ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಅಕ್ಟೋಬರ್ ತಾ|| ೨೬ನೆಯ ಭಾನುವಾರ.

ಜಯದೇವ ವೀರಶೈವ ವಿದ್ಯಾರ್ಥಿನಿಲಯ, ಬೆಂಗಳೂರು.

ಬೆಂಗಳೂರು ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವದ ಸಾದ್ಯಂತ ವೃತ್ತಾಂತವನ್ನು ಬೇರೆ ಕಡೆಗೆ ಮುದ್ರಿಸಿರುತ್ತೇವೆ. ಸಂಸ್ಥಾನಕ್ಕೆಲ್ಲಾ ಕೇಂದ್ರಸ್ಥಾನವಾಗಿರುವ ಬೆಂಗಳೂರಿನಂಥ ಮುಖ್ಯಪಟ್ಟಣದಲ್ಲಿ ವಿದ್ಯಾಭ್ಯಾಸಮಾಡುವ ವೀರಶೈವ ವಿದ್ಯಾರ್ಥಿಗಳಿಗೆ ಒಂದು ಅನುಕೂಲವಾದ ನಿಲಯವಿಲ್ಲದಿದ್ದ ಕೊರತೆಯು ವರ್ಣನಾತೀತವಾಗಿದ್ದಿತು. ಅದು ಇಂದಿಗೆ ತೀರುವಂತಾಯಿತೆಂಬುದನ್ನು ಈ ಮಹೋತ್ಸವವು ಸೂಚಿಸಿರುವುದು. ವೀರಶೈವರ ವಿದ್ಯಾಭಿವೃದ್ಧಿಯ ಸದುದ್ದೇಶದಿಂದಲೇ ಜನ್ಮವೆತ್ತಿರುವ ವಿದ್ಯಾಭಿವೃದ್ಧಿ ಫಂಡ್ ಸಂಘವು ತಾನು ನೆರವೇರಿಸಬೇಕಾಗಿರುವ ಕಾರ್ಯಗಳಲ್ಲಿ ಒಂದು ಮುಖ್ಯವಾದ ಘಟ್ಟವನ್ನು ಈಗ ಸಾಧಿಸಿತೆಂದು ಹೇಳಬಹುದು. ಸದುದ್ದೇಶಕ್ಕೆ ಸಾಫಲ್ಯವು ಎಂದಿಗಾದರೊಂದುದಿನ ಇದ್ದೇಯಿರುವುದೆಂಬುದು ನಿಜ. ಈ ವಿದ್ಯಾರ್ಥಿನಿಲಯವನ್ನು ಬೆಂಗಳೂರಲ್ಲಿ ನಿರ್ಮಿಸಬೇಕೆಂಬ ಉದ್ದೇಶವು ಈಗ್ಗೆ ೧೪ ವರ್ಷಗಳ ಕೆಳಗೇ ಮೂಡಿದ್ದರೂ, ಅದಕ್ಕೆ ಉಚಿತಜ್ಞರಾದ ಮ|| ಸಿದಲಬಸವಪ್ಪನವರು ಉದಾರವಾದ ೧೦೦೦೦ ರೂ. ಗಳ ವಾಗ್ದಾನವನ್ನು ಮಾಡಿದ್ದರೂ, ಪರಿಪಾಕಸ್ಥಿತಿಗೆ ಬರುವುದಕ್ಕೆ ಇಷ್ಟು ಕಾಲವಾಯಿತು. ಕೈಕೊಂಡ ಸತ್ಕಾರ್ಯಗಳೆಲ್ಲಾ ಜಯಸಿದ್ಧಿಗೊಳ್ಳುವುದನ್ನು ಸೂಚಿಸುವುದೋ ಎಂಬಂತಿರುವ ಜಯಶಬ್ದವೇ ಉಪಪದವಾದ ನಾಮವುಳ್ಳ ನಮ್ಮ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅನುಗ್ರಹಪ್ರಸಾದವು ಇದಕ್ಕೆ ಸೋಂಕಿದೊಡನೆಯೇ ಇದು ನವಚೈತನ್ಯಗೊಂಡು ಮೂರ್ತಿಭವಿಸುವಂತಾಯಿತು. ಈ ಸ್ವಾಮಿಗಳು ಪೀಠಾಧಿಪತ್ಯವನ್ನು ವಹಿಸಿದಾರಭ್ಯ ಸಮಾಜಾಭ್ಯುದಯಕ್ಕಾಗಿ ಲಕ್ಷಾಂತರ ದ್ರವ್ಯವನ್ನು ದಾನಮಾಡಿರುವುದಲ್ಲದೆ, ಸ್ವಸಮಾಜ ಪರಸಮಾಜವೆಂಬ ಭೇದವನ್ನಿಡದೆ ಅಪಾರವಾದ ಧನವನ್ನು ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಿರುತ್ತಾರೆ. ಅದರಲ್ಲಿ ನಮಗೆ ಜ್ಞಪ್ತಿಯಿರುವ ಮಟ್ಟಿಗೆ ಹೇಳುವುದಾದರೆ-ಕೊಲ್ಹಾಪುರದ ವೀರಶೈವವಿದ್ಯಾರ್ಥಿನಿಲಯಕ್ಕೆ ೨೦,೦೦೦, ಚಿತ್ರದುರ್ಗದ ಶ್ರೀ ಜಗದ್ಗುರು ವಿದ್ಯಾರ್ಥಿನಿಲಯಕ್ಕೆ ೨೦,೦೦೦, ಧಾರವಾಡದ ಜಗದ್ಗುರು ವಿದ್ಯಾರ್ಥಿನಿಲಯಕ್ಕೆ ೫,೦೦೦, ಧಾರವಾಡದ ಶ್ರೀ ಜಗದ್ಗುರು ಮುರುಘರಾಜೇಂದ್ರಶಾಲೆಗೆ ೧೦,೦೦೦, ಸಾಂಗಲಿಯ ವೀರಶೈವ ವಿದ್ಯಾರ್ಥಿನಿಲಯಕ್ಕೆ ೩,೦೦೦, ಸಿರ್ಸಿಯ ವೀರಶೈವವಿದ್ಯಾರ್ಥಿನಿಲಯಕ್ಕೆ ೩,೫೦೦, ಬಾಗಲಕೋಟೆ ವೀರಶೈವ ವಿದ್ಯಾರ್ಥಿನಿಲಯದ ಫಂಡಿಗೆ ೧,೦೦೦, ಸೊಲ್ಲಾಪುರದ ವೀರಶೈವವಿದ್ಯಾರ್ಥಿನಿಲಯದ ಫಂಡಿಗೆ ೧,೦೦೦, ಚಿತ್ರದುರ್ಗದ ಡಿಸ್ಟ್ರಿಕ್ಟ್ ಲೈಬ್ರರಿಗಾಗಿ ೫೦೦೦, ಕೊಲ್ಹಾಪುರದ ಶ್ರೀ ಜಯದೇವ ಲೈಬ್ರರಿಗಾಗಿ ೫,೦೦೦, ಧಾರವಾಡದ ಕರ್ನಾಟಕ ಕಾಲೇಜು ಫಂಡಿಗಾಗಿ ೫,೦೦೦, ಚಿತ್ರದುರ್ಗದ ಶ್ರೀಬೃಹನ್ಮಠದ ಮುಂದಣ ಶಾಲಾಭವನಕ್ಕೆ ೧,೦೦೦, ಕೊಲ್ಹಾಪುರದ ಜೈನ ಮರಾಠಾ ಮಹಮ್ಮದೀಯ ವಿದ್ಯಾರ್ಥಿನಿಲಯಕ್ಕೆ ೭೦೦, ಸತಾರೆಯ ಅಂಜುಮನ್ ಇಸ್ಲಾಮಿಯಾ ಸಂಘಕ್ಕೆ ೧೦೦, ಸವಣೂರು ಅಂಜುಮನ್ ಇಸ್ಲಾಮಿಯಸಂಘಕ್ಕೆ ೫೦೦, ಜಾನಕಲ್ಲಿನ ಮಹಮ್ಮದೀಯ ಶಾಲಾಗೃಹಕ್ಕಾಗಿ ೫೦೦, ಚಿತ್ರದುರ್ಗದ ಅರ್ಲ್ಸ್ ಸ್ಟೂಡೆಂಟ್ಸ್ ಭವನಕ್ಕಾಗಿ ೨೦೦, ಸಂಪಗಾಂವ ವೀರಶೈವ ಲೈಬ್ರರಿಗೆ ೧೦೦, ಇಂಗ್ಲೆಂಡಿಗೆ ಸಿವಿಲ್ ಸರ್ವೀಸ್ ಅಭ್ಯಾಸಕ್ಕಾಗಿ ಹೋಗುತ್ತಿರುವ ಮಡಿವಾಳೇಶ್ವರ ಸರದಾರ್ ಬಿ. ಎ., ಯವರಿಗಾಗಿ ೫,೦೦೦, ಇವರಿಗಾಗಿಯೇ ಮುಂದೆ ಕೊಡಲು ವಾಗ್ದಾನಮಾಡಿರುವುದು ಮತ್ತೆ ೧೦,೦೦೦ ರೂ. ಅಲ್ಲದೆ ಪ್ರತಿವರ್ಷವೂ ಅನೇಕ ಸ್ಥಲಗಳಲ್ಲಿ ವಿದ್ಯಾರ್ಥಿಗಳ ವೇತನಕ್ಕಾಗಿಯೇ ೩,೦೦೦ ರೂ. ಗಳನ್ನು ದಾನಮಾಡುತ್ತಿರುವರು. ಮತ್ತು ಚಿತ್ರದುರ್ಗದ ಜಗದ್ಗುರು ವಿದ್ಯಾರ್ಥಿನಿಲಯದಲ್ಲಿರುವ ೧೭ ಮಂದಿ ವಿದ್ಯಾರ್ಥಿಗಳ ಊಟದ ವ್ಯವಸ್ಥೆಗಾಗಿ ಪ್ರತಿ ವರ್ಷವೂ ೧,೬೦೦ ರೂ. ಗಳನ್ನೂ, ತಿಪಟೂರು ಆನಂದಾಶ್ರಮದ ವಿದ್ಯಾರ್ಥಿಗಳ ಭೋಜನದ ವೆಚ್ಚಕ್ಕಾಗಿ ೨,೪೦೦ ರೂ. ಗಳನ್ನೂ, ಧಾರವಾಡದ ಜಗದ್ಗುರು ವಿದ್ಯಾರ್ಥಿನಿಲಯದ ಭೋಜನದ ವೆಚ್ಚಕ್ಕಾಗಿ ೩,೬೦೦ ರೂ. ಗಳನ್ನೂ ಪ್ರತಿವರ್ಷವೂ ಒದಗಿಸುತ್ತಿರುವರು. ಮತ್ತೂ ಧಾರವಾಡದಲ್ಲೂ ತಿಪಟೂರಿನಲ್ಲೂ ಸ್ಥಾಪಿತವಾಗಿರುವ ಸಂಸ್ಕೃತವೈದಿಕಪಾಠಶಾಲೆಗಳ ವೆಚ್ಚಕ್ಕಾಗಿ ವರ್ಷಂಪ್ರತಿ ೨,೬೦೦ ರೂ. ಗಳನ್ನು ಕೊಡುತ್ತಿರುವರು. ಈ ದಾನಪ್ರವಾಹವನ್ನು ನೋಡಲಾಗಿ ಬೆಂಗಳೂರ ಜಯದೇವ ವಿದ್ಯಾರ್ಥಿನಿಲಯದ ಕಟ್ಟಡಕ್ಕಾಗಿ ಶ್ರೀಗಳವರು ೩೦,೦೦೦ ರೂ. ಗಳನ್ನು ದಯಪಾಲಿಸಿದುದು ಅವರ ನಿಸರ್ಗಗುಣಕ್ಕೆ ಒಪ್ಪತಕ್ಕುದಾಗಿಯೇ ಇರುತ್ತದೆ. ಶ್ರೀ ನಿರಂಜನ ಜಗದ್ಗುರುಪೀಠಕ್ಕೆ ಈ ಸ್ವಾಮಿಗಳವರು ಹಕ್ಕುದಾರಿಕೆ ಅಥವಾ "ಬರಾವರ್ದಿ" ವಿಕ್ರಯ ಇತ್ಯಾದಿಗಳ ಮೂಲಕದಿಂದೇನೂ ಅಲ್ಲದೆ, ಬೊಂಬಾಯಿಯ ಸಕಲ ಕರ್ನಾಟಕಪ್ರಾಂತ, ಮತ್ತೂ ಮೈಸೂರು, ಮದ್ರಾಸು, ಹೈದರಾಬಾದು ಪ್ರಾಂತಗಳೆಲ್ಲದರಿಂದಲೂ ಬಂದ ಸಕಲ ವೀರಶೈವಮಂಡಲದವರೂ ಓಟುಗಳನ್ನು ಕೊಟ್ಟು ಆರಿಸಿದುದರ ಮೂಲಕ ಸಕಲ ವೀರಶೈವಮಂಡಲಮಹಿತ ಜಗದ್ಗುರುಪಟ್ಟವನ್ನು ವಹಿಸಿದವರಾಗಿದ್ದಾರೆ. ಯಾವ ನಿರೀಕ್ಷಣೆಯಿಂದ ಆ ಸಮಾಜವೆಲ್ಲವೂ ಇವರನ್ನು ದೊಡ್ಡಪದವಿಗೆ ಹತ್ತಿಸಿತೋ ಅಂಥ ನಿರೀಕ್ಷಣೆಯನ್ನು ದ್ವಿಗುಣತ್ರಿಗುಣವಾಗಿ ಶ್ರೀಗಳವರು ಇಷ್ಟರೊಳಗೇ ಸಫಲಗೊಳಿಸಿದ್ದಾರೆ. ಮುಂದೆಯೂ ಹೀಗೆಯೇ ಇವರ ಕಡೆಯಿಂದ ಎಷ್ಟೋ ಸಮಾಜೋನ್ನತಿಯ ಕಾರ್ಯಗಳು ನಡೆಯುವುವಾಗಿವೆ. ಇಂಥ ಜಗದ್ಗುರುಗಳ ಆಶ್ರಯವು ಸದ್ಯಃ ನಮ್ಮ ಸಮಾಜಕ್ಕೆ ದೊರೆದಿರುವುದು ಸುಕೃತವಿಶೇಷವೇ ಸರಿ.

ಈ ಶ್ರೀಗಳವರು ಬೆಂಗಳೂರಿಗೆ ವಿಜಯಮಾಡಿಸಿದ ಕಾಲವು ಸ್ಮರಣೀಯವಾದುದು. ಅಲ್ಲಿಯ ವಿದ್ಯಾರ್ಥಿನಿಲಯದ ಕಟ್ಟಡಕ್ಕಾಗಿ ೧೫ ಸಾವಿರ ರೂ. ಗಳನ್ನು ಕೊಡಲು ೨ ವರ್ಷಗಳ ಕೆಳಗೆ ತಾವು ವಾಗ್ದಾನಮಾಡಿದ್ದಾಗ್ಗೂ, ಕಾರ್ಯದ ಮಹತ್ತ್ವವನ್ನರಿತು ಆ ಸಾಹಾಯ್ಯದ್ರವ್ಯವನ್ನು ದ್ವಿಗುಣವಾಗಿ ಕೊಡಲು ಅಪ್ಪಣೆ ಮಾಡಿದುದಲ್ಲದೆ ಅಷ್ಟು ಹಣ (೩೦ ಸಾವಿರ) ವನ್ನೂ ಒಡನೆಯೇ ಸರ್ಕಾರದ ವಶಕ್ಕೆ ಸಲ್ಲಿಸಿಬಿಟ್ಟರು. ಅದರಿಂದಲೇ ಕಟ್ಟಡದ ಕಾರ್ಯಾರಂಭಕ್ಕೆ ಅನುಕೂಲಿಸಿತು. ಈಗ ಜತೆಗೂಡಿರುವ ೪೦ ಸಾವಿರ ರೂ. ಗಳಿಗೆ ಸಮನಾಗಿ ಎಂದರೆ ಇನ್ನು ೪೦ ಸಾವಿರ ರೂ. ಗಳನ್ನು ಸರ್ಕಾರದವರು ಇದಕ್ಕೆ ಸಹಾಯಮಾಡುವರು. ಒಂದುವೇಳೆ ಸಾಲದೆಬಂದರೆ ಮತ್ತೆ ೧೦ ಸಾವಿರ ರೂ. ಗಳು ಶ್ರೀಗಳವರದ್ವಾರಾ ದೊರೆಯುವುದು. ಆ ಬಳಿಕ ಅಷ್ಟೇ ಹಣವು ಸರ್ಕಾರದಿಂದಲೂ ದೊರೆಯುವುದು. ಹೀಗಾಗಿ ಈ ಕಟ್ಟಡವು ಬಹುಶಃ ೧ ಲಕ್ಷ ರೂ. ಮುಟ್ಟಿದ ಭವ್ಯಮಂದಿರವಾಗಿಯೂ, ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳವರ ಬೆಂಗಳೂರು ನಗರಾಗಮನ ಸಂದರ್ಭವನ್ನು ಶಾಶ್ವತವಾಗಿ ಸಾರುವ ಮಹಾಸ್ಮಾರಕ ಪ್ರತಿಷ್ಠಾಪನೆಯಾಗಿಯೂ, ಸಮಾಜಕ್ಕೆ ಮಹೋಪಕಾರಕವಾಗಿಯೂ ಪರಿಣಮಿಸುವುದೆಂಬುದಕ್ಕೆ ಸಂಶಯವಿಲ್ಲ. ಈ ಸಂದರ್ಭವಿಶೇಷದಿಂದ ಉಂಟಾದ ಒಂದಾನೊಂದು ಸಂಸ್ಕಾರವೋ ಎಂಬಂತೆ ಅನಿರೀಕ್ಷಿತವಾದ ಪ್ರೇರಣೆಯುಂಟಾಗಿ, ಮ|| ಕಬ್ಬಳ್ಳಿ ಚನ್ನಬಸವಪ್ಪನವರು ರಾಜಧಾನಿಯಲ್ಲೂ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಲು 30 ಸಹಸ್ರ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನಮಾಡಿರುವುದೂ, ಇಷ್ಟರಲ್ಲೇ ಅದನ್ನು ಸರ್ಕಾರದ ವಶಪಡಿಸಲಿಕ್ಕಿರುವುದೂ ಸಹ ಸಮಾಜದವರೆಲ್ಲರಿಗೂ ಅತ್ಯಂತ ಸಂತೋಷಪ್ರದವಾಗಿರುವುದರಿಂದ, ಅವರ ಸಮಾಜಾಭಿಮಾನಕ್ಕಾಗಿ ಈ ಮೂಲಕ ಧನ್ಯವಾದವನ್ನರ್ಪಿಸುವೆವು.

ಶ್ರೀಮದ್ಯುವರಾಜರವರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದವರ ಪ್ರಾರ್ಥನೆಯನ್ನಂಗೀಕರಿಸಿ ಈ ನಿಲಯದ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಲು ದಯಮಾಡಿಸಿ ಅಮೋಘವಾದ ಹಸ್ತಸ್ಪರ್ಶದಿಂದ ಪ್ರತಿಷ್ಠಾಪನೆಯನ್ನು ಮಾಡಿ, ದಿವ್ಯವಾಣಿಯಿಂದ ವೀರಶೈವಸಮಾಜಕ್ಕೆ ಅಭ್ಯುದಯವನ್ನು ಕೋರಿ, ಆವಶ್ಯಕವಾದ ಬೆಂಬಲವನ್ನೀಯುವುದಕ್ಕೆ ಅಭಯದಾನಮಾಡಿ ಪ್ರೋತ್ಸಾಹಿಸಿದುದು, ವೀರಶೈವ ಸಮಾಜದವರ ಕರ್ತವ್ಯತತ್ಪರತೆಗೆ ಮತ್ತಷ್ಟು ಉತ್ತೇಜನಕಾರಿಯಾಯಿತೆಂದು ಸಂತೋಷದಿಂದ ನಾವು ಹೇಳುವೆವಲ್ಲದೆ ಇದಕ್ಕಾಗಿ ಶ್ರೀಮದ್ಯುವರಾಜರ ಸನ್ನಿಧಿಯಲ್ಲಿ ಸಮಾಜದ ಪರವಾದ ಕೃತಜ್ಞತಾವಂದನೆಗಳನ್ನರ್ಪಿಸುವೆವು.

ಮುಖ್ಯವಾಗಿ ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದ ಅಧ್ಯಕ್ಷರೇ ಮೊದಲಾದವರ ದೃಢಪ್ರಯತ್ನದಿಂದ ಈ ಮುಖ್ಯಕಾರ್ಯವು ಫಲೋನ್ಮುಖವಾದುದಕ್ಕಾಗಿ ಅವರೆಲ್ಲರನ್ನೂ ನಾವು ಈ ಮೂಲಕ ಅಭಿನಂದಿಸುವೆವಲ್ಲದೆ ಇತೋಪ್ಯತಿಶಯವಾದ ಸೌಕರ್ಯಗಳನೇಕಗಳು ಅವರಮೂಲಕ ಸಮಾಜಕ್ಕೆ ಲಭಿಸುವಂತಾಗಲೆಂದೂ, ವಿದ್ಯಾಭಿವೃದ್ಧಿಫಂಡು ಇನ್ನುಮೇಲೆ ತೀವ್ರವಾದ ಅಭ್ಯುದಯವನ್ನು ಹೊಂದಿ ಉದ್ದಿಷ್ಟಪರಿಮಿತಿಯನ್ನು ಹೊಂದುವಂತಾದೀತೆಂದೂ ನಿರೀಕ್ಷಿಸುತ್ತೇವೆ. ಆರಂಭಿಸಲ್ಪಟ್ಟಿರುವ ಕಟ್ಟಡದ ಕೆಲಸವನ್ನು ಶೀಘ್ರವಾಗಿ ನೆರವೇರಿಸಿ, ಇದರ ಶಂಕುಸ್ಥಾಪನವನ್ನು ಮಾಡಿರುವ ಶ್ರೀಮದ್ಯುವರಾಜರವರ ಮನಸ್ಸನ್ನು ಸಂತೋಷಪಡಿಸುವುದಲ್ಲದೆ, ಕಟ್ಟಡದ ಪ್ರವೇಶ ಮಹೋತ್ಸವವನ್ನು ಶ್ರೀಮನ್ಮಹಾರಾಜರವರಿಂದಲೇ ನಡೆಯಿಸುವುದಕ್ಕೆ ಅನುಕೂಲಪಡಿಸಿ ಸಮಾಜಬಾಂಧವರೆಲ್ಲರ ಮನ್ನಣೆಗೂ ಕೃತಜ್ಞತೆಗೂ ಸಂಘದವರು ಪಾತ್ರರಾಗುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಶ್ರೀ ಜಯದೇವ ವೀರಶೈವ ವಿದ್ಯಾರ್ಥಿನಿಲಯ ಶಂಕುಸ್ಥಾಪನ ಮಹೋತ್ಸವ.

ಬೆಂಗಳೂರಿನಲ್ಲಿ ಈ ಮಹೋತ್ಸವವು ಕಳೆದ ತಾ|| ೨೦ ನೆ ಬೆಳಗ್ಗೆ ಬಹಳ ವೈಭವದಿಂದ ಜರುಗಿತು. ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರ ವಿಶೇಷ ಪ್ರಯತ್ನದಿಂದಲೇ ಕಾರ್ಯಮುಖಕ್ಕೆ ಬಂದ ಈ ಪ್ರತಿಷ್ಠಾಪನೆಯು, ಆ ಸಂಘದವರ ಪ್ರಾರ್ಥನೆಯ ಪ್ರಕಾರ ಇದನ್ನು ನೆರವೇರಿಸಲು ಶ್ರೀಮದ್ಯುವರಾಜರವರು ದಯಾಪೂರ್ವಕರಾಗಿ ಅನುಮತಿಯನ್ನಿತ್ತು ದಯಮಾಡಿಸಿ ಸ್ವತಃ ಶಂಕುಸ್ಥಾಪನ ಮಹೋತ್ಸವವನ್ನು ಜರುಗಿಸಿದುದರಿಂದ ಅತಿಶಯ ಮಹತ್ವವನ್ನೂ ವಿಜೃಂಭಣೆಯನ್ನೂ ಪಡೆದುಕೊಂಡಿತು. ಈ ಸಮಾರಂಭಕ್ಕಾಗಿ ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದವರು ಸ್ಥಲದ ಮುಖ್ಯಾಧಿಕಾರಿಗಳು ಪ್ರಮುಖಜನರು ಮೊದಲಾದವರಿಗೇ ಅಲ್ಲದೆ ಹೊರಗಣ ಅನೇಕ ಸ್ಥಲಗಳವರಿಗೂ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ಅದರ ಮೇಲೆ ಹೊರಗಣಿಂದ ನೂರಾರುಮಂದಿ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಈ ಕಟ್ಟಡಕ್ಕಾಗಿ ಸರ್ಕಾರದವರು ಉಚಿತವಾಗಿ ದಯಪಾಲಿಸಿರುವ ಭೂಮಿಯು ಶೇಷಾದ್ರಿರೋಡಿನ ಪಕ್ಕದಲ್ಲಿ ಅತ್ಯಂತ ಪ್ರಶಸ್ತವಾದ ಸ್ಥಳದಲ್ಲಿರುತ್ತದೆ. ಬರೆಯಿಸಲ್ಪಟ್ಟಿರುವ ಕಟ್ಟಡದ ಮಾದರಿಯನ್ನು ಅವಲೋಕಿಸಿದರೆ, ಬಹುಶಃ ೧ ಲಕ್ಷ ಧನವ್ಯಯದಿಂದ ಸಿದ್ಧವಾಗುವ ಕಟ್ಟಡವು ೧೫೦ ಮಂದಿ ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾಗಿ, ಆ ಭಾಗವನ್ನೆಲ್ಲಾ ತನ್ನ ಸೌಂದರ್ಯದಿಂದ ಮನೋಹರಗೊಳಿಸಬಲ್ಲುದಾಗುವುದೆಂದು ಯೋಚಿಸಬಹುದಾಗಿದೆ. ಈ ಸ್ಥಲದಲ್ಲಿ ಸಭೆಗಾಗಿ ಚತುಸ್ತಂಭದ ಒಂದು ಅತಿ ವಿಶಾಲವಾದ ಪಟಗೃಹ (ಗುಡಾರವನ್ನು) ಪೂರ್ವಮುಖವಾಗಿ ಹಾಕಿಸಿ, ಆ ಬಯಲನ್ನೆಲ್ಲಾ ತೋರಣಗಳಿಂದಲೂ ಧ್ವಜಪಟಗಳಿಂದಲೂ ಬಾಳೆಗಂಬಗಳಿಂದಲೂ ಮನೋಹರವಾಗಿ ಅಲಂಕರಿಸಿದ್ದರು. ಆ ಪಟಗೃಹದ ಮುಂಗಡೆಯಲ್ಲಿಯೇ ಮೆಟ್ಟಿದ್ದ ಹದಿಯ ಮೇಲ್ಗಡೆ ಸುವರ್ಣಾಕ್ಷರಪಙ್ಕ್ತಿವಿರಾಜಿತವಾದ ಶಿಲೆಯು ತೂಗಗಟ್ಟಲ್ಪಟ್ಟಿದ್ದಿತು. ಸರ್ಕಾರಿ ಬ್ಯಾಂಡು ಘೋರ್ಗರೆಯುತ್ತಿದ್ದಿತು. ಬೆಳಗಿನ ೮ ಗಂಟೆಯಿಂದಲೇ ಸಭೆಗೆ ಜನರು ಬಂದು ಸೇರುವುದಕ್ಕೆ ಉಪಕ್ರಮಿಸಿದರು. ೧ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನರನ್ನು ಹಿಡಿಸುವಂತಿದ್ದ ಆ ಗುಡಾರದ ತುಂಬಾ ಜನರು ಕಿಕ್ಕಿರಿದುದರಿಂದ ಸಾವಿರಾರು ಮಂದಿಗಳು ಹೊರಗಡೆಯೇ ನಿಂತಿರಬೇಕಾಯಿತು. ಮಧ್ಯದಲ್ಲಿ ಇದಿರ್ಗಡೆ ಪೂರ್ವಮುಖವಾಗಿದ್ದ ಜಗತಿಯ ಮೇಲೆ ಶ್ರೀಮದ್ಯುವರಾಜರವರಿಗೂ, ದಿವಾನರಿಗೂ, ಅವರ ಬಲಪಕ್ಕದಲ್ಲಿ ಉತ್ತರಾಭಿಮುಖವಾಗಿದ್ದ ಜಗತಿಯ ಮೇಲೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಗೂ ಉಚಿತಾಸನಗಳು ಏರ್ಪಡಿಸಲ್ಪಟ್ಟಿದ್ದುವು. ಸಭೆಗೆ ದಯಮಾಡಿಸಿದ್ದ ಪ್ರಮುಖರಲ್ಲಿ ಮ|| ಗಳಾದ ದಿವಾನ್ ಸರ್ದಾರ್ ಕಾಂತರಾಜ ಅರಸಿನವರು, ಕೌನ್ಸಿಲರ್ ಹಂಜಾ ಹುಸೇನ್ ಸಾಹೇಬರು, ವಿದ್ಯಾಪೀಠದ ವೈಸ್ ಛಾನ್ಸಲರಾದ ಎಚ್. ವಿ. ನಂಜುಂಡಯ್ಯನವರು, ಪೊಲೀಸ್ ಇನ್|| ಜನರಲ್ಲಾದ ಎ. ಸುಬ್ರಹ್ಮಣ್ಯಯ್ಯರು, ವಿದ್ಯಾಭ್ಯಾಸದ ಇನ್|| ಜನರಲ್ ಮ|| ಸಿ. ಆರ್. ರಡ್ಡಿಯವರು, ಎಕ್ಸೈಜ್ ಕಮಿಷನರಾದ ಡಿ. ನಾರಾಯಣಯ್ಯಂಗಾರರು, ರಾ|| ಬ|| ಎಂ. ಶ್ಯಾಮರಾಯರು, ಮೇಜರ್ ಚಾಮರಾಜ ಅರಸ್‌ರವರು, ರಾ|| ಬ|| ಅಣ್ಣಾಸ್ವಾಮಿ ಮೊದಲಿಯಾರ್, ಸಿ.ಐ.ಇ.ಯವರು, ರಾ|| ಬ|| ದೇಶಮುಖಿ ಶ್ಯಾಮರಾಯರು, ರಾ|| ಬ|| ಪ್ರಾಕ್ತನವಿಮರ್ಶನ ವಿಚಕ್ಷಣ ಆರ್. ನರಸಿಂಹಾಚಾರ್ಯರು, ರಾ|| ಸಾ|| ಸಿ. ಚನ್ನಯ್ಯನವರು, ಜನರಲ್‌ಸೆಕ್ರೆಟರಿ ಸಿ.ಎಸ್. ಬಾಲಸುಂದರಂ ಅಯ್ಯರವರು, ಟಿ. ಪರಮಶಿವಯ್ಯರ್‌ರವರು, ಬಿ. ರಾಮಸ್ವಾಮಯ್ಯನವರು, ಎನ್. ಟಿ. ಗೋಪಾಲಯ್ಯಂಗಾರರು, ವಿ. ರಂಗಸ್ವಾಮಿಯವರು, ಡಬ್ಲ್ಯೂ. ಸಿ. ರೋಜ್‌ರವರು, ಎನ್. ತ್ಯಾಗರಾಜಯ್ಯರ್‌ರವರು, ಡಿ. ಬಿ. ರಾಮಚಂದ್ರ ಮೊದಲಿಯಾರರು, ಕೆ. ಲಕ್ಷ್ಮೀನಾರಾಯಣ್ಯನವರು, ಬಿ. ಎಸ್. ರಾಣೋಜಿರಾಯರು, ಕೆ. ಎಚ್. ರಾಮಯ್ಯನವರು, ಎಲ್. ಶ್ರೀನಿವಾಸಯ್ಯಂಗಾರರು, ಎ. ಚಂಗಯ್ಯಶೆಟ್ಟರು, ಸಯ್ಯದ್ ತಾಜ್ ಪೀರಾನ್‌ರವರು, ಅಬ್ಬಾಸ್ ಖಾನರು, ಎಫ್. ಫರ್ನಾಂಡೀಜ್‌ರವರು, ಡಿಕ್ರೂಜ್‌ರವರು, ಬ್ಯಾ|| ವಿಜಯದೇವರವರು, ಎಸ್. ನಾರಾಯಣರಾಯರು, ಅನೇಕಮಂದಿ ಹಿಂದೂಮಹಮ್ಮದೀಯ ವರ್ತಕಶ್ರೇಷ್ಠರುಗಳು ಮೊದಲಾದವರು ತಂತಮ್ಮ ಪೀಠಗಳನ್ನು ಅಲಂಕರಿಸಿದ್ದರು. ಶ್ರೀ ಜಗದ್ಗುರುಗಳವರು ಪಂಡಿತಮಂಡಲೀಪರಿವೃತವಾದ ಮ್ಯಾನದಲ್ಲಿ ಕುಳಿತು ೯ ಗಂಟೆಯಹೊತ್ತಿಗೆ ದಯಮಾಡಿಸಿ ಮಗ್ಗುಲಿನ ಸಣ್ಣಡೇರೆಯಲ್ಲಿಳಿದರು. ಅಷ್ಟರಲ್ಲಿ ಶ್ರೀಮದ್ಯುವರಾಜರಸ್ವಾರಿಯೂ ದಯಮಾಡಿಸಿತು. ಶ್ರೀ ಜಗದ್ಗುರುಗಳು ಶುಭಾಶಂಸನೆಯನ್ನು ಮಾಡಿ ಶ್ರೀಮದ್ಯುವರಾಜರವರ ಕುಶಲಪ್ರಶ್ನವನ್ನು ಮಾಡುತ್ತಿರುವಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾದ ಪ್ರಮುಖ ವೀರಶೈವಮಂಡಲಿಯವರು ಇದಿರ್ಗೊಂಡು ಸಭಾಂಗಣಕ್ಕೆ ಕರೆತಂದರು. ಸಭಿಕರು ಆನಂದಕರಾಸ್ಫಾಲನವನ್ನು ಮಾಡುತ್ತಿರುವಲ್ಲಿ ಶ್ರೀಮದ್ಯುವರಾಜರವರೂ ಜಗದ್ಗುರುಗಳೂ ದಿವಾನ್ ಕಾಂತರಾಜ ಅರಸಿನವರೂ ಸಹ ತಂತಮ್ಮ ಅಗ್ರಪೀಠಗಳನ್ನಲಂಕರಿಸಿದರು.

ಪ್ರಥಮತಃ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಶ್ರೀಮದ್ಯುವರಾಜರವರ ಅಪ್ಪಣೆ ಪಡೆದು ಸಭಾಕಾರ್ಯಕ್ಕೆ ಉಪಕ್ರಮಿಸಿದರು. ವಿದ್ಯಾಭಿವೃದ್ಧಿಸಂಘದ ಮ್ಯಾನೇಜಿಂಗ್ ಕಮಿಟಿಯ ಪ್ರತಿಯೊಬ್ಬ ಸಭಿಕರ ಪರಿಚಯವನ್ನೂ ಶ್ರೀಮದ್ಯುವರಾಜರವರಿಗೆ ಮಾಡಿಸಿದ ಬಳಿಕ, ಇದೇ ಕಟ್ಟಡಕ್ಕಾಗಿ ೧೦ ಸಾವಿರ ರೂ. ಗಳನ್ನು ಸಹಾಯಮಾಡಿರುವ ಅತ್ತಿಬೆಲೆ ಸಾ|| ಸಿದಲಬಸಪ್ಪನವರನ್ನೂ, ಮೈಸೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಲು ೩೦ ಸಹಸ್ರ ರೂ. ಗಳನ್ನು ದಾನಮಾಡಲು ವಾಗ್ದಾನಂಗೈದಿರುವ ಗುಂಡಲುಪೇಟೆ ತಾ|| ಮ|| ಶ್ರೀಮಂತ ಕಬ್ಬಳ್ಳಿಚನ್ನಬಸಪ್ಪನವರನ್ನು ಸಹ ಪರಿಚಯಮಾಡಿಸಿದರು. ಬಳಿಕ ಆಸ್ಥಾನವಿದ್ವಾನ್ ವೇ|| ಎನ್. ಆರ್. ಕರಿಬಸವಶಾಸ್ತ್ರಿಗಳಿಂದ ರಚಿತವಾಗಿದ್ದ ಈ ಕೆಳಗಣ ಮಂಗಳ ಪದ್ಯಗಳನ್ನು ಸಂಗೀತ ವಿದ್ವಾನ್ ರಾಜೋಟಪ್ಪನವರು ನಾನಾ ರಾಗಗಳಿಂದ ಸುಶ್ರಾವ್ಯವಾಗಿ ಓದಿದರು. ಸಭಿಕರೆಲ್ಲರೂ ಪ್ರತಿಪದ್ಯವೂ ಮುಗಿದಾಗಲೂ ಆನಂದದಿಂದ ಕರಾಸ್ಫಾಲನಗಳನ್ನು ಮಾಡುತ್ತಿದ್ದರು. ಆ ಪದ್ಯಗಳಾವುವೆಂದರೆ—

ಕಂ|| ಕಲ್ಯಾಣಗಿರಿನಿವಾಸಂ | ಕಲ್ಯಾಣೀಪ್ರೇಮಕೋಶ
ನತುಲವಿಲಾಸಂ || ಕಲ್ಯಾಣವಿತತಿಯಂ ಸಾ | ಕಲ್ಯಂ ಕರುಣಿ
ಸುಗೆ ಪೊರೆಗೆ ಮಿಗೆ ಪರಮೇಶಂ ||೧||

ಶಾ|| ವಿ|| ಶ್ರೀಮದ್ಭಾರತಭೂತಲಪ್ರಥಿತಸತ್ಪ್ರಾಚೀನಸಿಂಹಾ
ಸನ | ಸ್ವಾಮಿ ಶ್ರೀಯದುವಂಶಭೂಪತಿಲಕಂ ಕರ್ಣಾಟರಾಷ್ಟ್ರ
ಪ್ರಜಾ || ಸ್ತೋಮೋಪಾರ್ಜಿತಪೂರ್ವಪುಣ್ಯಫಲರೂಪಂ ಧರ್ಮ
ಸತ್ಯಾಶ್ರಯಂ | ಚಾಮೇಂದ್ರಾತ್ಮಜ ಕೃಷ್ಣರಾಜನೆನಿಸುಂ ತಾ
ನಾಳ್ಗೆ ಭೂಕಾಂತೆಯಂ ||೨||

ಕಂ|| ನರಪಂ ಧರ್ಮಪ್ರಭು ಯುವ | ನರಪಂ ಸುವಿಚಾರಿ
ದೀನಬಂಧು ವಮಾತ್ಯಂ || ನರಸಂ ಪ್ರಜಾನುರಕ್ತಂ | ಪೆರತೇ
ನೀನಾಡ ಭಾಗ್ಯಕಿನ್ನೆಣೆಯುಂಟೇಂ ||೩||

ಕಂ|| ಸೀತಾಪತಿಗೆ ಸುಮಿತ್ರಾ | ಜಾತಂ ಪಾರ್ಥಂಗೆ
ಚಕ್ರಿ ಯಿರ್ದಂತೆವಿಮ್ಮಾ || ಖ್ಯಾತವಿಭುಗೆ ಯುವರಾಜಂ | ನೂ
ತನಮಂತ್ರೀಶಕಾಂತರಾಜನು ಮಿರ್ಪರ್ ||೪||

ಕಂ|| ಅದರಿಂ ರಾಜ್ಯಕ್ಕೆ ಸುಖಂ | ಪದುಳಂ ಸುಶ್ರೀಯ
ಮತುಳವಿಜಯಶ್ರೀಯುಂ || ಸದಮಳಧರ್ಮಾಭ್ಯುದಯಂ | ವಿದಿ
ತಂ ದೊರೆಕೊಳ್ವುದರಿದೆ ಸಕಲೇಷ್ಟಾರ್ಥಂ ||೫||

ವಾ|| ಷ|| ಶ್ರೀನಿರಂಜನಜಗದ್ಗುರುಮೂರ್ತಿ ಜಯದೇವ |
ದಾನಸಾಹಾಯ್ಯದಿಂ ಬೆಂಗಳೂರ್ನಗರದೊಳ | ನೂನಮೆನೆ ರಚಿ
ಯಿಪ್ಪ ವೀರಶೈವೀಯವಿದ್ಯಾರ್ಥಿನಿಲಯಕೆ ಶಂಕುವಂ || ಸಾನು
ಕಂಪಂ ಪ್ರತಿಷ್ಠಿಸಲೆಯ್ದಿ ವಿದ್ಯಾಭಿ | ಮಾನವಂ ಮೆರೆದ ಯುವ
ರಾಜನರಸಿಂಹೇಂದ್ರ | ನಾನಂದಸಾಂದ್ರ ನೆಮ್ಮಯ ಕೃತಜ್ಞತೆ
ಗೆನೇಣ್ವಂದನೆಗೆ ಸತ್ಪಾತ್ರನು ||೬||

ಕಂ|| ವಿಜಯಿಕೆ ಕೃಷ್ಣೇಂದ್ರಂ ಸಾ | ನುಜನುಂ ಸಾಮಾ
ತ್ಯನುಂ ಸಪರಿವಾರಂ ಸ || ಪ್ರಜನುಂ ಚಾಮುಂಡಾಂಬಿಕೆ |
ವಿಜಯಮ ನೆಲ್ಲೆಡೆಯೊಳಿತ್ತು ಪಾಲಿಕೆ ಸುಚಿರಂ ||೭||

ಬಳಿಕ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಆಂಗ್ಲಭಾಷೆಯ ವಿಜ್ಞಾಪನ ಪತ್ರವನ್ನು ಗಂಭೀರವಾಗಿ ಓದಿದರು. ಅದರ ಭಾಷಾಂತರವು ಈ ಕೆಳಗೆ ಮುದ್ರಿಸಲ್ಪಟ್ಟಿದೆ.

ಶ್ರೀಮದ್ಯುವರಾಜ ಸರ್. ಶ್ರೀ ಕಂಠೀರವ ನರಸಿಂಹರಾಜ
ಒಡೆಯರ್, ಬಹದ್ದೂರ್, ಜಿ. ಸಿ. ಐ. ಇ., ಯವರ
ದಿವ್ಯ ಸನ್ನಿಧಾನದಲ್ಲಿ

ಬೆಂಗಳೂರಲ್ಲಿ ಕಟ್ಟಿಸಬೇಕೆಂದಿರುವ ವೀರಶೈವ ವಿದ್ಯಾರ್ಥಿನಿಲಯದ (ಹಾಸ್ಟಲ್) ಶಂಕುಸ್ಥಾಪನೋತ್ಸವವನ್ನು ನೆರವೇರಿಸಿಕೊಡಬೇಕೆಂಬ ನಮ್ಮ ವಿನೀತಪ್ರಾರ್ಥನೆಯನ್ನು ತಾವು ಕೃಪಾದೃಷ್ಟಿಯಿಂದ ಅಂಗೀಕರಿಸಿದುದಕ್ಕೋಸ್ಕರ ಮೈಸೂರು ಲಿಂಗಾಯತ ವಿದ್ಯಾವರ್ಧಕ ನಿಧಿಯ ಸಂಘದವರಾದ ನಾವುಗಳು ಈ ಸಂಸ್ಥಾನದಲ್ಲಿರುವ ವೀರಶೈವ ಜನವರ್ಗದ ಪರವಾಗಿ ತಮಗೆ ನಮ್ಮ ಕೃತಜ್ಞತಾಭಕ್ತಿಪುರಸ್ಸರವಾದ ವಂದನೆಗಳನ್ನು ಸಮರ್ಪಿಸುತ್ತೇವೆ, ಮಹಾಸ್ವಾಮಿ.

2. ನಮ್ಮ ಸಂಘವು ವ್ಯವಸಾಯ ಮತ್ತು ವಾಣಿಜ್ಯಗಳಲ್ಲಿ ಉದ್ಯುಕ್ತರಾಗಿರುವ ಏಳುಲಕ್ಷಕ್ಕೆ ಮೇಲ್ಪಟ್ಟ ಜನಸಂಖ್ಯೆಯುಳ್ಳ ಪಂಗಡದ ವಿದ್ಯಾಸಂಬಂಧವಾದ ಕುಂದುಕೊರತೆಗಳನ್ನು ನಿವೇದನಮಾಡುವ ಪ್ರತಿನಿಧಿಯಂತಿದೆ. ಈ ಸಂಸ್ಥಾನದ ಪ್ರಜಾಕೋಟಿಯಲ್ಲಿ ಈ ಪಂಗಡದವರು ಅತ್ಯಂತ ಶಾಂತಶೀಲರೂ, ನ್ಯಾಯಬದ್ಧರೂ, ಉದ್ಯಮಶೀಲರೂ, ಮಿತವ್ಯಯಿಗಳೂ ಆಗಿದ್ದಾರೆ, ಮಹಾಸ್ವಾಮಿ.

3. ವೀರಶೈವ ಜನವರ್ಗದ ಪ್ರಯೋಜನಾರ್ಥವಾಗಿ ತಮ್ಮ ಅಪರಿಮಿತ ಆಸ್ತಿಯನ್ನೆಲ್ಲಾ ಬಿಟ್ಟುಕೊಟ್ಟಿರುವ ದಿವಂಗತರಾದ ಸರ್ ದೇಶಾಯಿ ಸಿರಸಂಗಿಕರ್‌ಯವರ ಅಧ್ಯಕ್ಷತೆಯಲ್ಲಿ 1905 ನೆಯ ಇಸವಿಯಲ್ಲಿ ಬೆಂಗಳೂರಲ್ಲಿ ನಡೆದ ಯಾವದ್ಭಾರತ ವೀರಶೈವ ಮಹಾಸಭೆಯ ದೀರ್ಘಾಲೋಚನೆಗಳ ಫಲಸ್ವರೂಪವಾಗಿ ಅದೇ ವರ್ಷ ಈ ಮೈಸೂರು ವೀರಶೈವ ವಿದ್ಯಾವರ್ಧಕನಿಧಿಯ ಸಂಘವು ಉದ್ಭವಿಸಿತು. ಸ್ವಪ್ರಯಾಸದಿಂದ ಈ ಪಂಗಡದವರು ಮಾಡಿದ ಪ್ರಥಮಪ್ರಯತ್ನದ ಫಲವೇ ಈ ಸಂಘರೂಪದಲ್ಲಿ ಮೂರ್ತೀಭವಿಸಿದೆ; ಮತ್ತೂ ಮೈಸೂರು ಸಂಸ್ಥಾನದಲ್ಲಿ ಇದೇ ಈ ಬಗೆಯ ಪ್ರಥಮ ಸಂಸ್ಥೆಯಾಗಿದ್ದಿತು. ಮೈಸೂರ ವೀರಶೈವರಲ್ಲಿ ವಿದ್ಯಾಭಿಲಾಷೆಯನ್ನು ಹುಟ್ಟಿಸುವುದು, ಬೆಂಗಳೂರು ಮತ್ತು ಇತರ ಸ್ಥಳಗಳಲ್ಲಿರುವ ವೀರಶೈವ ವಿದ್ಯಾರ್ಥಿಗಳಿಗಾಗಿ ನಿಲಯಗಳನ್ನು ನಿರ್ಮಿಸಿ ಅವನ್ನು ನಡೆಸಿಕೊಂಡು ಬರುವುದು, ವಿದ್ಯಾರ್ಥಿವೇತನಗಳನ್ನು ಕೊಡುವುದರ ಮೂಲಕ ಬಡ ವಿದ್ಯಾರ್ಥಿಗಳಿಗೆ ಸಹಾಯಮಾಡುವುದು, ಮತ್ತೂ ಸಾಮಾನ್ಯತಃ ಈ ಪಂಗಡದ ಸಾಂಪತ್ತಿಕ, ನೈತಿಕ ಮತ್ತೂ ಸಾಮಾಜಿಕ ಪುರೋವೃದ್ಧಿಗೆ ಗಮನಕೊಡುವುದು-ಇವುಗಳೇ ಈ ಸಂಘದ ಉದ್ದೇಶವಾಗಿದೆ. ಈ ಉದ್ದೇಶಸಿದ್ಧಿಗಾಗಿ ಒಂದು ನಿಧಿಯು (ಫಂಡು) 1905ನೆಯ ಇಸವಿಯಲ್ಲಿ ಏರ್ಪಡಿಸಲ್ಪಟ್ಟಿತು; ಮತ್ತು ಅದರಿಂದ ಹುಟ್ಟುವಳಿಯಾದ ಬಡ್ಡಿಯಿಂದಲೇ ಸಾಮಾನ್ಯವಾಗಿ ಈ ಸಂಘವು ತನ್ನ ಕೆಲಸಗಳನ್ನು ನಡೆಯಿಸಿಕೊಂಡು ಬಂದಿದೆ. ಈಗ ಈ ಸಂಘಕ್ಕೆ ಮೈಸೂರಿನ ಎಲ್ಲಾ ಭಾಗಗಳಿಂದಲೂ 254 ಜನ ಸದಸ್ಯರು (ಮೆಂಬರು) ಗಳಾಗಿರುತ್ತಾರೆ. 1909 ನೆಯ ಇಸವಿಯಲ್ಲಿ ಸರ್ಕಾರದವರು ಈ ಸಂಘದ ಗೌರವ ಮತ್ತೂ ಪ್ರತಿನಿಧೀಭೂತಲಕ್ಷಣಗಳನ್ನು ಪರಿಗಣಿಸಿ, ಈ ಸಂಘದವರು ಅನುಕೂಲವಾದ ಬಡ್ಡಿಯ ದರಗಳ ಮೇಲೆ ಒಂದು ಲಕ್ಷ ರೂಪಾಯಿಗಳ ಪರಿಮಿತಿಯವರೆಗೆ ಚಂದಾವನ್ನು ಶೇಖರಿಸಿ ಸರ್ಕಾರಿ ಖಜಾನೆಯಲ್ಲಿ ಡಿಪಾಜಿಟ್ಟಾಗಿಡಲು ಅನುಜ್ಞೆಯನ್ನು ದಯೆಪಾಲಿಸಿದರು. ಅದೇ ವರ್ಷ ಈ ಸಂಘವು 1904 ನೆಯ ಇಸವಿಯ 3 ನೆಯ ರೆಗ್ಯುಲೇಷನ್ (ಸೊಸೈಟಿಗಳ ರಿಜಿಸ್ಟ್ರೇಷನ್ ಕಾನೂನು) ಅನುಸರಿಸಿ ರಿಜಿಸ್ಟರ್ ಮಾಡಿಸಲ್ಪಟ್ಟಿತು. 1913 ನೆಯ ಇಸವಿ ಜುಲೈ ತಿಂಗಳಲ್ಲಿ ಈ ಸಂಘದವರು ಪ್ರಜಾಪ್ರತಿನಿಧಿ ಸಭೆಗೆ ತಮ್ಮ ಮೆಂಬರುಗಳಲ್ಲೊಬ್ಬರನ್ನು ಚುನಾಯಿಸಿ ಕಳುಹಿಸಲು ಅನುಜ್ಞೆಯನ್ನು ಕೊಟ್ಟರು. ಈಚೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸುವುದಕ್ಕಾಗಿ ಅದೇರೀತಿಯ ರಿಯಾಯತಿಯನ್ನು ತೋರಿಸಿರುತ್ತಾರೆ.

4. ಈ ಸಂಘದ ಜನರಲ್ ಮತ್ತು ಮ್ಯಾನೇಜಿಂಗ್ ಕಮಿಟಿಗಳವರು ತಮ್ಮ ಮೀಟಿಂಗುಗಳನ್ನು ಕ್ರಮವಾಗಿ ಜರುಗಿಸಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ; ಮತ್ತೂ ಇವರುಗಳು ತೋರಿಸಿದ ಉತ್ಸಾಹ ಮತ್ತೂ ಲವಲವಿಕೆಗಳು ಈ ಪಂಗಡದವರಲ್ಲಿ ಈಗ ಕಂಡುಬರುತ್ತಿರುವ ವಿದ್ಯಾಭಿಲಾಷೆ ಮತ್ತೂ ಸಾಮಾನ್ಯ ಜಾಗರೂಕತೆಗಳಿಗೆ ಬಹುಮಟ್ಟಿಗೆ ಸಹಕಾರಿಗಳಾದುವು. ಈ ಸಂಘವು ಇದುವರೆಗೆ 293 ಮಂದಿ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳ ರೂಪದಲ್ಲಿ ಒಟ್ಟು 9,285 ರೂಪಾಯಿಗಳನ್ನು ಕೊಟ್ಟಿರುವುದು ಸಂತೋಷಕರವಾದ ವಿಷಯವಾಗಿದೆ. ಈ ಹಣವು ದೊಡ್ಡಮನುಷ್ಯರಿಂದ ಆಗಾಗ್ಗೆ ಬಂದ ಮೊಬಲಗಿನಿಂದಲೂ ಈ ಸಂಸ್ಥಾನದ ಎಲ್ಲ ಕಡೆಗಳಲ್ಲಿರುವ ಈ ಪಂಗಡದ ಮೆಂಬರುಗಳು ಲಗ್ನ ಮತ್ತು ಇತರ ಶುಭಸಮಯಗಳಲ್ಲಿ ದಾನರೂಪವಾಗಿ ಮಾಡಿದ ಸಾಮಾನ್ಯ ಧನಸಹಾಯದಿಂದಲೂ, ಮುಖ್ಯವಾಗಿ ಈ ಸಂಘದ ಫಂಡಿನಿಂದ ಹುಟ್ಟುವಳಿಯಾದ ಬಡ್ಡಿಯಿಂದಲೂ ಒದಗಿಸಲ್ಪಟ್ಟಿರುತ್ತದೆ. ಈ ಸಂಘದ ಮೂಲಧನವು ಈಗ 23,802 ರೂಪಾಯಿಗಳಾಗಿರುತ್ತದೆ; ಮುಖ್ಯವಾಗಿ ಇದೆಲ್ಲವೂ ಮೈಸೂರು ಸರ್ಕಾರದವರಲ್ಲಿ ಇಡಲ್ಪಟ್ಟಿರುತ್ತದೆ.

5. ಬೆಂಗಳೂರು ಪಟ್ಟಣದಲ್ಲಿ ನಮ್ಮ ಪಂಗಡದ ಗೌರವಸ್ಥರಾದ ವರ್ತಕರಾಗಿದ್ದ ಗತಿಸಿದ ಮ|| ರಾ|| ಸೂಲಬೆಲೆ ನಂಜಪ್ಪನವರು ಉರುಫ್ ಶಾಮಣ್ಣನವರು ಇ ಸಂಘಕ್ಕೆ ಅದರ ಮೂಲಧನಕ್ಕಾಗಿ, ಈಗ 40,000 ರೂಪಾಯಿ ಬೆಲೆಬಾಳುವ ತಮ್ಮ ಆಸ್ತಿಯನ್ನೆಲ್ಲಾ 1915 ನೆಯ ಇಸವಿಯಲ್ಲಿ ಮೃತಿಪತ್ರದ ಮೂಲಕ ಬರೆದುಕೊಟ್ಟರು. ಈ ಆಸ್ತಿಯ ಹಣವು ಈಗ ಶೇಖರಿಸಲ್ಪಡುತ್ತಲಿರುವುದರಿಂದ ಸದ್ಯದಲ್ಲಿಯೇ ಸಂಘದ ಮೂಲಧನವು 70,000 ರೂ. ಗಳಾಗಬಹುದೆಂದು ನಂಬಿಕೆಯಿದೆ. ಆದಕಾರಣ ಈ ಉದಾರವಾದ ದಾನವನ್ನು ಮಾಡಿ ಘನವಾದ ಮೇಲು ಪಂತಿಯನ್ನು ಹಾಕಿದುದಕ್ಕಾಗಿ ಈ ದಾತರಿಗೆ ಸಂಘದವರು ತಮ್ಮ ಕೃತಜ್ಞತಾಭಾವನೆಯನ್ನು ಈ ಸಂದರ್ಭದಲ್ಲಿ ಪುನಃ ವ್ಯಕ್ತಪಡಿಸುವವರಾಗಿದ್ದಾರೆ.

6. ಈ ಸಂಘದ ಪ್ರಯೋಜನವು ಇದರಲ್ಲಿರುವ ಮೂಲಧನದಮೇಲೆ ಬಹುಮಟ್ಟಿಗೆ ನಿರ್ಭರವಾಗಿದೆ. ಮೂಲಧನಕ್ಕಾಗಿ ನಾವು ಮಾಡಿದ ಪ್ರಾರ್ಥನೆಗಳಿಗೆ ವೀರಶೈವ ಭ್ರಾತೃಗಳು ಇದುವರೆಗೆ ಮಾಡಿರುವ ಸಹಾಯಕ್ಕಾಗಿ ಅವರಿಗೆ ಸಂಘದವರು ಕೃತಜ್ಞರಾಗಿರುತ್ತಾರೆ; ಆದರೆ ಸಂಘದ ಪ್ರಯೋಜನವನ್ನು ಪರಿಮಿತಿಗೊಳಿಸುವ ಆದರ ಅಲ್ಪವಾದ ಉಪಪತ್ತಿಯು ಸರ್ವದಾ ಕೊರತೆಯನ್ನುಂಟುಮಾಡಿದೆ. ಆದುದರಿಂದ ಈ ವಿಷಯದಲ್ಲಿ ಧನಸಹಾಯವನ್ನು ಮಾಡಲು ಶಕ್ತರಾಗಿರುವ ಸಮಾಜಬಾಂಧವರಿಂದ ಇತೋಪ್ಯತಿಶಯವಾಗಿ ಉದಾರವಾದ ಸಹಾಯವು ದೊರೆಯುವುದೆಂಬ ದೃಢತರವಾದ ನಂಬಿಕೆಯಿದೆ.

7. ಈ ಪಂಗಡದವರಲ್ಲಿ ಲೋ ಅರ್ ಸೆಕೆಂಡರಿ, ಹೈಸ್ಕೂಲು ಮತ್ತು ಯೂನಿವರ್ಸಿಟಿ ವಿದ್ಯಾಭ್ಯಾಸಗಳಿಗಾಗಿ ಹೆಚ್ಚುತ್ತಿರುವ ಲವಲವಿಕೆಯು ಈಗಣ ಸ್ಥಿತಿಯಲ್ಲಿ ಒಂದು ವಿಶೇಷ ಲಕ್ಷಣವಾಗಿದೆ. ಮೈಸೂರು ಮತ್ತು ಇತರ ಸ್ಥಳಗಳಲ್ಲಿರುವ ವಿದ್ಯಾರ್ಥಿಗಳಲ್ಲದೆ, ಬೆಂಗಳೂರು ಸ್ಕೂಲುಗಳು ಮತ್ತು ಕಾಲೇಜುಗಳಲ್ಲೇ ಸುಮಾರು 197 ಮಂದಿ ವೀರಶೈವ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿರುವರೆಂಬ ಸಂಗತಿಯು ಮಹಾಸ್ವಾಮಿಯವರಿಗೆ ಸಂತೋಷವನ್ನುಂಟುಮಾಡದೆ ಇರಲಾರದು.

8. ಸರ್ಕಾರಿ ನಿಲಯ (ಹಾಸ್ಟೆಲ್) ಗಳಲ್ಲಿ ವೀರಶೈವ ವಿದ್ಯಾರ್ಥಿಗಳ ಭೋಜನಾದಿಗಳಿಗೆ ತಕ್ಕ ಅನುಕೂಲಗಳಿಲ್ಲದಿರುವುದರ ದೆಸೆಯಿಂದ, ಸೆಕೆಂಡರಿ ಮತ್ತು ಪ್ರೌಢವಿದ್ಯಾವ್ಯಾಸಂಗಕ್ಕಾಗಿ ಡಿ|| ಕಸಬೆಗಳಲ್ಲಿ ಏರ್ಪಡಿಸಿರುವ ಸೌಕರ್ಯಗಳ ಸಂಪೂರ್ಣ ಪ್ರಯೋಜನವನ್ನು ನಮ್ಮ ಬಾಲಕರು ಪಡೆಯಲು ಇದುವರೆಗೂ ಅಸಮರ್ಥರಾಗಿದ್ದಾರೆ. ಪ್ರೌಢ ವಿದ್ಯಾವ್ಯಾಸಂಗಕ್ಕಾಗಿ ಬೆಂಗಳೂರಿಗೆ ಬರುವ ಕೆಲವುಮಂದಿ ಹುಡುಗರು ಕೂಡ ಅನಾರೋಗ್ಯಕರವಾದ ಮತ್ತು ಅನುಪಯುಕ್ತವಾದ ಅವಸ್ಥೆಗಳಿಗೆ ಗುರಿಯಾಗಿದ್ದಾರೆ. ಇವರಿಗೋಸ್ಕರ ಒಂದು ಅನುಕೂಲವಾದ ನಿಲಯವನ್ನು ಏರ್ಪಡಿಸುವುದಾವಶ್ಯಕವೆಂಬ ವಿಷಯವು ಬಹುಕಾಲದ ಹಿಂದೆಯೇ ಎಂದರೆ, 1905 ನೆಯ ಇಸವಿಯಲ್ಲಿಯೇ ನಮಗೆ ಗೊತ್ತಾಯಿತು; ಆಗ ಅತ್ತಿಬೆಲೆಯ ಮ|| ರಾ|| ಸಿದ್ಧಬಸಪ್ಪನವರು ಬೆಂಗಳೂರಿನಲ್ಲಿ ಒಂದು ನಿಲಯ ನಿರ್ಮಾಣಕ್ಕಾಗಿ 10,000 ರೂಪಾಯಿಗಳನ್ನು ದಾನವಾಗಿ ಕೊಡುವುದಾಗಿ ಉದಾರವಾದ ವಾಗ್ದಾನಮಾಡಿದರು. ಒಂದು ಖಾಲಿ ನಿವೇಶನಕ್ಕಾಗಿ 1908 ನೆಯ ಇಸವಿಯಲ್ಲಿ ನಾವು ಸರ್ಕಾರದವರಿಗೆ ಬರೆದುಕೊಂಡೆವು. ಅಂದಿನಿಂದಲೂ ಒತ್ತಿ ಕೇಳಿಕೊಳ್ಳುತ್ತಲೇ ಬಂದಿದ್ದೇವೆ, ಅನುಕೂಲವಾದ ನಿಲಯವು ನಿರ್ಮಿಸಲ್ಪಡುವುದರೊಳಗಾಗಿ ಯಾವುದಾದರೊಂದು ಏರ್ಪಾಟನ್ನು ಮಾಡಬೇಕೆಂದುದ್ದೇಶಿಸಿ, 1912 ನೆಯ ಇಸವಿಯಲ್ಲಿ 30 ಮಂದಿ ಬಾಲಕರಿಗೋಸ್ಕರ ವಿದ್ಯಾರ್ಥಿನಿಲಯವನ್ನು ಒಂದು ಬಾಡಿಗೆಯ ಮನೆಯಲ್ಲಿ ಆರಂಭಿಸಿದೆವು. ಬಾಲಕರ ಸಂಖ್ಯೆಯು ಏಕರೀತಿಯಲ್ಲಿ ಹೆಚ್ಚುತ್ತ ಬಂದಿತು. ಈಗ ವಿವಿಧ ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವವರು ಆಶ್ರಮದಲ್ಲಿ 50 ಮಂದಿ ವರೆಗೂ ಇದ್ದಾರೆ. ಕಲಿಜಿಯೇಟ್ ಹೈಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವ ನಮ್ಮ ಬಾಲಕರ ಭೋಜನ ವಸತಿಗಳಿಗಾಗಿ ವೆಸ್ಲಿಯನ್ ಮಿಷನ್ ಅಧಿಕಾರಿಗಳು ದಯೆಯಿಟ್ಟು ಪ್ರತ್ಯೇಕವಾದ ಮತ್ತು ಅನುಕೂಲವಾದ ಏರ್ಪಾಟುಗಳನ್ನು ಮಾಡಿರುತ್ತಾರೆ. ಮೊದಲು ಅತ್ಯಲ್ಪಮಂದಿ ವೀರಶೈವ ವಿದ್ಯಾರ್ಥಿಗಳಿದ್ದ ಕಾಲೇಜು ತರಗತಿಗಳಲ್ಲಿ ಅವರ ಸಂಖ್ಯೆ ಸ್ವಲ್ಪಮಟ್ಟಿಗೆ ಹೆಚ್ಚುತ್ತಾಬರಲು ಸೆಂಟ್ರಲ್ ಕಾಲೇಜಿನ ಹಾಸ್ಟೆಲಿನಲ್ಲಿ ಈ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೂ ಅವರ ಭೋಜನಕ್ಕೂ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಮ|| ಟೇಟರವರ ಮೂಲಕ ಸೆಂಟ್ರಲ್ ಕಾಲೇಜಿನ ಹಾಸ್ಟೆಲ್ ಮ್ಯಾನೇಜಿಂಗ್ ಕಮಿಟಿಯವರಿಗೆ ವಿಜ್ಞಾಪಿಸಿಕೊಂಡು ಸ್ವಂತ ಖರ್ಚಿನಿಂದಲೇ ಒಂದು ಅಡುಗೆಯ ಮನೆಯನ್ನೂ ಸಹ ಕಟ್ಟಿಸಿದೆವು. ನಮ್ಮ ಈ ವಿಜ್ಞಾಪನೆಯು ಚರಿತಾರ್ಥವಾಯಿತೆಂದು ಕೃತಜ್ಞತೆಯಿಂದ ತಿಳಿಸುವೆವು ಕಾಲೇಜು ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವ ಅಲ್ಪಸಂಖ್ಯಾಕರಾದ ನಮ್ಮ ಬಾಲಕರಿಗೆ ಈಗ ಕಾಲೇಜು ಹಾಸ್ಟೆಲಿನಲ್ಲಿ ವಸತಿಯು ಏರ್ಪಡಿಸಲ್ಪಟ್ಟಿದೆ. ನಾವು ಕೊಡಲು ಶಕ್ಯವಾಗಿರುವ ಧನಸಹಾಯವು ಅಲ್ಪವಾಗಿದೆ, ಸ್ಪೆಷಲ್ ಗೌರ್ನಮೆಂಟ್ ವಿದ್ಯಾರ್ಥಿ ವೇತನಗಳನ್ನು ಪಡೆಯದಿರುವಂತಹವರ ಪೋಷಣೆಯ ವೆಚ್ಚವಾದರೊ ಹೆಚ್ಚಾಗಿದೆ. ಇದಲ್ಲದೆ, ಸರ್ಕಾರಿ ಸೆಕೆಂಡರಿ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಬಾಲಕರಿಗೆ ಹಾಸ್ಟೆಲುಗಳಿಲ್ಲವೇ ಇಲ್ಲ. ವರ್ಷವರ್ಷಕ್ಕೆ ಹೆಚ್ಚುತ್ತಿರುವ ಬಾಲಕರ ವಸತಿಗಾಗಿ ಅನುಕೂಲವಾದ ಮತ್ತು ವಿಶಾಲವಾದ ಒಂದು ಕಟ್ಟಡದ ಆವಶ್ಯಕತೆಯು ಈ ರೀತಿಯಲ್ಲಿ ಹೆಚ್ಚಿರುತ್ತದೆ.

9. ನಮ್ಮ ಪಂಗಡದಲ್ಲಿ ಒಳ್ಳೆಯ ಸ್ಥಿತಿಗೆ ಬರಬಹುದೆಂಬ ಭರವಸೆಯುಳ್ಳ ಬಡ ಬಾಲಕರಲ್ಲಿ ತೀವ್ರವಾದ ವಿದ್ಯಾಭಿಲಾಷೆಯು ಅಂಕುರಿಸಿದ ಸಮಯದಲ್ಲಿ ಗತಿಸಿದ ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆಗಳಿಗೆ ಸಂಬಂಧಿಸಿದ ಧರ್ಮಭೋಜನಾಲಯ (ಫ್ರೀ ಬೋರ್ಡಿಂಗ್ ಹಾಸ್ಟೆಲ್) ವು ಬಹುಮಟ್ಟಿಗೆ ನಮ್ಮ ತೊಂದರೆಗಳನ್ನೂ ಚಿಂತೆಯನ್ನೂ ದೂರಮಾಡಿತು. ವಿಶೇಷ ಸನ್ಮಾನ್ಯರೂ, ಲೋಕೋಪಕಾರಿಗಳೂ ಆದ ಆ ದೊಡ್ಡಮನುಷ್ಯರ ಹಾಸ್ಟೆಲ್ ಮತ್ತು ಇತರ ಧರ್ಮಕಾರ್ಯಗಳಿಗಾಗಿ ನಾವು ಅವರಿಗೆ ನಿರಂತರವೂ ಕೃತಜ್ಞತಾ ಋಣಬದ್ಧರಾಗಿದ್ದೇವೆ ಈ ಸಂಘಕ್ಕೆ ಹಲವು ಸತ್ಸಹಾಯಗಳನ್ನು ಮಾಡಿರುವ ಈ ಧರ್ಮಕಾರ್ಯಗಳ ಮೇಲ್ವಿಚಾರಕರ್ತರು (ಟ್ರಸ್ಟೀ) ಗಳಿಗೂಕೂಡ ನಮ್ಮ ವಂದನೆಗಳು ಸಲ್ಲತಕ್ಕುವಾಗಿವೆ.

10. ಮೂವತ್ತುಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲದೆ ವೆಚ್ಚವಾಗುವ ಒಂದು ಹಾಸ್ಟೆಲಿನ ಕಟ್ಟಡಕ್ಕಾಗಿ 15,000 ರೂ. ಗಳನ್ನು ಡಿಪಾಜಿಟ್ಟು ಇಡುವುದಾದರೆ, ಒಂದು ಖಾಲಿ ನಿವೇಶನವನ್ನು ಕೊಡುವೆನೆಂದು ಎಷ್ಟೋ ಪತ್ರವ್ಯವಹಾರಗಳನ್ನು ನಡೆಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಡೆಪ್ಯುಟೇಷನ್ ಮೂಲಕ ಕೇಳಿಕೊಂಡುದರಮೇಲೆ ಅಪ್ಪಣೆಯನ್ನು ದಯೆಪಾಲಿಸಿದರು. ಅನಂತರ ಸಹಾಯಕ್ಕಾಗಿ ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ಪ್ರಾರ್ಥಿಸಿಕೊಂಡೆವು. ನಮ್ಮ ಪ್ರಾರ್ಥನೆಯು ತತ್ಕ್ಷಣವೇ ಫಲಪ್ರದವಾಯಿತು. ಮ|| ರಾ|| ಸಿದ್ಧಬಸಪ್ಪನವರಿಂದ ಹಿಂದೆಯೇ ಸಂದಾಯವಾಗಿದ್ದ 10,000 ರೂ. ಗಳೂ ಸೇರಿ 15,000 ರೂ. ಗಳ ಡಿಪಾಜಿಟ್ಟು ಕಟ್ಟಲನುಕೂಲವಾಗುವಂತೆ ಶ್ರೀಯವರು 5,000 ರೂ. ಗಳನ್ನು ದಯೆಪಾಲಿಸಿದರು. 15000 ರೂ. ಗಳ ಒಟ್ಟು ಮೊತ್ತವು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಡಲ್ಪಟ್ಟು, ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರ ಮುಂದೆ ಶ್ರೀ ಮಠದ ಏಜಂಟರಿಂದ ಕಟ್ಟಡದ ನಿರ್ಮಾಣಕ್ಕಾಗಿ ಆವಶ್ಯಕವಾದ ಕರಾರು ಬರೆಯಲ್ಪಟ್ಟಿತು. ಖಾಲಿ ನಿವೇಶನವು ಕಳೆದ ಜೂನ್ ತಿಂಗಳಲ್ಲಿ ನಮಗೆ ಕ್ರಮವಾಗಿ ವಹಿಸಲ್ಪಟ್ಟಿತು. ಶ್ರೀಯವರು ಈಚೆಗೆ ಮತ್ತೆ 25,000 ರೂ. ಗಳನ್ನು ಅನುಗ್ರಹಿಸಿ, ಅವಶ್ಯಕ ಬಿದ್ದರೆ ಇನ್ನೂ 10,000 ರೂ. ಗಳನ್ನು ದಯೆಪಾಲಿಸುವುದಾಗಿ ಅಭಯಪ್ರದಾನಮಾಡಿದ್ದಾರೆ. ಅಂತು ಹಾಲಿ ನಮ್ಮಲ್ಲಿರತಕ್ಕ ಒಟ್ಟು 40,000 ರೂಪಾಯಿಗಳಲ್ಲದೆ, ಇನ್ನೂ 10,000 ರೂ. ವಾಗ್ದಾನಮಾಡಲ್ಪಟ್ಟಿದೆ. ಈ ಮೊತ್ತಕ್ಕೆ ಸಮನಾದ ಗ್ರಾಂಟನ್ನು ಸರ್ಕಾರದವರಿಂದ ಪಡೆಯುವುದರಿಂದಲೂ, ಹಾಸ್ಟಲುಗಳನ್ನೊದಗಿಸುವುದರಲ್ಲಿ ವಿಶೇಷ ಶ್ರದ್ಧೆಯುಳ್ಳವರಾಗಿರುವ ಕರುಣಾಶಾಲಿಗಳಾದ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಮ|| ರೆಡ್ಡಿಯವರ ತೀವ್ರ ಸಹಾಯದಿಂದಲೂ ಕಟ್ಟಡವು ಜಾಗ್ರತೆಯಾಗಿ ಕಣ್ಗೊಳಿಸುವಂತಾಗಿ, ಯಾರ ಅಮೃತ ಹಸ್ತದಿಂದ ಶಂಕುಸ್ಥಾಪನೆ ಮಾಡಲ್ಪಡುವುದೋ ಆ ಘನತೆಯೊಂದಿದ ಮಹಾಸ್ವಾಮಿಯವರಿಗೂ, ಕಟ್ಟಡವು ಮುಗಿದಮೇಲೆ ಅದು ಯಾರ ಹೆಸರನ್ನು ತಳೆವುದೋ ಆ ಜಗದ್ಗುರುಯತೀಂದ್ರರಿಗೂ ಸರ್ವ ವಿಧದಲ್ಲಿಯೂ ಒಪ್ಪುವಹಾಗೆ ಪರಿಣಮಿಸುವುದೆಂದು ದೃಢಸಂಕಲ್ಪರಾಗಿದ್ದೇವೆ. ಅತ್ಯುದಾರವಾದ ಈ ವರಪ್ರದಾನಮಾಡಿದುದಕ್ಕೋಸ್ಕರ ಶ್ರೀ ಜಗದ್ಗುರುಗಳವರಿಗೆ ನಾವು ನಮ್ಮ ಕೃತಜ್ಞತಾ ಭಕ್ತಿ ವಿಶೇಷಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇವೆ.

11. ತಮ್ಮ ಶಿಷ್ಯವರ್ಗದ ಕ್ಷೇಮಾಭಿವೃದ್ಧಿಗಳಿಗಾಗಿ ಸರ್ವದಾ ಪ್ರದರ್ಶಿಸುತ್ತ ಬಂದಿರುವ ವಿಚಕ್ಷಣಾ ವಿಶಿಷ್ಟ ಸದ್ಭಾವನೆಯ ಸ್ಮಾರಕ ಸ್ತಂಭದಂತೆ ಚಿರಕಾಲ ಬೆಳಗುವ ಅತ್ಯುದಾರವಾದ ಈ ವರವನ್ನು ಪ್ರದಾನಮಾಡಿದುದಕ್ಕೋಸ್ಕರ ಶ್ರೀಜಗದ್ಗುರುಗಳವರಿಗೆ ನಾವು ನಮ್ಮ ಕೃತಜ್ಞತಾ ಭಕ್ತಿ ವಿಶೇಷಗಳನ್ನು ಈ ಸಂದರ್ಭದಲ್ಲಿ ಸಮರ್ಪಿಸುತ್ತೇವೆ. ಶ್ರೀಯವರಿಂದ ಉದಾರವಾದ ಸಹಾಯವನ್ನು ಹೊಂದುತ್ತಿರುವ ಹಲವು ವಿದ್ಯಾಸಂಸ್ಥೆಗಳಲ್ಲಿ ಇದೂ ಒಂದಾಗಿದೆಯೆಂಬುದನ್ನೂ, ಬೊಂಬಾಯಿ ಡಿಸ್ಟ್ರಿಕ್ಟುಗಳಲ್ಲೂ ಮೈಸೂರು ಸಂಸ್ಥಾನದಲ್ಲೂ ಜಾತಿ ಮತ ಭೇದಗಳನ್ನೆಣಿಸದೆ ಸಕಲ ಜನವರ್ಗಗಳ ಪಾತ್ರರಾದ ಮತ್ತೂ ಬಡವರಾದ ಹಲವುಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳ ರೂಪದಲ್ಲಿ ಪ್ರತಿವರ್ಷವೂ ಶ್ರೀಯವರು ವಿಶೇಷವಾಗಿ ಧನಸಹಾಯಮಾಡುತ್ತಿದ್ದಾರೆಂಬುದನ್ನೂ ಅರಿಕೆಮಾಡಲಪೇಕ್ಷಿಸುತ್ತೇವೆ.

12. ಗುಂಡ್ಲುಪೇಟೆಯ ತಾಲ್ಲೂಕಿನ ಮ|| ರಾ|| ಕಬ್ಬಳ್ಳಿ ಚೆನ್ನಬಸಪ್ಪನವರು ಮೈಸೂರು ಪಟ್ಟಣದಲ್ಲಿ ವೀರಶೈವ ಹಾಸ್ಟೆಲನ್ನು ಕಟ್ಟಿಸುವುದಕ್ಕೋಸ್ಕರ 30,000 ರೂ. ಗಳನ್ನು [illegible] ವುದಾಗಿ [illegible] ವಾಗ್ದಾನದಮೂಲಕ [illegible]

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಅಕ್ಟೋಬರ್ ತಾ|| ೨೬ನೆಯ ಭಾನುವಾರ.

ಜಯದೇವ ವೀರಶೈವ ವಿದ್ಯಾರ್ಥಿನಿಲಯ, ಬೆಂಗಳೂರು.

ಬೆಂಗಳೂರು ವೀರಶೈವ ವಿದ್ಯಾರ್ಥಿನಿಲಯ ಶಂಕುಸ್ಥಾಪನ ಮಹೋತ್ಸವದ ಸಾದ್ಯಂತ ವೃತ್ತಾಂತವನ್ನು ಬೇರೆ ಕಡೆಗೆ ಮುದ್ರಿಸಿರುತ್ತೇವೆ. ಸಂಸ್ಥಾನಕ್ಕೆಲ್ಲಾ ಕೇಂದ್ರಸ್ಥಾನವಾಗಿರುವ ಬೆಂಗಳೂರಿನಂಥ ಮುಖ್ಯಪಟ್ಟಣದಲ್ಲಿ ವಿದ್ಯಾಭ್ಯಾಸಮಾಡುವ ವೀರಶೈವ ವಿದ್ಯಾರ್ಥಿಗಳಿಗೆ ಒಂದು ಅನುಕೂಲವಾದ ನಿಲಯವಿಲ್ಲದಿದ್ದ ಕೊರತೆಯು ವರ್ಣನಾತೀತವಾಗಿದ್ದಿತು. ಅದು ಇಂದಿಗೆ ತೀರುವಂತಾಯಿತೆಂಬುದನ್ನು ಈ ಮಹೋತ್ಸವವು ಸೂಚಿಸಿರುವುದು. ವೀರಶೈವರ ವಿದ್ಯಾಭಿವೃದ್ಧಿಯ ಸದುದ್ದೇಶದಿಂದಲೇ ಜನ್ಮವೆತ್ತಿರುವ ವಿದ್ಯಾಭಿವೃದ್ಧಿ ಫಂಡ್ ಸಂಘವು ತಾನು ನೆರವೇರಿಸಬೇಕಾಗಿರುವ ಕಾರ್ಯಗಳಲ್ಲಿ ಒಂದು ಮುಖ್ಯವಾದ ಘಟ್ಟವನ್ನು ಈಗ ಸಾಧಿಸಿತೆಂದು ಹೇಳಬಹುದು. ಸದುದ್ದೇಶಕ್ಕೆ ಸಾಫಲ್ಯವು ಎಂದಿಗಾದರೊಂದುದಿನ ಇದ್ದೇಯಿರುವುದೆಂಬುದು ನಿಜ. ಈ ವಿದ್ಯಾರ್ಥಿನಿಲಯವನ್ನು ಬೆಂಗಳೂರಲ್ಲಿ ನಿರ್ಮಿಸಬೇಕೆಂಬ ಉದ್ದೇಶವು ಈಗ್ಗೆ ೧೪ ವರ್ಷಗಳ ಕೆಳಗೇ ಮೂಡಿದ್ದರೂ, ಅದಕ್ಕೆ ಉಚಿತಜ್ಞರಾದ ಮ|| ಸಿದ್ದಲಬಸವಪ್ಪನವರು ಉದಾರವಾದ ೧೦೦೦೦ ರೂ. ಗಳ ವಾಗ್ದಾನವನ್ನು ಮಾಡಿದ್ದರೂ, ಪರಿಪಾಕಸ್ಥಿತಿಗೆ ಬರುವುದಕ್ಕೆ ಇಷ್ಟು ಕಾಲವಾಯಿತು. ಕೈಕೊಂಡ ಸತ್ಕಾರ್ಯಗಳಲ್ಲೆಲ್ಲಾ ಜಯಸಿದ್ಧಿಗೊಳ್ಳುವುದನ್ನು ಸೂಚಿಸುವುದೋ ಎಂಬಂತಿರುವ ಜಯಶಬ್ದವೇ ಉಪನಾಮವಾದ ನಾಮವುಳ್ಳ ನಮ್ಮ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅನುಗ್ರಹಪ್ರಸಾದವು ಇದಕ್ಕೆ ಸೋಂಕಿದೊಡನೆಯೇ ಇದು ನವಚೈತನ್ಯಗೊಂಡು ಮೂರ್ತೀಭವಿಸುವಂತಾಯಿತು. ಈ ಸ್ವಾಮಿಗಳು ಪೀಠಾಧಿಪತ್ಯವನ್ನು ವಹಿಸಿದಾರಭ್ಯ ಸಮಾಜಾಭ್ಯುದಯಕ್ಕಾಗಿ ಲಕ್ಷಾಂತರ ದ್ರವ್ಯವನ್ನು ದಾನಮಾಡಿರುವುದಲ್ಲದೆ, ಸ್ವಸಮಾಜ ಪರಸಮಾಜವೆಂಬ ಭೇದವನ್ನಿಡದೆ ಅಪಾರವಾದ ಧನವನ್ನು ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಿರುತ್ತಾರೆ. ಅದರಲ್ಲಿ ನಮಗೆ ಜ್ಞಪ್ತಿಯಿರುವ ಮಟ್ಟಿಗೆ ಹೇಳುವುದಾದರೆ-ಕೊಲ್ಹಾಪುರದ ವೀರಶೈವವಿದ್ಯಾರ್ಥಿನಿಲಯಕ್ಕೆ ೨೦,೦೦೦, ಚಿತ್ರದುರ್ಗದ ಶ್ರೀ ಜಗದ್ಗುರು ವಿದ್ಯಾರ್ಥಿನಿಲಯಕ್ಕೆ ೨೦,೦೦೦, ಧಾರವಾಡದ ಜಗದ್ಗುರು ವಿದ್ಯಾರ್ಥಿನಿಲಯಕ್ಕೆ ೫,೦೦೦, ಧಾರವಾಡದ ಶ್ರೀ ಜಗದ್ಗುರು ಮುರುಘರಾಜೇಂದ್ರಶಾಲೆಗೆ ೧೦,೦೦೦, ಸಾಂಗಲಿಯ ವೀರಶೈವ ವಿದ್ಯಾರ್ಥಿನಿಲಯಕ್ಕೆ ೩,೦೦೦, ಸಿರ್ಸಿಯ ವೀರಶೈವವಿದ್ಯಾರ್ಥಿನಿಲಯಕ್ಕೆ ೩,೫೦೦, ಬಾಗಲಕೋಟೆ ವೀರಶೈವ ವಿದ್ಯಾರ್ಥಿನಿಲಯದ ಫಂಡಿಗೆ ೧,೦೦೦, ಸೊಲ್ಲಾಪುರದ ವೀರಶೈವವಿದ್ಯಾರ್ಥಿನಿಲಯದ ಫಂಡಿಗೆ ೧,೦೦೦, ಚಿತ್ರದುರ್ಗದ ಡಿಸ್ಟ್ರಿಕ್ಟ್ ಲೈಬ್ರರಿಗಾಗಿ ೫೦೦೦, ಕೊಲ್ಹಾಪುರದ ಶ್ರೀ ಜಯದೇವ ಲೈಬ್ರರಿಗಾಗಿ ೫,೦೦೦, ಧಾರವಾಡದ ಕರ್ನಾಟಕ ಕಾಲೇಜು ಫಂಡಿಗಾಗಿ ೫,೦೦೦, ಚಿತ್ರದುರ್ಗದ ಶ್ರೀಬೃಹನ್ಮಠದ ಮುಂದಣ ಶಾಲಾಭವನಕ್ಕೆ ೧,೦೦೦, ಕೊಲ್ಹಾಪುರದ ಜೈನ ಮರಾಠಾ ಮಹಮ್ಮದೀಯ ವಿದ್ಯಾರ್ಥಿನಿಲಯಕ್ಕೆ ೮೦೦, ಸತಾರೆಯ ಅಂಜುಮನ್ ಇಸ್ಲಾಮಿಯಾ ಸಂಘಕ್ಕೆ ೧೦೦, ಸವಣೂರು ಅಂಜುಮನ್ ಇಸ್ಲಾಮಿಯಸಂಘಕ್ಕೆ ೫೦೦, ಬಾನಕಲ್ಲಿನ ಮಹಮ್ಮದೀಯ ಶಾಲಾಗೃಹಕ್ಕಾಗಿ ೫೦೦, ಚಿತ್ರದುರ್ಗದ ಆರ್ಯನ್ ಸ್ಟೂಡೆಂಟ್ಸ್ ಭವನಕ್ಕಾಗಿ ೨೦೦, ಸಂಪಗಾಂವ ವೀರಶೈವ ಲೈಬ್ರರಿಗೆ ೧೦೦, ಇಂಗ್ಲೆಂಡಿಗೆ ಸಿವಿಲ್‌ಸರ್ವೀಸ್ ಅಭ್ಯಾಸಕ್ಕಾಗಿ ಹೋಗುತ್ತಿರುವ ಮಡಿವಾಳೇಶ್ವರ ಸರದಾರ್ ಬಿ.ಎ., ಯವರಿಗಾಗಿ ೫,೦೦೦, ಇವರಿಗಾಗಿಯೇ ಮುಂದೆ ಕೊಡಲು ವಾಗ್ದಾನಮಾಡಿರುವುದು ಮತ್ತೆ ೧೦,೦೦೦ ರೂ. ಅಲ್ಲದೆ ಪ್ರತಿವರ್ಷವೂ ಅನೇಕ ಸ್ಥಲಗಳಲ್ಲಿ ವಿದ್ಯಾರ್ಥಿಗಳ ವೇತನಕ್ಕಾಗಿಯೇ ೩,೦೦೦ ರೂ. ಗಳನ್ನು ದಾನಮಾಡುತ್ತಿರುವರು. ಮತ್ತು ಚಿತ್ರದುರ್ಗದ ಜಗದ್ಗುರು ವಿದ್ಯಾರ್ಥಿನಿಲಯದಲ್ಲಿರುವ ೧೭೦ ಮಂದಿ ವಿದ್ಯಾರ್ಥಿಗಳ ಊಟದ ವ್ಯವಸ್ಥೆಗಾಗಿ ಪ್ರತಿ ವರ್ಷವೂ ೧,೬೨೦ ರೂ. ಗಳನ್ನೂ, ತಿಪಟೂರು ಆನಂದಾಶ್ರಮದ ವಿದ್ಯಾರ್ಥಿಗಳ ಭೋಜನದ ವೆಚ್ಚಕ್ಕಾಗಿ ೨,೪೦೦ ರೂ.ಗಳನ್ನೂ, ಧಾರವಾಡದ ಜಗದ್ಗುರು ವಿದ್ಯಾರ್ಥಿನಿಲಯದ ಭೋಜನದ ವೆಚ್ಚಕ್ಕಾಗಿ ೩,೬೦೦ ರೂ. ಗಳನ್ನೂ ಪ್ರತಿವರ್ಷವೂ ಒದಗಿಸುತ್ತಿರುವರು. ಮತ್ತೂ ಧಾರವಾಡದಲ್ಲೂ ತಿಪಟೂರಿನಲ್ಲೂ ಸ್ಥಾಪಿತವಾಗಿರುವ ಸಂಸ್ಕೃತವೈದಿಕಪಾಠಶಾಲೆಗಳ ವೆಚ್ಚಕ್ಕಾಗಿ ವರ್ಷಂಪ್ರತಿ ೨,೬೦೦ ರೂ. ಗಳನ್ನು ಕೊಡುತ್ತಿರುವರು. ಈ ದಾನಪ್ರವಾಹವನ್ನು ನೋಡಲಾಗಿ ಬೆಂಗಳೂರ ಜಯದೇವ ವಿದ್ಯಾರ್ಥಿನಿಲಯದ ಕಟ್ಟಡಕ್ಕಾಗಿ ಶ್ರೀಗಳವರು ೩೦,೦೦೦ ರೂ. ಗಳನ್ನು ದಯಪಾಲಿಸಿದುದು ಅವರ ನಿಸರ್ಗಗುಣಕ್ಕೆ ಒಪ್ಪತಕ್ಕುದಾಗಿಯೇ ಇರುತ್ತದೆ. ಶ್ರೀ ನಿರಂಜನ ಜಗದ್ಗುರುಪೀಠಕ್ಕೆ ಈ ಸ್ವಾಮಿಗಳವರು ಹಕ್ಕುದಾರಿಕೆ ಅಥವಾ "ಬಿರಾದರ್ಕಿ" ವಿಕ್ರಯ ಇತ್ಯಾದಿಗಳ ಮೂಲಕದಿಂದೇನೂ ಅಲ್ಲದೆ, ಬೊಂಬಾಯಿಯ ಸಕಲ ಕರ್ನಾಟಕಪ್ರಾಂತ, ಮತ್ತು ಮೈಸೂರು, ಮದ್ರಾಸು, ಹೈದರಾಬಾದು ಪ್ರಾಂತಗಳೆಲ್ಲದುಂದಲೂ ಬಂದ ಸಕಲ ವೀರಶೈವಮಂಡಲದವರೂ ಓಟುಗಳನ್ನು ಕೊಟ್ಟು ಆರಿಸಿದುದರ ಮೂಲಕ ಸಕಲ ವೀರಶೈವಮಂಡಲಮಹಿತ ಜಗದ್ಗುರುಪಟ್ಟವನ್ನು ವಹಿಸಿದವರಾಗಿದ್ದಾರೆ. ಯಾವ ನಿರೀಕ್ಷಣೆಯಿಂದ ಆ ಸಮಾಜವೆಲ್ಲವೂ ಇವರನ್ನು ದೊಡ್ಡಪದವಿಗೆ ಹತ್ತಿಸಿತೋ ಅಂಥ ನಿರೀಕ್ಷಣೆಯನ್ನು ದ್ವಿಗುಣತ್ರಿಗುಣವಾಗಿ ಶ್ರೀಗಳವರು ಇಷ್ಟರೊಳಗೇ ಸಫಲಗೊಳಿಸಿದ್ದಾರೆ. ಮುಂದೆಯೂ ಹೀಗೆಯೇ ಇವರ ಕಡೆಯಿಂದ ಎಷ್ಟೋ ಸಮಾಜೋನ್ನತಿಯ ಕಾರ್ಯಗಳು ನಡೆಯುವುವಾಗಿವೆ. ಇಂಥ ಜಗದ್ಗುರುಗಳ ಆಶ್ರಯವು ಸದ್ಯಃ ನಮ್ಮ ಸಮಾಜಕ್ಕೆ ದೊರೆದಿರುವುದು ಸುಕೃತವಿಶೇಷವೇ ಸರಿ.

ಈ ಶ್ರೀಗಳವರು ಬೆಂಗಳೂರಿಗೆ ಬಿಜಯಮಾಡಿಸಿದ ಕಾಲವು ಸ್ಮರಣೀಯವಾದುದು. ಅಲ್ಲಿಯ ವಿದ್ಯಾರ್ಥಿನಿಲಯದ ಕಟ್ಟಡಕ್ಕಾಗಿ ೧೫ ಸಾವಿರ ರೂ. ಗಳನ್ನು ಕೊಡಲು ೨ ವರ್ಷಗಳ ಕೆಳಗೆ ತಾವು ವಾಗ್ದಾನಮಾಡಿದ್ದಾಗ್ಯೂ, ಕಾರ್ಯದ ಮಹತ್ತ್ವವನ್ನರಿತು ಆ ಸಾಹಾಯ್ಯದ್ರವ್ಯವನ್ನು ದ್ವಿಗುಣವಾಗಿ ಕೊಡಲು ಅಪ್ಪಣೆ ಮಾಡಿದುದಲ್ಲದೆ ಅಷ್ಟು ಹಣ (೩೦ ಸಾವಿರ) ವನ್ನೂ ಒಡನೆಯೇ ಸರ್ಕಾರದ ವಶಕ್ಕೆ ಸಲ್ಲಿಸಿಬಿಟ್ಟರು. ಅದರಿಂದಲೇ ಕಟ್ಟಡದ ಕಾರ್ಯಾರಂಭಕ್ಕೆ ಅನುಕೂಲಿಸಿತು. ಈಗ ಜತೆಗೂಡಿರುವ ೪೦ ಸಾವಿರ ರೂ. ಗಳಿಗೆ ಸಮನಾಗಿ ಎಂದರೆ ಇನ್ನು ೪೦ ಸಾವಿರ ರೂ. ಗಳನ್ನು ಸರ್ಕಾರದವರು ಇದಕ್ಕೆ ಸಹಾಯಮಾಡುವರು. ಒಂದುವೇಳೆ ಸಾಲದೆಬಂದರೆ ಮತ್ತೆ ೧೦ ಸಾವಿರ ರೂ. ಗಳು ಶ್ರೀಗಳವರದ್ವಾರಾ ದೊರೆಯುವುದು. ಆ ಬಳಿಕ ಅಷ್ಟೇ ಹಣವು ಸರ್ಕಾರದಿಂದಲೂ ದೊರೆಯುವುದು. ಹೀಗಾಗಿ ಈ ಕಟ್ಟಡವು ಬಹುಶಃ ೧ ಲಕ್ಷ ರೂ. ಮುಟ್ಟಿದ ಭವ್ಯಮಂದಿರವಾಗಿಯೂ, ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳವರ ಬೆಂಗಳೂರು ನಗರಾಗಮನ ಸಂದರ್ಭವನ್ನು ಶಾಶ್ವತವಾಗಿ ಸಾರುವ ಮಹಾಸ್ಮಾರಕ ಪ್ರತಿಷ್ಠಾಪನೆಯಾಗಿಯೂ, ಸಮಾಜಕ್ಕೆ ಮಹೋಪಕಾರಕವಾಗಿಯೂ ಪರಿಣಮಿಸುವುದೆಂಬುದಕ್ಕೆ ಸಂಶಯವಿಲ್ಲ. ಈ ಸಂದರ್ಭವಿಶೇಷದಿಂದ ಉಂಟಾದ ಒಂದಾನೊಂದು ಸಂಸ್ಕಾರವೋ ಎಂಬಂತೆ ಅನಿರೀಕ್ಷಿತವಾದ ಪ್ರೇರಣೆಯುಂಟಾಗಿ, ಮ|| ಕಬ್ಬಳ್ಳಿ ಚನ್ನಬಸಪ್ಪನವರು ರಾಜಧಾನಿಯಲ್ಲೂ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಲು 30 ಸಹಸ್ರ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನಮಾಡಿರುವುದೂ, ಇಷ್ಟರಲ್ಲೇ ಅದನ್ನು ಸರ್ಕಾರದ ವಶಪಡಿಸಲಿಕ್ಕಿರುವುದೂ ಸಹ ಸಮಾಜದವರೆಲ್ಲರಿಗೂ ಅತ್ಯಂತ ಸಂತೋಷಪ್ರದವಾಗಿರುವುದರಿಂದ, ಅವರ ಸಮಾಜಾಭಿಮಾನಕ್ಕಾಗಿ ಈ ಮೂಲಕ ಧನ್ಯವಾದವನ್ನರ್ಪಿಸುವೆವು.

ಶ್ರೀಮದ್ಯುವರಾಜರವರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದವರ ಪ್ರಾರ್ಥನೆಯನ್ನಂಗೀಕರಿಸಿ ಈ ನಿಲಯದ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಲು ದಯಮಾಡಿಸಿ ಅಮೋಘವಾದ ಹಸ್ತಸ್ಪರ್ಶದಿಂದ ಪ್ರತಿಷ್ಠಾಪನೆಯನ್ನು ಮಾಡಿ, ದಿವ್ಯವಾಣಿಯಿಂದ ವೀರಶೈವಸಮಾಜಕ್ಕೆ ಅಭ್ಯುದಯವನ್ನು ಕೋರಿ, ಆವಶ್ಯಕವಾದ ಬೆಂಬಲವನ್ನೀಯುವುದಕ್ಕೆ ಅಭಯದಾನ ಮಾಡಿ ಪ್ರೋತ್ಸಾಹಿಸಿದುದು, ವೀರಶೈವ ಸಮಾಜದವರ ಕರ್ತವ್ಯತತ್ಪರತೆಗೆ ಮತ್ತಷ್ಟು ಉತ್ತೇಜನಕಾರಿಯಾಯಿತೆಂದು ಸಂತೋಷದಿಂದ ನಾವು ಹೇಳುವೆವಲ್ಲದೆ ಇದಕ್ಕಾಗಿ ಶ್ರೀಮದ್ಯುವರಾಜರ ಸನ್ನಿಧಿಯಲ್ಲಿ ಸಮಾಜದ ಪರವಾದ ಕೃತಜ್ಞತಾವಂದನೆಗಳನ್ನರ್ಪಿಸುವೆವು.

ಮುಖ್ಯವಾಗಿ ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದ ಅಧ್ಯಕ್ಷರೇ ಮೊದಲಾದವರ ದೃಢಪ್ರಯತ್ನದಿಂದ ಈ ಮುಖ್ಯಕಾರ್ಯವು ಫಲೋನ್ಮುಖವಾದುದಕ್ಕಾಗಿ ಅವರೆಲ್ಲರನ್ನೂ ನಾವು ಈ ಮೂಲಕ ಅಭಿನಂದಿಸುವೆವಲ್ಲದೆ ಇತೋಽಪ್ಯತಿಶಯವಾದ ಸೌಕರ್ಯಗಳನೇಕಗಳು ಅವರಮೂಲಕ ಸಮಾಜಕ್ಕೆ ಲಭಿಸುವಂತಾಗಲೆಂದೂ, ವಿದ್ಯಾಭಿವೃದ್ಧಿಫಂಡು ಇನ್ನುಮೇಲೆ ತೀವ್ರವಾದ ಅಭ್ಯುದಯವನ್ನು ಹೊಂದಿ ಉದ್ದಿಷ್ಟಪರಿಮಿತಿಯನ್ನು ಹೊಂದುವಂತಾದೀತೆಂದೂ ನಿರೀಕ್ಷಿಸುತ್ತೇವೆ. ಆರಂಭಿಸಲ್ಪಟ್ಟಿರುವ ಕಟ್ಟಡದ ಕೆಲಸವನ್ನು ಶೀಘ್ರವಾಗಿ ನೆರವೇರಿಸಿ, ಇದರ ಶಂಕುಸ್ಥಾಪನವನ್ನು ಮಾಡಿರುವ ಶ್ರೀಮದ್ಯುವರಾಜರವರ ಮನಸ್ಸನ್ನು ಸಂತೋಷಪಡಿಸುವುದಲ್ಲದೆ, ಕಟ್ಟಡದ ಪ್ರವೇಶ ಮಹೋತ್ಸವವನ್ನು ಶ್ರೀಮನ್ಮಹಾರಾಜರವರಿಂದಲೇ ನಡೆಯಿಸುವುದಕ್ಕೆ ಅನುಕೂಲಪಡಿಸಿ ಸಮಾಜಬಾಂಧವರೆಲ್ಲರ ಮನ್ನಣೆಗೂ ಕೃತಜ್ಞತೆಗೂ ಸಂಘದವರು ಪಾತ್ರರಾಗುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಶ್ರೀ ಜಯದೇವ ವೀರಶೈವ ವಿದ್ಯಾರ್ಥಿನಿಲಯ ಶಂಕುಸ್ಥಾಪನ ಮಹೋತ್ಸವ.

ಬೆಂಗಳೂರಿನಲ್ಲಿ ಈ ಮಹೋತ್ಸವವು ಕಳೆದ ತಾ|| ೨೦ ನೆ ಬೆಳಗ್ಗೆ ಬಹಳ ವೈಭವದಿಂದ ಜರುಗಿತು. ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರ ವಿಶೇಷ ಪ್ರಯತ್ನದಿಂದಲೇ ಕಾರ್ಯಮುಖಕ್ಕೆ ಬಂದ ಈ ಪ್ರತಿಷ್ಠಾಪನೆಯು, ಆ ಸಂಘದವರ ಪ್ರಾರ್ಥನೆಯ ಪ್ರಕಾರ ಇದನ್ನು ನೆರವೇರಿಸಲು ಶ್ರೀಮದ್ಯುವರಾಜರವರು ದಯಾಪೂರ್ವಕರಾಗಿ ಅನುಮತಿಯನ್ನಿತ್ತು ದಯಮಾಡಿಸಿ ಸ್ವತಃ ಶಂಕುಸ್ಥಾಪನ ಮಹೋತ್ಸವವನ್ನು ಜರುಗಿಸಿದುದರಿಂದ ಅತಿಶಯ ಮಹತ್ವವನ್ನೂ ವಿಜೃಂಭಣೆಯನ್ನೂ ಪಡೆದುಕೊಂಡಿತು. ಈ ಸಮಾರಂಭಕ್ಕಾಗಿ ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದವರು ಸ್ಥಲದ ಮುಖ್ಯಾಧಿಕಾರಿಗಳು ಪ್ರಮುಖಜನರು ಮೊದಲಾದವರಿಗೇ ಅಲ್ಲದೆ ಹೊರಗಣ ಅನೇಕ ಸ್ಥಲಗಳವರಿಗೂ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ಅದರ ಮೇಲೆ ಹೊರಗಣಿಂದ ನೂರಾರುಮಂದಿ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಈ ಕಟ್ಟಡಕ್ಕಾಗಿ ಸರ್ಕಾರದವರು ಉಚಿತವಾಗಿ ದಯಪಾಲಿಸಿರುವ ಭೂಮಿಯು ಶೇಷಾದ್ರಿರೋಡಿನ ಪಕ್ಕದಲ್ಲಿ ಅತ್ಯಂತ ಪ್ರಶಸ್ತವಾದ ಸ್ಥಳದಲ್ಲಿರುತ್ತದೆ. ಬರೆಯಿಸಲ್ಪಟ್ಟಿರುವ ಕಟ್ಟಡದ ಮಾದರಿಯನ್ನು ಅವಲೋಕಿಸಿದರೆ, ಬಹುಶಃ ೧ ಲಕ್ಷ ಧನವ್ಯಯದಿಂದ ಸಿದ್ಧವಾಗುವ ಕಟ್ಟಡವು ೧೫೦ ಮಂದಿ ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾಗಿ, ಆ ಭಾಗವನ್ನೆಲ್ಲಾ ತನ್ನ ಸೌಂದರ್ಯದಿಂದ ಮನೋಹರಗೊಳಿಸಬಲ್ಲುದಾಗುವುದೆಂದು ಯೋಚಿಸಬಹುದಾಗಿದೆ. ಈ ಸ್ಥಲದಲ್ಲಿ ಸಭೆಗಾಗಿ ಚತುಸ್ತಂಭದ ಒಂದು ಅತಿ ವಿಶಾಲವಾದ ಪಟಗೃಹ (ಗುಡಾರವನ್ನು) ಪೂರ್ವಮುಖವಾಗಿ ಹಾಕಿಸಿ, ಆ ಬಯಲನ್ನೆಲ್ಲಾ ತೋರಣಗಳಿಂದಲೂ ಧ್ವಜಪಟಗಳಿಂದಲೂ ಬಾಳೆಗಂಬಗಳಿಂದಲೂ ಮನೋಹರವಾಗಿ ಅಲಂಕರಿಸಿದ್ದರು. ಆ ಪಟಗೃಹದ ಮುಂಗಡೆಯಲ್ಲಿಯೇ ಮೆಟ್ಟಿದ್ದ ಹದಿಯ ಮೇಲ್ಗಡೆ ಸುವರ್ಣಾಕ್ಷರಪಙ್ಕ್ತಿವಿರಾಜಿತವಾದ ಶಿಲೆಯು ತೂಗಗಟ್ಟಲ್ಪಟ್ಟಿದ್ದಿತು. ಸರ್ಕಾರಿ ಬ್ಯಾಂಡು ಘೋರ್ಗರೆಯುತ್ತಿದ್ದಿತು. ಬೆಳಗಿನ ೮ ಗಂಟೆಯಿಂದಲೇ ಸಭೆಗೆ ಜನರು ಬಂದು ಸೇರುವುದಕ್ಕೆ ಉಪಕ್ರಮಿಸಿದರು. ೧ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನರನ್ನು ಹಿಡಿಸುವಂತಿದ್ದ ಆ ಗುಡಾರದ ತುಂಬಾ ಜನರು ಕಿಕ್ಕಿರಿದುದರಿಂದ ಸಾವಿರಾರು ಮಂದಿಗಳು ಹೊರಗಡೆಯೇ ನಿಂತಿರಬೇಕಾಯಿತು. ಮಧ್ಯದಲ್ಲಿ ಇದಿರ್ಗಡೆ ಪೂರ್ವಮುಖವಾಗಿದ್ದ ಜಗತಿಯ ಮೇಲೆ ಶ್ರೀಮದ್ಯುವರಾಜರವರಿಗೂ, ದಿವಾನರಿಗೂ, ಅವರ ಬಲಪಕ್ಕದಲ್ಲಿ ಉತ್ತರಾಭಿಮುಖವಾಗಿದ್ದ ಜಗತಿಯ ಮೇಲೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಗೂ ಉಚಿತಾಸನಗಳು ಏರ್ಪಡಿಸಲ್ಪಟ್ಟಿದ್ದುವು. ಸಭೆಗೆ ದಯಮಾಡಿಸಿದ್ದ ಪ್ರಮುಖರಲ್ಲಿ ಮ|| ಗಳಾದ ದಿವಾನ್ ಸರ್ದಾರ್ ಕಾಂತರಾಜ ಅರಸಿನವರು, ಕೌನ್ಸಿಲರ್ ಹಂಜಾ ಹುಸೇನ್ ಸಾಹೇಬರು, ವಿದ್ಯಾಪೀಠದ ವೈಸ್‌ಚಾನ್ಸಲರಾದ ಎಚ್. ವಿ. ನಂಜುಂಡಯ್ಯನವರು, ಪೋಲೀಸ್ ಇನ್|| ಜನರಲ್ಲಾದ ವಿ. ಸುಬ್ರಹ್ಮಣ್ಯಯ್ಯರು, ವಿದ್ಯಾಭ್ಯಾಸದ ಇನ್|| ಜನರಲ್ ಮ|| ಸಿ. ಆರ್. ರೆಡ್ಡಿಯವರು, ಎಕ್ಸೈಜ್ ಕಮಿಷನರಾದ ಹಿ. ನಾರಾಯಣಯ್ಯಂಗಾರರು, ರಾ|| ಬ|| ಎಂ. ಶ್ಯಾಮರಾಯರು, ಮೇಜರ್ ಚಾಮರಾಜ ಅರಸ್‌ರವರು, ರಾ||ಬ|| ಅಣ್ಣಾಸ್ವಾಮಿ ಮೊದಲಿಯಾರ್, ಸಿ.ಐ.ಇ.ಯವರು, ರಾ|| ಬ|| ದೇಶಮುಖಿ ಶ್ಯಾಮರಾಯರು, ರಾ|| ಬ|| ಪ್ರಾಕ್ತನವಿಮರ್ಶನ ವಿಚಕ್ಷಣ ಆರ್. ನರಸಿಂಹಾಚಾರ್ಯರು, ರಾ|| ಸಾ|| ಸಿ. ಚನ್ನಯ್ಯನವರು, ಜನರಲ್‌ಸೆಕ್ರೆಟರಿ ಸಿ.ಎಸ್. ಬಾಲಸುಂದರಂ ಅಯ್ಯರವರು, ಟಿ. ಪರಮಶಿವಯ್ಯರ್‌ರವರು, ಬಿ. ರಾಮಸ್ವಾಮಯ್ಯನವರು, ಎನ್. ಟಿ. ಗೋಪಾಲಯ್ಯಂಗಾರರು, ವಿ. ರಂಗಸ್ವಾಮಿಯವರು, ಡಬ್ಲ್ಯೂ. ಸಿ. ರೋಜ್‌ರವರು, ಎನ್. ತ್ಯಾಗರಾಜಯ್ಯರ್‌ರವರು, ಡಿ. ಬಿ. ರಾಮಚಂದ್ರ ಮೊದಲಿಯಾರರು, ಕೆ. ಲಕ್ಷ್ಮೀನಾರಾಯಣ್ಣನವರು, ಬಿ. ಎಸ್. ರಾಣೋಜಿರಾಯರು, ಕೆ. ಎಚ್. ರಾಮಯ್ಯನವರು, ಎಲ್. ಶ್ರೀನಿವಾಸಯ್ಯಂಗಾರರು, ಎ. ಚಂಗಯ್ಯಶೆಟ್ಟರು, ಸಯ್ಯದ್‌ತಾಜ್ ಪೀರಾನ್‌ರವರು, ಅಬ್ಬಾಸ್‌ಖಾನರು, ಎಫ್. ಫರ್ನಾಂಡೀಜ್‌ರವರು, ಡಿಕ್ರೂಜ್‌ರವರು, ಬ್ಯಾ|| ವಿಜಯದೇವರವರು, ಎಸ್. ನಾರಾಯಣರಾಯರು, ಅನೇಕಮಂದಿ ಹಿಂದೂಮಹಮ್ಮದೀಯ ವರ್ತಕಶ್ರೇಷ್ಠರುಗಳು ಮೊದಲಾದವರು ತಂತಮ್ಮ ಪೀಠಗಳನ್ನು ಅಲಂಕರಿಸಿದ್ದರು. ಶ್ರೀ ಜಗದ್ಗುರುಗಳವರು ಪಂಡಿತಮಂಡಲೀಪರಿವೃತವಾದ ಮ್ಯಾನದಲ್ಲಿ ಕುಳಿತು ೯ ಗಂಟೆಯಹೊತ್ತಿಗೆ ದಯಮಾಡಿಸಿ ಮಗ್ಗುಲಿನ ಸಣ್ಣಡೇರೆಯಲ್ಲಿಳಿದರು. ಅಷ್ಟರಲ್ಲಿ ಶ್ರೀಮದ್ಯುವರಾಜರ ಸ್ವಾರಿಯೂ ದಯಮಾಡಿಸಿತು. ಶ್ರೀ ಜಗದ್ಗುರುಗಳು ಶುಭಾಶಂಸನೆಯನ್ನು ಮಾಡಿ ಶ್ರೀಮದ್ಯುವರಾಜರವರ ಕುಶಲಪ್ರಶ್ನವನ್ನು ಮಾಡುತ್ತಿರುವಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾದ ಪ್ರಮುಖ ವೀರಶೈವಮಂಡಲಿಯವರು ಇದಿರ್ಗೊಂಡು ಸಭಾಂಗಣಕ್ಕೆ ಕರೆತಂದರು. ಸಭಿಕರು ಆನಂದಕರಾಸ್ಫಾಲನವನ್ನು ಮಾಡುತ್ತಿರುವಲ್ಲಿ ಶ್ರೀಮದ್ಯುವರಾಜರವರೂ ಜಗದ್ಗುರುಗಳೂ ದಿವಾನ್ ಕಾಂತರಾಜ ಅರಸಿನವರೂ ಸಹ ತಂತಮ್ಮ ಅಗ್ರಪೀಠಗಳನ್ನಲಂಕರಿಸಿದರು.

ಪ್ರಥಮತಃ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಶ್ರೀಮದ್ಯುವರಾಜರವರ ಅಪ್ಪಣೆ ಪಡೆದು ಸಭಾಕಾರ್ಯಕ್ಕೆ ಉಪಕ್ರಮಿಸಿದರು. ವಿದ್ಯಾಭಿವೃದ್ಧಿಸಂಘದ ಮ್ಯಾನೇಜಿಂಗ್ ಕಮಿಟಿಯ ಪ್ರತಿಯೊಬ್ಬ ಸಭಿಕರ ಪರಿಚಯವನ್ನೂ ಶ್ರೀಮದ್ಯುವರಾಜರವರಿಗೆ ಮಾಡಿಸಿದ ಬಳಿಕ, ಇದೇ ಕಟ್ಟಡಕ್ಕಾಗಿ ೧೦ ಸಾವಿರ ರೂ. ಗಳನ್ನು ಸಹಾಯಮಾಡಿರುವ ಅತ್ತಿಬೆಲೆ ಸಾ|| ಸಿದ್ದಲಬಸಪ್ಪನವರನ್ನೂ, ಮೈಸೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಲು ೩೦ ಸಹಸ್ರ ರೂ. ಗಳನ್ನು ದಾನಮಾಡಲು ವಾಗ್ದಾನಂಗೈದಿರುವ ಗುಂಡಲುಪೇಟೆ ತಾ|| ಮ|| ಶ್ರೀಮಂತ ಕಬ್ಬಳ್ಳಿಚನ್ನಬಸಪ್ಪನವರನ್ನು ಸಹ ಪರಿಚಯಮಾಡಿಸಿದರು. ಬಳಿಕ ಆಸ್ಥಾನವಿದ್ವಾನ್ ವೇ|| ಎನ್. ಆರ್. ಕರಿಬಸವಶಾಸ್ತ್ರಿಗಳಿಂದ ರಚಿತವಾಗಿದ್ದ ಈ ಕೆಳಗಣ ಮಂಗಳ ಪದ್ಯಗಳನ್ನು ಸಂಗೀತ ವಿದ್ವಾನ್ ರಾಜೋಟಪ್ಪನವರು ನಾನಾ ರಾಗಗಳಿಂದ ಸುಶ್ರಾವ್ಯವಾಗಿ ಓದಿದರು. ಸಭಿಕರೆಲ್ಲರೂ ಪ್ರತಿಪದ್ಯವೂ ಮುಗಿದಾಗಲೂ ಆನಂದದಿಂದ ಕರಾಸ್ಫಾಲನಗಳನ್ನು ಮಾಡುತ್ತಿದ್ದರು. ಆ ಪದ್ಯಗಳಾವುವೆಂದರೆ—

ಕಂ|| ಕಲ್ಯಾಣಗಿರಿನಿವಾಸಂ | ಕಲ್ಯಾಣೀಪ್ರೇಮಕೋಶ
ನತುಲವಿಲಾಸಂ || ಕಲ್ಯಾಣವಿತತಿಯಂ ಸಾ | ಕಲ್ಯಂ ಕರುಣಿ
ಸುಗೆ ಪೊರೆಗೆ ಮಿಗೆ ಪರಮೇಶಂ ||೧||

ಶಾ||ವಿ|| ಶ್ರೀಮದ್ಭಾರತಭೂತಲಪ್ರಥಿತಸತ್ಪ್ರಾಚೀನಸಿಂಹಾ
ಸನ | ಸ್ವಾಮಿ ಶ್ರೀಯದುವಂಶಭೂಪತಿಲಕಂ ಕರ್ನಾಟರಾಷ್ಟ್ರ
ಪ್ರಜಾ || ಸ್ತೋಮೋಪಾರ್ಜಿತಪೂರ್ವಪುಣ್ಯಫಲರೂಪಂ ಧರ್ಮ
ಸತ್ಯಾಶ್ರಯಂ | ಚಾಮೇಂದ್ರಾತ್ಮಜ ಕೃಷ್ಣರಾಜನೆನಿಸುಂ ತಾ
ನಾಳ್ಗೆಭೂಕಾಂತೆಯಂ ||೨||

ಕಂ|| ಸರಸಂ ಧರ್ಮಪ್ರಭು ಯುವ | ಸರಸಂ ಸುವಿಚಾರಿ
ದೀನಬಂಧುವಮಾತ್ಯಂ || ಸರಸಂ ಪ್ರಜಾನುರಕ್ತಂ | ಪೆರತೇ
ನೀನಾಡ ಭಾಗ್ಯಕಿನ್ನೆಣೆಯುಂಟೇಂ ||೩||

ಕಂ|| ಸೀತಾಪತಿಗೆ ಸುಮಿತ್ರಾ | ಜಾತಂ ಪಾರ್ಥಂಗೆ
ಚಕ್ರಿ ಯಿರ್ದಂತೆವಿಶ್ವ || ಖ್ಯಾತವಿಭುಗೆ ಯುವರಾಜಂ | ಸೂ
ತನಮಂತ್ರೀಶಕಾಂತರಾಜನು ಮಿರ್ಪ್ಪರ್ ||೪||

ಕಂ|| ಅದರಿಂ ರಾಜ್ಯಕ್ಕೆ ಸುಖಂ | ಪದುಳಂ ಸುಶ್ರೀಯ
ಮತುಳವಿಜಯಶ್ರೀಯುಂ || ಸದಮಳಧರ್ಮಾಭ್ಯುದಯಂ | ವಿದಿ
ತಂ ದೊರೆಕೊಳ್ವುದರಿದೆ ಸಕಲೇಷ್ಟಾರ್ಥಂ ||೫||

ವಾ|| ಷ|| ಶ್ರೀನಿರಂಜನಜಗದ್ಗುರುಮೂರ್ತಿ ಜಯದೇವ |
ದಾನಸಾಹಾಯ್ಯದಿಂ ಬೆಂಗಳೂರ್ನಗರದೊಳ | ನೂನಮೆನೆ ರಚಿ
ಯಿಪ್ಪ ವೀರಶೈವೀಯವಿದ್ಯಾರ್ಥಿನಿಲಯಕೆ ಶಂಕುವಂ || ಸಾನು
ಕಂಪಂ ಪ್ರತಿಷ್ಠಿಸಲೆಯ್ದಿ ವಿದ್ಯಾಬ್ಧಿ | ಮಾನವಂ ಮೆರೆದ ಯುವ
ರಾಜನರಸಿಂಹೇಂದ್ರ | ನಾನಂದಸಾಂದ್ರ ನೆಮ್ಮಯ ಕೃತಜ್ಞತೆ
ಗೆಮೇಣ್ವಂದನೆಗೆ ಸತ್ಪಾತ್ರನು ||೬||

ಕಂ|| ವಿಜಯಿಕೆ ಕೃಷ್ಣೇಂದ್ರಂ ಸಾ | ನುಜನುಂ ಸಾಮಾ
ತ್ಯನುಂ ಸಪರಿವಾರಂ ಸ || ಪ್ರಜನುಂ ಚಾಮುಂಡಾಂಬಿಕೆ |
ವಿಜಯಮ ನೆಲ್ಲೆಡೆಯೊಳಿತ್ತು ಪಾಲಿಕೆ ಸುಚಿರಂ ||೭||

ಬಳಿಕ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಆಂಗ್ಲಭಾಷೆಯ ವಿಜ್ಞಾಪನ ಪತ್ರವನ್ನು ಗಂಭೀರವಾಗಿ ಓದಿದರು. ಅದರ ಭಾಷಾಂತರವು ಈ ಕೆಳಗೆ ಮುದ್ರಿಸಲ್ಪಟ್ಟಿದೆ.

ಶ್ರೀಮದ್ಯುವರಾಜ ಸರ್. ಶ್ರೀ ಕಂಠೀರವ ನರಸಿಂಹರಾಜ
ಒಡೆಯರ್, ಬಹದ್ದೂರ್, ಜಿ. ಸಿ. ಐ. ಇ., ಯವರ
ದಿವ್ಯ ಸನ್ನಿಧಾನದಲ್ಲಿ

ಬೆಂಗಳೂರಲ್ಲಿ ಕಟ್ಟಿಸಬೇಕೆಂದಿರುವ ವೀರಶೈವ ವಿದ್ಯಾರ್ಥಿನಿಲಯದ (ಹಾಸ್ಟಲ್) ಶಂಕುಸ್ಥಾಪನೋತ್ಸವವನ್ನು ನೆರವೇರಿಸಿಕೊಡಬೇಕೆಂಬ ನಮ್ಮ ವಿನೀತಪ್ರಾರ್ಥನೆಯನ್ನು ತಾವು ಕೃಪಾದೃಷ್ಟಿಯಿಂದ ಅಂಗೀಕರಿಸಿದುದಕ್ಕೋಸ್ಕರ ಮೈಸೂರು ಲಿಂಗಾಯತ ವಿದ್ಯಾವರ್ಧಕ ನಿಧಿಯ ಸಂಘದವರಾದ ನಾವುಗಳು ಈ ಸಂಸ್ಥಾನದಲ್ಲಿರುವ ವೀರಶೈವ ಜನವರ್ಗದ ಪರವಾಗಿ ತಮಗೆ ನಮ್ಮ ಕೃತಜ್ಞತಾಭಕ್ತಿಪುರಸ್ಸರವಾದ ವಂದನೆಗಳನ್ನು ಸಮರ್ಪಿಸುತ್ತೇವೆ, ಮಹಾಸ್ವಾಮಿ.

2. ನಮ್ಮ ಸಂಘವು ವ್ಯವಸಾಯ ಮತ್ತು ವಾಣಿಜ್ಯಗಳಲ್ಲಿ ಉದ್ಯುಕ್ತರಾಗಿರುವ ಏಳುಲಕ್ಷಕ್ಕೆ ಮೇಲ್ಪಟ್ಟ ಜನಸಂಖ್ಯೆಯುಳ್ಳ ಪಂಗಡದ ವಿದ್ಯಾಸಂಬಂಧವಾದ ಕುಂದುಕೊರತೆಗಳನ್ನು ನಿವೇದನಮಾಡುವ ಪ್ರತಿನಿಧಿಯಂತಿದೆ. ಈ ಸಂಸ್ಥಾನದ ಪ್ರಜಾಕೋಟಿಯಲ್ಲಿ ಈ ಪಂಗಡದವರು ಅತ್ಯಂತ ಶಾಂತಶೀಲರೂ, ನ್ಯಾಯಬದ್ಧರೂ, ಉದ್ಯಮಶೀಲರೂ, ಮಿತವ್ಯಯಿಗಳೂ ಆಗಿದ್ದಾರೆ, ಮಹಾಸ್ವಾಮಿ.

3. ವೀರಶೈವ ಜನವರ್ಗದ ಪ್ರಯೋಜನಾರ್ಥವಾಗಿ ತಮ್ಮ ಅಪರಿಮಿತ ಆಸ್ತಿಯನ್ನೆಲ್ಲಾ ಬಿಟ್ಟುಕೊಟ್ಟಿರುವ ದಿವಂಗತರಾದ ಸರ್ ದೇಶಾಯಿ ಸಿರಸಂಗಿಕರ್‌ಯವರ ಅಧ್ಯಕ್ಷತೆಯಲ್ಲಿ 1905 ನೆಯ ಇಸವಿಯಲ್ಲಿ ಬೆಂಗಳೂರಲ್ಲಿ ನಡೆದ ಯಾವದ್ಭಾರತ ವೀರಶೈವ ಮಹಾಸಭೆಯ ದೀರ್ಘಾಲೋಚನೆಗಳ ಫಲಸ್ವರೂಪವಾಗಿ ಅದೇ ವರ್ಷ ಈ ಮೈಸೂರು ವೀರಶೈವ ವಿದ್ಯಾವರ್ಧಕನಿಧಿಯ ಸಂಘವು ಉದ್ಭವಿಸಿತು. ಸ್ವಪ್ರಯಾಸದಿಂದ ಈ ಪಂಗಡದವರು ಮಾಡಿದ ಪ್ರಥಮಪ್ರಯತ್ನದ ಫಲವೇ ಈ ಸಂಘರೂಪದಲ್ಲಿ ಮೂರ್ತೀಭವಿಸಿದೆ; ಮತ್ತೂ ಮೈಸೂರು ಸಂಸ್ಥಾನದಲ್ಲಿ ಇದೇ ಈ ಬಗೆಯ ಪ್ರಥಮ ಸಂಸ್ಥೆಯಾಗಿದ್ದಿತು. ಮೈಸೂರ ವೀರಶೈವರಲ್ಲಿ ವಿದ್ಯಾಭಿಲಾಷೆಯನ್ನು ಹುಟ್ಟಿಸುವುದು, ಬೆಂಗಳೂರು ಮತ್ತು ಇತರ ಸ್ಥಳಗಳಲ್ಲಿರುವ ವೀರಶೈವ ವಿದ್ಯಾರ್ಥಿಗಳಿಗಾಗಿ ನಿಲಯಗಳನ್ನು ನಿರ್ಮಿಸಿ ಅವನ್ನು ನಡೆಸಿಕೊಂಡು ಬರುವುದು, ವಿದ್ಯಾರ್ಥಿವೇತನಗಳನ್ನು ಕೊಡುವುದರ ಮೂಲಕ ಬಡ ವಿದ್ಯಾರ್ಥಿಗಳಿಗೆ ಸಹಾಯಮಾಡುವುದು, ಮತ್ತೂ ಸಾಮಾನ್ಯತಃ ಈ ಪಂಗಡದ ಸಾಂಪತ್ತಿಕ, ನೈತಿಕ ಮತ್ತೂ ಸಾಮಾಜಿಕ ಪುರೋವೃದ್ಧಿಗೆ ಗಮನಕೊಡುವುದು–ಇವುಗಳೇ ಈ ಸಂಘದ ಉದ್ದೇಶವಾಗಿದೆ. ಈ ಉದ್ದೇಶಸಿದ್ಧಿಗಾಗಿ ಒಂದು ನಿಧಿಯು (ಫಂಡು) 1905ನೆಯ ಇಸವಿಯಲ್ಲಿ ಏರ್ಪಡಿಸಲ್ಪಟ್ಟಿತು; ಮತ್ತು ಅದರಿಂದ ಹುಟ್ಟುವಳಿಯಾದ ಬಡ್ಡಿಯಿಂದಲೇ ಸಾಮಾನ್ಯವಾಗಿ ಈ ಸಂಘವು ತನ್ನ ಕೆಲಸಗಳನ್ನು ನಡೆಯಿಸಿಕೊಂಡು ಬಂದಿದೆ. ಈಗ ಈ ಸಂಘಕ್ಕೆ ಮೈಸೂರಿನ ಎಲ್ಲಾ ಭಾಗಗಳಿಂದಲೂ 254 ಜನ ಸದಸ್ಯರು (ಮೆಂಬರು) ಗಳಾಗಿರುತ್ತಾರೆ. 1909 ನೆಯ ಇಸವಿಯಲ್ಲಿ ಸರ್ಕಾರದವರು ಈ ಸಂಘದ ಗೌರವ ಮತ್ತೂ ಪ್ರತಿನಿಧೀಭೂತಲಕ್ಷಣಗಳನ್ನು ಪರಿಗಣಿಸಿ, ಈ ಸಂಘದವರು ಅನುಕೂಲವಾದ ಬಡ್ಡಿಯ ದರಗಳ ಮೇಲೆ ಒಂದು ಲಕ್ಷ ರೂಪಾಯಿಗಳ ಪರಿಮಿತಿಯವರೆಗೆ ಚಂದಾವನ್ನು ಶೇಖರಿಸಿ ಸರ್ಕಾರಿ ಖಜಾನೆಯಲ್ಲಿ ಡಿಪಾಜಿಟ್ಟಾಗಿಡಲು ಅನುಜ್ಞೆಯನ್ನು ದಯೆಪಾಲಿಸಿದರು. ಅದೇ ವರ್ಷ ಈ ಸಂಘವು 1904 ನೆಯ ಇಸವಿಯ 3 ನೆಯ ರೆಗ್ಯುಲೇಷನ್ (ಸೊಸೈಟಿಗಳ ರಿಜಿಸ್ಟ್ರೇಷನ್ ಕಾನೂನು) ಅನುಸರಿಸಿ ರಿಜಿಸ್ಟರ್ ಮಾಡಿಸಲ್ಪಟ್ಟಿತು. 1913 ನೆಯ ಇಸವಿ ಜುಲೈ ತಿಂಗಳಲ್ಲಿ ಈ ಸಂಘದವರು ಪ್ರಜಾಪ್ರತಿನಿಧಿ ಸಭೆಗೆ ತಮ್ಮ ಮೆಂಬರುಗಳಲ್ಲೊಬ್ಬರನ್ನು ಚುನಾಯಿಸಿ ಕಳುಹಿಸಲು ಅನುಜ್ಞೆಯನ್ನು ಕೊಟ್ಟರು. ಈಚೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸುವುದಕ್ಕಾಗಿ ಅದೇರೀತಿಯ ರಿಯಾಯತಿಯನ್ನು ತೋರಿಸಿರುತ್ತಾರೆ.

4. ಈ ಸಂಘದ ಜನರಲ್ ಮತ್ತು ಮ್ಯಾನೇಜಿಂಗ್ ಕಮಿಟಿಗಳವರು ತಮ್ಮ ಮೀಟಿಂಗುಗಳನ್ನು ಕ್ರಮವಾಗಿ ಜರುಗಿಸಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ; ಮತ್ತೂ ಇವರುಗಳು ತೋರಿಸಿದ ಉತ್ಸಾಹ ಮತ್ತೂ ಲವಲವಿಕೆಗಳು ಈ ಪಂಗಡದವರಲ್ಲಿ ಈಗ ಕಂಡುಬರುತ್ತಿರುವ ವಿದ್ಯಾಭಿಲಾಷೆ ಮತ್ತೂ ಸಾಮಾನ್ಯ ಜಾಗರೂಕತೆಗಳಿಗೆ ಬಹುಮಟ್ಟಿಗೆ ಸಹಕಾರಿಗಳಾದುವು. ಈ ಸಂಘವು ಇದುವರೆಗೆ 293 ಮಂದಿ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳ ರೂಪದಲ್ಲಿ ಒಟ್ಟು 9,285 ರೂಪಾಯಿಗಳನ್ನು ಕೊಟ್ಟಿರುವುದು ಸಂತೋಷಕರವಾದ ವಿಷಯವಾಗಿದೆ. ಈ ಹಣವು ದೊಡ್ಡಮನುಷ್ಯರಿಂದ ಆಗಾಗ್ಗೆ ಬಂದ ಮೊಬಲಗಿನಿಂದಲೂ ಈ ಸಂಸ್ಥಾನದ ಎಲ್ಲ ಕಡೆಗಳಲ್ಲಿರುವ ಈ ಪಂಗಡದ ಮೆಂಬರುಗಳು ಲಗ್ನ ಮತ್ತು ಇತರ ಶುಭಸಮಯಗಳಲ್ಲಿ ದಾನರೂಪವಾಗಿ ಮಾಡಿದ ಸಾಮಾನ್ಯ ಧನಸಹಾಯದಿಂದಲೂ, ಮುಖ್ಯವಾಗಿ ಈ ಸಂಘದ ಫಂಡಿನಿಂದ ಹುಟ್ಟುವಳಿಯಾದ ಬಡ್ಡಿಯಿಂದಲೂ ಒದಗಿಸಲ್ಪಟ್ಟಿರುತ್ತದೆ. ಈ ಸಂಘದ ಮೂಲಧನವು ಈಗ 23,802 ರೂಪಾಯಿಗಳಾಗಿರುತ್ತದೆ; ಮುಖ್ಯವಾಗಿ ಇದೆಲ್ಲವೂ ಮೈಸೂರು ಸರ್ಕಾರದವರಲ್ಲಿ ಇಡಲ್ಪಟ್ಟಿರುತ್ತದೆ.

5. ಬೆಂಗಳೂರು ಪಟ್ಟಣದಲ್ಲಿ ನಮ್ಮ ಸಂಗಡದ ಗೌರವಸ್ಥರಾದ ವರ್ತಕರಾಗಿದ್ದ ಗತಿಸಿದ ಮ|| ರಾ|| ಸೂಲಬೆಲೆ ನಂಜಪ್ಪನವರು ಉರುಫ್ ಶಾಮಣ್ಣನವರು ಇ ಸಂಘಕ್ಕೆ ಅದರ ಮೂಲಧನಕ್ಕಾಗಿ, ಈಗ 40,000 ರೂಪಾಯಿ ಬೆಲೆಬಾಳುವ ತಮ್ಮ ಆಸ್ತಿಯನ್ನೆಲ್ಲಾ 1915 ನೆಯ ಇಸವಿಯಲ್ಲಿ ಮೃತಿಪತ್ರದ ಮೂಲಕ ಬರೆದುಕೊಟ್ಟರು. ಈ ಆಸ್ತಿಯ ಹಣವು ಈಗ ಶೇಖರಿಸಲ್ಪಡುತ್ತಲಿರುವುದರಿಂದ ಸದ್ಯದಲ್ಲಿಯೇ ಸಂಘದ ಮೂಲಧನವು 70,000 ರೂ. ಗಳಾಗಬಹುದೆಂದು ನಂಬಿಕೆಯಿದೆ. ಆದಕಾರಣ ಈ ಉದಾರವಾದ ದಾನವನ್ನು ಮಾಡಿ ಘನವಾದ ಮೇಲು ಪಂಕ್ತಿಯನ್ನು ಹಾಕಿದುದಕ್ಕಾಗಿ ಈ ದಾತರಿಗೆ ಸಂಘದವರು ತಮ್ಮ ಕೃತಜ್ಞತಾಭಾವನೆಯನ್ನು ಈ ಸಂದರ್ಭದಲ್ಲಿ ಪುನಃ ವ್ಯಕ್ತಪಡಿಸುವವರಾಗಿದ್ದಾರೆ.

6. ಈ ಸಂಘದ ಪ್ರಯೋಜನವು ಇದರಲ್ಲಿರುವ ಮೂಲಧನದಮೇಲೆ ಬಹುಮಟ್ಟಿಗೆ ನಿರ್ಭರವಾಗಿದೆ. ಮೂಲಧನಕ್ಕಾಗಿ ನಾವು ಮಾಡಿದ ಪ್ರಾರ್ಥನೆಗಳಿಗೆ ವೀರಶೈವ ಭ್ರಾತೃಗಳು ಇದುವರೆಗೆ ಮಾಡಿರುವ ಸಹಾಯಕ್ಕಾಗಿ ಅವರಿಗೆ ಸಂಘದವರು ಕೃತಜ್ಞರಾಗಿರುತ್ತಾರೆ; ಆದರೆ ಸಂಘದ ಪ್ರಯೋಜನವನ್ನು ಪರಿಮಿತಿಗೊಳಿಸುವ ಅದರ ಅಲ್ಪವಾದ ಉತ್ಪತ್ತಿಯು ಸರ್ವದಾ ಕೊರತೆಯನ್ನುಂಟುಮಾಡಿದೆ. ಆದುದರಿಂದ ಈ ವಿಷಯದಲ್ಲಿ ಧನಸಹಾಯವನ್ನು ಮಾಡಲು ಶಕ್ತರಾಗಿರುವ ಸಮಾಜಬಾಂಧವರಿಂದ ಇತೋಽಪ್ಯತಿಶಯವಾಗಿ ಉದಾರವಾದ ಸಹಾಯವು ದೊರೆಯುವುದೆಂಬ ದೃಢತರವಾದ ನಂಬಿಕೆಯಿದೆ.

7. ಈ ಸಂಗಡದವರಲ್ಲಿ ಲೋ ಅರ್ ಸೆಕೆಂಡರಿ, ಹೈಸ್ಕೂಲು ಮತ್ತು ಯೂನಿವರ್ಸಿಟಿ ವಿದ್ಯಾಭ್ಯಾಸಗಳಿಗಾಗಿ ಹೆಚ್ಚುತ್ತಿರುವ ಲವಲವಿಕೆಯು ಈಗಣ ಸ್ಥಿತಿಯಲ್ಲಿ ಒಂದು ವಿಶೇಷ ಲಕ್ಷಣವಾಗಿದೆ. ಮೈಸೂರು ಮತ್ತು ಇತರ ಸ್ಥಳಗಳಲ್ಲಿರುವ ವಿದ್ಯಾರ್ಥಿಗಳಲ್ಲದೆ, ಬೆಂಗಳೂರು ಸ್ಕೂಲುಗಳು ಮತ್ತು ಕಾಲೇಜುಗಳಲ್ಲೇ ಸುಮಾರು 197 ಮಂದಿ ವೀರಶೈವ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿರುವರೆಂಬ ಸಂಗತಿಯು ಮಹಾಸ್ವಾಮಿಯವರಿಗೆ ಸಂತೋಷವನ್ನುಂಟುಮಾಡದೆ ಇರಲಾರದು.

8. ಸರ್ಕಾರಿ ನಿಲಯ (ಹಾಸ್ಟೆಲ್) ಗಳಲ್ಲಿ ವೀರಶೈವ ವಿದ್ಯಾರ್ಥಿಗಳ ಭೋಜನಾದಿಗಳಿಗೆ ತಕ್ಕ ಅನುಕೂಲಗಳಿಲ್ಲದಿರುವುದರ ದೆಸೆಯಿಂದ, ಸೆಕೆಂಡರಿ ಮತ್ತು ಪ್ರೌಢವಿದ್ಯಾವ್ಯಾಸಂಗಕ್ಕಾಗಿ ಡಿ|| ಕಸಬೆಗಳಲ್ಲಿ ಏರ್ಪಡಿಸಿರುವ ಸೌಕರ್ಯಗಳ ಸಂಪೂರ್ಣ ಪ್ರಯೋಜನವನ್ನು ನಮ್ಮ ಬಾಲಕರು ಪಡೆಯಲು ಇದುವರೆಗೂ ಅಸಮರ್ಥರಾಗಿದ್ದಾರೆ. ಪ್ರೌಢ ವಿದ್ಯಾವ್ಯಾಸಂಗಕ್ಕಾಗಿ ಬೆಂಗಳೂರಿಗೆ ಬರುವ ಕೆಲವುಮಂದಿ ಹುಡುಗರು ಕೂಡ ಅನಾರೋಗ್ಯಕರವಾದ ಮತ್ತು ಅನುಪಯುಕ್ತವಾದ ಅವಸ್ಥೆಗಳಿಗೆ ಗುರಿಯಾಗಿದ್ದಾರೆ. ಇವರಿಗೋಸ್ಕರ ಒಂದು ಅನುಕೂಲವಾದ ನಿಲಯವನ್ನು ಏರ್ಪಡಿಸುವುದಾವಶ್ಯಕವೆಂಬ ವಿಷಯವು ಬಹುಕಾಲದ ಹಿಂದೆಯೇ ಎಂದರೆ, 1905 ನೆಯ ಇಸವಿಯಲ್ಲಿಯೇ ನಮಗೆ ಗೊತ್ತಾಯಿತು; ಆಗ ಅತ್ತಿಬೆಲೆಯ ಮ|| ರಾ|| ಸಿದ್ಧಲಬಸಪ್ಪನವರು ಬೆಂಗಳೂರಿನಲ್ಲಿ ಒಂದು ನಿಲಯ ನಿರ್ಮಾಣಕ್ಕಾಗಿ 10,000 ರೂಪಾಯಿಗಳನ್ನು ದಾನವಾಗಿ ಕೊಡುವುದಾಗಿ ಉದಾರವಾದ ವಾಗ್ದಾನಮಾಡಿದರು. ಒಂದು ಖಾಲಿ ನಿವೇಶನಕ್ಕಾಗಿ 1908 ನೆಯ ಇಸವಿಯಲ್ಲಿ ನಾವು ಸರ್ಕಾರದವರಿಗೆ ಬರೆದುಕೊಂಡೆವು. ಅಂದಿನಿಂದಲೂ ಒತ್ತಿ ಕೇಳಿಕೊಳ್ಳುತ್ತಲೇ ಬಂದಿದ್ದೇವೆ, ಅನುಕೂಲವಾದ ನಿಲಯವು ನಿರ್ಮಿಸಲ್ಪಡುವುದರೊಳಗಾಗಿ ಯಾವುದಾದರೊಂದು ಏರ್ಪಾಟನ್ನು ಮಾಡಬೇಕೆಂದುದ್ದೇಶಿಸಿ, 1912 ನೆಯ ಇಸವಿಯಲ್ಲಿ 30 ಮಂದಿ ಬಾಲಕರಿಗೋಸ್ಕರ ವಿದ್ಯಾರ್ಥಿನಿಲಯವನ್ನು ಒಂದು ಬಾಡಿಗೆಯ ಮನೆಯಲ್ಲಿ ಆರಂಭಿಸಿದೆವು. ಬಾಲಕರ ಸಂಖ್ಯೆಯು ಏಕರೀತಿಯಲ್ಲಿ ಹೆಚ್ಚುತ್ತ ಬಂದಿತು. ಈಗ ವಿವಿಧ ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವವರು ಆಶ್ರಮದಲ್ಲಿ 50 ಮಂದಿ ವರೆಗೂ ಇದ್ದಾರೆ. ಕಲಿಜಿಯೇಟ್ ಹೈಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವ ನಮ್ಮ ಬಾಲಕರ ಭೋಜನ ವಸತಿಗಳಿಗಾಗಿ ವೆಸ್ಲಿಯನ್ ಮಿಷನ್ ಅಧಿಕಾರಿಗಳು ದಯೆಯಿಟ್ಟು ಪ್ರತ್ಯೇಕವಾದ ಮತ್ತು ಅನುಕೂಲವಾದ ಏರ್ಪಾಟುಗಳನ್ನು ಮಾಡಿರುತ್ತಾರೆ. ಮೊದಲು ಅತ್ಯಲ್ಪಮಂದಿ ವೀರಶೈವ ವಿದ್ಯಾರ್ಥಿಗಳಿದ್ದ ಕಾಲೇಜು ತರಗತಿಗಳಲ್ಲಿ ಅವರ ಸಂಖ್ಯೆ ಸ್ವಲ್ಪಮಟ್ಟಿಗೆ ಹೆಚ್ಚುತ್ತಾಬರಲು ಸೆಂಟ್ರಲ್ ಕಾಲೇಜಿನ ಹಾಸ್ಟೆಲಿನಲ್ಲಿ ಈ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೂ ಅವರ ಭೋಜನಕ್ಕೂ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಮ|| ಟೇಟರವರ ಮೂಲಕ ಸೆಂಟ್ರಲ್ ಕಾಲೇಜಿನ ಹಾಸ್ಟೆಲ್ ಮ್ಯಾನೇಜಿಂಗ್ ಕಮಿಟಿಯವರಿಗೆ ವಿಜ್ಞಾಪಿಸಿಕೊಂಡು ಸ್ವಂತ ಖರ್ಚಿನಿಂದಲೇ ಒಂದು ಅಡುಗೆಯ ಮನೆಯನ್ನೂ ಸಹ ಕಟ್ಟಿಸಿದೆವು. ನಮ್ಮ ಈ ವಿಜ್ಞಾಪನೆಯು ಚರಿತಾರ್ಥವಾಯಿತೆಂದು ಕೃತಜ್ಞತೆಯಿಂದ ತಿಳಿಸುವೆವು ಕಾಲೇಜು ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವ ಅಲ್ಪಸಂಖ್ಯಾಕರಾದ ನಮ್ಮ ಬಾಲಕರಿಗೆ ಈಗ ಕಾಲೇಜು ಹಾಸ್ಟೆಲಿನಲ್ಲಿ ವಸತಿಯು ಏರ್ಪಡಿಸಲ್ಪಟ್ಟಿದೆ. ನಾವು ಕೊಡಲು ಶಕ್ಯವಾಗಿರುವ ಧನಸಹಾಯವು ಅಲ್ಪವಾಗಿದೆ, ಸ್ಪೆಷಲ್ ಗೌರ್ನಮೆಂಟ್ ವಿದ್ಯಾರ್ಥಿ ವೇತನಗಳನ್ನು ಪಡೆಯದಿರುವಂತಹವರ ಪೋಷಣೆಯ ವೆಚ್ಚವಾದರೊ ಹೆಚ್ಚಾಗಿದೆ. ಇದಲ್ಲದೆ, ಸರ್ಕಾರಿ ಸೆಕೆಂಡರಿ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಬಾಲಕರಿಗೆ ಹಾಸ್ಟೆಲುಗಳಿಲ್ಲವೇ ಇಲ್ಲ. ವರ್ಷವರ್ಷಕ್ಕೆ ಹೆಚ್ಚುತ್ತಿರುವ ಬಾಲಕರ ವಸತಿಗಾಗಿ ಅನುಕೂಲವಾದ ಮತ್ತು ವಿಶಾಲವಾದ ಒಂದು ಕಟ್ಟಡದ ಆವಶ್ಯಕತೆಯು ಈ ರೀತಿಯಲ್ಲಿ ಹೆಚ್ಚಿರುತ್ತದೆ.

9. ನಮ್ಮ ಪಂಗಡದಲ್ಲಿ ಒಳ್ಳೆಯ ಸ್ಥಿತಿಗೆ ಬರಬಹುದೆಂಬ ಭರವಸೆಯುಳ್ಳ ಬಡ ಬಾಲಕರಲ್ಲಿ ತೀವ್ರವಾದ ವಿದ್ಯಾಭಿಲಾಷೆಯು ಅಂಕುರಿಸಿದ ಸಮಯದಲ್ಲಿ ಗತಿಸಿದ ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆಗಳಿಗೆ ಸಂಬಂಧಿಸಿದ ಧರ್ಮಭೋಜನಾಲಯ (ಫ್ರೀ ಬೋರ್ಡಿಂಗ್ ಹಾಸ್ಟೆಲ್) ವು ಬಹುಮಟ್ಟಿಗೆ ನಮ್ಮ ತೊಂದರೆಗಳನ್ನೂ ಚಿಂತೆಯನ್ನೂ ದೂರಮಾಡಿತು. ವಿಶೇಷ ಸನ್ಮಾನ್ಯರೂ, ಲೋಕೋಪಕಾರಿಗಳೂ ಆದ ಆ ದೊಡ್ಡಮನುಷ್ಯರ ಹಾಸ್ಟೆಲ್ ಮತ್ತು ಇತರ ಧರ್ಮಕಾರ್ಯಗಳಿಗಾಗಿ ನಾವು ಅವರಿಗೆ ನಿರಂತರವೂ ಕೃತಜ್ಞತಾ ಋಣಬದ್ಧರಾಗಿದ್ದೇವೆ ಈ ಸಂಘಕ್ಕೆ ಹಲವು ಸತ್ಸಹಾಯಗಳನ್ನು ಮಾಡಿರುವ ಈ ಧರ್ಮಕಾರ್ಯಗಳ ಮೇಲ್ವಿಚಾರಕರ್ತರು (ಟ್ರಸ್ಟೀ) ಗಳಿಗೂಕೂಡ ನಮ್ಮ ವಂದನೆಗಳು ಸಲ್ಲತಕ್ಕುವಾಗಿವೆ.

10. ಮೂವತ್ತುಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲದೆ ವೆಚ್ಚವಾಗುವ ಒಂದು ಹಾಸ್ಟೆಲಿನ ಕಟ್ಟಡಕ್ಕಾಗಿ 15,000 ರೂ. ಗಳನ್ನು ಡಿಪಾಜಿಟ್ಟು ಇಡುವುದಾದರೆ, ಒಂದು ಖಾಲಿ ನಿವೇಶನವನ್ನು ಕೊಡುವೆನೆಂದು ಎಷ್ಟೋ ಪತ್ರವ್ಯವಹಾರಗಳನ್ನು ನಡೆಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಡೆಪ್ಯುಟೇಷನ್ ಮೂಲಕ ಕೇಳಿಕೊಂಡುದರಮೇಲೆ ಅಪ್ಪಣೆಯನ್ನು ದಯೆಪಾಲಿಸಿದರು. ಅನಂತರ ಸಹಾಯಕ್ಕಾಗಿ ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ಪ್ರಾರ್ಥಿಸಿಕೊಂಡೆವು. ನಮ್ಮ ಪ್ರಾರ್ಥನೆಯು ತತ್ಕ್ಷಣವೇ ಫಲಪ್ರದವಾಯಿತು. ಮ|| ರಾ|| ಸಿದ್ದಲಬಸಪ್ಪನವರಿಂದ ಹಿಂದೆಯೇ ಸಂದಾಯವಾಗಿದ್ದ 10,000 ರೂ. ಗಳೂ ಸೇರಿ 15,000 ರೂ. ಗಳ ಡಿಪಾಜಿಟ್ಟು ಕಟ್ಟಲನುಕೂಲವಾಗುವಂತೆ ಶ್ರೀಯವರು 5,000 ರೂ. ಗಳನ್ನು ದಯೆಪಾಲಿಸಿದರು. 15000 ರೂ. ಗಳ ಒಟ್ಟು ಮೊತ್ತವು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಡಲ್ಪಟ್ಟು, ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರ ಮುಂದೆ ಶ್ರೀ ಮಠದ ಏಜೆಂಟರಿಂದ ಕಟ್ಟಡದ ನಿರ್ಮಾಣಕ್ಕಾಗಿ ಆವಶ್ಯಕವಾದ ಕರಾರು ಬರೆಯಲ್ಪಟ್ಟಿತು. ಖಾಲಿ ನಿವೇಶನವು ಕಳೆದ ಜೂನ್ ತಿಂಗಳಲ್ಲಿ ನಮಗೆ ಕ್ರಮವಾಗಿ ವಹಿಸಲ್ಪಟ್ಟಿತು. ಶ್ರೀಯವರು ಈಚೆಗೆ ಮತ್ತೆ 25,000 ರೂ. ಗಳನ್ನು ಅನುಗ್ರಹಿಸಿ, ಅವಶ್ಯಕ ಬಿದ್ದರೆ ಇನ್ನೂ 10,000 ರೂ. ಗಳನ್ನು ದಯೆಪಾಲಿಸುವುದಾಗಿ ಅಭಯಪ್ರದಾನಮಾಡಿದ್ದಾರೆ. ಅಂತು ಹಾಲಿ ನಮ್ಮಲ್ಲಿರತಕ್ಕ ಒಟ್ಟು 40,000 ರೂಪಾಯಿಗಳಲ್ಲದೆ, ಇನ್ನೂ 10,000 ರೂ. ವಾಗ್ದಾನಮಾಡಲ್ಪಟ್ಟಿದೆ. ಈ ಮೊತ್ತಕ್ಕೆ ಸಮನಾದ ಗ್ರಾಂಟನ್ನು ಸರ್ಕಾರದವರಿಂದ ಪಡೆಯುವುದರಿಂದಲೂ, ಹಾಸ್ಟಲುಗಳನ್ನೊದಗಿಸುವುದರಲ್ಲಿ ವಿಶೇಷ ಶ್ರದ್ಧೆಯುಳ್ಳವರಾಗಿರುವ ಕರುಣಾಶಾಲಿಗಳಾದ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಮ|| ರೆಡ್ಡಿಯವರ ತೀವ್ರ ಸಹಾಯದಿಂದಲೂ ಕಟ್ಟಡವು ಜಾಗ್ರತೆಯಾಗಿ ಕಣ್ಗೊಳಿಸುವಂತಾಗಿ, ಯಾರ ಅಮೃತ ಹಸ್ತದಿಂದ ಶಂಕುಸ್ಥಾಪನೆ ಮಾಡಲ್ಪಡುವುದೋ ಆ ಘನತೆಯೊಂದಿದ ಮಹಾಸ್ವಾಮಿಯವರಿಗೂ, ಕಟ್ಟಡವು ಮುಗಿದಮೇಲೆ ಅದು ಯಾರ ಹೆಸರನ್ನು ತಳೆವುದೋ ಆ ಜಗದ್ಗುರು ಯತೀಂದ್ರರಿಗೂ ಸರ್ವ ವಿಧದಲ್ಲಿಯೂ ಒಪ್ಪುವಹಾಗೆ ಪರಿಣಮಿಸುವುದೆಂದು ದೃಢಸಂಕಲ್ಪರಾಗಿದ್ದೇವೆ. ಅತ್ಯುದಾರವಾದ ಈ ವರಪ್ರದಾನಮಾಡಿದುದಕ್ಕೋಸ್ಕರ ಶ್ರೀ ಜಗದ್ಗುರುಗಳವರಿಗೆ ನಾವು ನಮ್ಮ ಕೃತಜ್ಞತಾ ಭಕ್ತಿ ವಿಶೇಷಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇವೆ.

11. ತಮ್ಮ ಶಿಷ್ಯವರ್ಗದ ಕ್ಷೇಮಾಭಿವೃದ್ಧಿಗಳಿಗಾಗಿ ಸರ್ವದಾ ಪ್ರದರ್ಶಿಸುತ್ತ ಬಂದಿರುವ ವಿಚಕ್ಷಣಾ ವಿಶಿಷ್ಟ ಸದ್ಭಾವನೆಯ ಸ್ಮಾರಕ ಸ್ತಂಭದಂತೆ ಚಿರಕಾಲ ಬೆಳಗುವ ಅತ್ಯುದಾರವಾದ ಈ ವರವನ್ನು ಪ್ರದಾನಮಾಡಿದುದಕ್ಕೋಸ್ಕರ ಶ್ರೀಜಗದ್ಗುರುಗಳವರಿಗೆ ನಾವು ನಮ್ಮ ಕೃತಜ್ಞತಾ ಭಕ್ತಿ ವಿಶೇಷಗಳನ್ನು ಈ ಸಂದರ್ಭದಲ್ಲಿ ಸಮರ್ಪಿಸುತ್ತೇವೆ. ಶ್ರೀಯವರಿಂದ ಉದಾರವಾದ ಸಹಾಯವನ್ನು ಹೊಂದುತ್ತಿರುವ ಹಲವು ವಿದ್ಯಾಸಂಸ್ಥೆಗಳಲ್ಲಿ ಇದೂ ಒಂದಾಗಿದೆಯೆಂಬುದನ್ನೂ, ಬೊಂಬಾಯಿ ಡಿಸ್ಟ್ರಿಕ್ಟುಗಳಲ್ಲೂ ಮೈಸೂರು ಸಂಸ್ಥಾನದಲ್ಲೂ ಜಾತಿ ಮತ ಭೇದಗಳನ್ನೆಣಿಸದೆ ಸಕಲ ಜನವರ್ಗಗಳ ಪಾತ್ರರಾದ ಮತ್ತು ಬಡವರಾದ ಹಲವುಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳ ರೂಪದಲ್ಲಿ ಪ್ರತಿವರ್ಷವೂ ಶ್ರೀಯವರು ವಿಶೇಷವಾಗಿ ಧನಸಹಾಯಮಾಡುತ್ತಿದ್ದಾರೆಂಬುದನ್ನೂ ಅರಿಕೆಮಾಡಲಪೇಕ್ಷಿಸುತ್ತೇವೆ.

12. ಗುಂಡ್ಲುಪೇಟೆಯ ತಾಲ್ಲೂಕಿನ ಮ|| ರಾ|| ಕಬ್ಬಳ್ಳಿ ಚೆನ್ನಬಸಪ್ಪನವರು ಮೈಸೂರು ಪಟ್ಟಣದಲ್ಲಿ ವೀರಶೈವ ಹಾಸ್ಟೆಲನ್ನು ಕಟ್ಟಿಸುವುದಕ್ಕೋಸ್ಕರ 30,000 ರೂ. ಗಳನ್ನು [illegible] ವುದಾಗಿ ಉದಾರವಾದ ವಾಗ್ದಾನಮೂಲಕ ಮುಂದಾ[illegible]

ಗಳಾಗಿ ಬಂದಿರುತ್ತಾರೆಂಬ ಸಂಗತಿಯನ್ನು ಪ್ರಕಾಶಪಡಿಸುವುದು ನಮಗೆ ಸಂತೋಷವನ್ನುಂಟುಮಾಡಿದೆ. ಮೈಸೂರುಪಟ್ಟಣವು ಮೈಸೂರು ವಿಶ್ವವಿದ್ಯಾಲಯದ ಪೀಠವಾಗಿರುವುದರಿಂದ ಅಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಅಂತಹ ವಸತಿಯು ಅತ್ಯವಶ್ಯಕವಾಗಿದೆ.

13. ಉಪಸಂಹಾರದಲ್ಲಿ—ಮಹಾಸ್ವಾಮಿಯವರು ಈ ಕಟ್ಟಡದ ಶಂಕುಸ್ಥಾಪನೋತ್ಸವವನ್ನು ನೆರವೇರಿಸಿಕೊಡುವುದಕ್ಕೂ ವೀರಶೈವ ತರುಣರಿಗೆ ವಿದ್ಯಾಭ್ಯಾಸ ಮಾಡಿಸುವ ಘನತರೋದ್ದೇಶಕ್ಕಾಗಿ ಏರ್ಪಟ್ಟಿರುವ ಈ ಕಟ್ಟಡವು ಚಿರಕಾಲ ಆ ಸಂಗಡದವರಿಗೆ ಪ್ರಯೋಜನಕಾರಿಯಾಗಲೆಂದು ಹರಸುವುದಕ್ಕೂ ಮಹಾಸ್ವಾಮಿಯವರನ್ನು ಬೇಡಿಕೊಳ್ಳಲು ಅನುಜ್ಞೆಯಾಗಬೇಕೆಂದು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಇತಿ, ತಮ್ಮ ವಿಧೇಯರಾದ ಪ್ರಜೆಗಳು,
ಮೈಸೂರು ವೀರಶೈವ ವಿದ್ಯಾವರ್ಧಕ
ನಿಧಿಯ ಸಂಘದ ಪ್ರೆಸಿಡೆಂಟ್ ಮತ್ತು
ಮೆಂಬರುಗಳು.

ಬೆಂಗಳೂರು,
20-10-19.

ಈ ಪತ್ರಿಕೆಯನ್ನೂ ಮಂಗಳಪದ್ಯಗಳ ಪತ್ರವನ್ನೂ ಗರ್ಭೀಕರಿಸಿದ ಬೆಳ್ಳಿಯ ಸಚಿತ್ರವಾದ ಕರಂಡವನ್ನು (ಕ್ಯಾಸ್ಕೆಟ್) ಸಂಘಾಧ್ಯಕ್ಷರಾದ ದಿ|| ಬ|| ಕೆ. ಪಿ. ಸೆಟ್ಟರೂ, ಉಪಾಧ್ಯಕ್ಷರಾದ ವ|| ಆರ್. ಪುಟ್ಟಣ್ಣ, ಬಿ.ಎ., ಬಿ.ಎಲ್. ರವರೂ ಸಹ ಶ್ರೀಮದ್ಯುವರಾಜರವರಿಗೆ ಸಮರ್ಪಿಸಿದರು. ಅದನ್ನು ಸ್ವೀಕರಿಸಿ ಶ್ರೀಮದ್ಯುವರಾಜರು ಸಭಿಕರೆಲ್ಲಾ ಕರತಾಡನಮಾಡುತ್ತಿರುವಾಗ್ಗೆ ಎದ್ದುನಿಂತು, ಈ ಕೆಳಗೆ ಕಂಡ ಪ್ರತ್ಯುತ್ತರವನ್ನು ಆಂಗ್ಲಭಾಷೆಯಲ್ಲಿ ಹೇಳಿದರು.—

"ಮಹಾಸ್ವಾಮಿಗಳೇ, ಮೆ|| ಪುಟ್ಟಣ್ಣಸೆಟ್ಟರೇ ಮತ್ತು ದೊಡ್ಡಮನುಷ್ಯರುಗಳೇ, ಲಿಂಗಾಯತ ವಿದ್ಯಾರ್ಥಿನಿಲಯದ ಶಂಕುಸ್ಥಾಪನೋತ್ಸವ ಶುಭಕಾರ್ಯವನ್ನು ನೆರವೇರಿಸುವುದು ನನಗೆ ಅತ್ಯಂತ ಸಂತೋಷವಾಗಿದೆ. ಮತ್ತು ಈ ದಿನ ಬೆಳಗ್ಗೆ ನೀವುಗಳು ಆದರದಿಂದ ನನ್ನನ್ನು ಗೌರವಿಸುದುದನ್ನು ಅಂಗೀಕರಿಸಿರುತ್ತೇನೆ.

ವಿದ್ಯಾಪ್ರಸಾರಕ್ಕಾಗಿ ಮ|| ರಾ|| ಗಳಾದ ಸೂಲಿಬೆಲೆ ಸಂಜಪ್ಪನವರೂ ಸಿದ್ದಬಸಪ್ಪನವರೂ ಗುಬ್ಬಿ ತೋಟದಪ್ಪನವರೂ ಮಾಡಿರುವ ಧನಸಹಾಯ್ಯವನ್ನೂ ಈ ಸಂಘವು ಮಾಡಿರುವ ಕೆಲಸವನ್ನೂ ನಿಮ್ಮ ಪ್ರೆಸಿಡೆಂಟರವರು ತಮ್ಮ ಸ್ವಾರಸ್ಯವಾದ ವರದಿಯಲ್ಲಿ ತಿಳಿಯಪಡಿಸಿರುತ್ತಾರೆ. ಈ ನಿಲಯ ಸ್ಥಾಪನೆಯ ಕಾರ್ಯದಲ್ಲಿ ಗೌರವಕ್ಕೆ ಪಾತ್ರರಾದವರು ಅನೇಕರಿರುವರೆಂದು ನಾವು ದೃಢವಾಗಿ ಹೇಳುವೆವು. ಮತ್ತು ನಿಮ್ಮ ಗಣ್ಯರಾದ ಪ್ರೆಸಿಡೆಂಟವರ ಹೆಸರನ್ನು ಉದಾಹರಣಾರ್ಥವಾಗಿ ಸೂಚಿಸಬಹುದಾಗಿದೆ. ನಿಮ್ಮಗಳ ವಿದ್ಯಾಭಿವೃದ್ಧಿಗೋಸ್ಕರವಾಗಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಯವರು ಮಾಡಿರುವ ನಿರ್ವ್ಯಾಜ ಹಿತೈಷಿತೆಯಿಂದ ಕೂಡಿದ ಮಹಾ ಸಹಾಯವನ್ನು ನಿಮ್ಮಗಳ ಪರವಾಗಿ ಈ ಸಂದರ್ಭದಲ್ಲಿ ಅಂಗೀಕರಿಸದೆ ಉಪೇಕ್ಷಿಸಲಾಗುವುದಿಲ್ಲ. ನಿಮ್ಮ ಜನವರ್ಗದ ಕ್ಷೇಮಾಭಿವೃದ್ಧಿಯಲ್ಲಿ ಸ್ವಾಮಿಗಳವರು ಪ್ರದರ್ಶಿಸುತ್ತಾ ಬಂದಿರುವ ವಿಶೇಷ ಶ್ರದ್ಧೆಗೆ ಅವರು ಈ ದಿನ ಇಲ್ಲಿಗೆ ದಯಮಾಡಿಸಿರುವುದೇ ನಿದರ್ಶನವಾಗಿದೆ. ಸ್ವಾಮಿಗಳು ಉದಾರಬುದ್ಧಿಯಿಂದ ಮಾಡಿರುವ ಧನಸಹಾಯ್ಯವೂ, ಅವಶ್ಯಕವಿದ್ದರೆ ಈ ಸಹಾಯ್ಯವನ್ನು ಇನ್ನಷ್ಟು ಹೆಚ್ಚಿಸಿಕೊಡುವುದಕ್ಕೆ ಅವರು ಮಾಡಿರುವ ವಾಗ್ದಾನವೂ, ಸರ್ಕಾರದವರು ಮಾಡುವ ಸಹಾಯವೂ ಸಹ ನಿಮ್ಮ ವಿದ್ಯಾರ್ಥಿಗಳಿಗೆ ಅನುಕೂಲವಾದ ನಿಲಯದ ನಿರ್ಮಾಣಕ್ಕೆ ಸಹಕಾರಿಗಳಾಗುವುವೆಂದು ನಾವು ದೃಢವಾಗಿ ನಂಬಿರುತ್ತೇವೆ.

ವಿದ್ಯಾಭಿವೃದ್ಧಿಗೋಸ್ಕರ ನ್ಯಾಯವಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸುವುದು ನಾಗರಕರಾದ ಮತ್ತು ವಿಚಕ್ಷಣಾವಿಶಿಷ್ಟರಾದ ಸರ್ಕಾರದವರಿಗೆ ಕರ್ತವ್ಯಕರ್ಮವಾಗಿರುವಂತೆಯೇ ತಮಗೂ ಅದು ಕರ್ತವ್ಯವೆಂಬುದನ್ನು ಪ್ರಜೆಗಳು ಮರೆಯಬಾರದು. ಹೊರಗಣಿಂದ ದೊರೆತ ಸಹಾಯ್ಯವು ಫಲಿತಾಂಶದಲ್ಲಿ ಅನೇಕವೇಳೆ ದುರ್ಬಲವಾಗಿರುತ್ತದೆ.

ನಿಮ್ಮಗಳ ಅಭಿವೃದ್ಧಿಗಾಗಿ ಸರ್ಕಾರದವರಿಂದ ಎಷ್ಟೆಷ್ಟು ಸಹಾಯಗಳೊದಗಿಸಲ್ಪಡುವುವೋ ಅಷ್ಟಷ್ಟು ಉತ್ಸಾಹಶಕ್ತಿಯು ನಿಮ್ಮಲ್ಲಿ ಕಡಮೆಯಾಗಿ ನೀವು ಅಸಹಾಯರಾಗುವಿರಿ. ಆದಕಾರಣ ಸ್ವಸಹಾಯ ಮತ್ತು ಸ್ವಾರ್ಥತ್ಯಾಗದ ಪರಮಾರ್ಥವನ್ನು ನಿಮ್ಮಗಳಿಗೆ ಒತ್ತಿ ಒತ್ತಿ ಹೇಳಲು ಅಪೇಕ್ಷಿಸುವೆವು. ನಮ್ಮ ಜನ್ಮಭೂಮಿಗೆ ನಾವು ಋಣಬದ್ಧರಾಗಿರುವುದೇ ನಮ್ಮ ಪವಿತ್ರ ಕರ್ತವ್ಯಕರ್ಮವೆಂಬುದನ್ನು ಕುರುಕ್ಷೇತ್ರದ ರಣರಂಗದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ಬೋಧಿಸಿದ ದಿವ್ಯ ಸಂದೇಶವನ್ನು ಯಾರೊಬ್ಬರೂ ಮರೆಯಬಾರದು.

ಆದಕಾರಣ ನಿಮ್ಮ ಜನವರ್ಗದವರಲ್ಲಿ ವಿದ್ಯಾಭಿವೃದ್ಧಿಗೋಸ್ಕರ ಗುಂಡಲುಪೇಟೆಯ ಮ|| ಚನ್ನಬಸಪ್ಪನವರು ಮಾಡಿರುವಂತೆ ಉದಾರವಾದ ಧನಸಹಾಯವನ್ನು ಮಾಡುವುದಕ್ಕಾಗಿ ಮುಂದುಮುಂದು ಬರುವುದು ನಿಮ್ಮೆಲ್ಲರಿಗೂ ಉಚಿತವಾಗಿದೆ.

ದೊಡ್ಡಮನುಷ್ಯರೇ, ವಿದ್ಯಾರ್ಥಿನಿಲಯಗಳ ಪ್ರಯೋಜನಗಳನ್ನು ಕುರಿತು ಈ ಸಂದರ್ಭದಲ್ಲಿ ವಿಸ್ತರಿಸಿ ಹೇಳುತ್ತಾ ನಿಮ್ಮನ್ನು ನಿಲ್ಲಿಸಿಕೊಳ್ಳಲು ನಾವು ಅಪೇಕ್ಷಿಸುವವರಾಗಲಿಲ್ಲ. ನಿಮ್ಮ ಕಾರ್ಯಭಾಗಗಳು ಕ್ಷಿಪ್ರದಲ್ಲಿಯೇ ಫಲಪ್ರದವಾಗಿ ಈ ಸಂಸ್ಥಾನದ ಪ್ರಮುಖವರ್ಗಗಳಲ್ಲಿ ಒಂದಾದ ನಿಮ್ಮ ಸಂಘದ ಅಭಿವೃದ್ಧಿಗೆ ಸುಕಾರಿಯಾಗಲೆಂಬ ನಮ್ಮ ಕೋರಿಕೆಯನ್ನು ತಿಳಿಸಲಪೇಕ್ಷಿಸುತ್ತೇನೆ."

ಇದನ್ನು ಕೇಳಿ ಸಭಿಕರೆಲ್ಲಾ ಆನಂದದಿಂದ ಚಪ್ಪಾಳೆಗಳನ್ನು ಹಾಕುತ್ತಿರುವಲ್ಲಿ, ಶ್ರೀಮದ್ಯುವರಾಜರವರು ಪೀಠದಿಂದಿಳಿದು ಶ್ರೀಮಜ್ಜಗದ್ಗುರುಗಳವರನ್ನು ಒಡಗೂಡಿಕೊಂಡು, ಗುಡಾರದ ಕೊರಕ್ಕೆ ಶಂಕುವಿನ ಬಳಿಗೆ ದಯಮಾಡಿಸಿ, ಮನೋಹರವಾದ ಬೆಳ್ಳಿಯ ಕರಣೆಯನ್ನು ಪರಿಗ್ರಹಿಸಿ, ಯಥಾವಿಧಿಯಾಗಿ ಹದಿಯ ಮೇಲೆ ಶಿಲೆಯ ಸ್ಥಾಪನಕಾರ್ಯವನ್ನು ತಮ್ಮ ಅಮೃತ ಹಸ್ತಸ್ಪರ್ಶಮೂಲಕ ಜರುಗಿಸಿದರು. ಶ್ರೀಜಗದ್ಗುರುಗಳು ಶುಭಾಶಂಸನವನ್ನು ಮಾಡಿದರು. ವಾದ್ಯಗಳು ಘೋರ್ಘರೆದುವು. ಭಾವಚಿತ್ರಗಳು ತೆಗೆಯಲ್ಪಟ್ಟುವು. ಅಲ್ಲಿಂದ ಮರಳಿ ಸಭಾಂಗಣಕ್ಕೆ ದಯಮಾಡಿಸಿ ತಂತಮ್ಮ ಪೀಠಗಳನ್ನಲಂಕರಿಸಿದ ಬಳಿಕ ದಿ|| ಬ|| ಪುಟ್ಟಣ್ಣಸೆಟ್ಟರು ಶ್ರೀಮದ್ಯುವರಾಜರವರಿಗೆ ಹಾರ ತುರಾಯಿಗಳನ್ನು ಸಮರ್ಪಿಸಿದರು. ದಿವಾನರು ಮೊದಲಾದ ಸರ್ವರಿಗೂ ಪುಷ್ಪಹಾರಾದಿಗಳು ಸಮರ್ಪಿಸಲ್ಪಡುತ್ತಿರುವಾಗ್ಗೆ ವಿದ್ವಾನ್ ರಾಚಪ್ಪನವರ ಹಾಡುಗಾರಿಕೆಯು ಇಂಪಾಗಿ ಜರುಗುತ್ತಿದ್ದಿತು. ಕಟ್ಟಕಡೆಗೆ ಸರ್ವರೂ ಎದ್ದುನಿಂತು ಶ್ರೀಮನ್ಮಹಾರಾಜರನ್ನೂ ಶ್ರೀಮದ್ಯುವರಾಜರನ್ನೂ ಕುರಿತು ಜಯಘೋಷವನ್ನು ಮಾಡಿದ ಬಳಿಕ ಸಭೆಯು ಮುಗಿಸಲ್ಪಟ್ಟಿತು. ಶ್ರೀಮದ್ಯುವರಾಜರು ಜಗದ್ಗುರುಗಳವರಿಗೆ ವಂದಿಸಿ ತೆರಳಲು, ದ್ವಾರದವರೆಗೂ ಶ್ರೀಗಳವರು ಸಾಗಗಳುಹಿಸಿಕೊಟ್ಟರು. ದಿವಾನರು ಶ್ರೀಗಳವರನ್ನು ವಂದಿಸಿ ಉಚಿತವಚನಗಳಿಂದ ಸಂಭಾವಿಸಲ್ಪಟ್ಟು ತೆರಳಿದರು. ಆನಂದಮಯವಾಗಿ ನಡೆದ ಈ ಉತ್ಸವ ಸಮಾರಂಭದ ವೈಭವವನ್ನು ಕೊಂಡಾಡುತ್ತಾ ಸರ್ವರೂ ತೆರಳಿದರು.

ಪತ್ರವ್ಯವಹಾರ.

೯ ನೆ ಶ್ರೀಮದ್ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನದ ವಿಷಯವಾಗಿ ಶ್ರೀಮಂತ ರಾ|| ಸಾ|| ಶಿವಲಿಂಗರಾವ ಜಗದೇವರಾವ ದೇಶಮುಖ ಆಲಮೇಲ ಇವರ ಪತ್ರವು:—

ಏ. ಏ. ಈ ವರ್ಷ ಬೀರೂರಲ್ಲಿ ಕೂಡುವ ೯ ನೇ ಶ್ರೀಮದ್ವೀರಶೈವ ಮಹಾಸಭೆಗೆ ಯಾರನ್ನು ಚುನಾಯಿಸಬೇಕೆಂಬ ವಿಷಯದ ಆಲೋಚನೆ ನಡೆದಿರುತ್ತದೆ. ಹೋದವರ್ಷ ಅಲ್ಲಿಯ ಕಮಿಟಿಯವರು ನನ್ನನ್ನು ಚುನಾಯಿಸಿ ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್ನರಾದ ಮಿ|| ಶಾಂತವೀರಪ್ಪಾ ಮೆಣಸಿನಕಾಯಿ ರಿಟೈರ್ಡ್ ಡಿ|| ಡಿ|| ಕಲೆಕ್ಟರ ಇವರಿಗೆ ತಿಳಿಸಲು, ಅವರು ನನಗೆ ತಂತಿಯಮೂಲಕ ಒಪ್ಪಿಗೆ ಕೊಡುವುದಕ್ಕೆ ಕೇಳಿದರು. ಆದರೆ ನಾನು ಅದಕ್ಕೆ ಒಪ್ಪದೆ ಮಿ|| ಶಾಂತವೀರಪ್ಪಾ ಮೆಣಸಿನಕಾಯಿ ಇವರು ಸಮಾಜಸೇವೆಯಲ್ಲಿ ಮುಪ್ಪಾದವರೂ, ವಯೋವೃದ್ಧರೂ, ಅನುಭವಿಕರೂ ಇರುವದರಿಂದ ಈ ಮಹತ್ಕಾರ್ಯದ ಭಾರವನ್ನು ಅವರೇ ವಹಿಸಲಿಕ್ಕೆ ಯೋಗ್ಯರೆಂದು ಅವರನ್ನೇ ಆರಿಸುವ ವಿಷಯವಾಗಿ ಸೂಚನೆಯನ್ನು ಮಾಡಿದೆನು. ಕೆಲವು ಕಾರಣಗಳ ಬಗ್ಗೆ ಹೋದವರ್ಷ ಸಭೆಯು ಜರುಗದೆ ಈ ವರ್ಷ ಅದೇ ಸ್ಥಳದಲ್ಲಿ ಸಭೆಯು ನಡೆಯುವ ಏರ್ಪಾಡು ಆಗಿದ್ದು ಆ ಸಭೆಗೆ ಮಿ|| ಶಾಂತವೀರಪ್ಪ ಮೆಣಸಿನಕಾಯಿ ಇವರನ್ನು ಅಧ್ಯಕ್ಷರನ್ನಾಗಿ ಆರಿಸುವದರಿಂದ ಆ ಸಭೆಯ ಕೆಲಸವು ಉತ್ತಮರೀತಿಯಿಂದ ಜರುಗುವುದೆಂದು ನನ್ನ ಅಭಿಪ್ರಾಯವಿದ್ದು, ನಮ್ಮ ಸಮಾಜಬಂಧುಗಳು ಸರ್ವಾನುಮತದಿಂದ ಅವರನ್ನೇ ಆರಿಸಬೇಕೆಂದು ನನ್ನ ಪ್ರಾರ್ಥನೆ. ಇದನ್ನು ಸರ್ವರ ತಿಳುವಳಿಕೆಗೋಸ್ಕರ ತಮ್ಮ ಪತ್ರದಲ್ಲಿ ಪ್ರಸಿದ್ಧಿಸೋಣಾಗಬೇಕು.

ತಾ|| ೧೩-೧೦-೧೯. S. J. Deshmukh.

9 ನೆಯ ವೀರಶೈವ ಮಹಾಸಭೆಯ ಅಧ್ಯಕ್ಷತೆ.

ಬೀರೂರಿನ ವೀರಶೈವ ಮಹಾಜನರು ಹೋದವರುಷ ಕೂಡಿಸಬೇಕೆಂದಿದ್ದ 9 ನೆಯ ವೀರಶೈವ ಮಹಾಸಭೆಗೆ ಅಧ್ಯಕ್ಷರನ್ನೂ ಮತ್ತು ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳನ್ನೂ ನಿರ್ಧರಿಸಲು ತಾ|| 22-9-18 ರಲ್ಲು ಬೀರೂರಲ್ಲಿ ಮೀಟಿಂಗ್ ಇಟ್ಟುಕೊಂಡಿರುವುದಾಗಿಯೂ, ಆ ಕಾಲಕ್ಕೆ ಅಶೇಷ ವೀರಶೈವರು ದಯಮಾಡಿಸಿ ತಮ್ಮ ಸೂಚನೆಗಳನ್ನು ತಿಳುಹಿಸಬೇಕೆಂದೂ ತಾ|| 25-8-18 ನೇ ಸಂಚಿಕೆ ಸ್ಟಾರ್ ಪತ್ರದಲ್ಲಿ ಪ್ರಕಟಮಾಡಿದ್ದುದಲ್ಲದೆ, ಆಹ್ವಾನಪತ್ರಗಳನ್ನು ಸಹ ಕಳುಹಿಸಿಕೊಟ್ಟಿದ್ದರು. ಮತ್ತು ಅದರಂತೆ ವೀರಶೈವಮಹಾಜನರು ಸೆಪ್ಟಂಬರ್ ತಾ|| 22 ನೆ ಭಾನುವಾರ ಹಾಜರಾಗಿ ನಡೆಸಿದ ಮೀಟಿಂಗಿನಲ್ಲಿ, ಬೀರೂರಲ್ಲಿ ನಡೆವ 9 ನೆಯ ವೀರಶೈವ ಮಹಾಸಭೆಗೆ ಶ್ರೀಮಂತ ಶಿವಲಿಂಗರಾವ್ ಜಗದೇವರಾವ್ ದೇಶಮುಖ ಆಲಮೇಲ್ ಬಿಜಾಪುರ ಇವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ತೀರ್ಮಾನಮಾಡಿದ್ದು ಸರಿಯಷ್ಟೆ. ಅದರಂತೆ ಹೋದವರ್ಷ ಕೂಡಬೇಕಾಗಿದ್ದ ಮಹಾಸಭೆಯನ್ನು ಅಕಸ್ಮಾತ್ ಒದಗಿದ ಇನ್‌ಫ್ಲುಯೆಂಜಾ ಗಲಾಟೆಯಿಂದ ನಿಲ್ಲಿಸಿ ಈ ವರ್ಷ ಮಾಡಲು ಬೀರೂರ ಮಹಾಜನರು ಕೈಗೊಂಡಿರುವುದು ಸ್ತುತ್ಯವಾದುದೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ.

ಈ ಮೊದಲೇ ಅಶೇಷ ವೀರಶೈವರು ಸೇರಿ ಮೀಟಿಂಗಿನಲ್ಲಿ ನಿರ್ಧರಿಸಿದ್ದ ಅಧ್ಯಕ್ಷರನ್ನು ಬಿಟ್ಟು ಬೇರೆ ಅಧ್ಯಕ್ಷರನ್ನು ಮಾಡಲು ಆಲೋಚನೆ ಮಾಡುವ ವರ್ತಮಾನವು ನನಗೆ ತಿಳಿದು, ಕೂಡಲೆ ಬೀರೂರುಸ್ವಾಗತ ಸಂಘಾಧ್ಯಕ್ಷರಿಗೆ ಬೇರೆಯವರನ್ನು ಚುನಾಯಿಸಲು ಕಾರಣವೇನೆಂಬುದನ್ನು ತಿಳುಹಿಸಬೇಕೆಂದು ಕಾಗದ ಬರೆದಿರುತ್ತೇನಲ್ಲದೆ, ಧಾರವಾಡದ ಸ್ಟ್ಯಾಂಡಿಂಗ್ ಕಮಿಟಿ ಚೇರ್ಮನ್ನರಾದ ಮ||ರಾ|| ಶಾಂತವೀರಪ್ಪ ಮೆಣಸಿನಕಾಯಿ ರಿ|| ಡಿ|| ಕಲೆಕ್ಟರ್ ಇವರಿಗೂ ಸಹ-"ಬೀರೂರು ಮಹಾಜನರು ಈ ಮುಂಚೆ ಮೀಟಿಂಗಿನಲ್ಲಿ ತೀರ್ಮಾನಿಸಿದ್ದ ಅಧ್ಯಕ್ಷರಾದ ಶ್ರೀಮಂತ ಶಿವಲಿಂಗರಾವ್ ಜಗದೇವರಾವ್ ದೇಶಮುಖ ಆಲ್‌ಮೇಲ್ ಇವರನ್ನು ಬಿಟ್ಟು ಬೇರೆ ಅಧ್ಯಕ್ಷರನ್ನು ಚುನಾಯಿಸುವ ಆಲೋಚನೆಮಾಡಿರುವ ವರ್ತಮಾನ ಕೇಳುತ್ತೇನೆ. ಆರೀತಿ ಮಾಡಲು ಕಾರಣವೇನೋ ಗೊತ್ತಾಗಲಿಲ್ಲ. ವೀರಶೈವ ಮಹಾಜನರು ಸೇರಿ ತೀರ್ಮಾನಿಸಿದ್ದವರನ್ನು ಬಿಟ್ಟು ಬೇರೆಯವರನ್ನು ಚುನಾಯಿಸುವ ವಿಷಯವನ್ನು ಸ್ಟ್ಯಾಂಡಿಂಗ್ ಕಮಿಟಿಯ ಎಲ್ಲಾ ಮೆಂಬರುಗಳ ಮುಂದಿಟ್ಟು ಮೀಟಿಂಗಿನಲ್ಲಿ ತೀರ್ಮಾನಿಸಬೇಕೆಂ" ಎಂದು ಕಳೆದ ತಿಂಗಳು 29 ನೆ ತಾರೀಖಿನಲ್ಲಿ ರಿಜಿಸ್ಟ್ರು ಟಪ್ಪಾಲು ಮೂಲಕ ಕಾಗದ ಬರೆದಿರುತ್ತೇನೆ.

ಬೀರೂರಲ್ಲಿ ನಡೆಯುವ ಮಹಾಸಭೆಗೆ ನಿರ್ಧರಿಸಿದ್ದ ಅಧ್ಯಕ್ಷರನ್ನು ಬಿಟ್ಟು, ತಮ್ಮ ಇಷ್ಟಬಂದಂತೆ ಮಾಡುವುದು ಕ್ರಮತಪ್ಪಿ ಮಾಡಿದಂತಾಗುವುದಾಗಿಯೂ, ಮಹಾಸಭಾಕಾರ್ಯವು ಸಾಂಗವಾಗಿ ನಡೆಯುವುದಕ್ಕೆ ಪ್ರತಿಬಂಧಕವನ್ನುಂಟುಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುವುದಾಗಿಯೂ, ಮೊದಲು ಮಹಾಜನರು ಸಭೆಯಲ್ಲಿ ನಿರ್ಧರಿಸಿದ್ದ ತೀರ್ಮಾನಕ್ಕೆ ಅವಮರ್ಯಾದೆಯನ್ನುಂಟುಮಾಡತಕ್ಕದಾಗಿಯೂ ಇರುವುದರಿಂದ, ಬೀರೂರು ಮಹಾಜನರು ಕೈಗೊಂಡಿರುವ ಮಹಾಸಭೆಯ ಕೆಲಸಗಳು ಯಾವ ಚರ್ಚೆಗೂ ಅವಕಾಶವಿಲ್ಲದಂತೆ ಸುಲಲಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ನನಗೆ ತಿಳಿದ ವಿಷಯವನ್ನು ಸ್ಟ್ಯಾಂಡಿಂಗ್ ಕಮಿಟಿ ಚೇರ್ಮನ್ನರಿಗೂ ಮತ್ತು ಮೆಂಬರುಗಳಿಗೂ ಸಹ ಬರೆದಿರುತ್ತೇನೆ.

ಈಚೆಗೆ ಬೀರೂರುಮಹಾಜನರು, ಸ್ಟ್ಯಾಂಡಿಂಗ್ ಕಮಿಟಿ ಚೇರ್ಮನ್ನರಾದ ಮ||ರಾ|| ಶಾಂತವೀರಪ್ಪ ಮೆಣಸಿನಕಾಯಿ ಧಾರವಾಡ ಇವರನ್ನು ಅಧ್ಯಕ್ಷರಾಗಬೇಕೆಂದು ಪ್ರಾರ್ಥಿಸಿಕೊಂಡಿರುವುದಾಗಿಯೂ, ಅದರಂತೆ ಅವರು ಅಧ್ಯಕ್ಷರಾಗಲು ಕಮಿಟಿಯ ಮೆಂಬರುಗಳ ಅಪ್ಪಣೆಯನ್ನು ಕೇಳಿರುವುದಾಗಿಯೂ ಮೆಂಬರುಗಳಿಂದ ತಿಳಿಯಬಂದಿರುತ್ತದೆ.

ಬೀರೂರು ಮಹಾಜನರು ಮ|| ರಾ|| ಶಾಂತವೀರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಸಮ್ಮತಿಸಿದ್ದಾಗ್ಗ್ಯೂ, ಈ ಮೊದಲೇ ಅಧ್ಯಕ್ಷರನ್ನು ಚುನಾಯಿಸುವುದಕ್ಕೆ ವೀರಶೈವ ಮಹಾಜನಗಳಿಗೆ ಜಾಹಿರಾತ್ ಮೂಲಕ ಮತ್ತು ಆಹ್ವಾನಪತ್ರಗಳ ಮೂಲಕ ಬರಮಾಡಿಕೊಂಡು ಮೀಟಿಂಗ್ ನಡೆಸಿ ಅದರಲ್ಲಿ ಬಹುಮತದಂತೆ ಶ್ರೀಮಂತ ದೇಶಮುಖ ಆಲ್‌ಮೇಲ್ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿರುವುದರಿಂದ ನಿಷ್ಕಾರಣವಾಗಿ ಅಂಥಾವರನ್ನು ಬಿಡುವುದು ಸಾಧ್ಯವಾಗಲಾರದು, ಬೇರೆ ಅಧ್ಯಕ್ಷರನ್ನು ಮಾಡುವಾಗಲೂ ಕೂಡ ಮೊದಲಿನಂತೆ ಅನುಸರಿಸಿರುವುದಿಲ್ಲ, ಬೀರೂರವರು ತಮ್ಮ ಮನಸ್ಸಿಗೆ ಬಂದಂತೆ ಮಾಡಿಕೊಂಡಮಾತ್ರಕ್ಕೇ ವೀರಶೈವ ಮಹಾಜನರೆಲ್ಲರೂ ಒಪ್ಪಿದಂತೆ ಆಗುವುದಿಲ್ಲ.

ನಾನು ಸ್ಟ್ಯಾಂಡಿಂಗ್ ಕಮಿಟಿ ಮೆಂಬರುಗಳಿಗೆ ಬರೆದ ಕಾಗದಗಳಿಗೆ ಈ ಮುಂಚೆ ಅಶೇಷ ವೀರಶೈವರು ಮೀಟಿಂಗಿನಲ್ಲಿ ತೀರ್ಮಾನಿಸಿದ್ದ ಶ್ರೀಮಂತ ದೇಶಮುಖರವರೇ ಅಧ್ಯಕ್ಷರಾಗುವುದು ನ್ಯಾಯವೆಂತಲೂ, ತಮ್ಮಗಳ ಸಮ್ಮತವೆಂತಲೂ, ಕಾರಣವಿಲ್ಲದೆ ಅವರನ್ನು ಬಿಡುವುದು ಸಮಾಜದ ಏಕತ್ವಕ್ಕೂ, ಮತೋದ್ಧಾರಕ್ಕೂ ಕುಂದಕವೆಂತಲೂ ಅನೇಕರು ಜವಾಬು ಬರೆದಿರುತ್ತಾರೆ.

ಬೀರೂರಿನ ಮಹಾಜನರು, ಈ ಮೊದಲೇ ಶ್ರೀಮಂತ ದೇಶಮುಖರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದ ವಿಷಯವನ್ನು ಸ್ಟ್ಯಾಂಡಿಂಗ್ ಕಮಿಟಿ ಚೇರ್ಮನ್ನರವರಿಗೆ ತಿಳುಹಿಸಿರುತ್ತಾರೋ ಇಲ್ಲವೋ ತಿಳಿಯದು. ಹಾಗೆ ತಿಳುಹಿಸದೆ ಇದ್ದರೆ ಬೀರೂರವರದೇ ತಪ್ಪಾಗಿರುತ್ತದೆ.

ಮ||ರಾ|| ಮೆಣಸಿನಕಾಯಿ ಶಾಂತವೀರಪ್ಪನವರಿಗೆ ನಾನು ಬರೆದ ರಿಜಿಸ್ಟ್ರು ಕಾಗದ ತಲುಪಿ, ಶ್ರೀಮಂತ ದೇಶಮುಖರನ್ನು ಅಧ್ಯಕ್ಷರಾಗಬೇಕೆಂದು ಮೀಟಿಂಗಿನಲ್ಲಿ ತೀರ್ಮಾನವಾದ ವಿಷಯ ತಿಳಿದಮೇಲಾದರೂ ಶ್ರೀಮಂತ ದೇಶಮುಖರವರೇ ಅಧ್ಯಕ್ಷರಾಗುವುದು ನ್ಯಾಯವೆಂದು ಮ||ರಾ|| ಶಾಂತವೀರಪ್ಪನವರಾದರೂ ಹೇಳದೆ ಇರಲಾರರು. ಅದುದರಿಂದಲೇ ಬೀರೂರು ಮಹಾಜನರಿಗೆ ಬರೆದು ಇದರ ನಿಜಾಂಶವನ್ನು ತಿಳಿದುಕೊಂಡು, ಸ್ಟ್ಯಾಂಡಿಂಗ್ ಕಮಿಟಿಯ ಎಲ್ಲಾ ಮೆಂಬರುಗಳ ಮುಂದಿಟ್ಟು ಇತ್ಯರ್ಥಮಾಡುತ್ತಿರುವರಾದಕಾರಣದಿಂದಲೇ ನನ್ನ ರಿಜಿಸ್ಟ್ರು ಕಾಗದಕ್ಕೆ ಇದುವರೆಗೂ ಜವಾಬು ಕೊಡದೆ ಇರುತ್ತಾರೆಂದು ಊಹಿಸುತ್ತೇನೆ.

ಮೇಲ್ಕಂಡ ವಿಷಯಗಳನ್ನೆಲ್ಲಾ ಮ||ರಾ|| ಚೇರ್ಮನ್ನರಾದ ಶಾಂತವೀರಪ್ಪನವರೂ, ಬೀರೂರಿನ ಮಹಾಜನರೂ ಪೂರ್ಣವಾಗಿ ಪರ್ಯಾಲೋಚಿಸಿ ಮಹಾಸಭಾ ಕಾರ್ಯಗಳು ಸಮರ್ಪಕವಾಗಿ ನಡೆಯುವ ಏರ್ಪಾಡನ್ನು ಮಾಡಿ ಕೀರ್ತಿಭಾಗಿಗಳಾಗುವರೆಂದು ನಂಬಿರುತ್ತೇನೆ.

ಈ ವಿಷಯಕ್ಕೆ ವೀರಶೈವ ಮಹಾಜನಗಳು ಲಕ್ಷ್ಯ ಕೊಡುತ್ತಾರೆಂದು ಕೋರುತ್ತೇನೆ.

ದಾವಣಗೆರೆ,
15-10-19.

ಬಿ. ಚನ್ನವೀರಪ್ಪ, ಸೆಕ್ರೆಟರಿ,
8 ನೇ ವೀರಶೈವ ಮಹಾಸಭಾ.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ ?

ಎಂದಿಗೂ ಅಲ್ಲ.

ಈ ಸುಧಾಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರಹ ಕಜ್ಜಿಗಳು, ಹುಳುಕಡ್ಡಿ, ಮುಂತಾದವುಗಳಮೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ತೀಸೆ 1 ಕ್ಕೆ. 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ತಾಯಿಗಳ, ಶರಬತ್ತುಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಅರುಕಾಸಿನ ಸ್ಟ್ಯಾಂಪು ರವಾನಿಸಿ ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಬೋರ್ಡ್ ಮಾಫಿ ಫಾಯಿದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ನಿಗಾಕೊಡುವದಿಲ್ಲಾ. ಈದಿನವೇಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎಸ್. ಕಂಪೆನಿ
2 ತಿಪ್ಟೂರು (ಮೈಸೂರು ಪ್ರಾವಿನ್ಸ್).

೧೯೧೯ ನೆಯ ಇಸವಿ ಅಕ್ಟೋಬರ್ ತಾ|| ೨೬ ರಿಂದ ೧೯೧೯ ನೆಯ ನವಂಬರ್ ತಾ|| ೧ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಕಾರ್ತೀಕ ಶು|| ತದಿಗೆಯಿಂದ ಕಾರ್ತೀಕ ಶು|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
26	ಭಾನು	ತದಿಗೆ	60	ಅನೂ	60	10
27	[1] ಸೋಮ	ತದಿಗೆ	0-9	ಅನೂ	5-54	11
28	ಮಂಗಳ	ಚೌತಿ	5-22	ಜ್ಯೇಷ್ಠ	12-3	12
29	ಬುಧ	ಪಂಚ	10-6	ಮೂಲ	18-14	13
30	ಗುರು	ಷಷ್ಠಿ	13-59	ಪೂಷಾ	23-19	14
31	ಶುಕ್ರ	ಸಪ್ತ	16-49	ಉಷಾ	27-21	15
1	ಶನಿ	ಅಷ್ಟಮಿ	18-23	ಶ್ರವ	30-10	16

(1) ಕಾರ್ತೀಕಸೋಮವಾರ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಹಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃಪಾಪಕಾರಾ ಪತ್ರಜ್ಞನಿಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಮ್ರಾಜ್ಯಾಲವಾಲಂವಲಂ ||
ಶೀಮಾಶೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಾಂಚಿತ್ರಿಲಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ನವಂಬರ್ ತಾರೀಖು ೨ ನೆಯ ಭಾನುವಾರ (ಸಂಚಿಕೆ ೪೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸಹಸ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಧಪ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಕಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

36 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 15

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ ಚಾರ್ಜು ೦—೪—೦. ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೦ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ..ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
43 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 46

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರವೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ಸಿರೋಗಸ್ಥವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪ್ರಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧಿ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಪಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||

„ದಲ್ಲಾಲಿ ಅಂಗಡಿ ಸೊಲ್ಲಾಪುರ"

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕು, ಶೀಗೆಕಾಯಿ, ತುಪ್ಪ, ಕೊಬರಿ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ, ಚಹಾ, ಕಾಜು, ಆಲೂ, ಉಳ್ಳಿಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಬಿಕರಿಮಾಡಿ ಕೊಡುತ್ತೇವೆ. ಒಂದುವೇಳೆ ಕೆಲಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೇಯವಾರ ಮುಂಬಯದಲ್ಲಿ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
4 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

MYSORE GOVERNMENT ADVERTISEMENTS.

PUREST raw materials and the FINEST essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

ಪ್ರಕಟನೆ.

ಕಂಬಳಿಗಳು, ರತ್ನಕಂಬಳಿಗಳು, ಬಾಗಿಲುಮುಂದೆ ಹಾಕುವ ರಗ್ಗುಗಳು, ಕೈವಸ್ತ್ರಗಳು, ತರಹಾವರಿ ಚೌಕಗಳು, ತರಹಾವರಿ ಬಟ್ಟೆಗಳು, ದುಪಟಿಗಳು, ಮರದ ಸಾಮಾನುಗಳು, ಕಬ್ಬಿಣದ ಸಾಮಾನುಗಳು, ಹಣದ ಚೀಲಗಳು, ಟೆನ್ನಿಸ್ ಬಲೆಗಳು, ಹಗ್ಗಗಳು, ಈ ಸಾಮಾನುಗಳು ಈ ಜೈಲಿನಲ್ಲಿ ತಯಾರುಮಾಡಲ್ಪಡುತ್ತವೆ. ಬಿಕರಿಗೆ ಸಿದ್ಧವಾಗಿದ್ದರೆ ಕಿಮ್ಮತ್ತು ಪಾವತಿಮಾಡಿ ಪಡೆಯಬಹುದು. ಅಲ್ಲದೆ ಶೇಕಡ 50 ರಂತೆ ಬೆಲೆಯನ್ನು ಮುಂಗಡವಾಗಿ ಕೊಟ್ಟರೆ ಸಾಮಾನುಗಳನ್ನು ತಯಾರುಮಾಡಿಸುತ್ತೆ.

C. Rajagopal, Suparintendent,
Mysore Jail.

1. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ನಾನಾ ವಿಧವಾದ ಟುವಲುಗಳು ದುಪಟಿಗಳು, ಮಗ್ಗಲುಹಾಸಿಗೆಗಳು, ಕ್ವಿಲ್ಟು ಎಂಬ ಹಾಸಿಗೆಗಳು, ತೆಂಗಿನ ನಾರಿನ ಚಾಪೆಗಳು, ಮತ್ತು ರಗ್ಗುಗಳು, ಮತ್ತು ಚಕ್ಕುಗಳೇ ಮುಂತಾದ ಸಾಮಾನುಗಳು, ತಯಾರುಮಾಡಿಸಿ ವ್ಯಾಪಾರಕ್ಕೆ ಯಾವಾಗಲು ಸಿದ್ಧವಾಗಿವೆ. ರತ್ನಕಂಬಳಿಗಳು ಮತ್ತು ಜಮಖಾನೆಗಳು ಅನೇಕ ವಿಧವಾಗಿ ಆರ್ಡರುಗಳಿಗೆ ತಯಾರುಮಾಡಿಸಿ ಕೊಡಲ್ಪಡುತ್ತವೆ. ಜೈಲ್‌ಸ್ಟೋರು ರಜಾ ದಿನಹೊರತು ಬಾಕಿ ದಿನಗಳಲ್ಲಿ ಬೆಳಿಗ್ಗೆ 7 ರಿಂದ 10-30 ಘಂಟೆಯವರಿವಿಗೂ ಮಧ್ಯಾಹ್ನ 3 ರಿಂದ 5 ಘಂಟೆಯವರಿವಿಗೂ ತೆರೆಯಲ್ಪಟ್ಟಿರುತ್ತದೆ.

2. ಈ ಜೈಲಿನಲ್ಲಿ ಖೈದಿಗಳಿಗೆ ಒಂದು ವರುಷಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳಿಗೂ ಮತ್ತು ಜೈಲ್‌ಕಾರ್ಖಾನೆಗೆ ಬೇಕಾದ ಚಿಲ್ಲರೆ ಸಾಮಾನುಗಳಿಗೋಸ್ಕರ ಪ್ರತಿವರುಷವು ನವಂಬರು ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ ಮತ್ತು ಜೈಲ್‌ಕಟ್ಟಡ ರಿಪೇರಿಗೋಸ್ಕರ ಬೇಕಾದ ಸಾಮಾನುಗಳಿಗೆ ಪ್ರತಿವರುಷವು ಜೂನ್ ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ.

13 Superintendent,
Centrel Jail, Bangalore.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಟೆಲಿಗ್ರಾಫ್ ವಿಳಾಸ:—ಕರೇಗೌಡರು ದಾವಣಗೆರೆ.

ಇಲ್ಲಿನೋಡಿ.

ನಮ್ಮಲ್ಲಿ ಎಲ್ಲಾ ತರಹದ ರಹಿಂವಾರ್ ಮಂಗಳೂರು ಹೆಂಚುಗಳು ಮತ್ತು ಕಡಪಾಕಲ್ಲುಗಳು ಕಿರಲೋಸ್ಕರು ಕಂಪನೀಮಾಲು, ಮತ್ತು ಕಬ್ಬಿಣದ ನೇಗಿಲುಗಳು ಹಾಡಿಕಕ್ಕ ಸಾಮಾನುಗಳು ನಮ್ಮಲ್ಲಿ ಬಿಕರಿಗೆ ಸಿಗುತ್ತದೆ. ಬೇಕಾದವರು ದಾವಣಗೆರೆಗೆ ಕಾಗದಬರೆದು. ತಿಳಕೊಂಡು ಕಳ್ಳಿಕೊಳ್ಳಬಹುದು.

ಮಂಗಳೂರು ಹೆಂಚುಗಳು ಮಾತ್ರಕ್ಕೆ ಹುಲವಿಗಿ ಸ್ಟೇಷನ್ ಇಂದಾ ಅರಸಿಕೆರೆ ಸ್ಟೇಷನ್‌ವರೆಗೂ ೯ ಮೈಲಿಯ ಚಕ್ಕಿಯುರುತ್ತ.

ವಿಳಾಸ:—ಎಸ್. ಪಿ. ಕರೇಗೌಡರ ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ನವಂಬರ್ ತಾ|| ೨ ನೆಯ ಭಾನುವಾರ.

ಸಾಂಘಿಕ ಪ್ರಾತಿನಿಧ್ಯ.

ಸರ್ ಶಂಕರನ್ ನಾಯರ್‌ರವರು.

ಸೀಮೆಯಲ್ಲಿ ಭಾರತ ರಾಜಕೀಯ ನೂತನಸಂಸ್ಕರಣ ಸಂಬಂಧವಾಗಿ ಪಾರ್ಲಿಮೆಂಟಿನ ಜಾಯಿಂಟ್ ಕಮಿಟಿಯವರು ನಡೆಯಿಸುತ್ತಿದ್ದ ವಿಚಾರಣೆಯೆಲ್ಲಾ ಮೊನ್ನೆವಾರಕ್ಕೆ ಮುಗಿದಿತು. ಕಡೆಯಸಲ ವಾಙ್ಮೂಲಕೊಟ್ಟ ದೊಡ್ಡಮನುಷ್ಯರುಗಳೊಳಗೆ ಸರ್ ಶಂಕರನ್ ನಾಯರ್‌ರವರೂ ಒಬ್ಬರಾಗಿದ್ದರು. ಇವರು ತಮ್ಮ ಅಭಿಪ್ರಾಯಗಳನ್ನು ಬಹಳ ಸ್ಪಷ್ಟವಾಗಿ ಹೇಳಿರುತ್ತಾರೆ. ಕಮಿಟಿ ಮೆಂಬರರಲ್ಲಿ ಒಬ್ಬರಾದ ಲಾರ್ಡ್ ಸಿಡೆನ್ಹ್ಯಾಮ್‌ರವರಿಗೆ ಇವರು ಉತ್ತರಕೊಡುವಾಗ್ಗೆ ಸಾಂಘಿಕ ಪ್ರಾತಿನಿಧ್ಯವನ್ನು ಕುರಿತು ಕೆಲ ಮಾತುಗಳನ್ನಾಡಿದ್ದಾರೆ "ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟರೆ ಭರತಖಂಡ ಸರ್ಕಾರದವರು ಅಭಿಪ್ರಾಯಪಡುವಂತೆ ವರ್ಣಕುಲಭೇದಗಳು ಹೆಚ್ಚುವುವೇನೋ ನಿಜ. ಆದರೆ ಇಂಥ ಸಾಂಘಿಕ ಪ್ರಾತಿನಿಧ್ಯವು ಇದ್ದೇತೀರಬೇಕೆಂದು ಬ್ರಾಹ್ಮಣೇತರರು ಕೇಳುತ್ತಿರುವುದರಿಂದ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಒಳ್ಳೆಯದು" ಎಂದು ಹೇಳಿರುತ್ತಾರೆ. ಭರತಖಂಡ ಸರ್ಕಾರದವರಿಗೆ ಈ ದೇಶದ ವರ್ಣಕುಲಭೇದಗಳೆಲ್ಲಾ ಮೂಲೋತ್ಪಾಟನೆಗೊಂಡು ಎಲ್ಲರೂ ಒಂದೇ ಜಾತಿಯಾಗಬೇಕೆಂಬ ಸಂಕಲ್ಪವಿರಬಹುದೋ ಏನೋ! ಇದೇತೆರದ ಆಸೆಯು ಕ್ರೈಸ್ತಪಾದ್ರಿಗಳಿಗೂ ಇರುತ್ತದೆ. ಅದುಕಾರಣ, ಅವರುಗಳು ಸಾಂಘಿಕ ಪ್ರಾತಿನಿಧ್ಯದಿಂದ ವರ್ಣಕುಲಭೇದಗಳು ಮತ್ತಷ್ಟು ಬಲವಾಗುವುವೆಂದು ಯೋಚಿಸಿಕೊಂಡು, ಈ ಸಾಂಘಿಕ ಪ್ರಾತಿನಿಧ್ಯತತ್ತ್ವಕ್ಕೆ ವಿಮುಖರಾಗಿರುವುದು ಸಹಜ. ಆದರೆ ಸರ್ ಶಂಕರನ್ ನಾಯರ್‌ರವರು ಕೂಡ ಅದನ್ನೇ ನಿಜವೆಂದು ಅನುಮೋದಿಸಿರುವುದನ್ನು ನೋಡಿದರೆ ಇವರೂ ಕೂಡ ಆಧುನಿಕ ಸಂಘಸಂಸ್ಕಾರಿಗಳಾದ ಸರ್ ಚಂದ್ರಾವರ್ಕರವರೇ ಮೊದಲಾದವರಂತೆ "ಸಬ್‌ಲುಂಪಾ" ಮಾಡುವ ಭ್ರಾಂತಿಗೇ ಬದ್ಧರಾಗಿ ಕಾಣಿಸುತ್ತಾರೆ. ಸಾಂಘಿಕ ಪ್ರಾತಿನಿಧ್ಯತತ್ತ್ವವು ಅಂಗೀಕರಿಸಲ್ಪಡದೆ ಹೋದರೆ ಭರತಖಂಡದ ಮತ ಕುಲ ಜಾತಿ ಭೇದಗಳೆಲ್ಲಾ ನಿರ್ನಾಮವಾಗಿಹೋಗುವುದು ನಿಜವೆ? ಆ ತತ್ತ್ವವು ಅಂಗೀಕರಿಸಲ್ಪಡದಿರುವ ಈಗಣ ಕಾಲದಲ್ಲಿ ಕುಲಜಾತಿ ಸ್ಪರ್ಧೆಗಳು ಕಡಿಮೆಯಾಗುತ್ತಿರುವ ಚಿಹ್ನೆಗಳೇನಾದರೂ ಕಾಣುತ್ತಿವೆಯೆ? ಪಾಶ್ಚಾತ್ಯ ವಿದ್ಯಾಸಂಸ್ಕಾರವನ್ನು ಪಡೆದಿರುವ ವಿದ್ಯಾಧಿಕರುಕೂಡ ಅಂತಸ್ಸಾಹಸವನ್ನು ಮೂಲೆಗೊತ್ತಿ, ಬಾಹ್ಯಾಡಂಬರಕ್ಕೂ ಮತವೈಷಮ್ಯಕ್ಕೂ ನಡುಕಟ್ಟಿನಿಂತಿರುವುದನ್ನು ಯಾರು ಕಾಣರು? ಸಾಂಘಿಕಪ್ರಾತಿನಿಧ್ಯ ತತ್ತ್ವಕ್ಕೆ ವಿದ್ಯಾಧಿಕ ಜನರು ಅಡ್ಡಿಯನ್ನು ಮಾಡುವುದಕ್ಕೆ ನಿಂತುದರಿಂದಲೇ ಈಗ ಭರತಖಂಡದಲ್ಲಿ ಹಿಂದುಳಿದವರ ಮತ್ತು ಮುಂಬರಿದವರ ಮಧ್ಯದಲ್ಲಿ ಮನಸ್ಸ್ಪರ್ಧೆಗಳು ಬೆಳೆಯುವುದಕ್ಕೆ ಅವಕಾಶವಾಗಿದೆ. ಎಲ್ಲಿಯವರೆಗೆ ಪ್ರತ್ಯೇಕಪ್ರಾತಿನಿಧ್ಯ ತತ್ತ್ವಕ್ಕೆ ಅಡ್ಡಿಗಳು ಮಾಡಲ್ಪಡುತ್ತಿರುವುವೋ ಅಲ್ಲಿಯವರೆಗೂ ಇಂಥ ಸ್ಪರ್ಧಾವೈಮನಸ್ಯಗಳೂ ಭೇದಗಳೂ ಕಸಿಮಾಡಿದಂತೆ ಶಾಖೋಪಶಾಖವಾಗಿ ವೃದ್ಧಿಗೊಳ್ಳುವುವೇ ಹೊರತು ಕಡಿಮೆಯಾಗುವುದಿಲ್ಲ. ಮುಂಬರಿದ ದೇಶೀಯರು ಸಹೋದರಪ್ರೀತಿಯಿಂದ ದೂರಾಲೋಚನೆಯಿಟ್ಟು ಈ ತತ್ತ್ವಕ್ಕೆ ಅನುಮೋದನೆ ಕೊಡುವುದೊಂದೇ ಈ ಭಿನ್ನಭಾವಗಳ ಶಾಂತಿಗೆ ಪರಮೌಷಧವಾದೀತು. ಹಾಗಲ್ಲದೆಹೋದರೆ ಹಿಂದುಳಿದವರು ಪ್ರತ್ಯೇಕ ಪ್ರಾತಿನಿಧ್ಯಫಲವನ್ನು ತಮ್ಮ ಕರ್ತೃತ್ವ ಶಕ್ತಿಯಿಂದ ತಾವು ಹೇಗಾದರೂ ಪಡೆದುಕೊಳ್ಳದೆ ಬಿಡುವುದಿಲ್ಲ. ಅದರ ವಿರೋಧಿಗಳಾದರೂ ಕಾಲಾನುಕಾಲದಲ್ಲಿ ತಾವೇ ಪ್ರತ್ಯೇಕಪ್ರಾತಿನಿಧ್ಯವನ್ನು ಕೋರಿಕೊಳ್ಳುವ ಅವಸ್ಥೆಗೆ ಬರುವುದುಕೂಡ ತಪ್ಪುವುದಿಲ್ಲ.

ಈ ಪ್ರತ್ಯೇಕ ಪ್ರಾತಿನಿಧ್ಯ ತತ್ತ್ವಕ್ಕೆ ಅಂಗೀಕಾರವನ್ನು ಕೊಡದೆಹೋಗುವುದರಿಂದ ಆಗತಕ್ಕ ಅನರ್ಥವು ಜಾತಿಭೇದಾದಿಗಳ ಅಭಿವೃದ್ಧಿಯಿಂದ ಆಗಬಹುದಾದ ಅನರ್ಥಕ್ಕಿಂತಲೂ ಮಿಗಿಲಾಗುವುದೆಂಬುದನ್ನು ಯೋಚಿಸಿಕೊಂಡೇ ಸರ್ ಶಂಕರನ್ ನಾಯರ್‌ರವರು ಕಡೆಗೆ "ಪ್ರತ್ಯೇಕಪ್ರಾತಿನಿಧ್ಯಾಧಿಕಾರವನ್ನು ಕೊಡುವುದು ಒಳ್ಳೆಯದು" ಎಂದು ಅಭಿಪ್ರಾಯಕೊಟ್ಟಿರುತ್ತಾರೆ. ಆದರೆ ಈ ಅಭಿಪ್ರಾಯವು ಎಷ್ಟುಮಟ್ಟಿಗೆ ಗೌರವಿಸಲ್ಪಡುವುದೆಂಬುದನ್ನು ಮುಂದೆ ತಿಳಿಯಬೇಕು. ವೈಸ್‌ರಾಯರ ಎಗ್ಜಿಕ್ಯುಟಿವ್ ಕೌನ್ಸಿಲ್‌ಗಿರಿಗೆ ಸರ್ ಶಂಕರನ್ ನಾಯರ್‌ರವರು ರಾಜೀನಾಮೆಕೊಟ್ಟಾಗ, ಅವರನ್ನು ಇಂದ್ರ ಚಂದ್ರ ದೇವೇಂದ್ರನೆಂದು ಹೊಗಳಿ, ಅವರ ದೇಶಾಭಿಮಾನವನ್ನೂ ಧೀಮತ್ತೆಯನ್ನೂ ಮರ್ಯಾದಿಸಲು ನಾಮುಂದು ತಾಮುಂದೆಂದು ಒಂದು ೨ನೆ ಸಲ ರಾಷ್ಟ್ರೀಯ ಮಹಾಸಭಾಧ್ಯಕ್ಷತೆಯನ್ನು ಅವರಿಗೆ ಕೊಡಬೇಕೆಂದು ಓಡಾಡುತ್ತಿರುವ ಜನರುಗಳು ಅದೇ ನಾಯರ್‌ರವರ ಹಿತವಚನವನ್ನು ಈಗ ಎಷ್ಟುಮಟ್ಟಿಗೆ ಗೌರವಿಸುವರೋ ನೋಡಬೇಕು.

ಸ್ತ್ರೀವಿದ್ಯಾಭ್ಯಾಸ.

ಪುರುಷರ ವಿದ್ಯಾಭ್ಯಾಸಕ್ಕೂ ಸ್ತ್ರೀಯರು ಮಾಡುವ ವಿದ್ಯಾಭ್ಯಾಸಕ್ಕೂ ತಾರತಮ್ಯವಿರಬೇಕಾದುದು ಅವಶ್ಯಕವೆಂದು ಬಹುಜನ ಮತವಿರುವಂತೆ, ಅದನ್ನು ನಿರೋಧಿಸಿ ಎರಡಕ್ಕೂ ಸಮಾನತೆಯಿರಬೇಕೆಂದು ವಾದಿಸುವ ವರ್ಗವಾದರೂ ಅಲ್ಲಲ್ಲಿ ಇದ್ದೇ ಇದೆ. ನಮ್ಮ ಮೈಸೂರು ದೇಶದಲ್ಲಾದರೊ ವಿದ್ಯಾಧಿಕ ಜನರಲ್ಲಿ ಬಹುಭಾಗದವರು ಹುಟ್ಟುಕನ್ನಡಿಗರಲ್ಲದೆ ತಮಿಳು ತೆಲುಗರೇ ಹೆಚ್ಚಾಗಿರುವುದರಿಂದ ಅವರುಗಳಿಗೆ ಕರ್ಣಾಟಭಾಷೆಯ ಮೇಲೆ ಅಷ್ಟು ಪ್ರೇಮವಿಲ್ಲ. ಇದರಿಂದ "ದತ್ತಪುತ್ರನಿಗೇಕೆ ಪಿತೃಭಕ್ತಿ?" ಎಂಬಂತೆ ಕನ್ನಡವನ್ನು ಕಂಡರೆ ಸೇರದೆ ಪರಭಾಷೆಯನ್ನು ಮೋಹಿಸುವವರೇ ಹೆಚ್ಚಾಗಿದ್ದಾರೆ. ಅಂಥವರ ಹೆಂಗುಸರು ಕೂಡ ತಮಗೆ ಇಂಗ್ಲೀಷಿನಲ್ಲೇ ಪುರುಷರಂತೆ ಎಲ್ಲ ವಿದ್ಯಾಭ್ಯಾಸವನ್ನೂ ಮಾಡಿಸಬೇಕು; ಕನ್ನಡದಲ್ಲಿ ಯಾವ ತರಗತಿಯ ಅಭ್ಯಾಸವೂ ನಡೆಯಕೂಡದು ಎಂದು ವಾದಿಸುವುದರಲ್ಲಿ ಆಶ್ಚರ್ಯವೇನು?

ಮೊನ್ನೆ ತಾನೇ ರಾಜಧಾನಿಯಲ್ಲಿ ನೆರೆದಿದ್ದ ಸ್ತ್ರೀಸಮ್ಮೇಳನದಲ್ಲೂ ಅವರು ಹಾಗೆಯೇ ನಿರ್ಧಾರಮಾಡಿದರಂತೆ. ನಮ್ಮ ವಿದ್ಯಾಪೀಠದ ಸೆನೇಟ್ ಮೀಟಿಂಗಿನಲ್ಲೂ ಆ ತೆರದ ಅಭಿಪ್ರಾಯವೇ ಬಹುಮತವಾಗಿ ಹೊರಬಿದ್ದಿರುವುದು. ಇದಕ್ಕಾದರೂ ನಾವು ಮೇಲೆ ಹೇಳಿರುವ ದೇಶಭಾಷಾನಿರಭಿಮಾನದ ಹೇತುವಿನ ಜತೆಗೆ ಮಿ|| ರಡ್ಡಿಯವರ ಹೊಸ ಸ್ಕೀಮಿನ ಮೇಲಣ ವಕ್ರದೃಷ್ಟಿಯೂ ಕೆಲಮಟ್ಟಿಗೆ ಕಾರಣವಾಗಿರಬೇಕೆಂದು ಕಾಣುತ್ತದೆ. ಈ ಸ್ಥಿತಿಯನ್ನೆಲ್ಲಾ ನೋಡಿ ಮಂಗಳೂರಿನ ಪುರುಷಸಿಂಹವು (ಕಂಠೀರವ ಪತ್ರವು) "ಹೆಂಗಸರೆಲ್ಲರೂ ಗಂಡಸರಾದರೆ ಗಂಡಸರೇನಾಗಬೇಕು?, ಎಂದು ಪಲ್ಲವಿಯನ್ನಿಟ್ಟುಕೊಂಡು,-ಸುಧಾರಣೆಯಲ್ಲಿ ಮೈಸೂರ ಹೆಂಗುಸರೆಷ್ಟು ಮುಂಬರಿದಿರುವರೆಂದು ಹೇಳಬೇಕಿಲ್ಲ. ಬಾಲ್ಯವಿವಾಹದ ನಿರೋಧ, ಪ್ರೌಢವಿವಾಹದ ಅನುಮೋದನ, ವಿಧವಾವಿವಾಹದ ಉತ್ತೇಜನ, ಮೊದಲಾದ ವಿವಿಧ ವಿಷಯಗಳನ್ನು ಚರ್ಚಿಸಿ, ಇತ್ಯರ್ಥಿಸಿ ಸಾಲದೆ, ಅಲ್ಲಿಯ ಸ್ತ್ರೀಸಮ್ಮೇಳನವು ಸ್ವಸಂಪಾದನೆಯ ಮಾರ್ಗವಾದ ವಿದ್ಯಾಭ್ಯಾಸ ಸುಧಾರಣೆಗೂ ತಲೆಹಾಕ ತೊಡಗಿದೆ. ಮಧ್ಯಮಶಾಲೆಗಳ ವಿದ್ಯಾಭ್ಯಾಸವು ದೇಶಭಾಷೆಯಲ್ಲೇ ನಡೆಯಬೇಕೆಂದು ಎಷ್ಟೋ ಕಷ್ಟಪಟ್ಟು ಎಷ್ಟೋ ಪ್ರಮಾಣಗಳನ್ನು ಸಂಗ್ರಹಿಸಿ ಕಲಕತ್ತೆಯ ಯೂನಿವರ್ಸಿಟಿ ಕಮಿಷನ್ನಿನವರೂ, ಮೈಸೂರು ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ ಆ ರಡ್ಡಿಯವರೂ ವ್ಯಕ್ತಪಡಿಸಿರುವ ಅಭಿಪ್ರಾಯವು ನಮ್ಮ ಮೈಸೂರಿನ ಸುಧಾರಣೆ ಹೊಂದಿದ ಸ್ತ್ರೀಸಮಾಜಕ್ಕೆ ಹೇಗೆ ಸರಿತೋರೀತು?" ಎಂದು ಗರ್ಜನೆಯನ್ನು ಹಾಕಿರುತ್ತದೆ. ಪ್ರಕೃತದಲ್ಲಿ ಈ ಸಂಬಂಧವಾಗಿ ನಾವು ವಿಶೇಷವಾಗಿ ಚರ್ಚಿಸಲು ತೊಡಗುವುದಕ್ಕಿಂತಲೂ, ನಮ್ಮ ನೆರೆಹೊರೆಯ ಕುಲಸ್ತ್ರೀ ವಿದ್ಯಾವತಿಗಳ ಅಭಿಪ್ರಾಯವು ಈ ವಿಷಯದಲ್ಲಿ ಹೇಗಿರುವುದೆಂಬುದನ್ನು ನಮ್ಮ ದೇಶದ ವಿದ್ಯಾವತಿಯರಿಗೆ ತೋರಿಸಿಕೊಡುವುದು ಉಚಿತವೆಂದು ಯೋಚಿಸುವೆವು.

ಅದೇನೆಂದರೆ—ಕಳೆದ ತಿಂಗಳು ತಾ|| ೧೫ ರಲ್ಲಿ ಗುಂಟೂರಿನಲ್ಲಿ ಸ್ತ್ರೀಸನಾತನಧರ್ಮಮಂಡಲೀಸಭೆಯ ವಾರ್ಷಿಕಾಧಿವೇಶನವು ಕೂಡಿದ್ದಾಗ್ಗೆ ಶ್ರೀಯುತ ದಿಗುವರ್ತಿ ವೆಂಕಟರಾಮಸ್ವಾಮಿ, ಬಿ.ಎ., ಬಿ.ಎಲ್., ರವರ ಪತ್ನಿ ಶ್ರೀಮತೀ ಜಾನಕೀಬಾಯಿಯವರು ಅಗ್ರಾಸನವನ್ನಲಂಕರಿಸಿ, ದೊಡ್ಡ ಭಾಷಣವನ್ನು ಮಾಡಿದರು. ಅದರಲ್ಲಿ ದೇಶಭಾಷಾವಶ್ಯಕತೆಯನ್ನು ಕುರಿತು ಅವರು ಹೀಗೆ ಹೇಳಿರುವರು—"ಸ್ತ್ರೀಯರಿಗೆ ಪುರುಷರಿಗೆ ಹೇಗೋ ಹಾಗೆ ಮುಖ್ಯವಾದ ಪ್ರಕೃತಿಶಾಸ್ತ್ರಾಭ್ಯಾಸವನ್ನು ಮಾಡಿಸುವುದಲ್ಲದೆ, ಮನೆಮಠಗಳನ್ನು ಶುಚಿಯಾಗಿಟ್ಟುಕೊಳ್ಳುವುದು, ಶಿಶುಪೋಷಣೆಯ ವಿಧಾನ, ಇತರ ಗೃಹಕೃತ್ಯನಿರ್ವಾಹ, ಇತ್ಯಾದಿ ವಿಷಯಗಳನ್ನು ಕುರಿತು ವಿದ್ಯಾಭ್ಯಾಸ ಮಾಡಿಸುವುದು ಅತ್ಯಾವಶ್ಯಕವು. ಇಷ್ಟನ್ನೆಲ್ಲಾ ಕಲಿಸುವುದಕ್ಕೆ ಕಾಲವು ಸಾಲುವುದಿಲ್ಲವೆಂದು ಹೇಳಕೊಳ್ಳುವರೇನೋ? ಹಾಗಿದ್ದರೆ ಆಂಗ್ಲಭಾಷೆಯನ್ನು ಈಗ ಅದು ಆಕ್ರಮಿಸಿಕೊಂಡಿರುವ ಅಗ್ರಸ್ಥಾನದಿಂದ ತೊಲಗಿಸಿ, ಕಲಿಸಬೇಕಾದ ಪಾಠಗಳನ್ನೆಲ್ಲಾ ಮಾತೃಭಾಷಾದ್ವಾರದಿಂದಲೇ ಕಲಿಸಿಕೊಟ್ಟರೆ ಎಷ್ಟೋ ಕಾಲವು ಕೂಡಿಬರುವುದೆಂದು ಪ್ರೊ|| ಕರ್ವೆಯವರೇ ಮೊದಲಾದ ಪಂಡಿತರು ಹೇಳಿರುತ್ತಾರೆ. ಆಂಗ್ಲಭಾಷೆಯನ್ನು ಕಲಿತುಕೊಳ್ಳುವುದು ನಮಗೆ ಸುಲಭವಲ್ಲ. ಬಹು ಕಷ್ಟ. ನಮ್ಮ ಗಂಡುಸರು ೧೨ ವರ್ಷ ಕಾಲಕ್ಕಿಂತ ಹೆಚ್ಚಾಗಿಯೇ ಆ ಭಾಷೆಯನ್ನು ಪಾಠಶಾಲೆಗಳಲ್ಲಿ ಅಭ್ಯಾಸಮಾಡಿ, ಬಳಿಕ ಹಗಲು ರಾತ್ರಿಯೆಲ್ಲಾ ಅದನ್ನೇ ಮಾತಾಡುತ್ತಿದ್ದರೂ, ಅವರ ಇಂಗ್ಲೀಷು ತಪ್ಪುಗಳ ಕುಪ್ಪೆಯಾಗಿರುವುದು. ಅಂಥ ಕಷ್ಟತಮವಾದ ಭಾಷೆಯನ್ನು ಕಲಿತುಕೊಳ್ಳುವುದಕ್ಕಾಗಿ ನಮ್ಮ ಶಕ್ತಿಯನ್ನು ಏತಕ್ಕೆ ವ್ಯರ್ಥಪಡಿಸಬೇಕು? ಕೆಲಬಾಲಿಕಾಪಾಠಶಾಲೆಗಳಲ್ಲಿ ಮೊದಲನೆ ಸ್ಟಾಂಡರ್ಡಿನಿಂದಲೂ ಇಂಗ್ಲೀಷೇ ಉಪಯೋಗಿಸಲ್ಪಡುತ್ತ, ಎಲ್ಲ ವಿಷಯಗಳನ್ನೂ ಆ ಭಾಷಾದ್ವಾರದಿಂದಲೇ ಕಲಿಸುವುದಕ್ಕೆ ಪ್ರಯತ್ನಮಾಡಲ್ಪಡುತ್ತಿದೆಯೆಂದು ಮೊನ್ನೆತಾನೇ ಶಾಸನನಿರ್ಮಾಣಸಭೆಯಲ್ಲಿ ಹೇಳಲ್ಪಟ್ಟಿದೆ. ಇಂಥ ಏರ್ಪಾಟಿನಿಂದ ಚಿಕ್ಕ ತರಗತಿಗಳಲ್ಲೂ ಕೂಡ ದೊಡ್ಡ ಸಂಬಳಗಳನ್ನು ಕೊಟ್ಟು ಆಂಗ್ಲೇಯೋಪಾಧ್ಯಾಯರನ್ನು ನಿಯಮಿಸುವುದಕ್ಕೆ ಅವಕಾಶವನ್ನು ಮಾಡುವುದರ ಹೊರತು ಬೇರೆ ಲಾಭವೇನೂ ಕಾಣುವುದಿಲ್ಲ. ಇಂಥ ಮಾರ್ಪು ಸ್ವಭಾವಕ್ಕೆ ವಿರುದ್ಧವಾದುದು. ಯಾರೊಬ್ಬರೂ ತಮ್ಮ ಮಾತೃಭಾಷೆಯಿಂದಲೇ ವಿಷಯಜ್ಞಾನವನ್ನು ಮಾಡಿಕೊಳ್ಳುವುದು ಸಹಜವೂ ಸುಲಭವೂ ಆಗಿರುವುದು. ಅದುಕಾರಣ ಆಂಗ್ಲಭಾಷೆಯಿಂದ ವಿದ್ಯಾಭ್ಯಾಸ ಮಾಡಿಸುವುದನ್ನು ತಪ್ಪಿಸುವುದಕ್ಕೆ ಸ್ತ್ರೀಪುರುಷರೆಲ್ಲರೂ ಗಟ್ಟಿಯ ಪ್ರಯತ್ನಗಳನ್ನು ಮಾಡಬೇಕು."

ಕಮರ್ಶಿಯಲ್ ಕ್ಲಬ್.

ರಾಜಧಾನಿಯ ವರ್ತಕಮಂಡಲಿಯವರು ಮೇಲೆ ಕಂಡ ಹೆಸರಿನಿಂದ ಒಂದು ಕ್ಲಬ್ಬನ್ನು ಏರ್ಪಡಿಸಿಕೊಳ್ಳಬೇಕೆಂದು ನಿರ್ಧರಿಸಿ, ಅದನ್ನು ತಮ್ಮ ತಮ್ಮಲ್ಲಿ ಕೂಡಿಸುವ ಚಂದಾಹಣದಿಂದ ಕಟ್ಟುವ ಒಂದು ಸ್ವಂತದ ಕಟ್ಟಡದಲ್ಲಿಯೇ ಸ್ಥಾಪಿಸಿಕೊಳ್ಳಬೇಕೆಂದು ನಿರ್ಧರಿಸಿದ್ದಾರೆ. ಈ ಕಟ್ಟಡವನ್ನು ಬಹುಶಃ ೫೦ ಸಾವಿರ ರೂಗಳವರೆಗೂ ಮುಟ್ಟಿಸಿ ಕಟ್ಟಿಸುವ ಯೋಜನೆಯು ಅವರುಗಳಿಗೆ ಇದೆಯೆಂದು ಕೇಳುತ್ತೇವೆ. ಉತ್ತರತ್ರ ಇದು ಕೇವಲ ವಿನೋದಭವನ ಮಾತ್ರವಾಗಿರದೆ, ವರ್ತಕ ಸಂಘವೊಂದನ್ನು ಇಲ್ಲಿ ಸ್ಥಾಪಿಸಿಕೊಳ್ಳಲಿಕ್ಕೂ ಆಗಾಗ್ಗೆ ಅವರ ಹಿತಸಂಬಂಧವಾದ ವಿಷಯಗಳನ್ನು ಚರ್ಚಿಸುವ ಸಭೆಗಳನ್ನು ಕೂಡಿಸಿಕೊಳ್ಳಲಿಕ್ಕೂ ಅನುಕೂಲವಾಗಬಹುದು. ಇಂಥ ಉತ್ಸಾಹವು ನಮ್ಮ ದೇಶದ ವರ್ತಕರಲ್ಲಿ ಕಂಡುಬಂದದು ದೇಶಾಭಿಮಾನಿಗಳಿಗೆ ಸಂತೋಷವನ್ನುಂಟುಮಾಡದೆ ಇರದು.

ಈ ಕಟ್ಟಡವನ್ನು ಕಟ್ಟುವುದಕ್ಕಾಗಿ ಟೌನ್‌ಹಾಲಿನ ಪಶ್ಚಿಮದ ಕಡೆ ವೆಸ್ಲಿಯನ್ ಮಿಷನ್ ಕನ್ನಡ ಶಾಲೆಯ ಪೂರ್ವಭಾಗಕ್ಕಿರುವ ಜಾಗವನ್ನು ಕೊಡಿಸಿಕೊಡಬೇಕೆಂದು ಪ್ರಮುಖ ವರ್ತಕರು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರಲಾಗಿ, ಅವರು ಅದನ್ನು ರಾಜಧಾನಿಯ ಮ್ಯುನಿಸಿಪಾಲಿಟಿಯವರ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟಿದ್ದುದರ ಮೇಲೆ ಆ ವಿಷಯವು ಕಳೆದ ವಾರದಲ್ಲಿ ನಡೆದ ತಿಂಗಳುಗಟ್ಟಲೆಯ ಮೀಟಿಂಗಿನ ಕಾಲದಲ್ಲಿ ಚರ್ಚೆಗಿಡಲ್ಪಟ್ಟಿದ್ದಿತು. ಅದರಲ್ಲಿ ನಡೆದ ವಿದ್ಯಮಾನಗಳನ್ನು ಕೇಳಿದರೆ ನಮಗೆ ಪರಮಾಶ್ಚರ್ಯವಾಗುತ್ತದೆ. ಬಂದಿದ್ದ ಕೌನ್ಸಿಲರೊಳಗೆ ಮ|| ಅಣ್ಣಯ್ಯಪಂಡಿತರು ತಟಸ್ಥರಾಗಿದ್ದು ಬಿಟ್ಟುದರಿಂದ ಉಳಿದ ಬ್ರಾಹ್ಮಣ ಸಭಿಕರೆಲ್ಲಾ ಒಂದು ಪಕ್ಷವಾಗಿ ನಿಂತು, ಆ ಸ್ಥಲವನ್ನು ಕಟ್ಟಡಕ್ಕೆ ಕೊಡಗೊಡಿಸದಿರುವುದಕ್ಕೆ ಎಷ್ಟು ತಡೆಯ ಮಾತುಗಳನ್ನೊಡ್ಡಬೇಕೋ ಅಷ್ಟನ್ನೂ ಒಡ್ಡಿದರೆಂದೂ, ಇತರರೆಲ್ಲಾ ಕೊಡುವುದೇ ಉತ್ತಮವೆಂಬುವ ಪಕ್ಷವಾಗಿ ವಾದಿಸಿದರೆಂದೂ ಕೇಳುತ್ತೇವೆ. ಇದರಿಂದ ಆದ ಪರ್ಯವಸಾನವೇನೆಂದರೆ-ವರ್ತಕರ ಪಕ್ಷವಾಗಿ ೧೪ ಮಂದಿಗಳ ಓಟೂ, ಸಿಕ್ಕಕೂಡದೆಂಬ ಬ್ರಾಹ್ಮಣ ಪಕ್ಷಕ್ಕೆ ೬ ಓಟುಗಳೂ ಸಿಕ್ಕಿದುವೆಂದು ತಿಳಿದೆವು. ನಡೆದ ವಿದ್ಯಮಾನವೆಲ್ಲಾ ಗೌರ್ನಮೆಂಟಿಗೆ ಇಷ್ಟರಲ್ಲೇ ವರದಿಮಾಡಲ್ಪಟ್ಟಿರಬೇಕು. ವರ್ತಕರಲ್ಲಿ ಕೂಪಕೂರ್ಮನ್ಯಾಯವು ತಪ್ಪಿ, ಈ ವಿಧವಾದ ನಾಗರಕ ಪ್ರಯತ್ನಕ್ಕೆ ಅವರು ತೊಡಗಿರುವಾಗ್ಗೆ ಸರ್ವವಿಧದಿಂದಲೂ ಅದನ್ನು ಪ್ರೋತ್ಸಾಹಿಸುವುದು ಪ್ರಭುತ್ವ ಧರ್ಮವಾಗಿರುವುದರಿಂದ ಶ್ರೀಮನ್ಮಹಾರಾಜರ ಸರ್ಕಾರದಿಂದ ಇದಕ್ಕೆ ಅನುಕೂಲವಾದ ಉತ್ತರವು ದೊರೆಯುವುದೆಂಬುದರಲ್ಲಿ ನಮಗೆ ಸಂಶಯವಿಲ್ಲ.

ಬ್ರಾಹ್ಮಣ ಕೌನ್ಸಿಲರುಗಳು ಈ ವಿಷಯದಲ್ಲಿ ಹೀಗೆ ಮಾಡಿದುದು ಧರ್ಮವಾಗಿ ತೋರಲಿಲ್ಲ. ಪಕ್ಷಪಾತವು ಯಾರಲ್ಲಿದೆಯೆಂಬುದನ್ನು ಇಂಥ ದೃಷ್ಟಾಂತಗಳಿಂದ ಅವರೇ ವ್ಯಕ್ತಪಡಿಸಿಕೊಳ್ಳುತ್ತಿರುವರು. ವರ್ತಕರಲ್ಲಿ ಒಂದೇ ಜಾತಿಯವರಲ್ಲ. ಈಗಣ ಕಾಲದಲ್ಲಿ ಬ್ರಾಹ್ಮಣರು ಸಕಲತರದ ವೃತ್ತಿಗೂ ಪ್ರವರ್ತಿಸಿರುವುದರಿಂದ ಅವರೂ ವರ್ತಕಕೋಟಿಯಲ್ಲಿ ಸೇರಿರುವರು. ಈ ದೃಷ್ಟಿಯಿಂದಲಾದರೂ ಈ ಪ್ರಯತ್ನಕ್ಕೆ ಅವರುಗಳು ಸಹಾಯಕರಾಗಬಾರದಾಗಿದ್ದಿತೆ? ಸುಬ್ರಾಯನ ಕೆರೆ ಪೂರ್ವಕ್ಕೆ ಅಕ್ಕಿಯಂಗಡಿ ಚಿಕ್ಕಣ್ಣನವರ ಮನೆಯ ಪಶ್ಚಿಮಕ್ಕೆ ಇರುವ ನಿವೇಶನವನ್ನು ನಮಗೆ ಕೊಡಿಸಬೇಕೆಂದು ಮಗ್ಗುಲ ಮನೆಯ ಮ|| ದೊಡ್ಡಯ್ಯನವರು ದಿವಾನರ ವರೆಗೆ ಹೋಗಿ ಬೇಡಿಕೊಂಡರೂ ನಡೆಯಗೊಡದೆ, ಕಡೆಗೆ ತಮ್ಮ ಅನಾಥಾಲಯಕ್ಕೆ ತಮ್ಮ ಪಕ್ಷದ ಟ್ರಸ್ಟ್‌ಬೋರ್ಡು ಚೇರ್ಮನ್ನರು ಇದ್ದಾಗ್ಗೆ ಉಪಾಯವಾಗಿ ಆ ಜಾಗವನ್ನು ಬ್ರಾಹ್ಮಣರು ವಶಪಡಿಸಿಕೊಂಡು ಬಿಟ್ಟರಲ್ಲವೆ? ಆಗ್ಗೆ ವರ್ತಕಾದಿಗಳೇನಾದರೂ ಈಗ ಇವರು ತೋರಿಸುತ್ತಿರುವಂಥ ಪಕ್ಷಪಾತವನ್ನು ತೋರಿಸಿ ಅಡ್ಡಿಮಾಡಿದರೆ? ಅನಾಥಾಲಯ ಮೊದಲಾದುವುಗಳಿಗೆ ಎಷ್ಟೋ ಮಂದಿ ವರ್ತಕರು ಈಗ್ಲೂ ಸಹಾಯಮಾಡುತ್ತಲಿಲ್ಲವೆ? ಆ ಉಪಕಾರಸ್ಮರಣೆಯಿಂದಲಾದರೂ ಈ ವಿಷಯದಲ್ಲಿ ಬ್ರಾಹ್ಮಣ ಕೌನ್ಸಿಲರು ಸಾನುಭೂತಿಯನ್ನು ತೋರಿಸಬಾರದಾಗಿದ್ದಿತೆ? ಇಂಥ ವರ್ತನಗಳಿಂದಲೇ ಕೆಲ ಬ್ರಾಹ್ಮಣರು ಇತರರ ಮನಸ್ಸನ್ನು ರೇಗಿಸಿ ಪಾರ್ಟಿಗಳು ಹುಟ್ಟುವುದಕ್ಕೆ ದಾರಿಮಾಡುತ್ತಿರುವುದನ್ನು ನೋಡಿದರೆ ಪಶ್ಚಾತ್ತಾಪವಾಗುತ್ತದೆ. ದಳವಾಯಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಮಿಟಿಯನ್ನೇರ್ಪಡಿಸುವಾಗ್ಗೆ ಅದರ ಮುಖಂಡರಾಗಿರುವ ಬ್ರಾಹ್ಮಣರು ಇತರರಿಗೆಲ್ಲಾ ಅದರಿಂದ ಬಹಿಷ್ಕಾರ ಹಾಕಿ, ಅದರಂತೆ ತಮ್ಮ ವಿಷಯದಲ್ಲಿ ಇತರರೂ ಆಚರಿಸುವಂಥ ಬುದ್ಧಿಯನ್ನು ಹುಟ್ಟಿಸಲು ಮೇಲುಪಂತಿ ಹಾಕಿದರು. ಕಡೆಗೆ ಇತರರನ್ನೇ ಎಂಟರ್ಟೇನ್‌ಮೆಂಟು ಮೊದಲಾದುವುಗಳಲ್ಲಿ ಬ್ರಾಹ್ಮಣರಿಗೆ ಬಹಿಷ್ಕಾರವನ್ನು ಹಾಕಿದರೆಂದು ನಿರಾಧಾರವಾಗಿ ತಾವೇ ದೂಯುವುದಕ್ಕೆ ಆರಂಭಿಸಿದರು. ವಿದ್ಯಾಧಿಕರಾದ ಜನರಲ್ಲಿ ಇಂಥ ಸಂಕುಚಿತಭಾವವು ಇರಬಾರದು. ಗುಲಗಂಜಿಯ ಬುಡದಲ್ಲೇ ಕಪ್ಪಿರುವಂತೆ ತಮ್ಮಲ್ಲೇ ಇರುವ ಕಲೆಯನ್ನು ಅವರುಗಳು ತೊಳೆದುಕೊಂಡರೆ, ದೇಶದಲ್ಲಿ ಪರಸ್ಪರ ಪ್ರೀತಿಯು ತನಗೆ ತಾನೇ ವೃದ್ಧಿಯಾಗುವುದು.

ಅದ್ಭುತಭವಿಷ್ಯತ್ತು.

ಪ್ರೊಫೆಸರ್ ಆಲ್ಬರ್ಟ್‌ಪೋರ್ಟ ಎಂಬ ಪಾಶ್ಚಾತ್ಯಜ್ಯೋತಿಶ್ಶಾಸ್ತ್ರಜ್ಞರು ಬರುವ ಡಿಶಂಬರ್ ತಾ|| ೧೭ ರಿಂದ ೨೦ ರೊಳಗೆ ಪ್ರಪಂಚಕ್ಕೆ ದೊಡ್ಡ ಪ್ರಳಯವುಂಟಾಗುವುದೆಂಬುದಾಗಿ

ಅದಕ್ಕೆ ಕಾರಣವನ್ನು ಕೂಡ ವಿವರಿಸಿ ಬರೆದಿರುತ್ತಾರೆ. ಅವರು ಹೇಳಿರುವುದೇನೆಂದರೆ—ಡಿಶಂಬರ್ ತಾ|| ೧೭ ನೆಯ ದಿನ ಖಗೋಳದಲ್ಲಿ ಸೂರ್ಯಮಂಡಲವನ್ನು ೬ ಗ್ರಹಗಳು ಒಂದೇಸಮಯದಲ್ಲಿ ಅತಿ ಬಲದಿಂದ ಆಕರ್ಷಿಸುವುವು ಇವು ಸೂರ್ಯನಿಗೆ ೨೬ ಡಿಗ್ರಿಗಳಷ್ಟು ಸಮೀಪದಲ್ಲೇ ಇರುವುದರಿಂದ ಈ ಸಪ್ತಗ್ರಹಸಮ್ಮೇಳನದಿಂದ ಹುಟ್ಟುವ ಮಹಾ ಶಕ್ತಿಯು ಸೂರ್ಯನನ್ನು ಬಲ್ಲೆಯದಿಂದ ತಿವಿದಂತೆ ಹೊಡೆಯುವುದು. ಆಗ ಆಕಾಶದಲ್ಲಿ ಅತ್ಯಗಾಧವಾದ ಬೇಕಿನಿಂದ ವಿದ್ಯುಚ್ಛಕ್ತಿಯು ಹರಡುವುದು. ಸೂರ್ಯಮಂಡಲದ ಮೇಲೆ ಪೂರ್ವಭಾಗದಲ್ಲಿ ದೊಡ್ಡಮಚ್ಚೆ ಕಾಣಿಸಿಕೊಳ್ಳುವುದು. ಇದು ಸಾಮಾನ್ಯದೃಷ್ಟಿಗೂ ಕೂಡ ಕಾಣಿಸುವಷ್ಟಿರುವುದು. ಆ ಭಾಗಕ್ಕೆ ಸಮೀಪದಲ್ಲೇ ಭೂಮಂಡಲವಿರುವುದರಿಂದ ಇಲ್ಲಿ ಭೂಕಂಪ, ಜಲಪ್ರಳಯ, ಬಿರುಗಾಳಿ, ಸಿಡಿಲು, ಅತಿವೃಷ್ಟಿ ಇತ್ಯಾದಿಗಳೆಲ್ಲಾ ಸಂಭವಿಸುವುವು. ಇದರಿಂದ ಅತ್ಯಂತ ವಿನಾಶವು ಜಗತ್ತಿಗೆ ಸಂಭವಿಸುವುದು. ಲೋಕಕ್ಕೆ ಭಯಹುಟ್ಟಿಸಬೇಕೆಂದು ನಾನು ಇದನ್ನು ಬರೆದಿಲ್ಲ. ಗಣಿತಶಾಸ್ತ್ರಾಧಾರವನ್ನು ಪರೀಕ್ಷಿಸಿಯೇ ಬರೆದಿರುತ್ತೇನೆ. ೨೦೦೦ ವರ್ಷಗಳಿಂದಲೂ ಇಂಥ ಗ್ರಹಸಂಯೋಜನವಾಗಿರಲಿಲ್ಲ. ಎಂದು ಹೇಳಿರುತ್ತಾರೆ.

ಇದರ ಮೇಲೆ ನಮ್ಮ ದೇಶದ ಸೂರ್ಯಸಿದ್ಧಾಂತಿಗಳು ಕೆಲರು ಅಭಿಪ್ರಾಯಪಟ್ಟಿರುವುದೇನೆಂದರೆ—"ಸೂರ್ಯನಿಗೆ ೨೬ ಡಿಗ್ರಿಗಳ ದೂರದಲ್ಲಿ ೬ ಗ್ರಹಗಳು ಒಂದೇ ಕಡೆಯಲ್ಲಿ ಸೇರುವುದೇ ಅಸಂಭವ. ಅಲ್ಲದೆ ೭೧ ಮಹಾಯುಗಗಳಾದರೆ ೧ ಮನ್ವಂತರವಾಗುವುದು. ೧ ಮನ್ವಂತರಕ್ಕೆ ೧೭ ಲಕ್ಷದ ೨೮ ಸಾವಿರ ವರ್ಷ. ಈಗಲಾದರೊ ೨೮ ನೆ ಮಹಾಯುಗವು ನಡೆಯುತ್ತಿದೆ. ಹೀಗಿರುವಾಗ ಮನ್ವಂತರದ ಕೊನೆಯಲ್ಲಿ ಸಂಭವಿಸುವ ಪ್ರಳಯವು ಈಗ ಸಂಭವಿಸಲು ಅವಕಾಶವೇ ಇಲ್ಲ. ಒಂದುವೇಳೆ ಸೂರ್ಯನಲ್ಲಿ ಹೆಚ್ಚಾಗಿ ಕಾಣುವುದೆಂದು ಹೇಳಲ್ಪಟ್ಟಿರುವ ಕಪ್ಪುಮಚ್ಚೆಯು ಕೇತುವಾಗಿರಬಹುದು. ಸೂರ್ಯಮಂಡಲದಮೇಲೆ ಕಾಣಿಸಿಕೊಳ್ಳುವ ಕೇತುಗಳು ಯಾವಯಾವ ದೇಶಭಾಗಕ್ಕೆ ಗೋಚರಿಸುವುವೋ ಅಲ್ಲಲ್ಲಿ ಮಾತ್ರವೇ ಕೆಲವು ಉತ್ಪಾತಗಳು ಸಂಭವಿಸುವುವೆಂಬ ಪ್ರಮಾಣವುಂಟು. ಜಗತ್ತೆಲ್ಲಾ ಬದಲಾವಣೆಗೊಳ್ಳುವಂಥ ಪ್ರಳಯವೇನೂ ಸಂಭವಿಸುವುದಿಲ್ಲ" ಎಂಬುದಾಗಿ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಒಕ್ಕಲಿಗರ ಹಾಸ್ಟಲಿನ ವಿದ್ಯಾರ್ಥಿಗಳು ಮ|| ಎಂ. ಮಾದಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಯೂನಿಯನ್ನನ್ನು ಕಳೆದವಾರ ಸ್ಥಾಪಿಸಿಕೊಂಡಿರುವರು.

ದಿವಾನ್ ಕಾಂತರಾಜ ಅರಸಿನವರ ಸನ್ಮಾನಸಮಾರಂಭವನ್ನು ಇದೇ ತಿಂಗಳು ತಾ|| ೧೫ ರಲ್ಲಿ ಬೆಂಗಳೂರು ಪುರನಿವಾಸಿಗಳು ನಡೆಯಿಸುವವರಾಗಿದ್ದಾರೆಂದು ಕೇಳುತ್ತೇವೆ.

ಸಂಸ್ಥಾನದ ಸೈನ್ಯದ ಚೀಫ್ ಕಮ್ಯಾಂಡೆಂಟರಾದ ಸರ್ದಾರ್ ಬಹದೂರ್ ಮೇಜರ್ ಬಿ. ಚಾಮರಾಜ ಅರಸಿನವರಿಗೆ ಶ್ರೀಮನ್ಮಹಾರಾಜರವರು ಲೆ|| ಕರ್ನಲ್‌ಗಿರಿಯನ್ನು ದಯಪಾಲಿಸಿದ್ದಾರೆ.

ಸೀಮೆಯೆಣ್ಣೆ ಮೇಲಣ ವ್ಯಾಪಾರನಿರ್ಬಂಧವನ್ನು ನಿನ್ನೆಯದಿನದಿಂದ ನಮ್ಮ ಸರ್ಕಾರದವರು ತಪ್ಪಿಸಿದ್ದಾರೆ. ಇನ್ನು ಮೇಲೆ ಯಾರು ಬೇಕಿದ್ದರೂ ಪೂರ್ವದಂತೆ ಸ್ವತಂತ್ರಿಸಿ ಮಾರಬಹುದಾಗಿದೆ.

ವೈಸ್‌ರಾಯರ ಪರಾಮರಿಕೆಗಾಗಿ ಆನೆಗಳ ಕೆಡ್ಡಾ ಏರ್ಪಾಟು ತ್ವರಿತದಿಂದ ನಡೆಯುತ್ತಿರುವುದು. ಇಷ್ಟರಲ್ಲೇ ೧ ಆನೆಗಳ ಹಿಂಡನ್ನು ಬಂಗಡಿಯ ಕಡೆಗೆ ಅಟ್ಟುವ ಪ್ರಯತ್ನವು ನಡೆದಿದೆಯೆಂದು ಕೇಳುತ್ತೇವೆ

ದೊಡ್ಡಬಳ್ಳಾಪುರದ ಮ|| ಡಿ|| ಕೊಂಗಾಡಿಯಪ್ಪನವರು ವಿದ್ಯಾಪ್ರೋತ್ಸಾಹನ ಕಾರ್ಯದಲ್ಲಿ ಮಾಡಿದ ಶ್ರದ್ಧೆಗಾಗಿ ಮೆಚ್ಚಿ ಶ್ರೀಮನ್ಮಹಾರಾಜರವರು ಅವರಿಗೆ ಒಂದನೆ ತರಗತಿಯ ಪಬ್ಲಿಕ್ ಸರ್ವೀಸ್ ಮೆಡಲನ್ನು ದಯಪಾಲಿಸಿರುವರು.

ಕಳೆದ ವಾರದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಹಲವು ಕಡೆ ಸ್ವಾತಿಮಳೆಯು ಬಿದ್ದಿದೆ. ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ. ರಾಗಿ ಜೋಳ ಅಕ್ಕಿ ಮೊದಲಾದವುಗಳ ಬೆಲೆಯು ಇಳಿಯುತ್ತಿದೆ. ರಾಜಧಾನಿಯಲ್ಲಿ ದಕ್ಷಿಣಭಾಗದೊಳಗೆ ಪ್ಲೇಗು ಕಾಣಿಸಿಕೊಂಡು ಪ್ರಬಲಿಸುವ ಚಿಹ್ನೆಯು ಕಾಣುತ್ತದೆ.

ಮೇಲ್ಕೋಟೆ ಮ್ಯುನಿಸಿಪಾಲಿಟಿಗೆ ಮ|| ಎಂ. ಜಿ. ಶ್ಯಾಮಯ್ಯಂಗಾರರೂ, ಎಡತೊರೆ ಮ್ಯುನಿಸಿಪಾಲಿಟಿಗೆ ಮ|| ಡಿ. ನಾರಾಯಣಸ್ವಾಮಿಶೆಟ್ಟರೂ, ತಿ|| ನರಸೀಪುರದ ಮ್ಯುನಿಸಿಪಾಲಿಟಿಗೆ ಮ|| ಟಿ. ಶ್ಯಾಮಯ್ಯಂಗಾರರೂ, ತಲಕಾಡು ಮ್ಯುನಿಸಿಪಾಲಿಟಿಗೆ ಮ|| ಕದೀಮ್ ವೆಂಕಟಸುಬ್ಬಯ್ಯನವರೂ ಸಹ ವೈಸ್ ಪ್ರೆಸಿಡೆಂಟರಾಗಿ ಅಲ್ಲಲ್ಲಿಯ ಕೌನ್ಸಿಲರುಗಳಿಂದ ಆರಿಸಲ್ಪಟ್ಟಿದ್ದಾರೆ.

ಬೆಂಗಳೂರು ಪಟ್ಟಣದಲ್ಲಿರುವ ಪೇಟೆ ಬುಕ್ಕಿಂಗ್ ಆಫೀಸುಗಳಲ್ಲಿ ರೈಲ್ವೆಟಿಕೇಟುಗಳು ಬೆಳಗಿನಿಂದ ಸರಿರಾತ್ರಿಯವರೆಗೂ ಅಖಂಡವಾಗಿ ಮಾರುವಂತೆ ಏರ್ಪಾಟಿರುವುದರಿಂದ ಪ್ರಜೆಗಳಿಗೆ ಬಹಳ ಸೌಕರ್ಯವಾಗಿದೆ. ಮೈಸೂರು ಪಟ್ಟಣದಲ್ಲಿರುವ ಪೇಟೆಯ ಬುಕ್ಕಿಂಗ್ ಆಫೀಸಿನಲ್ಲಿ ಅಂಥ ಏರ್ಪಾಡಿಲ್ಲದಿರುವುದರಿಂದ ಪ್ರಯಾಣಿಕರಿಗೆ ತೊಂದರೆ ಹೆಚ್ಚು. ಮೈಸೂರು ರೈಲ್ವೆಶಾಖೆಯವರಿಗೆ ಇದರ ಯಾಜಮಾನ್ಯವು ದೊರೆದಿರುವ ಈಗಾದರೂ ಬೆಂಗಳೂರಿನಂತೆ ಇಲ್ಲಿಯೂ ಸದಾ ಟಿಕೇಟು ದೊರೆಯುವಂತೆಯೂ ಅರಸೀಕೆರೆ ಮೈಸೂರು ಲೋಹಮಾರ್ಗದ ಟಿಕೇಟುಗಳನ್ನು ಕೂಡ ಈ ಪೇಟೆ ಬುಕ್ಕಿಂಗ್ ಆಫೀಸಿನಲ್ಲಿ ಮಾರುವಂತೆಯೂ ಏರ್ಪಡಿಸಿದರೆ ಪ್ರಜೆಗಳಿಗೆ ಅನುಕೂಲವಾದೀತು.

ಮೈಸೂರು ಬೆಂಗಳೂರುಗಳ ಮಧ್ಯದ ರೈಲ್ವೆ ಆಡಳಿತವು ಮೈಸೂರು ಸರ್ಕಾರಕ್ಕೆ ಸೇರಿದರೂ ಟಿಕೇಟಿಲ್ಲದೆ ರೈಲ್ವೆಪ್ರಯಾಣ ಮಾಡುವವರ ಮತ್ತು ಲಂಚಕೋರರ ಹಾವಳಿಯು ತಪ್ಪಿಲ್ಲ. ಹೀಗಾದರೆ ರೈಲ್ವೆಶಾಖೆಯಿಂದ ಸರ್ಕಾರಕ್ಕೆ ಬಹಳ ನಷ್ಟವು ಸಂಭವಿಸದೆ ತಪ್ಪುವುದಿಲ್ಲ. ಟಿಕೇಟ್ ಚಕ್‌ಮಾಡುವ ಸಮರ್ಥೋದ್ಯೋಗಿಗಳನ್ನು ನಿಯಮಿಸುವುದಲ್ಲದೆ ದೊಡ್ಡದೊಡ್ಡ ಆಫೀಸರು ಅನಿರೀಕ್ಷಿತವಾಗಿ ಮಧ್ಯಮಾರ್ಗದಲ್ಲಿ ಬಂದು ಪರೀಕ್ಷಿಸಿ ದಂಡನೆ ಮಾಡಿಸುತ್ತ ಬಂದರೆ ಈ ತಪ್ಪಿತವು ಕಡಿಮೆಯಾದೀತು. ರಾತ್ರಿವೇಳೆ ಹೋಗಿ ಬರುವ ಬಂಡಿಗಳಲ್ಲಿ ದೀಪದ ಅವ್ಯವಸ್ಥೆಯು ಬಹಳವಾಗಿದೆ. ಗ್ಯಾಸು ಒದಗದಿದ್ದರೆ ಎಣ್ಣೆಯ ದೀಪಗಳನ್ನಾದರೂ ಇಡಿಸದಿರುವುದು ಬಹಳ ಅನ್ಯಾಯ.

ರಾಜಧಾನಿಗೆ ಮದರಾಸಿನಿಂದ ಪಂಚಾನನಕುಲದ ಪಾರ್ಥಸಾರಥಿ ಆಚಾರ್ಯರೆಂಬ ಭಾಗವತರು ಬಂದಿರುವರು. ಇವರಿಗೆ ಸಂಗೀತದಲ್ಲೂ ವಿಶೇಷ ಪಾಂಡಿತ್ಯವಿರುವುದು. ರಸಭರಿತವಾಗಿಯೂ ಪ್ರೌಢವಾಗಿಯೂ ಹರಿಕಥೆಗಳನ್ನು ಮಾಡುವ ಸಾಮರ್ಥ್ಯವು ಚೆನ್ನಾಗಿರುವುದು. ಹಲವುಕಡೆ ಇವರ ಕಥಾಶ್ರವಣವಾಗಿ ಭಂಗಾರದ ಆಭರಣಗಳು ಇವರಿಗೆ ಬಹುಮಾನಮಾಡಲ್ಪಟ್ಟುವು. ಕಳೆದ ಸೋಮವಾರ ವಿಶ್ವಕರ್ಮವರ್ಗದವರು ತಮ್ಮ ಕಾಳಿಕಾಂಬಾ ದೇವಾಲಯದಲ್ಲಿ ಇವರ ಸಂಗೀತ ಕಚೇರಿಯನ್ನು ನಡೆಯಿಸಿದರು. ವಿದ್ವಾನ್ ವಿಶ್ವನಾಥಯ್ಯರ್‌ರವರ ಪಿಟೀಲೂ, ಅರಮನೆ ಮೃದಂಗವಿದ್ವಾನ್ ಮುತ್ತುಸ್ವಾಮಿಯವರ ಮೃದಂಗನಾದನವೂ ಸೇರಿ, ನೆರೆದಿದ್ದ ಸಾವಿರಾರುಮಂದಿ ಸಭಿಕರಿಗೆ ಕರ್ಣಾನಂದವನ್ನುಂಟುಮಾಡಿದುವು. ಭಾಗವತರಿಗೆ ಒಂದು ಭಂಗಾರದ ಮೆಡಲೂ, ಪಿಟೀಲು ವಿದ್ವಾಂಸರಿಗೆ ಒಂದು ಭಂಗಾರದ ತೋಡವೂ, ಮೃದಂಗವಿದ್ವಾಂಸರಿಗೆ ಭಂಗಾರದ ಕೈಮುರಿಯೂ ವೀಣೆ ಭಕ್ಷಿ ಮ|| ಸುಬ್ಬಣ್ಣನವರ ಹಸ್ತದಿಂದ ಸಭಾಮಧ್ಯದಲ್ಲಿ ಕೊಡಿಸಲ್ಪಟ್ಟುವು.

ವೈಸ್ರಾಯರು ಸಪರಿವಾರರಾಗಿ ಇದೇ ತಿಂಗಳು ತಾ|| ೨೭ ನೆ ತಾರೀಖಿನ ಬೆಳಗ್ಗೆ ೮|| ಗಂಟೆಗೆ ಬೆಂಗಳೂರುಪಟ್ಟಣದ ಸಿಲ್ದಾಣದಲ್ಲಿಳಿದು ಉತ್ಸವಪೂರ್ವಕವಾಗಿ ರೆಸಿಡೆಂಟರ ಬಂಗಲೆಗೆ ತೆರಳುವರು. ಫಲಾಹಾರಾನಂತರ ೧೦ ಗಂಟೆಗೆ ಕಂಟೋನ್ಮೆಂಟಿನ ಮ್ಯುನಿಸಿಪಾಲಿಟಿಯಿಂದಲೂ ಕೊಡಗಿನ ತೋಟಗಾರರ ಪಕ್ಷದಿಂದಲೂ ಒಪ್ಪಿಸಲ್ಪಡುವ ವಿಜ್ಞಾಪನಪತ್ರವನ್ನು ಸ್ವೀಕರಿಸುವರು. ಮಧ್ಯಾಹ್ನೋತ್ತರ ೩|| ಗಂಟೆಗೆ ವೈಸ್ರಾಯ್ ದಂಪತಿಗಳು ಟಾಟಾರವರ ಶಾಸ್ತ್ರ ಶೋಧನಾಲಯಕ್ಕೆ ದಯಮಾಡಿಸಿ ಅಲ್ಲಿಂದ ೫|| ಗಂಟೆಗೆ ಹೊರಟು ಹೆಬ್ಬಾಳದ ಫಾರಮಿಗೂ ರಾಜಮಹಲ್ಲಿಗೂ ದಯಮಾಡಿಸಿ, ಅಲ್ಲಿಂದ ಪಟ್ಟಣದ ದೊಡ್ಡಪೇಟೆಯಮಾರ್ಗವಾಗಿ ಕೋಟೆಗೂ ಲಾಲಬಾಗಿಗೂ ದಯಮಾಡಿಸುವರು. ಆ ಉದ್ಯಾನದಲ್ಲಿ ಬೆಂಗಳೂರು ಮ್ಯುನಿಸಿಪಾಲಿಟಿಯವರ ವಿಜ್ಞಾಪನಪತ್ರವನ್ನು ಸ್ವೀಕರಿಸುವರು. ತಾ|| ೨೮ ನೆಯ ದಿನ ಸಪ್ತಮ ಎಡ್ವರ್ಡ್ ಚಕ್ರವರ್ತಿಯವರ ಭಾವಪ್ರತಿಮೆಯನ್ನು ಪ್ರಕಾಶಪಡಿಸುವ ಮಹೋತ್ಸವವನ್ನು ನೆರವೇರಿಸಿ, ಆದೇದಿನ ರಾತ್ರಿ ಹೊಗೆಬಂಡಿಯಮೇಲೆ ಶಿವಮೊಗ್ಗೆಗೆ ದಯಮಾಡಿಸಿ, ಗೆರಸೊಪ್ಪಾ ಜಲಪಾತವನ್ನು ನೋಡುವದಕ್ಕೆ ದಯಮಾಡಿಸುವರು. ಅಲ್ಲಿಂದ ಹಿಂದಿರಿಗಿ ಅರಸೀಕೆರೆ ಮೈಸೂರು ಲೋಹಮಾರ್ಗದ ಮೂಲಕ ಡಿಶಂಬರ್ ತಾ|| ೧ ರಲ್ಲಿ ಮೈಸೂರು ಪಟ್ಟಣಕ್ಕೆ ದಯಮಾಡಿಸುವರು.

ಥಿಯೋಸಾಫಿಕಲ್ ಸಂಘದ ಮೈಸೂರು ಶಾಖಾ ಸಮಾಜದವರು ಸುಸಂಘ ಎಂಬ ಹೆಸರಿನ ಮಾಸಪತ್ರವನ್ನು ಪ್ರಕಟಿಸುತ್ತಿದ್ದು, ಅದರ ಮೂಲಕ ಅನರ್ಘಗಳಾದ ಅನೇಕ ತಾತ್ತ್ವಿಕ ಧಾರ್ಮಿಕ ವಿಷಯಗಳನ್ನು ಕನ್ನಡಿಗರಿಗೆ ಉಪದೇಶಿಸಿದ್ದುದು ಸುಪ್ರಸಿದ್ಧವಷ್ಟೆ. ಈಗ ಅದು ನಿಂತುಹೋಗಿದೆ. ಅದರ ಸ್ಥಾನದಲ್ಲಿ "ಬ್ರಹ್ಮವಿದ್ಯಾ" ಎಂಬ ಹೆಸರಿನ ಮಾಸಪತ್ರವನ್ನು ಈ ದೇಶದ ಥಿಯೋಸಾಫಿಕಲ್ ಸೊಸೈಟಿ ಶಾಖಾ ಸಮಾಜಗಳ ಪ್ರತಿನಿಧಿಯಾದ ಕರ್ಣಾಟಕ ಫೆಡರೇಷನ್ ಸಂಘದವರು ಇದೇ ಅಕ್ಟೋಬರ್ ತಿಂಗಳಿಂದ ಬೆಂಗಳೂರಿನಲ್ಲಿ ಪ್ರಕಟಿಸಲು ಆರಂಭಿಸಿರುತ್ತಾರೆ. ಈ ಪತ್ರದಲ್ಲಿ ರಾಜಕೀಯ ವಿಷಯವೊಂದರ ಹೊರತು ಮುಖ್ಯವಾಗಿ ಬ್ರಹ್ಮವಿದ್ಯಾ ತತ್ತ್ವಗಳನ್ನೂ ಧಾರ್ಮಿಕ ಸಾಮಾಜಿಕ ಲೌಕಿಕಾದಿ ಸಕಲ ವಿಷಯಗಳನ್ನೂ ಕುರಿತ ಲೇಖನಗಳು ಬರುವಂತೆ ಏರ್ಪಡಿಸಿದ್ದಾರೆ. ಪ್ರಥಮಸಂಚಿಕೆಯಲ್ಲಿ ಪತ್ರಿಕಾಸ್ವವಿಷಯವೂ, ದೇವರ ಪ್ರಾರ್ಥನೆ, ಬ್ರಹ್ಮವಿದ್ಯೆ, ಆನಿಬೆಸೆಂಟಮ್ಮನವರ ಜೀವಮಾನದ ಸಂಕ್ಷಿಪ್ತಚರಿತ್ರೆ, ಸಹೋದರತ್ವ, ಬ್ರಹ್ಮಸಮಾಜದ ವೃತ್ತಾಂತಗಳು, ಇಷ್ಟು ವಿಷಯಗಳು ಕನ್ನಡದಲ್ಲಿ ಬರೆಯಲ್ಪಟ್ಟಿರುವುವು. ಇವುಗಳಲ್ಲಿ ಎಚ್. ಲಕ್ಷ್ಮಮ್ಮ ಎಂಬ ನಾರೀಮಣಿಯ ಒಂದು ಲೇಖನವೂ ಇರುವುದು. ಇವುಗಳೆಲ್ಲಾ ಸುಲಭವಾದ ಶೈಲಿಯಲ್ಲಿ ಸರ್ವರಿಗೂ ಬೋಧೆಯಾಗುವಂತೆ ಬರೆಯಲ್ಪಟ್ಟಿರುವುವು ಆಸ್ತಿಕರೆಲ್ಲರಿಗೂ ಪಠನೀಯವಾದ ಈ ಮಾಸಪತ್ರದ ವಾರ್ಷಿಕಚಂದಾಧನವು ೧|| ರೂ.

ಮೈಸೂರ ಶಾಸನನಿರ್ಮಾಣಸಭೆಯು ಕಳೆದ ತಾ|| ೨೯ರಲ್ಲಿ ಬೆಂಗಳೂರು ಅಠಾರಾಕಚೇರಿಯ ಕಟ್ಟಡದಲ್ಲಿ ಕೂಡಿದ್ದಿತು. ಕೌನ್ಸಿಲರ್ ಮಿ|| ಹಂಜಾಹುಸೇನ್ ಸಾಹೇಬರು ನಿಯಮನಿರ್ಮಾಣಸಭಾಸಭಿಕರ ಸಂಖ್ಯೆಯನ್ನು ೨೧ ರಿಂದ ೩೦ ಕ್ಕೆ ಹೆಚ್ಚಿಸುವ ಮತ್ತು ಪ್ರತಿಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಸಭಿಕರನ್ನು ಆರಿಸಿ ಕಳುಹಿಸುವ ವಿಷಯಕವಾದ ಬಿಲ್ಲನ್ನು ಉಪಪಾದಿಸಿದರು. ಅದರಮೇಲೆ ಮ|| ಎಂ. ಬಸವಯ್ಯನವರು ಆಯಾ ಡಿಸ್ಟ್ರಿಕ್ಟಿನವರೇ ಅಲ್ಲಲ್ಲಿಯ ಸಭ್ಯರಾಗಿ ಬರಲು ಉಮೇದುವಾರರಾಗಬೇಕೆಂಬುದನ್ನು ತಪ್ಪಿಸಿ, ಯಾವ ಡಿಸ್ಟ್ರಿಕ್ಟಿನವರು ಯಾವ ಡಿಸ್ಟ್ರಿಕ್ಟಿನಿಂದಾದರೂ ಉಮೇದುವಾರರಾಗಿ ಬರಲು ಅವಕಾಶವಿರುವಂತೆ ಮಾಡಿದರೆ ಪ್ರಾತಿನಿಧ್ಯಾಧಿಕಾರವು ಹೆಚ್ಚುವುದೆಂತಲೂ, ಮತ್ತು ಓಟನ್ನು ಕೊಡಲು ಅರ್ಹತೆಯುಳ್ಳ ಪ್ರತಿಯೊಬ್ಬ ಪ್ರಜೆಯೂ ಪ್ರತ್ಯಕ್ಷವಾಗಿ ಓಟನ್ನು ಕೊಡುವಂತೆ ಮಾಡಬೇಕಲ್ಲದೆ, ಲೋಕಲ್‌ಬೋರ್ಡುಗಳ ದ್ವಾರಾ ಓಟನ್ನು ಗ್ರಹಿಸುವುದನ್ನು ತಪ್ಪಿಸಬೇಕೆಂತಲೂ ಹೇಳಿದರು. ಇದನ್ನು ಮಿ|| ನವಾಬ್ ಗುಲಾಮ್ ಅಹಮ್ಮದ್ ಕಲಾಮಿಯವರು ಪುಷ್ಟಿಗೊಳಿಸುವಾಗ್ಗೆ—ಸಂಸ್ಥಾನದಲ್ಲಿ ೫೭ ಲಕ್ಷ ಪ್ರಜೆಗಳಿದ್ದರೂ ಅವರಲ್ಲಿ ಮುಕ್ಕಾಲುಪಾಲು ಜನಕ್ಕೆ ಓಟುಗಳು ಸಿಕ್ಕುವುದೇ ಇಲ್ಲ. ಅವರಿಗೆ ತಕ್ಕಷ್ಟು ಪ್ರಾತಿನಿಧ್ಯಾಧಿಕಾರವು ದೊರಕುವುದಿಲ್ಲ. ಮಹಮ್ಮದೀಯರಿಗೆ ತಕ್ಕಷ್ಟು ಪ್ರಾತಿನಿಧ್ಯವಿಲ್ಲ. ಬೇರೆ ಬೇರೆ ಸಂಘಗಳಿಗೂ ಬೇರೆಬೇರೆ ಕಸಬಿನವರಿಗೂ ಪ್ರತ್ಯೇಕ ಪ್ರಾತಿನಿಧ್ಯವಿರುವಂತೆ ಮಾಡಬೇಕು. ಕೋಲಾರದ ಗಣಿಗಳವರಿಗೂ ಯುರೋಪ್ಯರಿಗೂ, ನೇಟಿವ್ ಕ್ರೈಸ್ತರಿಗೂ ಸಹ ಸಂಬಂಧಪಟ್ಟ ಪ್ರತಿನಿಧಿಗಳು ಇಲ್ಲಿಲ್ಲ. ಈ ಲೋಪಪರಿಹಾರಕ್ಕಾಗಿ ಪ್ರತ್ಯೇಕ ಪ್ರಾತಿನಿಧ್ಯಾಧಿಕಾರವನ್ನು ಕೊಡುವುದು ಉಚಿತವೆಂದು ಶ್ರುತಪಡಿಸಿದರು. ಇದರ ಮೇಲೆ ಮ||ಗಳಾದ ಕರಣಿಕ ಕೃಷ್ಣಮೂರ್ತಿರಾಯರೂ, ಎಂ. ವೆಂಕಟಕೃಷ್ಣಯ್ಯನವರೂ, ಸಿ. ನರಸಿಂಹಯ್ಯನವರೂ, ಸೀತಾರಾಮಯ್ಯನವರೂ ವಿರುದ್ಧವಾಗಿ ವಾದಿಸಿದರು. ಇದಕ್ಕೆ ಮಿ|| ಕಲಾಮಿಯವರು ಸಮಾಧಾನ ಹೇಳಿದರು. ಇದನ್ನು ಪ್ರಭುತ್ವದವರು ಮುಂದೆ ಪರ್ಯಾಲೋಚಿಸುವರೆಂದು ಮಿ|| ಹಂಜಾಹುಸೇನ್ ಸಾಹೇಬರವರು ಪ್ರಭುತ್ವಪಕ್ಷದಿಂದ ನುಡಿದರು. ಬಳಿಕ ಬಿಲ್ಲು ಸರ್ವರಿಂದಲೂ ಅಂಗೀಕೃತವಾಯಿತು.

ವರ್ತಮಾನಸಾರ.

ಚೀನಾದಕಡೆಗೆ ಹೋಗುವುದಕ್ಕಾಗಿ ಇಂಗ್ಲೀಷರ ೬ ದೊಡ್ಡ ಸಬ್‌ಮೆರೀನುಗಳೂ ಕೆಲವು ಯುದ್ಧದ ಹಡಗುಗಳೂ ಸಹ ಬೊಂಬಾಯಿರೇವೆಗೆ ಬಂದಿರುತ್ತವೆ.

ರಷ್ಯಾದಲ್ಲಿ ಬೋಲ್ಷೆವಿಕ್ಕರಹಾವಳಿಯು ವಿಶೇಷವಾಗಿಯೇ ಇದೆ. ಅಲ್ಲಿಯ ಬೇರೆ ಬೇರೆ ದೇಶಭಾಗಗಳ ಪ್ರಭುತ್ವದವರನೇಕರು ಬೋಲ್ಷೆವಿಕ್ಕರನ್ನು ಅಣಗಿಸಲು ಹಲವುಕಡೆ ಯುದ್ಧಮಾಡುತ್ತಿದ್ದಾರೆ.

ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರ ಭಯಂಕರವಾದ ಅನಾರೋಗ್ಯಸ್ಥಿತಿಯು ತಪ್ಪಿ ಈಗ ಅವರು ಆರೋಗ್ಯಗೊಳ್ಳುತ್ತಿದ್ದಾರೆ. ಈಗ ಅವರು ತಮ್ಮ ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಎಷ್ಟೋ ಕಾಗದಪತ್ರಗಳನ್ನು ನೋಡಿ ರುಜುಮಾಡುತ್ತಿದ್ದಾರೆ.

ರಾಷ್ಟ್ರೀಯಸಭೆಯು ಬರುವ ಡಿಶಂಬರ್ ತಿಂಗಳಲ್ಲಿ ಅಮೃತಸರಪಟ್ಟಣದಲ್ಲಿ ಜರುಗುವುದಕ್ಕೆ ನಿರ್ಧರವಾಗಿದೆ. ಆ|| ಸಪ್ರೂ, ತಿಲಕ್, ಶಂಕರನ್ ನಾಯರ್, ಮೋತೀಲಾಲಘೋಷ್, ವಿ. ಪಿ. ಮಾಧವರಾವ್, ಬಾಪ್ಟಿಸ್ಟಾ ಮೊದಲಾದವರುಗಳ ಹೆಸರು ಅಧ್ಯಕ್ಷತೆಗೆ ಸೂಚಿಸಲ್ಪಡುತ್ತಿವೆ.

ಫ್ರಾನ್ಸ್ ದೇಶದಲ್ಲಿಯೂ ಬೆಳ್ಳಿ ನಾಣ್ಯಗಳು ಕಡಿಮೆಯಾಗಿಹೋಗಿವೆ. ಇದ್ದ ನಾಣ್ಯಗಳನ್ನು ಕರಗಿಸಿಯೋ ಏನೋ ಪ್ರಜೆಗಳು ಉಳಿಸಿಕೊಂಡುಬಿಟ್ಟಿದ್ದಾರೆ. ಚಲಾವಣೆಗೆ ನಾಣ್ಯಗಳು ಸಾಲದಿರುವುದರಿಂದ ವ್ಯಾಪಾರಿಗಳು ಚಿಲ್ಲರೆಗೆ ಬೆಳ್ಳಿ ನಾಣ್ಯಗಳನ್ನು ಕೊಡಲಾರದೆ ನೋಟುಗಳನ್ನೇ ಕೊಡುತ್ತಿದ್ದಾರೆ.

ಅಫ್ಘಾನಿಸ್ಥಾನ ಸಂಬಂಧದ ವಾರ್ತೆಗಳು ವಿಷಮವಾಗಿವೆ ಅಲ್ಲಿಯ ರಾಯಭಾರಿಗಳು ಕೆಲರು ಬೋಲ್ಷೆವಿಕ್ಕರೊಡನೆ ಸಂಧಾನ ನಡೆಯಿಸುವುದಕ್ಕೆ ಹೋಗಿದ್ದಾರಂತೆ. ಬೋಲ್ಷೆವಿಕ್ಕರು ಅಫ್ಘಾನಿಸ್ಥಾನದವರಿಗೆ ಒತ್ತಾಸೆಯಾಗಿ ಬರಲು ವಾಗ್ದಾನ ಮಾಡಿರುವರಂತೆ. ಅಫ್ಘಾನಿಸ್ಥಾನದಲ್ಲೋ ಪಾರ್ಟಿಗಳ ವೈಷಮ್ಯವು ಬೆಳೆಯುತ್ತಿದೆ. ಈಗಣ ಅಮೀರರನ್ನು ಕೊಲ್ಲುವುದಕ್ಕೂ ಕೂಡ ಪ್ರಯತ್ನವು ನಡೆದಿದ್ದಿತಂತೆ.

ಎಸ್. ಆರ್. ಬೊಮ್ಮಂಜಿಯವರು ಸ್ವಂತ ಕೆಲಸದಮೇಲೆ ಸೀಮೆಗೆ ಹೋಗಿ ೧೦ ತಿಂಗಳಿದ್ದು ಈಗತಾನೇ ಬೊಂಬಾಯಿಗೆ ಬಂದು ಅಲ್ಲಿನ ಅನುಭವವನ್ನು ಹೇಳಿರುವುದರಲ್ಲಿ-ಸಂಯೋಗಸಂಘವಿಚಾರಣಕಾಲದಲ್ಲಿ ಸರ್ ಸ್ಟಾನ್ಲಿ ರೀಸ್‌ರವರೂ ಬಾನರ್ಜಿಯವರೂ ಶ್ರೀನಿವಾಸಶಾಸ್ತ್ರಿಯವರೂ ರಾಮಸ್ವಾಮಯ್ಯರವರೂ ಚೆನ್ನಾಗಿ ವಾಙ್ಮೂಲಕೊಟ್ಟರೆಂದೂ, ಸ್ಟೇಟ್‌ಸೆಕ್ರಟರಿ ಮಾಂಟೂಗ್‌ರವರು ಭರತಖಂಡ ವಿಷಯವಾಗಿ ಬಹಳ ಶ್ರದ್ಧಾಭಿಮಾನಗಳಿಂದ ಕೆಲಸಮಾಡುತ್ತಿರುವರೆಂದೂ ಇಂಥ ಮಂತ್ರೀಶ್ವರರು ನಮಗೆ ಸಿಕ್ಕುವುದು ಪರಮದುರ್ಲಭವೆಂದೂ, ಲಾರ್ಡ್ ಸಿನ್ಹರವರೂ ಬಾಸುರವರೂ ಕೂಡ ಮಾಂಟಗ್ಯುರವರಿಗೆ ಕಡಿಮೆಯಾಗಿ ಕೆಲಸಮಾಡುತ್ತಲಿಲ್ಲವೆಂದೂ; ಸಂಯೋಗಸಂಘದವರು ಇನ್ನು ಮುಂದೆ ಸಂಸ್ಕರಣದಲ್ಲಿ ಏನಾದರೂ ಸುಧಾರಣೆ ಮಾಡುವರಾದರೆ ಅದು ಭರತಖಂಡಕ್ಕೆ ಅನುಕೂಲಕರವಾಗಿದ್ದೀತೇ ಹೊರತು ಪ್ರತಿಕೂಲವಾಗಿರುವುದಿಲ್ಲವೆಂದೂ ಹೇಳಿರುತ್ತಾರೆ.

ರಷ್ಯಾದೇಶದಲ್ಲಿ ಬೋಲ್ಷೆವಿಜಂ ಹಾವಳಿಯನ್ನು ಮೂಲೋತ್ಪಾಟನೆ ಮಾಡಬೇಕಾದರೆ ಆದಕ್ಕೆ ಎಲ್ಲಕಡೆಯಿಂದಲೂ ಸಮುದ್ರಮಾರ್ಗ ನಿರೋಧವನ್ನು ಮಾಡುವುದೇ ಉಪಾಯವೆಂದು ಮಿತ್ರಮಂಡಲಿಯವರು ಯೋಚಿಸಿ, ಆದಕ್ಕಾಗಿ ತಟಸ್ಥದೇಶೀಯರ ಮತ್ತು ಜರ್ಮನರ ಸಹಾಯವನ್ನು ಕೋರಿದ್ದರು. ಜ

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ನವಂಬರ್ ತಾ|| ೨ ನೆಯ ಭಾನುವಾರ.

ಸಾಂಘಿಕ ಪ್ರಾತಿನಿಧ್ಯ.

ಸರ್ ಶಂಕರನ್ ನಾಯರ್‌ರವರು.

ಸೀಮೆಯಲ್ಲಿ ಭಾರತ ರಾಜಕೀಯ ನೂತನಸಂಸ್ಕರಣ ಸಂಬಂಧವಾಗಿ ಪಾರ್ಲಿಮೆಂಟಿನ ಜಾಯಿಂಟ್ ಕಮಿಟಿಯವರು ನಡೆಯಿಸುತ್ತಿದ್ದ ವಿಚಾರಣೆಯೆಲ್ಲಾ ಮೊನ್ನೆವಾರಕ್ಕೆ ಮುಗಿದಿತು. ಕಡೆಯಸಲ ವಾಙ್ಮೂಲಕೊಟ್ಟ ದೊಡ್ಡಮನುಷ್ಯರುಗಳೊಳಗೆ ಸರ್ ಶಂಕರನ್ ನಾಯರ್‌ರವರೂ ಒಬ್ಬರಾಗಿದ್ದರು. ಇವರು ತಮ್ಮ ಅಭಿಪ್ರಾಯಗಳನ್ನು ಬಹಳ ಸ್ಪಷ್ಟವಾಗಿ ಹೇಳಿರುತ್ತಾರೆ. ಕಮಿಟಿ ಮೆಂಬರರಲ್ಲಿ ಒಬ್ಬರಾದ ಲಾರ್ಡ್ ಸಿಡೆನ್ಹಾಮ್‌ರವರಿಗೆ ಇವರು ಉತ್ತರಕೊಡುವಾಗ್ಗೆ ಸಾಂಘಿಕ ಪ್ರಾತಿನಿಧ್ಯವನ್ನು ಕುರಿತು ಕೆಲ ಮಾತುಗಳನ್ನಾಡಿದ್ದಾರೆ "ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟರೆ ಭರತಖಂಡ ಸರ್ಕಾರದವರು ಅಭಿಪ್ರಾಯಪಡುವಂತೆ ವರ್ಣಕುಲಭೇದಗಳು ಹೆಚ್ಚುವುವೇನೋ ನಿಜ. ಆದರೆ ಇಂಥ ಸಾಂಘಿಕ ಪ್ರಾತಿನಿಧ್ಯವು ಇದ್ದೇತೀರಬೇಕೆಂದು ಬ್ರಾಹ್ಮಣೇತರರು ಕೇಳುತ್ತಿರುವುದರಿಂದ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಒಳ್ಳೆಯದು" ಎಂದು ಹೇಳಿರುತ್ತಾರೆ. ಭರತಖಂಡ ಸರ್ಕಾರದವರಿಗೆ ಈ ದೇಶದ ವರ್ಣಕುಲಭೇದಗಳೆಲ್ಲಾ ಮೂಲೋತ್ಪಾಟನೆಗೊಂಡು ಎಲ್ಲವೂ ಒಂದೇ ಜಾತಿಯಾಗಬೇಕೆಂಬ ಸಂಕಲ್ಪವಿರಬಹುದೋ ಏನೋ! ಇದೇತೆರದ ಆಸೆಯು ಕ್ರೈಸ್ತಪಾದ್ರಿಗಳಿಗೂ ಇರುತ್ತದೆ. ಅದುಕಾರಣ, ಅವರುಗಳು ಸಾಂಘಿಕ ಪ್ರಾತಿನಿಧ್ಯದಿಂದ ವರ್ಣಕುಲಭೇದಗಳು ಮತ್ತಷ್ಟು ಬಲವಾಗುವುವೆಂದು ಯೋಚಿಸಿಕೊಂಡು, ಈ ಸಾಂಘಿಕ ಪ್ರಾತಿನಿಧ್ಯತತ್ತ್ವಕ್ಕೆ ವಿಮುಖರಾಗಿರುವುದು ಸಹಜ. ಆದರೆ ಸರ್ ಶಂಕರನ್ ನಾಯರ್‌ರವರು ಕೂಡ ಅದನ್ನೇ ನಿಜವೆಂದು ಅನುಮೋದಿಸಿರುವುದನ್ನು ನೋಡಿದರೆ ಇವರೂ ಕೂಡ ಆಧುನಿಕ ಸಂಘಸಂಸ್ಕಾರಿಗಳಾದ ಸರ್ ಚಂದ್ರಾವರ್ಕರರವರೇ ಮೊದಲಾದವರಂತೆ "ಸಬ್‌ಲುಂಡಾ" ವೆಂಬುವ ಭ್ರಾಂತಿಗೇ ಬದ್ಧವರಾಗಿ ಕಾಣಿಸುತ್ತಾರೆ. ಸಾಂಘಿಕ ಪ್ರಾತಿನಿಧ್ಯತತ್ತ್ವವು ಅಂಗೀಕರಿಸಲ್ಪಡದೆ ಹೋದರೆ ಭರತಖಂಡದ ಮತ ಕುಲ ಜಾತಿ ಭೇದಗಳೆಲ್ಲಾ ನಿರ್ನಾಮವಾಗಿಹೋಗುವುದು ನಿಜವೆ? ಆ ತತ್ತ್ವವು ಅಂಗೀಕರಿಸಲ್ಪಡದಿರುವ ಈಗಣ ಕಾಲದಲ್ಲಿ ಕುಲಜಾತಿ ಸ್ಪರ್ಧೆಗಳು ಕಡಿಮೆಯಾಗುತ್ತಿರುವ ಚಿಹ್ನೆಗಳೇನಾದರೂ ಕಾಣುತ್ತಿವೆಯೆ? ಪಾಶ್ಚಾತ್ಯ ವಿದ್ಯಾಸಂಸ್ಕಾರವನ್ನು ಪಡೆದಿರುವ ವಿದ್ಯಾಧಿಕರುಕೂಡ ಅಂತರ್ಭಾವವನ್ನು ಮೂಲೆಗೊತ್ತಿ, ಬಾಹ್ಯಾಡಂಬರಕ್ಕೂ ಮತವೈಷಮ್ಯಕ್ಕೂ ನಡುಕಟ್ಟಿನಿಂತಿರುವುದನ್ನು ಯಾರು ಕಾಣರು? ಸಾಂಘಿಕಪ್ರಾತಿನಿಧ್ಯ ತತ್ತ್ವಕ್ಕೆ ವಿದ್ಯಾಧಿಕ ಜನರು ಅಡ್ಡಿಯನ್ನು ಮಾಡುವುದಕ್ಕೆ ನಿಂತುದರಿಂದಲೇ ಈಗ ಭರತಖಂಡದಲ್ಲಿ ಹಿಂದುಳಿದವರ ಮತ್ತು ಮುಂಬರಿದವರ ಮಧ್ಯದಲ್ಲಿ ಮನಸ್ಸ್ಪರ್ಧೆಗಳು ಬೆಳೆಯುವುದಕ್ಕೆ ಅವಕಾಶವಾಗಿದೆ. ಎಲ್ಲಿಯವರೆಗೆ ಪ್ರತ್ಯೇಕಪ್ರಾತಿನಿಧ್ಯ ತತ್ತ್ವಕ್ಕೆ ಅಡ್ಡಿಗಳು ಮಾಡಲ್ಪಡುತ್ತಿರುವುವೋ ಅಲ್ಲಿಯವರೆಗೂ ಇಂಥ ಸ್ಪರ್ಧಾವೈಮನಸ್ಯಗಳೂ ಭೇದಗಳೂ ಕಪಿಮಾಡಿದಂತೆ ಶಾಖೋಪಶಾಖವಾಗಿ ವೃದ್ಧಿಗೊಳ್ಳುವುವೇ ಹೊರತು ಕಡಿಮೆಯಾಗುವುದಿಲ್ಲ. ಮುಂಬರಿದ ದೇಶೀಯರು ಸಹೋದರಪ್ರೀತಿಯಿಂದ ದೂರಾಲೋಚನೆಯಿಟ್ಟು ಈ ತತ್ತ್ವಕ್ಕೆ ಅನುಮೋದನೆ ಕೊಡುವುದೊಂದೇ ಈ ಭಿನ್ನಭಾವಗಳ ಶಾಂತಿಗೆ ಪರಮೌಷಧವಾದೀತು. ಹಾಗಲ್ಲದೆಹೋದರೆ ಹಿಂದುಳಿದವರು ಪ್ರತ್ಯೇಕ ಪ್ರಾತಿನಿಧ್ಯಫಲವನ್ನು ತಮ್ಮ ಕರ್ತೃತ್ವ ಶಕ್ತಿಯಿಂದ ತಾವು ಹೇಗಾದರೂ ಪಡೆದುಕೊಳ್ಳದೆ ಬಿಡುವುದಿಲ್ಲ. ಅದರ ವಿರೋಧಿಗಳಾದರೂ ಕಾಲಾನುಕಾಲದಲ್ಲಿ ತಾವೇ ಪ್ರತ್ಯೇಕಪ್ರಾತಿನಿಧ್ಯವನ್ನು ಕೋರಿಕೊಳ್ಳುವ ಅವಸ್ಥೆಗೆ ಬರುವುದುಕೂಡ ತಪ್ಪುವುದಿಲ್ಲ.

ಈ ಪ್ರತ್ಯೇಕ ಪ್ರಾತಿನಿಧ್ಯ ತತ್ತ್ವಕ್ಕೆ ಅಂಗೀಕಾರವನ್ನು ಕೊಡದೆಹೋಗುವುದರಿಂದ ಆಗತಕ್ಕ ಅನರ್ಥವು ಜಾತಿಭೇದಾದಿಗಳ ಅಭಿವೃದ್ಧಿಯಿಂದ ಆಗಬಹುದಾದ ಅನರ್ಥಕ್ಕಿಂತಲೂ ಮಿಗಿಲಾಗುವುದೆಂಬುದನ್ನು ಯೋಚಿಸಿಕೊಂಡೇ ಸರ್ ಶಂಕರನ್ ನಾಯರ್‌ರವರು ಕಡೆಗೆ "ಪ್ರತ್ಯೇಕಪ್ರಾತಿನಿಧ್ಯಾಧಿಕಾರವನ್ನು ಕೊಡುವುದು ಒಳ್ಳೆಯದು" ಎಂದು ಅಭಿಪ್ರಾಯಕೊಟ್ಟಿರುತ್ತಾರೆ. ಆದರೆ ಈ ಅಭಿಪ್ರಾಯವು ಎಷ್ಟುಮಟ್ಟಿಗೆ ಗೌರವಿಸಲ್ಪಡುವುದೆಂಬುದನ್ನು ಮುಂದೆ ತಿಳಿಯಬೇಕು. ವೈಸ್‌ರಾಯರ ಎಗ್ಸಿಕ್ಯುಟೀವ್ ಕೌನ್ಸಿಲ್‌ಗಿರಿಗೆ ಸರ್ ಶಂಕರನ್ ನಾಯರ್‌ರವರು ರಾಜೀನಾಮೆಕೊಟ್ಟಾಗ, ಅವರನ್ನು ಇಂದ್ರ ಚಂದ್ರ ದೇವೇಂದ್ರನೆಂದು ಹೊಗಳಿ, ಅವರ ದೇಶಾಭಿಮಾನವನ್ನೂ ಧೀಮತ್ರಿಯನ್ನೂ ಮರ್ಯಾದಿಸಲು ನಾಮುಂದು ತಾಮುಂದೆಂದು ಒಂದು ೨ನೆ ಸಲ ರಾಷ್ಟ್ರೀಯ ಮಹಾಸಭಾಧ್ಯಕ್ಷತೆಯನ್ನು ಅವರಿಗೆ ಕೊಡಬೇಕೆಂದು ಓಡಾಡುತ್ತಿರುವ ಜನರುಗಳು ಅದೇ ನಾಯರ್‌ರವರ ಹಿತವಚನವನ್ನು ಈಗ ಎಷ್ಟುಮಟ್ಟಿಗೆ ಗೌರವಿಸುವರೋ ನೋಡಬೇಕು.

ಸ್ತ್ರೀವಿದ್ಯಾಭ್ಯಾಸ.

ಪುರುಷರ ವಿದ್ಯಾಭ್ಯಾಸಕ್ಕೂ ಸ್ತ್ರೀಯರು ಮಾಡುವ ವಿದ್ಯಾಭ್ಯಾಸಕ್ಕೂ ತಾರತಮ್ಯವಿರಬೇಕಾದುದು ಅವಶ್ಯಕವೆಂದು ಬಹುಜನ ಮತವಿರುವಂತೆ, ಅದನ್ನು ನಿರೋಧಿಸಿ ಎರಡಕ್ಕೂ ಸಮಾನತೆಯಿರಬೇಕೆಂದು ವಾದಿಸುವ ವರ್ಗವಾದರೂ ಅಲ್ಲಲ್ಲಿ ಇದ್ದೇ ಇದೆ. ನಮ್ಮ ಮೈಸೂರು ದೇಶದಲ್ಲಾದರೊ ವಿದ್ಯಾಧಿಕಜನರಲ್ಲಿ ಬಹುಭಾಗದವರು ಹುಟ್ಟುಕನ್ನಡಿಗರಲ್ಲದೆ ತಮಿಳು ತೆಲುಗರೇ ಹೆಚ್ಚಾಗಿರುವುದರಿಂದ ಅವರುಗಳಿಗೆ ಕರ್ನಾಟಭಾಷೆಯ ಮೇಲೆ ಅಷ್ಟು ಪ್ರೇಮವಿಲ್ಲ. ಇದರಿಂದ "ದತ್ತಪುತ್ರನಿಗೇಕೆ ಪಿತೃಭಕ್ತಿ?" ಎಂಬಂತೆ ಕನ್ನಡವನ್ನು ಇಂಚರೆ ಸೇರದೆ ಪರಭಾಷೆಯನ್ನು ಮೋಹಿಸುವವರೇ ಹೆಚ್ಚಾಗಿದ್ದಾರೆ. ಅಂಥವರ ಹೆಂಗುಸರು ಕೂಡ ತಮಗೆ ಇಂಗ್ಲೀಷಿನಲ್ಲೇ ಪುರುಷರಂತೆ ಎಲ್ಲ ವಿದ್ಯಾಭ್ಯಾಸವನ್ನೂ ಮಾಡಿಸಬೇಕು; ಕನ್ನಡದಲ್ಲಿ ಯಾವ ತರಗತಿಯ ಅಭ್ಯಾಸವೂ ನಡೆಯಕೂಡದು ಎಂದು ವಾದಿಸುವುದರಲ್ಲಿ ಆಶ್ಚರ್ಯವೇನು?

ಮೊನ್ನೆ ತಾನೇ ರಾಜಧಾನಿಯಲ್ಲಿ ನೆರೆದಿದ್ದ ಸ್ತ್ರೀಸಮ್ಮೇಳನದಲ್ಲೂ ಅವರು ಹಾಗೆಯೇ ನಿರ್ಧಾರಮಾಡಿದರಂತೆ. ನಮ್ಮ ವಿದ್ಯಾಪೀಠದ ಸೆನೇಟ್ ಮೀಟಿಂಗಿನಲ್ಲೂ ಆ ತೆರದ ಅಭಿಪ್ರಾಯವೇ ಬಹುಮತವಾಗಿ ಹೊರಬಿದ್ದಿರುವುದು. ಇದಕ್ಕಾದರೂ ನಾವು ಮೇಲೆ ಹೇಳಿರುವ ದೇಶಭಾಷಾನಿರಭಿಮಾನದ ಹೇತುವಿನ ಜತೆಗೆ ಮಿ|| ರಡ್ಡಿಯವರ ಹೊಸ ಸ್ಕೀಮಿನ ಮೇಲಣ ವಕ್ರದೃಷ್ಟಿಯೂ ಕೆಲಮಟ್ಟಿಗೆ ಕಾರಣವಾಗಿರಬೇಕೆಂದು ಕಾಣುತ್ತದೆ. ಈ ಸ್ಥಿತಿಯನ್ನೆಲ್ಲಾ ನೋಡಿ ಮಂಗಳೂರಿನ ಪುರುಷಸಿಮ್ಮವು (ಕಂಠೀರವ ಪತ್ರವು) "ಹೆಂಗಸರೆಲ್ಲರೂ ಗಂಡಸರಾದರೆ ಗಂಡಸರೇನಾಗಬೇಕು?, ಎಂದು ಪಲ್ಲವಿಯನ್ನಿಟ್ಟುಕೊಂಡು,-ಸುಧಾರಣೆಯಲ್ಲಿ ಮೈಸೂರ ಹೆಂಗುಸರೆಷ್ಟು ಮುಂಬರಿದಿರುವರೆಂದು ಹೇಳಬೇಕಿಲ್ಲ. ಬಾಲ್ಯವಿವಾಹದ ನಿರೋಧ, ಪ್ರೌಢವಿವಾಹದ ಅನುಮೋದನ, ವಿಧವಾವಿವಾಹದ ಉತ್ತೇಜನ, ಮೊದಲಾದ ವಿವಿಧವಿಷಯಗಳನ್ನು ಚರ್ಚಿಸಿ, ಇತ್ಯರ್ಥಿಸಿ ಸಾಲದೆ, ಅಲ್ಲಿಯ ಸ್ತ್ರೀಸಮ್ಮೇಳನವು ಸ್ವಸಂಪಾದನೆಯ ಮಾರ್ಗವಾದ ವಿದ್ಯಾಭ್ಯಾಸಸುಧಾರಣೆಗೂ ತಲೆಹಾಕ ತೊಡಗಿದೆ. ಮಧ್ಯಮಶಾಲೆಗಳ ವಿದ್ಯಾಭ್ಯಾಸವು ದೇಶಭಾಷೆಯಲ್ಲೇ ನಡೆಯಬೇಕೆಂದು ಎಷ್ಟೋ ಕಷ್ಟಪಟ್ಟು ಎಷ್ಟೋ ಪ್ರಮಾಣಗಳನ್ನು ಸಂಗ್ರಹಿಸಿ ಕಲಕತ್ತೆಯ ಯೂನಿವರ್ಸಿಟಿ ಕಮಿಷನ್ನಿನವರೂ, ಮೈಸೂರು ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ ಆ ರಡ್ಡಿಯವರೂ ವ್ಯಕ್ತಪಡಿಸಿರುವ ಅಭಿಪ್ರಾಯವು ನಮ್ಮ ಮೈಸೂರಿನ ಸುಧಾರಣೆಹೊಂದಿದ ಸ್ತ್ರೀಸಮಾಜಕ್ಕೆ ಹೇಗೆ ಸರಿತೋರೀತು?" ಎಂದು ಗರ್ಜನೆಯನ್ನು ಹಾಕಿರುತ್ತದೆ. ಪ್ರಕೃತದಲ್ಲಿ ಈ ಸಂಬಂಧವಾಗಿ ನಾವು ವಿಶೇಷವಾಗಿ ಚರ್ಚಿಸಲು ತೊಡಗುವುದಕ್ಕಿಂತಲೂ, ನಮ್ಮ ನೆರೆಹೊರೆಯ ಕುಲಸ್ತ್ರೀ ವಿದ್ಯಾವತಿಗಳ ಅಭಿಪ್ರಾಯವು ಈ ವಿಷಯದಲ್ಲಿ ಹೇಗಿರುವುದೆಂಬುದನ್ನು ನಮ್ಮ ದೇಶದ ವಿದ್ಯಾವತಿಯರಿಗೆ ತೋರಿಸಿಕೊಡುವುದು ಉಚಿತವೆಂದು ಯೋಚಿಸುವೆವು.

ಅದೇನೆಂದರೆ—ಕಳೆದ ತಿಂಗಳು ತಾ|| ೧೫ ರಲ್ಲಿ ಗುಂಟೂರಿನಲ್ಲಿ ಸ್ತ್ರೀಸನಾತನಧರ್ಮಮಂಡಲೀಸಭೆಯ ವಾರ್ಷಿಕಾಧಿವೇಶನವು ಕೂಡಿದ್ದಾಗ್ಗೆ ಶ್ರೀಯುತ ದಿಗುಮರ್ತಿ ವೆಂಕಟರಾಮಸ್ವಾಮಿ, ಬಿ.ಎ., ಬಿ.ಎಲ್., ರವರ ಪತ್ನಿ ಶ್ರೀಮತೀ ಜಾನಕೀಬಾಯಿಯವರು ಅಗ್ರಾಸನವನ್ನಲಂಕರಿಸಿ, ದೊಡ್ಡ ಭಾಷಣವನ್ನು ಮಾಡಿದರು. ಅದರಲ್ಲಿ ದೇಶಭಾಷಾವಶ್ಯಕತೆಯನ್ನು ಕುರಿತು ಅವರು ಹೀಗೆ ಹೇಳಿರುವರು—"ಸ್ತ್ರೀಯರಿಗೆ ಪುರುಷರಿಗೆ ಹೇಗೋ ಹಾಗೆ ಮುಖ್ಯವಾದ ಪ್ರಕೃತಿಶಾಸ್ತ್ರಾಭ್ಯಾಸವನ್ನು ಮಾಡಿಸುವುದಲ್ಲದೆ, ಮನೆಮಠಗಳನ್ನು ಶುಚಿಯಾಗಿಟ್ಟುಕೊಳ್ಳುವುದು, ಶಿಶುಪೋಷಣೆಯ ವಿಧಾನ, ಇತರ ಗೃಹಕೃತ್ಯನಿರ್ವಾಹ, ಇತ್ಯಾದಿ ವಿಷಯಗಳನ್ನು ಕುರಿತು ವಿದ್ಯಾಭ್ಯಾಸ ಮಾಡಿಸುವುದು ಅತ್ಯಾವಶ್ಯಕವು. ಇಷ್ಟನ್ನೆಲ್ಲಾ ಕಲಿಸುವುದಕ್ಕೆ ಕಾಲವು ಸಾಲುವುದಿಲ್ಲವೆಂದು ಹೇಳಕೊಳ್ಳುವರೇನೋ? ಹಾಗಿದ್ದರೆ ಆಂಗ್ಲಭಾಷೆಯನ್ನು ಈಗ ಅದು ಆಕ್ರಮಿಸಿಕೊಂಡಿರುವ ಅಗ್ರಸ್ಥಾನದಿಂದ ತೊಲಗಿಸಿ, ಕಲಿಸಬೇಕಾದ ಪಾಠಗಳನ್ನೆಲ್ಲಾ ಮಾತೃಭಾಷಾದ್ವಾರದಿಂದಲೇ ಕಲಿಸಿಕೊಟ್ಟರೆ ಎಷ್ಟೋ ಕಾಲವು ಕೂಡಿಬರುವುದೆಂದು ಪ್ರೊ|| ಕರ್ವೆಯವರೇ ಮೊದಲಾದ ಪಂಡಿತರು ಹೇಳಿರುತ್ತಾರೆ. ಆಂಗ್ಲಭಾಷೆಯನ್ನು ಕಲಿತುಕೊಳ್ಳುವುದು ನಮಗೆ ಸುಲಭವಲ್ಲ. ಬಹು ಕಷ್ಟ. ನಮ್ಮ ಗಂಡುಸರು ೧೨ ವರ್ಷಕಾಲಕ್ಕಿಂತ ಹೆಚ್ಚಾಗಿಯೇ ಆ ಭಾಷೆಯನ್ನು ಪಾಠಶಾಲೆಗಳಲ್ಲಿ ಅಭ್ಯಾಸಮಾಡಿ, ಬಳಿಕ ಹಗಲು ರಾತ್ರಿಯೆಲ್ಲಾ ಅದನ್ನೇ ಮಾತಾಡುತ್ತಿದ್ದರೂ, ಅವರ ಇಂಗ್ಲೀಷು ತಪ್ಪುಗಳ ಕುಪ್ಪೆಯಾಗಿರುವುದು. ಅಂಥ ಕಷ್ಟತಮವಾದ ಭಾಷೆಯನ್ನು ಕಲಿತುಕೊಳ್ಳುವುದಕ್ಕಾಗಿ ನಮ್ಮ ಶಕ್ತಿಯನ್ನು ಏತಕ್ಕೆ ವ್ಯರ್ಥಪಡಿಸಬೇಕು? ಕೆಲಬಾಲಿಕಾಪಾಠಶಾಲೆಗಳಲ್ಲಿ ಮೊದಲನೆ ಸ್ಟಾಂಡರ್ಡಿನಿಂದಲೂ ಇಂಗ್ಲೀಷೇ ಉಪಯೋಗಿಸಲ್ಪಡುತ್ತ, ಎಲ್ಲ ವಿಷಯಗಳನ್ನೂ ಆ ಭಾಷಾದ್ವಾರದಿಂದಲೇ ಕಲಿಸುವುದಕ್ಕೆ ಪ್ರಯತ್ನಮಾಡಲ್ಪಡುತ್ತಿದೆಯೆಂದು ಮೊನ್ನೆತಾನೇ ಶಾಸನನಿರ್ಮಾಣಸಭೆಯಲ್ಲಿ ಹೇಳಲ್ಪಟ್ಟಿದೆ. ಇಂಥ ಏರ್ಪಾಟಿನಿಂದ ಚಿಕ್ಕ ತರಗತಿಗಳಲ್ಲೂ ಕೂಡ ದೊಡ್ಡ ಸಂಬಳಗಳನ್ನು ಕೊಟ್ಟು ಆಂಗ್ಲೇಯೋಪಾಧ್ಯಾಯರನ್ನು ನಿಯಮಿಸುವುದಕ್ಕೆ ಅವಕಾಶವನ್ನು ಮಾಡುವುದರ ಹೊರತು ಬೇರೆ ಲಾಭವೇನೂ ಕಾಣುವುದಿಲ್ಲ. ಇಂಥ ಮಾರ್ಪು ಸ್ವಭಾವಕ್ಕೆ ವಿರುದ್ಧವಾದುದು. ಯಾರೊಬ್ಬರೂ ತಮ್ಮ ಮಾತೃಭಾಷೆಯಿಂದಲೇ ವಿಷಯಜ್ಞಾನವನ್ನು ಮಾಡಿಕೊಳ್ಳುವುದು ಸಹಜವೂ ಸುಲಭವೂ ಆಗಿರುವುದು. ಅದುಕಾರಣ ಆಂಗ್ಲಭಾಷೆಯಿಂದ ವಿದ್ಯಾಭ್ಯಾಸ ಮಾಡಿಸುವುದನ್ನು ತಪ್ಪಿಸುವುದಕ್ಕೆ ಸ್ತ್ರೀಪುರುಷರೆಲ್ಲರೂ ಗಟ್ಟಿಯ ಪ್ರಯತ್ನಗಳನ್ನು ಮಾಡಬೇಕು."

ಕಮರ್ಶಿಯಲ್ ಕ್ಲಬ್.

ರಾಜಧಾನಿಯ ವರ್ತಕಮಂಡಲಿಯವರು ಮೇಲೆ ಕಂಡ ಹೆಸರಿನಿಂದ ಒಂದು ಕ್ಲಬ್ಬನ್ನು ಏರ್ಪಡಿಸಿಕೊಳ್ಳಬೇಕೆಂದು ನಿರ್ಧರಿಸಿ, ಅದನ್ನು ತಮ್ಮ ತಮ್ಮಲ್ಲಿ ಕೂಡಿಸುವ ಚಂದಾಹಣದಿಂದ ಕಟ್ಟುವ ಒಂದು ಸ್ವಂತದ ಕಟ್ಟಡದಲ್ಲಿಯೇ ಸ್ಥಾಪಿಸಿಕೊಳ್ಳಬೇಕೆಂದು ನಿರ್ಧರಿಸಿದ್ದಾರೆ. ಈ ಕಟ್ಟಡವನ್ನು ಬಹುಶಃ ೫೦ ಸಾವಿರ ರೂ ಗಳವರೆಗೂ ಮುಟ್ಟಿಸಿ ಕಟ್ಟಿಸುವ ಯೋಚನೆಯು ಅವರುಗಳಿಗೆ ಇದೆಯೆಂದು ಕೇಳುತ್ತೇವೆ. ಉತ್ತರೋತ್ತರ ಇದು ಕೇವಲ ವಿನೋದಭವನ ಮಾತ್ರವಾಗಿರದೆ, ವರ್ತಕ ಸಂಘವೊಂದನ್ನು ಇಲ್ಲಿ ಸ್ಥಾಪಿಸಿಕೊಳ್ಳಲಿಕ್ಕೂ ಆಗಾಗ್ಗೆ ಅವರ ಹಿತಸಂಬಂಧವಾದ ವಿಷಯಗಳನ್ನು ಚರ್ಚಿಸುವ ಸಭೆಗಳನ್ನು ಕೂಡಿಸಿಕೊಳ್ಳಲಿಕ್ಕೂ ಅನುಕೂಲವಾಗಬಹುದು. ಇಂಥ ಉತ್ಸಾಹವು ನಮ್ಮ ದೇಶದ ವರ್ತಕರಲ್ಲಿ ಕಂಡುಬಂದುದು ದೇಶಾಭಿಮಾನಿಗಳಿಗೆ ಸಂತೋಷವನ್ನುಂಟುಮಾಡದೆ ಇರದು.

ಈ ಕಟ್ಟಡವನ್ನು ಕಟ್ಟುವುದಕ್ಕಾಗಿ ಟೌನ್ ಹಾಲಿನ ಪಶ್ಚಿಮದ ಕಡೆ ವೆಸ್ಲಿಯನ್ ಮಿಷನ್ ಕನ್ನಡ ಶಾಲೆಯ ಪೂರ್ವಭಾಗಕ್ಕಿರುವ ಜಾಗವನ್ನು ಕೊಡಿಸಿಕೊಡಬೇಕೆಂದು ಪ್ರಮುಖ ವರ್ತಕರು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರಲಾಗಿ, ಅವರು ಅದನ್ನು ರಾಜಧಾನಿಯ ಮ್ಯುನ್ಸಿಪಾಲಿಟಿಯವರ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟಿದ್ದುದರ ಮೇಲೆ ಆ ವಿಷಯವು ಕಳೆದ ವಾರದಲ್ಲಿ ನಡೆದ ತಿಂಗಳುಗಟ್ಟಲೆಯ ಮೀಟಿಂಗಿನ ಕಾಲದಲ್ಲಿ ಚರ್ಚಿಸಲ್ಪಟ್ಟಿದ್ದಿತು. ಅದರಲ್ಲಿ ನಡೆದ ವಿದ್ಯಮಾನಗಳನ್ನು ಕೇಳಿದರೆ ನಮಗೆ ಪರಮಾಶ್ಚರ್ಯವಾಗುತ್ತದೆ. ಬಂದಿದ್ದ ಕೌನ್ಸಿಲರೊಳಗೆ ಮ|| ಅಣ್ಣಯ್ಯಪಂಡಿತರು ತಟಸ್ಥರಾಗಿದ್ದು ಬಿಟ್ಟುದರಿಂದ ಉಳಿದ ಬ್ರಾಹ್ಮಣ ಸಭಿಕರೆಲ್ಲಾ ಒಂದು ಪಕ್ಷವಾಗಿ ನಿಂತು, ಆ ಸ್ಥಲವನ್ನು ಕಟ್ಟಡಕ್ಕೆ ಕೊಡಗೊಡಿಸದಿರುವುದಕ್ಕೆ ಎಷ್ಟು ತಡೆಯ ಮಾತುಗಳನ್ನೊಡ್ಡಬೇಕೋ ಅಷ್ಟನ್ನೂ ಒಡ್ಡಿದರೆಂದೂ, ಇತರರೆಲ್ಲಾ ಕೊಡುವುದೇ ಉತ್ತಮವೆಂಬುವ ಪಕ್ಷವಾಗಿ ವಾದಿಸಿದರೆಂದೂ ಕೇಳುತ್ತೇವೆ. ಇದರಿಂದ ಆದ ಪರ್ಯವಸಾನವೇನೆಂದರೆ-ವರ್ತಕರ ಪಕ್ಷವಾಗಿ ೧೪ ಮಂದಿಗಳ ಓಟೂ, ಸಿಕ್ಕಕೂಡದೆಂಬ ಬ್ರಾಹ್ಮಣ ಪಕ್ಷಕ್ಕೆ ೬ ಓಟುಗಳೂ ಸಿಕ್ಕಿದುವೆಂದು ತಿಳಿದೆವು. ನಡೆದ ವಿದ್ಯಮಾನವೆಲ್ಲಾ ಗೌರ್ನಮೆಂಟಿಗೆ ಇಷ್ಟರಲ್ಲೇ ವರದಿಮಾಡಲ್ಪಟ್ಟಿರಬೇಕು. ವರ್ತಕರಲ್ಲಿ ಕೂಪಕೂರ್ಮನ್ಯಾಯವು ತಪ್ಪಿ, ಈ ವಿಧವಾದ ನಾಗರಕ ಪ್ರಯತ್ನಕ್ಕೆ ಅವರು ತೊಡಗಿರುವಾಗ್ಗೆ ಸರ್ವವಿಧದಿಂದಲೂ ಅದನ್ನು ಪ್ರೋತ್ಸಾಹಿಸುವುದು ಪ್ರಭುತ್ವ ಧರ್ಮವಾಗಿರುವುದರಿಂದ ಶ್ರೀಮನ್ಮಹಾರಾಜರ ಸರ್ಕಾರದಿಂದ ಇದಕ್ಕೆ ಅನುಕೂಲವಾದ ಉತ್ತರವು ದೊರೆಯುವುದೆಂಬುದರಲ್ಲಿ ನಮಗೆ ಸಂಶಯವಿಲ್ಲ.

ಬ್ರಾಹ್ಮಣ ಕೌನ್ಸಿಲರುಗಳು ಈ ವಿಷಯದಲ್ಲಿ ಹೀಗೆ ಮಾಡಿದುದು ಧರ್ಮವಾಗಿ ತೋರಲಿಲ್ಲ. ಪಕ್ಷಪಾತವು ಯಾರಲ್ಲಿದೆಯೆಂಬುದನ್ನು ಇಂಥ ದೃಷ್ಟಾಂತಗಳಿಂದ ಅವರೇ ವ್ಯಕ್ತಪಡಿಸಿಕೊಳ್ಳುತ್ತಿರುವರು. ವರ್ತಕರಲ್ಲಿ ಒಂದೇ ಜಾತಿಯವರಿಲ್ಲ. ಈಗಣ ಕಾಲದಲ್ಲಿ ಬ್ರಾಹ್ಮಣರು ಸಕಲತರದ ವೃತ್ತಿಗೂ ಪ್ರವರ್ತಿಸಿರುವುದರಿಂದ ಅವರೂ ವರ್ತಕಕೋಟಿಯಲ್ಲಿ ಸೇರಿರುವರು. ಈ ದೃಷ್ಟಿಯಿಂದಲಾದರೂ ಈ ಪ್ರಯತ್ನಕ್ಕೆ ಅವರುಗಳು ಸಹಾಯಕರಾಗಬಾರದಾಗಿದ್ದಿತೆ? ಸುಬ್ರಾಯನ ಕೆರೆ ಪೂರ್ವಕ್ಕೆ ಅಕ್ಕಯಂಗಡಿ ಚಿಕ್ಕಣ್ಣನವರ ಮನೆಯ ಪಶ್ಚಿಮಕ್ಕೆ ಇರುವ ನಿವೇಶನವನ್ನು ನಮಗೆ ಕೊಡಿಸಬೇಕೆಂದು ಮಗ್ಗುಲ ಮನೆಯ ಮ|| ದೊಡ್ಡಯ್ಯನವರು ದಿವಾನರ ವರೆಗೆ ಹೋಗಿ ಬೇಡಿಕೊಂಡರೂ ನಡೆಯಗೊಡದೆ, ಕಡೆಗೆ ತಮ್ಮ ಅನಾಥಾಲಯಕ್ಕೆ ತಮ್ಮ ಪಕ್ಷದ ಟ್ರಸ್ಟ್‌ಬೋರ್ಡು ಚೇರ್ಮನ್ನರು ಇದ್ದಾಗ್ಗೆ ಉಪಾಯವಾಗಿ ಆ ಜಾಗವನ್ನು ಬ್ರಾಹ್ಮಣರು ವಶಪಡಿಸಿಕೊಂಡು ಬಿಟ್ಟರಲ್ಲವೆ? ಆಗ್ಗೆ ವರ್ತಕಾದಿಗಳೇನಾದರೂ ಈಗ ಇವರು ತೋರಿಸುತ್ತಿರುವಂಥ ಪಕ್ಷಪಾತವನ್ನು ತೋರಿಸಿ ಅಡ್ಡಿಮಾಡಿದರೆ? ಅನಾಥಾಲಯ ಮೊದಲಾದುವುಗಳಿಗೆ ಎಷ್ಟೋ ಮಂದಿ ವರ್ತಕರು ಈಗ್ಗೂ ಸಹಾಯಮಾಡುತ್ತಲಿಲ್ಲವೆ? ಆ ಉಪಕಾರಸ್ಮರಣೆಯಿಂದಲಾದರೂ ಈ ವಿಷಯದಲ್ಲಿ ಬ್ರಾಹ್ಮಣ ಕೌನ್ಸಿಲರು ಸಾನುಭೂತಿಯನ್ನು ತೋರಿಸಬಾರದಾಗಿದ್ದಿತೆ? ಇಂಥ ವರ್ತನಗಳಿಂದಲೇ ಕೆಲ ಬ್ರಾಹ್ಮಣರು ಇತರರ ಮನಸ್ಸನ್ನು ರೇಗಿಸಿ ಪಾರ್ಟಿಗಳು ಹುಟ್ಟುವುದಕ್ಕೆ ದಾರಿಮಾಡುತ್ತಿರುವುದನ್ನು ನೋಡಿದರೆ ಪಶ್ಚಾತ್ತಾಪವಾಗುತ್ತದೆ. ದಳವಾಯಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಮಿಟಿಯನ್ನೇರ್ಪಡಿಸುವಾಗ್ಗೆ ಅದರ ಮುಖಂಡರಾಗಿರುವ ಬ್ರಾಹ್ಮಣರು ಇತರರಿಗೆಲ್ಲಾ ಅದರಿಂದ ಬಹಿಷ್ಕಾರ ಹಾಕಿ, ಅದರಂತೆ ತಮ್ಮ ವಿಷಯದಲ್ಲಿ ಇತರರೂ ಆಚರಿಸುವಂಥ ಬುದ್ಧಿಯನ್ನು ಹುಟ್ಟಿಸಲು ಮೇಲುಪಂತಿ ಹಾಕಿದರು. ಕಡೆಗೆ ಇತರರನ್ನೇ ಎಂಟರ್ಟೇನ್‌ಮೆಂಟು ಮೊದಲಾದುವುಗಳಲ್ಲಿ ಬ್ರಾಹ್ಮಣರಿಗೆ ಬಹಿಷ್ಕಾರವನ್ನು ಹಾಕಿದರೆಂದು ನಿರಾಧಾರವಾಗಿ ತಾವೇ ದೂರುವುದಕ್ಕ ಆರಂಭಿಸಿದರು. ವಿದ್ಯಾಧಿಕರಾದ ಜನರಲ್ಲಿ ಇಂಥ ಸಂಕುಚಿತಭಾವವು ಇರಬಾರದು. ಗುಲಗಂಜಿಯ ಬುಡದಲ್ಲೇ ಕಪ್ಪಿರುವಂತೆ ತಮ್ಮಲ್ಲೇ ಇರುವ ಕಲೆಯನ್ನು ಅವರುಗಳು ತೊಳೆದುಕೊಂಡರೆ, ದೇಶದಲ್ಲಿ ಪರಸ್ಪರ ಪ್ರೀತಿಯು ತನಗೆ ತಾನೇ ವೃದ್ಧಿಯಾಗುವುದು.

ಅದ್ಭುತಭವಿಷ್ಯತ್ತು.

ಪ್ರೊಫೆಸರ್ ಆಲ್ಬರ್ಟ್‌ಪೋರ್ಟಾ ಎಂಬ ಪಾಶ್ಚಾತ್ಯಜ್ಯೋತಿಶ್ಶಾಸ್ತ್ರಜ್ಞರು ಬರುವ ಡಿಶಂಬರ್ ತಾ|| ೧೭ ರಿಂದ ೨೦ ರೊಳಗೆ ಪ್ರಪಂಚಕ್ಕೆ ದೊಡ್ಡ ಪ್ರಳಯವುಂಟಾಗುವುದೆಂಬುದಾಗಿ

ಅದಕ್ಕೆ ಕಾರಣವನ್ನು ಕೂಡ ವಿವರಿಸಿ ಬರೆದಿರುತ್ತಾರೆ. ಅವರು ಹೇಳಿರುವುದೇನೆಂದರೆ—ಡಿಶಂಬರ್ ತಾ|| ೧೭ ನೆಯ ದಿನ ಖಗೋಳದಲ್ಲಿ ಸೂರ್ಯಮಂಡಲವನ್ನು ೬ ಗ್ರಹಗಳು ಒಂದೇಸಮಯದಲ್ಲಿ ಅತಿ ಬಲದಿಂದ ಆಕರ್ಷಿಸುವುವು ಇವು ಸೂರ್ಯನಿಗೆ ೨೬ ಡಿಗ್ರಿಗಳಷ್ಟು ಸಮೀಪದಲ್ಲೇ ಇರುವುದರಿಂದ ಈ ಸಪ್ತಗ್ರಹಸಮ್ಮೇಳನದಿಂದ ಹುಟ್ಟುವ ಮಹಾ ಶಕ್ತಿಯು ಸೂರ್ಯನನ್ನು ಬಲ್ಲೆಯದಿಂದ ತಿವಿದಂತೆ ಹೊಡೆಯುವುದು. ಆಗ ಆಕಾಶದಲ್ಲಿ ಅತ್ಯಗಾಧವಾದ ಬೆಳಕಿನಿಂದ ವಿದ್ಯುಚ್ಛಕ್ತಿಯು ಹರಡುವುದು. ಸೂರ್ಯಮಂಡಲದ ಮೇಲೆ ಪೂರ್ವಭಾಗದಲ್ಲಿ ದೊಡ್ಡಮಚ್ಚೆ ಕಾಣಿಸಿಕೊಳ್ಳುವುದು. ಇದು ಸಾಮಾನ್ಯದೃಷ್ಟಿಗೂ ಕೂಡ ಕಾಣಿಸುವಷ್ಟಿರುವುದು. ಆ ಭಾಗಕ್ಕೆ ಸಮೀಪದಲ್ಲೇ ಭೂಮಂಡಲವಿರುವುದರಿಂದ ಇಲ್ಲಿ ಭೂಕಂಪ, ಜಲಪ್ರಳಯ, ಬಿರುಗಾಳಿ, ಸಿಡಿಲು, ಅತಿವೃಷ್ಟಿ ಇತ್ಯಾದಿಗಳೆಲ್ಲಾ ಸಂಭವಿಸುವುವು. ಇದರಿಂದ ಅತ್ಯಂತ ವಿನಾಶವು ಜಗತ್ತಿಗೆ ಸಂಭವಿಸುವುದು ಲೋಕಕ್ಕೆ ಭಯಹುಟ್ಟಿಸಬೇಕೆಂದು ನಾನು ಇದನ್ನು ಬರೆದಿಲ್ಲ. ಗಣಿತಶಾಸ್ತ್ರಾಧಾರವನ್ನು ಪರೀಕ್ಷಿಸಿಯೇ ಬರೆದಿರುತ್ತೇನೆ. ೨೦೦೦ ವರ್ಷಗಳಿಂದಲೂ ಇಂಥ ಗ್ರಹಸಂಯೋಜನವಾಗಿರಲಿಲ್ಲ. ಎಂದು ಹೇಳಿರುತ್ತಾರೆ.

ಇದರ ಮೇಲೆ ನಮ್ಮ ದೇಶದ ಸೂರ್ಯಸಿದ್ಧಾಂತಿಗಳು ಕೆಲರು ಅಭಿಪ್ರಾಯಪಟ್ಟಿರುವುದೇನೆಂದರೆ—"ಸೂರ್ಯನಿಗೆ ೨೬ ಡಿಗ್ರಿಗಳ ದೂರದಲ್ಲಿ ೬ ಗ್ರಹಗಳು ಒಂದೇ ಕಡೆಯಲ್ಲಿ ಸೇರುವುದೇ ಅಸಂಭವ. ಅಲ್ಲದೆ ೭೧ ಮಹಾಯುಗಗಳಾದರೆ ೧ ಮನ್ವಂತರವಾಗುವುದು. ೧ ಮನ್ವಂತರಕ್ಕೆ ೧೭ ಲಕ್ಷದ ೨೮ ಸಾವಿರ ವರ್ಷ. ಈಗಲಾದರೊ ೨೮ ನೆ ಮಹಾಯುಗವು ನಡೆಯುತ್ತಿದೆ. ಹೀಗಿರುವಾಗ ಮನ್ವಂತರದ ಕೊನೆಯಲ್ಲಿ ಸಂಭವಿಸುವ ಪ್ರಳಯವು ಈಗ ಸಂಭವಿಸಲು ಅವಕಾಶವೇ ಇಲ್ಲ. ಒಂದುವೇಳೆ ಸೂರ್ಯನಲ್ಲಿ ಹೆಚ್ಚಾಗಿ ಕಾಣುವುದೆಂದು ಹೇಳಲ್ಪಟ್ಟಿರುವ ಕಪ್ಪುಮಚ್ಚೆಯು ಕೇತುವಾಗಿರಬಹುದು. ಸೂರ್ಯಮಂಡಲದಮೇಲೆ ಕಾಣಿಸಿಕೊಳ್ಳುವ ಕೇತುಗಳು ಯಾವಯಾವ ದೇಶಭಾಗಕ್ಕೆ ಗೋಚರಿಸುವುವೋ ಅಲ್ಲಲ್ಲಿ ಮಾತ್ರವೇ ಕೆಲವು ಉತ್ಪಾತಗಳು ಸಂಭವಿಸುವುವೆಂಬ ಪ್ರಮಾಣವುಂಟು. ಜಗತ್ತೆಲ್ಲಾ ಬದಲಾವಣೆಗೊಳ್ಳುವಂಥ ಪ್ರಳಯವೇನೂ ಸಂಭವಿಸುವುದಿಲ್ಲ" ಎಂಬುದಾಗಿ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಒಕ್ಕಲಿಗರ ಹಾಸ್ಟಲಿನ ವಿದ್ಯಾರ್ಥಿಗಳು ಮ|| ಎಂ. ಮಾದಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಯೂನಿಯನ್ನನ್ನು ಕಳೆದವಾರ ಸ್ಥಾಪಿಸಿಕೊಂಡಿರುವರು.

ದಿವಾನ್ ಕಾಂತರಾಜ ಅರಸಿನವರ ಸನ್ಮಾನಸಮಾರಂಭವನ್ನು ಇದೇ ತಿಂಗಳು ತಾ|| ೧೫ ರಲ್ಲಿ ಬೆಂಗಳೂರು ಪುರನಿವಾಸಿಗಳು ನಡೆಯಿಸುವವರಾಗಿದ್ದಾರೆಂದು ಕೇಳುತ್ತೇವೆ.

ಸಂಸ್ಥಾನದ ಸೈನ್ಯದ ಚೀಫ್ ಕಮ್ಯಾಂಡೆಂಟರಾದ ಸರ್ದಾರ್ ಬಹದೂರ್ ಮೇಜರ್ ಬಿ. ಚಾಮರಾಜ ಅರಸಿನವರಿಗೆ ಶ್ರೀಮನ್ಮಹಾರಾಜರವರು ಲೆ|| ಕರ್ನಲ್‌ಗಿರಿಯನ್ನು ದಯಪಾಲಿಸಿದ್ದಾರೆ.

ಸೀಮೆಯೆಣ್ಣೆ ಮೇಲಣ ವ್ಯಾಪಾರನಿರ್ಬಂಧವನ್ನು ನಿನ್ನೆಯದಿನದಿಂದ ನಮ್ಮ ಸರ್ಕಾರದವರು ತಪ್ಪಿಸಿದ್ದಾರೆ. ಇನ್ನು ಮೇಲೆ ಯಾರು ಬೇಕಿದ್ದರೂ ಪೂರ್ವದಂತೆ ಸ್ವತಂತ್ರಿಸಿ ಮಾರಬಹುದಾಗಿದೆ.

ವೈಸ್‌ರಾಯರ ಪರಾಮರಿಕೆಗಾಗಿ ಆನೆಗಳ ಕೆಡ್ಡಾ ಏರ್ಪಾಟು ತ್ವರಿತದಿಂದ ನಡೆಯುತ್ತಿರುವುದು. ಇಷ್ಟರಲ್ಲೇ ೧ ಆನೆಗಳ ಹಿಂಡನ್ನು ಬಂಗಡಿಯ ಕಡೆಗೆ ಅಟ್ಟುವ ಪ್ರಯತ್ನವು ನಡೆದಿದೆಯೆಂದು ಕೇಳುತ್ತೇವೆ

ದೊಡ್ಡಬಳ್ಳಾಪುರದ ಮ|| ಡಿ|| ಕೊಂಗಾಡಿಯಪ್ಪನವರು ವಿದ್ಯಾಪ್ರೋತ್ಸಾಹನ ಕಾರ್ಯದಲ್ಲಿ ಮಾಡಿದ ಶ್ರದ್ಧೆಗಾಗಿ ಮೆಚ್ಚಿ ಶ್ರೀಮನ್ಮಹಾರಾಜರವರು ಅವರಿಗೆ ಒಂದನೆ ತರಗತಿಯ ಪಬ್ಲಿಕ್ ಸರ್ವೀಸ್ ಮೆಡಲನ್ನು ದಯಪಾಲಿಸಿರುವರು.

ಕಳೆದ ವಾರದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಹಲವು ಕಡೆ ಸ್ವಾತಿಮಳೆಯು ಬಿದ್ದಿದೆ. ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ. ರಾಗಿ ಜೋಳ ಅಕ್ಕಿ ಮೊದಲಾದವುಗಳ ಬೆಲೆಯು ಇಳಿಯುತ್ತಿದೆ. ರಾಜಧಾನಿಯಲ್ಲಿ ದಕ್ಷಿಣಭಾಗದೊಳಗೆ ಪ್ಲೇಗು ಕಾಣಿಸಿಕೊಂಡು ಪ್ರಬಲಿಸುವ ಚಿಹ್ನೆಯು ಕಾಣುತ್ತಿದೆ.

ಮೇಲುಕೋಟೆ ಮ್ಯುನ್ಸಿಪಾಲಿಟಿಗೆ ಮ|| ಎಂ. ಜೆ. ಶ್ಯಾಮಯ್ಯಂಗಾರರೂ, ಎಡತೊರೆ ಮ್ಯುನ್ಸಿಪಾಲಿಟಿಗೆ ಮ|| ಡಿ. ನಾರಾಯಣಸ್ವಾಮಿಶೆಟ್ಟರೂ, ತಿ|| ನರಸೀಪುರದ ಮ್ಯುನ್ಸಿಪಾಲಿಟಿಗೆ ಮ|| ಟಿ. ಶ್ಯಾಮಯ್ಯಂಗಾರರೂ, ತಲಕಾಡು ಮ್ಯುನ್ಸಿಪಾಲಿಟಿಗೆ ಮ|| ಕದೀಮ್ ವೆಂಕಟಸುಬ್ಬಯ್ಯನವರೂ ಸಹ ವೈಸ್ ಪ್ರೆಸಿಡೆಂಟರಾಗಿ ಅಲ್ಲಲ್ಲಿಯ ಕೌನ್ಸಿಲರುಗಳಿಂದ ಆರಿಸಲ್ಪಟ್ಟಿದ್ದಾರೆ.

ಬೆಂಗಳೂರು ಪಟ್ಟಣದಲ್ಲಿರುವ ಪೇಟೆ ಬುಕ್ಕಿಂಗ್ ಆಫೀಸುಗಳಲ್ಲಿ ರೈಲ್ವೆಟಿಕೇಟುಗಳು ಬೆಳಗಿನಿಂದ ಸರಿರಾತ್ರಿಯವರೆಗೂ ಅಖಂಡವಾಗಿ ಮಾರುವಂತೆ ಏರ್ಪಾಟಿರುವುದರಿಂದ ಪ್ರಜೆಗಳಿಗೆ ಬಹಳ ಸೌಕರ್ಯವಾಗಿದೆ. ಮೈಸೂರು ಪಟ್ಟಣದಲ್ಲಿರುವ ಪೇಟೆಯ ಬುಕ್ಕಿಂಗ್ ಆಫೀಸಿನಲ್ಲಿ ಅಂಥ ಏರ್ಪಾಡಿಲ್ಲದಿರುವುದರಿಂದ ಪ್ರಯಾಣಿಕರಿಗೆ ತೊಂದರೆ ಹೆಚ್ಚು. ಮೈಸೂರು ರೈಲ್ವೆಶಾಖೆಯವರಿಗೆ ಇದರ ಯಾಜಮಾನ್ಯವು ದೊರೆದಿರುವ ಈಗಾದರೂ ಬೆಂಗಳೂರಿನಂತೆ ಇಲ್ಲಿಯೂ ಸದಾ ಟಿಕೇಟು ದೊರೆಯುವಂತೆಯೂ ಅರಸೀಕೆರೆ ಮೈಸೂರು ಲೋಹಮಾರ್ಗದ ಟಿಕೇಟುಗಳನ್ನು ಕೂಡ ಈ ಪೇಟೆ ಬುಕ್ಕಿಂಗ್ ಆಫೀಸಿನಲ್ಲಿ ಮಾರುವಂತೆಯೂ ಏರ್ಪಡಿಸಿದರೆ ಪ್ರಜೆಗಳಿಗೆ ಅನುಕೂಲವಾದೀತು.

ಮೈಸೂರು ಬೆಂಗಳೂರುಗಳ ಮಧ್ಯದ ರೈಲ್ವೆ ಆಡಳಿತವು ಮೈಸೂರು ಸರ್ಕಾರಕ್ಕೆ ಸೇರಿದರೂ ಟಿಕೇಟಿಲ್ಲದೆ ರೈಲ್ವೆಪ್ರಯಾಣ ಮಾಡುವವರ ಮತ್ತು ಲಂಚಕೋರರ ಹಾವಳಿಯು ತಪ್ಪಿಲ್ಲ. ಹೀಗಾದರೆ ರೈಲ್ವೆಶಾಖೆಯಿಂದ ಸರ್ಕಾರಕ್ಕೆ ಬಹಳ ನಷ್ಟವು ಸಂಭವಿಸದೆ ತಪ್ಪುವುದಿಲ್ಲ. ಟಿಕೇಟ್ ಚೆಕ್‌ಮಾಡುವ ಸಮರ್ಥೋದ್ಯೋಗಿಗಳನ್ನು ನಿಯಮಿಸುವುದಲ್ಲದೆ ದೊಡ್ಡದೊಡ್ಡ ಆಫೀಸರು ಅನಿರೀಕ್ಷಿತವಾಗಿ ಮಧ್ಯಮಾರ್ಗದಲ್ಲಿ ಬಂದು ಪರೀಕ್ಷಿಸಿ ದಂಡನೆ ಮಾಡಿಸುತ್ತ ಬಂದರೆ ಈ ತಪ್ಪಿತವು ಕಡಿಮೆಯಾದೀತು. ರಾತ್ರಿವೇಳೆ ಹೋಗಿ ಬರುವ ಬಂಡಿಗಳಲ್ಲಿ ದೀಪದ ಅವ್ಯವಸ್ಥೆಯು ಬಹಳವಾಗಿದೆ. ಗ್ಯಾಸು ಒದಗದಿದ್ದರೆ ಎಣ್ಣೆಯ ದೀಪಗಳನ್ನಾದರೂ ಇಡಿಸದಿರುವುದು ಬಹಳ ಅನ್ಯಾಯ.

ರಾಜಧಾನಿಗೆ ಮದರಾಸಿನಿಂದ ಪಂಚಾನನಕುಲದ ಪಾರ್ಥಸಾರಥಿ ಆಚಾರ್ಯರೆಂಬ ಭಾಗವತರು ಬಂದಿರುವರು. ಇವರಿಗೆ ಸಂಗೀತದಲ್ಲೂ ವಿಶೇಷ ಪಾಂಡಿತ್ಯವಿರುವುದು. ರಸಭರಿತವಾಗಿಯೂ ಪ್ರೌಢವಾಗಿಯೂ ಹರಿಕಥೆಗಳನ್ನು ಮಾಡುವ ಸಾಮರ್ಥ್ಯವು ಚೆನ್ನಾಗಿರುವುದು. ಹಲವುಕಡೆ ಇವರ ಕಥಾಶ್ರವಣವಾಗಿ ಭಂಗಾರದ ಆಭರಣಗಳು ಇವರಿಗೆ ಬಹುಮಾನಮಾಡಲ್ಪಟ್ಟುವು. ಕಳೆದ ಸೋಮವಾರ ವಿಶ್ವಕರ್ಮವರ್ಗದವರು ತಮ್ಮ ಕಾಳಿಕಾಂಬಾ ದೇವಾಲಯದಲ್ಲಿ ಇವರ ಸಂಗೀತ ಕಚೇರಿಯನ್ನು ನಡೆಯಿಸಿದರು. ವಿದ್ವಾನ್ ವಿಶ್ವನಾಥಯ್ಯರ್‌ರವರ ಪಿಟೀಲೂ, ಅರಮನೆ ಮೃದಂಗವಿದ್ವಾನ್ ಮುತ್ತುಸ್ವಾಮಿಯವರ ಮೃದಂಗವಾದನವೂ ಸೇರಿ, ನೆರೆದಿದ್ದ ಸಾವಿರಾರುಮಂದಿ ಸಭಿಕರಿಗೆ ಆನಂದವನ್ನುಂಟುಮಾಡಿದುವು. ಭಾಗವತರಿಗೆ ಒಂದು ಭಂಗಾರದ ಮೆಡಲೂ, ಪಿಟೀಲು ವಿದ್ವಾಂಸರಿಗೆ ಒಂದು ಭಂಗಾರದ ತೋಡವೂ, ಮೃದಂಗವಿದ್ವಾಂಸರಿಗೆ ಭಂಗಾರದ ಕೈಮುರಿಯೂ ವೀಣೆ ಭಕ್ಷಿ ಮ|| ಸುಬ್ಬಣ್ಣನವರ ಹಸ್ತದಿಂದ ಸಭಾಮಧ್ಯದಲ್ಲಿ ಕೊಡಿಸಲ್ಪಟ್ಟುವು.

ವೈಸ್ರಾಯರು ಸಪರಿವಾರರಾಗಿ ಇದೇ ತಿಂಗಳು ತಾ|| ೨೬ ನೆ ತಾರೀಖಿನ ಬೆಳಗ್ಗೆ ೮|| ಗಂಟೆಗೆ ಬೆಂಗಳೂರುಪಟ್ಟಣದ ನಿಲ್ದಾಣದಲ್ಲಿಳಿದು ಉತ್ಸವಪೂರ್ವಕವಾಗಿ ರೆಸಿಡೆಂಟರ ಬಂಗಲೆಗೆ ತೆರಳುವರು. ಫಲಾಹಾರಾನಂತರ ೧೦ ಗಂಟೆಗೆ ಕಂಟೋನ್ಮೆಂಟಿನ ಮ್ಯುನಿಸಿಪಾಲಿಟಿಯಿಂದಲೂ ಕೊಡಗಿನ ತೋಟಗಾರರ ಪಕ್ಷದಿಂದಲೂ ಒಪ್ಪಿಸಲ್ಪಡುವ ವಿಜ್ಞಾಪನಪತ್ರವನ್ನು ಸ್ವೀಕರಿಸುವರು. ಮಧ್ಯಾಹ್ನೋತ್ತರ ೩|| ಗಂಟೆಗೆ ವೈಸ್ರಾಯ್ ದಂಪತಿಗಳು ಟಾಟಾರವರ ಶಾಸ್ತ್ರ ಶೋಧನಾಲಯಕ್ಕೆ ದಯಮಾಡಿಸಿ ಅಲ್ಲಿಂದ ೫|| ಗಂಟೆಗೆ ಹೊರಟು ಹೆಬ್ಬಾಳದ ಫಾರಮಿಗೂ ರಾಜಮಹಲ್ಲಿಗೂ ದಯಮಾಡಿಸಿ, ಅಲ್ಲಿಂದ ಪಟ್ಟಣದ ದೊಡ್ಡಪೇಟೆಯಮಾರ್ಗವಾಗಿ ಕೋಟೆಗೂ ಲಾಲಬಾಗಿಗೂ ದಯಮಾಡಿಸುವರು. ಆ ಉದ್ಯಾನದಲ್ಲಿ ಬೆಂಗಳೂರು ಮ್ಯುನ್ಸಿಪಾಲಿಟಿಯವರ ವಿಜ್ಞಾಪನಪತ್ರವನ್ನು ಸ್ವೀಕರಿಸುವರು. ತಾ|| ೨೮ ನೆಯ ದಿನ ಸಪ್ತಮ ಎಡ್ವರ್ಡ್ ಚಕ್ರವರ್ತಿಯವರ ಭಾವಪ್ರತಿಮೆಯನ್ನು ಪ್ರಕಾಶಪಡಿಸುವ ಮಹೋತ್ಸವವನ್ನು ನೆರವೇರಿಸಿ, ಅದೇದಿನ ರಾತ್ರಿ ಹೊಗೆಬಂಡಿಯಮೇಲೆ ಶಿವಮೊಗ್ಗೆಗೆ ದಯಮಾಡಿಸಿ, ಗೆರಸೊಪ್ಪಾ ಜಲಪಾತವನ್ನು ನೋಡುವುದಕ್ಕೆ ದಯಮಾಡಿಸುವರು. ಅಲ್ಲಿಂದ ಹಿಂದಿರುಗಿ ಅರಸೀಕೆರೆ ಮೈಸೂರು ಲೋಹಮಾರ್ಗದ ಮೂಲಕ ಡಿಶಂಬರ್ ತಾ|| ೧ ರಲ್ಲಿ ಮೈಸೂರು ಪಟ್ಟಣಕ್ಕೆ ದಯಮಾಡಿಸುವರು.

ಥಿಯೋಸಾಫಿಕಲ್ ಸಂಘದ ಮೈಸೂರು ಶಾಖಾ ಸಮಾಜದವರು ಸುಸಂಘ ಎಂಬ ಹೆಸರಿನ ಮಾಸಪತ್ರವನ್ನು ಪ್ರಕಟಿಸುತ್ತಿದ್ದು, ಅದರ ಮೂಲಕ ಅನರ್ಘಗಳಾದ ಅನೇಕ ತಾತ್ತ್ವಿಕ ಧಾರ್ಮಿಕ ವಿಷಯಗಳನ್ನು ಕನ್ನಡಿಗರಿಗೆ ಉಪದೇಶಿಸಿದ್ದುದು ಸುಪ್ರಸಿದ್ಧವಷ್ಟೆ. ಈಗ ಅದು ನಿಂತುಹೋಗಿದೆ. ಅದರ ಸ್ಥಾನದಲ್ಲಿ "ಬ್ರಹ್ಮವಿದ್ಯಾ" ಎಂಬ ಹೆಸರಿನ ಮಾಸಪತ್ರವನ್ನು ಈ ದೇಶದ ಥಿಯೋಸಾಫಿಕಲ್ ಸೊಸೈಟಿ ಶಾಖಾ ಸಮಾಜಗಳ ಪ್ರತಿನಿಧಿಯಾದ ಕರ್ನಾಟಕ ಫೆಡರೇಷನ್ ಸಂಘದವರು ಇದೇ ಅಕ್ಟೋಬರ್ ತಿಂಗಳಿಂದ ಬೆಂಗಳೂರಿನಲ್ಲಿ ಪ್ರಕಟಿಸಲು ಆರಂಭಿಸಿರುತ್ತಾರೆ. ಈ ಪತ್ರದಲ್ಲಿ ರಾಜಕೀಯ ವಿಷಯವೊಂದರ ಹೊರತು ಮುಖ್ಯವಾಗಿ ಬ್ರಹ್ಮವಿದ್ಯಾ ತತ್ತ್ವಗಳನ್ನೂ ಧಾರ್ಮಿಕ ಸಾಮಾಜಿಕ ಲೌಕಿಕಾದಿ ಸಕಲ ವಿಷಯಗಳನ್ನೂ ಕುರಿತ ಲೇಖನಗಳು ಬರುವಂತೆ ಏರ್ಪಡಿಸಿದ್ದಾರೆ. ಪ್ರಥಮಸಂಚಿಕೆಯಲ್ಲಿ ಪತ್ರಿಕಾಸ್ವವಿಷಯವೂ, ದೇವರ ಪ್ರಾರ್ಥನೆ, ಬ್ರಹ್ಮವಿದ್ಯೆ, ಅನಿಬೆಸೆಂಟಮ್ಮನವರ ಜೀವಮಾನದ ಸಂಕ್ಷಿಪ್ತಚರಿತ್ರೆ, ಸಹೋದರತ್ವ, ಬ್ರಹ್ಮಸಮಾಜದ ವೃತ್ತಾಂತಗಳು, ಇಷ್ಟು ವಿಷಯಗಳು ಕನ್ನಡದಲ್ಲಿ ಬರೆಯಲ್ಪಟ್ಟಿರುವುವು. ಇವುಗಳಲ್ಲಿ ಎಚ್. ಲಕ್ಷ್ಮಮ್ಮ ಎಂಬ ನಾರೀಮಣಿಯ ಒಂದು ಲೇಖನವೂ ಇರುವುದು. ಇವುಗಳೆಲ್ಲಾ ಸುಲಭವಾದ ಶೈಲಿಯಲ್ಲಿ ಸರ್ವರಿಗೂ ಬೋಧೆಯಾಗುವಂತೆ ಬರೆಯಲ್ಪಟ್ಟಿರುವುವು ಆಸ್ತಿಕರೆಲ್ಲರಿಗೂ ಪಠನೀಯವಾದ ಈ ಮಾಸಪತ್ರದ ವಾರ್ಷಿಕಚಂದಾಧನವು ೧|| ರೂ.

ಮೈಸೂರ ಶಾಸನನಿರ್ಮಾಣಸಭೆಯು ಕಳೆದ ತಾ|| ೨೯ರಲ್ಲಿ ಬೆಂಗಳೂರು ಅಠಾರಾಕಚೇರಿಯ ಕಟ್ಟಡದಲ್ಲಿ ಕೂಡಿದ್ದಿತು. ಕೌನ್ಸಿಲರ್ ಮಿ|| ಹಂಜಾಹುಸೇನ್ ಸಾಹೇಬರು ನಿಯಮನಿರ್ಮಾಣಸಭಾಸಭಿಕರ ಸಂಖ್ಯೆಯನ್ನು ೨೧ ರಿಂದ ೩೦ ಕ್ಕೆ ಹೆಚ್ಚಿಸುವ ಮತ್ತು ಪ್ರತಿಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಸಭಿಕರನ್ನು ಆರಿಸಿ ಕಳುಹಿಸುವ ವಿಷಯಕವಾದ ಬಿಲ್ಲನ್ನು ಉಪಪಾದಿಸಿದರು. ಅದರಮೇಲೆ ಮ|| ಎಂ. ಬಸವಯ್ಯನವರು ಆಯಾ ಡಿಸ್ಟ್ರಿಕ್ಟಿನವರೇ ಅಲ್ಲಲ್ಲಿಯ ಸಭ್ಯರಾಗಿ ಬರಲು ಉಮೇದುವಾರರಾಗಬೇಕೆಂಬುದನ್ನು ತಪ್ಪಿಸಿ, ಯಾವ ಡಿಸ್ಟ್ರಿಕ್ಟಿನವರು ಯಾವ ಡಿಸ್ಟ್ರಿಕ್ಟಿನಿಂದಾದರೂ ಉಮೇದುವಾರರಾಗಿ ಬರಲು ಅವಕಾಶವಿರುವಂತೆ ಮಾಡಿದರೆ ಪ್ರಾತಿನಿಧ್ಯಾಧಿಕಾರವು ಹೆಚ್ಚುವುದೆಂತಲೂ, ಮತ್ತು ಓಟನ್ನು ಕೊಡಲು ಅರ್ಹತೆಯುಳ್ಳ ಪ್ರತಿಯೊಬ್ಬ ಪ್ರಜೆಯೂ ಪ್ರತ್ಯಕ್ಷವಾಗಿ ಓಟನ್ನು ಕೊಡುವಂತೆ ಮಾಡಬೇಕಲ್ಲದೆ, ಲೋಕಲ್‌ಬೋರ್ಡುಗಳ ದ್ವಾರಾ ಓಟನ್ನು ಗ್ರಹಿಸುವುದನ್ನು ತಪ್ಪಿಸಬೇಕೆಂತಲೂ ಹೇಳಿದರು. ಇದನ್ನು ಮಿ|| ನವಾಬ್ ಗುಲಾಮ್ ಅಹಮ್ಮದ್ ಕಲಾಮಿಯವರು ಪುಷ್ಟಿಗೊಳಿಸುವಾಗ್ಗೆ—ಸಂಸ್ಥಾನದಲ್ಲಿ ೫೬ ಲಕ್ಷ ಪ್ರಜೆಗಳಿದ್ದರೂ ಅವರಲ್ಲಿ ಮುಕ್ಕಾಲುಪಾಲು ಜನಕ್ಕೆ ಓಟುಗಳು ಸಿಕ್ಕುವುದೇ ಇಲ್ಲ. ಅವರಿಗೆ ತಕ್ಕಷ್ಟು ಪ್ರಾತಿನಿಧ್ಯಾಧಿಕಾರವು ದೊರಕುವುದಿಲ್ಲ. ಮಹಮ್ಮದೀಯರಿಗೆ ತಕ್ಕಷ್ಟು ಪ್ರಾತಿನಿಧ್ಯವಿಲ್ಲ. ಬೇರೆ ಬೇರೆ ಸಂಘಗಳಿಗೂ ಬೇರೆಬೇರೆ ಕಸಬಿನವರಿಗೂ ಪ್ರತ್ಯೇಕ ಪ್ರಾತಿನಿಧ್ಯವಿರುವಂತೆ ಮಾಡಬೇಕು. ಕೋಲಾರದ ಗಣಿಗಳವರಿಗೂ ಯುರೋಪ್ಯರಿಗೂ, ನೇಟಿವ್ ಕ್ರೈಸ್ತರಿಗೂ ಸಹ ಸಂಬಂಧಪಟ್ಟ ಪ್ರತಿನಿಧಿಗಳು ಇಲ್ಲಿಲ್ಲ. ಈ ಲೋಪಪರಿಹಾರಕ್ಕಾಗಿ ಪ್ರತ್ಯೇಕ ಪ್ರಾತಿನಿಧ್ಯಾಧಿಕಾರವನ್ನು ಕೊಡುವುದು ಉಚಿತವೆಂದು ಶ್ರುತಪಡಿಸಿದರು. ಇದರ ಮೇಲೆ ಮ||ಗಳಾದ ಕರಣಿಕ ಕೃಷ್ಣಮೂರ್ತಿರಾಯರೂ, ಎಂ. ವೆಂಕಟಕೃಷ್ಣಯ್ಯನವರೂ, ಸಿ. ನರಸಿಂಹಯ್ಯನವರೂ, ಸೀತಾರಾಮಯ್ಯನವರೂ ವಿರುದ್ಧವಾಗಿ ವಾದಿಸಿದರು. ಇದಕ್ಕೆ ಮಿ|| ಕಲಾಮಿಯವರು ಸಮಾಧಾನ ಹೇಳಿದರು. ಇದನ್ನು ಪ್ರಭುತ್ವದವರು ಮುಂದೆ ಪರ್ಯಾಲೋಚಿಸುವರೆಂದು ಮಿ|| ಹಂಜಾಹುಸೇನ್ ಸಾಹೇಬರವರು ಪ್ರಭುತ್ವಪಕ್ಷದಿಂದ ನುಡಿದರು. ಬಳಿಕ ಬಿಲ್ಲು ಸರ್ವರಿಂದಲೂ ಅಂಗೀಕೃತವಾಯಿತು.

ವರ್ತಮಾನಸಾರ.

ಚೀನಾದಕಡೆಗೆ ಹೋಗುವುದಕ್ಕಾಗಿ ಇಂಗ್ಲೀಷರ ೬ ದೊಡ್ಡ ಸಬ್‌ಮೆರೀನುಗಳೂ ಕೆಲವು ಯುದ್ಧದ ಹಡಗುಗಳೂ ಸಹ ಬೊಂಬಾಯಿರೇವಿಗೆ ಬಂದಿರುತ್ತವೆ.

ರಷ್ಯಾದಲ್ಲಿ ಬೋಲ್ಷೆವಿಕ್ಕರ ಹಾವಳಿಯು ವಿಶೇಷವಾಗಿಯೇ ಇದೆ. ಅಲ್ಲಿಯ ಬೇರೆ ಬೇರೆ ದೇಶಭಾಗಗಳ ಪ್ರಭುತ್ವದವರನೇಕರು ಬೋಲ್ಷೆವಿಕ್ಕರನ್ನು ಅಣಗಿಸಲು ಹಲವುಕಡೆ ಯುದ್ಧಮಾಡುತ್ತಿದ್ದಾರೆ.

ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರ ಭಯಂಕರವಾದ ಅನಾರೋಗ್ಯಸ್ಥಿತಿಯು ತಪ್ಪಿ ಈಗ ಅವರು ಆರೋಗ್ಯಗೊಳ್ಳುತ್ತಿದ್ದಾರೆ. ಈಗ ಅವರು ತಮ್ಮ ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಎಷ್ಟೋ ಕಾಗದಪತ್ರಗಳನ್ನು ನೋಡಿ ರುಜುಮಾಡುತ್ತಿದ್ದಾರೆ.

ರಾಷ್ಟ್ರೀಯಸಭೆಯು ಬರುವ ಡಿಶಂಬರ್ ತಿಂಗಳಲ್ಲಿ ಅಮೃತಸರಪಟ್ಟಣದಲ್ಲಿ ಜರುಗುವುದಕ್ಕೆ ನಿರ್ಧರವಾಗಿದೆ. ಅ|| ಸಪ್ರೂ, ತಿಲಕ್, ಶಂಕರನ್‌ನಾಯರ್, ಮೋತೀಲಾಲಘೋಷ್, ಎ. ಸಿ. ಮಾಧವರಾವ್, ಬಾಪ್ಟಿಸ್ಟಾ ಮೊದಲಾದವರುಗಳ ಹೆಸರು ಅಧ್ಯಕ್ಷತೆಗೆ ಸೂಚಿಸಲ್ಪಡುತ್ತಿವೆ.

ಫ್ರಾನ್ಸ್ ದೇಶದಲ್ಲಿಯೂ ಬೆಳ್ಳಿ ನಾಣ್ಯಗಳು ಕಡಿಮೆಯಾಗಿಹೋಗಿವೆ. ಇದ್ದ ನಾಣ್ಯಗಳನ್ನು ಕರಗಿಸಿಯೋ ಏನೋ ಪ್ರಜೆಗಳು ಉಳಿಸಿಕೊಂಡುಬಿಟ್ಟಿದ್ದಾರೆ. ಚಲಾವಣೆಗೆ ನಾಣ್ಯಗಳು ಸಾಲದಿರುವುದರಿಂದ ವ್ಯಾಪಾರಿಗಳು ಚಿಲ್ಲರೆಗೆ ಬೆಳ್ಳಿ ನಾಣ್ಯಗಳನ್ನು ಕೊಡಲಾರದೆ ನೋಟುಗಳನ್ನೇ ಕೊಡುತ್ತಿದ್ದಾರೆ.

ಅಫ್ಘಾನಿಸ್ಥಾನ ಸಂಬಂಧದ ವಾರ್ತೆಗಳು ವಿಷಮವಾಗಿವೆ ಅಲ್ಲಿಯ ರಾಯಭಾರಿಗಳು ಕೆಲರು ಬೋಲ್ಷೆವಿಕ್ಕರೊಡನೆ ಸಂಧಾನ ನಡೆಯಿಸುವುದಕ್ಕೆ ಹೋಗಿದ್ದಾರಂತೆ. ಬೋಲ್ಷೆವಿಕ್ಕರು ಅಫ್ಘಾನಿಸ್ಥಾನದವರಿಗೆ ಒತ್ತಾಸೆಯಾಗಿ ಬರಲು ವಾಗ್ದಾನಮಾಡಿರುವರಂತೆ. ಅಫ್ಘಾನಿಸ್ಥಾನದಲ್ಲೋ ಪಾರ್ಟಿಗಳ ವೈಷಮ್ಯವು ಬೆಳೆಯುತ್ತಿದೆ. ಈಗಣ ಅಮೀರರನ್ನು ಕೊಲ್ಲುವುದಕ್ಕೂ ಕೂಡ ಪ್ರಯತ್ನವು ನಡೆದಿದ್ದಿತಂತೆ.

ಎಸ್. ಆರ್. ಬೊಮ್ಮಂಜಿಯವರು ಸ್ವಂತ ಕೆಲಸದಮೇಲೆ ಸೀಮೆಗೆ ಹೋಗಿ ೧೦ ತಿಂಗಳಿದ್ದು ಈಗತಾನೇ ಬೊಂಬಾಯಿಗೆ ಬಂದು ಅಲ್ಲಿಯ ಅನುಭವವನ್ನು ಹೇಳಿರುವುದರಲ್ಲಿ-ಸಂಯೋಗಸಂಘವಿಚಾರಣಕಾಲದಲ್ಲಿ ಸರ್ ಸ್ಟಾನ್ಲಿ ರೀಸ್‌ರವರೂ ಬಾನರ್ಜಿಯವರೂ ಶ್ರೀನಿವಾಸಶಾಸ್ತ್ರಿಯವರೂ ರಾಮಸ್ವಾಮಯ್ಯರವರೂ ಚೆನ್ನಾಗಿ ವಾಙ್ಮೂಲಕೊಟ್ಟರೆಂದೂ, ಸ್ಟೇಟ್‌ಸೆಕ್ರಟರಿ ಮಾಂಟೆಗೂರವರು ಭರತಖಂಡ ವಿಷಯವಾಗಿ ಬಹಳ ಶ್ರದ್ಧಾಭಿಮಾನಗಳಿಂದ ಕೆಲಸಮಾಡುತ್ತಿರುವರೆಂದೂ ಇಂಥ ಮಂತ್ರೀಶ್ವರರು ನಮಗೆ ಸಿಕ್ಕುವುದು ಪರಮದುರ್ಲಭವೆಂದೂ, ಲಾರ್ಡ್ ಸಿನ್ಹರವರೂ ಬಾಸುರವರೂ ಕೂಡ ಮಾಂಟೆಗ್ಯುರವರಿಗೆ ಕಡಿಮೆಯಾಗಿ ಕೆಲಸಮಾಡುತ್ತಲಿಲ್ಲವೆಂದೂ; ಸಂಯೋಗಸಂಘದವರು ಇನ್ನು ಮುಂದೆ ಸಂಸ್ಕರಣದಲ್ಲಿ ಏನಾದರೂ ಸುಧಾರಣೆ ಮಾಡುವರಾದರೆ ಅದು ಭರತಖಂಡಕ್ಕೆ ಅನುಕೂಲಕರವಾಗಿದ್ದೀತೇ ಹೊರತು ಪ್ರತಿಕೂಲವಾಗಿರುವುದಿಲ್ಲವೆಂದೂ ಹೇಳಿರುತ್ತಾರೆ.

ರಷ್ಯಾದೇಶದಲ್ಲಿ ಬೋಲ್ಷೆವಿಜಂ ಹಾವಳಿಯನ್ನು ಮೂಲೋತ್ಪಾಟನೆ ಮಾಡಬೇಕಾದರೆ ಅದಕ್ಕೆ ಎಲ್ಲಕಡೆಯಿಂದಲೂ ಸಮುದ್ರಮಾರ್ಗ ನಿರೋಧವನ್ನು ಮಾಡುವುದೇ ಉಪಾಯವೆಂದು ಮಿತ್ರಮಂಡಲಿಯವರು ಯೋಚಿಸಿ, ಅದಕ್ಕಾಗಿ ತಟಸ್ಥದೇಶೀಯರ ಮತ್ತು ಜರ್ಮನರ ಸಹಾಯವನ್ನು ಕೋರಿದ್ದರು. ಜ

ರ್ಕ್ ರಾಜಕೀಯ ಸಭೆಯಲ್ಲಿ ಈ ವಿಷಯವಾಗಿ ವಿದೇಶಾಂಗ ಮಂತ್ರಿಯವರು ಉಪನ್ಯಸಿಸುವಾಗ್ಗೆ-ಜರ್ಮನೀದೇಶವು ಇದುವರೆಗೇ ಕ್ಷುದ್ಬಾಧೆಯನ್ನು ಅನುಭವಿಸಿ ಕೃಶವಾಗಿ ಹೋಗಿರುವುದರಿಂದ ಅಂಥ ಬಾಧೆಯನ್ನು ರಷ್ಯಾದೇಶಕ್ಕೆ ಉಂಟುಮಾಡಿಸುವುದಕ್ಕೆ ಅನುಮತಿಸಲಾರದೆಂತಲೂ, ರಷ್ಯಾವಿಗೆ ಆಹಾರಪದಾರ್ಥಗಳು ದೊರೆಯದೆಹೋದರೆ ಅಲ್ಲಿಯ ಪ್ರಜೆಗಳು ಬಾಲ್ಷೇವಿಕ್ಕರನ್ನು ಪ್ರತಿಭಟಿಸುವ ಶಕ್ತಿಯುಳ್ಳವರಾಗುವುದಿಲ್ಲವೆಂತಲೂ, ಆದುಕಾರಣ ಮಿತ್ರಮಂಡಲಿಯವರ ಕೋರಿಕೆಯನ್ನು ಜರ್ಮನರು ಅಂಗೀಕರಿಸಲಾರರೆಂತಲೂ ಹೇಳಿದರು. ಆದರೆ ಸಭೆಯಲ್ಲಿದ್ದ ಸಾಂಘಿಕವಾದಿಗಳೆಲ್ಲಾ ಮಿತ್ರಮಂಡಲಿಯವರ ಸೂಚನೆಗೆ ಅಂಗೀಕರಿಸಿದರು. ಮುಂದೆ ಮಿತ್ರಮಂಡಲಿಯವರು ಜರ್ಮನರ ವಿಷಯದಲ್ಲಿ ಹೇಗೆ ಯೋಚಿಸುವರೋ ನೋಡಬೇಕು.

ಮಹಾಕವಿ ರವೀಂದ್ರನಾಥ ಠಾಕೂರ್‌ರವರು ಎಸ್. ಆರ್. ಬೊಮ್ಮಂಜಿಯವರಿಗೆ ಒಂದು ಪತ್ರವನ್ನು ಬರೆದಿದ್ದರಂತೆ. ಅದನ್ನು ಈಗ ಬೊಮ್ಮಂಜಿಯವರು ಪ್ರಕಟಿಸಿದ್ದಾರೆ. ಅದರಲ್ಲಿ ಹೇಳಲ್ಪಟ್ಟಿರುವ ಅಭಿಪ್ರಾಯವು ಭಾರತೀಯರಿಗೆ ಬೋಧಪ್ರದವಾಗಿದೆ. ಏನೆಂದರೆ-"ಇಂಗ್ಲೀಷ್‌ದೇಶದ ಈಗಣ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಭರತಖಂಡದ ಸಮಸ್ಯೆಯನ್ನು ಕುರಿತು ಅವರು ವಿಶೇಷ ಶ್ರದ್ಧೆಯನ್ನು ವಹಿಸುವರೆಂದು ತೋರುವುದಿಲ್ಲ. ನಾವು ಪ್ರಪಂಚ ದೃಷ್ಟಿಯನ್ನೆಲ್ಲಾ ನಮ್ಮ ಕಡೆಗೆ ಆಕರ್ಷಿಸಿಕೊಳ್ಳಬೇಕಾಗಿದ್ದರೆ ಕೇವಲ ರಾಜಕೀಯ ವಿಷಯದಲ್ಲೇ ನಿಮಗ್ನವಾಗಿರುವ ನಮ್ಮ ದೃಷ್ಟಿಯನ್ನೆಲ್ಲಾ ದೇಶದ ಸಾಂಘಿಕ ನೈತಿಕ ಆರ್ಥಿಕಾಭಿವೃದ್ಧಿಗೂ ವಿದ್ಯಾಭಿವೃದ್ಧಿಗೂ ಕಳಾಭಿವೃದ್ಧಿಗೂ ತಿರುಗಿಸಿ ಅದಕ್ಕಾಗಿ ಪ್ರಬಲಪ್ರಯತ್ನಮಾಡಿ ನಮ್ಮ ಸ್ವಸಾಮರ್ಥ್ಯವನ್ನು ಪ್ರಪಂಚಕ್ಕೆ ವ್ಯಕ್ತಪಡಿಸಬೇಕು. ಸ್ವರಾಜ್ಯವೆಂಬ ದಾನದ ಕುದುರೆಗೆ ಎಷ್ಟು ಹಲ್ಲುಗಳಿವೆಯೋ ಎಂದು ನಾವು ಲೆಕ್ಕಮಾಡುತ್ತ ಕುಳಿತುಕೊಳ್ಳುವುದರಲ್ಲಿ ಪ್ರಯೋಜನವಿಲ್ಲ. ಅದಕ್ಕಿಂತ ಶ್ರಮಪಟ್ಟು ಆತ್ಮಗೌರವವನ್ನು ಸಂಪಾದಿಸಿಕೊಳ್ಳುವುದು ಸಾವಿರಪಾಲುಮೇಲು" ಎಂಬುದಾಗಿ.

ನೋಟೀಸು.

ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಟಣದ ತಾಲ್ಲೂಕು ನುಗ್ಗೇಹಳ್ಳಿ ಹೋಬಳಿ ಹಾರೇಕೆರೆಯಲ್ಲಿರುವ ಬೊಮ್ಮೇಗೌಡನ ಮಗ ಶಿವನಂಜಯ್ಯನು ತಿಳಿಯಪಡಿಸುವುದೇನೆಂದರೆ — ನಮ್ಮ ತಂದೆ ಸುಮಾರು 80 ವರುಷ ವಯಸ್ಸುಳ್ಳ ಅರಳುಮರುಳಿನ ಬೊಮ್ಮೇಗೌಡನಿಗೂ ನನ್ನ ಚಿಕ್ಕಾ ಅಣ್ಣ ಸಿದ್ದಪ್ಪನಿಗೂ ಭಾಗಾಂಶವಿಷಯದಲ್ಲಿ ಬಹಳ ಜಿದ್ದುಂಟಾಗಿ ಶಿವನಂಜಯ್ಯನಾದ ನನಗೆ ಅನ್ಯಾಯ ಮಾಡಬೇಕೆಂಬ ಉದ್ದಿಶ್ಯವನ್ನಿಟ್ಟುಕೊಂಡು ಗೌರ್ನಮೆಂಟಿನಲ್ಲಿ 3000 ರೂ. ಗಳನ್ನು ಸಾಲಾಕೇಳುತ್ತಾರೆಂತ ಅಜುಬಾಜು ವರ್ತಮಾನ ಕೇಳುತ್ತೇನೆ. ನಮ್ಮಗಳ ಏಕಗ್ರಹಕೃತ್ಯದ ಸಾಲ 1200—1500 ರೂ. ಗಳು ಇರುತ್ತೆ. ಮತ್ತು ನಮ್ಮ ಆಸ್ತಿಯಲ್ಲಿ ವರುಷ 1ಕ್ಕೆ 500—600 ರೂ. ಗಳು ಉತ್ಪತ್ತಿ ಆಗುತ್ತೆ. ಆದ್ದರಿಂದ ಈ ಸ್ವತ್ತುಗಳನ್ನು ಯಾರಿಗೂ ಪರಭಾರೆಯಾಗಿ ಆಧಾರಕ್ರಯ ಭೋಗ್ಯ ವಗೈರೆ ಮಾಡಕೂಡದು. ಹಿಂದೆ ನಮ್ಮಗಳ ಏಕಗ್ರಹಕೃತ್ಯದ ಸಾಲವು ಮೇಲೆ ನಮೂದಾಗಿರುವದಷ್ಟೇ ಹೊರ್ತು ಜಾಸ್ತಿ ಸಾಲವೂ ಇರುವುದಿಲ್ಲ. ಮುಂದೆ ನನಗೆ ಅನ್ಯಾಯಮಾಡಬೇಕೆಂಬ ಉದ್ದಿಶ್ಯವನ್ನಿಟ್ಟುಕೊಂಡು ಪರಭಾರೆಯಾಗಿ ಆಧಾರ ಕ್ರಯ ಭೋಗ್ಯ ಇತ್ಯಾದಿಗಳನ್ನು ನನ್ನ ಸಹಿಯಿಲ್ಲದೆ ಮಾಡಿಕೊಂಡಲ್ಲಿ ಮುಂದೆ ತಕರಾರಿಗೆ ಕಾರಣವೇ ಹೊರ್ತು ಆಧಾರ ಕ್ರಯ ಭೋಗ್ಯ ವಗೈರೆಗಳು ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಈ ನೋಟೀಸು ಮೂಲಕ ಸರ್ವರಿಗೂ ತಿಳಿಯಪಡಿಸಿರುತ್ತೇನೆ.

ಶಿವನಂಜಯ್ಯನ ರುಜು.

29—10—1919.

ಪತ್ರವ್ಯವಹಾರ.

ನೈಜಾಂ ಇಲಾಖಾ ಗುಲ್ಬರ್ಗಾಜಿಲ್ಲೆಗೆ ಸೇರಿದ ಸಣ್ಣಾಹಳೇಡ ಈ ಗ್ರಾಮವು ಅತಿ ಚಿಕ್ಕದಿದ್ದು ಅದರಲ್ಲಿ ವೀರಶೈವರ ವಸತಿ ಅತ್ಯಂತ ಕಡಿಮೆ ಇರುತ್ತದೆ. ಆದರೂ ಇಲ್ಲಿಯ ಹಿರೇಮಠಾಧ್ಯಕ್ಷ ಚರಮೂರ್ತಿ ಗುರುಬಸವಸ್ವಾಮಿಗಳು ಭಕ್ತಿಮಾರ್ಗಾವಲಂಬಿಗಳಾಗಿರುವುದರಿಂದ ಭಕ್ತರಿಗೆ ಭಕ್ತಿಯ ತಾರತಮ್ಯವನ್ನು ತಿಳುಹಿಸುವುದಕ್ಕಾಗಿ ಕಳೆದ ಶ್ರಾವಣಮಾಸದಲ್ಲಿ ಭಕ್ತಾಗ್ರಗಣ್ಯ 'ಶ್ರೀ ಶರಣಬಸವೇಶ್ವರ' ಪುರಾಣವನ್ನು ಪ್ರಾರಂಭಿಸಿ ಈ ಮಹಾಕಾರ್ಯದ ಸಹಾಯಾರ್ಥವಾಗಿ ಶ್ರೀ ಇಟ್ಟಿಗಿಮಠದ ನಿರಂಜನಮೂರ್ತಿ ವೀರತ್ತಪ್ಪಸ್ವಾಮಿಗಳವರನ್ನು ಬರಮಾಡಿಕೊಂಡು ಒಂದೂವರೆ ತಿಂಗಳವರೆಗೂ ಭಕ್ತರಿಗೆ ಸುಶ್ರಾವ್ಯವಾಗಿ ಪುರಾಣಶ್ರವಣಮಾಡಿಸಿ ಕಡೆಗೆ ಮಂಗಲಗಣಾರಾಧನೆಯನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿದರು. ಆ ಕಾಲಕ್ಕೆ ಬಹುಜನ ಪಟ್ಟಚರಮೂರ್ತಿಗಳೂ, ಮಾಹೇಶ್ವರವೃಂದವೂ, ಭಕ್ತಸಮುದಾಯವೂ ನೆರೆದಿತ್ತು. ಅಂತಹ ೫-೬ ಸಹಸ್ರ ಜನರಿಗೆ ಮೃಷ್ಟಾನ್ನ ಭೋಜನದಿಂದ ತೃಪ್ತಿಪಡಿಸಿ ಮಾಹೇಶ್ವರರಿಗೆ ಯೋಗ್ಯದಕ್ಷಿಣೆಯಿಂದ ಸಂತೋಷಗೊಳಿಸಿದರು. ಅದೇ ದಿವಸ ಸಾಯಂಕಾಲದಲ್ಲಿ ಮಹಾಗಾಂವ್ ತಳಕಲ್ ಗುರುಲಿಂಗಸಿದ್ಧಕವಿಯ ಅಧ್ಯಕ್ಷತೆಯಿಂದ ಸಭೆ ಕೂಡಿಸಿ ಸುಲೇಗಾಂವ್, ಮಹಾಗಾಂವ್, ಸಿಂಧನಕೆರೆಶಾಸ್ತ್ರಿಗಳ ಹಾಗೂ ವಿದ್ಯಾರ್ಥಿಗಳ ಉಪನ್ಯಾಸಗಳಾಗುವಂತೆ ವ್ಯವಸ್ಥೆ ಮಾಡಿಸಿದರು. ಆ ಸಭೆಯಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ ಸಂಬಂಧ ವ್ಯಾಖ್ಯಾನಗಳು ಜರಗುವಂತಾಗಿ, ಅದರಲ್ಲಿ ಮಹಾಗಾಂವ್ ಪಾಠಶಾಲೆಯಲ್ಲಿ ಅಭ್ಯಾಸಿಸುತ್ತಿರುವ ಪೊಲೀಸ್‌ಗೌಡರ ಪುತ್ರಿಯಾದ (ಮೇನಕಾಬಾಯಿ) ಎಂಬ ಎಂಟು ವರ್ಷದ ಬಾಲಿಕೆಯು ಧರ್ಮಸಂಬಂಧ ಉತ್ತಮಭಾಷಣ ಮಾಡಿದ್ದಕ್ಕಾಗಿ ಇಟ್ಟಿಗಿ ಶ್ರೀಗಳವರು ೧ ಬಂಗಾರಪದಕವನ್ನೂ, 'ಕೋಳೂರು ಕೊಡಗೂಸು' ಎಂಬ ಉಪನಾಮವನ್ನೂ ಆಶೀರ್ವಾದರೂಪವಾಗಿ ದಯಪಾಲಿಸಿದರು. ಅದೇ ಸಮಯದಲ್ಲಿ ಹಳೇಡದ ಸ್ವಾಮಿಗಳವರಿಗೆ ಸ್ಟಾರ್‌ಪತ್ರಿಕೆಯನ್ನು ತರಿಸಲು ಸುಲೇಗಾಂವ್ ಪಾಠಶಾಲಾಧ್ಯಾಪಕ ವೇ|| ಬಸವಣ್ಣಪ್ಪಶಾಸ್ತ್ರಿಗಳು ಬೋಧಿಸಿದ್ದರಿಂದ ಅದಕ್ಕೆ ಒಪ್ಪಿಕೊಂಡು ಪತ್ರಿಕೆಯ ವರ್ಗಣಿಯನ್ನು ಅವರ ಕೈಯಲ್ಲಿ ಕೊಟ್ಟುಬಿಟ್ಟರು. ಆಮೇಲೆ ಅಧ್ಯಕ್ಷರ ಭಾಷಣವಾಗಿ ಮಂಗಲರವದೊಡನೆ ಸಭಾಕಾರ್ಯ ಪೂರ್ತಿಮಾಡುವುದಾಯಿತು. ಇಂತಹ ಕಠಿಣಕಾಲದಲ್ಲಿ ಗುರುಬಸವಸ್ವಾಮಿಗಳು ಪುರಾಣವನ್ನಾರಂಭಿಸಿದಂದಿನಿಂದ ಒಂದೂವರೆತಿಂಗಳವರೆಗೂ ಮಾಹೇಶ್ವರತೃಪ್ತಿಪಡಿಸುತ್ತಾ ಕಡೆಗೆ ೫-೬ ಸಹಸ್ರಜನರಿಗೆ ಅನ್ನಸಂತರ್ಪಣೆ ಮಾಡಿಸಿದ್ದು ಸ್ತೋತ್ರಾರ್ಹವಾಗಿದೆ. ಅದರಲ್ಲಿ ವಿದ್ವಾಂಸರನ್ನು ಬರಮಾಡಿಕೊಂಡು ಸಭಾ ಕೂಡಿಸಿ ಉಪನ್ಯಾಸಗಳಾಗುವಂತೆ ಮಾಡಿದ್ದು ಅತ್ಯಂತ ಸ್ತೋತ್ರಾರ್ಹವಾಗಿದೆ. ಯಾಕಂದರೆ ನಮ್ಮ ಪ್ರಾಂತದಲ್ಲಿ ಸಭೆಯೆಂದರೇನು ? ಎಂದು ಕೇಳುವವರು ಎಷ್ಟೋಜನರಿರುತ್ತಾರೆ. ಅಂತಹ ಜನರಿಗೆ ಇಂತಹ ಆರಾಧನೆಗಳಲ್ಲಿ ಚಿಕ್ಕಚಿಕ್ಕ ಸಭೆಗಳಾಗಿ ಸಭೆ ಎಂಬ ಅರ್ಥ ತಿಳಿಯುವುದಾದರೆ ಮುಂಬಯಿ ಮದ್ರಾಸ್ ಮೈಸೂರು ಇಲಾಖೆಗಳಲ್ಲಿ ಮಹಾಸಭೆಗಳಾದಂತೆ ನಮ್ಮ ದೇಶದಲ್ಲೂ ಮಹಾ ಸಭೆಗಳಾಗಲು ಹಾದಿಯಾಗುವುದು. ಇಂತಹ ಸತ್ಕಾರ್ಯಗಳನ್ನು ಮಾಡುತ್ತಿರುವ ಗುರುಬಸವಸ್ವಾಮಿಗಳವರಿಗೆ ಜಗದೀಶ್ವರನು ಸೌಖ್ಯದಲ್ಲಿಡಲಿ ಎಂದು ಪರಮೇಶ್ವರನನ್ನು ಪ್ರಾರ್ಥಿಸುವ,

ಓರ್ವ ಸತ್ಕಾರ್ಯಾಭಿಮಾನಿ.

ವಿಚಿತ್ರಲೇಖನ.

ಸ್ವಾಮಿ.

ಅಕ್ಟೋಬರ್ ತಿಂಗಳು ೨೪ ನೆ ತಾರೀಖಿನ ಸಂಪದಭ್ಯುದಯ ಪತ್ರದಲ್ಲಿ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಮ|| ವೆಂಕಟಕೃಷ್ಣಯ್ಯನವರು ಲೆಜಿಸ್ಲೇಟೀವ್ ಕೌನ್ಸಿಲಿನಿಂದ ತೆಗೆಯಲ್ಪಟ್ಟರೆಂಬುದಾಗಿಯೂ ಮಹಾರಾಣೀ ಕಾಲೇಜು ಕಮಿಟಿ, ಎಕನಾಮಿಕ್ ಕಾನ್ಫರೆನ್ಸು, ಡಿಸ್ಟ್ರಿಕ್ಟುಬೋರ್ಡು, ಮ್ಯು|| ಸ್ಕೂಲುಕಮಿಟಿ, ಟವನ್‌ಹಾಲ್ ಕಮಿಟಿ, ಮಾರ್ಕೆಟ್‌ಕಮಿಟಿ, ಇವುಗಳ ಮೆಂಬರುತನದಿಂದ ತೆಗೆದುಹಾಕಲ್ಪಟ್ಟಿರುವರೆಂಬುದಾಗಿಯೂ, ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್‌ಮಾಸ್ಟರ್‌ಗಿರಿಯಿಂದ ತಪ್ಪಿಸಲ್ಪಟ್ಟರೆಂಬುದಾಗಿಯೂ, ಎಸ್. ಎಸ್. ಎಲ್. ಸಿ. ಬೋರ್ಡಿನಿಂದಲೂ, ಪ್ರಜಾಪ್ರತಿನಿಧಿಸಭೆಯಿಂದಲೂ, ಮ್ಯುನ್ಸಿಪಲ್‌ಕೌನ್ಸಿಲಿನಿಂದಲೂ ಇವರು ತೆಗೆಯಲ್ಪಡುವುದರಲ್ಲಿದ್ದಾರೆಂಬುದಾಗಿಯೂ, ಒಬ್ಬಮಗನು ಸತ್ತು ಇನ್ನೊಬ್ಬನು ಕೆಲಸದಿಂದ ನಿವೃತ್ತಿಮಾಡಲ್ಪಟ್ಟಾಗ್ಯೂ ಇವರಿಗೆ ಬುದ್ಧಿ ಬರಲಿಲ್ಲವೆಂಬದಾಗಿಯೂ ಇವರು ಹಿಡಿದ ಕೆಲಸವೆಲ್ಲಾ ನಾಶವಾಗುವಂತೆ ಏರ್ಪಾಡು ಮಾಡಲ್ಪಡುವುದೆಂಬುದಾಗಿಯೂ, ಇವರು ಮರಿಮಲ್ಲಪ್ಪನವರ ಸ್ಕೂಲಿನಿಂದ ತೆಗೆದ.ಹಾಕಲ್ಪಟ್ಟರೂ ಶಾರದಾವಿಲಾಸ ಪಾಠಶಾಲೆಯನ್ನು ಹೈಸ್ಕೂಲ್‌ಮಾಡಿ ಅದರ ಸೂಪರಿಂಟೆಂಡೆಂಟರಾದುದರಿಂದ ಇನ್|| ಜನರಲ್‌ರವರು ಆ ಸ್ಕೂಲನ್ನು ರಿಕಗ್ನೈಜು ಮಾಡುವುದಿಲ್ಲವೆಂದು ಹುಕುಂಮಾಡಿರುವರೆಂಬುದಾಗಿಯೂ ಮೊದಲಾಗಿ ಯಾರೋ ವಿಜೃಂಭಿಸುತ್ತಿರುವಂತೆಯೂ, ಮ|| ವೆಂಕಟಕೃಷ್ಣಯ್ಯನವರು ೫೦ ವರ್ಷಗಳಿಂದ ಈ ಸಂಸ್ಥಾನದಲ್ಲಿ ಎಷ್ಟೋ ಮೆಹನತ್ತುಮಾಡಿದ್ದರೂ, ಪಬ್ಲಿಕ್ಕಿಗಾಗಿ ತಮ್ಮ ಮನೆಯನ್ನೂ ಕೂಡ ಮಾರಿಕೊಂಡರೂ ಅವರ ಮೆಹನತ್ತಿಗೆ ಉಂಟಾದ ಪ್ರತಿಫಲವು ನಾನಾವಿಧವಾದ ಸಂಕಟಗಳೇ ಆಗಿರುವುವೆಂತಲೂ, ಇಷ್ಟು ಮೆಹನತ್ತಿನಲ್ಲಿ ನೂರನೇ ಒಂದು ಭಾಗವನ್ನು ಬ್ರಿಟಿಷ್‌ರಾಜ್ಯದಲ್ಲಿ ಅವರು ಮಾಡಿದ್ದರೂ ನ್ಯಾಷನಲ್ ಕಾಂಗ್ರೆಸ್ ಅಧ್ಯಕ್ಷತೆಯೂ, ಎಕ್ಸಿಕ್ಯುಟೀವ್ ಕೌನ್ಸಿಲರ್‌ಗಿರಿಯೂ ದೊರೆಯುವ ಸಂಭವವಿತ್ತೆಂತಲೂ, ತನ್ನ ಊರು ಎಂದು ತಿಳಿದು ಅವರು ಮೆಹನತ್ತುಮಾಡಿ ಇಲ್ಲಿ ಇದ್ದುದೂ ಅವರ ತಪ್ಪೆಂತಲೂ, ಇವರ ಮೇಲೆ ವಿಜೃಂಭಿಸತಕ್ಕವರು ಇವರನ್ನು ಗಡೀಪಾರುಮಾಡಿಸಿದರೆ ಕ್ಷೇಮವಾಗುವುದೆಂತಲೂ, ಮಾಡಲ್ಪಟ್ಟ ಉಪಕಾರವು ಅಪಕಾರದಂತೆ ತಿಳಿದುಕೊಳ್ಳಲ್ಪಡುವ ದೇಶದಲ್ಲಿ ಒಂದು ನಿಮಿಷವೂ ಇರಬಾರದೆಂತಲೂ ಬರೆಯಲ್ಪಟ್ಟಿದೆ.

ಮ|| ವೆಂಕಟಕೃಷ್ಣಯ್ಯನವರ ಪತ್ರಿಕೆಯಲ್ಲೇ ಅವರನ್ನು ಕುರಿತು ಈ ವಿಚಿತ್ರಲೇಖನವನ್ನು ಬರೆಯುವದಕ್ಕೆ ಏನು ಕಾರಣವಿತ್ತೋ ನಾನರಿಯೆ. ಅವರಿಗೆ ಉಂಟಾಗಿರುವ ಪರಿಣಾಮವನ್ನು ಹೀಗೆ ಎತ್ತಿ ಆಡುವುದರಿಂದ ನನ್ನಂಥವರನೇಕರಿಗೆ ವ್ಯಸನವಾಗುತ್ತದೆ. ವಿಲಾಪಿಸಿದರೆ ನಾಮಿನೇಷನ್ನಿನ ಮೂಲಕ ಲೆಜಿಸ್ಲೇಟಿವ್ ಕೌನ್ಸಿಲ್‌ಗಿರಿ ಮೊದಲಾದುವುಗಳು ದೊರೆಯುವುವೆಂಬ ನಿರೀಕ್ಷಣೆಯಿಂದ ಮ|| ವೆಂಕಟಕೃಷ್ಣಯ್ಯನವರ ಹಿತಚಿಂತಕರು ಯೋಚಿಸಿಕೊಂಡು ಇಂಥ ಲೇಖನವನ್ನು ಬರೆದಿದ್ದರೂ ಅದನ್ನು ನಂಬಿ ಅವರು ತಮ್ಮ ಪತ್ರದಲ್ಲಿ ಇದಕ್ಕೆ ಸ್ಥಳಕೊಟ್ಟಿದ್ದರೂ ಇದರಿಂದ ಅವರ ಇಷ್ಟಾರ್ಥಲಾಭವಾಗುವಂತಿದ್ದರೆ ನನಗೆ ಸಂತೋಷವೇ. ಆದರೆ ಅದೇ ವೆಂಕಟಕೃಷ್ಣಯ್ಯನವರೇ ನಮ್ಮ ಶ್ರೀಮನ್ಮಹಾರಾಜರವರ ಸದ್ಧರ್ಮಪ್ರಭಾವವನ್ನೂ ಅವರ ರಾಜ್ಯವು ರಾಮರಾಜ್ಯವಾಗಿರುವುದನ್ನೂ ಹಲವು ವೇಳೆ ಕೊಂಡಾಡುತ್ತಿರುವಲ್ಲಿ, ಅದೇ ರಾಜ್ಯವನ್ನು ಈಗ ಉಪಕಾರವನ್ನು ಅಪಕಾರವನ್ನಾಗಿ ತಿಳಿದುಕೊಳ್ಳತಕ್ಕ ದೇಶವೆಂದು ನಿಂದಿಸಿರುವುದು ಅನ್ಯಾಯವಲ್ಲವೆ ? ಕರ್ಮಾನುಸಾರವಾದ ಫಲವು ಪ್ರತಿಯೊಬ್ಬನಿಗೂ ಸಿದ್ಧವಾಗಿರುವುದು. ಅದೇ ಸಂಪದಭ್ಯುದಯ ಕರ್ತರೇ ತಮ್ಮ ೨೯ ನೆ ತಾರೀಖಿನ ಸಂಚಿಕೆಯ ೨ ನೇ ಪೇಜಿನಲ್ಲಿ "ಅನೇಕ ಸಂದರ್ಭಗಳಲ್ಲಿ ಸಕಲ ಚರಾಚರವಸ್ತುಗಳೂ ಕೂಡ ಅವುಗಳ ಕರ್ಮಫಲವನ್ನು ಈ ಜನ್ಮದಲ್ಲಿಯೇ ಅನುಭವಿಸಬೇಕಾಗುವುದು. ಇದನ್ನು ನೋಡುತ್ತಲೇ ಇದ್ದೇವೆ. ಕರ್ಮಕ್ಕೆ ಅನುರೂಪವಾದ ಫಲವು ಎಂದಿಗೂ ತಪ್ಪುವುದಿಲ್ಲ. ಜಗದೀಶ್ವರನು ಕೂಡ ಕರ್ಮಕ್ಕೆ ಅಧೀನನು" ಎಂದು ಬರೆದುಕೊಂಡಿರುವರು. "ಮಾಡಿದ್ದುಣ್ಣೋ ಮಹಾರಾಯ" ಎಂಬದಾಗಿಯೂ, "ಮಾಡಿದ್ದಕ್ಕೆ ಮನವೇಸಾಕ್ಷಿ ತೋಡಿದ್ದಕ್ಕೆ ಜಲವೇಸಾಕ್ಷಿ" ಎಂಬದಾಗಿಯೂ ಗಾದೆಗಳು ಹುಟ್ಟಿರುವುವು. ಇವುಗಳ ತಾತ್ಪರ್ಯವೇನೆಂಬುದನ್ನು ಸದರಿ ಪತ್ರಕರ್ತರಿಂದಲೇ ಕೇಳಿ ತಿಳಿದುಕೊಂಡಿದ್ದರೆ ಈ ಕರೆಸ್ಪಾಡೆಂಟರು ಹೀಗೆ ಬರೆಯುತ್ತಿರಲಿಲ್ಲ. ಮತ್ತೂ ಉಂಟಾದ ಪರಿಣಾಮಕ್ಕೆ ಕಾರಣವು ದೇಶದಲ್ಲಿತ್ತೇ ಕರ್ತೃಗಳ ಕರ್ಮಲೋಪದಲ್ಲಿತ್ತೇ ಎಂಬುವದೂ ಗೊತ್ತಾಗುತ್ತಿತ್ತು. ಪರಿವಾರದ ಜುಲುಮಿಗೆ ಮನಸೋತ ಮ|| ವೆಂಕಟಕೃಷ್ಣಯ್ಯನವರು ತಮ್ಮ ಪೂರ್ವದ ನಿಷ್ಪಕ್ಷಪಾತ ಸಮವರ್ತನಕ್ಕೆ ಬಂದು ನಿಂತರೆ ಈಗಲೂ ಗೀತವೈಭವವು ಮರಳಿ ಪ್ರಾಪ್ತವಾಗುವುದು. ಅವರಿಗೆ ದೂರವಾಗಿಲ್ಲವೆಂದು ನನಗೆ ತೋರುತ್ತದೆ.

ನಿಜವಾದಿ

ಸರ್ದಾರ್ ಕಾಂತರಾಜ ಅರಸಿನವರ ಎಂಟರ್‌ಟೈನ್‌ಮೆಂಟು ಮತ್ತು ಸಂಪದಭ್ಯುದಯ.

ಅಯ್ಯಾ !

ಮೈಸೂರುಪಟ್ಟಣದಲ್ಲಿ ಸರ್ದಾರ್ ಕಾಂತರಾಜೇ ಅರಸಿನವರಿಗೆ ಪುರನಿವಾಸಿಗಳಿಂದ ಮಾಡಲ್ಪಟ್ಟ ಎಂಟರ್‌ಟೈನ್‌ಮೆಂಟು ಬಹಳ ಸಮರ್ಪಕವಾಗಿಯೂ ಅಭೂತಪೂರ್ವವಾಗಿಯೂ ಇದ್ದಿತೆಂದು ಎಲ್ಲರೂ ಆನಂದಪಡ.ತ್ತಿರುವಾಗ್ಗೆ, ಆ ವಿಜೃಂಭಣೆಯನ್ನು ನೋಡಿ ಸೈರಿಸಲಾರದ ಕಾರಣದಿಂದಲೋ ಅಥವಾ ತನ್ನ ಪಾರ್ಟಿಗೆ ಪ್ರಮುಖತ್ವವು ಕೊಡಲ್ಪಡಲಿಲ್ಲವೆಂಬ ದುಬ್ಧಿಯಿಂದಲೋ ಏನೋ ಆ ಎಂಟರ್‌ಟೈನ್‌ಮೆಂಟಿನ ಸಂಬಂಧವಾಗಿ ಸಂಪದಭ್ಯುದಯದಲ್ಲಿ ಅವಿವೇಕದ ಬರವಣಿಗೆಗಳು ಬಂದಿವೆ. "ಕಳೆದ ಲೆಜಿಸ್ಲೇಟೀವ್ ಕೌನ್ಸಿಲ್ ಚುನಾವಣೆಯಲ್ಲಿ ಹೇಗೋ ಹಾಗೆ ಈ ಎಂಟರ್‌ಟೈನ್‌ಮೆಂಟಿನಲ್ಲೂ ಬ್ರಾಹ್ಮಣರಿಗೆ ಬಹಿಷ್ಕಾರವು ಹಾಕಲ್ಪಟ್ಟಿತು. ಬ್ರಹ್ಮದ್ವೇಷವು ತೋರಿಸಲ್ಪಟ್ಟಿತು. ಅನೇಕ ಬ್ರಾಹ್ಮಣರಿಗೆ ಸಭೆಯಲ್ಲಿ ಅಪಮಾನಮಾಡಲ್ಪಟ್ಟಿತು. ಗೌರವಸ್ಥರಾದ ಕೆಲವುಜನ ಬ್ರಾಹ್ಮಣರಿಗೆ ಎಲ್ಲೋ ಒಂದು ಮೂಲೆಯಲ್ಲಿ ಸ್ಥಳವು ತೋರಿಸಲ್ಪಟ್ಟಿತು. ಈ ರೀತಿಯಲ್ಲಿ ಇವರು ಮಾಡುತ್ತಾರೆಂದು ತಿಳಿದಿದ್ದರೆ ಅನೇಕ ದೊಡ್ಡಮನುಷ್ಯರು ಈ ಸಭೆಗೆ ಬರುತ್ತಿರಲಿಲ್ಲ. ಮ|| ಮಹಮ್ಮದ್‌ಸೇಟರೇ ಮೊದಲಾದವರು ಈ ರಾಜಧಾನಿಗೆ ಮಾತ್ರವೇ ಅಲ್ಲದೆ ಈ ಸಂಸ್ಥಾನಕ್ಕೆಲ್ಲಾ ಕಿರೀಟವಿಲ್ಲದ ಪ್ರಭುಗಳೆಂದು ವಿಜೃಂಭಿಸುತ್ತಾರೆ. ಇವರು ಯಾವ ಸಭೆಯಲ್ಲಿ ಮುಖಂಡರಾಗುವರೋ ಅಲ್ಲಿಗೆ ಮಾನದಮೇಲೆ ದೃಷ್ಟಿಯುಳ್ಳ ಬ್ರಾಹ್ಮಣರು ಹೋಗುವುದು ಯೋಗ್ಯವಲ್ಲ." ಎಂಬಿತ್ಯಾದಿ ಬರೆದುಕೊಂಡಿದ್ದಾರೆ. ಈ ಎಂಟರ್‌ಟೈನ್‌ಮೆಂಟಿನ ಆದ್ಯಂತ ವೃತ್ತಾಂತವನ್ನೆಲ್ಲಾ ನಾನು ಬಲ್ಲೆ. ಇದಕ್ಕೆ ಬ್ರಾಹ್ಮಣರೇ ಮೊದಲಾದ ಎಲ್ಲಾ ಪಂಗಡಗಳವರೂ ಚಂದಾಹಣ ಕೊಟ್ಟು ಮೊದಲಿಂದಲೂ ಕೆಲಸಮಾಡಿದ್ದಾರೆ. ಆ ಡ್ರೆಸ್‌ಕಾಪಿಗೆ ಎಲ್ಲಾ ಕೋಮುಗಳವರೂ ರುಜುಮಾಡಿದ್ದಾರೆ. ಸಭೆಯಲ್ಲಿ ಮೊಟ್ಟಮೊದಲು ಓದಿದ ಮಂಗಳಪದ್ಯಗಳು ಒಬ್ಬ ಬ್ರಾಹ್ಮಣವಿದ್ವಾಂಸರಿಂದಲೇ ರಚಿಸಲ್ಪಟ್ಟದ್ದು ಒಬ್ಬಬ್ರಾಹ್ಮಣ ಸಂಗೀತಗಾರರಿಂದ ಹಾಡಲ್ಪಟ್ಟವು. ಬ್ರಾಹ್ಮಣ ನಾಟಕಕಂಪೆನಿಯವರಿಂದಲೇ ಒಂದು ಸೀನನ್ನು ಪ್ರದರ್ಶಿಲು ಏರ್ಪಾಡಾಗಿತ್ತು. ಹೀಗಿರುವಲ್ಲಿ ಬ್ರಾಹ್ಮಣರಿಗೆ ಬಹಿಷ್ಕಾರವು ಹಾಕಲ್ಪಟ್ಟಿತ್ತು ಎಂದು ಹೇಳುವುದು ಎಷ್ಟುಮಟ್ಟಿಗೆ ಸತ್ಯವಂತರ ಕೆಲಸವೋ ವಾಚಕರೇ ಯೋಚಿಸಬೇಕು. ಸುಳ್ಳುಸುದ್ದಿಗಳನ್ನು ಹಬ್ಬಿಸಿ ಪ್ರಜೆಗಳಲ್ಲಿ ವೈಮನಸ್ಯವನ್ನು ಹೆಚ್ಚಿಸಿ ದ್ವೇಷವನ್ನು ಬೆಳಸಬೇಕೆಂಬ ಇರಾದೆಯಿಂದ ಬರೆದ ಇಂಥ ಬರವಣಿಗೆಗಳಿಗೆ ಸ್ಥಳಕೊಡುವುದು ಪತ್ರಿಕೆಗಳಿಗೆ ಯೋಗ್ಯವೆ ? ಸಂಪದಭ್ಯುದಯಕ್ಕೆ ಈಚೀಚೆಗೆ ಇಂಥ ನಡೆನುಡಿಯೇ ಪ್ರಿಯವಾಗುತ್ತ ಬಂದಿರುವುದರಿಂದಲೇ ಅದರ ಕೂಗನ್ನು ಕೇಳಿ ನಿಜಸ್ಥಿತಿಯನ್ನರಿಯದ ಸಾಮಾನ್ಯ ಜನರು ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಪಾರ್ಟಿಯನ್ನು ಕಲ್ಪಿಸಿಕೊಂಡು ಪರಸ್ಪರ ದ್ವೇಷ ಸಾಧಿಸುವ ಅವಸ್ಥೆಯು ಪ್ರಾಪ್ತವಾಗಿರುತ್ತದೆ. ಸಂಸ್ಥಾನದಲ್ಲಿ ಇನ್ನೇನೇನನ್ನುಮಾಡಿ ನೋಡಿ ಸಂತೋಷಿಸಬೇಕೆನ್ನುವುದು ಸಂಪದಭ್ಯುದಯದ ಮನಸ್ಸಿನಲ್ಲಿದೆಯೋ ಗೊತ್ತಾಗಲಿಲ್ಲ. ಯಾರಿಗೆ ಸರ್ದಾರ್ ಕಾಂತರಾಜೇ ಅರಸರಲ್ಲಿ ನಿಜವಾದ ಶ್ರದ್ಧೆಯೂ ವಿಶ್ವಾಸವೂ ಹೆಚ್ಚಾಗಿತ್ತೋ ಅವರೆಲ್ಲಾ ತಮ್ಮ ಸ್ವಂತ ಕೆಲಸವನ್ನು ಕೂಡ ಬಿಟ್ಟು ಮುತುವರ್ಜಿಯಿಂದ ಇದನ್ನು ನೆರವೇರಿಸಿರುತ್ತಾರೆ. "ನೀನು ಯಾತವನ್ನು ತುಳಿ, ನಾನು ಭುಜಗಳನ್ನು ಕುಣಿಸುತ್ತೇನೆ" ಎಂಬ ಗಾದೆಯಂತೆ ನಡೆದುಕೊಳ್ಳುವವರಿಗೆ ಮಾತ್ರ ಇದರಲ್ಲಿ ಮುಂದಾಳುತನ ಸಿಕ್ಕದೇಹೋಗಿರಬಹುದು. ಅದು ದೋಷವಲ್ಲ. ಗುಣಪಾತವೇ ಸರಿ. ಮ|| ವೆಂಕಟಕೃಷ್ಣಯ್ಯನವರೂ ಅವರ ಪಾರ್ಟಿಯವರೂ ಸಹ ಮುಂದಿನ ಲೈನಿನ ಕುರ್ಚಿಗಳಮೇಲೆಯೇ ಕೂತಿದ್ದರಲ್ಲಾ ! ಇನ್ಯಾರನ್ನು ಮೂಲೆಗೆ ಕೂರಿಸಿದ್ದು ? ಅವರನೆಲ್ಲಾ ಸರ್ದಾರರ ಪೀಠದ ಪಕ್ಕದಲ್ಲೇ ಕುಳ್ಳಿರಿಸದೆ ಹೋದದ್ದೇ ತಪ್ಪೊ ? ಅಥವಾ ಕ್ಯಾಸ್ಕೇಟ್ ವಗೈರೆಯನ್ನು ಒಪ್ಪಿಸುವುದಕ್ಕೆ ಇವರುಗಳನ್ನೇ ನಿಲ್ಲಿಸಬೇಕಾಗಿತ್ತೋ ಏನೋ ತಿಳಿಯಲಿಲ್ಲ. "ಗುಣೈರುತ್ತುಂಗತಾಂ ಯಾತಿನೋಚ್ಚೈರಾಸನ ಸಂಸ್ಥಿತಃ | ಪ್ರಾಸಾದಶಿಖರಸ್ಥೋಽಪಿ ಕಾಕಃ ಕಿಂಗರುಡಾಯತೇ" ಅಂದರೆ ಯಾವನೂ ಕೂಡ ತನ್ನ ಗುಣಾತಿಶಯದಿಂದ ಗೌರವ ಪಡೆದುಕೊಳ್ಳುವನೇ ಹೊರ್ತು, ಎತ್ತರವಾದ ಪೀಠದಮೇಲೆ ಹೋಗಿ ಕೂತುಕೊಂಡಮಾತ್ರದಿಂದಲೇ ದೊಡ್ಡವನಾಗುವದಿಲ್ಲ. ಹೇಗಂದರೆ-ಕಾಗೆಯು ಗೋಪುರದಮೇಲಕ್ಕೇರಿ ಕೂತುಕೊಂಡರೂ ಅದು ಕಾಗೆಯೇ ಹೊರ್ತು ಗರುಡನಾಗುವುದಿಲ್ಲ. ಎಂಬದಾಗಿ ಆರ್ಯೋಕ್ತಿಯಿರುವುದರಿಂದ ನಿಜವಾದ ಯೋಗ್ಯತೆಯುಳ್ಳವರು ಎಲ್ಲಿದ್ದರೂ ಅವರಿಗೆ ಇರುವ ಗೌರವವು ಇದ್ದೇ ಇರುತ್ತದೆ. ನಿಜವಾದ ಗುಣಕ್ಕೆ ಮರ್ಯಾದೆ ಮಾಡದೆ ಇರತಕ್ಕವರೇ ಇಲ್ಲ. ಗುಣವಿಲ್ಲದವರು ಗುಣಿಗಳಂತೆ ತೋರಿಸಿಕೊಂಡು ಒಣಮರ್ಯಾದೆಗೆ ಹೊಡೆದಾಡುವರೇ ಹೊರತು ಗುಣಿಗಳು ಆ ಹಂಬಲಿಗೆ ಬೀಳುವುದೇ ಇಲ್ಲ. ಮರ್ಯಾದೆಗಳೆಲ್ಲಾ ಸಹಜಗುಣಿಗೆ ಅಪ್ರಾರ್ಥಿತವಾಗಿ ತಾನೇ ಬರುವವು.

ಮಿ|| ಮಹಮ್ಮದ್‌ಸೇಟರು ಕಿರೀಟವಿಲ್ಲದ ಪ್ರಭುಗಳಂತೆ ವಿಜೃಂಭಿಸುವರು ಎಂದು ಈ ಕರಸ್ಪಾಂಡೆಂಟರು ಹೇಳಿರುತ್ತಾರೆ. ಮಿ|| ಸೇಟರ ಪ್ರಾಬಲ್ಯವನ್ನು ನೋಡಿ ಇವರಿಗೆ ಎಷ್ಟು ಹೊಟ್ಟೆಕಿಚ್ಚು ಉಂಟಾಗಿದೆಯೆಂಬುದಕ್ಕೆ ಈ ಮಾತೇ ದೃಷ್ಟಾಂತವಾಗಿದೆ. ನ್ಯಾಯವಾಗಿ ನೋಡಿದರೆ ವರ್ತಕರು ಕಿರೀಟವಿಲ್ಲದ ಪ್ರಭುಗಳ ಸ್ಥಿತಿಯಲ್ಲಿರಬೇಕಾದದ್ದೇ ಧರ್ಮ. "ಶೆಟ್ಟಿ ಇದ್ದಕಡೆ ಪಟ್ಟಣ" ಎಂಬ ಗಾಥೆಯು ಈ ಮಾತನ್ನೇ ಸಾಧಿಸುವದು. ಪ್ರಪಂಚದಮೇಲೆ ನಾಗರಕತೆಯಲ್ಲೂ ಸಂಪತ್ತಿನಲ್ಲೂ ಮುಂದಾಗಿರುವ ದೇಶಗಳಲ್ಲೆಲ್ಲಾ ವರ್ತಕರೇ ಕಿರೀಟವಿಲ್ಲದ ಪ್ರಭುಗಳಾಗಿರುತ್ತಾರೆ. ಇಂಗ್ಲೀಷರು ಪ್ರಪಂಚದಲ್ಲಿ ಮಹಾಸಾಮ್ರಾಜ್ಯವನ್ನು ಸಾಧಿಸಿ ಅನುಭವಿಸುತ್ತಿರುವುದು ವರ್ತಕಗೌರವದಿಂದಲೇ. ಅವರ ಮುಖ್ಯ ತತ್ವಗಳಲ್ಲಿ ವಾಣಿಜ್ಯರಕ್ಷಣವೇ ಪ್ರಧಾನವಾಗಿರುತ್ತದೆ. ನಮ್ಮ ಇಂಡ್ಯಾದೇಶದಲ್ಲಿಯೂ ಪ್ರಸಿದ್ಧವಾದ ಬೊಂಬಾಯಿ, ಕಲ್ಕತ್ತಾ ಮೊದಲಾದ ಪಟ್ಟಣಗಳಲ್ಲಿ ವರ್ತಕರ ಮಾತುಗಾರಿಕೆಯೇ ಮುಂದಾಗಿರುತ್ತದೆ. ಆದರೆ ನಮ್ಮ ಮೈಸೂರುದೇಶದ ಸ್ಥಿತಿಯು ಅದಕ್ಕೆಲ್ಲಾ ತಲೆಕೆಳಕಾಗಿದೆ. ಇಲ್ಲಿಯ ವರ್ತಕರೆಂದರೆ ಕಾಲುಕಸವಾಗಿ ಕಾಣುತ್ತಾರೆ. ಮೂರುಕಾಸಿನ ಮುತ್ಸದ್ದಿಗೆ ಅಡಿಯಾಳಾಗಿರುವ ಅವಸ್ಥೆ ಅವರಿಗಿದೆ. ಭಿಕ್ಷೆಯ ಯಾಚಕನು ಕೂಡ ವರ್ತಕರನ್ನು ಬೆದರಿಸತಕ್ಕವನೇ. ಕಾಸುದುಡ್ಡಿನ ಮಾತು ಬಂದಾಗಮಾತ್ರ ವರ್ತಕರು ಬೇಕು. ಹೆಸರಿಗೆ ಖ್ಯಾತಿಗೆ, ಫಲಾನುಭವಕ್ಕೆಲ್ಲಾ ಇತರರು. ಪ್ರಪಂಚಾನುಭವವೂ ಸ್ವಮರ್ಯಾದೆಯ ಜ್ಞಾನವೂ ಆತ್ಮಾಭಿಮಾನವೂ ನಮ್ಮ ವರ್ತಕರಲ್ಲಿದ್ದರೆ ಅವರ ಅವಸ್ಥೆಯು ಮೈಸೂರುದೇಶದಲ್ಲಿ ಇಷ್ಟು ನಿಕೃಷ್ಟವಾಗಿರುತ್ತಿರಲಿಲ್ಲ. ಅವರ ಈ ಹಿಂದಾಳುತನದ ಲಾಭವನ್ನು ಉಪಯೋಗಿಸಿಕೊಂಡು ಇತರರು ತಮ್ಮ ಡೋಲುಗಳನ್ನು ಚೆನ್ನಾಗಿ ಬಾರಿಸಿಕೊಳ್ಳುತ್ತಿದ್ದಾರೆ. ಆದರೆ ದೇಶವೆಲ್ಲಾ ಈಗ ಕಣ್ದೆರೆದು ತಮ್ಮ ಜ್ಞಾನವನ್ನು ತಾವು ಮಾಡಿಕೊಳ್ಳುತ್ತಿರುವದರಿಂದ ನಮ್ಮ ವರ್ತಕರೂ ಸ್ವಲ್ಪ ಸ್ವಲ್ಪ ಕಣ್ಣುಬಿಡುತ್ತಿದ್ದಾರೆ. ಇಂಥವರಿಗ ಮಿ|| ಮಹಮ್ಮದ್‌ಸೇಟರಂಥ ಸ್ವಾಭಿಮಾನಿಗಳು ಬಾಯ್ಲರುಗಳಂತೆ ಪರಿಣಮಿಸಿರುತ್ತಾರೆ. ಇದನ್ನು ನೋಡಿ ಸೈರಿಸಲಾರದೆಯೂ, ತಮ್ಮ ಮಾಯಾನಿರ್ಮಿತಗಾಳಿಗೋಪುರದಂಥ ಪ್ರತಿಷ್ಠೆಗೆ ಚ್ಯುತಿಬರುವದೆಂಬ ಭೀತಿಯಿಂದಲೂ, ಅಲ್ಲ ಸಲ್ಲದ ದೋಷಾರೋಪಣೆಯನ್ನು ಇತರರ ಮೇಲೆ ಮಾಡುವದು, ಜಗತ್ತಿನ ಸೌಭಾಗ್ಯವನ್ನೆಲ್ಲಾ ಇತರರಿಗೆ ಬಿಟ್ಟುಬಿಟ್ಟು ಭಿಕ್ಷಾವೇಷಿಕೆಯನ್ನೂ ಧರ್ಮಬೋಧನೋದ್ಯೋಗವನ್ನೂ ತಾವು ವಹಿಸಿಕೊಂಡೆವೆಂದು ವೈರಾಗ್ಯವನ್ನು ಕೊಚ್ಚಿಕೊಳ್ಳುವ ಬ್ರಾಹ್ಮಣ ಪಂಗಡದವರಿಗೆ ಧರ್ಮವೆ ? ಈ ಎಂಟರ್‌ಟೈನ್‌ಮೆಂಟನ್ನು ವರ್ತಕಾದಿ ಜನರು ತಾವೇ ಪ್ರಮುಖರಾಗಿ ನಿಂತು ಒಂದು ವೇಳೆ ನೆರವೇರಿಸಿದ್ದರೂ ಅದರಲ್ಲಿ ತಪ್ಪೇನು? ದೇಶಕ್ಕೆಲ್ಲಾ ತಾವೇ ಪ್ರತಿನಿಧಿಗಳೆಂದು ಹೇಳಿಕೊಂಡು ಎಷ್ಟೋ ಕಾಲದಿಂದ ಅಗ್ರಮರ್ಯಾದೆಯನ್ನೆಲ್ಲಾ ಬ್ರಾಹ್ಮಣವರ್ಗದವರೇ ಅನುಭವಿಸಿಲ್ಲವೆ ? ಅದನ್ನು ಇತರರೆಲ್ಲಾ ಇದುವರೆಗೆ ಕರುಬಿದರೆ? ಈಗ ಎಲ್ಲೋ ಸ್ವಲ್ಪ ಮುಂದುವರಿಯುವುದಕ್ಕೆ ಇತರ ಜನರುಗಳು ಪ್ರಯತ್ನಪಟ್ಟಮಾತ್ರದಿಂದಲೇ ಇಷ್ಟು ಅಸೂಯಾಗ್ನಿಯನ್ನು ಕಾರುವದಕ್ಕೆ ಪ್ರಯತ್ನಿಸಿರುವವರನ್ನು ಬ್ರಾಹ್ಮಣರೆಂದು ಕರೆದು, ತಮ್ಮ ವರ್ಗದ ಮಧ್ಯದಲ್ಲಿಟ್ಟುಕೊಂಡು ಬಾಳುವದು ಲೋಕಕಲ್ಯಾಣೇಚ್ಛುಗಳಾದ ನಿಜಬ್ರಾಹ್ಮಣರಿಗೆ ಲಾಂಛನವಲ್ಲವೆ ? "ಬಾಯಿ ಒಳ್ಳೆಯದಾಗಿದ್ದರೆ ಊರು ಒಳ್ಳೆಯದು" ಎಂಬ ಬಾಲಪಾಠವನ್ನು ಸಂಪದಭ್ಯುದಯಪತ್ರಿಕೆಯೂ ಅದರ ಲೇಖಕರೂ ತಮ್ಮ ಅರಳುಮರಳುತನದಿಂದ ಮರೆತುಬಿಟ್ಟಿದ್ದರೆ ಈಗ ಮರಳಿ ಜ್ಞಾಪಿಸಿಕೊಂಡು ನಡೆದರೆ ಕ್ಷೇಮವುಂಟು.

ಪುರನಿವಾಸಿ.

ಮ|| ರಾ|| ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಕುತಂತ್ರಗಳು.

ಹಿಂದುಳಿದಿದ್ದವರು ಎಚ್ಚೆತ್ತು ಮುಂದಕ್ಕೆ ಬರುವುದಕ್ಕೆ ಶ್ರೀಮನ್ಮಹಾಪ್ರಭುಗಳೂ ಅವರ ಗೌರ್ನಮೆಂಟೂ ಪ್ರೋತ್ಸಾಹ ಕೊಡುತ್ತಿದ್ದಾರೆ. ಈ ಹಿಂದುಳಿದ ಪಂಗಡಗಳಲ್ಲಿ ಜ್ಞಾನೋದಯವಾಗುತ್ತಿದೆ. ಅನೇಕರು ಎಚ್ಚೆತ್ತುಕೊಂಡಿದ್ದಾರೆ. "ನಿಮ್ಮ ಉದ್ಧಾರವನ್ನು ನೀವು ಮಾಡಿಕೊಳ್ಳಬೇಕು. ನಿಮ್ಮ ಕೋಮುವಾರು ಪ್ರಾತಿನಿಧ್ಯವನ್ನು ಮಾಡಿಕೊಳ್ಳುವುದು ನಿಮ್ಮ ಕೈಯಲ್ಲೇ ಇದೆ" ಎಂದು ಮಹಾಪ್ರಭುಗಳು ಅಪ್ಪಣೆಕೊಡಿಸಿದ ಅಮೃತವಾಕ್ಯವು ಸಂಜೀವನಕರಣಿಯಂತೆ ಹಿಂದುಳಿದವರನ್ನೆಲ್ಲಾ ಬದುಕಿಸುತ್ತಿದೆ. ಹೀಗಾಗಿರುವದಕ್ಕೆ ದೃಷ್ಟಾಂತವು ಹೋದಸಲದ ಲೆಜಿಸ್ಲೇಟಿವ್ ಕೌನ್ಸಿಲ್, ಫೈನಾನ್ಸ್ ಕಮಿಟಿ, ಸೆಂಟರಲ್ ಬೋರ್ಡು-ಮೆಂಬರುಗಳ ಚುನಾವಣೆಯ ಫಲಿತಾಂಶವೇ ನಿದರ್ಶನವಾಗಿದೆ. ಇತರ ಜನರೆಲ್ಲಾ ಬೇಕೆಂದು ಹಠತೊಟ್ಟು ಐಕಮತ್ಯದಿಂದ ನಿಂತರೆ ಯಾವುದೂ ಅವರಿಗೆ ಅಸಾಧ್ಯವಾದದ್ದಲ್ಲ ಎನ್ನುವದು ಈ ಪ್ರಥಮಪ್ರಯತ್ನದಿಂದ ನಿರ್ಧರವಾಗಿದೆ. ಇದನ್ನು ತಿಳಿದು ಹಿಂದುಳಿದ ಜನಪಂಗಡಗಳೆಲ್ಲಾ ಕಾರ್ಯನಿರತರಾಗಿ ನಡೆದುಕೊಳ್ಳಬೇಕು. ಎಲಕ್ಷನ್ನಿನಲ್ಲಿ ಜಯಶೀಲರಾಗುವದೇ ಹೆಚ್ಚಲ್ಲ. ಅದರಿಂದ ತಮ್ಮಗಳ ಮೇಲೆ ಹೊತ್ತ ಭಾರವನ್ನು ಸರಿಯಾಗಿ ನಿರ್ವಾಹಮಾಡಿ ಸಾರ್ಥಕಪಡಿಸಿಕೊಳ್ಳುವದು ದೊಡ್ಡದು. ಯಾತಕ್ಕೆಂದರೆ ಯಾವನೋ ರಾಜನು ಅಗಸನಿಗೆ ಮಂತ್ರಿತ್ವವನ್ನು ಕೊಟ್ಟಿದ್ದ ಕಥೆಯನ್ನು ಅಸೂಯಾವಿಶಿಷ್ಟರು ಪದೇಪದೇ ಆಡಿ ಮುಖಮುರಿಯುತ್ತಿದ್ದಾರೆ. ಎಚ್ಚರ! ಎಚ್ಚರ!! ಅದು ಹಾಗಿರಲಿ.

ದಿನದಿನಕ್ಕೆ ಎಲ್ಲಾ ಭಾಗಗಳಲ್ಲೂ ಹಿಂದುಳಿದವರು ಮುಂದಕ್ಕೆ ಬರುತ್ತಿರುವುದನ್ನು ಕಂಡು ಬ್ರಾಹ್ಮಣನಾಮಧಾರಿಗಳಾದ ಕೆಲವು ಬ್ರುವಗಳಿಗೆ ಹೊಟ್ಟೆ ಹಿಡಿಸದಷ್ಟು ದುಃಖವು ಪ್ರಾಪ್ತವಾಗಿದೆ. ಈ ಚಿಂತಾಗ್ನಿಯು ಪರೋತ್ಕರ್ಷಾಸಹನೆಯ ಮೂಲವಾಗಿರುವದರಿಂದ ಅವರುಗಳ ಆತ್ಮವಿನಾಶಕ್ಕೇ ಅದು ಹೇತುವಾಗಿರುತ್ತದೆ. ಈ ಚಿಂತಾಜ್ವರದಿಂದ ಅವರುಗಳು ಮಾಡಬಾರದ ಯಾವ ಕೆಲಸವನ್ನಾದರೂ ಮಾಡುವದಕ್ಕೂ ಆಡಬಾರದ ಯಾವ ಮಾತುಗಳನ್ನಾದರೂ ಆಡುವದಕ್ಕೂ ಸಿದ್ಧರಾಗಿರುವಂತೆ ಕಾಣುತ್ತದೆ. ಸಂಪದಭ್ಯುದಯದ ಗರಡಿಯಲ್ಲಿ ಈ ವಸ್ತಾದಿಗಳೆಲ್ಲಾ ಪಟಾವರಸೆ ಕಲಿಯುತ್ತಿದ್ದಾರೆ. ಇನ್ಯಾವ ಸಾಹಸವೂ ಇವರ ಕೈಯಲ್ಲಿ ಸಾಗದಿರುವದರಿಂದ ಹಿಂದುಳಿದವರನ್ನೆಲ್ಲಾ ತಮ್ಮ ಪ್ರತಿಕಕ್ಷಿಗಳನ್ನಾಗಿ ಕಲ್ಪಿಸಿಕೊಂಡು ಅಲ್ಲಸಲ್ಲದ ಕಾರಣಗಳನ್ನು ಕಲ್ಪಿಸಿ ಅವರುಗಳನ್ನು ನಿಂದಿಸುವದಕ್ಕೂ ಅವರುಗಳಲ್ಲಿ ಪರಸ್ಪರ ಇರುವ ಐಕಮತ್ಯವನ್ನು ತಪ್ಪಿಸುವದಕ್ಕೂ ಅವರ ಮುಂದಾಳುಗಳನ್ನು ಮುರಿಯುವದಕ್ಕೂ ನಾನಾ ತಂತ್ರಗಳನ್ನು ಮಾಡುತ್ತಾರೆ. ನಿಜವಾದ ಬ್ರಾಹ್ಮಣ್ಯವು ಇವರಲ್ಲಿದ್ದರೆ ಶಾಪಾಗ್ನಿಯಿಂದ ದೇಶವನ್ನೇ ಸುಟ್ಟುಬಿಡುತ್ತಿದ್ದರೋ ಏನೊ ! ಅದೂ ಅಸಂಭವನೆಂದು ಕಾಣುತ್ತೆ. ಯಾಕಂದರೆ ನಿಜಬ್ರಾಹ್ಮಣ್ಯಕ್ಕೆ ಪರೋತ್ಕರ್ಷಾಸಹನೆಯ ಗಂಧವೂ ಕೂಡ ಸೋಕಿರುವುದಿಲ್ಲ. ಸತ್ಯ ಕ್ಷಮಾ ಶೌಚ ಪರಹಿತಾಚರಣಗಳೇ ಅದರ ಧರ್ಮ. ಹೀಗಿರುವಾಗ ಈ ಬ್ರಾಹ್ಮಣಬ್ರುವರಿಗೆ ಉಳಿದಿರುವ ಶಕ್ತಿಯೇನು ? ಕುತಂತ್ರವೇ. ಅದನ್ನು ಅವರು ಈಗ ಪ್ರಯೋಗಿಸುತ್ತಿದ್ದಾರೆ.

ಮ|| ರಾಮಲಿಂಗರೆಡ್ಡಿಯವರು ಮೈಸೂರು ಅಧಿಕಾರಕ್ಕೆ ಬಂದ ಮೇಲೆ ಹಿಂದುಳಿದವರ ಪ್ರೋತ್ಸಾಹಕ್ಕೆ ನಾನಾ ಸಹಾಯಗಳಾದದ್ದೂ, ಮಿ|| ಕಲಾಮ್, ರಾ|| ಸಾ|| ಚನ್ನಯ್ಯ, ಮಿ|| ಬಸವಯ್ಯ, ಮಿ|| ಸುಬ್ಬಯ್ಯ ಇವರುಗಳು ಹಿಂದುಳಿದವರ ಹಿತಾರ್ಥವಾಗಿ ನಡುಕಟ್ಟಿ ನಿಂತದ್ದೂ, ಗೌರ್ನಮೆಂಟಿನವರು ಹಿಂದುಳಿದವರ ಉದ್ಧಾರಕ್ಕಾಗಿ ಅನೇಕ ತರದ ಪ್ರೋತ್ಸಾಹವನ್ನು ಕಲ್ಪಿಸಿದ್ದೂ ಸಹ ಇವರುಗಳಿಗೆ ಸೈರಿಸಲಾಗದಷ್ಟು ಹೊಟ್ಟೆಯುರಿಯನ್ನುಂಟುಮಾಡಿದೆ. ಇವರೆಲ್ಲರ ಪ್ರಯತ್ನದಿಂದ ದೇಶದಲ್ಲಿ ಸಾಮಾನ್ಯಜನರೆಲ್ಲಾ ಅಕ್ಷರಸ್ಥರಾಗಿ ಮುಂದಕ್ಕೆ ಬಂದುಬಿಟ್ಟರೆ, ಅವರುಗಳು ಸಂಸ್ಕಾರಶುದ್ಧಿಯೆಂಬ ನಮ್ಮ ಜಹಗೀರಿಯನ್ನು ಹಂಚಿಕೊಂಡು ನಮ್ಮಂತೆ ಬೆಳ್ಳಗೆ ಬಟ್ಟೆಬರೆಗಳನ್ನು ಹೊದ್ದು ಸುಖಪಡುವಂತಾಗುವದಲ್ಲಾ ಎಂಬ ಹೊಟ್ಟೆಯುರಿಯಿಂದ ಇವರು ಬೆಂದು ಕರಕಾಗುತ್ತಿದ್ದಾರೆ. ಆ ಮಸಿಯನ್ನು ಇತರರ ಮುಖಕ್ಕೆಲ್ಲಾ ಹಚ್ಚಲು ತೊಡಗುತ್ತಿದ್ದಾರೆ. ಗೌರ್ನಮೆಂಟಿನವರ ಮೇಲೆ ಹೊಟ್ಟೆಯುರಿಯಿದ್ದರೂ ಅವರ ಮೇಲೆ ಪ್ರತ್ಯಕ್ಷವಾದ ಕಾರ್ಯಭಾರ ನಡೆಸಲು ಸಾಧ್ಯವಿಲ್ಲದವರಾಗಿದ್ದಾರೆ. ರೆಡ್ಡಿಯವರನ್ನು ದೂರಿಗೆಳೆದು ಪದಭ್ರಷ್ಟರನ್ನು ಮಾಡಿಸಬೇಕೆಂದು ಅಸಮಸಾಹಸ ಮಾಡುತ್ತಿದ್ದಾರೆ. ಸರ್ಕಾರವು ಬ್ರಾಹ್ಮಣವಾಗಿರುವುದೆಂಬ ಧೈರ್ಯದಿಂದಲೂ, ಶ್ರೀಮನ್ಮಹಾಪ್ರಭುಗಳು ಕರುಣಾಳುಗಳೆಂಬ ನಿರ್ಲಕ್ಷ್ಯದಿಂದಲೂ, ಪ್ರೆಸ್ ಆಕ್ಟು ಮೊಂಡಕತ್ತಿಯಾಗಿರುವದೆಂಬ ನಿರ್ಭಯದಿಂದಲೂ ಕೀಳುಮಾತುಗಳನ್ನು ಕೊನೆಮೊದಲಿಲ್ಲದಷ್ಟು ಪತ್ರಿಕೆಗಳಲ್ಲಿ ಹರಟುತ್ತಿದ್ದಾರೆ. ಇಷ್ಟೂ ಸಾಲದೆ ಅರ್ಜುನನ ಮುಂದೆ ಕೌರವರು ಹೆಣ್ಣಿಗನನ್ನು ತಂದು ನಿಲ್ಲಿಸಿದಂತೆ ಸ್ತ್ರೀವಿದ್ಯಾಭ್ಯಾಸದ ಸಂಬಂಧದಲ್ಲಿ ಹೊಸ ಸ್ಕೀಮಿನಲ್ಲಿ ಕಂಡ ಸೂಕ್ತವಾದ ಅಭಿಪ್ರಾಯವನ್ನು ನಿರೋಧಿಸಿ ರೆಡ್ಡಿಯವರಿಗೆ ತೇಜೋವಧೆ ಮಾಡಿಸುತ್ತೇವೆಂಬ ಭ್ರಾಂತಿಯಿಂದ ಕೆಲ ಹೆಂಗುಸರನ್ನು ಎತ್ತಿಕಟ್ಟಿ ನಿಲ್ಲಿಸಿರುತ್ತಾರೆ. ಮುಸಲ್ಮಾನರೂ ಒಕ್ಕಲಿಗರೂ ಲಿಂಗಾಯತರೂ ಸಹ ಇತರ ಹಿಂದುಳಿದವರನ್ನೆಲ್ಲಾ ಮುಂದುವರಿಸಲು ಪ್ರಮುಖರಾಗಿ ನಿಂತಿರುವರೆಂಬ ಕಾರಣದಿಂದ ಹೆಚ್ಚಾದ ಹೊಟ್ಟೆಕಿಚ್ಚನ್ನು ಆ ಮೂರು ಜನವರ್ಗಗಳ ಮೇಲೆ ಹೊಂದಿ, ಅತ್ಯಾಗ್ರಹ ಪರವಶರಾಗಿ, ಪತ್ರಿಕೆಗಳಲ್ಲಿ ಆ ಮೂರು ಪಂಗಡಗಳ ಪ್ರಮುಖರ ಮೇಲೆ ವ್ಯಭಿಚಾರಿಗಳೆಂಬ ಅರ್ಥವು ಇತರರಿಗೆಲ್ಲಾ ತೋರಿ ಅವರಲ್ಲಿ ಹೀನತ್ವಬುದ್ಧಿಯು ಹುಟ್ಟುವಂತೆ ಮಾಡಲು "ಲಿಂಗಾಯಿತನು ಕೂಡಿಕೆ ಹೆಂಡತಿಯನ್ನು ಕಟ್ಟಿಕೊಂಡಿರುವನು, ತುರುಕನು ಪಂಚಮಜಾತಿಯವಳ ಸಂಗಮಾಡಿರುವನು, ಒಕ್ಕಲಿಗನು ಗಾಣಿಗಿತ್ತಿಯನ್ನು ಮದುವೆಯಾಗಿರುವನು.' ಎಂದು ಹೇಳಿ ಲೇವಡಿಮಾಡಿರುವರು. ಮುಂದಾದವರೆಂದೂ ಮರ್ಯಾದಸ್ಥರೆಂದೂ ಲೋಕಕ್ಕೆಲ್ಲಾ ಧರ್ಮಬೋಧೆಯನ್ನು ಮಾಡತಕ್ಕವರೆಂದೂ ಉತ್ತಮವರ್ಣದವರೆಂದೂ ಹೇಳಿಕೊಳ್ಳುವ ವಿದ್ಯಾವಂತರುಗಳೇ ಇಂಥ ಬೈಗಳುಗಳನ್ನು ಮಾರಕಟ್ಟಿನ ಎಲೆಮಾರುವವರಿಗಿಂತಲೂ ಕಡೆಯಾಗಿ ಆಡುವದಕ್ಕೂ ಕುತಂತ್ರಗಳನ್ನು ಮಾಡುವದಕ್ಕೂ ನಿಂತರೆ, ಸಾಮಾನ್ಯ ಜನರ ಸ್ಥಿತಿಯನ್ನು ಹೇಳಬೇಕಾದದ್ದೇನು ? ಸ್ಟ್ರೀಟುಗಳಲ್ಲೂ ಅಧಿಕಾರ ಪದವಿಯನ್ನು ಪಡೆಯುವಲ್ಲೂ ಕ್ಲಬ್ಬುಗಳಲ್ಲೂ ರಿಫ್ರೆಷ್ಮೆಂಟ್ ರೂಮುಗಳಲ್ಲೂ ಪಡಖಾನೆಗಳಲ್ಲೂ ನಡೆಯುತ್ತಿರುವ ಇವರ ಜನರ ಚರಿತ್ರೆಯನ್ನು ಯಾರು ಕಾಣರು ? ಅದನ್ನೆಲ್ಲಾ ವಿಮರ್ಶಿಸುವದಕ್ಕೆ ಕುಳಿತರೆ ಪ್ರತಿವ್ಯಾಸಾವತಾರವನ್ನೇ ಮಾಡಬೇಕಾಗುವದು. ಒಬ್ಬೊಬ್ಬರು ಮಾಡುವ ದುರಾಗತದಿಂದ ಅವೆಲ್ಲಾ ಬೈಲಿಗೆ ಬರಬೇಕಾದೀತು. ನಮಗೆ ಅಂಥ ಕೆಲಸವು ಸ್ವಲ್ಪವೂ ಬೇಕಿಲ್ಲ. ನಾವು ಶಾಂತರು. ನಮ್ಮ ಪಾಡು ನಮ್ಮದು. ನಮ್ಮ ವ್ಯವಸಾಯೋದ್ಯೋಗಕ್ಕಾಗಲೀ ವ್ಯಾಪಾರ ಕೈಗಾರಿಕೆ ಮೊದಲಾದ ಕಸಬುಗಳಿಗಾಗಲೀ ಯಾವ ಇತರರು ನುಗ್ಗುತ್ತಿದ್ದರೂ ನಾವೇನೂ ದ್ವೇಷಪಡುತ್ತಾ ಇಲ್ಲ. ಕಾಡುಗಳಲ್ಲಿ ಗಿಡಗೆಡ್ಡೆಗಳನ್ನು ತಿಂದುಕೊಂಡು ನಾರುಮಡಿಯನ್ನುಟ್ಟುಕೊಂಡು ಅಹಿಂಸ್ರಗಳಾದ ವನ್ಯಪಶುಗಳಂತೆ ಇದ್ದುದರಿಂದಲೇ ಸರ್ವಸಂಮಾನ್ಯರಾಗಿದ್ದ ಬ್ರಾಹ್ಮಣವರ್ಣದವರು ಷೋಕ್‌ಬಜಾಯಿಸುವದಕ್ಕೂ ನಾನಾರುಚಿಯ ತಿಂಡಿ ತೀರ್ಥಗಳನ್ನು ಸವಿಯುವದಕ್ಕೂ ಉಡಿಗೆ ತೊಡಿಗೆ ವಸ್ತುವಾಹನಾದಿಗಳಲ್ಲಿ ಕ್ಷತ್ರಿಯ ವೈಶ್ಯಾದಿಗಳನ್ನು ಕೂಡಮೀರಿಸಿ, ಇಹಲೋಕವ್ಯಾಪಾರದಲ್ಲಿ ಮುಳುಗಿ ವರ್ಣಧರ್ಮವನ್ನೇ ತಲೆಕೆಳಗುಮಾಡಿ, "ತಾವು ಹೇಗೆ ನಡೆದರೂ ನಿತ್ಯಸುಖಿಗಳಾಗಿರಬೇಕು. ಪರರೆಲ್ಲಾ ತಮಗೆ ದುಡಿದಿಕ್ಕಿ ಸೇವಿಸಿಕೊಂಡು ಮೃಗಗಳಂತಿರಬೇಕು" ಎಂಬ ಸ್ಕೀಮನ್ನು ಕಲ್ಪಿಸಿದರು. ತಿಳಿವಳಿಕೆಯಿಲ್ಲದ ಜನರು, ಅವರು ಮಾಡುವದೆಲ್ಲಾ ಧರ್ಮ, ಆಡುವದೆಲ್ಲಾ ಶಾಸ್ತ್ರ, ಎಂದು ತಿಳಿದು, ನಂಬಿ ಮೋಸಹೋದರು. ಈಗೀಗ ನಿಜಸ್ವರೂಪವು ವ್ಯಕ್ತವಾಗುತ್ತ ಬಂತು. ತಾವೂ ಇತರರಂತೆ ಮನುಷ್ಯರೆಂದೂ ಅವರಂತೆ ನಾವೂ ವಿದ್ಯಾಬುದ್ಧಿಗಳನ್ನು ಕಲಿತು ಬಾಳಲರ್ಹರಾದವರೆಂದೂ, ಯಾರ್‍ಯಾರು ಯಾವ ಯಾವ ಕಸಬಿನಲ್ಲಿ ಪ್ರವರ್ತಿಸುವದಕ್ಕೂ ದೈವದತ್ತವಾದ ಶಕ್ತಿಯು ಇದ್ದೇಇರುವದೆಂದೂ, ಸಂಸ್ಕಾರವಿಶೇಷದಿಂದ ಯಾರಲ್ಲೂ ಅವು ವಿಕಸಿತವಾಗಬಹುದೆಂದೂ ಅರಿತುಕೊಂಡವರಾಗಿ, ವಿದ್ಯಾಭ್ಯಾಸಕ್ಕೂ, ಪ್ರಕೃತದಲ್ಲಿ ವಿದ್ಯಾವಂತರಿಗೆಲ್ಲಾ ಗಮ್ಯಸ್ಥಾನದಂತಿರುವ ಸರ್ಕಾರಿ ಹುದ್ದೆಯನ್ನು ಪಡೆಯಲಿಕ್ಕೂ ಮುಂದೆ ಬಂದರು. ಆ ಪದವಿಗಳನ್ನು ಇದಕ್ಕೆ ಮುಂಚೆಯೇ ಅಕ್ರಮಾಕ್ರಮಣ ಮಾಡಿರುವ ಕೆಲಜನರಿಗೆ ಅದು ಸೈರಣೆಯಿಲ್ಲದೆ ಹೋಗಿರುವದರಿಂದ, ಅದನ್ನು ನಿರೋಧಿಸುವದಕ್ಕೆ ಯಾವ ಉಪಾಯವೂ ಸಾಧ್ಯವಲ್ಲದಿರುವದರಿಂದ, ದೇಶದಲ್ಲಿ ಹ್ಯಾಗಾದರೂ ಮಾಡಿ ಅಶಾಂತಿಯನ್ನು ಹುಟ್ಟಿಸಿಬಿಟ್ಟರೆ ಎಲ್ಲವೂ ಉಲ್ಲೋಲಕಲ್ಲೋಲವಾಗಿ ಬಿಡುವದೆಂದೂ, ತಾವು ಬುದ್ಧಿಶಾಲಿಗಳೂ ತಂತ್ರಪರರೂ ಸಾಹಸಿಗಳೂ ಆಗಿರುವದರಿಂದ ಮೆಲ್ಲಗೆ ಮೆದೆಗೆ ಬೆಂಕಿಯಿಟ್ಟು ತಪ್ಪಿಸಿಕೊಂಡುಬಿಡುವಂತೆ ದೇಶದ ಶಾಂತಿಪ್ರಾಸಾದಕ್ಕೆ ಹೇಗಾದರೂ ರೋಷೋತ್ಪಾದನಾಗ್ನಿಯನ್ನು ತಗುಲಿಸಿಬಿಟ್ಟರೆ, ವಿದ್ಯೆಯಿಲ್ಲದ ಮೂಢಜನರು ರೇಗಿ ಮಾಡಬಾರದ ಕೆಲಸಗಳನ್ನು ಅತಿಶಯವಾಗಿ ಮಾಡಿಬಿಟ್ಟರೆ ಅವರು ಬೈಲಿಗೆ ಬಂದು ದಂಡನಾರ್ಹರಾಗಿ ಕಡೆಗೆ ಈ ಚಳವಳವೇ ನಿಂತುಹೋಗಲು ದಾರಿಯಾಗಬಹುದೆಂದೂ, ಏನೇನೋ ಯೋಚಿಸಿಕೊಂಡು ಬೋಲ್ಷೆವಿಜಂ ತತ್ವವನ್ನು ಮೈಸೂರಿನಲ್ಲಿ ಬಿತ್ತಿ ಬೆಳಸಲು ಪ್ರಯತ್ನಿಸಿರುವಂತೆ ಕಾಣುತ್ತದೆ. ಈ ದುಷ್ಟತತ್ವವನ್ನು ಅಭಿವೃದ್ಧಿಗೊಳಿಸಲು ಬಿಡುವದು ಕ್ಷೇಮಕರವಾಗಿ ತೋರುವದಿಲ್ಲ. ಗೌರ್ನಮೆಂಟಿನವರು ಯಾವ ದಾಕ್ಷಿಣ್ಯದಿಂದಲೋ ಇನ್ಯಾವ ಕಾರಣದಿಂದಲೋ ಇಂಥ ಬರವಣಿಗೆಗಳನ್ನೂ ಕುತಂತ್ರಗಳನ್ನೂ ಈಗಲೇ ತಕ್ಕ ದರ್ಪದಿಂದ ನಿಲ್ಲಿಸದೆಹೋದರೆ ತೃಣವೇ ಪರ್ವತವಾಗಬಹುದು. ಹೊಸದಾಗಿ ರಾಜಬಂಧುವರ್ಗದವರು ದಿವಾನಗಿರಿಗೆ ಬಂದಿರುವದರಿಂದ ಅವರ ಕಾಲದಲ್ಲಿ ದೇಶದೊಳಗೆ ಅಂಥ ಗಲಾಟೆ ಹುಟ್ಟಿಸುವದೂ ಕೂಡ ಕೆಲವರಿಗೆ ಇಷ್ಟವಾಗಿಯೇ ಇರಬಹುದು. ನಿಜಬ್ರಾಹ್ಮಣ್ಯಗೌರವವುಳ್ಳ ಉತ್ತಮವರ್ಣೀಯರಾದ ಅಧಿಕಾರಿಗಳೂ ಖಾಸಗಿಜನಗಳೂ ನಮ್ಮ ದೇಶದಲ್ಲಿ ಇಲ್ಲದೆ ಇಲ್ಲ. ಅವರುಗಳೂ ಪ್ರಭುತ್ವದವರೂ ಸಹ ಈಗ ಲೇಶವೂ ಉದಾಸೀನಮಾಡದೆ ಈ ಬಾಲ್ಷೆವಿಜಂಬೀಜವನ್ನು ನುಚ್ಚುಗೊಡದಂತೆ ಮಾಡಿ ದೇಶಕ್ಷೇಮವನ್ನು ಕಾಪಾಡಿಕೊಳ್ಳುವವರಾಗಬೇಕು. ದೋಷೋದ್ಘಾಟನೆ ಮಾಡಿ ಪರರನ್ನು ಉದ್ಧರಿಸುವೆನೆಂಬ ನೆಪದಿಂದ ಹೆರರಮೇಲೆ ಅಪವಾದವನ್ನು ಹೊರಿಸಿ, ಜನವರ್ಗಗಳ ಮನಸ್ಸನ್ನೆಲ್ಲಾ ಕೆಡಿಸಿ ರೇಗಿಸುವದಕ್ಕಿಂತಲೂ, ತಮ್ಮ ಬುಡದೊಳಗಣ ಪರ್ವತಗಾತ್ರದ ದೋಷಗಳನ್ನು ಉದ್ಘಾಟಿಸಿಕೊಂಡು ತಿದ್ದಿಕೊಳ್ಳುವಂತೆ ಮಾಡಲು ಮೊದಲು ಪ್ರಯತ್ನಿಸಿದರೆ ದೇಶಕ್ಕೆ ಕ್ಷೇಮವಾದೀತು.

ದೇಶಸೇವಕ.

ಸಾಂಡೋ ಆಯಿಲ್.
(ನಪುಂಸಕತ್ವಹಾರಿ ತೈಲವು.)
ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಶಾಸಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಸ್ತ್ರೀಯ ಸಮಾರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡೋ ಎಂಬ ವನೌಷಧಿಯಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ೮ ದಿನಗಳ್ಳೆ ಸವರುವದರಿಂದ ಗುಣವಾಗುವದು, ಮತ್ತು ೮ ದಿನಗಳು ಬಲಹೀನವಾಗಿದ್ದರೂ ದೃಢವಾಗುವದು.
ಕ್ರಯ ಶೀಸೆ 1-ಕ್ಕೆ 1-0-0 ರೂ.
ವಿಳಾಸ:—ಡಾ|| ಎ. ಪ್ಲೀಡರ್,
೩, ಇರುಳಪ್ಪನದೀದಿ, ಮದರಾಸ್.

ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

1918-19 ನೇ ಸಾಲ್ ಸಿವಿಲ್-ಮಿಸ್ ನಂ. 70.

ಅರ್ಜಿದಾರ್—ರುದ್ರಪ್ಪ. 2

ಅಪೋನೆಂಟ್‌ಗಳು—ಗೌರಮ್ಮ ಮತ್ತು ಇತರ ಆರುಜನಗಳು.

ಹಾಸನದ ವಾಸಸ್ಥ ಬಸೆಟ್ಟಪ್ಪನವರ ಮಕ್ಕಳು ಮೈನರು ಶಿವನಂಜಪ್ಪನವರ ಆಸ್ತಿ ವಿಚಾರದಲ್ಲಿ—

ವಿಕ್ರಯದ ಬಾಬ್ತು ಇಸ್ತಿಹಾರ್.

1. ಮೈಸೂರು ಡಿಸ್ಟ್ರಿಕ್ಟು ಜಡ್ಜರವರು 1911 ನೇ ಇಸವಿ 5 ನೇ ರೆಗ್ಯುಲೇಷನ್ ಅಂದರೆ ಗಾರ್ಡಿಯನ್‌ಗಳ ಮತ್ತು ವಾರ್ಡ್‌ಗಳ ರೆಗ್ಯುಲೇಷನ್ ಅನುಸರಿಸಿ 16-9-1919 ನೆ ಮುಕ್ಕಾಂನಲ್ಲಿ ಒಬ್ಬ ರಿಸೀವರನ್ನು ನೇಮಕರೂರು ಮಾಡಿರುವುದಾಗಿಯೂ ಮತ್ತು ಸದರಿ ಮೈನರಿಗೆ ಸಂಬಂಧಪಟ್ಟ ಚರಸ್ವತ್ತುಗಳನ್ನು ಅಂದರೆ-ವಜ್ರ, ಕೆಂಪು ಮತ್ತು ಇತರ ರತ್ನಗಳಿಂದ ಕೆತ್ತಲ್ಪಟ್ಟದ್ದೇ ಮೊದಲಾದ ಬಹಳ ಬೆಲೆಯುಳ್ಳ ಚಿನ್ನ ಮತ್ತು ಬೆಳ್ಳಿ ಒಡವೆಗಳನ್ನು ಮತ್ತು ಮುತ್ತು, ಹವಳ ಮೊದಲಾದವುಗಳಿಂದೊಡಗೂಡಿದ ಆಭರಣಗಳು ವಗೈರೆ ಮಾಲುಗಳು ಮತ್ತು ಸಾಧಾರಣವಾಗಿ ಹಿಂದೂ ಮತ್ತು ಮಹಮ್ಮದೀಯರ ಕುಟುಂಬಗಳಲ್ಲಿ ಧರಿಸುವುದಕ್ಕೆ ಮತ್ತು ಪೂಜೆಗೆ ಉಪಯೋಗಿಸಲ್ಪಡುವ ಇತರ ಚರಸ್ವತ್ತುಗಳನ್ನು ವಿಕ್ರಯಮಾಡಲು ಈ ರಿಸೀವರಿಗೆ ಅಪ್ಪಣೆಯನ್ನು ಕೊಟ್ಟಿರುವುದಾಗಿ ಹುಕುಂ ಮಾಡಿರುತ್ತಾರೆಂದು ಇದರಿಂದ ನೋಟೀಸು ಕೊಡಲಾಗಿದೆ.

2. ಸದರಿ ಚರಸ್ವತ್ತುಗಳು 1919 ನೆ ಇಸವಿ ನವೆಂಬರು 14 ನೇ ತಾರೀಖು ಶುಕ್ರವಾರ ಮತ್ತು ಮರುದಿನಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನ ಬಳಿಯಲ್ಲಿ ಪ್ರತಿ ದಿನವೂ ದಿವಿ 11 ಘಂಟೆಗೆ ಉಪಕ್ರಮವಾಗಿ ಸಾಯಂಕಾಲ 5 ಘಂಟೆವರಿವಿಗೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವುದು.

3. ಈ ಸೊತ್ತುಗಳನ್ನು ಒಂದು ಐಟಂ ನಂತರ ಮತ್ತೊಂದು ಐಟಂ ಅಥವಾ ರಿಸೀವರಿಗೆ ಅವಶ್ಯಕ ತೋರಿಬರುವ ರೀತಿ ಲಾಟುಗಳ ಪ್ರಕಾರ ಹರಾಜಿಗೆ ಇಡಲ್ಪಡುವುದು. ಮತ್ತು ಅತ್ಯಧಿಕ ಮೊಬಲಗಿಗೆ ದರಖಾಸ್ತು ಮಾಡುವವನನ್ನು ಅಂಥಾ ಐಟಂ ಅಥವಾ ಲಾಟುಗಳ ಖರೀದಿದಾರನಾಗಿ ಪ್ರಕಟಿಸಲ್ಪಡುತ್ತೆ, ಆದರೆ ಆತನು ಕೊಡುತ್ತೇನೆಂಬ ಕ್ರಯವು ಅಂಗೀಕರಿಸಲಿಕ್ಕೆ ಯುಕ್ತವಾಗದಷ್ಟು ಕಡಮೆಯಾಗಿದೆ ಎಂದು ಸ್ಪಷ್ಟವಾಗಿ ತೋರಿಬಂದರೆ ಅತ್ಯಧಿಕ ದರಖಾಸ್ತನ್ನಾದರೂ ಅಂಗೀಕರಿಸದೆ ನಿರಾಕರಿಸುವುದು ಸಂಪೂರ್ಣವಾಗಿ ಕೋರ್ಟಿನ ಮುನಾಸಬ್ ಮೇರಿಗೆ ಇರುತ್ತೆ.

4. ಎಲ್ಲಾ ಜನರೂ ಖುದ್ದಾಗಿ ಅಥವಾ ಕ್ರಮವಾಗಿ ಅಧಿಕಾರಗೊಳಿಸಲ್ಪಟ್ಟ ಮುತಾಲೀಕರ ಮೂಲಕ ದರಖಾಸ್ತು ಮಾಡಬಹುದು, ಆದರೆ ಅಂಥಾ ಮುತಾಲೀಕರು ತಮ್ಮ ಅಧಿಕಾರ ಪತ್ರಗಳನ್ನು ದರಖಾಸ್ತು ಮಾಡುವುದಕ್ಕೆ ಮುಂಚೆ ರಿಸೀವರಲ್ಲಿ ದಾಖಲ್ಮಾಡಬೇಕು.

5. ಪ್ರತಿ ಐಟಂ ಅಥವಾ ಲಾಟಿನ ಕ್ರಯವನ್ನು ಪೂರ್ತಿಯಾಗಿ ವಿಕ್ರಯದ ಕಾಲದಲ್ಲಾದರೂ ರಿಸೀವರು ಆಜ್ಞಾಪಿಸುವ ಮೇರೆಗೆ ತದನಂತರ ಯಾವ ಸಮೀಪದ ಕಾಲದಲ್ಲಾದರೂ ಪಾವತಿ ಮಾಡಬೇಕು. ಮತ್ತು ಪಾವತಿ ಮಾಡಲಿಕ್ಕೆ ತಪ್ಪಿದರೆ ಆ ಸೊತ್ತನ್ನು ಕೂಡಲೆ ಇನ್ನೊಂದುಸಲ ಹರಾಜು ಹಾಕಿ ಪುನಃ ವಿಕ್ರಯಿಸುತ್ತೆ. ಪುನರ್ ವಿಕ್ರಯದಲ್ಲಿ ಮೊದಲಿನ ಖರೀದಿಗಿಂತ ಏನಾದರೂ ಕಡಮೆ ಬಿದ್ದರೆ ಆ ಕಡಮೆ ಹಣವನ್ನು ಕ್ರಯದ ಮೊಬಲಗು ಸಂದಾಯಮಾಡದೆ ತಪ್ಪಿದವನಿಂದ ವಸೂಲ್ಮಾಡಲ್ಪಡುತ್ತೆ. ಮತ್ತು ಆತನಿಗೆ ಆ ಸೊತ್ತಿಗಾಗಿಯಾಗಲಿ ಅಥವಾ ಹಾಗೆ ಮಾಡಿದ್ದರಿಂದ ಬಂದ ಹಣದಲ್ಲಿಯಾಗಲಿ ಎಷ್ಟುಮಾತ್ರಕ್ಕಾಗಲಿ ಎಷ್ಟುಮಾತ್ರವೂ ಹಕ್ಕು ಇರುವುದಿಲ್ಲ.

6. ಸದರಿ ಮೈನರಿನ ಸದರಿ ಸೊತ್ತುಗಳಿಗೆ ಸಂಬಂಧಪಟ್ಟ ಏನಾದರೂ ಹಕ್ಕುಬಾಧ್ಯತೆಗಳು ಅಥವಾ ಜವಾಬ್ದಾರಿಗಳು ಇದ್ದರೆ ಅವುಗಳನ್ನು ಡಿಸ್ಟ್ರಿಕ್ಟು ಜಡ್ಜರವರಲ್ಲಿ ಹರಾಜು ತಾರೀಖಿಗೆ 2 ವಾರಕ್ಕಿಂತಲಾದರೂ ಮುಂಚೆ ದಾಖಲ್ಮಾಡಬೇಕು.

ಷರಾ:—ಈ ಸೊತ್ತುಗಳು 20,000 ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಮೆ ಇಲ್ಲದೆ ಬೆಲೆಯುಳ್ಳವುಗಳಾಗಿ ತೋರುತ್ತವೆ.

ಹಾಸನ, ಎಚ್. ಮಹಲಿಂಗಣ್ಣ,
ತಾ|| 16-10-1919. ರಿಸೀವರ್.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ?

ಎಂದಿಗೂ ಅಲ್ಲ.

ಈ ಸುಧಾ ಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರಹ ಕಜ್ಜಿಗಳು, ಹುಳುಕಡ್ಡಿ, ಮುಂತಾದವುಗಳಮೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ಶೀಸೆ 1 ಕ್ಕೆ 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ತಾಯಿಗಳ, ಷರಬತ್ತುಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಅರುಕಾಸಿನ ಸ್ಟಾಂಪು ರವಾನಿಸಿ ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್, ಬೋರ್ಡು ಮಾಫಿ, ಫಾಯಿದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ಏಗಾಕೊಡುವದಿಲ್ಲಾ. ಈದಿನವೇ ಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎ. & ಕಂಪೆನಿ
8 ತಿಪ್ಪೂರು (ಮೈಸೂರು ಪ್ರಾವಿನ್ಸ್).

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಶಂಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
6 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅವೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಷ್ಮಿಜಡ್ಡು, ಗುಡ್ಡವ್ಯನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೋಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಟಚ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮು ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ ಮುಲ್ಲಾ, ಸಂಪಾದಕ ಅರ್ಕಶಫಾ,
7 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುಳು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
36 3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ಪಾಣಿ ಕಂಪನಿ,
36 ಸಾಹುಕಾರಪೇಟೆ, ಮದರಾಸು.

೧೯೧೯ ನೆಯ ಇಸವಿ ನವಂಬರ್ ತಾ|| ೨ ರಿಂದ ೧೯೧೯ ನೆಯ ನವಂಬರ್ ತಾ|| ೮ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಕಾರ್ತಿಕ ಶು|| ನವಮಿಯಿಂದ ಕಾರ್ತಿಕ ಬ|| ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
2	(1) ಭಾನು	ನವಮಿ	18-41	ಧನಿಷ್ಠ	1-46	17
3	(2) ಸೋಮ	ದಶಮಿ	17-38	ಶತಭಿಷ	32-2	18
4	(3) ಮಂಗಳ	ಏಕಾ	15-29	ಪೂಭಾ	31-12	19
5	(4) ಬುಧ	ದ್ವಾದ	12-24	ಉಭಾ	29-18	20
6	(5) ಗುರು	ತ್ರಯೋ	8-5	ರೇವತಿ	26-39	21
7	(6) ಶುಕ್ರ	ಚತು	3-11	ಅಶ್ವಿನಿ	54-51	22
8	ಶನಿ	ಪಾಡ್ಯ	52-6	ಭರಣಿ	19-24	23

(1) ಮೇಲುಕೋಟೆಯಲ್ಲಿ ರಾಜಮುಡೀ ಉತ್ಸವ. (2) ಕಾರ್ತೀಕಸೋಮವಾರ, ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ. (3) ಸರ್ವತ್ರ ಏಕಾದಶಿ. (4) ಪ್ರದೋಷ, ಉತ್ಥಾನದ್ವಾದಶಿ, ತುಳಸೀಬೃಂದಾವನೋತ್ಸವ, ನಂಜನಗೂಡಿನಲ್ಲಿ ರುದ್ರಾಕ್ಷಿಮಂಟಪೋತ್ಸವ, ಮೇಲುಕೋಟೆಯಲ್ಲಿ ಅಷ್ಟತೀರ್ಥರಥ. (5) ವೈಕುಂಠ ಚತುರ್ದಶಿ (6) ಚಂದ್ರಗ್ರಹಣಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೈಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನತ್ಯುತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೨) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ನವಂಬರ್ ತಾರೀಖು ೨ ನೆಯ ಭಾನುವಾರ. (ಸಂಚಿಕೆ ೪೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ, ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭರುಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

37 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 16

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಚಳುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ ಛಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಛಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಛಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
44 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 47

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಂದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯುವೆಚ್ಚ ಬೇರೆ.

MYSORE GOVERNMENT ADVERTISEMENTS.

PUREST raw materials and the **FINEST** essential oils are used in our celebrated **SANDAL SOAPS.**

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintendent,
Government Museum.

ಪ್ರಕಟನೆ.

ಕಂಬಳಿಗಳು, ರತ್ನಕಂಬಳಿಗಳು, ಬಾಗಿಲುಮುಂದೆ ಹಾಕುವ ರಗ್ಗುಗಳು, ಕೈವಸ್ತ್ರಗಳು, ತರಹಾವರಿ ಚೌಕಗಳು, ತರಹಾವರಿ ಬಟ್ಟೆಗಳು, ದುಪಟಿಗಳು, ಮರದ ಸಾಮಾನುಗಳು, ಕಬ್ಬಿಣದ ಸಾಮಾನುಗಳು, ಹಣದ ಚೀಲಗಳು, ಟೆನಿಸ್ ಬಲೆಗಳು, ಹಗ್ಗಗಳು, ಈ ಸಾಮಾನುಗಳು ಈ ಜೈಲಿನಲ್ಲಿ ತಯಾರ್ಮಾಡಲ್ಪಡುತ್ತವೆ. ಬೇಕಾದವರಿಗೆ ಸಿದ್ಧವಾಗಿದ್ದರೆ ಕಿಮ್ಮತ್ತು ಪಾವತಿಮಾಡಿ ಪಡೆಯಬಹುದು. ಅಲ್ಲದೆ ಶೇಕಡ 50 ರಂತೆ ಬೆಲೆಯನ್ನು ಮುಂಗಡವಾಗಿ ಕೊಟ್ಟಲ್ಲಿ ಸಾಮಾನುಗಳನ್ನು ತಯಾರ್ಮಾಡಿಕುತ್ತೆ.

C. Rajagopal, Suparintendent,
Mysore Jail.

1. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ನಾನಾ ವಿಧವಾದ ಟುವಲುಗಳು ದುಪಟಿಗಳು, ಮಗ್ಗಲಹಾಸಿಗೆಗಳು, ಕ್ವಿಲ್ಟು ಎಂಬ ಹಾಸಿಗೆಗಳು, ತೆಂಗಿನ ನಾರಿನ ಚಾಪೆಗಳು, ಮತ್ತು ರಗ್ಗುಗಳು, ಮತ್ತು ಚಕ್ಕುಗಳೇ ಮುಂತಾದ ಸಾಮಾನುಗಳು, ತಯಾರ್ಮಾಡಿಸಿ ಮಾರಾಟಕ್ಕೆ ಯಾವಾಗಲು ಸಿದ್ಧವಾಗಿವೆ. ರತ್ನಕಂಬಳಿಗಳು ಮತ್ತು ಜಮಖಾನೆಗಳು ಅನೇಕ ವಿಧವಾಗಿ ಅರ್ಥಿಗಳಿಗೆ ತಯಾರ್ಮಾಡಿಸಿ ಕೊಡಲ್ಪಡುತ್ತವೆ. ಜೈಲ್‌ಸ್ಟೋರು ರಜಾ ದಿನಹ ಬಾಕಿ ದಿನಗಳಲ್ಲಿ ಬೆಳಗ್ಗೆ 7 ರಿಂದ 10-30 ಘಂಟೆಯವರಿವಿಗೂ ಮಧ್ಯಾಹ್ನ 3 ರಿಂದ 5 ಘಂಟೆಯವರಿವಿಗೂ ತೆರೆಯಲ್ಪಟ್ಟಿರುತ್ತದೆ.

2. ಈ ಜೈಲಿನಲ್ಲಿ ಖೈದಿಗಳಿಗೆ ಒಂದು ವರುಷಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳಿಗೂ ಮತ್ತು ಜೈಲ್‌ಖಾರ್ಖಾನೆಗೆ ಬೇಕಾದ ಚಿಲ್ಲರೆ ಸಾಮಾನುಗಳಿಗೋಸ್ಕರ ಪ್ರತಿವರುಷವು ನವಂಬರು ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ ಮತ್ತು ಜೈಲ್‌ಕಟ್ಟಡ ರಿಪೇರಿಗೋಸ್ಕರ ಬೇಕಾದ ಸಾಮಾನುಗಳಿಗೆ ಪ್ರತಿವರುಷವು ಜೂನ್ ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ.

Superintendent,
14 Centrel Jail, Bangalore.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ಪುಷ್ಟವಾಗುವದು.

ಕ್ರಯ ಶೀಸೆ 1-ಕ್ಕೆ 1-0-0 ರೂ.

ವಿಳಾಸ:—ಡಾ|| ಎಂ. ಪ್ಲೀಡರ್,
37 3. ಇರುಳಪ್ಪನಬೀದಿ, ಮದರಾಸು.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ನವಂಬರ್ ತಾ|| ೯ ನೆಯ ಭಾನುವಾರ.

ದೇಶಭಾಷೆಯ ಮೂಲಕ ವಿದ್ಯಾಭ್ಯಾಸ.

ಮ|| ಸಿ. ರಾಮಲಿಂಗರೆಡ್ಡಿಯವರ ಘನತರೋಪನ್ಯಾಸ.

ಈಗಣ ಕಾಲದಲ್ಲಿ ಚರ್ಚಿಸಲ್ಪಡುತ್ತಿರುವ ಮುಖ್ಯವಿಷಯಗಳೊಳಗೆ ದೇಶಭಾಷೆಯ ಮೂಲಕ ವಿದ್ಯಾಭ್ಯಾಸಮಾಡಿಸುವುದು ಹಿತವೆ? ಅನವಶ್ಯಕವೆ? ಎಂಬ ವಿಷಯವೂ ಒಂದಾಗಿರುತ್ತದೆ. ಸ್ವದೇಶಭಾಷೆಗಳಿಂದ ವಿದ್ಯಾಭ್ಯಾಸ ಮಾಡಿಸುವುದರ ಪ್ರಯೋಜನವನ್ನೂ ಅವಶ್ಯಕತೆಯನ್ನೂ ಕುರಿತು ಸಾಕಾದಷ್ಟು ಕಾರಣಗಳೆಲ್ಲಾ ಅಡಕವಾಗಿರುವಂಥ ಒಂದು ಉತ್ತಮೋಪನ್ಯಾಸವನ್ನು ಮೈಸೂರು ವಿದ್ಯಾಭ್ಯಾಸ ಶಾಖಾಧ್ಯಕ್ಷರಾದ ಮ|| ಸಿ. ರಾಮಲಿಂಗರೆಡ್ಡಿ, ಎಂ.ಎ., ಯವರು ಕಳೆದ ತಿಂಗಳು ತಾ|| ೨೭ ರಲ್ಲಿ ಮದರಾಸಿನಲ್ಲಿ ಮಾಡಿರುತ್ತಾರೆ. ಆ ಪಟ್ಟಣದ ಗೋಖಲೆಭವನದಲ್ಲಿ ಅಲ್ಲಿಯ ಹೈಕೋರ್ಟಿನ ನ್ಯಾಯಮೂರ್ತಿ ಟಿ. ವಿ. ಶೇಷಗಿರಿ ಅಯ್ಯರವರ ಅಧ್ಯಕ್ಷತೆಯಿಂದ ಕೂಡಿದ್ದ ದೊಡ್ಡಸಭೆಯಲ್ಲಿ ಇದು ಜರುಗಿತು. ಸಭಾಧ್ಯಕ್ಷರು ಸಭಿಕರಿಗೆ ಉಪನ್ಯಾಸಕರ ಪರಿಚಯವನ್ನು ಮಾಡಿಸುವಾಗ್ಗೆ—ಕಲ್ಕತ್ತಾ ವಿಶ್ವವಿದ್ಯಾಲಯ ಸಂಘದ ವರದಿಯು ಪ್ರಕಟವಾಗುವುದಕ್ಕೆ ಮುಂಚೆಯೇ ನಾನೂ ಉಪನ್ಯಾಸಕರೂ ಸಹ ಸೇರಿ ವಿದ್ಯಾವಿಷಯಕಗಳಾದ ಕೆಲವಂಶಗಳನ್ನು ಕುರಿತು ಚರ್ಚಿಸಿರುವೆವೆಂತಲೂ ಅವುಗಳಲ್ಲಿ ಒಂದಂಶವನ್ನು ಕುರಿತು ಇವರು ಈಗ ಉಪನ್ಯಾಸ ಮಾಡುವರೆಂತಲೂ, ಈ ರೆಡ್ಡಿಯವರು ಉಪಾಧ್ಯಾಯರಲ್ಲದೆ ಇದ್ದರೂ ವಿದ್ಯಾವಿಷಯಕಗಳಾದ ಸೂತ್ರಗಳನ್ನು ಗ್ರಹಿಸುವಲ್ಲಿ ನೈಪುಣ್ಯವು ಇವರಿಗೆ ವಿಶೇಷವಾಗಿರುವುದೆಂತಲೂ, ಅಮೇರಿಕಾ ಇಂಗ್ಲೆಂಡು ಮೊದಲಾದ ವಿದೇಶಗಳಲ್ಲಿ ಸಂಚರಿಸಿ, ಅಲ್ಲಲ್ಲಿಯ ವಿದ್ಯಾವಿಧಾನಗಳನ್ನೆಲ್ಲಾ ಪರಿಶೀಲನೆ ಮಾಡಿ, ಅವುಗಳಲ್ಲಿನ ಗುಣಾಂಶಗಳನ್ನೆಲ್ಲಾ ಪರಿಗ್ರಹಿಸಿಕೊಂಡು, ಅವುಗಳನ್ನು ಈಗ ಮೈಸೂರು ದೇಶದಲ್ಲಿ ಕಾರ್ಯರೂಪವಾಗಿ ವ್ಯವಹಾರಕ್ಕೆ ತರುವುದಕ್ಕೆ ಪ್ರಯತ್ನಿಸಿ, ಮೈಸೂರು ಸಂಸ್ಥಾನದ ವಿದ್ಯಾಭ್ಯಾಸ ವಿಧಾನವನ್ನು ಅನೇಕ ಪ್ರಕಾರವಾಗಿ ಅಭಿವೃದ್ಧಿಪಡಿಸುತ್ತಿದ್ದಾರೆಂತಲೂ, ಇಂಥ ಮಹನೀಯರ ಅನುಭವಪ್ರಯೋಜನವನ್ನು ಪಡೆದುಕೊಂಡುದಕ್ಕಾಗಿ ಆ ಸಂಸ್ಥಾನವು ನಿಜವಾಗಿ ಅದೃಷ್ಟಶಾಲಿಯೆಂದು ಹೇಳಬಹುದಾಗಿದೆಯೆಂತಲೂ, ಈ ರೆಡ್ಡಿಯವರು ಉಪನ್ಯಸಿಸುವುದಕ್ಕಿರುವ ವಿಷಯವು ದೇಶಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳೆಲ್ಲೆಲ್ಲಾ ಅತ್ಯಂತ ಮುಖ್ಯವಾದುದೆಂತಲೂ ಅಪ್ಪಣೆಕೊಡಿಸಿದರು. ನಂತರ ಮ|| ರೆಡ್ಡಿಯವರು ಉಪನ್ಯಾಸಕ್ಕೆ ಆರಂಭಿಸಿದರು. ಅದು ಅವರಿಗೆ ನಿಸರ್ಗವಾಗಿರತಕ್ಕ ಮೃದುಮಧುರಗಳಾದ ವಚನನಿಚಯಗಳಿಂದಲೂ ಸುಬೋಧಗಳಾದ ವಾಕ್ಯಮಂಜರಿಗಳಿಂದಲೂ ಕೂಡಿ ಸುಲಭವಾದ ಶೈಲಿಯಿಂದ ಸಭಿಕರ ಚಿತ್ತಾಕರ್ಷಕವಾಗಿದ್ದಿತು. ಅದರಲ್ಲಿ ಕಂಡ ಮುಖ್ಯಾಭಿಪ್ರಾಯಗಳನ್ನು ಮಾತ್ರ ಇಲ್ಲಿ ಕೊಡುತ್ತೇವೆ. ಅನ್ಯಭಾಷಾಮೋಹದಲ್ಲೇ ಮುಳುಗಿ ತೇಲುತ್ತಿರುವವರ ಅಜ್ಞಾನವನ್ನು ಸ್ವಲ್ಪಮಟ್ಟಿಗಾದರೂ ತಿದ್ದಲು ಇದು ಸಾಧಕವಾದೀತೆಂದು ನೆನೆಸುತ್ತೇವೆ.

“ಮೊನ್ನೆ ತಾನೇ ಮೈಸೂರು ಕಾನ್ವೊಕೇಷನ್ ಸಭೆಯಲ್ಲಿ ಸರ್ ಅಬ್ದುಲ್‌ರಹೀಂರವರು ಉಪನ್ಯಾಸ ಮಾಡಿದಾಗ್ಗೆ ನಾವು ಸದ್ಯಃ ಪುರಸ್ಕರಿಸಿಕೊಳ್ಳಬೇಕಾದ ವಿಷಯಗಳೊಳಗೆ ಸಾಂಘಿಕ ಪುನರ್ನಿರ್ಮಾಣ ಸಮಸ್ಯೆಯು ಅತ್ಯಂತ ಪ್ರಮುಖವಾದುದೆಂದು ಅಪ್ಪಣೆಕೊಡಿಸಿದರು. ವಿದ್ಯೆಯ ಮುಖ್ಯೋದ್ದೇಶವು ಸಾಂಘಿಕ ಜಾತೀಯ ಜೀವನಾಭಿವೃದ್ಧಿಗೆ ಆಧಾರಭೂತವಾಗಿರುವುದೇ ಹೊರತು ಕೇವಲ ವಿದ್ಯಾರ್ಜನೆಯೊಡನೆಯೇ ಕೊನೆಮುಟ್ಟುವುದಕ್ಕಲ್ಲ. ನಮ್ಮ ಈಗಣ ವಿದ್ಯಾವಿಧಾನವು ಆ ಉದ್ದೇಶವನ್ನು ಎಷ್ಟುಮಟ್ಟಿಗೆ ನೆರವೇರಿಸಬಲ್ಲುದಾಗಿರುವುದೋ ಅದನ್ನು ನಾವು ಆಲೋಚಿಸಬೇಕಾಗಿದೆ. ಮಾತೃಭಾಷೆಯಲ್ಲಿ ವಿದ್ಯೆಯನ್ನು ಕಲಿಸುವುದೇ ಅತ್ಯಂತ ಸಹಜವಾದ ಮಾರ್ಗವು. ಈ ಸಮಸ್ಯೆಯು ಭರತಖಂಡದ ಹೊರತು ಮತ್ತಾವ ದೇಶದಲ್ಲೂ ಚರ್ಚಿಸಲ್ಪಡಬೇಕಾದ ಅವಶ್ಯಕತೆಯನ್ನೇ ಹೊಂದಿಲ್ಲ. ಆಂಗ್ಲದೇಶದಲ್ಲಿ ಆಂಗ್ಲೇಯರಿಗೆ ಇಂಗ್ಲೀಷಿನಲ್ಲೂ, ಫ್ರಾನ್ಸ್ ದೇಶದಲ್ಲಿ ಫ್ರೆಂಚ್ ಬಾಲಕರಿಗೆ ಫ್ರೆಂಚ್ ಭಾಷೆಯಲ್ಲೂ ವಿದ್ಯೆಯು ಕಲಿಸಲ್ಪಡುತ್ತಿದೆಯೇ ಹೊರತು ಅನ್ಯಭಾಷೆಗಳಲ್ಲಿ ಕಲಿಸಲ್ಪಡುವುದೇ ಇಲ್ಲ. ನಮ್ಮ ಈಗಣ ವಿದ್ಯಾವಿಧಾನದಲ್ಲಿ ಅನೇಕ ಲೋಪಗಳಿರುತ್ತವೆ. ಅವುಗಳಲ್ಲಿ ಮೊದಲನೆಯ ಲೋಪವಾವುದೆಂದರೆ—ನಮ್ಮ ಬಾಲಕರು ವಿಷಯಜ್ಞಾನವಿಲ್ಲದೆಯೇ ತಮ್ಮ ಪಾಠಗಳನ್ನು ಕುರುಡುಪಾಠವಾಗಿ ಒರಲುಹಾಕಿ ಕಲಿಯುವುದಾಗಿರುತ್ತದೆ. ಆ ಪಾಠಗಳು ಅನ್ಯಭಾಷೆಯಲ್ಲಿರುವುದರಿಂದ ಬಾಲಕರು ಅವುಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದಕ್ಕೇ ಯತ್ನಿಸುತ್ತಾರಲ್ಲದೆ ಆ ಪಾಠಗಳ ಅರ್ಥವನ್ನಾಗಲೀ ವಿಷಯಜ್ಞಾನವನ್ನಾಗಲೀ ಮಾಡಿಕೊಳ್ಳುವುದಕ್ಕೆ ಯತ್ನಿಸುವುದಿಲ್ಲ. ಇದರಿಂದ ಅವರ ಗ್ರಹಣಶಕ್ತಿಯು ಕ್ರಮೇಣ ನಶಿಸಿಹೋಗುತ್ತದೆ. ವಿದ್ಯೆಯ ಮುಖ್ಯೋದ್ದೇಶವು ಜ್ಞಾನವನ್ನುಂಟುಮಾಡುವುದಾಗಿರುತ್ತದೆ. ಜ್ಞಾನವನ್ನು ಅಭಿವೃದ್ಧಿಗೊಳಿಸದೆ ಇರುವ ವಿದ್ಯೆಯು ನಿಜವಾದ ವಿದ್ಯೆಯಾಗಲಾರದು. ಅಂಥ ವಿದ್ಯಾವಿಧಾನವು ಖಂಡನಾರ್ಹವಾದುದೇ ಸರಿ. ಬಹುಶಃ ೭೦ ವರ್ಷಗಳಿಂದಲೂ ನಾವು ಆಂಗ್ಲಭಾಷೆಯನ್ನು ಅಭ್ಯಸಿಸುತ್ತಲಿರುವೆವು. ಅದರಿಂದ ನಮಗೇನಾದರೂ ಪ್ರಯೋಜನವುಂಟಾಗಿರುವುದೆ? ನಮ್ಮಲ್ಲಿ ಯಾರಾದರೂ ಘನಪಂಡಿತರೆನಿಸಿಕೊಳ್ಳಲರ್ಹರಾದವರು ಇರುವರೆ? ನಮ್ಮಲ್ಲಿ ಬಹುಜನರು ಭಾಷೆಯನ್ನು ಕಲಿತುಕೊಳ್ಳುತ್ತಿದ್ದಾರೆಯೇ ಹೊರತು ವಿಷಯಜ್ಞಾನವನ್ನು ಸಂಪಾದಿಸುವವರಾಗಿಲ್ಲ. ವಿಷಯಜ್ಞಾನವಿಲ್ಲದಿರುವುದು ಅಭಿವೃದ್ಧಿಯೇ ಅಲ್ಲ. ಅದುಕಾರಣ ನಮ್ಮ ಈಗಣ ವಿದ್ಯಾವಿಧಾನವು ನಮ್ಮ ಪುರೋವೃದ್ಧಿಗೆ ಭಂಗಕರವಾಗಿರುತ್ತದೆ. ಮನುಷ್ಯನಲ್ಲಿ ಸದ್ಭಾವವನ್ನು ಹುಟ್ಟಿಸಿ ಉತ್ಸಾಹಪೂರಿತನನ್ನಾಗಿ ಮಾಡುವುದೂ, ಚಿತ್ರಕಲೆಗಳನ್ನು ಅಭಿವೃದ್ಧಿಪಡಿಸುವುದೂ ಕೂಡ ವಿದ್ಯೆಯ ಮುಖ್ಯೋದ್ದೇಶವಾಗಿರುತ್ತವೆ. ನಮ್ಮ ಈಗಣ ವಿದ್ಯಾವಿಧಾನವು ಅದನ್ನು ಎಷ್ಟುಮಟ್ಟಿಗೆ ಸಾಧಿಸಿಕೊಟ್ಟಿದೆಯೋ ನೋಡಿರಿ. ಭಾರತರಾಮಾಯಣಗಳನ್ನು ಓದಿದಾಗ ಹುಟ್ಟುವಂಥ ಉದ್ರೇಕವಾಗಲೀ ಉತ್ಸಾಹವಾಗಲೀ ಇಂಗ್ಲೀಷ್ ಪದ್ಯಗಳನ್ನು ಓದಿದಾಗ ನಮ್ಮಲ್ಲಿ ಯಾರಿಗಾದರೂ ಉಂಟಾಗಿರುವುದೇನೋ ಸ್ವಲ್ಪ ಆಲೋಚಿಸಿನೋಡಿರಿ. ಭರತಖಂಡದೊಳಗೆಲ್ಲಾ ಮದರಾಸು ಆಧಿಪತ್ಯದಲ್ಲಿ ಆಂಗ್ಲ ವಿದ್ಯಾವ್ಯಾಪನೆಯು ಹೆಚ್ಚಾಗಿ ಮಾಡಲ್ಪಟ್ಟಿರುವುದು. ಆದರೆ ನಮ್ಮ ಈ ಆಧಿಪತ್ಯದಲ್ಲಿರುವ ಚಿತ್ರಕಲಾವ್ಯಾಪನೆಗೂ ಇತರ ಆಧಿಪತ್ಯಗಳಲ್ಲಿರುವ ಚಿತ್ರಕಲಾವ್ಯಾಪನೆಗೂ ಹೋಲಿಕೆ ಮಾಡಿ ನೋಡಿದರೆ ನಮ್ಮ ಚಿತ್ರಕಲೆಗಳು ಎಷ್ಟು ಹೀನಸ್ಥಿತಿಯಲ್ಲಿವೆಯೆಂಬುದು ಗೊತ್ತಾಗುವುದು. ನಮ್ಮ ಶತ್ರುಪಕ್ಷದವರು ಕೂಡ ನಮ್ಮ ವಿದ್ಯಾವಿಧಾನವು ಸಾಮಾನ್ಯ ಪದ್ಧತಿಗೆ ವಿರುದ್ಧವಾಗಿದೆಯೆಂದು ಒಪ್ಪಿಕೊಂಡಿರುತ್ತಾರೆ.

ಇನ್ನು ದೇಶಭಾಷೆಯ ಮೂಲಕ ವಿದ್ಯೆಯನ್ನು ಕಲಿಸದಿರುವುದಕ್ಕೆ ಇರುವ ಕಾರಣವನ್ನು ಕುರಿತು ಸ್ವಲ್ಪ ಯೋಚಿಸೋಣ. ಅವುಗಳಲ್ಲಿ ೧ ನೆಯದು ದೇಶಭಾಷೆಯಲ್ಲಿ ಸರಿಯಾದ ಪಠನಗ್ರಂಥಗಳಿಲ್ಲವೆಂಬುದಾಗಿರುತ್ತದೆ. ದೇಶಭಾಷೆಯಲ್ಲಿ ಪಠನಗ್ರಂಥಗಳಿಲ್ಲವೆಂದು ಹೇಳತಕ್ಕವರು ೫೦ ವರ್ಷಗಳ ಹಿಂದಣ ಪರಿಸ್ಥಿತಿಯನ್ನು ಕುರಿತು ಮಾತನಾಡುತ್ತಾರೆಂದು ನನ್ನ ಮತವು. ವಂಗಭಾಷೆಯಲ್ಲೂ ಆಂಧ್ರಭಾಷೆಯಲ್ಲೂ ಸಹ ವಿಜ್ಞಾನಸರ್ವಸ್ವ (Encyclopedia) ಎಂಬುದೊಂದು ಇದೆಯೆಂಬುದು ಅವರಿಗೆ ತಿಳಿದಿರುವಂತೆ ಕಾಣಲಿಲ್ಲ. ಈ ವಿಜ್ಞಾನಸರ್ವಸ್ವದಲ್ಲಿ ನೂತನಯುಗಕ್ಕೆ ಸಂಬಂಧಿಸಿದ ಅನೇಕ ನವೀನ ವಿಷಯಗಳು ಇವೆಯೆಂಬುದು ಅವರಿಗೆ ಗೊತ್ತಿಲ್ಲ. ನಾನು ಕಳಾಶಾಲಾ ತರಗತಿಯ ವಿದ್ಯಾರ್ಥಿಗಳಿಗೆ ಚರಿತ್ರವಿಷಯವನ್ನು ಬೋಧಿಸುವಾಗ್ಗೆ ವಿಜ್ಞಾನಮಂಡಲಿಯವರಿಂದ ಪ್ರಕಟಿಸಲ್ಪಡುತ್ತಿರುವ ಆಂಧ್ರವಿಜ್ಞಾನಸರ್ವಸ್ವವನ್ನು ಸಾಹಾಯ್ಯಕ್ಕೆ ತೆಗೆದುಕೊಳ್ಳುತ್ತಿದ್ದೆ. ಮೂರನೆ ಫಾರಮಿನವರೆಗೆ ಇತರ ವಿಷಯಗಳನ್ನೆಲ್ಲಾ ದೇಶಭಾಷೆಯಲ್ಲೇ ಕಲಿಸುತ್ತ ಆಂಗ್ಲಭಾಷೆಯನ್ನು ಭಾಷಾಭಿವೃದ್ಧಿಗಾಗಿ ಮಾತ್ರ ಹೇಳಿಕೊಡಬೇಕೆಂಬುದನ್ನು ಎಲ್ಲರೂ ಅಂಗೀಕರಿಸಿಯೇ ಇರುತ್ತಾರೆ. ಚರಿತ್ರೆ, ಭೂಗೋಳ, ರಸಾಯನಶಾಸ್ತ್ರ ಮೊದಲಾದ ವಿಷಯಗಳನ್ನು ಮಾತೃಭಾಷೆಯಲ್ಲೇ ಹೇಳಿಕೊಟ್ಟರೆ ಆಯಾ ವಿಷಯಗಳನ್ನು ಬಾಲಕರು ಬೇಗನೆ ಗ್ರಹಿಸಿಕೊಂಡು ಮನನಮಾಡಿಕೊಳ್ಳುವರು. ಇದರಿಂದ ವಿಷಯಜ್ಞಾನವು ಅಭಿವೃದ್ಧಿಹೊಂದುವುದು. ಕಳಾಶಾಲಾ ತರಗತಿಗಳಲ್ಲಿ ಎಲ್ಲ ವಿದ್ಯೆಯನ್ನೂ ಈಗಣಂತೆ ಆಂಗ್ಲಭಾಷೆಯಲ್ಲೇ ಕಲಿಸಬೇಕೆಂಬ ವಿಷಯದಲ್ಲೂ ಕೂಡ ವಿಶೇಷ ಭಿನ್ನಾಭಿಪ್ರಾಯವಿರುವಂತೆ ತೋರುವುದಿಲ್ಲ. ಇನ್ನು ಹೈಸ್ಕೂಲು ತರಗತಿಗಳ ವಿಷಯವನ್ನು ಕುರಿತು ಆಲೋಚಿಸಿದರೆ ಮಾತ್ರ ಭಿನ್ನಾಭಿಪ್ರಾಯವು ಗೋಚರಿಸುತ್ತದೆ. ದೇಶಭಾಷೆಯಲ್ಲಿ ವಿದ್ಯೆಯನ್ನು ಕಲಿಸಬೇಕೆಂದು ನಾವು ಹೇಳುವಾಗ್ಗೆ ಆಂಗ್ಲಭಾಷೆಯನ್ನು ಕಿತ್ತು ಒಗೆದುಬಿಡುವರೆಂದು ಕೆಲವರು ದುರಭಿಪ್ರಾಯ ಪಡುತ್ತಾರೆ. ಆಂಗ್ಲಭಾಷೆಯು ಘನತರವಾದ ಭಾಷೆ. ಅದನ್ನು ತಿರಸ್ಕರಿಸುವುದು ನಮ್ಮ ಅಭಿಪ್ರಾಯವಲ್ಲ; ಅದು ಸಾಧ್ಯವೂ ಅಲ್ಲ. ವಿವಿಧ ದೇಶಗಳವರೊಡನೆ ಅನ್ಯೋನ್ಯಸಂಪರ್ಕವನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಆಂಗ್ಲಭಾಷೆಯು ಅತ್ಯಂತಾವಶ್ಯಕವು. ಈಗಣ ರೀತಿಯಲ್ಲಿ ಹೈಸ್ಕೂಲು ತರಗತಿಗಳ ಬಾಲಕರಿಗೆ ಅವರ ಪಾಠಶಾಲೆಗಳಲ್ಲಿ ಹೇಳಿಕೊಡುವ ಪಾಠಗಳ ಹೊರತು ಇತರ ಸಾಧಾರಣ ಪುಸ್ತಕಗಳನ್ನು ಓದಿಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಇದಕ್ಕೆ ಕಾರಣವು ಈಗಣ ನಮ್ಮ ವಿದ್ಯಾವಿಧಾನದ ಲೋಪವೇ ಆಗಿರುತ್ತದೆ. ೭೦ ವರ್ಷಗಳಕಾಲದಿಂದ ನಮಗೆ ವಿದ್ಯಾಭ್ಯಾಸ ಮಾಡಿಸಲ್ಪಡುತ್ತ ಬಂದಿದ್ದರೂ ನಮ್ಮ ಗ್ರಾಮಾಂತರನಿವಾಸಿಗಳಿಗೆ ಚರಿತ್ರೆ, ಭೂಗೋಳ ಮೊದಲಾದ ವಿಷಯಗಳ ಜ್ಞಾನವು ಲೇಶವೂ ವ್ಯಾಪಿಸದಿರುವುದಕ್ಕೆ ದೇಶಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿಸದಿರುವ ಲೋಪವೇ ಕಾರಣವಾಗಿರುತ್ತದೆ.

ಜರ್ಮನಿ, ಇಂಗ್ಲೆಂಡು, ಫ್ರಾನ್ಸು ಮೊದಲಾದ ದೇಶಗಳಲ್ಲಿರುವ ೧೪-೧೫ ವರ್ಷ ವಯಸ್ಸಿನ ಬಾಲಕರಿಗೆ ನಮ್ಮ ಜೂನಿಯರ್ ಬಿ. ಎ. ತರಗತಿ ವಿದ್ಯಾರ್ಥಿಗಳಿಗೆ ಎಷ್ಟು ವಿಷಯಗಳು ತಿಳಿದಿರುವುವೋ ಅದಕ್ಕಿಂತಲೂ ಹೆಚ್ಚಾಗಿಯೇ ತಿಳಿದಿರುವುದು. ಇದಕ್ಕೆ ಕಾರಣವೇನೆಂದರೆ—ನಮ್ಮ ವಿದ್ಯಾರ್ಥಿಗಳು ೧೪ನೆ ವಯಸ್ಸಿನಲ್ಲಿ ಇನ್ನೂ ಬೆಕ್ಕು ನಾಯಿ ಎಂಬುದೇ ಮೊದಲಾದ ಪದಗಳಿಗೆ ಸ್ಪೆಲಿಂಗನ್ನು ಇನ್ನೂ ಕಲಿಯುತ್ತಿರುವರು. ಆ ವಿದೇಶಬಾಲಕರಾದರೋ ಅವರವರ ಮಾತೃಭಾಷೆಯಲ್ಲೇ ನಾಯನ್ನು ಕುರಿತೂ ಬೆಕ್ಕನ್ನು ಕುರಿತೂ ಚೆನ್ನಾಗಿ ವಿಷಯಜ್ಞಾನವಾಗಿಯೇ ಇರುವುದು. ನಾವಾದರೋ ೧೪ನೆ ವರ್ಷ ವಯಸ್ಸಿನಲ್ಲೂ ಬಾಲಕರಿಗೆ ಬೆಕ್ಕು ನಾಯಿಗಳ ಪಾಠವನ್ನೇ ಹೇಳಿಕೊಡುತ್ತ ಕುಳಿತುಕೊಳ್ಳುವುದರಿಂದ ಆ ಬಾಲಕರ ಜೀವಿತಕಾಲದಲ್ಲಿ ಬಲು ಬೆಲೆಬಾಳುವ ಕೆಲವು ವರ್ಷಗಳೇ ವ್ಯರ್ಥವಾಗಿ ಹೋಗುತ್ತವೆ. ಜರ್ಮನ್ ದೇಶದಲ್ಲಿ ವಿದ್ಯಾರ್ಥಿಗಳಿಗೆ ಅವರ ದೇಶಭಾಷೆಯಲ್ಲೇ ವಿದ್ಯೆಯನ್ನು ಕಲಿಸುತ್ತಾರೆ. ಹೀಗೆ ಮಾಡುತ್ತಿರುವುದರಿಂದ ಆ ಜರ್ಮನ್ ದೇಶವು ಅದಕ್ಕೆ ಇತರವಾದ ದೇಶಗಳಲ್ಲಿ ಯಾವುದಕ್ಕಾದರೂ ರಾಜಕೀಯ ಪಾರಿಶ್ರಾಮಿಕಾದ್ಯಭಿವೃದ್ಧಿಗಳಲ್ಲಿ ಕಡಿಮೆಯಾಗಿದೆಯೆ? ಜರ್ಮನ್ ದೇಶವು ನೂತನಮಾರ್ಗದಲ್ಲಿ ನುಗ್ಗುತ್ತ ದಿನದಿನಾಭಿವೃದ್ಧಿಯನ್ನು ಪಡೆಯುತ್ತಿದೆ. ದೇಶಭಾಷೆಗಳಲ್ಲಿ ವಿದ್ಯೆಯನ್ನು ಕಲಿಸಿದರೆ ವಿಜ್ಞಾನವನ್ನು ಚೆನ್ನಾಗಿಯೂ ತ್ವರಿತವಾಗಿಯೂ ಉಂಟುಮಾಡಬಹುದೆಂದು ಡಾಕ್ಟರ್ ಸಾಡ್ಲರ್ ಕಮಿಷನ್ನಿನವರು ಅಭಿಪ್ರಾಯಪಟ್ಟಿದ್ದಾರೆ. ನಾವು ಏರ್ಪಡಿಸಲಿಕ್ಕಿರುವ ವಿದ್ಯಾವಿಧಾನವು ಧನಿಕರಿಗೆ ಮಾತ್ರವೇ ಅಲ್ಲದೆ ಸರ್ವಸಾಮಾನ್ಯ ಜನರೆಲ್ಲರಿಗೂ ಉಪಯೋಗಕರವಾಗಿಯೂ ಉಚಿತವಾಗಿಯೂ ಇರಬೇಕು. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉರ್ದುಭಾಷೆಯಲ್ಲೇ ವಿದ್ಯೆಯನ್ನು ಕಲಿಸುತ್ತಾರೆ. ಅಲ್ಲಿ ಅದೇ ಪ್ರಥಮಭಾಷೆಯಾಗಿ ಇಡಲ್ಪಟ್ಟಿದೆ. ಅಲ್ಲಿಯ ವಿಶ್ವವಿದ್ಯಾಲಯದವರೇ ಮಾತೃಭಾಷೆಗೆ ಪ್ರಾಮುಖ್ಯವನ್ನು ಕೊಟ್ಟಿರುವಾಗ ನಮ್ಮ ವಿಶ್ವವಿದ್ಯಾಲಯದವರು ಹೈಸ್ಕೂಲು ತರಗತಿಗಳಲ್ಲಾದರೂ ಆ ಭಾಷೆಗೆ ಪ್ರಾಮುಖ್ಯವನ್ನು ಕೊಡಕೂಡದೆ? ಹೈಸ್ಕೂಲು ತರಗತಿಗಳಲ್ಲಿ ಎಲ್ಲ ವಿಷಯಗಳನ್ನೂ ಮಾತೃಭಾಷೆಯಲ್ಲೇ ಬೋಧಿಸಿ ಇಂಗ್ಲೀಷನ್ನು ಮಾತ್ರ ಕೇವಲ ಭಾಷೆಗೋಸ್ಕರವಾಗಿ ಕಲಿಸಿಕೊಡಬೇಕೆಂದು ಸಾಡ್ಲರ್ ಕಮಿಷನ್ನಿನವರು ಹೇಳಿರುತ್ತಾರೆ. ಅದನ್ನು ಬಿಟ್ಟು ಎಲ್ಲವನ್ನೂ ಆಂಗ್ಲಭಾಷೆಯಲ್ಲೇ ಬೋಧಿಸಬೇಕಾದರೆ ನಮ್ಮ ಉಪಾಧ್ಯಾಯರುಗಳು ಇಂಗ್ಲೀಷನ್ನು ಕಲಿತುಕೊಳ್ಳುವುದು ಮಾತ್ರವೇ ಅಲ್ಲದೆ ಆಯಾ ಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಕೂಡ ಆಂಗ್ಲಭಾಷೆಯಲ್ಲೇ ಕಲಿತುಕೊಂಡಿರಬೇಕಾಗುವುದು.

ವಿದ್ಯಾವಿಷಯದಲ್ಲಿ ಅದ್ವೈತಸಿದ್ಧಾಂತವನ್ನು ಸ್ಥಾಪಿಸುವುದು ನನ್ನ ಮತವು. ನಾವು ವಿದ್ಯಾಭಿವೃದ್ಧಿಗೊಳ್ಳಬೇಕಾಗಿದ್ದರೆ ಡಾಕ್ಟರ್ ಸಾಡ್ಲರ್‌ರವರು ಸೂಚಿಸಿರುವ ವಿದ್ಯಾವಿಷಯಕ ಸಂಸ್ಕರಣಗಳನ್ನು ಅವಲಂಬಿಸುವುದೇ ಮುಖ್ಯೋಪಾಯವು. ಹೈಸ್ಕೂಲು ವಿದ್ಯಾವಿಷಯದಲ್ಲಿ ಒಂದು ನೂತನಾಭಿಪ್ರಾಯವು ಹುಟ್ಟಿದೆ. ಪ್ರಾಥಮಿಕವಿದ್ಯೆಯು ನ್ಯಾಯವಾದುದೆಂತಲೂ, ಅತ್ಯಂತಾವಶ್ಯಕವಾದುದೆಂತಲೂ, ಹೈಸ್ಕೂಲು ವಿದ್ಯೆಯು ಅಷ್ಟು ಅವಶ್ಯಕವಾದುದಲ್ಲವೆಂತಲೂ ಕೆಲವರ ಅಭಿಪ್ರಾಯವಾಗಿರುತ್ತದೆ. ನಾವು ಒಬ್ಬ ಬಾಲಕನಿಗೇ ಆಗಲೀ ಒಬ್ಬ ಬಾಲಿಕೆಗೇ ಆಗಲೀ ವಿದ್ಯೆಯನ್ನು ಕಲಿಸಿಕೊಡುವುದರ ಉದ್ದೇಶವೇನೆಂದರೆ-ಅವರುಗಳು ಪರಾವಲಂಬನೆಯಿಲ್ಲದೆ ಸ್ವತಂತ್ರವಾಗಿ ಜೀವಿಸಿಕೊಂಡು ಹೋಗುವಂತೆ ಮಾಡುವುದೇ ಆಗಿರುತ್ತದೆ. ಹೈಸ್ಕೂಲು ವಿದ್ಯೆಯು ಮುಗಿಯುವ ಹೊತ್ತಿಗೆ ವಿದ್ಯಾರ್ಥಿಗಳಿಗೆ ೧೭ನೆ ವಯಸ್ಸು ಪ್ರಾಪ್ತವಾಗಿ ಸ್ವಲ್ಪಮಟ್ಟಿಗೆ ಲೋಕಜ್ಞಾನವೂ ಉಂಟಾಗಿ ಆತನು ತನ್ನ ಹೊಟ್ಟೆಯನ್ನು ತಾನು ಹೊರಕೊಳ್ಳುವ ಸ್ಥಿತಿಗೆ ಬಂದಿರುವನು. ಅಂಥವನು ಪ್ರಾಥಮಿಕ ವಿದ್ಯೆಯನ್ನು ಮಾತ್ರವೇ ಕಲಿತು ಅಲ್ಲಿಗೇ ಬಿಟ್ಟುಬಿಟ್ಟರೆ ಅವನು ನಿರಾಧಾರಿಯಾಗುವನು. ನಾವು ಬೋಧಿಸುವ ವಿದ್ಯೆಯು ಅತಿ ತ್ವರಿತವಾಗಿ ಅಭಿವೃದ್ಧಿಹೊಂದುವಂತೆಯೂ, ಪ್ರಜಾಸಾಮಾನ್ಯದಲ್ಲೆಲ್ಲಾ ವ್ಯಾಪಿಸುವಂತೆಯೂ ಇರಬೇಕೆಂದು ಡಾ|| ಸಾಡ್ಲರ್‌ರವರ ವರದಿಯಲ್ಲಿ ಹೇಳಲ್ಪಟ್ಟಿರುವುದು. ನಿಮ್ನಜಾತಿಯವರನ್ನು ಉನ್ನತಸ್ಥಿತಿಗೆ ಹತ್ತಿಸುವುದು ಮಾತ್ರವೇ ಅಲ್ಲದೆ ಅವರ ಜೀವನಾಧಾರಕ್ಕೆ ಸಹಾಯಕವಾಗುವಂಥ ವಿದ್ಯೆಯನ್ನು ಕಲಿಸುವುದು ನಮ್ಮ ಕರ್ತವ್ಯವಾಗಿರುತ್ತದೆ. ಅದುಕಾರಣ ಪ್ರಾಥಮಿಕ ವಿದ್ಯೆಯನ್ನು ಮಾತ್ರವೇ ಅಲ್ಲದೆ ಹೈಸ್ಕೂಲು ವಿದ್ಯೆಯನ್ನೂ ಕೂಡ ನಿರ್ಬಂಧವಾಗಿಯೂ ಉಚಿತವಾಗಿಯೂ ಕಲಿಸುವಂತೆ ಮಾಡಬೇಕು.

ಆಂಗ್ಲವಿದ್ಯೆಯು ಮದ್ರಾಸು ಆದಿಪತ್ಯದಲ್ಲಿ ವ್ಯಾಪಿಸಿರುವಮಟ್ಟಿಗೆ ಮತ್ತಾವ ಆಧಿಪತ್ಯದಲ್ಲೂ ವ್ಯಾಪಿಸಿರುವುದಿಲ್ಲ. ಬಂಗಾಳಾದಲ್ಲಿ ಸಾಮಾನ್ಯವಾಗಿ ಆಂಗ್ಲಭಾಷೆಯಲ್ಲಿ ಮಾತನಾಡತಕ್ಕವರು ಬಹಳ ಕಡಿಮೆ. ಬೊಂಬಾಯಿಯಲ್ಲಿ ಈಗ್ಗೆ ೧೦ ವರ್ಷಗಳ ಹಿಂದಣವರೆಗೂ ಭಾರತೀಯರಿಂದ ನಡೆಯಿಸಲ್ಪಡುವ ಇಂಗ್ಲೀಷ್ ದಿನಪತ್ರಿಕೆಯೇ ಇರಲಿಲ್ಲ. ಹೀಗಿದ್ದ ಮಾತ್ರದಿಂದಲೇ ರಾಜಕೀಯ ವಿಷಯದಲ್ಲೇ ಆಗಲೀ ಸಾಂಘಿಕ ಪಾರಿಶ್ರಾಮಿಕ ವಿಷಯಗಳಲ್ಲೇ ಆಗಲೀ ಬೊಂಬಾಯಿ ಆಧಿಪತ್ಯವು ಇತರಾಧಿಪತ್ಯಗಳಿಗಿಂತ ಹಿಂದುಬಿದ್ದಿದೆಯೆ? ಇಲ್ಲ. ಅದು ಇತರಾಧಿಪತ್ಯಗಳೆಲ್ಲಕ್ಕಿಂತಲೂ ಮುಂದಾಗಿಯೇ ಇದೆ. ದೇಶಭಾಷಾಮೂಲಕವಾಗಿ ವಿದ್ಯೆಯನ್ನು ಕಲಿಸಿಕೊಡತಕ್ಕ ಪ್ರದೇಶಗಳಲ್ಲಿ ಪ್ರಜಾಸಾಮಾನ್ಯದೊಳಗೆ ಉದ್ಭವಿಸಿರುವ ಕಾರ್ಯಪರತೆಯು ನಮಗೆ ಗೊತ್ತಾಗಿಯೇ ಇದೆ. ಮಾತೃಭಾಷೆಯಲ್ಲಿ ವಿದ್ಯೆಯನ್ನು ಕಲಿಸಿಕೊಟ್ಟರೆ ಸಂಘದಲ್ಲಿ ಕಂಡುಬರುತ್ತಿರುವ ಈಗಣ ಅನೇಕ ದೋಷಗಳು ಅಳಿದುಹೋಗಿ ಸಾಂಘಿಕಬಲವು ವೃದ್ಧಿಯಾಗುವುದು.

ನಮ್ಮ ದೇಶದ ಪುರೋಭಿವೃದ್ಧಿಯೆಲ್ಲವೂ ಈ ಸಮಸ್ಯಾಪರಿಷ್ಕಾರದ ಮೇಲೆಯೇ ಆಧಾರಪಟ್ಟಿದೆ. ಅದುಕಾರಣ ನಮ್ಮ ಪ್ರಜಾನಾಯಕರೆಲ್ಲರೂ 'ಪ್ರಪಂಚದಲ್ಲಿ ಉಂಟಾಗುತ್ತಲಿರುವ ಹೊಸ ಹೊಸ ಮಾರ್ಪುಗಳನ್ನು ಗಮನಿಸಿ ಎಚ್ಚತ್ತುಕೊಂಡು ಈ ಸಮಸ್ಯೆಯ ವಿಷಯದಲ್ಲಿ ವಿಶೇಷವಾಗಿ ಕೃಷಿ ಮಾಡಿ ಸರ್ಕಾರದ ಗಮನಕ್ಕೆ ತಂದು ಭರತಖಂಡದ ಪುರೋವೃದ್ಧಿಗೆ ಸಹಾಯಕರಾಗಬೇಕು.’’ ಹೀಗೆ ಉಪನ್ಯಾಸವಾದ ಬಳಿಕ, ಸಭಾಧ್ಯಕ್ಷರವರು ಉಪನ್ಯಾಸಕರಿಗೂ ಅವರ ಉತ್ತಮವಾದ ಉಪನ್ಯಾಸಕ್ಕೂ ವಂದನೆಯನ್ನರ್ಪಿಸಿ, ದೇಶಭಾಷೆಯ ಮೂಲಕವೇ ರಾಜಕೀಯ ಸಾಂಘಿಕ ಪಾರಿಶ್ರಾಮಿಕ ವ್ಯವಸಾಯಾದಿ ವಿದ್ಯೆಗಳನ್ನೆಲ್ಲಾ ಕಲಿಸಿಕೊಡುವಂತಾದರೆ ಪ್ರಜಾಸಾಮಾನ್ಯವೂ ಅದರಿಂದ ವಿಷಯಜ್ಞಾನವನ್ನು ಬಲುಬೇಗನೆ ಸಂಪಾದಿಸಿಕೊಳ್ಳುವರು. ಅದುಕಾರಣ ಈ ವಿಷಯದಲ್ಲಿ ವಿದ್ಯಾರ್ಥಿಗಳ ತಾಯ್ತಂದೆಗಳೇ ಶ್ರದ್ಧೆಯಿಂದ ಕೆಲಸಮಾಡಿ ವಿದ್ಯಾವಿಧಾನವು ತಮಗೆ ಪ್ರಯೋಜಕವಾಗುವ ರೀತಿಯಲ್ಲಿ ನಡೆಯುವಂತೆ ಮಾಡಿಕೊಳ್ಳಬೇಕು.’’ ಎಂದು ಅಪ್ಪಣೆ ಕೊಡಿಸಿದರು.

ಒಳದೇಶದ ವೃತ್ತಾಂತಗಳು.

ಸ್ವಾತಿಮಳೆಯು ಹುಯ್ದು ಸಾಕುಮಾಡಿಬಿಟ್ಟಿದೆ. ಮಳೆಯು ತೆಗೆದರೆ ಸಾಕೆಂದು ರೈತರು ಕೋರುತ್ತಿದ್ದಾರೆ.

ರಾಜಧಾನಿಯಲ್ಲಿ ಕೃಷ್ಣರಾಜಮೊಹಲ್ಲಾ ಚಾಮರಾಜಮೊಹಲ್ಲಾಗಳ ಕಡೆ ಪ್ಲೇಗಿನ ಹಾವಳಿಯು ಹೆಚ್ಚುತ್ತಿದೆ.

ಶ್ರೀಮಜ್ಜಗದ್ಗುರು ಮರುಘರಾಜೇಂದ್ರ ಮಹಾಸ್ವಾಮಿಗಳ ಸ್ವಾರಿಯು ಬಿಡದಿಯ ಮೊಕ್ಕಾಮಿನಲ್ಲಿ ಇನ್ನೂ ೪-೬ ದಿನಗಳವರೆಗಿರುವುದಾಗಿ ತಿಳಿಯಬಂದಿದೆ.

ವೈಸ್‌ರಾಯರ ಆಗಮನಾರ್ಥವಾಗಿ ಬೆಂಗಳೂರಿನಲ್ಲಿ ನಡೆಸಲ್ಪಡುತ್ತಿರುವ ಏರ್ಪಾಟುಗಳನ್ನು ಶ್ರೀಮನ್ ಮಹಾರಾಜರವರು ಪರಾಂಬರಿಸಿಕೊಂಡು ಬರಲು ಇಷ್ಟರಲ್ಲೇ ಬೆಂಗಳೂರಿಗೆ ಚಿತ್ತೈಸುವವರಾಗಿರುವರು.

ಕೋಲಾರದ ಮುನ್ಸೀಫರಾಗಿದ್ದ ಮ|| ಬಿ. ಟಿ. ರಾಘವಾಚಾರ್ಯರು ಈಜುವುದಕ್ಕಾಗಿ ಹೋಗಿದ್ದು ಮುಳುಗಿ ಮೃತರಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು ಚಿಕ್ಕವಯಸ್ಸಿನವರಾಗಿ ಮುಂದೆ ವೃದ್ಧಿಗೆ ಬರತಕ್ಕವರಾಗಿದ್ದರು.

ಹೆಸರು, ಉದ್ದು, ತೊಗರಿ, ಮೆಣಸಿನಕಾಯಿ, ಹುಲ್ಲು ಮತ್ತು ಬೂಸಾ ಈ ಪದಾರ್ಥಗಳನ್ನು ರೈಲುಮಾರ್ಗದಿಂದಾಗಲೀ ಅಥವಾ ಬಂಡಿಯ ಮಾರ್ಗದಿಂದಾಗಲೀ ಮೈಸೂರುಸೀಮೆಯಿಂದ ಹೊರಗಡೆಗೆ ಕಳುಹಿಸಬಹುದೆಂದು ಸರ್ಕಾರದಪ್ಪಣೆಯಾಗಿದೆ.

ದಿವಾನ್ ಸರದಾರ್ ಕಾಂತರಾಜ ಅರಸಿನವರು ತಾ|| ೭ ರ ಬೆಳಿಗ್ಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. ಇಲ್ಲಿಯ ಅರ್ಸ್‌ಕ್ಲಬ್ಬು, ಕಾಸ್ಮಾಪಾಲಿಟನ್ ಕ್ಲಬ್ಬು ಮತ್ತು ಗಾಯನಸಮಾಜ ಈ ಸಂಘಗಳವರು ಸರದಾರರನ್ನು ಬರಮಾಡಿಕೊಂಡು ಸಂತೋಷಕೂಟಗಳಿಂದ ಸತ್ಕರಿಸುವವರಾಗಿರುವರು.

ಜಯೋತ್ಸವವನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಘನತರವಾಗಿ ನಡೆಯಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ. ೨೦-೩೦ ಸಾವಿರ ರೂ.ಗಳ ಮೇಲ್ಪಟ್ಟು ಇದಕ್ಕಾಗಿ ವೆಚ್ಚಮಾಡುವವರಾಗಿದ್ದಾರೆ, ವೈಮಾನಿಕ ಶಾಖೆಯವರನ್ನು ಕೋರಿಕೊಂಡು ಆ ಕಾಲಕ್ಕೆ ವಿಮಾನೋಡ್ಡಾಣ ವಿನೋದ ಪ್ರದರ್ಶನವನ್ನು ಸಹ ಜರುಗಿಸಬೇಕೆಂದಿದ್ದಾರೆ.

ಪ್ರಿವಿಕೌನ್ಸಿಲ್ ತೀರ್ಮಾನವಾದನಂತರ ಸಿರಸಂಗಿ ದೇಸಾಯರ ಆಸ್ತಿಯನ್ನು ಟ್ರಸ್ಟಿಗಳ ವಶಕ್ಕೆ ವಹಿಸಿಕೊಡಬೇಕೆಂದು ಅಪ್ಪಣೆಯಾಗಿದ್ದರೂ, ಸುಂದರಾಬಾಯಿಯವರು ತಾವು ಮೃತರಾಗುವವರೆಗಾದರೂ ಆಸ್ತಿಯು ತಮ್ಮಧೀನದಲ್ಲಿರುವಂತೆ ಮಾಡಿಕೊಳ್ಳಬೇಕೆಂದು ಮತ್ತೊಂದು ವ್ಯಾಜ್ಯವನ್ನು ಹೂಡಿ ಅದರಲ್ಲೂ ಪರಾಜಿತರಾದರು. ಟ್ರಸ್ಟಿಗಳ ವಶಕ್ಕೆ ಕೂಡಲೇ ಆಸ್ತಿಯನ್ನು ವಹಿಸಿಕೊಡಬೇಕೆಂದು ಈಚೆಗೆ ಸರ್ಕಾರದ ಅಪ್ಪಣೆಯಾಯಿತು. ಆದರಮೇಲೂ ಸುಂದರಾಬಾಯಿಯವರು ಬೆಳಗಾಂವಿಯ ಸಬ್ ಜಡ್ಜ್ ಕೋರ್ಟಿನಲ್ಲಿ ಮತ್ತೊಂದು ಅಡ್ಡಿಯ ವ್ಯಾಜ್ಯವನ್ನು ಹೂಡಿದ್ದರು. ಅದರಲ್ಲೂ ಅವರಿಗೆ ವಿರುದ್ಧವಾಗಿಯೇ ತೀರ್ಪಾಯಿತು. ತಮ್ಮ ಪ್ರವರ್ತನವು ಅಧರ್ಮವಾದುದೆಂದು ಇನ್ನಾದರೂ ಸುಂದರಾಬಾಯಿಯವರಿಗೆ ತೋರೀತೆ?

ಮರಿಮಲ್ಲಪ್ಪನವರ ಹೈಸ್ಕೂಲು ಸಹಾಯೋಪಾಧ್ಯಾಯರಾಗಿ ೩೩ ವರ್ಷಗಳಿಂದಲೂ ಕೆಲಸಮಾಡುತ್ತ ಬಂದಿದ್ದ ಅನಾಮಲೈಪಿಳ್ಳೆಯವರು ನಾಲ್ಕಾರುದಿನ ಅಸ್ವಸ್ಥರಾಗಿದ್ದು ಕಳೆದ ಬುಧವಾರ ತಮ್ಮ ೭೦ ನೆ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರ ಗೌರವಕ್ಕಾಗಿ ಆ ದಿವಸ ಮರಿಮಲ್ಲಪ್ಪನವರ ಹೈಸ್ಕೂಲು ಮುಚ್ಚಲ್ಪಟ್ಟಿದ್ದುದಲ್ಲದೆ ಅನೇಕಮಂದಿ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಸ್ಮಶಾನದವರೆಗೆ ಹೋಗಿದ್ದು ಸಾನುಭೂತಿಯನ್ನು ತೋರಿಸಿದರು. ಇವರು ಬೆಂಗಳೂರು ಡಿಸ್ಟ್ರಿಕ್ಟಿನವರು. ಈಗ್ಗೆ ೪೦ ವರ್ಷಗಳ ಹಿಂದೆ ಮೈಸೂರಿಗೆ ಬಂದು ತಮ್ಮ ೨೦ನೆ ವಯಸ್ಸಿನಲ್ಲಿ ಇಂಗ್ಲೀಷನ್ನು ಕಲಿಯಲು ಆರಂಭಿಸಿ, ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟು ರಿಕ್ತದಶೆಯಿಂದ ಮುಂದಣ ಅಭ್ಯಾಸಕ್ಕೆ ದಾರಿಯಿಲ್ಲದೆ ಅಲ್ಪವೇತನಕ್ಕೆ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಉಪಾಧ್ಯಾಯವೃತ್ತಿಗೆ ಸೇರಿ ಕಡೆಯವರೆಗೂ ಅಲ್ಲೇ ಕೆಲಸಮಾಡುತ್ತಿದ್ದರು. ಖಂಡಿತವಾದಿಗಳೂ ನಿಸ್ಪೃಹಿಗಳೂ ಆಗಿದ್ದರು.

ಭಕ್ತಬಂಧು ಎಂಬ ಹೆಸರಿನಿಂದ ಒಂದು ಮಾಸಪತ್ರವು ಕಳೆದ ಆಶ್ವಯುಜ ಮಾಸದಿಂದ ಪ್ರಕಟವಾಗುತ್ತಿದೆ. ಇದರ ಪ್ರಥಮಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದೆವು. ಪಾರಮಾರ್ಥಿಕ ಲೇಖನಗಳನ್ನು ಗ್ರಂಥಪ್ರಕಟನ ಮುಖದಿಂದಲೂ ಮಾಸಪತ್ರಿಕಾ ಪ್ರಕಟನ ದ್ವಾರದಿಂದಲೂ ಬರೆದು ಕನ್ನಡಿಗರಿಗೆ ಚಿರಪರಿಚಿತರಾಗಿರುವ ಮ|| ಎಚ್. ಚಿದಂಬರಯ್ಯನವರೇ ಇದರ ಸಂಪಾದಕರು. ಇದರ ಮೇಲೆ ಕರ್ಪೂರ ಶ್ರೀನಿವಾಸರಾಯರಂಥ ವಿಬುಧವರ್ಯರ ಲೇಖನಸಂಬಂಧವೂ ಪೋಷಣಸಂಬಂಧವೂ ಇದಕ್ಕೆ ಇರುವಾಗ್ಗೆ ಇದರ ಪ್ರಾಶಸ್ತ್ಯವನ್ನು ಹೇಳಬೇಕಾಗಿಲ್ಲ. ಹೆಸರಿಗೆ ತಕ್ಕಂತೆ ಪುರುಷಾರ್ಥ ಸಾಧನಗಳಾದ ಭಕ್ತಿ ಜ್ಞಾನ ವೈರಾಗ್ಯಾದಿ ವಿಷಯಕ ಲೇಖನಗಳೂ ಸಾಧುಪುರುಷರ ಜೀವಿತಚರಿತ್ರೆಗಳೂ ಇದರಲ್ಲಿ ಸ್ಫುಟವಾಗಿ ಬರೆಯಲ್ಪಡುತ್ತಿವೆ. ಪ್ರಥಮಸಂಚಿಕೆಯಲ್ಲಿ ಶ್ರೀ ಬ್ರಹ್ಮಾನಂದರ ಭಾವಚಿತ್ರವು ಮುದ್ರಿಸಲ್ಪಟ್ಟಿರುವುದಲ್ಲದೆ ಅವರ ಜೀವಿತ ಚಾರಿತ್ರವು ಆರಂಭಿಸಲ್ಪಟ್ಟಿರುವುದು. ರಾ|| ಸಭಾಭೂಷಣ ಕೆ|| ಶ್ರೀನಿವಾಸರಾಯರು ಭಕ್ತಿ ವಿಷಯಕವಾದ ಪ್ರೌಢಲೇಖನವನ್ನು ಆರಂಭಿಸಿರುವರು. ಭರತನ ಬಂಧುಪ್ರೇಮವೆಂಬ ವ್ಯಾಸವನ್ನು ಸಂಪಾದಕರೇ ಆರಂಭಿಸಿರುವರು. ಇದರಲ್ಲಿರುವ ಭಾವಪರಿಪುಷ್ಟಿಯೂ ಸುಲಭಶೈಲಿಯೂ ಸಂದರ್ಭೋಚಿತ ಪದವಾಕ್ಯ ಪ್ರಯೋಗಗಳೂ, ವಾಚಕರ ಮನಸ್ಸನ್ನು ಸೆಳೆಯುವಂತಿರುವುವು. ಕನ್ನಡಿಗರಿಗೆ ಸಮಾದರಣೀಯವಾದ ಈ ಪತ್ರದ ವಾರ್ಷಿಕ ಚಂದಾಧನವು ೨ ರೂ. ದಾವಣಗೆರೆಯ ಭಕ್ತಿವರ್ಧಕ ಸಂಘದವರು ಇದರ ಪ್ರಕಟನಕರ್ತೃಗಳು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ವಿಷಯಗಳು.

ಪ್ರ.—ಪ್ರತಿಯೊಂದು ತಾಲ್ಲೂಕು ಕಸಬೆಯಲ್ಲಿಯೂ ಟೆಲಿಗ್ರಾಫ್ ಆಫೀಸನ್ನು ಇಡಿಸಿಕೊಡುವಂತೆ ಮಾಡಬೇಕು.

ಉ.—ಸರ್ಕಾರದವರಿಗೆ ಅದೇ ಉದ್ದೇಶವಿದೆ. ೨ ವರ್ಷಗಳಲ್ಲಿ ೧೨ ಟೆಲಿಗ್ರಾಫ್ ಆಫೀಸುಗಳನ್ನು ಏರ್ಪಡಿಸಲಿಕ್ಕಾಗುತ್ತದೆ. ಶೀಘ್ರವಾಗಿ ಬೇಲೂರು, ಶಿಕಾರಿಪುರ ಹೊನ್ನಾಳಿಗಳಲ್ಲಿ ಇಡಿಸಲು ಏರ್ಪಡಿಸುತ್ತೇವೆ

ಪ್ರ.—ವಿದ್ಯಾಭ್ಯಾಸದ ಫುದುವಟ್ಟು ಹಣಕ್ಕೆ ೫ ರೂ. ನಂತೆ ಬಡ್ಡಿಯನ್ನು ಕೊಡಿಸುವಂತೆ ಮಾಡಬೇಕು.

ಉ.—ಖಾಯಮ್ಮಾಗಿ ಒಟ್ಟಿಗೆ ಹಾಗೆ ಮಾಡಲಾಗುವುದಿಲ್ಲ.

ಪ್ರ.—ಮನೆಕಟ್ಟಲು ಸರ್ಕಾರಿ ನೌಕರರಿಗೆ ಸರ್ಕಾರದಿಂದ ಅಡ್ವಾನ್ಸು ಕೊಡುವಂತೆ ಖಾಸಗಿಜನರಿಗೂ ಕೊಡಿಸಬೇಕು.

ಉ.—ಹೌಸ್‌ಬಿಲ್ಡಿಂಗ್ ಸೊಸೈಟಿಗಳನ್ನು ಮಾಡಿಕೊಂಡು ಅದರ ಮೂಲಕ ಪಡೆಯಬಹುದು. ಅಂಥ ಸೊಸೈಟಿಗಳಿಗೆ ಬೇಕಿದ್ದರೆ ಸರ್ಕಾರದವರು ಸಹಾಯಮಾಡಬಹುದು.

ಪ್ರ.—ಮಲೆನಾಡಿನ ಎಲ್ಲಾ ಇಲಾಖೆಯ ೨೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಿಗಳಿಗೆಲ್ಲಾ ಸಂಬಳವನ್ನು ಹೆಚ್ಚಿಸಬೇಕು.

ಉ.—ಪರ್ಯಾಲೋಚನೆಯಲ್ಲಿದೆ.

ಪ್ರ.—೫೦ ರೂ. ನೊಳಗಣ ಸಂಬಳದವರಿಗೆಲ್ಲಾ ಕ್ಷಾಮದ ಭತ್ಯವನ್ನು ಸೇಕಡಾ ೨೫ ರಂತೆ ಕೊಡಿಸಬೇಕು.

ಉ.—ಧಾರಣೆಗಳು ಇಳಿಯುವವರೆಗೂ ಈಗಿನಂತೆಯೇ ಅಲೋಯನ್ಸನ್ನು ನಡೆಯಿಸುತ್ತೇವೆ.

ಪ್ರ.—ಮೆಡಿಕಲ್ ಇಲಾಖೆಯವರ ಮೈಲೇಜನ್ನು ಹೆಚ್ಚಿಸಬೇಕು.

ಉ.—ಎಲ್ಲಾ ಇಲಾಖೆಗಳ ಮೈಲೇಜಿನ ವಿಷಯವಾಗಿಯೂ ಹೊಸವಿಧಿಯು ಆಗುವುದರಲ್ಲಿದೆ.

ಪ್ರ.—ಶ್ಯಾನುಭೋಗರಿಗೆ ಪೋಟಗಿಯನ್ನು ಗ್ರಾಮದ ಎಲ್ಲಬಾಬಿನ ಉತ್ಪತ್ತಿಯ ಮೇಲೂ ಸೇಕಡಾ ೫ ರಂತೆಯೂ ಪಟೇಲರಿಗೆ ಸೇಕಡಾ ೪ ರಂತೆಯೂ ಕೊಡಲು ಏರ್ಪಡಿಸಬೇಕು.

ಉ.—ಜೀವನಕ್ಕೆ ತಕ್ಕಷ್ಟು ಸಂಬಳವನ್ನು ಅವರಿಗೆ ಕೊಡಬೇಕಾದರೆ ಶ್ಯಾನುಭೋಗರಿಂದ ತಕ್ಕಷ್ಟು ಕೆಲಸವು ನಮಗೆ ಆಗಬೇಕು. ನಾವು ಅವರುಗಳಿಗೆ ೧-೨ ರೂ. ನಂತೆ ಹೆಚ್ಚಿಸಿಕೊಟ್ಟರೆ ಅದರಿಂದ ಅವರಿಗೇನೂ ವಿಶೇಷ ಲಾಭವಾಗುವುದಿಲ್ಲ. ಸರ್ಕಾರಕ್ಕಾದರೋ ವೆಚ್ಚವು ೨ ಲಕ್ಷದ ಮೇಲೆಯೇ ಹೆಚ್ಚಾಗುತ್ತದೆ. ಆದರೂ ಈ ವಿಷಯವಾಗಿ ಆಲೋಚಿಸಿ ವರದಿಮಾಡಲು ನಿಯುಕ್ತವಾಗಿರುವ ಕಮಿಟಿಯವರು ಕಳುಹಿಸಿಕೊಟ್ಟಿರುವ ವರದಿಯು ಸರ್ಕಾರದ ಆಲೋಚನೆಯಲ್ಲಿದೆ.

ಪ್ರ.—ತೋಟಿಗಳ ವಿರಾಸೆಯನ್ನು ತಪ್ಪಿಸಿ ಅವರಿಗೆ ಸರ್ಕಾರವು ಸಂಬಳವನ್ನು ಗೊತ್ತುಮಾಡಿಕೊಡುವಂತೆ ಅಪ್ಪಣೆಯಾಗಬೇಕು.

ಉ.—ಈ ವಿಷಯವೂ ಸ್ಪೆಷಲ್ ಕಮಿಟಿಯ ವರದಿಯಲ್ಲಿ ಬಂದಿದೆ.

ಪ್ರ.—ಹೊಸನಮೂನೆಯ ಕಂದಾಯದ ರಸೀದಿಗಳಲ್ಲಿ ಶ್ಯಾನುಬೋಗರ ಮತ್ತು ಪಟೇಲರ ಇಬ್ಬರ ರುಜುವಿಗೂ ಸ್ಥಳವಿರುವುದು. ಇದರಿಂದ ವಸೂಲಿಕಾಲದಲ್ಲಿ ಇಬ್ಬರೂ ಹಾಜರಿರಬೇಕೆಂದು ಊಹೆ ತೋರುವುದು. ಆ ರಸೀದಿಯಲ್ಲಿ ಶ್ಯಾನುಭೋಗರ ರುಜುವೆಂಬುದನ್ನು ತೆಗೆಸಿಬಿಟ್ಟರೆ ರಸೀದಿಯನ್ನು ಕೊಡುವ ಭಾರವು ಪಟೇಲನ ಮೇಲೆ ಬೀಳುವುದು.

ಉ.—ಪಟೇಲರು ಅನೇಕರು ಅಕ್ಷರಸ್ಥರಲ್ಲದುದರಿಂದ ಈ ಪದ್ಧತಿಯಿದೆ. ಅವರೆಲ್ಲರೂ ಅಕ್ಷರಸ್ಥರಾದಮೇಲೆ ಪಟೇಲರೇ ಹಣವನ್ನು ತೆಗೆದುಕೊಂಡು ರಸೀದಿ ಕೊಡುವಂತೆ ಮಾಡಬಹುದು.

ಪ್ರ.—ಸಂಪೂರ್ಣವಾಗಿ ಮಳೆನೀರಿನಿಂದಲೇ ಸಾಗುವಳಿಯಾಗುತ್ತಿರುವ ತರಿಬಾಗಾಯಿತು ಜಮೀನುಗಳ ಮೇಲೆ ನೀರುಸರದಿ ವಸೂಲುಮಾಡುತ್ತಿರುವುದನ್ನು ತಪ್ಪಿಸಬೇಕು.

ಉ.—ಇರಿಗೇಷನ್ ಸೆಸ್ ರಿಯಾಯತಿಯ ಪರ್ಯಾಲೋಚನೆಯು ಸರ್ಕಾರಕ್ಕಿದೆ.

ಪ್ರ.—ಮೇಜರ್ ಕೆರೆಗಳನ್ನು ಸರ್ಕಾರದವರು ಸ್ವಂತ ಖರ್ಚಿನಿಂದ ಜೀರ್ಣೋದ್ಧಾರ ಮಾಡಿಸುವಂತೆಯೇ ಮೈನರ್ ಕೆರೆಗಳನ್ನೂ ಅವರೇ ಮಾಡಿಸಬೇಕು.

ಉ.—ಖರ್ಚಿನಲ್ಲಿ ⅓ ಭಾಗವನ್ನು ನಿರ್ಬಂಧವಾಗಿ ಪ್ರಜೆಗಳಿಂದ ಎತ್ತಿ ನಡೆಯಿಸಬಹುದೆಂದು ಏಕವಾಕ್ಯತೆಯಿಂದ ನೀವೇ ಒಪ್ಪಿರುವ ಕಾರಣ ಅದು ಹಿಂದೆಯೇ ವ್ಯವಸ್ಥೆಯಾಗಿಹೋಗಿದೆ.

ಪ್ರ.—ಸ್ವಂತ ಲಾಗುವಡಿನಿಂದ ಮಾಡಿಸಿದ ಕೆರೆಗಳ ಕೆಳಗಣ ಭೂಮಿಗಳಿಗೂ ನೀರುಸರದಿಯನ್ನು ತೆಗೆದುಕೊಳ್ಳುವುದನ್ನು ತಪ್ಪಿಸಬೇಕು. ನೀರಿಲ್ಲದೆ ಕೆರೆಕೆಳಗೆ ಜಮೀನು ವ್ಯವಸಾಯವಾಗದಿದ್ದರೂ ತರೀಕಂದಾಯ ತೆಗೆದುಕೊಳ್ಳುತ್ತಿರುವುದನ್ನು ತಪ್ಪಿಸಿ ಕುಷ್ಕಿಕಂದಾಯವನ್ನು ತೆಗೆದುಕೊಳ್ಳುವಂತೆ ಅಪ್ಪಣೆಮಾಡಬೇಕು.

ಉ.—ಈ ಸಂಬಂಧವಾದ ಪರ್ಯಾಲೋಚನೆಯೂ ನಡೆಯುತ್ತಿದೆ.

ಪ್ರ.—ಕೆರೆಗಳ ಮೀನುಹಿಡಿಯುವ ಹರಾಜು ಬಾಬಿನಿಂದ ಬರುವ ಹಣವು ಸರ್ಕಾರಕ್ಕೆ ಸೇರುತ್ತಿರುವುದನ್ನು ತಪ್ಪಿಸಿ ರೈತರಿಗೆ ಸೇರಿಸಿಕೊಡಬೇಕು. ಇದನ್ನು ಅವರು ಕೆರೆಗಳ ಆಬಾದಿಗೆ ಉಪಯೋಗಿಸಿಕೊಳ್ಳಬಹುದು.

ಉ.—ಸಾಲಾಬಾದ್ ಕಾಮಗಾರಿಯನ್ನು ರೈತರೇ ಮಾಡಿಕೊಳ್ಳುತ್ತಿರುವ ಕೆರೆಗಳ ಉತ್ಪತ್ತಿಯೆಲ್ಲಾ ಅವರಿಗೇ ಸೇರುವಂತೆ ರೂಲ್ಸಿದೆ. ಹಾಗೆಲ್ಲಾದರೂ ನಡೆಯದೆ ಇದ್ದರೆ ಅದನ್ನು ಸರ್ಕಾರದವರ ಗಮನಕ್ಕೆ ತನ್ನಿರಿ.

ಪ್ರ.—ಗ್ರಾಮದ ಲೆಕ್ಕ ಮೊದಲ್ಗೊಂಡು ರೆವಿನ್ಯೂ ಲೆಕ್ಕಗಳನ್ನೆಲ್ಲಾ ಪರೀಕ್ಷಿಸಲು ಪ್ರತಿ ಡಿಸ್ಟ್ರಿಕ್ಟಿಗೂ ಒಂದು ಪ್ರತ್ಯೇಕವಾದ ಆಡಿಟ್ ಸಿಬ್ಬಂದಿಯನ್ನು ಏರ್ಪಡಿಸಬೇಕು.

ಉ.—ಒಂದು ಗ್ರಾಮದ ಲೆಕ್ಕವನ್ನು ಆಡಿಟ್ ಮಾಡಬೇಕಾದರೆ ೨ ದಿನ ಹಿಡಿಯುತ್ತದೆ. ಸೇಕ್ದಾರರು ಶಿರಸ್ತೇದಾರರು ಮೊದಲುಗೊಂಡು ಅ|| ಕಮಿಷನರವರೆಗೂ ರೆವಿನ್ಯೂ ಉದ್ಯೋಗಿಗಳು ಆ ಲೆಕ್ಕಗಳನ್ನು ತನಿಖೆಮಾಡಬಹುದೇ ಹೊರತು ಬೇರೆ ಜನರು ಆಡಿಟ್ ಮಾಡಬೇಕಾದರೆ ದ್ವಿಗುಣವಾದ ಸಿಬ್ಬಂದಿ ಬೇಕಾಗುವುದು. ಸರ್ಕಾರಿ ಖರ್ಚನ್ನು ಕಡಿಮೆ ಹಾಕಬೇಕೆಂದು ನೀವೇ ಹೇಳುತ್ತೀರಿ. ಈ ಹೆಚ್ಚು ಖರ್ಚನ್ನು ಎಲ್ಲಿಂದ ಮಾಡುವುದು? ಮತ್ತು ಹೊರಗಣ ಆಡಿಟರು ಬಂದರೆ ರೆವಿನ್ಯೂ ಲೆಕ್ಕದ ಮರ್ಮಗಳನ್ನೆಲ್ಲಾ ಆಡಿಟ್ ಮಾಡಲಾಗುವುದೆ? ಅದುಕಾರಣ ಬೇರೆ ಜನರಲ್ ಆಡಿಟ್ ಮಾಡಿಸುವುದು ಸಾಧ್ಯವಲ್ಲ.

ಪ್ರ.—ನೆರೆಯ ಜಮೀನಿನವರು ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ವಿಚಾರಿಸಿ ಬಿಡಿಸಿಕೊಡುವ ಅಧಿಕಾರವನ್ನು ತಾ|| ಅಮಲ್ದಾರರುಗಳಿಗೆ ಕೊಡಿಸಬೇಕು.

ಉ.—ಸಿವಿಲ್‌ಕೋರ್ಟಿಗೇ ಆ ಅಧಿಕಾರವಿರುವುದು. ಅಮಲ್ದಾರರಿಗೆ ವಹಿಸುವುದು ಸಾಧ್ಯವಲ್ಲ. ರೆವಿನ್ಯೂ ಉದ್ಯೋಗಸ್ಥರು ಹದ್ದುಬಸ್ತನ್ನು ತೋರಿಸಿಕೊಡುತ್ತಾರೆ. ಭೂಮಿ ಸ್ವಾಧೀನಪಡಿಸಿಕೊಳ್ಳುವುದು ನಿಮ್ಮ ಕೆಲಸ.

ಎತ್ತಿನ ಚಹರೆ.

1. ಬೂದುಬಣ್ಣ, ನೆಟ್ಟಕೊಂಬು, ಕಡಹಲ್ಲು ಬಿದ್ದಿದೆ. ಬಾಲ ಉದ್ದವಾಗಿದೆ. ಮುಂಡ್ಯದಹಳ್ಳಿಕಡೆ ದನ. ಖರೀದಿ ಸುಮಾರು 250 ರೂ.
2. ಬಿಳುಪು, ನೆಟ್ಟಕೊಂಬು, ಕಡಹಲ್ಲು ಬಿದ್ದಿಲ್ಲ. ಬಾಲ ಉದ್ದವಾಗಿದೆ. ಬೆನ್ನಿನ ಮೇಲೆ ಕಳ್ಳಿಬಿದ್ದು ಗಾಯವಾಗಿ ಮಚ್ಚೆ ಕಾಣುತ್ತದೆ. ಮುಂಡ್ಯದಹಳ್ಳಿದನ. ಖರೀದಿ ಸುಮಾರು 240.
3. ಕಪ್ಪುಬೂದ, ಕೊಕ್ಕಕೊಂಬು, ಬಾಲ ಉದ್ದವಾಗಿದೆ. ಸ್ವಲ್ಪ ಬಡವಾಗಿದೆ. ಪ್ರಾಯವಾದ್ದು. ಕ್ರಯ ಸುಮಾರು 125 ರೂ.
4. ಕಪ್ಪುಬೂದ, ನೆಟ್ಟಗೋಡು, ಬಾಲ ಉದ್ದವಾಗಿದೆ. ಪ್ರಾಯವಾದ್ದು. ಕ್ರಯ ಸುಮಾರು 125 ರೂ.

ಈ ನಾಲ್ಕನ್ನು ಪತ್ತೆಮಾಡಿದವರಿಗೆ ಬಹುಮಾನ 50 ರೂ. ಕೊಡಲ್ಪಡುವುದು.

ಯಡತೊರೆ ಬಳೆನಂಜಪ್ಪ.

ಪತ್ರವ್ಯವಹಾರ.

ಔದಾರ್ಯ.

ಅಜ್ಜಂಪುರದ ದೊಡ್ಡಿಹಟ್ಟಿಯಲ್ಲಿ ಇರುವ ಗೌರ್ನಮೆಂಟ್ ಸೈಟ್ ಸ್ಕೂಲಿನಲ್ಲಿ ವಿದ್ಯಾರ್ಥಿಗಳು ಬಹಳವಾಗಿ ಸೇರಿರುವದರಿಂದ ಸ್ಥಳಸಂಕೋಚವಾಗಿರುವುದನ್ನು ಮ|| ರಾ|| ಅ|| ಹಾಲುಮತದ ಸಿರಿಯಣ್ಣನ ತಿಪ್ಪಣ್ಣನ ಚಿಕ್ಕಣ್ಣನವರ ಹೆಂಡತಿ ಗಂಗಮ್ಮನು ನೋಡಿ ಅದೇ ಸ್ಕೂಲು ಪಕ್ಕದಲ್ಲಿರುವ ತನ್ನ ಖಾಲಿಜಾಗವನ್ನು ಧರ್ಮಾರ್ಥವಾಗಿ ಬರೆದುಕೊಟ್ಟು ಅದನ್ನು ಸ್ಕೂಲು ಇಲಾಖಾ ಅಧ್ಯಕ್ಷರವರಿಗೆ ತಲುಪಿಸುವಂತೆ ಸ್ಕೂಲು ಹೆಡ್ಮಾಸ್ಟರವರ ವಶಕ್ಕೆ ಕೊಟ್ಟಿರುವುದನ್ನು ತಿಳಿದು ಜನಗಳು ತುಂಬಾ ಸಂತೋಷಪಡುತ್ತಾರೆ.

ಸ್ಥಳಿಕ.

ಮೈಸೂರು ಒಕ್ಕಲಿಗರ ವಿದ್ಯಾರ್ಥಿಗಳ ಅನ್ಯೋನ್ಯ.

ಮೈಸೂರು ಸಿಟಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರ್ ಮ|| ರಾ|| ಎಂ. ಮಾದಪ್ಪನವರು ಮತ್ತು ಇತರ ದೊಡ್ಡಮನುಷ್ಯರುಗಳಿಂದ ಒಂದು ಒಕ್ಕಲಿಗರ ಹಾಸ್ಟಲ್ ಏರ್ಪಡಿಸಲ್ಪಟ್ಟಿರುವುದು ಸುಯಷ್ಟು. ಈ ಹಾಸ್ಟಲಿನಲ್ಲಿ ಪ್ರಾರಂಭದಲ್ಲಿ ಬಹಳ ಕಮ್ಮಿ ವಿದ್ಯಾರ್ಥಿಗಳು ಬೋರ್ಡರಾಗಿದ್ದರು. ಈಗ ಹಾಸ್ಟಲ್ ವಿದ್ಯಾರ್ಥಿಗಳ ಸಂಖ್ಯೆ ಇಪ್ಪತ್ತರಹತ್ತಿರಕ್ಕೆ ಬಂದಿದೆ. ಇನ್ನೂ ವಿದ್ಯಾರ್ಥಿಗಳು ಬರುವದರಮೇಲೆಯೇ ಇದ್ದಾರೆ. ಕಳೆದ ಭಾ

ಸುವಾರ 12 ನೆ ತಾರೀಖಿನಲ್ಲಿ ಈ ಮೇಲೆ ನಮೂದಿಸಿರುವ ವಿದ್ಯಾರ್ಥಿಗಳ ಸಂಘವು ಮ|| ರಾ|| ಎಂ. ಮಾದಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿತು. ಈ ಸಂಘಕ್ಕೆ ಬಹು ಮಂದಿ ಒಕ್ಕಲಿಗರ ವಿದ್ಯಾರ್ಥಿಗಳು ಮೆಂಬರುಗಳಾಗಿ ಸೇರಿದರು. ಒಂದು ಡಿಬೇಟಿಂಗ್ ಸೊಸೈಟಿಯು ಸಹ ಏರ್ಪಾಡಾಯಿತು. ಈ ಯೂನಿಯನ್ ವಿಚಾರವಾಗಿ ಮಹಾರಾಜರವರ ಕೊಲಿಜಿಯೆಟ್ ಹೈಸ್ಕೂಲ್ ವಿದ್ಯಾರ್ಥಿಯಿಂದ ಒಂದು ಸಂಸ್ಕೃತ ಕೊಟೇಷನ್ ಕೂಡಿದ ಸಣ್ಣ ಉಪನ್ಯಾಸವು ಕೊಡಲ್ಪಟ್ಟಿತು. ಕಳೆದ ದಿನ ಭಾನುವಾರ ಸ್ತ್ರೀ ವಿದ್ಯಾಭ್ಯಾಸದ ವಿಷಯವಾಗಿ ಒಂದು ಉಪನ್ಯಾಸವು ಡಿಟೋ ಹೈಸ್ಕೂಲಿನ ವಿದ್ಯಾರ್ಥಿಯಾದ ಮ|| ಕೆ. ಆರ್. ತಿಮ್ಮಯ್ಯನವರಿಂದ ಕೊಡಲ್ಪಟ್ಟಿತು. ಈ ಯೂನಿಯನ್ನನ್ನು ಅಭಿವೃದ್ಧಿಗೆ ತರುವುದಕ್ಕೆ ಕೆಲವು ಜನ ಒಕ್ಕಲಿಗ ಮಹಾಶಯರು ಧನಸಹಾಯವನ್ನು ಮಾಡಿದ್ದಾರೆ. ಮ|| ರಾ|| ರೈಸ್‌ಮಿಲ್ ಮಾದಯ್ಯನವರು ಇದಕ್ಕಾಗಿ (೨೫) ರೂಪಾಯಿಗಳನ್ನೂ, ಜವಳಿ ಅಂಗಡಿ ಮ|| ರಾ|| ವಿ. ತಿಮ್ಮಯ್ಯನವರು (15) ರೂಪಾಯಿಗಳನ್ನೂ ಮ|| ರಾ|| ಎಂ. ಪಿ. ಶಿವಲಿಂಗಯ್ಯನವರು (10) ರೂಪಾಯಿಗಳನ್ನೂ ಮ|| ರಾ|| ಕೆಂಟ್ರಾಕ್ಟರ್ ಕೆಂಪಣ್ಣನವರು (5) ರೂಪಾಯಿಗಳನ್ನೂ ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರ್ ಮ|| ರಾ|| ಎಸ್. ಎ. ಜವರಯ್ಯನವರು (5) ರೂಪಾಯಿಗಳನ್ನೂ, ಅಕ್ಕಿಅಂಗಡಿ ಮ|| ರಾ|| ಕೆಂಪಣ್ಣನವರು (2) ರೂಪಾಯಿಗಳನ್ನೂ ಮ|| ಸಾ|| ಗಂಜಾಮಿನ ಚನ್ನಪ್ಪನವರು (2) ರೂಪಾಯಿಗಳನ್ನೂ ಚಂದಾ ಕೊಟ್ಟಿರುತ್ತಾರೆ. ಮುಂದೆ ಚಂದಾ ಕೊಡುವವರ ಸಂಖ್ಯೆ (50) ಮೇಲೆಯೇ ಇದೆ. ಈಗ ವಸೂಲಾಗಿರುವ ಫಂಡನ್ನು ಮ|| ರಾ|| ಜವಳಿ ಅಂಗಡಿ ವಿ. ತಿಮ್ಮಯ್ಯನವರನ್ನು ಟ್ರೆಜರರನ್ನಾಗಿ ಮಾಡಿ ಅವರ ವಶದಲ್ಲಿ ಕೊಟ್ಟು ಅನಂತರ ಬ್ಯಾಂಕಿನಲ್ಲಿ ಇನ್‌ವೆಸ್ಟ್ ಮಾಡುವದೆಂದು ನಿಷ್ಕರ್ಷೆಯಾಗಿದೆ. ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿರುವ ಜಿ. ಎಚ್. ಕಾಳೇಗೌಡ ಎಂಬ ವಿದ್ಯಾರ್ಥಿಯನ್ನು ಅಸಿಸ್ಟೆಂಟ್ ಟ್ರೆಜರರಾಗಿ ನೇಮಿಸಿದೆ. ಹಿಂದುಳಿದ ವಿದ್ಯಾರ್ಥಿಗಳನ್ನು ಉನ್ನತಸ್ಥಿತಿಗೆ ತರುವ ಪ್ರಯುಕ್ತ ನಮ್ಮ ಶ್ರೀಮನ್ಮಹಾರಾಜರವರೂ ಮತ್ತು ಯುವರಾಜರವರೂ ಮಾಡಿರುವ ಉದಾರವಾದ ಸಹಾಯಕ್ಕಾಗಿ ನಮ್ಮ ಜೀವಾವಧಿ ಸಾವು ಬಹಳ ಕೃತಜ್ಞತೆಯುಳ್ಳವರಾಗಿದ್ದೇವೆ. ಆ ದಿವಸದ ಮೀಟಿಂಗಿನಲ್ಲಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದನಂತರ ಸಭಾಧ್ಯಕ್ಷರಿಗೆ ವಂದನೆಯನ್ನು ಮಾಡಿ ಸಭಾ ಬರಖಾಸ್ತು ಮಾಡಲ್ಪಟ್ಟಿತು.

ಹಾಸ್ಟಲ್ ವಿದ್ಯಾರ್ಥಿ.

ಹಿರೇಕೆರೂರು.

ಈ ಮೊದಲು ಪ್ರಸಿದ್ಧಮಾಡಿದಮೇರೆಗೆ ಹಿರೇಕೆರೂರು ಗ್ರಾಮದಲ್ಲಿ ಕೋಡ ತಾಲ್ಲೂಕು ವೀರಶೈವ ವಿದ್ಯಾವರ್ಧಕ ಸಮ್ಮೇಲನವು ತಾರೀಖು ೧೯-೨೦-೨೧-೨೨ ನೇ ಅಕ್ಟೋಬರ್ ೧೯೨೯ ಈ ನಾಲ್ಕು ದಿವಸ ಬಹು ವಿಜೃಂಭಣೆಯಿಂದ ಜರಗಿತು. ಸಭೆಯ ಅಧ್ಯಕ್ಷಸ್ಥಾನವನ್ನು ವೀರಶೈವರ ಅಭಿವೃದ್ಧಿಗಾಗಿ ಅವಿಶ್ರಾಂತಶ್ರಮವನ್ನು ವಹಿಸಿ ಅಲೌಕಿಕ ಕೀರ್ತಿಯನ್ನು ಪಡೆದಿರುವ ರಾವ್‌ಬಹದ್ದೂರ್ ರುದ್ರಗೌಡ ಅರಟಾಳ ಬಿ. ಎಸ್. ಸಿ ಯವರು ವಹಿಸಿದ್ದರು. ಸಭೆಗೆ ಶ್ರೀ ಪ್ರಣವಸ್ವರೂಪಿ ದಾವಣಗೆರೆ ವಿರಕ್ತಮಠದ ಮೃತ್ಯುಂಜಯ ಮಹಾಸ್ವಾಮಿಗಳವರೂ ಮೆ|| ಶಾಂತವೀರಪ್ಪಾ ಅಣ್ಣಾ ಮೆಣಸಿನಕಾಯಿ ಧಾರವಾಡ ರಾವ್ ಬಹದ್ದೂರ ಮಹಾಂತಶೆಟ್ಟಿ ನೇಸುರಗಿ ಮಿಸ್. ಮೆಕಾಫೀ ಗರ್ಲ್‌ಸ್ಕೂಲ್ ಇನ್‌ಸ್ಪೆಕ್ಟ್ರೆಸ್ ಧಾರವಾಡ ಮೆ|| ಮಾಮಲೇದಾರ ಸಾಹೇಬ ತಾಲ್ಲೂಕು ಕೋಡ ಈ ಮಹನೀಯರುಗಳಲ್ಲದೆ ಈ ತಾಲ್ಲೂಕಿನ ಯಾವತ್ತೂ ವೀರಶೈವ ಪ್ರಮುಖರೂ ಪರಸ್ಥಳದ ವೀರಶೈವ ಪ್ರಮುಖರೂ ಕೂಡಿ ೫-೬ ಸಾವಿರ ಜನರು ನೆರೆದಿದ್ದರು. ಸಭೆಯ ಮೊದಲನೇ ದಿವಸ ರಾವ್‌ಬಹದ್ದೂರ್‌ರವರನ್ನು ರಥದಮೇಲೆ ಕುಳ್ಳಿರಿಸಿ ಜನರು ಅತ್ಯಂತ ಪವಿತ್ರತಮ ಭಕ್ತಿಯಿಂದ ಊರೆಲ್ಲ ಮೆರವಣಿಗೆ ಮಾಡಿ ಸಭಾಮಂಟಪಕ್ಕೆ ಕರತಂದು ಅಧ್ಯಕ್ಷಸ್ಥಾನದಮೇಲೆ ವಿರಾಜಮಾನಗೊಳಿಸಿದರು. ಸಭೆಯಲ್ಲಿ ಅಧ್ಯಕ್ಷ ಮಹಾಶಯರಾದ ರಾವ್ ಬಹದ್ದೂರ ರುದ್ರಗೌಡ ಅರಟಾಳ ಬಿ. ಎಸ್. ಸಿ. ಯವರಿಗೆ ಇವರು ತಮ್ಮ ವೀರಶೈವರ ಧಾರ್ಮಿಕ ನೈತಿಕ ಸಾಮಾಜಿಕ ವಿಷಯಗಳ ಅಭಿವೃದ್ಧಿಗಾಗಿ ಮಾಡಿದ ಉಪಕಾರಕ್ಕಾಗಿ ಕೃತಜ್ಞತೆಯನ್ನು ಪ್ರಕಟಿಸುವ ಕುರಿತು ಕೋಡ ತಾಲ್ಲೂಕಿನ ವತಿಯಿಂದ ಒಂದು ಮಾನಪತ್ರವೂ, ಒಂದು ಸುವರ್ಣಪದಕವೂ ಸಮರ್ಪಿಸಲ್ಪಟ್ಟವು. ಆಮೇಲೆ ಕೋಡ ತಾಲ್ಲೂಕಿನಲ್ಲಿ ಮೊದಲನೇ ಗ್ರಾಜುಯೇಟರಾದ ಮಿ|| ಎಸ್. ಬಿ. ಹಿರೇಮಠ ಬಿ. ಎ. ಕಾಗಿನೆಲ್ಲಿ ಇವರಿಗೂ ತಾಲ್ಲೂಕಿನ ವೀರಶೈವರ ವತಿಯಿಂದ ವಿದ್ಯಾಪ್ರೋತ್ಸಾಹನಾರ್ಥ ಒಂದೊಂದು ಸುವರ್ಣಪದಕಗಳು ಕೊಡಲ್ಪಟ್ಟವು. ಇದಲ್ಲದೆ ಸ್ತ್ರೀ ಶಿಕ್ಷಣ, ವ್ಯಾಪಾರ ಒಕ್ಕಲತನ, ಮೊದಲಾದ ವಿಷಯಗಳ ಬಗ್ಗೆ ಎಷ್ಟೋ ವ್ಯಾಖ್ಯಾತರು ಭಾಷಣಮಾಡಿದರು. ಕಡೆಯದಿವಸ ಮಿ|| ಪಾಟೀಲ ಬಿ. ಎ. ಜಿ. ಕಂಚಲಿ ಇವರು ಕೋಡತಾಲ್ಲೂಕಿನ ವೀರಶೈವರಲ್ಲಿ ವಿದ್ಯಾಜಾಗ್ರತೆಮಾಡುವ ಕುರಿತು ಭಾಷಣಮಾಡಿ ಕೋಡ ತಾಲ್ಲೂಕ್ ವೀರಶೈವ ವಿದ್ಯಾವರ್ಧಕ ಸಂಘಸ್ಥಾಪನೆ ಮಾಡಬೇಕೆಂಬ ಸೂಚನೆಯನ್ನು ತರಲು ಅದು ಸರ್ವಾನುಮತದಿಂದ ಪಾಸಾಯಿತು. ಮತ್ತು ವೀರಶೈವ ವಿದ್ಯಾವರ್ಧಕ ಸಂಘದ ಉದ್ದೇಶವು ಈಡೇರುವ ನಿಮಿತ್ತ ತಾಲ್ಲೂಕ್ ಕಮಿಟಿಯನ್ನು ಸ್ಥಾಪನೆಮಾಡಬೇಕೆಂದು ನಿರ್ಧರವಾಗಿ ಅದು ಸರ್ವಾನುಮತದಿಂದ ಪಾಸಾಗಿ ಸ್ಥಾಪಿಸಲ್ಪಟ್ಟಿತು. ಮತ್ತು ಹಿರೇಕೆರೂರಲ್ಲಿ ಇಂಗ್ಲೀಷ್ ಸ್ಕೂಲನ್ನು ಸ್ಥಾಪಿಸಬೇಕೆಂದು ನಿಶ್ಚಿತವಾಗಿ ಆ ಶಾಲೆಯ ಸ್ಥಾಪನಾರ್ಥ ನೆರೆದ ಮಹಾಶಯರು ಕೂಡಿ ೧೦೦೦೦ ರೂಪಾಯಿಗಳನ್ನು ವರ್ಗಣಿಮಾಡಿಕೊಟ್ಟರು. ಈ ಪೈಕಿ ೬೪೦೦ ರೂಪಾಯಿರೋಖ ವಸೂಲಾಯಿತು ಮತ್ತು ತಾಲ್ಲೂಕು ಕಮಿಟಿಯ ಕೆಳಗೆ ತಾಲ್ಲೂಕಿನಲ್ಲಿ (೧೧) ಗ್ರೂಪುಮಾಡಿ ಪ್ರತಿಯೊಂದು ಗ್ರೂಪಿಗೆ ನಾಲ್ಕಾರುಮಂದಿ ಮೆಂಬರರನ್ನು ಚುನಾಯಿಸಲಾಯಿತು. ಮತ್ತು ಆಯಾ ಗ್ರೂಪಿನ ಮೆಂಬರರು ತಮ್ಮ ಭಾಗದ ವೀರಶೈವರಿಗೆ ವಿದ್ಯೆಯ ಬಗ್ಗೆ ಪ್ರೋತ್ಸಾಹಕೊಟ್ಟು ಪ್ರತಿಯೊಂದು ಗ್ರೂಪಿಗೆ ೨೦೦೦ ರೂಪಾಯಿ ವರ್ಗಣಿ ಕೂಡಿಸಿ ಹಿರೇಕೆರೂರಲ್ಲಿ ಹಾಯಸ್ಕೂಲ ಸ್ಥಾಪನೆಮಾಡಬೇಕೆಂಬ ಭಾವೀ ಉದ್ದೇಶವನ್ನು ಈಡೇರಿಸಬೇಕೆಂದು ಸೂಚನೆ ತಂದದ್ದಕ್ಕೆ ಆಯಾ ಗ್ರೂಪಿನ ಮೆಂಬರರು ಸ್ವಸಂತೋಷದಿಂದ ಒಪ್ಪಿಕೊಂಡರು. ಕಡೆಗೆ ಅಧ್ಯಕ್ಷಮಹಾಶಯರ ಅತ್ಯಂತ ಸ್ಫೂರ್ತಿದಾಯಕ ಅನುಭವಸಂಪೂರಿತ ಚಿತ್ತಾಕರ್ಷಕ ಸಮಾರೋಪಣಭಾಷಣವೂ, ಶ್ರೀಮೃತ್ಯುಂಜಯ ಮಹಾಸ್ವಾಮಿಗಳವರ ಕರುಣಾ ರಸಭರಿತವಾದ ಆಶೀರ್ವಾದ ಪರಭಾಷಣವೂ ಆದವು. ಆಮೇಲೆ ಮಿ|| ಬೂದಿಹಾಳಮಠ ಇವರು ಮುಪ್ಪಿನವರಾದ ರಾವ್‌ಬಹದ್ದೂರ್‌ರವರು ಅತ್ಯಂತ ಶ್ರಮವನ್ನು ವಹಿಸಿ ಹಿರೇಕೆರೂರಿಗೆ ಬಂದು ದರ್ಶನಲಾಭವನ್ನು ಒದಗಿಸಿಕೊಟ್ಟಬಗ್ಗೆಯೂ ಹಿರೇಕೆರೂರು ತಾಲ್ಲೂಕಿನ ವೀರಶೈವರ ವಿದ್ಯೆಯ ಪ್ರೋತ್ಸಾಹನಾರ್ಥ ಅಪಾರವಾದ ವರ್ಗಣೀ ಕೂಡಿಸಿಕೊಟ್ಟಬಗ್ಗೆಯೂ ಅಭಾರ ಮನ್ನಿಸಿದುದಲ್ಲದೆ ಇತರ ಯಾವತ್ತು ಸಭಿಕರ ಅಭಾರಮನ್ನಿಸಿದರು. ಆಮೇಲೆ ಅಧ್ಯಕ್ಷ ಮಹಾಶಯರನ್ನೂ ಮಿಕ್ಕ ಸಭಿಕ ಮಹಾಶಯರನ್ನೂ ಹಾರತುರಾಯಿ ಮೊದಲಾದುವುಗಳಿಂದ ಸತ್ಕರಿಸಿ ಸಭೆಯನ್ನು ಮಂಗಲ ಮಾಡಲಾಯಿತು.

ಪ್ರತ್ಯಕ್ಷದರ್ಶಿ.

ಗುರುವರ್ಗದ ಇತಿಹಾಸ.

ಅಯ್ಯಾ ಪತ್ರಕರ್ತರೆ!

ನಮ್ಮ ವೀರಶೈವ ಸಮಾಜದಲ್ಲಿ ಕಾಲಾನುಸಾರವಾಗಿ ಅಭಿವೃದ್ಧಿಹೊಂದುವ ಪ್ರಯತ್ನಗಳೂ ಚಿಹ್ನೆಗಳೂ ದಿನದಿನಕ್ಕೆ ಕಾಣುತ್ತಿರುವದು ಆನಂದವೇ ಸರಿ. "ಪುಟ್ಟರಾಜ ಒಡೆಯರ ಇನಾಮದಾರ ಚವುಡಯ್ಯ ದಾನಪುರ" ಇವರು ವೀರಶೈವಮತದ ಗುರುವರ್ಗದ ಇತಿಹಾಸವನ್ನು ಬರೆಯಿಸಬೇಕೆಂದು ಒಂದು ಹೊಸ ಪ್ರಯತ್ನವನ್ನು ಮಾಡಿ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ಇದು ಸ್ತುತ್ಯವಾದ ಕಾರ್ಯ. ಈ ಪ್ರಯತ್ನವು ಸಫಲವಾಗಿ ಕೊನೆಗಂಡರೆ ಒಡೆಯರವರಿಗೆ ಒಳ್ಳೇ ಕೀರ್ತಿಯು ಬರುವುದು ಸಹಜ. ಉದ್ದೇಶವು ಘನತರವಾಗಿರುವಂತೆ ಕಾರ್ಯಸಾಫಲ್ಯವೂ ಮಹಾಪ್ರಯತ್ನ ಸಾಧ್ಯವಾಗಿರುತ್ತದೆ. ಪ್ರತಿಯೊಂದು ಸಂಸ್ಥಾನದವರೂ ದೇಶದಮೇಲಿರುವ ತಂತಮ್ಮ ಶಾಖಾಮಠಗಳ ಸೆನ್ಸಸ್ಸನ್ನು ತೆಗೆದಿಡಿಸಬೇಕೆಂಬ ಯೋಚನೆಯು ೨೦ ವರ್ಷಗಳ ಹಿಂದೆಯೇ ಕೆಲವರಲ್ಲಿ ಹುಟ್ಟಿದ್ದು ಕಾರ್ಯಮುಖವಾಗದೆ ನಿಂತುಹೋಗಿತ್ತು. ಈಗ ಅದು ನೆರವೇರಿದರೆ ಸಮಾಜಕ್ಕೆಲ್ಲಾ ಸಂತೋಷವೇ ಸರಿ. ನಮ್ಮ ಮತದಲ್ಲಿ ಇತರ ಮತಗಳಲ್ಲಿರುವಂತೆ ಬೆರಳುಗಳಮೇಲೆ ಎಣಿಸುವಷ್ಟು ಮಠಗಳಿರದೆ ನಾನಾಂಕಿತಮಠಗಳೂ ಕೂಡ ಸಾವಿರಗಟ್ಟಲೆ ಇರುತ್ತವೆ. ಅವುಗಳು ಇರುವಸ್ಥಲಕ್ಕೆಲ್ಲಾ ಹೋಗಿ ಅವುಗಳಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಅವುಗಳ ಕರ್ತರ ಮರ್ಜಿಯನ್ನನುಸರಿಸಿ ಕೇಳಿ ತಿಳಿದುಕೊಳ್ಳುವುದು ಸುಲಭವಾದ ಕಾರ್ಯವಲ್ಲ. ಸರ್ಕಾರದವರು ಪ್ರಯತ್ನಪಟ್ಟರೂ ಪ್ರೈವೇಟ್ ಜನಗಳಿಂದ ಅವರ ಆಸ್ತಿಪಾಸ್ತಿ ಮೊದಲಾದ ವಿಷಯಗಳನ್ನು ಕುರಿತ ವಿವರಣವನ್ನು ಅರಿತುಕೊಳ್ಳುವುದು ಪರಮ ಪ್ರಯಾಸವಾಗುತ್ತದೆ. ಹೀಗಿರುವಾಗ ಸಾಮಾನ್ಯ ಜನರು ಪ್ರಯತ್ನಿಸಿದರೆ ಎಷ್ಟು ಅನುಕೂಲವಾಗಿ ಸಾಗಬಹುದೋ ಅದೂ ಗೊತ್ತೇ ಇದೆ ಆದರೂ ನಿರುತ್ಸಾಹಪಟ್ಟು ಬಿಡತಕ್ಕ ಕೆಲಸವಲ್ಲ. ಒಡೆಯರು ಅದಕ್ಕಾಗಿ ಇಟ್ಟಿರುವ ಇನಾಮು ೨೫೦ ರೂ. ಬಹಳ ಅಲ್ಪವೆಂದೇ ಹೇಳಬೇಕಾಗುತ್ತದೆ. ವಿಷಯಸಂಗ್ರಹಕ್ಕಾಗಿ ದೇಶಾಟನೆ ಮಾಡುವವರಿಗೆ ಸಾವಿರಾರು ರೂ. ಗಳು ಗಾಡಿ ಬಾಡಿಗೆಗೇ ಸಾಕಾಗಲಾರವು. ಹೀಗಿರುವಾಗ ಇವರ ಇನಾಮು ಯಾವ ಮೂಲೆಗೆ? ಇನಾಮಿನ ಆಸೆಯಿಡದೆ ಅಭಿಮಾನಿಗಳಾದ ಕೆಲವು ಜನರು ಇದಕ್ಕಾಗಿ ಪ್ರಾಂತಿಕವಾರು ನಿಂತು ಕೆಲಸಮಾಡಿದರೆ ಸಾಧ್ಯವಾಗುವ ಸಂಭವವಿದೆ.

ಮತ್ತು ಇದನ್ನು ಪರಮತದವರು ಸಮರ್ಪಕವಾಗಿ ಮಾಡುವರೆಂದು ಊಹಿಸುವುದು ಸರಿಯಾಗಿಲ್ಲ. ಅವರಿಗೆ ಇತರ ಮತದ ಪ್ರಾಶಸ್ತ್ಯರಕ್ಷಣೆಯಮೇಲೆ ಗಮನವಿರುವುದು ಕಂಡೇ ಇದೆ. ದುಡ್ಡಿನಾಸೆಗೆ ಒಂದುವೇಳೆ ಅಂಥವರು ಈ ಕೆಲಸವನ್ನು ಕೈಕೊಳ್ಳಬೇಕು. ದುಡ್ಡಿಗಾಗಿ ದುಡಿಯುವ ಕೆಲಸವು ಸಂತೆಗೆ ಮೂರುಮೊಳ ನೆಯ್ದಂತೆ ಆಗಿರುವುದೇ ಹೊರತು ಎಂದಿಗೂ ಪ್ರಮಾಣಭೂತವಾಗಿರಲಾರದು. ಅದಕ್ಕಾಗಿ ಸ್ವಮತಸ್ಥರಿಗೇ ಈ ಕಾರ್ಯಭಾರವು ಸೇರಿರುವಂತೆ ಪ್ರಕಟನೆ ಮಾಡಬೇಕಾಗಿತ್ತು. ಅಲ್ಲದೆ ಈ ಪ್ರಯತ್ನದಲ್ಲಿ ಹೊಕ್ಕವರು ವಿಸ್ತಾರ ಮನೋಭಾವದಿಂದ ದೂರದೃಷ್ಟಿಯಿಟ್ಟು ಕೆಲಸ ಮಾಡಬೇಕು. ಎತ್ತಿಗೊಳ್ಳುತ್ತಲೂ ಇಂಥ ಕಾರ್ಯಯತ್ನವನ್ನು ವೀರಶೈವ ಸಮಾಜದವರಿಗೇ ಮೊದಲು ಪ್ರಕಟಿಸಿ ತಿಳಿಸಬೇಕಾಗಿರುವಲ್ಲಿ, ಮತಕ್ಕೆ ಮೊದಲನೆ ಪತ್ರವಾಗಿರುವ ಸ್ಟಾರಿನಲ್ಲಿ ಇದನ್ನು ಪ್ರಕಟಿಸದೆ, ಸಮಯ ಸಿಕ್ಕಿದಾಗ ವೀರಶೈವ ಮತದಮೇಲೆ ಕಲ್ಲೊಗೆಯುತ್ತಿರುವ ಪರರ ಪತ್ರಿಕೆಗಳಲ್ಲಿ ಈ ಜಾಹೀರಾತನ್ನು ಪ್ರಕಟಿಸಲು ಕೊಟ್ಟಿರುವುದನ್ನು ನೋಡಿದರೆ ಒಡೆಯರು ಯಾವ ಉದ್ದೇಶದಿಂದ ಈ ಬಾಬಿನಲ್ಲಿ ಕೈಹಾಕಿರುವರೋ ಅದರಲ್ಲಿ ಸಂಶಯಪಡಬೇಕಾಗಿದೆ. ಸಂಕುಚಿತ ಅಥವಾ ದುಷ್ಟಮನೋಭಾವದಿಂದ ಇಂಥ ಕೆಲಸಕ್ಕೆ ಆರಂಭಿಸಿದರೆ ಒಳ್ಳೇದಕ್ಕೆ ಬದಲಾಗಿ ಕೆಟ್ಟ ಪರಿಣಾಮವಾಗುವ ಸಂಭವವೇ ಹೆಚ್ಚಾಗಿ ಉಂಟು.

ಈ ಗ್ರಂಥಕ್ಕೆ ಗುರುವರ್ಗದ ಇತಿಹಾಸವೆಂದು ಹೆಸರಿಟ್ಟು ಅದರಲ್ಲಿ "ವಿರಕ್ತಮಠಗಳ ಹಾಗೂ ವಿರಕ್ತಮಠಾಧಿಪತಿಗಳ ಚರಿತ್ರ ತೋರಿಸುವ ಕಾರಣವಿಲ್ಲ. ಗುರುವರ್ಗದ ಮಠಾಶ್ರಯದಿಂದ ವಿರಕ್ತರು ಜೀವಿಸುತ್ತಿದ್ದಲ್ಲಿ ಅಷ್ಟುಮಾತ್ರ ಮುದ್ದಾಂ ಶೋಧಿಸಿ ಬರೆಯಬೇಕು" ಎಂದು ಪ್ರಸ್‌ಮಾಡಿ ಉದ್ದೇಶಪೂರ್ವಕ ಈ ವಾಕ್ಯಗಳನ್ನು ಸೇರಿಸಿರುವುದನ್ನು ನೋಡಿದರೆ ಉದ್ದೇಶದ ತಳದಲ್ಲಿ ವಿಷಬೀಜವನ್ನು ನಾಟಿರುವಂತೆ ಕಾಣುತ್ತದೆ. ಪಟ್ಟಚರಂತಿಗೆಯವರ ವಿಷಯಗಳನ್ನಷ್ಟನ್ನೇ ಇದರಲ್ಲಿ ಬರೆಯಿಸಿಕೊಳ್ಳಬೇಕೆಂಬ ಉದ್ದೇಶವಿದ್ದರೆ ವಿರಕ್ತರ ಮಾತನ್ನು ಇದರಲ್ಲಿ ಎತ್ತಬೇಕಾದದ್ದೇ ಇರಲಿಲ್ಲ. ಹಾಗೆ ಮಾಡಿಕೊಂಡಿದ್ದರೆ ಯಾವ ಆಕ್ಷೇಪವೂ ಇರಲು ಕಾರಣವಿಲ್ಲ. ಗುರುವರ್ಗದ ಮಠಾಶ್ರಯದಿಂದ ಉಪಜೀವಿಸುವ ವಿರಕ್ತರಿದ್ದರೆ ಅದನ್ನು ಮುದ್ದಾಂ ಶೋಧಿಸಿ ಬರೆಯಬೇಕೆಂದು ಒತ್ತಿ ಹೇಳಿರುವುದನ್ನು ನೋಡಿದರೆ ಪಟ್ಟಚರಂತಿಗೆಯವರಿಂದಲೂ ಪೂಜ್ಯವಾಗಿರುವ ವಿರಕ್ತಮಂಡಲಿಯ ಪೂಜ್ಯತೆಯನ್ನು ಆಚ್ಛಾದಿಸಿಬಿಟ್ಟು, ವಿರಕ್ತರು ಪರೋಪಾಶ್ರಯದಲ್ಲಿರುವರೆಂಬುದನ್ನು ಕಲ್ಪಿಸಿ ಕಟ್ಟುಕತೆಯನ್ನು ಮಾಡಿಸುವದಕ್ಕಾಗಿ ಈ ಬೂಟಾಟಿಕೆಯು ಎತ್ತಲ್ಪಟ್ಟಿದೆಯೋ ಏನೋ ಎಂದು ಅನೇಕರು ಸಂಶಯಪಡುತ್ತಿದ್ದಾರೆ. ಇದೇ ನಿಜವಾಗಿದ್ದರೆ ಸಮಾಜಕ್ಕೆ ಇದು ವಿಘಾತಕಪ್ರಯತ್ನವಾಗಿರುತ್ತದೆ. ಯಾವದೋ ಸುದೈವದಿಂದ ನಮ್ಮ ಇಂಡ್ಯಾದೇಶಕ್ಕೆ ಸರ್ವಸಮದೃಷ್ಟಿಯುಳ್ಳ ಆಂಗ್ಲ ಬಹದ್ದೂರ್‌ರವರ ಸಾಮ್ರಾಜ್ಯಾಶ್ರಯವು ಪ್ರಾಪ್ತವಾಗಿದೆ. ಪ್ರತಿ ಜನಾಂಗವೂ ಪರನಿರ್ಬಂಧವಿಲ್ಲದೆ ಸ್ವತಂತ್ರವಾಗಿ ಆತ್ಮೋನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಅವಕಾಶವುಂಟಾಗಿದೆ. ಇಂಥ ಸುಸಮಯದಲ್ಲಿ ನಮ್ಮ ನಮ್ಮಲ್ಲಿ ಏಕಮತ್ಯವನ್ನು ವೃದ್ಧಿಪಡಿಸಿಕೊಂಡು ವಿದ್ಯೆಯನ್ನೂ, ಸಂಪತ್ತನ್ನೂ, ಗೌರವವನ್ನೂ, ಪ್ರತಿಷ್ಠೆಯನ್ನೂ ಹೆಚ್ಚಿಸಿಕೊಳ್ಳುವಕಡೆಗೆ ಲಕ್ಷ್ಯಕೊಡದೆ, ಆತ್ಮಘಾತಕವಾದ ಭೇದವೃದ್ಧಿಯ ಕಡೆಗೆ ಕ್ಷುಲ್ಲಕಮನಸ್ಸನ್ನಿತ್ತು ಪ್ರವರ್ತಿಸುವದು ದುರ್ದೈವವಲ್ಲದೆ ಸಮಾಜದ ಸುದೈವವೆನಿಸುವದಿಲ್ಲ. ಒಡೆಯರಂಥ ಸುಧಾರಿಸಿದ ವಿದ್ಯಾವಂತರು ಅಂಥ ಕ್ಷುಲ್ಲಕಭಾವಗಳಿಗೆ ಮನಸ್ಸಿನಲ್ಲಿ ಇಂಬುಗೊಡಬಾರದೆಂದು ನಮ್ಮಂಥಾವರ ಕೋರಿಕೆ. ಗುರುವರ್ಗದ ಪ್ರಾಶಸ್ತ್ಯರಕ್ಷಣದಲ್ಲಿ ಬದ್ಧಕುತೂಹಲರಾಗಿರುವ ನಮ್ಮ ಮಿತ್ರರನೇಕರು ಈ ಇತಿಹಾಸ ಶೋಧನೆಗಾಗಿ ಇದುವರೆಗೇ ಎಷ್ಟೋ ದೂರ ಕೆಲಸ ಮಾಡಿರುವರು. ಈ ಸಮಯದಲ್ಲಿ ಅದನ್ನು ಮತ್ತಷ್ಟು ಪರಿಪೂರ್ಣಗೊಳಿಸಬೇಕೆಂಬ ಕುತೂಹಲವು ಹೆಚ್ಚಾಗಿರುವದು. ಆದಕಾರಣ ಸದರಿ ಜಾಹಿರಾತಿನಲ್ಲಿ ಮೇಲ್ಕಂಡಂತೆ ತೋರಿಬಂದಿರುವ ಸಂಶಯದ ನಿವಾರಣೆಗಾಗಿ ಸದರಿ ಒಡೆಯರವರು ಈ ಸಂದರ್ಭದಲ್ಲಿ ಮಾಡಿಕೊಂಡಿರುವ ಉದ್ದೇಶಗಳೇನೆಂಬುವದನ್ನು ವಿವರವಾಗಿ ಪ್ರಕಟಿಸಬೇಕೆಂದು ಕೋರುತ್ತೇನೆ. ಹಾಗಲ್ಲದೆಹೋದರೆ ಸಮಾಜದ ಜನರಲ್ಲಿ ದ್ವೈಧೀಭಾವವನ್ನು ಹುಟ್ಟಿಸುವದಕ್ಕಾಗಿಯೇ ಈ ಕ್ಷುಲ್ಲಕಪ್ರಯತ್ನಕ್ಕೆ ಕೈಹಾಕಿರುವರೆಂದು ಮತಾಭಿಮಾನಿಗಳು ತಿಳಿದು ಭಯಪಟ್ಟು ಇದರಿಂದ ದೂರಸ್ಥರಾಗಬೇಕಾಗುವುದೆಂದೂ, ಗೂಢೋದ್ದೇಶದಿಂದ ಹುಟ್ಟುವ ಇತಿಹಾಸಪಿಂಡವು ಗರ್ಭಸ್ರಾವಗೊಂಡೋ, ಅಥವಾ ಅಕ್ರಮಪ್ರಸವವಾಗಿಯೋ ಇಲ್ಲವೆ ಭೂಪತನವಾದರೂ ಬಾಲಾರಿಷ್ಟದಿಂದ ನರಳಿಯೋ ಕೊನೆಗಾಣುವುದೆಂದು ಹೇಳಬೇಕಾಗುತ್ತದೆ.

ಬಿ. ಚನ್ನವೀರಪ್ಪ, ದಾವಣಗೆರೆ.

ಕಲಿಕಾಲ ವೈಚಿತ್ರ್ಯ.

(ಹಿಂದಣ ಶೇಷ).

ಈ ಅಸೂಯಾಳುವಿನ ಧೈರ್ಯಕ್ಕೆ ಎಣೆಯೇ ಇಲ್ಲ. ನೂತನ ವೀರಶೈವ ಜಗತ್ತೊಂದನ್ನು ಹುಟ್ಟಿಸುವುದಕ್ಕೇ ಪ್ರಯತ್ನಿಸಿದಂತೆ ಕಾಣುತ್ತೆ. ಆದಿಕಾಲದಿಂದಲೂ ವೀರಶೈವಜಗತ್ತಿಗೆಲ್ಲಾ ಪೂಜ್ಯಸ್ಥಾನವಾಗಿ ಜಗದ್ಗುರುತ್ವವನ್ನು ಅನೂಚಾನವಾಗಿ ಅನುಭವಿಸುತ್ತ ಬಂದಿರುವ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧಿಪತಿಗಳು ಮೊದಲ್ಗೊಂಡು ಇರುವ ಆಚಾರ್ಯಪೀಠಾಧಿಪತಿಗಳನ್ನೂ ಅವರ ಶಾಖೋಪಶಾಖೆಗಳಾಗಿ ದೇಶದ ಸರ್ವಕಡೆಗಳಲ್ಲೂ ಹರಡಿರುವ ಮಠಗಳ ಪಟ್ಟಚರಂತಿಗೆಯವರು, ನಿರಾಭಾರಿ ಗುರುಕುಲದವರುಗಳನ್ನು ಸಹ ಈಚಿಗೆ ಮಠಗಳಿಗೂ ಪೀಠಗಳಿಗೂ ಇವರು ಅಧಿಕಾರಿಗಳಾದರೆಂದು ಹೇಳುವ ಒಂದು ವಿಚಿತ್ರಕಥೆಯನ್ನೇ ಆರಂಭಿಸಿರುವನು. ಎಂಥಾ ತಮಾಷೆ! ತಮ್ಮ ಪಂಗಡದವರೇ ಪಂಚಾಚಾರ್ಯರ ಪುತ್ರವರ್ಗದವರಂತೆ! ಉಳಿದವರೆಲ್ಲಾ ಶಿಷ್ಯವರ್ಗದವರಂತೆ! ಆ ಶಿಷ್ಯವರ್ಗದವರೂ ಸಹ ನಾನಾ ಕಸಬುಗಾರರಾಗಿದ್ದು ಈಚಿಗೆ ಲಿಂಗಧಾರಣೆ ಮಾಡಿಸಿಕೊಂಡವರಂತೆ. ಅಂಥವರನ್ನೆಲ್ಲಾ ತಮ್ಮವರು ಒಂದೊಂದು ಮಠಗಳ ದೀಪಾರಾಧನೆಗಾಗಿ ಇಟ್ಟುಬಿಟ್ಟು ಮತಸ್ಥಾಪನೆಗಾಗಿ ಜಗಜ್ಜಯಯಾತ್ರೆಗಾಗಿ ಹೊರಟುಹೋದರಂತೆ. ಹೋಗುವಾಗ್ಗೆ ನಮ್ಮ ಪುತ್ರವರ್ಗದವರಿಂದಲೇ ಲಿಂಗಧಾರಣೆ ಮೊದಲಾದ ಕಾರ್ಯವನ್ನೆಲ್ಲಾ ಮಾಡಿಸಿಕೊಂಡು ಅವರಿಗೇ ಕಪ್ಪಕಾಣಿಕೆಯನ್ನು ಕೊಟ್ಟುಕೊಂಡು ಹೋಗಬೇಕೆಂದು ಅಣತಿಯನ್ನು ಕೊಟ್ಟು ಎಲ್ಲಾ ಜನಾಂಗಕ್ಕೂ ಅದನ್ನು ಪ್ರಚುರಪಡಿಸಿದರಂತೆ. ಅದರಂತೆಯೇ ತಹಲ್‌ವರೆಗೂ ಸಮಸ್ತ ವೀರಶೈವರೂ ಇವರ ಪಂಗಡದವರಿಗೆ ಗುರುಮರ್ಯಾದೆಯನ್ನು ಕೊಡುತ್ತಲಿರುವರಂತೆ! "ಕಲೌಪಂಚಸಹಸ್ರಾಂತೇಜಾಯತೆವರ್ಣಸಂಕರೆ" ಎಂಬ ರೀತಿಯಂತೆ ಆದೀಪಾರಾಧನೆ ಊಳಿಗದ ಜನರೇ ತಮ್ಮತಮ್ಮಲ್ಲೇ ಒಬ್ಬೊಬ್ಬರನ್ನು ಮಠಾಧಿಕಾರಕ್ಕೆ ಏರ್ಪಡಿಸಿಕೊಂಡುಬಿಟ್ಟರಂತೆ!! ಅವರುಗಳೇ ಮಹಾಂತಿನವರು ಉಡೇರುಗಳು ಎಂದು ಕರೆಸಿಕೊಳ್ಳುತ್ತಿರುವರಂತೆ!!!

ಈ ಅದ್ಭುತಕಥೆಯನ್ನು ಇದುವರಿವಿಗೆ ಜಗತ್ತಿನಲ್ಲಿ ಯಾರಾದರೂ ಕೇಳಿದ್ದರೆ? ಇಂಥ ಅಪೂರ್ವವಾದ ವಿಷಯವನ್ನು ಲೋಕದ ಮುಂದೆ ತಂದು ಇಟ್ಟ ಈ ಅಸೂಯಾಳುವಿನ ಬುದ್ಧಿಕುಶಲತೆಗಾಗಿ ಆಚಾರ್ಯಪೀಠಾಧಿಪತಿಗಳು ಪ್ರಭುತ್ವದವರಿಗೆ ಇದನ್ನು ಶೃತಪಡಿಸಿ ತಕ್ಕ ಹಸ್ತಪಾದಾಭರಣಗಳನ್ನು ಮರ್ಯಾದೆ ಮಾಡಿಸದಿದ್ದರೆ ಈ ಕಥಾಕಲ್ಪನೆಯ ಶ್ರಮವು ಸಾರ್ಥಕವಾಗಲಾರದು.

ಸುಳ್ಳನ್ನಾದರೂ ನಿಜದ ಬಾಯ್ಬಡಿಯುವಂತೆ ಆಡತಕ್ಕವರು ಪಕ್ಕಾ ಸುಳ್ಳುಗಾರರು. ಆ ವಿದ್ಯೆಯೂ ಸರಿಯಾಗಿ ಬಾರದಿದ್ದ ಹಸಿಬಿಸಿಯ ಸುಳ್ಳುಗಾರರು ಸುಳ್ಳಿನಿಂದ ಲೋಕವನ್ನು ವಂಚಿಸುವದಕ್ಕೆ ಹೊರಟು ಲೋಕಪರಿಹಾಸ್ಯಕ್ಕೆ ಪಾತ್ರರಾಗುತ್ತಾರೆ. ಈ ಅಸೂಯಾಳುವಿನ ಅವಸ್ಥೆಯು ಹಾಗೇ ಆಗಿದೆ. ವೀರಶೈವಮತದ ಮೇಲೆಲ್ಲಾ ಗುರುತ್ವವನ್ನು ಪ್ರತಿಷ್ಠಾಪಿಸಿಕೊಳ್ಳಲು ಪ್ರಯತ್ನಿಸಿರುವ ಈ ಅಸೂಯಾಳುವಿನ ಬುಡಕಟ್ಟು ಆಸೇತು ಹಿಮಾಚಲಾಂತವಾಗಿರುವ ಇಂಡ್ಯಾದೇಶದ ಯಾವಭಾಗದಲ್ಲೂ ಇಲ್ಲದೆ, ಮೈಸೂರು ದೇಶದ ಅದರಲ್ಲೂ ಕಡೆಶಟ್ಟಾದ ಮೈಸೂರು ಡಿಸ್ಟ್ರಿಕ್ಟಿನ ಅದರಲ್ಲೂ ಮೂಲೆಶಾಕಾದ ೨-೩ ತಾಲ್ಲೂಕುಗಳಲ್ಲಿ ಮಾತ್ರ ನೇತಾಡುತ್ತ ನಿಂತಿದೆ. ವೀರಶೈವಮತವನ್ನೇ ಇವರು ಪ್ರತಿಷ್ಠಾಪಿಸಿದವರಾಗಿದ್ದರೆ ಇಂಥ ಇವರ ಹಿರಿಯರಿಗೆ ಇಂಡ್ಯಾದೇಶದ ಮುಖ್ಯಮುಖ್ಯ ಭಾಗಗಳಲ್ಲೆಲ್ಲೂ ಒಂದು ಗುಡಿಸಲು ಕಟ್ಟಿಕೊಂಡಿರುವುದಕ್ಕೆ ಸ್ಥಲವಿಲ್ಲದೆ ಹೋಯಿತೆ? ಆ ಮಹಾದೇಶಭಾಗಗಳ ಹವಾಗುಣವೆಲ್ಲಾ ಇವರ ಪೂರ್ವಿಕರಿಗೆ ಒಗ್ಗದೆಹೋದಕಾರಣ ಈ ನಾಡಿನ ಮೂಲೆಗೆ ಬಂದು ನೆಲಸಿಕೊಂಡಿರಬೇಕೋ ಏನೊ! ಅಥವಾ ಆ ದೇಶಗಳಲ್ಲಿ ಸಲುವಳಿ ಬರಲಿಲ್ಲವೊ? ಹಾಗಲ್ಲದೆ ಬಲಾತ್ಕಾರದಿಂದ ಇವರ ಅಧಿಕಾರವನ್ನು ಇತರ ಅವಾಂತರ ವೀರಶೈವರುಗಳು ಆಕ್ರಮಿಸಿ ಕೊಂಡುಬಿಟ್ಟಿದ್ದರೆ, ಹಾಗೆ ಅತಿಕ್ರಮಿಸಿ ಅನ್ಯಾಯಾಕ್ರಮಣ ಮಾಡಿದವರ ಮೇಲೆ ಇವರ ಹಿರಿಯರು ಆಗ ಯಾವತರದ ಯುದ್ಧವನ್ನೂ ಮಾಡದೆ ಯಾಕೆ ಬಿಟ್ಟರು? ಅಥವಾ ಆಗಿನ ಪ್ರಭುಗಳಲ್ಲಿ ದೂರಿಟ್ಟುಕೊಂಡು ಅನ್ಯಾಯಾಕ್ರಮಣಕ್ಕೆ ತಕ್ಕ ಶಾಸನವನ್ನು ಮಾಡಿಸದೆ ಹ್ಯಾಗೆ ಬಿಟ್ಟರು? ಇವರಿಗಿದ್ದ ಆಚಾರ್ಯಪೀಠಾಧಿಕಾರವನ್ನು ಇತರರು ಕಿತ್ತುಕೊಂಡದ್ದು ಯಾವಾಗ? ನಂಜರಾಜ ಒಡೆಯರ್ ಬಹದ್ದೂರ್‌ರವರು ಇದ್ದದ್ದು ಯಾವಾಗ? ಈ ನಂಜರಾಜ ಒಡೆಯರವರು ಸುಮಾರು ಈಗ್ಗೆ ೧೫೦ ವರ್ಷಗಳ ಕೆಳಗೆ ಮೈಸೂರು ಪ್ರಭುಗಳಾಗಿದ್ದವರು. ಅವರ ಕಾಲದಲ್ಲಿ ಇವರ ಹಿರಿಯರು ಮಹಾಂತಿನವರ ಮೇಲೆ ಫಿರ್ಯಾದುಮಾಡಿಕೊಂಡು ಸನ್ನದು ಪಡಕೊಂಡಿರುವುದನ್ನು ಮಾತ್ರ ಉದಾಹರಿಸಿಕೊಂಡಿರುವದನ್ನು ನೋಡಿದರೆ, ಇವರ ಪೀಠಾಧಿಕಾರಗಳ ಆಕ್ರಮಣವನ್ನು ಆ ಸುಮಾರಿನಲ್ಲೇ ಇತರರು ಮಾಡಿರಬೇಕಾಯಿತು. ಅದಕ್ಕೆ ಮುಂಚೆಯೆಲ್ಲಾ ಇವರುಗಳ ಪಂಗಡದವರೇ ಮಠಾಚಾರ್ಯ ಸಕಲ ಪೀಠಾಧಿಪತ್ಯವನ್ನೂ ಮಾಡುತ್ತಿದ್ದರೆಂದು ಹೇಳಬೇಕಾಯಿತು. ಅದು ನಿಜವೆ? ಅದನ್ನು ಸ್ಥಾಪಿಸಿಕೊಡಲು ಈ ಅಸೂಯಾಳುವಿಗೆ ಧೈರ್ಯವುಂಟೆ? ಶಾಸ್ತ್ರಾಧಾರವಾಗಲೀ ಇತಿಹಾಸಾಧಾರವಾಗಲೀ ಇದ್ದರೆ ಬಿಚ್ಚಿ ತೋರಿಸಲಿ. ವೀರಶೈವರು ಮೈಸೂರುರಾಜ್ಯದಲ್ಲಿ ಮಾತ್ರವೇ ಇಲ್ಲ. ಬೊಂಬಾಯಿಪ್ರಾಂತ, ಮದ್ರಾಸುಪ್ರಾಂತ, ಹೈದರಾಬಾದುಸೀಮೆ, ಕೊಡಗು, ಮಂಗಳೂರು, ಮಧ್ಯಪ್ರಾಂತ, ಉತ್ತರಹಿಂದೂಸ್ಥಾನ, ಈ ಕಡೆಗಳಲ್ಲೆಲ್ಲಾ ಇದ್ದಾರೆ. ಇವರ ಬುಡಕಟ್ಟಿನ ಯಾವ ಗುಡಿಸಲಾದರೂ ಆ ಪ್ರಾಂತಗಳಲ್ಲಿ ಯಾವ ಶತಮಾನದಲ್ಲಾದರೂ ಇದ್ದ ಆಧಾರವೇನಾದರೂ ಇದೆಯೆ? ಅಲ್ಲಿದ್ದ ಇವರ ಅಧಿಕಾರವನ್ನು ಇತರರು ಆಕ್ರಮಿಸಿಕೊಂಡಿದ್ದರೆ ಹಾಗೆ ಆಕ್ರಮಿಸಿಕೊಂಡಾಗಲೇ ಅವರುಗಳಮೇಲೆ ಅಲ್ಲಲ್ಲಿನ ರಾಜರ ಬಳಿಯಲ್ಲಿ ಈ ಸೀಮೆಯ ನಂಜರಾಜ ಒಡೆಯರವರಲ್ಲಿ ಫಿರ್ಯಾದ್ ಮಾಡಿಕೊಂಡಂತೆ ಅಲ್ಲೂ ಏಕೆ ಫಿರ್ಯಾದ್ ಮಾಡಿಕೊಳ್ಳಲಿಲ್ಲ? ಅಲ್ಲಲ್ಲಿನ ಸನ್ನದು ಇವರಲ್ಲಿ ಯಾವದಿದೆ? ಮೈಸೂರಿನ ೧೫೦ ವರ್ಷದ ಸನ್ನದು ಹೊರತು ಇಂಡ್ಯಾದೇಶದ ಸಕಲದೇಶ ವೀರಶೈವರ ಮೇಲೂ ಇವರಿಗೆ ಗುರುತ್ವವಿದೆಯೆಂಬುದನ್ನು ತೋರಿಸುವದಕ್ಕೆ ಇನ್ಯಾವ ಸನ್ನದಾದರೂ ಇದ್ದರೆ ಅದನ್ನು ಬಿಚ್ಚಿ ತೋರಿಸಿದ್ದರೆ ಅಂಥಮಾತಿಗೆ ಸ್ವಲ್ಪತೂಕವಿರುತ್ತಿತ್ತು. ಅದಂತೂ ಇಲ್ಲವಷ್ಟೆ. ಇನ್ನೊಂದು ವಿಚಿತ್ರವನ್ನುನೋಡಿರಿ. ನಂಜರಾಜ ಒಡೆಯರಿಂದ ಇವರು ಸನ್ನದು ಪಡೆದುಕೊಂಡದ್ದು ೧೫೦ ವರ್ಷವಾಗಿರುವದರಿಂದ ಆ ಸುಮಾರಿನಲ್ಲಿ ಇತರರು ಇವರ ಪೀಠಾಧಿಕಾರವನ್ನು ಕಿತ್ತುಕೊಂಡರೆಂದು ಹೇಳಿಕೊಂಡಹಾಗಾಯಿತಷ್ಟೆ. ಇನ್ನೊಂದುಕಡೆ ಈ ಅಸೂಯಾಳುವು "ಕಲೌ ಪಂಚಸಹಸ್ರಾಂತೇ ಜಾಯತೇ ಜಾತಿಸಂಕರೆ" ಎಂದು ಜಾತಿಗೆಟ್ಟ ಸಂಸ್ಕೃತ ಶ್ಲೋಕಾರ್ಥವನ್ನು ಹೇಳಿಕೊಂಡು, (ಇದು ಸ್ಪೆಷಲ್ ಆರಾಧ್ಯಸಂಸ್ಕೃತವಾಗಿರಬೇಕು). ಈ ರೀತಿ ಜನಗಳಲ್ಲಿ ಭಿನ್ನಾಭಿಪ್ರಾಯ ಹುಟ್ಟಿ ತಮ್ಮತಮ್ಮಲ್ಲೇ ಒಬ್ಬ ಗುರುವನ್ನು ಮಾಡಕೊಂಡರೆಂದು ಹೇಳಿರುವ ವಿಷಯದಿಂದ. ಈ ಅಸೂಯಾಳುವಿನ ಸುಳ್ಳಿನ ಮೊಟ್ಟೆಯು ಒಡೆದೇಹೋಗಿ ಒಳಗಿನ ಸಾರವು ಸುರಿದುಹೋದಂತಾಗಿರುವುದು. ಹೇಗೆಂದರೆ-ಕಲಿಯುಗದ ೫ ಸಾವಿರ ವರ್ಷದ ಅಂತವಾದದ್ದು ಈಗ್ಗೆ ೩೦ ವರ್ಷಗಳ ಕೆಳಗೆ. ಆಗ್ಗೆ ಅಧಿಕಾರಸಂಕ್ರಮಣವಾಯಿತೆಂದು ಇವರೇ ತಮ್ಮ ಶ್ಲೋಕೋದಾಹರಣೆಯಿಂದ ಹೇಳಿದ ಹಾಗಾಯಿತು. ೧೮ನೆ ಶತಮಾನದಲ್ಲಿ ಆಕ್ರಮಣವಾಯಿತೆಂದು ನಂಜರಾಜಒಡೆಯರ ಸನ್ನದಿನಿಂದ ಹೇಳಿದಂತಾಗಿದೆ. 'ಕಲೌಪಂಚಸಹಸ್ರಾಂತೆ' ಶ್ಲೋಕೋದಾಹರಣೆಯಿಂದ ೧೯ನೆ ಶತಮಾನದ ಕೊನೆಯಲ್ಲಿ ಸಂಕ್ರಮಣವಾಯಿತೆಂದು ಹೇಳಿದ ಹಾಗಾಗಿದೆ. ಇವೆರಡು ಸುಳ್ಳುಬುರುಡೆಗಳಲ್ಲಿ ಯಾವದನ್ನು ಗಟ್ಟಿಮಾಡಿ ಈ ಅಸೂಯಾಳುವು ನಿಲ್ಲಿಸುವರೋ ಆಗ್ಗೆ ಆ ಬುರುಡೆಗೆ ತಂತಿಕಟ್ಟಿ ಬಾರಿಸಬಹುದು. ಸದ್ಯಕ್ಕೆ ಆ ವಿಷಯವನ್ನು ಇಲ್ಲಿಗೆ ಬಿಡುತ್ತೇನೆ.

ಈ ಅಸೂಯಾಳುವು ತನ್ನ ಪಂಗಡಕ್ಕೆ ಕಟ್ಟಿಕೊಂಡಿರುವ ಆರಾಧ್ಯವೆಂಬ ಹೆಸರು ರೂಢಿಯಾಗಿರುವದರಿಂದ ರೇಣುಕಾದ್ಯಾಚಾರ್ಯ ಪರಂಪರೆಯೇ ತನ್ನದೆಂದು ಭ್ರಾಂತಿಗೊಂಡು, ಆ ಭ್ರಾಂತಿಜನ್ಯವಾದ ಹಮ್ಮಿನಿಂದ ಇಷ್ಟೆಲ್ಲಾ ಹರಡಿರುವಂತೆ ಬರವಣಿಗೆ ಯಾದ್ಯಂತವನ್ನು ನೋಡುವಲ್ಲಿ ಗೊತ್ತಾಗುತ್ತೆ. ಈ ಕಾರಣದಿಂದಲೇ ತಮ್ಮ ಆರಾಧ್ಯರ ಹೊರತು ಇತರರನ್ನು ಜಗದ್ಗುರುಗಳೆಂದು ಬರೆಯುವವರು ಮತದ ಧರ್ಮಗಳೇನೆಂಬುವದನ್ನು ಅರಿಯದವರೆಂದೂ, ಮತ ಗ್ರಂಥಗಳನ್ನು ಓದದವರೆಂದೂ ಈ ಅಸೂಯಾಳುವಿನಿಂದ ಬರೆಯಲ್ಪಟ್ಟಿದೆ. ಮತ ಗ್ರಂಥಗಳನ್ನು ಓದುವ ಯೋಗ್ಯತೆಯಾಗಲೀ ಸಂಸ್ಕೃತದಲ್ಲಿ ಬಾಲಸಾತಜ್ಞಾನವೇ ಆಗಲೀ ಈ ಅಸೂಯಾಳುವಿಗೆ ಇದ್ದು, ಅವುಗಳನ್ನು ಓದಿ ಅವುಗಳಲ್ಲಿ ಹೇಳಲ್ಪಟ್ಟಿರುವ ವೀರಶೈವ ತತ್ವಗಳನ್ನೂ ಮತಾಚಾರೇತಿಹಾಸವನ್ನೂ ಮತ ಲಕ್ಷಣಗಳನ್ನೂ ತಿಳಿದು, ತನ್ನ ಧರ್ಮವನ್ನೂ ಸ್ಥಿತಿಯನ್ನೂ ಅವುಗಳೊಡನೆ ಹೋಲಿಸಿಕೊಂಡು ನೋಡಿದ್ದರೆ ಲೋಕಪರಿಹಾಸಪಾತ್ರವಾದ ಈ ಜಳ್ಳುಹರಟೆಗಳನ್ನು ಕೊಚ್ಚುವದಕ್ಕೆ ಈತನಿಗೆ ನಾಲಗೆಯೇ ಬರುತ್ತಿರಲಿಲ್ಲ. ಕುರುಡನು ಪ್ರಕೃತಿಸೌಂದರ್ಯವರ್ಣನೆಯನ್ನು ಮಾಡಿ, ಕಾಳಿದಾಸನ ಕವಿತೆಯನ್ನು ಕಸಕ್ಕಿಂತಲೂ ಕಡೆಯೆಂದು ನಿಂದಿಸುವಂತೆ ಮಾಡಿರುವ ಈ ಅಸೂಯಾಳುವಿನ ಪ್ರಾಜ್ಞಂಮನ್ಯತೆಯ ವಿಜೃಂಭಣೆಯನ್ನು ನೋಡಿದರೆ ನಗೆಬರುತ್ತದೆ. "ಯದಾಕಿಂಚಿಜ್ಜ್ಞೋಹಂಗಜ ಇವ ಮದಾಂಧಸ್ಸಮಭವಂ" ಎಂಬ ನೀತಿವಚನದಂತೆ ಇಂಥ ಪ್ರತಾಪವು ಅಜ್ಞಲೋಕಕ್ಕೆ ಸ್ವಭಾವವೇ ಸರಿ. ಆದಕಾರಣ ಪ್ರಾಜ್ಞರಿಗೆ ಇಂಥ ಮಾತುಗಳಿಂದ ಕೋಪವಿಲ್ಲ. ಆದರೆ ಈ ಭ್ರಾಂತಿ ಮೂಲವನ್ನು ಕಡಿದುಹಾಕುವುದು ಮಾತ್ರ ಅವಶ್ಯಕವಾಗಿರುತ್ತದೆ.

ಲೋಕದಲ್ಲಿ ಲಿಂಗಧಾರಣ ಸಂಪನ್ನರೆಲ್ಲರೂ ವೀರಶೈವರೆನ್ನಿಸಿಕೊಳ್ಳುವುದಿಲ್ಲ. ಸಿದ್ಧಾಂತಾಚಾರಾದಿ ಭೇದಗಳಿಂದ ಲಿಂಗಧಾರಿಗಳಲ್ಲೇ ಅನೇಕ ಭೇದಗಳಿರುತ್ತವೆ. ಲಿಂಗಧಾರಣ ಸಂಪನ್ನರೇ ಆಗಿದ್ದರೂ ಕೇವಲ ತಾಂತ್ರಿಕರಾದ ಲಗುಡೇಶ ಪಾಶುಪತ ಸಂಪ್ರದಾಯಸ್ಥರು ವಾಮಾಚಾರ ಪರಾಯಣರಾಗಿರುತ್ತಾರೆ. ಲಿಂಗಧಾರಣ ಸಂಪನ್ನರೇ ಆಗಿದ್ದರೂ ಲಿಂಗದ ಕೂಡ ತಂತುಮಯ ಯಜ್ಞೋಪವೀತವನ್ನೂ ಧರಿಸಿಕೊಂಡಿರುವ ಆರಾಧ್ಯರೆಂಬ ಹೆಸರುಳ್ಳ ಶ್ರೀಶೈಲಪ್ರಾಂತದ ಜನರುಗಳು ಶುದ್ಧ ಶೈವರೆಂದು ಹೇಳಲ್ಪಟ್ಟಿರುತ್ತಾರೆ. ಬಸವೇಶ್ವರನು ಆ ಪಂಗಡದಲ್ಲಿ ಹುಟ್ಟಿದರೂ ಅವರ ಧರ್ಮಗಳಲ್ಲಿನ ಲೋಪಗಳನ್ನು ಕಂಡು ಅದನ್ನು ದೂರೀಕರಿಸಿ ಶ್ರೀ ರೇಣುಕಾದಿ ಸಂಸ್ಥಾಪಿತವಾದ ವೀರಶೈವ ಮತಧರ್ಮಗಳನ್ನು ಅಂಗೀಕರಿಸಿ ಪುಷ್ಟೀಕರಿಸಿರುತ್ತಾನೆ. ಆ ಆರಾಧ್ಯವರ್ಣದವರಲ್ಲಿ ಸ್ಮಾರ್ತ ಧರ್ಮಗಳೂ ಚಿಹ್ನೆಗಳೂ ಸಹ ಇರುತ್ತವೆ. ತಾಂತ್ರಿಕವೈದಿಕವಾದ ವೀರಶೈವ ಮತದ ಆಚರಣೆಗೂ ಸಂಪ್ರದಾಯಕ್ಕೂ ಆರಾಧ್ಯರ ಸಂಪ್ರದಾಯಧರ್ಮಗಳಿಗೂ ಎಷ್ಟೋ ವಿಷಯಗಳಲ್ಲಿ ಭೇದವಿರುತ್ತದೆ. ಅವರಲ್ಲಿ ಋಷಿವಂಶಜನ್ಮ ಪ್ರಮಥ ವಂಶಜನ್ಮವೆರಡನ್ನೂ ಹೇಳಿಕೊಳ್ಳುತ್ತಾರೆ. "ಗರ್ದಭೇನಸಂಭವತಿ ತಸ್ಮಾದ್ಗರ್ದಭೋದ್ವಿರೇತಾ ಇತಿಶ್ರುತ್ಯಾ ಗಾರ್ದಭವನೇಕಸ್ಯೋಭಯವೀರ್ಯೋತ್ಪತ್ತ್ಯಾ ಅತ್ಯಂತಲೋಕಹಾಸ್ಯತಾಸ್ಯಾತ" ಎಂಬಂತೆ ಹಾಗೆ ಹೇಳಿಕೊಳ್ಳುವವರಲ್ಲಿ ಉತ್ಪತ್ತಿ ಸಂಬಂಧದಿಂದ ಉಭಯವಂಶ ಸಂಭೂತತ್ವವನ್ನು ಹೇಳುವುದು ಪರಿಹಾಸಾಸ್ಪದವೆಂದು ವೀರಶೈವ ಸಿದ್ಧಾಂತ ಗ್ರಂಥಕಾರರು ಖಂಡಿಸಿರುತ್ತಾರೆ. ಆರಾಧ್ಯವಿಪ್ರರಲ್ಲಿ ಲಿಂಗಲೋಪ ವ್ರತಲೋಪಗಳಿಗೆ ಪ್ರಾಯಶ್ಚಿತ್ತವಿದೆ. ವೀರಶೈವರಲ್ಲಿ ಪ್ರಾಣತ್ಯಾಗವೇ ಪ್ರಾಯಶ್ಚಿತ್ತವಾಗಿದೆ. ಈ ಕಾರಣದಿಂದ ಆ ಆರಾಧ್ಯರು ವೀರಶೈವರಿಗೆ ಭಿನ್ನರಾಗಿರುತ್ತಾರೆ. ಅಂಥ ಆರಾಧ್ಯರ ಗುಂಪಿಗೇ ತಾವು ಸೇರಿದವರೆಂದು ಈ ಚೈತನ್ಯಾರಾಧ್ಯರು ನಂಬಿಕೊಂಡು, ತಮಗೆ ಪ್ರಾಚೀನತ್ವವನ್ನೂ ವೀರಶೈವ ಮತಗುರುತ್ವವನ್ನೂ ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದ್ದರೆ ಇವರ ಬಾಳು ಮತ್ತಷ್ಟು ನಗೆಗೀಡಾಗದೆ ಹೋಗುವುದಿಲ್ಲ. ಆ ಆರಾಧ್ಯರೇ ವೀರಶೈವ ಸಮಾಜಕ್ಕೆ ಭಿನ್ನರಾಗಿ ತಿಳಿಯಲ್ಪಟ್ಟಿರುವಾಗ, ಈ ಚೈತನ್ಯರು ನಾವೂ ಅವರೇ ಎಂದು ಹೇಳುವುದಾದರೆ ಇವರೂ ಕೂಡ ವೀರಶೈವರಿಗೆ ಭಿನ್ನರಾಗಿಯೇ ಬಾಳಬೇಕಾದವರಾಗಿರುತ್ತಾರೆ. ಆ ಆರಾಧ್ಯವಿಪ್ರರಾದರೂ ಇವರನ್ನು ತಮ್ಮ ಗುಂಪಿಗೆ ಸೇರಿಸುವುದುಂಟೆ? ಅದೂ ಇಲ್ಲ. ಯಾಕಂದರೆ ಇವರಲ್ಲಿ ಆ ಆರಾಧ್ಯರ ಸಂಪ್ರದಾಯಗಳಿಲ್ಲ. ಅವರ ಗೋತ್ರ ಸೂತ್ರಗಳನ್ನು ಇವರು ಹೇಳುತ್ತಾರೋ ಇಲ್ಲವೋ ತಿಳಿಯದು. ಅವರ ಜನ್ನಿವಾರವು ಇವರಿಗಿಲ್ಲ. ಅವರಂತೆ ದಹನ ಖನನ ಕರ್ಮಗಳೆರಡೂ ಇವರಿಗಿಲ್ಲ. ಅವರ ವಿಧವೆಯರಂತೆ ಇವರ ವಿಧವೆಯರಿಗೆ ತಲೆಬೋಳಿಸುವದಿಲ್ಲ. ಆ ಆರಾಧ್ಯರೇ ಇವರಾಗಬೇಕಾಗಿದ್ದರೆ ಅವರಲ್ಲಿರುವ ಮೇಲ್ಕಂಡ ಸಂಪ್ರದಾಯಗಳನ್ನೆಲ್ಲಾ ಇವರು ಅವಲಂಬಿಸಬೇಕಾಗುವದು. ತಮ್ಮ ಆರಾಧ್ಯತ್ವವು ಕಲ್ಪಿತವಾಗಿರದೆ ಪ್ರಾಚೀನವಾಗಿಯೂ ಅನುಸ್ಯೂತವಾಗಿಯೂ ಬಂದದ್ದೆಂಬುವದನ್ನು ಇವರು ಸಾರ್ಥಕಪಡಿಸಿಕೊಳ್ಳುವದಕ್ಕಾಗಿ ಒಂದುವೇಳೆ ಆ ಧರ್ಮಗಳನ್ನೆಲ್ಲಾ ಇನ್ನುಮುಂದೆ ಕಿಂಚಿತ್ಕಿಂಚಿತ್ ಅವಲಂಬಿಸುವದಕ್ಕೆ ತೊಡಗಿದರೂ ತೊಡಗಬಹುದು. (ಇವರು ತೊಡಗಿದರೂ ಇವರ ಹೆಂಗುಸರು ಮುಂಡನಕ್ಕೆ ಎಂದಿಗೂ ಒಪ್ಪುವದಿಲ್ಲವೆಂದು ತೋರುತ್ತೆ). ಇಷ್ಟು ಮಾಡಿಕೊಂಡರೂ ಈ ಗುಂಪನ್ನು ಆ ಪೌರ್ವಾತ್ಯಾರಾಧ್ಯರು ತಮ್ಮ ಗುಂಪಿಗೆ ಎಂದಿಗೂ ಸೇರಿಸಿಕೊಳ್ಳಲಾರರು. ಆಗ್ಗೆ ಇವರಿಗೆ ವೀರಶೈವ ಮತದ ಆಶ್ರಯವೂ ಇಲ್ಲ; ಶುದ್ಧಶೈವಾರಾಧ್ಯರ ಅವಲಂಬನೆಯೂ ಇಲ್ಲ; ಹೀಗಾಗಿ ತ್ರಿಶಂಕುಸ್ವರ್ಗದ ಬಾಳೇ ಇವರಿಗೆ ಲಭಿಸಬೇಕಾಗುವದು. ವೀರಶೈವ ಜಗತ್ತಿನಲ್ಲಿರುವ ಯಾವೊಂದು ಪಿಳ್ಳೆಯೂ ಕೂಡ ಶ್ರೀ ಜಗದ್ಗುರು ರೇಣುಕಾದ್ಯಾಚಾರ್ಯಪೀಠಾಧಿಪತಿಗಳಾದ ಈಗಿನ ಜಗದ್ಗುರು ಪರಂಪರೆಯವರನ್ನು ಮನ್ನಣೆಮಾಡದೆ ಇರತಕ್ಕದ್ದಿಲ್ಲ. ಆ ಪೀಠಾಧಿಪತಿಗಳ ಗುರುತ್ವವನ್ನೊಪ್ಪದಿರುವವರು ವೀರಶೈವಮತದವರಾಗಿರುವುದೇ ಸಂಭವವಲ್ಲ. ಔರಸಸಂಬಂಧವನ್ನೇ ಆಗಲೀ ದತ್ತಕಸಂಬಂಧವನ್ನೇ ಆಗಲೀ ಹೊಂದಿ ಕುಟುಂಬದಲ್ಲಿಲ್ಲದವನು ಕುಟುಂಬದ ಪಿತ್ರಾರ್ಜಿತ ಆಸ್ತಿಯ ಅನುಭವಕ್ಕಾಗಲೀ ಕುಟುಂಬದಲ್ಲಿ ವಾಸಿಸಿಕೊಂಡಿರುವುದಕ್ಕಾಗಲೀ ಅಧಿಕಾರಿಯಾಗಿರದೆ ಜೀತಗಾರನಾಗಿ ಬೇಕಿದ್ದರೆ ಒಡೆಯರ ಅಪ್ಪಣೆಯ ಮೇಲೆ ಜೀವಿಸಿಕೊಂಡಿರಬಹುದೆಂಬ ಲೌಕಿಕ ವ್ಯವಹಾರೋದಾಹರಣೆಯು ಎಲ್ಲರಿಗೂ ಗೊತ್ತೇಇದೆ. ಈ ಅಸೂಯಾಳುವು ತಮ್ಮ ವರ್ಗಕ್ಕೆ ಜಗದ್ಗುರುತ್ವವನ್ನೂ ಸ್ವಯಮಾಚಾರ್ಯತ್ವವನ್ನೂ ಸಂಪಾದಿಸಿಕೊಡುವುದಕ್ಕೆ ಹೊರಟು "ವಿನಾಯಕಂಪ್ರಕುರ್ವಾಣೋರಚಯಾಮಾಸ ವಾನರಂ" ಎಂಬಂತೆ ತಮ್ಮ ಗುಂಪಿನವರಿಗೆಲ್ಲಾ ವೀರಶೈವಮತಕ್ಕೇ ದೂರವಾಗಿರುವ ಪರಿಣಾಮವನ್ನುಂಟುಮಾಡಿ, ಈ ಮತಾಶ್ರಯದಿಂದ ತಮ್ಮವರಿಗೆ ಹುಟ್ಟುತ್ತಿದ್ದ ಯಾಚ್ನೆಗೂ ಕಲ್ಲನ್ನು ಹಾಕುವ ದಾರಿಮಾಡಿರುದನ್ನು ನೋಡಿದರೆ ವ್ಯಸನವಾಗುತ್ತದೆ. ಆರಾಧ್ಯ ಎಂಬ ಹೆಸರಿದ್ದ ಮಾತ್ರಕ್ಕೇ ತಾವು ಲೋಕಪೂಜ್ಯರೆಂದು ಇವರು ತಿಳಿದುಕೊಂಡಿದ್ದರೆ ರಾವ್ ಎಂಬ ಹೆಸರುಳ್ಳವರೆಲ್ಲಾ ಬ್ರಾಹ್ಮಣರಾಗಿಯೂ, ಅಪ್ಪ ಅಣ್ಣ ಎಂಬ ಉಪಪದ ನಾಮಧಾರಿಗಳೆಲ್ಲಾ ಲೋಕಕ್ಕೆಲ್ಲಾ ಜನಕರೂ ಭ್ರಾತೃಗಳೂ ಆಗಿಯೂ, ರಾಯ ಎಂಬ ಉಪಪದವುಳ್ಳವರೆಲ್ಲಾ ಭೂಪತಿಗಳೇ ಆಗಿಯೂ ಇರಬೇಕೆಂದು ಯಾರಾದರೂ ಇವರಂಥ ಪಂಡಿತರು ಕಾಲಾನುಕಾಲದಲ್ಲಿ ಸಿದ್ಧಾಂತಮಾಡುವುದಕ್ಕೆ ಹೊರಟರೂ ಹೊರಡಬಹುದು.

ಈ ಚೈತನ್ಯರು ತಮ್ಮ ಪ್ರಾಜ್ಞತೆಯ ಚೈತನ್ಯವನ್ನು ಇಷ್ಟಕ್ಕೇ ಮುಗಿಸಿಲ್ಲ. ಮತ್ತೊಂದು ವಿಧದಲ್ಲೂ ಹೊರಹಾಕಿದ್ದಾರೆ. ಅದೆಷ್ಟು ವಿಲಕ್ಷಣವಾಗಿದೆ ನೋಡಿರಿ. ಸೆನ್ಸಸ್ಸಿನಲ್ಲಿಯೂ ಕೂಡ ಗೌರ್ನಮೆಂಟಿನವರು ಲಿಂಗಧಾರಿಗಳನ್ನೆಲ್ಲಾ ಒಂದು ಗುಂಪಾಗಿ ಮಾಡಿ, ಅವರಲ್ಲಿ ಆರಾಧ್ಯರು ಮೊದಲನೆ ಪಂಗಡದವರೆಂದು ಬರೆದಿರುತ್ತಾರೆಂದು ಉದ್ಘೋಷಿಸಿಕೊಂಡಿರುತ್ತಾರೆ. ಆಹಾ! ಎಂಥಾ ಕುಶಲಮತಿ!! ಎಷ್ಟು ದಿವ್ಯಪರಿಶೋಧನೆ!!! ವರ್ಣಮಾಲೆಯಲ್ಲಿ "ಅ" ವರ್ಣವು ಮೊದಲನೆಯದಾಗಿದ್ದುದೇ ತಪ್ಪಾಯಿತು. ಇಂಗ್ಲೀಷಿನಲ್ಲಿಯೂ "A" ವರ್ಣವು ಮೊದಲನೆಯದಾಗಿರುವದು. ಸೆನ್ಸಸ್ಸಿನಲ್ಲಿ ಮತ ಕುಲಜಾತಿಗಳ ಹೆಸರನ್ನೆಲ್ಲಾ ಬರೆಯುವಾಗ ಅಕ್ಷರಾನುಕ್ರಮವಾಗಿ ಹೆಸರುಗಳನ್ನು ಸೇರಿಸಿ ಬರೆಯುವ ಪದ್ಧತಿಯುಂಟು. ಇವರ ವರ್ಗದ ಹೆಸರಿನಲ್ಲಿ A ವರ್ಣವೇ ಆದ್ಯಕ್ಷರವಾಗಿದ್ದುದರಿಂದ ಮೊದಲು ಅದು ಸ್ವೀಕರಿಸಲ್ಪಟ್ಟಿತು. ಹಾಗಲ್ಲದೆ ಇವರು ಅಜ್ಞತೆಯಿಂದ ಭಾವಿಸಿಕೊಂಡಿರುವಂತೆ ಇವರೇ ಇತರರಿಗೆಲ್ಲಾ ಅಗ್ರೇಸರರಾಗಿದ್ದರೆ, ಆ ಅಭಿಪ್ರಾಯದಿಂದಲೇ ಸೆನ್ಸಸ್ ಅಧಿಕಾರಿಗಳೂ ಬರೆದಿದ್ದರೆ, ಇವರ ಹೆಸರಿಗಿಂತಲೂ ಮೊದಲು ನಾಮನಿರ್ದೇಶ ಮಾಡಲ್ಪಟ್ಟಿರುವ ಅಗಸರನ್ನು ಉಳಿದ ಎಲ್ಲ ವರ್ಗದವರಿಗಿಂತಲೂ ಮಕುಟಮಣಿಗಳೆಂದು ಹೇಳಬೇಕಾಯಿತು.

(ಸಶೇಷ).

ಆರಾಧ್ಯಗುರು.

ಜಾಗ್ರತ. ಕಬ್ಬಿಣದ ನೇಗಿಲು. ಕರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

೨ ಮಂಗಳೂರು ಹೆಂಚುಗಳು.

ನಾವು ಎ. ಆಲ್ ಬ್ಯುಕ್ಕ್ಯುಯರ್ ಅಂಡ್ ಕೋ ಆಂಡ್‌ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವದಲ್ಲದೆ ಬಾಸಲ್‌ಮಿಷನ್ ವಗ್ಯೆರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಯೆರೆ ಸಂಗತಿ ಪತ್ರ ಮುಖಾಂತರ ತಿಳಿದುಕರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ನೋಟೀಸ್.

ಹುಮನಾಬಾದು ತಾಲ್ಲೂಕು ಗೋಳೂರು ಸಮ್ಮತು ಹರಳೂರಲ್ಲಿರುವ ವೀರಶೈವ ಮಠದ ತೋಟದ ಚನ್ನವೀರಪ್ಪನ ಮಗ ಮಲ್ಲಶೆಟ್ಟಪ್ಪನು ಇದರಿಂದ ತಿಳಿಯಪಡಿಸುವುದೇನೆಂದರೆ--ನನ್ನ ಖಾಸಾ ಚಿಕ್ಕಪ್ಪ ಚಕ್ಕರುದ್ರಪ್ಪನು ಗಂಡುಹೆಣ್ಣು ಮಕ್ಕಳಿಲ್ಲದೆ ಸತ್ತುಹೋಗಿರುತ್ತಾನೆ. ಈತನಿಗೆ ಗುರುಸಿದ್ಧಮ್ಮನೆಂಬ ಹೆಂಡತಿ ಇರುತ್ತಾಳೆ. ಈಕೆಯು ತನಗೆ ಸಂತಾನವಿಲ್ಲದಿದ್ದಾಗ್ಯೂ ಕೂಡಾ ನನ್ನ ಚಿಕ್ಕಪ್ಪನ ಅತ್ಯಂತ ಸಮೀಪ ಉತ್ತರವಾರಸುದಾರನಾಗಿರುವ ನನಗೆ ಮೋಸಪಡಿಸಿ ನಷ್ಟಪಡಿಸಬೇಕೆಂಬ ಇರಾದೆಯಿಂದ ನನ್ನ ಚಿಕ್ಕಪ್ಪನಬಾಬತು ಸ್ಥಿರಚರ ಆಸ್ತಿಗಳನ್ನು ಪರಭಾರೆ ಮಾಡಲು ಉದ್ಯುಕ್ತಳಾಗಿರುವದಾಗಿ ಗೊತ್ತಾಗುತ್ತೆ. ಈಕೆಯು ಮಾಡತಕ್ಕ ಪರಭಾರೆಗಳು ಲಾ ಪ್ರಕಾರ ಊರ್ಜಿತವಾಗುವುದಿಲ್ಲ. ಉತ್ತರವಾರಸುದಾರನಾಗಿರುವ ನನ್ನ ಹಕ್ಕನ್ನು ಯಾವ ವಿಧವಾಗಿಯೂ ಬಾಧಿಸಲಾರದು. ಆದಕಾರಣ ಸದರಿ ಗುರುಸಿದ್ಧಮ್ಮನಿಂದ ಮೇಲ್ಕಂಡ ನನ್ನ ಚಿಕ್ಕಪ್ಪನ ವಿಶಿಷ್ಟ ಚರಸ್ಥಿರ ಸ್ವತ್ತುಗಳನ್ನು ಯಾರು ಯಾವ ವಿಧವಾದ ಕ್ರಯ ಆಧಾರ ಭೋಗ್ಯ ದಾನ ಮೊದಲಾದ ಪರಭಾರೆಗಳನ್ನು ಮಾಡಿಸಿಕೊಳ್ಳಕೂಡದೆಂದು ಈ ಮೂಲಕ ನಾನು ತಿಳಿಸಿರುತ್ತೇನೆ.

ಮಲ್ಲಶೆಟ್ಟಪ್ಪನರುಜು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿರವರ ಕೋರ್ಟಿನಲ್ಲಿ.

1918-19 ನೇ ಸಾಲ್ ಸಿವಿಲ್-ಮಿಸ್ ನಂ. 70.

ಅರ್ಜಿದಾರ್—ರುದ್ರಪ್ಪ. 3

ಅಪೊನೆಂಟ್‌ಗಳು—ಗೌರಮ್ಮ ಮತ್ತು ಇತರ ಆರುಜನಗಳು.

ಹಾಸನದ ವಾಸಸ್ಥ ಬಸೆಟ್ಟಪ್ಪನವರ ಮಕ್ಕಳು ಮೈನರು ಶಿವನಂಜಪ್ಪನವರ ಆಸ್ತಿ ವಿಚಾರದಲ್ಲಿ—

ವಿಕ್ರಯದ ಬಾಬ್ತು ಇಸ್ತಿಹಾರ್.

1. ಮೈಸೂರು ಡಿಸ್ಟ್ರಿಕ್ಟು ಜಡ್ಜಿರವರು 1911 ನೇ ಇಸವಿ 5 ನೇ ರೆಗ್ಯುಲೇಷನ್ ಅಂದರೆ ಗಾರ್ಡಿಯನ್‌ಗಳ ಮತ್ತು ವಾರ್ಡ್‌ಗಳ ರೆಗ್ಯುಲೇಷನ್ ಅನುಸರಿಸಿ 16-9-1919 ನೆ ಮರ್ಕುಂನಲ್ಲಿ ಒಬ್ಬ ರಿಸೀವರನ್ನು ಮೊಕರೂರು ಮಾಡಿರುವುದಾಗಿಯೂ ಮತ್ತು ಸದರಿ ಮೈನರಿಗೆ ಸಂಬಂಧಪಟ್ಟ ಚರಸ್ವತ್ತುಗಳನ್ನು ಅಂದರೆ-ವಜ್ರ, ಕೆಂಪು ಮತ್ತು ಇತರ ರತ್ನಗಳಿಂದ ಕೆತ್ತಲ್ಪಟ್ಟದ್ದೇ ಮೊದಲಾದ ಬಹಳ ಬೆಲೆಯುಳ್ಳ ಚಿನ್ನ ಮತ್ತು ಬೆಳ್ಳಿ ಒಡವೆಗಳನ್ನು ಮತ್ತು ಮುತ್ತು, ಹವಳ ಮೊದಲಾದವುಗಳಿಂದೊಡಗೂಡಿದ ಆಭರಣಗಳು ವಗೈರೆ ಮಾಲುಗಳು ಮತ್ತು ಸಾಧಾರಣವಾಗಿ ಹಿಂದೂ ಮತ್ತು ಮಹಮ್ಮದೀಯರ ಕುಟುಂಬಗಳಲ್ಲಿ ಧರಿಸುವುದಕ್ಕೆ ಮತ್ತು ಪೂಜೆಗೆ ಉಪಯೋಗಿಸಲ್ಪಡುವ ಇತರ ಚರಸ್ವತ್ತುಗಳನ್ನು ವಿಕ್ರಯಮಾಡಲು ಈ ರಿಸೀವರಿಗೆ ಅಪ್ಪಣೆಯನ್ನು ಕೊಟ್ಟಿರುವುದಾಗಿ ಹುಕುಂ ಮಾಡಿರುತ್ತಾರೆಂದು ಇದರಿಂದ ನೋಟೀಸು ಕೊಡಲಾಗಿದೆ.

2. ಸದರಿ ಚರಸ್ವತ್ತುಗಳು 1919 ನೆ ಇಸವಿ ನವೆಂಬರು 14 ನೇ ತಾರೀಖು ಶುಕ್ರವಾರ ಮತ್ತು ಮರುದಿನಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಜಡ್ಜಿರವರ ಕೋರ್ಟಿನ ಬಳಿಯಲ್ಲಿ ಪ್ರತಿ ದಿನವೂ ದಿವಿ 11 ಘಂಟೆಗೆ ಉಪಕ್ರಮವಾಗಿ ಸಾಯಂಕಾಲ 5 ಘಂಟೆವರವಿಗೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವುದು.

3. ಈ ಸೊತ್ತುಗಳನ್ನು ಒಂದು ಐಟಂ ನಂತರ ಮತ್ತೊಂದು ಐಟಂ ಅಥವಾ ರಿಸೀವರಿಗೆ ಅವಶ್ಯಕ ತೋರಿಬರುವ ರೀತಿ ಲಾಟುಗಳ ಪ್ರಕಾರ ಹರಾಜಿಗೆ ಇಡಲ್ಪಡುವುದು. ಮತ್ತು ಅತ್ಯಧಿಕ ಮೊಬಲಗಿಗೆ ದರಖಾಸ್ತು ಮಾಡುವವನನ್ನು ಅಂಥಾ ಐಟಂ ಅಥವಾ ಲಾಟುಗಳ ಖರೀದಿದಾರನಾಗಿ ಪ್ರಕಟಿಸಲ್ಪಡುತ್ತೆ, ಆದರೆ ಆತನು ಕೊಡುತ್ತೇನೆಂಬ ಕ್ರಯವು ಅಂಗೀಕರಿಸಲಿಕ್ಕೆ ಯುಕ್ತವಾಗದಷ್ಟು ಕಡಮೆಯಾಗಿದೆ ಎಂದು ಸ್ಪಷ್ಟವಾಗಿ ತೋರಿಬಂದರೆ ಅತ್ಯಧಿಕ ದರಖಾಸ್ತನ್ನಾದರೂ ಅಂಗೀಕರಿಸದೆ ನಿರಾಕರಿಸುವುದು ಸಂಪೂರ್ಣವಾಗಿ ಕೋರ್ಟಿನ ಮುನಾಸಬ್ ಮೇರೆಗೆ ಇರುತ್ತೆ.

4. ಎಲ್ಲಾ ಜನರೂ ಖುದ್ದಾಗಿ ಅಥವಾ ಕ್ರಮವಾಗಿ ಅಧಿಕಾರಗೊಳಿಸಲ್ಪಟ್ಟ ಮುತಾಲೀಕರ ಮೂಲಕ ದರಖಾಸ್ತು ಮಾಡಬಹುದು, ಆದರೆ ಅಂಥಾ ಮುತಾಲೀಕರು ತಮ್ಮ ಅಧಿಕಾರ ಪತ್ರಗಳನ್ನು ದರಖಾಸ್ತು ಮಾಡುವುದಕ್ಕೆ ಮುಂಚೆ ರಿಸೀವರಲ್ಲಿ ದಾಖಲ್ಮಾಡಬೇಕು.

5. ಪ್ರತಿ ಐಟಂ ಅಥವಾ ಲಾಟಿನ ಕ್ರಯವನ್ನು ಪೂರ್ತಿಯಾಗಿ ವಿಕ್ರಯದ ಕಾಲದಲ್ಲಾದರೂ ರಿಸೀವರು ಆಜ್ಞಾಪಿಸುವ ಮೇರೆಗೆ ತದನಂತರ ಯಾವ ಸಮೀಪದ ಕಾಲದಲ್ಲಾದರೂ ಪಾವತಿ ಮಾಡಬೇಕು. ಮತ್ತು ಪಾವತಿ ಮಾಡಲಿಕ್ಕೆ ತಪ್ಪಿದರೆ ಆ ಸೊತ್ತನ್ನು ಕೂಡಲೆ ಇನ್ನೊಂದುಸಲ ಹರಾಜು ಹಾಕಿ ಪುನಃ ವಿಕ್ರಯಿಸುತ್ತೆ. ಪುನರ್ ವಿಕ್ರಯದಲ್ಲಿ ಮೊದಲಿನ ಖರೀದಿಗಿಂತ ಏನಾದರೂ ಕಡಮೆ ಬಿದ್ದರೆ ಆ ಕಡಮೆ ಹಣವನ್ನು ಕ್ರಯದ ಮೊಬಲಗು ಸಂದಾಯಮಾಡದೆ ತಪ್ಪಿದವನಿಂದ ವಸೂಲ್ಮಾಡಲ್ಪಡುತ್ತೆ. ಮತ್ತು ಆತನಿಗೆ ಆ ಸೊತ್ತಿನಾಗಿಯಾಗಲಿ ಅಥವಾ ಹಾಗೆ ಮಾಡಿದ್ದರಿಂದ ಬಂದ ಹಣದಲ್ಲಿಯಾಗಲಿ ಎಷ್ಟುಮಾತ್ರಕ್ಕಾಗಲಿ ಎಷ್ಟುಮಾತ್ರವೂ ಹಕ್ಕು ಇರುವುದಿಲ್ಲ.

6. ಸದರಿ ಮೈನರಿನ ಸದರಿ ಸೊತ್ತುಗಳಿಗೆ ಸಂಬಂಧಪಟ್ಟ ಏನಾದರೂ ಹಕ್ಕುಬಾಧ್ಯತೆಗಳು ಅಥವಾ ಜವಾಬ್ದಾರಿಗಳು ಇದ್ದರೆ ಅವುಗಳನ್ನು ಡಿಸ್ಟ್ರಿಕ್ಟು ಜಡ್ಜಿರವರಲ್ಲಿ ಹರಾಜು ತಾರೀಖಿಗೆ 2 ವಾರಕ್ಕಿಂತಲಾದರೂ ಮುಂಚೆ ದಾಖಲ್ಮಾಡಬೇಕು.

ಷರಾ:—ಈ ಸೊತ್ತುಗಳು 20,000 ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಮೆ ಇಲ್ಲದೆ ಬೆಲೆಯುಳ್ಳವುಗಳಾಗಿ ತೋರುತ್ತವೆ.

ಹಾಸನ, ಎಚ್. ಮಹಲಿಂಗಣ್ಣ,
ತಾ||16-10-1919. ರಿಸೀವರ್.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ?

ಎಂದಿಗೂ ಅಲ್ಲ.

ಈ ಸುಧಾ ಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರಹ ಕಜ್ಜಿಗಳು, ಹುಳುಕಡ್ಡಿ, ಮುಂತಾದವುಗಳಮೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ಶೀಷೆ 1 ಕ್ಕೆ 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ಕಾಯಿಗಳ, ಷರಬತ್ತುಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಆರುಕಾಸಿನ ಸ್ಟಾಂಪು ರವಾನಿಸಿ ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್, ಬೋರ್ಡು ಮಾಫಿ, ಫಾಯಿದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ವಿ.ಪಿ. ಕೊಡುವದಿಲ್ಲಾ. ಈದಿನವೇ ಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎಸ್. & ಕಂಪೆನಿ
4 ತಿಪ್ಟೂರು (ಮೈಸೂರು ಪ್ರಾವಿನ್ಸ್).

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಸ್ತು ಕಾಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
7 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಜಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ಯನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಜೋಟಕ ಸಿಗುವವು. ತಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
8 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
37 3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.



ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಛಾವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಪೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು, ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ತೋರಬೇಕು. ಕ್ರಯ 1 ಕ್ಕೆ 0-12-0 ಆಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ವಾಣಿ ಕಂಪನಿ,
37 ಸಾಹುಕಾರಪೇಟೆ, ಮದರಾಸು.

೧೯೧೯ ನೆಯ ಇಸವಿ ನವಂಬರ್ ತಾ|| ೯ ರಿಂದ ೧೯೧೯ ನೆಯ ನವಂಬರ್ ತಾ|| ೧೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಕಾರ್ತಿಕ ಬ|| ಬಿದಿಗೆಯಿಂದ ಕಾರ್ತಿಕ ಬ|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
9	ಭಾನು	ಬಿದಿಗೆ	46-2	ಕೃತ್ತಿ	15-16	24
10	[1]ಸೋಮ	ತದಿಗೆ	40-1	ರೋ	11-3	25
11	[2]ಮಂಗಳ	ಚೌತಿ	34-20	ಮೃಗ	7-0	26
12	ಬುಧ	ಪಂಚ	29-6	ಆರಿ	3-18	27
13	ಗುರು	ಷಷ್ಠಿ	24-29	ಪುನ	0-7	28
14	ಶುಕ್ರ	ಸಪ್ತ	20-44	ಆಶ್ಲೆ	55-41	29
15	ಶನಿ	ಅಷ್ಟ	17-55	ಮಖ	55-7	30

(1) ಕಾರ್ತಿಕಸೋಮವಾರ. (2) ಸಂಕಷ್ಟಚತುರ್ಥಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲಿಫೆಂಟ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃಶಾನತಾರಾ ಪಕ್ಷಜ್ಞನಪ್ರಭಾ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಪಾಲಿತ ಸಾಧ್ವಗ್ರ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ನವಂಬರ್ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೪೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿಸಲಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ, ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ, ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಿಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 3

ನಾವು ಎ. ಆಲ್ ಬ್ಯುಕ್ಯಯರ್‌ಕ್ಯು ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಛಬಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಶಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

38 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
45 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 48

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ.	೦—೮—೦
ಶಿವಪೂಜಾವಿಧಿ.	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಂದಾಶಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

PUREST raw materials and the **FINEST** essential oils are used in our celebrated **SANDAL SOAPS.**

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

ಪ್ರಕಟನೆ.

ಕಂಬಳಿಗಳು, ರತ್ನಕಂಬಳಿಗಳು, ಬಾಗಿಲುಮುಂದೆ ಹಾಕುವ ರಗ್ಗುಗಳು, ಕೈವಸ್ತ್ರಗಳು, ತರಹಾವರಿ ಚೌಕಗಳು, ತರಹಾವರಿ ಒಟ್ಟಿಗಳ, ದುಪಟಿಗಳು, ಮರದ ಸಾಮಾನುಗಳು, ಕಬ್ಬಿಣದ ಸಾಮಾನುಗಳು, ಹಣದ ಚೀಲಗಳು, ಟೇಬಲ್ ಬಟ್ಟೆಗಳು, ಹಗ್ಗಗಳು, ಈ ಸಾಮಾನುಗಳು ಈ ಜೈಲಿನಲ್ಲಿ ತಯಾರ್ಮಾಡಲ್ಪಡುತ್ತವೆ. ಬೇಕಾದರೆ ಸಿದ್ಧವಾಗಿದ್ದರೆ ಕಿಮ್ಮತ್ತು ಪಾವತಿಮಾಡಿ ಪಡೆಯಬಹುದು. ಅಲ್ಲದೆ ಶೇಕಡ 50 ರಂತೆ ಬೆಲೆಯನ್ನು ಮುಂಗಡವಾಗಿ ಕೊಟ್ಟಲ್ಲಿ ಸಾಮಾನುಗಳನ್ನು ತಯಾರ್ಮಾಡಿಸುತ್ತೆ.

C. Rajagopal, Superintendent,
Mysore Jail.

1. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ನಾನಾ ವಿಧವಾದ ಟುವಲುಗಳು ದುಪಟಿಗಳು, ಮಗ್ಗಲಹಾಸಿಗೆಗಳು, ಕ್ವಿಲ್ಟು ಎಂಬ ಹಾಸಿಗೆಗಳು, ತೆಂಗಿನ ನಾರಿನ ಚಾಪೆಗಳು, ಮತ್ತು ರಗ್ಗುಗಳು, ಮತ್ತು ಚಕ್ಕಗಳೇ ಮುಂತಾದ ಸಾಮಾನುಗಳು, ತಯಾರ್ಮಾಡಿಸಿ ಮಾರಾಟಕ್ಕೆ ಯಾವಾಗಲು ಸಿದ್ಧವಾಗಿವೆ. ರತ್ನಕಂಬಳಿಗಳು ಮತ್ತು ಜಂಖಾನೆಗಳು ಅನೇಕ ವಿಧವಾಗಿ ಆರ್ಡರುಗಳಿಗೆ ತಯಾರ್ಮಾಡಿಸಿ ಕೊಡಲ್ಪಡುತ್ತವೆ. ಜೈಲ್‌ಸ್ಟೋರು ರಜಾ ವಿನಹ ಬಾಕಿ ದಿನಗಳಲ್ಲಿ ಬೆಳಿಗ್ಗೆ 7 ರಿಂದ 10-30 ಘಂಟೆಯವರವಿಗೂ ಮಧ್ಯಾಹ್ನ 3 ರಿಂದ 5 ಘಂಟೆಯವರವಿಗೂ ತೆರೆಯಲ್ಪಟ್ಟಿರುತ್ತದೆ.

2. ಈ ಜೈಲಿನಲ್ಲಿ ಖೈದಿಗಳಿಗೆ ಒಂದು ವರುಷಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳಿಗೂ ಮತ್ತು ಜೈಲ್‌ಖಾರ್ಖಾನೆಗೆ ಬೇಕಾದ ಚಿಲ್ಲರೆ ಸಾಮಾನುಗಳಿಗೋಸ್ಕರ ಪ್ರತಿವರುಷವು ನವಂಬರು ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ ಮತ್ತು ಜೈಲ್‌ಕಟ್ಟಡ ರಿಪೇರಿಗೋಸ್ಕರ ಬೇಕಾದ ಸಾಮಾನುಗಳಿಗೆ ಪ್ರತಿವರುಷವು ಜೂನ್ ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ.

Superintendent,
15 Centrel Jail, Bangalore

ಇನ್‌ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 17

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸ್ ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ನವೆಂಬರ್ ತಾ|| ೧೬ ನೆಯ ಭಾನುವಾರ.

ಮದದ್ರವ್ಯಶಾಖೆ.

ಭರತಖಂಡದ ಯಾವುದೊಂದು ಸರ್ಕಾರದಲ್ಲೂ ಮದದ್ರವ್ಯಶಾಖೆಯ ವರಮಾನವು ವರ್ಷವರ್ಷಕ್ಕೆ ಹೆಚ್ಚುತ್ತಲೇ ಬರುತ್ತಿದೆ. ದೇಶದ ನೈತಿಕ ಸಾಂಪತ್ತಿಕಾಭಿವೃದ್ಧಿಯನ್ನು ಕೋರತಕ್ಕವರಿಗೆ ಇದು ವಿಷಾದವನ್ನುಂಟುಮಾಡೀತಲ್ಲದೆ ಸಮಾಧಾನಕರವಾಗಿರದು. ಮತಾಚಾರಪ್ರಕಾರ ಕುಡಿತವನ್ನು ಸಂಪೂರ್ಣವಾಗಿ ನಿಷೇಧಿಸಿರುವ ಭರತಖಂಡದಲ್ಲಿ ದಿನದಿನಕ್ಕೆ ಕುಡಿತದ ರೂಪವಾದ ಮಹಾಮಾರಿಯ ಉಪದ್ರವವು ಹಬ್ಬಿ, ಜನರ ನೈತಿಕಸಂಪದ್ರೂಪವಾದ ರಕ್ತವನ್ನು ಹೀರಿ ಹಿಪ್ಪೆಮಾಡುತ್ತಿರುವುದು ದೇಶಾಭಿಮಾನಿಗಳಾದ ಯಾರಿಗೆತಾನೇ ವಿಷಾದವನ್ನುಂಟುಮಾಡದೆ ಇದ್ದೀತು ? ಪ್ಲೇಗು ಇನ್‌ಫ್ಲುಯಂಜಾ ಕಾಲರಾ ಮೊದಲಾದ ರೋಗಗಳ ನಿರೋಧಕ್ಕೆ ಸರ್ಕಾರದವರು ಎಷ್ಟೋ ಧನವ್ಯಯವನ್ನು ಮಾಡಿ ಮನಮುಟ್ಟಿ ಪ್ರಯತ್ನಿಸುತ್ತಾರೆ. ಈ ಮಹಾರೋಗದ ಹಾವಳಿಯಿಂದ ದೇಶ ಪ್ರಜೆಗಳನ್ನು ಕಾಪಾಡುವುದಕ್ಕೆ ಮಾತ್ರ ಅವರು ಪಟ್ಟುಹಿಡಿದು ಕೆಲಸಮಾಡುವುದಿಲ್ಲ. ಇದೀಗ ಭರತಖಂಡದ ದುರ್ದೈವ. ಯುದ್ಧಕಾಲದಲ್ಲಿ ಅಮೇರಿಕೆಯೊಳಗೆ ಮದ್ಯಪಾನಕ್ಕೆ ಸಂಪೂರ್ಣ ನಿಷೇಧವು ಮಾಡಲ್ಪಟ್ಟಿದ್ದಿತು. ಇಂಗ್ಲೆಂಡು ಮೊದಲಾದ ಕಡೆಗಳಲ್ಲಿ ಸಂಕೋಚ ಮಾಡಲ್ಪಟ್ಟಿದ್ದಿತು. ರಷ್ಯಾ ಸಾರ್ವಭೌಮ ಪ್ರಭುತ್ವದವರು ಕಠಿನಶಾಸನದ ಮೂಲಕ ಅದನ್ನು ಯುದ್ಧಕ್ಕೆ ಮುಂಚೆಯೇ ತಪ್ಪಿಸಿಬಿಟ್ಟಿದ್ದರು. ಈಗ ಯುದ್ಧವು ಮುಗಿದುಹೋಗಿರುವ ಕಾರಣ ಮತ್ತೆ ಮದ್ಯಪಾನವನ್ನು ನಿರಾತಂಕವಾಗಿ ಸಾಗಿಸಿಕೊಳ್ಳಬಹುದೆಂಬ ಆಸೆಯು ಅಮೇರಿಕಾದವರನ್ನು ಬಾಧಿಸಿಲ್ಲ. ಅಮೇರಿಕಾ ಸಂಯುಕ್ತರಾಷ್ಟ್ರ ಪ್ರಭುತ್ವದವರ ಸೆನೇಟ್ ಸಭೆಯಲ್ಲಿ ಕಳೆದತಿಂಗಳ ಕೊನೆಯೊಳಗೆ ''ಯುದ್ಧಕಾಲದಲ್ಲಿ ಮಾಡಿಕೊಂಡಿದ್ದ ಮದ್ಯಪಾನ ನಿಷೇಧಕ ಶಾಸನವನ್ನು ಮುಂದಣ ಜನವರಿಯವರೆಗೂ ವ್ಯವಹಾರದಲ್ಲಿಟ್ಟುಕೊಂಡಿರಬೇಕು.'' ಎಂಬ ಒಂದು ಬಿಲ್ಲು ಚರ್ಚೆಗೆ ಬಂದಿತು. ಅದು ಇನ್ನು ಅವಶ್ಯಕವಿಲ್ಲವೆಂದು ಪ್ರೆಸಿಡೆಂಟ್ ವಿಲ್ಸನ್ನರು ನಿರಾಕರಿಸಿದಾಗ್ಯೂ, ಆ ನಿರ್ಬಂಧವನ್ನು ತೊಲಗಿಸಲಾಗದೆಂಬ ಪಕ್ಷಕ್ಕೆ ೧೭೬ ಮಂದಿಗಳೂ, ತೆಗೆದುಬಿಡಬಹುದೆಂಬ ಪಕ್ಷಕ್ಕೆ ೫೫ ಮಂದಿಗಳೂ ಮತಗಳನ್ನು ಕೊಟ್ಟರು. ಅದುಕಾರಣ ಸಭಾಧ್ಯಕ್ಷರಮಾತನ್ನು ಕೂಡ ಮೀರಿ ಅದು ಶಾಸನವಾಗಿ ಏರ್ಪಟ್ಟಿತು. ಮದ್ಯಪಾನನಿಷೇಧವಿಲ್ಲದ ಪಾಶ್ಚಾತ್ಯದೇಶಗಳ ಸ್ಥಿತಿಯು ಹಾಗಿರುವಾಗ, ಪ್ರಾಚೀನವಾಗಿ ಅದರ ನಿಷೇಧವುಳ್ಳ ನಮ್ಮ ದೇಶದ ಪಾಡು ದಿನದಿನಕ್ಕೆ ಮದ್ಯಸಮುದ್ರದಲ್ಲಿ ಮುಳುಗಿಹೋಗುವಂತಾಗಿರುವುದು ಎಷ್ಟು ದುಃಖಸ್ಥಾನವು !

ನಮ್ಮ ಮೈಸೂರು ಪ್ರಭುತ್ವದವರಿಗು ಕೂಡ ಈ ಶಾಖೆಯ ವರಮಾನವು ವರ್ಷವರ್ಷಕ್ಕೆ ವಿಪರೀತವಾಗಿ ಹೆಚ್ಚುತ್ತಲೇ ಇದೆ. ಮೊನ್ನೆವರ್ಷದ ಉತ್ಪತ್ತಿಯು ೬೫೩೩೯೫೩ ರೂ.ಗಳಾಗಿರುವಲ್ಲಿ ಕಳೆದವರ್ಷದ ಉತ್ಪತ್ತಿಯು ೭೦೬೮೦೫೪ ರೂ. ಗಳಾಗಿರುತ್ತವೆ. ಈ ಶಾಖೆಯಲ್ಲಿ ಇಷ್ಟು ವರಮಾನವು ಹಿಂದಕ್ಕೆ ಯಾವ ವರ್ಷದಲ್ಲೂ ಆಗಿಲ್ಲವೆಂದು ದಿವಾನರವರೇ ತಮ್ಮ ಪ್ರಜಾಪ್ರತಿನಿಧಿಸಭಾ-ಉಪನ್ಯಾಸದಲ್ಲಿ ಹೇಳಿರುತ್ತಾರೆ. ನಮ್ಮ ದೇಶದ ಜನಸಂಖ್ಯೆಯನ್ನೂ ಈ ವರಮಾನವನ್ನೂ ಸರಾಸರಿ ಹಂಚಿ ಹಾಕಿದರೆ ಈ ಕುಡಿತಕ್ಕಾಗಿ ಪ್ರತಿಯೊಬ್ಬ ಪ್ರಜೆಯೂ ೧-೩-೯ ಯನ್ನು ತೆತ್ತಂತಾಗುವುದು. ಪ್ರಜೆಗಳ ದುಸ್ಥಿತಿಗೆ ಮೂಲಭೂತವಾಗಿರುವ ಈ ಕುಡಿತವನ್ನು ನಿಲ್ಲಿಸಿಬಿಡುವುದಕ್ಕೆ ಸರ್ಕಾರದವರು ದೊಡ್ಡಮನಸ್ಸು ಮಾಡಿದಲ್ಲದೆ ಇದು ನಿಲ್ಲುವಹಾಗಿಲ್ಲ. ಅಂಗಡಿಗಳ ಸಂಖ್ಯೆಯನ್ನು ತಗ್ಗಿಸುವುದು, ಮದದ್ರವ್ಯಗಳ ಬೆಲೆಯನ್ನು ಹೆಚ್ಚಿಸುವುದು, ಅಂಗಡಿಗಳಲ್ಲಿ ಮಾರುವ ಕಾಲವನ್ನು ಕಡಿಮೆಮಾಡುವುದು, ಇತ್ಯಾದಿ ಸಾಮಾನ್ಯೋಪಾಯಗಳನ್ನು ಸರ್ಕಾರದವರು ಮಾಡಿದೆವೆಂದು ತೋರಿಸುತ್ತಾರೆ. ಇವುಗಳಿಂದೆಲ್ಲಾ ಫಲಿತಾಂಶವು ಮಾತ್ರ ಶೂನ್ಯವೇ. ಮದದ್ರವ್ಯಗಳ ಬೆಲೆ ಹೆಚ್ಚಿಸುವುದರಿಂದ ಕುಡಿಕರು ಮತ್ತಷ್ಟು ಪಾಪರುಗಳಾಗುವುದಕ್ಕೂ ಸರ್ಕಾರಕ್ಕೆ ಉತ್ಪತ್ತಿ ಹೆಚ್ಚುವುದಕ್ಕೂ ದಾರಿಯಾಯಿತು. ಇದುವರೆಗೆ ಮಾಡಿದ ಏರ್ಪಾಡುಗಳಿಂದ ಹೆಚ್ಚು ಪ್ರಯೋಜನವಾಗಲಿಲ್ಲವೆಂದು ಸರ್ಕಾರದವರೇ ಒಪ್ಪಿಕೊಂಡಿರುತ್ತಾರೆ. ಈ ದುರಭ್ಯಾಸದ ನಿವಾರಣೋಪಾಯವು ಬುದ್ಧಿವಂತರಾದ ಜನಗಳ ವಶದಲ್ಲಿಯೇ ಇರುವುದರಿಂದ ಮುಖಂಡರುಗಳು ಫಲಪ್ರದವಾಗುವ ಕಾರ್ಯಗಳನ್ನು ಶೀಘ್ರವಾಗಿ ಅವರೇ ಮಾಡಬೇಕೆಂದು ಹೇಳಿ, ಅನಿಷ್ಟವನ್ನು ಅವರ ತಲೆಗೆ ಕಟ್ಟಿ ಸರ್ಕಾರದವರು ನುಣುಚಿಕೊಳ್ಳಬೇಕೆಂದಿದ್ದಾರೆ.

ತಮ್ಮ ಹಿತದೃಷ್ಟಿಯು ತಮಗೆ ಇರುವಂಥ ಪ್ರಜೆಗಳೇ ನಮ್ಮದೇಶದ ತುಂಬಾ ಇದ್ದರೆ ವಿದ್ಯಾಭ್ಯಾಸ, ಸಿಡುಬು ಹಾಕಿಸುವುದು, ಇತ್ಯಾದಿ ಕಾರ್ಯಗಳನ್ನು ಸರ್ಕಾರದವರು ನಿರ್ಬಂಧಶಾಸನಗಳ ಮೂಲಕ ಜರುಗಿಸಬೇಕಾದ ಅಗತ್ಯವೇನಿದ್ದಿತು ? ಪ್ರಜೆಗಳ ಹಿತಾರ್ಥವಾಗಿ ಅವುಗಳನ್ನೆಲ್ಲಾ ನಿರ್ಬಂಧದ ಮೂಲಕ ಮಾಡಿಸುತ್ತಿರುವ ನಮ್ಮ ಸರ್ಕಾರದವರು, ಪ್ರಜೆಗಳನ್ನು ದುಸ್ಥಿತಿಯಿಂದ ತಪ್ಪಿಸಿ ಅವರಿಗೆ ನೈತಿಕವೃದ್ಧಿಯನ್ನು ಮಾಡುವ ಕೆಲಸಕ್ಕಾಗಿ ನಿರ್ಬಂಧವಿಧಿಯನ್ನು ಕಲ್ಪಿಸಿ ಮದದ್ರವ್ಯಶಾಖೆಯನ್ನೇ ತೆಗೆದುಬಿಡುವುದಕ್ಕೆ ಏಕೆ ಮನಸ್ಸುಮಾಡಬಾರದು ? ಲಕ್ಷಾಂತರ ರೂ. ಗಳ ವರಮಾನವನ್ನು ಕಳೆದುಕೊಳ್ಳಲಾಗದ ಕಾರಣದಿಂದ ಈ ಶಾಖೆಯನ್ನು ತೆಗೆಯಲಾರದೆ ಇದ್ದರೆ ಪ್ರಜೆಗಳಿಗೆ ಉಂಟಾಗುವ ನೈತಿಕಾಭಿವೃದ್ಧಿಯನ್ನು ಹಣದ ಜತೆಗೆ ಹಾಕಿ ತೂಗಿ ತೂರಿಬಿಡಬಹುದೆ ?

ಈ ವರ್ಷದ ಪ್ರಜಾಪ್ರತಿನಿಧಿಸಭೆಯಲ್ಲಿ ಪದ್ಧತಿಯಂತೆ ಈ ಸಲವೂ ಈ ವಿಷಯದ ಚರ್ಚೆಯು ಬಂದಿದ್ದಿತು. ಆದ ಪರ್ಯಾವಸಾನದ ವಿಚಿತ್ರವನ್ನೇನು ಹೇಳುವ ! ಕೋಲಾರದ ಮ್ಯುನಿಸಿಪಾಲಿಟಿಯಿಂದ ಬಂದಿದ್ದ ಮ|| ವಿ. ಚಿಕ್ಕಚೆನ್ನಂಜಪ್ಪಶೆಟ್ಟರು ದಿನಕ್ರಮೇಣ ಮದ್ಯದಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡುತ್ತ ೧೦ ವರ್ಷಗಳೊಳಗಾಗಿ ಈ ಮದದ್ರವ್ಯಶಾಖೆಯನ್ನೇ ತೆಗೆದುಬಿಡುವಂತೆ ಮಾಡಿಸಬೇಕೆಂಬ ವಿಷಯವನ್ನು ವಿಚಾರಕ್ಕೆ ಇಟ್ಟಿದ್ದರು. ಮದದ್ರವ್ಯಪಾನದ ಹಬ್ಬುಗೆಯ ರೀತಿಯನ್ನೂ ಅನರ್ಥಪರಿಣಾಮವನ್ನೂ ನಿಲ್ಲಿಸಬೇಕಾದ ಅವಶ್ಯಕತೆಯನ್ನೂ ಕುರಿತು ಅವರು ಸಭೆಯಲ್ಲಿ ಮನಕರಗುವಂತೆ ಪ್ರತಿಪಾದಿಸಿದರು. ಮ|| ಗಳಾದ ಕೆ.ಟಿ. ದೇವಪ್ಪಗೌಡರು, ಎಚ್.ಎಸ್. ವೆಂಕಪ್ಪಗೌಡರು, ಕರಣಿಕ ಕೃಷ್ಣಮೂರ್ತಿರಾಯರು, ಕೆ. ಟಿ. ಶೇಷಯ್ಯನವರು ಮೊದಲಾದವರು ಅದನ್ನು ಪುಷ್ಟೀಕರಿಸಿ ಮಾತನಾಡುವಾಗ್ಗೆ-ಮಲ್ನಾಡಿನಲ್ಲಿ ಈ ಕುಡಿತದಿಂದಲೇ ಮರಣಸಂಖ್ಯೆ ಹೆಚ್ಚಾಗುತ್ತಿದೆಯೆಂತಲೂ, ಅಲ್ಲಿ ಎರಡೆರಡು ಮೈಲಿಗಳಿಗೆ ಒಂದೊಂದು ಮದ್ಯದಂಗಡಿಗಳಿವೆಯೆಂತಲೂ, ದೂರದಲ್ಲಿ ಅಂಗಡಿಗಳಿದ್ದರೆ ಸ್ವಲ್ಪ ಪ್ರತಿಬಂಧಕವಾಗಲವಕಾಶವಾಗುವುದೆಂತಲೂ, ಮದದ್ರವ್ಯವು ಸುಲಭಸಾಧ್ಯವಾಗದಂತೆಯೂ ಪ್ರಯಾಸಸಾಧ್ಯವಾಗುವಂತೆಯೂ ಮಾಡಬೇಕೆಂತಲೂ, ಒಂದು ವಿಧಿಯನ್ನು ಕಲ್ಪಿಸುವ ಮೂಲಕ ನಿರ್ಬಂಧಪಡಿಸಿ, ಅದನ್ನು ಮೂಲೋತ್ಪಾಟನೆ ಮಾಡಿಬಿಡಬೇಕೆಂತಲೂ ಮೊದಲಾಗಿ ಹೇಳಿಕೊಂಡರು. ಇದಕ್ಕೆಲ್ಲಾ ಗೌರ್ನಮೆಂಟಿನವರು ಉತ್ತರಕೊಡುವಾಗ್ಗೆ—''ಈ ವಿಷಯದಲ್ಲಿ ಏನುಮಾಡಬೇಕೆಂಬ ಬಗೆಯನ್ನು ವಿಚಾರಿಸುವುದಕ್ಕಾಗಿ ನಿಯುಕ್ತರಾಗಿದ್ದ ಕಮಿಟಿಯವರ ವರದಿಯು ಬಂದಿದೆ ; ಪರ್ಯಾಲೋಚಿಸುತ್ತಿದ್ದೇವೆ. ಇದುವರೆಗೆ ೩ ವರ್ಷಗಳ ಕಾಲದಲ್ಲಿ ೪೮೪ ಮದ್ಯದಂಗಡಿಗಳನ್ನು ಮುಚ್ಚಿಸಿಬಿಟ್ಟಿದ್ದೇವೆ. ಅಂಗಡಿಗಳನ್ನು ತೆಗೆದುಹಾಕಿದರೆ ಕಳ್ಳಭಟ್ಟಿಗಳು ಹುಟ್ಟುವ ಸಂಭವವಿದ್ದಕಡೆ ಅಂಗಡಿಗಳನ್ನು ತೆಗೆಯುವುದು ಸಾಧ್ಯವಲ್ಲ. ಬೆಂಗಳೂರು, ಕೋಲಾರ, ಮೈಸೂರುಗಳಲ್ಲಿ ಒಂದೊಂದು ಲೈಸೆನ್ಸ್‌ಬೋರ್ಡನ್ನು ಏರ್ಪಡಿಸಿದ್ದೇವೆ. ಅವರು ಸೂಚಿಸುವ ಮೇರೆಗೆ ಅಂಗಡಿಗಳನ್ನು ಮುಚ್ಚುವುದು ಇಡುವುದು ಇತ್ಯಾದಿ ಕಾರ್ಯಗಳನ್ನು ನಡೆಯಿಸುವಂತೆ ಏರ್ಪಡಿಸಿದ್ದೇವೆ. ಇತರ ಡಿಸ್ಟ್ರಿಕ್ಟುಗಳಲ್ಲೂ ತಾಲ್ಲೂಕುಗಳಲ್ಲೂ ಮುಂದೆ ಇಂಥ ಬೋರ್ಡುಗಳನ್ನೇ ಏರ್ಪಡಿಸುತ್ತೇವೆ. ಪೋಲೀಸುಶಾಖೆಯನ್ನು ತೆಗೆದುಹಾಕಿಬಿಟ್ಟರೆ ಕಳ್ಳತನವೇ ನಿಂತುಹೋಗುವುದೆಂದು ಹೇಳುವುದೂ ಮದದ್ರವ್ಯಶಾಖೆಯನ್ನು ತೆಗೆದುಹಾಕಿಬಿಟ್ಟರೆ ಕುಡಿಕತನವು ನಿಂತುಹೋಗುತ್ತದೆಯೆಂದು ಹೇಳುವುದೂ ಎರಡೂ ಒಂದೇ. ಈ ಶಾಖೆಯ ಉತ್ಪತ್ತಿಯು ಸರ್ಕಾರಕ್ಕೆ ಹೆಚ್ಚಾಗಿರುವುದರಿಂದ ಆ ಶಾಖೆಯನ್ನು ತೆಗೆದುಬಿಡಲಾಗುವುದಿಲ್ಲ. ಕುಡಿಕತನವನ್ನು ನಿಲ್ಲಿಸಿಬಿಡುವ ಏರ್ಪಾಟನ್ನು ಪ್ರಜೆಗಳೇ ಮಾಡಿಕೊಳ್ಳಬೇಕಾಗಿದೆ'' ಎಂದು ಹೇಳಿದರು. ಸರ್ಕಾರದವರು ಹೀಗೆ ಹೇಳುತ್ತ ದಬ್ಬುವುದು ಆಶ್ಚರ್ಯವಲ್ಲ. ಆದರೆ ಪ್ರಜೆಗಳ ಹಿತವನ್ನೂ ದೇಶಾಭ್ಯುದಯವನ್ನೂ ಕೋರಿ ಕೆಲಸಮಾಡುತ್ತೇವೆಂದು ಬಂದ ಪ್ರಜಾಪ್ರತಿನಿಧಿಗಳಲ್ಲಿ ಕೆಲವರು ಅಲ್ಲಿ ಪಟ್ಟ ಅಭಿಪ್ರಾಯವನ್ನು ಕೇಳಿದರೆ ಯಾರೂ ಆಶ್ಚರ್ಯಪಡದೆ ಇರಲಿಕ್ಕಾಗುವುದಿಲ್ಲ. ಅದೇನೆಂದರೆ-ಮ|| ಸಿ. ಶ್ರೀನಿವಾಸರಾಯರು ''ಕುಡಿತಕ್ಕೆ ಪ್ರತಿಬಂಧವನ್ನು ಕಲ್ಪಿಸುವುದಾದರೆ ನಾಳೆಯದಿನ ನಶ್ಯಹಾಕಿಕೊಳ್ಳುವವರಿಗೂ ಕಾಫೀ ಟೀ ಕುಡಿಯುವವರಿಗೂ ನಿರ್ಬಂಧವನ್ನು ಕಲ್ಪಿಸಬೇಕಾಗುವುದು'' ಎಂದರು. ಮ|| ಎಂ. ಸುಬ್ಬಯ್ಯನವರು ''ಪಂಚಮರ ಪ್ರತಿನಿಧಿಗಳು ಈ ಸಭೆಯಲ್ಲಿ ಯಾರೂ ಬಂದಿಲ್ಲ. ಅವರಾರಾದರೂ ಇದ್ದರೆ ಈ ವಿಷಯಕ್ಕೆ ವಿರೋಧಿಸಿ ಮಾತನಾಡುತ್ತಿದ್ದರು. ಈ ಸಂಬಂಧದಲ್ಲಿ ಸರ್ಕಾರದವರು ಪ್ರತಿಬಂಧಕವನ್ನು ಕಲ್ಪಿಸುವುದು ಉಚಿತವಲ್ಲ'' ಎಂದರು. ಇನ್ನೇನಾಗಬೇಕು ? ಇದನ್ನು ಖಂಡಿಸಿ ಮಾತನಾಡತಕ್ಕವರು ಸಭೆಯಲ್ಲಿ ಯಾರೂ ಏಳಲಿಲ್ಲ. ದೇಶಾರಿಷ್ಟನಿವಾರಣೆಗೆ ಅತ್ಯಂತ ಮುಖ್ಯವಾದ ಈ ವಿಷಯಕ್ಕೆ ತಮ್ಮ ಬುದ್ಧಿವಿವೇಕವನ್ನು ವೆಚ್ಚಮಾಡಿ, ''ಸರ್ಕಾರದವರು ಗಟ್ಟಿಮನಸ್ಸು ಮಾಡದಿದ್ದರೆ ಪ್ರಜಾಪ್ರಮುಖರಿಂದಲೇ ಇದನ್ನು ಹುಟ್ಟಣಗಿಸುವುದು ಸಾಧ್ಯವಲ್ಲ''ವೆಂದು ಹೇಳಿದವರಾರನ್ನೂ ಕಾಣಲಿಲ್ಲ. ಪಂಚಮರು ಕೂಡ ಕುಡಿತವನ್ನು ಬಿಟ್ಟು ಉತ್ತಮಸ್ಥಿತಿಗೆ ಬರಬೇಕೆಂದು ತಂತಮ್ಮಲ್ಲಿ ಕಟ್ಟುಮಾಡಿಕೊಳ್ಳುತ್ತಲೂ, ಸಭೆಗಳಲ್ಲಿ ಆ ವಿಷಯಕ್ಕೆ ನಿರ್ಧಾರಮಾಡಿಕೊಳ್ಳುತ್ತಲೂ, ತಮ್ಮ ನಿಕೃಷ್ಟಸ್ಥಿತಿಗೆ ತಮ್ಮ ದುರಾಹಾರ ದುಷ್ಪಾನಗಳೇ ಕಾರಣಗಳೆಂಬುದನ್ನು ತಿಳಿದುಕೊಂಡು ದೂರೀಕರಿಸುವುದಕ್ಕೆ ಸಾಧ್ಯವಾದಷ್ಟು ಸಾಹಸಪಡುತ್ತಲೂ ಇರುವಾಗ, ಅವರ ಹಿತಚಿಂತನೆಗಾಗಿ ಮಾತನಾಡುವವರಂತೆ ಮ|| ಸುಬ್ಬಯ್ಯನವರು ಮದದ್ರವ್ಯದ ಮೇಲೆ ಅಭಿಮಾನವನ್ನು ತೋರಿಸಿದುದು ಬಹಳ ಅನ್ಯಾಯವೆಂದು ನಮಗೆ ತೋರುವುದು. ಪ್ರಜಾಪ್ರತಿನಿಧಿಸಭೆ ಹುಟ್ಟಿದಾಗಣಿಂದ ಅದರ ಸಂಬಂಧವನ್ನು ಬಿಡದೆ ಬೆಳೆದ ಬ್ರಾಹ್ಮಣವರ್ಯರಾದ ಮ|| ಶ್ರೀನಿವಾಸರಾಯರು ನಶ್ಯದ ಅನಾಹುತವನ್ನೂ ಮದದ್ರವ್ಯದ ಅನಾಹುತವನ್ನೂ ಸರಿಹೋಲಿಸಿ ಮದದ್ರವ್ಯವ್ಯಾಪನೆಗೆ ಪೋಷಕರಾಗಿ ನಿಂತುದು ಇನ್ನೂ ವ್ಯಸನಕರವು. ಎಲ್ಲರಿಗೂ ಧರ್ಮನೀತಿಬೋಧಕರಾಗಿ ಸತ್ಯಶೌಚಾದಿಗಳಿಗೆ ತವರಾಗಿ ಸದಾಚಾರಕ್ಕೆ ಆದರ್ಶಪ್ರಾಯರಾಗಿ ಇದ್ದ ಜನವರ್ಗದಲ್ಲೇ ಮೇಲೆಮೇಲೆ ಆಚಾರಾಡಂಬರವೂ ಒಳಗೊಳಗೆ ದುಷ್ಪಾನಾಸಕ್ತಿಯೂ ಬಳೆಯುತ್ತಿರುವ ಈಗಣ ಕಾಲದಲ್ಲಿ, ಪ್ರಜೆಗಳಿಂದಲೇ ಕುಡಿತದ ಹಾವಳಿಗೆ ಪ್ರತಿಬಂಧವು ಕಲ್ಪಿಸಲ್ಪಡುವುದೆಂದು ನಿರೀಕ್ಷಿಸುವುದು ಗಗನದಲ್ಲಿ ಕುಸುಮೋತ್ಪತ್ತಿಯನ್ನು ನಿರೀಕ್ಷಿಸುವಂತೆಯೇ ಸರಿ. ವೆಚ್ಚಕ್ಕೆ ಸಾಲದೆಂದು ಕಣ್ಬಾಯಿ ಬಿಡುತ್ತ, ಇರುವ ವರಮಾನವನ್ನು ಕಳೆದುಕೊಳ್ಳಲಾರದ ಸ್ಥಿತಿಯಲ್ಲಿರುವ ಸರ್ಕಾರವು ತನಗೆ ತಾನೇ ಈ ಶಾಖೆಯನ್ನು ನಿರ್ಮೂಲಮಾಡಿಬಿಡುವುದಂತೂ ಅದಕ್ಕಿಂತಲೂ ಅಸಂಭವವಾಗಿಯೇ ಇರುವುದು. ಹೀಗಿರುವಾಗ ದೇಶದ ಈ ಅರಿಷ್ಟಮೂಲವು ನಾಶವಾಗುವುದೆಂದಿಗೆ ? ಸರ್ವನಾಶವೂ ಆದಮೇಲೆಯೇ ಎಂದು ತೋರುತ್ತದೆ.

ಪ್ರಾಚ್ಯಪಂಡಿತಮಹಾಸಭೆ.

ಗೊತ್ತಾಗಿದ್ದ ಮೇರೆಗೆ ಈ ಸಭೆಯು ಕಳೆದ ತಾ|| ೫ರಿಂದ ಮೂರುದಿನಗಳ ಕಾಲ ಪೂನಾನಗರದಲ್ಲಿ ಚಂದ್ರವಾರ್ಕರ್ ಇನ್‌ಸ್ಟಿಟ್ಯೂಟಿನ ಆವರಣದಲ್ಲಿ ಹೂಡಲ್ಪಟ್ಟಿದ್ದ ದೊಡ್ಡ ಗುಡಾರದಲ್ಲಿ ನೆರವೇರಿತು. ಇಂಥ ಸಭೆಯು ಭರತಖಂಡದಲ್ಲಿ ಇದುವರೆಗೆ ನೆರವೇರಿದುದಿಲ್ಲವಾದುದರಿಂದ ಎಲ್ಲ ಭಾಗಗಳಿಂದಲೂ ನಾನಾ ಶಾಸ್ತ್ರಗಳಲ್ಲಿ ಪಂಡಿತರಾದ ಮಹಾಜನರು ೩೦೦ ಮಂದಿಗಳವರೆಗೂ ಪ್ರತಿನಿಧಿಗಳಾಗಿ ದಯಮಾಡಿಸಿದ್ದರು. ಪ್ರೇಕ್ಷಕರೂ ಸೇರಿ ಸಭೆಯಲ್ಲಿ ೧೦೦೦ ಮಂದಿಗಳು ನೆರೆದಿದ್ದರು. ಮಿರ್ಜಿ, ಔಂದ್, ಸಾಂಗ್ಲೆ ಸಂಸ್ಥಾನಾಧಿಪತಿಗಳೂ, ಭೋರ್, ಇಚಲ್ಕರಂಜಿ, ಯುವರಾಜರುಗಳೂ, ಪರಂಜಪೆ, ಕಡ್ವೇಲ್, ಉಪಾಸನಿ, ಜಾಫರ್, ಕೃಷ್ಣಚಂದ್, ಪ್ರಿನ್ಸಿಪಲ್ ಭಾಟೆ, ಸರ್ದಾರ್ ಮಹಂದಳೆ, ಸರ್ದಾರ್ ಮುಜುಂದಾರ್, ಸರ್ದಾರ್ ಚಂದ್ರಚೂಡ, ಡಾಕ್ಟರ್ ಗುಣೆ, ಡಾಕ್ಟರ್ ಜಿಮ್ಮರ್‌ಮ್ಯಾನ್, ಡಾಕ್ಟರ್ ಚಲ್ವಲ್ಕರ್, ಪ್ರೊ|| ರಾಜವಾಡೆ ಪ್ರೊ|| ಕಣೆತ್ಕರ್ ಮೊದಲಾದನೇಕಮಂದಿ ಪಂಡಿತೋತ್ತಮರು ದಯಮಾಡಿಸಿದ್ದರು. ಇಂಡ್ಯಾ ಸರ್ಕಾರದವರು ೧ ಸಾವಿರ ರೂ. ಗಳನ್ನು ಈ ಸಭಾವ್ಯಯಕ್ಕಾಗಿ ಸಹಾಯ ಮಾಡಿದ್ದರು. ಪ್ರಾಂತಿಕ ಸರ್ಕಾರಗಳೂ ಅನೇಕ ಸಂಸ್ಥಾನಾಧಿಪತಿಗಳೂ ಸಹ ದ್ರವ್ಯಸಹಾಯ ಮಾಡಿದುದಲ್ಲದೆ ತಂತಮ್ಮ ಕಡೆಯಿಂದ ವಿದ್ವಾಂಸರುಗಳನ್ನೂ ಪ್ರಾಚೀನ ಗ್ರಂಥಗಳನ್ನೂ ಶಾಸನಗಳನ್ನೂ ಸಹ ಕಳುಹಿಸಿಕೊಟ್ಟಿದ್ದರು. ಬೊಂಬಾಯಿ ಗೌರ್ನರಾದ ಜಾರ್ಜಿಲಾಯಿಡ್‌ರವರು ಮೊದಲಿಂದಲೂ ಈ ಸಭಾವಿಷಯದಲ್ಲಿ ತುಂಬಾ ಶ್ರದ್ಧೆವಹಿಸಿದ್ದರು. ಸಭಾರಂಭವನ್ನು ಅವರೇ ಮಾಡಿದರು. ಆಗ್ಗೆ ಅವರು ಮಾಡಿದ ಭಾಷಣದಲ್ಲಿ—''ಸರ್ ಭಂಡಾರ್ಕರ್‌ರವರು ಈ ಸಭೆಗೆ ಬರತಕ್ಕ ಸ್ಥಿತಿಯಲ್ಲಿಲ್ಲವೆಂದು ತಿಳಿಸುವುದಕ್ಕೆ ನಾನು ಬಹಳ ಚಿಂತಿಸುತ್ತಿದ್ದೇನೆ. ಅವರು ಈ ಸಭೆಗಾಗಿ ಬಹಳ ಶ್ರದ್ಧೆವಹಿಸಿ ಕೆಲಸಮಾಡಿದವರು. ಅವರ ಮೇಲೆ ಈ ದೇಶೀಯರಿಗೆಲ್ಲಾ ವಿಶೇಷ ಗೌರವವಿರುವುದು. ಅವರು ಬೇಗನೆ ಆರೋಗ್ಯಗೊಂಡು ಬರುವಂತಾಗಬೇಕೆಂದು ನನ್ನ ಪಕ್ಷದಿಂದಲೂ ನಿಮ್ಮೆಲ್ಲರ ಪಕ್ಷದಿಂದಲೂ ಕೋರುತ್ತೇನೆ. ಅವರು ಇನ್ನೂ ಚಿರಕಾಲ ತಮ್ಮ ಪರಿಶೋಧನಾ ಕಾರ್ಯವನ್ನು ಜರುಗಿಸುತ್ತಿರುವಂತೆ ಭಗವಂತನು ಆಶೀರ್ವದಿಸಬೇಕು. ಈ ಸಭೆಯನ್ನು ಪ್ರಾರಂಭಿಸುವ ಯೋಗವು ನನಗೂ ಮೊದಲನೆಸಲ ನೆರೆಯಿಸುವ ಯೋಗವು ಬೊಂಬಾಯಿ ಆಧಿಪತ್ಯಕ್ಕೂ ಪ್ರಾಪ್ತವಾದುದಕ್ಕಾಗಿ ನಾನು ಸಂತೋಷಿಸುತ್ತೇನೆ'' ಎಂದು ಹೇಳಿ ಸಭಿಕರಿಗೆಲ್ಲಾ ಸುಸ್ವಾಗತ ಮಾಡಿದುದಲ್ಲದೆ, ಪಶ್ಚಿಮದೇಶಗಳ ಮುಖ್ಯಮುಖ್ಯ ನಗರಗಳಲ್ಲಿ ಆಗಾಗ್ಗೆ ಇಂಥ ಅಂತರ್ಜಾತೀಯ ವಿದ್ವತ್ಸಭೆಗಳು ಜರುಗುವ ಪದ್ಧತಿಯುಂಟೆಂತಲೂ, ಅಂಥ ಸಭೆಯನ್ನು ಒಂದು ವರ್ಷ ಭರತಖಂಡದಲ್ಲಿ ಜರುಗಿಸಬೇಕೆಂಬ ಅಭಿಪ್ರಾಯವನ್ನು ಕಾಪನ್‌ಹಾಗನ್ ಸಭೆಯಲ್ಲಿ ಪ್ರೊ|| ಮೆಕ್ಡಾನಲ್‌ರವರು ಸೂಚಿಸಿದ್ದರೂ ಅನೇಕ ಕಾರಣಗಳಿಂದ ಅದು ನೆರವೇರಲಿಲ್ಲವೆಂತಲೂ, ಭಾರತೀಯ ವಿದ್ವತ್ ಸಭೆಯನ್ನು ಕಲ್ಕತ್ತಾದಲ್ಲಿ ಕೂಡಿಸಬೇಕೆಂದು ಅದೇ ವಿದ್ವಾಂಸರು ಮತ್ತೊಂದುಸಲ ಯತ್ನಿಸಿದರೂ ಕೂಡ ಭಾರತೀಯರ ಪ್ರೋತ್ಸಾಹವಿಲ್ಲದೆ ಹೋದುದರಿಂದ ಅದೂ ಸಾಗಲಿಲ್ಲವೆಂತಲೂ, ೧೯೧೧ನೆ ವರ್ಷದಲ್ಲಿ ಸರ್ ಹಾರ್‌ಕೋರ್ಟ್ ಬಟ್ಲರ್‌ರವರು ಸಿಮ್ಲಾ ನಗರದಲ್ಲಿ ಭಾರತೀಯ ವಿದ್ವಾಂಸರ ಸಭೆಯನ್ನು ಜರುಗಿಸಿದರೆಂತಲೂ, ಈಗಣ ಸಭೆಯಂಥ ಪ್ರತಿಷ್ಠಾಪನೆಯೊಂದನ್ನು ಶಾಶ್ವತವಾಗಿ ಮಾಡಬೇಕೆಂಬ ಸೂಚನೆಯನ್ನು ಪ್ರೊ|| ವೋನೆಲ್‌ರವರು ಆ ಸಭೆಯಲ್ಲೇ ಮಾಡಿದರೆಂತಲೂ, ಈಗ ಆ ಕೋರಿಕೆಯು ಪ್ರಾಚ್ಯಸಂಘದವರ ದೃಢಯತ್ನದಿಂದ ಸಾಗಿ, ಅವರ ಶ್ರದ್ಧಾಫಲರೂಪವಾಗಿ ಈ ಮಹಾಸಭೆಯು ಕೂಡಿರುವುದೆಂತಲೂ, ಇಂಥ ಸಭೆಗಳಿಂದ ಪ್ರಪಂಚದ ಮೇಲಿರುವ ವಿದ್ವಾಂಸರಿಗೆ ಮಾತ್ರವೇ ಅಲ್ಲದೆ ಸಾಮಾನ್ಯಪ್ರಜೆಗಳೆಲ್ಲರಿಗೂ ಬಹಳ ಪ್ರಯೋಜನವಾಗುವುದೆಂತಲೂ, ಆಯಾ ಶಾಸ್ತ್ರಜ್ಞರು ತಂತಮ್ಮ ಅಭಿಮಾನ ಶಾಸ್ತ್ರಗಳನ್ನು ಕುರಿತು ಈ ಸಭಾರಂಗದಲ್ಲಿ ಚರ್ಚಿಸಲೂ ಅದನ್ನು ಇತರರು ಸುಲಭವಾಗಿ ತಿಳಿದುಕೊಳ್ಳಲೂ ಅವಕಾಶವಾಗುವುದೆಂತಲೂ, ಮುಖ್ಯವಾಗಿ ಇಲ್ಲಿಯ ಉಪನ್ಯಾಸಗಳು ಮುದ್ರಿತವಾದರೆ ವಿದೇಶೀಯಪಂಡಿತರು ವಿಶೇಷ ಲಾಭವನ್ನು ಪಡೆದುಕೊಳ್ಳುವರೆಂತಲೂ, ಆದರೆ ಇಲ್ಲಿ ಮಾಡಲ್ಪಡುವ ಉಪನ್ಯಾಸಗಳು ಶಾಂತವಾಗಿಯೂ ಪರಸ್ಪರ ವಾಗ್ವಿವಾದಕ್ಕೆ ಅಸ್ಪದವಿಲ್ಲದಂತೆಯೂ ನಡೆಯಬೇಕೆಂತಲೂ, ಪ್ರಾಚೀನಗ್ರಂಥಗಳನ್ನು ಕುರಿತು ವಿಮರ್ಶೆಮಾಡಿ ಬರೆಯತಕ್ಕ ಪದ್ಧತಿಯನ್ನು ಪಾಶ್ಚಾತ್ಯರೇ ಮೊದಲು ಮಾಡಿದವರೆಂತಲೂ, ಈ ದೇಶೀಯರು ದೇಶಭಾಷೆಗಳಲ್ಲೂ ಸಂಸ್ಕೃತದಲ್ಲೂ ವಿಶೇಷವಾಗಿ ಪರಿಶ್ರಮ ಮಾಡಿದವರೆಂತಲೂ, ಈಗ ಸರ್ ರಾಮಕೃಷ್ಣಭಂಡಾರ್ಕರಂಥ ವಿದ್ವಾಂಸರು ಕೂಡ ಪಾಶ್ಚಾತ್ಯರಂತೆಯೇ ಗ್ರಂಥವಿಮರ್ಶೆಗೆ ಪ್ರಾರಂಭಿಸಿರುವರೆಂತಲೂ, ಇಂಥ ಸಭೆಯ ವಿಷಯದಲ್ಲಿ ಪಾಶ್ಚಾತ್ಯ ವಿದ್ವಾಂಸರು ಬಹಳ ಶ್ರದ್ಧೆ ತೋರಿಸುವರೆಂತಲೂ, ಮುಂದಣ ಸಲ ಕೂಡುವ ಈ ಸಭೆಗೆ ಅನೇಕ ಪಾಶ್ಚಾತ್ಯ ವಿದ್ವಾಂಸರನ್ನೂ ಆಹ್ವಾನಿಸಬೇಕೆಂತಲೂ, ಈ ದೇಶದ ವಿದ್ವಾಂಸರುಗಳು ಪಾಶ್ಚಾತ್ಯದೇಶಗಳಿಗೆ ಹೋಗಿ ಅಲ್ಲಿಯ ವಿದ್ವಾಂಸರೊಡನೆ ಚರ್ಚಿಸುತ್ತ ಬರಬೇಕೆಂತಲೂ, ಇಲ್ಲಿಗೆ ಬಂದಿರುವ ಪ್ರಾಚೀನವಸ್ತುಸಮುದಾಯವು ಅನೇಕ ಪುರಾತನ ವಿಷಯಗಳನ್ನು ಗೋಚರಕ್ಕೆ ತಂದುಕೊಡತಕ್ಕುವಾಗಿವೆಯೆಂತಲೂ, ಇಂಥ ವಸ್ತುಗಳ ಮೇಲೆ ನನಗೆ ಯಾವಾಗಲೂ ಬಹಳ ಅಭಿಮಾನವಿರುವುದೆಂತಲೂ, ಈ ಆಧಿಪತ್ಯದ ಪೂನಾ, ಬಿಜಾಪುರ, ಅಹಮ್ಮದಾಬಾದ್, ಸೊಲ್ಲಾಪುರ ಮೊದಲಾದ ಕಡೆಗಳಲ್ಲಿ ಪರಿಶೋಧನಾರ್ಹವಾದ ಅನೇಕ ವಸ್ತುಗಳಿರುವುವೆಂತಲೂ, ಅಂಥವುಗಳನ್ನು ಕಾಪಾಡುವ ವಿಷಯದಲ್ಲಿ ನಾನು ತುಂಬಾ ಪ್ರಯತ್ನಿಸುವೆನೆಂತಲೂ, ಇಂಥ ಸಭೆಯನ್ನು ಏರ್ಪಡಿಸಿದ ಕಾರ್ಯಕರ್ತರುಗಳಿಗೂ ಅದಕ್ಕೆ ಸಹಾಯಮಾಡಿದ ಪಂಡಿತರುಗಳಿಗೂ ಕೂಡ ನಾನು ಕೃತಜ್ಞತಾಪೂರ್ವಕ ವಂದನೆಯನ್ನರ್ಪಿಸುತ್ತೇನೆಂತಲೂ ಈ ಸಭೆಯನ್ನೇರ್ಪಡಿಸಿದ ಸರ್ ಭಂಡಾರ್ಕರ್ ಇನ್‌ಸ್ಟಿಟ್ಯೂಟ್ ಪಾಲಕಸಂಘದವರು ಮಹಾಭಾರತವನ್ನು ವಿಮರ್ಶಾಸಮೇತವಾಗಿ ಮುದ್ರಣ ಮಾಡಿಸುವುದಕ್ಕೆ ಯತ್ನಿಸಿರುವುದು ಶ್ಲಾಘನೀಯವಾದ ಪ್ರಯತ್ನವೆಂತಲೂ, ಅದಕ್ಕೆ ಧನಸಾಹಾಯ್ಯವೇ ಮುಖ್ಯವಲ್ಲದೆ ವಿದ್ವತ್ಸಹಾಯವೂ ಅವಶ್ಯಕವಾದುದೆಂತಲೂ, ಈ ಸಭಾಪ್ರಯತ್ನದಿಂದ ಆ ಮಹಾಕಾರ್ಯವು ಕೂಡ ಸಾವಲಂಬನವಾಗಿ ಜರುಗಿಹೋಗುವುದೆಂದು ನಾನು ನಂಬುತ್ತೇನೆಂತಲೂ, ನನ್ನ ಪತ್ನಿಯು ಈ ಸಭೆಗೆ ಬರಬೇಕೆಂದು ಎಷ್ಟೋ ಆಸಕ್ತಿಯುಳ್ಳವರಾಗಿದ್ದರೂ ಕುದುರೆ ಸ್ವಾರಿಯ ದೆಸೆಯಿಂದ ಪೆಟ್ಟು ಬಿದ್ದು ಸ್ವಲ್ಪ ಅಸ್ವಸ್ಥರಾಗಿರುವ ಕಾರಣ ಬರಲಾಗದೆ ಹೋದುದಕ್ಕಾಗಿ ನಾನು ವಿಷಾದಿಸುತ್ತೇನೆಂತಲೂ ಹೇಳಿ, ಸಭಿಕರೆಲ್ಲರೂ ಸಭಾಕಾರ್ಯವನ್ನು ಈ ಪೂನಾನಗರದಲ್ಲಿ ಜಯಪ್ರದವಾಗಿ ನೆರವೇರಿಸುವವರಾಗಬೇಕೆಂದು ಕೋರಿದರು.

ಸಭಾಧ್ಯಕ್ಷರಾಗಬೇಕಾಗಿದ್ದ ಸರ್ ಭಂಡಾರ್ಕರ್‌ರವರು ದೇಹಾಸ್ವಸ್ಥತೆಯಿಂದ ಸಭೆಗೆ ಬರಲಾಗದೆ ಹೋದಕಾರಣ ಅವರು ಬರೆದಿದ್ದ ಉಪನ್ಯಾಸವನ್ನು ಪ್ರೊ. ವಿ. ಕೆ ರಾಜವಾಡೆಯವರು ಓದಿದರು. ಬೆಳಗಿನ ಸಭಾಕಾರ್ಯವು ಅಲ್ಲಿಗೆ ಮುಗಿದಿತು. ಆದಿನ ಮಧ್ಯಾಹ್ನವೂ ಮರುದಿನದಿಂದ ಕಡೆಯವರೆಗೂ ಬೆಳಗ್ಗೆ ಮಧ್ಯಾಹ್ನ ಹೀಗೆ ಎರಡೆರಡು ಹೊತ್ತುಗಳೂ ಸಭೆಯ ಸಮಾವೇಶವಾಗಿ ಅನೇಕ ಶಾಸ್ತ್ರೀಯ ವಿಷಯೋಪನ್ಯಾಸಗಳು ಜರುಗಿದುವು. ವೇದ, ವಾಙ್ಮಯ, ದೇಶಭಾಷೆ, ವೇದಾಂತಾದಿ ನಾನಾ ಮತಗಳು ರಸಾಯನಾದಿ ಶಾಸ್ತ್ರಗಳು ಇತ್ಯಾದಿ ಪ್ರತ್ಯೇಕ ಶಾಖೆಗಳಿಗೆಲ್ಲಾ ಬೇರೆಬೇರೆ ಅಧ್ಯಕ್ಷರು ನಿಯುಕ್ತರಾಗಿದ್ದರು. ಅವರವರ ಅಧ್ಯಕ್ಷತೆಯಲ್ಲಿ ಆಯಾ ಭಾಗಕ್ಕೆ ಸಂಬಂಧಪಟ್ಟ ಉಪನ್ಯಾಸಗಳು ನಡೆದುವು. ಬರಲಾಗದೆ ಹೋದ ಅನೇಕ ಪಂಡಿತರು ತಂತಮ್ಮ ಉಪನ್ಯಾಸಗಳನ್ನು ಬರೆದು ಕಳುಹಿಸಿದ್ದರು. ಅನೇಕರು ಸಭಾಸಾನುಭೂತಿಯ ತಂತ್ರೀವಾರ್ತೆಗಳನ್ನು ಕಳುಹಿಸಿದ್ದರು. ಮುಂದೆ ಈ ಸಂಘದವರು ನಡೆಯಿಸಬೇಕಾದ ಕರ್ತವ್ಯಗಳನ್ನು ಕುರಿತು ವಿಚಾರಪೂರ್ವಕ ವರದಿಮಾಡುವುದಕ್ಕೆ ಒಂದು ಪ್ರತ್ಯೇಕ ಸಂಘವನ್ನೇರ್ಪಡಿಸಿದ್ದರು. ಅವರ ವರದಿಯನ್ನು ಸಭಿಕರು ವಿಮರ್ಶಿಸಿದರು. ಸಭಾಕಾರ್ಯ ವಿವರಣೆಯನ್ನೂ ನಡೆದ ಉಪನ್ಯಾಸಗಳನ್ನೂ ಮುದ್ರಿಸುವ ಅಧಿಕಾರವು ಕಾರ್ಯದರ್ಶಿಗಳಿಗೆ ವಹಿಸಲ್ಪಟ್ಟಿತು. ಮುದ್ರಿಸಬೇಕಾದ ಗ್ರಂಥಗಳ ವಿಷಯವನ್ನು ಉಪಸಂಘಾಧ್ಯಕ್ಷರೊಡನೆಯೂ ಉಪಾಧ್ಯಕ್ಷರೊಡನೆಯೂ ಕೂಡಿ ಆಲೋಚಿಸಿ ನಿರ್ಧರಿಸಬೇಕೆಂದು ಗೊತ್ತಾಯಿತು. ಮುಂದಣ ಸಭೆಯನ್ನು ೧೯೨೧ನೆ ವರ್ಷದಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಜರುಗಿಸಲು ನಿರ್ಧಾರವಾಯಿತು. ಈ ಸಭಾಕಾರ್ಯ ನಿರ್ವಾಹಕ್ಕೆ ಅನೇಕ ವಿಧದಿಂದ ಸಹಾಯಮಾಡಿದ ಪ್ರಭುತ್ವಗಳಿಗೂ ಪಂಡಿತರಿಗೂ ವಂದನೆಯರ್ಪಿಸಲ್ಪಟ್ಟಿತು.

ಒಳದೇಶದ ವೃತ್ತಾಂತಗಳು.

ವೈಸ್ರಾಯರ ಸ್ವಾಗತಕ್ಕಾಗಿ ರಾಜಧಾನಿಯೆಲ್ಲಾ ಸುಣ್ಣಬಣ್ಣ ಚಪ್ಪರ ಮೊದಲಾದುವುಗಳಿಂದ ಅಲಂಕರಿಸಲ್ಪಡುತ್ತಿದೆ.

ಶ್ರೀಮದ್ಯುವರಾಜರವರು ಮಿತಪರಿವಾರದೊಡನೆ ಬೆಂಗಳೂರಿಂದ ಬೊಂಬಾಯಿಗೆ ದಯಮಾಡಿಸಿದ್ದಾರೆ. ಇನ್ನು ಒಂದು ವಾರ ಕಾಲ ಅಲ್ಲಿದ್ದು ಬರುವರೆಂದು ತಿಳಿಯುತ್ತೇವೆ.

ರಾಜಧಾನಿಯಲ್ಲೂ ಈ ಡಿಸ್ಟ್ರಿಕ್ಟಿನ ಹಲವುಕಡೆಯಲ್ಲೂ ಮಳೆ ವಿಶೇಷವಾಗಿದೆ. ಇದರಿಂದ ಕುಯ್ದು ಕುಯ್ಲಿಗೆ ಬಂದೂ ಇರುವ ರಾಗಿ ಭತ್ತದ ಪೈರುಗಳಿಗೆ ಹಾನಿಯಾಗುತ್ತಿದೆ.

ನಂಜನಗೂಡು ಚಾಮರಾಜನಗರದ ಲೋಹಮಾರ್ಗದ ಕೆಲಸಕ್ಕೆ ಆರಂಭಿಸಲು ಅಪ್ಪಣೆಯಾಗಿದೆ. ಇದಕ್ಕಾಗಿ ಅ|| ಇಂಜನಿಯರ್ ಮ|| ತಿಪ್ಪಯ್ಯನವರು ಅದರ ಸಬ್‌ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ಹೆಸರು, ಉದ್ದು, ತೊಗರಿಬೇಳೆ, ಮೆಣಸಿನಕಾಯಿ, ಮತ್ತು ಹುಲ್ಲು ಮೊದಲಾದ ದನಗಳಮೇವು ಇವುಗಳನ್ನು ಯಾವ ನಿರ್ಬಂಧವೂ ಇಲ್ಲದೆ ಸಂಸ್ಥಾನದ ಹೊರಕ್ಕೆ ಎಲ್ಲಿಗಾದರೂ ಸಾಗಿಸಬಹುದೆಂದು ನಮ್ಮ ಫುಡ್ ಕಂಟ್ರೋಲರು ತಿಳಿಸಿರುತ್ತಾರೆ.

ದಾವಣಗೆರೆಯಲ್ಲಿ ತಾ|| ೨೪-೧೦-೧೯ ನೇ ಶುಕ್ರವಾರ ''ಶ್ರೀಬುಕ್ಕೇಶ್ವರಸ್ವಾಮಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಆ ಕಾಲಕ್ಕೆ ೫೦೦-೬೦೦ ಮಂದಿ ಸಭಿಕರು ದಯಮಾಡಿಸಿದ್ದರು. ಮ|| ಆನೆಕೊಂಡದ ಮುಪ್ಪಣ್ಣನವರು ಬಹಳ ಶ್ರದ್ಧೆಯಿಂದ ಇದಕ್ಕಾಗಿ ಕೆಲಸಮಾಡಿದರು'' ಎಂದು ಒಬ್ಬ ಬಾತ್ಮಿದಾರರು ಬರೆದಿದ್ದಾರೆ.

ತಾತ್ಕಾಲಿಕ ಯುದ್ಧ ವಿಶ್ರಾಂತಿ ಪತ್ರಕ್ಕೆ ಶತ್ರುಗಳು ರುಜುಮಾಡಿ ಕಳೆದ ತಾ|| ೧೧ ನೆಯ ೧೧ ಗಂಟೆಗೆ ಸರಿಯಾಗಿ ೧ ವರುಷವಾಯ್ತು. ಅದುಕಾರಣ ಆದಿನ ಸಕಲ ಭಾಗಗಳ ಪ್ರಜೆಗಳೂ ಮಧ್ಯಾಹ್ನ ೧೧ ಗಂಟೆ ಹೊಡೆದ ಕೂಡಲೇ ೨ ನಿಮಿಷಗಳ ಕಾಲ ತಂತಮ್ಮ ಕಾರ್ಯಗಳನ್ನು ಹಾಗೆ ಹಾಗೆಯೇ ಬಿಟ್ಟು, ಆ ರಣರಂಗದಲ್ಲಿ ಜೀವಿತವನ್ನು ಅರ್ಪಿಸಿದ ಯೋಧರುಗಳ ಆತ್ಮಗಳಿಗೆ ಶಾಂತಿಯನ್ನು ಕೋರುವುದಕ್ಕಾಗಿ ದೈವಪ್ರಾರ್ಥನೆ ಮಾಡಬೇಕೆಂದು ನಮ್ಮ ಚಕ್ರವರ್ತಿಯವರು ಅಪ್ಪಣೆ ಮಾಡಿದ್ದರು. ಅದರ ಪ್ರಕಾರ ಆಂಗ್ಲಸಾಮ್ರಾಜ್ಯದಲ್ಲೆಲ್ಲಾ ಆ ೨ ನಿಮಿಷಕಾಲ ರೈಲುಗಳು, ಟ್ರಾಂಗಳು, ಯಂತ್ರಗಳು ಮೊದಲಾದುವುಗಳೆಲ್ಲಾ ನಿಲ್ಲಿಸಲ್ಪಟ್ಟಿದ್ದುವು ; ಪ್ರಾರ್ಥನೆಗಳೂ ಜರುಗಿದುವು.

ಕೃಷ್ಣರಾಜಸಾಗರ ಕಟ್ಟೆಯನ್ನು ೧೨೦ ಅಡಿ ಎತ್ತರಕ್ಕೆ ಕಟ್ಟುವ ವಿಷಯದಲ್ಲಿ ಇಂಡ್ಯಾ ಮಂತ್ರಿಯವರ ತೀರ್ಮಾನವು ಮೈಸೂರಿಗೆ ಅನುಕೂಲವಾಗಿಲ್ಲ. ಅದರ ವಿಚಾರಣೆಗಾಗಿ ಇಂಡ್ಯಾ ಸರ್ಕಾರದವರು ಬೇರೆ ಕೋರ್ಟನ್ನು ಏರ್ಪಡಿಸಿ ಮಾಡಿದ್ದ ತೀರ್ಮಾನವು ತಿರಸ್ಕೃತವಾಗಿ, ಮತ್ತೆ ಬೇರೆ ಕೋರ್ಟಿನ ಮೂಲಕ ಪುನರ್ವಿಚಾರಣೆ ನಡೆಯಿಸತಕ್ಕುದೆಂದು ತೀರ್ಮಾನಿಸಿರುವುದಾಗಿಯೂ, ಮ|| ಎ. ಆರ್. ಬಾನರ್ಜಿಯವರು ಇಲ್ಲಿಂದ ಸೀಮೆಗೆ ಹೋಗಿ ತಲುಪುವುದರೊಳಗಾಗಿ ಇಂಥ ಅಪ್ಪಣೆಯಾಗಿದ್ದುದಾಗಿಯೂ ತಿಳಿಯುತ್ತೇವೆ. ಇದರಿಂದ ಕಾರ್ಯವು ಸಾವಕಾಶವಾಗಲು ಕಾರಣವಾಯಿತು. ಈ ಕಟ್ಟೆಯನ್ನು ಹೆಚ್ಚಿಸುವುದರಿಂದ ಮದ್ರಾಸು ಪ್ರಾಂತದವರಿಗೆ ನೀರಿನ ಅನುಕೂಲತೆ ಹೆಚ್ಚುವುದೇ ಹೊರತು ಕಡಿಮೆಯಾಗುವುದಿಲ್ಲ. ಕಡೆಗಾದರೂ ನ್ಯಾಯಕ್ಕೆ ಜಯವಾಗದೆ ಹೋಗಲಾರದು.

ನೋಟೀಸು.

ಧಾರವಾಡ ಜಿಲ್ಲಾ ಜಮಖಿಂಡಿ ಸಂಸ್ಥಾನ ಪೈಕಿ ಕುಂದಗೋಳ ಪಂಚಗೃಹ ಹಿರೇಮಠದಲ್ಲಿ ನಿರಂತರ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕಾಗಿರುವುದರಿಂದ ನಾಟಕಾಂತ ಸಾಹಿತ್ಯದಲ್ಲಿ ಉತ್ತೀರ್ಣರಾಗಿ ಯಾವುದಾದರೊಂದು ಶಾಸ್ತ್ರದಲ್ಲಿ ಗತಿಯಿದ್ದು ಧರ್ಮಗ್ರಂಥಗಳಲ್ಲಿ ಪರಿಶ್ರಮ ಹೊಂದಿದ ಸುಶೀಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿರುವರು.

ಸದರಿ ಶಾಸ್ತ್ರಿಗಳವರಿಗೆ ಪ್ರತಿವರ್ಷಕ್ಕೆ ಸದ್ಯಃ ಎರಡುನೂರು ರೂಪಾಯಿಗಳ ವೇತನವು ಕೊಡಲ್ಪಡುವದು. ಬರಲಪೇಕ್ಷೆಯುಳ್ಳವರು ಸನ್ ೧೯೧೯ ನೆ ಇಸವಿಯೊಳಗಾಗಿ ಸದರಿ ಕುಂದಗೋಳ ಪಂಚಗೃಹ ಹಿರೇಮಠದ ಶ್ರೀ ಪಟ್ಟದ ಚನ್ನಬಸವಸ್ವಾಮಿಗಳವರ ಕಡೆಗೆ ಬಂದು ಗೊತ್ತುಮಾಡಿಕೊಂಡು ಹೋಗಬೇಕು. ಅಥವಾ ಪತ್ರದ್ವಾರದಿಂದ ತಿಳಿಸಿಕೊಳ್ಳಬೇಕು.

ವೀರಭದ್ರಪ್ಪ ಗುಲ್ಲಪ್ಪ ದೇಶಪಾಂಡೆ.

ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿತಗಳಾದ ವಿಷಯಗಳು.

ಪ್ರ.—ಅಮಲ್ದಾರರು ಸರ್ಕೀಟು ಹೋಗುವಾಗ್ಗೆ ಒಬ್ಬ ಗುಮಾಸ್ತನನ್ನೂ ಒಬ್ಬ ಜವಾನನನ್ನೂ ಕರೆದುಕೊಂಡು ಹೋಗುತ್ತಾರೆ. ಇಬ್ಬಿಬ್ಬರನ್ನು ಕರೆದುಕೊಂಡು ಹೋಗುವಂತೆ ಅಪ್ಪಣೆ ಕೊಡಬೇಕು.

ಉ.—ಸರ್ಕಾರಕ್ಕೆ ಅವಶ್ಯವಾಗಿ ತೋರಿದರೆ ನಾವು ಮಾಡಿಕೊಳ್ಳುತ್ತೇವೆ. ನಿಮಗೆ ಈ ವಿಷಯ ವಿಚಾರವೇಕೆ ?

ಪ್ರ.—ಗ್ರಾಮಾಭಿವೃದ್ಧಿ ಫಂಡು ಅಥವಾ ಮಲ್ನಾಡು ಅಭಿವೃದ್ಧಿ ಫಂಡುಗಳಿಂದ ಸ್ಥಾಪಿಸಿರುವ ರಸ್ತೆಗಳನ್ನು ರಿಪೇರಿ ಮಾಡಿಸಿ ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳಲು ಗ್ರಾಮಸ್ಥರನ್ನು ಅಥವಾ ತಾ|| ಬೋರ್ಡುಗಳನ್ನು ನಿರ್ಬಂಧಪಡಿಸಬೇಕು.

ಉ.—ತಾ|| ಬೋರ್ಡುಗಳಿಂದ ಇದನ್ನು ಮಾಡಲು ಸಾಧ್ಯವೆ ಅಸಾಧ್ಯವೆ ಎಂಬುದನ್ನು ವಿಚಾರಿಸದೆ ನಿರ್ಬಂಧಪಡಿಸಲಾಗುವುದಿಲ್ಲ. ತಾ|| ಬೋರ್ಡುಗಳಿಗೆ ಹೆಚ್ಚು ಹಣವನ್ನು ಕೊಡಲು ಸರ್ಕಾರಕ್ಕೆ ಸಾಧ್ಯವಲ್ಲ. ಗ್ರಾಮಪಂಚಾಯಿತಿಗಳನ್ನು ಏರ್ಪಡಿಸಿಕೊಟ್ಟಿದ್ದೇವೆ. ಅವರು ಬೇಕಾದ ಅಭಿವೃದ್ಧಿಕಾರ್ಯಗಳನ್ನು ಮಾಡಿಕೊಳ್ಳಬಹುದು.

ಪ್ರ.—ರೆವಿನ್ಯೂಹರಾಜನ್ನು ರದ್ದುಮಾಡುವ ಸಂದರ್ಭದಲ್ಲಿ ಅಂಥ ಅಪ್ಪಣೆಯನ್ನು ಮಾಡುವುದಕ್ಕೆ ಮೊದಲು ಜಡಸವಾಲ್‌ದಾರರು ಕೊಟ್ಟಿರುವ ಕಂದಾಯದ ಮೊಬಲಗನ್ನು ತೇವಣಿ ಮಾಡುವಂತೆ ಪ್ರತಿವಾದಿಯನ್ನು ಕೇಳಿಕೊಳ್ಳುವ ಹಾಗೆ ಅಪ್ಪಣೆಮಾಡಬೇಕು.

ಉ.—ಕಂದಾಯವನ್ನೆಲ್ಲಾ ವಸೂಲ್ಮಾಡಿಕೊಂಡೇ ಹರಾಜನ್ನು ಖಾಯಂಮಾಡಲಾಗುತ್ತದೆ. ಕ್ರಮತಪ್ಪಿ ಎಲ್ಲಾದರೂ ನಡೆದರೆ ಅದನ್ನು ಮೇಲ್ಪಟ್ಟವರ ಗಮನಕ್ಕೆ ತರಬಹುದು.

ಪ್ರ.—ಸಿವಿಲ್ ವ್ಯವಹಾರದಲ್ಲಿ ಡಿಕ್ರಿಅಮಲ್ಜಾರಿಯೊಳಗೆ ಒಂದು ಸ್ಥಿರಸ್ವತ್ತು ಹರಾಜಾಗಿದ್ದು ಆ ಸ್ವತ್ತಿನ ಮಾಲಿಕನು ಹರಾಜು ತಾರೀಖು ಲಾಗಾಯ್ತು ೩೦ ದಿನಗಳೊಳಗಾಗಿ ಹರಾಜು ಇಸ್ತಿಹಾರಿನಲ್ಲಿ ಕಂಡ, ಮೊಬಲಗನ್ನೂ, ಸ್ವತ್ತನ್ನು ಕೊಂಡವನಿಗೆ ಪರಿಹಾರವಾಗಿ ಕೊಡಬೇಕಾದದ್ದಕ್ಕಾಗಿ ಹರಾಜು ಮೊಬಲಗಿನಲ್ಲಿ ಸೇಕಡಾ ೫ ಕ್ಕೆ ಸರಿಯಾಗುವಷ್ಟು ಮೊತ್ತವನ್ನೂ ತೇವಣಿಮಾಡಿದಲ್ಲಿ ಹರಾಜು ರದ್ದಾಗುವ ಪದ್ಧತಿಯಂತೆ ರೆವಿನ್ಯೂ ವಿಷಯದಲ್ಲೂ ಒಂದು ನಿಯಮವನ್ನು ಏರ್ಪಡಿಸಿಕೊಡಬೇಕು. ಇದರಿಂದ ಉಭಯರಿಗೂ ನಷ್ಟತಪ್ಪುವುದು.

ಉ.—ಈ ಏರ್ಪಾಟನ್ನು ಮಾಡಿದರೆ ಸಕಾಲದಲ್ಲಿ ಕಂದಾಯವೇ ವಸೂಲಾಗಲಾರದು. ಅದುಕಾರಣ ಸಾಧ್ಯವಲ್ಲ.

ಪ್ರ.—ಜಮೀನ್ ದರಖಾಸ್ತು ವಿಲೇವಾರಿ ಬೇಗಬೇಗನೆ ಆಗುವುದಕ್ಕಾಗಿ ಮೋಜಣೀದಾರರನ್ನು ಹೆಚ್ಚಾಗಿ ಏರ್ಪಡಿಸಬೇಕು.

ಉ.—ಅವಶ್ಯಕವಿದ್ದಕಡೆಗೆ ಕಳುಹಿಸಿಕೊಡುತ್ತಾರೆ

ಪ್ರ.—ಒಂದು ಸಬ್‌ನಂಬರನ್ನು ಯಾವುದೊಂದು ಹಕ್ಕನ್ನೂ ಉಳಿಸಿಕೊಳ್ಳದೆ ರಾಜೀನಾಮೆ ಕೊಟ್ಟುಬಿಟ್ಟಲ್ಲಿ ಸದರಿ ಸಬ್ ನಂಬರನ್ನು ತೆಗೆದುಕೊಳ್ಳುವಂತೆ ಇತರ ಸಬ್‌ನಂಬರ್ ಹಿಡುವಳಿದಾರರನ್ನು ಬಲಾತ್ಕಾರ ಪಡಿಸುವ ನಿರ್ಬಂಧವನ್ನು ತಪ್ಪಿಸಬೇಕು. ಮತ್ತು ಅಂಥ ಸಬ್‌ನಂಬರುಗಳಿಗೆ ಸೇರಿದ ಹಿಡುವಳಿಯಲ್ಲಿಲ್ಲದ ಬಂಜರು ಜಮೀನುಗಳನ್ನು ಅವುಗಳಿಗೆ ದರಖಾಸ್ತು ಬಂದಲ್ಲಿ ಪಕ್ಕದ ಸಬ್‌ನಂ. ಹಿಡುವಳಿದಾರರಿಗೆ ಮುಫತ್ತಾಗಿ ಅಥವಾ ಬೆಲೆಗೆ ಕಟ್ಟಿಕೊಡಿಸಬೇಕು.

ಉ.—ಸಣ್ಣನಂಬರಾಗಿದ್ದರೆ ಮಗ್ಗುಲಿನವರೇ ವಹಿಸಿಕೊಳ್ಳಬೇಕು. ದೊಡ್ಡನಂಬರಾಗಿದ್ದರೆ ಪೋಡುಮಾಡಿಸಿಕೊಳ್ಳಬೇಕು.

ಪ್ರ.—ಸೀಗೆಕಾಯಿ ಮೊದಲಾದ ಅಮರಾಯಿ ಉತ್ಪತ್ತಿಯನ್ನು ಹರಾಜುಮಾಡದೆ ಒಂದು ಕಿಮ್ಮತ್ತು ಕಟ್ಟಿ ಪ್ರತಿವರ್ಷವೂ ಆಯಾ ಗ್ರಾಮಸ್ಥರಿಗೇ ಕೊಡಬೇಕು.

ಉ.—೪-೫ ವರ್ಷಗಳ ಒಟ್ಟು ಉತ್ಪತ್ತಿಯನ್ನು ಸರಾಸರಿ ಮಾಡಿಸಿ ಅದರಂತೆ ತೆಗೆದುಕೊಳ್ಳಲು ಗ್ರಾಮಸ್ಥರೆಲ್ಲರೂ ಒಪ್ಪಿದರೆ ಆಗಬಹುದು.

ಪ್ರ.—ಗ್ರಾಮನಿವೇಶನದೊಳಗಣ ಕಾಮನ್ ಫಂಡು, ಲೋಕಲ್ ಸೆಸ್ಸು, ಅಮರಾಯಿ ಉತ್ಪತ್ತಿ ಇತ್ಯಾದಿ ಹಣವನ್ನೆಲ್ಲಾ ಗ್ರಾಮಗಳ ಆರೋಗ್ಯರಕ್ಷಣೆ, ಲಾಂಟಾನಾ ಪೊದೆಗಳನ್ನು ಕಡಿಯುವುದು ಇತ್ಯಾದಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವಂತೆ ಅಪ್ಪಣೆಯಾಗಬೇಕು.

ಉ.—ಗುರ್ತುಮಾಡಿಕೊಂಡಿದೆ.

ಪ್ರ.—ಕ್ರಯವಾದುದರಿಂದ ಅಥವಾ ವಿಭಾಗದಿಂದ ಅಥವಾ ಸಿವಿಲ್ ಕೋರ್ಟು ಡಿಕ್ರಿಗಳ ಮೂಲಕ ಜಮೀನುಗಳನ್ನು ಅನುಭವಿಸುತ್ತಿರುವ ಖಾತೆದಾರರಲ್ಲದ ಜನರ ಹೆಸರು ಮೊದಲಾದ ವಿವರಣೆಯನ್ನು ತೋರಿಸುವ ಹಿಕ್ಮೀದಾರರ ರಿಜಿಸ್ಟರನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಡಿಸಬೇಕು. ಮತ್ತು ಹಿಕ್ಮೀದಾರರಿಂದ ವಾಸ್ತವವಾಗಿ ಸಲ್ಲಬೇಕಾಗಿರುವ ಮೊಬಲಗು ಗ್ರಾಮನೌಕರರುಗಳಿಗೆ ಗೊತ್ತಾಗುವುದಕ್ಕಾಗಿ ಸದರಿ ರಿಜಿಸ್ಟರಿನಿಂದ ವಿವರಗಳನ್ನು ಕಳುಹಿಸಿಕೊಡಬೇಕು. ಹೀಗೆ ಮಾಡಿದ ಮೇಲೆಯೂ ಬಾಕಿಗಳು ನಿಂತಲ್ಲಿ ಖಾತೆಯಲ್ಲಿನ ಜಮೀನುಗಳನ್ನೆಲ್ಲಾ ಹರಾಜುಮಾಡುವುದಕ್ಕೆ ಪ್ರತಿಯಾಗಿ ತಪ್ಪಿತಸ್ಥರಾದ ಹಿಕ್ಮೀದಾರರ ಜಮೀನನ್ನು ಮಾತ್ರ ಮಾರಿಸುವಂತೆ ಮಾಡಬೇಕು.

ಉ.—ಬೇರೆ ಬೇರೆ ಹರಾಜುಮಾಡಿಸುವುದು ಸಾಧ್ಯವಲ್ಲ. ರೀಸರ್ವೆ ಕಾಲದಲ್ಲಿ ಸಾಧ್ಯವಾದಮಟ್ಟಿಗೆ ಜಮೀನಿನ ಸಣ್ಣ ಭಾಗಗಳನ್ನು ಪೋಡ್‌ಮಾಡಿ ಸಬ್ ನಂಬರ್ ಮಾಡಬಹುದು. ಈಗಿರುವ ಮಿನಿಮಮ್ಮಿಗಿಂತಲೂ ರೀಸರ್ವೆಯಲ್ಲಿ ಸ್ವಲ್ಪ ರಿಯಾಯತಿ ತೋರಿಸಿಕೊಡುತ್ತೇವೆ. ಬಾಕಿ ನಿಂತಿರುವ ಜಮೀನ್‌ಭಾಗದ ಫಾರ್‌ಫೀಟ್ ಮಾಡುವ ಖರ್ಚನ್ನು ಕೊಡುವುದಾದರೆ ಮೊದಲ ಅದನ್ನೇ ಹರಾಜುಮಾಡುವ ಏರ್ಪಾಡನ್ನು ಮಾಡಬಹುದು.

ಪ್ರ.—ಗ್ರಾಮ ಲೆಕ್ಕಗಳಿಗಾಗಿ ಶ್ಯಾನುಭೋಗರಿಗೆ ಅಚ್ಚುಹಾಕಿದ ನಮೂನೆಗಳನ್ನು ಕೊಡಿಸಬೇಕು.

ಉ.—ಕೆಲವನ್ನು ಸ್ವತಂತ್ರವಾಗಿ ಅಚ್ಚುಮಾಡಿಸಿಕೊಳ್ಳಬಹುದು. ಕೆಲವನ್ನು ಸರ್ಕಾರದವರು ಮಾಡಿಸಿಕೊಡುವರು. ಆದರೆ ಅದರ ಲಾಗೋಡನ್ನು ಕೊಡಬೇಕು.

ಪ್ರ.—ತಾಲ್ಲೂಕು ಮತ್ತು ಸಬ್ ಡಿವಿಜನ್ ಆಫೀಸುಗಳಿಗೆ ಹಾಕಿಕೊಳ್ಳುವ ರೆವಿನ್ಯೂ ಅರ್ಜಿಗಳಿಗೆ ಸಿವಿಲ್ ಕ್ರಿಮಿನಲ್ ಕೋರ್ಟು ಅರ್ಜಿಗಳಂತೆ ಕೇಸ್ ನಂಬರನ್ನು ಕೊಟ್ಟು ವಿಚಾರಣೆಯ ಬಗೆಗೆ ಗೊತ್ತಾದ ತಾರೀಖುಗಳನ್ನು ನಿರ್ಧರಿಸಿ ಸಕಾಲದಲ್ಲಿ ರಿಪೋರ್ಟುಗಳನ್ನು ತರಿಸಿಕೊಳ್ಳುವಂತೆಯೂ ಅವಶ್ಯಕವಾದರೆ ಕಕ್ಷಿದಾರರನ್ನು ವಿಚಾರಣೆಮಾಡಿದ ತರುವಾಯ ತೀರ್ಮಾನವಾದ ಸಂಗತಿಗಳನ್ನು ಇಂಡಾರ್ಸ್‌ಮೆಂಟುಗಳ ಮೂಲಕ ತಿಳಿಸುವಂತೆಯೂ ಮಾಡಬೇಕು.

ಉ.—ಬೇಗಬೇಗನೆ ಅರ್ಜಿಗಳನ್ನು ಇತ್ಯರ್ಥಮಾಡುವಂತೆ ರೆವಿನ್ಯೂ ಅಧಿಕಾರಿಗಳಿಗೆ ಖಂಡಿತವಾದ ಅಪ್ಪಣೆಯನ್ನು ಕೊಡುತ್ತೇವೆ.

ಪ್ರ.—ಮಲೆನಾಡಿಗೆ ಕೂಲಿಯಾಳುಗಳನ್ನು ಸರಬರಾಯಿ ಮಾಡುವ ಏರ್ಪಾಡಿಗೆ ತಗಲುವ ಖರ್ಚುಗಳನ್ನೆಲ್ಲಾ ಸುಪಾರಿತೆರುಗೆಯ ಫಂಡಿನಿಂದ ಕೊಡಿಸುವಂತೆ ಮಾಡಬೇಕು.

ಉ.—ರಿಪೋರ್ಟೊಂದನ್ನು ಕಳುಹಿಸಿದರೆ ಪರ್ಯಾಲೋಚಿಸಬಹುದು.

ಪ್ರ.—ಎಕರೆ ೧ಕ್ಕೆ ೪೦ ಮರಗಳಿಗಿಂತ ಕಡಿಮೆಯಾಗಿ ಈಚಲು ಮರಗಳಿರುವ ಭೂಮಿಯನ್ನೆಲ್ಲಾ ಸಾಗುವಳಿಗೆ ಕೊಡಿಸಬೇಕು.

ಉ.—ಪರ್ಯಾಲೋಚನೆಯಲ್ಲಿದೆ. ೧ ಎಕರೆಯಲ್ಲಿ ೫೦ ಗಿಡಕ್ಕೆ ಕಡಿಮೆಯಿರುವ ಭೂಮಿಯನ್ನು ಸಾಗುವಳಿಗೆ ಕೊಡುವಂತೆ ಅಪ್ಪಣೆಮಾಡುತ್ತೇವೆ.

ಪ್ರ.—ಸೇಂದಿ ಭೂಮಿಗಳ ವಿಷಯವಾಗಿ ಬರುವ ದರಖಾಸ್ತುಗಳ ವಿಲೇವಾರಿಗೆ ಸಬ್ ಡಿವಿಜನ್ ಆಫೀಸರುಗಳಿಗೆ ಅಧಿಕಾರ ಕೊಡಬೇಕು.

ಉ.—ಸ್ಪೆಷಲ್ ಕೇಸಿದ್ದರೆ ಡಿಸ್ಟ್ರಿಕ್ಟ್ ಆಫೀಸರಿಗೆ ಬರೆದುಕೊಳ್ಳಬಹುದು.

ಪ್ರ.—ಮಳೆಗಾಲದಲ್ಲಿ ರೈತರ ದನಗಳನ್ನು ಸೇಂದಿ ವನದಲ್ಲಿ ಮೇಯಿಸಿಕೊಳ್ಳಲು ಅಪ್ಪಣೆಯಾಗಬೇಕು.

ಉ.—ಬೇಕಿದ್ದರೆ ಅಂಥಕಡೆ ರೈತರು ಹುಲ್ಲನ್ನು ಕೊಯ್ದು ತೆಗೆದುಕೊಳ್ಳಬಹುದು. ದನಗಳನ್ನು ಬಿಟ್ಟರೆ ಈಚಲ ಸುಳಿಯನ್ನು ತಿಂದುಬಿಡುತ್ತವೆ. ಮತ್ತು ಅವುಗಳ ಸಗಣಿಯಿಂದ ಹುಳುವು ಹುಟ್ಟಿ ಅವು ಗಿಡಗಳನ್ನು ನಾಶಮಾಡುತ್ತವೆ. ಆದರೂ ಒಂದು ರಿಜರ್ವ್ ಲಿಸ್ಟನ್ನು ಮಾಡಿಸುತ್ತೇವೆ, ಅದರಲ್ಲಿ ದನಗಳನ್ನು ಬಿಡಬಹುದಾದ ಮತ್ತೂ ಬಿಡಬಾರದ ಪ್ರದೇಶಗಳನ್ನೆಲ್ಲಾ ತಿಳಿಸುತ್ತೇವೆ. ರಿಜರ್ವ್ ವನದಲ್ಲಿ ಮಾತ್ರ ದನಗಳನ್ನು ಬಿಡಲಾಗುವುದಿಲ್ಲ.

ಪ್ರ.—ಸೇಂದಿ ಮತ್ತು ಷರಾಬ್ ಅಂಗಡಿಗಳನ್ನು ಕ್ರಮಕ್ರಮವಾಗಿ ಕಡಿಮೆಮಾಡಿ ಹತ್ತು ವರ್ಷಗಳೊಳಗಾಗಿ ಈ ಇಲಾಖೆಯನ್ನೇ ತೆಗೆದುಬಿಡಬೇಕು.

ಉ.—ಆ ಇಲಾಖೆಯ ಉತ್ಪತ್ತಿಯನ್ನು ಯಾರು ಕೊಡುತ್ತಾರೆ? ತೆಗೆಯುವುದು ಸಾಧ್ಯವಲ್ಲ.

ಪ್ರ.—ಬಿದಿರಿನ ಸೀಬುಮುಳ್ಳು ಮತ್ತು ಸೌದೆಯನ್ನು ಮುಫತ್ತಾಗಿ ರೈತರು ಫಾರೆಸ್ಟುಗಳಿಂದ ಸಾಗಿಸಿಕೊಂಡು ಹೋಗಲು ಅಪ್ಪಣೆಯಾಗಬೇಕು.

ಉ.—ಬಿಂಬುಗಳನ್ನು ಕಡಿಯದೆ ಮೇಲಣ ಮುಳ್ಳು ಸೀಬುಗಳನ್ನು ರೈತರು ಮುಫತ್ತಾಗಿ ತೆಗೆದುಕೊಂಡು ಹೋಗಬಹುದೆಂದು ಅಪ್ಪಣೆಮಾಡುತ್ತೇವೆ.

ಪ್ರ.—ರೈತರಿಗೆ ಅವರ ಮನೆಗೆ ಬೇಕಾಗುವಷ್ಟು ಸೌದೆಯನ್ನು ಡಿಸ್ಟ್ರಿಕ್ಟ್ ಫಾರೆಸ್ಟಿನಿಂದ ತೆಗೆದುಕೊಳ್ಳುವಂತೆ ಅಪ್ಪಣೆಯಾಗಬೇಕು.

ಉ.—ಇದಕ್ಕೆ ಅಪ್ಪಣೆ ಇದ್ದೇಇದೆ. ಫಾರೆಸ್ಟ್ ರೂಲುಗಳ ಪುಸ್ತಕವನ್ನು ತರಿಸಿಕೊಂಡು ಓದಿನೋಡಿದರೆ ರೈತರಿಗೆ ಸರ್ಕಾರದವರು ಮಾಡಿಕೊಟ್ಟಿರುವ ರಿಯಾಯತಿಗಳೆಲ್ಲಾ ಗೊತ್ತಾಗುತ್ತವೆ. ಅಂಥ ರಿಯಾಯತಿಗಳನ್ನು ಹೊಂದುವಾಗ್ಗೆ ಯಾರಾದರೂ ಸಣ್ಣ ನೌಕರರು ತಡಮಾಡಿದರೆ ಅವರ ವಿಷಯವನ್ನು ಕುರಿತು ಮೇಲಕ್ಕೆ ಅರ್ಜಿಬರೆದುಕೊಂಡರೆ ವಿಚಾರಣೆಯಿಂದ ಬಂದೋಬಸ್ತು ಮಾಡುತ್ತಾರೆ.

ಪ್ರ.—ರೈತರಿಗೆ ಸ್ವಂತ ಜಮೀನಿನಲ್ಲಿರುವ ಸೌದೆಯನ್ನು ಕತ್ತರಿಸಿ ಸಾಗಿಸಿಕೊಂಡುಹೋಗಲು ವಾಫರಹದಾರಿಯನ್ನು ಸ್ಥಲದಲ್ಲಿ ಕೊಡಿಸಬೇಕು.

ಉ.—ಸ್ವಂತ ಜಮೀನಿನಿಂದ ಸಾಗಿಸಿಕೊಳ್ಳುವ ಸೌದೆಗೆ ಅವರು ರೇಟನ್ನು ಕೊಡಬೇಕಾದುದೇ ಇಲ್ಲ. ಯಾರಾದರೂ ರೇಟನ್ನು ವಸೂಲ್ಮಾಡಿದ್ದರೆ ಮೇಲಕ್ಕೆ ಬರೆದುಕೊಳ್ಳಿ.

ಪ್ರ.—ಗೊಬ್ಬರಕ್ಕಾಗಿ ಬೇಕಾದ ಹಸುರು ಎಲೆಗಳನ್ನು ಫಾರೆಸ್ಟುಗಳಿಂದ ಮುಫತ್ತು ಸಾಗಿಸಿಕೊಳ್ಳಲು ಅಪ್ಪಣೆಯಾಗಬೇಕು.

ಉ.—ಸ್ಟೇಟು ಫಾರೆಸ್ಟುಗಳಿಂದ ಕೊಡಲಾಗುವುದಿಲ್ಲ. ಡಿಸ್ಟ್ರಿಕ್ಟ್ ಫಾರೆಸ್ಟುಗಳಿಂದ ತೆಗೆದುಕೊಳ್ಳಬಹುದು.

ಪ್ರ.—ಗ್ರಾಮದ ಸಾಗುವಳಿ ಜಮೀನ್ ಬೌಂಡರಿಯಿಂದ ೧೧೦ ಗಜ ದೂರದಲ್ಲೇ ಸ್ಟೇಟ್ ಫಾರೆಸ್ಟಿದೆ. ಅದರಿಂದ ದುಷ್ಟಮೃಗಗಳ ಕಾಟವು ಹೆಚ್ಚಾಗಿದೆ. ಪೈರುಗಳನ್ನು ನಷ್ಟಪಡಿಸುವ ಮೃಗಗಳು ಸಮೀಪದಲ್ಲೇ ಇರುವ ಕಾಡುಗಳಿಗೆ ಹೊಕ್ಕಿಕೊಳ್ಳುವುದರಿಂದ ಅಲ್ಲಿಗೆ ನುಗ್ಗಿ ಅವುಗಳನ್ನು ಹೊಡೆಯಲಾಗುವುದಿಲ್ಲ. ಆದಕಾರಣ ಅಂಥ ಬೌಂಡರಿಗೆ ೨ ಫರ್ಲಾಂಗುಗಳ ದೂರದಲ್ಲಾದರೂ ಸ್ಟೇಟ್ ಫಾರೆಸ್ಟು ಇರುವಂತೆ ಬೌಂಡರಿಯನ್ನೇರ್ಪಡಿಸಬೇಕು.

ಉ.—ಸರ್ವತ್ರ ಹಾಗೆ ಮಾಡಲಾಗುವುದಿಲ್ಲ. ಯಾವ ಹಳ್ಳಿಗೆ ಅಂಥ ತೊಂದರೆಯಿದೆಯೋ ಅದನ್ನು ಬರೆದುಕೊಂಡರೆ ವಿಚಾರಮಾಡಿ ಏರ್ಪಡಿಸಿಕೊಡುತ್ತೇವೆ.

ಪ್ರ.—ದನಗಳ ಕೊಟ್ಟಿಗೆಗೂ ಗೊಬ್ಬರದ ಗುಂಡಿಗಳನ್ನು ಮುಚ್ಚುವುದಕ್ಕೂ ಗ್ರಾಮ ಚಾವಡಿಗಳನ್ನು ಕಟ್ಟುವುದಕ್ಕೂ ಸಮಜಂಗಲುಗಳಿಂದ ಮರಗಳನ್ನು ಉಚಿತವಾಗಿ ಕೊಡಿಸಬೇಕು. ಸ್ಥಲಗಳಲ್ಲಿ ಮನೆ ಕಟ್ಟಿಕೊಳ್ಳಲು ರೈತರಿಗೆ ಮರವನ್ನು ಕಡಿಮೆ ದಾರಣೆಯಲ್ಲಿ ಕೊಡಿಸಬೇಕು. ಮೊದಲು ಅಂಥ ಮರದ ಗಾಡಿ ೧ಕ್ಕೆ ೮ ಆಣೆ ತೆಗೆದುಕೊಳ್ಳುತ್ತಿದ್ದರು. ಈಗ ೨|| ರೂ.ನ್ನು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಕಡಿಮೆಮಾಡಿಸಬೇಕು.

ಉ.—ಕಡಿಮೆಮಾಡಲಾಗುವುದಿಲ್ಲ.

ಪ್ರ.—ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಕೆಲವು ಭಾಗಗಳನ್ನು ಅಮೃತಮಹಲ್ ದನಗಳಿಗೆ ಬಿಟ್ಟುಕೊಟ್ಟಿರುವುದರಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ವಿಸ್ತೀರ್ಣವು ಕಡಿಮೆಬಿದ್ದುಹೋಗಿದೆ. ಅದನ್ನು ಪೂರ್ವದಂತೆಯೇ ಹೆಚ್ಚಿಸಿಕೊಡಬೇಕು. ಹಾಗಾದರೆ ರೈತರ ದನಗಳು ಮೇಯಲು ಅವುಗಳಿಗೆ ಸಾಕಾದಷ್ಟು ಸ್ಥಳವಾಗುವುದು.

ಉ.—ಸಾಧ್ಯವಲ್ಲ.

ಪ್ರ.—ಹುಲ್ಲುಬನ್ನಿಯನ್ನು ವಜಾಮಾಡಿಸಬೇಕು.

ಉ.—ಇದನ್ನು ಕೊಟ್ಟರೆ ರೈತರಿಗೆ ೨ ಕಾಸೋ ಒಂದು ದುಡ್ಡೋ ನಷ್ಟವಾಗಬಹುದು. ಆ ಬಾಬನ್ನೇ ತೆಗೆದುಬಿಡುವುದರಿಂದ ಸರ್ಕಾರಕ್ಕೆ ೪೦-೫೦ ಸಾವಿರ ರೂ. ನಷ್ಟವಾಗುತ್ತದೆ. ಅದುಕಾರಣ ಅದನ್ನು ತೆಗೆದುಬಿಡಲಾಗುವುದಿಲ್ಲ. ಆವರಮಾನವನ್ನೆಲ್ಲಾ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ನೀವು ಉಪಯೋಗಿಸಿಕೊಳ್ಳಲು ಗ್ರಾಮಾಭಿವೃದ್ಧಿ ಕಮಿಟಿಯವರು ಒಪ್ಪಿದರೆ ಹಾಗೆ ಮಾಡಬಹುದು.

ಪ್ರ.—ವರ್ಷದಲ್ಲಿ ೮ ತಿಂಗಳ ಕಾಲ ಸ್ಟೇಟ್ ಫಾರೆಸ್ಟುಗಳಲ್ಲಿ ಮುಫತ್ತಾಗಿ ದನಗಳನ್ನು ಮೇಯಿಸಿಕೊಳ್ಳಲಿಕ್ಕೂ ಮಿಕ್ಕ ೪ ತಿಂಗಳ ಕಾಲ ಅಲ್ಲಿ ಹುಲ್ಲು ಕುಯ್ದುಕೊಳ್ಳಲಿಕ್ಕೂ ರೈತರಿಗೆ ಅವಕಾಶಕೊಡಬೇಕು.

ಉ.—ಸ್ಪೆಷಲ್ ಸೀಜನ್ನಿನಲ್ಲಿ ಕೊಡಬಹುದು. ಜನರಲ್ಲಾಗಿ ಕೊಡಲಾಗುವುದಿಲ್ಲ. ಮಲ್ನಾಡಿನಲ್ಲಿ ಜನವರಿ ಕಡೆಯವರೆಗೂ ಬಯಲು ಸೀಮೆಯಲ್ಲಿ ಡಿಶಂಬರ್ ಕಡೆಯವರೆಗೂ ಹುಲ್ಲು ಕುಯ್ದುಕೊಳ್ಳಲು ಅಪ್ಪಣೆಕೊಡುತ್ತೇವೆ.

ಪ್ರ.—ಡಿ|| ಫಾರೆಸ್ಟನ್ನು ಸ್ಟೇಟ್ ಫಾರೆಸ್ಟನ್ನಾಗಿ ಮಾರ್ಪಡಿಸಿದ ಸಂದರ್ಭದಲ್ಲಿ ಅಂಥ ಸ್ಟೇಟ್ ಫಾರೆಸ್ಟಿನಲ್ಲಿ ರಿಯಾಯತಿ ದರದಲ್ಲಿ ಮರವನ್ನು ಸಾಗಿಸಲು ರೈತರಿಗೆ ಅಪ್ಪಣೆಯಾಗಬೇಕು.

ಉ.—ಆವಶ್ಯಕತೆ ಬಿದ್ದಾಗ ತಿಳಿಸಿದರೆ ಪರ್ಯಾಲೋಚಿಸುತ್ತೇವೆ.

ಪ್ರ.—ಬೆಂಕಿಯಿಂದ ಮನೆ ಸುಟ್ಟುಹೋದ ರೈತರಿಗೆ ೨೫ ರೂ. ಬೆಲೆಯೊಳಗಣ ಮರಗಳನ್ನು ಮನೆ ಕಟ್ಟಿಕೊಳ್ಳಲು ಕೊಡುವ ಅಧಿಕಾರವನ್ನು ತಾ|| ಅಮಲ್ದಾರರಿಗೆ ವಹಿಸಬೇಕು.

ಉ.—ಆಗಬಹುದು.

ಪತ್ರವ್ಯವಹಾರ.

|| ಶ್ರೀ ಕ್ಷೇತ್ರಕಾಶಿ ||

ಪದ್ಧತಿಯಂತೆ ಇದೇ ಸಿದ್ಧಾರ್ಥಿನಾಮ ಸಂವತ್ಸರದ ಕಾ|| ಶು|| ೧ ಶುಕ್ರವಾರ ದಿವಸ ಇಲ್ಲಿರುವ ವೀರಶೈವ ವಿದ್ಯಾರ್ಥಿಮಂದಿರದ ಮೂರನೆ ವಾರ್ಷಿಕ ಸಮಾರಂಭವು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಮೊದಲೇ ನಿರ್ಧರಿಸಿದಂತೆ ಇಲ್ಲಿಯಬಿಕಾನೇರ ರಾಜ್ಯ ಟೀಕ್ ಮಾಣಿಕ್ ಸಂಸ್ಕೃತ ಕಾಲೇಜಿನ ಗಣಿತ ಪ್ರೊಫೇಸರಾದ ಪಂ|| ಕೃಷ್ಣದತ್ತಝಾ ಎಂಬುವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪಂ|| ಶ್ರೀ ಶಂಕರತರ್ಕರತ್ನ, ಪಂ|| ಫಣಿಭೂಷಣ ಭಟ್ಟಾಚಾರ್ಯ ಮುಂತಾದ ಪ್ರಸಿದ್ಧಪಂಡಿತರೂ, ಹಿಂದೀ ಕಾಲೇಜು, ಬಂಗಾಳೀ ಹೈಸ್ಕೂಲಿನ ವಿದ್ಯಾರ್ಥಿಗಳೂ, ಗ್ರಾಮದ ಇತರ ಕೆಲ ಜನರೂ ಸಭೆಗೆ ಆಗಮಿಸಿದ್ದರು. ಪ್ರಥಮದಲ್ಲಿ ವ್ಯವಸ್ಥಾಪಕರ ಭಾಷಣವೂ ಅನಂತರ ಧರ್ಮ ನೀತಿ ಉದ್ಯೋಗ ಐಕ್ಯ ಮುಂತಾದ ವಿಷಯಗಳಮೇಲೆ ವಕ್ತೃಗಳ ಭಾಷಣಗಳಾಗಿ, ಇಲ್ಲಿ ಅಧ್ಯಯನಮಾಡತಕ್ಕವರಿಗಿದ್ದ ತೊಂದರೆಯನ್ನು ದೂರಮಾಡುವುದಕ್ಕಾಗಿಯೂ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿಯೂ ಈ ಪುಣ್ಯಕ್ಷೇತ್ರದಲ್ಲಿ ಸ್ಥಾಪಿಸಲಾಗಿರುವ ಈ ಮಂದಿರವು ದಿನೇದಿನೇ ಅಭಿವೃದ್ಧಿಯನ್ನು ಹೊಂದಲೆಂದು ಶ್ರೀ ವಿಶ್ವನಾಥನ ಜಯಘೋಷವನ್ನು ಮಾಡುತ್ತಾ ಸಭೆಯ ಕಾರ್ಯವು ಮುಗಿಸಲ್ಪಟ್ಟಿತು.

ಮ್ಯಾನೇಜರ್ ವಿ. ವಿದ್ಯಾರ್ಥಿ ಮಂದಿರ, ಬನಾರಸ್.

ಸ್ವಾಮಿ,

ಶ್ರೀಮದ್ವೀರಶೈವ ಗುರುವರ್ಗದ ಎರಡನೆ ಮಹಾಸಭೆಯ ವಿಚಾರವಾಗಿ ಸರ್ವರ ತಿಳುವಳಿಕೆಗೂ ತರುವದಕ್ಕೋಸ್ಕರ ತಮ್ಮ ಅಂದವಾದ ಪತ್ರಿಕೆಯಲ್ಲಿ ಈ ಕೆಳಗೆ ನಮೂದಿಸುವ ಅಂಶಗಳನ್ನು ಪ್ರಕಟಿಸಬೇಕಾಗಿ ಕೋರುವೆನು.

1. ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರದಲ್ಲಿ ಮೇಲ್ಕಂಡ ಸಭೆಯು ಇದೇ ನವಂಬರು ೧೯-೨೦ ನೇ ತಾರೀಖುಗಳಲ್ಲಿ ನಡೆಯುವ ಹಾಗೂ, ಇದಕ್ಕೆ ೨ನೆ ಮಹಾಸಭೆ ಎಂತ ಹೆಸರಿಟ್ಟಿರುವ ಹಾಗೂ, ೨೦ನೆ ತಾರೀಖಿನಲ್ಲಿ ಗುರುವರ್ಗದ ಉನ್ನತಿ ವಿಷಯಕವಾದ ಚರ್ಚೆ ಎಂಬುವದೇ ಪ್ರಧಾನವಾಗಿರುವ ಹಾಗೂ, ಈ ಪ್ರಕರಣಕ್ಕೆ ಕ್ಯಾಸನೂರುಪಟ್ಟದ ಗುರುಬಸವ ಸ್ವಾಮಿಗಳೂ ಕೆರೆಮಠದ ಸ್ವಾಮಿಗಳೂ ಚವುಡಯ್ಯ ದಾನಪುರದ ವಿರೂಪಾಕ್ಷವಡೆಯರೂ ಕರ್ತೃಗಳಾಗಿರುವಂತೆಯೂ ತಾ|| 25-10-19 ರ ಜಾಹೀರಾತ ಪತ್ರಿಕೆಯಿಂದ ತಿಳಿಯಬರುವ ಅಂಶವನ್ನು ಈಗ ತಾನೇ ನೋಡಿದೆನು.

2. ಈ ಸಂಬಂಧವಾದ ೧ನೆ ಮಹಾಸಭೆಯು ಯಾವ ಊರಲ್ಲಿ ಹಿಂದೆ ನಡೆದಿತ್ತು? ಯಾರ ಸಮ್ಮತಿಯಿಂದ ಅಧ್ಯಕ್ಷರು ನೇಮಕವಾಗಿ ಯಾವ ಯಾವ ವಿಷಯಗಳು ತೀರ್ಮಾನ ಹೊಂದಿದವೆಂಬ ಅಂಶ ಇದುವರೆಗೂ ಯಾರಿಗೂ ತಿಳಿಯದವುಗಳಾಗಿವೆ. ಈ ೨ನೆ ಮಹಾಸಭೆ ಎಂಬುವದೂ ಕೂಡ ಸರ್ವಾನುಮತಿಯಿಂದ ನಡೆಯತಕ್ಕದ್ದಾಗಿದೆ ಎಂಬುದಕ್ಕೆ ಸಾಕಾದಷ್ಟು ಕಾರಣಗಳು ಕಂಡುಬಂದಿಲ್ಲ. ಈ ವೀರಶೈವ ಮತದ ಮಹಾಸಭೆಗಳು ಇದುವರೆಗೆ ಎಂಟರವರೆಗೂ ನಡೆದು ಮುಂದೆಯೂ ನಡೆಯತಕ್ಕ ಪ್ರಯತ್ನದಲ್ಲಿವೆ. ಅವುಗಳೆಲ್ಲವೂ ಯಾವ ಯಾವ ಪ್ರಕಾರ ಕ್ರಮವರಿತು ಹಿಂದೆ ನಡೆದಿರುತ್ತವೆಯೋ ಆದರಂತೆ ಈ ಸಾಗರದ ಸಭೆಯ ಕಾರ್ಯಗಳು ನಡೆದಿರುವದಿಲ್ಲ. ಮಹಾಸಭೆಯೆಂದರೆ ಸರ್ವಾನುಮತಿಯಿಂದ ದೇಶಮಧ್ಯೆ ಇರತಕ್ಕ ವೀರಶೈವ ಮಹಾಜನಗಳನ್ನೆಲ್ಲಾ ಬರಮಾಡಿಕೊಂಡು ಮತೋತ್ತೇಜನಕ್ಕಾಗಿ ಮಾಡತಕ್ಕ ಕಾರ್ಯಗಳುಳ್ಳದ್ದಕ್ಕಲ್ಲದೆ ಗುರುವರ್ಗದವರ ಪೈಕಿ ಒಬ್ಬರಿಬ್ಬರು ಸೇರಿಕೊಂಡು, ಗುರುಗಳಲ್ಲಿ ಒಬ್ಬರು ಹೆಚ್ಚು ಒಬ್ಬರು ಕಡಮೆಯೆಂಬ ಚರ್ಚೆಗೆ ಅವಕಾಶ ಇಟ್ಟುಕೊಳ್ಳುವದರ ಮೂಲಕ ಮತದಲ್ಲಿ ಅನೈಕಮತ್ಯ, ಗುರುಪರಂಪರೆಯವರಲ್ಲಿ ದ್ವೇಷ ಅಸಮಾಧಾನಗಳು ವೈರಿಗಳನ್ನುಂಟುಮಾಡಿ ಅನರ್ಥಗಳನ್ನು ಹೆಚ್ಚಿಸತಕ್ಕ ಸಂಘಕ್ಕೆ ಮಹಾಸಭೆ ಎಂತ ಹೇಳುವದಕ್ಕಾಗುವುದಿಲ್ಲ.

3. ಗುರುವರ್ಗದ ಉನ್ನತಿ ವಿಷಯವಾದ ಚರ್ಚೆಯಿಂದ ಹಾಲಿ ವೀರಶೈವ ಮತಕ್ಕೆ ಯಾವ ಪ್ರಯೋಜನವುಂಟಾಗುತ್ತದೆಯೋ ಅಂಥ ಪ್ರಕರಣಗಳನ್ನು ಸರ್ವರಿಗೂ ತಿಳಿಯುವಂತೆ ಪ್ರಚುರಪಡಿಸಿ, ಅನುಮತಿಪಡೆದು ಮುಂದಿನ ಕಾರ್ಯ ನಡೆಯಿಸಬೇಕಾಗಿತ್ತೇ ಹೊರ್ತು, ಅಕಸ್ಮಾತ್ತಾಗಿ ಕೆಲವರು ಸೇರಿಕೊಂಡು ಮಾಡಬೇಕೆಂದಿರುವ ಸಂಘದ ಉದ್ದೇಶ ನೋಡಿದರೆ, ಗುರುವರ್ಗದವರಲ್ಲಿ ಪ್ರಬಲರಾಗಿರತಕ್ಕವರನ್ನು ನೋಡಿ ದ್ವೇಷಾಸೂಯೆಗಳನ್ನುಂಟುಮಾಡಬಹುದೆಂಬದಾಗಿ ತೋರುತ್ತೆ. ಮತದವರೆಲ್ಲರೂ ಕೂಡಿ ಸರ್ವರಿಗೂ ಪ್ರಯೋಜನ, ಮತ್ತು ಐಕಮತ್ಯ ವಿದ್ಯಾಪ್ರಸರಣೆ, ಗುರುದೇವತಾಭಕ್ತಿ, ರಾಜ್ಯಸೇವಾ ಇಂಥಾವುಗಳನ್ನುಂಟುಮಾಡುವದಕ್ಕಾಗಿ ಸೇರುವ ಕೂಟಕ್ಕೆ ಮಹಾಸಭೆ ಎಂತ ಧಾರಾಳವಾಗಿ ಹೇಳಬಹುದು. ಒಬ್ಬರು ಕಡಮೆ ಒಬ್ಬರು ಹೆಚ್ಚು ಎಂಬ ಚರ್ಚೆಯಿಂದ ಅಸಮಾಧಾನಗಳು ಹುಟ್ಟಿಸತಕ್ಕ ಸಮಾಜಕ್ಕೆ ಮಹಾಸಭೆ ಎನ್ನುವದಕ್ಕಾಗುವದಿಲ್ಲ. ಅದನ್ನು ನೆಮ್ಮದಿಗೆ ಭಂಗವನ್ನುಂಟುಮಾಡುವ ಸಂಘವೆಂತ ಭಾವಿಸಬೇಕಾಗುತ್ತೆ.

4. ಆದ್ದರಿಂದ ಅಧ್ಯಕ್ಷಸ್ಥಾನವನ್ನು ಅಲಂಕರಿಸುವ ಮಹನೀಯರು ಮೇಲ್ಕಂಡ ಅನರ್ಥಪರಂಪರೆಗೆ ಅವಕಾಶವಾಗುವ ಪ್ರಕರಣಗಳನ್ನು ಬಿಡಿಸಿ ಸರ್ವರಿಗೂ ಸಮಾಧಾನವಾಗುವ ಅಂಶಗಳಿಂದ ಕೂಡಿದ ಉಪನ್ಯಾಸಕ್ಕೆ ಅವಕಾಶಕೊಡಬೇಕು. ಕಾರಣವೇನಂದರೆ—ಜಾಹೀರಾತ್ ಪತ್ರಿಕೆಯಲ್ಲಿ ಗುರುಸ್ಥಲದ ಎರಡನೇ ಸಭೆಯೆಂತಲೂ, ಗುರುವರ್ಗದ ಉನ್ನತಿ ಮೊದಲಾದ ಮತ ವಿಷಯ ಚರ್ಚೆ ಎಂತಲೂ, ಸಭೆಗೆ ಗುರುಸ್ಥಲದ ಪಟ್ಟಚರಾಧಿಪತಿಗಳೂ ಮತ್ತು ಶಾಸ್ತ್ರಪಂಡಿತರೂ ಬರಬೇಕೆಂತಲೂ ನಮೂದಿರುತ್ತೆ. ಈ ಮತದಲ್ಲಿ ಅನಾದಿ ಸಂಸಿದ್ಧವಾದ ಷಟ್ಸ್ಥಲ ನಿರಂಜನ ಮೂರ್ತಿಗಳಲ್ಲಿ ಶ್ರೀ ಪಟ್ಟದ ಸ್ವಾಮಿಗಳೂ ಚರಮೂರ್ತಿಗಳೂ ವಿರಕ್ತರೂ ಸಹ ಪ್ರಸಿದ್ಧರಾಗಿರುವಲ್ಲಿ, ಅಂಥಾವರಿಗೆ ಆಮಂತ್ರಣಕೊಡದೆ ಇರುವದು ನೋಡಿದರೆ ಇವರುಗಳ ಮೇಲಣ ದ್ವೇಷಾಸೂಯೆಗಳಿಂದ ಈ ಸಂಘವು ಸೇರಬಹುದೆಂಬ ಅಂಶ ಬಹು ಜನಕ್ಕೆ ತಿಳಿಯದೆ ಇರಲಾರದು. ವಿರಕ್ತಮೂರ್ತಿಗಳ ಮೇಲೆ ಸಾಮಾನ್ಯ ಪ್ರಕರಣ ಹೊರಟಲ್ಲಿ, ಗುರುಪರಂಪರೆಯವರಿಗೂ ಮತಸ್ಥರಿಗೂ ಕೂಡ ನೆಮ್ಮದಿಗೆ ಭಂಗವಾಗುವದೆಂಬ ವಿಷಯವನ್ನು ಅಧ್ಯಕ್ಷರು ಆಲೋಚನೆಗೆ ತಂದುಕೊಳ್ಳಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ. ಈ ವಿಷಯಗಳೆಲ್ಲವೂ ಈ ಪ್ರಾಂತ್ಯದ ಬಹು ಮಂದಿ ವೀರಶೈವರ ಅಭಿಪ್ರಾಯಕ್ಕೆ ಬಂದಿರುತ್ತಾದ್ದರಿಂದ ಅವರ ಇರಾದೆಪ್ರಕಾರ ಶೃತಪಡಿಸುವ,

ಬಾಣಾವಾರದ ಹುಚ್ಚಪ್ಪ,
ತಾ|| 12-11-1919. ಬೆಂಗಳೂರು ಪುರನಿವಾಸಿ.

ಜಾಹಿರಾತು.

ಮಹನೀಯರೇ:—

"ಶ್ರೀಮದ್ವೀರಶೈವ ಗುರುವರ್ಗದ ಎರಡನೇ ಮಹಾಸಭೆಯು" ಸಾಗರದಲ್ಲಿ ನಡೆಯುತ್ತದೆ ಎಂದು ತಿಳಿಸುವ ಜಾಹಿರಾತುಪತ್ರ ಒಂದು ಕರಗತವಾಯಿತು. ಇದರಲ್ಲಿ ೧೯ ನೇ ತಾರೀಖಿನಲ್ಲಿ "ಧರ್ಮ" ವೆಂಬ ವಿಷಯದಮೇಲೆ ನಮ್ಮ ಮ|| ರಾ|| ಸೂರ್ಯನಾರಾಯಣಶಾಸ್ತ್ರಿಗಳವರು, ಸಾಗರ ಸಬ್‌ಡಿವಿಜನ್ ಆಫೀಸರ್ ಇವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ ಎಂಬ ವಿಷಯವು ತುಂಬಾ ಸಂತೋಷಕರವಾಗಿರುವುದು. ತಾರೀಖು ೨೦-೧೧-೧೯೧೯ ರಲ್ಲಿ ನಡೆಯುವದು ಗುರುವರ್ಗದ ಉನ್ನತಿ ವಿಚಾರಮಾಡುವ ಸಭೆಯೆಂದು ತಿಳಿಯಬರುತ್ತದೆ. ಇದನ್ನು ವಿಚಾರಿಸಿದರೆ, ಗುರುವರ್ಗದ ಶ್ರೇಷ್ಠತೆಯನ್ನೂ ಅದರ ಪ್ರಾಬಲ್ಯಕ್ಕೆ ಕಾರಣವನ್ನೂ ವಿಮರ್ಶೆಮಾಡತಕ್ಕ ಸಭೆಯೆಂದು ಅರ್ಥವಾಗುತ್ತದೆ. ಆದರೆ ಗುರುವರ್ಗದ ಉನ್ನತಿವಿಚಾರವು ಆರ್ಷೇಯ ಮತಸ್ಥಾಪಕರಾದ ಪಂಚಾಚಾರ್ಯರಿಂದಲೇ ವಿಮರ್ಶಿಸಿ ತೀರ್ಮಾನಿಸಲ್ಪಟ್ಟಿರುವುದು.

ಇದೂಅಲ್ಲದೆ ಸಾಮಾನ್ಯವಾಗಿ ಪ್ರಾಂತಿಕ ಸಭೆಯೆಂದು ಕರೆಯದೆ ಮಹಾಸಭೆಯೆಂದು ವ್ಯಕ್ತಪಡಿಸಿದ್ದರಿಂದ ಈ ಸಭೆಯು ಮೂವತ್ತೈದುಲಕ್ಷ ಜನಸಂಖ್ಯೆಯುಳ್ಳ ಲಿಂಗಾಂಗಿಗಳ ಅಭಿಪ್ರಾಯವನ್ನು ಒಳಗೊಂಡಿರುವ ಶ್ರೇಷ್ಠರಾಗಿರುವ ಪಂಚಾಚಾರ್ಯ ಪೀಠದವರ ಅಧ್ಯಕ್ಷತೆಯಲ್ಲಿ ನಡೆಯುವುದು ಯುಕ್ತವಾಗಿತ್ತು. ಮತ್ತು ಸಕಲ ಮತಾಭಿಮಾನಿಗಳ ಅಭಿಪ್ರಾಯವನ್ನನುಸರಿಸಿ ನಡೆಯಬೇಕಾಗಿತ್ತು. ಉತ್ತಮ ಅಸ್ತಿಭಾರದಿಂದ ಭದ್ರಿಸಲ್ಪಟ್ಟ ಗುರುವರ್ಗದ ಸುಧಾರಣೆಗೆ ಮೊದಲೊಂದು ಸಭೆಯು ನಡೆದಿದೆ, ಎಂದು ಪತ್ರಿಕೆಯಲ್ಲಿ ಉಕ್ತವಾಗಿರುವುದು. ಈ ಮೊದಲನೇ ಸಭೆಯು ಎಲ್ಲಿ ಯಾರ ಅಧ್ಯಕ್ಷತೆಯಲ್ಲಿ ಯಾವಾಗ ನಡೆಯಿತೆಂಬುವುದು ಅಭೇದ್ಯವಾಗಿದೆ. ಹಾಗೆ ನಡೆದಿದ್ದರೆ ಪ್ರಾಯಶಃ ಸಭೆಯ ತೀರ್ಮಾನವು ಜನಜನಿತವಾಗುತ್ತಿತ್ತು. ಇದು ಗುಪ್ತ ವಿಚಾರವಾಗಿರಬಹುದು; ಇರಲಿ. ಈ ಪತ್ರಿಕೆಯಲ್ಲಿ ದ್ವಿತಿಯ ಮಹಾಸಭೆಯ ಪ್ರಯತ್ನವು ೧೯-೨೦ ದಿನಗಳಲ್ಲಿ ಪ್ರಾರಂಭಿಸಿದೆ. ಕ್ಯಾಸನೂರ ಸಂಸ್ಥಾನದ ಪೀಠಾದೀಶ್ವರ, ಕೆರೆಮಠದ ಗುರುಸಂಸ್ಥಾನದ ಪೀಠಾದೀಶ್ವರ, ದಕ್ಷಿಣಕಾಶೀ ಸಿಂಹಾಸನಾಧೀಶ್ವರ ಎಂದು ಪತ್ರಿಕೆಯಲ್ಲಿ ಸ್ಪಷ್ಟಪಡಿಸಲ್ಪಟ್ಟಿರುವುದು. ಪೀಠಾಧೀಶ್ವರರೆಂಬ ಬಿರುದು ಮತಸ್ಥಾಪಕರಾದ ಪಂಚಾಚಾರ್ಯರಿಗೆ ಸಲ್ಲುವುದಲ್ಲದೆ ಶಾಖಾಮಠಗಳಿಗೆ ಪೀಠಾದೀಶ್ವರರೆಂಬ ಬಿರುದು ಅಸಂಗತವಾಗಿರುವುದು ಇದನ್ನು ವಿಚಾರಿಸಿದರೆ ಪಂಚಾಚಾರ್ಯರ ಬಿರುದನ್ನು ಅಪಹರಿಸುವ ಅಥವಾ ಅನುಕರಿಸುವ ಉದ್ದೇಶವು ವ್ಯಕ್ತವಾಗುತ್ತದೆ.

ಈ ಮಹಾಸಭೆಯು "ವಿರೂಪಾಕ್ಷವಡೆಯರವರ" ಅಧ್ಯಕ್ಷತೆಯಲ್ಲಿ ನಡೆಯುವದೆಂದು ವಿದಿತವಾಗಿದೆ. ಅಧ್ಯಕ್ಷರ ಮನೋಗತದಂತೆ ಭಾಷಣವು ವ್ಯಕ್ತವಾಗುವುದು ಸ್ವಭಾವವಲ್ಲವೆ? ಇವರ ಮನೋಗತವನ್ನು ವ್ಯಕ್ತಪಡಿಸುವ ಭಾಷಣಗಳಲ್ಲಿ ಒಂದು ಉದಾಹರಣೆಗಾಗಿ ಈ ಕೆಳಗೆ ಕೊಡಲ್ಪಟ್ಟಿರುವುದು.

ಮಹನೀಯರೆ, ಪಟೇಲರ ಮಿಶ್ರವಿವಾಹದ ವಿಷಯವಾಗಿ ಸ್ವಾಮಿಒಡೆಯರವರ ಪಾಂಡಿತ್ಯ ಪರಿಪೂರ್ಣವಾದ ಅಭಿಪ್ರಾಯವು ಯಾವಪ್ರಕಾರವಿರುತ್ತದೆಂಬುವದನ್ನು ಸರ್ವರಿಗೂ ಶೃತಗೊಳಿಸುವಂತೆ ಮಾಡಬೇಕಾಗಿ ಕೋರುತ್ತೇನೆ. ಒಡೆಯರವರು ಪಟೇಲರಿಗೆ ಬರೆದದ್ದೇನಂದರೆ.—

"1. ವರ್ತಮಾನ ಪತ್ರಿಕೆಗಳಲ್ಲಿಯೂ ಭಾಷಣಗಳಲ್ಲಿಯೂ ಹಿಂದೂಸ್ಥಾನದ ಪ್ರತಿಯೊಂದು ಭಾಗದಲ್ಲಿ ಸದ್ಯಕ್ಕೆ ಚರ್ಚಿಸಲ್ಪಡುತ್ತಿರುವ ಭಿನ್ನ ಭಿನ್ನ ವರ್ಗಗಳ ನಡುವೆ ವಿವಾಹದ ಕಾಯದೆಯ ಮಸೂದೆಯನ್ನು ಕೌನ್ಸಿಲ್ಲದ ಮುಂದೆ ತಂದದ್ದಕ್ಕೆ ನಾನು ಬಹಳ ಆನಂದ ಪಡುತ್ತೇನೆ. ಪುಣೆ ಮತ್ತು ಇತರ ಭಾಗಗಳಲ್ಲಿ ಸದರಿ ಮಸೂದೆಯ ವಿರುದ್ಧವಾಗಿ ಮಾಡಿದ ಟೀಕೆಯು ಅಪೂರ್ಣ ಮತ್ತು ಏಕಪಕ್ಷಿಯಾದದ್ದು ಇರುತ್ತದೆ. ಮುಖ್ಯವಾಗಿ ಆಟೀಕೆಯು ಕೆಲವು ಸ್ವಾರ್ಥಸಾಧುಗಳಾದ ಬ್ರಾಹ್ಮಣರು ತಮ್ಮ ಪ್ರತಿಷ್ಠೆಗೆ ವಿಘಾತಕರವಾದದ್ದಿರುತ್ತದೆಂಬ ನಂಬಿಕೆಯಿಂದ ಮಾಡಿದ್ದು ಇರುತ್ತದೆ. 2. ಹಿಂದೂಸ್ಥಾನದ ಸಾಮಾಜಿಕ ರಾಜಕೀಯ ಉನ್ನತಿಯನ್ನುಂಟುಮಾಡುವುದರಲ್ಲಿಯೂ ಹಿಂದೂಸ್ಥಾನದಲ್ಲಿರುವ ಭಿನ್ನ ಭಿನ್ನ ವರ್ಗಗಳಲ್ಲಿರುವ ಮಹದಂತರವನ್ನು ದೂರಮಾಡುವುದರಲ್ಲಿಯೂ ಪ್ರತಿರೋಧಿ ಹಿತಸಂಬಂಧಗಳಲ್ಲಿ ಐಕ್ಯ ಮತ್ತು ಸ್ವಾಸ್ಥ್ಯವನ್ನುಂಟುಮಾಡುವುದರಲ್ಲಿಯೂ ಈ ಮಿಶ್ರವಿವಾಹವು ಸ್ತುತ್ಯವಾದದ್ದಿರುತ್ತದೆ. ಹಿಂದೂಸ್ಥಾನದ ಸಾಮಾಜಿಕ ಉನ್ನತಿಯಬಗ್ಗೆ ನೀವು ಎಷ್ಟು ಶ್ರಮತೆಗೆದುಕೊಂಡಿರುತ್ತೀರೆಂಬ ಬಗ್ಗೆ ನಿಮ್ಮ ಮನಸ್ಸಿನ ಉದಾರತ್ವವನ್ನು ತೋರಿಸಲಿಕ್ಕೆ ಸದ್ಯದ ಸ್ಥಿತಿಯಲ್ಲಿ ನೀವು ಕೌನ್ಸಿಲ್ಲದಮುಂದೆ ತಂದ ಈ ಮಿಶ್ರವಿವಾಹದ ಬಿಲ್ಲೇ ಸಾಕ್ಷಿಯಾಗಿರುತ್ತದೆ. 3. ನಾನು ಧಾರವಾಡ ಜಿಲ್ಲೆಯಲ್ಲಿ ಲಿಂಗಾಯಿತ ಸಮಾಜದ ಧರ್ಮಸಂಬಂಧಿ ಮಠದ ಗುರು ಇರುತ್ತೇನೆ. ಮತ್ತು ನನಗೆ ಲಿಂಗಾಯಿತರೂ ವ ಕೋಳಿ (ಅಂಬಿಗರು) ಜನರೂ ಕೂಡಿ ಒಂದು ಲಕ್ಷಕ್ಕಿಂತ ಹೆಚ್ಚು ಶಿಷ್ಯರಿರುತ್ತಾರೆ. ನಾನು ಮಹಾರಾಜಾ ಹೋಳಕರ ಇಂದೂರ ಸಂಸ್ಕೃತ ಕಾಲೇಜದಲ್ಲಿ ವೇದಭಾಷ್ಯಗಳ ಪ್ರೊಫೇಸರನಿರುತ್ತೇನೆ. ಹಿಂದೂಸ್ಥಾನದಲ್ಲಿರುವ ಈ ಕೀಳು ಅಸಹ್ಯವಾದ ಜಾತಿಪದ್ಧತಿಯನ್ನು ತೆಗೆದುಹಾಕಲಿಕ್ಕೆ ಉಪಾಯಗಳನ್ನು ಬಹುದಿವಸಗಳಿಂದ ಚಿಂತಿಸುತ್ತಿರುವೆನು. ಆದರೆ ನೀವು ಈಗ ತಂದಿರುವ ಮಿಶ್ರವಿವಾಹದ ಬಿಲ್ಲಿಗಿಂತಲೂ ಹೆಚ್ಚಿಗೆ ಚಲೋದಾದ ಉಪಾಯವು ಇಲ್ಲವೆಂದು ನನಗೆ ಕಂಡುಬರುತ್ತದೆ. ವೇದಕಾಲದಲ್ಲಿಯೂ ಕೂಡ ಈ ಮಿಶ್ರವಿವಾಹವು ಇತ್ತೆಂದು ಸಿದ್ಧಮಾಡಲಿಕ್ಕೆ ನಾನು ಬೇಕಾದಷ್ಟು ವೇದ ಆಧಾರಗಳನ್ನೂ ಶಾಸ್ತ್ರಾಧಾರಗಳನ್ನೂ ತಮಗೆ ಪೂರೈಸಿಕೊಡುತ್ತೇನೆ. ಈ ಬಿಲ್ಲು ತಂದ ಬಾಬತಿಯಲ್ಲಿ ನಿಮಗೆ ಪೂರ್ಣಜಯವಾಗಲೆಂದು ಆಶಿಸುವ, ತಮ್ಮ ಪಂಡಿತ ಸ್ವಾಮಿ ವಿರೂಪಾಕ್ಷ ಒಡೆಯರು."

ಈ ಭಾಷಣದಿಂದ ಪಂಡಿತ ಒಡೆಯರವರು, ಮಿಶ್ರವಿವಾಹಕ್ಕೆ ತಮ್ಮ ಪೂರ್ಣ ಪಾಂಡಿತ್ಯ ಬಲದಿಂದ ದಾರ್ಢ್ಯವನ್ನುಂಟುಮಾಡುವ ಮಹತ್ಪ್ರಯತ್ನದಲ್ಲಿದ್ದಾರೆಂದು ಕಂಡುಬರುತ್ತದೆ. ಕೋಟ್ಯನುಕೋಟಿ ಮಹಾ ವಿದ್ವಾಂಸರಿಂದ ಕ್ಷುಣ್ಣವಾದ ಮಾರ್ಗಪ್ರವರ್ತನಕ್ಕೆ ಭಿನ್ನಾಭಿಪ್ರಾಯ ಕಲ್ಪನೆಯು ಬಹುಕಷ್ಟಸಾಧ್ಯವಾದದ್ದಿರುತ್ತದೆ.

ಇಷ್ಟು ಕಷ್ಟಪಟ್ಟು ವೇದ ಮೊದಲಾದ ಆಧಾರ ಗ್ರಂಥಗಳಿಗೆ ವಿಪರೀತಾರ್ಥ ಕಲ್ಪನೆಯಿಂದ ಸಾಮಾನ್ಯಜನರ ಮನಸ್ಸನ್ನು ಬದಲಾಯಿಸಿ ಕೆಡಿಸುವುದಕ್ಕೆ ಉತ್ತೇಜನವಲ್ಲದೆ ಗುರುವರ್ಗದ ಉನ್ನತಿಯೇ ಆಗಲಿ, ಮತದ ಐಕಮತ್ಯವೇ ಆಗಲಿ ಇದರಿಂದ ಆಗಲಾರದು. ಒಂದುವೇಳೆ ಮಿಶ್ರವಿವಾಹದಿಂದ ಐಕಮತ್ಯ ಉಂಟಾದೀತೇ? ಬಂಧುಗಳಲ್ಲಿಯಲ್ಲವೇ ಮನಸ್ತಾಪ ಸ್ವಭಾವವಾಗುವುದು? ಭಿನ್ನಮತದವರಿದ್ದಾಗ್ಯೂ ಸಾರ್ವಜನಿಕ ವಿಷಯದಲ್ಲಿ ಐಕಮತ್ಯ ಉಂಟಾಗುವುದಿಲ್ಲವೇ? ಆದೇರೀತಿ ಅನೇಕರು ನಡೆದು ಸುಖವನ್ನು ಪಡೆಯಲಿಲ್ಲವೆ? ಸ್ವಧರ್ಮದಲ್ಲಿ ನಡೆಯುವ ನಮ್ಮ ಸಹೋದರರಾದ ಬ್ರಾಹ್ಮಣರ ಧರ್ಮವನ್ನು ನೋಡಿ ಸೈರಿಸದೆ ತಿರಸ್ಕರಿಸುವುದು ಯುಕ್ತವೇ? ಸ್ವಧರ್ಮದಲ್ಲಿ ನಡೆಯುವುದು ಸಕಲ ಜನಾಂಗಕ್ಕೂ ಶ್ರೇಯಸ್ಕರವಲ್ಲವೇ? ಶುದ್ಧವಾದ ಮತದ ಸುಯೋಗ್ಯತೆಯನ್ನು ತಿಳಿಯದೆ ಸಾರ್ವಜನಿಕ ವಿಷಯದ ಸಾಧಕ ಬಾಧಕಗಳ ವಿಮರ್ಶೆಯಿಲ್ಲದೆ ಸ್ವಪ್ರತಿಷ್ಠಾಸ್ಥಾಪನೆಯು ಸಾಫಲ್ಯಪ್ರದವಾದದ್ದೇ? ಶ್ರೇಷ್ಠತರವಾದ ವಿದ್ಯಾಪ್ರಸಾರವು ಸಾಂಕರ್ಯ ವಿಷಯೋತ್ತೇಜಕವಾದದ್ದಕ್ಕೆ ಮತಾಭಿಮಾನಿಗಳು ವಿಷಾದಿಸಬೇಕಾಯಿತು. ಮಿಶ್ರವಿವಾಹದ ಸಾಂಕರ್ಯಕ್ಕೆ ಒಪ್ಪಿದವರು ಗುರುವರ್ಗದ ಉನ್ನತಿಯ ವಿಷಯದ ಚರ್ಚೆಮಾಡುವ ಈ ಸಭೆಯ ಅಧ್ಯಕ್ಷತೆಗೆ ಯೋಗ್ಯರೆ? ಮಿಶ್ರವಿವಾಹಕ್ಕೆ ಬದ್ಧಕಂಕಣರಾದ ಒಡೆಯರವರ ಉದ್ದೇಶವೆಲ್ಲಿ? ಗುರುವರ್ಗದ ಉನ್ನತಿ ಎಲ್ಲಿ? ಇಂಥಾ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯವು ಎಷ್ಟು ಶ್ಲಾಘನೀಯವಾಗಿರಬಹುದು! ಬಹು ಸ್ವಲ್ಪಕಾಲದಲ್ಲಿಯೇ ಮಹಾಸಭೆಯು ನಡೆಯುವ ಏರ್ಪಾಡಾಗಿರುವುದು. ಶೀಘ್ರದಿಂದಲೇ ಅಧ್ಯಕ್ಷರ ಚುನಾವಣೆಯೂ ಸ್ಥಳಿಕ ಮಹಾಜನರ ಅಭಿಪ್ರಾಯಗಳ ನಿರಾಕರಣೆಯೂ ನಡೆದದ್ದನ್ನು ನೋಡಿ ಆಶ್ಚರ್ಯಸೂಚಕವಾದ ಈ ವಿಷಯವನ್ನು ಬಹುಜನಗಳ ತಿಳುವಳಿಕೆಯಬಗ್ಗೆ ಶೃತಪಡಿಸಿದೆ.

ತಮ್ಮ ವಿಧೇಯ
ಕಾಸರಗುಪ್ಪೆ ಒಡೆಯರು ಬಸಪ್ಪ.

ಕಲಿಕಾಲವೈಚಿತ್ರ್ಯ.

(ಹಿಂದಣಶೇಷ).

ಈ ಚೈತನ್ಯರು ಅದರ ಮುಂದಕ್ಕೆ ಬರೆದುಕೊಂಡಿರುವುದರಲ್ಲಿ—"ಬಸವೇಶ್ವರ ಹರಿಹರೇಶ್ವರ ...... ಷಡಕ್ಷರಾರಾಧ್ಯ ನಿಜಗುಣಾರಾಧ್ಯ ವಗೈರೆ ಎಲ್ಲಾ ಗ್ರಂಥಕರ್ತರೂ ಕೂಡ ಆರಾಧ್ಯರ ಪುತ್ರವರ್ಗಕ್ಕೆ ಸೇರಿದವರಾಗಿದ್ದಾರೆ" ಎಂದು ಹೇಳಿಕೊಂಡಿರುವುದಲ್ಲದೆ, ಇದಕ್ಕೆ ಮಿ|| ಕಿಟಲ್ ರೈಸ್ ಮೊದಲಾದವರನ್ನೂ ಮ|| ಆರ್. ನರಸಿಂಹಾಚಾರ್ಯರನ್ನೂ ಸಾಕ್ಷಿಗೆ ಎಳೆದುಕೊಂಡಿದ್ದಾರೆ. ಆರಾಧ್ಯ ಶಬ್ದಾಂತವಾದ ಹೆಸರುಳ್ಳ ಗ್ರಂಥಕರ್ತರನ್ನೆಲ್ಲಾ ಒಟ್ಟುಗೂಡಿಸಿ, ಅವರ ಜತೆಗೆ ತಾವೂ ಸೇರಿದೆವೆಂದು ಇವರು ಹೇಳಿಕೊಂಡಿರುವುದು, ನರಸಿಷ್ಮ, ವನಸಿಷ್ಮ, ಗ್ರಾಮಸಿಷ್ಮಗಳೆಲ್ಲಾ ಒಂದೇಜಾತಿಯೆಂದು ಹೇಳಿಕೊಳ್ಳುವಷ್ಟು ಸಮಂಜಸವಾಗಿದೆ. "ಎಮ್ಮಾಳ್ದನಾದಲ್ಲಮವಿಭುವಿರತಿಶ್ರೇಯಮಂ ಮಾಳ್ಪುದೆನ್ಮೊಳ್"—"ಉರುತರಸಿದ್ಧಲಿಂಗ ಯತಿತುಂಗನೊಡರ್ಪುಗೆ ಸಜ್ಜನೇಷ್ಟಮಂ" ಎಂಬುದಾಗಿ ವಿರಕ್ತಮಂಡಲಿಯವರನ್ನು ಗ್ರಂಥಾದಿಯಲ್ಲಿ ಭಕ್ತಿಪೂರ್ವಕವಾಗಿ ಕೊಂಡಾಡಿರುವ ಷಡಕ್ಷರಾರ್ಯರೆಲ್ಲಿ? ವಿರಕ್ತರು ಸಿಂಹಾಸನಾಧಿಪತಿಗಳು ಮೊದಲಾದವರನ್ನೆಲ್ಲಾ ಅವಾಂತರವೀರಶೈವರನ್ನಾಗಿಯೂ ಶಿಷ್ಯಪರಂಪರೆಯವರನ್ನಾಗಿಯೂ, ದೀಪದ ಊಳಿಗದವರನ್ನಾಗಿಯೂ ಕಲ್ಪಿಸಿ ಬರಹುವ ಈ ಅಸೂಯಾಳುವೆಲ್ಲಿ? ಮತ್ತು "ಶ್ರೀಮದನೇಕ ಭುವನ ಭವನಾರಂಭ ಮೂಲಸ್ತಂಭರೂಪ ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮ ಪರ್ಯಂತ ಮಹಾ ಗುರುಪರಂಪರೆಗೆ ಮನೋವಾಕ್ಕಾಯಂಗಳಿಂದಭಿವಂದಿಸುವೆನೆಂದು" ತಮ್ಮ ಗ್ರಂಥಾದಿಯಲ್ಲಿ ಹೇಳಿಕೊಂಡಿರುವ ನಿಜಗುಣ ಶಿವಯೋಗಿಗಳೆಲ್ಲಿ? ನಿರಾಭಾರಿ ಗುರುಕುಲವನ್ನೇ ದ್ವೇಷಿಸಿ, ತಂದೆಗೆ ನಾಮಕರಣಮಾಡಿದೆನೆಂದು ಹೇಳಿಕೊಳ್ಳುವ ಸುಪುತ್ರನ ಆಚರಣೆಯಂತೆ ನಡೆಯುತ್ತಿರುವ ಈ ಅಸೂಯಾಳುವೆಲ್ಲಿ? "ಅತ್ರೋಚ್ಯತೇ ವೀರಶೈವಮತಮೇತಚ್ಛಿವೋದಿತಂ | ತತ್ರಾಪಿ ವಿವಿಧಾಭೇದಾ ನಿರಾಭಾರಾದಿ ಭೇದತಃ || ನಿರಾಭಾರಸ್ವಯೇಧರ್ಮಾಸ್ತಾನ್ವಿಶೇಷೋ ನಚಾರ್ಹತಿ | ವಿಶೇಷಧರ್ಮಾನ್ಸಾಮಾನ್ಯಶೈವೋ ನೈವಾರ್ಹತಿ ಕ್ವಚಿತ್" ಎಂಬುದೇ ಮೊದಲಾದ ವಚನಗಳಿಂದ ನಿರಾಭಾರಿ ಸರ್ವೋತ್ಕೃಷ್ಟತ್ವವನ್ನು ನಿರೂಪಿಸಿಕೊಂಡಿರುವ ನೀಲಕಂಠ ಶಿವಾಚಾರ್ಯರೆಲ್ಲಿ? ಅಜ್ಞಾತಾಪರಿಕಲ್ಪಿತ ಸ್ವಯಮಾಚಾರ್ಯತ್ವ ವಿಜೃಂಭಣೆಯಿಂದ ನಿರಾಭಾರಾದಿ ಗುರುಕುಲವನ್ನು ಕುರಿತು ವಿಪ್ರಲಾಪಿಸುತ್ತಿರುವ ಈ ಅರಬೆಡಗೆಲ್ಲಿ? ಮಿ|| ಕಿಟಲ್ ರೈಸ್ ಮೊದಲಾದವರುಗಳು ಇವರಿಗೆ ಸ್ವಮತಾಚಾರ್ಯರಿಗಿಂತಲೂ, ಅವರ ವಾಕ್ಯಗಳು ಇವರಿಗೆ ಶಿವಾಗಮಗಳಿಗಿಂತಲೂ ಶ್ರೇಷ್ಠಗಳಾಗಿರಬಹುದು! ಅವರುಗಳಾದರೂ ಇವರಿಗೆ ಸಾಧಿಸಿಕೊಟ್ಟಿರುವುದೇನು? ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಯಾರಾದರೂ ಸಂಬಂಧವನ್ನು ಕಲ್ಪಿಸಿ ಹೇಳಿದರೆ ಲೋಕಶಾಸ್ತ್ರಾನುಭವಜ್ಞರು ನಂಬುವರೆ?

ಈ ಅಸೂಯಾಳುವು ಅದರ ಮುಂದಕ್ಕೆ—"ಆದ್ದರಿಂದ ಮುರಿಗಿ ಮಠದವರೇ ಮೊದಲಾದ ಕೆಲವು ಮಠದ ವಡೇರುಗಳು "ಈಗಿನ ಸೆನ್ಸಸ್ ಪ್ರಕಾರ ಆರಾಧ್ಯರೇ ಮೊದಲಾದ ಎಲ್ಲರನ್ನೂ ಲಿಂಗಾಯತರೆಂದು ಒಂದು ಗುಂಪಾಗಿ ಭಾವನೆ ಮಾಡಿರುವಾಗ" ಲಿಂಗಾಯಿತರಿಗೆಲ್ಲಾ ಜಗದ್ಗುರುಗಳಾದರೆ ಮೊದಲನೆ ಪಂಗಡದವರಾದ ಆರಾಧ್ಯರಿಗೂ ಅವರ ಶಿಷ್ಯಮಂಡಲಿಗೂ ಸಹ ಅನ್ವಯಿಸಿದಂತಾಗುವುದಿಲ್ಲವೆ? ಇದು ಗುರುವಿನಿಂದ ದೋಷಕ್ಕೆ ಪಾತ್ರರಾದಂತಾಗುವುದಿಲ್ಲವೆ? ...ಸಾಮಾನ್ಯವಾಗಿ ಆರಾಧ್ಯರು ಯಾವತ್ತೂ ಲಿಂಗಾಯಿತರಿಗೂ ಗುರುವಾಗಬಹುದಾದ್ದರಿಂದ ಇವರೇ ಜಗದ್ಗುರುಗಳು ಎನಿಸಿಕೊಳ್ಳಲು ಏನೂ ಅಭ್ಯಂತರವಿಲ್ಲ. ಆದರೂ ಕೂಡ "ತುಂಬಿದ ಕೊಡ ತುಳುಕುವುದೆ?" ಎಂಬ ಗಾಥೆಗನುಸಾರವಾಗಿ ಅವರು ಒಬ್ಬರ ಗೋಜಿಗೂ ಹೋಗದೇ ಸುಮ್ಮನಿದ್ದಾಗ್ಯೂ ಈ ರೀತಿ ಬರೆದಿರುವುದು ತುಂಬಾಅನ್ಯಾಯವಲ್ಲದೆ ಆರಾಧ್ಯರಿಗೂ ಅರಸುಗಳೇ ಮೊದಲಾದ ಎಲ್ಲಾ ಜಾತಿಯ ಶಿಷ್ಯಮಂಡಲಿಯವರಿಗೂ ತುಂಬಾ ವಿಷಾದಮಾಡಿರುತ್ತೆ. ವೀರಶೈವ ಮತಸ್ಥಾಪನಾಚಾರ್ಯರು ಮೂಲಕರ್ತರು ಆರಾಧ್ಯರಾದ್ದರಿಂದ ಈ ಜಗದ್ಗುರುತ್ವವು ಎಲ್ಲಾ ಬಿರುದಾವಳಿಗಳೆಲ್ಲಾ ಆರಾಧ್ಯರಿಗಲ್ಲದೆ ಮತ್ತಾರಿಗೂ ಸಲ್ಲಲಾರದು" ಎಂದು ಹೇಳಿಕೊಂಡಿರುತ್ತಾರೆ.

ಇಲ್ಲಿ ಸೆನ್ಸಸ್ಸಿನವರು ಆರಾಧ್ಯರೇ ಮೊದಲಾದ ಎಲ್ಲರನ್ನೂ ಲಿಂಗಾಯತರೆಂದು ಒಂದು ಗುಂಪಾಗಿ ಭಾವನೆಮಾಡಿರುತ್ತಾರೆಂದು ಹೇಳಿಕೊಂಡಿರುವುದನ್ನು ನೋಡಿದರೆ, ಸೆನ್ಸಸ್ಸಿನವರ ಭಾವನೆಯು ಇವರಿಗೆ ತಪ್ಪಾಗಿರಬೇಕು. ಲಿಂಗಾಯತರ ಗುಂಪಿನಲ್ಲೇ ತಾವು ಸೇರಿದವರಲ್ಲವೆಂಬ ಭಾವನೆಯು ಇವರಿಗಿದ್ದರೆ ಲಿಂಗಾಯತ ಮತದ ವಿಷಯವಾಗಿಯಾಗಲಿ ಅವರ ಗುರುವರ್ಗದವರ ವಿಷಯವಾಗಿ ಆಗಲಿ ಮಾತನಾಡುವುದಕ್ಕೆ ಲೇಶವೂ ಅಧಿಕಾರವು ಇವರಿಗೆ ಇರುವುದೇ ಇಲ್ಲ. ಇವರನ್ನು ನಮ್ಮ ಮತದವರೆಂದು ಲಿಂಗಾಯತರು ಭಾವಿಸಿಕೊಂಡಿದ್ದರೆ ಅದೂ ತಪ್ಪಾಗಬೇಕಾಯಿತು. ಇದು ನಿಜವಾಗಿದ್ದರೆ ಇವರು ತಮ್ಮ ವರ್ಗದವರನ್ನೆಲ್ಲಾ ಕಟ್ಟಿಕೊಂಡು ಈ ಮತಕ್ಕೆ ದೂರವಾಗಿಯೇ ಇರಲಿ. ಉಂಡಮನೆಗೆರಡುಬಗೆಯುವವರ ಸಹವಾಸ ತಪ್ಪಿದರೆ ಅನಿಷ್ಟವೇ ಕಳೆಯಿತು. ಈ ಚೈತನ್ಯರ ಅಭಿಪ್ರಾಯವೇ ಇವರ ವರ್ಗಕ್ಕೆಲ್ಲಾ ಇರುವದಾದರೆ ವೀರಶೈವ ಮಂಡಲಿಯು ಇನ್ನು ಮುಂದೆ ಎಚ್ಚತ್ತು ಹೇಗೆ ನಡೆದುಕೊಳ್ಳಬೇಕೋ ಹಾಗೆ ನಡೆದುಕೊಳ್ಳುವದರಲ್ಲಿ ಸಂಶಯವಿಲ್ಲ. ಮಠದ ವಡೇರುಗಳು ಲಿಂಗಾಯತರಿಗೆಲ್ಲಾ ಜಗದ್ಗುರುಗಳಾದರೆ ಆರಾಧ್ಯರಿಗೂ ಅವರ ಶಿಷ್ಯಮಂಡಲಿಗೂ ಸಹ ಗುರುಗಳಾಗಬೇಕಾಗುತ್ತೆಂದೂ, ಹಾಗೆ ಹೇಳುವದು ಗುರುವಿನಿಂದ ದೋಷಕ್ಕೆ ಪಾತ್ರವೆಂದೂ ಈ ಅವಿಚಾರಿಯು ಬರೆದುಕೊಂಡಿದ್ದಾರಷ್ಟೆ. ಮಠದ ಅಧಿಕಾರಿಗಳ ಗುರುತ್ವವು ವೀರಶೈವ ಜಗತ್ತೆಲ್ಲಕ್ಕೂ ಆದಿಯಿಂದಲೂ ಸಿದ್ಧವಾಗಿ ಅನುಭವಪೂರ್ವಕವಾಗಿರುವಾಗ, ಅದನ್ನು ಒಪ್ಪದಿದ್ದವರು ಲಿಂಗಾಯತರೂ ಅಲ್ಲ; ವೀರಶೈವ ಮಠಾಧಿಕಾರಿಗಳು ಜಗದ್ಗುರುಗಳೆಂದು ಹೊಗಳಿಸಿಕೊಂಡರೆ ಇತರರ ತಲೆಹುಳುವು ಕೆದರುವುದಕ್ಕೆ ಕಾರಣವೂ ಇಲ್ಲ. ಯಾರು ಲಿಂಗಾಯತರೇ ಆಗಿದ್ದು, ಮಠಾಧಿಕಾರಿಗಳ ಗುರುತ್ವ ವೈಭವವನ್ನು ನೋಡಿ ಸೈರಿಸದೆ ಅಸೂಯೆಯಿಂದ ಬಡಬಡಿಸುವರೋ ಅವರು ನಿಜವಾಗಿಯೂ ಗುರುದ್ರೋಹಿಗಳೂ ಮತದ್ರೋಹಿಗಳೂ ಗುರುನಿಂದಾಪಾತ್ರರೂ ಆಗುವರೆಂಬ ವಿಷಯದಲ್ಲಿ ಸಂಶಯವೇ ಇಲ್ಲ.

ಇನ್ನೊಂದು ಗಮ್ಮತ್ತನ್ನು ನೋಡಿರಿ! ಸಾಮಾನ್ಯವಾಗಿ ಆರಾಧ್ಯರು ಯಾವತ್ತೂ ಲಿಂಗಾಯಿತರಿಗೂ ಗುರುವಾಗಬಹುದಾದ್ದರಿಂದ ಇವರೇ ಜಗದ್ಗುರುಗಳು ಎನಿಸಿಕೊಳ್ಳಲು ಏನೂ ಅಭ್ಯಂತರವಿಲ್ಲವಂತೆ! ಆದರೂ ತುಂಬಿದಕೊಡ ತುಳುಕದಿರುವಂತೆ ಅದನ್ನನುಭವಿಸದೆ ಬಿಟ್ಟುಬಿಟ್ಟು ಸುಮ್ಮನಿದ್ದಾರಂತೆ! ಹೀಗಿದ್ದರೂ ಇತರರು ಜಗದ್ಗುರುಗಳೆಂದು ಹೇಳಿಸಿಕೊಳ್ಳುತ್ತಿರುವುದು ಆರಾಧ್ಯರಿಗೂ ಅರಸುಗಳೇ ಮೊದಲಾದ ಎಲ್ಲಜಾತಿಯ ಶಿಷ್ಯಮಂಡಲಿಗೂ ವಿಷಾದಕರವಾಗಿರುವುದಂತೆ! ವೀರಶೈವ ಮತಸ್ಥಾಪನಾಚಾರ್ಯರೂ ಮೂಲಕರ್ತರೂ ಇವರೇ ಅಂತೆ! ಆದ್ದರಿಂದ ಜಗದ್ಗುರುತ್ವವೂ ಬಿರುದಾವಳಿಗಳೂ ಇವರಿಗೇ ಸಲ್ಲಬೇಕಲ್ಲದೆ ಇನ್ನಾರಿಗೂ ಸಲ್ಲಲಾರವಂತೆ!! ಈ ಮಾತಿನಲ್ಲಿ ಇವರ ಕಟ್ಟುವೇಷದ ಗುರುತ್ವವು ತಾನಾಗಿ ಬಯಲಿಗೆ ಬಂದಿದೆ. "ಆರಾಧ್ಯರು ಲಿಂಗಾಯಿತರಿಗೆ ಗುರುವಾಗಬಹುದು." "ಜಗದ್ಗುರುಗಳು ಎನ್ನಿಸಿಕೊಳ್ಳಲು ಏನೂ ಅಭ್ಯಂತರವಿಲ್ಲ" ಎಂದು ಭವಿಷ್ಯತ್ಕಾಲದ ಸಿದ್ಧಾಂತವನ್ನು ಇವರು ಈಗ ಮಾಡುವುದಕ್ಕೆ ಉಪಕ್ರಮಿಸಿರುವುದರಿಂದ, ಇದುವರೆಗೆ ತಮಗೆ ಗುರುತ್ವವಿಲ್ಲ; ತಾವು ಜಗದ್ಗುರುಗಳು ಎನಿಸಿಕೊಳ್ಳುತ್ತಲೂ ಇಲ್ಲ; ಎಂದು ತಾವೇಬಾಯ್ಬಿಟ್ಟು ಒಪ್ಪಿಕೊಂಡಂತಾಯಿತು. ನಿಜಕ್ಕೆ ಜಯವು ಎಂದಿಗಾದರೂ ಆಗದೆ ತಪ್ಪುವದಿಲ್ಲವಷ್ಟೆ. ಮುಂದೆ ಇವರು ವೀರಶೈವಮತಕ್ಕೆ ಜಗದ್ಗುರುತ್ವವನ್ನೋ ಜಗದ್ಗುರು ಸಾರ್ವಭೌಮತ್ವವನ್ನೋ ಪಡೆದುಕೊಳ್ಳಲು ಸಾಹಸಪಡಲಿ! ಕೊಡುವವರಾಗಬೇಕಷ್ಟೆ? ಲಿಂಗಾಯತ ಮತಸಂಬಂಧವೇ ಇವರಿಗಿಲ್ಲವಾದಪಕ್ಷಕ್ಕೆ ಇವರು ಪಡೆದುಕೊಳ್ಳಲು ಹೋಗುವ ಗುರುತ್ವವು ಯಾವ ಕೋಣೆಯಮೇಲೋ ತಿಳಿಯಲಿಲ್ಲ. "ತುಂಬಿದ ಕೊಡತುಳುಕುವುದೆ?" ಎಂಬ ಉದಾಹರಣೆಕೊಟ್ಟುಕೊಂಡು, ತಮ್ಮ ಕಾಲಿಗೆ ತಾವೇ ಅಡ್ಡಬಿದ್ದುಕೊಂಡು ಗೌರವವನ್ನು ತೋರ್ಪಡಿಸಿಕೊಳ್ಳುವಂತೆ ತಮ್ಮ ಘನತರವಾದ ಶಾಂತಿಯನ್ನೂ ವಿರಕ್ತಿಯನ್ನೂ ಇಲ್ಲಿ ಮೆರೆಯಿಸಿಕೊಂಡಿರುವರು! ಇಂಥ ವಿರಾಗಿಗಳು ಅನೂಚಾನವಾಗಿ ಜಗದ್ಗುರುತ್ವಾದಿಗಳನ್ನು ಅನುಭವಿಸುತ್ತ ಬಂದಿರುವವರ ವೈಭವವನ್ನು ನೋಡಿ ಸೈರಿಸಲಾರದೆ ಪರಮತ ಪತ್ರಿಕೋಪಾತ್ರಯದಿಂದ ತಮ್ಮ ಅಸೂಯೆಯನ್ನು ಕಕ್ಕಿರುವುದು ಯಾತಕ್ಕೋ ತಿಳಿಯಲಿಲ್ಲ. ವಜ್ರಕಂಕಣಗಳನ್ನಿಕ್ಕಿ ಇಕ್ಕಿ ನನ್ನ ಕೈ ಸಣ್ಣಗಾದುದರಿಂದ ಆಭರಣಗಳ ಹಂಬಲವನ್ನೇ ನಾನು ಬಿಟ್ಟೆನೆಂದು ಒಂದು ಕೋಡಗವು ಹೇಳುತ್ತಿತ್ತೆಂಬ ಅಜ್ಜಿಕತೆಯು ಇವರ ವೈರಾಗ್ಯದ ಮಾತನ್ನು ಕೇಳಿದರೆಜ್ಞಾಪಕಕ್ಕೆ ಬರುತ್ತದೆ. ತಮ್ಮಲ್ಲಿರುವ "ಅಭಾವೇ ವಿರಕ್ತಿ" ಯನ್ನು ಇವರು ಬಣ್ಣದ ಗೋಟುಗಟ್ಟಿ ಮುಚ್ಚಿಕೊಳ್ಳಲಿಕ್ಕೆ ಪ್ರಯತ್ನಿಸಿರುವ ಮಾತುಗಳು "ಆತ್ಮಪ್ರಶಂಸಾ ಪರನಿಂದೆಗಳಿಲ್ಲದೆ ಧನಾಶಾ ರಹಿತನಾಗಿರುವ ನನಗೆ ಈ ಅಧಮರಾದ ಭೂರಿ ಅಯ್ಯಗಳೊಡನೆ ಸೇರಿಸಿ ಮೂರುಕಾಸು ದಕ್ಷಿಣೆಯನ್ನು ಕೊಡಬಹುದೆ?" ಎಂದು ಹೇಳಿದಕಪಟಸನ್ಯಾಸಿಯ ಮಾತಿಗೆ ಸದೃಶವಾಗಿದೆಯೆಂದು ಯಾರೊಬ್ಬರೂ ಊಹಿಸದೆ ಇರಲಾರರು. ಇವರೇ ಮತಸ್ಥಾಪನಾಚಾರ್ಯರೂ ಮೂಲಕರ್ತರೂ ಆಗಿದ್ದರೆ, ಇವರ ಜಗದ್ಗುರುತ್ವವನ್ನೂ ಬಿರುದಾವಳಿಗಳನ್ನೂ ಅನ್ಯಾಯವಾಗಿ ಕಿತ್ತುಕೊಂಡು ಇತರರು ಆಕ್ರಮಿಸಿಕೊಂಡು ಅನುಭವಿಸುತ್ತಿದ್ದರೆ, ಅದನ್ನು ಹಿಂದಿರುಗಿಸಿಕೊಳ್ಳುವುದಕ್ಕಾಗಿ ಸಂಪದಭ್ಯುದಯಕೋರ್ಟೇ ಇವರಿಗೆ ಚೀಫ್‌ಕೋರ್ಟಾಗಿ ಕಂಡಿತೋ ಏನೋ! ಅಥವಾ ದುಡ್ಡು ಕಾಸು ಖರ್ಚಿಲ್ಲದೆ ದಾವಾವನ್ನು ಈ ಕೋರ್ಟಿನಲ್ಲಿ ಹೀಗೆ ಮಾಡಿದ್ದರೆ, ಇವರ ವರ್ಗದವರಾರಾದರೂ ಚಂದಾ ಕೂಡಿಸಿ ನಿಜವಾದ ನ್ಯಾಯಸ್ಥಾನಗಳಲ್ಲಿ ದಾವಾಹಾಕಿಸಿ ಜಗದ್ಗುರುತ್ವವನ್ನೂ ಬಿರುದಾವಳಿಗಳನ್ನೂ ಸ್ಥಾಪಿಸಿಕೊಳ್ಳುವದಕ್ಕೂ, ಕಳೆದುಕೊಂಡಿರುವ ಆಚಾರ್ಯಪೀಠಾಧಿಪತಿತ್ವವನ್ನು ಪಡೆದುಕೊಳ್ಳುವುದಕ್ಕೂ ಯಾಕೆ ಪ್ರಯತ್ನ ಮಾಡಬಾರದು?

ಸಶೇಷ.

ಆರಾಧ್ಯಗುರು.

ನೋಟೀಸ್.

ಬೆಂಗಳೂರು ಸಿಟಿ. ಚಿಕ್ಕಪೇಟೆಯಲ್ಲಿ ಸರಾಫುವ್ಯಾಪಾರ ಮಾಡುತ್ತಲಿದ್ದ ಸೂಲಬೆಲೆ ನಂಜಪ್ಪ ಉರುಫ್ ಶಾಮಣ್ಣನವರಲ್ಲಿ ಗಿರ್ವಿ ಇಟ್ಟಿರತಕ್ಕ ನಗಗಳ ಮಾಲೀಕರು ಇದೇ ತಿಂಗಳು ಆಖೈರಿನೊಳಗಾಗಿ ಅಸಲುಬಡ್ಡಿಯನ್ನು ಪೂರ್ತಾ ಪಾವತಿಮಾಡಿ ವಾಪಸ್ಸು ಪಡೆಯದ ಪಕ್ಷಕ್ಕೆ ಸದರಿ ಒಡವೆಗಳು ಎಕ್ಸಿಕ್ಯೂಟರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ ರವರ ಇನ್‌ಸ್ಟ್ರಕ್ಷನ್ ಮೇರೆ ಹರಾಜು ಮಾಡಲ್ಪಡುತ್ತೆ. ಹರಾಜಿನಲ್ಲಿ ಪೂರ್ತಾ ಮೊಬಲಗು ಬಾರದ ಪಕ್ಷಕ್ಕೆ ಬಾಕಿಯಾಗುವ ಮೊಬಲಗನ್ನು ಆಯಾಯ ಮಾಲೀಕರುಗಳಿಂದ ಬರಮಾಡಿಕೊಳ್ಳಲು ಮುಂದಿನ ಕ್ರಮ ಜರುಗಿಸಲ್ಪಡುವುದು.

ಬೆಂಗಳೂರು ಸಿಟಿ-
10—11—1919.

ಜಿ. ಪರಮಶಿವಯ್ಯ ಅಡ್ವೊಕೇಟ್
ಅರಳೇಪೇಟೆ ಚೌಕ.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1 ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ನೋಡ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಶ್ರೀಧರ್,
38 3. ಇರುಳಪ್ಪನಬೀದಿ, ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಸ್ತು ಸರಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಕ್ಕಾ ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗಸ್ಥವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮರ್ದನದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ. ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
8 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ?

ಎಂದಿಗೂ ಅಲ್ಲ.

ಈ ಸುಧಾ ಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರಹ ಕಜ್ಜಿಗಳು, ಹುಳುಕಡ್ಡಿ, ಮುಂತಾದವುಗಳ ಮೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ಶೀಸೆ 1 ಕ್ಕೆ 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ಸಾಬೂನುಗಳ, ಪರಿಮಳಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಅರುಕಾಸಿನ ಸ್ಟಾಂಪು ರವಾನಿಸಿ. ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್, ಬೋರ್ಡು ಮಾಫಿ, ಫಾಯಿದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ಸಾಗಿಸಿಕೊಡುವದಿಲ್ಲಾ. ಈದಿನವೇ ಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎ. & ಕಂಪೆನಿ
6 ತಿಪ್ಟೂರು (ಮೈಸೂರು ಪ್ರಾವಿನ್ಸ್).

2

ಎತ್ತಿನ ಚಹರೆ.

1. ಬೂದುಬಣ್ಣ, ನೆಟ್ಟಕೊಂಬು, ಕಡಹಲ್ಲು ಬಿದ್ದಿದೆ. ಬಾಲ ಉದ್ದವಾಗಿದೆ. ಮಂಡ್ಯದಹಳ್ಳಿಕಡೆ ದನ. ಖರೀದಿ ಸುಮಾರು 250 ರೂ.
2. ಬಿಳುಪು, ನೆಟ್ಟಕೊಂಬು, ಕಡಹಲ್ಲು ಬಿದ್ದಿಲ್ಲ. ಬಾಲ ಉದ್ದವಾಗಿದೆ. ಬೆನ್ನಿನ ಮೇಲೆ ಕಳ್ಳಿಬಿದ್ದು ಗಾಯವಾಗಿ ಮಚ್ಚೆ ಕಾಣುತ್ತದೆ. ಮಂಡ್ಯದಹಳ್ಳಿದನ. ಖರೀದಿ ಸುಮಾರು 240.
3. ಕಪ್ಪುಬೂದ, ಕೊಕ್ಕಕೊಂಬು, ಬಾಲ ಉದ್ದವಾಗಿದೆ. ಸ್ವಲ್ಪ ಬಡವಾಗಿದೆ. ಪ್ರಾಯವಾದ್ದು. ಕ್ರಯ ಸುಮಾರು 125 ರೂ.
4. ಕಪ್ಪುಬೂದ, ನೆಟ್ಟಗೋಡು, ಬಾಲ ಉದ್ದವಾಗಿದೆ. ಪ್ರಾಯವಾದ್ದು. ಕ್ರಯ ಸುಮಾರು 125 ರೂ.

ಈ ನಾಲ್ಕನ್ನು ಪತ್ತೆಮಾಡಿದವರಿಗೆ ಬಹುಮಾನ 50 ರೂ. ಕೊಡಲ್ಪಡುವುದು. ಯಡತೊರೆ ಬಳೆನಂಜಪ್ಪ.

ಸೀಮೆ ತಲೆದಿಂಬುಗಳು.



ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸಿ ಪ್ಲಗ್ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಪ್ರೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನ, ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಾಗಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ವಾಣಿ ಕಂಪನಿ,
38 ಸಾಹುಕಾರಪೇಟೆ, ಮದರಾಸು.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವನಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕಶಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಜೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊಂಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯು ಶೋಭಿತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
9 ಹೆಡ್ ಆಫೀಸ್ ಶಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ನವಂಬರ್ ತಾ|| ೧೬ ರಿಂದ ೧೯೧೯ ನೆಯ ನವಂಬರ್ ತಾ|| ೨೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಕಾರ್ತಿಕ ಬ|| ನವಮಿಯಿಂದ ಕಾರ್ತಿಕ ಬ|| ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
16	[1] ಭಾನು	ನವಮಿ	16-44	ಹುಬ್ಬೆ	55-41	1
17	[2] ಸೋಮ	ದಶಮಿ	15-47	ಉತ್ತ	57-34	2
18	[3] ಮಂಗಳ	ಏಕಾ	16-36	ಹಸ್ತ	60	3
19	[4] ಬುಧ	ದ್ವಾದ	18-42	ಹಸ್ತ	1-14	4
20	ಗುರು	ತ್ರಯೋ	22-2	ಚಿತ್ತ	5-31	5
21	ಶುಕ್ರ	ಚತು	26-20	ಸ್ವಾತಿ	10-50	6
22	[5] ಶನಿ	ಅಮಾ	31-23	ವಿಶಾ	13-54	7

(1) ವಿಷ್ಣುಪದ ಪುಣ್ಯಕಾಲಃ. (2) ಕಾರ್ತಿಕಸೋಮವಾರ. (3) ಸರ್ವತ್ರ ಏಕಾದಶಿ. (4) ಪ್ರದೋಷಃ. (5) ಸರ್ವತ್ರ ಅಮಾವಾಸ್ಯೆ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷದ್ವಯ ನಕ್ಷತ್ರ ತೋಷರಾಜೀಯತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸಿತಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂ ಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ನವಂಬರ್ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೪೭

MYSORE GOVERNMENT ADVERTISEMENTS.

PUREST raw materials and the **FINEST** essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintendent,
Government Museum.

ಪ್ರಕಟನೆ.

ಕಂಬಳಿಗಳು, ರತ್ನಕಂಬಳಿಗಳು, ಬಾಗಿಲುಮುಂದೆ ಹಾಕುವ ರಗ್ಗುಗಳು, ಕೈವಸ್ತ್ರಗಳು, ತರಹಾವರಿ ಚೌಕಗಳು, ತರಹಾವರಿ ಟವೆಲ್‌ಗಳು, ದುಪಟಿಗಳು, ಮರದ ಸಾಮಾನುಗಳು, ಕಬ್ಬಿಣದ ಸಾಮಾನುಗಳು, ಹಜಾರ ಚೀಲಗಳು, ಟೆನ್ನಿಸ್ ಬಲೆಗಳು, ಹಗ್ಗಗಳು, ಈ ಸಾಮಾನುಗಳು ಈ ಜೈಲಿನಲ್ಲಿ ತಯಾರುಮಾಡಲ್ಪಡುತ್ತವೆ. ಬೇಕಾದವರಿಗೆ ಸಿದ್ಧವಾಗಿದ್ದರೆ ಕಿಮ್ಮತ್ತು ಪಾವತಿಮಾಡಿ ಪಡೆಯಬಹುದು. ಅಲ್ಲದೆ ಶೇಕಡ 50 ರಂತೆ ಬೆಲೆಯನ್ನು ಮುಂಗಡವಾಗಿ ಕೊಟ್ಟಲ್ಲಿ ಸಾಮಾನುಗಳನ್ನು ತಯಾರುಮಾಡಿಸುತ್ತೆ.

C. Rajagopal, Suparintendent,
Mysore Jail.

1. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ನಾನಾ ವಿಧವಾದ ಟುವಲುಗಳು ದುಪಟಿಗಳು, ಮಗ್ಗಲುಹಾಸಿಗೆಗಳು, ಕೈಲ್ಟು ಎಂಬ ಹಾಸಿಗೆಗಳು, ತೆಂಗಿನನಾರಿನ ಚಾಪೆಗಳು, ಮತ್ತು ರಗ್ಗುಗಳು, ಮತ್ತು ಚಿಲ್ಲುಗಳೇ ಮುಂತಾದ ಸಾಮಾನುಗಳು, ತಯಾರುಮಾಡಿಸಿ ಮಾರಾಟಕ್ಕೆ ಯಾವಾಗಲೂ ಸಿದ್ಧವಾಗಿವೆ. ರತ್ನಕಂಬಳಿಗಳು ಮತ್ತು ಜಮಖಾನೆಗಳು ಅನೇಕ ವಿಧವಾಗಿ ಆರ್ಡರುಗಳಿಗೆ ತಯಾರುಮಾಡಿಸಿ ಕೊಡಲ್ಪಡುತ್ತವೆ. ಜೈಲ್‌ಸ್ಟೋರು ರಜಾ ದಿನಹ ಬಾಕಿ ದಿನಗಳಲ್ಲಿ ಬೆಳಿಗ್ಗೆ 7 ರಿಂದ 10-30 ಘಂಟೆಯವರೆವಿಗೂ ಮಧ್ಯಾಹ್ನ 3 ರಿಂದ 5 ಘಂಟೆಯವರೆವಿಗೂ ತೆರೆಯಲ್ಪಟ್ಟಿರುತ್ತದೆ.

2. ಈ ಜೈಲಿನಲ್ಲಿ ಖೈದಿಗಳಿಗೆ ಒಂದು ವರುಷಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳಿಗೂ ಮತ್ತು ಜೈಲ್‌ಖಾರ್ಖಾನೆಗೆ ಬೇಕಾದ ಚಿಲ್ಲರೆ ಸಾಮಾನುಗಳಿಗೋಸ್ಕರ ಪ್ರತಿವರುಷವು ನವಂಬರು ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ ಮತ್ತು ಜೈಲ್‌ಕಟ್ಟಡ ರಿಪೇರಿಗೋಸ್ಕರ ಬೇಕಾದ ಸಾಮಾನುಗಳಿಗೆ ಪ್ರತಿವರುಷವು ಜೂನ್ ತಿಂಗಳಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುತ್ತವೆ.

Superintendent,
16 Centrel Jail, Bangalore.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೬೭ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ವಿಮಲಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ ವ್ಯಾಖ್ಯಾನಗಳು, ಕರಣಹಸುಗೆ, ಪಂಚಾಕ್ಷರಿ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಚೀತೀವಯೋಗಪ್ರದೀಪಿಕೆ.—ಬೆಲೆ ೧೨ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸವಿಸ್ತಾರವಾಗಿ ಪಟ್ಟಿಕೆಯ ಸಾಮಗ್ರಿಯಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿವರಣೆಯೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶತೋಕ್ತಿ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕನಕಸ್ತುತಿರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ಮೃತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೩ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 4

ನಾವು ಎ. ಅಲ್ ಬ್ರುಕ್ಮ್ಯಯರ್ ಕ್ಕೊ ಅಂಡ್ ಸನ್ಸ್ ಎಂಬ ಹೆಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸೆಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗದ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹೆಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ ಕರೇಗೌಡರು ದಾವಣಗೆರೆ. }

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

2

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವನಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕಶಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷ್ಮೀವಿಲಾಸ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.
5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.



ನಮ್ಮ ವಿಳಾಸ:—ಶ್ರೀ ಸೀತಾರಾಘವ
46 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 49

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗಸ್ಥವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮರ್ದನದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ ಮದನೋದ್ಭವ ಗುಳಿಗೆಯನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಶರಣಾಗ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕ	೦—೨—೦

ಅಂಚೆವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ನವಂಬರ್ ತಾ|| ೨೩ ನೆಯ ಭಾನುವಾರ.

ಯುದ್ಧಶಾಂತ್ಯುತ್ಸವಗಳು.

ಜಗತ್ತನ್ನೇ ತಲ್ಲಣಗೊಳಿಸುತ್ತಿದ್ದ ಮಹಾ ಯುದ್ಧವು ಶಾಂತವಾದುದರಿಂದ ಲೋಕವೆಲ್ಲವೂ ಆನಂದಪಡುತ್ತಿದೆ. ಈ ಸಂತೋಷಪ್ರದರ್ಶನೋತ್ಸವವು ಜಗತ್ತಿನಲ್ಲೆಲ್ಲಾ ನಾನಾವಿಧವಾಗಿ ನಡೆದೂ ನಡೆಯುತ್ತಲೂ ಇವೆ. ನಮ್ಮ ಭರತಖಂಡದಲ್ಲಿ ಈ ಸಂಬಂಧಗಳಾದ ಉತ್ಸವಗಳನ್ನು ಸರ್ವತ್ರ ನಡೆಯಿಸುವುದಕ್ಕೆ ಬರುವ ಡಿಶಂಬರ್ ತಾ|| ೧೩ ರಿಂದ ೪ ದಿನಗಳನ್ನು ಗೊತ್ತುಮಾಡಿ ಭರತಖಂಡದ ಸರ್ಕಾರದವರು ಪ್ರಕಟಿಸಿರುವ ವಿಷಯವನ್ನು ಹಿಂದೆಯೇ ನಾವು ತಿಳಿಯಿಸಿರುತ್ತೇವೆ. ಆಂಗ್ಲಪ್ರಭುಗಳ ಪ್ರತ್ಯಕ್ಷಪರಿಪಾಲನೆಗೆ ಒಳಪಟ್ಟಿರುವ ಭರತಖಂಡಭಾಗಗಳಲ್ಲೆಲ್ಲಾ ಈ ರೂಪವಾಗಿಯೇ ದೇವತಾಪ್ರಾರ್ಥನೆಗಳೂ ಉತ್ಸವಗಳೂ ಜರುಗತಕ್ಕದೆಂದು ಆಗಲೇ ನಿರ್ಧಾರವಾಗಿ, ಅದಕ್ಕೆ ತಗಲುವ ವೆಚ್ಚಗಳನ್ನು ಆಯಾ ಸರ್ಕಾರದವರೇ ವಹಿಸಿಕೊಂಡಿರುತ್ತಾರೆ. ಇದು ಸರ್ಕಾರಕ್ಕೆ ಮಾತ್ರವೇ ಅಲ್ಲದೆ ಪ್ರಜಾಸಮುದಾಯಕ್ಕೂ ಕೂಡ ವಿಶೇಷವಾಗಿ ಸಂಬಂಧಪಟ್ಟ ವಿಷಯವಾಗಿದೆ. ಅದರಲ್ಲೂ ಕೇವಲ ರಾಜಭಕ್ತಿಗಾಗಿಯೂ ಮಿತ್ರಮಂಡಲಿಯ ಜಯಪ್ರಾಪ್ತಿಯೊಡನೆ ಯುದ್ಧಶಾಂತಿಯಾದುದಕ್ಕಾಗಿಯೂ ಮಾತ್ರವೇ ಸಂತೋಷಪಟ್ಟು ಪ್ರಜೆಗಳು ಈ ಉತ್ಸವವನ್ನು ನಡೆಯಿಸುತ್ತಾರೆಂದಲ್ಲ; ಪ್ರತಿಯೊಬ್ಬರಿಗೂ ದುಸ್ಸಹವಾಗಿದ್ದ ಸಂಕಟಗಳನೇಕವು ಈ ಯುದ್ಧಶಾಂತಿಯ ದೆಸೆಯಿಂದ ತಪ್ಪಿ ಪೂರ್ವದಲ್ಲಿದ್ದಂತಹ ಸುಖಶಾಂತಿ ಸೌಕರ್ಯಾದಿಗಳನ್ನು ಮರಳಿ ಅನುಭವಿಸಲು ಅವಕಾಶವಾಯಿತೆಂಬುದಾಗಿಯೇ ಪ್ರತಿಯೊಬ್ಬರೂ ಈ ಉತ್ಸವವನ್ನು ಮನಃಪೂರ್ವಕವಾಗಿ ನಡೆಯಿಸಲು ಕುತೂಹಲಗೊಂಡಿರುತ್ತಾರೆಂಬುದಕ್ಕೆ ಸಂಶಯವಿಲ್ಲ. ಎಂದಿಗೆ ಯುದ್ಧ ಮುಕ್ತಾಯವಾಗುವುದೋ ಎಂದು ಪ್ರತಿಯೊಬ್ಬರಿಗೂ ಇದ್ದ ಚಿಂತೆಯನ್ನು ಜಗದೀಶನು ತಪ್ಪಿಸಿ, ಅದು ತಪ್ಪಿದ ಮರುವರ್ಷದಲ್ಲೇ ನಮ್ಮ ದೇಶದಲ್ಲಿ ಸುಭಿಕ್ಷವಾಗುವಂತೆ ಎಲ್ಲಕಡೆಯೂ ಮಳೆಬೆಳೆಗಳು ಆಗಲು ಅನುಗ್ರಹಿಸಿ, ರೋಗಾದಿಗಳ ಹಾವಳಿಯೂ ಅಷ್ಟು ಉಲ್ಬಣವಾಗದಿರುವಂತೆ ಕೃಪೆಮಾಡಿರುವುದರಿಂದ ಆ ಪರಮಾತ್ಮನಲ್ಲಿ ವಿಶೇಷ ಭಕ್ತಿಯಿಂದ ಕೃತಜ್ಞತಾಪೂರ್ವಕ ಪೂಜಾಪ್ರಾರ್ಥನಾದಿಗಳನ್ನು ಇದೇ ಸಮಯದಲ್ಲಿ ಸಮರ್ಪಿಸುವುದು ಕೂಡ ಉಚಿತವಾಗಿರುತ್ತದೆ. ಕೃತಜ್ಞತಾಭಕ್ತಿಪ್ರದರ್ಶನಗಳು ಮತ್ತಷ್ಟು ಉತ್ತರೋತ್ತರ ಶ್ರೇಯಸ್ಸಿಗೆ ಸಾಧಕಗಳಾಗುತ್ತವೆ.

ನಮ್ಮ ಶ್ರೀಮನ್ಮಹಾರಾಜರವರು ಸಹ ಈ ಸಮಯದಲ್ಲಿ ತಮ್ಮ ಪ್ರಜೆಗಳೆಲ್ಲರೂ ವಿಶೇಷವಾಗಿ ಉತ್ಸವಭಾಗಿಗಳಾಗಲೆಂಬ ಉತ್ಸಾಹಕೃಪೆಗಳಿಂದ, ಈ ದೇಶದಲ್ಲಿ ಆದರಾಚರಣೆಗಾಗಿ ಗೊತ್ತುಮಾಡಿರುವ ಏರ್ಪಾಟುಗಳ ವಿವರಣೆಗೆ ಸಂಬಂಧಪಟ್ಟ ಅಪ್ಪಣೆಯನ್ನು ಬೇರೆಕಡೆಯಲ್ಲಿ ನಾವು ಮುದ್ರಿಸಿರುತ್ತೇವೆ. ಸಕಲ ಪ್ರಜೆಗಳೂ ಔಚಿತ್ಯವರಿತು ತಂತಮ್ಮ ಸ್ಥಲಗಳಲ್ಲೆಲ್ಲಾ ದೈವಭಕ್ತಿ ಪ್ರಭುಭಕ್ತಿ ಯುದ್ಧಶಾಂತ್ಯುತ್ಸಾಹ ಪ್ರದರ್ಶಕಗಳಾಗಿರುವಂತೆ ಈ ಉತ್ಸವವನ್ನು ನಡೆಯಿಸುವರೆಂದು ನಂಬುತ್ತೇವೆ.

ದುರಾಗ್ರಹಬೋಧೆ.

ಯುದ್ಧವು ನಡೆಯುತ್ತಿರುವ ಕಾಲದಲ್ಲಿ ಭರತಖಂಡದೊಳಗೆ ಹೊಸದಾಗಿ ಸೈನಿಕರನ್ನು ಕೂಡಿಸಬೇಕಾಗಿ ಬಂದಾಗ್ಗೆ ಭರತಖಂಡ ಸರ್ಕಾರದವರು ಆ ವಿಷಯವನ್ನು ಪ್ರಕಟಪಡಿಸಿ, ದೇಶೀಯರೆಲ್ಲರೂ ಅದಕ್ಕೆ ಒತ್ತಾಸೆಯಾಗಬೇಕೆಂದು ಕೋರಿದರು. ಆಗ್ಗೆ ಮ|| ಬಾಲಗಂಗಾಧರತಿಲಕರೂ ಅವರ ಪಕ್ಷದವರೂ ಸಹ ಸ್ವರಾಜ್ಯವನ್ನು ಕೊಡುತ್ತೇನೆಂಬ ವಾಗ್ದಾನವನ್ನು ಮಾಡಿ ಭಾರತೀಯರನ್ನು ಪ್ರೋತ್ಸಾಹಿಸದಿದ್ದರೆ ಅಲ್ಲಿ ಸೈನ್ಯಕ್ಕೆ ಯಾರೂ ಸೇರುವುದೇ ಇಲ್ಲವೆಂದು ಹೇಳುತ್ತ ಗೊಡ್ಡುಬೆದರಿಕೆ ಹಾಕಿದ್ದರು. ಆದರೆ ಅವರ ಸಂಕಲ್ಪಕ್ಕೆ ವಿರುದ್ಧವಾಗಿಯೇ ಪರ್ಯವಸಾನವಾಯಿತು. ಈಗಲೂ ಆ ತಿಲಕರ ಶಿಷ್ಯಕೋಟಿಗೆ ಸೇರಿದ ಬಾಪ್ಟಿಸ್ಟಾ ಎಂಬುವವರು ಈಗಣ ಯುದ್ಧಶಾಂತಿ ಸಂಧಿಮಹೋತ್ಸವವನ್ನು ಜರುಗಿಸುವಾಗಲೂ ಒಂದು ಗೊಡ್ಡುಬೆದರಿಕೆಯನ್ನು ತೋರಿಸಿರುತ್ತಾರೆ. ಏನೆಂದರೆ—"ನಮ್ಮ ಸೋದರರಾದ ಅನೇಕ ಪ್ರಜೆಗಳು ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಮಹಮ್ಮದೀಯರ ತುರ್ಕಿರಾಜ್ಯಪರಿಪಾಲನ ವಿಷಯವು ಪರಿಷ್ಕಾರವಾಗಲಿಲ್ಲ. ಹೀಗಿರುವಾಗ ನಾವು ಸಂಧ್ಯುತ್ಸವದಲ್ಲಿ ಹೇಗೆ ಸೇರುವುದು ? ನಾವು ಸೇರಕೂಡದು. ಈ ಸಂಗತಿಯನ್ನು ಪ್ರಜಾನಾಯಕರು ದೇಶಕ್ಕೆಲ್ಲಾ ಸ್ಪಷ್ಟವಾಗಿ ತಿಳಿಯಿಸಬೇಕು. ಏವಾರಿ ಯಾರಾದರೂ ಉತ್ಸವದಲ್ಲಿ ಸೇರುತ್ತಿದ್ದರೆ ಅವರ ತಂಟೆಗೆ ನಾವು ಹೋಗಬಾರದು" ಎಂದು ಬರೆದು ಪ್ರಕಟಿಸಿರುತ್ತಾರೆ. ರಾಜಕೀಯ ವಿಷಯಕ್ಕೂ ಸರ್ವರಿಗೂ ಆವಶ್ಯಕವಾಗಿರುವ ಸಂತೋಷದ ಅನುಭವಕ್ಕೂ ಯಾವ ಸಂಬಂಧವೋ ನಮಗೆ ಗೊತ್ತಾಗಲಿಲ್ಲ. ಡಿಶಂಬರ್ ತಿಂಗಳಲ್ಲಿ ಭರತಖಂಡದೊಳಗೆ ಯುದ್ಧಶಾಂತ್ಯುತ್ಸವವನ್ನು ನಡೆಯಿಸತಕ್ಕದೆಂದು ಸಾರ್ವಭೌಮರು ಅನುಮತಿ ಕೊಟ್ಟಿದ್ದಾರೆ. ಅದರಂತೆ ನಡೆಯಿಸಲು ಅವರ ಪ್ರತಿನಿಧಿಗಳಾದ ಗೌರ್ನರ್ ಜನರಲ್‌ರವರು ಪ್ರವೃತ್ತರಾಗಿದ್ದಾರೆ. ಯುದ್ಧಶಾಂತಿಯಾಯಿತಲ್ಲಾ ಎಂಬ ಸಂತೋಷವು ಪ್ರಜಾಕೋಟಿಯಲ್ಲೆಲ್ಲಾ ತುಂಬಿತುಳುಕುತ್ತಿದೆ. ಹೀಗಿರುವಲ್ಲಿ ಪ್ರಜೆಗಳ ಉತ್ಸವಕ್ಕೆ ಭಂಗವನ್ನೊಡ್ಡಿ ರಾಜಾಜ್ಞೆಗೆ ವಿರುದ್ಧವಾಗಿ ಆಚರಿಸಲು ಬೋಧಿಸುತ್ತಿರುವುದು ಎಷ್ಟುಮಾತ್ರಕ್ಕೂ ಅನುಸರಣೀಯವಾಗಿ ಕಾಣಲಿಲ್ಲ. ಭರತಖಂಡಕ್ಕೆ ದೊರೆಯಲಿಕ್ಕಿರುವ ಸ್ವರಾಜ್ಯವು ಭಾರತೀಯರು ತೋರಿಸಿದ ರಾಜಭಕ್ತಿಯಿಂದಲೇ ಹೊರತು ಬಾಪ್ಟಿಸ್ಟಾರವರಂಥವರ ಗೊಡ್ಡುಬೆದರಿಕೆಯಿಂದಲೂ ಪ್ರತಿಷೇಧಗಳಿಂದಲೂ ಅಲ್ಲ. ದುರಾಗ್ರಹವು ರಾಜಕೃಪೆಯನ್ನು ಹ್ರಾಸಗೊಳಿಸುವುದೇ ಹೊರತು ಇಷ್ಟಾರ್ಥವನ್ನು ಪೂರೈಸುವುದಿಲ್ಲ.

ಮ|| ಗಂಧಿಯವರು ಕೂಡ ಒಂದು ಪ್ರಕಟನಪತ್ರವನ್ನು ಹೊರಡಿಸಿ ಆಂಗ್ಲಪ್ರಭುತ್ವದವರು ಮಹಮ್ಮದೀಯರಿಗೆ ತಕ್ಕ ಸಾಹಾಯ್ಯವನ್ನು ತುರ್ಕಿಪ್ರಭುತ್ವ ವಿಷಯದಲ್ಲಿ ನಡೆಯಿಸದಿರುವುದರಿಂದ ಭಾರತೀಯರು ಮಹಮ್ಮದೀಯರ ಮೇಲಣ ಸಾನುಭೂತಿಪ್ರದರ್ಶನಕ್ಕಾಗಿ ಸಂಧಿಯುತ್ಸವದಲ್ಲಿ ಸೇರಕೂಡದೆಂದು ತಿಳಿಯಿಸಿದ್ದಾರೆ. ಇದನ್ನು ಕುರಿತು ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಯಲ್ಲಿ ಒಬ್ಬ ಸತ್ಯಾಗ್ರಹಿಗಳು ಖಂಡಿಸಿ ತಕ್ಕ ಉತ್ತರವನ್ನು ಕೊಟ್ಟಿರುತ್ತಾರೆ. "ನನಗೆ ಸಂಪೂರ್ಣವಾದ ಆಭರಣಗಳನ್ನು ಮಾಡಿಸಿಕೊಡುವವರೆಗೂ ನಾನು ಮನೆಗೆ ದೀಪವನ್ನು ಹಚ್ಚುವುದಿಲ್ಲ" ಎಂದು ಒಬ್ಬ ಸ್ತ್ರೀಯು ಹೇಳುವುದೂ ಗಂಧಿಯವರ ಮಾತೂ ಒಂದೇ ಆಗಿದೆಯೆಂದು ಅದರಲ್ಲಿ ತಿಳಿಸಿರುತ್ತಾರೆ.

ತುರ್ಕಿ ಸಮಸ್ಯೆಯ ಪರಿಷ್ಕಾರದಲ್ಲಿ ಆಂಗ್ಲಪ್ರಭುತ್ವದವರು ಉದಾಸೀನರಾಗಿಲ್ಲ. ತುರ್ಕಿಯನ್ನುದ್ಧರಿಸುವ ಕಾರ್ಯದ ಬಾಧ್ಯತೆಯಲ್ಲಿ ಅಮೇರಿಕಾದ ಸಂಯುಕ್ತರಾಷ್ಟ್ರದವರು ಕೂಡ ಅಂಗವಾಗಿರುವಂತೆ ಮಾಡಬೇಕೆಂದು ಅವರು ಪ್ರಯತ್ನಿಸುತ್ತಿದ್ದಾರೆ. ಅಮೇರಿಕನ್ನರು ಇನ್ನೂ ಅದಕ್ಕೆ ಮನಸ್ಸು ಮಾಡಿಲ್ಲ. ಈ ಕಾರಣದಿಂದ ತುರ್ಕಿ ಸಂಧಿಯ ಏರ್ಪಾಟು ಇನ್ನೂ ಮುಗಿಯದೆ ನಿಂತಿದೆ. ಹೀಗಿರುವಾಗ ವಿಘ್ನಸಂತೋಷಿಗಳ ಮಾತುಗಳನ್ನು ಹಿಂದೂಮಹಮ್ಮದೀಯ ಪ್ರಜೆಗಳು ಕೇಳಿಕೊಂಡು ಸಾರ್ವಭೌಮರಿಗೂ ಅವರ ಪ್ರಭುತ್ವದವರಿಗೂ ಮನಸ್ಸು ಕೆಡಿಸುವಂಥ ದುರಾಗ್ರಹಪ್ರವರ್ತನೆಯನ್ನು ಮಾಡುವುದು ಎಂದಿಗೂ ಉಚಿತವಾಗಲಾರದು.

ದಿವಾನ್ ಕಾಂತರಾಜ ಅರಸರವರಿಗೆ ಬೆಂಗಳೂರು ಮಹಾಜನರು ಮಾಡಿದ ಸತ್ಕಾರ.

ಸರದಾರ್ ಕಾಂತರಾಜಅರಸ್ ಬಿ. ಎ ಸಿ. ಎಸ್. ಐ. ಯವರಿಗೆ ಮೈಸೂರು ಮಂತ್ರಿಪದವಿಯು ಪ್ರಾಪ್ತವಾದುದರಿಂದ ತಮಗುಂಟಾದ ಸಂತೋಷವನ್ನು ಪ್ರದರ್ಶಿಸುವುದಕ್ಕಾಗಿ ಬೆಂಗಳೂರಿನ ಪ್ರಜನರು ಕಳೆದ ತಾ|| ೧೫ ನೆ ದಿವಸ ಅಲ್ಲಿಯ ಲಾಲ್‌ಬಾಗಿನಲ್ಲಿರುವ ಆಲ್ಬರ್ಟ್ ವಿಕ್ಟರ್ ಹಾಲೆಂಬ ಗಾಜಿನ ಭವನದಲ್ಲಿ ಕೂಡಿದ್ದ ದೊಡ್ಡ ಸಭೆಯಲ್ಲಿ ಸರ್ದಾರರಿಗೆ ಒಂದು ವಿಜ್ಞಾಪನಪತ್ರವನ್ನು ಅರ್ಪಿಸಿದರು. ಅಲ್ಲದೆ ಒಕ್ಕಲಿಗ ಜನವರ್ಗದವರು, ವೀರಶೈವ ಸಮಾಜದವರು, ಮಹಮ್ಮದೀಯರು, ಪ್ರಜಾಮಿತ್ರಮಂಡಲಿಯವರು ಪ್ರತ್ಯೇಕ ಪ್ರತ್ಯೇಕವಾದ ವಿಜ್ಞಾಪನಪತ್ರಗಳನ್ನು ಸಮರ್ಪಿಸಿ, ಅದರಲ್ಲಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದುದಲ್ಲದೆ, ಸಮುಚಿತಗಳಾದ ಕೆಲ ಪ್ರಾರ್ಥನೆಗಳನ್ನೂ ಮಾಡಿಕೊಂಡಿದ್ದರು. ಅವನ್ನೆಲ್ಲಾ ದಿವಾನರವರು ಪರಿಗ್ರಹಿಸಿ, ಕೃತಜ್ಞತೆಯಿಂದ ವಂದನೆಯನ್ನರ್ಪಿಸಿದುದಲ್ಲದೆ ಎಲ್ಲಕ್ಕೂ ಸಂಕ್ಷೇಪವಾದ ಉತ್ತರವನ್ನೂ ಕೊಟ್ಟರು. ಅದನ್ನು ಸಂಗ್ರಹವಾಗಿ ಇಲ್ಲಿ ತಿಳಿಯಿಸಿರುತ್ತೇವೆ-"ವಿದ್ಯಾಭ್ಯಾಸ ವಿಷಯವು ಅತ್ಯವಶ್ಯಕವಾದುದರಿಂದ ಅದನ್ನು ಕುರಿತು ಪ್ರಭುತ್ವದವರು ಸಾಧ್ಯವಾದಷ್ಟು ಸಾಹಾಯ್ಯವನ್ನು ಮಾಡಲು ಸಿದ್ಧರಾಗಿರುವರು. ಆದರೆ ಸದ್ಯದಲ್ಲಿ ನಮಗೆ ದುಡ್ಡಿನ ಕೊರತೆಯು ಹೆಚ್ಚಾಗಿರುವುದು. ಆಯಕ್ಕಿಂತಲೂ ವ್ಯಯಭಾರವು ಮಿಗಿಲಾಗಿರುವುದು. ಆದರೆ ಈ ಕಾರಣವನ್ನು ಮುಂಬರಿಸಿ ಸರ್ಕಾರದವರು ವಿದ್ಯಾವಿಷಯವನ್ನು ಹಿಂದೊತ್ತಬಾರದೆಂದು ವಿಜ್ಞಾಪನಪತ್ರದಲ್ಲಿ ತಿಳಿಯಿಸಲ್ಪಟ್ಟಿದೆ. ವಿದ್ಯಾಭ್ಯಾಸವು ಎಷ್ಟು ಪ್ರಮುಖವಾದುದೋ ಅಷ್ಟೇ ಪ್ರಾಮುಖ್ಯವುಳ್ಳ ಇನ್ನು ಕೆಲ ಭಾಗಗಳು ಸರ್ಕಾರಕ್ಕಿರುವುವು ಅದುಕಾರಣ ಹೆಚ್ಚುವೆಚ್ಚಕ್ಕೆ ಆಕರವಾದ ಕಾರ್ಯಗಳಿಗೆ ಕೈಹಾಕುವುದಕ್ಕೆ ಮುಂಚೆ ತಮ್ಮ ಆರ್ಥಿಕಸ್ಥಿತಿಯನ್ನು ಗಮನಿಸಬೇಕಾದುದು ಅತ್ಯವಶ್ಯಕವು. ಆದರೂ ಇತರ ವಿಧದ ಎಲ್ಲ ವೆಚ್ಚಗಳಿಗಿಂತಲೂ ವಿದ್ಯಾವಿಷಯಕವಾದ ವೆಚ್ಚಕ್ಕೇ ಪ್ರಾಮುಖ್ಯವು ಕೊಡಲ್ಪಡುವುದೆಂಬುದನ್ನು ಮಾತ್ರ ನಾನು ಈಗ ಹೇಳಬಲ್ಲೆನೆಂದು ಆ ವಿಷಯವನ್ನು ಮುಗಿಸಿ, ಶಾಸನನಿರ್ಮಾಣಸಭೆಗೆ ಡಿಸ್ಟ್ರಿಕ್ಟುಗಳಿಗೊಬ್ಬೊಬ್ಬ ಸಭಿಕರನ್ನಾರಿಸಿ ಕಳುಹಿಸುವ ಸಂದರ್ಭದಲ್ಲಿ ಓಟರುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಓಟುಕೊಡುವ ಅಧಿಕಾರವಿರುವಂತೆ ಮಾಡಿಕೊಡಬೇಕೆಂಬ ವಿಷಯದಲ್ಲಿ ಶ್ರೀಮನ್ಮಹಾರಾಜರವರು ಪ್ರಜಾಪ್ರಾರ್ಥನೆಯಂತೆಯೇ ನಡೆಯಿಸಿಕೊಡಲು ಅಪ್ಪಣೆಮಾಡಿರುವರೆಂಬ ಸಂತೋಷವಾರ್ತೆಯನ್ನು ತಿಳಿಯಿಸಿದುದಲ್ಲದೆ, ಪ್ರತಿನಿಧಿಸಭೆಗೆ ಸಭಿಕರನ್ನು ಆರಿಸುವ ಅರ್ಹತೆಯುಳ್ಳ ಪ್ರಜೆಗಳು ಸಂಸ್ಥಾನದಲ್ಲೆಲ್ಲಾ ೨೦ ಸಾವಿರ ಮಂದಿಗಳಿರುವರೆಂತಲೂ, ಅವರೆಲ್ಲರೂ ನಿಯಮನಿರ್ಮಾಣಸಭೆಯ ಡಿಸ್ಟ್ರಿಕ್ಟ್‌ವಾರ್ ಮೆಂಬರುಗಳನ್ನು ಆರಿಸಲೂ ಅಧಿಕಾರವುಳ್ಳವರಾಗಿರುವರೆಂತಲೂ, ಇನ್ನುಮುಂದೆ ಪ್ರತಿತಾಲ್ಲೂಕುಗಳಲ್ಲೂ ಆ ನಿಯಮನಿರ್ಮಾಣ ಸಭಾಸಭಿಕರ ಚುನಾವಣೆಯು ನಡೆಯುವುದೆಂತಲೂ ಅಪ್ಪಣೆಕೊಡಿಸಿದರು. ಬಳಿಕ ಬೆಂಗಳೂರಿನಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಷಯದಲ್ಲಿ ಇತರ ದೇಶಗಳೊಳಗೆ ಈ ಭಾಗದಲ್ಲಿ ಮಾಡಲ್ಪಡುತ್ತಿರುವ ಕೃಷಿಯಂತೆಯೇ ಇಲ್ಲಿಯೂ ಪ್ರಯತ್ನಗಳು ನಡೆಯುತ್ತಿರುವವೆಂತಲೂ ಅವಕ್ಕೆ ಪ್ರಭುತ್ವದವರಿಂದ ಸಾಧ್ಯವಾದಷ್ಟು ಸಾಹಾಯ್ಯಗಳು ಮಾಡಲ್ಪಡುವುವೆಂತಲೂ, ಪುರಪಾಲಕಸಂಘಗಳವರು ಯಾವ ಸೂಚನೆಗಳನ್ನು ಮಾಡಿದರೂ ಜರುಗಲು ಸಾಧ್ಯವಾಗಿಯೂ ನಷ್ಟಕರವಾಗಿಲ್ಲದೆಯೂ ಇರತಕ್ಕ ಸಲಹೆಗಳನ್ನು ಮಾಡಬೇಕೆಂತಲೂ, ಈ ಊರಿನಲ್ಲಿ ಟ್ರಾಂವೆಯನ್ನು ಹಾಕಿಸಲು ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲವೆಂತಲೂ, ಈಗ ಮರಳಿ ಪ್ರತ್ಯೇಕ ಪ್ರಯತ್ನಗಳು ಮಾಡಲ್ಪಡುವುವೆಂತಲೂ, ಜಾತಿಗಳ ಮರ್ಯಾದೆಯನ್ನು ಕುರಿತು ಮಾಡಲ್ಪಟ್ಟಿರುವ ಪ್ರಾರ್ಥನೆಯು ಈಡೇರಿಸಲ್ಪಡುವುದೆಂತಲೂ, ಎಲ್ಲ ವರ್ಗದ ಪ್ರಜೆಗಳಿಗೂ ಸರ್ಕಾರಿ ಉದ್ಯೋಗಗಳನ್ನು ವಿನಿಯೋಗಿಸುವಲ್ಲಿ ಪಕ್ಷಪಾತವಿಲ್ಲದಂತೆ ನಡೆಯುವ ಬಗೆಗೆ ಶ್ರೀಮನ್ಮಹಾರಾಜರವರು ೧೯೧೮ ನೆ ಜೂನ್ ತಿಂಗಳಲ್ಲಿ ಅಭಯದಾನಮಾಡಿರುವ ವಾಕ್ಯಗಳನ್ನೇ ಮತ್ತೆ ಈಗ ನಾನು ಹೇಳುತ್ತೇನೆಂತಲೂ ಅಪ್ಪಣೆಕೊಡಿಸಿದುದಲ್ಲದೆ ಕಟ್ಟಕಡೆಯಲ್ಲಿ "ನಾನು ಶಕ್ತಿವಂಚನೆಯಿಲ್ಲದೆ ದೇಶಸೇವೆಯನ್ನು ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ನಾನು ಈ ಪದವಿಯನ್ನು ಬಿಟ್ಟು ತೆರಳುವ ಹೊತ್ತಿಗೆ ಶಕ್ತಿವಂಚನೆಯಿಲ್ಲದೆ ಕೆಲಸಮಾಡಿರುವನೆಂದು ನೀವು ತಿಳಿದುಕೊಳ್ಳುವಂತೆ ಮಾಡಬೇಕೆಂಬುದೇ ನನ್ನ ಆದರ್ಶವಾಗಿರುವುದು" ಎಂದು ಹೇಳಿ, ತಮ್ಮ ದೇಶಸೇವಾಭಿಮಾನದ ಪರಾಕಾಷ್ಠದಶೆಯನ್ನು ಸುಸ್ಪಷ್ಟವಾಗಿ ಹೇಳಿ ಸಭಿಕರನ್ನೆಲ್ಲಾ ಪರಮಾನಂದಗೊಳಿಸಿದರು.

ಒಳದೇಶದ ವೃತ್ತಾಂತಗಳು.

ಕಾರಾಪುರದ ಕಾಡಿನಲ್ಲಿ ಬಂಗಡಿಗೆ ಕೂಡಲು ಅನುಕೂಲವಾಗಿ ಇದುವರೆಗೆ ಆನೆಗಳ ಮೂರು ಗುಂಪು ಸಿಕ್ಕಿರುತ್ತವೆ. ಸಮೀಪದಲ್ಲೇ ಇನ್ನೂ ೨-೩ ಗುಂಪುಗಳಿವೆಯಂತೆ.

ಬ್ರಿಟಿಷ್ ರೆಸಿಡೆಂಟರವರು ರಾಜಧಾನಿಗೆ ಬಂದು ಇಲ್ಲಿಯ ವೈಸ್ರಾಯರ ಸ್ವಾಗತದ ಏರ್ಪಾಡುಗಳನ್ನೂ ಕಾಕನಕೋಟೆಯ ಕೆಡ್ಡಾಕ್ಕೆ ಹೋಗಿ ಅಲ್ಲಿಯ ಏರ್ಪಾಟುಗಳನ್ನೂ ಪರಾಮರಿಸಿದರು.

ಸುಂದರಾಬಾಯಿಯವರ ತರಲೆವ್ಯಾಜ್ಯಗಳೆಲ್ಲಾ ಮುಗಿದು ಸಿರಸಂಗಿ ಆಸ್ತಿಯೆಲ್ಲಾ ಧರ್ಮಕರ್ತರ ಉದ್ದೇಶದಂತೆ ಟ್ರಸ್ಟಿಗಳ ಯಾಜಮಾನ್ಯಕ್ಕೆ ಬಂದು ಸೇರಿತೆಂಬ ವಾರ್ತೆಯನ್ನು ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ.

ನಿಯಮನಿರ್ಮಾಣ ಸಭೆಗೆ ಡಿಸ್ಟ್ರಿಕ್ಟುಗಳಿಂದ ಸಭಿಕರಾಗಿ ಆರಿಸಲ್ಪಡಲು ಉಮೇದುವಾರರಾಗಿ ನಿಲ್ಲತಕ್ಕವರು ಬರುವ ಡಿಶಂಬರ್ ತಾ|| ೧ ರೊಳಗಾಗಿ ಗೌ|| ಚೀಫ್‌ಸೆಕ್ರೆಟರಿಯವರಿಗೆ ಅರ್ಜಿಗಳನ್ನು ಬರೆದುಕೊಳ್ಳಬೇಕಾಗಿದೆ.

ರೈಲ್ವೆ ಇಂಜನಿಯರ್ ಮ|| ಅನಂತಾಚಾರ್ಯರನ್ನು ಹೊಡೆದರೆಂಬ ತಪ್ಪಿನ ಮೇಲೆ ಕ್ರಿಮಿನಲ್ ವಿಚಾರಣೆಗೆ ಗುರಿಯಾಗಿದ್ದ ವೆಂಕಟರಾಮಯ್ಯನವರಿಗೆ ಮ್ಯಾಜಿಸ್ಟ್ರೇಟರು ೧ ವರ್ಷದ ಕಠಿನಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು. ಅದರ ಮೇಲೆ ಇವರು ಸೆಷನ್ಸಿನಲ್ಲಿ ಅಪ್ಪೀಲ್ಮಾಡಿ ಹೊಣೆಯ ಮೇಲೆ ಬಿಡಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಜಾತ್ಯಂತರ ವಿತಂತುವಿವಾಹಗಳು ಕೆಲವು ಇಷ್ಟರಲ್ಲೇ ನಡೆಯುವುವಾಗಿವೆಯೆಂದೂ, ಇದಕ್ಕಿರುವ ಪ್ರತಿಬಂಧಕವನ್ನು ತೊಲಗಿಸಿಕೊಳ್ಳುವುದಕ್ಕಾಗಿ ಬ್ರಾಹ್ಮಮತ ವಿವಾಹಶಾಸನವನ್ನು ಬೆಂಗಳೂರು ಕಂಟೋನ್ಮೆಂಟಿನಲ್ಲೂ ವ್ಯವಹಾರಕ್ಕೆ ತರಿಸಬೇಕೆಂದು ಅಲ್ಲಿಯವರು ಬಿನ್ನಯಿಸಿಕೊಂಡಿರಲಾಗಿ, ಇಂಡ್ಯಾ ಗೌರ್ನಮೆಂಟಿನರು ಅದಕ್ಕೆ ಒಪ್ಪಿದರೆಂತಲೂ ಪ್ರಕಟವಾಗಿದೆ.

ಕಳೆದ ವಾರವೆಲ್ಲಾ ಮಳೆಯು ತೆಗೆದು ಆಕಾಶವು ನಿರಭ್ರವಾಗಿರುವುದರಿಂದ ಕುಯ್ಲಿನ ಕೆಲಸಗಳು ನಡೆಯಲು ಅನುಕೂಲವಾಯಿತು. ಹಗಲು ಬಿಸಿಲು ಕಾಯುತ್ತಲೂ ರಾತ್ರಿ ಹಿಮವು ಸುರಿಯುತ್ತಲೂ ಇದೆ. ಧಾನ್ಯಗಳ ಧಾರಣೆಯು ಮಾತ್ರ ಮತ್ತೆ ಏರುತ್ತಲಿದೆ. ರಾಗಿಯು ಹೊಸದು ಬಂದಿಲ್ಲ. ಉಳಿದ ಮೆಣಸಿನಕಾಯಿ ಕಾಳುಕಡ್ಡಿಗಳು ಹೊರಕ್ಕೆ ಸಾಗುತ್ತಿರುವುದರಿಂದ ಬೆಲೆಯು ಹೆಚ್ಚಿದೆಯೆಂದು ಕಾಣುತ್ತದೆ.

೯ನೆ ವೀರಶೈವ ಮಹಾಸಭೆಯು ಬೀರೂರಿನಲ್ಲಿ ಡಿಶಂಬರ್ ತಾ|| ೨೭-೨೮-೨೯ ರಲ್ಲಿ ಧಾರವಾಡದ ರಿಟೈರ್ಡ್ ಡಿ|| ಕಲೆಕ್ಟರ್ ಮ|| ಶಾಂತವೀರಪ್ಪ ವೀರಸಂಗಪ್ಪನವರ ಅಧ್ಯಕ್ಷತೆಯಿಂದ ನಡೆಯಲು ಗೊತ್ತಾಗಿರುವುದು. ಈಗ ಅಲ್ಲಿ ರೋಗಾದ್ಯುಪದ್ರವವೊಂದೂ ಇಲ್ಲದೆ ಸುಖವಾಗಿರುವುದೆಂದು ಕೇಳಿ ಸಂತೋಷಿಸುತ್ತೇವೆ. ಸಭಾಸಂಬಂಧದ ಪ್ರಕಟನಪತ್ರವನ್ನು ಮುಂದಣವಾರದ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ಭರತಖಂಡದ ಗೌರ್ನರ್ ಜನರಲ್‌ರವರೂ ಸಾರ್ವಭೌಮ ಪ್ರತಿನಿಧಿಗಳೂ ಆದ ಹಿಜ್ ಎಕ್ಸಲೆನ್ಸಿ ದಿ ರೈಟ್ ಆನರಬಲ್ ಫ್ರೆಡರಿಕ್ ಜಾನ್ ನೇಪಿಯರ್ ಬಾರನ್ ಚೆಲಮ್ಸ್‌ಫರ್ಡ್ ಪಿ. ಸಿ., ಜಿ. ಎಂ. ಎಸ್. ಐ., ಜಿ. ಸಿ. ಎಂ. ಜಿ., ಜಿ. ಎಂ. ಐ. ಇ., ಜಿ. ಬಿ. ಇ., ಯವರು ಅವರ ಪತ್ನಿಯವರಾದ ಹರ್ ಎಕ್ಸಲೆನ್ಸಿ ಲೇಡಿ ಚೆಲಮ್ಸ್‌ಫರ್ಡ್ ಸಿ. ಐ., ಜಿ ಬಿ. ಯವರೊಡನೆ ಕೂಡಿ ಇದೇ ತಿಂಗಳು ತಾರೀಖು ೨೧ ರಲ್ಲಿ ದಿಲ್ಲಿಪಟ್ಟಣವನ್ನು ಬಿಟ್ಟುಹೊರಟು ತಾ|| ೨೪ಕ್ಕೆ ಮದ್ರಾಸನ್ನು ಸೇರುವವರಾಗಿದ್ದಾರೆ. ಅಲ್ಲಿಂದ ತಾ|| ೨೭ರಲ್ಲಿ ಬೆಂಗಳೂರಿಗೆ ಬಂದು ತಾ|| ೨೮ರ ರಾತ್ರಿ ಅಲ್ಲಿಂದ ಶಿವಮೊಗ್ಗಾಕ್ಕೆ ಹೊರಟು ಜಲಪಾತವನ್ನು ನೋಡಿಕೊಂಡು, ಡಿಶಂಬರ್ ತಾ|| ೧ ರ ಬೆಳಗ್ಗೆ ಮೈಸೂರನ್ನು ಸೇರುವವರಾಗಿದ್ದಾರೆ. ಇಲ್ಲಿಂದ ತಾ|| ೪ ಕ್ಕೆ

ಕೆಡ್ಡಾಕ್ಕೆ ಹೊರಟು ಅಲ್ಲಿ ೧ ವಾರವಿದ್ದು, ರಾಜಧಾನಿಗೆ ಬಂದು ತಾ|| ೧೧ ರ ರಾತ್ರಿ ಇಲ್ಲಿಂದ ಹೊರಟು ಬೆಂಗಳೂರು ಮಾರ್ಗವಾಗಿ ಕೋಲಾರಕ್ಕೆ ಹೋಗಿ, ಅಲ್ಲಿಂದ ತಾ|| ೧೪ ಕ್ಕೆ ಕಲ್ಕತ್ತಾ ಪಟ್ಟಣವನ್ನು ಸೇರುವವರಾಗಿದ್ದಾರೆ. ಇವರ ಜತೆಯಲ್ಲಿ ಲೆಫ್ಟನೆಂಟ್ ಕರ್ನಲ್ ಆರ್. ಇ. ಹಾಲೆಂಡ್‌ರವರೂ, ಜೆ. ಎಲ್. ಮಾಫೆರವರೂ, ಲೆ|| ಕರ್ನಲ್ ಆರ್. ವೆರ್ನಿಯವರೂ, ಲೆ|| ಕರ್ನಲ್ ಹೆಚ್. ಆಸ್ಟಿನ್‌ಸ್ಮಿತ್‌ರವರೂ, ಮೇಜರ್ ಅಲಗ್ಜಾಂಡರ್ ರವರೂ, ಕೇಪ್ಟನ್ನರುಗಳಾದ ಜೆ. ಎ ಡೆನ್ನಿ, ಸಿ. ಎಂ. ಜಿ. ಗಾರ್ಡನ್ ಐಬಿಸ್, ಆನರಬಲ್ ಎ. ಜಿ. ರಾಬರ್ಟ್ಸ್, ಇ. ಆರ್. ಹೋರಿಯವರುಗಳೂ ಬರುತ್ತಾರೆ.

ಭರತಖಂಡದ ವೃತ್ತಾಂತಗಳು.

B. D. 74 ನಂಬರಿನ ಒಂದು ನೂರು ರೂಪಾಯಿಗಳ ಕೆಲವು ನೋಟುಗಳು ಫೋರ್ಜರಿಯಾಗಿ ಪೇಟೆಗಳಲ್ಲಿ ವ್ಯವಹಾರಕ್ಕೆ ಬಂದಿವೆಯೆಂದು ಮದ್ರಾಸು ಸರ್ಕಾರದವರು ಎಚ್ಚರಿಸಿರುತ್ತಾರೆ.

ತಾತ್ಕಾಲಿಕ ಯುದ್ಧ ವಿಶ್ರಾಂತಿಯಾದೀಚೆಗೆ ಭಾರತ ಸೈನ್ಯದಲ್ಲಿ ೩೪೫೩ ಮಂದಿ ಆಂಗ್ಲಸೈನಿಕೋದ್ಯೋಗಿಗಳೂ, ೨೧೧೦೦೦ ಮಂದಿ ಭಾರತೀಯ ಸೈನಿಕರೂ, ೮೩೦೦೦ ಮಂದಿ ಅನುಚರಭಟರೂ ಸಹ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಸಂಧಿಯುತ್ಸವಾರ್ಥವಾಗಿ ಬೊಂಬಾಯಿಯವರು ೧ ಲಕ್ಷ ರೂ. ಗಳ ವರೆಗೆ ಚಂದಾ ಕೂಡಿಸಿ ದೀಪಾಲಂಕಾರ, ವಿಮಾನಸಂಚಾರ, ಬಡಬಗ್ಗರಿಗೆ ಅನ್ನದಾನಾದಿಗಳನ್ನು ಮಾಡಿಸಬೇಕೆಂದು ಯತ್ನಿಸಿದ್ದಾರೆ. ಈಗಾಗಲೇ ೬೫ ಸಾವಿರಕ್ಕೆ ಮೇಲೆಯೇ ಹಣವು ಕೂಡಿದೆ.

ರಾಜಕೀಯ ಶಿಕ್ಷಿತರೆಲ್ಲರನ್ನು ಸಂಧಿಯುತ್ಸವದಲ್ಲಿ ಬಿಡಿಸಿಬಿಡುವುದಕ್ಕೆ ವೈಸ್ರಾಯರೂ ಸ್ಟೇಟ್‌ಸೆಕ್ರೆಟರಿಯವರೂ ಸಹ ಚಕ್ರವರ್ತಿಯವರಿಗೆ ಬಿನ್ನಯಿಸಬೇಕೆಂದು ಬೊಂಬಾಯಿಯ ನ್ಯಾಷನಲ್ ಯೂನಿಯನ್ನಿನವರು ೮೦ ಸಾವಿರ ರುಜುಗಳುಳ್ಳ ೧ ಮಹಜರನ್ನು ಸ್ಟೇಟ್ ಸೆಕ್ರೆಟರಿಯವರಿಗೆ ಬರೆದು ಕಳುಹಿಸಿದ್ದಾರೆ.

ಅಫ್ಘಾನಿಸ್ಥಾನ ಪ್ರಭುತ್ವದವರೊಡನೆ ಯುದ್ಧನಿಂತರೂ ಎಲ್ಲೆಕಟ್ಟಿನಲ್ಲಿರುವ ಮಹಸೂದರು ವಜೀರರು ಎಂಬ ಗುಂಪಿನ ಜನರ ಹಾವಳಿಯು ತಪ್ಪಿಲ್ಲ. ಆಗಿರುವ ನಿಬಂಧನೆಗಳನ್ನು ಮಹಸೂದರು ನಿರಾಕರಿಸಿ ಹಾವಳಿ ಮಾಡುತ್ತಿರುವುದರಿಂದ ಇನ್ನು ಮೇಲೆ ಅವರ ಗುಂಪಿನ ಮೇಲೆ ವಿಮಾನಗಳ ಮೂಲಕ ಸಿಡಿಮದ್ದುಗಳನ್ನು ಹಾಕಬೇಕೆಂದು ಆಂಗ್ಲಸೇನಾಪತಿಗಳು ನಿರ್ಧರಿಸಿದ್ದಾರಂತೆ.

ಸ್ಟೇಟ್‌ಸೆಕ್ರೆಟರಿಯವರು ಬಹಳ ಭಂಗಾರವನ್ನು ಕೊಂಡು ಭರತಖಂಡಕ್ಕೆ ಕಳುಹಿಸುತ್ತಿದ್ದಾರೆ. ಅದುಕಾರಣ ಈ ದೇಶದಲ್ಲಿ ಇಂಡ್ಯಾಸರ್ಕಾರದವರು ಈ ತಿಂಗಳಲ್ಲಿ ೫ ಲಕ್ಷ ತೊಲ ಚಿನ್ನವನ್ನು ಮಾರುವವರಾಗಿದ್ದಾರೆ. ಬರುವ ಡಿಶಂಬರ್ ಜನವರಿ ಫೆಬ್ರುವರಿ ತಿಂಗಳುಗಳಲ್ಲೂ ಹೀಗೆಯೇ ಮಾರುತ್ತಾರೆ. ಉತ್ತಮವಾದ ಭಂಗಾರವು ತೊಲ ೧ ಕ್ಕೆ ೨೩-೧೪-೪ ಕ್ಕೆ ಕಡಿಮೆಯಿಲ್ಲದೆ ಮಾರಲ್ಪಡುವುದು. ಒಟ್ಟು ಇನ್ನು ಮೂರು ತಿಂಗಳಲ್ಲಿ ೧೦ ಲಕ್ಷ ತೊಲ ಭಂಗಾರವು ವಿಕ್ರಯಿಸಲ್ಪಡುವುದು.

ಸಂಧಿಯುತ್ಸವ ಸಂದರ್ಭದಲ್ಲಿ ಡಿಶಂಬರ್ ತಾ|| ೧೩ ನೆ ದಿವಸ ರಜಾದಿನವಾಗಿದ್ದರೂ ಸರ್ಕಾರಿ ಕೂಲಿ ಜನರಿಗೆಲ್ಲಾ ಆ ದಿನದ ಕೂಲಿಯನ್ನು ಕೊಡುವಂತೆಯೂ, ತಾ|| ೧೪ ರಲ್ಲಿ ಹಿಂದೂ ಕ್ರೈಸ್ತ ಮಹಮ್ಮದೀಯ ದೇವಾಲಯಗಳಲ್ಲೆಲ್ಲಾ ದೈವಪ್ರಾರ್ಥನೆಗಳನ್ನು ನಡೆಯಿಸಿ, ಯುದ್ಧದಲ್ಲಿ ಅಂಗವಿಹೀನರಾಗಿ ಬಂದಿರುವ ಸೈನಿಕರ ಸಾಹಾಯ್ಯಕ್ಕಾಗಿ ಚಂದಾ ಕೂಡಿಸುವುದೆಂತಲೂ, ತಾ|| ೧೫ ನೆಯ ಸೋಮವಾರ ಆಧಿಪತ್ಯದ ಎಲ್ಲ ಕಡೆಯೂ ಇರುವ ಸೈನಿಕರಿಗೆಲ್ಲಾ ಔತಣಮಾಡಿಸುವಂತೆಯೂ ವಿದ್ಯಾರ್ಥಿಗಳಿಗೆಲ್ಲಾ ತಿಂಡಿಗಳನ್ನು ಹಂಚಿಸುವಂತೆಯೂ ಮದ್ರಾಸು ಸರ್ಕಾರದವರು ಏರ್ಪಡಿಸಿದ್ದಾರೆ.

ಪೂನಾದಲ್ಲಿ ಮಹಮ್ಮದೀಯ ವಿದ್ಯಾವಿಷಯಕ ಸಭೆಯು ಆ|| ಮಿರ್ ಅಸದಲ್ಲಿಖಾನರ ಅಧ್ಯಕ್ಷತೆಯಿಂದ ನೆರವೇರಿತು. ಬೊಂಬಾಯಿ ಗೌರ್ನರು ಸಭಾಪ್ರಾರಂಭವನ್ನು ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದೊಳಗೆ ಮಹಮ್ಮದೀಯರಿಗೆ ಪ್ರತ್ಯೇಕ ನಾಗರಿಕತೆಯೂ ಪ್ರತ್ಯೇಕ ವ್ಯಕ್ತಿತ್ವವೂ ಇರುವುದೆಂತಲೂ, ಅದರ ಸಂರಕ್ಷಣೆಗೆ ಸಾಧಕವಾದ ವಿದ್ಯೆಯು ಅವರಿಗೆ ಕಲಿಸಲ್ಪಡಬೇಕೆಂತಲೂ, ಮಹಮ್ಮದೀಯ ವಿದ್ಯಾವ್ಯಾಪನೆಯ ವಿಷಯದಲ್ಲಿ ನಿರುತ್ಸಾಹಪಡುವುದಕ್ಕೆ ಕಾರಣವೇನೂ ಇಲ್ಲವೆಂತಲೂ ಹೇಳಿದುದಲ್ಲದೆ, ವಿದ್ಯಾಭ್ಯಾಸ ವಿಷಯವನ್ನು ಉಪಪಾದಿಸುವಾಗ್ಗೆ ಸೆಕೆಂಡರಿ ಪಾಠಶಾಲೆಗಳಲ್ಲಿ ಮಹಮ್ಮದೀಯರಿಗೆ ಭಾಷೆಗೋಸ್ಕರ ಇಂಗ್ಲೀಷನ್ನು ಕಲಿಸುತ್ತಾ ಉಳಿದ ವಿಷಯಗಳನ್ನೆಲ್ಲಾ ಉರ್ದುವಿನಲ್ಲೇ ಕಲಿಸಬೇಕೆಂತಲೂ, ಕಾಲೇಜು ತರಗತಿಗಳಲ್ಲಿ ಎಲ್ಲವನ್ನೂ ಇಂಗ್ಲೀಷಿನಲ್ಲೇ ಕಲಿಸಬೇಕೆಂತಲೂ, ಬರಿಯ ಸಾಹಿತ್ಯವಿದ್ಯೆಯನ್ನೇ ಕಲಿಸದೆ ಜೀವನಾಧಾರವಾದ ಪಾರಿಶ್ರಾಮಿಕವಿದ್ಯೆಯನ್ನೂ ಕಲಿಸಬೇಕೆಂತಲೂ ಗ್ರಾಮಾಂತರದ ಬಾಲಕರಿಗೆ ತಪ್ಪದೆ ವೃತ್ತಿಸಂಬಂಧವಾದ ವಿದ್ಯೆಯನ್ನು ಕಲಿಸಬೇಕೆಂತಲೂ ಅಭಿಪ್ರಾಯಪಟ್ಟಿರುವರು.

ನೀಲಗಿರಿಯ ಪ್ರಸಿದ್ಧ ವರ್ತಕರೂ ಪ್ಲಾಂಟರೂ ಆಗಿದ್ದ ಹಾಜಿ ಫಕೀರ್ ಮಹಮ್ಮದ್ ಸೇಟರು ತಮ್ಮ ೬೩ನೆ ವಯಸ್ಸಿನಲ್ಲಿ ಮೊನ್ನೆವಾರ ಕಾಲವಾದರು. ಇವರು ಕೇವಲ ಬಡತನದಲ್ಲಿದ್ದು ಕಚ್‌ದೇಶದಿಂದ ನೀಲಗಿರಿಗೆ ಬಂದು ವಾಸಮಾಡಿಕೊಂಡು ೨ ಕೋಟಿ ಆಸ್ತಿಯನ್ನು ಸಂಪಾದಿಸಿದವರು. ಇವರಿಗೆ ೧೩ಸಾವಿರ ಎಕರೆ ಕಾಫಿ, ಟೀ, ಅಡಿಕೆ ತೋಟಗಳು ಇರುವುವು, ಸೌತ್ ಇಂಡಿಯನ್ ಇಂಡಸ್ಟ್ರಿ ಕಂಪೆನಿಯು ಇವರದೇ. ಲೆಕ್ಕವಿಲ್ಲದಷ್ಟು ಬಂಗಲೆಗಳು ಇವರಿಗೆ ಬಾಡಿಗೆಯನ್ನು ಈಯುತ್ತಿರುವುವು. ಇಷ್ಟು ಐಶ್ವರ್ಯವಿದ್ದರೂ ಇವರು ನಿಗರ್ವಶಿರೋಮಣಿಗಳಾಗಿ ಬಡತನದಲ್ಲಿ ತಾವು ವಾಸವಾಗಿದ್ದ ಚಿಕ್ಕಮನೆಯಲ್ಲೇ ವಾಸಮಾಡುತ್ತ ಸಣ್ಣ ಪರ್ಚಾರೆ ಅಂಗಡಿಯಲ್ಲಿ ನೆಪಮಾತ್ರಕ್ಕೆ ಕುಳಿತು ದಾನಧರ್ಮಗಳನ್ನು ಮಾಡುತ್ತ, ಉಳಿದ ದೊಡ್ಡದೊಡ್ಡ ಷಾಪುಗಳ ಯಾಜಮಾನ್ಯವನ್ನೆಲ್ಲಾ ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ಬಿಟ್ಟು, ಬಾಲ್ಯದಿಂದ ಕಡೆಯವರೆಗೂ ರೋಗದಿಂದ ಮಂಚವನ್ನೇರುವುದನ್ನೇ ಕಾಣದೆ ಅರೋಗದೃಢಕಾಯರಾಗಿದ್ದರು. ಪಾಠಶಾಲೆ, ವೈದ್ಯಶಾಲೆ ಮೊದಲಾದ ಧರ್ಮಪ್ರತಿಷ್ಠಾಪನೆಗಳು ಕೆಲವನ್ನು ಮಾಡಿರುವರಲ್ಲದೆ ಮಕ್ಕಾಯಾತ್ರೆಯನ್ನೂ ಮಾಡಿಕೊಂಡು ಬಂದಿದ್ದರು. ಮಕ್ಕಾ ಮದೀನಾಗಳಿಗೆ ಹೋಗಬೇಕೆನ್ನುವ ಮಹಮ್ಮದೀಯ ಯಾತ್ರಿಕರಿಗೆ ಧನಸಹಾಯ ಮಾಡುವುದಕ್ಕಾಗಿ ೪ ಲಕ್ಷ ರೂ. ನ ಫಂಡನ್ನು ಧರ್ಮಾರ್ಥವಾಗಿ ಹಾಕಿರುವರು. ಈ ವರ್ಷದಾರಂಭದಲ್ಲಿ ಇವರು ತಮ್ಮ ಆಸ್ತಿಯನ್ನೆಲ್ಲಾ ವಾರಸ್ದಾರರಿಗೆ ಕ್ರಮವಾಗಿ ಹಂಚಿಕೊಟ್ಟಿದ್ದರು. ದಕ್ಷಿಣದೇಶದಲ್ಲಿ ಇವರಂಥ ಶ್ರೀಮಂತರೂ ಗುಣಾಢ್ಯರೂ ಉದ್ಯೋಗತತ್ಪರರೂ ವಿರಳರು.

ವಿದೇಶ ವೃತ್ತಾಂತಗಳು.

ರೊಮೇನಿಯಾ ಪ್ರಭುತ್ವದವರು ಮಿತ್ರಮಂಡಲಿಯವರು ಸೂಚಿಸಿದ ಸಂಧಿ ನಿಬಂಧನೆಗಳಿಗೆಲ್ಲಾ ಒಪ್ಪಿದರು.

ಅಮೇರಿಕಾದಿಂದ ಭರತಖಂಡಕ್ಕೆ ೫ ಲಕ್ಷ ಡಾಲರುಗಳ ಬೆಲೆಯ ಭಂಗಾರವು ಕಳುಹಿಸಲ್ಪಟ್ಟು ಬರುತ್ತಿದೆ.

ಆಸ್ಟ್ರಿಯಾ ಪ್ರಭುತ್ವಸಭೆಯವರು ಸಂಧಿಪತ್ರವನ್ನು ದೃಢಪಡಿಸಿದರು. ಆಸ್ಟ್ರಿಯಾ ಜರ್ಮನಿದೇಶಗಳ ಸಂಯೋಗಕ್ಕಾಗಿ ಹುಟ್ಟಿಕೊಂಡಿದ್ದ ಶಾಸನವನ್ನು ತೆಗೆದುಬಿಟ್ಟರು.

ಈಗ ಸೀಮೆಯಲ್ಲಿ ನಿರ್ಮಾಣವಾಗುತ್ತಿರುವ ರೇಲ್ವೆ ಇಂಜನುಗಳಲ್ಲಿ ಸೀಮೆಯೆಣ್ಣೆಯನ್ನು ಕಲ್ಲಿದ್ದಲಿಗೆ ಪ್ರತಿಯಾಗಿ ಉಪಯೋಗಿಸಿ ಗಂಟೆಗೆ ೬೦ ಮೈಲಿಗಳಂತೆ ಪ್ರಯಾಣಿಕರ ಬಂಡಿಯನ್ನು ಎಳೆದುಕೊಂಡು ಹೋಗುವಂಥ ಇಂಜನ್ನುಗಳು ನೂತನತರವಾಗಿ ನಿರ್ಮಿಸಲ್ಪಟ್ಟಿವೆ.

ಆಸ್ಟ್ರಿಯಾವಿಗೂ ಮಿತ್ರಮಂಡಲೀ ರಾಷ್ಟ್ರಗಳಿಗೂ ಮೈತ್ರಿಯು ವೃದ್ಧಿಯಾಗುತ್ತಿದೆ. ಆಸ್ಟ್ರಿಯಾದಿಂದ ಆಹಾರ್ಯವಸ್ತುಗಳನ್ನೂ ಹಸಿಯ ಪದಾರ್ಥಗಳನ್ನೂ ತರಿಸಿಕೊಳ್ಳುವುದಕ್ಕಾಗಿ ಮಿತ್ರಮಂಡಲಿಯವರು ೫೦ ಕೋಟಿ ಫ್ರಾಂಕುಗಳನ್ನು ಆಸ್ಟ್ರಿಯಾವಿಗೆ ಕೊಟ್ಟಿರುತ್ತಾರೆ.

ಇಂಗ್ಲೀಷರು ಅದ್ಭುತವಾದ ಒಂದು ದೊಡ್ಡ ಯುದ್ಧದ ಹಡಗನ್ನು ಕಟ್ಟಿಸಿದ್ದಾರೆ. ಅದರಮೇಲೆ ೩೦ ಅಡಿ ಉದ್ದದ ಫಿರಂಗಿಗಳು ಕೂಡ ಕೆಲವಿವೆ. ಫಿರಂಗಿಗಳ ಬೆಲೆಯಲ್ಲದೆ ಹಡಗಿನ ಕಟ್ಟಾಟಕ್ಕೇ ೬|| ಕೋಟಿ ರೂ. ಮುಟ್ಟಿದೆ. ಸಬ್‌ಮೇರೀನಿನ ಬಡಿತಕ್ಕೂ ಹಾಳಾಗದಂಥ ಏರ್ಪಾಟು ಇದರಲ್ಲಿ ಮಾಡಲ್ಪಟ್ಟಿದೆ. ಇದು ೪೧ ಸಾವಿರ ಟನ್ ಭಾರವನ್ನು ಹೊರತಕ್ಕುದು.

ಬೋಲ್ಷೆವಿಕ್ಕರು ಅಮೇರಿಕಾದಲ್ಲೂ ಕೂಡ ತಮ್ಮ ವಿಷಬೀಜವನ್ನು ಬಿತ್ತಿರುತ್ತಾರೆ. ರಷ್ಯನ್ ಭಾಷೆಯಲ್ಲಿ ಬೋಲ್ಷೆವಿಕ್ ತತ್ವಗಳನ್ನು ಮುದ್ರಿಸಿ ಅಲ್ಲಲ್ಲಾ ಹರಡಿದ್ದರು. ೧ ಸಾವಿರ ಮಂದಿಗಳವರೆಗೆ ಈಗ ಅಮೇರಿಕಾಸಂಯುಕ್ತರಾಷ್ಟ್ರ ಪ್ರಭುತ್ವದವರಿಂದ ಸಂಶಯದಮೇಲೆ ಹಿಡಿಯಲ್ಪಟ್ಟಿದ್ದಾರೆ. ಅಮೇರಿಕನ್ನರಲ್ಲಿ ಕೆಲವರೇ ಈ ತತ್ವಪ್ರಚಾರಕ್ಕೆ ಧನಸಹಾಯ ಮಾಡಿದ್ದುದು ಗೊತ್ತಾಯಿತು.

ರಷ್ಯಾದ ಬೇರೆ ಬೇರೆ ಭಾಗಗಳವರಾದ ಎಸ್ತೋನಿಯನ್ನರು, ಲೆಟ್ಟರು, ಲಿಥೂನಿಯನ್ನರು, ಪೋಲರು, ಫಿನ್ನರು, ಇವರೆಲ್ಲಾ ಡೋರ್ಪಾಟಿನಲ್ಲಿ ಕಲೆತು ಬೋಲ್ಷೆವಿಕ್ಕರೊಡನೆ ಯಾವ ರೀತಿಯಲ್ಲಿ ತಾತ್ಕಾಲಿಕ ಸಂಧಿಯನ್ನು ಮಾಡಿಕೊಳ್ಳಬಹುದೆಂಬುದನ್ನು ಪರ್ಯಾಲೋಚಿಸುತ್ತಿದ್ದಾರೆ. ಎಲ್ಲೆಕಟ್ಟಿನ ಈ ರಾಷ್ಟ್ರಗಳೆಲ್ಲಾ ಹೀಗೆ ಏಕೀಭವಿಸಿರುವುದನ್ನು ನೋಡಿದರೆ ರಷ್ಯಾ ಸಮಸ್ಯೆಯು ಯಾವುದೋ ರೀತಿಯಲ್ಲಿ ಪರಿಷ್ಕಾರವಾಗಬಹುದೆಂದು ತೋರುತ್ತದೆ.

ಫ್ರಾನ್ಸಿನ ಅಧ್ಯಕ್ಷರಾದ ಪಾಯಿಂಕೇರ್‌ರವರು ಲಂಡನ್ ಪಟ್ಟಣಕ್ಕೆ ಪತ್ನೀಸಮೇತರಾಗಿ ದಯಮಾಡಿಸಿರುವರು. ಅಲ್ಲಿ ಅವರಿಗೆ ಅಭೂತಪೂರ್ವ ಸತ್ಕಾರಗೌರವಗಳು ಜರುಗಿದುವು. ನಮ್ಮ ಚಕ್ರವರ್ತಿದಂಪತಿಗಳು ವಿಕ್ಟೋರಿಯಾ ನಿಲ್ದಾಣಕ್ಕೆ ಹೋಗಿದ್ದು ಇದಿರ್ಗೊಂಡು ಬಕಿಂಗ್‌ಹ್ಯಾಂ ಅರಮನೆಗೆ ಕರೆದುಕೊಂಡು ಹೋಗಿ ಇಳಿಸಿದರು. ಪ್ರಜೆಗಳು ಅಟ್ಟಹಾಸದಿಂದ ವಾರಿಯುದ್ಧಕ್ಕೂ ಮರ್ಯಾದಿಸಿದರು. ಅರಮನೆಯಲ್ಲಿ ಔತಣವು ನಡೆದಾಗ ನಮ್ಮ ಚಕ್ರವರ್ತಿಯವರು ಯುದ್ಧಕಾಲದಲ್ಲಿ ಜನರಲ್ ಫಾಕ್‌ರವರೇ ಮೊದಲಾದ ಸೇನಾಪತಿಗಳೂ ಅವರ ಸೈನಿಕರೂ ತೋರಿಸಿದ ಪರಾಕ್ರಮವನ್ನು ವರ್ಣಿಸಿ, ಹೀಗೆಯೇ ಇಂಗ್ಲೀಷ್, ಫ್ರಾನ್ಸ್ ಸೈನ್ಯಗಳ ಅನ್ಯೋನ್ಯತೆಯು ಅಭಿವೃದ್ಧಿಗೊಂಡು ಸ್ವೇಚ್ಛಾಸ್ವಾತಂತ್ರ್ಯರಕ್ಷಣೆಗೆ ಸಹಾಯಕವಾಗಿ ಚಿರಕಾಲವಿರಲೆಂದು ಕೋರಿದರು. ಅದಕ್ಕೆ ಪ್ರತಿಯಾಗಿ ಪಾಯಿಂಕೇರರವರೂ ಸಹ-ಆಂಗ್ಲರು ಯುದ್ಧಾದಿಯಿಂದಲೂ ತೋರಿಸಿದ ದೂರದೃಷ್ಟಿಯನ್ನೂ ಶೌರ್ಯಧೈರ್ಯಗಳನ್ನೂ ಕೊಂಡಾಡಿ, ಅವರ ಸ್ನೇಹವು ತಮಗೆ ಚಿರಕಾಲವಿರಬೇಕೆಂದೂ, ಇನ್ನುಮುಂದೆ ಒಬ್ಬರ ಸಹಾಯವು ಮತ್ತೊಬ್ಬರಿಗಿಲ್ಲದೆ ಬಾಳುವುದು ಅಸಾಧ್ಯವೆಂಬುದಾಗಿಯೂ, ಇಂಗ್ಲೀಷ್ ಫ್ರೆಂಚರ ಏಕಮತ್ಯವು ಮಾನವಾವಳಿಯ ಶ್ರೇಯಸ್ಸಿಗೆ ಸಾಧಕವೆಂತಲೂ, ಇನ್ನುಮುಂದೆ ಯೂರೋಪಿನಲ್ಲಿ ಯಾವ ರಾಜ್ಯದವರೂ ಆಶಾಬದ್ಧರಾಗಿ ಅಸಂಗತಕಾರ್ಯಗಳನ್ನು ನಡೆಯಿಸದಿರುವಂತೆ ತಕ್ಕ ಕಟ್ಟುಪಾಡುಗಳನ್ನು ಮಾಡಿಡಬೇಕೆಂತಲೂ, ಫ್ರಾನ್ಸು, ಬ್ರಿಟನ್ನು ಮತ್ತು ಇತರ ಮಿತ್ರಮಂಡಲೀದೇಶಗಳು ಇವೆಲ್ಲಾ ಕಲೆತು ಕೆಲಸಮಾಡಿದರೆ ಅದು ಅಸಾಧ್ಯವಲ್ಲವೆಂತಲೂ ಹೇಳಿದರು.

ಮೈಸೂರು ಸರ್ಕಾರಿ ಅಪ್ಪಣೆ.

ಯುದ್ಧ ಶಾಂತ್ಯುತ್ಸವಗಳು.

ಮುಖ್ಯಗಳಾದ ಯುದ್ಧ ಶಾಂತ್ಯುತ್ಸವಗಳು ಇಂಡಿಯಾದಲ್ಲಿ ಮುಂದಿನ ಚಳಿಗಾಲದಲ್ಲಿ ನಡೆಯತಕ್ಕದ್ದೆಂದು ಇಂಡಿಯಾ ಸರ್ಕಾರದವರು ಮಾಡಿದ ಪ್ರಕಟನೆಯನ್ನು ಅನುಸರಿಸಿ ಶ್ರೀಮನ್ ಮಹಾರಾಜಾ ಸಾಹೇಬ್ಬಹದೂರರವರ ಸರ್ಕಾರದವರು ಅದೇ ರೀತಿಯಲ್ಲಿ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಇಂಥ ಮಹಾಸಮಯಕ್ಕೆ ಅನುಗುಣವಾದ ರೀತಿಯಲ್ಲಿ ಉತ್ಸವಗಳನ್ನು ನಡೆಸಬೇಕೆಂದು ಅಪೇಕ್ಷಿಸುತ್ತಾರೆ.

2. ಇದಕ್ಕಾಗಿ 1919 ನೇ ಡಿಶಂಬರ್ 13 ನೇ ತಾ. ಶನಿವಾರವನ್ನು ಸಂಸ್ಥಾನದಲ್ಲೆಲ್ಲಾ ಪಬ್ಲಿಕ್ ರಜಾ ದಿನವನ್ನಾಗಿ ತಿಳಿಯತಕ್ಕದ್ದೆಂತಲೂ 14 ನೇ ಭಾನುವಾರ ದಿನದಲ್ಲಿ ಸರ್ವರೂ ಕಲೆತು ಪ್ರಾರ್ಥನೆಗಳನ್ನು ನಡಿಸತಕ್ಕದ್ದೆಂತಲೂ, 1919 ಡಿಶಂಬರ್ 15 ನೇ ತಾ. ಸೋಮವಾರವೂ 16 ನೇ ತಾ. ಮಂಗಳವಾರವೂ ಮುಖ್ಯವಾದ ಶಾಂತ್ಯುತ್ಸವಗಳು ನಡೆಯತಕ್ಕದ್ದೆಂತಲೂ, ಈ ತಾರೀಖುಗಳಲ್ಲಿ ಎಲ್ಲಾ ಪಾಠಶಾಲೆಗಳೂ ಆಫೀಸುಗಳೂ ಕೋರ್ಟುಗಳೂ ಮುಚ್ಚಲ್ಪಡಬೇಕೆಂತಲೂ ಸರ್ಕಾರದವರು ಹುಕುಮನ್ನು ದಯಪಾಲಿಸುತ್ತಾರೆ.

3. ಆಯಾ ಸ್ಥಳಗಳಲ್ಲಿ ನಿರ್ಧರಿಸಲ್ಪಡಬಹುದಾದ ಇತರ ವಿಧವಾದ ಉತ್ಸವಗಳೊಂದಿಗೆ ಈ ಕೆಳಗಿನ ಬಗೆಗಳ ಉತ್ಸವಗಳು ನಡೆಯತಕ್ಕದ್ದೆಂದು ಸಲಹೆ ಮಾಡಿದೆ:— 13 ನೇ ಡಿಶಂಬರು

(1) ಬಡಬಗ್ಗರಿಗೆ ಅನ್ನ ವಸ್ತ್ರಾದಿಗಳನ್ನು ಕೊಡುವುದು; (2) ಬೀದಿಗಳು, ಖಾಸಗಿ ಮನೆಗಳು, ಅಂಗಡಿ ಮತ್ತು ಸರ್ಕಾರಿ ಕಟ್ಟಡಗಳನ್ನು ಬಾವುಟ ಮುಂತಾದವುಗಳಿಂದ ಅಲಂಕರಿಸುವುದು.

14 ನೇ ಡಿಸೆಂಬರು.

(3) ದೇವಸ್ಥಾನ, ಮಸೀದಿ ವಗೈರೆಗಳಲ್ಲಿ ಪೂಜೆ ಪುರಸ್ಕಾರಗಳನ್ನು ನಡಿಸಿ ಆ ಸಂದರ್ಭದಲ್ಲಿ ಅಂಗಹೀನರ ಮತ್ತು ಯುದ್ಧದಲ್ಲಿ ಮೃತರಾದ ಯೋಧರ ಪೋಷ್ಯವರ್ಗದವರ ಉಪಯೋಗಕ್ಕಾಗಿ ದಾನಧರ್ಮಗಳನ್ನು ವಸೂಲ್ಮಾಡಬಹುದು. (4) ಗ್ರಾಮಭೋಜನೆಗಳು, ಹಂಕಫೆ ವಗೈರೆ.

15 ನೇ ಡಿಸೆಂಬರು

(5) ಸಾಧ್ಯವಾದ ಕಡೆಗಳಲ್ಲಿ ಸೈನ್ಯಗಳಿಗೆ ಫಲಹಾರಾದಿಗಳೂ ಆಟಪಾಟಗಳೂ. (6) ಮಕ್ಕಳಿಗೆ ಮಿಠಾಯಿಯನ್ನೂ ಯುದ್ಧಶಾಂತಿಯ ಪದಕಗಳನ್ನೂ ಹಂಚುವುದು. (7) ಮಕ್ಕಳ ಆಟಪಾಟಗಳು ಮತ್ತು ಇನಾಮುಗಳು. (8) ಬಹಿರಂಗವಾದ ಮೀಟಿಂಗುಗಳು ಮತ್ತು ಭಾಷಣಗಳು.

16 ನೇ ಡಿಸೆಂಬರು

(9) ಮಹಾಮಹಿಮರಾದ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರ ಮತ್ತು ಶ್ರೀಮನ್ ಮಹಾರಾಜರವರ ಭಾವಚಿತ್ರಗಳೊಂದಿಗೆ ಮುಖ್ಯವಾದ ಬೀದಿಗಳಲ್ಲಿ ಸಂಭ್ರಮದೊಡನೆ ಮೆರವಣಿಗೆ; ಈ ಮೆರವಣಿಗೆಯಲ್ಲಿ ಸ್ಥಳದ ಪ್ರಧಾನರಾದ ಆಫೀಸರರೂ ಮುಖಂಡರಾದ ದೊಡ್ಡಮನುಷ್ಯರೂ ಸೇರಿರತಕ್ಕದ್ದು. (10) ಆನಂದಾಗ್ನಿಗಳು, ಬಾಣಬಿರುಸುಗಳು ಮತ್ತು ದೀಪೋತ್ಸವಗಳು.

4. ಪ್ರತಿಯೊಂದು ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಸಬೆಯಲ್ಲಿಯೂ ಇತರ ಸ್ಥಳಗಳಲ್ಲಿಯೂ ಡಿಸೆಂಬರ್ 15 ನೇ ತಾ. ಬಹಿರಂಗವಾದ ನಿದರ್ಶನಗಳನ್ನೂ ಮೀಟಿಂಗುಗಳನ್ನೂ ನಡಿಸಿ ಈ ಜಯೋತ್ಸವದ ಮಹತ್ವವು ಸಾಮಾನ್ಯ ಜನಗಳಿಗೆ ಗೊತ್ತಾಗುವಂತೆಯೂ ಮಕ್ಕಳಿಗೆ ಮನಮುಟ್ಟುವಂತೆಯೂ ಮಾಡತಕ್ಕದ್ದು. ಸೈನ್ಯಕ್ಕೆ ಜನಗಳು ಹೇರಳವಾಗಿ ಸಂಗ್ರಹವಾದ ಸ್ಥಳಗಳಲ್ಲಿ ಈ ಉತ್ಸವಗಳಿಗೆ ವಿಶೇಷ ಗಮನವನ್ನು ಕೊಡತಕ್ಕದ್ದೆಂತಲೂ ಯುದ್ಧಭೂಮಿಯಿಂದ ಹಿಂದಿರುಗಿರುವ ಜನಗಳಿಗೆ ಉತ್ಸವಗಳಲ್ಲಿಯೂ ಬಹಿರಂಗವಾದ ಮೀಟಿಂಗುಗಳಲ್ಲಿಯೂ ಪ್ರಾಮುಖ್ಯವಾದ ಭಾಗವನ್ನು ಕೊಡಲು ಏರ್ಪಾಡುಗಳನ್ನು ಮಾಡತಕ್ಕದ್ದೆಂತಲೂ ಡೆಪ್ಯುಟಿ ಕಮಿಷನರರನ್ನು ಅಪೇಕ್ಷಿಸಲಾಗಿದೆ. ವಿದ್ಯಾಲಯಗಳಲ್ಲಿ ದರ್ಬಾರ್ ದಿವಸ (12 ನೇ ಡಿಸೆಂಬರು) ಉತ್ಸವಗಳನ್ನು ಮೇಲೆ ನಮೂದಿಸಿರುವ ಯುದ್ಧಶಾಂತಿಯ ಉತ್ಸವಗಳೊಂದಿಗೆ ಸೇರಿಸಿಬಿಡತಕ್ಕದ್ದೇ ಹೊರತು ಪ್ರತ್ಯೇಕವಾಗಿ ಏರ್ಪಡಿಸತಕ್ಕ ಅವಶ್ಯಕವಿಲ್ಲ.

5. ಮೇಲ್ಕಂಡ ರೀತಿಯಲ್ಲಿ ಉತ್ಸವಗಳನ್ನು ನಡಿಸುವುದಕ್ಕೆ ತಗಲುವ ಲಾಗೋಡಿಗಾಗಿ ಸಂಸ್ಥಾನದ ಫಂಡಿನಿಂದ ಈ ಕೆಳಗೆ ಕಂಡಂತೆ 21,500 ರೂಪಾಯಿ ಮಂಜೂರುಮಾಡಿದೆ. ಇವುಗಳ ಜತೆಗೆ ಮ್ಯುನಿಸಿಪಲ್ ಮತ್ತು ಲೋಕಲ್‌ಫಂಡುಗಳನ್ನೂ ಜನಗಳು ಐಚ್ಛಿಕವಾಗಿ ಕೊಡುವ ಚಂದಾಗಳನ್ನೂ ಸೇರಿಸಿಕೊಳ್ಳತಕ್ಕದ್ದು. ಖಾಸಗಿ ಜನಗಳಿಂದ ವಸೂಲಾಗುವ ಚಂದಾ ಮೊಬಲಗನ್ನು ಕೊಡದಮಟ್ಟಿಗೂ ಬಡಬಗ್ಗರಿಗೆ ಅನ್ನವನ್ನೂ ಬಟ್ಟೆಬರೆಗಳನ್ನೂ ಕೊಡುವುದಕ್ಕೆ ವಿನಿಯೋಗಪಡಿಸಿಕೊಳ್ಳತಕ್ಕದ್ದು :—

ಡಿಸ್ಟ್ರಿಕ್ಟುಗಳು	ರೂ.	ಡಿಸ್ಟ್ರಿಕ್ಟುಗಳು	ರೂ.
ಬೆಂಗಳೂರು	2,000	ಕೋಲಾರ ಚಿನ್ನದ ಗಣಿಗಳು	500
ಬೆಂಗಳೂರು ಸಿಟಿ	5,000	ತುಮಕೂರು	1,500
ಮೈಸೂರು	2,000	ಹಾಸನ	1,500
ಮೈಸೂರು ಸಿಟಿ	3,000	ಚಿತ್ರದುರ್ಗ	1,500
ಶಿವಮೊಗ್ಗ	1,500	ಕಡೂರು	1,500
ಕೋಲಾರ	1,500		

ಮೇಲಿನ ಹಣಕ್ಕೆ ಸಾಲದ್ದಕ್ಕಾಗಿ ಎರಡು ಸಿಟಿ ಮ್ಯುನಿಸಿಪಾಲಿಟಿಗಳವರೂ ಕೋಲಾರ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿನವರೂ ತಮ್ಮ ಫಂಡುಗಳಿಂದ ಒಬ್ಬೊಬ್ಬರೂ 5,000 ರೂಪಾಯಿಗೆ ಮೇಲ್ಪಡದಂತೆ ಸಹಾಯಮಾಡುವುದಕ್ಕೆ ಅಧಿಕಾರವನ್ನು ಅವರಿಗೆ ಕೊಟ್ಟಿದೆ. ಟವನು ಮ್ಯುನಿಸಿಪಾಲಿಟಿಗಳು ತಲಾ 1,000 ರೂಪಾಯಿಗಳೊಳಗಾಗಿಯೂ ಇತರ ಮ್ಯುನಿಸಿಪಾಲಿಟಿಗಳು ತಲಾ 100 ರೂಪಾಯಿಗಳೊಳಗಾಗಿಯೂ ಮಂಜೂರುಮಾಡಬಹುದು.

7. ಇಷ್ಟೇ ಅಲ್ಲದೆ ಎಲ್ಲಾ ಪೂಜಾಸ್ಥಾನಗಳಲ್ಲಿಯೂ ನಡೆಯಬೇಕಾಗಿರುವ ವಿಶೇಷವಾದ ಪೂಜಾ ಪುರಸ್ಕಾರಗಳ ಖರ್ಚುಗಳಿಗಾಗಿ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳಿಗೆ ಒಂದೊಂದಕ್ಕೆ 200 ರೂಪಾಯಿಗಳಂತೆಯೂ ಇತರ ಡಿಸ್ಟ್ರಿಕ್ಟುಗಳಿಗೆ ಒಂದೊಂದಕ್ಕೆ 100 ರೂಪಾಯಿಗಳಂತೆಯೂ ಮುಜರಾಯಿ ಸೂಪರಿಂಟೆಂಡೆಂಟರ ಮೂಲಕ ಡೆಪ್ಯುಟಿ ಕಮಿಷನರುಗಳ ವಶದಲ್ಲಿ ಇರಿಸಲಾಗುವುದು.

8. ಸೈನ್ಯದವರಿಗಾಗಿ ಆಟಪಾಟಗಳು, ವಿನೋದಗಳು ವಗೈರೆ ಏರ್ಪಡಿಸಲು ಚೀಫ್ ಕಮಾಂಡೆಂಟರವರ ವಶದಲ್ಲಿ 3,000 ರೂಪಾಯಿ ಪ್ರತ್ಯೇಕವಾಗಿ ಇರಿಸಲಾಗುವುದು.

9. ದಿನದ ಕೂಲಿಯಮೇಲೆ ಕೆಲಸಮಾಡುವ ಸರ್ಕಾರದ ಕೆಲಸಗಾರರಿಗೆಲ್ಲರಿಗೂ ಡಿಸೆಂಬರ್ ಉತ್ಸವಗಳ ರಜಾ ದಿವಸಗಳಲ್ಲಿ ಪೂರ್ತಿ ಕೂಲಿಗಳು ಸಲ್ಲತಕ್ಕದ್ದೆಂದು ಸರ್ಕಾರದವರು ಹುಕುಂ ಮಾಡುವುದಲ್ಲದೆ, ಖಾಸಗಿ ಯಜಮಾನರೂ ತಮ್ಮ ಕೆಲಸಗಾರರ ವಿಷಯದಲ್ಲಿ ಕೂಡಿದಮಟ್ಟಿಗೂ ಅದೇ ರೀತಿಯಾಗಿ ನಡೆದುಕೊಳ್ಳುವರೆಂದು ನಂಬುತ್ತಾರೆ.

10. ಈ ಉದ್ದೇಶಕ್ಕೆ ಬೇಕಾಗುವ ಹಣವನ್ನು ಹೆಚ್ಚುಗಟ್ಟೆ ಖರ್ಚುಗಳಿಗೆಂದು ಇಟ್ಟಿರುವ ರಿಜರ್ವ್ ಹಣದಿಂದ ಸ್ಪೆಷಲ್ ಗ್ರ್ಯಾಂಟ್ ಮೂಲಕ ಕೊಡತಕ್ಕದ್ದು.

11. ಮಾಡಲ್ಪಟ್ಟ ಮುಖ್ಯವಾದ ಏರ್ಪಾಡುಗಳು, ಕಾರ್ಯಭಾಗಿಗಳಾಗಿದ್ದ ಜನಗಳ ಸಂಖ್ಯೆ, ಅನ್ನವಸ್ತ್ರಾದಿಗಳನ್ನು ಪಡೆದ ಬಡಬಗ್ಗರ ಸಂಖ್ಯೆ, ಆಟಪಾಟಗಳು ವಗೈರೆ ಬಾಬುಗಳಿಗೆ ಸೇರಿದ್ದ ಪಾಠಶಾಲೆಗಳ ಹುಡುಗರ ಸಂಖ್ಯೆ, ನಾನಾ ಮೂಲಗಳಿಂದ ವಹಿಸಿದ ಖರ್ಚುಗಳು, ಈ ಬಾಬುಗಳನ್ನೆಲ್ಲಾ ಸೂಚಿಸಿ ಆಯಾ ಡಿಸ್ಟ್ರಿಕ್ಟುಗಳಲ್ಲಿ ನಡೆದ ಉತ್ಸವಗಳ ವಿಷಯವಾಗಿ ಒಂದು ಸಂಕ್ಷೇಪವಾದ ರಿಪೋರ್ಟನ್ನು 1920 ನೇ ಜನವರಿ 15 ನೇ ತಾ. ಒಳಗಾಗಿ ಸರ್ಕಾರಕ್ಕೆ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳು ಕಳುಹಿಸಿಕೊಡತಕ್ಕದ್ದು. ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರುಗಳೂ ತಮ್ಮ ತಮ್ಮ ಪ್ರದೇಶಗಳ ವಿಷಯದಲ್ಲಿ ಸದರೀ ರಿಪೋರ್ಟುಗಳಿಗೆ ಜವಾಬ್ದಾರರಾಗಿರುವರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ವಿಷಯಗಳು.

ಪ್ರ.—ಛಾಪಾಕಾಗದಗಳನ್ನು ಕೊಳ್ಳುವುದಕ್ಕೆ ಬರುವವರ ರುಜುವನ್ನು ವೆಂಡರುಗಳು ತೆಗೆದಿಟ್ಟುಕೊಳ್ಳುವಂತೆ ಮಾಡಬೇಕು. ಇದರಿಂದ ಸೃಷ್ಟನೆ ಕಾಗದಗಳಿಗೆ ಅವಕಾಶ ತಪ್ಪುತ್ತದೆ.

ಉ.—ಆಗಲಿ. ಆಲೋಚನೆಮಾಡುತ್ತೇವೆ.

ಪ್ರ.—ರಿಜಿಸ್ಟ್ರೇಷನ್ನಿಗಾಗಿ ರಿಜಿಸ್ಟ್ರಾರರು ಮನೆಗಳಿಗೆ ಬರುವುದಕ್ಕೆ ವಿಧಿಸಲ್ಪಟ್ಟಿರುವ ಫೀಯನ್ನು ೧೦ ರೂ. ನಿಂದ ೫ ರೂ.ಗಾದರೂ ಇಳಿಸಬೇಕು. ಬಡವರಿಗೆ ಕಷ್ಟವಾಗಿದೆ.

ಉ.—ಸರ್ಕಾರದ ಲಾಭಕ್ಕಾಗಿ ೧೦ ರೂ.ಗಳನ್ನಿಟ್ಟಿಲ್ಲ. ಎಲ್ಲರೂ ರಿಜಿಸ್ಟ್ರಾರರನ್ನು ತಂತಮ್ಮ ಮನೆಗಳಿಗೆ ಕರೆಯದೆ ಇರುವಂತೆ ಮಾಡುವುದಕ್ಕಾಗಿ ಏರ್ಪಡಿಸಿದೆ. ಅತಿ ಬಡವರಾದವರು ಅಷ್ಟು ಫೀಯನ್ನು ಕೊಡಲಾರದ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಿಗೆ ಬರೆದುಕೊಂಡರೆ ಕಡಿಮೆಮಾಡುವುದಕ್ಕೆ ಅಧಿಕಾರವಿರುವಂತೆ ಏರ್ಪಡಿಸಬೇಕೆಂದು ಸರ್ಕಾರದ ಪರ್ಯಾಲೋಚನೆಯಿದೆ.

ಪ್ರ.—ರಿಜಿಸ್ಟ್ರೇಷನ್ ಫೀಜನ್ನು ನಗದಾಗಿ ತೆಗೆದುಕೊಳ್ಳುವುದನ್ನು ತಪ್ಪಿಸಿ ಸರಿಯಾದ ಸ್ಟಾಂಪು ಡ್ಯೂಟಿ, ಮತ್ತು ರಿಜಿಸ್ಟ್ರೇಷನ್ ಫೀ ಇವುಗಳ ಒಟ್ಟು ಮೊತ್ತಕ್ಕೆ ಸರಿಯಾದ ಛಾಪಾಕಾಗದಗಳನ್ನೇ ಉಪಯೋಗಿಸುವಂತೆ ಮಾಡಬೇಕು.

ಉ.—ಪರ್ಯಾಲೋಚಿಸಿ ಅಪ್ಪಣೆಕೊಡುತ್ತೇವೆ.

ಪ್ರ.—ರಿಜಿಸ್ಟ್ರೇಷನ್ ಇಲಾಖೆಯ ತಪಸೀಲು ಇಂಡೆಕ್ಸುಗಳಲ್ಲಿ ಗ್ರಾಮಗಳ ಹೆಸರಿನ ಜತೆಗೆ ಸರ್ವೆನಂಬರುಗಳ ಇಂಡೆಕ್ಸನ್ನೂ ಕೊಡುವಂತೆ ಮಾಡಬೇಕು.

ಉ.—ಮಾಡಿಕೊಡಲು ಪರ್ಯಾಲೋಚಿಸುತ್ತೇವೆ.

ಪ್ರ.—ಇನಾಂಗ್ರಾಮಗಳಿಗೆ ಸರ್ವೆ ಸೆಟಲ್ಮೆಂಟನ್ನು ಮಾಡಿಸುವಂತೆ ಇನಾಂದಾರರನ್ನು ನಿರ್ಬಂಧಪಡಿಸಬೇಕು.

ಉ.—ಇನಾಂಗ್ರಾಮಗಳ ವಿಷಯವೆಲ್ಲಾ ಇನಾಂ ಕಮಿಷನರ ಪರ್ಯಾಲೋಚನೆಯಲ್ಲಿದೆ. ಅವರ ರಿಪೋರ್ಟು ಬಂದಮೇಲೆ ಪರ್ಯಾಲೋಚಿಸುತ್ತೇವೆ.

ಪ್ರ—ಸರ್ವೆ ನಂಬರುಗಳ ಪೋಡುಗಳ ಗುರ್ತು ಭೂಮಿಯ ಮೇಲೆ ಕಾಣುವುದಿಲ್ಲ. ಕಾಣುವಂತೆ ಗುರ್ತು ಹಾಕಿಸಬೇಕು.

ಉ.—ನಕಾಸೆಯಲ್ಲಿ ಕಾಣದಿರುವ ಗುರ್ತು ಭೂಮಿಯ ಮೇಲಿದ್ದರೆ ಪ್ರಯೋಜನವಿಲ್ಲ. ಪೋಡುಗಳಿಗೂ ಗುರ್ತು ಹಾಕಿಸುವುದು ಸಾಧ್ಯವಲ್ಲ.

ಪ್ರ.—ಸರ್ಕಾರದಮೇಲೆ ದಾವಾಮಾಡಲು ಅವಕಾಶವಿರುವಂತೆ ಕಾನೂನನ್ನೇರ್ಪಡಿಸಬೇಕು.

ಉ.—ಯಾವಯಾವ ತೆರದ ಕೇಸುಗಳಿಗೆ ಅವಕಾಶಕೊಡಬೇಕೆಂಬುದನ್ನು ಪರ್ಯಾಲೋಚಿಸಬೇಕಾಗಿದೆ.

ಪ್ರ.—ಪ್ರೆಸ್ ಆಕ್ಟನ್ನು ತೆಗೆದುಬಿಡಬೇಕು. (ಈ ವಿಷಯದಲ್ಲಿ ದೀರ್ಘವಾಗಿ ಚರ್ಚೆ ನಡೆಯಿತು. ಮ|| ಟಿ. ಕೆ. ಶೇಷಯ್ಯನವರು ಇದನ್ನು ಚರ್ಚೆಗೆ ತಂದವರು. ಇದರಿಂದ ಪತ್ರಿಕಾ ಸ್ವಾತಂತ್ರ್ಯಕ್ಕೆ ಭಂಗಬಂದಿದೆ. ನಮ್ಮ ಸಂಸ್ಥಾನಕ್ಕೆ ಇದು ಅನವಶ್ಯಕವಾಗಿದೆ. ನಮ್ಮದು ಮಾದರಿಸಂಸ್ಥಾನ. ಇಲ್ಲಿ ಮೊದಲು ನಾವು ಇದನ್ನು ತೆಗೆದುಬಿಟ್ಟರೆ ನಮ್ಮನ್ನು ನೋಡಿ ಇತರ ಸರ್ಕಾರಗಳೂ ತೆಗೆದುಬಿಡಲು ಮಾರ್ಗವಾಗುತ್ತದೆ. ಅದರಿಂದ ನಮ್ಮ ಸಂಸ್ಥಾನಕ್ಕೆ ಕೀರ್ತಿ ಬರುತ್ತದೆ. ಎಂದು ತಿಳಿಸಿದರು. ಮ|| ಎಂ. ಸುಬ್ಬಯ್ಯನವರು—"ನಮ್ಮ ಸಂಸ್ಥಾನದಲ್ಲಿ ಈ ಕಾನೂನು ನಾಮಮಾತ್ರಕ್ಕಿದೆ. ಅದು ಇದ್ದೂ ಇಲ್ಲದಂತೆಯೇ. ಯಾರುಯಾರು ಯಾವ ಪೇಪರಿನಲ್ಲಿ ಇತರರನ್ನು ವ್ಯಕ್ತಿವಿಷಯವಾಗಿ ಬಯ್ಯುತ್ತಿದ್ದರೂ ಜನವರ್ಗಗಳಿಗೆ ಪರಸ್ಪರ ದ್ವೇಷ ಬೆಳೆಯಿಸುವ ಬರವಣಿಗೆಗಳನ್ನು ಯದ್ವಾತದ್ವಾ ಬರೆಯುತ್ತಿದ್ದರೂ ಸರ್ಕಾರದವರು ಕೇಳುವುದೇ ಇಲ್ಲ. ಅದನ್ನೆಲ್ಲಾ ನೋಡಿಕೊಂಡು ಸುಮ್ಮನಿರುವುದಾದರೆ ಕಾನೂನಿದ್ದು ಪ್ರಯೋಜನವೇನು ? ಇದ್ದರೆ ಜಾರಿಗೆ ತರಬೇಕು, ಇಲ್ಲದಿದ್ದರೆ ವಜಾಮಾಡಬೇಕು. ಸರ್ಕಾರಿ ಆಫೀಸರುಗಳಮೇಲೆ ಪತ್ರಿಕೆಗಳಲ್ಲಿ ಅಬಂಡವಾಗಿ ಬರೆಯುತ್ತಿರುವಾಗ ಅಲ್ಲಿ ಬರೆಯಲ್ಪಟ್ಟಿರುವ ಸಂಗತಿಗಳು ನಿಜವಾಗಿದ್ದರೆ ಅಂಥ ಆಫೀಸರುಗಳನ್ನು ವಜಾಮಾಡಬೇಕು. ಇಲ್ಲದಿದ್ದರೆ ಅಂಥ ಪತ್ರಿಕೆಗಳಮೇಲೆ ಪ್ರೆಸ್ ಆಕ್ಟನ್ನು ಉಪಯೋಗಿಸಬೇಕು" ಎಂದರು.

ಪತ್ರವ್ಯವಹಾರ.

ಬಿಡದಿ.

ಕ್ಲೋಸ್‌ಪೇಟೆ ಸಬ್‌ತಾಲ್ಲೂಕಿಗೆ ಸೇರಿದ ಈ ಬಿಡದಿಗ್ರಾಮದ ವೀರಶೈವರ ಪ್ರಾರ್ಥನೆಯಂತೆ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ವಾರಿಯು ಕಳೆದ ಅಕ್ಟೋಬರ್ ತಾ|| ೩೦ ರಲ್ಲಿ ಬೆಂಗಳೂರಿಂದ ಈ ಗ್ರಾಮಕ್ಕೆ ಸಕಲ ಬಿರುದಾವಳಿಗಳೊಡನೆ ಚಿತ್ತೈಸಿತು. ಈ ಗ್ರಾಮದ ಶೆಟ್ಟಿ ಯಜಮಾನ ಮೊದಲಾಗಿ ಸಮಸ್ತ ವೀರಶೈವರೂ ಬೆಂಗಳೂರಿನಿಂದಲೂ ನೆರೆಗ್ರಾಮಗಳಿಂದಲೂ ಪ್ರಮುಖ ವೀರಶೈವರನ್ನು ಬರಮಾಡಿಕೊಂಡಿದ್ದರಲ್ಲದೆ ಮಹಾಪಾದದರ್ಶನಾರ್ಥವಾಗಿ ಬಹುಕಡೆಯಿಂದ ಸಾವಿರಾರು ಜನರು ಬಂದು ಉತ್ಸವ ಬರತಕ್ಕ ಮಾರ್ಗದ ಇಕ್ಕೆಲದಲ್ಲಿ ಕಿಕ್ಕಿರಿದು ನಿಂತಿದ್ದರು. ಗ್ರಾಮಸ್ಥರು ಗ್ರಾಮವನ್ನು ಕದಳೀಸ್ತಂಭಗಳಿಂದಲೂ ತೋರಣಗಳಿಂದಲೂ ಕಮಾನುಗಳಿಂದಲೂ ಸಾರಣೆಕಾರಣೆಗಳಿಂದಲೂ ಅಲಂಕರಿಸಿ ಊರಹೊರಗಡೆ ಫಲಪುಷ್ಪ ಸಮೇತ ನಿರೀಕ್ಷಿಸಿಕೊಂಡಿದ್ದು ಮಹಾಸ್ವಾಮಿಯವರ ಸ್ವಾರಿಯು ದಯಮಾಡಿಸುತ್ತಲೇ ಸಾಷ್ಟಾಂಗನಮಸ್ಕಾರಪೂರ್ವಕ ಒಪ್ಪಿಸಿ ಆಶೀರ್ವಾದವನ್ನು ಪಡೆದು ಉತ್ಸವದೊಡನೆ ಪುರಪ್ರವೇಶ ಮಾಡಿಸಿ ಪೂರ್ಣಯ್ಯನ ಸತ್ರದಲ್ಲಿ ಸಜ್ಜುಗೊಳಿಸಿದ್ದ ಸಭಾಮಂಟಪಕ್ಕೆ ಬಿಜಯಂಗೈಸಿದರು. ಶ್ರೀಮಹಾಸ್ವಾಮಿಯವರು ಅಲಂಕೃತವಾಗಿದ್ದ ದಿವ್ಯಾಸನದಲ್ಲಿ ಮಂಡಿಸಿದ ಮೇಲೆ ಶ್ರೀಗಳವರ ಕಾಲೋಚಿತ ಭಾಷಣವಾದನಂತರ ಚಕ್ರವರ್ತಿಸಾರ್ವಭೌಮರ ಶ್ರೀಮನ್ಮಹಾರಾಜ ಯುವರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟಿತು. ಸಭಿಕರು ಮಹಾಸ್ವಾಮಿಯವರ ಆಶೀರ್ವಾದವನ್ನು ಪಡೆದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಸಬ್‌ತಾಲ್ಲೂಕು ಡಿ|| ಅಮಲ್ದಾರರೂ ಬಿಡದಿಯ ಪೋಲೀಸ್ ಅಧಿಕಾರಿಗಳೂ ಉತ್ಸವವು ಸಮರ್ಪಕವಾಗಿ ನಡೆಯಲು ತಕ್ಕೇರ್ಪಾಟನ್ನು ಇಟ್ಟಿದ್ದರು. ಪರಸ್ಥಳದಿಂದ ಬಂದಿದ್ದ ಜನರಿಗೆ ಭೋಜನಸೇರ್ಪಾಟನ್ನು ಬಿಡದಿಯ ವೀರಶೈವರು ಬಹಳ ವಿತರಣೆಯಿಂದ ಮಾಡಿದ್ದರು. ಶ್ರೀಗಳವರಿಗೆ ಮ|| ಚನ್ನಶೆಟ್ಟಪ್ಪನವರ ಮನೆಯಲ್ಲಿ ಬಿಡಾರವು ಏರ್ಪಡಿಸಲ್ಪಟ್ಟಿದ್ದಿತು. ತಾ|| ೩೧ರ ರಾತ್ರಿ ಮಹಾಸನ್ನಿಧಿಯಲ್ಲಿ ಒಂದು ಸಭೆಯು ನಡೆದು ಭಕ್ತ್ಯಾಚರಣೆಯ ವಿಷಯವಾಗಿ ಜಗದ್ಗುರುಗಳಿಂದ ಸ್ವಾರಸ್ಯವಾದ ಉಪನ್ಯಾಸವು ಮಾಡಲ್ಪಟ್ಟಿತು. ಈ ತಾ|| ೧ರಲ್ಲಿ ಶ್ರೀಗಳವರ ಸನ್ನಿಧಿಯಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ಶಿವಕಥಾ ಪಂಡಿತ ಶಿವದೇವಶಾಸ್ತ್ರಿಗಳ ಶ್ರೀ ದಕ್ಷಿಣಾಮೂರ್ತಿಲೀಲಾ ಕಾಲಕ್ಷೇಪವು ರಸವತ್ತಾಗಿ ಜರುಗಿತು. ಮಹಾಸ್ವಾಮಿಯ ಸ್ವಾರಿಯು ಇಲ್ಲಿಂದ ಭಕ್ತರ ಪ್ರಾರ್ಥನೆಯಂತೆ ಈವರೆಗಿಲ್ಲಿನಿಂತು ಅವರ ಸೇವೆಯನ್ನು ಕೈಕೊಂಡು ಈ ತಾ|| ೨೦ ರಲ್ಲಿ ಕ್ಲೋಸ್‌ಪೇಟೆಗೆ ಅಲ್ಲಿಯ ವೀರಶೈವರ ಪ್ರಾರ್ಥನೆಯಂತೆ ಚಿತ್ತೈಸಿತು.

ಒಬ್ಬ ಸ್ಥಳಿಕ.

ಮನೆಕೈಗಾರಿಕೆಗಳ ಪಾಠಶಾಲೆಯ ಸ್ಥಾಪನೆ.

ಶಿಡ್ಲಘಟ್ಟ.

ಶಿಡ್ಲಘಟ್ಟದ ಪ್ರಾಂತದಲ್ಲಿ ರೇಷ್ಮೆವ್ಯವಸಾಯವು ಮುಖ್ಯಸಂಪಾದನಾ ಕಾರ್ಯವಾಗಿರುವುದಲ್ಲದೆ ವರ್ಷ 1ಕ್ಕೆ ಸುಮಾರು ೨ ಲಕ್ಷ ರೂಪಾಯಿನಷ್ಟು ರೇಷ್ಮೆಯು ಹೊರಕ್ಕೆ ರವಾನೆಯಾಗುತ್ತಿದೆ. ಹೀಗಿದ್ದರೂ ಸ್ಥಳದ ನೆಯ್ಗೆ ಕೆಲಸಗಾರರಿಗೆ ಇದು ಕೆಲಸಕ್ಕೆಬಾರದೆ ಪರಸ್ಥಳದಲ್ಲಿ ಹುರಿಮಾಡಲ್ಪಟ್ಟು ಪುನಃ ಇಲ್ಲಿನವರಿಗೆ ಖರೀದಿ ಮಾಡಲ್ಪಡುತ್ತಿದೆ. ಹುರಿಮಾಡುವ ಕೆಲಸಕ್ಕೆ ಅಷ್ಟೇನೂ ಯಂತ್ರವಿಶೇಷಗಳು ಅವಶ್ಯವಿಲ್ಲವಾದರೂ ಈ ಕೆಲಸದಲ್ಲಿ ತರಬಿಯತ್ತಾದವರು ಈ ಪ್ರಾಂತ ಇರುವುದಿಲ್ಲ. ಇದಕ್ಕಾಗಿ ಒಂದು ಸ್ಕೂಲನ್ನು ಏರ್ಪಡಿಸಿಕೊಡಬೇಕೆಂದು ಸರ್ಕಾರಕ್ಕೆ ಅರಿಕೆಮಾಡಿಕೊಂಡಿದ್ದೆವು. ರೇಷ್ಮೆ ಇಲಾಖಾ ಸೂಪರಿಂಟೆಂಡೆಂಟ್ ಸಾಹೇಬರವರು ಸ್ಥಳದ ವಿದ್ಯಮಾನಗಳನ್ನರಿತು ಶಿಫಾರಸುಮಾಡಿದ್ದುದು ಅಂಗೀಕೃತವಾಗಿ ಘನಸರ್ಕಾರದಿಂದ ಸ್ಕೂಲು ಏರ್ಪಡಿಸಲು ಮಂಜೂರಾಗಿ ಬಂದಿರುವ ಮೇರೆಗೆ ಇದರ ಆರಂಭಕಾರ್ಯಕ್ಕಾಗಿ ಹಜರತ್ ಕೋಲಾರ ಡಿ|| ಡೆಪ್ಯುಟಿ ಕಮಿಷನರ್ ಸಾ|| ರವರೂ, ರೇಷ್ಮೆ ಇಲಾಖಾ ಸೂಪರಿಂಟೆಂಡೆಂಟರವರೂ, ಎಕನಾಮಿಕ್ ಸೂಪರಿಂಟೆಂಡೆಂಟರವರೂ ದಯಮಾಡಿಸಿದ್ದು ತಾ|| 11-11-1919ರಲ್ಲಿ ಮೀಟಿಂಗ್ ನಡಿಸಿದರು. ಆಗ್ಗೆ ರೇಷ್ಮೆ ಕಸಬುದಾರರಾದ ಅನೇಕ ವರ್ತಕರೂ ಮ್ಯುನಿಸಿಪಲ್ ತಾಲ್ಲೂಕ್‌ಬೋರ್ಡ್ ಮೆಂಬರುಗಳೂ ಹಾಜರಿದ್ದು ಸ್ಕೂಲಿನ ಆರಂಭಕಾರ್ಯವು ಹಜರತ್ ಡೆ|| ಕ|| ಸಾಹೇಬರವರ ಸ್ವಹಸ್ತ ನಡಿಸಿಕೊಟ್ಟು ಚಿರಸ್ಥಾಯಿಯಾಗಿರುವಂತೆ ಅನುಗ್ರಹಿಸಬೇಕೆಂದು ಕೋರಿಕೊಂಡ ಮೇರೆಗೆ ಸಾಹೇಬರವರು ದಯವಿಟ್ಟು ನಡಿಸಿಕೊಟ್ಟರು. ಸ್ಕೂಲಿನ ಮೇಲ್ವಿಚಾರಣೆಗಾಗಿ ಡಿಸ್ಟ್ರಿಕ್ಟ್‌ಕಮಿಟಿ ಮೆಂಬರು ಮ|| ಎಸ್. ಹಂಪಯ್ಯನವರು ಆನರರಿ ಮ್ಯಾನೇಜರಾಗಿ ನಿಯಮಿತರಾದರು. ಸ್ಕೂಲಿನಲ್ಲಿ ಲಾಯಕ್ಕಾದ ವಿದ್ಯಾರ್ಥಿಗಳು ತರಬಿಯತ್ತಾದಲ್ಲಿ ಈ ಊರಿನಲ್ಲಿಯೇ ಹತ್ತಾರು ಸ್ಥಳಗಳಲ್ಲಿ ಹುರಿಮಾಡುವ ಕೆಲಸಗಳು ಏರ್ಪಡಲು ಅಡ್ಡಿಯಿಲ್ಲ. ಗೌರವಸ್ಥರಾಗಿರುತ್ತ ಮನೆಯಲ್ಲಿಯೇ ಇದ್ದು ಜೀವನಕ್ಕೆ ಕೊರತೆಯಾಗಿರುವ ಹೆಂಗಸರು ರೇಷ್ಮೆ ತೋಡುವ ಕೆಲಸಗಳನ್ನು ತಮ್ಮ ಮನೆಗಳಲ್ಲಿಯೇ ಮಾಡಿಕೊಡಲು ಹೇಳಿಕೊಡುವುದಕ್ಕೆ ಒಬ್ಬ ಹೆಂಗಸು ಮಾಸ್ಟರು ಸಹ ನಿಯಮಿತರಾಗಿರುವದರಿಂದ ಮನೆಕೈಗಾರಿಕೆ ಅಭಿವೃದ್ಧಿಯಾಗಲು ಸಹಾಯವಾಗಿದೆ. ಈ ಏರ್ಪಾಡಿಗೆ ಸಹಾಯಮಾಡಿದ ಶ್ರೀಮನ್ಮಹಾರಾಜರ ಗೌರ್ನಮೆಂಟಿಗೆ ವಂದನೆಮಾಡುತ್ತೇವೆ.

ಪ್ರತ್ಯಕ್ಷದರ್ಶಿ.

ಮೈಸೂರು ದೇಶದಲ್ಲಿ ಈಗ ಕೋಮ್‌ವಾರ್ ಪ್ರಾತಿನಿಧ್ಯವೇ ಆಗಬೇಕು.

ವಾಚಕಮಹಾಶಯರೇ !

ದೇಶವೆಂಬ ತಾಯಿಗೂ ಗೌರ್ನಮೆಂಟ್ ಎಂಬ ತಂದೆಗೂ ಎಲ್ಲಾ ಪ್ರಜೆಗಳೂ ಮಕ್ಕಳಾಗಿ ಪ್ರತಿಯೊಬ್ಬರೂ ಸಹೋದರರಾಗಿದ್ದಾರೆ. ಆ ಸಹೋದರರಲ್ಲಿ ಅವರವರ ಗುಣಕರ್ಮ ಸ್ವಭಾವಗಳಿಗನುಸಾರವಾಗಿಯೂ, ದೇಶಕಾಲಾನುಗುಣ್ಯವಾಗಿಯೂ ಜಾತಿಗಳೆಂಬ ಅನೇಕ ಪಂಗಡಗಳೇರ್ಪಟ್ಟು ಈಗ ಅವು ಫಾರ್ವರ್ಡ್, ಬ್ಯಾಕ್‌ವರ್ಡ್, ಡಿಪ್ರೆಸ್ಡ್‌ಕ್ಲಾಸ್ ಎಂದು ಮೂರು ಗುಂಪುಗಳಾಗಿ ವಿಭಾಗಿಸಲ್ಪಟ್ಟಿವೆ. ಈ ಕೋಮ್‌ವಾರ್ ಪ್ರಜೆಗಳೆಲ್ಲರನ್ನೂ, ಒಂದೇ ರೀತಿಯಾಗಿಯೂ, ನ್ಯಾಯವಾಗಿಯೂ, ನಿಷ್ಪಕ್ಷಪಾತವಾಗಿಯೂ, ಪ್ರತಿಯೊಬ್ಬರ ಏಳಿಗೆಗೆ ಆಕರವಾಗಿಯೂ, ಪರಿಪಾಲಿಸತಕ್ಕದ್ದು ಗೌರ್ನಮೆಂಟಿನ ಉದ್ದೇಶವಾಗಿದೆ. ಈ ಘನೋದ್ದೇಶದ ಸಾಫಲ್ಯಕ್ಕಾಗಿ ಪ್ರತಿಯೊಂದು ಕೋಮಿನಲ್ಲಿ ಪ್ರತಿನಿಧಿಗಳನ್ನೇರ್ಪಡಿಸಿ ಅವರ ಮೂಲಕ ದೇಶದೇಳಿಗೆಯ ಕಾರ್ಯಾಲೋಚನೆ ಮಾಡತಕ್ಕದ್ದು ಯುಕ್ತವೆಂಬುದು ಸರ್ವಾನುಮೋದಕವಾಗಿಯೂ, ಜಗದ್ಧಿತವಾಗಿಯೂ ಇದೆ. ಈ ಕ್ರಮಕ್ಕೇನೇ ಸಾಂಕುಶಪ್ರಭುತ್ವವೆಂತಲೂ ಹೇಳಲ್ಪಟ್ಟಿದೆ.

ಈ ಸಾಂಕುಶ ಪ್ರಭುತ್ವಕ್ಕನುಗುಣವಾಗಿ ನಮ್ಮ ದಯಾಳುಗಳಾದ ಶ್ರೀಮನ್ಮಹಾರಾಜರವರು ತಮ್ಮ ದೇಶದಲ್ಲಿನ ಎಲ್ಲಾ ಜಾತಿಯ ಪ್ರಜೆಗಳನ್ನೂ, ಮುಂದುವರಿದ ಜನಾಂಗ, ಹಿಂದುಳಿದ ಜನವರ್ಗ, ನಿಮ್ನಜಾತಿ ಎಂದು ಮೂರು ಕೋಮು (ತರಗತಿ) ಗಳಾಗಿ ವಿಂಗಡಿಸಿದ್ದಾರೆ. ಮತ್ತು ಈ ಕೋಮುಗಳ ಏಳಿಗೆಗಾಗಿ ಆಯಾಯ ಕೋಮಿಗೆ ತಕ್ಕಂತೆ ವಿದ್ಯಾರ್ಜನೆಗೋಸ್ಕರ ಸಹಾಯಸಂಪತ್ತುಗಳನ್ನೊದಗಿಸುತ್ತಾ, ಆಯಾಯ ಕೋಮಿನಲ್ಲಿನ ಅಸಾಧಾರಣ ವಿದ್ಯಾವಂತರಿಗೇನೇ ಗೌರ್ನಮೆಂಟ್ ಮುಖ್ಯಸ್ಥಾನಗಳ ಪದವಿಯನ್ನಿತ್ತು ಕ್ರಮವಾದ ಗೌರ್ನಮೆಂಟ್ ರಚನೆ ಮಾಡಿ ತೋರಿಸುತ್ತಿದ್ದಾರೆ. ಅಲ್ಲದೆ ಅಧಿಕ ಸಂಖ್ಯಾಕರಾದ ಹಿಂದುಳಿದ ಜನವರ್ಗದ ಪ್ರಮುಖರನೇಕರು ಕಳೆದವರುಷ ಮಹಾಸನ್ನಿಧಾನದಲ್ಲಿ ಒಪ್ಪಿಸಿದ ಡೆಪ್ಯುಟೇಷನ್ನಿಗೆ "ನಿಂನಿಮಗೆ ಬೇಕಾದ ಜನರಿಗೆ ನೀವು ಓಟುಗಳನ್ನು ಕೊಟ್ಟು ನಿಮ್ಮಗಳಿಗೆ ಸರಿಯಾದ ಪ್ರಾತಿನಿಧ್ಯವಿರುವಂತೆ ಮಾಡಿಕೊಳ್ಳುವ ಕೆಲಸವು ನಿಮ್ಮ ಕೈಯ್ಯಲ್ಲೇ ಇದೆ" ಎಂದೂ ಸಹಾ ಬೋಧಿಸಿದ್ದಾರೆ. ಈ ಸದ್ಬೋಧನೆಯಂತೆ ಈ ವರುಷ ಈ ದೇಶದಲ್ಲಿನ ವಿಲೇಜ್ ಕಮಿಟಿ, ತಾಲ್ಲೂಕ್ ಕಮಿಟಿ, ಡಿಸ್ಟ್ರಿಕ್ಟ್‌ಕಮಿಟಿ ತಾಲ್ಲೂಕ್ ಬೋರ್ಡ್, ಡಿಸ್ಟ್ರಿಕ್ಟ್‌ಬೋರ್ಡ್, ಫೈನಾನ್ಷಿಯಲ್‌ಕಮಿಟಿ, ಪ್ರಜಾಪ್ರತಿನಿಧಿಸಭಾ, ಅರ್ಥಸಾಧಕಸಭಾ, ನ್ಯಾಯವಿಧಾಯಕಸಭಾ ಇವುಗಳಲ್ಲೆಲ್ಲಾ ಕೋಮ್‌ವಾರಾಗಿ ಮೆಂಬರುಗಳು ತಕ್ಕಮಟ್ಟಿಗೆ ಚುನಾವಣೆಯಾಗಿ ಕೋಮ್‌ವಾರ್ ಪ್ರಾತಿನಿಧ್ಯಕ್ಕೆ ಅಂಕುರವಾಗಿದೆ.

ಈ ಪ್ರಾತಿನಿಧ್ಯದ ಚುನಾವಣೆಯು ಹಿಂದುಳಿದ ಜನವರ್ಗಗಳ ಕೋಮಿಗೆ ಅದರ ಹೆಚ್ಚಾದ ಜನ ಬಾಹುಳ್ಯಕ್ಕೆ ತಕ್ಕಂತೆ ಇನ್ನೂ ಜಾಸ್ತಿಯಾದ ಮೆಂಬರುಗಳು ಚುನಾವಣೆಯಾಗಬೇಕಾಗಿತ್ತು. ಅಷ್ಟಾಗಲಿಲ್ಲ. ನಿಮ್ನಜಾತಿಯ (ಅಂತ್ಯಜರ) ಕೋಮಿನಲ್ಲಿಂತು ಚುನಾವಣೆಯೇ ಆಗಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ತಪ್ಪು ಆ ಜನವರ್ಗಗಳವರದೇ ಆಗಿರುತ್ತೆ. ಆದರೆ ಈ ಹಿಂದುಳಿದ ಜನವರ್ಗದವರಲ್ಲಿ ಬಹುಭಾಗವಿದ್ಯಾಗಂಧವಿಲ್ಲದವರಾದ ಸಭ್ಯ ಪ್ರಜೆಗಳಾದ್ದರಿಂದ ಇವರು ತಾವು ಹಿಂದುಳಿದ ಜನವರ್ಗದ ಕೋಮಿಗೆ ಸೇರಿದವರೆಂದು ತಿಳಿದುಕೊಳ್ಳಲಾರದೆಯೂ, ಈ ಕೋಮಿನಲ್ಲಿ ಲಕ್ಷಕ್ಕೊಬ್ಬರಂತೆ ವಿದ್ಯಾವಂತರಾಗಿರುವ ತಮ್ಮ ಕೋಮಿನ ಉಮೇದುವಾರ್ ದೊಡ್ಡಮನುಷ್ಯರನ್ನು ಕಂಡುಕೊಳ್ಳಲಾರದೆಯೂ, ಮತ್ತು ರಾಜನೀತಿಮರ್ಮಗಳನ್ನರಿಯದವರಾಗಿಯೂ, ಈ ಜನರಲ್ಲಿ ಕೆಲವರು ತಪ್ಪು ತಿಳಿವಳಿಕೆಯಿಂದ ತಾವು ವಿದ್ಯಾವಂತರಲ್ಲದೇ ಹೋದರೂ ಅಂತಸ್ತಂತಸ್ತಾಗಿರುವ ಪ್ರಾತಿನಿಧ್ಯಕ್ಕೆ ಆಸೆಪಟ್ಟುಕೊಂಡು ಮುಂದುವರಿದ ಜನಾಂಗದ ಕೋಮಿನಲ್ಲಿ ಸಂಕುಚಿತ ಮನಸ್ಸುಳ್ಳ ಕೆಲವರ ಮಾತಿನಮೇಲೆ ದೊಡ್ಡದೊಡ್ಡ ಸಭೆಗಳಲ್ಲಿ ಮೆಂಬರುಗಳಾಗಲು ಗೌರವವೆಂದು ತಿಳಿದುಕೊಂಡು ಅದಕ್ಕೆ ಪ್ರಯತ್ನಪಟ್ಟು ಇವರಕಡೆ ಯಜಮಾನರಿಂದ ಓಟುಗಳನ್ನು ಅಲ್ಪಾಶಯರಿಗೆ ಕೊಡಿಸಿ, ಆ ಜನರಿಂದ ಇವರಿಗೆ ಓಟ್ ಸರಿಯಾಗಿ ಬಾರದೆ, ಕಡೆಗೆ ಇವರೇ ಮೋಸಹೋಗಿರುವದಾಗಿಯೂ, ಮತ್ತು ಅಸ್ವಾರ್ಥಪರರ ಡಂಭ, ಮೋಸ, ಕಪಟ, ಪಟಾಟೋಪ, ದಾಕ್ಷಿಣ್ಯ, ಕಿರುಕುಳ, ಹಿತಶತೃತ್ವ, ತಕ್ಕು, ತಕರಾರಿಕೆ, ಬರೀ ಸವಿಮಾತು ಮುಂತಾದ ಕುತಂತ್ರ ಕುಯುಕ್ತಿಗಳಿಗೆ ಬೆರಗಾಗಿಯೂ, ಕೆಲವು ವರ್ತಮಾನಪತ್ರಕರ್ತರು ಸ್ವಲಾಭಾಪೇಕ್ಷೆಯಿಂದ ಕೋಮ್‌ವಾರ್ ಪ್ರಾತಿನಿಧ್ಯಕ್ಕೆ ಕಂಟಕಪ್ರಾಯರಾಗಿ ಮಹಾಪ್ರಭುಗಳಿಂದ ದಯಪಾಲಿಸಿರುವ ಬ್ಯಾಕ್‌ವರ್ಡ್, ಮತ್ತು ಡಿಪ್ರೆಸ್ಡ್‌ಕ್ಲಾಸಿನ ಸ್ಕಾಲರ್ಷಿಪ್‌ಗಳ ಏರ್ಪಾಡಿಗೂ, ಸರ್ವಸಮವಾದ ವಿದ್ಯಾವ್ಯಾಪನೆಯ ಕಾರ್ಯಕ್ರಮಕ್ಕೆ ಬದ್ಧಾದರರಾಗಿರುವ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಮ|| ಸಿ. ರಾಮಲಿಂಗರೆಡ್ಡಿ ಎಂ ಎ ಯವರಮೇಲೂ, **ಕೋಮುವಾರ್ ಪ್ರಾತಿನಿಧ್ಯವೇ ದೇಶದೇಳಿಗೆಗೂ, ಏಕಮತ್ಯತ್ವಕ್ಕೂ ಮೂಲಕಾರಣವೆಂಬ ತತ್ವವನ್ನು ಕಂಡುಹಿಡಿದು ಅದಕ್ಕಾಗಿಯೇ ತಮ್ಮ ತನು, ಮನ, ಧನಾದಿಗಳನ್ನೆರಚಿ, ಪಾಟುಪಡುತ್ತಿರುವ ದೊಡ್ಡಮನುಷ್ಯರಮೇಲೂ, ಇಲ್ಲದಸಲ್ಲದ ದೋಷಾರೋಪಣೆಗಳಿಂದ ವಾಚಾಮಗೋಚರವಾಗಿ ಕುಹಕರಿಂದ ಬರೆದುಬಂದ ಲೇಖನಗಳನ್ನು ತಮ್ಮ ಹಸ್ತಂಗತವಾಗಿರುವ ವೃತ್ತಪತ್ರಗಳಲ್ಲಿ ಪ್ರಕಟಿಸುತ್ತಾ ತಮ್ಮ ಅಸೂಯಾಗ್ನಿಯನ್ನು ಕಾರುತ್ತಿರುವರು. ಕಂಡು, ಕೇಳಿ, ಭಯಾನ್ವಿತರಾಗಿಯೂ, ಈ ವಗೈರೆ ಕಾರಣಗಳಿಂದ ಬೇರೆ ಕೋಮಿನ ಜನರಿಗೆ ಓಟುಗಳನ್ನು ಕೊಟ್ಟು ಮೋಸಹೋಗಿರುವಂತೆಯೂ ತಿಳಿಯಬರುತ್ತೆ.**

ಘನವಂಪಡೆದ ಓಟರ್‌ಮಹಾಜನಗಳಿರಾ ! ಮುಂದುವರಿದ ಜನಾಂಗದ ಕೋಮಿನಲ್ಲಿನ ಬ್ರಾಹ್ಮಣೇತರಗತಿಯ ಜನರೆಲ್ಲಾ ಚತುರೋಪಾಯದ ವಾಕ್‌ಚಾತುರ್ಯವುಳ್ಳ ವಿದ್ಯಾವಂತರಾದ ಪ್ರಜ್ಞಾಶಾಲಿಗಳಾದ್ದರಿಂದ ಅವರನ್ನೂ ಗೌರ್ನಮೆಂಟಿನವರು ಬಿಡುವುದೇ ಇಲ್ಲ. ಅವರೇ ಚುನಾಯಿಸಿಕೊಳ್ಳುತ್ತಾರೆ. ಆ ಜನರಾದರೋ ಗೌರ್ನಮೆಂಟಿಗೆ ಬೇಕಾದ ಸಲಹೆಗಳನ್ನು ಕೊಡುವುದು ಯಾವಾಗ್ಲೂ ತಮ್ಮ ಕರ್ತವ್ಯಕರ್ಮವೆಂದು ಭಾವಿಸಿರುತ್ತಾರೆ. ನಿಮ್ನಜಾತಿಯ ಕೋಮಿನಲ್ಲಿ ಅಂತ್ಯಜರನ್ನುದ್ಧರಿಸತಕ್ಕಭಾರ ಗೌರ್ನಮೆಂಟಿನವರೇ ವಹಿಸಿಕೊಂಡಿರುವುದರಿಂದ ಆ ಜನರನ್ನೂ ಸರ್ಕಾರದವರೇ ಚುನಾಯಿಸಿಕೊಳ್ಳುತ್ತಾರೆ. ಪ್ರಕೃತ ಈ ಎರಡು ಕೋಮಿಗೂ, ಗೌರ್ನಮೆಂಟಿಗೂ ದುಡಿದಿಡತಕ್ಕವರು ಹಿಂದುಳಿದ ಜನವರ್ಗದಕೋಮಿನ ಜನರೇ ಆಗಿದ್ದಾರೆ. ಮತ್ತು ಈ ಪ್ರಜೆಗಳೇ ದೇಶದಲ್ಲಿ ಒಕ್ಕಲಿಗರು, ಲಿಂಗಾಯಿತರು, ಮುಸಲ್ಮಾನರು, ಜೈನರು, ವೈಶ್ಯರು, ಲಾಡರು, ಅರಸುಮಕ್ಕಳು, ಬಡಿಗಿ, ಕಮ್ಮಾರ, ಅಕ್ಕಸಾಲಿಗ, ನೆಯ್ಗೆ, ಕುರುಬ, ಕುಂಬಾರ, ಅಗಸ, ನಾಯಿಂದ, ಈಡಿಗ ಮುಂತಾದ ಅನೇಕ ಜಾತಿಯವರು ಸೇರಿ ಮೇಲ್ಕಂಡಂತೆ ಒಂದು ವರ್ಗ ಆಗಿದ್ದಾರೆ. ಈ ಕೋಮಿನ ಪ್ರಜಾಸಂಖ್ಯೆಯೇ ಮಿಕ್ಕ ಎರಡು ಕೋಮುಗಳಿಗಿಂತಲೂ ಏದರಷ್ಟು ಜಾಸ್ತಿಯಾಗಿ ಗೌರ್ನಮೆಂಟಿನ ಆಡಳಿತಕ್ಕೆಲ್ಲಾ ಬೇಕಾದಷ್ಟು ಹೆಚ್ಚಾದ ಕಂದಾಯ ಕೊಳಗೆಗಳನ್ನೂ ಒಪ್ಪಿಸತಕ್ಕವರಾಗಿದ್ದಾರೆಂಬುದು ಈ ಜನಬಾಹುಳ್ಯಕ್ಕೆ ತಕ್ಕಷ್ಟು ಮೆಂಬರುಗಳು ದೇಶಾಡಳಿತಕ್ಕೆ ಸಂಬಂಧಪಟ್ಟ ಮೇಲ್ಕಂಡ ಎಲ್ಲಾ ಕಮಿಟಿಗಳಲ್ಲಿಯೂ ಇನ್ನೂ ಹೆಚ್ಚಾಗಿ ಇದ್ದು ಇರಬೇಕೆಂಬುದೂ ಈ ಕಾರ್ಯ ಹಠಾತ್ತಾಗಿ ಅವರೇ ಮಾಡಿಕೊಳ್ಳತಕ್ಕದ್ದಾಗಿದೆ ಎಂಬುದೂ ಸರ್ವರೂ ಒಪ್ಪತಕ್ಕದ್ದಾಗಿಯೂ, ತಿಳಿದ ಅಂಶವಾಗಿಯೂ ಇದೆ. ಈ ತಿಂಗಳಲ್ಲಿ ಪ್ರತಿ ಡಿಸ್ಟ್ರಿಕ್ಟಿನಿಂದಲೂ ಡಿಸ್ಟ್ರಿಕ್ಟಿಗೆ ಒಬ್ಬರು ನ್ಯಾಯವಿಧಾಯಕಸಭೆಗೂ, ಮೂವರು ಅರ್ಥಸಾಧಕಸಭೆಗೂ ಮೆಂಬರುಗಳಾಗಿ ಚುನಾಯಿಸಲು ಸರ್ಕಾರದ ಅಪ್ಪಣೆಯಾಗಿದೆ. ಈ ಸಭೆಗಳೆರಡೂ ನಮ್ಮ ದೇಶಕ್ಕೆ ಬಹು ಮುಖ್ಯಸಭೆಗಳಾಗಿರುವುದರಿಂದ ಮೇಲ್ಕಂಡ ಕಾರಣಗಳ ಮೇಲೆ ಹಿಂದುಳಿದ ಜನವರ್ಗದ ಕೋಮಿನಲ್ಲೇ ಅತ್ಯವಶ್ಯಕವಾಗಿ ಮೆಂಬರುಗಳ ಚುನಾವಣೆಯಾಗತಕ್ಕದ್ದು ನ್ಯಾಯವಾಗಿಯೇ ಇದೆ. ಆದ್ದರಿಂದ ಎಲ್ಲಾ ಡಿಸ್ಟ್ರಿಕ್ಟಿನಲ್ಲಿರತಕ್ಕ ಹಿಂದುಳಿದ ವರ್ಗಗಳ ಓಟರ್‌ಮಹಾಜನರೂ, ತಮ್ಮ ತಮ್ಮ ಕೋಮಿನಲ್ಲಿಯೇ ರಾಜಭಾಷೆ ಮತ್ತು ರಾಜನೀತಿ ತಿಳಿದವರಾಗಿಯೂ, ಪ್ರಜೆಗಳ ಕಷ್ಟನಷ್ಟಗಳನ್ನು ಕುರಿತು ನಿಷ್ಪಕ್ಷಪಾತವಾಗಿ ವಾದಿಸತಕ್ಕ ಅನುಭವಸ್ಥರೂ, ದೇಶದೇಳಿಗೆಯನ್ನು ಬಯಸತಕ್ಕ ವಿದ್ಯಾವಂತರೂ ಆದ ದೊಡ್ಡಮನುಷ್ಯರನ್ನು ಆರಿಸಿಕೊಂಡು ಅಂತಹವರಿಗೇನೇ ಓಟ್ ಕೊಡಬೇಕೇ ಹೊರತು ವಿದ್ಯಾವಂತರಲ್ಲದ ರಾಜನೀತಿ ತಿಳಿಯದವರಿಗೂ ಮತ್ತು ತಮ್ಮ ವಿರುದ್ಧವಾಗಿ ಅಥವಾ ಉದಾಸೀನವಾಗಿ ಕಾರ್ಯಭಾರ ಮಾಡತಕ್ಕ ಉಮೇದುವಾರರಿಗೆ (ಹಿಂದಿನಂತೆ ಮೋಸಕ್ಕೆ ಒಳಗಾಗಿ) ಓಟ್ ಕೊಡಬಾರದೆಂಬುದೇ ಕೋಮುವಾರ್ ಪ್ರಾತಿನಿಧ್ಯದ ಉದ್ದೇಶವಾಗಿದೆ. ಈ ಉದ್ದೇಶಕ್ಕೆ ಭಂಗ ಬರದಂತೆ ಒಬ್ಬರಿಗೊಬ್ಬರು ಯಾವ ವಿಧವಾಗಿಯೂ ಮೋಸಮಾಡದೆ, ಅಸೂಯೆಪಟ್ಟುಕೊಳ್ಳದೆ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಯಾರಿಗೂ ಭಯಪಡದೆ ಧೈರ್ಯವಾಗಿ ಧಾರಾಳಮನಸ್ಸುಮಾಡಿ ಈಗ ಕೋಮುವಾರ್ ಪ್ರಾತಿನಿಧ್ಯವನ್ನು ಸಂಪಾದಿಸಬೇಕೆಂಬುದೇ ಬಹುಭಾಗದ ಪ್ರಜೆಗಳ ಕೋರಿಕೆಯಾಗಿದೆ. ಪಕ್ಷಪಾತಿಗಳು ಇದಕ್ಕೆ ವಿರುದ್ಧವಾಗಿ ಬರೆದು ಪ್ರಕಟಿಸಾರು. ಬಾಯಿಮಾತುಗಳನ್ನೂ ಹೇಳಬಹುದು. ಅಂತಹ ಲೇಖನಗಳನ್ನೂ ಅಭಿಪ್ರಾಯದ ಮಾತುಗಳನ್ನೂ ಈಗ ಈ ವಿಷಯದಲ್ಲಿ ಎಷ್ಟುಮಾತ್ರವೂ ಗಮನಿಸತಕ್ಕವುಗಳಲ್ಲವೆಂದು ನಿಷ್ಪಕ್ಷಪಾತಿಗಳಾದವರನೇಕರು ನಿರ್ಧರಿಸಿರುತ್ತಾರೆ. ಎಚ್ಚರಿಕೆ ! ಎಚ್ಚರಿಕೆ !! ಮೋಸಹೋಗಬೇಡಿರಿ. ಈ ದೇಶದಲ್ಲಿ ಈಗ ಕೋಮುವಾರ್ ಪ್ರಾತಿನಿಧ್ಯವೇ ಆಗಬೇಕು. ಸರ್ವೇಶ್ವರನು ನಮ್ಮ ಮಹಾಪ್ರಭುಗಳಿಗೂ, ಜಯಚಾಮರಾಜೇಂದ್ರ ಒಡೆಯರಿಗೂ, ಓಟರ್‌ಮಹಾಜನರಿಗೂ, ದೇಶಕ್ಕೂ ಸರ್ವಸುಖಸಾಮ್ರಾಜ್ಯಗಳನ್ನು ದಯಪಾಲಿಸಲಿ.

ಕೋಮ್‌ವಾರ್ ಪ್ರಾತಿನಿಧ್ಯದ ಆಮೋದಕ
ಮತ್ತು ಆರ್ಯರಾಜಧರ್ಮ ಸೇವಕ.

ಕಲಿಕಾಲ ವೈಚಿತ್ರ್ಯ.

(ಹಿಂದಿನ ಶೇಷ)

"ಇದೂ ಅಲ್ಲದೆ ಮುರುಗಿ ಮಠದವರು ಬೆಂಗಳೂರಿಗೆ ಬಂದಿರುವುದಾಗಿಯೂ, ಅವರಿಗೆ ಕಾಣಿಕೆಯನ್ನು ಕೊಡಬೇಕೆಂಬದಾಗಿಯೂ, ಗ್ರಾಮಾಂತರಗಳಲ್ಲಿರುವ ಆರಾಧ್ಯಶಿಷ್ಯವರ್ಗದವರನ್ನು ಕೇಳುತ್ತಾರೆಂದು ನಮ್ಮಲ್ಲಿಗೆ ಅಂದರೆ ಪ್ರಸಿದ್ಧವಾದ ಶ್ರೀತಳೂರುಮಠ, ಶ್ರೀಯೆತ್ತಿಗದಮಠ, ಶ್ರೀಮಜ್ಜಂಗಿನ ವಿಶ್ವಾರಾಧ್ಯನಿರಂಜನ ಸ್ವಾಮಿಗಳವರ ಮಠ, ಶ್ರೀಗರಿಕೆಹಳ್ಳಿಮಠ, ………**ಕೊತ್ತತ್ತಿಮಠ ವಗೈರೆ ಆಚಾರವಿಚಾರಣೆ ಎಲ್ಲಾ ಮಠಗಳೂ ಬರೆದುಕೊಂಡಿರುತ್ತಾರೆ. ಆದರೆ ಮುರುಗಿಮಠದವ**ರೇ ಆಗಲೀ ಅವರ ಕಡೆಯವರೇ ಆಗಲೀ ರಾಜಾಧಿರಾಜರ ಸನ್ನಿಧಿಗೆ ವಿರೋಧವಾಗಿ ನಡೆಯಲಾರರು. ನಿಮ್ಮ ತಂಟೆಗೆ ಬರಲೂಲಾರರು" ಎಂಬುದಾಗಿ ಈ ಚೈತನ್ಯರು ಒಂದು ಪ್ಯಾರಾವನ್ನು ಬರೆದಿರುತ್ತಾರೆ.

ಈ ಪಂಡಿತರ ವಾಕ್ಯಕ್ಕೆ ಈ ದೇಶದ ಯಾವ ವಿದ್ವಾಂಸರಿಂದಲೂ ಅರ್ಥಮಾಡಲು ಸಾಧ್ಯವಾಗಿಲ್ಲ. ಇವರ ಸಾಲಿನ ಪಂಡಿತರೇ ನೂತನ ವ್ಯಾಕರಣವನ್ನು ಕಲ್ಪಿಸಿ ಅದರ ಸಾಹಾಯ್ಯದಿಂದ ಪ್ರಯೋಗಸಾಧುತ್ವವನ್ನು ಸಾಧಿಸಿ ಆಮೇಲೆ ಅರ್ಥ ಹೇಳಬೇಕಾಗುತ್ತದೆ. "ಮುರುಗಿಮಠದ ಕಡೆಯವರು ಆರಾಧ್ಯರ ಶಿಷ್ಯವರ್ಗದವರನ್ನು ಕಾಣಿಕೆ ಕೇಳುತ್ತಾರೆಂದು ನಮ್ಮಲ್ಲಿಗೆ ಬರೆದುಕೊಂಡಿರುತ್ತಾರೆ" ಎಂಬ ವಾಕ್ಯದಲ್ಲಿ "ಬರೆದುಕೊಂಡಿರುತ್ತಾರೆ" ಎಂಬ ಕ್ರಿಯೆಗೆ ಕರ್ತೃವೇ ಆ ವಾಕ್ಯದಲ್ಲಿಲ್ಲ. ಆ ಕ್ರಿಯೆಯ ಹಿಂದೆ ಎಲ್ಲಾ ಮಠಗಳೂ ಎಂಬ ಪದವು ಇರುವುದರಿಂದ ಅದನ್ನೇ ಕರ್ತೃವಾಗಿ ಇಟ್ಟುಕೊಂಡರೆ, ತಳೂರುಮಠ ಮೊದಲಾದುವುಗಳೆಲ್ಲಾ ಇವರಲ್ಲಿ ದೂರಿಟ್ಟುಕೊಂಡುವೆಂದು ಹೇಳಬೇಕಾಗುತ್ತದೆ. ಹಾಗೆ ಹೇಳುವುದಕ್ಕೂ ಯತ್ನವಿಲ್ಲ. ಏಕೆಂದರೆ—"ಮಠಗಳು" ಎಂಬ ನಪುಂಸಕವಾಚಿಯಾದ ಕರ್ತೃವಿಗೆ "ಬರೆದುಕೊಂಡಿರುತ್ತಾರೆ" ಎಂಬ ಪುಂವಾಚಕವಾದ ಕ್ರಿಯೆಯ ಸಂಯೋಗವು ಅಸಾಧುವಾಗಿರುತ್ತದೆ. ಮತ್ತು "ನಮ್ಮಲ್ಲಿಗೆ ತಳೂರುಮಠ ಮೊದಲಾದುವುಗಳೆಲ್ಲವೂ ಬರೆದುಕೊಂಡಿರುತ್ತವೆ" ಯೆಂಬಲ್ಲಿನ ಲಿಂಗದೋಷವನ್ನು ಕಣ್ಗೊತ್ತಿ ಅರ್ಥಮಾಡಿದರೆ, ಈ ಚೈತನ್ಯರ ಪೀಠಕ್ಕೆ ಉಳಿದ ತಳೂರು ಪ್ರಭೃತಿ ಮಠಗಳೆಲ್ಲವೂ ಅಪ್ಪೀಲುಮಾಡಿಕೊಂಡಿರುವುದೆಂದು ಹೇಳಿಕೊಂಡ ಹಾಗಾಗುತ್ತದೆ. ಹಾಗಾದರೆ ತಳೂರುಮಠ ಮೊದಲಾದುವುಗಳೆಲ್ಲಾ ಒರಿಜಿನಲ್ ಕೋರ್ಟೋ? ಅಥವಾ ಫಿರ್ಯಾದಿದಾರರೋ? ಈ ಚೈತನ್ಯರದು ಅಪ್ಪೀಲುಕೋರ್ಟೋ? ಇಲ್ಲಿಗೇ ಅಪ್ಪೀಲುಕೋರ್ಟಿನ ಪರಮಾವಧಿಯಾಯಿತೊ ? ಅದಕ್ಕೂ ಮೇಲಿನ ಹೈಕೋರ್ಟೂ ಪ್ರಿವಿಕೌನ್ಸಿಲೂ ಯಾವುವಾದರೂ ಇವೆಯೋ ತಿಳಿಯಲಿಲ್ಲ. ಈ ಅದ್ಭುತವಾದ ಕಥೆಯನ್ನು ಕೇಳಿ ವೀರಶೈವ ಪ್ರಪಂಚವು ಎಷ್ಟುನಗಬಹುದು ! ಚೈತನ್ಯರ ಮಠವನ್ನು ಉಳಿದ ಮಠಗಳೆಲ್ಲಾ ಅಪ್ಪೀಲುಕೋರ್ಟೆಂದು ತಿಳಿದು ದೂರುಹೇಳಿಕೊಂಡಿರುವುದು ನಿಜವಾಗಿದ್ದರೆ ಆ ವಾದಿಗಳನ್ನೂ ಪ್ರತಿವಾದಿಗಳನ್ನೂ ಕರೆಯಿಸಿ ವಿಚಾರಮಾಡುವ ಅಧಿಕಾರವನ್ನು ಈ ಚೈತನ್ಯಕೋರ್ಟಿನವರು ಏತಕ್ಕೆ ನಡೆಯಿಸಲಿಲ್ಲ ? "ತುಂಬಿದ ಕೊಡ ತುಳುಕುವುದೆ ?" ಎಂದು ತಟಸ್ಥರಾಗಿರಬೇಕು ! ಹಾಗಲ್ಲದೆ ಈ ವಾಕ್ಯದಲ್ಲಿ "ಆರಾಧ್ಯರ ಶಿಷ್ಯವರ್ಗದವರನ್ನು ಕೇಳುತ್ತಾರೆಂದು ನಮ್ಮಲ್ಲಿಗೆ ಅಂದರೆ ತಳೂರುಮಠ ವಗೈರೆ" ಎಂದು ಹೇಳಿಕೊಂಡಿರುವುದರಲ್ಲಿ "ಅಂದರೆ" ಎಂಬ ವಿವರಣಾರ್ಥಕ ಶಬ್ದಪ್ರಯೋಗದಿಂದ ನಾವು ಎಂಬುದರಲ್ಲೇ ತಳೂರುಮಠ ಮೊದಲಾದುವುಗಳೆಲ್ಲಾ ಅಂತರ್ಗರ್ಭಿತವಾಗಿರುವುವೆಂದೂ, ಅವುಗಳಿಗೆಲ್ಲಾ ಬರೆದುಕೊಂಡಿರುವರೆಂದೂ ಅರ್ಥಮಾಡಿಕೊಳ್ಳುವುದಾದರೆ, ಆಗ್ಗೆ "ಬರೆದುಕೊಂಡಿರುತ್ತಾರೆ" ಎಂಬ ಕ್ರಿಯೆಗೆ ಕರ್ತೃವೇ ಶೂನ್ಯವಾಗುವುದು. ಕರ್ತೃವೇ ಶೂನ್ಯವಾಗಿರುವಾಗ ಕಾರ್ಯದ ಸಂಭವವೆಲ್ಲಿ ? ಅದುಕಾರಣ ಈ ಅಕರ್ತೃಕವಾಕ್ಯವು ಆ ಕಾರ್ಯ ನಡೆದಿರುವುದನ್ನೇ ಶೂನ್ಯವನ್ನಾಗಿ ಹೇಳಲು ಸಾಕಾದಷ್ಟು ಪ್ರಮಾಣವಾಗಿ ಇರುವುದು. ಎಂದರೆ ಶ್ರೀ ಮುರುಘಮಠದವರು ಬಲಾತ್ಕಾರವಾಗಿ ಇತರರನ್ನು ಕಾಣಿಕೆ ಕೇಳಿದುದೂ ಸುಳ್ಳು. ಆ ಸಂಬಂಧವಾಗಿ ಗರಿಕೆಮಠ ಮೊದಲಾದುವುಗಳಿಗೆ ಯಾರೂ ಅಪ್ಪೀಲು ಮಾಡಿಕೊಂಡಿರುವುದೂ ಸುಳ್ಳು. ಅಪ್ಪೀಲು ಮಾಡಿಕೊಂಡ ಕರ್ತೃಗಳು ನಿಜವಾಗಿದ್ದರೆ ಈ ವಾಕ್ಯದಲ್ಲಿ ಆ ಕರ್ತೃಪ್ರಯೋಗವು ಆಗುತ್ತಲೇ ಇತ್ತು. ಅದುಕಾರಣ ಈ ಕಥೆ ಆದ್ಯಂತವೂ ಸುಳ್ಳು. ಶ್ರೀ ಜಗದ್ಗುರುಗಳ ಮರ್ಯಾದಾವೈಭವವನ್ನು ಕೇಳಿ ಸೈರಿಸಲಾರದ ಅಸೂಯೆಯಿಂದಲೂ, ಇದೊಂದು ಸಮಯದಲ್ಲಿ ಯೇನಕೇನಾಪಿಪ್ರಕಾರೇಣ ಪ್ರಸಿದ್ಧಿಗೆ ಬಂದು, ಉಪಾಯವಾಗಿ ತಮಗೆ ವೀರಶೈವ ಜಗದ್ಗುರುತ್ವವನ್ನು ಸಮರ್ಥಿಸಿಕೊಂಡುಬಿಡಬಹುದೆಂಬ ಭ್ರಮೆಯಿಂದಲೂ ಈ ಪತ್ರಿಕಾಪ್ರಸಂಗದ ಸಾಹಸಕ್ಕೆ ಈ ಚೈತನ್ಯರು ಕೈಹಾಕಿದರೆಂದು ಹೇಳುವುದರಲ್ಲಿ ಸಂಶಯವೇ ಇಲ್ಲ. ಹಾಗಲ್ಲದಿದ್ದರೆ "ಮುರುಗಿಮಠದವರೇ ಆಗಲಿ ಅವರ ಕಡೆಯವರೇ ಆಗಲಿ ರಾಜಾಧಿರಾಜರ ಸನ್ನಿಧಿಗೆ ವಿರೋಧವಾಗಿ ನಡೆಯಲಾರರು. ಮತ್ತು ನಿಮ್ಮ ತಂಟೆಗೆ ಬರಲೂಲಾರರು" ಎಂದು ತಿಳಿದುಕೊಂಡು, ಉತ್ತರವಾಕ್ಯದಲ್ಲೇ ತಾವೇ ಬಾಯಿಬಿಟ್ಟು ಅದನ್ನು ಆಡಿರುವ ಈ ಚೈತನ್ಯರು—ತುಂಬಿದ ಕೊಡ ತುಳುಕದಂತಿರುವ ಪಂಡಿತರು ! ಈ ಪ್ರಸಕ್ತಿಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಕಾದ ಅವಶ್ಯಕತೆಯೇನಿತ್ತು ?

ಈ ವಾಕ್ಯದ ಮುಂದಕ್ಕೆ ಬರೆದುಕೊಂಡಿರುವ ಇನ್ನೊಂದು ಪ್ಯಾರಾದಲ್ಲಿ ಚೈತನ್ಯರ ಸುಳ್ಳಿನಮೊರೆಯು ಎಷ್ಟುಮಟ್ಟಿಗೆ ಹೊರಬಿದ್ದಿದೆಯೋ ನೋಡಿರಿ. "ಅವರ ಕಡೆಯವರಿಂದ ನಿಮಗೆ ತೊಂದರೆ ಸಂಭವಿಸಿದರೆ ನಿಮ್ಮ ತಂಟೆಗೆ ಬಂದರೆ ಎತ್ತಿಗದ ಮಠದ ಶ್ರೀಯವರಿಗಾಗಲಿ ತಳೂರುಮಠದ ಶ್ರೀಯವರಿಗಾಗಲಿ ತಿಳಿಸಿಕೊಳ್ಳುವುದಲ್ಲದೆ ನಮ್ಮಲ್ಲಿಗೂ ಬರೆದುಕೊಂಡಲ್ಲಿ ವಿಚಾರಿಸಲಾದೀತು" ಎಂದು ಹೇಳಿಕೊಂಡಿರುತ್ತಾರೆ. ಇಲ್ಲಿ ತಂಟೆಗೆ ಬಂದರೆ ನಮಗೆ ಬರೆದುಕೊಳ್ಳಿರಿ ವಿಚಾರಿಸುತ್ತೇವೆಂದು ಎಚ್ಚರ ಹೇಳಿರುವುದರಿಂದ, ಇದಕ್ಕೆ ಮುಂಚೆ ಈ ಚೈತನ್ಯರಿಗಾಗಲಿ ಇವರ ಲೋಕಪ್ರಸಿದ್ಧ ಮಠಗಳ ಶ್ರೀಗಳಿಗಾಗಲಿ ಯಾರೂ ಈ ವಿಷಯವಾಗಿ ಬರೆದುಕೊಂಡುದಿಲ್ಲವೆಂಬ ಸಂಗತಿಯು ಅವರಮಾತಿನಿಂದಲೇ ಮತ್ತಷ್ಟು ದೃಢಪಟ್ಟಂತೆ ಆಗಲಿಲ್ಲವೆ ?

ಈ ಚೈತನ್ಯರು ಇಷ್ಟನ್ನೆಲ್ಲಾ ಹೇಳಿಬಿಟ್ಟು ಕಡೆಗೆ ಈ ಅಪೂರ್ವಸಿದ್ಧಾಂತಪ್ರದರ್ಶನವನ್ನು ಮುಗಿಸಿಬಿಡುವಾಗ್ಗೆ—ಮೇಲ್ಕಂಡ ಎಲ್ಲಾ ವಿಚಾರವನ್ನೂ ಬ್ರಾಹ್ಮಣರೂ ಸಮಸ್ತ ಜನಾಂಗದವರಾದ ವಿದ್ಯಾಪಕ್ಷಪಾತಿಗಳೂ ಇದರ ನೈಜಸ್ವಭಾವವನ್ನು ತಿಳಿದಿರುವರೆಂತಲೂ, ಆದರೂ ಕೆಲವು ಪತ್ರಿಕಾಕರ್ತರು ಏನೋ ಅನ್ಯಾಯವಾಗಿ ಬರೆದುಬಿಟ್ಟಿರುವುದನ್ನು ನೋಡಿ ಯಾರೋ ವಿಷಾದಪಡುತ್ತಿರುವರೆಂತಲೂ, ಈಗಲಾದರೂ ಮಠದ ಸ್ವರೂಪವೇನೆಂಬುದನ್ನು ವಿಚಾರಮಾಡಿ ಬರೆಯಬೇಕೆಂತಲೂ, ಯಾರಿಗೆ ಉತ್ತಮಪದವಿಯಿರುವುದೋ ಅದನ್ನು ಅವರ ಆಚಾರವ್ಯವಹಾರಗಳಿಂದಲೂ ಮತಭಾಷ್ಯಾದಿ ಅನೇಕಾನೇಕ ಮತಗ್ರಂಥಗಳ ಪರಿಶೋಧನೆಯಿಂದಲೂ ತಿಳಿಯಬಹುದೆಂತಲೂ, ಗಂಗಡಿಕಾರ ಒಕ್ಕಲಿಗರಿಗೆಲ್ಲಾ ಆರಾಧ್ಯರು ಮತ್ತು ಇವರಂತೆಯೇ ಸ್ವಯಮಾಚಾರ್ಯರಾದ ಶ್ರೀವೈಷ್ಣವರೂ ಗುರುಗಳಾಗಿರುವುದು ಸರ್ವತ್ರ ತಿಳಿದಿರುವುದೆಂತಲೂ, ಮಹಾನಾಡುಗೌಡಗಳೆಲ್ಲಾ ಆರಾಧ್ಯರೇ ತಮಗೆ ಗುರುಗಳಲ್ಲದೆ ಇತರರಲ್ಲವೆಂದು ಅತ್ತಿಗುಪ್ಪಾ ತೀರ್ಪನ್ನು ಮಾಡಿರುವರೆಂತಲೂ, ಕಾಲವು ಬರಬರುತ್ತ ಉತ್ತಮವರ್ಣಾಶ್ರಮದವರಿಗೆ ಮರ್ಯಾದೆ ಲೋಪವಾಗುವುದು ಲೋಕಧರ್ಮವಾಗಿರುವುದೆಂತಲೂ, ಅದಕ್ಕಾಗಿ ವ್ಯಸನಪಟ್ಟು ಪ್ರಯೋಜನವಿಲ್ಲವೆಂತಲೂ, ಶ್ರೀಮನ್ಮಹಾರಾಜರವರು ಪರ್ಯಾಲೋಚಿಸಿ ತಮ್ಮ ಪಿತಾಮಹರಾದಿಯಾಗಿ ಕೊಟ್ಟಿರುವ ಸನ್ನದುಗಳಿಗೆ ಲೋಪಬರದಂತೆ ಅವರವರ ಧರ್ಮವನ್ನು ಕಾಪಾಡಬೇಕೆಂತಲೂ ಬರೆದು ಮುಗಿಸಿರುತ್ತಾರೆ.

ಇಲ್ಲಿ ಗಂಗಡಿಕಾರ ಒಕ್ಕಲಿಗರ ಮಾತು ಬೇಕಿಲ್ಲ. ಅವರು ಮಾಡಿಕೊಂಡಿರುವ ತೀರ್ಪೇನೊ ? ಯಾತಕ್ಕೆ ಯಾವಾಗ ಹೇಗೆ ಬರೆದುಕೊಂಡಿರುವರೋ ಯಾರುಬಲ್ಲರು ? ಶ್ರೀಜಗದ್ಗುರುಗಳು ಬೆಂಗಳೂರಿಗೆ ದಯಮಾಡಿಸಿದ್ದ ಸಂದರ್ಭದಲ್ಲಿ ಒಕ್ಕಲಿಗಮಂಡಲಿಯ ಕಣ್ಣುಗಳಂತಿರುವ ಮ|| ಎಂ. ಸುಬ್ಬಯ್ಯನವರು, ಮ|| ರಾಮಯ್ಯನವರು ಮೊದಲಾದವರುಗಳು ನಡೆದುಕೊಂಡಿರುವ ಆಚರಣೆಯೂ, ಅವರ ಪತ್ರಿಕೆಗಳಲ್ಲಿ ಇವರೇ ನಮಗೆ ಜಗದ್ಗುರುಗಳೆಂದು ಬರೆದುಕೊಂಡಿರುವುದೂ ಲೋಕವಿದಿತವೇ ಆಗಿರುವುದು. ಚೈತನ್ಯರ ಉಳಿದ ಮಾತುಗಳನ್ನು ಕುರಿತು ಪರ್ಯಾಲೋಚಿಸೋಣ. ಮಠದೊಳಗಣ ಸ್ಥಿತಿಯನ್ನೂ ಸಂಪ್ರದಾಯಗಳನ್ನೂ ಕುರಿತು ಮಠದವರು ತಿಳಿದಿರುವಂತೆ ಇತರರಿಗೇನುಗೊತ್ತುಂಟು? ಮಠದೊಳಗೆ ಬೆಯ್ಯದಿರುವ ತಮ್ಮ ಬೇಳೆಯನ್ನು ಇತರ ಜನಾಂಗದವರ ಸಾಕ್ಷಿಯ ಹಪ್ಪಳಕಾರದ ಜತೆಗೆ ಸೇರಿಸಿ ಬೆಯ್ಯಿಸಲು ಈ ಚೈತನ್ಯರು ಪ್ರಯತ್ನಿಸಿರುವಂತೆ ತೋರುತ್ತದೆ. ವೀರಶೈವಮತೇತರರಾದ ಬ್ರಾಹ್ಮಣರೂ ಇತರ ಸಮಸ್ತ ಜನಾಂಗದವರೂ ಸಹ, ವೀರಶೈವಮತದಲ್ಲಿ ಅನಾದಿಗುರುಪರಂಪರೆಯವರಾರು? ಈಚೆಗೆ ಲಿಂಗವನ್ನು ಕಟ್ಟಿಕೊಂಡಿರುವ ಅವಾಂತರ ವೀರಶೈವರಾರು ? ನೂತನ ಕಲ್ಪಿತ ಗುರುತ್ವದವರಾರು ? ಇತ್ಯಾದಿ ವಿಷಯವನ್ನೆಲ್ಲಾ ನಿರ್ಣಯಿಸಿ ಹೇಳಬಲ್ಲರೆ? ಸುಳ್ಳುವ್ಯಾಜ್ಯವನ್ನು ಗೆಲ್ಲುವುದಕ್ಕೆ ಕಟ್ಟುಸಾಕ್ಷಿಗಳನ್ನು ಅಣಿಮಾಡುವಂತೆ ಈ ಚೈತನ್ಯರು ಪರರ ಉಪಾಶ್ರಯವನ್ನೇ ಬಲವಾಗಿ ಮಾಡಿಕೊಂಡಿರುತ್ತಾರೆ. ಮಠದ ಸ್ವರೂಪವೇನೆಂಬುದನ್ನು ವಿಚಾರಮೂಲಕವೂ ಮತಗ್ರಂಥಾಧಾರಗಳಿಂದಲೂ ಆಚಾರವ್ಯವಹಾರಗಳಿಂದಲೂ ಉತ್ತಮಪದವಿಯ ಅನುಭವ ದೃಷ್ಟಾಂತದಿಂದಲೂ ನಿರ್ಧರಮಾಡಬೇಕೆಂದು ಈ ಚೈತನ್ಯರು ಆಡಿರುವ ಮಾತನ್ನು ಯಾರು ತಾನೇ ಅಲ್ಲಗಳೆಯುವುದಕ್ಕಾದೀತು ? ಅದನ್ನು ನಾನೂ ಸಂತೋಷದಿಂದ ಒಪ್ಪುತ್ತೇನೆ.

ಎತ್ತಿಗ, ಗರಿಕೆ, ಕೊತ್ತತ್ತಿ ಮೊದಲಾದುವುಗಳಲ್ಲಿ ವೀರಶೈವಮತದ ಆಚಾರ್ಯಪೀಠಗಳು ಪೂರ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವುವೆಂದು ಯಾವುದೊಂದು ಶಿವಾಗಮದಲ್ಲೇ ಆಗಲೀ ಪುರಾಣಗಳಲ್ಲೇ ಆಗಲಿ ವೀರಶೈವಶಾಸ್ತ್ರಗ್ರಂಥಗಳಲ್ಲೇ ಆಗಲಿ ಹೇಳಲ್ಪಟ್ಟಿರುವುದನ್ನು ನಾನು ಇದುವರೆಗೂ ನೋಡಿಯೂ ಇಲ್ಲ, ಕೇಳಿಯೂ ಇಲ್ಲ. ಇಂಥ ಊರುಗಳಲ್ಲಿ ಪ್ರಸಿದ್ಧ ವೀರಶೈವಮಠಗಳಿರುವುವೆಂಬುದನ್ನು ಯಾರೂ ಸ್ವಪ್ನದಲ್ಲೂ ಕೇಳಿಲ್ಲ. ಈ ಚೈತನ್ಯರ ಕರೆಸ್ಪಾಂಡೆನ್ಸು ಬಂದ ಮೇಲೆ ಆ ಮಠಗಳ ಪರಿಸ್ಥಿತಿಯೇನು ಹೇಗಿದೆಯೋ ನೋಡಬೇಕೆಂಬ ಲವಲವಿಕೆ ನನಗೆ ಹುಟ್ಟಿತು. ಅಧುಕ್ತಮೂಲೆಯಲ್ಲಿರುವ ಆ ಹಳ್ಳಿಗಳಿಗೆಲ್ಲಾ ಹೋಗುವುದು ಪ್ರಯಾಸಸಾಧ್ಯವಾಗಿ ಕಂಡದ್ದರಿಂದ, ಮೈಸೂರು ಪಟ್ಟಣದಲ್ಲಿ ಒಂದು ಸಂದಿನೊಳಗೆ ತಳೂರುಮಠವಿದೆಯೆಂಬುದನ್ನು ಕೇಳಿ ವಿಚಾರಿಸಿಕೊಂಡುಹೋಗಿ ನೋಡಿದೆ. ಒಳಗೆ ನೋಡುವಲ್ಲಿ ಪರಮಠದ ಮಾಧ್ವರ ಹೆಣ್ಣುಗಂಡುಗಳೇ ತೋರಿದುವು. ಈ ಮಠದ ಗುರುಗಳಲ್ಲಿ ಈ ಸಂಪ್ರದಾಯವೂ ಉಂಟೆ? ಎಂದು ನನಗೆ ಆಶ್ಚರ್ಯವಾಗಿ, ಸ್ವಲ್ಪಹೊತ್ತು ಬೆರಗಾಗಿ ಕುಳಿತು ವಿಚಾರಮಾಡುವಲ್ಲಿ, ಅಲ್ಲಿ ವಾಸವಾಗಿರುವವರು ಒಬ್ಬ ಅಡ್ವೋಕೇಟರೆಂದೂ ಅವರೇ ಮಠದ ಸ್ವಾಮಿಯಾಗಿರುವರೆಂದೂ ಗೊತ್ತಾಯಿತು. ಆ ಮಠದಲ್ಲಿ ಲಿಂಗಧಾರಿಗಳು ಯಾರೂ ಇದ್ದಂತೆಯೇ ತೋರಲಿಲ್ಲ. ಅಲಿಂಗಿಗಳು ವಾಸವಾಗಿರುವ ಒಂದು ಒಟಾರದಲ್ಲಿ ಮಠದ ಗುರುಗಳೆನಿಸಿಕೊಳ್ಳುವ ಸದಾಚಾರಿಗಳ ವಾಸವು ಹೇಗೆ ಸಾಧ್ಯವಾಗಬಹುದು ? ಅಲ್ಲಿಂದ ಹೊರಕ್ಕೆ ಬಂದು ಇತರತ್ರ ವಿಚಾರಮಾಡುವಲ್ಲಿ—ನಾವು ಹುಟ್ಟಿದಾಗಿನಿಂದಲೂ ಈ ಮಠಕ್ಕೆ ಪಟ್ಟಕಟ್ಟಿಸಿಕೊಂಡ ಸ್ವಾಮಿಗಳು ಯಾರೆಂಬುದನ್ನು ನಾವು ಕಂಡೂ ಇಲ್ಲ ಕೇಳಿಯೂ ಇಲ್ಲವೆಂದು ಅನೇಕರು ಹೇಳಿದರು. ಆಶ್ಚರ್ಯದಮೇಲೆ ಆಶ್ಚರ್ಯವಾಯಿತು. ಚೈತನ್ಯರು ಸುಪ್ರಸಿದ್ಧವೆಂದು ಹೇಳಿಕೊಳ್ಳುವ ಮಠಗಳ ಸಾಲಿನಲ್ಲಿ ಮೊದಲನೆಯದಾಗಿ ನಮೂದಿಸಿರುವ ಈ ಮಠದ ಸ್ಥಿತಿಯೇ ಹೀಗಿರುವಾಗ ಸ್ಥಾಲೀಪುಲಾಕನ್ಯಾಯದಿಂದ ಉಳಿದ ಮಠಗಳ ಸ್ಥಿತಿಯ ವಿಮರ್ಶೆಯ ಪ್ರವರ್ತನೆಯೇ ನನಗೆ ಹುಟ್ಟಲಿಲ್ಲ. (ಸಶೇಷ)

ಆರಾಧ್ಯಗುರು.

ನೋಟೀಸ್.

ಬೆಂಗಳೂರು ಸಿಟಿ. ಚಿಕ್ಕಪೇಟೆಯಲ್ಲಿ ಸರಾಫುವ್ಯಾಪಾರ ಮಾಡುತ್ತಲಿದ್ದ ಸೊಲಬೆಲೆ ನಂಜಪ್ಪ ಉರುಫ್ ಶಾಮಣ್ಣನವರಲ್ಲಿ ಗಿರ್ವಿ ಇಟ್ಟಿರತಕ್ಕ ನಗಗಳ ಮಾಲೀಕರು ಇದೇತಿಂಗಳು ಆಖೈರಿನೊಳಗಾಗಿ ಅಸಲು ಬಡ್ಡಿಯನ್ನು ಪೂರಾ ಪಾವತಿಮಾಡಿ ವಾಪಸ್ಸು ಪಡೆಯದ ಪಕ್ಷಕ್ಕೆ ಸದರಿ ಒಡವೆಗಳು ಎಕ್ಸಿಕ್ಯೂಟರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ ರವರ ಇನ್‌ಸ್ಟ್ರಕ್ಷನ್ ಮೇರೆ ಹರಾಜುಮಾಡಲ್ಪಡುತ್ತೆ. ಹರಾಜಿನಲ್ಲಿ ಪೂರಾ ಮೊಬಲಗು ಬಾರದ ಪಕ್ಷಕ್ಕೆ ಬಾಕಿಯಾಗುವ ಮೊಬಲಗನ್ನು ಆಯಾಯ ಮಾಲೀಕರುಗಳಿಂದ ಬರಮಾಡಿಕೊಳ್ಳಲು ಮುಂದಿನ ಕ್ರಮ ಜರುಗಿಸಲ್ಪಟ್ಟೀತು.

ಬೆಂಗಳೂರು ಸಿಟಿ. } ಜಿ ಪರಮಶಿವಯ್ಯ ಅಡ್ವೋಕೇಟ್
10—11—1919. } 2 ಅರಳೇಪೇಟೆ ಚೌಕ.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಸ್ತ್ರೀಯ ಸಮಾಗಮರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡೋ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮಾ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1.4.0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಸ್ಲೀಡರ್,
39 3. ಇರುಳಪ್ಪನಬೀದಿ, ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಸ್ತು ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
9 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ?

ಎಂದಿಗೂ ಅಲ್ಲ.

ಈ ಸುಧಾ ಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರದ ಕಜ್ಜಿಗಳು, ಹುರುಕಜ್ಜಿ, ಮುಂತಾದವುಗಳವೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ಶೀಸೆ 1 ಕ್ಕೆ 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ಶಾಯಿಗಳ, ಪರಬತ್ತುಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಅರುಕಾಸಿನ ಸ್ಟಾಂಪು ರವಾನಿಸಿ ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್, ಬೋರ್ಡು ಮಾಫಿ, ಫಾಯಿದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ಸಿಗಾಕೊಡುವದಿಲ್ಲಾ. ಈದಿನವೇಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎಸ್. & ಕಂಪೆನಿ
6 ತಿಪ್ಪೂರು (ಮೈಸೂರು ಪ್ರಾನ್ಸ್).

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವದು ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ವಾಣಿ ಕಂಪನಿ,
39 ಸಾಹುಕಾರಪೇಟೆ, ಮದರಾಸು.

ಇನ್‌ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 18

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಶಸ್ತ್ರ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಕಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

39 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಿಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಿಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಿಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಿಫಾ,
10 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ನವಂಬರ್ ತಾ|| ೨೩ ರಿಂದ ೧೯೧೯ ನೆಯ ನವಂಬರ್ ತಾ|| ೨೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾರ್ಗಶಿರ ಶು|| ಪಾಡ್ಯಮಿಯಿಂದ ಮಾರ್ಗಶಿರ ಶು|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
23	ಭಾನು	ಪಾಡ್ಯ	37-46	ಅನೂ	23-21	8
24	ಸೋಮ	ಬಿದಿಗೆ	43-10	ಜ್ಯೇಷ್ಠ	29-54	9
25	ಮಂಗಳ	ತದಿಗೆ	48-4	ಮೂಲ	36-5	10
26	ಬುಧ	ಚೌತಿ	52-4	ಪೂಷಾ	41-27	11
27	[1] ಗುರು	ಪಂಚ	55-3	ಉಷಾ	45-47	12
28	[2] ಶುಕ್ರ	ಷಷ್ಠಿ	56-43	ಶ್ರವಣ	48-58	13
29	ಶನಿ	ಸಪ್ತ	57-3	ಧನಿಷ್ಠ	50-50	14

(1) ನಾಗರಪಂಚಮಿ. (2) ಸುಬ್ರಹ್ಮಣ್ಯಸ್ವಾಮಿರಥ, ಚಂಪಾಷಷ್ಠಿ.

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಂತಾರಾ ಪರಮಧಿಗತರಾಜಮಂಡಲಚಿತ್ರಿಪಾ | ಘನಪಥಕೃತಾವತಾರಾ ಪಕ್ಷಜ್ಞ ಸಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರನಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತವಾನಾಕುಲಂ | ಶ್ರೀಮಂಚಿತ್ರೆತಿಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ನವಂಬರ್ ತಾರೀಖು ೩೦ ನೆಯ ಭಾನುವಾರ. (ಸಂಚಿಕೆ ೪೮

MYSORE GOVERNMENT ADVERTISEMENTS.

PUREST raw materials and the FINEST essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

17

ಬಿಕರಿಗೆ ಸಿದ್ಧವಾಗಿದೆ.

ಬೆಂಗಳೂರು ಹೈಗ್ರೌಂಡಿನಲ್ಲಿರುವ ಭಾರೀ ಬೆಲೆ ಬಾಳತಕ್ಕ ಬಂಗಲಿ.

ಬೆಂಗಳೂರು ಸಿಟಿ ಹೈಗ್ರೌಂಡ್ ರೇಸ್‌ಕೋರ್ಸ್ ರೋಡಿನಲ್ಲಿ ಗ್ರ್ಯಾಂಡ್ ಸ್ಟ್ಯಾಂಡಿಗೆ ಎದುರಾಗಿರುವ ಲೇಟ್ ಮೆ|| ದಳವಾಯಿ ದೇವರಾಜ ಅರಸಿನವರ ಬಂಗಲಿ ಮತ್ತು ಅದಕ್ಕೆ ಲಗತ್ತಾದ ಖಾಲಿ ಜಮೀನೂ ಸಹ ಮೇಲ್ಕಂಡ ಸ್ವತ್ತನ್ನು ಆಧಾರಮಾಡಿಕೊಂಡಿರುವ ಸರಕಾರದವರಿಂದ ಸಾದರಾಗಿರುವ ಹುಕುಮುಗಳಿಗನುಸಾರವಾಗಿಯೂ ಲೇಟ್ ಮೆ|| ದಳವಾಯಿ ದೇವರಾಜ ಅರಸಿನವರ ಪ್ರತಿನಿಧಿಗಳ ಒಪ್ಪಿಗೆಯಿಂದಲೂ 1919 ನೆಯ ಇಸವಿ ಡಿಸೆಂಬರ್ 20 ನೆ ತಾರೀಖು ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಸದರೀ ಬಂಗಲಿ ಬಳಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರಿಂದ ಹರಾಜು ಮಾಡಲ್ಪಡುತ್ತದೆ. ಈ ಸ್ಥಿರಸ್ವತ್ತಿಗೆ ಸಂಬಂಧಪಟ್ಟ ಪ್ಲಾನ್ ಮತ್ತು ಖಟ್ಟೆ ವಗೈರೆ ಕಾಗದಪತ್ರಗಳನ್ನು ಹರಾಜಿನಲ್ಲಿ ಸವಾಲ್ ಮಾಡಲು ಉದ್ದೇಶವಿರುವವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರ ಆಫೀಸಿನಲ್ಲಿ ಆಫೀಸ್ ನಡೆಯತಕ್ಕ ದಿನಗಳು ಮತ್ತು ಕಾಲದಲ್ಲಿ ಅಜಮಾಯಿಷಿಮಾಡಬಹುದು. ಹರಾಜು ಬಗ್ಗೆ ಹೆಚ್ಚಿನ ಷರ್ತುಗಳನ್ನು ತಿಳಿಯಲಪೇಕ್ಷೆಯುಳ್ಳವರು ಮೈಸೂರು ಗೆಜೆಟ್ ನವಂಬರ್ 27 ಮತ್ತು ಡಿಸೆಂಬರ್ 4 ಮತ್ತು 11 ನೆ ತಾರೀಖುಗಳ ಸಂಚಿಕೆಗಳನ್ನು ನೋಡಬಹುದಾಗಿದೆ. ಹರಾಜು ಇಸ್ತಿಹಾರ್ ಕಾಪಿಗಳನ್ನು ಡೆಪ್ಯುಟಿ ಕಮಿಷನರ್‌ರವರ ಪರ್ಸನಲ್ ಅಸಿಸ್ಟೆಂಟ್‌ರವರಿಗೆ ಬರದು ತರಿಸಿಕೊಳ್ಳಬಹುದು.

14 ನೆ ನವಂಬರ್ 1919 } ಡೆಪ್ಯುಟಿ ಕಮಿಷನರ್
ಬೆಂಗಳೂರು. } ಬೆಂಗಳೂರು ಡಿಸ್ಟ್ರಿಕ್ಟ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನು ೬೩ ಶೀಲಗಳನ್ನು ವಿವರಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕೋಶಿ:—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಕ್ತಿಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಸಕಲೆ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. ಕಬ್ಬಿಣದ ನೇಗಿಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 5

ನಾವು ಎ. ಅಲ್ ಬ್ರುಕ್ಕ್ಯುಯರ್ ಕ್ಕು ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ನಮ್ಮ
ನರ

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ } ವಿಳಾಸ :—ಎಸ್. ಪಿ. ಕರೇಗೌಡರ
ಕರೇಗೌಡರು ದಾವಣಗೆರೆ. } ಹಾಲಪ್ಪ ಶಿವಲಿಂಗಪ್ಪ,
ಕಮಿಷನ್‌ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

3 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳಿಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
47 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 50

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೩—೦
ಹಂಡಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ನವಂಬರ್ ತಾ|| ೩೦ ನೆಯ ಭಾನುವಾರ.

೯ ನೆಯ ವೀರಶೈವಮಹಾಸಭೆ.

ದಾವಣಗೆರೆಯಲ್ಲಿ ಮೊನ್ನೆಯವರ್ಷ ೮ ನೆಯ ವೀರಶೈವಮಹಾಸಭೆಯು ನಡೆದು ಮುಗಿದಾಗಲೇ ಬೀರೂರಿನ ಪ್ರಮುಖರಾದ ಮ|| ಪತ್ರೆ ಜಂ|| ವೀರಪ್ಪಯ್ಯನವರೇ ಮೊದಲಾದ ಮಹಾಜನರು ೯ ನೆಯ ಸಭೆಯನ್ನು ತಮ್ಮ ಸ್ಥಲದಲ್ಲಿ ನೆರವೇರಿಸುವುದಕ್ಕೆ ಆಹ್ವಾನಿಸಿಕೊಂಡರು. ಆನೇಪ್ರಕಾರ ಕಳೆದವರ್ಷ ತಮ್ಮಲ್ಲಿ ಈ ಸಭೆಯನ್ನು ನಡೆಯಿಸುವುದಕ್ಕೆ ತಕ್ಕ ಸನ್ನಾಹಗಳನ್ನು ಅವರು ಮಾಡಿಕೊಂಡರೂ ಎಲ್ಲರ ಅನುಭವಕ್ಕೂ ಬಂದಿರುವ ಇನ್‌ಫ್ಲುಯಂಜಾ ರೋಗದ ಹಾವಳಿಯಕಾರಣದಿಂದ ಆ ಪ್ರಯತ್ನಕ್ಕೆ ಭಂಗಬಂದಿತು. ಈವರ್ಷ ಬೀರೂರಿನವರ ಉದ್ದೇಶವು ಹೇಗಿದೆಯೆಂಬುದು ಗೊತ್ತಾಗದಿರಲು, ರಾಜಧಾನಿಯ ವೀರಶೈವ ಮಹಾಜನರು ೯ ನೆಯ ಸಭೆಯನ್ನು ತಮ್ಮಲ್ಲಿ ನೆರೆಯಿಸಬೇಕೆಂದು ಪ್ರಯತ್ನಿಸಿದರು. ಆದರೆ ತಮ್ಮ ವ್ರತಸಂಕಲ್ಪಕ್ಕೆ ಚ್ಯುತಿ ತಂದುಕೊಳ್ಳುವುದು ಬೀರೂರಿನವರಿಗೆ ಸಮಾಧಾನಕರವಾಗದುದರಿಂದ ಅವರು ಮಹಾಸಭಾ ನಿವರ್ತನದಲ್ಲಿ ತಮಗಿರುವ ಗಾಢಸಂಕಲ್ಪವನ್ನು ವ್ಯಕ್ತಪಡಿಸಿದರು. ಸ್ಟ್ಯಾಂಡಿಂಗ್ ಕಮಿಟಿಯವರೂ ಇತರರೂ ಅವರ ಪ್ರಯತ್ನಕ್ಕೇ ಅನುಮೋದನ ಕೊಡಬೇಕಾಯಿತು. ಪ್ರಕೃತಕ್ಕೆ ಮೈಸೂರುದೇಶದ ರಾಜಧಾನಿಯಲ್ಲಿ ಮಹಾಸಭೆ ನಡೆಯುವುದು ನಿಂತರೂ ಮೈಸೂರುದೇಶಕ್ಕೆ ಸೇರಿದ ಬೇರೊಂದು ಸ್ಥಲದಲ್ಲೇ ಇದು ನಡೆಯುವಂತಾಗಿರುವುದು ಮೈಸೂರಿನವರಿಗೆಲ್ಲಾ ಸಂತೋಷಪ್ರದವೇ ಆಗುವುದು. ಬೀರೂರು ಸಾಮಾನ್ಯವಾದ ಒಂದು ತಾಲ್ಲೂಕು ಸ್ಥಲವು. ಅಡಿಕೆಯ ವ್ಯಾಪಾರ ವಿಷಯದಲ್ಲಿ ಅದು ಸ್ವಲ್ಪ ಪ್ರಸಿದ್ಧಿಗೆ ಬಂದಿರುವುದು. ಆದರೂ ಅಲ್ಲಿಯ ವೀರಶೈವಜನರ ಅಭಿಮಾನ ಜ್ಯೋತಿಯು ತೇಜೋವತ್ತಾಗಿದ್ದುದರಿಂದ ಮಹಾಸಭೆಯು ಅಲ್ಲಿ ನಡೆಯುವುದಕ್ಕೆ ಕಾರಣವಾಗಿ, ಧಾರ್ಮಿಕಸಂಬಂಧವಾಗಿ ಧಾರವಾಡ ಬೆಂಗಳೂರು ಸೊಲ್ಲಾಪುರ ಬಳ್ಳಾರಿ ಮೊದಲಾದ ಮಹಾಪಟ್ಟಣಗಳ ಸಾಲಿಗೆ ಅದೂ ಬಂದು ಸೇರುವಂತಾಯಿತು. ಈ ಪಟ್ಟಣಕ್ಕೆ ಇಂಥ ಅಪೂರ್ವ ಕೀರ್ತಿಯೋಗವನ್ನು ತಂದುಕೊಂಡುದು ಅಲ್ಲಿಯ ಮಹಾಜನರಿಗೆ ವಿಶೇಷ ಭೂಷಣಪ್ರದವು. ಅದರಲ್ಲೂ ಮಹಾಸಭೆಯ ವೆಚ್ಚಕ್ಕೆ ಬೇಕಾಗುವ ಧನವನ್ನೆಲ್ಲಾ ಅನ್ಯತ್ರ ಯಾಚನೆಯಿಲ್ಲದೆ ತಂತಮ್ಮಲ್ಲೇ ಒದಗಿಸಿಕೊಂಡಿರುವುದು ಮತ್ತಷ್ಟು ಪ್ರಶಂಸನೀಯವಾಗಿರುತ್ತದೆ. ಅಭಿಮಾನಾಧಿಕ್ಯದಿಂದ ಸಮಾಜಸೇವೆಯಲ್ಲಿ ಕುತೂಹಲಪಟ್ಟು ಇವರು ಕೈಕೊಂಡಿರುವ ಕಾರ್ಯಕ್ಕೆ ಭರತಖಂಡದ ಎಲ್ಲಭಾಗಗಳ ವೀರಶೈವರೂ ಅವಲಂಬನವನ್ನಿತ್ತು ತಮ್ಮೆಲ್ಲ ಭಾಗಗಳಿಂದಲೂ ಪ್ರತಿನಿಧಿಗಳನ್ನೂ ಪ್ರೇಕ್ಷಕರನ್ನೂ ಕಳುಹಿಸಿಕೊಟ್ಟು ಮಹಾಸಭಾಕಾರ್ಯವನ್ನು ಸಲಕ್ಷಣವಾಗಿಯೂ ಫಲಪ್ರದವಾಗಿಯೂ ನಡೆಯುವಂತೆ ಮಾಡುವವರಾಗಬೇಕು.

ಕಳೆದವರ್ಷವೇ ಈ ಮಹಾಸಭೆಯು ಅಲ್ಲಿ ನೆರೆದಿದ್ದರೆ ಆಗಿನ ನಿರ್ಧಾರ ಪ್ರಕಾರ ಶ್ರೀಮಂತ ಅಲ್‌ಮೇಲ್ ದೇಸಾಯಿರವರು ಅದರ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದಿತು. ಈಗಣ ಸಂದರ್ಭದಲ್ಲಿ ಧಾರವಾಡದ ರಿಟೈರ್ಡ್ ಡಿಸ್ಟ್ರಿಕ್ಟ್ ಡಿ|| ಕಲೆಕ್ಟರ್ ಮ|| ಶಾಂತವೀರಪ್ಪನವರಿಗೆ ಇದರ ಅಧ್ಯಕ್ಷತೆಯು ದೊರೆಯುವುದಾಗಿದೆ. ಅಲ್‌ಮೇಲ್ ದೇಸಾಯರವರೇ ಈ ಸಲದ ಅಧ್ಯಕ್ಷಸ್ಥಲವನ್ನು ತ[illegible]ಯರೂ ಅನುಭವಿಗಳೂ ಮಾನ್ಯರೂ ಆದ ಮ|| [illegible]ವೀರಪ್ಪನವರಿಗೇ ವಹಿಸಿಕೊಡುವಲ್ಲಿ ತಮ್ಮ ಒಪ್ಪಿಗೆಯನ್ನು ಸಮಾಜಕ್ಕೆಲ್ಲಾ ನಿವೇದಿಸಿಕೊಂಡಿರುತ್ತಾರೆ. ಮ|| ಶಾಂತವೀರಪ್ಪನವರಿಗೆ ಮಹಾಸಭೆಯ ಅಧ್ಯಕ್ಷತೆಯು ಒಪ್ಪಿಸಲ್ಪಟ್ಟುದಕ್ಕಾಗಿ ನಾವು ಸಂತೋಷಿಸಿ ಈ ಮೂಲಕ ಅಭಿನಂದಿಸುತ್ತೇವೆ. ಈ ಪದವಿಗೆ ಸರ್ವಪ್ರಕಾರದಿಂದಲೂ ಅವರು ಅರ್ಹರಾಗಿರುತ್ತಾರೆ. ಮಹಾಸಭೆಯು ಜನ್ಮನೆತ್ತಿದಾರಭ್ಯ ಅವರು ಪ್ರತಿಯೊಂದು ಸಭಾಕಾರ್ಯದಲ್ಲೂ ಅಂಗವಾಗಿದ್ದುಕೊಂಡು (ಅನಿವಾರ್ಯಕಾರಣಗಳಿಂದ ಒಂದೆರಡು ಸಭೆಗಳ ಹೊರತು) ಮನಮುಟ್ಟಿ ಸಮಾಜಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಗೆ ಮೊದಲಿಂದಲೂ ಇವರೇ ಚೇರ್ಮನ್ನರಾಗಿರುತ್ತಾರೆಂಬುದು ಗೊತ್ತೇ ಇದೆ. ಅಲ್ಲದೆ ಧಾರ್ವಾಡದಲ್ಲಿರುವ ವೀ|| ವಿದ್ಯಾಭಿವೃದ್ಧಿ ಫಂಡ್ ಸಂಘಕ್ಕೆ ಪ್ರೆಸಿಡೆಂಟರಾಗಿರುವುದಲ್ಲದೆ, ಮತಸಂಬಂಧವಾದ ಪ್ರತಿಯೊಂದು ಕಾರ್ಯಗಳಲ್ಲೂ ಮುಂದಾಗಿರುತ್ತಾರೆ. ಮುಂಬಯಿ ಕರ್ಣಾಟಕದ ವೀರಶೈವ ಪ್ರಜಾಮಂಡಲದ ಅಗ್ರೇಸರರ ಕೋಟಿಯಲ್ಲಿ ಇವರು ಗಣ್ಯರಾಗಿರುತ್ತಾರೆ. ಸರ್ಕಾರದ ಕೆಲಸದಲ್ಲಿ ಧೀಮತ್ತೆಯನ್ನು ವ್ಯಕ್ತಪಡಿಸಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರ್ ಗಿರಿಯವರೆಗೂ ಏರಿ ವಿಶ್ರಾಂತಿಯನ್ನು ಪಡೆದಿರುವುದಲ್ಲದೆ ಮೊನ್ನೆಯವರೆಗೆ ಧಾರ್ವಾಡದ ಟವುನ್ ಮ್ಯುನ್ಸಿಪಾಲಿಟಿಯ ಮಾನನೀಯಾಧ್ಯಕ್ಷರಾಗಿ ಕೆಲಸಮಾಡುತ್ತಿದ್ದರು. ಎಲ್ಲಕ್ಕಿಂತಲೂ ಮಿಗಿಲಾಗಿ ಇವರಲ್ಲಿರುವ-ಪ್ರಸಕ್ತಸಂದರ್ಭಕ್ಕೆ ಅತ್ಯಂತ ಗಮನೀಯವಾದ ಗುಣವೆಂದರೆ ಸಮಾಜಾಭ್ಯುದಯ ಪರಿಚಿಂತನೆಯೇ ಆಗಿರುತ್ತದೆ. ಸಾಮಾಜಿಕಕಾರ್ಯದ ಮಹಾಸಭೆಯ ಅಧ್ಯಕ್ಷತೆಗೆ ಮುಖ್ಯವಾಗಿ ಅಂಥ ಗುಣವುಳ್ಳವರೇ ವಿಶೇಷತಃ ಅರ್ಹರು. ಸಭೆಯಕಡೆಗೆ ಒಂದುಸಲವೂ ಕಣ್ಣೆತ್ತಿನೋಡದವರು ಎಂಥ ಬಿ. ಎ., ಬಿ. ಎಲ್., ಗಳಾಗಿದ್ದರೂ, ಎಷ್ಟೇ ಐಶ್ವರ್ಯವಿರಾಜಿತರಾಗಿದ್ದರೂ, ಇತರ ವಿಧವಾದ ಎಷ್ಟೇ ಸಂಪತ್ತುಳ್ಳವರಾಗಿದ್ದರೂ, ಅಭಿಮಾನರಾಹಿತ್ಯದಿಂದ ಯಾವದ್ವೀರಶೈವ ಸಮಾಜ ಪ್ರತಿನಿಧಿಯಾದ ಮಹಾಸಭೆಯ ಅಧ್ಯಕ್ಷತಾಗೌರವವನ್ನು ಪಡೆಯಲಿಕ್ಕೆ ಎಂದಿಗೂ ಅರ್ಹರೆನಿಸಿಕೊಳ್ಳುವುದಿಲ್ಲ. ಮ|| ಶಾಂತವೀರಪ್ಪನವರು ಈ ಪದವಿಗೆ ಅರ್ಹರೆಂಬುದನ್ನು ಸಮಾಜವೆಲ್ಲವೂ ಒಪ್ಪಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅದುಕಾರಣ ಇವರ ಅಧ್ಯಕ್ಷತಾ ಪರವಾದ ಉಪನ್ಯಾಸವು ಸಮಾಜಕ್ಕೆ ಕಾಲೋಚಿತವಾದ ದಿಗ್ದರ್ಶನವನ್ನು ಮಾಡುವಲ್ಲಿ ಸಮರ್ಥವಾಗಿರಬಲ್ಲುದೆಂದು ಎಣಿಸುತ್ತೇವೆ.

ಈ ಸಲದ ಸಭೆಯಲ್ಲಿ ಚರ್ಚಿಗಿಡಲ್ಪಟ್ಟಿರುವ ವಿಷಯಗಳು ಕೂಡ ಪರಿಮಿತವಾಗಿಯೇ ಇರುತ್ತವೆ. ಹಾಗಿರಬೇಕಾದುದೇ ಅವಶ್ಯಕ. ಹೆಚ್ಚು ವಿಷಯಗಳನ್ನಿಟ್ಟುಕೊಂಡು ಉಪನ್ಯಾಸಗಳಿಗೆ ಅವಕಾಶವೇ ಸಾಲದಂತೆ ಮಾಡಿಕೊಳ್ಳುವುದು ಉಚಿತವಲ್ಲ. ಮತ್ತೂ ಗೊತ್ತಾದವಿಷಯಗಳಮೇಲೆ ಮನಸ್ಸಿಗೆ ಬಂದವರೆಲ್ಲಾ ಉಪನ್ಯಾಸಗಳನ್ನು ಬರೆತಂದು ಓದುವುದಕ್ಕೆ ಯತ್ನಿಸುವುದಕ್ಕಿಂತಲೂ, ಉಪನ್ಯಾಸ ಕಲೆಯಲ್ಲಿ ನುರಿತ ಅನುಭವಸ್ಥರಾದ ಜನರ ಉಪನ್ಯಾಸಗಳು ಜರುಗಲಿಕ್ಕೆ ಅವಕಾಶಕೊಟ್ಟು, ಅವರ ಮುಖಗಳಿಂದ ಬರುವ ಉಪದೇಶಾಮೃತವನ್ನು ಪಾನಮಾಡಲಿಕ್ಕೆ ಅಪೇಕ್ಷೆಪಡುವುದೇ ಒಳ್ಳೇದು. ನಿರ್ಧಾರಗೊಳ್ಳಬೇಕಾದ ವಿಷಯಗಳ ಪಟ್ಟಿಯಲ್ಲಿ ಮಹಾಸಭೆಯ ಚಿರಸ್ಥಾಯಿ ಫಂಡಿನ ವ್ಯವಸ್ಥೆಯನ್ನು ಮೊದಲನೆಯದನ್ನಾಗಿ ಇಟ್ಟಿರುವುದು ಯುಕ್ತವಾಗಿದೆ. ಈ ಕೆಲಸವು ಅವಶ್ಯಕವಾಗಿ ಆಗಬೇಕಾದುದೇ. ಕಳೆದಸಭೆಯಲ್ಲಿ ಈ ಫಂಡಿಗೆ ೭೨ ಸಾವಿರ ಚಿಲ್ಲರೆ ರೂ. ಗಳ ವರ್ಗಣಿಯಾದುದರಲ್ಲಿ ಆ ಸಭೆಯೊಳಗೇ ಕೂಡಿಹೋದ ೩೭ ಸಾವಿರ ರೂ.ಗಳ ಹೊರತು ಉಳಿದ ಹಣವನ್ನು ಆಯಾ ದಾತ್ಯಾಗಳಿಂದ ಬರಮಾಡಿಕೊಳ್ಳಲು ಯಾವ ಪ್ರಯತ್ನವೂ ಮಾಡಲ್ಪಟ್ಟಂತೆ ಕಾಣಲಿಲ್ಲ. ಅದು ಮುಂದೆ ತ್ವರ್ಯವಾಗಿ ನಡೆಯುವುದಕ್ಕೂ, ಈ ಫಂಡು ಲಕ್ಷದ ಅವಧಿಯನ್ನು ಕಾಣುವಂತೆ ಮಾಡುವುದಕ್ಕೂ ತಕ್ಕ ಕೆಲಸವು ನಡೆಯಬೇಕಾಗಿದೆ. ಅಲ್ಲದೆ ಈ ಫಂಡಿನಯೋಜನಾವ್ಯವಸ್ಥೆಯು ಸರ್ವ ಸಮರ್ಪಕವಾಗಿಯೂ ನಿರುಪಾಧಿಕ ರೀತಿಯಿಂದಲೂ ಆಗಬೇಕು. ಉಳಿದ ವಿಷಯಗಳು ಕೂಡ ಕಾಲೋಚಿತವಾಗಿಯೂ ಪರ್ಯಾಲೋಚನೀಯವಾಗಿಯೂ ಇರುತ್ತವೆ.

ಈ ಸಲದ ಸಭೆಯಲ್ಲಿ ಮತ್ತೊಂದು ಅಪೂರ್ವಸಂಯೋಗವಾಗುವ ಸಂಭವವಿದೆಯೆಂದು ನಾವು ಕೇಳಿದ್ದೆವು. ಅದರ ನಿಜಸ್ಥಿತಿಯು ಇನ್ನೂ ಚೆನ್ನಾಗಿ ತಿಳಿಯದು. ಅದಾವುದೆಂದರೆ—ಶ್ರೀಮತ್[illegible]ಸಿಂಹಾಸನಾಧ್ಯಕ್ಷ ಜಗದ್ಗುರುಗಳನ್ನೂ ಈ ಮಹಾಸಭೆ[illegible]ಕ್ಕೆ ಬರಮಾಡಿಕೊಳ್ಳಬೇಕೆಂಬುದಾಗಿರುತ್ತದೆ. ಕಳೆದ ಮ[illegible]ಭಾಕಾಲಕ್ಕೆ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾ[illegible]ವರ ಆಗಮನವಾಗಿದ್ದುದರಿಂದ ಮಹಾಸಭೆಯ ಚಿರಸ್ಥಾಯಿ ಫಂಡು ಅವರ ಆಗಮನಸ್ಮಾರಕವಾಗಿ ಉದಯಗೊಳ್ಳಲು ಅವಕಾಶವಾಯಿತು. ಮಹಾಸಭೆಯ ವಿಜೃಂಭಣೆಯೂ ವಿಶೇಷತಃ ಆಯಿತು. ಈಗ ಪಂಚಸಿಂಹಾಸನ ಜಗದ್ಗುರುಗಳೂ ಏಕತ್ರ ಕೂಡುವುದಾದರೆ ಈ ಸಲದ ಮಹಾಸಭೆಯು ಅಭೂತಪೂರ್ವವೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಮತ್ತು ಅವರುಗಳ ಕೃಪಾಶೀರ್ವಾದಬಲದಿಂದ ಚಿರಸ್ಥಾಯಿ ಫಂಡು ಲಕ್ಷದ ಅವಧಿಯನ್ನು ಮುಟ್ಟುವುದು ಮಾತ್ರವೇ ಅಲ್ಲದೆ ಮೈಸೂರು ದೇಶದ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಪರಿಪುಷ್ಟಿಯೂ ಕೂಡ ತಕ್ಕ ರೀತಿಯಿಂದ ಆಗಲು ಸಾಧಕವಾದೀತೆಂದು ನಿರೀಕ್ಷಿಸುತ್ತೇವೆ. ಆದರೆ ಬೀರೂರಿನಂಥ ಸಣ್ಣ ಊರಿನಲ್ಲಿ ಆ ಪಂಚಸಿಂಹಾಸನಾಧೀಶರನ್ನೂ ಅವರವರ ಘನತೆಗಳಿಗೆ ತಕ್ಕಂತೆಯೂ ಕೊರತೆ ಬಾರದಂತೆಯೂ ಸತ್ಕರಿಸುವ ಕಾರ್ಯಭಾರವು ಮಾತ್ರ ಸಾಮಾನ್ಯವಾಗಿರಲಾರದು.

ಈ ಪಂಚಪೂಜ್ಯಪಾದರುಗಳ ಪ್ರತ್ಯಕ್ಷಾಗಮನದಿಂದ ಸಮಾಜದ ಏಕಮತ್ಯಾಭಿವೃದ್ಧಿಗೆ ಮತ್ತಷ್ಟು ಸಾಹಾಯ್ಯಕವಾಗುವುದಾದರೆ ಅದು ದೊಡ್ಡ ಪ್ರಯೋಜನವಾಗಿ ತಿಳಿಯಲ್ಪಡುವುದು. ಈಗ ಕೆಲವರು ಅದೂರದರ್ಶಿಗಳು “ಅವರು ದೊಡ್ಡವರು; ಇವರು ಚಿಕ್ಕವರು; ಅವರು ಗುರುಗಳು; ಇವರು ಶಿಷ್ಯರು” ಎಂಬ ಸಿದ್ಧಾಂತವನ್ನು ನೂತನವಾಗಿ ಮಾಡಿ ತೋರಿಸುವುದಕ್ಕೆ ಹೊರಟು, ನಿಷ್ಕಾರಣವಾಗಿ ತುಂಬಿದ ಪಟ್ಟಣದಲ್ಲಿ ಸಿಡಿಮದ್ದನ್ನಿಟ್ಟು ಗಲಭೆಯನ್ನು ಎಬ್ಬಿಸುವಂಥ ಶಾಂತಿಭಂಗಪ್ರಯತ್ನವನ್ನು ಮಾಡುತ್ತಿದ್ದಾರೆ. ಆದಿಯಿಂದಲೂ ಮಹಾಸಭೆಯ ಉದ್ದೇಶವು ಸಮಾಜದಲ್ಲಿ ಕೂಡಿದಮಟ್ಟಿಗೂ ಅನೈಕ್ಯವನ್ನು ನಿರ್ಮೂಲಿಸಿ ಏಕಮತ್ಯವನ್ನು ಹೆಪ್ಪುಗಟ್ಟಿಸುವುದೇ ಆಗಿರುತ್ತದೆ. ಲೋಕದಲ್ಲಿ ಅಜ್ಞಸ್ತೋಮವೇ ಹೆಚ್ಚಾಗಿರುವುದರಿಂದ ಹಿಡಿದ ಪ್ರಯತ್ನವೆಲ್ಲಾ ಸುಲಭವಾಗಿ ಕೈಗೂಡುವುದು ಅಸಾಧ್ಯವಾಗಿರುತ್ತದೆ. ಆದರೂ ಹಿಡಿದ ಪಟ್ಟನ್ನು ಬಿಡದೆ ಉದ್ದೇಶವನ್ನು ಸಾಧಿಸುವುದು ವರ್ಧಿಷ್ಣುಗಳ ಲಕ್ಷಣವಾಗಿರುತ್ತದೆ. ಅದಕ್ಕಾಗಿ ಅವರುಗಳು ಸಾಧ್ಯವಾದಷ್ಟು ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ. ಸಮಾಜದ ವಿದ್ಯಾವಂತರ ಧೀಮಂತರ ಶ್ರೀಮಂತರ ಸಾಮರ್ಥ್ಯಗಳೆಲ್ಲಾ ಈಗ ಸಮಾಜದ ಸಾರ್ವತ್ರಿಕ ಪುರೋಭಿವೃದ್ಧಿ ಸಾಧನೆಗೆ ವಿನಿಯೋಗವಾಗಬೇಕಾದುದು ಅತ್ಯವಶ್ಯಕವಾಗಿರುವಲ್ಲಿ ಕಲಿತವಿದ್ಯೆಯನ್ನು, ಕೆರೆದು ಗಾಯಮಾಡಿಕೊಳ್ಳುವಂತಹ ಅಕಾರ್ಯಕ್ಕೆ ಉಪಯೋಗಿಸುವುದನ್ನು ಸಮಾಜವು ಎಂದಿಗೂ ಸಹಿಸದು. ಜಗದ್ಗುರುತ್ವವೇ ಆಗಲೀ ಸಾಮಾನ್ಯಗುರುತ್ವವೇ ಆಗಲೀ ಈಗ ಮಾತಿನ ಆಧಾರಗಳಿಗಿಂತಲೂ ಅವರವರ ಕ್ರಿಯೆಯನ್ನೇ ಹೆಚ್ಚಾಗಿ ಅಧರಿಸಿಕೊಂಡಿರುತ್ತವೆ. ಯೂರೋಪು ಖಂಡದಲ್ಲಿ ನಿರುಪಾಧಿಕವೆಂದು ತಿಳಿಯಲ್ಪಟ್ಟಿದ್ದ ದೊಡ್ಡದೊಡ್ಡ ಪ್ರಭುತ್ವಗಳು ಕೂಡ ಕರ್ತವ್ಯನ್ಯೂನತೆಯಿಂದ ಈಗ ಎಂಥ ಪ್ರಳಯಕ್ಕೆ ಒಳಗಾಗಿ ನಾಮಾವಶೇಷವಾದುವೆಂಬುದನ್ನು ಪ್ರಪಂಚವೇ ನೋಡುತ್ತಿದೆ. ಈ ಮಾತಿನಿಂದ ನಿರಾಧಾರವಾಗಿ ತಮ್ಮ ಪ್ರಕೃತಕಾರ್ಯವೈಭವದಿಂದಲೇ ಯಾರು ಬೇಕಿದ್ದರೂ ಜಗದ್ಗುರುತ್ವವನ್ನು ಸಂಪಾದಿಸಿಕೊಳ್ಳಬಲ್ಲರೆಂದುಹೇಳುವುದು ನಮ್ಮಭಿಪ್ರಾಯವಲ್ಲ. ಸಾಧಾರವಾಗಲ್ಲದೆ ನಿರಾಧಾರವಾಗಿ ಅದನ್ನು ಆರ್ಜಿಸುವುದು ಯಾರಿಗೂ ಶಕ್ಯವಲ್ಲ. ಸಂಪ್ರದಾಯಸಿದ್ಧವಾಗಿ ಬಂದಿರುವುದನ್ನು ನಿರ್ನಾಮ ಮಾಡಿಬಿಡುತ್ತೇವೆಂಬುದು ಕೂಡ ಸಾಧ್ಯವಲ್ಲ. ಆದರೆ ತಮ್ಮದು ಸಾಧಾರವಾದ ಗುರುತ್ವವೆಂದು ತಿಳಿದು ಮನಸ್ಸಿನ ಮಂಡಿಗೆಯನ್ನು ತಿನ್ನುತ್ತ ತಮ್ಮ ನಿಜವಾದಕರ್ತವ್ಯವನ್ನು ಮಾಡದೆ ಕುಳಿತರೆಮಾತ್ರ ಅಂಥ ಗುರುತ್ವಾದಿಗಳು ಇದ್ದರೂ ಇಲ್ಲದಂತೆಯೇ ಆಗುತ್ತವೆ. ಯಾವ ಉದ್ದೇಶದಿಂದ ಪೂಜ್ಯಪಾದ ಪೀಠಗಳು ಆದಿಕಾಲದಲ್ಲಿ ಪ್ರತಿಷ್ಠಾಪಿಸಲ್ಪಟ್ಟವೋ ಆ ಉದ್ದೇಶವನ್ನು ಕಾರ್ಯತಃ ನೆರವೇರಿಸುತ್ತಿರುವವರ ಕಡೆಗೇ ಸಮಾಜದ ಗೌರವದೃಷ್ಟಿಯು ಹರಿಯುವುದು ಸಹಜವಾಗಿರುತ್ತದೆ. ಇದನ್ನು ಲಕ್ಷಿಸಿ ಯಾವುದೊಂದು ದೊಡ್ಡಪೀಠದವರೇ ಆಗಲಿ ಚಿಕ್ಕಮಠದವರೇ ಆಗಲಿ ಆತ್ಮವೈಭವದಲ್ಲೇ ಮುಳುಗಿ ತೇಲದೆ, ತಾವೂ ಕೂಡ ಸಮಾಜಧರ್ಮಸೇವಕರೇ ಎಂಬ ನಿರಹಂಭಾವದಿಂದ ಕೆಲಸಮಾಡುತ್ತ ಬಂದರೆ, ಅವರೂ ಧನ್ಯರಾಗಿ ಅವರ ಪೂಜ್ಯತೆಯು ಲೋಕೋತ್ತರವಾಗಿ ಬೆಳೆದು, ಕೀರ್ತಿಯು ದಿಗಂತವ್ಯಾಪ್ತವಾಗುತ್ತದೆ. ಅಂಥವರಿಂದ ಸಮಾಜಕ್ಕೆ ನಿಜವಾದ ಫಲವುಂಟಾಗಿ ಸಮಾಜದವರು ಆಯಾ ಮಠಾಧೀಶರುಗಳಿಗೆ ಕೊಡತಕ್ಕ ಕಾಣಿಕೆಯೂ ಭಿಕ್ಷೆಯೂ ಸಾರ್ಥಕವಾಗುತ್ತವೆ. ಅಂಥ ಜಗದ್ಗುರುಗಳ ಸಂಖ್ಯೆಯು ಎಷ್ಟು ಹೆಚ್ಚಿದರೂ ಅವರಿಗೆ ಸಮಾಜವು ಲೋಕೋತ್ತರವಾದ ಮರ್ಯಾದೆಯನ್ನೂ ಸೇವೆಯನ್ನೂ ಮಾಡಲು ಸಿದ್ಧವಾಗಿರುತ್ತದೆ. ಇದನ್ನು ಬಿಟ್ಟು ತಮ್ಮ ಕರ್ತವ್ಯದಲ್ಲಿ ಅಲಸರಾಗಿ ಬರಿಯ ಕಲಹಮೂಲಕವಾಗಿ ತಮ್ಮ ಸರ್ವಸಂಮಾನ್ಯತೆಯನ್ನು ಸ್ಥಾಪಿಸಿಕೊಳ್ಳುತ್ತೇವೆಂದು ಯತ್ನಿಸುವುದು ವಿಚಕ್ಷಣತೆಯೆನಿಸಿಕೊಳ್ಳುವುದಿಲ್ಲ. ಪ್ರಕೃತದಲ್ಲಿ ಪಂಚಸಿಂಹಾಸನಾಧಿಪತ್ಯವನ್ನು ವಹಿಸಿಕೊಂಡಿರುವ ಪೂಜ್ಯಪಾದರುಗಳಲ್ಲಿ ಈ ವಿಧವಾದ ಪರಸ್ಪರ ಮಾತ್ಸರ್ಯವರ್ಧಕವಾದ ಮತ್ತು ಸಮಾಜಹಿತಕ್ಕೆ ಘಾತಕವಾದ ಕುತ್ಸಿತಪ್ರಯತ್ನಗಳಿಗೆ (ಅವರು ಜಗದ್ಗುರುಗಳಲ್ಲ, ನಾವೇ ಜಗದ್ಗುರುಗಳು ಎಂದು ಹೇಳಿಕೊಳ್ಳುವುದೇ ಮೊದಲಾದ ಉಜ್ಜುಗಗಳಿಗೆ) ಅನುಮೋದಕರೂ ಪ್ರೋತ್ಸಾಹಕರೂ ಯಾರೂ ಇರಲಾರರೆಂದು ನಂಬುತ್ತೇವೆ. ಜಗದ್ಗುರು ಪೀಠಾಧಿಪತಿಗಳೂ ಮತ್ತು ಇಂಥ ಮಹಾಸಭೆಯವರೂ ಸಹ ದುಷ್ಫಲದಾಯಕವಾದ ಇಂಥ ಕ್ಷುಲ್ಲಕಯತ್ನಗಳಿಗೆ ವಾಕ್ಕಿನಿಂದಲೂ ಕಾರ್ಯದಿಂದಲೂ ಸಹ ನಿಷೇಧವನ್ನು ವ್ಯಕ್ತಗೊಳಿಸಿ ಹುಟ್ಟಣಗಿಸಬೇಕಲ್ಲದೆ, ಇಂಥ ಘಾತಕಪ್ರಯತ್ನಗಳಿಗೆ ಮುಂದೆ ಯಾರೂ ಉಜ್ಜುಗಿಸದಂತೆ ಮಾರ್ಗದರ್ಶನವನ್ನು ಮಾಡಿಡಬೇಕಾದುದು ಅವಶ್ಯಕವಾಗಿರುತ್ತದೆ. ಪೂಜ್ಯಪಂಚಸಿಂಹಾಸನಾಧೀಶರೂ ಈ ಮಹಾಸಭೆಗೆ ದಯಮಾಡಿಸುವುದಾದರೆ ಇಂಥ ಸ್ಮರಣೀಯಕಾರ್ಯವು ಅವರ ಪ್ರತ್ಯಕ್ಷದಲ್ಲೇ ನಡೆಯಬೇಕು. ಆಗ್ಗೆ ಅವರುಗಳ ಪ್ರತ್ಯಕ್ಷಾಗಮನವು ಸ್ಮರಣೀಯವಾಗುವುದಲ್ಲದೆ ಅವರುಗಳ ಧೀರೋದಾತ್ತಘನತೆಯು ಸುವ್ಯಕ್ತವೂ ಆಗುವುದು.

ಮುಖ್ಯವಾಗಿ ಸಮರ್ಥರಾದ ಸಭಾಧ್ಯಕ್ಷರ ದೀರ್ಘದರ್ಶಿತೆಯೂ, ಬೀರೂರಿನವರ ನಿರತಿಶಯ ಸಮಾಜಾಭಿಮಾನವೂ, ಮತಭಾಂಧವರ ಧರ್ಮಸೇವಾಭಿರತಿಯೂ ಒಬ್ಬುಳಿಗೊಂಡು ೯ನೆಯ ಮಹಾಸಭೆಯನ್ನು ಯಶಃಪ್ರದವಾಗಿ ಕೊನೆಮುಟ್ಟುವಂತೆ ಮಾಡಲೆಂದು ಕೋರುವೆವು.

ವೈಸ್‌ರಾಯರು ಮೈಸೂರು ಸೀಮೆಯಲ್ಲಿ ಸಂಚರಿಸುವ ಕಾಲಕ್ರಮ.

ತಾ|| 27 ನೆಯ ಗುರುವಾರ ಬೆಳಿಗ್ಗೆ.—ಬೆಂಗಳೂರನ್ನು ತಲುಪುವರು (ಬಹಿರಂಗವಾಗಿ). ದಂಡಿನ ಮ್ಯುನಿಸಿಪಾಲಿಟಿಯವರೂ ಕೊಡಗಿನ ತೋಟದ ಸಂಘದವರೂ ಒಪ್ಪಿಸುವ ವಿಜ್ಞಾಪನಪತ್ರವನ್ನು ಸ್ವೀಕರಿಸುವರು.

ವೈಸ್‌ರಾಯಪತ್ನಿಯವರು ದಂಡಿನಲ್ಲಿರುವ ಲೇಡಿ ಕರ್ಜನ್ ಮತ್ತು ಬೌರಿಂಗ್ ಆಸ್ಪತ್ರೆಗಳನ್ನೂ ಸಿಟಿಯಲ್ಲಿರುವ ವಿಕ್ಟೋರಿಯಾ, ಮಿಂಟೊ ಆಸ್ಪತ್ರೆಗಳನ್ನೂ ವಾಣಿವಿಲಾಸ ಬಾಲಿಕಾ ಹೈಸ್ಕೂಲನ್ನೂ ಪರಾಮರ್ಶಿಸುವರು.

ಮಧ್ಯಾಹ್ನದಲ್ಲಿ.—ವೈಸ್‌ರಾಯ ದಂಪತಿಗಳು ವಿಜ್ಞಾನ ಶಾಸ್ತ್ರಶೋಧನಾಲಯವನ್ನು ಪರಾಮರ್ಶಿಸುವರು. ಹೆಬ್ಬಾಳ, ಅರಮನೆ, ಪೇಟೆ ಕೋಟೆ ಲಾಲಬಾಗ್ ಮತ್ತು ದಂಡಿನಲ್ಲಿ ಕೆಲ ಭಾಗ ಈ ಸ್ಥಳಗಳನ್ನು ಮೋಟಾರು ಬಂಡಿಯ ಸ್ವಾರಿಯಿಂದ ಸಂಚರಿಸಿಕೊಂಡುಬರುವರು. ಲಾಲ್‌ಬಾಗಿನಲ್ಲಿ ಮ್ಯುನಿಸಿಪಾಲಿಟಿಯವರಿಂದ ಪುಷ್ಪಮಾಲಿಕೆಗಳೊಪ್ಪಿಸಲ್ಪಡುವುವು.

ರಾತ್ರಿ.—ಔತಣವಾದನಂತರ ಪ್ರಶಸ್ತಿಗಳನ್ನು ದಯಪಾಲಿಸುವರು.

ತಾ|| 28 ನೆಯ ಶುಕ್ರವಾರ ಬೆಳಿಗ್ಗೆ.—7 ನೆಯ ಎಡ್ವರ್ಡ್ ಚಕ್ರವರ್ತಿಯವರ ಪ್ರತಿಮೆಯ ಮೇಲುಮುಸುಕನ್ನು ತೆರೆಯುವರು. ಅನಂತರ ಬೇಡ್‌ಬೆರಾಕ್ಸ್ ಮತ್ತು ಇಂಗ್ಲೆಂಡಿನಿಂದ ಹೊಸದಾಗಿ ಬಂದಿರುವ ಸೇನೆಯನ್ನು ಪರಾಮರ್ಶಿಸುವರು.

ಮಧ್ಯಾಹ್ನ.—ದಂಡಿನಲ್ಲಿರುವ ಸೈನಿಕರ ಕೆಲ ಸಂಸ್ಥೆಗಳಿಗೆ ಹೋಗಿಬರುವರು. ವೈಸ್‌ರಾಯಪತ್ನಿಯವರು ಇಂಗ್ಲೆಂಡ್

ಜನಾನಾ ಮಿಷನ್ ಆಸ್ಪತ್ರೆ ಮತ್ತು ವೈ. ಯಂ. ಸಿ. ಎ. ಯನ್ನು ಪರಾಮರಿಸುವರು. ರೆಸಿಡೆನ್ಸಿಯಲ್ಲಿ ನಡೆಯುವ ಟೀಪಾರ್ಟಿಗೆ ಹೋಗಿಬರುವರು.

ರಾತ್ರಿ.—ವೈಸ್‌ರಾಯರು ಸೈನಿಕೋದ್ಯೋಗಿಗಳ ಕೂಡ ಭೋಜನವನ್ನು ಮಾಡುವರು.

ವೈಸ್‌ರಾಯದಂಪತಿಗಳು ಪರಿವಾರದೊಡನೆ ಶಿವಮೊಗ್ಗೆಗೆ ಪ್ರಯಾಣಮಾಡುವರು (ಬಹಿರಂಗವಲ್ಲ).

ತಾ|| 29 ನೆಯ ಶನಿವಾರ ಬೆಳಗ್ಗೆ.—ಶಿವಮಗ್ಗೆಯನ್ನು ತಲುಪುವರು (ಬಹಿರಂಗವಲ್ಲ). ಅಲ್ಲಿಂದ ಮೋಟಾರಿನಲ್ಲಿ 65 ಮೈಲಿ ದೂರ ಪ್ರಯಾಣಮಾಡಿ ಮಧ್ಯಾಹ್ನ ಗರಸಪ್ಪೆಯನ್ನು ಸೇರುವರು.

ತಾ|| 30 ನೆಯ ಭಾನುವಾರ ಮಧ್ಯಾಹ್ನ.—ಗರಸಪ್ಪವನ್ನು ಬಿಟ್ಟು ಪ್ರಯಾಣಮಾಡುವರು.

ತಾ|| 1 ನೆಯ ಸೋಮವಾರ ಬೆಳಿಗ್ಗೆ.—ರಾಜಧಾನಿಯನ್ನು ತಲುಪುವರು (ಬಹಿರಂಗವಾಗಿ). ರೆಸಿಡೆನ್ಸಿಗೆ ಹೋಗುವ ಮಾರ್ಗದಲ್ಲಿ ಮ್ಯುನಿಸಿಪಾಲಿಟಿಯವರಿಂದ ವಿಜ್ಞಾಪನ ಪತ್ರಿಕೆಯನ್ನು ಸ್ವೀಕರಿಸುವರು.

ಬಳಿಕ ಮಿಜಾಜ್‌ಪರ್ಸಿ.

ಶ್ರೀಮನ್ಮಹಾರಾಜರವರು ದರ್ಶನಕ್ಕಾಗಿ ಬರುವರು. ಅನಂತರ ವೈಸ್ರಾಯರು ಶ್ರೀಮನ್ ಮಹಾರಾಜರವರಿಗೆ ಪ್ರತಿದರ್ಶನ ಕೊಟ್ಟುಬರುವರು.

ತಾ|| 2 ನೆಯ ಮಂಗಳವಾರ ಬೆಳಿಗ್ಗೆ.—ಮೈಸೂರು ತೋಟಗಾರರಿಂದಲೂ ಕೊಡಗಿನ ಜಮೀನ್ದಾರರ ಸಂಘದವರಿಂದಲೂ ವಿಜ್ಞಾಪನಪತ್ರಿಕೆಗಳನ್ನು ಸ್ವೀಕರಿಸುವರು.

ಮಧ್ಯಾಹ್ನ.—ಶ್ರೀಮನ್ಮಹಾರಾಣಿಯವರು ವೈಸ್‌ರಾಯರ ಪತ್ನಿಯವರ ದರ್ಶನಕ್ಕಾಗಿ ಬರುವರು. ಬಳಿಕ ವೈಸ್‌ರಾಯರ ಪತ್ನಿಯವರು ಪ್ರತಿದರ್ಶನಕೊಟ್ಟು ಬರುವರು.

ರಾತ್ರಿ.—ಗೌರ್ನಮೆಂಟ್ ಹೌಸಿನಲ್ಲಿ ರಾಜರ ಔತಣವು.

ತಾ|| 3 ನೆಯ ಬುಧವಾರ ಮಧ್ಯಾಹ್ನ.—ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿ ದರಿಯಾದವಲತ್ ಬಂಗಲೆಯಲ್ಲಿ ಟೀಯನ್ನು ತೆಗೆದುಕೊಂಡುಬರುವರು.

ರಾತ್ರಿ.—ಅರಮನೆಗೆ ಚಿತ್ತೈಸಿ ಸಂಗೀತಶ್ರವಣ ಮೊದಲಾದುವನ್ನು ಅನುಭವಿಸಿ ಬರುವರು.

ತಾ|| 4 ನೆಯ ಗುರುವಾರ ಮಧ್ಯಾಹ್ನ.—ಮೋಟಾರುಬಂಡಿಯಲ್ಲಿ ಕೆಡ್ಡಾ ಕ್ಯಾಂಪಿಗೆ ಪ್ರಯಾಣಮಾಡುವರು. ಮಧ್ಯಮಾರ್ಗದಲ್ಲಿ ಗಂಧದೆಣ್ಣೆಯ ಕಾರ್ಖಾನೆಯನ್ನು ಪರಾಮರಿಸುವರು.

ತಾ|| 5 ನೆಯ ಶನಿವಾರದಿಂದ 10 ನೆಯ ಬುಧವಾರದವರೆಗೂ ಕೆಡ್ಡಾದಲ್ಲಿರುವರು.

ತಾ|| 11 ನೆಯ ಗುರುವಾರಬೆಳಗ್ಗೆ.—ಮೈಸೂರಿಗೆ ಮೋಟಾರು ಬಂಡಿಯಲ್ಲಿ ಹಿಂದಿರುಗಿ ಬರುತ್ತ ಹಾಗೆಯೇ ಕನ್ನಂಬಾಡಿಗೆ ಹೋಗಿ ಕಟ್ಟೆಯನ್ನು ಪರಾಮರಿಸಿಕೊಂಡು ಬರುವರು.

ರಾತ್ರಿ.—ಮೈಸೂರನ್ನು ಬಿಟ್ಟು ತೆರಳುವರು (ಬಹಿರಂಗವಲ್ಲ).

ತಾ|| 12 ನೆಯ ಶುಕ್ರವಾರ ಬೆಳಗ್ಗೆ.—ಬೆಂಗಳೂರನ್ನು ತಲುಪಿ ಹಾಗೆಯೇ ಮದ್ರಾಸು ಬಂಡಿಯನ್ನು ಹತ್ತಿ ಮಾರಿಕೊಪ್ಪಂ ತಲುಪುವರು (ಬಹಿರಂಗವಾಗಿ). ಗಣಿಯ ಬೋರ್ಡಿನವರಿಂದಲೂ, ಮೈಸೂರು ಸರ್ಕಾರಿಯಧಿಕಾರಿಗಳಿಂದಲೂ ಇದಿರುಗೊಳ್ಳಲ್ಪಟ್ಟಮೇಲೆ ಗಣಿಯ ಬೋರ್ಡಿನವರಿಂದ ಅಡ್ರೆಸ್ಸನ್ನು ಸ್ವೀಕರಿಸುವರು. ಮೈಸೂರು ಮೈನ್ ಮೊದಲಾದುವನ್ನು ಪರಾಮರಿಸುವರು.

ಮಧ್ಯಾಹ್ನ.—ಉರಿಗಾಮನ್ನು ಬಿಟ್ಟು ಪ್ರಯಾಣಮಾಡುವರು (ಬಹಿರಂಗವಲ್ಲ).

ಒಳದೇಶದ ವೃತ್ತಾಂತಗಳು.

ವೈಸ್ರಾಯರ ಆಗಮನ ಸಂದರ್ಭದಲ್ಲಿ ರಾಜಧಾನಿಯೊಳಗೆ ಡಿಸೆಂಬರ್ ತಾ|| ೧-೨-೩ ರಲ್ಲಿ ಎಲ್ಲ ಕೋರ್ಟು ಕಚೇರಿ ಪಾಠಶಾಲೆಗಳಿಗೂ ರಜಾಕೊಡಲ್ಪಟ್ಟಿರುವುದು.

ಮಾರೀಕಣಿವೆಯಲ್ಲಿರುವ ವಾಣೀವಿಲಾಸ ಸಾಗರವು ನಿರ್ಮಿತವಾದಾರಭ್ಯ ಕೋಡಿ ಬಿದ್ದಿರಲಿಲ್ಲ. ಈಗ ಅದರಲ್ಲಿ ೧೨೭ ಅಡಿಯಾಳವಾಗಿ ನೀರು ನಿಂತು ಕೋಡಿಯ ಮೇಲೆ ೨||| ಅಡಿ ನೀರು ಉರುಳುತ್ತಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ರಿಜಮೆಂಟ್‌ದಾರ್ ಮಿ|| ಮೀರ್‌ಮೊಹಿಯುದ್ದೀನ್ ಬಹದೂರ್ ಐ ಓ. ಎ. ರವರಿಗೆ ಸರ್ದಾರ್ ಬಹದೂರ್ ಎಂಬ ಬಿರುದು ಇಂಡ್ಯಾ ಗೌರ್ನಮೆಂಟಿನಿಂದ ದೊರೆದಿರುತ್ತದೆ.

ವೈಸ್ರಾಯರ ಸ್ವಾಗತಪುರಾಲಂಕಾರವೈಭವದಿಂದ ದೇಡ್ಡು ೬ ಕಾಸಿಗೆ ಸೇರಿನಂತೆ ಮಾರುತ್ತಿದ್ದ ಸುಣ್ಣಕ್ಕೆ ೮ ಆಣೆ ಬೆಲೆಯಾಗಿದೆ. ಅಷ್ಟನ್ನು ಕೊಟ್ಟರೂ ಸಿಕ್ಕದಿರುವುದರಿಂದ ಕ್ಲೋಸ್‌ಪೇಟೆ ಚೆನ್ನಪಟ್ಟಣಗಳಿಂದ ಸುಣ್ಣವನ್ನು ತರಿಸುತ್ತಿದ್ದಾರೆ.

ಗೊತ್ತಾಗಿದ್ದ ಮೇರೆಗೆ ವೈಸ್ರಾಯಿ ದಂಪತಿಗಳು ಬೆಂಗಳೂರಿಗೆ ದಯಮಾಡಿಸಿ ಎಲ್ಲ ಕಾರ್ಯಕ್ರಮಗಳೂ ಜರುಗಿ ಗೆರಸೊಪ್ಪಾ ಜಲಪಾತಕ್ಕೆ ದಯಮಾಡಿಸಿರುತ್ತಾರೆ. ನಾಳೆ ಬೆಳಗಿನ ೮ ಗಂಟೆಗೆ ಮೈಸೂರು ಪಟ್ಟಣವು ಆ ಸಂಮಾನ್ಯದಂಪತಿಗಳನ್ನು ಸ್ವಾಗತಿಸಲು ನಿರೀಕ್ಷಿಸಿಕೊಂಡಿದೆ.

ಅರಮನೆಯ ಇನ್ ಛಾರ್ಜ್ ಆಫೀಸರಾಗಿದ್ದ ಮ|| ಬಿ. ರಾಮಕೃಷ್ಣರಾಯರು ಸದಾ ರಾಮಾಯಣ ಪಾರಾಯಣ ಧುರೀಣರು. ಇವರು ಕಳೆದ ಗುರುವಾರ ತಮ್ಮ ಭವನದಲ್ಲಿ ಶ್ರೀರಾಮ ಪಟ್ಟಾಭಿಷೇಕವನ್ನು ಅತಿ ವೈಭವದಿಂದ ಜರುಗಿಸಿದರು. ಶ್ರೀಮನ್ಮಹಾರಾಜರೂ ಮಹಾಮಾತೃಶ್ರೀಯವರೂ ಕೂಡ ಅಲ್ಲಿಗೆ ದಯಮಾಡಿಸಿದ್ದರು.

ಸಂಪದಭ್ಯುದಯ ಸಮಾಜದ ಸೆಂಟರಲ್ ಬೋರ್ಡುಗಳಿಗೆ ಮೈಸೂರು ಡಿಸ್ಟ್ರಿಕ್ಟ್‌ಬೋರ್ಡಿನಿಂದ ಪ್ರತಿನಿಧಿಗಳನ್ನಾರಿಸಿ ಕಳುಹಿಸುವ ಕೆಲಸವು ಕಳೆದವಾರ ನಡೆದಿತು. ಶ್ರೀರಂಗಪಟ್ಟಣದ ಮ|| ದೇವೋಜಿರಾಯರು ವಿದ್ಯಾಶಾಖೆಯ ಬೋರ್ಡಿಗೂ, ಮ|| ಜವರಯ್ಯನವರು ವ್ಯವಸಾಯಶಾಖೆಯ ಬೋರ್ಡಿಗೂ, ಮಂಡ್ಯದ ಮ|| ನಂಜಪ್ಪಶೆಟ್ಟರು ಕೈಗಾರಿಕೆ ವ್ಯಾಪಾರಗಳ ಶಾಖೆಯ ಬೋರ್ಡಿಗೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು.

ಕ್ಲೋಸ್‌ಪೇಟೆ ತಾ|| ಸುಗ್ಗನಹಳ್ಳಿಯ ಗ್ರಾಮಾಭಿವೃದ್ಧಿ ಕಾರ್ಯಗಳು ತೃಪ್ತಿಕರವಾಗಿ ನಡೆದಿದ್ದುದರಿಂದ ಸಬ್‌ಡಿವಿಜನ್ ಆಫೀಸರೂ ಅಮಲ್ದಾರರೂ ನೋಡಿ ಸಂತೋಷಪಟ್ಟು ಅಲ್ಲಿಯ ವಿಲೇಜ್ ಕಮಿಟಿ ಮೆಂಬರಾದ ಮ|| ಪಟೇಲ್ ಚನ್ನಪ್ಪನವರೇ ಮೊದಲಾದವರ ಶ್ರದ್ಧೆಯನ್ನು ಮೆಚ್ಚಿ ಗೊತ್ತಾಗಿದ್ದ ಮರ್ಯಾದೆಯ ರಜತಪಾತ್ರೆ (ಮೆಡಲನ್ನು) ತಾಲ್ಲೂಕು ಕಾನ್‌ಫರೆನ್ಸಿನಲ್ಲಿ ಸಬ್‌ಡಿವಿಜನ್ ಆಫೀಸರು ಕೊಟ್ಟರೆಂದು ಬಾತ್ಮೀದಾರರು ಬರೆದಿರುತ್ತಾರೆ.

ಸಾಗರದಲ್ಲಿ ನವೆಂಬರ್ ತಾ|| ೧೯—೨೦ ರಲ್ಲಿ ನಡೆಯಬೇಕೆಂದು ಗೊತ್ತಾಗಿದ್ದ ವೀರಶೈವ ಗುರುವರ್ಗದ ಸಭೆಯು ಸದ್ಯಕ್ಕೆ ನಿಂತುಹೋಗಿ ಮುಂದಕ್ಕೆ ಹಾಕಲ್ಪಟ್ಟಿರುವುದೆಂದೂ ಅದರ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿದ್ದ ಸಬ್‌ಡಿವಿಜನ್ ಆಫೀಸರ್ ಮ|| ಸೂರ್ಯನಾರಾಯಣಶಾಸ್ತ್ರಿಗಳು ವೈಸ್ರಾಯರ ಆಗಮನದ ಗಡಬಿಡಿಯಲ್ಲಿ ತೊಡಗಿ ಬರಲು ಅವಕಾಶವಿಲ್ಲದ್ದರಿಂದ ಹೀಗಾಯಿತೆಂದೂ ತಿಳಿಯಪಡಿಸಬೇಕೆಂದು ಶ್ರೀ ಕ್ಯಾಸನೂರು ಮಠದ ಪಟ್ಟದ ಗುರುಬಸವಸ್ವಾಮಿಗಳವರು ನಮಗೆ ಬರೆದಿರುತ್ತಾರೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ವಿಷಯಗಳು.

ಮ|| ಕೆ. ಟಿ. ಶೇಷಯ್ಯನವರು—ಪತ್ರಿಕೆಗಳಲ್ಲಿ ಸರ್ಕಾರಿ ಆಫೀಸರುಗಳಮೇಲೆ ಅಟಾಕ್ ಮಾಡುತ್ತಿದ್ದರೆ ಅದನ್ನು ಅವರು ರಾಜಭಕ್ತಿಗೆ ದೂರವಾಗಿ ಮಾಡುತ್ತಲಿಲ್ಲ. ಮ|| ಸಿ. ನರಸಿಂಹಯ್ಯನವರು—ಯಾವ ಆಫೀಸರಮೇಲಾದರೂ ತಪ್ಪಾಗಿ ಆಕ್ಷೇಪಣೆಮಾಡಲ್ಪಟ್ಟಿದ್ದರೆ ಲಾ ಪ್ರಕಾರ ಅವರು ಕೋರ್ಟಿಗೆ ಹೋಗಬೇಕು. ಹಾಗೆ ಮಾಡದೆ ಸುಮ್ಮನಿದ್ದರೆ ಅಂಥ ಆಫೀಸರಲ್ಲಿ ದೋಷವಿರುವುದು ನಿಜವೆಂದು ವ್ಯಕ್ತವಾಗುತ್ತದೆ. ಮ|| ಗೋಪಾಲಸ್ವಾಮಯ್ಯರು—ಯಾರಾದರೂ ಪತ್ರಿಕೆಯಲ್ಲಿ ಪರ್ಸನಾಲಿಟಿಯಮೇಲೆ ಅಟಾಕ್ ಮಾಡುತ್ತಿದ್ದರೆ ಅದು ತಪ್ಪು ಗೌರ್ನಮೆಂಟ್ ತತ್ವಕ್ಕೆ ವಿರುದ್ಧವಾದ ನಡತೆಯಿದ್ದರೆ ಅಟಾಕ್‌ಮಾಡಬಹುದು.

ಸರ್ಕಾರದ ಉತ್ತರ—ಪ್ರೆಸ್‌ಆಕ್ಟು ಇರುವುದರಿಂದ ನ್ಯಾಯ ಪ್ರವರ್ತನವುಳ್ಳ ಪತ್ರಿಕೆಗಳಿಗೆ ಭಯವೇನೂ ಇರಲು ಕಾರಣವಿಲ್ಲ. ಹಾಗಲ್ಲದೆ ನಿರಂಕುಶವಾಗಿ ಪ್ರವರ್ತಿಸುವವರಿಗೆ ಈಗ ಪ್ರೆಸ್ ಆಕ್ಟು ಇರುವುದರಿಂದ ಸ್ವಲ್ಪವಾದರೂ ಭಯವಿದೆ. ಆದುಕಾರಣ ಆಕ್ಟು ಇರತಕ್ಕದುನ್ಯಾಯ, ತೆಗೆದುಬಿಡಲಾಗುವುದಿಲ್ಲ.

ಪ್ರ.—ದನಗಳ ಕಳ್ಳತನವನ್ನು ತಪ್ಪಿಸುವುದಕ್ಕಾಗಿ ಚರ್ಮ ಕೊಳ್ಳುವವರು ಕೊಟ್ಟವರ ಹೆಸರು ಮೊದಲಾದುವನ್ನು ಬರೆದಿಡುವಂತೆ ಒಂದು ಕಾನೂನನ್ನು ಏರ್ಪಡಿಸಬೇಕು.

ಉ.—ಯೋಚಿಸುತ್ತೇವೆ.

ಪ್ರ.—ಹಾಲಿಗೂ ತುಪ್ಪಕ್ಕೂ ಇತರ ಪದಾರ್ಥಗಳನ್ನು ಮಿಶ್ರಮಾಡಿ ಮಾರುವುದನ್ನು ತಪ್ಪಿಸಲಿಕ್ಕೆ ಒಂದು ಕಾನೂನಾಗಬೇಕು.

ಉ.—ಪರ್ಯಾಲೋಚನೆಯಲ್ಲಿದೆ.

ಪ್ರ.—ವಿಲೇಜ್ ಮುನ್‌ಸೀಫ್‌ಕೋರ್ಟುಗಳಿಗೆ ೨೦ ರೂ. ನೊಳಗಣ ವ್ಯಾಜ್ಯವನ್ನು ವಿಚಾರಿಸುವ ಅಧಿಕಾರವಿದೆ. ೫೦ ರೂ ನೊಳಗಣ ವ್ಯಾಜ್ಯವನ್ನು ವಿಚಾರಿಸುವ ಅಧಿಕಾರವುಳ್ಳ ಟೌನ್ ಮುನ್‌ಸೀಫ್ ಕೋರ್ಟುಗಳನ್ನು ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೂ ಏರ್ಪಡಿಸಬೇಕು.

ಉ.—ಆಗಬಹುದಾಗಿದೆ.

(ಮತ್ತೊಬ್ಬ ಮೆಂಬರು—ಸಮನ್ ಜಾರಿ ವಗೈರೆ ಇಲ್ಲದ ಬರೀಕೋರ್ಟಿನಿಂದ ಪ್ರಯೋಜನವಿಲ್ಲ. ಅದಕ್ಕೆಲ್ಲಾ ಅವಕಾಶವಿದ್ದರೆ ಪ್ರಯೋಜನ.)

ಪ್ರ.—ಕ್ರಿಮಿನಲ್ ಕೋರ್ಟುಗಳಲ್ಲಿಯೂ ಸಾಕ್ಷಿ ಬತ್ಯವನ್ನು ಕೊಡಿಸುವಂತೆ ಮಾಡಬೇಕು.

ಉ.—ಚೀಫ್‌ಕೋರ್ಟಿನ ಅಭಿಪ್ರಾಯಕ್ಕಾಗಿ ಹೋಗಿದೆ.

ಪ್ರ.—ಜುಡಿಷಿಯಲ್ ಮತ್ತೂ ಎಗ್ಜಿಕ್ಯುಟೀವ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಟನ್ನು ಉಳಿದ ೪ ಡಿಸ್ಟ್ರಿಕ್ಟುಗಳಿಗೂ ಉಪಯೋಗಿಸಬೇಕು. ಎರಡು ತಾಲ್ಲೂಕುಗಳಿಗೊಬ್ಬರಂತೆ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ಏರ್ಪಡಿಸಬೇಕು.

ಉ.—ಈಗಣ ಏರ್ಪಾಟಿನ ಫಲಿತಾಂಶವನ್ನು ಎಲ್ಲಾ ಡಿಸ್ಟ್ರಿಕ್ಟಿನಲ್ಲಿಯೂ ನೋಡಿ ಬಳಿಕ ಹೆಚ್ಚಿನ ಏರ್ಪಾಟನ್ನು ಪರ್ಯಾಲೋಚಿಸುತ್ತೇವೆ.

ಪ್ರ.—ಅಪರಾಧಿಯನ್ನು ಪೊಲೀಸು ಸುಪರ್ದಿಗೆ ಕಳುಹಿಸುವ ಪದ್ಧತಿಯನ್ನು ತಪ್ಪಿಸಿ, ವಿಚಾರಣೆಯಲ್ಲಿರುವ ಅಪರಾಧಿಗಳನ್ನು ಪೊಲೀಸು ಇಲಾಖೆಗೆ ಸೇರದಿರುವ ಆಫೀಸರುಗಳ ಅಧೀನದಲ್ಲಿಡಿಸುವಂತೆ ಮಾಡಿಸಬೇಕು.

ಉ.—ಛಾರ್ಜುಷೀಟು ಕೊಟ್ಟಮೇಲೆ ಪೊಲೀಸರ ವಶದಲ್ಲಿಡುವುದೇ ಇಲ್ಲ. ಎಲ್ಲ ಸಂದರ್ಭಗಳಲ್ಲೂ ಸರ್ವತ್ರ ಬೇರೆ ವಾರ್ಡ್ ಎಸ್ಟಾಬ್ಲಿಷ್ಮೆಂಟ್ ಮಾಡುವುದು ಅಷ್ಟು ಅವಶ್ಯಕವಲ್ಲ. ಯಾವಾಗಲೂ ಅದಕ್ಕೆ ತಕ್ಕಷ್ಟು ಕೆಲಸವಿರುವುದಿಲ್ಲ. ಸ್ಪೆಷಲ್ ಕೇಸು ಬಂದಾಗ ಹಾಗೆ ಮಾಡಬಹುದು.

ಪ್ರ.—ಪೊಲೀಸು ಕಾನ್‌ಸ್ಟೇಬಲುಗಳ ಸಂಬಳವನ್ನು ಕನಿಷ್ಠಪಕ್ಷ ೧೨ ರೂ.ಗಳಿಗಾದರೂ ಹೆಚ್ಚಿಸಬೇಕು.

ಉ.—ಪರ್ಯಾಲೋಚನೆಯಲ್ಲಿದೆ

ಪ್ರ.—ಪ್ರತಿ ತಾಲ್ಲೂಕಿಗೂ ಒಬ್ಬೊಬ್ಬ ಸಂಚಾರಕ ವೈದ್ಯನನ್ನು ಏರ್ಪಡಿಸಬೇಕು.

ಉ.—ಬ್ರಿಟಿಷ್ ಇಂಡ್ಯಾದಲ್ಲಿ ಈಗ ಮಾಡಿರುವ ಈ ತೆರದ ಏರ್ಪಾಡಿನ ಫಲಿತಾಂಶವನ್ನು ತಿಳಿದಮೇಲೆ ಆಲೋಚಿಸುತ್ತೇವೆ.

ಪ್ರ.—ಆಯುರ್ವೇದ ಪಂಡಿತರನ್ನು ಸರ್ಕಾರಿ ನೌಕರರಂತೆ ಭಾವಿಸಿ ಅವರಿಗೆ ಸರಿಯಾದ ಪ್ರೋತ್ಸಾಹವನ್ನು ಕೊಡಬೇಕು

ಉ.—ಆಯುರ್ವೇದ ಕಾಲೇಜಿನಲ್ಲಿ ಓದಿ ಚೆನ್ನಾಗಿ ಪ್ಯಾಸ್ಮಾಡಿ ಬಂದವರು ತಕ್ಕಷ್ಟು ದೊರೆದಮೇಲೆ ಅವರನ್ನು ನಿಯಮಿಸುವ ಏರ್ಪಾಟನ್ನು ಮಾಡಬಹುದು.

ಪ್ರ.—ಮದ್ರಾಸು ಅಧಿಪತ್ಯದಲ್ಲಿರುವಂತೆ ನಮ್ಮಲ್ಲೂ ಸಬ್ ಅಸಿಸ್ಟೆಂಟ್ ಸರ್ಜನರ ಸಂಬಳವನ್ನು ಹೆಚ್ಚಿಸಬೇಕು.

ಉ.—ಸ್ಯಾಂಕ್ಷನ್ ಆಗಿದೆ.

ಪ್ರ.—ದೊಡ್ಡದೊಡ್ಡ ಗ್ರಾಮಗಳಲ್ಲೆಲ್ಲಾ ಆಸ್ಪತ್ರೆಗಳನ್ನೇರ್ಪಡಿಸಿ ಅವುಗಳ ಖರ್ಚಿನಲ್ಲಿ ಮೂರುಭಾಗವನ್ನು ಸರ್ಕಾರದವರು ವಹಿಸಬೇಕು.

ಉ.—ಇಂಥ ಗ್ರಾಮವೈದ್ಯರ ಏರ್ಪಾಟಿನ ಆಲೋಚನೆಗಾಗಿ ಒಂದು ಸ್ಪೆಷಲ್ ಕಮಿಟಿ ಯೇರ್ಪಾಟಾಗಿದೆ. ಅಲ್ಲಿ ಪರ್ಯಾಲೋಚನೆ ನಡೆಯುತ್ತಿದೆ.

ಪ್ರ.—ಗ್ರಾಮಾಂತರಗಳ ಆರೋಗ್ಯ, ಸಿಡುಬುಹಾಕಿಸುವುದು, ಜನನ ಮರಣದ ರಿಜಿಸ್ಟರು, ವ್ಯವಸಾಯಕೈಗಾರಿಕೆಗಳ ಅಭಿವೃದ್ಧಿ, ಇತ್ಯಾದಿಗಳ ಮೇಲ್ವಿಚಾರಣೆಗಾಗಿ ಪ್ರತಿ ತಾಲ್ಲೂಕ್ ಪ್ರತಿ ಹೋಬಳಿಗೂ ಒಬ್ಬೊಬ್ಬ ಸ್ಯಾನಿಟರಿ ಓವರ್ಸಿಯನ್ನು ನಿಯಮಿಸಬೇಕು.

ಉ.—ಡಿಸ್ಟ್ರಿಕ್ಟುಬೋರ್ಡುಗಳಿಂದ ಇದಕ್ಕೆ ಹಣವು ಒದಗಬೇಕು. ಅವುಗಳಿಂದ ಈ ಪ್ರಪೋಜು ಬರಲಿ.

ಪ್ರ.—ತರುಣರಾದ ಖೈದಿಗಳನ್ನು ಜೈಲಿಗೆ ಹಾಕದೆ ಅವರಿಗೆ ಶಿಕ್ಷೆ ಮುಗಿಯುವವರೆಗೂ ಯಾವುದಾದರೂ ಕೈಗಾರಿಕೆ ಕಲಿಸುವಂತೆ ಮಾಡಬೇಕು.

ಉ.—ಗುರ್ತುಮಾಡಿಕೊಂಡಿದೆ.

ಪ್ರ.—ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದಂತೆ ಲಾ ವೈದ್ಯ ಮತ್ತು ಇತರ ಫ್ಯಾಕಲ್ಟಿಗಳನ್ನು ಬೋಧಿಸುವುದಕ್ಕಾಗಿ ಕಾಲೇಜುಗಳನ್ನು ಸ್ಥಾಪಿಸಬೇಕು.

ಉ.—ಹಣ ಒದಗಬೇಕು.

ಪ್ರ.—ಅರಬಿಕ್ ಭಾಷೆಯ ಪೀಠವೊಂದನ್ನು ನಮ್ಮ ವಿದ್ಯಾಪೀಠದಲ್ಲಿ ಏರ್ಪಡಿಸಬೇಕು.

ಉ.—ಪರ್ಯಾಲೋಚಿಸುತ್ತೇವೆ.

ಪ್ರ.—ಪಂಚಮರಿಗೆ ಹೇರಳವಾಗಿ ಬೋರ್ಡಿಂಗುಗಳನ್ನು ಸ್ಥಾಪಿಸುವುದು, ಅವರ ಸ್ಕೂಲು ಮ್ಯಾಸ್ಟರುಗಳಿಗೆ ಅಲೋಯನ್ಸನ್ನು ಕೊಡುವುದು, ಅವರ ಸ್ಕೂಲುಗಳಿಗೆ ಪ್ರತ್ಯೇಕ ಇನ್‌ಸ್ಪೆಕ್ಟರುಗಳನ್ನು ನಿಯಮಿಸುವುದು, ಆ ವಿದ್ಯಾರ್ಥಿಗಳಿಗೆ ಹೆಚ್ಚಾದ ಜೀವನಾಂಶ ಕೊಡುವುದು, ಮ್ಯು|| ಕೌನ್‌ಸಿಲು ನ್ಯಾಯ ವಿಧಾಯಕ ಸಭೆ ಮೊದಲಾದುವುಗಳಲ್ಲಿ ಅವರ ಜನರನ್ನು ಮೆಂಬರಾಗಿ ಸೇರಿಸುವುದು, ಮದರಾಸಿನಲ್ಲಿ ತಂದಿರುವಂತೆ ಆ ಜನರ ವಿದ್ಯಾಭ್ಯಾಸದ ನಿಬಂಧನೆಗಳನ್ನು ಇಲ್ಲೂ ಜಾರಿಗೆ ತರುವುದೇ ಮೊದಲಾದ ಏರ್ಪಾಡುಗಳನ್ನು ಮಾಡಬೇಕು.

ಉ.—ಗುರ್ತುಮಾಡಿಕೊಂಡಿದೆ.

(ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅನೇಕವಿಷಯಗಳು ಮೆಮೋರಾಂಡಂ ಚರ್ಚೆಗೆಂದು ನಿಲ್ಲಿಸಲ್ಪಟ್ಟುವು.)

ಪ್ರ.—ಪ್ರೌಢವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಹೋಗುವ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಕನಿಷ್ಠಪಕ್ಷ ೨ ವೇತನಗಳನ್ನು ಕಾದಿಟ್ಟುಕೊಡಬೇಕು.

ಉ.—ಯೋಗ್ಯರು ಸಿಕ್ಕಿದಾಗ ಕೊಡುತ್ತೇವೆ.

ಪ್ರ.—ಈಗ ಹಿಂದುಳಿದ ಜನವರ್ಗಗಳ ವೇತನಗಳಿಂದ ಕೆಲವು ವರ್ಗದವರಿಗೆ ಮಾತ್ರವೇ ಸಹಾಯವಾಗುತ್ತದೆ. ಇತರ ಹಿಂದುಳಿದ ವಿದ್ಯಾರ್ಥಿಗಳಿಗೆಲ್ಲಾ ಸೌಕರ್ಯಕಲ್ಪನೆಗಾಗಿ ಮಹಮ್ಮದೀಯರಿಂದ ಅರ್ಧ ಫೀಜು ತೆಗೆದುಕೊಳ್ಳುವಂತೆ ಎಲ್ಲ ತರಗತಿಗಳಲ್ಲೂ ಇವರಿಂದ ಅರ್ಧ ಫೀಜನ್ನು ತೆಗೆದುಕೊಳ್ಳುವಂತೆ ಮಾಡಬೇಕು.

ಉ.—ಮಿಡಲ್‌ಸ್ಕೂಲಿನವರೆಗೂ ಈಗ ಫ್ರೀ ಮಾಡಿರುವಾಗ ಅದಕ್ಕಿಂತ ಹೆಚ್ಚಾಗಿ ಈಗ ಮಾಡಲಾಗುವುದಿಲ್ಲ.

ಪ್ರ.—ಹಿಂದುಳಿದ ಪಂಗಡದವರ ವೇತನಗಳನ್ನು ಇನ್ನೂ ಹೆಚ್ಚಿಸಬೇಕು.

ಉ.—ಈ ಸ್ಕಾಲರ್ಷಿಪ್ ವಿಷಯದ ಸಂಸ್ಕರಣವು ಇಷ್ಟರಲ್ಲೇ ಆಗುತ್ತದೆ.

ಪ್ರ.—ಹವಿಕಬ್ರಾಹ್ಮಣರೂ ವಿದ್ಯೆಯಲ್ಲಿ ಹಿಂದುಳಿದಿರುವುದರಿಂದ ಬ್ಯಾಕ್ವರ್ಡ್ ಕ್ಲಾಸ್ ಸ್ಕಾಲರ್ಷಿಪ್ಪಿನಲ್ಲಿ ಒಂದು ಭಾಗವನ್ನು ಅವರಿಗೂ ಕೊಡಿಸಬೇಕು.

ಉ.—ಮುಂದೆ ಸ್ಕಾಲರ್ಷಿಪ್ ವಿಧಿಸುವಾಗ ಇದನ್ನು ಯೋಚಿಸುತ್ತೇವೆ.

ಪ್ರ.—ಸರ್ಕಾರಿ ಸಂಸ್ಕೃತ ಪಾಠಶಾಲೆಗಳಿಗೂ ಕಲಾಶಾಲೆಗಳಿಗೂ ನಿರ್ಬಂಧವಿಲ್ಲದೆ ಎಲ್ಲ ಪಂಗಡಗಳ ವಿದ್ಯಾರ್ಥಿಗಳನ್ನೂ ಸೇರಿಸಬೇಕು. ಸರ್ಕಾರಿ ಸಂಸ್ಕೃತ ಪಾಠಶಾಲಾ ಕಲಾಶಾಲೆಗಳನ್ನು ವಿದ್ಯಾಭ್ಯಾಸಶಾಖೆಗೆ ಅಧೀನಪಡಿಸಬೇಕು.

(ಇದು ಅರಮನೆಗೆ ಸಂಬಂಧಪಟ್ಟ ಶಾಲೆ ಅದರ ವಿಷಯವನ್ನು ಇಲ್ಲಿ ಚರ್ಚೆಗೆ ತರಕೂಡದೆಂದು ಮ|| ಗೋಪಾಲಸ್ವಾಮಯ್ಯರು ವಾದಿಸಿದರು. ಈ ಇಲಾಖೆಗೆ ಸರ್ಕಾರಿ ಗ್ರಾಂಟನ್ನು ಕೊಡುತ್ತಿದೆಯೆಂಬ ಕಾರಣದಿಂದ ಇತರರನ್ನೆಲ್ಲಾ ಇಲ್ಲಿ ಓದುವುದಕ್ಕೆ ಸೇರಿಸಬೇಕೆಂದರೆ ಅಲ್ಲಿ ಪಾಠ ಹೇಳತಕ್ಕವರಲ್ಲಿ ಎಷ್ಟು ಜನ ಕೆಲಸವನ್ನೇ ಬಿಟ್ಟುಬಿಡುತ್ತಾರೋ ಅದನ್ನು ಗೌರ್ನಮೆಂಟಿನವರು ಪರ್ಯಾಲೋಚಿಸಬೇಕು ಎಂದು ಮ|| ವೆಂಕಟಕೃಷ್ಣಯ್ಯನವರು ಹೇಳಿದರು.) ಸರ್ಕಾರದ ಉತ್ತರ—ಈಗಲೇ ಇದಕ್ಕೆ ಉತ್ತರ ಕೊಡಲಾಗುವುದಿಲ್ಲ. ಸ್ವಲ್ಪಯೋಚಿಸಬೇಕಾಗಿದೆ.

ಪ್ರ.—೧೨ ಅಥವಾ ೧೧ ರೂ. ಗಳಿಗೆ ಕಡಿಮೆಯಿಲ್ಲದಂತೆ ಗ್ರಾಮಾಂತರ ಶಾಲೆಗಳ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಬೇಕು.

ಉ.—ಅರ್ಹತೆಯುಳ್ಳವರು ಸಿಕ್ಕಿದಂತೆ ಮಾಡಲಾಗುತ್ತದೆ.

ಪ್ರ.—ಲೀವಿಂಗ್ ಸರ್ಟಿಫಿಕೇಟನ್ನು ಪಡೆದ ಹುಡುಗರು ಒಂದು ಸ್ಕೂಲಿನಿಂದ ಮತ್ತೊಂದು ಸ್ಕೂಲಿಗೆ ಹೋದರೆ ಪ್ರತಿಸಲವೂ ಅಡ್ಮಿಷನ್ ಫೀಜನ್ನು ಕೊಡಬೇಕಾಗಿರುವ ಭಾರವನ್ನು ತಪ್ಪಿಸಬೇಕು.

ಉ.—ಒಂದು ಸ್ಕೂಲಿನಿಂದ ಮತ್ತೊಂದು ಸ್ಕೂಲಿಗೆ ಹುಡುಗರು ಪದೇಪದೇ ಬದಲಾಯಿಸುವುದರಿಂದ ಉಂಟಾಗುವ ಅನರ್ಥಗಳನ್ನು ತಪ್ಪಿಸುವುದಕ್ಕಾಗಿಯೇ ಅಡ್ಮಿಷನ್ ಫೀಜನ್ನು ಏರ್ಪಡಿಸಲಾಗಿದೆ. ಅದನ್ನು ಬದಲಾಯಿಸಲಾಗುವುದಿಲ್ಲ. ಕೇವಲ ಬಡಹುಡುಗರ ವಿಷಯದಲ್ಲಿ ಅಪ್ಲಿಕೇಷನ್ ಬರೆದುಕೊಂಡರೆ ಆಗ್ಗೆ ಪರ್ಯಾಲೋಚಿಸಲಾಗುತ್ತದೆ.

ಪ್ರ.—ಸ್ಕೂಲುಗಳನ್ನು ೧೧ ಗಂಟೆಯಿಂದ ೫ ಗಂಟೆವರೆಗೆ ಮಾಡುವ ಈಗಣ ಪದ್ಧತಿಯನ್ನು ತಪ್ಪಿಸಿ, ಬೆಳಗ್ಗೆ ೭ ರಿಂದ ೧೧ ಗಂಟೆಯವರೆಗೆ ನಡೆಯಿಸುವಂತೆ ಮಾಡಿದರೆ ಅಭ್ಯಾಸಕ್ಕೂ ಆರೋಗ್ಯಕ್ಕೂ ಸಾಹಾಯ್ಯವಾಗುವುದು. (ಈ ವಿಷಯದಲ್ಲಿ ಮೆಂಬರುಗಳೊಳಗೆ ಈಗಿರುವುದೇ ಅನುಕೂಲವೆಂದು ಕೆಲವರೂ, ಪ್ರತಿಕೂಲವೆಂದು ಕೆಲವರೂ ಭಿನ್ನಾಭಿಪ್ರಾಯವನ್ನು ತೋರಿಸಿದರು.)

ಸ. ಉ.—ಅವಶ್ಯಕವಲ್ಲ.

ಪ್ರ.—ಈಗಣ ಯೂನಿವರ್ಸಿಟಿ ಪರೀಕ್ಷೆಗಳು ಬೇಸಗೆಕಾಲದಲ್ಲಿ ನಡೆಯುತ್ತವೆ. ಅದನ್ನು ತಪ್ಪಿಸಿ ಡಿಶಂಬರ್ ತಿಂಗಳ ಕ್ರಿಸ್ಮಸ್ ರಜಾಕಾಲದಲ್ಲಿ ನಡೆಯಿಸುವಂತೆ ಮಾಡಬೇಕು.

ಮ|| [illegible] ರಂಗಯ್ಯಂಗಾರರು—ಈ ವಿಷಯವು ಯೂನಿವರ್ಸಿಟಿ [illegible] ಬಂದಿತ್ತು. ಡಿಶಂಬರಿನಲ್ಲಿ ನಡೆಯಿಸುವುದು ಅನನುಕೂಲವೆಂದು ನಿರ್ಧರವಾಯಿತು. ಅಲ್ಲದೆ ಬೇಸಗೆಕಾಲದಲ್ಲಿ ಪರೀಕ್ಷೆನಡೆದು ಸ್ಕೂಲುಗಳಿಗೆ ರಜಾ ಕೊಡುವುದರಿಂದ ಪ್ರೊಫೆಸರುಗಳು ಸೀಮೆಗೆ ಹೋಗಿ ಬರಲು ಅವಕಾಶವಿರುತ್ತದೆ ಎಂದು ಗೊತ್ತಾಗಿದೆಯೆಂಬದಾಗಿ ತಿಳಿಯಿಸಿದರು. ಮ|| ಎಂ. ಶ್ಯಾಮರಾಯರೂ ಕೂಡ-ನನ್ನ ಅನುಭವದಲ್ಲಿ ಬೇಸಗೆ ಕಾಲದೊಳಗೆ ಪರೀಕ್ಷೆ ನಡೆಯಿಸುವುದೇನೂ ಕೆಟ್ಟದ್ದೆಂದು ಕಾಣಲಿಲ್ಲ ಎಂದು ಹೇಳಿದರು.

ಉ.—ಯೂನಿವರ್ಸಿಟಿಯವರು ಹಾಗೆ ಅಭಿಪ್ರಾಯಪಟ್ಟಿರುವುದರಿಂದ ಬದಲಾವಣೆಯು ಅವಶ್ಯಕವಲ್ಲ.

ಪ್ರ.—ಪರೀಕ್ಷಕರು ವಿದ್ಯಾರ್ಥಿಗಳ ಉತ್ತರಪತ್ರಗಳನ್ನು ಪರೀಕ್ಷಿಸುವುದಕ್ಕಾಗಿ ಮನೆಗಳಿಗೆ ತೆಗೆದುಕೊಂಡುಹೋಗಕೂಡದೆಂದು ವಿಧಿಸಿ, ಸರ್ಕಾರಿ ಕಟ್ಟಡದಲ್ಲೇ ಪರಿಶೋಧಿಸುವಂತೆ ಮಾಡಿಸಬೇಕು. ಒಬ್ಬೊಬ್ಬರಿಗೆ ೧೦೦೦-೧೨೦೦ ಪತ್ರಗಳನ್ನು ಎಗ್ಸಾಮಿನ್ನಿಗೆ ಕೊಡುತ್ತಾರೆ. ಅವರು ಅವುಗಳನ್ನು ಇತರರಿಂದ ಪರಿಶೋಧನೆ ಮಾಡಿಸುತ್ತಾರೆ. ಅದಕ್ಕಾಗಿ ಅವುಗಳನ್ನು ಒಬ್ಬೊಬ್ಬರಿಗೆ ಕಡಿಮೆಯಾಗಿ ಕೊಡಬೇಕು. ಫಲಿತಾಂಶವು ಪ್ರಕಟಿತವಾದ ಮೂರುತಿಂಗಳೊಳಗಾಗಿ ೧ ರೂ. ರುಸುಂ ಕೊಟ್ಟರೆ ಉತ್ತರ ಪತ್ರಿಕೆಗಳನ್ನು ನೋಡುವುದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕು.

(ಮ|| ರಡ್ಡಿಯವರು—ಅದಿಲ್ಲ, ಒಬ್ಬೊಬ್ಬರಿಗೆ ೪೦೦-೫೦೦ ಕ್ಕಿಂತ ಹೆಚ್ಚಾಗಿ ಕೊಡುತ್ತಿಲ್ಲ).

(ಮ|| ಎಂ. ಶ್ಯಾಮರಾಯರು—ಪೇಪರುಗಳಲ್ಲಿ || ಗಂಟೆ ೧ ಗಂಟೆ ೨ ಗಂಟೆ ೩ ಗಂಟೆ ಪೇಪರುಗಳೆಲ್ಲಾ ಇರುತ್ತವೆ. ಸಣ್ಣ ಪೇಪರುಗಳನ್ನು ಒಬ್ಬೊಬ್ಬರು ಸಾವಿರಾರನ್ನು ಶೋಧಿಸುವುದು ಕಷ್ಟವಲ್ಲ. ಎಗ್ಸಾಮಿನರುಗಳೂ ಡಿಪಾರ್ಟ್‍ಮೆಂಟಿನವರೂ ಅನ್ಯಾಯಮಾಡುತ್ತಾರೆಂದು ಹೇಳುವುದು ನ್ಯಾಯವಲ್ಲ).

ಸ. ಉ.—ರುಸುಮನ್ನು ತೆಗೆದುಕೊಂಡು ಉತ್ತರದ ಪತ್ರವನ್ನು ಕೊಡುವ ಏರ್ಪಾಟು ಯಾವ ಯೂನಿವರ್ಸಿಟಿಯಲ್ಲೂ ಇರುವುದಿಲ್ಲವಾದಕಾರಣ ಇಲ್ಲೂ ಹಾಗೆ ಮಾಡಲು ಸಾಧ್ಯವಲ್ಲ.

ಪ್ರ.—ಈಗಣ ವಿದ್ಯಾಭ್ಯಾಸಕ್ರಮದ ಪಾಠಶಾಲೆಗಳಲ್ಲಾಗುವ ಬೋಧನೆಗಳು ತೃಪ್ತಿಕರವಾಗಿ ಫಲಿತಾಂಶಗಳನ್ನು ನೋಡುವುದರಿಂದ ವ್ಯಕ್ತವಾಗುತ್ತದೆ. ಅದನ್ನು ಉತ್ತಮಪಡಿಸಬೇಕು. ನೋಟುಬುಕ್ಕುಗಳ ಏರ್ಪಾಟಿನಿಂದ ಈ ಕಾಗದದ ತಗ್ಗಿನಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನು ಬಡಬಗ್ಗರು ಮಾಡಿಸುವುದು ಬಹಳ ಪ್ರಯಾಸವಾಗಿದೆ. ಆ ನೋಟುಬುಕ್ಕುಗಳ ಏರ್ಪಾಡನ್ನು ತಪ್ಪಿಸಿ ಪೂರ್ವದಂತೆ ಹಲಗೆಬಳಪಗಳನ್ನೇ ಉಪಯೋಗಿಸಲು ಆಜ್ಞೆಯಾಗಬೇಕು.

(ನೋಟುಬುಕ್ಕುಗಳಿರುವುದರಿಂದ ಬರೆದುದರ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಹುಡುಗರು ಅದನ್ನಿಟ್ಟುಕೊಂಡು ಆಗಾಗ್ಗೆ ನೋಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಮೊದಲಾಗಿ ಕೆಲ ಮೆಂಬರುಗಳು ಅವರ ಉಪಯೋಗವನ್ನು ವರ್ಣಿಸಿದರು.)

ಸರ್ಕಾರಿ ಉತ್ತರ.—ಈಗಿರುವುದೇ ಸರಿಯಾಗಿದೆ.

ಪ್ರ.—ಓದುವುದಕ್ಕೆ ಇಟ್ಟಿರುವ ಪುಸ್ತಕಗಳಲ್ಲಿ ಕೆಲವು ಕಾಲಕ್ಕೆ ಸಿಕ್ಕುವುದಿಲ್ಲ. ಮತ್ತೂ ಬೆಲೆಹೆಚ್ಚು.

ಉ.—ಸಿಕ್ಕದೆ ಇರುವ ಪುಸ್ತಕಗಳ ವಿಷಯವನ್ನು ತಿಳಿಸಿದರೆ ತಕ್ಕ ಏರ್ಪಾಡನ್ನು ಮಾಡಲಾಗುತ್ತದೆ. ಕಾಗದದ ಬೆಲೆ ಹೆಚ್ಚಿರುವುದರಿಂದ ಪುಸ್ತಕಗಳ ಬೆಲೆಯೂ ಹೆಚ್ಚಾಗಿದೆ. ತಗ್ಗಿಸುವುದು ಸಾಧ್ಯವಲ್ಲ.

ಪತ್ರವ್ಯವಹಾರ.

ಕಲಿಕಾಲ ವೈಚಿತ್ರ್ಯ.

ಶ್ರೀಮನ್ ಮಹಾರಾಜರವರ ಪಿತಾಮಹಾದಿಗಳು ಕೊಟ್ಟಿರುವ ಸನ್ನದುಗಳಿಗೆ ಲೋಪಬರದಂತೆ ಈಗಿನ ಮಹಾರಾಜರು ಕಾಪಾಡಬೇಕೆಂದೂ, ಆಚಾರವ್ಯವಹಾರಾದಿಗಳಿಂದ ಯಾರಿಗೆ ಉತ್ತಮಪದವಿಯೋ ಅದನ್ನು ಲೋಕದವರು ತಿಳಿದುಕೊಳ್ಳಬೇಕೆಂದೂ ಈ ಚೈತನ್ಯರು ಆಡಿರುವ ಮಾತನ್ನು ಕುರಿತು ವಿಚಾರ ಮಾಡೋಣ :—

"ಅಷ್ಟಾವರ್ಣಪಂಚಾಚಾರಕ್ಕೆ ಸೇರಿದ ಎಲ್ಲಾ ಶಿವಭಕ್ತರಲ್ಲಿಯೂ ದರ್ಶನಾಚಾರಿ ಮುಂತಾದ ಎಲ್ಲಾ ಅಯ್ಯಗಳಲ್ಲಿಯೂ ಆಚಾರವಿಚಾರಣೆಯನ್ನು ನಡೆಸಿಕೊಂಡು ಎಲ್ಲಾ ಗುರುಮರ್ಯಾದೆಯನ್ನು ಹೊಂದಲು ಆರಾಧ್ಯರುಗಳು ಬಾಧ್ಯರಲ್ಲದೆ ಮತದ ಉಡೇರುಗಳು ಚರಂತ್ರಿಗಳು ಬಾಧ್ಯರಲ್ಲವು. ಅವರು ಹೆಚ್ಚಿನ ಮಾಮೂಲು ನಡೆಸಿದರೆ ಅವರಿಂದ ಗುನ್ನೇಗಾರಿಕೆಯನ್ನು ವಸೂಲ್ಮಾಡತಕ್ಕದ್ದೆಂದು ಮತದ ಉಡೇರುಗಳಿಗೆ ಜೋರು ತಾಕೀದುಮಾಡಿ ಆರಾಧ್ಯರ ಗುರುಮರ್ಯಾದೆಗೆ ಲೋಪಬರದಂತೆ ಸನ್ನದು ಹುಟ್ಟಿದೆ" ಎಂದು ಈ ಚೈತನ್ಯರು ಹೇಳಿಕೊಂಡಿರುತ್ತಾರಷ್ಟೆ. ಇವರು ಹೇಳುವ ಸನ್ನದುಗಳು ಯಾವ ಮತದವರಿಗೆ ಯಾವ ತಾರೀಖಿನಲ್ಲಿ ಯಾತಕ್ಕೋಸ್ಕರ ಹುಟ್ಟಿತೋ ಗೊತ್ತಾಗಲಿಲ್ಲ. ಆದೇ ಮೈಸೂರಿನ ಕರ್ಣಾಟ ಸಿಂಹಾಸನಾಧೀಶ್ವರರಾದ ಮುಮ್ಮಡಿ ಕೃಷ್ಣರಾಜಪ್ರಭುಗಳವರು ಈ ಚೈತನ್ಯರಿಂದ ಉಡೇರುಗಳೆಂದು ಕರೆಯಲ್ಪಟ್ಟಿರುವ ಒಂದಾನೊಂದು ಮತದವರಿಗೆ ೧೮೩೧ ನೆ ಇಸವಿ ಫೆಬ್ರುವರಿ ತಾ|| ೧೨ ರಲ್ಲಿ ಕೊಟ್ಟಿರುವ ಒಂದು ಸನ್ನದಿನಲ್ಲಿ—"ಆರಾಧ್ಯರುಗಳ ವಿಷಯವಾಗಿಯೂ ತುಂಡುಮತದವರ ವಿಷಯವಾಗಿಯೂ **ಸ್ವತಂತ್ರವನ್ನು ಕೊಡಿಸಿ ಅಪ್ಪಣೆ ಕೊಡಿಸಿದ್ದ ನಿರೂಪವನ್ನು ರದ್ದುಮಾಡಿಸಿ ಪೂರ್ವಪದ್ಧತಿಯಮೇರೆ**………ಮತದವರೇ ಮೈಸೂರು ಮುಂತಾಗಿ ತಾಲ್ಲೋಕುಜಾತುಗಳಲ್ಲಿರುವ ವೀರಶೈವ ಮತಸ್ಥರಾದ ಶಿವಭಕ್ತರಾದ ಸಮಸ್ತ ಜನಗಳ ಆಚಾರವಿಚಾರ, ಸ್ಥೂಲಸೂಕ್ಷ್ಮ, ತಪ್ಪುನೆಪ್ಪು, ನೆಟ್ಟಕಲ್ಲು, ಬಿಟ್ಟಬಸವಿ, ಮತಮಹಂತು, ಎದ್ದಲಿಂಗ ಬಿದ್ದಲಿಂಗ ಶಿವಭಕ್ತರಿಗೆ ಲಿಂಗಕಟ್ಟುವದು, ಬಹಿಷ್ಕಾರ ಹಾಕುವದು, ಪರಿಶುದ್ಧತೆ ಮಾಡುವದು, ಮುಂತಾಗಿ ವಿಹಿತವಾಗಿ ನಡೆಸಿಕೊಂಡು ಬರುವಲ್ಲಿ ಅಡ್ಡಿಮಾಡಲಾಗದು. ಈ………ಮತದವರು ಬಂದು ವಿಚಾರಣೆಮಾಡುವಲ್ಲಿ ಆರಾಧ್ಯರುಗಳೇ ಆದಾಗ್ಯೂ ಮತದವರುಗಳೇ ಆದಾಗ್ಯೂ ಚರಂತಿಗಳೇ ಆದಾಗ್ಯೂ ಹರಕತ್ತುಮಾಡಿದಲ್ಲಿ ಅವರ ಕಡೆಯಿಂದ ಮುನಾಸಬು ಗುನ್ನೇಗಾರಿ ತೆಗೆದುಕ್ಕೊಂಡು ಈ ತಂಟೆಗೆ ಹೋಗದಂತೆ ತಾಕೀತುಮಾಡುವದು. ………ಈ ಮತದವರು ವಿಹಿತವಾಗಿ ನಡಿಸುವ ಕ್ರಮಗಳಿಗೆ ಕುಮ್ಮಕು ಮಾಡಿಕೊಡುವದು. ಗುನ್ನೇಗಾರಿಬಗ್ಗೆ ಬಂದದ್ದು ಸರ್ಕಾರ ಶಿವಾಜಮೆ ದಾಖಲ್ಮಾಡುವದು. ಈ………ಮತದವರು ನಿಮ್ಮ ಸಿಮ್ಮೆ ಗಡಿಗಳಮಾರ್ಗವಾಗಿ ಬಂದಲ್ಲಿ ಇಳಿಯುವದಕ್ಕೆ ಖೈದುವಾರ್ ಜಾಗ ಕೊಡಿಸಿ ಉಸ್ತುವಾರಿ ಇಟ್ಟು ಮುಂದಣ ಗಡಿಯವರಿಗೆ ರಹದಾರಿಯ ಆಳುಕೊಟ್ಟು ಕಳಿಸುವದು. ಈ………ಮತದವರಿಗೆ ಭಕ್ತಾದಿಗಳು ಕೊಡುವ ದವಸ ವಗೈರೆ ತರುವಲ್ಲಿ ಸುಂಕಕ್ಕೆ ಅಟಕಾಯಿಸದೆ ಬಿಡುವದು" ಎಂದು ಸ್ಪಷ್ಟೋಕ್ತಿಗಳಿಂದ ಅಪ್ಪಣೆಮಾಡಿರುತ್ತಾರೆ.

ಇದರಿಂದ ಆರಾಧ್ಯರುಗಳು ಏನೋ ಕಾರಣಾಂತರದಿಂದ ಹೇಗೋ ಸಂಪಾದಿಸಿಕೊಂಡಿದ್ದ ಸನ್ನದಿನಮೂಲಕವಾದ ಅಧಿಕಾರವು ಈ ಮೇಲ್ಕಂಡ ಹುಕುಮ್ಮಿನಿಂದ ಸಂಪೂರ್ಣವಾಗಿ ಕಿತ್ತುಹಾಕಲ್ಪಟ್ಟಿದೆಯೆನ್ನುವದು ಕರತಲಾಮಲಕವಾಗಿದೆ. ಈ ಚೈತನ್ಯರು ಕೋರಿಕೊಂಡಿರುವಂತೆ ಈಗಿನ ನಾಲ್ವಡಿ ಶ್ರೀಕೃಷ್ಣರಾಜ ಪ್ರಭುಗಳು ತಮ್ಮ ಪಿತಾಮಹರ ಸನ್ನದಿನಂತೆ ಕಾರ್ಯವನ್ನು ನಡಿಸುವದು ಅವಶ್ಯಕವಾಗಿರುವುದು. ಹಾಗೆ ಮಾಡಿ ಈ ಚೈತನ್ಯರಂಥವರು ಮಾಡುತ್ತಿರುವ ಹರಟೆಗೂ ನಡೆಸುತ್ತಿರುವ ಆಚರಣೆಗೂ ಮೊದಲು ಗುನ್ನೇಗಾರಿಯನ್ನು ಕಟ್ಟಿಸಿದಲ್ಲದೆ ಇಂಥ ತುಂಟಾಟದ ಅತಿ ಪ್ರಸಕ್ತಿಗಳು ತಪ್ಪಲಾರವು.

ಇವರಿಗಿರುವ ಸನ್ನದಿನಮೂಲಕವಾದ ಅಧಿಕಾರವು ಎಷ್ಟು ಊರ್ಜಿತವಾದದ್ದು ಎನ್ನುವದು ಈ ಮೇಲ್ಕಂಡ ವಿವರಣೆಯಿಂದ ಗೊತ್ತಾಯಿತಷ್ಟೆ. ಆದೇ ಶ್ರೀ ಮುಮ್ಮಡಿ ಕೃಷ್ಣರಾಜ ಪ್ರಭುಗಳು ಶ್ರೀ ಚಿತ್ರದುರ್ಗದ ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಅನಂತಾನಂತವಾಗಿ ಕೊಟ್ಟಿರುವ ಸನ್ನದುಗಳಲ್ಲಿ ೧೮೧೭ ನೆ ಇಸವಿ ಜುಲೈ ತಾ|| ೨೭ರಲ್ಲಿ ಹುಟ್ಟಿರುವುದರೊಳಗೆ—

"ಶ್ರೀ ವೀರಶೈವ ಮತಸ್ಥಾಪನಾಚಾರ್ಯವರ್ಯ ಶ್ರೀಮತ್ಪರಮಪಾವನ……………ಶ್ರೀಮಚ್ಚಿನ್ಮೂಲಾದ್ರಿಪ್ರಭು ಪೀಠಾರೂಢರಾದಂಥ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಮುರಗರಾಜೇಂದ್ರಸ್ವಾಮಿಗಳವರ ಸನ್ನಿಧಾನಕ್ಕೆ—ಶ್ರೀಮದ್ರಾಜಾಧಿರಾಜ……………ಮಹೀಶೂರ ರತ್ನಸಿಂಹಾಸನಾರೂಢರಾದಂಥ ಕೃಷ್ಣರಾಜ ಒಡೆಯರವರು ಮಾಡುವ ಸಾಷ್ಟಾಂಗ ನಮಸ್ಕಾರ……………ಇಲ್ಲಿಂದ ಕಳುಹಿಸಿ ಇರುವಂಥ ಸಾಮಾನುಗಳ ವಿವರ—ದುಲಡೀಪದಕ ೧. ವಜ್ರ ೯. ಮುಕ್ತಾಲೋಲಕ್ ಸಹ ೧೧೭. ಪೈಠಣಿಮದಾರ್ನಿ ಹಳದಿಮಡಿ ೧. ಹಸರುಮಡಿ ೧. ನಾಗಫಣಿಧೋತ್ರದ ಜೋಡಿ ೧. ಕಿನ್ಖಾಪುಥಾನು ೧. ಮಹತಾಪಿಪಟಕಿ ೧. ಜಾಮೇವಾರು ೨. ಚೀರ ೧. ಸಂಗೆ ತುರಾಯಿಕಂಬಿ ಶಾಲುಜೋಡಿ ೧. ಕಂಠೀರಾಯಿ ಸಾವಿರ ವರಹದ ಥೈಲಿ ೧. ಪಾಲಕಿಮೈಸರಂಜಾಂ, ಹಚ್ಚುಗೋಲ ಸಹಾ ೧. ಬೆಳ್ಳಿ ಕಾವು ಹಾಕಿದ ಚಾಮರ ಜೋಡಿ ೧. ಚಿನ್ನದ ಕಲಶಹಾಕಿದ ಕಿನ್ಖಾಪು ಛತ್ರಿ ೧. ಚಿನ್ನದ ಕಲಶಹಾಕಿದ ಶ್ವೇತಛತ್ರ ೨. ಚಿನ್ನದ ಕಲಶಹಾಕಿದ ಸೂರ್ಯಪಾನ ೨. ಆನೆ ೨. ಕುದುರೆ ೨. ಒಂಟೆ ೨. ವರ್ಷಾಶನದ ಸನ್ನದು ೧. ಚಿಲ್ಲರೆ ರಹದಾರಿ ನಿರೂಪಗಳು ಇವು ಸನ್ನಿಧಾನಕ್ಕೆ ಬಂದು ತಲ್ಪಿದ ಬಗ್ಗೆ ಅಪ್ಪಣೆ ಕೊಟ್ಟು ಕಳುಹಿಸುವದು……………ಸ್ವಾಮಿಗಳವರ ದರ್ಶನಾಪೇಕ್ಷೆ ಬಹಳವಾಗಿರುವದ್ದರಿಂದ……………ಮನಸ್ಸಿನಲ್ಲಿ ಚೆನ್ನಾಗಿ ಅಂಗೀಕರಿಸಿ ಶೀಘ್ರದಲ್ಲಿ ಮೈಸೂರಿಗೆ ದಯಮಾಡಿಸುವಬಗ್ಗೆ ಮುಂಚಿತವಾಗಿ ಲೇಖನಗೊಳಿಸಿ ಕಳುಹಿಸಿಕೊಡುವಂತೆ ಮಾಡಿಸಬೇಕು. ಇದೇ ಬಿನ್ನಹಪತ್ರ ಸಹಸ್ರವೆಂದು ಭಾವಿಸಿ ನಮ್ಮ ಮನಸ್ಸಂತೋಷಪಡಿಸಬೇಕು."

ಇತ್ಯಾದಿ ಬರೆದಿದ್ದಾರೆ. ತಾ|| ೧೮೧೭ ನೆ ಸೆಪ್ಟಂಬರ್ ೨೯ ರಲ್ಲಿ ಕೊಟ್ಟಿರುವ ಇನ್ನೊಂದು ಸನ್ನದಿನಲ್ಲಿ—"ಶ್ರೀಮತು ಅರಮನೆ ಸೀಮೆ ಗಡಿಗಳ ಅಮಿಲ ಕಿಲ್ಲೇದಾರರಿಗೆ ಬರಸಿ ಕಳುಹಿಸಿದ ನಿರೂಪ ಅದಾಗಿ—ಚಿತ್ರದುರ್ಗದಲ್ಲಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಗರಾಜೇಂದ್ರಸ್ವಾಮಿಗಳವರು ಚಿತ್ರದುರ್ಗದಿಂದ ಮೈಸೂರಿಗೆ ದಯಮಾಡಿಸುತ್ತಾರಾದ್ದರಿಂದ ಶ್ರೀಗಳವರ ಅಡ್ಡಪಾಲಿಕೆ ಸವಾರಿ ಮುಂದೆ ನಡೆಯುವ ಮಕರತೋರಣ……………ಈ ಮೇರೆ ಬಿರುದುಗಳು ಸಹಿತವಾಗಿ ಸೀಮೆ ಸಂಚಾರಮಾಡುವ ಪದ್ಧತಿ ಪೂರ್ವಾರಭ್ಯ ಉಂಟಾಗಿರುವ ಮೇರೆಗೆ ಈಗಲೂ ಸಂಚಾರಮಾಡುವಲ್ಲಿ ಯಾರೂ ಅಡ್ಡಿ ಮಾಡಲಾಗದು." ಎಂದು ಅಪ್ಪಣೆ ಕೊಡಿಸಿರುತ್ತಾರೆ. ಹೀಗೆ ಎಷ್ಟೋ ಸನ್ನದುಗಳಿವೆ. ಉದಾಹರಣಾರ್ಥವಾಗಿ ಒಂದೆರಡನ್ನು ಮೇಲೆ ಬರೆದಿರುತ್ತೇನೆ. ಇದರಂತೆ ಮೊಗಲಚಕ್ರವರ್ತಿಗಳು ಹೈದರಾಬಾದು ನೈಜಾಮರು ಮೊದಲಾದ ಪ್ರಭುಗಳಿಂದಲೂ ಸಹ ಅನೇಕ ಸನ್ನದುಗಳಿವೆ. ಅವು ಮೈಸೂರು ದೇಶಕ್ಕೆ ಸಂಬಂಧಪಟ್ಟಿಲ್ಲವೆಂದೂ ಲೇಖನವು ವಿಸ್ತಾರವಾಗುವುದೆಂದೂ ಬಿಟ್ಟಿರುತ್ತೇನೆ. ಮೈಸೂರು ರಾಜ್ಯವು ಚೀಫ್ ಕಮಿಷನರ ಆಳ್ವಿಕೆಗೆ ಒಳಪಟ್ಟಿದ್ದಾಗ ೧೮೮೧ ನೆ ಇಸವಿಯಲ್ಲೂ ಬೇರೆ ಬೇರೆ ಕಾಲದಲ್ಲೂ ಆ ಇಂಗ್ಲೀಷ್ ಅಧಿಕಾರಿಗಳೂ ಹೀಗೆಯೇ ನಿರೂಪಗಳನ್ನು ಕೊಟ್ಟಿರುತ್ತಾರೆ. ಸರ್ವರಿಗೂ ಗೊತ್ತಾಗಿರುವಂಥ ಕಾರಣದಿಂದ ಶ್ರೀ ಚಿತ್ರದುರ್ಗದ ಜಗದ್ಗುರುಸ್ವಾಮಿಗಳವರಿಗೆ ಮೈಸೂರು ದೇಶದ ಎಲ್ಲೆಯೊಳಗೆ ಮಾತ್ರ ಅಡ್ಡಪಲ್ಲಕ್ಕಿಬಿರುದು ಪ್ರಕೃತ ನಿಲ್ಲಿಸಿಬಿಟ್ಟಿದ್ದರೂ ಇಂಗ್ಲೀಷರ ಆಳ್ವಿಕೆಯಲ್ಲಿರುವ ಇಂಡ್ಯಾ ದೇಶದ ಅನೇಕ ಭಾಗಗಳಲ್ಲಿಯೂ ಹೈದರಾಬಾದು ಮೊದಲಾದ ನೇಟೀವ್ ಸ್ಟೇಟುಗಳಲ್ಲಿಯೂ ಇವರ ಪ್ರಾಚೀನ ಜಗದ್ಗುರು ಮರ್ಯಾದೆಗಳೆಲ್ಲಾ ಸಾಂಗೋಪಾಂಗವಾಗಿ ಈಗ್ಯೂ ನಡೆಯುತ್ತಲೇ ಇವೆ. ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸಹ ಅಭಿಮಾನವಿಟ್ಟು ಪ್ರಾಚೀನಗೌರವಗಳಲ್ಲಿ ಬಹು ಭಾಗವನ್ನು ಈಗ್ಯೂ ನಡೆಯಿಸಿಕೊಂಡು ಬರುತ್ತಲೇ ಇದ್ದಾರೆ. ಬೆಂಗಳೂರಿನಲ್ಲಿ ಜಯದೇವ ವೀರಶೈವ ಹಾಸ್ಟಲಿಗೆ ಫೌಂಡೇಷನ್ ಸ್ಟೋನ್ ಸ್ಥಾಪನೆ ಮಾಡುವಾಗ್ಯೆ ಶ್ರೀಮದ್ಯುವರಾಜರವರು ಕೊಟ್ಟ ಸ್ಪೀಚಿನಲ್ಲಿ I cannot allow this opportunity to pass without acknowledging, on your behalf, the great disinterested service rendered to the cause of the advancement of your education by His Holiness Sri Jagadguru Jayadeva Murga Rajendra Mahaswami, whose presence here this morning is a proof, if proof is needed, of the great interest he has been evincing in the welfare of your community. The liberal contribution paid by His Holiness, his promise to augment the resources, if need be, and the Government grant will, I am sure, enable you era long, to have a suitable habitation for your students. ಎಂದು ಶ್ರೀ ಜಗದ್ಗುರು ಪೀಠಾಧಿಪತಿಗಳ ಜಗದ್ಗುರುತ್ವವನ್ನು ತಮ್ಮ ಮುಖದಿಂದಲೇ ಉದ್ಘೋಷಿಸಿ, ತಮ್ಮ ಪಿತಾಮಹಾದಿಗಳು ನಡೆಯಿಸಿಕೊಟ್ಟಿರುವ ಗೌರವದ ರಕ್ಷಣೆಯನ್ನು ಕಾರ್ಯರೂಪದಲ್ಲಿಯೇ ತೋರಿಸುತ್ತಾರೆ.

ಹೀಗೆಯೇ ಮತದ ಇತರ ಪಂಚಸಿಂಹಾಸನಾಧೀಶ ಜಗದ್ಗುರು ಪೀಠಗಳಿಗೂ ಇತರ ಪ್ರಮುಖ ಮತಗಳಿಗೂ ಸಾವಿರಾರುವರ್ಷಗಳಿಂದ ನಡೆದುಬಂದಿರುವ ಅನೇಕ ಸನ್ನದುಗಳೂ ರಹದಾರಿಗಳೂ ತಾಮ್ರಶಾಸನಗಳೂ ಅಗಣಿತವಾಗಿರುತ್ತವೆ. ಇಂಥ ಆಧಾರಗಳಲ್ಲಿ ಕೋಟಿಪಾಲಿನಲ್ಲಿ ವೀಸಪಾಲಾದರೂ ಈ ಚೈತನ್ಯರ ಭ್ರಾಂತಿಕಲ್ಪಿತ ಗುರುತ್ವದವರಿಗಿದೆಯೇ? ವಾಚಕರೇ ವಿಚಾರಮಾಡಬೇಕು.

ತಕ್ಕ ಆಧಾರಗಳಿಂದಲೂ ಅನೂಚಾನವಾದ ಸಂಪ್ರದಾಯಗಳಿಂದಲೂ ಜಗತ್ತೆಲ್ಲಾ ಕಾಣುತ್ತಿರುವ ಜಗದ್ಗುರು ವೈಭವದಿಂದಲೂ ಮತಸಾಮಾನ್ಯ ಸಂಪೂಜ್ಯತೆಯಿಂದಲೂ ಒಪ್ಪುತ್ತಿರುವ ವೀರಶೈವ ಪ್ರಾಚೀನಮತಗಳ ಸ್ವಾಮಿಗಳ ಗುರುತ್ವವನ್ನು ಅಪಲಪಿಸಿಬಿಡುವುದರಿಂದಲೇ ತಮ್ಮಲ್ಲಿ ಜಗದ್ಗುರುತ್ವವನ್ನು ಸಂಪಾದಿಸಿಕೊಂಡುಬಿಡುವೆನೆಂದು ಭ್ರಮಿಸಿ ಮಾರುದ್ದದ ನಾಲಗೆಯನ್ನು ಚಾಚಿರುವ ಚೈತನ್ಯರ ಸಾಹಸವು ಕಲಿಕಾಲದ ವೈಚಿತ್ರ್ಯವಲ್ಲವೆ? ಅತ್ತೆಗೆ ಸೊಸೆಯೂ ತಾಯ್ತಂದೆಗಳಿಗೆ ಮಕ್ಕಳೂ ಗುರುವಿಗೆ ಶಿಷ್ಯರೂ ಎದೆಗೆ ಕಾಲುತೋರಿಸುವ ಈ ಕಾಲದ ವೈಚಿತ್ರ್ಯದಲ್ಲಿ ಈ ಚೈತನ್ಯರಂಥವರ ಪ್ರವರ್ತನವು ಅದ್ಭುತವಾದದ್ದೇ? ಇದು ಕಾಲಧರ್ಮ.

ಈ ಮೇಲೆಹೇಳಿರುವ ಕಾರಣಗಳಿಂದೆಲ್ಲಾ ಗೊತ್ತಾಗುವುದೇನೆಂದರೆ—ಈ ಚೈತನ್ಯರಾಗಲೀ ಇವರ ಅಭಿಮಾನಿತವರ್ಗವಾಗಲೀ ವೀರಶೈವಮತಸಾಮಾನ್ಯಕ್ಕೂ ಗುರುವೆಂದು ಶಾಸ್ತ್ರವಚನಗಳಿಂದಾಗಲೀ ಲೋಕಾನುಭವ ದೃಷ್ಟಾಂತದಿಂದಾಗಲಿ ಸಿದ್ಧವಾಗುವದಿಲ್ಲ. ಗುರುತ್ವವೇ ಹೀಗಿರುವಾಗ ಜಗದ್ಗುರುತ್ವವಿಷಯವಂತೂ ಸ್ವಪ್ನದಲ್ಲೂ ಸಿದ್ಧವಲ್ಲ. ಇವರ ಮಾತುಗಳಿಂದ ವೀರಶೈವ ಮತಕ್ಕೇ ತಾವು ದೂರರೆಂಬ ಸ್ಥಿತಿಯನ್ನು ಇವರೇ ತೋರ್ಪಡಿಸಿಕೊಂಡಿದ್ದಾರೆ. ಇವರ ನಡೆನುಡಿಗಳು ವೀರಶೈವ ಶಾಸ್ತ್ರವಚನಗಳಿಗೂ ಆಚರಣೆಗಳಿಗೂ ದೂರವಾದವುಗಳು. ಒಂದುವೇಳೆ ಅಭುಕ್ತಮೂಲೆಯಲ್ಲಿ ಇವರಕಡೆಯವರು ಎಲ್ಲೋ ಕೆಲ ಅಜ್ಞಜನರನ್ನು ಮಂತ್ರತಂತ್ರಾದಿ ಜಾಲದಿಂದ ವಶಪಡಿಸಿಕೊಂಡು ಅದರಿಂದ ಮನ್ನಣೆಸಿಕೊಳ್ಳುತ್ತಿದ್ದ ಮಾತ್ರಕ್ಕೇ ಅದು ಮತಸಾಮಾನ್ಯಕ್ಕೆ ಸಂಬಂಧಪಟ್ಟ ಗುರುತ್ವವಲ್ಲ. ಅಜ್ಞಜನರು ಯಾವ ಕೆಲಸವನ್ನು ತಾನೇ ಮಾಡುವುದಿಲ್ಲ? ಎಷ್ಟೋಜನ ಹಿಂದೂಗಳು ಮಹಮ್ಮದೀಯರ ಗೋರಿಗಳಿಗೂ ಪಂಜಾಗಳಿಗೂ ಪಾತಯಾಮಾಡಿಸುತ್ತಾರೆ. ಅದಮಾತ್ರಕ್ಕೇ ಹಿಂದುಗಳೆಲ್ಲಾ ಮಹಮ್ಮದೀಯರಾದರೇ? ಅವರಿಗೆಲ್ಲಾ ಮಹಮ್ಮದೀಯ ದೈವವೇ ಕುಲದೈವವೆ? ಇದನ್ನೆಲ್ಲಾ ವಿಚಾರಮಾಡದೆ ತಾವು ಕಟ್ಟಿಕೊಂಡಿರುವ ಒಂದು ಹೆಸರಿನ ಬಲದಿಂದಲೇ ತಮಗೆ ಜಗದ್ಗುರುತ್ವವನ್ನು ಆರೋಪಿಸಿಕೊಂಡು ಅನೂಚಾನಸಿದ್ಧರಾಗಿರುವ ಜಗದ್ಗುರುಗಳಮೇಲೆಲ್ಲಾ ಕಾಲುಕೆರೆದು ಪಾಳೆಯಿಡುವುದಕ್ಕೆ ಈ ಚೈತನ್ಯರು ನಿಂತುದು, "ಸೊಳ್ಳೆಯೊಂದಾನೆಯ ನುಂಗಿತು" ಎಂಬ ಹಾಡಿನ ಆಧಾರವನ್ನಿಟ್ಟುಕೊಂಡು ಒಂದಾನೊಂದು ಮಶಕವು ಆನೆಯನ್ನು ನುಂಗುತ್ತೇನೆಂದು ಬಂದು ಬಾಯ್ಬಿಕ್ಕಿಸಿದಂತೆ ನಗೆಗೀಡಾಗಿರುತ್ತದೆ. ಇದರಮೇಲೂ ವೀರಶೈವಮತಕ್ಕೆ ತಮ್ಮ ಪಂಗಡದವರೇ ಜಗದ್ಗುರುಗಳು; ಇತರ ಸರ್ವಭಾಗದ ಮತಾಚರ್ಯ ಪೀಠಾಧಿಪತಿಗಳೂ ಸಿರಾಭಾರಿ ಚರವರೇಣ್ಯರೂ ಸಹ ಅವಾಂತರದ ಅಥವಾ ಕಲ್ಪಿತದ ಗುರುಗಳು ಎಂಬುದನ್ನು ಸಭಾಮುಖದಲ್ಲಿ ಸಿದ್ಧಾಂತಪಡಿಸುವುದಕ್ಕೆ ಈ ಚೈತನ್ಯರಾಗಲಿ ಇವರ ವರ್ಗದ ಇನ್ನಾರೇ ಆಗಲಿ ಶಕ್ತಿಯುಳ್ಳವರಾಗಿದ್ದಲ್ಲಿ ಅದನ್ನು ಪ್ರಕಾಶಪಡಿಸಿದರೆ ಅದಕ್ಕೂ ಏರ್ಪಾಡುಮಾಡುವಲ್ಲಿ ಅಡ್ಡಿಯಿಲ್ಲ. ಅದಕ್ಕೆ ಶಕ್ತಿಯಿಲ್ಲದೆ ಹೀಗೆ ಪತ್ರಿಕೆಗಳಲ್ಲಿ ಕೂಗಿಕೊಂಡಷ್ಟೇ ಲಾಭವೆಂದು ತಿಳಿದುಕೊಂಡಿದ್ದರೆ, ವೀರಶೈವ ಗುರುವರ್ಗದ ವಿಷಯದಲ್ಲಿ ಇವರಾಡಿರುವ ಕೆಟ್ಟಮಾತುಗಳು ಎಂದಿಗೂ ಕ್ಷಮ್ಯವಾಗುವುದಿಲ್ಲ. ಸಮಾಜದ ಕ್ಷಮಾಪಣೆಯನ್ನು ಇವರು ಕೇಳಿಕೊಳ್ಳದಿದ್ದರೆ ಅಥವಾ ಹಾಗೆ ಮಾಡಿಕೊಳ್ಳುವಂತೆ ಇವರವರ್ಗದ ವಿವೇಕಿಗಳಾರಾದರೂ ಇವರಿಗೆ ಹೇಳಿ ಮಾಡಿಸದಿದ್ದರೆ "ಏಕಃ ಪಾಪಾನಿಕುರುತೆ ಫಲಂಭುಙ್ತ್ತೆ ಮಹಾಜನಃ" ಎಂಬಂತೆ ಪರ್ಯವಸಾನವಾಗುತ್ತದೆ.

ಆರಾಧ್ಯಗುರು.

೯ನೆ ಶ್ರೀಮದ್ವೀರಶೈವ ಮಹಾಸಭೆ ಬೀರೂರು.

ಅಶೇಷ ವೀರಶೈವ ಮಹಾಜನರಲ್ಲಿ ವಿಜ್ಞಾಪಿಸಿಕೊಳ್ಳುವುದೇನೆಂದರೆ.—

ಆಸೇತುಹಿಮಾಚಲಾಂತವಾಗಿರುವ ಈ ಭರತಖಂಡದ ನಾನಾಭಾಗಗಳಲ್ಲಿ ನೆಲಸಿರುವ ವೀರಶೈವ ಸಮಾಜದ ಧಾರ್ಮಿಕ ನೈತಿಕ, ಸಾಂಪತ್ತಿಕ, ವಿದ್ಯಾವಿಷಯಕಾದಿ ಪುರೋಭಿವೃದ್ಧಿಗಳನ್ನು ಸಾಧಿಸುವ ಉದ್ದೇಶದಿಂದ ೧೯೦೪ ನೆಯ ಇಸವಿಯಲ್ಲಿ ಉದಯಂಗೊಂಡು ಮೊಟ್ಟಮೊದಲು ಧಾರವಾಡದಲ್ಲಿ ನೆರೆದ ಶ್ರೀಮದ್ವೀರಶೈವ ಮಹಾಸಭೆಯು ಅದರಿಂದೀಚೆಗೆ ಬೆಂಗಳೂರು ಸೊಲ್ಲಾಪುರ, ಬಾಗಲಕೋಟೆ, ಬಳ್ಳಾರಿ, ಬೆಳಗಾಂ, ಸಿಪ್ಪಾಣಿ, ದಾವಣಗೆರೆ-ಈ ಸ್ಥಲಗಳಲ್ಲಿ ನೆರೆದು ಆಯಾಪ್ರಾಂತಗಳಲ್ಲೆಲ್ಲಾ ಸಮಾಜದವರಲ್ಲಿ ಮತಾಭಿಮಾನವನ್ನೂ, ಧರ್ಮಜಾಗರೂಕತೆಯನ್ನೂ, ಪುರೋಭಿವೃದ್ಧಿಗಮನವನ್ನೂ ಉಂಟುಮಾಡಿ, ೯ ನೆಯ ಮಹಾಸಭೆಯು ಈ ವರ್ಷ ನಮ್ಮ ಬೀರೂರಿನಲ್ಲಿ ನಡೆಯುವ ಸಂಯೋಗವು ಉಂಟಾಗಿರುತ್ತದೆ. ಈ ಮಹಾಸಮಯದಲ್ಲಿ ಸರ್ವಭಾಗದ ಸಮಾಜಬಾಂಧವರ ಸೇವಾರೂಪವಾದ ಭಾಗ್ಯವು ನಮ್ಮ ಬೀರೂರು ವೀರಶೈವ ಜನವರ್ಗದವರಿಗೆ ಪ್ರಾಪ್ತವಾಗಿರುವುದರ ಜತೆಗೆ ಶ್ರೀ ಶೂನ್ಯಸಿಂಹಾಸನಾಧೀಶ್ವರರನ್ನೂ, ಶ್ರೀ ಪಂಚಸಿಂಹಾಸನಾಧೀಶ್ವರರನ್ನೂ ಮಹಾಸಭಾಕಾಲಕ್ಕೆ ಬಿಜಯಂಗೈಸಿಕೊಳ್ಳುವ ಏರ್ಪಾಟೂ ಕೂಡ ನಡೆದಿರುವುದು ನಮ್ಮಗಳ ಪುಣ್ಯೋದಯವೆಂದು ಭಾವಿಸಬೇಕಾಗಿದೆ.

೨. ಈ ಮಹಾಸಭೆಯನ್ನು ನೆರವೇರಿಸುವ ಮೂಲಕ ಸಮಾಜಸೇವೆಯನ್ನು ಮಾಡುವುದರಿಂದ, ಈ ನಮ್ಮ ಭಾಗದ ಸಮಾಜಬಾಂಧವರಲ್ಲೂ ತಕ್ಕ ಜಾಗರೂಕತೆಯುಂಟಾಗುವುದೆಂಬ ಕುತೂಹಲದಿಂದ ಬೀರೂರು ವೀರಶೈವರಾದ ನಾವು ಈ ವರ್ಷ ೯ ನೆಯ ಶ್ರೀಮದ್ವೀರಶೈವ ಮಹಾಸಭಾಕಾರ್ಯವನ್ನು ನಿರ್ವಹಿಸಲು ನಿರ್ಧರಿಸಿ ಸಮಾಜಬಾಂಧವರೆಲ್ಲರ ಕೃಪಾಬಲಸಾಹಾಯ್ಯವನ್ನು ನಿರೀಕ್ಷಿಸಿಕೊಂಡಿದ್ದೇವೆ. ಆದುದರಿಂದ ವೀರಶೈವ ಮಹನೀಯರೆಲ್ಲರೂ ದಯಮಾಡಿಬಂದು ದರ್ಶನವನ್ನು ಕೊಟ್ಟು ನಮ್ಮಿಂದ ಮಾಡಲ್ಪಡುವ ಆತಿಥ್ಯವನ್ನು ಸ್ವೀಕರಿಸಿ, ಕಳೆದ ಎಂಟು ಮಹಾಸಭೆಗಳಂತೆ ಈ ಮಹಾ ಸಭಾಕಾರ್ಯವೂ ಸಾಂಗವಾಗಿ ನೆರವೇರುವಂತೆ ಪ್ರೋತ್ಸಾಹಿಸಿ, ನಮ್ಮಗಳ ಮನಸ್ಸಂತೋಷಗೊಳಿಸುವ ಭಾರವು ತಮ್ಮೆಲ್ಲರಿಗೂ ಸೇರಿದ್ದೆಂದು ಸಂಪೂರ್ಣವಾಗಿ ನಂಬಿದ್ದೇವೆ.

೩. ಮಂಗಲಪ್ರದವಾದ ಈ ಮಹಾಸಭೆಯು ಇದೇ 1919 ನೆ ಇಸವಿ ಡಿಶಂಬರ್ 27, 28, 29 ನೆ ತಾರೀಖುಗಳಲ್ಲಿ ಕೂಡುವಂತೆ ನಿಷ್ಕರ್ಷಿಸಲ್ಪಟ್ಟಿದೆ. ಸರ್ವಪ್ರಾಂತದ ವೀರಶೈವ ಮಹನೀಯರೂ ತಂತಮ್ಮ ಪ್ರದೇಶಗಳಲ್ಲಿ ಪ್ರಾಂತಿಕ ಸಭೆಗಳನ್ನು ಕೂಡಿಸಿ, ಪ್ರತಿನಿಧಿಗಳನ್ನು ಆರಿಸಿ ನೇಮಿಸಿ 1919 ನೆಯ ಡಿಶಂಬರು 15ನೆಯ ತಾರೀಖಿನೊಳಗಾಗಿ ನಮಗೆ ತಲಪುವಂತೆ ತಮ್ಮ ತಮ್ಮ ಸಭೆಯ ಅಧ್ಯಕ್ಷರ ಅಥವಾ ಸೆಕ್ರೆಟರಿಗಳ ಸಹಿಯೊಡನೆ ಇದರ ಜತೆಯಲ್ಲಿರುವ ಫಾರಮುಗಳಲ್ಲಿ ಬರೆಯಿಸಿ ಕಳುಹಿಸುವವರಾಗಬೇಕು.

೪. ಈ 9 ನೆಯ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಮಾನ್ ಶಾಂತವೀರಪ್ಪ, ವೀರಸಂಗಪ್ಪ ಮೆಣಸಿನಕಾಯಿ, ರಿಟೈರ್ಡ್ ಡೆಪ್ಯುಟಿಕಲೆಕ್ಟರ್ ಧಾರವಾಡ ಇವರು ಸ್ವೀಕರಿಸಲು ಅನುಮತಿಸಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

೫. ಈ ಬೀರೂರೆಂಬ ಗ್ರಾಮವು ಅಡಿಕೆ, ಕಾಫಿ, ವ್ಯಾಪಾರದಲ್ಲಿ ಬಹಳ ಪ್ರಸಿದ್ಧಸ್ಥಳವಾಗಿ ಮಲನಾಡಿಗೂ, ಮೈದಾನಪ್ರದೇಶಕ್ಕೂ ಮಧ್ಯಪ್ರದೇಶವಾಗಿದೆ. ಈ ಗ್ರಾಮವೂ ಸುತ್ತುಮುತ್ತಣ ಪ್ರದೇಶಗಳೂ ವೀರಶೈವಮಂಡಲಿಯಿಂದ ನಿಬಿಡವಾಗಿವೆ. ಈ ಸ್ಥಳಕ್ಕೆ ಸಮೀಪದಲ್ಲಿ ಕೆಲವು ಮಹಿಮಸ್ಥಳಗಳೂ, ಜಗತ್ಪ್ರಸಿದ್ಧ ರಮಣೀಯ ಸ್ಥಲಗಳೂ ಇವೆ. ಅವುಗಳು ಯಾವುವೆಂದರೆ-ಕಲ್ಹತ್ತಿಗಿರಿ, ಎಗಟಿ, ಬಾಬಾಬುಡನ್‍ಗಿರಿ, ಜೋಗ್ ಜಲಪಾತ (Gerasoppa Falls) ಶ್ರೀಮದ್ರೇಣುಕಾಚಾರ್ಯರ ಪೀಠಸ್ಥಳವಾದ ಬಾಳೆಹೊನ್ನೂರು, ಮಾರಿಕಣಿವೆ ಮುಂತಾದುವುಗಳಾಗಿರುತ್ತವೆ. ದೂರಪ್ರದೇಶಗಳಿಂದ ಬರುವ ಪ್ರತಿನಿಧಿಗಳು ಮಹಾಸಭಾಕಾರ್ಯವನ್ನು ಪೂರೈಸಿಕೊಂಡು ಅವುಗಳನ್ನು ನೋಡಿ ಬರಬಹುದಾಗಿದೆ. ನಮ್ಮ ತಿಳುವಳಿಕೆಗೆ ಬಂದ ಮಹನೀಯರಿಗೆಲ್ಲಾ ಈ ಆಹ್ವಾನಪತ್ರಿಕೆಗಳನ್ನು ಕಳುಹಿಸಿರುತ್ತೇವೆ. ಸ್ಟಾರ್, ಚಂದ್ರೋದಯ, ವಿಭಾಕರ, ಆಂಧ್ರಪ್ರಕಾಶಿಕ, ಮದ್ರಾಸ್ ಮೇಲ್, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳಲ್ಲೆಲ್ಲಾ ಸಮಸ್ತ ವೀರಶೈವರೂ ಈ ಮಹಾಸಭೆಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತೇವೆ. ನಮ್ಮ ಗಮನಕ್ಕೆ ಬಾರದಿರುವ ಕೆಲವರಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸುವುದು ತಪ್ಪಿದ್ದರೂ ನಮಗೆ ಪತ್ರಿಕೆಯು ಬಂದಿರುವುದಿಲ್ಲ, ಮಹಾಸಭೆಗೆ ಹೋಗಬಾರದೆಂದು ಆಲೋಚಿಸದೆ ಸರ್ವರೂ ಏಕಭಾವದಿಂದ ಸಭೆಗೆ ದಯಮಾಡಿಸಬೇಕಾಗಿ ಪ್ರಾರ್ಥಿಸುತ್ತೇವೆ. ಇಂಥಿಂಥವರ ಅಡ್ರೆಸ್ಸಿಗೆ ಪತ್ರಿಕೆಗಳನ್ನು ಕಳುಹಿಸಬೇಕೆಂದು ಸೂಚನೆ ಕೊಡುವ ಮಹನೀಯರಿಗೆ ನಾವು ಕೃತಜ್ಞರಾಗಿ ಅದರಂತೆ ಕಳುಹಿಸಿಕೊಡುತ್ತೇವೆ.

ಸಭಾಸದರ ನಿಯಮಗಳು.

1. ಪ್ರತಿನಿಧಿಗಳ ಫೀ ರೂ. 5. ಮತ್ತು ಪ್ರೇಕ್ಷಕರ ಫೀ ರೂ. 2. ಪ್ರತಿನಿಧಿಗಳಿಗೆ ಮಾತ್ರ ಭೋಜನಕ್ಕೂ ವಾಸವಾಗಿರುವುದಕ್ಕೂ ಏರ್ಪಾಟು ಮಾಡಲ್ಪಡುತ್ತದೆ. ಆದರೆ ಅವಶ್ಯವಾಗಿ ತಮಗೆ ಬೇಕಾಗತಕ್ಕ ಹಾಸಿಗೆ, ಪಾತ್ರೆ ಮೊದಲಾದುವುಗಳನ್ನು ಸಂಗಡಲೇ ತೆಗೆದುಕೊಂಡು ಬರಬೇಕು. ಪ್ರತ್ಯೇಕವಾಗಿರಬೇಕೆಂದು ಅಪೇಕ್ಷಿಸುವ ಪ್ರತಿನಿಧಿಗಳು ತಮ್ಮ ಸಂಗಡವೇ ಅಡಿಗೆಯ ಆಳುಗಳನ್ನು ಕರೆದುಕೊಂಡು ಬರಬೇಕಲ್ಲದೆ ಸ್ವಾಗತಸಂಘದ ಸೆಕ್ರೆಟರಿಗಳಿಗೆ 1919 ನೆಯ ಡಿಶಂಬರ್ 15 ನೆಯ ತಾರೀಖಿನೊಳಗಾಗಿ ತಿಳಿಸುವುದು. ಅಂಥವರಿಗೆ ಬೇರೆ ಸ್ಥಳಗಳು ಏರ್ಪಡಿಸಲ್ಪಡುವುವು. ಈ ರೀತಿ ಮುಂಚಿತವಾಗಿ ತಿಳುಹಿಸದಿದ್ದ ಪ್ರತಿನಿಧಿಗಳಿಗೆಲ್ಲಾ ಒಂದೇ ಕಡೆಯಲ್ಲಿ ಊಟಕ್ಕೆ ವ್ಯವಸ್ಥೆಯು ಮಾಡಲ್ಪಡುವುದು.

2. ಸ್ವಯಂಸೇವಕ (Volunteers) ರಾಗಲಿಚ್ಛಿಸುವ ದೊಡ್ಡಮನುಷ್ಯರೂ ಮತ್ತು ವಿದ್ಯಾರ್ಥಿಗಳೂ 1919 ನೆ ಡಿಶಂಬರ್ 10 ನೆಯ ತಾರೀಖಿನೊಳಗಾಗಿ ತಲುಪುವಂತೆ ವ್ಯವಸ್ಥಾಪಕಸಂಘದ ಉಪಾಧ್ಯಕ್ಷರಿಗೆ ಬರೆದುಕೊಳ್ಳುವುದಲ್ಲದೆ, 1919 ನೆಯ ಡಿಶಂಬರ್ 20ನೆಯ ತಾರೀಖಿಗೆ ಬೀರೂರಿಗೆ ಬಂದು ಕೆಲಸಕ್ಕೆ ಸೇರುವವರಾಗಬೇಕು.

3. ಶ್ರೀ ಪೂಜ್ಯ ವಿರಕ್ತಸ್ವಾಮಿಗಳವರಿಗೂ, ಶ್ರೀ ಮಾನ್ಯ ಪಟ್ಟ ಚರಮೂರ್ತಿಗಳವರಿಗೂ, ಶ್ರೀಮದ್ವೀರಶೈವ ಮಹಾಸಭಾ ಚಿರಸ್ಥಾಯಿಫಂಡಿನ ಮೆಂಬರುಗಳಿಗೂ, ಶಾಸ್ತ್ರಿಗಳಿಗೂ, ಉಪನ್ಯಾಸಕರಿಗೂ, ವಿದ್ಯಾರ್ಥಿಗಳಿಗೂ ಸಭಾಪ್ರವೇಶದ ಫೀ ಇರುವುದಿಲ್ಲ. ಇವರುಗಳ ಊಟಕ್ಕೂ ಉಚಿತವಾಗಿ ಅನುಕೂಲಪಡಿಸಲ್ಪಡುವುದು. ಇವರುಗಳಿಗೆ ಉಚಿತವಾಗಿ ಟಿಕೆಟ್ಟುಗಳು ಮಹಾಸಭೆಯ ಆಫೀಸಿನಲ್ಲಿ ದೊರೆಯುವುವು. ಶ್ರೀಮದ್ವೀರಶೈವ ಮಹಾಸಭಾ ಚಿರಸ್ಥಾಯಿಫಂಡಿಗೆ ವಾಗ್ದಾನಮಾಡಿ ಮೊಬಲಗನ್ನು ಪಾವತಿಮಾಡಿರುವ ಮಹನೀಯರಿಗೆ ಗೌರವಾಸನಗಳು ಸಭಾಮಂಟಪದಲ್ಲಿ ಏರ್ಪಡಿಸಲ್ಪಡುವುವು. ಮಹಾಸಭೆ ನಡೆಯುವ ತಾರೀಖುಗಳೊಳಗೆ ಶ್ರೀಮದ್ವೀರಶೈವ ಮಹಾಸಭಾ ಚಿರಸ್ಥಾಯಿಫಂಡಿನ ಛೇರ್ಮನ್ನರಾದ (Chairman) ಮ|| ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ. ಯವರ ಕಡೆಗೆ ಚಿರಸ್ಥಾಯಿಫಂಡಿಗೆ ಮೊಬಲಗನ್ನು ಪಾವತಿಮಾಡಿ ರಸೀತಿಯನ್ನು ತೋರಿಸಿದವರಿಗೂ ಸಹ ಗೌರವಾಸನಗಳು ಸಭಾಮಂಟಪದಲ್ಲಿ ಏರ್ಪಡಿಸಲ್ಪಡುವುವು.

4. ಯೋಗ್ಯಟಿಕೆಟ್ ತೋರಿಸಿದವಿನಾ ಯಾರಿಗೂ ಮಹಾಸಭೆಯಲ್ಲಿ ಪ್ರವೇಶವು ದೊರೆಯಲಾರದು.

5. ಸದ್ಯಕ್ಕೆ ಬೀರೂರಿನಲ್ಲಿ ಹವೆಯು ಚನ್ನಾಗಿರುತ್ತದೆ. 1919 ನೆ ಡಿಶಂಬರ್ 26 ನೆಯ ತಾರೀಖಿನಿಂದ ಸ್ಟೇಷನ್ನಿನಲ್ಲಿ ಪ್ರತಿನಿಧಿಗಳನ್ನು ಬರಮಾಡಿಕೊಳ್ಳುವ ವ್ಯವಸ್ಥೆಯು ಇಡಲ್ಪಡುವುದು. ಪ್ರತಿನಿಧಿಗಳು ಬರುವ ರೇಲ್ವೆಗಾಡಿಯ ಕಾಲವನ್ನು ಮೊದಲೇ ದಯವಿಟ್ಟು ತಿಳಿಯಿಸತಕ್ಕದ್ದು. ಮಹಾಸಭೆಯ ಸಂಬಂಧವಾಗಿ ಪತ್ರವ್ಯವಹಾರಗಳನ್ನು ಸ್ವಾಗತಸಂಘದ ಸೆಕ್ರೆಟರಿಯವರ ಸಂಗಡ ನಡೆಯಿಸತಕ್ಕದ್ದು.

ಸಭೆಯಲ್ಲಿ ಚರ್ಚಿಸಲ್ಪಡತಕ್ಕ ಮುಖ್ಯ ವಿಷಯಗಳು.

1. ಎಂಟನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಏರ್ಪಟ್ಟಿರುವ ಚಿರಸ್ಥಾಯಿಫಂಡಿನ ವ್ಯವಸ್ಥೆ. 2. ಮಹಾಸಭೆಯ ನಿರ್ಣಯಗಳನ್ನು ಜಾರಿಯಲ್ಲಿ ತರುವುದಕ್ಕೆ ಮಾಡತಕ್ಕ ಉಪಾಯ. 3. ಮತಗ್ರಂಥದ ಶೋಧನೆ ಮತ್ತು ಪ್ರಕಟನೆ, ಪುಸ್ತಕಭಂಡಾರ ಸ್ಥಾಪನೆ. 4. ಮೈಸೂರು ಮತ್ತು ಇಂಡ್ಯಾಸರ್ಕಾರಗಳ ಕೌನ್ಸಿಲುಗಳಲ್ಲಿ ವೀರಶೈವಜನಾಂಗದ ಪ್ರಾತಿನಿಧ್ಯ. 5. ವಿದ್ಯಾಪ್ರಸಾರ ಪ್ರೋತ್ಸಾಹ. 6. ವೀರಶೈವ ಮುಖ್ಯತತ್ತ್ವಗ್ರಂಥವನ್ನು ದೇಶಭಾಷೆಯಲ್ಲೂ ರಾಜಭಾಷೆಯಲ್ಲೂ ಬರೆಯಿಸುವುದು. 7. ಸಮಾಜದಲ್ಲಿ ಏಕಮತ್ಯವನ್ನುಂಟುಮಾಡುವುದು. 8. ವೀರಶೈವರ ವ್ಯವಸಾಯ, ವ್ಯಾಪಾರ, ಕೈಗಾರಿಕೆಗಳ ಅಭಿವೃದ್ಧಿ.

ಈ ಮೇಲ್ಕಂಡ ವಿಷಯಗಳನ್ನು ಕುರಿತು ಉಪನ್ಯಾಸ ಮಾಡತಕ್ಕವರು ತಮ್ಮ ಉಪನ್ಯಾಸಗಳನ್ನು ಕಾಗದದ ಒಂದೇ ಮಗ್ಗಲಿಗೆ ಸ್ಪಷ್ಟವಾಗಿ ಬರೆದು ಡಿಶಂಬರು ತಿಂಗಳು 20 ನೆ ತಾರೀಖಿನೊಳಗಾಗಿ ಸ್ವಾಗತಸಂಘದ ಸೆಕ್ರೆಟರಿಗಳ ಕಡೆಗೆ ಕಳುಹಿಸತಕ್ಕದ್ದು. ಸಬ್‍ಜಕ್ಟ್ ಕಮಿಟಿಯವರಿಂದ ಒಪ್ಪಲ್ಪಟ್ಟವರ ಉಪನ್ಯಾಸಗಳು ರಿಪೋರ್ಟಿನಲ್ಲಿ ಪ್ರಿಂಟುಮಾಡಲ್ಪಡುವುವು. ದೀರ್ಘವಾದ ಉಪನ್ಯಾಸಗಳನ್ನು ಬರೆದಿರತಕ್ಕವರು ತಾವು ಬರೆದ ಎಲ್ಲಾ ವಿಷಯವನ್ನೂ ಕ್ರೋಡೀಕರಿಸಿ 10-15 ನಿಮಿಷಗಳಲ್ಲಿಯೇ ಪೂರೈಸುವಂತೆ ಸಿದ್ಧಮಾಡಿಕೊಂಡಿದ್ದರೆ ಒಳ್ಳೇದು.

ಈ ಮಹಾಸಭೆಯ ಕಾರ್ಯವು ಅಶೇಷವೀರಶೈವ ಮಹಾಮಂಡಲಿಗೂ ಸಂಬಂಧಪಟ್ಟುದಾದುದರಿಂದ ಸರ್ವರೂ ಪೂರ್ಣಾಭಿಮಾನವಿಟ್ಟು ದಯಮಾಡಿಸಬೇಕಾಗಿ ಅತಿ ವಿನಯದಿಂದ ಪ್ರಾರ್ಥಿಸುತ್ತೇವೆ.

ಸ್ವಾಗತಸಂಘ :—

(1) ಪತ್ರೆ ಚಂ|| ವೀರಪ್ಪಯ್ಯ, ಅಧ್ಯಕ್ಷ.
(2) ಇಂ|| ನಿ|| ಶಾಂತಪ್ಪಶೆಟ್ಟಿ, ಉಪಾಧ್ಯಕ್ಷ.
(3) ಬಳ್ಳಾರಿ ಗಡಿಗೆ ಮುದ್ದಪ್ಪ, ಚಿಕ್ಕವೀರಪ್ಪ, ಕೋಶಾಧ್ಯಕ್ಷ.
(4) ದೊಡ್ಡಮನೆ ಹಾಲಪ್ಪ,
(5) ಎಂ|| ವಿ|| ಮರುಳಸಿದ್ದಯ್ಯ, } ಜನರಲ್ ಸೆಕ್ರೆಟರಿಗಳು.

ವ್ಯವಸ್ಥಾಪಕ ಸಂಘ :—

(1) ಸಣ್ಣಂಗಿ ಪರ್ವತಪ್ಪಯ್ಯ, ಅಧ್ಯಕ್ಷ.
(2) ಕೋಡಿಹಳ್ಳಿ ಮಲ್ಲಪ್ಪ, ಉಪಾಧ್ಯಕ್ಷ.
(3) ಎಸ್. ಎಂ. ಶಿವಲಿಂಗಪ್ಪಯ್ಯ,
(4) ದೊಡ್ಡಮನೆ ಸಣ್ಣನಂಜಪ್ಪ,
(5) ,, ಬಸಪ್ಪ,
(6) ಕೆ. ನಂಜಪ್ಪ, } ಸೆಕ್ರೆಟರಿಗಳು.

ಮೆಂಬರುಗಳು.

(7) ಮಠದ ಪುಟ್ಟಯ್ಯ.
(8) ಮಾಳಿಗೆ ದೊಡ್ಡಮರುಳಯ್ಯ.
(9) ಬೀಕನಹಳ್ಳಿ ಚನ್ನವೀರಯ್ಯ.
(10) ದೊಡ್ಡಮನೆ ಚಿಕ್ಕಬಸಪ್ಪ.
(11) ದೊಡ್ಡಮನೆ ವೀರಭದ್ರಪ್ಪ.
(12) ವೀ|| ಮದ್ವೀರಯ್ಯ.
(13) ಸಣ್ಣಂಗಿ ಮಲ್ಲಯ್ಯ.
(14) ಗುರುಸಿದ್ದಣ್ಣನವರ ಗಂಗಣ್ಣ.
(15) ಬೊಮ್ಮಜ್ಜಿ ನಂಜಪ್ಪ.
(16) ತೋಟದಯ್ಯನವರ ತೋಟಪ್ಪ.
(17) ಕಡೂರು ಬಸಪ್ಪ.
(18) ಮೂ|| ಬಸಪ್ಪ.
(19) ಪಟೇಲ್ ಸಂಜೀಗೌಡ.
(20) ಚಿಂ|| ರುದ್ರಪ್ಪ.
(21) ಎಂ|| ಕಲ್ಲಪ್ಪ.

ಇಲ್ಲಿಗೆ ಬರುವ ರೇಲ್ವೆಗಾಡಿಗಳ ಕಾಲ.

ಹುಬ್ಬಳ್ಳಿಯಮಾರ್ಗವಾಗಿ ಬರತಕ್ಕ ಮೇಲ್ ಬಂಡಿಯು ರಾತ್ರಿ 11-15 ಘಂಟೆಗೆ, ಪ್ಯಾಸೆಂಜರ್ ಬಂಡಿಯು ಮಧ್ಯಾಹ್ನ 12 ಘಂಟೆಗೆ, ಬೆಂಗಳೂರಿಂದ ಬರತಕ್ಕ ಮೇಲ್ ಬಂಡಿಯು ರಾತ್ರಿ 3 ಘಂಟೆಗೆ, ಪ್ಯಾಸೆಂಜರ್ ಬಂಡಿಯು ಮಧ್ಯಾಹ್ನ 2-30 ಘಂಟೆಗೆ ಬೀರೂರಿಗೆ ತಲುಪುತ್ತವೆ.

ನೋಟೀಸ್.

ಬೆಂಗಳೂರು ಸಿಟಿ. ಚಿಕ್ಕಪೇಟೆಯಲ್ಲಿ ಸರಾಫುವ್ಯಾಪಾರ ಮಾಡುತ್ತಲಿದ್ದ ಸೊಲಬೆರೆ ನಂಜಪ್ಪ ಉರುಫ್ ಶಾನುಣ್ಣನವರಲ್ಲಿ ಗಿರ್ವಿ ಇಟ್ಟಿರತಕ್ಕ ನಗಗಳ ಮಾಲೀಕರು ಅದೇತಿಂಗಳು ಅಸ್ಸೈರಿನೊಳಗಾಗಿ ಅಸಲು ಬಡ್ಡಿಯನ್ನು ಪೂರ್ತಾ ಪಾವತಿಮಾಡಿ ವಾಪಸ್ಸು ಪಡೆಯದ ಪಕ್ಷಕ್ಕೆ ಸದರಿ ಒಡವೆಗಳು ಎಕ್ಸಿಕ್ಯೂಟರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ ರವರ ಇನ್‌ಸ್ಟ್ರಕ್ಷನ್ ಮೇರೆ ಹರಾಜುಮಾಡಲ್ಪಡುತ್ತೆ. ಹರಾಜಿನಲ್ಲಿ ಪೂರ್ತಾ ಮೊಬಲಗು ಬಾರದ ಪಕ್ಷಕ್ಕೆ ಬಾಕಿಯಾಗುವ ಮೊಬಲಗನ್ನು ಆಯಾಯ ಮಾಲೀಕರುಗಳಿಂದ ಬರವಾಡಿಕೊಳ್ಳಲು ಮುಂದಿನ ಕ್ರಮ ಜರುಗಿಸಲ್ಪಟ್ಟಿತು.

ಬೆಂಗಳೂರು ಸಿಟಿ. } ಬಿ. ಪರಮಶಿವಯ್ಯ ಅಡ್ವೋಕೇಟ್
10—11—1919. } 3 ಅರಳೇಪೇಟೆ ಚೌಕ.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೆಲವು ಧಾತುವಿನಿಂದಲೇ ಇರುವದು. ಮನುಷ್ಯರ ಪಾಪಿಕ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಸ್ತ್ರೀಯು ಸಮಾಗಮದಲ್ಲಿ ರತಿಸುಖಕ್ಕೆ ಶಕ್ತಿಯಿಲ್ಲದೆ ಉತ್ಸಾಹಭಂಗದಿಂದ ಅತಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುತ, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಫ್ಲೀಡರ್,
10 3. ಇರುಳಪ್ಪನಬೀದಿ, ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಮನ್ನು ಕರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭಕ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
10 ಬಿ. ಪೋಸ್ಟ್, ಶಿರ್ಶಿ, ಉತ್ತರಕಾನಡಾ.

ಶಾಸ್ತ್ರಿಗಳು ಬೇಕು.

ಕಾವ್ಯ, ನಾಟಕ, ಅಲಂಕಾರ, ತಕ್ಕಷ್ಟು ವ್ಯಾಕರಣಬಲ್ಲವರು ಮಹಾಗಾವ್ ಪಾಠಶಾಲೆಗೆ ಬೇಕಾಗಿರುತ್ತಾರೆ. ಅರಲಪೇಕ್ಷೆಯುಳ್ಳವರು ಈ ಪುಷ್ಯ ಬ॥ ೩೦ ರೊಳಗಾಗಿ ತಿಳಿಸಬೇಕು. ಸಂಬಳ ಮುಂತಾದ್ದರ ವಿಷಯಕ್ಕೆ ಪ್ರತ್ಯಕ್ಷದಿಂದಾಗಲಿ, ಪತ್ರವ್ಯವಹಾರದಿಂದಲಾಗಲಿ ತಿಳಿದುಕೊಳ್ಳಬಹುದು.

ಸಂಗಪ್ಪಶೆಟ್ಟಿ ಪೋಲೀಸ್ ಪಾ॥
ಪಾಠಶಾಲಾ ವ್ಯವಸ್ಥಾಪಕ, ಮಹಾಗಾವ್. ಜಿಲ್ಲಾ ಗುಲ್ಬರ್ಗಾ.

ಜಾಹೀರ್‌ನಾಮೆ.

ಜಿನ್ನಿಂಗ್‌ಫ್ಯಾಕ್ಟರಿಯ ಮಾರಾಟ.

ಇದರಲ್ಲಿ ನಮೂದು ಕಂಡ ಫ್ಯಾಕ್ಟರಿಯನ್ನು ದಾವಣಗೆರೆ ಹಿರಲಾಲ್ ಮಗಲಾಲ್ ಇವರುಮಾರಾಟಮಾಡತಕ್ಕವರು ಇರುತ್ತಾರೆ. ಇದರಲ್ಲಿರತಕ್ಕ ವಿವರ ನಡಿ ೧೨ ಜಿನ್ನಗಳೂ, ಡಬ್ಬಲ್ ರೂಲ್ ಸಹ ಮತ್ತು ಸಾಜೇನುಗಳು ಇನ್ಜನ್ ಬೈಲರ್ ಲೇತ್ ವಗೈರೆ ಹಾಲಿ ಚಾಲು ಸ್ಥಿತಿ ಒಳಗೆ ಇರತಕ್ಕ ಫ್ಯಾಕ್ಟರಿಯು ಮತ್ತು ಗುದಾಮುಗಳು ಜನಗಳು ವಾಸವಾಗಿರತಕ್ಕ ಮನೆಗಳೂ ಆಫೀಸು ಸಹ ಇರುತ್ತದೆ. ಇಷ್ಟವುಳ್ಳವರು ಡಿಶಂಬರ್ 15 ಸೋಮವಾರದಿಂದ 18 ನೇತಾರೀಖು ಗುರುವಾರಕ್ಕೆ ಪೂರೈಸುತ್ತದೆ, ಇಷ್ಟಪಟ್ಟವರು ಆದೇಟೈಮು ಒಳಗೆ ಆ ಫ್ಯಾಕ್ಟರಿಯ ಆಫೀಸಿನಲ್ಲಿ ಸಮಕ್ಷಮ ಕಾಣಬೇಕು. ರೂಲ್ಸು ವಗೈರೆ ಸಮಕ್ಷಮ ಕೇಳತಕ್ಕದ್ದು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ಪಾಣಿ ಕಂಪನಿ,
40 ಸಾಹುಕಾರಪೇಟೆ, ಮದರಾಸು.

ಇನ್‌ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 19

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ತೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0-8-0.

40 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತೆಯಾಗಿ ತಾ॥ ೧೦-೮-೧೯೦೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅವೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ವಶನೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ಣಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡಶೂಲಿ, ವಾರಶೂಲಿ, ರೇಷ್ಮೆಜಡ್ಡು, ಗುಪ್ತವ್ರಣವೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೂಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗಿಸ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
11 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ನವಂಬರ್ ತಾ॥ ೩೦ ರಿಂದ ೧೯೧೯ ನೆಯ ಡಿಶಂಬರ್ ತಾ॥ ೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾರ್ಗಶಿರ ಶು॥ ಅಷ್ಟಮಿಯಿಂದ ಮಾರ್ಗಶಿರ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
30	ಭಾನು	ಅಷ್ಟಮಿ	56-2	ಶತಭಿಷ	51-27	15
1	ಸೋಮ	ನವಮಿ	53-44	ಪೂಭಾ	50-57	16
2	ಮಂಗಳ	ದಶಮಿ	50-27	ಉಭಾ	49-12	17
3	[1] ಬುಧ	ಏಕಾ	46-7	ರೇವತಿ	46-40	18
4	[2] ಗುರು	ದ್ವಾದಶಿ	41-9	ಅಶ್ವಿನಿ	43-24	19
5	[3] ಶುಕ್ರ	ತ್ರಯೋ	35-38	ಭರಣಿ	39-34	20
6	[4] ಶನಿ	ಚತು	29-44	ಕೃತ್ತಿಕೆ	35-25	21

(1) ಸರ್ವತ್ರೈಕಾದಶೀ. (2) ಮಾರ್ಗಶಿರಲಕ್ಷ್ಮೀವ್ರತಂ (3) ಪ್ರದೋಷ, ಹನುಮಜ್ಜಯಂತೀ. (4) ದತ್ತಾತ್ರೇಯ ಜಯಂತೀ ತಿರುಮಂಗೈಯಾಳ್ವಾರ್ ತಿರುನಕ್ಷತ್ರಂ ಮದೀಸ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕೆಷಾ | ಘನಪಥಕೃತಾವತಾರಾ ಪಕ್ಷಜ್ಞ ನಹೃತ ಮೋಹರಾಜೀಯಾಶ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ ಸ್ಟಾರ್ ಸನ್ ೧೯೧೯ ನೆಯ ಇಸವಿ ಡಿಶಂಬರ್ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೪೯

MYSORE GOVERNMENT ADVERTISEMENTS.

PUREST raw materials and the FINEST essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

18

ಬಿಕರಿಗೆ ಸಿದ್ಧವಾಗಿದೆ.

ಬಂಗಳೂರು ಹೈಗ್ರೌಂಡಿನಲ್ಲಿರುವ ಭಾರೀ ಬೆಲೆ ಬಾಳತಕ್ಕ ಬಂಗಲಿ.

ಬೆಂಗಳೂರು ಸಿಟಿ ಹೈಗ್ರೌಂಡ್ ರೇಸ್‌ಕೋರ್ಸ್ ರೋಡಿನಲ್ಲಿ ಗ್ರ್ಯಾಂಡ್ ಸ್ಟ್ಯಾಂಡಿಗೆ ಎದುರಾಗಿರುವ ಲೇಟ್ ಮೆ॥ ದಳವಾಯಿ ದೇವರಾಜ ಅರಸಿನವರ ಬಂಗಲಿ ಮತ್ತು ಅದಕ್ಕೆ ಲಗತ್ತಾದ ಖಾಲಿ ಜಮಿನಾನೂ ಸಹ ಮೇಲ್ಕಂಡ ಸ್ವತ್ತನ್ನು ಆಧಾರಮಾಡಿಕೊಂಡಿರುವ ಸರಕಾರದವರಿಂದ ಸಾದರ್ ಆಗಿರುವ ತಿಳವಳಿಕೆಗಳಿಗನುಸಾರವಾಗಿಯೂ ಲೇಟ್ ಮೆ॥ ದಳವಾಯಿ ದೇವರಾಜ ಅರಸಿನವರ ಪ್ರತಿನಿಧಿಗಳ ಒಪ್ಪಿಗೆಯಿಂದಲೂ 1919 ನೆಯ ಇಸವಿ ಡಿಶಂಬರ್ 20 ನೆ ತಾರೀಖು ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಸದರೀ ಬಂಗಲಿ ಬಳಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರಿಂದ ಹರಾಜು ಮಾಡಲ್ಪಡುತ್ತದೆ. ಈ ಸ್ಥಿರಸ್ವತ್ತಿಗೆ ಸಂಬಂಧಪಟ್ಟ ಪ್ಲ್ಯಾನ್ ಮತ್ತು ಪಟ್ಟಿ ವಗೈರೆ ಕಾಗದಪತ್ರಗಳನ್ನು ಹರಾಜಿನಲ್ಲಿ ಸವಾಲ್ ಮಾಡಲು ಉದ್ದೇಶವಿರುವವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರ ಆಫೀಸಿನಲ್ಲಿ ಆಫೀಸ್ ನಡೆಯತಕ್ಕ ದಿನಗಳು ಮತ್ತು ಕಾಲದಲ್ಲಿ ಅಜಮಾಯಿಷಿಮಾಡಬಹುದು. ಹರಾಜು ಬಗೆ ಹೆಚ್ಚಿಗೆ ತಪ್ಸೀಲುಗಳನ್ನು ತಿಳಿಯಲಪೇಕ್ಷೆಯುಳ್ಳವರು ಮೈಸೂರು ಗೆಜೆಟ್ ನವಂಬರ್ 27 ಮತ್ತು ಡಿಶೆಂಬರ್ 4 ಮತ್ತು 11 ನೆ ತಾರೀಖುಗಳ ಸಂಚಿಕೆಗಳನ್ನು ನೋಡಬಹುದಾಗಿದೆ. ಹರಾಜು ಇಸ್ತಿಹಾರ್ ಕಾಪಿಗಳನ್ನು ಡೆಪ್ಯುಟಿ ಕಮಿಷನರ್‌ರವರ ಪರ್ಸನಲ್ ಅಸಿಸ್ಟೆಂಟ್‌ರವರಿಗೆ ಬರದು ತರಿಸಿಕೊಳ್ಳಬಹುದು.

14 ನೆ ನವಂಬರ್ 1919 } ಡೆಪ್ಯುಟಿ ಕಮಿಷನರ್
ಬೆಂಗಳೂರು. } ಬೆಂಗಳೂರು ಡಿಸ್ಟ್ರಿಕ್ಟ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸಹಸ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಸತಕ ೩ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಿಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 6

ನಾವು ಎ. ಅಲ್ ಬ್ಯುಕ್ಯುಯರ್ ಕಂ. ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವದಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ } ವಿಳಾಸ:—ಎಚ್. ಪಿ. ಕರೇಗೌಡರ
ಕರೇಗೌಡರು ದಾವಣಗೆರೆ. } ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

4 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಸತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೀಕ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
48 ವೈದ್ಯಶಾಲಾ, ಮೈಸೂರು.

ಜಾಹೀರ್‌ನಾಮೆ.

2 ಜಿನ್ನಿಂಗ್‌ಫ್ಯಾಕ್ಟರಿಯ ಮಾರಾಟ.

ಇದರಲ್ಲಿ ನಮೂದು ಕಂಡ ಫ್ಯಾಕ್ಟರಿಯನ್ನು ದಾವಣಗೆರೆ ಹಿರಲಾಲ್ ಮಗಲಾಲ್ ಇವರುಮಾರಾಟಮಾಡತಕ್ಕವರು ಇರುತ್ತಾರೆ. ಇದರಲ್ಲಿರತಕ್ಕ ವಿವರ ನಡಿ ೧೨ ಜಿನ್ನಗಳೂ, ಡಬ್ಬಲ್ ರೂಲ್ ಸಹ ಮತ್ತು ಸಾಜೇನುಗಳು ಇನ್ಜನ್ ಬೈಲರ್ ಲೇತ್ ವಗೈರೆ ಹಾಲಿ ಚಾಲು ಸ್ಥಿತಿ ಒಳಗೆ ಇರತಕ್ಕ ಫ್ಯಾಕ್ಟರಿಯು ಮತ್ತು ಗುದಾಮುಗಳು ಜನಗಳು ವಾಸವಾಗಿರತಕ್ಕ ಮನೆಗಳೂ ಆಫೀಸು ಸಹ ಇರುತ್ತದೆ. ಇಷ್ಟವುಳ್ಳವರು ಡಿಶಂಬರ್ 15 ಸೋಮವಾರದಿಂದ 18 ನೇತಾರೀಖು ಗುರುವಾರಕ್ಕೆ ಪೂರೈಸುತ್ತದೆ, ಇಷ್ಟಪಟ್ಟವರು ಆದೇಟೈಮು ಒಳಗೆ ಆ ಫ್ಯಾಕ್ಟರಿಯ ಆಫೀಸಿನಲ್ಲಿ ಸಮಕ್ಷಮ ಕಾಣಬೇಕು. ರೂಲ್ಸು ವಗೈರೆ ಸಮಕ್ಷಮ ಕೇಳತಕ್ಕದ್ದು.

ಇನ್‌ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 20

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦— ೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦— ೫—೦
ಹರಿದಾಸಿ	೦— ೪—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧ)ನ	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಡಿಶಂಬರ್ ತಾ|| ೭ ನೆಯ ಭಾನುವಾರ.

ಮೈಸೂರಿಗೆ ಶ್ರೀಮನ್ ವೈಸ್ರಾಯರವರ ಸಂದರ್ಶನ.

ಘನತೆಯನ್ನೈದಿದ ವೈಸ್‌ರಾಯ್ ಮತ್ತು ಗೌರ್ನರ್ ಜನರಲ್‌ರವರಾದ ಲಾರ್ಡ್ ಚಲಮ್ಸ್‌ಫರ್ಡ್‌ರವರು ಪತ್ನೀಪುತ್ರೀ ಪರಿವಾರ ಸಮೇತರಾಗಿ ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು. ಅತಿಥಿಸತ್ಕಾರದಲ್ಲಿ ಅಸಾಧಾರಣವಾದ ಕೀರ್ತಿಯನ್ನು ಪಡೆದುಕೊಂಡಿರುವ ಮೈಸೂರು ಸಂಸ್ಥಾನವು ತನ್ನ ಪ್ರಸಿದ್ಧಿಗೆ ತಕ್ಕಂತೆ ಈ ಸಂಮಾನ್ಯ ದಂಪತಿಗಳನ್ನು ಸ್ವಾಗತಿಸಿತು. ಶ್ರೀ ಭಾರತ ಸಾರ್ವಭೌಮ ಪ್ರತಿನಿಧಿಗಳ ಗೌರವಕ್ಕೆ ಉಚಿತಗಳಾದ ಎಲ್ಲ ಏರ್ಪಾಟುಗಳೂ ವಿತರಣೆಯಿಂದ ಮಾಡಲ್ಪಟ್ಟಿರುವುವು. ನಮ್ಮ ಸಂಸ್ಥಾನದ ಆತಿಥ್ಯದಲ್ಲಿ ಇವರು ಇರುವ ೧ ಪಕ್ಷ ಕಾಲವು, ಇವರ ಘನತರ ರಾಜ್ಯ ಕಾರ್ಯನಿರ್ವಾಹದ ಬಳಲಿಕೆಯನ್ನು ಬಲುಮಟ್ಟಿಗೆ ಶಾಂತಿಗೊಳಿಸಿ ಆನಂದಗೊಳಿಸದೆ ಹೋಗಲಾರದು. ಶರಾವತೀ ಜಲಪಾತದ ಸೊಬಗು, ಮೈಸೂರುನಗರದ ಸೌಂದರ್ಯ, ಕನ್ನಂಬಾಡಿಕಟ್ಟೆಯ ಅಗಾಧತೆ, ಶ್ರೀರಂಗಪಟ್ಟಣದ ಚಾರಿತ್ರಶಾವಶೇಷ, ಕಾಕನಕೋಟೆ ಕಾಡಿನ ಆನೆಹಿಂಗಡಿಯ ಅಪೂರ್ವತರವಾದ ನೋಟ, ಇವೆಲ್ಲಕ್ಕಿಂತಲೂ ಮಿಗಿಲಾದ ಮೈಸೂರುಡಿಸ್ಟ್ರಿಕ್ಟಿನ ಫಲವತ್ಪ್ರದೇಶಗಳ ಸೊಗಸು, ಮತ್ತು ಸುನಿರ್ಮಲಪ್ರಭುಭಕ್ತಿಪರಾಯಣರಾದ ಮೈಸೂರು ಪ್ರಜೆಗಳ ಸುಖಶಾಂತಿಗಳು—ಇವೆಲ್ಲಾ ಒಂದಕ್ಕೊಂದು ಮಿಗಿಲಾಗಿ ನಮ್ಮ ವೈಸ್ರಾಯ್ ದಂಪತಿಗಳ ಚಿತ್ತರಂಜನೆಯನ್ನು ಮಾಡುತ್ತಿರುವುವೆಂಬುದಕ್ಕೆ ಸಂಶಯವಿಲ್ಲ. ಇವರ ಸ್ವಾಗತದ ಏರ್ಪಾಟಿಗಾಗಿಯೇ ನಮ್ಮ ಪ್ರಭುತ್ವದವರು ೧೦-೧೨ ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ವ್ಯಯಮಾಡುವವರಾಗಿದ್ದಾರೆಂದು ಕೇಳುತ್ತೇವೆ. ಇದರಿಂದಲೇ ಸರ್ಕಾರದ ಏರ್ಪಾಟುಗಳ ಮಹತ್ವವನ್ನು ವಾಚಕರು ಪರ್ಯಾಲೋಚಿಸಿಕೊಳ್ಳಬಹುದು.

ಸಂಸ್ಥಾನದ ಪ್ರಧಾನನಗರವು ತನ್ನ ಪ್ರಾಶಸ್ತ್ಯಕ್ಕೆ ತಕ್ಕಂತೆ ರಮಣೀಯತೆಯನ್ನು ಪಡೆದುಕೊಂಡಿರಬೇಕೆಂಬುದಕ್ಕಾಗಿ ನಮ್ಮ ಈಗಣ ಮಹಾಪ್ರಭುಗಳು ಎಷ್ಟುಮಟ್ಟಿನ ಅವಧಾನವನ್ನು ಕೊಟ್ಟಿರುವರೆಂಬುದನ್ನು ಹೇಳಬೇಕಾಗಿಲ್ಲ. ಪ್ರತಿಕ್ಷಣಕ್ಕೂ ಈ ಪಟ್ಟಣದ ಸೊಬಗು ವೃದ್ಧಿಗೊಳ್ಳುತ್ತಿದೆ. ಇಂಥ ನಗರವು ಈಗಣ ಸಮಾರಂಭಕಾಲದಲ್ಲಿ ಗುಡಿತೋರಣಗಳಿಂದಲೂ ಧ್ವಜಪತಾಕೆ ಮೊದಲಾದುವುಗಳಿಂದಲೂ ವಿದ್ಯುಚ್ಛಕ್ತಿಯ ವಿಶೇಷದೀಪರಾಜಿಯಿಂದಲೂ ಹೊಂದಿರುವ ಅಲಂಕರಣದಿಂದ ಎಷ್ಟು ಚಿತ್ತಾಕರ್ಷಕವಾಗಿದೆಯೆಂಬುದು ಅವಲೋಕಿಸಿದವರಿಗೇ ಗೊತ್ತು. ನಮ್ಮ ಮ್ಯುನಿಸಿಪಲ್ ಅಧಿಕಾರಿಗಳೂ ಆರೋಗ್ಯಶಾಖೆಯವರೂ ಮಾಡಿದ ಮುತವರ್ಜಿಯು ಪ್ರಶಂಸನೀಯವಾಗಿರುವುದು. ತತ್ರಾಪಿ ಆ|| ಪ್ರೆಸಿಡೆಂಟರು ಅಹರ್ನಿಶಿಯೂ ಪುರಾಲಂಕಾರಕ್ಕಾಗಿ ತೋರಿಸಿದ ಶ್ರದ್ಧೆಯು ಅಮೋಘವಾದುದು. ಪೋಲೀಸು ಏರ್ಪಾಟು ಕೂಡ ಬಹಳ ಸಮರ್ಪಕವಾಗಿರುವುದು. ಸಂಸ್ಥಾನದ ಅನೇಕ ಭಾಗಗಳಿಂದ ಪೋಲೀಸು ಉದ್ಯೋಗಿಗಳೂ ಕಾನ್‌ಸ್ಟೇಬಲ್ಲುಗಳೂ ಸೇರಿ ಬಹುಶಃ ೭೦೦ ಮಂದಿ ಕರೆಯಲ್ಪಟ್ಟಿರುವರು. ಬೆಂಗಳೂರಿನಿಂದ ೪೦೦ ಪದಾತಿ ಸೈನ್ಯವೂ ಇಂಪೀರಿಯಲ್ ಲ್ಯಾನ್ಸರ್ಸ್ ಸೈನ್ಯವೂ ರಾಜಧಾನಿಗೆ ಬರಮಾಡಲ್ಪಟ್ಟಿರುವುವು. ಈ ಪಟ್ಟಣದ ಎಲ್ಲಪಾಠಶಾಲೆಗಳ ಬಹುಶಃ ೧೫ ಸಾವಿರಕ್ಕೆ [illegible]ದಷ್ಟು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೆಲ್ಲಾ ಉತ್ಸವ ಬರತಕ್ಕ ಮಾರ್ಗದ ಇಕ್ಕೆಲದಲ್ಲಿ ಹಾಕಿದ್ದ ಮಾಟಕಗಳ ಮೇಲೆ ಕುಳ್ಳಿರಿಸಿದ್ದರು. ನಾಲ್ಕೈದು ನೂರು ಬಾಲಭಟರುಗಳು ರೈಲ್ವೆಸ್ಟೇಷನ್ ಮಾರ್ಗದ ಇಕ್ಕೆಲಗಳಲ್ಲಿ ನಿಲ್ಲಿಸಲ್ಪಟ್ಟಿದ್ದರು. ನಿಲ್ದಾಣದಿಂದ ಬಿಡಾರದವರೆಗೂ ಮಾರ್ಗಗಳ ಮಗ್ಗುಲುಗಳಲ್ಲಿ ಉದ್ದಕ್ಕೂ ಸಿಪಾಯಿಗಳೂ ಪೋಲೀಸರೂ ನಿಲ್ಲಿಸಲ್ಪಟ್ಟಿದ್ದರು. ರೈಲ್ವೆನಿಲ್ದಾಣವು ಹೊಸದಾಗಿ ಏರ್ಪಡಿಸಲ್ಪಟ್ಟ ವಿದ್ಯುದ್ದೀಪಾವಳಿಗಳಿಂದಲೂ, ಮಂಟಪರಚನೆ ಮೊದಲಾದುವುಗಳಿಂದಲೂ ಬಹಳ ರಮಣೀಯವಾಗಿರುವುದು.

ತಾ|| ೧ ನೆ ಸೋಮವಾರದ ದಿನ ೭ ಗಂಟೆಯೊಳಗಾಗಿಯೇ ಪುರಜನರು ಉತ್ಸವಮಾರ್ಗಗಳಲ್ಲಿ ಇಕ್ಕೆಲಗಳಲ್ಲೂ ಬಂದು ಸೇರಿದ್ದರು. ಅರಮನೆಯ ಸಕಲ ಬಿರುದಾವಳಿಗಳೂ ಆನೆ ಕುದುರೆ ಒಂಟೆ ಮೊದಲಾದುವುಗಳೂ ಸೈನ್ಯಗಳೂ ಬ್ಯಾಂಡುಗಳ ಸೆಟ್ಟುಗಳೂ ಮನೋಹರಗಳಾದ ಉಡುಪುಗಳನ್ನು ತೊಟ್ಟು ಕಾದಿದ್ದುವು. ಶ್ರೀಮನ್ಮಹಾರಾಜರು ಯುವರಾಜರು ಸರ್ದಾರರು ದಿವಾನರು ಕೌನ್ಸಿಲರು ಶಾಖಾಮುಖ್ಯಾಧಿಕಾರಿಗಳು ರಾಜಬಂಧುವರ್ಗದವರು ಮ್ಯು|| ಕೌನ್ಸಿಲರು ಪುರಪ್ರಮುಖರಾದ ಕೆಲವರು ಇವರೆಲ್ಲಾ ನಿಲ್ದಾಣದಲ್ಲಿ ನಿರೀಕ್ಷಿಸಿಕೊಂಡಿರುವಾಗ್ಗೆ ಅರಸೀಕೆರೆ ಮಾರ್ಗವಾಗಿ ವೈಸ್ರಾಯರ ಸ್ಪೆಶಲ್ ಬಂಡಿಯು ೭-೫೦ ಕ್ಕೆ ನಿಲ್ದಾಣವನ್ನು ಬಂದು ಸೇರಿತು. ಬಂಡಿಯನ್ನು ಬಿಟ್ಟು ವೈಸ್ರಾಯರು ಇಳಿದಕೂಡಲೇ ೩೧ ಗುಂಡುಗಳು ಅಲ್ಲೇ ಹಾರಿಸಲ್ಪಟ್ಟುವು. ಬ್ರಿಟಿಷ್ ರೆಸಿಡೆಂಟರು ಮಧ್ಯವರ್ತಿಗಳಾಗಿ ಶ್ರೀಮನ್ಮಹಾರಾಜರನ್ನೂ ಶ್ರೀಮದ್ಯುವರಾಜರನ್ನೂ ಪರಿಚಯಮಾಡಿಸಲು, ಇವರುಗಳು ವೈಸ್‌ರಾಯ್ ದಂಪತಿಗಳಿಗೆ ಸ್ವಾಗತ ಮರ್ಯಾದೆಯನ್ನು ಮಾಡಿದರು. ಬಳಿಕ ಉಳಿದವರ ಪರಿಚಯವು ವೈಸ್‌ರಾಯರಿಗೆ ಮಾಡಿಸಲ್ಪಟ್ಟಿತು. ಸೈನಿಕ ಮರ್ಯಾದೆಯಾಯಿತು. ನಿಲ್ದಾಣದಿಂದ ಹೊರಕ್ಕೆ ಬಂದು ಅಲ್ಲಿ ನಿಂತಿದ್ದ ಸಕಲ ಸೈನ್ಯಗಳೂ ಬ್ಯಾಂಡುಗಳೂ ಮರ್ಯಾದೆಮಾಡಿದುದನ್ನು ಅಂಗೀಕರಿಸಿ, ನಾಲ್ಕುನಾಲ್ಕು ಕುದುರೆಗಳನ್ನು ಹೂಡಿದ್ದ ರಥಗಳೊಳಗೆ ಮೊದಲನೆಯದರಲ್ಲಿ ವೈಸ್ರಾಯರೂ ಮಹಾರಾಜರೂ ಅವರಿದಿರಿಗೆ ವೈಸ್ರಾಯರಕಡೆಯ ಇಬ್ಬರು ಕರ್ನಲುಗಳೂ, ೨ ನೆ ಬಂಡಿಯಲ್ಲಿ ಲೇಡಿ ಚಲಮ್ಸ್‌ಫರ್ಡ್‌ರವರೂ ಯುವರಾಜರೂ ಇದಿರಿನಲ್ಲಿ ಬ್ರಿಟಿಷ್ ರೆಸಿಡೆಂಟರೂ ಅ|| ರೆಸಿಡೆಂಟರೂ, ಅದರಹಿಂದಣ ಬಂಡಿಗಳಲ್ಲಿ ದಿವಾನರೂ ವೈಸ್ರಾಯರ ಪುತ್ರಿಯವರೂ ವೈಸ್ರಾಯರಪರಿವಾರದ ಅಧಿಕಾರಿಗಳೂಸಹ ಕುಳಿತು ಹೊರಟರು. ಹಿಂದೆ ಮುಂದೆ ಇಂಪೀರಿಯಲ್ ಲ್ಯಾನ್ಸರ್ಸ್‌ದಳವೂ, ಶ್ರೀಮನ್ಮಹಾರಾಜರ ಬಾಡೀಗಾರ್ಡ್‌ದಳವೂ ಹೋಗುತ್ತಿದ್ದುವು. ಉತ್ಸವವು ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಭವನದಬಳಿಗೆ ಬಂದಕೂಡಲೇ ಅಲ್ಲಿಂದ ಟೌನ್‌ಹಾಲ್ ದಕ್ಷಿಣದ ಮ್ಯುನ್ಸಿಪಲ್ ಚಪ್ಪರದವರೆಗೆ ಉತ್ಸವವು ಹೋಗಿ ಸೇರುವವರೆಗೂ ನಿಂತಿದ್ದ ವಿದ್ಯಾರ್ಥಿಗಳು ಮಾಡಿದ ಜಯಶಬ್ದಗಳೂ ಹರ್ಷಧ್ವನಿಗಳೂ ಕೂಡ ಆಸಂಮಾನ್ಯಾತಿಥಿಗಳ ಮನಸ್ಸಿನಲ್ಲಿ ಆನಂದರಸವನ್ನುಕ್ಕಿಸಿ ವದನಮಂಡಲದಿಂದ ಮಂದಹಾಸ ರೂಪದಿಂದ ಅಖಂಡವಾಗಿ ಹೊರಸೂಸುವಂತೆ ಮಾಡಿಬಿಟ್ಟಿದ್ದುವು. ಆ ಆನಂದಭರದಲ್ಲಿ ವೈಸ್ರಾಯರು ಪ್ರತಿಮರ್ಯಾದೆಗಾಗಿ ತಲೆಯಿಂದ ಟೊಪ್ಪಿಗೆಯನ್ನು ತೆರೆಯುವುದಕ್ಕೆ ವಿಚ್ಛಿತ್ತಿಯೇ ಇರಲಿಲ್ಲ. ಬಳಿಕ ಮ್ಯು|| ಚಪ್ಪರದ ಬಳಿಯಲ್ಲಿ ರಥಗಳು ನಿಂತಕೂಡಲೇ ಮಹಾವಿದ್ವಾನ್ ಕವಿರತ್ನ ಮಂ|| ರಾಮಾಶಾಸ್ತ್ರಿಗಳು ಸ್ವಾಗತಪರಗಳಿಂದ ಮೂರು ಶ್ಲೋಕಗಳನ್ನು ಹೇಳಿದರು. ಪ್ರೆಸಿಡೆಂಟರು ಇಂಗ್ಲೀಷ್‌ಭಾಷೆಯಲ್ಲಿ ವಿಜ್ಞಾಪನಪತ್ರವನ್ನೋದಿ ಒಪ್ಪಿಸಿದರು. ಅದರ ಅಭಿಪ್ರಾಯವೇನೆಂದರೆ—

ಮೈಸೂರು ಪುರನಿವಾಸಿಗಳ ಪರವಾಗಿ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್ ಮತ್ತು ಮೆಂಬರುಗಳಾದ ನಾವು ತಮಗೂ ತಮ್ಮ ಪತ್ನಿಯವರಿಗೂ ನಮ್ಮ ಪಟ್ಟಣಕ್ಕೆ ಸುಖಾಗಮನವನ್ನು ಬಯಸುತ್ತೇವೆ. ಶ್ರೀ ಸಾರ್ವಭೌಮರವರ ಪ್ರತಿನಿಧಿಗಳಾದ ತಾವು ಇಂಥಾ ಸಮಯದಲ್ಲಿ ನಮ್ಮ ಪಟ್ಟಣಕ್ಕೆ ದಯಮಾಡಿಸಿದ್ದು ನಮಗೆ ಪರಮಸಂತೋಷವನ್ನುಂಟುಮಾಡಿದೆ. ಬ್ರಿಟಿಷ್ ಚಕ್ರಾಧಿಪತ್ಯಕ್ಕೂ ಅವರ ಮಿತ್ರಮಂಡಲಿಗೂ ಒದಗಿದ ಅದ್ವಿತೀಯವಾದ ಮತ್ತು ಮಹಾ ಘೋರವಾದ ಯುದ್ಧಪ್ರಮೇಯದಲ್ಲಿ ಜಯಲಾಭವುಂಟಾದುದರಿಂದ ಸಕಲರಿಗೂ ಈಗ ಮಹದಾನಂದವುಂಟಾಗಿರುವುದು. ಮಹಾಯುದ್ಧದಲ್ಲಿ ಮೈಸೂರು ಸಂಸ್ಥಾನದವರು ಬ್ರಿಟಿಷ್ ಪ್ರಭುತ್ವದಲ್ಲಿ ಭಕ್ತಿಪ್ರೀತಿಗಳನ್ನಿಟ್ಟುಕೊಂಡು ತನುಮನಧನಗಳನ್ನೊಪ್ಪಿಸಿ ತಮ್ಮ ಪಾಲಿನ ಸಹಾಯಸಂಪತ್ತುಗಳನ್ನು ಅತ್ಯಂತಧಾರಾಳವಾಗಿ ಒದಗಿಸಿರುತ್ತಾರೆಂದು ಅರಿಕೆಮಾಡಲು ಹೆಮ್ಮೆಗೊಳ್ಳುವರು. ನಮ್ಮನ್ನಾಳುವ ನಮ್ಮ ಭಕ್ತಿಪ್ರೀತಿಗಳಿಗೆ ಪರಮ ಪಾತ್ರರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು ನಮಗೆ ಅನೇಕ ಶಾಶ್ವತವಾದ ಉಪಕಾರಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ. ಅವುಗಳನ್ನೆಲ್ಲಾ ವಿವರವಾಗಿ ಅರಿಕೆಮಾಡಲು ಇದು ಸಮಯವಲ್ಲ. ರಾಜಧಾನಿಯಾದ ಈ ಪಟ್ಟಣವನ್ನು ಸೌಂದರ್ಯ ವೈಭವಯುಕ್ತವಾಗಿ ಮಾಡಿ ಅಭಿವೃದ್ಧಿಗೆ ತಂದಿರುವುದನ್ನು ಕೃತಜ್ಞತೆಯಿಂದ ಅರಿಕೆಮಾಡುವೆವು. ತಾವು ದಂಪತಿಗಳು ನಮ್ಮ ಪಟ್ಟಣದಲ್ಲಿರುವಾಗ್ಗೆ ತಮಗೆ ವಿಶ್ರಾಂತಿಯೂ ವಿಹಾರವೂ ಲಭ್ಯವಾಗಿ ಶ್ರಮ ಪರಿಹಾರವಾಗಲೆಂದು ಪ್ರಾರ್ಥಿಸುತ್ತೇವೆ.

ಇದಕ್ಕೆ ಪ್ರತ್ಯುತ್ತರವನ್ನು ವೈಸ್ರಾಯರು ಕೊಡುವಾಗ್ಗೆ ಈ ಸತ್ಕಾರಕ್ಕಾಗಿ ತಮ್ಮ ವಂದನೆಯನ್ನೂ ಸಂತೋಷವನ್ನೂ ವ್ಯಕ್ತಪಡಿಸಿ, ಶ್ರೀಮನ್ಮಹಾರಾಜರು ಸ್ವಪ್ರಜಾಭ್ಯುದಯಕ್ಕಾಗಿ ಮಾಡುತ್ತಿರುವ ನಾನಾ ವಿಧಗಳಾದ ಏರ್ಪಾಡುಗಳು ತಮಗೆ ತುಂಬಾ ಸಂತೋಷವನ್ನುಂಟುಮಾಡಿರುವುವೆಂದೂ, ಈ ಸುಂದರವಾದ ಪಟ್ಟಣವನ್ನು ನೋಡಿ ತಮಗೆ ಸಂತೋಷವಾಗಿದೆಯೆಂದೂ ಹೇಳಿ ರಾಜಧಾನಿಯ ಪುರೋವೃದ್ಧಿಗಾಗಿಯೂ, ಆರೋಗ್ಯರಕ್ಷಣೆಗಾಗಿಯೂ ಮಹಾರಾಜರು ಉದಾರಸಾಹಾಯ್ಯಗಳನ್ನೂ ಪ್ರತ್ಯಕ್ಷ ಗಮನವನ್ನೂ ಕೊಡುತ್ತಿರುವುದನ್ನು ಕುರಿತು ತಮ್ಮ ಅಭಿನಂದನವನ್ನು ವ್ಯಕ್ತಪಡಿಸಿ ಪ್ರೆಸಿಡೆಂಟರ ಸಾಮರ್ಥ್ಯವನ್ನು ಕೊಂಡಾಡಿದರು. ಬಳಿಕ ಸಮರ್ಪಿಸಲ್ಪಟ್ಟ ಪುಷ್ಪಹಾರಗುಚ್ಛಗಳನ್ನು ವೈಸ್ರಾಯರೂ ಹಿಂದಣ ಬಂಡಿಯಲ್ಲಿದ್ದ ಅವರ ಪತ್ನಿಯವರೂ ಇತರಾಧಿಕಾರಿಗಳೂ ಸ್ವೀಕರಿಸಿದ ಬಳಿಕ ಉತ್ಸವವು ಸ್ಯಾಚ್ಯುಸ್ಕ್ವೈರ್ ಹಾರ್ಡಿಂಜ್ ಸರ್ಕಲ್ಲುಗಳ ಮಾರ್ಗವಾಗಿ ದಕ್ಷಿಣದಕಡೆಯಿಂದ ದೊಡ್ಡಬಂಗಲೆಗೆ (ಬಿಡಾರಕ್ಕೆ) ಚಿತ್ತೈಸಿತು. ಆಗಲೂ ಕೂಡ ೩೧ ಗುಂಡುಗಳು ಮರ್ಯಾದಾರ್ಥವಾಗಿ ಹಾರಿಸಲ್ಪಟ್ಟುವು. ಬಳಿಕ ಮಿಜಾಜ್‌ಪುರ್ಸಿಯೆಂಬ ಆಚರಣೆಯು (ಶ್ರೀಮನ್ಮಹಾರಾಜರಕಡೆಯ ಕೆಲ ಸರದಾರರು ಮರ್ಯಾದಾ ಪುರಸ್ಸರವಾಗಿ ವೈಸ್ರಾಯರ ಬಿಡಾರಕ್ಕೆ ಹೋಗಿ ಕುಶಲಪ್ರಶ್ನೆಮಾಡಿಬರುವುದು. ಅನಂತರ ವೈಸ್ರಾಯರಕಡೆಯ ಕೆಲ ಅಧಿಕಾರಿಗಳೂ ಹಾಗೆಯೇ ಮರ್ಯಾದೆಯಿಂದ ಹೊರಟು ಅರಮನೆಗೆ ಹೋಗಿ ಮಹಾರಾಜರ ಕುಶಲಪ್ರಶ್ನವನ್ನು ಮಾಡಿ ಬರುವುದು) ನಡೆದ ಬಳಿಕ, ಶ್ರೀಮನ್ಮಹಾರಾಜರವರು ಮಿತ ಪರಿವಾರ ಸೈನ್ಯಗೌರವದೊಡನೆ ವೈಸ್ರಾಯರ ಬಿಡಾರಕ್ಕೆ ದಯಮಾಡಿ ಸಂದರ್ಶನ ಸಂಭಾಷಣೆಗಳನ್ನು ನಡೆಯಿಸಿ ಮರ್ಯಾದೆಗೊಂಡು ಬಂದರು. ಮತ್ತು ಅದರಂತೆಯೇ ವೈಸ್ರಾಯರೂ ಅರಮನೆಗೆ ದಯಮಾಡಿಸಿ ಪ್ರತಿಸಂದರ್ಶನವನ್ನು ಮಾಡಿ ಬರುವ ಮರ್ಯಾದೆಗಳು ನಡೆದುವು. ಪದ್ಧತಿಯಂತೆ ಇಬ್ಬರ ಗಮನಾಗಮನಕಾಲಗಳಲ್ಲೂ ಗುಂಡುಗಳು ಹಾರಿಸಲ್ಪಟ್ಟುವು. ಆ ದಿನ ಸಾಯಂಕಾಲದ ಹೊತ್ತಿನಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಮೋಟಾರಿನಲ್ಲಿ ವೈಸ್ರಾಯರನ್ನೂ ಶ್ರೀಮದ್ಯುವರಾಜರವರು ತಮ್ಮ ಮೋಟಾರಿನಲ್ಲಿ ವೈಸ್ರಾಯ್ ಪತ್ನಿಯವರನ್ನೂ ಕುಳ್ಳಿರಿಸಿಕೊಂಡು ಪಟ್ಟಣದ ಪ್ರಮುಖವೀಧಿಗಳನ್ನೂ ದರ್ಶನೀಯಭಾಗಗಳನ್ನೂ ತೋರಿಸಿಕೊಂಡು ಬಂದರು. ಮರುದಿನದಿಂದ ಪ್ರೋಗ್ರಾಮಿನಲ್ಲಿ ಕಂಡಂತೆ ದರ್ಶನೀಯ ಸ್ಥಲಗಳ ಅವಲೋಕನವೆಲ್ಲಾ ಜರುಗಿತು. ತಾ|| ೧೧ ರಲ್ಲಿ ಕನ್ನಂಬಾಡಿ ಕಟ್ಟೆಗೆ ದಯಮಾಡಿಸುವ ಏರ್ಪಾಟಿದ್ದರೂ, ತಾ|| ೩ ನೆ ಬುಧವಾರದದಿನ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದ್ದು ಅಲ್ಲಿಂದ ಹಾಗೆಯೇ ಕನ್ನಂಬಾಡಿ ಕೃಷ್ಣರಾಜಸಾಗರಕ್ಕೂ ದಯಮಾಡಿಸಿ ಅವಲೋಕಿಸಿಕೊಂಡು ಬಂದರು. ಮಂಗಳವಾರದದಿವಸ ಬಿಡಾರದಲ್ಲಿ ಸಂಸ್ಥಾನದ ಪರವಾದ ಘನತರವಾದ ಔತಣವು ಜರುಗಿತು. ಊಟವೆಲ್ಲಾ ಮುಗಿದಬಳಿಕ ರಾತ್ರಿ ೧೦ ಗಂಟೆಯಲ್ಲಿ ಶ್ರೀಮನ್ಮಹಾರಾಜ ಸಹೋದರರು ಅಲ್ಲಿಗೆ ದಯಮಾಡಿಸಿದರು. ಆಗ್ಗೆ ಶ್ರೀಮನ್ಮಹಾರಾಜರು ಭಾಷಣ ಮಾಡಿದಮೇಲೆ ಅದಕ್ಕೆ ವೈಸ್ರಾಯರು ಕೊಟ್ಟ ಉತ್ತರದ ಮುಖ್ಯಭಾಗಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ಮಹಾರಾಜರವರೇ,—ಲೇಡಿ ಛಲ್ಮ್ಸ್‌ಫರ್ಡ್‌ರವರ ವಿಷಯದಲ್ಲಿಯೂ ನನ್ನ ವಿಷಯದಲ್ಲಿಯೂ ನೀವು ಅಪ್ಪಣೆಕೊಡಿಸಿದ ಉಪನ್ಯಾಸಕ್ಕೋಸ್ಕರ ನಾನು ನಿಮ್ಮನ್ನು ವಂದಿಸುತ್ತೇನೆ. ನಮಗೆ ನೀವು ಮಾಡಿದ ಅನೇಕ ವಿಧವಾದ ಮರ್ಯಾದೆಗಳಿಗೂ, ಉಪಚಾರಕ್ಕೂ ನಾವು ಬಹಳ ಕೃತಜ್ಞರಾಗಿದ್ದೇವೆ. ನಿಮ್ಮ ದೇಶವು ಬಹಳ ಸುಂದರವಾದದ್ದು. ಬಹುಕಾಲದಿಂದ ನಿಮ್ಮ ದೇಶವನ್ನು ನೋಡಬೇಕೆಂದು ನಾನು ಸಂಕಲ್ಪಮಾಡಿದ್ದೆನು. ಈಗ ಅದು ಕೈಗೂಡಿತು. ಇಂಡಿಯಾ ದೇಶದಲ್ಲಿ ನಾನು ಮಾಡಿದ ಕೆಲಸಗಳನ್ನು ನೀವು ಮನೋಹರವಾದ ವಾಕ್ಯಗಳಿಂದ ಪ್ರಶಂಸೆ ಮಾಡಿದಿರಿ. ಮಹಾಜನಗಳ ಮೆಚ್ಚಿಕೆಗೆ ಅದು ಪಾತ್ರವಾಗುತ್ತದೆಂಬುದಾಗಿಯೂ ನೀವು ಅಪ್ಪಣೆಕೊಡಿಸಿದಿರಿ. ಬ್ರಿಟಿಷ್ ಇಂಡಿಯಾದ ರಾಜಕೀಯ ವಿಷಯಗಳನ್ನು ಕುರಿತು ಮಾತನಾಡುವುದಕ್ಕೆ ಇದು ಸಮಯವಲ್ಲ. ದಯೆಯಿಂದ ಕೊಡಿದ ನಿಮ್ಮ ಮಾತುಗಳಿಗೋಸ್ಕರ ನಾನು ಕೃತಜ್ಞನಾಗಿ ಇದ್ದೇನೆ. ನನ್ನ ಕಾಲದಲ್ಲಿ ನಾನು ಏರ್ಪಡಿಸಿರತಕ್ಕ ರಾಜಕೀಯ ಬದಲಾವಣೆಗಳು ಈ ಭರತಖಂಡದ ಮಹಾಜನಗಳಿಗೆ ಹೆಚ್ಚು ಸೌಖ್ಯವನ್ನೂ, ಲೋಕವ್ಯವಹಾರಜ್ಞಾನವನ್ನೂ ತರುವವೆಂದು ನಾನು ನಂಬಿದ್ದೇನೆ. ನನ್ನ ಅಭಿಪ್ರಾಯದಂತೆ ನಡೆಯುವುವೆಂಬದಾಗಿಯೂ, ಅದರಿಂದ ತೃಪ್ತನಾಗುವುದಕ್ಕೆ ನನಗೂ ಅವಕಾಶ ಬರುವದೆಂಬುದಾಗಿಯೂ ನಾನು ನಂಬಿದ್ದೇನೆ.

ನ್ಯಾಯವಿಧಾಯಕ ಸಭೆ, ಪ್ರಜಾಪ್ರತಿನಿಧಿಸಭೆ, ಎಕನಾಮಿಕ್ ಕಾನ್ಫರೆನ್ಸು ಮೊದಲಾದವುಗಳ ಮೂಲಕ ನಿಮ್ಮ ಪ್ರಜೆಗಳು ನಿಮ್ಮ ರಾಜ್ಯಭಾರದ ಏರ್ಪಾಡುಗಳಲ್ಲಿ ಭಾಗಿಗಳಾಗಿ ಕೆಲಸಮಾಡುವಂತೆ ಮಾಡಿರುವುದಾಗಿ ನೀವು ಅಪ್ಪಣೆ ಕೊಡಿಸಿದಿರಿ. ಬ್ರಿಟಿಷ್ ಜನಗಳು 50 ವರ್ಷಗಳವರೆಗೂ ನಿಮ್ಮ ಸಂಸ್ಥಾನದಲ್ಲಿ ರಾಜ್ಯಭಾರ ಮಾಡಿ, ಪ್ರಜೆಗಳ ಕ್ಷೇಮಾಭಿವೃದ್ಧಿಯ ವಿಷಯದಲ್ಲಿ ಹಾಕಿದ ಮೇಲ್ಪಂಗ್ತಿಯಂತೆ ಪ್ರಜೆಗಳ ಯೋಗಕ್ಷೇಮಚಿಂತನೆಯನ್ನು ನೀವು ಮಾಡಿರುವುದಕ್ಕೋಸ್ಕರವೂ, ನಾವು ಹಾಕಿರುವ ಅಸ್ತಿಭಾರದ ಮೇಲೆ ನೀವು ಕಟ್ಟಿರುವ ಪ್ರಜಾರಂಜನೆಯ ಏರ್ಪಾಡಿನ ರೂಪವಾದ ಕಟ್ಟಡವನ್ನು ನೋಡಿ ನಾನು ಸಂತೋಷಿಸುತ್ತೇನೆ. ನಿಮ್ಮ ಪ್ರಜೆಗಳನ್ನು ನೀವು ಧರ್ಮದಿಂದ ಆಳುತ್ತೀರೆಂದು ನಂಬಿಕೆಯನ್ನು ಇಟ್ಟು, ಇಂಡಿಯಾ ಗೌರ್ನಮೆಂಟಿನವರು ಹೇಗೆ ಈ ದೇಶವನ್ನು ನಿಮಗೆ ಒಪ್ಪಿಸಿದರೋ ಆ ರೀತಿಯಲ್ಲಿ ನೀವು ಪ್ರಜೆಗಳಲ್ಲಿ ಪ್ರೀತಿಯನ್ನು ಇಟ್ಟು, ರಾಜ್ಯಭಾರ ಮಾಡುತ್ತಿರುವುದನ್ನು ನೋಡಿ, ನಾನು ತುಂಬಾ ಸಂತೋಷಿಸುತ್ತೇನೆ. ಪ್ರಜೆಗಳಿಗೋಸ್ಕರ ನೀವು ಮಾಡಿರತಕ್ಕ ಉಪಕಾರಗಳನ್ನು ಪರಿಪೂರ್ಣವಾಗಿ ಹೇಳಿಕೊಂಡರೆ, ಜಂಭವಾಗಿ ಕಾಣಬಹುದೆಂದು ನೀವು ಮಾಡಿರುವ ಉಪಕಾರಗಳಲ್ಲಿ ಒಂದು ಭಾಗವನ್ನೂ ಕೂಡ ನೀವು ಪ್ರಶಂಸೆ ಮಾಡಲಿಲ್ಲ. ಆದರೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಪ್ರಜಾಪ್ರತಿನಿಧಿಗಳಿಗೆ ನಿಮ್ಮ ದಿವಾನ್‌ರವರು ಒಪ್ಪಿಸಿದ ಅಡ್ರೆಸ್ಸನ್ನು ಓದಿ, ಪ್ರಜೆಗಳ ವಿಷಯದಲ್ಲಿ ನೀವು ಎಷ್ಟು ಪ್ರೀತಿಯುಳ್ಳವರಾಗಿರುವಿರೋ ಅದನ್ನು ನಾನು ತಿಳಿದುಕೊಂಡಿರುವೆನು. ಪ್ರಜೆಗಳ ಕ್ಷೇಮಕ್ಕೋಸ್ಕರ ಇದುವರೆಗೂ ಏನು ಮಾಡಲ್ಪಟ್ಟಿರುವುದೋ, ಈಗ ಏನು ಮಾಡಲ್ಪಡುತ್ತಲಿರುವುದೋ ಅವೆಲ್ಲಾ ಸದರಿ ಅಡ್ರೆಸ್ಸಿನಲ್ಲಿ ಗರ್ಭಿತವಾಗಿರುತ್ತವೆ.

ಕಳೆದ ಕೆಲವು ವರ್ಷಗಳಿಂದ ಪ್ರಪಂಚಕ್ಕೆಲ್ಲಾ ಯುದ್ಧವೇ ಮೊದಲಾದ ಗಲಾಟೆಗಳಿಂದ ಎಷ್ಟೋ ಕಷ್ಟವು ಬಂದಿತು. ಇಂಥಾ ಕಷ್ಟಗಳಲ್ಲಿಯೂ ಕೂಡ ನೀವು ದೇಶಹಿತಾರ್ಥವಾಗಿ ಮಾಡಿರುವ ಕೆಲಸಗಳನ್ನು ನೋಡಿದರೆ ತುಂಬಾ ಸಂತೋಷವಾಗುತ್ತದೆ. ಯುದ್ಧಕ್ಕೋಸ್ಕರ ಹೆಚ್ಚು ಖರ್ಚಾಯಿತು. ಮಳೆ, ಬೆಳೆ ಸರಿಯಾಗಿ ಆಗದೆ ಹೋದದ್ದರಿಂದಲೂ, ಆಹಾರಪದಾರ್ಥಗಳು ಕಡಮೆಯಾದದ್ದರಿಂದಲೂ, ಸಾಂಕ್ರಾಮಿಕ ರೋಗಗಳು ಬಂದದ್ದರಿಂದಲೂ ಬಹಳ ಕಷ್ಟವುಂಟಾಯಿತು. ಈ ಕಷ್ಟವು ಅನಿರ್ವಚನೀಯವಾಗಿತ್ತು. ಇಂಥಾ ಕಷ್ಟದಲ್ಲಿಯೂ ಕೂಡ ನಿಮ್ಮ ದೇಶವು ಕಷ್ಟಕ್ಕೆ ಗುರಿಯಾಗದಂತೆ ಮಾಡಲ್ಪಟ್ಟದ್ದನ್ನು ನೋಡಿದರೆ, ರಾಜ್ಯಭಾರವನ್ನು ವಹಿಸುವುದರಲ್ಲಿ ನೀವು ತೋರಿಸಿರತಕ್ಕ ವಿತರಣೆಯು ಗೊತ್ತಾಗುವುದು. ರಾಜ್ಯಭಾರಕ್ಕೆ ಸಂಬಂಧಪಟ್ಟ ಶ್ಲಾಘ್ಯವಾದ ಏರ್ಪಾಡುಗಳು ಅನೇಕವಾಗಿ ಇರುವುದರಿಂದ ಅವುಗಳಲ್ಲಿ ಯಾವುದನ್ನು ಸ್ಪೆಷಲ್ಲಾಗಿ ಶ್ಲಾಘಿಸಬೇಕೋ, ಯಾವುದನ್ನು ಬಿಡಬೇಕೋ ಅದನ್ನು ಗೊತ್ತುಮಾಡುವುದು ಕಷ್ಟವಾಗಿದೆ. ದೇಶದ ಹುಟ್ಟುವಳಿಯು ಹೆಚ್ಚುವುದಕ್ಕೆ ಅನೇಕ ಏರ್ಪಾಡುಗಳನ್ನು ಮಾಡಿದ್ದೀರಿ. ರೈಲ್ವೆಬಡಾವಣೆಗಳ ಏರ್ಪಾಡನ್ನು ಮಾಡಿ ಇದ್ದೀರಿ. ನೀರಾವರಿ ಕೆಲಸಗಳು ಹೆಚ್ಚಿಸಲ್ಪಟ್ಟಿರುತ್ತವೆ. ವಿದ್ಯುಚ್ಛಕ್ತಿಯಿಂದ ಆಗತಕ್ಕ ಕೆಲಸಗಳು ಹೆಚ್ಚಿರುತ್ತವೆ. ವ್ಯವಸಾಯವು ಅಭಿವೃದ್ಧಿಗೆ ಬಂದಿರುತ್ತದೆ. ಗಣಿಕೆಲಸಗಳು ವೃದ್ಧಿಗೆ ಬರುತ್ತಲಿವೆ. ಕೈಗಾರಿಕೆಗಳ ಅಭಿವೃದ್ಧಿಗೆ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿರುವುವು. ವಿದ್ಯಾಭ್ಯಾಸಕ್ಕೆ ಉತ್ತೇಜನವು ಕೊಡಲ್ಪಟ್ಟಿರುವುದು. ಸ್ತ್ರೀಯರ ಕ್ಷೇಮಕ್ಕೂ, ಪಂಚಮರ ಕ್ಷೇಮಕ್ಕೂ ಬೇಕಾದ ಏರ್ಪಾಡುಗಳು ಮಾಡಲ್ಪಟ್ಟಿರುವುವು. ಹಿಂದುಳಿದವರು ಅಜ್ಞಾನದಲ್ಲಿ ಇಡಲ್ಪಟ್ಟರೆ, ಜನಗಳು ಅಭಿವೃದ್ಧಿಗೆ ಬರುವುದು ಕಷ್ಟ. ಸ್ತ್ರೀಯರು ಅಜ್ಞಾನಿಗಳಾಗಿದ್ದರೆ, ಜನಾಂಗದ ಏಳಿಗೆಗೆ ಪ್ರತಿಬಂಧಕವಾಗುವುದು. ಜನಗಳು ವೃದ್ಧಿಗೆ ಬರಬೇಕಾದರೆ, ಮಕ್ಕಳಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡುವ ಶಕ್ತಿಯು ತಾಯಿಗಳಿಗೆ ಇರಬೇಕು. ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸಿ, ನೀವು ತಕ್ಕ ಏರ್ಪಾಡನ್ನು ಮಾಡಿ ಇರುತ್ತೀರಿ. ಭಾರತೀಯ ಸ್ತ್ರೀಯರ ಕ್ಷೇಮಾಭಿವೃದ್ಧಿಗೂ, ಯುದ್ಧದಲ್ಲಿ ಘಾಯವನ್ನು ಹೊಂದಿದ ಯೋಧರ ಕ್ಷೇಮಕ್ಕೂ, ರೋಗದಿಂದ ಪೀಡಿತರಾದ ಮಹಾಜನಗಳ ಕ್ಷೇಮಕ್ಕೂ ಲೇಡಿ ಚಲ್ಮ್ಸ್‌ಫರ್ಡ್‌ರವರು ಮಾಡುತ್ತಲಿರುವ ಕೆಲಸವನ್ನು ನೀವು ಪ್ರಶಂಸೆ ಮಾಡಿರುವಿರಿ. ಅವರ ಪಕ್ಷದಲ್ಲಿ ನಾನು ನಿಮ್ಮನ್ನು ವಂದಿಸುತ್ತೇನೆ. ಈ ದೇಶದ ಮಹಾಜನಗಳಲ್ಲಿ ನಿವಾರಣೀಯವಾದ ಕಷ್ಟಗಳೇನಿರುವುವೋ ಅದನ್ನು ನಿವಾರಣೆ ಮಾಡುವುದರಲ್ಲಿ ಲೇಡಿ ಛಲ್ಮ್ಸ್‌ಫರ್ಡ್‌ರವರಿಗೆ ತುಂಬಾ ಆಸಕ್ತಿಯು ಇರುವುದು. ಈ ಬಾಬಿನಲ್ಲಿ ಅವರು ಮಾಡಿರತಕ್ಕ ಕೆಲಸಗಳಿಗೆ ಪ್ರತಿಫಲವು ಆಗಿರುವುದು. ಇದಕ್ಕಾಗಿ ನಾನು ಸಂತೋಷಿಸುತ್ತೇನೆ.

ನಿಮ್ಮ ದಿವಾನ್‌ರವರ ಅಡ್ರೆಸ್ಸಿನಲ್ಲಿ ಕೆಲವು ಜುಜುಬಿ ಕೈಗಾರಿಕೆಗಳಿಗೆ ಮಾಡಲ್ಪಟ್ಟ ಖರ್ಚಿಗೆ ಉದ್ದೇಶಿಸಲ್ಪಟ್ಟ ಪ್ರತಿಫಲವಾಗಲಿಲ್ಲವೆಂದು ಬರೆಯಲ್ಪಟ್ಟಿರುವುದು. ಕೈಗಾರಿಕೆಗಳ ಮರ್ಮಗಳನ್ನು ತಿಳಿದವರು ನಿಯಮಿಸಲ್ಪಟ್ಟಹೊರತು, ಅವುಗಳು ಫಲಕಾರಿಯಾಗುವುದಿಲ್ಲ, ಅಂಥಾವರ ಸಹಾಯವು ನಿಮಗೆ ಬೇಕಾದ ಪಕ್ಷದಲ್ಲಿ, ಇಂಡಿಯಾ ಗೌರ್ನಮೆಂಟಿನವರು ಅವರ ಸರ್ವಿಸ್ಸುಗಳನ್ನು ನಿಮಗೆ ಕೊಡುವರು. ಕಾಲವು ವಿಷಮವಾಗಿರುವುದು. ಕೈಗಾರಿಕೆಗಳ ಅಭಿವೃದ್ಧಿಗೆ ಬಂಡವಾಳವನ್ನು ಒದಗಿಸುವುದು ಕಷ್ಟವಾಗಿರುವುದು. ಕೈಗಾರಿಕೆಗಳು ಮಾತ್ರವೇ ಅಲ್ಲದೆ, ಸಾಮಾಜಿಕ ಕೆಲಸಗಳ ಅಭಿವೃದ್ಧಿಗೂ ಬಂಡವಾಳವು ಬೇಕಾಗಿರುವುದು. ಸರ್ಕಾರದ ಖರ್ಚನ್ನು ಕಡಮೆಮಾಡುವುದು ಸುಲಭವಲ್ಲ. ರಾಜ್ಯಭಾರದ ಕೆಲಸಗಳು ಕೆಡದಂತೆ ಖರ್ಚು ಕಡಮೆಮಾಡಲ್ಪಡಬೇಕು. ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ, ದುಬಾರಿ ಖರ್ಚಿಲ್ಲದೆ, ಸರ್ಕಾರದ ಕೆಲಸವು ಚೆನ್ನಾಗಿ ನಡೆಯುವಂತೆ ಮಾಡಿಕೊಳ್ಳಬೇಕು. ಈ ವಿಷಯಕ್ಕೆ ನಿಮ್ಮ ಗಮನವು ಕೊಡಲ್ಪಡುವುದೆಂದು ನಂಬಿದ್ದೇನೆ.

ಇಂಡಿಯಾ ಗೌರ್ನಮೆಂಟಿನವರ ಸಹಾಯದಿಂದ ಈ ಕಷ್ಟಕಾಲದಲ್ಲಿ ಧಾನ್ಯವು ನಿಮ್ಮ ದೇಶಕ್ಕೆ ಸರಬರಾಯಿ ಆಯಿತೆಂದು ನೀವು ಕೃತಪಡಿಸಿದ್ದೀರಿ. ಇದಕ್ಕಾಗಿ ನಾನು ಸಂತೋಷಿಸುತ್ತೇನೆ. ಎಕ್ಸ್‌ಚೇಂಜ್ ಬಾಬಿನಲ್ಲಿ ಉಂಟಾಗಿರತಕ್ಕ ನಷ್ಟವನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿರುತ್ತೀರಿ. ಈ ವಿಷಯದಲ್ಲಿ ಬ್ರಿಟಿಷ್ ಗೌರ್ನಮೆಂಟಿನವರ ಸಹಾಯವನ್ನೂ ಅಪೇಕ್ಷಿಸುತ್ತೀರಿ. ಎಕ್ಸ್‌ಚೇಂಜಿನ ಕಷ್ಟಗಳನ್ನು ನಿವಾರಣೆಮಾಡುವುದು ಅಸಾಧ್ಯ. ಅದಕ್ಕೆ ಅನೇಕ ಕಾರಣಗಳಿರುವುವು. ಅದನ್ನು ಕ್ರಮಪಡಿಸುವುದು ಸರ್ಕಾರದವರಿಗೂ ತುಂಬಾ ಕಷ್ಟವಾಗಿರುವುದು. ಆದಾಗ್ಯೂ, ಅದನ್ನು ಸರಿಮಾಡುವ ವಿಷಯದಲ್ಲಿ ಗೌರ್ನಮೆಂಟಿನವರು ತಕ್ಕ ತರದೂದನ್ನು ಮಾಡುವರು. ನೀವೂ ನಿಮ್ಮ ಪ್ರಜೆಗಳೂ ಈ ಮಹಾಯುದ್ಧದಲ್ಲಿ ನಮಗೆ ತುಂಬಾ ಸಹಾಯವನ್ನು ಮಾಡಿರುವಿರಿ. (ಇಲ್ಲಿ ಮೈಸೂರಿನಿಂದ ಯುದ್ಧಕ್ಕೆ ಆದ ಸಾಹಾಯ್ಯವನ್ನೆಲ್ಲಾ ವೈಸ್ರಾಯರು ವರ್ಣಿಸಿರುವರು.) ನಮಗೆ ಒದಗಿದ್ದ ವಿಷಮಕಾಲದಲ್ಲಿ ನೀವೂ, ನಿಮ್ಮ ಪ್ರಜೆಗಳೂ ಮಾಡಿದ ಉಪಕಾರವು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯದಲ್ಲಿ ನಿಮಗೆ ಇರತಕ್ಕ ಅಕೃತ್ರಿಮವಾದ ಸ್ನೇಹವನ್ನೂ, ರಾಜಭಕ್ತಿಯನ್ನೂ ತೋರಿಸುವುದು. ಇದಕ್ಕೆಲ್ಲಾ ನಾನು ತುಂಬಾ ಕೃತಜ್ಞನಾಗಿರುತ್ತೇನೆ.

ನಿಮ್ಮ ಬ್ರಿಟಿಷ್ ರೆಸಿಡೆಂಟರಾದ ದಿ ಆನರಬಲ್ ಮ|| ಕಾಟ್‌ರವರು ಶೀಘ್ರದಲ್ಲಿಯೇ ರಿಟೈರಾಗುವರು. ಮದ್ರಾಸ್ ಸಿವಿಲ್ ಸರ್ವೆಂಟುಗಳಲ್ಲಿ ಇವರು ಅಗ್ರಗಣ್ಯರು. ಶಕ್ತಿಯೂ ಉತ್ಸಾಹವೂ ಪರಿಪೂರ್ಣವಾಗಿರುವಾಗ ಇವರು ರಿಟೈರಾಗುವರು, ಇವರ ಶಕ್ತಿಗೆ ಅನುರೂಪವಾದ ಕೆಲಸಗಳು ವಿಲಾಯತಿಯಲ್ಲಿ ಇವರಿಗೆ ದೊರೆಯುವುವೆಂದು ನಾನು ನಂಬಿದೇನೆ. ಇವರು ಇಂಡಿಯಾದೇಶದ ಸರ್ವಿಸ್ಸಿಗೆ ಬಂದಾರಭ್ಯ ಬ್ರಿಟಿಷ್ ಇಂಡಿಯಾದಲ್ಲಿಯೂ, ನಿಮ್ಮ ಸಂಸ್ಥಾನದಲ್ಲಿಯೂ ಬಹಳ ಮೆಹನತ್ತುಮಾಡಿದರು. ನಿಮ್ಮ ಗೌರವಕ್ಕೂ ಪ್ರೀತಿಗೂ ಇವರು ಪಾತ್ರರಾಗಿರುವರೆಂದು ನಾನು ನಂಬಿದೇನೆ. ಈ ಮಹಾಯುದ್ಧದಲ್ಲಿ ಜಯವಾಗಿ, ಸಮಾಧಾನವಾಗುವ ಸಮಯದಲ್ಲಿ ಶ್ರೀಮನ್ ಯುವರಾಜರವರಿಗೆ ಪುತ್ರೋತ್ಸವವಾಯಿತು. ಇದಕ್ಕಾಗಿ ನಾನು ತುಂಬಾ ಸಂತೋಷಿಸುತ್ತೇನೆ. ಯುದ್ಧದ ಗಲಾಟೆಯೂ, ಕ್ಷಾಮದ ಗಲಾಟೆಯೂ ಕಳೆದು, ಶಾಂತಿಯೂ, ಸುಭಿಕ್ಷವೂ ಉಪಕ್ರಮವಾದ ಈ ಸಮಯದಲ್ಲಿ ನಿಮ್ಮ ಸಂಸ್ಥಾನಕ್ಕೆ ಬರುವ ಸಂಪತ್ತು ನನಗೆ ಉಂಟಾಯಿತು. ಇದು ತುಂಬಾ ಸಂತೋಷವನ್ನು ಉಂಟುಮಾಡಿರುವುದು.

ಈ ಭಾಷಣವು ಮೈಸೂರು ಸಂಸ್ಥಾನವನ್ನು ಪ್ರತ್ಯಕ್ಷ ಸಂದರ್ಶನಮಾಡಿದುದರಿಂದ ವೈಸ್ರಾಯರಲ್ಲಿ ಎಷ್ಟುಮಟ್ಟಿನ ಮನಸ್ತುಷ್ಟಿಯುಂಟಾಗಿದೆಯೆಂಬುದನ್ನು ವ್ಯಕ್ತಪಡಿಸಿರುತ್ತದೆ.

ಅತಿಥಿಗಳು ತಾ|| ೪ ನೆ ಗುರುವಾರ ಮಧ್ಯಾಹ್ನ ಕಾಕನಕೋಟೆ ಕಾಡಿಗೆ ಶ್ರೀಮನ್ಮಹಾರಾಜ ಸಹೋದರರ ಸಮೇತ ದಯಮಾಡಿಸಿರುತ್ತಾರೆ. ತಾ|| ೧೧ ರಲ್ಲಿ ಅಲ್ಲಿಂದ ರಾಜಧಾನಿಗೆ ದಯಮಾಡಿಸಿ, ಆರಾತ್ರಿಯೇ ಇಲ್ಲಿಂದ ಮುಂದಕ್ಕೆ ಬೆಂಗಳೂರು ಮಾರ್ಗವಾಗಿ ಪ್ರಯಾಣಬೆಳೆಯಿಸುವವರಾಗಿದ್ದಾರೆ.

ಈ ಸಂಮಾನ್ಯ ದಂಪತಿಗಳು ಸಂಸ್ಥಾನದಲ್ಲಿರುವಷ್ಟು ಕಾಲವೂ ಅವರಿಗೆ ದಿನಗಳು ಕ್ಷಣಗಳಂತೆ ಕಳೆದು ಆನಂದಪ್ರದವಾಗಿಯೂ ಆರೋಗ್ಯಕರವಾಗಿಯೂ ವಿಲಾಸಯುತವಾಗಿಯೂ ಪರಿಣಮಿಸಲೆಂದು ಕೋರುತ್ತೇವೆ. ಎಲ್ಲ ಕಡೆಯಲ್ಲೂ ಯುದ್ಧಶಾಂತಿಮಹೋತ್ಸವಗಳು ನಡೆಯಲಾರಂಭಗೊಳ್ಳುವ ಸಮಯದಲ್ಲೇ ನಮ್ಮ ದೇಶಕ್ಕೆ ಈ ಸಾರ್ವಭೌಮ ಪ್ರತಿನಿಧಿಗಳು ಕೃಪಾಪೂರ್ವಕವಾಗಿ ದಯಮಾಡಿಸಿ ಸಂದರ್ಶನವನ್ನಿತ್ತುದಕ್ಕಾಗಿ ಸಂಸ್ಥಾನದ ಪ್ರಜಾಪಕ್ಷದಿಂದ ಈ ಮೂಲಕ ಕೃತಜ್ಞತಾ ವಂದನೆಗಳನ್ನರ್ಪಿಸುತ್ತೇವೆ. ಮತ್ತೂ ಸ್ಮರಣೀಯವಾದ ಲಾರ್ಡ್ ಹಾರ್ಡಿಂಜ್‌ರವರ ಆಗಮನದಂತೆಯೇ ಲಾರ್ಡ್ ಚಲಮ್ಸ್‌ಫರ್ಡ್‌ರವರ ಆಗಮನವು ಕೂಡ ಒಂದಾನೊಂದು ರೀತಿಯಲ್ಲಿ ಮೈಸೂರಿಗೆ ಸ್ಮರಣೀಯವಾಗುವಂಥ ರೀತಿಯಲ್ಲಿ ಪರಿಣಮಿಸುವುದಾಗಲೆಂದು ಕೋರುತ್ತೇವೆ.

ಸಂಯುಕ್ತ ಸಂಘದ ವರದಿ.

ಭಾರತ ರಾಜಕೀಯ ಸಂಸ್ಕರಣಗಳನ್ನು ಕುರಿತು ಆಲೋಚಿಸುವುದಕ್ಕಾಗಿ ೨ ಪಾರ್ಲಿಮೆಂಟ್ ಸಭೆಗಳಿಂದಲೂ ಕೆಲ ಕೆಲ ಸಭಿಕರನ್ನು ಆರಿಸಿ ನಿಯುಕ್ತವಾಗಿದ್ದ ಸಂಘದವರು ಅನೇಕ ಭಾರತೀಯರ ಮತ್ತು ಆಂಗ್ಲ ಜನರ ಸಾಕ್ಷ್ಯಗಳನ್ನು ಕೇಳಿ ಅದರಮೇಲೆ ತಾವು ಒಂದು ವರದಿಯನ್ನು ಬರೆದು ಪಾರ್ಲಿಮೆಂಟಿಗೆ ಕಳುಹಿಸಿಕೊಟ್ಟಿದ್ದಾರೆ. ಅದರ ಸಂಬಂಧವಾದ ಬಿಲ್ಲು ಈಗ ಪಾರ್ಲಿಮೆಂಟಿನ ಚರ್ಚೆಗೆ ಬಂದಿದೆ. ಈ ಚರ್ಚೆ ಮುಗಿದು ಸಂವರಣೆಗಳೇನಾದರೂ ಆಗಬೇಕಾಗಿದ್ದರೆ ಆಗಿ ತ್ವರ್ಯದಲ್ಲೇ ಅದು ಶಾಸನವಾಗಿ ಏರ್ಪಡುವುದರಲ್ಲಿದೆ. ಆ ವರದಿಯಲ್ಲಿ ಯಾವ ಯಾವ ಮುಖ್ಯವಿಷಯಗಳು ವ್ಯತ್ಯಾಸಗೊಂಡಿವೆಯೆಂಬುದನ್ನು ತಿಳಿಯಪಡಿಸುವುದಕ್ಕಾಗಿ ಸ್ಟೇಟ್ ಸೆಕ್ರೆಟರಿಯವರು ಸಂಗ್ರಹರೂಪವಾಗಿ ಅದನ್ನು ಕಳೆದ ತಾ|| ೨೦ ರಲ್ಲಿ ತಂತಿಯ ಮೂಲಕವಾಗಿ ಭರತಖಂಡಕ್ಕೆ ತಿಳಿಯಪಡಿಸಿದ್ದಾರೆ. ಅದನ್ನು ಓದಿನೋಡಲಾಗಿ ಸಂಘದವರು ಮಾಡಿದ ಹೆಚ್ಚು ಬದಲಾವಣೆಗಳೇನೂ ಕಂಡುಬರಲಿಲ್ಲ. ತೀವ್ರಚರ್ಚೆಗೆ ಆಸ್ಪದವಾಗಿದ್ದ ದ್ವಂದ್ವ ಪ್ರಭುತ್ವ ಪದ್ಧತಿ (ಎಂದರೆ ಅಧಿಕಾರದಲ್ಲಿ ಪ್ರಜಾವಶಕ್ಕೆ ಕೆಲಭಾಗ ಸರ್ಕಾರಿ ಅಧಿಕಾರಿವರ್ಗಕ್ಕೆ ಕೆಲಭಾಗ, ಸೇರಿರುವುದು) ಯೇ ಅಂಗೀಕರಿಸಲ್ಪಟ್ಟಿದೆ. ಆದರೆ ಈ ೨ ಪ್ರಭುತ್ವಗಳ ವಿಧಾನಗಳು ಪ್ರತ್ಯೇಕಿಸಲ್ಪಟ್ಟಿದ್ದರೂ ಇವೆರಡೂ ಕಲೆತು ಮುಖ್ಯವಿಷಯಗಳನ್ನು ಆಲೋಚಿಸತಕ್ಕದೆಂಬ ಸೂಚನೆಯು ನೂತನವಾಗಿ ಮಾಡಲ್ಪಟ್ಟಿದೆ. ಬಜೆಟ್ಟನ್ನು ಇವೆರಡುಪ್ರಭುತ್ವಗಳೂ ಸೇರಿ ಆಲೋಚಿಸಿ ನಿರ್ಧರಿಸಬೇಕೆಂದು ಸೂಚಿಸಿದ್ದಾರೆ. ಇದು ಅನುಕೂಲವಾದ ವಿಷಯವಾಗಿದೆ. ಪಾರ್ಲಿಮೆಂಟುಸಭೆಗಳ ಸ್ಟಾಂಡಿಂಗ್ ಕಮಿಟಿಗಳು ಏರ್ಪಡಿಸಲ್ಪಡುತ್ತವೆ. ಆಗಸ್ಟ್ ೨೦ ನೆ ತಾರೀಖಿನ ಆಂಗ್ಲಪ್ರಭುತ್ವ ಪ್ರಕಟನಕ್ಕೆ ಅನುಸಾರವಾಗಿಯೇ ಈ ಬಿಲ್ಲು ಇದೆಯೆಂದು ಈ ಸಂಯುಕ್ತ ಸಂಘದವರು ಅಭಿಪ್ರಾಯಪಟ್ಟಿದ್ದಾರೆ. ಮತ್ತೂ ಶಾಖಾವಿಭಜನಕ್ಕೆ ಸಂಬಂಧಿಸಿದ ಸೂಚನೆಗಳನ್ನೆಲ್ಲಾ ಒಪ್ಪಿಕೊಂಡಿದ್ದಾರೆ. ಇದರ ಪ್ರಕಾರ ವಿದ್ಯಾಭ್ಯಾಸ, ಕೈಗಾರಿಕೆಗಳ ಶಾಖೆಗಳು ಪ್ರಜಾಸ್ವಾಧೀನಕ್ಕೆ ಬರುವುವು. ೨ ಪ್ರಭುತ್ವಗಳ ಬೊಕ್ಕಸವನ್ನೂ ಬೇರೆ ಬೇರೆ ಯೇರ್ಪಡಿಸುವುದನ್ನು ಸಂಘದವರು ಒಪ್ಪಿಲ್ಲ. ಶಾಸನಸಭೆಯವರ ಅಭಿಮತಕ್ಕೆ ವಿರುದ್ಧವಾಗಿ ಪ್ರವರ್ತಿಸತಕ್ಕ ಮಂತ್ರಿಯನ್ನು ಗೌರ್ನರುಗಳು ತೊಲಗಿಸಿಬಿಡಬಹುದಾಗಿದೆ. ಪ್ರತಿಪ್ರಾಂತಕ್ಕೂ ಇಬ್ಬಿಬ್ಬರು ಮಂತ್ರಿಗಳಿರುವಂತೆಯೂ ಆ ಮಂತ್ರಿಗಳಿಗೂ ಕಾರ್ಯನಿರ್ವಾಹಕ ಸಭಿಕರಿಗೂ ಸಮಾನವಾದ ಅಂತಸ್ತಿರುವಂತೆಯೂ ಸೂಚಿಸಿರುತ್ತಾರೆ. ಪ್ರತ್ಯೇಕಪ್ರಾತಿನಿಧ್ಯ ವಿಷಯವಾಗಿ ಸ್ವಲ್ಪ ನೂತನ ಸುಧಾರಣೆಗಳಾಗಿರುವುವು. ಶಾಸನ ಸಭಾಸಭಿಕರನ್ನಾರಿಸುವಲ್ಲಿ ನಿಮ್ನಜಾತಿಯವರಿಗೋಸ್ಕರ ಕೆಲವು ಸ್ಥಾನಗಳು ಕಾದಿಡಲ್ಪಟ್ಟು, ಅಲ್ಲಿಗೆ ಆ ಜನರನ್ನು ಸರ್ಕಾರದವರೇ ನಿಯೋಜಿಸುವರು. ಬೊಂಬಾಯಿ ಅಧಿಪತ್ಯದ ಮರಾಟೆಯವರಿಗೂ ಮದ್ರಾಸು ಅಧಿಪತ್ಯದ ಬ್ರಾಹ್ಮಣೇತರರಿಗೂ ಪ್ರತ್ಯೇಕ ಪ್ರಾತಿನಿಧ್ಯವು ಕೊಡಲ್ಪಡಬೇಕೆಂದು ಸೂಚಿಸಲ್ಪಟ್ಟಿದೆ. ಬೊಂಬಾಯಿ ವೀರಶೈವರ ಚಳವಳಿಯಲ್ಲಿ ತಕ್ಕಷ್ಟು ಸಾಮರ್ಥ್ಯವಿಲ್ಲದುದರಿಂದ ಅವರ ಕೋರಿಕೆಯೀಡೇರದಿದ್ದರೂ ಪ್ರತ್ಯೇಕ ಪ್ರಾತಿನಿಧ್ಯ ತತ್ವವೇನೋ ಅಂಗೀಕೃತವಾಯಿತೆಂತಲೇ ಹೇಳಬಹುದು. ಎಷ್ಟೋ ವಿಘ್ನಾಂತರಗಳಿದ್ದರೂ, ಸ್ಟೇಟ್ ಸೆಕ್ರೆಟರಿಯವರೂ ವೈಸ್‌ರಾಯರೂ ಸಹ ಈ ಪ್ರತ್ಯೇಕ ಪ್ರಾತಿನಿಧ್ಯ ತತ್ವಕ್ಕೆ ಮೊದಲಿಂದಲೂ ವಿಮುಖರಾಗಿದ್ದರೂ ಈ ತತ್ವಕ್ಕೆ ಜಯವುಂಟಾದುದು ಮದ್ರಾಸಿನ ನಾಯರ್‌ಪಕ್ಷದವರ ದೃಢತರ ಪ್ರಯತ್ನಗಳ ಸಾಮರ್ಥ್ಯದಿಂದಲೇ ಎಂದು ನಿಸ್ಸಂಶಯವಾಗಿ ಹೇಳಬಹುದು. ಇದಕ್ಕಾಗಿ ಮದ್ರಾಸು ಅಧಿಪತ್ಯದ ಶಾಸನಸಭೆಯಲ್ಲಿ ಅಲ್ಲಿಯ ಬ್ರಾಹ್ಮಣೇತರ ಪ್ರತಿನಿಧಿಗಳಿಗೋಸ್ಕರವೇ ಕೆಲವು ಸ್ಥಲಗಳನ್ನು ಕಾದಿಟ್ಟಿರಬೇಕೆಂತಲೂ, ಎಷ್ಟು ಸ್ಥಾನಗಳಿರಬೇಕು ಹೇಗೆ ಪ್ರತ್ಯೇಕಿಸಬೇಕು ಎಂಬುದೇ ಮೊದಲಾದ ವಿಷಯಗಳನ್ನು ಆ ಅಧಿಪತ್ಯದ ಬ್ರಾಹ್ಮಣ ಬ್ರಾಹ್ಮಣೇತರ ಜನರೇ ಸೇರಿ ಆಲೋಚಿಸಿ ಗೊತ್ತುಮಾಡಬೇಕೆಂತಲೂ, ಅವರುಗಳ ಸೇರುವಿಕೆಯಿಂದ ಇದು ಪರಿಷ್ಕಾರವಾಗದಿದ್ದರೆ, ಇಂಡ್ಯಾಸರ್ಕಾರದವರು ನಿಯಮಿಸಿದ ಅಧಿಕಾರಿಯು ಆ ವಿಷಯವನ್ನು ಪರಿಷ್ಕರಿಸಬೇಕೆಂತಲೂ ಬಿಲ್ಲಿನಲ್ಲಿ ಸೂಚಿಸಿರುತ್ತಾರೆ. ಇದರಮೇಲೆ ಆದಿಯಿಂದಲೂ ಈ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ತಮ್ಮಲ್ಲಿಯ ಬ್ರಾಹ್ಮಣಜನರು ವಿರುದ್ಧವಾಗಿಯೇ ಪ್ರವರ್ತಿಸುತ್ತಿರುವುದರಿಂದ ಇದರ ಪರಿಷ್ಕಾರ ಕಾರ್ಯದಲ್ಲಿ ಆ ಜನರನ್ನು ಸೇರಿಸಿಕೊಂಡಿರಬೇಕೆಂದು ಮಾಡಿರುವ ಸೂಚನೆಯನ್ನು ಮದ್ರಾಸಿನ ಬ್ರಾಹ್ಮಣೇತರ ಜನರು ಸಭಾಮುಖದಲ್ಲಿ ಖಂಡಿಸಿದುದಲ್ಲದೆ, ತಮಗೆ ಪ್ರತ್ಯೇಕ ನಿಯೋಜಕವರ್ಗವಿರಬೇಕೆಂತಲೂ, ಈ ವಿಷಯವನ್ನು ಪಾರ್ಲಿಮೆಂಟಿನವರು ತಮ್ಮ ಸ್ವಕೀಯ ವಿಮರ್ಶೆಗೆ ಇಟ್ಟುಕೊಂಡು ಪರಿಷ್ಕರಿಸಬೇಕೆಂತಲೂ ನಿರ್ಧಾರಮಾಡಿ ಶ್ರುತಪಡಿಸಿಕೊಂಡಿದ್ದಾರೆ. ಇನ್ನುಮೇಲಾದರೂ ಈ ದೇಶದ ಪ್ರತ್ಯೇಕಪ್ರಾತಿನಿಧ್ಯ ವಿರೋಧಿಗಳು ವೃಥಾ ದುರಭಿಮಾನದಿಂದ ಪರಸ್ಪರ ವೈಮನಸ್ಯವನ್ನು ಬೆಳೆಯಿಸಿಕೊಳ್ಳುವುದನ್ನು ಬಿಟ್ಟು ಈ ಪ್ರತ್ಯೇಕ ಪ್ರಾತಿನಿಧ್ಯ ತತ್ವಕ್ಕೆ ಅನುಕೂಲಮತವನ್ನು ವ್ಯಕ್ತಪಡಿಸುತ್ತ ಬಂದರೇನೆಯೇ ರಾಜಕೀಯ ವಿಷಯದಲ್ಲಿ ಸಂಘಶಕ್ತಿ ಹೆಚ್ಚಿ ತನ್ಮೂಲಕ ದೇಶಹಿತ ಸಾಧನೆಗೆ ಸುಲಭ ಮಾರ್ಗವಾದೀತು.

ಈ ಪ್ರಕಾರವಾಗಿ ಏರ್ಪಟ್ಟಿರುವ ಬಿಲ್ಲನ್ನು ಕುರಿತು ಈಗ ಬಹುಜನ ಭಾರತ ದೇಶಾಭಿಮಾನಿಗಳು ಅಂಗೀಕಾರವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಉಗ್ರಮತವಾದಿಗಳಾದ ಕೆಲವರು ಮಾತ್ರ ತಮ್ಮ ನಿಸರ್ಗಗುಣಕ್ಕನುಸರಿಸಿ, ಇದನ್ನು ಅಲ್ಲಗಳೆಯುತ್ತಲೂ ಅಸಂತೃಪ್ತಿಯನ್ನು ವ್ಯಕ್ತಗೊಳಿಸುತ್ತಲೂ ಇದ್ದಾರೆ. ಮುಖ್ಯವಾಗಿ ಭರತಖಂಡದ ರಾಜಕೀಯ ವಿಧಾನದಲ್ಲಿ ಇಷ್ಟು ಉದಾರವಾದ ಸಂಸ್ಕರಣವಾಗುವುದಕ್ಕೆ ಮಿ|| ಮಾಂಟುಗ್‌ರವರಂಥ ಮಹನೀಯರು ಸ್ಟೇಟ್ ಸೆಕ್ರೆಟರಿ ಸ್ಥಾನದಲ್ಲಿದ್ದುದೂ, ಅವರು ಭರತಖಂಡದಮೇಲೆ ನಿರ್ಮಲವಾದ ಅಭಿಮಾನವನ್ನಿಟ್ಟು ಮುತುವರ್ಜಿಯಿಂದ ಕೆಲಸಮಾಡಿದುದೂ, ನಮ್ಮ ವೈಸ್ರಾಯರು ಅದಕ್ಕೆ ಸರ್ವ ವಿಧದಿಂದಲೂ ಸಹಾಯಕರಾಗಿದ್ದುದೂ ಸಹ ಕಾರಣವು. ಅದಕ್ಕಾಗಿ ಈ ಮಹನೀಯರೀರ್ವರಿಗೂ ಭರತಖಂಡವು ಕೃತಜ್ಞವಾಗಿರಬೇಕಾದುದು ಧರ್ಮವು. ಮತ್ತೂ ಈಗ ಕೊಡಲ್ಪಡುವ ಸಂಸ್ಕರಣಗಳನ್ನು ಭಾರತೀಯರು ದೇಶಾಭ್ಯುದಯೈಕದೃಷ್ಟಿಯಿಂದ ವಿನಿಯೋಗಿಸಿ ಸಾರ್ಥಕಪಡಿಸಿಕೊಂಡು ತಮ್ಮ ಸಾಮರ್ಥ್ಯವನ್ನೂ ರಾಜಭಕ್ತಿಯನ್ನೂ ವಿಶೇಷತಃ ವ್ಯಕ್ತಪಡಿಸುತ್ತ ಬಂದರೆ ಇದಕ್ಕೂ ಅತಿಶಯವಾದ ಸ್ವಾತಂತ್ರ್ಯವು ಉತ್ತರತ್ರ ದೊರೆಯುವ ವಿಷಯದಲ್ಲಿ ಸಂಶಯವು ತೋರುವುದಿಲ್ಲ.

ನೈಜಾಂ ಪ್ರಭುತ್ವ ಸಂಸ್ಕರಣ.

ಬಹುಕಾಲದಿಂದ ಪ್ರಶಸ್ತ ಪ್ರಭುತ್ವವಿಧಾನವಿಲ್ಲದೆ ಹೇಗೆ ಹೇಗೋ ನಡೆಯುತ್ತಿದ್ದ ಹೈದರಾಬಾದು ಪ್ರಭುತ್ವದಲ್ಲಿ ಕಾಲೋಚಿತ ಸುಧಾರಣೆಗಳನ್ನು ಮಾಡಲು ಈಗಣ ನೈಜಾಂರವರು ವಿಶೇಷಶ್ರದ್ಧೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಈಗ್ಗೆ ನಾಲ್ಕಾರುವರ್ಷಗಳಿಂದ ಅವರು ಯತ್ನವಿಲ್ಲದೆ ಮಂತ್ರಿಪದವಿಯನ್ನು ಕೂಡ ತಾವೇ ವಹಿಸಿ ನಿರ್ವಹಿಸುತ್ತ ಬಂದು, ಈಗ ಸುಧಾರಿಸಿದ ರಾಜ್ಯಪದ್ಧತಿಯ ಪ್ರಕಾರ ತಮಗೆ ಒಂದು ಕಾರ್ಯಕಾರಿ ಮಂತ್ರಿಮಂಡಲ (ಎಗ್ಜಿಕ್ಯುಟೀವ್ ಕೌನ್ಸಿಲ್) ವನ್ನು ಏರ್ಪಡಿಸಿಕೊಳ್ಳುವುದು ಅತ್ಯವಶ್ಯಕವೆಂದರಿತು ಕಳೆದವಾರ ಅದನ್ನು ಪ್ರತಿಷ್ಠಾಪಿಸಿದರು. ಆ ಸಮಯದಲ್ಲಿ ಅವರು ಮಾಡಿದ ಭಾಷಣದೊಳಗೆ ತಮ್ಮ ಪ್ರಭುತ್ವದಲ್ಲಿದ್ದ ಇದುವರೆಗಣ ಅನನ್ವಿತಕಾರ್ಯಗಳನ್ನೂ ತೊಡಕುಗಳನ್ನೂ ತಮ್ಮ ದುರ್ಧರಭಾರವನ್ನೂ ಕೂಡ ವಿವರಿಸಿರುವುದಲ್ಲದೆ, ಉತ್ತರತ್ರ ತಮ್ಮ ಆ ಕಾಂಕ್ಷೆಗಳನ್ನೆಲ್ಲಾ ನೂತನವಾದ ಕೌನ್ಸಿಲು ಪೂರೈಸಿಕೊಡುವುದೆಂಬ ಆಶೆಯನ್ನು ವ್ಯಕ್ತಪಡಿಸಿದರು. ಹೀಗೆ ಹೈದರಾಬಾದುಪ್ರಭುತ್ವವು ತನ್ನ ಪುರಾತನಕಾಲದ ಗೊಡ್ಡುದಾರಿಯನ್ನು ಬಿಟ್ಟು ನಾಗರಿಕಮಾರ್ಗದಲ್ಲಿ ಕಾಲಿಡುತ್ತಲಿರುವುದು ಆ ದೇಶದ ಅಭ್ಯುದಯಕ್ಕೆ ಶುಭಸೂಚನೆಯಾಗಿರುತ್ತದೆ. ಈಗ ಏರ್ಪಟ್ಟಿರುವ ಕೌನ್ಸಿಲ್ಲಿಗೆ ಸುಪ್ರಸಿದ್ಧ ರಾಜತಂತ್ರಜ್ಞರಾದ ಸರ್ ಆಲಿಇಮಾಂರವರು ಅಧ್ಯಕ್ಷರಾಗಿರುವರು. ಮುಂದೆ ಒಬ್ಬ ಉಪಾಧ್ಯಕ್ಷರನ್ನೂ ನಿಯಮಿಸಿಕೊಳ್ಳಬಹುದು. ಇವರಲ್ಲದೆ ಇನ್ನು ೮ ಮಂದಿ ಸಭಿಕರಿರುವರು. ಇವರಲ್ಲಿ ಒಬ್ಬರು ಆಂಗ್ಲಾಧಿಕಾರಿಯಾಗಿಯೂ ಉಳಿದವರೆಲ್ಲಾ ದೊಡ್ಡಮನೆತನಕ್ಕೆ ಸೇರಿದ ವಿದ್ಯಾವಂತರಾದ ಮಹಮ್ಮದೀಯರಾಗಿಯೂ ಇದ್ದಾರೆ. ಬ್ರಾಹ್ಮಣಪ್ರವೇಶವೇ ಇಲ್ಲದ ಈ ಕೌನ್ಸಿಲು ಕಾರ್ಯನಿರ್ವಾಹವನ್ನು ಮಾಡಬಲ್ಲುದೋ ಇಲ್ಲವೋ ನೋಡಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಎಡ್ವರ್ಡ್ ಪ್ರತಿಮೆಯ ಮೇಲೆ ನೂತನವಾಗಿ ಛತ್ರಾವರಣವನ್ನು ಏರ್ಪಡಿಸಿರುವರು. ಇದನ್ನು ವೈಸ್ರಾಯರು ಕಳೆದ ತಿಂಗಳು ತಾ|| ೨೮ ರಲ್ಲಿ ಪ್ರಕಾಶಪಡಿಸಿದರು. ಆಗ್ಗೆ ೧೦೧ ಗುಂಡುಗಳು ಹಾರಿಸಲ್ಪಟ್ಟುವು.

ವೈಸ್ರಾಯರು ಬೆಂಗಳೂರಿಗೆ ದಯಮಾಡಿಸಿದ್ದಾಗ್ಗೆ ಕಂಟೋನ್ಮೆಂಟಿನಲ್ಲಿ ಮಿ|| ಹಾಜಿ ಇಸ್ಮಾಯಿಲ್ ಸೇಟ್‌ರವರಿಗೂ ಪೇಟೆಯಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರಿಗೂ ಸಹ ವೈಸ್ರಾಯರ ಅಂತರಂಗಸಂಭಾಷಣೆಗೆ ಅವಕಾಶಕೊಡಲ್ಪಟ್ಟಿದ್ದಿತು.

ಚಿತ್ರದುರ್ಗ ಡಿಸ್ಟ್ರಿಕ್ಟಿನ ಬೋರ್ಡಿಗೆ ಅಲ್ಲಿಯ ಮ|| ಪ್ಲೀಡರ್ ಸಿದ್ಧನಂಜಪ್ಪನವರು ವೈಸ್‌ಪ್ರೆಸಿಡೆಂಟರಾಗಿಯೂ ಬೀರೂರಿನ ಮ್ಯುನ್ಸಿಪಾಲಿಟಿಗೆ ಮ|| ಎಂ. ಎನ್. ಶಿವಲಿಂಗಪ್ಪಯ್ಯನವರು ವೈಸ್ ಪ್ರೆಸಿಡೆಂಟರಾಗಿಯೂ ಚುನಾಯಿಸಲ್ಪಟ್ಟಿದ್ದಾರೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಸಂಪದಭ್ಯುದಯಸಮಾಜದ ಸೆಂಟರಲ್‌ಬೋರ್ಡುಗಳಿಗೆ ಎಂದರೆ ಮ|| ಪ್ಲೀಡರ್ ಸಿದ್ಧನಂಜಪ್ಪನವರು ವಿದ್ಯಾಭ್ಯಾಸಶಾಖೆಗೂ ಮ|| ಪ್ರೊ|| ನಾರಾಯಣರಾಯರು ವ್ಯಾಪಾರಶಾಖೆ ಮತ್ತು ಕೈಗಾರಿಕೆಯ ಕಮಿಟಿಗೂ, ಮ|| ಚಿನ್ನೋಬಯ್ಯನವರು ವ್ಯವಸಾಯಶಾಖೆಗೂ ಸಭಿಕರಾಗಿ ಆರಿಸಲ್ಪಟ್ಟಿದ್ದಾರೆ.

ತಮ್ಮ ಮತದ ಆದಿ ಗುರುವಾದ ಮುಹಮ್ಮದರ ಜನ್ಮದಿನೋತ್ಸವವನ್ನು ರಾಜಧಾನಿಯ ಮಹಮ್ಮದೀಯರು ಕಳೆದ ಶುಕ್ರವಾರ ಬಹಳ ವಿಜೃಂಭಣೆಯಿಂದ ನಡೆಯಿಸಿದರು. ರಾತ್ರಿ ದೊಡ್ಡಪೇಟೆಯ ಮತ್ತಿಸದ್ದಿ ಬೀದಿಯೂ ಮಹಮ್ಮದೀಯ ಸ್ಟೂಡೆಂಟ್ಸ್ ಹಾಲಿನ ಬೀದಿಯೂ ವಿದ್ಯುಚ್ಛಕ್ತಿ ದೀಪಾವಳಿಗಳಿಂದಲೂ ತೋರಣಾದಿಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಅವರ ವಿದ್ಯಾರ್ಥಿ ಭವನದಲ್ಲಿ ಸಭೆಯೂ ಉಪನ್ಯಾಸಗಳೂ ಜರುಗಿದುವು.

ಕಳೆದ ಸಲದ ಎಲ್ ಎಲ್. ಬಿ. ಪರೀಕ್ಷೆಯಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ಮೂರುಮಂದಿ ವೀರಶೈವರು ಉತ್ತೀರ್ಣರಾದರು. ಮದ್ರಾಸು ಆಧಿಪತ್ಯದಲ್ಲಿ ಒಬ್ಬರು ಉತ್ತೀರ್ಣರಾದರು. ಮದ್ರಾಸಿನ ಬಿ. ಎ., ಬಿ. ಎಲ್. ಪರೀಕ್ಷೆಯಲ್ಲಿ ಉತ್ತೀರ್ಣರಾದ ರಾ|| ಡಿ. ಕೆ. ರಡ್ಡಿಯವರಿಗೆ ಅಲ್ಲಿಯ ವೀರಶೈವಾಶ್ರಮದಲ್ಲಿ ಮ|| ಎ. ಸಂಗಪ್ಪ ಬಿ. ಎ., ಬಿ. ಎಲ್. ರವರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯಲ್ಲಿ ಸನ್ಮಾನಸಮಾರಂಭವು ನಡೆದಿತು. ಆಗ್ಗೆ ಆಶ್ರಮಾಭಿವೃದ್ಧಿಗಾಗಿ ಮ|| ಸಿ. ಚನ್ನವೀರಪ್ಪನವರು ೧೦೧ರೂ. ಗಳ ಧನಸಹಾಯಮಾಡಿದರು.

ಪತ್ರವ್ಯವಹಾರ.

ಬಹುಮಾನ ವಿನಿಯೋಗ

ಈ ಮೊದಲೇ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಸಿದ್ಧಿಪಡಿಸಿದ್ದ ಮೇರೆ ವೀರಶೈವಸಮಾಜಕ್ಕೆ ಕಳಶಪ್ರಾಯರಾಗಿದ್ದ ಕೈ|| ಯಜಮಾನ್ ವೀರಸಂಗಪ್ಪನವರ ಮೆಮೋರಿಯಲ್ ಬಹುಮಾನಕ್ಕಾಗಿ 1919 ನೆ ಇಸವಿಯಲ್ಲಿ ನಡೆದ ಮೈಸೂರು ಯೂನಿವರ್ಸಿಟಿ ಎಂಟ್ರನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವೀರಶೈವ ವಿದ್ಯಾರ್ಥಿಗಳಪೈಕಿ ಮೊದಲನೆಯವರಾಗಿರುವ ಮೈಸೂರಿನ ಎಂ. ಎಸ್. ಬಸವಲಿಂಗಯ್ಯನವರಿಗೆ (15-0-0) ಬೆಲೆ ಬಾಳುವ ಬೆಳ್ಳಿಯ ಬಟ್ಟಲನ್ನು ಮತ್ತು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ತುಮಕೂರಿನ ಟಿ. ಡಿ. ರಾಚಪ್ಪನವರಿಗೆ ನಮ್ಮ ಅನಕರಾಜ, ಶೀ||

ಗುಬ್ಬಿ ಕೊಟ್ಟೂರಯ್ಯನವರ ಮೆಮೋರಿಯಲ್ ಬಹುಮಾನಕ್ಕಾಗಿ ಹತ್ತು ರೂಪಾಯಿ ಬೆಲೆಬಾಳುವ ಬೆಳ್ಳಿಯ ಬಟ್ಟಲನ್ನೂ ಸಹ ಇದೇ ಡಿಶಂಬರ್ ತಿಂಗಳಲ್ಲಿ ಬೀರೂರಲ್ಲಿ ನಡೆಯುವ 9 ನೆ ಶ್ರೀಮದ್ವೀರಶೈವ ಮಹಾ ಸಭಾಧ್ಯಕ್ಷರವರ ಮೂಲಕ ಕೊಡಿಸಲ್ಪಡುವುದರಿಂದ ಆ ಕಾಲಕ್ಕೆ ಸದರಿ ವಿದ್ಯಾರ್ಥಿಗಳು ಬೀರೂರಿಗೆ ಬರಬೇಕಾಗಿ ಈ ಮೂಲಕ ತೋರಲ್ಪಟ್ಟಿದೆ. ವೀರಶೈವ ಬಾಲಿಕಾ ಬಹುಮಾನಕ್ಕೆ ದರಖಾಸ್ತುಗಳು ಬರಲಿಲ್ಲವಾಗಿ ಅದನ್ನು 1920 ನೆ ಇಸವಿಗೆ ಇರಿಸಿದೆ. ಮುಂದಿನ ವರ್ಷದ ಮೇಲ್ಕಂಡ ಪರೀಕ್ಷೆಗಳಿಗೂ ಈ ಬಹುಮಾನಗಳನ್ನು ಇಟ್ಟಿರುವದರಿಂದ ನಮ್ಮ ವಿದ್ಯಾರ್ಥಿಗಳು ಅತ್ಯಂತ ಶ್ರದ್ಧೆಯಿಂದ ಅಭ್ಯಾಸಮಾಡಬೇಕಾಗಿಯೂ ಮತ್ತು ಸಕಾಲದಲ್ಲಿ ಅಂದರೆ 1920 ನೆ ಫೆಬ್ರವರಿ ಅಖೈರಿನೊಳಗಾಗಿ ನಮ್ಮಲ್ಲಿಗೆ ಅಪ್ಲಿಕೇಷನ್ನುಗಳನ್ನು ಕಳುಹಿಸಬೇಕಾಗಿಯೂ ಈ ಮೂಲಕ ವಿಜ್ಞಾಪಿಸಿದೆ. ಸಮಾಜ ಸೇವಕ.

ತುಮಕೂರು }
೨೫-೧೧-೧೯. }
ಜಿ. ಕೆ. ಗುರುಸಂಗಾರ್ಯ,
ಲಾಯರ್.

ಶ್ರೀ ಶಂಕರಲಿಂಗಪ್ರತಿಷ್ಠೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕು ಸಲಬೊಮ್ಮನಹಳ್ಳಿ ಗ್ರಾಮದಪಟೇಲ್ ಶಿದ್ದಪ್ಪನು ಗುರುಗಳಾದ ಹರ್ತಿಮಠದ ವೇ॥ ಸಣ್ಣವೀರಪ್ಪನವರ ಅನುಜ್ಞೆಯಂತೆ ಸದರೀ ಗ್ರಾಮದಲ್ಲಿ ನೂತನವಾಗಿ ತಯಾರಿಸಿದ ದೇವಸ್ಥಾನದಲ್ಲಿ ಶ್ರೀ ಶಂಕರಲಿಂಗಪ್ರತಿಷ್ಠೆ ನಡೆಸಲು ವಹಿಸಿಕೊಂಡು ಈ ಕಾರ್ತಿಕ ಶು॥ ೬ ಗುರುವಾರ ಗಣಪತಿಪೂಜಾ ಪುಣ್ಯಾಹ ಆಲಯ ಪ್ರತಿಷ್ಠಾ ಮೊದಲಾದ ಕಾರ್ಯಗಳೂ ಈ ಶು॥ ೭ ಶುಕ್ರವಾರ ಮೃತ್ಸಂಗ್ರಹ ಅಂಕುರಾರ್ಪಣ ಧ್ವಜಾರೋಹಣಾದಿಕಾರ್ಯಗಳೂ, ಶು॥ ೮ ಶನಿವಾರ ಪ್ರಧಾನದೇವತಾ ಕಲಶಸ್ಥಾಪನಾಕಾರ್ಯಗಳೂ, ಶು॥ ೯ ಭಾನುವಾರ ಸೂರ್ಯೋದಯಾದಿ ಘಟಿಕೆ ೧೫-೨೬ ಗಳಿಗೆ ಸಲ್ಲುವ ಮಕರಲಗ್ನದಲ್ಲಿ ಶ್ರೀ ಶಂಕರಲಿಂಗಪ್ರತಿಷ್ಠಾ ಅಷ್ಟಬಂಧನಾದಿ ಕಾರ್ಯಗಳೂ ಇದೇ ದಿನ ರಾತ್ರಿ ೩೯-೨೪ ಗಳಿಗೆಗೆ ಸಲ್ಲುವ ಮಿಥುನಲಗ್ನದಲ್ಲಿ ದೀಕ್ಷಾಸಂಸ್ಕಾರಗಳೂ ಬ್ರಹ್ಮೋಪದೇಶ ಮೊದಲಾದ ಕಾರ್ಯಗಳೂ ಈ ಶು॥ ೧೦ ಸೋಮವಾರ ಸುವರ್ಣಾಭಿಷೇಕ ಭಿಕ್ಷಾಟನಾ ಉತ್ಸವಕಾರ್ಯಗಳೂ ಮಹಾಗಣಾರಾಧನೆಯು ಮೊದಲಾದ ಕಾರ್ಯಗಳೂ ಈ ಮಹತ್ಕಾರ್ಯಕ್ಕೆ ದಯಮಾಡಿಸಿದ ಸಪ್ಪನಕೆರೆ ಮಠದ ಶ್ರೀ ಪಟ್ಟದ ಸ್ವಾಮಿಗಳವರು ಮತ್ತು ಮಂಗಪೋಟೀ ಮಠದ ಹುಲಿಕುಂಟೆಯಲ್ಲಿರುವ ಶ್ರೀಪಟ್ಟದ ಸ್ವಾಮಿಗಳವರಿಂದಲೂ ಈ ಕಾರ್ಯಕ್ಕೆ ಪೌರೋಹಿತ್ಯವನ್ನು ವಹಿಸಿದ ರಂಗಸಮುದ್ರದ ಮಠದ ಬಬ್ಬೂರು ಸ್ಕೂಲ್ ಮಾಸ್ಟರ್ ಎಂ. ರುದ್ರಯ್ಯನವರಿಂದಲೂ ಈ ಮೇಲ್ಕಂಡ ಎಲ್ಲಾ ಕಾರ್ಯಗಳೂ ಸಾಂಗವಾಗಿ ನೆರವೇರಿಸಲ್ಪಟ್ಟನಂತರ ಮಂಗಪೋಟೀಮಠದ ಪಟ್ಟದ ಸ್ವಾಮಿಗಳವರು ವೀರಶೈವ ಧರ್ಮವೆಂಬ ವಿಷಯವನ್ನು ಕುರಿತು ಒಂದು ಘಂಟೆ ಕಾಲದವರೆಗೆ ಉಪನ್ಯಾಸವನ್ನು ಮಾಡಿ ವೀರಶೈವ ವಿದ್ಯಾವರ್ಧಕ ಫಂಡಿಗೆ ನಾಲ್ಕು ರೂಪಾಯನ್ನು ತೆಗಿಸಿ ಸಭೆಯವರನ್ನು ಆನಂದಗೊಳಿಸಿದರು. ಅನಂತರ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಜಯಘೋಷವಂಗೈದು ಸಭೆಯು ಬರಖಾಸ್ತುಮಾಡಲ್ಪಟ್ಟಿತು.

ಕಾರ್ಯದರ್ಶಿಪಟೇಲ್ ಶಿದ್ದಪ್ಪ ಸಲಬೊಮ್ಮನಹಳ್ಳಿ.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡಷ್ಟಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ನೊಡಮೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಯಮಾಡುವದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

41 ನಮ್ಮ ವಿಳಾಸ:—ವ್ಹೆರಿ [illegible] ಕೊ,
3. ಇರುಳಪ್ಪನ [illegible] ಮದರಾಸು.

ಧಪಕೇ ಜಾಹೀರಾತಿಗೆ ಮರುಳಾಗಬೇಡಿರಿ.

ಪರೀಕ್ಷಿಸಿ. ಸತ್ಯಮೇವ ಜಯತೇ. ನೋಡಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬನಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಥಟ್ಟ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
11 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೊರಗುತ್ತಲೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
41 3. ಇರುಳಪ್ಪನಬೀದಿ, ಮದರಾಸು.

---

2 ಶಾಸ್ತ್ರಿಗಳು ಬೇಕು.

ಕಾವ್ಯ, ನಾಟಕ, ಅಲಂಕಾರ, ತರ್ಕಪ್ಪು ವ್ಯಾಕರಣಬಲ್ಲವರು ಮಹಾಗಾವ್ ಪಾಠಶಾಲೆಗೆ ಬೇಕಾಗಿರುತ್ತಾರೆ. ಬರಲಪೇಕ್ಷೆಯುಳ್ಳವರು ಈ ಪುಷ್ಯ ಬ॥ ೩೦ ರೊಳಗಾಗಿ ತಿಳಿಸಬೇಕು. ಸಂಬಳ ಮುಂತಾದ್ದರ ವಿಷಯಕ್ಕೆ ಪ್ರತ್ಯಕ್ಷದಿಂದಾಗಲಿ, ಪತ್ರವ್ಯವಹಾರದಿಂದಲಾಗಲಿ ತಿಳಿದುಕೊಳ್ಳಬಹುದು.

ಸಂಗಪ್ಪಶೆಟ್ಟಿ ಪೋಲೀಸ್ ಪಾ॥
ಪಾಠಶಾಲಾ ವ್ಯವಸ್ಥಾಪಕ, ಮಹಾಗಾವ್. ಜಿಲ್ಲಾ ಗುಲ್ಬರ್ಗಾ.

ಸೀಮೆ ತಲೆದಿಂಬುಗಳು.



ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗುರ.

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ಪಾಣಿ ಕಂಪನಿ,
41 ಸಾಹುಕಾರಪೇಟೆ, ಮದರಾಸು.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೮೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರಿಗೆ ಮೂವತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ಯಶವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹೃದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಯೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದದ್ವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಕ್ಕ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
12 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ಡಿಶಂಬರ್ ತಾ॥ ೭ ರಿಂದ ೧೯೧೯ ನೆಯ ಡಿಶಂಬರ್ ತಾ॥ ೧೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾರ್ಗಶಿರ ಶು॥ ಪೌರ್ಣಿಮಿಯಿಂದ ಮಾರ್ಗಶಿರ ಬ॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
7	[1] ಭಾನು	ಪೌರ್ಣ	23-47	ರೋಹಿಣಿ	31-8	22
8	ಸೋಮ	ಪಾಡ್ಯ	17-53	ಮೃಗಶಿರ	27-0	23
9	ಮಂಗಳ	ಬಿದಿಗೆ	12-14	ಆರಿದ್ರಾ	23-11	24
10	ಬುಧ	ತದಿಗೆ	7-10	ಪುನರ್ವಸು	19-52	25
11	[2] ಗುರು	ಚೌತಿ	2-42	ಉಪರಿ	35-51	26
12	ಶುಕ್ರ	ಷಷ್ಠಿ	55-50	ಆಶ್ಲೇಷ	15-28	27
13	ಶನಿ	ಸಪ್ತ	54-18	ಮಘಾ	14-40	28

(1) ಪೌರ್ಣಮಾತಿಥಿ, ವಿಷ್ಣುದೀಪ, ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ರಥಃ. (2) ಮಾರ್ಗಶಿರಲಕ್ಷ್ಮೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ಯಜ್ಜನಹೃತ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವ[illegible] |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಕಾನುಕಂಪೋಜ್ಜ್ವಲಂ |

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಡಿಶಂಬರ್ ತಾರೀಖು ೧೪ ನೆಯ ಭಾನುವಾರ. (ಸಂಚಿಕೆ ೫೦

MYSORE GOVERNMENT ADVERTISEMENTS.

PUREST raw materials and the **FINEST** essential oils are used in our celebrated **SANDAL SOAPS.**

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.
19

ಬಿಕರಿಗೆ ಸಿದ್ಧವಾಗಿದೆ.

ಬೆಂಗಳೂರು ಹೈಗ್ರೌಂಡಿನಲ್ಲಿರುವ ಭಾರೀ ಬೆಲೆ ಬಾಳತಕ್ಕ ಬಂಗಲಿ.

ಬೆಂಗಳೂರು ಸಿಟಿ ಹೈಗ್ರೌಂಡ್ ರೇಸ್‌ಕೋರ್ಸ್ ರೋಡಿನಲ್ಲಿ ಗ್ರ್ಯಾಂಡ್ ಸ್ಟ್ಯಾಂಡಿಗೆ ಎದುರಾಗಿರುವ ಲೇಟ್ ಮ॥ ದಳವಾಯಿ ದೇವರಾಜ ಅರಸಿನವರ ಬಂಗಲಿ ಮತ್ತು ಅದಕ್ಕೆ ಲಗತ್ತಾದ ಖಾಲಿ ಜಮೀನೂ ಸಹ ಮೇಲ್ಕಂಡ ಸ್ವತ್ತನ್ನು ಆಧಾರಮಾಡಿಕೊಂಡಿರುವ ಸರಕಾರದವರಿಂದ ಸಾದರಾಗಿರುವ ತೀರ್ಮಾನಗಳಿಗನುಸಾರವಾಗಿಯೂ ಲೇಟ್ ಮ॥ ದಳವಾಯಿ ದೇವರಾಜ ಅರಸಿನವರ ಪ್ರತಿನಿಧಿಗಳ ಒಪ್ಪಿಗೆಯಿಂದಲೂ 1919 ನೆಯ ಇಸವಿ ಡಿಶಂಬರ್ 20 ನೆ ತಾರೀಖು ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಸದರೀ ಬಂಗಲಿ ಬಳಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರಿಂದ ಹರಾಜು ಮಾಡಲ್ಪಡುತ್ತದೆ. ಈ ಸ್ಥಿರಸ್ವತ್ತಿಗೆ ಸಂಬಂಧಪಟ್ಟ ಪ್ಲಾನ್ ಮತ್ತು ಪಟ್ಟಿ ವಗ್ಯೆರೆ ಕಾಗದಪತ್ರಗಳನ್ನು ಹರಾಜಿನಲ್ಲಿ ಸವಾಲ್ ಮಾಡಲು ಉದ್ದೇಶವಿರುವವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರ ಆಫೀಸಿನಲ್ಲಿ ಆಫೀಸ್ ನಡೆಯತಕ್ಕ ದಿನಗಳು ಮತ್ತು ಕಾಲದಲ್ಲಿ ಅಜಮಾಯಿಸಿಮಾಡಬಹುದು. ಹರಾಜು ಬಗ್ಗೆ ಹೆಚ್ಚಿನ ತಪ್ಸೀಲುಗಳನ್ನು ತಿಳಿಯಲಪೇಕ್ಷೆಯುಳ್ಳವರು ಮೈಸೂರು ಗೆಜೆಟ್ ನವಂಬರ್ 27 ಮತ್ತು ಡಿಶಂಬರ್ 4 ಮತ್ತು 11 ನೆ ತಾರೀಖುಗಳ ಸಂಚಿಕೆಗಳನ್ನು ನೋಡಬಹುದಾಗಿದೆ. ಹರಾಜು ಇಸ್ತಿಹಾರ್ ಕಾಪಿಗಳನ್ನು ಡೆಪ್ಯುಟಿ ಕಮಿಷನರ್‌ರವರ ಪರ್ಸನಲ್ ಅಸಿಸ್ಟೆಂಟ್ ರವರಿಗೆ ಬರದು ತರಿಸಿಕೊಳ್ಳಬಹುದು.

14 ನೆ ನವಂಬರ್ 1919 }
ಬೆಂಗಳೂರು. }
ಡೆಪ್ಯುಟಿ ಕಮಿಷನರ್
ಬೆಂಗಳೂರು ಡಿಸ್ಟ್ರಿಕ್ಟ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಚಾರ, ಆಚರಣೆ ತಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕನಕಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ತಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 7

ನಾವು ಎ. ಆಲ್ ಬ್ಯುಕ್ಯುಯರ್ ಕ್ಕೊ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಯೆರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ. }
ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್‌ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

5 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿಕಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. **ಲಕ್ಷ್ಮೀವಿಲಾಸರಸ (ಪ್ಲೇಗಿಗೆ)**—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. **ಶ್ರೀನಿವಾಸತೈಲ**—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಡಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. **ವೈಶ್ವಾನರಾಸವ**—ಸೇವಿಸಿದ ಕೂಡಲೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. **ಬಾಲಸುಖೋದಯ**—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. **ಲೋಕಾಮಯಹರಕಸ್ತೂರಿಮಾತ್ರೆಗಳು**—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
49 ವೈದ್ಯಶಾಲಾ, ಮೈಸೂರು.

ಜಾಹೀರ್‌ನಾಮೆ.

4 ಜಿನ್ನಿಂಗ್‌ಫ್ಯಾಕ್ಟರಿಯ ಮಾರಾಟ.

ಇದರಲ್ಲಿ ನಮೂದು ಕಂಡ ಫ್ಯಾಕ್ಟರಿಯನ್ನು ದಾವಣಗೆರೆ ಹಿರಲಾಲ್ ಮಗಲಾಲ್ ಇವರುಮಾರಾಟಮಾಡತಕ್ಕವರು ಇರುತ್ತಾರೆ. ಇದರಲ್ಲಿರತಕ್ಕ ವಿವರ ಸಡಿ ೧೨ ಜಿನ್ನಗಳೂ, ಡಬ್ಬರ್ ರೋಲ್ ಸಹ ಮತ್ತು ಸಾಜೀನುಗಳು ಇಂಜನ್ ಬೈಲರ್ ಲೇತ್ ವಗೈರೆ ಹಾಲಿ ಚಾಲು ಸ್ಥಿತಿ ಒಳಗೆ ಇರತಕ್ಕ ಫ್ಯಾಕ್ಟರಿಯು ಮತ್ತು ಗುದಾಮುಗಳು ಜನಗಳು ವಾಸವಾಗಿರತಕ್ಕ ಮನೆಗಳೂ ಆಫೀಸು ಸಹ ಇರುತ್ತದೆ. ಇಷ್ಟವುಳ್ಳವರು ಡಿಶಂಬರ್ 15 ಸೋಮವಾರದಿಂದ 18 ನೇತಾರೀಖು ಗುರುವಾರಕ್ಕೆ ಪೂರೈಸುತ್ತದೆ. ಇಷ್ಟಪಟ್ಟವರು ಅಪೇಟ್ಮೆಯು ಒಳಗೆ ಆ ಫ್ಯಾಕ್ಟರಿಯ ಆಫೀಸಿನಲ್ಲಿ ಸಮಕ್ಷಮಕಾಣಬೇಕು. ರೂಲ್ಸು ವಗೈರೆ ಸಮಕ್ಷಮ ಕೇಳತಕ್ಕದ್ದು.

ಇನ್‌ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 21

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧವ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಇಸುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦— ೭—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦— ೫—೦
ಹರಿದಾಸಿ	೦— ೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ	೦— ೩—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಡಿಸೆಂಬರ್ ತಾ|| ೧೪ ನೆಯ ಭಾನುವಾರ.

ರಿಜಿಸ್ಟ್ರೇಷನ್.

ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಗೆ ವಿಶೇಷ ಕಾಲವನ್ನು ಹಿಡಿದುಕೊಂಡ ಕೆಲ ಮುಖ್ಯ ವಿಷಯಗಳಿದ್ದುವು. ಅವುಗಳಲ್ಲಿ ರಿಜಿಸ್ಟ್ರೇಷನ್ ವಿಷಯವೂ ಒಂದಾಗಿದ್ದಿತು. "ಪೋಸ್ಟಾಫೀಸುಗಳ ವಿಷಯದಲ್ಲಿರುವಂತೆ, ರಿಜಿಸ್ಟ್ರೇಷನ್ ಫೀಜನ್ನು ನಗದಾಗಿ ವಸೂಲ್ಮಾಡುವುದನ್ನು ನಿಲ್ಲಿಸಿ, ಸರಿಯಾದ ಸ್ಟಾಂಪು ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಫೀ ಇವುಗಳ ಒಟ್ಟು ಮೊತ್ತಕ್ಕೆ ಸರಿಯಾದ ಛಾಪಾಕಾಗದಗಳನ್ನು ಉಪಯೋಗಿಸುವಂತೆ ಮಾಡಿದರೆ ರಿಜಿಸ್ಟ್ರೇಷನ್ ಬಗ್ಗೆ ಅದನ್ನು ರಿಜಿಸ್ಟರ್ ಮಾಡುವ ಆಫೀಸರಲ್ಲಿ ಹಾಜರ್ಮಾಡಲು ಕಕ್ಷಿಗಾರರಿಗೆ ಅನುಕೂಲವಾಗುತ್ತದೆ." ಎಂಬುವಾಗಿ ಈ ಸೂಚನೆಯನ್ನು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮ|| ಬಿ. ವಿ. ರಂಗಯ್ಯನವರು ಚರ್ಚೆಗೆ ತಂದರು. ಆ ಕೂಡಲೇ ಸಭಿಕರಲ್ಲನೇಕರು ವಿಷಯ ಸಮರ್ಥನ ಮಾಡುವುದಕ್ಕೆ ನಾಮುಂದು ತಾಮುಂದೆಂದು ಬಂದು ಸರ್ಕಾರಕ್ಕೆ ಮಾಡಿಕೊಂಡ ವಿನ್ನಹವು ಸಭಿಕರೆಲ್ಲರ ಅಭಿಪ್ರಾಯವೂ ಈ ವಿಷಯದಲ್ಲಿ ಒಂದೇಮುಖವಾಗಿದೆಯೆಂಬುದನ್ನು ತೋರಿಸುತ್ತಿದ್ದಿತಲ್ಲದೆ, ಸಂಸ್ಥಾನವೆಲ್ಲವೂ ಈ ಶಾಖೆಯ ಉದ್ಯೋಗಿಗಳಿಂದ ಪಡುತ್ತಿರುವ ನಷ್ಟಕಷ್ಟಗಳು ಪ್ರತಿನಿಧಿಗಳ ಮುಖದಿಂದ ಒಂದೇಸಲ ಪ್ರತಿಧ್ವನಿಗೊಳ್ಳುತ್ತಿರುವಂತೆ ಕಾಣುತ್ತಿದ್ದಿತು. ಮುಸುಗಿನೊಳಗಣ ಗುದ್ದಿನಂತೆ ಪ್ರಜೆಗಳು ರಿಜಿಸ್ಟ್ರೇಷನ್ ಆಫೀಸುಗಳಮೂಲಕ ಅನುಭವಿಸುತ್ತಿರುವ ಹಿಂಸೆಗಳು ಪ್ರಜೆಗಳಿಗೆ ಎಷ್ಟು ದುರ್ಭರವಾಗಿವೆಯೆಂಬುದನ್ನು ಪ್ರತಿನಿಧಿಗಳು ಚೆನ್ನಾಗಿ ಸರ್ಕಾರಕ್ಕೆ ಮನದಟ್ಟಾಗುವಂತೆ ನಿವೇದಿಸಿದುದು ಪ್ರಶಸ್ತವಾಗಿದ್ದಿತು. ಆ ಸಮಯದಲ್ಲಿ ಸರ್ಕಾರದ ಪಕ್ಷದಿಂದ ಕೌನ್ಸಿಲರು ಕೊಟ್ಟ ಉತ್ತರವನ್ನು ನೋಡುವಲ್ಲಿ ಈ ಕೋಟಲೆಗಳೆಲ್ಲಾ ಸರ್ಕಾರದವರಿಗೂ ಚೆನ್ನಾಗಿ ತಿಳಿದಿದೆಯೆಂದೇ ವ್ಯಕ್ತವಾಯಿತು. ಯಾವ ತೆರದಿಂದ ನಿವಾರಣೋಪಾಯವನ್ನು ಮಾಡಬೇಕೆಂಬುದು ಅವರ ಪರ್ಯಾಲೋಚನೆಯಲ್ಲಿದೆಯೆಂಬುದೂ ಗೊತ್ತಾಯಿತು. ಮ|| ಗಳಾದ ಕರಣಿಕ ಕೃಷ್ಣಮೂರ್ತಿರಾಯರೂ ಮ|| ಶ್ಯಾಮಯ್ಯಂಗಾರರೂ ಈ ಶಾಖೆಯಿಂದಾಗುತ್ತಿರುವ ಕಷ್ಟಗಳನ್ನು ವಿವರಿಸಿ ಹೇಳುವಾಗ್ಗೆ—ಲಂಚಾ ಕೊಡುವವರು ತೆಗೆದುಕೊಳ್ಳುವವರಿಬ್ಬರೂ ತಪ್ಪಿತಸ್ಥರೆಂದು ಕಾನೂನಿರುವುದರಿಂದ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ನಡೆಯುವ ಲಂಚದ ಹಾವಳಿಯನ್ನು ಬೈಲಿಗೆ ತಂದು ಅಡಗಿಸುವುದು ಕಷ್ಟವಾಗಿದೆಯೆಂತಲೂ, ಡಾಕ್ಯುಮೆಂಟಿಗೆ ಎಷ್ಟು ಫೀಜನ್ನು ಸರ್ಕಾರಕ್ಕೆ ಪ್ರಜೆಗಳು ತೆರುವರೋ ಅಷ್ಟೇ ಹಣವನ್ನು ಲಂಚದ ರೂಪವಾಗಿ ಬೇರೆಕೊಡದಿದ್ದರೆ ಪತ್ರಗಳ ರಿಜಿಸ್ಟರೇ ಆಗುವುದಿಲ್ಲವೆಂತಲೂ, ಈ ಸಂಬಂಧವಾಗಿ ಆಫೀಸುಗಳಲ್ಲಿ ನಡೆಯುವ ಸಂಧಾನಗಳನ್ನು ಇಂಥ ಸಭೆಯಲ್ಲಿ ವಿವರಿಸಿ ಹೇಳುವುದು ಅಸಾಧ್ಯವೆಂತಲೂ, ಈ ಹಾವಳಿಯಿಂದ ರೈತರು ಬಹಳಮಟ್ಟಿಗೆ ಅನ್ಯಾಯವಾಗಿ ಹಣವನ್ನು ತೆತ್ತು ಹಾಳಾಗುತ್ತಿರುವರೆಂತಲೂ, ರಿಜಿಸ್ಟ್ರೇಷನ್ ಪದ್ಧತಿಯನ್ನೇ ತಪ್ಪಿಸಿಬಿಟ್ಟರೆ ರೈತರು ಅಪಾರ ಕೃತಜ್ಞರಾಗಿರುತ್ತಾರೆಂತಲೂ, ಹಾಗೆ ಮಾಡಿದರೆ ಸರ್ಕಾರಕ್ಕೆ ನಷ್ಟವಾಗುವುದೆಂದು ಹೇಳುವುದಾದರೆ, ಇನ್ನಾವವಿಧದ ಹೊಸಕಂದಾಯವನ್ನು ಅಲ್ಪಸ್ವಲ್ಪ ಹಾಕಿದರೂ ತೆತ್ತು ಈ ನಷ್ಟಕಷ್ಟಗಳ ಈ ಭಾರವನ್ನು ರೈತರು ತಪ್ಪಿಸಿಕೊಳ್ಳುವರೆಂತಲೂ, ಆದುದರಿಂದ ಇಲಾಖೆಯನ್ನೇ [illegible]ಬಿಟ್ಟರೆ ಬದುಕಿಕೊಳ್ಳುತ್ತೇವೆಂತಲೂ ಹೇಳಿಕೊಂಡರು. ಈ ಮಾತುಗಳಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲದೆ ಅವು ನಿಜವಾದ ಪ್ರಜಾಭಿಪ್ರಾಯವೇ ಆಗಿದ್ದವೆಂದು ಹೇಳುವಲ್ಲಿ ಸಂಶಯವಿಲ್ಲ. ಅದುಕಾರಣವೇ ಸರ್ಕಾರದವರು ಮನಮುಟ್ಟಿ ಇದನ್ನು ಲಾಲಿಸಿದರು.

ನಿವಾರಣೋಪಾಯಗಳನ್ನು ಕುರಿತು ಪ್ರತಿನಿಧಿಗಳು ಸೂಚಿಸಿದುದರಲ್ಲಿ—ದುಡ್ಡಿನ ಸಪ್ಪಳೇ ಈ ಆಫೀಸುಗಳಲ್ಲಿ ಆಗದಿರುವಂತೆ ಮಾಡಿದರೆ ಲಂಚದ ಹಾವಳಿಯು ತಪ್ಪಿಹೋಗುವುದೆಂದು ಯೋಚಿಸಿದಂತೆ ತೋರಿತು. ಅದಕ್ಕಾಗಿಯೇ ಛಾಪಾಕಾಗದದ ಬೆಲೆಯನ್ನು ದ್ವಿಗುಣಮಾಡಿ ತೆಗೆದುಕೊಂಡು, ರಿಜಿಸ್ಟ್ರೇಷನ್ ಫೀಯನ್ನು ಪ್ರತ್ಯೇಕವಾಗಿ ಕೇಳದೆ, ಹಾಗೆಯೇ ರಿಜಿಸ್ಟರ್ ಮಾಡಿಕೊಡುವಂತೆ ಏರ್ಪಡಿಸಬೇಕೆಂಬ ಒಂದು ಸೂಚನೆಯೂ, ರಿಜಿಸ್ಟ್ರೇಷನ್ ಫೀಜನ್ನು ನಗದಾಗಿ ತೆಗೆದುಕೊಳ್ಳದೆ ಪೋಸ್ಟೇಜಿನಂತೆ ಬೇರೆ ಸ್ಟಾಂಪನ್ನು ಪತ್ರಗಳಿಗೇ ಅಂಟಿಸಿ ರಿಜಿಸ್ಟರ್‌ಮಾಡಿಸಿಕೊಳ್ಳುವಂತೆ ಆಗಬೇಕೆಂಬ ಮತ್ತೊಂದು ಸೂಚನೆಯೂ ಮಾಡಲ್ಪಟ್ಟುವು. ಈಗ ಪರಸ್ಪರಸಹಾಯಸಂಘಗಳ ಪತ್ರಗಳಿಗೆ ಫೀಜು ಸ್ಟಾಂಪು ಮೊದಲಾದ ಸಂಬಂಧವೊಂದೂ ಇಲ್ಲದೆ ರಿಜಿಸ್ಟರ್ ಮಾಡಿಸಲ್ಪಡುವ ಪದ್ಧತಿಯಿರುವುದರಿಂದ, ನಿರುಪದ್ರವವಾಗಿ ಅವುಗಳ ರಿಜಿಸ್ಟ್ರೇಷನು ಬೇಗಸಾಗಿಹೋಗುತ್ತಿದೆಯೆಂಬುದನ್ನು ಉದಾಹರಣೆಯಾಗಿ ಕೊಟ್ಟರು.

ಇದನ್ನೆಲ್ಲಾ ಸರ್ಕಾರದವರು ಚೆನ್ನಾಗಿ ಆಲಿಸಿದ್ದಾರೆ. ಪೂರ್ವಾಪರವನ್ನು ಚೆನ್ನಾಗಿ ಆಲೋಚಿಸಿ ಸರಿಯಾದ ನಿವಾರಣೋಪಾಯವನ್ನು ಕಲ್ಪಿಸಿ ತಕ್ಕ ಅಪ್ಪಣೆಯನ್ನು ಕೊಡುವುದಾಗಿ ಪ್ರತಿನಿಧಿಗಳಿಗೆ ಅಭಯವನ್ನು ಕೊಟ್ಟಿರುತ್ತಾರೆ. ಅದು ಬೇಗನೆ ಫಲರೂಪಕ್ಕೆ ಬರಲೆಂದು ಸರ್ವ ಪ್ರಜೆಗಳ ಜತೆಯಲ್ಲಿ ನಾವೂ ಇದಿರುನೋಡುತ್ತಿದ್ದೇವೆ.

ರಿಜಿಸ್ಟ್ರೇಷನ್ ಶಾಖೆಯು ಪ್ರಜೆಗಳಿಗೆ ಅತ್ಯಂತ ನಿಕಟಸಂಬಂಧವುಳ್ಳದು. ಬೆಳಗಾಯಿತೆಂದರೆ ಆ ಆಫೀಸಿಗೆ ಹೋಗದಿದ್ದರೆ ತೀರದು. ಇಂಥ ಶಾಖೆಯ ಆಫೀಸುಗಳಲ್ಲಿ ನಡೆಯುತ್ತಿರುವ ಲಂಚದ ಹಾವಳಿಗೆ ಸಂಬಂಧಪಟ್ಟ ಕಪಟನಾಟಕಗಳನ್ನು ಕೇಳಿದರೆ ಅವುಗಳನ್ನೆಲ್ಲಾ ವೃತ್ತಪತ್ರಗಳಲ್ಲಿ ವಿವರಿಸಿ ಬರೆಯುವುದಕ್ಕೇ ನಾಚುಗೆಯಾಗುತ್ತದೆ. ಪವಿತ್ರಗಳಾದ ಸರ್ಕಾರಿ ಆಫೀಸುಗಳು ನಂಬುಗೆಯ ನಿಧಿಯಾಗಿ, ತಾಯಿಮನೆಯಂತೆ ಪ್ರಜೆಗಳಿಗೆ ಒತ್ತಾಸೆಯೂ ಶ್ರಮನಿವಾರಕವೂ ನೀತಿಬೋಧಕವೂ ಪಾಪಭೀತಿಪ್ರದವೂ ಆಗಿರುವುದಕ್ಕೆ ಪ್ರತಿಯಾಗಿ "ಹಗಲು ದರೋಡೆಕೋರರ ಕಚೇರಿಯಂತೆ ಇರುವುದಾದರೆ ಅವು ಸರ್ಕಾರಕ್ಕೆ ಎಷ್ಟು ಲಾಂಛನಪ್ರದವಾಗಿರುವುವೆಂಬುದನ್ನು ಹೇಳಬೇಕಾಗಿಲ್ಲ. ಇಂಥ ಕಚೇರಿಗಳು ಪ್ರಜೆಗಳ ಪಾಲಿಗೆ ಯಮಾಲಯದಷ್ಟು ಭಯಂಕರವಾಗಿರುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಅಪವಾದವಾಗಿ ಎಷ್ಟು ಆಫೀಸುಗಳಿವೆಯೋ ನಾವು ಕಾಣೆವು. ಮೇಲ್ಪಟ್ಟ ದೊಡ್ಡದೊಡ್ಡ ಅಧಿಕಾರಿಗಳು ಮಾತ್ರ ಶುದ್ಧವರ್ತನರಾಗಿದ್ದು ಉಳಿದ ಸಣ್ಣ ಉದ್ಯೋಗಿಗಳನ್ನೆಲ್ಲಾ ತುರಿಗಳ ಮಂದೆಯಮೇಲೆ ತೋಳಗಳನ್ನು ಕಾವಲಿಗೆ ಹಾಕಿದಂತೆ ಸ್ವಚ್ಛಂದವಾಗಿ ನಡೆಯಲು ಬಿಟ್ಟುಬಿಟ್ಟರೆ, ಇದರಿಂದಾಗುವ ಅನರ್ಥದೋಷಕ್ಕೆ ಮೇಲ್ಪಟ್ಟ ಶಾಖಾಮುಖ್ಯೋದ್ಯೋಗಿಗಳು ದೂರಸ್ಥರೆಂದು ಎಣಿಸಲ್ಪಡುವುದಿಲ್ಲ. ಲೋಕವೆಲ್ಲಾ ಕಂಡ ಬಹಿರಂಗವಾದ ಗುಟ್ಟಿನಂತಿರುವ ಸಬ್‌ರಿಜಿಸ್ಟ್ರೇಷನ್ ಆಫೀಸುಗಳ ಲಂಚಗುಳಿತನವನ್ನು ಕಂಡುಹಿಡಿದು ಕಠಿನಶಿಕ್ಷೆಯ ಮೂಲಕ ಅವನ್ನು ಪರಿಶುದ್ಧಿಗೊಳಿಸುವುದಕ್ಕಾಗಿ ಇದುವರೆಗೆ ಯಾವ ಉದ್ಯೋಗಿಗಳು ಯಾವತೆರದ ಪ್ರಯತ್ನವನ್ನು ಮಾಡಿರುತ್ತಾರೋ ನಾವರಿಯೆವು. ರಾತ್ರಿಕಾಲದಲ್ಲಿ ಗುಟ್ಟಾಗಿ ಕಳ್ಳತನಮಾಡುವ ಕಳ್ಳರಿಗಾದರೂ ಪೋಲೀಸರ ಭಯವಿದೆ. ಹಗಲುಹೊತ್ತೇ ಸುಲಿಗೆಮಾಡುವ ಲಂಚಗುಳಿಗಳಾದ ಕಳ್ಳರಿಗೆ ಮಾತ್ರ ಭಯವೇ ಇಲ್ಲವೆನ್ನುವುದಾದರೆ ಇದಕ್ಕಿಂತ ಆಶ್ಚರ್ಯವುಂಟೆ? ಪ್ಲೇಗು ಕಾಲರಾ ಇನ್‌ಫ್ಲುಯಂಜಾ ಮೊದಲಾದ ಮಾರಿಗಳ ನಿರೋಧಕ್ಕೆ ಸರ್ಕಾರದವರು ಎಷ್ಟೋ ಎಚ್ಚರಿಕೆ ತೆಗೆದುಕೊಳ್ಳುತ್ತಾರೆ. ಆ ಮಾರಿಗಳು ಒಳಗಣ ಪ್ರಾಣವನ್ನು ಹೀರುತ್ತಿದ್ದರೆ ಈ ಲಂಚದ ಮಾರಿಯು ಬಹಿಃ ಪ್ರಾಣವನ್ನು ಹೀರುತ್ತದೆ. ಇದರ ನಿರೋಧೋಪಾಯವನ್ನು ಮಾಡದಿದ್ದರೆ ಸರ್ಕಾರದ ಪ್ರತಿಶಾಖೆಯಲ್ಲೂ ಇದರ ಸುಂಕು ನಿರರ್ಗಳವಾಗಿ ವ್ಯಾಪಿಸಿ ಕಾಲಕ್ರಮದಲ್ಲಿ ಪ್ರಜೆಗಳನ್ನೆಲ್ಲಾ ಬಲಿ ತೆಗೆದುಕೊಂಡು ಬೆಂಡುಮಾಡಿಹಾಕುತ್ತದೆ. ಅದುಕಾರಣ ಅತ್ಯಂತದರ್ಪದಿಂದ ಕಠಿನಶಿಕ್ಷೆಯ ಭಯವಿಟ್ಟು ಇದರ ಹಾವಳಿಯನ್ನು ಅಣಗಿಸಿಬಿಡುವುದನ್ನು ಎಲ್ಲಾ ಶಾಖೆಯಲ್ಲೂ ಒಂದು ಪ್ರಮುಖ ಕಾರ್ಯವೆಂದು ಪ್ರಭುತ್ವದವರು ಪರ್ಯಾಲೋಚಿಸಬೇಕಾಗಿರುವುದು.

ಪ್ರತಿನಿಧಿ ಸಭಿಕರು ಕೊಟ್ಟಿರುವ ಸೂಚನೆಗಳಮೇಲೆ ಸರ್ಕಾರದವರೂ ತಕ್ಕ ಪರ್ಯಾಲೋಚನೆಮಾಡಿ, ಅಥವಾ ಇದಕ್ಕಾಗಿ ಒಂದು ಪ್ರತ್ಯೇಕ ಸಂಘವನ್ನೇರ್ಪಡಿಸಿ ಅವರಭಿಪ್ರಾಯವನ್ನು ತೆಗೆದುಕೊಂಡು, ಸರ್ಕಾರಕ್ಕೆ ಧನನಷ್ಟವಿಲ್ಲದಂತೆಯೂ, ಪ್ರಜೆಗಳಿಗೆ ಲಂಚದ ಹಿಂಸೆಯು ತಪ್ಪಲವಕಾಶವಾಗುವಂತೆಯೂ ರಿಜಿಸ್ಟ್ರೇಷನ್ ಕೆಲಸವು ನಡೆಯುವಹಾಗೆ ಅದಷ್ಟು ಶೀಘ್ರದಲ್ಲಿ ಅಪ್ಪಣೆ ಮಾಡುವುದು ಆವಶ್ಯಕವಾಗಿದೆ. ಇದಕ್ಕಾಗಿ ಸರ್ವಪ್ರಜೆಗಳಮೇಲೂ ಸಾಮಾನ್ಯವಾದ ಒಂದು ಕಂದಾಯವನ್ನು ವಿಧಿಸಿ ರಿಜಿಸ್ಟ್ರೇಷನ್ ಫೀಜೇ ಇಲ್ಲದೆ ಪತ್ರಗಳನ್ನು ರಿಜಿಸ್ಟರ್ ಮಾಡಿಸಿಕೊಡುವುದು ಉಚಿತವಾಗಿ ಕಾಣುವುದಿಲ್ಲ. ಯಾವಾತನು ಕೆಲಸಮಾಡಿಸಿಕೊಳ್ಳಬೇಕಾಗಿರುವನೋ ಅವನೇ ಅದರ ವೆಚ್ಚವನ್ನು ವಹಿಸಬೇಕಾದುದು ಧರ್ಮವಾದಕಾರಣ, ಛಾಪಾಕಾಗದದ ಬೆಲೆಯಲ್ಲಿ ಇಷ್ಟಂಶವು ರಿಜಿಸ್ಟ್ರೇಷನ್ನಿಗೆ ಇರಬೇಕೆಂದು ವಿಧಿಸಿಬಿಟ್ಟು, ಆ ಒಟ್ಟು ಬೆಲೆಗೆ ಸರಿಯಾಗುವಷ್ಟು ಮೊತ್ತದ ಛಾಪಾಕಾಗದದಲ್ಲಿ ಬರೆದು ರಿಜಿಸ್ಟ್ರೇಷನ್ನಿಗೆ ಕೊಟ್ಟು ಅಲ್ಲಿ ಯಾವುದೊಂದು ಫೀಯನ್ನೂ ಕೇಳುವುದಕ್ಕವಕಾಶವಿಲ್ಲದಂತೆ ಮಾಡುವುದೇ ಉಚಿತವೆಂದು ನಮ್ಮಭಿಪ್ರಾಯವು ಇದರಮೇಲೂ ಉಚಿತವಾದ ಉಪಾಯವೇನಾದರೂ ಸರ್ಕಾರಕ್ಕೆ ತೋರುವುದಾದರೆ ಅವಶ್ಯಕವಾಗಿ ಮಾಡಬಹುದು.

ವೈಸ್ರಾಯರು ಮತ್ತು ಮೈಸೂರು ಸಂಸ್ಥಾನ.

ಕಳೆದ ತಾ|| ೬ ರಲ್ಲಿ ವೈಸ್ರಾಯ್ ದಂಪತಿಗಳು ಪರಿವಾರಸಮೇತರಾಗಿ ಕಾಕನಕೋಟೆ ಕಾಡಿಗೆ ದಯಮಾಡಿಸುವಾಗ್ಗೆ ನಮ್ಮ ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರವರೂ ಮಾತೃಶ್ರೀಯವರೇ ಮೊದಲಾದ ರಾಣೀವಾಸದವರೂ ರಾಜಬಂಧು ವರ್ಗದ ಮುಖ್ಯರಾದ ಸರ್ದಾರರೂ ಅರಸುಗಳೂ ಸಹ ದಯಮಾಡಿದರು. ಅದೇ ದಿನ ಬೆಳಗ್ಗೆ ವಸ್ತುಪ್ರದರ್ಶನ ಶಾಲೆಯನ್ನೂ ಗಂಧದೆಣ್ಣೆ ಕಾರ್ಯಾಲಯವನ್ನೂ ಪರಾಮರಿಸಿಕೊಂಡು ಬಂದಿದ್ದರು. ಮಧ್ಯಾಹ್ನ ಕಾಡಿಗೆ ದಯಮಾಡಿಸುತ್ತಿರುವಾಗ್ಗೆ ರಾಜಧಾನಿಯಿಂದ ಹಿಡಿದು ಕಾರಾಪುರದ ಬಿಡದಿಯವರೆಗೆ ಆಗುವ ೪೩ ಮೈಲಿಗಳ ಉದ್ದಕ್ಕೂ ಅಲ್ಲಲ್ಲಿಗೆ ಒಬ್ಬೊಬ್ಬರಂತೆ ಪೋಲೀಸಾಳುಗಳು ನಿಲ್ಲಿಸಲ್ಪಟ್ಟು ಸಾಲುಮರಗಳು ಸುಣ್ಣ ಕೆಮ್ಮಣ್ಣು ಪಟ್ಟೆಗಳಿಂದ ಅಲಂಕೃತಗಳಾಗಿ ಪ್ರತಿ ಗ್ರಾಮಗಳ ಬಳಿಯಲ್ಲೂ ಗುಡಿತೋರಣ ಚಪ್ಪರ ಬಾಳೆಕಂಬ ಮೊದಲಾದುವುಗಳಿಂದಲೂ ದಾರಿಯು ನೀರಿನ ಚಳಯದಿಂದಲೂ ಬಹು ಮನೋಹರವಾಗಿ ಕಾಣಿಸುವಂತೆ ಮಾಡಲ್ಪಟ್ಟಿದ್ದಿತು. ಬಿಡದಿಗಾಗಿ ಪ್ರತ್ಯೇಕವಾಗಿಯೇ ಕಟ್ಟಲ್ಪಟ್ಟಿರುವ ಶಾಶ್ವತವಾದ ಎರಡು ಕಟ್ಟಡಗಳಲ್ಲಿ ವೈಸ್ರಾಯರೊಂದರಲ್ಲೂ ಶ್ರೀಮನ್ಮಹಾರಾಜರು ಒಂದರಲ್ಲೂ ಇಳಿದುಕೊಂಡರು. ಇತರರಿಗೆಲ್ಲಾ ನೂರಾರು ಗುಡಾರಗಳು ಸಿದ್ಧವಾಗಿದ್ದುವು. ಅಲ್ಲಿ ವಿದ್ಯುಚ್ಛಕ್ತಿಯ ದೀಪ, ಶುದ್ಧವಾದ ನಲ್ಲಿಯ ನೀರು ಪ್ರಶಸ್ತವಾದ ಪೂದೋಟರಮ್ಯವಾದ ಮಾರ್ಗಗಳು ಧ್ವಜಪತಾಕೆಗಳ ವೈಭವ—ಇವನ್ನೆಲ್ಲಾ ನೋಡಿದರೆ ಆ ಕಾಡಿನ ಪ್ರದೇಶವು ಅತಿ ರಮ್ಯವಾದ ಒಂದು ನೂತನ ನಗರಿಯೋಪಾದಿಯಲ್ಲಿ ಕಾಣುತ್ತಿದ್ದಿತು. ಇವರೆಲ್ಲರೂ ಹೋಗಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡನಂತರ ಅಲ್ಲಿಂದ ಮೋಟಾರುಗಳ ಮೇಲೆ ಆನೆ ಬಂಗಡಿಗಳ ಸಮೀಪಕ್ಕೆ ಹೋಗಿ ಅವರುಗಳಿಗಾಗಿ ಏರ್ಪಡಿಸಲ್ಪಟ್ಟಿದ್ದ ಸ್ಥಲಗಳಲ್ಲಿ ನೋಡುವುದಕ್ಕೆ ನಿಂತಕೂಡಲೇ, ಬಹು ದಿನಗಳಿಂದ ಸಾವಿರಾರು ಆಳುಗಳು ಅತ್ತಿತ್ತ ಬಿಡದೆ ಹಗಲೂ ರಾತ್ರಿಯೂ ಇರುಕಲಿನಲ್ಲಿ ತಡೆದು ನಿಲ್ಲಿಸಿಕೊಂಡಿದ್ದ ಕಾಡಾನೆಗಳ ಗುಂಪು ನದಿಯನ್ನು ದಾಟಿ ಬಂಗಡಿಯ ಕಡೆಗೆ ಸಾಗಿಸಲ್ಪಡುವ ಪ್ರಯತ್ನವು ಮಾಡಲ್ಪಟ್ಟಿತು. ಆಷ್ಟೊಂದು ಜನರ ಹಾಹಾಕಾರ ತಮಟೆಗಳ ಸದ್ದು ಪಿಸ್ತೋಲುಗಳ ಹಾರಾಟ ಪಟಾಕಿಗಳ ಸದ್ದು ಮೊದಲಾದುವುಗಳಿಂದೆಲ್ಲಾ ಕಾಡು ಮೊಳಗುತ್ತಿದ್ದಿತು. ಪಳಗಿದ ಎಷ್ಟೋ ಒತ್ತಾನೆಗಳನ್ನು ಮಾವುತರು ಬಿಟ್ಟು ಕಾಡಾನೆಗಳನ್ನು ಉದ್ದಿಷ್ಟಸ್ಥಲಕ್ಕೆ ಸಾಗಿಸುವಲ್ಲಿ ಮಾಡಿದ ವಿಶ್ವಪ್ರಯತ್ನವೂ ಕಾಡಾನೆಗಳ ತಂಟೆಯೂ ಕಡೆಗೂ ಅವು ನಿರ್ವಾಹವಿಲ್ಲದೆ ಬಂಗಡಿಯೊಳಕ್ಕೆ ನುಗ್ಗಿಹೋಗಬೇಕಾದ ಅವಸ್ಥೆಯೂ ನೋಡುವವರಿಗೆ ಆಶ್ಚರ್ಯಜನಕವೂ ಕರುಣಾಜನಕವೂ ಭೀಕರವೂ ಆಗಿದ್ದುವು. ಮೈಸೂರಿಗೆ ಬಂದಿದ್ದ ನೂತನ ಅತಿಥಿಗಳಿಗೆ ಈ ನೋಟವು ಅತ್ಯಂತಾಪೂರ್ವವಾಗಿ ಮನೋರಂಜಕವಾಗಿದ್ದಿತು. ಮರುದಿನದಿಂದ ಆ ಆನೆಗಳನ್ನು ಇನ್ನೊಂದು ಬಂಗಡಿಯೊಳಕ್ಕೆ ಹಳೆಯಾನೆಗಳ ಸಹಾಯ್ಯದಿಂದ ಸಾಗಿಸಿ ಒಂದೊಂದಕ್ಕೆ ಹಗ್ಗಗಳನ್ನು ಹಳೆಯಾನೆಗಳಿಂದಲೇ ಬಿಗಿಸಿ ಮರಗಳಿಗೆ ಕಟ್ಟಿಸುವುದರಲ್ಲೂ ಮಾವುತರು ಹಳೆಯಾನೆಗಳ ಹೊಟ್ಟೆಯಡಿಯಣ ತೊಟ್ಟಿಲಲ್ಲಿ ಕುಳಿತು ಹಗ್ಗಗಳನ್ನು ಬಿಗಿಸುವುದಕ್ಕೆ ಮಾಡುತ್ತಿದ್ದ ಸಾಹಸಗಳೂ ಬಹಳ ಪ್ರೇಕ್ಷಣೀಯವಾಗಿದ್ದುವು. ಅಂತೂ ಹೀಗೆ ಹೊಸದಾಗಿ ಕೂಡಲ್ಪಟ್ಟ ಕಾಡಾನೆಗಳ ಸಂಖ್ಯೆಯು ೫೦ ಕ್ಕೆ ಕಡಿಮೆಯಿಲ್ಲದೆ ಇದ್ದಿರಬಹುದು. ಅವುಗಳಲ್ಲಿ ಒಂದೆರಡು ದೊಡ್ಡವಾಗಿಯೂ ಉಳಿದುವು ಚಿಕ್ಕವಾಗಿಯೂ ಸಣ್ಣ ಮರಿಗಳಾಗಿಯೂ ಇವೆ. ವೈಸ್ರಾಯರೇ ಮೊದಲಾದ ಅತಿಥಿಗಳೆಲ್ಲಾ ಅವಕಾಶವಾದಾಗಳೆಲ್ಲಾ ಶ್ರೀಮನ್ಮಹಾರಾಜರೊಡನೆ ಹೊರಟು ಕಪಿನೀನದೀತೀರದಲ್ಲಿರುವ ಆ ಕಾಡಿನ ಮನೋಹರತೆಯನ್ನು ನೋಡಿ ಆನಂದಿಸುತ್ತಿದ್ದುದಲ್ಲದೆ ಆಗಾಗ್ಗೆ ಬೇರೆ ಮೃಗಗಳ ಬೇಟೆಗೂ ಹೋಗುತ್ತಿದ್ದರು. ನದಿಯೊಳಗೆ ವೈಸ್ರಾಯರಿಗೆ ಅತಿ ಪ್ರಿಯವಾಗಿರುವ ಮೀನಿನ ಬೇಟೆಗೂ ಏರ್ಪಡಿಸಿದ್ದರು. ಹೀಗೆ ನಡೆದ ಬೇಟೆಯಲ್ಲಿ ವೈಸ್ರಾಯರು ಒಂದು ದೊಡ್ಡ ಕಾಡುಕೋಣವನ್ನು ಹೊಡೆದು ೧೧೦ ಪೌನು (೪|| ಮಣ) ತೂಕವುಳ್ಳ ಒಂದು ದೊಡ್ಡ ಮೀನನ್ನು ಗಾಳದಿಂದ ಹಿಡಿದರು. ಈ ಬೇಂಟೆಯು ಅವರಿಗೆ ಅಪಾರ ಸಂತೋಷವನ್ನುಂಟುಮಾಡಿತು. ನದಿಯ ದೊಡ್ಡಮಡುವಿನಲ್ಲಿ ಎಷ್ಟೋಕಾಲದಿಂದಲೂ ಲಾರ್ಡ್ ಚಲಮ್ಸ್‌ಫರ್ಡರ ಗಾಳಕ್ಕೇ ಗುರಿಯಾಗಲು ಮೀಸಲಾಗಿ ಅಷ್ಟು ದೊಡ್ಡಮೀನು ಇದ್ದುದು ಆಶ್ಚರ್ಯಕರವು. ವೈಸ್ರಾಯರ ಪರಿವಾರದಲ್ಲಿದ್ದವರಲ್ಲಿ ವೈಸ್ರಾಯರ ಕುಮಾರಿಯವರಾದ ಮಿಸ್. ಥಿಯಸರ್‌ರವರು ಒಂದು ಹುಲಿಯನ್ನೂ, ಕ್ಯಾಪ್ಟನ್ ಡೆನ್ನಿಯವರು ಮತ್ತೊಂದು ಹುಲಿಯನ್ನೂ ಗುಂಡಿನಿಂದ ಹೊಡೆದು ಬೇಂಟೆಯಾಡಿದರು. ಹೀಗೆ ಅಲ್ಲಿಯ ವಿಹಾರವನ್ನೆಲ್ಲಾ ಮುಗಿಸಿಕೊಂಡು ತಾ|| ೧೧ ನೆ ಗುರುವಾರ ಮಧ್ಯಾಹ್ನ ೨|| ಗಂಟೆಗೆ ಸರ್ವರೂ ರಾಜಧಾನಿಗೆ ದಯಮಾಡಿಸಿದರು. ಆದಿನ ರಾತ್ರಿ ಕೋಟೆಯಬಾಗಿಲುಗಳು ಟವನ್‌ಹಾಲು ಚೌಕ ಅರಮನೆಯ ಮುಂಭಾಗ ಮೊದಲಾದುವುಗಳೆಲ್ಲಾ ವಿದ್ಯುದ್ದೀಪಾವಳಿಯಿಂದ ವಿರಾಜಿಸುವಂತೆ ಮಾಡಲ್ಪಟ್ಟಿದ್ದುವು. ವೈಸ್ರಾಯರ ಬಿಡಾರದಲ್ಲಿ ರಾತ್ರಿ ೮ ಗಂಟೆಯಿಂದ ೧೦ ಗಂಟೆವರೆಗೂ ದಿವ್ಯವಾಗಿ ಬ್ಯಾಂಡುಗಳು ಆಗುತ್ತಿರುವಾಗ್ಗೆ ಕಡೆಯದಿನದ ಅರಸೌತಣವು ಜರುಗಿತು. ಶ್ರೀಮನ್ಮಹಾರಾಜರು ಯುವರಾಜರು ದಿವಾನರು ಲೆ|| ಕರ್ನಲ್ ದೇಶರಾಜೆ ಅರಸಿನವರು ಮೊದಲಾದವರು ತದನಂತರ ರೆಸಿಡೆನ್ಸಿಗೆ ದಯಮಾಡಿಸಿ, ದರ್ಶನ ಸಂಭಾಷಣಗಳನ್ನು ಮಾಡಿದ ನಂತರ, ವೈಸ್ರಾಯರೂ ಶ್ರೀಮನ್ಮಹಾರಾಜರೂ ಒಂದು ಮೋಟಾರಿನಲ್ಲೂ, ವೈಸ್ರಾಯರ ಪತ್ನಿಯವರೂ ಶ್ರೀಮದ್ಯುವರಾಜರೂ ಒಂದು ಮೋಟಾರಿನಲ್ಲೂ ಇತರರು ಬೇರೆ ಬೇರೆ ಮೋಟಾರುಗಳಲ್ಲೂ ಕುಳಿತು ನಿಲ್ದಾಣಕ್ಕೆ ತೆರಳಿದರು. ಈ ತೆರಳುವಿಕೆಯು ಪ್ರೈವೇಟ್ ಆಗಿದ್ದುದರಿಂದ ಸೇನಾಪರಿವಾರವೇ ಆಗಲೀ ಉತ್ಸವ ವೈಭವವಾಗಲೀ ಯಾವುದೂ ಇರಲಿಲ್ಲ. ದಾರಿಯುದ್ದಕ್ಕೂ ಪೋಲೀಸರು ಮಾತ್ರ ನಿಲ್ಲಿಸಲ್ಪಟ್ಟಿದ್ದರು. ಚಾಮುಂಡಿ ಬೆಟ್ಟದ ಮೇಲೆ ಹೊಸದಾಗಿ ಹಾಕಿರುವ ಅಡ್ಡದಾರಿಯ ಮೇಲೆ "Aurevoir to Lord & Lady Chelmsford" ಎಂಬುದಾಗಿ ದೀಪಾವಳಿಗಳಿಂದ ರಚಿಸಲ್ಪಟ್ಟಿದ್ದ ಅಕ್ಷರ ಪಙ್ಕ್ತಿಯು ತೆರಳುತ್ತಿದ್ದ ಅತಿಥಿಗಳ ಕಣ್ಣಿಗೆ ಮನೋಹರವಾಗಿ ಕಾಣುತ್ತಲಿದ್ದಿತು. ಆ ಅಕ್ಷರಗಳು ಬಹುಶಃ ಪ್ರತಿಯೊಂದೂ ೨೦–೩೦ ಅಡಿ ಉದ್ದವಾಗಿದ್ದುವು. ಅಕ್ಷರಗಳಸಾಲು ೧|| ಫರ್ಲಾಂಗು ದೂರದಷ್ಟಿದ್ದಿತು. ಶ್ರೀಮನ್ಮಹಾರಾಜರು ಯುವರಾಜರು ಮೊದಲಾದವರೆಲ್ಲಾ ನಿಲ್ದಾಣದಲ್ಲಿ ವೈಸ್ರಾಯರನ್ನೂ ಅವರ ಪತ್ನಿಯವರೇ ಮೊದಲಾದವರನ್ನೂ ಹಸ್ತಲಾಘವವನ್ನಿತ್ತು ವಂದಿಸಿ ಬಂಡಿಗಳಿಗೆ ಹತ್ತಿಸಿದರು. ಪ್ರತಿವಂದನೆಯನ್ನು ಮಾಡುತ್ತ ಆ ಸಂಮಾನ್ಯಾತಿಥಿಗಳೆಲ್ಲರೂ ತೆರಳಿದರು. ನಾಲ್ಕಾರುತಿಂಗಳಿಂದಲೂ ಮಾಡಲ್ಪಡುತ್ತಿದ್ದ ಮೈಸೂರು ಆತಿಥ್ಯದ ಏರ್ಪಾಟುಗಳೆಲ್ಲವೂ ಇಲ್ಲಿಗೆ ಸರ್ವಾಂಗಸಫಲವಾಗಿ ಕೊನೆಮುಟ್ಟಿದುವು.

ನೂತನ ರಾಜಕೀಯ ಸಂಸ್ಕರಣದ ಬಿಲ್ಲು.

ಸಂಯುಕ್ತ ಸಂಘದವರಿಂದ ಸಂಸ್ಕರಣಗೊಂಡು ಪಾರ್ಲಿಮೆಂಟಿನ ಮುಂದೆ ಕಳೆದ ತಾ|| ೩ ರಲ್ಲಿ ಇಡಲ್ಪಟ್ಟ ಈ ಬಿಲ್ಲು ಅನೇಕತೆರದ ಚರ್ಚೆಗೆ ಒಳಪಟ್ಟು ೩ ಸಲ ವಾಚಿಕವಾಗಿ ಯಾವುದೊಂದು ಬದಲಾವಣೆಗೂ ಗುರಿಯಾಗದೆ ಕಳೆದ ತಾ|| ೫ ರಲ್ಲಿ ಕಾಮನ್ಸ್ ಸಭೆಯಲ್ಲಿ ಮೂರನೆ ಸಲ ಅನುಮೋದಿತವಾಯಿತು.

… … …

ತಾವು ಹಿಡಿದ ಕಾರ್ಯವನ್ನು ಸ್ಟೇಟ್ ಸೆ|| ಮಿ|| ಮಾಂಟೆಗ್‌ರವರು ಈಗ ಕೊನೆಮುಟ್ಟಿಸಿಕೊಂಡಂತಾಯಿತು. ಮುಂದೆ ಲಾರ್ಡುಗಳ ಸಭೆಯ ಚರ್ಚೆಗೆ ಇದು ಒಳಪಟ್ಟರೂ ಅಷ್ಟೇನೂ ವಿಘ್ನವು ಇದಕ್ಕೆ ತಟ್ಟಲಾರದೆಂದು ಕಾಣುತ್ತದೆ. ಹೀಗೆ ಸಫಲೀಕೃತಪ್ರಯತ್ನರಾದುದರಿಂದಲೇ ಅದೇ ಸಭೆಯಲ್ಲಿ ಮಾಂಟೆಗ್‌ರವರು ಮಾಡಿದ ಒಂದು ದೊಡ್ಡ ಉಪನ್ಯಾಸವು ಅವರ ಮನಸ್ಸಂತೃಪ್ತಿಯನ್ನು ವ್ಯಕ್ತಪಡಿಸಿತು. ಇದುವರೆಗೆ ಯಾವ ಸೆಕ್ರೆಟರಿಯೂ ಮಾಡದಿದ್ದಷ್ಟು ಹಿತವನ್ನು ಇವರು ತಮ್ಮ ಕಾಲದಲ್ಲಿ ಭರತಖಂಡಕ್ಕೆ ಮಾಡಿಕೊಟ್ಟುದರಿಂದ ಇವರ ಹೆಸರು ಭಾರತಚರಿತ್ರೆಯಲ್ಲಿ ಚಿರಸ್ಮರಣೀಯವಾಗಿರುವುದಲ್ಲದೆ, ಭಾರತೀಯರೆಲ್ಲರೂ ಇವರಿಗೆ ಚಿರ ಕೃತಜ್ಞರಾಗಿರಬೇಕಾಗಿರುವುದು. ಇವರು ಇದನ್ನು ಶಾಸನವಾಗಿ ಮಾಡಿಸುವ ವಿಷಯದಲ್ಲಿ ಭರತಖಂಡದಮೇಲೆ ಅಸಾಧಾರಣವಾದ ಅಭಿಮಾನವನ್ನೂ ದೃಢನಿಷ್ಠೆಯನ್ನೂ ವಹಿಸಿದ್ದುದಲ್ಲದೆ ತಕ್ಕ ಬುದ್ಧಿಚಾತುರ್ಯವನ್ನು ಮೊದಲಿಂದಲೂ ಉಪಯೋಗಿಸಿದರು. ಇಂಡೋಬ್ರಿಟಿಷ್ ಸಂಘದವರು ಮೊದಲಿಂದಲೂ ಇವರ ಹಾದಿಗೆ ಅಡ್ಡಗಟ್ಟುತ್ತಿದ್ದರು. ಅವನ್ನೆಲ್ಲಾ ಅತಿ ಜಾಗರೂಕತೆಯಿಂದ ಇವರು ಹಿಂದೆ ನೂಕುತ್ತ ಬಂದರು. ಮೊಟ್ಟಮೊದಲೇ ಈ ಸಂಸ್ಕರಣಕ್ಕೆ ವೈಸ್‌ರಾಯರ ಅಂಗೀಕಾರವನ್ನು ಪಡೆದುಕೊಂಡುಬಿಟ್ಟು ಅವರ ತಂಟೆಯು ಮರಳಿ ಬಾರದಂತೆ ಮಾಡಿಕೊಂಡನಂತರವೇ ಪ್ರಕಟಪಡಿಸಿದರು. ಅದಾದಮೇಲೆ ಕಾಮನ್ಸ್ ಸಭೆಯಲ್ಲಿ ಇದಕ್ಕೆ ಪ್ರತಿಕೂಲ ಪಕ್ಷದವರ ಆತಂಕವು ಹೆಚ್ಚಾಗದಿರುವಂತೆ ಮಾಡಿಕೊಳ್ಳುವುದಕ್ಕಾಗಿ ಸಂಯುಕ್ತ ಸಂಘದವರ ವಶಕ್ಕೆ ಸಂಸ್ಕರಣದ ಬಿಲ್ಲನ್ನು ಕಳುಹಿಸಿಕೊಟ್ಟು, ಆ ಸಂಘದಲ್ಲಿ ಇಂಡೋಬ್ರಿಟಿಷ್ ಸಂಘಸಭಿಕರನ್ನೂ ಕಾಮನ್ಸ್ ಮತ್ತು ಲಾರ್ಡ್ಸ್‌ಸಭೆಗಳ ಸಭಿಕರನ್ನೂ ಸೇರಿಸುವಂತೆ ಮಾಡಿದರು. ಭರತಖಂಡದಲ್ಲಿ ರಾಜಕೀಯ ಪಕ್ಷಗಳೊಳಗೆ ಹಳಬರಾಗಿಯೂ ದೂರದರ್ಶಿಗಳಾಗಿಯೂ ಶಾಂತಿಮಾರ್ಗಗಾಮಿಗಳಾಗಿಯೂ ಮಿತಫಲಾಕಾಂಕ್ಷಿಗಳಾಗಿಯೂ ಇದ್ದ ಒಂದು ಪಕ್ಷದವರ ಒಲುಮೆಯನ್ನು ಮೊದಲಿಂದಲೂ ಸಂಪಾದಿಸಿಕೊಂಡರು. ಇದರಮೇಲೆ ಆಂಗ್ಲ ಮಂತ್ರಿವರ್ಗದವರ ಪ್ರಾತಿಕೂಲ್ಯವೇನೂ ಸಂಘಟಿಸದಂತೆ ಮಾರ್ಗವನ್ನು ಸರಿಪಡಿಸಿಕೊಂಡಿದ್ದರು. ಇಷ್ಟೆಲ್ಲಾ ದಿಗ್ಬಂಧವನ್ನು ಮಾಡಿಕೊಳ್ಳುವ ಸಾಹಸವು ಮಾಂಟೆಗ್‌ರವರಲ್ಲಿಲ್ಲದಿದ್ದರೆ ಈ ಕಾರ್ಯವು ಎಂದಿಗೂ ಕೊನೆಮುಟ್ಟುತ್ತಿರಲಿಲ್ಲ. ಭರತಖಂಡದ ಹಿತಕ್ಕಾಗಿ ಇಷ್ಟೆಲ್ಲಾ ಸಾಹಸಪಟ್ಟ ಮಿ|| ಮಾಂಟೆಗ್‌ರವರನ್ನು ಯಾವ ಭಾರತೀಯನು ತಾನೇ ಪ್ರಶಂಸೆ ಮಾಡದೆಯೂ ಅವರ ಉಪಕಾರವನ್ನು ಸ್ಮರಿಸದೆಯೂ ಇರುವುದಕ್ಕಾದೀತು? ಆದರೂ ಅವರಿಂದೇನಾಯಿತು? ಎಂದು ಹಳಿಯತಕ್ಕವರು ನಮ್ಮ ಮಧ್ಯದಲ್ಲಿರುವುದು ಆಶ್ಚರ್ಯವಲ್ಲವೆ?

… … …

ಸಂಯುಕ್ತಸಂಘದ ಇದಿರಿಗೆ ಸಾಕ್ಷ್ಯ ಕೊಡುವುದಕ್ಕೂ ಭರತಖಂಡದ ಆಶಯವನ್ನು ಆಂಗ್ಲ ಮಹಾಜನರಲ್ಲಿ ನಿವೇದಿಸುವುದಕ್ಕೂ ನಾನಾ ಸಂಘಗಳ ಪ್ರತಿನಿಧಿಗಳಾಗಿ ಇಲ್ಲಿಂದ ಸೀಮೆಗೆ ಹೋಗಿದ್ದ ಪ್ರಮುಖರಲ್ಲನೇಕರು ಕಳೆದಪಕ್ಷದಲ್ಲಿ ಭರತಖಂಡಕ್ಕೆ ಬಂದು ಸೇರಿರುತ್ತಾರೆ. ಅವರುಗಳನ್ನು ಮರ್ಯಾದಿಸುವ ಕೆಲಸವು ಆಯಾ ಮುಖ್ಯಪಟ್ಟಣಗಳಲ್ಲಿ ನಡೆದಿರುತ್ತದೆ. ಮ|| ಬಾಲಗಂಗಾಧರ ತಿಲಕರಿಗೆ ಬೊಂಬಾಯಿ ನೇಷನಲ್ ಯೂನಿಯನ್ ಪಕ್ಷದಲ್ಲಿ ನಡೆದ ಔತಣದ ಸಮಾರಂಭದಲ್ಲಿ ತಿಲಕರು ತಮ್ಮ ಚಿರೋಲ್ ಪ್ರಕರಣದ ಅಪಜಯದ ವಿಷಯವಾಗಿ ಮಾತನಾಡುವಾಗ್ಗೆ "ಈ ವ್ಯಾಜ್ಯದಪರ್ಯವಸಾನವು ನಮಗೆ ಒಂದು ಪಾಠವನ್ನು ಕಲಿಸುತ್ತಿದೆ. ಇಂಗ್ಲಂಡಿನಲ್ಲೇ ಆಗಲೀ ಭರತಖಂಡದಲ್ಲೇ ಆಗಲೀ ಭಾರತೀಯರಿಗೂ ಆಂಗ್ಲೇಯರಿಗೂ ವಿವಾದ ಹುಟ್ಟಿದರೆ ಆಂಗ್ಲೇಯರು ನ್ಯಾಯವನ್ನು ಮಾಡುವರೆಂದು ನಂಬುವುದಕ್ಕಾಗದು" ಎಂದು ಹೇಳಿದರು. ಜಿತರಾದವರು ಏನಾದರೊಂದು ಹೆಸರಿಡುವುದು ಹೀಗೆತಾನೆ? ಮೊನ್ನೆಯವರ್ಷ ತಿಲಕರು ರಾಜದ್ರೋಹಾತ್ಮಕವಾದ ಉಪನ್ಯಾಸಮಾಡಿದರೆಂದು ದಂಡಾಧಿಕಾರಿಗಳು ವಿಧಿಸಿದ್ದ ಶಿಕ್ಷೆಯಮೇಲೆ ಬೊಂಬಾಯಿಹೈಕೋರ್ಟಿನಲ್ಲಿ ಮಾಡಿಕೊಂಡಿದ್ದ ಅಪ್ಪೀಲಿನಲ್ಲಿ ಇವರು ಜಯಶೀಲರಾದಾಗ ಆಂಗ್ಲ ನ್ಯಾಯದೇವತೆಯ ಪ್ರಭಾವವನ್ನು ಕುರಿತು ಪ್ರಶಂಸೆಮಾಡುವಷ್ಟು ನಂಬುಗೆಯು ತಿಲಕರಿಗೂ ಅವರ ಪಕ್ಷದವರಿಗೂ ಉಂಟಾಗಿತ್ತು.

ಈಗಣ ರಾಜಕೀಯ ಸುಧಾರಣೆಗಳು ಅಂಗೀಕರಾರ್ಹವೇ ಅಲ್ಲವೆಂದು ತಿಲಕರೂ ಅವರ ಪಕ್ಷದವರೂ ಮೊದಲಿಂದಲೂ ಹೇಳುತ್ತಲೂ ಸಭಾಮುಖದಲ್ಲಿ ಧಿಕ್ಕರಿಸಿ ನಿರ್ಧಾರಮಾಡುತ್ತಲೂ ಇದ್ದರು. ಅದೇ ತಿಲಕರು ಸೀಮೆಗೆ ಹೋದಬಳಿಕ ಈಗ ಕೊಟ್ಟಷ್ಟು ಸ್ವಾತಂತ್ರ್ಯವನ್ನು ಅಂಗೀಕರಿಸುವುದು ವಿಹಿತವೆಂದು ಹೇಳುವುದಕ್ಕುಪಕ್ರಮಿಸಿದರು. ಈಗ ಭರತಖಂಡಕ್ಕೆ ಬಂದಮೇಲೆ "ಸಂಸ್ಕರಣದಲ್ಲಿ ತಮಗನುಕೂಲವಾಗಿರುವ ಭಾಗವೆಲ್ಲಾ ಕಾಲಸ್ವಭಾವದಿಂದ ಪ್ರಾಪ್ತವಾದುದೇ ಹೊರತು ಮಾಂಟೆಗ್‌ರವರಿಂದ ಏನೂ ಲಾಭವಾಗಲಿಲ್ಲವೆಂದು ಸ್ಟೇಟ್ ಸೆಕ್ರೆಟರಿಯವರನ್ನು ಜರೆದಿರುತ್ತಾರೆ. ಎಂತಹ ಕೃತಘ್ನತೆ! ಮಿ|| ಮಾಂಟೆಗ್‌ರವರ ವಿಶೇಷ ಪ್ರಯತ್ನವೇ ಈಗಣ ಸುಧಾರಣೆಗಳಿಗೆ ಮುಖ್ಯಮೂಲವೆಂಬುದನ್ನು ಪ್ರಪಂಚವೇ ತಿಳಿದಿರುತ್ತದೆ. ಇಷ್ಟು ಸ್ವಾತಂತ್ರ್ಯಗಳನ್ನು ಸುಧಾರಣೆಯಮೂಲಕ ಭರತಖಂಡಕ್ಕೆ ಕೊಡಿಸಲು ಅವರು ಎಷ್ಟೋ ಆಂಗ್ಲಜನರ ಆಗ್ರಹಕ್ಕೆ ಪಾತ್ರರಾಗಿ ಇನ್ನೂ ಆ ಇಕ್ಕಟ್ಟಿನಲ್ಲೇ ಒದ್ದಾಡುತ್ತಿದ್ದಾರೆ. ಸಾಧ್ಯವಾದಷ್ಟುಬೇಗನೆ ವಿಘ್ನಗಳನ್ನೆಲ್ಲಾ ಕಳೆದು ಇದನ್ನು ಶಾಸನವಾಗಿ ಏರ್ಪಡಿಸಿಬಿಡಬೇಕೆಂದು ಅವರು ಅಹರ್ನಿಶಿಯೂ ಪ್ರಯತ್ನಿಸುತ್ತಿದ್ದಾರೆ. ಅವರ ಈ ತೆರದ ಪ್ರಯತ್ನಗಳನ್ನೂ ಭಾರತಾಭಿಮಾನವನ್ನೂ ಕಣ್ಣಾರ ಕಂಡಿರುವ ಭಾರತಪ್ರಮುಖರಾದ ಸರ್ ವಾಚಾ, ಜಿನ್ನಾ, ಲಲ್ಲೂಭಾಯಿ ಶಾಮಲದಾಸ್, ಪೆಟಿಟ್, ಮೊದಲಾದನೇಕರು ಈ ಸಂಸ್ಕರಣಗಳು ಸಂತೃಪ್ತಿಕರವಾಗಿವೆಯೆಂದು ಹೇಳಿರುವುದಲ್ಲದೆ, ಸ್ಟೇಟ್ ಸೆಕ್ರೆಟರಿ ಸ್ಥಾನದಲ್ಲಿ ಇವರಲ್ಲದೆ ಮತ್ತಾರಿದ್ದರೂ ಇಷ್ಟು ಉದಾರವಾದ ಸಂಸ್ಕರಣವು ಭರತಖಂಡಕ್ಕೆ ಲಭ್ಯವಾಗುತ್ತಿರಲಿಲ್ಲವೆಂದು ಸೆಂಟ್‌ನಿಹಾಲ್ ಸಿಂಗರೇ ಮೊದಲಾದ ಕೆಲವರು ಮುಕ್ತಕಂಠವಾಗಿ ಹೇಳಿದ್ದಾರೆ. ಹೀಗಿದ್ದರೂ ತಿಲಕರು ಕೃತಘ್ನತೆಯ ಮಾತುಗಳನ್ನಾಡಿರುವುದನ್ನು ನೋಡಿದರೆ ಅವರ ಸ್ವಭಾವವೇ ಅಂತಹುದೆಂದು ಭಾವಿಸಬೇಕೋ ಆಂಗ್ಲರ ಮೇಲೆ ಅವರಿಗಿರುವ ಅಭಿಮಾನವೇ ಅಂತಹುದೆಂದು ಹೇಳಬೇಕೋ ತಿಳಿಯಲಿಲ್ಲ. ಆದರೆ ಈ ಸಂದರ್ಭದಲ್ಲಿ ಅವರಾಡಿರುವ ಮಾತು ಅವರ ಪೂರ್ತಿಗೇ ಹೊರತು ಭಾರತಮಂಡಲದ ಅಭಿಪ್ರಾಯವೆಂದು ಯಾರೂ ಭಾವಿಸಬಾರದು.

… … …

ತಿಲಕರು ಈಗಣ ಸುಧಾರಣೆಗಳಿಗೆ ಮಾಂಟೆಗ್‌ರವರ ಪ್ರಯತ್ನವೇನೂ ಕಾರಣವಾಗಿರದೆ ಕಾಲವೇ ಕಾರಣವೆಂದು ಹೇಳಿರುವುದರಲ್ಲಿ "ನಾವು ಭರತಖಂಡದೊಳಗೆ ವಿಶೇಷವಾಗಿ ಆಂದೋಳನವನ್ನು ಮಾಡಿದುದರಿಂದ ಇದಕ್ಕೆ ಬೆದರಿ ಆಂಗ್ಲರು ಸಂಸ್ಕರಣವನ್ನು ಮಾಡಿದರು" ಎಂಬ ಆಶಯವನ್ನು ಇಟ್ಟುಕೊಂಡು ಆ ಮಾತನ್ನು ಆಡಿರುವಂತೆ ಕಾಣುತ್ತದೆ. ಆದರೆ ಪಾರ್ಲಿಮೆಂಟಿನಲ್ಲಿ ಬಿಲ್ಲಿನ ಚರ್ಚೆ ನಡೆಯುವಾಗ್ಗೆ ಸ್ಟೇಟ್ ಸೆಕ್ರೆಟರಿಯವರು ಕೊಟ್ಟಿರುವ ಉತ್ತರವು ಇದಕ್ಕೆ ಒಳ್ಳೆ ಚಪೇಟಿಕೆಯಾಗಿದೆ. ಅವರು ಅಂದಿರುವುದೇನೆಂದರೆ—"ಈ ಬಿಲ್ಲು ಭಾರತೀಯರು ಕೋರಿಕೊಂಡ ಕೋರಿಕೆಯ ಫಲಿತವಾಗಿ ಅವರನ್ನು ಸಮಾಧಾನಪಡಿಸುವುದಕ್ಕಾಗಿ ಉದ್ದೇಶಪಟ್ಟು ಮಾಡಿದುದಲ್ಲ; ಪಾರ್ಲಿಮೆಂಟಿನವರ ಸಂರಕ್ಷಣಭಾರವನ್ನು ಕ್ರಮಕ್ರಮವಾಗಿ ಭಾರತೀಯರಿಗೆ ವಹಿಸಿಕೊಡುತ್ತ ಬರಬೇಕೆಂಬ ಮುಖ್ಯ ಸೂತ್ರವನ್ನನುಸರಿಸಿಯೇ ಈ ಬಿಲ್ಲು ರಚಿಸಲ್ಪಟ್ಟಿದೆ" ಎಂದು ಹೇಳಿರುತ್ತಾರೆ. ಅದುಕಾರಣ ಆಂದೋಳನಕ್ಕೆ ಬೆದರಿ ಸಂಸ್ಕರಣವನ್ನು ಕೊಡುವರೆಂದು ಭಾವಿಸುವುದು ಭ್ರಮೆಯಾಗಿರುತ್ತದೆ.

… … …

ಈಗ ಸೀಮೆಗೆ ಹೋಗಿ ಬಂದ ನಾನಾ ಸಂಘಗಳ ರಾಯಭಾರಿಗಳು ಈಗಣ ಸಂಸ್ಕರಣದಲ್ಲಿ ಆಗಿರುವ ಫಲಕ್ಕೆ ನಾವೇ ಕಾರಣಭೂತರು ನಾವೇ ಕಾರಣಭೂತರ ಎಂದು ಪೌರುಷವನ್ನು ಕೊಚ್ಚಿಕೊಳ್ಳುವುದಕ್ಕೂ ಒಬ್ಬರನ್ನೊಬ್ಬರು ಅಲ್ಲಗಳೆಯುವುದಕ್ಕೂ ಆರಂಭಿಸಿರುತ್ತಾರೆ. ಸಂಸ್ಕರಣಪ್ರಧಾನಕ್ಕೆ ನಿಜವಾಗಿ ಕಾರಣಭೂತವಾದುದು ಭಾರತೀಯರಲ್ಲಿ ಅತ್ಯಾಚ್ಛವಾಗಿ ತೋರ್ಪಟ್ಟ ಅತುಲವಾದ ರಾಜಭಕ್ತಿ ಮತ್ತು ವಿಪತ್ಸಮಯದಲ್ಲಿ ಸಾಮ್ರಾಜ್ಯರಕ್ಷಣೆಗಾಗಿ ತಮ್ಮ ದೇಹ ಪ್ರಾಣಗಳನ್ನು ರಣರಂಗಕ್ಕೆ ಬಲಿಗೊಟ್ಟ ಸೈನಿಕರ ಸ್ವಾಮಿಭಕ್ತಿಗಳೇ ಆಗಿರುತ್ತವೆ. ನಿಜಸ್ಥಿತಿ ಹೀಗಿರುತ್ತ ಮೂಲಭೂತರು ಮೌನವಾಗಿರುವಲ್ಲಿ, ಇತರರು ಬಡಿವಾರ ಕೊಚ್ಚಿಕೊಳ್ಳುವುದನ್ನು ನೋಡಿದರೆ, ಹಸುವು ಕೊಡತುಂಬಿ ಹಾಲನ್ನು ಹಿಂಡುವುದಕ್ಕೆ ನಾನು ಕಾರಣನೆಂದು ಗೋಪಾಲಕನೂ, ನಾನು ಕಾರಣನೆಂದು ಯಜಮಾನನೂ ಬಡಿದಾಡುತ್ತಿರುವಲ್ಲಿ ಮುಖ್ಯಕಾರಣವಾದ ಕರುವು ತಟಸ್ಥವಾಗಿರುವುದನ್ನು ಅದು ಹೋಲಿರುತ್ತದೆ.

… … …

ಈಗಣ ಸಂಸ್ಕರಣವು ಪ್ರಜೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುವುದಿಲ್ಲವೆಂಬುದು ನಿಜ. ಆದರೆ ಆ ಸ್ವಾತಂತ್ರ್ಯದಾನಕ್ಕೆ ಇದು ಪ್ರಥಮಸೋಪಾನವಾಗಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಆದಾಯವ್ಯಯಕ್ಕೆ ಸಂಬಂಧಪಟ್ಟ ಭಾಗಗಳ ಮೇಲಣ ಯಾಜಮಾನ್ಯವನ್ನೆಲ್ಲಾ ಪ್ರಜಾಯತ್ತಮಾಡಿಕೊಡಬೇಕೆಂದು ಒಂದು ಪಕ್ಷದವರು ವಾದಿಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ಸಂವರಣವನ್ನು ಬಿಲ್ಲಿನಲ್ಲಿ ಮಾಡಬೇಕೆಂದು ಕರ್ನಲ್ ವೆಡ್ಜ್‌ವುಡ್‌ರವರು ಪಾರ್ಲಿಮೆಂಟಿನಲ್ಲಿ ಸೂಚಿಸಿದಾಗ್ಗೆ ಅದಕ್ಕೆ ಸ್ಟೇಟ್ ಸೆಕ್ರೆಟರಿಯವರು ಉತ್ತರ ಕೊಟ್ಟದರಲ್ಲಿ—"ಭೂಗಂದಾಯದ ಸಮಸ್ಯೆಯೆಲ್ಲವೂ ನಿಯೋಜಕಗಣದ ಸಮಸ್ಯೆಯ ಮೇಲೆ ಆಧಾರಪಟ್ಟುಕೊಂಡಿರುತ್ತದೆ. ಈಗಣ ಸುಧಾರಣೆಯ ಪ್ರಕಾರ ಮಾಡಲ್ಪಡುವ "ಚುನಾವಣೆ" ಯಲ್ಲಿ ಎಲ್ಲ ಪ್ರಜೆಗಳಿಗೂ ತಕ್ಕಷ್ಟು ಪ್ರಾತಿನಿಧ್ಯವು ಬರುವುದಿಲ್ಲ. ಮುಖ್ಯವಾಗಿ ವ್ಯವಸಾಯಗಾರರಿಗೆ ತಕ್ಕಷ್ಟು ಪ್ರಾತಿನಿಧ್ಯವು ಲಭಿಸುವುದಿಲ್ಲ. ದೊಡ್ಡ ದೊಡ್ಡ ಭೂಸ್ವಾಮಿಗಳ ಅಕ್ರಮಕಾರ್ಯದಿಂದ ವ್ಯವಸಾಯಗಾರರನ್ನು ಕಾಪಾಡತಕ್ಕ ಪ್ರತಿನಿಧಿಗಳು ಈಗಣ ಚುನಾವಣೆಯಲ್ಲಿ ಲಭಿಸುವರೇ ಇಲ್ಲವೇ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಭಾರತೀಯರಾದ ಕೂಲಿಕಾರ ಜನರಿಗೆ ತಕ್ಕ ಪ್ರಾತಿನಿಧ್ಯವು ದೊರೆಯದಿರುವಾಗ್ಗೆ ಫ್ಯಾಕ್ಟರಿಗಳ ಶಾಖೆಯನ್ನು ಭಾರತ ಪ್ರಜೆಗಳ ವಶಮಾಡಲು ಆಗಲಾರದು" ಎಂದು ಹೇಳಿರುತ್ತಾರೆ. ಇದರಿಂದ ಈಗ ಕೊಡಲ್ಪಟ್ಟಿರುವ ಸ್ವಾತಂತ್ರ್ಯವನ್ನು ಸರ್ವ ಪ್ರಜಾಸಮಾನ ಪ್ರತಿನಿಧಿತ್ವದಿಂದ ಭಾರತ ಪ್ರಮುಖರು ಉಪಯೋಗಿಸಿಕೊಂಡರೇನೆಯೇ ಅದು ಉತ್ತರೋತ್ತರಾಭಿವೃದ್ಧಿಗೆ ಸಾಧಕವಾಗಿ ಪರಿಣಮಿಸುವುದೆಂದು ಪ್ರಭುತ್ವದವರು ಭಾವಿಸುವರೇ ಹೊರತು ಕೆಲವೊಂದು ಭಾಗದ ಜನರು ಮಾತ್ರ ಈಗಣ ಸ್ವಾತಂತ್ರ್ಯಾಧಿಕಾರವನ್ನೆಲ್ಲಾ ಹಸ್ತಗತಮಾಡಿಕೊಂಡು ಬಿಡುವಂಥ ಪರ್ಯವಸಾನವನ್ನು ತಂದಿಕ್ಕಿದರೆ ಅದು ಫಲಕಾರಿಯಾಗುವುದಿಲ್ಲವೆಂಬುದು ಸಿದ್ಧವಾಗಿಯೇ ಇರುವುದು. ಅಲ್ಲದೆ ಬೇಸಾಯಗಾರರು ಕೂಲಿಕಾರರು ಮೊದಲಾದ ಹಿಂದುಳಿದ ಜನರಿಗೆ ತಕ್ಕ ಪ್ರಾತಿನಿಧ್ಯವನ್ನು ಕೊಡಬೇಕಾದ ಆವಶ್ಯಕತೆಯು ಸರ್ಕಾರಕ್ಕೆ ಒಪ್ಪುಗೆಯಾಗಿಯೇ ಇದ್ದಂತಾಯಿತು. ನಿಯೋಜಕಕ್ರಮದಲ್ಲಿ ಕಾಣದೆಹೋದರೆ ಅದನ್ನು ಕೂಡಲೇ ಅವರು ಏರ್ಪಡಿಸಿಕೊಡದೆ ಇರಲಾರರೆಂಬ ಅರ್ಥವಾದರೂ ಇದರಿಂದ ಧ್ವನಿತವಾಗಿರುತ್ತದೆ.

ಈ ಬಿಲ್ಲು ಈ ವರ್ಷದ ಕ್ರಿಸ್ಮಾಸ್ ಹಬ್ಬದೊಳಗಾಗಿಯೇ ಶಾಸನವಾಗಿ ಏರ್ಪಡುವುದರಲ್ಲಿದೆ. ಈ ಶಾಸನವನ್ನನುಸರಿಸಿ ನಿಯಮನಿರ್ಮಾಣಸಭೆಗಳಿಗೆ ಸಭಿಕರನ್ನಾರಿಸುವಿಕೆಯು ೧೯೨೦ ನೆ ವರ್ಷದ ನವೆಂಬರ್ ತಿಂಗಳಲ್ಲಿ ಜರುಗುವುದಾಗಿದೆ. ನೂತನ ಶಾಸನ ಸಭೆಗಳು ೧೯೨೧ ನೆ ವರ್ಷದ ಜನವರಿ ತಿಂಗಳಲ್ಲಿ ಕೂಡುವುವಾಗಿವೆಯೆಂದು ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ.

ತಿಲಕರಿಗೆ ಸನ್ಮಾನಪತ್ರ.

ತಿಲಕರ ಮನೆಯೂರಾದ ಪುನಾಪಟ್ಟಣದಲ್ಲಿ ಅಲ್ಲಿಯ ಸಕಲ ಪೌರಪಕ್ಷದಿಂದ ಒಂದು ವಿಜ್ಞಾಪನಪತ್ರವನ್ನರ್ಪಿಸಬೇಕೆಂಬ ಪ್ರಯತ್ನವನ್ನು ಕೆಲರು ಮಾಡಿದರು. ಆದರೆ ಆಪ್ಟೆ, ಪರಂಜಪೆ, ದೇವಧಾರ್, ಕನತ್ಕರ್, ಕೇಲ್, ಜಾಗ್ ಮೊದಲಾದ ಅನೇಕ ಜನರು ಅ|| ಪರಂಜಪೆಯವರ ಅಧ್ಯಕ್ಷತೆಯಿಂದ ಒಂದು ಸಭೆಗೂಡಿ "ತಿಲಕರ ಸ್ನೇಹಿತರುಗಳು ಬೇಕಿದ್ದರೆ ಅವರಿಗೆ ವಿಜ್ಞಾಪನಪತ್ರವನ್ನು ಅರ್ಪಿಸಿಕೊಳ್ಳಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಪುರವಾಸಿಗಳಾದ ನಮ್ಮೆಲ್ಲರ ಪಕ್ಷದಿಂದ ಎಂದೂ ಒಪ್ಪಿಸಲಾಗದು. ತಿಲಕರು ತಮ್ಮ ಉಗ್ರಮತವಾದದಿಂದಲೂ, ಸಂಘಸಂಸ್ಕರಣವನ್ನು ನಿರೋಧಿಸಿದುದರಿಂದಲೂ ದೇಶಕ್ಕೆ ಹೇಳಲಾಗದಷ್ಟು ಕೇಡನ್ನುಂಟುಮಾಡಿದ್ದಾರೆ. ಗೋಖಲೆ, ರಾನಡೆ, ಅಗರ್ಕರ್ ಮೊದಲಾದ ದೇಶನಾಯಕರ ರಾಜಕೀಯ ಸಾಂಘಿಕಾಭಿಪ್ರಾಯಗಳಿಗೆಲ್ಲಾ ವಿಘ್ನವೊಡ್ಡಿದ್ದಾರೆ" ಎಂದು ಹೇಳಿ ಆ ಅರ್ಥಕ್ಕೆ ಒಂದು ನಿರ್ಧಾರವನ್ನು ಮಾಡಿದರು. ಹೀಗೆ ತಮ್ಮ ಊರಿಗೇ ಇವರ ಪ್ರತಿನಿಧಿತ್ವವು ಸಿದ್ಧವಾಗದಿದ್ದರೂ ತಿಲಕರು ಭರತಖಂಡದ ಪ್ರತಿನಿಧಿಗಳೆಂದು ತಿಲಕರ ಶಿಷ್ಯರು ಶಂಖವನ್ನೂದುತ್ತಿರುವುದರಲ್ಲಿ ಎಷ್ಟು ತಥ್ಯಾಂಶವಿರುವುದೋ ಅವರೇ ಬಲ್ಲರು.

ಪತ್ರವ್ಯವಹಾರ.

೯ ನೆ ಶ್ರೀಮದ್ವೀರಶೈವ ಮಹಾಸಭಾ ಆಫೀಸು ಬೀರೂರು,

ವಾಲಂಟಿಯರುಗಳು ಮುಖ್ಯವಾಗಿ ಗಮನಿಸತಕ್ಕದ್ದು.

-ಸ್ವಯಂಸೇವಕ(Volunteers) ರಾಗಲಿಚ್ಛಿಸುವ ದೊಡ್ಡ ಮನುಷ್ಯರೂ ಮತ್ತು ವಿದ್ಯಾರ್ಥಿಗಳೂ 1919 ನೇ ಡಿಸಂಬರ್ 10 ನೆಯ ತಾರೀಖಿನೊಳಗಾಗಿ ತಲುಪುವಂತೆ ವ್ಯವಸ್ಥಾಪಕ ಸಂಘದ ಉಪಾಧ್ಯಕ್ಷರಿಗೆ ಬರೆದುಕೊಳ್ಳುವುದಲ್ಲದೆ 1919 ನೆಯ ಡಿಸಂಬರ್ 20 ನೆಯ ತಾರೀಖಿಗೆ ಬೀರೂರಿಗೆ ಬಂದು ಕೆಲಸಕ್ಕೆ ಸೇರುವುದು. ಎಂದು ಇರುವ ನಿಯಮವನ್ನು ವಾಲಂಟಿಯರಾಗಲು ಇಚ್ಛಿಸುವ ದೊಡ್ಡ ಮನುಷ್ಯರುಗಳ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೊದಲನೆಯ ತಾರೀಖನ್ನು 20 ಕ್ಕೂ ಎರಡನೆಯ ತಾರೀಖನ್ನು 25 ಕ್ಕೂ ಬದಲಾಯಿಸಿರುತ್ತದೆ.

9-12-1919.

ಎಂ. ವಿ. ಮರುಳಸಿದ್ದಯ್ಯ.
ಸೆಕ್ರೆಟರಿ.

ಕ್ಷೌರಸಮಾಜ.

ನಮ್ಮ ಕ್ಷೌರಸಮಾಜ (ಕೆರುಬರ) ಮುಂದಾಳುಗಳಾದ ಕರ್ಜಗಿ ತಾಲ್ಲೂಕು ಕಳಸೂರು ಶಾಳಾ ಹೆಡ್‌ಮಾಸ್ತರ ಮ|| ರಾ|| ಬಸಪ್ಪಾ ಲಿಂಗಪ್ಪಾ ನಂದಿಹಳ್ಳಿ ಇವರು ಕಳೆದ ಅಕ್ಟೋಬರ ತಿಂಗಳಲ್ಲಿ ಪರಲೋಕವಾಸಿಯಾದರೆಂದು ತಿಳುಹಲಿಕ್ಕೆ ವಿಷಾದವಾಗುತ್ತದೆ. ಈ ಮಹನೀಯರು ಕ್ಷೌರಸಮಾಜದೇಳಿಗೆಗಾಗಿ ಬಹಳ ಪ್ರಯತ್ನಮಾಡಿದರು. ಇಂಥಾ ಉತ್ಸಾಹಯುಳ್ಳವರನ್ನು ದುಷ್ಟನಾದ ಕಾಲನು ಕಟ್ಟಿಕೊಂಡುಹೋದನು. ಉಪಾಯವಿಲ್ಲ, ದೈವೀಸಂಕಲ್ಪವನ್ನು ಮೀರುವವರಾರು? ಇದು ನಮ್ಮ ಸಮಾಜದ ಜಮಾತೆಯ ದುರ್ದೈವವು. ಹೇ ಎನ್ನ ಬಂಧುಗಳಿರಾ! ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂದು ಅಹೋರಾತ್ರಿ ಯತ್ನಮಾಡುವ ಜಯಾಳುವಾದ ಈ ನಮ್ಮ ರಾಜ್ಯವಾಡಳಿತೆಯಲ್ಲಿ ನಾವು ಸುಮ್ಮನೆ ಕೈಕಟ್ಟಿಕೊಂಡು ಕೊಡ್ರುವದು ಸಮವಲ್ಲ. ನಾವು ಸಮಾಜದ ಸೇವೆಯನ್ನು ಗೈಯದಿದ್ದರೆ ಮಾತೃದ್ರೋಹವು ನಮ್ಮ ಪಾಲಿಗೆ ಬಂದಂತಾಗುವದು. ನಮ್ಮ ಸಮಾಜ ಸೇವೆಯನ್ನು ಮಾಡಲಿಚ್ಛಿಸುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಿರಿ. ಇಷ್ಟೇ ಎನ್ನವಿನಂತಿ.

ಪತ್ತೆ.—ಕ್ಷೌರಸಮಾಜ ಸೇವಕ
ರಾಮಪ್ಪಾ ಮಾನಪ್ಪಾ, ಸಾ|| ಲಿಂಗಾಪೂರ
ಹಾಂಸಭಾವಿ ಪೋಸ್ಟ್, ರೋಣ ತಾಲ್ಲೂಕ್,
ಜಿಲ್ಲಾ ಧಾರವಾಡ.

ಒಬ್ಬ ಶರಣರ ಮರಣ.

ಕಳೆದ ನವಂಬರ್ ತಿಂಗಳು 3 ನೆಯ ಭಾನುವಾರ ಪ್ರಾತಃಕಾಲ ಸುಮಾರು ನಾಲ್ಕುಘಂಟೆಯ ಸಮಯಕ್ಕೆ ಹಾಸನದ ಜವರೇನಹಳ್ಳಿ ಮಠದ ಚರಮೂರ್ತಿಗಳಾಗಿದ್ದು ತಮ್ಮ 106 ನೆವರ್ಷಗಳವರೆಗೂ ಶಿವಪೂಜಾಧುರಂಧರರೂ, ಜಿತೇಂದ್ರಿಯರೂ, ಮಲೆನಾಡುಪ್ರಾಂತದ ವೀರಶೈವರಿಗೂ ಮತ್ತು ತದನುಯಾಯಿಗಳಿಗೂ ಮುಕ್ತಿದಾಯಕರೂ ಸನ್ಮಾರ್ಗಬೋಧಕರೂ ಮಹಿಮಾಶಾಲಿಗಳೂ ಆಗಿದ್ದ ಶ್ರೀಮನ್ನಿರಂಜನ ದೇಶಿಕೇಂದ್ರ ದೊಡ್ಡಶಾಂತವೀರ ಮಹಾಸ್ವಾಮಿಗಳು ಶಿವೈಕ್ಯರಾದುದು ಹಾಸನದ ಡಿಸ್ಟ್ರಿಕ್ಟ್ ಅಪೇಕ ವೀರಶೈವರಿಗೂ ಮತ್ತು ಇತರ ಭಕ್ತಮಂಡಲಿಗೂ ತುಂಬಾ ವ್ಯಸನಪ್ರದವಾಗಿರುವುದಲ್ಲದೆ ಇಡೀ ಸಮಾಜಕ್ಕೆ ದೊಡ್ಡ ನಷ್ಟವಾಯಿತೆಂದು ಹೇಳಬೇಕು. ಇಂತಹ ಕ್ರಿಯಾಮೂರ್ತಿಗಳು ಮತವಿಷಯದಲ್ಲಿ ಪೂರ್ಣ ಪರಿಚಯವುಳ್ಳವರೂ ಪರಾಭಿಮಾನ ಕರ್ತವ್ಯವನ್ನು ಅರಿತು ನಡೆಯುವವರೂ ಈ ಕಾಲದಲ್ಲಿ ವಿರಳವೆಂದು ಹೇಳಿದರೆ ಆಶ್ಚರ್ಯವಾಗುವುದೆ?

ಈ ಮಹನೀಯರು ತಮ್ಮ ಮಠದ ಅಧಿಕಾರವನ್ನು ಈಗ್ಗೆ ಸುಮಾರು ೩೦ ವರ್ಷಗಳ ಹಿಂದೆಯೇ ಶ್ರೀ ದೇಶಿಕೇಂದ್ರ ನಿರಂಜನ ಮೂರ್ತಿಗಳಾದ ಚಿಕ್ಕಶಾಂತವೀರಸ್ವಾಮಿಗಳಿಗೆ ಒಪ್ಪಿಸಿದರು. ಈ ಚಿಕ್ಕಶಾಂತವೀರ ದೇಶಿಕೇಂದ್ರ ಮಹಾಸ್ವಾಮಿಗಳು ವಿದ್ಯಾರ್ಜನೆಗಾಗಿ ಅನೇಕದೇಶಗಳನ್ನು ಸಂಚಾರಮಾಡಿ ಪೂರ್ಣಪಾಂಡಿತ್ಯವನ್ನು ಪಡೆದವರಾಗಿಯೂ ಷಟ್‌ಸ್ಥಲ ವಿದ್ಯೆಯಲ್ಲಿ ಪ್ರಸಿದ್ಧರಾದ ಶಿವಾನುಭವಿಗಳ ಮೆಚ್ಚುಗೆಗೆ ಪಾತ್ರರಾಗಿಯೂ ಇರುವುದರಿಂದ ತಮ್ಮ ಗುರುಗಳ ಕೀರ್ತಿಯನ್ನು ಕಾಪಾಡಿಕೊಂಡು ಭಕ್ತಾದಿಗಳ ಶ್ರೇಯೋಭಿವೃದ್ಧಿಯನ್ನು ಸಹ ಕೋರುತ್ತ ಮಠದ ಪ್ರಶಸ್ತಿಯನ್ನು ಕಾಪಾಡಿಕೊಂಡು ಬರುತ್ತಾರೆಂದು ನಂಬಿದ್ದೇನೆ.

ಶಿವೈಕ್ಯರಾದ ಶ್ರೀಗಳವರ ಉತ್ತರಕ್ರಿಯಾದಿಗಳು ಬಹಳ ವಿಜೃಂಭಣೆಯಿಂದ ಅವರ ಶಿಷ್ಯಕೋಟಿಯಿಂದಲೂ, ಮಠಾಧಿಪತ್ಯಕ್ಕೆ ನಿಯಮಿತರಾಗಿ ಅವರ ಕರಕಂಜಸಂಜಾತರಾದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳವರ ಶ್ರದ್ಧಾಪೂರ್ವಕವಾದ ಮುತುವರ್ಜಿಯಿಂದಲೂ ಸಾಂಗವಾಗಿ ನಡೆಯಿಸಲ್ಪಟ್ಟವು. ಗತಿಸಿದ ಶ್ರೀಗಳವರು ಜಿತೇಂದ್ರಿಯರೆಂಬುವುದಕ್ಕೆ ಅವರು ೧೦೦ ವರ್ಷಗಳಿಗಿಂತಲೂ ಮೇಲ್ಪಟ್ಟ ದೀರ್ಘಕಾಲ ಜೀವಿತರಾಗಿದ್ದುದೂ ಮತ್ತು ಸ್ಥೂಲದೇಹ ಪರಿತ್ಯಾಗಮಾಡುವವರೆಗೂ ಅವರ ಪಂಚೇಂದ್ರಿಯಗಳ ಪಟುತ್ವದ ಬಲುಮೆಯು ಸ್ವಲ್ಪವೂ ಕುಂದದೇ ಇದ್ದುದೂ ಸಾಕ್ಷೀಭೂತವಾಗಿವೆ. “ಶರಣರ ಸಾವನ್ನು ಮರಣದಲ್ಲಿ ನೋಡು” ಎಂಬ ನಾಣ್ಣುಡಿಗನುಸಾರವಾಗಿ ಇವರ ಅಂತ್ಯಕಾಲವೂ ಸಹ ಅವರಿಗೆ ಕೇವಲ ಸುಖಪ್ರದವಾಗಿಯೇ ಪರಿಣಮಿಸಿ ಅವರ ಕೃಪೆಗೆ ಕೇವಲ ಪಾತ್ರರಾದ ಮುಖ್ಯಶಿಷ್ಯರಿಗೆ ತಮ್ಮ ಅವಸಾನಕಾಲವನ್ನು ಮೊದಲೇ ಸೂಚಿಸಿ ಶಿವೈಕ್ಯರಾದುದು ಬಹಳ ವಿಶೇಷ.

ಓರ್ವ ಪ್ರತ್ಯಕ್ಷದರ್ಶಿ.

೯ ನೆಯ ವೀರಶೈವ ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯ.

ಈ ಸಾರಿ ಬೀರೂರಿನಲ್ಲಿ ಸೇರುವ ೯ ನೆಯ ವೀರಶೈವ ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಅಲ್ಲಿಯ ಸ್ವಾಗತಸಂಘದವರು ಈ ಮುಂಚೆಯೇ ಪ್ರಕಟಿಸಿದ್ದಾರೆಯೆ? ಈ ಸಂಘದವರು ಈಸಾರಿ ಶ್ರೀಮದ್ವೀರಶೈವ ಮಹಾಸಭಾ ನಿಬಂಧನೆಯ (Constitution) ವಿಷಯವನ್ನು ಇಟ್ಟಿದ್ದರೆ ಚೆನ್ನಾಗಿದ್ದಿತು. ಏಕೆಂದರೆ ಈ ವಿಷಯವೇ ಮಹಾಸಭೆಗೆ ಅಸ್ತಿಭಾರವಾಗಿದೆ. ಸಕ್ರಮವಾದ ನಿಬಂಧನೆಗಳಿಲ್ಲದ ಸಭೆಗಳಿಂದ ಯಾವ ಪ್ರಯೋಜನವೂ ಆಗುವದಿಲ್ಲ. ನಮ್ಮ ಮಹಾಸಭೆಯು ನಾನಾ ಆಕ್ಷೇಪಣೆಗಳಿಗೂ, ಚರ್ಚೆಗಳಿಗೂ ಗುರಿಯಾಗಿರಲು ಅದಕ್ಕೆ ಸರಿಯಾದ ನಿಬಂಧನೆಗಳಿಲ್ಲದಿರುವುದೇ ಮುಖ್ಯ ಕಾರಣವಾಗಿದೆ. ಈ ಮಹಾಸಭೆಗೆ, ತಾನು ಅವತರಿಸಿರುವುದೇಕೆ? ತಾನು ಸಾಧಿಸಬೇಕಾದುದೇನು? ತಾನು ಯಾವಪ್ರಕಾರ ವರ್ತಿಸಬೇಕು? ಈ ಮೊದಲಾದ ಸಂಗತಿಗಳ ಗಮನವೇ ಇಲ್ಲ. ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ದಿಕ್ಕುಗಾಣದೆ ಹೋಗುತ್ತಲಿದೆ. ರಾಷ್ಟ್ರೀಯಸಭೆ, ಮುಸಲೀಮ್‌ಲೀಗ್ ಮೊದಲಾದ ಈ ದೇಶದ ನಾನಾ ಪ್ರಸಿದ್ಧ ಸಭೆಗಳು ಈಪ್ರಕಾರ ನಿಬಂಧನೆಗಳಿಲ್ಲದೆ ನಡೆಯುತ್ತಲಿವೆಯೇ? ಹಾಗೆ ನಡೆದಿದ್ದರೆ ಅವುಗಳಿಂದ ಮಹತ್ಕಾರ್ಯಗಳಾಗುತ್ತಿದ್ದವೇ? ಬಾಗಲಕೋಟೆಯಲ್ಲಿ ಕೂಡಿದ ನಾಲ್ಕನೆಯ ವೀರಶೈವ ಮಹಾಸಭೆಯಲ್ಲಿ ಕೆಲವು ನಿಯಮಗಳನ್ನು ಮಾಡಿರುವುದೇನೋ ನಿಜ, ಆದರೆ ಅವು ತುಂಬಾ ಅಪೂರ್ಣವಾಗಿವೆ. ಮೊದಲು ಮಹಾಸಭೆಯ ಉದ್ದೇಶವೇನೆಂಬುದನ್ನೇ ಆಗ ಗೊತ್ತುಪಡಿಸಿಲ್ಲ. ಇಷ್ಟೇ ಅಲ್ಲ; ಆಗ ಗೊತ್ತುಮಾಡಿದ ಕೆಲವು ನಿಯಮಗಳನ್ನಾದರೂ ಆಚರಣೆಯಲ್ಲಿ ತರಲು ಯಾವ “ಸ್ಟ್ಯಾಂಡಿಂಗ್ ಕಮಿಟಿಯು, ಏರ್ಪಟ್ಟಿತ್ತೋ ಅದು ಎಷ್ಟುಕಾಲ ವಿರಬೇಕೆಂಬುದನ್ನು, ಯಾವಾಗ ಹೇಗೆ “ಬದಲಾಯಿಸ” ಬೇಕೆಂಬುದನ್ನು ಸಹ ಗೊತ್ತುಪಡಿಸಿಲ್ಲ. ಆದುದರಿಂದ ಈಗ ೧೧ ವರ್ಷಗಳಿಂದ ಏರ್ಪಟ್ಟ ಸ್ಟ್ಯಾಂಡಿಂಗ್ ಕಮಿಟಿಯೇ ಈಗಲೂ ಇದೆ. ಅದರಲ್ಲಿಯ ಎಷ್ಟೋ ಮಹನೀಯರು ಪರಲೋಕವಾಸಿಗಳಾದರೂ ಈ ಕಮಿಟಿಯು ಇನ್ನೂ ತಾನು ಪೂರ್ಣಾವಸ್ಥೆಯಲ್ಲಿಯೇ ಇದ್ದೇನೆಂದು ಭಾವಿಸುತ್ತದೆ. ಇದು ವಿಚಿತ್ರವಲ್ಲವೇ? ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಗೊತ್ತುಪಡಿಸುವ ವಿಷಯ ನಿಯಾಮಕ ಸಂಘ (Subject committee) ವೇ ಈ ಮಹಾ ಸಭಾಪುರುಷನಿಗೆ ಹೃದಯಪ್ರಾಯವಾಗಿದೆ. ಇಂಥ ಸಂಘವನ್ನು ಹೇಗೆ ಏರ್ಪಡಿಸಬೇಕೆಂಬುದು ಕೂಡ ಆಗ ಮಾಡಲ್ಪಡಲಿಲ್ಲ. ಈ ಪ್ರಕಾರ ಆ ನಿಯಮಗಳಲ್ಲಿ ಅನೇಕ ಕೊರತೆಗಳಿವೆ, ಆದುದರಿಂದಲೇ ಕಳೆದ ೮ ನೆಯ ಮಹಾಸಭೆಯಲ್ಲಿ ಕೊನೆಯ ದಿವಸ ಸ್ಟ್ಯಾಂಡಿಂಗ್ ಕಮಿಟಿಯ ಸುಧಾರಣೆಯನ್ನು ಮುಂದಣ ಮಹಾಸಭೆಯಲ್ಲಿ ಮಾಡಬೇಕೆಂದು ಯೋಚಿಸಲ್ಪಟ್ಟಿತು. ಈವರೆಗೂ ಆದದ್ದಾಗಿ ಹೋಯಿತು. ಇನ್ನು ಮುಂದೆಯೂ ಈಪ್ರಕಾರ ಅಕ್ರಮವಾಗಿ ನಡೆಯುವುದು ಸರಿಯಲ್ಲ. ಮಹಾಸಭೆಯನ್ನು ತಪ್ಪದೆ ನಡೆಯಿಸಿ ಅದು ಫಲಕಾರಿಯಾಗುವಂತೆ ಮಾಡಬೇಕೆಂದು ನಮ್ಮ ಸಮಾಜದ ಉದಾರಹೃದಯರು ಸಹಸ್ರಾವಧಿ ರೂ. ಗಳನ್ನು ಕೊಟ್ಟು ಒಂದು ಫಂಡನ್ನು ಏರ್ಪಡಿಸಿದ್ದಾರೆ. ಅದರ ಸದುಪಯೋಗವನ್ನು ಮಾಡುವುದು ಸಮಾಜದ ಮುಖಂಡರ ಕರ್ತವ್ಯವಾಗಿದೆ. ಭರತಖಂಡದಲ್ಲುಂಟಾಗಿರುವ ನವಚೈತನ್ಯವು ನಮ್ಮ ಸಮಾಜದಲ್ಲಿಯೂ ವ್ಯಾಪಿಸುತ್ತಲಿರುವ ಇಂತಹ ಸಮಯದಲ್ಲಿ ಸಮಾಜದ ಶ್ರೇಯಸ್ಸಿಗೆ ಮುಖ್ಯಸಾಧನವಾದ ಈ ಮಹಾಸಭೆಗೆ ವಿಹಿತವಾದ ನಿಬಂಧನೆಗಳಿಲ್ಲದಿದ್ದರೆ ಅದು ಮುಂದೆ ಅನರ್ಥಕ್ಕೆ ಗುರಿಯಾಗದೆ ಇರಲಾರದು. ಆದಕಾರಣ ಈಗಲೇ ಎಚ್ಚತ್ತು ನಿಯಮಬದ್ಧವಾದ ರೀತಿಯಲ್ಲಿ ಸಮಾಜಕಾರ್ಯಗಳನ್ನು ಮಹಾಸಭೆಯು ಬಿಟ್ಟುಬಿಡದೇ ಮಾಡುವಂತೆ ಏರ್ಪಡಿಸಬೇಕು. ಈಗ ಜನಗಳಲ್ಲುಂಟಾಗಿರುವ ವಿಚಾರ ಕ್ರಾಂತಿಯನ್ನು ಪರ್ಯಾಲೋಚಿಸಿ, ಈ ೯ ನೆಯ ಮಹಾಸಭೆಯ ವಿಷಯ ನಿಯಾಮಕ ಸಂಘದಲ್ಲಿ ಸೇರುವವರು ಈ ವಿಷಯವನ್ನು ಅವಶ್ಯಕವಾಗಿ ಚರ್ಚಿಸಿ, ಶ್ರೀಮದ್ವೀರಶೈವ ಮಹಾಸಭೆಯ ನಿಬಂಧನೆಗಳನ್ನು ಗೊತ್ತುಪಡಿಸಬೇಕೆಂದು ಪ್ರಾರ್ಥನೆ,

ಎಂ. ಮಂಜಪ್ಪ ಹರ್ಡೇಕರ್.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಛಪಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ತೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

42 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

3 ಶಾಸ್ತ್ರಿಗಳು ಬೇಕು.

ಕಾವ್ಯ, ನಾಟಕ, ಅಲಂಕಾರ, ತರ್ಕಷ್ಟು ವ್ಯಾಕರಣಬಲ್ಲವರು ಮಹಾಗಾವ್ ಪಾಠಶಾಲೆಗೆ ಬೇಕಾಗಿರುತ್ತಾರೆ. ಬರಲಪೇಕ್ಷೆಯುಳ್ಳವರು ಈ ಪುಷ್ಯ ಬ|| ೩೦ ರೊಳಗಾಗಿ ತಿಳಿಸಬೇಕು. ಸಂಬಳ ಮುಂತಾದ್ದರ ವಿಷಯಕ್ಕೆ ಪ್ರತ್ಯಕ್ಷದಿಂದಾಗಲಿ, ಪತ್ರವ್ಯವಹಾರದಿಂದಲಾಗಲಿ ತಿಳಿದುಕೊಳ್ಳಬಹುದು.

ಸಂಗಪ್ಪ ಶೆಟ್ಟಿ ಪೋಲೀಸ್ ಪಾ||
ಪಾಠಶಾಲಾ ವ್ಯವಸ್ಥಾಪಕ, ಮಹಾಗಾವ್. ಜಿಲ್ಲಾ ಗುಲ್ಬರ್ಗಾ.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೊಳಕುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
42 3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಪೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ

ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ವಾಣಿ ಕಂಪನಿ,
42 ಸಾಹುಕಾರಪೇಟೆ, ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ. ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
12 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

೧೯೧೯ ನೆಯ ಇಸವಿ ಡಿಶಂಬರ್ ತಾ|| ೧೪ ರಿಂದ ೧೯೧೯ ನೆಯ ಡಿಶಂಬರ್ ತಾ|| ೨೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾರ್ಗಶಿರ ಬ|| ಅಷ್ಟಮಿಯಿಂದ ಮಾರ್ಗಶಿರ ಬ|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
14	ಭಾನು	ಅಷ್ಟಮಿ	53-58	ಪೂಫ	15-0	29
15	ಸೋಮ	ನವಮಿ	54-58	ಉಫ	16-37	30
16	[1] ಮಂಗಳ	ದಶಮಿ	57-10	ಹಸ್ತ	19-26	1
17	ಬುಧ	ಏಕಾ	60	ಚಿತ್ತ	23-27	2
18	[2] ಗುರು	ಏಕಾ	1-17	ಸ್ವಾತಿ	28-29	3
19	[3] ಶುಕ್ರ	ದ್ವಾದ	5-43	ವಿಶಾ	34-27	4
20	[4] ಶನಿ	ತ್ರಯೋ	10-55	ಅನೂ	40-57	5

(1) ಧನುರ್ಮಾಸ ಪೂಜಾರಂಭಃ ಷಡಶೀತಿ ಪುಣ್ಯಕಾಲಃ. (2) ಸರ್ವತ್ರೈಕಾದಶೀ ಮಾರ್ಗಶಿರ ಲಕ್ಷ್ಮೀವ್ರತಂ. (3) ಪ್ರದೋಷಃ. (4) ಚತುರ್ದಶೀತಿಥಿಃ ಮಾಸಶಿವರಾತ್ರಿಃ, ಚಲುವಾಜಮ್ಮಣ್ಣಿಯವರ ವರ್ಧಂತಿಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಶರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷ್ಯಜ್ಞನಕ್ಷತ್ರ ನೋತರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿರೆಯಂಸದಾಪೊರೆಗೆ ಗೌರೀಕಾಮುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸ: ೧೯೧೯ ನೆಯ ಇಸವಿ ಡಿಶಂಬರ್ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೫೧

MYSORE GOVERNMENT ADVERTISEMENTS.

PUREST raw materials and the FINEST essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

20

GOVERNMENT ART WORKSHOPS, BANGALORE CITY.

Started and worked by Government to encourage and develop the local artisans, Master Artisans in Sandalwood, ivory, and rosewood carving, art furniture, brass embossing and carving, ivory inlaying etc., are employed. Special attention is devoted to workmanship and design.

Costly art furniture work, sandal-wood casket, almirahs, walking sticks, smoking sets, ivory caskets, daggers, card-cases etc., Mysore carved rosewood tables, and Teapoys made largely.

Designs and estimates are furnished to customers.

For further particulars apply to:—
THE SUPERINTENDENT,
Government Metal Factory &
Art Workshops,
No. 16. BANGALORE CITY.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಸ್ವಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲವನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕನಕಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 8

ನಾವು ಎ. ಆಲ್ ಬ್ಯುಕ್ಯುಯರ್ ಕ್ಕೊ ಅಂಡ್‌ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸೆಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

6

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಅಪೇಕ್ಷೆಯುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನಿಲ್ಲಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಬಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
50 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. **ಮದನೋದ್ಭವ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿಹಾಸ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಪ್ರಕಟನೆ.

೧೯೧೭ ನೆಯ ಡಿಶಂಬರ್ ತಿಂಗಳಲ್ಲಿ ದಾವಣಗೆರೆಯಲ್ಲಿ ನೆರೆದಿದ್ದ ೮ ನೆಯ ವೀರಶೈವ ಮಹಾಸಭೆಯ ರಿಪೋರ್ಟು ಸಮಗ್ರವಾಗಿ ಸ್ವಚ್ಛವಾದ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಾಗಿರುತ್ತದೆ. ಮಹಾಸಭೆಯ ಚಿರಸ್ಥಾಯಿ ಫಂಡಿಗೆ ಚಂದಾಹಣವನ್ನು ಕೊಡಲು ವಾಗ್ದಾನ ಮಾಡಿರುವ ವೀರಶೈವ ದೊಡ್ಡಮನುಷ್ಯರುಗಳ ಭಾವಚಿತ್ರಪಟ, ಪ್ರತಿನಿಧಿಗಳ ಭಾವಚಿತ್ರಪಟ ಮತ್ತು ಸ್ವಾಗತಸಂಘದವರ ಭಾವಚಿತ್ರಪಟ ಈರೀತಿ ಮೂರು ಭಾವಚಿತ್ರಪಟಗಳು ಇದರಲ್ಲಿ ಸೇರಿಸಲ್ಪಟ್ಟಿರುತ್ತವೆ. ಈ ಮೂರು ಪಟಗಳಲ್ಲೂ ಶ್ರೀಮನ್ ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಭಾವಚಿತ್ರವು ಸೇರಿರುವುದು. ಬಹಳ ಸ್ವಲ್ಪಪ್ರತಿಗಳು ಮಾತ್ರ ಮುದ್ರಣ ಮಾಡಿಸಲ್ಪಟ್ಟಿರುವುದರಿಂದ, ಅಪೇಕ್ಷಿತರು ಕೂಡಲೇ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳುವುದು. ಬೆಲೆ ಪ್ರತಿ 1ಕ್ಕೆ ೧ ರೂಪಾಯಿ. ಅಂಚೆವೆಚ್ಚ ಬೇರೆ.

ಬಿ. ಚೆನ್ನವೀರಪ್ಪ,
೮ನೆಯ ಮಹಾಸಭಾ ಸೆಕ್ರೆಟರಿ,
ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಡಿಶಂಬರ್ ತಾ|| ೨೧ ನೆಯ ಭಾನುವಾರ.

ಶಾಂತ್ಯುತ್ಸವಗಳು.

ಭರತಖಂಡದಲ್ಲೆಲ್ಲಾ ಕಳೆದ ತಾ|| ೧೩ರಿಂದ ೪ ದಿನಗಳ ಕಾಲ ಶಾಂತ್ಯುತ್ಸವಗಳು ಪ್ರಭುತ್ವದವರ ಅಪ್ಪಣೆಪ್ರಕಾರ ನಾನಾ ರೀತಿಯಿಂದ ಆಚರಿಸಲ್ಪಟ್ಟಿರುವುವು. ಬಡಬಗ್ಗರಿಗೆ ಅಕ್ಕಿ ಬಟ್ಟೆಗಳನ್ನು ಹಂಚುವುದು, ಯುದ್ಧದಲ್ಲಿ ಮೃತರಾದವರ ಬಂಧುಬಳಗದವರ ಸಹಾಯ್ಯಕ್ಕೆ ಹಣವನ್ನು ಕೊಟ್ಟಿದ್ದು, ಬಾಲ ಬಾಲಿಕೆಯರುಗಳಿಗೆ ಆಟಗಳನ್ನಾಡಿಸಿ ತಿಂಡಿಗಳನ್ನು ಹಂಚುವುದು, ದೇವಾಲಯಗಳಲ್ಲಿ ಪೂಜಾ ಪ್ರಾರ್ಥನೆಗಳು, ಮೆರವಣಿಗೆಗಳು, ದೀಪಾಲಂಕಾರಗಳು, ಬಾಣಬಿರುಸುಗಳ ಹಾರಿಸುವಿಕೆ, ದರ್ಬಾರುಗಳು, ಯುದ್ಧದ ಅನರ್ಥ ಅದರ ಶಾಂತಿಯಿಂದ ಜಗತ್ತಿಗುಂಟಾದ ಲಾಭ ಇತ್ಯಾದಿಗಳ ಉಪನ್ಯಾಸ—ಮೊದಲಾದುವುಗಳೆಲ್ಲಾ ಜರುಗಿರುತ್ತವೆ. ನಮ್ಮ ಮೈಸೂರು ದೇಶದಲ್ಲೂ ನಮ್ಮ ಶ್ರೀಮನ್ಮಹಾರಾಜರವರ ಅಪ್ಪಣೆಪ್ರಕಾರ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಈ ಉತ್ಸವಗಳು ನಡೆದಿರುತ್ತವೆ. ಆದರೂ ಈ ಉತ್ಸವಗಳು ನಡೆಯಬೇಕಾಗಿದ್ದಷ್ಟು ವೈಭವದಿಂದ ಎಲ್ಲೂ ನಡೆದಿಲ್ಲವೆಂದು ಹೇಳಲು ಅಡ್ಡಿಯಿಲ್ಲ. ಹಾಗಾಗುವುದಕ್ಕೆ ಕಾರಣವಿಲ್ಲದೆ ಇರಲಿಲ್ಲ. ಮುಖ್ಯವಾಗಿ ಯುದ್ಧವು ನಿಂತು ಸಂಧಿಯು ಜರುಗಿ ಎಷ್ಟೋ ಕಾಲವಾದ ಮೇಲೆ ಈ ಉತ್ಸವವನ್ನು ನಡೆಯಿಸುವುದಕ್ಕೆ ಏರ್ಪಾಡಿಟ್ಟುದರಿಂದ ಪ್ರಜೆಗಳ ಮನಸ್ಸಿನಲ್ಲಿ ಯುದ್ಧಶಾಂತಿ ವಿಷಯಕವಾಗಿದ್ದ ಉತ್ಸಾಹದ ಸೆಳೆವು ಆರಿಹೋಗಿದ್ದುದು ಪ್ರಬಲ ಕಾರಣವು. ಯುದ್ಧವು ನಿಂತು ಸಂಧಿಯಾಗಿದ್ದರೂ ಶಾಶ್ವತ ಶಾಂತಿಯು ಸ್ಥಾಪಿತವಾಯಿತೆಂದು ನೆಮ್ಮದಿಗೊಳ್ಳುವಂಥ ಸ್ಥಿತಿಯು ಯೂರೋಪುಖಂಡದಲ್ಲಿ ಇನ್ನೂ ಕಾಣಬರದೆ ಇರುವುದು ೨ನೆಯ ಕಾರಣವು. ಮಹಮ್ಮದೀಯರು ತಮ್ಮ ತುರ್ಕಿರಾಜ್ಯದ ಸಂಬಂಧವಾಗಿ ಮಿತ್ರಮಂಡಲಿಯವರು ಸಂಧಿನಿಬಂಧನೆಯ ಪರಿಷ್ಕಾರವನ್ನು ಇನ್ನೂ ಮಾಡದೆ ಇರುವ ಕಾರಣ ತಾವು ಈ ಉತ್ಸವದಲ್ಲಿ ಭಾಗಿಗಳಾಗಬಾರದೆಂದು ಸಂಕಲ್ಪಿಸಿ ಹಲವು ಕಡೆ ಹಾವನ್ನು ತೊಟ್ಟು ವಿರೋಧಿಸಿದುದು ೩ನೆ ಕಾರಣವು. ಇವಲ್ಲದೆ ಇನ್ನು ಕೆಲ ಸಣ್ಣಪುಟ್ಟ ಕಾರಣಗಳೂ ಇರಬಹುದು. ಇವೆಲ್ಲವುಗಳಿಂದ ಪ್ರಜೆಗಳ ಮನಸ್ಸಿನಲ್ಲಿ ಈ ಉತ್ಸವಾಚರಣೆಯ ವಿಷಯಕವಾಗಿ ಸ್ವಭಾವಜನ್ಯವಾದ ಉತ್ಸಾಹವು ಅಧಿಕವಾಗಿಲ್ಲದೆ ಪ್ರಭುತ್ವದವರ ಆಜ್ಞಾಧೀನರಾಗಿ ಆಚರಿಸಿದ ಲಕ್ಷಣಗಳೇ ವಿಶೇಷವಾಗಿ ಕಾಣಬಂದಿರುವುವು. ದಿನಕಳೆದಂತೆ ಸ್ವಭಾವವಾಗಿ ಮನಸ್ಸಿನ ಉತ್ಸಾಹವು ತಗ್ಗಿದುದರಿಂದ ಉತ್ಸವದ ಕಳೆಯು ತಗ್ಗುವುದರಲ್ಲಿ ಆಶ್ಚರ್ಯವಿಲ್ಲ. ಮೈಸೂರ ಪ್ರಜೆಗಳಾದ ಕೆಲ ಮಹಮ್ಮದೀಯರು ಇತರ ಪ್ರಜೆಗಳಂತೆ ಈ ಉತ್ಸವದಲ್ಲಿ ಬೆರೆದಿರದೆ ದೂರವಾಗಿದ್ದುದು ಮಾತ್ರ ಅಷ್ಟು ಉಚಿತವಾಗಿ ಕಾಣಲಿಲ್ಲ. ಬ್ರಿಟಿಷ್ ಇಂಡ್ಯಾದ ಮಹಮ್ಮದೀಯ ಪ್ರಜೆಗಳು ಒಂದುವೇಳೆ ಮೊಂಡತನವನ್ನು ಮಾಡಿ ನಿಂತಿದ್ದರೂ ನಿಂತಿರಲಿ; ಮೈಸೂರು ಪ್ರಭುತ್ವದವರು ಮಹಮ್ಮದೀಯರ ವಿಷಯವಾಗಿ ಅಸಾಧಾರಣವಾದ ಪ್ರೋತ್ಸಾಹವನ್ನು ಕಲ್ಪಿಸುತ್ತಿರುವಾಗ, ಅವರಪ್ಪಣೆಗೆ ವ್ಯತಿರೇಕಿಸಿ ಈ ಉತ್ಸವ ಸಮಯದಲ್ಲಿ ಅಂಗಡಿಗಳನ್ನು ಕೂಡ ಮುಚ್ಚಿಕೊಂಡು ಕರಿಯ ಬಟ್ಟೆಗಳ ಚೂರುಗಳನ್ನು ತೋಳುಗಳಿಗೆ ಅಂಟಿಸಿಕೊಂಡು ಆಶೌಚವನ್ನಾಚರಿಸುವವರಂತೆ ತೋರ್ಪಟ್ಟುಕೊಂಡುದು ಮಾತ್ರ ವಿಹಿತವಾಗಿ ತೋರಲಿಲ್ಲ. ಜಗದೀಶ್ವರನ ಅನುಗ್ರಹದಿಂದ ಯುದ್ಧಶಾಂತಿಯಾದಂತೆಯೇ, ಯೂರೋಪುಖಂಡದಲ್ಲಿ ಕಂಡುಬರುತ್ತಿರುವ ಅಶಾಂತಿ, ಅಂತಃಕಲಹ, ಪರಸ್ಪರ ಮಾತ್ಸರ್ಯಗಳು ಕೂಡ ಬೇಗನೆ ಶಾಂತಿಗೊಂಡು, ಸರ್ವದೇಶ ಸಂಮೇಳನ ಸಂಘವು ಬೇಗನೆ ಏರ್ಪಟ್ಟು ತನ್ಮೂಲಕ ಜಗತ್ತಿಗೆಲ್ಲಾ ಮನಶ್ಶಾಂತಿಯೂ ನಿಸರ್ಗವಾದ ಉತ್ಸವೋದಯವೂ ಉಂಟಾಗುವಂತೆ ಆಗಲೆಂದು ಕೋರುವೆವು.

೯ ನೆ ವೀರಶೈವ ಮಹಾಸಭೆ.

ತಾ|| ೨೭-೨೮-೨೯ ರಲ್ಲಿ ಬೀರೂರಿನಲ್ಲಿ ನೆರೆಯಲಿಕ್ಕಿರುವ ಈ ಮಹಾಸಭೆಯು ಬಹಳ ವೈಭವದಿಂದ ಜರಗಲಿಕ್ಕಿರುವುದೆಂದು ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ. ಕಳೆದ ಸಭೆಗೆ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ದಯಮಾಡಿಸಿದ್ದುದರಿಂದಲೇ ಅಪೂರ್ವತರ ಶೋಭೆಯೂ ಮಹಾಸಭೆಗೆ ಶಾಶ್ವತತತ್ವಕ್ಕೂ ತನ್ಮೂಲಕ ಸಮಾಜಕ್ಕೆ ಲಾಭವೂ ಉಂಟಾಗಲವಕಾಶವಾಯಿತು. ಈಸಲ ಆ ನಿರಂಜನ ಜಗದ್ಗುರು ಮಹಾಸ್ವಾಮಿಗಳೇ ಅಲ್ಲದೆ ರಂಭಾಪುರೀ-ಉಜ್ಜಯಿನೀ-ಶ್ರೀಶೈಲ-ಕಾಶೀ-ಕೇದಾರಗಳಲ್ಲಿರುವ ಮಹಾಸಿಂಹಾಸನಾಧೀಶ್ವರ ಜಗದ್ಗುರುಗಳ ಸ್ವಾರಿಗಳೂ, ಇನ್ನು ಕೆಲ ಪ್ರಮುಖ ನಿರಂಜನ ಪೀಠಾಧೀಶ್ವರರ ಸ್ವಾರಿಗಳೂ ಸಹ ದಯಮಾಡಿಸಲಿಕ್ಕಿವೆಯೆಂದು ವರ್ತಮಾನ ಕೇಳುತ್ತೇವೆ. ಉಜ್ಜಯಿನೀ ಶ್ರೀಶೈಲ ಪೀಠಾಧೀಶ್ವರರುಗಳ ಸ್ವಾರಿಗಳು ಬೀರೂರಿಗೆ ಚಿತ್ತೈಸುವ ವಿಷಯದ ಮುಕ್ಕಾಂ ವಿವರಣೆಗಳುಳ್ಳ ಪ್ರಕಟನಪತ್ರವು ನಮಗೆ ಆಯಾ ಸಂಸ್ಥಾನಗಳಿಂದೇನೂ ಬಂದಿಲ್ಲ ನರಸಿಮ್ಮರಾಜಪುರದ ಅಂಚೆಯ ಮುದ್ರೆಯನ್ನೊತ್ತಿ ಬಂದಿರುತ್ತವೆ. ಕಾಶೀ ಕೇದಾರಪೀಠಾಧೀಶ ಜಗದ್ಗುರುಗಳ ಸ್ವಾರಿಗಳು ದಯಮಾಡಿಸುವ ವಿಷಯದಲ್ಲೂ ನಮಗೆ ನೇರಾದ ವರ್ತಮಾನವು ಆ ಪೀಠಾಧಿಕಾರಸ್ಥಾನಗಳಿಂದ ತಿಳಿದುಬಂದಿಲ್ಲ. ಆದರೆ ತಾ|| ೧೭ ರಲ್ಲೇ ಅವರುಗಳ ಸ್ವಾರಿಯು ಹೊರಟಿದೆಯೆಂಬ ವಿಷಯಕ್ಕೆ ಹೆಸರಿಲ್ಲದ ಒಂದು ಪತ್ರ ಬಂದಿದೆ. ರಂಭಾಪುರೀ ಪೀಠದಿಂದ ಯಾವ ಸುದ್ದಿಯೂ ಬಂದಿಲ್ಲ.

ಶ್ರೀ ಮುರುಘರಾಜೇಂದ್ರ ಜಗದ್ಗುರುಗಳ ಸ್ವಾರಿಯು ಹೊರಡುವ ಮುಕ್ಕಾಂ ಸಿದ್ಧವಾಗಿದೆಯೆಂದು ನಂಬುಗೆಯಾದ ಕಡೆಯಿಂದ ವರ್ತಮಾನಬಂದಿದೆ. ನಿಜಸ್ಥಿತಿಗೆ ಸದರಿ ಸಂಸ್ಥಾನದಿಂದಲೂ ಅಪ್ಪಣೆಯೂ ನಮ್ಮಲ್ಲಿಗೆ ಬಂದಿಲ್ಲ. ಹೀಗಿರುವುದರಿಂದ ಮಹಾಸಭಾಕಾಲಕ್ಕೆ ಇಂಥಿಂಥವರೇ ಬಂದು ಸೇರುತ್ತಾರೆಂದು ತಿಳಿಯಿಸುವುದಕ್ಕೆ ನಮಗೆ ಸಾಧ್ಯವಿಲ್ಲದೆಹೋಗಿರುವುದಕ್ಕಾಗಿ ವಿಷಾದಿಸುತ್ತೇವೆ.

ಜಗದ್ಗುರು ಪಂಙ್ತಿಯೊಳಗಣ ಯಾರು ದಯಮಾಡಿಸಿದರೂ ಸಭೆಗೆ ವಿಶೇಷ ಪ್ರಯೋಜನವೇ ಆಗುವುದು. ಸಮಾಜಬಾಂಧವರಂತು ಮತಸೇವೆಗಾಗಿ ತೀರ್ಥಕ್ಷೇತ್ರಯಾತ್ರೆಗೆ ಭಕ್ತಿಯಿಂದ ಹೋಗುವಂತೆ ಈ ಸಭೆಗಾಗಿ ಹೋಗಬೇಕಾದುದು ಅವಶ್ಯಕವಾಗಿಯೇ ಇರುತ್ತದೆ.

ಈ ಸಭೆಗೆ ಪಂಚಸಿಂಹಾಸನಾಧಿಪತಿ ಜಗದ್ಗುರುಗಳು ಒಂದು ಕಡೆಯೂ ನಿರಾಭಾರಿ ಜಗದ್ಗುರುಗಳೇ ಮೊದಲಾದ ನಿರಂಜನ ಚರವರ್ಯರು ಒಂದು ಕಡೆಯೂ ಬಂದು ಸೇರುವ ಸಂಭವವಿರುವುದರಿಂದ, ಅದೂರದರ್ಶಿಗಳು ಕೆಲವರಿಂದ ಈಗ ಎಬ್ಬಿಸಲ್ಪಟ್ಟಿರುವ ದುಷ್ಟಸ್ಪರ್ಧಾವಿಷಬೀಜದ ಆರೋಪಣವು ಆ ಸಭೆಯಲ್ಲೂ ಆಗಿ ಅನರ್ಥವಾಗುವ ಲಕ್ಷಣವಿದೆಯೆಂದು ನಮ್ಮಲ್ಲಿಗೆ ಸಮಾಜಾಭಿಮಾನಿಗಳಾದ ಕೆಲ ದೊಡ್ಡ ಮನುಷ್ಯರು ಪತ್ರಮುಖೇನ ಬರೆದು ತಿಳಿಯಿಸಿರುತ್ತಾರೆ. ಸಮಾಜ ಗೌರವಾಭಿಮಾನಿಗಳಿಗೆಲ್ಲಾ ಈ ವಿಷಯದಲ್ಲಿ ಭೀತಿಯುಂಟಾಗುವುದೇನೋ ಸಹಜವೇ ಸರಿ. ಆದರೆ ನಮ್ಮ ವಿಚಾರದೃಷ್ಟಿಯಲ್ಲಿ ಅಂಥ ಅತ್ಯಾಚಾರಕ್ಕೆ ಮಹಾಸಭೆಯು ಎಂದಿಗೂ ಎಡೆಗೊಡುವುದಿಲ್ಲವೆಂದೇ ನಂಬುಗೆಯುಂಟು. ಬೀರೂರು ಪ್ರಮುಖವಾದ ಪಟ್ಟಣಸ್ಥಲವಲ್ಲ. ಗದ್ದಲವಾದರೆ ತಕ್ಕಷ್ಟು ಪೋಲೀಸುರಕ್ಷಣವನ್ನು ಪಡೆಯಲೂ ಅವಕಾಶವಿರುವುದಿಲ್ಲ. ಹೀಗಿರುವಲ್ಲಿ ಅನಾಲೋಚಿತವಾಗಿ ಅಂಥ ಅನವಸ್ಥಾವಿಷಯಗಳ ಪ್ರಸಂಗಕ್ಕೆ ಇಲ್ಲಿ ಅವಕಾಶಕೊಡುವಂತೆ ಮಾಡಿಕೊಂಡರೆ, ಎಂದೆಂದಿಗೂ ಮಾಜದಂಥ ಅಪಕೀರ್ತಿಯು ಬೀರೂರಿಗೆ ತಟ್ಟುವುದಲ್ಲದೆ ಮಹಾಸಭೆಯು ಇದುವರೆಗೂ ಕಾಪಾಡಿಕೊಂಡುಬಂದಿರುವ ಗೌರವಕ್ಕೂ ಚ್ಯುತಿಯಾದೀತು. ಕಡೆಗೆ ಪರಂಪರೆಯಾ ಆ ಅಪವಾದರೂಪಕಳಂಕವು ಸಭೆಗೆ ದಯಮಾಡಿಸಿದ್ದ ಜಗದ್ಗುರು ಪೀಠಗಳಿಗೂ ಸಂಘಟಿಸೀತು. ಅದುಕಾರಣ ಅಂಥ ಅನುಚಿತಾಲೋಚನೆಗಳಿಗೆ ಸಭೆಯಲ್ಲಿ ಲೇಶಮಾತ್ರವೂ ಅವಕಾಶ ಕೊಡಲ್ಪಡಲಾರದು. ಅಲ್ಲದೆ ಸಮಾಜದ ಐಕಮತ್ಯವೃದ್ಧಿಯನ್ನೇ ತನ್ನ ಉದ್ದೇಶಗಳಲ್ಲೊಂದನ್ನಾಗಿಟ್ಟುಕೊಂಡಿರುವ ಮಹಾಸಭೆಯು, ಸಮಾಜದಲ್ಲಿ ಒಡಕನ್ನೂ ಅನರ್ಥವನ್ನೂ ಹುಟ್ಟಿಸಲು ಸಾಧಕವಾದ ಪ್ರಯತ್ನಗಳನ್ನು ಸಮಾಜದ ಯಾರೊಬ್ಬರಾದರೂ ನಡೆಯಿಸುತ್ತಿದ್ದರೆ ಅಂಥ ವಿಷಯದಲ್ಲಿ ಸಮಾಜಕ್ಕೂ ಅದರ ಪ್ರತಿನಿಧಿಯಾಗಿರುವ ಮಹಾಸಭೆಗೂ ಇರುವ ಅಸಮಾಧಾನವನ್ನು ವ್ಯಕ್ತಪಡಿಸಿ, ಅಂಥ ಯತ್ನಗಳಿಗೆ ನಿಷೇಧವನ್ನು ಕಲ್ಪಿಸುವುದು ಕೂಡ ಅವಶ್ಯಕವಾಗಿರುತ್ತದೆ. ಸಾಮಾನ್ಯ ಪ್ರಜೆಗಳೆಲ್ಲರಿಗೂ ಇರುವ ಅಭಿಮಾನಕ್ಕಿಂತಲೂ ನೂರ್ಮಡಿ ಹೆಚ್ಚಾದ ಅಭಿಮಾನವು ಮತಾಚಾರ್ಯ ಪೀಠಾಧಿಪತಿಗಳಿರುವುದೆಂಬುದಕ್ಕೆ ಸಂಶಯವಿಲ್ಲ. ಅದುಕಾರಣ ಅಂಥವರುಗಳ ಸ್ವಾರಿಯು ಪ್ರತ್ಯಕ್ಷವಾಗಿ ಮಹಾಸಭೆಗೆ ದಯಮಾಡಿಸಿರುವಾಗ್ಗೆ ಅನಾಗರಿಕೋಚಿತಗಳಾದ ಅತಿ ಪ್ರಸಂಗಗಳೂ ಅತ್ಯಾಚಾರಗಳೂ ಜರುಗಲವಕಾಶವಾಗುವುದೆಂದು ಭಾವಿಸಿ ಬೆದರಬೇಕಾದ ಕಾರಣವಿರುವುದಿಲ್ಲ. ಆದುದರಿಂದ ಸಕಲಪ್ರಾಂತದ ವೀರಶೈವ ಮಹಾಜನರೂ ಉತ್ಸಾಹದಿಂದ ಮಹಾಸಭೆಗೆ ದಯಮಾಡಿಸಿ ಸಮಾಜದ ಸೇವೆಯನ್ನೂ ಫಲವನ್ನೂ ಜಗದ್ಗುರುಪಾದಸಂದರ್ಶನ ಲಾಭವನ್ನೂ ಪಡೆದು ಧನ್ಯರಾಗಲಿ. ದಯಮಾಡಿಸತಕ್ಕ ಜಗದ್ಗುರು ಪೀಠಾಧೀಶರುಗಳು ತಂತಮ್ಮ ಅಪೂರ್ವತರಾಗಮನಲಾಭವು ಸಮಾಜಕ್ಕೆ ಚಿರಸ್ಮರಣೀಯವಾಗಿ ಉಳಿಯುವಂತೆ ಮಾಡಿಕೊಳ್ಳುವವರಾಗಲಿ. ಮಹಾಸಭೆಯು ಎಂದಿಗಿಂತಲೂ ವಿಶೇಷವಾದ ವೈಭವದಿಂದನಡೆದು ಸಮಾಜಕ್ಕೆ ಶಾಶ್ವತಪ್ರಯೋಜನಕಾರಿಯೆನಿಸಿಕೊಳ್ಳುವ ಸುಸ್ಥಿತಿಯನ್ನು ಪಡೆದುಕೊಳ್ಳುವುದಾಗಲಿ.

ಹೊಸ ನಿಕಲ್ ನಾಣ್ಯಗಳು.

ಪ್ರಪಂಚದಲ್ಲಿ ಭೂಗರ್ಭದಿಂದ ಬೆಳ್ಳಿಯುತ್ಪತ್ತಿಯಾಗುವುದು ಕಡಿಮೆಯಾಗುತ್ತಿದೆ. ಆದರೆ ಅದನ್ನು ಕೊಳ್ಳುವ ಗಿರಾಕಿಗಳು ಮಾತ್ರ ದಿನದಿನಕ್ಕೆ ಹೆಚ್ಚುತ್ತಿದ್ದಾರೆ. ಈ ಕಾರಣದಿಂದ ಬೆಳ್ಳಿಯ ಬೆಲೆಯು ಹೆಚ್ಚುವುದರಲ್ಲಿದೆಯೇ ಹೊರತು ಇಳಿಯುತ್ತಲಿಲ್ಲ. ಈ ಸ್ಥಿತಿಯಲ್ಲಿ ಸರ್ಕಾರದವರು ಹೊಸಹೊಸದಾಗಿ ಬೆಳ್ಳಿಯ ನಾಣ್ಯಗಳನ್ನು ಮುದ್ರಿಸಿ ಬಳಕೆಗೆ ತರಿಸುವುದು ಅವರಿಗೆ ನಷ್ಟಕಾರಿಯೇ ಹೊರತು ಲಾಭಕಾರಿಯಲ್ಲ. ಆದುದರಿಂದ ಇನ್ನು ಮುಂದೆ ನಮ್ಮ ಭರತಖಂಡ ಸರ್ಕಾರದವರು ನಾಣ್ಯಗಳಲ್ಲಿ ೪ ಆಣೆ ೮ ಆಣೆಯ ನಾಣ್ಯಗಳನ್ನು ಕೂಡ ೧-೨ ಆಣೆಯ ನಿಕ್ಕಲ್ ನಾಣ್ಯಗಳನ್ನು ನಿರ್ಮಿಸಿ ಇದುವರೆಗೆ ವ್ಯವಹಾರಕ್ಕೆ ತಂದಿರುವಂತೆಯೇ ಅವುಗಳನ್ನೂ ತರಬೇಕೆಂದು ನಿರ್ಧರಿಸಿದ್ದಾರೆ. ಈ ನಿಕಲ್ ಅರ್ಧರೂಪಾಯಿಯು ಗುಂಡಾಗಿಯೇ ಇರುವುದು. ಅದರ ಮೇಲೆ ಒಂದು ಕಡೆ ಚಕ್ರವರ್ತಿಯವರ ಭಾವಪ್ರತಿಮೆಯೂ, ಮತ್ತೊಂದು ಕಡೆ ಮಧ್ಯದಲ್ಲಿ 8 ಎಂಬ ಸಂಖ್ಯೆಯೂ ಅದರ ಚತುರ್ದಿಕ್ಕಿನಲ್ಲೂ ಉರ್ದು, ನಾಗರಿ, ಬಂಗಾಳಿ, ತೆಲುಗು ಭಾಷೆಗಳಲ್ಲಿ ಎಂಟಾಣೆಯೆಂಬ ಹೆಸರೂ ಮುದ್ರಿಸಲ್ಪಡುವುವು. ೪ ಆಣೆಯ ನಾಣ್ಯದ ಆಕೃತಿಯು ಭಿನ್ನವಾಗಿರುವುದು. ಸಂಖ್ಯೆ ಮತ್ತು ಹೆಸರುಗಳೆಲ್ಲಾ ಮೇಲೆ ಹೇಳಿದಂತೆ ಬೇರೆ ಬೇರೆ ಭಾಷೆಗಳಲ್ಲೆಲ್ಲಾ ಇರುವುವು, ಎಂಬುದಾಗಿ ಗೌರ್ನರ್ ಜನರಲ್‌ರವರು ಪ್ರಕಟಿಸಿದ್ದಾರೆ. ಇವಾದಬಳಿಕ ನಾಣ್ಯಗಳಲ್ಲಿ ರೂಪಾಯಿ ನಾಣ್ಯವೊಂದು ಮಾತ್ರ ಬೆಳ್ಳಿಯದಾಗಿ ಉಳಿದಂತಾಯಿತು. ಇನ್ನಾವ ಕಾಲಕ್ಕೆ ಅದೂ ನಿಕಲ್ಲಿನದೇ ಆಗಿ ಮಾರ್ಪಡುವುದೋ ಹೇಳಲಿಕ್ಕಿಲ್ಲ. ಕಾಗದದ ಒಂದು ರೂ.ನ ನೋಟುಗಳಿಗಿಂತಲೂ ರೂಪಾಯಿನ ನಿಕ್ಕಲ್ ನಾಣ್ಯಗಳಿದ್ದರೆ ಎಷ್ಟೋ ಮೇಲು. ಆದರೆ ಪ್ರಭುತ್ವದವರು ಎಲ್ಲವನ್ನೂ ನಿಕಲ್ ನಾಣ್ಯಗಳಲ್ಲೇ ಮುದ್ರಿಸುವುದಕ್ಕಿಂತ ೨-೪-೮ ಆಣೆಗಳನ್ನು ಬೆಳ್ಳಿಯಲ್ಲೂ ಅರ್ಧಭಾಗ ಮುದ್ರಿಸಿ ಪ್ರಕಟಿಸಿದರೆ ಎಷ್ಟೋ ಅನುಕೂಲವಾದೀತು. ಎಷ್ಟೋ ಕಾಲ ಬೆಳ್ಳಿಯ ಬೆಲೆಯು ಕಡಿಮೆಯಾಗಿದ್ದಾಗ ಪ್ರಭುತ್ವದವರು ಬೆಳ್ಳಿಯ ನಾಣ್ಯಗಳ ಮುದ್ರಣದಿಂದ ೧ ರೂಪಾಯಿಗೆ ೮ ಆಣೆಯಷ್ಟು ಲಾಭವನ್ನು ಕೂಡ ಸಂಪಾದಿಸುತ್ತಿದ್ದರು. ಈಗ ಸ್ವಲ್ಪಮಾತ್ರ ನಷ್ಟವನ್ನು ಸಂಭವಿಸುತ್ತಿರುವಲ್ಲಿ ಅಷ್ಟನ್ನೂ ತಾಳಿಕೊಳ್ಳಲಾರದೆ ನಿಕಲ್ ನಾಣ್ಯಗಳ ಪರಂಪರೆಯನ್ನೇ ಹುಟ್ಟಿಸುವುದಕ್ಕೆ ಸಿದ್ಧವಾಗಿರುವುದು ಸರಿಯಲ್ಲ. ಅಷ್ಟು ಇಷ್ಟು ತಮ್ಮ ಕಷ್ಟಾರ್ಜಿತವನ್ನು ಬೆಳ್ಳಿಯ ನಾಣ್ಯರೂಪವಾಗಿ ಕೂಡಿಟ್ಟುಕೊಳ್ಳುತ್ತಿದ್ದ ಬಡಬಗ್ಗರನ್ನು ಈ ನಿಕಲ್ ನಾಣ್ಯರಾಶಿಯು ಹತಾಶರನ್ನಾಗಿ ಮಾಡುವುದೆಂಬುದಕ್ಕೆ ಸಂಶಯವಿಲ್ಲ.

ದೀರ್ಘವಿಮಾನ ಪ್ರಯಾಣ ಜಯ.

ವಾಯುವೇಗದಿಂದ ಪುರುಷನು ಆಕಾಶಮಾರ್ಗದಲ್ಲಿ ವಿಮಾನಗಳ ಮೂಲಕ ಸ್ವೇಚ್ಛೆಯಿಂದ ಬಹುದೂರ ಪ್ರಯಾಣವನ್ನು ಕೂಡ ನಿರಾತಂಕವಾಗಿ ಮಾಡಬಲ್ಲನೆಂಬುದಕ್ಕೆ ಹೆಚ್ಚು ಹೆಚ್ಚಿನ ನಿದರ್ಶನಗಳು ದಿನದಿನಕ್ಕೆ ನಮಗೆ ಒದಗುತ್ತಿವೆ. ಕೇಪ್ಟನ್ ರಾಸ್‌ಸ್ಮಿತ್ ಎಂಬ ಆಂಗ್ಲ ವೈಮಾನಿಕನು ಇಂಗ್ಲಂಡಿನಿಂದ ವಿಮಾನದಲ್ಲಿ ಕುಳಿತು ಹೊರಟು ಭರತಖಂಡದ ಮಾರ್ಗವಾಗಿ ಆಸ್ಟ್ರೇಲಿಯಾಕ್ಕೆ ಹೋಗಿ ಸೇರಿ ಈ ಪಂಥವನ್ನು ಗೆದ್ದು ೧೦೦೦೦ ಸವರನ್ನುಗಳ ಬಹುಮಾನವನ್ನು ಈಗತಾನೇ ಪಡೆದಿರುತ್ತಾನೆ. ಈತನು ನವೆಂಬರ್ ತಾ|| ೧೧ ರಲ್ಲಿ ಇಂಗ್ಲಂಡಿನಿಂದ ಹೊರಟು ಈಜಿಪ್ಟ, ಕರಾಚಿ, ದಿಲ್ಲಿ, ಕಲ್ಕತ್ತಾ, ಬರ್ಮಾ, ಮಲಕ್ಕಾಗಳ ಮಾರ್ಗವಾಗಿ ಆಸ್ಟ್ರೇಲಿಯಾಕ್ಕೆ ಡಿಶಂಬರ್ ತಾ|| ೯ ರಲ್ಲಿ ಹೋಗಿ ಸೇರುತ್ತಾನೆ. ಮಾರ್ಗದಲ್ಲಿ ವಿಮಾನವನ್ನು ಸರಿಮಾಡಿಕೊಳ್ಳಲಿಕ್ಕೂ ಬೇಕಾದ ಸಾಮಗ್ರಿಗಳನ್ನು ತುಂಬಿಕೊಳ್ಳಲಿಕ್ಕೂ ಅಲ್ಲಿಗಲ್ಲಿಗೆ ಎಷ್ಟೋ ಕಡೆ ಇಳಿದು ತಂಗಿಹೋಗಿರುತ್ತಾನೆ. ಒಟ್ಟಿಗೆ ಹಿಡಿದ ೨೯ ದಿನಗಳಲ್ಲಿ ವಿಮಾನದ ಮೂಲಕ ಪ್ರಯಾಣಮಾಡಿದ ಗಂಟೆಗಳ ಕಾಲವು ೧೩೪ ಮಾತ್ರವೇ ಆಗಿರುತ್ತದೆ. ಈ ವಿಮಾನವು ಗಂಟೆಗೆ ೭೫ ಮೈಲಿಗಳ ಪ್ರಕಾರ ನಡೆಯಿಸಲ್ಪಟ್ಟಿರುತ್ತದೆ. ಕರಾಚಿಯಿಂದ ದಿಲ್ಲಿಗೆ ೯|| ಗಂಟೆ ಕಾಲದೊಳಗಾಗಿ ಹೋಗಿ ಸೇರಿರುತ್ತದೆ. ೪೦ ಮೈಲಿಗಳ ದೂರದಲ್ಲಿರುವಾಗಲೇ ಆಸ್ಟ್ರೇಲಿಯಾವು ಕೇಪ್ಟನ್ನಿನ ಕಣ್ಣಿಗೆ ಕಾಣಿಸಿತಂತೆ. ಇಷ್ಟು ದೀರ್ಘ ಪ್ರಯಾಣವನ್ನು ರಾಸ್‌ಸ್ಮಿತ್ತನು ಇಷ್ಟು ಜಯಶೀಲವಾಗಿ ಸಾಗಿಸಿದುದಕ್ಕಾಗಿ ಆಂಗ್ಲಪತ್ರಿಕೆಗಳೆಲ್ಲಾ ಆತನನ್ನು ಹೊಗಳುತ್ತಿವೆ. ಇನ್ನೊಬ್ಬ ವೈಮಾನಿಕನು ಎಲ್ಲೂ ನಿಲ್ಲದೇನೆಯೇ ಇಂಗ್ಲಂಡಿನಿಂದ ಆಸ್ಟ್ರೇಲಿಯಾವಿಗೆ ೧೦ ದಿನಗಳೊಳಗಾಗಿ ಹೋಗಿ ಮುಟ್ಟಬಹುದೆಂದು ಹೇಳಿರುತ್ತಾನೆ. ನಮ್ಮ ಭರತಖಂಡಕ್ಕೂ ಸೀಮೆಗೂ ವಿಮಾನಯಾನ ಸೌಕರ್ಯ ಕಲ್ಪನೆಯ ಪ್ರಯತ್ನವು ನಡೆಯುತ್ತಿದೆ. ಸ್ವಲ್ಪಕಾಲದೊಳಗ ನಾವೆಲ್ಲಾ ಆಕಾಶಗಾಮಿಗಳನ್ನು ನಮ್ಮ ದೇಶಗಳಲ್ಲಿ ಕಾಣಬಹುದಾಗಿದೆ,

---

ಈಸಲದ ರಾಷ್ಟ್ರೀಯ ಮಹಾಸಭೆಯು ಅಮೃತಸಾರ ಪಟ್ಟಣದಲ್ಲಿ ಅ|| ಪಂಡಿತ ಮೋತೀಲಾಲ ನೆಹ್ರೂರವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿದೆ. ಸ್ವಾಮಿಶ್ರದ್ಧಾನಂದರವರು ಸತ್ಕಾರಕ ಸಂಘಾಧ್ಯಕ್ಷರಾಗಿರುವರು.

೯ನೆ ವೀರಶೈವ ಮಹಾಸಭೆಯು

ಬೀರೂರಿನಲ್ಲಿ

ರಿಟೈರ್ಡ್ ಡಿ|| ಕಲೆಕ್ಟರ್ ಮ|| ಶಾಂತವೀರಪ್ಪನವರ

ಅಧ್ಯಕ್ಷತೆಯಿಂದ

ಡಿಶಂಬರ್ ತಾ|| ೨೭—೨೮—೨೯ ರಲ್ಲಿ ನಡೆಯುವುದರಿಂದ

ಸಕಲ ಪ್ರಾಂತ್ಯದ ವೀರಶೈವರೂ ಮಹಾಸಭೆಗೆ ದಯಮಾಡಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದ್ದಾರೆ.

ಒಳದೇಶದ ವೃತ್ತಾಂತಗಳು.

ಮರಳಿ ಕೆಡ್ಡಾಕ್ಕೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರು ರಾಜಧಾನಿಗೆ ಬಂದಿರುತ್ತಾರೆ.

ಮ|| ಎ. ಸಿ. ಬಾನರ್ಜಿಯವರು ಸೀಮೆಯಿಂದ ಬಂದ ನಂತರ ಮೊದಲನೆ ಕೌನ್ಸಿಲರಾಗಿ ನಮ್ಮ ಸಂಸ್ಥಾನದ ಉದ್ಯೋಗದಲ್ಲಿರುವರು. ಅವರು ಇನ್ನು ೨ ವರ್ಷ ಕಾಲ ಈ ದೇಶದ ಕೆಲಸದಲ್ಲಿರುವುದಕ್ಕೆ ಇಂಡ್ಯಾ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ಬೆಂಗಳೂರಿಂದ ವೀರಶೈವ ಮಹಾಸಭೆಗೆ ೬೦ ಮಂದಿಗಳವರೆಗೂ ಪ್ರತಿನಿಧಿಗಳೂ ಪ್ರೇಕ್ಷಕರೂ ಹೋಗುವವರಾಗಿದ್ದಾರೆಂದು ಕೇಳುತ್ತೇವೆ. ಎಲ್ಲ ಕಡೆಯವರೂ ಹೀಗೆಯೇ ಉತ್ಸಾಹದಿಂದ ತೆರಳಿ ಸಭಾಕಾರ್ಯವನ್ನು ಜಯಶೀಲವಾಗಿ ನೆರವೇರಿಸುವವರಾಗಬೇಕು.

ಕಾಕನಕೋಟೆಯ ಕಾಡಿನ ಕಾರಾಪುರದ ಬಳಿಯಲ್ಲಿ ಅತಿಥಿಗಳಿಗೋಸ್ಕರ ಹೊಸದಾಗಿ ನಮ್ಮ ಸರ್ಕಾರದವರು ಕಟ್ಟಿಸಿರುವ ಬಂಗಲೆಗೆ ಈಗಣ ನಮ್ಮ ವೈಸ್ರಾಯರ ಹೆಸರನ್ನು "ಚೆಲಮ್ಸ್‌ಫರ್ಡ್ ಲಾಡ್ಜ್" ಎಂಬುದಾಗಿ ಇಡಲು ವೈಸ್ರಾಯರು ಅನುಮತಿಯನ್ನು ಕೊಟ್ಟರು.

೨-೩ ದಿನಗಳಿಂದ ರಾಜಧಾನಿಯಲ್ಲಿ ಮೋಡ ಮುಚ್ಚಿ ತುಂತುರಾಡುವುದಕ್ಕೆ ಉಪಕ್ರಮವಾಗಿದೆ. ಇದರಿಂದ ಬತ್ತದ ಕಣಗೆಲಸದವರಿಗೆ ಭಯವುಂಟಾಗಿದೆ. ಪ್ಲೇಗುರೋಗವು ಎಲ್ಲೋ ಒಂದೆರಡು ಮರಣಗಳನ್ನುಂಟುಮಾಡುತ್ತಿದೆ. ಬತ್ತದ ಸುಗ್ಗಿಕಾಲವಾಗಿದ್ದರೂ ಬೆಲೆಯು ಕಂಡಗಕ್ಕೆ ೧೭ ರೂ.ಗಳಿಗಿಂತ ಕಡಿಮೆಯಾಗಿಲ್ಲ.

ಇದುವರೆಗೆ ಹಿಂದೆ ನಡೆದ ವೀರಶೈವ ಮಹಾಸಭೆಗಳ ರಿಪೋರ್ಟುಗಳು ಎಲ್ಲಿವೆ? ಯಾರಲ್ಲಿ ದೊರೆಯುತ್ತವೆ? ಎಂದು ಹಲವರು ನಮ್ಮನ್ನು ಬರೆದು ಕೇಳುತ್ತಿದ್ದಾರೆ. ಅಂಥ ರಿಪೋರ್ಟುಗಳನ್ನು ಇಟ್ಟುಕೊಂಡಿರತಕ್ಕವರು ಮಹಾಸಭಾ ಕಾಲಕ್ಕೆ ಅವುಗಳನ್ನು ಬೀರೂರಿಗೆ ತೆಗೆದುಕೊಂಡು ಬಂದರೆ ಇಷ್ಟವುಳ್ಳವರು ಕೊಂಡುಕೊಳ್ಳಲುಅವಕಾಶವಾದೀತೆಂದು ಸೂಚಿಸುತ್ತೇವೆ.

ಪ್ರೊ|| ಅಬ್ದುಲ್ ಕರೀಂಖಾನರ ಮತ್ತು ಅವರ ಶಿಷ್ಯೆ ಸರಸ್ವತೀಬಾಯಿಯವರ ಹಾಡುಗಾರಿಕೆಯು ಮೈಸೂರು ರತ್ನಾವಳೀ ನಾಟಕಶಾಲೆಯಲ್ಲಿ ಕರ್ಣಶ್ರಾವ್ಯವಾಗಿ ನಡೆದಿತು. ಪುರಜನರು ಅವರುಗಳಿಗೆ ಪಾರಿತೋಷಿಕವಾಗಿ ಕೊಡಲು ಏರ್ಪಡಿಸಿದ್ದ ರತ್ನಖಚಿತವಾದ ಭಂಗಾರದ ಕಂಠಿಯನ್ನು ಪ್ರೊ|| ಕರೀಂಖಾನರಿಗೂ, ಭಂಗಾರದಮೆಡಲನ್ನು ಮಿಸ್ ಸರಸ್ವತೀಬಾಯಿಯವರಿಗೂ ಸಹ ಅರಮನೆ ಸಂಗೀತ ವಿದ್ವಾಂಸರಾದ ವೈ|| ಮ|| ಶೇಷಣ್ಣನವರ ಮತ್ತು ಗಾನವಿಶಾರದ ಬಿ. ಕೃಷ್ಣಪ್ಪನವರ ಹಸ್ತಗಳಿಂದ ಕೊಡಿಸಿ ಸನ್ಮಾನಿಸಿದರು.

ಹಾಸನದಲ್ಲಿ ಎಕ್ಸಿಕ್ಯುಟೀವ್ ಇಂಜನಿಯರಾಗಿದ್ದ ಮ|| ಬಿ. ನಂಜುಂಡಾರಾಧ್ಯರು ಅಸ್ವಸ್ಥರಾಗಿ ರಜಾವನ್ನು ಪಡೆದು ಬೆಂಗಳೂರಿನಲ್ಲಿ ಔಷಧಗಳನ್ನು ಸೇವಿಸುತ್ತಿದ್ದು ಕಡೆಗೂ ಆರೋಗ್ಯಗೊಳ್ಳದೆ ಕಳೆದವಾರ ಶಿವಾಧೀನರಾದರು. ಅವರ ಅಣ್ಣಂದಿರಾದ ಮ|| ಬಿ. ಬಸವಾರಾಧ್ಯ ಬಿ.ಎ.,ಬಿ.ಎಲ್.ರವರು ಮೋಟಾರಿನಲ್ಲಿ ಶವವನ್ನು ರಾಜಧಾನಿಗೆ ಸಾಗಿಸಿ ತಂದು ಇಲ್ಲಿ ಸಂಸ್ಕಾರ ಮಾಡಿಸಿದರು. ಅವರ ಅತ್ಯಂತ ವಯೋವೃದ್ಧರಾಗಿರುವ ಮಾತಾಪಿತರುಗಳಿಗೆ ಕೊನೆಗಾಲದಲ್ಲಿ ಇಂಥ ಸಮರ್ಥ ಪುತ್ರವಿಯೋಗವು ಪ್ರಾಪ್ತವಾದುದು ಅತ್ಯಂತ ವಿಷಾದಸ್ಥಾನವು. ಇನ್ನೂ ಪದವಿಯಲ್ಲಿ ವೃದ್ಧಿಗೊಳ್ಳುವವರಾಗಿಯೂ ಸರಸಿಗರಾಗಿಯೂ ಇದ್ದ ಇವರು ಅಕಾಲದಲ್ಲಿ ಮೃತ್ಯುವಶರಾದುದಕ್ಕಾಗಿ ನಮಗುಂಟಾದ ಅನುತಾಪವನ್ನು ಈ ಮೂಲಕ ಅವರ ಬಂಧುವರ್ಗಕ್ಕೆಲ್ಲಾ ತಿಳಿಯಿಸುತ್ತೇವೆ.

ಒಕ್ಕಲಿಗರ ಮುಖಂಡರು ತಮ್ಮ ಜನವರ್ಗದ ಉದ್ಧಾರಕ್ಕಾಗಿ ಮಾಡುತ್ತಿರುವ ಪ್ರಯತ್ನಗಳ ಹೊರವು ಅಭಿನಂದನೀಯವಾಗಿದೆ. ನಾಗಮಂಗಲದ ತಾಲ್ಲೂಕಿನಲ್ಲಿ ಇದೇ ಬರುವ ತಾ|| ೨೩ ರಲ್ಲಿ ಅವರ ಜನಗಳ ಒಂದು ಸಭೆಯು ಮ|| ಕೆ. ಎಚ್. ರಾಮಯ್ಯನವರು ಬಿ.ಎ., ಬ್ಯಾ|| ಆಟ್ಲಾಯವರ ಅಧ್ಯಕ್ಷತೆಯಲ್ಲಿಯೂ, ಚನ್ನಪಟ್ಟಣದ ತಾಲ್ಲೂಕಿನಲ್ಲಿ ಅವರ ಜನರ ಒಂದು ಸಭೆಯು ಇದೇ ತಿಂಗಳು ತಾ|| ೨೧ ರಲ್ಲಿ ಮೈಸೂರು ಡಿಸ್ಟ್ರಿಕ್ಟು ಜಡ್ಜರಾದ ಮ|| ಬ್ಯಾರಿಸ್ಟರ್ ನಾಗಪ್ಪನವರ ಅಧ್ಯಕ್ಷತೆಯಲ್ಲೂ, ಅಲ್ಲಿಯ ಒಕ್ಕಲಿಗ ವಿದ್ಯಾರ್ಥಿಗಳ ಯೂನಿಯನ್ನಿನ ವಾರ್ಷಿಕಾಧಿವೇಶನವು ಅದೇ ದಿವಸ ಮ|| ರಾಮಲಿಂಗರೆಡ್ಡಿ ಎಂ. ಎ ಯವರ ಅಧ್ಯಕ್ಷತೆಯಿಂದಲೂ ನಡೆಯುವುವಾಗಿವೆ. ಆ ಜನವರ್ಗದವರೆಲ್ಲರೂ ಅಭಿಮಾನದಿಂದ ಆ ಸಭೆಗಳಿಗೆ ನೆರೆದು ಪ್ರಮುಖರ ಉದ್ದೇಶಕ್ಕೆ ಬೆಂಬಲವಿತ್ತು ತಮ್ಮ ಉದ್ಧಾರವನ್ನು ತಾವು ಮಾಡಿಕೊಳ್ಳುವವರಾಗಬೇಕು.

ಆಂಧ್ರಸಾರಸ್ವತಪರಿಷತ್ತಿನವರು ತೆನುಗಿನಲ್ಲಿ ವಿಜ್ಞಾನಸರ್ವಸ್ವಕೋಶವನ್ನು ಬರೆಯಿಸುತ್ತಿದ್ದಾರೆ. ಇದುವರೆಗೆ ಕೆಲ ಸಂಪುಟಗಳು ಮುಗಿದಿವೆ. ನಮ್ಮ ಮೈಸೂರು ಗೌರ್ನಮೆಂಟಿನವರು ಉಚಿತರೀತಿಯಿಂದ ಆ ಪ್ರಯತ್ನಕ್ಕೆ ಪ್ರೋತ್ಸಾಹವನ್ನು ಕೊಟ್ಟಿರುವರೆಂದು ಕೇಳಿ ಪರಭಾಷೆಯವರೂ ಅದಕ್ಕೆ ಮಾಡಿದ ಪ್ರೋತ್ಸಾಹಕ್ಕಾಗಿ ನಾವು ಸಂತೋಷಿಸುತ್ತೇವೆ. ಇದುವರೆಗೂ ಮುದ್ರಿತವಾಗಿರುವ ಭಾಗಗಳಿಗಾಗಿ ೯೦೦ ರೂ.ಗಳನ್ನು ಮುಂದೆ ಮುದ್ರಿತವಾಗುವ ಪ್ರತಿಸಂಪುಟಕ್ಕೂ ೩೦೦ ರೂ.ಗಳಂತೆಯೂ ಕೊಡಲು ಅಪ್ಪಣೆಮಾಡಿದ್ದಾರೆ. ಅನೇಕ ಮುಖವಾಗಿ ಮೈಸೂರಿನ ಔದಾರ್ಯವು ಪ್ರವಹಿಸುತ್ತಿರುವಾಗ ಸಾರಸ್ವತಾಭಿವೃದ್ಧಿ ಪ್ರಯತ್ನಕ್ಕೆ ಮಾಡಲ್ಪಟ್ಟ ಈ ಔದಾರ್ಯವನ್ನು ಸ್ವದೇಶೀಯರಾರೂ ಅಸೂಯೆಪಡಲಾರರು. ಆದರೆ ಕನ್ನಡದಲ್ಲಿ ಇಂಥ ಪ್ರಯತ್ನವನ್ನು ಮಾಡತಕ್ಕ ಪಂಡಿತರಾರೂ ತಲೆತೋರಿಸದಿರುವುದಕ್ಕಾಗಿ ಮಾತ್ರ ವಿಷಾದಿಸಬೇಕಾಗಿರುವುದು. ಪರರಿಗೇ ಪರಭಾಷೆಗೇ ಅಷ್ಟು ಪ್ರೋತ್ಸಾಹವಿತ್ತ ನಮ್ಮ ಸರ್ಕಾರವು ಸ್ವದೇಶಭಾಷೆಯ ವಿಷಯದಲ್ಲಿ ಇನ್ನೆಷ್ಟು ಸಹಾಯಮಾಡಬಹುದು !

ಭರತಖಂಡದ ವೃತ್ತಾಂತಗಳು.

ಮಿತವಾದಿಗಳ ರಾಷ್ಟ್ರೀಯ ಮಹಾಸಭೆಯು ಈ ವರ್ಷ ಕಲ್ಕತ್ತಾಪಟ್ಟಣದಲ್ಲಿ ಸರ್ ಶಿವಸ್ವಾಮಯ್ಯರ್‌ರವರ ಅಧ್ಯಕ್ಷತೆಯಲ್ಲಿ ಕೂಡುವುದಾಗಿದೆ.

ಲಾರ್ಡ್ ಸಿಹ್ಮರವರೂ ಬಾಬು ಭೂಪೇಂದ್ರನಾಥ ಬಾಸುರವರೂ ಸಹ ಸೀಮೆಯಿಂದ ಭರತಖಂಡಕ್ಕೆ ಪ್ರಯಾಣಮಾಡಿ ಬರುವವರಾಗಿದ್ದಾರೆ. ಡಿಶಂಬರ್ ತಾ|| ೨೭ ರಲ್ಲಿ ಫ್ರಾನ್ಸ್ ದೇಶದ ಮಾರ್ಸಲೇಸ್ ಪಟ್ಟಣದಲ್ಲಿ ಹಡಗನ್ನು ಹತ್ತುವರು. ಇಲ್ಲಿಂದ ಅವರು ಸೀಮೆಗೆ ಮರಳಿ ಮೇ ತಿಂಗಳಲ್ಲಿ ಪ್ರಯಾಣಮಾಡುವವರಾಗಿದ್ದಾರಂತೆ.

ಹೈದರಾಬಾದಿನಲ್ಲಿ ಯುದ್ಧಶಾಂತ್ಯುತ್ಸವಗಳಿಗಾಗಿ ೧ ಲಕ್ಷ ರೂ.ಗಳು ವ್ಯಯಮಾಡಲ್ಪಟ್ಟುವು. ಸರ್ ಅಲಿಇಮಾಂರವರೂ ರೆಸಿಡೆಂಟರೂ ಸೇರಿ ಎಲ್ಲ ಉತ್ಸವಗಳನ್ನು ಬಹು ವಿಜೃಂಭಣೆಯಿಂದ ನಡೆಯುವಂತೆ ಮಾಡಿದರು. ಯುದ್ಧಸ್ಮಾರಕಕ್ಕಾಗಿ ನೈಜಾಮರು ಒಂದು ಶಾಶ್ವತಭವನವನ್ನು ಕಟ್ಟಿಸುವವರಾಗಿದ್ದಾರೆ. ಅದರ ಶಂಕುಸ್ಥಾಪನವನ್ನು ಬ್ರಿಟಿಷ್ ರೆಸಿಡೆಂಟ್ ಮಿ|| ಎಸ್. ಎಂ. ಫ್ರೇಜರ್‌ರವರು ನೆರವೇರಿಸಿದರು.

ಭಾರತ ರಾಜಕೀಯ ಸಂಸ್ಕರಣ ಶಾಸನವು ಲಾರ್ಡುಗಳ ಸಭೆಯಲ್ಲಿ ವಾಚಿತವಾಗುವ ಶಾಸ್ತ್ರವು ಮುಗಿದಿತು. ಇಷ್ಟರಲ್ಲೇ ಅದು ಸಾರ್ವಭೌಮರ ಅನುಮತಿಯನ್ನು ಹೊಂದುವುದರಲ್ಲಿದೆ. ಈ ನೂತನ ಶಾಸನದ ಪ್ರಕಾರ ಭರತಖಂಡದಲ್ಲಿ ಏರ್ಪಡುವ ಶಾಸನ ಸಭೆಗಳ ಪ್ರಾರಂಭಮಹೋತ್ಸವವನ್ನು ಮಾಡುವುದಕ್ಕಾಗಿ ಯುವ ಚಕ್ರವರ್ತಿಯವರು ಭರತಖಂಡಕ್ಕೆ ಮುಂದಣ ವರ್ಷದ ಅಕ್ಟೋಬರ್ ತಿಂಗಳಲ್ಲಿ ದಯಮಾಡಿಸುವವರಾಗಿದ್ದಾರೆ. ಆಗ ದಿಲ್ಲಿಯಲ್ಲಿ ದೊಡ್ಡ ದರ್ಬಾರು ಜರಗುತ್ತದೆ. ಅನೇಕ ಸ್ವದೇಶ ರಾಜರುಗಳು ಅಲ್ಲಿಗೆ ಹೋಗುತ್ತಾರೆ.

ಅಮೇರಿಕಾ ರಾಜ್ಯಾಂಗಸಭೆಯವರು ಸಂಧಿಪತ್ರವನ್ನೊಪ್ಪುವಲ್ಲಿಯೂ ಸರ್ವದೇಶಸಮ್ಮೇಳನಕ್ಕೆ ಸೇರುವಲ್ಲಿಯೂ ಸ್ವಲ್ಪ ಹಿಂದೇಟು ಹೊಡೆಯುತ್ತಿರುವುದರಿಂದ, ಜರ್ಮನರು ಕೂಡ ಸಂಧಿನಿಬಂಧನೆಗಳಿಗೆ ತಪ್ಪಿ ನುಣುಚಿಕೊಳ್ಳುವ ಸ್ಥಿತಿಯು ಕಾಣುತ್ತಿದೆಯಷ್ಟೆ. ಇದರಿಂದ ಜರ್ಮನ ಪ್ರಭುತ್ವದವರು ಸಂಧಿಪತ್ರದ ಮೇಲೆ ಒಪ್ಪುಗೆಯ ಹಸ್ತಾಕ್ಷರವನ್ನು ಹಾಕಲಾರರೆಂದೂ, ಮರಳಿ ಯುದ್ಧವು ಹುಟ್ಟಬಹುದೆಂದೂ ವಾರ್ತೆಗಳು ತರತರಂಗವಾಗಿ ಹುಟ್ಟಲುಪಕ್ರಮಿಸಿರುವುವು. ಆದರೆ ಸೀಮೆಯಲ್ಲಿ ಯುದ್ಧಮಂತ್ರಿಯಾದ ವಿನ್‌ಸ್ಟನ ಚರ್ಚಿಲ್‌ರವರು ಪಾರ್ಲಿಮೆಂಟಿನಲ್ಲಿ ಉಪನ್ಯಾಸಮಾಡುವಾಗ್ಗೆ-ಜರ್ಮನರು ತಮ್ಮ ಸೈನ್ಯದಲ್ಲಿ ಬಹುಭಾಗವನ್ನು ಈಗಾಗಲೇ ತಗ್ಗಿಸಿರುವರೆಂತಲೂ, ಇನ್ನು ೧೪೦೦೦೦ ಸೈನ್ಯವನ್ನು ಮಾತ್ರ ಅವರು ತೆಗೆದುಹಾಕಬೇಕಾದುದು ಉಳಿದಿರುವುದೆಂತಲೂ, ಸಾಧ್ಯವಾದಷ್ಟುಬೇಗನೆ ಅದನ್ನುಕೂಡ ಅವರು ತೆಗೆದುಬಿಡುವುದರಲ್ಲಿದ್ದಾರೆಂತಲೂ ೧೯೧೯ನೆ ಅಗಸ್ಟ ತಿಂಗಳಲ್ಲಿ ಅವರ ಹತ್ತಿರ ೫ ಲಕ್ಷ ಸೈನ್ಯವಿದ್ದು ಈಗ ೩೦೯೦೦೦ ಸೈನ್ಯ ಮಾತ್ರ ಇದೆಯೆಂತಲೂ, ಮರಳಿ ಯುದ್ಧಮಾಡುವುದಕ್ಕಾಗಿ ಅವರು ಹೊಸದಾಗಿ ಸೈನ್ಯವನ್ನು ಕೂಡಿಸಿಕೊಳ್ಳಲು ಪ್ರಯತ್ನಿಸುವಂತೆ ನನಗೆ ತಿಳಿದುಬಂದಿಲ್ಲವೆಂತಲೂ ಹೇಳಿರುವುದನ್ನು ನೋಡಿದರೆ ಮರಳಿ ಯುದ್ಧಕ್ಕೆ ದುಮಿಕುವುದು ಈಗ ಯಾರಿಗೂ ಸುಲಭವಾಗಿಲ್ಲವೆಂದು ವ್ಯಕ್ತವಾಗುತ್ತದೆ.

ಪ್ರಸಿದ್ಧಪತ್ರಿಕೆ.

ಮುಡುಕುತೊರೆ ಶ್ರೀ ವೀರಶೈವ ಮತಸಂವರ್ಧಿನೀ ಸಭಾ.

ಈ ವರ್ಷದ ಮಾಘ ಶುದ್ಧ ದಶಮಿ ಯಾರಭ್ಯ ನಡೆಯುವ ಸಭೆಗೆ ಬಂದು ಷಡಕ್ಷರಿಮಂತ್ರಿ ವಿರಚಿತ ವೀರಶೈವ ಸಿದ್ಧಾಂತ ಶಿರೋಮಣಿಯಮೇಲೆ ಅನಾದಿಶೈವ ಮುಂತಾದ ಸ್ಥಳಗಳ ಭೇದಗಳ ಸ್ವರೂಪವನ್ನು ಕುರಿತ ಉಪನ್ಯಾಸವನ್ನು ಮಾಡುವುದರಲ್ಲಿ ಉತ್ತಮ ತರಗತಿ ಪಾಸಾದವರಿಗೆ ೨೦ ರೂಪಾಯಿಗಳ ಬಹುಮಾನಗಳು ಕೊಡಲ್ಪಡುವುವು. ಸದರಿ ಭಾಷಣಗಳು 15-1-1920 ರೊಳಗೆ ಕೊಯಮತ್ತೂರು ಜಿಲ್ಲ ಕೊಳ್ಳೆಗಾಲದಲ್ಲಿರುವ ವರ್ಕಿಂಗ್ ಕಮಿಟಿ ಅಧ್ಯಕ್ಷರಾದ ಶ್ರೀಯುತ ಜಿ. ಪಿ. ಮಲ್ಲಪ್ಪನವರ ಬಳಿಗೆ ಕಳುಹಿಸಲ್ಪಡಬೇಕು. ಸಭೆಗೆ ಬರಲಾರದೆ ಉಪನ್ಯಾಸಗಳನ್ನು ಮಾತ್ರ ಕಳುಹಿಸುವವರಿಗೆ ಯಥೋಚಿತ ಬಹುಮಾನವು ದೊರೆಯುವುದು.

ಮುಡುಕುತೊರೆ } ಪಿ. ಆರ್. ಕರಿಬಸವಶಾಸ್ತ್ರಿ
ಮೈಸೂರು ಡಿ|| } ಅಜೀವಸಭಾಧ್ಯಕ್ಷರು.

ಪತ್ರವ್ಯವಹಾರ.

ಡಿಸ್ಟ್ರಿಕ್ಟ್‌ವಾರ್ ಲೆಜಿಸ್ಲೇಟೀವ್ ಕೌನ್ಸಿಲ್ ಮೆಂಬರುಗಳ ಚುನಾವಣೆ.

ಸ್ವಾಮಿ,

ಡಿಸ್ಟ್ರಿಕ್ಟಿಗೆ ಒಬ್ಬೊಬ್ಬರನ್ನಂತೆ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರನ್ನು ಪ್ರಜೆಗಳು ಚುನಾಯಿಸಿ ಕಳುಹಿಸಿಕೊಡಬೇಕಾದ ಕಾಲವು ಸಮೀಪಿಸಿರುತ್ತದಷ್ಟೆ. ಪ್ರಜಾಪ್ರತಿನಿಧಿಸಭೆಗೆ ಮೆಂಬರನ್ನು ತನ್ನ ಓಟನ್ನು ಕೊಟ್ಟು ಚುನಾಯಿಸಲು ಅರ್ಹತೆಯುಳ್ಳ ಅಂದರೆ (೫೦ ರೂ. ಭೂಕಂದಾಯವನ್ನೋ ಅಥವಾ ೧೦ ರೂ. ಮೊಹತರ್ಫಾ ಕಂದಾಯವನ್ನೊ ಕೊಡತಕ್ಕವರುಗಳು) ಪ್ರತಿಯೊಬ್ಬರೂ ಒಂದೊಂದು ಓಟನ್ನು ತನಗೆ ಬೇಕಾದವನಿಗೆ (ಎಂದರೆ ತಮ್ಮ ಡಿಸ್ಟ್ರಿಕ್ಟಿನಿಂದ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಲು ಹೋಗುತ್ತೇನೆಂದು ನಿಂತಿರುವ ಉಮೇದುವಾರರುಗಳಲ್ಲಿ ಒಬ್ಬರಿಗೆ) ಒಂದು ಓಟನ್ನು ಕೊಡಲು ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಅಧಿಕಾರವಿರುವಂತೆ ನಮ್ಮ ಘನ ಪ್ರಜಾಪ್ರಿಯ ಸರ್ಕಾರದವರು ಹೊಸದಾಗಿ ಅಪ್ಪಣೆ ಕೊಟ್ಟಿರುತ್ತಾರಷ್ಟೆ. ಇದರಂತೆ ಚುನಾವಣೆಯು ಬರುವ ೧೯೨೦ ನೆ ಜನವರಿ ತಿಂಗಳ ಮೊದಲನೆ ವಾರದಲ್ಲಿ ಪ್ರತಿ ತಾಲ್ಲೂಕು ಮತ್ತು ಸಬ್ ತಾಲ್ಲೂಕು ಸ್ಥಳಗಳಲ್ಲಿ ನಡೆಯುವುದಾಗಿರುತ್ತದೆ. ಚುನಾವಣೆಯು ಇಂಥ ತಾರೀಖಿನಲ್ಲಿ ನಡೆಯುವುದೆಂಬ ವಿಷಯವನ್ನು ಸರ್ಕಾರದವರು ಮುಂದಾಗಿ ಪ್ರಕಟನೆಯ ಮೂಲಕ ತಿಳಿಯಪಡಿಸುತ್ತಾರೆ. ಆ ಕಾಲಕ್ಕೆ ಮೇಲ್ಕಂಡ ರೀತಿಯ ಅರ್ಹತೆಯುಳ್ಳ ಪ್ರತಿಯೊಬ್ಬ ಓಟರೂ ಯಾವ ಕೆಲಸವಿದ್ದರೂ ಬಿಟ್ಟು ತನ್ನ ಕಡೆಯಲ್ಲಿ ಪ್ರಜೆಗಳ ಹಿತಕ್ಕಾಗಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿ ಯಾರು ನಿರ್ಭಯವಾಗಿಯೂ ಮುತುವರ್ಜಿಯಿಂದಲೂ ವಾದಾನುವಾದಗಳನ್ನು ಮಾಡಿ ಕಾರ್ಯನಿರ್ವಾಹ ಮಾಡಬಲ್ಲರೆಂಬ ನಂಬುಗೆಗೆ ಅರ್ಹರೋ ಅಂಥವರೊಬ್ಬರ ಹೆಸರಿಗೆ ತನ್ನ ಒಂದೊಂದು ಓಟನ್ನು ಕೊಟ್ಟು ಬರಬೇಕಾಗಿರುತ್ತದೆ.

ಆದರೆ ಈ ಸಂದರ್ಭದಲ್ಲಿ ಪ್ರಜಾಮಿತ್ರಮಂಡಲಿಯವರು ಒಂದು ನೋಟೀಸನ್ನು ಪ್ರಕಟಪಡಿಸಿ, ಬೆಂಗಳೂರು, ಕೋಲಾರ, ಮೈಸೂರು, ಚಿತ್ರದುರ್ಗ, ಹಾಸನ, ಕಡೂರು—ಈ ೬ ಡಿಸ್ಟ್ರಿಕ್ಟುಗಳಿಗೆ ಮಾತ್ರ, ಹಿಂದುಳಿದವರ ಪೈಕಿ ಉಮೇದುವಾರರಾಗಿ ನಿಂತಿರುವ ಒಬ್ಬೊಬ್ಬ ದೊಡ್ಡಮನುಷ್ಯರ ಹೆಸರನ್ನು ತಿಳಿಸಿ, ಅವರುಗಳಿಗೆ ಓಟನ್ನು ಕೊಡಬೇಕೆಂದು ಪ್ರಜೆಗಳಿಗೆ ಬಿನ್ನೈಸಿಕೊಂಡಿರುತ್ತಾರೆ. ಅದರಲ್ಲಿ ನ್ಯೂನತೆ ಕಂಡುಬಂದುದ್ದರಿಂದ ನಾನು ಈ ಕರೆಸ್ಪಾಂಡೆನ್ಸನ್ನು ಬರೆದು ಎಚ್ಚರಿಸಬೇಕಾಯಿತು.

ಮೈಸೂರು ದೇಶದಲ್ಲಿ ಲಿಂಗಾಯಿತ ಕಮ್ಯೂನಿಟಿಯು ಹೆಚ್ಚು ಪ್ರಜಾಸಂಖ್ಯೆಯುಳ್ಳ ಒಂದು ಮುಖ್ಯ ಜನಾಂಗವಾಗಿಯೂ, ಇದು ಹಿಂದುಳಿದ ಜನವರ್ಗಗಳ ಗುಂಪಿನಲ್ಲಿ ಸೇರಿದ್ದಾಗಿಯೂ ಇರುತ್ತಿರುವಲ್ಲಿ, ಪ್ರಜಾಮಿತ್ರಮಂಡಲಿಯವರು ತಾವು ಆರಿಸಿಕೊಂಡು ನಮೂದಿಸಿರುವ ಹೆಸರುಗಳಲ್ಲಿ ಈ ಕಮ್ಯೂನಿಟಿಯ ಯಾವೊಬ್ಬ ದೊಡ್ಡಮನುಷ್ಯರ ಹೆಸರನ್ನೂ ನಮೂದಿಸದೆ ಬಿಟ್ಟುಬಿಟ್ಟಿರುತ್ತಾರೆ. ಏನುಕಾರಣವೋ ಗೊತ್ತಾಗಲಿಲ್ಲ. ಈ ಕಮ್ಯೂನಿಟಿಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಮೆಂಬರಾಗಿ ಹೋಗಲು ಅರ್ಹತೆಯುಳ್ಳ ಜನರುಗಳಿಗೆ ಪ್ರೋತ್ಸಾಹವಿತ್ತು ಅಂಥ ಒಬ್ಬರಿಬ್ಬರ ಹೆಸರನ್ನಾದರೂ ಈ ಪಟ್ಟಿಯಲ್ಲಿ ನಮೂದಿಸುವದು ಮಂಡಲಿಯವರ ಕರ್ತವ್ಯವಾಗಿತ್ತೆಂದು ನಾನು ತಿಳಿಯುತ್ತೇನೆ. ಹೀಗಿರುವಲ್ಲಿ ಈ ಕಮ್ಯೂನಿಟಿಯವರಾಗಿ ಚಿತ್ರದುರ್ಗದ ಫಸ್ಟ್‌ಗ್ರೇಡ್ ಪ್ಲೀಡರ್ ಮ|| ಸಿದ್ಧನಂಜಪ್ಪನವರೂ, ಬೆಂಗಳೂರಿನ ಸಾ|| ಗ್ರಂದಿಗೆ ಪಾಪಣ್ಣನವರ ಮಕ್ಕಳು ಮ|| ಮುನಿಬಸಪ್ಪನವರೂ, ಮೈಸೂರು ಡಿಸ್ಟ್ರಿಕ್ಟ್ ನಾಗವಾಲದ ಪಟೇಲ್ ಮ|| ಎಲ್. ಮಲ್ಲಣ್ಣನವರೂ ಸಹ ಉಮೇದುವಾರರಾಗಿ ನಿಂತಿದ್ದರೂ ಅವರ ಹೆಸರುಗಳನ್ನು ಕೂಡ ಮಂಡಲಿಯವರು ಉದಾಹರಿಸದೆ ಬಿಟ್ಟುಕೊಟ್ಟಿರುತ್ತಾರೆ. ಸದ್ಯಃ ಮಂಡಲಿಯವರ ಕರ್ತವ್ಯಲೋಪವನ್ನು ಕುರಿತು ವಿಚಾರಮಾಡುವುದಕ್ಕೆ ನಾನು ಪ್ರವರ್ತಿಸುವುದಿಲ್ಲ. ದೇಶದ ಮುಖ್ಯ ಕಮ್ಯೂನಿಟಿಗಳಲ್ಲಿ ಲಿಂಗಾಯಿತ ಕಮ್ಯೂನಿಟಿಯೂ ಒಂದಾದದ್ದೆಂದೂ, ಅದರ ಪ್ರತಿನಿಧಿಗಳು ಸಹ ಡಿಸ್ಟ್ರಿಕ್ಟು ಚುನಾವಣೆಯಲ್ಲೂ ಬರಬೇಕಾದದ್ದು ಯುಕ್ತವಾದದ್ದೆಂದೂ ನೆನಸಿ, ಪರಸ್ಪರ ನಂಬುಗೆ ಐಕಮತ್ಯ ಪ್ರೀತಿಗಳ ಫಲವನ್ನು ಯೋಚಿಸಬಲ್ಲ ಮಹಾಜನರಾದ ಓಟರುಗಳು ಮೇಲೆ ಹೇಳಿದ ಉಮೇದುವಾರರಾದ ಲಿಂಗಾಯಿತ ಮೆಂಬರುಗಳ ಹೆಸರನ್ನು ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ಓಟನ್ನು ಅವಶ್ಯಕವಾಗಿ ಕೊಡುವವರಾಗಬೇಕೆಂದು ಬಿನ್ನೈಸುತ್ತೇನೆ.

ಬೆಂಗಳೂರು.
ಶಿವಪ್ಪ.

ಚಿತ್ರದುರ್ಗದ ತಾ|| ಜಂಪಣ್ಣನಾಯಕನಕೋಟೆ ತೆಪ್ಪೋತ್ಸವ.

ಈ ಗ್ರಾಮದ ಕೆರೆ ಸುಮಾರು 35 ವರ್ಷಗಳ ಲಾಗಾಯಿತು ತುಂಬಿರಲಿಲ್ಲ. ಈ ವರ್ಷ ನವಂಬರ್ ತಿಂಗಳಿನಲ್ಲಿ ಕೆರೆ ತುಂಬಿ ಕೋಡಿ ಬಿದ್ದಿರುತ್ತದೆ. ಇದರಿಂದ ಈ ಗ್ರಾಮದವರಿಗೆ ಉಂಟಾದ ಸಂತೋಷಕ್ಕೆ ಪಾರವೇ ಇಲ್ಲ. ಇದಕ್ಕಾಗಿ ಈ ಗ್ರಾಮದವರು ಮತ್ತು ಇದಕ್ಕೆ ಸೇರಿದ ಮಜರೆ ಗ್ರಾಮಗಳಾದ ನರೇನಹಾಳು, ಕಳ್ಳಿಕೊಪ್ಪದವರು ಸಹ ಸೇರಿ ತಾ|| 27-11-19 ನೇ ಗುರುವಾರದ ದಿವಸ ತೆಪ್ಪೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡಿಸಿರುವದು ತುಂಬಾ ಸ್ತೋತ್ರಾರ್ಹವಾಗಿದೆ. ಈ ಮಹೋತ್ಸವಕ್ಕೆ ಪರಸ್ಥಳಗಳಿಂದ ಸುಮಾರು ಮೂರು ಸಾವಿರ ಜನಗಳ ಮೇಲೆ ಸೇರಿದ್ದರು. ಬಂದ ಜನಗಳಿಗೆಲ್ಲಾ ಗ್ರಾಮಸ್ಥರು ಭೋಜನದ ಏರ್ಪಾಟು ಬಹಳ ತೃಪ್ತಿಕರವಾಗಿ ನಡಿಸಿರುವದು ತುಂಬಾ ಶ್ಲಾಘನೀಯವಾಗಿದೆ. ಭೋಜನದ ಏರ್ಪಾಟಿಗಾಗಿ ಗ್ರಾಮಸ್ಥರು ಮಾಡಿರತಕ್ಕ ಮೆಹನತ್ತನ್ನು ಎಷ್ಟು ವರ್ಣಿಸಿದರೂ ತೀರದು.

ಪ್ರತ್ಯಕ್ಷದರ್ಶಿ
ಕೆ. ಕರಿಬಸವಯ್ಯ, ಜಂಪಣ ನಾಯಕನಕೋಟೆ.

ವಡಿಗೇನಹಳ್ಳಿ.

ಈ ಊರಿನಲ್ಲಿ 300 ಮನೆಗಳವರೆಗೂ ಶಿವಾಚಾರದ ವೈಶ್ಯರಿರುತ್ತಾರೆ. ಇವರಲ್ಲಿ ಅನೇಕರು ದೊಡ್ಡದೊಡ್ಡ ವ್ಯಾಪಾರಸ್ಥರಾಗಿ ಇದುವರೆಗೂ ವಿದ್ಯಾಭಿವೃದ್ಧಿ ವಿಷಯದಲ್ಲಿ ಹಿಂದುಳಿದಿದ್ದು ಈಚೆಗೆ ಇಂಗ್ಲೀಷು ವಿದ್ಯಾಭ್ಯಾಸದಲ್ಲಿಯೂ ಬಹಳ ಶ್ರದ್ಧೆಯನ್ನ ವಹಿಸುತ್ತಾ ತಮ್ಮ ಬಾಲಕರನ್ನ ಎಫ್. ಎ. ಬಿ.ಎ. ವರೆಗೂ ಅಭ್ಯಾಸಮಾಡಿಸುತ್ತಾ ಇರುತ್ತಾರೆ.

ಈಚೆಗೆ ಬೆಂಗಳೂರಿನಲ್ಲಿ ಶಿವಾಚಾರ ವೈಶ್ಯ ವಿದ್ಯಾವರ್ಧಕ ಸಂಘವೆಂಬದಾಗಿ ಒಂದು ಸಂಘವನ್ನು ಸ್ಥಾಪಿಸಿ ಈ ಊರಿನ ಅನೇಕರು ಈ ಸಂಘಕ್ಕೆ ಅಧಿಕವಾಗಿ ಸಹಾಯಮಾಡಿಯೂ ಮಾಡುತ್ತಲೂ ಇರುತ್ತಾರೆ.

ಪಾರಮಾರ್ಥಿಕ ವಿಷಯದಲ್ಲಿ ಮೊದಲಿನಿಂದಲೂ ಶ್ರಮವನ್ನು ವಹಿಸುತ್ತಿರುವ ಮ|| ಎಂ. ಪ್ರಭುಸ್ವಾಮಪ್ಪನವರೂ ತಮ್ಮಂತೆಯೇ ತಮ್ಮ ಮಕ್ಕಳಾದ ರಾಮಬಸಪ್ಪನವರನ್ನ ಪಾರಮಾರ್ಥಿಕ ವಿಷಯದಲ್ಲಿ ತಯಾರುಮಾಡಬೇಕೆಂಬ ಇರಾದೆಯಿಂದ ಇವರನ್ನು ಕನ್ನಡ, ಇಂಗ್ಲೀಷು, ಸಂಗೀತ ಇವುಗಳಲ್ಲಿ ತಯಾರುಮಾಡಿಸಿ ಜ್ಞಾನಸಂಬಂಧವಾದ ಶಿವಕಥೆಯಲ್ಲಿ ವೇದಮನಾರಾಧ್ಯರೆಂಬ ಮಹನೀಯರ ಕಥೆಯನ್ನು 12-11-19ರ ರಾತ್ರಿ ಈ ಊರು ನಡುಪೇಟೆಯಲ್ಲಿ ಅನೇಕ ಜನ ಬ್ರಾಹ್ಮಣರು ಲಿಂಗಾಯಿತರು ಲಿಂಗಾಯಿತ ವೈಶ್ಯರು ಇನ್ನೂ ಇತರ ಮತಸ್ಥರಿಂದ ಕೂಡಿದ ಸಭೆಯಲ್ಲಿ ಸಂಗೀತ ವಾದ್ಯಗಳೊಡನೆ ಎಲ್ಲರ ಮನಸ್ಸನ್ನೂ ಲೀನಗೊಳಿಸುವಂತೆ ಶಿವಕಥಾಶ್ರವಣವನ್ನು ಮಾಡಿಸಿದರು. ಮೇಲ್ಕಂಡ ರಾಮಬಸಪ್ಪನವರನ್ನು ಲಿಂಗಾಯಿತ ವೈಶ್ಯರು ಇರುವ ಎಲ್ಲಾ ಕಡೆಗಳಿಗೂ ಕರಿಸಿಕೊಂಡು ಇವರ ವಿದ್ಯಾಶಕ್ತಿಯನ್ನ ಮತ್ತಷ್ಟು ಅಭಿವೃದ್ಧಿ ಪಡಿಸಬೇಕಾಗಿ ಕೋರುವ,

ಶಿ. ಮುಪ್ಪಣ್ಣ, ಲಿಂಗಾಯಿತ ವೈಶ್ಯ.

ನಂಜನಗೂಡು.

ಕಳೆದ ಹದಿನಾಲ್ಕನೆಯ ತಾರೀಖಿನ ದಿನ ಇಲ್ಲಿಯ ಕೋಆಪರೇಟಿವ್ ಸೊಸೈಟಿಯವರು ಸುಮಾರು ಒಂದು ಸಾವಿರ ಮಂದಿ ದೀನಾನಾಥರಿಗೆ ತೃಪ್ತಿಯಾಗುವಂತೆ ಭೋಜನಮಾಡಿಸಿದರು. ಈ ಕಾರ್ಯದಲ್ಲಿ ಮುಂದಾಗಿ ನಿಂತು ಸಮರ್ಪಕವಾಗಿ ನೆರವೇರಿಸಿದ ವೀರಶೈವ ತರುಣರು ಶ್ರೀಯುತ ರುದ್ರಸೇನರು ಕೆ. ನಂಜುಂಡಯ್ಯ ಮೊದಲಾದವರ ಶ್ರಮವು ಶ್ಲಾಘ್ಯವಾದುದಾಗಿದ್ದಿತು. ಸುಮಾರು ಇನ್ನೂರು ರೂಪಾಯಿಗಳಿಗೆ ಮೇಲ್ಪಟ್ಟು ಮುನಿಸಿಪಾಲಿಟಿಯ ಹಣ ವೆಚ್ಚಮಾಡಿದ್ದರೂ ಇಂತಹ ಸತ್ಕಾರ್ಯಕ್ಕೆ ಒಂದು ಕಾಸಾದರೂ ಕೊಡದಂತಾದುದು ಮುಂದುವರಿದ ಜನಾಂಗದವರ ಕೈಸೇರಿ ಈ ಸತ್ಕಾರ್ಯವು ಬಾರದಿದ್ದುದೇ ಕಾರಣವೆಂದು ಜನರಾಡಿಕೊಳ್ಳುವರು. ಇಲ್ಲಿನ ಮುನಿಸಿಪಾಲಿಟಿಯ ವರ್ತನವು ಮಾರ್ಪುಗೊಳ್ಳದಿದ್ದರೆ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಹೋರಾಡದೆ ಹಿಂದುಳಿದವರು ಮತ್ತೇನು ಮಾಡಬೇಕು? ಬಾಲಕರಿಗೆ ಹಂಚಿದ ಬಡ್ಡುಗಳು ವೆಚ್ಚಕ್ಕೆ ತಕ್ಕಂತೆ ಪ್ರತಿಫಲವುಳ್ಳವುಗಳಲ್ಲವೆಂದೂ ಸಾರ್ವಜನಿಕ ಕೃತ್ಯಗಳ ನೆವದಿಂದ ಹಣಗಳಿಸುವ ಉದ್ಯೋಗವೇ ಸ್ವಭಾವವಾಗುಳ್ಳ ಕೆಲವು ನೀಚರೇ ಇದಕ್ಕೆ ಕಾರಣವೆಂದೂ ಕೆಲರಾಡಿಕೊಳ್ಳುವರು. ಇಲ್ಲಿನ ಪಂಚಮರೂ ಸಹ ಶ್ರೀಮನ್ಮಹಾರಾಜರವರ ಭಾವಚಿತ್ರದ ಮೆರವಣಿಗೆಯನ್ನು ವಾದ್ಯಸಮೇತರಾಗಿ ರಾಜಬೀದಿಗಳಲ್ಲಿ ಅತ್ಯುತ್ಸಾಹದಿಂದ ನೆರವೇರಿಸಿದುದು ಅತೀವವಿಶೇಷವು. ಮಿಕ್ಕುಳಿದ ಶಾಂತ್ಯುತ್ಸವ ಪ್ರಯುಕ್ತವಾದ ಕಾರ್ಯಗಳು ಅಷ್ಟೇನೂ ಹೆಸರಿಡುವಂತಹುಗಳಾಗಿರಲಿಲ್ಲ.

ನಿಷ್ಪಕ್ಷಪಾತಿಗಳಾದ ಅಮಲ್ದಾರ್ರವರ ಅಧ್ಯಕ್ಷತೆಯಲ್ಲಿ ನೆರವೇರಿದ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವವೂ, ಪುರವಾಸಿಗಳ ಮತ್ತು ಬಾಲಕರ ಸಹಿತವಾದ ಚಕ್ರವರ್ತಿ ದಂಪತಿಗಳ ಮತ್ತು ನಮ್ಮ ಖಾವಂದರವರ ಭಾವಚಿತ್ರಗಳ ಮೆರವಣಿಗೆಗಳ ವೈಭವವೂ ಅಭೂತಪೂರ್ವವಾಗಿದ್ದುವು.

ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಹೊಸಪೇಷ್ಕಾರರು ಬಂದು ಅತ್ಯಲ್ಪ ದಿನಗಳಾಗಿದ್ದರೂ ಈಗಾಗಲೇ ಜನರನುರಾಗಕ್ಕೆ ಪಾತ್ರರಾಗಿರುವರು. ಭಕ್ತಾದಿಗಳಿಗೆ ವಿಶೇಷ ನೆರವಾಗಿ ಪ್ರೋತ್ಸಾಹಕೊಡುತ್ತಿರುವರು. ತಿಂಡಿಕೂಟದ ದುರಹಂಕಾರಿಗಳಾದ ಕೆಲವು ಮಂದಿ ಪಟ್ಟಣವಾಸರು ಪ್ರಜಾಸೇವೆಯಲ್ಲಿ ಈ ಲೋಕಪ್ರಿಯ ಅಮಲ್ದಾರರವರ ಮಾದರಿಯನ್ನನುಸರಿಸಬಾರದೆ?

ನಿಷ್ಪಕ್ಷಪಾತಿ.

ವಿದ್ಯಾವರ್ಧಕಫಂಡಿನ ದ್ರವ್ಯಸಹಾಯ.

ಬೆಂಗಳೂರಲ್ಲಿ ಏರ್ಪಾಡುಮಾಡಿರುವ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಕೆಲಸಕಾರ್ಯಗಳಲ್ಲಿ ಹೆಚ್ಚು ಮೆಹನತ್ತು ವಹಿಸಿ ತಮ್ಮ ಸ್ವಂತ ಕೆಲಸಗಳಿಗಿಂತಲೂ ಅಧಿಕವಾದ ಭಾವನೆಯನ್ನು ತೋರಿಸಿ ಸಂಘವನ್ನು ಉನ್ನತಸ್ಥಿತಿಗೆ ತರಬೇಕೆಂದು ಪ್ರಯತ್ನಪಡುತ್ತಿರುವ ಪ್ರೆಸಿಡೆಂಟ್ ಕೆ. ಪಿ. ಪುಟ್ಟಣ್ಣಸೆಟ್ಟಿ ಸಿ. ಐ. ಇ. ಯವರು, ಸೆಕ್ರೆಟರಿ ಮ|| ಜಿ. ಪರಮಶಿವಯ್ಯನವರು ಮೊದಲಾದ ಮಹನೀಯರುಗಳ ಉಪಕಾರವು ಚಿರಸ್ಮರಣೀಯವಾಗಿರುತ್ತೆ. ಇವರುಗಳ ಪೇಲ್ಪಂಕ್ತಿಯನ್ನನುಸರಿಸಿ ಕೊರಟಗೆರೆ ಸ|| ತಾ|| ತೀತದ ಗ್ರಾಮದ ವೀರಶೈವರ ಭದ್ರಣ್ಣನವರ ಮನೆಯಲ್ಲಿ ನಡೆದ ವಿವಾಹಮಹೋತ್ಸವ ಕಾಲದಲ್ಲಿ ನೆರೆದಿದ್ದ ಹೊಳವನಹಳ್ಳಿ ಶೆಟ್ಟರು, ಯಜಮಾನರು ಇನ್ನೂ ಅನೇಕ ಕಟ್ಟೆಮನೆ ದೈವದವರ ಸಮಕ್ಷಮ ಪರಸ್ಪರ ಸಂಭಾಷಿಸಿ ನಮ್ಮ ಬಾಲಕರುಗಳು ವಿದ್ಯೆಯಲ್ಲಿ ಹಿಂದುಳಿದಿರುವ ಸಂಗತಿ ಸರ್ವರಿಗೂ ತಿಳಿದಂತವಾಗಿರುತ್ತೆ. ಇವರ ಶ್ರೇಯೋಭಿವೃದ್ಧಿಗಾಗಿ ಏರ್ಪಡಿಸಿರುವ ಫಂಡಿಗೆ ಈ ಲಾಗಾಯ್ತು ಈ ಗ್ರಾಮದಲ್ಲಿ ನಡೆಯುವ ಶುಭ ಶೋಭನಪ್ರಸ್ತಗಳಲ್ಲಿ ಲಗ್ನ 1 ಕ್ಕೆ ಒಂದು ರೂಪಾಯಿ ಪ್ರಕಾರ ಚಂದಾಮಾಡಿ ಕಳುಹಿಸಿಕೊಡಬೇಕೆಂದು ತೀರ್ಮಾನಮಾಡಿಕೊಂಡಿರುವ ಪ್ರಕಾರ ವಸೂಲಾಗಿ ಫಂಡ್ ಸೆಕ್ರೆಟರಿಯವರಲ್ಲಿಗೆ ರವಾನೆಮಾಡಿದ ನೊಬಲಗನ್ನು ತಪ್ಸೀಲ್‌ವಾರಾಗಿ ಈ ಕೆಳಗೆ ನಮೂದಿಸಿರುತ್ತೆ.

1. ಭದ್ರಣ್ಣನವರಿಂದ ಮಗ ಬಿ. ರುದ್ರಪ್ಪನವರ ಲಗ್ನದಲ್ಲಿ 1 0 0
2. ,, ,, ಶಿವಯ್ಯನವರ ಲಗ್ನದಲ್ಲಿ 1 0 0
3. ಬೆಳ್ಳಾವಿ ಕೋಟೆದಪ್ಪನವರಿಂದ ನಂಜಪ್ಪನವರ ಲಗ್ನದಲ್ಲಿ 1 0 0
4. ಮಿಂಡೇನಹಳ್ಳಿ ಚಿಕ್ಕವೀರಪ್ಪನವರಿಂದ ತಮ್ಮ ಸೋಮಯ್ಯನವರ ಲಗ್ನದಲ್ಲಿ 1 0 0
5. ಕೊರಟಗೆರೆ ಲಿಂಗಪ್ಪನವರಿಂದ ಮಗ ಸಿದ್ದಲಿಂಗಪ್ಪನ ಪ್ರಸ್ತದಲ್ಲಿ 1 0 0
6. ಕೊರಟಗೆರೆ ಬಸಪ್ಪನವರಿಂದ ಡಿಟೋ ಯವರ ಪ್ರಸ್ತದಲ್ಲಿ 1 0 0
7. ಮಂಚೇನಹಳ್ಳಿ ಯಜಮಾನ್ ರುದ್ರಯ್ಯನವರಿಂದ ಇವರ ಪ್ರಸ್ತದಲ್ಲಿ 1 0 0
8. ಮಾದುವಾರದ ಮಲ್ಲಣ್ಣನವರಿಂದ ಪುಟ್ಟಯ್ಯನವರಪ್ರಸ್ತದಲ್ಲಿ 1 0 0
9. ತೀತದ ಭದ್ರಣ್ಣನವರಿಂದ ಇವರ ಮಗ ಶಿವಯ್ಯನವರಪ್ರಸ್ತದಲ್ಲಿ 1 0 0
10. ಹುಚ್ಚವೀರಯ್ಯನ ವಾಳ್ಯದ ಶಿವಯ್ಯನವರಿಂದ ಇವರ ಪ್ರಸ್ತದಲ್ಲಿ 1 0 0
11. ಕ್ಯಾತವಾರದ ನಂಜಪ್ಪನವರಿಂದ ಇವರ ಲಗ್ನದಲ್ಲಿ 1 0 0
12. ತೀತದ ಚನ್ನಬಸವೇಗೌಡರಿಂದ ಗಂಗಪ್ಪನವರ ಲಗ್ನದಲ್ಲಿ 1 0 0
13. ತೀತದ ರುದ್ರಣ್ಣನವರಿಂದ ಮಗ ರುದ್ರಯ್ಯನವರ ,, 1 0 0
14. ತೀತದ ಚಿಕ್ಕವೀರಪ್ಪನವರಿಂದ ಮಗ ಚಿಕ್ಕಮಲ್ಲಪ್ಪನವರ ಲಗ್ನದಲ್ಲಿ 1 0 0
15. ತೀತದ ಜವಳಿ ಅಂಗಡಿ ಯಜಮಾನ್ ಭದ್ರಪ್ಪ, ಭದ್ರಣ್ಣನವರು ಅಂಗಡಿ ಲೆಖ್ಖನೋಡಿ ಬಂದ ಆದಾಯದಲ್ಲಿ 5 0 0
16. ಕ್ಯಾತವಾರದ ನಂಜಪ್ಪನವರಿಂದ ಡಿಟೋಯವರ ಪ್ರಸ್ತದಲ್ಲಿ 1 0 0

ಜಂಲಾ ಇಪ್ಪತ್ತು ರೂಪಾಯಿಗಳನ್ನು ಯಜಮಾನ್ ಭದ್ರಪ್ಪನಿಂದ ಸಂಘದ ಫಂಡ್ ಸೆಕ್ರೆಟರಿಯವರ ಸನ್ನಿಧಾನಕ್ಕೆ ದಫಾವಾರಾಗಿ ರವಾನಿಸಿರುತ್ತೆ,

ಯಜಮಾನ್ ಭದ್ರಪ್ಪ,
ಜವಳಿ ಅಂಗಡಿ, ತೀತ ಪೋ., ಕೊರಟಗೆರೆ.

ಇನ್ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 22

ತಲೆನೋವು, ಕೆಮ್ಮುಉಬ್ಬಸ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ತೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಟ್ಟೇ ಒಂದು ಘಳಿಗೆ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಹುಜ್ಜ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ 0.8.0.

43 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ಪಶುವಿನಿಂದ ತಯಾರಿಸಲಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
43 3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇವರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ



ರಾಮನೂ ಮುಂತಾದವರು ಕಾಣುವರು ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಅಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4.8.0.

ವಿಳಾಸ: —ವಿ. ಎ. ಎಸ್. ಪಾಣಿ ಕಂಪನಿ,
43 ಸಾಹುಕಾರಪೇಟೆ, ಮದರಸಾ.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಬನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಬನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
13 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

೧೯೧೯ ನೆಯ ಇಸವಿ ಡಿಶಂಬರ್ ತಾ|| ೨೧ ರಿಂದ ೧೯೧೯ ನೆಯ ಡಿಶಂಬರ್ ತಾ|| ೨೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾರ್ಗಶಿರ ಬ|| ಚತುರ್ದಶಿಯಿಂದ ಪುಷ್ಯ ಶು|| ೫ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ಮಾಸ
21	ಭಾನು	ಚತು	16-20	ಜೇಷ್ಠ	47-31	6
22	1 ಸೋಮ	ಅಮಾ	21-17	ಮೂಲ	53-58	7
23	2 ಮಂಗಳ	ಪಾಡ್ಯ	26-24	ಪೂಷಾ	59-36	8
24	ಬುಧ	ಬಿದಿಗೆ	30-17	ಉಷಾ	60	9
25	3 ಗುರು	ತದಿಗೆ	33-7	ಉಷಾ	3-45	10
26	4 ಶುಕ್ರ	ಚೌತಿ	34-38	ಶ್ರವಣ	7.9	11
27	ಶನಿ	ಪಂಚ	34-52	ಧನಿ	9-17	12

(1) ಅಮಸೋಮವ್ರತಂ, ಎಳ್ಳಮಾವಾಸ್ಯಾ ಪ್ರಯುಕ್ತ ತೀರ್ಥಹಳ್ಳಿಯಲ್ಲಿ ತುಂಗಾನದಿ ಸ್ನಾನ. (2) ತೀರ್ಥಹಳ್ಳಿಯಲ್ಲಿ ರಾಮೇಶ್ವರಸ್ವಾಮಿ ರಥ. (3) ಮಾರ್ಗಶಿರ ಲಕ್ಷ್ಮೀವ್ರತಂ. (4) ದೂರ್ವಾಗಣಪತಿವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರಿಶ್ಚಿಯನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಡಿಶಂಬರ್ ತಾರೀಖು ೨೮ ನೆಯ ಭಾನುವಾರ (ಸಂಚಿಕೆ ೫೦

REGISTERED NO. M. 124.

MYSORE GOVERNMENT ADVERTISEMENTS.

PUREST raw materials and the FINEST essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

21

GOVERNMENT ART WORKSHOPS, BANGALORE CITY.

Started and worked by Government to encourage and develop the local artisans, Master Artisans in Sandalwood, ivory, and rosewood carving, art furniture, brass embossing and carving, ivory inlaying etc., are employed. Special attention is devoted to workmanship and design.

Costly art furniture work, sandal-wood casket, almirahs, walking sticks, smoking sets, ivory caskets, daggers, card-cases etc., Mysore carved rosewood tables, and Teapoys made largely.

Designs and estimates are furnished to customers.

For further particulars apply to:—
THE SUPERINTENDENT,
Government Metal Factory & Art Workshops,
No. 16. BANGALORE CITY.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಸ್ವಾದನ, ಶರಣಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪದ್ಯದ ಗ್ರಂಥ.

ಪಂಚಸ್ತೋತ್ರ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಸಸೂಕ್ತರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುಭಿಮುಕ್ತಾವಳಿ ೬ ಆಣೆ; ರತ್ನಾಸಕಲ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 9

ನಾವು ಎ. ಆಲ್ ಬ್ಯುಕ್ಕ್ಯಯರ್ ಕ್ಕ ಅಂಡ್‌ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆನಲ್ಲದೆ ಬಾಸಲ್‌ಮಿಷನ್ ವಗ್ಯೆರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಯೆರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ ಕರೇಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

7 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿಶಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವನಾದವರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿವೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕಶಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೋತ್ಸಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ನಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಬರುವವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಂಭ ಶಕೆ ೧೮೫೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೋಕ್ಷೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಬರುವವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಬಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಇರ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲುಬಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
1 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 2

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ. ೦—೮—೦
ಶಿವಪೂಜಾವಿಧಿ. ೦—೧೦—೦
ಚಾರುಶೀಲೆಚರಿತ್ರೆ ೦—೫—೦
ಹರಿದಾಸಿ ೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ ೦—೨—೦
ಗುರುಶಂಕರೇಶ್ವರ ಶತಕಂ ೦—೧—೦

ಅಂಚೆಯವೆಚ್ಚ ಬೇರೆ.

ಪ್ರಕಟನೆ.

೧೯೧೭ ನೆಯ ಡಿಸೆಂಬರ್ ತಿಂಗಳಲ್ಲಿ ದಾವಣಗೆರೆಯಲ್ಲಿ ನೆರೆದಿದ್ದ ೮ ನೆಯ ವೀರಶೈವ ಮಹಾಸಭೆಯ ರಿಪೋರ್ಟು ಸಮಗ್ರವಾಗಿ ಸ್ವಚ್ಛವಾದ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಾಗಿರುತ್ತದೆ. ಮಹಾಸಭೆಯ ಚಿರಸ್ಥಾಯಿ ಫಂಡಿಗೆ ಚಂದಾಹಣವನ್ನು ಕೊಡಲು ವಾಗ್ದಾನ ಮಾಡಿರುವ ವೀರಶೈವ ದೊಡ್ಡಮನುಷ್ಯರುಗಳ ಭಾವಚಿತ್ರಪಟ, ಪ್ರತಿನಿಧಿಗಳ ಭಾವಚಿತ್ರಪಟ ಮತ್ತು ಸ್ವಾಗತಸಂಘದವರ ಭಾವಚಿತ್ರಪಟ ಈರೀತಿ ಮೂರು ಭಾವಚಿತ್ರಪಟಗಳು ಇದರಲ್ಲಿ ಸೇರಿಸಲ್ಪಟ್ಟಿರುತ್ತವೆ. ಈ ಮೂರು ಪಟಗಳಲ್ಲೂ ಶ್ರೀಮತ್ ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಭಾವಚಿತ್ರವು ಸೇರಿರುವುದು. ಬಹಳ ಸ್ವಲ್ಪಪ್ರತಿಗಳು ಮಾತ್ರ ಮುದ್ರಣ ಮಾಡಿಸಲ್ಪಟ್ಟಿರುವುದರಿಂದ, ಅಪೇಕ್ಷಿತರು ಕೂಡಲೇ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳುವುದು. ಬೆಲೆ ಪ್ರತಿ 1ಕ್ಕೆ ೧ ರೂಪಾಯಿ. ಅಂಚೆವೆಚ್ಚ ಬೇರೆ.

ಬಿ. ಚನ್ನವೀರಪ್ಪ,
೮ ನೆಯ ಮಹಾಸಭಾ ಸೆಕ್ರೆಟರಿ,
ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಡಿಸೆಂಬರ್ ತಾ|| ೨೮ ನೆಯ ಭಾನುವಾರ.

ನಾನಾಜಾತೀಯ ಸಂಘ, ಮತ್ತೂ ಅಮೇರಿಕಾ.

ಯುದ್ಧವು ಮಿತ್ರಮಂಡಲಿಗೆ ಜಯಪ್ರದವಾಗಿ ಬೇಗನೆ ಕೊನೆಮುಟ್ಟಿ ಸಂಧಿಯಾಗುವುದಕ್ಕೂ ಸ್ವಯಂನಿರ್ಣಯಾಧಿಕಾರ, ಅಂತರ್ಜಾತೀಯಸಂಘದ ನಿರ್ಮಾಣ ಈ ಏರ್ಪಾಟುಗಳೆಲ್ಲಾ ಜರಗುವುದಕ್ಕೂ ಅಮೇರಿಕಾದವರೇ ವಿಶೇಷ ಕಾರಣಭೂತರೆಂಬುದನ್ನು ಲೋಕವೇ ತಿಳಿದಿದೆ. ಡಾ|| ವಿಲ್ಸನ್‌ರವರು ಪ್ರಯತ್ನಪಟ್ಟು ಸಂಧಿನಿಬಂಧನೆ ಮೊದಲಾದುವುಗಳೆಲ್ಲಾ ಮುಗಿಯುವಂತೆ ಮಾಡಿದರು. ಈಗ ಅವರು ಅಸ್ವಸ್ಥರಾಗಿ ಅಸಮರ್ಥರಾಗಿರುವುದರಿಂದ ಈ ಸಂಧಿಯನ್ನು ಪಯೋಗಿಸಿಕೊಂಡು ಅವರ ವಿರುದ್ಧಪಕ್ಷದವರು ರಾಜ್ಯಾಂಗಸಭೆಯಲ್ಲಿ ಪ್ರಬಲರಾಗಿ ಸಂಧಿ ಸಂಬಂಧಗಳಾದ ಏರ್ಪಾಟುಗಳಲ್ಲಿ ಕೆಲವನ್ನು ಒಪ್ಪಿಕೊ [illegible] ಗಣ ಸಂಧಿಯನ್ನು ಒಪ್ಪುತ್ತಾರೋ ಬಿಡುತ್ತಾರೋ ಹೇಳುವುದು ಕಷ್ಟವಾಗಿದೆ. ಮತ್ತೂ ಅವರು ಸರ್ವಜಾತೀಯ ಸಮ್ಮೇಳನದಲ್ಲಿ ಕೂಡುವುದು ಕೂಡ ಸಂಶಯವೇ ಆಗಿ ಕಾಣುತ್ತಿದೆ. ಈ ಸಂಧಿಯನ್ನು ಅನುಕೂಲಿಸಿಕೊಂಡು ಜರ್ಮನರು ಸಂಧಿನಿಬಂಧನೆಗಳಂತೆ ತಾವು ಎಲ್ಲ ಭಾಗಗಳಲ್ಲೂ ನಡೆದು ಮುಗಿಸದೆ ಕಾಲ ಕಳೆಯುತ್ತಿದ್ದಾರೆ. ಅದನ್ನು ಕಂಡು ಮಿತ್ರಮಂಡಲಿಯವರು ಮತ್ತೊಂದು ಅಂತ್ಯಸಂದೇಶವನ್ನು ಜರ್ಮನಿಗೆ ಕಳುಹಿಸಿ ಮರಳಿ ಯುದ್ಧವನ್ನಾಕ್ರಮಿಸುವ ಬೆದರಿಕೆಯನ್ನು ಹಾಕಿದ್ದಾರೆ.

ಈ ಸಮಯದಲ್ಲಿ ಅಮೇರಿಕಾದೊಳಗಣ ಡಾ|| ವಿಲ್ಸನ್ ಪ್ರತಿಪಕ್ಷದವರು ತೋರಿಸುತ್ತಿರುವ ರೀತಿಯು ಅಮೇರಿಕಾದ ಗೌರವಕ್ಕೆ ಎಷ್ಟುಮಾತ್ರವೂ ತಕ್ಕುದಾಗಿಲ್ಲ. ಸಂಧಿಪತ್ರದಲ್ಲಿ ಕೆಲ ನ್ಯೂನಾತಿರೇಕಗಳಿರಬಹುದು. ಆ ಕಾರಣವನ್ನೇ ದೊಡ್ಡದುಮಾಡಿಕೊಂಡು ಈ ಸಂಬಂಧವನ್ನೇ ಕಳಚಿಕೊಳ್ಳಬೇಕೆಂದು ಅಮೇರಿಕನ್ನರು ಯೋಚಿಸುವವರಾದರೆ ಇದುವರೆಗೂ ಅವರು ಮಾಡಿದ ಸ್ವಾರ್ಥತ್ಯಾಗಗಳೂ ಶ್ರಮಗಳೂ ಸಹ ಹೊಳೆಯಲ್ಲಿ ಹುಣಿಸೆಹಣ್ಣನ್ನು ತೆಯ್ದಂತೆ ಆಗುವುವು. ಯೂರೋಪು ಖಂಡಕ್ಕೆ ಪುನಃ ಪೂರ್ವದ ಅವಸ್ಥೆಯೇ ಪ್ರಾಪ್ತವಾಗಿ ಯುದ್ಧವು ಮರುಕಳಿಸಬಹುದು. ಈಗ ಸರ್ಬಿಯಾ ಬ್ರಿಟನ್ನುಗಳಿಗೂ, ಫ್ರಾನ್ಸ್ ಬ್ರಿಟನ್ನುಗಳಿಗೂ, ಫ್ರಾನ್ಸು ಇಟಲಿಗಳಿಗೂ ಮಧ್ಯೆ ಬೇರೆ ಬೇರೆ ಒಡಂಬಡಿಕೆಗಳಾಗಿರುವುವೆಂಬ ಸುದ್ದಿಯನ್ನು ಕೇಳಿದರೆ ಯೂರೋಪುಖಂಡದ ಮೊದಲಿನ ಸ್ಪರ್ಧೆಯು ದೇಶಾಕ್ರಮಣದುರಾಶೆಗೂ ಪುನರ್ಯುದ್ಧಕ್ಕೂ ಅಂಕುರಾರೋಪಣೆಯಾಗಿದೆಯೆಂದೇ ಹೇಳಬೇಕಾಗುವುದು. ಇದರಿಂದ ಲೋಕದ ವಿನಾಶಕ ಸ್ಥಿತಿಯು ಎಂದಿಗೂ ಕೊನೆಮುಟ್ಟಿದಂತಾಗುವುದಿಲ್ಲ. ಜಗತ್ತಿನ ಸ್ವಾತಂತ್ರ್ಯರಕ್ಷಣೆಗಾಗಿ ಅಮೇರಿಕನ್ನರು ಯಾವ ಧೀರೋದಾತ್ತತೆಯಿಂದ ಯುದ್ಧಕ್ಕೆ ದುಮಿಕಿದರೋ ಆ ಪವಿತ್ರಾಶಯವನ್ನು ಈಗ ಅಮೇರಿಕನ್ನರು ಕಡೆಗೊತ್ತಬಹುದೆ? ಈಗಲೂ ಕೂಡ ಜಗತ್ತಿಗೆ ಅಮೇರಿಕನ್ನರ ಮೇಲೆ ಇರುವ ಗೌರವಭಾವವು ಕಡಿಮೆಯಾಗಿಲ್ಲ. ಅವರ ಸ್ವಾರ್ಥತ್ಯಾಗವನ್ನು ಕಂಡು ಜಗತ್ತೇ ವಿಸ್ಮಯಪಟ್ಟಿದೆ. ಉದ್ವೇಶವೆಲ್ಲಾ ಮುಗಿದು ಪ್ರಪಂಚವು ಪುನರ್ನಿರ್ಮಾಣವಾಗುವಂಥ ಸಮಯದಲ್ಲಿ ಹೆರುಗೆಯಾಗುವಾಗ ಸೂಲಗಿತ್ತಿಯು ಕಣ್ಮುಚ್ಚಿದಂತೆ ಅಮೇರಿಕನ್ನರು ಹಿಂದೆಗೆದು ಕುಳಿತುಕೊಳ್ಳುವುದೆಂದರೆ ಅದು ಪ್ರಪಂಚಕ್ಕೆಲ್ಲಾ ಆಶಾಭಂಗವನ್ನುಂಟುಮಾಡುವ ಕಾರ್ಯವಲ್ಲದೆ ಬೇರೆಯಲ್ಲ. ಅದುಕಾರಣ ಅಮೇರಿಕಾವು ಇದುವರೆಗೆ ತನ್ನ ಕರ್ತವ್ಯಜಾಗರೂಕತೆಯಿಂದ ಗಳಿಸಿಕೊಂಡಿರುವ ಗೌರವಕೀರ್ತಿಗೆ ಭಂಗ ತಂದುಕೊಳ್ಳದಂತೆ ನಡೆದುಕೊಳ್ಳುವುದು ವಿಹಿತವಾಗಿರುತ್ತದೆ. ಅಮೇರಿಕಾದವರೊಡನೆ ಈ ವಿಷಯವಾಗಿ ಆಲೋಚಿಸಲು ಸರ್ವಪ್ರಕಾರದಿಂದಲೂ ಅರ್ಹರಾಗಿ ಆಂಗ್ಲ ರಾಯಭಾರಿಗಳಾಗಿ ಅಮೇರಿಕಾಕ್ಕೆ ಹೋಗಿದ್ದ ಅರ್ಲ್ ಎಡ್ವರ್ಡ್‌ಗ್ರೇರವರು ಅಲ್ಲಿಂದ ಹಿಂದಿರಿಗಿ ಲಂಡನ್ನಿಗೆ ಬಂದುಬಿಟ್ಟರೆಂಬ ವಾರ್ತೆಯು ಇನ್ನಷ್ಟು ವಿಚಾರಕ್ಕೆ ಎಡೆಗೊಟ್ಟಿರುತ್ತದೆ. ದೀರ್ಘದರ್ಶಿಗಳಾದ ಮಿತ್ರಮಂಡಲಿಯವರು ಈ ವಿಷಮಸಂಧಿಯನ್ನು ಅಲಕ್ಷ್ಯಮಾಡದೆ ಅಮೇರಿಕನ್ನರೊಡನೆ ಕಲೆತು ದೀರ್ಘವಾಗಿ ಪರ್ಯಾಲೋಚಿಸಿ, ಸಂಧಿ ನಿಬಂಧನೆಗಳಲ್ಲಿ ವ್ಯತ್ಯಾಸಮಾಡುವ ಅವಶ್ಯಕತೆಯೇನಾದರೂ ಇದ್ದರೆ ಹಾಗೆ ಮಾಡಿ ಅಮೇರಿಕನ್ನರ ಜತೆಯನ್ನು ಬಿಡದೆ ನಾನಾಜಾತಿಸಂಘಸ್ಥಾಪನೆಯಮೂಲಕ ಜಗಚ್ಛಾಂತಿಯನ್ನು ಸಾಧಿಸುವವರಾಗಬೇಕು. ಈ ವಿಷಯದಲ್ಲಿ ಲಾಯಿಡ್ ಜಾರ್ಜ್‌ರವರೂ ಕ್ಲೆಮಂಕೋರವರೂ ಮನಸ್ಸಿಗೆ ತಂದುಕೊಂಡರೆ ಆ ಕಾರ್ಯವು ಅಸಾಧ್ಯವಾಗುವುದಿಲ್ಲ.

ಪ್ರತ್ಯೇಕ ಪ್ರಾತಿನಿಧ್ಯ ಮತ್ತೂ ಪಾರ್ಲಿಮೆಂಟು.

ಲಾರ್ಡುಗಳ ಸಭೆಯಲ್ಲಿ ಭಾರತ ರಾಜಕೀಯ ಸಂಸ್ಕರಣದ ಬಿಲ್ಲು ಚರ್ಚಿಸಲ್ಪಡುವಾಗ್ಗೆ ಲಾರ್ಡ್ ಆಂಪ್ಥಿಲ್‌ರವರು ಮುಖ್ಯಮುಖ್ಯವಾದ ಕೆಲವು ಜನ ವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಬೇಕೆಂಬ ಒಂದು ಉಪಸೂಚನೆಯನ್ನು ಮಾಡಿದರು. ಅದಕ್ಕೆ ಲಾರ್ಡ್ ಸಿನ್ಹರವರು ಉತ್ತರಕೊಡುವಾಗ್ಗೆ— "ಬಿಲ್ಲಿನಲ್ಲಿ ಕಾಣಿಸಲ್ಪಟ್ಟಿರುವುದಕ್ಕಿಂತ ಪ್ರತ್ಯೇಕ ಸಂಘಪ್ರಾತಿನಿಧ್ಯಕ್ಕಾಗಿ ಇನ್ನಾವ ಏರ್ಪಾಟನ್ನು ಮಾಡಬೇಕಾಗಿದೆಯೋ ಅದನ್ನು ಹೇಳಬಹುದು, ಇಂಥಿಂಥ ಸಂಘಗಳಿಗೇ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂದು ಬಿಲ್ಲಿನಲ್ಲಿ ವಿವರಿಸುವುದು ಸಾಧ್ಯವಲ್ಲ. ಮಿಶ್ರಸಂಘದವರು ವಿಶದಪಡಿಸಿರುವ ಎರಡು ಸಂಘಗಳು (ಮರಾಟೆಯವರು, ಮದ್ರಾಸು ಬ್ರಾಹ್ಮಣೇತರರು) ಹೊರತು ಇನ್ನಾವ ಜನವರ್ಗದವರೂ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೋರಿಕೊಂಡಿರುವುದಿಲ್ಲ. ಇನ್ನಾರಾದರೂ ಅದನ್ನು ಕೋರುವವರಿದ್ದರೆ ಅದಕ್ಕೆ ತಕ್ಕ ನಿಯೋಜಕಗಣವನ್ನೇರ್ಪಡಿಸುವುದಕ್ಕೆ ಸರ್ಕಾರದವರಿಗೆ ತಕ್ಕಷ್ಟು ಅವಕಾಶವಿರುವುದು. .... ಪ್ರತ್ಯೇಕ ಸಂಘಪ್ರಾತಿನಿಧ್ಯವನ್ನೇ ಆಗಲಿ ಇನ್ನಾವತೆರದ ಪ್ರಾತಿನಿಧ್ಯವನ್ನೇ ಆಗಲಿ ಕೋರತಕ್ಕವರು ಯಾರಾದರೂ ಇದ್ದಾರೆಂಬುದಾಗಿ ಇಂಡ್ಯಾಸರ್ಕಾರದವರಿಗೆ ತಿಳಿಯಬಂದರೆ, ಅವರಿಗೆ ಅಂಥ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವಲ್ಲಿ ಈ ಬಿಲ್ಲೇ ಆಗಲಿ ಮಿಶ್ರಸಂಘವೇ ಆಗಲಿ ಯಾವ ಆತಂಕವನ್ನೂ ಮಾಡುವುದಿಲ್ಲ." ಎಂದು ಪ್ರತ್ಯುತ್ತರವನ್ನು ಕೊಟ್ಟಿರುತ್ತಾರೆ.

ಇದರಿಂದ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೋರಿಕೊಳ್ಳುವುದರಲ್ಲಿ ಇದುವರೆಗೆ ಪ್ರಯತ್ನಮಾಡಿ ಸಾಕಾದಷ್ಟು ಸಾಹಸವಿಲ್ಲದುದರಿಂದ ಹತಾಶರಾಗಿರುವ ವೀರಶೈವ ಜನವರ್ಗದವರೇ ಮೊದಲಾದ ಹಿಂದಾಳುಗಳು ಈ ವಿಷಯವಾಗಿ ಇಂಡ್ಯಾಸರ್ಕಾರದ [illegible] ಕೊಳ್ಳಲು ಏರ್ಪಡಿಸಿದರೆ ಶ್ರಮವು ಸಾರ್ಥಕವಾಗಲು ಅವಕಾಶವಿದ್ದೇ ಇದೆಯೆಂಬುದು ವ್ಯಕ್ತಪಟ್ಟಿದೆ. ತಡಮಾಡದೆ ತಕ್ಕ ಯತ್ನವನ್ನು ಈಗಲೂ ಮಾಡುವವರಾಗಲಿ.

ಸರ್ಕಾರಿ ಪಾಠಶಾಲೆಗಳು ಮತ್ತು ಪಂಚಮರು.

(ಬರೆದು ಬಂದುದು).

ಮೈಸೂರು ದೇಶದಲ್ಲಿ ಸರ್ಕಾರಿ ಪಾಠಶಾಲೆಗಳಿಗೆ ಪಂಚಮವಿದ್ಯಾರ್ಥಿಗಳನ್ನು ಸೇರಿಸಿ ವಿದ್ಯಾಭ್ಯಾಸ ಮಾಡಿಸಲು ಸರ್ಕಾರದವರು ಅಪ್ಪಣೆಮಾಡಿದುದರ ಮೇಲೆ ಹಲವು ಕಡೆಗಳಲ್ಲಿ ಅದು ವ್ಯವಹಾರಕ್ಕೆ ಬರುತ್ತಿದೆ. ಈ ಮಧ್ಯೆ ಅಲ್ಲಲ್ಲಿ ಕೆಲವರು ಗದ್ದಲವನ್ನೆಬ್ಬಿಸಿ ಶ್ರೀಮನ್ಮಹಾರಾಜರವರ ಸನ್ನಿಧಿಗೂ ಈ ವಿಷಯದಲ್ಲಿ ತಮ್ಮ ಅಸಮಾಧಾನವನ್ನು ಶ್ರುತಪಡಿಸಿಕೊಂಡಿರುತ್ತಾರೆ. ಆದರೆ ಇದುವರೆಗೆ ಯಾವ ಉತ್ತರವೂ ಪರಿಹಾರರೂಪವಾಗಿ ಶ್ರೀಮನ್ಮಹಾರಾಜರವರಿಂದ ಕೊಡಲ್ಪಟ್ಟಂತೆ ಕಾಣುವುದಿಲ್ಲ. ದಿನದಿನಕ್ಕೆ ಈ ಗದ್ದಲವನ್ನು ಹೀಗೆಯೇ ಬೆಳೆಯಲವಕಾಶಕೊಟ್ಟು ಪ್ರಭುತ್ವದವರು ತಟಸ್ಥರಾಗಿರುವುದಕ್ಕಿಂತಲೂ ಖಂಡಿತವಾದ ಉತ್ತರವೊಂದನ್ನು ಕೊಟ್ಟು ಚಳವಳಿಗೆ ಅವಕಾಶ ತಪ್ಪಿಸುವುದು ಅವಶ್ಯಕವಾಗಿರುತ್ತದೆ.

ವಿಚಾರಮಾಡಿ ನೋಡಿದರೆ ಈ ಗದ್ದಲವು ವರ್ಣಾಶ್ರಮಧರ್ಮ ರಕ್ಷಣೆಗಾಗಿಯೇ ನಿಜವಾಗಿ ಮಾಡಲ್ಪಡುತ್ತಿದೆಯೆಂದು ಹೇಳಲು ಅವಕಾಶವಿರುವುದಿಲ್ಲ. ಏಕೆಂದರೆ-ಪಂಚಮರು ಸರ್ಕಾರಿ ಶಾಲೆಗಳಲ್ಲಿ ಸೇರಿ ಓದುವುದಕ್ಕೆ ಉಪಕ್ರಮಿಸಿದರೆ ಉಂಟಾಗುವುದೆಂದು ಹೇಳಲ್ಪಡುತ್ತಿರುವ ಸಾಂಕರ್ಯಕ್ಕೆ ನೂರ್ಮಡಿಯಾದ ವರ್ಣಾಶ್ರಮ ಧರ್ಮಭ್ರಷ್ಟತೆಗಳು ಹಲವು ತೆರದಲ್ಲಿ ವರ್ಣಾಶ್ರಮಧರ್ಮಬದ್ಧರೂ ವರ್ಣಾಶ್ರಮ ಧರ್ಮರಕ್ಷಕರೂ ಎಂದು ಹೇಳಿಕೊಳ್ಳುವವರಿಂದಲೇ ಪ್ರತಿ ದಿನದಲ್ಲೂ ಆಚರಿಸಲ್ಪಡುತ್ತಿವೆ. ಅದರ ನಿರೋಧಕ್ಕೇ ಆಗಲೀ ಪ್ರತಿಕ್ರಿಯೆಗೇ ಆಗಲೀ ದಂಡನೆಗೇ ಆಗಲೀ ಯಾವ ಗದ್ದಲವನ್ನೂ ಯಾರೂ ಎಬ್ಬಿಸುತ್ತಲಿಲ್ಲ. ಯಾರೊಬ್ಬರೂ ಶ್ರೀಮನ್ಮಹಾರಾಜರ ಸನ್ನಿಧಿಗೆ ಒಂದು ಅರ್ಜಿಯನ್ನು ಬರೆದುಕೊಂಡಿಲ್ಲ.

ಪಂಚಮರಮೇಲಣ ದ್ವೇಷದಿಂದ ಅವರ ಉನ್ನತಿಗೆ ಅಸೂಯೆಪಟ್ಟು ಈ ಗದ್ದಲವನ್ನೆಬ್ಬಿಸುತ್ತಿರಬಹುದೆ? ಎಂದರೆ ಅದೂ ಕೂಡ ಅಷ್ಟು ಯಥಾರ್ಥವಾಗಿರಲಾರದೆಂದು ಹೇಳಬೇಕಾಗುತ್ತದೆ. ಈ ಚಳವಳದಲ್ಲಿ ಸೇರಿರುವವರೆಲ್ಲರಿಗೂ ಪಂಚಮಾಭ್ಯುದಯದಿಂದ ಹೊಟ್ಟೆಯುರಿಯಿದೆಯೆಂದು ಹೇಳಲಾಗುವದಿಲ್ಲ. ಮತ್ತು ಬೇಗಾರರೇ ಮೊದಲಾದ ಪಂಚಮರು ನಮ್ಮದೇಶದ ಸರ್ಕಾರಿ ಶಾಲೆಗಳಲ್ಲಿ ಸೇರಿ ಓದುವುದಕ್ಕೆ ಈಗಲೇ ಮೊದಲಲ್ಲ. ಪೂರ್ವಾರಭ್ಯ ಎಷ್ಟೋ ಕಾಲದಿಂದಲೂ ಅನೇಕ ಸ್ಥಲಗಳಲ್ಲಿ ಒಟ್ಟಿಗೆ ಓದಿಕೊಂಡು ಬರುತ್ತಿದ್ದಾರೆ.

ಮೇಲೆ ಹೇಳಿದ ಎರಡು ಕಾರಣಗಳೂ ಇಲ್ಲದಿದ್ದರೆ ಇನ್ನಾವ ಕಾರಣದಿಂದ ಈ ಗದ್ದಲವು ಎಬ್ಬಿಸಲ್ಪಟ್ಟಿದೆಯೆಂದು ಯೋಚಿಸಿದರೆ ಮ|| ರಾಮಲಿಂಗರಡ್ಡಿ ಎಂ.ಎ. ಯವರು ವಿದ್ಯಾಭ್ಯಾಸ ಶಾಖಾಧ್ಯಕ್ಷಪದವಿಯಲ್ಲಿ ಕುಳಿತು, ಹಿಂದುಳಿದವರನ್ನೆಲ್ಲಾ ವಿದ್ಯೆಯಲ್ಲಿ ಮುಂಬರಿಸುವುದಕ್ಕೆ ವಿಶಿಷ್ಟತರಗಳಾದ ಅನೇಕ ಪ್ರಯತ್ನಗಳನ್ನು ಮಾಡುತ್ತಿರುವುದರಿಂದ, ಅವರಮೇಲೆ ಬೇರೆಬೇರೆ ತೆರದ ವಿರುದ್ಧಭಾವವುಳ್ಳವರು ಅವರ ಮೇಲೆ ಅಪವಾದವನ್ನು ಹೊರಿಸಿ ದೂರಿಗೆಳೆಯಬೇಕೆಂಬ ದುರುದ್ದೇಶದಿಂದ ಮಾಡುತ್ತಿರುವ ದುಷ್ಪ್ರೇರಣೆಗಳೇ ಈ ಗದ್ದಲಕ್ಕೆ ಮೂಲಭೂತವಾಗಿವೆಯೆಂದು ಅನೇಕರು ಹೇಳುತ್ತಿದ್ದಾರೆ. ಇದನ್ನು ನಿರಾಧಾರವೆಂದು ಹೇಳಲಾಗುವುದಿಲ್ಲ. ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಿಗೆ ಮ|| ರಾಮಲಿಂಗರಡ್ಡಿಯವರ ಮೇಲಿರುವ ದ್ವೇಷವೂ ಅದಕ್ಕೆ ಮೂಲಕಾರಣವೂ ಕೂಡ ಸರ್ವರಿಗೂ ವ್ಯಕ್ತವಾಗಿಯೇ ಇವೆ. ಯಾವ ತೆರದಲ್ಲೂ ಮ|| ರಡ್ಡಿಯವರಮೇಲಣ ಹಗೆಯನ್ನು ತೀರಿಸಿಕೊಳ್ಳೋಣವೆಂದು ತಪಸ್ಸು ಮಾಡುತ್ತಿದ್ದ ಆ ಪತ್ರಿಕೆಗಳಿಗೆ ಇದೊಂದು ವಿಷಯವು ಸಿಕ್ಕಿರುತ್ತದೆ. ಇದರಾಧಾರದಿಂದ ರಡ್ಡಿಯವರನ್ನು ತೂರಿಬಿಡಬಹುದೆಂದು ಆ ಪತ್ರಿಕೆಗಳು ಭ್ರಮೆಪಟ್ಟು, ವರ್ಣಸಾಂಕರ್ಯಕಲ್ಪನೆಗೆ ರಡ್ಡಿಯವರು ಬದ್ಧದೀಕ್ಷರಾಗಿ ಸ್ಕೂಲುಗಳಿಗೆ ಪಂಚಮಪ್ರವೇಶ ಮಾಡಿಸುತ್ತಿರುವರೆಂಬ ಅಪವಾದವನ್ನು ಹುಟ್ಟಿಸಿ, ಇದರಿಂದ ದೇಶದ ಜನರಿಗೆಲ್ಲಾ ಮಂಕುಬೂದಿಯೆರಚಿ ಗದ್ದಲವನ್ನೆಬ್ಬಿಸುವುದಕ್ಕೆ ತೊಡಗಿರುತ್ತವೆ. ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳ ಉದ್ದೇಶಗಳಿಗೆ ಸಾಹಾಯಭೂತರೂ, ಪೋಷಕರೂ ಆದವರುಗಳ ಹೊರತು ಇತರರೆಲ್ಲಾ ಇವುಗಳ ಮಾತಿಗೆ ಬಲಿಬಿದ್ದು ವೃಥಾ ನಿಷ್ಠುರಕ್ಕೆ ಪಾತ್ರವಾಗುವುದರಹೊರತು ಇನ್ನೇನೂ ಫಲವಿಲ್ಲವೆಂಬುದನ್ನು ಅರಿತು ಈ ಗದ್ದಲದಲ್ಲಿ ಸೇರದೆ ತಟಸ್ಥರಾಗಿರುತ್ತಿರುವುದು ಸಮಾಧಾನಕರವಾಗಿದೆ.

ಈ ಸಂದರ್ಭದಲ್ಲಿ ಕೂಲಂಕಷವಾಗಿ ವಿಚಾರಮಾಡಿದರೆ ಮ|| ರಡ್ಡಿಯವರ ಮೇಲೆ ಇದರ ಭಾರವನ್ನು ಹೇರುವುದಕ್ಕೆ ಲೇಶವೂ ಅವಕಾಶವಿರುವುದಿಲ್ಲ. ಸರ್ಕಾರದ ಪ್ರತಿಯೊಂದು ಮುಖ್ಯವಿಷಯಗಳಲ್ಲೂ ಶ್ರೀಮನ್ಮಹಾರಾಜರವರೂ ದಿವಾನರೂ ಕೌನ್ಸಿಲರುಗಳೂ ಒಪ್ಪಿ ಅಪ್ಪಣೆಮಾಡದೆ ಯಾವ ಶಾಖಾ ಮುಖ್ಯಾಧಿಕಾರಿಯೂ ಸ್ವತಂತ್ರಿಸಿ ಯಾವ ಅಪ್ಪಣೆಯನ್ನೂ ತಾನೇ ಮಾಡುವುದಿಲ್ಲವೆಂಬುದು ಗೊತ್ತೇ ಇದೆ. ಈ ಪಂಚಮ ವಿದ್ಯಾಭ್ಯಾಸದ ಏರ್ಪಾಟೂ ಕೂಡ ಹಾಗೇ ಆಗಿರತಕ್ಕುದು. ಹೀಗಿರುವುದರಿಂದ ಮ|| ರಡ್ಡಿಯವರನ್ನೇ ಇದಕ್ಕೆ ಮೂಲಭೂತರನ್ನಾಗಿ ದೂಷಿಸುವುದರಲ್ಲಿ ಎಷ್ಟುಮಟ್ಟಿಗೆ ಸೌಜನ್ಯವಿರಬಹುದು? ರಡ್ಡಿಯವರು ಈ ಏರ್ಪಾಟಿನಿಂದ ದುಷ್ಟರೆನಿಸಿಕೊಳ್ಳಬಹುದಾದರೆ ಅದನ್ನು ಪ್ಯಾಸ್‌ಮಾಡಿರುವ ಸರ್ಕಾರವೂ ಶ್ರೀಮನ್ಮಹಾರಾಜರೂ ಸಹ ಆ ಹೆಸರಿಗೆ ಈಡಾಗಬೇಕಾಗುವುದಲ್ಲವೆ? ಶ್ರೀಮನ್ಮಹಾರಾಜರೇ ಮೊದಲಾದವರೊಬ್ಬರ ಅಪ್ಪಣೆಯೂ ಇಲ್ಲದೆ ಮ|| ರಡ್ಡಿಯವರೇ ಸ್ವತಂತ್ರಿಸಿ ಇಂಥ ಅಪ್ಪಣೆಯನ್ನು ಹೊಸದಾಗಿ ಮಾಡಿ ತೀರಿಸಬೇಕಾದ ಅವಶ್ಯಕತೆಯು ಅವರಿಗೆತಾನೇ ಏನಿದ್ದಿತು? ಇದ್ದರೂ ಸ್ವತಂತ್ರಿಸಿ ಮಾಡಲು ಅವರಿಗೆಲ್ಲಿ ಸಾಧ್ಯ? ಹಾಗೆ ಪ್ರಭುತ್ವಕ್ಕೆ ವಿರುದ್ಧವಾಗಿ ಅನ್ಯಾಯ್ಯವಾದ ಅಪ್ಪಣೆಯನ್ನು ಅವರೊಬ್ಬರೇ ಮಾಡಿದ್ದರೆ, ಪ್ರಜೆಗಳಿಂದ ಧರ್ಮಸಮ್ಮತವಾದ ಗೂರು ಬಂದಿದ್ದರೆ, ಅದನ್ನು ಕೇಳಿಕೊಂಡು ಇದಕ್ಕೆ ಕಾರಣಭೂತರಾದವರನ್ನು ಶಿಕ್ಷಿಸದೆ ಶ್ರೀಮನ್ಮಹಾರಾಜರವರು ಇದುವರೆಗೂ ಸುಮ್ಮನಿರುತ್ತಿದ್ದರೆ? ಎಂದಿಗೂ ಇಲ್ಲ. ಅದುಕಾರಣ ಇಂಥ ಚಳವಳವನ್ನು ಬಲಪಡಿಸುವುದರಲ್ಲಿ ಎಷ್ಟುಮಟ್ಟಿನ ಫಲವಾಗುವುದೆಂಬುದನ್ನು ಪ್ರಜೆಗಳು ಚೆನ್ನಾಗಿ ಪರ್ಯಾಲೋಚಿಸುವುದು ಯುಕ್ತವಾಗಿರುತ್ತದೆ.

ನಮ್ಮ ಪ್ರಭುತ್ವದವರು ಕೂಡ ಈ ಪದ್ಧತಿಯನ್ನು ಸ್ವಪ್ರಜೆಗಳಿಗೆ ವಿರುದ್ಧವಾಗಿ ಮಾಡಬೇಕೆಂದು ಲೇಶವೂ ಯೋಚಿಸಿಲ್ಲ. ಸರ್ವಪ್ರಜೆಗಳ ಸಮಾನೋದ್ಧಾರವೇ ಅವರ ಮುಖ್ಯಲಕ್ಷ್ಯವಾಗಿದೆ. ಅದನ್ನು ಯಾರೊಬ್ಬರೂ ತಪ್ಪೆಂದು ಹೇಳಲಾಗುವುದಿಲ್ಲ. ಪಂಚಮರಷ್ಟು ಹೀನಸ್ಥಿತಿಯಲ್ಲಿರುವವರು ನಮ್ಮ ದೇಶದಲ್ಲಿ ಮತ್ತಾರೂ ಇಲ್ಲ. ಬಹುಕಾಲದಿಂದ ತುಳಿಯಲ್ಪಟ್ಟು ಪತಿತರಾಗಿರುವ ಅವರನ್ನು ಉದ್ಧರಿಸುವುದಕ್ಕೆ ಬಲವತ್ತರವಾದ ಪ್ರಯತ್ನವೇ ಆಗಬೇಕಾಗಿದೆ. ಜೂಪುಗಾರಿಕೆಯಿಂದ ಮೇಲೆಮೇಲಣ ಸವಿಮಾತಿನ ಸಮರ್ಪಣೆಯಿಂದ ಅವರ ಉದ್ಧಾರವಾಗುವುದಿಲ್ಲ. ಈಗ ಅವರ ಉದ್ಧರಣವು ಭರತಖಂಡದ ಸುಧಾರಣೆಯ ಸಮಸ್ಯೆಗಳಲ್ಲಿ ಒಂದು ಮುಖ್ಯಸ್ಥಾನವನ್ನು ಪಡೆದುಕೊಂಡಿದೆ. ಈಗಣ ನೂತನ ರಾಜಕೀಯ ಶಾಸನದಲ್ಲಿ ಪಂಚಮೋದ್ಧರಣ ಸಮಸ್ಯೆಯು ಒಂದು ಸ್ಥಾನವನ್ನು ಪಡೆದು ಕುಳಿತಿದೆ. ಭರತಖಂಡದ ಸರ್ಕಾರವೂ ಪ್ರಾಂತಿಕ ಸರ್ಕಾರಗಳೂ ಕೂಡ ಪಂಚಮೋದ್ಧರಣವನ್ನು ಮುಖ್ಯಲಕ್ಷ್ಯದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿವೆ. ವೈಸ್ರಾಯರು ನಮ್ಮ ಸಂಸ್ಥಾನಕ್ಕೆ ಬಂದಿದ್ದಾಗ ಅರಸೌತಣದ ಸಮಯದಲ್ಲಿ ಮಾಡಿದ ಭಾಷಣದೊಳಗೂ ಕೂಡ ಪಂಚಮೋದ್ಧರಣದ ಮಾತನ್ನು ಮರೆತಿಲ್ಲ. ಎಷ್ಟೋ ಸ್ವದೇಶ ಸಂಸ್ಥಾನಗಳವರು ಕೂಡ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಅದಕ್ಕಾಗಿ ಮಾಡುತ್ತಿದ್ದಾರೆ. ಹೀಗಿರುವಾಗ ಮಾದರಿ ಸಂಸ್ಥಾನವೆಂದು ಹೇಳಿಸಿಕೊಂಡಿರುವ ನಮ್ಮದೇಶದ ಪ್ರಭುತ್ವದವರು ಇದರ ಪ್ರಸಿದ್ಧಿಗೆ ತಕ್ಕಂತೆ ಈ ವಿಷಯದಲ್ಲೂ ಮಾದರಿಯಾಗಿ ಪರಿಣಮಿಸುವಂತೆ ಕೆಲಸಮಾಡದೆ ಇರುವುದು ಸಾಧ್ಯವೆ? ತಿರುವಾಂಕೂರು ಬರೋಡಾ, ಮೊದಲಾದ ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳಿಗೆ ಪಂಚಮ ವಿದ್ಯಾರ್ಥಿಗಳನ್ನು ಸೇರಿಸಿ ಓದಿಸುವುದಕ್ಕೆ ಆರಂಭಿಸಿ ಎಷ್ಟೋ ವರ್ಷಗಳಾದುವು. ಮದ್ರಾಸು ಪ್ರಭುತ್ವದವರೂ

ಕೂಡ ಈ ಪದ್ಧತಿಯನ್ನು ವ್ಯವಹಾರಕ್ಕೆ ತಂದಿರುವುದಲ್ಲದೆ, ದೇವಾಲಯ ಮೊದಲಾದ ಕಡೆಗಳಲ್ಲಿ ಪಾಠಶಾಲೆಗಳಿದ್ದರೆ ಪಂಚಮರು ಮೊದಲಾದವರನ್ನು ಅಲ್ಲಿಗೆ ಸೇರಿಸಲು ಅಭ್ಯಂತರವಾಗಬಹುದೆಂದು ಯೋಚಿಸಿ, ಇತಃಪರಃ ಶಾಲೆಗಳನ್ನು ಅಂಥ ಸ್ಥಲಗಳಲ್ಲಿ ಸ್ಥಾಪಿಸದೆ ಎಲ್ಲ ಜನವರ್ಗದವರೂ ಬಂದು ಸೇರಿ ಓದಲನುಕೂಲಿಸುವಂಥ ಸ್ಥಲಗಳಲ್ಲೇ ಏರ್ಪಡಿಸಬೇಕೆಂದು ಅಪ್ಪಣೆ ಮಾಡಿದ್ದಾರೆ. ಬೊಂಬಾಯಿ, ಕಲ್ಕತ್ತ, ಪಂಜಾಬು ಮೊದಲಾದ ಪ್ರಾಂತಗಳಲ್ಲೆಲ್ಲಾ ಯಾವ ಗದ್ದಲವೂ ಇಲ್ಲದೆ ಈ ಪದ್ಧತಿಯು ನಡೆದುಕೊಂಡುಹೋಗುತ್ತಿದೆ. ಕಾಲ ಸ್ಥಿತಿಗತಿಪ್ರವಾಹವೇ ಹೀಗಿರುವಾಗ ನಮ್ಮ ಮೈಸೂರಿನ ಸ್ಥಿತಿಯು ಅದಕ್ಕನುಗುಣವಾಗಿ ಸಾಗಿಕೊಂಡುಹೋಗದೆ ಪ್ರತಿಭಟಿಸಿ ನಿಂತಿರುವುದು ಎಷ್ಟು ಕಾಲದವರೆಗೆ ಸಾಧ್ಯವಾದೀತು? ಶ್ರೀಮನ್ಮಹಾರಾಜರಿಗೂ ಅವರ ಸರ್ಕಾರಕ್ಕೂ ಇತರ ಪ್ರಜೆಗಳೆಲ್ಲರ ಮೇಲೂ ಇಲ್ಲದ ಅಭಿಮಾನವು ಪಂಚಮರಮೇಲೆಯೇ ಇರುವುದಕ್ಕೆ ಕಾರಣಾಂತರವೇನಾದರೂ ಉಂಟೆ? ಮ|| ರಡ್ಡಿಯವರು ಇ[illegible]|| ಜನರಲ್ಲಾಗಿಲ್ಲದೆ ಆ ಸ್ಥಲದಲ್ಲಿ ಒಬ್ಬ ಬ್ರಾಹ್ಮಣಾಧಿಕಾರಿಯೇ ಇದ್ದರೂ ಈ ಕೆಲಸವನ್ನು ಹೀಗೆಯೇ ನಿರ್ವಹಿಸಬೇಕಾಗುತ್ತಿದ್ದಿತು. ಆಗ್ಗೆ ಸಾಧ್ವೀ ಸಂಪದಭ್ಯುದಯಗಳ ಬಾಯಿಂದ ಹೊರಡುವ ಮಾತುಗಳೇ ಬೇರೆಯಾಗುತ್ತಿದ್ದುವು.

"ಪಂಚಮೋದ್ಧರಣವನ್ನು ಮಾಡಬೇಕಾಗಿದ್ದರೆ ಅವರಿಗೆ ಪ್ರತ್ಯೇಕ ಶಾಲೆಗಳನ್ನೂ ಪ್ರತ್ಯೇಕವಾದ ಏರ್ಪಾಟುಗಳನ್ನೂ ಬೇಕಿದ್ದರೆ ಮಾಡಿಕೊಳ್ಳಲಿ" ಎಂದು ಕೆಲವರು ವಾದಿಸುತ್ತಿರುವರಷ್ಟೆ. ಈ ವಿಷಯವಾಗಿ ವಿಚಾರಮಾಡಿ ನೋಡೋಣ. ಪಂಚಮರಲ್ಲಿರುವ ಆಚರಣೆಗಳಿಗಿಂತಲೂ ಕನಿಷ್ಠವಾದ ಆಚರಣೆಯುಳ್ಳವರನ್ನೆಲ್ಲಾ ನಮ್ಮ ಹುಡುಗರ ಜತೆಯಲ್ಲಿ ಸ್ಕೂಲುಗಳೊಳಗೆ ಕುಳ್ಳಿರಿಸಿಕೊಂಡು ಓದಿಸುತ್ತಿರುವಾಗ ಈ ಪಂಚಮರನ್ನು ಮಾತ್ರ ಅಸ್ಪೃಶ್ಯರೆಂದು ನಿಂದಿಸಿ ಹೊರಕ್ಕೋಡಿಸಬೇಕೆಂದು ಹೇಳುವಲ್ಲಿ ನಮ್ಮ ವಾದವು ಎಷ್ಟು ಧರ್ಮವಾಗಿರುವುದೆಂಬುದನ್ನು ಮೊದಲು ಯೋಚಿಸಿಕೊಳ್ಳಬೇಕು. ಅಲ್ಲದೆ ಪಂಚಮರ ವಿದ್ಯಾಭ್ಯಾಸಕ್ಕೆಲ್ಲಾ ಅವರಿರುವ ಪ್ರತಿಯೊಂದು ಹಳ್ಳಿಗಳಲ್ಲೂ ಪಟ್ಟಣಗಳಲ್ಲೂ ಬೇರೆ ಬೇರೆ ಶಾಲೆಗಳನ್ನೂ ಹೈಸ್ಕೂಲುಗಳನ್ನೂ ಕಾಲೇಜುಗಳನ್ನೂ ಅವರಿಗಾಗಿ ಸ್ಥಾಪಿಸಿಕೊಡಬೇಕಾದರೆ ಸರ್ಕಾರವು ಎಷ್ಟು ಹಣವನ್ನು ಕಟ್ಟಿಕೊಳ್ಳಬೇಕಾಗುವುದೆಂಬುದನ್ನೂ ಅದನ್ನು ಎಲ್ಲಿಂದ ತರಬೇಕೆಂಬುದನ್ನೂ ಅನಂತರ ಪರ್ಯಾಲೋಚಿಸಬೇಕು. ಇದುವರೆಗೂ ಪಶುಮೃಗಾದಿಗಳಿಗಿಂತಲೂ ಕಡೆಯಾಗಿ ಪಂಚಮರು ತಿಳಿಯಲ್ಪಟ್ಟುದರಿಂದಲೇ ಅವರು ಅಷ್ಟು ನಿಕೃಷ್ಟಸ್ಥಿತಿಗೆ ಬಂದಿರುವುದರಿಂದ, ಇನ್ನೂ ಅವರನ್ನು ಹಾಗೆಯೇ ಅಸ್ಪೃಶ್ಯಕೋಟಿಯಲ್ಲೇ ಇರಿಸಿಬಿಟ್ಟು, ನಮ್ಮ ಜತೆಗೆ ತೆಗೆದುಕೊಂಡು ವಿದ್ಯಾಬುದ್ಧಿಗಳನ್ನೂ ನಡೆನುಡಿಗಳನ್ನೂ ಕಲಿಸದಿದ್ದರೆ ಎಷ್ಟು ಕಲ್ಪಾಂತರಗಳಾದರೂ ಅವರು ಉದ್ಧಾರವಾಗುವುದು ನಿಜವೆ ಎಂಬುದನ್ನು ನಿರ್ಮತ್ಸರಮತಿಯಿಂದ ಪರ್ಯಾಲೋಚಿಸಬೇಕು.

"ಇತರ ಪ್ರಜೆಗಳೊಡನೆ ಕಲೆತು ನಾವೂ ಪುರೋವೃದ್ಧಿಗೊಳ್ಳುವುದಕ್ಕೆ ಸಮಾನಾವಕಾಶವನ್ನು ನಮ್ಮ ಜನವರ್ಗಕ್ಕೆ ಪ್ರಭುತ್ವದವರು ಕಲ್ಪಿಸಿಕೊಡಲಾರದೆ ಪ್ರತ್ಯೇಕಪಡಿಸುವವರಾಗಿದ್ದರೆ, ನಮ್ಮ ಜನವರ್ಗದಿಂದ ಸರ್ಕಾರಕ್ಕೆ ಕಂದಾಯ ಕಸಳಿಗೆಗಳ ರೂಪದಲ್ಲಿ ಬರತಕ್ಕ ವರಮಾನವನ್ನೂ ಪ್ರತ್ಯೇಕವಾಗಿಯೇ ಇಡಿಸಿ, ಅದನ್ನು ನಮ್ಮ ಜನಗಳ ಅಭ್ಯುದಯಕ್ಕೇ ಬೇರೆಯಾಗಿ ಉಪಯೋಗಿಸಿರಿ" ಎಂದು ಪಂಚಮ ಕಾನ್ಫರೆನ್ಸಿನ ಅಧ್ಯಕ್ಷರಾಗಿದ್ದ ಆ|| ರಾಜರವರು ಮಾಡಿದ ಪ್ರಶ್ನೆಗೆ ಏನುತ್ತರವನ್ನು ಕೊಡಬೇಕೆಂಬುದನ್ನಾದರೂ ಪರ್ಯಾಲೋಚಿಸಬೇಕು.

ಇದನ್ನೆಲ್ಲಾ ಪರ್ಯಾಲೋಚಿಸಿದರೆ ಶ್ರೀಮನ್ಮಹಾರಾಜರೇ ಆಗಲಿ ಅವರ ಸರ್ಕಾರದ ಅಧಿಕಾರಿಗಳೇ ಆಗಲಿ ಈ ಸಂಬಂಧವಾಗಿ ಮಾಡಿರುವ ಏರ್ಪಾಟಿನಲ್ಲಿ ಯಾವ ದುಷ್ಟಮನೋಭಾವಗಳೂ ಲೇಶವೂ ಇಲ್ಲವೆಂಬುದು ಸರ್ವರಿಗೂ ವ್ಯಕ್ತವಾಗುವುದು. ವ್ಯಕ್ತಿದ್ವೇಷದಿಂದಲೋ ಸ್ವಾರ್ಥೈಕಪರತೆಯಿಂದಲೋ ಇಂಥ ಸಂಧಿಯನ್ನು ಸಾಧಿಸಿ ಕೆಲವರು ಪುಳ್ಳೆಯನ್ನು ಹೊತ್ತಿಸಿದರೆ ವಿಚಾರಪರರು ಅದಕ್ಕೆ ಗಾಳಿ ಬೀಸುವಂತೆ ಸಹಾಯಕರಾಗಿ ಉರಿಯೇಳಿಸುವುದು ಪ್ರಭುತ್ವವಿರೋಧವನ್ನು ಸಂಪಾದಿಸಿಕೊಳ್ಳುವುದಕ್ಕೂ ಅನಿಷ್ಟಸಂಪಾದನೆಗೂ ಮಾರ್ಗಮಾಡಿಕೊಂಡಂತಾಗುವುದೆಂಬುದನ್ನು ಅರಿತುಕೊಳ್ಳಬೇಕು.

ಯಾವ ಕಾಲದಲ್ಲೇ ಆಗಲಿ ಯಾವ ದೇಶದಲ್ಲೇ ಆಗಲಿ ಯಾವುದಾದರೊಂದು ಹೊಸತರದ ಬದಲಾವಣೆಯು ಆಗುವ ಸಂಧಿಯು ಸ್ವಲ್ಪ ವಿಕೋಪಕ್ಕೋ ಚಳವಳಿಗೋ ಅವಕಾಶವನ್ನು ಕೊಡುವುದು ಸಹಜವಾಗಿರುತ್ತದೆ. ಬರೋಡಾ, ತಿರುವಾಂಕೂರು ಮೊದಲಾದ ಸಂಸ್ಥಾನಗಳಲ್ಲೂ ಮೊದಮೊದಲು ಇಂಥ ಏರ್ಪಾಟಾದಾಗ ಅಲ್ಲೂ ಕೆಲವರು ಬೇಕಾದಷ್ಟು ಚಳವಳಿಯನ್ನು ಎಬ್ಬಿಸಿದರು. ಆದರೆ ಅಲ್ಲಿಯ ಗಾಯಕ್ವಾರ್ ಮಹಾರಾಜರು ಅದಕ್ಕೆ ಹೆದರಿ ತಮ್ಮ ಉದ್ದೇಶವನ್ನು ಪರಿಮಿಸಿಕೊಳ್ಳಲಿಲ್ಲ. "ಇದಕ್ಕೆ ವಿರುದ್ಧವಾಗಿ ಚಳವಳವನ್ನೆಬ್ಬಿಸಿ ಉಪಾಧ್ಯಾಯತ್ವವನ್ನು ಬಿಡುವವರನ್ನೂ, ಓದುವುದನ್ನು ಬಿಡುವ ವಿದ್ಯಾರ್ಥಿಗಳನ್ನೂ ಮುಂದೆ ಸಂಸ್ಥಾನದ ಯಾವ ಉದ್ಯೋಗಕ್ಕೂ ಶಾಲೆಗಳಿಗೂ ಸೇರಿಸಿಕೊಳ್ಳುವುದಿಲ್ಲ" ಎಂದು ಕಟ್ಟಪ್ಪಣೆಯನ್ನು ಪ್ರಕಟಿಸಿದಕೂಡಲೇ ಗದ್ದಲವೆಲ್ಲಾ ಅಡಗಿಹೋಯಿತು. ನಮ್ಮ ಮೈಸೂರಿನ ಸ್ಥಿತಿಯು ಅಷ್ಟುಮಟ್ಟಿಗೆ ಬರಲಾರದು. ಮುಕ್ಕಾಲುಮೂರುವೀಸಪಾಲು ಪ್ರಜೆಗಳಿಗ ಇದರಲ್ಲಿ ಅಸಮಾಧಾನವಿರುವಂತೆಯೇ ಕಾಣುವುದಿಲ್ಲ. ಕೆಲ ಕೆಲರ ಬಲಾತ್ಕಾರಕ್ಕಾಗಿ ಅಲ್ಲಲ್ಲಿ ಎದ್ದ ಗದ್ದಲವೂ ಕೂಡ ಅಲ್ಲಲ್ಲೇ ಶಾಂತವಾಗಿಹೋಗುತ್ತಲಿದೆ. ಹತಹೊಟ್ಟು ನಾಲ್ಕುದಿನ ಸ್ಕೂಲುಗಳನ್ನು ಬಿಟ್ಟಿದ್ದವರು ಜನೆ ದಿನ ತಾವಾಗಿ ಬಂದು ಸೇರಿಕೊಳ್ಳುತ್ತಿದ್ದಾರೆ. ಗದ್ದಲವನ್ನೆಬ್ಬಿಸಿ ದೇಶದಲ್ಲಿ ಅಶಾಂತಿಯನ್ನುಂಟುಮಾಡಬೇಕೆನ್ನುವ ವಾಕ್ಶೂರರಾದ ಬಂಟರಿಗೆ ದುಡ್ಡನ್ನು ಬಿಚ್ಚಿ ಬೇರೆ ಪಾಠಶಾಲೆಗಳನ್ನು ಸ್ಥಾಪಿಸುವಷ್ಟು ದಿಟ್ಟತನವಿಲ್ಲ. ಅಂಥವರ ಮಾತನ್ನು ಕಟ್ಟಿಕೊಂಡು ಇತರರು ಕುಣಿಯುವುದೆಂದರೆ ಹರಕಲು ಹರಿಗೋಲನ್ನು ಹತ್ತಿ ಮಹಾನದಿಯನ್ನು ದಾಂಟಲುಪಕ್ರಮಿಸುವಂತೆಯೇ ಆಗುವುದು. ಇದರಮೇಲೆ ವೈಸ್ರಾಯರು ಈ ದೇಶಕ್ಕೆ ದಯಮಾಡಿಸಿದಾಗ್ಗೆ ಈ ಸಂಬಂಧವಾಗಿ ಅವರಿಗೆ ವಿಜ್ಞಾಪನಪತ್ರವನ್ನರ್ಪಿಸಿ ಅಪ್ಪೀಲುಮಾಡಿಕೊಳ್ಳಬೇಕೆಂದೂ ಕೆಲವರು ಪ್ರವರ್ತಿಸಿದ್ದರು. ಶ್ರೀಮನ್ಮಹಾರಾಜರನ್ನು ಮೀರಿ ಇಂಥ ಪ್ರವರ್ತನವನ್ನು ಮಾಡುವುದು ಎಂಥ ರಾಜದ್ರೋಹವಾಗುವುದೆಂಬುದು ಯಾವ ಚಾವಟಿಯೇಟಿನಿಂದಲೋ ಅವರಿಗೆ ಗೊತ್ತಾಗಿ ಅದು ಉಪಸಂಹೃತವಾಗಿರಬೇಕು. ನಮ್ಮ ಶ್ರೀಮನ್ಮಹಾರಾಜರವರು ಕೇವಲ ವರ್ಣಾಶ್ರಮಧರ್ಮಾಭಿಮಾನಿಗಳು, ಸತ್ಯಸಂಧರು, ಪ್ರಜೆಗಳನ್ನೇ ಪ್ರಾಣವನ್ನಾಗಿ ತಿಳಿದುಕೊಂಡಿರತಕ್ಕವರು. ಯಾರನ್ನೂ ನೋಯಿಸಬೇಕೆಂಬುದಾಗಲಿ, ನ್ಯಾಯವಾದ ಪ್ರಜಾಭಿಪ್ರಾಯಕ್ಕೆ ವಿರೋಧವಾಗಿ ಆಚರಿಸಬೇಕೆಂಬುದಾಗಲಿ ಅವರ ಮನಸ್ಸಿನಲ್ಲಿ ಲೇಶವೂ ಇರುವುದಿಲ್ಲ. ಸತ್ಯ ನ್ಯಾಯವೆಂದು ಅವರ ಮನಸ್ಸಿಗೆ ತೋರಿದುದನ್ನು ಬಿಡಿಸುವುದಕ್ಕೆ ಹರಿಹರಬ್ರಹ್ಮಾದಿಗಳಿಂದಲೂ ಸಾಧ್ಯವಿಲ್ಲ. ಹೀಗಿರುವುದರಿಂದಲೇ ಈ ಸಂಬಂಧವಾಗಿ ಬಂಪಾನೊಂದುಮತದ ಕಡೆಯ ಪ್ರತಿನಿಧಿಗಳು ಶ್ರೀಮತ್ ಮಹಾರಾಜರ ಸನ್ನಿಧಿಯಲ್ಲಿ ವಿಜ್ಞಾಪಿಸಿದ ಕಾಲದಲ್ಲಿ "ಸಕಲ ಪ್ರಜೆಗಳ ಅಭ್ಯುನ್ನತಿಯೂ ನಿಮಗೆ ಇಷ್ಟವಾಗಿದ್ದರೆ ಇಂಥ ವಿಷಯದಲ್ಲಿ ನೀವುಗಳು ಪ್ರವರ್ತಿಸಬಾರದು" ಎಂದು ಅವರು ಖಂಡಿತವಾದ ಉತ್ತರವನ್ನಿತ್ತರೆಂದು ನಾವು ವರ್ತಮಾನವನ್ನು ಕೇಳಿದೆವು. ಇದು ನಿಜವಾಗಿದ್ದರೆ ಯುಕ್ತವಾಗಿರುತ್ತದೆ. ಸರ್ವಪ್ರಜಾ ಸಂರಕ್ಷಣೆಯ ಭಾರವನ್ನೇ ಹೊತ್ತಿರುವ ಶ್ರೀಮನ್ಮಹಾರಾಜರವರಿಗೆ ವರ್ಣಾಶ್ರಮಧರ್ಮರಕ್ಷಣೆಯ ವಿವೇಕವಿಲ್ಲವೆಂದು ಭಾವಿಸುವುದು ತಪ್ಪಲ್ಲವೆ? ಈಗ ಹಲವು ಕಡೆಗಳಿಂದ ಅರ್ಜಿಗಳು ಶ್ರೀಮನ್ಮಹಾರಾಜರ ಸನ್ನಿಧಿಗೆ ಬರುವಂತೆ ಪ್ರಯತ್ನಗಳು ಮಾಡಲ್ಪಟ್ಟಿವೆಯಷ್ಟೆ. ಇದಕ್ಕೆಲ್ಲಾ ಮುಖ್ಯವಾದ "ಬಾಯ್ಲರು" ಎಲ್ಲಿ ಹೇಗಿರುವುದೆಂಬುದನ್ನು ಶ್ರೀಮನ್ಮಹಾರಾಜರೂ ಅವರ ಪ್ರಭುತ್ವದವರೂ ಅರಿಯದೆ ಇಲ್ಲ. ಅವುಗಳಿಗೆ ತಕ್ಕ ಉತ್ತರವಾಗಿ ಒಂದು ಪ್ರಕಟನವನ್ನು ಮಾಡಿಸುವುದು ಅವಶ್ಯಕವಾಗಿದೆಯೆಂದು ನಮ್ಮಂಥವರಿಗೆ ತೋರುವುದು. ಅದನ್ನು ಅವರಾದರೂ ಇಷ್ಟರಲ್ಲೇ ನೆರವೇರಿಸದೆ ಇರಲಾರರು.

ಮೇಲೆ ವಿಚಾರಮಾಡಿದ ಕಾರಣಗಳನ್ನೆಲ್ಲಾ ನೋಡಿದರೆ ಪಂಚಮರಿಗಾಗಿ ಪ್ರತ್ಯೇಕ ಪಾಠಶಾಲೆಗಳನ್ನೇ ಇಡಿಸಿಕೊಡುವುದು ಸಾಧ್ಯವಾಗಿ ತೋರುವುದಿಲ್ಲ. ಜನರ ಮನಸ್ಸಿನ ಸಂಕೋಚವು ದಿನಕ್ರಮೇಣ ಕಡಿಮೆಯಾಗುವುದರಲ್ಲಿ ಅಭ್ಯಂತರವಿಲ್ಲ. ಅಲ್ಲಿಯವರೆಗೂ ಪ್ರತಿ ಸರ್ಕಾರಿ ಶಾಲೆಗಳಲ್ಲೂ ಪಂಚಮರು ಇರತಕ್ಕ ತರಗತಿಗಳಲ್ಲಿ ಇತರ ಬಾಲಕರ ಮಗ್ಗುಲಲ್ಲೇ ಬೇರೆ ಬೆಂಚುಗಳನ್ನು ಅವರ ಮಕ್ಕಳುಗಳಿಗಾಗಿ ಹಾಕಿಸಿಕೊಟ್ಟು ಉಭಯರಿಗೂ ಒಬ್ಬರೇ ಉಪಾಧ್ಯಾಯರಿಂದ ಏಕಕಾಲದಲ್ಲಿ ಒಂದೇ ತೆರದ ಪಾಠವು ಸಾಗುವಂತೆ ಬೇಕಾದರೆ ಮಾಡಬಹುದು. ನಿತ್ಯವೂ ಸ್ನಾನಮಡಿಗಳನ್ನು ಮಾಡಿಕೊಂಡು ಪಾಠಶಾಲೆಗಳಿಗೆ ಪಂಚಮ ವಿದ್ಯಾರ್ಥಿಗಳು ಬರಬೇಕೆಂದು ಕಟ್ಟುಮಾಡಿದರೂ ಮಾಡಲಿ. ದುರಾಹಾರ ದುಷ್ಪಾನಗಳನ್ನು ಬಿಟ್ಟವರೇ ಶಾಲೆಗಳಿಗೆ ಬರಬೇಕೆಂದು ಕಟ್ಟುನಿಟ್ಟನ್ನು ಮಾಡಲಿ. ಇಂಥ ಕಟ್ಟುಗಳಿಂದ ಇತರರಲ್ಲಿರುವ ದುಷ್ಪಾನ ದುರಾಹಾರಗಳ ಪದ್ಧತಿಯೂ ತಪ್ಪಲಿ. ಈ ಅರ್ಥಕ್ಕೆ ಸರ್ಕಾರದವರು ಕೂಡ ಬೇಗನೆ ಒಂದು ಅಪ್ಪಣೆ ಮಾಡಿದರೆ ಪ್ರಕೃತದ ಗದ್ದಲದ ನಾಟಕಕ್ಕೆ ಎಷ್ಟೋ ತಡೆಯಾದೀತೆಂದು ತೋರುವುದು.

ಒಳದೇಶದ ವೃತ್ತಾಂತಗಳು.

ಶ್ರೀರಂಗಪಟ್ಟಣದ ಮ|| ಎ. ಜವರಯ್ಯನವರಿಗೆ ಸಂಪದಭ್ಯುದಯಸಮಾಜದ ವ್ಯವಸಾಯಶಾಖಾ ಬೋರ್ಡಿನ ಮೆಂಬರುತನವು ಲಭ್ಯವಾದುದಕ್ಕಾಗಿ ಆ ತಾಲ್ಲೋಕು ಪ್ರಜೆಗಳು ತಮ್ಮ ಅಭಿನಂದನಗಳನ್ನು ವಿಜ್ಞಾಪನಪತ್ರಸಮರ್ಪಣಮೂಲಕ ಈ ದಿವಸ ಶ್ರೀರಂಗಪಟ್ಟಣದ ದರಿಯಾದವಲತ್ತುಭವನದಲ್ಲಿ ರಾ|| ಸಾ|| ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿಸಲು ನಿರ್ಧರಿಸಿಕೊಂಡಿದ್ದಾರೆ.

ನಮ್ಮ ವಿದ್ಯಾಭ್ಯಾಸ ಶಾಖಾಧ್ಯಕ್ಷರಾದ ಮ|| ರಾಮಲಿಂಗರಡ್ಡಿಯವರ ಸಹೋದರರ ಪುತ್ರಿಯನ್ನು ಕಲ್ಕತ್ತಾದಲ್ಲಿ ಅಸಿಸ್ಟೆಂಟ್ ಇಂಜನಿಯರಾಗಿರುವ ರಾ|| ಎ. ಟಿ. ರಾಮಲಿಂಗರಡ್ಡಿಯವರಿಗೆ ಕೊಟ್ಟು ಬೆಂಗಳೂರಿನಲ್ಲಿ ವಿವಾಹಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ದಿವಾನರೇ ಮೊದಲಾದ ಸರ್ಕಾರಿ ದೊಡ್ಡ ದೊಡ್ಡ ಅಧಿಕಾರಿಗಳೂ ಸ್ಥಲ ಪರಸ್ಥಲಗಳ ಅನೇಕಮಂದಿ ದೊಡ್ಡಮನುಷ್ಯರೂ ಹೋಗಿದ್ದರು.

ಭರತಖಂಡದ ವೃತ್ತಾಂತಗಳು.

ರಾಷ್ಟ್ರೀಯ ಮಹಾಸಭೆಯು ಅಮೃತಸರದಲ್ಲಿ ಜರುಗುವುದಷ್ಟೆ. ಅದಕ್ಕೆ ಅನೇಕಾನೇಕ ರೈತಜನರೂ ಬರುವಂತೆ ಏರ್ಪಡಿಸಿದ್ದಾರೆ. ಅಲ್ಲಿ ನಡೆಯುವ ಉಪನ್ಯಾಸಗಳಲ್ಲಿ ಸತ್ಕಾರಕ ಸಂಘಾಧ್ಯಕ್ಷರ ಮತ್ತೂ ಸಭಾಧ್ಯಕ್ಷರ ಭಾಷಣಗಳ ಹೊರತು ಉಳಿದುವುಗಳೆಲ್ಲಾ ಉರುದುಭಾಷೆಯಲ್ಲೇ ನಡೆಯುವಂತೆ ಏರ್ಪಡಿಸಿದ್ದಾರೆ.

ಬರುವ ಜನವರಿ ತಾ|| ೧೫ ರಿಂದ ಕರಾಚಿ ಬೊಂಬಾಯಿಗಳ ಮಧ್ಯದಲ್ಲಿ ಆಕಾಶವಿಮಾನಗಳ ಮೂಲಕ ಅಂಚೆಯನ್ನು ಸಾಗಿಸುವಂತೆ ಏರ್ಪಡಿಸಿದ್ದಾರೆ. ಹಾಗೆ ಕಳುಹಿಸಲ್ಪಡುವ ಕಾಗದಗಳ ಮೇಲೆ "ವಿಮಾನದ ಅಂಚೆ" ಎಂದು ಬರೆದಿರಬೇಕಲ್ಲದೆ ಪ್ರತ್ಯೇಕವಾಗಿ ೮ ಆಣೆ ತಲೆ ಚೀಟಿಯನ್ನು ಅಂಟಿಸಬೇಕು. ಹೀಗೆ ಲಂಡನ್ನಿನಿಂದ ಕಳುಹಿಸಲ್ಪಟ್ಟ ಕಾಗದಗಳು ಪ್ರತ್ಯೇಕವಾದ ಚೀಲಗಳಲ್ಲಿ ತುಂಬಲ್ಪಟ್ಟು ಕರಾಚಿಯಿಂದ ವಿಮಾನದ ಮೇಲೆ ಬೊಂಬಾಯಿಗೆ ಸೇರುವುದು.

ವಿದೇಶ ವೃತ್ತಾಂತಗಳು.

ಭಾರತ ರಾಜಕೀಯ ಸಂಸ್ಕರಣದ ಬಿಲ್ಲು ಲಾರ್ಡುಗಳ ಪಾರ್ಲಿಮೆಂಟಿನಲ್ಲಿ ೩ ನೆ ಸಲವೂ ವಾಂಚಿತವಾಗಿ ತಾ|| ೧೮ರಲ್ಲಿ ಅನುಮೋದನೆಯನ್ನು ಪಡೆದುಕೊಂಡಿತು.

ಭಾರತ ರಾಜಕೀಯ ಸಂಸ್ಕರಣದ ಬಿಲ್ಲು ಲಾರ್ಡುಗಳ ಪಾರ್ಲಿಮೆಂಟಿನಲ್ಲಿ ೩ ನೆಯ ಸಲವೂ ವಾಚಿತವಾಗಿ ತಾ|| ೧೮ ರಲ್ಲಿ ಅನುಮೋದನೆಯನ್ನು ಪಡೆದುಕೊಂಡಿತು.

ಲಂಡನ್ ಪಟ್ಟಣದಲ್ಲಿ ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಅಮೇರಿಕಾ, ಇಟಲಿ ಪ್ರತಿನಿಧಿಗಳೆಲ್ಲಾ ಕೂಡಿ ಕಳೆದ ತಾ|| ೧೩ರ ವರೆಗೆ ಮೂರುದಿನ ಸಭೆಮಾಡಿ ಪ್ರಸಕ್ತಸಮಯದಲ್ಲಿ ಆಚರಿಸಬೇಕಾದ ರಾಜಕೀಯಾಂಶಗಳನ್ನು ಕುರಿತು ಚರ್ಚಿಸಿ ಮುಗಿಸಿದರು. ಅದರಲ್ಲಿ ನಡೆದ ವಿಷಯವನ್ನು ಕುರಿತು ಅಧಿಕಾರಿಗಳು ಪ್ರಕಟಿಸಿರುವುದರಲ್ಲಿ—ಆಂಗ್ಲಪ್ರಭುತ್ವದವರು ಕರೆದಿದ್ದ ಪ್ರಕಾರಕ್ಕೆ ಅನೇಕ ವಿಷಯಗಳನ್ನು ಕುರಿತು ಆಲೋಚಿಸಲು ಫ್ರಾನ್ಸಿನ ಮುಖ್ಯಮಂತ್ರಿ ಕ್ಲೆಮೆಂಕೋರವರು ಬಂದಿದ್ದರು. ಅವರು ಬಂದುದು ಬಹು ಉಪಯೋಗಕರವಾಯಿತು. ಇಟಲಿ ಪ್ರತಿನಿಧಿಯು ಬಂದುದರಿಂದ ಆದ್ರಿಯಾಟಿಕ್ ಸಮುದ್ರಸಮಸ್ಯೆಯು ಚೆನ್ನಾಗಿ ಪರಿಷ್ಕೃತವಾಯಿತು. ಅಮೇರಿಕಾ ಪ್ರತಿನಿಧಿಯು ಕೂಡ ಬಂದಿದ್ದರು. ಜಪಾನ್ ಪ್ರತಿನಿಧಿ ಬಂದಿದ್ದುದರಿಂದ ರಷ್ಯಾಸಮಸ್ಯೆಯನ್ನು ಕುರಿತು ಚರ್ಚಿಸುವುದಕ್ಕೆ ಬಹಳ ಅನುಕೂಲವಾಯಿತು. ಇನ್ನೂ ಪರಿಷ್ಕಾರಗೊಳ್ಳಬೇಕಾಗಿರುವ ಅಂತರ್ಜಾತೀಯ ವಿಷಯಗಳು ಕೂಡ ಚರ್ಚಿಸಲ್ಪಟ್ಟುವು. ಅವುಗಳೊಳಗೆ ತುರ್ಕಿ ವಿಷಯವೂ ಒಂದಾಗಿದ್ದಿತು. ಸಭಿಕರೆಲ್ಲರೂ ಸ್ನೇಹಭಾವದಿಂದಲೇ ವರ್ತಿಸಿದರು. ಮುಂದೆ ಪರಿಷ್ಕರಿಸಬೇಕಾಗಿರುವ ಮುಖ್ಯಾಂಶಗಳೆಲ್ಲವನ್ನೂ ಕುರಿತು ಅವರುಗಳು ಸಂತೃಪ್ತಿಕರಗಳಾದ ಏರ್ಪಾಟುಗಳನ್ನು ಮಾಡಿದರು ಎಂದು ತಿಳಿಸಿರುತ್ತಾರೆ.

ಪತ್ರವ್ಯವಹಾರ.

ತಿಪ್ಟೂರಲ್ಲಿ ಯುದ್ಧದ ಶಾಂತ್ಯುತ್ಸವದಲ್ಲಿ ನಡೆದ ಸಂತೋಷವೂ, ಸಂತಾಪವೂ.

ಇಂಡಿಯಾ ಸರ್ಕಾರದವರ ಅಪ್ಪಣೆ ಪ್ರಕಾರ ಶ್ರೀಮತ್ ಮಹಾರಾಜಾ ಸರ್ಕಾರದವರು ತಿಪ್ಟೂರಿಗೆ ೨೦೦ ರೂಪಾಯಿಗಳನ್ನು ಕೊಟ್ಟಿದ್ದರು. ಮ್ಯುನಿಸಿಪಾಲಿಟಿಯಿಂದಲೂ ವರ್ತಕರುಗಳಿಂದಲೂ ೧ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ೧೩ನೇ ಶನಿವಾರ ಟೌನಿನ ಎಲ್ಲಾ ರಾಜಬೀದಿಗಳಲ್ಲೂ ಬಾವುಟಗಳು ನೆಡಲ್ಪಟ್ಟಿದ್ದುವು. ಸರ್ಕಾರಿ ಆಫೀಸುಗಳ ಮೇಲೂ ದೊಡ್ಡದೊಡ್ಡ ಕಟ್ಟಡಗಳ ಮೇಲೂ ಜಯಧ್ವನಿಸೂಚನೆಗಳೂ ಕಾಣುತ್ತಿದ್ದುವು. ಟೌನ್‌ನಲ್ಲಿ ಹಿಂದುಗಳೆಲ್ಲರೂ ತಮ್ಮ ತಮ್ಮ ಮನೆಗಳ ಮುಂದೆ ತಳಿರುತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಿರುವದನ್ನು ನೋಡತಕ್ಕ ಜನರಿಗೆ ನೂತನ ಗ್ರಾಮದಂತೆ ಕಾಣುತ್ತಿತ್ತು. ಆ ದಿನ ಎಲ್ಲಾ ಸ್ಕೂಲು ಹುಡುಗರೂ ಸೇರಿ ಶ್ರೇಯಃ ಪ್ರಾರ್ಥನೆ ಮಾಡಿದರು. ಬಡಬಗ್ಗರಿಗೆ ಅನ್ನ ಹಾಕಲ್ಪಟ್ಟಿತು. ೧೪ರಲ್ಲು ಹಿಂದೂ ದೇವಾಲಯಗಳಲ್ಲಿ ಪೂಜೆ, ಅಭಿಷೇಕ ವಗೈರೆ ನಡೆಯಿತು. ಜರ್ಮನಿಯವರ ಮತ್ತು ತುರ್ಕಿಯವರ ಘೋರಕೃತ್ಯಗಳಿಗೆ ಬ್ರಿಟಿಷ್ ಸರ್ಕಾರದವರು ತಮ್ಮ ತನುಮನಗಳನ್ನು ಒಪ್ಪಿಸಿ ಜಯಶೀಲರಾಗಿ ಇಂಡಿಯಾದೇಶಕ್ಕೆ ತೊಂದರೆಯಿಲ್ಲದಂತೆ ಕಾಪಾಡಿದ ಜ್ಞಾಪಕಾರ್ಥವಾಗಿ ಪ್ರಾರ್ಥನೆಗಳನ್ನು ಮಾಡಿದರು. ೧೫ರಲ್ಲಿ ವೈಸ್ ಪ್ರೆಸಿಡೆಂಟರು ಜವಳಿ ಅಂಗಡಿಯವರಿಂದ ಪಂಚೆಗಳನ್ನೂ ಸೀರೆಗಳನ್ನೂ ತಂದು ಬಡಬಗ್ಗರಿಗೆ ಅಮಲ್ದಾರರ ಮುಖಾಂತರ ಹಂಚಿದರು. ೧೬ನೇ ತಾರೀಖಿನಲ್ಲಿ ಚಕ್ರವರ್ತಿಗಳ ಚಕ್ರವರ್ತಿನಿಯವರ ಶ್ರೀಮತ್ ಮಹಾರಾಜರವರ ಭಾವಚಿತ್ರಗಳನ್ನು ರಾಜಬೀದಿಗಳಲ್ಲಿ ಮೆರೆವಣಿಗೆ ಮಾಡಲು ಪೇಟೆ ಬಸವೇಶ್ವರ ದೇವಸ್ಥಾನದಿಂದ ಅಮಲ್ದಾರರವರು ಪಲ್ಲಕ್ಕಿ ತರಿಸಿ ಅಲಂಕಾರಗಳನ್ನು ಮಾಡಿಸಿ ಉತ್ಸವ ಹೊರಡುವ ಸಮಯಕ್ಕೆ ಸರಿಯಾಗಿ ೨೦-೩೦ ಜನ ಮುಸಲ್ಮಾನರು ಬಂದು ತಂಟೆಮಾಡಿ ಉತ್ಸವ ಭಂಗಮಾಡಲು ನಿಂತರು. ಅಮಲ್ದಾರರೂ, ಪೊ|| ಇನ್ಸ್‌ಪೆಕ್ಟರೂ, ಪೊ|| ಜಮಾದಾರರೂ ಎಷ್ಟು ಹೇಳಿದರೂ ಕೇಳದೆ ತಂಟೆಮಾಡಿದ್ದರಿಂದ ಉತ್ಸವವು ನಿಲ್ಲಿಸಲ್ಪಟ್ಟಿತು. ಆ ದಿನ ಸುತ್ತುಮುತ್ತಲಿನ ರೈತರು ಬಹು ಜನರು ನೇತ್ರಾನಂದಕ್ಕಾಗಿ ಕಾದಿದ್ದರು. ಕೆರೆಯಲ್ಲಿ ಉತ್ಸವ ಮಾಡಲು ತೆಪ್ಪವು ಕಟ್ಟಲ್ಪಟ್ಟಿತ್ತು. ಈ ಉತ್ಸವ ಭಂಗವಾದದ್ದಕ್ಕಾಗಿ ಹಿಂದುಗಳು ಆಶಾಭಂಗಗೊಂಡಿರುತ್ತಾರೆ. ನಮ್ಮ ಚಕ್ರವರ್ತಿಗಳು ದಿಗ್ವಿಜಯಮಾಡಿದ ಸಂತೋಷಭಂಗವಾಗಿ ಮತ್ತೆ ಉತ್ಸವ ಭಂಗವಾದುದೂ ಸಹ ಅಮಲ್ದಾರರವರು ಪೋಲೀಸ್ ಸೂಪರಿಂಟೆಂಡೆಂಟರವರಿಗೆ ಕೊಟ್ಟಿರುವ ರೈಫಿಯತ್ತಿನಿಂದ ಗೊತ್ತಾಗುತ್ತದೆ.

ತಾ. 20-12-19. ಪ್ರತ್ಯಕ್ಷದರ್ಶಿ.

ಸಿರಾ ತಾ|| ಬೆಳ್ಳಗ್ರಾಮದ ಯುದ್ಧಶಾಂತ್ಯುತ್ಸವವು.

ಮ|| ರಾ|| ಚಿಕ್ಕಬಾದೆಗೌಡರೇ ಮೊದಲಾದ ದೊಡ್ಡ ಮನುಷ್ಯರ ಘನವಾದ ಪ್ರಯತ್ನದಿಂದಲೂ ಮತ್ತು ಪಟೇಲ್ ಲಿಂಗಪ್ಪನವರ ಕಾರ್ಯದಕ್ಷತೆಯಿಂದಲೂ ಅತಿ ವಿಜೃಂಭಣೆಯಿಂದ ಜರುಗಿತು. ಇದು ಒಂದು ಹಳ್ಳಿಯಾದರೂ ಯುದ್ಧ ಶಾಂತ್ಯುತ್ಸವಗಳಲ್ಲಿ ಮೈಸೂರು ಬೆಂಗಳೂರು ಪಟ್ಟಣಗಳ ಬೀದಿಗಳನ್ನು ಹೋಲುತ್ತಿತ್ತು. ಪ್ರತಿದಿವಸವೂ ಶ್ರೇಯಃಪ್ರಾರ್ಥನೆಗಳಿಂದಲೂ ದೇವರ ಅಭಿಷೇಕ ಮೊದಲಾದ ಉತ್ಸವಗಳಿಂದಲೂ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರ ಕಾಲವಿಳಂಬವಿಲ್ಲದ ಜಯಜಯ ವಿನೋದದಿಂದಲೂ ತುಂಬಿ ತುಳುಕುತ್ತಿತ್ತು. ೧೫ನೇ ತಾರೀಖು ಮಧ್ಯಗಿರಿ ವಿದ್ಯಾಭ್ಯಾಸದ ಅಸಿ

ಸೈಂಟ್ ಇಕ್ಸ್‌ಪೆಕ್ಟರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆಸಿ ಅಧ್ಯಕ್ಷರ ಮತ್ತು ಸ್ಕೂಲ್ ಹೆಡ್ಮಾಸ್ಟರವರ ಉಪನ್ಯಾಸಗಳು ನಡೆದನಂತರ ಆಟಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನಗಳು ಕೊಡಲ್ಪಟ್ಟುವು. ಆ ದಿವಸ ಪರಸ್ಥಳದ ಜನಗಳೂ ಸೇರಿ ಸುಮಾರು ೫೦೦ ಜನಗಳವರೆಗೆ ಸೇರಿದ್ದರು. ಮರುದಿವಸ ದೇವರ ಮತ್ತು ಶ್ರೀ ಮಾರ್ಕ್ ಚಕ್ರವರ್ತಿ ಮಹಾರಾಜರವರ ಮೆರವಣಿಗೆಯು ನಿಜವಾದ ಚಕ್ರವರ್ತಿ ಮಹಾರಾಜರವರ ಉತ್ಸವಕ್ಕೆ ಸಮಾನವಾಗಿ ಅತಿ ಮನೋಹರವಾಗಿತ್ತು.

ಗ್ರಾಮದಲ್ಲಿ ದೊಡ್ಡ ಮನುಷ್ಯರನೇಕರು ಮನೆಯ ಮುಂಭಾಗವನ್ನಲಂಕರಿಸಿ ಕಾದುಕೊಂಡಿದ್ದು ಉತ್ಸವವು ಬರುತ್ತಲೇ ಬಿಜಯಮಾಡಿಸಿಕೊಂಡು ಉಪಚಾರಮಾಡುತ್ತಲೂ ಗಂಧಪುಷ್ಪತಾಂಬೂಲಾದಿಗಳ ವಿನಿಯೋಗಗಳಿಂದಲೂ ಈರೀತಿ ಉತ್ಸವವು ಅತಿ ವಿಜೃಂಭಣೆಯಿಂದ ಜರುಗಿತು. ಹಿಂದೆ ಯಾವಾಗಲೂ ಇಂಥಾ ಉತ್ಸವವು ಈ ಊರಲ್ಲಿ ನಡೆದಿರಲಿಲ್ಲವೆಂತಲೂ ಜನಗಳು ಹೇಳಿಕೊಳ್ಳುವಂತೆ ಈ ಉತ್ಸವವು ನೆರವೇರಿಸಲ್ಪಟ್ಟಿತು.

ಇಷ್ಟಕ್ಕೆಲ್ಲಾ ಗ್ರಾಮಮುಖಂಡರಾದ ಮ|| ಚಿಕ್ಕಬಾದೇಗೌಡರವರು ತಾವು ೮-೧೦ ವರ್ಷಕಾಲ ಪ್ರಜಾಪ್ರತಿನಿಧಿ ಸಭೆ ಡಿಸ್ಟ್ರಿಕ್ಟ್ ಬೋರ್ಡ್ ವಗೈರೆಗಳಿಗೆ ಮೆಂಬರಾಗಿದ್ದು ದೇಶಸೇವೆಯನ್ನು ಮಾಡಿ ಅನುಭವಿಗಳಾಗಿದ್ದು ಅನೇಕ ದೊಡ್ಡ ಮನುಷ್ಯರ ಬೆಂಬಲದಿಂದ ಈ ರಾಜಭಕ್ತಿಯನ್ನು ಪ್ರದರ್ಶಿಸಿದ್ದು ತುಂಬಾ ಸಂತೋಷಕರವಾಗಿತ್ತು. ಈ ಉತ್ಸವದ ಜ್ಞಾಪಕಾರ್ಥವಾಗಿ ೧೫ರೂ. ಬೆಲೆಯುಳ್ಳ ನಮ್ಮ ಮಹಾರಾಜರವರ ಸುಂದರವಾದ ಫೋಟೋ ಒಂದನ್ನೂ ಮತ್ತು ರಿಟೈರ್ಡ್ ದಿವಾನ್ ಸರ್ ವಿಶ್ವೇಶ್ವರಯ್ಯನವರ ಫೋಟೋ ಒಂದನ್ನೂ ತೆಗೆದು ಸ್ಕೂಲಿನಲ್ಲಿರಿಸಬೇಕೆಂದು ತೀರ್ಮಾನಿಸಿರುತ್ತಾರೆ.

ಪ್ರತ್ಯಕ್ಷದರ್ಶಿ.

ಯುದ್ಧಶಾಂತ್ಯುತ್ಸವ.

ಮಾಗಡಿ ತಾ|| ಗ್ರಾ|| ಕನ್ನಡ ಗರ್ಲ್ಸ್ ಸ್ಕೂಲ್.

೧೩ನೇ ಶನಿವಾರ ಪಾಠಶಾಲೆಯು ಕದಳೀಸ್ತಂಭಗಳಿಂದಲೂ, ತೋರಣಗಳಿಂದಲೂ ಅಂದವಾಗಿ ಅಲಂಕರಿಸಲ್ಪಟ್ಟಿತು. ೧೪ನೇ ಭಾನುವಾರ ಶಾರದಾ ಪೂಜೆ ಮತ್ತು ಸಂಗೀತೋತ್ಸವವು ನಡೆಯಿಸಲ್ಪಟ್ಟಿತು. ೧೫ನೇ ಸೋಮವಾರ ಪ್ರಾತಃಕಾಲ ಸ್ಕೂಲ್ ಮುಂಭಾಗದ ಚಪ್ಪರದ ಬಳಿ ಉಪಾಧ್ಯಾಯ ಉಪಾಧ್ಯಾಯಿನಿಯರೂ, ಬಾಲಕಿಯರೂ ಸಹ ನೆರೆದಿದ್ದರು. ಚಪ್ಪರದ ಮಧ್ಯದಲ್ಲಿ ನಿಲ್ಲಿಸಿದ್ದ ಇಂಗ್ಲಿಷ್ ರಾಜ್ಯಭಾರ ಸೂಚಕವಾದ ಪತಾಕೆಗೆ ಎಲ್ಲರೂ ವಂದಿಸಿದರು. ತರುವಾಯ ದೇವರ ಪ್ರಾರ್ಥನೆ ಮುಂತಾದ ಮಂಗಳ ವಾದ್ಯಗಳೂ ವಿದ್ಯಾರ್ಥಿನಿಯರ ಆಟಪಾಟಗಳೂ ಸಹ ನಡೆಸಲ್ಪಟ್ಟವು. ಮಧ್ಯಾಹ್ನ ಸಭಿಕರ ಅಭಿಪ್ರಾಯಾನುಸಾರ ಸಾಹುಕಾರ್ ಮ|| ರಾ|| ರಾಮಶೆಟ್ಟರ ಕುಟುಂಬ ಶ್ರೀಮತಿ ಕಾಮಾಕ್ಷಿಯಮ್ಮನವರು ಅಗ್ರಾಸನವನ್ನು ವಹಿಸಿದರು. ಪ್ರೋಗ್ರಾಂ ಪ್ರಕಾರ ವಿದ್ಯಾರ್ಥಿನಿಯರಿಂದ ದೇವರ ಪ್ರಾರ್ಥನೆಯು ನೆರವೇರಿಸಲ್ಪಟ್ಟ ತರುವಾಯ ಪ್ರೌಢಸ್ತ್ರೀಯರ ಹಾರ್ಮೋನಿಯಂ ಸಂಗೀತವು ಬಹು ಸ್ವಾರಸ್ಯವಾಗಿ ನಡೆಯಿಸಲ್ಪಟ್ಟಿತು. ನಂತರ ಸ್ಕೂಲ್ ಮ. ಆ. ಮಿಸ್ಟ್ರೆಸ್ ಶ್ರೀಮತಿ ಎಸ್. ರಾಮಕ್ಕನವರು ಸ್ತ್ರೀವಿದ್ಯಾಭ್ಯಾಸದ ಆವಶ್ಯಕತೆ, ಅದರ ಪ್ರಯೋಜನ ಇವುಗಳನ್ನು ವಿವರಿಸಿ ಬಹು ಶ್ಲಾಘ್ಯವಾಗಿ ಉಪನ್ಯಸಿಸಿದರು. ತರುವಾಯ ಇಲ್ಲಿನ ಹೆ. ಮಾ. ಅಶ್ವತ್ಥಶಾಸ್ತ್ರಿಗಳು ಇಂಗ್ಲಿಷ್ ರಾಜ್ಯಭಾರದಿಂದ ಈ ದೇಶೀಯರಿಗುಂಟಾಗಿರುವ ಮಹತ್ಫಲವನ್ನೂ, ರಾಜಭಕ್ತಿವಿಚಾರವನ್ನೂ ಕುರಿತು ಉಪನ್ಯಾಸ ಮಾಡಿದರು. ಇಲ್ಲಿನ ಬೆಂಚ್ ಮ್ಯಾಜಿಸ್ಟ್ರೇಟರಾದ ಮ|| ರಾ|| ಚೊಕ್ಕಣ್ಣಯ್ಯಂಗಾರ್ಯರವರ ಕುಟುಂಬ ಶ್ರೀಮತಿ ಲಕ್ಷ್ಮಿಯಮ್ಮನವರು ದೇಶದ ಏಳಿಗೆ ಮತ್ತು ರಾಜರಲ್ಲಿ ನಮಗಿರಬೇಕಾದ ಭಕ್ತಿವಿಶ್ವಾಸಗಳು ಇವುಗಳನ್ನು ಕುರಿತು ಉಪನ್ಯಾಸ ಮಾಡಿದ ತರುವಾಯ ಅಗ್ರಾಸನವನ್ನು ವಹಿಸಿದ್ದ ಶ್ರೀಮತಿ ಕಾಮಾಕ್ಷಿಯಮ್ಮನವರು ರಾಜರಲ್ಲಿ ಪ್ರಜೆಗಳಿಗಿರಬೇಕಾದ ಕೃತಜ್ಞತೆಯನ್ನು ಕುರಿತು ಭಾಷಣಮಾಡಿದರು. ಆ ಮೇಲೆ ಸ್ಕೂಲಿನಲ್ಲಿ ಅರ್ಹರಾದ ವಿದ್ಯಾರ್ಥಿನಿಯರಿಗೆ ಬಹುಮಾನಗಳೂ I. B. A. ತರಗತಿ ವಿದ್ಯಾರ್ಥಿನಿಯರಿಗೆ ಬೊಂಬೆ ಮುಂತಾದ ಆಟದ ಸಾಮಾನುಗಳೂ ಸಹ ಕೊಡಲ್ಪಟ್ಟ ತರುವಾಯ ವಿದ್ಯಾರ್ಥಿನಿಯರಿಂದ ಮಂಗಳಗಾನವು ಮಾಡಿಸಲ್ಪಟ್ಟಿತು. ಬಳಿಕ ಸಭಾಧ್ಯಕ್ಷರಿಗೂ, ಸಭಿಕರಿಗೂ, ಗಂಧಪುಷ್ಪ ತಾಂಬೂಲಗಳೂ ಮಿಠಾಯಿ ಮೊದಲಾದ ತಿಂಡಿಯ ಸಾಮಾನುಗಳೂ ಸಹ ವಿನಿಯೋಗಿಸಲ್ಪಟ್ಟ ತರುವಾಯ ಸಭಾಧ್ಯಕ್ಷರೂ ಸಭಿಕರೂ ವಿದ್ಯಾರ್ಥಿನಿಯರೂ ಸಹ ಸಪರಿವಾರರಾದ ನಮ್ಮ ಶ್ರೀ ಸಾರ್ವಭೌಮರವರ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಏಕಕಂಠದಿಂದ ಬಯಸಿದರು. ಸಭೆಯು ಬರಖಾಸ್ತಾಯಿತು. ಸಾಯಂಕಾಲ ಸ್ಕೂಲ್ ಬಳಿ ದೀಪೋತ್ಸವವು ನಕ್ಷತ್ರಗಳ ಕಾಂತಿಯನ್ನು ತಿರಸ್ಕರಿಸುವಂತೆ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಇಲ್ಲಿನ ಜನರೆಲ್ಲರೂ ಈ ದಿನವನ್ನು ಅತ್ಯಾನಂದದಿಂದ ಕಳೆದರು. ೧೯ನೇ ಮಂಗಳವಾರ ಪ್ರಾತಃಕಾಲ ೮ ರಿಂದ ೧೨ರ ವರೆಗೂ ಊರಿನ ಸಕಲ ಅಧಿಕಾರಿಗಳೂ ಸಕಲ ದೊಡ್ಡ ಮನುಷ್ಯರೊಡನೆ ಸಪರಿವಾರರಾದ ಶ್ರೀ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಪಟಗಳನ್ನು ಸಕಲ ಮಂಗಳವಾದ್ಯಗಳು ದಿಗಂತವನ್ನು ಭೇದಿಸುತ್ತಿರಲು ರಾಜಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿ ಪುನಃ ಸ್ವಸ್ಥಾನಕ್ಕೆ ತಲಪಿದ ತರುವಾಯ ಬಾಣಬಿರಸು ಮುಂತಾದ ವಿನೋದ ವ್ಯಾಪಾರಗಳನ್ನು ನಡಿಸಿದ ತರುವಾಯ ಪುನಃ ಶ್ರೀಯವರ ಶ್ರೇಯಃಪ್ರಾರ್ಥನೆ ಮಾಡಿ ಸರ್ವರೂ ಅತ್ಯುತ್ಸಾಹದಿಂದ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಪುಟ್ಟರಂಗಮ್ಮ.

[ಹೀಗೆಯೇ ಯುದ್ಧಶಾಂತ್ಯುತ್ಸವ ಸಂಬಂಧಗಳಾದ ಲೇಖನಗಳು ಉದ್ದುದ್ದವಾಗಿ ಬರೆಯಲ್ಪಟ್ಟು ಹಲವು ಕಡೆಯಿಂದ ಬಂದಿವೆ. ಸ್ಥಲವು ಸಾಲದುದರಿಂದ ಅವುಗಳನ್ನೆಲ್ಲಾ ಪ್ರಕಟಿಸಲು ಯುಕ್ತವಿಲ್ಲವಾಗಿ ಲೇಖಕರ ಕ್ಷಮೆಯನ್ನು ಕೋರುತ್ತೇವೆ.

ಇನ್ನು ಕೆಲ ದೀರ್ಘ ಲೇಖನಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತೇವೆ.

ಪ. ಪ್ರ.]

ಧಾರವಾಡ ಜಿಲ್ಲಾ ಕರ್ಜಗಿ ತಾ|| ಹಾಂವಸಿ ಗ್ರಾಮದಲ್ಲಿ ಮ|| ಕರಜಗಿ ನಾಗಪ್ಪನವರು ತಮ್ಮ ತಂಗಿಯ ಪಿಸೇಕಪ್ರಸ್ತವನ್ನು ಉದಾರವಾಗಿ ಮಾಡಿಸಿದ ಸಮಯದಲ್ಲಿ ಹಾನಗಲರು ಕನ್ನಪ್ಪಶಾಸ್ತ್ರಿಗಳು ಬಾಣಾಸುರೋಪಾಖ್ಯಾನ, ಸೀತಾಸ್ವಯಂವರ ಕೀರ್ತನಗಳನ್ನು ಮಾಡಿದರು. ಮ|| ಹಂಚಿನಾಳ ಬಾಳಪ್ಪನವರು ಧಾರ್ಮಿಕ ವಿಷಯವಾಗಿ ಉಪನ್ಯಾಸಮಾಡಿ ಸಮಾಜದ ವಿದ್ಯಾಭಿವೃದ್ಧಿಗೆ ಸರ್ವರೂ ಸಹಾಯಮಾಡಬೇಕೆಂದು ಪ್ರತಿಪಾದಿಸಿದರು. ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕೆ ಪ್ರಯಾಣಮಾಡಿರುವ ರಾ|| ರಾ|| ಗುಗ್ಗರಿಯವರ ಫಂಡಿಗೂ, ಹಾಂವಸಭಾವಿಯಲ್ಲಿರುವ ಶ್ರೀ ಮೃತ್ಯುಂಜಯ ಸ್ಕೂಲ್ ಫಂಡಿಗೂ ಕೆಲ ಹಣವು ಚಂದಾರೂಪವಾಗಿ ಕೂಡಿತು.

ನಿಜಾಂ ಇಲಾಖಾಕ್ಕೆ ಸೇರಿದ ದೇವರಗೂಗೂರಿನಲ್ಲಿರುವ ಶ್ರೀಮಂತ ಸೂಗೂರಪ್ಪಣ್ಣನವರು ಕಳೆದ ಕಾರ್ತಿಕಮಾಸದಿಂದಲೂ ವೇ|| ಕಲ್ಲೂರು ಸೊಗೂರುಶಾಸ್ತ್ರಿಗಳಿಂದಲೂ ದೇವದುರ್ಗದ ವೇ|| ರಾಚೋಟಿಸ್ವದೇವರಿಂದಲೂ ಶರಣಬಸವೇಶ್ವರ ಪುರಾಣವನ್ನು ವಿಜೃಂಭಣೆಯಿಂದ ನಡೆಯಿಸಿದರು. ಮ|| ಕೆ. ವೀರಪ ಅಣ್ಣಾ ಇವರ ವಿಶಿಷ್ಟಾದ್ವೈತ ಮತಸಿದ್ಧಾಂತ ವಿಷಯದ ಉಪನ್ಯಾಸಗಳು ನಡೆದುವು. ಮಾರ್ಗಶಿರ ಶುದ್ಧ ೨ ಸೋಮವಾರಕ್ಕೆ ಮಂಗಳ ಮಹೋತ್ಸವವು ಜರುಗಿತು. ಚಿಕ್ಕಸಾಗರ ಚೌಕಿ ಮಠದ ಶಿವಾನುಭವ ಚರವರ್ಯ ವಿರೂಪಾಕ್ಷಸ್ವಾಮಿಗಳೇ ಮೊದಲಾದ ಅನೇಕ ಮಹಾಸ್ವಾಮಿಗಳೂ, ಬಾಲಚೇಡದ ವೇ|| ಶ್ರೀಕಂಠಶಾಸ್ತ್ರಿಗಳೇ ಮೊದಲಾದ ವಿದ್ವಾಂಸರುಗಳೂ ಅನೇಕಮಂದಿ ಭಕ್ತಮಾಹೇಶ್ವರರೂ ಕೂಡಿದ್ದರು. ಮೃಷ್ಟಾನ್ನ ಭೋಜನ ಸಂತರ್ಪಣೆಯೂ ಉದಾರವಾದ ದಕ್ಷಿಣಾದಾನವೂ ಆಯಿತು. ಪುರಾಣದ ಮೆರವಣಿಗೆಯು ಬಹು ವೈಭವದಿಂದ ಸಾಗಿತು. ಮರುದಿನ ಕೂಡಿದ ಮಹಾಸಭೆಯಲ್ಲಿ ಸಂಗೀತಶ್ರವಣವೂ, ವಿದ್ವಾಂಸರ ಧಾರ್ಮಿಕೋಪನ್ಯಾಸಗಳೂ ನಡೆದುವು. ಸ್ವಾಮಿಗಳಿಗೂ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಯಥೋಚಿತ ಸಂಭಾವನೆಗಳು ಜರುಗಿದುವು. ಮೈಸೂರು ವಿದ್ಯಾಭಿವೃದ್ಧಿ ಫಂಡಿಗೆ ೧೦ ರೂ. ಗಳನ್ನೂ ಗುಲ್ಬರ್ಗಾ ವೀರಶೈವ ಬಂಧುಸಮಾಜಕ್ಕೆ ೧೦ ರೂ. ಗಳನ್ನೂ ತೆಗೆದು ಕಳುಹಿಸಿಕೊಟ್ಟರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 23

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಶಸ್ತ್ರ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವಸಂಬಂಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಡಿನ್ನು ಬಾಟ್ಲಿ ೧ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಬಜ್ಜಿ, ಕುರು, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

44 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುತಿಲಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಶುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಫ್ಲೀಡರ್,
44 3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ತೋರಬೇಕು. ಕ್ರಯ 1 ಕ್ಕೆ 0-12-0 ಆಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ವಾಣಿ ಕಂಪನಿ,
44 ಸಾಹುಕಾರಪೇಟೆ, ಮದರಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಒಮ್ಮೆ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರತ್ಯೇಕ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
14 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

೧೯೧೯ ನೆಯ ಇಸವಿ ಡಿಸೆಂಬರ್ ತಾ|| ೨೮ ರಿಂದ ೧೯೨೦ ನೆಯ ಜನವರಿ ತಾ|| ೩ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಪುಷ್ಯಶುದ್ಧ ಷಷ್ಠಿಯಿಂದ ಪುಷ್ಯ ಶು|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
28	(1) ಭಾನು	ಷಷ್ಠಿ	33-48	ಶತಭಿ	10-10	13
29	ಸೋಮ	ಸಪ್ತ	31-30	ಪೂಭಾ	9-52	14
30	ಮಂಗಳ	ಅಷ್ಟ	28-2	ಉಭಾ	8-33	15
31	ಬುಧ	ನವ	24-1	ರೇವತಿ	6-16	16
1	ಗುರು	ದಶ	18-56	ಅಶ್ವಿ	3-10	17
2	(2) ಶುಕ್ರ	ಏಕಾ	13-28	ಕೃತ್ತಿ	55-46	18
3	(3) ಶನಿ	ದ್ವಾದ	7-41	ರೋಹಿ	51-31	19

(1) ಕುಲಷಷ್ಠಿ. (2) ಸರ್ವತ್ರಏಕಾದಶಿ, ತ್ರೈಲೋಕ್ಯಗೌರಿವ್ರತಂ. (3) ಕೂರ್ಮದ್ವಾದಶಿ, ಮೂಗನೂರುಹೊಡೆ, ಮುಕ್ಕೋಟಿದ್ವಾದಶಿ.

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.





Year 1920

Vol. 33.

Kanarese

No.	Leader	Sub-leader	Contributions etc
1	[illegible].	[illegible].	1 [illegible].
2	34 [illegible].	[illegible].	" [illegible].
		[illegible].	
3	[illegible] -	[illegible].	
		[illegible].	
		[illegible].	
4	[illegible] -	[illegible].	
5	[illegible].		
6	[illegible].	[illegible].	
7	[illegible] I	[illegible]	
8	" " II		
9	[illegible] III	Sir. K. P. ಪುಟ್ಟಣ್ಣ ಚೆಟ್ಟಿ C. I. E.	
		[illegible]	
		[illegible].	
10	[illegible]	[illegible]	
		[illegible].	
13	[illegible].		
14	[illegible].	[illegible]	
		[illegible]	
15	[illegible].		
16	[illegible]	[illegible].	
17	[illegible].		
18	[illegible]	[illegible]	
19	[illegible].		
20	[illegible].		
21	[illegible].		
22	[illegible].	[illegible].	
23	[illegible].	[illegible].	
24	[illegible].		
25	[illegible]	[illegible]	
		[illegible]	
26.	[illegible] -		
7	[illegible]		
	[illegible].	[illegible].	
		[illegible]	
9	[illegible]		
0	[illegible].	[illegible]	
		[illegible]	
1	[illegible]		
2	[illegible]		
3	[illegible].	[illegible]	
4	[illegible]		[illegible]. (Govt. Nomi
5	[illegible] -	[illegible]	
	[illegible] -	[illegible].	
		[illegible].	
	[illegible]		
8.	[illegible]		
9	[illegible]		
	[illegible]		
	[illegible] -		

45	[illegible]	
46.	[illegible]	[illegible]
47	[illegible]	
48	[illegible]	
49	—do— [illegible]	[illegible] [illegible]
50	[illegible]	
51	[illegible]	
52	[illegible]	

Year 1920.

Vol. 33.

Important News	Correspondence
	[illegible]
	[illegible]
	[illegible]
	[illegible]
	[illegible]
	[illegible]
	[illegible]
	—do—
	[illegible]
	[illegible]
	[illegible]
	[illegible]
	[illegible]
	[illegible] ([illegible])
	[illegible]
	[illegible]
	[illegible]
	[illegible]
	[illegible]
	[illegible] ✓
	[illegible]
	[illegible]
	[illegible]
	[illegible]
30.	[illegible]

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿಕ್ಮಿತಾ | ಭುವನಭಕ್ತ್ಯಾವತಾರಾ ಪಕ್ವಜ್ಞ ನಕ್ಷತ ಮೋಹರಾಜೀಯೂಶ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾತಾಳುಲಂ | ಪ್ರೇಮಂಚಿತ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦]

[ಪ್ರಾಪ್ತವೇಶ ...-೦]

REGISTERED NO. M. 124.

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಜನವರಿ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೧

MYSORE GOVERNMENT ADVERTISEMENTS.

PUREST raw materials and the **FINEST** essential oils are used in our celebrated **SANDAL SOAPS.**

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

22

GOVERNMENT ART WORKSHOPS, BANGALORE CITY.

Started and worked by Government to encourage and develop the local artisans, Master Artisans in Sandalwood, ivory, and rosewood carving, art furniture, brass embossing and carving, ivory inlaying etc., are employed. Special attention is devoted to workmanship and design.

Costly art furniture work, sandal-wood casket, almirahs, walking sticks, smoking sets, ivory caskets, daggers, card-cases etc., Mysore carved rosewood tables, and Teapoys made largely.

Designs and estimates are furnished to customers.

For further particulars apply to: —

THE SUPERINTENDENT,
Governent Metal Factory &
Art Workshops,
No. 16. BANGALORE CITY.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆಯ ಕಾವ್ಯ. ಬೆಲೆ ೧೨ ಆಣೆ.

[illegible] ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ತಿಳಿದುಕೊಳ್ಳುವಂತೆ [illegible] ವೃಷಭೇಂದ್ರವಿಜಯದಲ್ಲಿನ [illegible] ಬರೆಯಲ್ಪಟ್ಟಿದೆ.

[illegible] ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ [illegible]

[illegible]

[illegible] ಬೆಲೆ ೧-೩-೦ [illegible]

ಪಂಚಕಸ್ತೋತ್ರೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕನಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಸ್ತವ ೨ ಆಣೆ; ಶಂತರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ಖರೀದಿಸಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 10

ನಾವು ಎ. ಆಲ್ ಬ್ಯುಕ್ಯಯರ್ ಕ್ಕು. ಅಂಡ್ ಸನ್ಸ್ ಎಂಬ ಹೆಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗ್ಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

8

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕಶಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಅಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಅಪೇಕ್ಷವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ಪವಶಾಯಿಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ಜರೆಯುವ ಶುಭಾಶುಭಾದಿ ಫಲವಿಚಾರ, ಅಪಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ಕೋಷಿಕೆ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರಕ್ಕೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂತು ಬೆಲೆಯನ್ನು [illegible] ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ಪ್ರತಿ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
[illegible] ಮುಕ್ಕಾಂ, [illegible] ಗುಲ್ಬುರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
2 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಶಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 3

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನ ಸುಭವಿಸಲು ಅಪೇಕ್ಷೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರ [illegible] ಟಪಾಲಖರ್ಚು ಬೇರೆ, ಪ್ರತ್ಯೇಕ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪ್ನಿ,
ಪೋಸ್ಟ್ ಬನವಾಸಿ ಉತ್ತರಕನ್ನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ.	೦—೬—೦
[illegible]	೦—[illegible]—೦
[illegible]	೦—[illegible]—೦
[illegible]	೦—[illegible]—೦
[illegible] (ಮುಕ್ತಾವಳಿ)ತ	[illegible]
[illegible]	[illegible]

[illegible]

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶ್ರೀಕೃಪಾ | ಭುವನಪಥಕೃತಾವತಾರಾ ಪಕ್ಷ್ಯಜ್ಞ ಸಪ್ತತ ಮೋಹರಾಜೀಯೂಷ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕರಾಲೋಲಂಸುಧೀಭೂಂಗವ | ಸ್ತೋಮಾಭೀಷ್ಟದೋಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ರೀಯಂಸದಾಪುರೀಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [[illegible]-೦]

REGISTERED NO. M. [illegible]

(ಸಂಪುಟ ೩೩) ಮೈಸೂರ್ ಸ್ಟಾರ್ ಸರ್ಕ ೧೯೨೦ ನೆಯ ಇಸವಿ ಜನವರಿ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೧

MYSORE GOVERNMENT ADVERTISEMENTS.

PUREST raw materials and the **FINEST** essential oils are used in our celebrated SANDAL SOAPS.

The Government Soap Factory,
Bangalore.

Mysore Governmet Museum.

The Museum is open from 7-30 A. M. to 5-30 P. M. all days of the week except on Wednesday when it will be closed.

The afternoons of every Monday are set apart for the visits of Zenana and other ladies. On that day men are not allowed to enter the Museum after 2 P. M.

Donations of any kind specially objects of local importance will be thankfully accepted.

H. C. JAVARAYA.
Assistant Superintedent,
Government Museum.

22

GOVERNMENT ART WORKSHOPS, BANGALORE CITY.

Started and worked by Government to encourage and develop the local artisans, Master Artisans in Sandalwood, ivory, and rosewood carving, art furniture, brass embossing and carving, ivory inlaying etc., are employed. Special attention is devoted to workmanship and design.

Costly art furniture work, sandal-wood casket, almirahs, walking sticks, smoking sets, ivory caskets, daggers, card-cases etc., Mysore carved rosewood tables, and Teapoys made largely.

Designs and estimates are furnished to customers.

For further particulars apply to:—
THE SUPERINTENDENT,
Governent Metal Factory &
Art Workshops,
No. 16. BANGALORE CITY.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. [illegible] ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿ[illegible] ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮, ಬಾಲಕರು ಕೂಡ ಸುಲಭ[illegible] ತಿಳಿಯುವಂತೆ ಬಿಡುಗನ್ನಡ ಶೈಲಿಯಿಂದ ವೃಷಭೇಂದ್ರವಿಜಯದಲ್ಲಿ[illegible] ಕಥೆಗಳೆಲ್ಲಾ ಸರಳವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. [illegible] ಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವಶರಣರ [illegible]ಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ [illegible], [illegible] ಪಂಚಾಚಾರ, [illegible], ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

[illegible].—ಬೆಲೆ ೧೪ ಆಣೆ. [illegible] ಶ್ರೀ ಚನ್ನ[illegible]ಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ [illegible] ನಿರೂಪಿಸಲಾಗಿದೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ [illegible] ಟೀಕೆಯೂ ಇರುತ್ತದೆ.

[illegible] ಪುರಾಣಂ.—ಬೆಲೆ ೧-೩-೦ [illegible]

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳೀ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೊಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 10

ನಾವು ಎ. ಆಲ್ ಬ್ಯುಕ್ಯುಯರ್ ಕ್ಯೊ ಆಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

8

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವನಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕಶಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಡಲ್ಪಡುವವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ [illegible] ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ಪಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, [illegible] ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರಕ್ಕೆ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನು [illegible] ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೪ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
[illegible], ಜಿಲ್ಲಾ ಗುಲ್ಬುರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೆಡಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
2 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಳ್ಳೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 3

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ನಾಶಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. [illegible] ಸಹಿತ. ಟಪಾಲುಖರ್ಚು ಬೇರೆ. ಪ್ರತ್ಯೇಕ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನ್ನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—[illegible]—೦
[illegible]ಚರಿತ್ರೆ	೦—[illegible]—೦
[illegible]	೦—[illegible]—೦
[illegible] (ಮುಕ್ತಿ[illegible])	[illegible]
[illegible]	[illegible]

[illegible] ಬೇರೆ.

ಪ್ರಕಟನೆ.

೧೯೧೭ ನೆಯ ಡಿಶಂಬರ್ ತಿಂಗಳಲ್ಲಿ ದಾವಣಗೆರೆಯಲ್ಲಿ ನೆರೆದಿದ್ದ ೮ ನೆಯ ವೀರಶೈವ ಮಹಾಸಭೆಯ ರಿಪೋರ್ಟು ಸಮಗ್ರವಾಗಿ ಸ್ವಚ್ಛವಾದ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಾಗಿರುತ್ತದೆ. ಮಹಾಸಭೆಯ ಚಿರಸ್ಥಾಯಿ ಫಂಡಿಗೆ ಚಂದಾಹಣವನ್ನು ಕೊಡಲು ವಾಗ್ದಾನ ಮಾಡಿರುವ ವೀರಶೈವ ದೊಡ್ಡ ಮನುಷ್ಯರುಗಳ ಭಾವಚಿತ್ರಪಟ, ಪ್ರತಿನಿಧಿಗಳ ಭಾವಚಿತ್ರಪಟ ಮತ್ತು ಸ್ವಾಗತಸಂಘದವರ ಭಾವಚಿತ್ರಪಟ ಈರೀತಿ ಮೂರು ಭಾವಚಿತ್ರಪಟಗಳು ಇದರಲ್ಲಿ ಸೇರಿಸಲ್ಪಟ್ಟಿರುತ್ತವೆ. ಈ ಮೂರು ಪಟಗಳಲ್ಲೂ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಭಾವಚಿತ್ರವು ಸೇರಿರುವುದು. ಬಹಳ ಸ್ವಲ್ಪಪ್ರತಿಗಳು ಮಾತ್ರ ಮುದ್ರಣ ಮಾಡಿಸಲ್ಪಟ್ಟಿರುವುದರಿಂದ, ಅಪೇಕ್ಷಿತರು ಕೂಡಲೇ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳುವುದು. ಬೆಲೆ ಪ್ರತಿ 1ಕ್ಕೆ ೧ ರೂಪಾಯಿ. ಅಂಚೆವೆಚ್ಚ ಬೇರೆ.

ಜಿ. ಚನ್ನವೀರಪ್ಪ,
೮ ನೆಯ ಮಹಾಸಭಾ ಸೆಕ್ರೆಟರಿ,
ದಾವಣಗೆರೆ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಜನವರಿ ತಾ|| ೪ ನೆಯ ಭಾನುವಾರ.

ಬೀರೂರಿನಲ್ಲಿ ನೆರೆದ ವೀರಶೈವ ಮಹಾಸಭೆ.

ಈ ಸಭೆಯ ಸಾದ್ಯಂತ ವೃತ್ತಾಂತಗಳನ್ನು ಬೇರೆಕಡೆ ಮುದ್ರಿಸಿರುತ್ತೇವೆ. ಶ್ರೀಮನ್ನಿರಂಜನ ಜಗದ್ಗುರುಗಳೂ ಶ್ರೀ ಪಂಚಸಿಂಹಾಸನಾಧೀಶ್ವರರುಗಳೂ ಸಹ ದಯಮಾಡಿಸುತ್ತಾರೆಂಬ ವಾರ್ತೆಯು ಹರಡಿದ್ದುದರಿಂದಲೂ ಬೇರೆ ಕಾರಣದಿಂದಲೂ ಈ ಸಲದ ಸಭೆಗೆ ಬಂದಿದ್ದ ಪ್ರತಿನಿಧಿಗಳ ಸಂಖ್ಯೆಯು ಅತಿಶಯವಾಗಿದ್ದಿತು. ಮಹಾಸಭೆಯ ವಿಷಯದಲ್ಲಿ ವೀರಶೈವ ಮಹಾಜನರ ಅಭಿಮಾನವೂ ಆದರವೂ ಎಷ್ಟು ಗಾಢವಾಗಿದೆಯೆಂಬುದು ಸಭೆಯನ್ನವಲೋಕಿಸಿದವರಿಗೆಲ್ಲಾ ಗೊತ್ತಾಗುವಂತಿದ್ದಿತು. ಪಂಚಸಿಂಹಾಸನಾಧೀಶ ಜಗದ್ಗುರುಗಳಲ್ಲಿ ಮೂವರು ಈಸಲದ ಸಭಾಕಾಲಕ್ಕೆ ದಯಮಾಡಿಸಿದ್ದುದು ಅಪೂರ್ವ ವಿಷಯವಾಗಿದ್ದರೂ ಮಹಾಸಭೆಯನ್ನು ಅವರುಗಳು ಅಲಂಕರಿಸದಂತೆ ಪರಿಣಮಿಸಿದುದು ಸಮಾಜದ ದುರ್ದೈವವು. ನಾವು ಪ್ರತ್ಯಕ್ಷವಾಗಿ ಆ ಮೂವರು ಪೀಠಾಧೀಶರನ್ನೂ ಸಂದರ್ಶಿಸಿ ಸಂಭಾಷಿಸಿದುದರಲ್ಲಿ ಅವರುಗಳ ಅಭಿಪ್ರಾಯವು ಉದಾರವಾಗಿಯೂ ಸಮಾಜೋನ್ನತಿಯಕಡೆಗೆ ತೀವ್ರವಾಗಿ ಪ್ರವಹಿಸತಕ್ಕುದಾಗಿಯೂ ಇದೆಯೆಂಬುದು ವ್ಯಕ್ತವಾಗಿರುವುದು. ಮೂಲ ಪೀಠಾಧೀಶರುಗಳೆಲ್ಲಾ ಏಕವಾಗಿ ಸಮಾಜಾಭ್ಯುದಯವನ್ನೇ ಲಕ್ಷ್ಯವಾಗಿಟ್ಟುಕೊಂಡು ಕೆಲಸಮಾಡಿದರೆ ಅಸಾಧಾರಣವಾದ ಫಲವು ಸಮಾಜಕ್ಕೆ ಸಿದ್ಧಿಸುವುದು. ಕೆಲ ಜನರ ವೈಯಕ್ತಿಕದ್ವೇಷದಿಂದ ಒಡಕುಹುಟ್ಟುವುದಕ್ಕೂ ಅದರ ಸೋಂಕು ಮಹಾಸಭೆಗು ಕೂಡ ತಗಲುವುದಕ್ಕೂ ಅವಕಾಶವಾದುದನ್ನು ನೋಡಿ ಮತಾಭಿಮಾನಿಗಳೆಲ್ಲರೂ ವಿಷಾದಿಸುತ್ತಿರುವರು. ಹಾದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಹುಗಿಸಿಕೊಂಡಂತೆ ಯಾರೋ ಕಟ್ಟಿಕೊಂಡಿದ್ದ ದ್ವೇಷಾಗ್ನಿಯನ್ನು ಬೀರೂರಿನ ಕೆಲವರು ತಮ್ಮ ಮೊಡಲಿಗೆ ಸುರಿಸಿಕೊಂಡು, ಮಹಾಸಭೆಯ ನಿರ್ವರ್ತನದಂಥ ಅಸಾಧಾರಣ ಸಮಾರಂಭದಲ್ಲಿ ಅದನ್ನು ಎರಚುವುದಕ್ಕೆ ಆರಂಭಿಸಿದುದು ವಿವೇಕವಾಗಲಿಲ್ಲ. ೨ ವರ್ಷದಿಂದ ಕಷ್ಟಪಟ್ಟು ಅವರುಗಳು ಸಿಂಹಾಸನಾಧೀಶರನ್ನು ಸಭಾಕಾಲಕ್ಕೆ ಬರಮಾಡಿಕೊಂಡರೂ, ಮಹಾಸಭೆಯನ್ನು ಅವರುಗಳ ಪದವಿನ್ಯಾಸದಿಂದ ಪವಿತ್ರಗೊಳಿಸಿಕೊಳ್ಳುವುದಕ್ಕಾಗಲೀ ಸಭಾಮಧ್ಯದಲ್ಲಿ ಸಭಿಕರು ಆ ಶ್ರೀಗಳ ಸಂದರ್ಶನವನ್ನು ಮಾಡುವುದಕ್ಕಾಗಲೀ ಅವಕಾಶವಿಲ್ಲದಂತೆಯೂ, ಇದರಿಂದ ಆ ಶ್ರೀಗಳ ಮನಸ್ಸಿಗೂ ಸಮಾಜದವರ ಮನಸ್ಸಿಗೂ ಬೀರೂರಿನವರ ಮನಸ್ಸಿಗೂ ಕೂಡ ಸಂತೃಪ್ತಿ ಸಮಾಧಾನಗಳಿಗೆ ಅವಕಾಶವಿಲ್ಲದಂತೆಯೂ, ಮಹಾಸಭೆಯ ವಿಶೇಷ ಕಾಲವೆಲ್ಲಾ ಚರ್ಚೆಯಲ್ಲೇ ಕಳೆದು, ಈ ರೂಪದಲ್ಲಿ ಬೀರೂರಿನ ಮಹಾಸಭೆಯು ಸ್ಮರಣೀಯವಾಗುವಂತೆಯೂ ಮಾಡಿಕೊಂಡುದು ಅನ್ಯಾಯವು. ಪಕ್ಷಾಂಧತೆಯು ಯಾವ ಅನರ್ಥವನ್ನು ತಾನೇ ಮಾಡುವುದಿಲ್ಲ? ನಾಮಮಾತ್ರದಿಂದಲ್ಲದೆ ಅರ್ಥದಿಂದಲೂ ಶಾಂತರೇ ಆಗಿರತಕ್ಕ ಸಭಾಧ್ಯಕ್ಷ ಶ್ರೀಮನ್ ಶಾಂತವೀರಪ್ಪನವರೂ, ದೀರ್ಘದರ್ಶಿಗಳಾದ ದಿ|| ಬ|| ಮ|| ಕೆ. ಪಿ. ಪುಟ್ಟಣ್ಣಶೆಟ್ಟರಂಥವರೂ ಸಹ ಈಸಲದ ಸಭೆಯಲ್ಲಿ ಕೂಡಿದ್ದುದರಿಂದಲೇ ಅನರ್ಥಗಳಾವುದಕ್ಕೂ ಅವಕಾಶವಿಲ್ಲದೆ ಸಭಾಕಾರ್ಯವು ಹೇಗೋ ಕೊನೆಮುಟ್ಟಿತೆಂದು ಹೇಳಬೇಕಾಗಿದೆ. ವೈಯಕ್ತಿಕದ್ವೇಷವುಳ್ಳ ಒಬ್ಬಿಬ್ಬರ ದುಷ್ಪ್ರೇರಣೆಗೆ ಬಲಿಬಿದ್ದು ಕೆಲ ಸಮಯದಲ್ಲಿ ಮುಂದಾಳುಗಳಾದ ಕೆಲವರು ಹಠವಾದಕ್ಕೆ ನಿಂತುದನ್ನು ಪರಿತ್ಯಜಿಸಿದರೆ, ಸಭೆಯ ಉಳಿದ ಕಾರ್ಯವೆಲ್ಲಾ ಸಲಕ್ಷಣವಾಗಿಯೇ ನಡೆಯಿತೆಂದು ಹೇಳಬಹುದು. ಆದರೇನು? ಅವಶ್ಯಕರ್ತವ್ಯವಾಗಿದ್ದ ಯಾವುದೊಂದು ಮುಖ್ಯ ಕಾರ್ಯವೂ ಈ ೯ನೆಯ ಸಭೆಯಲ್ಲಿ ನೆರವೇರಲಿಲ್ಲವೆಂದು ವಿಷಾದದಿಂದ ತಿಳಿಯಿಸಬೇಕಾಗಿದೆ. ಚಿರಸ್ಥಾಯಿಫಂಡಿನ ವ್ಯವಸ್ಥೆಯು ಮುಗಿಯಲಿಲ್ಲ. ಸ್ಟಾಂಡಿಂಗ್ ಕಮಿಟಿಯ ಪುನರ್ನಿರ್ಮಾಣವು ಗಮನಿಸಲ್ಪಡಲೇ ಇಲ್ಲ. ಮಹಾಸಭೆಯ ಕಾರ್ಯಕ್ರಮದ ಸುಧಾರಣೆಗೆ ಕೈಯನ್ನೇ ಹಾಕಲಿಲ್ಲ. ಚಿರಸ್ಥಾಯಿ ಫಂಡಿನ ಬೆಳವಣಿಗೆಗೆ ಯಾವ ಪ್ರಯತ್ನವನ್ನೂ ಮಾಡಲಿಲ್ಲ.

ಮಹಾಸಭೆಯು ಉದಯಗೊಂಡಾರಭ್ಯ ಎಂದೂ ಸಭೆಗೆ ಬಾರದಿದ್ದವರನೇಕರು ಈ ಸಲದ ಸಭೆಗೆ ದಯಮಾಡಿಸಿದ್ದರು. ಸಭೆಯಲ್ಲಿ ನಡೆದ ಕೋಲಾಹಲವನ್ನು ನೋಡಿ ಅವರು ಬೆರಗುಗೊಂಡರು. ಮತ್ತೂ ಮುಂದೆ ಮಹಾಸಭೆಯನ್ನು ತಮ್ಮಲ್ಲಿಗೆ ಆಹ್ವಾನಿಸಬೇಕೆಂದಿದ್ದವರೂ ಕೂಡ "ಹೀಗಾದರೆ ಹೇಗೆ?" ಎಂದು ಭಯಪಟ್ಟು ಹಿಂದೆಗೆದಿರುವರೆಂದೂ ಸಹ ನಾವು ಕೇಳಿದೆವು. ಆದರೆ ವೈಯಕ್ತಿಕದ್ವೇಷದಿಂದ ನಡೆದ ಒಂದೆರಡು ಸಂಗತಿಗಳನ್ನು ಬಿಟ್ಟರೆ ಉಳಿದ ಚರ್ಚೆಗಳೆಲ್ಲಾ, ಸಭಾಧ್ಯಕ್ಷರೂ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರೂ ಅಪ್ಪಣೆ ಕೊಡಿಸಿದಂತೆ ಸಮಾಜದವರಲ್ಲಿ ವೃದ್ಧಿಗೊಳ್ಳುತ್ತಿರುವ ಸಾಮರ್ಥ್ಯದ ಶುಭಲಕ್ಷಣವೇ ಹೊರತು ದುರ್ಲಕ್ಷಣವಲ್ಲ. ಪ್ರತಿಯೊಂದು ವಿಷಯವೂ ಚೆನ್ನಾಗಿ ಊಹಾಪೋಹಗೊಂಡು ನಿರ್ಧಾರಗೊಳ್ಳುವುದೇ ಮೇಲು. ಅದಕ್ಕಾಗಿ ಸಭೆಯಲ್ಲಿ ನಡೆದ ಚರ್ಚಾರಭಸವನ್ನು ನೋಡಿ ಯಾರೂ ದಿಗಿಲುಬೀಳಬೇಕಾದುದಿಲ್ಲ. ಆದರೆ ಒಂದು ಸಂಗತಿಯನ್ನು ಮಾತ್ರ ಮುಂದಣ ಮಹಾಸಭೆಗಳವರು ಪೂರ್ಣವಾಗಿ ನೆನಪಿಡಬೇಕಾಯಿತು. ಏನೆಂದರೆ—ಆಹ್ವಾನಿಸಿದ ಕಡೆಗೆಲ್ಲಾ ಮಹಾಸಭೆಯನ್ನು ಕಳುಹಿಸಿಕೊಡುವುದರಲ್ಲಿ ದೀರ್ಘಾಲೋಚನೆಯನ್ನು ಮಾಡಬೇಕು. ಸ್ಥಳದ ಪರಿಸ್ಥಿತಿಯನ್ನೂ ಮುಂದಾಳುಗಳ ಕಾರ್ಯನಿರ್ವಾಹ ಸಾಮರ್ಥ್ಯವನ್ನೂ ಪರಿಕಿಸದೆ ಮಹಾಸಭೆಯನ್ನು ಕೂಡಿಸಲು ಅವಕಾಶ ಕೊಡಬಾರದು.

ಈಸಲದ ಸಭಾಕಾಲದಲ್ಲಿ ಬೀರೂರಿನೊಳಗೆ ಸತ್ಕಾರಕ ಸಂಘದ ಕೆಲವರ ಅನಾದರಣೆಯಿಂದಲೂ ಅವ್ಯವಸ್ಥೆಯಿಂದಲೂ ಕಷ್ಟಗಳನ್ನನುಭವಿಸಿದವರ ಬಾಯಿಂದೆಲ್ಲಾ ಇವೇ ಮಾತುಗಳೇ ಹೊರಡುತ್ತಿರುವುವು. ಈಸಲದ ಸಭೆಯು ನಡೆದುದರಲ್ಲಿ ಬೀರೂರಿನವರ ಮನಸ್ಸಿಗಾದರೂ ಸಮಾಧಾನವಿರಲು ಎಡೆಯಿರುವುದಿಲ್ಲ. ಈ ಸ್ಥಿತಿಯನ್ನು ಅವರಾಗಿ ತಂದುಕೊಂಡರೆಂದು ಕಂಡು ವಿಷಾದಿಸಬೇಕಾಗುತ್ತದೆ. ಮುಂದೆ ಮಹಾಸಭೆಯನ್ನು ನಡೆಯಿಸತಕ್ಕವರೆಲ್ಲರೂ ಬೀರೂರಿನವರ ಅನುಭವವನ್ನು ನೋಡಿ ಎಚ್ಚತ್ತು ನಡೆದುಕೊಳ್ಳಲು ಒಂದು ವಿಧದಲ್ಲಿ ಇದು ಉಪಕರಿಸಿದಂತೆಯೇ ಆಯಿತು. ಬೀರೂರಿನ ವಿಷಮ ಪರಿಸ್ಥಿತಿಯು ಮುಂದಣ ಯಾವ ಸಭೆಗಳಲ್ಲೂ ಜರಗದಿರುವಂತೆ ಜಗದೀಶ್ವರನು ಅನುಗ್ರಹಿಸಲೆಂದು ನಾವು ಕೋರುವೆವು.

ಶ್ರೀಮತ್ಪಂಚಮ ಜಾರ್ಜ್ ಸಾರ್ವಭೌಮರ ಸಂದೇಶವು.

ಭರತಖಂಡದ ರಾಜಕೀಯ ಸಂಸ್ಕರಣ ಶಾಸನಕ್ಕೆ ನಮ್ಮ ಸಾರ್ವಭೌಮರವರು ತಮ್ಮ ಅಂಗೀಕಾರವನ್ನು ಕೊಡುವ ಸಂದರ್ಭದಲ್ಲಿ ಭರತಖಂಡಕ್ಕೆ ಒಂದು ಸಂದೇಶವನ್ನು ಈಗತಾನೇ ದಯಪಾಲಿಸಿರುತ್ತಾರೆ. ಅದರ ಮೊದಲಭಾಗದಲ್ಲಿ ೧೭೭೩ ನೆ ವರ್ಷದಾರಭ್ಯ ಭರತಖಂಡದ ಪರಿಪಾಲನ ವಿಷಯವಾಗಿ ಆಗಿಂದಾಗ್ಗೆ ಮಾಡುತ್ತ ಬಂದಿರುವ ರಾಜಶಾಸನಗಳನ್ನು ವಿಮರ್ಶಿಸಿ ೧೮೫೮ ನೆ ವರ್ಷದಲ್ಲಿ ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರು ಮಾಡಿದ್ದ ಪ್ರಕಟನೆಯನ್ನೇ ಅನುಸರಿಸಿ ೭ನೆ ಎಡ್ವರ್ಡ್ ಚಕ್ರವರ್ತಿಯವರು ೧೯೦೮ ನೆ ವರ್ಷದಲ್ಲಿ ಕೊಟ್ಟ ಪ್ರಕಟನೆಯ ಮೂಲಕ ತಮ್ಮ ಪರಿಪಾಲನೆಗೊಳಪಟ್ಟ ಸಕಲಪ್ರಜೆಗಳನ್ನೂ ಭಿನ್ನಭಾವವಿಲ್ಲದಂತೆ ಕಾಪಾಡಿಕೊಂಡು ಬರುವೆವೆಂಬುದನ್ನು ಮತ್ತಷ್ಟು ದೃಢಪಡಿಸಿ ಹೇಳಿದ್ದರೆಂದೂ, ಅದನ್ನೇ ೧೯೧೧ ನೆ ವರ್ಷದಲ್ಲಿ ಮತ್ತೊಂದು ಸಲ ಪ್ರಕಟಿಸಿ ಸ್ಥಿರಪಡಿಸಿದರೆಂದೂ, ತಾವು ೧೯೧೦ ನೆ ವರ್ಷದಲ್ಲಿ ರಾಜ್ಯಭಾರವನ್ನು ವಹಿಸಿದಾಗ ಪ್ರಜೆಗಳ ರಾಜಭಕ್ತಿಯನ್ನು ಮೆಚ್ಚಿಕೊಂಡು ಭರತಖಂಡದ ಪ್ರಜೆಗಳ ಸೌಖ್ಯದಲ್ಲೂ ಐಶ್ವರ್ಯಾಭಿವೃದ್ಧಿಯಲ್ಲೂ ತಮಗೆ ವಿಶೇಷವಾದ ಶ್ರದ್ಧೆಯಿರುವುದೆಂದು ವಾಗ್ದಾನಮಾಡಿದೆವೆಂದೂ, ಅದರ ಮರುವರ್ಷ ತಾವು ಭರತಖಂಡಕ್ಕೆ ಪ್ರತ್ಯಕ್ಷವಾಗಿ ಬಂದಾಗ ಈ ದೇಶದ ಮೇಲೆ ತಮಗಿರುವ ಸಾನುಭೂತಿಯನ್ನು ವ್ಯಕ್ತಪಡಿಸಿದೆವೆಂತಲೂ ತಾವೂ ತಮ್ಮ ಪೂರ್ವಿಕರೂ ಮಾತ್ರವೇ ಅಲ್ಲದೆ ತಮ್ಮ ಪಾರ್ಲಿಮೆಂಟಿನವರೂ ಭರತಖಂಡದ ತಮ್ಮ ಸರ್ಕಾರಿ ಉದ್ಯೋಗಿಗಳೂ ಸಹ ಭರತಖಂಡದ ಕ್ಷೇಮಾಭಿವೃದ್ಧಿಗಾಗಿ ಪಾಟುಪಡುತ್ತಿರುವರೆಂತಲೂ, ಭಗವದನುಗ್ರಹದಿಂದ ತಮಗೆ ದೊರೆದಿರುವುದನ್ನೆಲ್ಲಾ ಭಾರತೀಯರಿಗೆ ಕೊಡಲು ಸಿದ್ಧವಾಗಿರುತ್ತೇವೆಂತಲೂ, ಈಗ ಭಾರತೀಯರಿಗೆ ಸ್ವಪರಿಪಾಲನ ಬಾಧ್ಯತೆಯನ್ನು ಕೊಡಬೇಕಾಗಿರುವುದೆಂತಲೂ ಹೇಳಿ, ಭರತಖಂಡದ ಮೇಲೆ ಅನ್ಯರಾಷ್ಟ್ರಗಳವರು ಬಂದು ಬೀಳದಂತೆ ಕಾಪಾಡುವುದು ತಮ್ಮ ಧರ್ಮವಾಗಿರುವುದೆಂದೂ, ಭರತಖಂಡಕ್ಕೆ ಸಂಬಂಧಪಟ್ಟ ರಾಜ್ಯಪರಿಪಾಲನತಂತ್ರವೆಲ್ಲಾ ಪ್ರಜೆಗಳಿಂದಲೇ ನಿರ್ವಹಿಸಲ್ಪಡುವಂತೆ ಆಗಬೇಕೆಂತಲೂ, ಆದರೆ ಈಗಲೇ ಆ ಭಾರವನ್ನು ನಿರ್ವಹಿಸುವ ಶಕ್ತಿಯು ಭಾರತೀಯರಿಗೆ ಸಮಗ್ರವಾಗಿಲ್ಲವೆಂತಲೂ, ಈಗ ಕೊಡಲ್ಪಟ್ಟಿರುವ ಶಾಸನದಿಂದ ದಿನಕ್ರಮೇಣ ರಾಜ್ಯಭಾರವನ್ನೆಲ್ಲಾ ಸ್ವತಃ ನಿರ್ವಹಿಸುವ ಶಕ್ತಿಯು ಭಾರತೀಯರಿಗೆ ಉಂಟಾಗಲವಕಾಶವಾಗುವುದೆಂತಲೂ, ಆಂಗ್ಲಪರಿಪಾಲನವೇ ಭಾರತೀಯರಿಗೆ ಸ್ವಪರಿಪಾಲನಾಶೆಯನ್ನು ಉಂಟುಮಾಡಿಕೊಟ್ಟಿತೆಂತಲೂ, ಈಗಣ ಶಾಸನದಿಂದ ಅನುಗ್ರಹಿಸಲ್ಪಟ್ಟಿರುವ ಸ್ವಾತಂತ್ರ್ಯಾಧಿಕಾರಗಳನ್ನು ಭಾರತೀಯರು ನೇರ್ಪಿನಿಂದಲೂ, ಮುತುವರ್ಜಿಯಿಂದಲೂ, ಐಕಮತ್ಯದಿಂದಲೂ, ಸಹನಶಕ್ತಿಯಿಂದಲೂ ನಿರ್ವಹಿಸುವವರಾಗಬೇಕೆಂತಲೂ, ನಿಜವಾದ ದೇಶಭಕ್ತಿಯಿಂದ ಪ್ರಜಾಸಮುದಾಯದ ಕ್ಷೇಮವನ್ನೇ ಲಕ್ಷ್ಯವಾಗಿಟ್ಟುಕೊಂಡು ಶಾಸನನಿರ್ಮಾತೃಗಳಿಗೆ ಸಹಾಯಕರಾಗಿದ್ದುಕೊಂಡು ನಮ್ಮ ಸರ್ಕಾರಿ ಉದ್ಯೋಗಿಗಳೊಡನೆ ಕಲಸಿ ರಾ ಕಾರ್ಯವು ಸುಸೂತ್ರವಾಗಿ ಸಾಗಿಹೋಗುವುದಕ್ಕೆ ಅನುಕ ಮಾಡಿಕೊಟ್ಟು ನಡೆಯಬೇಕೆಂತಲೂ, ನಮ್ಮ ಉದ್ಯೋಗಿಗ ಕೂಡ ಪ್ರಜಾಪ್ರತಿನಿಧಿಗಳ ವಿಷಯದಲ್ಲಿ ದಯೆಗೊಂಡು ವದಿಂದ ಪ್ರವರ್ತಿಸುತ್ತ ಪ್ರಜೆಗಳನ್ನು ಸ್ವಪ್ರಜಾಪಾಲನೆಗೆ ರ್ಹರನ್ನಾಗಿ ಮಾಡುವಂತೆ ನಡೆದುಕೊಳ್ಳುವವರಾಗಬೇ ತಲೂ ಭರತಖಂಡದ ಪ್ರಜೆಗಳಿಗೂ ಅಧಿಕಾರಿಗಳಿಗೂ ಸಹ ಪ್ಪಣೆಕೊಡಿಸಿರುವುದಲ್ಲದೆ, ರಾಜಕೀಯ ಸಂಬಂಧವಾಗಿ ದ ಡಿಸಲ್ಪಟ್ಟು ಕಾರಾಗೃಹವಾಸ ಪ್ರವಾಸಶಿಕ್ಷೆ ಮೊದಲಾದುವ ಳನ್ನನುಭವಿಸುತ್ತಿರುವ ಭಾರತೀಯರನ್ನೆಲ್ಲಾ ಕ್ಷಮಿಸಿ ಬಿಟ್ಟು ಡುವುದಕ್ಕೆ ತಾವು ಅಪ್ಪಣೆಮಾಡಿರುತ್ತೇವೆಂದು ತಿಳಿಯಿಸಿರುತ ರೆ. ಮತ್ತೂ ಭರತಖಂಡದ ಸಂಸ್ಥಾನಿಕರ ಶ್ರೇಯೋಭಿವೃ ಗಾಗಿ ಏರ್ಪಡಿಸಲ್ಪಡುವ "ಚೇಂಬರ್ ಆಫ್ ಪ್ರಿನ್ಸೆಸ್" ಎಂಬ ಸಭೆಯ ಪ್ರಾರಂಭಮಹೋತ್ಸವವನ್ನು ಮಾಡುವುದಕ ಗಿ ತಮ್ಮ ಪ್ರಿಯ ಪುತ್ರರಾದ ಯುವಸಾರ್ವಭೌಮ ಪ್ರಿನ್ ಆಫ್ ವೇಲ್ಸರನ್ನೇ ಬರುವ ಚಳಿಗಾಲದಲ್ಲಿ ಭರತಖಂಡಕ್ಕೆ ಕ ಹಿಸಿಕೊಡುವವರಾಗಿದ್ದೇವೆಂತಲೂ, ನಮ್ಮನ್ನು ಭಾರತೀಯ ಹಿಂದೆ ರಾಜಭಕ್ತಿಯಿಂದ ಗೌರವಿಸಿದಂತೆಯೇ ಅವರನ್ನೂ ವಿಸುವರೆಂದು ನಂಬಿರುತ್ತೇವೆಂತಲೂ ತಿಳಿಸಿ, ಭಗವಂತನು ತಖಂಡವನ್ನು ಸರ್ವವಿಧದಲ್ಲೂ ವೃದ್ಧಿಗೆ ತರುವವನಾಗಲಿ ಹರಸಿರುತ್ತಾರೆ.

ಈ ಸಂದೇಶವು ಭಾರತ ಚಕ್ರವರ್ತಿಗಳಿಗೆ ಭರತ ಮೇಲೆ ದೃಢತರವಾಗಿರುವ ಮಹಾವಿಶ್ವಾಸಕ್ಕೆ ನಿದರ್ಶನ ಭರತಖಂಡದಲ್ಲಿ ಅಧಿಕಾರಿಗಳ ಪ್ರಜೆಗಳ ಮಧ್ಯದಲ್ಲಿ ಯಾವ ಕಾರಣಗಳಿಂದಲೋ ಹುಟ್ಟಿ ಬೆಳೆಯುತ್ತ ಬಂ ಮ್ಯವನ್ನು ಇಂಥ ಉದಾರ ಸಂದೇಶಗಳು ಖಂಡಿಸಿ ಸ ರಾಜ ಪ್ರಜಾಮಧ್ಯದ ಭಕ್ತಿ ವಿಶ್ವಾಸಗಳನ್ನು ಯಥಾ ವಾಗಿ ಬಲಪಡಿಸಲು ಸಹಾಯಕಾರಿಗಳಾಗುತ್ತವೆ. ಈ ದ ಜತೆಗೇ ರಾಜಕೀಯ ದಂಡಿತರಿಗೆಲ್ಲಾ ಚಕ್ರವರ್ತಿ ಕ್ಷಮಾಪಣೆಯನ್ನು ಕೊಟ್ಟುದು ಭಾರತೀಯರನ್ನೆಲ್ಲಾ ವಾಗಿ ಸಂತೋಷಪಡಿಸಿತೆಂಬುದಕ್ಕೆ ಸಂಶಯವಿಲ್ಲ. ಮುಕ್ತರಾದ ಆ ಜನರೂ ಇತರ ಮುಂದಾಳುಗಳೂ ಸ ಗಣ ಸಾರ್ವಭೌಮ ಸಂದೇಶವನ್ನು ಶಿರಸಾವಹಿಸಿ, ಅವರ ಉದ್ಯೋಗಿಗಳಿಗೆ ಸಹಾಯಭೂತರಾಗಿದ್ದು ಕೊ ಮಗೆ ದೊರೆದಿರುವ ಸ್ವಾತಂತ್ರ್ಯವನ್ನು ಸಮೀಚೀನವಾ ಯೋಗಿಸಿ ರಾಜ್ಯಪರಿಪಾಲನ ಚಕ್ರವನ್ನು ಸುಪಥದಲ್ಲಿ ತ್ತ ಬಂದರೆ ಭರತಖಂಡಕ್ಕೆ ಸೌಖ್ಯವೂ ಭಾರತೀಯರಿ ಪೂರ್ಣ ಸ್ವಪರಿಪಾಲನಾಧಿಕಾರವೂ ದಿನಕ್ರಮೇಣ ಸಿದ್ಧ ಸಿದ್ಧಿಸುವುವು. ತಕ್ಕಸಮಯದಲ್ಲಿ ಇಂಥ ಸಂದೇಶವು ಸ ಮರ ಮುಖೇನ ಪ್ರಕಟಿತವಾಗುವಂತೆ ಮಾಡುವುದರಲ್ಲಿ ಮಂಡಲದವರೂ ನಮ್ಮ ಗೌರ್ನರ್ ಜನರಲ್‌ರವರೂ ಣಭೂತರಾಗದೆ ಇರಲಿಕ್ಕಿಲ್ಲ. ಆದುಕಾರಣ ಶ್ರೀ ಸಾ ರೇ ಮೊದಲಾದವರನ್ನೆಲ್ಲಾ ಈ ಸಮಯದಲ್ಲಿ ಅಭಿ ಮುಂದೆ ಈ ದೇಶಕ್ಕೆ ದಯಮಾಡಿಸುವವರಾಗಿರುವ ಸಾರ್ವಭೌಮರನ್ನು ಉಚಿತರೀತಿಯಿಂದ ಸ್ವಾಗತಿಸಿ ಸ ವುದಕ್ಕ ಭಾರತೀಯರಾದ ನಾವೆಲ್ಲರೂ ಸಿದ್ಧರಾಗಿರೋ

೯ ನೆಯ ಶ್ರೀಮದ್ವೀರಶೈವ ಮಹಾಸಭೆ.

(ನಮ್ಮ ಪ್ರತ್ಯೇಕ ವಿಲೇಖಕರಿಂದ)

ಬೀರೂರು ಚಿಕ್ಕದಾದಾಗ್ಗೂ ಅಲ್ಲಿಯ ವೀರಶೈವ ಖರು ಈ ಮಹಾಸಭೆಯನ್ನು ತಮ್ಮಲ್ಲಿ ಅತ್ಯಂತ ವಿ ಯಿಂದ ನಡೆಯಿಸಬೇಕೆಂದು ಮಹೋತ್ಸಾಹವುಳ್ಳವರಾ ಪುರವೀಥಿಗಳನ್ನು ಗುಡಿತೋರಣ ಧ್ವಜಪತಾಕೆ ಮೊದ ಗಳಿಂದ ಚೆನ್ನಾಗಿ ಅಲಂಕರಿಸಿದ್ದರು. ಪ್ಲೇಗು ನಿವ ದ್ದುದರಿಂದ ಪ್ರತಿ ಮನೆಗಳೂ ಸುಣ್ಣಬಣ್ಣಗಳಿಂದ ಸ್ವ ಸಲ್ಪಟ್ಟಿದ್ದುವು. ಬೇರೆ ಬೇರೆ ಇರಬೇಕೆನ್ನುವ ಪ್ರತಿನಿಧಿ ತ್ಯೇಕವಾಗಿ ೭೨ ಬಿಡಾರಗಳು ಮಾಡಲ್ಪಟ್ಟಿದ್ದುವು. ಭೋಜನ ಮಾಡಲಿಕ್ಕೆ ಎರಡು ಕಡೆ ಭೋಜನಾಲಯ ಏರ್ಪಡಿಸಿದ್ದರು.

ಮಠಾಚಾರ್ಯಪೀಠಾಧೀಶರಾದ ಜಗದ್ಗುರುಗಳೊ ರಂಭಾಪುರೀ ಶ್ರೀಮದುಜ್ಜಯಿನೀ ಶ್ರೀ ಕೇದಾರಪೀ ಠಾಸ್ವಾಮಿಗಳು ಮಾತ್ರ ದಯಮಾಡಿಸಿದ್ದರು. ಅ ಪುರಪ್ರವೇಶ ಮಾಡುವಾಗ್ಗೆ ಆನೆ ಕುದುರೆ ಮೊದ ಸಕಲ ಮರ್‍ಯಾದೆಗಳೊಡನೆ ಉತ್ಸವವು ರಮಣೀಯ ದಿತು. ತಾ|| ೨೫ ರಿಂದಲೂ ನಾನಾಭಾಗಗಳಿಂದ ವಿ ಗುಂಪು ಬೀರೂರಿಗೆ ಬಂದಿಳಿಯಲಾರಂಭವಾಯಿತು. ಸಭಾ ತೆಯನ್ನು ವಹಿಸುವವರಾಗಿದ್ದ ಮ|| ಶಾಂತವೀರಪ್ಪನವರು ೨೬ರ ಮಧ್ಯಾಹ್ನ ಅನೇಕ ಪರಿವಾರಪರಿವೃತರಾಗಿ ಬಂ ಬೆಂಗಳೂರು ಮೈಸೂರು ಕಡೆಯ ಪ್ರತಿನಿಧಿಗಳು ದಿ|| ಬ|| ಪಿ. ಪುಟ್ಟಣ್ಣಸೆಟ್ಟರ ಜತೆಯಲ್ಲಿ ಅದೇ ದಿನ ಹೋಗಿ ಸೇರಿದರು. ನಿಲ್ದಾಣದಲ್ಲಿ ಸತ್ಕಾರಕ ಸಂಘದವರೂ, ಸ್ವಯಂಸೇವಕರು ವಾದ್ಯವೈಭವ ಸಮೇತರಾಗಿ ಕಾದಿದ್ದು ಎಲ್ಲರನ್ನೂ ಯಥೋ ತವಾಗಿ ಮರ್‍ಯಾದಿಸಿ, ಮೋಟಾರುಗಳಲ್ಲಿ ಪ್ರಮುಖರನ್ನು ರಿಸಿ ಉತ್ಸವಪೂರ್ವಕ ಅವರವರ ಬಿಡಾರಗಳನ್ನು ಸೇರಿಸಿದರು.

ತಾ|| ೨೭ನೆ ಶನಿವಾರ ಮಧ್ಯಾಹ್ನದೊಳಗಾಗಿ ಬೀರ ವೀರಶೈವರ ಮಯವಾಗಿ ಕಾಣುವಂತಾಯಿತು. ಆ ದಿ

ಧ್ಯಾಹ್ನ ೧೨ ಗಂಟೆಗೆ ಮಹಾಸಭೆಯು ಆರಂಭಿಸಲ್ಪಡಬೇಕಾಗಿದ್ದಿತು. ಸಭಾಮಂಟಪವು ೬-೭ ಸಹಸ್ರ ಜನರನ್ನು ಹಿಡಿಯುವಷ್ಟು ವಿಶಾಲವಾಗಿ ಸುಂದರವಾಗಿ ರಚಿಸಲ್ಪಟ್ಟಿದ್ದಿತು. ಮಧ್ಯಾಹ್ನ ೨ ಗಂಟೆಯೊಳಗಾಗಿ ಪ್ರತಿನಿಧಿಗಳು ಪ್ರೇಕ್ಷಕರುಗಳೆಲ್ಲಾ ಸಭೆಯಲ್ಲಿ ಕಿಕ್ಕಿರಿದು ತುಂಬಿದರು. ೧ ಸಾವಿರ ಮಂದಿ ಪ್ರತಿನಿಧಿಗಳೂ, ೭ ನೂರರವರೆಗೆ ಪ್ರೇಕ್ಷಕರ ಟಿಕೇಟನ್ನು ಪಡೆದವರೂ, ವೈದಿಕವರ್ಗದವರೂ ವಿದ್ಯಾರ್ಥಿಗಳು ಮೊದಲಾದವರೂ, ಸ್ಥಲದವರೂ ಸೇರಿ ೨ ಸಹಸ್ರ ಮಂದಿಗಳೂ ಒಟ್ಟು ೩ ಸಾವಿರದವರೆಗೆ ಸಭಿಕರು ನೆರೆದಿದ್ದರು.

ಬೀರೂರಿಗೆ ದಯಮಾಡಿಸಿರುವ ಜಗದ್ಗುರು ಮಹಾಸ್ವಾಮಿಗಳವರ ಸ್ವಾರಿಯು ಸಭೆಗೆ ಇನ್ನೇನು ದಯಮಾಡಿಸುವುದೆಂದು ಸಭೆಯೆಲ್ಲಾ ನಿರೀಕ್ಷಿಸುತ್ತಿದ್ದಿತು. ಅವರುಗಳೇ ಆಗಲೀ ಇತರ ಧಾರ್‍ವಾಡದ ಕಡೆಯ ಮೈಸೂರು ಕಡೆಯ ಪ್ರಮುಖರೇ ಆಗಲೀ ೨| ಗಂಟೆಯಾದರೂ ಸಭೆಗೆ ಬರಲಿಲ್ಲ. ಸಂಗತಿಯೇನೆಂಬುದನ್ನು ತಿಳಿಯುವುದಕ್ಕೆ ಸಭೆಯಜನರು ಹೊರಕ್ಕೆ ಚದರಿದರು. ಗುರುಪೀಠಗಳವರು ಕುಳಿತುಕೊಳ್ಳುವ ಸ್ಥಾನವನ್ನು ಸಭೆಯಲ್ಲಿ ಏರ್ಪಡಿಸುವ ವಿಷಯವಾಗಿ ವಾದಾನುವಾದಗಳು ಪ್ರಮುಖರಲ್ಲಿ ನಡೆಯುತ್ತಿದ್ದುದು ಗೊತ್ತಾಯಿತು. ಅದು ಅಗ್ಗೇ ಕೊನೆಮುಟ್ಟುವಂತೆ ಇರಲಿಲ್ಲ. ಆದುಕಾರಣ ಆದಿನದ ಸಭೆಯನ್ನು ಮರುದಿನ ಮಧ್ಯಾಹ್ನದವರೆಗೆ ನಿಲ್ಲಿಸಿರಬೇಕೆಂದು ಯೋಚಿಸಿ, ಭಾನುವಾರ ಮಧ್ಯಾಹ್ನ ೧೨ ಗಂಟೆಗೆ ಸಭೆಯು ಪ್ರಾರಂಭವಾಗುವುದೆಂದು ಸತ್ಕಾರಕ ಸಂಘದವರು ಸಭೆಯಲ್ಲಿ ಬಂದು ತಿಳಿಯಿಸಿದರು. ಆ ದಿನ ರಾತ್ರಿಯೂ ಮರುದಿನ ಮಧ್ಯಾಹ್ನದವರೆಗೂ ಎಲ್ಲೆಲ್ಲೂ ಇದೇ ಚರ್ಚೆಯೇ ನಡೆಯುತ್ತಿದ್ದಿತು. ಸಭೆಗೆ ಏನೋ ವಿಘ್ನ ಬಂದಿತೆಂದು ತಿಳಿದು ಮೊದಲದಿನದ ರಾತ್ರಿಯೇ ಕೆಲವರು ತಂತಮ್ಮೂರುಗಳಿಗೆ ಪ್ರಯಾಣಮಾಡಿಹೋದರು.

ಪೀಠಾಧಿಪತಿಗಳ ಉದಾರ ಮನೋಭಾವ.

ತಾವುಗಳು ಸ್ವತಃ ಬೀರೂರಿಗೆ ದಯೆಮಾಡಿಸಿದ್ದರೂ, ಸಭಾಂಗಣದಲ್ಲಿ ಜಗದ್ಗುರು ಪೀಠಾಧಿಪತಿಗಳ ಸ್ಥಾನಕಲ್ಪನೆಯ ಸಂಬಂಧವಾದ ಸಣ್ಣ ವಿಚಾರದಿಂದ ಮಹಾಸಭೆಯು ಗೊತ್ತಾಗಿದ್ದ ದಿನದಲ್ಲಿ ನಡೆಯದೆ ನಿಂತುಹೋದುದು ಆ ಸಿಂಹಾಸನಾಧಿಪತಿಗಳ ಮನಸ್ಸಿಗೆ ಎಷ್ಟೋ ನೋವನ್ನುಂಟುಮಾಡಿತು. ಆದುಕಾರಣ ಆ ಮಿಗಳು, ನಮ್ಮಗಳ ಆಗಮನವನ್ನು ಮಾಡಿಕೊಳ್ಳದಿದ್ದರೂ ಚಿಂತೆಯಿಲ್ಲ. ಸಭಾಕಾರ್ಯವು ನಿರ್ವಿಘ್ನವಾಗಿ ಸಾಗಬೇಕೆಂದು ಉದಾರಮನೋಭಾವದಿಂದ ಅಪ್ಪಣೆಯನ್ನು ಕಳುಹಿಸಿದರೆಂಬ ವಾರ್ತೆಯು ಊರಲ್ಲೆಲ್ಲಾ ಹಬ್ಬಿತು. ಸ್ವಾಮಿಗಳವರು ಊರಿಗೆ ಪ್ರತ್ಯಕ್ಷವಾಗಿ ದಯಮಾಡಿಸಿದ್ದರೂ ಸಭೆಗೆ ಆಗಮಿಸದಂತಾಯಿತಲ್ಲಾ! ಎಂದು ಅನೇಕರು ವಿಷಾದಪಟ್ಟರು. ಮಧ್ಯಾಹ್ನ ೧೨ ಗಂಟೆಯೊಳಗಾಗಿ ಸಭೆಯು ಗಿಜಿಗಿಜೆನ್ನುವಂತೆ ತುಂಬಿತು. ಜಗದ್ಗುರು ಪೀಠಗಳಿಗಾಗಿ ಏರ್ಪಡಿಸಿದ್ದ ಜಗತಿಯು ಬರಿದಾಗಿಯೇ ಇದ್ದಿತು. ಅಧ್ಯಕ್ಷರ ಪೀಠದ ಮುಂಗಡೆ ಎಡಬಲಗಳಲ್ಲಿ ಎರಡೆರಡು ಸಾಲು ಕುರ್ಚಿಗಳು ಚಿರಸ್ಥಾಯಿ ಫಂಡಿಗೆ ಧನಸಹಾಯ ಮಾಡಿದ ಉದಾರ ಮತಾಭಿಮಾನಿಗಳಿಗಾಗಿ ಏರ್ಪಡಿಸಲ್ಪಟ್ಟಿದ್ದುವು. ದೇಶಾಯರುಗಳು ಸರ್ಕಾರಿ ಉದ್ಯೋಗಿಗಳು ಅಡ್ವೋಕೇಟರುಗಳು ಪಂಡಿತಜನರು ಶ್ರೀಮಂತರು ಮೊದಲಾದವರಿಗೆಲ್ಲಾ ಅಧ್ಯಕ್ಷರ ಹಿಂಗಡೆಯೂ ಮಗ್ಗುಲಲ್ಲೂ ಉಚಿತಗಳಾದ ಆಸನಗಳು ಏರ್ಪಡಿಸಲ್ಪಟ್ಟಿದ್ದುವು. ಜಗತಿಯ ಕೆಳಗೆ ಮುಂಭಾಗದ ತಗ್ಗಿನಲ್ಲಿ ಪ್ರತಿನಿಧಿಗಳಿಗೆ ಆಸನಗಳೂ, ಅವರ ಸುತ್ತಲೂ ಪ್ರೇಕ್ಷಕರಿಗೆ ಸ್ಥಲಗಳೂ ಏರ್ಪಡಿಸಲ್ಪಟ್ಟಿದ್ದುವು.

ಸಭಾಧ್ಯಕ್ಷರು ಸರ್ ದೇಶಾಯಿ ಹಂದಿಗನೂರು ಇವರೊಡನೆ ಸಭಾಮಂಟಪಕ್ಕೆ ಆಗಮಿಸಿದಕೂಡಲೇ ಹೊರಗೆ ವಾದ್ಯಗಳು ಭೋರ್ಗರೆದುವು. ಸತ್ಕಾರಕಸಂಘದ ಅಧ್ಯಕ್ಷರಾದ ಮ|| ವೀರಪ್ಪಯ್ಯನವರೇ ಮೊದಲಾದವರು ದ್ವಾರದಲ್ಲಿ ಇದಿರ್ಗೊಂಡು ಸಭಾಪ್ರವೇಶ ಮಾಡಿಸಿದರು. ಸರ್ವರೂ ಎದ್ದು ಕರತಾಡನವನ್ನು ಮಾಡಿ ಸ್ವಾಗತಿಸಿದರು. ಎಲ್ಲರೂ ಅವರವರ ಸ್ಥಾನಗಳಲಂಕರಿಸಿದ ಬಳಿಕ ಬೆಂಗಳೂರ ವೇ|| ಗುರುಲಿಂಗಶಾಸ್ತ್ರಿಗಳು ಮತ್ತು ನಂಜಪ್ಪಶಾಸ್ತ್ರಿಗಳ ವೇದಪಠನದ ಮತ್ತು ವೇ|| ದಾವಣಗೆರೆ ಚಂದ್ರಶೇಖರ ಶಾಸ್ತ್ರಿಗಳ ಮಂಗಳಪದ್ಯಗಳ ವಾಚನದ ಪುರಸ್ಸರವಾಗಿ ಸಭಾಕಾರ್ಯವು ಆರಂಭಿಸಲ್ಪಟ್ಟಿತು. ಸತ್ಕಾರಕ ಸಂಘಾಧ್ಯಕ್ಷರು ಎದ್ದು ನಿಂತು ಸಭಿಕರನ್ನು ವಂದಿಸಿ, ತಮ್ಮ ಭಾಷಣವನ್ನು ಮ|| ಹೆಚ್. ಕೆ. ಮಲ್ಲಪ್ಪನವರು ಓದುವರೆಂದು ಶ್ರುತಪಡಿಸಿದರು. ಅದು ಓದಲ್ಪಟ್ಟಿತು. ಅದರಲ್ಲಿ-ಮೊಟ್ಟಮೊದಲು ಸಭೆಗೆ ಎಲ್ಲ ಭಾಗಗಳಿಂದಲೂ ದಯಮಾಡಿಸಿದ್ದ ಮಹಾಂಧವರಿಗೆ ಕೃತಜ್ಞತಾವಂದನೆಗಳ ಸಮರ್ಪಣೆಯೂ, ಶ್ರೀ ಸಿಂಹಾಸನಾಧೀಶ್ವರರುಗಳನ್ನು ಬೀರೂರಿನ ಸಭೆಗೆ ಬಿಜಮಾಡಿಸಿಕೊಳ್ಳಬೇಕೆಂದು ಬೀರೂರಿನವರು ೨ ವರ್ಷಗಳಿಂದಲೂ ಪ್ರಯತ್ನಮಾಡಿದುದೂ, ಕಳೆದ ವರ್ಷ ನಡೆಯಬೇಕಾಗಿದ್ದ ಸಭೆಯು ಇನ್‌ಫ್ಲುಯಂಜಾರೋಗ ಕ್ಷಾಮಬಾಧೆಗಳ ವಿಘ್ನದಿಂದ ನಿಂತುಹೋದುದೂ, ಅಧ್ಯಕ್ಷರನ್ನಾರಿಸುವ ವಿಷಯದಲ್ಲಿ ನಡೆಯಿಸಿದ ಪ್ರಯತ್ನಗಳೂ, ಬೀರೂರಿನ ಸ್ಥಲಪುರಾಣವೂ (ಈಗ್ಗೆ ೨೦೦-೩೦೦ ವರ್ಷಗಳ ಹಿಂದೆ ಈ ಪಟ್ಟಣವು ಒಬ್ಬ ವೀರಶೈವ ರಾಜರಿಂದ ಆಳಲ್ಪಡುತ್ತಿದ್ದಿತು. ಆರಂಬದಯ್ಯನೆಂಬ ಅರಸರಿಂದ ಬೀರನಹಳ್ಳಿ ಎಂಬ ಹೆಸರಿನಿಂದ ಕಟ್ಟಲ್ಪಟ್ಟ ಆ ಊರೇ ಈಗ ಬೀರೂರು ಎಂದು ಕರೆಯಲ್ಪಟ್ಟಿರುವುದು) ಅಲ್ಲಿ ೧೨ ವರ್ಷಗಳ ಕೆಳಗೆ ಸ್ಥಾಪಿಸಲ್ಪಟ್ಟ ವೀರಶೈವ ಸಂಸ್ಕೃತ ಪಾಠಶಾಲೆಯು ಇನ್ನೂ ನಡೆದುಕೊಂಡು ಬರುತ್ತಿರುವುದೂ, ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಸೂಚನೆಪ್ರಕಾರ ಬೆಂಗಳೂರಿನಲ್ಲಿ ಒಂದು ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಲು ೩೦ ಸಹಸ್ರ ರೂ. ಗಳನ್ನು ಕೊಡಲು ಪತ್ರೆ ಚಂ|| ವೀರಪ್ಪಯ್ಯನವರು ವಾಗ್ದಾನಮಾಡಿರುವುದೂ ಸಹ ಹೇಳಲ್ಪಟ್ಟು, ತದನಂತರ ಎಲ್ಲರೂ ಕಂಡು ಕೇಳಿ ಹಳೆಯದಾಗಿರುವ ಮೈಸೂರು ಮರಿಮಲ್ಲಪ್ಪನವರ ಪಾಠಶಾಲೆ ರಾ|| ಬ|| ಗುಬ್ಬಿ ತೋಟದಪ್ಪನವರ ಸತ್ರ ಮೈಸೂರು ವಿದ್ಯಾಭಿವೃದ್ಧಿಫಂಡಿನ ಸ್ಥಾಪನೆ ಮೊದಲಾದ ಅಪ್ರಾಸಂಗಿಕ ವಿಷಯಗಳು ಅನೇಕವಾಗಿದ್ದುವು. ಬಳಿಕ ಸಿರಸಂಗಿ ದೇಶಾಯರು ಮಾಡಿದ್ದ ಮೃತ್ಯುಪತ್ರದ ವಿಷಯವಾಗಿ ಪ್ರಿವಿಕೌನ್ಸಿಲ್‌ವರೆಗೆ ವ್ಯವಹಾರ ನಡೆದು ಕಡೆಗೆ ಅದು ಧರ್ಮಕರ್ತರ ಉದ್ದೇಶಕ್ಕನುಸಾರವಾಗಿಯೇ ತೀರ್ಮಾನವಾದುದಕ್ಕೆ ಸಂತೋಷಪ್ರದರ್ಶನಮಾಡಿ, ಅವರ ದಾನದ್ರವ್ಯದ ಸಾಹಾಯ್ಯವು ಭರತಖಂಡದ ಸಕಲ ಭಾಗದ ವೀರಶೈವ ವಿದ್ಯಾರ್ಥಿಗಳಿಗೂ ಒದಗುವಂತೆ ಮಾಡಬೇಕೆಂದು ಕೈ. ಸರ್ ದೇಶಾಯರು ಮಾಡಿದ್ದ ಸಂಕಲ್ಪಕ್ಕೆ ಅನುಸಾರವಾಗಿಯೇ ಅದರ ಟ್ರಸ್ಟಿಗಳು ಅದರ ವಿನಿಯೋಗವನ್ನು ಮಾಡಬೇಕೆಂದೂ, ಔತ್ತರೇಯರಿಗಿಂತ ಮೈಸೂರಿನ ವೀರಶೈವರು ವಿದ್ಯೆಯಲ್ಲಿ ಹಿಂದುಳಿದಿರುವುದರಿಂದ ಇಲ್ಲಿಯ ಪ್ರಜಾನುಗುಣವಾಗಿ ಸ್ವಲ್ಪ ಹೆಚ್ಚಾದ ಸಾಹಾಯ್ಯವನ್ನು ಟ್ರಸ್ಟಿಗಳು ಮಾಡಿಕೊಡಬೇಕೆಂದೂ, ಆ ಟ್ರಸ್ಟಿಗಳ ಕಮಿಟಿಗೆ ಮೈಸೂರು ದೇಶದ ಕೆಲ ಮೆಂಬರುಗಳನ್ನು ಆರಿಸಿ ಸೇರಿಸಿಕೊಳ್ಳಬೇಕೆಂದೂ ಹೇಳಿಕೊಂಡಿದ್ದುದಲ್ಲದೆ, ಕಾಶಿಯ ಶ್ರೀ ವಿಶ್ವಾರಾಧ್ಯಪೀಠದವರು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಮಾಡುತ್ತಿರುವ ಪ್ರೋತ್ಸಾಹ, ಶ್ರೀ ಉಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರರು ಸ್ಥಾಪಿಸಿರುವ ವಿದ್ಯಾಭಿವೃದ್ಧಿ ಫಂಡಿನ ವಿಚಾರ, ಧಾರ್‍ವಾಡದ ವೀರಶೈವ ವಿದ್ಯಾಭಿವೃದ್ಧಿಫಂಡು, ಬೆಳಗಾವೆನ ಗಿಲಗಂಜಿ ಆರಟಾಳ್ ಹೈಸ್ಕೂಲು, ಸೊಲ್ಲಾಪುರದ ಕೈ. ವಾರದ ಮಲ್ಲಪ್ಪನವರು ಮಾಡಿದ ಮಠೋದ್ಧಾರಕಾರ್ಯಗಳು, ಬಿಜಾಪುರದ ವಿದ್ಯಾಭಿವೃದ್ಧಿ ಫಂಡು, ಬೆಂಗಳೂರು ಸೂಲಬೆಲೆ ನಂಜಪ್ಪನವರು ಮಾಡಿದ ಧರ್ಮ-ಇವುಗಳನ್ನೆಲ್ಲಾ ವರ್ಣಿಸಿಬಿಟ್ಟು, ಶ್ರೀ ಚಿತ್ರದುರ್ಗದ ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರು ದೇಶದ ಆಬಾಲವೃದ್ಧರೂ ಅರಿಯುವಂತೆ ಮಾಡಿರುವ ಅಪರಿಮಿತಗಳಾದ ವಿದ್ಯಾಪ್ರೋತ್ಸಾಹಕ ಧರ್ಮಸ್ಥಾಪನೆಗಳನ್ನೂ, ಅತಿಶಯವಾದ ದಾನಗಳನ್ನೂ, ನಿನ್ನೆತಾನೇ ಬೆಂಗಳೂರಿನಲ್ಲಿ ವಿದ್ಯಾರ್ಥಿನಿಲಯಕ್ಕೆ ಮಾಡಿದ ಅಸಾಧಾರಣವಾದ ದ್ರವ್ಯಸಾಹಾಯ್ಯವನ್ನೂ ಸಹ ಕುರಿತು ಒಂದಕ್ಷರವನ್ನೂ ಕೂಡ ಆಡದಿರುವಂತೆ ಸತ್ಕಾರಕ ಸಂಘದವರು ತೆಗೆದುಕೊಂಡ ಎಚ್ಚರಿಕೆಗಾಗಿ ಅವರಿಗೆ ಎಷ್ಟು ಧನ್ಯವಾದವನ್ನು ಮಾಡಿದರೂ ತೀರದು. ಬೀರೂರು ಸತ್ಕಾರಕ ಸಂಘದವರು ಪಕ್ಷಪಾತದ ವಿಷಬೀಜವನ್ನು ಒಳಗೊಳಗೇ ಬಹುಕಾಲದಿಂದ ಸಿದ್ಧಪಡಿಸಿಕೊಂಡಿದ್ದು ಅದನ್ನು ಈ ಭಾಷಣದ ಮೂಲಕವಾಗಿ ಮಹಾಸಭಾಕ್ಷೇತ್ರದಲ್ಲಿ ನಾಟಿದಂತೆ ಮಾಡಿದರು. ಹಾಗೂ ಹೀಗೂ ಸಂಶಯಪಡುತ್ತಿದ್ದ ಮಹಾಜನರಿಗೆ ಈ ಭಾಷಣಶ್ರವಣದಿಂದ ಬೀರೂರಿನ ಕೆಲವರ ದುಷ್ಟವಾದ ಪಕ್ಷಾಂಧತೆಯ ಪರಾಕಾಷ್ಠದಶೆಯು ಸುವ್ಯಕ್ತವಾಗಿ ಅಸಮಾಧಾನವನ್ನು ಹುಟ್ಟಿಸಲು ಕಾರಣವಾಯಿತು.

ಸ್ವಾಗತಸಂಘಾಧ್ಯಕ್ಷರ ಭಾಷಣದ ಕಡೆಯಲ್ಲಿ—ಯುದ್ಧಶಾಂತಿಯಾದುದಕ್ಕಾಗಿಯೂ, ನಮ್ಮ ಸಾರ್ವಭೌಮರಿಗೆ ಜಯಲಾಭವಾದುದಕ್ಕಾಗಿಯೂ, ನಮ್ಮ ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವುಂಟಾದುದಕ್ಕಾಗಿಯೂ, ಸರ್ದಾರ್ ಕಾಂತರಾಜ ಅರಸರವರಿಗೆ ದಿವಾನ್‌ಪದವಿಯು ಲಭಿಸಿದುದಕ್ಕಾಗಿಯೂ ಸಂತೋಷಪ್ರದರ್ಶನವು ಮಾಡಲ್ಪಟ್ಟು, ಈ ಮಹಾಸಭೆಯ ವ್ಯವಸ್ಥೆಗೆ ಪೂರ್ಣ ಸಹಾಯಮಾಡಿ ಉಪಯುಕ್ತಸಲಹೆ ಕೊಟ್ಟವರೆಂಬ ಕಾರಣದಿಂದ ಜಿ. ಕೆ. ರುದ್ರಾರ್ಯರಿಗೂ, ದೇವೀಹೊಸೂರುಶೆಟ್ಟರಿಗೂ ಪೂರ್ಣಕೃತಜ್ಞತೆಯು ಅರ್ಪಿಸಲ್ಪಟ್ಟಿತು.

ಈ ಭಾಷಣವೆಲ್ಲಾ ಓದಿ ಮುಗಿಸಲ್ಪಟ್ಟ ಬಳಿಕ, ಇದಕ್ಕೆ ಮುಂಚೆ ಇನ್ನೊಂದು ಭಾಷಣವು ಸತ್ಕಾರಕ ಸಂಘದವರಿಂದ ಬರೆದು ಮುದ್ರಿಸಲ್ಪಟ್ಟಿದ್ದಿತೆಂತಲೂ, ಕೆಲ ವಿಷಯಗಳು ಅದರಲ್ಲಿ ಬಿಟ್ಟುಹೋಗಿದ್ದುದರಿಂದ ಆ ಭಾಷಣವನ್ನು ಬಿಟ್ಟು ಇದನ್ನು ಅವಸರದಲ್ಲಿ ಮುದ್ರಿಸಬೇಕಾಯಿತೆಂತಲೂ ಸ್ವಾಗತಸಂಘದ ಪಕ್ಷದಿಂದ ಹೇಳಲ್ಪಟ್ಟಿರುವುದು.

ಬಳಿಕ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ., ಯವರು ಸಭಾಧ್ಯಕ್ಷತೆಗೆ ರಿಟೈರ್ಡ್ ಡಿ|| ಕಲೆಕ್ಟರ್ ಮ|| ಶಾಂತವೀರಪ್ಪ ವೀರಸಂಗಪ್ಪ ಮೆಣಸಿನಕಾಯಿಯವರು ಸರ್ವಪ್ರಕಾರದಿಂದಲೂ ತಕ್ಕವರಾಗಿರುತ್ತಾರೆಂದು ಅವರ ಯೋಗ್ಯತಾವಿಶೇಷಗಳನ್ನು ವರ್ಣಿಸಿ ಅವರಿಗೆ ಅಧ್ಯಕ್ಷಪೀಠವನ್ನು ವಹಿಸಿಕೊಡಲಿಕ್ಕೆ ಸೂಚನೆಯನ್ನು ತಂದರು. ಸಭಿಕರೆಲ್ಲರೂ ಒಮ್ಮುಖವಾಗಿ ಕರತಾಡನವನ್ನು ಮಾಡಿ ಅನುಮೋದನೆಯನ್ನು ಕೊಡಲು, ಅವರು ಅಧ್ಯಕ್ಷಪೀಠವನ್ನಲಂಕರಿಸಿದರು. ಪುಷ್ಪಮಾಲಿಕೆಯು ಅರ್ಪಿಸಲ್ಪಟ್ಟಿತು. ಮುದ್ರಿಸಿ ತಂದಿದ್ದ ಭಾಷಣವನ್ನು ಅವರು ಓದಿ ಹೇಳಿದರು. ಬಳಿಕ ಮಹಾಸಭೆಯು ಸಾಂಗವಾಗಿ ನೆರವೇರಲೆಂದು ತಮ್ಮ ಸಾನುಭೂತಿಯನ್ನು ತೋರಿಸಿದ್ದವರ ತಂತೀವಾರ್ತೆಗಳನ್ನೂ ಪತ್ರಗಳನ್ನೂ ಅಧ್ಯಕ್ಷರು ಓದಿ ತಿಳಿಯಿಸಿದರು. ಅವುಗಳು ಯಾವುಯಾವವೆಂದರೆ- ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಸಂಸ್ಥಾನ, ಶ್ರೀಮಜ್ಜಗದ್ಗುರುಗಳಾದ ಉಜ್ಜಯಿನೀ ಕಾಶೀ ಸಂಸ್ಥಾನಗಳವರ ಕಡೆಯಿಂದ ಆಶೀಃಪತ್ರಗಳು, ದಿವಾನ್ ಸರ್ದಾರ್ ಕಾಂತರಾಜ ಅರಸರು, ಪುಂಗನೂರ ರಾಜರು, ಮೈಸೂರು ವಿದ್ಯಾಭ್ಯಾಸ ಶಾಖಾಧ್ಯಕ್ಷರಾದ ಮ|| ಸಿ. ರಾಮಲಿಂಗರಡ್ಡಿಯವರು, ರಾ|| ಬ|| ರುದ್ರಗೌಡ ಆರಟಾಳರು, ಶ್ರೀಮಂತ ಆಲಮೇಲ ದೇಶಮುಖರು, ಮ|| ಗಳಾದ ಸೊಲ್ಲಾಪುರದ ಉಮ್ಮರಜಿ ಬಿ.ಎ. ಯವರು, ರಾ||ಬ|| ಮಲ್ಲಪ್ಪಣ್ಣ ಸಿಂತ್ರೆ, ರಾ||ಸಾ|| ಮಾನ್ವಿ ಗದಗ, ಶಿವಶಂಕರಪ್ಪ ಜೇರಿಗೆ ಸೊಲ್ಲಾಪುರ, ಗುಲ್ಬರ್ಗಾ ವೀರಶೈವ ಬಂಧುಸಮಾಜ, ಮದ್ರಾಸ್ ಗುರುಬಸವ ಅಂಡ್ ಕೊ, ವಿಭಾಕರ ಪತ್ರದ ಎಡಿಟರು, ಅಥಣಿ ಶೆಟ್ಟರು ನೂರೊಂದಪ್ಪನವರು ಇತ್ಯಾದಿಗಳವರ ಅನೇಕಾನೇಕ ಪತ್ರಗಳೂ ತಂತ್ರೀವೃತ್ತಾಂತಗಳೂ ಸಹ ಸಭಿಕರಿಗೆ ತಿಳಿಯಿಸಲ್ಪಟ್ಟುವು.

ತದನಂತರ ಸಭಾಧ್ಯಕ್ಷರು ಎದ್ದು ನಿಂತು ಸಭೆಯ ಪರವಾಗಿ ಈ ಕೆಳಗೆ ಕಂಡ ವಿಷಯಗಳ ಸಂಬಂಧವಾಗಿ ತಂತ್ರೀವಾರ್ತೆಗಳನ್ನು ಕಳುಹಿಸಲಿಕ್ಕೆ ಸಭಾನುಮತಿಯನ್ನು ಕೇಳಿ, ಸರ್ವರ ಏಕವಾಕ್ಯತೆಯಿಂದ ಅನುಮೋದನೆಯನ್ನು ಪಡೆದು ಕಳುಹಿಸಿಕೊಟ್ಟರು. ಅವು ಯಾವುವೆಂದರೆ-(೧) ಯುದ್ಧವು ಶಾಂತವಾಗಿ ಆಂಗ್ಲಸಾರ್ವಭೌಮರಿಗೂ ಅವರ ಮಿತ್ರಮಂಡಲಿಗೂ ಜಯವಾದುದಕ್ಕಾಗಿ ನಮ್ಮ ಸಮಾಜಕ್ಕೆ ಉಂಟಾಗಿರುವ ಸಂತೋಷವನ್ನು ಸ್ಟೇಟ್ ಸೆಕ್ರೆಟರಿಯವರ ಮೂಲಕ ಸಾರ್ವಭೌಮರಿಗೆ ಬಿನ್ನೈಸುವುದು. (೨) ಮಾಂಟೆಗೂ ಚೇಮ್ಸ್‌ಫರ್ಡ್‌ರ ನೂತನ ರಾಜಕೀಯಸಂಸ್ಕರಣದಿಂದ ಭರತಖಂಡಕ್ಕೆ ಉಂಟಾಗುವ ಲಾಭವನ್ನು ಕುರಿತು ನಮ್ಮ ಸಮಾಜಕ್ಕೆ ಉಂಟಾಗಿರುವ ಆನಂದವನ್ನು ನಿವೇದಿಸುವುದು. (೩) ಮೈಸೂರು ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವಾದುದರಿಂದ ನಮ್ಮ ಸಮಾಜಕ್ಕುಂಟಾದ ಮಹಾನಂದವನ್ನು ತಂತ್ರೀವಾರ್ತೆಯಮೂಲಕ ಅವರಿಗೆ ಬಿನ್ನೈಸುವುದು. (೪) ಸರ್ದಾರ್ ಕಾಂತರಾಜ ಅರಸರವರಿಗೆ ದೇಹಾರೋಗ್ಯವುಂಟಾಗಿ ಅವರು ಮಂತ್ರಿಪದವಿಯನ್ನು ಅಲಂಕರಿಸಿದುದರಿಂದಲೂ ಈ ಮಹಾಸಭೆಯ ವಿಷಯದಲ್ಲಿ ಅವರು ಸಾನುಭೂತಿಯ ತಂತ್ರೀವಾರ್ತೆಯನ್ನು ಕಳುಹಿಸಿದುದರಿಂದಲೂ ಮಹಾಸಭೆಗೆ ಉಂಟಾದ ಆನಂದವನ್ನು ಅವರಿಗೆ ಶ್ರುತಪಡಿಸಿಕೊಳ್ಳುವುದು.

ಇವೆಲ್ಲಾ ಮುಗಿದಬಳಿಕ ವಿಷಯನಿರ್ಧಾರಕ ಸಂಘವು (ಸಬ್ಜೆಕ್ಟ್‌ಕಮಿಟಿಯು) ಏರ್ಪಡಿಸಲ್ಪಟ್ಟಿತು. ಸಭೆಗೆ ಬಂದಿದ್ದವರಲ್ಲಿ ಎಲ್ಲ ಪ್ರಾಂತಗಳ ವಿದ್ವಜ್ಜನ ಪ್ರಮುಖರ ಹೆಸರುಗಳು ಅದರಲ್ಲಿ ಸಮಾವೇಶವಾಗಿದ್ದುವು. ಆಗ ಪ್ರತಿನಿಧಿ ಮಂಡಲದಲ್ಲಿದ್ದ ಕೊರಟಗೆರೆ ಮ|| ವೀರಣ್ಣದೇವರು ತಾಲ್ಲೂಕಿಗೆ ಇಬ್ಬಿಬ್ಬರಂತೆ ಪ್ರತಿನಿಧಿಗಳನ್ನಾರಿಸಿ ಈ ಕಮಿಟಿಯಲ್ಲಿ ಸೇರಿಸಬೇಕೆಂದು ಆಗ್ರಹದಿಂದ ಹೇಳಿದರು. ಅದು ಅಸಾಧ್ಯವೆಂದು ಹೇಳಿ ಬಿಡಲ್ಪಟ್ಟಿತು. ೪|| ಗಂಟೆಯಿಂದ ಸಬ್ಜೆಕ್ಟ್‌ಕಮಿಟಿಯು ಕೂಡುವುದೆಂದು ಸಭಾಧ್ಯಕ್ಷರು ಅಪ್ಪಣೆ ಕೊಡಿಸಿ, ಅಂದಿನ ಮಹಾಸಭೆಯನ್ನು ಮುಗಿಸಿದರು.

ಗೊತ್ತಾಗಿದ್ದಮೇರೆಗೆ ಸಬ್ಜೆಕ್ಟ್ ಕಮಿಟಿಯ ಸಭಿಕರೆಲ್ಲಾ ಮಹಾಸಭಾ ಮಂಟಪದಲ್ಲೇ ನೆರೆದರು. ಆ ಸಭೆಗೆ ಮ|| ಸಿದ್ಧರಾಮಪ್ಪ ಪಾವಟೆ ಬಿ.ಎ., ಎಲ್‌ಎಲ್.ಬಿ. ಯವರು ಅಧ್ಯಕ್ಷರಾಗಬೇಕೆಂಬ ಸೂಚನೆಯನ್ನು ಮ|| ವೈ. ವಿರೂಪಾಕ್ಷಯ್ಯನವರು ಮಾಡಿದರು. ಇತರರಿಂದ ಅದರ ಅನುಮೋದನವೂ ಪರಿಪೋಷಣವೂ ಆದಬಳಿಕ ಸರ್ವಾನುಮತಿ ದೊರೆದು ಅವರು ಅಧ್ಯಕ್ಷತೆಯನ್ನು ವಹಿಸಿದರು. ಆ ಸಭಾಕಾರ್ಯವು ರಾತ್ರಿ ೯||| ಗಂಟೆಯವರೆಗೂ ಜರುಗಿ ಬೆಳಗ್ಗೆ ಸಭೆಯಲ್ಲಿ ಆಗಬೇಕಾದ ನಿರ್ಧಾರಗಳನ್ನು ಗೊತ್ತುಮಾಡಿದರು.

ತಾ|| ೨೯ನೆ ಸೋಮವಾರದ ದಿನದ ಸಭೆ.

ಈ ದಿನ ಬೆಳಗ್ಗೂ ಮಧ್ಯಾಹ್ನವೂ ಸಭಾಕಾರ್ಯಗಳು ಜರುಗಿದುವು. ಗೊತ್ತಾಗಿದ್ದಮೇರೆಗೆ ೮|| ಗಂಟೆಯೊಳಗೆ ಸಭೆಯು ತುಂಬಿತು. ೯ ಗಂಟೆಗೆ ಕಾರ್ಯಾರಂಭವಾಯಿತು. ಶ್ರೀಮದುಜ್ಜಯಿನಿಯೇ ಮೊದಲಾದುವುಗಳ ಸಂಸ್ಥಾನಾಧೀಶರುಗಳು ಈ ಊರಿಗೆ ಸಭಾಕಾಲಕ್ಕೆ ದಯಮಾಡಿಸಿದ್ದು, ಒಂದು ದಿನ ಸಭೆ ನಡೆಯದೆ ನಿಂತುದಕ್ಕೆ ವಿಷಾದಿಸಿ, ತಾವು ಸಭೆಗೆ ಬರದಿದ್ದರೂ ಚಿಂತೆಯಿಲ್ಲ ಸಭಾಕಾರ್ಯವು ನಿರ್ವಿಘ್ನವಾಗಿ ಸಾಗಲೆಂದು ಅಪ್ಪಣೆ ಕೊಟ್ಟಿರುತ್ತಾರೆ; ಅವರುಗಳಿಗೆ ಮಹಾಸಭೆಯಿಂದ ವಂದನೆಯನ್ನು ತಿಳಿಯಿಸುವ ಒಂದು ರೆಜಲ್ಯೂಷನನ್ನು ಮಾಡಬೇಕೆಂಬ ಸೂಚನೆಯನ್ನು ಸಭೆಯ ಒಪ್ಪಿಗೆಗಾಗಿ ಮಿ|| ಹುಲಕೋಟಿ ಬಿ.ಎ., ಎಲ್‌ಎಲ್.ಬಿ. ಯವರು ಇಟ್ಟರು. ಇದಕ್ಕೆ ದಾವಣಗೆರೆಯ ಮ|| ಕೋಗುಂಡಿ ನಂಜುಂಡಯ್ಯನವರು ನಿರೋಧಿಸಿ, ಮಹಾಸಭೆಗೆ ಆಶೀರ್ವದಿಸಿ ಮೊದಲು ನಿರಂಜನ ಜಗದ್ಗುರು ಶ್ರೀ ಚಿತ್ರದುರ್ಗದ ಮಹಾಸ್ವಾಮಿಗಳವರು ಆಶೀರ್ವಾದಪತ್ರವನ್ನು ಕಳಿಸಿದ್ದು ಅದನ್ನು ಮೊದಲೇ ಸಭಾಧ್ಯಕ್ಷರು ಓದಿ ತಿಳಿಯಿಸಿರುತ್ತಾರೆ. ಆದುಕಾರಣ ಹೀಗೆ ವಂದನೆ ತಿಳಿಯಿಸುವುದರಲ್ಲಿ ಮೊದಲು ಆ ಸ್ವಾಮಿಗಳಿಗೂ ವಂದನೆಯನ್ನು ತಿಳಿಯಿಸುವುದು ಯುಕ್ತವೆಂದು ಹೇಳಿದರು. ಈ ವಿಷಯವು ಮೊದಲೇ ಸಬ್ಜೆಕ್ಟ್ ಕಮಿಟಿಯಲ್ಲಿ ಬಂದಿರಲಿಲ್ಲ. ಆದುಕಾರಣ ರೆಜಲ್ಯೂಷನ್ ಆಗತಕ್ಕುದಲ್ಲವೆಂದು ಚಿತ್ರದುರ್ಗದ ಪ್ಲೀಡರ್ ಮ|| ಸಿದ್ಧನಂಜಪ್ಪನವರು ಹೇಳಿದರು. ಅದರಮೇಲೆ ಬಹಳ ವಾದಾನುವಾದಗಳು ೧||| ಗಂಟೆಯಕಾಲ ಜರುಗಿದುವು. ಶ್ರೀಮನ್ನಿರಂಜನ ಜಗದ್ಗುರುಗಳಿಗೂ ಪಂಚಸಿಂಹಾಸನಾಧೀಶ್ವರರಿಗೂ ಸಹ ವಂದನೆಯನ್ನು ಕಳುಹಿಸಬೇಕೆಂದು ಮುಕ್ತಾಯವಾಗಿ ಅದರಂತೆ ನಿರ್ಧಾರವು ಬರೆಯಲ್ಪಟ್ಟಿತು. ಓದಿಸುವಾಗ್ಗೆ ಒಬ್ಬಿಬ್ಬರು ಮತ್ತೆ ಚರ್ಚೆಯನ್ನು ತೆಗೆದರು. ಅಧ್ಯಕ್ಷರು ಇನ್ನು ಮುಂದಣ ಕೆಲಸವು ಸಾಗುವುದಿಲ್ಲವೆಂದು ಬಗೆದು ಇದು ಸಬ್ಜೆಕ್ಟ್ ಕಮಿಟಿಯ ಮುಂದೆ ಬಾರದ ವಿಷಯವಾದುದರಿಂದ ರೆಜಲ್ಯೂಷನ್ ಆಗತಕ್ಕುದು ವಿಧಿವಿರುದ್ಧವೆಂದು ಹೇಳಿ ಆ ವಿಷಯವನ್ನೇ ನಿಲ್ಲಿಸಿಬಿಟ್ಟರು. ಆನಂತರ ಇತರ ವಿಷಯಗಳ ರೆಜಲ್ಯೂಷನ್ನುಗಳಿಗೆ ಉಪಕ್ರಮವಾಯಿತು. ಧಾರವಾಡದ ಶುಭೋದಯ ಪ್ರಕರಣ ಸಂಬಂಧವಾಗಿ ಒಂದು ರೆಜಲ್ಯೂಷನನ್ನು ಮಾಡಬೇಕೆಂಬ ಸೂ

ೡ

ಚನೆಯನ್ನು ಮೈಸೂರ ಆಸ್ಥಾನ ವಿದ್ವಾನ್ ವೇ|| ಎ. ಆರ್. ಕರಿಬಸವಶಾಸ್ತ್ರಿಗಳು ಸಭೆಯ ಮುಂದಿಟ್ಟು ಹೀಗೆ ಹೇಳಿದರು– ನಮ್ಮ ಸಭೆಯ ಉದ್ದೇಶಗಳಲ್ಲಿ ಧರ್ಮೋದ್ಧರಣವೂ ಒಂದಾಗಿರುತ್ತದೆ. ಮತಧರ್ಮಕ್ಕೆ ಅಗೌರವವು ತಟ್ಟುವ ಸಂದರ್ಭದಲ್ಲಿ ಅದನ್ನು ಪರಿಹರಿಸುವುದು ಇದರ ಕರ್ತವ್ಯವಾಗಿರುತ್ತದೆ. ಧಾರವಾಡದ ಶುಭೋದಯಪತ್ರದಲ್ಲಿ ನಮ್ಮ ಮತದ ಪೂಜ್ಯರಾದ ಮತ್ತೂ ಧರ್ಮೋದ್ಧಾರಕರಾದ ಬಸವೇಶ್ವರನ ಮತ್ತು ಅಲ್ಲಮ ಮಹಾಪ್ರಭುವಿನ ವಿಷಯವಾಗಿ ನಿಂದಾಪ್ರಚುರವಾದ ಲೇಖನವು ಪ್ರಕಟಿತವಾಗಿರುತ್ತದೆ. ಅದು ಪ್ರತಿಯೊಬ್ಬ ವೀರಶೈವನಿಗೂ ಶೂಲದಲ್ಲಿ ಇರಿದಷ್ಟು ನೋವನ್ನುಂಟುಮಾಡಿರುತ್ತದೆ. ಶಿವನ ನಿಂದೆ ಮತ್ತು ಶಿವಶರಣರ ನಿಂದೆಯನ್ನು ಯಾವ ವೀರಶೈವನೂ ಕೇಳಕೂಡದೆಂದೂ, ಕೇಳಿದರೆ ಪ್ರಾಯಶ್ಚಿತ್ತ ಮಾಡಬೇಕೆಂದೂ, ಅದನ್ನು ಮಾಡುವುದು ಅಸಾಧ್ಯವಾದರೆ ಆತ್ಮಹತ್ಯೆಯನ್ನೇ ಮಾಡಿಕೊಳ್ಳಬೇಕೆಂದೂ, ಇಂಥ ವೀರವ್ರತವುಳ್ಳ ಕಾರಣದಿಂದಲೇ ವೀರಶೈವ ಎಂಬ ಹೆಸರು ಈ ಮತದವರಿಗೆ ಸಿದ್ಧವಾಗಿರುವುದೆಂದೂ, ಶುಭೋದಯದ ನಿಂದಾಲೇಖನಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡುವುದು ಪ್ರತಿಯೊಬ್ಬ ವೀರಶೈವನಿಗೂ ಕರ್ತವ್ಯವಾಗಿದೆಯೆಂದೂ, ಆ ಕಾರ್ಯವನ್ನು ಎಲ್ಲ ಬಗೆಯಿಂದಲೂ ನೆರವೇರಿಸಲು ಶಕ್ತರಾಗಿದ್ದ ಮ|| ಪಾವಟೆ ಸಿದ್ಧರಾಮಪ್ಪನವರು ಕೋರ್ಟಿನಲ್ಲಿ ಆ ಪತ್ರಕರ್ತರ ಲೇಖಕರ ಮೇಲೆ ಕ್ರಿಮಿನಲ್ ವ್ಯಾಜ್ಯವನ್ನು ಎಲ್ಲರಿಗಿಂತಲೂ ಮುಂದಾಗಿ ಹೂಡಿ ಕರ್ತವ್ಯಜಾಗರೂಕತೆಯನ್ನು ತೋರಿಸಿದುದರಿಂದ ಅವರು ನಿಜವಾದ ವೀರಶೈವರಾಗಿರುತ್ತ, ಅವರ ಆ ಕೃತ್ಯಕ್ಕಾಗಿ ಸಮಾಜದವರೆಲ್ಲರೂ ಮುಖ್ಯವಾಗಿ ಈ ಮಹಾಸಭೆಯು ಅವರಿಗೆ ವಂದನೆಯನ್ನು ತಿಳಿಯಿಸುವುದೆಂದೂ, ಮತ್ತು ಕ್ರಿಮಿನಲ್ ಕೋರ್ಟಿನಲ್ಲಿ ಮಾಡಲ್ಪಟ್ಟಿರುವ ತೀರ್ಪು ನ್ಯಾಯವಿರುದ್ಧವಾಗಿರುವುದರಿಂದ ಆದರಮೇಲೆ ಮುಂದಕ್ಕೆ ಅಪೀಲು ಮಾಡಲು ಕಕ್ಷಿದಾರರಿಗೆ ಲಾ ಪ್ರಕಾರ ಅವಕಾಶವಿಲ್ಲದಿರುವ ಕಾರಣದಿಂದ ಸರ್ಕಾರದವರೇ ಮುಂಬೈ ಹೈಕೋರ್ಟಿನಲ್ಲಿ ಕ್ರಿ. ಪ್ರೊ. ೧೯೪ ಎ. ಸೆಕ್ಷನ್ನಿನ ಪ್ರಕಾರ ಅಪೀಲು ಮಾಡಬೇಕೆಂದೂ ಆ ಲೇಖನವು ಮತ ಮತಗಳ ಮಧ್ಯದಲ್ಲಿ ಪರಸ್ಪರ ವೈಷಮ್ಯವನ್ನು ಬೆಳೆಯಿಸಿ ಅನರ್ಥವನ್ನುಂಟುಮಾಡುವುದಾಗಿರುವಕಾರಣ ಮುದ್ರಣಶಾಸನದಪ್ರಕಾರ ಸರ್ಕಾರದವರು ಪತ್ರಕರ್ತರಮೇಲೆ ಕಾರ್ಯಭಾರ ನಡೆಯಿಸುವವರಾಗಬೇಕೆಂದೂ, ಈ ಪ್ರಾರ್ಥನೆಯನ್ನು ಪ್ರತ್ಯಕ್ಷವಾಗಿ ಮುಂಬೈ ಸರ್ಕಾರಕ್ಕೆ ಮಾಡಿಕೊಳ್ಳುವುದಕ್ಕಾಗಿ ಮ|| ಗಳಾದ ವೈ. ವಿರೂಪಾಕ್ಷಯ್ಯನವರು, ಸಿದ್ಧರಾಮಪ್ಪ ಪಾವಟೆ ಬಿ.ಎ., ಎಲ್‌ಎಲ್.ಬಿ. ಯವರು, ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿಯವರು, ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.ಬಿ. ಯವರು, ಫಕೀರಪ್ಪ ಹಳಕಟ್ಟಿ ಬಿ.ಎ., ಎಲ್‌ಎಲ್.ಬಿ. ಯವರು ಈ ಐದು ಮಂದಿಗಳುಳ್ಳ ಒಂದು ಡೆಪ್ಯುಟೇಷನ್ನು ಹೋಗತಕ್ಕುದೆಂದೂ ಪ್ರತಿಪಾದಿಸಿದರು. ಈ ಸೂಚನೆಯನ್ನು ಬೆಂಗಳೂರು ಅಡ್ವೋಕೇಟರಾದ ಮ|| ಜಿ. ಪರಮಶಿವಯ್ಯ ಬಿ. ಎ., ಎಲ್.ಎಲ್. ಬಿ. ಯವರು ಅನುಮೋದಿಸಿದರು. ರಬಕವಿಯ ಮ|| ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿಯವರು ಪುಷ್ಟೀಕರಿಸಿದರು. ಸಭೆಯವರೆಲ್ಲರೂ ಕರತಾಡನದಿಂದ ಅನುಮೋದನ ಕೊಟ್ಟ ಬಳಿಕ ಪ್ಯಾಸಾಯಿತು. ಬೆಳಗಿನ ಸಭೆಯ ಕೆಲಸವು ಅಲ್ಲಿಗೆ ಮುಗಿದಿತು.

ಮಧ್ಯಾಹ್ನ ೧|| ಗಂಟೆಯಿಂದ ೨|| ಗಂಟೆಯವರೆಗೆ ಸಬ್ಜೆಕ್ಟ ಕಮಿಟಿಯು ನಡೆದಿತು. ೩ ಗಂಟೆಗೆ ಮರಳಿ ಮಹಾಸಭೆಯು ಕೂಡಿತು.

ತುಮಕೂರಿನ ಮ|| ಪ್ಲೀಡರ್ ಗುರುಸಂಗಾರ್ಯರು ವಿದ್ಯಾಪ್ರೋತ್ಸಾಹಕ್ಕಾಗಿ ಪ್ರತಿವರ್ಷವೂ ವೀರಶೈವಮತದಲ್ಲಿ ಎಂಟೆರನ್ಸ್ ಎಗ್ಜಾಮಿನೇಷನ್ನಿನೊಳಗೆ ಮೊದಲನೆಯವನಾಗಿ ಉತ್ತೀರ್ಣನಾದ ಒಬ್ಬ ವೀರಶೈವ ವಿದ್ಯಾರ್ಥಿಗೂ, ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮೊದಲನೆಯವನಾಗಿ ಉತ್ತೀರ್ಣನಾದ ಒಬ್ಬ ವೀರಶೈವ ವಿದ್ಯಾರ್ಥಿಗೂ, ಕೈ. ಯಜಮಾನ್ ವೀರಸಂಗಪ್ಪನವರ ಮತ್ತು ಗುರುಸಂಗಾರ್ಯರ ಜನಕರ ಹೆಸರಿನ ಮೇಲೆ ಕೊಡಲು ಗೊತ್ತುಮಾಡಿರುವ ಬಹುಮಾನದ ೨ ರಜತಪಾತ್ರಗಳನ್ನು ಸಭಾಧ್ಯಕ್ಷರು ಆಯಾ ವಿದ್ಯಾರ್ಥಿಗಳಿಗೆ ಕೊಟ್ಟರು. ಆ ಬಹುಮಾನಕ್ಕೆ ಪಾತ್ರರಾದ ವಿದ್ಯಾರ್ಥಿಗಳು–ಮೈಸೂರಿನ ಎಂ. ಎಸ್. ಬಸವಲಿಂಗಪ್ಪ, ತುಮಕೂರಿನ ಟಿ. ಗುರುನಂಜಯ್ಯ ಇವರುಗಳಾಗಿದ್ದರು. ಈ ಬಹುಮಾನವನ್ನು ಪಡೆದುಕೊಳ್ಳಲಿಕ್ಕೆ ಬಂದಿದ್ದ ಬಿ.ಎ. ವಿದ್ಯಾರ್ಥಿ ಎಂ. ಎಸ್. ಬಸವಲಿಂಗಪ್ಪನವರು ಸಂಸ್ಕೃತಭಾಷೆಯಲ್ಲಿ ತಾನೇ ರಚಿಸಿ ತಂದಿದ್ದ ಮಹಾಸಭಾ ಪಂಚರತ್ನವೆಂಬ ೫ ಶ್ಲೋಕಗಳನ್ನು ಸುಶ್ರಾವ್ಯವಾಗಿ ಓದಿ ಹೇಳಿ ವಂದಿಸಿದರು.

ಬಳಿಕ ಮಹಾಸಭೆಯ ಚಿರಸ್ಥಾಯಿಫಂಡಿನ ಪ್ರೊವಿಜನಲ್ ಕಮಿಟಿಯವರು ಮುದ್ರಣಮಾಡಿಸಿ ತಂದಿದ್ದ ವರದಿಯನ್ನು ಮ|| ಪಿ. ಮಹಾದೇವಯ್ಯ ಬಿ.ಎ., ಬಿ.ಎಲ್., ರವರು ಇಂಗ್ಲೀಷಿನಲ್ಲಿ ಓದಿದರು. ಅದನ್ನು ಮ|| ವೀರಬಸವಯ್ಯ ಬಿ.ಎ., ಬಿ.ಎಲ್. ರವರು ಕನ್ನಡದಲ್ಲಿ ಅರ್ಥಮಾಡಿ ಸಭಿಕರಿಗೆ ತಿಳಿಯಿಸಿದರು. ಇದರ ಸಂಬಂಧವಾಗಿ ಸಬ್ಜೆಕ್ಟ್ ಕಮಿಟಿಯಲ್ಲೇ ಬಹಳ ವಾದಾನುವಾದಗಳು ನಡೆದು ರೆಜಲ್ಯೂಷನ್ ಮಾಡಲಿಕ್ಕೆ ದಾರಿ ಕಾಣದೆ ಹೋದಕಾರಣ ಮಹಾಸಭಾ ಪರ್ಯಾಲೋಚನೆಗೇ ಇಡಲ್ಪಟ್ಟಿದ್ದಿತು. ಸಭೆಯಲ್ಲೂ ಇದರಮೇಲೆ ಬಹಳ ಚರ್ಚೆಗಳು ನಾನಾವಿಧವಾಗಿ ನಡೆದುವು. ಕಡೆಗೆ ಹೀಗೆ ನಿರ್ಧಾರವಾಯಿತು– ಈ ಚಿರಸ್ಥಾಯಿಫಂಡಿಗೆ ಈಗ ಹಣ ಕೊಟ್ಟಿರುವವರ ಮತ್ತೂ ಮುಂದೆ ಕೊಡತಕ್ಕವರ ಸ್ಪೆಷಲ್ ಕಮಿಟಿಯೊಂದನ್ನು ಮಾಡಿ, ಅವರಲ್ಲೇ ಒಬ್ಬ ಪ್ರೆಸಿಡೆಂಟರನ್ನೂ ಒಬ್ಬ ಸೆಕ್ರೆಟರಿಯನ್ನೂ ಆರಿಸಿಕೊಂಡು ಫಂಡಿನ ಆಡಳಿತವನ್ನು ನಡೆಯಿಸತಕ್ಕುದು. ಅದರ ಆಫೀಸ್ ಹೆಡ್‌ಕ್ವಾರ್ಟರು ಬೆಂಗಳೂರಿನಲ್ಲಿರತಕ್ಕುದು. ಈ ಕಮಿಟಿಯವರು ಒಂದು ಡ್ರಾಫ್ಟ್ ರೂಲ್ಸನ್ನು ರಚಿಸಿ ಮುಂದಿನ ಮಹಾಸಭಾಕಾಲಕ್ಕೆ ತರಬೇಕು.

ಬಳಿಕ ಮ|| ಬ್ಯಾರಿಸ್ಟರ್ ಜಿ. ರುದ್ರಪ್ಪ ಎಂ.ಎ. ಯವರು ಸಿರಸಂಗಿ ದೇಸಾಯರ ಧರ್ಮಫಂಡಿನ ಟ್ರಸ್ಟಿಗಳ ಅಭಿನಂದನ, ಸ್ಮಾರಕಸ್ಥಾಪನ, ಆ ಧರ್ಮದ್ರವ್ಯದ ವಿನಿಯೋಗ––ಈ ವಿಷಯ ಸಂಬಂಧವಾಗಿ ಒಂದು ಸೂಚನೆಯನ್ನು ಸಭೆಯ ಮುಂದಿಟ್ಟು ಹೀಗೆ ಭಾಷಣಮಾಡಿದರು–ಕೈ. ಸಿರಸಂಗಿ ದೇಸಾಯರವರಿಗೆ ಇಡೀ ವೀರಶೈವ ಸಮಾಜದಮೇಲೆ ಇದ್ದ ಅಭಿಮಾನವು ಅಸದೃಶವಾದುದು. ಅವರು ತಮ್ಮ ಅವಸಾನಕಾಲದಲ್ಲಿ ವರ್ಷ ೧ಕ್ಕೆ ೫೦–೬೦ ಸಹಸ್ರ ರೂ. ಗಳ ವರಮಾನವುಳ್ಳ ತಮ್ಮ ದೇಶಗತಿಯನ್ನೆಲ್ಲಾ ತಮ್ಮ ಸಮಾಜದವರ ವಿದ್ಯಾಪ್ರಸಾರಕಾರ್ಯಕ್ಕೆ ವಿನಿಯೋಗಿಸಲು ಮೃತ್ಯುಪತ್ರವನ್ನು ಬರೆದಿಟ್ಟು ಅಸಾಧಾರಣವಾದ ದಾನವನ್ನು ಮಾಡಿ ಲೋಕವಿಖ್ಯಾತರಾದರು. ಅದರಮೇಲೆ ಅವರ ಧರ್ಮಪತ್ನಿಯವರು ೧೨ ವರ್ಷಗಳಕಾಲ ವ್ಯಾಜ್ಯವನ್ನು ನಡೆಯಿಸಿದರು. ಟ್ರಸ್ಟಿಗಳು ಅಸಮಸಾಹಸದಿಂದ ಕಡೆಯತನಕ ಪ್ರಿವಿ ಕೌನ್ಸಿಲನವರೆಗೂ ಹೋರಾಡಿ ಜಯಶೀಲರಾದರು. ಅವರ ಸಾಹಸವನ್ನು ಕುರಿತು ಸಮಾಜದವರೆಲ್ಲರೂ ಅಭಿನಂದಿಸಬೇಕಾಗಿದೆ. ಸರ್ ದೇಸಾಯರು ತಮ್ಮ ದಾನದ್ರವ್ಯದ ಪ್ರಯೋಜನವನ್ನು ಭರತಖಂಡದ ಸಕಲ ವೀರಶೈವರಿಗೂ ಉಂಟುಮಾಡುವಂತೆ ಏರ್ಪಡಿಸಿರುವರೆಂಬುದರಲ್ಲಿ ಸಂಶಯವಿಲ್ಲ. ಅದುಕಾರಣ ಎಲ್ಲ ಪ್ರಾಂತದ ವೀರಶೈವರಿಗೂ ಆ ಹಣದ ಪ್ರಯೋಜನವನ್ನುಂಟುಮಾಡಿಕೊಡಬೇಕೆಂದು ಈ ಮಹಾಸಭೆಯಿಂದ ಒಂದು ಪ್ರಾರ್ಥನೆಯನ್ನು ಮಾಡುವುದು ಅವಿಹಿತವೇನೂ ಅಲ್ಲ. ಆದುದರಿಂದ ಆ ವಿಷಯವಾಗಿ ಒಂದು ರೆಜಲ್ಯೂಷನ್ನಾಗಬೇಕು. ಸಮಾಜಕ್ಕೆ ಇಂಥ ಮಹೋಪಕಾರವನ್ನು ಮಾಡಿರುವ ಆ ಪುಣ್ಯಪುರುಷರ ಹೆಸರಿನ ಒಂದು ಸ್ಮಾರಕವನ್ನು ಏರ್ಪಡಿಸುವುದು ಸರ್ವಸಮ್ಮತವಾಗಿದೆ. ಆ ವಿಷಯವಾಗಿಯೂ ಒಂದು ರೆಜಲ್ಯೂಷನ್ ಆಗಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಇದನ್ನು ಮ|| ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿಯವರು ಅನುಮೋದಿಸುವುದಕ್ಕೆ ಮುಂಚೆ ತಮ್ಮಿಂದ ಸರ್. ದೇಸಾಯರ ವಿಷಯವಾಗಿ ರಚಿಸಲ್ಪಟ್ಟಿದ್ದ ಒಂದು ಪದವನ್ನು ತಮ್ಮ ವಿದ್ಯಾರ್ಥಿಯೊಬ್ಬನ ಮುಖದಿಂದ ಸುಶ್ರಾವ್ಯವಾಗಿ ಹೇಳಿಸಿದರು. ಅದು ದೇಸಾಯರ ಸದ್ಗುಣಾವಳಿಯನ್ನು ಕನ್ನಡಿಯಂತೆ ವ್ಯಕ್ತಪಡಿಸುವುದಾಗಿದ್ದು ಸರಸವಾಗಿಯೂ ಮನೋಹರವಾಗಿಯೂ ಸಭಿಕರಲ್ಲಿ ರೋಮಾಂಚನವನ್ನುಂಟುಮಾಡಿತು. ಆ ಬಳಿಕ ಸರ್ ದೇಸಾಯರು ಮಾಡಿದ ಅದ್ವಿತೀಯ ದಾನವನ್ನು ಮ|| ಚಿಕ್ಕೋಡಿಯವರು ಅಭಿನಂದಿಸಿ ಭಾಷಣ ಮಾಡುವಾಗ್ಗೆ–ತಮಗೆ ಅವರ ಸಹವಾಸ ಸಂಭಾಷಣಗಳು ಕೆಲಕಾಲ ದೊರೆತಿದ್ದುದರಿಂದ ಅನುಭವಪೂರ್ವಕವಾಗಿ ಗೊತ್ತಿದ್ದ ಕೆಲ ಸಂಗತಿಗಳನ್ನು ವಿವರಿಸಿದರು. ಆ ಧರ್ಮದ ಟ್ರಸ್ಟಿಗಳು ವಿವಾದಜಯಕ್ಕಾಗಿ ಮಾಡಿದ ಸಾಹಸವನ್ನು ವಿವರಿಸಿದರು. ಅದರಮೇಲೆ ಟ್ರಸ್ಟಿಗಳ ಅಭಿನಂದನಕ್ಕೆ ತಮ್ಮ ಅನುಮೋದನವನ್ನಿತ್ತು, ಅಂಥ ಮಹಾಪುರುಷರ ಆದರ್ಶವು ಸಮಾಜದಮುಂದೆ ಎಂದೂ ಇರುವಂತೆ ಮಾಡುವುದು ಬಹಳ ಪ್ರಯೋಜಕವಾದುದರಿಂದ ಸ್ಮಾರಕಾರ್ಥವಾದ ಫಂಡಿಗೆ ಎಲ್ಲರೂ ಧನಸಹಾಯ ಮಾಡಬೇಕೆಂಬ ವಿಷಯಕ್ಕೂ ಅನುಮೋದನೆಯನ್ನಿತ್ತು, ಈ ಫಂಡಿನಿಂದ ಇಡೀ ಸಮಾಜಕ್ಕೆ ಸಹಾಯವಾಗಬೇಕೆಂದು ಟ್ರಸ್ಟಿಗಳನ್ನು ಕೇಳಿಕೊಳ್ಳಬೇಕೆಂಬ ೩ನೆ ವಿಷಯಕ್ಕೆ ಮಾತ್ರ ನಾನು ಅನುಮೋದಿಸುವುದಿಲ್ಲವೆಂದೂ, ಏತಕ್ಕೆಂದರೆ–"ಅದರಿಂದ ಸರ್ವವೀರಶೈವರಿಗೂ ಸಹಾಯವಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಮೃತ್ಯುಪತ್ರದಲ್ಲಿರುವಂತೆ ಆ ಫಂಡಿನ ೮ ಮಂದಿ ಟ್ರಸ್ಟಿಗಳು ಆ ಕಾರ್ಯವನ್ನು ಮಾಡಿಯೇ ಮಾಡುವರು. ಆದಕಾರಣ ನಾವು ಬೇರೆ ವಿಜ್ಞಾಪನ ಪತ್ರವನ್ನು ಟ್ರಸ್ಟಿಗಳಿಗೆ ಬರೆದುಕೊಳ್ಳುವುದು ಅಪ್ರಕೃತ. ಆದುದರಿಂದ ಆ ವಿಷಯಕ್ಕೆ ನನ್ನ ಅನುಮೋದನವಿಲ್ಲ. ಮೇಲೆ ಕಂಡ ೨ ಠರಾವುಗಳನ್ನು ಮಾತ್ರ ಈ ಸಂಬಂಧವಾಗಿ ಮಾಡಬೇಕೆಂಬುದು ನನ್ನ ಅಭಿಪ್ರಾಯ'' ಎಂದು ಹೇಳಿದರು.

ಇದರ ಮೇಲೆ ಹೈದರಾಬಾದ್ ಸಂಸ್ಥಾನದಿಂದ ಬಂದಿದ್ದ ಮ|| ರುದ್ರಗೌಡ ವಕೀಲರವರು ಉರುದುಭಾಷೆಯಲ್ಲಿ ಭಾಷಣಮಾಡಿ ಮೇಲಿನ ಎಲ್ಲ ವಿಷಯಗಳನ್ನೂ ತಾವು ಪುಷ್ಟೀಕರಿಸಿದುದಲ್ಲದೆ, ಹೈದರಾಬಾದಿನಲ್ಲಿ ಒಟ್ಟು ವೀರಶೈವರ ಜನಸಂಖ್ಯೆಯಲ್ಲಿ ⅕ ಭಾಗದಷ್ಟು ಎಂದರೆ ೭ ಲಕ್ಷ ವೀರಶೈವರಿರುವರೆಂದೂ, ಇತರ ಪ್ರಾಂತದವರೆಲ್ಲರಿಗಿಂತಲೂ ಅಲ್ಲಿಯ ವೀರಶೈವರು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವರೆಂತಲೂ ದೇಸಾಯರ ಫಂಡಿನಿಂದ ವಿಶೇಷವಾದ ಸಾಹಾಯ್ಯವು ಹೈದರಾಬಾದಿನವರಿಗೆ ದೊರೆಯಬೇಕೆಂತಲೂ, ಅದುಕಾರಣ ಮ|| ಜಿ. ರುದ್ರಪ್ಪನವರು ಹೇಳಿದ ಮೂರು ವಿಷಯದ ರೆಜಲ್ಯೂಷನ್ನನ್ನೂ ನಾನು ಪುಷ್ಟೀಕರಿಸುತ್ತೇನೆಂತಲೂ ಹೇಳಿ, ಅದನ್ನು ಕನ್ನಡದಲ್ಲೂ ವಿಶದೀಕರಿಸಿದರು.

ದಾವಣಗೆರೆಯ ವೇ|| ಚಂದ್ರಶೇಖರಶಾಸ್ತ್ರಿಗಳು ಸಭೆಯಲ್ಲೇ ಸರ್ ದೇಸಾಯರ ಗುಣಾತಿಶಯವನ್ನು ಕುರಿತು ರಚಿಸಿದ್ದ ಮೂರು ಪದ್ಯಗಳನ್ನು ಹೇಳಿ ಸಭಿಕರನ್ನು ಆನಂದಪಡಿಸಿದರು. ಬಳಿಕ ಮ|| ಹೆಚ್. ಕೆ. ವೀರಬಸವಯ್ಯನವರು ಈ ಸಂಬಂಧವಾಗಿ ಬರೆದ ರೆಜಲ್ಯೂಷನ್ನನ್ನು ಓದಿದರು. ಅದರಲ್ಲಿ ಮೇಲೆ ಕಂಡ ಮೂರು ವಿಷಯಗಳೂ ಇದ್ದುವಲ್ಲದೆ ಟ್ರಸ್ಟಿಗಳಲ್ಲಿ ಬಿಡುವಾದ ಸ್ಥಾನಕ್ಕೆ ಮೈಸೂರಿನವರನ್ನೂ ಸೇರಿಸಿಕೊಳ್ಳಬೇಕೆಂದು ಸೇರಿಸಿದ್ದರು. ಈ ಅಮೆಂಡ್‌ಮೆಂಟಿಗೆ ಮ|| ಕೆ. ಸಿದ್ಧರಾಮಪ್ಪನವರು ಅನುಮೋದನೆ ಕೊಟ್ಟರು. ಅಗ್ಗೆ ಅವರು ಮಾಡಿದ ಭಾಷಣದಲ್ಲಿ–ಇದುವರೆಗೆ ನಮ್ಮ ಔತ್ತರೇಯ ಬಂಧುಗಳು ಮಾಡಿದ ಭಾಷಣದಿಂದ ಎಲ್ಲ ಪ್ರಾಂತದ ವೀರಶೈವರಿಗೂ ಆ ಫಂಡಿನಿಂದ ಸಹಾಯವಾಗುವುದಕ್ಕೆ ಮೃತ್ಯುಪತ್ರದಲ್ಲಿ ಅವಕಾಶಕೊಡಲ್ಪಟ್ಟಿದೆಯೆಂದು ಗೊತ್ತಾಗುತ್ತದೆ. ಹೀಗಿರುವಾಗ ನಾವು ಮಹಾಸಭೆಯ ಪಕ್ಷದಿಂದ ಟ್ರಸ್ಟಿಗಳಿಗೆ ಒಂದು ವಿಜ್ಞಾಪನೆಯನ್ನು ಅದೇ ವಿಷಯವಾಗಿ ಬರೆದುಕೊಳ್ಳುವುದರಲ್ಲಿ ತಪ್ಪೇನೂ ಕಾಣುವುದಿಲ್ಲ. ಎಂದು ಹೇಳಿದರು. ಇದಕ್ಕೆ ಮಿ|| ಸಾಮ್ರಾಣಿಯವರೂ, ಮಿ|| ವೀರಬಸಪ್ಪಶ್ರೇಷ್ಠಿ ಬಿ. ಎ. ಯವರೂ ವಿರೋಧಿಸಿ ಭಾಷಣ ಮಾಡಿದರು. ಸ್ವಲ್ಪಹೊತ್ತು ಹೀಗೆಯೇ ಚರ್ಚೆಯಾದ ಬಳಿಕ ಇಡೀ ಸಮಾಜಕ್ಕೇ ಆ ಫಂಡಿನಿಂದ ಸಹಾಯವಾಗುವುದು ಸಿದ್ಧವಾಗಿರುವಾಗ ಪ್ರತ್ಯೇಕವಾಗಿ ಮಹಾಸಭೆಯಿಂದ ಆ ವಿಷಯಲ್ಲಿ ವಿಜ್ಞಾಪನ ಪತ್ರವನ್ನು ಬರೆದುಕೊಳ್ಳಬೇಕೆಂಬ ವಿಷಯವನ್ನು ಹೊರತುಪಡಿಸಿ ಉಳಿದ ೨ ವಿಷಯಗಳ ಮೇಲೆ ರೆಜಲ್ಯೂಷನ್ ಸರ್ವಾನುಮತದಿಂದ ಆಯಿತು.

(ಸಶೇಷ.)

ಬೀರೂರಿನಲ್ಲಾದ ೯ ನೆ ವೀರಶೈವ ಮಹಾಸಭೆಯಲ್ಲಿ ಅಧ್ಯಕ್ಷರ ಭಾಷಣವು.

ಪರಮಪೂಜ್ಯರಾದ ಮಹಾಸ್ವಾಮಿಗಳೇ, ಸಮಾಜಹಿತೈಕತತ್ಪರರಾದ ಪ್ರತಿನಿಧಿಗಳೇ, ಪ್ರೇಕ್ಷಕರೇ, ಈ ಶ್ರೀಮದ್ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ನೀವೆಲ್ಲರೂ ಬಹು ಪ್ರೀತಿಯಿಂದ ನನಗೆ ಕೊಟ್ಟಬಗ್ಗೆ ನಾನು ನಿಮ್ಮೆಲ್ಲರ ಆಭಾರಿಯಾಗಿದ್ದೇನೆ. ಈ ಸಭೆಯು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಮುಂತಾದ ಸಮಸ್ತ ಪ್ರಾಂತಗಳಲ್ಲಿರುವ ವೀರಶೈವ ಸಮಾಜದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಮುಂತಾದ ಸಕಲ ಅಂಗೋಪಾಂಗಗಳ ಅಭಿವೃದ್ಧಿಯ ವಿಚಾರಮಾಡಿ ಸಮಾಜವನ್ನು ಉನ್ನತಿಗೆ ತರಲು ಯತ್ನಿಸುವದಾದ್ದರಿಂದ ಇದಕ್ಕೆ ಮಹಾಸಭೆಯು ಎಂಬ ನಾಮವು ಸರ್ವಥಾ ಸಾರ್ಥಕವಾಗಿರುವದು. ಇಂಥ ಮಹತ್ತಮವಾದ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವ ಯೋಗ್ಯತೆಯು ನನ್ನಲ್ಲಿ ಸಂಪೂರ್ಣವಾಗಿ ಇರುವದೆಂಬ ವಿಷಯದಲ್ಲಿ ನನ್ನಲ್ಲಿಯೇ ನನಗೆ ಸಂಶಯವಿದ್ದಾಗ್ಯೂ ನಿಮ್ಮೆಲ್ಲರ ಪ್ರೇಮಪೂರ್ವಕವಾದ ಆಗ್ರಹದ ಮೂಲಕ ನಿಮ್ಮ ಅಪೇಕ್ಷೆಗೆ ಮಾನ ಕೊಟ್ಟು ಈ ಸ್ಥಾನವನ್ನು ಸ್ವೀಕರಿಸಬೇಕಾಯಿತು. ದಯಾಘನನಾದ ಪರಶಿವನ ಕೃಪೆಯಿಂದಲೂ ತಮ್ಮೆಲ್ಲರ ಸುಜ್ಞಾನದ ಮತ್ತು ಸುವಿಚಾರದ ಯೋಗದಿಂದಲೂ ಈ ಮಹತ್ಕಾರ್ಯವು ಸಾಂಗವಾಗಿ ನೆರವೇರುವುದೆಂದು ನಂಬಿ ಇಂಥ ಬಹುಮಾನವನ್ನು ನನಗೆ ಕೊಟ್ಟ ಬಗ್ಗೆ ತಮ್ಮೆಲ್ಲರ ಉಪಕಾರವನ್ನು ಪುನಃ ಸ್ಮರಿಸಿ ಈ ಸಭೆಯ ಕೆಲಸಕ್ಕೆ ಪ್ರಾರಂಭಿಸುವೆನು.

ಈ ೯ ನೇ ಮಹಾಸಭೆಯನ್ನು ಈ ಸ್ಥಾನದಲ್ಲಿ ಹೋದ ವರ್ಷವೇ ನೆರೆಯಿಸಬೇಕೆಂದು ಇಲ್ಲಿಯ ಮಹಾಜನಗಳು ಪ್ರಯತ್ನಪಟ್ಟಿದ್ದರು. ಆ ಕಾಲಕ್ಕೆ ಇನ್‌ಫ್ಲುಯಂಜಾ ರೋಗವು ಎಲ್ಲ ಕಡೆಯಲ್ಲಿ ವಿದ್ಯುದ್ವೇಗದಂತೆ ಪಸರಿಸಿ ಹಾಹಾಕಾರವನ್ನುಂಟುಮಾಡಿತು. ಈ ವಿಘ್ನದಿಂದ ಆ ಕಾಲಕ್ಕೆ ಸಭೆಯನ್ನು ನಿಲ್ಲಿಸುವ ಪ್ರಸಂಗಬಂದರೂ ಕೈಕೊಂಡ ಕಾರ್ಯವನ್ನು ಬಿಡದೆ ಪುನಃ ಈ ವರ್ಷವಾದರೂ ಅಭಿಮಾನದಿಂದಲೂ ಉತ್ಸಾಹದಿಂದಲೂ ನೆರವೇರಿಸಿದ್ದಕ್ಕಾಗಿ ಬೀರೂರ ಮಹಾಜನಗಳು ಸಮಸ್ತ ವೀರಶೈವರ ಸ್ತುತಿಗೆ ಪಾತ್ರರಿದ್ದಾರೆಂಬುದನ್ನು ಇಲ್ಲಿ ಉಲ್ಲೇಖಿಸದೆ ಇರಲಾರೆನು. ಈ ವರ್ಷ ಯಾವ ತೊಂದರೆಗಳೂ ಇಲ್ಲದಂತೆ ಮಹಾಸಭಾ ಕಾರ್ಯವು ಸುಸೂತ್ರವಾಗಿ ನಡೆಯುವಂತೆ ಅನುಕೂಲತೆಗಳನ್ನು ಒದಗಿಸಿಕೊಟ್ಟದ್ದಕ್ಕಾಗಿ ಸರ್ವಶಕ್ತನಾದ ಪರಮಾತ್ಮನನ್ನು ಅನನ್ಯಭಾವದಿಂದ ಸ್ತುತಿಸುತ್ತೇನೆ.

ಈ ವರ್ಷದಲ್ಲಿ ಆದಂಥ ಅತ್ಯಂತ ಆನಂದದ ಮತ್ತು ಜಗತ್ತಿನ ಇತಿಹಾಸದಲ್ಲಿ ಅತಿಶಯ ಮಹತ್ವದ ಸಂಗತಿಯೆಂದರೆ–ಜಗದ್ವ್ಯಾಪಿಯಾದ ಭಯಂಕರ ಮಹಾಯುದ್ಧದಲ್ಲಿ ಸತ್ಯಪಕ್ಷಪಾತಿಗಳೂ, ಪುಣ್ಯಪ್ರತಾಪಿಗಳೂ ಆದಂಥ ನಮ್ಮ ಬ್ರಿಟಿಷ್ ಸಾರ್ವಭೌಮರಿಗೂ ಮಿತ್ರರಾಷ್ಟ್ರದವರಿಗೂ ಜಯವಾಗಿ, ಮತ್ತರಾದ ಶತ್ರುಗಳ ಮಬ್ಬಿಳಿದು, ಹೇಳಿದಂತೆ ಒಡಂಬಡಿಕೆಯನ್ನು ಮಾಡಿಕೊಂಡದ್ದು. ಸತ್ಪಕ್ಷಕ್ಕೆ ಜಯವನ್ನುಕೊಟ್ಟು ಜಗತ್ತಿಗೆ ಆಗುತ್ತಿದ್ದ ಪೀಡೆಯನ್ನೂ ತೊಂದರೆಯನ್ನೂ ಪರಿಹರಿಸಿದಂಥ ಪರಶಿವನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ಮತ್ತು ನಮ್ಮ ಈ ಅಂತಃಕರಣಪೂರ್ವಕವಾದ ಆನಂದೋದ್ಗಾರಗಳ ಅಭಿನಂದನೆಯನ್ನು ತಂತಿಯಮೂಲಕ ಹಿಂದುಸ್ಥಾನ ಸರ್ಕಾರಕ್ಕೆ ತಿಳಿಸುವದು ಯೋಗ್ಯವಾಗಿ ತೋರುತ್ತದೆ.

ಸರದಾರ ಲಖಮನಗೌಡಬಸವಪ್ರಭು ಸರ ದೇಸಾಯಿ ವಂಟಮುರಿ ಇವರಿಗೆ ಸರಕಾರದವರು ಸಿ.ಐ.ಇ. ಎಂಬ ಬಹುಮಾನದ ಪದವಿಯನ್ನು ಕೊಟ್ಟ ಬಗ್ಗೆ ಸರಕಾರದ ಆಭಾರಮನ್ನಿಸುತ್ತೇನೆ. ಮತ್ತು ಸರ ದೇಸಾಯರವರ ಅಭಿನಂದನ ಮಾಡುತ್ತೇನೆ.

ಈ ಮಹಾಸಭೆಯ ಉದ್ದೇಶವು ಸರ್ವತೋಪರಿಯಾದ ವೀರಶೈವ ಸಮಾಜದ ಉನ್ನತಿಯನ್ನು ಮಾಡುವುದಿರುತ್ತದೆ. ಇದನ್ನು ಕಂಡು ರಾಷ್ಟ್ರಭಕ್ತರೂ ಕಾಂಗ್ರೆಸ್ ಕಾನ್‌ಫರೆನ್ಸಗಳ ಅಭಿಮಾನಿಗಳೂ, ಬೇರೆ ಬೇರೆ ಮತದವರು ತಮ್ಮ ತಮ್ಮ ಮತಗಳ ಸಭೆಗಳನ್ನು ಕೂಡಿಸುವುದರಿಂದ ರಾಷ್ಟ್ರೀಯ ಐಕ್ಯಕ್ಕೆ ಭಂಗಬರುತ್ತದೆಂದು ಆಕ್ಷೇಪಿಸಿದರೆ ಅದು ತಪ್ಪು. ಈ ಆಕ್ಷೇಪದಲ್ಲಿ ಅರ್ಥವಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಕುಟುಂಬಗಳನ್ನೂ ಮತಗಳನ್ನೂ ಸುಧಾರಿಸಲಿಕ್ಕೆ ಪ್ರಯತ್ನಮಾಡಿದರೆ ದೇಶವು ತಾನಾಗಿಯೇ ಸುಧಾರಿಸುತ್ತದೆ. ಕೆಲವು ಕುಟುಂಬದವರು ಕೂಡಿ ಒಂದು ಮತವೂ ಹಲವು ಮತಗಳು ಕೂಡಿ ನಮ್ಮ ಹಿಂದೂಸ್ಥಾನರಾಷ್ಟ್ರವೂ ಆಗಿರುತ್ತದೆ. ಎಲ್ಲ ಮತದವರನ್ನೂ ಒಂದೇ ಸಮುಚ್ಚಯಮಾಡಿ ಸುಧಾರಿಸುವದು ಕಠಿಣವಾಗುತ್ತದೆ. ಬೇರೆ ಬೇರೆ ಮತದವರ ಕುಂದುಕೊರತೆಗಳು ಅವರವರ ಪರಿಸ್ಥಿತಿಗನುಸರಿಸಿ ಭಿನ್ನವಿರುವವು. ಅವನ್ನು ಕಂಡುಹಿಡಿದು ತೆಗೆದುಹಾಕುವದು ಅವರವರಿಗೆ ಸುಸಾಧ್ಯವಾಗುವದು. ಇದರಿಂದ ರಾಷ್ಟ್ರೀಯ ಐಕ್ಯಕ್ಕೆ ಅನುಕೂಲವೇ ಹೊರತು ಅಪಾಯವೇನೂ ಇಲ್ಲ. ಪ್ರತಿಯೊಂದು ಮತದವರು ಪರಸ್ಪರ ಸಹಾನುಭೂತಿಯಿಂದ ನಡೆಯಬೇಕು. ಯಾವತ್ತೂ ಮತದವರಿಗೆ ಸಮಾನವಾದ ಕಷ್ಟಗಳನ್ನು ಪರಿಹರಿಸಿಕೊಳ್ಳಲಿಕ್ಕೆ ಎಲ್ಲ ಮತದವರೂ ಸಮಾನವಾದ ಮತ್ತು ಸರಿಯಾದ ಪ್ರಯತ್ನಗಳನ್ನು ಮಾಡಬೇಕು. ಸುಧಾರಣೆಯ ಮಾರ್ಗದಲ್ಲಿ ಮುಂದಡಿಯಿಟ್ಟವರು ಹಿಂದುಳಿದವರಮೇಲೆ ದಯಾದಾಕ್ಷಿಣ್ಯಗಳನ್ನು ತೋರಿಸಬೇಕು. ಇದರಿಂದ ರಾಷ್ಟ್ರೀಯ ಐಕ್ಯಕ್ಕೆ ಏನೂ ಹಾನಿಯಿಲ್ಲ. ಈ ಮಾದರಿಯ ಪ್ರಯತ್ನವೇ ಈ ನಮ್ಮ ಮಹಾಸಭೆಯ ಉದ್ದೇಶವಿದ್ದು ಪರಮತಸ್ಥರ ನಿಂದೆಯನ್ನೂ ಅವರ ಕೂಡ ಕಲಹವನ್ನೂ ಮಾಡುವದು ನಮಗೆ ಇಷ್ಟವಿಲ್ಲವೆಂಬ ಸಂಗತಿಯನ್ನು ಧಾರವಾಡದಲ್ಲಿ ಕೂಡಿದ ಮೊದಲನೇ ಮಹಾಸಭೆಯಲ್ಲಿ ಅಧ್ಯಕ್ಷರಾದ ಕೈ. ವಾ. ಶಿರಸಂಗಿದೇಸಾಯರವರು ಸ್ಪಷ್ಟವಾಗಿ ಆಡಿ ತೋರಿಸಿದ್ದಾರೆ. ಅದೇ ಧ್ಯೇಯವನ್ನಿಟ್ಟುಕೊಂಡು ಈ ನಮ್ಮ ಎಂಟು ಮಹಾಸಭೆಗಳು ಕೆಲಸಮಾಡುತ್ತ ಬಂದಿವೆ. ಮುಂದಾದರೂ ಹಾಗೇ ನಡೆಯುವವು. ಇದನ್ನು ಯಾವತ್ತೂ ಮತಬಾಂಧವರು ಚನ್ನಾಗಿ ಗ್ರಹಿಸುವರೆಂದು ನನ್ನ ಕೋರಿಕೆಯದೆ.

ಧಾರ್ಮಿಕ ಶಿಕ್ಷಣ.

ನಮ್ಮ ಈ ವೀರಶೈವ ಮತವು ಸನಾತನವಾದದ್ದು; ವೇದಾಗಮ ಉಪನಿಷತ್‌ಪ್ರತಿಪಾದ್ಯವಾದದ್ದು. ಇದಕ್ಕೆ ಶಕ್ತಿವಿಶಿಷ್ಟಾದ್ವೈತವೆಂತಲೂ ಶಿವಾದ್ವೈತವೆಂತಲೂ ಹೆಸರು. ಇದು ಭಕ್ತಿಕ್ರಿಯಾಜ್ಞಾನಮಯವಾದದ್ದು; ಅತಿಶಯ ಸ್ವಾರಸ್ಯವುಳ್ಳ ತಾತ್ವಿಕಾರ್ಥದಿಂದ ಕೂಡಿದ್ದು; ಜಡಕರ್ಮಗಳ ತೊಡಕಿಲ್ಲದೆ ಆಚರಿಸಲಿಕ್ಕೆ ಸುಲಭವಾದದ್ದು; ಅಲ್ಪಕ್ರಿಯೆಯಿಂದ ಬಹುಫಲವನ್ನು ಕೊಡತಕ್ಕಂಥಾದ್ದು; ಕಾಮಿಕಾದಿ ವಾತುಲಾಂತ ೨೮ ಶಿವಾಗಮಗಳು ವೀರಶೈವ ಮತತತ್ವವನ್ನೇ ವಿಶದವಾಗಿ ಹೇಳುತ್ತವೆ. ನೀಲಕಂಠ ಶಿವಾಚಾರ್ಯರು ಬ್ರಹ್ಮಸೂತ್ರಗಳ ಮೇಲೆ ಬರೆದ ನೀಲಕಂಠಭಾಷ್ಯ, ಶ್ರೀಪತಿ ಪಂಡಿತರು ಬರೆದ ಶ್ರೀಕರಭಾಷ್ಯ ಮೊದಲಾದವು ಶಿವಾದ್ವೈತಸಿದ್ಧಾಂತವನ್ನೇ ಪ್ರತಿಪಾದಿಸುವವು. ಸ್ವಪ್ರಭಾನಂದ ಶಿವಾಚಾರ್ಯರು ಶಿವಾದ್ವೈತಮಂಜರಿ ಎಂಬ ಗ್ರಂಥದಲ್ಲಿ ಶುದ್ಧಾದ್ವೈತ ಮತವನ್ನು ಖಂಡನಮಾಡಿ ಶಿವಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವರು. ಇವರಲ್ಲದೆ ಇನ್ನೂ ಅನೇಕ ಮಹಾತ್ಮರು ಸ್ವಮತಸಿದ್ಧಾಂತ ಗ್ರಂಥಗಳನ್ನೂ ಅನ್ಯಮತಖಂಡನ ಗ್ರಂಥಗಳನ್ನೂ ಬರೆದಿರುವರು. ಎಷ್ಟೋ ಗ್ರಂಥಗಳು ಇನ್ನೂ ಸಿಕ್ಕಿರುವದಿಲ್ಲ. ಸಿಕ್ಕ ಗ್ರಂಥಗಳಲ್ಲಿಯೂ ಎಷ್ಟೋ ಇನ್ನೂ ಪ್ರಸಿದ್ಧವಾಗಿಲ್ಲ. ನಮ್ಮ ಸಮಾಜದಲ್ಲಿ ಧರ್ಮಶಿಕ್ಷಣವು ಬಹಳ ಕಡಿಮೆ ಇರುವದು. ಧರ್ಮವು ಸಮಾಜದ ಪ್ರಾಣಸ್ವರೂಪವಿರುತ್ತದೆ ಧರ್ಮಶಿಕ್ಷಣದ ಅಭಿವೃದ್ಧಿಯಿಂದಲೇ ಸಮಾಜದಲ್ಲಿ ತೇಜಸ್ವಿತೆಯು ಹೆಚ್ಚಾಗುತ್ತದೆ. ಧರ್ಮಶಿಕ್ಷಣವಿಲ್ಲದ ಸಮಾಜವು ಪ್ರಾಣವಿಲ್ಲದ ದೇಹದಂತೆ ಆಗುವದು. ನಾವೆಲ್ಲರೂ ಒಂದೇ ಧರ್ಮರೂಪವಾದ ರಜ್ಜುವಿನಿಂದ ಬಂಧಿಸಲ್ಪಟ್ಟು ಒಂದು ಸಮಾಜವಾಗಿದ್ದೇವೆ. ಧರ್ಮಶಿಕ್ಷಣವಿಲ್ಲದಿದ್ದರೆ ಧರ್ಮಬಂಧನವು ಶಿಥಿಲವಾಗುತ್ತಹೋಗಿ ನಾವೆಲ್ಲರೂ ಒಂದೆಂಬ ಅಭಿಮಾನಕ್ಕೆ ಆಸ್ಪದವಾದ ಒಂದು ವಸ್ತುವು ಇಲ್ಲದಂತಾಗಿ ಸಮಾಜವು ವಿಸ್ಖಲಿತವಾಗುವದು. ಧಾರ್ಮಿಕಶಿಕ್ಷಣದಿಂದ ಸ್ವಾಭಿಮಾನವು ಜಾಗೃತವಾಗುತ್ತದೆ; ಮನಸ್ಸು ಉದಾತ್ತವಾಗುತ್ತದೆ; ಸನ್ಮಾರ್ಗಸದಾಚಾರಗಳು ನೆಲೆಗೊಳ್ಳುತ್ತವೆ; ಇಹದಲ್ಲಿ ಸುಖಶಾಂತಿಗಳು ದೊರೆಯುವವಲ್ಲದೆ ಮನುಷ್ಯನ ಅಂತಿಮಧ್ಯೇಯವಾದ ಮೋಕ್ಷವು ಸಿಗುವದು. ನಮ್ಮ ಗುರುವರ್ಗದವರು ತಾವು ಧರ್ಮಶಿಕ್ಷಣವನ್ನು ಪಡೆದು ಸದಾಚಾರಿಗಳಾಗಿ ಶಿಷ್ಯವರ್ಗಕ್ಕೆ ಜ್ಞಾನವನ್ನೂ ಸದಾಚಾರವನ್ನೂ ಬೋಧಿಸತಕ್ಕದ್ದು ಅವರ ಕರ್ತವ್ಯವಾಗಿರುತ್ತದೆ. ಅವರು ಈ ಪರಮಪವಿತ್ರವಾದ ಕರ್ತವ್ಯವನ್ನು ವಹಿಸಿಕೊಂಡಿರುವದರಿಂದ ಶಿಷ್ಯರು ಅವರಿಗೆ ಸ್ವಪೋಷಣೆಯ ಚಿಂತೆಯು ತಗಲದಂತೆ ಅವರಲ್ಲಿ ಕೃತಜ್ಞತೆಯನ್ನೂ ಪೂಜ್ಯಬುದ್ಧಿಯನ್ನೂ ತೋರಿಸಿ ನಿರತಿಶಯ ಭಕ್ತಿಭಾವದಿಂದ ಅವರ ಪೋಷಣೆಯ ಭಾರವನ್ನು ವಹಿಸುವದು ಯುಕ್ತವೂ ನ್ಯಾಯವಾದದ್ದೂ ಆಗಿರುವದು. ಆದರೆ ಗುರುವರ್ಗದವರು ತಾವು ಅಜ್ಞಾನಿಗಳಾಗಿ ಕರ್ತವ್ಯಪರಾಙ್ಮುಖರಾಗಿ ಕೇವಲ ಭಿಕ್ಷೆ ಬೇಡುವದೇ ತಮ್ಮ ಉದ್ಯೋಗವೆಂದು ಹೇಳುತ್ತ ಶಿಷ್ಯರವಿತ್ತಾಪಹಾರ ಮಾಡುವದು ಯಾವನ್ಯಾಯ? ಪೂರ್ವದಲ್ಲಿ ಮತಗಳು ವಿದ್ಯಾಪೀಠಗಳಾಗಿಯೂ ಗ್ರಂಥಾಲಯಗಳಾಗಿಯೂ ಇದ್ದವು. ಮತದಾಚಾರ್ಯರು ಬೋಧಕರಾಗಿದ್ದರು, ಕಾಲಗತಿಯಿಂದ ಅದೆಲ್ಲ ನಾಶವಾಗಿ ಧರ್ಮಶಿಕ್ಷಣವೂ ಧರ್ಮಜ್ಞಾನವೂ ಲೋಪವಾಗುತ್ತ ಬಂದು ಸ್ವಮತಜ್ಞಾನವಿಲ್ಲದೆ ಗ್ರಂಥಭಾಂಡಾರವಿಲ್ಲದೆ ದುಸ್ಥಿತಿಗೆ ಈಡಾಗಿ ಅನ್ಯಮತದವರ ನಿಂದೆಗೂ ಅನಾದರಕ್ಕೂ ಪಾತ್ರರಾಗಿರುವೆವು. ಈ ದುಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಪೂರ್ವದಿಂದಲೂ ಅನೇಕ ಮಹಾತ್ಮರು ಪ್ರಯತ್ನಮಾಡುತ್ತಬಂದಿದ್ದಾರೆ. ಈಗಲಾದರೂ ಸಂಸ್ಕೃತ ವಿದ್ಯಾಭ್ಯಾಸವನ್ನೂ ಮತಗ್ರಂಥಗಳ ಅಧ್ಯಯನವನ್ನೂ ಮಾಡಿಸತಕ್ಕಂಥ ಅನೇಕ ಪಾಠಶಾಲೆಗಳು ಅಲ್ಲಲ್ಲಿ ಕಂಗೊಳಿಸುತ್ತಿರುವವು. ಕಾಶಿಯಲ್ಲಿ ಅನೇಕ ವಿದ್ಯಾರ್ಥಿಗಳು ಶಾಸ್ತ್ರಾಧ್ಯಯನವನ್ನು ಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿಗಳನ್ನು ಸಂಪಾದಿಸುತ್ತಿರುವರು. ಬಾದಾಮಿಯ ನೆರೆಯಲ್ಲಿ ಸ್ಥಾಪಿತವಾಗಿರುವ ಶಿವಯೋಗಮಂದಿರವೆಂಬ ಸಂಸ್ಥೆಯಲ್ಲಿ ಶಿವಯೋಗಸಾಧನ ಮತಗ್ರಂಥಾಧ್ಯಯನಗಳನ್ನು ಮಾಡಿಸುತ್ತಿರುವದಲ್ಲದೆ ಅನೇಕ ಮತಗ್ರಂಥಗಳನ್ನು ಸಂಗ್ರಹಿಸಿರುವರು. ತಿಪಟೂರಲ್ಲಿ ವೀರಶೈವಾಶ್ರಮವೆಂಬ ಸಂಸ್ಥೆಯನ್ನು ಸ್ಥಾಪಿಸಿ ಸಂಸ್ಕೃತದ ಅಧ್ಯಯನವನ್ನು ಮಾಡಿಸುತ್ತಿರುವರು. ಇನ್ನೂ ಕೆಲ ಮಹಾತ್ಮರು ಅಲ್ಲಲ್ಲಿ ಪಾಠಶಾಲೆಗಳನ್ನಿಟ್ಟು ಸಂಸ್ಕೃತಜ್ಞಾನವನ್ನೂ ಮತಗ್ರಂಥಗಳ ಅವಲೋಕನವನ್ನೂ ಮಾಡಿಸುತ್ತಿರುವರು. ಆದರೆ ವೀರಶೈವ ಜನಾಂಗದ ವಿಸ್ತಾರವನ್ನು ನೋಡಲು ಈ ಪ್ರಯತ್ನವು ತೀರ ಅತ್ಯಲ್ಪವೆಂದು ಹೇಳಲಿಕ್ಕೆ ಏನೂ ಅಭ್ಯಂತರವಿಲ್ಲ. ಮತ್ತು ಎಷ್ಟೋ ಕಡೆಯಲ್ಲಿ ಈಗ ಸ್ಥಾಪಿಸಲ್ಪಟ್ಟಿರುವ ಸಣ್ಣ ಸಣ್ಣ ಪಾಠಶಾಲೆಗಳು ಸರಿಯಾಗಿ ನಡೆಯುವದಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯು ತೀರ ಕಡಿಮೆ ಇರುವದು. ಮತ್ತು ಸ್ವಲ್ಪ ದಿವಸ ನಡೆದು ಬಂದಾಗುತ್ತಿರುವವು. ಹೀಗಾಗಲಿಕ್ಕೆ ಕಾರಣವೇನಂದರೆ ಹಣದ ಕೊರತೆ, ಧರ್ಮಾರ್ಥಫಂಡು ಸರಿಯಾಗಿ ವಸೂಲಾಗದೆ ಇರುವದು, ಊರಲ್ಲಿ ಪಕ್ಷವಡೆಗಳಿರುವದು, ಮೇಲೆ ದೇಖರೇಖ ಸರಿಯಾಗಿ ಇಲ್ಲದಿರುವದು, ಜನರಿಂದ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯಾಗದಿರುವದು. ಇಂಥ ತೊಂದರೆಗಳಿಂದ ಪಾಠಶಾಲೆಗಳು ಸರಿಯಾಗಿ ನಡೆಯಲಾರವೆಂದು ಬೇರೆ ಹೇಳುವ ಕಾರಣವಿಲ್ಲ. ಇದುವರೆಗೆ ಉದಯಹೊಂದಿ ಕೆಲಕೆಲವು ದಿನ ಹಾಗೂ ಹೀಗೂ ನಡೆದು ಲಯಹೊಂದುತ್ತಿರುವ ಅನೇಕ ಪಾಠಶಾಲೆಗಳ ಐತಿಹ್ಯವನ್ನು ನೋಡಲು ಈ ಸಂಗತಿಯು ಸ್ಪಷ್ಟವಾಗಿ ನಿದರ್ಶನಕ್ಕೆ ಬರುವದು. ಇದಲ್ಲದೆ ಅನೇಕ ಸ್ಥಳಗಳಲ್ಲಿ ಪಾಠಶಾಲೆಯ ಚಾಲಕರಲ್ಲಿ ಸಂಸ್ಕೃತಜ್ಞಾನವುಳ್ಳ ಜನರು ತೀರವಿರಳರಾಗಿರುವದರಿಂದ, ಅಧ್ಯಾಪಕರು ಕಲಿಸಿದ್ದೂ ವಿದ್ಯಾರ್ಥಿಗಳು ಕಲಿತದ್ದೂ ಕಲಿಯದೆ ಇದ್ದದ್ದೂ ತಿಳಿಯಲಿಕ್ಕೆ ಮಾರ್ಗವಿಲ್ಲದ್ದರಿಂದ ಶಿಕ್ಷಣಕ್ರಮವು ಸರಿಯಾಗಿ ಸಾಗುವದಿಲ್ಲ. ಇಂಥ ಅವ್ಯವಸ್ಥೆಯಿಂದ ನಡೆದ ಶಿಕ್ಷಣದಿಂದ ಹೇಳತಕ್ಕಷ್ಟು ಲಾಭವಾಗುವದಿಲ್ಲ. ಆದ್ದರಿಂದ ಇಂಥ ಸಣ್ಣ ಸಣ್ಣ ಪಾಠಶಾಲೆಗಳನ್ನಿಡುವ ತೊಂದರೆಗೆ ಬೀಳದೆ ವೀರಶೈವರ ವಸತಿಯ ಮಧ್ಯಸ್ಥಳಗಳಾಗಿರುವ ದೊಡ್ಡ ದೊಡ್ಡ ಅನುಕೂಲವಾದ ಪಟ್ಟಣಗಳಲ್ಲಿ ಸಂಸ್ಕೃತ ಕಾಲೇಜುಗಳನ್ನು ಸ್ಥಾಪಿಸಿ ಬೇರೆ ಬೇರೆ ಶಾಸ್ತ್ರಗಳಲ್ಲಿ ಪರಿಣತರಾದ ಪಂಡಿತರನ್ನಿಟ್ಟು ಬಹು ಜನ ವಿದ್ಯಾರ್ಥಿಗಳಿಗೆ ಅನುಕೂಲತೆಯನ್ನು ಮಾಡಿಕೊಟ್ಟು ಧಾರ್ಮಿಕಶಿಕ್ಷಣವು ಸುವ್ಯವಸ್ಥಿತ ರೀತಿಯಿಂದ ಅವಿಚ್ಛಿನ್ನವಾಗಿ ಸಾಗುವಂತೆ ಅನುಕೂಲತೆಗಳನ್ನೊದಗಿಸಿಕೊಡಬೇಕು. ಇದಕ್ಕೆ ಧನಸಹಾಯವು ಬಹಳವಾಗಿ ಬೇಕು. ಎಷ್ಟೋ ಜನರಿಗೆ ತಮ್ಮ ತಮ್ಮ ಊರುಗಳಲ್ಲಿಯೇ ಪಾಠಶಾಲೆಗಳಿರಬೇಕೆಂಬ ಅಭಿಮಾನವಿರುವದು. ಅಲ್ಲಿಯೇ ಆದರೆ ಮಾತ್ರ ಧನಸಹಾಯವನ್ನು ಮಾಡುವರು. ಬೇರೆ ಕಡೆಗಾದರೆ ಸಹಾಯ ಮಾಡಲು ಒಪ್ಪುವದಿಲ್ಲ. ಇದು ಯೋಗ್ಯವಲ್ಲ. ತಮ್ಮ ಸಮಾಜದಲ್ಲಿ ಯೋಗ್ಯರೀತಿಯಿಂದ ಸುವ್ಯವಸ್ಥಿತವಾಗಿ ಧಾರ್ಮಿಕ ಶಿಕ್ಷಣವು ನಡೆಯಬೇಕೆಂಬ ಅಭಿಮಾನವಿರಬೇಕೇ ಹೊರತು ನಮ್ಮಲ್ಲಿ ತಮ್ಮಲ್ಲಿ ಎಂಬ ಕ್ಷುದ್ರವಾದ ಸಂಕುಚಿತ ಅಭಿಮಾನವಿರತಕ್ಕದ್ದಲ್ಲ. ಆದ್ದರಿಂದ ಸಮಾಜಹಿತಕ್ಕೆ ಲಕ್ಷ್ಯಕೊಟ್ಟು ಸಂಕುಚಿತ ವಿಚಾರವನ್ನು ಬಿಟ್ಟು ವಿಸ್ತೃತದೃಷ್ಟಿಯನ್ನಿಟ್ಟು ಸಹಾಯ ಮಾಡಬೇಕು. ಸಂಸ್ಕೃತ ಕಾಲೇಜು ಸ್ಥಾಪನೆಯಂಥ ಮಹತ್ಕಾರ್ಯವನ್ನು ಮುಖ್ಯವಾಗಿ ಜಗದ್ಗುರು ಪೀಠಾಚಾರ್ಯರು ಕೈಕೊಂಡು ಧಾರ್ಮಿಕ ಶಿಕ್ಷಣದ ಸಂಬಂಧವಾಗಿರುವ ಕೊರತೆಯನ್ನು ಪೂರ್ಣವಾಗಿ ಇಲ್ಲದಂತೆ ಮಾಡಿ ಧರ್ಮಶಿಕ್ಷಣಾಭಿವೃದ್ಧಿಯ ಕೆಲಸಕ್ಕೆ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮತಗ್ರಂಥ ಶೋಧನೆ.

ನಮ್ಮ ವೀರಶೈವರ ಮತಗಳಲ್ಲಿಯೂ ಎಷ್ಟೋ ಮನೆಗಳಲ್ಲಿಯೂ ಇನ್ನೂ ಪ್ರಸಿದ್ಧವಾಗದೆ ಇರುವ ಪ್ರಾಚೀನ ಮತಗ್ರಂಥಗಳು ಎಷ್ಟೋ ಇರುವವು. ಕಾಶ್ಮೀರ, ನೇಪಾಳ, ಹೈದರಾಬಾದು, ಸಿಕೆಂದರಾಬಾದು, ತಂಜಾವೂರು ಮುಂತಾದ ಕಡೆಗಳಲ್ಲಿಯೂ ನಮ್ಮ ಮತಗ್ರಂಥಗಳು ಸಿಕ್ಕುತ್ತವೆ. ಅವನ್ನೆಲ್ಲ ಶೋಧಿಸಿ, ಬರೆಯಿಸಿ ಪ್ರಸಿದ್ಧಿಸಬೇಕು. ಮತ್ತು ಸುಗಮವಾಗಿ ಸರ್ವರಿಗೂ ಮತತತ್ವಗಳ ಜ್ಞಾನವಾಗುವಂತೆ ಸುಲಭಶೈಲಿಯಿಂದ ಸಣ್ಣ ಸಣ್ಣ ಮತಗ್ರಂಥಗಳನ್ನು ಬರೆಯಿಸಿ ಪ್ರಸಿದ್ಧಿಸಬೇಕು. ಇದಕ್ಕಾಗಿ ಮತಗ್ರಂಥ ಶೋಧಕ–ಪ್ರಸಾರಕ–ಮಂಡಳವೆಂಬ ಸಂಸ್ಥೆಯನ್ನು ಸ್ಥಾಪಿಸಬೇಕು. ಈ ಪ್ರಯತ್ನಕ್ಕಾಗಿ ಒಂದು ಧನರಾಶಿಯನ್ನು ಕೂಡಿಸಬೇಕು. ಮತ್ತು ಸತತಪ್ರಯತ್ನಮಾಡಿ ಈ ಕಾರ್ಯವನ್ನು ಮಾಡಿದರೆ ನಮ್ಮಲ್ಲಿ ಮತಗ್ರಂಥಗಳ ಕೊರತೆ ಇಲ್ಲದಂತಾಗಿ ನಮ್ಮ ಧಾರ್ಮಿಕ ವಿಧಿವಿಧಾನಗಳು ಸಕ್ರಮವಾಗಿ ಸಾಗಲಿಕ್ಕೆ ಮಾರ್ಗವಾಗುತ್ತದೆ. ವಿವಾದಾಸ್ಪದ ವಿಷಯಗಳ ನಿರ್ಣಯವಾಗಲಿಕ್ಕೆ ಮಾರ್ಗವಾಗುತ್ತದೆ. ಸಂದೇಹಗಳೆಲ್ಲ ಅಳಿದುಹೋಗುತ್ತವೆ. ಆದ್ದರಿಂದ ಈ ಕಾರ್ಯವನ್ನು ಅವಶ್ಯವಾಗಿ ಮಾಡಬೇಕೆಂದು ಅತ್ಯಾದರದಿಂದ ಸೂಚಿಸುತ್ತೇನೆ.

ಪ್ರಾಥಮಿಕ ಶಿಕ್ಷಣ.

ಇನ್ನು ಸರ್ವಸುಧಾರಣೆಗಳಿಗೂ ಮೂಲಾಧಾರವಾದ ಪ್ರಾಥಮಿಕ ಶಿಕ್ಷಣವನ್ನು ಕುರಿತು ವಿಚಾರಮಾಡುವಾ. ಯಾವದೊಂದು ಸಮಾಜವಾಗಲಿ ರಾಷ್ಟ್ರವಾಗಲಿ ಉನ್ನತಿಯನ್ನು ಹೊಂದಬೇಕಾದರೆ ವಿದ್ಯಾಪ್ರಸಾರವು ಅತ್ಯಂತ ಅವಶ್ಯವು. ಸಮಾಜದ ಉನ್ನತಿಯು ಆ ಸಮಾಜದೊಳಗಿನ ಪ್ರತಿಯೊಂದು ವ್ಯಕ್ತಿಯ ಉನ್ನತಿಯನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ಮನುಷ್ಯನೂ ಸುಧಾರಣೆಯನ್ನೂ ಉನ್ನತಿಯನ್ನೂ ಹೊಂದಬೇಕಾದರೆ ವಿದ್ಯಾವಂತನಾಗಬೇಕೆಂಬುದು ನಿರ್ವಿವಾದವಾದದ್ದು. ವಿದ್ಯಾವಿಹೀನನಾದ ಮನುಷ್ಯನು ಅಜ್ಞಾನಾಂಧಕಾರದಲ್ಲಿ ಮುಳುಗಿ ತನ್ನಸ್ಥಿತಿರೀತಿಗಳನ್ನು ತಿಳಿದುಕೊಳ್ಳಲಾರನು; ಕುಂದುಕೊರತೆಗಳನ್ನು ಅರಿತುಕೊಳ್ಳಲಾರನು. ಆತನಿಗೆ ತನ್ನ ಹಕ್ಕು ಬಾಧ್ಯತೆಗಳ ಜ್ಞಾನವು ಆಗಲಾರದು. ಇಂಥವನು ಯಾವ ಬಗೆಯಿಂದ ತನ್ನ ಏಳ್ಗೆಯನ್ನೂ ತನ್ನ ಸಮಾಜದ ಏಳ್ಗೆಯನ್ನೂ ಮಾಡಿಕೊಂಡಾನು? ಇಂಥ ಜನರೇ ಹೆಚ್ಚಾಗಿ ತುಂಬಿರುವ ಸಮಾಜಕ್ಕೆ ಗೌರವ ಬರುವ ಬಗೆ ಹ್ಯಾಗೆ? ನಮ್ಮ ವೀರಶೈವರ ಜನಸಂಖ್ಯೆಯು ಸುಮಾರು ೩೫ ಲಕ್ಷವಿದ್ದು ಅದರಲ್ಲಿ ನಿರಕ್ಷರಿಗಳ ಜನಸಂಖ್ಯೆಯು ೩೩ ಲಕ್ಷಕ್ಕಿಂತ ಹೆಚ್ಚಿರುತ್ತದೆ. ಅಂದರೆ ೧೦೦ ಜನರಲ್ಲಿ ೫ ಜನರುಮಾತ್ರ ಓದುಬರಹ ಬಲ್ಲವರು, ೯೫ ಜನರು ಅಕ್ಷರಶತ್ರುಗಳು ಇರುತ್ತಾರೆಂದು ೧೯೧೧ ನೇ ಇಸ್ವಿಯ ಸೆನ್ಸಸ್ ರಿಪೋರ್ಟಿನಿಂದ ತಿಳಿದುಬಂದದೆ. ಇಲ್ಲಿ ನೆರೆದಿರುವ ಸಹಸ್ರಾವಧಿಅಕ್ಷರಸ್ಥರಾದ ಜನಸಮುದಾಯವನ್ನೂ ಕೆಲವುಜನ ಪದವೀಧರರನ್ನೂ ನೋಡಿ ನಮ್ಮ ಸಮಾಜವು ವಿದ್ಯೆಯಲ್ಲಿ ಪ್ರಗತಿಯನ್ನು ಹೊಂದಿದೆಯೆಂಬ ತಿಳುವಳಿಕೆಯಾಗುವದಲ್ಲವೆ? ಆದರೆ ನಿಜಸ್ಥಿತಿಯನ್ನು ನೋಡಿದರೆ ಹೀಗಲ್ಲ. ೧೦೦ ಕ್ಕೆ ೯೫ ಜನರು ವಿದ್ಯಾವಿಹೀನರು ಇರುವರೆಂದರೆ ಬಹಳ ವಿಷಾದದ ಸಂಗತಿಯು. ಇನ್ನು ಮುಂದಾದರೂ ಈ ಸ್ಥಿತಿಯನ್ನು ಹಾಗೇ ಉಳಿಯಗೊಟ್ಟರೆ ನಮ್ಮ ಸಮಾಜವು ಎಂದೂ ಉತ್ಕರ್ಷವನ್ನು ಹೊಂದಲಾರದು. ಮುಂದಿನ ಜನಾಂಗದಲ್ಲಿಯಾದರೂ ಈ ಅವನತಿಯು ಅಳಿದು ಹೋಗಬೇಕಾದರೆ ಶಾಲೆಗೆ ಹೋಗುವ ವಯಸ್ಸುಳ್ಳ ಪ್ರತಿಯೊಬ್ಬನೂ ವಿದ್ಯೆ ಕಲಿಯುವಂತೆ ನಾವು ಯತ್ನಮಾಡಲಿಕ್ಕೆಬೇಕು. ೧೦೦ ರಲ್ಲಿ ೧೫ ಜನರು ಶಾಲೆಗೆ ಹೋಗಲಿಕ್ಕೆ ಯೋಗ್ಯರಾದ ವಯಸ್ಸಿನವರಿರುತ್ತಾರೆ. ಆದರೆ ನಮ್ಮವರಲ್ಲಿ ಈಗ ೧೦೦ಕ್ಕೆ ಇಬ್ಬರು ಮಾತ್ರ ವಿದ್ಯಾಭ್ಯಾಸದಲ್ಲಿ ತೊಡಗಿರುವರೆಂದು ವಿದ್ಯಾಖಾತೆಯ ವಾರ್ಷಿಕ ರಿಪೋರ್ಟಿನಿಂದ ಗೊತ್ತಾಗುತ್ತದೆ. ಈಗಿನ ೭–೮ ಪಟ್ಟಿನಷ್ಟು ಶಾಲೆಗೆ ಹೋಗುವ ಹುಡುಗರ ಸಂಖ್ಯೆಯು ಬೆಳೆಯಬೇಕಾಯಿತು. ಎಲ್ಲರೂ ಘನಪಂಡಿತರಾಗಲು ಸಾಧ್ಯವಲ್ಲದಿದ್ದರೂ ಪ್ರಾಥಮಿಕ ಶಿಕ್ಷಣವಾದರೂ ಪ್ರತಿಯೊಬ್ಬನಿಗೆ ಸಿಗುವಂತೆ ಮಾಡುವದು ಅತ್ಯವಶ್ಯವದೆ. ಈ ವಿಷಯಕ್ಕೆ ಎಷ್ಟು ಲಕ್ಷ್ಯಕೊಟ್ಟರೂ ಸ್ವಲ್ಪವೇ. ಈ ವಿಷಯವನ್ನು ದುರ್ಲಕ್ಷ್ಯಮಾಡಿ ಉಳಿದ ಸುಧಾರಣೆಗಳನ್ನು ಮಾಡಲು ಯತ್ನಮಾಡುವದು ಗುದ್ದಿನಲ್ಲಿ ಹೆಗ್ಗಣವನ್ನಿಟ್ಟು ಮೇಲೆ ಗಿಲಾಯಿ ಮಾಡಿದಂತೆಯೂ ತಳವು ಘಟ್ಟಿ ಇಲ್ಲದೆ ಸುಂದರವಾದ ಮಂದಿರವನ್ನು ಕಟ್ಟಲೆಳಿಸಿದಂತೆಯೂ ನಿಷ್ಫಲವೂ ಅಶಾಶ್ವತವೂ ಆಗುವದು. ನಮ್ಮ ಮೈಸೂರ ಸರ್ಕಾರದವರು ತಮ್ಮಲ್ಲಿ ಪ್ರಾಥಮಿಕಶಿಕ್ಷಣವು ಉಚಿತವಾಗಿಯೂ ಬಲಾತ್ಕಾರಕವಾಗಿಯೂ ಸಿಗುವಂತೆ ಮಾಡುವ ಏರ್ಪಾಡನ್ನು ನಡಿಸಲುಪಕ್ರಮಿಸಿರುವದರಿಂದ ಶ್ರೀಮನ್ ಮಹಾರಾಜರವರನ್ನು ಕೃತಜ್ಞತಾ ಭಾವದಿಂದ ಅಭಿನಂದಿಸುತ್ತೇವೆ. ನಮ್ಮ ಬ್ರಿಟಿಷ್ ಸರಕಾರದವರೂ ಪ್ರಾಥಮಿಕ ಶಿಕ್ಷಣದ ಕಡೆಗೆ ಹೆಚ್ಚು ಹಣವನ್ನು ವೆಚ್ಚ ಮಾಡಹತ್ತಿರುವರು. ಮುಂಬಯಿ ಇಲಾಖೆಯಲ್ಲಿ ಪ್ರತಿವರ್ಷ ೫೦೦ ಹೊಸ ಶಾಲೆಗಳಾಗುವಂತೆ ಏರ್ಪಾಡು ಮಾಡಿದ್ದಾರೆ. ಇದರಿಂದ ನಾವು ನಮ್ಮ ದಯಾಳು ಸರ್ಕಾರಕ್ಕೆ ಅತ್ಯಂತ ಆಭಾರಿಯಾಗಿದ್ದೇವೆ. ನಾಮದಾರ ಪಟೇಲರೆಂಬವರು ಮುಂಬಯಿ ಇಲಾಖೆಯ ನಿಯಮನಿರ್ಮಾಣ ಸಭೆಯಲ್ಲಿ ಒಂದು ಬಿಲ್ಲನ್ನು ತಂದು ಮ್ಯುನಸಿಪಾಲಿಟಿಯವರು ತಮ್ಮಲ್ಲಿ ಪ್ರಾಥಮಿಕಶಿಕ್ಷಣವನ್ನು ಉಚಿತವಾಗಿಯೂ ಬಲಾತ್ಕಾರವಾಗಿಯೂ ಮಾಡಲಪೇಕ್ಷಿಸಿದಲ್ಲಿ ಹಾಗೆ ಮಾಡಲಿಕ್ಕೆ ಮ್ಯುನಿಸಿಪಾಲಿಟಿಗೆ ಅಧಿಕಾರವನ್ನು ಕೊಡಬೇಕೆಂಬ ಕಾಯಿದೆಯನ್ನು ಪಾಸಮಾಡಿಸಿರುತ್ತಾರೆ. ಇದರ ಸಲುವಾಗಿ ಜನರ ಮೇಲೆ ಎಜ್ಯುಕೇಷನ್ ಸೆಸ್ ಎಂಬ ಕರವನ್ನು ಕಟ್ಟಲಿಕ್ಕೆ ಅಧಿಕಾರ ಕೊಟ್ಟಿರುತ್ತಾರೆ. ಹೆಚ್ಚಿನ ವೆಚ್ಚದ ಕೆಲವು ಭಾಗವನ್ನು ಸರ್ಕಾರದವರು ಕೊಡಲೊಪ್ಪಿದ್ದಾರೆ. ಇದಕ್ಕಾಗಿ ನಾವು ಮುಂಬೈ ಸರ್ಕಾರದವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಸಾರ್ವತ್ರಿಕವಾಗಿ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೂ ಬಲಾತ್ಕಾರಿಕವಾಗಿಯೂ ಮಾಡುವದು ಅತಿಶಯ ಅವಶ್ಯವಿರುತ್ತದೆ. ಇನ್ನು ಇದರ ಸಲುವಾಗಿ ನಾವು ಸಂಪೂರ್ಣ ಪ್ರಯತ್ನ ಮಾಡಲಿಕ್ಕೆಬೇಕು. ನಮಗಿರತಕ್ಕ ಕುಂದುಕೊರತೆಗಳನ್ನು ಸರ್ಕಾರದ ಕಣ್ಣೆದುರಿಗೆ ತಂದು ಬೇಕಾದ ಅನುಕೂಲತೆಗಳನ್ನು ಬೇಡಿಕೊಂಡರೆ ಅವು ನಿಶ್ಚಯವಾಗಿ ದೊರೆಯುವವೆಂದು ನನ್ನ ಪೂರ್ಣ ನಂಬಿಗೆಯುಂಟು. ನಾವು ಪ್ರಯತ್ನ ಮಾಡದೆ ಸಾಧ್ಯವಾಗುವದು ಶಕ್ಯವಲ್ಲ. ಕಾರಣ ಈ ಸಂಬಂಧವಾಗಿ ಜನರು ಬಹಳ ಪ್ರಯತ್ನ ಮಾಡಲಿಕ್ಕೇಬೇಕು. ಶಾಲೆಗಳಿಲ್ಲದ ಊರುಗಳಲ್ಲಿ ಶಾಲೆಗಳನ್ನು ಹಾಕಿಸಬೇಕು. ಬರೇ ಸರ್ಕಾರದಿಂದ ಅನುಕೂಲತೆಗಳನ್ನು ಒದಗಿಸಿಕೊಳ್ಳಲಿಕ್ಕೆ ಪ್ರಯತ್ನಮಾಡಿದ ಮಾತ್ರದಿಂದ ತೀರಲಿಲ್ಲ. ಜನರ ಸಂಬಂಧದಿಂದಾದರೂ ಮಾಡತಕ್ಕ ಪ್ರಯತ್ನವು ವಿಶೇಷ ಮಹತ್ವದ್ದಿರುತ್ತದೆ. ತಮ್ಮ ಊರಲ್ಲಿ ಶಾಲೆಗಳಿದ್ದು ಸ್ವಲ್ಪ ವೆಚ್ಚದಿಂದ ಅಥವಾ ಏನೂ ವೆಚ್ಚವಿಲ್ಲದೆ (ಮಾಫಿಯಿಂದ) ಸಹ ಮುಕ್ತದ್ವಾರವಾಗಿ ಸರ್ವಜಾತಿಯವರಿಗೆ ಸರಿಯಾಗಿ ಶಿಕ್ಷಣ ಸಿಗುವ ಅನುಕೂಲತೆಯಿದ್ದಾಗ್ಯೂ ನಮ್ಮವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದೆ ಅಜ್ಞಾನದಲ್ಲಿ ಮುಳುಗಿಸಿದ್ದಾರೆ. ಇದಕ್ಕೆ ವಿದ್ಯೆಯ ಮಹತ್ವವನ್ನರಿಯದಿರುವ ಅವರ ಅಜ್ಞಾನವೇ ಮುಖ್ಯ ಕಾರಣವು. ಅವರಿಗೆ ವಿದ್ಯೆಯ ಮಹತ್ವವನ್ನು ಲಕ್ಷ್ಯಕ್ಕೆ ತಂದುಕೊಟ್ಟು ಸತತ ಉಪದೇಶದಿಂದ ಅವರ ತಪ್ಪುತಿಳುವಳಿಕೆಯನ್ನು ದೂ

ರಮಾಡಿ ಅವರ ಮಕ್ಕಳನ್ನು ವಿದ್ಯಾಭ್ಯಾಸದಲ್ಲಿ ತೊಡಗಿಸುವ ಯತ್ನ ಮಾಡಬೇಕು. ಈಗಿನ ಸುಧಾರಣೆಯ ಶತಕದಲ್ಲಿ ಎಲ್ಲ ರಾಷ್ಟ್ರಗಳೂ ಸಮಾಜಗಳೂ ವಿದ್ಯಾಪ್ರಗತಿಯಲ್ಲಿ ಭರದಿಂದ ಮುಂದೆ ಸಾಗಹತ್ತಿರುವಾಗ ನಾವು ಆಲಸ್ಯವನ್ನೂ ದುರ್ಲಕ್ಷ್ಯವನ್ನೂ ಮಾಡಿ ಹಿಂದುಳಿದರೆ ನಮ್ಮ ಹೀನಾವಸ್ಥೆಗೆ ಪಾರಾವಾರವಿಲ್ಲದಂತಾಗುವದು. ನಮ್ಮಲ್ಲಿ ಎಷ್ಟೋಜನರು ಇಂಗ್ಲೀಷ ಶಾಲೆಗಳನ್ನು ಹಾಕಿಸಲಿಕ್ಕೆ, ಸಂಸ್ಕೃತ ಪಾಠಶಾಲೆಗಳನ್ನಿಡಿಸಲಿಕ್ಕೆ ಮೇಲ್ತರದ ಶಿಕ್ಷಣದ ಸಲುವಾಗಿ ಫಂಡು ಕೂಡಿಸಲಿಕ್ಕೆ ಪ್ರಯತ್ನಮಾಡುತ್ತಲಿದ್ದಾರೆ. ಇದು ಸ್ತುತ್ಯವಾದದ್ದು ಸರಿ; ಆದರೆ ಕೆಳಗಿನ ಮನೆಯನ್ನು ಇದ್ದಷ್ಟೇ ಇಟ್ಟು ಮೇಲ ಅಂತಸ್ತನ್ನು ಹೆಚ್ಚು ಹೆಚ್ಚು ವಿಸ್ತೃತಮಾಡುತ್ತ ಹೋದರೆ ಅದು ಸ್ಥಿರವಾದೀತೆ ಹ್ಯಾಗೆ? ವಿಚಾರ ಮಾಡಿರಿ. ಪ್ರಾಥಮಿಕ ಶಿಕ್ಷಣವು ಕೆಳಗಿನ ಮಜಲಿನಂತೆಯೂ ದ್ವೈತೀಯಿಕ (ಸೆಕೆಂಡರಿ) ಉಚ್ಚ, (ಹಾಯರ) ಶಿಕ್ಷಣಗಳು ಎರಡನೇ ಮೂರನೇ ಅಂತಸ್ತುಗಳಂತೆಯೂ ಇರುತ್ತವೆ. ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ವಿಸ್ತೃತವಾಗಿಯೂ ಭದ್ರವಾಗಿಯೂ ಮಾಡಿದಂತೆ ಉಳಿದ ಶಿಕ್ಷಣವನ್ನು ಬೆಳೆಸಲಿಕ್ಕೆ ಮಾರ್ಗವಾಗುವದು. ಆದ್ದರಿಂದ ಪ್ರಾಥಮಿಕ ಶಿಕ್ಷಣವು ಮುಖ್ಯವಾಗಿ ಸರ್ವಶಿಕ್ಷಣಗಳಿಗೂ ಮೂಲಾಧಾರವಾಗಿದ್ದು ಇದರ ಅಭಿವೃದ್ಧಿಯ ವಿಷಯಕ್ಕೆ ಹೆಚ್ಚು ಗಮನ ಕೊಡುವದು ಅವಶ್ಯವೆಂಬುದು ನಿರ್ವಿವಾದವು. ಆದ್ದರಿಂದ ಸರ್ವರೂ ಈ ವಿಷಯದ ಕಡೆಗೆ ಇನ್ನೂ ವಿಶೇಷ ಮನಸ್ಸುಕೊಟ್ಟು ಯತ್ನಮಾಡುವರೆಂದು ಆಶಿಸುತ್ತೇನೆ.

ದ್ವೈತೀಯಿಕ ವ ಉಚ್ಚ ಶಿಕ್ಷಣವು.

ಪ್ರಾಥಮಿಕ ಶಿಕ್ಷಣದ ಮುಂದಿನ ಮೆಟ್ಟಿಂದರೆ ದ್ವೈತೀಯಿಕ ಶಿಕ್ಷಣವು. ಇದು ನಮ್ಮ ರಾಜಭಾಷೆಯಾದ ಇಂಗ್ಲೀಷ ದ್ವಾರದಿಂದ ನಡೆಯುತ್ತದೆ. ಈ ಶಿಕ್ಷಣಕ್ಕಾಗಿ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿಯೂ ಬೇರೆ ದೊಡ್ಡ ಶಹರಗಳಲ್ಲಿಯೂ ಹೈಸ್ಕೂಲುಗಳೂ ಆಂಗ್ಲೋವರ್ನ್ಯಾಕ್ಯುಲರ್ ಸ್ಕೂಲುಗಳೂ ಕಾಲೇಜುಗಳೂ ಇರುವವು. ಇದಕ್ಕೆ ವೆಚ್ಚವು ಹೆಚ್ಚು ಬೇಕಾಗುತ್ತದೆ. ಎಲ್ಲಾ ಊರುಗಳಲ್ಲಿಯೂ ಹೈಸ್ಕೂಲು ಕಾಲೇಜುಗಳಿರುವದು ಸಾಧ್ಯವಿಲ್ಲದ್ದರಿಂದ ದೊಡ್ಡ ಪಟ್ಟಣಗಳಲ್ಲಿ ಹೋಗಿ ಇರಬೇಕಾಗುತ್ತದೆ. ಬಡವರಿಗೂ ಮಧ್ಯಮ ಸ್ಥಿತಿಯ ಜನರಿಗೂ ಸಾಧ್ಯವಿಲ್ಲದ್ದರಿಂದ ಒಂದು ಧನರಾಶಿಯನ್ನು ಕೂಡಿಸಿ ಸಹಾಯ ಮಾಡದ ಹೊರತು ನಮ್ಮ ಸಮಾಜವು ಮುಂದಕ್ಕೆ ಬರಲಾರದೆಂದು ಬಗೆದು ನಮ್ಮ ಸಮಾಜದಲ್ಲಿ ಅನೇಕ ಪುಣ್ಯಾತ್ಮರಾದ ಮಹಾತ್ಮರು ಅಹರ್ನಿಶಿ ಪ್ರಯತ್ನಮಾಡಿ ತನು ಮನ ಧನಗಳಿಂದ ಸಹಾಯಮಾಡಿ ಧನರಾಶಿಯನ್ನು ಕೂಡಿಸಿಯೂ ಕೂಡಿಸುತ್ತಲೂ ಇದ್ದು ವಿದ್ಯಾಭಿವೃದ್ಧಿಗೆ ಸಹಾಯ ಮಾಡುತ್ತಿರುವರು. ಇದರಲ್ಲಿ ಧಾರವಾಡ ಲಿಂಗಾಯತ ಎಜ್ಯುಕೇಶನ್ ಫಂಡು ೧೮೮೩ರಲ್ಲಿ ಸ್ಥಾಪಿತವಾಗಿರುವದು. ಇದರಿಂದ ಇದುವರೆಗೆ ಸುಮಾರು ೯೦ ಜನ ಪದವೀಧರರು ತಯಾರಾಗಿರುವರು. ಮೈಸೂರ ಲಿಂಗಾಯತ ಎಜ್ಯುಕೇಷನ್ ಫಂಡು ೧೯೦೫ ರಲ್ಲಿ ಸ್ಥಾಪಿತವಾಗಿ ಅಲ್ಲಿಯ ಅಭಿಮಾನಿಗಳಾದ ಉದಾರ ಗೃಹಸ್ಥರ ಸಹಾಯದಿಂದ ಅಭಿವೃದ್ಧಿಯನ್ನು ಹೊಂದುತ್ತಾ ಇರುವದು. ಅದರಿಂದಲೂ ಎಷ್ಟೋಜನ ಪದವೀಧರರು ತಯಾರಾಗಿರುವರು. ಆ ಫಂಡಿನ ಸಂಬಂಧಿ ಇದುವರೆಗೆ ನಡೆದ ಕೆಲಸದ ವರದಿಯನ್ನು ಓದಿ ಹೇಳಿ ಮುಂದೆ ಮಾಡಬೇಕಾಗಿರುವ ಕೆಲಸಗಳನ್ನು ನಿರ್ಧರಿಸುವರೆಂದು ಕೋರುತ್ತೇನೆ. ಮೈಸೂರ ವೀರಶೈವ ಬಾಂಧವರು ತನು ಮನ ಧನಗಳಿಂದ ಸಹಾಯಮಾಡಿ ಫಂಡಿನ ಕಾರ್ಯವು ತೀವ್ರ ಯಶಸ್ವಿಯಾಗುವಂತೆ ಮಾಡುವರೆಂದು ಆಶಿಸುತ್ತೇನೆ. ಇದರಂತೆ ಸೊಲ್ಲಾಪುರ ಬಳ್ಳಾರಿಗಳಲ್ಲಿ ಸ್ಥಾಪಿತವಾಗಿರುವ ವಿದ್ಯಾಭಿವೃದ್ಧಿ ಫಂಡಿನ ಅಭಿವೃದ್ಧಿಯನ್ನು ಮಾಡಿ, ಮಹಾರಾಷ್ಟ್ರ ಪ್ರಾಂತದಲ್ಲೂ ಮದ್ರಾಸ ಇಲಾಖೆಯಲ್ಲಿಯೂ ಶಿಕ್ಷಣಾಭಿವೃದ್ಧಿಗೆ ಸಹಾಯಮಾಡುವರೆಂದು ಹಾರೈಸುತ್ತೇನೆ. ನಿಜಾಮ ಇಲಾಖೆಯಲ್ಲಿ ವೀರಶೈವರ ಸಂಖ್ಯೆಯು ೭ ಲಕ್ಷದ ಮೇಲೆ ಇದ್ದು ಅಲ್ಲಿ ವಿದ್ಯಾಭಿವೃದ್ಧಿಯ ಸಲುವಾಗಿ ವಿಶೇಷ ಯತ್ನಗಳೇನೂ ನಡೆದಂತೆ ಕಂಡು ಬರುವದಿಲ್ಲ. ಅಲ್ಲಿಯ ಶಿಕ್ಷಣಾಭಿವೃದ್ಧಿಯ ಸಲುವಾಗಿ ಎಲ್ಲಕ್ಕೂ ಹೆಚ್ಚು ಲಕ್ಷ್ಯಕೊಡುವದು ಅತಿಶಯ ಅವಶ್ಯವಿರುತ್ತದೆ.

೧ ನೆ ೨ ನೆ ಮಹಾಸಭೆಯ ಅಧ್ಯಕ್ಷರಾಗಿದ್ದ ಕೈ. ವಾ. ಲಿಂಗಪ್ಪಾ ಚಾಯಪ್ಪಾ ಸರದೇಸಾಯಿ ಶಿರಸಂಗಿಕರ ಈ ಪುಣ್ಯಾತ್ಮರು ತಮ್ಮ ಸರ್ವಸ್ವವನ್ನೂ (೫೦ ಸಾವಿರಕ್ಕಿಂತ ಹೆಚ್ಚು ವಾರ್ಷಿಕ ಉತ್ಪನ್ನವುಳ್ಳ ತಮ್ಮ ಇಡೀ ಸಂಸ್ಥಾನವನ್ನೇ) ವೀರಶೈವರ ವಿದ್ಯಾಭಿವೃದ್ಧಿಗಾಗಿ ಸಮರ್ಪಿಸಿ ಮರಣಶಾಸನವನ್ನು ಬರೆದಿಟ್ಟ ಸಂಗತಿಯು ಸರ್ವರಿಗೂ ವಿದಿತವಿದೆ. ಇದರ ವಿಷಯವಾಗಿ ಈಗ ೧೩ ವರ್ಷ ಕೋರ್ಟಿನಲ್ಲಿ ವಿವಾದ ನಡೆದು ಅಂತ್ಯದಲ್ಲಿ ಆ ಮಹಾತ್ಮರ ಸತ್ಯಸಂಕಲ್ಪದಂತೆ ಆ ಆಸ್ತಿಯು ಟ್ರಸ್ಟಿಗಳ ಸ್ವಾಧೀನಕ್ಕೆ ಬಂದದ್ದನ್ನು ತಿಳುಹಿಸಲಿಕ್ಕೆ ಪರಮಾವಧಿ ಸಂತೋಷವಾಗುತ್ತದೆ. ಇವರ ಈ ಅಲೌಕಿಕ ಔದಾರ್ಯವನ್ನು ಎಷ್ಟು ಕೊಂಡಾಡಿದರೂ ತೀರದು. ಇದರಿಂದ ಇನ್ನು ನಮ್ಮ ಸಮಾಜದಲ್ಲಿ ವಿದ್ಯಾಭಿವೃದ್ಧಿಯು ಅತಿ ತೀವ್ರವಾಗಿ ಆಗುವದೆಂದು ಹೇಳಲಿಕ್ಕೆ ಏನೂ ಸಂದೇಹವಿಲ್ಲ. ನಮ್ಮ ಸಮಾಜವನ್ನು ಉದ್ಧರಿಸಿ ನಮಗೆ ಮಹದುಪಕಾರ ಮಾಡಿದ ಈ ಮಹಾಪುರುಷರ ವಿಷಯದಲ್ಲಿ ನಮ್ಮ ಹೃದಯದಲ್ಲಿ ವಾಸವಾಗಿರುವ ಪೂಜ್ಯಬುದ್ಧಿಯನ್ನೂ ಕೃತಜ್ಞತೆಯನ್ನೂ ವ್ಯಕ್ತಪಡಿಸಲಿಕ್ಕೆ ಇವರ ಒಂದು ಚಿರಸ್ಮರಣೀಯವಾದ ಸ್ಮಾರಕವನ್ನು ಮಾಡುವದು ಅವಶ್ಯಕವಿದೆ. ಈ ಸ್ಮಾರಕಕ್ಕಾಗಿ ಧಾರವಾಡ ಲಿಂಗಾಯತ ಎಜ್ಯುಕೇಷನ್ನಿನ ವತಿಯಿಂದ ನಾನು ಎರಡಾವರ್ತಿ ವಿನಂತಿಪತ್ರವನ್ನು ಪ್ರಸಿದ್ಧಿಸಿದರೂ ವಿಶೇಷ ಜನರು ಇದಕ್ಕೆ ಲಕ್ಷ್ಯಕೊಡಲಿಲ್ಲ. ಇದು ಸಮಾಜಕ್ಕೆ ಭೂಷಣವಲ್ಲ. ಇಂಥ ಮಹಾತ್ಮರ ಸ್ಮಾರಕರೂಪವಾದ ಮಹತ್ಕಾರ್ಯಕ್ಕೆ ಅಲಕ್ಷ್ಯಮಾಡಿದರೆ ನಮ್ಮಂಥ ಕೃತಘ್ನರು ಯಾರೂ ಇರಲಿಕ್ಕಿಲ್ಲ. ಆದ್ದರಿಂದ ಯಾವತ್ತರೂ ಈ ಸತ್ಕಾರ್ಯಕ್ಕೆ ತಪ್ಪದೆ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈಗ ೧೪೦೦ ರೂಪಾಯಿಗಳು ಕೂಡಿದ್ದು ಅವರ ಶಿಲಾಪ್ರತಿಮೆಯನ್ನು ಮಾಡಿಸಲಿಕ್ಕೆ ೧೫-೨೦ ಸಾವಿರ ರೂಪಾಯಿಗಳಾದರೂ ಕೂಡಲಿಕ್ಕೆ ಬೇಕು. ಇಂಥ ದೊಡ್ಡ ಸಮಾಜಕ್ಕೆ ಇದು ಏನೂ ದೊಡ್ಡ ಮಾತಲ್ಲ. ಎಲ್ಲರೂ ಇದಕ್ಕೆ ಲಕ್ಷ್ಯಕೊಟ್ಟೀರೆಂದು ಆಶಿಸುತ್ತೇನೆ.

(ಸಶೇಷ)

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 24

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

45 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಅರುಳಪ್ಪನಬೀದಿ, ಮದರಾಸು.

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗೂ ಕೊತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸು ವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).



ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
45 3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಅಣೆ.

ಬೆಸ್ಟ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ



ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ಪಾಣಿ ಕಂಪನಿ,
45 ಸಾಹುಕಾರಪೇಟೆ, ಮದರಾಸು.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ವಾಪಸ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
15 ಬಿ. ಪೋಸ್ಟ್. ಶಿರ್ಸಿ, ಉತ್ತರಕಾನಡಾ.

೧೯೨೦ ನೆಯ ಇಸವಿ ಜನವರಿ ತಾ|| ೪ ರಿಂದ ೧೯೨೦ ನೆಯ ಜನವರಿ ತಾ|| ೧೦ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಪುಷ್ಯಶುದ್ಧ ತ್ರಯೋದಶಿಯಿಂದ ಪುಷ್ಯ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
4	[1] ಭಾನು	ತ್ರಯೋ	1·46	ಉಷರಿ	54·7	20
5	[2] ಸೋಮ	ಪೌರ್ಣ	50·12	ಆರ್ದ್ರಾ	43·18	21
6	ಮಂಗಳ	ಪಾಡ್ಯ	45·9	ಪುನ	39·48	22
7	[3] ಬುಧ	ಬಿದಿಗೆ	40·42	ಪುಷ್ಯ	37·0	23
8	[4] ಗುರು	ತದಿಗೆ	36·56	ಆಶ್ಲೇ	34·56	24
9	ಶುಕ್ರ	ಚೌತಿ	34·34	ಮಖಾ	33·57	25
10	[5] ಶನಿ	ಪಂಚ	33·9	ಪೂಫ	34·4	26

(1) ಅಂಧಕಾಸುರ ಸಂಹಾರ. (2) ಅರಿದ್ರೋತ್ಸವ. (3) ಮೂಗೂರು ರಥ. (4) ಸಂಕಟಹರಚತುರ್ಥಿ, ಮೂಗೂರು ಚಿಗುರು ಕಡಿಯುವುದು. (5) ಕೊಡಾರವಿಲ್ಲಂ.

ಮೈಸೂರ: ವೈ. ವಿರೂಪಾಕ್ಷಯ್ಯನವರಿಂದ ಕ್ಯಾಷ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಯಚ್ಛ ನಕ್ಷತ್ರ ಮನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಪ್ರಾಜ್ಞಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ ಸ್ಟಾರ ಸನ್ ೧೯೨೦ ನೆಯ ಇಸವಿ ಜನವರಿ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೨

MYSORE GOVERNMENT ADVERTISEMENTS.

23

Government Botanic Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintendent,
Government Gardens.

MYSORE ECONOMIC JOURNAL.

A Monthly Periodical devoted to the Discussion of all Economic Topics of Interest.

Special Features.

Original articles on Economic subjects by writers of note; summary of articles of interest from Indian and Foreign Economic periodicals; seletions from important speeches and papers on Economic subjects; notes of the month on current Economic matters; notes on various Economic activities in and outside the State, and topical portraits and illustrations.

Annual Subscription.

Mysore State	Rs. 3
Outside Mysore State ...	Rs. 4
Great Britain	Sh. 8
America	$ 2
Single copy	As. 8

The Journal is an excellent medium for advertising all matters of Economic utility. The following is the schedule of rates:—

For full page, Rs. 10 per insertion.
" half " " 6 "
" quarter " " 3½ "

One anna per line for special short advertisements not exceeding four lines each.

Contract rates on application.

For sample copy send eight annas stamp.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕತೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ, ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 11

ನಾವು ಎ. ಅಲ್ ಬ್ಯುಕ್ಯಾಯರ್ ಕ್ಯ. ಅಂಡ್ ಸನ್ಸ್ ಎಂಬ ಹೆಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹೆಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

9 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಅದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
3 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ಮದನೋದ್ಭವಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 4

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಶಂಕಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಜನವರಿ ತಾ|| ೧೧ನೆಯ ಭಾನುವಾರ.

೩೪ನೆ ರಾಷ್ಟ್ರೀಯ ಮಹಾಸಭೆ.

ಪಂಜಾಬಿಗೆ ಸೇರಿದ ಅಮೃತಸರ ಪಟ್ಟಣದಲ್ಲಿ ಈ ಮಹಾಸಭೆಯು ಅತಿ ವೈಭವದಿಂದ ಜರುಗಿತು. ಇದುವರೆಗೂ ಯಾವುದೊಂದು ಸಭೆಗೂ ಕೂಡದಿದ್ದಷ್ಟು ಜನರು ಎಂದರೆ ಪ್ರತಿನಿಧಿಗಳು ೮೦೦೦, ಪ್ರೇಕ್ಷಕರು ೭೦೦೦ ಮಂದಿಗಳು ಸೇರಿದ್ದರು. ದಕ್ಷಿಣ ದೇಶೀಯರಿಗೆ ಆ ಪಟ್ಟಣವು ೨೦೦೦ ಮೈಲಿಗಳಿಗಿಂತಲೂ ದೂರದಲ್ಲಿರುವುದು. ಆದರೂ ಈ ಕಡೆಯಿಂದೆಲ್ಲಾ ಸಾವಿರಾರು ಮಂದಿಗಳು ಹೋಗಿದ್ದರು. ಕಳೆದ ವರ್ಷ ಪಂಜಾಬಿನಲ್ಲಿ ಪ್ರಭುತ್ವೋದ್ಯೋಗಿಗಳು ಪ್ರಜೆಗಳ ಮೇಲೆ ಸಿಡಿಮದ್ದುಗಳನ್ನು ಹಾಕಿಸಿ ಬಹುಜನರನ್ನು ಕೊಲ್ಲಿಸಿದ ಕಾರಣದಿಂದ, ಪ್ರಜೆಗಳಲ್ಲಿ ರೇಗಾಟವು ಹೆಚ್ಚಿದುದೇ ಈ ಸಲದ ಸಭೆಯು ಅದೇ ಪಂಜಾಬು ದೇಶದಲ್ಲಿ ಇಷ್ಟು ಮಹತ್ತರವಾಗಿ ನಡೆಯುವುದಕ್ಕೆ ದಾರಿಮಾಡಿಕೊಟ್ಟಿತೆಂದು ಹೇಳಿದರೆ ತಪ್ಪಾಗದು. ಅಧಿಕಾರವೂ ಪ್ರಾಬಲ್ಯವೂ ಇದೆಯೆಂದು ದುರ್ಬಲರುಗಳನ್ನು ಮೆಟ್ಟಿ ತುಳಿಯುವುದಕ್ಕೆ ಉಪಕ್ರಮಿಸಿದರೆ, ಭೂಮಿಗೆ ಅಪ್ಪಳಿಸಲ್ಪಟ್ಟ ಚಂಡು ಮರಳಿ ರಭಸದಿಂದ ಪುಟಹಾರುವಂತೆ, ಭೂಮಿಯವರೆಗೂ ತಗ್ಗಿದ ದುರ್ಬಲಜನರು ಕಡೆಗೆ ನಿರ್ಭರಪುರುಷರಾಗಿ ಹೇಗೆ ಪ್ರತಿಭಟಿಸಿ ನಿಲ್ಲುವರೆಂಬುದಕ್ಕೆ ಈ ಸಲದ ರಾಷ್ಟ್ರೀಯ ಮಹಾಸಭಾ ಚಾರಿತ್ರವು ದೊಡ್ಡ ನಿದರ್ಶನವಾಗಿರುವುದು.

ಮಹಾಸಭೆಯು ನಡೆಯಬೇಕಾಗಿದ್ದ ಕಾಲದಲ್ಲಿ ಅಮೃತಸರ ಪಟ್ಟಣದೊಳಗೆ ವಿಪರೀತವಾಗಿ ಮಳೆಸುರಿದು ಸಭಾಮಂಟಪವೆಲ್ಲಾ ನೀರಿನಿಂದ ತುಂಬಿದ್ದ ಕಾರಣ ೨೬ನೆ ತಾರೀಖಿನ ದಿನ ನಡೆಯಬೇಕಾಗಿದ್ದ ಸಭೆಯನ್ನು ೨೭ನೆ ತಾರೀಖಿಗೆ ಆರಂಭಿಸಬೇಕಾಯಿತು. ಸ್ವಾಗತಸಂಘದವರು ಸಭಾಧ್ಯಕ್ಷರನ್ನೂ ತಿಲಕ್, ಗಂಧಿ ಮೊದಲಾದ ಪ್ರಮುಖರನ್ನೂ ಬಹು ವೈಭವಾಟ್ಟಹಾಸದಿಂದ ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ಬಿಡಾರಗಳಲ್ಲಿಳಿಸಿದರು.

ಮಹಾಸಭಾಮಂಟಪವು ಅತಿ ವಿಶಾಲವಾಗಿ ವಿದ್ಯುದ್ದೀಪಾವಳಿಗಳಿಂದ ವಿರಾಜಮಾನವಾಗಿ, ಗೋಖಲೆ, ತಿಲಕ್, ಗಂಧಿ, ಮಾಲವ್ಯ ಮೊದಲಾದ ದೇಶಭಕ್ತ ಪ್ರಮುಖರ ಹೆಸರಿನ ೮ ಮಹಾದ್ವಾರಗಳುಳ್ಳದಾಗಿದ್ದಿತು. ಸಭೆಗೆ ೩ ಸಾವಿರದವರೆಗೆ ಬೇರೆ ಬೇರೆ ಕಡೆಯ ಬೇಸಾಯಗಾರರ ಜನರು ಬಂದಿದ್ದರು. ಇವರೆಲ್ಲರಿಗೂ ಪ್ರವೇಶಧನದ ನಿರ್ಬಂಧವಿಲ್ಲದೆ ಸಭೆಯಲ್ಲಿ ಆಸನಗಳು ಏರ್ಪಡಿಸಲ್ಪಟ್ಟಿದ್ದುವು. ಸಾರ್ವಭೌಮರ ಅಣತಿಯ ಪ್ರಕಾರ ನಿರ್ಬಂಧನಿವಾಸದಿಂದ ಆಗತಾನೇ ಬಿಡಲ್ಪಟ್ಟಿದ್ದ ಕಿಚುಲ್, ಸತ್ಯಪಾಲ್ ಮೊದಲಾದ ಪ್ರಮುಖರೂ ಸಹ ಸಭೆಯನ್ನಲಂಕರಿಸಿದ್ದರು. ಸಭಾಮಂಟಪದಲ್ಲಿ ಜನರಿಗೆ ಸ್ಥಳವಿಲ್ಲದೆ ಹತ್ತಾರು ಸಾವಿರ ಜನರು ಹೊರಗೆ ನಿಂತು ಗದ್ದಲಮಾಡುತ್ತಿದ್ದರು.

ತಾ|| ೨೭ನೆಯ ಮಧ್ಯಾಹ್ನ ೨|| ಗಂಟೆಗೆ ಸಭಾರಂಭವಾಯಿತು. ಸಭಾಜಗತಿಯ ಮೇಲೆ ಪಂಡಿತ ಮದನಮೋಹನ ಮಾಳವ್ಯ, ಗಾಂಧಿ. ತಿಲಕ್, ಜಿನ್ನಾ, ಸಪ್ರೂ, ವಿಪಿನ ಚಂದ್ರಪಾಲ್, ಸಯ್ಯದ್ ಹುಸೇನ್ ಇಮಾಂ, ವಿ. ಪಿ. ಮಾಧವರಾವ್, ಆನಿಬೆಸೆಂಟ್, ಹರಿಕಿಷನ್ ಲಾಲ್, ಕಿಚುಲ್, ಸತ್ಯಪಾಲ್, ಮಹಮ್ಮದಬಾದ್ ರಾಜಾಸಾಹೇಬ, ಸಿ. ಆರ್. ದಾಸ್, ಶ್ರೀನಿವಾಸಶಾಸ್ತ್ರಿ, ದೇವಧರ, ಎಸ್. ಆರ್. ಬಮ್ಮಂಜಿ, ಕಸ್ತೂರಿರಂಗಯ್ಯಂಗಾರ್, ಸಿ. ಪಿ. ರಾಮಸ್ವಾಮಯ್ಯರ್, ಸರ್ ದಿನ್ಷಾ ಪೆಟಿಟ್, ಬಿ. ಎನ್. ಶರ್ಮ ಮೊದಲಾದ ಪ್ರಮುಖರು ವಿರಾಜಮಾನರಾಗಿದ್ದರು. ಸರಲಾದೇವಿ ಚೌಧುರಾಣಿಯವರು ವಂದೇಮಾತರಂ ಗೀತೆಯನ್ನು ಹಾಡಿ ಮುಗಿಸಿದ ಬಳಿಕ ಸ್ವಾಗತಸಂಘಾಧ್ಯಕ್ಷರಾದ ಸ್ವಾಮಿ ಶ್ರದ್ಧಾನಂದಜಿಯವರು ತಮ್ಮ ಭಾಷಣವನ್ನು ಹಿಂದೀಭಾಷೆಯಲ್ಲಿ ಓದಿದರು. ಈ ಭಾಷಣದೊಳಗೆ ಮೊಟ್ಟಮೊದಲು ಪಂಜಾಬಿನ ಪರಿಸ್ಥಿತಿಯನ್ನು ವರ್ಣಿಸಿ, ಪಂಜಾಬಿನ ಪರಿಸ್ಥಿತಿಗಳೇ ಪ್ರಜೆಗಳ ರಾಜಕೀಯ ಜೀವಿತದಲ್ಲಿ ಇಂಥ ನವಚೇತನವನ್ನು ಹುಟ್ಟಿಸಿದುವೆಂದೂ, ಕೆಟ್ಟುದರಿಂದ ಯಾವಾಗಲೂ ಇಂಥ ಒಂದು ಸತ್ಫಲವು ಹುಟ್ಟುವುದು ಸಹಜವೆಂದೂ, ಜನರಲ್ ಡಯರ್‌ರವರ ಚರ್ಯೆಗಳು ಅಧಿಕಾರಿಗಳ ನಿರಂಕುಶ ಸಾಮರ್ಥ್ಯವನ್ನು ಜಗತ್ತಿಗೆ ಡಂಗುರಿಸಲು ಸಾಧಕವಾದುವೆಂದೂ, ಈ ಸಂದಿಗ್ಧಸ್ಥಿತಿಯು ಭರತಖಂಡದ ಸ್ವಪರಿಪಾಲನಾಭಿವೃದ್ಧಿಗೆ ಸಹಾಯಮಾಡುವುದೆಂದೂ ಹೇಳಿದುದಲ್ಲದೆ, ಸರ್ಕಾರಿ ಉದ್ಯೋಗಿಗಳ ನಿರಂಕುಶ ಚರ್ಯೆಗಳನ್ನು ಉಚಿತವಚನಗಳಿಂದ ಖಂಡಿಸಿ, ಆದರಂತೆಯೇ ಕೆಲ ಪ್ರಜೆಗಳು ಉಚ್ಛೃಂಖಲರಾಗಿ ವರ್ತಿಸಿದುದನ್ನು ಕೂಡ ಖಂಡಿಸಿದರು. ಅಧಿಕಾರಿಗಳು ಎಷ್ಟು ಭೀಕರ ಕಾರ್ಯಗಳನ್ನು ನಡೆಯಿಸಿದರೂ ಪ್ರಜೆಗಳು ಅವರ ಮೇಲೆ ಮನಸ್ಸಿನಲ್ಲಿ ಕ್ರೋಧಗೊಂಡು ತಿರಗಿ ಬೀಳಬಾರದೆಂದೂ, ಸತ್ಯಪ್ರಚಾರಣೆಯಲ್ಲೇ ಇರಬೇಕೆಂದೂ ತಮ್ಮ ಮಹರ್ಷಿತ್ವಕ್ಕೆ ಉಚಿತವಾದ ಸಾತ್ವಿಕೋಪದೇಶವನ್ನು ಮಾಡಿದರು. ಬಳಿಕ **ಪಂಜಾಬಿನ ಪ್ರಜೆಗಳಿಗೆ ದಿಗ್ದರ್ಶನಮಾಡಿಕೊಟ್ಟು ಧೈರ್ಯವನ್ನು ಹೇಳಿ ಸಹಾಯಿಕರಿಸಿದ ಪಂಡಿತಮಾಲವ್ಯ, ಮೋತೀಲಾಲ್ ನೆಹ್ರೂ, ಇವರುಗಳ ದೇಶಸೇವಾ ಮಹತ್ವವನ್ನೂ ಗಂಧಿಯವರ ಪವಿತ್ರೋದ್ಯಮವನ್ನೂ ಕೊಂಡಾಡಿ, ನೂತನ ರಾಜಕೀಯ ಸಂಸ್ಕರಣ ವಿಷಯವಾಗಿ ಮಾತನಾಡುವುದಕ್ಕುಪಕ್ರಮಿಸಿ-ಈಗ ಕೊಡಲ್ಪಟ್ಟಿರುವ ಸಂಸ್ಕರಣಗಳನ್ನು ನಾವುಗಳು ನೇರ್ಪಿನಿಂದ ಉಪಯೋಗಿಸಿಕೊಂಡು, ಇನ್ನೂ ದೊರೆಯಬೇಕಾದ ಅಧಿಕಾರಗಳಿಗಾಗಿ ವಿಧಿವಿರುದ್ಧವಲ್ಲದ ಆಂದೋಳನವನ್ನು ಮಾಡಬೇಕೆಂದೂ, ಸ್ಟೇ|| ಸೆ|| ಮಾಂಟೊಗ್‌ರವರಿಗೆ ದೇಶೀಯರು ಕೃತಜ್ಞರಾಗಿರಬೇಕೆಂದೂ ಹಿತೋಪದೇಶಮಾಡಿ,** ಈಗ ಹಿಂದೂ ಮಹಮ್ಮದೀಯರ ಮಧ್ಯದಲ್ಲಿ ಉತ್ತಮ:ವಾದ ಸಂಯೋಗವು ಸಿದ್ಧಿಸಿರುವುದೆಂದೂ, ಅದನ್ನು ಒಡೆದುಹೋಗದಂತೆ ಕಾಪಾಡಿಕೊಳ್ಳುವುದು ಭಾರತೀಯರೆಲ್ಲರಿಗೂ ಧರ್ಮವೆಂದೂ, ನಮ್ಮ ದೇಶದಲ್ಲಿರುವ ೬|| ಕೋಟಿ ಪ್ರಜಾಸಂಖ್ಯೆಯುಳ್ಳ ನಿಮ್ನಜಾತಿಜನರ ಅಸ್ಪೃಶ್ಯತ್ವವನ್ನು ಹೇಗಾದರೂ ತೊಲಗಿಸಿ, ಅವರನ್ನೆಲ್ಲಾ ಸೋದರರಂತೆ ಭಾವಿಸಿ ಉದ್ಧರಿಸುವುದು ಭಾರತೀಯರಿಗೆಲ್ಲಾ ಮುಖ್ಯ ಕರ್ತವ್ಯವೆಂದೂ ಅವರನ್ನು ಧಾರಾಳವಾಗಿ ನಮ್ಮ ಮನೆಗಳಿಗೆ ಹೊಗಿಸಿಕೊಳ್ಳಬೇಕೆಂದೂ, ಇದುವರೆಗೆ ರಾಷ್ಟ್ರೀಯ ಮಹಾಸಭೆಯು ಕೇವಲ ರಾಜಕೀಯಾಭಿವೃದ್ಧಿಗಾಗಿಯೇ ಕೆಲಸಮಾಡುತ್ತಿದ್ದಿತೆಂದೂ, ಇನ್ನುಮುಂದೆ ರಾಜಕೀಯವೇ ಮತವೆಂಬ ವಾಕ್ಯವನ್ನು ಗ್ರಹಿಸಿ ಸಭೆಯವರು ಕೆಲಸ ಮಾಡಬೇಕೆಂದೂ, ನಮ್ಮ ಜಾರ್ಜ್ ಸಾರ್ವಭೌಮರು ಈಗ ದಯಪಾಲಿಸಿರುವ ರಾಜಸಂದೇಶಕ್ಕಾಗಿ ಪ್ರಜೆಗಳೆಲ್ಲರೂ ಕೃತಜ್ಞರಾಗಿರುವರೆಂದೂ, ಇದುವರೆಗೆ ಪ್ರಜೆಗಳಲ್ಲಿ ದೃಢವಾಗಿದ್ದ ರಾಜಭಕ್ತಿಪಾಶವು ಈ ಸಂದೇಶದಿಂದ ಮತ್ತಷ್ಟು ದೃಢವಾಯಿತೆಂದೂ ಹೇಳಿ, ಸ್ವಾಗತಸಂಘದವರ ಏರ್ಪಾಟುಗಳಲ್ಲಿರಬಹುದಾದ ನ್ಯೂನತೆಯನ್ನು ಪ್ರತಿನಿಧಿಗಳೆಲ್ಲರೂ ಮನ್ನಿಸಬೇಕೆಂದು ಕೋರಿ, ದೈವಪ್ರಾರ್ಥನೆಯನ್ನು ಮಾಡಿ ಭಾಷಣವನ್ನು ಮುಗಿಸಿದರು.

ಬಳಿಕ ಸಭಾಧ್ಯಕ್ಷತೆಗೆ ಪಂಡಿತ ಮೋತೀಲಾಲ್‌ನೆಹ್ರೂರವರನ್ನು ಕೋರುವ ಸೂಚನೆಯನ್ನು ಮಿ|| ಹಸೇನ್ ಇಮಾಂರವರು ಮಾಡಿ, ಪಾಂಚಾಲದೇಶದಲ್ಲಿ ಕಳೆದ ೬ ತಿಂಗಳಿಂದಲೂ ಪ್ರಜೆಗಳ ಹಿತಾರ್ಥವಾಗಿ ಅಹರ್ನಿಶಿಯೂ ಪರಿಶ್ರಮಮಾಡಿ ಪ್ರಜೆಗಳಿಂದೆಲ್ಲಾ ಸಂಮಾನ್ಯ ಸಂಪ್ರಿಯರಾಗಿ, ಈ ಸಭಾಧಿಪತ್ಯಕ್ಕೆ ಎಲ್ಲರಿಗಿಂತಲೂ ವಿಶೇಷವಾಗಿ ಕೋರಲ್ಪಟ್ಟಿರುವ ನೆಹ್ರೂರವರನ್ನೇ ಆಸ್ಥಾನಾಲಂಕರಣಕ್ಕೆ ನಾನು ಕೋರುವೆನೆಂದು ಸೂಚಿಸಿದರು. ಮ|| ಗಳಾದ ಕಸ್ತೂರಿರಂಗಯ್ಯಂಗಾರ್, ತಿಲಕ್, ಬಿ. ಚಕ್ರವರ್ತಿ ಮೊದಲಾದವರುಗಳು ಅನುಮೋದಿಸಿ ಪುಷ್ಟೀಕರಿಸಿ ಭಾಷಣ ಮಾಡಿದಬಳಿಕ ಮಿ|| ನೆಹ್ರೂರವರು ಸಭಿಕರ ಮಹಾಕೋಲಾಹಲವಾಗುತ್ತಿರುವಾಗ ಅಧ್ಯಕ್ಷಪೀಠವನ್ನಲಂಕರಿಸಿ, ತಮ್ಮ ಭಾಷಣವನ್ನುಪಕ್ರಮಿಸಿದರು. ಸ್ವಲ್ಪ ಭಾಗವನ್ನು ಉರ್ದುವಿನಲ್ಲಿ ಓದಿದಬಳಿಕ ಉಳಿದುದನ್ನೆಲ್ಲಾ ಆಂಗ್ಲಭಾಷೆಯಲ್ಲಿ ಓದಿದರು. ಸಭಾಮಂಟಪದ ಹೊರಗೆ ನಿಂತಿದ್ದವರಿಗೋಸ್ಕರ ಉರುದುವಿನಲ್ಲಿ ಹೊರಗೆ ಕೆಲರು ಓದಿ ಹೇಳಿದರು. ರಾತ್ರಿ ೭ ಗಂಟೆಗೆ ಉಪನ್ಯಾಸವನ್ನು ಓದಿ ಮುಗಿಸಲಾಯಿತು. ಮರುದಿನ ೨೮ ನೆ ಭಾನುವಾರ ೧೧ ಗಂಟೆಗೆ ಸಬ್ಜೆಕ್ಟ್ಸಕಮಿಟಿಯು ಕೂಡಿತು. ತದನಂತರ ತಾ|| ೨೯, ೩೦, ೩೧ರಲ್ಲೂ ಜನವರಿ ತಾ|| ೧ರಲ್ಲೂ ಸಹ ಸಭೆಯು ನೆರೆದಿದ್ದು ಅನೇಕ ನಿರ್ಧಾರಗಳು ಮಾಡಲ್ಪಟ್ಟುವು.

ಸಭಾಧ್ಯಕ್ಷರ ಭಾಷಣವು ಬಹಳ ದೀರ್ಘವಾಗಿದ್ದಿತು. ಸಭೆಯು ಪಂಜಾಬು ದೇಶದಲ್ಲೇ ಸೇರಿದ್ದು, ಸದ್ಯಃ ಪಂಜಾಬು ದೇಶದ ಪರಿಸ್ಥಿತಿಗೆ ಸಂಬಂಧಪಟ್ಟ ವಿಷಯವೇ ಭಾರತೀಯರ ಮನಸ್ಸಿನಲ್ಲಿ ಕುಣಿದಾಡುತ್ತಲೂ, ಸಭಾಧ್ಯಕ್ಷರಾದ ಮಿ|| ನೆಹ್ರೂರವರು ಆ ದೇಶದ ದುರ್ದಶಾನಿವಾರಣೆಗಾಗಿಯೇ ವಿಶೇಷ ಶ್ರದ್ಧೆ ವಹಿಸಿದವರಾದುದರಿಂದ ಇವರ ಭಾಷಣದಲ್ಲೂ ಪಂಜಾಬಿನ ಸ್ಥಿತಿಗತಿಯ ವಿಷಯಕ್ಕೇ ಅಗ್ರೇಸರತ್ವವು ಕೊಡಲ್ಪಟ್ಟಿದ್ದಿತು. ಇವರು ಅಲ್ಲಿಯ ವಿಷಯಗಳನ್ನೆಲ್ಲಾ ಪ್ರತ್ಯಕ್ಷವಾಗಿ ಅರಿತವರಾದುದರಿಂದ, ಇವರ ಭಾಷಣದಲ್ಲಿ ತಿಳಿಯಿಸಿದ ವಿವರಣಗಳನ್ನು ಕೇಳಿದರೆ ಎಂಥವರಿಗೂ ಮನಸ್ಸು ತಲ್ಲಣಿಸಿ ಹೋಗುತ್ತಿರುವುದು. ಪಂಜಾಬು ಸ್ಥಿತಿಯನ್ನೆಲ್ಲಾ ವರ್ಣಿಸಿದ ಬಳಿಕ ಈ ಸಂಬಂಧವಾಗಿ ವಿಚಾರಣೆ ನಡೆಯಿಸುವುದಕ್ಕೆ ಏರ್ಪಟ್ಟಿರುವ ಹಂಟರ್ ಸಂಘದವರ ಕಾರ್ಯವು ಪ್ರಜೆಗಳ ಮಾನಸೋದ್ರೇಕವನ್ನು ಶಾಂತಪಡಿಸಲು ಸಾಧಕವಾಗುವಂತೆ ಪರಿಣಮಿಸಲೆಂದು ನಿರೀಕ್ಷಿಸುತ್ತಿರುವುದಾಗಿ ಹೇಳಿ, ಪಂಜಾಬಿನಲ್ಲಿ ಜರುಗಿದ ಘೋರಕಾರ್ಯಗಳು ಆಂಗ್ಲರಾಜ್ಯದ ಮಹಾಪ್ರತಿಷ್ಠೆಗೆ ಭಂಗವನ್ನು ತಂದುವೆಂತಲೂ, ಮಾಂಟೊಗ್‌ರವರು ಮಾಡಿದ ಸತ್ಪ್ರಯತ್ನಕ್ಕೂ ಭಂಗತಂದುವೆಂತಲೂ ಹೇಳಿದರು. ಬಳಿಕ ಪಂಜಾಬ್ ದೇಶದಲ್ಲಿ ಸರ್ ಮೈಕೇಲ್ ಒಡ್ವೈಯರ್‌ರವರು ಲೆ|| ಗೌರ್ನರಾಗಿ ಬಂದು ಅಧಿಕಾರವನ್ನಾರಂಭಿಸಿದಾಗಿನಿಂದ ಪ್ರಜೆಗಳಿಗುಂಟಾದ ಈತಿಬಾಧೆಗಳನ್ನೆಲ್ಲಾ ವಿವರಿಸಿರುವರು. ಪ್ರಜಾಪ್ರಮುಖರಿಗೆ ನಿರ್ಬಂಧದ ಮೇಲೆ ನಿರ್ಬಂಧವನ್ನುಂಟುಮಾಡಿದುದನ್ನೂ, ಕಮಾಗಾಟೂಮಾರು ಹಡಗಿನ ವ್ಯವಹಾರವನ್ನೂ, ಅವುಗಳ ಮೂಲಕ ರಾಜ್ಯದಲ್ಲಿ ಅಶಾಂತಿ ಹೆಚ್ಚಿದುದನ್ನೂ, ಈಚೆಗೆ ದೇಶ ರಕ್ಷಣ ಶಾಸನವು ಏರ್ಪಟ್ಟ ಬಳಿಕ ಸರ್ ಒಡ್ವೈಯರ್‌ರವರು ಅದರ ಬಲದಮೇಲೆ ಮನಸ್ಸಿಗೆ ಬಂದಂತೆ ನಡೆದು ತಿಲಕ ಪಾಲ ಮೊದಲಾದವರನ್ನು ತಮ್ಮ ಆಧಿಪತ್ಯಕ್ಕೇ ಬರಗೊಡದಂತೆ ನಿರ್ಬಂಧಿಸಿದುದನ್ನೂ, ಈಚೆಗೆ ಯುದ್ಧಸಂದರ್ಭದಲ್ಲಿ ಭರತಖಂಡದಿಂದ ಸೈನಿಕರನ್ನೂ ಹಣವನ್ನೂ ಕೂಡಿಸುವುದಕ್ಕೆ ಏರ್ಪಾಟು ನಡೆದಾಗ ಈ ದೇಶದಿಂದೆಲ್ಲಾ ೫ ಲಕ್ಷ ಮಂದಿಯನ್ನು ಮಾತ್ರವೇ ಕೂಡಿಸಬೇಕೆಂದು ನಿರ್ಧರವಾಗಿರುವಲ್ಲಿ ಅದರೊಳಗೆ ೧೦೦ ಕ್ಕೆ ೪೦ ರಷ್ಟನ್ನು ಪಂಜಾಬಿನಿಂದಲೇ ಕೂಡಿಸುವುದಕ್ಕೆ ಸರ್ ಒಡ್ವೈಯರ್‌ರವರು **ಬದ್ಧಕಂಕಣರಾಗಿ ಪ್ರತಿಗ್ರಾಮದಲ್ಲೂ ಭಯದಿಂದಲೂ ನಿರ್ಬಂಧದಿಂದಲೂ ಪ್ರಜೆಗಳನ್ನು ಹಿಂಸೆಪಡಿಸಿ, ಸೈನಿಕರನ್ನೂ, ಹಣವನ್ನೂ ಕೂಡಿಸುವಲ್ಲಿ ಮಾಡಿದ ದಾಂಧಲೆಗಳನ್ನೂ ಅದರಿಂದೆಲ್ಲಾ ಪ್ರಜಾಕ್ರೋಧವನ್ನು ಇವರು ಎಷ್ಟುಮಟ್ಟಿಗೆ ವೃದ್ಧಿಪಡಿಸಿದರೆಂಬುದನ್ನೂ ವಿವರಿಸಿರುವರು.**

ಬಳಿಕ ಪಂಜಾಬು ದುರ್ದಶೆಯು ಈಗಣ ರಾಜಕೀಯ ಸಂಸ್ಕರಣದಾನದಿಂದಲೂ ಮರೆಯುವ ಹಾಗಿಲ್ಲವೆಂದೂ, ಆ ಸಂಸ್ಕರಣವು ಅಷ್ಟು ತೃಪ್ತಿಕರವಾಗಿಲ್ಲವೆಂದೂ, ಜನ್ಮಸ್ವಾತಂತ್ರ್ಯ ರಕ್ಷಣೆಯ ಅಧಿಕಾರವು ಪ್ರಜೆಗಳಿಗೆ ಕೈಗೂಡಿದರೇನೆಯೇ ಅದು ಮರೆಯುವುದೆಂತಲೂ ಗರ್ಜಿಸಿ ಹೇಳಿರುವರು. ಆದರೆ ಈಗಣ ಸಂಸ್ಕರಣಗಳನ್ನು ತಿರಸ್ಕರಿಸದೆ ಅವನ್ನು ಉಪಯೋಗಿಸಿಕೊಂಡು ಉಳಿದುವುಗಳಿಗಾಗಿ ಮುಂದೆ ಸಕ್ರಮಾಂದೋಳನವನ್ನು ನಡೆಯಿಸಬೇಕೆಂಬ ಅಭಿಪ್ರಾಯವನ್ನು ಇವರೂ ಕೂಡ ತಿಳಿಯಿಸಿರುವರು. ಮತ್ತೂ ರೌಲತ್‌ಶಾಸನ, ಅದರಿಂದುಂಟಾದ ಬಾಧೆ, ಸತ್ಯಾಗ್ರಹಸ್ವೀಕಾರ, ಹಂಟರ್‌ಸಂಘ, ಪಂಜಾಬು ದುಸ್ಥಿತಿಯಿಂದ ಹಿಂದೂ ಮಹಮ್ಮದೀಯರೊಳಗೆ ಉಂಟಾದ ಗಾಢಮೈತ್ರಿ ಮೊದಲಾದ ವಿಷಯಗಳನೇಕವನ್ನು ಕುರಿತು ಮಾತನಾಡಿ ಶ್ರೀಸಾರ್ವಭೌಮಸಂದೇಶವನ್ನು ಕುರಿತು ಹೇಳುವಾಗ, ನಮ್ಮ ಈ ಮಹಾಸಭೆ ಸೇರುವ ಕಾಲಕ್ಕೆ ಸಾರ್ವಭೌಮರು ಉದಾರಭಾವದಿಂದ ಕೂಡಿದ ಸಂದೇಶವನ್ನು ಕಳುಹಿಸಿ ರಾಜಕೀಯ ನಿರ್ಬಂಧಿತರನ್ನೆಲ್ಲಾ ಬಿಡಿಸುವುದಕ್ಕೆ ಅಪ್ಪಣೆ ಮಾಡಿದುದು ನಮ್ಮಗಳ ಮನಸ್ಸಿಗೆ ಶಾಂತಿಯನ್ನುಂಟುಮಾಡುತ್ತಲಿದೆಯೆಂದೂ, ಅದುಕಾರಣ ಅವರಿಗೆ ನಮ್ಮ ರಾಜಭಕ್ತಿಪೂರ್ವಕವಾದ ಅಭಿನಂದನಗಳನ್ನರ್ಪಿಸುವವರಾಗಿದ್ದೇವೆಂದೂ, ಬರುವ ಬೇಸಗೆಯಲ್ಲಿ ಶ್ರೀ ಪ್ರಿನ್ಸ್ ಆಫ್ ವೇಲ್ಸರು ಈ ದೇಶಕ್ಕೆ ದಯಮಾಡಿಸುತ್ತಾರೆಂಬುದನ್ನು ಕೇಳಿ ಸಂತೋಷಿಸುತ್ತೇವೆಂದೂ, ಅವರ ನಾಯಕತ್ವದ ಕೆಳಗೆ ಭರತಖಂಡಕ್ಕೆ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವು ಲಭಿಸುವುದಾಗಲಿ ಎಂಬುದಾಗಿ ಶ್ರೀ ಸಾರ್ವಭೌಮರ ಅಭಿಪ್ರಾಯದೊಡನೆ ನಾವೂ ಅಭಿಪ್ರಾಯಪಡೋಣವೆಂದೂ ಹೇಳಿದರು.

ಸಭೆಯಲ್ಲಿ ೩೦ ಕ್ಕೆ ಮೇಲ್ಪಟ್ಟು ನಿರ್ಧಾರಗಳಾಗಿರುವುವು. ಅವುಗಳೊಳಗೆ ರಾಜಕೀಯಸಂಸ್ಕರಣ ಸಂಬಂಧವಾಗಿಯೂ ಸ್ವಪರಿಪಾಲನ ಸಂಬಂಧವಾಗಿಯೂ ಆದ ನಿರ್ಧಾರವನ್ನು ಸಿ. ಆರ್. ದಾಸರವರು ಉಪಪಾದಿಸಿದರು. ಹೇಗೆಂದರೆ-“ ಭಾರತೀಯರು ಸ್ವಪರಿಪಾಲನೆಗೆ ಈಗಲೇ ಅರ್ಹರಾಗಿದ್ದಾರೆ. ಈಗಣ ನೂತನ ರಾಜಕೀಯ ಶಾಸನವು ಅಸಮಗ್ರವಾಗಿಯೂ ಅತೃಪ್ತಿಕರವಾಗಿಯೂ ಆಶಾಭಂಗಕರವಾಗಿಯೂ ಇದೆ. ಪಾರ್ಲಿಮೆಂಟಿನವರು ಸ್ವಯಂ ನಿರ್ಣಯಸೂತ್ರವನ್ನನುಸರಿಸಿ ಈ ದೇಶದಲ್ಲಿ ಜೇಗನೆ ಸಂಪೂರ್ಣ ಸ್ವಪರಿಪಾಲನವನ್ನು ಏರ್ಪಡಿಸಬೇಕೆಂದು ಈ ಸಭೆಯವರು ಕೋರುತ್ತಾರೆ.’’

ಇದನ್ನು ತಿಲಕರು ಅನುಮೋದಿಸುವಾಗ್ಗೆ ಇದರಲ್ಲಿರುವ ಆಶಾಭಂಗಕರವೆಂಬ ಪದವಿರಕೂಡದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದನ್ನು ತೆಗೆಯುವುದಕ್ಕೆ ಕಾರಣವು ನನಗೆ ತೋರುವುದಿಲ್ಲ. ನಾವು ಇನ್ನೂ ೧೦ ವರ್ಷಗಳ ಕಾಲದವರೆಗೆ ತಾಳಿಕೊಂಡಿರಲಾರೆವು. ಈಗ ದೊರೆದಷ್ಟರಲ್ಲೇ ತೃಪ್ತರಾಗಿ ಸುಮ್ಮನಿರಲಾರೆವು. ಆಂದೋಳನವನ್ನು ಮಾಡುತ್ತೇವೆ. ೧೦ ವರ್ಷಗಳಾದಮೇಲೆ ನಿರಂಕುಶಾಧಿಕಾರಿಗಳು ಮಾಡುವ ಪರಿಷ್ಕರಣಗಳಿಗೆ ಬದ್ಧರಾಗುವುದಕ್ಕೆ ನಾವು ಒಪ್ಪುವುದಿಲ್ಲ. ಸಂಪೂರ್ಣ ಸ್ವಪರಿಪಾಲನವನ್ನು ಹೊಂದುವುದಕ್ಕೆ ಶಾಸನಬದ್ಧವಾದ ಚಳವಳವನ್ನು ನಾವು ಮಾಡುವೆವು. ನಮ್ಮ ಆಂದೋಳನಕ್ಕೆ ಪ್ರತಿಫಲವಾಗಿ ಈಗಣ ಶಾಸನವು ಬಂದಿಲ್ಲ. ಪ್ರಪಂಚದ ಪರಿಸ್ಥಿತಿಯನ್ನನುಸರಿಸಿ ಇದು ಬಂದಿದೆ. ಸ್ವಯಂ ನಿರ್ಣಯವನ್ನಾಧಾರಪಡಿಸಿಕೊಂಡಿರುವ ಸ್ವಪರಿಪಾಲನವನ್ನು ನಾವು ಕೋರಿದೆವು. ಈಗ ದೊರೆದುದರಲ್ಲಿ ನಮಗೆ ತೃಪ್ತಿಯಿಲ್ಲ. ನಮ್ಮ ಸಂಪೂರ್ಣ ಫಲಸಿದ್ಧಿಗೆ ಇದನ್ನು ಸಾಧನಮಾತ್ರವನ್ನಾಗಿ ನಾವು ಅಂಗೀಕರಿಸುತ್ತೇವೆ’’ ಎಂದು ಹೇಳಿದರು.

ಆಗ ಮ|| ಗಾಂಧಿಯವರು ಎದ್ದುನಿಂತು-ಸಿ. ಆರ್. ದಾಸರು ಉಪಪಾದಿಸಿ ತಿಲಕರು ಅನುಮೋದಿಸಿದ ಈ ಸೂಚನೆಗೆ ಪ್ರತಿಕೂಲವಾಗಿ ನಾನು ಮಾತನಾಡಬೇಕಾಗಿ ಬಂದುದಕ್ಕಾಗಿ ವಿಷಾದಿಸುತ್ತೇನೆಂದು ಆರಂಭಿಸಿ, ಇದರಲ್ಲಿ ‘‘ಆಶಾಭಂಗಕರ’’ ಎಂಬ ಪದವನ್ನುಪಯೋಗಿಸಿರುವುದು ಸರಿಯಲ್ಲ. ಅದನ್ನುಪಯೋಗಿಸಿದಪಕ್ಷದಲ್ಲಿ ಆ ಶಾಸನವನ್ನು ನಾವು ಸಂಪೂರ್ಣವಾಗಿ ಬಹಿಷ್ಕರಿಸಬೇಕಾಗುವುದು. ನಾವು ಹಾಗೆ ಮಾಡುವುದಿಲ್ಲ. ಈಗ ದೊರೆದಿರುವ ಶಾಸನವನ್ನು ಉಪಯೋಗಿಸಿಕೊಳ್ಳುವವರಾಗಿದ್ದೇವೆ. ಹೀಗಿರುವಲ್ಲಿ ಆ ಪದವನ್ನು ಏತಕ್ಕೆ ಪ್ರಯೋಗಿಸಬೇಕು ? ಅದುಕಾರಣ ‘‘ ಆಶಾಭಂಗ’’ ಎಂಬ ಪದವನ್ನು ತೆಗೆದುಬಿಡಬೇಕು. ಶ್ರೀ ಸಾರ್ವಭೌಮರು ಕೋರಿರುವ ರೀತಿಯಲ್ಲೇ ಈ ಸಭೆಯವರು ಸಹಕಾರಭಾವದಿಂದ ಶಾಸನವನ್ನು ಅನುಸರಿಸುವವರಾಗಿದ್ದಾರೆ. ಈ ಸಭೆಯವರು ಮಾಂಟೊಗ್‌ರವರಿಗೆ ವಂದನೆಯನ್ನರ್ಪಿಸುತ್ತಾರೆ’’ ಎಂಬ ಸವರಣವನ್ನು ಇದಕ್ಕೆ ನಾನು ಉಪಪಾದಿಸುತ್ತೇನೆ’’ ಎಂದರು. ಗಂಧಿಯವರ ಈ ಉಪಪಾದನೆಗೆ ಜೆನ್ನಾರವರು ಅನುಮೋದಿಸಿದರು. ೧೦ ವರ್ಷಗಳವರೆಗೆ ಸುಮ್ಮನಿರಬೇಕೆಂದು ಶಾಸನದಲ್ಲೇನೂ ಇಲ್ಲ. ಆದುಕಾರಣ ಸಭೆಯವರು ಸಹಕಾರಭಾವದಿಂದ ವರ್ತಿಸಲು ಸಮ್ಮತಿಸಬೇಕೆಂದು ನುಡಿದರು.

ಆನಿಬೆಸೆಂಟ್‌ರವರು-“ ಈ ಸಭೆಯವರು ಸಂಸ್ಕರಣವನ್ನು ಸ್ವಪರಿಪಾಲನೆಗೆ ಪ್ರಥಮಸೋಪಾನವನ್ನಾಗಿ ಆಮೋದಿಸುತ್ತಾರೆ. ಮಾಂಟೊಗ್ ಸಿಹ್ಮರವರಿಗೆ ವಂದನೆಯನ್ನರ್ಪಿಸುತ್ತಾರೆ. **ಮಾಂಟೊಗ್‌ರವರು ನಮ್ಮ ಕೃತಜ್ಞತೆಗೆ ಪಾತ್ರರು. ಮೊಟ್ಟಮೊದಲು ನಾನು ಈ ಸಂಸ್ಕರಣವನ್ನು ತಿರಸ್ಕರಿಸಿದ್ದೆ. ಈಚೆಗೆ ಅದರಲ್ಲಿ ಹಲವು ತಿದ್ದುಪಾಟುಗಳಾಗಿರುವುದರಿಂದ ಅನುಮೋದಿಸುತ್ತೇನೆ’’ ಎಂದರು. ಇದನ್ನು ಬಮ್ಮಂಜಿಯವರು ಅನುಮೋದಿಸಿದರು.**

ವಿಪಿನಚಂದ್ರಪಾಲರು-**ಸಂಪೂರ್ಣ ಸ್ವಪರಿಪಾಲನವನ್ನು ಪಡೆಯಲನುಕೂಲವಾಗುವವರೆಗೆ ಈ ಶಾಸನವನ್ನು ನಾವು ಉಪಯೋಗಿಸಿಕೊಳ್ಳಬಹುದು. ಮಾಂಟೊಗಾರವರಿಗೆ ನಾವು ವಂದನೆಯನ್ನು ಅರ್ಪಿಸತಕ್ಕುದು. ಭವಿಷ್ಯಲ್ಲಾಭಕ್ಕಾಗಿ ಲಾರ್ಡ್ ಸಿಹ್ಮರವರಿಗೂ ವಂದನೆಯನ್ನರ್ಪಿಸಬಹುದು. ದೇಶೀಯರು ಈ ಶಾಸನವನ್ನು ತಿರಸ್ಕರಿಸುವುದಿಲ್ಲ ಎಂದರು.** ಇದರಮೇಲೆ ಸತ್ಯಮೂರ್ತಿ ಮೊದಲಾದನೇಕರು ವಿಧವಿಧವಾಗಿ ಅಭಿಪ್ರಾಯಪಟ್ಟರು. ಕಡೆಗೆ-

ಪಂಡಿತ ಮದನಮೋಹನಮಾಳವ್ಯರು ಗಾಂಧಿಯವರ ಸವರಣವನ್ನು ಚೆನ್ನಾಗಿ ಸಮರ್ಥಿಸಿದರು. ನಾವು ಸಹಕಾರವನ್ನುಂಟುಮಾಡುವುದಕ್ಕೆ ಕೋರುವವರಾಗಿದ್ದೇವೆ. ನಿಯೋಜಕರಾಗುವುದಕ್ಕೂ ನಿಯೋಜಕರಿಗೆ ಬೋಧಿಸುವುದಕ್ಕೂ ಪ್ರಜೆಗಳಿಗೆ ಜ್ಞಾನೋಪದೇಶ ಮಾಡುವುದಕ್ಕೂ ರಾಜ್ಯಾಂಗಸಭೆಗಳಲ್ಲಿ ಕೆಲಸ ಮಾಡುವುದಕ್ಕೂ ಕೋರುತ್ತೇವೆ. ಸಹಕಾರಭಾವವೆಂದರೆ ಇದೇ ಅರ್ಥ. ಮಾಂಟೊಗ್‌ರವರು ಈ ಶಾಸನ ನಿರ್ಮಾಣಕ್ಕಾಗಿ ವಂದನೀಯರು. ಮುಂದಣ ಫಲಗಳಿಗಾಗಿ ನಾವು ಆಂದೋಳನವನ್ನು ಮಾಡುವವರಾಗಿದ್ದೇವೆ. ಇದುವರೆಗೇ ನಾವು ಆಂದೋಳನವನ್ನಾರಂಭಿಸಿದ್ದೇವೆ. ದೊರೆದ ಲಾಭವನ್ನು ನಾವು ಸ್ಪಷ್ಟವಾಗಿ ಅಂಗೀಕರಿಸಬೇಕು. ಅದುಕಾರಣ ಗಾಂಧಿಯವರ ಸವರಣವು ಪರಿಗ್ರಾಹ್ಯವಾದುದೆಂದು ಹೇಳಿದರು. ಮತ್ತೂ ತಿಲಕರ ಬಳಿಗೂ ಸಿ. ಆರ್. ದಾಸ್‌ರವರ ಬಳಿಗೂ ಹೋಗಿ ಮಾತನಾಡಿಕೊಂಡು, ಜಗತಿಯ ಮುಂದೆ ಬಂದು, ಈ ವಿಷಯದಲ್ಲಿ ಸಮಾಧಾನವು ಕುದಿರಿತೆಂದು ಹೇಳಿದರು. ನೀವೂ ಇದಕ್ಕೆ ಸಮಾಧಾನಪಟ್ಟಿರಾ ? ಎಂದು ಆನಿಬೆಸೆಂಟರನ್ನು ಕೇಳುವಲ್ಲಿ ಪ್ರಥಮ ಸೋಪಾನವನ್ನಾಗಿ ಶಾಸನವನ್ನು ಅಂಗೀಕರಿಸಿದೆವೆಂದು ಸವರಣವಾದರೆ ನಾನೂ ಒಪ್ಪುವೆನೆಂದರು. ಅಭಿಪ್ರಾಯಾರ್ಥವಾಗಿ ಹಾಕಿದಾಗ ಅದಕ್ಕೆ ಬಹುಮತವು ಬರಲಿಲ್ಲ. ಮಾಂಟೊಗ್‌ರವರಿಗೆ ವಂದನೆ ಮಾಡಿ, ಆಶಾಭಂಗವೆಂಬ ಪದವನ್ನು ತೆಗೆದುಹಾಕಿಸಿ, ಆರ್. ದಾಸರು ಮಾಡಿದ ಸೂಚನೆಯು ನಿರ್ಧಾರವಾಯಿತು.

ಅತಿವಾದಿಗಳೆಂಬುವವರು ಪ್ರಬಲಿಸಿ ಮಾತಿನಲ್ಲಿ ಕಟುತ್ವವನ್ನು ಹೆಚ್ಚಿಸಿಕೊಳ್ಳುತ್ತಿದ್ದರೂ, ಪರಿಣಾಮದಲ್ಲಿ ಮಿತವಾದಿಗಳ ಅಭಿಪ್ರಾಯದ ಬಾಲವನ್ನೇ ಹಿಡಿದು ಶಾಸನಸಂಬಂಧವಾಗಿ ಅಂಗೀಕಾರವನ್ನು ವ್ಯಕ್ತಪಡಿಸಿ, ಈಗ ಕೊಟ್ಟುದನ್ನು ಗ್ರಹಿಸಿ ಮುಂದಣದಕ್ಕೆ ಪ್ರಯತ್ನಪಡುವುದೇ ಇವರಿಗೂ ಮಾರ್ಗವಾಯಿತು.

ಮಿತವಾದಿಗಳ ರಾಷ್ಟ್ರೀಯ ಮಹಾಸಭೆ.

ಕಲ್ಕತ್ತಾಪಟ್ಟಣದಲ್ಲಿ ಈ ಸಭೆಯು ಸರ್ ಶಿವಸ್ವಾಮಯ್ಯರ್‌ರವರ ಅಧ್ಯಕ್ಷತೆಯಿಂದ ಡಿಶಂಬರ್ ತಾ|| ೩೦-೩೧ ಜನವರಿ ತಾ|| ೧ರಲ್ಲಿ ಕೂಡಿತು. ೫೦೦ ಮಂದಿ ಪ್ರತಿನಿಧಿಗಳೂ ಅನೇಕ ಪ್ರೇಕ್ಷಕರೂ ಸೇರಿದ್ದರು. ಸರ್ ಬಿ. ಸಿ. ಮಿತ್ರರವರು ಸ್ವಾಗತಸಂಘಾಧ್ಯಕ್ಷರಾಗಿ ಭಾಷಣಮಾಡಿದರು. ಸಭಾಧ್ಯಕ್ಷರ ಭಾಷಣವು ಬಹಳ ಗಂಭೀರವಾಗಿಯೂ ನಿಷ್ಪಕ್ಷಪಾತವಾಗಿಯೂ ಇದ್ದಿತು. ಪಂಜಾಬಿನ ವ್ಯವಹಾರ ವಿಷಯವಾಗಿ ನಿರಂಕುಶಾಧಿಕಾರಿಗಳ ಪ್ರವರ್ತನವನ್ನು ಬಹಳವಾಗಿ ನಿಂದಿಸಿರುವರು. ಅಧ್ಯಕ್ಷರ ಮತ್ತು ಬಾನರ್ಜಿ ಮೊದಲಾದ ಪ್ರಮುಖರ ಭಾಷಣದಲ್ಲಿ ನೂತನ ರಾಜಕೀಯ ಶಾಸನಲಾಭವು ಮಿತವಾದಿಗಳ ದೂರದೃಷ್ಟಿಯ ಫಲವೇ ಎಂದು ವ್ಯಕ್ತಪಡಿಸಲ್ಪಟ್ಟಿರುವುದು. ಶಾಸನ ವಿಷಯವಾಗಿ ಮಾಡಿದ ನಿರ್ಧಾರದಲ್ಲಿ ‘‘ ಬಾಧ್ಯತಾಯುತ ಪ್ರಭುತ್ವವು ಸಿದ್ಧಿಸುವುದಕ್ಕೆ ಈ ಸಂಸ್ಕರಣಶಾಸನವು ಮುಖ್ಯ ಸಾಧನವಾಗಿರುವುದೆಂದು ಈ ಸಭೆಯವರು ಸಂತೋಷಿಸುತ್ತಾರೆ. ಶಾಸನವು ನಿರ್ವಿಘ್ನವಾಗಿ ಸಾಗುವುದಕ್ಕೆ ದೇಶೀಯರೆಲ್ಲರೂ ಕಲಸಿ ಕೆಲಸ ಮಾಡಬೇಕೆಂದು ಸಭೆಯವರು ಕೋರುತ್ತಾರೆ ’’ ಎಂದು ತಿಳಿಯಿಸಿರುವುದಲ್ಲದೆ, ಸಾರ್ವಭೌಮರ ಸಂದೇಶಸಂಬಂಧವಾಗಿ ಭಕ್ತಿವಂದನ ಕೃತಜ್ಞತೆಗಳನ್ನೂ, ಯುವರಾಜರವರಿಗೆ ಸ್ವಾಗತವನ್ನೂ, ಮಾಂಟೊಗ್ ಲಾರ್ಡ್ ಸಿಹ್ಮರವರಿಗೂ ಜಾಯಿಂಟ್ ಕಮಿಟಿಯವರಿಗೂ ಕೃತಜ್ಞತೆಯನ್ನೂ ತಿಳಿಯಿಸುವ ತೀರ್ಮಾನಗಳನ್ನು ಮಾಡಿದರು. ತುರ್ಕಿ ವ್ಯವಹಾರವನ್ನು ನ್ಯಾಯಭಂಗವಿಲ್ಲದಂತೆಯೂ ತುರ್ಕಿಸಾಮ್ರಾಜ್ಯದ ವಿಚ್ಛೇದವಾಗದಂತೆಯೂ ಪರಿಷ್ಕರಿಸಬೇಕೆಂಬ ನಿರ್ಧಾರವನ್ನು ಕೂಡ ಮಾಡಿದರು.

ಮಹಮ್ಮದೀಯ ಮಹಾಸಭೆ.

ಅಮೃತಸರಪಟ್ಟಣದಲ್ಲಿ ಈ ಸಭೆಯು ಡಿಶಂಬರ್ ತಾ|| ೨೯ರಲ್ಲಿ ಹಬೀಕಲ್ ಮುಲ್ಕು ಹಕೀಂ ಮಹಮ್ಮದ್ ಅಜ್ಮಲ್ ಖಾನ್‌ರವರ ಅಧ್ಯಕ್ಷತೆಯಿಂದ ಆರಂಭವಾಯಿತು. ತಾ|| ೩೧ ರಲ್ಲಿ ಮುಗಿದಿತು. ಅಧ್ಯಕ್ಷರ ಭಾಷಣದಲ್ಲಿ ತುರ್ಕಿಸಮಸ್ಯೆಯೇ ಮುಖ್ಯವಾಗಿದ್ದಿತು. ದಿಲ್ಲಿ ಪಂಜಾಬುಗಳಲ್ಲಿ ನಡೆದ ಪ್ರಳಯಗಳ ವಿಷಯವು ೨ನೆಯದಾಗಿದ್ದಿತು. ರಾಜಕೀಯ ಸಂಸ್ಕರಣಗಳು ಸಪ್ಪೆಯಾಗಿರುವುವೆಂದೂ, ಆಗಸ್ಟ್ ತಾ|| ೨೦ ರ ಪ್ರಕಟನೆಗೆ ಅನುಗುಣವಾಗಿಲ್ಲವೆಂದೂ, ಭಾರತೀಯರ ಕೋರಿಕೆಗೆ ಇವು **ಅನುಕೂಲವಾಗಿಲ್ಲವೆಂದೂ, ನಮಗೆ ಅನುಕೂಲವಾದ ಶಾಸನವು ದೊರೆಯಬೇಕಾದರೆ ಹಿಂದೂ ಮಹಮ್ಮದೀಯರು ಒಗ್ಗಟ್ಟಾಗಿರುವುದೇ ಮುಖ್ಯ ಸಾಧನವೆಂದೂ ಅಧ್ಯಕ್ಷರ ಭಾಷಣದಲ್ಲಿ ಹೇಳಲ್ಪಟ್ಟಿತು. ನಿರ್ಧಾರಗಳಾದುದರಲ್ಲಿ- ಸಂಸ್ಕರಣಶಾಸನಕ್ಕೆ ಆಮೋದನೆಯೂ, ಚಕ್ರವರ್ತಿಯವರ ಸಂದೇಶಕ್ಕಾಗಿ ಮಹಮ್ಮದೀಯರ ಕೃತಜ್ಞತೆಯೂ, ರಾಜಕೀಯ ನಿರ್ಬಂಧಿತರನ್ನು ಬಿಡುಗಡೆ ಮಾಡಿದುದಕ್ಕಾಗಿ ಸಂತೋಷಪ್ರದರ್ಶನವೂ, ಪ್ರಿನ್ಸ್ ಆಫ್ ವೇಲ್ಸರು ಭರತಖಂಡಕ್ಕೆ ದಯಮಾಡಿಸಿದಲ್ಲಿ ಭಾರತೀಯರೆಲ್ಲಾ ಹೃದಯಪೂರ್ವಕವಾಗಿ ಸ್ವಾಗತಿಸುವುದಕ್ಕೆ ಸಿದ್ಧರಾಗಿರುವರೆಂಬ ಪ್ರಭುಭಕ್ತಿ ಪ್ರದರ್ಶನವೂ,** ಮಹಮ್ಮದೀಯರಲ್ಲಿ ಹಿಂದೂಗಳು ಸದ್ಭಾವಪೂರಿತರಾಗಿ ಕಾಲಿಫತ್ ದಿನ ಮೊದಲಾದುವುಗಳಲ್ಲಿ ಸಾನುಭೂತಿಯಿಂದ ನಡೆದುಕೊಳ್ಳುತ್ತಿರುವುದರಿಂದ ಹೀಗೆ ಹಿಂದೂ ಮಹಮ್ಮದೀಯರ ಮಧ್ಯದಲ್ಲಿ ವೃದ್ಧಿಗೊಳ್ಳುತ್ತಿರುವ ಮೈತ್ರಿಯನ್ನು ಬಲಪಡಿಸುವುದಕ್ಕಾಗಿ ಬಕ್ರೀದ್ ಹಬ್ಬದಲ್ಲಿ ಗೋವಧೆಗೆ ಪ್ರತಿಯಾಗಿ ಇತರ ಜಂತುಗಳನ್ನು ಬಲಿಕೊಡುವಂತೆ ಮಹಮ್ಮದೀಯರೆಲ್ಲರೂ ಮಾಡಬೇಕೆಂದು ಈ ಸಭೆಯವರು ಕೋರುತ್ತಾರೆ.’’ ಎಂಬ ತೀರ್ಮಾನವನ್ನು ಕೂಡ ಮಾಡಿದರು. ತುರ್ಕಿರಾಜ್ಯವನ್ನು ಮಹಮ್ಮದೀಯರ ಪ್ರಾರ್ಥನೆಗೆ ವಿರುದ್ಧವಾಗಿ ವಿಚ್ಛಿನ್ನಗೊಳಿಸಿದರೆ ಭರತಖಂಡದ ಮಹಮ್ಮದೀಯರೆಲ್ಲಾ ಉದ್ರೇಕಗೊಳ್ಳುವರೆಂದೂ, ಅದರಿಂದ ಬಳಿಕ ಉಂಟಾಗುವ ಅನರ್ಥಕ್ಕೆ ಮಹಮ್ಮದೀಯರು ಬಾಧ್ಯರಾಗಿರಲಾರರೆಂದೂ, ಇದರಿಂದ ಆಂಗ್ಲಸೇನೆಯು ಭರತಖಂಡದ ಹೊರಗೆ ಆಂಗ್ಲಸಾಮ್ರಾಜ್ಯರಕ್ಷಣೆಗೇ ಆಗಲಿ ಮಹಮ್ಮದೀಯ ರಾಜ್ಯವಿನಾಶಕ್ಕೇ ಆಗಲಿ ಯುದ್ಧಮಾಡಲು ಸೈನ್ಯವನ್ನು ಕಳುಹಿಸಿಕೊಟ್ಟರೆ ಮಹಮ್ಮದೀಯರು ಆ ಸೈನ್ಯದಲ್ಲಿ ಸೇರದೆ ಇರುವುದೇ ಮೊದಲಾದ ಸಕ್ರಮಾಂದೋಳನವನ್ನು ನಡೆಯಿಸಬಹುದೆಂತಲೂ ಸಹ ತೀರ್ಮಾನಿಸಿರುತ್ತಾರೆ. ಈಜಿಪ್ಟ್‌ದೇಶದಲ್ಲಿ ಜಾತೀಯವಾದಿಗಳು ನಡೆಯಿಸುತ್ತಿರುವ ಚಳವಳಕ್ಕೆ ಸಾನುಭೂತಿಯನ್ನು ತೋರಿಸಿದ್ದಾರೆ. ಸಂಸ್ಕರಣಶಾಸನಕ್ಕಾಗಿ ಮಾಂಟೊಗ್‌ರವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

ಒಳದೇಶ ವೃತ್ತಾಂತಗಳು.

ಶ್ರೀಮದ್ಯುವರಾಜರವರು ರಾಜಕಾರ್ಯನಿಮಿತ್ತವಾಗಿ ಮಿ|| ಮಿರ್ಜಾ ಇಸ್ಮಾಯಿಲ್‌ರವರ ಜತೆಯಲ್ಲಿ ಈ ವಾರ ದಿಲ್ಲಿ ಪಟ್ಟಣಕ್ಕೆ ದಯಮಾಡಿಸುವವರಾಗಿದ್ದಾರೆ.

ಡಿ|| ಕಮಿಷನರ್ ಪದವಿಯಿಂದ ನಿವೃತ್ತರಾಗಿ ವಿಶ್ರಾಂತಿಯನ್ನನುಭವಿಸುತ್ತಿದ್ದ ಮ|| ಎಂ. ನಾರಾಯಣರಾಯರು ಕಳೆದವಾರ ಬೆಂಗಳೂರಿನಲ್ಲಿರುವ ತಮ್ಮ ಮನೆಯಲ್ಲಿ ಕಾಲವಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ಪ್ಲೇಗಿನಿಂದಲೂ ಇನ್‌ಫ್ಲುಯೆಂಜಾದಿಂದಲೂ ಮರಣಗಳು ವಿರಳವಾಗಿ ಆಗುತ್ತಿವೆ. ಕೆಮ್ಮಲು ವಿಶೇಷ ಸಾಮ್ರಾಜ್ಯವನ್ನನುಭವಿಸುತ್ತಿದೆ. ಜನಾರೋಗ್ಯವು ಸಮರ್ಪಕವಾಗಿಲ್ಲ. ಸುಗ್ಗಿಕಾಲವಾದರೂ ದಾರಣೆಗಳು ಕಳೆದ ವರ್ಷದ ಕ್ಷಾಮದ ಸ್ಥಿತಿಗೂ ಮೀರಿರುತ್ತವೆ. ಬಡಬಗ್ಗರು ಕಣ್ಣಾಯಿ ಬಿಡುತ್ತಿದ್ದಾರೆ.

ರಾಜಧಾನಿಯ ಕೃಷ್ಣರಾಜಮೊಹಲ್ಲಾ ವರ್ತಕರಾದ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು ಪ್ರಕಟಿಸಿ ಕಳುಹಿಸಿರುವ ೧೯೨೦ ನೆ ವರ್ಷದ ರಮಣೀಯವಾದ ಸಚಿತ್ರದ ಕ್ಯಾಲಂಡರನ್ನು ನಾವು ಕೃತಜ್ಞತೆಯಿಂದ ಅಂಗೀಕರಿಸಿದೆವು. ಇದು ರವಿವರ್ಮರ ಸರಸ್ವತೀಭಾವಚಿತ್ರದಿಂದ ಕೂಡಿ ತಗುಲಿಹಾಕಿದ ಮನೆಗೆ ಶೃಂಗಾರಕರವಾಗಿರುತ್ತದೆ.

ಸರ್. ಕೃಷ್ಣಮೂರ್ತಿಗಳ ತಮ್ಮಂದಿರಾದ ಪೂರ್ಣಯ್ಯನವರ ಮಕ್ಕಳು ಎಳಂದೂರ್ ಜಹಗೀರ್ದಾರ್ ಮ|| ಪೂರ್ಣನರಸಿಂಗರಾಯರು ತಮ್ಮ ದೇಹಾಸ್ವಸ್ಥತೆಯಿಂದ ತಮ್ಮ ಸರ್ಕಾರಿ ಉದ್ಯೋಗವನ್ನೂ ಬಿಟ್ಟಿದ್ದರು. ಕಳೆದವಾರ ತಮ್ಮ ೪೦ ನೆ ವಯಸ್ಸಿನಲ್ಲಿ ಬೆಂಗಳೂರಿನಲ್ಲಿರುವ ತಮ್ಮ ಮನೆಯಲ್ಲಿ ಕಾಲವಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಮೈಸೂರು ದೇಶದ ವಿದ್ಯಾಶಾಖೆಯಲ್ಲಿ ೩೦ ವರ್ಷಗಳ ಕಾಲ ಕೆಲಸಮಾಡಿ ವಿದ್ಯಾರ್ಥಿಗಳಿಗೂ ದೇಶೀಯರಾದ ವಿದ್ಯಾವಂತರಿಗೂ ಪ್ರಿಯರಾದ ಮಿ|| ಥಾಮಸ್ ಡೆನ್ಹಾಂರವರು ಸಂಸ್ಥಾನದ ಉದ್ಯೋಗದಿಂದ ನಿವೃತ್ತರಾಗಿ ಸೀಮೆಗೆ ದಯಮಾಡಿದರು. ಇವರು ತಮ್ಮ ಯೂನಿಯನ್ನಿಗೆ ವೈಸ್‌ಪ್ರೆಸಿಡೆಂಟರಾಗಿ ಬಹುಕಾಲ ಕೆಲಸ ಮಾಡಿದ್ದುದರಿಂದ ಕೃತಜ್ಞತೆಗಾಗಿ ರಾಜಧಾನಿಯ ಲಿಟರರಿ ಯೂನಿಯನ್ನಿನವರು ಮಿ|| ಕೇಂಬಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಸನ್ಮಾನಕೂಟವನ್ನೇರ್ಪಡಿಸಿ, ವಿಜ್ಞಾಪನ ಪತ್ರವನ್ನರ್ಪಿಸಿ ಗೌರವಿಸಿದರು.

ಬೆಂಗಳೂರು ಚಿಕ್ಕಪೇಟೆಯಲ್ಲಿ ಮಾರ್ವಾಡಿ ಜನರು ಹೊಸದಾಗಿ ತಮ್ಮ ಜಿನದೇವಾಲಯವನ್ನು ಕಟ್ಟಿಸಿದ್ದಾರೆ. ಬೆಂಗಳೂರಿಗೆ ಹೋದ ಜನರು ನೋಡತಕ್ಕ ಸ್ಥಲಗಳಲ್ಲಿ ಇದೂ ಒಂದಾಗಿರುತ್ತದೆ. ಲಕ್ಷ ರೂ. ಗಳ ಮೇಲೆಯೇ ಇದಕ್ಕೆ ವೆಚ್ಚ ತಗುಲಿದೆಯಂತೆ. ಪ್ರೇಕ್ಷಣೀಯವಾದ ಈ ಆಲಯದಲ್ಲಿ ದೇವತಾಪ್ರತಿಷ್ಠಾಪನೆಯು ಬರುವ ಮಾಘ ಶುದ್ಧ ತ್ರಯೋದಶಿಯ ದಿವಸ ನಡೆಯುವುದಾಗಿದೆ. ಆಗ ಉತ್ತರಹಿಂದೂಸ್ಥಾನದಿಂದ ಅವರ ಜಾತಿಯ ಶ್ರೀಮಂತರನೇಕರು ಬರುವವರಾಗಿದ್ದಾರೆ. ಮಹೋತ್ಸವವನ್ನು ಅತಿ ವೈಭವದಿಂದ ನಡೆಯಿಸುವುದಕ್ಕೆ ಸಜ್ಜುಗೊಳಿಸುತ್ತಿದ್ದಾರೆ. ಆ ಕಾಲಕ್ಕೆ ಶ್ರೀಮನ್ಮಹಾರಾಜರವರು ಕೂಡ ದಯಮಾಡಿಸಿಕೊಳ್ಳಲ್ಪಡುವರೆಂಬ ಸುದ್ದಿಯಿದೆ.

ರಾಜಧಾನಿಯ ಶಾಕುಂತಲ ನಾಟಕಸಂಘದವರು ಮದ್ರಾಸಿಗೆ ಹೋಗಿ ಕಳೆದ ಡಿಸೆಂಬರ್ ತಾ|| ೨೫ ರಿಂದ ತಮ್ಮ ಪ್ರಸಿದ್ಧಗಳಾದ ಶಾಕುಂತಲ ಮೊದಲಾದ ನಾಟಕಗಳನ್ನು ಅಭಿನಯಿಸಿ ಕರ್ನಾಟಕ ಭಾಷೆಯನ್ನರಿಯದ ಮದ್ರಾಸು ಪಟ್ಟಣದ ಜನರ ಮನಸ್ಸಿಗೆ ವಿಶೇಷವಾದ ಆನಂದವನ್ನುಂಟುಮಾಡಿ ಹೆಚ್ಚು ದ್ರವ್ಯವನ್ನು ಸಂಪಾದಿಸುತ್ತಿರುವರೆಂದೂ, ಜಡ್ಜಿಗಳೂ ದೊಡ್ಡ ಲಾಯರುಗಳೂ ಶ್ರೀಮಂತರುಗಳೂ ನಾಟಕಾವಲೋಕನದಿಂದ ಸಂತುಷ್ಟರಾಗಿರುವರಲ್ಲದೆ ಜಸ್ಟಿಸ್ ಅಬ್ದುಲ್‌ರಹೀಂ ಮತ್ತು ಜಸ್ಟಿಸ್ ಶೇಷಗಿರಿ ಅಯ್ಯರ್‌ರವರು ಈ ಸಂಘದವರ ಹಾಡುಗಾರಿಕೆಯನ್ನೂ ಅಭಿನಯ ವಾಕ್ಚಾತುರ್ಯಾದಿಗಳನ್ನೂ ಬಹಳವಾಗಿ ಶ್ಲಾಘಿಸಿ ಈ ಸಂಘವು ನಾಟಕಪ್ರಯೋಗದಲ್ಲಿ ಬಹಳವಾಗಿ ಸುಧಾರಿಸಿರುವ ಪಾಶ್ಚಾತ್ಯದೇಶಗಳಿಗೆ ಹೋಗಿ ತಮ್ಮ ನಾಟಕವನ್ನು ಪ್ರಯೋಗಿಸಲು ಯೋಗ್ಯವಾಗಿರುವುದೆಂದು ಅಭಿಪ್ರಾಯಪಟ್ಟಿರುವರೆಂದೂ ಕೇಳಿ ಸಂತೋಷಿಸುತ್ತೇವಲ್ಲದೆ, ಈ ಸಂಘದವರು ಸ್ವಪ್ರಯೋಜನದೊಂದಿಗೆ ನಮ್ಮ ಸಂಸ್ಥಾನಕ್ಕೆ ಕೀರ್ತಿಯನ್ನೂ ತರುತ್ತಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಮಿತವಾದಿಗಳ ರಾಷ್ಟ್ರೀಯ ಮಹಾಸಭೆಯು ಈ ವರ್ಷ ಬರುವ ಡಿಶಂಬರಿನಲ್ಲಿ ಮದ್ರಾಸಿನಲ್ಲಿ ಕೂಡುವುದು.

೩೫ ನೆ ರಾಷ್ಟ್ರೀಯ ಮಹಾಸಭೆಯನ್ನು ನಾಗಪುರದಲ್ಲಿ ನಡೆಯಿಸುವುದಕ್ಕೆ ಮಧ್ಯಪ್ರಾಂತದವರು ಒಪ್ಪಿಕೊಂಡಿದ್ದಾರೆ.

ನಿರ್ಬಂಧವಿಮುಕ್ತರಾದ ಲಾಲಜಪತರಾಯರು ಅಮೇರಿಕಾದಿಂದ ಇಂಗ್ಲೆಂಡಿಗೆ ಹೊರಟಿದ್ದಾರೆ. ಅಲ್ಲಿಂದ ಭರತಖಂಡಕ್ಕೆ ಬರುವವರಾಗಿದ್ದಾರೆ

ಸೀಮೆಯಲ್ಲಿರುವ ಸ್ಟೇಟ್ ಸೆಕ್ರಟರಿಗಳ ಕೌನ್ಸಿಲ್ಲಿನಲ್ಲಿದ್ದ ಪ್ರಭಾ ಶಂಕರಪಟಾಣಿಯವರ ಸ್ಥಾನಕ್ಕೆ ಸರ್ ಶಂಕರನ್ ನಾಯರ್‌ರವರು ನಿಯಮಿಸಲ್ಪಟ್ಟಿದ್ದಾರೆ. ಅಸಿಸ್ಟೆಂಟ್ ಸ್ಟೇಟ್ ಸೆಕ್ರಟರಿ ಲಾರ್ಡ್ ಸಿಹ್ಮರವರೂ ಸಭಿಕರಾದ ಮ|| ಭೂಪೇಂದ್ರನಾಥ ಬಾಸುರವರೂ ಸಹ ಭರತಖಂಡಕ್ಕೆ ಬರುತ್ತಿದ್ದಾರೆ.

ಬರ್ಮಾದೇಶದಲ್ಲಿ ಮಾಣಿಕ್ಯರತ್ನವು ದೊರೆಯುವುದು ಹೆಚ್ಚು ಅಲ್ಲಿಯ ಮಾಷಕ್ ಎಂಬ ಸ್ಥಲದಲ್ಲಿ ಈಗ ಒಂದು ದೊಡ್ಡ ಮಾಣಿಕ್ಯವು ದೊರೆದಿದೆ. ಅದು ೮ ಅಂಗುಲದಗಲವೂ ೫ ಪೌನುಗಳ ಭಾರವೂ ಉಳ್ಳದಾಗಿದೆಯಂತೆ. ಇದು ಅತ್ಯದ್ಭುತವೇ ಸರಿ. ಇದರ ಬೆಲೆ ಇದುವರೆಗೆ ೫ ಲಕ್ಷಕ್ಕೆ ಏರಿದೆಯಂತೆ.

ಕಲ್ಕತ್ತಾದಲ್ಲಿರುವ ಸೈನ್ಸ್ ಕಾಲೇಜಿಗೆ ಬಾಬು ರಸವಿಹಾರಿ ಘೋಷ್‌ರವರು ಇದುವರೆಗೇ ೧೨ ಲಕ್ಷ ದ್ರವ್ಯಸಹಾಯ ಮಾಡಿದ್ದರು. ಮತ್ತೆ ಅದರಲ್ಲಿ ಟೆಕ್ನೊಲಾಜಿಕಲ್ ಶಾಖೆಯನ್ನು ಸ್ಥಾಪಿಸುವುದಕ್ಕೆ ಮತ್ತೆ ೧೧ ಲಕ್ಷವನ್ನು ದಾನಮಾಡಿರುವರು. ಇವೀಗ ದೇಶೋದ್ಧರಣ ದೀಕ್ಷಿತರ ಸ್ವಾರ್ಥತ್ಯಾಗ.

ಬೊಂಬಾಯಿಯಲ್ಲಿ ಯಂತ್ರಾಲಯಗಳ ಕೂಲಿಗಾರರು ತಮಗೆ ಕೂಲಿಯನ್ನು ಹೆಚ್ಚಿಸಿಕೊಡಬೇಕೆಂದೂ ಕೆಲಸಮಾಡುವ ಕಾಲವನ್ನು ೧೦ ಗಂಟೆಯಿಂದ ೮ ಗಂಟೆಗೆ ಕಡಿಮೆಮಾಡಿಕೊಡಬೇಕೆಂದೂ ಕೋರುತ್ತ ಕೆಲಸಕ್ಕೆ ಹೋಗದೆ ೨ ಲಕ್ಷ ಮಂದಿಗಳು ನಿಂತುಬಿಟ್ಟಿದ್ದಾರೆ. ಇದರಿಂದ ಆ ಪಟ್ಟಣದ ೮೫ ಯಂತ್ರಾಲಯಗಳ ಬಾಗಿಲು ಮುಚ್ಚಲ್ಪಟ್ಟಿದೆ.

ರಾಷ್ಟ್ರೀಯ ಮಹಾಸಭೆಯಲ್ಲಿ ಸಯ್ಯದ್ ಹಸೇನ್ ಇಮಾಂರವರು ಈಗಣ ವೈಸ್ರಾಯರನ್ನು ಕೆಲಸ ಬಿಡಿಸಿ ಕೂಡಲೇ ಸೀಮೆಗೆ ಕರೆಯಿಸಿಕೊಳ್ಳಬೇಕೆಂದು ವಿನಯಪೂರ್ವಕವಾಗಿ ಸಾರ್ವಭೌಮರನ್ನು ಮಹಾಸಭೆಯು ಪ್ರಾರ್ಥಿಸುವುದೆಂಬ ನಿರ್ಧಾರವಾಗಬೇಕೆಂದು ಸೂಚನೆಯನ್ನು ತಂದರು. ಆಗ ಅವರು ಮಾಡಿದ ಭಾಷಣದಲ್ಲಿ ಪ್ರಜೆಗಳ ಮನ್ನಣೆಗೆ ಪಾತ್ರರಾಗದೆ ಹೋದ ವೈಸ್ರಾಯರಲ್ಲಿ ಲಾರ್ಡ್ ಕರ್ಜನ್ನರೇ ದೊಡ್ಡವರಾಗಿದ್ದರು. ಆದರೆ ಪ್ರಜಾಹಿತಕರವಾದ ಕಾರ್ಯವೊಂದನ್ನೂ ಮಾಡದಿರುವ ವೈಸ್ರಾಯರೆಂದರೆ ಈಗಣ ಚಲಮ್ಸ್‌ಫರ್ಡರೇ ಸರಿ. ಇವರು ಪ್ರಜೆಗಳ ವಿಶ್ವಾಸವನ್ನು ಪೂರ್ತಿಯಾಗಿ ಕಳೆದುಕೊಂಡಿರುವರು. ಎಂದು ಭಾಷಣಮಾಡಿದರು. ಇದನ್ನು ಹಿಂದೂಪತ್ರಿಕಾ ಎಡಿಟರಾದ ಎಸ್. ಕಸ್ತೂರಿರಂಗಯ್ಯಂಗಾರರು ಅನುಮೋದಿಸಿದರು.

೯ ನೆಯ ಶ್ರೀಮದ್ವೀರಶೈವ ಮಹಾಸಭೆ.

(ನಮ್ಮ ಪ್ರತ್ಯೇಕ ವಿಲೇಖಕರಿಂದ).

ಹಿಂದಣ ಶೇಷ.

“ ಮಹಾಸಭೆಯಲ್ಲಿ ಪ್ಯಾಸಾದ ಠರಾವುಗಳನ್ನು ವ್ಯವಹಾರಕ್ಕೆ ತರುವ ಉಪಾಯ ’’ ಎಂಬ ವಿಷಯದ ಮೇಲೆ ಮ|| ಜಿ. ರುದ್ರಪ್ಪ ಎಂ. ಎ. ಯವರು ಉಪನ್ಯಾಸಮಾಡಿ, ಅಲ್ಲಲ್ಲಿಗೆ ಮತಾಭಿಮಾನಿಗಳಾದ ದೊಡ್ಡಮನುಷ್ಯರುಗಳು ಒಂದೊಂದು ಕಮಿಟಿಯಾಗಿ ಏರ್ಪಟ್ಟು ಸಭೆಯ ನಿರ್ಧಾರಗಳನ್ನು ತಂತಮ್ಮ ಪ್ರಾಂತ್ಯಗಳಲ್ಲಿ ವ್ಯವಹಾರಕ್ಕೆ ತರಿಸಲಿಕ್ಕೆ ಮುತುವರ್ಜಿಯಿಂದ ಕೆಲಸಮಾಡುತ್ತ ಬರಬೇಕು ಎಂದು ಸೂಚಿಸಿದರು. ಇದಕ್ಕೆ ಮ|| ಜಿ. ಕೆ. ರುದ್ರಾರ್ಯರು ಅನುಮೋದನ ಕೊಡುವಾಗ್ಗೆ—ಮಹಾಸಭೆಯಿಂದ ಉಪನ್ಯಾಸಕರನ್ನು ಏರ್ಪಡಿಸಿ, ಎಲ್ಲಕಡೆಗೂ ಅವರುಗಳನ್ನು ಕಳುಹಿಸಿ, ಮಹಾಭೆಯ ನಿರ್ಧಾರಗಳನ್ನೂ ಅದರಂತೆ ನಡೆಯುವುದರಿಂದ ಸಮಾಜಕ್ಕೆ ಉಂಟಾಗುವ ಲಾಭವನ್ನೂ ಗ್ರಾಮಾಂತರಗಳ ಜನರಿಗೆಲ್ಲಾ ಮನದಟ್ಟಾಗುವಂತೆ ಮಾಡಬೇಕೆಂದು ತಿಳಿಯಿಸಿದರು. ಈ ವಿಷಯದಲ್ಲೂ ಸರ್ವಾನುಮತದಿಂದ ನಿರ್ಧಾರವಾಯಿತು.

“ ಮತಗ್ರಂಥ ಪ್ರಕಟನೆ ’’ ಈ ವಿಷಯವಾಗಿ ದಾವಣಗೆರೆಯ **ಮ|| ಮಾಗಾನಹಳ್ಳಿ ದೊಡ್ಡಬಸಪ್ಪನವರು ಒಳ್ಳೇ ಆವೇಶಪೂರ್ಣವಾಗಿ ಭಾಷಣಮಾಡಿ, ಪಾಶ್ಚಾತ್ಯ ಪೌರ್ವಾತ್ಯ ಮತತತ್ವಗ್ರಂಥಗಳನ್ನೆಲ್ಲಾ ನಾನು ಚೆನ್ನಾಗಿ ಬಹುಕಾಲ ಪರಿಶೀಲಿಸಿ ನೋಡಿರುವೆನೆಂತಲೂ ನಮ್ಮ ಮತದ ಶಿವಾದ್ವೈತ ಸಿದ್ಧಾಂತವು ಎಲ್ಲ ಸಿದ್ಧಾಂತಗಳಿಗಿಂತಲೂ ಮತ್ತು ಶಂಕರಾಚಾರ್ಯರ ಅದ್ವೈತಮತ ತತ್ವಕ್ಕಿಂತಲೂ ಉನ್ನತವಾಗಿ ಕಂಡುಬಂದಿರುವುದೆಂತಲೂ, ನಮ್ಮ ಸಿದ್ಧಾಂತ ಶಿಖಾಮಣಿಯಲ್ಲಿ ಆ ತತ್ವದ ಸರ್ವೋ**

ತ್ಕೃಷ್ಟತೆಯು ಚೆನ್ನಾಗಿ ನಿರೂಪಿತವಾಗಿರುವುದೆಂತಲೂ, ನಾನಾ ಮತಗಳ ತತ್ತ್ವಗಳನ್ನು ಪರಸ್ಪರ ಹೋಲಿಸುವಮೂಲಕ ನಮ್ಮ ಮತತತ್ವದ ಸರ್ವೋತ್ಕೃಷ್ಟತೆಯು ಸ್ವಮತ ಪರಮತದವರಿಗೆಲ್ಲಾ ಗೊತ್ತಿಗೆ ಬರುವಂತೆ ನೂತನ ಗ್ರಂಥವನ್ನು ಈ ನಾಗರಿಕ ಕಾಲಕ್ಕೆ ಅನುಗುಣವಾಗಿ ನಮ್ಮವರಿಂದ ಬರೆಯಿಸಿ ಪ್ರಕಟಿಸುವುದು ಅತ್ಯಾವಶ್ಯಕವೆಂತಲೂ, ಇದಕ್ಕೆ ತಕ್ಕ ಏರ್ಪಾಟನ್ನು ಮಹಾಸಭೆಯು ನಡೆಯಿಸಬೇಕೆಂತಲೂ ಸೂಚಿಸಿದರು. ದಾವಣಗೆರೆಯ ವೇ|| ಚಂದ್ರಶೇಖರ ಶಾಸ್ತ್ರಿಗಳು ಅನುಮೋದನವಿತ್ತರು. ಸರ್ವಾನುಮತದಿಂದ ತೀರ್ಮಾನವಾಯಿತು.

“ ಮತದ ಐಕಮತ್ಯರಕ್ಷಣೆ ” ಈ ವಿಷಯವಾಗಿ ಬೆಂಗಳೂರಿನ ಮ|| ಜಿ. ರುದ್ರಪ್ಪ ಎಂ. ಎ. ಯವರು ಉಪನ್ಯಾಸ ಮಾಡುವಾಗ್ಗೆ-ಮತದಲ್ಲಿ ಐಕಮತ್ಯವು ಬರಿಯ ಬಾಯ್ಮಾತಿನಿಂದಲೇ ಸಾಧ್ಯವಾಗುವುದಿಲ್ಲವೆಂತಲೂ ಮಾತಿನಲ್ಲಿರುವಂತೆಯೇ ಮನಸ್ಸಿನಲ್ಲಿಯೂ ಸಹೋದರಭಾವವು ಸರ್ವತ್ರ ಇರಬೇಕೆಂತಲೂ, ಸರ್ವಭ್ರಾತೃತ್ವವರ್ಧನಕ್ಕಾಗಿಯೇ ಒಂದೊಂದು ಮತಗಳು ಪ್ರತ್ಯೇಕಪ್ರತ್ಯೇಕವಾಗಿ ಏರ್ಪಟ್ಟಿವೆಯೆಂತಲೂ ಹೇಳಿ, ಈಗ ಉಂಟಾಗಿರುವ ಒಡಕು ಮತಕ್ಕೆ ವಿಘಾತಕವಾಗಿರುವುದರಿಂದ ಮತದಲ್ಲಿ ಒಡಕನ್ನು ಹುಟ್ಟಿಸುವುಕ್ಕೆ ಯಾವುದೇ ತೆರದ ಪ್ರಯತ್ನಗಳನ್ನು ಯಾರು ಮಾಡಿದರೂ ಅದನ್ನು ಮಹಾಸಭೆಯು ನಿಷೇಧಿಸುವುದೆಂತಲೂ ರೆಜಲ್ಯೂಷನನ್ನು ಸೂಚಿಸಿದರು. ಅದಕ್ಕೆ ಮೈಸೂರ ವೇ|| ಎಚ್. ಆರ್. ಕರಿಬಸವಶಾಸ್ತ್ರಿಗಳು ಅನುಮೋದನೆಯಿತ್ತರು. ಸರ್ವಾನುಮತದಿಂದ ಪ್ಯಾಸಾಯಿತು.

“ ವಿದ್ಯಾಪ್ರಸಾರ ಪ್ರೋತ್ಸಾಹ ” ಈ ವಿಷಯದ ಮೇಲೆ ಮ|| ಕೆ. ಸಿದ್ಧರಾಮಪ್ಪ ಬಿ.ಎ. ಯವರು ಒಂದು ಉಪನ್ಯಾಸವನ್ನು ಮಾಡಿ ವಿದ್ಯಾಬಲದಲ್ಲಿ ಹಿಂದುಳಿದವರಿಗೆ ಆಗುವ ಅನರ್ಥಗಳನ್ನೂ ವಿದ್ಯಾವಂತರಾಗಿರುವವರಿಗೆ ಉಂಟಾಗುವ ಲಾಭಗಳನ್ನೂ ವಿವರಿಸಿ, ನಮ್ಮಲ್ಲಿ ಓದತಕ್ಕವರಿಗೆ ಸಕಲ ವಿಧದಿಂದಲೂ ಎಂದರೆ ಹಾಸ್ಟೆಲ್ಲುಗಳ ನಿರ್ಮಾಣ, ವಿದ್ಯಾರ್ಥಿವೇತನಗಳ ಪ್ರದಾನ, ಅನ್ನಸಾಹಾಯ್ಯ ಇತ್ಯಾದಿಗಳನ್ನು ವಿಶೇಷವಾಗಿ ಮಾಡಬೇಕಾಗಿದೆಯೆಂತಲೂ, ಅದಕ್ಕಾಗಿ ಧನರಾಶಿಯು ಸಮೃದ್ಧವಾಗಿ ಕೂಡಿಸಲ್ಪಡಬೇಕೆಂತಲೂ, ಹಾಗೆ ಹಣವನ್ನು ಕೂಡಿಸುವುದಕ್ಕೆ ತಕ್ಕ ಉಪಾಯವನ್ನು ನಾವುಗಳು ಚಿಂತಿಸಬೇಕಾಗಿರುವುದೆಂತಲೂ, ನನಗೆ ತೋರುವ ಸಮೀಚೀನವಾದ ಉಪಾಯವಾವುದೆಂದರೆ-ವಿದ್ಯಾಪ್ರಸಾರಕಾರ್ಯಕ್ಕಾಗಿ ೧೦ ಸಾವಿರ ರೂ. ಗಳಿಗೆ ಕಡಿಮೆಯಿಲ್ಲದೆ ಯಾರು ದಾನಮಾಡಿದರೂ ಅಂಥವರ ಭಾವಚಿತ್ರವನ್ನು ಪ್ರತಿ ಮಹಾಸಭಾ ಮಂಟಪದಲ್ಲೂ ಎಲ್ಲರಿಗೂ ಕಾಣುವಂತೆ ಕಟ್ಟುವ ಏರ್ಪಾಡಿನ ಪ್ರೋತ್ಸಾಹವನ್ನು ಕಲ್ಪಿಸಬೇಕೆಂತಲೂ, ಈ ವಿಷಯಕ್ಕೆ ಒಂದು ರೆಜಲ್ಯೂಷನ್ ಆಗಬೇಕೆಂತಲೂ ಸೂಚಿಸಿದರು. ಇದರಮೇಲೆ ಮ|| ಹುಲಕೋಟಿ ಬಿ.ಎ., ಎಲ್.ಎಲ್.ಬಿ., ಯವರೇ ಮೊದಲಾದ ಔತ್ತರೀಯರು ಕೆಲರು ಆಕ್ಷೇಪವನ್ನು ತೆಗೆದು ಮಾತಾಡಿದರು. ಅವರು ಆಕ್ಷೇಪಿಸಿದ ಕಾರಣಗಳಾವುವೆಂದರೆ- ಹೀಗೆ ಮಾಡಲಿಕ್ಕೆ ಹತ್ತಿದರೆ ನಮಗೆ ಮಂಟಪದಲ್ಲಿ ಭಾವಚಿತ್ರಪಟಗಳನ್ನು ಕಟ್ಟಲಿಕ್ಕೆ ಸ್ಥಲವೇ ಸಾಲದೆಹೋದೀತು. ಮತ್ತು ನಮ್ಮ ಮತದ ಒಬ್ಬ ಸ್ವಾಮಿಗಳು ೧೦ ಸಾವಿರ ರೂ. ಗಳನ್ನು ಕೊಟ್ಟರೆ ಇನ್ನೊಬ್ಬ ಸಾಧಾರಣ ಗೃಹಸ್ಥರು ೨೦ ಸಾವಿರ ರೂ. ಗಳನ್ನು ಕೊಟ್ಟರೆ, ಆ ಸ್ವಾಮಿಗಳ ಪಟದಮೇಲೆ ಗೃಹಸ್ಥನ ಪಟವನ್ನು ಕಟ್ಟಬೇಕಾದೀತು. ಮತ್ತು ೧೦ ಸಾವಿರ ಕನಿಷ್ಠಪರಿಮಾಣವನ್ನು ಕಲ್ಪಿಸಿದರೆ ೪-೫ ಸಾವಿರ ಕೊಡಬೇಕೆನ್ನುವವರಿಗೆ ಅವಕಾಶವಿಲ್ಲದೆ ಹೋದೀತು--ಇತ್ಯಾದಿ. ಇದರಮೇಲೆ ಮೈಸೂರಿನ ಕೆಲ ವಿದ್ಯಾಧಿಕರು ವಿರೋಧಿಸಿ ಮಾತನಾಡಿದುದರಲ್ಲಿ--ಮ|| ಸಿದ್ಧರಾಮಪ್ಪನವರ ಅತ್ಯುಪಯೋಗಕರವಾದ ಸೂಚನೆಯನ್ನು ನಿರೋಧಿಸುವುದಕ್ಕೆ ಈ ಕಾರಣಗಳೊಂದೂ ಸಮರ್ಥವಲ್ಲವೆಂದೂ, ನಮ್ಮ ಸಭಾಮಂಟಪದಲ್ಲಿ ಕಟ್ಟಿಸಲು ಹಿಡಿಸಲಾರದಷ್ಟು ಭಾವಚಿತ್ರಗಳು ಲಭಿಸುವಾಗ್ಗೆ ನಮಗೆ ಎಷ್ಟೋ ಕೋಟ್ಯಂತರ ರೂ. ಗಳು ಕೂಡಿಹೋಗುವುವೆಂತಲೂ, ಆಗ್ಗೆ ಇಂಥ ಮಹಾಸಭಾಮಂಟಪಗಳನ್ನು ಇನ್ನು ಮೂರು ನಾಲ್ಕನ್ನೂ ಕೂಡ ಹಾಕಿಸಬಹುದೆಂತಲೂ, ಇದು ಹಣದ ತರಗತಿಯಾದುದರಿಂದ, ಹೆಚ್ಚು ಹಣವನ್ನು ಕೊಟ್ಟವರು ಯಾರೇ ಆಗಲಿ ಅವರ ಭಾವಚಿತ್ರಗಳನ್ನು ಮೇಲೆ ಕಟ್ಟಲು ಯಾರೂ ಅಭ್ಯಂತರ ಹೇಳಲಾರರೆಂತಲೂ, ಹಣದ ಕನಿಷ್ಠಪರಿಮಾಣವನ್ನು ಹತ್ತುಸಾವಿರದಿಂದ ತಪ್ಪಿಸಿ ಬೇಕಾದರೆ ೫ ಸಾವಿರಕ್ಕೆ ಇಳಿಸಬಹುದೆಂತಲೂ ಮೊದಲಾಗಿ ಹೇಳಿದರು. ಇದರಮೇಲೆ ವಾದಾನುವಾದಗಳು ನಡೆಯುತ್ತಿರಲು, ಅಲ್ಲಿಗೆ ರಾತ್ರಿ ೭ ಗಂಟೆಯಾದುದರಿಂದ ಅಂದಿನ ಸಭಾಕಾರ್ಯವನ್ನು ಅಲ್ಲಿಗೆ ಮುಗಿಸುತ್ತೇವೆಂತಲೂ, ಈ ವಿಷಯವನ್ನೂ ಇತರ ವಿಷಯಗಳ ರೆಜಲ್ಯೂಷನ್ನುಗಳನ್ನೂ ಮರುದಿನ ಬೆಳಗಿನ ೮ ಗಂಟೆಗೆ ಇಟ್ಟುಕೊಳ್ಳಬಹುದೆಂತಲೂ ಸಭಾಧ್ಯಕ್ಷರು ಅಪ್ಪಣೆ ಕೊಡಿಸಿ ಸಭೆಯನ್ನು ಮುಗಿಸಿದರು.

ತಾ|| ೩೦ ನೆ ಮಂಗಳವಾರ.

ಈ ದಿನ ಬೆಳಗಿನ ೮ ಗಂಟೆಗೆ ಮರಳಿ ಸಭೆಯು ಕೂಡಿತು. ಆದರೆ ಸಭಾಸದರ ಸಂಖ್ಯೆಯು ಅರ್ಧಭಾಗ ಕಡಿಮೆಯಾಗಿದ್ದಿತು. ಸಭಾಧ್ಯಕ್ಷರು ಪೀಠವನ್ನಲಂಕರಿಸಿದ ಬಳಿಕ ಮ|| ಕೆ. ಸಿದ್ಧರಾಮಪ್ಪನವರ ಸೂಚನೆಯನ್ನು ಕೆಲ ಕಾರಣಗಳಿಂದ ಮುಂದಣ ಮಹಾಸಭೆಗೆ ಇಟ್ಟುಕೊಳ್ಳಬಹುದೆಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದುದರಿಂದ ಅವರ ವಾದವು ಅಲ್ಲಿಗೆ ನಿಂತಿತು. ಈ ಮಧ್ಯದಲ್ಲಿ ತುಮಕೂರು ತಾ|| ಶೆಟ್ಟಿಕೆರೆ ಯಜಮಾನ್ ಸಿದ್ಧಪ್ಪನವರ ಕುಮಾರಿ ಗಂಗಮ್ಮನೆಂಬ ೧೦ ವರ್ಷ ವಯಸ್ಸಿನ ಹೆಣ್ಣುಮಗಳು ಸ್ತ್ರೀವಿದ್ಯಾಪ್ರಸಾರದ ಅವಶ್ಯಕತೆಯ ವಿಷಯವಾಗಿ ಒಂದು ನಿಬಂಧವನ್ನು ಸುಶ್ರಾವ್ಯವಾಗಿ ಸಭೆಯಲ್ಲಿ ಓದಿದುದನ್ನೂ ಮ|| ಜಿ. ಕೆ. ರುದ್ರಾರ್ಯರ ೬-೭ ವರ್ಷದ ಒಂದು ಗಂಡುಮಗುವು ಆಂಗ್ಲಭಾಷೆಯಲ್ಲಿ ಬರೆದಿದ್ದ ಒಂದು ಪುಟ್ಟ ಲೇಖನವನ್ನು ಧೈರ್ಯವಾಗಿ ಓದಿದುದನ್ನೂ ಕೇಳಿ ಸಭಿಕರೆಲ್ಲಾ ಸಂತೋಷಪಟ್ಟರು.

ಬಳಿಕ ಮೈಸೂರು ಸಂಸ್ಥಾನದಲ್ಲಿ ಶ್ರೀಮನ್ಮಹಾರಾಜರವರು ಲೋವರ್ ಸೆಕೆಂಡರಿಯವರೆಗೂ ವಿದ್ಯಾಭ್ಯಾಸವನ್ನು ಸರ್ವರಿಗೂ ಉಚಿತವಾಗಿ ನಡೆಯಿಸುವುದಕ್ಕೆ ಉದಾರವಾದ ಅಪ್ಪಣೆಯನ್ನಿತ್ತಿರುವುದರಿಂದಲೂ, ಹಿಂದುಳಿದವರ ವಿದ್ಯಾಭ್ಯಾಸಕ್ಕಾಗಿ ವಿಶೇಷಗಳಾದ ಪ್ರೋತ್ಸಾಹಗಳನ್ನು ಕಲ್ಪಿಸಿರುವುದರಿಂದಲೂ, ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ನಮ್ಮ ಮಹಾಸಭಾಪರವಾದ ವಂದನೆಯನ್ನು ಅರ್ಪಿಸಬೇಕಲ್ಲದೆ, ವಿದ್ಯಾಭ್ಯಾಸದ ಇಲಾಖಾ ಇನ್|| ಜನರಲ್‌ರವರಾದ ಮಿ|| ರಾಮಲಿಂಗರಡ್ಡಿ ಎಂ.ಎ ಯವರು ಸಂಸ್ಥಾನದಲ್ಲಿ ವಿದ್ಯಾಪ್ರಸಾರವು ಸಾರ್ವತ್ರಿಕವಾಗಿ ಸಾಗುವುದಕ್ಕೆ ಸಾಧಕವಾಗುವಂತೆ ಹೊಸದಾಗಿ ಒಂದು ಸ್ಕೀಮನ್ನು ಕಲ್ಪಿಸಿಕೊಟ್ಟು ಸರ್ಕಾರಕ್ಕೆ ಒಪ್ಪಿಸಿರುವುದೂ, ಅದರಲ್ಲಿ ಕಂಡ ಏರ್ಪಾಟುಗಳೂ ನಮ್ಮ ಮಹಾಸಭೆಗೆ ಒಪ್ಪುಗೆಯಾಗಿರುವುವೆಂತಲೂ, ಅದನ್ನು ಸಾಧ್ಯವಾದಷ್ಟು ಬೇಗನೆ ಸಂಸ್ಥಾನದಲ್ಲಿ ವ್ಯವಹಾರಕ್ಕೆ ತರಿಸುವುದಕ್ಕೆ ಸರ್ಕಾರದವರು ಪ್ರಯತ್ನಿಸಬೇಕೆಂತಲೂ ಪ್ರಾರ್ಥಿಸುವುದಲ್ಲದೆ, ನಮ್ಮ ಸಮಾಜದಲ್ಲಿ ಸಾವಿರಾರು ವರ್ಷಗಳಿಂದಲೂ ಸಂಸ್ಕೃತಭಾಷೆಯಲ್ಲಿ ಮಹಾ ಮಹಾ ಪಂಡಿತರುಗಳಿದ್ದು ಅಸಂಖ್ಯಾಕಗ್ರಂಥಗಳನ್ನು ರಚಿಸಿರುವುದು ಸರ್ವತ್ರ ವಿದಿತವಾಗಿರುವ ಕಾರಣದಿಂದ, ಗೀರ್ವಾಣಭಾಷೆಯು ನಮ್ಮ ಮತಸ್ಥರಿಗೆ ಅವಶ್ಯಕವಾದ ಭಾಷೆಯಾಗಿರುವುದೆಂತಲೂ, ಈಗ ನಮ್ಮ ಮತದವರು ಅಲ್ಲಲ್ಲಿ ಕೆಲವು ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿಕೊಂಡಿದ್ದರೂ ಅವುಗಳಲ್ಲಿ ಬಾಲತರಗತಿಯ ಮತ್ತು ಮಧ್ಯಮತರಗತಿಯ ಪಾಠಗಳನ್ನು ಮಾತ್ರ ಕಲಿಯಲು ಸಾಧ್ಯವಾಗುತ್ತಿದೆಯೇ ಹೊರತು ಪ್ರೌಢ ತರಗತಿಯ ಶಾಸ್ತ್ರೀಯ ಪಾಠಗಳನ್ನು ಕಲಿಯಲು ಅನುಕೂಲ್ಯವಿಲ್ಲವೆಂತಲೂ, ಅದಕ್ಕೆ ತಕ್ಕ ಕಾಲೇಜನ್ನು ಸ್ಥಾಪಿಸುವುದು ಸಮಾಜದವರಿಗೆ ಸುಲಭಸಾಧ್ಯವಾಗಿಲ್ಲವೆಂತಲೂ, ಅದುಕಾರಣ ನಮ್ಮ ಮತದ ವಿದ್ಯಾರ್ಥಿಗಳನ್ನು ಮೈಸೂರು, ಬೆಂಗಳೂರಿನ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ಸೇರಿಸಿ ವಿದ್ಯಾಭ್ಯಾಸ ಮಾಡಿಸಲು ಅವಕಾಶವನ್ನು ಕೊಡಿಸುವಂತೆ ನಮ್ಮ ಸರ್ಕಾರದವರನ್ನು ಪ್ರಾರ್ಥಿಸಬೇಕೆಂತಲೂ ಸಹ ಈ ಸೂಚನೆಯನ್ನು ಮೈಸೂರಿನ ವೇ|| ಎಚ್. ಆರ್. ಕರಿಬಸವಶಾಸ್ತ್ರಿಗಳು ತಂದರು. ಅದನ್ನು ಮ|| ಅಡ್ವೋಕೇಟ್ ಜಿ. ಪರಶಿವಯ್ಯ ಬಿ.ಎ., ಎಲ್.ಎಲ್.ಬಿ. ಯವರು ಅನುಮೋದಿಸಲಾಗಿ ಸರ್ವಾನುಮತದಿಂದ ಪ್ಯಾಸಾಯಿತು.

“ ನಮ್ಮವರಲ್ಲಿ ವಿದ್ಯಾವಂತರಾಗಿ ಬಂದ ಅರ್ಹರಿಗೆ ಸರ್ಕಾರಿ ಉದ್ಯೋಗಗಳನ್ನು ಕೊಡಲು ಅನುಕೂಲವಾದ ಬರವಸೆಯನ್ನು ಬೊಂಬಾಯಿ ಗೌರ್ನರವರು ಮೊನ್ನೆತಾನೇ ಕೊಟ್ಟಿರುತ್ತಾರೆ. ಅದರಂತೆ ಮೈಸೂರು ಹೈದರಾಬಾದು ಮದ್ರಾಸು ಸರ್ಕಾರಗಳವರು ಕೂಡ ಹೀಗೆಯೇ ಅನುಕೂಲ್ಯವನ್ನು ಅಲ್ಲಲ್ಲಿಯ ವೀರಶೈವ ವಿದ್ಯಾವಂತರಿಗೆ ಮಾಡಿ ಕೊಡಬೇಕೆಂಬುದಾಗಿ ಆಯಾ ಸರ್ಕಾರಗಳನ್ನು ಪ್ರಾರ್ಥಿಸಬೇಕೆಂದು ಮಹಾಸಭೆಯು ಅಭಿಪ್ರಾಯಪಡುತ್ತದೆ.” ಎಂಬ ಸೂಚನೆಯನ್ನು ಮಿ|| ಹುಲಕೋಟಿ ವಕೀಲರವರು ತಂದರು. ಇದಕ್ಕೆ ಬೇರೆ ಬೇರೆ ಜನರು ಅನುಮೋದನೆಯನ್ನೂ ಪುಷ್ಟಿಯನ್ನೂ ಕೊಟ್ಟು ಭಾಷಣ ಮಾಡಿದಬಳಿಕ ಸರ್ವಾನುಮತದಿಂದ ಪ್ಯಾಸಾಯಿತು.

“ ಮಹಾ ಯುದ್ಧಕಾಲದಲ್ಲಿ ಬೊಂಬಾಯಿ ಕರ್ನಾಟಕದಲ್ಲಿ ವೀರಶೈವರ ಒಂದು ಪಟಾಲಮ್ಮು ಸಿದ್ಧಮಾಡಲ್ಪಟ್ಟಿದ್ದು ಅದು ಯಶಸ್ಕರವಾಗಿ ಕೆಲಸವನ್ನು ಮಾಡಿರುವುದು. ಈಗ ಯುದ್ಧ ಮುಗಿದುದರಿಂದ ಅದನ್ನು ತೆಗೆದುಹಾಕದೆ ಹಾಗೆಯೇ ಶಾಶ್ವತವಾಗಿ ಉಳಿಯಿಸಿರುವಂತೆ ಸರ್ಕಾರದವರನ್ನು ಮಹಾಸಭೆಯು ಪ್ರಾರ್ಥಿಸುತ್ತದೆ ” ಎಂಬ ಸೂಚನೆಯನ್ನು ಮ|| ಚೆನ್ನಬಸಪ್ಪ ತಿರಹಟ್ಟಿಯವರು ಮಾಡಿದರು. ಅದನ್ನು ಮ|| ಒಡೆಯರ್‌ರವರು ಅನುಮೋದಿಸುವಾಗ್ಗೆ- ನಾನು ಆ ಕಾಲದಲ್ಲಿ ರಿಕ್ರೂಟಿಂಗ್ ಆಫೀಸರಾಗಿದ್ದೆನೆಂತಲೂ, ಆ ಪಟಾಲಮ್ಮಿಗೆ ನಮ್ಮ ಮತದ ೪೦೦ ಜನರು ಯುದ್ಧಮಾಡುವ ಭಟರಾಗಿಯೂ ೫೦೦ ಮಂದಿಯವರೆಗೆ ಸೇವಕರಾಗಿಯೂ ಸೇರಿದ್ದರೆಂತಲೂ, ಅವರೆಲ್ಲಾ ಶೌರ್ಯದಿಂದಲೂ ಪ್ರಾಮಾಣಿಕರಾಗಿಯೂ ಕೆಲಸ ಮಾಡಿರುವರೆಂತಲೂ, ನಮ್ಮ ಮತದ ಈ ಪಟಾಲಮ್ಮನ್ನು ಸರ್ಕಾರದವರು ಶಾಶ್ವತವಾಗಿ ಉಳಿಯಿಸಿಕೊಟ್ಟರೆ ನಮ್ಮ ಮತದ ಪೂರ್ವಿಕರಲ್ಲಿದ್ದ ಕ್ಷಾತ್ರತೇಜಸ್ಸು ಈಗಲೂ ಕಾಪಾಡಲ್ಪಟ್ಟಂತೆ ಆಗುವುದೆಂತಲೂ, ಅದುಕಾರಣ ಈ ಪ್ರಾರ್ಥನೆಯನ್ನು ಸರ್ಕಾರಕ್ಕೆ ಮಾಡಲು ನಾನು ಅನುಮೋದಿಸುತ್ತೇನೆಂತಲೂ ಹೇಳಿದರು. ಇದನ್ನು ಮ|| ಹೆಚ್. ಕೆ. ಮಲ್ಲಪ್ಪನವರು ಪುಷ್ಟೀಕರಿಸಲು ಸರ್ವಾನುಮತದಿಂದ ಪ್ಯಾಸಾಯಿತು.

ಬಳಿಕ ವ್ಯವಸಾಯ ವಿಷಯದಲ್ಲೂ ಔದ್ಯೋಗಿಕಾಭಿವೃದ್ಧಿಯ ವಿಷಯವಾಗಿಯೂ ಪ್ರತ್ಯೇಕಪ್ರಾತಿನಿಧ್ಯ ವಿಷಯವಾಗಿಯೂ ಸೂಚನೆಗಳೂ ರೆಜಲ್ಯೂಷನ್ನುಗಳೂ ಆದುವು. ವ್ಯವಸಾಯ ವಿದ್ಯೆಯಲ್ಲಿ ಓದಿ ಪರೀಕ್ಷೆ ಕೊಟ್ಟಿರುವ ವೀರಶೈವರನ್ನು ವ್ಯವಸಾಯ ಶಾಖೆಯ ಸರ್ಕಾರಿ ಉದ್ಯೋಗಸ್ಥಾನಗಳಿಗೆ ಸೇರಿಸಿಕೊಳ್ಳಬೇಕೆಂದು ಮಹಾಸಭೆಯು ಪ್ರಾರ್ಥಿಸುತ್ತದೆಂದು ರೆಜಲ್ಯೂಷನ್ನಾಯಿತು.

ಗೊತ್ತಾಗಿದ್ದ ವಿಷಯಗಳ ಮೇಲೆ ಅನೇಕರು ಭಾಷಣಗಳನ್ನು ಬರೆದು ಕಳುಹಿಸಿದ್ದರು. ಅವುಗಳನ್ನೆಲ್ಲಾ ಓದಲು ಅನವಕಾಶವಿಲ್ಲದುದರಿಂದ ಅವುಗಳಲ್ಲಿ ಉತ್ತಮವಾದುವುಗಳನ್ನು ವರದಿಯಲ್ಲಿ ಮುದ್ರಣ ಮಾಡಿಸಲಾಗುತ್ತದೆಂದು ತಿಳಿಯಿಸಿ ಹಾಗೆಯೇ ಇಟ್ಟರು. ಅಲ್ಲಿಗೆ ೧೦ ಗಂಟೆಯ ಹೊತ್ತಾದುದರಿಂದಲೂ ಬಹುಜನರು ಆಗಿನ ಮಧ್ಯಾಹ್ನವೇ ಸ್ವಸ್ಥಲಗಳಿಗೆ ಪ್ರಯಾಣಮಾಡಬೇಕಾದ ಅವಶ್ಯಕತೆಯನ್ನು ತಿಳಿಯಿಸಿದುದರಿಂದಲೂ ಅಧ್ಯಕ್ಷರು ಸಭಾಕಾರ್ಯವನ್ನು ಅಲ್ಲಿಗೆ ಪರಿಸಮಾಪ್ತಿಮಾಡಿ ಕಡೆಗೆ ಎದ್ದುನಿಂತು ಉಪಸಂಹಾರಭಾಷಣವನ್ನು ಹೀಗೆ ಮಾಡಿದರು.--ಮಹಾಸಭಾಕಾರ್ಯಕ್ಕಾಗಿ ಈ ಊರಿಗೆ ಬಂದಿದ್ದ ಪ್ರತಿನಿಧಿಗಳು ಮೊದಲಾದವರೆಲ್ಲಾ ಇಲ್ಲಿ ತಮಗುಂಟಾದ ಹಲವು ಬಗೆಯ ಅನನುಕೂಲಗಳನ್ನೆಲ್ಲಾ ಸಹಿಸಿಕೊಂಡಿರುತ್ತಾರೆ. ಸ್ವಾಗತಸಂಘದವರು ಊಟ ನಿದ್ರೆಗಳ ಪರಿವೆಯೂ ಕೂಡ ಇಲ್ಲದೆ ಬಹಳ ಶ್ರಮಪಟ್ಟು ಕೆಲಸಮಾಡಿದ್ದಾರೆ. ಆದರೂ ಅನೇಕ ಪರಸ್ಥಲದ ಜನರಿಗೆ ಆಹಾರಪಾನ ಮೊದಲಾದ ವಿಷಯದಲ್ಲಿ ತ್ರಾಸವುಂಟಾಯಿತೆಂದು ನನಗೆ ತಿಳಿದುಬಂದಿದೆ. ಮತದ ಮಹಾಕಾರ್ಯವಾದುದರಿಂದ ಅವರುಗಳೆಲ್ಲಾ ಆ ಕೊರತೆಯ ಸಂಬಂಧವಾಗಿ ಮನಸ್ಸಿಗೆ ಹಚ್ಚಿಕೊಳ್ಳಲಾರರೆಂದು ನಂಬುತ್ತೇನೆ. ಈಸಲದ ಸಭೆಯಲ್ಲಿ ಕೆಲವು ವಿಷಯಗಳ ಸಂಬಂಧವಾಗಿ ತೀವ್ರವಾದ ಚರ್ಚೆಗಳು ನಡೆದಿರುತ್ತವೆ. ಇವುಗಳು ೨ ಪಕ್ಷವನ್ನುಂಟುಮಾಡಿದಂತೆ ಭಾಸವಾಗುತ್ತಿರಲಿಕ್ಕು ಸಾಕು. ಆದರೆ ಇದು ಶುಭಲಕ್ಷಣವೇ ಹೊರತು ಅನಿಷ್ಟಲಕ್ಷಣವಲ್ಲ. ಉಭಯಪಕ್ಷದವರೂ ಮನಮುಟ್ಟಿ ವಿಶೇಷವಾಗಿ ಚರ್ಚೆಮಾಡಿದ ಬಳಿಕ ಯಾವ ಠರಾವನ್ನೂ ಪ್ಯಾಸ್ ಮಾಡುವುದೇ ಉತ್ತಮ. ಏಕದಂ ಪ್ಯಾಸಾಗುವ ಠರಾವಿಗಿಂತಲೂ ಇಂಥ ಠರಾವುಗಳಿಗೇ ಬೆಲೆ ಹೆಚ್ಚು. ಈ ಸಭೆಗೆ ಹಿಂದಣ ಸಭೆಗಳಿಗಿಂತಲೂ ಹೆಚ್ಚಾಗಿ ಪ್ರತಿನಿಧಿಗಳು ಬಂದಿದ್ದರೆಂದು ತಿಳಿಯುತ್ತೇನೆ. ಇದು ಸಂತೋಷಕರವಾದುದು. ಸ್ವಾಗತಸಂಘದವರು ಮಾಡಿದ ಶ್ರಮಕ್ಕೆ ಇದು ತಕ್ಕ ಫಲವಾಗಿದೆ. ಮಹಾಸಭಾಕಾರ್ಯವನ್ನು ಮುತುವರ್ಜಿಯಿಂದ ನಡೆಯಿಸಲು ಸ್ವಾಗತಸಂಘದವರು ಕೈಲಾದಷ್ಟು ಪ್ರಯತ್ನಗಳನ್ನೆಲ್ಲಾ ಮಾಡಿದುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ವಾಲಂಟಿಯರುಗಳು ಬೇರೆಬೇರೆ ಕಡೆಗಳಿಂದ ಬಂದು ಸಮಾಜಸೇವೆಯ ಕೆಲಸದಲ್ಲಿ ತಮ್ಮ ಶ್ರಮಗಳೊಂದನ್ನೂ ಲಕ್ಷಿಸದೆ ಎಲ್ಲ ಜನರಿಗೂ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡುವಲ್ಲಿ ತುಂಬಾ ಶ್ರದ್ಧೆಯನ್ನು ತೋರಿಸಿದುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ನಮ್ಮ ಮೈಸೂರಿನ ಸಮಾಜಬಾಂಧವರು ವಿದ್ಯೆಯ ಕಡೆಗೆ ವಿಶೇಷ ಲಕ್ಷ್ಯಕೊಟ್ಟಿರುವರೆಂದು ನನಗೆ ಕಂಡುಬಂದು ಸಂತೋಷವನ್ನುಂಟುಮಾಡಿರುತ್ತದೆ. ಈಗ ೧೬ ಮಂದಿಗಳು ಬಿ.ಎ. ತರಗತಿಯಲ್ಲಿ ಓದುತ್ತಿರುವರೆಂದು ಕೇಳುತ್ತೇನೆ. ಇನ್ನೂ ವಿದ್ಯಾಭಿವೃದ್ಧಿಯೂ ಅದರ ಪ್ರಯತ್ನಗಳೂ ಹೆಚ್ಚಿಗೆ ಸಾಗಲೆಂದು ಹಾರೈಸುತ್ತೇನೆ. ವಿದ್ಯಾಪ್ರಸಾರದ ಕಡೆಗೆ ಈ ಊರಿನ ಮತ್ತು ದಾವಣಗೆರೆಯ ಸಾವಕಾರ ಮಂಡಲಿಯವರು ವಿಶೇಷ ಲಕ್ಷ್ಯಕೊಟ್ಟಿರುತ್ತಾರೆ. ಇದು ಪ್ರಶಂಸನೀಯವಾಗಿದೆ. ಎಲ್ಲ ಕಡೆಯವರೂ ಹೀಗೆಯೇ ಪ್ರಯತ್ನಿಸಲಿಕ್ಕೆ ಬೇಕು. ತುಮಕೂರಿನ ವಕೀಲರಾದ ಮ|| ಗುರುಸಂಗಾರ್ಯರ ವಿದ್ಯಾಭಿಮಾನವು ಅಭಿನಂದನೀಯವಾಗಿದೆ. ಅವರು ತಮ್ಮ ಸಂಸ್ಥಾನದಲ್ಲಿ ಎಂಟರೆನ್ಸ್ ಪರೀಕ್ಷೆಯಲ್ಲೂ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲೂ ನಮ್ಮ ಸಮಾಜದ ವಿದ್ಯಾರ್ಥಿಗಳಲ್ಲಿ ಮೊದಲನೆಯವರಾಗಿ ಬಂದ ಇಬ್ಬರು ವಿದ್ಯಾರ್ಥಿಗಳಿಗೆ ಕೈ|| ಯಜಮಾನ ವೀರಸಂಗಪ್ಪನವರ ಮತ್ತು ತಮ್ಮ ತಂದೆಯವರ ಹೆಸರಿನ ಮೇಲೆ ಒಂದೊಂದು ಬಹುಮಾನಗಳನ್ನು ಕೊಡಲಿಕ್ಕೆ ಏರ್ಪಡಿಸಿರುವುದೂ ಅದರಂತೆ ಈ ಸಭೆಯಲ್ಲಿ ಆಯಾ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಟ್ಟಿರುವುದೂ ನಿಮಗೆಲ್ಲಾ ಗೊತ್ತೇ ಇದೆ. ಇಂಥ ಏರ್ಪಾಟನ್ನು ಮಾಡಿದ ಗುರುಸಂಗಾರ್ಯರನ್ನು ನಾನು ಅಭಿನಂದಿಸುತ್ತೇನೆ.

ಮುಖ್ಯವಾಗಿ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಈ ಮಹಾಸಭೆಯ ಕೆಲಸದಲ್ಲಿ ನಮಗೆ ಎಷ್ಟು ಸಹಾಯಮಾಡಿದರೆಂಬುದನ್ನು ನಾನು ವರ್ಣಿಸಲಾರೆ. ಅವರು ಇಲ್ಲದಿದ್ದರೆ ಈಸಲದ ಸಭೆಯು ಇಷ್ಟುಮಟ್ಟಿಗೆ ಶಾಂತಿಯಿಂದ ನಡೆಯುತ್ತಲೇ ಇರಲಿಲ್ಲ. ಅವರ ಶಾಂತಸ್ವಭಾವವೂ ಅನುಭವವೂ ನಮಗೆ ವಿಶೇಷ ಸಹಾಯಮಾಡಿತು. ಅದಕ್ಕಾಗಿ ಅವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಗೊತ್ತಾದ ದಿನದಲ್ಲಿ ಸಭಾಕಾರ್ಯವನ್ನಾರಂಭಿಸಲಿಕ್ಕೆ ಸ್ವಲ್ಪ ತೊಂದರೆಗಳು ಸಂಭವಿಸಿದುವು. ಆದರೂ ಅವು ಹೇಗೋ ಹರೆಯಾಗಿ ಕೆಲಸಗಳೆಲ್ಲಾ ಯಥಾಸಾಂಗವಾಗಿ ಜರುಗಿರುತ್ತವೆ. ಈಸಲದ ಸಭೆಯ ಅಧ್ಯಕ್ಷರನ್ನಾರಿಸುವ ಕಾಲಕ್ಕೆ ಸ್ವಲ್ಪ ಕರಸ್ಪಾಂಡೆನ್ಸು ನಡೆಯಿತು. ಕಳೆದ ವರ್ಷ ಈ ಸಭೆಯು ನಡೆದಿದ್ದರೆ ಅದಕ್ಕೆ ಶ್ರೀಮಂತ ಆಲ್‌ಮೇಲ ದೇಶಾಯರು ಅಧ್ಯಕ್ಷರಾಗಿರುತ್ತಿದ್ದರು. ಈಸಲದ ಸಭೆಗೆ ಅಧ್ಯಕ್ಷರಾಗಲು ಅವರು ಒಡಂಬಡದುದರಿಂದ ಸ್ವಾಗತಸಂಘದವರು ನಮ್ಮೆಡೆಗೆ ಬರೆದು ನನ್ನನ್ನೇ ಅಧ್ಯಕ್ಷನಾಗಲಿಕ್ಕೆ ಕೋರಿಕೊಂಡುದರ ಮೇಲೆ ನಾನು ಸ್ಟಾಂಡಿಂಗ್ ಕಮಿಟಿ ಮೆಂಬರರಿಗೆ ಬರೆದು, ಅವರಲ್ಲಿ ಹೆಚ್ಚುಜನರ ಅನುಮತದ ಮೇಲೆ ಈ ಸಭಾಧ್ಯಕ್ಷತೆಯನ್ನು ನಾನೇ ವಹಿಸಬೇಕಾಯಿತು. ಚಂದ್ರೋದಯ ಪತ್ರಿಕೆಯಲ್ಲಿ ಬೀರೂರಿನೊಳಗೆ ಪ್ಲೇಗುರೋಗವಿರುವುದೆಂದು ಪ್ರಕಟಿಸಲ್ಪಟ್ಟ ಕಾರಣದಿಂದಲೂ ಇನ್ನೊಂದು ಪತ್ರದಲ್ಲಿ ಇದು ಸೂರತ್ ಕಾಂಗ್ರೆಸ್ಸಿನ ರೀತಿಯಾಗುವುದೆಂದು ಪ್ರಕಟಿಸಿದುದರಿಂದಲೂ ಅನೇಕಾನೇಕರು ಬರುವುದು ತಪ್ಪಿತು. ಹಾಗೆ ಬರೆಯದಿದ್ದರೆ ಇನ್ನೂ ವಿಶೇಷ ಜನರು ಈ ಸಭೆಗೆ ಬರುತ್ತಿದ್ದರು. ಮುಖ್ಯವಾಗಿ ಸಭಾಕಾರ್ಯಕ್ಕೆ ತಾವೆಲ್ಲರೂ ಬಂದು ಸಹಾಯಮಾಡಿದುದಕ್ಕಾಗಿ ಸಭಿಕರಾದ ತಮ್ಮೆಲ್ಲರನ್ನೂ ವಂದಿಸುತ್ತೇನೆ.

ಹೀಗೆ ಭಾಷಣ ಮಾಡಿದ ಬಳಿಕ, ಸ್ವಾಗತಸಂಘದ ಪಕ್ಷದಿಂದ ಮ||ಜಿ. ಕೆ. ರುದ್ರಾರ್ಯರು ಅಧ್ಯಕ್ಷರನ್ನೂ ಸಭಿಕರನ್ನೂ ವಂದಿಸಿ, ಮಹಾಸಭೆಯಂಥ ಈ ದೊಡ್ಡ ಕಾರ್ಯದಲ್ಲಿ ಸತ್ಕಾರಕ ಸಂಘದವರ ಏರ್ಪಾಟಿನಲ್ಲಿ ಯಾವ ನ್ಯೂನಾತಿರೇಕಾದಿಗಳಿದ್ದರೂ ಸರ್ವರೂ ಮನ್ನಿಸಬೇಕೆಂತಲೂ, ಸ್ವಾಗತಸಂಘದವರ ಆಹ್ವಾನಪ್ರಕಾರ ತಾವೆಲ್ಲರೂ ದಯವಿಟ್ಟು ದಯಮಾಡಿಸಿ, ಸಭಾಕಾರ್ಯವನ್ನು ಸಾಂಗಗೊಳಿಸಿದುದಕ್ಕಾಗಿ ಸರ್ವರನ್ನೂ ವಂದಿಸುತ್ತೇವೆಂತಲೂ ಶ್ರುತಪಡಿಸಿದರು.

ಬಳಿಕ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಎದ್ದುನಿಂತು ಆಂಗ್ಲಭಾಷೆಯಲ್ಲಿ ಆಪಾತಮಧುರವಾಗಿರುವಂತೆ ಭಾಷಣಮಾಡಿ, ಈಸಲದ ಸಭೆಯಲ್ಲಿ ವಿಶೇಷ ಚರ್ಚೆಗಳು ನಡೆದುದು ನಮ್ಮ ಸಮಾಜದಲ್ಲಿ ಬರಬರುತ್ತ ಮಾದರಿಯ ಅಭಿಪ್ರಾಯಗಳು ವೃದ್ಧಿಯಾಗುತ್ತಿರುವುದೆಂಬುದಕ್ಕೆ ನಿದರ್ಶನವಾಗಿರುತ್ತದೆಂತಲೂ ಅದರಿಂದ ವ್ಯಕ್ತವಾದ ಶುಭಲಕ್ಷಣವು ಸಮಾಜಾಭಿಮಾನಿಗಳಿಗೆಲ್ಲಾ ಸಂತೋಷಪ್ರದವಾಗಿಯೇ ಇರುವುದೆಂತಲೂ, ಮಹಾಸಭೆಯ ಕಾರ್ಯನಿರ್ವರ್ತನದ ಜತೆಗೆ ಸಮಾಜದ ಸಕಲವಿಧ ಕಲ್ಯಾಣವೂ ವೃದ್ಧಿಯಾಗುತ್ತಬರಲೆಂತಲೂ ಕೋರಿ, ಶಾಂತರೂ ವಿವೇಕಿಗಳೂ ಸಮರ್ಥರೂ ಆದ ಮ|| ಶಾಂತವೀರಪ್ಪನವರು ಈ ಸಲದ ಸಭೆಗೆ ಅಧ್ಯಕ್ಷರಾಗಿ ದೊರೆದು ಸಭಾಕಾರ್ಯವನ್ನೆಲ್ಲಾ ದಕ್ಷತೆಯಿಂದ ನಿರ್ವಹಿಸಿದುದಕ್ಕಾಗಿ ವಂದನೆಯನ್ನೂ, ಸತ್ಕಾರಕ ಸಂಘದವರು ಮಾಡಿದ್ದ ಏರ್ಪಾಟುಗಳಿಗಾಗಿ ಅಭಿನಂದನೆಯನ್ನೂ, ಸ್ಥಲದ ಸರ್ಕಾರಿ ಉದ್ಯೋಗಿಗಳು ಮಹಾಸಭಾಕಾರ್ಯವು ಸುಲಲಿತವಾಗಿ ಸಾಗುವುದಕ್ಕೆ ತಕ್ಕ ಸಾಹಾಯ್ಯಮಾಡಿದುದಕ್ಕಾಗಿ ಅವರಿಗೆ ವಂದನೆಯನ್ನೂ ತಿಳಿಸಿದರು. ಬಳಿಕ ಸತ್ಕಾರಕ ಸಂಘದವರು ಸಭಾಧ್ಯಕ್ಷರಿಗೂ ದಿ|| ಬ|| ಕೆ. ಪಿ. ಸೆಟ್ಟರೇ ಮೊದಲಾದವರಿಗೂ ಹಾರಗುಚ್ಛಗಳನ್ನು ಸಮರ್ಪಿಸಲಾಗಿ, ಸಾರ್ವಭೌಮರಿಗೂ ಶ್ರೀಮದ್ಯುವರಾಜರಿಗೂ ಜಯಚಾಮರಾಜರಿಗೂ ಸಭಾಧ್ಯಕ್ಷರಿಗೂ ಶ್ರೇಯಸ್ಸನ್ನು ಕುರಿತು ಮೂರು ಮೂರು ವೇಳೆ ಸಭೆಯವರೆಲ್ಲರೂ ಜಯಘೋಷವನ್ನು ಮಾಡಿದರು. ಹೀಗೆ ೯ನೆ ವೀರಶೈವ ಮಹಾಸಭೆಯು ಬೀರೂರಿನಲ್ಲಿ ನಡೆದು ಮುಗಿದಿತು.

ತಿದ್ದುವಿಕೆ.

ನಮ್ಮ ಪ್ರತ್ಯೇಕ ವಿಲೇಖಕರಿಂದ ಬರೆಯಲ್ಪಟ್ಟು ಬಂದಿದ್ದ ವೀರಶೈವ ಮಹಾಸಭೆಯ ವರದಿಯಲ್ಲಿ ಸತ್ಕಾರಕ ಸಂಘಾಧ್ಯಕ್ಷರ ಭಾಷಣದೊಳಗೆ ಶ್ರೀಮನ್ನಿರಂಜನ ಜಗದ್ಗುರುಗಳವರು ವಿದ್ಯಾಪ್ರಸಾರಕ್ಕಾಗಿ ಮಾಡಿರುವ ಧನಸಾಹಾಯ್ಯವೊಂದೂ ಸೂಚಿಸಲ್ಪಟ್ಟಿಲ್ಲವೆಂದು ಕಂಡಿರುವುದು ತಪ್ಪಾಗಿರುತ್ತದೆ. ಆ ಭಾಷಣದೊಳಗೆ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಬೆಂಗಳೂರು ಜಯದೇಶ ವೀರಶೈವ ವಿದ್ಯಾರ್ಥಿನಿಲಯಕ್ಕಾಗಿ ಮಾಡಿರುವ ವಿಶೇಷ ಧನಸಾಹಾಯ್ಯವು ವರ್ಣಿಸಲ್ಪಟ್ಟಿರುತ್ತದೆ. ಅದುಕಾರಣ ಕಳೆದ ಸಂಚಿಕೆಯ ಮೂರನೆ ಪುಟದ ೨ನೆ ಕಾಲಮ್ಮಿನೊಳಗೆ ೨೭ ನೆ ಪಂಗ್ತಿಯಿಂದ ಕೆಳಗೆ ೧೫ ಪಂಗ್ತಿಗಳನ್ನು ಬಿಟ್ಟು ಓದಿಕೊಳ್ಳಬೇಕೆಂದು ವಾಚಕರಿಗೆ ಶ್ರುತಪಡಿಸುತ್ತೇವೆ. ಪ. ಪ್ರ.

ಬೀರೂರಿನಲ್ಲಾದ ೯ ನೆ ವೀರಶೈವ ಮಹಾಸಭೆಯಲ್ಲಿ ಅಧ್ಯಕ್ಷರ ಭಾಷಣವು.

(ಹಿಂದಣ ಶೇಷ).

ನಮ್ಮಲ್ಲಿ ಉತ್ಸಾಹಿಗಳಾದ ಕೆಲವು ತರುಣ ಪದವೀಧರರು ಒಳ್ಳೇ ಮನೋಧೈರ್ಯವನ್ನು ತೋರಿಸಿ, ಕಷ್ಟನಷ್ಟಗಳನ್ನು ಸಹಿಸಿ ಸ್ವಾರ್ಥತ್ಯಾಗವನ್ನು ಮಾಡಿ ಬೆಳಗಾಂವಿಯಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸಿ ನಡಿಸಿರುವರು. ಈ ಕಾರ್ಯವು ಸ್ತುತ್ಯವೂ ಅನುಕರಣೀಯವೂ ಅವರಿಗೆ ಭೂಷಣಾಸ್ಪದವಾದದ್ದೂ ಆಗಿರುವುದಲ್ಲದೆ ಸಮಾಜಕ್ಕೆ ಅಭಿಮಾನಾಸ್ಪದ ಸಂಗತಿಯಾಗಿರುತ್ತದೆ. ಮತ್ತು ವಿಜಾಪುರ, ಬಾಗಲಕೋಟೆ, ಆಲೂರ, ಹಾಂಸಭಾವಿ, ಒಂಟಮುರಿ ಮುಂತಾದ ಸ್ಥಳಗಳಲ್ಲಿ ವೀರಶೈವ ಬಾಂಧವರು ಹೈಸ್ಕೂಲ ಆಂಗ್ಲೋ ವ್ಹರ್ನ್ಯಾಕ್ಯುಲರ ಸ್ಕೂಲುಗಳನ್ನು ಸ್ಥಾಪಿಸಿ ನಡಿಸುತ್ತಿರುವದಾದರೂ ಆನಂದದ ಮತ್ತು ಅಭಿಮಾನದ ಸಂಗತಿಗಳಾಗಿವೆ. ಹಿರೇಕೆರೂರಲ್ಲಿಯೂ ಹೈಸ್ಕೂಲನ್ನು ಸ್ಥಾಪಿಸುವ ಸಲುವಾಗಿ ೭-೮ ಸಾವಿರ ರೂಪಾಯಿ ವರ್ಗಣಿ ಕೂಡಿದ್ದು ಇನ್ನೂ ಕೂಡಿಸುವ ಕೆಲಸವು ನಡೆದಿದೆ. ನಮ್ಮಲ್ಲಿ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಮುಖ್ಯ ಮುಖ್ಯ ತಾಲೂಕಿನ ಸ್ಥಳಗಳಲ್ಲಿ ಸಹ ನಮ್ಮ ಜನರು ಹೈಸ್ಕೂಲುಗಳನ್ನು ಸ್ಥಾಪಿಸಿದರೆ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗುವದು. ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚಾದಂತೆ ಸ್ವಂತ ಕಾಲೇಜವನ್ನಾದರೂ ಸ್ಥಾಪಿಸುವ ಸುಯೋಗವು ಶೀಘ್ರವಾಗಿ ಬರುವದೆಂದು ಆಶಿಸುತ್ತೇನೆ.

ಔದ್ಯೋಗಿಕ ಶಿಕ್ಷಣ.

ನಮ್ಮ ಜನರಲ್ಲಿ ವಿದ್ಯೆ ಕಲಿಯುವದು ಸರ್ಕಾರಿ ನೌಕರಿಗಳ ಸಲುವಾಗಿಯೇ ಎಂದು ಬಹುಜನರ ತಿಳುವಳಿಕೆಯಾಗಿದೆ. ಇದು ಕೇವಲ ತಪ್ಪು. ಇದರಿಂದ ವಿದ್ಯೆಕಲಿತ ಜನರು ಸರಕಾರಿ ನೌಕರಿಗಳಲ್ಲಿ ಸೇರಬಾರದೆಂದು ನನ್ನ ಅಭಿಪ್ರಾಯವಿಲ್ಲ. ಕೆಲವು ಜನರು ಅಧಿಕಾರಸ್ಥಾನಗಳಲ್ಲಿರುವದು ನಮ್ಮ ಸಮಾಜಕ್ಕೆ ಅವಶ್ಯಕವಾಗಿಯೂ ಅಪೇಕ್ಷಿತವಾಗಿಯೂ ಇರುವದು. ಯೋಗ್ಯತಾಸಂಪನ್ನರಾದ ಜನರಿಗೆ ಸರಕಾರಿ ನೌಕರಿಗಳಲ್ಲಿ ವಿಶೇಷ ಸವಲತುಗಳನ್ನು ಕೊಡುವ ಬಗ್ಗೆ ನಾವು ಆಗಾಗ್ಗೆ ಸರಕಾರದವರನ್ನು ಪ್ರಾರ್ಥಿಸುತ್ತೇವೆ. ಧಾರವಾಡ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್‌ದವರಿಗೆ ಮುಂಬಯಿ ಸರಕಾರದವರು ಯೋಗ್ಯವಾದ ಜನರನ್ನು ಸರಕಾರಿ ನೌಕರಿಗಳ ಬಗ್ಗೆ ಶಿಫಾರಸ ಮಾಡಲಿಕ್ಕೆ ಅಧಿಕಾರವನ್ನು ಕೊಟ್ಟಿರುತ್ತಾರೆ. ಇದೇ ಪ್ರಕಾರದ ಸವಲತುಗಳನ್ನು ಕೊಡಬೇಕೆಂದು ನಾವು ಮೈಸೂರ, ನೈಜಾಮು, ಮದ್ರಾಸ ಸರಕಾರಗಳನ್ನು ಪ್ರಾರ್ಥಿಸತಕ್ಕದ್ದು. ಆದರೆ ಎಲ್ಲರೂ ಸರಕಾರಿ ನೌಕರಿಗಳಲ್ಲಿ ಸೇರುವದು ಸಾಧ್ಯವೂ ಶಕ್ಯವೂ ಅದೆಯೋ ಹ್ಯಾಗೆ ವಿಚಾರಮಾಡಿರಿ. ಮತ್ತು ಎಲ್ಲರೂ ಇದೇ ಧ್ಯೇಯವನ್ನಿಟ್ಟುಕೊಂಡು ವಿದ್ಯೆ ಕಲಿಯುವದು ಸಮಾಜದ ಸಾಂಪತ್ತಿಕ ಸ್ಥಿತಿಗೆ ಹಿತಕರವಲ್ಲವೆಂಬುದನ್ನು ಚೆನ್ನಾಗಿ ಲಕ್ಷ್ಯದಲ್ಲಿಡಿರಿ. ವಿದ್ಯೆಯಿಂದ ಮನುಷ್ಯನ ಬುದ್ಧಿ ವಿಕಾಸಹೊಂದಿ ಅತನು ತನ್ನ ಉದ್ಯೋಗದಲ್ಲಿ ಉನ್ನತಿಯನ್ನು ಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ಬರೇ ಪುಸ್ತಕೀಜ್ಞಾನದಿಂದ ಉಪಯೋಗವಿಲ್ಲ. ಔದ್ಯೋಗಿಕ ಶಿಕ್ಷಣವನ್ನು ಪಡೆದು ದೇಶದ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸತಕ್ಕದ್ದು. ಈ ವಿಷಯವಾಗಿ ಮುಂಬಯಿಯ ಈಗಿನ ಗವ್ಹರ್ನರರಾದ ನೇಕ ನಾಮದಾರ ಸರ ಜಾರ್ಜ ಲಾಯಿಡರವರು ಕಳೆದ ೬ನೆ ಸಪ್ಟೆಂಬರದಲ್ಲಿ ಪುಣೆಯ ಡೆಕ್ಕನ್ ಕಾಲೇಜದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಭಾಷಣವು ಮಹತ್ವವಾದದ್ದೂ ಮನನೀಯವಾದದ್ದೂ ಇದ್ದದರಿಂದ ಅದರ ಸಾರಾಂಶವನ್ನು ಇಲ್ಲಿ ಹೇಳುತ್ತೇನೆ. - ಸದ್ಯಕ್ಕೆ ವಿದ್ಯಾರ್ಥಿಗಳಿಗೆ ದೊರಕುವ ಪುಸ್ತಕೀಜ್ಞಾನದ ಸಂಗಡ ಇನ್ನುಮುಂದೆ ಕಲಾಕೌಶಲ್ಯಕ್ಕೆ ಅವಶ್ಯವಾದ ಶಿಕ್ಷಣವು ದೊರಕಬೇಕೆಂದು ನನ್ನ ಮತವಿರುತ್ತದೆ. ಅಂಥ ಶಿಕ್ಷಣದ ಕಡೆಗೆ ವಿದ್ಯಾರ್ಥಿಗಳ ಲಕ್ಷ್ಯವು ಅವಶ್ಯವಾಗಿ ತಿರುಗತಕ್ಕದ್ದು. ನಾನು ಮಾಡುವ ಈ ಉಪದೇಶವು ಕೇವಲ ಬಾಯಿಮಾತೆಂದು ತಿಳಿಯಬೇಡಿರಿ. ಹಿಂದುಸ್ಥಾನದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸಿ ಅದರ ಅಭಿವೃದ್ಧಿಯಾಗುವಂತೆ ಮಾಡುವ ಸುಸಂಧಿಯು ಸದ್ಯಕ್ಕೆ ಬಂದೊದಗಿದೆ. ಹಾಗೂ ಆ ಪ್ರಯತ್ನವು ಸಫಲವಾಗುವಂತೆ ಸರಕಾರದವರಾದರೂ ತಕ್ಕ ಪ್ರಯತ್ನವನ್ನು ಮಾಡತಕ್ಕವರಿದ್ದಾರೆ. ಕಾರಣ ಪ್ರಸಂಗ ಬಂದಾಗ ಔದ್ಯೋಗಿಕ ಶಿಕ್ಷಣವನ್ನು ಹೊಂದಲಪೇಕ್ಷೆಯುಳ್ಳ ವಿದ್ಯಾರ್ಥಿಗಳು ಹಿಂದುಳಿಯದೆ ಪೂರ್ವಸಿದ್ಧತೆಯನ್ನು ಮಾಡಿಟ್ಟುಕೊಂಡು ಮುಂದರಿಸಬೇಕೆಂದು ಸೂಚಿಸುತ್ತೇನೆ. ಈಗ ಧಾರವಾಡ ಬೆಳಗಾಂವಿಗಳಲ್ಲಿ ಔದ್ಯೋಗಿಕ ಶಾಲೆಗಳಾಗುವ ವಿಚಾರ ನಡೆದದೆ. ಮತ್ತು ಮೈಸೂರು ಸರ್ಕಾರದವರು ಸಂಪದಭ್ಯುದಯ ಸಮಾಜವನ್ನು ಸ್ಥಾಪಿಸಿ ದೇಶೀಯ ಉದ್ಯೋಗ ಕಲಾಕೌಶಲ್ಯಗಳಿಗೆ ಉತ್ತೇಜನವನ್ನು ಕೊಡಲಾರಂಭಿಸಿದ್ದಾರೆ. ಈ ಸಮಯದಲ್ಲಿ ನಾವು ಅವುಗಳ ಯೋಗ್ಯ ಉಪಯೋಗ ಮಾಡಿಕೊಳ್ಳತಕ್ಕದ್ದು. ನಮ್ಮಲ್ಲಿ ವಿದ್ಯಾವ್ಯಾಸಂಗವನ್ನು ಮಾಡತಕ್ಕ ವಿದ್ಯಾರ್ಥಿಗಳಿಗೆ ಯಾವ ಯಾವ ಕಲೆಗಳ ಕಡೆಗೆ ಅವರ ಮನಸ್ಸಿನ ಒಲವಿರುವದೋ ಅವಕ್ಕೆ ಉತ್ತೇಜನವನ್ನು ಕೊಟ್ಟು ಅವರನ್ನು ಆಯಾಯ ಉದ್ಯಮಗಳಲ್ಲಿ ಸೇರಿಸಬೇಕು. ಅಂದರೆ ಅವರು ಅದರಲ್ಲಿ ಯಶಸ್ವಿಗಳಾಗುವರು.

ಕೃಷಿಕರ್ಮ.

ನಮ್ಮ ಸಮಾಜದಲ್ಲಿ ಎಲ್ಲ ತರದ ಉದ್ಯೋಗ ವ್ಯವಸಾಯಗಳ ಜನರಿರುವರು. ಆದರೆ ಅವರು ವಿದ್ಯಾವಿಹೀನರಾದುದರಿಂದ ತಮ್ಮ ತಮ್ಮ ಉದ್ಯೋಗಗಳಲ್ಲಿ ಕಾಲಕ್ಕೆ ಸರಿಯಾದ ಸುಧಾರಣೆಗಳನ್ನು ಮಾಡಿಕೊಳ್ಳದಿರುವದರಿಂದ ಅವರ ಉದ್ಯೋಗಗಳು ಹೀನಾವಸ್ಥೆಗೆ ಬಂದಿರುವವು. ಕೃಷಿಕರ್ಮವು ಹಿಂದುಸ್ಥಾನದ ಮುಖ್ಯ ಉದ್ಯೋಗವು. ನಮ್ಮ ಸಮಾಜದಲ್ಲಿಯಂತು ೧೦೦ ರಲ್ಲಿ ೮೦ ಕ್ಕಿಂತ ಹೆಚ್ಚು ಜನರು ಈ ಉದ್ಯೋಗವನ್ನವಲಂಬಿಸಿರುವರು. ದೇಶದಲ್ಲಿ ನಿಜವಾದ ಸುಖಸಂಪತ್ತುಗಳು ಬೆಳೆಯಬೇಕಾದರೆ ಒಕ್ಕಲತನದಲ್ಲಿ ಸುಧಾರಣೆಯಾಗಲಿಕ್ಕೆಬೇಕು. ಸರಕಾರದವರು ಶೇತಕಿ ಸುಧಾರಣೆಯ ಸಲುವಾಗಿ ಅನೇಕ ಉಪಾಯಗಳನ್ನು ಕೈಕೊಂಡಿರುವರು. ಪ್ರಯೋಗದ ಸಲುವಾಗಿ ಅಲ್ಲಲ್ಲಿ ಸರಕಾರಿ ಫಾರ್ಮಗಳನ್ನು ಸ್ಥಾಪಿಸಿ ಯಾವ ಯಾವ ತರದ ಭೂಮಿಯಲ್ಲಿ ಯಾವ ಬೆಳೆಗಳು ಚೆನ್ನಾಗಿ ಬರುತ್ತವೆ. ಯಾವ ರೀತಿಯಿಂದ ವ್ಯವಸಾಯ ಮಾಡಿದರೆ ಲಾಭದಾಯಕವಾಗುತ್ತದೆ. ಎಂಬದನ್ನು ಪ್ರತ್ಯಕ್ಷ ಪ್ರಯೋಗಮಾಡಿ ನೋಡುತ್ತಿರುವರು. ನಮ್ಮಲ್ಲಿ ಸುಶಿಕ್ಷಿತರಾದ ರೈತಜನರು ಅವುಗಳ ಉಪಯೋಗ ಮಾಡಿಕೊಂಡು ತಾವು ಲಾಭಹೊಂದಿ ಉಳಿದವರು ತಮ್ಮ ಬೆನ್ನುಹತ್ತುವಂತೆ ಮಾಡಬೇಕು. ಸುಧಾರಿಸಿದ ಗಳೇದ ಸಾಮಾನುಗಳು, ಉತ್ತಮವಾದ ಗೊಬ್ಬರ, ಚಲೋ ಬೀಜಗಳು ಮುಂತಾದ ಕೃಷಿಕರ್ಮಕ್ಕೆ ಉಪಯೋಗ ಬೀಳುವ ಒಡವೆಗಳನ್ನು ಪ್ರತ್ಯೇಕವಾಗಿ ತರಿಸುವದು ಶಕ್ಯವಾಗುವದಿಲ್ಲ. ಒಕ್ಕಲತನದ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡರೆ ಅವು ಸುಲಭವಾಗಿ ಸರ್ವರಿಗೂ ಸಿಗಲಿಕ್ಕೆ ಸರ್ವರಿಗೂ ಮಾರ್ಗವಾಗುವದು. ಈಗ ಎಷ್ಟೋ ಸ್ಥಳಗಳಲ್ಲಿ ಇಂಥ ಸಂಘಗಳು ಸ್ಥಾಪಿತವಾಗಿ ಒಕ್ಕಲತನಕ್ಕೆ ಬಹಳ ಸಹಾಯವಾಗಿರುವದು. ಎಲ್ಲರೂ ಇಂಥ ಸಂಘಗಳನ್ನು ಸ್ಥಾಪಿಸಿಕೊಂಡು ಶೇತಕಿ ಸುಧಾರಣೆಯನ್ನು ಮಾಡಿಕೊಳ್ಳತಕ್ಕದ್ದು. ಈಗ ರೈತಜನರಲ್ಲಿ ಶ್ರಮವಹಿಸಿ ದುಡಿಯುವ ಚಟವು ಕಡಿಮೆಯಾಗಿದೆ. ವಿಷಯ ಆರಾಮಿಯೂ ಚೈನಿಯೂ ಹೆಚ್ಚಾಗಿದೆ. ಕಾಬಾಡ ಕಷ್ಟಮಾಡುವದನ್ನು ಬಿಟ್ಟು ಸೂಕ್ಷ್ಮ ತರದ ಬಟ್ಟೆಗಳನ್ನು ಧರಿಸಿಕೊಂಡು ಅಡ್ಡಾಡಲು ಪ್ರೀತಿಸಹತ್ತಿದ್ದಾರೆ. ಇದು ಬಹಳ ಕೆಟ್ಟ ಚಿನ್ಹವು; ಅವನತಿಯ ಸೋಪಾನವು; ದಾರಿದ್ರ್ಯಬೀಜವು; ಈ ಚಟವು ಸಮೂಲವಾಗಿ ನಾಶವಾಗಿ ಶ್ರಮವಹಿಸಿ ದುಡಿಯುವ ಚಟವು ಬೀಳುವಂತೆ ಯತ್ನಮಾಡತಕ್ಕದ್ದು. ಅಂದರೆ ನಿಜವಾಗಿ ಒಕ್ಕಲತನದ ಸುಧಾರಣೆಯ ಮಾರ್ಗಕ್ಕೆ ಹತ್ತಿದಂತಾಯಿತೆಂದು ತಿಳಿಯುತ್ತೇನೆ.

ವ್ಯಾಪಾರ.

ಮೊದಲು ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹು ಭಾಗದ ವ್ಯಾಪಾರವೆಲ್ಲ ಮುಖ್ಯವಾಗಿ ವೀರಶೈವರ ಕೈಯಲ್ಲೇ ಇತ್ತು. ಇವರಲ್ಲಿ ಉದ್ಯೋಗಶೀಲತೆ, ಸಾಹಸ, ಐಕಮತ್ಯ ಮುಂತಾದ ವ್ಯಾಪಾರದ ಅಭಿವೃದ್ಧಿಗೆ ಅವಶ್ಯವಾದ ಗುಣಗಳು ಲೋಪವಾಗುತ್ತ ಬಂದದರಿಂದ ವ್ಯಾಪಾರವು ಇವರ ಕೈಬಿಟ್ಟು ಸಾಹಸಿಗಳೂ ದೀರ್ಘೋದ್ಯೋಗಿಗಳೂ ಆದಂಥ ಗುಜ್ಜರು ಮಾರವಾಡಿಗಳು ಫಾರ್ಸಿಯವರು ಭಾಟಿಜನರು ಮುಂತಾದ ಜನರ ಕೈಸೇರ ಹತ್ತಿರುವದು. ಇದೇ ತರದ ಉದಾಸೀನತೆಯನ್ನು ನಾವು ಇನ್ನುಮುಂದಾದರೂ ಇಟ್ಟುಕೊಂಡದ್ದಾದರೆ ವ್ಯಾಪಾರವು ಪೂರ್ಣವಾಗಿ ನಮ್ಮ ಕೈಬಿಟ್ಟು ವ್ಯಾಪಾರಿ ವರ್ಗವು ಕೀಳುಸ್ಥಿತಿಯನ್ನು ಹೊಂದುವದು. ಜಪಾನ, ಇಂಗ್ಲಂಡ, ಅಮೇರಿಕಾ ಮೊದಲಾದ ರಾಷ್ಟ್ರಗಳು ಯಾವ ರೀತಿಯಿಂದ ಉನ್ನತಿಯನ್ನು ಹೊಂದಿದವೆಂಬದನ್ನು ವಿಚಾರಕ್ಕೆ ತಂದು ನೋಡಿ, ನಮ್ಮಲ್ಲಿಯ ಆಲಸ್ಯವನ್ನು ಹೊಡೆದೋಡಿಸಿ ಜಾಗೃತರಾಗಿ ಕಾಲಮಾನಕ್ಕೆ ಸರಿಯಾಗಿ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಮಾಡಿಕೊಳ್ಳತಕ್ಕದ್ದು. ಸ್ವಲ್ಪ ಬಂಡವಲದಿಂದ ಸಣ್ಣ ವ್ಯಾಪಾರ ಮಾಡುವದಕ್ಕಿಂತ ಸಾಮುದಾಯಿಕ ಪದ್ಧತಿಯಿಂದ ದೊಡ್ಡ ಭಂಡವಲಗಳನ್ನು ಕೂಡಿಸಿ ದೊಡ್ಡ ಸ್ಕೇಲಿನಿಂದ ವ್ಯಾಪಾರಮಾಡಿದರೆ ಹೆಚ್ಚು ಲಾಭವಾಗುವದು. ಕಾರಣ ಜಾಯಿಂಟ ಸ್ಟಾಕ ಕಂಪನಿ ಮೊದಲಾದವುಗಳನ್ನು ಸ್ಥಾಪಿಸಿ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಹೊಂದಬೇಕೆಂದು ಆಶಿಸುತ್ತೇನೆ.

ಜಾತಿನಿವಿಷ್ಟ ಪ್ರಾತಿನಿಧ್ಯ.

ನಮ್ಮ ವೀರಶೈವ ಸಮಾಜದ ಜನಸಂಖ್ಯೆಯು ಸುಮಾರು ೩೫ ಲಕ್ಷವಿದ್ದು ಎಲ್ಲ ತರದ ಉದ್ಯೋಗ ವ್ಯವಸಾಯಗಳ ಜನರಿರುವರು. ಅನೇಕ ಜನ ಜಮೀನುದಾರರು, ಕರಕೊಡುವವರು ವ್ಯಾಪಾರಸ್ಥರು ಇದ್ದು ಗೌರವವುಳ್ಳ ದೊಡ್ಡ ಜನಾಂಗವಾಗಿರುವದು. ಹೀಗಿದ್ದಾಗ್ಯೂ ವಿದ್ಯಾಪ್ರಸಾರವು ಕಡಿಮೆ ಇರುವದರಿಂದ ಅಶಿಕ್ಷಿತ ಜನಸಮುದಾಯವು ಬಹಳವಿರುತ್ತದೆ. ಅದರಿಂದ ಬಹುಜನರು ತಮ್ಮ ಹಕ್ಕುಬಾಧ್ಯತೆಗಳನ್ನೂ ಹಿತಾಹಿತಗಳನ್ನೂ ತಿಳಿಯದವರಾಗಿದ್ದಾರೆ. ಕಾರಣ ಲೋಕಲ್‌ಬೋರ್ಡ ಮುನಿಸಿಪಾಲಿಟಿಗಳಲ್ಲಿ ಸಹ ನಮ್ಮ ಜನರು ಜನಸಂಖ್ಯೆಯ ಮಾನಕ್ಕನುಸರಿಸಿ ಬರುವದಿಲ್ಲ. ನಮ್ಮ ದಯಾಳು ಸರಕಾರದವರು ರಾಜ್ಯಕಾರಭಾರದಲ್ಲಿ ಸುಧಾರಣೆಗಳನ್ನು ಮಾಡುವ ಉದ್ದೇಶದಿಂದ ಮಾಂಟೇಗೂ ಚೇಮ್ಸ್‌ಫರ್ಡ ಸ್ಕೀಮನ್ನು ಶೀಘ್ರವೇ ಅಮಲಿನಲ್ಲಿ ತರತಕ್ಕವರಿದ್ದಾರೆ. ಅದರಲ್ಲಿ ಮುಸಲ್ಮಾನ ಶೀಖ ಜಾತಿಯವರಿಗೆ ಜಾತಿನಿವಿಷ್ಟಪ್ರಾತಿನಿಧ್ಯವನ್ನು ಕೊಡುವದನ್ನು ಮೊದಲೇ ಗೊತ್ತುಪಡಿಸಿದ್ದರು. ಮದ್ರಾಸ ಇಲಾಖೆಯಲ್ಲಿ ನಾನ್‌ಬ್ರಾಹ್ಮಣರೂ ಮತ್ತು ಮುಂಬಯಿ ಇಲಾಖೆಯಲ್ಲಿ ಮರಾಠಾ ಜಾತಿಬಾಂಧವರೂ ವಿಶೇಷ ಪ್ರಯತ್ನ ಮಾಡಿದ್ದರಿಂದ ಅವರಿಗೂ ಜಾತಿನಿವಿಷ್ಟ ಪ್ರಾತಿನಿಧ್ಯವು ದೊರೆತಿರುವದು. ನಮ್ಮ ಜನಸಂಖ್ಯೆಯ ಮಾನಕ್ಕನುಸರಿಸಿ ನಮ್ಮ ಪ್ರತಿನಿಧಿಗಳು ಕೌನ್ಸಿಲ್‌ದಲ್ಲಿ ಬರುವಂತೆ ಜಾತಿನಿವಿಷ್ಟ ಪ್ರಾತಿನಿಧ್ಯವನ್ನು ಕೊಡಬೇಕೆಂದು ನಾವು ಸರಕಾರದವರನ್ನು ಬೇಡಿಕೊಳ್ಳತಕ್ಕದ್ದು. ಮೈಸೂರ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ನಮ್ಮ ಜನಸಂಖ್ಯೆಯ ಮಾನದಂತೆ ಪ್ರತಿನಿಧಿಗಳನ್ನು ಆರಿಸಿಕೊಳ್ಳುವ ಹಕ್ಕನ್ನು ಕೊಡಲು ನಾವು ಶ್ರೀಮನ್ಮಹಾರಾಜ ಸರ್ಕಾರಕ್ಕೆ ವಿಜ್ಞಾಪಿಸಿಕೊಳ್ಳತಕ್ಕದ್ದು.

ಚಿರಸ್ಥಾಯಿ ಫಂಡಿನ ವ್ಯವಸ್ಥೆ.

ಈ ಮಹಾಸಭೆಯು ಪ್ರತಿವರ್ಷ ತಪ್ಪದೆ ಕೂಡಬೇಕೆಂತಲೂ ಅದರ ಕಾರ್ಯವು ಅವ್ಯಾಹತವಾಗಿ ನಡೆಯಬೇಕೆಂತಲೂ ದಾವಣಗೇರಿಯಲ್ಲಿ ಕೂಡಿದ ೮ ನೇ ಮಹಾಸಭೆಯಲ್ಲಿ ಒಂದು ಚಿರಸ್ಥಾಯಿ ಫಂಡನ್ನು ಏರ್ಪಡಿಸಿರುವರು. ಇದರಿಂದ ಇನ್ನು ನಮ್ಮ ಮಹಾಸಭೆಯು ಚ್ಯುತಿಯಿಲ್ಲದೆ ನಡೆಯಲಿಕ್ಕೆ ಮಾರ್ಗವಾಯಿತು. ಇದುವರೆಗೆ ಇಂಥ ಫಂಡು ಇಲ್ಲದ್ದರಿಂದ ಸ್ವತಃ ಹಣವನ್ನು ವೆಚ್ಚಮಾಡಿ ಮಹಾಸಭೆಯನ್ನು ಮಾಡಲಿಕ್ಕೆ ಶಕ್ತರಾದ ಜನರು ಮಾತ್ರ ತಮ್ಮ ತಮ್ಮ ಸ್ಥಳಗಳಲ್ಲಿ ಮಹಾಸಭೆಯನ್ನು ಮಾಡುತ್ತಿದ್ದರು. ಇನ್ನು ಸುಧಾರಣೆಯ ಗಾಳಿ ಸಹ ಸೋಂಕದೆ ಇದ್ದ ಸ್ಥಳಗಳಲ್ಲಿ ಮಹಾ ಸಭೆಯನ್ನು ಮಾಡಿ ಅಲ್ಲಿಯ ಜನರಲ್ಲಿ ಜಾಗ್ರತೆಯನ್ನುಂಟುಮಾಡುವದು ಅವಶ್ಯವಿರುವದರಿಂದ ಈ ಫಂಡಿನಿಂದ ಅಂಥ ಸ್ಥಳಗಳಲ್ಲಿ ಮಹಾ ಸಭೆಯನ್ನು ಮಾಡಲಿಕ್ಕೆ ಮಾರ್ಗವಾಯಿತು. ಅದ್ದರಿಂದ ಇದರ ಉತ್ಪಾದಕರು ಅತಿಶಯ ಮಹತ್ವದ ಕಾರ್ಯವಾಡಿದರೆಂದು ಅವರನ್ನು ಮನಃಪೂರ್ವಕ ಅಭಿನಂದಿಸುತ್ತೇನೆ. ಈ ಫಂಡಿಗೆ ವಾಗ್ದಾನ ಮಾಡಿರುವ ಹಣವನ್ನು ವಸೂಲ ಮಾಡುವ ಸಲುವಾಗಿಯೂ, ಹಣದ ವ್ಯವಸ್ಥೆಯ ಸಲುವಾಗಿ ನಿಯಮಗಳನ್ನು ಮಾಡುವ ಸಲುವಾಗಿಯೂ ಹೋದವರ್ಷ ದಿವಾನ ಬಹದ್ದೂರ ರಾಜ ಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಆಯ್. ಇ. ಇವರ ಅಧ್ಯಕ್ಷತೆಯ ಕೆಳಗೆ ಒಂದು ಸಬ್ ಕಮಿಟಿಯು ನಿಯಾಮಕವಾಗಿದೆ. ಆ ಸಬ್ ಕಮಿಟಿಯವರು ತಯಾರ ಮಾಡಿದ ನಿಯಮಗಳನ್ನು ಪಾಸ ಮಾಡುವದು ಈ ಮಹಾ ಸಭೆಯ ಕಡೆಗಿರುವದು. ಅದರಿಂದ ಆ ಸಬ್ ಕಮಿಟಿಯವರು ತಂದ ಸೂಚನೆಗಳನ್ನು ಚನ್ನಾಗಿ ಮನನಮಾಡಿಕೊಂಡು ಪೂರ್ಣ ವಿಚಾರಮಾಡಿ ಮಹಾಸಭಾಕಾರ್ಯವು ಫಲಕಾರಿಯಾಗುವಂತೆ ಯೋಗ್ಯ ನಿಬಂಧನೆ ಮಾಡುವದು ನಿಮ್ಮ ಮಹತ್ವದ ಕಾರ್ಯವಾಗಿರುವದು. ಹೋದವರ್ಷ ವಾಗ್ದಾನಮಾಡಿ ಹಣ ಕೊಡದೆ ಉಳಿದಿರುವವರೂ ಹಣ ಕೊಡುವದಲ್ಲದೆ ಈ ವರ್ಷವಾದರೂ ಹೆಚ್ಚಿಗೆ ಜನರು ಹಣಕೊಟ್ಟು ಫಂಡಿನ ಕೆಲಸವನ್ನು ಪೂರ್ಣಮಾಡಬೇಕು. ಮತ್ತು ಆ ಹಣವನ್ನು ಹೆಚ್ಚು ಬಡ್ಡಿ ಬರುವ ಹೆಚ್ಚು ಸುರಕ್ಷಿತವಾದ ಸ್ಥಳದಲ್ಲಿ ಇಡುವದು ಇಷ್ಟವಾಗಿದೆ. ಮೂಲಧನವು ಕಾಯಂ ಉಳಿದು ಅದರ ಬಡ್ಡಿಯಿಂದಲೇ ಮಹಾ ಸಭಾಕಾರ್ಯಕ್ಕೆ ಉಪಯೋಗವಾಗಬೇಕು. ಇವು ಸರ್ವರಿಗೂ ಮಾನ್ಯವಾಗುವ ಸೂಚನೆಗಳೆಂದು ನಂಬುತ್ತೇನೆ.

ಐಕಮತ್ಯ.

ನಮ್ಮ ಯಾವತ್ತೂ ಸುಧಾರಣೆಗೂ ಉನ್ನತಿಗೂ ಬಹು ದೊಡ್ಡ ವಿಘ್ನವೆಂದರೆ ನಮ್ಮಲ್ಲಿರುವ ಐಕಮತ್ಯದ ಅಭಾವವು. ಎಲ್ಲ ಸಮಾಜಗಳೂ ಪ್ರಗತಿಯ ಮಾರ್ಗದಲ್ಲಿ ಭರದಿಂದ ಮುಂದೆ ಸಾಗಿರಲು ನಾವು ನಮ್ಮಲ್ಲಿ ಅವಾಂತರ ಭೇದಗಳನ್ನಿಟ್ಟುಕೊಂಡು ಪರಸ್ಪರ ದ್ವೇಷಾಸೂಯೆಗಳನ್ನು ಮಾಡುತ್ತ ಕೂತರೆ ನಮ್ಮ ಉತ್ಸಾಹಶಕ್ತಿಯು ವ್ಯರ್ಥ ಹಾಳಾಗುತ್ತದೆ.

ನಮ್ಮ ಯತ್ನಗಳೆಲ್ಲ ನಿರರ್ಥಕವಾಗುತ್ತವೆ ಇದರಿಂದ ನಾವು ಅವನತಿಯ ಮಾರ್ಗವನ್ನು ಹಿಡಿದೆವೆಂದು ನಿಸ್ಸಂದೇಹವಾಗಿ ತಿಳಿಯಬೇಕು. ಈ ಪ್ರಕಾರದ ಅನರ್ಥಕ್ಕೆ ಕಾರಣವಾದ ಭೇದಗಳು ನಮ್ಮಲ್ಲಿ ಅನಂತವಾಗಿರುವವು. ಗುರುಸ್ಥಲದವರಿಗೂ ವಿರಕ್ತರಿಗೂ ವೈಷಮ್ಯ. ಈ ವೈಷಮ್ಯವನ್ನು ಬಲಪಡಿಸಲಿಕ್ಕೆ ಕೆಲವು ಭಕ್ತರು ಒಂದು ಪಕ್ಷ ಕೆಲವು ಭಕ್ತರು ಮತ್ತೊಂದು ಪಕ್ಷ ಹಿಡಿದು ಪಕ್ಷಾಂಧರಾಗಿ ಬಡಿದಾಡಹತ್ತುವರು. ಇದರಿಂದ ಪಥ್ಯವಾದ ವನಸ್ಪತಿಗಳಿಂದ ವಿಷವನ್ನು ಉತ್ಪನ್ನಮಾಡಿ ಆತ್ಮನಾಶಕ್ಕೆ ಕಾರಣಮಾಡಿಕೊಂಡಂತೆ ಯಾವ ಸ್ಥಾನಗಳು ನಮ್ಮ ಉನ್ನತಿಗೂ ಉದ್ಧಾರಕ್ಕೂ ಉತ್ಪನ್ನವಾಗಿವೆಯೋ ಅಂಥ ಸ್ಥಾನಗಳಿಂದ ಕಲಹರೂಪವಾದ ವಿಷವನ್ನು ಉತ್ಪನ್ನಮಾಡಿಕೊಂಡು ಸಮಾಜನಾಶಕ್ಕೆ ಕಾರಣವಾಡಿಕೊಳ್ಳುವದೆಂದರೆ ಮೂರ್ಖತನದ ಪರಮಾವಧಿಯು. ಇದೊಂದೇ ಭೇದದಿಂದ ತೀರಲಿಲ್ಲ. ವಿರಕ್ತರಲ್ಲಿ ಸಮಯಭೇದ, ಭಕ್ತರಲ್ಲಿ ಒಳಪಂಗಡದ ಭೇದ, ಹೀಗೆ ನೆಲೆಯಿಲ್ಲದಷ್ಟು ಭೇದಗಳಾಗಿ ಐಕಮತ್ಯವು ತಪ್ಪಿ ಅನರ್ಥಪರಂಪರೆಗೆ ಕಾರಣವಾಗಿರುವದು. ಈ ಅರ್ಥವಿಲ್ಲದ ಭೇದಗಳನ್ನು ತೆಗೆದುಕೊಂಡು ಚರ್ಚೆಮಾಡುತ ಕೂತರೆ ಮತ್ತಿಷ್ಟು ಮನಸ್ತಾಪಕ್ಕೆ ಕಾರಣವಾಗುವದು. ನಮ್ಮಲ್ಲಿ ಐಕಮತ್ಯವನ್ನುಂಟುಮಾಡುವ ಒಂದೇ ಒಂದು ಉತ್ತಮವಾದ ಉಪಾಯವೆಂದರೆ ಸಮಾಜದಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡುವದು ; ಭೇದಗಳೆಲ್ಲ ಅಜ್ಞಾನಮೂಲಕ ಉತ್ಪನ್ನವಾದಂಥವಿದ್ದು ಸೂರ್ಯೋದಯದಿಂದ ಕತ್ತಲೆಯು ನಾಶವಾಗುವಂತೆ ಜ್ಞಾನೋದಯದಿಂದ ಅಜ್ಞಾನಜನ್ಯವಾದ ಈ ಭೇದಗಳು ತಾವೇ ನಾಶಹೊಂದುತ್ತವೆ. ಅದ್ದರಿಂದ ನಾವು ಯಾವದೊಂದು ಪಕ್ಷವನ್ನೂ ಹಿಡಿದು ಬಡಿದಾಡುತ್ತ ಕೂಡದೆ ಭೇದಭಾವದ ವಿಚಾರಗಳಿಗೆ ಮನಸ್ಸಿನಲ್ಲಿ ಯಾವ ಪ್ರಕಾರದಿಂದಲೂ ಇಂಬುಗೊಡದೆ ವ್ಯರ್ಥವಿವಾದವನ್ನು ಬೆಳೆಸುವ ಗೋಜಿಗೆ ಹೋಗದೆ ವಿದ್ಯಾಪ್ರಸಾರ ಮೊದಲಾದ ಮಾನ್ಯವಾದ ಉಪಾಯಗಳಿಗೆ ಪ್ರಯತ್ನಮಾಡುತ್ತ ಹೋಗಬೇಕು. ಇದೇ ಐಕಮತ್ಯಕ್ಕೆ ರಾಜಮಾರ್ಗವು.

ಮಹಾಸಭೆಯ ನಿರ್ಣಯಗಳನ್ನು ಅಮಲಿನಲ್ಲಿ ತರುವದಕ್ಕೆ ಮಾಡತಕ್ಕ ಉಪಾಯಗಳು.

ಮಹನೀಯರೇ, ಇದುವರೆಗೆ ಎಂಟು ಮಹಾಸಭೆಗಳಾಗಿ ಪ್ರತಿಯೊಂದು ಮಹಾಸಭೆಯಲ್ಲಿ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮೊದಲಾದ ಅನೇಕ ವಿಷಯಗಳ ಊಹಾಪೋಹವಾಗಿದೆ. ವಕ್ತೃತ್ವಪೂರ್ಣವಾದ ವ್ಯಾಖ್ಯಾನಗಳಾಗಿವೆ. ಉಪಯುಕ್ತವಾದ ನಿರ್ಣಯಗಳಾಗಿವೆ. ಅವುಗಳನ್ನು ಅಮಲಿನಲ್ಲಿ ತರುವ ವಿಷಯದಲ್ಲಿ ಮಾತ್ರ ಆಗತಕ್ಕಷ್ಟು ಪ್ರಯತ್ನಗಳಾಗಿಲ್ಲವೆಂದು ಹೇಳಲಿಕ್ಕೆ ವಿಷಾದವಾಗುತ್ತದೆ. ನಿರ್ಣಯಗಳನ್ನು ಪಾಸುಮಾಡಿದ ಮಾತ್ರದಿಂದ ಇಲ್ಲವೆ ರಿಪೋರ್ಟಿನಲ್ಲಿ ಬರೆದ ಮಾತ್ರದಿಂದ ಕೆಲಸತೀರಲಿಲ್ಲ. ಮಹಾಸಭೆಯನ್ನು ಮಾಡುವವರು ಬಂದ ಜನರ ಆತಿಥ್ಯ ಆದರೋಪಚಾರಗಳನ್ನು ಮಾಡಿ ತೃಪ್ತರಾಗುತ್ತಾರೆ. ಮಹಾಸಭೆಯ ನಿಯಮಗಳಿಗನುಸಾರವಾಗಿ ಸ್ಟ್ಯಾಂಡಿಂಗ್ ಕಮಿಟಿಯವರ ಕಡೆಗೆ ರಿಪೋರ್ಟ ಕಳುಹಿಸುವದಿಲ್ಲ. ಮಹಾಸಭೆಯಲ್ಲಿ ವಸೂಲಾದ ಹಣದ ಕೆಲವು ಭಾಗವನ್ನು ಸ್ಟ್ಯಾಂಡಿಂಗ್ ಕಮಿಟಿ ಚೇರಮನ್ನರ ಕಡೆಗೆ ಕಳುಹಿಸಬೇಕೆಂಬ ನಿಯಮವಿದ್ದು ಅಪ್ರಕಾರ ಕಳುಹಿಸುವದಿಲ್ಲ. ಪ್ರತಿನಿಧಿಗಳೂ ಪ್ರೇಕ್ಷಕರೂ ಮೂರು ದಿನ ವ್ಯಾಖ್ಯಾನಗಳನ್ನು ಕೇಳಿ ಸಂತುಷ್ಟರಾಗಿ ಹೋದರೆಂದರೆ ತಿರುಗಿ ವರ್ಷ ಬರುವವರೆಗೆ ಸಭೆಯ ಸಂಬಂಧಿಸ್ಮರಣವನ್ನು ಸಹ ಮಾಡುವದಿಲ್ಲ. ಇನ್ನು ಮುಂದಾದರೂ ಇದೇ ರೀತಿಯಿಂದ ಮಹಾ ಸಭೆಗಳಾಗುತ್ತ ಹೋದರೆ ಅದರಿಂದ ಪೂರ್ಣ ಉಪಯೋಗವಾದೀತೆಂದು ತೋರುವದಿಲ್ಲ. ಮಹಾಸಭೆಯು ಬಾಹ್ಯಾಡಂಬರದ ಜಾತ್ರೆಮಾತ್ರವಾಗುವದು. ನಿರ್ಣಯಗಳನ್ನು ಅಮಲಿನಲ್ಲಿ ತರುವ ಬಗ್ಗೆ ವಿಚಾರಮಾಡುವದು ಮಹತ್ವದ ಸಂಗತಿಯಾಗಿರುತ್ತದೆ. ಕಾರಣ ಬಹಳ ನಿರ್ಣಯಗಳನ್ನು ಮಾಡದೆ ಈ ವರ್ಷದಲ್ಲಿ ಅಮಲಿನಲ್ಲಿ ತರಲಿಕ್ಕೆ ಸಾಧ್ಯವಾಗುವಂಥ ಸ್ವಲ್ಪೇ ನಿರ್ಣಯಗಳನ್ನು ಮಾಡಬೇಕು. ಎಲ್ಲ ಕಡೆಯಲ್ಲಿ ತಾಲೂಕ ಕಮಿಟಿ ಜಿಲ್ಲಾ ಕಮಿಟಿ ಪ್ರಾಂತಿಕ ಕಮಿಟಿಗಳನ್ನು ಸ್ಥಾಪಿಸಬೇಕು. ಹಾಗು ಪ್ರತಿಯೊಂದು ಭಾಗದಲ್ಲಿ ಬೇರೆಬೇರೆ ವಿಷಯಗಳ ಸಂಬಂಧಿ ನಿರ್ಣಯಗಳನ್ನು ಅಮಲಿನಲ್ಲಿ ತರಲು ಪ್ರಯತ್ನಮಾಡುವದಕ್ಕಾಗಿ ಆಯಾ ವಿಷಯದಲ್ಲಿ ಜ್ಞಾನವೂ ಅನುಭವವೂ ಉಳ್ಳಂಥ ಯೋಗ್ಯರಾದ ಜನರುಳ್ಳ ವಿಷಯವಾರ ಕಮಿಟಿಗಳನ್ನು ಮಾಡಬೇಕು. ಅಂದರೆ ಒಂದೊಂದು

ತಾಲೂಕಿನಲ್ಲಿ ಶಿಕ್ಷಣವಿಷಯವಾಗಿ ಪ್ರಯತ್ನಮಾಡತಕ್ಕ ತಾಲೂಕಾ-ವೀರಶೈವ-ಶಿಕ್ಷಣ ಮಂಡಳವೆಂಬ ಒಂದು ಕಮಿಟಿ, ಧಾರ್ಮಿಕ ವಿಷಯಗಳನ್ನು ಅಮಲಿನಲ್ಲಿ ತರುವದೊಂದು ಕಮಿಟಿ, ಈ ಪ್ರಕಾರ ಪ್ರಾಂತವಾರ ವಿಷಯವಾರ ಜನರ ಯೋಜನೆಯಾಗುವದರಿಂದ ತಾವು ಮಾಡತಕ್ಕ ಕಾರ್ಯಕ್ಷೇತ್ರವು ಮರ್ಯಾದಿತವಾಗಿ ಮಾಡಿದ ಯತ್ನವು ಫಲವದ್ರೂಪವಾಗುವದು. ಇದರಿಂದ ವ್ಯವಸ್ಥಿತ ರೀತಿಯಿಂದ ಕಾರ್ಯಗಳಾಗಲಿಕ್ಕೆ ಮಾರ್ಗವಾಗುವದು. ಕೌನ್ಸಿಲ್ ಇಲೆಕ್ಷನ್ ಮೊದಲಾದ ಕೆಲಸಗಳಿಗೆ ಸಹಾಯವಾಗುವದು. ಯಾವದೊಂದು ವಿಷಯವನ್ನು ಸರಕಾರದ ಮುಂದಿಡಲಿಕ್ಕೆ ಒಂದು ಮುಖವಾಗದು. ಬರೇ ಕಮಿಟಿಯ ರಚನೆಯನ್ನು ಮಾಡಿದ ಮಾತ್ರದಿಂದಾದರೂ ಕೆಲಸ ತೀರಲಿಲ್ಲ. ವಿಶೇಷ ಶ್ರಮವಹಿಸಿ ಕಳಕಳಿಯಿಂದಲೂ ಅಭಿಮಾನದಿಂದಲೂ ಆಸ್ಥೆಯಿಂದಲೂ ಕೆಲಸ ಮಾಡತಕ್ಕ ಜನರು ಬೇಕು. ಜನರಲ್ಲಿ ತಮ್ಮ ಹೆಸರು ಮುಂದೆ ಬರಬೇಕು, ಜನರಿಂದ ತಾವು ಸ್ತುತಿ ಮಾಡಿಸಿಕೊಳ್ಳಬೇಕು, ಎಂಬ ಉದ್ದೇಶದಿಂದ ಮಾತ್ರ ಸಮಾಜ ಸೇವೆಯನ್ನು ಕೈಕೊಳ್ಳತಕ್ಕದ್ದಲ್ಲ. ಅದು ತಮ್ಮ ಪವಿತ್ರ ಕರ್ತವ್ಯವೆಂದು ತಿಳಿದು ಕೆಲಸಮಾಡತಕ್ಕದ್ದು. ಈ ಪ್ರಕಾರ ಮನಃಪೂರ್ವಕವಾಗಿ ಕೆಲಸಮಾಡತಕ್ಕ ಜನರು ಹೆಚ್ಚಾದಂತೆ ನಮ್ಮ ಉದಯಕಾಲವು ಸಮೀಪಿಸಿತೆಂದು ತಿಳಿಯಬೇಕು. ಅವಶ್ಯವಿದ್ದಲ್ಲಿ ಪಗಾರಿ ನೌಕರರನ್ನು ನಿಯಮಿಸಿಕೊಳ್ಳಬೇಕು. ಹೀಗೆ ವ್ಯವಸ್ಥಿತ ರೀತಿಯಿಂದ ಕಾರ್ಯಾರಂಭಮಾಡಿ ಕೆಲಸಮಾಡುತ್ತ ಹೋದರೆ ಮಾತ್ರ ಮಹಾಸಭೆಯ ನಿಜವಾದ ಉಪಯೋಗಕರವಾಗುವದು. ಇನ್ನು ಶೀಘ್ರವೇ ಮಾಂಟಿಗೂ ಚೇಮ್ಸ್‌ಫರ್ಡರ ರಾಜ್ಯಕಾರಭಾರದ ಸುಧಾರಣೆಯ ಬಿಲ್ಲು ಅಮಲಿನಲ್ಲಿ ಬರತಕ್ಕದ್ದದೆ. ಅದರಿಂದ ಜನರ ಕಡೆಗೆ ಜವಾಬದಾರ ಕಾರಭಾರವು ಬರುವದು. ಅದನ್ನು ವಹಿಸಲಿಕ್ಕೆ ನಾವು ಶಕ್ತರಾಗಬೇಕಾದರೆ ನಮ್ಮಲ್ಲಿ ಶಿಕ್ಷಣವು ಹೆಚ್ಚಾಗಲಿಕ್ಕೆ ಬೇಕು. ಏಕಮತ್ಯವು ಉತ್ಪನ್ನವಾಗಲಿಕ್ಕೆ ಬೇಕು. ನಿರ್ಭೀಡೆಯಿಂದಲೂ ವಿವೇಕದಿಂದಲೂ ಯೋಗ್ಯಪ್ರತಿನಿಧಿಗಳನ್ನು ಆರಿಸಿಕೊಡಲಿಕ್ಕೆ ತಯಾರಾಗಲಿಕ್ಕೆ ಬೇಕು. ಅಂದರೆ ನಾವು ನಮ್ಮ ಹಕ್ಕುಗಳನ್ನು ಕಾಯ್ದುಕೊಂಡು ನಮ್ಮ ಉನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಸಮರ್ಥರಾಗುವೆವು. ಇಂಥ ಉತ್ತಮವಾದ ಪರಿಸ್ಥಿತಿಯು ಉಂಟಾಗಬೇಕಾದರೆ ಸರ್ವರೂ ಪ್ರಯತ್ನಮಾಡಿ ಸಮಾಜೋನ್ನತಿಯ ಕೆಲಸಕ್ಕೆ ಸಹಾಯಮಾಡಬೇಕೆಂತಲೂ ಈ ವರ್ಷದಲ್ಲಿ ಮಾಡಿದ ಪ್ರಯತ್ನಗಳ ಮತ್ತು ಅದರಿಂದ ಸಾಧ್ಯವಾದ ಫಲಗಳ ವರದಿಯನ್ನು ಮುಂದಿನ ವರ್ಷದ ಮಹಾಸಭೆಯಲ್ಲಿ ತಪ್ಪದೆ ತರಬೇಕೆಂತಲೂ ಸೂಚಿಸಿ, ನನ್ನ ಭಾಷಣವನ್ನು ಶಾಂತರೀತಿಯಿಂದ ಕೇಳಿಕೊಂಡಬಗ್ಗೆ ತಮ್ಮೆಲ್ಲರ ಆಭಾರಮನ್ನಿಸಿ ವಿಷಯ ನಿಯಾಮಕ ಕಮಿಟಿಯನ್ನು ಗೊತ್ತುಪಡಿಸಿ ನೀವೆಲ್ಲರೂ ಕಾರ್ಯಕ್ರಮದಂತೆ ಮುಂದಿನ ಕೆಲಸಗಳನ್ನು ನಡಿಸಬೇಕೆಂದು ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಬೀರೂರ,
ತಾ|| ೨೭-೧೨-೧೯.

ಶಾಂತವೀರಪ್ಪಾ ವಿ. ಮೆಣಸಿನಕಾಯಿ,
ಅಧ್ಯಕ್ಷ, ೯ನೇ ಶ್ರೀಮದ್ವೀರಶೈವ
ಮಹಾಸಭೆ, ಬೀರೂರು.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಬಿಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0-8-0.

46 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ



ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4-8-0.

ವಿಳಾಸ: —ವಿ. ಎ. ಎಸ್. ಪಾಣಿ ಕಂಪನಿ,
46 ಸಾಹುಕಾರಪೇಟೆ, ಮದರಸು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 25

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಸ್ತು ತಂಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಸಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
16 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರವೆ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸುವಿನಿಂದ ತಯಾರಿಸಲಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಖುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ: —ಡಾಕ್ಟರ್ ಎಂ. ಪ್ಲೀಡರ್,
46 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೮ ನೇ ಇಸ್ವಿಯ ೨೫ ನೇ ಅಕ್ಟನಂತೆ ರಿಜಸ್ಟರ ಮಾಡಲ್ಪಟ್ಟ 13

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೪ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ರನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೆಡಡುತ್ತೇನೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜನವರಿ ತಾ|| ೧೧ ರಿಂದ ೧೯೨೦ ನೆಯ ಜನವರಿ ತಾ|| ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಪುಷ್ಯಬಹುಳ ಷಷ್ಠಿಯಿಂದ ಪುಷ್ಯಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುಮಳೆ
11	ಭಾನು	ಷಷ್ಠಿ	33-0	ಉಫ	35-19	27
12	ಸೋಮ	ಸಪ್ತ	34-3	ಹಸ್ತ	37-53	28
13	ಮಂಗಳ	ಅಷ್ಟ	36-28	ಚಿತ್ತ	41-33	29
14	[1]ಬುಧ	ನವ	40-1	ಸ್ವಾತಿ	46-27	1
15	[2]ಗುರು	ದಶ	44-37	ವಿಶಾ	52-17	2
16	[3]ಶುಕ್ರ	ಏಕಾ	49-50	ಅನೂ	58-44	3
17	ಶನಿ	ದ್ವಾದ	50-30	ಜ್ಯೇಷ್ಠ	60-0	4

(1) ಉತ್ತರಾಯಣ ಪುಣ್ಯಕಾಲ, ಶಿವಗಂಗಾ ಗಂಗೋತ್ಸವ. (2) ಚುಂಚನಕಟ್ಟೆ ರಾಮಸ್ವಾಮಿ ರಥ, ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿ ರಥ, ಉಡುಪಿಯಲ್ಲಿ ಚೂರ್ಣೋತ್ಸವ. (3) ಸರ್ವತ್ರೈಕಾದಶಿ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ವಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯಂಸದಾಪೊರೆಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]   [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩)   ಮೈಸೂರ ಸ್ಟಾರ ಸರ್ ೧೯೨೦ ನೆಯ ಇಸವಿ ಜನವರಿ ತಾರೀಖು ೧೮ ನೆಯ ಭಾನುವಾರ.   (ಸಂಚಿಕೆ ೩

MYSORE GOVERNMENT ADVERTISEMENTS.

24

Government Botanic Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE ECONOMIC JOURNAL.

A Monthly Periodical devoted to the Discussion of all Economic Topics of Interest.

Special Features.

Original articles on Economic subjects by writers of note; summary of articles of interest from Indian and Foreign Economic periodicals; seletions from important speeches and papers on Economic subjects; notes of the month on current Economic matters; notes on various Economic activities in and outside the State, and topical portraits and illustrations.

Annual Subscription.

Mysore State	Rs. 3
Outside Mysore State ...	Rs. 4
Great Britain	Sh. 8
America	$ 2
Single copy	As. 8

The Journal is an excellent medium for advertising all matters of Economic utility. The following is the schedule of rates:—

For full page, Rs. 10 per insertion.
„ half „ „ 6 „
„ quarter „ $3\frac{1}{2}$ „

One anna per line for speeial short advrt isements not exceeding four lines each.

Contract rates on application.

For sample copy send eight annas stamp.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನು ೬೩ ಶೀಲಗಳನ್ನು ನಿರೂಪಿಸುವ ದೊಡ್ಡ ಪದ್ಯದ ಗ್ರಂಥ.

ಪಂಚಶತ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಶಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 12

ನಾವು ಎ. ಅಲ್ ಬ್ಯುಕ್ಯಯರ್ ಕ್ಯು ಅಂಡ್ ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

10 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಅಪ್ಪವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ,

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಪ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
4 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 5

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦— ೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲಚರಿತ್ರೆ	೦— ೫—೦
ಹರಿದಾಸಿ	೦— ೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಜನವರಿ ತಾ|| ೧೮ ನೆಯ ಭಾನುವಾರ.

ಆಹಾರ್ಯಪದಾರ್ಥಗಳು.

ಯುದ್ಧವು ಶಾಂತವಾದ ಬಳಿಕ ಮಳೆಗಳು ಸುಮುಖವಾಗಿ ಬೀಳುತ್ತ ಬಂದುದರಿಂದ ಯುದ್ಧ ಚಿಂತೆಯ ಜತೆಗೆ ನಮ್ಮ ದೇಶದ ಕ್ಷಾಮಭೀತಿಯೂ ತಪ್ಪುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಹಾಗೆ ಆಗಲಿಲ್ಲ. ಹಿಂಗಾರು ಬೆಳಸು ಹೋದವರ್ಷದಮಟ್ಟಿಗೂ ಆಗಲಿಲ್ಲ. ಕಾಳುಕಡ್ಡಿಗಳ ಪೈರುಗಳು ತಕ್ಕಷ್ಟು ಫಲಿಸಲಿಲ್ಲ. ಹುರುಳಿಯು ಕೆಟ್ಟಿತು. ಬತ್ತದ ಬೆಳಸಿನಲ್ಲಿ ಜಳ್ಳು ಹೆಚ್ಚಿದುದಲ್ಲದೆ ಹುಲಸೂ ಕಡಿಮೆಯಾಯಿತು. ಇನ್ನು ಜೋಳ ರಾಗಿಗಳ ವಿಷಯವನ್ನು ತೆಗೆದುಕೊಂಡರೆ ಅದೂ ಸಂಪೂರ್ಣವಾಗಿ ಕೈಸೇರಲಿಲ್ಲ. ಅರಿಯ ಕಾಲದಲ್ಲಿ ಮಳೆಯೂ ಮೋಡವೂ ಮುಸುಕಿ ರಾಗಿಯನ್ನು ಕೆಡಿಸಿತು ಹಲವು ಕಡೆ ಮಳೆಯ ಹದ ತಪ್ಪಿ ಜೋಳವು ಅರ್ಧಬೆಳಸು ಆಯಿತು. ಡಿಸೆಂಬರ್ ೧೯ ನೆಯ ತಾರೀಖು ಜನಪ್ರಳಯಕರವಾಗುವುದೆಂಬ ಭವಿಷ್ಯತ್ತು ಧಾನ್ಯಪ್ರಳಯದಲ್ಲಿ ಪರ್ಯವಸನ್ನವಾದಂತೆ ತಿಳಿಯಬೇಕಾಯಿತು. ಇಷ್ಟಾದರೂ ನಿರಾಶೆಯಾಗುವ ಸ್ಥಿತಿಯೇನೂ ಒದಗಿಲ್ಲ. ದಾರಣೆವಾಸಿಗಳು ಮಿತಿಮೀರಿ ಏರಿರುವುದು ಮಾತ್ರ ಜನರನ್ನು ಎದೆಗೆಡಿಸುತ್ತಿದೆ. ಈ ವಿಷಯದಲ್ಲಿ ಕಳೆದ ವರ್ಷದ ಈ ಕಾಲದ ಸ್ಥಿತಿಗಿಂತಲೂ ಈ ವರ್ಷದ ಸ್ಥಿತಿಯು ಬಹಳ ಭೀಕರವಾಗಿದೆ. ಕಳೆದ ವರ್ಷ ಈ ಕಾಲದಲ್ಲಿ ಬತ್ತದ ಬೆಲೆಯು ಕಂಡಗಕ್ಕೆ ೧೦ ರಿಂದ ೧೪ ರೂ. ಯೊಳಗೆ ಇದ್ದಿತು. ಈ ವರ್ಷ ಜನವರಿ ತಿಂಗಳಾರಂಭದಲ್ಲಿ ೨೩ ರೂ. ನ ವರೆಗೂ ಬೆಲೆಯೇರಿತು. ಹುರುಳಿಯ ಬೆಲೆಯು ಪಲ್ಲ ೧ಕ್ಕೆ ೨೦ ರೂ. ನ ವರೆಗೂ ತೊಗರಿಯ ಬೆಲೆಯು ೨೩ರ ವರೆಗೂ ಏರಿತು. ಉಳಿದ ಕಾಳುಗಳ ಬೆಲೆಯ ಸ್ಥಿತಿಯೂ ಹೀಗೆಯೇ ಹೆಚ್ಚಿಕೊಂಡಿದೆ. ಇದಕ್ಕೆಲ್ಲಾ ರೈತರ ದುರಾಸೆಯೇ ಕಾರಣವೆಂದು ಕೆಲವರೂ, ವರ್ತಕರ ಸ್ವಾರ್ಥೈಕಪರತೆಯೇ ಕಾರಣವೆಂದು ಕೆಲವರೂ, ನಿರ್ಬಂಧವಿಲ್ಲದೆ ಪರಸ್ಥಳಗಳಿಗೆ ಧಾನ್ಯಗಳು ಸಾಗಿಹೋಗುತ್ತಿರುವುದೇ ಕಾರಣವೆಂದು ಕೆಲವರೂ ನಾನಾ ವಿಧವಾಗಿ ಹೇಳಿಕೊಳ್ಳುತ್ತಿದ್ದಾರೆ. ಬೆಲೆಯ ಹೆಚ್ಚುಗೆಗೆ ಮೇಲೆ ಕಂಡ ಅಂಶಗಳೆಲ್ಲವೂ ಕಾರಣಗಳೆಂದೇ ಹೇಳಬಹುದು. ಧನದಾಸೆಯು ಯಾರನ್ನೂ ಬಿಟ್ಟಿದಲ್ಲ. ಅದರೂ ರೈತರಲ್ಲೂ ವರ್ತಕರಲ್ಲೂ ಎಲ್ಲರೂ ನಿಷ್ಕರುಣರೂ ದೇಶಾಭಿಮಾನರಹಿತರೂ, ಸ್ವಾರ್ಥೈಕಚಿಂತಕರೂ ಆಗಿರುವರೆಂದು ಹೇಳಲಾಗುವುದಿಲ್ಲ. ಧರ್ಮಮಾರ್ಗಪರಾಯಣರೂ ಇರುವರು. ಆದರೆ ಅಂಥವರು ಸ್ವಲ್ಪ ಜನರಾಗಿರುವುದರಿಂದ ಅವರುಗಳು ಪ್ರಾಣಿದಯೆಯಿಂದಲೋ ಪಾಪಭೀತಿಯಿಂದಲೋ ದುರಾಶಾರಾಹಿತ್ಯದಿಂದಲೋ ಹೆಚ್ಚುಬೆಲೆಗೆ ಮಾರುವುದನ್ನು ಬಿಟ್ಟು ಕುಳಿತುಕೊಂಡ ಮಾತ್ರಕ್ಕೇ ಇತರರೇನೂ ಬಿಡುವ ಹಾಗಿಲ್ಲ. ಇದರಿಂದ ಬಿಟ್ಟವನು ಲಾಭವನ್ನು ಕಳೆದುಕೊಳ್ಳುವನೇ ಹೊರತು ದೇಶಕ್ಕೆ ಹಿತವನ್ನೇನೂ ಮಾಡಿದವನಾಗುವುದಿಲ್ಲ. ಅದುಕಾರಣ ಅವರೂ ಇತರರಂತೆಯೇ ನಡೆಯಬೇಕಾಗುತ್ತದೆ. ಅಲ್ಲದೆ ಪರಸ್ಥಳದ ಗಿರಾಕಿಗಳು ಹೆಚ್ಚುಬೆಲೆಯನ್ನು ಕೊಟ್ಟು ಕೊಳ್ಳುವುದಕ್ಕೆ ಮೇಲಾಟ ಮಾಡುತ್ತಿರುವಾಗ ವರ್ತಕರು ಹೆಚ್ಚುಬೆಲೆಗೆ ರೈತರಿಂದ ಕೊಂಡುಕೊಳ್ಳದೆ ಏತಕ್ಕೆ ಬಿಟ್ಟಾರು? ರೈತರಮನೆ ಮುಂದಕ್ಕೆ ವರ್ತಕರು ದುಡ್ಡಿನ ಚೀಲವನ್ನು ಹೊತ್ತುಕೊಂಡುಹೋಗಿ ಬೆಲೆಯೇರಿಸುತ್ತಿರುವಾಗ ಅವರು ಧನಲಕ್ಷ್ಮಿಯ ಮೇಲೆ ವೈರಾಗ್ಯವನ್ನು ತೋರಿಸುವುದುಂಟೆ? ಪರಸ್ಥಳದ ಗಿರಾಕಿಗಳ ಬರವಸೆಯಿರುವುದರಿಂದ ಅಕ್ಕಿಯ ಮಿಲ್ಲಿನ ಯಜಮಾನರುಗಳು ಬಡಬಗ್ಗರಾದ ವರ್ತಕರಿಗೆ ಅವಕಾಶವೇ ಕೊಡದೆ ಬೆಲೆಯನ್ನು ಏರಿಸಿ ವಿಪರೀತವಾಗಿ ಕೊಂಡು ತುಂಬಿಕೊಳ್ಳುತ್ತಿರುವರೆಂಬುದೊಂದು ಬೇರೆ. ಹೀಗೆಲ್ಲಾ ಆಗಿರುವುದರಿಂದ ಕೊಂಡು ತಿನ್ನುವ ಬಡಬಗ್ಗರ ಅವಸ್ಥೆಯು ವಾಚಾಮಗೋಚರವಾಗಿದೆ. ಕಳೆದ ವರ್ಷದ ಕ್ಷಾಮದ ಹಾವಳಿಯನ್ನು ಜನರು ಹೇಗೆ ಹೇಗೋ ಕಳೆದುಕೊಂಡರು. ಈ ವರ್ಷ ಮಳೆಬೆಳೆಗಳು ಸುಮುಖವಾಗಿದ್ದುದರಿಂದ ಇನ್ನು ನಮಗೆ ಹಿಂದಣ ಕಷ್ಟವು ತಟ್ಟಲಾರದೆಂದು ಆಸೆಪಟ್ಟುಕೊಂಡಿದ್ದರು. ವಿಷವೇರಿದಂತೆ ಸುಗ್ಗಿಯಲ್ಲೇ ದಾರಣೆಗಳು ದ್ವಿಗುಣ ತ್ರಿಗುಣವಾಗಿ ಏರುತ್ತಿರುವುದನ್ನು ಕಂಡು ಅವರುಗಳಿಗೆ ಎದೆಯೊಡೆದುಹೋಗಿರುವುದು. ಈಗಲೇ ಹೀಗಾದ ಮೇಲೆ ಮುಂದೆ ವರ್ಷವನ್ನು ತುಂಬಿಸುವವರೆಗೆ ಗತಿಯೇನೆಂಬ ಚಿಂತೆಯು ಲಕ್ಷಾಂತರ ಪ್ರಜೆಗಳಿಗೆ ಹತ್ತಿರುವುದು. ಕೊಳ್ಳುವ ಚಿಂತೆಯಿಲ್ಲದಂತೆ ಬೆಳೆದು ತುಂಬಿಕೊಳ್ಳುವ ರೈತರೂ ಧನಿಕರೂ ೧೦೦ಕ್ಕೆ ೧೦ ಮಂದಿಗಳೂ ಇದ್ದಾರೆಯೋ ಇಲ್ಲವೋ. ಉಳಿದ ೯೦ ಜನರು ಕೊಂಡು ತಿನ್ನತಕ್ಕವರೇ. ಅದುಕಾರಣ ಬೆಲೆಹೆಚ್ಚಿಗೆಯಿಂದಾಗುವ ತಾಪವು ದೇಶಕ್ಕೆಲ್ಲಾ ತಟ್ಟಿರುವುದೆಂದೇ ಹೇಳಬೇಕು. ಹೀಗಿರುವಾಗ ಇಂಥ ಕಷ್ಟವನ್ನು ನೀಗಿಸುವುದಕ್ಕೆ ಸರ್ಕಾರದವರು ಕೈಹಾಕದಿದ್ದರೆ ಆದೀತೆ?

ಇಂಗ್ಲೆಂಡಿನಲ್ಲಿ ಆಹಾರ್ಯವಸ್ತುಗಳ ಮುಖ್ಯಾಧಿಕಾರಿಯು ಮಾಡಿರುವ ಒಂದಾನೊಂದು ಭಾಷಣದಲ್ಲಿ ಈ ೧೯೨೦ ನೆ ವರ್ಷದಲ್ಲಿ ಹಿಂದೆಲ್ಲಾ ಅನುಭವಿಸಿದ ದುರ್ಭಿಕ್ಷಕ್ಕಿಂತಲೂ ಹೆಚ್ಚಿನ ಕಷ್ಟವನ್ನು ಅನುಭವಿಸಬೇಕಾಗುವುದೆಂದೂ, ಯುದ್ಧವು ನಿಂತುಹೋದ ಕಾರಣ ಈ ವರ್ಷ ಯರೋಪುಖಂಡದಲ್ಲಿ ಎಂದಿನಂತೆ ವ್ಯವಸಾಯವು ನಡೆಯಲುಪಕ್ರಮವಾಗಿರುವುದರಿಂದ ೧೯೨೧ ನೆ ವರ್ಷದಲ್ಲಿ ಯೂರೋಪಿಗೆ ಸಾಕಾಗುವಷ್ಟು ಪದಾರ್ಥಗಳನ್ನು ಅವರು ಒದಗಿಸಿಕೊಳ್ಳಬಲ್ಲರೆಂದೂ, ಯುದ್ಧಕಾಲದಲ್ಲಿ ಸಂಚಾರಕ್ಕಿದ್ದ ತೊಡಕುಗಳೆಲ್ಲಾ ಈಗ ತಪ್ಪಿರುವ ಕಾರಣ ಒಂದು ಕಡೆಯಿಂದ ಮತ್ತೊಂದು ಕಡೆಗೆ ಆಹಾರ್ಯವಸ್ತುಗಳು ಸಾಗಲು ಅನುಕೂಲ್ಯವುಂಟಾಗಿರುವುದೆಂದೂ, ಈ ಕಾರಣದಿಂದ ಆಹಾರ್ಯಪದಾರ್ಥಗಳ ಬೆಲೆಯು ಈ ವರ್ಷ ಹೆಚ್ಚಿರುವುದೇ ಸಹಜವೆಂತಲೂ ಹೇಳಿರುತ್ತಾರೆ. ನಮ್ಮ ಭರತಖಂಡದಿಂದ ಈಗ ಹೊರಕ್ಕೆ ಅಕ್ಕಿ ರಾಗಿ ಕಾಳುಕಡ್ಡಿ ಮೊದಲಾದುವುಗಳೆಲ್ಲಾ ಸಾಗಿಹೋಗುತ್ತಿವೆ. ಇದರಿಂದಲೇ ನಮಗೆ ದುರ್ಭಿಕ್ಷವು ಬೆನ್ನುಹತ್ತಿದಂತಾಗಿದೆ. ಆದರೂ ಸ್ವದೇಶವನ್ನು ಉಪವಾಸ ಬಿಡಿಸಿ ಪರದೇಶದವರ ಹೊಟ್ಟೆಯನ್ನು ತುಂಬಿಸುವುದು ಪ್ರಭುತ್ವದವರ ಧರ್ಮವಾಗಿರುವುದಿಲ್ಲ. ಅದುಕಾರಣ ಇಂಡ್ಯಾ ಸರ್ಕಾರದವರು ಈ ವಿಷಯದಲ್ಲಿ ಜಾಗರೂಕರಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ತಪ್ಪಿಸಿಬಿಡಬೇಕೆಂದಿದ್ದ ಕಂಟ್ರೋಲ್ ಪದ್ಧತಿಯನ್ನು ಅವರು ಕೂಡ ಈ ವರ್ಷದ ಕಡೆಯವರೆಗೂ ಸಾಗಿಸಲು ಸಂಕಲ್ಪಿಸಿರುವಂತೆ ಕಾಣುತ್ತದೆ. ಅದು ಯುಕ್ತವೇ ಆಗಿದೆ.

ನಮ್ಮ ಮೈಸೂರು ಪ್ರಭುತ್ವದವರು ಕೂಡ ಇದುವರೆಗೆ ಆಹಾರ್ಯವಸ್ತುಗಳ ಕಂಟ್ರೋಲರಾಗಿದ್ದ ಮಿ|| ಮೆಥ್ಯೂರವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಿಗೆ ಕಳುಹಿಸಿಬಿಟ್ಟು ಈ ತಿಂಗಳಲ್ಲಿ ಆ ಶಾಖೆಯ ಕೆಲಸವನ್ನೇ ತೆಗೆದುಹಾಕಿಬಿಡಬೇಕೆಂದು ನಿಶ್ಚೈಸಿದ್ದುದನ್ನು ಈಗಣ ಬೆಲೆಯ ವೈಷಮ್ಯವನ್ನೂ ದೇಶದ ಹಾಹಾಕಾರವನ್ನೂ ಕಂಡು ಮತ್ತೆ ಪೂರ್ವದಂತೆಯೇ ಇನ್ನು ಕೆಲಕಾಲ ಆ ಶಾಖೆಯ ಕೆಲಸವನ್ನು ಸಾಗಿಸಬೇಕೆಂದು ನಿರ್ಧರಿಸಿ ಹೊಸದಾಗಿ ಒಂದು ಪ್ರಕಟನೆಯನ್ನು ಮಾಡಿರುವರು. ಇದರ ಪ್ರಕಾರ ಇನ್ನು ಕೆಲಕಾಲ ಮಿ|| ಮೆಥ್ಯೂರವರೇ ಆಹಾರ್ಯವಸ್ತುಗಳ ಕಂಟ್ರೋಲರಾಗಿರುವರು. ಮುಖ್ಯಗಳಾದ ಬತ್ತ, ಅಕ್ಕಿ, ರಾಗಿ, ಜೋಳ, ಹುರುಳಿ, ಕಡಲೆ ಮೊದಲಾದ ಧಾನ್ಯಗಳನ್ನೆಲ್ಲಾ ಸಂಸ್ಥಾನದ ಹೊರಕ್ಕೆ ಸಾಗಗೊಡಿಸದಂತೆ ಪೂರ್ವದ ಹಾಗೆಯೇ ನಿರ್ಬಂಧವನ್ನು ಕಲ್ಪಿಸುವರು. ಧಾನ್ಯಗಳ ಬೆಲೆಯನ್ನು ಕಾಲೋಚಿತವಾಗಿ ನಿಗದಿಮಾಡಿ ಪ್ರಕಟಿಸುವುದಲ್ಲದೆ, ಅವಶ್ಯಕವಾದೆಡೆಯಲ್ಲಿ ಬಲಾತ್ಕಾರವಾಗಿ ನಿಗದಿಯ ಬೆಲೆಗೆ ಧಾನ್ಯಗಳನ್ನು ಸರಕಾರದವರು ವಶಪಡಿಸಿಕೊಳ್ಳುವರು. ಸಹಕಾರ ಸಂಘಗಳ ಮೂಲಕದಿಂದಲೂ ಸರ್ಕಾರಿ ಅಂಗಡಿಗಳಿಂದಲೂ ಧಾನ್ಯಗಳನ್ನು ಮಾರಿಸುವರು. ಇಂಥ ಜಾಗರೂಕತೆಯನ್ನು ಸರ್ಕಾರದವರು ತೆಗೆದುಕೊಂಡು ತಕ್ಕ ಏರ್ಪಾಟನ್ನು ಮಾಡಿಸಿದುದಕ್ಕಾಗಿ ಅವರನ್ನು ವಂದಿಸುತ್ತೇವೆ. ಆದರೆ ಈ ಪ್ರಯತ್ನವನ್ನು ಇನ್ನೂ ಒಂದು ತಿಂಗಳಿಗೆ ಮುಂಚೆಯೇ ಮಾಡಿ ನಿರ್ಬಂಧಗಳನ್ನು ಕಲ್ಪಿಸಿದ್ದರೆ ಇನ್ನೂ ಅನುಕೂಲವಾಗುತ್ತಿದ್ದಿತು. ಹುರುಳಿ ಕಡಲೆ ಮೊದಲಾದುವುಗಳಿಗೆ ನಿರ್ಬಂಧಾಜ್ಞೆಯು ಈಗಾಗಲೇ ಪ್ರಕಟಿಸಲ್ಪಟ್ಟುದರಿಂದ ಪಲ್ಲ ೧ಕ್ಕೆ ೨೦ ರೂ. ಬೆಲೆಯಾಗಿದ್ದ ಹುರುಳಿಯ ಬೆಲೆಯು ಈಗ ೮ ದಿನದೀಚೆಗೆ ೧೭ ರೂ. ಆಗಿದೆ. ಬತ್ತದ ಬೆಲೆಯು ೨೩ ರಿಂದ ೧೮-೧೯ ಕ್ಕೆ ಇಳಿದಿದೆ. ಎಲ್ಲ ಮುಖ್ಯಧಾನ್ಯಗಳಿಗೂ ಸರ್ಕಾರದವರು ಬೆಲೆಯ ನಿಗದಿಯನ್ನು ಮಾಡಿಸುವುದೂ ಹೊರಕ್ಕೆ ಸಾಗದಂತೆ ನಿರ್ಬಂಧವನ್ನು ಬೇಗನೆ ಕಲ್ಪಿಸುವುದೂ ಅವಶ್ಯಕವಾಗಿದೆ. ನಿಷ್ಕಾರುಣ್ಯದಿಂದ ಬೆಲೆ ಹೆಚ್ಚಿಸಿ ಸಾವಿರಗಟ್ಟಲೆ ಕಂಡಗ ಬತ್ತವನ್ನು ಕೊಂಡು "ದಾಸ್ತಾನು" ಮಾಡಿದ್ದವರ ದುರಾಸೆಯು ಅಧರ್ಮವಾದುದೆಂಬ ಗುಣಪಾಠವು ಸರ್ಕಾರದವರ ಯತ್ನದಿಂದ ಉಂಟಾಗಲಿ. ಬಡಬಗ್ಗರು ಪ್ರಭುತ್ವದವರನ್ನು ಹಾಡಿ ಹರಸಲಿ. ತಮ್ಮ ನಾಡಿನಲ್ಲಿ ಬೆಳೆದ ಧಾನ್ಯಗಳನ್ನು ಪ್ರಜೆಗಳು ಅಗ್ಗವಾಗಿ ಕೊಂಡುತಿಂದು ಬದುಕಲಿ.

ರಾ|| ಬ|| ರಾಜಕಾರ್ಯಪ್ರಸಕ್ತ ಎ. ನರಸಿಹ್ಮಯ್ಯಂಗಾರರ ಮೃತಿ.

ರಾ|| ಬ|| ಅಂಬಲ್ ನರಸಿಹ್ಮಯ್ಯಂಗಾರರು ತಮ್ಮ ೭೭ನೆ ವರ್ಷದ ಮುಪ್ಪಿನ ವಯಸ್ಸಿನಲ್ಲಿ ಕಳೆದ ತಾ|| ೧೦ ನೆ ಶನಿವಾರ ಮಧ್ಯಾಹ್ನ ೩ ಗಂಟೆಗೆ ದೈವಾಧೀನರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಕೈ|| ಶ್ರೀ ಚಾಮರಾಜಪ್ರಭುಗಳಿಗೆ ವಿದ್ಯಾಭ್ಯಾಸ ಮಾಡಿಸಿದವರು. ಕಡೆಗೆ ಅವರ ಬಳಿಯಲ್ಲೇ ದರ್ಬಾರುಭಕ್ಷಿಯವರಾಗಿಯೂ ಧೀಸಚಿವರಾಗಿಯೂ ಆ ಪ್ರಭುಗಳ ಅವಸಾನದವರೆಗೂ ರಾಜಸೇವೆಯನ್ನು ಮಾಡಿಕೊಂಡಿದ್ದರು. ಮೈಸೂರುದೇಶವು ಸ್ತ್ರೀ ವಿದ್ಯಾಭ್ಯಾಸ ವಿಷಯದಲ್ಲಿ ಇತರ ಹಿಂದೂ ಸಂಸ್ಥಾನಗಳಿಗೆಲ್ಲಾ ಪ್ರಥಮಸ್ಥಾನವನ್ನು ಪಡೆದುದೆಂಬ ಕೀರ್ತಿಯನ್ನು ಪಡೆದುಕೊಳ್ಳುವಂತಾದುದಕ್ಕೆ ಈ ನರಸಿಹ್ಮಯ್ಯಂಗಾರರೇ ಮೂಲಕಾರಣರೆಂದರೆ ಅತಿಶಯೋಕ್ತಿಯಲ್ಲ. ಇವರ ಆಪ್ತಾಲೋಚನೆಯಿಂದಲೇ ಶ್ರೀಮಚ್ಚಾಮರಾಜೊಡೆಯರವರು ವಾಣೀವಿಲಾಸದ ಸನ್ನಿಧಿಯವರ ಹೆಸರಿನಮೇಲೆ ಬಾಲಿಕಾಪಾಠಶಾಲೆಯನ್ನು ಮೊಟ್ಟಮೊದಲು ರಾಜಧಾನಿಯಲ್ಲಿ ಏರ್ಪಡಿಸಿದುದು. ಅದು ದಿನದಿನಕ್ಕೆ ಶಾಖೋಪಶಾಖೆಗಳಾಗಿ ಒಡೆದು ಕಡೆಗೆ ಈಗ ಕಾಲೇಜಾಗಿ ನಿಲ್ಲುವಂತಾದುದನ್ನು ಕೂಡ ಇವರು ನೋಡಿ ಸಂತೋಷಪಟ್ಟರು. ಸರ್ಕಾರದಿಂದ ಸ್ತ್ರೀ ವಿದ್ಯಾಭಿವೃದ್ಧಿಗಾಗಿ ಲಕ್ಷಾಂತರ ರೂ. ಗಳು ವ್ಯಯಮಾಡಲ್ಪಡುತ್ತಿದ್ದರೂ ಅಯ್ಯಂಗಾರರು ತಮ್ಮ ಸ್ವಾರ್ಜಿತವೆಲ್ಲವನ್ನೂ ಕೂಡ ಅದಕ್ಕೇ ವಿನಿಯೋಗಿಸಿದರು. ತಾವು ಸರ್ಕಾರಿ ಕೆಲಸದಿಂದ ವಿಶ್ರಾಂತಿ ತೆಗೆದುಕೊಂಡಮೇಲೂ ತಮಗೆ ಬರುತ್ತಿದ್ದ ಪೆನ್ಷನ್ ಹಣ ೫೦೦ ರೂ. ಗಳಲ್ಲಿ ತಮ್ಮ ಮಿತವಾದ ವೆಚ್ಚಕ್ಕೆ ಹೋಗುತ ಉಳಿದುದನ್ನೆಲ್ಲಾ ಅದಕ್ಕೇ ವಿನಿಯೋಗಿಸುತ್ತಿದ್ದರು. ಅನಾಥ ವಿತಂತುಗಳ ದುರವಸ್ಥೆಯನ್ನು ನೋಡಲಾರದೆ ಅವರಿಗೊಂದು ಶರಣಾಲಯವನ್ನು ಕಲ್ಪಿಸಿ, ಅದಕ್ಕೆ ಸರ್ಕಾರದಿಂದಲೂ ನಂಜರಾಜ ಬಹದ್ದೂರ್ ಧರ್ಮದ್ರವ್ಯದಿಂದಲೂ ಸಹಾಯವನ್ನು ಒದಗಿಸುತ್ತಿದ್ದು, ತಮ್ಮ ಆದಾಯವನ್ನೂ ವಿನಿಯೋಗಿಸಿ ಆ ವಿಧವೆಯರನ್ನೆಲ್ಲಾ ಪಿತೃವಿನೋಪಾದಿಯಲ್ಲಿ ಕಾಪಾಡುತ್ತಿದ್ದರು. ಇವರಿಗೆ ದೇಶಭಾಷೆಯ ಮೇಲೆ ಬಹಳ ಪ್ರೇಮ. ಕೈ|| ಬಸವಪ್ಪಶಾಸ್ತ್ರಿಗಳನ್ನು ಪ್ರಾಣದಂತೆ ತಿಳಿದುಕೊಂಡಿದ್ದರು. ಮತಮಾತ್ಸರ್ಯವನ್ನು ಇವರು ಸ್ವಪ್ನದಲ್ಲೂ ಅರಿತವರಲ್ಲ. ಇವರ ಯೋಗ್ಯತಾ ವಿಶೇಷಕ್ಕಾಗಿ ಮೆಚ್ಚಿ ಸಾರ್ವಭೌಮರು ರಾವ್ ಬಹದ್ದೂರ್ ಬಿರುದನ್ನೂ ಮೈಸೂರು ಮಹಾರಾಜರು ರಾಜಕಾರ್ಯಪ್ರಸಕ್ತ ಎಂಬ ಪ್ರಶಸ್ತಿಯನ್ನೂ ದಯಪಾಲಿಸಿದ್ದರು. ನಮ್ಮನ್ನಾಳುವ ಮಹಾಸ್ವಾಮಿಯವರು ತಮ್ಮ ಜನಕರ ವಿದ್ಯಾಗುರುಗಳಾದ ಇವರಲ್ಲಿ ವಿಶೇಷವಾದ ಮರ್ಯಾದೆಯನ್ನೂ, ಇವರ ಮಾತಿನಲ್ಲಿ ತುಂಬಾ ಗೌರವವನ್ನೂ ಇಟ್ಟುಕೊಂಡು, ಕಾಲೋಚಿತವಾಗಿ ಇವರ ಆಪ್ತಾಲೋಚನೆಗಳನ್ನು ಕೇಳುತ್ತಿದ್ದರು. ಇವರು ತುಂಬಾ ಅಸ್ವಸ್ಥರಾಗಿರುವರೆಂಬ ಸುದ್ದಿಯನ್ನು ಕೇಳಿ ತಾವೇ ಒಂದು ದಿವಸ ದಯಮಾಡಿಸಿ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋದುದಲ್ಲದೆ, ಆಗಾಗ್ಗೆ ತಮ್ಮ ಹುಜೂರು ಸೆಕ್ರಟರಿಗಳನ್ನು ಕಳುಹಿಸಿ ವಿಚಾರಣೆ ತೆಗೆದುಕೊಳ್ಳುತ್ತಿದ್ದರು. ಅವಸಾನವಾದಮೇಲೆ ತಮ್ಮ ಕಡೆಯ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಅರಮನೆಯ ವೆಚ್ಚದಿಂದ ಅವರ ಶವಸಂಸ್ಕಾರವೆಲ್ಲಾ ಸಾಂಗವಾಗಿ ನೆರವೇರುವಂತೆ ಮಾಡಿದರು. ಪ್ರಭುಗಳ ಇಷ್ಟು ವಿಶೇಷವಾದ ಅಭಿಮಾನಕ್ಕೆ ಮ|| ನರಸಿಹ್ಮಯ್ಯಂಗಾರರು ಪಾತ್ರರಾಗಿದ್ದುದಕ್ಕೆ ಮೈಸೂರು ರಾಜವಂಶದ ಶ್ರೇಯೋಭಿವೃದ್ಧಿಯಲ್ಲಿ ಅವರಿಗೆ ಅಕುಟಿಲವಾಗಿದ್ದ ಅಭಿಮಾನವೂ, ಮೈಸೂರು ಸಂಸ್ಥಾನದ ಕೀರ್ತಿ ಕ್ಷೇಮಲಾಭಗಳ ವಿಷಯದಲ್ಲಿ ಅವರು ಅಹೋರಾತ್ರ ಇಟ್ಟುಕೊಂಡಿದ್ದ ತತ್ಪರತೆಯೂ ಕಾರಣಗಳಾಗಿದ್ದುವು. ಅದುಕಾರಣವೇ ಮಹಾಪ್ರಭುಗಳೇ ಅಲ್ಲದೆ ದಿವಾನರೇ ಮೊದಲಾದ ಸರ್ವಾಧಿಕಾರಿಗಳೂ ವಿದ್ಯಾವಂತರು ಧನಿಕರು ಮೊದಲಾದ ಪ್ರಜಾಪ್ರಮುಖರೂ ಇವರನ್ನು ವಿಶೇಷವಾಗಿ ಮರ್ಯಾದಿಸುತ್ತಿದ್ದರು. ಇವರು ಮರಿಮಲ್ಲಪ್ಪನವರ ಸ್ಕೂಲಿನ ಟ್ರಸ್ಟಿಗಳಾಗಿ ಆದಿಯಿಂದಲೂ ಕೆಲಸಮಾಡಿ, ಅದರ ಅಭಿವೃದ್ಧಿಗೆ ಕಾಲೋಚಿತವಾದ ಸಾಹಾಯ್ಯಗಳನ್ನು ಮಾಡಿರುವರು. ಇವರ ಗೌರವಾರ್ಥವಾಗಿ ಕಳೆದ ಸೋಮವಾರ ಆ ಪಾಠಶಾಲೆಯು ಮುಚ್ಚಲ್ಪಟ್ಟಿದ್ದಿತು. ಇವರು ಆಜಾನುಬಾಹುಗಳಾದ ದೃಢಾಂಗಪುರುಷರಾಗಿದ್ದರೂ ೨-೩ ವರ್ಷಗಳಿಂದ ಮೂತ್ರಾಶಯರೋಗದಿಂದಲೂ ವಾಯುರೋಗದಿಂದಲೂ ಪೀಡಿತರಾಗಿ ಸಂಚಾರಮಾಡಲಾರದಷ್ಟು ಅಶಕ್ತರಾಗಿ ದೇಹವನ್ನು ಉಪಾಯವಾಗಿ ರಕ್ಷಿಸಿಕೊಂಡಿದ್ದರು. ಇಂಥ ಪುರುಷಸಿಹ್ಮರು ತಮ್ಮ ಪ್ರಕಾಶವತ್ತರವಾದ ಭೌತಿಕದೇಹಯಾತ್ರೆಯನ್ನು ಮುಗಿಸಿಕೊಂಡು ಕಣ್ಮರೆಯಾದುದಕ್ಕಾಗಿ ಅವರ ಗುಣಾತಿಶಯಪರಿಚಿತರಾದವರೆಲ್ಲಾ ಪರಿತಪಿಸುತ್ತಿರುವರು. ಸ್ವಯಂಭುವಂತಿರುವ ಅವರ ಏಕಮಾತ್ರಪುತ್ರನಿಗೆ ದೈವಸ್ಥಾನಾಪನ್ನರಾದ ಪ್ರಭುಗಳೇ ರಕ್ಷಕರು.

ಒಂದು ವೀರಶೈವ ಪ್ರಾಂತಿಕಸಭೆ.

ಅಜ್ಜಂಪುರದ ಪೋಸ್ಟ್ ಬಗ್ಗವಳ್ಳಿಗ್ರಾಮದಲ್ಲಿ ಬರುವ ತಾ|| ೨೫-೨೬ ರಲ್ಲಿ ಬೀರೂರಿನ ಮ್ಯುನ್ಸಿಪಾಲಿಟಿ ವೈಸ್‌ಪ್ರೆಸಿಡೆಂಟರೂ ಪ್ರಜಾಪ್ರತಿನಿಧಿ ಸಭೆಯ ಮೆಂಬರೂ ಆದ ಮ|| ಎಂ. ಎಲ್. ಶಿವಲಿಂಗಪ್ಪಯ್ಯನವರ ಅಧ್ಯಕ್ಷತೆಯಿಂದ ವೀರಶೈವ ಮತಕ್ಕೆ ಸೇರಿದ ಹೇಮಾರಡ್ಡಿ ಕುಲದವರ ಅಭ್ಯುನ್ನತಿಯನ್ನು ಕುರಿತು ಒಂದು ಪ್ರಾಂತಿಕಸಭೆಯು ನಡೆಯುವುದಾಗಿದೆಯೆಂದು ಕೇಳುತ್ತೇವೆ. ಮತದವರ ವಿದ್ಯೆ ವಿವೇಕ ಆಚಾರ ನೀತಿ ಸಂಪತ್ತು ಏಕಮತ್ಯ ಇತ್ಯಾದಿಗಳೆಲ್ಲಾ ಅಭಿವೃದ್ಧಿಗೊಳ್ಳಲಿಕ್ಕೆ ಸಾಧನವಾಗಿ ಇಂಥ ಸಭೆಗಳು ಪ್ರತಿ ಡಿಸ್ಟ್ರಿಕ್ಟು ತಾಲ್ಲೂಕು ಹೋಬಳಿ ಗ್ರಾಮಗಳಲ್ಲೆಲ್ಲಾ ನಡೆಯುವುದು ಅತ್ಯಾವಶ್ಯಕ. ಆದರೆ ಮತದಲ್ಲಿ ಧಾರ್ಮಿಕಗಳಾದ ಅಂತಸ್ತುಗಳ ನ್ಯೂನಾಧಿಕ್ಯಗಳನ್ನು ಚರ್ಚಿಸಿ ತನ್ಮೂಲಕ ಇಬ್ಬಣಮುಬ್ಬಣಗಳನ್ನು ಮಾಡಿ ಅನರ್ಥ ಮಾಡುವ ಪ್ರಯತ್ನಕ್ಕೆ ಮಾತ್ರ ವಿವೇಕಿಗಳಾರೂ ಮನಸ್ಸು ಕೊಡಬಾರದು. ನಿಬುರನ್ನು ಕೆತ್ತಿದಷ್ಟೂ ಮತಕ್ಕೆ ಮಹಾನರ್ಥವಾಗುವುದು. ಒಗ್ಗಟ್ಟು ಒಡೆಯಗೊಡದಂತೆ ಉಪಾಯದಿಂದ ಸಾಮುದಾಯಕಶ್ರೇಯಸ್ಸನ್ನು ಸಾಧಿಸಿಕೊಳ್ಳಬೇಕಾದ ಕಾಲವು ನಮಗೆ ಬಂದಿದೆ. ಪಟ್ಟಚರಾಧಿಕಾರಿಗಳ ವಿರಕ್ತರುಗಳ ಜಗಳಕ್ಕೆ ಭಕ್ತಮಾಹೇಶ್ವರರಾರೂ ಯಾವ ಸಭೆಯಲ್ಲೂ ಇಂಬುಗೊಡಬಾರದು. ಅದನ್ನು ಬಗೆಹರಿಸುವುದಕ್ಕೆ ತ್ರಿಮೂರ್ತಿಗಳಿಂದಲೂ ಸಾಧ್ಯವಲ್ಲ. ನಾವು ನಮ್ಮ ಇಹಪರಾಭ್ಯುದಯಕ್ಕಾಗಿ ಮಾಡಿಕೊಳ್ಳಬೇಕಾದ ಕೆಲಸವೇ ಅಪರಿಮಿತವಾಗಿ ಬಿದ್ದಿರುವಾಗ, ಸ್ವಲ್ಪಸ್ವಲ್ಪವಾಗಿ ಅದನ್ನು ಸಾಧಿಸಿಕೊಳ್ಳಲು ನಮ್ಮ ತನುಮನೋಧನಗಳನ್ನು ವಿನಿಯೋಗಿಸುವುದನ್ನು ಬಿಟ್ಟು, ಹರಿಯಬಾರದ ಜಗಳದ ಯಂತ್ರದ ಹಲ್ಲಿಗೆ ನಮ್ಮ ಕೈಗಳನ್ನು ಸಿಲ್ಕಿಸಿ ತೊಳಲಿ ಬಳಲುವುದು ನಮಗೆ ವಿವೇಕವಲ್ಲ. ಇದನ್ನು ಸಮಾಜಬಾಂಧವರೆಲ್ಲರೂ ಅವಶ್ಯವಾಗಿ ಗಮನಿಸಬೇಕೆಂದು ಕೋರುತ್ತೇವೆ. ಮತಸಿಹ್ಮಾಸನಾಧೀಶರಾದರೂ ತಮ್ಮ ಶಮದಮಾದಿಗಳ ಕಡೆಗೆ ಲಕ್ಷ್ಯವಿತ್ತು ಇಂಥ ಒಡಿವಾಟಕ್ಕೆ ತಮ್ಮ ಶಿಷ್ಯಭಕ್ತಮಂಡಲಿಯ ಮನಸ್ಸು ತಿರುಗದಂತೆ ಎಚ್ಚರಿಕೆ ಕೊಟ್ಟು ಮತೋದ್ಧಾರಮಾಡಬೇಕೆಂದು ಶ್ರುತಪಡಿಸುತ್ತೇವೆ. ಬಗ್ಗವಳ್ಳಿ ಪ್ರಾಂತಿಕಸಭೆಯವರುಕೂಡ ಇದನ್ನು ಗಮನಿಸುವರಾಗಲೆಂದು ಕೋರುತ್ತೇವೆ.

ನ್ಯಾಯವಿಧಾಯಕಸಭೆ.

ಈ ಸಭೆಗೆ ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಒಬ್ಬೊಬ್ಬ ಮೆಂಬರನ್ನು ಆರಿಸುವ ಸೌಲಭ್ಯವನ್ನು ನಮ್ಮ ಸರ್ಕಾರದವರು ಪ್ರಜಾವರ್ಗಕ್ಕುಂಟುಮಾಡಿಕೊಟ್ಟು ಆ ಪ್ರಕಾರ ಆರಿಸುವ ಕಾರ್ಯವು ಈ ತಿಂಗಳು ತಾ|| ೨೪ ರಲ್ಲಿ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ಗೊತ್ತುಮಾಡಿರುವ ಅಧಿಕಾರಿಗಳಿಂದ ನಡಸಲ್ಪಡಬೇಕಾಗಿ ಗೊತ್ತುಮಾಡಿರುತ್ತಾರೆ. ಆ ಕಾಲಕ್ಕೆ ಓಟುಗಳನ್ನು ಕೊಡಲು ಅರ್ಹರೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಜನರು ತಾಲ್ಲೂಕು ಕಚೇರಿಗೆ ಬಂದು ಮೆಂಬರಾಗಲು ಸ್ಪರ್ಧಿಸಿ ನಿಂತಿರುವ ದೊಡ್ಡಮನುಷ್ಯರುಗಳಲ್ಲಿ ಅರ್ಹರೆಂದು ತಮಗೆ ತೋರುವವರೊಬ್ಬರಿಗೆ ತಮ್ಮ ಓಟನ್ನು ಕೊಡಬೇಕಾಗಿರುವುದು. ಮೆಂಬರಾಗಿ ಆರಿಸಲ್ಪಡಲು ೩೩ ಜನರು ನಿಂತಿರುವುದಾಗಿ ತಿಳಿಯಬರುತ್ತದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಮೂವರು ನಿಂತಿರುವರು. ಇವರಲ್ಲಿ ಮ|| ಪಿ. ಎಂ. ಬಸಪ್ಪ ಎಂಬುವರೊಬ್ಬರಾಗಿರುವರು. ಇವರು ದೊಡ್ಡ ವರ್ತಕರಾಗಿಯೂ, ಜಪಾನ್, ಜಾವ, ಬರ್ಮಾ ಮೊದಲಾದ ಅನ್ಯದೇಶಗಳಿಗೆ ಹೋಗಿ ಅಲ್ಲಿಯ ಜನರ ಸ್ಥಿತಿಗತಿಯನ್ನೂ ವ್ಯಾಪಾರಾಭಿವೃದ್ಧಿಯ ಮರ್ಮವನ್ನೂ ಚೆನ್ನಾಗಿ ಅರಿತು ಬಂದವರಾಗಿರುವರಲ್ಲದೆ ಎಕನಾಮಿಕ್ ಕಾನ್ಫರೆನ್ಸಿನ ವ್ಯಾಪಾರಶಾಖೆಯ ಕಮಿಟಿಯಲ್ಲಿ ಒಬ್ಬ ಮೆಂಬರಾಗಿದ್ದರು ಮತ್ತು ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲರಾಗಿರುವರು. ನ್ಯಾಯವಿಧಾಯಕ ಸಭಾಸ್ತರರಾಗಿದ್ದು ಜನೋಪಯುಕ್ತವಾದ ವಿಷಯಗಳನ್ನು ಉತ್ಸಾಹದಿಂದಲೂ ಧೈರ್ಯದಿಂದಲೂ ನಿಷ್ಪಕ್ಷಪಾತತೆಯಿಂದಲೂ ಚರ್ಚಿಸಿ ತನ್ಮೂಲಕ ಪ್ರಜಾಸೇವೆಯನ್ನು ವಿಗಿಲಾಗಿ ಮಾಡಲು ಶಕ್ತರೂ ಉತ್ಸಾಹಶೀಲರೂ ಆಗಿರುವುದರಿಂದ ಇವರಿಗೆ ಹೆಚ್ಚು ಓಟುಗಳು ದೊರೆತು ಈ ಸ್ಪರ್ಧೆಯಲ್ಲಿ ಇವರು ಉತ್ತೀರ್ಣರಾಗುವರೆಂದು ನಿರೀಕ್ಷಿಸುತ್ತೇವೆ.

ಒಳದೇಶ ವೃತ್ತಾಂತಗಳು.

ಬರುವ ಸೆನ್ಸಸ್ಸಿನ ಸೂಪರಿಂಟೆಂಡೆಂಟ್ ಕೆಲಸಕ್ಕೆ ಮಿ|| ತ್ಯಾಗರಾಜಯ್ಯರ್‌ರವರು ನಿಯಮಿಸಲ್ಪಟ್ಟಿದ್ದಾರೆ.

ಶಾಸನನಿರ್ಮಾಣಸಭೆಗೆ ಪ್ರತಿ ಡಿಸ್ಟ್ರಿಕ್ಟಿನಿಂದಲೂ ಮೆಂಬರುಗಳನ್ನು ಆರಿಸುವ ಕೆಲಸವು ಬರುವ ತಾ|| ೨೪ ರಲ್ಲಿ ನಡೆಯತಕ್ಕುದೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

೯ ನೆ ವೀರಶೈವಮಹಾಸಭೆಯಲ್ಲಿ ಮತಗ್ರಂಥ ಪ್ರಕಟನೆಯ ವಿಷಯವಾದ ನಿರ್ಧಾರಸಂಬಂಧದಲ್ಲಿ ತಾವು ಮಾಡಿದ ಸೂಚನೆಗೆ ಅನುಮೋದನವನ್ನು ಕೊಟ್ಟವರು ಮ|| ಸಿದ್ಧರಾಮಪ್ಪ ಪಾವಟೆಯವರೆಂದು ದಾವಣಗೆರೆಯ ಮ|| ಮಾಗಾನಹಳ್ಳಿ ದೊಡ್ಡಬಸವಪ್ಪನವರು ತಿಳಿಯಿಸಿರುತ್ತಾರೆ.

ಎಡತೊರೆ ತಾ|| ಚುಂಚನಕಟ್ಟೆಯ ಜಾತ್ರೆಯು ಕಳೆದ ತಾ|| ೮ ರಿಂದ ನಡೆಯುತ್ತಿದೆ. ಗುರುವಾರ ರಥೋತ್ಸವವಾಯಿತು. ಈ ಸಲದ ಜಾತ್ರೆಗೂ ಪ್ರದರ್ಶನಕ್ಕೂ ಅಪರಿಮಿತವಾಗಿ ದನಗಳು ಬಂದಿದ್ದುವು. ದನಗಳಬೆಲೆಯು ಎಂದಿಗಿಂತ ದ್ವಿಗುಣ ತ್ರಿಗುಣವಾಗಿದ್ದುವು. ಕೊಳ್ಳುವ ಜನರು ಬಹು ದೂರದೇಶದಿಂದ ವಿಶೇಷವಾಗಿ ಬಂದಿದ್ದರು.

ಪಾರ್ಲಿಮೆಂಟ್ ಮೆಂಬರಾದ ಮಿ|| ಚಾರ್ಲಸ್ ರಾಬರ್ಟ್ಸ್ ಎಂಬುವರು ಕಳೆದವಾರ ಮೈಸೂರಿಗೆ ದಯಮಾಡಿಸಿ ನಮ್ಮ ಮಹಾರಾಜರ ಆತಿಥ್ಯದಲ್ಲಿದ್ದು ನೋಡತಕ್ಕ ಪ್ರದೇಶಗಳನ್ನೆಲ್ಲಾ ನೋಡಿಕೊಂಡು ದಯಮಾಡಿಸಿದರು. ನೂತನ ರಾಜಕೀಯ ಸಂಸ್ಕರಣಗಳ ಪ್ರಕಾರ ಏರ್ಪಡುವ ಸಾಮ್ರಾಜ್ಯಶಾಸನ ಸಭೆಗೆ ಇವರು ಮೊಟ್ಟಮೊದಲನೆ ಅಧ್ಯಕ್ಷರಾಗಲಿಕ್ಕಿರುವರೆಂದು ತಿಳಿಯುತ್ತೇವೆ.

ರಾಜಧಾನಿಯ ಮೆಸರ್ಸ್ ಜಗನ್ನಾಥಸೆಟ್ಟಿ ಅಂಡ್ ಸನ್, ಅಬ್ಬಾಅಬ್ದುಲ್ ಷುಕುರ್ ಸೇಟ್ ಅಂಡ್ ಸನ್ಸ್, ಎಸ್. ತ್ರಿಲೋಕ್ ಚಂದ್ ಅಂಡ್ ಕೋ, ಎಂ. ಎಲ್. ಕೆ. ಬ್ರದರ್ಸ್, ಟಿ. ಎಲ್. ವೆಂಕಟರಾಮಸೆಟ್ಟಿ ಅಂಡ್ ಕೊ, ಚಾಮುಂಡಿ ರೈಸ್ ಮಿಲ್ ಕಂಪೆನಿ ಮತ್ತು ಮದ್ರಾಸಿನ ವಿ. ಎ. ಎಸ್. ಪಾಣಿ ಕಂಪೆನಿ ಇವರುಗಳು ವಿಶ್ವಾಸದಿಂದ ಕಳುಹಿಸಿಕೊಟ್ಟಿರುವ 1920 ನೆಯ ವರ್ಷದ ಸುಂದರವಾದ ಕ್ಯಾಲೆಂಡರುಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸುತ್ತೇವೆ.

ಮದ್ರಾಸಿನಲ್ಲಿರುವ ವೀರಶೈವಾಶ್ರಮದ ವಿದ್ಯಾರ್ಥಿಗಳು ಕೀರ್ತಿಶೇಷರಾದ ಸಿರಸಂಗಿ ದೇಶಾಯಿ ಮಹಾಪುರುಷರ ಭಾವಚಿತ್ರಪಟಸ್ಥಾಪನಾ ಮಹೋತ್ಸವವನ್ನು ಆಶ್ರಮದಲ್ಲಿ ಹೈಕೋರ್ಟು ವಕೀಲ್ ಮ|| ಎ. ಸಂಗಪ್ಪ, ಬಿ.ಎ.,ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿಸಿ ಪುರಾತನರ ಶ್ರೇಣಿಯನ್ನು ಸೇರಿದ ದೇಶಾಯಿ ಮಹಾಪುರುಷರ ಗುಣಕಥನವನ್ನು ಮಾಡಿದನಂತರ ಈ ಆಶ್ರಮವನ್ನು ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದವರು ತಮ್ಮಾಶ್ರಮವನ್ನು ಅವರ ಪೋಷ್ಯಕ್ಕೆ ಸೇರಿಸಿಕೊಂಡುದುದಕ್ಕಾಗಿ ಆ ಸಂಘದವರಿಗೆ ತಮ್ಮಗಳ ವಂದನಾಪುರಸ್ಸರವಾದ ಕೃತಜ್ಞತೆಯನ್ನು ಅರ್ಪಿಸಿದುದಲ್ಲದೆ ಆಶ್ರಮದುಪಯೋಗಕ್ಕಾಗಿ ಒಂದು ಸ್ವಂತ ಕಟ್ಟಡವನ್ನು ಸಂಪಾದಿಸಿಕೊಡುವಂತೆ ಆ ವಿದ್ಯಾವರ್ಧಕ ಸಂಘದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರಿಸಿದರೆಂದು ಪತ್ರವ್ಯವಹಾರಕರು ತಿಳಿಸಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ಪಂಜಾಬು ದೇಶದ ದಕ್ಷಿಣಭಾಗದಲ್ಲ ೧೭೧೫೦೦ ಎಕ ಭೂಮಿಗಳು ಯುದ್ಧದಲ್ಲಿ ಶ್ಲಾಘನೀಯವಾಗಿ ಕೆಲಸಮಾಡಿ ಭಾರತೀಯರಿಗೆ ಕೊಡುವುದಕ್ಕಾಗಿ ಬಿಡಲ್ಪಟ್ಟಿರುತ್ತವೆ.

ಆನಿಬೆಸೆಂಟಮ್ಮನವರು ಮದ್ರಾಸಿಗೆ ಬಂದು ಸೇರಿದರು. ಅನೇಕ ಪ್ರಮುಖರು ನಿಲ್ದಾಣಕ್ಕೆ ಹೋಗಿ ಇದಿರ್ಗೊಂಡು ಉತ್ಸವಪೂರ್ವಕವಾಗಿ ಅವರ ಬಿಡಾರವನ್ನು ಸೇರಿಸಿದರು.

ಲಾರ್ಡ್ ಸಿಹ್ಮರವರು ಭರತಖಂಡಕ್ಕೆ ತಾ|| ೧೫ ರಲ್ಲಿ ಬಂದು ಬೊಂಬಾಯಿಯಲ್ಲಿಳಿದರು. ಬೊಂಬಾಯಿ ಮತ್ತು ಕಲ್ಕತ್ತೆಯ ಮ್ಯುನ್ಸಿಪಾಲಿಟಿಗಳವರು ಅವರಿಗೆ ಮಾನಪತ್ರವನ್ನಿತ್ತು ಗೌರವಿಸಬೇಕೆಂದು ನಿರ್ಧರಿಸಿದ್ದಾರೆ.

ಸರ್ಕಾರಿ ಶಾಲೆ ಮೊದಲಾದುವುಗಳಿಗೆಲ್ಲಾ ಪಂಚಮರನ್ನು ನಿರಾತಂಕವಾಗಿ ಸೇರಿಸಿಕೊಳ್ಳಬೇಕೆಂದೂ, ಅಸ್ಪೃಶ್ಯವೆಂಬ ಹೆಸರೇ ಸಂಸ್ಥಾನದಲ್ಲಿರಕೂಡದೆಂದೂ ಕೊಲ್ಲಾಪುರದ ಮಹಾರಾಜರು ಒಂದು ಅಪ್ಪಣೆಯನ್ನು ಮಾಡಿರುತ್ತಾರೆ.

ಭರತಖಂಡದಲ್ಲಿ ನಿರ್ಬಂಧದಲ್ಲಿಡಲ್ಪಟ್ಟಿದ್ದ ಜರ್ಮನರನ್ನೆಲ್ಲಾ ಅವರ ಸ್ವದೇಶಕ್ಕೆ ಕೂಡಲೇ ಕಳುಹಿಸಿಬಿಡುವವರಾಗಿದ್ದಾರೆ. ಇನ್ನು ೩ ವರ್ಷಗಳ ವರೆಗೂ ಆ ದೇಶದವರು ಇಲ್ಲಿಗೆ ಬರದಂತೆ ಮಾಡಲ್ಪಡುತ್ತಾರೆ. ಆದರೆ ಪ್ರತ್ಯೇಕ ಕಾರಣಗಳಿಂದ ಇಲ್ಲಿಯೇ ಇರಲು ಅನುಮತಿಸುವ ಜರ್ಮನರನ್ನು ಮಾತ್ರ ನಿರ್ಬಂಧದಿಂದ ಕಳುಹಿಸುವುದಿಲ್ಲ.

ಬೋಲ್ಷೆವಿಕ್ಕರ ಹಾವಳಿ.

ಕಳೆದ ವಾರದಲ್ಲಿ ಸೀಮೆಯಿಂದ ಬಂದಿರುವ ವಾರ್ತೆಗಳಲ್ಲಿ ಬೋಲ್ಷೆವಿಕ್ಕರ ಹಾವಳಿಯ ಭಯಂಕರತ್ವವು ವಿಶೇಷವಾಗಿ ತೋರುತ್ತಿದೆ. ರಷ್ಯಾದೇಶವೆಲ್ಲಾ ಇವರ ವಶವಾಗುವಂತೆಯೇ ಕಾಣುತ್ತಿದೆ. ಅಲ್ಲಿಯ ಒಳನಾಡುಗಳ ಸೈನ್ಯಗಳು ಬೋಲ್ಷೆವಿಕ್ಕರನ್ನು ಅಣಗಿಸಲಾರದೆ ಹೋದುವು. ಜನರಲ್ ಕೋಲ್ಚಾಕು ಜನರಲ್ ಡೆಂಕಿನ್ ಇವರ ಸೈನ್ಯಗಳು ಪರಾಜಿತವಾಗಿ ಒಡೆದು ಸಾಮಗ್ರಿಗಳನ್ನೆಲ್ಲಾ ಕಳೆದುಕೊಂಡು ದಿಕ್ಕುದಿಕ್ಕಿಗೆ ಓಡಿದುವು. ಈ ಸೈನ್ಯಗಳು ಮಿತ್ರಮಂಡಲೀ ಪಕ್ಷವಾಗಿದ್ದುವು ಈಗ ಬೋಲ್ಷೆವಿಕ್ಕರು ಕ್ಯಾಸ್ಪಿಯನ್ ಸಮುದ್ರವನ್ನು ಸಮೀಪಿಸುತ್ತಿದ್ದಾರೆ. ಪಶ್ಚಿಮ ಸೈಬೀರಿಯಾ ಪ್ರಾಂತವೆಲ್ಲಾ ಅವರ ವಶವಾದಂತಾಗಿದೆ. ಬೋಲ್ಷೆವಿಕ್ಕರು ರಷ್ಯಾದ ಸಾಮ್ರಾಜ್ಯವನ್ನನುಭವಿಸುವುದರಲ್ಲಿ ಮಾತ್ರವೇ ತೃಪ್ತಿಪಡತಕ್ಕವರಾಗಿ ತೋರುವುದಿಲ್ಲ. ದಿನಕ್ರಮೇಣ ಪ್ರಪಂಚವನ್ನೇ ಆವರಿಸುವ ಉದ್ದೇಶವುಳ್ಳವರಾಗಿದ್ದಾರೆ. ಆದರೆ ಪಶ್ಚಿಮದ ಕಡೆ ಯೂರೋಪು ಖಂಡದಲ್ಲಿ ನುಗ್ಗುವುದು ಸುಲಭವಾಗಿಲ್ಲ. ಅಲ್ಲಿ ಬಲವಾದ ತಡೆಯು ಇದೆ. ಅದುಕಾರಣ ಸದ್ಯಃ ಅವರ ಕಣ್ಣು ಭರತಖಂಡದಮೇಲೆ ಪೂರ್ಣವಾಗಿ ಬಿದ್ದಿರುವಂತಿದೆ. ಪರ್ಷಿಯಾ, ತುರ್ಕಿಸ್ಥಾನ, ಅಫ್ಘಾನಿಸ್ಥಾನಗಳನ್ನು ಹಾಯ್ದು ಭರತಖಂಡಕ್ಕೆ ನುಗ್ಗಲು ಇವರು ಉದ್ದೇಶಪಟ್ಟಿದ್ದಾರೆ. ಆ ಮೂರು ತುರುಷ್ಕ ದೇಶಗಳಲ್ಲೂ ತಮ್ಮ ಉದ್ದೇಶಬೀಜಗಳನ್ನು ನಟ್ಟಿರುವರೆಂಬ ವಾರ್ತೆ ಬಂದಿದೆ. ದೇಶದ ಆಸೆಯನ್ನು ತೋರಿಸಿ ಅವರುಗಳನ್ನು ತಮ್ಮ ಕಡೆಗೆ ಸೆಳೆದುಕೊಂಡು ತಮ್ಮ ದಾರಿಯನ್ನು ನಿರಾತಂಕಪಡಿಸಿಕೊಳ್ಳಬೇಕೆಂದು ಹವಣಿಸಿದ್ದಾರೆ. ಇದರಿಂದ ವಿಶೇಷವಾಗಿ ಆಂಗ್ಲಸಾಮ್ರಾಜ್ಯಕ್ಕೆ ಧಕ್ಕೆ ತಗಲುವ ಚಿಂತೆ ಹುಟ್ಟಿದೆ. ಅಲ್ಲಿಯ ಪತ್ರಿಕೆಗಳು ಹಾಹಾಕಾರ ಪಡುತ್ತಿವೆ. ಚರ್ಚಿಲ್ ಮಂತ್ರಿಯವರು ಕಳೆದ ತಾ|| ೩ ರಲ್ಲಿ ಸಂದರ್ಲಂಡಿನಲ್ಲಿ ಉಪನ್ಯಸಿಸುವಾಗ– "ಯೂರೋಪು ಆಸ್ಯಾಗಳ ಸ್ಥಿತಿಯು ನಿರುತ್ಸಾಹಕರವಾಗಿದೆ. ರಷ್ಯಾ ಬಿದ್ದುಹೋಗುವುದರಿಂದ ಮುಂದೇನು ಸಂಭವಿಸುವುದಕ್ಕಿದೆಯೋ ಹೇಳಲಾಗುವುದಿಲ್ಲ. ಅದರಿಂದ ನಾಗರಕತಾ ಪ್ರಪಂಚಕ್ಕೂ ಆಂಗ್ಲಸಾಮ್ರಾಜ್ಯಕ್ಕೂ ಬಹಳ ನಷ್ಟವುಂಟಾಗುವುದು. ಚಿಕ್ಕ ಆಸ್ಯಾದಲ್ಲಿ ನವೀನ ಪರಿಸ್ಥಿತಿಗಳು ಉದಯಿಸುತ್ತಿವೆ. ರಷ್ಯಾಬೋಲ್ಷೆವಿಕ್ಕರೂ ತುರ್ಕಿಯ ಮಹಮ್ಮದೀಯರೂ ಒಟ್ಟುಗೂಡಿದರೆ ಗ್ರೇಟ್‌ಬ್ರಿಟನ್ನಿನ ಸ್ಥಿತಿಯು ಬಹಳ ವಿಷಮವಾಗುವುದು. ಈಗ ಜರ್ಮನಿಯು ನಿಸ್ಸಾರವಾಗಿದ್ದರೆ ಯೂರೋಪಿನ ಸ್ಥಿತಿಯೆಲ್ಲಾ ಕೆಡುವುದು. ಅದುಕಾರಣ ಜರ್ಮನಿಯಿಂದ ನಾವು ಪರಿಹಾರವಾಗಿ ಅಪಾರದ್ರವ್ಯವನ್ನು ಬಲವಂತವಾಗಿ ತೆಗೆದುಕೊಳ್ಳಲು ಯತ್ನಿಸಬಾರದು" ಎಂದು ಹೇಳಿರುತ್ತಾರೆ. ಹೀಗಿರುವಾಗ ಆಂಗ್ಲಪ್ರಭುತ್ವದವರು ಈ ಸಮಯದಲ್ಲಿ ಎಂದಿಗೂ ಮೈಮರೆತು ಕುಳಿತರಲಾರರು. ತಕ್ಕ ಪ್ರಯತ್ನಗಳನ್ನು ಮಾಡುತ್ತಲೇ ಇರುವರೆಂಬುದರಲ್ಲಿ ಸಂಶಯವಿಲ್ಲ. ಪ್ರಬಲರಾಗುತ್ತಿರುವ ಬೋಲ್ಷೆವಿಕ್ಕರನ್ನು ಅಣಗಿಸುವುದಕ್ಕೆ ಮುಖ್ಯವಾಗಿ ಅವರಿಗೆ ಹೊಸಹೊಸದಾಗಿ ಕೂಡುವುದಕ್ಕಿರುವ ಸಾಹಾಯ್ಯಬಲವನ್ನು ಒಡೆದುಹಾಕುವುದು ಉತ್ತಮೋಪಾಯವಾಗಿರುತ್ತದೆ. ತುರುಷ್ಕ ಪ್ರಪಂಚವನ್ನು ಬೋಲ್ಷೆವಿಕ್ಕರ ಜತೆಗೂಡದಂತ ಮಾಡಿಡುವುದರಿಂದ ಆ ಕಾರ್ಯವು ಸಾಧಿಸುತ್ತದೆ ಈಗಲಾದರೊ ತುರ್ಕಿ ಸಮಸ್ಯೆಯ ಪರಿಷ್ಕಾರವು ಇನ್ನೂ ಆಗಿರುವುದಿಲ್ಲ. ಜಗತ್ತಿನ ಮೇಲಣ ಸರ್ವಮಹಮ್ಮದೀಯರ ಕಣ್ಣು ಕಿವಿಗಳೂ ಅತ್ತಕಡೆಗೆ ತಿರುಗಿವೆ. ಈಗ ಸೀಮೆಯ ಮುಖ್ಯಮುಖ್ಯ ವಾರ್ತಾಪತ್ರಿಕೆಗಳಲ್ಲಿ ತುರ್ಕಿ ಸಂಬಂಧವಾಗಿ ಬರುತ್ತಿರುವ ವಾರ್ತೆಗಳನ್ನು ನೋಡಿದರೆ ಇನ್ನುಮುಂದೆ ತುರ್ಕಿ ಸುಲ್ತಾನರಿಗೆ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲ ಧಾರ್ಮಿಕ ಸಂಬಂಧವಾದ ಅಧಿಕಾರದ ಹೊರತು ರಾಜಕೀಯ ಸಂಬಂಧವಾದ ಯಾಜಮಾನ್ಯವಾವುದೂ ಇಲ್ಲದಂತೆ ಮಾಡಿ, ಅದರ ಯಾಜಮಾನ್ಯವನ್ನು ಅಂತರ್ಜಾತೀಯ ಸಂಘದ ಅಧೀನದಲ್ಲಿಟ್ಟುಕೊಳ್ಳುವರೆಂದೂ, ತುರ್ಕಿಸುಲ್ತಾನರ ರಾಜಕೀಯ ರಾಜಧಾನಿಯು ಆಸ್ಯಾತುರ್ಕಿಯಲ್ಲೊಂದು ಕಡೆ ಏರ್ಪಡಿಸಲ್ಪಡುವುದೆಂದೂ, ಆಸ್ಯಾಖಂಡದಲ್ಲೂ ಕೂಡ ಇದುವರೆಗೆ ತುರ್ಕಿಗೆ ಸೇರಿದ್ದ ಅರೇಬಿಯಾ, ಆರ್ಮೇನಿಯಾ ಭಾಗಗಳೂ ಕೂಡ ಅವರ ಅಧೀನದಿಂದ ತಪ್ಪಿಸಲ್ಪಡುವುವೆಂದೂ ಗೊತ್ತಾಗುತ್ತದೆ. ಇದು ನಿಜವಾಗುವುದಾದರೆ ತುರುಷ್ಕ ಪ್ರಪಂಚವು ಸಹಿಸಿಕೊಂಡಿರಲಾರದು. ತುರ್ಕಿಸುಲ್ತಾನರೇ ಮಹಮ್ಮದೀಯರಿಗೆಲ್ಲಾ ಜಗದ್ಗುರುವು. ಅಂಥ ಸುಲ್ತಾನರ ಅಧಿಕಾರವು ನಾಮಮಾತ್ರವಾಗುವುದಾದರೂ, ಮಕ್ಕಾಮದೀನಾ ಮೊದಲಾದ ಪವಿತ್ರಸ್ಥಲಗಳೆಲ್ಲಾ ಅವರ ಅಧೀನದಿಂದ ತಪ್ಪಿಹೋಗುವುದಾದರೂ ಅವರು ಸೈರಿಸಿಕೊಂಡಿರಲಾರರು. ಇದರಿಂದ ಅವರಲ್ಲಿ ಈಗಲೇ ಹುಟ್ಟಿರುವ ಅಸಮಾಧಾನಾಗ್ನಿಗೆ ಮತ್ತಷ್ಟು ಆಜ್ಯಾಹುತಿಯನ್ನು ಬಿಟ್ಟಂತಾಗಬಹುದು. ಇಂಥವರು ಬೋಲ್ಷೆವಿಕ್ಕರ ಪಕ್ಷವಾಗಿ ನಿಂತರೆ ಎಷ್ಟು ಅನಾಹುತವುಂಟಾಗಬಹುದೆಂಬುದನ್ನು ಹೇಳಬೇಕಾಗಿಲ್ಲ. ಅದುಕಾರಣ ರಾಜತಂತ್ರ ವಿಶಾರದರಾದ ಆಂಗ್ಲಮಂತ್ರಿಮಂಡಲದವರು ಕಾಲಪರಿಸ್ಥಿತಿಯನ್ನು ಪರ್ಯಾಲೋಚಿಸಿ, ತುರ್ಕಿಸಮಸ್ಯೆಯನ್ನು ಉಚಿತರೀತಿಯಿಂದ ಪರಿಷ್ಕರಿಸುವುದಕ್ಕೂ ಬೋಲ್ಷೆವಿಕ್ಕರ ಹಾವಳಿಯ ನಿಗ್ರಹಕ್ಕೂ ಮಾರ್ಗವನ್ನು ಕಲ್ಪಿಸಿ, ತನ್ಮೂಲಕ ಪ್ರಪಂಚಶಾಂತಿಯನ್ನು ರಕ್ಷಿಸಿದಲ್ಲದೆ ಇದುವರೆಗೆ ಮಹಾಯುದ್ಧದಲ್ಲಿ ಅವರು ಪಟ್ಟ ನಷ್ಟಕಷ್ಟಗಳು ಸಫಲವಾಗಲಾರವು.

ಪತ್ರವ್ಯವಹಾರ.

ಚಿತ್ರದುರ್ಗದ ತಾ|| ಜಂಜಣ್ಣನಾಯಕನಕೋಟೆ ವಿ. ಇ. ಸ್ಕೂಲು.

ಈ ಸ್ಕೂಲಿನ ಹೆಡ್ಮಾಸ್ಟರ್ ಮ|| ಸಿ. ಕರಿಬಸವಯ್ಯನವರು ಸುಮಾರು ೮|| ತಿಂಗಳ ಕೆಳಗೆ ಇಲ್ಲಿಗೆ ಬಳಿಚೊಡಿನಿಂದ ವರ್ಗವಾಗಿ ಬಂದರು. ಇವರು ಬಂದು ಸ್ವಲ್ಪದಿನಗಳಾದಾಗ್ಯೂ ತಮ್ಮ ಬೋಧನಾಶಕ್ತಿಯ ಬಲದಿಂದ ಹೆಚ್ಚು ಬಾಲಕರನ್ನು ಜಮಾಯಿಸಿಕೊಂಡು ಸ್ಕೂಲನ್ನು ಅಭಿವೃದ್ಧಿಗೆ ತರುತ್ತಾ ಸಹಾಯೋಪಾಧ್ಯಾಯರುಗಳಲ್ಲಿಯೂ ಗ್ರಾಮಸ್ಥರಲ್ಲಿಯೂ ಅತಿಶಯವಾದ ವಿಶ್ವಾಸವನ್ನು ಸಂಪಾದಿಸಿಕೊಂಡಿರುವದು ತುಂಬಾ ಶ್ಲಾಘನೀಯವಾಗಿದೆ. ಇವರು ಬಂದ ವೇಳೆ ಇವರ ಪ್ರೋತ್ಸಾಹದಿಂದ ಕೆಲವುಜನ ದೊಡ್ಡಮನುಷ್ಯರುಗಳು ಮೈಸೂರು ಸ್ಟಾರ್, ಸಾಧ್ವಿ, ವೃತ್ತಾಂತಪತ್ರಿಕೆ, ಒಕ್ಕಲಿಗರ ಪತ್ರಿಕೆ, ವೃತ್ತಾಂತರತ್ನಾಕರ, ಅರ್ಥಸಾಧಕ ಪತ್ರಿಕೆ ಇವುಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಒಂದು ರೀಡಿಂಗ್‌ರೂಂ ಸ್ಥಾಪಿಸಬೇಕೆಂದು ಗ್ರಾಮಸ್ಥರನ್ನೆಲ್ಲಾ ತುಂಬಾ ಪ್ರೋತ್ಸಾಹ ಮಾಡುತ್ತಿದ್ದಾರೆ. ಇದರಿಂದ ನಮ್ಮ ಸ್ಕೂಲು ಕ್ರಮೇಣ ಉನ್ನತಸ್ಥಿತಿಗೆ ಬರುತ್ತದೆಂಬ ಭರವಸೆ ತುಂಬಾ ಇತ್ತು. ಆದರೆ ಇವರನ್ನು ಚಳ್ಳಕೆರೆ ತಾ|| ರಾಮಜೋಗಿಹಳ್ಳಿಗೆ ವರ್ಗಮಾಡಲು ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಸಾ|| ರವರು ಹೆ|| ಸರ್ಕಲ್ ಇನ್ಸ್‌ಪೆಕ್ಟರ್ ಸಾ|| ರವರಿಗೆ ಶಿಫಾರಸು ಮಾಡಿರುವುದಾಗಿ ವರ್ತಮಾನ ಕೇಳಿ ಗ್ರಾಮಸ್ಥರೆಲ್ಲರೂ ತುಂಬಾ ವಿಷಾದಿಸುತ್ತಾರೆ. ಇವರನ್ನೇ ಇಟ್ಟುಕೊಡಬೇಕೆಂದು ಹೆ|| ಸರ್ಕಲ್ ಇನ್ಸ್‌ಪೆಕ್ಟರವರಿಗೆ ಟೆಲಿಗ್ರಾಂ ಕೊಟ್ಟಿರುವದಲ್ಲದೆ ಒಂದು ಅರ್ಜಿಯನ್ನೂ ಸಹ ಕೊಟ್ಟಿರುತ್ತಾರೆ. ಆದುದರಿಂದ ಗ್ರಾಮಸ್ಥರ ಪ್ರಾರ್ಥನೆಯಂತೆ ಇವರನ್ನೇ ಇಡುತ್ತಾರೆಂದು ಪೂರ್ಣನಂಬಿರುತ್ತೇನೆ.

ಗ್ರಾಮಾಭಿಮಾನಿ.

ಕರ್ನಾಟಕ ಕವಿಚರಿತ್ರೆ.

ಬಹುದಿನಗಳಿಂದಲೂ ನಿರೀಕ್ಷಿತವಾಗಿದ್ದ ಕರ್ನಾಟಕ ಕವಿಚರಿತೆಯ II ನೇ ಸಂಪುಟವು ಮುದ್ರಿತವಾಗಿ ಹೊರಬಿದ್ದಿತು. ಕರ್ನಾಟಕ ಕವಿಚರಿತೆಯ I ನೇ ಸಂಪುಟವು ೧೯೦೭ ರಲ್ಲಿ ಮುದ್ರಿತವಾದದು ಸರ್ವಶ್ರುತವಾಗಿರುವುದು. I ನೆ ಸಂಪುಟವು ಆದಿಯಿಂದಲೂ ೧೪ ನೆ ಶತಮಾನದ ಕೊನೆಯವರೆಗಿನ ಕವಿಗಳ ಚರಿತ್ರವನ್ನು ಹೇಳುತ್ತದೆ. II ನೇ ಸಂಪುಟವು ೧೫-೧೬-೧೭ ನೆ ಶತಮಾನಗಳ ಕವಿಗಳ ಚರಿತ್ರವನ್ನು ಹೇಳುತ್ತದೆ. ಮ|| ಆರ್. ನರಸಿಹ್ಮಾಚಾರ್ಯರು ಈ ಚರಿತ್ರೆಯನ್ನು ಬಹಳ ಶ್ರಮವನ್ನು ವಹಿಸಿ ಬಹು ಶೋಧನೆಯನ್ನು ಮಾಡಿ ಬರೆದುದರಿಂದ ಕರ್ನಾಟಕ ಗ್ರಂಥಚಾರಿತ್ರಕ್ಕೆ ಮಹದುಪಕಾರ ಮಾಡಿರುತ್ತಾರೆ. ಕವಿಚರಿತ್ರೆಯ ಸಂಪುಟಗಳು ಅಪರಿಮಿತವಾದ ವಿಷಯಗಳನ್ನು ಒಳಕೊಂಡಿರುತ್ತವೆ. ಕವಿಗಳು ಇದ್ದ ಕಾಲ, ಕವಿಗಳು ಇದ್ದ ಸ್ಥಲ, ಕವಿಗಳ ವಂಶಪರಂಪರೆಗಳು, ಕವಿಗಳ ಗುರುಪರಂಪರೆಗಳು, ಕವಿಗಳಿಗೆ ಆಶ್ರಯದಾತರಾದ ರಾಜರುಗಳ ಚರಿತ್ರಗಳು, ಕವಿಗಳು ಸೂಚಿಸುವ ಪೂರ್ವಕವಿಗಳ ವಿಷಯಗಳು, ಕವಿಗಳು ಬರೆದಿರುವ ಗ್ರಂಥಗಳು, ಆ ಗ್ರಂಥಗಳ ಪದ್ಯ ಸಂಖ್ಯೆ ಮೊದಲಾದ ವಿಷಯಗಳು, ಕವಿಗಳ ಬಿರುದುಗಳು, ಕವಿಗಳ ಗ್ರಂಥಸ್ವಭಾವ, ಕವಿಗಳ ಗ್ರಂಥದಲ್ಲಿ ಪದ್ಯಗಳ ಉದಾಹರಣ, ಕವಿಗಳ ಕಾಲನಿರ್ಣಯಕ್ಕೆ ಕಾರಣಗಳು ಇವೇ ಮೊದಲಾದ ವಿಷಯಗಳು ವಿಶದವಾಗಿ ಬರೆಯಲ್ಪಟ್ಟಿರುತ್ತವೆ. ಈ ಕರ್ನಾಟಕ ಕವಿಚರಿತ್ರೆಯ ನಿರ್ಮಾಣಕ್ಕೆ ಮ|| ಆರ್. ನರಸಿಹ್ಮಾಚಾರ್ಯರು ಎಷ್ಟು ಶ್ರಮವನ್ನು ವಹಿಸಿರುತ್ತಾರೆಂಬುವದು ಮತ್ತು ಅದರಿಂದ ಕರ್ನಾಟಕ ದೇಶಕ್ಕೆ ಎಷ್ಟು ಉಪಕಾರ ಮಾಡಿರುವರೆಂಬುದು ಬಾಯಿಮಾತಿನಲ್ಲಿ ಹೇಳಿದರೆ ಗೊತ್ತಾಗುವುದಿಲ್ಲ; ಸಂಪುಟಗಳನ್ನು ಓದಿದರೆ ಸ್ಪಷ್ಟವಾಗುತ್ತದೆ. ಇದರ ಮಾತು ಹಾಗಿರಲಿ. ಕರ್ನಾಟಕ ಭಾಷೆಗೆ ಉಪಕಾರ ಮಾಡುವುದರಲ್ಲಿ ವೀರಶೈವಗ್ರಂಥ ಚಾರಿತ್ರಕ್ಕೆ ಮಹದುಪಕಾರ ಮಾಡಿರುತ್ತಾರೆ. ಈ ಉಪಕಾರವನ್ನು ಹೇಳಲಸದಳ. ಇವರು ಬರೆದಿರುವ ಕವಿಚರಿತ್ರೆಯಿಂದ ವೀರಶೈವರಲ್ಲಿ ಪೂರ್ವಕಾಲದಿಂದಲೂ ಬಹಳ ಘನಪಂಡಿತರಿದ್ದರೆಂಬುದಲ್ಲದೆ ಅಸಂಖ್ಯಾತಪಂಡಿತರಿದ್ದರೆಂಬುದೂ ಗೊತ್ತಾಗುತ್ತದೆ. ಆದಿಯಿಂದಲೂ ಕೆರೆ ಪದ್ಮಣಸರು ಮೊದಲಾದ ಮಹಾ ವಿದ್ವಾಂಸರಿದ್ದುದು I ನೆ ಸಂಪುಟದಲ್ಲಿ ವ್ಯಕ್ತವಾಗುತ್ತದೆ. II ನೆ ಸಂಪುಟದಲ್ಲಿ ೧೫-೧೬-೧೭ ಶತಮಾನಗಳಿಗೆ ಒಟ್ಟು ೩೫೦ ಕವಿಗಳಿಗೆ ೧೬೦ ಮಂದಿ ವೀರಶೈವರೂ, ೭೫ ಮಂದಿ ಜೈನರೂ, ೬೦ ಮಂದಿ ಬ್ರಾಹ್ಮಣರೂ, ೫೦ ಮಂದಿ ಇತರರೂ ಇದ್ದರೆಂಬುದು ವ್ಯಕ್ತವಾಗುತ್ತದೆ. ಇವರ ಕವಿಚರಿತ್ರೆಯ ದಾರಿಹಿಡಿದು ವೀರಶೈವರು ಗ್ರಂಥಗಳನ್ನು ಶೇಖರಿಸಿ ಪುಸ್ತಕಭಂಡಾರದಲ್ಲಿ ಮಡಗಬೇಕು. ಮತ್ತು ಪರೀಕ್ಷೆಗಳನ್ನೇರ್ಪಡಿಸಿ ಗ್ರಂಥಗಳನ್ನೋದುವ ವ್ಯವಸ್ಥೆ ಮಾಡಬೇಕು. ಪ್ರತಿ ಒಬ್ಬ ವೀರಶೈವನೂ ಕವಿಚರಿತ್ರೆಯ ಎರಡು ಸಂಪುಟಗಳನ್ನೂ ಓದಬೇಕು.

✓

ಜೀರಿಗೆ ಬಸವಲಿಂಗಪ್ಪ.

ಓಂತತ್ಸತ್.

ಪುಂಜೀಕೃತಮಹಾಂಗಃಯದ್ಬ್ರಹ್ಮರೂಪಕುಲಿಂಗಕಂ |
ನಿರಂಜನಮಹಾಲಿಂಗಂ ಶಂಜಯಾಯಪರಂಭಜೇ ||೧||

ಆಸ್ತಿಕಮಹಾಶಯರೇ, ನಿಜಾಂ ಇಲಾಖಾ ಡಿ|| ರಾಯಚೂರು ತಾ|| ಮಾನ್ವಿ ಗ್ರಾಮದಲ್ಲಿ ಶ್ರೀ ಪರಮಪೂಜ್ಯರಾದ ಮುತ್ತಿನಪೆಂಡೆ ಹಿರಿಮಠದ ರಾಮಗಡಿ ಶ್ರೀಗಳ ಕೃಪಾಪೋಷಿತರಾದ ಶಿವಯೋಗಿ ಚರಪಟ್ಟಾಧ್ಯಕ್ಷ ಸಿದ್ಧರಾಮಸ್ವಾಮಿಗಳ ಮಠದಲ್ಲಿ ಶ್ರೀಮನ್ನಿರಂಜನ ರಾಮಗಡ್ಡಿ ಸಿದ್ಧಲಿಂಗ ಮಹಾಸ್ವಾಮಿಗಳವರ ಸ್ಮಾರಕರೂಪವಾದ ಸಂಸ್ಕೃತ ಪಾಠಶಾಲೆಯು ನಾರಾಯಣಪೇಟೆಯ ರೋಗೋಲ್ಬಣದಿಂದ ಸವರಿ ಗ್ರಾಮದ ಶ್ರೀ

ಗಳ ಮಠದಲ್ಲಿ ಶಾಲೆಯು ಸಿದ್ಧಾರ್ಥಿ ಸಂ|| ಕಾರ್ತೀಕಮಾಸ ಮೊದಲ್ಗೊಂಡು ಕೀರುಗಾರಸವಿಶೇಷದಿಂದ ಯಾವದ್ವಿಷಯಗಳನ್ನೂ ಸುಲಲಿತವಾಗಿ ಸಾಗಿ ಸದರೀ ಸಂವತ್ಸರದ ಪುಷ್ಯ ಬ|| ೪ ದಿನದಲ್ಲಿ ಪ್ರಮುಖಜನರ ಕಾಂಕ್ಷೆಯಿಂದಲೂ ಸಮಾಜದ ಕಳಕಳಿಯಿಂದಲೂ ಶಾಲಾಧ್ಯಾಪಕರಾದ ಗುಳೇದಗುಡ್ಡದ ಸಿದ್ಧಲಿಂಗಶಾಸ್ತ್ರಿಗಳು ಶಾಸ್ತ್ರರಸವೈಭವದಿಂದ ಸರ್ವಮತಸ್ಥರಿಗೆ ಆನಂದವಾಗುವಂತೆ ವೇದಾಂತರಹಸ್ಯವು ಕೇಳುವವರ ಮನಸ್ಸಿಗೆ ಪ್ರತಿಬಿಂಬಿಸುವಂತೆ ಬಹು ಯುಕ್ತಿಯುಕ್ತವಾಗಿಯೂ ಮನೋಹರವಾಗಿಯೂ ಸದರೀ ದಿವಸದ ರಾತ್ರಿಯಲ್ಲಿ ೬ ಗಂಟೆಯಿಂದ ೮ ಗಂಟೆಯವರೆಗೂ ಶಿವಕೀರ್ತನವನ್ನು ಶಾಂತಿಪೂರ್ವಕವಾಗಿ ಮಾಡಿದರು. ಆ ಕಾಲಕ್ಕೆ ಶ್ರೀ ಪೂಜ್ಯಪಾದರಾದ ಸದರೀ ಗ್ರಾಮದ ವಿರಕ್ತಮಠದ ಗುರುಬಸವಸ್ವಾಮಿಗಳೂ ಯಾವನ್ನತಸ್ಥರೂ ಕೂಡಿದ್ದುದಲ್ಲದೆ ಶ್ರೀಯುತ ವಿದ್ಯಾಭಿಮಾನಿಗಳಾದ ತಾಲ್ಲೂಕ ದೇವದುರ್ಗ ಜಿ. ರಾಯಚೂರ ಪೈಕಿ ಮುಂಡಕಲ್ ದೇಶಮುಖ ವೆಂಕೋಬರಾವ್ ತಾಸಿಲ್‌ದಾರ ಸಾಹೇಬರವರು ಈ ಗ್ರಾಮದಲ್ಲಿದ್ದು ಸಾತ್ವಿಕಗುಣಸಂಪತ್ತಿನಿಂದಲೂ ವೇದಾಂತಶ್ರವಣ ಕಾಂಕ್ಷೆಯಿಂದಲೂ ಆಗಮಿಸಿದ್ದು ಸರ್ವರಿಗೆ ಆನಂದ ಸಮಯವೇ ಪ್ರಾಪ್ತವಾಗಿ ಮತ್ತು ಶ್ರೀಯುತ ಗುಂಡೇರಾವ್ ಪೇಷಗಾರರೂ ವಕೀಲ ಶ್ರೀನಿವಾಸರೂ ವಗೈರೆ ಸುತ್ತುಮುತ್ತಲು ಗ್ರಾಮಜನತಿಂತಿಣಿಯಿಂದ ಸದರಿ ಮಠವು ಶೋಭಾಯಮಾನವಾಗಿತ್ತು. ಕೀರ್ತನವಾದ ಬಳಿಕ ಸದರೀ ಸ್ವಾಮಿಗಳ ಮಠೀಯರಾದ ವಿರೂಪಾಕ್ಷ ದೇಶಿಕರೂ ವಿದ್ಯಾರ್ಥಿಗಳೂ ನೈತಿಕ, ಧಾರ್ಮಿಕ ವಿಷಯಕ ಉಪನ್ಯಾಸಮಾಡಿದ್ದು ಆನಂದಪ್ರದವಾಯಿತು. ತರುವಾಯ ಸದರೀ ಗುಣವಂತ ಮಂಡಿತರಾದ ತಾಸಿಲ್‌ದಾರ ಸಾಹೇಬರವರು ವಿದ್ಯಾರ್ಥಿನಿಕರಕ್ಕೆ ಮರ್ಯಾದಾಪೂರ್ವಕ ಭಾಷಣಮಾಡಿದ್ದೇನೆಂದರೆ—ಪ್ರಾಚೀನವಾದ ಈ ಸಂಸ್ಕೃತ ವಿದ್ಯೆಯನ್ನು ಶರೀರದಲ್ಲಿ ಬಿತ್ತಿ ಪ್ರಕಟಿಗೊಳಿಸಿರಿ. ಈ ಧರ್ಮಕಾರ್ಯಕ್ಕೆ ನಮ್ಮ ಶರೀರವಾದರೂ ಸನ್ನದ್ಧವಾಗಿದೆ. ಎಂದು ಸುವಿಷಯಗಳಂ ಪ್ರಕಟಿಗೊಳಿಸಿದರು. ಆ ಮೇಲೆ ಪುಷ್ಪಹಾರ ಗುಚ್ಛ ತಾಂಬೂಲಾದಿ ಸ್ವೀಕಾರಪೂರ್ವಕ ಆನಂದಪರಂಪರೆಯಿಂದ ನಮ್ಮನ್ನಾಳುವ ನೈಜಾಂ ಬಾದಷಹ ಪ್ರಭುಗಳಿಗೂ ಬ್ರಿಟಿಷ್ ಸಾರ್ವಭೌಮರಿಗೂ ಶ್ರೇಯಃಪ್ರಾರ್ಥನೆಯಿಂದ ಜಯಘೋಷವಂ ಗೈದು ಶ್ರೀಗಳ ಆಶೀರ್ವಾದವಂ ಪಡೆದು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಓರ್ವ ಸಮಾಜಸೇವಕ.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರುಷ ಇಲ್ಲಿ ಬಿಳೆ (ಹಳದಿ) ಗೋಧಿಯ ಬೆಳೆಯು ಚೆನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಗಿ, ಧಾರವಾಡ.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಘಳಿಗೆ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0-8.0.

47 ನಮ್ಮ ವಿಳಾಸ:—ವೈರಂ ಅಂಡ್ ಕೊ,

3. ಇರುಳಪ್ಪನಬೀದಿ, ಮದರಾಸು.

...ನ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಪೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ



ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ಎ. ಎ. ಎಸ್. ಪಾಣಿ ಕಂಪನಿ,

47 ಸಾಹುಕಾರಪೇಟೆ, ಮದರಾಸು.

ಅರ್ಶ್ವಿಯರ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 26

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,

೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಪರೀಕ್ಷಿಸಿ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ## ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ

17 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗೂ ಕೊಟುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,

47 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸರ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 14

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ಯುಭವ ತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆ ರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ. ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಿಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೆಡಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,

ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜನವರಿ ತಾ|| ೧೮ ರಿಂದ ೧೯೨೦ ನೆಯ ಜನವರಿ ತಾ|| ೨೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಪುಷ್ಯಬಹುಳ ತ್ರಯೋದಶಿಯಿಂದ ಮಾಘಶುದ್ಧ ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಮಾಸ
18	1 ಭಾನು	ತ್ರಯೋ	60	ಜ್ಯೇಷ್ಠ	5-29	5
19	ಸೋಮ	ತ್ರಯೋ	0-43	ಮೂಲ	11-48	6
20	2 ಮಂಗಳ	ಚತು	5-27	ಪೂಷಾ	17-29	7
21	ಬುಧ	ಅಮಾ	9-26	ಉಷಾ	22-20	8
22	3 ಗುರು	ಪಾಡ್ಯ	11-48	ಶ್ರವ	26-0	9
23	4 ಶುಕ್ರ	ಬಿದಿ	13-10	ಧನಿ	28-27	10
24	5 ಶನಿ	ತದಿ	13-15	ಶತ	29-41	11

(1) ಪ್ರದೋಷಃ, ಉಡುಪಿಯಲ್ಲಿ ಪರಾ ಯೋತ್ಸವಃ. (2) ಸರ್ವತ್ರ ತ್ಯೆಯ್ಯಮಾವಾಸ್ಯ. (3) ಮಾಘಗೌರೀವ್ರತಂ. (4) ಕೈಲಾಸಗೌರೀವ್ರತಂ. (5) ಮೌನಗೌರೀವ್ರತಂ, ತಿಲಚತುರ್ಥೀ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಪ್ರೀತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಜನವರಿ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೪

MYSORE GOVERNMENT ADVERTISEMENTS.

25

Government Botanic Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE ECONOMIC JOURNAL.

A Monthly Periodical devoted to the Discussion of all Economic Topics of Interest.

Special Features.

Original articles on Economic subjects by writers of note; summary of articles of interest from Indian and Foreign Economic periodicals; seletions from important speches and papers on Economic subjects; notes of the month on current Economic matters; notes on various Economic activities in and outside the State, and topical portraits and illustrations.

Annual Subscription.

Mysore State	Rs. 3
Outside Mysore State ...	Rs. 4
Great Britain	Sh. 8
America	$ 2
Single copy	As. 8

The Journal is an excellent medium for advertising all matters of Economic utility. The following is the schedule of rates:—

For full page, Rs. 10 per insertion.
,, half ,, ,, 6 ,,
,, quarter ,, 3½ ,,

One anna per line for speial short advertisements not exceeding four lines each.

Contract rates on application.

For sample copy send eight annas stamp.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಶಾಸ್ತ್ರಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಚಾಲುಕ್ಯರ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಚಾಲುಕ್ಯರ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ನಂಡಿಶಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. ## ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.



ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 13

ನಾವು ಎ. ಆಲ್ ಬ್ಯುಕ್ಯುಯರ್ ಕ್ಕೊ. ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

11 ## ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0,

ನಮ್ಮ ವಿಳಾಸ:—ಶ್ರೀ ಸೀತಾರಾಘವ

5 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ## ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 6

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,

ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦— ೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲಚರಿತ್ರೆ	೦— ೫—೦
ಹರಿದಾಸಿ	೦— ೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಜನವರಿ ತಾ|| ೨೫ ನೆಯ ಭಾನುವಾರ.

ಆಹಾರ್ಯಧಾನ್ಯಗಳು

ಬೇರೆಕಡೆ ನಾವು ಮುದ್ರಿಸಿರುವ ಸರ್ಕಾರಿ ಪ್ರಕಟನೆಗಳಿಂದ ಆಹಾರ್ಯಧಾನ್ಯಗಳು ಅಗ್ಗವಾಗಿಯೂ ನಿರಾತಂಕವಾಗಿಯೂ ಪ್ರಜೆಗಳಿಗೆ ಒದಗುವಂತೆ ನೋಡುವ ವಿಷಯದಲ್ಲಿ ಪ್ರಭುತ್ವದವರು ಹಿಂದೆ ಮಾಡಿದ್ದ ನಿರ್ಬಂಧಗಳನ್ನೆಲ್ಲಾ ಏರ್ಪಡಿಸಲು ಸಿದ್ಧರಾಗಿರುವರೆಂಬ ಸಂಗತಿಯು ವ್ಯಕ್ತವಾಗಿದೆ. ತಕ್ಕಷ್ಟು ಮಳೆಬೆಳೆಯಾಗಿದ್ದರೂ ಸಹೋದರರ ಕ್ಷೇಮಚಿಂತೆಯು ರೈತರಿಗೂ ವರ್ತಕರಿಗೂ ಇಲ್ಲದೆಹೋದುದರಿಂದ ಬೆಲೆಗಳು ಹೆಚ್ಚಿ ಕೊಂಡು ಉಂಟಾಗಿರುವ ಹಾಹಾಕಾರಗಳನ್ನು ತಪ್ಪಿಸುವುದಕ್ಕೆ ಪ್ರಭುತ್ವದವರು ಕೈಹಾಕದಿದ್ದರೆ ತೀರದಂತಾಗಿರುವುದು. ಮರಳಿ ಇಂಥ ನಿರ್ಬಂಧಪದ್ಧತಿಯನ್ನು ಬಳಮಾಡಿಕೊಳ್ಳುವ ಸ್ಥಿತಿಯು ದೇಶದಲ್ಲಿ ಉಂಟಾದುದು ವಿಷಾದವು. ಆದರೂ ಈಗಣ ಸ್ಥಿತಿಯಲ್ಲಿ ನಿರ್ಬಂಧಪದ್ಧತಿಯು ದೇಶಕ್ಷೇಮಕ್ಕೆ ಅವಶ್ಯಕವಾಗಿದೆ. ಗೌರ್ನ್ಮೆಂಟಿನವರು ತಮ್ಮ ಸಂಕಲ್ಪವನ್ನು ಕಾರ್ಯರೂಪದಲ್ಲಿ ತರಿಸುವುದಕ್ಕೆ ಇನ್ನು ತಡಮಾಡಲಾಗದು. ವರ್ತಕರೂ, ದಳ್ಳಾಳಿಗಳೂ, ಮಿಲ್ಲುಗಳವರೂ, ರೈತರೂ ಅಧರ್ಮವಾದ ದುರಾಶೆಯನ್ನು ದೂರೀಕರಿಸುವುದು ಇಹಪರಗಳೆರಡರಲ್ಲೂ ಕ್ಷೇಮಕರವಾಗಿರುವುದು.

ವೈಸ್ರಾಯರು ಮತ್ತೂ ಕಾಲಿಫಟ್ ಪ್ರತಿನಿಧಿಗಳು.

ಕಳೆದ ತಾ|| ೧೯ ರಲ್ಲಿ ದಿಲ್ಲಿಪಟ್ಟಣದೊಳಗೆ ತುರ್ಕಿ ಸಮಸ್ಯಾಪರಿಷ್ಕಾರ ವಿಷಯವನ್ನು ಮಹಮ್ಮದೀಯರ ಮನಸ್ಸಿಗೆ ನೋವಿಲ್ಲದಂತೆ ಮಾಡಿಸಿಕೊಡಬೇಕೆಂಬುದಾಗಿ ವಿಜ್ಞಾಪನಪತ್ರ ಸಮರ್ಪಣ ಮೂಲಕ ಕೇಳಿಕೊಳ್ಳುವುದಕ್ಕಾಗಿ ವೈಸ್ರಾಯರ ಬಳಿಗೆ ನಾನಾ ಪ್ರಾಂತಗಳ ಮಹಮ್ಮದೀಯ ಪ್ರಮುಖರಾದ ಡಾಕ್ಟರ್ ಎಂ. ಎ. ಅನ್ಸಾರಿ, ಹಕೀಂ ಅಜುಮಲ್‌ಖಾನ್, ಮುನ್ಷಿ ಸೌಕತಾಲಿ, ಸರ್ ಫಜುಲ್ಭಾಯಿಕರೀಂಭಾಯಿ, ಸಯ್ಯದ್‌ಹುಸೇನ್ ಇಮಾಂ, ಎಂ. ಎ. ಜಿನ್ನಾ ಮೊದಲಾದವರೂ ಹಿಂದೂಗಳೊಳಗೆ ಮ|| ಗಾಂಧಿ, ಸ್ವಾಮಿಶ್ರದ್ಧಾನಂದ, ಪಂಡಿತ ಮ|| ಮಾಳವ್ಯ, ಪಂಡಿತರಾಮಭಜದತ್ತಚೌಧುರಿ, ಪಂಡಿತ ನೆಹ್ರೂ ಮೊದಲಾದವರುಗಳೂ ಹೋಗಿದ್ದರು. ವೈಸ್ರಾಯರು ವಿಜ್ಞಾಪನಪತ್ರವನ್ನು ಸ್ವೀಕರಿಸಿ ಕೊಟ್ಟ ಉತ್ತರದಲ್ಲಿ ಇರುವ ನಿಜಸ್ಥಿತಿಗಳನ್ನು ಮುಚ್ಚುಮರೆಯಿಲ್ಲದೆ ಹೇಳಿದರು. ಹೇಗೆಂದರೆ—ಸ್ಟೇಟ್‌ಸೆಕ್ರೆಟರಿಯವರೂ ಇಂಡ್ಯಾ ಸರ್ಕಾರದವರೂ ಸಹ ನಿಮ್ಮಗಳ ಅಭಿಪ್ರಾಯವನ್ನು ಸಂಧಿಸಭೆಯವರಿಗೆ ಚೆನ್ನಾಗಿ ತಿಳಿಯಪಡಿಸಿದ್ದಾರೆ. ಆ ಸಭೆಯವರು ಹೇಗೆಯೇ ಪರಿಷ್ಕಾರಮಾಡುವರೆಂಬುದು ನನಗೆ ತಿಳಿಯದು. ವೃತ್ತಪತ್ರಿಕೆಗಳು ಆ ಪರಿಷ್ಕರಣದ ವಿಷಯದಲ್ಲಿ ನಾನಾ ವಿಧವಾಗಿ ಊಹಿಸಿ ಈಗಾಗಲೇ ಪ್ರಕಟಿಸುತ್ತಿರುವ ಸುದ್ದಿಗಳನ್ನು ನೀವು ನಂಬಬೇಡಿ. ಅವು ಆಂಗ್ಲಮಂತ್ರಿಗಳ ಅಭಿಪ್ರಾಯವಲ್ಲ. ಸ್ವಲ್ಪ ದಿನಗಳಲ್ಲೇ ಪರ್ಯವಸಾನವು ಗೊತ್ತಾಗುತ್ತದೆ. ಆಂಗ್ಲಮಂತ್ರಿಗಳು ಶಕ್ತಿವಂಚನೆಯಿಲ್ಲದೆ ಕೆಲಸಮಾಡುತ್ತಿದ್ದಾರೆ. ಸಂಧಿಸಭೆಗೆ ಮಂತ್ರಿಗಳು ಹೋಗುವಾಗ್ಗೆ ಮೂರುಮಂದಿ ಮಹಮ್ಮದೀಯ ಪ್ರಮುಖರನ್ನೂ ಸಂಗಡ ಕರೆದುಕೊಂಡು ಹೋಗಿದ್ದರು. ಇದರ ಮೇಲೆ ಸಂಧಿಸಭೆಯವರ ತೀರ್ಮಾನವು ಯಾವ ರೂಪವಾಗಿ ಆದರೂ ಅದನ್ನು ಕುರಿತು ಇಂಡ್ಯಾ ಸರ್ಕಾರದವರ ಲೋಪವೇನೂ ಇಲ್ಲವೆಂಬುದನ್ನು ನೀವು ನಂಬಿರಿ. ಆಗಾಖಾನರೂ, ಸ್ಟೇಟ್‌ಸೆಕ್ರೆಟರಿಯವರೂ, ಬಿಕನೀರ್ ಮಹಾರಾಜರೂ, ಲಾರ್ಡ್ ಸಿಂಹರವರೂ, ನಾನೂ ಹೇಳಬೇಕಾದುದನ್ನೆಲ್ಲಾ ಹೇಳಿರುತ್ತೇವೆ. ತುರ್ಕಿಯು ಯುದ್ಧಾರಂಭದಲ್ಲಿ ಶತ್ರುಮಂಡಲದವರೊಡನೆ ಸೇರಿದ ಕಾರಣದಿಂದಲೇ ಯುದ್ಧವು ಬೇಗನೆ ಮುಗಿಯದೆ ತೊಂದರೆಗಳು ಹೆಚ್ಚಾದುವು. ಯುದ್ಧವು ಇಂಗ್ಲಿಷ್ ತುರ್ಕಿ ದೇಶಗಳಿಗೆ ಮಾತ್ರವೇ ಸಂಬಂಧಿಸಿರದೆ ಅನೇಕ ದೇಶಗಳಿಗೆ ಸಂಬಂಧಿಸಿದ್ದಿತು. ಆದುಕಾರಣ ಸಂಧಿಕಾರ್ಯವನ್ನು ಇಂಗ್ಲೀಷರೊಬ್ಬರೇ ಪರಿಷ್ಕರಿಸುವ ಹಾಗಿಲ್ಲ. ನಿಮ್ಮ ಪ್ರತಿನಿಧಿಗಳನ್ನು ಈಗ ಸಂಧಿಸಭೆಗೆ ಕಳುಹಿಸಿಕೊಡಲು ಕಾಲವು ಮಿಂಚಿತು. ಸಂಧಿಪರಿಷ್ಕಾರವು ಇಷ್ಟರಲ್ಲೇ ಆಗಿಹೋಗುತ್ತದೆ. ನಿಮ್ಮ ವಿಜ್ಞಾಪನೆಯನ್ನೆಲ್ಲಾ ನಾನು ತಂತಿಯ ಮೂಲಕ ಸ್ಟೇಟ್‌ಸೆಕ್ರೆಟರಿಯವರಿಗೆ ಕಳುಹಿಸಿ ಕೊಟ್ಟಿದ್ದೇನೆ. ನಾನು ನಿಮ್ಮ ವಿಷಯದಲ್ಲಿ ಸಂಪೂರ್ಣ ಸಾನುಭೂತಿಯುಳ್ಳವನಾಗಿದ್ದರೂ ನಿಮ್ಮ ಕೋರಿಕೆಗಳೆಲ್ಲಾ ನ್ಯಾಯವಾದುವುಗಳೆಂದು ಅಂಗೀಕರಿಸಲಾರೆ. ಕಾಲಿಫಟ್ ವಿಷಯದಲ್ಲಿ ಮಹಮ್ಮದೀಯರು ಹೇಗೆ ಪರಿಷ್ಕರಿಸಿದರೂ ಆಗಬಹುದು. ತುರ್ಕಿಸಾಮ್ರಾಜ್ಯದಲ್ಲಿ ಎಂಥ ಮಾರ್ಪೂ ಆಗಕೂಡದೆಂದು ಹೇಳುವುದನ್ನು ಸಂಧಿಸಭೆಯವರು ಅಂಗೀಕರಿಸುತ್ತಾರೆಂದು ಹೇಳಲಾರೆನು. ಯುದ್ಧಾರಂಭದಲ್ಲಿ ತುರ್ಕಿಯು ತಟಸ್ಥವಾಗಿದ್ದರೆ ನಾವು ಆ ಸಾಮ್ರಾಜ್ಯವನ್ನು ಕಾಪಾಡುತ್ತೇವೆಂದು ಇಂಗ್ಲೀಷರು ವಾಗ್ದಾನಮಾಡಿದರು. ಆದರೆ ತುರ್ಕಿಯು ಶತ್ರುಗಳೊಡನೆ ಸೇರಿಕೊಂಡಿತು. ಆದುಕಾರಣ ಈಗಣ ಸಂಧಿಸಂದರ್ಭದಲ್ಲೂ ಶತ್ರುದೇಶಗಳಿಗೆ ಆದ ಏರ್ಪಾಡೇ ತುರ್ಕಿಗೂ ಆಗಬೇಕಾಗಿರುತ್ತದೆ. ಅದು ಬಹಳ ಸಂತಾಪಕರವೆಂಬುದನ್ನೇನೋ ನಾನು ಬಲ್ಲೆ. ಆದರೆ ನೀವು ದೀರ್ಘಾಲೋಚನೆಯನ್ನು ಮಾಡಬೇಕು. ವಿಧಿವಶದಿಂದ ತುರ್ಕಿಯು ಶತ್ರುಗಳೊಡನೆ ಸೇರಿದ ಕಾರಣ ಎಲ್ಲವಿಧದ ಕಷ್ಟಗಳೂ ಅವರಿಗೆ ಸಮಾನವಾಗಿ ತುರ್ಕಿಗೂ ಪ್ರಾಪ್ತವಾಯಿತು. ಆದರೆ ತುರ್ಕಿಗೂ ಬ್ರಿಟನ್ನಿಗೂ ಚಿರಕಾಲ ಮೈತ್ರಿಯಿರುವುದೆಂಬುದು ಸತ್ಯ. ಆ ಮೈತ್ರಿಯು ಇತಃಪರಃ ಕ್ರಮವಾಗಿ ಅಭಿವೃದ್ಧಿಗೊಳ್ಳಬಹುದು. ಈಗ ಪ್ರಪಂಚವೆಲ್ಲಾ ಎಷ್ಟೋ ಉಲ್ಲೋಲಕಲ್ಲೋಲಸ್ಥಿತಿಯಲ್ಲಿದೆ. ಇಂಥ ಸಂದರ್ಭದಲ್ಲಿ ಎಂಥ ಮಾರ್ಪುಗಳುಂಟಾದರೂ ಅದಕ್ಕಾಗಿ ಚಿಂತಿಸಿ ಫಲವಿಲ್ಲ. ನೀವು ಈ ಸಂಗತಿಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿರಿ. ಒಳ್ಳೆಯತನಕ್ಕೆ ವಿನಾಶವು ಎಂದಿಗೂ ಇಲ್ಲ'' ಎಂದು ಹೇಳಿರುತ್ತಾರೆ. ಇದು ಕಾಲಿಫಟ್ ಪ್ರತಿನಿಧಿಗಳನ್ನು ಸಂತೃಪ್ತಿಪಡಿಸಲಾರದೆ ಹೋಗಿರಬಹುದಾದರೂ ಇರುವ ಸ್ಥಿತಿಯೇ ವೈಸ್ರಾಯರ ಬಾಯಿಂದ ಬಂದಿರುತ್ತದೆ. ಇದಕ್ಕೆ ಮೀರಿದ ವಾಗ್ದಾನವನ್ನು ಮಾಡಲು ವೈಸ್ರಾಯರಿಂದಲೂ ಸಾಧ್ಯವಲ್ಲ; ಕೇವಲ ಆಂಗ್ಲಮಂತ್ರಿಮಂಡಲಕ್ಕೂ ಸಾಧ್ಯವಲ್ಲವೆಂದು ಹೇಳಬೇಕಾಗುತ್ತದೆ. ಸಂಧಿಸಭೆಯ ಪಂಚಾಯಿತರಲ್ಲಿ ಬಿದ್ದಿರುವ ವಿಷಯವಾದುದರಿಂದ ಪಕ್ಷಪಾತಾಚರಣೆಗೂ ನ್ಯಾಯವಿರುದ್ಧ ಪರಿಷ್ಕರಣಕ್ಕೂ ಅಲ್ಲಿ ಎಡೆಯಿರಲಾರದು. ಅಂತು ಲೋಕಶಾಂತಿಕಾಮುಕರೆಲ್ಲರಿಗೂ ತುರ್ಕಿಸಮಸ್ಯಾ ಪರಿಷ್ಕರಣವು ಮಹಮ್ಮದೀಯ ಸೋದರರ ಮನಸ್ಸಿಗೆ ವಿಶೇಷ ಕ್ಲೇಶದಾಯಕವಾಗದಂತೆ ಪರಿಣಮಿಸಲೆಂಬುದೇ ಆಗಿರುತ್ತದೆ ಈಚೆಗೆ ಬಂದಿರುವ ತಂತೀವಾರ್ತೆಗಳಿಂದ ಸಂಧಿಸಭೆಯವರು ಸದ್ಯಃ ಬೋಲ್ಷೆವಿಕ್ಕರ ವಿಷಯದ ಆಲೋಚನೆಯನ್ನಿಟ್ಟುಕೊಂಡು, ತುರ್ಕಿಸಮಸ್ಯೆಯನ್ನು ಹಾಗೆಯೇ ಉಳಿಸಿರುವರೆಂದು ಗೊತ್ತಾಗಿರುತ್ತದೆ.

ಒಳದೇಶ ವೃತ್ತಾಂತಗಳು.

ನಿಯಮನಿರ್ಮಾಣಸಭೆಗೆ ಡಿಸ್ಟ್ರಿಕ್ಟ್ ಮೆಂಬರುಗಳನ್ನು ಆರಿಸುವ ಕೆಲಸವು ನಿನ್ನೆ ದಿವಸ ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲೂ ನಡೆದಿರುತ್ತದೆ.

ಮುಡುಕುದೊರೆಯ ಜಾತ್ರೆಯು ಈ ತಿಂಗಳು ತಾ|| ೩೦ ರಿಂದ ೭ ದಿನಗಳವರೆಗೆ ನಡೆಯುತ್ತದೆ. ಆ ಕಾಲದಲ್ಲಿ ನಡೆಯುವ ದನಗಳ ಪ್ರದರ್ಶನದಲ್ಲಿ ಉತ್ತಮವಾದ ಎತ್ತುಗಳಿಗೂ ಹೋರಿಗಳಿಗೂ ೨೦ ರೂ. ನಿಂದ ೫ ರೂ. ನ ವರೆಗಿನ ೧೩ ಬಹುಮಾನಗಳನ್ನು ಕೊಡಲು ಏರ್ಪಡಿಸಿದ್ದಾರೆ.

ಮೈಸೂರು ಅಡ್ವೋಕೇಟ್ ಮ|| ಎಂ. ಆರ್. ಕೃಷ್ಣಮಾಚಾರ್ಯರು ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ಬೆಂಗಳೂರಿಗೆ ಹೋದುದರಿಂದ ತೆರವಾದ ಅವರ ಮುನ್ಸಿಪಲ್ ಕೌನ್ಸಿಲರ ಸ್ಥಾನಕ್ಕೆ ಮ|| ಅಡ್ವೋಕೇಟ್ ಕೆ. ಚಂದ್ರಶೇಖರಯ್ಯನವರು ಆರಿಸಲ್ಪಟ್ಟಿರುತ್ತಾರೆ. ಅವರ ಪಬ್ಲಿಕ್ ಪ್ರಾಸಿಕ್ಯೂಟರ್‌ಸ್ಥಾನಕ್ಕೆ ಮ|| ಅಡ್ವೋಕೇಟ್ ಸಿ. ನರಸಿಂಹಯ್ಯನವರು ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಮ್ಯುನಿಸಿಪಾಲಿಟಿಯ ಆ|| ಪ್ರೆಸಿಡೆಂಟ್ ಗಿರಿಯಿಂದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಈ ತಿಂಗಳ ಕೊನೆಗೆ ವಿಮುಕ್ತರಾಗುತ್ತಾರೆ. ಆ ಸ್ಥಲಕ್ಕೆ ತಮ್ಮಲ್ಲಿ ಒಬ್ಬರನ್ನು ಆರಿಸಿಕೊಳ್ಳುವ ಅಧಿಕಾರವನ್ನುಪಯೋಗಿಸಿಕೊಳ್ಳಲು ಅವಕಾಶವನ್ನು ಸರ್ಕಾರದವರು ಬೆಂಗಳೂರು ಮ್ಯು|| ಕೌನ್ಸಿಲ್ಲಿಗೆ ಕೊಟ್ಟಿರುತ್ತಾರೆ. ಆ ಸ್ಥಾನಕ್ಕೆ ಇದುವರೆಗೆ ಮ|| ಬಿ. ಕೆ. ಗರುಡಾಚಾರರು ಉಮೇದುವಾರರಾಗಿ ನಿಂತಿದ್ದಾರೆಂದು ಕೇಳುತ್ತೇವೆ.

ಈಸಲದ ಮೈಸೂರು ಸಿವಿಲ್‌ಸರ್ವೀಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಈ ಕೆಳಗೆ ಕಂಡವರು ಎ. ಷೆಡ್ಯೂಲ್ ಪ್ರೊ|| ಅ|| ಕಮಿಷನರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ—ಮ|| ಗಳಾದ ಇ. ವಿ. ಗಣಪತಿ ಅಯ್ಯರು, ಕಳಸದ ಸುಬ್ಬರಾಯರು, ಮೈಸೂರು ಶ್ಯಾಮಣ್ಣನವರು, ಕೀಲ್ಪಾಡಿ ಗುರುದತ್‌ರವರು, ಮಹಮ್ಮದ್ ಇಸ್ಮೆಯಿಲ್‌ಷರೀಫ್‌ರವರು. ಇವರಲ್ಲದೆ ಈ ಕೆಳಗೆ ಕಂಡವರುಗಳು ಬಿ. ಷೆಡ್ಯೂಲ್ ಪ್ರೊ|| ಅ|| ಕಮಿಷನರುಗಳಾಗಿ ನಾಮಿನೇಟ್ ಮಾಡಲ್ಪಟ್ಟಿದ್ದಾರೆ:—ಮ|| ಗಳಾದ ಚಾರ್ಲ್ಸ್ ಸರೋನಾರವರು, ಆರ್. ಪಿ. ಮಲ್ಲಪ್ಪನವರು, ಆರ್. ಪುಟ್ಟರಾಜೆ ಅರಸಿನವರು, ಸಿ. ಎಂ. ಹೆಚ್. ರಣಜೋಧಸಿಂಗರವರು, ಪಿ. ಸೂರ್ಯನಾರಾಯಣಶೆಟ್ಟಿಯವರು.

ಪತ್ರವ್ಯವಹಾರ.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲೂಕು ಸಾಸ್ವೆಹಳ್ಳಿ ಮಾಗಣಿ ಲಾಂಪುರದಲ್ಲಿ ಶ್ರೀ ಹಾಲುಸ್ವಾಮಿಗಳವರ ರಥೋತ್ಸವವು ಇದೇ ಸಿದ್ಧಾರ್ಥಿ ಸಂವತ್ಸರದ ಮಾಘಬಹುಳ ಬಿದಿಗೆ (ತಾ|| 6-2-1920ನೇ) ಶುಕ್ರವಾರ ಸಾಯಂಕಾಲ ನಡೆಯುತ್ತದೆ. ಆಗ್ಗೆ ಅನೇಕ ಯಾತ್ರಾರ್ಥಿಗಳೂ ತರತರದ ಅಂಗಡಿಗಳೂ ಶಾಪುಗಳೂ ನಾಟಕಗಳೂ ಸುಮಾರು 30-40 ಸಾವಿರ ದನಗಳೂ ಸಹ ಸೇರುತ್ತವೆ. ಈ ಜಾತ್ರೆಯು ತುಂಗಭದ್ರಾ ನದೀತೀರದಲ್ಲಿ ನಡೆಯುತ್ತದೆ.

ಸ್ಥಳಿಕ.

ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗೆ ಓದುವ ವೀರಶೈವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ.

ಈ 1920 ನೆಯ ಇಸವಿ ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ತೇರ್ಗಡೆಯಾದ ಮೈಸೂರು ದೇಶದ ಇಬ್ಬರು ವೀರಶೈವ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ 5 ರೂಪಾಯಿಗಳಂತೆ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹೆಸರಿನ ಮೇಲೆ ಮುಡುಕುತೊರೆಯ ಶ್ರೀಮದ್ವೀರಶೈವಮತಸಂವರ್ಧಿನೀ ಸಭಾದಲ್ಲಿ ನನ್ನಿಂದ ಕೊಡಲ್ಪಡುತ್ತೆ. ಹೀಗೆ ಬಹುಮಾನ ಹೊಂದುವ ವಿದ್ಯಾರ್ಥಿಗಳು ನಮ್ಮ ಸಮಾಜದ ವಿದ್ಯಾರ್ಥಿಗಳ ವ್ಯಾಸಂಗಪ್ರೋತ್ಸಾಹಕ್ಕೆ ಮಾರ್ಗದರ್ಶಕರಾಗುತ್ತಾರೆಂದು ನಂಬಿದ್ದೇನೆ.

ಸಮಾಜಸೇವಕ.

ಶ್ರೀವಿರಕ್ತಮಠ, ಜಡೆ ತಾ|| ಸೊರಬ ಡಿ-ಶಿವಮೊಗ್ಗ.

ಶ್ರೀಮನ್ನೃಪಶಾಲಿವಾಹನಶಕೆ ೧೮೪೧ ನೆ ಸಿದ್ಧಾರ್ಥಿ ಸಂವತ್ಸರದ ಮಾಘಶುದ್ಧ ೧೫ ಬುಧವಾರ (ತಾ|| 4—2—1920) ಸಾಯಂಕಾಲಕ್ಕೆ ಈ ಪೀಠದ ಮೂಲಸ್ವಾಮಿಗಳ ಪುಷ್ಪರಥಾರೋಹಣವೂ ಅದೇ ಬಹುಳ ೧ ಗುರುವಾರ (ತಾ|| 5—2—20) ಹಗಲು ವಟುಗಳಿಗೆ ಮಾಹೇಶ್ವರದೀಕ್ಷೆಯೂ ಅದೇ ದಿವಸ ಸಾಯಂಕಾಲಕ್ಕೆ ಮಹಾರಥಾರೋಹಣವೂ ಬಹುಳ ೩ ಶನಿವಾರ (ತಾ|| 7—2—29) ಮಂಗಳಸ್ನಾನವೂ ಹೀಗೆ ರಥೋತ್ಸವ ಕಾರ್ಯಗಳು ಅತಿ ವಿಜೃಂಭಣೆಯಿಂದ ಈ ನಮ್ಮ ಜಡೆ ವಿರಕ್ತಮಠದಲ್ಲಿ ನೆರವೇರಿಸಲ್ಪಡತಕ್ಕವಿರುತ್ತವೆ. ಅಲ್ಲದೆ ಈ ರಥೋತ್ಸವ ಕಾಲದಲ್ಲಿಯೇ ವೀರಶೈವ ಧರ್ಮೋತ್ತೇಜಕ ಸಭೆಯೆಂಬ ಪ್ರಾಂತಿಕಸಭೆಯು ಸಹ ಈ ವಿರಕ್ತಮಠದಲ್ಲಿಯೇ ನಡಿಸಲ್ಪಡತಕ್ಕದ್ದೆಂದು ನಿಷ್ಕರ್ಷಿಸಲ್ಪಟ್ಟಿರುತ್ತಾಗಿ ಸರ್ವರೂ ಸಕಾಲಕ್ಕೆ ಇಲ್ಲಿಗೆ ಆಗಮಿಸಿ ಮಹಾಸನ್ನಿಧಿಯ ದರ್ಶನಾನಂದವನ್ನು ಪಡೆಯುವುದಲ್ಲದೆ ಸಭಾಕಾರ್ಯಗಳನ್ನು ಸಾಂಗಗೊಳಿಸಿ ಧರ್ಮೋತ್ತೇಜನವನ್ನುಂಟುಮಾಡಬೇಕಾಗಿ ಅಪೇಕ್ಷಿಸುತ್ತೇವೆ. ಧರ್ಮೋತ್ತೇಜಕ ಸಭೆಯ ನಿಬಂಧನೆಗಳು.—1. ಸಭೆಯು ತಾ|| 6-2-20 ಮತ್ತು ತಾ|| 7-2-20 ಈ ಎರಡು ದಿವಸಗಳಲ್ಲಿಯೂ ಪ್ರಾತಃಕಾಲ ೧೨ ಗಂಟೆಗೆ ಪ್ರಾರಂಭವಾಗಿ ವೀರಶೈವ ಮತದ ಪುರೋಭಿವೃದ್ಧಿಗೆ ಸಾಧನಭೂತಗಳಾದ ಅನೇಕ ಧರ್ಮೋತ್ತೇಜಕ ಸಂಗತಿಗಳು ನಡೆಸಲ್ಪಟ್ಟು ಸಂಜೆ ೫ ಗಂಟೆಗೆ ಮುಕ್ತಾಯ ಮಾಡಲ್ಪಡತಕ್ಕದ್ದು. 2. "ಸಂಸ್ಕೃತಭಾಷಾ ಪ್ರಾಶಸ್ತ್ಯ" "ಒಕ್ಕಲತನ" "ವಿರಕ್ತರು ಮತ್ತು ಗುರುಸ್ಥಲದವರು" ಈ ವಿಷಯಗಳಲ್ಲಿ ಭಾಷಣ ಮಾಡತಕ್ಕವರಿಗೆ ಸಭೆಯಲ್ಲಿ ಅವಕಾಶವು ಕೊಡಲ್ಪಡುವುದು. ಅಲ್ಲದೆ ಉಪನ್ಯಾಸಕರಿಗೂ ವಿದ್ಯಾರ್ಥಿಗಳಿಗೂ ಬಹುಮಾನಗಳು ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷಿಸಲ್ಪಟ್ಟಿದೆ. ಶ್ರೀರುದ್ರ ಚಮಕ ಇವುಗಳನ್ನು ಸಮಗ್ರವಾಗಿ ಕಂಠಪಾಠ ಮಾಡಿರತಕ್ಕ ವಿದ್ಯಾರ್ಥಿಗಳಿಗೂ ಜಾತಕರ್ಮ ದೀಕ್ಷಾ ಮತ್ತು ವಿವಾಹ ಈ ಕರ್ಮಗಳ ವಿಧಿಗಳನ್ನು ಸಮರ್ಪಕವಾಗಿ ಅಭ್ಯಾಸ ಮಾಡಿರತಕ್ಕ ವಿದ್ಯಾರ್ಥಿಗಳಿಗೂ ಬಹುಮಾನ ಕೊಡಲ್ಪಡುತ್ತದೆ.

ಸೂಚನೆ—ಉಪನ್ಯಾಸಕರು ತಮ್ಮ ಭಾಷಣಗಳನ್ನು ತಾ|| 1-2-20 ರೊಳಗೆ ನಮಗೆ ಮುಟ್ಟುವಂತೆ ನಮ್ಮಲ್ಲಿಗೆ ಬರೆದು ಕಳುಹಿಸತಕ್ಕದ್ದು. ಆಗಮಿಸತಕ್ಕ ಸರ್ವರಿಗೂ ಭೋಜನ ವಾಸ ಇವುಗಳಿಗೆ ಯೋಗ್ಯವ್ಯವಸ್ಥೆಯು ಮಾಡಲ್ಪಡುವುದು.

ಚನ್ನವೀರಯ್ಯ.

ರಾಜಹಂಸನೊ ? ಕಾಕರಾಜನೊ ?

ಸ್ವಾಮಿ !

ಸಂಪದಭ್ಯುದಯ ಪತ್ರಿಕೆಗೆ "ರಾಜಹಂಸ" ಎಂಬ ಹೆಸರಿಟ್ಟುಕೊಂಡು ಯಾರೋ ಒಂದು ಲೇಖನವನ್ನು ಬರೆದಿದ್ದಾರೆ. ಅವರು ಶುಭೋದಯ ಪತ್ರದಲ್ಲಿ "ಅಲ್ಲಮನ ಮತ್ತು ಬಸವನ ವೃತ್ತಾಂತವೇನು ?" ಎಂಬ ಹೆಸರಿನಿಂದ ಹಿಂದಕ್ಕೆ ಬರೆದಿದ್ದ ಲೇಖನವು ವೀರಶೈವಮತದ ಉತ್ಕರ್ಷವನ್ನು ಹೇಳಿದೆಯೇ ಹೊರತು ಅಪಮಾನಪಡಿಸತಕ್ಕದ್ದಾಗಿಲ್ಲವೆಂದೂ, ಒಂದುವೇಳೆ ಅದರಿಂದ ಬಸವ ಅಲ್ಲಮ ಅವರೀರ್ವರಿಗೆ ಅಪಮಾನವಾಗಬಹುದೇ ಹೊರತು ಮತಕ್ಕೆ ಅವಮಾನಕರವಲ್ಲವೆಂದೂ, ಮ|| ಪಾವಟೆಯವರು ವೀರಶೈವರಲ್ಲಿ ಜಾತಿ ತಾರತಮ್ಯವನ್ನು ತಪ್ಪಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವರಾದುದರಿಂದ ಅವರು ಬಸವನ ಮಾರ್ಗಪ್ರವರ್ತಕರಾಗಿರುತ್ತ ಸ್ವಜಾತ್ಯುನ್ನತಿಯ ಪ್ರಯತ್ನದಲ್ಲಿ ಶುಭೋದಯದ ಲೇಖನದ ಮೇಲೆ ವ್ಯಾಜ್ಯಹೂಡಿ ಅವಮಾನ ಪಟ್ಟುಕೊಂಡರೆಂದೂ, ಆದ್ದರಿಂದ ಮತಕ್ಕೆ ಅಪಮಾನ ಮಾಡದಿರುವ ಈ ಲೇಖನಸಂಬಂಧವಾಗಿ ವೀರಶೈವರು ದುಡುಂಪ್ರವೇಶ ಮಾಡಬೇಕಾದ ಕಾರಣವಿಲ್ಲವೆಂದೂ ಅಭಿಪ್ರಾಯ ಕೊಟ್ಟಿರುತ್ತಾರೆ.

ಬಸವೇಶನೂ ಅಲ್ಲಮನೂ ನಮ್ಮ ಮತಕ್ಕೆ ಸಂಬಂಧಪಟ್ಟವರಲ್ಲವೆಂದೂ ಅವರು ವೀರಶೈವರಲ್ಲವೆಂದೂ ಅವರು ವೀರಶೈವ ಮತವನ್ನು ಕೆಡಿಸಿದರೆಂದೂ ಹೇಳುವ ಪಾಪಿಯು ವೀರಶೈವರಲ್ಲಿ ಯಾವನೂ ಇರಲಾರನು, "ಆ ಮಹಿಮರನ್ನು ಯಾರು ಬೇಕಾದರೂ ಹಳಿಯಲಿ; ನಾನೂ ನನ್ನ ಮತವೂ ಪವಿತ್ರವಾಗಿರುತ್ತವೆ" ಎಂದು ವೀರಶೈವರೇತಸ್ಸಮುತ್ಪನ್ನನಾದ ಯಾವೊಬ್ಬನೂ ಹೇಳಲಾರನು. ಹಾಗೆ ಹೇಳಿದವನ ಬಾಯಲ್ಲಿ ಹುಳು ಬೀಳದೆ ಸಾಯನು. ಬಸವೇಶನು ವೀರಶೈವ ಮತವನ್ನು ಕೆಡಿಸಿದನೆಂಬುದನ್ನು ಕೇಳಿದ ಕಿವಿಗೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕಾಗುತ್ತದೆ. ಶಿವಾಜ್ಞೆಯಿಂದ ಬಸವೇಶನು ಭೂಮಿಗವತರಿಸದಿದ್ದರೆ ಭರತಖಂಡದಲ್ಲಿ ಈ ಮತವು ನಾಮಾವಶೇಷವಾಗಿರುತ್ತಿತ್ತು. ಈಗ ತಾವು ವೀರಶೈವರೆಂದು ಹೇಳಿಕೊಳ್ಳುತ್ತಿರುವ ಜನರೆಲ್ಲಾ ಇಷ್ಟುಹೊತ್ತಿಗೆ ಮುಸಲ್ಮಾನರೋ ಮತ್ತಾರೋ ಆಗಿರುತ್ತಿದ್ದರು. ವೀರಶೈವ ಗ್ರಂಥಗಳನ್ನು ಓದಿನೋಡದ ಜನರಿಗೆ ಬಸವೇಶ್ವರ ವಿಷಯಕವಾದ ಮಹತ್ವವು ವೀರಶೈವಮತದಲ್ಲಿ ಎಷ್ಟಿರುವುದೆಂಬುದು ಗೊತ್ತಾಗುವ ಸಂಭವವಿಲ್ಲ. ಬಸವೇಶ್ವರನಿಂದೀಚಿನ ಯಾವೊಬ್ಬ ವೀರಶೈವ ಕವಿಯೂ ಗ್ರಂಥಾದಿಭಾಗದಲ್ಲಿಯೂ ಸಂದರ್ಭ ಸಿಕ್ಕಿದಾಗಲೂ ಬಸವೇಶ್ವರನನ್ನು ಪರಶಿವ ಪರಾವತಾರವಾಗಿ ವರ್ಣಿಸದೆ ಬಿಟ್ಟಿಲ್ಲ. ಬಸವೇಶ್ವರಚಾರಿತ್ರವನ್ನೇ ಬರೆದಿರುವ ಗ್ರಂಥಕರ್ತರುಗಳು ಎಷ್ಟುಮಟ್ಟಿಗೆ ಬಸವೇಶನ ಔನ್ನತ್ಯವನ್ನು ವರ್ಣಿಸಿರುವರೆಂಬುದನ್ನು ಲೋಕವೇ ಬಲ್ಲುದು. ಸ್ವಲ್ಪಸ್ವಲ್ಪವಾಗಿ ಗ್ರಂಥಾಧಾರಗಳಮೂಲಕ ಆತನ ಪ್ರಾಶಸ್ತ್ಯವರ್ಣನೆಯನ್ನು ಮಾಡುವುದಕ್ಕೆ ಕುಳಿತರೂ ದೊಡ್ಡ ಗ್ರಂಥವಾಗುವುದು. ವೀರಶೈವ ಮತದಲ್ಲಿ ಸಮಗ್ರವೀರಶೈವಾಚಾರಧುರಂಧರರೂ ವೇದವೇದಾಂತಾಗಮ ಪುರಾಣಾದಿಪಾರಂಗತರೂ, ೬೪ ಶೀಲಗಳನ್ನು ಸಾಂಗವಾಗಿ ನೆರವೇರಿಸಿದ ಪವಿತ್ರಚಾರಿತ್ರರೂ ಅನೇಕ ಗ್ರಂಥಕರ್ತರೂ ಆದ ಶ್ರೀ ಪಾಲ್ಕುರಿಕೆ ಸೋಮನಾರ್ಯರೂ ಸಹ ಬಸವೇಶನಲ್ಲಿ ಅನಿತರ ಸಾಧಾರಣವಾದ ಪೂಜ್ಯಬುದ್ಧಿಯನ್ನಿಟ್ಟಿದ್ದರು. ಅವರ ಶಿವಲಿಂಗಾರ್ಚನಕಾಲದಲ್ಲೂ ಲಿಂಗನಿರೀಕ್ಷಣೆಯಲ್ಲಿ ಬಸವೇಶ್ವರನ ದರ್ಶನವನ್ನೇ ಮಾಡುತ್ತಿದ್ದರೆಂದು ಅವರ ಚರಿತ್ರದಲ್ಲಿ ಹೇಳಲ್ಪಟ್ಟಿದೆ. ಆ ಬಸವೇಶ್ವರ ಸದ್ಭಕ್ತಿಯಿಂದ ತಮ್ಮ ಮಗನಿಗೆ "ಚತುರ್ಮುಖಬಸವ" ನೆಂದು ನಾಮಕರಣ ಮಾಡಿದ್ದರು. ಬಸವೇಶ್ವರ ವಿಷಯವಾಗಿ ಎಷ್ಟೋ ಗದ್ಯಪದ್ಯಗಳನ್ನು ಪರಿಪೂರ್ಣಭಕ್ತಿಯಿಂದ ರಚಿಸಿರುವರು. ಅವುಗಳಲ್ಲಿ ನಮಸ್ಕಾರಗದ್ಯವೆಂಬುದರೊಳಗೆ—

ಶ್ರೀಕಂಠೋದ್ಭವವೇದಚೋದಿತಲಸದ್ವೀರವ್ರತಪ್ರಕ್ರಿಯಾ ಚರ್ಯಾದೇಶಿಕದೇಶಿಕಾಯ ಭುವನಸ್ತುತ್ಯಾಯ ನಿತ್ಯಾಯಚ | ಭಾಂಡಾಗಾರಧುರಂಧರಾಯ ಸುಮಹದ್ರುದ್ರಾಯಭದ್ರಾಯತೇ ಸಾಕ್ಷಾಚ್ಛ್ರೀವೃಷಭಾಧಿಪಾಂಶಬಸವಾಧೀಶಾಯತಸ್ಮೈನಮಃ ||

ಎಂಬ ಶ್ಲೋಕದಲ್ಲಿ ಬಸವೇಶನನ್ನು ವೀರಶೈವಾಚಾರ್ಯರಿಗೆಲ್ಲಾ ಗುರೂತ್ತಮನಾದವನೆಂಬ ವಿಶೇಷಣದಿಂದ ವರ್ಣಿಸಿರುವರು.

ಮತ್ತೂ ಅವನು ವೀರಶೈವಮತಕ್ಕೆ ಮಾಡಿದ ಮಹೋಪಕಾರದಿಂದ ಮತಪ್ರತಿಷ್ಠಾಪಕನೇ ಅವನೆಂದು ಆದಿಶಿವಾಚಾರ್ಯರನೇಕರು ಬಸವೇಶನನ್ನು ವರ್ಣಿಸಿರುವರು. ಪಾಲ್ಕುರಿಕೆ ಸೋಮನಾರಾಧ್ಯರೂ ಸಹ ಒಂದು ಕಡೆ—

ಯಸ್ಸಂಗೀತಸಿಧರ್ಮಮಾಹುರವಧುವಂಯೇನಾರ್ಚಿತಂಸೊನ್ನತಂ ಯಸ್ಮೈಸ್ವಸ್ತಿಯತಸ್ತದೀಯ ಮುದಭೂದ್ಯದ್ವೀರಶೈವ ವ್ರತಂ || ಯಸ್ಯಾಪಾಂಗಸಹೋದರೀಚ ಕರುಣಾ ಯಸ್ಮಿನ್ಮಹತ್ವಾಧಿಕಂಸತ್ವಂ ಶ್ರೀಣಿಜಗಂತಿಪಾಹಿಬಸವಾಮಾತ್ಯೇಶಚೂಡಾಮಣೇ ||

ಎಂಬ ಶ್ಲೋಕದಲ್ಲಿ ವೀರಶೈವವ್ರತಕ್ಕೆ ಬಸವೇಶನೇ ಜನ್ಮಭೂಮಿಯೆಂದುಕೂಡ ವರ್ಣಿಸಿರುವರು.

ಇದಲ್ಲದೆ ವೀರಶೈವ ಮತಾಚಾರ್ಯಕೋಟಿಯಲ್ಲಿ ಸೇರಿದ ಶ್ರೀಮನ್ಮಲ್ಲಿಕಾರ್ಜುನ ಪಂಡಿತಾರಾಧ್ಯರು ಬಸವೇಶ್ವರನ ಸಮಕಾಲೀನರಾಗಿದ್ದು ಬಸವೇಶಸಂದರ್ಶನಾಪೇಕ್ಷೆಯಿಂದ ತಮ್ಮ ಊರನ್ನು ಬಿಟ್ಟು ಕಲ್ಯಾಣಪಟ್ಟಣವನ್ನು ಕುರಿತು ಹೊರಟುಬರುತ್ತ ಪಾನುಗಲ್ಲನ್ನು ಬಿಟ್ಟು ವನಿಪುರಕ್ಕೆ ಬರುವಲ್ಲಿ ಅಲ್ಲಿಗೆ ಒಬ್ಬಭಕ್ತನು ಬಂದು ಬಸವೇಶನು ಸಂಗಮೇಶನಲ್ಲಿ ಐಕ್ಯನಾಗಿ ಇಂದಿಗೆ ೮ ದಿನಗಳಾದುವೆಂಬ ಸುದ್ದಿಯನ್ನು ಹೇಳಲು, ಅದನ್ನು ಕೇಳಿ ಪಂಡಿತಾರಾಧ್ಯರು ಹತಾಶರಾಗಿ ಬಸವೇಶನನ್ನು ಕುರಿತು ಅತಿಶಯವಾಗಿ ವಿಲಾಪಪಟ್ಟಿರುವರು. ಆಗ್ಗೆ ಅವರಾಡಿರುವ ಮಾತುಗಳು—

"ಬಸವಾಮಾತ್ಯಬಸವಕುಮಾರ ಬಸವೇಶ್ವರ | ಪ್ರಭೋ ಬಸವಲಿಂಗಪ್ಪ ಭಂಡಾರಬಸವೇಶ್ವರ || ಸತ್ಯಪ್ರಲಾಪ ವಿನುತಭೂಪ ಸಜ್ಜನವಂದಿತ | ವಿಶುದ್ಧ ಚರಲಿಂಗಸ್ವರೂಪ ಪಾಪವಿವರ್ಜಿತ ||

ಎಂದು ಆರಂಭಿಸಿ ೩೦-೪೦ ಶ್ಲೋಕಗಳಲ್ಲಿ ಬಸವೇಶ್ವರ ಪ್ರಾಶಸ್ತ್ಯವನ್ನು ವರ್ಣಿಸಿ,

ಮನ್ಮನೋಹರಮುತ್ತಾಪಮುದ್ಭ್ರಾಂತರ್ಗದಧೀಶ್ವರ | ಆವಿಶಃಕಿಂ ಹಾ ಮಹೇಶಗರ್ಭಂ ಪಿತ್ರಾತ್ವಮೇವಮಾಂ ||

ಎಂದರೆ ಎಲೈ ನನ್ನ ತಂದೆಯೆ, ಅಣ್ಣನೆ, ನನ್ನ ಸ್ವಾಮಿಯೆ ! ನನ್ನನ್ನು ಬಿಟ್ಟು ನೀನೊಬ್ಬನೇ ಶಿವಗರ್ಭವನ್ನು ಹೊಕ್ಕಿಕೊಂಡೆಯಾ ? ಎಂದು ಗೋಳಿಟ್ಟು, ಆ ಬಸವೇಶನನ್ನು ತನ್ನಲ್ಲಿ ಐಕ್ಯಮಾಡಿಕೊಂಡ ಸಂಗಮೇಶನನ್ನು ಕುರಿತು—ಎಲೈ ಸ್ವಾಮಿಯೆ ! ವೀರಶೈವ ಮತೋದ್ಧಾರಾರ್ಥವಾಗಿ ಬಂದಿದ್ದ ಬಸವೇಶನನ್ನು ಇಷ್ಟು ಬೇಗನೆ ನಿನ್ನಲ್ಲಿ ಐಕ್ಯಮಾಡಿಕೊಳ್ಳಬಹುದೆ ? ಎಂದು ಆಕ್ಷೇಪಿಸುವುದಕ್ಕೆ ತೊಡಗಿ,

"ಶ್ರೀಸಂಗಮೇಶ ಗಿರಿಜಾಪ್ರಾಣನಾಥಮಹೇಶ್ವರ | .... ಶ್ರೀಮಹಾಲಿಂಗತನುಜಂ ಶಿವಭಾಜಂ ನಿರಂತರಂ | ತತ್ತ್ವಕಬೀಜಂಶರಣಕಲ್ಪಭೂಜಂ ಮಹೋಜ್ವಲಂ | ನಿರಸ್ತಭೋಜಂ ವಿಜಿತಮನೋಜಂ ದಿವ್ಯತೇಜಸಂ | ಶಿವಭಕ್ತಸಮಾಜಂ ಸದ್ಗುಣನೈಜಂಯಶಸ್ವಿನಂ |............... ವಿನಿರ್ಗತಭವವ್ಯಾಜಂ ಭಕ್ತಿರಾಜಂಮಹೋನ್ನತಂ |............... ಶ್ರೀಮದ್ಬಸವರಾಜಂಕಿಂತ್ವದ್ಗರ್ಭೇಸನ್ನವೇಶಯಃ | ಹಾಸಂಗಮೇಶ ದೇವೇಶ ತ್ವದೀಯ ಇತಿಸಾದರಂ | ತ್ವಯ್ಯೇವಾಯೋಜಯಸ್ತಂ ಕಿಂ ಬಸವಾಮಾತ್ಯಶೇಖರಂ | ಪ್ರಸಿದ್ಧಕೀರ್ತಿಂ ಪ್ರಮಥಾವತಾರಂಭಕ್ತಿಭೂಷಣಂ....... ಸ್ವತಃಭಕ್ತ್ಯರ್ಥಮಹಿಮಾವತಾರಂ ಧರಣೀತಲೇ | ಸತ್ಯಾಂಭವಧರ್ಮಾವತಾರಂ ನಿರ್ಮಲಭಾಸುರಂ | ಪ್ರಸಿದ್ಧಸದ್ವೀರಭಕ್ತಿಸ್ಥಲಾಚಾರಮಚಂಚಲಂ | ಜಂಗಮಪ್ರೋಹಸುಪಥಪ್ರಕಾರಮತಿಶೋಭನಂ | ಚಿತ್ರಂಶಿವಪಥಾಚಾರಮಮೇಯಮಿಜವೈಭವಂ | ಲಿಂಗಸಾಮ್ರಾಜ್ಯಪದವೀಪಟ್ಟಬದ್ಧಂ ಮಹೇಶ್ವರ | ಸದ್ಭಕ್ತಿಪಟ್ಟಭದ್ರಂ ಕಮಕರೋಸ್ತ್ವಮಿತಃಪರಂ | ಅಶೇಷಮುಕ್ತಿಸಾಮ್ರಾಜ್ಯಪರಿಸ್ಫುರಿತವೈಭವ | ಅಶೇಷಭಕ್ತರಾಜ್ಯಾಂಗಃ ಕೋವಾಭೂಮಾವಿತಃಪರಂ | ಸದ್ಭಕ್ತದೇಹಸದ್ಭಕ್ತಪ್ರಾಣೇಚಕ ಇತಃಪರಂ | ತ್ವದರ್ಚನಾಫಲಂದಾತುಂಪ್ರತಿಭೂಃ ಕ ಇತಃಪರಂ | ತ್ವದ್ಗುಣಾಸ್ಥಾನರಂಗಸ್ಯಜ್ಯೋತಿಃ ಕಸ್ಸಾಕ್ಷಿತಃಪರಂ | ಹರತೃಪ್ತಿಪ್ರಿಯಭಕ್ತಾನಾಂಕೋಹಸ್ತಸ್ಥಿತದರ್ಪಣಂ | ಪ್ರಾಣೇಶತವಭಕ್ತಾನಾಂ ಪ್ರಾಣಾಃಕೋವಾಮಹೀತಲೇ | ವೀರಮಾಹೇಶ್ವರಾಚಾರವೃತ್ತೇಃ ಕಾದಿಗಿತಃಪರಂ | ಶ್ರೀ ವೀರಶೈವಸಮಯಂ ಕಃಖ್ಯಾಪಯಿತುಮೀಶ್ವರಃ | ಶ್ರೀವೀರಶೈವಧರ್ಮಸ್ಯ ಸರಣಿಂ ಪರಮೇಶ್ವರ | ಅವಿಚ್ಛಿನ್ನಾಂಸ್ಥಾಪಯಿತುಂ ಕೋವಾಶಕ್ತೋಮಹೀತಲೇ | ವೀರಮಾಹೇಶ್ವರೋದಾರಮಹಿಮಾನಂ ಸಮುನ್ನತಂ | ಕೋವಾಪ್ರಕಾಶಯಿತುಂಕ್ಷಮತೇಭುವಿಶಂಕರ | ಕೋವಾನಾಶಯಿತುಂಶಕ್ತೋ ವೀರಮಾಹೇಶ್ವರಾಹಿತಾನ್ | ವೀರಮಾಹೇಶ್ವರಾನ್ ಪ್ರೀತ್ಯಾಕಸ್ಸಂಮಾನಯಿತುಂಕ್ಷಮಃ | ಕೋಜಂಗಮೇಚ್ಛಾಮನುವರ್ತೀ ಜಂಗಮೇಚ್ಛಾಪ್ರದಕ್ಷಕಃ...................ಲಿಂಗಜಂಗಮಸದ್ಭಕ್ತಿಂ ಸಕಾಂಕ್ಷಕರ್ತುಂಕ ಈಶ್ವರಃ |...................ಭಕ್ತಿಬೀಜಾನಿ ಬಸವಾಧಿಪತೇರಖಿಲಾಗುಣಾಃ | ಚಿತ್ರಾಣಿತಚ್ಚರಿತ್ರಾಣಿಗುರೂಣಾಂ ಗುರವೋಭುವಿ | ....
............ಬಸವಾಕ್ಷರಪಾಠಸ್ಯ ಫಲಮಾಹಾತ್ಮ್ಯಮದ್ಭುತಂ | ಬೇತ್ಯುಕ್ತೇಲಿಂಗಸಂಬಂಧಸೌಖ್ಯಂ ಸತ್ಯಮಪಿಸುಖಂ | ಸೇತ್ಯುಕ್ತೇ ಸದ್ಗುರುಕೃಪಾಸಮುನ್ನತಿರನುತ್ತಮಾ | ವೇತ್ಯುಕ್ತೇಶ್ಚಪ್ರಸಾದಸ್ಯಮಹನಂ ಪ್ರಾಪ್ಯತೇನರೈಃ |...............ಹರಕೇವಲಭಕ್ತಃ ಕಿಂ ಬಸವಾಮಾತ್ಯಶೇಖರಃ | ಶಿವಭಕ್ತಿಹಿತಾರ್ಥಾಯತ್ವಮಭೂರ್ಬಸವಾಧಿಪಃ ತ್ವಮೇವಹರ ಇತ್ಯುಕ್ತೋಬಸವತ್ವೇತಿ ಭೂತಲೇ |............ಮಹೇಶ್ವರೈನಂ ಬಸವಂ ಸಮಾಪಯಿತುಮಸ್ಮರಃ | ಸಂರಕ್ಷಿತಶಿವಾಚಾರಂ ಕರುಣಾಪೂರ್ಣಮಾನಸಂ | ಲಿಂಗಜಂಗಮ ಸದ್ಭಕ್ತಿಸಂಯುಕ್ತಂ ಧರಣೀತಲೇ | ಅದೀಪಂಮಂದಿರಂವಿದ್ಯಾಪ್ರೌಢಿಸಂವರ್ಜಿತಾಸಭಾ | ಪ್ರಸೂನಂಗಂಧರಹಿತಂ ಮಾತಂಗೋದಾನವರ್ಜಿತಃ | ಸನ್ಮಾನರಹಿತಾಕಾಂತಾ ದೇಹಃ ಪ್ರಾಣವಿವರ್ಜಿತಃ | ಪರಿವ್ರಾಟ್ ಶಾಂತಿರಹಿತಸ್ತಪೋಧ್ಯಾನವರ್ಜಿತಂ | ಮಾಣಿಕ್ಯಂ ಕಾಂತಿನಿರ್ಮುಕ್ತಂ ಸತ್ಯೇನರಹಿತೋಜಪಃ | ಶಶಿನಾರಹಿತಾರಾತ್ರಿರ್ದಿವಸಸ್ಸೂರ್ಯವರ್ಜಿತಃ | ಬಸವೇಶೇನರಹಿತೋಭಕ್ತಸಂಘೋಪಿಶಂಕರ | ಕಿಂಶೋಭತೇದಿವ್ಯಲಿಂಗಕೃಪಾಪಾಂಗಮಹೇಶ್ವರ..................ದೇವಕಪ್ಪಡಿಸಂಗ ಶ್ರೀಮಹಾಲಿಂಗಕೃಪಾನಿಧೇ ಸಂಪ್ರದರ್ಶಯ ಪುಣ್ಯಾವತಾರಂ ಶ್ರೀಬಸವೇಶ್ವರಂ | ಸುಜನಮ್ಯಾತಮಂದಾರಂ ವಿಸ್ತಾರಂ ಗುಣಸಂತತೇಃ | ರುಚಿರಾಕಾರಮಾಮ್ನಾಯ ಮತಾಚಾರಂಯತೋಧಿಕಂ | ಭಕ್ತೇಷ್ಟಲಿಂಗಗರ್ಭೇಷು ಮೂರ್ತಿಂ ಶ್ರೀಬಸವೇಶಿತುಃ | ತ್ವಂನಪ್ರಕಾಶಯಸಿ ಚೇತ್ಪರಿಭ್ರಷ್ಟಾನಕಿಂಭುವಿ | ಭಕ್ತಜಿಹ್ವಾಸು ಬಸವಾಕ್ಷರಾಣಿ ಗಿರಿಜಾಪತೇ | ತ್ವಂನಾಂಕಯಸಿ ಚೇದ್ವ್ಯಕ್ತಂ ಬಹುಲಾಘಕದಂಬಕೈಃ | ನಸ್ಯುಃಪರ್ಯಾಕುಲಾಜಿಹ್ವಾಃ ಕಿಮನರ್ಪಿತಸೇವಯಾ | ಭಕ್ತಚೇತಸ್ಸು ಬಸವಾಕ್ಷರಾಣಿಗಿರಿಜಾಪತೇ | ತ್ವಂನಾಂಕಯಸಿಚೇದ್ವ್ಯಕ್ತಂ ವಿಷಯಭ್ರಾಂತಿಚಾಲಕೈಃ | ನಸ್ಯುರ್ಹತಾನಿ ಚಿತ್ತಾನಿಕಿಮನರ್ಪಿತರಾಗತಃ | ಭಕ್ತವಾಕ್ಯೇಷು ಬಸವಾಕ್ಷರಾಣಿ ಗಿರಿಜಾಪತೇ |................ತಸ್ಮಾದ್ಬಸವಲಿಂಗಸ್ಯ ದಿವ್ಯರೂಪಂ ಮಹೇಶ್ವರ | ಸದ್ಭಕ್ತಾನಾಮಿಂದ್ರಿಯೇಷುಕೃಪಯಾ ಚಿಹ್ನಿತಂಕುರು ||

ಇವರ ತಾತ್ಪರ್ಯಾರ್ಥವೇನಂದರೆ—ಎಲೈ ಸಂಗಮೇಶ್ವರನೆ ! ಶಿವಭಕ್ತಿಗೊಡೆಯನೂ ಶರಣಕಲ್ಪವೃಕ್ಷನೂ ಶಿವತತ್ವಬೀಜನೂ ಆದ ಬಸವರಾಜನನ್ನು ನನ್ನವನೆಂದು ನೀನು ನಿನ್ನ ಗರ್ಭಕ್ಕೆ ಹುಗಿಸಿಕೊಂಡೆಯಾ ? ಆತನು ಭಕ್ತಿಯ ಸಮುದ್ಧರಣಾರ್ಥವಾಗಿ ಭೂಮಿಯಲ್ಲಿ ಮಹತ್ವದಿಂದ ಅವತರಿಸಿದವನು. ಶಿವಧರ್ಮವೇ ಆ ರೂಪವಾಗಿ ಅವತರಿಸಿದವನು. ಲೋಕಪ್ರಸಿದ್ಧವಾದ ಶಿವಭಕ್ತಿಸ್ಥಲದ ಆಚರಣೆಯುಳ್ಳವನು. ಜಂಗಮಸ್ತೋಮಕ್ಕೆ ಸನ್ಮಾರ್ಗದರ್ಶಕನು. ಲಿಂಗಾಂಗಸಾಮರಸ್ಯ ಸಿದ್ಧಾಂತ ಸಾಮ್ರಾಜ್ಯರಕ್ಷಣೆಯ ಪಟ್ಟವನ್ನು ಕಟ್ಟಿಕೊಂಡವನು. ಅಂಥವನನ್ನು ನಿನ್ನಲ್ಲಿ ಐಕ್ಯಮಾಡಿಕೊಂಡುಬಿಟ್ಟೆ, ಇನ್ನು ಆತನ ಸ್ಥಾನಕ್ಕೆ ಇನ್ನಾರಿಗೆ ಪಟ್ಟಕಟ್ಟಿರುವೆ ? ಇನ್ನುಮೇಲೆ ಭೂಮಿಯಲ್ಲಿ ಶಿವಭಕ್ತರಾಜ್ಯವನ್ನು ಪರಿಪಾಲಿಸುವವರಾರು ? ಇನ್ನುಮುಂದೆ ಭಕ್ತದೇಹಿಗಳೂ ಭಕ್ತಪ್ರಾಣಿಗಳೂ ಆಗಿರುವವರಾರು ? ನಿನ್ನನ್ನು ಪೂಜಿಸುವುದರಿಂದ ಉಂಟಾಗುವ ಫಲವನ್ನು ಭಕ್ತರಿಗೆ ಕೊಡುವುದಕ್ಕೆ ಇನ್ನು ಜಬಾಬ್ದಾರರಾರು ? ಇನ್ನುಮೇಲೆ ಶಿವಗಣ ಸಭಾಮಂಟಪಕ್ಕೆ ಪ್ರಕಾಶವನ್ನು ಕೊಡುವ ಜ್ಯೋತಿಗಳಾಗಿರತಕ್ಕವರಾರು ? ಇನ್ನುಮುಂದೆ ನಿನ್ನ ಪ್ರಿಯಭಕ್ತರ ಕೈಕನ್ನಡಿಯಾಗಿರತಕ್ಕವರಾರು ? ಇನ್ನುಮೇಲೆ ವೀರಮಾಹೇಶ್ವರಾಚರಣೆಗೆ ಯಾರು ದಿಕ್ಕು ? ಇನ್ನು ಶಿವಮತವನ್ನು ಪ್ರಸಿದ್ಧಿಪಡಿಸುವುದಕ್ಕೆ ಒಡೆಯರಾರು ? ಇನ್ನು ಭೂತಲದಲ್ಲಿ ವೀರಶೈವ ಧರ್ಮಮಾರ್ಗವನ್ನು ಅಖಂಡವಾಗಿ ಸ್ಥಾಪಿಸುವುದಕ್ಕೆ ಶಕ್ತರಾರು ? ಉತ್ಕೃಷ್ಟವಾದ ವೀರಮಾಹೇಶ್ವರ ಮಹತ್ವವನ್ನು ಭೂತಲದಲ್ಲಿ ಪ್ರತಿಷ್ಠಿಸುವುದಕ್ಕೆ ಇನ್ನಾರು ಶಕ್ತರು ? ವೀರಮಾಹೇಶ್ವರರ ಶತ್ರುಗಳನ್ನು ಧ್ವಂಸಗೊಳಿಸುವುದಕ್ಕೆ ಇನ್ನಾರು ಶಕ್ತರು ? ಪ್ರೀತಿಯಿಂದ ವೀರಮಾಹೇಶ್ವರರನ್ನು ಗೌರವಿಸುವುದಕ್ಕೆ ಇನ್ನಾರು ಶಕ್ತರು ? ಜಂಗಮರ ಇಷ್ಟದಂತೆ ನಡೆದು ಅವರು ಬೇಡಿದುದನ್ನು ಕೊಡತಕ್ಕವನು ಇನ್ನಾರು ? ಹರಚರ ಮಹತ್ವವನ್ನು ಜಗತ್ತಿನಲ್ಲಿ ಬೋಧಿಸುವುದಕ್ಕೆ ಇನ್ನು ಸಮರ್ಥರಾರು ? ಬಸವೇಶನ ಸಕಲ ಗುಣಗಳೂ ಭಕ್ತಿಯ ಬೀಜವಾಗುಳ್ಳವಾಗಿದ್ದುವು. ಅವನ ಚರಿತ್ರೆಗಳು ಲೋಕಾಶ್ಚರ್ಯಕರಗಳು. ಅವುಗಳು ಲೋಕೋದ್ಧರಣವಿಷಯದಲ್ಲಿ ಗುರುಗಳಿಗಿಂತಲೂ ಗುರುಗಳಾಗಿ ಉದಾಹರಣಭೂತಗಳಾಗಿರುವುವು. ಬಸವಾಕ್ಷರವನ್ನು ಪಾರಾಯಣ ಮಾಡುವುದರಿಂದುಂಟಾಗುವ ಫಲವು ಅತ್ಯದ್ಭುತವಾದುದು. "ಬ" ಎಂಬಕ್ಷರದ ಉಚ್ಚಾರವು ಲಿಂಗಾಂಗಸಾಮರಸ್ಯ ಸೌಖ್ಯವನ್ನು ಕೊಡುವುದು. "ಸ" ಕಾರೋಚ್ಚಾರಣವು ಗುರುಕಟಾಕ್ಷಲಾಭವನ್ನು ಉಂಟುಮಾಡುವುದು. "ವ" ಕಾರೋಚ್ಚಾರವು ಶುದ್ಧಸಿದ್ಧಪ್ರಸಿದ್ಧಪ್ರಸಾದಪ್ರಾಪ್ತಿಯನ್ನುಂಟುಮಾಡುವುದು. ಎಲೈ ಸಂಗಮೇಶನೆ! ಬಸವಮಂತ್ರಿಯು ಕೇವಲ ಭಕ್ತಮಾತ್ರನೇ? ಶಿವಭಕ್ತಿಸಮುದ್ಧಾರಾರ್ಥವಾಗಿ ನೀನೇ ಬಸವನೆಂಬ ಹೆಸರು ತಳೆದು ಭೂಮಿಯಲ್ಲಿ ಅವತರಿಸಿದೆ. ನೀನೇ ಶಿವನು ನೀನೇ ಬಸವನು. ಭೂಮಿಯಲ್ಲಿ ಶಿವಾಚಾರವನ್ನು ಸಂರಕ್ಷಿಸಿ, ಲಿಂಗಜಂಗಮ ಭಕ್ತಿತತ್ಪರನಾಗಿದ್ದುಕೊಂಡಿದ್ದ ಇಂತಹ ಬಸವೇಶನನ್ನು ನೀನು ನುಂಗಿಕೊಂಡು ಬಿಟ್ಟ ಬಳಿಕ, ಆ ಬಸವೇಶ್ವರನಿಂದ ರಹಿತವಾದ ಶಿವಭಕ್ತಸಮೂಹವು ಭೂತಲದಲ್ಲಿ ದೀಪವಿಲ್ಲದ ಮನೆಯಂತೆಯೂ, ವಿದ್ವತ್ಪ್ರೌಢಿಮೆಯಿಲ್ಲದ ಸಭೆಯಂತೆಯೂ, ಪರಿಮಳವಿಲ್ಲದ ಹೂವಿನಂತೆಯೂ, ಮದೋದಕವಿಲ್ಲದ ಆನೆಯಂತೆಯೂ, ಮಾನಹೀನೆಯಾದ ಸ್ತ್ರೀಯಂತೆಯೂ, ಪ್ರಾಣವಿಲ್ಲದ ದೇಹದಂತೆಯೂ, ಶಾಂತಿಯಿಲ್ಲದ ಸನ್ಯಾಸಿಯಂತೆಯೂ, ಧ್ಯಾನವಿಲ್ಲದ ತಪಸ್ಸಿನಂತೆಯೂ, ಹೊಳಪಿಲ್ಲದ ರತ್ನದಂತೆಯೂ, ನಿಜವಿಲ್ಲದ ಜಪದಂತೆಯೂ, ಚಂದ್ರನಿಲ್ಲದ ರಾತ್ರಿಯಂತೆಯೂ, ಸೂರ್ಯನಿಲ್ಲದ ಹಗಲಂತೆಯೂ ಇರುವುದೇ ಹೊರತು ಉಜ್ವಲವಾಗಿದ್ದೀತೆ ? ಆದುಕಾರಣ ಎಲೈ ದಯಾನಿಧಿಯಾದ ಕಪ್ಪಡಿ ಸಂಗಮನಾಥನೆ ! ಪರಿಶುದ್ಧವತಾರನೂ ವೇದಸಮ್ಮತಾಚಾರನೂ ಕೀರ್ತಿವಂತನೂ ಸುಂದರಾಕಾರನೂ ಆದ ಬಸವೇಶ್ವರನ ಸಂದರ್ಶನವನ್ನು ನನಗೆ ಮಾಡಿಸು. ಭೂತಲದಲ್ಲಿ ಶಿವಭಕ್ತರಿಗೆ ಅವರ ಇಷ್ಟಲಿಂಗದ ಮಧ್ಯದಲ್ಲಿ ಬಸವೇಶ್ವರನ ಸಂದರ್ಶನವನ್ನು ನೀನು ಮಾಡಿಸದೆಹೋದರೆ ಅವರೆಲ್ಲರೂ ಭ್ರಷ್ಟರಾಗುವರಲ್ಲವೆ ? ಶಿವಭಕ್ತರ ನಾಲಗೆಗಳಲ್ಲಿ ಬಸವ ಎಂಬಕ್ಷರಗಳನ್ನು ನೀನು ಅಂಕಿತಗೊಳಿಸದಿದ್ದರೆ ಆ ನಾಲಗೆಗಳು ಬಹು ಪಾಪಸಮಾಕುಲಿತಗಳಾಗಿ ಹೋಗುವುವಲ್ಲವೆ ? ಭಕ್ತರ ಮನಸ್ಸುಗಳಲ್ಲಿ ಬಸವಾಕ್ಷರಗಳನ್ನು ನೀನು ನಾಟಿಸದಿದ್ದರೆ, ಅವುಗಳು ವಿಷಯಭ್ರಾಂತಿವಿಮೋಹಿತಗಳಾಗಿ ಹಾಳಾಗಿಹೋಗುವುವಿಲ್ಲವೆ ? ಆದುಕಾರಣ ಎಲೈ ಪರಶಿವನೆ ! ಸದ್ಭಕ್ತರ ಸಕಲೇಂದ್ರಿಯಗಳಲ್ಲೂ ಬಸವೇಶದಿವ್ಯರೂಪವೇ ಅಚ್ಚೊತ್ತಿರುವಂತೆ ಮಾಡು" ಎಂದು ಪ್ರಾರ್ಥಿಸಿದರು. ಆಗ ಪಂಡಿತಾರಾಧ್ಯರ ಇಷ್ಟಲಿಂಗದಲ್ಲೇ ಬಸವೇಶ್ವರನ ರೂಪಸಂದರ್ಶನವಾಗಲು, ಅವರು ಧನ್ಯತೆಯನ್ನಾಂತು ಸ್ತುತಿಸಿದರೆಂದು ಅವರ ಚರಿತ್ರದಲ್ಲೇ ಹೇಳಲ್ಪಟ್ಟಿದೆ.

ಬಸವೇಶನ ವಿಷಯದಲ್ಲಿ ಮತಾಚಾರ್ಯರೂ ಕೂಡ ಎಷ್ಟು ಪೂಜ್ಯಬುದ್ಧಿಯುಳ್ಳವರಾಗಿದ್ದರೆಂಬುದನ್ನು ತೋರಿಸುವುದಕ್ಕಾಗಿ ಈ ಭಾಗವನ್ನು ಇಷ್ಟು ವಿವರಿಸಿ ಬರೆಯಬೇಕಾಯಿತು ನಿಜ ವೀರಶೈವಮಾರ್ಗಸಂಪನ್ನರೆಲ್ಲರೂ ಬಸವೇಶನನ್ನು ಕುರಿತು ಎಂಥ ಅನುಸಂಧಾನಮಾರ್ಗದಲ್ಲಿ ನಡೆದುಕೊಳ್ಳುತ್ತಿರುವರೆಂಬುದು ಬಾಹ್ಯರಿಗೆ ಗೊತ್ತಾಗುವುದಿಲ್ಲ. ಬಸವೇಶನು ವೀರಶೈವ ಮತವನ್ನು ಕೆಡಿಸಿದನೆಂಬುದು ಪತಿತರಾದವರ ಮಾತೇ ಹೊರತು ಸಂಪ್ರದಾಯಸ್ಥರ ಮಾತಲ್ಲ. ತಾಯ್ತಂದೆಗಳ ಗುರುಹಿರಿಯರ ಮನೆದೈವರ ಗುರುತೂ ಅಭಿಮಾನವೂ ಇಲ್ಲದವರಿಗೆ ಆ ತಾಯ್ತಂದೆ ಮೊದಲಾದವರ ದೂಷಣವು ನೋವನ್ನು ಉಂಟುಮಾಡದಿರುವಂತೆಯೇ ಬಸವೇಶ್ವರನ ನಿಂದೆಯು ನೋವನ್ನುಂಟುಮಾಡದಿರುವುದು ಭವಿಗಳಿಗೇ ಹೊರತು ನಿಜಭಕ್ತರಾದ ವೀರಶೈವರಿಗೆಂದಿಗೂ ಅಲ್ಲ.

ಯಾವೊಬ್ಬ ಮತಾಚಾರ್ಯರೂ ಮಾಡದಿದ್ದಷ್ಟು ಕಾರ್ಯವನ್ನು ಮತಕ್ಕಾಗಿ ಬಸವೇಶನು ಮಾಡಿದನು. ಭವಿಸಂಬಂಧವಿಲ್ಲದಂತೆ ಪ್ರತಿಕಾರ್ಯವನ್ನು ಭಕ್ತರಿಂದಲೇ ಮಾಡಿಸಿಕೊಳ್ಳಬೇಕೆಂಬ ಶಿವಾಗಮೋಕ್ತವಿಧಿಯಂತೆ ಕಾರ್ಯನಿರ್ವಹವಾಗಲು ಮತಸ್ಥರಿಗೆ ಅನುಕೂಲವಾದದ್ದು ಬಸವೇಶನ ಮತ್ತು ಅವನ ಕಾಲದ ಶರಣರ ಶಕ್ತಿಯಿಂದಾಗಿದೆ. ಪರಮತದವರನ್ನು ಸ್ವಮತಕ್ಕೆ ಸೇರಿಸಿಕೊಳ್ಳುವುದು ಶಿವಾಗಮೋಕ್ತಿಗಳಿಗೂ ಸಿದ್ಧಾಂತಶಾಸ್ತ್ರಗಳಿಗೂ ಸಂಮತವಾದದ್ದೇ. ಮುಮುಕ್ಷುಗಳಿಗೆ ಶರಣ್ಯವಾಗಿಯೇ ಮತವಿರತಕ್ಕದ್ದು. ಭವದಲ್ಲಿ ಬಿದ್ದು ತೊಳಲುತ್ತಿದ್ದವರಿಗೆ ವೀರಶೈವಮತಾಶ್ರಯದ ಮೂಲಕ ಸುಲಭ ಕರ್ಮಾಚರಣೆಯಿಂದ ಶೀಘ್ರವಾಗಿ ಸುಗತಿಯನ್ನುಂಟುಮಾಡುವ ಮಹೋಪಕೃತಿಯನ್ನು ಬಸವೇಶ ಮೊದಲಾದವರು ಮಾಡಿದ್ದರೆ ಅದು ಶಿವಾಜ್ಞೆಗೆ ಅನುಸಾರವಾದದ್ದೂ ಮತಕ್ಕೆ ಹಿತಕರವಾದದ್ದೂ ಆಗಿರುತ್ತದೆ. ರಾಮಾನುಜರೇ ಮೊದಲಾದ ಪರಮತಾಚಾರ್ಯರನೇಕರು ಇಂಥ ಕೆಲಸವನ್ನು ಮಾಡಿಯೇ ಇದ್ದಾರೆ. ಅವರ ಅಂಥ ಕಾರ್ಯದಿಂದ ಅವರ ಮತವು ಕೆಟ್ಟಿತೆಂದು ಯಾರೂ ತಿಳಿಯುವುದಿಲ್ಲ. ಬಸವೇಶನು ಮಾಡಿದ ಕಾರ್ಯವು ಮತೋದ್ಧಾರಕವಾದುದರಿಂದಲೇ ಮತಾಚಾರ್ಯರಾದ ಮಲ್ಲಿಕಾರ್ಜುನಪಂಡಿತರಂಥವರು ಕೂಡ ಬಸವೇಶನನ್ನು "ದೇಶಿಕದೇಶಿಕನೆಂದೂ" "ಧರ್ಮಪ್ರತಿಷ್ಠಾಪಕ" ನೆಂದೂ ಹೇಳಿರುತ್ತಾರೆ. ಅವನು ಮತವನ್ನು ಕೆಡಿಸಿದನೆಂಬ ಪಾಪಿಷ್ಠವಚನವು ತಿಳಿಗೇಡಿತನದ ಅಥವಾ ದುಷ್ಕರ್ಮ ಪರಿಪಾಕದ ಮಾತೇ ಹೊರತು ಸಾಧುವಚನವಲ್ಲ. ಆದಕಾರಣ ಶುಭೋದಯದಲ್ಲಿ ಬಂದ ಲೇಖನವು ಬಸವೇಶದೂಷಣದಿಂದ ದೂಷ್ಯವಾಗಿರುವುದು. ಆ ಲೇಖನವು ಬಸವೇಶನನ್ನು ದ್ವಿತೀಯ ಶಂಭುವೆಂದು ಭಾವಿಸಿ ಭಜಿಸುವ ವೀರಶೈವ ಜನವರ್ಗಕ್ಕೆಲ್ಲಾ ಅತ್ಯಂತ ಮನಃಪೀಡಜನಕವೂ ಅಪಮಾನಕರವೂ ಆಗಿರುವುದರಿಂದಲೇ ಕಳೆದ ೯ ನೆ ವೀರಶೈವ ಮಹಾಸಭೆಯಲ್ಲಿ ಅದರ ನಿಷೇಧ ವಿಷಯದಲ್ಲೂ ಅದರ ಮುಂದಣ ಕಾರ್ಯಭಾಗದ ವಿಷಯದಲ್ಲೂ ಒಂದು ರೆಜಲ್ಯೂಷನನ್ನು ಮಾಡಿರುವುದು ಪ್ರಶಸ್ತವಾಗಿರುತ್ತದೆ. ಅದು ಸಕಲ ವೀರಶೈವರ ಮನೋಭಾವವನ್ನೇ ಪ್ರದರ್ಶನ ಮಾಡಿರುತ್ತದೆ. ರಾಜಹಂಸ ನಾಮಾಂಕಿತ ಲೇಖಕರು ಶುಭೋದಯ ಲೇಖನದಲ್ಲಿ ವೀರಶೈವೋತ್ಕರ್ಷಾಪಾದಕತ್ವವನ್ನು ಮಾಡಿ, ತನ್ಮೂಲಕ ಶುಭೋದಯದ ಮೇಲಣ ಆಗ್ರಹವು ವೀರಶೈವರಿಗೆ ಇಳಿಯುವಂತೆ ಮಾಡಿ, ಪಾವಟೆ ಸಿದ್ಧರಾಮಪ್ಪನವರಿಗೂ ಮತಸ್ಥರಿಗೂ ಮಧ್ಯದಲ್ಲಿ ವೈಷಮ್ಯೋತ್ಪಾದನವನ್ನು ಮಾಡಿ, ಇವೆಲ್ಲ ಸಂಧಾನಗಳಿಂದ ಶುಭೋದಯ ಕಾವರನ್ನು ಬಚಾವಣೆ ಮಾಡಿಸುವ ಕುತಂತ್ರದಲ್ಲಿ ತೊಡಗಿ ಈ ಲೇಖನವನ್ನು ಬರೆದಿರುತ್ತಾರಾದಕಾರಣ, ಇವರು ಶುಭೋದಯ ಲೇಖಕರ ಅಣ್ಣತಮ್ಮಂದಿರಲ್ಲಿ ಯಾರೋ ಆಗಿರಬೇಕೆಂದು ತೋರುತ್ತಾರಾದ ಕಾರಣ ಈ ಪಯೋಮುಖವಿಷಕಲಂಭವನ್ನು ಕುರಿತು ವೀರಶೈವರೆಲ್ಲರೂ ಎಚ್ಚರವಾಗಿದ್ದಾರೇ ಹೊರತು ಮೋಸಹೋಗುವುದಿಲ್ಲ. ಈ ಲೇಖನವು ಶುಭೋದಯದಲ್ಲಿ ಬಂದಿದ್ದ ಲೇಖನಕ್ಕಿಂತಲೂ ನೀಚವಾಗಿರುತ್ತ ಮತ್ತಷ್ಟು ವೀರಶೈವರನ್ನು ಛೇದಗೊಳಿಸತಕ್ಕದ್ದಾಗಿದೆ. ಈ ಲೇಖಕರು ಕಿಡಿಗೇಡಿತನದಿಂದ ವೀರಶೈವ ಮತವಿಷಯಕ್ಕೆ ನುಗ್ಗಿರುವರಾದ ಕಾರಣ ಹೊಸಮನೆಗೆ ನುಗ್ಗುವ ಕಾಗೆಯಂತೆ ಇವರ ಪ್ರವೇಶವನ್ನು ವೀರಶೈವರು ಭಾವಿಸದೆ ಇರಲಾರರು. ಅದುಕಾರಣ ಇವರು ತಮ್ಮನ್ನು ರಾಜಹಂಸನೆಂದು ಕರೆದುಕೊಂಡಿದ್ದರೂ, ವೀರಶೈವರು ಇವರಿಗೆ ಕಾಕರಾಜನೆಂದು ಹೆಸರಿಡುವುದೇ ತಕ್ಕದ್ದೆಂದು ತಿಳಿಯುವರು.

ಒಬ್ಬ ವೀರಶೈವ.

ಮೈಸೂರು ದೇಶದ ಫುಡ್‌ಕಂಟ್ರೋಲರ್ ಮತ್ತು ಸಿವಿಲ್ ಸಪ್ಲೈಸ್ ಡೈರೆಕ್ಟರವರ ಆಫೀಸು, ಬೆಂಗಳೂರು 17-1-1920.

ನೋಟೀಸ್.

ಬರ್ಮಾ ಅಕ್ಕಿಯನ್ನು ಆಮದು ಮಾಡಲು ಲೈಸೆನ್ಸ್ ಕೊಡಲ್ಪಟ್ಟ ಅಥವಾ ಕೊಡಬಹುದಾದ ವರ್ತಕರುಗಳು ಮೇಲ್ಕಂಡ ಅಕ್ಕಿಯನ್ನು ರೈಸ್ ಕಮಿಷನರವರ ಮೂಲಕವೇ ಖರೀದಿ ಮಾಡಿ ಆಮದು ಮಾಡಲು ಏರ್ಪಾಡುಮಾಡಬೇಕೆ ಹೊರತು ಸ್ವತಂತ್ರಿಸಿ ತಾವೇ ವ್ಯಾಪಾರ ಮಾಡಿ ಆಮದು ಮಾಡಕೂಡದು.

1920 ನೇ ಇಸವಿ ಜನವರಿ ತಿಂಗಳಿಗೆ ಮೈಸೂರು ಸಂಸ್ಥಾನಕ್ಕೆ 464 ಟನ್ ಅಕ್ಕಿಯನ್ನು ಮದರಾಸ್ ಆಧಿಪತ್ಯಕ್ಕೆ ಸೇರಿದ ಗೋದಾವರಿ ಕೃಷ್ಣಾ ಅಥವಾ ತಂಜಾವೂರು ಡಿಸ್ಟ್ರಿಕ್ಟುಗಳಿಂದ ಆಮದು ಮಾಡಬಹುದು. ಮೇಲ್ಕಂಡ ಸ್ಥಳಗಳಿಂದ ಅಕ್ಕಿಯನ್ನು ಆಮದು ಮಾಡಲು ಇಷ್ಟವುಳ್ಳ ಪರಸ್ಪರ ಸಹಾಯಸಂಘಗಳೂ ಮತ್ತು ರಿಜಿಸ್ಟರ್ ಆದ ವರ್ತಕರುಗಳೂ ಈ ಕೆಳಗೆ ರುಜುಮಾಡಿರುವವರಿಗೆ ಪ್ರಯಾರ್ಟಿ ಸರ್ಟಿಫಿಕೇಟುಗಳಿಗೆ ಅರ್ಜಿಯನ್ನು ಹಾಕಬಹುದು.

ಕೆ. ಮಾಥರ್,
ಫುಡ್‌ಕಂಟ್ರೋಲರ್ ಮತ್ತು ಸಿವಿಲ್ ಸಪ್ಲೈಸ್ ಡೈರೆಕ್ಟರವರು.

(ಸರ್ಕಾರದ ಅಪ್ಪಣೆ).
ಹುಕುಂ ನಂಬರು ಜ. 15611-24-ಪಿ. ಪಿ. 6-19-194.
ತಾರೀಖು 9ನೆಯ ಜನವರಿ 1920

ಹಾಲಿ ಇರುವ ಕಾಲಸ್ಥಿತಿಯನ್ನೂ, ಈಗ ಕಟಾವಾಗುತ್ತಿರುವ ಫಸಲುಗಳ ತೃಪ್ತಿಕರವಾದ ಉತ್ಪತ್ತಿಯನ್ನೂ ಪರಿಭಾವಿಸಿ ಸರ್ಕಾರದವರು, ದಾಸ್ತಾನುಗಳು ಧಾರಾಳವಾಗಿ ಮಾರಾಟಕ್ಕೆ ಬಂದು ಧಾರಣೆ ಇಳಿಯುವುದೆಂದು ನಿರೀಕ್ಷಿಸಿ ಆಹಾರಧಾನ್ಯಗಳನ್ನು ಸರ್ಕಾರೀ ತರಫ್ ಮಾರುವುದು ಇನ್ನುಮುಂದೆ ಅನಾವಶ್ಯಕವೆಂದು ತಿಳಿದರು. ಅದಕ್ಕನುಸಾರವಾಗಿ ಅವರು 1920 ನೆಯ ಜನವರಿ 1 ನೆಯ ತಾರೀಖಿನ ಲಾಗಾಯತು ಬೆಂಗಳೂರು ವಿನಾ ಇತರ ಸ್ಥಳಗಳ ಸರ್ಕಾರಿ ಡಿಪೋಗಳನ್ನು ಮುಚ್ಚಬೇಕೆಂದು ಹುಕುಂ ಕೊಟ್ಟರು.

2. ಆದರೆ ರಫ್ತುಮಾಡುವುದರ ಮೇಲೆ ಇಟ್ಟಿರುವ ನಿರ್ಬಂಧವು ತಪ್ಪಿದ ಕೂಡಲೇ ರಫ್ತುಮಾಡುವ ಉದ್ದೇಶದಿಂದ ಹೊಸದಾಗಿ ಕಟಾವಾದ ಫಸಲುಗಳನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನಗಳು ನಡೆಯುತ್ತಲಿವೆಯೆಂದೂ ಎಲ್ಲಾ ಸ್ಥಳಗಳಲ್ಲಿಯೂ ಧಾರಣೆ ಹೆಚ್ಚುತ್ತಿದೆಯೆಂದೂ ಪೇಟೆಗೆ ಸಾಕಾದಷ್ಟು ಸರಬರಾಯಿ ಇಲ್ಲವೆಂದೂ ಸರ್ಕಾರದವರಿಗೆ ಬಂದಿರುವ ರಿಪೋರ್ಟುಗಳಿಂದ ತಿಳಿದುಬರುತ್ತದೆ.

3. ಈ ವಿಷಯದಲ್ಲಿ ಸರ್ಕಾರದವರು ಮುಂದೆ ಅನುಸರಿಸಬೇಕೆಂದಿರುವ ಕ್ರಮವನ್ನು ತಿಳಿಸುವ ಒಂದು ಪ್ರಸಿದ್ಧಪತ್ರಿಕೆಯನ್ನು ಸರ್ಕಾರದವರು ಪ್ರತ್ಯೇಕವಾಗಿ ಸಾದರ್ಪಡಿರುವರಲ್ಲದೆ ಅದಕ್ಕನುಸಾರವಾಗಿ ಈಗ ಈ ಕೆಳಗಿನ ತಿಳುವಳಿಕೆಗಳನ್ನು ಸಾದರ್ಪಡಿರುತ್ತಾರೆ:—

(1) ಫುಡ್‌ಕಂಟ್ರೋಲರ ಹುದ್ದೆಯೂ, ಅವರ ಕಚೇರಿಯೂ ಮತ್ತು ಎಲ್ಲಾ ಡಿಸ್ಟ್ರಿಕ್ಟು ಮತ್ತು ತಾಲ್ಲೂಕುಗಳಲ್ಲಿನ ಫುಡ್‌ಕಂಟ್ರೋಲ್ ಸಿಬ್ಬಂದಿಯೂ ಸಹ ಬೇರೆ ಹುಕುಂ ಕೊಡುವ ವರೆಗೆ ಜಾರಿಯಲ್ಲಿರತಕ್ಕದ್ದು. ಆದರೆ ಮುಂದಿನ ಏರ್ಪಾಡುಗಳನ್ನು ಜಾರಿಗೆ ತರುವುದರಲ್ಲಿ ತಮ್ಮ ಕೈಕೆಳಗೆ ಕೆಲಸಮಾಡುತ್ತಿರುವ ಸಿಬ್ಬಂದಿಯ ಯಾವ ಭಾಗವಾದರೂ ಅನವಶ್ಯಕವಾಗಿ ಕಂಡುಬಂದರೆ ಅದನ್ನು ತಪ್ಪಿಸಲು ಡೆಪ್ಯುಟಿಕಮಿಷನರುಗಳೂ, ಫುಡ್‌ಕಂಟ್ರೋಲರೂ, ರೆವಿನ್ಯೂ ಕಮಿಷನರೂ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ತಮಗೆ ಯುಕ್ತತೋರಿದಂತೆ ವಜಾಮಾಡಬಹುದು. ಆದರೆ ಈ ಕೆಳಗೆ (3) ನೆಯ ಪ್ಯಾರಾದಲ್ಲಿ ಸೂಚಿಸುವಷ್ಟರಮಟ್ಟಿಗೆ ವಿನಾ ಡಿಪೋ ಸಿಬ್ಬಂದಿಗಳನ್ನು ವಜಾಮಾಡತಕ್ಕದ್ದು.

(2) ಫುಡ್‌ಕಂಟ್ರೋಲರು ಬರ್ಮಾ ಮತ್ತು ಬಂಗಾಳ ಪ್ರಾಂತ್ಯಗಳಿಂದ ಜನವರಿ ತಿಂಗಳಿನಲ್ಲಿ ಬರಬೇಕಾಗಿರುವ ಅಕ್ಕಿಯನ್ನೆಲ್ಲವನ್ನೂ ಸಾಧ್ಯವಾದಷ್ಟು ಶೀಘ್ರವಾಗಿ ತರಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡತಕ್ಕದ್ದು. ಹೀಗೆ ತರಿಸಿಕೊಳ್ಳುವುದನ್ನು ಸಾಧ್ಯವಾದಷ್ಟುಮಟ್ಟಿಗೆ ಪರಸ್ಪರ ಸಹಾಯಸಂಘಗಳ ಮೂಲಕವೂ ಹತೋಟಿಗೆ ಒಳಪಟ್ಟು ಮಾರಲು ಒಪ್ಪುವ ವರ್ತಕರ ಮೂಲಕವೂ ಏರ್ಪಾಡು ಮಾಡತಕ್ಕದ್ದು.

(3) ಹೊರಗಿನಿಂದ ತರಿಸಿದ ಆಹಾರ ಧಾನ್ಯಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಕೋಆಪರೇಟಿವ್ ಸೊಸೈಟಿಗಳ ಮೂಲಕ ಮಾರಿಸತಕ್ಕದ್ದು. ಇದು ಸಾಧ್ಯವಿಲ್ಲದಿದ್ದ ಪಕ್ಷ ಸರ್ಕಾರೀ ಅಥವಾ ಮ್ಯುನಿಸಿಪಲ್ ಡಿಪೋಗಳಲ್ಲಿ ಮಾರಿಸತಕ್ಕದ್ದು. ಈ ಕೆಲಸಕ್ಕಾಗಿ ಡೆಪ್ಯುಟಿ ಕಮಿಷನರು ಅಥವಾ ಫುಡ್ ಕಂಟ್ರೋಲರು ಅವಶ್ಯವೆಂದು ಭಾವಿಸುವ ಸ್ಥಳಗಳಲ್ಲೆಲ್ಲಾ ಡಿಪೋಗಳನ್ನು ಪುನಃ ಇಡಲಾಗುವುದು. ಮತ್ತು ಅವನ್ನು ಇಟ್ಟ ಮೇಲೆ ಹಿಂದೆ ಅವಕ್ಕೆ ಮಂಜೂರು ಮಾಡಿರುವ ಸಿಬ್ಬಂದಿಯನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬಹುದು. ಹೊರಗಿನಿಂದ ತರಿಸಿಕೊಳ್ಳುವ ವರ್ತಕರು ತಮ್ಮ ಸ್ವಂತ ಲೆಕ್ಕದಲ್ಲಿ ಚಿಲ್ಲರೆಯಾಗಿ ವಿಕರಿಮಾಡುವುದನ್ನು 1919 ರಲ್ಲಿದ್ದಂತೆ ಖಂಡಿತವಾದ ಹತೋಟಿಯಲ್ಲಿಡತಕ್ಕದ್ದು.

(4) ಮೇಲೆ ಓದಿದ 1920 ನೆಯ ಜನವರಿ 6 ನೆಯ ತಾರೀಖಿನ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಿರುವ ಮಿ|| ಮ್ಯಾಥರ್‌ರವರ ವರ್ಗವನ್ನು ರದ್ದು ಮಾಡಲಾಗಿದೆ.

ಸಿ. ಎಸ್. ಬಾಲಸುಂದರಂ ಅಯ್ಯರ್,
ಮೈಸೂರು ಸರ್ಕಾರದ ಚೀಫ್‌ಸೆಕ್ರೆಟರಿ.

ಪ್ರಸಿದ್ಧ ಪತ್ರಿಕೆ.

ಸಂಸ್ಥಾನದ ನಾನಾಭಾಗಗಳಿಂದ ಬಂದಿರುವ ರಿಪೋರ್ಟುಗಳಿಂದ, ಆಹಾರಧಾನ್ಯಗಳ ರಫ್ತುಗಳ ಮೇಲಿರುವ ನಿರ್ಬಂಧಗಳನ್ನು ಸರ್ಕಾರದವರು ಶೀಘ್ರದಲ್ಲಿಯೇ ತೆಗೆದುಬಿಡುವವರಾಗಿರುವರೆಂತಲೂ, ವರ್ತಕರು ರಫ್ತುಮಾಡುವವಕ್ಕೆ ಅವಕಾಶ ದೊರೆಯುವುದೆಂಬ ಅಥವಾ ಇತರ ವಿಧದಲ್ಲಿ ವಿಶೇಷ ಲಾಭವನ್ನು ಪಡೆಯಬಹುದೆಂಬ ನಿರೀಕ್ಷಣೆಯಿಂದ ಹೊಸ ಫಸಲುಗಳನ್ನು ವಿಶೇಷ ದುಬಾರಿ ಬೆಲೆಗೆ ಕೊಳ್ಳತೊಡಗಿರುವರೆಂತಲೂ, ಜನಗಳಲ್ಲಿ ಸಾ

ಮೂಸ್ತವಾದಭಾವನೆ ಇರುವುದಾಗಿ ತಿಳಿದುಬಂದಿರುತ್ತೆ. ಸ್ಥಿತಿಗತಿಗಳು ಪೂರ್ವದಂತೆ ಉತ್ತಮವಾಗುವವರೆಗೂ, ಭತ್ತ, ಅಕ್ಕಿ, ರಾಗಿ ಮತ್ತು ಜೋಳ ಈ ಪದಾರ್ಥಗಳನ್ನು ಹೊರಗೆ ರಫ್ತುಮಾಡುವ ವಿಷಯದಲ್ಲಿ ಇಟ್ಟಿರುವ ನಿರ್ಬಂಧಗಳನ್ನು ಪ್ರಕೃತದಲ್ಲಿ ವಜಾಮಾಡುವ ಉದ್ದೇಶವು ಸರ್ಕಾರದವರಿಗೆ ಇರುವುದಿಲ್ಲವೆಂದು ಸಮಸ್ತ ಜನಗಳಿಗೂ ಸರ್ಕಾರದವರು ಈ ಮೂಲಕ ಚೆನ್ನಾಗಿ ತಿಳಿಯಪಡಿಸಲಪೇಕ್ಷಿಸುತ್ತಾರೆ. ಹುಂಡೀಮೇಲಿಟ್ಟಿದ್ದ ಹತೋಟಿಯನ್ನು ಪುನಃ ತತ್ಕ್ಷಣವೇ ಜಾರಿಗೆ ತರಲಾಗುವುದು. ರೈಲ್‌ಮೂಲಕ ರಫ್ತಾಗುವವನ್ನು ಪ್ರೈಯಾರಿಟಿ ಸರ್ಟಿಫಿಕೇಟುಮೂಲಕ ಹತೋಟಿಯಲ್ಲಿಟ್ಟಿರುವುದು ಮಾತ್ರವೇಯಲ್ಲದೆ, ಅವಶ್ಯಕವಾದ ಸ್ಥಳಗಳಲ್ಲಿ ಸರಹದ್ದು ಉಕ್ಕಡಗಳನ್ನೂ ಸರಹದ್ದು ಪೊಲೀಸು ಉಸ್ತುವಾರಿ ಸಿಬ್ಬಂದಿಯನ್ನೂ ಮುಂದೆಯೂ ನಡಿಸಿಕೊಂಡು ಬರುವರು.

ಪ್ರಕೃತ ಕಾಲಸ್ಥಿತಿಯನ್ನೂ ಈಗ ಕಟಾವಾಗುತ್ತಿರುವ ಬೆಳೆಗಳ ತೃಪ್ತಿಕರವಾದ ಉತ್ಪತ್ತಿಯನ್ನೂ ನೋಡುವಲ್ಲಿ ಪೇಟೆಗೆ ಧಾರಾಳವಾಗಿ ಜನಸಿಗಳು ಬಂದು ಧಾರಣೆ ಇಳಿಯುವುದೆಂದು ಸರ್ಕಾರದವರು ನಂಬಿ, ಸರ್ಕಾರದ ಮಾರ್ಫತ್ತು ಆಹಾರ ಧಾನ್ಯಗಳನ್ನು ಬಿಕರಿ ಮಾಡುವುದನ್ನು ಮುಂದೆಯೂ ನಡಿಸಿಕೊಂಡು ಬರುವುದು ಅನಾವಶ್ಯವೆಂದು ಭಾವಿಸಿ ಸರ್ಕಾರೀ ಡಿಪೋಗಳನ್ನು ಸನ್ 1920 ನೆ ಜನವರಿ 1ನೆ ತಾರೀಖಿನ ಲಾಗಾಯತು ಮುಚ್ಚತಕ್ಕದ್ದೆಂದು ಹುಕುಂ ಮಾಡಿದರು. ಪೇಟೆಗೆ ದಿನಸಿಗಳನ್ನು ತರದೆ ಜನರು ದಾಸ್ತಾನುಗಳನ್ನು ನಿಲ್ಲಿಸಿಕೊಂಡಿರುವರೆಂತಲೂ, ಬೇಕೆಂತ ಧಾರಣೆಗಳನ್ನು ಹೆಚ್ಚಿಸುತ್ತಿರುವರೆಂತಲೂ ಈಗ ರಿಪೋರ್ಟಾಗಿದೆ. ಇಂಡಿಯಾ ಸಂರಕ್ಷಣೆಯ ರೆಗ್ಯುಲೇಷನ್ನಿನಿಂದ ತಮಗೆ ಕೊಡೋಣಾದ ಅಧಿಕಾರಗಳ ಮೇರೆಗೆ ಬಜಾರುಗಳಲ್ಲಿ ಬೇಕಾದಷ್ಟು ಆಹಾರ ಧಾನ್ಯಗಳ ಸರಬರಾಯಿಯನ್ನು ಅವಶ್ಯಕವಾದರೆ ಬಲಾತ್ಕಾರದಿಂದ ಪಡೆದು ಇಟ್ಟುಕೊಳ್ಳುವುದಕ್ಕೂ, ಅತಿ ಲಾಭದ ವ್ಯಾಪಾರವನ್ನು ತಪ್ಪಿಸುವ ಬಗ್ಗೂ ಅವಶ್ಯಕವಾದ ಎಲ್ಲಾ ಏರ್ಪಾಡುಗಳನ್ನೂ ಸರ್ಕಾರದವರು ಮಾಡುವರೆಂಬ ಸಂಗತಿಯನ್ನು ತಿಳಿಯಪಡಿಸಲು ಅವರು ಅಪೇಕ್ಷಿಸುತ್ತಾರೆ. ಸಾಧ್ಯವಾದಮಟ್ಟಿಗೆ ಪರಸ್ಪರ ಸಹಾಯ ಸಂಘಗಳ ಮೂಲಕ ಆಹಾರ ಧಾನ್ಯಗಳ ಮಾರಾಟಕ್ಕೆ ಏರ್ಪಾಟು ಮಾಡಲಾಗುವುದು. ಮತ್ತು ಅವಶ್ಯಕವಾದ ಸ್ಥಳಗಳಲ್ಲಿ ಡಿಪೋಗಳನ್ನೂ ಪೂರ್ವದಂತೆಯೇ ಇಡಲಾಗುವುದು.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರುಷ ಇಲ್ಲಿ ಬೆಳೆ (ಹರದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

2 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ನೊಡವೆ, ಬಿಜ್ಜ, ಕುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0-8-0.

48 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುತ್ತದೆ. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು ಕ್ರಯ 1 ಕ್ಕೆ 0-12-0 ಅಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ



ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4-8-0.

ವಿಳಾಸ:—ವಿ. ಎ. ಎಸ್. ಪಾಣಿ ಕಂಪನಿ,
48 ಸಾಹುಕಾರಪೇಟೆ, ಮದರಾಸು.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 27

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳೀಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨—೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಒಮ್ಮೆ ತರಿಸಿ ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
18 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,
48 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 15

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ಯತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವೆ ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಮ್. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜನವರಿ ತಾ|| ೨೫ ರಿಂದ ೧೯೨೦ ನೆಯ ಜನವರಿ ತಾ|| ೩೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾಘಶುದ್ಧ ಚೌತಿಯಿಂದ ಮಾಘಶುದ್ಧ ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಮಾಸ
25	[1] ಭಾನು	ಚೌತಿ	12-2	ಪೂಭಾ	29-37	12
26	ಸೋಮ	ಪಂಚ	9-43	ಉಭಾ	28-47	13
27	[2] ಮಂಗಳ	ಷಷ್ಠಿ	6-15	ರೇವ	26-24	14
28	[3] ಬುಧ	ಸ-ಅ	1-57 55-27	ಅಶ್ವಿ	23-31	15
29	[4] ಗುರು	ನವ	51-48	ಭರ	20-1	16
30	[5] ಶುಕ್ರ	ದಶ	45-48	ಕೃತ್ತಿ	16-5	17
31	[6] ಶನಿ	ಏಕಾ	39-47	ರೋಹಿ	11-53	18

(1) ಶರಲಪಂಚಮಿ, ಶ್ರೀರಂಗದಲ್ಲಿ ಭೂಪತಿ ಉತ್ಸವ. (2) ಕುಮಾರಷಷ್ಠಿ. (3) ರಥಸಪ್ತಮಿ, ಸೂರ್ಯಚಂದ್ರವ್ರತಂ, ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿರಥಃ, ಭೀಷ್ಮಾಷ್ಟಮಿ. (4) ಮಧ್ವನವಮಿ. (5) ಮುಡುಕುತೊರೆಯಲ್ಲಿ ಮಲ್ಲಿಕಾರ್ಜುನಸ್ವಾಮಿ ರಥಃ. (6) ಸರ್ವೇಷಾಂ ಭೀಷ್ಮೈಕಾದಶಿ, ತಿಲಪದ್ಮವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಹಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಸತ್ಸುಜನಪ್ರೀತಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸಿತದೋಲ ನಾಕಲಿತ ಸಾದ್ಗುಣ್ಯಲೀಲಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಫೆಬ್ರುವರಿ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೫

MYSORE GOVERNMENTVE ADRTISEMENTS.

26

Government Botanic Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE ECONOMIC JOURNAL.

A Monthly Periodical devoted to the Discussion of all Economic Topics of Interest.

Special Features.

Original articles on Economic subjects by writers of note; summary of articles of interest from Indian and Foreign Economic periodicals; selections from important speches and papers on Economic subjects; notes of the month on current Economic matters; notes on various Economic activities in and outside the State, and topical portraits and illustrations.

Annual Subscription.

Mysore State	Rs. 3
Outside Mysore State ...	Rs. 4
Great Britain	Sh. 8
America	$ 2
Single copy	As. 8

The Journal is an excellent medium for advertising all matters of Economic utility. The following is the schedule of rates:—

For full page, Rs. 10 per insertion.
" half " " 6 "
" quarter " 3½ "

One anna per line for special short advertisements not exceeding four lines each.

Contract rates on application.

For sample copy send eight annas stamp.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪದ್ಯದ ಗ್ರಂಥ.

ಪಂಚಕ್ಷೋಣೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶತ್ರುಪ್ರಕಾಶಿಕಾ ೬ ಆಣೆ; ಸಟೀಕ ಶಶಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 14

ನಾವು ಎ. ಅಲ್ ಬ್ರುಕ್ಸ್ಯುಯರ್ ಕ್ಕೋ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

12 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಕೂಡಲೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕ್ಷಯಕ್ಷ, ಹೊಟ್ಟೆ ದಪ್ಪನಾಗಿರುವುದು, ಹಸಿವಿಲ್ಲದಿರುವುದು ಎಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಔನ್ಸು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
6 ವೈದ್ಯಶಾಲಾ, ಮೈಸೂರು

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 7

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ವಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦— ೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦— ೫—೦
ಹರಿದಾಸಿ	೦— ೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಫೆಬ್ರುವರಿ ತಾ|| ೧ ನೆಯ ಭಾನುವಾರ.

ಅತಿವಾದಿಗಳು.

"ರಾಜಕೀಯ ಸಂಬಂಧವಾಗಿ ಮಾಡುತ್ತಿರುವ ಅತಿವಾದಗಳನ್ನು ತೊಲಗಿಸದೆ ಹೋದರೆ ರಷ್ಯಾದೇಶದಂತೆ ಭರತಖಂಡದಲ್ಲಿಯೂ ಬೋಲ್ಶೆವಿಕ್ ತತ್ತ್ವಪರಿಣಾಮವುಂಟಾಗಬಹುದು. ಭಾರತೀಯರು ತಮ್ಮ ಪ್ರಾಚೀನ ಸಂಪ್ರದಾಯಗಳನ್ನು ಅನುಸರಿಸಬೇಕೇ ಹೊರತು ಕೇವಲ ಪಾಶ್ಚಾತ್ಯವಿಧಾನಗಳನ್ನು ಅನುಸರಿಸಕೂಡದು. ಈಗ ಮಾಡಿಸಲ್ಪಡುತ್ತಿರುವ ವಿದ್ಯಾಭ್ಯಾಸ ವಿಧಾನವು ನಮ್ಮ ದೇಶಕ್ಕೆ ಅನುಕೂಲವಾದುದಲ್ಲ."

ಈ ಮೇಲೆ ಕಂಡ ವಾಕ್ಯಗಳನ್ನು ನಭಾ ಸಂಸ್ಥಾನದ ಮಹಾರಾಜರು ಆಡಿರುತ್ತಾರೆ. ಭರತಖಂಡದ ಈಗಣ ಸ್ಥಿತಿಗತಿಯನ್ನು ನೋಡಿ ನಿಟ್ಟುಸಿರನ್ನು ಬಿಟ್ಟೇ ಮಹಾರಾಜರು ಹೀಗೆ ಅಭಿಪ್ರಾಯ ಪಟ್ಟಿರುತ್ತಾರೆ. ದೀರ್ಘದರ್ಶಿಗಳಾದ ದೇಶಾಭಿಮಾನಿಗಳೆಲ್ಲಾ ಇದೇ ತೆರದ ಅಭಿಪ್ರಾಯವನ್ನು ಪಡುವರೆಂಬುದಕ್ಕೆ ಸಂಶಯವಿಲ್ಲ. ಜನ್ಮಾದಿಯಾಗಿ ದೇಶೀಯ ಮಹಾಸಭೆಯನ್ನು ಪೂರ್ವಾಪರಾಲೋಚನೆಗಳಿಂದ ಸಾಗಿಸಿಕೊಂಡು ಬಂದ ವಯೋಜ್ಞಾನವೃದ್ಧ ದೇಶಭಕ್ತರುಗಳ ಸಾರಥ್ಯವು ಈಗ ಅದಕ್ಕೆ ತಪ್ಪಿದೆ. ದೇಶೀಯ ಮಹಾಸಭೆಯು ಈಗ ಅತಿವಾದಿಗಳಾದ ಕೆಲವರ ಮುಷ್ಟಿ ಸಾರಥ್ಯಕ್ಕೆ ಒಳಪಟ್ಟು ತನ್ನ ತೂಕವನ್ನೇ ಅದು ಕೆಡಿಸಿಕೊಳ್ಳುತ್ತಿದೆ. ದೂರಸ್ಥರಾಗಿದ್ದ ಅತಿವಾದಿಗಳನ್ನು ಅನಿಬೆಸೆಂಟಮ್ಮನವರು ಅಸಮಸಾಹಸ ಮಾಡಿ ಸಭೆಗೆ ಸೇರಿಸಿದರು. ಆಗ ಅವರನ್ನು ಅತಿವಾದಿಗಳು ಲೋಕಮಾತೆಯೆಂದು ಕರೆಯುತ್ತ ಅವರ ಶಿಲಾವಿಗ್ರಹಕ್ಕೂ ಭಾವಚಿತ್ರಗಳಿಗೂ ಪೂಜಾಪುನಸ್ಕಾರಗಳನ್ನು ಮಾಡುತ್ತಿದ್ದರು. ಈಗ ಅದೇ ಅಮ್ಮನವರ ದೂರಾಲೋಚನೆಯ ವಿವೇಕ ವಚನಗಳು ಈ ಅತಿವಾದಿಗಳಿಗೆ ಸರಿಬೀಳದೆ ವಾಚಾಮಗೋಚರವಾಗಿ ಅವರನ್ನು ನಿಂದಿಸುತ್ತ ಒದೆಗಳನ್ನು ಕೊಡುತ್ತಿದ್ದಾರೆ. ಮಿ|| ಮೋಂಟಾಗ್ಯರವರು ಪಾರ್ಲಿಮೆಂಟಿನೊಳಗೆ ಆಂಗ್ಲ ಸೌಜನ್ಯಕ್ಕೆ ಸಹಜವಾದ ಸರಳಮನಸ್ಸಿನಿಂದ ಭರತಖಂಡದ ದೇಶೀಯ ಮಹಾಸಭೆಯು ಸೇರುವುದರೊಳಗಾಗಿ ಆ ದೇಶೀಯರ ಮನಸ್ಸು ಶಾಂತವಾಗುವಂತೆ ನಾವು ನೂತನ ರಾಜಕೀಯ ಸಂಸ್ಕರಣವನ್ನು ಶಾಸನವಾಗಿ ಮಾಡಬೇಕೆಂದು ಹೇಳಿದ ಅಭಿಪ್ರಾಯವನ್ನು ನಮ್ಮ ಅತಿವಾದಿಗಳು ಕೇಳಿ, ತಮ್ಮ ಸಭೆಯ ದಿಗಿಲು ಮಂತ್ರಿಮಂಡಲದವರಿಗೆ ಅಪ್ಪೊಂದಿದೆಯೆಂದು ಯೋಚಿಸಿಕೊಂಡು, ತಮ್ಮ ಅತಿವಾದವನ್ನು ಮತ್ತಷ್ಟು ಹೆಚ್ಚಿಸಿದುದಲ್ಲದೆ, ಈಗಣ ಸಂಸ್ಕರಣಗಳಿಗೂ ಅತೃಪ್ತಿಪಟ್ಟು, ವೈಸ್‌ರಾಯರನ್ನು ಪಂಜಾಬು ಪ್ರಕರಣ ಸಂಬಂಧವಾಗಿ ಧಿಕ್ಕರಿಸಿ ಮಾತನಾಡಿ, ಅವರನ್ನು ಆ ಪದವಿಯಿಂದ ತಪ್ಪಿಸಬೇಕೆಂಬ ರೆಜಲ್ಯೂಷನನ್ನು ಕೂಡ ಮಾಡಿಕೊಂಡರು. ವೈಸ್ರಾಯಿ ಲಾರ್ಡ್ ಚೆಲ್ಮ್ಸ್‌ಫರ್ಡರವರೂ ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೊಗ್'ರವರೂ, ಲಾರ್ಡ್ ಸತ್ಯೇಂದ್ರಪ್ರಸನ್ನಸಿಂಹರವರೂ ಮನಮುಟ್ಟಿ ಕೆಲಸಮಾಡದಿದ್ದರೆ ಈಗಣ ನೂತನ ಶಾಸನವು ಏರ್ಪಡುವುದಕ್ಕೇ ಅವಕಾಶವಿರುತ್ತಿರಲಿಲ್ಲ. ಹೀಗಿದ್ದರೂ ವೈಸ್ರಾಯರ ವಿಷಯದಲ್ಲಿ ಹಾಗೆ ರೆಜಲ್ಯೂಷನ್ ಮಾಡಿದ ಅತಿವಾದಿಗಳ ಕೃತಘ್ನತೆಯು ಸಾಧಾರಣವಾದುದೆ? ಲಾರ್ಡ್ ಸಿಂಹರ ವಿಷಯದಲ್ಲಾದರೂ ಇವರು ಗೌರವ ಕೃತಜ್ಞತೆಗಳನ್ನು ತಳೆದಿರುವರೆ? ಅದೂ ಇಲ್ಲ. ಅವರು ಬೊಂಬಾಯಿಗೆ ಬಂದಿಳಿದಾಗ್ಗೆ ವಾರ್ತಾಸಂಘ ಪ್ರತಿನಿಧಿಯೊಡನೆ ಮಾತನಾಡಿದಾಗ್ಗೆ—

"ಈಗಣ ಶಾಸನವು ಪ್ರಜೆಗಳ ಇಷ್ಟಾರ್ಥವನ್ನು ಪರಿಪೂರ್ಣ ಮಾಡಲಿಲ್ಲವೆಂದು ಆಕ್ಷೇಪಿಸುವುದೂ ಮತ್ತೆ ಆಂದೋಳನವನ್ನು ನಡೆಯಿಸುತ್ತೇವೆಂದು ಬೆದರಿಸುವುದೂ ಅಸಮಂಜಸವೂ ಅಕ್ರಮವೂ ಆಗಿದೆ. ಈಗ ನಮ್ಮಧೀನಗೊಳಿಸಲ್ಪಟ್ಟ ಶಾಖೆಗಳ ಪರಿಪಾಲನವನ್ನು ಪ್ರಜೆಗಳಿಗೆ ಸಂತೃಪ್ತಿಕರವಾಗುವಂತೆ ನಿರ್ವಹಿಸುವುದೇ ಶ್ರೇಷ್ಠವಾದ ಆಂದೋಳನವು. ಸ್ಥಾನಿಕ ಸ್ವಪರಿಪಾಲನ, ಪಾರಿಶುದ್ಧ್ಯ, ವಿದ್ಯಾಭ್ಯಾಸ—ಈ ಮುಖ್ಯ ಶಾಖಾತ್ರಯವೂ ಪ್ರಜೆಗಳ ಅಧೀನವಾಗುವುವು. ಇವುಗಳ ಕಾರ್ಯವನ್ನು ಲೋಪವಿಲ್ಲದಂತೆಯೂ ದೇಶಹಿತಕರವಾಗುವಂತೆಯೂ ನಿರ್ವಹಿಸುವುದು ಹೇಗೆಂಬುದರಲ್ಲಿ ಬುದ್ಧಿಶಕ್ತಿ ಆಲೋಚನೆಗಳನ್ನೆಲ್ಲಾ ತೊಡಗಿಸುವುದನ್ನು ಬಿಟ್ಟು, ಇದುವರೆಗೆ ನಾವು ಏನನ್ನೂ ಮಾಡದೆ ಇದ್ದರೂ, ನಮ್ಮ ಸಾಮರ್ಥ್ಯವನ್ನು ಇಂಥ ಕಾರ್ಯಗಳಿಗೆ ಉಪಯೋಗಿಸದೆ ಇದ್ದರೂ, ಇನ್ನು ಕೆಲವು ನೂತನ ಶಾಖೆಗಳ ಭಾರನಿರ್ವಾಹವನ್ನು ನಮಗೆ ಕೊಡಲಿಲ್ಲವೆಂದು ಅದಕ್ಕಾಗಿ ಆಂದೋಳನವನ್ನು ಮಾಡುವುದರಲ್ಲೇ ನಮ್ಮ ಶಕ್ತಿಯನ್ನು ವಿನಿಯೋಗಿಸಿದರೆ ಅದು ದುರ್ವಿನಿಯೋಗವಾಗುವುದು. ಈಗ ಕೊಟ್ಟಿರುವ ಅಧಿಕಾರವನ್ನು ವಿನಿಯೋಗಿಸುವುದರಲ್ಲಿ ನಮ್ಮ ದೇಶದವರು ತೊಡಗಬೇಕು. ಬರಿಯ ಮಾತುಗಳನ್ನು ಕೊಚ್ಚುವುದರಿಂದ ಫಲವಿಲ್ಲ. ಅದರಿಂದ ಹಾನಿ ತಟ್ಟಿದರೂ ತಟ್ಟಬಹುದು. ಮಿ|| ಮಾಂಟೊಗ್'ರವರೂ, ಲಾರ್ಡ್ ಚೆಲ್ಮ್ಸ್‌ಫರ್ಡರವರೂ ಸಹ ನಮ್ಮಗಳಿಗಾಗಿ ಬಹಳ ಶ್ರಮಪಟ್ಟರು. ಅವರಿಬ್ಬರೂ ಭಾರತೀಯರೆಲ್ಲರ ಕೃತಜ್ಞತೆಗೂ ಪಾತ್ರರು."

ಎಂದು ಲಾರ್ಡ್ ಸಿಂಹರು ಹೇಳಿದ ಅಭಿಪ್ರಾಯವು ಈ ದೇಶದ ಅತಿವಾದಿಗಳಿಗೆ ಮೆಣಸಿನಕಾಯನ್ನಿಕ್ಕಿದಂತೆ ಆಗಿದೆಯೇ ಹೊರತು ಜ್ಞಾನಾಂಜನೆಯಾಗಿ ತಿಳಿಯಲಿಲ್ಲ. ಅದರಿಂದಲೇ ಲಾರ್ಡ್ ಸಿಂಹರವರು ಕಲ್ಕತ್ತೆಗೆ ಹೋದಾಗ್ಗೆ ಅಲ್ಲಿಯ ಮಹಾಜನರು ನಿಲ್ದಾಣದಿಂದ ಅವರನ್ನು ಬಹು ಮರ್ಯಾದೆಯೊಡನೆ ಉತ್ಸವ ಮಾಡಿ ಕರೆದುಕೊಂಡು ಹೋಗುತ್ತಿರುವಾಗ್ಗೆ ಅಲ್ಲಿಯ ಅತಿವಾದಿಗಳು ಕಾಲೇಜ್ ಸ್ಕ್ವೈರಿನಲ್ಲಿ ಒಂದು ಸಭೆಯನ್ನು ಮಾಡಿಕೊಂಡು ಲಾರ್ಡ್ ಸಿಂಹರ ಬೊಂಬಾಯಿ ಉಪನ್ಯಾಸವನ್ನು ಖಂಡಿಸುತ್ತಿದ್ದರು. ಮತ್ತು ಸಿಂಹರನ್ನು ಕುರಿತು—"ನೀನು ಅಮೃತಸರದ ಜಲಿಯನ್‌ವಾಲಾಬಾಗನ್ನು ಮರೆಯಬೇಡ. ಜನರಲ್ ಡಯರಿನ ಸಹಾಯಕನಾಗಿರು" ಎಂದು ಒಂದು ಹಲಗೆಯ ಮೇಲೆ ಬರೆದು ಉತ್ಸವಬರುತ್ತಿದ್ದ ದಾರಿಯಲ್ಲಿ ನಿಲ್ಲಿಸಿದ್ದುದಲ್ಲದೆ ಸಭೆಯೊಳಗೆ "ಲಾರ್ಡ್ ಸಿಂಹರು ಹೇಳಿದ ಮಾತುಗಳು ದೇಶೀಯಾಭಿಪ್ರಾಯವಲ್ಲ, ಅವರ ಮಿತ್ರರು ಅವರಿಗೆ ಸ್ವಾಗತ ಮಾಡಿದರೇ ಹೊರತು ನಗರನಿವಾಸಿಗಳೆಲ್ಲಾ ಮಾಡಲಿಲ್ಲ" ಎಂಬ ನಿರ್ಧಾರವನ್ನು ಮಾಡಿದರು. ಮತ್ತು ಆ ದಿನ ಸಾಯಂಕಾಲ ಲಾರ್ಡ್ ಸಿಂಹರ ಸನ್ಮಾನಾರ್ಥವಾಗಿ ಕೂಡಿಸಿದ್ದ ಸಭೆಗೆ ಈ ಅತಿವಾದಿಗಳು ಹೋಗಿ "ಲಾರ್ಡ್ ಸಿಂಹನಿಗೆ ಅಪಮಾನ" ಎಂದು ಪದೇಪದೇ ಕೂಗಿಕೊಳ್ಳುತ್ತಿದ್ದುದಲ್ಲದೆ ಆ ಚೌಕದಲ್ಲಿ ಅಲಂಕಾರಾರ್ಥವಾಗಿ ಹೊತ್ತಿಸಿದ್ದ ದೀಪಗಳನ್ನೆಲ್ಲಾ ಆರಿಸಿಬಿಟ್ಟರು.

ಇಷ್ಟೇ ಅಲ್ಲದೆ ಮಿ|| ಮಾಂಟೊಗ್'ರವರು ನೂತನ ರಾಜಕೀಯಶಾಸನ ಸ್ಥಾಪನೆಗಾಗಿ ಪಟ್ಟ ಶ್ರಮವೂ ಕೃಷಿಯೂ ಲೋಕಾಭಿರಾಮವಾಗಿರುವಾಗ, ಅವರಿಗೆ ಕೃತಜ್ಞತಾ ವಂದನೆಗಳನ್ನು ತಿಳಿಯಿಸುವುದಕ್ಕೂ ರಾಷ್ಟ್ರೀಯ ಮಹಾಸಭೆಯಲ್ಲಿ ಇವರು ಎಷ್ಟೋ ತೊಡಕುಗಳನ್ನು ತಂದಿದ್ದರು. ಕಡೆಗೆ ಅದು ಸಾಗಲಿಲ್ಲ. ಕೃತಜ್ಞತೆಯನ್ನೇನೋ ನಿರ್ವಾಹವಿಲ್ಲದೆ ಬಾಯಿಂದ ಒಪ್ಪಿಸಿದರು. ಲಾರ್ಡ್ ಸಿಂಹರವರ ಉಪನ್ಯಾಸವನ್ನು ಕೇಳಿದ ನಂತರ ಬೊಂಬಾಯಿಯ ಪುರಪ್ರಮುಖರಾದ ಎಸ್. ಆರ್. ಬೊಮ್ಮಂಜಿಯವರೇ ಮೊದಲಾದವರು ಮಿ|| ಮಾಂಟೊಗ್'ರವರ ಅಮೃತ ಶಿಲಾವಿಗ್ರಹವೊಂದನ್ನು ಬೊಂಬಾಯಿಯಲ್ಲಿ ಸ್ಥಾಪಿಸುವಂತೆ ಮಾಡಬೇಕೆಂದು ಅದಕ್ಕಾಗಿ ಆಗಲೇ ೬೦ ಸಾವಿರ ರೂ.ಗಳ ಮೇಲೆಯೇ ಚಂದಾ ಕೂಡಿಸಿರುವರು. ಇದಕ್ಕೂ ಅತಿವಾದಿಗಳು ಗುಣಗುಟ್ಟುವಿಕೆಯನ್ನಾರಂಭಿಸಿರುವರು. ಹಂಟರ್ ಸಂಘದ ತೀರ್ಮಾನ, ಸಂಸ್ಕರಣ ಶಾಸನದ ನಿಬಂಧನೆಗಳ ಪ್ರಕಟನ ಇತ್ಯಾದಿ ಕಾರ್ಯಗಳೆಲ್ಲಾ ಅನುಕೂಲವಾಗಿ ಜರುಗುವವರೆಗೂ ಈ ಕೆಲಸವನ್ನು ಮಾಡುವುದು ಸರಿಯಲ್ಲವೆಂಬ ಕೂಗಾಟವನ್ನೆಬ್ಬಿಸಿರುವರು. ದಿನದಿನಕ್ಕೆ ಇನ್ನು ಯಾವ ಯಾವ ತೆರದ ಆಟಗಳಲ್ಲಿ ತಮ್ಮ ಸಾಮರ್ಥ್ಯವನ್ನು ಇವರು ತೋರಿಸುವರೋ ಗೊತ್ತಿಲ್ಲ. ಇಂಥ ಮಾರ್ಗದಲ್ಲಿ ತಮ್ಮ ಬುದ್ಧಿ ಶಕ್ತಿಯನ್ನು ತೋರಿಸುವುದೇ ತಮ್ಮ ಆಂದೋಳನವೆಂದೂ ಇದಕ್ಕೆ ಬೆದರಿಯೇ ತಮಗೆ ಸ್ವರಾಜ್ಯವು ಕೊಡಲ್ಪಡುವುದೆಂದೂ ಈ ಅತಿವಾದಿಗಳು ಭ್ರಮೆಪಟ್ಟಿರುವರು; ಮಿತವಾದಿಗಳನ್ನು ಅಪರಿಮಿತವಾಗಿ ನಿಂದಿಸುತ್ತಿರುವರು.

ಈ ಸ್ಥಿತಿಯನ್ನು ನೋಡಿಯೇ ನಭಾ ಸಂಸ್ಥಾನಾಧಿಪತಿಗಳ ಬಾಯಿಂದ ಅಂಥ ಮಾತುಗಳು ಹೊರಟಿರುವುವು. ಈ ತೆರದ ಆಂದೋಳನದಿಂದ ದೇಶಕ್ಕೆ ಹಾನಿ ತಟ್ಟಿದರೂ ತಟ್ಟಬಹುದೆಂದು ಲಾರ್ಡ್ ಸಿಂಹರವರು ಆಡಿರುವ ಮಾತು ಎಂದಿಗೂ ಹುಸಿಯಲ್ಲ. ವಾಕ್ಶೂರರಾದ ಅತಿವಾದಿಗಳು ಪರಿಪಕ್ವಮತಿಗಳಲ್ಲದ ವಿದ್ಯಾರ್ಥಿ ವರ್ಗದ ಮುಂದೆ ಅಧಿಕಾರಿಧಿಕ್ಕಾರ ರೂಪವಾದ ಉಪನ್ಯಾಸಗಳನ್ನು ಮಾಡುತ್ತ ಅವರುಗಳ ಮನಸ್ಸುಗಳನ್ನು ಉದ್ವಿಗ್ನಗೊಳಿಸುತ್ತ ಬಂದುದು ಸಾಲದೆ, ರಾಷ್ಟ್ರೀಯ ಮಹಾಸಭೆಗೆ ಲೋಕಜ್ಞಾನವೇ ಇಲ್ಲದ ರೈತ ಜನರನ್ನು ಬರಮಾಡಿಸಿ, ಅವರ ಮುಂದೆಯೂ ಅದೇತೆರದ ಉಪನ್ಯಾಸಗಳನ್ನು ಮಾಡಿ ಒಂದು ತೆರದ ಕೆಟ್ಟ ಸಂಸ್ಕಾರ ಬೀಜವನ್ನು ಅವರ ಮನಸ್ಸಿನಲ್ಲಿ ನಾಟಿದಂತೆ ಕಾಣುತ್ತದೆ. ಇದರ ವಿಕಾರಫಲವು ಆಗಲೇ ಗೋಚರವಾಗ ಹತ್ತಿದೆ. ಏನೆಂದರೆ—ಬಂಗಾಳಕ್ಕೆ ಸೇರಿದ ದರ್ಭಂಗಾ ಜಿಲ್ಲೆಯಲ್ಲಿರುವ ವೀರಪುರ ಪ್ರಾಂತದ ರೈತರುಗಳಲ್ಲಿ ಕೆಲವರು ಅಮೃತಸರದ ಮಹಾಸಭೆಗೆ ಹೋಗಿ ಬಂದವರಾಗಿದ್ದಾರೆ. ಅವರುಗಳು ತಂತಮ್ಮೂರಿನ ರೈತರುಗಳ ಮುಂದೆ "ನಮ್ಮ ವ್ಯಕ್ತಿಸ್ವಾತಂತ್ರ್ಯಕ್ಕೂ ದೇಶಸ್ವಾತಂತ್ರ್ಯಕ್ಕೂ ಅಭ್ಯಂತರವುಂಟಾಗಬಾರದು. ಅದುಕಾರಣ ನಾವು ಜಮೀನ್‌ದಾರರುಗಳಿಗೂ ಭೂಸ್ವಾಮಿಗಳಿಗೂ ಅಧೀನರಾಗಿ ಬಾಳಬಾರದು. ಅವಶ್ಯಕತೆ ಬಿದ್ದರೆ ನಾವು ಅವರ ಕಚೇರಿಗಳನ್ನು ಸುಟ್ಟು ಬೂದಿಮಾಡುವುದಕ್ಕೂ ಸಿದ್ಧರಾಗಬೇಕು" ಎಂದು ಬೋಧಿಸಿ ಅವರನ್ನೆಲ್ಲಾ ಹುರಿದುಂಬಿಸಿ ರೇಗಿಸಿ ಕುಳ್ಳಿರಿಸಿಬಿಟ್ಟಿರುವರಂತೆ. ಇದರ ಮೇಲೆ ಆ ವೀರಪುರದ ಜಮೀನ್‌ದಾರರು ದರ್ಭಂಗಾ ಜಿಲ್ಲಾ ಮೇಜಿಸ್ಟ್ರೇಟರಿಗೆ ಈ ವಿಷಯವನ್ನೆಲ್ಲಾ ಕಾಣಿಸಿ ಅರ್ಜಿಯನ್ನು ಕೊಟ್ಟಿರುವರು. ಅದರ ಮೇಲೆ ಯಾವ ಅಕ್ರಮವೂ ನಡೆಯದಂತೆ ನೋಡಿಕೊಳ್ಳಲಿಕ್ಕೆ ಪೊಲೀಸು ಅಧಿಕಾರಿಗಳಿಗೆ ಮೇಜಿಸ್ಟ್ರೇಟರು ಅಪ್ಪಣೆಮಾಡಿರುವರಂತೆ. ಅರಿಯದ ಹುಡುಗರಿಗೆ ಉನ್ಮತ್ತಿಕಾಯನ್ನು ತಿನ್ನಿಸಿದಂತೆ ಈ ಅತಿವಾದಿಗಳು ನಿರ್ಮಲಹೃದಯರಾದ ರೈತರ ರಕ್ತಕ್ಕೆ ಅಧಿಕಾರಿದ್ವೇಷದ ಅವಿಧೇಯತಾರೂಪ ವಿಷವನ್ನು ಅಂಟಿಸುತ್ತ ಬಂದರೆ ಇಂಥ ವಿಷಮಪರಿಣಾಮಗಳು ಎಷ್ಟೆಷ್ಟು ಆಗಬಹುದೆಂಬುದನ್ನು ಹೇಳಬೇಕಾಗಿಲ್ಲ.

ಇದಲ್ಲದೆ ಈ ಅತಿವಾದಿಗಳಲ್ಲೇ ಕೆಲವರು ತಮ್ಮ ಪಂಗಡವನ್ನು ಬಲಮಾಡಿಕೊಳ್ಳುವುದಕ್ಕಾಗಿ ಕೂಲಿಕಾರ ಜನರ ಹಿತವನ್ನು ಸಾಧಿಸುವವರಂತೆ ಅವರಿಗೆ ಉಪದೇಶಮಾಡುತ್ತ ಬರುತ್ತಲಿರುವುದರಿಂದ ಯಂತ್ರಾಲಯಗಳಲ್ಲಿ ಕೆಲಸಮಾಡುತ್ತಲಿರುವ ಆ ಜನರು ಪದೇಪದೇ ಮುಷ್ಕರಹಿಡಿದು ಕೆಲಸಕ್ಕೆ ಹೋಗದೆ ತಮಗೆ ಕೂಲಿಯನ್ನು ಹೆಚ್ಚಿಸಬೇಕೆಂದೂ ಕೆಲಸಮಾಡುವ ಕಾಲವನ್ನು ಕಡಿಮೆಮಾಡಿಕೊಡಬೇಕೆಂದೂ ಮೊಂಡತನದಿಂದ ಬೇಡಿ ಕೆಲಸಕ್ಕೆ ವಿಘ್ನವನ್ನು ತರುವ ಪದ್ಧತಿಯು ಈಚೆಗೆ ಭರತಖಂಡದಲ್ಲಿ ಸೊಂಕಿನ ಜಾಡ್ಯದಂತೆ ವೃದ್ಧಿಗೊಳ್ಳುತ್ತಿದೆ. ಭರತಖಂಡದಲ್ಲಿ ಸ್ವಲ್ಪ ಸ್ವಲ್ಪವಾಗಿ ಈಗತಾನೇ ತಲೆಯೆತ್ತುತ್ತಿರುವ ಪಾರಿಶ್ರಾಮಿಕಾಭ್ಯುದಯಕ್ಕೆ ಈ ಪದ್ಧತಿಯಿಂದ ಬಹಳ ಧಕ್ಕೆಯು ತಗಲುವ ಸಂಭವವುಂಟಾಗಿದೆ. ಕಳೆದ ವಾರದಲ್ಲಿ ಬೊಂಬಾಯಿಯಲ್ಲಿ ಕೂಡಿದ್ದ ಪಾರಿಶ್ರಾಮಿಕ ಮಹಾಸಭೆಯಲ್ಲಿ ಸ್ವಾಗತ ಸಂಘಾಧ್ಯಕ್ಷರಾಗಿದ್ದ ಮಿ|| ಜಹಾಂಗೀರ್ ಬೊಮ್ಮಂಜಿ ಪೇಟಿಟ್'ರವರು ಮಾಡಿದ ಭಾಷಣದಲ್ಲಿ ಈ ವಿಷಯವನ್ನು ಎತ್ತಿ ಆಡಿ ಅದರ ದುಷ್ಪರಿಣಾಮವನ್ನು ದೇಶೀಯರಿಗೆ ವ್ಯಕ್ತಪಡಿಸಿದ್ದಾರೆ. ಹೇಗೆಂದರೆ—"ಈಗ ಕೆಲ ಸ್ವಾರ್ಥಪರರು ಕೂಲಿಕಾರ ಜನರನ್ನು ಪ್ರೇರೇಪಿಸಿ ಅವರು ವಿಪರೀತವಾದ ಕೋರಿಕೆಗಳನ್ನು ಕೋರುವಂತೆ ಮಾಡಿದ್ದಾರೆ. ಅದರ ಫಲಿತಾಂಶವನ್ನು ಅವರು ಯೋಚಿಸಲಿಲ್ಲ. ಯೂರೋಪು ಅಮೇರಿಕಾ ದೇಶಗಳ ಪರಿಸ್ಥಿತಿಯೇ ಬೇರೆ; ಈ ದೇಶದ ಪರಿಸ್ಥಿತಿಯೇ ಬೇರೆ. ಅದು ಕಾರಣ ಅವರು ಅವಲಂಬಿಸಬೇಕಾದ ಪದ್ಧತಿಗಳು ಬೇರೆಯಾಗಿಯೂ ನಮ್ಮವರು ಅವಲಂಬಿಸಬೇಕಾದ ಪದ್ಧತಿಗಳು ಬೇರೆ ತೆರನಾಗಿಯೂ ಇರಬೇಕಾಗುತ್ತವೆ. ನಮ್ಮಲ್ಲಿನ ಕೂಲಿಕಾರ ಜನರ ಮಿತ್ರರು ಈ ವಿಷಯವನ್ನು ಯೋಚಿಸಿಕೊಂಡು ಕೆಲಸಮಾಡಬೇಕೇ ಹೊರತು ಆ ಪಾಶ್ಚಾತ್ಯ ದೇಶ ಪದ್ಧತಿಯನ್ನೇ ಇಲ್ಲಿಗೂ ತಂದು ನೆಡುವುದಕ್ಕೆ ಯತ್ನಿಸಬಾರದು. ಅದನ್ನೇ ಅನುಸರಿಸುವುದಕ್ಕೆ ಪ್ರಯತ್ನಮಾಡಿದರೆ ಬಹಳ ಅನಿಷ್ಟವು ಸಂಭವಿಸುವುದು. ಅಲ್ಲಿಯ ಕೂಲಿಕಾರರ ಮುಷ್ಕರದ ಗದ್ದಲವನ್ನು ಇಲ್ಲಿ ಅಂಟಿಸಬಾರದು. ಯಜಮಾನರಿಂದ ಕೂಲಿಕಾರರಿಗೆ ಹಿಂಸೆಯಾಗುತ್ತಿದ್ದರೆ ಅದನ್ನು ತಪ್ಪಿಸಲಿಕ್ಕೆ ಪ್ರಯತ್ನಿಸಬಹುದು. ಅದಕ್ಕೆ ಯಾರೂ ಕೂಡದೆನ್ನರು. ಆ ಕೂಲಿಕಾರರಿಂದ ಇಲ್ಲಿಯ ಪರಿಶ್ರಮಗಳಿಗೆ ಭಂಗಬರಗೊಡದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ವಿದೇಶದ ಪರಿಸ್ಥಿತಿಯು ಈಗ ಹಾಗೇ ಆಗಿದೆ. ಅದನ್ನು ನೋಡಿ ನಾವು ಎಚ್ಚತ್ತುಕೊಳ್ಳಬೇಕು. ವಿದೇಶದಲ್ಲಿ ಈಗಣ ಕೂಲಿಕಾರರು ಕತ್ತಿಗಳನ್ನೂ ದೊಣ್ಣೆಗಳನ್ನೂ ಹಿಡಿದು ಸಂಘವನ್ನು ಭಯಂಕರಗೊಳಿಸುತ್ತಿದ್ದಾರೆ. ಕೆಲಸ ಸ್ವಲ್ಪ, ಸಂಬಳ ಹೆಚ್ಚು ಆಗಬೇಕೆಂದು ಬಾಧೆಕೊಡುತ್ತಿದ್ದಾರೆ. ಇದರಿಂದ ಯೂರೋಪುಖಂಡದ ಧನಸಂಪತ್ತಿಯೂ ವಸ್ತುನಿರ್ಮಾಣ ವೈಪುಲ್ಯವೂ ಕ್ಷೀಣಿಸಿ ಹೋಗುತ್ತಿವೆ. ಅದರಿಂದ ಆ ದೇಶವೇ ಈಗ ತರಗುಟ್ಟುತ್ತಿದೆ. ಅದನ್ನು ನೋಡಿ ನಾವು ಅಲ್ಲಿಯ ಪದ್ಧತಿಯನ್ನು ಪರಿತ್ಯಜಿಸಬೇಕು" ಎಂದು ಹೇಳಿರುತ್ತಾರೆ. ಕೂಲಿಕಾರರ ಮುಷ್ಕರವೆದ್ದಾಗ ಅತಿವಾದಿಗಳೂ ಅವರ ಪತ್ರಿಕೆಗಳೂ ಕೂಲಿಕಾರರ ಬೆಂಬಲದ ಮಾತುಗಳನ್ನು ಸುರಿಸುವರೇ ಹೊರತು, ಅದರಿಂದ ಪರಿಶ್ರಮಾಭಿವೃದ್ಧಿಗೆ ಉಂಟಾಗುವ ಕೇಡನ್ನು ಅನುಲಕ್ಷಿಸಿ ಇದಕ್ಕೆ ಸಹಕಾರವಾದ ಅಭಿಪ್ರಾಯಗಳನ್ನೇ ಹೇಳುವುದಿಲ್ಲ.

ಗದ್ದಲವೆಬ್ಬಿಸುವುದು ಒಂದೇ ಪುರುಷಾರ್ಥಸಾಧನವೆಂದು ತಿಳಿದುಕೊಂಡಿರುವ ಅತಿವಾದಿಗಳಿಗೆ ದೇಶಾಭ್ಯುದಯ ಕಾರ್ಯನಿರ್ವಾಹಭಾರವು ಹೊತ್ತಿಲ್ಲವೆಂದೇ ಹೇಳಬೇಕಾಗುತ್ತದೆ. ಹೊರೆಯನ್ನೆಳೆದು ಮೈಮುರಿಯದಿರುವ ಕಾಯಿಹೋರಿಗಳನ್ನು ಹೂಡಿದ ಬಂಡಿಯಲ್ಲಿ ಕುಳಿತಿರುವ ಪ್ರಯಾಣಿಕರಂತೆ ಈ ಅತಿವಾದಿಗಳ ಮುಂಜೂರುತನವು ದೇಶೀಯರಿಗೆ ಅಪಾಯಭೀತಿಪ್ರದವಾಗಿದೆ. ಈ ಅತಿವಾದಿಗಳು ತಮ್ಮ ಉಗ್ರತರೋಪನ್ಯಾಸಗಳನ್ನೂ, ಉದ್ರೇಕಜನಕಗಳಾದ ಲೇಖನಗಳನ್ನೂ ಕಟ್ಟಿಟ್ಟು ನೂತನ ರಾಜಕೀಯ ಸಂಸ್ಕರಣಗಳಿಂದ ಲಬ್ಧವಾಗಿರುವ ಪ್ರಜಾಧಿಕಾರವನ್ನು ಸದ್ವಿನಿಯೋಗಪಡಿಸುವಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಿ, ಪ್ರಜೆಗಳ ಮನ್ನಣೆಗೂ ಪ್ರಭುತ್ವದ ಮೆಚ್ಚುಗೆಗೂ ಪಾತ್ರವಾದರೆ ನಿಜವಾಗಿ ದೇಶಕಲ್ಯಾಣವು ದಿನದಿನಕ್ಕೆ ಹೆಚ್ಚುವುದರಲ್ಲಿ ಸಂಶಯವಿಲ್ಲ. ನಮ್ಮ ದೇಶದ ಪರಮಾಪ್ತರಾದ ಮಿ|| ಮಾಂಟೊಗ್'ರವರು ಈ ಸಮಯದಲ್ಲಿ ಭಾರತೀಯರಿಗೆ ಕೊಟ್ಟಿರುವ ಎಚ್ಚರಿಕೆಯು ತಾರಕೋಪದೇಶದಂತಿರುತ್ತದೆ. ಅದನ್ನಾದರೂ ಈ ಅತಿವಾದಿಗಳು ಗಮನಿಸಿ ಅನುಷ್ಠಾನಕ್ಕೆ ತರಲೆಂದು ಈ ಕೆಳಗೆ ಕೊಟ್ಟಿರುತ್ತೇವೆ.—"ಭರತಖಂಡವನ್ನು ಅಭಿವೃದ್ಧಿಗೆ ತರುವುದಕ್ಕೆ ಭಾರತೀಯರಿಗೆ ತಕ್ಕ ಅವಕಾಶವು ಕೊಡಲ್ಪಡುವ ಈ ಸಮಯದಲ್ಲಿ ಭರತಖಂಡದ ನಾನಾ ವರ್ಗಗಳಲ್ಲಾಗಲೀ ರಾಜರುಗಳಲ್ಲಾಗಲೀ ಕಲಹವನ್ನು ವೃದ್ಧಿಪಡಿಸುವುದಕ್ಕೆ ಯಾವ ವೃತ್ತಪತ್ರಿಕೆಯೂ ಪ್ರಯತ್ನಿಸಕೂಡದು. ಭರತಖಂಡದಲ್ಲಿ ಪಾರಿಶ್ರಾಮಿಕ, ನ್ಯಾಯ, ಶಾಸನ, ಸೈನಿಕ ಸಂಬಂಧಗಳಾದ ಸಂಸ್ಕರಣಗಳೆಷ್ಟನ್ನೋ ಇನ್ನೂ ಮಾಡಬೇಕಾಗಿದೆ. ಅದಕ್ಕೆ ಅನ್ಯೋನ್ಯ ಸಹಾಯವು ಅತ್ಯವಶ್ಯಕವಾಗಿದೆ. ಪರಸ್ಪರ ದೂಷಣೆಯಿಂದ ಕಷ್ಟಗಳು ಹೆಚ್ಚಿ ಮತ್ತಷ್ಟು ಅಪಾಯಗಳು ಹೆಚ್ಚುವುವು. ಆದರೆ ಅನ್ಯೋನ್ಯ ಸಹಾಯಕತೆಯಿಂದ ಕಷ್ಟಗಳನ್ನೆಲ್ಲಾ ಸುಲಭವಾಗಿ ದಾಟಬಹುದು."

ಒಳದೇಶ ವೃತ್ತಾಂತಗಳು.

ದಿಲ್ಲಿಗೆ ದಯಮಾಡಿಸಿರುವ ಶ್ರೀಮನ್ಮಹಾರಾಜರು ಕೂಡಲೆ ಹಿಂದಿರುಗಿ ಬರುವವರಾಗಿರುವರು.

ಮೈಸೂರು ರೈಲ್ವೆಯ ಟ್ರಾಫಿಕ್ ಮ್ಯಾನೇಜರ್ ಕೆಲಸವು ಮ|| ವೆಂಕೋಬರಾಯರಿಂದ ತಪ್ಪಿ ಬೇರೊಬ್ಬರಿಗೆ ಕೊಡಲ್ಪಟ್ಟಿತೆಂದು ಕೇಳುತ್ತೇವೆ.

ಬೆಂಗಳೂರು ಕೋಟೆಯ ಪೋಸ್ಟ್‌ಮಾಸ್ಟರ್ ಕೆ. ನರಸಿಂಹಯ್ಯಂಗಾರ್ರಿಗೆ ಪೋಸ್ಟಿನ ೩೧೯ ರೂ. ಗಳನ್ನು ದುರುಪಯೋಗಪಡಿಸಿಕೊಂಡ ತಪ್ಪಿತಕ್ಕಾಗಿ ೬ ತಿಂಗಳ ಕಾರಾಗೃಹವಾಸ ಶಿಕ್ಷೆಯಾಯಿತು.

ರಾಜಧಾನಿಯ ಅಡ್ವೊಕೇಟರಾದ ಮ|| ಸಿ. ನರಸಿಂಹಯ್ಯನವರಿಗೆ ಇಲ್ಲಿನ ಪಬ್ಲಿಕ್ ಪ್ರಾಸಿಕ್ಯೂಟರ್ ಕೆಲಸವು ದೊರೆಯಿತೆಂದು ತಿಳಿಸಿದ್ದೆವಷ್ಟೆ. ಇವರು ಆ ಉದ್ಯೋಗವನ್ನು ಅಂಗೀಕರಿಸಲಿಲ್ಲವೆಂದು ತಿಳಿಯುತ್ತೇವೆ.

ಬರುವ ಜುಲೈ ತಿಂಗಳಾರಂಭದಲ್ಲಿ ನಮ್ಮ ಸಂಸ್ಥಾನದ ಎಲ್ಲಾ ಪಾಠಶಾಲೆಗಳಲ್ಲೂ ಲೋವರ್‌ಸೆಕೆಂಡರಿ ತರಗತಿಯ ಕೆಳಗಿನ ಇಂಗ್ಲೀಷ್ ಕನ್ನಡ ವಿದ್ಯಾಭ್ಯಾಸವೆಲ್ಲಾ ಫೀಜಿಲ್ಲದೆ ಉಚಿತವಾಗಿ ಮಾಡಿಸಲ್ಪಡಬೇಕೆಂದು ಸರ್ಕಾರದ ಅಪ್ಪಣೆಯಾಗಿದೆ.

ದಿವಾನರು ತಮ್ಮ ಪ್ರೈವೆಟ್ ಸೆಕ್ರೆಟರಿಯವರೊಡನೆ ರಾಜಧಾನಿಗೆ ದಯಮಾಡಿಸಿರುವರು. ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನವರು ದಿವಾನರನ್ನು ನೆನ್ನೆಯದಿನ ಸಾಯಂಕಾಲ ಕ್ಲಬ್ಬಿಗೆ ಬರಮಾಡಿಕೊಂಡು ಸಂಗೀತ ಮೊದಲಾದ ವಿನೋದಗಳಿಂದಲೂ ಅಲ್ಪಾಹಾರದಿಂದಲೂ ಸತ್ಕರಿಸಿದರು.

ನಮ್ಮ ಸರ್ಕಾರದವರು ಧಾನ್ಯವು ನಮ್ಮ ಸೀಮೆಯಿಂದ ಹೊರಗೆ ಅಪ್ಪಣೆಯಿಲ್ಲದೆ ಸಾಗಿಸಲ್ಪಡಕೂಡದೆಂದು ಕಟ್ಟನ್ನು ಮಾಡಿರುವರಾದರೂ ಬೆಲೆಯು ಮಾತ್ರ ನಿತ್ಯದಲ್ಲೂ ಏರುತ್ತಿರುವುದರಿಂದ ಇನಷ್ಟು ಜಾಗ್ರತೆಯಲ್ಲಿ ಬೆಲೆಯು ನಿರಕುಮಾಡಲ್ಪಟ್ಟ ಹೊರತು ಬಡಬಗ್ಗರು ಜೀವಿಸುವುದು ಕಷ್ಟವಾಗಿದೆ.

ಸಂಸ್ಥಾನದ ಲೆಕ್ಕಪರೀಕ್ಷಣ ಶಾಖಾ ಡೈರೆಕ್ಟರವರಾದ ಮ|| ಎಸ್. ಜಿ. ನರಸಿಂಹಾಚಾರ್ಯರ ಅಧಿಕಾರದವಧಿಯು ಇಲ್ಲಿಗೆ ಮುಗಿದಿತಾದರೂ ಅವರು ಮಾಡುತ್ತಿರುವ ಶ್ಲಾಘ್ಯವಾದ ಕೆಲಸವನ್ನು ಸರ್ಕಾರದವರು ಮೆಚ್ಚಿ ಅವರ ಅಧಿಕಾರದ ಅವಧಿಯನ್ನು ಹೆಚ್ಚಿಸಿರುತ್ತಾರೆಂದು ತಿಳಿಸಲು ಸಂತೋಷವಾಗುತ್ತದೆ.

ರಾ|ಬ| ಗುಬ್ಬಿ ತೋಟದಪ್ಪನವರ ಸತ್ರದಲ್ಲಿರುವ ವಿದ್ಯಾರ್ಥಿಗಳು ಕಳೆದ ತಾ|| ೨೪ನೆಯ ಶನಿವಾರದ ದಿವಸ ಧರ್ಮಪ್ರವರ್ತಕರ ಪುಣ್ಯತಿಥಿಯನ್ನು ಆಚರಿಸಿದರು. ಆ ದಿವಸ ಸಾಯಂಕಾಲ ರಾ|ಬ| ಎಂ. ಶಾಮರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಆ ಪುಣ್ಯಪುರುಷರ ಗುಣಕಥನವಾದ ಮೇಲೆ ಗೌರ್ನಮೆಂಟ್ ಅಡ್ವೊಕೇಟ್ ಮ|| ಶಂಕರನಾರಾಯಣರಾಯರಿಂದ ವಿದ್ಯಾರ್ಥಿಗಳಿಗೆ ಉಪದೇಶರೂಪವಾಗಿ ಒಂದು ಸ್ವಾರಸ್ಯವಾದ ಉಪನ್ಯಾಸವು ಕೊಡಲ್ಪಟ್ಟಿತು.

ಹೊಳಲ್ಕೆರೆ ತಾಲ್ಲೂಕು ವೀರಶೈವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ವಿದ್ಯಾರ್ಥಿನಿಲಯವು ಕಟ್ಟಲ್ಪಡಬೇಕೆಂದು ಕಳೆದ ತಾಲ್ಲೂಕು ಕಾನ್ಫರೆನ್ಸಿನಲ್ಲಿ ಡಿ|| ಎಕನಾಮಿಕ್ ಸೂಪರಿಂಟೆಂಡೆಂಟ್ ಮ|| ಕೆ. ಸಿದ್ಧರಾಮಪ್ಪನವರು ಮತ್ತು ತಾ|| ಅಮಲ್ದಾರ್ ಮ|| ಶಂಕರಪ್ಪನವರು ವೀರಶೈವರನ್ನು ಪ್ರೋತ್ಸಾಹಿಸಿದುದರ ಮೇಲೆ ಕಟ್ಟಡಕ್ಕಾಗಿ ೬೦೦೦ ರೂ. ವರೆಗೆ ಚಂದಾ ವಾಗ್ದಾನವಾಯಿತು. ಮ|| ಗಳಾದ ದೊಗ್ಗನಾಳು ಚಂದಪ್ಪನವರು ಮುತ್ತುಗದೂರು ಪಟೇಲ್ ಪರ್ವತಪ್ಪನವರು, ತಾಳ್ಯದ ಪಟೇಲ್ ಶಿವಪ್ಪನವರು ಮತ್ತು ಸಿದ್ಧರಾಮಣ್ಣನವರು, ಭರ್ಮನಾಯಕನದುರ್ಗದ ಪಟೇಲ್ ವೀರಪ್ಪನವರು, ಕಣಿಕೆಗಲಿ ಗೌಡ ಮಲ್ಲಪ್ಪನವರು ಮೊದಲಾದ ವೀರಶೈವ ದೊಡ್ಡಮನುಷ್ಯರುಗಳು ಬಹಳ ಶ್ರದ್ಧೆಯನ್ನು ವಹಿಸಿ ೧,೫೦೦ ರೂ. ವರೆಗೆ ಶೇಖರಿಸಿ ಸರ್ಕಾರಿ ಸೇವಿಂಗ್ಸ್‌ಬ್ಯಾಂಕಿನಲ್ಲಿಟ್ಟು ಹೊಳಲ್ಕೆರೆಯಲ್ಲಿ ಟ್ರಾವಲರ್ಸ್ ಬಂಗಲೆಯಬಳಿನ ವಿಶಾಲವಾದ ಬೈಲುಪ್ರದೇಶದಲ್ಲಿ ಕಟ್ಟಡವನ್ನು ಕಟ್ಟಲು ಮೊನ್ನೆ ಶುಕ್ರವಾರ ಮಧ್ಯಾಹ್ನದಲ್ಲಿ ಚಿತ್ರದುರ್ಗದ ಡಿ|| ಕ|| ಮ|| ಸಿ. ವೆಂಕಟರಾಯರವರ ಹಸ್ತದಿಂದ ಶಂಕುಸ್ಥಾಪನೆಯು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತೆಂದು ಒಬ್ಬ ಪ್ರೇಕ್ಷಕರು ತಿಳಿಸಿರುತ್ತಾರೆ.

ಈ ಸಲ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರುಗಳೊಳಗೆ ಒಬ್ಬ ಮಹಮ್ಮದೀಯರಿರುವುದು ಅಭಿನಂದನೀಯವಾದ ಸಂಗತಿಯಾಗಿದೆ. ಈ ಪರೀಕ್ಷೆಯಲ್ಲಿ ಆ ಜನವರ್ಗದೊಳಗೆ ಉತ್ತೀರ್ಣರಾಗಿ ಬಂದವರು ಯಾರೂ ಇರಲಿಲ್ಲ. ಆ ಲೋಪವನ್ನು ಪರಿಹರಿಸಿದ ಮಿ|| ಎಂ. ಇಸ್ಮಾಯಿಲ್ ಷರೀಫ್‌ರವರು ಮೈಸೂರಿನ ರಿಟೈರ್ಡ್ ಬಕ್ಷಾ ಮಿ|| ಸಾಲಾರ್‌ಸಾಬರ ಕುಮಾರರಾಗಿರುತ್ತಾರೆ. ಚಿಕ್ಕಂದಿನಿಂದಲೂ ಪ್ರತಿಯೊಂದು ತರಗತಿಯ ಪರೀಕ್ಷೆಯಲ್ಲೂ ತಪ್ಪದೆ ಜಯಶೀಲರಾಗುತ್ತ ಬಂದ ಇವರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನೂ ಲೀಲಾಜಾಲವಾಗಿ ಕೊಟ್ಟು ಅವರ ಜನಕರಿಗೂ ಮಿತ್ರಮಂಡಲಿಗೂ ವಿಶೇಷ ಸಂತೋಷವನ್ನುಂಟುಮಾಡಿರುತ್ತಾರೆ. ಬಿ ಷೆಡ್ಯೂಲ್ ಪ್ರೊ|| ಅ|| ಕಮಿಷನರಾಗಿ ಮಾಡಲ್ಪಟ್ಟವರುಗಳೊಳಗೆ ಮ|| ಆರ್. ಪಿ. ಮಲ್ಲಪ್ಪ ಬಿ.ಎ., ಎಲ್‌ಎಲ್. ಬಿ., ಯವರು ಚೀಫ್‌ಕಮ್ಯಾಂಡೆಂಟರ ಅಸಿಸ್ಟೆಂಟರಾದ ಮ|| ಆರ್. ಪುಟ್ಟಣ್ಣ, ಬಿ.ಎ., ಬಿ.ಎಲ್., ರವರ ಪುತ್ರರಾಗಿದ್ದಾರೆ. ಇವರು ವೀರಶೈವರಾಗಿರುವುದರಿಂದ ಹಿಂದಣ ಸಲದ ಪ್ರೊ|| ಅ|| ಕಮಿಷನರ ಆರಿಸುವಿಕೆಯಲ್ಲಿ ವೀರಶೈವರೊಬ್ಬರಿಗೂ ದೊರೆಯದೆ ಹೋಗಿದ್ದ ನಾಮಿನೇಷನ್ ಸ್ಥಾನವನ್ನು ಈಸಲ ನಮ್ಮ ಮಹಾರಾಜ ಸರ್ಕಾರದವರು ಅನುಗ್ರಹಿಸಿಕೊಟ್ಟಿರುವುದು ಅವರ ಉಚಿತಜ್ಞತೆಯನ್ನು ವ್ಯಕ್ತಪಡಿಸಿದೆ. ಹಿಂದುಳಿದ ವರ್ಗಗಳೊಳಗೆ ಒಬ್ಬರಾದ ವೈಶ್ಯರ ವರ್ಗಕ್ಕೆ ಸೇರಿದ ಮ|| ಪಿ. ಸೂರ್ಯನಾರಾಯಣಶೆಟ್ಟಿ ಬಿ. ಎ. ಯವರಿಗೆ ಪ್ರೊ|| ಅ|| ಕಮಿಷನರ ಪದವಿಯು ಕೊಡಲ್ಪಟ್ಟಿರುವುದು ಸಹ ಸರ್ಕಾರಿ ಉದ್ಯೋಗಗಳಲ್ಲಿ ಅತ್ಯಂತ ವಿರಳರಾಗಿರುವ ಆ ಜನವರ್ಗದ ವರ್ಧಿಷ್ಣುಗಳಿಗೆ ಎಷ್ಟೋ ಪ್ರೋತ್ಸಾಹಕರವಾಯಿತೆಂಬುದಕ್ಕೆ ಸಂಶಯವಿಲ್ಲ.

ಭರತಖಂಡದ ವೃತ್ತಾಂತಗಳು.

ಪ್ರಿನ್ಸ್ ಆಫ್ ವೇಲ್ಸರು ಈ ವರ್ಷದ ಕೊನೆಯಲ್ಲಿ ಭರತಖಂಡಕ್ಕೆ ಪ್ರಯಾಣಮಾಡಿ ಬರುವವರಾಗಿದ್ದಾರೆಂದು ನಿಜವಾದ ವರ್ತಮಾನ ಬಂದಿದೆ.

ಯುದ್ಧ ಮುಗಿದಾರಭ್ಯ ೫ ವರ್ಷಗಳ ವರೆಗೆ ಶತ್ರುದೇಶೀಯರಾರನ್ನೂ ಭರತಖಂಡಕ್ಕೆ ಬರಗೊಡಿಸಲಾಗದೆಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ಕರಾಚಿಗೂ ಬೊಂಬಾಯಿಗೂ ಈಗ ವಿಮಾನದ ಅಂಚೆಯನ್ನು ಏರ್ಪಡಿಸಿರುವಂತೆ ಇನ್ನುಮುಂದೆ ಬೊಂಬಾಯಿ ಮದ್ರಾಸುಗಳ ಮಧ್ಯದಲ್ಲಿ ವಿಮಾನದ ಅಂಚೆಯನ್ನು ಸಾಗಿಸಲು ಯೋಚಿಸುತ್ತಿರುವರು.

ತುರ್ಕಿಯವರನ್ನು ಯೂರೋಪುಖಂಡದಿಂದ ಓಡಿಸಿಬಿಡಬೇಕೆಂದು ಪ್ಯಾರಿಸ್ ಸಂಧಿಸಭೆಯಲ್ಲಿ ಆಂಗ್ಲಮಂತ್ರಿಗಳು ವಾದಿಸುತ್ತಾರೆಂಬ ಹುಟ್ಟಿರುವ ವದಂತಿಗಳು ಸುಳ್ಳೆಂದು ಇಂಡ್ಯಾಸರ್ಕಾರದವರು ಸ್ಪಷ್ಟವಾಗಿ ಅದನ್ನು ಖಂಡಿಸಿ ಪ್ರಕಟನೆ ಮಾಡಿದ್ದಾರೆ.

ಕರಾಚಿ ಬೊಂಬಾಯಿಗಳಿಗೆ ಆಕಾಶ ವಿಮಾನದ ಮೂಲಕ ಅಂಚೆಯನ್ನು ಸಾಗಿಸುವುದಕ್ಕೆ ಕಳೆದ ತಾ|| ೨೪ ರಿಂದ ಆರಂಭವಾಯಿತು. ಅಲ್ಲಿಂದಲ್ಲಿಗೆ ೭೫೦ ಮೈಲಿಗಳ ದೂರವಿದೆ. ವಿಮಾನಗಳು ಗಂಟೆಗೆ ೧೦೦ ಮೈಲಿನಂತೆ ಆಕಾಶದಲ್ಲಿ ೬-೮ ಸಾವಿರ ಅಡಿಗಳ ಎತ್ತರದಲ್ಲಿ ನಡೆದವು.

ಈಗ ಅರ್ಧ ರೂಪಾಯಿ, ಪಾವಲಿ, ಒಂದಾಣೆ, ೨ ಆಣೆ ನಾಣ್ಯಗಳು ನಿಕ್ಕಲಿನಲ್ಲಿ ಮುದ್ರಿಸಲ್ಪಟ್ಟಿರುವುದರಿಂದ ರೂಪಾಯಿ ನಾಣ್ಯವೂ ಅದೇ ಲೋಹದಲ್ಲಿ ಮಾಡಲ್ಪಡುವುದೆಂದು ಸುದ್ದಿಹುಟ್ಟಿದೆ. ಈ ಸುದ್ದಿಯು ಸುಳ್ಳು, ಮುಂದೂ ರೂಪಾಯಿಯು ಮೊದಲಂತೆ ಬೆಳ್ಳಿಯಲ್ಲೇ ಅದೇ ತೂಕ ಅದೇ ಮಾದರಿಯಲ್ಲೇ ಇರುವುದೆಂದೂ ಇಂಡ್ಯಾಸರ್ಕಾರದವರು ಪ್ರಕಟಿಸಿದ್ದಾರೆ.

ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪರೀಕ್ಷೆಯನ್ನು ಕೊಟ್ಟ ಮೊದಲನೆ ನಾರೀಮಣಿಯಾದ ಬಿಲಿಜಕುಮಾರಿಯು ಕಳೆದ ತಾ|| ೨೪ ರಲ್ಲಿ ತನ್ನ ಮೈ ಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಹೊತ್ತಿಸಿಕೊಂಡು ಸುಟ್ಟುಹೋದಳು. ಅವಳಿದ್ದ ಕೊಟ್ಟಡಿಯಿಂದ ಬೆಂಕಿ ಹೊಗೆ ಬರುತ್ತಿದ್ದುದನ್ನು ಕಂಡವರು ಓಡಿಹೋಗಿ ಕದವನ್ನೊದೆದು ನೋಡುವಲ್ಲಿ ಆಕೆ ಸತ್ತುಬಿದ್ದಿದ್ದಳು. ಈಕೆಯು ತಾನು ಬಿ.ಎ. ಪರೀಕ್ಷೆ ಕೊಟ್ಟ ೬ ತಿಂಗಳಲ್ಲೇ ಎಂ.ಎ. ಪರೀಕ್ಷೆಯನ್ನು ಕೊಟ್ಟಿದ್ದಳಂತೆ. ಆತ್ಮಹತ್ಯೆಗೆ ಏನು ಕಾರಣವೋ ಗೊತ್ತಾಗಲಿಲ್ಲ.

ಈಗಣ ನೂತನ ಶಾಸನದ ಪ್ರಕಾರ ಪ್ರಾಂತಿಕ ಶಾಸನ ಸಭೆಗಳ ಸಭಿಕರ ಸಂಖ್ಯೆಯು ಈ ಕೆಳಗೆ ಕಂಡಂತೆ ಇರುತ್ತದು. ಮದ್ರಾಸು ೧೧೮, ಬೊಂಬಾಯಿ ೧೧೧, ಬಂಗಾಳಾ ೧೨೫, ಸಂಯುಕ್ತಪ್ರಾಂತ ೧೧೮, ಪಂಜಾಬು ೮೩, ಬೀಹಾರು ಒರಿಸ್ಸಾ ೯೮, ಮಧ್ಯಪ್ರಾಂತ ೭೦, ಅಸ್ಸಾಮು ೫೩. ಮತ್ತು ಗೌರ್ನರ್ ಜನರಲ್ಲರ ಮತ್ತು ಪ್ರಾಂತಿಕ ಗೌರ್ನರುಗಳ ವರ್ಷದ ಸಂಬಳಗಳು ಈ ಕೆಳಗೆ ಕಂಡಂತೆ ಇರುವುವು. ವೈಸ್ರಾಯರಿಗೆ ವರ್ಷಕ್ಕೆ ೨೫೦೦೦೦ ರೂ. ಬೊಂಬಾಯಿ, ಮದ್ರಾಸು, ಬಂಗಾಳಾ, ಸಂಯುಕ್ತ ಪ್ರಾಂತಗಳ ಗೌರ್ನರುಗಳಿಗೆ ವರ್ಷಕ್ಕೆ ೧೨೮೦೦೦ ರೂ. ಸರ್ವಸೇನಾಪತಿಗೂ ಪಂಜಾಬು, ಬೀಹಾರು, ಒರಿಸ್ಸಾ ಗೌರ್ನರುಗಳಿಗೂ ೧ ಲಕ್ಷ. ಮಧ್ಯಪ್ರಾಂತದ ಗೌರ್ನರಿಗೆ ೭೨೦೦೦, ಅಸ್ಸಾಂ ಗೌರ್ನರಿಗೆ ೬೮೦೦೦ ರೂ.

ಲಾಹೋರಿನಲ್ಲಿ ಕೆ. ಜಿ. ರುಸ್ತುಂಜಿ ಎಂಬ ಪಾರ್ಸಿ ಬ್ಯಾರಿಸ್ಟರೊಬ್ಬರು ಕಾಂಗ್ರೆಸ್ ಮತ್ತೂ ಜನರಲ್ ಡಯರ್ ಎಂಬ ಹೆಡ್ಡಿಂಗಿನಿಂದ ಸಿವಿಲ್ ಮಿಲಿಟರಿ ಗೆಜೆಟ್‌ಪತ್ರಿಕೆಗೆ ಒಂದು ಲೇಖನವನ್ನು ಬರೆದಿದ್ದರು. ಬಳಿಕ ಅವರು ಅಲ್ಲಿಯ ಹೈಕೋರ್ಟಿನಲ್ಲಿರುವ ಲಾಯರ್ ರೂಮಿಗೆ ಹೋದಾಗ ಅಲ್ಲಿ ಇತರ ಬ್ಯಾರಿಸ್ಟರುಗಳು ವಕೀಲರುಗಳೆಲ್ಲಾ ಬೇಕಾದಷ್ಟು ಜನರಿರುವಾಗ ಅವರಲ್ಲಿ ಕೆಲವರು ಈ ರುಸ್ತುಂಜಿಯನ್ನು ಕುರಿತು ಅಂಥ ಲೇಖನವನ್ನು ನೀನು ಪತ್ರಿಕೆಗೆ ಏತಕ್ಕೆ ಬರೆದೆಯೆಂದು ಆಕ್ಷೇಪಿಸಿ ೧ ಗಂಟೆ ಹೊತ್ತು ವಾಗ್ವಾದ ಮಾಡಿ ಕಡೆಗೆ ಬಡಿದಾಡಿದರು. ಅದರ ಮೇಲೆ ರುಸ್ತುಂಜಿಯವರು ತನ್ನನ್ನು ಅವಮಾನಪಡಿಸುವುದಕ್ಕಾಗಿ ೧೩ ಮಂದಿ ಬ್ಯಾರಿಸ್ಟರುಗಳೂ ವಕೀಲರುಗಳೂ ಹಾಗೆ ಮಾಡಿದರೆಂದು ಅವರ ಮೇಲೆ ಹೈಕೋರ್ಟಿನಲ್ಲಿ ಕ್ರಿಮಿನಲ್ ವ್ಯಾಜ್ಯವನ್ನು ಹೂಡಿದ್ದಾರೆ. ಅದನ್ನು ವಿಚಾರಣೆಗಾಗಿ ಮೇಜಿಸ್ಟ್ರೇಟ್ ಕೋರ್ಟಿಗೆ ಹೈಕೋರ್ಟಿನವರು ಕಳುಹಿಸಿದ್ದಾರೆ.

ವಿದೇಶ ವೃತ್ತಾಂತಗಳು.

ಅಮೇರಿಕಾದ ಚಿಕಾಗೋ ಪಟ್ಟಣದಲ್ಲಿ ಇನ್‌ಫ್ಲುಯಂಜಾ ಜ್ವರವು ಬಹಳ ತೀಕ್ಷ್ಣವಾಗಿದೆ. ಎಲ್ಲ ವೈದ್ಯಾಲಯಗಳಲ್ಲೂ ಆ ರೋಗಿಗಳೇ ತುಂಬಿದ್ದಾರೆ.

ತುರ್ಕಿ ಸಂಧಿ ರಾಯಭಾರವನ್ನು ಮಿತ್ರಮಂಡಲಿಯವರು ನಿಲ್ಲಿಸಿಬಿಟ್ಟಿದ್ದರಷ್ಟೆ. ಈಗ ಅದನ್ನು ನಿಲ್ಲಿಸದೆ ಜರುಗಿಸಲಿಕ್ಕೆ ಮಿತ್ರಮಂಡಲಿ ಪ್ರತಿನಿಧಿಗಳು ಒಂದು ಕೌನ್ಸಿಲನ್ನು ಏರ್ಪಡಿಸಿದ್ದಾರೆ.

ಬೋಲ್ಷೆವಿಕ್ಕರ ಮೇಲೆ ಯುದ್ಧಮಾಡಲಿಕ್ಕೆ ಕಾಕಸಸ್‌ಪ್ರಾಂತಕ್ಕೆ ಇಷ್ಟರೊಳಗೇ ೨ ಲಕ್ಷ ಸೈನ್ಯವನ್ನು ಮಿತ್ರಮಂಡಲಿಯವರು ಕಳುಹಿಸಿಕೊಟ್ಟಿದ್ದಾರೆಂದು ಆಂಗ್ಲಪತ್ರಿಕೆಯೊಂದು ಹೇಳಿರುತ್ತದೆ. ಆದರೆ ಬೋಲ್ಷೆವಿಕ್ಕರ ಮೇಲೆ ಯುದ್ಧಮಾಡುವ ವಿಷಯದಲ್ಲಿ ಇಂಗ್ಲೀಷ್ ಮಂತ್ರಿಮಂಡಲದಲ್ಲೇ ಭಿನ್ನಾಭಿಪ್ರಾಯವುಂಟಾಗಿತ್ತು. ಅವರ ಮೇಲೆ ಯುದ್ಧಮಾಡುವುದೇ ಸರಿಯೆಂದು ಚರ್ಚಿಲ್‌ರವರು ಹೇಳುತ್ತಿದ್ದರು. ಮುಖ್ಯಮಂತ್ರಿಯವರು ಅವರಲ್ಲಿ ನಾವು ಸಂಬಂಧವನ್ನೇ ಇಟ್ಟುಕೊಳ್ಳಕೂಡದೆಂದೂ ಅವರಷ್ಟಕ್ಕೆ ಅವರನ್ನು ಬಿಟ್ಟುಬಿಟ್ಟರೆ ಮಿತಿಮೀರಿ ಹೆಚ್ಚಿ ಅವರೇ ಕ್ಷೀಣಿಸಿಹೋಗುವರು. ಈಗ ನಾವು ಪ್ರತಿಭಟಿಸಿದರೆ ಬಹಳ ನಷ್ಟವಾಗುವುದು ಎಂದು ಅವರು ಅಭಿಪ್ರಾಯಪಟ್ಟರು. ಹೀಗೆಯೇ ಸರಿಯೆಂದು ಮಂತ್ರಿಮಂಡಲದವರೆಲ್ಲಾ ಈಗ ನಿಶ್ಚಯಿಸಿರುವರು.

ಪಿಕಿಂಗ್ ಪಟ್ಟಣದ ಒಂದು ತಂತ್ರೀವಾರ್ತೆಯಲ್ಲಿ ಈ ವಿಷಯವು ಹೇಳಲ್ಪಟ್ಟಿದೆ. ಆಸ್ಯಾಖಂಡದ ಅಭಿಮಾನದಿಂದ ಕೆಲಸಮಾಡುವುದಕ್ಕಾಗಿ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಅದನ್ನು ಜಪಾನರು ಸ್ಥಾಪಿಸಿದಂತಿದೆ. ಅದರಲ್ಲಿ ೬ ಸಾವಿರ ಮಂದಿ ಸಭಿಕರಿದ್ದಾರೆ. ಅದರ ಮುಖ್ಯ ಕಾರ್ಯಾಲಯಗಳು ಮಕ್ಕಾ, ಸೌಂಡ್ಲ, ಡೆಯಿರ್ಲ, ಕಲ್ಕತ್ತಾ, ಕಾನ್ಸ್ಟಾಂಟಿನೋಪಲ್ ಈ ಪಟ್ಟಣಗಳಲ್ಲಿರುವುವಂತೆ. ಪಾರಸಿಕ, ಅಫ್ಘಾನಿಸ್ಥಾನ, ಸಯ್ಯಾಮುಗಳಲ್ಲೂ ಕೂಡ ಅದರ ಶಾಖೆಗಳು ಸ್ಥಾಪಿಸಲ್ಪಡುವುವು. ಈ ಸಂಘದವರು ಚೀನಾ ಜಪಾನ್ ಭಾಷೆಗಳಲ್ಲಿ ಒಂದು ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಅದರಲ್ಲಿ ಬಿಳಿ ಜನಗಳನ್ನು ವಿಪರೀತವಾಗಿ ದೂಷಿಸುವ ಲೇಖನಗಳು ಕೆಲವಿವೆ. ಆಸ್ಯಾಪ್ರಮಾದ, ಇಂಡ್ಯಾ ಭಾವಿದಶೆ, ಬ್ರಿಟನ್ ಅಮೇರಿಕಗಳ ದೇಶಾಕ್ರಮಣ ಕಾಂಕ್ಷೆ ಎಂಬುದೇ ಮೊದಲಾದ ಶಿರೋಲೇಖನಗಳಿಂದ ಅನೇಕ ವ್ಯಾಸಗಳು ಪ್ರಕಟಿಸಲ್ಪಡುತ್ತವೆ. ಆಸ್ಯಾಖಂಡದವರನ್ನೆಲ್ಲಾ ಸಂಪೂರ್ಣಸ್ವಾತಂತ್ರ್ಯವನ್ನು ಹೊಂದುವಹಾಗೆ ಮಾಡುವುದೇ ಈ ಸಂಘದವರ ಆದರ್ಶವು.

ಮಿತ್ರಮಂಡಲಿಯವರು ರಷ್ಯಾದೇಶದೊಡನೆ ವ್ಯಾಪಾರಸಂಬಂಧವನ್ನು ಬೆಳೆಯಿಸುವುದಕ್ಕೆ ಒಡಂಬಡಿಕೆಯನ್ನು ಮಾಡಿಕೊಂಡರು. ಇದನ್ನು ನೋಡಿ ಮಿತ್ರಮಂಡಲಿಯವರು ಸಾಮೋಪಾಯದಿಂದ ಬೋಲ್ಷೆವಿಕ್ ಪ್ರಭುತ್ವದೊಡನೆ ಸಂಧಿ ನಡೆಯಿಸುತ್ತಿರುವರೆಂದು ಜನರು ಭಾವಿಸುತ್ತಿದ್ದರು. ಈಚೆಗೆ ಆ ಸಂಬಂಧವಾಗಿ ಬಂದಿರುವ ವಾರ್ತೆಗಳನ್ನು ನೋಡಿದರೆ ಈ ವ್ಯಾಪಾರದ ಒಡಂಬಡಿಕೆಗೆ ರಾಜಕೀಯ ಸಂಬಂಧವೇನೂ ಇಲ್ಲವೆಂದು ಗೊತ್ತಾಗುತ್ತದೆ. ರಷ್ಯಾದೇಶದಲ್ಲಿ ೧೮೬೦ ನೆ ವರ್ಷದಲ್ಲೇ ವ್ಯಾಪಾರದ ಯೂನಿಯನ್ನು ಸ್ಥಾಪಿಸಲ್ಪಟ್ಟಿದೆ. ಅದರ ಅಧ್ಯಕ್ಷನೇ ಈಗ ಮಿತ್ರಮಂಡಲಿಯವರೊಡನೆ ಒಡಂಬಡಿಕೆಯನ್ನು ನಡೆಯಿಸಿದ್ದಾನೆ. ಯೂನಿಯನ್ನಿನ ಶಾಖೆಗಳು ಆ ದೇಶದಲ್ಲಿ ೫೦೦ ಇವೆ. ಅದರ ಉಪಶಾಖೆಗಳು ೫೦ ಸಾವಿರ ಇವೆ. ಅವಕ್ಕೆಲ್ಲಾ ಒಟ್ಟು ೨|| ಕೋಟಿ ಜನ ಮೆಂಬರುಗಳಿದ್ದಾರಂತೆ. ಈ ಸಂಘಗಳು ಬೋಲ್ಷೆವಿಕ್ಕರು ಇರುವ ಸ್ಥಳಗಳಲ್ಲೂ ಇಲ್ಲದ ಸ್ಥಳಗಳಲ್ಲೂ ಇವೆ. ರಷ್ಯಾದಲ್ಲಿ ಗೋದುವೆ, ಎಣ್ಣೆಯಬೀಜಗಳು, ಪಶುಗಳು, ನಾರು ಇವುಗಳು ವಿಶೇಷವಾಗಿವೆ. ಯುದ್ಧಕ್ಕೆ ಮುಂಚೆ ವರ್ಷ ೧ ಕ್ಕೆ ಇಂಗ್ಲೀಷರೇ ರಷ್ಯಾದಿಂದ ೪|| ಲಕ್ಷ ಟನ್ನುಗಳ ಗೋದುವೆಯನ್ನು ತರಿಸಿಕೊಳ್ಳುತ್ತಿದ್ದರಂತೆ. ರಷ್ಯನರಿಗೆ ಹೊರಗಿನಿಂದ ಬೇಸಾಯದ ಮುಟ್ಟುಗಳು, ಬಟ್ಟೆಗಳು, ಜೋಡುಗಳು, ಇಂಜನುಗಳು, ಮೋಟಾರುಗಳು, ಔಷಧಗಳು ಬರಬೇಕಾಗಿರುತ್ತವೆ. ಅದುಕಾರಣ ಈ ಯೂನಿಯನ್ ಅಧ್ಯಕ್ಷನು ಆಂಗ್ಲಮಂತ್ರಿ ಲಾಯಡ್ ಜಾರ್ಜ್‌ರವರಿಗೆ ಬರೆದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಏರ್ಪಡಿಸಿರುವರು.

ಫ್ರಾನ್ಸ್ ಪ್ರಭುತ್ವವು ಹೊಸದಾಗಿ ಮಾರ್ಪಟ್ಟಿತು. ಹೊಸದಾಗಿ ನಡೆದ ಚುನಾವಣೆಯಲ್ಲಿ ಡೆಷ್ನೇನಲ್ ಎಂಬುವರಿಗೆ ಹೆಚ್ಚಾದ ಓಟುಗಳು ಬಂದುದರಿಂದ ಅವರೇ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಇವರು ಇಂಗ್ಲೀಷ್ ಫ್ರೆಂಚರ ಮೈತ್ರಿಯ ಅಭಿಮಾನವುಳ್ಳವರು. ಅತ್ಯಂತ ವಾಗ್ಮಿಗಳು ಅನೇಕ ಗ್ರಂಥಕರ್ತರು ದೊಡ್ಡ ಶಾಸ್ತ್ರವೇತ್ತರು ಅರ್ಥಶಾಸ್ತ್ರಪಂಡಿತರು ನ್ಯಾಯಧುರಂಧರರು, ಫ್ರಾನ್ಸ್ ವಿಜ್ಞಾನ ಪರಿಷತ್ಸಭಿಕರು. ಇವರಿಗೆ ಮಿಲ್ಲೆರಾಂಡ್'ರವರು ಮುಖ್ಯ ಮಂತ್ರಿಗಳಾಗಿದ್ದಾರೆ. ಬೇರೆ ಮಂತ್ರಿಮಂಡಲವು ಏರ್ಪಟ್ಟಿದೆ. ಹಿಂದಣ ಮಂತ್ರಿ ಕ್ಲೆಮೆಂಕೋರವರು ಸಂಧಿಸಭೆಯ ಅಧ್ಯಕ್ಷತೆಯಲ್ಲೇ ಇರಬಹುದಾಗಿದ್ದರೂ ರಾಜೀನಾಮೆ ಕೊಟ್ಟರು. ಸಭಿಕರು ಮನಸ್ಸಿಲ್ಲದೆ ಅದನ್ನಂಗೀಕರಿಸಿದರು. ಇವರ ಶಾಂತಿಸ್ಥಾಪನೆಗೂ ಫ್ರಾನ್ಸ್ ದೇಶಾಭ್ಯುದಯಕ್ಕೂ ಪ್ರಪಂಚ ಕ್ಷೇಮಕ್ಕೂ ಮಾಡಿದ ಅಸಮಸೇವೆಯನ್ನು ಮಿತ್ರಮಂಡಲೀ ಮಂತ್ರಿಗಳೆಲ್ಲರೂ ವಿಶೇಷವಾಗಿ ಕೊಂಡಾಡಿದರು. ಅವರ ಸೇವೆಗಾಗಿ ಅವರ ತಲೆ ತಲಾಂತರದವರೆಗೆ ಅನುಭವಿಸುವ ಜಹಗೀರಿಯೊಂದನ್ನು ಅವರಿಗೆ ಕೊಡಬೇಕೆಂದು ಫ್ರಾನ್ಸ್ ಪತ್ರಿಕೆಗಳು ಹೇಳುತ್ತಿರುವುವು. ಅದನ್ನು ತಾವೆಂದಿಗೂ ಅಂಗೀಕರಿಸುವುದಿಲ್ಲವೆಂದು ಕ್ಲೆಮೆಂಕೋರವರು ಹೇಳುವರು. ಮತ್ತು ತಮ್ಮ ಕೃತಜ್ಞತೆಯನ್ನು ಸಭಿಕರಿಗೆ ತಿಳಿಸುವಾಗ್ಗೆ—ಗ್ರೇಟ್‌ಬ್ರಿಟನ್ನು, ಫ್ರಾನ್ಸು, ಅಮೇರಿಕಾ ಸಂಯುಕ್ತರಾಷ್ಟ್ರಗಳು, ಜಪಾನು ಇವಿಷ್ಟೂ ಏಕಮತ್ಯದಿಂದ ಕೆಲಸಮಾಡುತ್ತಾ ಬಂದರೆ ಪ್ರಪಂಚ ಶಾಂತಿಯನ್ನು ಅವರು ಕಾಪಾಡಿಕೊಳ್ಳಬಲ್ಲರೆಂದೂ, ಕಾಗದದ ಮೇಲೆ ನೂರು ತೆರನಾಗಿ ಬರೆದು ಬಲಪಡಿಸಿಕೊಳ್ಳುವುದಕ್ಕಿಂತ ಇದೇ ಮುಖ್ಯವಾದುದೆಂದೂ, ಅವರು ಯಾವಾಗಲಾದರೂ ಒಡೆದುಹೋದರೆ ಏನು ಪ್ರಮಾದವುಂಟಾಗುವುದೋ ನಾನು ಹೇಳಲಾರೆನೆಂದೂ ತಿಳಿಯಿಸಿದರು.

ಪತ್ರವ್ಯವಹಾರ.

ನ್ಯಾಯವಿಧಾಯಕ ಸಭೆಯ ಮೆಂಬರುಗಳ ಚುನಾವಣೆ.

ನ್ಯಾಯವಿಧಾಯಕ ಸಭೆಗೆ ಮೆಂಬರನ್ನು ಆರಿಸುವ ಕೆಲಸವು ಚಿತ್ರದುರ್ಗದ ತಾಲ್ಲೂಕು ಕಚೇರಿಯಲ್ಲಿ ಮುನಸೀಫರ ಮೇಲ್ವಿಚಾರಣೆಯಲ್ಲಿ ನಡೆಯಿತು. ಇಲ್ಲಿಗೆ ಕಳುಹಲ್ಪಟ್ಟಿದ್ದ ಪೋಲಿಂಗ್ ಪೆಟ್ಟಿಗೆಯು ಸಾಮಾನ್ಯ ಜಾಯಿಕಾಯಿ ಮರದಿಂದ ಮಾಡಲ್ಪಟ್ಟಿದ್ದಿತಲ್ಲದೆ ಯಾರು ಬೇಕಿದ್ದರೂ ಬೀಗವನ್ನು ತೆಗೆಯುವಂತಿದ್ದಿತು. ಕೆಲ ಓಟರುಗಳು ಪೆಟ್ಟಿಗೆಯ ಮೇಲಿನ ರಂಧ್ರದಲ್ಲಿ ತಮ್ಮ ಓಟುಗಳನ್ನು ಹಾಕುವುದಕ್ಕೆ ಬದಲು ಬಾಗಿಲನ್ನು ತೆಗೆದು ಹಾಕಿದರೆಂದೂ, ಶೇಕದಾರರು ಶಾನುಭೋಗರು ಮೊದಲಾದ ಸರ್ಕಾರಿಯ ನೌಕರರುಗಳು ಬ್ರಾಹ್ಮಣ ಉಮೇದುವಾರರಿಗೇ ಓಟನ್ನು ಕೊಡಿಯೆಂದು ಪ್ರತಿಯೊಬ್ಬ ಓಟರನ್ನೂ ಬಲವಂತಪಡಿಸುತ್ತಿದ್ದರೆಂದೂ, ಇವರಂತೆ ಬ್ರಾಹ್ಮಣೇತರ ಉಮೇದುವಾರರಿಗೆ ಸಹಾಯಮಾಡತಕ್ಕವರಾರೂ ಇರಲಿಲ್ಲವೆಂದೂ ಕೇಳಿದೆನು. ಇದೆಲ್ಲವೂ ನಿಜವಾಗಿದ್ದಲ್ಲಿ ಬಹಳ ವಿಷಾದವೆನಿಸುವದು ಮತ್ತು ಸರ್ಕಾರದವರು ಇದಕ್ಕೆ ಗಮನ ಕೊಟ್ಟು ತಕ್ಕ ವಿಚಾರಣೆ ಮಾಡಿ ತಮ್ಮ ಉದ್ದೇಶಕ್ಕೆ ಭಂಗಬಾರದ ರೀತಿ ತಕ್ಕ ಕಾರ್ಯಭಾಗವನ್ನು ನಡಿಸುವರೆಂದು ನಿರೀಕ್ಷಿಸುತ್ತೇನೆ.

ನಿಷ್ಪಕ್ಷಪಾತಿ.

ಶ್ರೀಮದ್ವೀರಶೈವ ಶಿವಯೋಗ ಮಂದಿರದ ಮಹಾಶಿವರಾತ್ರಿಯ ಸಮಾರಂಭವು.

ವಾಡಿಕೆಯಂತೆ ಇದೇ ಮಾಘ ಬ|| ೧೪-೩೦ ಫಾಲ್ಗುಣ ಶು|| ೧ (ತಾರೀಖು ೧೮-೧೯-೨೦ ಫೆಬ್ರವರಿ ೧೯೨೦) ದಿವಸ ಇಲ್ಲಿ ಯಾತ್ರಾಸಮಾರಂಭವೂ ಮಹಿಳಾಪರಿಷತ್ತೂ ಜರುಗುವುವು. ವಕ್ತೃತ್ವಕಲೆಯುಳ್ಳ ಪಂಡಿತರ ವ್ಯಾಖ್ಯಾನ ಪುರಾಣ ಹಾಗು ಶಿವಕೀರ್ತನ ಸಂಗೀತ ಭಜನೆಗಳೂ ಧರ್ಮಗ್ರಂಥಗಳಲ್ಲಿ ಪರೀಕ್ಷೆ ಮಂಗಲರಥೋತ್ಸವ ಮುಂತಾದ ಕಾರ್ಯಗಳು ಜರಗುವುವು. ಕಾರ್ಯಕ್ರಮ—ಬುಧವಾರ ಮಹಾಶಿವರಾತ್ರಿಯ ದಿವಸ ವಾಡಿಕೆಯಂತೆ ಸಾಯಂಕಾಲಕ್ಕೆ ಪಾದಪೂಜಾ, ರಾತ್ರಿ ಪುರಾಣಕೀರ್ತನಗಳು ಬ|| ೩೦ ಗುರುವಾರ ದಿವಸ ಮುಂಜಾನೆ ಆಲೋಚನಾಸಭೆಯು; ಮಧ್ಯಾಹ್ನದ ೨ ಘಂಟೆಯಿಂದ ೫ ಗಂಟೆವರೆಗೆ ಬೇರೆ ಬೇರೆ ಸ್ಥಳಗಳಲ್ಲಿ ಸ್ತ್ರೀಯರ ಹಾಗೂ ಪುರುಷರ ಧರ್ಮಗ್ರಂಥಗಳ ಪರೀಕ್ಷೆಯು; ಮತ್ತು ಭಾಷಣಗಳು. ೫ ಗಂಟೆಯಿಂದ ೭ ಗಂಟೆವರೆಗೆ ರಥೋತ್ಸವವು ೭ ಗಂಟೆಯಿಂದ ೯ ಗಂಟೆವರೆಗೆ ಶಿವಕೀರ್ತನ ಶು|| ೧ ಶುಕ್ರವಾರದ ದಿವಸ ಮುಂಜಾನೆ ೭ ಗಂಟೆಯಿಂದ ೧೧ ಗಂಟೆವರೆಗೆ ಶ್ರೀ ಸಾಧಕರ ಹಾಗು ವಟುಗಳ ಪರೀಕ್ಷೆಯೂ ಉತ್ತಮ ಹೋರಿ ಮುಂತಾದುವುಗಳ ಮಾರಾಟವೂ ಆಲೋಚನಾ ಸಭೆಯೂ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಇನಾಮುಗಳು ಹಂಚಲ್ಪಡುವವು. ಮಧ್ಯಾಹ್ನದಲ್ಲಿ ಭಾಷಣವು ಹೋರಿಗಳ ಮಾರಾಟವು ರಾತ್ರಿ ೭ ರಿಂದ ೯ ರವರೆಗೆ ಕೀರ್ತನ ಮತ್ತು ವಾಹನೋತ್ಸವಗಳು. ಆದ್ದರಿಂದ ಜನರಲ್ ಕಮಿಟಿಯ ಮೆಂಬರುಗಳೂ ಹಾಗು ಧರ್ಮಾಭಿಮಾನಿಗಳೂ ಆದ ತಾವು ತಮ್ಮ ಜನರೊಡನೆ ಇತರ ಕ್ಷೇತ್ರಯಾತ್ರೆಗಳಿಗೆ ಹೋಗುವಂತೆ ಇಲ್ಲಿಗೆ ಕುಟುಂಬ ಸಹಿತ ಬಂದು ಇಲ್ಲಿ ಜರಗುವ ಪುಣ್ಯಕಾರ್ಯಗಳ ಫಲಭಾಗಿಗಳಾಗಿ ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕಾಗಿ ಕೋರುತ್ತೇವೆ. ಮಂದಿರವು ವಿಜಾಪುರ ಜಿಲ್ಲಾ ಬಾದಾಮಿ ಸ್ಟೇಷನ್ನಿನಿಂದ ೯ ಮೈಲಿ ಅಂತರದಲ್ಲಿ ಆದೆ, ಬಾಡಿಗೆಯ ಟಾಂಗಾ ಹಾಗು ಬಂಡಿಗಳು ಸ್ಟೇಷನ್ನಿನಲ್ಲಿ ದೊರೆಯುವುವು.

ವ್ಯವಸ್ಥಾಪಕ.

[ವೀರಶೈವ ಮತದಲ್ಲಿ ಅಂತಃಕಲಹವನ್ನು ಬೆಳೆಯಿಸಿ ಘಾತಮಾಡತಕ್ಕ ಪ್ರಕಟನೆಗಳನ್ನು ಕೆಲವರು ಈ ಮಧ್ಯೆ ಹಬ್ಬಿಸುತ್ತಿದ್ದಾರೆ. ಇದು ಮತ ಶ್ರೇಯಃಕಾಂಕ್ಷಿಗಳಿಗೆಲ್ಲಾ ಅಸಂಮತವೂ ವಿಷಾದಜನಕವೂ ಆಗಿದೆ. ಅದುಕಾರಣ ಸಮಾಜದವರು ಅವನ್ನು ನಿಷೇಧಿಸುವುದು ಯುಕ್ತವಾಗಿರುತ್ತದೆ. ಇಂಥ ಪ್ರಯತ್ನವನ್ನು ಮೊಟ್ಟಮೊದಲು ಮರಾಟಾದೇಶದ ವೀರಶೈವರು ಕೈಕೊಂಡಿದ್ದು ಅವರು ನಡೆಯಿಸಿದ ಸಭಾನಿರ್ಧಾರವನ್ನು ಮುದ್ರಿಸಿ ಕಳುಹಿಕೊಟ್ಟಿದ್ದಾರೆ. ಅದನ್ನು ಈ ಕೆಳಗೆ ಪ್ರಕಟಿಸಿದ್ದೇವೆ. ಪ.ಪ್ರ.]

ನಿಷೇಧಪತ್ರಿಕಾ.

ಸುಮಾರು ಎರಡು ಮೂರು ತಿಂಗಳ ಮೊದಲು ಬೆಂಗಳೂರಲ್ಲಿ ಸನ್ಯಾಸಾಶ್ರಮ ವಿಮರ್ಶತತ್ತ್ವ ಸ್ಥಿರೀಕರಣಂ ಎಂಬ ಹೆಸರಿನ ಒಂದು ಗ್ರಂಥವು ಪ್ರಸಿದ್ಧವಾಗಿದೆ. ಈ ಗ್ರಂಥದಲ್ಲಿ ಲೇಖಕನು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಬೃಹನ್ಮಠ ಚಿತ್ರದುರ್ಗ, ಮತ್ತೂ ಗದಗ, ಹುಬ್ಬಳ್ಳಿ, ಉರೇಕೊಂಡೆ, ಡಂಬಳ ಇತ್ಯಾದಿ ಸ್ಥಳಗಳ ದೊಡ್ಡದೊಡ್ಡ ಪೂಜ್ಯಮಹಾಸ್ವಾಮಿಗಳ ಸಂಬಂಧದಿಂದ ತನ್ನ ಅನಾದರವನ್ನು ವ್ಯಕ್ತಮಾಡಿದ್ದಾನೆ. ಮತ್ತು ಸದರಿ ಮಹಾಸ್ವಾಮಿಗಳ ಮತ್ತು ಶ್ರೀಮದ್ವೀರಶೈವ ಧರ್ಮಸಂಸ್ಥಾಪನಾಚಾರ್ಯ ಗುರುಸ್ಥಲದ ಪೀಠಾಧಿಕಾರಿ ಚರಮೂರ್ತಿ ಮಠ ಸಂಸ್ಥಾನಿಕವರ್ಗ ಮತ್ತು ಸಮಸ್ತ ವೀರಮಾಹೇಶ್ವರ ಭಕ್ತಮಂಡಳಿ ಇವರಲ್ಲಿ ಪುರಾತನ ಕಾಲದಿಂದ ನಡೆಯುತ್ತ ಬಂದ ಪೂಜ್ಯಪೂಜಕಭಾವ ಸಂಬಂಧದಿಂದ ಶಂಕಾಪ್ರದರ್ಶನ ಮಾಡಿದ್ದಾನೆ. ಲೇಖಕನು ತನ್ನ ಅಭಿಪ್ರಾಯದ ಸಮರ್ಥನದ ದೆಸೆಯಿಂದ ನಿರ್ಮಲವೂ ಪವಿತ್ರವೂ ಆದ ಶಾಸ್ತ್ರವಚನಗಳ ಅರ್ಥವನ್ನು ವ್ಯತ್ಯಾಸಮಾಡಿ ಜನಗಳ ಕಣ್ಣಲ್ಲಿ ಮಣ್ಣನ್ನು ಚೆಲ್ಲುವ ಅಶ್ಲಾಘ್ಯ ಯತ್ನಮಾಡಿದ್ದಾನೆ. ಗ್ರಂಥದ ಭಾಷೆಯ ಮೇಲಿಂದ ಲೇಖಕನಿಗೆ ಮೇಲೆ ಹೇಳಿದ ಪೂಜ್ಯಮಹಾಸ್ವಾಮಿಗಳಿಗೆ ಉತ್ತರೋತ್ತರಶಾ

ಗಿ ಅಗುತ್ತ ನಡೆದ ಗೌರವ ಪ್ರಶಂಸೆಗಳು ಸಹನವಾಗುವದಿಲ್ಲ. ಮತ್ತು ತತ್ವಬೋಧಮಾಡುವ ಸತ್ಯವಾದ ಉದ್ದೇಶದಿಂದಲ್ಲದೆ ಕೇವಲ ಹೊಟ್ಟೆಕಿಚ್ಚಿನಿಂದ (ಮತ್ಸರದಿಂದ) ಪ್ರೇರಿತನಾಗಿ ಬರೆಯುತ್ತ ಹೋಗಿದ್ದಾನೆಂಬುವದು ಸ್ಪಷ್ಟವಾಗಿ ಕಾಣುತ್ತದೆ. ಆದರೂ ಈ ವಿಧವಾದ ಅಮಂಗಲ, ಆತ್ಮಘಾತಕ, ನಿರಾಧಾರ, ವಿರೋಧವರ್ಧಕ, ಅನುಚಿತ ಮತ್ತು ಅಂತಃಕಲಹವರ್ಧಕವಾದ ಬರವಣಿಗೆಯನ್ನು ನಾವು ಈ ಕೆಳಗೆ ಸಹಿಮಾಡುವ ಜನರು ಅತ್ಯಂತ ಆಗ್ರಹಪೂರ್ವಕವಾಗಿ ನಿಷೇಧಮಾಡುತ್ತೇವೆ. ಮತ್ತು ಈ ಲೇಖದಲ್ಲಿ ಮಾಡಿದ ವಿಧಾನಕ್ಕೆ ಕೆಲವು ಗುರುಸ್ಥಲ ಆಚಾರ್ಯಪೀಠಾಧಿಕಾರಿಗಳ ಸಮ್ಮತಿಯದೆಯೆಂದು ಯಾವ ಲೇಖಕನು ತೋರಿಸಿರುವನೋ ಅದು ಕೇವಲ ಕಿಡಿಗೇಡಿತನದ್ದಾಗಿದೆ. ಮತ್ತು ಒಂದುವೇಳೆ ಯಾರಾದರೂ ಎರಡನೇ ಪೀಠಾಧಿಕಾರಿಗಳು ಅದಕ್ಕೆ ಸಮ್ಮತಿಕೊಡುತ್ತಿದ್ದರೂ ಸರ್ವಸಾಧಾರಣ ಪೀಠಾಧಿಕಾರಿ ವರ್ಗದವರು ಈ ಪ್ರಕಾರವಾದ ಅಂತರ್ವಿರೋಧ ಬೆಳಸುವ ಗ್ರಂಥಕ್ಕೆ ಅಗದಿ ವಿರುದ್ಧವಾಗಿದ್ದಾರೆ. ಹೀಗೆ ನಾವು ಲೇಖಕನಿಗೆ ಸ್ಪಷ್ಟವಾಗಿ ತಿಳಿಸುತ್ತೇವೆ. ಸದ್ಯಃಸ್ಥಿತಿಗೆ ಅನುಸರಿಸಿ ನಮ್ಮ ಉಭಯ ಗುರುವರ್ಗಾಧಿಕಾರಿ ಮಂಡಳಿಯವರು ತಮ್ಮ ತಮ್ಮ ಅಧಿಕಾರದಂತೆ ನಡೆಯತಕ್ಕದ್ದು; ಮತ್ತು ಇಂಥ ಪ್ರಕಾರದ ನಿಂದ್ಯವಾದ ಕಲಹಕ್ಕೆ ಯಾವಾಗಲೂ ಆತುರಪಡಬಾರದು. ಹೀಗೆ ನಮ್ಮ ಉಭಯ ಗುರುವರ್ಗಾಧಿಕಾರಿ ಮಂಡಳಿಯವರಿಗೆ ಅತ್ಯಂತ ವಿಧೇಯತೆಯ ವಿನಂತಿಯುಂಟು. ಮೇಲಿನ ಕಾರಣದ ದೆಸೆಯಿಂದ ಸದರಿ ಗ್ರಂಥದ ಲೇಖಕ (ನಾಗನೂರ ಪಂ. ಕಾಶೀನಾಥಶಾಸ್ತ್ರಿ) ಇವರು ಮೇಲಿನ ಪೂಜ್ಯವಿಭೂತಿಗಳವರ ಕ್ಷಮಾಬೇಡಿ, ಮಾಡಿದ ದೋಷದ ಪ್ರಾಯಶ್ಚಿತ್ತ ತೆಗೆದುಕೊಳ್ಳತಕ್ಕದ್ದು. ಮತ್ತು ಇನ್ನುಮುಂದೆ ಇಂಥ ಪರಸ್ಪರದಲ್ಲಿ ವಿರೋಧ ಬೆಳಸುವ ಲೇಖನವನ್ನು ಪ್ರಸಿದ್ಧಮಾಡಲಾಗದು. ಹೀಗೆ ಅವರಿಗೆ ನಮ್ಮ ಸೂಚನೆ ಉಂಟು.—1. ಶ್ರೀಮನ್ಮೂರ್ತಿ ಶಾಂತವೀರಸ್ವಾಮಿ ಪೀಠಾಧಿಕಾರಿ ಚರಮೂರ್ತಿಮಠ ಸಂಸ್ಥಾನ ಅನಸಾ ಹಳ್ಳ ಮುಕ್ಕಾಂ ಬಾರ್ಸಿ. 2. ಶ್ರೀ ಬಿಂಧಪೀಠಾಧಿಕಾರಿ ಚರಮೂರ್ತಿ ಶ್ರೀ ಗಂಗಾಧರಸ್ವಾಮಿ ಉರ್ಫ ಮಾಹೇಶ್ವರಸ್ವಾಮಿ ಆದಿಮಠ ಸಂಸ್ಥಾನ ಬಿಂಧ. 3. ಮಾರಲಿಂಗಪ್ರಭು ಅಯ್ಯಾಸ್ವಾಮಿ ಪ್ರಬೋಧರತ್ನ ಛಾಪಖಾನ ಮಾಲಕ ಬಾರ್ಸಿ. 4. ಭಾವು ಅಯ್ಯಾಸ್ವಾಮಿ ಮಠಪತಿ ದಂ. ಬಾರಯ್ಯ. 5. ಬಂಡುಅಯ್ಯ ಮಾಹದಯ್ಯ ಸ್ಥಳಪತಿ ದ. ಖುದ್ದ ಇತ್ಯಾದಿಯಾಗಿ ೪೦-೫೦ ರುಜುವಿದೆ.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರುಷ ಇಲ್ಲಿ ಬೆಳೆ (ಹವಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವನು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

3 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಾವುಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

49 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚಿಕ್ಕದಾಗಿ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸಲ್ಪಹಾಕಿದರೆ ತಲೆದಿಂಬಾಗುವುದು ತಿಣಿ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ



ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಥಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ವಿಳಾಸ: —ವಿ. ಎ. ಎಸ್. ಪಾಣಿ ಕಂಪನಿ,
49 ಸಾಹುಕಾರಪೇಟೆ, ಮದರಾಸು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 28

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಿಬುಕು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦

೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೬—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ

ಮಿತ್ತು ನಿಜ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿ ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
19 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾತಕವಾಗಲಾರದು ಅತ್ಯಂತ

ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೊಳುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆತ್ಮಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವವು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ: —ಡಾಕ್ಟರ್ ಎಂ. ಪ್ಲೀಡರ್,
49 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನ ರಿಜಸ್ಟರ ಮಾಡಲ್ಪಟ್ಟ 16

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹದೆಸರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಅದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇತ್ರಿಜಿದ್ದು, ಗುದವ್ರಣಬೇನೆ, ಹುರುತುರಿಜ್ಜ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹದಿನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೋಘ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಶಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಜೊತೆ ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಲಬ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಫೆಬ್ರವರಿ ತಾ|| ೧ ರಿಂದ ೧೯೨೦ ನೆಯ ಫೆಬ್ರವರಿ ತಾ|| ೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾಘಶುದ್ಧ ದ್ವಾದಶಿಯಿಂದ ಮಾಘ ಬ|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಮಾಸ
1	[1]ಭಾನು	ದ್ವಾದ	33-41	ಮೃಗ	7-43	19
2	[2]ಸೋಮ	ತ್ರಯೋ	28-19	ಆರ್ದ್ರಾ	3-47	20
3	[3]ಮಂಗಳ	ಚತು	23-17	ಪುನ	0-16	21
4	ಬುಧ	ಪೌರ್ಣ	18-55	ಆಶ್ಲೇ	54-35	22
5	ಗುರು	ಪಾಡ್ಯ	15-27	ಮಘಾ	53-17	23
6	ಶುಕ್ರ	ಬಿದಿಗೆ	13-0	ಪುಬ್ಬ	53-10	24
7	[4]ಶನಿ	ತದಿಗೆ	11-40	ಉಬ್ಬ	54-12	25

(1) ಶಿವನಸಮುದ್ರದ ರಂಗಸ್ವಾಮಿ ರಥಃ. (2) ಸೋಮಪ್ರದೋಷಃ. (3) ತ್ರಿನೇತ್ರಸ್ವಾಮಿ ರಥಃ. (4) ಸಂಕಟಹರಚತುರ್ಥೀ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃಶಾವಶಾರಾ ಪಕ್ಷಜ್ಞ ನಹ್ಯತ ಮೋಹರಾಜೀಯತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತವಾಲಾಕುಲಂ | ಪ್ರೇಮಂಚೆತ್ರಿಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಫೆಬ್ರವರಿ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೬

MYSORE GOVERNMENTVE ADRTISEMENTS.

27

Government Botanic Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE ECONOMIC JOURNAL.

A Monthly Periodical devoted to the Discussion of all Economic Topics of Interest.

Special Features.

Original articles on Economic subjects by writers of note; summary of articles of interest from Indian and Foreign Economic periodicals; selations from important speches and papers on Economic subjects; notes of the month on current Economie matters; notes on various Economic activities in and outside the State, and topical portraits and illustrations.

Annual Subscription.

Mysore State	Rs. 3
Outside Mysore State ...	Rs. 4
Great Britain	Sh. 8
America	$ 2
Single copy	As. 8

The Journal is an excellent medium for advertising all matters of Economic utility. The following is the schedule of rates:—

For full page, Rs. 10 per insertion.
„ half „ „ 6 „
„ quarter „ „ 3½ „

One anna per line for speial short advertisements not exceeding four lines each.

Contract rates on application.

For sample copy send eight annas stamp.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪದ್ಯದ ಗ್ರಂಥ.

ಪಂಚಶಿಕ್ಷೋಶೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 15

ನಾವು ಎ. ಅಲ್ ಬ್ರುಕ್ಸ್ಯರ್ ಕ್ಕು ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್‌ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

13

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಫಾಲಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರಂಡ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ,

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
7 ವೈದ್ಯಶಾಲಾ, ಮೈಸೂರು

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 8

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦— ೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ,	೦— ೫—೦
ಪಂಚಾಂಗ	೦— ೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಫೆಬ್ರುವರಿ ತಾ|| ೮ ನೆಯ ಭಾನುವಾರ.

ಸಾಮ್ರಾಜ್ಯಶಾಸನ ಸಭೆ.

ದಿಲ್ಲಿ ಪಟ್ಟಣದಲ್ಲಿ ವೈಸ್ರಾಯರ ಅಧ್ಯಕ್ಷತೆಯಿಂದ ಸಾಮ್ರಾಜ್ಯಶಾಸನ ಸಭೆಯು ಕಳೆದ ತಿಂಗಳು ತಾ|| ೩೦ ರಲ್ಲಿ ಕೂಡಿದ್ದಿತು. ಸರ್ ಪ್ರತಾಪಸಿಮ್ಮರೇ ಮೊದಲಾದ ಅನೇಕ ಮಹಾಜನರು ಪ್ರೇಕ್ಷಕರಾಗಿ ಬಂದಿದ್ದರು. ಅ|| ಪಂಡಿತ ಮದನಮೋಹನಮಾಳವ್ಯ, ಸರ್ ವಾಚಾ ಮೊದಲಾದ ಕೆಲ ಸಭಿಕರು ಮಾತ್ರ ಬಂದಿರಲಿಲ್ಲ. ಉಳಿದ ಸಭಿಕರೆಲ್ಲಾ ಬಂದಿದ್ದರು. ೧೯೧೬ ನೆ ವರ್ಷದಲ್ಲಿ ಘನತೆಯನ್ನೈದಿದ ಅಲಗ್ಸಾಂಡ್ರಿಯಾ ಮಹಾಮಾತೃಶ್ರೀಯವರು, ಭಾರತಸೈನಿಕರು ಮಹಾಯುದ್ಧದಲ್ಲಿ ತೋರಿಸಿದ ಪರಾಕ್ರಮಾದಿಗಳನ್ನು ಮೆಚ್ಚಿ ಅದಕ್ಕೆ ತಮ್ಮ ಅಭಿನಂದನವನ್ನು ತಿಳಿಯಪಡಿಸುವುದಕ್ಕಾಗಿ ಆಂಗ್ಲದೇಶದ ಸ್ತ್ರೀಯರೂ ಬಾಲಕರೂ ಭಾರತಸೈನಿಕರಿಗೆ ಕೊಡಲು ಉದ್ದೇಶಿಸಿದ್ದ ಒಂದು ಆಂಗ್ಲಪತಾಕೆಯನ್ನೂ, ಒಂದು ಕತ್ತಿಯನ್ನೂ ಸ್ಟೇಟ್‌ಸೆಕ್ರಟರಿಯವರ ಕಾರ್ಯಾಲಯದಲ್ಲಿ ಸ್ವತಃ ಸರ್ ಪ್ರತಾಪಸಿಮ್ಮರವರ ಹಸ್ತಕ್ಕೆ ಅನುಗ್ರಹಿಸಿದ್ದರು. ಅದನ್ನು ವೈಸ್ರಾಯರ ಅಧೀನಪಡಿಸುವುದಕ್ಕಾಗಿಯೂ ಅದನ್ನು ಈ ಸಭೆಯಲ್ಲಿ ಶಾಶ್ವತವಾಗಿಡಿಸುವುದಕ್ಕಾಗಿಯೂ ಸರ್ ಪ್ರತಾಪಸಿಮ್ಮರೇ ಈ ಸಭೆಗೆ ಬಂದಿರುವರೆಂದು ಭರತಖಂಡದ ಸರ್ವಸೇನಾಪತಿಗಳು ಉಪನ್ಯಾಸಮಾಡಿ, ಆವೆರಡು ಪದಾರ್ಥಗಳನ್ನೂ ವೈಸ್ರಾಯರಿಗೆ ಸಮರ್ಪಿಸಿದರು. ಅದನ್ನು ಸಭಾಭವನದ ಗೋಡೆಗೆ ಅಲಂಕರಿಸಿದರು. ಬಳಿಕ ವೈಸ್ರಾಯರು ಆರಂಭಭಾಷಣವನ್ನು ಮಾಡಿದರು. ಅದರಲ್ಲಿ ಸದ್ಯಃಕಾಲೀನ ಮುಖ್ಯವಿಷಯಗಳೆಲ್ಲಾ ವಿಮರ್ಶಿಸಲ್ಪಟ್ಟಿದ್ದುವು.

ಎಲ್ಲಕ್ಕೂ ಮೊದಲಾಗಿ ಅವರು ನೂತನ ರಾಜಕೀಯಸಂಸ್ಕರಣಶಾಸನದ ವಿಷಯವನ್ನು ಎತ್ತಿಕೊಂಡು, ಅದಕ್ಕಾಗಿ ಕಷ್ಟಪಟ್ಟು ಶ್ರದ್ಧೆಯಿಂದ ಕೆಲಸ ಮಾಡಿದವರಲ್ಲಿ ಮುಖ್ಯವಾಗಿ ಮಿ|| ಮಾಂಟೂಗಾರವರ, ಲಾರ್ಡ್ ಮೆಸ್ಟನ್‌ರವರ, ಮಿ|| ಮಡ್ಡಿಮನ್‌ರವರ ಹೆಸರುಗಳನ್ನು ಹೇಳಿ ಅವರಿಗೆ ನಾವು ಕೃತಜ್ಞರಾಗಿರಬೇಕೆಂದು ತಿಳಿಯಿಸಿದರು. ಆದರೆ ಲಾರ್ಡ್ ಸಿಮ್ಮರ ಹೆಸರನ್ನು ಈ ಸಂದರ್ಭದಲ್ಲಿ ಎತ್ತಿಕೊಳ್ಳದಿದ್ದುದಕ್ಕೇನು ಕಾರಣವೋ ತಿಳಿಯಲಿಲ್ಲ. ಲಾರ್ಡ್ ಸಿಮ್ಮರು ಬೊಂಬಾಯಿಗೆ ಬಂದಿಳಿದಾಗ್ಗೆ ಈ ಶಾಸನದ ಅವತರಣಮೂಲವನ್ನು ವಿವರಿಸುವಾಗ್ಗೆ ಇದಕ್ಕೆ ಆಗಸ್ಟ ೨೦ ನೆ ತಾರೀಖಿನ ಪ್ರಕಟನೆಯೇ ಆಧಾರವೆಂತಲೂ, ಅದಕ್ಕೆ ವೈಸ್ರಾಯಿ ಚೆಲಮ್ಸ್‌ಫರ್ಡ್ ಪ್ರಭುಗಳೇ ಮೂಲಕಾರಣರೆಂತಲೂ, ಅವರ ದೃಢಪ್ರಯತ್ನದಿಂದಲೇ ಆ ಪ್ರಕಟನವಾಯಿತೆಂತಲೂ, ಅವರು ಹಾಗೆ ಪ್ರಯತ್ನಪಡುವುದಕ್ಕೂ ಕೂಡ ೧೯೧೫ ನೆ ವರ್ಷದಲ್ಲಿ ತಾನು ದೇಶೀಯ ಮಹಾಸಭಾಧ್ಯಕ್ಷತೆಯಿಂದ ಮಾಡಿದ ಉಪನ್ಯಾಸದಲ್ಲಿ ಇಂಥ ಪ್ರಕಟನವೊಂದನ್ನು ಮಾಡುವುದು ಅತ್ಯವಶ್ಯಕವೆಂದು ಸೂಚಿಸಿದ್ದೆನೆಂತಲೂ, ಲಾರ್ಡ್ ಚೇಮ್ಸ್‌ಫರ್ಡರು ಆಗ ವೈಸ್ರಾಯರಾಗಿಲ್ಲದಿದ್ದರೂ ಈ ದೇಶದಲ್ಲೇ ಇದ್ದು ಈ ನನ್ನ ಸೂಚನೆಯ ಆವಶ್ಯಕತೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದು, ಸೀಮೆಗೆ ಹೋಗಿ ಮರಳಿ ಈ ದೇಶಕ್ಕೆ ವೈಸ್ರಾಯರಾಗಿ ಬಂದರೆಂತಲೂ, ಸೀಮೆಗೆ ಹೋಗಿದ್ದಾಗ ಅಲ್ಲಿಯ ಮಂತ್ರಿಮಂಡಲದವರೊಡನೆ ಈ ವಿಷಯವಾಗಿ ಚೆನ್ನಾಗಿ ಆಲೋಚಿಸಿದುದಲ್ಲದೆ ಈ ದೇಶಕ್ಕೆ ಬಂದಮೇಲೂ ಇಲ್ಲಿಯ ತಮ್ಮ ಕಾರ್ಯನಿರ್ವಾಹಕಸಭಾ ಸಭಿಕರೊಡನೆಯೂ ಆಲೋಚಿಸಿ, ಆಗಸ್ಟ ಪ್ರಕಟನೆಯ "ನಕಲನ್ನು" ಸಿದ್ಧಪಡಿಸಿ, ತದಾರಭ್ಯ ಈ ಸಂಸ್ಕರಣಕ್ಕಾಗಿ ವಿಶೇಷ ಶ್ರದ್ಧೆಯನ್ನು ವಹಿಸಿ ಕೆಲಸ ಮಾಡಿದುದರಿಂದಲೇ ಈ ಶಾಸನವು ಜನಿಸುವುದಕ್ಕೆ ಕಾರಣವಾಯಿತೆಂತಲೂ ಹೇಳಿ, ಇಂಥವರ ವಿಷಯದಲ್ಲಿ ಕೃತಜ್ಞತಾವಂದನೆಗಳನ್ನು ತಿಳಿಯಿಸದೆ ಬಿಡುವುದು ಭಾರತೀಯರಿಗೆ ಧರ್ಮವಲ್ಲವೆಂದು ಹೇಳಿದ್ದರು. ಅಂಥ ಲಾರ್ಡ್ ಸಿಮ್ಮರೇ ಈ ಸಂಸ್ಕರಣವನ್ನು ಲಾರ್ಡುಗಳ ಸಭೆಯಲ್ಲಿ ಉತ್ತೀರ್ಣವಾಗುವಂತೆ ಮಾಡುವಲ್ಲಿ ಬಹಳ ಜಾಣ್ಮೆಯನ್ನು ತೋರಿಸಿ, ಅದನ್ನು ಶಾಸನವಾಗುವಂತೆ ಮಾಡಿಕೊಂಡರು. ಅವರ ಹೆಸರನ್ನು ವೈಸ್ರಾಯರು ಈ ಸಂದರ್ಭದಲ್ಲಿ ಸ್ವಲ್ಪವೂ ಎತ್ತಿಕೊಳ್ಳದೆ ಹೋಗಿರುವುದು ಭಾರತೀಯರಿಗೆ ಆಶ್ಚರ್ಯಕರವಾಗಿರುವುದು. ಈ ಶಾಸನದ ಉದಯಕ್ಕೆ ಆದಿಕಾರಣವು ತಮ್ಮ ಸೂಚನೆಯೇ ಎಂದು ಲಾರ್ಡ್ ಸಿಮ್ಮರವರು ಆಡಿದ ಮಾತು ಲಾರ್ಡ್ ಚೆಲಮ್ಸ್‌ಫರ್ಡ್‌ರವರಿಗೆ ಸರಿಬೀಳದೆ ಹೀಗೇನಾದರೂ ಮಾಡಿದರೋ ಎಂದು ಊಹಿಸುವುದಕ್ಕೆ ಅವಕಾಶವುಂಟಾಗಿರುವುದು.

ಈ ಶಾಸನದ ವಿಷಯವಾಗಿ ಇನ್ನು ಕೆಲ ಮಾತುಗಳನ್ನು ವೈಸ್ರಾಯರು ಹೇಳಿದುದರಲ್ಲಿ-ಮುಂದೆ ಭಾರತೀಯ ಮಂತ್ರಿಗಳು ಕೆಲಭಾಗ ರಾಜ್ಯಭಾರಗಳನ್ನು ವಹಿಸುವವರಾಗಿರುವುದರಿಂದ ರಾಜ್ಯರಥವು ಸುಸೂತ್ರವಾಗಿ ಜರುಗುವುದೆಂದೂ, ಇನ್ನೊಂದು ವರ್ಷಕಾಲ ನಾವು ಕಷ್ಟಪಟ್ಟು ಕೆಲಸ ಮಾಡಬೇಕಾಗಿರುವುದೆಂದೂ, ಹಾಗೆ ಮಾಡಿದರೆ ಈಗಣ ನೂತನ ಶಾಸನಪ್ರಕಾರ ರಾಜ್ಯರಥವನ್ನು ನಿರಾಘಾತವಾಗಿ ಸಾಗಿಸಿಕೊಂಡು ಹೋಗಲು ಅನುಕೂಲಿಸುವುದೆಂದೂ, ಇದಕ್ಕಾಗಿ ಇಂಡ್ಯಾಸರ್ಕಾರದವರು ನೂತನ ಸಂಸ್ಕರಣಗಳ ಕಮಿಷನರ್ ಕಾರ್ಯಾಲಯವೊಂದನ್ನು ಸ್ಥಾಪಿಸಿರುವರೆಂತಲೂ, ಆ ಕಮಿಷನರು ಎಲ್ಲ ಕಾರ್ಯವನ್ನೂ ನನ್ನೊಡನೆ ಆಲೋಚಿಸಿ ಮಾಡುತ್ತಿರುವರೆಂತಲೂ, ಹೀಗೆಯೇ ಪ್ರತಿಯೊಂದು ಪ್ರಾಂತಿಕ ಸರ್ಕಾರಗಳೂ ಪ್ರತ್ಯೇಕವಾಗಿ ಕಮಿಷನರುಗಳ ಕಾರ್ಯಾಲಯವೊಂದೊಂದನ್ನು ಸ್ಥಾಪಿಸಿಕೊಂಡಿರುವರೆಂತಲೂ, ಮುಂದೆ ನಡೆಯಬೇಕಾದ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ಸಂತೋಷಪೂರ್ವಕವಾಗಿ ಗ್ರಹಿಸಿಕೊಳ್ಳುತ್ತೇವೆಂತಲೂ ಮೊದಲಾಗಿ ಹೇಳಿ, ಈ ಶಾಸನವು ಸಮಗ್ರವಾಗಿ ಕಾರ್ಯರೂಪದಲ್ಲಿ ಬರುವುದಕ್ಕೆ ತಕ್ಕ ಪ್ರಯತ್ನಗಳನ್ನೆಲ್ಲಾ ಮಾಡುವಲ್ಲಿ ತಮಗಿರುವ ಆದರವನ್ನು ವ್ಯಕ್ತಪಡಿಸಿದರು. ಮತ್ತೂ ಶಾಸನಸಂಬಂಧವಾಗಿ ಒಂದೆರಡು ಮುಖ್ಯ ವಿಷಯಗಳನ್ನು ಸೂಚಿಸುತ್ತೇನೆಂದು ಹೇಳಿ ಓಟರುಗಳ ವಿಷಯವಾಗಿಯೂ ಪ್ರತ್ಯೇಕ ಪ್ರಾತಿನಿಧ್ಯವಿಷಯವಾಗಿಯೂ ಮಾತನಾಡಿದುದರಲ್ಲಿ-ಮದ್ರಾಸು ಮತ್ತೂ ಪಂಜಾಬು ಪ್ರಾಂತಗಳಲ್ಲಿ ಓಟರುಗಳಿಗೆ ಇರಬೇಕಾದ ಅರ್ಹತೆಯ ಪರಮಾವಧಿಯು ತಗ್ಗಿಸಲ್ಪಡುವುದೆಂತಲೂ ಇದರಿಂದ ಆ ಪ್ರಾಂತಗಳಲ್ಲಿ ಇನ್ನೂ ೬ ಲಕ್ಷದಷ್ಟು ಓಟರುಗಳ ಸಂಖ್ಯೆಯು ಹೆಚ್ಚುವುದೆಂತಲೂ, ಪಟ್ಟಣವಾಸಿಗಳಾದ ಓಟರುಗಳ ಸಂಖ್ಯೆಯನ್ನು ತಗ್ಗಿಸದೆ ಗ್ರಾಮವಾಸಿಗಳಾದ ಓಟರುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸಂಯೋಗಸಂಘದವರು ಮಾಡಿದ ಸೂಚನೆಯನ್ನು ನಾವು ಅನುಸರಿಸುತ್ತೇವೆಂತಲೂ, ನಿಮ್ನಜಾತಿಯವರ ಪ್ರಾತಿನಿಧ್ಯವನ್ನು ಇನ್ನಷ್ಟು ಅನುಕೂಲವಾಗುವಂತೆ ಮಾಡುವೆವೆಂತಲೂ, ಕಲ್ಕತ್ತಾ-ಬೊಂಬಾಯಿ ಪಟ್ಟಣಗಳಲ್ಲಿ ಕೂಲಿಕಾರರ ಸಂಖ್ಯೆಯು ಬಹಳ ಹೆಚ್ಚಾಗಿರುವುದರಿಂದ ಅವರಿಗೂ ಕೂಡ ಪ್ರತ್ಯೇಕ ಪ್ರಾತಿನಿಧ್ಯದ ಏರ್ಪಾಟನ್ನು ಮಾಡುವೆವೆಂತಲೂ, ಬೊಂಬಾಯಿ-ಮದ್ರಾಸು ಗೌರ್ನರುಗಳು ಈ ಪ್ರತ್ಯೇಕ ಪ್ರಾತಿನಿಧ್ಯದ ವಿಷಯದಲ್ಲಿ ಸಾಮರ್ಥ್ಯದಿಂದ ಕೆಲಸ ಮಾಡುತ್ತಿರುವರೆಂತಲೂ, ಓಟರುಗಳ ಪಟ್ಟಿಯನ್ನು ಅಣಿಮಾಡುವ ಕೆಲಸವು ಆರಂಭಿಸಲ್ಪಡುವುದರಲ್ಲಿರುವುದೆಂತಲೂ, ಸಾಮ್ರಾಜ್ಯಶಾಸನಸಭೆಯ ಮತ್ತೂ ರಾಷ್ಟ್ರೀಯ ಶಾಸನಸಭೆಗಳ ನಿಬಂಧನೆಗಳೆಲ್ಲಾ ರಚಿಸಲ್ಪಡಬೇಕಾಗಿವೆಯೆಂತಲೂ ಇವೆಲ್ಲ ವಿಷಯದಲ್ಲೂ ಪ್ರಜಾಭಿಪ್ರಾಯವನ್ನು ಪ್ರಭುತ್ವದವರು ತೆಗೆದುಕೊಳ್ಳುವರೆಂತಲೂ, ಪ್ರಜಾಪ್ರಮುಖರು ಈ ಸಂಬಂಧವಾಗಿ ಆಪ್ತಾಲೋಚನೆಗಳನ್ನು ತಿಳಿಯಿಸಬೇಕೆಂತಲೂ ಹೇಳಿ, ಸಾನುಭೂತಿ ಸಾಪೇಕ್ಷೆಯ ತಮ್ಮ ಧೋರಣೆಯನ್ನು ವ್ಯಕ್ತಪಡಿಸಿ ನೀವೆಲ್ಲರೂ ಈ ಕಾರ್ಯದಲ್ಲಿ ಮನಃಪೂರ್ವಕವಾಗಿ ಸಹಾಯಮಾಡಬೇಕೆಂದು ಮುಕ್ತಕಂಠವಾಗಿ ಹೇಳಿದರು. ಆದರೆ ಈಗಣ ಶಾಸನದಲ್ಲಿ ಸಭೆಗಳಕಾರ್ಯಭಾರಕ್ಕೆ ಸಂಬಂಧಪಟ್ಟ ನಿಬಂಧನೆಗಳೊಂದೂ ನಿರ್ಮಿಸಲ್ಪಟ್ಟಿರುವುದಿಲ್ಲ. ಆ ನಿಬಂಧನೆಯ ಸ್ವರೂಪವನ್ನನುಸರಿಸಿ ಶಾಸನದ ಫಲಾಫಲಗಳು ಲಭಿಸುವುವಾದಕಾರಣ, ಈ ವಿಷಯದಲ್ಲಿ ಪ್ರಜಾಪ್ರಮುಖರು ಉದಾಸೀನರಾಗದೆ ತಕ್ಕ ಸೂಚನೆಗಳನ್ನು ಪ್ರಭುತ್ವದವರಿಗೆ ಕೊಡಬೇಕಲ್ಲದೆ ಶಾಸನ ನಿರ್ಮಾಣಸಭೆಯಲ್ಲೂ ತಕ್ಕ ಕೃಷಿಯನ್ನು ಮಾಡಬೇಕಾಗಿರುವುದು. ಸಾಮ್ರಾಜ್ಯ ಶಾಸನಸಭೆಯಲ್ಲಿ ಸ್ಥಾನನಿರ್ಣಯವನ್ನು ಮಾಡಬೇಕಾದ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ನಾವು ಕೇಳಿರುವಲ್ಲಿ ಗಮನೀಯವಾದ ವಿಮರ್ಶನವಾವುದೂ ಪ್ರಜೆಗಳಿಂದ ತಮಗೆ ಬಂದಿಲ್ಲವೆಂದು ವೈಸ್ರಾಯರು ಈ ಭಾಷಣದಲ್ಲಿ ಪ್ರಜಾಪ್ರಮುಖರಮೇಲೆಯೇ ಆಕ್ಷೇಪವನ್ನು ಹೊರಿಸಿರುವುದರಿಂದ ಮುಂದೆಯೂ ಇಂಥ ಆಕ್ಷೇಪ ಬರುವಂತೆ ದೇಶಪ್ರಮುಖರು ಮಾಡಿಕೊಳ್ಳಬಾರದು.

ಈ ಶಾಸನದ ವಿಷಯವು ಮುಗಿದಬಳಿಕ ಸರ್ ಶಂಕರನ್‌ನಾಯರ ವಿಷಯವನ್ನು ಎತ್ತಿಕೊಂಡು, ತಮ್ಮ ಸೂಚನೆಯ ಪ್ರಕಾರವೇ ಸ್ಟೇಟ್ ಸೆಕ್ರಟರಿಯವರು ನಾಯರನ್ನು ತಮ್ಮ ಕೌನ್ಸಿಲ್ ಮೆಂಬರುತನಕ್ಕೆ ಸೇರಿಸಿಕೊಂಡರೆಂದೂ, "ಇಲ್ಲಿಯ ವೈಸ್ರಾಯರ ಕೌನ್ಸಿಲರ್‌ತನಕ್ಕೆ ರಾಜೀನಾಮೆ ಕೊಟ್ಟುಹೋದ ಶಂಕರನ್‌ನಾಯರನ್ನು ಸ್ಟೇಟ್ ಸೆಕ್ರಟರಿಗಳ ಕೌನ್ಸಿಲ್ಲಿಗೆ ಸೇರಿಸಿಕೊಳ್ಳುವುದೆಂದರೆ ವೈಸ್ರಾಯರನ್ನೂ ಇಂಡ್ಯಾ ಸರ್ಕಾರವನ್ನೂ ಸ್ಪಷ್ಟವಾಗಿ ತೃಣೀಕರಿಸುವ ಕೆಲಸವೇ ಸರಿಯೆಂದು ಕೆಲವರು ತಿಳಿಯುತ್ತಾರೆಂದು" ಅ|| ಭೂಪೇಂದ್ರನಾಥಬಾಸುರವರು ತಮ್ಮೊಡನೆ ಹೇಳಿದರೆಂತಲೂ, ಇದು ನನ್ನೊಬ್ಬನಿಗೇ ಸಂಬಂಧಪಟ್ಟುದಾಗಿದ್ದರೆ ನಾನು ಈ ಮಾತನ್ನೇ ಎತ್ತುತ್ತಿರಲಿಲ್ಲವೆಂದೂ, ಸ್ಟೇಟ್‌ಸೆಕ್ರಟರಿಯವರಿಗೂ ಸಂಬಂಧಪಟ್ಟಿದೆಯಾದಕಾರಣ ಈ ಮಾತನ್ನು ಎತ್ತಿ ಆಡಬೇಕಾಗಿದೆಯೆಂದೂ, ನಾನೂ ಸ್ಟೇಟ್ ಸೆಕ್ರಟರಿಯವರೂ ಆಲೋಚಿಸಿಯೇ ಅವರನ್ನು ಇಂಡ್ಯಾಮಂತ್ರಿ ಕೌನ್ಸಿಲ್ಲಿಗೆ ಸೇರಿಸಿದೆವೆಂದೂ ಹೇಳಿದರು. ಅ|| ಬಾಸುರವರು ಯಾವ ಉದ್ದೇಶವನ್ನಿಟ್ಟುಕೊಂಡು ವೈಸ್ರಾಯರ ಕಿವಿಯಲ್ಲಿ ನಾಯರ ಮಾತನ್ನು ಹೇಳಿದ್ದರೋ ತಿಳಿಯಲಿಲ್ಲ. ಅದು ಈಗ ಬಯಲಿಗೆ ಬಿದ್ದುದರಿಂದ ಸಂತೋಷಪಡುವವರಿಗಿಂತ ಖೇದಗೊಳ್ಳುವವರೇ ಹೆಚ್ಚಾಗಿರುವರೆಂದು ಹೇಳಬಹುದು.

ಬಳಿಕ ವೈಸ್ರಾಯರು ಕಾಲಸ್ಥಿತಿಯನ್ನು ವರ್ಣಿಸುವಾಗ್ಗೆ ನಮಗೆ ಕ್ಷಾಮಬಾಧೆಯು ತಪ್ಪಿದರೂ ಧಾರಣೆಗಳು ತಗ್ಗದಿರುವುದರಿಂದ ಕ್ಷಾಮಬಾಧೆಯು ತಗ್ಗಿದಂತೆಯೇ ಆಗಿಲ್ಲ. ಅದು ಕಾರಣ ನಾವು ವಿದೇಶಗಳಿಗೆ ಇಲ್ಲಿಯ ಧಾನ್ಯಗಳನ್ನು ಹೋಗಗೊಡಿಸದಂತೆಯೂ, ಧಾರಣೆಗಳು ಇಳಿಯುವವರೆಗೂ ಕಂಟ್ರೋಲ್ ಪದ್ಧತಿಯನ್ನು ತಗ್ಗಿಸದೆಯೂ ಇರಬೇಕಾಗಿದೆಯೆಂದು ಹೇಳಿದ ಮಾತು ದೇಶಕ್ಕೆ ಹಿತಕರವಾಗಿದೆ. ಅದರಂತೆಯೇ ಅವರು ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದು ದೇಶೀಯರಿಗೆ ಸೌಖ್ಯವನ್ನುಂಟುಮಾಡಿ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಬೇಕು.

ವಿದ್ಯಾವಿಷಯಕವಾದ ವೈಸ್ರಾಯರ ಭಾಷಣದಲ್ಲಿ ಸ್ಯಾಡ್ಲರ್ ಸಂಘದವರ ವರದಿಯ ಮೇಲೆ ಶಾಸನದ ಮಸೂದೆಯು ಮುಂದಣ ಏಪ್ರಿಲ್ ತಿಂಗಳಲ್ಲಿ ಪ್ರಕಟಿಸಲ್ಪಡುವುದೆಂದೂ, ಮುಂದೆ ವಿದ್ಯಾಶಾಖೆಯ ಉದ್ಯೋಗಗಳಲ್ಲ ನೂರಕ್ಕೆ ೫೦ ರಷ್ಟು ಸ್ಥಾನಗಳು ದೇಶೀಯರಿಗೇ ಕೊಡಲ್ಪಡುವುದಕ್ಕೆ ಸ್ಟೇಟ್ ಸೆಕ್ರೆಟರಿಯವರು ಒಪ್ಪಿರುವರೆಂದೂ ಹೇಳಿದರು. ಬಳಿಕ ಪರಿಶ್ರಾಮಿಕ ವಿಷಯದಲ್ಲಿಯೂ, ದಕ್ಷಿಣಾಫ್ರಿಕಾ ಭಾರತೀಯರ ಕಷ್ಟನಿವಾರಣೆಯ ವಿಷಯವಾಗಿಯೂ, ಸಾಮ್ರಾಜ್ಯಪ್ರಾಮುಖ್ಯವಿಷಯವಾಗಿಯೂ ಸ್ವಲ್ಪ ಉಪನ್ಯಾಸ ಮಾಡಿ, ಭರತಖಂಡದ ಎಲ್ಲೆಕಟ್ಟಿನ ಮತ್ತು ಬೋಲ್ಷೆವಿಕ್ಕರ ವಿಷಯವನ್ನು ಸೂಚಿಸುವಾಗ್ಗೆ-ಬೋಲ್ಷೆವಿಕ್ಕರು ಪೂರ್ವದೇಶದ ಮತ್ತು ಮಧ್ಯ ಆಸ್ಯಾದ ಅಸಂತುಷ್ಟ ಜನರ ಕೂಡ ಕಲೆತು ಭರತಖಂಡದ ಮೇಲೆ ಬೀಳುವರೆಂದು ಯೂರೋಪ್ಯ ವೃತ್ತಪತ್ರಿಕೆಗಳು ಬಹಳ ಅತಿಶಯೋಕ್ತಿಯಿಂದ ಬರೆಯುತ್ತಿರುವುವೆಂತಲೂ, ಆದರೆ ಬೋಲ್ಷೆವಿಕ್ಕರಿಂದ ಭರತಖಂಡಕ್ಕೆ ಅಪಾಯವು ಇಲ್ಲವೇ ಇಲ್ಲವೆಂದು ನಾನು ಹೇಳುವುದಿಲ್ಲವೆಂತಲೂ, ೫ ವರ್ಷಗಳಿಂದ ಅಖಂಡವಾಗಿ ಯುದ್ಧವು ನಡೆದುದರಿಂದ ಪ್ರಜೆಗಳು ಘೋರವಿಪತ್ತಿಗೆ ಗುರಿಯಾಗಿರುವರೆಂತಲೂ, ಅವರ ಮತಶ್ರದ್ಧೆಯು ಕುಗ್ಗಿಹೋಗಿರುವುದೆಂತಲೂ, ಕ್ಷಾಮವು ಪ್ರಬಲಿಸಿರುವುದೆಂತಲೂ, ಇಂಥ ಅನೇಕ ಕಾರಣಗಳಿಂದ ಮಾನವಕುಲಕ್ಕೆ ಸಹಜವಾದ ಶಾಂತಿಯೂ ಭೂತದಯೆಯೂ ನಿರ್ಮೂಲವಾಗಿ ಹೋಗಿರುವುವೆಂತಲೂ, ಸಕ್ರಮವಿಧಾನವನ್ನು ಸ್ಥಾಪಿಸಲು ಮಿತ್ರಮಂಡಲಿಯವರೇ ಸಮರ್ಥರೆಂತಲೂ, ಅವರಿಗೆ ಸ್ವದೇಶದ ಸಮಸ್ಯೆಗಳ ತೊಂದರೆಗಳು ಹೆಚ್ಚಾಗಿರುವುದರಿಂದಲೂ, ಸೇನೆಗಳು ಬಹಳ ಬಳಲಿರುವುದರಿಂದಲೂ, ಸೈನ್ಯಗಳನ್ನು ತಗ್ಗಿಸುತ್ತಿರುವರೆಂತಲೂ, ಮತ್ತು ತಂತಮ್ಮ ಆಂತರ್ದೇಶಕಾರ್ಯಗಳಲ್ಲಿ ಮಗ್ನರಾಗಿರುವರೆಂತಲೂ, ಜರ್ಮನಿ, ಆಸ್ಟ್ರಿಯಾ ದೇಶದವರುಗಳು ಸಂಧಿಪತ್ರಕ್ಕೆ ಒಪ್ಪಿ ರುಜುಹಾಕಿ ಮುಗಿದುದರಿಂದ ಯೂರೋಪ್ ದೇಶದಲ್ಲಿ ಮತ್ತೆ ಯುದ್ಧ ಹುಟ್ಟುವುದೆಂಬ ಭೀತಿಯು ತೊಲಗಿಹೋಗಿರುವುದೆಂತಲೂ, ಯೂರೋಪು ದೇಶಗಳವರೆಲ್ಲಾ ಪರಸ್ಪರ ವ್ಯಾಪಾರವನ್ನಾರಂಭಿಸಲಿಕ್ಕೆ ಇದ್ದಾರೆಂತಲೂ, ಈಗ ಪ್ರಪಂಚಕ್ಕೆ ರಷ್ಯಾದೇಶದ ಪ್ರಜೆಗಳಿಂದಲೇ ತೊಂದರೆಯುಂಟಾಗುತ್ತಿದೆಯೆಂತಲೂ, ಈಗಣ ಸ್ಥಿತಿಯಲ್ಲಿ ಬೋಲ್ಷೆವಿಕ್ಕರು ಜಯಶಾಲಿಗಳಾಗಿರುವುದು ನಿಜವಾದರೂ ಬಹು ಕಾಲದಿಂದ ಅವರು ಘೋರಕೃತ್ಯಗಳನ್ನು ಮಾಡುತ್ತ ಬಂದಿರುವುದರಿಂದ ಅವರಲ್ಲೇ ಒಳಗೊಳಗೆ ವಿರೋಧಭಾವವು ಪ್ರಬಲಿಸಿರುವುದೆಂತಲೂ, ಇನ್ನುಮೇಲೆ ಅವರ ನಾಯಕರುಗಳು ಸ್ವಲ್ಪ ಶಾಂತಿಯಿಂದ ಪ್ರವರ್ತಿಸುವ ಹಾಗೆ ತೋರುತ್ತಿದೆಯೆಂತಲೂ, ಯುದ್ಧಮುಖದಲ್ಲಿ ಅವರು ಜಯಶಾಲಿಗಳಾಗಲಾರದೆ ದುರ್ನೀತಿಯನ್ನು ಜಗತ್ತಿನಲ್ಲೆಲ್ಲಾ ಹಬ್ಬಿಸಿ ಜಯಶೀಲರಾಗಬೇಕೆಂದು ಯತ್ನಿಸಿರುವರೆಂತಲೂ, ಇಂಥ ಪ್ರಮಾದಕ್ಕೆ ಈಗ ಪೂರ್ವದೇಶವೂ ಮಧ್ಯ ಆಸ್ಯಾವೂ ಗುರಿಯಾಗದಂತೆ ನೋಡಿಕೊಳ್ಳಬೇಕಾಗಿದೆಯೆಂತಲೂ, ಭರತಖಂಡ ಪ್ರಭುತ್ವದವರು ಕೂಡ ಅದನ್ನು ಉಪೇಕ್ಷಿಸದೆ ಪ್ರತಿಭಟಿಸುವುದಕ್ಕೆ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿರುವರೆಂತಲೂ ಹೇಳಿದರು. ಮತ್ತು ಅಫ್ಘಾನಿಸ್ಥಾನದ ಮಾತನ್ನು ಎತ್ತಿಕೊಂಡು-"ಅಲ್ಲಿಯ ಅಮೀರರು ಸಂಧಿಯನ್ನು ಮಾಡಿಕೊಂಡುದೇ ಅಲ್ಲದೆ ಅದರಿಂದೀಚೆಗೂ ಇಂಡ್ಯಾ ಸರ್ಕಾರದವರೊಡನೆ ಆಗಾಗ್ಗೆ ಸ್ನೇಹಪೂರ್ಣವಾದ ಲೇಖನಗಳನ್ನು ಬರೆಯುತ್ತಿದ್ದರೂ, ಬೋಲ್ಷೆವಿಕ್ ಪ್ರತಿನಿಧಿಗಳನ್ನು ತಮ್ಮ ದೇಶಕ್ಕೂ ತಮ್ಮ ಪ್ರತಿನಿಧಿಗಳನ್ನು ಮಾಸ್ಕೊ ಪಟ್ಟಣಕ್ಕೂ ಕಳುಹಿಸಿಕೊಡಲು ಅನುಮತಿಯಿತ್ತುದರಿಂದ ಸಂಶಯವು ಹೆಚ್ಚಾಗಿದೆ. ನಾವು ಅವರೊಡನೆ ಸಂಧಿಯಂತೆ ನಡೆದುಕೊಳ್ಳಲು ಇಷ್ಟವುಳ್ಳವರಾಗಿದ್ದರೂ ಅವರು ಅದರಂತೆ ನಡೆದುಕೊಳ್ಳದೆ ಹೋದರೆ ಆ ಸಂಧಿಪತ್ರವು ನಾಮಮಾತ್ರಕ್ಕೇ ಇದ್ದಂತಾಗುವುದು. ಅಫ್ಘಾನ್ ದೇಶದ ಎಲ್ಲೆಕಟ್ಟಿನ ಮಷೂದ್ ಮತ್ತು ವಜೀರ್ ಜನರ ಹಾವಳಿಯು ಇನ್ನೂ ತಪ್ಪಿಲ್ಲ. ಕೈಬರ್ ಕಣಿವೆಗೆ ಉತ್ತರದಲ್ಲಿ ಶಾಂತಿಯುಂಟಾಗಿದೆ. ವಜೀರ ಜನರು ಶರಣಾಗತರಾದರು. ಮಷೂದರು ಇನ್ನೂ ವಶರಾಗಿಲ್ಲ. ಡಿಶಂಬರ್ ತಾ|| ೧೮ ರಲ್ಲಿ ಅವರಿಗೂ ನಮ್ಮವರಿಗೂ ನಡೆದ ಯುದ್ಧದಲ್ಲಿ ನಮ್ಮವರಲ್ಲಿ ಕೆಲವರೂ ಅವರಲ್ಲಿ ಬಹುಜನರೂ ಹತರಾದರು. ಅವರಲ್ಲಿ ಹಳಬರ ಮಾತನ್ನು ತರುಣರು ಲೆಕ್ಕಿಸದೆ ಕಾದಾಡುತ್ತಿದ್ದಾರೆ. ಅದು ಬೆಟ್ಟಗಳ ಸೀಮೆಯಾದುದರಿಂದ ವಿಮಾನಗಳ ಮೂಲಕ ನಮ್ಮವರು ಶತ್ರುಗಳ ನಿಗ್ರಹವನ್ನು ಮಾಡುತ್ತಿದ್ದಾರೆ. ಅವರನ್ನೆಲ್ಲಾ ಅಣಗಿಸುವುದಕ್ಕೆ ಇನ್ನೂ ವಿಶೇಷ ಪ್ರಯತ್ನಗಳನ್ನು ಮಾಡುವವರಾಗಿದ್ದೇವೆ. ಈ ದೇಶದಮೇಲೆ ಬೋಲ್ಷೆವಿಕ್ಕರ ಹಾವಳಿಯೇನಾದರೂ ಸಂಭವಿಸುವ ಸಂದರ್ಭದಲ್ಲಿ ಅವರ ದುರ್ನೀತಿ ದುರ್ಬೋಧನೆಗೆ ಒಳಗಾಗದಂತೆ ಎಚ್ಚರದಿಂದ ಈ ದೇಶವನ್ನು ಕಾಪಾಡಿಕೊಳ್ಳುವುದು ಭಾರತೀಯರಮೇಲೆ ಬಿದ್ದ ಭಾರವಾಗಿದೆ. ಅವರ ಅರಾಜಕತೆ ನಾಸ್ತಿಕತೆ ಮೊದಲಾದುವುಗಳಿಗೆ ಭಾರತೀಯರು ಎಂದಿಗೂ ಕಿವಿಕೊಡರೆಂದು ನಾನು ನಂಬುತ್ತೇನೆ. ಭರತಖಂಡವೆಂಬ ಆಕಾಶದೊಳಗೆ ಅಲ್ಲಲ್ಲಿ ಅಖಂಡವಾದ ಕರಿಯಮುಬ್ಬು ಕಾಣಿಸುತ್ತಿದ್ದರೂ ಯುಕ್ತಾಯುಕ್ತ ವಿವೇಚನಜ್ಞಾನವೆಂಬ ಮಿಂಚುಗಳು ಹೊಳೆದು ಆ ಮಬ್ಬಿನ ಕತ್ತಲನ್ನು ತೊಲಗಿಸುತ್ತಿವೆ" ಎಂದು ಹೇಳಿ, ಈ ದೇಶದಲ್ಲಿ ಆಗಾಗ್ಗೆ ತಲೆದೋರುವ ಅರಾಜಕ ವಿಪ್ಲವ ಸ್ಥಿತಿಯನ್ನೂ, ಅನುಭವಿ ದೇಶಭಕ್ತ ಜನರು ಅದರ ಹಬ್ಬುವಿಕೆಗೆ ಅವಕಾಶಕೊಡದೆ ತಡೆಯುತ್ತಿರುವುದನ್ನೂ ಈ ಮಾತಿನಿಂದ ಧ್ವನಿತೋರಿಸಿ ಹೇಳಿ, ಮುಂದಾದರೂ ಅದೇ ವಿಧಾನದಿಂದ ಬೋಲ್ಷವಿಕ್ಕರ ದುರ್ಬೋಧನೆಗೆ ಕಿವಿಗೊಟ್ಟು ಇಲ್ಲಿ ಅನರ್ಥಗಳಿಗೆ ಆಸ್ಪದ ಮಾಡಿಕೊಳ್ಳದಿರಲೆಂದು ಎಚ್ಚರಿಸಿರುವರು.

ಕಡೆಗೆ ಚಕ್ರವರ್ತಿಯವರ ಪ್ರಕಟನ ವಿಷಯವನ್ನೂ, ಸಾರ್ವಭೌಮ ಜ್ಯೇಷ್ಠಪುತ್ರರು ಮುಂದೆ ಭರತಖಂಡಕ್ಕೆ ಬರುವವರಾಗಿರುವ ಸಂಗತಿಯನ್ನೂ, ಅವರಿಗೆ ಭರತಖಂಡವು ತನ್ನ ಅಸಾಧಾರಣ ರಾಜಭಕ್ತಿಗೂ ಸಾರ್ವಭೌಮ ವಂಶೀಯರ ಘನತೆಗೂ ತಕ್ಕಂತೆ ಸನ್ಮಾನಿಸುವುದೆಂಬ ವಿಷಯದಲ್ಲಿ ತಮಗಿರುವ ಒರವಸೆಯನ್ನೂ ವ್ಯಕ್ತಪಡಿಸಿದರು.

ಪಂಜಾಬುಪ್ರಕರಣದ ಸಂಬಂಧವಾಗಿ ಅವರು ಯಾವ ಮಾತನ್ನೂ ಆಡಲಿಲ್ಲ. ಹಂಟರ್‌ಸಂಘದ ತೀರ್ಪು ಹೊರಬೀಳುವವರೆಗೂ ಆ ವಿಷಯವಾಗಿ ಏನನ್ನಾಡುವುದೂ ಸರಿಯಿಲ್ಲವೆಂದು ಅವರು ತಟಸ್ಥರಾಗಿರುವಂತೆ ಕಾಣುತ್ತದೆ. ಪಂಜಾಬುಪ್ರಕರಣವು ಉಪಸ್ಥಿತವಾದಮೇಲೆಯೇ ಲಾರ್ಡ್ ಚೆಲಮ್ಸ್‌ಫರ್ಡರ ಮೇಲೆ ಸ್ವಲ್ಪ ಕಟುತರವಾದ ಅಭಿಪ್ರಾಯವು ಭರತಖಂಡದಲ್ಲಿ ಹುಟ್ಟಿತು. ಉಳಿದ ವಿಷಯಗಳಲ್ಲೆಲ್ಲಾ ಇವರು ಭರತಖಂಡದ ಮೇಲೆ ಸಾನುಭೂತಿಯಿಂದ ಪ್ರವರ್ತಿಸಿರುವುದಕ್ಕೆ ಅನೇಕ ದೃಷ್ಟಾಂತಗಳಿವೆ. ರಾಜಕೀಯಸಂಸ್ಕರಣದ ವಿಷಯದಲ್ಲೂ ಇವರ ಸಾನುಭೂತಿಯ ಅಂಗವು ವಿಶೇಷವಾಗಿದ್ದಿತು. ಈಗಲೂ ಅದರ ನಿಬಂಧನೆಯ ರಚನೆಯಲ್ಲೂ ವಿದೇಶಕ್ಕೆ ಆಹಾರಧಾನ್ಯಗಳನ್ನು ಸಾಗಗೊಡದಂತೆ ತಡೆದು ಕಟ್ಟುನಿಟ್ಟಿನಮೂಲಕ ಇಲ್ಲಿಯ ಕ್ಷಾಮಭೀತಿಯನ್ನು ತಪ್ಪಿಸುವುದರಿಂದಲೂ ತಮ್ಮ ಪ್ರಜಾಪ್ರೇಮವನ್ನು ವ್ಯಕ್ತಪಡಿಸಿ, ಪ್ರಜೆಗಳ ಸಂಪೂರ್ಣ ಪ್ರೀತಿಗೆ ಪಾತ್ರರಾಗಬಹುದು. ಈಗಣ ಅವರ ಭಾಷಣದಲ್ಲೂ ಪೂರ್ಣವಾಗಿ ಸಾನುಭೂತಿಯನ್ನೇ ಅವರು ತೋರಿಸಿರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಮೈಸೂರು ಶಾಕುಂತಲ ಕರ್ನಾಟಕ ನಾಟಕಸಭಾ.

ಮೈಸೂರಿನಿಂದ ಮದ್ರಾಸಿಗೆ ಹೋಗಿದ್ದ ಈ ನಾಟಕಸಂಘದವರು ಆ ಪಟ್ಟಣದಲ್ಲಿ ಒಂದು ತಿಂಗಳು ಕಾಲವಿದ್ದು ತಮ್ಮ ಪ್ರಯೋಗಗಳನ್ನು ಪ್ರದರ್ಶಿಸಿ ಕಳೆದವಾರ ರಾಜಧಾನಿಗೆ ಬಂದು ಸೇರಿರುತ್ತಾರೆ. ಇವರು ಅಲ್ಲಿ ವಿದ್ವತ್ತಾಪರಿಪೂರ್ಣವಾಗಿಯೂ ಪ್ರಯೋಗವಿಜ್ಞಾನ ಸಮಂಚಿತವಾಗಿಯೂ ಲೋಕಾಕರ್ಷಕವಾಗಿಯೂ ಪ್ರದರ್ಶಿಸಿದ ರೂಪಕಗಳನ್ನು ಪ್ರತ್ಯಕ್ಷವಾಗಿ ಅವಲೋಕಿಸಿದ ಆ ಪಟ್ಟಣದ ಆಂಗ್ಲಭಾಷಾ ದೇಶಭಾಷಾ ಪತ್ರಿಕಾಕರ್ತರುಗಳೆಲ್ಲರೂ ಈ ಸಂಘದವರ ಕೌಶಲವನ್ನು ಕುರಿತು ಆಗಾಗ್ಗೆ ಬರೆಯುತಿದ್ದ ಲೇಖನಗಳನ್ನು ನೋಡಿ ನಮ್ಮ ಮೈಸೂರಿಗೆ ಇಂಥ ಅಸಾಧಾರಣವಾದ ಯಶಸ್ಸನ್ನು ತಂದ ಈ ಸಂಘದವರ ಯೋಗ್ಯತಾವಿಶೇಷವನ್ನು ಕುರಿತು ನಾವು ವಿಶೇಷವಾಗಿ ಸಂತೋಷಿಸುತ್ತಿದ್ದೆವು. ಪ್ರತ್ಯಕ್ಷವಾಗಿ ಈ ಸಂಘದವರ ಮುಖದಿಂದ ಅಲ್ಲಿ ನಡೆದ ಸಂಭಾವನೆ ಮೊದಲಾದುವುಗಳನ್ನು ಕೇಳಿ ಕೇಳಿ ನಮ್ಮ ಸಂತೋಷವು ಇಮ್ಮಡಿಯಾಯಿತು. ಈ ನಾಟಕಸಂಘಕ್ಕೆ ಶ್ರೀಮನ್ಮಹಾರಾಜರವರ ಪ್ರತ್ಯಕ್ಷಾಶ್ರಯವು ತಪ್ಪಿದರೂ ಮ|| ಗಳಾದ ಅಡ್ವೋಕೇಟ್ ಸಿ. ನರಸಿಂಹಯ್ಯನವರು, ಎಂ. ಎಲ್. ವರ್ಧಮಾನಯ್ಯನವರು, ದೊಡ್ಡಣ್ಣ ಜವರಯ್ಯನವರುಗಳು ಮೊದಲಾದ ದೊಡ್ಡಮನುಷ್ಯರುಗಳು ಈ ಸಂಘಕ್ಕೆ ಹಸ್ತಾವಲಂಬನವನ್ನಿತ್ತುದೂ, ಮ|| ಲಕ್ಷ್ಮೀಪತಿಶಾಸ್ತ್ರಿಗಳು, ಸಂಗೀತವಿದ್ವಾಂಸರುಗಳಾದ ಮ|| ರಾಚಪ್ಪನವರು, ಮ|| ಚಿಕ್ಕರಾಮರಾಯರು, ಮತ್ತು ಮ|| ಎನ್. ಸುಬ್ಬಣ್ಣನವರೇ ಮೊದಲಾದವರು ದೃಢಚಿತ್ತದಿಂದಲೂ ಏಕಮತ್ಯದಿಂದಲೂ ಕದಲದೆ ನಿಂತುದೂ ಸಹ ಈಗ ಅವರು ಪರದೇಶದಲ್ಲಿ ಸಂಪಾದಿಸಿದ ಅಸಾಧಾರಣವಾದ ಗೌರವದಿಂದ ಸಾರ್ಥಕವೆನಿಸಿಕೊಂಡುವು. ವರ್ಷಕ್ಕೊಂದೆರಡು ತಿಂಗಳಂತೆಯಾದರೂ ಈ ಸಂಘದವರು ಅವಕಾಶ ಮಾಡಿಕೊಂಡು, ಮದ್ರಾಸು ಆಧಿಪತ್ಯದ ಕೊಯಮುತ್ತೂರು. ಮಂಗಳೂರು, ಬಳ್ಳಾರಿ ಮೊದಲಾದ ಕಡೆಗಳಲ್ಲೂ ಬೊಂಬಾಯಿ ಆಧಿಪತ್ಯದ ಕನ್ನಡನಾಡಿನಲ್ಲೂ ಸಂಚರಿಸುತ್ತ ಬಂದರೆ, ಈ ಸಂಘದವರ ವಿದ್ವತ್ತು ಪ್ರಕಾಶಕ್ಕೆ ಬಂದು ಕೀರ್ತಿಯೂ ಧನಲಾಭವೂ ವಿಶೇಷವಾಗಿ ಉಂಟಾಗುವುವೆಂಬುದಕ್ಕೆ ಈಗಣ ಅವರ ಪ್ರಥಮಪ್ರಸ್ಥಾನ ಫಲವೇ ನಿದರ್ಶನವಾಗಿದೆ. ಮದ್ರಾಸಿನ ಪುರಪ್ರಮುಖರಾದ ವಿದ್ಯಾಭಿಮಾನಿಗಳೂ, ವೆಂಕಟಗಿರಿ ಮತ್ತು ಭದ್ರಾಚಲದ ರಾಜರೂ, ಪ್ರಸಿದ್ಧ ಸುಗುಣವಿಲಾಸ ಸಭೆಯವರೂ, ಸಕಲ ಪುರಜನರೂ ಸಹ ಈ ಸಂಘದವರಿಗೆ ಅನೇಕಗಳಾದ ಮೆಡಲುಗಳು ಪೀತಾಂಬರಗಳು ಮೊದಲಾದುವುಗಳನ್ನು ಕೊಟ್ಟು ಮರ್ಯಾದಿಸಿರುವುದರಲ್ಲಿ ಈ ಸಂಘದ ಮುಖ್ಯಪಾತ್ರಧಾರಿಗಳಾದ ಮ|| ರಾಚಪ್ಪನವರಿಗೆ ೫ ಭಂಗಾರದ ಮತ್ತು ರತ್ನಖಚಿತವಾದ ಮೆಡಲುಗಳೂ ೨ ಉಂಗುರಗಳೂ ಒಂದು ಕೈಬೆತ್ತವೂ, ಮ|| ಎನ್. ಸುಬ್ಬಣ್ಣನವರಿಗೆ ೪ ಭಂಗಾರದ ಮತ್ತು ವಜ್ರ ಕೆತ್ತಿದ ಮೆಡಲುಗಳೂ, ೨ ವಜ್ರ ಕೆತ್ತಿದ ಉಂಗುರಗಳೂ, ೧ ಕೈಗಡಿಯಾರವೂ, ಮ|| ಚಿಕ್ಕರಾಮರಾಯರಿಗೆ ೪ ಭಂಗಾರದ ಮೆಡಲುಗಳೂ ೨ ಉಂಗುರಗಳೂ, ಮ|| ಎಸ್ ಲಕ್ಷ್ಮೀಪತಿಶಾಸ್ತ್ರಿಗಳಿಗೆ ಭಂಗಾರದ ೨ ಮೆಡಲುಗಳೂ ಒಂದು ಭಂಗಾರದ ಕೈಸರಪಣಿಯೂ, ೧ ಉಂಗುರವೂ, ಮ|| ಜಿ. ವಿ. ಕೃಷ್ಣಮೂರ್ತಿರಾಯರಿಗೆ ೨ ಮೆಡಲುಗಳೂ ೧ ಉಂಗುರವೂ ಇನ್ನು ಕೆಲವು ಪಾತ್ರಧಾರಿಗಳಿಗೆ ಹೀಗೆಯೇ ಕೆಲಕೆಲ ಬಹುಮಾನಗಳೂ ನಾಟಕಸಂಘಕ್ಕೆ ೪ ಕಪ್ಪುಗಳೂ ೧ ಕ್ಲಾಕ್ಕಟ್ಟೂ ದೊರೆದಿರುವುದನ್ನು ಕಂಡು ಸಂತೋಷಿಸಿ ಇತೋಪ್ಯತಿಶಯವಾದ ಮರ್ಯಾದೆಗಳನ್ನು ಈ ಸಂಘದವರು ಅನಂತವಾಗಿ ಪಡೆಯುತ್ತ ಮೈಸೂರಿಗೆ ಯಶಸ್ಸನ್ನು ತರುತ್ತ ಚಿರಕಾಲವಿರಲೆಂದು ಕೋರುತ್ತೇವೆ.

ಬೀರೂರು ವೀರಶೈವ ಮಹಾಸಭೆ.

ಒಬ್ಬ ಪ್ರತಿನಿಧಿಯೆಂಬ ಹೆಸರಿಟ್ಟುಕೊಂಡು ಬೀರೂರು ವೀರಶೈವ ಕಾನ್ಫರೆನ್ಸ್ ಎಂಬ ಶಿರೋಲೇಖನದಿಂದ ಸಂಪದಭ್ಯುದಯ ಪತ್ರಿಕೆಗೆ ಯಾರೋ ಒಬ್ಬರು ಒಂದು ಲೇಖನವನ್ನು ಬರೆದಿದ್ದಾರೆ. ಅದರಲ್ಲಿ—ಕೆಲವು ಪತ್ರಿಕಾಕರ್ತರ ಅಂತರಾಭಿಪ್ರಾಯಕ್ಕೆ ಮಹಾಸಭಾ ಚಾಲಕರು ಮನಕೊಡದೆಹೋದದ್ದರಿಂದಲೇ ಕೆಲವು ಪತ್ರಿಕಾಕರ್ತರು ಬಾಯಿಗೆ ಬಂದಷ್ಟು ಉದ್ಘಾಟಿಸಿದ್ದಾರೆಂತಲೂ ಮಹಾಸಭಾ ಚಾಲಕರು ವಾರ್ತಾಪತ್ರಿಕೆಗಳಲ್ಲಿ ದುಡ್ಡುದುಗಾಣಿ ಕೊಟ್ಟು ಹೊಗಳಿಸಿಕೊಳ್ಳಲಿಕ್ಕೆ ಹೋದವರಲ್ಲವೆಂತಲೂ, ಸ್ಟಾರ್ ಪತ್ರಿಕಾಕರ್ತರು ವಿವೇಚನೆಯಿಲ್ಲದ ಪ್ರಕಟಿಮಾಡಿದ್ದಾರೆಂತಲೂ, ಮಹಾಸಭಾಧ್ಯಕ್ಷರು ಬೀರೂರು ಮಹಾಸಭೆಯವರು ಸಂಗ್ರಹಿಸಿದ್ದ ಲವಾಜಮೆಯನ್ನು ಪರೀಕ್ಷಿಸಿನೋಡಿದ್ದರೆ ಅವರನ್ನು ವಿಚಾರವಂತರೆಂದು ಹೇಳಬಹುದಾಗಿತ್ತೆಂತಲೂ, ಅವರ ಕೊನೆ ಭಾಷಣದಲ್ಲಿ ಭೋಜನೋಪಚಾರಗಳಿಗೆ ಕೊರತೆಯಾಗಿತ್ತೆಂದು ಸಂದೇಹ ತೋರಿಸಿದುದು ಆಶ್ಚರ್ಯಕರವೆಂತಲೂ ಮಹಾಸಭೆಗೆ ದಯಮಾಡಿಸಿದ್ದ ಮಧ್ಯವರ್ತಿಗಳ ಅಸೂಯಾಪ್ರಲಾಪಗಳಿಂದಲೇ ಜಗದ್ಗುರು ವರ್ಗದವರಿಗೂ ಬೀರೂರು ಸ್ಥಳದವರಿಗೂ ಮನೋವ್ಯಥೆಯುಂಟಾದುದರಿಂದ ಬೀರೂರಿನವರು ಎಲ್ಲಾ ಭಾಗದಲ್ಲೂ ನಿರ್ದೋಷಿಗಳೆಂತಲೂ ಮೊದಲಾಗಿ ಬರೆದಿರುತ್ತಾರೆ. ಕಂಡದುದನ್ನಾಡಿದರೆ ಕೆಂಡದಂಥ ಕೋಪವೆಂಬ ಗಾದೆಯು ಸುಳ್ಳಲ್ಲ. ಈ ಲೇಖನಕರ್ತರು ಸಭೆಗೆ ಬಂದಿದ್ದ ಮಹಾಜನರನ್ನೂ ಸಭಾಧ್ಯಕ್ಷರನ್ನೂ ಸಹ ಅಸೂಯಾಳುಗಳೂ ಅವಿಚಾರಿಗಳೂ ಆಗಿದ್ದರೆಂದು ದೂಷಿಸುವುದಕ್ಕೂ ಹಿಂದುಮುಂದು ನೋಡದೆ ಹೋಗಿರುವಾಗ ಕಂಡದ್ದನ್ನಾಡಿದ ವೃತ್ತಪತ್ರಿಕಾ ಕರ್ತರನ್ನು ದೂಷಿಸಿರುವುದರಲ್ಲಾಶ್ಚರ್ಯವೇನೂ ಇಲ್ಲ. ವೃತ್ತಪತ್ರಿಕೆಗಳವರನ್ನು ಕುರಿತು ದುಡ್ಡುದುಗಾಣಿ ಮಾತನ್ನಾಡಿರುವುದು ಲೇಖಕರ ನೀಚತನವನ್ನು ವ್ಯಕ್ತಪಡಿಸುವುದೇ ಹೊರತು ಮತ್ತೇನೂ ಇಲ್ಲ. ನ್ಯಾಯಬಲ ನೀತಿಬಲಗಳೆರಡೂ ಇಲ್ಲದ ಇಂಥ ಅವಿಚಾರದ ಬರವಣಿಗೆಯನ್ನು ಖಂಡಿಸುವುದಕ್ಕೆ ನಾವು ಮನಸ್ಸು ಕೊಡುವುದರಿಂದ ಬೀರೂರಿನವರ ಮನಸ್ಸಿಗೆ ನೋವನ್ನುಂಟುಮಾಡಬೇಕಾದೀತೆಂದು ಭಾವಿಸಿ, ಹಿಂದೆಯೇ ನಾವು ಅಂಥ ವಿಷಯಗಳನ್ನು ವಿಮರ್ಶನ ಮಾಡದವರಾದುದರಿಂದ ಈಗಲೂ ಅದಕ್ಕೆ ಪ್ರವರ್ತಿಸುವವರಾಗಿಲ್ಲ. ಬೀರೂರಿನಲ್ಲಿ ಮಹಾಸಭೆಯು ಸಲಕ್ಷಣವಾಗಿ ನಡೆದು ಬೀರೂರಿನವರಿಗೆ ಗೌರವವೂ ಮತಕ್ಕೆ ಪ್ರಯೋಜನವೂ ಉಂಟಾಗುವಂತೆ ಆಗಬೇಕೆಂಬುದೊಂದೇ ಸ್ಟಾರ್ ಪತ್ರಕರ್ತರ ಲಕ್ಷ್ಯವಾಗಿದ್ದಿತೋ ಇಲ್ಲವೋ ಎಂಬುದನ್ನು ಸಭೆ ನಡೆಯುವುದಕ್ಕೆ ಮುಂಚೆ ಅದರ ಸಂಬಂಧವಾಗಿ ಸ್ಟಾರ್ ಪತ್ರಿಕೆಯಲ್ಲಿ ಬಂದಿರುವ ಲೇಖನಗಳನ್ನು ಮತ್ತೊಮ್ಮೆ ಓದಿನೋಡಿದರೆ ಚೆನ್ನಾಗಿ ಗೊತ್ತಾಗಬಹುದು. ಬೀರೂರಿನವರು ಸುಮ್ಮನಿದ್ದರೂ ಅವರ ಹಿತಕಾಂಕ್ಷಿಗಳಂತೆ ಈ ಲೇಖಕರು ಅತಿ ಪ್ರಸಂಗವನ್ನು ಮಾಡಿ ಮರೆತುಹೋಗುತ್ತಿದ್ದ ವಿಷಯವನ್ನು ಮತ್ತೆ ಕೆದಕಿ ಬಳೆಯಿಸುವುದಕ್ಕೆ ಪ್ರಯತ್ನಿಸಿರುವುದು ಸರ್ವಥಾ ಉಚಿತವಲ್ಲ. ಬೀರೂರಿನವರು ನಮಗೆ ಹೊಸಬರಲ್ಲ. ಅವರುಗಳ ಮತಾಭಿಮಾನದ ಇಯತ್ತೆಯ ಪರಿಚಯವು ನಮಗೆ ನೂತನವೇನೂ ಅಲ್ಲ. ಯಾವ ಮೂಲದಿಂದ ಅನಿಷ್ಟವಿಷಯವು ಸಂಭವಿಸಿತೆಂಬುದು ನಮಗೆ ಗೊತ್ತಿಲ್ಲದೆ ಇಲ್ಲ. ಕಾಲವೈಷಮ್ಯದಿಂದ ಸಂಭವಿಸಿಹೋದುದಕ್ಕಾಗಿ ಬೀರೂರಿನ ಮಹಾಜನರು ಚಿಂತಿಸದೆ, ತಮ್ಮ ಮತಾಭ್ಯುದಯ ದೃಷ್ಟಿಯನ್ನು ಮತ್ತಷ್ಟು ವಿಶಾಲಗೊಳಿಸಿಕೊಂಡು ಪೂರ್ವಕ್ಕಿಂತಲೂ ಉಜ್ವಲವಾಗಿ ಮತಸೇವಾ ಕಾರ್ಯಗಳನ್ನು ಜರುಗಿಸಿ, ಶಿವಕಟಾಕ್ಷಕ್ಕೂ ಸಮಾಜದ ಪ್ರೀತಿಗೂ ಪಾತ್ರರಾಗುವಂತಾಗಲೆಂಬುದೇ ನಮ್ಮ ಸುಹೃನ್ನಿವೇದನವು.

ಪತ್ರವ್ಯವಹಾರ.

ಸಿದ್ಧಲಿಂಗೇಶ್ವರ ರಥೋತ್ಸವವು.

ತುಮಕೂರು ಸಮೀಪದಲ್ಲಿರುವ ಪ್ರಸಿದ್ಧ ಸಿದ್ಧಗಂಗಾಕ್ಷೇತ್ರದಲ್ಲಿ ಮಾಘಬ|| ೧೩ (19-2-20) ರಿಂದ ಫಾಲ್ಗುಣ ಶು|| ೭ (26-2-20) ರ ವರೆಗೂ ಶ್ರೀ ಸಿದ್ಧಲಿಂಗೇಶ್ವರ ರಥೋತ್ಸವವು ನಡೆಯುವುದಲ್ಲದೆ ಇದೇ ಸಮಯದಲ್ಲಿ ಎತ್ತುಗಳ ಪರಿಷೆಯೂ, ಪ್ರದರ್ಶನವೂ ಜರುಗುವುವಾದುದರಿಂದ ಆ ಕಾಲಕ್ಕೆ ಭಗವದ್ಭಕ್ತರು ಆಗತ್ಯವಾಗಿ ಬಂದು ದೇವರ ಸೇವಾಕಾರ್ಯವನ್ನು ನೆರವೇರಿಸಿ ತಮ್ಮ ದರ್ಶನಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಶ್ರೀ ಸಿದ್ಧಗಂಗಾಮಠಾಧ್ಯಕ್ಷ ಮಹಾಸ್ವಾಮಿಯವರು ಈ ಮೂಲಕ ಅಪೇಕ್ಷಿಸುತ್ತಾರೆ.

ಚಳ್ಳಕೆರೆ ತಾ|| ಹಿರೇಹಳ್ಳಿಯ ವಿ. ಇ. ಸ್ಕೂಲು ಹೆಡ್ಮಾಸ್ಟರ್ ಮ|| ಎಚ್. ಎಸ್. ಹಂಪಯ್ಯನವರ ವಿಶೇಷ ಪ್ರೋತ್ಸಾಹದಿಂದ ವಿದ್ಯಾರ್ಥಿಗಳ ಸಂಖ್ಯೆಯು ೫೦ ರಿಂದ ೯೦ ರ ವರೆಗೆ ಹೆಚ್ಚಿ ಬಹಳ ಅಭಿವೃದ್ಧಿಗೆ ಬರುತ್ತಿದೆ. ಈ ಹೆ|| ಮಾಸ್ತರು ಈ ಸ್ಕೂಲನ್ನು ಎ. ವಿ. ಸ್ಕೂಲನ್ನಾಗಿ ಮಾರ್ಪಡಿಸಬೇಕೆಂಬ ಸಂಕಲ್ಪದಿಂದ ಸ್ಕೂಲುಕಮಿಟಿ ಮೆಂಬರುಗಳನ್ನೂ, ಗ್ರಾಮದ ಮುಖಂಡರನ್ನೂ ಪ್ರೋತ್ಸಾಹಿಸಿ ೨೫೦೦ ರೂ. ಗಳ ವರೆಗೆ ಚಂದಾಹಾಕಿಸಿ ಬ್ಯಾಂಕಿನಲ್ಲಿ ಕಟ್ಟಿಸಿ ಜಾಗ್ರತೆಯಲ್ಲಿ ಎ. ವಿ. ಸ್ಕೂಲನ್ನಾಗಿ ಮಾಡಿಕೊಡಬೇಕೆಂದು ಇಲಾಖಾಧಿಕಾರಿಗಳಿಗೆ ಅರ್ಜಿಯನ್ನು ಹಾಕಿಸಿರುತ್ತಾರೆ. ಮತ್ತು ೨೦೦ ವಿದ್ಯಾರ್ಥಿಗಳವರೆಗೂ ಸೇರಲು ತಕ್ಕ ಪ್ರಯತ್ನವನ್ನು ಮಾಡುತ್ತಿರುವರು. ಇವರಂತೆ ಇತರ ಹೆ|| ಮಾ|| ರುಗಳೂ ಪ್ರಯತ್ನ ಪಟ್ಟಲ್ಲಿ ಇ|| ಜ|| ರವರು ನಡಿಸುತ್ತಿರುವ ವಿದ್ಯಾಭಿವೃದ್ಧಿಯ ಏರ್ಪಾಟು ಸಫಲವಾಗಿ ಜನರಿಗೆ ಮಹೋಪಕಾರವಾಗುವುದರಲ್ಲಿ ಸಂದೇಹವಿಲ್ಲ.

ಓರ್ವ ಪ್ರತ್ಯಕ್ಷದರ್ಶಿ.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಫಂಡ್.

ಮ|| ಹಿರಾಳೆ ಕೆಂಬಸಪ್ಪ, ಗಂಗಪ್ಪ ಬ್ರದರ್ಸ್, ಹಾಸನ ಇವರು ಮೇಲ್ಕಂಡ ಸಂಘಕ್ಕೆ ಉದಾರ ಮನಸ್ಸಿನಿಂದ ಕೊಟ್ಟ ೨೫ ರೂ. ಗಳ ಚಂದಾವನ್ನು ಸಂಘದವರು ಕೃತಜ್ಞತೆಯಿಂದ ಅಂಗೀಕರಿಸಿರುತ್ತಾರೆ. ಮೇಲ್ಕಂಡ ದೊಡ್ಡಮನುಷ್ಯರು ನಗರ ಡಿವಿಜನ್ ವಾಸಿಗಳಲ್ಲದಿದ್ದರೂ ಇವರು ಈ ಸಂಘಕ್ಕೆ ಕೊಟ್ಟ ಉತ್ತೇಜನವು ತುಂಬಾ ಶ್ಲಾಘನೀಯವಾಗಿದೆ. ಇವರ ಉದಾಹರಣೆಯನ್ನಾದರೂ ನೋಡಿಕೊಂಡು ಚಂದಾ ಹಾಕಿರತಕ್ಕ ಈ ಡಿವಿಜನ್ನಿನ ಮಹನೀಯರು ತಮ್ಮ ತಮ್ಮ ವಾಗ್ದಾನದ ಮೊಬಲಗನ್ನು ಸಂಘಕ್ಕೆ ಪಾವತಿ ಮಾಡಿ ಸದರಿ ಸಂಘದ ಏಳಿಗೆಗೆ ಪಾತ್ರರಾಗುತ್ತಾರೆಂದು ನಂಬಿರುತ್ತೇನೆ. ಇತರ ವೀರಶೈವ ಮಹನೀಯರೂ ಈ ಸಂಘವು ತಮ್ಮದೆಂದು ಭಾವಿಸಿ ಆದಷ್ಟು ಸಹಾಯ ಮಾಡುವವರಾಗಬೇಕೆಂದು ಕೋರಿದೆ.

ಜಿ. ಎಂ. ಕಾಡಪ್ಪ,
ವೈಸ್‌ಪ್ರೆಸಿಡೆಂಟ್, ನ. ಡಿ. ವೀ. ವಿ. ವ. ಸಂಘ, ಶಿವಮೊಗ್ಗ.

• ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಬಹುಮಾನ •

1920ನೆ ಏಪ್ರಿಲ್‌ನಲ್ಲಿ ನಡೆಯುವ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಯಾಗುವ 1 ಮತ್ತು 2 ನೆಯ ಇಬ್ಬರು ವೀರಶೈವ ವಿದ್ಯಾರ್ಥಿಗಳಿಗೆ 20 ಮತ್ತು 10 ರೂಪಾಯಿಗಳ 2 ಬಹುಮಾನಗಳು ಕೊಡಲ್ಪಡುವುವು. ಪರೀಕ್ಷೆಗೆ ದರಖಾಸ್ತು ಮಾಡಿ ಪ್ಯಾಸ್ ಆಗಬಹುದೆಂಬ ನಂಬಿಕೆ ಇರುವ ವಿದ್ಯಾರ್ಥಿಗಳು ಈ ಕೆಳಗಿನ ಅಡ್ರೆಸ್ಸಿಗೆ ಏಪ್ರಿಲ್ ಆಖೈರಿನೊಳಗೆ ತಮ್ಮ ತಮ್ಮ ರಿಜಿಸ್ಟರ್ ನಂಬರುಗಳನ್ನು ಕಳುಹಿಸುವುದಲ್ಲದೆ ಸದರಿ ಬಹುಮಾನವನ್ನು ಹೊಂದುವ ಆಶೆಯಿಂದ ಪ್ರತಿಯೊಬ್ಬ ವೀರಶೈವ ವಿದ್ಯಾರ್ಥಿಯೂ ಶ್ರದ್ಧೆಯಿಂದ ಪ್ಯಾಸುಮಾಡಿ ನನ್ನ ಸಂಕಲ್ಪವನ್ನು ಸಾರ್ಥಕಗೊಳಿಸುವರೆಂದು ನಂಬಿರುವ,

ವಿದ್ಯಾರ್ಥಿಗಳ ಹಿತಚಿಂತಕ, ಕೋರಿಹಾಲಪ್ಪಶೆಟ್ಟಿ,
ಮಂಡಿಮರ್ಚೆಂಟ್ ಮತ್ತು ಕಮಿಷನ್ ಏಜೆಂಟ್,
ಶಿವಮೊಗ್ಗ.

ಸೂ.—ಇಂಗ್ಲೀಷ್‌ಭಾಗ ಒಂದನ್ನೇ ತೆಗೆದುಕೊಂಡು ಪ್ಯಾಸ್‌ಮಾಡುವವರಿಗೆ ಇನಾಮುಗಳು ದೊರೆಯಲಾರವು.

• ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ •.

ಮತಬಾಂಧವರೆ! ಮೇಲ್ಕಂಡ ಸಂಘಕ್ಕೆ ಲಗ್ನವೇ ಮೊದಲಾದ ವಿಶೇಷ ಕಾಲಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರ ಮತಾಭಿಮಾನಿಗಳಾದ ಮಹನೀಯರು ಸಹಾಯ ಮಾಡುತ್ತಲಿರುವುದು ಸರಿಯಷ್ಟೆ. ಹಾಗೆ ವಸೂಲಾದ ಮೊಬಲಗು ಕೆಲವು ಸ್ಥಳೀಯ ದೊಡ್ಡಮನುಷ್ಯರಲ್ಲಿ ನಿಂತಿರುವುದಾಗಿಯೂ ಇನ್ನು ಕೆಲವು ಸಂದರ್ಭಗಳಲ್ಲಿ ಹೀಗೆ ಎತ್ತಲ್ಪಟ್ಟ ಹಣವು ಇತರ ಕೆಲಸಗಳಿಗಾಗಿ ಉಪಯೋಗಿಸಲ್ಪಡುತ್ತಿರುವುದಾಗಿಯೂ ತಿಳಿಯಬಂದಿದೆ. ವಸೂಲಾದ ಮೊಬಲಗನ್ನು ಕೂಡಲೆ ಮನಿಯಾರ್ಡರುದ್ವಾರಾ ಕಳುಹಿಸಿದಲ್ಲಿ, ಕಳುಹಿಸಿದವರಿಗೆ ದಾಖಲೆ ಇರುವುದಲ್ಲದೆ ಇಂಥಾ ದೂರುಗಳಿಗೆ ಅವಕಾಶವಿರುವದಿಲ್ಲ. ವಸೂಲಾದ ಹಣವನ್ನು ಇಟ್ಟುಕೊಂಡಿರತಕ್ಕ ಕೆಲವು ದೊಡ್ಡಮನುಷ್ಯರನ್ನು ಎಷ್ಟುಸಾರಿ ಕೇಳಿದಾಗ್ಯೂ ಈಗ ಆಗ ಎಂದು ಕಾಲಹರಣ ಮಾಡುತ್ತಿರುವರು. ಇದುವರೆಗೆ ವಸೂಲಾಗಿರತಕ್ಕ ಮೊಬಲಗು ಯಾರ ಬಳಿಯಲ್ಲಿದ್ದರೂ ಕೂಡಲೇ ದಯವಿಟ್ಟು ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ.

ಫಂಡಿನ ಮೂಲಧನದಿಂದ ಬರತಕ್ಕ ವೃದ್ಧ್ಯಂಶವು ಕ್ಷಿಪ್ತವಾದುದಾಗಿದ್ದರೂ ಸಹಾಯವನ್ನು ಅಪೇಕ್ಷಿಸತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಅದುಕಾರಣ ಮತಾಭಿಮಾನಿಗಳಾದ ಮಹನೀಯರೆಲ್ಲರೂ ತಮ್ಮ ಮನೆಗಳಲ್ಲಿ ನಡೆಯತಕ್ಕ ವಿಶೇಷ ಕಾರ್ಯಗಳಲ್ಲಿ ಸಂಘಕ್ಕಾಗಿ ತಮ್ಮ ಶಕ್ತ್ಯನುಸಾರ ಸಹಾಯ ಮಾಡುವುದಲ್ಲದೆ ತಮ್ಮ ಬಂಧುಮಿತ್ರರುಗಳನ್ನೂ ಸಹ ಪ್ರೋತ್ಸಾಹಿಸಿ ಅವರುಗಳಿಂದಲೂ ಸಹಾಯ ಮಾಡಿಸುವುದರ ಮೂಲಕ ಸಂಘದ ಉದ್ದೇಶವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥಿಸುವ,

ತಮ್ಮ ಅತ್ಯಂತ ವಿಧೇಯ,
ಬೆಂಗಳೂರು ಸಿಟಿ, ಜಿ. ಪರಮಶಿವಯ್ಯ, ಅಡ್ವೋಕೇಟ್ ಮತ್ತು
ತಾ|| 4-2-1920. ವೀರಶೈವ ವಿದ್ಯಾಭಿವೃದ್ಧಿ ಫಂಡು
ಸಂಘದ ಸೆಕ್ರೆಟರಿ.

ಅಭಿನಂದನ ಸಮಾರಂಭವು.

ಶ್ರೀ ಮಡಿವಾಳಸ್ವಾಮಿ ಸರದಾರ ಬಿ. ಎ. ಇವರು (ಐ. ಸಿ. ಎಸ್.) ಅಭ್ಯಾಸ ಮಾಡುವದಕ್ಕೆ ಇದೇ ೩೧-೧-೨೦ ದಿವಸ ಸೀಮೆಗೆ ಹೋಗುವವರಾಗಿರುತ್ತಾರೆ. ಅವರ ಅಭಿನಂದನ ಮಾಡುವದಕ್ಕೆ ಇಲ್ಲಿಯ ಸೊಲ್ಲಾಪುರ ಲಿಂಗಾಯತ ಎಜ್ಯುಕೇಷನ್ನಿನ ವತಿಯಿಂದ ಇದೇ ೨೫-೧-೨೦ ತಾರೀಖಿನ ದಿವಸ ರಾತ್ರಿ ೮ ಗಂಟೆಯಲ್ಲಿ ಮಿ|| ಅಕಿವಲೆ ಬಿ.ಎ., ಬ್ಯಾರಿಸ್ಟರ ಇವರ ಅಧ್ಯಕ್ಷತೆಯಲ್ಲಿ ಉಂಬರ್ಜೀ ಹಾಲಿನಲ್ಲಿ ಸಭೆ ಕೂಡಿತ್ತು. ಸಭೆಗೆ ವಕೀಲ, ವ್ಯಾಪಾರಿ, ಡಾಕ್ಟರ ಶಾಲಾಮಾಸ್ತರ-ವಿದ್ಯಾರ್ಥಿ ವ ಎಲ್ಲಾ ಜಾತಿಯ ನಾಗರಕರು ಬಂದು ಇದ್ದರು. ಸಭೆಯಲ್ಲಿ ಇಲ್ಲಿನ ಲಿಂಗಾಯತ ಪುಢಾರಿ ಹಾಂಗು ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್ನಿನ ಸೆಕ್ರೆಟರಿಗಳಾದ ಶ್ರೀಮಂತ ಅಣ್ಣಾಸಾ|| ಉಂಬರ್ಜೀ ಬಿ. ಎ. ಇವರು ಗೌರವಯುಕ್ತ ಪ್ರೋತ್ಸಾಹಪರ ಭಾಷಣ ಮಾಡಿದನಂತರ ಮೆಸರ್ಸ ಹಿರಾಚಂದ, ತಾತಾ, ಸಹಾವಕೀಲ, ಧೂಮ್ಮಾವಕೀಲ, ಸಿದ್ರೋಳೆ, ಜೀರಗೆ, ಬಾಕಳೆ, ಡಾಕ್ಟರ ದೇಶಮುಖ ಮುಂತಾದವರು-ಶ್ರೀ ಸರದಾರ ಇವರು ಹೋಗುವ ಕೆಲಸದಲ್ಲಿ ಯಶಸ್ವಿ ಆಗಿ ಸ್ವದೇಶಕ್ಕೆ ಬಂದನಂತರ ಸಮಾಜಸೇವಾ ರಾಷ್ಟ್ರಸೇವಾ ಮಾಡಬೇಕೆಂದು ಉತ್ಸಾಹಯುಕ್ತ ಮತ್ತು ಉಪದೇಶಯುಕ್ತ ಭಾಷಣ ಮಾಡಿದ ನಂತರ ಶ್ರೀ ಸರದಾರ ಇವರು - ಶ್ರೀ ಜಗದ್ಗುರು ಮಹಾಸ್ವಾಮಿ ಚಿತ್ರದುರ್ಗ ಇವರು ಆಶೀರ್ವಾದ ಪೂರ್ವಕ ೫೦೦೦ ರೂಪಾಯಿಗಳ ಧನಸಹಾಯ ಕೊಟ್ಟು ಶಾಸ್ತ್ರಾಧಾರದ ಆತಂಕ ತರದೆ ಸೀಮೆಗೆ ಹೋಗಲಿಕ್ಕೆ ಅಜ್ಞಾಪಿಸಿದರು. ಹಾಂಗು ಇಲ್ಲಿಯ ಕೀರಿಟೆ ಮಠಾಧ್ಯಕ್ಷ ಶ್ರೀಮನ್ನಿರಂಜನ ನಿಜಗುಣ ಸ್ವಾಮಿಗಳು ನಾನು ಹೋಗುವ ಕೆಲಸಕ್ಕೆ ಉತ್ಸಾಹಕೊಟ್ಟು ದ್ರವ್ಯಸಹಾಯ ಮಾಡಿಸಿದರು" ಎಂದು ಉಭಯರ ಆಭಾರ ಮಾನಿಸಿ ಸೀಮೆಯಿಂದ ಬಂದನಂತರ ಸಮಾಜಸೇವಾ ರಾಷ್ಟ್ರಸೇವಾ ಮಾಡುತ್ತೇನೆಂದು ಶಪಥ ಮಾಡಿದರು. ಅನಂತರ ಅಧ್ಯಕ್ಷರು ಸೀಮೆಯಲ್ಲಿ ಅಭ್ಯಾಸಮಾಡುವ ಕ್ರಮ ಹಾಂಗು ಅಲ್ಲಿಯ ಮಾಹಿತಿಯನ್ನು ಹೇಳಿದರು. ತದನಂತರ ಸಭಿಕರ ಆಭಾರಮಾನಿಸಿ, ಹಾರತುರಾಯಿ ಅತ್ತರ ಗುಲಾಬಿ ಕೊಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಸಭೆಗೆ ಸೊರಾಪುರದ ಶ್ರೀಮಂತ ವೆಂಕಪ್ಪಾನಾಯಕ ಭೈರಿಬಹಾದುರರು ಇವರು ಬಂದು ಇದ್ದರು. ಉಂಬರ್ಜೀಹಾಲು ಉತ್ತಮರೀತಿಯಿಂದ ಶೃಂಗರಿಸಲ್ಪಟ್ಟು ಜಾಗದ ಅಭಾವದಿಂದ ಬಹುಜನರು ಹಿಂತಿರಿಗಿಹೋಗಬೇಕಾಯಿತು.

ಮಹಾಲಿಂಗಪ್ಪ ಖಾನಾಪುರ.

ಸಾಲಂಕೃತ ಕನ್ಯಾದಾನ.

ನೈಜಾಂ ಇಲಾಖಾ ಯಾದಗಿರಿ ಗ್ರಾಮದಲ್ಲಿ ಶ್ರೀಯುತ ಲಿಂಗೇರಿ ಬಸವಲಿಂಗಪ್ಪನವರ ಕೋನಪ್ಪನವರು ಗತ ಮಾಘ ಶು|| ೫ ಇಂದುವಾರದಲ್ಲಿ ತಮ್ಮ ಸುಪುತ್ರಿ ಸೌ|| ಕುಂ|| ಶೋ|| ನೀಲಮ್ಮನನ್ನು ಶ್ರೀ|| ಯನ್. ರುದ್ರಗೌಡ ವಕೀಲ ಗುಲ್ಬರ್ಗ ಇವರಿಗೆ ಕೊಟ್ಟು ವಿಜೃಂಭಣೆಯಿಂದ ವಿವಾಹವನ್ನು ನೆರವೇರಿಸಿದರು. ಈ ಸಮಾರಂಭಕ್ಕೆ ಗುರುಮಠದಲ್ಲಿ ನೀರಡಗುಂಭದ ಶ್ರೀ|| ಪ್ರ|| || ಸ್ವಾಮಿಗಳವರು ಪಟ್ಟಚರಮೂರ್ತಿಗಳೇ ಮುಂತಾದ ಗುರುವರ್ಗದವರು ನಾಯಕಲ್ಲು ಟಿಬಟೋರ್ ಶಾಲೆಯ ಅಧ್ಯಾಪಕರು, ಶ್ರೀ|| ಶಿವಕಥಾ ಶಿವದೇವಶಾಸ್ತ್ರಿಗಳು ೩ ಸಾವಿರ ಮಾಹೇಶ್ವರರು, ಗವಾಯಿಗಳು, ಅನೇಕ ಪ್ರಮುಖಗೌಡರು, ಪೋತನಾಳು, ಬೆಳವಿನೂರು, ಕೊಡಂಗಲ್ಲು ಕಡೆಯ ದೇಶಮುಖರು ಸೇರಿದ್ದರು. ಮನೆಯ ಯಜಮಾನರು, ವಧೂವರರಿಗೆ ವಿವಾಹಕ್ಕೆ ೨ ದಿವಸ ಮುಂಚಿತವಾಗಿ ದೀಕ್ಷೆಯನ್ನು

ನೋಟೀಸು.

ಕಡೂರು ತಾಲ್ಲೂಕು ಯಗಟಿ ಹೋಬಳಿ ಹುಳಿಗೆರೆ ದಾಖಲೆ ದೊಡ್ಡಪ್ಪನಹಳ್ಳಿಯಲ್ಲಿರುವ ಮುಪ್ಪಿನಯ್ಯನ ಮಗ ಚನ್ನಬಸಯ್ಯನವರ ಹೆಂಡತಿ ವೀರಮ್ಮನು ತಿಳಿಯಪಡಿಸುವುದೇನೆಂದರೆ—ನನ್ನ ಗಂಡ ಪವತಿ ಆಗಿ ಈಗ ಸುಮಾರು 10-11 ವರ್ಷವಾಯಿತು. ಅಂದಿನಿಂದ ನಾನು ನನ್ನ ಭಾವನ ಮಕ್ಕಳು ಬಸಲಿಂಗಯ್ಯ ಚನ್ನವೀರಯ್ಯ ಎಂಬುವವರನ್ನು ನನ್ನ ಮನೆಯಲ್ಲಿಯೇ ಇಟ್ಟುಕೊಂಡು ನಾನೇ ಬಸಲಿಂಗಯ್ಯನ ಲಗ್ನ ಮಾಡಿದ್ದೇನೆ. ಈಗ ಸದರಿ ಬಸಲಿಂಗಯ್ಯ ವಗೈರೇರು ಯಾರ ದುರ್ಬೋಧನೆಯೋ ಒಳಗಾಗಿ ನನಗೆ ಮೋಸಮಾಡಬೇಕೆಂಬ ಇರಾದೆಯಿಂದ ನನ್ನೊಂದಿಗೆ ಕಲಹ ಹುಟ್ಟಿಸಿರುತಾರೆ. ನಾನು ಹಕ್ಕುದಾರಳಿದ್ದೇನೆ. ಇವರಿಗೆ ನನ್ನಮನೆ ಸಂಬಂಧವಾಗಿಯೂ ಮತ್ತು ಸ್ವತ್ತುಗಳ ಸಂಬಂಧವಾಗಿಯೂ ಚರಸ್ಥಿರ ಆಸ್ತಿಗಳಿಗೂ ಕೂಡ ನಾನೇ ಜವಾಬ್ದಾರಳು. ಕಡೂರು ಸಬ್‌ರಿಜಿಸ್ಟ್ರಾರ್‌ಗೆ ಒಳಪಟ್ಟ ಖುಷ್ಕಿಜಮೀನ್ (2) ನನ್ನ ವರ್ಗ ಅನುಭವದಲ್ಲಿರುತ್ತೆ. ಮತ್ತು ಕೆಸ್ತಿ ದೇವಪ್ಪಯ್ಯ ಬಿನ್ ತಿಮ್ಮಪ್ಪಯ್ಯ ಎಂತ ವರ್ಗವಿರುವ ನನ್ನ ಸ್ವಾಧೀನ ಅನುಭವದಲ್ಲಿರುವ ಭಾಗಾಯ್ತು (1) ಮತ್ತು ಸದರಿಯವರ ವರ್ಗ ನನ್ನ ವಾಸಸ್ಥಾನದ ಮನೆ (1) ಮತ್ತು ಚರಾಸ್ತಿ ಜಾನುವಾರು ವಗೈರೆ ಯಾವದಕ್ಕಾದರೂ ಸದರಿ ಬಸಲಿಂಗಯ್ಯ ವಗೈರೆಯವರಿಂದ ಖರೀದಿ ಭೋಗ್ಯ ವಗೈರೆ ಯಾರಾದರೂ ಪಡೆದುಕೊಂಡರೆ ಸಿದ್ಧವಾಗಲಾರದು. ಸದರಿಯವರು ಇನ್ನುಮುಂದೆ ಮಾಡತಕ್ಕ ಲೇಣೆದೇಣೆಗಳಿಗೂ ಹಿಂದೆ ಮಾಡಿರತಕ್ಕ ಲೇಣೆದೇಣೆಗಳಿಗೂ ಕೂಡ ನಾನು ಜವಾಬ್ದಾರಳಲ್ಲ. ಎಂಬದಾಗಿ ಈ ನೋಟೀಸು ಮೂಲಕ ಎಚ್ಚರಿಸಿದೆ.

—— ವೀರಮ್ಮನ ಗೆರೆ ರುಜು.

ಮಾಡಿಸಿ ಬಳಿಕ ವಿವಾಹವು ವಿಧ್ಯುಕ್ತವಾಗಿ ವೇ|| ತಿಬಟೂರ್ ವಿರೂಪಾಕ್ಷಶಾಸ್ತ್ರಿಗಳವರ ವೇ|| ಮಕ್ಕಲಿ ಬಸವಲಿಂಗಾರ್ಯರ ಪೌರೋಹಿತ್ಯದಿಂದ ನಾಂಗನಾಯಿತು. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಿಂದ ಬಂದ ಆಶೀರ್ವಾದ ಪತ್ರಿಕೆಯು ಓದಲ್ಪಟ್ಟು ವಧೂವರರಿಗೆ ಆಶೀರ್ವಾದವು ಸೂಚಿಸಲ್ಪಟ್ಟಿತು. ಸು. ೧೦ ಸಹಸ್ರ ಜನರಿಗೆ ಭೋಜನಾದ್ಯುಪಚಾರವು ನಡೆದು ಮಾಹೇಶ್ವರ ವರ್ಗಕ್ಕೆ ೧ ರೂ. ನಂತೆ ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಮಾರನೆ ದಿವಸ ಸಭಾಮಂಟಪದಲ್ಲಿ ಸದರಿ ಶ್ರೀ|| || ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಲು, ವೇ|| ನಾಯಕಲ್ಲು ಬಸವರಾಜಶಾಸ್ತ್ರಿಗಳು ಭಕ್ತಿ ವಿಷಯದಲ್ಲೂ, ಮಿ|| ಕಾಡಪ್ಪ ವಿದ್ಯಾರ್ಥಿಯು ವಿಕಮುತ್ತದ ಮೇಲೂ, ವೇ|| ಮಕ್ಕಲಿ ಬಸವಲಿಂಗಾರ್ಯರು ನೀತಿ ಮತ್ತು ಸ್ತ್ರೀವಿದ್ಯದ ಮೇಲೂ ಚೆನ್ನಾಗಿ ಭಾಷಣಮಾಡಿದರು. ವೇ|| ಶಿವಕಥಾ ಶಿವದೇವಶಾಸ್ತ್ರಿಗಳವರಿಂದ ಶಿವಕಥೆಯೂ, ಗವಾಯಿಗಳಿಂದ ಸಂಗೀತವೂ ನಡೆದು, ಸಭಿಕರು ಗಂಧಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟರು. ಕೈ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ೨ ರೂ ತೆಗೆಯಲ್ಪಟ್ಟ ಬಳಿಕ ಸರ್ವರೂ ಶ್ರೀಮರ್ತ್ ಚಕ್ರವರ್ತಿಗಳ, ಧರ್ಮಪ್ರಭುಗಳಾದ ನೈಜಾಂರವರ, ವಧೂವರರ ಶ್ರೇಯಸ್ಸನ್ನು ಕೋರಿ ಕರತಾಡನದೊಡನೆ ಸಭೆಯನ್ನು ವಿಸರ್ಜಿಸಿದರು.

ಓರ್ವ ಪ್ರತ್ಯಕ್ಷದರ್ಶಿ.

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ್, ಕಮಿಷನ್ ಏಜಂಟ್, ಸೊಲ್ಲಾಪುರ.

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಎಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಗೆಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳೆ, ಕಡಲೆಬ್ಯಾಳೆ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರುಷ ಇಲ್ಲಿ ಬಿಳಿ (ಹರಿದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

4 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಘಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ತೊಡನು, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

50 ನಮ್ಮ ವಿಳಾಸ:—ವೈರಂ ಅಂಡ್ ಕೊ,

3. ಇರುಳಪ್ಪನಬೀದಿ, ಮದರಾಸು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವವು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ, 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿದೆ. ಇದರಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಕೃಷ್ಣನೂ ರಾಮನೂ ಮುಂತಾದವರು ಕಾಣುವರು. ನೋಡಲು ಆಶ್ಚರ್ಯವಾಗಿರುವುದು. ಇದರ ಬಣ್ಣವು ಎಂದಿಗೂ ಹೋಗದು. ಕೈಯಲ್ಲಿ ಹಾಕಿಕೊಂಡರೆ ನಿಜವಾದ ಭಂಗಾರವೆಂದೇ ಹೇಳಬೇಕು. ಕ್ರಯ 1 ಕ್ಕೆ 0-12-0 ಆಣೆ.



ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ



ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅನುಕೂಲವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4.8.0.

ವಿಳಾಸ:—ವಿ. ಎ. ಎಸ್. ಪಾಣಿ ಕಂಪನಿ,

50 ಸಾಹುಕಾರಪೇಟೆ, ಮದರಸು.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 29

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ನೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲು ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,

೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತಂಪಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ

20 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತನಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತನಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಂಗರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ಪಶುವಿನಿಂದ ತಯಾರಿಸಲಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುಳ, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪ್ಲೀಡರ್,

50 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಸ್ಟರ ಮಾಡಲ್ಪಟ್ಟ 17

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೮೯೮ ನೇ ಇಸ್ವಿಯಿಂದ ತಾ|| ೧-೮-೧೮೯೯ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೮೯೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮೆಜಡ್ಡು, ಗುದ್ದವ್ಯಸನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ವೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಫೋಟೆ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,

ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೦೦ ನೆಯ ಇಸವಿ ಫೆಬ್ರವರಿ ತಾ|| ೮ ರಿಂದ ೧೯೦೦ ನೆಯ ಫೆಬ್ರವರಿ ತಾ|| ೧೪ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೨೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾಘ ಬ|| ಚೌತಿಯಿಂದ ಮಾಘ ಬ|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಕುಂಭ
8	[1]ಭಾನು	ಚೌತಿ	11-31	ಹಸ್ತ	56-30	26
9	ಸೋಮ	ಪಂಚ	12-44	ಚಿತ್ತ	60	27
10	ಮಂಗಳ	ಷಷ್ಠಿ	15-11	ಚಿತ್ತ	0-32	28
11	ಬುಧ	ಸಪ್ತ	18-45	ಸ್ವಾತಿ	5-11	29
12	ಗುರು	ಅಷ್ಟ	23-20	ವಿಶಾ	10-46	1
13	ಶುಕ್ರ	ನವ	28-31	ಅನೂ	17-1	2
14	ಶನಿ	ದಶ	34-0	ಜ್ಯೇಷ್ಠ	23-40	3

(1) ಮಾರಿಸಾರು, ಉತ್ತನಹಳ್ಳಿ ಜಾತ್ರೆ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರಮದಿಗಶರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತನಾಲಾಕುಲಂ | ಪ್ರೇಮಂಚಿತ್ತಲೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೦೦ ನೆಯ ಇಸವಿ ಫೆಬ್ರವರಿ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೬

MYSORE GOVERNMENTVE ACRTISEMENTS.

28

Government Botanic Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodation on the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮, ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾತನ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಸೂತ್ರೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕನಕೋತ್ತರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 16

ನಾವು ಎ. ಆಲ್ ಬ್ಯುಕ್ಯುಯರ್ ಕ್ಯು ಅಂಡ್ ಸನ್ಸ್ ಎಂಬ ಹೆಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆನಲ್ಲದೆ ಬಾಸಲ್‌ಮಿಷನ್ ವಗ್ಯೆರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಯೆರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ :—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

14 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೨೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೨೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲೂ ಆಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ನೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕವಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು. ಔನ್ಸು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ

8 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 9

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಂದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಫೆಬ್ರವರಿ ತಾ|| ೧೫ನೆಯ ಭಾನುವಾರ.

ಪೂಜ್ಯವರ್ಗದಲ್ಲಿ ಭೇದೋತ್ಪಾದನೆ.

(ಭಾಗ ೧.)

ಮತಧರ್ಮ ರಕ್ಷಣೆಗಾಗಿ ಪ್ರತಿ ಮತದಲ್ಲೂ ಪೂಜ್ಯವರ್ಗವು ಇದ್ದೇ ಇರುತ್ತದೆ. ವೀರಶೈವ ಮತದಲ್ಲಿ ಧರ್ಮರಕ್ಷಣೆಗಾಗಿ ಏರ್ಪಟ್ಟಿರುವ ಮಠಗಳೂ ತದಧಿಕಾರಿಗಳೂ ವಿಶೇಷವಾಗಿರುತ್ತಾರೆ. ಹೀಗೆ ಮಾಡಿದುದು ಮಹೇಶ್ವರ ಧರ್ಮಕರ್ಮನಿರ್ವಾಹ ಸೌಕರ್ಯಕ್ಕಾಗಿಯೂ ಧರ್ಮಲೋಪಾಲೋಪಗಳ ತಿದ್ದುವಿಕೆಗಾಗಿಯೂ ಅನುಕೂಲಿಸಲೆಂಬುದಕ್ಕಾಗಿಯೇ ಆಗಿರುತ್ತದೆ. ಮೇಲ್ವಿಚಾರಣೆಯು ಹೆಚ್ಚಿದಷ್ಟೂ ಕಾರ್ಯಭಾರಗಳು ಸುಧಾರಿಸಿ ನಡೆಯುವುದು ಸಹಜವಾಗಿರುತ್ತದೆ. ಆದರೆ ಇತ್ತೀಚೆಗೆ ಬರಬರುತ್ತ ಈ ಗುರುವರ್ಗದವರಲ್ಲಿ ಸ್ವಕರ್ತವ್ಯವನ್ನರಿತವರೂ, ಅದನ್ನು ನೆರವೇರಿಸಲು ಸಮರ್ಥರಾದವರೂ ವಿರಳರಾಗುತ್ತ ಬಂದ ಕಾರಣ, ಗುರುವರ್ಗದಿಂದ ಆಗಬೇಕಾಗಿದ್ದಷ್ಟು ಫಲವು ಸಮಾಜಕ್ಕೆ ಆಗದೆ ಹೋಯಿತು. ಸಮಾಜದಲ್ಲಿ ಧರ್ಮಗ್ಲಾನಿಯು ವೃದ್ಧಿಯಾಗುತ್ತಾ ಬಂದಿತು. ಶಿವಾಚಾರವೆಂಬುದೇ ಅನೇಕರಿಗೆ ಗೊತ್ತಿಲ್ಲವಾಯಿತು. ಷಟ್‌ಸ್ಥಲಾಚರಣೆಗಳನ್ನೂ ನಿತ್ಯನೈಮಿತ್ತಿಕಾದಿ ಕರ್ಮಾನುಷ್ಠಾನಗಳನ್ನೂ ಸಾಮಾಜಿಕ ಸಂಪ್ರದಾಯಗಳನ್ನೂ ಅರಿತವರು ಸಾವಿರಕ್ಕೊಬ್ಬರೂ ದೊರೆಯದಂತಾದರು. ಗುರುವರ್ಗದವರಲ್ಲಿ ವಿತ್ತಾಪಹಾರಕರೇ ಹೆಚ್ಚಾದರು. ಭಕ್ತಮಾಹೇಶ್ವರಾದಿಗಳಲ್ಲಿ ಅಜ್ಞಾನಮೂಲಕವಾಗಿ ಸ್ವೇಚ್ಛಾಚಾರವು ಪ್ರಬಲಿಸಿತು. ಎಲ್ಲಾ ವಿಕಾಸಗಳಿಗೂ ಮೂಲಭೂತವಾದ ವಿದ್ಯಾಶಕ್ತಿಯು ಕುಗ್ಗಿಹೋಯಿತು. ಆದರೆ ಹಾನಿ ವೃದ್ಧಿಗಳು ಒಂದೇ ಸಮನಾಗಿರುವುದು ಪ್ರಕೃತಿಸ್ವಭಾವವಲ್ಲವಾದುದರಿಂದ ಸಮಾಜದ ಅವನತಿಯ ಗುರುತು ಕೆಲಕೆಲರಿಗೆ ಹತ್ತಿದುದರಿಂದ, ಅದರ ನಿವಾರಣೆಗೆ ಪ್ರಯತ್ನಿಸಬೇಕೆಂಬ ವಿವೇಕ ವಿಕಾಸವುಂಟಾಯಿತು. ಅದರ ಮೇಲೆ ಕಾಲುಶತಮಾನದೀಚೆಗೆ ಮತದ ವೈದಿಕ ಲೌಕಿಕ ಸಂಪತ್ಸಾಧನೆಗಾಗಿ ಹಲವು ತೆರದ ಪ್ರಯತ್ನಗಳನ್ನು ಮತಾಭಿಮಾನಿಗಳು ನಡೆಯಿಸುತ್ತ ಬಂದಿರುವರು. ಧರ್ಮರಕ್ಷಣೆಯ ಭಾರವನ್ನು ಹೊತ್ತ ಮಠಾಧಿಕಾರ ಸ್ಥಾನಗಳಿಗೆ ವಿದ್ಯಾವಂತರನ್ನು ತರಲು ಉಜ್ಜುಗಿಸಿದುದೂ, ಅಲ್ಲಲ್ಲಿಗೆ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿದುದೂ, ಸಭೆಗಳನ್ನು ನೆರೆಯಿಸಿ ಜನರಲ್ಲಿ ಜಾಗರೂಕತೆಯನ್ನು ಹುಟ್ಟಿಸಲಿಕ್ಕೆ ಪ್ರವರ್ತಿಸಿದುದೂ, ಅಲ್ಲಲ್ಲಿಗೆ ವಿದ್ಯಾಭಿವೃದ್ಧಿ ಫಂಡುಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನು ಕಲ್ಪಿಸುತ್ತಿರುವುದೂ, ಮತಗ್ರಂಥಪ್ರಚಾರ ಮಾಡುತ್ತಿರುವುದೂ, ಪೀಠಾಧಿಕಾರಿಗಳು ದೇಶದ ಮೇಲೆ ಸಂಚರಿಸಿ ಭಕ್ತಮಂಡಲಿಗೆ ಕಾಲೋಚಿತವಾದ ಉಪದೇಶಗಳನ್ನಿತ್ತು ಅವರಲ್ಲಿ ಆತ್ಮೋದ್ಧಾರಕಾಂಕ್ಷೆಯನ್ನು ಹೆಚ್ಚಿಸಿ, ಅವರಿಂದ ಆರ್ಜಿಸಿದ ದ್ರವ್ಯವನ್ನು ಸಮಾಜದ ಕಲ್ಯಾಣಕ್ಕಾಗಿ ಪರಿಪರಿಯಾಗಿ ವಿನಿಯೋಗಿಸುತ್ತಲಿರುವುದೂ, ಸಮಾಜದಲ್ಲಿ ಲೌಕಿಕ ವೈದಿಕ ವಿದ್ಯಾಪರಿಣತರ ಸಂಖ್ಯೆಯು ಹೆಚ್ಚುತ್ತಿರುವುದೂ-ಇವೆಲ್ಲಾ ನವಚೈತನ್ಯವಿಕಾಸದ ಕುರುಹುಗಳಾಗಿರುತ್ತ ಮತಾಭಿಮಾನಿಗಳಿಗೆ ಪರಮಾನಂದಪ್ರದಗಳಾಗಿರುತ್ತವೆ. ಅಸೂಯಾಳುಗಳಿಗೆ ವೀರಶೈವರ ಉನ್ನತ್ಯಾಕಾಂಕ್ಷೆಯೂ ಇವರ ತೀವ್ರಪುರೋಗಮನ ಪರಿಸ್ಥಿತಿಯೂ ಇವರ ಐಕಮತ್ಯವೂ ಆಶ್ಚರ್ಯವನ್ನೂ ಅಸಹನೆಯನ್ನೂ ಕೂಡ ಉಂಟುಮಾಡುತ್ತಿವೆ. ವೀರಶೈವರಲ್ಲಿ ಕಾಣಬರುತ್ತಿರುವ ಇದೇ ತೆರದ ಪುರೋವೃದ್ಧಿ ಪ್ರಯತ್ನಗಳು ದೃಢತರವಾಗಿ ಅರ್ಧ ಶತಮಾನದ ವರೆಗೆ ನಡೆಯುತ್ತಾ ಬಂದರೆ ಅಸಾಧಾರಣಗಳಾದ ಫಲಗಳು ಸಮಾಜಕ್ಕೆ ಪ್ರಾಪ್ತವಾಗುವುವೆಂಬುದಕ್ಕೆ ಸಂಶಯವಿಲ್ಲ.

ಆದರೆ ಈ ಮಧ್ಯೆ ಕೆಲವರು ಕೈಕೊಂಡಿರುವ ಪ್ರಯತ್ನಗಳು ಸಮಾಜದಲ್ಲಿ ದೊಡ್ಡ ಒಡಕನ್ನು ಹುಟ್ಟಿಸುವುದಕ್ಕೂ ಸರ್ವವಿಧಾಭ್ಯುದಯ ಮೂಲಕ್ಕೂ ಕೊಡಲಿಯಾಗುವುದಕ್ಕೂ ಪರರು ನೋಡಿ ನಗುವುದಕ್ಕೂ ಸಾಧನಗಳಾಗಿರುವುದನ್ನು ಸ್ಮರಿಸಿಕೊಂಡರೆ ಮನಸ್ಸಿಗೆ ಬಹಳ ವಿಷಾದವಾಗುತ್ತದೆ. ವೀರಶೈವ ಮತದ ಹತಭಾಗ್ಯದ ಪರಿಪಾಕವು ಇನ್ನೂ ಕೊನೆಮುಟ್ಟಲಿಲ್ಲವೆ ಎಂದು ಶಂಕಿಸಬೇಕಾಗುತ್ತದೆ. ಆ ಪ್ರಯತ್ನವಾವುದೆಂದರೆ—ಎಲ್ಲರೂ ತಿಳಿದಿರುವಂತೆ ಸ್ವಲ್ಪ ಕಾಲದಿಂದೀಚೆಗೆ ದುಮುದುಮಿಸುತ್ತಿರುವ-ಪಟ್ಟದವರ ವಿರಕ್ತರ ಮಧ್ಯದಲ್ಲಿ ಉಚ್ಚನೀಚತ್ವ ಕಲ್ಪನೆಗಾಗಿ ನಾನಾ ತೆರದಲ್ಲಿ ಮಾಡುತ್ತಿರುವ-ಉಜ್ಜುಗಗಳೇ ಆಗಿರುತ್ತವೆ. ಇದರಿಂದ ಆ ವರ್ಗಗಳಲ್ಲಿ ಪರಸ್ಪರ ವೈಷಮ್ಯಗಳೂ, ಕಲಹಗಳೂ, ತದನುಯಾಯಿಗಳಲ್ಲಿ ಸ್ಪರ್ಧಾಮಾತ್ಸರ್ಯಗಳೂ ಹುಟ್ಟಿ ವೃದ್ಧಿಗೊಳ್ಳುವುದಕ್ಕೆ ಅವಕಾಶವಾಗಿರುತ್ತದೆ. ಯಾವ ಪರಿಯಿಂದ ಪರ್ಯಾಲೋಚಿಸಿದರೂ ಸಮಾಜದ ಅಭ್ಯುದಯಕ್ಕೆ ಇದರಿಂದ ಲೇಶಮಾತ್ರವೂ ಸಹಾಯ್ಯವಾಗದೆ ಅನಿಷ್ಟಪರಿಣಾಮಗಳನ್ನು ಬೇಕಾದಷ್ಟು ಉಂಟುಮಾಡಲು ಸಾಧಕವಾಗಿತ್ತದೆ. ಹೊಯಿವಾಗಿ ಏಳುತ್ತಿದ್ದ ತೆಂಗಿನ ಸಸಿಯ ಸುಳಿಗೆ ಮರದುಂಬಿಯು ಸೇರಿ ಕೊರೆದು ಗಿಡುವನ್ನು ಹಾಳ್ಮಾಡುವಂತೆ ಈ ದುಷ್ಪ್ರಯತ್ನದ ಬೀಜವು ಸಮಾಜಕ್ಕೆ ಬಹಳ ವಿಘಾತಕವಾಗಿರುವುದಾದಕಾರಣ, ಈಗಣ ಸಮಯದಲ್ಲಿ ಇದನ್ನು ಸಮಾಜದಲ್ಲಿ ಎಬ್ಬಿಸಿದವರು ಸಮಾಜಕ್ಕೆ ಸರ್ವಾತ್ಮನಾ ದ್ರೋಹಿಗಳಲ್ಲದೆ ಕ್ಷೇಮಚಿಂತಕರೆಂದಿಗೂ ಅಲ್ಲ. ಸರ್ವಫಲಗಳನ್ನೀಯುವುದಕ್ಕೂ ಕಾಮಧೇನುವಂತಿರುವ ಐಕಮತ್ಯವನ್ನು ವೃದ್ಧಿಪಡಿಸುವುದು ಜಾಣ್ಮೆಯೂ ಪುಣ್ಯಕಾರ್ಯವೂ ಆಗಿರುತ್ತ ಅದನ್ನು ಸಾಧಿಸುವುದು ಕಷ್ಟವೇ ಹೊರತು, ಹೆಪ್ಪುಗಟ್ಟುತ್ತಿದ್ದ ಐಕಮತ್ಯವನ್ನು ಒಡೆಯಿಸುವುದು ಕಷ್ಟವೂ ಅಲ್ಲ, ಪೌರುಷದ ಕೆಲಸವೂ ಅಲ್ಲ. ಬುದ್ಧಿವಂತಿಗೆಯೂ ಅಲ್ಲ, ಮತಾಭಿಮಾನದ ಗಂಧದ ಸೋಂಕೂ ಅದರಲ್ಲಿರುವುದಿಲ್ಲ. ಇಂಥ ವಿಷಬೀಜವನ್ನು ಸಮಾಜಕ್ಷೇತ್ರದಲ್ಲಿ ಬಿತ್ತಿದವರನ್ನು ತನ್ನ ಕ್ರೂರವೈರಿಯನ್ನಾಗಿ ಸಮಾಜವು ತಿಳಿಯದೆ ಬಿಡದು. ಈ ಉಜ್ಜುಗಕ್ಕೆ ಯಾವುದಾದರೊಂದು ಆಚಾರ್ಯಪೀಠವೇ ಆಗಲಿ ಅಥವಾ ಎಲ್ಲಾ ಆಚಾರ್ಯಪೀಠಗಳೇ ಆಗಲಿ ಮೂಲವಾಗಿರುವುವೆಂದು ಹೇಳಲು ನಮಗೆ ಧೈರ್ಯ ಸಾಲದು. ಏಕೆಂದರೆ —ಸಮಾಜದ ಆತ್ಮರಕ್ಷಣೆಯನ್ನು ಸರ್ವಪ್ರಕಾರದಿಂದಲೂ ಮಾಡಬೇಕಾದ ಘನತರವಾದ "ಜವಾಬ್ದಾರಿ" ಯನ್ನು ಹೊತ್ತಿರುವ ಆ ಪೀಠಾಧೀಶ್ವರರುಗಳು ಇಂಥ ವಿಘಾತಕಯತ್ನಗಳಿಗೆ ಉತ್ಪಾದಕರಾಗಿರುವರೆಂದು ಹೇಳುವುದಕ್ಕೆ ನಮ್ಮ ಆತ್ಮವು ಒಪ್ಪದು. ಒಂದು ವೇಳೆ ಉತ್ಪಾದಕತ್ವವು ಅವರಲ್ಲಿ ಇಲ್ಲದಿದ್ದರೂ ಅನುಮೋದಕತ್ವವಾದರೂ ಒಬ್ಬೊಬ್ಬರಲ್ಲಿದೆಯೆಂದು ಕೆಲವರು ಹೇಳುತ್ತಿರುವ ಮಾತಿನಲ್ಲಿ ಸಂಪೂರ್ಣವಾದ ಬರವಸೆಯಿಡುವುದಕ್ಕೂ ತಕ್ಕ ಆಧಾರವು ನಮಗೆ ಒದಗಿಲ್ಲ. ಆ ಪೀಠಾಧಿಪತಿಗಳು ಈ ದುಷ್ಪ್ರಯತ್ನದಿಂದ ಎಷ್ಟೆಷ್ಟು ದೂರವಾಗಿದ್ದರೂ ಅಷ್ಟಷ್ಟೂ ಅವರ ಗೌರವವೂ ಪೂಜ್ಯತೆಯೂ ಸಮಾಜದಲ್ಲಿ ಹೆಚ್ಚುವವೇ ಹೊರತು ಇದಕ್ಕೆ ಅವಲಂಬನವನ್ನು ಕೊಡುವುದರಿಂದ ಅವರ ಪೀಠಾಧಿಪತ್ಯವು ಸಫಲವಾಗುವ ಹಾಗಿಲ್ಲ. ಪಟ್ಟದರಾಧಿಪತಿಗಳನ್ನೆಲ್ಲಾ ಒಂದು ಗುಂಪುಕಟ್ಟಿಸಿ, ನಿರಾಭಾರಿಗಳ ಪೂಜ್ಯತ್ವಾಧಿಕಾರಗಳ ಮೇಲೆ ದಾಳಿಯಿಡಿಸುವುದಕ್ಕೆ ಕೆಲರು ತೊಡಗಿದರೆ, ನಿರಾಭಾರಿಗಳನ್ನು ಪ್ರೇರಿಸಿ ಅವರನ್ನೆಲ್ಲಾ ಗುಂಪುಕೂಡಿಸಿ ಹೋರಾಡಿಸುವುದಕ್ಕೆ ಇನ್ನು ಕೆಲರು ಪ್ರಯತ್ನಿಸಬಹುದು. ಆಗಲೇ ಕರ್ತವ್ಯವನ್ನು ಮರೆತು ಸ್ವಾರ್ಥದಲ್ಲಿ ಮುಳುಗಿರುವ ಗುರುವರ್ಗದವರಿಗೆ ಈ ವಿಷಮ ಕಲಹವೂ ಗಂಟುಬಿದ್ದರೆ ಇನ್ನು ಮತದ ಅನರ್ಥಕ್ಕೆ ಅವಧಿಯುಂಟೆ? ಈ ಸ್ವಯಂಭೂತ ಕಲಹಕ್ಕೆ ಪೂಜ್ಯಪೀಠಾಧಿಪತಿಗಳೇ ಎಡೆಗೊಟ್ಟರೆ, ಅವರುಗಳಿಗೆ ಪೂಜ್ಯಸ್ಥಾನ ಗೌರವವನ್ನು ಸಮಾಜವು ಸಲ್ಲಿಸುವುದೆ? ಅಸಾಧಾರಣ ಶಿವಾನುಗ್ರಹ ವಿಶೇಷದಿಂದ ಲಬ್ಧವಾದ ಮತಾಚಾರ್ಯಪೀಠಾಧಿಕಾರವನ್ನು ಮತದ ಅಂತಃಕಲಹವೃದ್ಧಿಗೆ ವಿನಿಯೋಗಿಸಿ ಹಾಳುಗೊಳಿಸಿದ ಕೃತಿಗಾಗಿ ಅವರುಗಳು ಪರ್ಯವಸಾನದಲ್ಲಿ ಶಿವನ ಮುಂದೆ "ಜವಾಬ್ದಾರ"ರಾಗಬೇಕಾಗುವುದಲ್ಲವೆ? ಅದುಕಾರಣ ಆ ಪೀಠಾಧಿಪತಿಗಳು ಈ ದುಷ್ಪ್ರಯತ್ನಕ್ಕೆ ಉತ್ಪಾದಕರೂ ಆಶ್ರಯದಾತರೂ ಕೂಡ ಆಗದಿರುವುದು ಮಾತ್ರವೇ ಅಲ್ಲದೆ ಈ ದುಷ್ಪ್ರಯತ್ನಪ್ರಸಾರಕರನ್ನು ಕೂಡ ಹತ್ತಿರಕ್ಕೆ ಸೇರಿಸದೆ ದೂರೀಕರಿಸಿರುವುದು ಶ್ರೇಯಸ್ಕರವು.

ಮ|| ಎಂ. ಬಸವಯ್ಯನವರ ಅಕಾಲಿಕವಾದ ಅತ್ಯಂತ ದುಃಖಪ್ರದವಾದ ಮೃತ್ಯು.

ಕೇಳಿದವರ ಎದೆಯನ್ನು ಒಡೆಯಿಸಿ ಅಶ್ರುಸ್ಯದುಃಖಸಮುದ್ರದಲ್ಲಿ ಮುಳುಗಿಸುವ ಈ ಲೇಖನವನ್ನು ವಿಶೇಷವಾಗಿ ಬರೆಯುವುದಕ್ಕೆ ನಮ್ಮ ಕೈಯೇ ಬರದು. ಕಣ್ಣುಗಳು ಅಶ್ರುಧಾರೆಯನ್ನು ನಿರರ್ಗಳವಾಗಿ ಸುರಿಸುತ್ತಿರುವುವು. ಯಾವ ಮಹಾಶಯನು ಮೈಸೂರು ಅರಮನೆಯ ಮೊಖ್ತೇಸರ್ ಮ|| ಬಸವಲಿಂಗಪ್ಪನವರ ಜ್ಯೇಷ್ಠಪುತ್ರನಾಗಿ ಅವತರಿಸಿ, ಅವರ ವಂಶವನ್ನೆಲ್ಲಾ ಬೆಳಗುವಷ್ಟು ವಿದ್ಯಾಬುದ್ಧಿಗಳನ್ನು ಪಡೆದು, ತನ್ನ ಕುಶಾಗ್ರಮತಿಪ್ರಭಾವವನ್ನು ಮೆರೆದು ಶ್ರೀ|| ಶ್ರೀಮನ್ಮಹಾರಾಜೊಡೆಯರವರ ಮೆಚ್ಚುಗೆಗೆ ಪಾತ್ರನಾಗಿ, ಸೀಮೆಯಲ್ಲಿ ಪ್ರೌಢವಿದ್ಯಾಭ್ಯಾಸಮಾಡಿಸಲು ಕಳುಹಿಸಿಕೊಡುತ್ತೇನೆಂದು ಪ್ರಭುಗಳು ಅಪ್ಪಣೆಕೊಟ್ಟರೂ ಸದಾಚಾರ ಶ್ರದ್ಧಾಳುಗಳಾದ ತಂದೆಯವರ ತಡೆಯಿಂದ ತನ್ನ ಸೀಮೆಯ ಪ್ರಯಾಣವು ತಪ್ಪಿಹೋದರೂ ಸ್ವದೇಶದಲ್ಲೇ ಬಿ. ಎ., ಬಿ. ಎಲ್., ಪರೀಕ್ಷೆಗಳನ್ನು ಕೊಟ್ಟು ಹೈಕೋರ್ಟು ವಕೀಲನಾಗಿ ಬಳ್ಳಾರಿಯಲ್ಲಿ ಕೆಲವು ಕಾಲವಿದ್ದು, ಸ್ವದೇಶ ಸೇವೆಯಿಂದ ಕೃತಾರ್ಥನಾಗಬೇಕೆಂದು ಬಗೆದು ಬೆಂಗಳೂರಿಗೆ ಬಂದು ನಿಂತು, ಅಡ್ವೋಕೇಟ್ ಕೆಲಸವನ್ನು ಗೌಣವಾಗಿಯೂ ದೇಶಸೇವಾಕಾರ್ಯವನ್ನು ಮುಖ್ಯವಾಗಿಯೂ ಹಿಡಿದು, ಇಹಲೋಕ ಯಾತ್ರೆಯನ್ನು ಮಾಡುತ್ತಿದ್ದನೋ, ಯಾವ ಮಹಾಶಯನ ಮೇಧಾಶಕ್ತಿ ಪ್ರಕಾಶವು ಮ್ಯುನಿಸಿಪಲ್ ಕೌನ್ಸಿಲು, ಸಂಪದಭ್ಯುದಯ ಸಮಾಜದ ಕಮಿಟಿ, ಪ್ರಜಾಪ್ರತಿನಿಧಿ ಸಭೆ, ನಿಯಮನಿರ್ಮಾಣ ಸಭೆ, ಫೈನಾನ್‌ಷಿಯಲ್ ಕಮಿಟಿ, ಸಿವಿಲ್‌ಸರ್ವಿಸ್ ಸುಧಾರಣೆಯ ಕಮಿಟಿ, ವಿಶ್ವವಿದ್ಯಾಲಯಸಂಘ ಮೊದಲಾದುವುಗಳಲ್ಲೆಲ್ಲಾ ಅದ್ವಿತೀಯವಾಗಿ ಪ್ರಕಾಶಕ್ಕೆ ಬಂದು ದೇಶಕ್ಕೆ ಪರಮೋಪಕಾರವನ್ನು ಮಾಡುತ್ತಿದ್ದಿತೋ, ಮೈಸೂರು ಸೀಮೆಯ ಪ್ರತ್ಯೇಕ ಪ್ರಾತಿನಿಧ್ಯತತ್ವಕ್ಕೆ ಯಾವಾತನು ಶಂಕುಸ್ಥಾಪಕನೋ, ಯಾವ ಮಹಾಪುರುಷನು ಹಿಂದುಳಿದವರ ಭಾಗ್ಯದೇವತೆಯಾಗಿದ್ದನೋ, ಯಾವ ಮಹಾಶಯನಿಗೆ ಲಕ್ಷಾಂತರಾರ್ಜನೆಯನ್ನು ಮಾಡುವುದಕ್ಕೆ ತಕ್ಕ ಸಾಮರ್ಥ್ಯವಿದ್ದರೂ ಅದನ್ನು ತೃಣೀಕರಿಸಿ ತನ್ನ ದೇಶೀಯ ದೀನ ಸಹೋದರರ ಸಮುದ್ಧಾರವೇ ತನ್ನ ಜೀವಿತ ಪರಮಾರ್ಥವೆಂದು ತ್ರಿಕರಣಶುದ್ಧಿಯಿಂದ ನಂಬಿ ಕೆಲಸಮಾಡುತ್ತಿದ್ದನೋ, ಯಾವ ನಿಶಿತಮತಿಯ ಸಯುಕ್ತಿಕ ಸಾಧಾರಾಭಿಪ್ರಾಯಗಳು ಪ್ರಭುತ್ವದವರಿಗೂ ವಿಶೇಷ ಗಣ್ಯವಾಗಿದ್ದುವೋ ಅಂಥ ಚಿರಸ್ಮರಣೀಯಚರಿತನಾದ ಪರಮಪುರುಷ ಮ|| ಎಂ. ಬಸವಯ್ಯ, ಬಿ.ಎ., ಬಿ.ಎಲ್. ಮಹಾಶಯನು ಕಳೆದ ತಾ|| ೧೧ನೇ ಬುಧವಾರ ರಾತ್ರಿ ೧೦|| ಗಂಟೆಯಲ್ಲಿ ಅರಳೇಪೇಟೆಯಲ್ಲಿರುವ ತಮ್ಮ ಮನೆಯಲ್ಲಿ ನಿರಾಯಾಸವಾದ ಮತ್ತು ಅನಿರೀಕ್ಷಿತವಾದ ಮರಣವನ್ನು ಹೊಂದಿ ಪ್ರಕಾಶವತ್ತರವಾದ ತನ್ನ ಜೀವಿತ ಯಾತ್ರೆಯನ್ನು ಮುಗಿಸಿಕೊಂಡನು!

ಕೆಲವು ಕಾಲದಿಂದ ಇವರ ದೇಹಾರೋಗ್ಯವು ಕೆಟ್ಟಿದ್ದಿತು. ಹೃದಯದೌರ್ಬಲ್ಯದಿಂದ ಇವರು ಈಗ್ಗೆ ೬ ತಿಂಗಳ ಕೆಳಗೆ ಹಾಸುಗೆ ಹಿಡಿದು ಮಲಗಿದ್ದರು. ಆಗ್ಗೆ ಉಪಸ್ಥಿತವಾಗುವಂತೆ ತೋರುತ್ತಿದ್ದ ಇವರ ಮೃತ್ಯುವು ಡಾ|| ಆರೋಗ್ಯಂ ಮೊದಲಿಯಾರರ ಡಾ|| ಉಸ್ಮಾನ್‌ರವರ ಚಿಕಿತ್ಸಾಮಹಿಮೆಯಿಂದ ಹಿಂತೆಗೆದಿತು. ದೇಶಸೇವೆಗಾಗಿ ದೇಹವನ್ನೇ ಒಪ್ಪಿಸಿದ್ದೇನೆಂದು ಇವರು ಬಾಯಿಂದ ಹೇಳುತ್ತಿದ್ದಂತೆಯೇ ಮನದಲ್ಲೂ ನಿಶ್ಚಯಿಸಿದವರಾಗಿದ್ದುದರಿಂದ, ಶ್ರಮಪ್ರದವಾದ ಕೆಲಸಗಳನ್ನು ಮಾಡಕೂಡದೆಂದೂ ಹೆಚ್ಚಾಗಿ ಮಾತನಾಡಕೂಡದೆಂದೂ ವೈದ್ಯರು ಕೊಟ್ಟಿದ್ದ ಎಚ್ಚರಿಕೆಯನ್ನು ಕೂಡ ಇವರು ಪೂರ್ಣವಾಗಿ ಪರಿಪಾಲಿಸಲಿಲ್ಲ. ಕಡೆಗೂ ಬೇಗನೆ ಇವರಿಗೆ ಮೃತ್ಯುಯು ಸಂಭವಿಸಿತು. ಆ ಬುಧವಾರ ಸಾಯಂಕಾಲದ ವರೆಗೂ ಇವರು ಬರವಣಿಗೆ ಮೊದಲಾದವುಗಳನ್ನು ಮಾಡುತ್ತಲೂ ಮನೆಗಿಪೇರಿ ಕೆಲಸವನ್ನು ಮಾಡಿಸುತ್ತಲೂ ಇದ್ದರು. ತಮ್ಮ ಮಿತ್ರರೊಡನೆ ರಾತ್ರಿ ೬|| ಗಂಟೆಯ ವರೆಗೂ ಮಾತನಾಡುತ್ತಿದ್ದು ಕಾಫಿ ತಿಂಡಿಗಳನ್ನು ಸ್ವೀಕರಿಸಿ ಏಕೋ ಸ್ವಲ್ಪ ತಲೆನೋವಾಗುತ್ತಿದೆಯೆಂದು ಹೇಳಿ ಮಿತ್ರರನ್ನು ಕಳುಹಿಸಿ, ಸ್ವಲ್ಪ ತಣ್ಣೀರನ್ನು ತರಿಸಿಕೊಂಡು ಕುಡಿದು, ತಲೆಗೆ ಒದ್ದೆಬಟ್ಟೆಯನ್ನು ಹೊದ್ದಿಸಿ, ಚಳಿಯಾಗುತ್ತದೆಂದು ಹೇಳಿ ಹಾಸುಗೆಯ ಮೇಲೆ ಮಲಗಿ ಹೊದ್ದಿಸಿಕೊಂಡರು. ಸ್ವಲ್ಪಹೊತ್ತಿನಲ್ಲೇ ಪ್ರಜ್ಞೆ ತಪ್ಪಿತು. ಡಾ|| ಟಿ. ಎಸ್. ನಂಜಪ್ಪನವರೂ ಡಾ|| ಆರೋಗ್ಯಂ ಮೊದಲಿಯಾರರೂ ಬಂದು ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ. ರಾತ್ರಿ೧೦-೨೫ಕ್ಕೆ ಅಂತ್ಯವಾಯಿತು. ಅವರ ಜನಕರಾದ ಮ|| ಬಸವಲಿಂಗಪ್ಪನವರು ಹಿಂದಿನ ಮಂಗಳವಾರದ ದಿನ ಬೆಂಗಳೂರಿಗೆ ಹೋಗಿ ತಮ್ಮ ಕುಮಾರರಾದ ಡಾ|| ಬಿ. ನಂಜಪ್ಪನವರ ಸಂಗಡ ಬೀರೂರಿಗೆ ಹೋಗಿದ್ದರು. ತಂತೀವಾರ್ತೆ ಕೊಟ್ಟ ಬಳಿಕ ಬುಧವಾರ ಬೆಳಗ್ಗೆ ಅವರು ಬಂದರು. ಮ|| ಬಸವಯ್ಯನವರ ದೊಡ್ಡ ಬಳಗವು ಎಲ್ಲಾ ಕಡೆಯಿಂದಲೂ ಬಂದು ಸೇರಿತು. ಬುಧವಾರ ಬೆಳಗ್ಗೆ ಬೆಂಗಳೂರಿನ ತುಂಬಾ ಈ ಸುದ್ದಿಯೇ ವ್ಯಾಪಿಸಿತು. ಅನೇಕರು ಈ ವಾರ್ತೆಯನ್ನು ನಂಬದೆ ಮನೆಬಳಿಗೆ ಬಂದು ತಿಳಿದ ಮೇಲೆ ನಿಟ್ಟುಸುರುಬಿಟ್ಟು ದುಃಖಿಸಿದರು. ದಿವಾನರವರೇ ಮೊದಲಾದ ಅನೇಕಾಧಿಕಾರಿಗಳ ಅನುತಾಪಸೂಚಕಗಳಾದ ಕಾಗದಗಳೂ ತಂತೀವಾರ್ತೆಗಳೂ ಬಂದು ಸೇರಿದುವು. ಕೌನ್ಸಿಲರ್ ಮಿ|| ಹಂಜಾಹುಸೇನ್ ಸಾಹೇಬರೂ, ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೂ, ಗುಲಾಂ ಅಹಮ್ಮದ್ ಕಲಾಮಿಯವರೂ, ರಾ|| ಸಾ|| ಚೆನ್ನಯ್ಯನವರೂ, ಪೇಟೆ ಶೆಟ್ಟರು ಯಜಮಾನರೂ ಪಿ. ಮಹಾದೇವಯ್ಯನವರು, ವೀರಬಸವಯ್ಯನವರು, ಅಬ್ಬಾಸ್‌ಖಾನರೇ ಮೊದಲಾದ ಸಾವಿರಾರು ಮಂದಿ ಮಿತ್ರಬೃಂದದವರು ಎಡೆಬಿಡದೆ ಬಂದು ನೋಡಿಕೊಂಡು ಹೋದರು. ಆ ದಿನ ಸಾಯಂಕಾಲ ಉತ್ತರಕ್ರಿಯಾದಿಗಳು ಬಹು ವಿಜೃಂಭಣೆಯಿಂದ ನಡೆಯಿಸಲ್ಪಟ್ಟುವು. ಶವದೊಡನೆ ಸಾವಿರಾರು ಮಂದಿ ಸ್ವಮತಪರಮತದ ದೊಡ್ಡ ಮನುಷ್ಯರುಗಳೂ, ಸರ್ಕಾರದಧಿಕಾರಿಗಳೂ, ವರ್ತಕರೂ ಹೋಗಿದ್ದರು. ದೊಡ್ಡಪೇಟೆ ಚಿಕ್ಕಪೇಟೆಯ ಅಂಗಡಿಬಾಗಿಲುಗಳು ಮುಚ್ಚಲ್ಪಟ್ಟಿದ್ದುವು. ಕುಂಡಲುಮಠದ ರುದ್ರಭೂಮಿಯಲ್ಲಿ ಶವಸಂಸ್ಕಾರವಾಯಿತು. ಅಲ್ಲಿ ಮ|| ಬ್ಯಾರಿಸ್ಟರ್ ವಿಜಯದೇವರವರು ಮೃತರ ಗುಣಸಾಮರ್ಥ್ಯ ವಿಶೇಷಗಳನ್ನು ಕುರಿತು ಒಂದು ಉಪನ್ಯಾಸ ಮಾಡಿದರು. ತನ್ನ ಪ್ರತಿಪಕ್ಷದವರಿಂದಲೂ ಮೆಚ್ಚಲ್ಪಡುವಂಥ ಸಾಮರ್ಥ್ಯವುಳ್ಳ ನಿಜವಾದ ಗಂಡೆನಿಸಿಕೊಂಡಿದ್ದ ಈ ಮಹಾಪುರುಷನ ಮೃತಿಯಿಂದ ನಮ್ಮ ದೇಶಕ್ಕೆ ಅಪರಿಮಿತವಾದ ನಷ್ಟವಾಯಿತೆಂಬುದಕ್ಕೆ ಸಂಶಯವಿಲ್ಲ. ಈ ಮಹಾಶಯನ ಸ್ಥಾನವನ್ನಲಂಕರಿಸುವ ಮತ್ತೊಬ್ಬರನ್ನು ಹಿಂದುಳಿದ ವರ್ಗಗಳಲ್ಲಿ ನಾವು ಕಾಣುವುದು ಅಸಾಧ್ಯ. ಅಂಥವರು ಗೋಚರವಾಗುವ ವರೆಗೂ ಈ ವಿಯೋಗ ದುಃಖವು ಪ್ರತಿಯೊಬ್ಬ ಹಿಂದುಳಿದವನಿಗೂ ದುರ್ಭರವಾಗಿಯೇ ಇರುವುದು. ಜಗದೀಶನು ಈ ಧನ್ಯಜನ್ಮನ ಆತ್ಮಕ್ಕೆ ಶಾಶ್ವತಶಾಂತಿಯನ್ನುಂಟುಮಾಡಲೆಂದೂ, ಪೂರ್ಣವಾದ ಮುಪ್ಪಿನ ಕಾಲದಲ್ಲಿ ಮ|| ಬಸವಲಿಂಗಪ್ಪನವರಿಗೆ ಈ ವಂಶತಿಲಕ ಪುತ್ರರತ್ನದ ದುರ್ಧರವಿಯೋಗ ದುಃಖವನ್ನು ಸಹಿಸಬೇಕಾದ ಗತಿಯು ಉಂಟಾದುದರಿಂದ ಅವರಿಗೂ ಅವರ ದೊಡ್ಡ ಕುಟುಂಬದ ಸಕಲರಿಗೂ ಈ ಅಪಾರ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಜಗದೀಶನು ಅನುಗ್ರಹಿಸಲೆಂದೂ ಕೋರಿ, ಈ ಮೂಲಕ ಅವರೆಲ್ಲರಿಗೂ ನಮ್ಮ ಅನುತಾಪವನ್ನು ನಿವೇದಿಸುವೆವು.

ಒಳದೇಶ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ತಾ|| ೨೨ರಲ್ಲಿ ಪ್ರಯಾಣಮಾಡುವವರಾಗಿದ್ದಾರೆ.

ರಾಜಧಾನಿಯಲ್ಲಿ ಫಲಪುಷ್ಪ ಪ್ರದರ್ಶನವು ನಿನ್ನೆಯ ದಿನ ನಡೆಯಿತು. ಈ ದಿನವೂ ಪ್ರೇಕ್ಷಕರಿಗೆ ತೆರೆಯಲ್ಪಟ್ಟಿರುವುದು.

ಮ|| ಅಡ್ವೋಕೇಟ್ ಎಂ. ಶ್ರೀನಿವಾಸಯ್ಯಂಗಾರರು ಅಷ್ಟಗ್ರಾಮ ಡಿವಿಜನ್ನಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಹಾಸನದ ೪ನೆ ಡಿಸ್ಟ್ರಿಕ್ಟ್ ಕಾನ್ಫರೆನ್ಸು ಬರುವ ತಾ|| ೨೩-೨೪ ರಲ್ಲಿ ಅಲ್ಲಿಯ ಜೂಬಿಲಿ ಹಾಲಿನಲ್ಲಿ ನಡೆಯಲು ಏರ್ಪಾಟಾಗಿರುತ್ತದೆ.

ಸೀಮೆಗೆ ಹೋಗಿದ್ದು ಬಂದ ಡಾ|| ಸಿ. ಎ. ನಂಜಪ್ಪನವರು ಕಳೆದ ಬುಧವಾರ ರಾಜಧಾನಿಯ ಕೃಷ್ಣರಾಜ ಆಸ್ಪತ್ರೆಯ ಛಾರ್ಜನ್ನು ವಹಿಸಿದರು.

ಮೈಸೂರು ಸಂಸ್ಥಾನದ ಎಸ್.ಎಸ್.ಎಲ್.ಸಿ. ಪರೀಕ್ಷೆಯು ಬರುವ ಮಾರ್ಚಿ ತಾ|| ೨೨ರಿಂದ ಬೆಂಗಳೂರು, ಮೈಸೂರು, ಶಿವಮೊಗ್ಗಾ, ತುಮಕೂರು, ಚಿತ್ರದುರ್ಗ ಈ ಸ್ಥಲಗಳಲ್ಲಿ ನಡೆಯುವುವು.

ಸೊಲ್ಲಾಪುರ, ದಾವಣಗೆರೆ, ದವನದ ಹೊಸಹಳ್ಳಿ ಮೊದಲಾದ ಕಡೆಗಳಿಂದ ಬಂದಿರುವ ಕೆಲವು ಲೇಖನಗಳನ್ನು ಸ್ಥಲದೊರೆಯದ ಕಾರಣ ಮುಂದಣ ಸಂಚಿಕೆಯಲ್ಲಿ ಪ್ರಕಟಿಸಬೇಕೆಂದಿಟ್ಟಿರುತ್ತೇವೆ.

೩ ತಿಂಗಳು ಮೊದಲುಗೊಂಡು ೩ ವರ್ಷದ ವರೆಗಿನ ವಯಸ್ಸಿನ ಮೈಸೂರು ಸರ್ಕಾರದ ೨೨ ಆನೆಗಳು ಅಲ್ಲಿಕೋಟೆಗೆ ಸೇರಿದ ಕಲ್ಕೆ ಎಂಬಲ್ಲಿ ಬರುವ ಮಾರ್ಚಿ ತಾ|| ೮ ರಲ್ಲಿ ಹರಾಜು ಮಾಡಲ್ಪಡುವುವು.

ಪರ್ಷಿಯಾದ ಪ್ರಾಂತ್ಯದಲ್ಲಿದ್ದ ಮೈಸೂರು ಇಂಪೀರಿಯಲ್ ಸೈನಿಕರೆಲ್ಲಾ ಕಳೆದ ಶುಕ್ರವಾರ ಬೆಂಗಳೂರಿಗೆ ಬಂದರು. ಬೊಂಬಾಯಿಗೆ ಅವರೆಲ್ಲಾ ಬಂದಿಳಿದು ೧೦ ದಿನಗಳು ಸೆಗ್ರಿಗೇಷನ್ ಕ್ಯಾಂಪಿನಲ್ಲಿಡಲ್ಪಟ್ಟಿದ್ದರು.

ರೈಲ್ವೆ ಟ್ರಾಫಿಕ್ ಮ್ಯಾನೇಜರಾದ ಮ|| ವೆಂಕೋಬರಾಯರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಡಿಸಲ್ಪಟ್ಟರು. ಆ ಸ್ಥಾನಕ್ಕೆ ರೈಲ್ವೆ ಸೆಕ್ರೆಟರಿಯಟ್ಟಿನ ರಿಜಿಸ್ಟ್ರಾರರಾದ ಮ|| ಪಿ. ಎಸ್. ನಾಯುಡುಯವರು ನಿಯಮಿಸಲ್ಪಟ್ಟರು.

ಗಾನವಿಶಾರದ ಮ|| ಬಿ. ಕೃಷ್ಣಪ್ಪನವರ ಸಂಗೀತಕಚೇರಿಗಳು ಮದ್ರಾಸಿನಲ್ಲಿ ನಡೆಯುತ್ತಿವೆ. ಇದೇ ತಿಂಗಳು ತಾ|| ೧೫ ರಲ್ಲಿ ಮದ್ರಾಸಿನ ಮೈಲಾಪುರದ ಗೋಪಾಲನಾಯಕರ್ ಪಾಠಶಾಲಾ ಮಂದಿರದಲ್ಲಿ ನಡೆಯಲು ಏರ್ಪಾಟಾಗಿದೆ. ಗೋಖಲೆಹಾಲಿನಲ್ಲಿ ಕಳೆದ ಭಾನುವಾರ ಜರುಗಿತು.

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಅ|| ಕಾಬ್‌ರವರು ಉದ್ಯೋಗದಿಂದ ನಿವೃತ್ತರಾಗುತ್ತಾರಾದ ಪ್ರಯುಕ್ತ ಅವರ ಸ್ಥಾನಕ್ಕೆ ಬರೋಡಾದ ರೆಸಿಡೆಂಟರಾಗಿದ್ದ ಅ|| ಡಬ್ಲ್ಯು. ಪಿ. ಬಾರ್ಟನ್‌ರವರು ನಿಯಮಿತರಾಗಿ ಬೆಂಗಳೂರಿಗೆ ಬಂದಿರುತ್ತಾರೆ. ಈ ತಿಂಗಳ ಕಡೆಯಲ್ಲಿ ಛಾರ್ಜನ್ನು ವಹಿಸಿಕೊಳ್ಳುವವರಾಗಿದ್ದಾರೆ.

ಬೆಂಗಳೂರು ಮ್ಯುನಿಸಿಪಾಲಿಟಿಯ ಅ|| ಪ್ರೆಸಿಡೆಂಟ್‌ಗಿರಿಗೆ ಉಮೇದುವಾರರಾಗಿ ಮ|| ಟಿ. ಕೆ. ಗರುಡಾಚಾರ್ಯರೊಬ್ಬರೇ ನಿಂತಿದ್ದುದರಿಂದ ಮ್ಯು|| ಕೌನ್ಸಿಲರುಗಳಲ್ಲಿ ಬರದೆ ಇದ್ದ ಮೂವರು ಹೊರತು ಉಳಿದ ೨೪ ಜನರೂ ಅವರಿಗೇ ಓಟನ್ನು ಕೊಟ್ಟುದರಿಂದ ಅವರೇ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟು ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

ನಮ್ಮ ಅರಮನೆ ಕಂಟ್ರೋಲರಾಗಿಯೂ ಸಿಟಿ ಟ್ರಸ್ಟ್‌ಬೋರ್ಡ್ ಚೇರ್ಮನ್ನರಾಗಿಯೂ ಇದ್ದು ಕೆಲಸದಿಂದ ನಿವೃತ್ತರಾಗಿ ಬೆಂಗಳೂರು ಶಂಕರಪುರದಲ್ಲಿ ವಾಸಮಾಡುತ್ತಿದ್ದ ಮ|| ಡಿ. ಸೀತಾರಾಮರಾಯರು ತಮ್ಮ ೬೦ನೆ ವಯಸ್ಸಿನಲ್ಲಿ ಹೃದಯಚಲನೆಯು ನಿಂತುದರಿಂದ ಕಳೆದ ಗುರುವಾರ ಕಾಲವಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಬೆಂಗಳೂರಿನ ಬ್ರಹ್ಮಸಮಾಜದವರು ಈ ದಿವಸ ವರ್ಣಾಂತರ ವಿತಂತು ವಿವಾಹವೊಂದನ್ನು ನಡೆಯಿಸುವವರಾಗಿದ್ದಾರೆ. ಇಂಥ ವಿವಾಹವು ಅಲ್ಲಿ ನಡೆದುದಕ್ಕೆ ಇದೇ ಮೊದಲು. ವರನು ವೆಸ್ಲಿಯನ್ ಮಿಷನ್ ಕಾಲೇಜ್ ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿರುವ ನಾರಾಯಣಸಿಂಗ್ ಎಂಬುವರೂ, ವಧುವು ಮೊದಲಿಯಾರರ ಕುಲಕ್ಕೆ ಸೇರಿದ ವಿತಂತುವೂ ಆಗಿರುತ್ತಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿ ತಾ|| ಜೋಡಿ ಹುಣಸುಮಾರನಹಳ್ಳಿ ಮಠದ ಶ್ರೀ ಚಂದ್ರಮೌಳೀಶ್ವರಸ್ವಾಮಿಯ ರಥೋತ್ಸವವು ಪದ್ಧತಿಯಂತೆ ಬರುವ ಫಾಲ್ಗುಣ ಶುದ್ಧ ೧೧ ಯಾರಭ್ಯ ಬಹುಳ ೪ ಯವರೆಗೆ ನಡೆಯುವುದು. ಆ ಕಾಲದಲ್ಲಿ ಎತ್ತಿನ ಪರಸೆಯೂ ನಡೆಯುತ್ತದೆ. ಈಗ ಹವಾಗುಣವೂ ಜಲವಸತಿಯೂ ಚೆನ್ನಾಗಿದೆ. ಯಾತ್ರಿಕರಿಗೆ ಅನುಕೂಲವಾಗಿದೆ.

ಮ|| ಬಸವಯ್ಯನವರ ಮೃತಿಯಿಂದ ತಮ್ಮ ವರ್ತಕಮಂಡಲಿಗೆಲ್ಲಾ ಉಂಟಾದ ನಷ್ಟವನ್ನೂ ದುಃಖವನ್ನೂ ವ್ಯಕ್ತಪಡಿಸುವುದಕ್ಕಾಗಿ ಬೆಂಗಳೂರು ವರ್ತಕರಲ್ಲಿ ಪ್ರಮುಖರಾದವರನೇಕರು ಬುಧವಾರದ ಗುರುವಾರದ ದಿವಸ ತಮ್ಮ ಅಂಗಡಿಗಳನ್ನು ಮುಚ್ಚಿ ದುಃಖಪ್ರದರ್ಶನ ಮಾಡಿದರು. ರಾಜಧಾನಿಯ ವರ್ತಕರೂ ಸಹ ಮೃತರ ೧೧ ನೆ ಕರ್ಮದ ದಿವಸ ತಮ್ಮ ಅಂಗಡಿಗಳನ್ನು ಮುಚ್ಚಬೇಕೆಂದು ನಿಷ್ಕರ್ಷಿಸಿದ್ದಾರೆಂದು ಕೇಳುತ್ತೇವೆ

ಬುಧವಾರದ ದಿವಸ ಚೀಫ್‌ಕೋರ್ಟು ಆರಂಭವಾದಾಗ ಗೌ|| ಅಡ್ವೋಕೇಟರಾದ ಮ|| ಶಂಕರನಾರಾಯಣರಾವ್‌ರವರು ಮ|| ಎಂ. ಬಸವಯ್ಯನವರ ಮೃತಿಯಿಂದ ತಮ್ಮ ಅಡ್ವೋಕೇಟ್ ಮಂಡಲಿಗೆಲ್ಲಾ ಉಂಟಾದ ದುಃಖವನ್ನೂ ಅವರ ಸಾಮರ್ಥ್ಯಾದಿಗಳನ್ನೂ ಕುರಿತು ಉಪನ್ಯಾಸ ಮಾಡಿ ಅನುತಾಪವನ್ನು ನಿವೇದಿಸಿದರು. ಚೀಫ್‌ಜಡ್ಜರು ಕೂಡ ಒಂದು ಚಿಕ್ಕ ಭಾಷಣವನ್ನು ಮಾಡಿ ಅನುತಾಪವನ್ನು ವ್ಯಕ್ತಪಡಿಸಿದರು.

ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನವರು ತಾ|| ೬-೨-೧೯೨೦ ರಲ್ಲಿ ಮೀಟಿಂಗ್ ಮಾಡಿ ತಮ್ಮ ಕಡೆಯಿಂದ ಮ|| ಚಿಕ್ಕಬಳ್ಳಾಪುರದ ಸಿ. ನಾರಾಯಣಸ್ವಾಮಿ ಶೆಟ್ಟರನ್ನೂ, ಕೋಲಾರದ ಮ|| ಜಿ. ಗಿರಿಮಾಜಿರಾಯರನ್ನೂ, ಸಿಡ್ಲಘಟ್ಟದ ಮ|| ಹಂಪಯ್ಯನವರನ್ನೂ ಸಂಪದಭ್ಯುದಯ ಸಮಾಜದ ಸೆಂಟರಲ್ ಬೋರ್ಡಿಗೆ ಕ್ರಮವಾಗಿ ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರ ಈ ಶಾಖೆಗಳ ಮೆಂಬರುಗಳನ್ನಾಗಿ ಆರಿಸಿರುತ್ತಾರೆ.

ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಸಕಲ ಬಿರುದಾವಳಿಗಳೊಡನೆ ಕಳೆದ ತಾ|| ೬ ರಲ್ಲಿ ಮಾಗಡಿಗೆ ದಯಮಾಡಿಸಿತೆಂದೂ, ಅಲ್ಲಿಯ ಸಕಲ ವೀರಶೈವಮತಸ್ಥರೇ ಅಲ್ಲದೆ ಇತರ ಮತದ ಭಕ್ತಜನರೂ ಪುರವನ್ನು ವಿವಿಧಾಲಂಕಾರಗಳಿಂದ ಮನೋಹರಗೊಳಿಸಿದ್ದರೆಂದೂ, ತಾ|| ಅಮಲ್ದಾರರು ಪೋಲೀಸಧಿಕಾರಿಗಳು ಮೊದಲಾದವರು ನಿಂತು ಉತ್ಸವವನ್ನು ಸಾಂಗವಾಗಿ ನೆರವೇರಿಸಿದರೆಂದೂ, ಅಲ್ಲಿಯ ಚಂದಾದಾರರೊಬ್ಬರು ಬರೆದಿರುತ್ತಾರೆ.

ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಮಯದಲ್ಲೂ ನವರಾತ್ರಿಯ ಉತ್ಸವ ಸಮಯದಲ್ಲೂ ಮಿತಿಗಿಂತಲೂ ಹೆಚ್ಚಾಗಿ ಮನೆಗಳಲ್ಲಿ ಬಳಸಲ್ಪಟ್ಟ ನೀರಿಗೆ ಎಕ್ಸ್‌ಟ್ರಾ ಚಾರ್ಜನ್ನು ವಸೂಲ್ಮಾಡಕೂಡದೆಂದು ಮ್ಯು|| ಪ್ರೆಸಿಡೆಂಟರು ಗೌರ್ನಮೆಂಟಿಗೆ ಬಲವಾಗಿ ಮಾಡಿದ್ದ ಶಿಫಾರಸ್ಸಿನ ಮೇಲೆ ಸರ್ಕಾರದವರು ಆಗಬಹುದೆಂದು ಅನುಮತಿಕೊಟ್ಟಿದ್ದಾರೆ. ಸತ್ರ, ದೇವಾಲಯ, ಮಸೀದಿಗಳಲ್ಲಿ ಉಪಯೋಗಿಸಲ್ಪಡುವ ನೀರಿಗೆ ಯಾವಾಗಲೂ ಚಾರ್ಜನ್ನು ಕೊಡಬೇಕಾದುದಿಲ್ಲವೆಂದೂ ಅಪ್ಪಣೆಯಾಗಿದೆ.

ಬೆಂಗಳೂರು ಮೈಸೂರುಗಳ ಮಧ್ಯದಲ್ಲಿ ತಿರುಗಾಡುವ ಮೇಲ್ ಬಂಡಿಯಲ್ಲಿ ೨-೩ ದಿನಕ್ಕೆ ಒಂದೊಂದು ಸಲ ಚಕ್ರದ ದೋರಿಯ ಬಳಿಯಲ್ಲಿ ಬೆಂಕಿಹೊತ್ತಿ ಅಪಾಯಕಾಣಿಸಿಕೊಳ್ಳುತ್ತಿರುವುದರಿಂದ ಅಲ್ಲಲ್ಲಿಗೆ ಬಂಡಿಯನ್ನು ನಿಲ್ಲಿಸಿ ಸರಿಮಾಡುತ್ತಲೂ, ಅಪಾಯವು ಹೆಚ್ಚಾಗುವುದೆಂದು ತೋರಿದಾಗ ಆ ಬಂಡಿಯನ್ನು ಕಳಚಿಯೇ ಬಿಡುತ್ತಲೂ ಬರುತ್ತಿರುವುದರಿಂದ ಗೊತ್ತಾದ ಕಾಲಕ್ಕೆ ಅರ್ಧ ಕಾಲು ಗಂಟೆಯಷ್ಟು ತಡವಾಗಿ ಬಂಡಿಗಳು ಸ್ಥಲಕ್ಕೆ ಸೇರುತ್ತಿವೆ. ರೈಲ್ವೆ ಶಾಖಾಧಿಕಾರಿಗಳು ಈ ತೊಂದರೆಯನ್ನು ಕೂಡಲೇ ತಪ್ಪಿಸಬೇಕು.

ಬೆಂಗಳೂರು ಪಟ್ಟಣದ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಮ|| ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಚೇರ್ಮನ್ನರಾಗಿಯೂ ಮ|| ಬಿ. ಕೆ. ಗರುಡಾಚಾರ್ಯರು ವೈಸ್ ಚೇರ್ಮನ್ನರಾಗಿಯೂ ಮ||ಗಳಾದ ಉಸ್ಮಾನ್‌ಖಾನರು, ಎಂ. ಸುಬ್ಬಯ್ಯನವರು, ಬಿ. ಚಿನ್ನಸ್ವಾಮಿಶೆಟ್ಟರು, ಎಂ. ರಾಮಚಂದ್ರರಾವ್ ಸಿಂಧೆಯವರು, ಬಿ. ಅಬ್ದುಲ್ ರೆಹಮಾನ್‌ರವರು, ಕೆ. ಶ್ರೀನಿವಾಸರಾಯರು, ವಿ. ಲಕ್ಷ್ಮಣಸ್ವಾಮಿಯವರು, ರೆ|| ರೀಸ್‌ರವರು ಮತ್ತೂ ಅಲ್ಲಿಯ ಸ್ಯಾನಿಟರಿ ಕಮಿಷನರು, ಸೂ|| ಇಂಜನಿಯರು ಸಹ ಮೆಂಬರುಗಳಾಗಿಯೂ ನಿಯಮಿಸಲ್ಪಟ್ಟಿದ್ದಾರೆ.

ಕಂಟ್ರೋಲ್ ಮೊದಲಾದ ಪದ್ಧತಿಗಳನ್ನು ಪೂರ್ವದಂತೆಯೇ ನಡೆಯಿಸಿಕೊಂಡು ಬರುತ್ತೇವೆಂದು ಸರ್ಕಾರದವರು ಪ್ರಕಟಿಸಿದ ಕೂಡಲೇ ಧಾನ್ಯದ ಬೆಲೆಯು ಸ್ವಲ್ಪ ಇಳಿಮುಖವಾಗಿದ್ದಿತು. ಆ ಸಂಬಂಧವಾಗಿ ಸರ್ಕಾರದವರು ಯಾವ ಕಟ್ಟುನಿಟ್ಟುಗಳನ್ನೂ ವ್ಯವಹಾರಕ್ಕೆ ತಾರದೆ ತಾತ್ಸಾರಮಾಡಿರುವುದರಿಂದ ಮತ್ತೆ ಬೆಲೆಗಳು ಏರುತ್ತಿವೆ. ಬತ್ತವು ಕಂಡುಗಕ್ಕೆ ೨೦ ರೂ. ಆಗಿದೆ. ರಾಗಿಯು ರೂ.ಗೆ ೬ ಸೇರು ಸಿಕ್ಕುವುದೂ ಪ್ರಯಾಸವಾಗಿದೆ. ಇಂಥ ವಿಷಯದಲ್ಲಿ ಸರ್ಕಾರದವರು ಮಾಡಬೇಕೆಂದಿರುವ ಕಾರ್ಯವನ್ನು ಚುರುಕಾಗಿ ಮಾಡಿದಷ್ಟೂ ಪ್ರಜೆಗಳಿಗೆ ಹಿತವಾಗುವುದು.

ಮುಡುಕುದೊರೆ ಜಾತ್ರೆಗೆ ಹೋಗಿ ದನ ವ್ಯಾಪಾರಮಾಡಿಕೊಂಡು ಸೋಸಲಿ ಬಳಿಯಲ್ಲಿ ತಾ|| ೯-೨-೨೦ ರಲ್ಲಿ ಕಾವೇರೀ ನದಿಯನ್ನು ದೋಣಿಯ ಮೇಲೆ ದಾಟುತ್ತಿದ್ದ ೮-೧೦ ಮಂದಿ ಮೈಸೂರು ವರ್ತಕರ ಬಾಬತು ೬೦೦-೭೦೦ ರೂ.ಗಳನ್ನು ಹಾಕಿದ್ದ ದುಡ್ಡಿನ ಚೀಲವು ನದಿಯಲ್ಲಿ ಬಿದ್ದು ಮುಳುಗಿಹೋಯಿತು. ಅದು ರಾತ್ರಿ ಕಾಲವಾಗಿದ್ದುದರಿಂದ ಮರುದಿವಸ ೨೦-೩೦ ಆಳುಗಳನ್ನು ಬಿಡಿಸಿ ಶೋಧಿಸಲಾಗಿ ಚೀಲವು ಸಿಕ್ಕಿತು. ತೆಗೆದುಕೊಟ್ಟವರಿಗೆ ೩೦ ರೂ.ಗಳ ಇನಾಮನ್ನು ಆ ವರ್ತಕರು ಕೊಟ್ಟರು. ಹೀಗೆ ಈ ಸ್ಥಲದಲ್ಲಿ ಪ್ರಯಾಣಿಕರಿಗೆ ಪದೇಪದೇ ನದಿಯ ಮೂಲಕ ಅನೇಕ ತೊಂದರೆಗಳು ಸಂಭವಿಸುತ್ತಿವೆಯಾದಕಾರಣ ಈ ಕಡುವಿನಲ್ಲೇ ಕಾವೇರೀ ನದಿಗೆ ಸೇತುವನ್ನು ದಯಾಳುಗಳಾದ ನಮ್ಮ ಸರ್ಕಾರದವರು ಕಟ್ಟಿಸುವುದು ಅತ್ಯಾವಶ್ಯಕವಾಗಿದೆಯೆಂದು ಇದನ್ನೆಲ್ಲಾ ಕಣ್ಣಾರ ಕಂಡ ಪ್ರಯಾಣಿಕರೊಬ್ಬರು ಬರೆದಿರುತ್ತಾರೆ.

“ದವಸಗಳ ಮಿತಿಮೀರಿದ ಬೆಲೆಯಿಂದ ಟವನ್ ನಿವಾಸಿಗಳಾದ ಮಧ್ಯಮ ತರಗತಿಯ ಕನಿಷ್ಠ ತರಗತಿಯ ಪ್ರಜೆಗಳೆಲ್ಲಾ ಕಣ್ಣಾಯ ಬಿಡುತ್ತಿರುವಾಗ ನಮ್ಮ ಮ್ಯುನಿಸಿಪಾಲಿಟಿಯವರು ಕಂದಾಯಗಳನ್ನು ಹೊಸದಾಗಿ ಹೆಚ್ಚಿಸಿದುದೇ ಅಲ್ಲದೆ ನಡೆಯುವ ವರ್ಷದ ಕಂದಾಯವನ್ನು ಕಿಸ್ತುವಾರಿಗೆ ವಸೂಲ್ಮಾಡುವುದಕ್ಕೂ ಅವಕಾಶಕೊಡದೆ ಒಂದೇ ಕಿಸ್ತಿನಲ್ಲಿ ಕೊಡಬೇಕೆಂದು ಹಿಂಸೆಪಡಿಸುತ್ತಿರುವುದನ್ನು ನೋಡಿ 'ಯಮಸ್ಯಕರುಣಾನಾಸ್ತಿ' ಎಂಬ ಗಾಧೆಯಂತೆ ಆ ಬಡ ಪ್ರಜೆಗಳು ವಸೂಲಿ ಗುಮಾಸ್ತರನ್ನು ಕಂಡಾಗೆಲ್ಲಾ ಶಪಿಸುತ್ತಲಿದ್ದಾರೆ. ಸಂಬಳ ತೆಗೆದುಕೊಳ್ಳುವ ವಸೂಲಿ ಗುಮಾಸ್ತರು ೧೨ ತಿಂಗಳೂ ಕೆಲಸಮಾಡುತ್ತಿರುವಾಗ ಕಿಸ್ತುವಾರಾಗಿ ಕಂದಾಯವನ್ನು ಅವರುಗಳು ವಸೂಲ್ಮಾಡಿಕೊಳ್ಳಲು ಏತಕ್ಕೆ ಅವಕಾಶ ಕೊಡಕೂಡದು? ಹಾಗೆ ಮಾಡುವುದರಿಂದ ಮ್ಯುನಿಸಿಪಾಲಿಟಿಗೆ ಲುಕ್ಸಾನೇನು? ಪ್ರಜೆಗಳಿಗೆ ಅದರಿಂದ ಎಷ್ಟೋ ಉಪಕಾರವಾಗುವುದಿಲ್ಲವೆ? ಇಂಥ ವಿಷಯದಲ್ಲಿ ಮ್ಯು|| ಕೌನ್ಸಿಲರುಗಳಾದರೂ ಪ್ರಜೆಗಳ ಹಿತದ ಕಡೆ ದೃಷ್ಟಿಯಿಟ್ಟು ಕಿಸ್ತುವಾರು ಪದ್ಧತಿಯನ್ನು ಜಾರಿಗೆ ತರಿಸುವುದನ್ನು ಬಿಟ್ಟು ತೂಕಡಿಸುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ, ಬಡವರಿಗೆ ದಿಕ್ಕೇ ಇಲ್ಲವೆ?” ಎಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ. ಇದನ್ನು ಮ್ಯು|| ಕೌನ್ಸಿಲರುಗಳೂ ಪ್ರೆಸಿಡೆಂಟರೂ ಅವಶ್ಯವಾಗಿ ಗಮನಿಸಬೇಕು.

ಭರತಖಂಡದ ವೃತ್ತಾಂತಗಳು.

ಅಫ್ಘಾನಿಸ್ತಾನದವರು ಮಾಡಿಕೊಂಡಿದ್ದ ತಾತ್ಕಾಲಿಕ ಸಂಧಿಯ ಗಡುವು (೬ ತಿಂಗಳ ಕಾಲ) ಇಲ್ಲಿಗೆ ಮುಗಿದಿತು. ಮುಂದೆ ನಡೆಯಬೇಕಾದ ಸಂಧಿಯ ಪ್ರಸ್ತಾಪವೇನೂ ಕಾಣಲಿಲ್ಲ.

ಮದ್ರಾಸಿನ ಮ್ಯುನಿಸಿಪಾಲಿಟಿಗೆ ಕೌನ್ಸಿಲರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಲು ಅಧಿಕಾರವು ಈಗತಾನೇ ಕೊಡಲ್ಪಟ್ಟಿತು. ಅದರ ಪ್ರಕಾರ ಪ್ರೆಸಿಡೆಂಟ್ ಪದವಿಗೆ ದಿ|| ಬ|| ತ್ಯಾಗರಾಯಶೆಟ್ಟರೂ, ರಾ|| ಬ|| ಟಿ. ರಂಗಾಚಾರ್ಯರೂ ಉಮೇದುವಾರರಾಗಿ ನಿಂತಿದ್ದರು. ತ್ಯಾಗರಾಯಶೆಟ್ಟರಿಗೆ ೨೮ ಓಟುಗಳೂ, ರಂಗಾಚಾರ್ಯರಿಗೆ ೧೭ ಓಟುಗಳೂ ಬಂದುದರಿಂದ ತ್ಯಾಗರಾಯಶೆಟ್ಟರೇ ಪ್ರೆಸಿಡೆಂಟರಾದರು.

ಮದ್ರಾಸಿನ ನ್ಯೂಯಿಂಗ್ಟನ್ ಮೈನರ್ ಪಾಠಶಾಲೆಯಲ್ಲಿ ಪ್ರಿನ್ಸಿಪಾಲರಾಗಿದ್ದ ಡಿಲಾಹೆ ಎಂಬ ಯೂರೋಪ್ಯನನ್ನು ರಿವಾಲ್ವರಿನಿಂದ ಹೊಡೆದು ಕೊಂದನೆಂಬ ತಪ್ಪಿತದ ಮೇಲೆ ಬೊಂಬಾಯಿ ಹೈಕೋರ್ಟಿನಲ್ಲಿ ವಿಚಾರಣೆಗೊಳಪಡಿಸಲ್ಪಟ್ಟಿದ್ದ ಕಡಂಬೂರು ವೈನಂನ ವಿಚಾರಣೆಯೆಲ್ಲಾ ನಡೆದು ಜ್ಯೂರರುಗಳೆಲ್ಲಾ ಏಕಗ್ರೀವರಾಗಿ ಅಪರಾಧಿಯನ್ನು ನಿರ್ದೋಷಿಯೆಂದು ಹೇಳಲಾಗಿ ನ್ಯಾಯಮೂರ್ತಿಗಳೂ ಅದನ್ನೊಪ್ಪಿ ಅಪರಾಧಿಯನ್ನು ನಿರ್ದೋಷಿಯೆಂದು ಹೇಳಿ ತೀರ್ಮಾನ ಕೊಟ್ಟು ಬಿಡುಗಡೆ ಮಾಡಿದರು.

ಮದ್ರಾಸ್ ಆಧಿಪತ್ಯದಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿಯನ್ನು ಸಾಗಿಸುವ ವಿಷಯದಲ್ಲಿ ಇದುವರೆಗೆ ಇದ್ದ ನಿರ್ಬಂಧಗಳೆಲ್ಲಾ ಇದೇ ಫೆಬ್ರವರಿ ತಾ|| ೧೫ ರಿಂದ ತಪ್ಪಿಸಲ್ಪಟ್ಟು ಮದ್ರಾಸಾಧಿಪತ್ಯದ ಯಾವ ದೇಶದಿಂದಲೂ ಕೂಡ ಕೊಚ್ಚಿ, ಮೈಸೂರು, ಹೈದರಾಬಾದು, ತಿರುವಾಂಕೂರು ಮೊದಲಾದ ಇತರ ಸ್ಥಲಗಳಿಗೆ ಅಕ್ಕಿಯನ್ನೂ ಇತರ ಧಾನ್ಯಗಳನ್ನೂ ಸಾಗಿಸಕೂಡದೆಂಬ ನಿರ್ಬಂಧವನ್ನು ಮದ್ರಾಸು ಸರ್ಕಾರದವರು ಏರ್ಪಡಿಸಿದ್ದಾರೆ. ಇದರಿಂದ ಆ ಮದ್ರಾಸಾಧಿಪತ್ಯದಲ್ಲಿ ಧಾನ್ಯಗಳ ಬೆಲೆಯು ಇಳಿದುಹೋಗುವುದೆಂದು ಆ ಸರ್ಕಾರದವರು ಯೋಚಿಸಿ ಹೀಗೆ ಮಾಡಿರುತ್ತಾರೆ.

ಕೊಯಮುತ್ತೂರಿನಲ್ಲಿ ಫೋಟೋಗ್ರಾಫರಾಗಿದ್ದ ಗುರುಸ್ವಾಮಿಪಿಳ್ಳೆಯೆಂಬುವನನ್ನು ಒಂದು ಕಡೆ ಫೋಟೋ ತೆಗೆಯಬೇಕೆಂದು ಯಾರೋ ಕರೆದುಕೊಂಡು ಮೋಟಾರಿನ ಮೇಲೆ ಕುಳ್ಳಿರಿಸಿಕೊಂಡು ಬಹುದೂರ ಹೋಗಿ ಕೊಂದುಹಾಕಿಬಿಟ್ಟರು. ಪೋಲೀಸರು ನಡೆಯಿಸಿದ ಪರಿಶೋಧನೆಯಿಂದ ಮೋಟಾರೂ ಅದರಲ್ಲಿದ್ದ ರಕ್ತದ ಕಲೆಗಳೂ ಗೊತ್ತಾಗಿ, ಅದರ ಮೂಲಕ ಪತ್ತೆಮಾಡಿದುದರಲ್ಲಿ ಕೊಯಮುತ್ತೂರಿನ ಎಸ್. ಎಸ್. ಸುಬ್ಬರಾವ್ ಎಂಬುವನು ಇದಕ್ಕೆ ಕಾರಣಭೂತನೆಂದು ನಿಶ್ಚಯಿಸಿ ಆತನನ್ನು ಊಸೂರಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಖಾದರ್‌ಹುಸೇನ್ ಎಂಬುವರು ಹಿಡಿದು ಬಂಧಿಸಿ ಕೊಯಮುತ್ತೂರಿಗೆ ಸಾಗಿಸಿಕೊಂಡು ಹೋಗಿ ವಿಚಾರಣೆಗೆ ಗುರಿಪಡಿಸಿರುವರು.

ಲೈಸೆನ್ಸಿನ ಮೇಲೆ ಭರತಖಂಡಕ್ಕೆ ಬಂದಿಳಿಯುವ ಭಂಗಾರದ ಬೆಲೆಯು ಇದೇ ಫೆಬ್ರವರಿ ತಾ|| ೨ ರಿಂದ ಸವರನ್ನು ೧ ಕ್ಕೆ ೧೦ ರೂಪಾಯಿಯಂತೆ ಇರತಕ್ಕದೆಂದೂ, ೧ ಸೌರನ್ನಿಗೆ ೧೫ ರೂ. ಅರ್ಧಕ್ಕೆ ೭|| ರೂ. ಯಂತೆ ಖಜಾನೆಗಳಲ್ಲಿ ಕೊಡಬೇಕೆಂದು ಇದುವರೆಗೆ ಮಾಡಿದ್ದ ಅಪ್ಪಣೆಯನ್ನು ರದ್ದುಮಾಡಿದೆಯೆಂದೂ, ಈ ದೇಶಕ್ಕೆ ತರಿಸಿಕೊಳ್ಳುವ ಬೆಳ್ಳಿಗೆ ಏರ್ಪಡಿಸಿದ್ದ ತಡೆಯನ್ನು ತೊಲಗಿಸಿಬಿಟ್ಟಿದ್ದೇವೆಂದೂ, ಅದರ ಮೇಲೆ ಔನ್ಸು ೧ಕ್ಕೆ ೪ ಆಣೆಯಂತೆ ತೆಗೆದುಕೊಳ್ಳುತ್ತಿದ್ದ ಸುಂಕವೂ ಕೂಡ ತೆಗೆದುಹಾಕಲ್ಪಟ್ಟಿದೆಯೆಂದೂ, ಬೆಳ್ಳಿಚಿನ್ನದ ನಾಣ್ಯಗಳನ್ನು ನಾಣ್ಯಗಳ ರೂಪದಿಂದಲ್ಲದೆ ಇತರ ಯಾವ ವಿಧದಲ್ಲೂ ಉಪಯೋಗಿಸಕೂಡದೆಂದು ಮಾಡಿದ್ದ ಅಪ್ಪಣೆಯನ್ನು ಕೂಡ ತೆಗೆದುಹಾಕಿಬಿಟ್ಟಿದ್ದೇವೆಂದೂ, ಫೆಬ್ರವರಿ ತಾ|| ೫ ರಿಂದ ೭|| ಲಕ್ಷ ತೊಲೆಯ ಭಂಗಾರವನ್ನೂ ಅದರಾಚೆಗೆ ೧|| ಕೋಟಿ ತೊಲೆಯ ಭಂಗಾರವನ್ನೂ ಮಾರುತ್ತೇವೆಂದೂ, ಅದರ ಹರಾಜಿನ ಕನಿಷ್ಠ ದರವು ತೊಲೆಗೆ ೨೩-೧೧-೪ ಎಂಬ ನಿರ್ಬಂಧವು ಕೂಡ ತೊಲಗಿಸಲ್ಪಟ್ಟಿದೆಯೆಂದೂ ಸಹ ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಇದರ ಮೇಲೆ ಭಂಗಾರದ ಬೆಲೆಯು ಈಗಾಗಲೇ ತೊಲೆಗೆ ೨೫ ರ ವರೆಗೆ ಇಳಿದಿದೆ. ಇನ್ನೂ ಇಳಿಯಬಹುದು.

ನೂತನ ರಾಜಕೀಯ ಸಂಸ್ಕರಣ ಶಾಸನದ ಪ್ರಕಾರ ಮದ್ರಾಸಿನ ಬ್ರಾಹ್ಮಣೇತರರಿಗೆ ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕು ದೊರೆತಿರುವುದರಿಂದ ಶಾಸನಸಭೆಯಲ್ಲಿ ಅವರಿಗಾಗಿ ಎಷ್ಟು ಸ್ಥಲಗಳನ್ನು ಕಾದಿಡಬೇಕೆಂಬ ವಿಷಯವನ್ನು ಗೊತ್ತುಮಾಡುವುದಕ್ಕಾಗಿ ಕಳೆದ ತಾ|| ೩೧ ರಲ್ಲಿ ೨ ನೆಯ ಸಲ ಸಭೆಯನ್ನು ಮದ್ರಾಸು ಗೌರ್ನರು ಕೂಡಿಸಿದ್ದರು. ಬ್ರಾಹ್ಮಣ ಪಕ್ಷದಲ್ಲಿ ಮ|| ಎಸ್. ಕಸ್ತೂರಿ ರಂಗಯ್ಯಂಗಾರರು, ಜಿ. ನಟೇಶನ್‌ರವರು, ಸಿ. ಪಿ. ರಾಮಸ್ವಾಮಯ್ಯರು ಮೊದಲಾದ ಕೆಲವರೂ, ಬ್ರಾಹ್ಮಣೇತರ ಪಕ್ಷದಲ್ಲಿ ದಿ|| ಬ|| ತ್ಯಾಗರಾಯಶೆಟ್ಟರು, ದಿ|| ಬ|| ರಾಮರಾಯಣಿಯವರು, ರೆಡ್ಡಿನಾಯಡುರವರು, ದಿ|| ಬ|| ಕೇಶವಪಿಳ್ಳೆಯವರು ಮೊದಲಾದ ಕೆಲವರು ಕರೆಯಿಸಲ್ಪಟ್ಟಿದ್ದರು. ನಡೆದ ಚರ್ಚೆಯಲ್ಲಿ ೩೬ ಸ್ಥಾನಗಳನ್ನು ನಮ್ಮ ಸಂಘದವರಿಗಾಗಿ ಪ್ರತ್ಯೇಕಿಸಿಡಬೇಕೆಂದು ಕೇಶವಪಿಳ್ಳೆಯವರು ಕೋರಿದರು. ಅದಕ್ಕೆ ಕಸ್ತೂರಿ ರಂಗಯ್ಯಂಗಾರರು ಒಪ್ಪಿದರು. ಇತರ ಬ್ರಾಹ್ಮಣೇತರರು ಒಪ್ಪಲಿಲ್ಲ. ನೇಕಡಾ ೫೦ ರಂತೆ ಸ್ಥಾನಗಳನ್ನು ಬ್ರಾಹ್ಮಣೇತರರಿಗೆ ಪ್ರತ್ಯೇಕಿಸಿಡುವುದಕ್ಕೆ ನೀವು ಒಪ್ಪಿದಿರಾ? ಹಾಗಾದರೆ ಉಭಯಪಕ್ಷಕ್ಕೂ ರಾಜೀ ಕುದುರುವುದೆಂದು ಗೌರ್ನರವರು ದಿ|| ಬ|| ತ್ಯಾಗರಾಯಶೆಟ್ಟರನ್ನೂ, ರೆಡ್ಡಿನಾಯಡುರವರನ್ನೂ ಕೇಳಿದರು. ನಾವು ಅಂಗೀಕರಿಸಲಾರೆವೆಂದು ಅವರು ಹೇಳಿದರು. ಈ ವಿಷಯವನ್ನೆಲ್ಲಾ ವೈಸ್ರಾಯರಿಗೆ ತಿಳಿಯಿಸುತ್ತೇನೆಂದು ಗೌರ್ನರು ಹೇಳಿ ಸಭೆಯನ್ನು ಮುಗಿಸಿದರು. ಬಗೆ ಹರಿಸಲು ಲಾರ್ಡ್ ಮೆಸ್ಟನ್‌ರವರನ್ನು ಮಧ್ಯಸ್ಥಗಾರರನ್ನಾಗಿ ಇಂಡ್ಯಾ ಗೌರ್ನಮೆಂಟಿನವರು ನಿಯಮಿಸಿದ್ದಾರೆ.

ವಿದೇಶ ವೃತ್ತಾಂತಗಳು.

ಬೋಲ್ಷೆವಿಕ್ಕರು ತಮ್ಮ ಮೇಲೆ ಯುದ್ಧಮಾಡುತ್ತಿದ್ದ ಕೋಲ್ಚಾಕ್ ಸೇನಾಪತಿಯನ್ನು ಹಿಡಿದುಕೊಂಡರಷ್ಟೆ. ಈಗ ಆತನನ್ನು ವಿಚಾರಿಸಿ ಶಿಕ್ಷೆ ಮಾಡುವುದಕ್ಕಾಗಿ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ.

ಬೋಲ್ಷೆವಿಕ್ಕರ ಸೈನ್ಯವು ಒಡೆಸ್ಸಾ ತೀರಪಟ್ಟಣಕ್ಕೆ ೫೦ ಮೈಲಿ ದೂರದಲ್ಲಿದೆ. ಅಲ್ಲಿ ನಡೆದ ಯುದ್ಧದಲ್ಲಿ ಅವರಿಗೆ ಒಂದು ದೊಡ್ಡ ಅಪಜಯವು ಕಳೆದವಾರ ಸಂಭವಿಸಿತು. ಆ ತೀರಪಟ್ಟಣವು ಅವರಿಗೆ ಸುಲಭವಾಗಿ ವಶವಾಗಲಾರದೆಂದು ಎಣಿಸಲ್ಪಡುತ್ತಿದೆ.

ಸಂಧಿ ಸಭಾಧ್ಯಕ್ಷರಾಗಿದ್ದ ಕ್ಲೆಮೆಂಕೋಯವರು ದೇಹಾರೋಗ್ಯಕ್ಕಾಗಿ ಈಜಿಪ್ಟಿಗೆ ಪ್ರಯಾಣಮಾಡಿ ಬರುತ್ತಿದ್ದಾರೆ. ಅವರೊಡನೆ ಡಾಕ್ಟರ್ ವಿಕ್ಟರ್ ಎಂಬುವರೂ ಬರುತ್ತಿದ್ದಾರೆ. ಇವರು ಸಿರಿಯಾ, ಪರ್ಷಿಯಾ, ಇಂಡ್ಯಾ, ಜಪಾನ್ ದೇಶಗಳಿಗೂ ಕೂಡ ಬಂದು ನೋಡಿಕೊಂಡು ಹೋಗಲು ಉದ್ದೇಶಪಟ್ಟಿರುವರಂತೆ.

ಮರೆಹೊಕ್ಕ ಕೈಸರನ್ನು ಬಿಟ್ಟುಕೊಡುವುದು ರಾಜನೀತಿಗೆ ಭಂಗಕರವಾದುದರಿಂದ ಬಿಟ್ಟುಕೊಡಲಾರೆವೆಂದು ಹಾಲೆಂಡ್ ಪ್ರಭುತ್ವದವರು ಮಿತ್ರಮಂಡಲಿಯವರಿಗೆ ಉತ್ತರವನ್ನು ಕೊಟ್ಟರು. ಅದರ ಮೇಲೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನ್ಯಾಯಶಾಸ್ತ್ರಕೋವಿದರಲ್ಲಿ ಆಲೋಚಿಸಿ, ಮಿತ್ರಮಂಡಲಿಯವರು ಮತ್ತೊಂದು ಕಠಿನವಾದ ಲೇಖನವನ್ನು ಹಾಲೆಂಡಿನವರಿಗೆ ಬರೆದಿರುತ್ತಾರೆ.

ಬೋಲ್ಷೆವಿಕ್ಕರು ವ್ಲಾಡಿವಾಸ್ಟಾಕನ್ನು ಆಕ್ರಮಿಸಿ ವಶಪಡಿಸಿಕೊಳ್ಳುವುದರಲ್ಲಿದ್ದಾರೆ. ಜಪಾನ್ ಸೈನಿಕರು ಅಲ್ಲಿಯ ಬ್ಯಾಂಕನ್ನು ರಕ್ಷಿಸಿಕೊಳ್ಳುತ್ತಿದ್ದಾರೆ. ಯುದ್ಧಕಾಲಿಕಶಾಸನವು ಅಲ್ಲಿ ಸಾರಲ್ಪಟ್ಟಿದೆ. ಅಲ್ಲಿರುವ ಮಿತ್ರಮಂಡಲೀ ಉದ್ಯೋಗಿಗಳು ವಾಸಮಾಡುವುದು ಕಷ್ಟವಾಗಿದೆ. ಅವರೆಲ್ಲಾ ಸೋವಿಯಟ್ ಪ್ರಭುತ್ವವನ್ನು ಅಂಗೀಕರಿಸಬೇಕಾದ ಹೊತ್ತುಬಂದಿದೆ. ಜಪಾನರು ಮಾತ್ರ ದಿಟ್ಟವಾಗಿದ್ದಾರೆ. ಅವರಿಗೆ ಸಹಾಯಸೈನ್ಯವು ಹೋಗುತ್ತಿದೆ.

ಬೋಲ್ಷೆವಿಕ್ಕರೊಡನೆ ಯುದ್ಧಮಾಡುವುದಕ್ಕೆ ತಾವು ಸಹಾಯ ಮಾಡಲಾರೆವೆಂದೂ ನೀವು ಬೋಲ್ಷೆವಿಕ್ಕರ ಸೋವಿಯಟ್ ಪ್ರಭುತ್ವನೊಡನೆ ಸಂಧಿಮಾಡಿಕೊಳ್ಳುವುದು ಒಳ್ಳೇದೆಂದೂ ಆಂಗ್ಲ ಮಂತ್ರಿವರ್ಗದವರು ಪೋಲೆಂಡಿನವರಿಗೆ ತಿಳಿಯಿಸಿಬಿಟ್ಟುದರಿಂದ ಅವರು ಸೋವಿಯಟ್ಟರೊಡನೆ ಸಂಧಿಯನ್ನು ಮಾಡಿಕೊಂಡರೆಂದು ಸುಳ್ಳುಸುದ್ದಿ ಹುಟ್ಟಿದ್ದಿತು. ಪೋಲೆಂಡಿನ ಸ್ವಾತಂತ್ರ್ಯವನ್ನು ರಷ್ಯಾ ಸೋವಿಯಟ್ ಪ್ರಭುತ್ವದವರು ಒಪ್ಪಿಕೊಂಡಿದ್ದಾರೆ. ಅವರವರಿಗೆ ಸಂಧಿ ನಡೆಯಿತು.

ರಷ್ಯಾದ ಬೋಲ್ಷೆವಿಕ್ಕರು ತಮ್ಮ ದೇಶದ ಪ್ರಜೆಗಳೆಲ್ಲಾ ಸೈನ್ಯಕ್ಕೆ ಸೇರಬೇಕೆಂದೂ ಪ್ರಭುತ್ವದವರು ಹೇಳಿದ ಕಡೆಗೆ ಯಾವ ಉದ್ಯೋಗವನ್ನು ಮಾಡುವುದಕ್ಕೆ ಕಳುಹಿಸಿದರೂ ಮರುಮಾತಾಡದೆ ಹೋಗಬೇಕೆಂದೂ, ಅದಕ್ಕೊಪ್ಪದೆ ಹೋದವರನ್ನು ಮರಣ ದಂಡನೆಗೆ ಗುರಿಪಡಿಸುವೆವೆಂದೂ ಮೊದಲಾಗಿ ರಾಕ್ಷಸ ಶಾಸನಗಳನ್ನು ವಿಧಿಸಿದ್ದಾರೆ. ಇದರಿಂದ ಆ ದೇಶದ ಪ್ರಜೆಗಳೆಲ್ಲಾ ಭಯಸಮುದ್ರದಲ್ಲಿ ಮುಳುಗಿದ್ದಾರೆ. ವ್ಯವಸಾಯವೂ ಪರಿಶ್ರಮಗಳೂ ನಿಂತುಹೋಗಿವೆ. ಬೋಲ್ಷೆವಿಕ್ಕರು ಪ್ರಜೆಗಳ ಸೊತ್ತುಗಳನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದಾರೆ.

ಅಮೇರಿಕಾದ ಸೆನೇಟ್ ಸಭೆಯವರು ಸಂಧಿಯಂಗೀಕಾರದ ವಿಷಯದಲ್ಲಿ ವಿಮುಖರಾಗಿದ್ದರಷ್ಟೆ. ಅಲ್ಲಿ ಆಂಗ್ಲ ರಾಯಭಾರಿಗಳಾಗಿರುವ ಅರ್ಲ್ ವೈಕೌಂಟ್ ಗ್ರೇಯವರು ಆಂಗ್ಲರ ಮನೋಭಾವಗಳನ್ನೂ ಸ್ಥಿತಿಗತಿಗಳನ್ನೂ ಕುರಿತು ವೃತ್ತಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಉಪನ್ಯಾಸಗಳನ್ನು ಕೊಟ್ಟು ತಿಳಿಯಪಡಿಸಿದುದರ ಮೇಲೆ ಅಮೇರಿಕನ್ನರಲ್ಲಿ ಉಂಟಾಗಿದ್ದ ಸಂಶಯವು ಬಲುಮಟ್ಟಿಗೆ ತೊಲಗಿಹೋಗಿದೆ. ಅದರ ಮೇಲೆ ಮತ್ತೆ ಸಭೆಗೆ ಸಂಧಿವಿಷಯಕವಾದ ತೀರ್ಮಾನದ ಚರ್ಚೆಯು ಬರುವಂತೆ ಇಟ್ಟುಕೊಂಡಿದ್ದಾರೆ. ಯಾವುದೋ ಒಂದು ತೆರದಲ್ಲಿ ಸಂಧಿ ವಿಷಯವಾಗಿ ಸಮಾಧಾನಮಾಡಿಕೊಳ್ಳಲು ಅವರು ನಿರ್ಧರಿಸಿದ್ದಾರೆ.

ಯುದ್ಧಕಾಲದಲ್ಲಿ ದಾರುಣಕೃತ್ಯಗಳನ್ನು ಮಾಡಿದ ಶತ್ರುಪಕ್ಷದ ಸೈನಿಕರನ್ನೆಲ್ಲಾ ತಮ್ಮಲ್ಲಿಗೆ ಕಳುಹಿಸಿಕೊಟ್ಟು ವಿಚಾರಣೆಗೆ ಗುರಿಪಡಿಸಬೇಕೆಂದು ಮಿತ್ರಮಂಡಲಿಯವರು ಅಂಥವರ ಹೆಸರುಗಳನ್ನೆಲ್ಲಾ ಪಟ್ಟಿಬರೆದು ಜರ್ಮನರಿಗೆ ಕೊಟ್ಟಿದ್ದರು. ಅದರಲ್ಲಿ ಹಡಗುಗಳ ಸೇನಾಪತಿಯಾಗಿದ್ದ ಅಡ್ಮಿರಲ್ ಟರ್ಪಿಟ್ಜ್, ತುರ್ಕಿಯ ಎನ್ವರ್‌ಪಾಷಾ, ಜಿಮಾಲ್‌ಪಾಷಾ, ಮೊದಲಾದ ಅನೇಕ ಹೆಸರುಗಳಿದ್ದುವು. ಇವರನ್ನೆಲ್ಲಾ ಮಿತ್ರಮಂಡಲಿಯವರ ವಶಪಡಿಸುವಲ್ಲಿ ಜರ್ಮನ್ ಪ್ರಜೆಗಳು ಇಷ್ಟವುಳ್ಳವರಾಗಿಲ್ಲ. ಇವರುಗಳನ್ನೆಲ್ಲಾ ನಿಮಗೆ ಒಪ್ಪಿಸಿಕೊಡುವುದರಿಂದ ಜರ್ಮನಿಯಲ್ಲಿ ಮಹಾ ಕಲ್ಲೋಲವುಂಟಾಗುವುದೆಂದೂ, ಅವರನ್ನೆಲ್ಲಾ ಜರ್ಮನಿಯಲ್ಲೇ ವಿಚಾರಿಸುವುದಕ್ಕೆ ಅವಕಾಶಕೊಡಬೇಕೆಂದೂ ಜರ್ಮನ್ ಪ್ರಭುತ್ವದವರು ಮಿತ್ರಮಂಡಲಿಯವರಿಗೆ ತಿಳಿಯಪಡಿಸಿದ್ದಾರೆ.

ಲಗ್ನದ ಫಂಡು.

1. ತುಮಕೂರಿನಲ್ಲಿರುವ ಗೊಲ್ಲಹಳ್ಳಿ ಮ॥ರಾ॥ ಮಂಡಿ ರುದ್ರಪ್ಪನವರಿಂದ ಅವರ ಮಗಳ ಲಗ್ನದಲ್ಲಿ ರೂ. 5.

2. ಆನೇಕಲ್ ತಾ॥ ದೊಮ್ಮಸಂದ್ರದಲ್ಲಿರುವ ಚಿಲ್ಲರೆ ಅಂಗಡಿ ಮ॥ರಾ॥ ಚಿಕ್ಕಲಿಂಗಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಮ॥ರಾ॥ ಬೆಂಗಳೂರು ಮುದ್ದಪ್ಪನವರ ಮೂಲಕ ರೂ. 2.

3. ಗೌರಿಬಿದನೂರು ತಾ॥ ಬೇತೂರು ಗ್ರಾ॥ ಮ॥ರಾ॥ ತಿಮ್ಮಪ್ಪನವರ ಮಗಳನ್ನು ಮೈಸೂರು ಮ॥ರಾ॥ ಬಳೆ ಹುಚ್ಚೀರಪ್ಪನವರ ಮಗನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. 3, ಹೆಣ್ಣಿನವರಿಂದ ರೂ. 2 ವೇ॥ ಎಚ್. ಆರ್. ಶಂಭುಲಿಂಗಶಾಸ್ತ್ರಿಗಳ ಮೂಲಕ.

ಮೇಲ್ಕಂಡ ಮೊಬಲಗು ರೂ. 12 ನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

ಜಿ. ಪರಮಶಿವಯ್ಯ, ಅಡ್ವೋಕೇಟ್,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಸೆಕ್ರೆಟರಿ.

ಬೆಂಗಳೂರು ಸಿಟಿ,
ತಾ॥ 10-2-1920.

ಪತ್ರವ್ಯವಹಾರ.

[ಪತ್ರವ್ಯವಹಾರಗಾರರ ಲೇಖನಗಳಲ್ಲಿ ಕಂಡ ಅಭಿಪ್ರಾಯಕ್ಕೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.]

ಮ॥ ಜಿ. ಎಸ್. ಕಬ್ಬೂರಿ ಹಿರೇಮಠ ಇವರಿಗೆ—ನಿಮ್ಮ ಲೇಖನವು ಇದಕ್ಕೆ ಮುಂಚೆಯೇ ಬೇರೆ ಪತ್ರಿಕೆಯಲ್ಲಿ ಮುದ್ರಿತವಾಗಿದೆಯಾದಕಾರಣ ಸ್ಟಾರ್ ಪತ್ರಿಕೆಯಲ್ಲೂ ಅದನ್ನು ಪುನಹ ಪ್ರಕಟಿಸಬೇಕಾದ ಅವಶ್ಯಕತೆಯು ತೋರಲಿಲ್ಲ. [ಪ. ಪ್ರ.]

ತುಮಕೂರು ಶ್ರೀ ಮುರುಘ ಮಠದಲ್ಲಿ ತಾ॥ ೮-೨-೧೯೨೦ನೇ ರಾತ್ರಿ ೮ ಘಂಟೆಗೆ ಸೇರಿದ ಸಭೆಯ ಪ್ರೊಸೀಡಿಂಗ್ಸ್.

ಈ ದಿನದ ಸಭಾಧ್ಯಕ್ಷತೆಯನ್ನು ಮ॥ರಾ॥ ಎಸ್. ಎಲ್. ನಂಜುಂಡಪ್ಪನವರು ಅಂಗೀಕರಿಸಬೇಕೆಂದು ಮ॥ ಜಿ. ಕೆ. ಗುರುಸಂಗಾರಾಧ್ಯರು ಸೂಚಿಸಲು ಮ॥ರಾ॥ ಟಿ. ಗುರುಚೆನ್ನಬಸವಯ್ಯನವರೂ ಮತ್ತು ಮ॥ರಾ॥ ಪ್ರಧಾನ ಅಯ್ಯಣ್ಣನವರೂ ಸಹ ಅನುಮೋದಿಸಿದ್ದರಿಂದ ಸಭಾಧ್ಯಕ್ಷತೆಯನ್ನು ಅಲಂಕರಿಸಿದರು.

ಅನಂತರ ಶ್ರೀಮಲ್ಲಿನಾಥದೇವರು ಸಭಾಮಂಗಳವನ್ನು ಕುರಿತು ಶಿವಸ್ತುತಿಯನ್ನು ಮಾಡಿದರು. ಆ ತರುವಾಯ ಸಭಾಧ್ಯಕ್ಷರು ಉಪನ್ಯಾಸಾರಂಭವನ್ನು ಮಾಡಿ ವೀರಶೈವ ಮತಸ್ಥಾಪನಾಚಾರ್ಯ ಸಿಂಹಾಸನಗಳನ್ನಲಂಕರಿಸಿರುವ ಈಗಿನ ಕೆಲವು ಸ್ವಾಮಿಗಳವರು ಪೂಜ್ಯವರ್ಗದವರಲ್ಲಿ ಹುಟ್ಟಿರುವ ಪರಸ್ಪರ ಭಿನ್ನಭಾವಗಳನ್ನು ಬಿಟ್ಟು ಏಕಮತ್ಯದಿಂದ ನಡೆಯುತ್ತ ಮತರಕ್ಷಣೆಯನ್ನು ನಡೆಸಬೇಕೆಂದು ಈ ಸಭಾದಿಂದಲೂ ದೇಶಮಧ್ಯದ ಎಲ್ಲಾ ಕಡೆಯಿಂದಲೂ ಬಿನ್ನವಿಸಬೇಕಾದ ಅವಶ್ಯಕತೆಯನ್ನು ಕುರಿತು ಸಭಾಸದರಿಗೆ ಚೆನ್ನಾಗಿ ಮನದಟ್ಟಾಗುವಂತೆ ಅಪ್ಪಣೆ ಕೊಡಿಸಿದರು.

ಕಾಶೀನಾಥಶಾಸ್ತ್ರಿಯ ವರ್ತನವನ್ನು ಖಂಡಿಸಿಮಾಡಿ ೧-೨-೨೦ ನೇ ತಾರೀಖು ಸ್ಟಾರ್ ಪತ್ರಿಕೆಯಲ್ಲಿ ಪ್ರಚುರವಾಗಿದ್ದ ಪತ್ರವ್ಯವಹಾರವು ಸಭಾಸದರಿಗೆ ಸಭಾಧ್ಯಕ್ಷರಿಂದ ಓದಿ ತಿಳಿಸಲ್ಪಟ್ಟು ಆ ಪತ್ರವ್ಯವಹಾರವು ಅನುಮೋದಿತವಾಯಿತು.

ತುಮಕೂರಿನ ಮತ್ತು ಸುತ್ತುಮುತ್ತಲ ಪ್ರದೇಶದ ವೀರಶೈವಮತೀಯರ ಧಾರ್ಮಿಕ ಲೌಕಿಕ ಹಿತಕ್ಕೋಸ್ಕರ ಒಂದು ಸಂಘವು ವೀರಶೈವಸೇವಾಸಮಾಜವೆಂಬ ನಾಮಧೇಯದಿಂದ ಸ್ಥಾಪಿಸಲ್ಪಡಬೇಕೆಂಬದಾಗಿಯೂ ಅದಕ್ಕಾಗಿ ೮-೨-೨೦ನೇ ತಾರೀಖು ಭಾನುವಾರ ಸಭಾ ಸೇರಬೇಕೆಂಬದಾಗಿಯೂ ಅಧ್ಯಕ್ಷರೂ ಮ॥ರಾ॥ ಸಿ. ರೇವಣ್ಣನವರು ಸಹ ಸೂಚನೆಕೊಟ್ಟದ್ದು ಮ॥ರಾ॥ ಅಯ್ಯಣ್ಣನವರಿಂದಲೂ ಗುರುಚೆನ್ನಬಸವಯ್ಯನವರಿಂದಲೂ ಅನುಮೋದಿತವಾಯಿತಾದ್ದರಿಂದ ಅಂಗೀಕೃತವಾಯಿತು.

ಶ್ರೀ ಸಿಂಹಾಸನಾಧೀಶ್ವರರಿಗೆ ಬಿನ್ನಹ ಪತ್ರವನ್ನು ಆ ದಿನವೇ ತೀರ್ಮಾನಿಸಿ ಕಳುಹಿಸಿಕೊಡಬೇಕೆಂದೂ 12 ಜನಕ್ಕೆ ಕಡಿಮೆಯಿಲ್ಲದಂತೆ ಹಿತಚಿಂತಕರು ಬದ್ಧಕಂಕಣರಾಗಿ ಸಂಘವನ್ನು ನಡೆಸಬೇಕೆಂದೂ ತೀರ್ಮಾನವಾಯಿತು. ಸಮಾಜದ ಪೋಷಕರು ಮತ್ತು ಮೆಂಬರುಗಳ ಚುನಾವಣೆಯನ್ನು ಆ ದಿನ ನಡೆಸತಕ್ಕದ್ದು.

ಈ ಸಂಗತಿಗಳನ್ನು ಧುರೀಣಾಸಿಗಳಾದ ವೀರಶೈವ ಮಹನೀಯರಿಗೆಲ್ಲಾ ಈ ಸಭಾಸದರು ದಯವಿಟ್ಟು ತಿಳಿಸಿ ಪ್ರೋತ್ಸಾಹಿಸಿ ಸಂಘಕ್ಕೆ ಸೇರಿಸಬೇಕೆಂದು ನಿರ್ಧಾರವಾಯಿತು. ತರುವಾಯ ಏಕಮತ್ಯ ವಿಚಾರದಲ್ಲಿ ಮ॥ರಾ॥ ಟಿ.ಸಿ. ರುದ್ರಣ್ಣನವರು ಶ್ಲಾಘ್ಯವಾದ ಉಪನ್ಯಾಸವಮಾಡಿದರು.

ಅನಂತರ ಸಭಾಧ್ಯಕ್ಷರಿಗೂ ಸಭಾಸದರಿಗೂ ವಂದನೆಗಳು ಸಮರ್ಪಿಸಲ್ಪಟ್ಟು ಜಯನಮಃಪಾರ್ವತೀಪತೇ ಹರಹರ ಮಹಾದೇವ ಎಂಬ ಮಂಗಲ ಘೋಷದಿಂದ ಸಭಾ ವಿರಮಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ವೀರಶೈವ ಪ್ರಾಂತಿಕ ಸಭೆ.

ಅಜ್ಜಂಪುರದ ಪೋಸ್ಟಿಗೆ ಸೇರಿದ ಬಗ್ಗೊಳ್ಳಿ ಗ್ರಾಮದಲ್ಲಿ ಜನವರಿ ತಾ॥ ೨೫, ೨೬ರಲ್ಲು ಬೀರೂರು ಮ॥ರಾ॥ ಎಚ್. ಯಂ. ಶಿವಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಪ್ರಾಂತಿಕ ಸಭೆ ಕೂಡಿಸಲು ನಿರ್ಧರಿಸಿರುವರೆಂಬ ಸಂಗತಿಯು ಜನವರಿ ತಾ॥ ೧೮ನೆ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಯಾರೋ ಒಬ್ಬರು ಪ್ರಕಟನ ಪಡಿಸಿರುತ್ತಾರೆ. ಅದರಂತೆ ತಾ॥ ೨೫, ೨೬ರಲ್ಲಿ ಸಭೆಯು ನಡೆದಂತೆ ಕಾಣುವದಿಲ್ಲ. ಮುಂದೆ ಯಾವ ತಿಂಗಳಲ್ಲಿಟ್ಟುಕೊಂಡಿದ್ದಾರೆಂಬ ವಿಚಾರವು ಸಹ ತಿಳಿಯಲಿಲ್ಲ. ಹಾಗೇನಾದರೂ ಮುಂದೆ ನಡೆಯುವ ಸಭೆಯು ಹಿರಿಯೂರು ತಾಲ್ಲೂಕಿನಲ್ಲಿ ನಡೆದಂತೆ ಇದೀ ತಾಲ್ಲೂಕಿಗೆ ಸಂಬಂಧಪಟ್ಟದ್ದೋ ಅಥವ ಬಗ್ಗೊಳ್ಳಿ ಗ್ರಾಮವೊಂದಕ್ಕೆ ಸಂಬಂಧಪಟ್ಟದ್ದೋ ಗೊತ್ತಾಗಲಿಲ್ಲ. ಮುಂದಿನ ತಿಂಗಳಾದರೂ ಪ್ರಾಂತಿಕ ಸಭಾಕಾರ್ಯವು ಅಲ್ಲಿ ನಡೆದರೆ ಸಂತೋಷವೇ ಸರಿ. ಇಲ್ಲವಾದರೆ ಅನ್ಯರು ಮಾಡುವುದಕ್ಕಾದರೂ ಅವಕಾಶವಿರುವಂತೆ ಮಾಡುವುದು ಉತ್ತಮ. ಸಮಾಜದ ಈ ಮಹತ್ಕಾರ್ಯದ ವಿಷಯದಲ್ಲಿ ಬಗ್ಗೊಳ್ಳಿ ಗ್ರಾಮದ ಕೆಲವು ವೀರಶೈವ ಜನಗಳ ಮೇಲೆ ವಿಶೇಷ ಜವಾಬ್ದಾರಿಯಿರುವುದರಿಂದ ಅವರು ಬರುವ ವಾರದಲ್ಲಿಯಾದರೂ ತಮ್ಮ ಉದ್ದೇಶಗಳನ್ನು ಪ್ರಕಟಿಸಬೇಕಾಗಿ ಸೂಚನೆ. ಇನ್ನು ಅಧ್ಯಕ್ಷರ ವಿಚಾರದಲ್ಲಿ ಮ॥ರಾ॥ ಶಿವಲಿಂಗಪ್ಪಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸುವುದಕ್ಕೆ ಆ ಪ್ರಾಂತ್ಯದ ವೀರಶೈವ ಜನಗಳ ಅಭಿಪ್ರಾಯವನ್ನು ಪಡೆದಿದ್ದಾರೆಯೋ ಹೇಗೆ? ಸದರಿ ಶಿವಲಿಂಗಪ್ಪಯ್ಯನವರಿಂದ ಈ ಪ್ರಾಂತಿಕ ಸಭೆಗೆ ಅಧ್ಯಕ್ಷರಾಗಲು ಒಪ್ಪಿಗೆಯನ್ನು ಪಡೆದು ಸಭೆಯನ್ನು ನಡೆಯಿಸಲು ನಿರ್ಧರಿಸಿರುವರೇ ಹೇಗೆ? ನಿರ್ಧರಿಸದೆ ಇದ್ದ ಪಕ್ಷದಲ್ಲಿ ಅದು ಪ್ರಾಂತಿಕ ಸಭೆಯೆಂಬ ನಾಮವನ್ನು ಸಾರ್ಥಕಗೊಳಿಸಿದಂತಾಗುವುದಿಲ್ಲ. ಇದಲ್ಲದೆ ಬಗ್ಗೊಳ್ಳಿ ಗ್ರಾಮವಾದರೊ ತರೀಕೆರೆ ತಾಲ್ಲೂಕಿಗೆ ಸಂಬಂಧಪಟ್ಟಿರುವುದರಿಂದ ಆ ತಾಲ್ಲೂಕಿನ ವೀರಶೈವ ಮಹಾಜನಗಳ್ಯಾವತ್ತರ ಅಭಿಪ್ರಾಯವನ್ನೂ ತಿಳಿದು ಅಧ್ಯಕ್ಷರ ಆರಿಸುವಿಕೆ ಮೊದಲಾದದ್ದನ್ನೆಲ್ಲಾ ನಡೆಸಿಕೊಂಡುದಾದರೆ ಮುಂದೆ ನಡೆಯುವ ಪ್ರಾಂತಿಕ ಸಭೆಯು ನಿರ್ವಿಘ್ನವಾಗಿ ನಡೆಯುವುದು.

ಆದ್ದರಿಂದ ನಮ್ಮ ಪ್ರಾಂತ್ಯದ ವೀರಶೈವ ಜನಗಳಿಗೆ ಇನ್ನೂ ಹೆಚ್ಚಾಗಿ ಮತಸೇವೆಮಾಡಬೇಕೆಂಬ ಅಪೇಕ್ಷೆಯು ಸಹ ಉಂಟಾಗುವುದು, ಮತ್ತು ವೀರಶೈವ ಮತಕ್ಕೆ ಸೇರಿದ ಹೇಮಾರೆಡ್ಡಿ ಕುಲದವರ ಅಭ್ಯುನ್ನತಿಯನ್ನು ಕುರಿತು ಈ ಪ್ರಾಂತಿಕ ಸಭೆಯು ನಡೆಯುವುದೆಂದು ಸ್ಟಾರ್ ಪತ್ರಿಕೆಯಿಂದ ತಿಳಿದಿರುವುದು ಸಂತೋಷಕರವಾದದ್ದಾದರೂ ಸದರಿ ಬಗ್ಗೊಳ್ಳಿಯಲ್ಲಿ ಹೇಮಾರೆಡ್ಡಿ ವಂಶಸ್ಥರು ಒಪ್ಪುವಂತೆ ಪ್ರಾಂತಿಕ ಸಭೆಯನ್ನು ಮಾಡಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿದ್ದರೂ ಅದನ್ನೆಲ್ಲಾ ನಿರೋಧಿಸಿ ಅವರ್ಯಾವತ್ತರ ಒಪ್ಪಿಗೆಯನ್ನೂ ಪಡೆಯದೆ ಏಕಪಕ್ಷದಿಂದಲೇ ಅನುದಾರಮತಿಗಳ ಪ್ರೇರಣೆಯಿಂದ ಟಕ್ಕಿ ಪ್ರತಿಟಕ್ಕಿಗಳನ್ನು ಮಾಡಿಕೊಂಡು ಪ್ರಾಂತಿಕ ಸಭೆ ನಡೆಯುವುದಾಗಿದೆಯೆಂದು ಕೇಳುತ್ತೇವೆ.

ಹೀಗಾಗುವುದರಿಂದ ಮತದಲ್ಲಿ ವಿದ್ಯೆ, ವಿವೇಕ, ಆಚಾರ, ನೀತಿ, ಸಂಪತ್ತು, ಐಕಮತ್ಯ ಇತ್ಯಾದಿಗಳೆಲ್ಲಾ ಅಭಿವೃದ್ಧಿಗೊಳ್ಳಲಿಕ್ಕೆ ಅವಕಾಶವು ಎಂದಿಗೂ ಉಂಟಾಗಲಾರದು. ಆದುದರಿಂದ ಮತಾಭಿಮಾನಿಗಳು ಈ ವಿಷಯದಲ್ಲಿ ಪೂರ್ಣ ವಿಚಾರಮಾಡಿ ವ್ಯಥಾ ತೊಂದರೆಯೆಂದು ತಿಳಿದುಕೊಳ್ಳದೆ ಉದಾಸೀನಮಾಡದೆ ಕಷ್ಟವಾದರೂ ಚಿಂತೆಯಿಲ್ಲ ಎಷ್ಟು ಕೆಲಸಗಳಿದ್ದರೂ ಬಿಟ್ಟು ಇದು ಮುಖ್ಯವಾದ ಕೆಲಸವೆಂದು ಭಾವಿಸಿ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುವುದು ಉತ್ತಮವೆಂಬ ಆರ್ಯೋಕ್ತಿಯಂತೆ ನಮ್ಮ ದೃಢಚಿತ್ತತೆಯನ್ನೂ ಸಂಕಲ್ಪವನ್ನೂ ಪ್ರಕಾಶಗೊಳಿಸತಕ್ಕದ್ದು ಯುಕ್ತವು.

ಚೆನ್ನಾಪುರದ ನಿವಾಸಿ.

ಶಿವಶಂಕರಪ್ಪಾ ಜೇರಿಗೆ

ಮರ್ಚಂಟ, ಕಮಿಶನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ವಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗೆಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲೆಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ವಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 2

ಪ್ರಾಮಾಣಿಕ ಜಂಗೀ ಕಮಿಶನ್ ಏಜನ್ಸಿ

ಈ ವರುಷ ಇಲ್ಲಿ ಬಿಳಿ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಶನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

5 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 30

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯಿ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಮ್ಮ ಹಿನಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷರ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
21 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ 18

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ನೂರವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ. ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೇಶೂಲಿ, ನಡುಶೂಲಿ, ವಾರಶೂಲಿ, ರೇಷ್ಮೆಜಿಡ್ಡು, ಗುದ್ದವ್ರಣಬೆನೆ, ಹುರುಕುಳಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ವ್ಯಾತೊಂಬೇಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಜೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಜೋತ್ತರ ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಫೆಬ್ರುವರಿ ತಾ॥ ೧೫ ರಿಂದ ೧೯೨೦ನೆಯ ಫೆಬ್ರವರಿ ತಾ॥ ೨೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾಘ ಬ॥ ಏಕಾದಶಿಯಿಂದ ಫಾಲ್ಗುಣ ಶುದ್ಧ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
15	ಭಾನು	ಏಕಾ	39-11	ಮೂಲ	30-4	4
16	ಸೋಮ	ದ್ವಾ	43-52	ಪೂಷಾ	36-3	5
17	[1]ಮಂಗಳ	ತ್ರಯೋ	47-40	ಉಷಾ	41-6	6
18	[2]ಬುಧ	ಚತು	50-18	ಶ್ರವ	45-8	7
19	[3]ಗುರು	ಅಮಾ	51-34	ಧನಿ	47-57	8
20	ಶುಕ್ರ	ಪಾಡ್ಯ	50-25	ಶತ	49-28	9
21	ಶನಿ	ಬಿದಿ	50-1	ಪೂಭಾ	49-43	10

(1) ಪ್ರದೋಷ. (2) ಮಹಾಶಿವರಾತ್ರಿ. (3) ಸರ್ವತ್ರಾಮಾವಾಸ್ಯ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀಕೃಷ್ಣ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲೋತ್ಕರ್ಷಾ | ಘನಪಥಕೃತಾವತಾರಾ ಸಜ್ಜನಹೃತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಮುತ್ತಮಕಲಾಶೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂ ವಲಂ ॥
ಸೀಮಾತೀತಯಶಃಪ್ರತಾಪವಿಭವಂ ಸದ್ಭಕ್ತಮಾಲಾಕುಲಂ | ಪ್ರೇಮಂ ಚಿತ್ರಕಿಯಂ ಗದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಫೆಬ್ರುವರಿ ತಾರೀಖು ೨೨ ನೆಯ ಭಾನುವಾರ. (ಸಂಚಿಕೆ ೮

MYSORE GOVERNMENTVE ADRTISEMENTS.

29

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಶನ್ ಏಜನ್ಸಿ

ಈ ವರುಷ ಇಲ್ಲಿ ಬಿಳಿ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಶನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

6 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 31

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯಿ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦
೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೇರಿಗೆ

ಮರ್ಚಂಟ, ಕಮಿಶನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ವಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗೆಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲೆಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ವಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 3

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಮ್ಮ ಹಿನಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷರ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
22 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0, 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
೪ ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 10

ಪುರುಷರ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

15

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಮಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆಟ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇನೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಲಗ್ನದ ಫಂಡು.

1. ತುಮಕೂರಿನಲ್ಲಿರುವ ಗೊಲ್ಲಹಳ್ಳಿ ಮ॥ರಾ॥ ಮಂಡಿ ರುದ್ರಪ್ಪನವರಿಂದ ಅವರ ಮಗಳ ಲಗ್ನದಲ್ಲಿ ರೂ. 5.

2. ಆನೇಕಲ್ ತಾ॥ ದೊಮ್ಮಸಂದ್ರದಲ್ಲಿರುವ ಚಿಲ್ಲರೆ ಅಂಗಡಿ ಮ॥ರಾ॥ ಚಿಕ್ಕಲಿಂಗಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಮ॥ರಾ॥ ಬೆಂಗಳೂರು ಮುದ್ದಪ್ಪನವರ ಮೂಲಕ ರೂ. 2.

3. ಗೌರಿಬಿದನೂರು ತಾ॥ ಬೇತೂರು ಗ್ರಾ॥ ಮ॥ರಾ॥ ತಿಮ್ಮಪ್ಪನವರ ಮಗಳನ್ನು ಮೈಸೂರು ಮ॥ರಾ॥ ಬಳೆ ಹುಚ್ಚೀರಪ್ಪನವರ ಮಗನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. 3, ಹೆಣ್ಣಿನವರಿಂದ ರೂ. 2 ವೇ॥ ಎಚ್. ಆರ್. ಕರಿಬಸವಶಾಸ್ತ್ರಿಗಳ ಮೂಲಕ.

ಮೇಲ್ಕಂಡ ಮೊಬಲಗು ರೂ. 12 ನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

ಜಿ. ಪರಮಶಿವಯ್ಯ, ಅಡ್ವೋಕೇಟ್,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಸೆಕ್ರೆಟರಿ.

ಬೆಂಗಳೂರು ಸಿಟಿ,
ತಾ॥ 10-2-1920.

ಪತ್ರವ್ಯವಹಾರ.

[ಪತ್ರವ್ಯವಹಾರರ ಲೇಖನಗಳಲ್ಲಿ ಕಂಡ ಅಭಿಪ್ರಾಯಕ್ಕೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.]

ಮ॥ ಜಿ. ಎಸ್. ಕಸ್ತೂರಿ ಹಿರೇಮಠ ಇವರಿಗೆ—ನಿಮ್ಮ ಲೇಖನವು ಇದಕ್ಕೆ ಮುಂಚೆಯೇ ಬೇರೆ ಪತ್ರಿಕೆಯಲ್ಲಿ ಮುದ್ರಿತವಾಗಿದೆಯಾದಕಾರಣ ಸ್ಟಾರ್ ಪತ್ರಿಕೆಯಲ್ಲೂ ಅದನ್ನು ಪುನಃ ಪ್ರಕಟಿಸಬೇಕಾದ ಅವಶ್ಯಕತೆಯು ತೋರಲಿಲ್ಲ. [ಪ. ಪ್ರ.]

ತುಮಕೂರು ಶ್ರೀ ಮುರುಘ ಮಠದಲ್ಲಿ ತಾ॥ ೮-೨-೧೯೨೦ನೇ ರಾತ್ರಿ ೮ ಘಂಟೆಗೆ ಸೇರಿದ ಸಭೆಯ ಪ್ರೊಸೀಡಿಂಗ್ಸ್.

ಈ ದಿನದ ಸಭಾಧ್ಯಕ್ಷತೆಯನ್ನು ಮ॥ರಾ॥ ಎಸ್. ಎಲ್. ನಂಜುಂಡಪ್ಪನವರು ಅಂಗೀಕರಿಸಬೇಕೆಂದು ಮ॥ ಜಿ. ಕೆ. ಗುರುಸಂಗಾರ್ಯನು ಸೂಚಿಸಲು ಮ॥ರಾ॥ ಟಿ. ಗುರುಚೆನ್ನಬಸವಯ್ಯನವರೂ ಮತ್ತು ಮ॥ರಾ॥ ಪ್ರಧಾನಿ ಅಯ್ಯಣ್ಣನವರೂ ಸಹ ಅನುಮೋದಿಸಿದ್ದರಿಂದ ಸಭಾಧ್ಯಕ್ಷತೆಯನ್ನು ಅಲಂಕರಿಸಿದರು.

ಅನಂತರ ಶ್ರೀಮಲ್ಲಿನಾಥದೇವರು ಸಭಾಮಂಗಲವನ್ನು ಕುರಿತು ಶಿವಸ್ತುತಿಯನ್ನು ಮಾಡಿದರು. ಆ ತರುವಾಯ ಸಭಾಧ್ಯಕ್ಷರು ಉಪನ್ಯಾಸಾರಂಭವನ್ನು ಮಾಡಿ ವೀರಶೈವ ಮತಸ್ಥಾಪನಾಚಾರ್ಯ ಸಿಂಹಾಸನಗಳನ್ನಲಂಕರಿಸಿರುವ ಈಗಿನ ಕೆಲವು ಸ್ವಾಮಿಗಳವರು ಪೂಜ್ಯ ವರ್ಗದವರಲ್ಲಿ ಹುಟ್ಟಿರುವ ಪರಸ್ಪರ ಭಿನ್ನಭಾವಗಳನ್ನು ಬಿಟ್ಟು ಏಕಮತ್ಯದಿಂದ ನಡೆಯುತ್ತ ಮತರಕ್ಷಣೆಯನ್ನು ನಡೆಸಬೇಕೆಂದು ಈ ಸಭೆಯಿಂದಲೂ ದೇಶಮಧ್ಯದ ಎಲ್ಲಾ ಕಡೆಯಿಂದಲೂ ಬಿನ್ನವಿಸಬೇಕಾದ ಅವಶ್ಯಕತೆಯನ್ನು ಕುರಿತು ಸಭಾಸದರಿಗೆ ಚೆನ್ನಾಗಿ ಮನದಟ್ಟಾಗುವಂತೆ ಅಪ್ಪಣೆ ಕೊಡಿಸಿದರು.

ಕಾಶೀನಾಥಶಾಸ್ತ್ರಿಯ ವರ್ತನವನ್ನು ಖಂಡನೆಮಾಡಿ ೧-೨-೨೦ ನೇ ತಾರೀಖು ಸ್ಟಾರ್ ಪತ್ರಿಕೆಯಲ್ಲಿ ಪ್ರಚುರವಾಗಿದ್ದ ಪತ್ರವ್ಯವಹಾರವು ಸಭಾಸದರಿಗೆ ಸಭಾಧ್ಯಕ್ಷರಿಂದ ಓದಿ ತಿಳಿಸಲ್ಪಟ್ಟು ಆ ಪತ್ರವ್ಯವಹಾರವು ಅನುಮೋದಿತವಾಯಿತು.

ತುಮಕೂರಿನ ಮತ್ತು ಸುತ್ತುಮುತ್ತಲ ಪ್ರದೇಶದ ವೀರಶೈವಮತೀಯರ ಧಾರ್ಮಿಕ ಲೌಕಿಕ ಹಿತಕ್ಕೋಸ್ಕರ ಒಂದು ಸಂಘವು ವೀರಶೈವ ಸೇವಾ ಸಮಾಜವೆಂಬ ನಾಮಧೇಯದಿಂದ ಸ್ಥಾಪಿಸಲ್ಪಡಬೇಕೆಂಬದಾಗಿಯೂ ಅದಕ್ಕಾಗಿ ೮-೨-೨೦ನೇ ತಾರೀಖು ಭಾನುವಾರ ಸಭಾ ಸೇರಬೇಕೆಂಬದಾಗಿಯೂ ಅಧ್ಯಕ್ಷರೂ ಮ॥ರಾ॥ ಸಿ. ರೇವಣ್ಣನವರು ಸಹ ಸೂಚನೆಕೊಟ್ಟದ್ದು ಮ॥ರಾ॥ ಅಯ್ಯಣ್ಣನವರಿಂದಲೂ ಗುರುಚೆನ್ನಬಸವಯ್ಯನವರಿಂದಲೂ ಅನುಮೋದಿತವಾಯಿತಾದ್ದರಿಂದ ಅಂಗೀಕೃತವಾಯಿತು.

ಶ್ರೀ ಸಿಂಹಾಸನಾಧೀಶ್ವರರಿಗೆ ಬಿನ್ನಹ ಪತ್ರವನ್ನು ಆ ದಿನವೇ ತೀರ್ಮಾನಿಸಿ ಕಳುಹಿಸಿಕೊಡಬೇಕೆಂದೂ 12 ಜನಕ್ಕೆ ಕಮ್ಮಿಯಿಲ್ಲದಂತೆ ಹಿತಚಿಂತಕರು ಬದ್ಧಕಂಕಣರಾಗಿ ಸಂಘವನ್ನು ನಡೆಸಬೇಕೆಂದೂ ತೀರ್ಮಾನವಾಯಿತು. ಸಮಾಜದ ಪೋಷಕರು ಮತ್ತು ಮೆಂಬರುಗಳ ಚುನಾವಣೆಯನ್ನು ಆ ದಿನ ನಡೆಸತಕ್ಕದ್ದು.

ಈ ಸಂಗತಿಗಳನ್ನು ಪುರನಿವಾಸಿಗಳಾದ ವೀರಶೈವ ಮಹನೀಯರುಗಳೆಲ್ಲಾ ಈ ಸಭಾಸದರು ದಯವಿಟ್ಟು ತಿಳಿಸಿ ಪ್ರೋತ್ಸಾಹಿಸಿ ಸಂಘಕ್ಕೆ ಸೇರಿಸಬೇಕೆಂದು ನಿರ್ಧರವಾಯಿತು. ತರುವಾಯ ಏಕಮತ್ಯ ವಿಚಾರದಲ್ಲಿ ಮ॥ರಾ॥ ಟಿ.ಸಿ. ರುದ್ರಣ್ಣನವರು ತಾತ್ಪರ್ಯವಾದ ಉಪನ್ಯಾಸಮಾಡಿದರು.

ಅನಂತರ ಸಭಾಧ್ಯಕ್ಷರಿಗೂ ಸಭಾಸದರಿಗೂ ವಂದನೆಗಳು ಸಮರ್ಪಿಸಲ್ಪಟ್ಟು ಜಯನಮಃಪಾರ್ವತೀಪತೇ ಹರಹರ ಮಹಾದೇವ ಎಂಬ ಮಂಗಲಘೋಷದಿಂದ ಸಭಾ ವಿರಮಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ವೀರಶೈವ ಪ್ರಾಂತಿಕ ಸಭೆ.

ಅಜ್ಜಂಪುರದ ಪೋಸ್ಟಿಗೆ ಸೇರಿದ ಬಗ್ಗೊಳ್ಳಿ ಗ್ರಾಮದಲ್ಲಿ ಜನವರಿ ತಾ॥ ೨೫, ೨೬ರಲ್ಲು ಬೀರೂರು ಮ॥ರಾ॥ ಎಚ್. ಯಂ. ಶಿವಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಪ್ರಾಂತಿಕ ಸಭೆ ಕೂಡಿಸಲು ನಿರ್ಧರಿಸಿರುವರೆಂಬ ಸಂಗತಿಯು ಜನವರಿ ತಾ॥ ೧೮ನೆ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಯಾರೋ ಒಬ್ಬರು ಪ್ರಕಟನ ಪಡಿಸಿರುತ್ತಾರೆ. ಅದರಂತೆ ತಾ॥ ೨೫, ೨೬ರಲ್ಲಿ ಸಭೆಯು ನಡೆದಂತೆ ಕಾಣುವುದಿಲ್ಲ. ಮುಂದೆ ಯಾವ ತಿಂಗಳಲ್ಲಿಟ್ಟುಕೊಂಡಿದ್ದಾರೆಂಬ ವಿಚಾರವು ಸಹ ತಿಳಿಯಲಿಲ್ಲ. ಹಾಗೇನಾದರೂ ಮುಂದೆ ನಡೆಯುವ ಸಭೆಯು ಹಿರಿಯೂರು ತಾಲ್ಲೂಕಿನಲ್ಲಿ ನಡೆದಂತೆ ಇದೀ ತಾಲ್ಲೂಕಿಗೆ ಸಂಬಂಧಪಟ್ಟದ್ದೋ ಅಥವ ಬಗ್ಗೊಳ್ಳಿ ಗ್ರಾಮವೊಂದಕ್ಕೆ ಸಂಬಂಧಪಟ್ಟದ್ದೋ ಗೊತ್ತಾಗಲಿಲ್ಲ. ಮುಂದಿನ ತಿಂಗಳಾದರೂ ಪ್ರಾಂತಿಕ ಸಭಾಕಾರ್ಯವು ಅಲ್ಲಿ ನಡದರೆ ಸಂತೋಷವೇ ಸರಿ. ಇಲ್ಲವಾದರೆ ಅನ್ಯರು ಮಾಡುವುದಕ್ಕಾದರೂ ಅವಕಾಶವಿರುವಂತೆ ಮಾಡುವುದು ಉತ್ತಮ. ಸಮಾಜದ ಈ ಮಹತ್ಕಾರ್ಯದ ವಿಷಯದಲ್ಲಿ ಬಗ್ಗೊಳ್ಳಿ ಗ್ರಾಮದ ಕೆಲವು ವೀರಶೈವ ಜನಗಳ ಮೇಲೆ ವಿಶೇಷ ಜವಾಬ್ದಾರಿಯಿರುವುದರಿಂದ ಅವರು ಬರುವ ವಾರದಲ್ಲಿಯಾದರೂ ತಮ್ಮ ಉದ್ದೇಶಗಳನ್ನು ಪ್ರಕಟಿಸಬೇಕಾಗಿ ಸೂಚನೆ. ಇನ್ನು ಅಧ್ಯಕ್ಷರ ವಿಚಾರದಲ್ಲಿ ಮ॥ರಾ॥ ಶಿವಲಿಂಗಪ್ಪಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸುವುದಕ್ಕೆ ಆ ಪ್ರಾಂತ್ಯದ ವೀರಶೈವ ಜನಗಳ ಅಭಿಪ್ರಾಯವನ್ನು ಪಡೆದಿದ್ದಾರೆಯೋ ಹೇಗೆ? ಸದರಿ ಶಿವಲಿಂಗಪ್ಪಯ್ಯನವರಿಂದ ಈ ಪ್ರಾಂತಿಕ ಸಭೆಗೆ ಅಧ್ಯಕ್ಷರಾಗಲು ಒಪ್ಪಿಗೆಯನ್ನು ಪಡೆದು ಸಭೆಯನ್ನು ನಡೆಯಿಸಲು ನಿರ್ಧರಿಸಿರುವರೇ ಹೇಗೆ? ನಿರ್ಧರಿಸದೆ ಇದ್ದ ಪಕ್ಷದಲ್ಲಿ ಅದು ಪ್ರಾಂತಿಕ ಸಭೆಯೆಂಬ ನಾಮವನ್ನು ಸಾರ್ಥಕಗೊಳಿಸಿದಂತಾಗುವುದಿಲ್ಲ. ಇದಲ್ಲದೆ ಬಗ್ಗೊಳ್ಳಿ ಗ್ರಾಮವಾದರೋ ತರೀಕೆರೆ ತಾಲ್ಲೂಕಿಗೆ ಸಂಬಂಧಪಟ್ಟಿರುವುದರಿಂದ ಆ ತಾಲ್ಲೂಕಿನ ವೀರಶೈವ ಮಹಾಜನಗಳ್ಯಾವತ್ತರ ಅಭಿಪ್ರಾಯವನ್ನೂ ತಿಳಿದು ಅಧ್ಯಕ್ಷರ ಆರಿಸುವಿಕೆ ಮೊದಲಾದದ್ದನ್ನೆಲ್ಲಾ ನಡೆಸಿಕೊಂಡುದಾದರೆ ಮುಂದೆ ನಡೆಯುವ ಪ್ರಾಂತಿಕ ಸಭೆಯು ನಿರ್ವಿಘ್ನವಾಗಿ ನಡೆಯುವುದು.

ಆದ್ದರಿಂದ ನಮ್ಮ ಪ್ರಾಂತ್ಯದ ವೀರಶೈವ ಜನಗಳಿಗೆ ಇನ್ನೂ ಹೆಚ್ಚಾಗಿ ಮತಸೇವೆಮಾಡಬೇಕೆಂಬ ಅಪೇಕ್ಷೆಯು ಸಹ ಉಂಟಾಗುವುದು, ಮತ್ತು ವೀರಶೈವ ಮತಕ್ಕೆ ಸೇರಿದ ಹೇಮಾರಡ್ಡಿ ಕುಲದವರ ಅಭ್ಯುನ್ನತಿಯನ್ನು ಕುರಿತು ಈ ಪ್ರಾಂತಿಕ ಸಭೆಯು ನಡೆಯುವುದೆಂದು ಸ್ಟಾರ್ ಪತ್ರಿಕೆಯಿಂದ ತಿಳಿದಿರುವುದು ಸಂತೋಷಕರವಾದದ್ದಾದರೂ ಸದರಿ ಬಗ್ಗೊಳ್ಳಿಯಲ್ಲಿ ಹೇಮಾರಡ್ಡಿ ತಂಟಸ್ಥರು ಒಪ್ಪುವಂತೆ ಪ್ರಾಂತಿಕ ಸಭೆಯನ್ನು ಮಾಡಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿದ್ದರೂ ಅದನ್ನೆಲ್ಲಾ ನಿರೋಧಿಸಿ ಅವರ್ಯಾವತ್ತರ ಒಪ್ಪಿಗೆಯನ್ನೂ ಪಡೆಯದೆ ಏಕಪಕ್ಷದಿಂದಲೇ ಅನುದಾರಮತಿಗಳ ಪ್ರೇರಣೆಯಿಂದ ಶಕ್ತಿ ಪ್ರತಿಶಕ್ತಿಗಳನ್ನು ಮಾಡಿಕೊಂಡು ಪ್ರಾಂತಿಕ ಸಭೆ ನಡೆಯುವುದಾಗಿದೆಯೆಂದು ಕೇಳುತ್ತೇವೆ.

ಹೀಗಾಗುವುದರಿಂದ ಮತದಲ್ಲಿ ವಿದ್ಯೆ, ವಿವೇಕ, ಆಚಾರ, ನೀತಿ, ಸಂಪತ್ತು, ಏಕಮತ್ಯ ಇತ್ಯಾದಿಗಳೆಲ್ಲಾ ಅಭಿವೃದ್ಧಿಗೊಳ್ಳಲಿಕ್ಕೆ ಅವಕಾಶವು ಎಂದಿಗೂ ಉಂಟಾಗಲಾರದು. ಆದುದರಿಂದ ಮತಾಭಿಮಾನಿಗಳು ಈ ವಿಷಯದಲ್ಲಿ ಪೂರ್ಣ ವಿಚಾರಮಾಡಿ ವೃಥಾ ತೊಂದರೆಯೆಂದು ತಿಳಿದುಕೊಳ್ಳದೆ ಉದಾಸೀನಮಾಡದೆ ಕಷ್ಟವಾದರೂ ಚಿಂತೆಯಿಲ್ಲ ಎಷ್ಟು ಕೆಲಸಗಳಿದ್ದರೂ ಬಿಟ್ಟು ಇದು ಮುಖ್ಯವಾದ ಕೆಲಸವೆಂದು ಭಾವಿಸಿ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುವುದು ಉತ್ತಮವೆಂಬ ಆರ್ಯೋಕ್ತಿಯಂತೆ ನಮ್ಮ ದೃಢಚಿತ್ತತೆಯನ್ನೂ ಸಂಕಲ್ಪವನ್ನೂ ಪ್ರಕಾಶಗೊಳಿಸತಕ್ಕದ್ದು ಯುಕ್ತವು.

ಚೆನ್ನಾಪುರದ ನಿವಾಸಿ.

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಒಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗೆಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 2

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬಳಿ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವವು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

5 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್ ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 30

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
21 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ 18

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೦೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯೆಂಜಾಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ. ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಸ್ಮಿಜಡ್ಡು, ಗುದದ್ವಾರಬೆನೆ, ಹುರುಕುಳಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರಬಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಕೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ. ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇರದ ಜವಾಬ ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಫೆಬ್ರವರಿ ತಾ॥ ೧೫ ರಿಂದ ೧೯೨೦ನೆಯ ಫೆಬ್ರವರಿ ತಾ॥ ೨೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಮಾಘ ಬ॥ ಏಕಾದಶಿಯಿಂದ ಫಾಲ್ಗುಣ ಶುದ್ಧ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
15	ಭಾನು	ಏಕಾ	39-11	ಮೂಲ	30-4	4
16	ಸೋಮ	ದ್ವಾ	43-52	ಪೂಷಾ	36-3	5
17	[1]ಮಂಗಳ	ತ್ರಯೋ	47-40	ಉಷಾ	41-6	6
18	[2]ಬುಧ	ಚತು	50-18	ಶ್ರವ	45-8	7
19	[3]ಗುರು	ಅಮಾ	51-34	ಧನಿ	47-57	8
20	ಶುಕ್ರ	ಪಾಡ್ಯ	50-25	ಶತ	49-28	9
21	ಶನಿ	ಬಿದಿ	50-1	ಪೂಭಾ	49-43	10

(1) ಪ್ರದೋಷ. (2) ಮಹಾಶಿವರಾತ್ರಿ. (3) ಸರ್ವತ್ರಾಮಾವಾಸ್ಯ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಶರಮಧಿಗತರಾಜಮಂಡಲೋತ್ಕರ್ಷಾ | ಘನಪಥಕೃತಾವತಾರಾ ಸತ್ಸಜ್ಜನಕೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಮಲಂ ||
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಲೆಯಂಗದಾಪ್ತರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩ ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಫೆಬ್ರುವರಿ ತಾರೀಖು ೨೨ ನೆಯ ಭಾನುವಾರ. (ಸಂಚಿಕೆ ೮

MYSORE GOVERNMENTVE ADRTISEMENTS.

29

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬಳಿ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವವು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

6 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್ ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 31

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಒಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗೆಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 3

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
22 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣಬಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
೪ ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 10

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

15

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇನ್ನೀ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೩೦ನೆಯ ಇಸವಿ ಫೆಬ್ರವರಿ ತಾ|| ೨೩ನೆಯ ಭಾನುವಾರ.

ಪೂಜ್ಯವರ್ಗದಲ್ಲಿ ಕಲಹೋತ್ಪಾದನೆ.

(ಭಾಗ ೨.)

ಈಗ ಪೂಜ್ಯವರ್ಗದ ಕಡೆಯಿಂದ ಸಮಾಜಕ್ಕೆ ಮುಖ್ಯವಾಗಿ ಆಗಬೇಕಾದುದು ಅವರೊಳಗಣ ಉಚ್ಚನೀಚ ಸಿದ್ಧಾಂತವಲ್ಲ. ಮತ್ತೇನೆಂದರೆ—ಅವರುಗಳ ಮೂಲಕವಾಗಿ ಮತಕ್ಕೆ ಉಂಟಾಗಬೇಕಾದ ಇಹಪರ ಶ್ರೇಯೋಲಾಭವೇ ಮುಖ್ಯವಾಗಿರುತ್ತದೆ. ಯಾವ ಸಮಾಜವಾದರೂ ಐಹಿಕವನ್ನು ಅಲಕ್ಷಿಸಿ ಪಾರಲೌಕಿಕವನ್ನೇ ನಂಬಿಕೊಂಡರೆ ಪ್ರಪಂಚದಲ್ಲಿ ಅದಕ್ಕೆ ತಕ್ಕ ಮನ್ನಣೆಯಿರಲಾರದು. ಅಲ್ಲದೆ ಪ್ರತ್ಯಕ್ಷವಾದ ಐಹಿಕಶ್ರೇಯಸ್ಸನ್ನೇ ಸಾಧಿಸಲಾರದವರು ಪರೋಕ್ಷವಾದ ಪಾರಲೌಕಿಕ ಶ್ರೇಯಸ್ಸನ್ನು ಹೇಗೆತಾನೇ ಸಾಧಿಸಬಲ್ಲರು? ಆದುಕಾರಣ ಐಹಿಕಶ್ರೇಯಸ್ಸು ಉಪೇಕ್ಷಿಸತಕ್ಕುದಲ್ಲ. ಆದರಂತೆಯೇ ಐಹಿಕದಲ್ಲೇ ಮುಳುಗಿ ಪರಮಾರ್ಥವನ್ನು ಉಪೇಕ್ಷಿಸಲೂ ಆಗುವುದಿಲ್ಲ. ವಿಚಾರಮಾಡಿ ನೋಡಿದರೆ ನಮ್ಮ ಸಮಾಜವು ನಮ್ಮ ಭರತಖಂಡದಲ್ಲಿ ಸಂಖ್ಯಾಮಾನದಿಂದ ಅಷ್ಟೇನೂ ಸಣ್ಣದಾಗಿಲ್ಲ. ಇದರ ಅಧ್ಯಂತ ಜನ ಸಂಖ್ಯೆಯು ೪೦ ಲಕ್ಷಕ್ಕಿಂತ ಕಡಿಮೆಯಿರಲಾರದು. ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಉಳಿದ ವ್ಯಾಪ್ತಿಗಳಲ್ಲಿ ಪಾರಸಿಯರೇ ಮೊದಲಾದವರಂತೆಯಾದರೂ ನಮ್ಮ ಸಮಾಜವು ಇರುವುದೆ ಎಂದರೆ ಅದೂ ಇಲ್ಲ. ನಮ್ಮ ಸಮಾಜದವರ ಮುಖ್ಯೋದ್ಯೋಗಗಳು ವ್ಯಾಪಾರ ವ್ಯವಸಾಯಗಳೇ ಆಗಿದ್ದರೂ ಅವು ಕೂಡ ಇವರಲ್ಲಿ ಪ್ರಬಲ ಪ್ರಮಾಣದಿಂದ ಸಾಗುತ್ತಲಿಲ್ಲ. ಪಾರ್ಸಿ, ಗುಜ್ಜರ, ಮಾರ್ವಾಡಿ ವರ್ತಕಜನರಲ್ಲಿ ಕೋಟೀಶ್ವರರ ಸಂಖ್ಯೆಯು ಎಷ್ಟೋ ಇರುವಲ್ಲಿ ನಮ್ಮಲ್ಲಿ ಒಬ್ಬರ ಹೆಸರನ್ನಾದರೂ ಕಾಣುವಂತಿರುವುದಿಲ್ಲ. ಇಂಗ್ಲೆಂಡಿನ ಅರ್ಜೆಂಟೈನ ವಿದೇಶ ವಿಶಾಲ ವ್ಯಾಪಾರಸಂಬಂಧವೂ ನಮ್ಮವರಿಗಿಲ್ಲ. ಇನ್ನು ಲೌಕಿಕ ಸಂಪದ್ಗೌರವ ಸಾಧನೆಗೆ ಅವಶ್ಯಕವಾದ ರಾಜಕೀಯ ವಿದ್ಯೆಯಲ್ಲಿ ನೋಡಿದರೆ ೧೦೦ ಮಂದಿ ಗ್ರಾಜುಯೇಟುಗಳು ನಮ್ಮ ಸಮಾಜದಲ್ಲಿ ಸಿಕ್ಕುವುದು ಕೂಡ ಸಂಶಯವೇ. ಇಲ್ಲವೆನ್ನಬಾರದುದಕ್ಕೆ ಇಬ್ಬರು ಮಹಿಳೆಯರು ಮಾತ್ರ ಎಂ. ಎ. ಪದವೀಧರರಾಗಿರುತ್ತಾರೆ. ಭರತಖಂಡದ ಸಿವಿಲ್ ಸರ್ವೀಸ್ ಪರೀಕ್ಷೆ ಕೊಟ್ಟ ಧೀಮಂತರೊಬ್ಬರ ತಲೆಯನ್ನೂ ನಮ್ಮಲ್ಲಿ ಇನ್ನೂ ಕಂಡಿಲ್ಲ. ಸರ್ಕಾರದ ಉದ್ಯೋಗಸ್ಥಾನಾಪನ್ನತೆಯಲ್ಲೂ ನಮ್ಮವರು ಕೇವಲ ವಿರಳರು. ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೊಬ್ಬರು ಹೊರತು ಅಷ್ಟು ಉನ್ನತಪದವಿಯನ್ನೂ ಡಿಸ್ಟ್ರಿಕ್ಟ್ ಜಡ್ಜ್ ಜಿಲ್ಲಾ ಕಲೆಕ್ಟರ್‌ಗಿರಿಯಂಥ ಸಾಧಾರಣ ಪದವಿಗಳನ್ನು ಕೂಡ ಪಡೆದವರಾರನ್ನೂ ನಾವು ನೋಡಿಲ್ಲ. ಇನ್ನು ನಿಯಮನಿರ್ಮಾಣಸಭಾಸ್ತರ ಪದವಿಯನ್ನು ನಿಯೋಜನ ದ್ವಾರಾ ಪಡೆದುಕೊಂಡವರು ಮದ್ರಾಸು ಬೊಂಬಾಯಿ ಆಧಿಪತ್ಯಗಳಲ್ಲಿ ಒಬ್ಬರೂ ಸಿಗುವುದಿಲ್ಲ. ಇಲ್ಲವೆನ್ನುವುದಕ್ಕೆ ಬಾರದಂತೆ ೮-೧೦ ಮಂದಿ ಅಡ್ವೋಕೇಟರೂ, ನಾಲ್ಕಾರು ಮಂದಿ ಡಾಕ್ಟರುಗಳೂ, ೨೦-೩೦ ಮಂದಿ ಸಣ್ಣ ಪುಟ್ಟ ಅಧಿಕಾರಸ್ಥರೂ ದೊರೆಯಬಹುದು. ಭರತಖಂಡವು ಸ್ವರಾಜ್ಯದ ಮೆಟ್ಟಲನ್ನು ಹತ್ತುತ್ತಿರುವಾಗ ನಮ್ಮವರು ಸ್ಥಳಿಕಸಂಘಗಳ ಸ್ವಾತಂತ್ರ್ಯಲಾಭವನ್ನು ಪಡೆದುಕೊಳ್ಳುವ ಆಸಕ್ತಿಯನ್ನೂ ತೋರಿಸುತ್ತಲಿಲ್ಲ. ಗೋಖಲೆಯವರಂಥ ರಾಜತಂತ್ರಕೋವಿದರೂ, ಬೋಸ್ ರಾಯರಂಥ ಶಾಸ್ತ್ರೀಯಪರಿಜ್ಞಾನ ಧುರೀಣರೂ, ಭಂಡಾರ್ಕರ್, ತಿಲಕ್‌ರಂಥ ಶೋಧಕರೂ, ನವರೋಜಿ, ಬ್ಯಾನರ್ಜಿ, ಮಾಳವೀಯರಂಥ ವಾಗ್ಮಿಗಳೂ ಉದಯಗೊಳ್ಳುವುದು ಯಾವ ಕಾಲಕ್ಕೆ? ದಕ್ಷಿಣದೇಶವನ್ನು ಬಿಟ್ಟು ಉತ್ತರ ಹಿಂದೂಸ್ಥಾನದ ಪಂಜಾಬು ಪ್ರಾಂತದಲ್ಲೂ ಬಂಗಾಳಾ ಪ್ರಾಂತದಲ್ಲೂ ವೀರಶೈವರೆಂದರೆ ಯಾರೆಂಬುದು ಅಲ್ಲಿಯ ಸಾಮಾನ್ಯಜನವರ್ಗಕ್ಕೆ ಗೊತ್ತೇಇಲ್ಲ. ನಮ್ಮ ಐಹಿಕಸ್ಥಿತಿಯ ಚಿತ್ರವು ಇಷ್ಟು ಹೀನದೀನ ರೂಪವಾಗಿರುತ್ತದೆ.

ಇನ್ನು ಧಾರ್ಮಿಕ ವಿಷಯದಲ್ಲೆಂದರೂ ಇದಕ್ಕಿಂತಲೂ ಹೀನವಾಗಿದೆ. ಸೂಕ್ಷ್ಮವಿಷಯಗಳನ್ನು ಬಿಟ್ಟು ಸ್ಥೂಲವಿಚಾರಗಳನ್ನು ಹಿಡಿದು ನೋಡಿದರೂ ಅಗಣಿತಲೋಪಗಳು ಕಂಡುಬರುತ್ತವೆ. ಅನೇಕ ತರದ ಕರ್ಮಗಳ ಜಂಜಾಟವು ನಮಗಿಲ್ಲದಿದ್ದರೂ ನಿತ್ಯವಾದ ಯಾವಜ್ಜೀವ ಶಿವಪೂಜಾ ವ್ರತಕ್ಕೂ ಕೂಡ ಅನೇಕರು ವಿರವಾಗಿದ್ದಾರೆ. ಅದನ್ನು ಬಿಡದೆ ಆಚರಿಸತಕ್ಕವರಲ್ಲೂ ಆ ವಿಧಿವಿಧಾನವು ಮನೆಗೆ ನಾಲ್ಕು ತೆರನಾಗಿವೆ. ಶಾಸ್ತ್ರೀಯ ಸಂಸ್ಕಾರಗಳು ನಾಮಮಾತ್ರಕ್ಕೂ ಲಕ್ಷಾಂತರ ಜನರಿಗೆ ನಡೆಯುವುದಿಲ್ಲ. ಇಷ್ಟಲಿಂಗ ಲಕ್ಷಣಾದಿಗಳನ್ನು ತಿಳಿದವರು ಪೂಜ್ಯವರ್ಗದಲ್ಲೇ ವಿರಳರಾಗಿರುವಾಗ ಪೂಜಕವರ್ಗದವರ ಅವಸ್ಥೆಯನ್ನು ಹೇಳುವುದೇನು? ಅವಿನಾಭೂತವಾಗಿ ದೇಹದಲ್ಲಿ ಸಂಬಂಧಗೊಂಡಿರಬೇಕಾದ ಇಷ್ಟಲಿಂಗದ ಧಾರಣವನ್ನೇ ಅನೇಕರು ಪರಿತ್ಯಜಿಸಿರುವರು. ಇನ್ನು ನಿತ್ಯನೈಮಿತ್ತಿಕ ಕರ್ಮಗಳ ಧರ್ಮಾಧರ್ಮಗಳ ವಿಧಿನಿಷೇಧಗಳ ವಿಚಾರವನ್ನು ಮಾಡಿದವರು ಲಕ್ಷಕ್ಕೊಬ್ಬರಾದರೂ ಸಿಕ್ಕುವರೋ ಇಲ್ಲವೋ! ಶಿವಾಗಮಗಳಲ್ಲೂ ಸಿದ್ಧಾಂತ ಶಾಸ್ತ್ರಗಳಲ್ಲೂ ಹೇಳಲ್ಪಟ್ಟಿರುವ ಷಟ್ಸ್ಥಲಾಷ್ಟಾವರಣಗಳ ಮರ್ಯಾದೆಯನ್ನು ಹಿಡಿದು ಆಚರಿಸುವ ಸದಾಚಾರಿಗಳು ಕೇವಲ ವಿರಳರೇ ಸರಿ. ಸ್ಥೂಲಾಚಾರ ನಿಯಮಗಳನ್ನನುಸರಿಸುವಲ್ಲ ವೀರಶೈವರು ಭವಿಸಂಗ ಸಾಹಚರ್ಯ ಸಂಭಾಷಣ ಪರಿತ್ಯಾಗರೂಪ ದುಸ್ಸಾಧ್ಯ ವಿಷಯಗಳ ಹೊರತು ಭವಿಪಾಕ ಸ್ವೀಕಾರ, ದುರಾಹಾರ ದುಷ್ಪಾನಸೇವನ ವಿಷಯಗಳಲ್ಲಿ ಕಟ್ಟಾಗಿರುವರೆಂಬ ಪ್ರತೀತಿಯಾದರೂ ಇದುವರೆಗಿದ್ದಿತು. ಈಗ ಅದುಕೂಡ ಸಡಿಲವಾಗುತ್ತಲಿರುವ ಭಯಂಕರ ಚಿಹ್ನೆಗಳು ಕಂಡುಬರುತ್ತಿವೆ. ಅನೇಕರು ಮತಸಂಬಂಧವನ್ನೇ ಕಳಕೊಳ್ಳುತ್ತಿದ್ದಾರೆ. ಧಾರ್ಮಿಕ ಶಿಕ್ಷಾರಕ್ಷಣ ಪಟ್ಟಬದ್ಧರ ಭಯವು ಸಮಾಜಕ್ಕೆ ತಪ್ಪಿಹೋಗಿದೆ. ಗದ್ದರಿಸಿ ಕೇಳಿ ಶಿಕ್ಷಿಸುವುದಕ್ಕೆ ಅವರಲ್ಲೇ ತಕ್ಕ ಬಂಡವಾಳವಿಲ್ಲ. ಉಪಾಧ್ಯಾಯನೇ ತಿಷ್ಠನ್ಮೂತ್ರದವನಾಗಿರುವಾಗ ಹುಡುಗರು ಗಚ್ಛನ್ಮೂತ್ರರಾಗುವುದಾಶ್ಚರ್ಯವೆ? ಎಂಬಂತಾಗಿರುತ್ತದೆ. ಆ ಧರ್ಮಾಧ್ಯಕ್ಷವರ್ಗದ ಲೋಪಗಳನ್ನು ಕುರಿತು ನಾವು ಇಲ್ಲಿ ಹೆಚ್ಚಿಗೆ ಬರೆಯಲು ಇಚ್ಛೈಸುವುದಿಲ್ಲ. ಸರ್ವರಿಗೂ ಅವು ಗೊತ್ತೇಇರುತ್ತವೆ. "ನಾವು ಸಲಿಸುವುದಕ್ಕೇ ಇರುವುದು; ಭಕ್ತರು ನೀಡುವುದಕ್ಕೇ ಇರುವುದು" ಎಂಬಷ್ಟರಲ್ಲೇ ಗುರುಶಿಷ್ಯ ಮುಖ್ಯಧರ್ಮವು ನಿಂತಿದೆಯೆಂದು ತಿಳಿದವರೇ ಇವರಲ್ಲಿ ಹೆಚ್ಚಿಕೊಂಡಿದ್ದಾರೆ. ಪೂಜ್ಯವರ್ಗದ ಮುಖ್ಯ ಪೀಠಾಧಿಪತಿಗಳು ತಮ್ಮ ಅಧಿಕಾರವನ್ನೂ ಸಾಮರ್ಥ್ಯವನ್ನೂ ಜ್ಞಾನವನ್ನೂ ವಿನಿಯೋಗಿಸಿ ವಿದ್ಯುಚ್ಛಕ್ತಿಯಂತೆ ಕೆಲಸ ಮಾಡುತ್ತಿದ್ದರೆ ಸಮಾಜದಲ್ಲಿ ಇಷ್ಟೊಂದು ಕಾರ್ಗತ್ತಲು ಕವಿಯುತ್ತಿರಲಿಲ್ಲ. ದೇಶಮಧ್ಯದಲ್ಲಿ ಧಾರ್ಮಿಕ ಜಾಗರೂಕತೆಯನ್ನು ಹುಟ್ಟಿಸಲು ತಮ್ಮ ಸಂಚರಣದ ಮೂಲಕ ಪ್ರಕಾಶವನ್ನು ಕೆಡಹಿ ಎಚ್ಚರುಗೊಳಿಸಿ ಸಮಾಜೋದ್ಧಾರವನ್ನು ಮಾಡಬೇಕೆಂಬ ಲವಲವಿಕೆಯೇ ಅವರಲ್ಲಿ ಕಡಿಮೆಯಾಗಿದೆ. ತಾವು ಪರಶಿವಸ್ವರೂಪಿಗಳೆಂಬುದನ್ನು ಈ ವಿಷಯದಲ್ಲಿ ಅವರಿಗಿರುವ ನಿಷ್ಕ್ರಿಯತ್ವದಿಂದ ತೋರ್ಪಡಿಸುತ್ತಿರುವಂತೆ ಕಾಣುತ್ತದೆ ಅವರ ಶಾಖಾಮಠಗಳ ಮತ್ತು ಅವುಗಳೊಳಗೆ ಸೇರಿಕೊಂಡು ಆ ಮಠಸ್ಥಲಗಳನ್ನೆಲ್ಲಾ ನರಕಕ್ಕೆ ಸಮನಾಗಿ ಮಾಡಿಕೊಂಡಿರುವ ಪರಸಹಸ್ರಮಠನಾಮಧಾರಕಗಳ ಅವಸ್ಥೆಯನ್ನು ನಾವು ವರ್ಣಿಸತೊಡಗುವುದಿಲ್ಲ. ಸ್ಮರಿಸಿದರೆ ಸಂಕಟವಾಗುತ್ತದೆ. ಅದಕ್ಕೆ ಅಪವಾದವಾಗಿ ಸಾವಿರಕ್ಕೊಂದೊಂದು ಮಠಗಳಿದ್ದರೂ ಇರಬಹುದು.

ಇನ್ನು ಮಠದ ಜ್ಞಾನಭಾಂಡಾಗಾರದ ಸ್ಥಿತಿಯನ್ನು ಅವಲೋಕಿಸಿದರೆ ಅದು ಇದಕ್ಕಿಂತಲೂ ಶೋಚನೀಯವಾಗಿರುವುದು. ತನ್ನ ಮತೋದ್ಧಾರಕ್ಕಾಗಿ ಶಿವನು ನಿರೂಪಿಸಿರುವ ದಿವ್ಯಾಗಮಗಳಲ್ಲಿ ಇದುವರೆಗೇ ಎಷ್ಟೋ ನಾಮಾವಶೇಷವಾಗಿರುವುವು. ಸಾಂಗವಾಗಿ ಒಂದೆರಡಾಗಮಗಳನ್ನಾದರೂ ಜೋಪಾನಗೊಳಿಸಿ ಇಟ್ಟುಕೊಂಡಿರುವ ಯಾವೊಬ್ಬ ಪಂಡಿತರನ್ನಾಗಲಿ ಯಾವೊಂದು ಆಚಾರ್ಯಪೀಠವನ್ನಾಗಲಿ ನಾವು ನೋಡಲಿಲ್ಲ. ಪ್ರತಿಯೊಬ್ಬ ಮುಖ್ಯಾಚಾರ್ಯಪೀಠಾಧೀಶರಾದರೂ ತಮ್ಮ ಮಠಗಳಲ್ಲಿ ಪ್ರಾಚೀನಗ್ರಂಥಗಳನ್ನು ಶೇಖರಿಸಿಡಬೇಕಾದುದು ಮುಖ್ಯಕರ್ತವ್ಯವೆಂಬುದನ್ನು ಗಮನಿಸಿಯೇ ಇಲ್ಲ. ಧರ್ಮಾಭಿಮಾನದಿಂದ ಅಲ್ಲಲ್ಲಿ ಕೆಲವಿದ್ವಜ್ಜನರು ಶೇಖರಿಸಿಟ್ಟುಕೊಂಡಿರುವ ಗ್ರಂಥಗಳ ಪ್ರಚಾರಕ್ಕೆ ತಕ್ಕ ಸಾಹಾಯ್ಯ ಪ್ರೋತ್ಸಾಹಗಳಿಲ್ಲ. ಧರ್ಮಗ್ರಂಥಗಳ ಅಧ್ಯಯನವನ್ನು ಮಾಡಿ ಧರ್ಮಪ್ರಸಾರಕ್ಕೆ ಸಾಹಾಯಕರಾಗಬೇಕೆಂಬ ಅಪೇಕ್ಷೆಯುಳ್ಳ ಮಾಹೇಶ್ವರ ಜನರೇ ವಿರಳ. ಒಂದುವೇಳೆ ಎಲ್ಲೋ ಒಬ್ಬಿಬ್ಬರು ತಲೆಯೆತ್ತಿ ಮುಂದಕ್ಕೆ ಬಂದರೆ ಅವರುಗಳಿಗೆ ಪ್ರೋತ್ಸಾಹವೇ ಇಲ್ಲ. ಹೀಗಿರುವುದರಿಂದ ವೈದಿಕವಿದ್ಯಾಭ್ಯಾಸದಿಂದ ಜೀವಿಕೆಗೇ ಕಷ್ಟವಾಗಿ ಅನೇಕರು ಇದನ್ನು ತಿರುಪದ ವಿದ್ಯೆಯೆಂದು ತಿಳಿದು ದೂರೀಕರಿಸುತ್ತ ಬಂದಿರುವರು. ಎಲ್ಲೋ ಕೆಲ ಶಾಸ್ತ್ರಜ್ಞಾನಸಂಪನ್ನರು ಕಂಡುಬಂದರೂ ಮಹಾಮಹೋಪಾಧ್ಯಾಯಾದಿ ಗೌರವವನ್ನು ಪಡೆದವರು ಒಬ್ಬರೂ ಇಲ್ಲ. ಹೀಗಾಗಿ ಮತಧರ್ಮಕರ್ಮ ವಿಧಿವಿಧಾನಗಳೆಲ್ಲಾ ಗ್ರಂಥಗಳಲ್ಲೇ ಉಳಿದಿರುವುವು. ಎಷ್ಟೋ ಶ್ರಮಪಟ್ಟು ಮತಸೇವಾರೂಪ ತಪಸ್ಸಿನಿಂದ ತಮ್ಮ ಜ್ಞಾನಶಕ್ತಿಯನ್ನೆಲ್ಲಾ ವಿನಿಯೋಗಿಸಿ ರಚಿಸಿಟ್ಟ ಪ್ರಾಚೀನರ ಧಾರ್ಮಿಕ ಗ್ರಂಥಗಳೆಲ್ಲಾ ಈಗಿನವರ ನಿರಭಿಮಾನ-ಅಸಾಮರ್ಥ್ಯಾದಿಗಳಿಂದ ಗೆಜ್ಜಲು ಪಾಲಾಗುತ್ತಿರುವುವು. ಈ ಸ್ಥಿತಿಯನ್ನೆಲ್ಲಾ ನೋಡಿ ಪರಸಮಯಗಳ ಕೆಲಧೂರ್ತರು ಈ ವೀರಶೈವರು ಗೀರ್ವಾಣಭಾಷಾಭ್ಯಾಸಕ್ಕೇ ಅರ್ಹರಲ್ಲವೆಂದು ನುಡಿಯುವುದಕ್ಕೂ ಹಿಂಜರಿಯದಂತಾಯಿತು. ವೀರಶೈವವೆಂಬುದು ಒಂದು ಜಾತಿಯೆಂತಲೂ, ಇವರು ಅವೈದಿಕರೆಂತಲೂ, ಇವರೆಲ್ಲಾ ಶೂದ್ರರೆಂತಲೂ ಸಹ ಅಜ್ಞಜನರು ಆಡಿಕೊಳ್ಳಲು ಮಾರ್ಗವಾಯಿತು.

ಇಷ್ಟೆಲ್ಲಾ ದುಃಸ್ಥಿತಿಗಳು ನಮಗೆ ಲೌಕಿಕ ಧಾರ್ಮಿಕ ವಿಷಯಗಳೆರಡಂಲ್ಲೂ ಬೆನ್ನಂಟಿ ಕವಿದುಕೊಂಡಿರುವಾಗ, ಪ್ರಚಂಡ ಜಂಝಾನಿಲವು ಮುಗಿಲನ್ನು ಝಾಡಿಸಿ ಹೊಡೆದುಬಿಡುವಂತೆ ನಮ್ಮ ಸಮಾಜವೆಲ್ಲವೂ ಏಕಶಕ್ತಿಯಿಂದ ನಮ್ಮ ಮೇಲೆ ಕವಿದಿರುವ ಲೌಕಿಕ ಧಾರ್ಮಿಕವ್ಯಾಪ್ಯತ್ವರೂಪವಾದ ಮಬ್ಬನ್ನು ಕೊಡಹಿ ಶುಭವಾತಾವರಣಕ್ಕೆ ಬಂದು ನಿಂತುಕೊಳ್ಳದಿದ್ದರೆ ನಮಗೆ ಇಹಪರ ಮೋಕ್ಷಗಳು ಲಭಿಸುವುದುಂಟೆ? ನಮಗೆ ಐಮತ್ಯ ಶಕ್ತಿಯಿಲ್ಲದಿದ್ದರೆ ಈ ಮಹತ್ಕಾರ್ಯವು ಸಾಧ್ಯವಾಗುವುದುಂಟೆ? ಕುಲಾಚಲಗಳ ಗಾತ್ರದ ಕರ್ತವ್ಯಭಾರವು ನಮ್ಮ ಮೇಲೆ ಬಿದ್ದಿರುವಾಗ ಅದನ್ನು ನೋಡದೆ, "ಗ್ರಾಮಂಗಚ್ಛನ್ ತೃಣಂಸ್ಪೃಶತಿ" ಎಂಬುವಂತೆ "ನಮ್ಮ ಪೂಜ್ಯವರ್ಗದವರಲ್ಲ ಅವರು ಹೆಚ್ಚು ಇವರು ಕಡಿಮೆ" ಯೆಂಬ ವಾದದ ಬೇತಾಳನನ್ನು ಎಬ್ಬಿಸಿರುವವರ ವಿವೇಕವನ್ನು ನೋಡಿ ನಗಬೇಕೆ? ಅಥವಾ ಅಳಬೇಕೆ?

ತುಮಕೂರು ಡಿ|| ೧ನೆ ಶ್ರೀಮದ್ವೀರಶೈವ ಪ್ರಾಂತಿಕ ಸಭೆ.

ತುಮಕೂರಿಗೆ ೩ ಮೈಲಿಗಳ ದೂರದಲ್ಲಿರುವ ಶ್ರೀಸಿದ್ಧಗಂಗಾಕ್ಷೇತ್ರದಲ್ಲಿ ಶಿವೈಕ್ಯಶ್ರೀ ಅಡವಿಸ್ವಾಮಿಗಳ ಕಾಲದಿಂದಲೂ ಪ್ರತಿನಿತ್ಯ ದಾಸೋಹವೂ ವರ್ಷವರ್ಷ ನವರಾತ್ರಿಯ ಕಾಲದಲ್ಲೂ, ರಥೋತ್ಸವ ಕಾಲದಲ್ಲೂ ಮಹತ್ತರವಾದ ಜಾತ್ರೆಯೂ ವಿಶೇಷದಾಸೋಹವೂ ನಡೆಯುವುದು ಪದ್ಧತಿಯಾಗಿದೆ. ಇಂಥ ವಿಶೇಷೋತ್ಸವ ಸಮಯವೂ ಬಹುಜನ ವೀರಶೈವ ಮತಸ್ಥರ ಕೂಟವೂ ಇದುವರೆಗೆ ಊಟ ನೋಟಗಳಲ್ಲೇ ಪರ್ಯವಸಾನಗೊಳ್ಳುತ್ತಿದ್ದುವು. ಈ ಸಂಧಿಯನ್ನು ಸಮಾಜೋತ್ಕರ್ಷಕ್ಕೆ ಉಪಯೋಗಿಸಿಕೊಳ್ಳುವ ದಾರಿಯನ್ನು ಅಲ್ಲಿಯ ಶ್ರೀ ಉದ್ದಾನಸ್ವಾಮಿಗಳೂ ತುಮಕೂರಿನ ಮತಾಭಿಮಾನಿ ಮಹಾಜನರೂ ಹಾಕಿಕೊಟ್ಟು, ಈ ವರ್ಷ ಅಲ್ಲಿ ಪ್ರಾಂತಿಕಸಭೆಯನ್ನು ನೆರೆಯಿಸಲು ಆರಂಭಿಸಿ, ತತ್ಸಂಬಂಧವಾಗಿ ಕೊಟ್ಟಿರುವ ಪ್ರಕಟನಪತ್ರಿಕೆಯನ್ನು ಇದೇ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿ, ಇಂಥ ಪ್ರಯತ್ನವನ್ನು ಕೈಕೊಂಡುದಕ್ಕಾಗಿ ಇದರ ವ್ಯವಸ್ಥಾಪಕರನ್ನೆಲ್ಲಾ ಅಭಿನಂದಿಸುವುದಲ್ಲದೆ ಸಭೆಯು ಸಾರ್ಥಕವಾಗಿ ಈಡೇರಲೆಂದು ಕೋರುತ್ತೇವೆ.

ಇಂಥ ಪ್ರಾಂತಿಕ ಸಭೆಗಳು ಪ್ರತಿ ಡಿಸ್ಟ್ರಿಕ್ಟು ತಾಲ್ಲೂಕು ಸ್ಥಲಗಳಲ್ಲೆಲ್ಲಾ ಆಗುವಂತಾಗಬೇಕು. ಮಹಾಸಭೆಯಲ್ಲಿ ಆದ ನಿರ್ಧಾರಗಳನ್ನು ಸರ್ವತ್ರ ವ್ಯವಹಾರಕ್ಕೆ ತರಿಸಬೇಕಾದರೂ ಎಲ್ಲ ಕಡೆಯೂ ಸಮಾಜಾಭಿಮಾನವನ್ನೂ ಧರ್ಮ ಜಾಗರೂಕತೆಯನ್ನೂ ವಿದ್ಯಾಪ್ರಸಾರಕುತೂಹಲವನ್ನೂ ಇತರ ವಿಧವಾದ ಆತ್ಮೋದ್ಧಾರದ ಯತ್ನಗಳಲ್ಲಿ ಅಭಿರುಚಿಯನ್ನೂ ಸಮಾಜದವರಲ್ಲಿ ಹೆಚ್ಚಿಸಬೇಕಾದರೂ ಇಂಥ ಪ್ರಾಂತಿಕಸಭೆಗಳಿಂದಲ್ಲದೆ ಬೇರೆ ಸಾಧ್ಯವಲ್ಲ. ಮಹಾಸಭೆಗೆ ಹೋಗಲು ಸಣ್ಣ ಸಣ್ಣ ಗ್ರಾಮಾಂತರಗಳ ಸಕಲರಿಗೂ ದೂರ ದೇಶಗಳವರಿಗೂ ಸಾಧ್ಯವಲ್ಲ. ಅಂಥವರುಗಳೆಲ್ಲಾ ಇಂಥ ಪ್ರಾಂತಿಕ ಸಭೆಗಳಿಗೆ ಸೇರಿ ಮಹಾಸಭೆಯ ಫಲಿತಾಂಶವನ್ನು ಇವುಗಳ ಮೂಲಕ ಪಡೆದುಕೊಳ್ಳಬಹುದು. ಇಂಥ ಪ್ರಾಂತಿಕಸಭೆಯ ಚಾಲಕರು ಮಹಾಸಭೆಯ ನಿರ್ಧಾರಗಳನ್ನು ವ್ಯವಹರಣೆಗೆ ತರಿಸುವ ಯತ್ನವನ್ನು ಮೊದಲನೆಯ ಕಾರ್ಯವನ್ನಾಗಿಟ್ಟುಕೊಳ್ಳಬೇಕು. ವಿದ್ಯಾಭ್ಯಾಸ ಸೌಕರ್ಯಗಳಿಗೆ ಶಾಶ್ವತಪ್ರತಿಷ್ಠಾಪನೆಗಳನ್ನು ಕಲ್ಪಿಸುವುದನ್ನು ೨ನೆ ಉದ್ದೇಶವನ್ನಾಗಿಟ್ಟುಕೊಳ್ಳಬೇಕು. ಉದ್ಯೋಗಿಕಾಭಿವೃದ್ಧಿ ಕುತೂಹಲವೂ, ಐಕಮತ್ಯ ರಕ್ಷಣ ಯತ್ನಗಳೂ, ಧರ್ಮಶ್ರದ್ಧೆಯೂ ಮತಲಕ್ಷಣ ಜ್ಞಾನವೂ ಇತರ ಸ್ಥಲಿಕ ವಿಷಯಗಳಿಗೆ ಸಂಬಂಧಪಟ್ಟ ವಿಚಾರಗಳೂ ೩ ನೆಯವಾಗಿರುವಂತೆ ಮಾಡಿಕೊಳ್ಳಬೇಕು. ಮುಖ್ಯವಾಗಿ ತುಮಕೂರು ಡಿಸ್ಟ್ರಿಕ್ಟು ವೀರಶೈವರು ಹೆಚ್ಚಾಗಿರುವ ಪ್ರಾಂತವಾಗಿದೆ. ಅಂಥ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲಿ ವೀರಶೈವ ವಿದ್ಯಾರ್ಥಿ ನಿಲಯವಿಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಅದು ಅವಶ್ಯವಾಗಿ ನೆರವೇರಬೇಕು. ಇದನ್ನು ಆ ಡಿಸ್ಟ್ರಿಕ್ಟಿನ ವೀರಶೈವ ಪ್ರಮುಖರೆಲ್ಲರೂ ಗಮನಿಸಿ, ಈ ಪ್ರಾಂತಿಕ ಸಭೆಗೆ ದಯಮಾಡಿಸಿ, ಈಗ ಕೈಕೊಂಡಿರುವ ಯತ್ನವನ್ನು ಕೊನೆಮುಟ್ಟಿಸಿ ಈ ಪ್ರಾಂತಿಕ ಸಭೆಯು ವರ್ಷೇವರ್ಷೇ ನಡೆಯುವಂತೆ ಶಾಶ್ವತಗೊಳಿಸಿ, ನೆರೆಹೊರೆಯ ಶಿವಮೊಗ್ಗಾ, ಚಿಕ್ಕಮಗಳೂರು, ಚಿತ್ರದುರ್ಗ, ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾರ್ಥಿಗಳಿಗೆ ಶಾಶ್ವತ ಸೌಕರ್ಯವಿರುವಂತೆ ಇಲ್ಲಿಯೂ ಮಾಡಿ, ಕೀರ್ತಿಭಾಜನರೂ ಪುಣ್ಯಭಾಗಿಗಳೂ ಆಗಲೆಂದೂ, ಅದಕ್ಕೆ ಸರ್ವರೂ ಮನಮುಟ್ಟಿ ಸಹಾಯಗೊಳಿಸುವವರಾಗಲೆಂದೂ ಕೋರುವೆವು.

ಒಳದೇಶ ವೃತ್ತಾಂತಗಳು.

ಶ್ರೀಮದ್ಯುವರಾಜರು ಬೊಂಬಾಯಿ ಮಾರ್ಗವಾಗಿ ಸೀಮೆಗೆ ಪ್ರಯಾಣ ಮಾಡುವುದಕ್ಕೆ ಇನ್ನು ೩-೪ ದಿನಗಳಲ್ಲಿ ಪ್ರಯಾಣ ಬೆಳಸುವವರಾಗಿದ್ದಾರೆ.

ಮೈಸೂರು ಸಿಟಿ ಪೊಲೀಸ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಎವರಾರ್ಡ್‌ರವರು ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ನಿಗೂ, ದಾವಣಗೆರೆಯಲ್ಲಿದ್ದ ಮಿ|| ಅಬ್ದುಲ್‌ಗನಿಯವರು ಮೈಸೂರುಸಿಟಿ ಪೊಲೀಸ್ ಸೂಪರಿಂಟೆಂಡೆಂಟ್ ಸ್ಥಾನಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಮೈಸೂರು ಸಂಸ್ಥಾನದ ಎಲ್ಲೆಯಿಂದ ಹೊರಕ್ಕೆ ಬತ್ತ (ಅಕ್ಕಿ) ರಾಗಿ ಜೋಳಗಳನ್ನು ರೈಲಿನ ಮೂಲಕವಾದರೆ ಫುಡ್‌ಕಂಟ್ರೋಲರ, ರೋಡುಗಳ ಮೂಲಕವಾದರೆ ಡಿ|| ಡಿ|| ಕಮಿಷನರ ಅಪ್ಪಣೆಯಿಲ್ಲದೆ ಫೆಬ್ರವರಿ ತಾ|| ೧೭ ರಿಂದ ಯಾರೂ ಸಾಗಿಸಕೂಡದೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಈ ದಿವಸ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಪ್ರಯಾಣ ಮಾಡಲಿಕ್ಕಿರುವ ಶ್ರೀಮನ್ಮಹಾರಾಜರವರ ಜತೆಗೆ ದಿವಾನರವರು ಕೂಡ ಪ್ರಯಾಣ ಮಾಡುವವರಾಗಿದ್ದಾರೆ. ಅಲ್ಲಿ ಜಲಪಾತ ಬೆಂಕಿಪುರದ ಕಬ್ಬಿಣದ ಕಾರ್ಖಾನೆಯು, ಬಟ್ಕಳ ರೇವೆಯ ಸ್ಥಲ ಮೊದಲಾದುವುಗಳನ್ನೆಲ್ಲಾ ಪರಾಮರಿಸಿಕೊಂಡು ಒಂದು ವಾರದಲ್ಲಿ ಹಿಂದಿರಿಗಿ ದಯಮಾಡಿಸುತ್ತಾರೆ.

ಮೈಸೂರು ನಿಯಮನಿರ್ಮಾಣ ಸಭೆಗೆ ಸರ್ಕಾರಿ ಮೆಂಬರುಗಳು—ಮ|| ಗಳಾದ ಚೀಫ್‌ಸೆಕ್ರೆಟರಿಯವರು, ಚೀಫ್‌ಇಂಜನಿಯರು, ರೆವಿನ್ಯೂ ಕಮಿಷನರು, ಎಡ್ಯುಕೇಷನಲ್ ಇನ್|| ಜನರಲ್‌ರವರು, ಗ|| ಅಡ್ವೋಕೇಟರು, ಫೈನಾನ್ಷಿಯಲ್ ಸೆಕ್ರೆಟರಿಯವರು, ಎಡ್ಯುಕೇಷನ್ ಮತ್ತು ಅಗ್ರಿಕಲ್ಚರ್ ಸೆಕ್ರೆಟರಿಯವರು, ಸೀನಿಯರ್ ಸರ್ಜನರು, ಫಾರೆಸ್ಟ್ ಕನ್ಸರ್ವೇಟರು, ಎಕ್ಸೈಜ್ ಕಮಿಷನರು, ರೈಲ್ವೆ ಏಜಂಟ್ ಮತ್ತು ಸೆಕ್ರೆಟರಿಗಳು, ಫುಡ್‌ಕಂಟ್ರೋಲರು. ಮತ್ತು ಪ್ರಜಾಪ್ರತಿನಿಧಿ ಸಭೆಯಿಂದ ಆರಿಸಲ್ಪಟ್ಟವರು—ಮ|| ಗಳಾದ ಬಿ. ಎನ್. ವಿಜಯದೇವರವರು, ಅಬ್ಬಾಸ್‌ಖಾನರು, ಎಂ. ಸುಬ್ಬಯ್ಯನವರು. ಡಿಸ್ಟ್ರಿಕ್ಟುಗಳಿಂದ ಆರಿಸಲ್ಪಟ್ಟವರು—ಮ|| ಗಳಾದ ಬಿ. ವಿ. ರಾಮಸ್ವಾಮಿಶೆಟ್ಟರು, ಡಿ. ವೆಂಕಟೇಶಯ್ಯನವರು, ಎಸ್. ಸಿ. ಜವರಯ್ಯನವರು, ಎಚ್. ವೆಂಕಟರಾಮಯ್ಯನವರು, ಹೆಚ್. ಕೃಷ್ಣರಾವ್‌ರವರು, ಎಚ್. ಜಿ. ಬಸವಪ್ಪನವರು, ಎನ್. ಎಸ್. ನಂಜುಂಡಯ್ಯನವರು, ಅನಂತಯ್ಯಶೆಟ್ಟರು. ಮೈಸೂರು ವಿಶ್ವವಿದ್ಯಾಲಯ ಸಂಘದಿಂದ ಆರಿಸಲ್ಪಟ್ಟವರು ಮ|| ಸಿ. ರಂಗಯ್ಯಂಗಾರರು. ಇವರಲ್ಲದೆ ಸರ್ಕಾರದಿಂದ ನಿಯುಕ್ತರಾದವರು—ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ರಾ|| ಬ|| ಎಂ. ಶ್ಯಾಮರಾಯರು, ರಾ|| ಸಾ|| ಎಚ್. ಚೆನ್ನಯ್ಯನವರು, ಎಂ. ರಾಮಚಂದ್ರರಾಯರು, ಅಬ್ದುರ್‌ರಹೀಂ ಬಿ. ಎ. ಎಲ್‌ಎಲ್. ಬಿ. ಯವರು ಸಹ, ಸಭಿಕರಾಗಿರುವರೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಆಹ್ವಾನ ಪ್ರಸಿದ್ಧಿಪತ್ರಿಕಾ.

ಸಮಸ್ತ ವೀರಶೈವ ಮಹಾಶಯರಲ್ಲಿ ವಿಜ್ಞಾಪಿಸಿಕೊಳ್ಳುವದೇನಂದರೆ:- ವೀರಶೈವಭಕ್ತಮಾಹೇಶ್ವರರ ಸಮ್ಮೇಳನ ಪ್ರಾಂತಿಕ ಸಭೆಯು ಕಡೂರು ಡಿ|| ತರೀಕೆರೆ ತಾಲ್ಲೂಕು ಪ್ರಾಂತದ ವೀರಶೈವ ಮಹಾಜನರ ಉದಾರಾಶ್ರಯದಿಂದ ಅಜ್ಜಂಪುರ ಪೋಸ್ಟ್ (ಬಗ್ಗವಳ್ಳಿ) ಎಂಬ ಗ್ರಾಮದಲ್ಲಿ ಇದೇ ಫೆಬ್ರವರಿ ತಿಂಗಳತಾರೀಖು ೨೮-೨೯ ನೇ ಶನಿವಾರ-ಭಾನುವಾರ ನಡೆಸಲ್ಪಡುತ್ತ. ಈ ತಾಲ್ಲೂಕು ವೀರಶೈವ (ಕಾನ್ಫರೆನ್ಸ್) ಪ್ರಾಂತಿಕ ಸಭೆಯು ಜಗತ್ಪೂಜ್ಯರಾದ ಷಟ್‌ಸ್ಥಲಜ್ಞಾನ ಸಿಂಹಾಸನಾಧೀಶರು ಮತ್ತು ಮತಸ್ಥಾಪಕರಾದ ಪಂಚಾಚಾರ್ಯ ಪೀಠಾಧೀಶ್ವರರು ಈ ಜಗದ್ಗುರು ಮಹಾಸ್ವಾಮಿಗಳವರ ಕೃಪಾಶೀರ್ವಾದ ಬಲದಿಂದ ಈ ಪ್ರಾಂತದ ಭಕ್ತಮಾಹೇಶ್ವರರ ಮತಾಚಾರ, ನೀತಿ, ವಿದ್ಯೆ, ವಿವೇಕ, ವ್ಯವಸಾಯ, ಸಂಪತ್ತು, ಐಕಮತ್ಯ ಇತ್ಯಾದಿಗಳ ಅಭ್ಯುನ್ನತಿಯನ್ನು ಕುರಿತು ಸ್ಟಾರ್ ಪತ್ರಿಕಾಕರ್ತರು ತಾ|| ೧೬-೧-೩೦ ನೇ ಸಂಚಿಕೆಯಲ್ಲಿ ಪ್ರಕಟಿಸಿದ ಯೋಗ್ಯಸಲಹೆ ಮೇರೆಯೇ ಬೀರೂರಿನ ನಲ್ಲೂರು ಉಬ್ರಾಣಿ ಮಠದ ವೇ|| ಎನ್. ಎಂ. ಶಿವಲಿಂಗಪ್ಪನವರು ರೆಪ್ರಜಂಟೇಟೀವ್ ಅಸಂಬ್ಲಿ ಮೆಂಬರು ಮತ್ತು ಮ್ಯು|| ಅರಸೀಕೆರೆ ವೈಸ್-ಪ್ರೆಸಿಡೆಂಟರು ಇವರ ಅಧ್ಯಕ್ಷತೆಯಿಂದ ಜರಗತಕ್ಕದ್ದಿರುತ್ತದೆ. ಈ ಮಹಾಶಯರು ಅಧ್ಯಕ್ಷರಾಗಲು ನಮ್ಮಗಳ ಕೋರಿಕೆ ಮೇರೆ ಒಪ್ಪಿರುವ ವಿಷಯವನ್ನು ತಿಳಿಸಲು ಸಂತೋಷಪಡುತ್ತೇವೆ. ಈ ತಾಲ್ಲೂಕು ವಗೈರೆ ಮಹಾಜನರಿಗೆಲ್ಲಾ ಆಮಂತ್ರಣಪತ್ರಿಕೆಗಳು ಕಳುಹಿಸಲ್ಪಟ್ಟು ಇವೆ. ಈ ಸಮ್ಮೇಳನ ಸಭಾಕಾಲಕ್ಕೆ ಮತಸ್ಥಾಪಕರಾದ ಪಂಚಾಚಾರ್ಯ ಜಗದ್ಗುರು ಪೀಠಗಳವರಲ್ಲಿ ಬಾಚು ಜಗದ್ಗುರು (ದಾರುಕಾಚಾರ್ಯ) ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶಿವಾನುಭವ ಚರಪಟ್ಟಾಧ್ಯಕ್ಷರು ಶ್ರೀ ಗುರುವರುಳ ಸಿದ್ಧರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ದಯಮಾಡಿಸಿ, ಸಿಂಹಾಸನಾರೋಹಣ ಮಾಡಿ ಧರ್ಮೋಪನ್ಯಾಸ ಮಾಡುತ್ತಾರೆ.

ಮೇಲ್ಕಂಡ ಅಭ್ಯುನ್ನತಿಗಳ ವಿಷಯಗಳ ಮೇಲೆ ಭಾಷಣ ಮಾಡತಕ್ಕವರು ತಾ|| ೨೬-೨-೩೦ ರೊಳಗೆ ಬರೆದು ಸೆಕ್ರೆಟರಿಯವರಲ್ಲಿಗೆ ಕಳುಹಿಸಲೂ ಉಪನ್ಯಾಸಕರು ದಯಮಾಡಿಸಲೂ ಪ್ರಾರ್ಥಿಸುತ್ತೇವೆ. ಈ ಸಭೆಗೆ ದಯಮಾಡಿಸತಕ್ಕ ಮಹಾಶಯರಿಗೆಲ್ಲಾ ಸಾಧ್ಯವಾದ ಮಟ್ಟಿಗೂ ಬಿಡಾರಗಳನ್ನು ಭೋಜನೋಪಚಾರದ ವ್ಯವಸ್ಥೆಯನ್ನೂ ಇಟ್ಟಿದ್ದೇವೆ. (ಮುಖ್ಯ) ಸಮಾಜೋನ್ನತಿಯ ಕಡೆಗೆ ಲಕ್ಷ್ಯವಿಟ್ಟು ಮತಾಭಿಮಾನಿಗಳಾದ ಸರ್ವರೂ ದಯಮಾಡಿ, ಈ ಗ್ರಾಮವನ್ನು ಪವಿತ್ರಗೊಳಿಸಬೇಕೆಂದು ಬೇಡುತ್ತೇವೆ. ಈ ಗ್ರಾಮವು ಅಜ್ಜಂಪುರ ರೈಲ್ವೆಸ್ಟೇಷನ್ನಿಗೆ ೩ ಮೈಲಿ, ಬೀರೂರಿಗೆ, ೬ ಮೈಲಿ ಅಂತರದಲ್ಲಿದೆ.

ಸೆಕ್ರೆಟರಿ,
ಆರಾಧ್ಯಸ್ವಾಮಿ,
ಹಿರೇಮಠ.

(ಸತ್ಕಾರಸಂಘದ ಅಧ್ಯಕ್ಷರು,)
ಪಿ. ಚಿಕ್ಕ ಕರಿಯಪ್ಪಗೌಡ,
ಬಿ. ಎ. ಮಲುಕಪ್ಪ,

ಈ ಮೇಲೆ ಕಂಡ ಪ್ರಾಂತಿಕಸಭೆಯು ಮತದ ಐಕಮತ್ಯಕ್ಕೆ ಭಂಗ ತರದಂತೆ ನಿರಾಕ್ಷೇಪವಾಗಿ ನಡೆದುಹೋಗಲು ಏರ್ಪಡಿಸಲ್ಪಟ್ಟಿದೆಯೆಂದು ಕೇಳುತ್ತೇವೆ. ಇದರ ಸಂಬಂಧವಾಗಿ ಸ್ಟಾರ್ ಪತ್ರದಲ್ಲಿ ಹಿಂದೆ ಒಬ್ಬರು ಆಕ್ಷೇಪಿಸಿ ಬರೆದಿದ್ದ ಕರಸ್ಪಾಂಡೆನ್ಸಿಗೆ ಉತ್ತರವನ್ನು ಸಭಾಚಾಲಕರು ಬರೆದು ಕಳುಹಿಸಿದ್ದಾರೆ ಆದರೆ ಸಭೆಯು ಶಾಂತವಾಗಿ ನಡೆಯುವುದಿದ್ದು, ತತ್ಸಂಬಂಧವಾಗಿ ನಮಗೆ ಕಳುಹಿಲ್ಪಟ್ಟಿರುವ ಲೇಖನಗಳೆಲ್ಲಾ ತಡವಾಗಿ ನಿನ್ನೆ ತಾನೇ ಬಂದಿವೆ. ಆದುಕಾರಣ ಅದನ್ನೆಲ್ಲಾ ಪ್ರಕಟಿಸಲು ಅವಕಾಶವಿಲ್ಲದೆ ಮೇಲ್ಕಂಡ ಆಹ್ವಾನಪತ್ರಿಕೆಯನ್ನು ಮಾತ್ರ ಮುದ್ರಿಸಿದ್ದೇವೆ. ಆ ಪ್ರಾಂತದ ವೀರಶೈವರೆಲ್ಲರೂ ಈ ಸಭೆಗೆ ದಯಮಾಡಿಸಿ, ಸಭೆಯನ್ನು ಸಾಂಗಗೊಳಿಸಬೇಕೆಂದು ಕೋರುತ್ತೇವೆ. ಪುಟ 2. ಸಂಖ್ಯೆ 22. ಸ. ಪ್ರ

~~ಮೈಸೂರ್ ಸ್ಟಾರ್ ೨೩|೨|೧೯೩೦~~

ಶ್ರೀ ಸಿದ್ಧಗಂಗಾ ಮಹಾಕ್ಷೇತ್ರದಲ್ಲಿ ನಡೆಯುವ ೧ನೇ ಶ್ರೀಮದ್ವೀರಶೈವ ಪ್ರಾಂತಿಕಸಭಾ.

ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣಾವಿರಳ ಪರಂಜ್ಯೋತಿ ಪರಬ್ರಹ್ಮ ಪರಶಿವ ಲೀಲಾವತಾರ ನಿರಂಜನ ಶ್ರೀ ಪ್ರಭುದೇವ ಪರಂಪರಾಗತ ಶ್ರೀ ಸಿದ್ಧಗಂಗಾ ಮಹಾಕ್ಷೇತ್ರ ಪ್ರವಿರಾಜಮಾನ ಮಠಾಧ್ಯಕ್ಷರಾದ ಶ್ರೀ ಉದ್ದಾನ ಸ್ವಾಮಿಗಳವರು ಈ ಮೊದಲೇ ಪ್ರಚುರಪಡಿಸಿರುವಂತೆ ಸದರಿ ಸುಕ್ಷೇತ್ರದಲ್ಲಿ ನಡೆಯುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಜಾತ್ರಾ ಮಹೋತ್ಸವ ಕಾಲದಲ್ಲಿ ತುಮಕೂರು ಡಿಸ್ಟ್ರಿಕ್ಟಿನ ವೀರಶೈವ ಸಮಾಜದ ಪುರೋವೃದ್ಧಿಗಾಗಿ ಒಂದು ಪ್ರಾಂತಿಕ ಸಭೆಯನ್ನು ತುಮಕೂರು ವೀರಶೈವ ಸೇವಾಸಮಾಜದವರು (೨೭-೨-೩೦) ನೇ ತಾ|| ಗುರುವಾರ ನಡೆಸಲು ಶ್ರೀಯವರ ಕೃಪೆಯಿಂದ ಏರ್ಪಾಡುಮಾಡಿರುವದರಿಂದ ಆದಕ್ಕಾಗಿ ಮತಾಭಿಮಾನಿಗಳೆಂದವರು ಸ್ವಂತ ಕೆಲಸದ ತೊಂದರೆಗಳೆದ್ದಾಗ್ಯೂ ಬಿಟ್ಟು ಅಗತ್ಯವಾಗಿ ದಯವಿಟ್ಟು ಬಂದು ಸಭಾಕಾರ್ಯವನ್ನು ಸಾಂಗಗೊಳಿಸಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಕೃಪಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರುತ್ತಾರೆ. ಬರತಕ್ಕವರು ಮೇಲ್ಕಂಡ ಕ್ಷೇತ್ರಕ್ಕೆ ಸ್ಪೆಷಲ್ ರೈಲ್ವೆ ಕಂಪನಿಯವರು ಅನುಕೂಲಪಡಿಸಿಕೊಟ್ಟಿರುವ ಕ್ಯಾತಸಂದ್ರದ ಸ್ಟೇಷನ್ನಲ್ಲಿ ಇಳಿಯತಕ್ಕದ್ದು. ಭೋಜನಾದಿಗಳಿಗೆ ಮೇಲ್ಕಂಡ ಶ್ರೀ ಉದ್ದಾನಸ್ವಾಮಿಗಳವರ ದಾಸೋಹದಲ್ಲಿ ಏರ್ಪಾಡುಮಾಡಿರುತ್ತಾರೆ.

ವಿಷಯಗಳು.

(೧) ಮತತತ್ವ. (೨) ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಐಕಮತ್ಯದ ಸಾಧನೆಗೆ ಉಪಾಯಗಳು. (೩) ವಿದ್ಯಾಭ್ಯಾಸ. (a) ಸಂಸ್ಕೃತ. (b) ಪ್ರಾಥಮಿಕ. (c) ಸ್ತ್ರೀ ಶಿಕ್ಷಣದ ಆವಶ್ಯಕತೆ. (೪) ವ್ಯಾಪಾರ, ವ್ಯವಸಾಯ ಮತ್ತು ಕೈಗಾರಿಕೆಗಳ ವಿಷಯಗಳಲ್ಲಿ ಅವಶ್ಯಕವಾದ ಸಾಧನೆಗಳು ಮತ್ತು ಅನುಕೂಲತೆಗಳು. (೫) ವಿವಾಹಾದಿ ಶುಭಕಾರ್ಯಗಳನ್ನು ಮಿತವ್ಯಯದಿಂದ ನಡೆಸುವದು ಮತ್ತು ವಿದ್ಯಾಭಿವೃದ್ಧಿ ಫಂಡಿಗೆ ಆ ಕಾಲಗಳಲ್ಲಿ ಸಹಾಯಮಾಡುವದು. (೬) ವಿದ್ಯಾರ್ಥಿನಿಲಯದ ಉಪಯೋಗಗಳು. ಈ ವಿಷಯಗಳಲ್ಲಿ ಉಪನ್ಯಾಸಮಾಡುವವರು ತಮ್ಮ ಉಪನ್ಯಾಸಗಳನ್ನು ಬಹು ಸಂಕ್ಷೇಪವಾಗಿ ಬರೆದು ಫೆಬ್ರವರಿ ೨೫ನೇ ತಾರೀಖಿನೊಳಗಾಗಿ ತುಮಕೂರಿನಲ್ಲಿರುವ ಈ ಸಮಾಜದ ಜನರಲ್ ಸೆಕ್ರೆಟರಿಯವರಿಗೆ ಕಳಿಸುವುದು.

ತುಮಕೂರು ವೀರಶೈವ ಸೇವಾ ಸಮಾಜದ ಮೆಂಬರುಗಳು.

(೧) ಟಿ. ಸಿ. ರೇವಣ್ಣ, ಪ್ರೆಸಿಡೆಂಟ್ (ಬೆಂಚ್‌ಮ್ಯಾಜಿಸ್ಟ್ರೇಟ್-ಮತ್ತು ಮುನಿಸಿಪಲ್ ಕೌನ್ಸಿಲರ್). (೨) ಟಿ. ಯಂ. ಹುಚ್ಚಣ್ಣ (ಮರ್ಚೆಂಟ್) ವೈಸ್‌ಪ್ರೆಸಿಡೆಂಟ್. (೩) ಜಿ. ಕೆ. ಗುರುಸಿದ್ದಾರಾಧ್ಯ, ಪ್ಲೀಡರ್, ಜನರಲ್ ಸೆಕ್ರೆಟರಿ. (೪) ಟಿ. ಗುರುಚನ್ನಬಸವಯ್ಯ ಹೆಡ್ಮಾಸ್ಟರ್, ಟಿ. ಸಿ. ರುದ್ರಣ್ಣ ಮರ್ಚೆಂಟು, ಜಾಯಿಂಟ್ ಸೆಕ್ರೆಟರಿಗಳು. (೫) ಎಂ. ಜಿ. ವೀರಣ್ಣ ಮಂಡಿ ಮತ್ತು ಜವಳಿ ವರ್ತಕರು, ಟಿ. ಪ್ರಧಾನ ಅಯ್ಯಣ್ಣ ಮಂಡಿಮರ್ಚೆಂಟು, ಅಸಿಸ್ಟೆಂಟ್ ಸೆಕ್ರೆಟರಿಗಳು. (೬) ಶ್ರೀ ಮಲ್ಲಿನಾಥದೇವರು ಮುರಘಾಮಠ, ಎಸ್. ಎಲ್. ನಂಜುಂಡಪ್ಪ, ಫರ್ನಿಚರ್ ಫ್ಯಾಕ್ಟರಿ, ಹೆಚ್. ಎಸ್. ನಂಜುಂಡಪ್ಪ ಫರ್ನಿಚರ್ ಫ್ಯಾಕ್ಟರಿ, ಹತ್ತಿಸಿದ್ದಪ್ಪ ಮಂಡಿಮರ್ಚೆಂಟು, ಪುಟ್ಟಸಿದ್ದಪ್ಪ ಮರ್ಚೆಂಟು, ಸತ್ಕಾರಕ ಕಾರ್ಯದರ್ಶಿಗಳು. ಮತ್ತು ೧೪ ಜನ ಸಹಾಯಕ ಕಮಿಟಿ ಮೆಂಬರುಗಳು.

ಮುಳಗುಂದ, ತಾ|| ಗದಗದ ಜಿಲ್ಲಾ ಧಾರವಾಡ.

ವೀರಶೈವ ವಿದ್ಯಾಪ್ರಸಾರಕ ಸಭೆ.

ಈ ಮುಂಚೆ ಪ್ರಕಟವಾದ ಪ್ರಕಾರ ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರರ ಗದ್ದುಗೆಯಲ್ಲಿ ಶಕೆ ೧೮೫೧ ಸಿದ್ಧಾರ್ಥಿ ಸಂವತ್ಸರ ಮಾಘ ಶು|| ೧೩ ಸೋಮವಾರ (ತಾ|| ೧೦-೨-೧೯೩೦) ಪ್ರಾತಃಕಾಲ ಶ್ರೀ ಏಕಾದಶ ರುದ್ರಪೂಜೆಯು ವಿಧಿವತ್ತಾಗಿ ಸಂಭ್ರಮದಿಂದ ನಡೆದು ಮಧ್ಯಾಹ್ನಕ್ಕೆ ಮಹಾಗಣಾರಾಧನೆಯು ಸಾಂಗವಾಯಿತು. ೩ ಘಂಟೆಗೆ ಮ|| ಹೋಳಿಯಪ್ಪಣ್ಣ ಬುಳ್ಳಾ ಇವರ ಜನ್ನಿನ ವರಾಂಡದಲ್ಲಿ ಏರ್ಪಡಿಸಿದ ಭವ್ಯಮಂಟಪದಲ್ಲಿ ಶ್ರೀಮದ್ವೀರಶೈವ ವಿದ್ಯಾಪ್ರಸಾರಕ ಸಭೆಯೂ ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಇಂಗ್ಲೀಷಶಾಲಾಸ್ಥಾಪನೆಯೂ ಅತಿ ವಿಜೃಂಭಣೆಯಿಂದ ಜರಗಿದವು. ಈ ಮಹತ್ಕಾರ್ಯಗಳಿಗೆ ರಾಣೇಬೆನ್ನೂರ, ಅಣ್ಣಿಗೇರಿ, ಅಥಣಿ, ಕೆರ್ಜಗಿ, ಚಿನ್ನಮುಳಗುಂದ, ಬಂಕಾಪುರ, ತಮಟೊಳ್ಳಿ, ಹುಬ್ಬಳ್ಳಿ, ಮಣಕವಾಡ, ಗದಗ, ಅಮೀನಗಡ, ಯರೆಬೇವಿನಹಳ್ಳಿ, ಹೊಂಗಲ, ರಾಯಬಾಗ ಮೊದಲಾದ ಕಡೆಯ ಶ್ರೀಮನ್ನಿರಂಜನ ಸ್ವಾಮಿಗಳವರೂ ಶಿವಯೋಗಮಂದಿರದಿಂದ ಶ್ರೀ ಮಹಾಂತದೇವರೇ ಮೊದಲಾದ ಶಿವಯೋಗಸಾಧಕರೂ ಗಂಜೀಗಟ್ಟಿ, ತೆಲಸಂಗಿ ಮೊದಲಾದ ಕಡೆಯ ಪಟ್ಟದದೇವರವರೂ, ವೇ|| ಶಿವಕಥಾ ಬಸವಲಿಂಗಶಾಸ್ತ್ರಿಗಳು, ವೇ|| ಮಾಗಡಿ ವೀರಪ್ಪಶಾಸ್ತ್ರಿಗಳು ಮೊದಲಾದ ಪಂಡಿತರೂ ಪಂಚಾಕ್ಷರ ಗವಾಯಿಗಳೂ, ರಾ. ಸಾ. ಮಣಸಿವೀರಪ್ಪನವರು, ಮ|| ಶಿವಪ್ಪ-ದುಂಡಪ್ಪನವರು ಮಾನ್ವಿ, ಮ|| ವೀರಪ್ಪನವರು ಚವಡಿ, ಮ|| ಶಾಂತವೀರಪ್ಪನವರು ಹುಬ್ಬಳ್ಳಿ, ಮ|| ಬಸಪ್ಪನವರು ಬಳ್ಳಾರಿ ಗದಗ, ಮ|| ದೊಡ್ಡಬಸಪ್ಪನವರು ಹಟ್ಟಿ, ಮ|| ತೋಟಪ್ಪನವರು ಕೋಟಿ ಬಿ. ಎ. ಎಲ್. ಎಲ್. ಬಿ., ಮೊದಲಾದ ಅನೇಕ ಶ್ರೀಮಂತರೂ ಪದವೀಧರರೂ ಗದಗ ರಾಣೆಬೆನ್ನೂರ ಹಾವೇರಿ ವೀರಶೈವ ತರುಣ ಸದುದ್ಯೋಗ ಸಂಘದವರೂ ಸುತ್ತಲಿನ ಗ್ರಾಮಗಳಿಂದ ನಾಲ್ಕಾರು ಸಾವಿರ ಜನ ಸದ್ಗೃಹಸ್ಥರೂ ಆಗಮಿಸಿದ್ದರು. ಈ ಮಹತ್ಕಾರ್ಯಗಳು ಜಯಪ್ರದವಾಗಿ ಜರುಗಲೆಂದು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದ ಆಶೀರ್ವಾದ ಪತ್ರವೂ, ರಾವ್ ಬಹದ್ದೂರ್ ಅರಟಾಳ ಸಾ|| ಬಿ. ಎಸ್. ಓ. ಮತ್ತು ಶ್ರೀಮಾನ್ ಶಾಂತವೀರಪ್ಪನವರು ಮೆಣಸಿನಕಾಯಿ ಮೊದಲಾದ ಮಹನೀಯರಿಂದ ಸಹಾನುಭೂತಿಪರವಾದ ಪತ್ರಗಳೂ ಬಂದಿದ್ದವು.

ಶ್ರೀಮದ್ವೀರಶೈವ ವಿದ್ಯಾಪ್ರಸಾರಕ ಸಭೆಯು ಡಿ. ಡಿ. ಕಲೆಕ್ಟರ್ ಶ್ರೀಮಾನ್ ರೇವಣಸಿದ್ಧಪ್ಪಯ್ಯನವರು ಕಿತ್ತೂರ ಇವರ ಅಧ್ಯಕ್ಷತೆಯಲ್ಲಿ ೨ ದಿವಸ ಜರುಗಿತು. ಈ ಸಭೆಯ ಸ್ವಾಗತ ಸಂಘಾಧ್ಯಕ್ಷರಾದ ಮ|| ಶಿವಪ್ಪ ಕೆಂಭಾವಿ ಇವರು ತಮ್ಮ ಭಾಷಣದಲ್ಲಿ ಶ್ರೀ ಬಾಲಲೀಲಾಮಹಾಂತ ಶಿವಯೋಗಿಗಳವರ ಮಹಿಮಚಾರಿತ್ರವನ್ನೂ ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯಸ್ವಾಮಿಗಳವರು ಮುಳಗುಂದಕ್ಕೆ ಆಗಮಿಸಿದ ಈ ನಾಲ್ಕು ತಿಂಗಳುಗಳಲ್ಲಿ ಯೇ ಯಾವ ಯಾವ ಮಹತ್ಕಾರ್ಯಗಳಾದವೆಂಬುದನ್ನೂ ಈ ದಿವಸ ಇಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಬಾಲಲೀಲಾಮಹಾಂತೇಶ ಇಂಗ್ಲೀಷ ಸ್ಕೂಲಿಗೆ ಶ್ರೀ ಸ್ವಾಮಿಗಳವರೇ ಇಲ್ಲಿಯ ಅನೇಕ ವಿದ್ಯಾಭಿಮಾನಿಗಳಾದ ಉದಾರಿಗಳ ಸಹಾಯದಿಂದ ಆರು ಸಾವಿರ ರೂಪಾಯಿಗಳ ಫಂಡನ್ನು ಕೂಡಿಸಿ ನಮಗೆ ಮಹತ್ಪ್ರಯೋಜನವನ್ನುಂಟುಮಾಡಿಕೊಟ್ಟಿರುವುದನ್ನೂ ಶ್ರೀ ಬಾಲಲೀಲಾಮಹಾಂತ ಶಿವಯೋಗಿಗಳವರು ಕಳೆದ ಇದೇ ಸಂವತ್ಸರ ಇದೇ ಮಾಸ ಇದೇ ತಿಥಿ ಇದೇ ಸೋಮವಾರ ದಿವಸ ಲಿಂಗೈಕ್ಯರಾದುದರಿಂದ ಇಂದಿಗೆ ಸರಿಯಾಗಿ ೬೦ ವರ್ಷಗಳಾದವೆಂತಲೂ ಆ ದಿವಸ ನಮಗುಂಟಾಗಿದ್ದ ಅಪಾರವಾದ ದುಃಖವು ಈ ದಿವಸ ಎಷ್ಟೋ ಮಟ್ಟಿಗೆ ಶಮನವಾಗಿ ನಮ್ಮ ಅಭಿವೃದ್ಧಿಯು ಇಂದಿನಿಂದ ಪ್ರಾರಂಭವಾಯಿತೆಂತಲೂ ಹೇಳಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜ ಹಿತಕಾರ್ಯಗಳಲ್ಲಿ ನಿರತರಾಗಿರುವ ಶ್ರೀ ಮೃತ್ಯುಂಜಯಸ್ವಾಮಿಗಳವರು ಹುಬ್ಬಳ್ಳಿ ತಾಲ್ಲೂಕು ಇಂಗಳಹಳ್ಳಿಯಲ್ಲಿ ಕ್ರಿ. ಶ. ೧೮೮೮ ರಲ್ಲಿ ಜನ್ಮವೆತ್ತಿ ೧೮ ನೇ ವರ್ಷದಲ್ಲಿ ಅಥಣಿಗಚ್ಚಿನ ಮಠದ ಶ್ರೀ ಮಹಾತಪಸ್ವಿಗಳ ಸೇವಾತತ್ಪರರಾಗಿ ಅನಂತರ ದಾವಣಗೇರಿ ವಿರಕ್ತಮಠಕ್ಕೆ ನೇಮಿಸಲ್ಪಟ್ಟು, ೧೯೧೭ ನೇ ಇಸವಿಯಿಂದ ಈಗ (೧೩) ವರ್ಷಗಳಲ್ಲಿ ಈ ಸ್ವಾಮಿಗಳು ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ವಿವರಿಸಿದರು. ದಾವಣಗೇರಿ ಹಾವನೂರು ಗುರುವಿಟಕಲ್ ಮುಳಗುಂದ ಮೊದಲಾದ ಸ್ಥಳಗಳಲ್ಲಿ ವಿದ್ಯಾಪ್ರಸಾರಕ ಫಂಡುಗಳು ಧಾರವಾಡದಲ್ಲಿ ೩೦ ಜನ ವಿದ್ಯಾರ್ಥಿಗಳಿಗೆ ಉಚಿತವಾದ ಬೋರ್ಡಿಂಗು, ಅನೇಕ ಸ್ಥಳಗಳಲ್ಲಿ ವೀರಶೈವತರುಣ ಸಂಘಗಳೂ, ವೀರಶೈವತರುಣ ಸಮ್ಮೇಲನವೂ, ಶ್ರೀ ಬಸವೇಶ್ವರ ಜಯಂತ್ಯುತ್ಸವವೂ ಮೊದಲಾದ ಸಮಾಜೋದ್ಧಾರಕ ಅನೇಕ ಮಹತ್ಕಾರ್ಯಗಳು ಈ ಮೃತ್ಯುಂಜಯಸ್ವಾಮಿಗಳವರಿಂದಲೇ ಮಾಡಲ್ಪಟ್ಟಿವೆಯೆಂತಲೂ, ಇವರಂತೆಯೇ ನಮ್ಮ ಸಮಾಜದ ಗುರುಗಳೆಲ್ಲರೂ ಸಮಾಜಹಿತತತ್ಪರರಾದರೆ ಶೀಘ್ರದಲ್ಲಿ ಸಮಾಜವು ಉನ್ನತಸ್ಥಿತಿಗೆ ಬರುವುದೆಂತಲೂ ಹೇಳಿ, ವಿದ್ಯಾಧರ್ಮಶಿಕ್ಷಣ ವಾಚನಾಲಯಗಳ ಅವಶ್ಯಕತೆ ಮತ್ತು ವ್ಯಾಪಾರ ಒಕ್ಕಲತನ ಕೈಗಾರಿಕೆಗಳನ್ನು ಕುರಿತು ಅತ್ಯಂತ ಮಹತ್ವದ ಭಾಷಣವನ್ನು ಮಾಡಿದರು. ವಿದ್ಯವೇ ನಮ್ಮ ಉನ್ನತಿಗೆ ಮೂಲವಾಗಿದೆಯೆಂತಲೂ ದಯಾಳುಗಳಾದ ಇಂಗ್ಲೀಷ ಸರ್ಕಾರದಿಂದ ಈ ವಿಷಯದಲ್ಲಿ ಬೇಕಾದಷ್ಟು ಸೌಲಭ್ಯಗಳುಂಟಾಗಿವೆಯೆಂತಲೂ ಪ್ರಾಥಮಿಕ ಶಿಕ್ಷಣವು ಬಲಾತ್ಕಾರವಾಗಿ ಕೊಡಲ್ಪಡದ ವಿನಾ ಅಶಿಕ್ಷಿತ ಸಮಾಜದವರು ತಮ್ಮ ಮಕ್ಕಳ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಅಷ್ಟು ಹೆಚ್ಚು ಲಕ್ಷಿಸುವುದಿಲ್ಲವೆಂತಲೂ ನಮ್ಮ ಸ್ವಂತ ಶಾಲೆಗಳಲ್ಲಿ ಧರ್ಮಶಿಕ್ಷಣ ದೊರೆಯುವಂತೆಯೂ ಅಂಥಶಾಲೆಗಳಲ್ಲಿ ವಾಚನಾಲಯಗಳನ್ನು ಏರ್ಪಡಿಸಿ ಧರ್ಮಗ್ರಂಥಗಳ ವಾಚನಾಭಿರುಚಿಯನ್ನು ಹೆಚ್ಚಿಸುವುದು ಅತ್ಯಗತ್ಯವೆಂತಲೂ ಕಾಲಕ್ಕೆ ತಕ್ಕಂತೆ ವ್ಯಾಪಾರ ಒಕ್ಕಲತನಗಳಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳಬೇಕೆಂತಲೂ, ಕೀರ್ತಿಶೇಷರಾದ ಶ್ರೀ ಶಿರಸಂಗೀ ಲಿಂಗರಾಜರವರ ಫಂಡಿನಿಂದ ಒಂದು ಕೈಗಾರಿಕೆಯ ವಿದ್ಯಾಲಯವನ್ನು ಸ್ಥಾಪಿಸುವುದು ಯುಕ್ತವೆಂತಲೂ ಸೂಚಿಸಿದರು. ಈ ಮೇಲಿನ ವಿಷಯಗಳನ್ನೇ ಕುರಿತು ಗದಗ ಹಾವೇರಿ ವೀರಶೈವ ತರುಣ ಸಂಘದ ಕೆಲವು ಸುಶಿಕ್ಷಿತ ತರುಣರು ಕನ್ನಡ, ಸಂಸ್ಕೃತ, ಇಂಗ್ಲೀಷು ಭಾಷೆಗಳಲ್ಲಿ ಬರೆದುಕೊಂಡುಬಂದಿದ್ದ ಸ್ವಾರಸ್ಯವಾದ ಉಪನ್ಯಾಸಗಳು ಓದಲ್ಪಟ್ಟವು.

ಶಿವಯೋಗಮಂದಿರದಿಂದ ಬಂದಿದ್ದ ಶ್ರೀ ಮಹಾಂತದೇವರು "ಯೋಗ" ಎಂಬ ವಿಷಯದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ವೇ|| ಕಂಬಸಯ್ಯನವರು ಪುರಾಣಮಠ ಇವರು ಧರ್ಮವೆಂಬ ವಿಷಯದಲ್ಲಿ ಬಹು ಬೋಧಪರವಾದ ಉಪನ್ಯಾಸವನ್ನು ಮಾಡಿದರು. ನಮ್ಮ ಇಹಪರಸುಖಗಳಿಗೆ ಧರ್ಮವೇ ಮೂಲವಾಗಿದೆಯೆಂಬುದನ್ನು ದೃಢೀಕರಿಸಿದರು. ಧೃತಿಕ್ಷಮಾದಮಾ ಅಸ್ತೇಯ ಮೊದಲಾದ ಧರ್ಮದ ದಶಲಕ್ಷಣಗಳನ್ನು ವಿವರಿಸಿ ಹೇಳಿದರು.

ಮ|| ಮಂಜಪ್ಪ ಹರ್ಡೇಕರ ಇವರು ಸಮಾಜಸೇವೆಯೆಂಬ ವಿಷಯದಲ್ಲಿ ಬಹು ಯುಕ್ತಿಯುಕ್ತವಾದ ಉಪನ್ಯಾಸವನ್ನು ಮಾಡಿದರು. ಪ್ರಾಣಿಶಾಸ್ತ್ರದಿಂದ ನೋಡಿದರೆ ಮನುಷ್ಯನು ಹೇಗೆ ಸಕಲ ಪ್ರಾಣಿಗಳಿಗಿಂತಲೂ ಇಂದ್ರಿಯವಿಶೇಷದಿಂದ ಶ್ರೇಷ್ಠನಾಗಿರುತ್ತಾನೆಯೋ ಹಾಗೆ ಸಮಾಜಶಾಸ್ತ್ರದಿಂದ ನೋಡಿದರೆ ಹಿಂದೂ ಧರ್ಮದ ಸಕಲ ಸಮಾಜಗಳಿಗಿಂತಲೂ ವೀರಶೈವ ಸಮಾಜವು ಅದರಲ್ಲಿರುವ ಶ್ರಮವಿಭಾಗದ ವಿಸ್ತಾರವಾದ ರಚನಾವಿಶೇಷದಿಂದ ಶ್ರೇಷ್ಠವಾದದ್ದಾಗಿದೆಯೆಂತಲೂ, ಗುರುವರ್ಗ ಮತ್ತು ಶಿಷ್ಯವರ್ಗಗಳೇ ಈ ಸಮಾಜಪುರುಷನ ರುಂಡ ಮತ್ತು ಮುಂಡಗಳೆಂತಲೂ ಸಮಾಜಪುರುಷನಲ್ಲಿ "ಸ್ವಾರ್ಥ, ದ್ವೇಷ, ಅಸೂಯೆ" ಗಳುಂಟಾದುದರಿಂದ ಶಾಸ್ತ್ರೋಕ್ತ ಸ್ವಾಚೀನ ಪದ್ಧತಿಗೂ ಸಮ್ಮತವಲ್ಲದ ರೀತಿಯಲ್ಲಿ ಗುರುಗುರುಗಳಲ್ಲಿಯೂ, ಭಕ್ತಭಕ್ತರಲ್ಲಿಯೂ ಮತ್ತು ಗುರುಶಿಷ್ಯರಲ್ಲಿಯೂ ಈ ಪ್ರಕಾರ ತ್ರಿವಿಧ ಕಲಹಗಳುಂಟಾಗಿ ಸಮಾಜಪುರುಷನು ನಾನಾ ದುಃಖಗಳಿಗೀಡಾಗಿದ್ದಾನೆಂತಲೂ ಸಮಾಜಸೇವೆಯೇ ದೇವರ ಸೇವೆಯಾಗಿರುವುದರಿಂದ ಸಮಾಜಪುರುಷನಲ್ಲುಂಟಾಗಿರುವ ಈ ತ್ರಿದೋಷಗಳನ್ನು ಧನಿಕರು ದ್ರವ್ಯದ ಸದ್ವಿನಿಯೋಗದಿಂದಲೂ, ವಿದ್ವಾಂಸರು ಸದುಪದೇಶದಿಂದಲೂ, ಗುರುಗಳು "ಪರಹಿತಾನುಯೋಗನೇಯೋಗಂ" ಎಂಬ ಕೈ|| ಬಸವಪ್ಪಶಾಸ್ತ್ರಿಗಳ ಉಕ್ತಿಯಂತೆ ಸಮಾಜಹಿತದಲ್ಲಿಯೇ ನಿರತವಾಗಿರುವ ಯೋಗದಿಂದಲೂ ನಿವಾರಣೆ ಮಾಡಬೇಕೆಂದು ಸೂಚಿಸಿದರು. ಅನಂತರ ಮೆ|| ೬ ನೇ ಅಸಿ. ಡಿ. ಎ. ಇ. ಸಾ|| ಮುದಿಯಪ್ಪಗೌಡರು ಮಣ್ಣೂರ ಇವರು ತಮ್ಮ ಕರ್ತವ್ಯವಾದ ವಿದ್ಯಾಭ್ಯಾಸದ ವಿಷಯದಲ್ಲಿ ಉಪಯುಕ್ತವಾದ ಸರಸಭಾಷಣ ಮಾಡಿದರು. ಅಂತೂರ ಅಸಿ|| ಮಾಸ್ತರ ಬಳ್ಳಾರಿಮಠ ಇವರು ಐಕಮತ್ಯದ ಬಗ್ಗೆ ಯೋಗ್ಯವಾದ ನಿಬಂಧವನ್ನು ಓದಿದರು. ಅನಂತರ ಮ|| ವೀರಬಸಪ್ಪ ಶ್ರೇಷ್ಠಿ ಬಿ. ಎ, ಇವರು "ಭಗವದ್ಗೀತೆ ಮತ್ತು ವೀರಶೈವಮತತತ್ವ" ಎಂಬ ವಿಷಯದಲ್ಲಿ ಅತ್ಯಂತ ಉತ್ಕೃಷ್ಟವಾದ ಉಪನ್ಯಾಸವನ್ನು ಮಾಡಿದರು. ವೀರಶೈವಮತತತ್ವಗಳಲ್ಲಿ ಮುಖ್ಯವಾದವುಗಳಾದ ಅಷ್ಟಾವರಣ ಮತ್ತು ಷಟ್‌ಸ್ಥಲಗಳ ವಿಷಯವು ಪ್ರಪಂಚಕ್ಕೇ ಮಾನ್ಯವಾಗಿರುವ ಭಗವದ್ಗೀತೆಯಲ್ಲಿಯೂ ವಿವರಿಸಲ್ಪಟ್ಟಿದೆಯೆಂದು ಕಳೆದ ನಾಲ್ಕು ವರ್ಷಗಳ ಅಧ್ಯಯನದಿಂದ ತನಗೆ ಗೊತ್ತಾಯಿತೆಂದು ಹೇಳಿ, ಹೆಚ್ಚು ಅವಕಾಶವಿಲ್ಲದ್ದರಿಂದ ಅಷ್ಟಾವರಣಗಳ ವಿಷಯವನ್ನು ಮಾತ್ರ ಸ್ಪಷ್ಟೀಕರಿಸಿದರು. ಭಗವದ್ಗೀತೆಯ ೫ ನೇ ಅಧ್ಯಾಯದ ೨೮-೨೯ ನೇ ಶ್ಲೋಕಗಳ ಮೇಲಿಂದ ಭಸ್ಮರುದ್ರಾಕ್ಷಿ ಗುರು ಲಿಂಗ ಜಂಗಮ ಇವುಗಳನ್ನೂ "ವಿಷಯಾವಿನಿವರ್ತಂತೆ" ಎಬ ಇದೇ ಅಧ್ಯಾಯದ ೫೯ ನೇ ಶ್ಲೋಕದಿಂದ ಪ್ರಸಾದವನ್ನೂ "ಯದಕ್ಷರಂ ವೇದವಿದೋವದಂತಿ" ಎಂಬ ೮ ನೇ ಅಧ್ಯಾಯದ ೧೧-೧೨-೧೩ ನೇ ಶ್ಲೋಕಗಳಿಂದ ಮಂತ್ರವನ್ನೂ ಈ ಪ್ರಕಾರ ಅಷ್ಟಾವರಣಗಳನ್ನು ಭಗವದ್ಗೀತೆಯ ಆಧಾರಗಳಿಂದ ದೃಢೀಕರಿಸಿ, ಅವುಗಳ ಪ್ರಾಮುಖ್ಯತೆಯನ್ನು ಬಹು ಚೆನ್ನಾಗಿ ವಿವರಿಸಿ ಯಾವ ಧರ್ಮದವರು ಮುಕ್ತರಾಗಬೇಕಾದರೂ ಈ ಅಷ್ಟಾವರಣಗಳನ್ನು ಯಾವ ವಿಧದಲ್ಲಿಯಾದರೂ ಹೊಂದಲೇಬೇಕೆಂದು ಪ್ರತಿಪಾದಿಸಿದರು.

ಶ್ರೀ ಬಾಲಲೀಲಾಮಹಾಂತೇಶ್ವರ ಇಂಗ್ಲೀಷ ಸ್ಕೂಲಿಗೋಸ್ಕರ ಪುಸ್ತಕಗಳನ್ನು ಕೊಂಡುಕೊಡಲಿಕ್ಕೂ, ಮೂಲದ್ರವ್ಯವನ್ನು ಹೆಚ್ಚಿಸಲಿಕ್ಕೂ ಸಭೆಯ ಕಾಲದಲ್ಲಿ ಧನಸಹಾಯ ಮಾಡಿದ ಮಹನೀಯರ ವಿವರ (ಸ್ಥಳಸಂಕೋಚದಿಂದ ಪಟ್ಟಿಯನ್ನು ಮುದ್ರಿಸಲಿಲ್ಲ. ಸ. ಪ್ರ.) ಅನೇಕ ಶ್ರೀಗಳವರು ಸದ್ಭಕ್ತರೂ, (ಸಮಾಜಸುಧಾರಕರೂ) ಧನಸಹಾಯ ಮಾಡಿದರು. ಇವರಲ್ಲಿ ಕೆಲವರು ವಾಗ್ದಾನ ಮಾಡಿದ್ದು ಅವರಿಂದಲೂ ಹಣ ಬರಲಿಕ್ಕೆ ಹತ್ತಿದೆ. ತೀವ್ರ ಬೇಬಾಕ ಬರುವಂತಿದೆ. ಅಧ್ಯಕ್ಷ ಮಹಾಶಯರು ಉಪಸಂಹಾರಕ ಭಾಷಣದಲ್ಲಿ ಈ ಇಂಗ್ಲೀಷ್ ಶಾಲೆಯು ಕೇವಲ ವೀರಶೈವರಿಂದಲೇ ಸ್ಥಾಪಿಸಲ್ಪಟ್ಟಿದ್ದರೂ ಸಕಲ ಮತೀಯರೂ ಇದರಲ್ಲಿ ಧಾರಾಳವಾಗಿ ಬಂದು ಕಲಿಯಲು ಅವಕಾಶವಿದೆಯೆಂದು ಸೂಚಿಸಿದರು. ಅನಂತರ ಗದಗ ಹಾವೇರಿ ರಾಣೇಬೆನ್ನೂರ ವೀರಶೈವ ತರುಣ ಸದುದ್ಯೋಗ ಸಂಘದವರು ಇಲ್ಲಿ ಸ್ವಯಂಸೇವಕರಾಗಿ ಸಮಾಜ ಕಾರ್ಯವನ್ನು ಮಾಡಿದ್ದರಿಂದ ಅವರಿಗೆ ಒಂದೊಂದು ಪದಕವೂ, ಮತ್ತು ಗ್ರಂಥಸಂಗ್ರಹಕ್ಕೋಸ್ಕರ ಶ್ರೀ ಶಿವಯೋಗಮಂದಿರಕ್ಕೆ ೨೫ ರೂಪಾಯಿಗಳೂ ಶ್ರೀ ಬಾಲಲೀಲಾಮಹಾಂತೇಶರ ಆಶೀರ್ವಾದ ರೂಪದಲ್ಲಿ ಕೊಡಲ್ಪಡುವುವೆಂದು ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯಸ್ವಾಮಿಗಳವರು ಅಪ್ಪಣೆ ಕೊಡಿಸಿದರು. ಆ ಮೇಲೆ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ರಥೋತ್ಸವ—ಮತ್ತು ತಾಲ್ಲೂಕು ಸಭೆ. ಸಿದ್ಧಾಪುರ

ಶ್ರೀಮನ್ನಿರಂಜನ ಸಿದ್ಧಾಪುರದ ಚನ್ನವೀರಸ್ವಾಮಿಗಳ ಕೃಪಾಬಲದಿಂದ ಇದೇ ಸಿದ್ಧಾರ್ಥಿ ಸಂ|| ಮಾಘ ಶು|| ೧೪ ಶಿ ಮಂಗಳವಾರದಿಂದ ಮಾಮೂಲಾಗಿ ಮಹಾರಥೋತ್ಸವವು ಅವಭೃತಸ್ನಾನಾಂತವಾಗಿ ಎಲ್ಲಾ ಉತ್ಸವಗಳೂ ಒಳ್ಳೇ ವಿಜೃಂಭಣೆಯಿಂದ ಜರುಗಿಸಲ್ಪಟ್ಟವು. ಈ ವರ್ಷದಿಂದ ಈ ರಥೋತ್ಸವಕ್ಕೆ ಸಂಬಂಧಿಸಿ ಮಾಘ ಬ|| ೨ ನೇ ಶುಕ್ರವಾರ ೫ ಘಂಟೆಗೆ ಒಂದು ವೀರಶೈವ ಮಹಾಜನರ ತಾಲ್ಲೂಕು ಸಭೆಯು ಕರೆಯಲ್ಪಟ್ಟಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಶಿರ್ಸಿ ಸಬ್‌ಜಡ್ ಕೋರ್ಟಿನ ವಕೀಲ ಸದಾಶಿವಪ್ಪಾಗೌಡ ಪಾಟೀಲ ಇವರು ಸ್ವೀಕರಿಸಲಿಕ್ಕೆ ಒಪ್ಪಿದ್ದರು. ಆದರೆ ಕೆಲವು ಅನಿವಾರ್ಯ ಕಾರಣದ ಮೂಲಕ ಸಭೆಗೆ ಬರಲಿಕ್ಕೆ ಆಗದೇ ಇದ್ದುದರಿಂದ ಶ್ರೇಯಸ್ಸಿಂಚನ ಸಂದೇಶವನ್ನು ಕಳಿಸಿದ್ದರು. ಸದರಿ ಸಭಾಧ್ಯಕ್ಷಸ್ಥಾನವನ್ನು ಸಿದ್ಧಾಪುರ ತಾಲ್ಲೂಕು ಲಿಂಗಾಯತ ಮುಂದಾಳುಗಳಲ್ಲೊಬ್ಬರೂ, ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನ ಮೆಂಬರರೂ ಆದ ಮ|| ಚನ್ನಬಸಪ್ಪಾಗೌಡ ಹೆಗ್ಗೋಡಮನೆ ಇವರು ಸ್ವೀಕರಿಸಿದರು.

ಈ ಸಭೆಯಲ್ಲಿ ಮಿ|| ಸಣ್ಣಪ್ಪಾ ಗಾಂವಕರ ಇವರು ಸಾಮಾಜಿಕ ರಾಜಕೀಯ ಸುಧಾರಣೆ ಈ ವಿಷಯದ ಮೇಲೆ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು. ಮತ್ತು ತಮ್ಮ ಭಾಷಣದ ಕೊನೆಯಲ್ಲಿ ಅವರು ಸಿದ್ಧಾಪುರದಲ್ಲಿ ಲಿಂಗಾಯತ ಇಂಗ್ಲೀಷ್ ಕಲಿಯುವ ವಿದ್ಯಾರ್ಥಿಗಳಿಗೆ ಒಂದು ಬೋರ್ಡಿಂಗನ್ನು ಸ್ಥಾಪಿಸುವುದು ಎಷ್ಟು ಅವಶ್ಯವದೆ ಎಂಬುದನ್ನು ತಿಳಿಸಿ ಹೇಳಿದರು. ಮತ್ತು ರಿಫಾರ್ಮ್ ಬಿಲ್ಲಿನನ್ವಯ ನಮ್ಮ ಜಿಲ್ಲೆಯಿಂದ ಉಮೇದುವಾರರಾಗಿ ನಿಲ್ಲುವವರಲ್ಲಿ ಯಾವ ಉಮೇದವಾರನು ಹಿಂದುಳಿದವರ ಸಂಬಂಧವಿದ್ದ ಮನಸಾ ದುಡಿಯುವನೋ ಅಂಥವನಿಗೆ ಮತಗಳನ್ನು ಕೊಡುವ ಸಲುವಾಗಿ ಮುಂದಾಗಿಯೇ ಒಂದು ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಪರಿಣಾಮಕಾರಕ ಭಾಷಣಮಾಡಿದರು. ಆ ಮೇಲೆ ವೇ|| ಮುರುಗಯ್ಯಾಸ್ವಾಮಿ ಹಿರೇಮಠ ಇವರು ಇಲ್ಲಿ ಹೊಸದಾಗಿ ಸ್ಥಾಪಿಸಿದ ಶಿರಸಂಗಿ ಸ್ಮಾರಕ ಲೈಬ್ರೆರಿಯ ಚಿರಸ್ಥಾಯಿ ಫಂಡನ್ನು ಕೂಡಿಸುವ ಸಲುವಾಗಿ ಒಂದು ಭಾಷಣ ಮಾಡಿದರು. ಕೂಡಲೇ ೬೦ ರೂಪಾಯಿಗಳು ವಸೂಲಾದವು. ಆ ಮೇಲೆ ಬಸ್ಸರ ಹೊಳೆಬಸಪ್ಪಾಸ್ವಾಮಿ ಇವರು ಶಿರ್ಸಿ ಮತ್ತು ಸಿದ್ಧಾಪುರ ತಾಲ್ಲೂಕಿನಲ್ಲಿ ಯಾವ ಲಿಂಗಾಯತ ವಿದ್ಯಾರ್ಥಿಯು ಮೊದಲು ಬಿ. ಎ. ಆಗುವರೋ ಅವನಿಗೆ ಈ ಹೊತ್ತಿನಿಂದ ಬಡ್ಡಿ ಸಹಿತ ೫೦ ರೂಪಾಯಿ ಇನಾಮು ಕೊಡುವದಾಗಿ ಒಪ್ಪಿಕೊಂಡು ಆ ಹಣವನ್ನು ಅಧ್ಯಕ್ಷರ ಕಡೆಗೆ ಕೊಡಲಿಕ್ಕೆ ಕಬೂಲ ಆದರು. ಮತ್ತು ಮುಂದೆ ಅವರು ದೇವಸ್ಥಾನದ ಎಲ್ಲಾ ವ್ಯವಸ್ಥೆಯು ಸರಿಯಾಗಿ ನಡೆಯುವಂತೆ ಒಂದು ತಾಲ್ಲೂಕ ಕಮಿಟಿ ಸ್ಥಾಪಿಸಬೇಕೆಂತಲೂ ಮತ್ತು ಲಿಂಗಾಯತರಿಗೆ ಅನುಕೂಲವಾಗುವಂತೆ ದೇವರ ಹೆಸರಿನಿಂದ ಒಂದು ಕೋ ಆಪರೇಟಿವ್ ಸೊಸೈಟಿ ಸ್ಥಾಪಿಸಬೇಕೆಂತಲೂ ಒಳ್ಳೇ ಆವೇಶಯುಕ್ತವಾಗಿ ಭಾಷಣ ಮಾಡಿದರು. ಇದಕ್ಕೆ ಯಾವತ್ತೂ ಜನರು ಅನುಮೋದನ ಕೊಟ್ಟರು. ಕೊನೆಯಲ್ಲಿ ಮಿ|| ಗಾಂವಕರ ಇವರು ಸೂಚಿಸಿದ ಅಂದರೆ ಉಮೇದುವಾರರಿಗೆ ಮತ ಕೊಡುವಾಗ ತಮ್ಮ ಮತಗಳನ್ನು ಮಾರಿಕೊಳ್ಳದೆ ಇಲ್ಲವೆ ಭೀಡೆ ಮುರುವತ್ತುಗಳಿಗೆ ಒಳಗಾಗದೆ ನಮ್ಮ ಹಿತಚಿಂತನೆಯನ್ನು ಬಯಸುವ ಥಾವರಿಗೇ ಓಟು ಕೊಡುವ ಬಗ್ಗೆ ಒಂದು ಸಂಘವನ್ನು ಸ್ಥಾಪಿಸುವ ಬಗ್ಗೆ ಸಮರ್ಥಿಸಿದರು. ಆ ಮೇಲೆ ವೇ|| ಮುರುಗಯ್ಯಾಸ್ವಾಮಿ ಹಿರೇಮಠ ಇವರು ಈ ವರ್ಷ ನಮ್ಮ ತಾಲ್ಲೂಕಿನಿಂದ ಮೂರು ಮಂದಿ ಲಿಂಗಾಯತ ಮೆಂಬರರಾಗಿ ಆರಿಸಲ್ಪಟ್ಟಿದ್ದಕ್ಕಾಗಿಯೂ ಅವರಲ್ಲಿ ಮ|| ಹೆಗ್ಗೋಡಮನಿ ಚನ್ನಬಸಪ್ಪಗೌಡರಿಗೆ ಡಿ|| ಲೋ||

ಮೈಸೂರು ಸ್ಟಾರ್.

೧೯೩೦ನೆಯ ಇಸವಿ ಫೆಬ್ರವರಿ ತಾ|| ೨೩ನೆಯ ಭಾನುವಾರ.

ಪೂಜ್ಯವರ್ಗದಲ್ಲಿ ಕಲಹೋತ್ಪಾದನೆ.

(ಭಾಗ ೨.)

ಈಗ ಪೂಜ್ಯವರ್ಗದ ಕಡೆಯಿಂದ ಸಮಾಜಕ್ಕೆ ಮುಖ್ಯವಾಗಿ ಆಗಬೇಕಾದುದು ಅವರೊಳಗಣ ಉಚ್ಚನೀಚ ಸಿದ್ಧಾಂತವಲ್ಲ. ಮತ್ತೇನೆಂದರೆ—ಅವರುಗಳ ಮೂಲಕವಾಗಿ ಮತಕ್ಕೆ ಉಂಟಾಗಬೇಕಾದ ಇಹಪರ ಶ್ರೇಯೋಲಾಭವೇ ಮುಖ್ಯವಾಗಿರುತ್ತದೆ. ಯಾವ ಸಮಾಜವಾದರೂ ಐಹಿಕವನ್ನು ಅಲಕ್ಷಿಸಿ ಪಾರಲೌಕಿಕವನ್ನೇ ನಂಬಿಕೊಂಡರೆ ಪ್ರಪಂಚದಲ್ಲಿ ಅದಕ್ಕೆ ತಕ್ಕ ಮನ್ನಣೆಯಿರಲಾರದು. ಅಲ್ಲದೆ ಪ್ರತ್ಯಕ್ಷವಾದ ಐಹಿಕಶ್ರೇಯಸ್ಸನ್ನೇ ಸಾಧಿಸಲಾರದವರು ಪರೋಕ್ಷವಾದ ಪಾರಲೌಕಿಕ ಶ್ರೇಯಸ್ಸನ್ನು ಹೇಗೆತಾನೇ ಸಾಧಿಸಬಲ್ಲರು ? ಆದುಕಾರಣ ಐಹಿಕಶ್ರೇಯಸ್ಸು ಉಪೇಕ್ಷಿಸತಕ್ಕುದಲ್ಲ. ಅದರಂತೆಯೇ ಐಹಿಕದಲ್ಲೇ ಮುಳುಗಿ ಪರಮಾರ್ಥವನ್ನು ಉಪೇಕ್ಷಿಸಲೂ ಆಗುವುದಿಲ್ಲ. ವಿಚಾರಮಾಡಿ ನೋಡಿದರೆ ನಮ್ಮ ಸಮಾಜವು ನಮ್ಮ ಭರತಖಂಡದಲ್ಲಿ ಸಂಖ್ಯಾಮಾನದಿಂದ ಅಷ್ಟೇನೂ ದೊಡ್ಡದಾಗಿಲ್ಲ. ಇದರ ಅತ್ಯಂತ ಜನ ಸಂಖ್ಯೆಯು ೪೦ ಲಕ್ಷಕ್ಕಿಂತ ಮೀರಿರಲಾರದು. ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಉಳಿದ ವ್ಯಾಪ್ತಿಗಳಲ್ಲಿ ಪಾರಸಿಯವರೇ ಮೊದಲಾದವರಂತೆಯಾದರೂ ನಮ್ಮ ಸಮಾಜವು ಇರುವುದೆ ಎಂದರೆ ಅದೂ ಇಲ್ಲ. ನಮ್ಮ ಸಮಾಜದವರ ಮುಖ್ಯೋದ್ಯೋಗಗಳು ವ್ಯಾಪಾರ ವ್ಯವಸಾಯಗಳೇ ಆಗಿದ್ದರೂ ಅವು ಕೂಡ ಇವರಲ್ಲಿ ಪ್ರಬಲ ಪ್ರಮಾಣದಿಂದ ಸಾಗುತ್ತಲಿಲ್ಲ. ಪಾರ್ಸಿ, ಗುಜ್ಜರ, ಮಾರ್ವಾಡಿ ವರ್ತಕಜನರಲ್ಲಿ ಕೋಟೀಶ್ವರರ ಸಂಖ್ಯೆಯು ಎಷ್ಟೋ ಇರುವಲ್ಲಿ ನಮ್ಮಲ್ಲಿ ಒಬ್ಬರ ಹೆಸರನ್ನಾದರೂ ಕಾಣುವಂತಿರುವುದಿಲ್ಲ. ಲಕ್ಷಗಟ್ಟಲೆ ಆರ್ಜಿಸುವ ವಿದೇಶ ವಿಶಿಷ್ಟ ವ್ಯಾಪಾರಸಂಬಂಧವೂ ನಮ್ಮವರಿಗಿಲ್ಲ. ಇನ್ನು ಲೌಕಿಕ ಸಂಪದ್ಗೌರವ ಸಾಧನೆಗೆ ಅವಶ್ಯಕವಾದ ರಾಜಕೀಯ ವಿದ್ಯೆಯಲ್ಲಿ ನೋಡಿದರೆ ೧೦೦ ಮಂದಿ ಗ್ರಾಜುಯೇಟುಗಳು ನಮ್ಮ ಸಮಾಜದಲ್ಲಿ ಸಿಕ್ಕುವುದು ಕೂಡ ಸಂಶಯವೇ. ಇಲ್ಲವೆನ್ನಬಾರದುದಕ್ಕೆ ಇಬ್ಬರು ಮಹನೀಯರು ಮಾತ್ರ ಎಂ. ಎ. ಪದವೀಧರರಾಗಿರುತ್ತಾರೆ. ಭರತಖಂಡದ ಸಿವಿಲ್ ಸರ್ವೀಸ್ ಪರೀಕ್ಷೆ ಕೊಟ್ಟ ಧೀಮಂತರೊಬ್ಬರ ತಲೆಯನ್ನೂ ನಮ್ಮಲ್ಲಿ ಇನ್ನೂ ಕಂಡಿಲ್ಲ. ಸರ್ಕಾರದ ಉದ್ಯೋಗಸ್ಥಾನಾಪನ್ನತೆಯಲ್ಲೂ ನಮ್ಮವರು ಕೇವಲ ವಿರಳರು. ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೊಬ್ಬರು ಹೊರತು ಅಷ್ಟು ಉನ್ನತಪದವಿಯನ್ನೂ ಡಿಸ್ಟ್ರಿಕ್ಟ್ ಜಡ್ಜ್, ಜಿಲ್ಲಾ ಕಲೆಕ್ಟರ್‌ಗಿರಿಯಂಥ ಸಾಧಾರಣ ಪದವಿಗಳನ್ನು ಕೂಡ ಪಡೆದವರಾರನ್ನೂ ನಾವು ನೋಡಿಲ್ಲ. ಇನ್ನು ನಿಯಮನಿರ್ಮಾಣಸಭಾಸ್ಥಾನ ಪದವಿಯನ್ನು ನಿಯೋಜನ ದ್ವಾರಾ ಪಡೆದುಕೊಂಡವರು ಮದ್ರಾಸು ಬೊಂಬಾಯಿ ಆಧಿಪತ್ಯಗಳಲ್ಲಿ ಒಬ್ಬರೂ ಸಿಗುವುದಿಲ್ಲ. ಇಲ್ಲವೆನ್ನುವುದಕ್ಕೆ ಬಾರದಂತೆ ೮-೧೦ ಮಂದಿ ಅಡ್ವೋಕೇಟರೂ, ನಾಲ್ಕಾರು ಮಂದಿ ಡಾಕ್ಟರುಗಳೂ, ೨೦-೩೦ ಮಂದಿ ಸಣ್ಣ ಪುಟ್ಟ ಅಧಿಕಾರಸ್ಥರೂ ದೊರೆಯಬಹುದು. ಭರತಖಂಡವು ಸ್ವರಾಜ್ಯದ ಮೆಟ್ಟಲನ್ನು ಹತ್ತುತ್ತಿರುವಾಗ ನಮ್ಮವರು ಸ್ಥಳಿಕಸಂಘಗಳ ಸ್ವಾತಂತ್ರ್ಯಲಾಭವನ್ನು ಪಡೆದುಕೊಳ್ಳುವ ಆಸಕ್ತಿಯನ್ನೂ ತೋರಿಸುತ್ತಲಿಲ್ಲ. ಗೋಖಲೆಯವರಂಥ ರಾಜತಂತ್ರಕೋವಿದರೂ, ಬೋಸ್ ರಾಯರಂಥ ಶಾಸ್ತ್ರೀಯಪರಿಜ್ಞಾನ ಧುರಂಧರರೂ, ಭಂಡಾರ್ಕರ್, ತಿಲಕ್‌ರಂಥ ಶೋಧಕರೂ, ನವರೋಜಿ, ಬ್ಯಾನರ್ಜಿ, ಮಾಳವ್ಯರಂಥ ವಾಗ್ಮಿಗಳೂ ಉದಯಗೊಳ್ಳುವುದು ಯಾವ ಕಾಲಕ್ಕೆ ? ದಕ್ಷಿಣ ದೇಶವನ್ನು ಬಿಟ್ಟು ಉತ್ತರ ಹಿಂದೂಸ್ಥಾನದ ಪಂಜಾಬು ಪ್ರಾಂತದಲ್ಲೂ ಬಂಗಾಳಾ ಪ್ರಾಂತದಲ್ಲೂ ವೀರಶೈವರೆಂದರೆ ಯಾರೆಂಬುದು ಅಲ್ಲಿಯ ಸಾಮಾನ್ಯಜನವರ್ಗಕ್ಕೆ ಗೊತ್ತೇಇಲ್ಲ. ನಮ್ಮ ಐಹಿಕಸ್ಥಿತಿಯ ಚಿತ್ರವು ಇಷ್ಟು ಹೀನದೀನ ರೂಪವಾಗಿರುತ್ತದೆ.

ಇನ್ನು ಧಾರ್ಮಿಕ ವಿಷಯದಲ್ಲೆಂದರೋ ಇದಕ್ಕಿಂತಲೂ ಹೀನವಾಗಿದೆ. ಸೂಕ್ಷ್ಮವಿಷಯಗಳನ್ನು ಬಿಟ್ಟು ಸ್ಥೂಲವಿಚಾರಗಳನ್ನು ಹಿಡಿದು ನೋಡಿದರೂ ಅಗಣಿತಲೋಪಗಳು ಕಂಡುಬರುತ್ತವೆ. ಅನೇಕ ತರದ ಕರ್ಮಗಳ ಜಂಜಾಟವು ನಮಗಿಲ್ಲದಿದ್ದರೂ ನಿತ್ಯವಾದ ಯಾವಜ್ಜೀವ ಶಿವಪೂಜಾ ವ್ರತಕ್ಕೂ ಕೂಡ ಅನೇಕರು ಎರವಾಗಿದ್ದಾರೆ. ಅದನ್ನು ಬಿಡದೆ ಆಚರಿಸತಕ್ಕವರಲ್ಲೂ ಆ ವಿಧಿವಿಧಾನವು ಮನೆಗೆ ನಾಲ್ಕು ತೆರನಾಗಿವೆ. ಶಾಸ್ತ್ರೀಯ ಸಂಸ್ಕಾರಗಳು ನಾಮಮಾತ್ರಕ್ಕೂ ಲಕ್ಷಾಂಶ ಜನರಿಗೆ ನಡೆಯುವುದಿಲ್ಲ. ಇಷ್ಟಲಿಂಗ ಲಕ್ಷಣಾದಿಗಳನ್ನು ತಿಳಿದವರು ಪೂಜ್ಯವರ್ಗದಲ್ಲೇ ವಿರಳರಾಗಿರುವಾಗ ಪೂಜಕವರ್ಗದವರ ಅವಸ್ಥೆಯನ್ನು ಹೇಳುವುದೇನು ? ಅವಿನಾಭೂತವಾಗಿ ದೇಹದಲ್ಲಿ ಸಂಬಂಧಗೊಂಡಿರಬೇಕಾದ ಇಷ್ಟಲಿಂಗದ ಧಾರಣವನ್ನೇ ಅನೇಕರು ಪರಿತ್ಯಜಿಸಿರುವರು. ಇನ್ನು ನಿತ್ಯನೈಮಿತ್ತಿಕ ಕರ್ಮಗಳ ಧರ್ಮಾಧರ್ಮಗಳ ವಿಧಿನಿಷೇಧಗಳ ವಿಚಾರವನ್ನು ಮಾಡಿದವರು ಲಕ್ಷಕ್ಕೊಬ್ಬರಾದರೂ ಸಿಕ್ಕುವರೋ ಇಲ್ಲವೋ ! ಶಿವಾಗಮಗಳಲ್ಲೂ ಸಿದ್ಧಾಂತ ಶಾಸ್ತ್ರಗಳಲ್ಲೂ ಹೇಳಲ್ಪಟ್ಟಿರುವ ಷಟ್ಸ್ಥಲಾಷ್ಟಾವರಣಗಳ ಮರ್ಯಾದೆಯನ್ನು ಹಿಡಿದು ಆಚರಿಸುವ ಸದಾಚಾರಿಗಳು ಕೇವಲ ವೃದ್ಧರೇ ಸರಿ. ಸ್ಥೂಲಾಚಾರ ನಿಯಮಗಳನ್ನನುಸರಿಸುವಲ್ಲಿ ವೀರಶೈವರು ಭವಿಸಂಗ ಸಾಹಚರ್ಯ ಸಂಭಾಷಣ ಪರಿತ್ಯಾಗರೂಪ ದುಸ್ಸಾಧ್ಯ ವಿಷಯಗಳ ಹೊರತು ಭವಿಪಾಕ ಸ್ವೀಕಾರ, ದುರಾಹಾರ ದುಷ್ಪಾನಸೇವನ ವಿಷಯಗಳಲ್ಲಿ ಕಟ್ಟಾಗಿರುವರೆಂಬ ಪ್ರತೀತಿಯಾದರೂ ಇದುವರೆಗಿದ್ದಿತು. ಈಗ ಅದುಕೂಡ ಸಡಿಲವಾಗುತ್ತಲಿರುವ ಭಯಂಕರ ಚಿಹ್ನೆಗಳು ಕಂಡುಬರುತ್ತಿವೆ. ಅನೇಕರು ಮತಸಂಬಂಧವನ್ನೇ ಕಳಕೊಳ್ಳುತ್ತಿದ್ದಾರೆ. ಧಾರ್ಮಿಕ ಶಿಕ್ಷಾರಕ್ಷಣ ಪಟ್ಟಬದ್ಧರ ಭಯವು ಸಮಾಜಕ್ಕೆ ತಪ್ಪಿಹೋಗಿದೆ. ಗದ್ದರಿಸಿ ಕೇಳಿ ಶಿಕ್ಷಿಸುವುದಕ್ಕೆ ಅವರಲ್ಲೇ ತಕ್ಕ ಬಂಡವಾಳವಿಲ್ಲ. ಉಪಾಧ್ಯಾಯನೇ ತಿಷ್ಠನ್ಮೂತ್ರದವನಾಗಿರುವಾಗ ಹುಡುಗರು ಗಚ್ಛನ್ಮೂತ್ರರಾಗುವುದಾಶ್ಚರ್ಯವೆ ? ಎಂಬಂತಾಗಿರುತ್ತದೆ. ಆ ಧರ್ಮಾಧ್ಯಕ್ಷವರ್ಗದ ಲೋಪಗಳನ್ನು ಕುರಿತು ನಾವು ಇಲ್ಲಿ ಹೆಚ್ಚಿಗೆ ಬರೆಯಲು ಇಚ್ಛೈಸುವುದಿಲ್ಲ. ಸರ್ವರಿಗೂ ಅವು ಗೊತ್ತೇಇರುತ್ತವೆ. ''ನಾವು ಪಲಿಸುವುದಕ್ಕೇ ಇರುವುದು; ಭಕ್ತರು ನೀಡುವುದಕ್ಕೇ ಇರುವುದು'' ಎಂಬಷ್ಟರಲ್ಲೇ ಗುರುಶಿಷ್ಯ ಮುಖ್ಯಧರ್ಮವು ನಿಂತಿದೆಯೆಂದು ತಿಳಿದವರೇ ಇವರಲ್ಲಿ ಹೆಚ್ಚಿಕೊಂಡಿದ್ದಾರೆ. ಪೂಜ್ಯವರ್ಗದ ಮುಖ್ಯ ಪೀಠಾಧಿಪತಿಗಳು ತಮ್ಮ ಅಧಿಕಾರವನ್ನೂ ಸಾಮರ್ಥ್ಯವನ್ನೂ ಜ್ಞಾನವನ್ನೂ ವಿನಿಯೋಗಿಸಿ ವಿದ್ಯುಚ್ಛಕ್ತಿಯಂತೆ ಕೆಲಸ ಮಾಡುತ್ತಿದ್ದರೆ ಸಮಾಜದಲ್ಲಿ ಇಷ್ಟೊಂದು ಕಾರ್ಗತ್ತಲು ಕವಿಯುತ್ತಿರಲಿಲ್ಲ. ದೇಶಮಧ್ಯದಲ್ಲಿ ಧಾರ್ಮಿಕ ಜಾಗರೂಕತೆಯನ್ನು ಹುಟ್ಟಿಸಲು ತಮ್ಮ ಸಂಚರಣದ ಮೂಲಕ ಪ್ರಕಾಶವನ್ನು ಕೆಡಹಿ ಎಚ್ಚರುಗೊಳಿಸಿ ಸಮಾಜೋದ್ಧಾರವನ್ನು ಮಾಡಬೇಕೆಂಬ ಲವಲವಿಕೆಯೇ ಅವರಲ್ಲಿ ಕಡಿಮೆಯಾಗಿದೆ. ತಾವು ಪರಶಿವಸ್ವರೂಪಿಗಳೆಂಬುದನ್ನು ಈ ವಿಷಯದಲ್ಲಿ ಅನೇಕರಿಗಿರುವ ನಿತ್ಯತೃಪ್ತತ್ವದಿಂದ ತೋರ್ಪಡಿಸುತ್ತಿರುವಂತೆ ಕಾಣುತ್ತದೆ. ಅವರ ಶಾಖಾಮಠಗಳ ಮತ್ತು ಅವುಗಳೊಳಗೆ ಸೇರಿಕೊಂಡು ಆ ಮಠಸ್ಥಲಗಳನ್ನೆಲ್ಲಾ ನರಕಕ್ಕೆ ಸಮನಾಗಿ ಮಾಡಿಕೊಂಡಿರುವ ಪರಸಹಸ್ರಮಠಸಾಮಧಾರಕಗಳ ಅವಸ್ಥೆಯನ್ನು ನಾವು ವರ್ಣಿಸ ತೊಡಗುವುದಿಲ್ಲ. ಸ್ಮರಿಸಿದರೆ ಸಂಕಟವಾಗುತ್ತದೆ. ಅದಕ್ಕೆ ಅಪವಾದವಾಗಿ ಸಾವಿರಕ್ಕೊಂದೊಂದು ಮಠಗಳಿದ್ದರೂ ಇರಬಹುದು.

ಇನ್ನು ಮಠದ ಜ್ಞಾನಭಾಂಡಾಗಾರದ ಸ್ಥಿತಿಯನ್ನು ಅವಲೋಕಿಸಿದರೆ ಅದು ಇದಕ್ಕಿಂತಲೂ ಶೋಚನೀಯವಾಗಿರುವುದು. ತನ್ನ ಮತೋದ್ಧಾರಕ್ಕಾಗಿ ಶಿವನು ನಿರೂಪಿಸಿರುವ ದಿವ್ಯಾಗಮಗಳಲ್ಲಿ ಇದುವರೆಗೇ ಎಷ್ಟೋ ನಾಮಾವಶೇಷವಾಗಿರುವುವು. ಸಾಂಗವಾಗಿ ಒಂದೆರಡಾಗಮಗಳನ್ನಾದರೂ ಜೋಪಾನಗೊಳಿಸಿ ಇಟ್ಟುಕೊಂಡಿರುವ ಯಾವೊಬ್ಬ ಪಂಡಿತರನ್ನಾಗಲಿ ಯಾವೊಂದು ಆಚಾರ್ಯಪೀಠವನ್ನಾಗಲಿ ನಾವು ನೋಡಲಿಲ್ಲ. ಪ್ರತಿಯೊಬ್ಬ ಮುಖ್ಯಾಚಾರ್ಯಪೀಠಾಧೀಶರಾದರೂ ತಮ್ಮ ಮಠಗಳಲ್ಲಿ ಪ್ರಾಚೀನಗ್ರಂಥಗಳನ್ನು ಶೇಖರಿಸಿಡಬೇಕಾದುದು ಮುಖ್ಯ ಕರ್ತವ್ಯವೆಂಬುದನ್ನು ಗಮನಿಸಿಯೇ ಇಲ್ಲ. ಧರ್ಮಾಭಿಮಾನದಿಂದ ಅಲ್ಲಲ್ಲಿ ಕೆಲವಿದ್ವಜ್ಜನರು ಶೇಖರಿಸಿಟ್ಟುಕೊಂಡಿರುವ ಗ್ರಂಥಗಳ ಪ್ರಚಾರಕ್ಕೆ ತಕ್ಕ ಸಾಹಾಯ್ಯ ಪ್ರೋತ್ಸಾಹಗಳಿಲ್ಲ. ಧರ್ಮಗ್ರಂಥಗಳ ಅಧ್ಯಯನವನ್ನು ಮಾಡಿ ಧರ್ಮಪ್ರಸಾರಕ್ಕೆ ಸಾಹಾಯಕರಾಗಬೇಕೆಂಬ ಅಪೇಕ್ಷೆಯುಳ್ಳ ಮಾಹೇಶ್ವರ ಜನರೇ ವಿರಳ. ಒಂದುವೇಳೆ ಎಲ್ಲೋ ಒಬ್ಬಿಬ್ಬರು ತಲೆಯೆತ್ತಿ ಮುಂದಕ್ಕೆ ಬಂದರೆ ಅವರುಗಳಿಗೆ ಪ್ರೋತ್ಸಾಹವೇ ಇಲ್ಲ. ಹೀಗಿರುವುದರಿಂದ ವೈದಿಕವಿದ್ಯಾಭ್ಯಾಸದಿಂದ ಜೀವಿಕೆಗೇ ಕಷ್ಟವಾಗಿ ಅನೇಕರು ಇದನ್ನು ತಿರುಪದ ವಿದ್ಯೆಯೆಂದು ತಿಳಿದು ದೂರೀಕರಿಸುತ್ತ ಬಂದಿರುವರು. ಎಲ್ಲೋ ಕೆಲ ಶಾಸ್ತ್ರಜ್ಞಾನಸಂಪನ್ನರು ಕಂಡುಬಂದರೂ ಮಹಾಮಹೋಪಾಧ್ಯಾಯಾದಿ ಗೌರವವನ್ನು ಪಡೆದವರು ಒಬ್ಬರೂ ಇಲ್ಲ. ಹೀಗಾಗಿ ಮತಧರ್ಮ ಕರ್ಮ ವಿಧಿವಿಧಾನಗಳೆಲ್ಲಾ ಗ್ರಂಥಗಳಲ್ಲೇ ಉಳಿದಿರುವುವು. ಎಷ್ಟೋ ಶ್ರಮಪಟ್ಟು ಮತಸೇವಾರೂಪ ತಪಸ್ಸಿನಿಂದ ತಮ್ಮ ಜ್ಞಾನಶಕ್ತಿಯನ್ನೆಲ್ಲಾ ವಿನಿಯೋಗಿಸಿ ರಚಿಸಿಟ್ಟ ಪ್ರಾಚೀನರ ಧಾರ್ಮಿಕ ಗ್ರಂಥಗಳೆಲ್ಲಾ ಈಗಿಣವರ ನಿರಭಿಮಾನ-ಅಸಾಮರ್ಥ್ಯಾದಿಗಳಿಂದ ಗೆಜ್ಜಲು ಪಾಲಾಗುತ್ತಿರುವುವು. ಈ ಸ್ಥಿತಿಯನ್ನೆಲ್ಲಾ ನೋಡಿ ಪರಸಮಯಗಳ ಕೆಲಧೂರ್ತರು ಈ ವೀರಶೈವರು ಗೀರ್ವಾಣಭಾಷಾಭ್ಯಾಸಕ್ಕೇ ಅರ್ಹರಲ್ಲವೆಂದು ನುಡಿಯುವುದಕ್ಕೂ ಹಿಂಜರಿಯದಂತಾಯಿತು. ವೀರಶೈವವೆಂಬುದು ಒಂದು ಜಾತಿಯೆಂತಲೂ, ಇವರು ಅವೈದಿಕರೆಂತಲೂ, ಇವರೆಲ್ಲಾ ಶೂದ್ರರೆಂತಲೂ ಸಹ ಅಜ್ಞಜನರು ಆಡಿಕೊಳ್ಳಲು ಮಾರ್ಗವಾಯಿತು.

ಇಷ್ಟೆಲ್ಲಾ ದುಃಸ್ಥಿತಿಗಳು ನಮಗೆ ಲೌಕಿಕ ಧಾರ್ಮಿಕ ವಿಷಯಗಳೆರಡಲ್ಲೂ ಬೆನ್ನಂಟಿ ಕವಿದುಕೊಂಡಿರುವಾಗ, ಪ್ರಚಂಡ ಜಂಝಾನಿಲವು ಮುಗಿಲನ್ನು ಝಾಡಿಸಿ ಹೊಡೆದುಬಿಡುವಂತೆ ನಮ್ಮ ಸಮಾಜವೆಲ್ಲವೂ ಏಕಶಕ್ತಿಯಿಂದ ನಮ್ಮ ಮೇಲೆ ಕವಿದಿರುವ ಲೌಕಿಕ ಧಾರ್ಮಿಕವ್ಯಾಪತ್ತಿರೂಪವಾದ ಮಬ್ಬನ್ನು ಕೊಡಹಿ ಶುಭವಾತಾವರಣಕ್ಕೆ ಬಂದು ನಿಂತುಕೊಳ್ಳದಿದ್ದರೆ ನಮಗೆ ಇಹಪರ ಮೋಕ್ಷಗಳು ಲಭಿಸುವುದುಂಟೆ ? ನಮಗೆ ಐಕಮತ್ಯ ಶಕ್ತಿಯಿಲ್ಲದಿದ್ದರೆ ಈ ಮಹತ್ಕಾರ್ಯವು ಸಾಧ್ಯವಾಗುವುದುಂಟೆ ? ಕುಲಾಚಲಗಳ ಗಾತ್ರದ ಕರ್ತವ್ಯಭಾರವು ನಮ್ಮ ಮೇಲೆ ಬಿದ್ದಿರುವಾಗ ಅದನ್ನು ನೋಡದೆ, ''ಗ್ರಾಮಂಗಚ್ಛನ್ ತೃಣಂಸ್ಪೃಶತಿ'' ಎಂಬುವಂತೆ ''ನಮ್ಮ ಪೂಜ್ಯವರ್ಗದವರಲ್ಲ ಅವರು ಹೆಚ್ಚು ಇವರು ಕಡಿಮೆ'' ಯೆಂಬ ವಾದದ ಬೇತಾಳನನ್ನು ಎಬ್ಬಿಸುರುವವರ ವಿವೇಕವನ್ನು ನೋಡಿ ನಗಬೇಕೆ ? ಅಥವಾ ಅಳಬೇಕೆ ?

ತುಮಕೂರು ಡಿ|| ೧ನೆ ಶ್ರೀಮದ್ವೀರಶೈವ ಪ್ರಾಂತಿಕ ಸಭೆ.

ತುಮಕೂರಿಗೆ ೩ ಮೈಲಿಗಳ ದೂರದಲ್ಲಿರುವ ಶ್ರೀಸಿದ್ಧಗಂಗಾಕ್ಷೇತ್ರದಲ್ಲಿ ಶಿವೈಕ್ಯಶ್ರೀ ಅಡವಿಸ್ವಾಮಿಗಳ ಕಾಲದಿಂದಲೂ ಪ್ರತಿನಿತ್ಯ ದಾಸೋಹವೂ ವರ್ಷವರ್ಷ ನವರಾತ್ರಿಯ ಕಾಲದಲ್ಲೂ, ರಥೋತ್ಸವ ಕಾಲದಲ್ಲೂ ಮಹತ್ತರವಾದ ಜಾತ್ರೆಯೂ ವಿಶೇಷದಾಸೋಹವೂ ನಡೆಯುವುದು ಪದ್ಧತಿಯಾಗಿದೆ. ಇಂಥ ವಿಶೇಷೋತ್ಸವ ಸಮಯವೂ ಬಹುಜನ ವೀರಶೈವ ಮತಸ್ಥರ ಕೂಟವೂ ಇದುವರೆಗೆ ಊಟ ನೋಟಗಳಲ್ಲೇ ಪರ್ಯವಸಾನಗೊಳ್ಳುತ್ತಿದ್ದುವು. ಈ ಸಂಧಿಯನ್ನು ಸಮಾಜೋತ್ಕರ್ಷಕ್ಕೆ ಉಪಯೋಗಿಸಿಕೊಳ್ಳುವ ದಾರಿಯನ್ನು ಅಲ್ಲಿಯ ಶ್ರೀ ಉದ್ದಾನ ಸ್ವಾಮಿಗಳೂ ತುಮಕೂರಿನ ಮತಾಭಿಮಾನಿ ಮಹಾಜನರೂ ಹಾಕಿಕೊಟ್ಟು, ಈ ವರ್ಷ ಅಲ್ಲಿ ಪ್ರಾಂತಿಕಸಭೆಯನ್ನು ನೆರೆಯಿಸಲು ಆರಂಭಿಸಿ, ತತ್ಸಂಬಂಧವಾಗಿ ಕೊಟ್ಟಿರುವ ಪ್ರಕಟನಪತ್ರಿಕೆಯನ್ನು ಇದೇ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿ, ಇಂಥ ಪ್ರಯತ್ನವನ್ನು ಕೈಕೊಂಡುದಕ್ಕಾಗಿ ಇದರ ವ್ಯವಸ್ಥಾಪಕರನ್ನೆಲ್ಲಾ ಅಭಿನಂದಿಸುವುದಲ್ಲದೆ ಸಭೆಯು ಸಾರ್ಥಕವಾಗಿ ಈಡೇರಲೆಂದು ಕೋರುತ್ತೇವೆ.

ಇಂಥ ಪ್ರಾಂತಿಕ ಸಭೆಗಳು ಪ್ರತಿ ಡಿಸ್ಟ್ರಿಕ್ಟ ತಾಲ್ಲೂಕು ಸ್ಥಲಗಳಲ್ಲೆಲ್ಲಾ ಆಗುವಂತಾಗಬೇಕು. ಮಹಾಸಭೆಯಲ್ಲಿ ಆದ ನಿರ್ಧಾರಗಳನ್ನು ಸರ್ವತ್ರ ವ್ಯವಹಾರಕ್ಕೆ ತರಿಸಬೇಕಾದರೂ ಎಲ್ಲ ಕಡೆಯೂ ಸಮಾಜಾಭಿಮಾನವನ್ನೂ ಧರ್ಮಜಾಗರೂಕತೆಯನ್ನೂ ವಿದ್ಯಾಪ್ರಸಾರಕುತೂಹಲವನ್ನೂ ಇತರ ವಿಧವಾದ ಆತ್ಮೋದ್ಧಾರದ ಯತ್ನಗಳಲ್ಲಿ ಅಭಿರುಚಿಯನ್ನೂ ಸಮಾಜದವರಲ್ಲಿ ಹೆಚ್ಚಿಸಬೇಕಾದರೂ ಇಂಥ ಪ್ರಾಂತಿಕಸಭೆಗಳಿಂದಲ್ಲದೆ ಬೇರೆ ಸಾಧ್ಯವಲ್ಲ. ಮಹಾಸಭೆಗೆ ಹೋಗಲು ಸಣ್ಣಸಣ್ಣ ಗ್ರಾಮಾಂತರಗಳ ಸಕಲರಿಗೂ ದೂರ ದೇಶಗಳವರಿಗೂ ಸಾಧ್ಯವಲ್ಲ. ಅಂಥವರುಗಳೆಲ್ಲಾ ಇಂಥ ಪ್ರಾಂತಿಕ ಸಭೆಗಳಿಗೆ ಸೇರಿ ಮಹಾಸಭೆಯ ಫಲಿತಾಂಶವನ್ನು ಇವುಗಳ ಮೂಲಕ ಪಡೆದುಕೊಳ್ಳಬಹುದು. ಇಂಥ ಪ್ರಾಂತಿಕಸಭೆಯ ಚಾಲಕರು ಮಹಾಸಭೆಯ ನಿರ್ಧಾರಗಳನ್ನು ವ್ಯವಹರಣೆಗೆ ತರಿಸುವ ಯತ್ನವನ್ನು ಮೊದಲನೆಯ ಕಾರ್ಯವನ್ನಾಗಿಟ್ಟುಕೊಳ್ಳಬೇಕು. ವಿದ್ಯಾಭ್ಯಾಸ ಸೌಕರ್ಯಗಳಿಗೆ ಶಾಶ್ವತಪ್ರತಿಷ್ಠಾಪನೆಗಳನ್ನು ಕಲ್ಪಿಸುವುದನ್ನು ೨ನೆ ಉದ್ದೇಶವನ್ನಾಗಿಟ್ಟುಕೊಳ್ಳಬೇಕು. ಔದ್ಯೋಗಿಕಾಭಿವೃದ್ಧಿ ಕುತೂಹಲವೂ, ಐಕಮತ್ಯ ರಕ್ಷಣ ಯತ್ನಗಳೂ, ಧರ್ಮಶ್ರದ್ಧೆಯೂ ಮತಲಕ್ಷಣ ಜ್ಞಾನವೂ ಇತರ ಸ್ಥಳಿಕ ವಿಷಯಗಳಿಗೆ ಸಂಬಂಧಪಟ್ಟ ವಿಚಾರಗಳೂ ೩ ನೆಯವಾಗಿರುವಂತೆ ಮಾಡಿಕೊಳ್ಳಬೇಕು. ಮುಖ್ಯವಾಗಿ ತುಮಕೂರು ಡಿಸ್ಟ್ರಿಕ್ಟು ವೀರಶೈವರು ಹೆಚ್ಚಾಗಿರುವ ಪ್ರಾಂತವಾಗಿದೆ. ಅಂಥ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲಿ ವೀರಶೈವ ವಿದ್ಯಾರ್ಥಿ ನಿಲಯವಿಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಅದು ಅವಶ್ಯವಾಗಿ ನೆರವೇರಬೇಕು. ಇದನ್ನು ಆ ಡಿಸ್ಟ್ರಿಕ್ಟಿನ ವೀರಶೈವ ಪ್ರಮುಖರೆಲ್ಲರೂ ಗಮನಿಸಿ, ಈ ಪ್ರಾಂತಿಕ ಸಭೆಗೆ ದಯಮಾಡಿಸಿ, ಈಗ ಕೈಕೊಂಡಿರುವ ಯತ್ನವನ್ನು ಕೊನೆಮುಟ್ಟಿಸಿ ಈ ಪ್ರಾಂತಿಕ ಸಭೆಯು ವರ್ಷೇವರ್ಷೆ ನಡೆಯುವಂತೆ ಶಾಶ್ವತಗೊಳಿಸಿ, ನೆರೆಹೊರೆಯ ಶಿವಮೊಗ್ಗಾ, ಚಿಕ್ಕಮಗಳೂರು, ಚಿತ್ರದುರ್ಗ, ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾರ್ಥಿಗಳಿಗೆ ಶಾಶ್ವತ ಸೌಕರ್ಯವಿರುವಂತೆ ಇಲ್ಲಿಯೂ ಮಾಡಿ, ಕೀರ್ತಿಭಾಜನರೂ ಪುಣ್ಯಭಾಗಿಗಳೂ ಆಗಲೆಂದೂ, ಅದಕ್ಕೆ ಸರ್ವರೂ ಮನಮುಟ್ಟಿ ಸಹಾಯಗೊಳಿಸುವವರಾಗಲೆಂದೂ ಕೋರುವೆವು.

ಒಳದೇಶ ವೃತ್ತಾಂತಗಳು.

ಶ್ರೀಮದ್ಯುವರಾಜರು ಬೊಂಬಾಯಿ ಮಾರ್ಗವಾಗಿ ಸೀಮೆಗೆ ಪ್ರಯಾಣ ಮಾಡುವುದಕ್ಕೆ ಇನ್ನು ೩-೪ ದಿನಗಳಲ್ಲಿ ಪ್ರಯಾಣ ಬೆಳೆಸುವವರಾಗಿದ್ದಾರೆ.

ಮೈಸೂರು ಸಿಟಿ ಪೊಲೀಸ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಎವರಾರ್ಡ್‌ರವರು ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ನಿಗೂ, ದಾವಣಗೆರೆಯಲ್ಲಿದ್ದ ಮಿ|| ಅಬ್ದುಲ್‌ಗನಿಯವರು ಮೈಸೂರುಸಿಟಿ ಪೊಲೀಸ್ ಸೂಪರಿಂಟೆಂಡೆಂಟ್ ಸ್ಥಾನಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಮೈಸೂರು ಸಂಸ್ಥಾನದ ಎಲ್ಲೆಯಿಂದ ಹೊರಕ್ಕೆ ಬತ್ತ (ಅಕ್ಕಿ) ರಾಗಿ ಜೋಳಗಳನ್ನು ರೈಲಿನ ಮೂಲಕವಾದರೆ ಫುಡ್‌ಕಂಟ್ರೋಲರ, ರೋಡುಗಳ ಮೂಲಕವಾದರೆ ಡಿ|| ಡಿ|| ಕಮಿಷನರ ಅಪ್ಪಣೆಯಿಲ್ಲದೆ ಫೆಬ್ರವರಿ ತಾ|| ೧೭ ರಿಂದ ಯಾರೂ ಸಾಗಿಸಕೂಡದೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಈ ದಿವಸ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಪ್ರಯಾಣ ಮಾಡಲಿಕ್ಕಿರುವ ಶ್ರೀಮನ್ಮಹಾರಾಜರವರ ಜತೆಗೆ ದಿವಾನರವರು ಕೂಡ ಪ್ರಯಾಣ ಮಾಡುವವರಾಗಿದ್ದಾರೆ. ಅಲ್ಲಿ ಜಲಪಾತ ಬೆಂಕಿಪುರದ ಕಬ್ಬಿಣದ ಕಾರ್ಖಾಲಯ, ಭಟ್ಕಳ ರೇವೆಯ ಸ್ಥಲ ಮೊದಲಾದುವುಗಳನ್ನೆಲ್ಲಾ ಪರಾಮರಿಸಿಕೊಂಡು ಒಂದು ವಾರದಲ್ಲಿ ಹಿಂದಿರುಗಿ ದಯಮಾಡಿಸುತ್ತಾರೆ.

ಮೈಸೂರು ನಿಯಮನಿರ್ಮಾಣ ಸಭೆಗೆ ಸರ್ಕಾರಿ ಮೆಂಬರುಗಳು—ಮ|| ಗಳಾದ ಚೀಫ್‌ಸೆಕ್ರೆಟರಿಯವರು, ಚೀಫ್‌ಇಂಜನಿಯರು, ರೆವಿನ್ಯೂ ಕಮಿಷನರು, ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಜನರಲ್‌ರವರು, ಗೌ|| ಅಡ್ವೋಕೇಟರು, ಫೈನಾನ್ಷಿಯಲ್ ಸೆಕ್ರೆಟರಿಯವರು, ಎಜ್ಯುಕೇಷನ್ ಮತ್ತು ಅಗ್ರಿಕಲ್ಚರ್ ಸೆಕ್ರೆಟರಿಯವರು, ಸೀನಿಯರ್ ಸರ್ಜನರು, ಫಾರೆಸ್ಟ್ ಕನ್ಸರ್ವೇಟರು, ಎಕ್ಸೈಜ್ ಕಮಿಷನರು, ರೈಲ್ವೆ ಏಜಂಟ್ ಮತ್ತು ಸೆಕ್ರೆಟರಿಗಳು, ಫುಡ್‌ಕಂಟ್ರೋಲರು. ಮತ್ತು ಪ್ರಜಾಪ್ರತಿನಿಧಿ ಸಭೆಯಿಂದ ಆರಿಸಲ್ಪಟ್ಟವರು—ಮ|| ಗಳಾದ ಬಿ. ಎನ್. ವಿಜಯದೇವರವರು, ಅಬ್ಬಾಸ್‌ಖಾನರು, ಎಂ. ಸುಬ್ಬಯ್ಯನವರು. ಡಿಸ್ಟ್ರಿಕ್ಟುಗಳಿಂದ ಆರಿಸಲ್ಪಟ್ಟವರು—ಮ|| ಗಳಾದ ಬಿ. ವಿ. ರಾಮಸ್ವಾಮಿಶೆಟ್ಟರು, ಡಿ. ವೆಂಕಟೇಶಯ್ಯನವರು, ಎಸ್. ಸಿ. ಜವರಯ್ಯನವರು, ಎಚ್. ವೆಂಕಟರಾಮಯ್ಯನವರು, ಹೆಚ್. ಕೃಷ್ಣರಾವ್‌ರವರು, ಎಚ್. ಜಿ. ಬಸವಪ್ಪನವರು, ಎನ್. ಎಸ್. ನಂಜುಂಡಯ್ಯನವರು, ಅನಂತಯ್ಯಶೆಟ್ಟರು. ಮೈಸೂರು ವಿಶ್ವವಿದ್ಯಾಲಯ ಸಂಘದಿಂದ ಆರಿಸಲ್ಪಟ್ಟವರು ಮ|| ಸಿ. ರಂಗಯ್ಯಂಗಾರರು. ಇವರಲ್ಲದೆ ಸರ್ಕಾರದಿಂದ ನಿಯುಕ್ತರಾದವರು—ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ರಾ|| ಬ|| ಎಂ. ಶ್ಯಾಮರಾಯರು, ರಾ|| ಸಾ|| ಎಚ್. ಚೆನ್ನಯ್ಯನವರು, ಎಂ. ರಾಮಚಂದ್ರರಾಯರು, ಅಬ್ದುಲ್‌ರಹೀಂ ಬಿ. ಎ. ಎಲ್‌ಎಲ್. ಬಿ. ಯವರು ಸಹ, ಸಭಿಕರಾಗಿರುವರೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಆಹ್ವಾನ ಪ್ರಸಿದ್ಧಿಪತ್ರಿಕಾ.

ಸಮಸ್ತ ವೀರಶೈವ ಮಹಾಶಯರಲ್ಲಿ ವಿಜ್ಞಾಪಿಸಿಕೊಳ್ಳುವದೇನಂದರೆ:- ವೀರಶೈವಭಕ್ತಮಾಹೇಶ್ವರರ ಸಮ್ಮೇಳನ ಪ್ರಾಂತಿಕ ಸಭೆಯು ಕಡೂರು ಡಿ|| ತರೀಕೆರೆ ತಾಲ್ಲೂಕು ಪ್ರಾಂತದ ವೀರಶೈವ ಮಹಾಜನರ ಉದಾರಾಶ್ರಯದಿಂದ ಅಜ್ಜಂಪುರ ಪೋಸ್ಟ್ (ಬಗ್ಗವಳ್ಳಿ) ಎಂಬ ಗ್ರಾಮದಲ್ಲಿ ಇದೇ ಫೆಬ್ರವರಿ ತಿಂಗಳುತಾರೀಖು ೨೮-೨೯ ನೇ ಶನಿವಾರ-ಭಾನುವಾರ ನಡೆಸಲ್ಪಡುತ್ತ. ಈ ತಾಲ್ಲೂಕು ವೀರಶೈವ (ಕಾನ್‌ಫರೆನ್ಸ್) ಪ್ರಾಂತಿಕ ಸಭೆಯು ಜಗತ್ಪೂಜ್ಯರಾದ ಷಟ್‌ಸ್ಥಲಜ್ಞಾನ ಸಿಂಹಾಸನಾಧೀಶರು ಮತ್ತು ಮತಸ್ಥಾಪಕರಾದ ಪಂಚಾಚಾರ್ಯ ಪೀಠಾಧೀಶ್ವರರು ಈ ಜಗದ್ಗುರು ಮಹಾಸ್ವಾಮಿಗಳವರ ಕೃಪಾಶೀರ್ವಾದ ಬಲದಿಂದ ಈ ಪ್ರಾಂತದ ಭಕ್ತಮಾಹೇಶ್ವರರ ಮತಾಚಾರ, ನೀತಿ, ವಿದ್ಯೆ, ವಿವೇಕ, ವ್ಯವಸಾಯ, ಸಂಪತ್ತು, ಐಕಮತ್ಯ ಇತ್ಯಾದಿಗಳ ಅಭ್ಯುನ್ನತಿಯನ್ನು ಕುರಿತು ಸ್ಟಾರ್ ಪತ್ರಿಕಾಕರ್ತರು ತಾ|| ೧೮-೧-೩೦ ನೇ ಸಂಚಿಕೆಯಲ್ಲಿ ಪ್ರಕಟಿಸಿದ ಯೋಗ್ಯಸಲಹೆ ಮೇರೆಯೇ ಬೀರೂರಿನ ನಲ್ಲೂರು ಉಬ್ರಾಣಿ ಮಠದ ವೇ|| ಎನ್. ಎಂ. ಶಿವಲಿಂಗಪ್ಪನವರು ರೆಪ್ರಜಂಟೇಟೀವ್ ಅಸೆಂಬ್ಲಿ ಮೆಂಬರು ಮತ್ತು ಮ್ಯು|| ಅನರೇರಿ ವೈಸ್-ಪ್ರೆಸಿಡೆಂಟರು ಇವರ ಅಧ್ಯಕ್ಷತೆಯಿಂದ ಜರಗಿಸಲ್ಪಡುತ್ತದೆ. ಈ ಮಹಾಶಯರು ಅಧ್ಯಕ್ಷರಾಗಲು ನಮ್ಮಗಳ ಕೋರಿಕೆ ಮೇರೆ ಒಪ್ಪಿರುವ ವಿಷಯವನ್ನು ತಿಳಿಸಲು ಸಂತೋಷಪಡುತ್ತೇವೆ. ಈ ತಾಲ್ಲೂಕು ವಗ್ಗೈರೆ ಮಹಾಜನರಿಗೆಲ್ಲಾ ಆಮಂತ್ರಣಪತ್ರಿಕೆಗಳು ಕಳುಹಿಸಲ್ಪಟ್ಟು ಇವೆ. ಈ ಸಮ್ಮೇಳನ ಸಭಾಕಾಲಕ್ಕೆ ಮತಸ್ಥಾಪಕರಾದ ಪಂಚಾಚಾರ್ಯ ಜಗದ್ಗುರು ಪೀಠಗಳವಲ್ಲಿ ಬಾಜು ಜಗದ್ಗುರು (ದಾರುಕಾಚಾರ್ಯ) ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶಿವಾನುಭವ ಚರಪಟ್ಟಾಧ್ಯಕ್ಷರು ಶ್ರೀ ಗುರುಮರುಳ ಸಿದ್ಧರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ದಯಮಾಡಿಸಿ, ಸಿಂಹಾಸನಾರೋಹಣ ಮಾಡಿ ಧರ್ಮೋಪನ್ಯಾಸ ಮಾಡುತ್ತಾರೆ.

ಮೇಲ್ಕಂಡ ಅಭ್ಯುನ್ನತಿಗಳ ವಿಷಯಗಳ ಮೇಲೆ ಭಾಷಣ ಮಾಡತಕ್ಕವರು ತಾ|| ೨೬-೨-೩೦ ರೊಳಗೆ ಬರೆದು ಸೆಕ್ರೆಟರಿಯವರಲ್ಲಿಗೆ ಕಳುಹಿಸಲೂ ಉಪನ್ಯಾಸಕರು ದಯಮಾಡಿಸಲೂ ಪ್ರಾರ್ಥಿಸುತ್ತೇವೆ. ಈ ಸಭೆಗೆ ದಯಮಾಡಿಸತಕ್ಕ ಮಹಾಶಯರುಗಳಿಗೆಲ್ಲಾ ಸಾಧ್ಯವಾದ ಮಟ್ಟಿಗೂ ಬಿಡಾರಗಳನ್ನು ಭೋಜನೋಪಚಾರದ ವ್ಯವಸ್ಥೆಯನ್ನೂ ಇಟ್ಟಿದ್ದೇವೆ. (ಮುಖ್ಯ) ಸಮಾಜೋನ್ನತಿಯ ಕಡೆಗೆ ಲಕ್ಷ್ಯವಿಟ್ಟು ಮತಾಭಿಮಾನಿಗಳಾದ ಸರ್ವರೂ ದಯಮಾಡಿ, ಈ ಗ್ರಾಮವನ್ನು ಪವಿತ್ರಗೊಳಿಸಬೇಕೆಂದು ಬೇಡುತ್ತೇವೆ. ಈ ಗ್ರಾಮವು ಅಜ್ಜಂಪುರ ರೈಲ್ವೆಸ್ಟೇಷನ್ನಿಗೆ ೩ ಮೈಲಿ, ಬೀರೂರಿಗೆ, ೬ ಮೈಲಿ ಅಂತರದಲ್ಲಿದೆ.

ಸೆಕ್ರೆಟರಿ,
ಆರಾಧ್ಯಸ್ವಾಮಿ,
ಹಿರೇಮಠ.

(ಸತ್ಕಾರಸಂಘದ ಅಧ್ಯಕ್ಷರು,)
ಸಿ. ಚಿಕ್ಕ ಕರಿಯಪ್ಪಗೌಡ,
ಬಿ. ಎ. ಮಲ್ಲಿಕಪ್ಪ,

ಈ ಮೇಲೆ ಕಂಡ ಪ್ರಾಂತಿಕಸಭೆಯು ಮತದ ಐಕಮತ್ಯಕ್ಕೆ ಭಂಗ ತರದಂತೆ ನಿರಾಕ್ಷೇಪವಾಗಿ ನಡೆದುಹೋಗಲು ಏರ್ಪಡಿಸಲ್ಪಟ್ಟಿದೆಯೆಂದು ಕೇಳುತ್ತೇವೆ. ಇದರ ಸಂಬಂಧವಾಗಿ ಸ್ಟಾರ್ ಪತ್ರದಲ್ಲಿ ಹಿಂದೆ ಒಬ್ಬರು ಆಕ್ಷೇಪಿಸಿ ಬರೆದಿದ್ದ ಕರಸ್ಪಾಂಡೆನ್ಸಿಗೆ ಉತ್ತರವನ್ನು ಸಭಾಚಾಲಕರು ಬರೆದು ಕಳುಹಿಸಿದ್ದಾರೆ. ಆದರೆ ಸಭೆಯು ಶಾಂತವಾಗಿ ನಡೆಯುತ್ತಿದ್ದು, ತತ್ಸಂಬಂಧವಾಗಿ ನಮಗೆ ಕಳುಹಿಸಲ್ಪಟ್ಟಿರುವ ಲೇಖನಗಳೆಲ್ಲಾ ತಡವಾಗಿ ನಿನ್ನೆ ತಾನೇ ಬಂದಿವೆ. ಆದುಕಾರಣ ಅದನ್ನೆಲ್ಲಾ ಪ್ರಕಟಿಸಲು ಅವಕಾಶವಿಲ್ಲದೆ ಮೇಲ್ಕಂಡ ಆಹ್ವಾನಪತ್ರಿಕೆಯನ್ನು ಮಾತ್ರ ಮುದ್ರಿಸಿದ್ದೇವೆ. ಆ ಪ್ರಾಂತದ ವೀರಶೈವರೆಲ್ಲರೂ ಈ ಸಭೆಗೆ ದಯಮಾಡಿಸಿ, ಸಭೆಯನ್ನು ಸಾಂಗಗೊಳಿಸಬೇಕೆಂದು ಕೋರುತ್ತೇವೆ. ಸಂಪು ೭. ಸಂಖ್ಯೆ ೨೨ ಸ. ಪ್ರ.

ಮೈಸೂರ್ ಸ್ಟಾರ್ ೨೩।೨।೧೯೩೦

ಶ್ರೀ ಸಿದ್ಧಗಂಗಾ ಮಹಾಕ್ಷೇತ್ರದಲ್ಲಿ ನಡೆಯುವ ೧ನೇ ಶ್ರೀಮದ್ವೀರಶೈವ ಪ್ರಾಂತಿಕಸಭಾ.

ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣಾವಿರಳ ಪರಂಜ್ಯೋತಿ ಪರಬ್ರಹ್ಮ ಪರಶಿವ ಲೀಲಾವತಾರ ನಿರಂಜನ ಶ್ರೀ ಪ್ರಭುದೇವ ಪರಂಪರಾಗತ ಶ್ರೀ ಸಿದ್ಧಗಂಗಾ ಮಹಾಕ್ಷೇತ್ರ ಪ್ರವಿರಾಜಮಾನ ಮಠಾಧ್ಯಕ್ಷರಾದ ಶ್ರೀ ಉದ್ದಾನ ಸ್ವಾಮಿಗಳವರು ಈ ಮೊದಲೇ ಪ್ರಚುರಪಡಿಸಿರುವಂತೆ ಸದರಿ ಸುಕ್ಷೇತ್ರದಲ್ಲಿ ನಡೆಯುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಜಾತ್ರಾ ಮಹೋತ್ಸವ ಕಾಲದಲ್ಲಿ ತುಮಕೂರು ಡಿಸ್ಟ್ರಿಕ್ಟಿನ ವೀರಶೈವ ಸಮಾಜದ ಪುರೋಭಿವೃದ್ಧಿಗಾಗಿ ಒಂದು ಪ್ರಾಂತಿಕ ಸಭೆಯನ್ನು ತುಮಕೂರು ವೀರಶೈವ ಸೇವಾಸಮಾಜದವರು (೨೭-೨-೩೦) ನೇ ತಾ|| ಗುರುವಾರ ನಡೆಸಲು ಶ್ರೀಯವರ ಕೃಪೆಯಿಂದ ಏರ್ಪಾಡುಮಾಡಿರುವದರಿಂದ ಅದಕ್ಕಾಗಿ ಮತಾಭಿಮಾನಿಗಳಾದವರು ಸ್ವಂತ ಕೆಲಸದ ತೊಂದರೆಗಳಿದ್ದಾಗ್ಯೂ ಬಿಟ್ಟು ಅಗತ್ಯವಾಗಿ ದಯವಿಟ್ಟು ಬಂದು ಸಭಾಕಾರ್ಯವನ್ನು ಸಾಂಗಗೊಳಿಸಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಕೃಪಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರುತ್ತಾರೆ. ಬರತಕ್ಕವರು ಮೇಲ್ಕಂಡ ಕ್ಷೇತ್ರಕ್ಕೋಸ್ಕರ ರೈಲ್ವೆಕಂಪನಿಯವರು ಅನುಕೂಲ ಪಡಿಸಿಕೊಟ್ಟಿರುವ ಕ್ಯಾತ್ಸಂದ್ರದ ಸ್ಟೇಷನ್ನಲ್ಲಿ ಇಳಿಯತಕ್ಕದ್ದು. ಭೋಜನಾದಿಗಳಿಗೆ ಮೇಲ್ಕಂಡ ಶ್ರೀ ಉದ್ದಾನಸ್ವಾಮಿಗಳವರ ದಾಸೋಹದಲ್ಲಿ ಏರ್ಪಾಡುಮಾಡಿರುತ್ತಾರೆ.

ವಿಷಯಗಳು.

(೧) ಮತತತ್ವ. (೨) ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಐಕಮತ್ಯದ ಸಾಧನೆಗೆ ಉಪಾಯಗಳು. (೩) ವಿದ್ಯಾಭ್ಯಾಸ. (a) ಸಂಸ್ಕೃತ. (b) ಪ್ರಾಥಮಿಕ. (c) ಸ್ತ್ರೀಶಿಕ್ಷಣದ ಅವಶ್ಯಕತೆ. (೪) ವ್ಯಾಪಾರ, ವ್ಯವಸಾಯ ಮತ್ತು ಕೈಗಾರಿಕೆಗಳ ವಿಷಯಗಳಲ್ಲಿ ಅವಶ್ಯಕವಾದ ಸಾಧನೆಗಳು ಮತ್ತು ಅನುಕೂಲತೆಗಳು. (೫) ವಿವಾಹಾದಿ ಶುಭಕಾರ್ಯಗಳನ್ನು ಮಿತವ್ಯಯದಿಂದ ನಡೆಸುವದು ಮತ್ತು ವಿದ್ಯಾಭಿವೃದ್ಧಿ ಫಂಡಿಗೆ ಆ ಕಾಲಗಳಲ್ಲಿ ಸಹಾಯಮಾಡುವದು. (೬) ವಿದ್ಯಾರ್ಥಿನಿಲಯದ ಉಪಯೋಗಗಳು. ಈ ವಿಷಯಗಳಲ್ಲಿ ಉಪನ್ಯಾಸಮಾಡುವವರು ತಮ್ಮ ಉಪನ್ಯಾಸಗಳನ್ನು ಬಹು ಸಂಕ್ಷೇಪವಾಗಿ ಬರೆದು ಫೆಬ್ರವರಿ ೨೫ನೇ ತಾರೀಖಿನೊಳಗಾಗಿ ತುಮಕೂರಿನಲ್ಲಿರುವ ಈ ಸಮಾಜದ ಜನರಲ್ ಸೆಕ್ರೆಟರಿಯವರಿಗೆ ಕಳಿಸುವುದು.

ತುಮಕೂರು ವೀರಶೈವ ಸೇವಾ ಸಮಾಜದ ಮೆಂಬರುಗಳು.

(೧) ಟಿ. ಸಿ. ರೇವಣ್ಣ, ಪ್ರೆಸಿಡೆಂಟ್ (ಬೆಂಚ್‌ಮ್ಯಾಜಿಸ್ಟ್ರೇಟ್-ಮತ್ತು ಮುನಿಸಿಪಲ್ ಕೌನ್ಸಿಲರ್). (೨) ಟಿ. ಯಂ. ಹುಚ್ಚಣ್ಣ (ಮರ್ಚೆಂಟ್) ವೈಸ್‌ಪ್ರೆಸಿಡೆಂಟ್. (೩) ಜಿ. ಕೆ. ಗುರುಸಂಗಯ್ಯ, ಪ್ಲೀಡರ್, ಜನರಲ್ ಸೆಕ್ರೆಟರಿ. (೪) ಟಿ. ಗುರುಚನ್ನಬಸವಯ್ಯ ಹೆಡ್ಮಾಸ್ಟರ್, ಟಿ. ಸಿ. ರುದ್ರಣ್ಣ ಮರ್ಚೆಂಟು, ಜಾಯಿಂಟ್ ಸೆಕ್ರೆಟರಿಗಳು. (೫) ಎಂ. ಆ. ವೀರಣ್ಣ ಮಂಡಿ ಮತ್ತು ಜವಳಿ ವರ್ತಕರು, ಟಿ. ಪ್ರಧಾನಿ ಅಯ್ಯಣ್ಣ ಮಂಡಿಮರ್ಚೆಂಟು, ಅಸಿಸ್ಟೆಂಟ್ ಸೆಕ್ರೆಟರಿಗಳು. (೬) ಶ್ರೀ ಮಲ್ಲಿನಾಥದೇವರು ಮುರುಘಾಮಠ, ಎಸ್. ಎಲ್. ನಂಜುಂಡಪ್ಪ, ಫರ್ನೀಚರ್ ಫ್ಯಾಕ್ಟರಿ, ಹೆಚ್. ಎಸ್. ನಂಜುಂಡಪ್ಪ ಫರ್ನೀಚರ್ ಫ್ಯಾಕ್ಟರಿ, ಹತ್ತಿಸಂಗಪ್ಪ ಮಂಡಿಮರ್ಚೆಂಟು, ಕುಟ್ಟಿಸಿದ್ದಪ್ಪ ಮರ್ಚೆಂಟು, ಸಹಕಾರಕ ಕಾರ್ಯದರ್ಶಿಗಳು. ಮತ್ತು ೧೪ ಜನ ಸಹಾಯಕ ಕಮಿಟಿ ಮೆಂಬರುಗಳು.

ಮುಳಗುಂದ, ತಾ|| ಗದಗ ಜಿಲ್ಲಾ ಧಾರವಾಡ.

ವೀರಶೈವ ವಿದ್ಯಾಪ್ರಸಾರಕ ಸಭೆ.

ಈ ಮುಂಚೆ ಪ್ರಕಟವಾದ ಪ್ರಕಾರ ಶ್ರೀ ಬಾಲಲೀಲಾಮಹಾಂತ ಶಿವಯೋಗಿಗಳವರ ಗವಿಮಠದಲ್ಲಿ ಶಕೆ ೧೮೫೧ ಸಿದ್ಧಾರ್ಥಿ ಸಂವತ್ಸರದ ಮಾಘ ಶು|| ೧೩ ಸೋಮವಾರ (ತಾ|| ೧೦-೨-೧೯೩೦) ಪ್ರಾತಃಕಾಲ ಶ್ರೀ ಏಕಾದಶ ರುದ್ರಪೂಜೆಯು ವಿಧಿವತ್ತಾಗಿ ಸಂಭ್ರಮದಿಂದ ನಡೆದು ಮಧ್ಯಾಹ್ನಕ್ಕೆ ಮಹಾಗಣಾರಾಧನೆಯು ಸಾಂಗವಾಯಿತು. ೩ ಘಂಟೆಗೆ ಮ|| ಹೋಳಿಯಪ್ಪಣ್ಣಾ ಬಳ್ಳಾ ಇವರ ಚನ್ನಿನ ವರಾಂಡದಲ್ಲಿ ಏರ್ಪಡಿಸಿದ ಭವ್ಯಮಂಟಪದಲ್ಲಿ ಶ್ರೀಮದ್ವೀರಶೈವ ವಿದ್ಯಾಪ್ರಸಾರಕ ಸಭೆಯೂ ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಇಂಗ್ಲೀಷಶಾಲಾಸ್ಥಾಪನೆಯೂ ಅತಿ ವಿಜೃಂಭಣೆಯಿಂದ ಜರಗಿದವು. ಈ ಮಹತ್ಕಾರ್ಯಗಳಿಗೆ ರಾಣೇಬೆನ್ನೂರ, ಅಣ್ಣೀಗೇರಿ, ಅಥಣಿ, ಕೆರ್ಜಗಿ, ಚಿನ್ನಮುಳಗುಂದ, ಬಂಕಾಪುರ, ಹಮದೊಳ್ಳಿ, ಹುಬ್ಬಳ್ಳಿ, ಮಣಕವಾಡ, ಗದಗ, ಅಡವೀನಗರ, ಯರಿಬೆಂವಡಿ, ಹೊಂಗಲ, ರಾಯವಾಳ ಮೊದಲಾದ ಕಡೆಯ ಶ್ರೀಮನ್ನಿರಂಜನ ಸ್ವಾಮಿಗಳವರೂ ಶಿವಯೋಗಮಂದಿರದಿಂದ ಶ್ರೀ ಮಹಾಂತದೇವರೇ ಮೊದಲಾದ ಶಿವಯೋಗಸಾಧಕರೂ ಗಂಜೀಗಟ್ಟಿ, ತೆಲಸಂಗಿ ಮೊದಲಾದ ಕಡೆಯ ಪಟ್ಟದದೇವರವರೂ, ವೇ|| ಶಿವಕಥಾ ಬಸವಲಿಂಗಶಾಸ್ತ್ರಿಗಳು, ವೇ|| ಮಾಗಡಿ ವೀರಪ್ಪಶಾಸ್ತ್ರಿಗಳು ಮೊದಲಾದ ಪಂಡಿತರೂ ಸಂಚಾಕ್ಷರ ಗವಾಯಿಗಳೂ, ರಾ. ಸಾ. ಮಾನವಿವೀರಪ್ಪನವರು, ಮ|| ಶಿವಪ್ಪ-ದುಂಡಪ್ಪನವರು ಮಾನ್ವಿ, ಮ|| ವೀರಪ್ಪನವರು ಚವಡಿ, ಮ|| ಶಾಂತವೀರಪ್ಪನವರು ಹುಬ್ಬಳ್ಳಿ, ಮ|| ಬಸಪ್ಪನವರು ಬಳ್ಳಾರಿ ಗದಗ, ಮ|| ದೊಡ್ಡಬಸಪ್ಪನವರು ಹಟ್ಟಿ, ಮ|| ತೋಟಪ್ಪನವರು ಕೋಟಿ ಬಿ. ಎ. ಎಲ್. ಎಲ್. ಬಿ., ಮೊದಲಾದ ಅನೇಕ ಶ್ರೀಮಂತರೂ ಪದವೀಧರರೂ ಗದಗ ರಾಣೆಬೆನ್ನೂರ ಹಾವೇರಿ ವೀರಶೈವ ತರುಣ ಸದುದ್ಯೋಗ ಸಂಘದವರೂ ಸುತ್ತಲಿನ ಗ್ರಾಮಗಳಿಂದ ನಾಲ್ಕಾರು ಸಾವಿರ ಜನ ಸದ್ಗೃಹಸ್ಥರೂ ಆಗಮಿಸಿದ್ದರು. ಈ ಮಹತ್ಕಾರ್ಯಗಳು ಜಯಪ್ರದವಾಗಿ ಜರುಗಲೆಂದು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದ ಆಶೀರ್ವಾದ ಪತ್ರವೂ, ರಾವ್ ಬಹದ್ದೂರ್ ಅರಟಾಳ ಸಾ|| ಐ. ಎಸ್. ಓ. ಮತ್ತು ಶ್ರೀಮಾನ್ ಶಾಂತವೀರಪ್ಪನವರು ಮೆಣಸಿನಕಾಯಿ ಮೊದಲಾದ ಮುಖಂಡರಿಂದ ಸಹಾನುಭೂತಿಪರವಾದ ಪತ್ರಗಳೂ ಬಂದಿದ್ದವು.

ಶ್ರೀಮದ್ವೀರಶೈವ ವಿದ್ಯಾಪ್ರಸಾರಕ ಸಭೆಯು ಡಿ. ಡಿ. ಕಲೆಕ್ಟರ್ ಶ್ರೀಮಾನ್ ರೇವಣಸಿದ್ದಪ್ಪಯ್ಯನವರು ಕಿತ್ತೂರ ಇವರ ಅಧ್ಯಕ್ಷತೆಯಲ್ಲಿ ೨ ದಿವಸ ಜರುಗಿತು. ಈ ಸಭೆಯ ಸ್ವಾಗತ ಸಂಘಾಧ್ಯಕ್ಷರಾದ ಮ|| ಶಿವಪ್ಪ ಕೆಂಭಾವಿ ಇವರು ತಮ್ಮ ಭಾಷಣದಲ್ಲಿ ಶ್ರೀ ಬಾಲಲೀಲಾಮಹಾಂತ ಶಿವಯೋಗಿಗಳವರ ಮಹಿಮಚಾರಿತ್ರವನ್ನೂ ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯಸ್ವಾಮಿಗಳವರು ಮುಳಗುಂದಕ್ಕೆ ಆಗಮಿಸಿದ ಈ ನಾಲ್ಕು ತಿಂಗಳುಗಳಲ್ಲಿಯೇ ಯಾವ ಯಾವ ಮಹತ್ಕಾರ್ಯಗಳಾದವೆಂಬುದನ್ನೂ ಈ ದಿವಸ ಇಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಬಾಲಲೀಲಾಮಹಾಂತೇಶ ಇಂಗ್ಲೀಷ ಸ್ಕೂಲಿಗೆ ಶ್ರೀ ಸ್ವಾಮಿಗಳವರೇ ಇಲ್ಲಿಯ ಅನೇಕ ವಿದ್ಯಾಭಿಮಾನಿಗಳಾದ ಉದಾರಿಗಳ ಸಹಾಯದಿಂದ ಆರು ಸಾವಿರ ರೂಪಾಯಿಗಳ ಫಂಡನ್ನು ಕೂಡಿಸಿ ನಮಗೆ ಮಹತ್ಪ್ರಯೋಜನವನ್ನುಂಟುಮಾಡಿಕೊಟ್ಟಿರುವುದನ್ನೂ, ಶ್ರೀ ಬಾಲಲೀಲಾಮಹಾಂತ ಶಿವಯೋಗಿಗಳವರು ಕಳೆದ ಇದೇ ಸಂವತ್ಸರ ಇದೇ ಮಾಸ ಇದೇ ತಿಥಿ ಇದೇ ಸೋಮವಾರ ದಿವಸ ಲಿಂಗೈಕ್ಯರಾದುದರಿಂದ ಇಂದಿಗೆ ಸರಿಯಾಗಿ ೬೦ ವರ್ಷಗಳಾದವೆಂತಲೂ ಆ ದಿವಸ ನಮಗುಂಟಾಗಿದ್ದ ಅಪಾರವಾದ ದುಃಖವು ಈ ದಿವಸ ಎಷ್ಟೋ ಮಟ್ಟಿಗೆ ಶಮನವಾಗಿ ನಮ್ಮ ಅಭಿವೃದ್ಧಿಯು ಇಂದಿನಿಂದ ಪ್ರಾರಂಭವಾಯಿತೆಂತಲೂ ಹೇಳಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜ ಹಿತಕಾರ್ಯಗಳಲ್ಲಿ ನಿರತರಾಗಿರುವ ಶ್ರೀ ಮೃತ್ಯುಂಜಯಸ್ವಾಮಿಗಳವರು ಹುಬ್ಬಳ್ಳಿ ತಾಲ್ಲೂಕು ಇಂಗಳಹಳ್ಳಿಯಲ್ಲಿ ಕ್ರಿ. ಶ. ೧೮೮೮ ರಲ್ಲಿ ಜನ್ಮವೆತ್ತಿ ೧೪ ನೇ ವರ್ಷದಲ್ಲಿ ಅಥಣಿಗಚ್ಚಿನ ಮಠದ ಶ್ರೀ ಮಹಾತಪಸ್ವಿಗಳ ಸೇವಾತತ್ಪರರಾಗಿ ಅನಂತರ ದಾವಣಗೇರಿ ವಿರಕ್ತಮಠಕ್ಕೆ ನೇಮಿಸಲ್ಪಟ್ಟು, ೧೯೦೬ ನೇ ಇಸವಿಯಿಂದ ಈಗ (೨೩) ವರ್ಷಗಳಲ್ಲಿ ಈ ಸ್ವಾಮಿಗಳು ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ವಿವರಿಸಿದರು. ದಾವಣಗೇರಿ ಹಾಮಸಭಾವಿ ಗುರುಮಿಟಕಲ್ ಮುಳಗುಂದ ಮೊದಲಾದ ಸ್ಥಳಗಳಲ್ಲಿ ವಿದ್ಯಾಪ್ರಸಾರಕ ಫಂಡುಗಳು ಧಾರವಾಡದಲ್ಲಿ ೩೦ ಜನ ವಿದ್ಯಾರ್ಥಿಗಳಿಗೆ ಉಚಿತವಾದ ಬೋರ್ಡಿಂಗು, ಅನೇಕ ಸ್ಥಳಗಳಲ್ಲಿ ವೀರಶೈವತರುಣ ಸಂಘಗಳೂ, ವೀರಶೈವತರುಣ ಸಮ್ಮೇಲನವೂ, ಶ್ರೀ ಬಸವೇಶ್ವರ ಜಯಂತ್ಯುತ್ಸವವು ಮೊದಲಾದ ಸಮಾಜೋದ್ಧಾರಕ ಅನೇಕ ಮಹತ್ಕಾರ್ಯಗಳು ಈ ಮೃತ್ಯುಂಜಯಸ್ವಾಮಿಗಳವರಿಂದಲೇ ಮಾಡಲ್ಪಟ್ಟವೆಯೆಂತಲೂ, ಇವರಂತೆಯೇ ನಮ್ಮ ಸಮಾಜದ ಗುರುಗಳೆಲ್ಲರೂ ಸಮಾಜಹಿತತತ್ಪರರಾದರೆ ಶೀಘ್ರದಲ್ಲಿ ಸಮಾಜವು ಉನ್ನತಸ್ಥಿತಿಗೆ ಬರುವುದೆಂತಲೂ ಹೇಳಿ, ವಿದ್ಯಾಧರ್ಮಶಿಕ್ಷಣ ವಾಚನಾಲಯಗಳ ಅವಶ್ಯಕತೆ ಮತ್ತು ವ್ಯಾಪಾರ ಒಕ್ಕಲತನ ಕೈಗಾರಿಕೆಗಳನ್ನು ಕುರಿತು ಅತ್ಯಂತ ಮಹತ್ವದ ಭಾಷಣವನ್ನು ಮಾಡಿದರು. ವಿದ್ಯವೇ ನಮ್ಮ ಉನ್ನತಿಗೆ ಮೂಲವಾಗಿದೆಯೆಂತಲೂ ದಯಾಳುಗಳಾದ ಇಂಗ್ಲೀಷ ಸರ್ಕಾರದಿಂದ ಈ ವಿಷಯದಲ್ಲಿ ಬೇಕಾದಷ್ಟು ಸೌಲಭ್ಯಗಳುಂಟಾಗಿವೆಯೆಂತಲೂ ಪ್ರಾಥಮಿಕ ಶಿಕ್ಷಣವು ಬಲಾತ್ಕಾರವಾಗಿ ಕೊಡಲ್ಪಡದ ವಿನಾ ಅಶಿಕ್ಷಿತ ಸಮಾಜದವರು ತಮ್ಮ ಮಕ್ಕಳ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಅಷ್ಟು ಹೆಚ್ಚು ಲಕ್ಷಿಸುವುದಿಲ್ಲವೆಂತಲೂ ನಮ್ಮ ಸ್ವಂತ ಶಾಲೆಗಳಲ್ಲಿ ಧರ್ಮಶಿಕ್ಷಣ ದೊರೆಯುವಂತೆಯೂ ಅಂಥಶಾಲೆಗಳಲ್ಲಿ ವಾಚನಾಲಯಗಳನ್ನು ಏರ್ಪಡಿಸಿ ಧರ್ಮಗ್ರಂಥಗಳ ವಾಚನಾಭಿರುಚಿಯನ್ನು ಹೆಚ್ಚಿಸುವುದು ಅತ್ಯಗತ್ಯವೆಂತಲೂ ಕಾಲಕ್ಕೆ ತಕ್ಕಂತೆ ವ್ಯಾಪಾರ ಒಕ್ಕಲತನಗಳಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳಬೇಕೆಂತಲೂ, ಕೀರ್ತಿಶೇಷರಾದ ಶ್ರೀ ಶಿರಸಂಗೀ ಲಿಂಗರಾಜರವರ ಫಂಡಿನಿಂದ ಒಂದು ಕೈಗಾರಿಕೆಯ ವಿದ್ಯಾಲಯವನ್ನು ಸ್ಥಾಪಿಸುವುದು ಯುಕ್ತವೆಂತಲೂ ಸೂಚಿಸಿದರು. ಈ ಮೇಲಿನ ವಿಷಯಗಳನ್ನೇ ಕುರಿತು ಗದಗ ಹಾವೇರಿ ವೀರಶೈವ ತರುಣ ಸಂಘದ ಕೆಲವು ಸುಶಿಕ್ಷಿತ ತರುಣರು ಕನ್ನಡ, ಸಂಸ್ಕೃತ, ಇಂಗ್ಲೀಷು ಭಾಷೆಗಳಲ್ಲಿ ಬರೆದುಕೊಂಡುಬಂದಿದ್ದ ಸ್ವಾರಸ್ಯವಾದ ಉಪನ್ಯಾಸಗಳು ಓದಲ್ಪಟ್ಟವು.

ಶಿವಯೋಗಮಂದಿರದಿಂದ ಬಂದಿದ್ದ ಶ್ರೀ ಮಹಾಂತದೇವರು 'ಯೋಗ' ಎಂಬ ವಿಷಯದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ವೇ|| ಕರಿಬಸವಯ್ಯನವರು ಪುರಾಣಮಠ ಇವರು ಧರ್ಮವೆಂಬ ವಿಷಯದಲ್ಲಿ ಬಹು ಬೋಧಪರವಾದ ಉಪನ್ಯಾಸವನ್ನು ಮಾಡಿದರು. ನಮ್ಮ ಇಹಪರಸುಖಗಳಿಗೆ ಧರ್ಮವೇ ಮೂಲವಾಗಿದೆಯೆಂಬುದನ್ನು ದೃಢೀಕರಿಸಿದರು. ಧೃತಿಕ್ಷಮಾದಮಾ ಅಸ್ತೇಯ ಮೊದಲಾದ ಧರ್ಮದ ದಶಲಕ್ಷಣಗಳನ್ನು ವಿವರಿಸಿ ಹೇಳಿದರು.

ಮ|| ಮಂಜಪ್ಪ ಹರ್ಡೇಕರ ಇವರು ಸಮಾಜಸೇವೆಯೆಂಬ ವಿಷಯದಲ್ಲಿ ಬಹು ಯುಕ್ತಿಯುಕ್ತವಾದ ಉಪನ್ಯಾಸವನ್ನು ಮಾಡಿದರು. ಪ್ರಾಣಿಶಾಸ್ತ್ರದಿಂದ ನೋಡಿದರೆ ಮನುಷ್ಯನು ಹೇಗೆ ಸಕಲ ಪ್ರಾಣಿಗಳಿಗಿಂತಲೂ ಇಂದ್ರಿಯವಿಶೇಷದಿಂದ ಶ್ರೇಷ್ಠನಾಗಿರುತ್ತಾನೆಯೋ ಹಾಗೆ ಸಮಾಜಶಾಸ್ತ್ರದಿಂದ ನೋಡಿದರೆ ಹಿಂದೂ ಧರ್ಮದ ಸಕಲ ಸಮಾಜಗಳಿಗಿಂತಲೂ ವೀರಶೈವ ಸಮಾಜವು ಅದರಲ್ಲಿರುವ ಶ್ರಮವಿಭಾಗದ ವಿಸ್ತಾರವಾದ ರಚನಾವಿಶೇಷದಿಂದ ಶ್ರೇಷ್ಠವಾದದ್ದಾಗಿದೆಯೆಂತಲೂ, ಗುರುವರ್ಗ ಮತ್ತು ಶಿಷ್ಯವರ್ಗಗಳೇ ಈ ಸಮಾಜಪುರುಷನ ರುಂಡ ಮತ್ತು ಮುಂಡಗಳೆಂತಲೂ ಸಮಾಜಪುರುಷನಲ್ಲಿ 'ಸ್ವಾರ್ಥ, ದ್ವೇಷ, ಅಸೂಯ' ಗಳುಂಟಾದುದರಿಂದ ಶಾಸ್ತ್ರಕ್ಕೆ ಸ್ವಾಚೀನ ಪದ್ಧತಿಗೂ ಸಮ್ಮತವಲ್ಲದ ರೀತಿಯಲ್ಲಿ ಗುರುಗುರುಗಳಲ್ಲಿಯೂ, ಭಕ್ತಭಕ್ತರಲ್ಲಿಯೂ ಮತ್ತು ಗುರುಶಿಷ್ಯರಲ್ಲಿಯೂ ಈ ಪ್ರಕಾರ ತ್ರಿವಿಧ ಕಲಹಗಳುಂಟಾಗಿ ಸಮಾಜಪುರುಷನು ನಾನಾ ದುಃಖಗಳಿಗೀಡಾಗಿದ್ದಾನೆಂತಲೂ ಸಮಾಜಸೇವೆಯೇ ದೇವರ ಸೇವೆಯಾಗಿರುವುದರಿಂದ ಸಮಾಜಪುರುಷನಲ್ಲುಂಟಾಗಿರುವ ಈ ತ್ರಿದೋಷಗಳನ್ನು ಧನಿಕರು ದ್ರವ್ಯದ ಸದ್ವಿನಿಯೋಗದಿಂದಲೂ, ವಿದ್ವಾಂಸರು ಸದುಪದೇಶದಿಂದಲೂ, ಗುರುಗಳು 'ಪರಹಿತಾನುಯೋಗಮೇಯೋಗಂ' ಎಂಬ ಕೈ|| ಬಸವಪ್ಪಶಾಸ್ತ್ರಿಗಳ ಉಕ್ತಿಯಂತೆ ಸಮಾಜಹಿತದಲ್ಲಿಯೇ ನಿರತವಾಗಿರುವ ಯೋಗದಿಂದಲೂ ನಿವಾರಣೆ ಮಾಡಬೇಕೆಂದು ಸೂಚಿಸಿದರು. ಅನಂತರ ವೆ|| ೬ ನೇ ಅಸಿ. ಡಿ. ಎ. ಇ. ಸಾ|| ಮುದಿಯಪ್ಪಗೌಡರ ಮಣ್ಣೂರ ಇವರು ತಮ್ಮ ಕರ್ತವ್ಯವಾದ ವಿದ್ಯಾಭ್ಯಾಸದ ವಿಷಯದಲ್ಲಿ ಉಪಯುಕ್ತವಾದ ಸರಸಭಾಷಣ ಮಾಡಿದರು. ಅಂತೂರ ಅಸಿ|| ಮಾಸ್ತರ ಬಳ್ಳಾರಿಮಠ ಇವರು ಐಕಮತ್ಯದ ಬಗ್ಗೆ ಯೋಗ್ಯವಾದ ನಿಬಂಧವನ್ನು ಓದಿದರು. ಅನಂತರ ಮ|| ವೀರಬಸಪ್ಪ ಶ್ರೇಷ್ಠಿ ಬಿ. ಎ., ಇವರು 'ಭಗವದ್ಗೀತೆ ಮತ್ತು ವೀರಶೈವಮತತತ್ವ' ಎಂಬ ವಿಷಯದಲ್ಲಿ ಅತ್ಯಂತ ಉತ್ಕೃಷ್ಟವಾದ ಉಪನ್ಯಾಸವನ್ನು ಮಾಡಿದರು. ವೀರಶೈವಮತತತ್ವಗಳಲ್ಲಿ ಮುಖ್ಯವಾದವುಗಳಾದ ಅಷ್ಟಾವರಣ ಮತ್ತು ಷಟ್‌ಸ್ಥಲಗಳ ವಿಷಯವು ಪ್ರಪಂಚಕ್ಕೇ ಮಾನ್ಯವಾಗಿರುವ ಭಗವದ್ಗೀತೆಯಲ್ಲಿಯೂ ವಿವರಿಸಲ್ಪಟ್ಟಿದೆಯೆಂದು ಕಳೆದ ನಾಲ್ಕು ವರ್ಷಗಳ ಅಧ್ಯಯನದಿಂದ ತಮಗೆ ಗೊತ್ತಾಯಿತೆಂದು ಹೇಳಿ, ಹೆಚ್ಚು ಅವಕಾಶವಿಲ್ಲದ್ದರಿಂದ ಅಷ್ಟಾವರಣಗಳ ವಿಷಯವನ್ನು ಮಾತ್ರ ಸ್ಪಷ್ಟೀಕರಿಸಿದರು. ಭಗವದ್ಗೀತೆಯ ೫ ನೇ ಅಧ್ಯಾಯದ ೨೮-೨೯ ನೇ ಶ್ಲೋಕಗಳ ಮೇಲಿಂದ ಭಸ್ಮರುದ್ರಾಕ್ಷಿ ಗುರು ಲಿಂಗ ಜಂಗಮ ಇವುಗಳನ್ನೂ 'ವಿಷಯಾವಿನಿವರ್ತಂತೇ' ಎಂಬ ೨ನೇ ಅಧ್ಯಾಯದ ೫೯ ನೇ ಶ್ಲೋಕದಿಂದ ಪ್ರಸಾದವನ್ನೂ 'ಯದಕ್ಷರಂ ವೇದವಿದೋವದಂತಿ' ಎಂಬ ೮ ನೇ ಅಧ್ಯಾಯದ ೧೧-೧೨-೧೩ ನೇ ಶ್ಲೋಕಗಳಿಂದ ಮಂತ್ರವನ್ನೂ ಈ ಪ್ರಕಾರ ಅಷ್ಟಾವರಣಗಳನ್ನು ಭಗವದ್ಗೀತೆಯ ಆಧಾರಗಳಿಂದ ದೃಢೀಕರಿಸಿ, ಅವುಗಳ ಪ್ರಾಮುಖ್ಯತೆಯನ್ನು ಬಹು ಚೆನ್ನಾಗಿ ವಿವರಿಸಿ ಯಾವ ಧರ್ಮದವರು ಮುಕ್ತರಾಗಬೇಕಾದರೂ ಈ ಅಷ್ಟಾವರಣಗಳನ್ನು ಯಾವ ವಿಧದಲ್ಲಿಯಾದರೂ ಹೊಂದಲೇಬೇಕೆಂದು ಪ್ರತಿಪಾದಿಸಿದರು.

ಶ್ರೀ ಬಾಲಲೀಲಾಮಹಾಂತೇಶ್ವರ ಇಂಗ್ಲೀಷ ಸ್ಕೂಲಿಗೋಸ್ಕರ ಪುಸ್ತಕಗಳನ್ನು ಕೊಂಡುಕೊಡಲಿಕ್ಕೂ, ಮೂಲದ್ರವ್ಯವನ್ನು ಹೆಚ್ಚಿಸಲಿಕ್ಕೂ ಸಭೆಯ ಕಾಲದಲ್ಲಿ ಧನಸಹಾಯ ಮಾಡಿದ ಮಹನೀಯರ ವಿವರ (ಸ್ಥಳಸಂಕೋಚದಿಂದ ಪಟ್ಟಿಯನ್ನು ಮುದ್ರಿಸಲಿಲ್ಲ. ಸ. ಪ್ರ.) ಅನೇಕ ಶ್ರೀಗಳವರು ಸದ್ಭಕ್ತರೂ, (ಸಮಾಜಸುಧಾರಕರೂ) ಧನಸಹಾಯ ಮಾಡಿದರು. ಇವರಲ್ಲಿ ಕೆಲವರು ವಾಗ್ದಾನ ಮಾಡಿದ್ದು ಅವರಿಂದಲೂ ಹಣ ಬರಲಿಕ್ಕೆ ಹತ್ತಿದೆ. ತೀವ್ರ ಬೇಚಾಕ ಬರುವಂತಿದೆ. ಅಧ್ಯಕ್ಷ ಮಹಾಶಯರು ಉಪಸಂಹಾರಕ ಭಾಷಣದಲ್ಲಿ ಈ ಇಂಗ್ಲೀಷ್ ಶಾಲೆಯು ಕೇವಲ ವೀರಶೈವರಿಂದಲೇ ಸ್ಥಾಪಿಸಲ್ಪಟ್ಟಿದ್ದರೂ ಸಕಲ ಮತೀಯರೂ ಇದರಲ್ಲಿ ಧಾರಾಳವಾಗಿ ಬಂದು ಕಲಿಯಲು ಅವಕಾಶವಿದೆಯೆಂದು ಸೂಚಿಸಿದರು. ಅನಂತರ ಗದಗ ಹಾವೇರಿ ರಾಣೇಬೆನ್ನೂರ ವೀರಶೈವ ತರುಣ ಸದುದ್ಯೋಗ ಸಂಘದವರು ಇಲ್ಲಿ ಸ್ವಯಂಸೇವಕರಾಗಿ ಸಮಾಜ ಕಾರ್ಯವನ್ನು ಮಾಡಿದ್ದರಿಂದ ಅವರಿಗೆ ಒಂದೊಂದು ಪದಕವೂ, ಮತ್ತು ಗ್ರಂಥಸಂಗ್ರಹಕ್ಕೋಸ್ಕರ ಶ್ರೀ ಶಿವಯೋಗಮಂದಿರಕ್ಕೆ ೨೫ ರೂಪಾಯಿಗಳೂ ಶ್ರೀ ಬಾಲಲೀಲಾಮಹಾಂತೇಶರ ಆಶೀರ್ವಾದ ರೂಪದಲ್ಲಿ ಕೊಡಲ್ಪಡುವುವೆಂದು ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯಸ್ವಾಮಿಗಳವರು ಅಪ್ಪಣೆ ಕೊಡಿಸಿದರು. ಆ ಮೇಲೆ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ರಥೋತ್ಸವ—ಮತ್ತು ತಾಲ್ಲೂಕು ಸಭೆ. ಸಿದ್ದಾಪುರ

ಶ್ರೀಮನ್ನಿರಂಜನ ಸಿದ್ದಾಪುರದ ಚನ್ನವೀರಸ್ವಾಮಿಗಳ ಕೃಪಾಬಲದಿಂದ ಇದೇ ಸಿದ್ಧಾರ್ಥಿ ಸಂ|| ಮಾಘ ಶು|| ೧೪ ಶಿ ಮಂಗಳವಾರದಿಂದ ನಾಮೂಲಾಗಿ ಮಹಾರಥೋತ್ಸವವು ಅವಧೂತಸ್ವಾನಾಂತವಾಗಿ ಎಲ್ಲಾ ಉತ್ಸವಗಳೂ ಒಳ್ಳೇ ವಿಜೃಂಭಣೆಯಿಂದ ಜರುಗಿಸಲ್ಪಟ್ಟವು. ಈ ವರ್ಷದಿಂದ ಈ ರಥೋತ್ಸವಕ್ಕೆ ಸಂಬಂಧಿಸಿ ಮಾಘ ಬ|| ೨ ನೇ ಶುಕ್ರವಾರ ೫ ಘಂಟೆಗೆ ಒಂದು ವೀರಶೈವ ಮಹಾಜನರ ತಾಲ್ಲೂಕು ಸಭೆಯು ಕರೆಯಲ್ಪಟ್ಟಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಶಿರ್ಶಿಸಬ್‌ಜಡ್ಜ್ ಕೋರ್ಟಿನ ವಕೀಲ ಸದಾಶಿವಪ್ಪಾಗೌಡ ಪಾಟೀಲ ಇವರು ಸ್ವೀಕರಿಸಲಿಕ್ಕೆ ಒಪ್ಪಿದ್ದರು. ಆದರೆ ಕೆಲವು ಅನಿವಾರ್ಯ ಕಾರಣದ ಮೂಲಕ ಸಭೆಗೆ ಬರಲಿಕ್ಕೆ ಆಗದೇ ಇದ್ದುದರಿಂದ ಶ್ರೇಯಸ್ಚಿಂತನ ಸಂದೇಶವನ್ನು ಕಳಿಸಿದ್ದರು. ಸದರಿ ಸಭಾಧ್ಯಕ್ಷಸ್ಥಾನವನ್ನು ಸಿದ್ದಾಪುರ ತಾಲ್ಲೂಕು ಲಿಂಗಾಯತ ಮುಖಂಡರುಗಳೂ, ತಾಲ್ಲೂಕ ಮತ್ತು ಡಿಸ್ಟ್ರಿಕ್ಟ ಲೋಕಲ್ ಬೋರ್ಡ್ ಮೆಂಬರರೂ ಆದ ಮ|| ಚನ್ನಬಸಪ್ಪಾಗೌಡ ಹೆಗ್ಗೋಡಮನೆ ಇವರು ಸ್ವೀಕರಿಸಿದರು.

ಈ ಸಭೆಯಲ್ಲಿ ಮಿ|| ಸಣ್ಣಪ್ಪಾ ಗಾಂವಕರ ಇವರು ಸಾಮಾಜಿಕ ರಾಜಕೀಯ ಸುಧಾರಣೆ ಈ ವಿಷಯದ ಮೇಲೆ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು. ಮತ್ತು ತಮ್ಮ ಭಾಷಣದ ಕೊನೆಯಲ್ಲಿ ಅವರು ಸಿದ್ದಾಪುರದಲ್ಲಿ ಲಿಂಗಾಯತ ಇಂಗ್ಲೀಷ್ ಕಲಿಯುವ ವಿದ್ಯಾರ್ಥಿಗಳಿಗೆ ಒಂದು ಬೋರ್ಡಿಂಗನ್ನು ಸ್ಥಾಪಿಸುವುದು ಎಷ್ಟು ಅವಶ್ಯವದೆ ಎಂಬುದನ್ನು ತಿಳಿಸಿ ಹೇಳಿದರು. ಮತ್ತು ರಿಫಾರ್ಮ್ ಬಿಲ್ಲಿನನ್ವಯ ನಮ್ಮ ಜಿಲ್ಲೆಯಿಂದ ಉಮೇದುವಾರರಾಗಿ ನಿಲ್ಲುವವರಲ್ಲಿ ಯಾವ ಉಮೇದವಾರನು ಹಿಂದುಳಿದವರ ಸಂಬಂಧದಿಂದ ಮನಸಾ ದುಡಿಯುವನೋ ಅಂಥವರಿಗೆ ಮತಗಳನ್ನು ಕೊಡುವ ಸಲುವಾಗಿ ಮುಂದಾಗಿಯೇ ಒಂದು ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಪರಿಣಾಮಕಾರಕ ಭಾಷಣಮಾಡಿದರು. ಆ ಮೇಲೆ ವೇ|| ಮುರುಗಯ್ಯಾಸ್ವಾಮಿ ಹಿರೇಮಠ ಇವರು ಇಲ್ಲಿ ಹೊಸದಾಗಿ ಸ್ಥಾಪಿಸಿದ ಸಿರಸಂಗಿ ಸ್ಮಾರಕ ಲೈಬ್ರರಿಯ ಚಿರಸ್ಥಾಯಿ ಫಂಡನ್ನು ಕೂಡಿಸುವ ಸಲುವಾಗಿ ಒಂದು ಭಾಷಣ ಮಾಡಿದರು. ಕೂಡಲೇ ೬೦ ರೂಪಾಯಿಗಳು ವಸೂಲಾದವು. ಆ ಮೇಲೆ ಬಸ್ಸರ ಹೊಲಿಬಸಪ್ಪಾ ನ್ಯಾಸಣಗಿ ಇವರು ಶಿರ್ಶಿ ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ಯಾವ ಲಿಂಗಾಯತ ವಿದ್ಯಾರ್ಥಿಯು ಮೊದಲು ಬಿ. ಎ. ಆಗುವರೋ ಅವನಿಗೆ ಈ ಹೊತ್ತಿನಿಂದ ಬಡ್ಡಿ ಸಹಿತ ೫೦ ರೂಪಾಯಿ ಇನಾಮು ಕೊಡುವದಾಗಿ ಒಪ್ಪಿಕೊಂಡು ಆ ಹಣವನ್ನು ಅಧ್ಯಕ್ಷರ ಕಡೆಗೆ ಕೊಡಲಿಕ್ಕೆ ಕಬೂಲ ಆದರು. ಮತ್ತು ಮುಂದೆ ಅವರು ದೇವಸ್ಥಾನದ ಎಲ್ಲಾ ವ್ಯವಸ್ಥೆಯು ಸರಿಯಾಗಿ ನಡೆಯುವಂತೆ ಒಂದು ತಾಲ್ಲೂಕ ಕಮಿಟಿ ಸ್ಥಾಪಿಸಬೇಕೆಂತಲೂ ಮತ್ತು ಲಿಂಗಾಯತರಿಗೆ ಅನುಕೂಲವಾಗುವಂತೆ ದೇವರ ಹೆಸರಿನಿಂದ ಒಂದು ಕೋ ಆಪರೇಟಿವ್ ಸೊಸೈಟಿ ಸ್ಥಾಪಿಸಬೇಕೆಂತಲೂ ಒಳ್ಳೇ ಆವೇಶಯುಕ್ತವಾಗಿ ಭಾಷಣ ಮಾಡಿದರು. ಇದಕ್ಕೆ ಯಾವತ್ತೂ ಜನರು ಅನುಮೋದನ ಕೊಟ್ಟರು. ಕೊನೆಯಲ್ಲಿ ಮಿ|| ಗಾಂವಕರ ಇವರು ಸೂಚಿಸಿದ ಅಂದರೆ ಉಮೇದುವಾರರಿಗೆ ಮತ ಕೊಡುವಾಗ ತಮ್ಮ ಮತಗಳನ್ನು ಮಾರಿಕೊಳ್ಳದೆ ಇಲ್ಲದ ಭೀಡೆ ಮುರುವತ್ತುಗಳಿಗೆ ಒಳಗಾಗದೆ ನಮ್ಮ ಹಿತಚಿಂತನೆಯನ್ನು ಬಯಸುವ ಉಮೇದವಾರರಿಗೇ ಓಟು ಕೊಡುವ ಬಗ್ಗೆ ಒಂದು ಸಂಘವನ್ನು ಸ್ಥಾಪಿಸುವ ಬಗ್ಗೆ ಸಮರ್ಥಿಸಿದರು. ಆ ಮೇಲೆ ವೇ|| ಮುರುಗಯ್ಯಾಸ್ವಾಮಿ ಹಿರೇಮಠ ಇವರು ಈ ವರ್ಷ ನಮ್ಮ ತಾಲ್ಲೂಕಿನಿಂದ ಮೂರು ಮಂದಿ ಲಿಂಗಾಯತ ಮೆಂಬರರಾಗಿ ಆರಿಸಲ್ಪಟ್ಟಿದ್ದಕ್ಕಾಗಿಯೂ ಅದರಲ್ಲಿ ಮ|| ಹೆಗ್ಗೋಡಮನಿ ಚನ್ನಬಸಪ್ಪಗೌಡರಿಗೆ ಡಿ|| ಲೋ||

ಮೆಂಬರರ ಸ್ಥಳವೂ ಹೊಸೂರ ದೊಡ್ಡಣ್ಣಯ್ಯಗೌಡರಿಗೆ ತಾಲ್ಲೂಕ ಲೋ॥ ಬೋರ್ಡಿನ ಸ್ಥಳವೂ ಬೇಡಕಣೆ ಚನ್ನಬಸಪ್ಪಗೌಡರಿಗೆ ಲೋ॥ ಮೆಂಬರು ಸ್ಥಳವೂ ದೊರತದ್ದಕ್ಕಾಗಿಯೂ ಅವರ ಅಭಿನಂದನ ಮಾಡಿದರು. ಆ ಮೇಲೆ ಅಧ್ಯಕ್ಷರ ಸಮಾರೋಪದ ಭಾಷಣ ಮಾಡಿದ ನಂತರ ಸಭೆಯ ಕೆಲಸವು ಮುಗಿಯಿತು.

ಪ್ರತ್ಯಕ್ಷದರ್ಶಿ.

ಮಾರಮ್ಮನ ರಕ್ತದ ಬಲಿಗೆ ವೀರಶೈವ ಮಹನೀಯರು ಟೊಂಕ ಕಟ್ಟಿಕೊಂಡು ನಿಂತರು.

ಬರುವ ಫಾಲ್ಗುಣಮಾಸದಲ್ಲಿ ನೋಡಿದರೆ ಎದೆಯೊಡೆದುಹೋಗುವಷ್ಟು ಹಿಂಸಾಕರವಾದ ಮತ್ತು ರಕ್ತಮಯವಾದ ಮಾರಮ್ಮನ ಹಬ್ಬವು ಈ ಊರಲ್ಲಿ ನಡೆಯುವುದು. ಆ ಕಾಲಕ್ಕೆ ಸಾವಿರಾರು ಕುರಿ ಕೋಣಾದಿಗಳು ಆಹುತಿಯಾಗಿ ಹೋಗುವವು. ಅವುಗಳ ಹಿಂಸೆಯನ್ನು ಯಾರು ವರ್ಣಿಸಾರು? ಎಲ್ಲಿ ನೋಡಿದರೂ ಅಲ್ಲಿ ರಕ್ತಮಯ! ಎಲ್ಲಿ ಕೇಳಿದರೂ ಅಲ್ಲಿ ರಣಮಯವಾದ ವಾತಾವರಣ! ಬಲಿಯಾದ ೮-೧೦ ದಿವಸಗಳ ವರೆಗೆ ಇನ್ನೂ ರಕ್ತದ ಒಣ್ಣೆಯೇ; ಇನ್ನೂ ದುರ್ವಾಸನೆಯೇ.

ಇಂಥಾ ಬಹು ಭಯಂಕರವಾದ ಹಬ್ಬಕ್ಕೆ ಯಾವುದೋ ಒಂದು ಮೂಢ ನಂಬಿಕೆಯಿಂದ ಈ ದೇವತೆಗೆ ಪರಮ ಭಕ್ತಾಗ್ರಗಣ್ಯರಾಗಿ ಪರಿಣಮಿಸಿರುವ ಕೆಲವು ೧೦ ನೆಯ ಶತಮಾನದ ಕಾಡು ಮನೆತನಕ್ಕೆ ಸೇರಿದ ಮಹಾಜನರು ಬೆಂಬಲರಾಗಿ ನಿಂತಿರುವರು. ಕಾರ್ಯದರ್ಶಿಗಳಾಗಿ ನಿಂತಿರುವ ೧೨ ಜನರಲ್ಲಿ ೬ ಜನ ವೀರಶೈವರ ಹೆಸರುಗಳು ಕಂಗೊಳಿಸುವವು! ಈ ೬ ಜನ ವೀರಶೈವರಾರೆಂದರೆ—(೧) ಓಂಕಾರಯ್ಯನವರು, (೨) ದೊಗ್ಗಳ್ಳಿ ಬಸವಣ್ಣೆಪ್ಪನವರು, (೩) ದೋಶಿ ಅಜ್ಜಪ್ಪನವರು, (೪) ಉರೇಕೊಂಡಿ ಮುರುಗೇಂದ್ರಪ್ಪನವರು, (೫) ಮಾದೇಗೌಡರ ಮುರಿಗೆಪ್ಪನವರು, (೬) ಅಲೂರು ಮುರುಗೆಪ್ಪನವರು ಇವರೆಲ್ಲರೂ ಇಲ್ಲಿ ಬಹು ದೊಡ್ಡ ಗಂಭೀರ ಗೃಹಸ್ಥರು. ದೇವರ ದಯೆಯಿಂದ ತಮ್ಮ ಸಂಪತ್ತಿನಿಂದಲೂ, ಮಕ್ಕಳುಮರಿಗಳೊಂದಿಗೂ ಸೌಖ್ಯದಿಂದ ಜೀವಿಸತಕ್ಕಂಥವರು. ಈ ೬ ಜನರಲ್ಲಿ ಕೆಲವರು ಇಲ್ಲಿನ ಮ್ಯುನಿಸಿಪಾಲಿಟಿಗೆ ಮೆಂಬರರಾಗಿರುವರು. ೨೦ ನೆಯ ಶತಮಾನದ ವಾತಾವರಣದಲ್ಲಿ ಜೀವಿಸಿರುವ ಇಂಥಾ ದೊಡ್ಡ ವೀರಶೈವ ಮಹನೀಯರು ದುರ್ಗಮ್ಮನಿಗೆ ಮಾಡುವ “ಮಹಿಷಾದಿ ಶಾಂತಿಮಹೋತ್ಸವ” ವೆಂಬ ಅಜ್ಞಾನದ ಕ್ಷುಲ್ಲಕವಾದ ಈ ಕಾರ್ಯದಲ್ಲಿ ತೊಡಗಿರುವುದನ್ನು ನೋಡಿ ಮನುಷ್ಯರಾದವರು ಸ್ವಾಭಾವಿಕವಾಗಿ ವಿಷಾದಪಡುವುದೊತ್ತಟ್ಟಿಗಿರಲಿ, ಆ “ಶಾಂತಿಮಹೋತ್ಸವ” ದ ದಿವಸ ತಮ್ಮ ಶಿರಸ್ಸುಗಳನ್ನು ಬಲಿಗೆ ಆಹುತಿಯಾಗಿ ಬಹು ಸಂಕಟದಿಂದ ಅರ್ಪಿಸುವ, ದಿಕ್ಕಿಲ್ಲದ ಆ ಮಹಿಷಾದಿ ಪ್ರಾಣಿಗಳೂ ಕೂಡ ಈಗಿನಿಂದಲೇ ತುಂಬಾ ಚಿಂತಾಗ್ರಸ್ತವಾಗಿ ಹೋಗಿವೆ. ಮೇವು ತಿನ್ನುವಾಗಲೂ, ನೀರು ಕುಡಿಯುವಾಗಲೂ “ನಾವು ಕುರಿಕೋಣಾದಿಗಳಾಗಿ ಹುಟ್ಟಿರುವುದು, ಕಡಿಯಿಸಿಕೊಳ್ಳುವುದಕ್ಕಾಗಿಯೇ” ಎಂದಂದುಕೊಳ್ಳುತ್ತಾ ಆ “ಶಾಂತಿ” ದಿವಸವನ್ನೇ ಇದಿರು ನೋಡುತ್ತಿರುವವು.

ಎಲ್ಲಾ ಮತತತ್ವಗಳಿಗಿಂತ ಶ್ರೇಷ್ಠತರವಾದ ತತ್ವಗಳನ್ನುಳ್ಳದ್ದೆಂದು ಸಾರಿಸಾರಿ ಹೇಳಿಸಿಕೊಳ್ಳುವ ವೀರಶೈವಮತಸ್ಥರಾದ ಈ ದೊಡ್ಡ ದೊಡ್ಡ ಜನರು ಇಂಥಾ ಹೇಯವಾದ ಹಬ್ಬಕ್ಕೆ ಕಾರ್ಯದರ್ಶಿಗಳಾಗಿ ನಿಂತಿರುವರೆಂದು ಹೇಳುವುದಕ್ಕೆ ತುಂಬಾ ನಾಚಿಕೆಯೂ, ದುಃಖವೂ ಆಗುತ್ತದೆ. ತನ್ನ ಇಷ್ಟಲಿಂಗದ ವಿನಾ ಅನ್ಯ ಯಾವದೇವರಿಗೂ, ದೇವತೆಗೂ ಕೂಡ ತಲೆಬಗ್ಗಿಸಲಾಗದೆಂದು ಘಂಟಾಘೋಷವಾಗಿ ಹೇಳುವ ವೀರಶೈವಮತದವರಾದ ಮನುಷ್ಯಪ್ರಾಣಿಗಳು, ಅಪವಿತ್ರವಾದ ಮತ್ತು ಅಧರ್ಮವಾದ ಈ ಕಾರ್ಯಕ್ಕೆ ಕಂಕಣಬದ್ಧರಾಗಿ ಕೈಕಟ್ಟಿ ಕೂತುಕೊಂಡಿರುವುದು, ಅಂಥಾ ಉಚ್ಚತತ್ವವನ್ನು ಬೋಧಿಸುವ ವೀರಶೈವ ಮತಕ್ಕೇನೇ ಕುಂದು ತಂದುಕೊಂಡಂತಾಗುವುದಿಲ್ಲವೇ? ಮತತತ್ವಗಳಿಗೆ ವಿರೋಧವಾಗಿ ನಡೆಯುವವರನ್ನು ಯಾವ ಮತಸ್ಥರೆಂದು ಕರೆಯೋಣ? ಇಂಥವರನ್ನು ವೀರಶೈವರೆಂದು ಹೇಗೆ ಕರೆಯೋಣ? ಕರೆಯಲು ನಾಚಿಕೆಯಾಗುತ್ತದೆ.

ಹೋದಸಾರೆ ಯಾವೋ ಕೆಲವು ಕಾರಣಗಳಿಂದ ಈ ಹಬ್ಬಕ್ಕೆ ಸಹಾಯವನ್ನು ಮಾಡದಿದ್ದವರು ಈ ಸಾರೆ ಮತ್ತೆ ಕೆಲವು ಕಾರಣಗಳಿಂದ ಇದನ್ನು ಸಾಂಗಗೊಳಿಸಲು ತುಂಬಾ ಕುತೂಹಲಪೂರ್ವಕರಾಗಿ ವಿಶೇಷ ಧನಸಹಾಯವನ್ನು ಮಾಡಿ, ಕಡಿಯುವ ಕಟುಕರ ಮುಂದಾಳುಗಳಾಗಿರುವ ಹಮಾಲಿ ಜನರ ಪ್ರೀತಿಗೆ ಪಾತ್ರರಾಗಿರುವರು. ಇವರ ಕನಸಿನಲ್ಲಿ ಆ ಮಹಾಮಾರಿಯು ಪ್ರತ್ಯಕ್ಷವಾಗಿ ಪ್ರಾಣಭಯದಿಂದ ಹೆದರಿಸಿರುವಳೋ? ಅಥವಾ ಆ ಹಮಾಲಿ ಜನರಿಗೆ ಹೆದರಿ ವಿಧ್ಯರಿಲ್ಲದೆ (ತಮ್ಮ ಸ್ವಂತ ಹಿತದ ಸಲುವಾಗಿ) ಈ ರೀತಿ ಮಾಡಿರುವರೋ? ಅಥವಾ ಮತ್ತಾವ ಕಾರಣವಿರುವುದೋ? ಹಾಗಿಲ್ಲದಿದ್ದರೆ, ಬಾಪ, ಇವರು ಹೀಗೇಕೆ ಕುಣಿದು ಕುಣಿದು ಹಣದ ಚೀಲವನ್ನು ಬಿಚ್ಚುತ್ತಿದ್ದರು? ಅಯ್ಯೋ! ವೀರಶೈವಬಾಂಧವರೇ, ಯಾವ ವೀರಶೈವಮತದ ಶಿವಶರಣನು ಕಡಿಯಲೆಳೆದುಕೊಂಡು ಒಯ್ಯುತ್ತಿದ್ದ ಕುರಿಮರಿಯನ್ನು ಬಲಾತ್ಕಾರದಿಂದ ಬಿಡಿಸಿ ಬದುಕಿಸಿದನೋ ಅಂಥಾ ಮಹಾತ್ಮನ ಮತಾನುಯಾಯಿಗಳಾದ ನೀವು ಕಡಿದಾಗ ಚೆಲ್ಲಿ ಹಾರಬೀಳುವ ರಕ್ತದಲ್ಲಿ ಕೈಯಿದ್ದುವುದಕ್ಕೆ ಹೋಗುವಿರಾ? ಕುರಿಕೋಣಗಳನ್ನು ಕಡಿಯಿಸಿ, “ಶಾಂತಿ” ಯನ್ನು ಮಾಡಬೇಕೆಂದು ಆತುರಪಡುವಿರಾ? ಕಳೆದ ಪ್ರಪಂಚದ ಮಹಾಯುದ್ಧದಲ್ಲಿ ಲೆಕ್ಕವಿಲ್ಲದಷ್ಟು ಜನರು ಸತ್ತರು; ಲೆಕ್ಕವಿಲ್ಲದಷ್ಟು ಪ್ರಾಣಿಗಳು ಕೊಲ್ಲಲ್ಪಟ್ಟವು. ಯೂರೋಪ್ ಖಂಡದ ತುಂಬೆಲ್ಲಾ ರಕ್ತದ ಕಾಲುವೆಗಳು ಹರಿದವು. ರಕ್ತಮಯವಾದ ವಾತಾವರಣದಿಂದ ಮಳೆಯ ಮೋಡಗಳು ಕರಗಿಹೋದವು. ಬೆಳೆಗಳು ಬರಲಿಲ್ಲ. ನಾನಾ ರೋಗಗಳು ಹುಟ್ಟಿಕೊಂಡವು. ಎಲ್ಲಾ ಕಡೆಗೆ ಹರಡಿಕೊಂಡವು. ಮತ್ತೆ ಹೊಟ್ಟೆಗಿಲ್ಲದೆ ಅನೇಕರು ಸತ್ತರು. ಮೇವು, ನೀರು ಇಲ್ಲದೆ ದನಕರುಗಳು ಹೋದವು. ಇಷ್ಟಾದರೂ, ಇನ್ನೂ ಆಗುತ್ತಿದ್ದರೂ, ಈ ಊರಿಗೆ “ಶಾಂತಿ” ಯೆನಿಸಲಿಲ್ಲವೇ? “ಇನ್ನೂ ಕಡಿದು ಕಡಿದು ಶಾಂತಿ ಮಾಡಿ” ರೆಂದು ನಿಮ್ಮ ಮಾರಿ ದುರ್ಗಮ್ಮನು ಹೇಳುವಳೇ? ಕಡಿಯಿಸಿದರೆ ಶಾಂತಿಯಾಗುತ್ತದೆಯೋ? “ನಾನಾವಲು ಪದ್ಧತಿ” ಎಂದು ಆ ಕಟುಕರನ್ನು ಪ್ರೋತ್ಸಾಹಿಸುವುದಕ್ಕೆ ಹೋಗುವಿರಾ? ಹೋಗಿರಿ. ಅವರ ಪ್ರೀತಿಗೆ ಪಾತ್ರರಾಗಿ ಆ ನಿಮ್ಮ ದುರ್ಗಮ್ಮನ ಆಶೀರ್ವಾದವನ್ನು ಪಡೆದುಕೊಂಡು ಶಾಂತರಾಗಿರಿ. ಹಾ! “ಬರುಬರುತ್ತಾ ರಾಯರ ಕುದುರೆಯು ಕತ್ತೆಯಾಯಿತು.” ಎಂಬ ಗಾದೆಯಂತೆ ನಮ್ಮ ವೀರಶೈವರು ಈ ರೀತಿಯಾಗಿ ವರ್ತಿಸುತ್ತಿರುವುದು ತುಂಬಾ ವಿಷಾದವನ್ನುಂಟುಮಾಡುವಂಥಾದ್ದಾಗಿದೆ. ಏನು ಮಾಡಬೇಕು?

ದಾವಣಗೆರೆ. ತ್ರಿಶೂಲಧಾರಿ.

ಶ್ರೀ ಶಿವಶರಣರ ಐಕ್ಯವು.

ಸೋಲಾಪುರದಲ್ಲಿ ಲೋಕಪ್ರಸಿದ್ಧರಾದ ವೀರಯ್ಯನವರೆಂಬ ಶ್ರೀ ಶಿವಶರಣರು ಇದೇ ಮಾಘ ಬ॥ ೧ ಗುರುವಾರ ಪ್ರಾತಃಕಾಲದ ೧೦ ಘಂಟೆಯಲ್ಲಿ ಪಾಂಚಭೌತಿಕ ಶರೀರವನ್ನು ಬಿಟ್ಟು ಸಚ್ಚಿದ್ಘನನಾದ ಸಾಂಬಶಿವನಲ್ಲಿ ಐಕ್ಯವನ್ನು ಹೊಂದಿದರು. ಶ್ರೀ ಬಸವೇಶ್ವರ ದೇವರ ಕಾಲದಲ್ಲಿ ಅನೇಕ ಶರಣರೂ, ವೀರವ್ರತಿಗಳೂ, ಕಾಯಕವ್ರತಿಗಳೂ ಆಗಿದ್ದರೆಂದು ಕೇಳುತ್ತಿದ್ದೇವೆ. ಆ ವೀರವ್ರತವು ಈ ಮಹನೀಯರಲ್ಲಿ ಅನೇಕ ದೂರದೇಶಗಳಿಂದ ದರ್ಶನಕ್ಕಾಗಿ ಬರುತ್ತಿದ್ದ ಅನೇಕ ಭಕ್ತಮಂಡಲಿಯಿಂದ ಪ್ರತ್ಯಕ್ಷವಾಗಿ ಕಾಣಲ್ಪಡುತ್ತಿದ್ದಿತು. ಶ್ರೀ ಬಸವೇಶನಲ್ಲಿದ್ದ ಪಂಚಸ್ಪರ್ಶಗಳಲ್ಲಿ ಪ್ರಸಾದಪರುಷವು ಇವರಲ್ಲಿತ್ತೆಂಬುದನ್ನೂ, ಸೋಲಾಪುರದವರಲ್ಲದೆ ದೇಶಾಂತರದಿಂದ ಬಂದಿದ್ದ ಇವರ ದರ್ಶನಾದಿ ಲಾಭವುಳ್ಳ ಭಕ್ತರೇ ಮೊದಲಾದವರು ತಿಳಿಯುತ್ತಿದ್ದರು. ವೀರಶೈವರಲ್ಲಿ ವೀರಶೈವದ ನಿಯಮಭಂಗವನ್ನು ಈ ಶರಣರು ಎಂದೂ ಸಹಿಸುತ್ತಿರಲಿಲ್ಲ. ತಮ್ಮ ಜನ್ಮವಾಸವಾದ ನಾಲತವಾಡವನ್ನು ಬಿಟ್ಟು ಬರುವುದಕ್ಕೆ ಇದೇ ಕಾರಣವಾಯಿತು. ಇವರು ಇಲ್ಲಿಗೆ ಬಂದು ೨೭-೨೮ ವರ್ಷಗಳಾದವು. ಇಷ್ಟು ವರ್ಷಗಳಲ್ಲಿ ಇವರ ಶರೀರದಲ್ಲಿ ವಾರ್ಧಕಾವಸ್ಥೆಯ ಭೇದ ಮಾತ್ರ ಕಳೆದೋರುತ್ತಲ್ಲದೆ, ಆಚಾರ ವಿಚಾರಾದಿಗಳು ತಿಲಾಂಶದಿಂದಾದರೂ ವ್ಯತ್ಯಸ್ತಗಳಾಗಿರಲಿಲ್ಲ. ಇವರು ವಿತಥಿಕಾರ್ಜನೆಯಿಂದ ಅಮಿತಚರತೃಪ್ತಿಯನ್ನು ದಿನಾಲೂ ಮಾಡುತ್ತಿದ್ದರು. ಧನಕನಕಾದಿಗಳ ಆಸೆಯು ಇವರನ್ನು ಅಂಟಿರಲಿಲ್ಲ. ಅನುಪಮ ವಿರತಿಯೇ ಮೂರ್ತಿಮತ್ತಾದಂತೆ ತೋರುತ್ತಿದ್ದರು. ಅವಸಾನಕಾಲಕ್ಕೆ ಯಾವ ರೋಗವೂ ಇವರಿಗೆ ಇದ್ದಿದ್ದಿಲ್ಲ. ಸಹಜವಾಗಿಯೇ ಶರೀರವನ್ನು ಬಿಟ್ಟರು. ಅವಸಾನಕ್ಕಿಂತ ಮೊದಲು ೧೫ ದಿವಸಗಳಿಂದಲೂ ಕೇವಲ ಜಂಗಮ ಪಾದೋದಕವನ್ನೇ ಸೇವಿಸುತ್ತಿದ್ದರು. ಇದನ್ನಾದರೂ ಜಂಗಮಾರ್ಚನೆಯಾದ ಬಳಿಕ ಮಿತವಾಗಿ ಸೇವಿಸುತ್ತಿದ್ದರು. ಒಂದು ದಿವಸ ಮುಂಚೆ ಇಲ್ಲಿಯ ಸದ್ಭಕ್ತರು ಊರಿನಿಂದ ಪೂಜ್ಯರಾದ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳನ್ನು ಕರೆಸಿಕೊಂಡರು. ಅವರ ದರ್ಶನದಿಂದಲೂ, ಸಂಭಾಷಣೆಯಿಂದಲೂ ಪರಮಾನಂದಗೊಂಡು ಜೀವನ್ಮುಕ್ತಿಯೇ ಇದೆಂದು ಭಾವಿಸಿದರು. ೫ ದಿವಸಗಳಿಂದ ಪ್ರಾಣವಿಯೋಗದ ವರೆಗೂ ಶ್ರೀ ಬಸವೇಶನ ಬಿಂಬವನ್ನು ಎದೆಗೆ ಅವಚಿಕೊಂಡೇ ಇದ್ದರು. (ಶಿವದಾಸೋಹಂ) ಎಂದು ಉಚ್ಚರಿಸುತ್ತಲೇ ಜಡದೇಹವನ್ನು ತ್ಯಜಿಸಿದರು. ಇಲ್ಲಿಯ ಪಾಠಶಾಲೆಯ ವಿದ್ಯಾರ್ಥಿಗಳೂ ಸ್ನಾನದಿಂದ ಶುಚಿರ್ಭೂತರಾದ ಉಳಿದ ಸದ್ಭಕ್ತರೂ ಆ ಕಾಲದಲ್ಲಿ ಶಿವಶಿವ ಎಂದು ಶಿವಘೋಷವನ್ನು ಭಕ್ತಿಯಿಂದ ಉಚ್ಚರಿಸುತ್ತಿದ್ದರು. ಹಾನಗಲ್ಲ ಶ್ರೀಗಳವರು ಹುಕ್ಕೇರಿಯ ಶ್ರೀ ಶಿವಲಿಂಗದೇವರ ಕಡೆಯಿಂದಲೂ, ಕುಂಟೋಜೀಮಠದ ಶ್ರೀ ಚನ್ನವೀರದೇವರ ಕಡೆಯಿಂದಲೂ ಔರ್ಧ್ವದೈಹಿಕ ಶಿವಕರ್ಮಗಳನ್ನು ಯಥಾಶಾಸ್ತ್ರವಾಗಿ ಮಾಡಿಸಿದರು. ಸಮಾಧಿಯ ಯಾತ್ರೆಗೆ ಅಂದಾಜು ೫೦ ಸಾವಿರ ಜನರು ಕೂಡಿದ್ದರು. ಸೊಲ್ಲಾಪುರದಲ್ಲಿರುವ ೮-೧೦ ಸಾವಿರ ಶ್ರೀಮಂತ ಮೊದಲಾದ ಎಲ್ಲಾ ವೀರಶೈವರೂ ಸ್ನಾನವನ್ನು ಮಾಡಿಕೊಂಡು, ಕಾಲುಗಳಲ್ಲಿ ಜೋಡನ್ನು ಮೆಡದೆ ಹಾಗೇ ಪಾದಚಾರಿಗಳಾಗಿ ನಡೆದಿದ್ದರು. ಲಿಂಗಶರೀರದ ಮುಂದೆ ವೈದಿಕರು ವೇದಘೋಷವನ್ನು ಮಾಡುತ್ತಿದ್ದರು. ೪-೫ ಭಜನೆಯ ಮೇಳದವರು ಭಜನೆ ಮಾಡುತ್ತಿದ್ದರು. ಶಿವಯಾತ್ರೆಯು ನಡೆದ ಎಲ್ಲಾ ಬೀದಿಗಳಲ್ಲಿ ಆಯಾಜನರು ಸಮ್ಮಾರ್ಜನೆ, ರಂಗವಲ್ಲಿ, ತಳಿರು, ತೋರಣ, ಹಂದರ ಮೊದಲಾದ ಅಲಂಕಾರಗಳನ್ನು ಮಾಡಿದ್ದರು. ಸಾವಿರಾರುಜನ ಶಿವಭಕ್ತ ಪುರಂಧ್ರಿಯರು ಪಂಚಾರತಿಗಳನ್ನು ಹಿಡಿದುಕೊಂಡು ಮಂಗಲಗಳನ್ನು ಮಾಡುತ್ತಿದ್ದರು. ಬೀದಿಯುದ್ದಕ್ಕೂ ಭಕ್ತಜನರು (ಎಲ್ಲಾ ಮತದವರೂ) ಚೌಲಿ ಪಾವಲಿಗಳನ್ನು ಎರಚುತ್ತಿದ್ದರು. ವ್ಯೋಮಯಾನವು ಮನೆಯಿಂದ ಶುಕ್ರವಾರ ಪ್ರಾತಃಕಾಲದ ೯ ಘಂಟೆಗೆ ಹೊರಟು, ಮಧ್ಯಾಹ್ನದ ೨ ಘಂಟೆಗೆ ಸಮಾಧಿಯ ಸ್ಥಾನವನ್ನು ಮುಟ್ಟಿತು. ಸಮಾಧಿಯು ಶ್ರೀಸಿದ್ಧರಾಮೇಶ್ವರದೇವಾಲಯದ ಹಿಂಭಾಗದಲ್ಲಿರುವ ಶಿವಾನಂದೋದ್ಯಾನದಲ್ಲಿ ರಚಿಸಲ್ಪಟ್ಟಿತ್ತು. ಸಮಾಧಿಯಸಂಸ್ಕಾರವು ಸಾಯಂಕಾಲ ೫ ಘಂಟೆಗೆ ಪೂರೈಸಿತು. ಅದೇದಿವಸದ ರಾತ್ರಿ ೮ ಘಂಟೆಗೆ ಶ್ರೀಮಲ್ಲಿಕಾರ್ಜುನದೇವಾಲಯದಲ್ಲಿ ಸಭೆಗೂಡಿಸಿ, ಹಾನಗಲ್ಲ ಶ್ರೀಗಳವರು ಶರಣರ ಗುಣಕಥನವನ್ನು ಉಪನ್ಯಾಸರೂಪದಿಂದಲೂ, ಶಿವಯೋಗಮಂದಿರದ ಕೀರ್ತನಕಾರರು ಕೀರ್ತನದಿಂದಲೂ ಸ್ತುತಿಸಿದರು. ಮಾರನೆಯ ದಿನ ಸಾಯಂಕಾಲ ೪ ಘಂಟೆಗೆ ಸಭೆಯನ್ನು ಕೂಡಿಸಿ ವಿದ್ಯಾರ್ಥಿಗಳ ಭಾಷಣ ಮತಕೀರ್ತನಗಳು ಆದ ನಂತರ ಹಾನಗಲ್ಲ ಶ್ರೀಗಳವರು ಶ್ರೀ ಶರಣರ ಸಮಾಧಿಯ ಕಟ್ಟಡವನ್ನು ಕಟ್ಟಿಸಬೇಕೆಂದು ಹೇಳಲಾಗಿ ಇಲ್ಲಿಯ ಶ್ರೀಯುತ ಭಂಡಪ್ಪಾ ಅಣ್ಣಾ ಕಾಡಾದಿ ಶ್ರೀಮಂತವಾರದ ಸೆಕ್ರೆಟರಿಗಳು ಮೊದಲಾದ ಪುರಪ್ರಮುಖರು ಒಂದೇ ಘಂಟೆಯಲ್ಲಿ ೧೦೦೦೦ ಸಾವಿರ ಚಂದಾವನ್ನು ಕೊಡಿಸಿದರು. ಇನ್ನೂ ೮-೧೦ ಸಾವಿರ ಚಂದಾ ಕೊಡುವವದೆ. ಶ್ರೀ ಶರಣರು ಲಿಂಗೈಕ್ಯರಾದರೆಂಬ ವಾರ್ತೆಯು ಊರಲ್ಲಿ ಹರಡಿದ ಕೂಡಲೆ ಎಲ್ಲಾ ಬಜಾರಗಳಲ್ಲಿಯ ಸರ್ವಜಾತಿಯವರ ಅಂಗಡಿಗಳೂ ೬ ಗಿರಣಿಗಳೂ, ೩ ಸಿನೀಮಾಗಳು ಬಂದಾಗಿದ್ದವು. ವಿಜಾಪುರ ಮೊದಲಾದ ಕಡೆಯ ಜನಗಳು ಇಲ್ಲಿಂದ ತಾರುಹೋದ ಕೂಡಲೆ ತಮ್ಮ ಅಂಗಡಿಗಳನ್ನು ಬಂದು ಮಾಡಿದರು. ಗದಗ, ರೋಣ, ಹಾಲಕೇರಿ. ಬಾಗಲಕೋಟೆ, ವಿಜಾಪುರ, ಬಾರಸಿ, ಕಲಬುರ್ಗಿ ಮೊದಲಾದ ಶಹರಗಳಿಂದ ಅನೇಕಜನ ಭಕ್ತಮಂಡಳಿಯೂ ಮತ್ತು ರೋಣ ಹಾಲಕೇರಿ ಶ್ರೀಗಳವರೂ ಇಲ್ಲಿಯ ಕಿರೀಟಮಠದ ಶ್ರೀಗಳೂ ಶಿವಯೋಗಮಂದಿರದ ಶಿವಯೋಗಿಗಳೂ ಸಮಾಧಿ ಯಾತ್ರೆಗೆ ದಯಮಾಡಿಸಿದ್ದರು. ೨ ದಿವಸಗಳ ವರೆಗೆ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಜಂಗಮದಾಸೋಹವನ್ನು ಎಂದರೆ ೪-೬ ಸಾವಿರ ಜಂಗಮರಿಗೆ ಶ್ರೀಮಂತಕಾಡಾದಿ ಭಂಡೆಪ್ಪಾ ಅಣ್ಣಾ ಅವರು ಭೋಜನ ಮಾಡಿಸಿದರು. ಇದಲ್ಲದೆ ಹಿಟ್ಟು ಅಕ್ಕಿ ಮೊದಲಾದುದನ್ನು ಅನೇಕ ಜನಗಳು ತಾವೇ ತಂದು ಒಪ್ಪಿಸುತ್ತಿದ್ದರು. ಶ್ರೀ ಶರಣರ ಫೋಟೋವನ್ನು ಜೀರಿಗೆ ಇವರು ೩-೪ ತೆರನಾಗಿ ತೆಗೆದುಕೊಂಡರು. ೨ ದಿವಸ ಶರಣರ ಮುಂದೆ ಬಸವಲಿಂಗಶಾಸ್ತ್ರಿಗಳವರು ಪುರಾಣಿಕ ಇವರು ಪುರಾಣ ಹೇಳಿದರು. ಕೀರ್ತನೆಗಳೂ ಜರಗಿದವು. ೨ ದಿವಸ ಊರಲ್ಲಿಯ ಶಿವಭಕ್ತರೇ ಮೊದಲಾದ ಎಲ್ಲಾ ಜಾತಿಯ ಜನರೂ ಸ್ನಾನವನ್ನು ಮಾಡಿ ಕಾಯಿ ಕರ್ಪೂರ ಮಂಗಲವನ್ನು ಮಾಡಿಹೋಗುತ್ತಿದ್ದರು.

ಓರ್ವ ಪ್ರತ್ಯಕ್ಷದರ್ಶಿ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 17

ನಾವು ಎ. ಆಲ್ ಬ್ಯುಕೈಯರ್ ಕ್ಯು ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ
ರಿಜಿಸ್ಟರ ಮಾಡಲ್ಪಟ್ಟ 19

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮಹಮರಿತೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತು ಜನರ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನುಭವಿಸತಕ್ಕದ್ದೆಂದು ತಿಳಿದು ಸ್ವೀಕರಿಸಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ನೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಳಜ್ಜು, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರಬು, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೋಲದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಬಿದ್ದರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಆಗದೆ ಇದದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಫೆಬ್ರವರಿ ತಾ॥ ೨೨ ರಿಂದ ೧೯೨೦ನೆಯ ಫೆಬ್ರವರಿ ತಾ॥ ೨೮ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಫಾಲ್ಗುಣ ಶು॥ ತದಿಗೆಯಿಂದ ಫಾಲ್ಗುಣ ಶುದ್ಧ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
22	ಭಾನು	ತದಿ	47-9	ಉಭಾ	48-48	11
23	ಸೋಮ	ಚೌತಿ	43-52	ರೇವ	46-54	12
24	ಮಂಗಳ	ಪಂಚ	39-21	ಅಶ್ವಿ	44-3	13
25	ಬುಧ	ಷಷ್ಠಿ	34-18	ಭರ	40-40	14
26	ಗುರು	ಸಪ್ತ	28-38	ಕೃತ್ತಿ	26-42	15
27	ಶುಕ್ರ	ಅಷ್ಟ	22-41	ರೋಹಿ	32-33	16
28	ಶನಿ	ನವ	16-42	ಮೃಗ	28-20	17

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಭುವನಪಥಕೃತಾವತಾರಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲಿಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚೆತ್ತೀಯಂಸದಾಪೂರಗೆ ಗೌರೀತಾಸುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಫೆಬ್ರವರಿ ತಾರೀಖು ೨೨ ನೆಯ ಭಾನುವಾರ (ಸಂಚಿಕೆ ೯

MYSORE GOVERNMENT ADVERTISEMENTS.

30

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬಿಳೆ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೆ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ, ಮುಖಾಂತರ ಅಥವ ಸಮಕ್ಷಮ.

7 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 32

ತಲೆನೋವು, ಕೆಣ್ಣೂಲು, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಚಳುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸ ಬಾಟ್ಲು ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ಹುಣ್ಣಿ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಎಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲೆಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದ ಫಾಯದೆಶೀರ ಮಾಡುತ್ತೇವೆ. ನಮ್ಮ ಅನುಭವ ತೋಗೊಂಡಲ್ಲಿ ಖಾತ್ರಿ ಆದೀತು. 4

ಛಪಕೀ ಜಾಹೀರಾತಿಗೆ ಮರುಳಾಗಬೇಡಿರಿ.

ಮಮ್ಮ ತರಿಸಿ **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
23 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
10 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 11

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

16

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಭಿನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಸಿದ್ದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ. ಕೊಟ್ಟುಬಿಡುವವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆಖೈ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬುರ್ಗಾ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಫೆಬ್ರುವರಿ ತಾ|| ೨೯ನೆಯ ಭಾನುವಾರ.

ಪೂಜ್ಯವರ್ಗದಲ್ಲಿ ಕಲಹೋತ್ಪಾದನೆ.

(ಭಾಗ ೩.)

ವೀರಶೈವ ಸಮಾಜದಲ್ಲಿ ಲೌಕಿಕ ಪಾರಮಾರ್ಥಿಕ ವಿಷಯಗಳೊಳಗೆ ಎಷ್ಟು ಹೀನಸ್ಥಿತಿಯು ಮನೆಮಾಡಿಕೊಂಡಿದೆಯೆಂಬುದನ್ನು ಹಿಂದಣ ಸಂಚಿಕೆಯಲ್ಲಿ ವಿವರಿಸಿರುತ್ತೇವೆ. ಆ ಹೀನಸ್ಥಿತಿಯನ್ನು ದೂರಮಾಡಿಕೊಂಡ ಹೊರತು ನಮ್ಮ ಸಮಾಜಕ್ಕೆ ಇಹಪರ ಮೋಕ್ಷಗಳೆಂದಿಗೂ ದೊರೆಯುವ ಹಾಗಿಲ್ಲ. ಈ ಲೋಪಪರಿಹಾರವೇ ಪ್ರತಿಯೊಬ್ಬ ವೀರಶೈವನ ಮುಖ್ಯ ಲಕ್ಷ್ಯವಾಗಿರಬೇಕು. ಅದಕ್ಕೆ ತಕ್ಕ ಪ್ರಯತ್ನವು ಸಮಾಜದವರಿಂದೆಲ್ಲಾ ನಡೆಯುವಂತೆ ಮಾಡುವ ಭಾರವು ಸಮಾಜದ ಮುಂದಾಳುಗಳ ಮೇಲೆ ಬಿದ್ದಿರುತ್ತದೆ. ಇಹಪರೋನ್ನತಿ ಪ್ರಾಸಾದವನ್ನು ಸೇರಬೇಕಾದರೆ ಏಕಮತ್ಯವೆಂಬ ಮೆಟ್ಟಲು ಮುಖ್ಯಸಾಧನವಾಗಿರುತ್ತದೆ. ಅದನ್ನು ಮೊದಲು ಗಟ್ಟಿಗೊಳಿಸಿ ಹವಣಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಭಕ್ತಮಾಹೇಶ್ವರ ವರ್ಗವೆಲ್ಲವೂ ಒಂದಾಗಿ ಸಮಾಜಶ್ರೇಯಸ್ಸನ್ನು ಸಾಧಿಸಿಕೊಳ್ಳಬೇಕಾಗಿದೆ. ಈಗಲೂ ಸಮಾಜದ ಸಾಧಾರಣ ಜನರಲ್ಲಿ ಮತದ ಅಭಿಮಾನವೇನೂ ಕಡಿಮೆಯಾಗಿಲ್ಲ. ಅವರಿಗೆ ಸರಿಯಾದ ದಿಗ್ದರ್ಶನಮಾಡಿಕೊಟ್ಟು ಕಾರ್ಯವನ್ನು ಸಾಧಿಸಿಕೊಳ್ಳುವ ಮುಖಂಡರು ನಮ್ಮಲ್ಲಿ ವಿರಳರಾಗಿದ್ದಾರೆ. ಧಾರ್ಮಿಕಮೂಲಪೀಠಾಧೀಶರೂ, ವೈದಿಕವಿದ್ವಜ್ಜನರೂ, ಲೌಕಿಕ ವಿಜ್ಞಾನವಿಭೂಷಿತರಾದ ಅಧಿಕಾರಿ ಅನಧಿಕಾರಿ ಮುಖಂಡಜನರೂ ಈಗ ಎಷ್ಟು ಚಟುವಟಿಕೆಯಿಂದ ಕೆಲಸಮಾಡಿದರೂ ಸಮಾಜಕ್ಕೆ ಅಷ್ಟು ಹಿತವಾಗುತ್ತದೆ. ಶ್ರೀರಂಭಾಪುರೀ ಉಜ್ಜಯನೀ ಮೊದಲಾದ ಕಡೆಯ ಆಚಾರ್ಯಸಂಸ್ಥಾನಾಧಿಪತಿಗಳೂ, ಚಿತ್ರದುರ್ಗ, ಡಂಬಳ, ಹುಬ್ಬಳ್ಳಿ ಮೊದಲಾದ ಕಡೆಯ ಪ್ರಮುಖ ನಿರಂಜನ ಪೀಠಾಧಿಪತಿಗಳೂ ಎಲ್ಲರೂ ಒಂದು ಕಡೆ ಕಲೆತು, ಬೊಂಬಾಯಿ ಕರ್ನಾಟಕ, ಮೈಸೂರು ಸಂಸ್ಥಾನ, ಮದ್ರಾಸು ಪ್ರಾಂತ, ಹೈದರಾಬಾದು, ಕೊಡಗು ಮೊದಲಾದ ಎಲ್ಲಾ ಕಡೆಯ ವಿದ್ಯಾವಂತರೂ ಮತ್ತು ಮತಾಭಿಮಾನಿಗಳೂ ಆದ ಪ್ರಮುಖ ಮಹಾಜನರುಗಳಿಗೆ ನಿರೂಪಕೊಟ್ಟು ಬರಮಾಡಿಕೊಂಡು, ಜಗತ್ತಿನ ಸದ್ಯದ ಪ್ರಗತಿಸ್ಥಿತಿಯನ್ನು ಲಕ್ಷಿಸಿ, ತಮ್ಮ ಸಮಾಜವನ್ನು ನೆರೆಹೊರೆಯ ಮುಂಬರಿದ ಸಮಾಜಗಳಂತೆ ಅಭಿವೃದ್ಧಿಗೊಳಿಸಬೇಕಾದರೆ ಲೌಕಿಕ ಧಾರ್ಮಿಕ ವಿಷಯಗಳಲ್ಲಿ ಯಾವಯಾವ ತೆರದ ಪ್ರಯತ್ನಗಳನ್ನು ಹೇಗೆಹೇಗೆ ಮಾಡಬೇಕೆಂಬುದನ್ನು ಚರ್ಚಿಸಿ ಸಿದ್ಧಾಂತಪಡಿಸಿಕೊಂಡು, ಮುಂದಣ ಕಾರ್ಯಕ್ಕೆ ತೊಡಗಬೇಕು. ಧಾರ್ಮಿಕಾಭಿವೃದ್ಧಿ ಕಾರ್ಯದಲ್ಲಿ ಪೂಜ್ಯವರ್ಗದವರೆಲ್ಲಾ ಒಮ್ಮನಸ್ಸಿನಿಂದ ಬದ್ಧದೀಕ್ಷರಾಗಿ ಕೆಲಸ ಮಾಡುತ್ತ ಬರಬೇಕು. ಅವರಲ್ಲಿ ಆತ್ಮಗೌರವಾಭಿವೃದ್ಧಿ ಚಿಂತೆಗಿಂತ ಸಮಾಜಶ್ರೇಯೋಭಿವೃದ್ಧಿ ಚಿಂತೆಯೇ ಮುಂದಾಗಿರಬೇಕು. ಸಮಾಜಹಿತಕ್ಕಾಗಿ ದೇಶಪರ್ಯಟನವನ್ನು ಮಾಡುತ್ತ ತಮ್ಮ ಆದಾಯದಲ್ಲಿ ಕಾಲುಭಾಗವನ್ನು ಪರಿವಾರದ ವ್ಯಯಕ್ಕೆ ಉಪಯೋಗಿಸಿ ಉಳಿದ ಮುಕ್ಕಾಲು ಭಾಗವನ್ನು ಸಮಾಜದ ಶ್ರೇಯೋಭಿವರ್ಧನ ಕಾರ್ಯಗಳಿಗೆ ವಿನಿಯೋಗಿಸುವಂತಾಗಬೇಕು. ತಮ್ಮ ಪ್ರತಿವರ್ಷದ ಆಯವ್ಯಯಸ್ವರೂಪವನ್ನು ಪ್ರಕಟಿಸಿ ಸಮಾಜಕ್ಕೆ ತಿಳಿಯಿಸಬೇಕು. ಅವಶ್ಯವಾದರೆ ಇಂಥಿಂಥ ದೇಶಭಾಗಗಳಲ್ಲಿ ಇಂಥಿಂಥ ಪೀಠಾಧಿಪತಿಗಳು ಸಂಚರಿಸಿ ಧರ್ಮೋದ್ಧಾರ ಕಾರ್ಯಗಳನ್ನು ನಡೆಯಿಸಬೇಕೆಂಬ ನಿಬಂಧನೆಗಳನ್ನೂ ಏರ್ಪಡಿಸಿಕೊಳ್ಳಬಹುದು. ಸಮಾಜಸೇವೆಯನ್ನೇ ಆತ್ಮತಪಸ್ಸೆಂದೂ ಪರಶಿವಾದಿಷ್ಟವಾದ ನಿಜಕರ್ತವ್ಯವೆಂದೂ ತಿಳಿದು ಆಚರಿಸುವ ಪೀಠಾಧಿಪತಿಗಳಿಗೆ ಮಿಗಿಲಾದ ಮರ್ಯಾದೆಗಳನ್ನೂ, ಯಥೇಚ್ಛವಾದ ಸೇವೆಯನ್ನೂ, ಕಾಣಿಕೆಕಪ್ಪಗಳನ್ನೂ, ಭಿಕ್ಷೆಗಳನ್ನೂ ಸಮಾಜದವರು ಅತಿಶಯವಾಗಿ ಸಲ್ಲಿಸುತ್ತ ಬರುವವರೆಂಬಲ್ಲಿ ಸಂಶಯವಿಲ್ಲ. ತಮ್ಮ ಪೂರ್ವಿಕರ ಔನ್ನತ್ಯವನ್ನು ತೋರಿಸಿಕೊಂಡು ತತ್ಸಂಬಂಧ ಮಾತ್ರದಿಂದಲೇ ಆತ್ಮಗೌರವವನ್ನು ಮೆರೆಯಿಸಿಕೊಳ್ಳುತ್ತ ಸಮಾಜಕ್ಕೆ ಪ್ರತ್ಯಕ್ಷವಾಗಿ ಯಾವ ಹಿತವನ್ನೂ ಉಂಟುಮಾಡದಿರುವ ಗುರುವನ್ನು ಸಮಾಜಕ್ಕೆ ಗುರು (ಭಾರಭೂತ) ವನ್ನಾಗಿಯೇ ಸಮಾಜದವರು ತಿಳಿಯುವರು. ಕಾಲಸ್ಥಿತಿಯೇ ಹಾಗೆ ಆಗುತ್ತಲಿದೆ. ಯೋಗ್ಯತಾಯೋಗ್ಯತೆಗಳನ್ನು ನೋಡದೆ ಮೂಢಭಕ್ತಿಯಿಂದ ಮನ್ನಿಸುವ ಕಾಲವು ಕಳೆದುಹೋಗುತ್ತಿದೆ. ಪೂಜ್ಯವರ್ಗವೆಲ್ಲವೂ ಜ್ಞಾನಕ್ರಿಯೆಗಳಲ್ಲಿ ಭಕ್ತವರ್ಗಕ್ಕಿಂತಲೂ ಉತ್ಕರ್ಷವನ್ನು ಪಡೆದಿಲ್ಲದಿದ್ದರೆ ಸಮಾಜದಲ್ಲಿ ಅರ್ಹವಾದ ಸಂಮಾನವೂ ಪೂಜ್ಯತೆಯೂ ನಿರುಪಾಧಿಕವಾಗಿ ಅವರುಗಳಿಗೆ ಸಲ್ಲಲಾರದು. ಇದನ್ನು ಅರಿತುಕೊಂಡು ಪೂಜ್ಯವರ್ಗವೆಲ್ಲವೂ ಎಚ್ಚತ್ತು ನಡೆದುಕೊಳ್ಳುವಂತಾಗಬೇಕು. ಹೀಗೆ ಪೂಜ್ಯವರ್ಗವು ಸುಧಾರಿಸಿಕೊಂಡು ಮತೋದ್ಧಾರರೂಪವಾದ ಮಹಾಲಕ್ಷ್ಯವನ್ನು ಮುಂದಿಟ್ಟುಕೊಂಡು ಏಕಮತ್ಯದಿಂದ ಕೆಲಸ ಮಾಡುತ್ತ ಬಂದರೆ ಜಗದೇಕಪೂಜ್ಯತೆಯು ತನ್ನಷ್ಟಗೆ ತಾನೇ ಅವರುಗಳ ಪಾದಾರವಿಂದವನ್ನು ಆಶ್ರಯಿಸುವುದು. ಸಮಾಜದಲ್ಲಿ ಅವರಿಗೆ ಕನಕವೃಷ್ಟಿಯಾಗುವುದು. ಆಗ ಯಾವುದೊಂದು ಫಂಡುಗಳನ್ನಾಗಲಿ, ಅವುಗಳ ಆಧಾರದಿಂದ ಪಾಠಶಾಲೆಗಳನ್ನೋ, ವಿದ್ಯಾರ್ಥಿನಿಲಯಗಳನ್ನೋ, ಸಾಧಕರ ಆಶ್ರಮಗಳನ್ನೋ, ಶಿವಾನುಭವಗೋಷ್ಠಿಗಳನ್ನೋ, ಮತಗ್ರಂಥೋದ್ಧಾರವನ್ನೋ, ಉಪನ್ಯಾಸಕರ ದ್ವಾರಾ ಧರ್ಮಪ್ರಸಾರವನ್ನೋ ಗ್ರಂಥಭಾಂಡಾಗಾರಸ್ಥಾಪನೆಯನ್ನೋ ಮಾಡಿಸುವುದೆಂದರೆ ಎಷ್ಟುಮಾತ್ರದ ಕೆಲಸವೆನ್ನುವಂತಾಗುವುದು. ಭಕ್ತವರ್ಗವೆಲ್ಲವೂ ಅವರುಗಳ ಹಸ್ತಾವಧಾನ ಪಾದಾವಧಾನದಲ್ಲಿರುವರು. ಅವರುಗಳ ಮಾತಿಗೆ ಇದಿರಿಲ್ಲವಾಗುವುದು. "ಕೊಟ್ಟರೆ ವರ ಇಟ್ಟರೆ ಶಾಪ" ವೆಂಬುದು ಪ್ರತ್ಯಕ್ಷವಾಗುವುದು. ಇಹಪರಮುಕ್ತಿಗಳೆರಡೂ ಅವರಿಗೆ ಲಭಿಸಿದಂತಾಗುವುದು. ಅಂಥ ಕೃತಕೃತ್ಯತೆಯಿಂದ ಅವರುಗಳು ನಿತ್ಯಾನಂದಮಯರಾಗಿರಬಹುದು. ಇಂಥ ಸುಸ್ಥಿತಿಯು ತಾನು ದೊಡ್ಡವನು ನಾನು ದೊಡ್ಡವನು ಎಂಬ ಹೋರಾಟದಲ್ಲೂ, ಅದಕ್ಕಾಗಿಯೇ ಎರಡುಹೊತ್ತೂ ಅವಧಾನವನ್ನೆಲ್ಲಾ ತೆತ್ತು ಚಿಂತಾಭರದಲ್ಲಿ ಮುಳುಗಿ ತೇಲುವುದರಲ್ಲೂ, ಈ ತಮ್ಮ ಹೋರಾಟದ ಸೊಂಕಿಗೆ ತಮ್ಮ ಭಕ್ತಮಂಡಲಿಯನ್ನೆಲ್ಲಾ ಗುರಿಮಾಡಿ ತನ್ಮೂಲಕ ಸಮಾಜದಲ್ಲೇ ವಿವಿಧ ವಿಭಾಗಗಳನ್ನುಂಟುಮಾಡಿ ಕಾದಾಡಿಸುವುದರಲ್ಲೂ, ಉಂಟಾಗುವುದುಂಟೆ ಎಂಬುದನ್ನು ಸಾವಧಾನವಾಗಿ ಪೂಜ್ಯವರ್ಗವೆಲ್ಲವೂ ಪರ್ಯಾಲೋಚಿಸಬೇಕು.

ಸಮಾಜಪುರುಷನು ಅಂಧನಲ್ಲ. ಪ್ರತಿಯೊಬ್ಬರಿಗೂ ಎರಡೆರಡು ಕಣ್ಣುಗಳಿದ್ದರೆ ಸಮಾಜಪುರುಷನು ಸಹಸ್ರಾಕ್ಷನಾಗಿರುವನು. ಅವನು ಸರ್ವಾಂತರ್ಯಾಮಿಯಾದುದರಿಂದ ಯಾರುಯಾರು ಎಷ್ಟು ಗುಪ್ತವಾಗಿ ಮಾಡಿಕೊಳ್ಳುವ ಕಾರ್ಯಗಳನ್ನೂ ಅವನು ಅರಿಯದೆ ಬಿಡುವನಲ್ಲ. ಬಹಿರಂತರ್ವಿಷಯಗಳಲ್ಲಿ ಅವನಿಗೆ ತಿಳಿಯದೆ ಹೋಗತಕ್ಕದು ಯಾವುದೂ ಇರುವುದಿಲ್ಲ. ತನ್ನ ಸೇವೆ ಮಾಡುವವರನ್ನೂ, ತನಗೆ ಹಿತವನ್ನು ಬಯಸುವವರನ್ನೂ ತನಗೆ ದ್ರೋಹಮಾಡುವವರನ್ನೂ ಸಹ ಅವನು ಅರಿಯದೆ ಇರುವುದಿಲ್ಲ. ಆಯಾ ಕರ್ಮಕ್ಕೆ ತಕ್ಕ ಫಲವನ್ನು ಸರ್ವಸಾಕ್ಷಿಯಾದ ಭಗವಂತನಂತೆ ಉಂಟುಮಾಡಿಸುವಲ್ಲಿ ಅವನು ಶಕ್ತನಾಗಿಯೇ ಇರುವನು.

ಶ್ರೀ ಜಗದ್ಗುರು ಕಾಶೀವಿಶ್ವಾರಾಧ್ಯಪೀಠವು ವೀರಶೈವರ ಸಂದಣಿಯೇ ಇಲ್ಲದ ಎಷ್ಟೋ ದೂರದೇಶದಲ್ಲಿದ್ದರೂ ಶಿವೈಕ್ಯ ಶ್ರೀ|| ವೀರಭದ್ರ ಮಹಾಸ್ವಾಮಿಗಳವರ ಕಾಲದಿಂದಲೂ ಆ ಪೀಠಾಚಾರ್ಯರುಗಳು ಸಮಾಜಕ್ಕೆ ಸಂಸ್ಕೃತ ವಿದ್ಯಾಪ್ರಸಾರ ದ್ವಾರಾ ಮಾಡಿದ ಮಹೋಪಕೃತಿಯು ಸಮಾಜಕ್ಕೆ ದೃಗ್ಗೋಚರವಾಗಿಲ್ಲವೆ? ಅದೇ ತೆರದ ಮಹೋಪಕೃತಿ ಯಾವುದನ್ನಾದರೂ ತತ್ಸಮಾನಪೀಠದ ಮುಖ್ಯಾಚಾರ್ಯರುಗಳು ಸಮಾಜಕ್ಕೆ ಈಗಣ ಕಾಲದಲ್ಲಿ ಮಾಡದಿರುವುದನ್ನು ಸಹ ಸಮಾಜವು ಕಾಣದೆ? ಅದರಂತೆಯೇ ಶ್ರೀ ಚಿತ್ರದುರ್ಗದ ಜಗದ್ಗುರು ಮಹಾಪೀಠದ ಈಗಣ ಮಹಾಸ್ವಾಮಿಗಳು ಸಮಾಜಾಭ್ಯುದಯಚಿಂತೆಯನ್ನೇ ತಮ್ಮ ತಪಸ್ಸನ್ನಾಗಿಟ್ಟುಕೊಂಡು ಪರಿಪರಿಯಿಂದ ಸಹಾಯ ಮಾಡುತ್ತಿರುವುದನ್ನೂ ಶ್ರೀ ಜಗದ್ಗುರು ಡಂಬಳಸಂಸ್ಥಾನಾಧೀಶ ಮಹಾಸ್ವಾಮಿಗಳು ಚಿರಕಾಲದಿಂದ ಸಂಸ್ಕೃತ ಪಾಠಶಾಲಾ ಸ್ಥಾಪನ ಮೂಲಕವೂ ಶ್ರೀ|| ಚರವರ್ಯ ಹಾನಗಲ್ಲು ಕುಮಾರ ಮಹಾಸ್ವಾಮಿಗಳು ಶಿವಯೋಗ ಮಂದಿರದ ಸ್ಥಾಪನದ ಮೂಲಕವೂ, ಅದರಂತೆಯೇ ಚರವರ್ಯ ಶ್ರೀ ಮೃತ್ಯುಂಜಯ ಸ್ವಾಮಿಗಳೇ ಮೊದಲಾದ ಕೆಲಕೆಲವರು ಯಥಾಶಕ್ತಿಯಾಗಿ ಧಾರ್ಮಿಕೋದ್ಧಾರ ಕೃತ್ಯವನ್ನಾಚರಿಸುತ್ತಿರುವುದನ್ನೂ ಕೂಡ ಸಮಾಜಪುರುಷನು ಕಾಣದೆ ಇರುವುದಿಲ್ಲ. ಅವರವರ ಕೃತಕರ್ಮಕ್ಕೆ ತಕ್ಕ ಫಲವನ್ನು ಅವರವರೇ ಉಂಟುಮಾಡಿಕೊಳ್ಳುವರು. ಒಬ್ಬರನ್ನೊಬ್ಬರು ನೋಡಿ ಅಸೂಯೆ ಪಡುವುದಕ್ಕಿಂತಲೂ, ಕಾರ್ಯದಲ್ಲಿ ಒಬ್ಬರನ್ನೊಬ್ಬರು ಮಿಂಚಿಸುವ ಸ್ಪರ್ಧೆಯನ್ನಿಟ್ಟುಕೊಂಡರೆ ಅವರೂ ಧನ್ಯರಾಗಿ, ಅಂಥವರಿಂದ ಸಮಾಜಕ್ಕಾದರೂ ವಿಶೇಷ ಲಾಭವಾಗುವುದು.

ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು.

ಇವರು ೧೯೧೩ನೆ ವರ್ಷದ ಫಿಬ್ರವರಿ ತಿಂಗಳಿಂದ ೧೯೨೦ ನೆ ಜನವರಿ ಕಡೆಯವರೆಗೆ ಬೆಂಗಳೂರು ಪಟ್ಟಣದ ಆನರರಿ ಪ್ರೆಸಿಡೆಂಟರಾಗಿ ಕೆಲಸ ಮಾಡಿ ನಡೆಯಿಸಿದ ಕಾರ್ಯಭಾಗಗಳ ವರದಿಯನ್ನು ಅಚ್ಚುಮಾಡಿಸಿರುತ್ತಾರೆ. ಇದನ್ನು ನೋಡುವಲ್ಲಿ ಆ ಮ್ಯುನಿಸಿಪಾಲಿಟಿಯ ಕಾರ್ಯಗಳು ಬಹುಭಾಗದಲ್ಲಿ ಅಭಿವೃದ್ಧಿಯನ್ನು ಹೊಂದಿರುವುವೆಂಬುದು ಗೊತ್ತಾಗುತ್ತದೆ. ಇವರು ಆ ಕೆಲಸಕ್ಕೆ ಸೇರಿದ ವರ್ಷದಲ್ಲಿ ಮ್ಯು|| ವಾರ್ಷಿಕಾದಾಯವು ೩,೨೭,೫೯೦ ರೂ. ಗಳಾಗಿದ್ದುದು, ೧೯೧೮-೧೯ ರಲ್ಲಿ ೫,೦೩,೯೯೦ ರೂ. ಗೆ ಹೆಚ್ಚಿದ್ದಿತು. ವೆಚ್ಚವು ೩,೧೫,೭೩೯ ರಿಂದ ೩,೯೯,೧೩೬ ಕ್ಕೆ ಮಾತ್ರ ಹೆಚ್ಚಿತು. ಇವರು ಕೆಲಸಕ್ಕೆ ಸೇರಿದಾಗ ಮ್ಯು|| ಬೊಕ್ಕಸದಲ್ಲಿ ೧೧,೭೨೮೭ ರೂ. ಗಳು ಮಾತ್ರ ಉಳಿದಿದ್ದುವು. ಕೆಲಸ ಬಿಡುವಾಗ ಆ ಹಣವು ೭,೮೮,೮೯೧ ರೂ. ಗಳಾಗಿದ್ದುವು. ಈ ವಿವರಣೆಯೆಲ್ಲಾ ಇವರ ಮಿತವ್ಯಯ ಕೌಶಲವನ್ನು ವ್ಯಕ್ತಪಡಿಸಿರುತ್ತವೆ. ಆದಾಯದಲ್ಲಿ ಅಭಿವೃದ್ಧಿಯುಂಟಾಗುವುದಕ್ಕೆ ಮನೆ ತೆರಿಗೆಯು ೯೨,೭೭೩ ರಿಂದ ೧೫೫,೮೮೭ ರೂ ಗೂ, ಆಕ್ಟ್ರಾಯ ವರಮಾನವು ೧೦೨,೫೬೩ ರೂ. ನಿಂದ ೨೩೯,೯೧೦ ರೂ. ಗೂ, ಮಾರ್ಕೆಟ್ಟು, ಟೋಲ್‌ಗೇಟು ಮೊದಲಾದ ಇತರ ಭಾಗಗಳ ಆದಾಯವು ಕೂಡ ೬೨,೩೫ ರಿಂದ ೧೨೨,೮೮ ರೂ. ಗೆ ಎಂದರೆ ದ್ವಿಗುಣವಾಗಿ ಹೆಚ್ಚಿದುದೂ, ಬೊಕ್ಕಸದಲ್ಲಿ ಉಳಿದ ಹಣವನ್ನು ಬಡ್ಡಿಗೆ ಹಾಕುವ ನೂತನ ಪದ್ಧತಿಯನ್ನೇರ್ಪಡಿಸಿದುದರಿಂದ ಆದ ವರಮಾನವು ೩,೫೫,೩೩ ರೂ. ಗಳಾದುದೂ ಸಹ ಒಟ್ಟು ಆದಾಯದ ಅಭಿವೃದ್ಧಿಗೆ ಸಾಧಕಗಳಾದುವು.

ಪುರಾಭಿವೃದ್ಧಿ ಕಾರ್ಯಗಳೂ ಆರೋಗ್ಯವರ್ಧನ ಕಾರ್ಯಗಳೂ ಶೃಂಗಾರಗಳೂ ಎಷ್ಟುಮಟ್ಟಿಗೆ ಅಭಿವೃದ್ಧಿಗೊಂಡಿವೆಯೆಂಬುದನ್ನು ಕೂಡ ಈ ವರದಿಯು ತಿಳಿಯಿಸುತ್ತದೆ. ಪ್ರಜೆಗಳ ಭೂಮಿಗಳನ್ನು ಸುಲಭವಾದ ಬೆಲೆಗೆ ಕೊಂಡು ವಿಪರೀತವಾದ ಬೆಲೆಗೆ ಅವುಗಳನ್ನು ಮಾರಿ ಆದಾಯವನ್ನು ಹೆಚ್ಚಿಸಿದ ಭಾಗಗಳೂ ಇದರಲ್ಲಿ ಕಂಡುಬಂದಿವೆ. ಹೊಸದಾಗಿ ಹಾಕಿಸಿದ ಮಾರ್ಗಗಳು, ಹಳೆಯ ಮಾರ್ಗಗಳಿಗೆ ಕಲ್ಲುಚಪ್ಪಡಿಗಳನ್ನು ಹಾಕಿಸಿ ಭದ್ರಪಡಿಸಿದುದು, ಚಚ್ಚಲುಗಳನ್ನು ಹಾಕಿಸಿದುದು, ನಲ್ಲಿಗಳನ್ನೂ ದೀಪಗಳನ್ನೂ ದನದ ದೊಡ್ಡಿಗಳನ್ನೂ ಏರ್ಪಡಿಸಿದುದು, ಕಕ್ಕಸುಗಳನ್ನೂ ಸ್ನಾನಮಂದಿರಗಳನ್ನೂ ಹುಡುಗರಿಗೆ ಆಟದ ಬಯಲುಗಳನ್ನೂ ಉದ್ಯಾನಗಳನ್ನೂ ಏರ್ಪಡಿಸಿದುದು ಈ ವಿವರಗಳೆಲ್ಲವೂ ಇದರಲ್ಲಿವೆ. ಇವೆಲ್ಲವೂ ೭ ವರ್ಷ ಕಾಲದಲ್ಲಿ ಮ|| ಶೆಟ್ಟರು ಎಷ್ಟು ಅಭಿಮಾನದಿಂದಲೂ ಪ್ರಜಾಸೇವೆಯನ್ನು ಮನಃಪೂರ್ವಕವಾಗಿ ಮಾಡಿ ಒಳ್ಳೆ ಕೀರ್ತಿಯನ್ನು ಪಡೆಯಬೇಕೆಂಬ ಶ್ರದ್ಧೆಯಿಂದಲೂ ಮಾಡಿರುವರೆಂಬುದನ್ನು ವ್ಯಕ್ತಪಡಿಸುತ್ತವೆ. ಮತ್ತು ಇವರ ಕಾಲದಲ್ಲಿ ನಡೆದ ಪುರಾಭಿವೃದ್ಧಿ ಆರೋಗ್ಯಾಭಿವೃದ್ಧಿ ಕಾರ್ಯಗಳ ಫಲಿತಾಂಶವೇನೆಂಬುದನ್ನು ವರದಿಯ ಕೊನೆಯಲ್ಲಿರುವ ಪಟ್ಟಿಯಿಂದ ತಿಳಿಯಬಹುದಾಗಿದೆ. ಅದರಲ್ಲಿ ಕಂಡಿರುವ ಪ್ರಕಾರ ಆ ಪಟ್ಟಣದಲ್ಲಿ ೧೯೦೬ ನೆ ವರ್ಷದಿಂದ ೧೯೧೨ ನೆ ವರ್ಷದ ವರೆಗಣ ೬ ವರ್ಷ ಕಾಲದಲ್ಲಿ ಒಟ್ಟು ಜನನಸಂಖ್ಯೆಯು ೧೩೯೨೫ ಆಗಿದ್ದುದು ೧೯೧೩ ರಿಂದ ೧೯೧೯ ನೆ ವರ್ಷದ ಮಧ್ಯದ ೬ ವರ್ಷ ಕಾಲದಲ್ಲಿ ೨೧೮೬೩ ಕ್ಕೆ ವೃದ್ಧಿಯಾಗಿರುತ್ತದೆ. ಮರಣವು ೨೮೮೭೮ ರಿಂದ ೨೮೨೮೦ ಕ್ಕೆ ಇಳಿದಿದೆ. (ಅಕಸ್ಮಾತ್ ಒದಗಿದ ಇಂಫ್ಲುಯಂಜಾ ರೋಗದಿಂದ ೨೦೦೦ ಮರಣಗಳು ಸಂಭವಿಸದಿದ್ದರೆ ಈ ಒಟ್ಟು ಮರಣಸಂಖ್ಯೆಯು ಇನ್ನೂ ಕಡಿಮೆಯಾಗುತ್ತಿದ್ದಿತು.) ಪ್ಲೇಗು ಸೋಂಕಿದುದು ೩೮೮೮ ರಿಂದ ೨೧೭೭ ಕ್ಕೂ ಪ್ಲೇಗಿನಿಂದಾದ ಮರಣಸಂಖ್ಯೆಯು ೨೮೭೮ ರಿಂದ ೧೬೨೮ ಕ್ಕೂ ಇಳಿದಿರುತ್ತವೆ. ಇನಾಕ್ಯುಲೇಷನ್ ವಾಕ್ಸಿನೇಷನ್ ಕೆಲಸಗಳು ಸಹ ಹಿಂದಿಗಿಂತ ಹೆಚ್ಚಿನ ಪ್ರಮಾಣದಿಂದ ನಡೆದಿರುತ್ತವೆ. ಮೇಲೆ ಕಂಡ ವಿವರಣದಿಂದ ಜನನಸಂಖ್ಯೆಯ ಪರಿಮಾಣವು ೧ಕ್ಕೆ ೧|| ಯಷ್ಟು ಅಭಿವೃದ್ಧಿಗೊಂಡಿರುವುದು ಶುಭ ಲಕ್ಷಣವಾಗಿದ್ದರೂ ಮರಣ ಸಂಖ್ಯೆಯು ಅಷ್ಟೇನೂ ಕಡಿಮೆಯಾದಂತೆ ತೋರುವುದಿಲ್ಲ.

ಇದುವರೆಗೆ ಪಟ್ಟಣದಲ್ಲಿ ನಡೆದಿರುವ ಪುರಾಭಿವೃದ್ಧಿ ಶೃಂಗಾರಕಾರ್ಯಗಳಲ್ಲದೆ ಹೊಸದಾಗಿ ಕೆಲವು ಕಾರ್ಯಗಳು ಉದ್ದೇಶಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಸರ್ಕಾರದ ಅನುಮತಿಯನ್ನು ಹೊಂದಿ ಬಂದಿರುತ್ತವೆ. ಕೆಲವು ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲ್ಪಟ್ಟಿವೆ. ಇನ್ನೂ ಕೆಲವು ಪರ್ಯಾಲೋಚನೆಯಲ್ಲಿವೆ. ಒಪ್ಪಿಗೆ ಪಡೆದಿರುವ ಕಾರ್ಯಗಳಲ್ಲಿ ಮುಖ್ಯವಾದುವು—೪|| ಲಕ್ಷ ರೂಪಾಯಿನ ಜನರಲ್ ಮಾರ್ಕೆಟ್ಟೂ, ೫|| ಲಕ್ಷ ಅಂದಾಜಿನ ಟೌನ್‌ಹಾಲೂ ಮ್ಯು|| ಆಫೀಸೂ, ಕೋಟೆಯ ಪೂರ್ವಭಾಗದಲ್ಲಿ ೩೬,೩೦೦೦ ರೂ. ಅಂದಾಜಿನಿಂದ ೬೮ ಉತ್ತಮತರಗತಿಯ, ೨೧೭ ಮಧ್ಯಮತರಗತಿಯ, ೧೮೨ ಕನಿಷ್ಠತರಗತಿಯ ಮನೆಗಳನ್ನು ಕಟ್ಟಬಹುದಾದ ನಿವೇಶನಗಳು ಏರ್ಪಡಿಸಲ್ಪಟ್ಟಿರುವುದೂ ಆಗಿವೆ. ಬಡಗ್ಗರಿಗಾಗಿ ಬಸವನಗುಡಿ ಎಕ್ಸ್‌ಟೆನ್‌ಷನ್ನಿನಲ್ಲಿ ೬೦ ಮನೆಗಳನ್ನು ಕಟ್ಟಿಸಲು ಏರ್ಪಡಿಸಿ ಸರ್ಕಾರಿ ಅಪ್ಪಣೆಯನ್ನು ಪಡೆದಿರುವುದು ಸ್ತುತ್ಯವಾಗಿದೆ. ಬೆಂಗಳೂರಿನಂಥ ತುಂಬಿದ ಪಟ್ಟಣಕ್ಕೆ ಇಂಥ ಮನೆಗಳು ಸಾವಿರಾರು ಇರುವುದು ಕೂಡ ಅವಶ್ಯವಾಗಿದೆ.

ಒಟ್ಟಿನಲ್ಲಿ ಮ|| ಶೆಟ್ಟರ ಆಡಳಿತದ ೭ ವರ್ಷ ಕಾಲದಲ್ಲಿ ಬೆಂಗಳೂರು ನಗರದ ವಿಸ್ತಾರವೂ ಅಲಂಕರಣ ಕಾರ್ಯಗಳೂ, ಶುಚೀಕರಣವೂ ಎಷ್ಟು ಹೆಚ್ಚಿರುವುವೆಂಬುದನ್ನು ಲೆಕ್ಕಗಳಿಂದಲೇ ಅಲ್ಲದೆ ಪ್ರತ್ಯಕ್ಷವಾಗಿ ಪಟ್ಟಣವನ್ನು ನೋಡಿದವರೆಲ್ಲರೂ ಹೇಳಬಲ್ಲರು. ಅದರ ಸಾಂಪತ್ತಿಕ ಸ್ಥಿತಿಯು ಮೈಸೂರು ಮ್ಯುನಿಸಿಪಾಲಿಟಿಯಂತೆ ಬಡಗ್ಗೆಯಾಗಿರದೆ ಸಮೃದ್ಧವಾಗಿದೆ. ಆ ನಗರದಲ್ಲಿ ವಾಸಿಸುವ ಜನಸಂಖ್ಯೆಯೂ, ವ್ಯಾಪಾರಸಂಖ್ಯೆಯೂ ದಿನದಿನಕ್ಕೆ ಹೆಚ್ಚುತ್ತಿವೆ. ಈ ಕಾರಣದಿಂದ ಬಾಡಿಗೆಗಳು ವಿಪರೀತವಾಗಿ ಹೆಚ್ಚುತ್ತಿವೆ. ಬಡಬಗ್ಗರು ಪಟ್ಟಣದಲ್ಲಿ ವಾಸಿಸುವುದೇ ಕಷ್ಟವಾಗುತ್ತಿದೆ. ಅವರುಗಳಿಗೆ ಆರೋಗ್ಯಕರವಾದ ವಾಸಸ್ಥಳಕಲ್ಪನೆಗೆ ಮ್ಯುನಿಸಿಪಾಲಿಟಿಯವರಾಗಲಿ ಪಟ್ಟಣದ ಶ್ರೀಮಂತರಾಗಲಿ ತಕ್ಕಷ್ಟು ಗಮನವನ್ನು ಇನ್ನೂ ಕೊಟ್ಟಿಲ್ಲದ ಲೋಪವು ಪರಿಹರಿಸಲ್ಪಡಬೇಕಾಗಿದೆ. ಮ|| ಶೆಟ್ಟರು ಮ್ಯು|| ಪ್ರೆಸಿಡೆಂಟ್‌ಗಿರಿಯನ್ನು ಹೆಸರಿಗೆ ಮಾತ್ರ ವಹಿಸಿದವರಾಗಿದ್ದರೆ ಇಷ್ಟು ದೀರ್ಘಕಾಲ ಅವರು ಅದನ್ನು ಅನುಭವಿಸುತ್ತಿರಲಿಲ್ಲ. ಪ್ರತಿದಿನವೂ ತಪ್ಪದೆ ಬೆಳಗಿನ ಹೊತ್ತು ಪಟ್ಟಣದ ಇನ್ಸ್‌ಪೆಕ್ಷನ್‌ಗಳನ್ನು ಮಾಡುತ್ತಲೂ, ಮಧ್ಯಾಹ್ನದ ಹೊತ್ತು ೨-೩ ಗಂಟೆಗಳ ಕಾಲ ಆಫೀಸುಕೆಲಸಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಲೂ ಇದ್ದರು. ಯುದ್ಧಕಾಲದ ವಿಘ್ನಗಳು ತಟ್ಟದಿದ್ದರೆ ಬೆಂಗಳೂರಿಗೆ ಅತ್ಯಂತಾವಶ್ಯಕವಾಗಿರುವ ಟ್ರಾಂವೆಸ್ಥಾಪನೆಯ ಕೆಲಸವೂ ಇವರ ಕಾಲದಲ್ಲೇ ಮುಗಿದುಹೋಗುತ್ತಿದ್ದಿತು. ಹಿಂದೆ ಬೆಂಗಳೂರಿನಲ್ಲಿ ಹೊಸತರಗಿನಪೇಟೆಯನ್ನು ಸ್ಥಾಪಿಸುವ ಕಾಲದಲ್ಲಿ ಮ|| ಶೆಟ್ಟರು ಸರ್ಕಾರದ ಉದ್ದೇಶವನ್ನು ನೆರವೇರಿಸುವುದಕ್ಕೆ ಎಷ್ಟು ಉಪಾಯದಿಂದ ಕೆಲಸನಡಸಿ ಕಾರ್ಯನಿರ್ವಾಹ ಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದರೋ ಅದನ್ನು ಸರ್ಕಾರವು ಮರೆಯದೆ ಮೈಸೂರು ಸಂಸ್ಥಾನದ ಮೊಟ್ಟಮೊದಲನೆಯ ಪಟ್ಟಣವಾದ ಬೆಂಗಳೂರಿನ ಮ್ಯುನಿಸಿಪಾಲಿಟಿಯ ಪ್ರಥಮವಾದ ಗೌರವಾಧ್ಯಕ್ಷ ಪದವಿಯನ್ನು ಇವರಿಗೆ ವಹಿಸಿದುದಕ್ಕೆ ಸರ್ಕಾರದವರಿಂದಲೂ ಪ್ರಜೆಗಳಿಂದಲೂ ಅಭಿನಂದನೀಯವಾಗುವಂತೆ ನಿರ್ವಾಹಮಾಡಿ ಶ್ರೀಮನ್ಮಹಾರಾಜರ ಮೆಚ್ಚುಗೆಯನ್ನೂ ಆತ್ಮತೃಪ್ತಿಯನ್ನೂ ಇವರು ಪಡೆದುಕೊಂಡುದು ನಮಗೆ ಸಂತೋಷವನ್ನುಂಟುಮಾಡಿದೆ. ಆಪ್ತಬಾಂಧವರಿಗೂ ತಮ್ಮ ಮತದವರಿಗೂ ಸಹ ತಮ್ಮ ಅಧಿಕಾರ ಕಾಲದಲ್ಲಿ ಸಾಧ್ಯವಾದಷ್ಟು ಸಾಹಾಯ್ಯವನ್ನು ಮಾಡದವರು ಈಗಣ ಅಧಿಕಾರಿಗಳಲ್ಲಿ ಯಾರೊಬ್ಬರೂ ಇರುವುದು ಅಸಂಭವ. ಆದರೆ ಅಂಥ ಸರ್ವಸಾಮಾನ್ಯ ವಿಷಯಕ್ಕೂ ಅಪವಾದರೂಪವಾಗಿ ಆಚರಿಸಿ ವಿಲಕ್ಷಣ ನಿದರ್ಶನವನ್ನು ತೋರಿಸಿದವರೆಂದರೆ ಈ ನಮ್ಮ ದಿವಾನ್ ಬಹದ್ದೂರರೊಬ್ಬರೇ ಸರಿ. ನಿಷ್ಪಕ್ಷಪಾತ ಪ್ರವರ್ತನಕ್ಕೆ ಇದು ಮುಖ್ಯವಾದರೆಂದು ತಿಳಿದು ಮ|| ಶೆಟ್ಟರು ಆತ್ಮತೃಪ್ತಿಯನ್ನು ಹೊಂದುತ್ತಿರಬಹುದು. ಸಹಜಗುಣಕ್ಕೆ ಮಾಡತಕ್ಕದೇನು? ಮ|| ಶೆಟ್ಟರಿಗೆ ಈಗ ಬೆಂಗಳೂರಿನ ಪುರಾಭಿವೃದ್ಧಿಸಂಘದ ಅಧ್ಯಕ್ಷಪದವಿಯು ವಹಿಸಲ್ಪಟ್ಟಿರುವುದು. ಅದರ ಕಾರ್ಯನಿರ್ವಾಹದಲ್ಲೂ ವಿಶೇಷವಾದ ಯಶಸ್ಸು ಇವರಿಗೆ ಲಭಿಸುವಂತೆ ಕಾರ್ಯಭಾಗಗಳು ಜರುಗಲೆಂದು ಕೋರುವೆವು.

ಆಹಾರ ಸಮಸ್ಯೆ.

ಒಂದು ಕಡೆಯಿಂದ ಮತ್ತೊಂದು ಕಡೆಗೆ ಆಹಾರಧಾನ್ಯಗಳನ್ನು ಸಾಗಗೊಡಿಸದೆ ನಿರ್ಬಂಧಪಡಿಸುವುದರಿಂದಲೇ ಬೆಲೆಗಳು ಹೆಚ್ಚಾಗುವುವೆಂದೂ ಅದುಕಾರಣ ಆ ನಿರ್ಬಂಧವನ್ನು ತಪ್ಪಿಸಿಬಿಡಬೇಕೆಂದೂ ಮದ್ರಾಸು ನಿಯಮನಿರ್ಮಾಣಸಭೆಯಲ್ಲಿ ಪ್ರಜಾಪಕ್ಷದ ಸಭಿಕರು ಸರ್ಕಾರಕ್ಕೆ ಶ್ರುತಪಡಿಸಿದರು. ಪ್ರಜೆಗಳೂ ಹಾಗೆಯೇ ಮೊರೆಯಿಟ್ಟುಕೊಳ್ಳುತ್ತಿದ್ದರು. ಅದರಂತೆಯೇ ಮಾಡುವೆವೆಂದು ಹೇಳಿ ಆ ಸರ್ಕಾರದವರು ನಿರ್ಬಂಧವನ್ನೆಲ್ಲಾ ತೆಗೆದುಬಿಟ್ಟರು. ಈಗಲಾದರೂ ನಿರ್ಬಂಧವು ತಪ್ಪಿದ ಮರು ದಿನದಿಂದಲೂ ಆಹಾರ್ಯಧಾನ್ಯಗಳ ಬೆಲೆಯು ವಿಪರೀತ ಹೆಚ್ಚಿಕೊಂಡಿವೆಯಂತೆ. ಬಡಬಗ್ಗರು ಸೈರಿಸಲಾರದೆ ಗೋಳಿಡುತ್ತಿದ್ದಾರೆ. ದೇಶದಲ್ಲಿ ಬೇಕಾದಷ್ಟು ಸಮೃದ್ಧವಾಗಿ ಧಾನ್ಯವಿದೆ, ಕೃತ್ರಿಮವಾಗಿ ಬೆಲೆಗಳನ್ನು ರೈತರೂ ದಲ್ಲಾಳಿಗಳೂ ವರ್ತಕರೂ ಹೆಚ್ಚಿಸುತ್ತಿರುವರು ಎಂದು ಎಲ್ಲಕಡೆಯೂ ಕೂಗುಟ್ಟಿದ್ದಿದೆ. ಮುಂದೇನುಮಾಡಬೇಕೆಂದು ಎಲ್ಲ ಸರ್ಕಾರದವರಿಗೂ ಯೋಚನೆ ಹಿಡಿದಿರುವಂತೆ ತೋರುತ್ತದೆ. ಬೊಂಬಾಯಿಯಲ್ಲಿ ಯಾರಾದರೂ ವಿಶೇಷವಾಗಿ ಆಹಾರಧಾನ್ಯಗಳನ್ನು ಕೂಡಿಟ್ಟು ಮಾರಿಕೆಗೆ ಕೊಡದೆ ಇದ್ದರೆ ಅದನ್ನು ಸಿವಿಲ್ ಸಪ್ಲೈ ಡೈರೆಕ್ಟರು ತಕ್ಕ ಬೆಲೆಯನ್ನು ಕೊಟ್ಟು ವಶಪಡಿಸಿಕೊಳ್ಳಲು ಅಧಿಕಾರ ಕೊಟ್ಟು ಬೊಂಬಾಯಿ ಸರ್ಕಾರದವರು ಈಗತಾನೇ ಒಂದು ಪ್ರಕಟನೆಯನ್ನು ಮಾಡಿದ್ದಾರೆ. ಅದರಂತೆ ಮದ್ರಾಸಿನವರೂ ಮಾಡಬಹುದಾಗಿ ತೋರುತ್ತದೆ. ನಮ್ಮ ಪ್ರಭುತ್ವದವರೂ ಕೂಡ ಇಂಥ ಏರ್ಪಾಟುಮಾಡುವುದು ಅವಶ್ಯವಾಗಿದೆ. ಗಡಿಗಳಿಂದ ಹೊರಕ್ಕೆ ಧಾನ್ಯಗಳು ಸಾಗದಂತೆ ಮಾಡಿಬಿಡುವುದರಿಂದಲೇ ಚಿಂತಿತಾರ್ಥವಾಗುವಹಾಗೆ ತೋರುವುದಿಲ್ಲ. ಹೆಚ್ಚು ಬೆಲೆಯ ರುಚಿಯನ್ನು ಕಂಡ ರೈತರೂ ವರ್ತಕರೂ ಸಹ ಸುಲಭವಾಗಿ ಅಗ್ಗಮಾಡಲಾರರು. ಬೆಲೆಯ ನಿರ್ಬಂಧವನ್ನು ಏರ್ಪಡಿಸಿ, ಅದರಿಂದಲೂ ಫಲವಾಗದಿದ್ದರೆ ಹೆಚ್ಚು ದಾಸ್ತಾನ್ ಮಾಡಿರುವವರ ಕಡೆಯಿಂದ ಧಾನ್ಯಗಳನ್ನು ವಶಪಡಿಸಿಕೊಂಡು ಅಕ್ಕಿಯನ್ನು ರೂ. ಗೆ ೬ ಸೇರಿನಂತೆಯೂ, ರಾಗಿಯನ್ನು ೧೦ ಸೇರಿನಂತೆಯೂ ಮಾರಿಸಲು ಸರ್ಕಾರದವರು ಏರ್ಪಡಿಸಬೇಕು. ಸ್ವದೇಶದ ರಾಜಬಂಧುಗಳಾದ ಮಂತ್ರಿವರ್ಯರು ನಮ್ಮ ಸಂಸ್ಥಾನಕ್ಕೆ ಬಂದಿರುವಾಗಲೂ ಈ ಕಷ್ಟಕಾಲದಲ್ಲಿ ಕನಿಕರವಾದ ಏರ್ಪಾಟು ಯಾವುದನ್ನೂ ಇನ್ನೂ ಮಾಡಲಿಲ್ಲವೆಂದು ಬಡಬಗ್ಗರು ಪರಿತಪಿಸುತ್ತಿದ್ದಾರೆ. ಆ ರೋದನವನ್ನು ಶ್ರೀಮನ್ಮಹಾರಾಜರೂ ಅವರ ಮಂತ್ರಿವರ್ಯರೂ ಸಹ ಗಮನಿಸಿ ತಕ್ಕ ಏರ್ಪಾಟನ್ನು ಮಾಡಿ ಬಡಬಗ್ಗರ ಕಷ್ಟವನ್ನು ನೀಗಿಸಬೇಕು. ಧನಿಕರ ದಾಕ್ಷಿಣ್ಯಫಲಕ್ಕಿಂತಲೂ ಬಡವರ ರಕ್ಷಣೆಯ ಫಲವು ಮೇಲಾದುದಲ್ಲವೆ?

ಪ್ರಜಾ ಮಿತ್ರಮಂಡಲಿ.

ಮೈಸೂರು ಪ್ರಜಾಮಿತ್ರಮಂಡಲಿಯ ಸಭಿಕರು ಕಳೆದ ಫಿಬ್ರವರಿ ತಾ|| ೨೧ ರಲ್ಲಿ ಬೆಂಗಳೂರು ಜನೋಪಕಾರಿ ದೊಡ್ಡಣ್ಣಶೆಟ್ಟರ ಶಾಲಾಭವನದಲ್ಲಿ ರಾ|| ಸಾ|| ಎಚ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಈ ಮಂಡಲಿಯ ಸಂಸ್ಥಾಪಕರೂ ಮೈಸೂರು ನಿಯಮನಿರ್ಮಾಣ ಸಭಿಕರೂ, ಮೈಸೂರು ದೇಶದ ಹಿಂದುಳಿದ ಮತ್ತು ನಿಮ್ನಜಾತಿಯ ಜನರ ಉದ್ಧಾರಕ್ಕಾಗಿ ಅಮೋಘವಾದ ಶ್ರಮವನ್ನು ವಹಿಸಿ ಕೆಲಸ ಮಾಡುತ್ತಿದ್ದವರೂ ಆದ ಮ|| ಎಂ. ಬಸವಯ್ಯ ಬಿ.ಎ, ಬಿ.ಎಲ್., ರವರು ಅನಿರೀಕ್ಷಿತವಾಗಿ ಅಕಾಲದಲ್ಲಿ ಮೃತರಾದುದರಿಂದ ಉಂಟಾದ ಅಪಾರವಾದ ನಷ್ಟವನ್ನು ರಿಕಾರ್ಡುಮಾಡಿದುದಲ್ಲದೆ, ಗತಿಸಿದವರ ಕುಟುಂಬಕ್ಕೆ ಮಂಡಲಿಯಿಂದ ಸಾನುತಾಪವನ್ನು ತಿಳಿಯಿಸುವ ರೆಜಲ್ಯೂಷನ್ ಮಾಡಿದರು.

ಮಂಡಲಿಗೆ ಜನರಲ್ ಸೆಕ್ರೆಟರಿಯಾಗಿದ್ದ ಮ|| ಬಸವಯ್ಯನವರು ಮೃತರಾದುದರಿಂದ ಆ ಸ್ಥಾನಕ್ಕೆ ಮ|| ಬಿ ಎಚ್. ವಿಜಯದೇವ ಎಂ.ಎ, ಬ್ಯಾರಿಸ್ಟರ್ ಆಟ್ ಲಾ ಯವರೊಡನೆ ಮ|| ಜಿ ಪರಮಶಿವಯ್ಯ ಬಿ.ಎ., ಎಲ್.ಎಲ್.ಬಿ. ಯವರೂ, ಮಿ|| ಮಹಮ್ಮದ್‌ಸೇಟರೂ ಸಹ ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಮ|| ಜನೋಪಕಾರಿ ದೊಡ್ಡಣ್ಣಸೆಟ್ಟರೂ, ಮ|| ಬಿ. ವಿ. ರಾಮಸ್ವಾಮಿಶೆಟ್ಟಿ ಬಿ.ಎ. ಯವರೂ, ಮಿ|| ನವಾಬ್ ಗುಲಾಮ್ ಅಹಮ್ಮದ್ ಕಲಾಮಿಯವರೂ ಮ|| ಡಾಕ್ಟರ್ ಟಿ. ಎಸ್. ನಂಜಪ್ಪನವರೂ ಸಹ ವೈಸ್‌ಪ್ರೆಸಿಡೆಂಟರಾಗಿಯೂ ಆರಿಸಲ್ಪಟ್ಟರು. ಮ|| ದೊಡ್ಡಣ್ಣಸೆಟ್ಟರು ಮಂಡಲಿಯ ಕೂಟಕ್ಕೆ ತಾತ್ಕಾಲಿಕವಾಗಿ ತಮ್ಮ ಶಾಲಾಭವನದಲ್ಲಿ ಒಂದು ಕೊಟಡಿಯನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಯು ತಿಳಿಸಲ್ಪಟ್ಟಿತು. ಮಂಡಲಿಯ ಕಾರ್ಯಗಳು ಚುರುಕಾಗಿ ನಡೆಯುವುದಕ್ಕೂ, ಅದಕ್ಕೆ ಬರಬೇಕಾದ ಚಂದಾಹಣ ಮೊದಲಾದುವುಗಳ ವಸೂಲಿಯನ್ನು ಮಾಡುವುದಕ್ಕೂ ತಕ್ಕ ಪ್ರಯತ್ನಗಳನ್ನು ಮಾಡಬೇಕೆಂದೂ ಮುಂದಣ ಮೀಟಿಂಗು ಫಿಬ್ರವರಿ ತಾ|| ೨೮ರಲ್ಲಿ ಅದೇ ದೊಡ್ಡಣ್ಣನವರ ಸ್ಕೂಲಿನಲ್ಲಿ ಕೂಡತಕ್ಕುದೆಂದೂ ನಿರ್ಧರಿಸಿದರು.

ವ್ಯವಹಾರಧುರಂಧರರಾಗಿದ್ದ ಮ|| ಬಸವಯ್ಯನವರು ಗತಿಸಿದುದರಿಂದ ಅವರಲ್ಲಿದ್ದ ಕರ್ತೃತ್ವಭಾರವು ಈಗ ಉಳಿದಿರುವ ಹಿಂದಾಳುಗಳ ಮುಖಂಡರ ಮೇಲೆಲ್ಲಾ ಬಿದ್ದಿರುತ್ತದೆ. ಮ|| ಬಸವಯ್ಯನವರ ಅಭಾವದಿಂದ ಹಿಂದುಳಿದವರಿಗೆ ಉಂಟಾಗಿರುವ ಅಧೈರ್ಯವೂ, ಕ್ಲೇಶವೂ ಸಹ ಬೇಗನೆ ಅರಿಹೋಗುವಂತೆ ಕೆಲಸಮಾಡಿ ದೇಶೀಯರ ಕೃತಜ್ಞತೆಗೂ ಮನ್ನಣೆಗೂ ಇವರುಗಳು ಪಾತ್ರರಾಗಬೇಕು. ದೇಶೀಯರೆಲ್ಲರೂ ಮಂಡಲಿಯಲ್ಲಿ ಅಂಗಭೂತರಾಗಿ ಸೇರಿ ತಂತಮ್ಮ ಅಭ್ಯುದಯಗಳನ್ನು ಸಾಧಿಸಿಕೊಳ್ಳಲು ಈ ಕೇಂದ್ರಸ್ಥಾನವನ್ನು ಚೆನ್ನಾಗಿ ಬಲಪಡಿಸಿಕೊಳ್ಳದಿರಲಾರರೆಂದು ನಂಬುತ್ತೇವೆ.

ಒಳದೇಶ ವೃತ್ತಾಂತಗಳು.

ನಮ್ಮ ಸೀಮೆಯ ಫುಡ್ ಕಂಟ್ರೋಲರು ಅಕ್ಕಿಯನ್ನು ಕೊಳ್ಳುವ ಏರ್ಪಾಟಿಗಾಗಿ ರಂಗೂನಿಗೆ ದಯಮಾಡಿಸಿದ್ದಾರೆ.

ಶ್ರೀಮದ್ಯುವರಾಜರ ಜತೆಗೆ ಡಾಕ್ಟರ್ ಉಸ್ಮಾನರೂ, ಮ|| ಸಿಂಗ್ರಾಚಾರರೂ ಸಹ ಮಾರ್ಚಿ ತಾ|| ೭ ರಲ್ಲಿ ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆ.

ಮದರಾಸಿನ ಮರಾಟಾ ಟ್ರೇಡಿಂಗ್ ಕಂಪೆನಿಯವರ ಪ್ರಸಿದ್ಧಿ ಪತ್ರಿಕೆಯನ್ನು ಈ ಸಂಚಿಕೆಯ ಸಂಗಡ ಹಂಚಿದ್ದೇವೆ. ವಾಚಕರು ಅದನ್ನು ಗಮನಿಸಬೇಕು.

ಶ್ರೀಮದ್ಯುವರಾಜರವರ ಸಂಗಡ ಸೀಮೆಗೆ ಸರ್ದಾರ್ ಶ್ರೀ ಲಕ್ಷ್ಮೀಕಾಂತರಾಜ ಅರಸರವರೂ ಕೂಡ ಪ್ರಯಾಣ ಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಗುಬ್ಬಿಯಲ್ಲಿ ಪ್ರಸಿದ್ಧವಾದ ಶ್ರೀ ಚೆನ್ನಬಸವೇಶ್ವರಸ್ವಾಮಿಯ ಬೆಳ್ಳಿ ಪಲ್ಲಕ್ಕಿ ಮಹೋತ್ಸವವು ಬರುವ ಮಾರ್ಚಿ ತಾ|| ೪ ರಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ.

ಸರ್. ಲೇಸ್ಲಿ ಮಿಲ್ಲರ್‌ರವರು ತಮ್ಮ ಚೀಫ್‌ಜಡ್ಜ್ ಪದವಿಯನ್ನು ತಾ|| ೨೦ ರಲ್ಲಿ ಸ್ವೀಕರಿಸಿದರು. ಮ|| ಕೆ. ಎಸ್. ಚಂದ್ರಶೇಖರಯ್ಯರವರು ೨ ತಿಂಗಳ ರಜಾ ಪಡೆದುಕೊಂಡಿರುವರು.

ಬೆಳಗಾಂ ಜಿಲ್ಲಾ ನಿಪ್ಪಾಣಿಯ ಜಿಲ್ಲಾ ಸಹಕಾರಪರಿಷತ್ತು ಇದೇ ಮಾರ್ಚಿ ತಿಂಗಳು ತಾ|| ೯-೧೦ ರಲ್ಲಿ ನಡೆಯಲು ಏರ್ಪಾಟಾಗಿದೆ. ಸ್ವಾಗತ ಸಂಘದ ಸಭಿಕರಿಗೆ ೫ ರೂ. ಪ್ರತಿನಿಧಿಗಳಿಗೆ ೨ ರೂ. ಫೀ ಇಡಲ್ಪಟ್ಟಿದೆ.

ದಾವಣಗೆರೆ ದುರ್ಗಮ್ಮನಜಾತ್ರೆಯ ಸಂಬಂಧದ ಪ್ರಸಿದ್ಧಿಪತ್ರಿಕೆಯಲ್ಲಿ ನನ್ನ ಹೆಸರನ್ನು ನನ್ನ ಅನುಮತಿ ಕೇಳದೆ ಪ್ರಕಟಿಸಿದ್ದಾರೆಂದೂ ಅದಕ್ಕೆ ಒಪ್ಪಿಗೆಯಿಲ್ಲವೆಂದೂ ತಿಳಿಯಿಸಬೇಕಾಗಿ ಮ|| ಯಜಮಾನ್ ಮೋತಿಅಜ್ಜಪ್ಪನವರು ನಮಗೆ ಬರೆದುಕೊಂಡಿದ್ದಾರೆ.

ದೇವನಹಳ್ಳಿ ತಾ|| ಹುಣಸೂಮಾರನಹಳ್ಳಿಯ ಮಠದ ಶ್ರೀಗಳವರು ಪದ್ಧತಿಯಾಗಿ ನಡೆಯಿಸುತ್ತಿರುವ ಶ್ರೀ ಚಂದ್ರಮೌಳೀಶ್ವರಸ್ವಾಮಿಯ ರಥೋತ್ಸವವೂ ತತ್ಸಂಬಂಧವಾದ ದನದ ಪರಿಷೆ ಮೊದಲಾದವುಗಳೂ ಮಾರ್ಚಿ ತಾ|| ೧ ರಿಂದ ೮ ದಿನಗಳಕಾಲ ನಡೆಯುವುವು.

ಕಳೆದವಾರ ಬೆಂಗಳೂರಿನಲ್ಲಿ ಕೂಡಿದ್ದ ಒಕ್ಕಲಿಗರಸಂಘದ ಎಗ್ಸಿಕ್ಯುಟಿವ್ ಕೌನ್ಸಿಲ್ ಮೀಟಿಂಗಿನಲ್ಲಿ ಮ|| ಬಸವಯ್ಯನವರು ಅಕಾಲದಲ್ಲಿ ಮೃತರಾದುದರಿಂದ ಒಕ್ಕಲಿಗರಮಂಡಲಿಗೆ ಉಂಟಾದ ಅಪಾರವ್ಯಸನವನ್ನು ಬಸವಯ್ಯನವರ ಕುಟುಂಬದವರಿಗೆ ತಿಳಿಯಿಸುವ ನಿರ್ಧಾರವನ್ನು ಮಾಡಿದರು.

ಮ|| ಬಿ. ಬಸವಾರಾಧ್ಯ ಬಿ.ಎ., ಬಿ.ಎಲ್., ರವರು ೨ ತಿಂಗಳು ೨೯ ದಿನಗಳ ರಜಾಪಡೆದುಕೊಂಡಿರುವುದರಿಂದ ಆ ಕಾಲದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕ. ಸಾಹೇಬರ ಪರ್ಸನಲ್ ಅಸಿಸ್ಟೆಂಟರಾದ ಮ|| ಎಸ್ ನಾರಾಯಣರಾಯರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಅರಸೀಕೆರೆ ತಾಲ್ಲೂಕು ಹೋಲಕೆರೆ ಶ್ರೀ ಪ್ರಸನ್ನರಾಮೇಶ್ವರಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ಪದ್ಧತಿಯಂತೆ ದನಗಳ ೪ನೆ ಪ್ರದರ್ಶನವು ಮಾರ್ಚಿ ತಾ|| ೨೮-೨೯-೩೦ ರಲ್ಲಿ ನಡೆಯುವಂತೆ ಏರ್ಪಾಡಾಗಿದೆ. ಉತ್ತಮವಾದ ರಾಸುಗಳಿಗೆ ಬಹುಮಾನವೂ ಯೋಗ್ಯತಾಪತ್ರಗಳೂ ಕೊಡಲ್ಪಡುವುವು.

ಬ್ರಿಟಿಷ್ ರೆಸಿಡೆಂಟ್ ಆ|| ಎಚ್. ವಿ. ಕಾಬ್‌ರವರು ಶೀಘ್ರದಲ್ಲೇ ವಿಶ್ರಾಂತಿಪಡೆದು ಸೀಮೆಗೆ ತೆರಳುವವರಾಗಿರುವುದರಿಂದ ಬೆಂಗಳೂರು ಕಂಟೋನ್ಮೆಂಟು ಪ್ರಜೆಗಳು ನಿನ್ನೆ ಶನಿವಾರ ಅಲಸೂರು ಕೆರೆಯ ಪೂರ್ವಭಾಗದಲ್ಲಿರುವ ಕನ್‌ಸಿಂಗ್ಟನ್ ಉದ್ಯಾನದಲ್ಲಿ ಒಂದು ಸತ್ಕಾರಸಮಾರಂಭವನ್ನು ಅವರಿಗೆ ವಿಜೃಂಭಣೆಯಿಂದ ನಡೆಯಿಸಿದರು.

ಮೈಸೂರು ಅರ್ಥಸಾಧಕ ವಾರಪತ್ರಿಕೆಯನ್ನು ಸ್ವತಃ ನಡೆಯಿಸುತ್ತೇವೆಂದು ಅಪೇಕ್ಷಿಸುವ ಖಾಸಗಿ ಜನಗಳಿಗೆ ಬರುವ ಏಪ್ರಿಲ್ ತಾ|| ೧ ರಿಂದ ವಹಿಸಿಕೊಡಲು ಸರ್ಕಾರದವರು ನಿಷ್ಕರ್ಷಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ನಿಬಂಧನೆಗಳು ಕಳೆದವಾರದ ಗೆಜೆಟ್ಟಿನಲ್ಲೂ, ಅರ್ಥಸಾಧಕ ಪತ್ರಿಕೆಯಲ್ಲೂ ಪ್ರಕಟವಾಗಿವೆ.

ಬೆಂಗಳೂರು ವೀರಶೈವ ವಿದ್ಯಾರ್ಥಿಗಳು ಜನೋಪಕಾರಿ ದೊಡ್ಡಣ್ಣಶೆಟ್ಟರ ಹಾಲಿನಲ್ಲಿ ಒಂದು ಸಭೆಗೂಡಿ ಮ|| ಬಸವಯ್ಯನವರ ಅಕಾಲಿಕಮರಣದಿಂದ ತಮಗುಂಟಾದ ನಷ್ಟವನ್ನೂ ದುಃಖವನ್ನೂ ವ್ಯಕ್ತಪಡಿಸಿದರು. ರಾ|| ಬ|| ಚನ್ನಯ್ಯನವರೇ ಮೊದಲಾದವರು ಗತಿಸಿದವರ ಗುಣಸಾಮರ್ಥ್ಯಾದಿಗಳನ್ನು ಕುರಿತು ಭಾಷಣ ಮಾಡಿದರು.

ಮೈಸೂರು ಬ್ಯಾಂಕಿನ ಅಸಿಸ್ಟೆಂಟ್ ಮ್ಯಾನೇಜರಾದ ಮ|| ರಾ|| ಪಿ. ಸುಬ್ಬರಾಯರು "ಬ್ಯಾಂಕುಗಳು ಮತ್ತು ಅವುಗಳ ಉಪಯೋಗ" ಎಂಬ ವಿಷಯದ ಮೇಲೆ ಕಳೆದ ಫಿಬ್ರವರಿ ತಾ|| ೨೩ ರಿಂದ ೬ ದಿನಗಳವರೆಗೆ ಪ್ರತಿದಿನ ಸಾಯಂಕಾಲ ೬ ಗಂಟೆಯ ಮೇಲೆ ಬೆಂಗಳೂರು ಚಿಕ್ಕಪೇಟೆ ಸ್ವಾಮಿ ಬಾಲಿಕಾ ಪಾಠಶಾಲೆಯಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವರು.

ಕಳೆದ ಫೆಬ್ರವರಿ ತಾ|| ೨೨ ರಲ್ಲಿ ಕುಣಿಗಲಿನಲ್ಲಿ ಬ್ರಹ್ಮಸಮಾಜದ ಎರಡನೆ ಸಮ್ಮೇಳನವು ಜರುಗಿತು. ಸಮಾಜಗಳ ಪ್ರೆಸಿಡೆಂಟರಾದ ಗೌ|| ಅಡ್ವೋಕೇಟ್ ಮ|| ಶಂಕರ ನಾರಾಯಣರಾವ್ ಎಂ.ಎ.,ಬಿ ಎಲ್‌ರವರು ಅಧ್ಯಕ್ಷರಾಗಿದ್ದರು. ಅವರೂ ಬ್ಯಾ|| ಮ|| ಕೆ.ಎಚ್. ರಾಮಯ್ಯನವರೂ, ಅನುಧರ್ಮಶಕ್ತಿಯವರೂ ಸಹ ಉತ್ಕೃಷ್ಟಗಳಾದ ಉಪನ್ಯಾಸಗಳನ್ನು ಮಾಡಿದರು.

ಬೆಂಗಳೂರಿನಲ್ಲಿ ಸೌದೆ ಬೆಲೆಯು ವಿಪರೀತವಾಗಿರುವುದರಿಂದ ಸರ್ಕಾರದವರು ಫಾರೆಸ್ಟ್ ಇಲಾಖೆಯವರ ಮೂಲಕ ಒಂದು ಡಿಪೋವನ್ನು ಇಡಿಸಿ ಪ್ರಜೆಗಳಿಗೆ ಅಗ್ಗವಾಗಿ ಸೌದೆಯು ದೊರೆಯುವಂತೆ ಏರ್ಪಡಿಸಲು ಅಪ್ಪಣೆ ಮಾಡಿದ್ದಾರೆ. ರಾಜಧಾನಿಯಲ್ಲೂ ಒಂದು ಬಂಡಿ ಸೌದೆಗೆ ೧೦ ರಿಂದ ೨೫ ರೂ. ವರೆಗೆ ಬೆಲೆಯಾಗಿದ್ದರೂ ಸರ್ಕಾರದವರಾಗಲಿ ಮ್ಯುನಿಸಿಪಾಲಿಟಿಯವರಾಗಲಿ ಯಾವ ಏರ್ಪಾಟನ್ನೂ ಮಾಡಿಲ್ಲ.

ಸರ್ಕಾರದವರು ಮುಖ್ಯಧಾನ್ಯಗಳನ್ನು ಸಂಸ್ಥಾನದ ಹೊರಕ್ಕೆ ಸಾಗಿಸದಂತೆ ನಿರ್ಬಂಧದ ಅಪ್ಪಣೆಯನ್ನು ಮಾತ್ರ ಮಾಡಿದರು. ಬೆಲೆಯ ಸ್ಥಿತಿಗತಿಗಳಲ್ಲಿ ವ್ಯತ್ಯಾಸವೇನೂ ಆಗಿಲ್ಲ. ಮುಖ್ಯಧಾನ್ಯಗಳ ಬೆಲೆಯನ್ನು ನಿರಖುಮಾಡಿ ಅದರಂತೆಯೇ ಕೊಳ್ಳುವ ಮಿತವಾದ ಲಾಭದಿಂದ ಮಾರುವ ಕಟ್ಟಪ್ಪಣೆಯನ್ನು ಸರ್ಕಾರದವರು ತ್ವರಿತವಾಗಿ ಮಾಡಿಸದಿದ್ದರೆ ಬಡಬಗ್ಗರು ಜೀವಿಸಲಾರರು. ಬೆಲೆಗಳು ಇಳಿಯಲಾರವು.

ಮ|| ಎ. ಆರ್. ಬಾನರ್ಜಿಯವರು ಕಳೆದ ಸೋಮವಾರ ಬೆಂಗಳೂರಿಗೆ ದಯಮಾಡಿಸಿದರು. ಅವರು ತಮ್ಮ ಮೊದಲನೆಯ ಕೌನ್ಸಿಲರ್ ಪದವಿಯನ್ನು ತಾ|| ೨೩ ರಲ್ಲಿ ಸ್ವೀಕರಿಸಿದರು. ಮ|| ಪಿ. ರಾಘವೇಂದ್ರರಾಯರು ೨ನೆ ಕೌನ್ಸಿಲರಾಗಿಯೂ, ಮಿ|| ಮೀರ್‌ಹಂಜಾಹುಸೇನ್ ಸಾಹೇಬರು ೩ನೆ ಕೌನ್ಸಿಲರಾಗಿಯೂ ಇರುವರು. ಮ|| ಆರ್ ಶ್ರೀನಿವಾಸಯ್ಯಂಗಾರರು ೨|| ತಿಂಗಳ ರಜಾವನ್ನು ಪಡೆದುಕೊಂಡಿರುವರು.

ಈ ಫಿಬ್ರವರಿ ತಿಂಗಳ ಮೊದಲನೆ ೧ ವಾರಕಾಲದಲ್ಲಿ ಸಂಸ್ಥಾನದ ರೈಲ್ವೆಗಳೊಳಗೆ ಮೈಸೂರು ಅರಸೀಕೆರೆ ಮಾರ್ಗದಿಂದ ೮೩೩೩ ರೂ. ಗಳೂ, ಮೈಸೂರು ಬೆಂಗಳೂರು ಮಾರ್ಗದಿಂದ ೨೭೮೮೨ ರೂ. ಗಳೂ, ಮೈಸೂರು ನಂಜನಗೂಡು ಮಾರ್ಗದಿಂದ ೩೦೪೫ ರೂ. ಗಳೂ, ಬೀರೂರು ಶಿವಮೊಗ್ಗ ಮಾರ್ಗದಿಂದ ೬೭೭೬ ರೂ. ಗಳೂ, ಕೋಲಾರ ಡಿಸ್ಟ್ರಿಕ್ಟ್ ರೈಲ್ವೆಯಿಂದ ೩೪೦೦ ರೂ. ಗಳೂ, ಬೆಂಗಳೂರು ಚಿಕ್ಕಬಳ್ಳಾಪುರ ರೈಲ್ವೆಯಿಂದ ೨೮೧೭ ರೂ. ಗಳೂ ಆದಾಯವಾಗಿವೆ.

ಮ|| ಎಂ. ಬಸವಯ್ಯನವರ ಅಕಾಲಮರಣದಿಂದ ತಮಗುಂಟಾದ ಅಪಾರವಾದ ನಷ್ಟವನ್ನೂ ವ್ಯಸನವನ್ನೂ ವ್ಯಕ್ತಪಡಿಸಲು ಬರುವ ಮಾರ್ಚಿ ತಾ|| ೩ನೆ ಸಾಯಂಕಾಲ ೫ ಗಂಟೆಗೆ ಬೆಂಗಳೂರು ಪುರವಾಸಿಗಳು ದೊಡ್ಡಣ್ಣಶೆಟ್ಟರ ಹಾಲಿನಲ್ಲಿ ಸಭೆಗೂಡುವವರಾಗಿದ್ದಾರೆ. ಆ ಸಭೆಯಲ್ಲಿ ಕೌನ್ಸಿಲರ್ ಮಿ|| ಮೀರ್‌ಹಂಜಾಹುಸೇನ್ ಸಾಹೇಬರು ಅಧ್ಯಕ್ಷರಾಗಿ ಭಾಷಣ ಮಾಡುತ್ತಾರೆ. ಮ|| ಸಿ. ರಾಮಲಿಂಗರೆಡ್ಡಿಯವರೇ ಮೊದಲಾದ ದೊಡ್ಡಮನುಷ್ಯರುಗಳ ಭಾಷಣಗಳೂ ಜರುಗುತ್ತವೆ.

ರಣರಂಗದಿಂದ ಸ್ವದೇಶಕ್ಕೆ ಹಿಂತಿರುಗಿ ಬಂದ ಮೈಸೂರು ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರನ್ನು ಸನ್ಮಾನಿಸುವುದಕ್ಕಾಗಿ ಶ್ರೀಮನ್ಮಹಾರಾಜರವರು ಕಳೆದ ತಾ|| ೨೦ನೆ ಶನಿವಾರ ಬೆಂಗಳೂರಿಗೆ ದಯಮಾಡಿಸಿದ್ದು ಕವಾಯತ್ತಿನ ಬಯಲಿನಲ್ಲಿ ಸೈನಿಕರ ಕವಾಯತ್ತನ್ನು ಅವಲೋಕಿಸಿ ಅವರೆಲ್ಲಾ ಮೈಸೂರಿನ ಕೀರ್ತಿಪ್ರತಿಷ್ಠೆಗಳನ್ನು ಕಾಪಾಡುವಂತೆ ರಣರಂಗದಲ್ಲಿ ಶೂರತನವನ್ನು ಮೆರೆಯಿಸಿ ಯಶಸ್ಸನ್ನು ಸಂಪಾದಿಸಿ ಬಂದುದನ್ನು ಕುರಿತು ಅಭಿನಂದಿಸಿ ಭಾಷಣಮಾಡಿ ಹರಸಿದರು.

ಬೆಂಗಳೂರು ಮೈಸೂರು ಪಟ್ಟಣಗಳಲ್ಲೂ ಮತ್ತು ಎಲ್ಲಾ ತಾಲ್ಲೂಕು ಸಬ್‌ತಾಲ್ಲೂಕುಗಳಲ್ಲೂ ಇರುವ ಸರ್ಕಾರಿ ಸಂಬಳಗಾರರಲ್ಲಿ ೧೬ ರೂ. ಒಳಪಟ್ಟ ಸಂಬಳದವರಿಗೆ ಸಂಬಳದಮೇಲೆ ತಿಂಗಳಿಗೆ ೧|| ರೂ. ನಂತೆಯೂ, ೧೬ ಮೇಲೆ ೩೦ ರೊಳಗೆ ಸಂಬಳವಿರುವವರಿಗೆ ಸಂಬಳದ ಮೇಲೆ ೩ ರೂ. ನಂತೆಯೂ, ೫ ರೂ. ನೊಳಗೆ ಸಂಬಳವಿರುವವರಿಗೆ ಸಂಬಳವೂ ಬತ್ತವೂ ಸೇರಿ ೬|| ರೂ. ನಂತೆಯೂ ಗ್ರೇನ್‌ಕಂಪೆನ್‌ಸೇಷನ್ ಬತ್ತವನ್ನು ಫೆಬ್ರವರಿ ತಿಂಗಳಲ್ಲಿ ಸಲ್ಲಿಸತಕ್ಕದೆಂದು ಸರ್ಕಾರದ ಅಪ್ಪಣೆಯಾಗಿದೆ.

ನಾಗಮಂಗಲದ ತಾ|| ಚುಂಚನಗಿರಿಯಲ್ಲಿ ಶ್ರೀ ಗಂಗಾಧರೇಶ್ವರಸ್ವಾಮಿಯ ರಥೋತ್ಸವವನ್ನು ಅಲ್ಲಿಯ ಸ್ಥಾನಿಕರೂ ಅನೇಕ ಕಡೆಯ ಭಕ್ತಪ್ರಮುಖರೂ ಸ್ಥಳದ ಮಠದ ಸ್ವಾಮಿಗಳೂ ಸಹ ಫೆಬ್ರವರಿ ತಾ|| ೨೭ ರಿಂದ ೧ ವಾರ ಕಾಲ ಬಹು ವಿಜೃಂಭಣೆಯಿಂದ ನಡೆಯಿಸುವರೆಂದೂ, ದನಗಳ ಪರಿಷೆಯೂ ನಡೆಯುವುದೆಂದೂ, ಪುರಾತನವಾದ ಆ ದೇವಾಲಯವು ಶಿಥಿಲವಾಗಿರುವುದರಿಂದ ಅರ್ಚಕರೂ ಪಟೇಲ್ ಲಿಂಗಪ್ಪಗೌಡರೂ ೨೦ ಸಾವಿರ ರೂ. ವೆಚ್ಚದಿಂದ ಅದನ್ನು ಜೀರ್ಣೋದ್ಧಾರ ಮಾಡಲು ಪ್ರಯತ್ನಿಸಿರುವರೆಂದೂ ಬಾತ್ಮೀದಾರರು ಬರೆದಿದ್ದಾರೆ.

ಕಳೆದ ತಾ|| ೫ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಬಲಿಜಸಂಘದವರ ಒಂದು ಸಭೆಯು ನಡೆಯಿತು. ಮ|| ರಾಮಸ್ವಾಮಿಶೆಟ್ಟರೂ ಬ್ಯಾ|| ಕೆ. ಎಚ್. ರಾಮಯ್ಯನವರೂ, ಬ್ಯಾ|| ವಿಜಯದೇವ ಎಂ.ಎ. ರವರೂ ಹೋಗಿ ಉತ್ತೇಜನಕರಗಳಾದ ಭಾಷಣಗಳನ್ನು ಮಾಡಿದರು. ಸಭೆಯಲ್ಲಿ ಕೂಡಿದ್ದ ಬಲಿಜಕುಲದವರು ತಮ್ಮ ಜನರ ವಿದ್ಯಾಭಿವೃದ್ಧಿ ಪ್ರಯತ್ನಗಳಿಗಾಗಿ ಒಂದು ಫಂಡನ್ನೇರ್ಪಡಿಸಬೇಕೆಂದೂ, ಬರುವ ಬೇಸಗೆಕಾಲದಲ್ಲಿ ತಮ್ಮ ಜನರ ಒಂದು ಮಹಾಸಭೆಯನ್ನು ಬೆಂಗಳೂರಿನಲ್ಲಿ ನಡೆಯಿಸಬೇಕೆಂತಲೂ ನಿಶ್ಚಯಿಸಿದರು. ಮತ್ತು ಬೆಂಗಳೂರಿನಲ್ಲೂ ಚಿಕ್ಕಬಳ್ಳಾಪುರದಲ್ಲೂ ತಮ್ಮ ವಿದ್ಯಾರ್ಥಿಗಳಿಗೆ ಭವನಗಳನ್ನು ನಿರ್ಮಿಸುವ ಕೆಲಸಕ್ಕಾಗಿ ಚಂದಾಪಟ್ಟಿಯನ್ನು ಮಾಡಲಾಗಿ ೧೦ ಸಾವಿರ ರೂ. ಗಳ ವಾಗ್ದಾನವಾಯಿತು.

ಬೆಂಗಳೂರು ಪುರವಾಸಿಗಳು ಕಳೆದ ತಾ|| ೨೫ ರಲ್ಲಿ ರಣರಂಗದಿಂದ ಹಿಂದಿರುಗಿ ಬಂದ ಮೈಸೂರು ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರನ್ನೆಲ್ಲಾ ಲಾಲ್‌ಬಾಗಿಗೆ ಬರಮಾಡಿಕೊಂಡು ಅಲ್ಪಾಹಾರಾದಿಗಳ ಮೂಲಕ ಆಲ್ಬರ್ಟ್ ಹಾಲಿನಲ್ಲಿ ಸತ್ಕರಿಸಿದರು. ಅವರ ಮುಂಗಡೆ ಚೀಫ್‌ಕಮ್ಯಾಂಡೆಂಟರಾದ ಲೆ|| ಕರ್ನಲ್ ಬಿ. ಚಾಮರಾಜ ಅರಸ್ ಸರ್ದಾರ್ ಬಹದ್ದೂರ್‌ರವರೂ ಕಮಾಂಡಿಂಗ್ ಆಫೀಸರಾದ ಮಿ|| ಬಿ. ಪಿ. ಕೃಷ್ಣೇಅರಸಿನವರೂ ಹೋಗುತ್ತಿದ್ದರು. ಪುರಜನರು ಉದ್ದಕ್ಕೂ ನಿಂತು ಹರ್ಷಧ್ವನಿ ಮಾಡಿ ಸ್ವಾಗತಿಸಿದರು. ಲಾಲ್‌ಬಾಗಿನಲ್ಲಿ ಕೌನ್ಸಿಲರುಗಳೇ ಮೊದಲಾದ ಮುಖ್ಯಾಧಿಕಾರಿಗಳೂ ರಿಟೈರ್ಡ್ ಆಫೀಸರುಗಳೂ ಮ್ಯು|| ಕೌನ್ಸಿಲರುಗಳೂ ಪುರಪ್ರಮುಖರೂ ಸೇರಿದ್ದರು. ಉದ್ಯಾನದ ಬಹಿರ್ದ್ವಾರದಲ್ಲಿ ಆ|| ಪ್ರೆಸಿಡೆಂಟ್ ಮ|| ಬಿ. ಕೆ. ಗರುಡಾಚಾರ್ಯರು, ಮಿ|| ಅಬ್ಬಾಸ್‌ಖಾನರೇ ಮೊದಲಾದವರು ಇದಿರ್ಗೊಂಡರು. ಉಪಹಾರ ಸ್ವೀಕಾರಾನಂತರ ಶುಭಾಶಂಸನಪದ್ಯಗಳು ಮ|| ವಿದ್ವಾನ್ ಕಾಯಪ್ಪನವರ ಪಿಟೀಲುವಾದನದೊಡನೆ ಮ|| ಸೂರಪ್ಪನವರಿಂದ ಹಾಡಲ್ಪಟ್ಟುವು. ಬಳಿಕ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಪುರವಾಸಿಗಳ ಪಕ್ಷವಾಗಿ ಒಂದು ಉತ್ತಮವಾದ ಭಾಷಣವನ್ನು ಮಾಡಿ, ಇಂಪೀರಿಯಲ್ ಸೈನಿಕರು ಮೈಸೂರಿಂದ ರಣರಂಗಕ್ಕೆ ಹೋದಾರಭ್ಯ ನಡೆಯಿಸಿದ ಶೌರ್ಯಧೈರ್ಯಸಾಹಸಗಳನ್ನು ವರ್ಣಿಸಿ, ಅವರುಗಳು ಪಡೆದ ಬಹುಮಾನವನ್ನೂ ಸಂಸ್ಥಾನಕ್ಕೆ ಅವರಿಂದ ಉಂಟಾದ ಕೀರ್ತಿಯನ್ನೂ ಕೊಂಡಾಡಿದರು. ಬಳಿಕ ಅದೇ ಅಭಿಪ್ರಾಯವನ್ನು ಹಿಡಿದು ಮ|| ಬಿ. ಗರುಡಾಚಾರ್ಯರು ಕನ್ನಡದಲ್ಲೂ ಮಿ|| ಅಬ್ಬಾಸ್‌ಖಾನರು ಹಿಂದೂಸ್ತಾನಿಯಲ್ಲೂ ಭಾಷಣಮಾಡಿದರು. ಕಡೆಗೆ ಲೆ|| ಕ|| ಚಾಮರಾಜ ಅರಸಿನವರು ಆ ದಿನ ತಮ್ಮೆಲ್ಲರಿಗೂ ಬೆಂಗಳೂರು ಪುರವಾಸಿಗಳು ಮಾಡಿದ ಸತ್ಕಾರಮರ್ಯಾದೆಗಳಿಗಾಗಿ ಕೃತಜ್ಞತಾವಂದನೆಗಳನ್ನು ತಿಳಿಸಿ ಭಾಷಣಮಾಡಿದರು. ಸೇನಾಪತಿಗಳಿಗೂ ಮುಖ್ಯಮುಖ್ಯ ಅಧಿಕಾರಿಗಳಿಗೂ ಸಹ ಪುಷ್ಪಹಾರಗುಚ್ಛಾದಿಗಳು ಕೊಡಲ್ಪಟ್ಟುವು. ಬಳಿಕ ಸೈನ್ಯವು ಲಾಲ್‌ಬಾಗಿನಿಂದ ಹೊರಟು ನಗರ್ತಪೇಟೆಯ ಮಾರ್ಗವಾಗಿ ಚಿಕ್ಕಪೇಟೆಯನ್ನೂ ಅರಳೆಪೇಟೆಯನ್ನೂ ಹಾಯ್ದು ಉತ್ಸವಪೂರ್ವಕವಾಗಿ ತಮ್ಮ ನೆಲೆಯನ್ನು ಸೇರಿದುವು.

ಲಗ್ನದ ಫಂಡು.

1. ನಿಡವಂದದಲ್ಲಿ ನಡೆದ ಹೊಸೂರು ಮ|| ರಾ|| ಚನ್ನಬಸಪ್ಪನವರ ಪುತ್ರನ ಲಗ್ನದಲ್ಲಿ ಗಂಡಿನವರಿಂದ ಕ್ಯಾಮಗೊಂಡ್ಲು ಯಜಮಾನರು ಮ|| ರಾ|| ಹುಚ್ಚಪ್ಪನವರ ಮೂಲಕ ರೂ 2.
2. ಬೆಳ್ಳಾವಿ ಮ|| ರಾ|| ಬಿ. ಶಾಂತವೀರಪ್ಪನವರ ಮನೆಯಲ್ಲಿ ನಡೆದ ನಿಶ್ಚಿತಾರ್ಥದಲ್ಲಿ ರೂ. 1.
3. ಬೆಂಗಳೂರು ಅಲಸೂರಿನಲ್ಲಿರುವ ಮ|| ರಾ|| ಇ. ಯಲ್ಲಪ್ಪಶೆಟ್ಟರವರ ಕುಮಾರಿ ಚಿ|| ಸೌ|| ಹ|| ಕುಂ|| ಚನ್ನಮ್ಮನವರನ್ನು ಮೈಸೂರು ಮ|| ರಾ|| ಸಿ. ದಾಸಪ್ಪನವರ ಸೋದರದಳಿಯಂದಿರು ಚಿ|| ಡಿ. ದಾಸಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಹೆಣ್ಣಿನವರಿಂದ ರೂ. 5, ಗಂಡಿನವರಿಂದ ರೂ. 5.
4. ಮೈಸೂರು ಹಳೆಅಗ್ರಹಾರದಲ್ಲಿರುವ ಮ|| ರಾ|| ಚನ್ನಬಸಪ್ಪನವರ ಮಗಳ ಲಗ್ನದಲ್ಲಿ ಮ|| ಎಂ. ನಾಗಪ್ಪನವರ ಮೂಲಕ ರೂ. 5.

ಮೇಲ್ಕಂಡ ಮೊಬಲಗು ರೂ. 18 ನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ,
ತಾ|| 25—2—20

ಜಿ. ಪರಮಶಿವಯ್ಯ ಬಿ.ಎ.ಎಲ್‌ಎಲ್.ಬಿ.
ಅಡ್ವೋಕೇಟ್
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್
ಸೆಕ್ರೆಟರಿ.

ಪತ್ರವ್ಯವಹಾರ.

[ಪತ್ರವ್ಯವಹಾರಕರ ಲೇಖನಗಳಲ್ಲಿ ಕಂಡ ಅಭಿಪ್ರಾಯಕ್ಕೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.]

ಶಿವಭಕ್ತಜನ ವಿಧೇಯ ಗೆಜ್ಜಲಹಟ್ಟಿ—ಈ ಲೇಖನದಲ್ಲಿ ಪ್ರಕಟನೆಗೆ ಅರ್ಹವಾದ ವಿಶೇಷ ವಿಷಯವೇನೂ ಇಲ್ಲ. ಪ.ಪ್ರ.

ಹಳೆಬೀಡು.

ಎಡತೊರೆ ತಾಲ್ಲೂಕಿನಲ್ಲಿ ಚುಂಚನಕಟ್ಟೆ, ಹೇಮಗಿರಿ ಮೊದಲಾದ ದೊಡ್ಡ ದೊಡ್ಡ ಜಾತ್ರೆಗಳು ನಡೆಯುತ್ತ, ಅಗ್ಗ ವಿಶೇಷವಾಗಿ ದನಗಳ ಪ್ರದರ್ಶನವೂ ನಡೆಯುತ್ತಲಿದೆ. ಮಗ್ಗುಲ ಹುಣಸೂರುತಾಲ್ಲೂಕು ವಿಸ್ತಾರದಲ್ಲಿ ಎಡತೊರೆಗಿಂತ ದೊಡ್ಡದಾಗಿದ್ದರೂ, ಬೆಟ್ಟದಪುರದ ಜಾತ್ರೆಯ ಕಾಲದಲ್ಲಿ ನಡೆಯುವ ದನದ ಪರಿಷೆಯ ಹೊರತು ಮತ್ತಾವುದೂ ಆ ತಾಲ್ಲೂಕಿನಲ್ಲಿ ನಡೆಯುತ್ತಿರಲಿಲ್ಲ. ಬೀಕರೆ ಹೋಬಳಿಗೆ ಸೇರಿದ ಹಳೆಬೀಡು ಗ್ರಾಮವು ಪುರಾತನವಾಗಿಯೂ ನೀರು ನೆಳಲಿಗೆ ಅನುಕೂಲ ಸ್ಥಳವಾಗಿಯೂ ಇರುವುದರಿಂದ ಆ ಊರಿನ ಆಸ್ತಿಕರೂ ಧರ್ಮಬುದ್ಧಿಯುಳ್ಳವರೂ ಆದ ಮ|| ಪಟೇಲ್ ಅಪ್ಪಾಜಪ್ಪನವರೇ ಮೊದಲಾದ ಪ್ರಜೆಗಳು ಊರಿನ ಬೀಳಿಯಲ್ಲಿ ಪುರಾತನವಾಗಿ ಶಿಥಿಲವಾಗಿದ್ದ ಮಾದೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಕಳೆದ ೫ ವರ್ಷಗಳಿಂದ ರಥೋತ್ಸವವನ್ನೂ ದನಗಳ ಪರಿಷೆಯನ್ನೂ ನಡೆಯಿಸುತ್ತಿದ್ದಾರೆ. ಮೊನ್ನೆ ವರ್ಷ ಅಲ್ಲಿ ತಾಲ್ಲೂಕು ಕಾನ್ಫರೆನ್ಸು ಕೂಡ ನಡೆಯಿತು. ಅಲ್ಲಿಯ ಗ್ರಾಮಾಭಿವೃದ್ಧಿ ಸಂಘದವರು ಶ್ಲಾಘನೀಯವಾಗಿ ಕೆಲಸಮಾಡಿದ ನಿಮಿತ್ತ ಆ ಗ್ರಾಮಕ್ಕೆ ಬಹುಮಾನದ ಬೆಳ್ಳಿಯ ತಟ್ಟೆಯನ್ನು ಕೊಡಲು ಸರ್ಕಾರದ ಅಪ್ಪಣೆಕೂಡ ಆಗಿರುತ್ತದೆ. ಈ ವರ್ಷದ ಜಾತ್ರೆಯು ಕಳೆದ ವಾರ ೫ ದಿನಗಳ ಕಾಲ ನಡೆಯಿತು. ಹಿಂದಣ ಎಲ್ಲ ವರ್ಷಗಳಿಗಿಂತಲೂ ಪರಿಷೆಯು ವಿಶೇಷವಾಗಿ ಸೇರಿದ್ದಿತು. ೨ ಸಾವಿರದ ವರೆಗೆ ದನಗಳು ಬಂದಿದ್ದುವು. ೧೩೦೦ ಬೆಲೆ ಬಾಳುವ ಒಂದು ಜತೆ ಹೋರಿಗಳು ಬಂದಿದ್ದುವು. ತಾಲ್ಲೂಕು ಅಮಲ್ದಾರರು ದಯಮಾಡಿಸಿ, ಉತ್ತಮವಾದ ರಾಸುಗಳಿಗೆ ೫ ರೂ.ನಿಂದ ಹಿಡಿದು ೨ ರೂ.ಗಳವರೆಗೆ ಅನೇಕ ಬಹುಮಾನಗಳನ್ನು ಕೊಟ್ಟು ದನಗಳ ಸಾಕುವಿಕೆಯಲ್ಲಿ ರೈತರಿಗೆ ಪ್ರೋತ್ಸಾಹಕರವಾದ ಭಾಷಣಮಾಡಿದರು. ವರ್ಷ ವರ್ಷ ಈ ಜಾತ್ರೆಯು ವೃದ್ಧಿಯಾಗುತ್ತಲೂ, ಈ ಸುತ್ತಿನ ರೈತರಿಗೆ ಪಶುಸಂರಕ್ಷಣೆಗೆ ಪ್ರೋತ್ಸಾಹಕರವಾಗುತ್ತಲೂ ಇದೆ. ಇಂಥ ಪುರೋವೃದ್ಧಿ ಪ್ರಯತ್ನದಲ್ಲಿ ಅಲ್ಲಿಯ ರೈತರಿಗೆ ಮಾರ್ಗದರ್ಶಕರಾಗಿರುವ ಮ|| ಪಟೇಲ್ ಅಪ್ಪಾಜಪ್ಪನವರೇ ಮೊದಲಾದವರಿಗೆ ಮಾದೇಶ್ವರನು ದೀರ್ಘಾಯುರಾರೋಗ್ಯಗಳನ್ನೂ ಆಸ್ತಿಕ್ಯಾಭಿವೃದ್ಧಿಯನ್ನೂ ಅನುಗ್ರಹಿಸುವವನಾಗಲಿ.

ಪ್ರತ್ಯಕ್ಷದರ್ಶಿ.

ವೀರಶೈವ ಧರ್ಮೋತ್ತೇಜಕ ಸಭೆ, ಸುತಗಟ್ಟಿ.

ತಾ|| ೯-೨-೧೯೨೦ ನೇ ಇಸವಿಯ ಚಂದ್ರವಾರ ದಿವಸ ಅಲ್ಲಿಯ ಬಸವೇಶ್ವರ ದೇವರ ಅಭಿಷೇಕವು ಯಥಾವಿಧಿಯಿಂದ ಜರುಗಿದ ಮೇಲೆ ಅದೇ ದಿವಸ ಸಾಯಂಕಾಲ ೬ ಗಂಟೆಯ ಸುಮಾರಿಕ್ಕೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಲ್ಲಿಯ ವೇ|| ಶಿವಲಿಂಗಯ್ಯನವರು ಹಿರೇಮಠ, ಎ|| ಬಸನಗೌಡರು, ಪೋಲೀಸ್ ಪಾಟೀಲ ಇವರೇ ಮೊದಲಾದ ಪುರಪ್ರಮುಖರೊಡನೆ ಸಭೆ ಸೇರಲು ಸರ್ವಾನುಮತದಿಂದ ಅಲ್ಲಿಯ ಮ|| ಶಿವಲಿಂಗಪ್ಪನವರು

ದೊಡ್ಡಮನೆ. ಇವರು ಅಧ್ಯಕ್ಷತೆಯನ್ನು ವಹಿಸಿದ ಮೇಲೆ ಧರ್ಮ ಅಂದರೇನು, ಈ ವಿಷಯವನ್ನು ಕುರಿತು ಶ್ರೀ ವೀರಯ್ಯನವರು ವಡ್ಡಿ ಮಲ್ಲನಗೌಡ ಪಾಟೀಲ ಇವರು ನಿಬಂಧವನ್ನು ಓದಿದರು. ಆ ಮೇಲೆ ವೀರಶೈವರ ಮನೆಯಲ್ಲಿ ಜರಗುವ ವಿವಾಹಾದಿ ಕಾರ್ಯಗಳ ಮಹತ್ವ ಮತ್ತು ಲಿಂಗಲಕ್ಷಣ ಈ ವಿಷಯಗಳ ಮೇಲೆ ಎಸ್. ಎಂ. ಸಿದ್ಧಾಂತಿ ಹೊಲಿ ಹಿರೇಮಠ ಇವರು ಉಪನ್ಯಾಸ ಮಾಡಿದ ತರುವಾಯ ಇಲ್ಲಿಯ ವೇ|| ಸಂಗಯ್ಯನವರು ಗಡಿಮಠ ಇವರು ಗುರುಸ್ಥಲದವರು, ಐಕ್ಯ, ಒಂದನೇ ಸಭೆಯಲ್ಲಿಯ (ಧಾರವಾಡದಲ್ಲಿ ಜರಗಿದ) ಠರಾವುಗಳನ್ನು ತೀವ್ರ ಅಮಲಿನಲ್ಲಿ ತರುವುದು ಈ ವಿಷಯಗಳ ಮೇಲೆ ಉಪನ್ಯಾಸ ಮಾಡಿದ ತರುವಾಯ ಅಧ್ಯಕ್ಷರು ಪುಷ್ಟೀಕರಿಸಲು ಕೆಳಗೆ ಬರೆದಂತೆ ಮೂರು ಠರಾವುಗಳು ಪಾಸಾದವು.

(೧) ವೀರಶೈವರ ಮನೆಯಲ್ಲಿ ಜರಗುವ ದೀಕ್ಷಾ ವಿವಾಹದ ಕಾರ್ಯಗಳನ್ನು ಜಗದ್ಗುರು ಪಂಚಾಚಾರ್ಯರ ಗೋತ್ರ ಸೂತ್ರದವರಾದ ಗುರುಸ್ಥಲದವರೇ ಮಾಡತಕ್ಕದ್ದು. (೨) ಪಂಚಕಲಶದ ಬಾಬು ಶ್ರೀ ಜಗದ್ಗುರು ಪಂಚಾಚಾರ್ಯರು ಠರಾಯಿಸಿದಂತೆ ಮಠದಾಚಾರ್ಯ ವ್ಯತ್ಯಾಸ್ತಚಾರ್ಯರಿಗೆ ಸಲ್ಲತಕ್ಕದ್ದು. (೩) ವೀರಶೈವರ ಮನೆಯಲ್ಲಿ ಜನಿಸಿದ ಶಿಶುವಿಗೆ ಪಂಚಸೂತ್ರಕ್ಕೆ ಸಂಬಂಧಿಸಿದ ಲಿಂಗವನ್ನೇ ಧಾರಣೆ ಮಾಡುವುದು ಗುರುಸ್ಥಲದವರ ಮುಖ್ಯಕರ್ತವ್ಯವು.

ಮಹಾಶಯರೇ,—

ಧಾರವಾಡ ಜಿಲ್ಲಾ ಗದಗ ತಾಲ್ಲೂಕು ಮೈಕೆ ಹಂಪಿಗಿ, ಶಿಂಗಟಾಲೂರ, ನಡಲಿ ಈ ಮೂರು ಗ್ರಾಮದ ಪಂಚಜನರ ಆಡಳಿತಕ್ಕೆ ಒಳಪಟ್ಟಿರುವ ಶ್ರೀ ವೀರಭದ್ರದೇವರ ರಥೋತ್ಸವವೂ ಜಾತ್ರೆಯೂ ಪದ್ಧತಿ ಪ್ರಕಾರ ಬರುವ ರೌದ್ರಿನಾಮ ಸಂ|| ರದ ಚೈತ್ರ ಶು|| ೫ ಗುರುವಾರ ರಥೋತ್ಸವ, ಶು|| ೬ ಶುಕ್ರವಾರ ಪ್ರಾತಃಕಾಲಕ್ಕೆ ಅಗ್ನಿಕುಂಡ, ಹಾಗೆಯೇ ಜಂಗಮಾರಾಧನೆ, ಮತ್ತು ಆ ದಿವಸ ರಾತ್ರಿ ಸಕಲ ವೈಭವದೊಡನೆ ಶ್ರೀ|| ದೇವರ ಉತ್ಸವವು ಜರಗುವುದು. ಈ ಜಾತ್ರೆಗೆ ಬಳೆಗಾರ, ಕಂಚುಗಾರ, ಕುಡ ಕಬ್ಬಿಣದ ಅಂಗಡಿಗಳು ಮತ್ತು ನಾಟಕಗಳು ಸಹ ಬರುತ್ತಿರುವವು. ಈ ಪವಿತ್ರವಾದ ದೇವಸ್ಥಾನವು ಹಂಪಿಗಿ, ಶಿಂಗಟಾಲೂರ, ಮಧ್ಯದಲ್ಲಿ ತುಂಗಭದ್ರಾ ನದೀ ತೀರದಲ್ಲಿದ್ದು ಅತಿ ರಮಣೀಯವಾದ ನೆರಳಿನಿಂದಲೂ, ನೀರಿನಿಂದಲೂ ಬಂದ ಜನಗಳಿಗೆ ಆಹ್ಲಾದಕರವಾಗಿದೆ. ಈ ದೇವಸ್ಥಾನವು ಎಷ್ಟೋ ವರ್ಷಗಳಿಂದ ಅರ್ಚಕರ ಆಡಳಿತಕ್ಕೆ ಒಳಪಟ್ಟಿದ್ದು ಈಗ ೪-೫ ವರ್ಷದಿಂದ ಮೇಲೆ ಬರೆದ ಗ್ರಾಮದ ಪಂಚ ಜನರ ಸೇವಾಗಿ ಈಗ ಸಾಧಾರಣ ಒಂದುನೂರು ಗೋವುಗಳು ಕೂಡಿವೆ. ಹಾಗೂ ಅಲ್ಪಸ್ವಲ್ಪ ಜಮೀನು ಕೂಡ ಭಕ್ತಾದಿಗಳಿಂದ ದಾನರೂಪವಾಗಿ ಬರಲಿಕ್ಕೆ ಹತ್ತಿದೆ. ಇಂಥಾ ರಮಣೀಯವಾದ ಸ್ಥಾನದಲ್ಲಿ ಯಾವದಾದರೊಂದು ಧಾರ್ಮಿಕ ಶಿಕ್ಷಣಾಲಯವನ್ನು ಸ್ಥಾಪಿಸುವುದು ಯೋಗ್ಯವಾಗಿರುವುದರಿಂದ ಅದರ ಬಗ್ಗೆ ಜಾತ್ರೆ ಕಾಲಕ್ಕೆ ಆಲೋಚನೆಯು ಕಮಿಟಿ ಕೂಡಲೂ, ಮತ್ತು ಶ್ರೀ ದೇವರ ಪೂಜಾ ವಿನಿಯೋಗಾದಿಗಳು ಕ್ರಮಪರಿತು ಜರುಗಲೂ ಯುಕ್ತವಾದದ್ದೆಂದು ತಮ್ಮಗಳಿಗೆಲ್ಲಾ ತೋರಿದಲ್ಲಿ ಯಾವತ್ತು ಮಹಾಜನರು ತಮ್ಮ ತಮ್ಮ ಸದಭಿಪ್ರಾಯಗಳನ್ನು ಮೇಲೆ ಬರೆದ ಪಂಚ ಜನರಿಗೆ ಸೂಚಿಸುವುದಲ್ಲದೆ ತಾವುಗಳು ಸಹ ಆ ಕಾಲಕ್ಕೆ ದಯಮಾಡಿ ಬಂದು ಕೈಲಾದ ಮಟ್ಟಿಗೆ ಸಹಾಯ ಮಾಡದೇ ಇರಲಾರರೆಂದು ಪೂರ್ಣ ನಂಬಿರುವ.

ಗುರುಬಸಪ್ಪಾ ಗದ್ದಿಕೇರಿ.

ನೂತನಶಾಲಾ ಪ್ರವೇಶೋತ್ಸವ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಹೋಬಳಿ ದಸಹದ ಹೊಸಹಳ್ಳಿ ಎಂಬ ಗ್ರಾಮವು ಸುಮಾರು ೫೦೦ ಪ್ರಜಾಸಂಖ್ಯೆಯುಳ್ಳದ್ದಾಗಿದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಸ್ಕೂಲ್ ಇಲ್ಲದೇ ಇದ್ದುದನ್ನು ತಾಲ್ಲೂಕು ಅಮಲ್ದಾರರಾಗಿದ್ದ ಮ|| ಮಲ್ಲಿಕಾರ್ಜುನಯ್ಯನವರು ಪರಾಂಬರಿಸಿ, ಈ ಗ್ರಾಮಕ್ಕೆ ಸರ್ಕೀಟು ದಯಮಾಡಿದ್ದವೇಳೆ ಎಲ್ಲಾ ಗ್ರಾಮಸ್ಥರಿಗೂ ಪ್ರೋತ್ಸಾಹ ಕೊಟ್ಟುದರ ಮೇಲೆ ಗ್ರಾಮದವರೆಲ್ಲರೂ ಏಕೀಭವಿಸಿ, ಒಂದು ಹೆಂಚಿನ ಹೊಸ ಕಟ್ಟಡವನ್ನು ತಮ್ಮ ಸ್ವಂತ ಖರ್ಚಿನಿಂದ ತಯಾರು ಮಾಡಿ, ಸ್ಕೂಲು ಮಂಜೂರು ಬಗ್ಗೆ ಹ|| ತುಮಕೂರು ಡಿಸ್ಟ್ರಿಕ್ಟು ಸ್ಕೂಲುಗಳ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರ್ ಸಾಹೇಬರವರಲ್ಲಿ ಅಂಕೆ ಮಾಡಿಕೊಳ್ಳಲಾಗಿ ಸ್ಕೂಲು ಪ್ರಾರಂಭಿಸಬಹುದೆಂದು ಅಪ್ಪಣೆ ಕೊಟ್ಟುದರ ಮೇಲೆ ತಾ|| ೨೦-೧-೨೦ ರಲ್ಲಿ ಸ್ಕೂಲು ಪ್ರಾರಂಭಿಸಲ್ಪಟ್ಟಿತು. ಆ ದಿವಸದ ಸಭೆಗೆ ಹೋಬಳಿ ಶೇಕದಾರ್ ಮ|| ಕೃಷ್ಣಪ್ಪನವರು, ಹಂದನಕೆರೆ ಸ್ಕೂಲು ಹೆಡ್ಮಾಸ್ಟರ್ ಮ|| ಎಚ್. ಆರ್. ನರಸಿಂಹಯ್ಯನವರೂ ದಯಮಾಡಿಸಿದ್ದಲ್ಲದೆ, ಬಾಜೂ ಗ್ರಾಮಗಳಾದ ಮಲ್ಲಿಗೆರೆ, ಬಿಂದ್ರೇಹಳ್ಳಿ, ಸೋರಲಮಾವು ಈ ಗ್ರಾಮಗಳ ಪುರಪ್ರಮುಖರೂ ಮಲ್ಲಿಗೆರೆ ಗ್ರ್ಯಾಂಟ್ ಸ್ಕೂಲ್ ಮಾಸ್ತರೂ ಸಹ ದಯಮಾಡಿಸಿದ್ದರು. ಸಭಿಕರ ಪ್ರಾರ್ಥನೆಯಂತೆ ಶೇಕದಾರ್ ಮ|| ಕೃಷ್ಣಪ್ಪನವರು ಮಂಗಳವಾದ್ಯಗಳು ಘೋರ್ಗರೆಯುತ್ತಿರುವಾಗ ತಮ್ಮ ಸ್ವಹಸ್ತದಿಂದ ಬೀಗವನ್ನು ತೆಗೆದು ಒಳಗೆ ಪ್ರವೇಶಿಸಿ ಅಗ್ರಾಸನವನ್ನು ವಹಿಸಿದರು. ತರುವಾಯ ಗಣಪತಿ, ಶಾರದಾ ಪೂಜೆಗಳು ಯಥಾವಿಧಿಯಾಗಿ ನಡೆಸಲ್ಪಟ್ಟವು. ಮ|| ಶೇಕದಾರ್ ಕೃಷ್ಣಪ್ಪನವರು ವಿದ್ಯಾಭ್ಯಾಸದ ವಿಚಾರದಲ್ಲಿಯೂ, ಹಂದನಕೆರೆ ಸ್ಕೂಲು ಹೆಡ್ಮಾಸ್ಟರ್ ಮ|| ಎಚ್. ಆರ್. ನರಸಿಂಹಯ್ಯನವರು ಸ್ಕೂಲಿನ ಪುರೋಭಿವೃದ್ಧಿಗೆ "ಉಪಾಧ್ಯಾಯರೂ ಮತ್ತು ಗ್ರಾಮಸ್ಥರೂ ಸಹ ಅನುಸರಿಸಬೇಕಾದ ನಿಯಮ" ಎಂಬ ವಿಚಾರದಲ್ಲಿಯೂ, ಮಲ್ಲಿಗೆರೆ ಗ್ರ್ಯಾಂಟ್ ಸ್ಕೂಲ್ಮಾಸ್ಟರ್ ಮ|| ಜೋಗೀಗೌಡರು "ಉಪಾಧ್ಯಾಯರುಗಳಿಗೆ ಗ್ರಾಮಸ್ಥರು ಮಾಡಿಕೊಡಬೇಕಾದ ಸೌಕರ್ಯ" ಎಂಬ ವಿಚಾರದಲ್ಲಿಯೂ ಉಪನ್ಯಾಸ ಮಾಡಿದರು. ಅನಂತರ ಶ್ರೀಮನ್ಮಹಾರಾಜರವರ ಮತ್ತು ಶ್ರೀಮನ್ ಯುವರಾಜರವರ ಮತ್ತು ಅವರ ಪರಿವಾರದವರ ಶ್ರೇಯಃಪ್ರಾರ್ಥನೆಗಳು ನಡೆಸಲ್ಪಟ್ಟು, ಸಭಿಕರಿಗೆ ಅಲ್ಪಾಹಾರವೂ, ಗಂಧಪುಷ್ಪ ತಾಂಬೂಲಾದಿಗಳೂ ವಿನಿಯೋಗಿಸಲ್ಪಟ್ಟುವು.

ಸ್ಥಳನಿವಾಸಿ.

ಗುರುವರ್ಗ ವಿರಕ್ತರ ಜಗಳ.

ಯಾವದಾದರೊಂದು ಕೆಲಸವನ್ನು ಮಾಡಬೇಕಾದರೆ ಅದು ಎಷ್ಟೇ ಸರಳವಾಗಿರಲಿ ! ಬಾಧ್ಯತಾಬದ್ಧವಾದದ್ದಿರಲಿ ! ಒಂದು ತುಸು ಸಮಯಸ್ಥಳಗಳನ್ನು ನೋಡಲೇಬೇಕಾಗುತ್ತದೆ. ಇಲ್ಲದಿದ್ದರೆ ಅಮೃತವು ಸಹ ವಿಷವಾಗಿ ತೋರುವುದೆಂಬ ಅನುಭವದ ಮಾತು ಯಾರಿಗಾದರೂ ಗೊತ್ತಾದುದೇ. ಇದನ್ನೆಲ್ಲಾ ನೋಡದೆ ಕುರುಡರಂತೆ ಕುಣಿದರೆ ಅದು ಜಾಣತನದ ಮಾತಾಗದು. ಹಕ್ಕು ಇಲ್ಲದೆಡೆಯಲ್ಲಿ ಕಾಲಿಡಬಾರದೆಂದರೆ ಹಕ್ಕು ಇದ್ದಲ್ಲಿ ದಗ್ ದಗ್ ಕುಣಿಯಬೇಕೆಂಬದಲ್ಲವು. ಸಲ್ಲದ ಕೆಲಸಗಳಿಗೆ ಕೈಹಾಕಬಾರದೆಂದರೆ ಸಲ್ಲುವ ಕೆಲಸಗಳನ್ನು ಮೈಮರೆತು ಮಾಡಬೇಕೆಂಬದಲ್ಲವು. ಇದರಿಂದ ಹುಚ್ಚುತನವು ಹೊರಬೀಳುವುದಲ್ಲದೆ—"ಗಜಾನನಂಪ್ರಕುರ್ವಾಣೋರಚಯಾಮಾಸವಾನರಂ—" ಎಂಬ ಮಾತಿಗೆ ಗುರಿಯಾಗಬೇಕಾಗುತ್ತದೆ. ಈಗ ನಾವು ನಮ್ಮ ಸಮಾಜವೆಂದರೆ ಅತಿ ದುರ್ದೆಸೆಯಲ್ಲಿದ್ದಂತಿರುವೆವು. ಕೋರ್ಟಿನಲ್ಲಿ ಅಪರಾಧಿಯಾದವನು ತಪ್ಪನ್ನು ನಿಷೇಧಿಸಿ ಮೇಲ್ಮೆಯನ್ನು ಸಾಧಿಸಬೇಕಾದರೆ ತನ್ನ ನಿರ್ದೋಷತ್ವವನ್ನು ನಿದರ್ಶನಕ್ಕೆ ತರಲು ಎಲ್ಲಾ ತೆರದಿಂದ ಪ್ರಯತ್ನಿಸುವಂತೆ ನಾವೂ ಸಾಧಿಸಬೇಕಾಗಿದೆ. ಜಾತಿವಾರ ಪ್ರಾತಿನಿಧ್ಯದ ಮಾತು ಇನ್ನೂ ಜೀವಂತ ಆಗಿಲ್ಲ. ಸುಧಾರಣೆಯ ಬಿಲ್ಲು ತೀವ್ರ ಪ್ರಚಾರದಲ್ಲಿ ಬರುವುದು ಇರುವುದರಿಂದ ಅದರ ಲಾಭಾಂಶವನ್ನು ತಕ್ಕೊಳ್ಳುವಷ್ಟು ಜ್ಞಾನವೂ ನಮ್ಮ ಕಾರ್ಯಕ್ಷೇತ್ರದ ಅರಿವೂ, ಕರ್ತೃತ್ವಶಕ್ತಿಯೂ ನಮ್ಮಲ್ಲಿ ಇಲ್ಲ. ಒಳಪಂಗಡಗಳ ಪ್ರಶ್ನೆಯಿಂದ ನಮ್ಮವರಲ್ಲಿರತಕ್ಕಷ್ಟು ಏಕೀಭಾವವು ಸರಿಯಾಗಿ ತೋರುವುದಿಲ್ಲ. ಇದರ ದೆಸೆಯಿಂದ ನಾವೆಲ್ಲರೂ ಭಗೀರಥ ಪ್ರಯತ್ನ ಮಾಡಿ ನಮ್ಮವರನ್ನು ಏಕೀಕರಿಸಿ ನಮ್ಮ ಹಕ್ಕನ್ನು ಬೇಡುವುದಲ್ಲದೆ ಮುಂದಿನ ಚುನಾವಣೆ ಕಾಲಕ್ಕೆ ಸ್ವಾಭಿಮಾನದ ಬೀಜವನ್ನೂರಿ ಆತ್ಮಗೌರವವನ್ನು ಮರೆಯದ ಹಾಗೆ ಸಾಹಸ ಮಾಡಿ ನಮ್ಮ ಜನರನ್ನು ಸುಧಾರಿಸುವ ದೊಡ್ಡ ಕೆಲಸವು ಎದೆಯ ಮೇಲೆ ಕೂತದೆ. ಈ ಹೊತ್ತಿನಲ್ಲಿ "ಗುರುವರ್ಗವಿರಕ್ತರದೊಂದು ಭೂತವು, ಎದ್ದು ಕೂತದ್ದು ನಮ್ಮೆಲ್ಲರ ದುರದೃಷ್ಟವೇ ಸರಿ. ಗಂಡಸ್ಯೋಪರಿ ಪಿಟಕಾಸಂವೃತ್ತಾ !" ಎಂಬಂತೆ ನಮ್ಮ ಹಣೆಯಬರಹವಾಯಿತು. ಇದರಿಂದ ಅವರವರ ಹಕ್ಕು ಮುಣುಗಿಸಬೇಕೆಂಬ ಅರ್ಥವಲ್ಲ. ಅವರವರ ಅಧಿಕಾರ ಹೋದರೂ ಚಿಂತೆಯಿಲ್ಲ. ಬಾಯಿಮುಚ್ಚಿಕೊಂಡಿರಬೇಕೆಂಬ ಉದ್ದೇಶವಲ್ಲ. ಸಲ್ಲತಕ್ಕ ಅಧಿಕಾರವು ಸಲ್ಲಲಿ. ಆದರೆ ಅದಕ್ಕಾಗಿ ಅಡುಗೆಮನೆಯ ಜಗಳವನ್ನು ಅಂಗಳಕ್ಕೆ ತಂದು ಹುರಿನ್ನುವುದು ಸಮಯಪರಿತು ಕೆಲಸ ಮಾಡುವ ಜಾಣರಿಗಂತೂ ಒಪ್ಪತಕ್ಕ ಮಾತಲ್ಲವೆಂದು ಕೈಯೆತ್ತಿ ಹೇಳಬಹುದು. ಈ ಚಲನವಲನೆಯಲ್ಲಿ ಕಳಕೊಂಡ ಅಧಿಕಾರವನ್ನು ಪಡೆಯುವುದಕ್ಕಾಗಿ ಹೊಡೆದಾಡುವವರೇನೂ "ಇಂಥಾದ್ದೇನೂ ಗೊತ್ತಿಲ್ಲದವರೆಂಬಂತಲ್ಲ. ಆದರೆ ಒಂದುತರದ ಅಂಧತನವು ಅಪ್ಪಳಿಸಿಕೊಂಡಿದೆಯೆಂದೆನ್ನಬಹುದು. ಆತ್ಮಸಮರ್ಥನೆಗಾಗಿ ಇವರು ಕೆಲವು ಮುದ್ದೆಗಳನ್ನು ಮುಂದಿಡುವರು. ಅವುಗಳಲ್ಲಿ ಮುಖ್ಯವಾದುವುಗಳು.

(೧) ಹೋದ ಅಧಿಕಾರವನ್ನು ಕಳಕೊಂಡು ಸುಮ್ಮನೆ ಕೂಡ್ರಬೇಕೇನು ? ಸ್ವರಾಜ್ಯ ಸಂಪಾದನೆಗೆ ಕೆಲವರು ಹೊಡೆದಾಡುವುದಿಲ್ಲವೇನು ?

(೨) ಚಳವಳಿಯನ್ನು ಪ್ರಚಾರದಲ್ಲಿ ತರಬೇಕಾದರೆ ಹೀಗೆ ಗೊಂದಲವನ್ನು ಹಾಕದೆ ಕೆಲಸವು ಹೇಗೆ ನಡೆಯಬೇಕು ? ಪರಿಣಾಮವು ಏನೇ ಆಗಲಿ ! ಕಾರ್ಯವು ಸಾಧಿಸಬೇಕಲ್ಲವೇ ?

(೩) ಸಮಾಜದ ಏಕೀಕರಣಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಎಂಬದಾಗಿ ಅನೇಕ ತರವಾಗಿ ಹೇಳುವರು. ಅಪ್ಪನವರಿರಾ ! ಧಾರ್ಮಿಕ ರೀತಿಯಿಂದ ನೋಡದೆ ಸಾಹಜಿಕ ನೋಡಿದರೂ ಈ ಮಾತುಗಳು ಯಾತಕ್ಕೂ ಕೆಲಸಕ್ಕೆ ಬಾರದವು. ಅಂದರೆ ಉಪಮಾನವೆಲ್ಲಿ ? ಉಪಮೇಯವೆಲ್ಲಿ ? ಸ್ವರಾಜ್ಯವಾದಿಗಳ ಪ್ರಭುತ್ವದವರ ಸಂಬಂಧವೆಲ್ಲಿ ? ಮತ್ತು ನಿಮ್ಮ-ವಿರಕ್ತರ ನಡುವಿನ ಸಂಬಂಧವೆಲ್ಲಿ ? ಕೌಲೀಸಿದ್ದನ ಲೆಕ್ಕವಾಯಿತಲ್ಲ ! ಸ್ವಾಧಿಕಾರದ ಸಾಧನೆಗಾಗಿ ಬೇಕಾದಹಾಗೆ ಮಾಡಬಹುದೇನು ? ಈ ಜಗಳದ ದೆಸೆಯಿಂದ ಸಮಾಜದ ಮೇಲೆ ಯಾವ ಪರಿಣಾಮವೂ ಆಗಲಿಕ್ಕಿಲ್ಲವೆನು ? ಅವರವರ ಅಧಿಕಾರವು ಹೋಗಲಿಂದು ಯಾರೂ ಅನ್ನುವುದಿಲ್ಲ. ಪರಂತು ಅಧಿಕಾರವು ಹೋಯಿತು ಹೇಗೆ ? ಕಳಕೊಂಡವರು ಯಾರು ? ಅಧಿಕಾರ ಸ್ಥಾನಾಂತರಕ್ಕೆ ಕಾರಣೀಭೂತರಾರು ? ಯಾರೇನೂ ಬೇಡವೆಂದು ಆಣೆ ಹಾಕಿಲ್ಲ. ಸಿಂಹಾಸನದವರೆಲ್ಲಾ ಗವಿ ಸೇರಲೆಂದು ಯಾರೂ ಹೇಳಲಿಲ್ಲ. ಮಠಾಧಿಕಾರಿಗಳು ಅಶಿಕ್ಷಿತರಾಗಿ ಸ್ವಕರ್ತವ್ಯವನ್ನರಿಯದೆ ಹಾಳಾಗಿಹೋಗಲೆಂದು ಯಾರೂ ಪ್ರಯತ್ನಿಸಲಿಲ್ಲ. ಕರ್ತೃತ್ವಶಕ್ತಿವಂತರಾಗಿ ಧರ್ಮಪ್ರಸಾರ ಪರ್ಯಟನ ಮಾಡಬೇಡಿರೆಂದು ಯಾರೂ ಅಡ್ಡಿ ಬರಲಿಲ್ಲ. ಭಿಕ್ಷೆಯನ್ನೆತ್ತಿ ಧರ್ಮಕಾರ್ಯ ಮಾಡಬಾರದೆಂದು ಯಾರು ಹೇಳಿದರು ? ದೇಶಸಂಚಾರ ಮಾಡಿ ಧರ್ಮಮಂಡನವನ್ನು ಮಾಡಬಾರದೆಂದು ಯಾರು ಹೇಳಿದರು ? ಮುಂದೆ ಬಂದು ಮಹಾಸಭೆಯ ಉತ್ಸಾಹದಕರಾಗಬಾರದೆಂದು ಯಾರು ಅಂದರು ? ಶಿವಯೋಗಮಂದಿರವನ್ನು ಸ್ಥಾಪಿಸಬಾರದೆಂದು ಯಾರು ತರುಬಿದರು ? ತರತರದ ಫಂಡುಗಳನ್ನು ಸ್ಥಾಪಿಸಬಾರದೆಂದು ಯಾರು ಬಿಡಿಸಿದರು ? ಇವೆಲ್ಲಾ ಸವಾಲುಗಳು ಗುರುವರ್ಗದವರಿಗೆ ಬೇಳುವವಲ್ಲವೇ ! ವಿರಕ್ತರು ಧರ್ಮಶಾಸ್ತ್ರೀತ್ಯಾ ಸರಿಯಾಗಿರುವರು ಇಲ್ಲವೆಂಬ ಪ್ರಶ್ನೆಯು ಬೇರೆ. ಪರಂತು ತಾವು ಕಳಕೊಂಡದ್ದನ್ನು ಪಶ್ಚಾತ್ತಾಪದಿಂದ ಸಮಯ ನೋಡಿ ಅಧಿಕಾರವನ್ನು ಸಾಧಿಸಬೇಕಲ್ಲದೆ ಸಮಾಜದ ದೊಡ್ಡ ದೊಡ್ಡ ಕಾರ್ಯಗಳಿಗೆ ಹಾನಿ ತಟ್ಟದಂತೆ ಪ್ರಯತ್ನಿಸತಕ್ಕದ್ದಾಗಿದೆ. "ನಮ್ಮ ಅಧಿಕಾರ ಹೋಯಿತೆಂದು ಹೀಗೆ ವಿಪರೀತ ಮಾಡುವ ದಿನವಲ್ಲ. ತಿರುಗಿ ಕೇಳಿದರೆ ಬುಡಕ್ಕೇ ಕೊಡಲಿ ಬರಬಹುದಲ್ಲವೇನು ? ಈ ಗುರುವರ್ಗದವರನ್ನು ಯಾರು ಮಾಡಿದರು ? ವಿರಕ್ತರನ್ನು ಯಾರು ಮಾಡಿದರು ? ಅವರನ್ನು ಪೂಜಿಸುವರಾರು ? ಭಕ್ತರೇ ನಿಂತು ನೀವು ಬೇಡಬೇಡವೆಂದಾಗಲೀ, ನಾವೇ ಒಬ್ಬರು ಅಯ್ಯನವರಾಗುತ್ತೇವೆಂದಾಗಲಿ ಅನ್ನುವ ದಿನಗಳು ಬಂದಿವೆ. ಸ್ವಾಮಿಗಳೇ ದಿನಮಾನದ ಮಾತದೆ. ನೆಲವು ಗಟ್ಟಿಯಿಲದೇ ಮೋಜಗಾಗಿ ಕುಣಿಯಲಿಕ್ಕೆ ಹೋಗುವದು ಸರಿಯಲ್ಲ. ನಿಮ್ಮ ಅಧಿಕಾರವನ್ನು ಯಾರೂ ಕಸುಕೊಂಡಿಲ್ಲ. ರಣಹೇಡಿಯಾಗಿ ಶಸ್ತ್ರವನ್ನು ಒಗೆದು ಓಡಿಹೋದ ಬಂಟನು ಇತರರಿಗೆ ಹೆಸರಿಡುವದರಿಂದೇನು ? ಗುರುವರ್ಗದವರು ಮುಂದಕ್ಕೆ ಬಂದರೆ ಸಾಕು ! ರಾಷ್ಟ್ರೀಯ ಸಭೆಯವರೇನೂ ನಿಯಮದಿಂದ ಮೊದಲಿನಿಂದ ಮಾಡಿದರೆ ? ಎಂದು ಅತಿಕ್ರಮ ಮಾಡುವುದು ಹೋಗ್ಯವಲ್ಲ. ಶಿಕ್ಷಿತರಾಗಿ ಕಾರ್ಯದಕ್ಷರಾಗಿ ಸಮಾಜ ಕೆಲಸಕ್ಕೆ ನಿಂತುಕೊಂಡರೆ ಏನು ಉಳಿದೀತು ? ಒಬ್ಬರ ಮೇಲೆ ಅಪರಾಧ ಹೊರಿಸದೆ ಜಾಗರೂಕರಾಗಿ ಇನ್ನುನ್ನು ತಾವು ಸುಧಾರಿಸಿಕೊಳ್ಳುವುದು ಸರಳವಾಗಿವಲ್ಲವೇ ? ಅಶಿಕ್ಷಿತರಾಗಿ ಗುರುವರ್ಗವಲ್ಲವೂ ಕರ್ತವ್ಯಪರಾಙ್ಮುಖರಾಗಿದ್ದಾರೆ. ಅವರ ಏಳಿಗೆಗೆ ಪ್ರಯತ್ನ ಮಾಡಿರಿ. ನಿಮ್ಮ ಕೆಲಸವನ್ನು ನೀವು ಮಾಡಿರಿ. ಅದಿಲ್ಲದೆ ಸಮಾಜವಿಘಾತಕವಾದ ಕೃತ್ಯಗಳನ್ನು ಮಾಡುವುದೂ ಮಾಡಿಸುವುದೂ ಸರಿಯಲ್ಲವು.

ಯಥಾರ್ಥವಾದಿ.

ಜಾಗ್ರತೆ. ಕಬ್ಬಿಣದ ನೇಗಿಲು. ತರಿಸಿಕೊಳ್ಳಿರಿ.



ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 18

ನಾವು ಎ. ಅಲ್ ಬ್ಯುಕ್ಯಯರ್ ಕ್ಯ ಅಂಡ್ ಸನ್ಸ್ ಎಂಬ ಹೆಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸೆಲ್ ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹೆಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಕರೇಗೌಡರು ದಾವಣಗೆರೆ.

ವಿಳಾಸ:—ಎಕ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟನಂತೆ ರಿಜಿಸ್ಟರ ಮಾಡಲ್ಪಟ್ಟ 20

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೫-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೆಂಟು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ನುಭವ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗಪಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೇಶೂಲಿ, ನಡುಶೂಲಿ, ವಾರಶೂಲಿ, ರೇತ್ರಿಜಡ್ಡು, ಗುಡ್ಡವ್ವನಬೆನೆ, ಹುರುಳುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯಿವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನರಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈಕೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೆಡಹುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಹೋಟೆ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಫೆಬ್ರವರಿ ತಾ|| ೨೯ ರಿಂದ ೧೯೨೦ನೆಯ ಮಾರ್ಚಿ ತಾ|| ೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಫಾಲ್ಗುಣ ಶು|| ದಶಮಿಯಿಂದ ಫಾಲ್ಗುಣ ಬಹುಳ ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
29	ಭಾನು	ದಶ	10-49	ಆರ್ದ್ರಾ	24-17	18
1	(1) ಸೋಮ	ಏಕಾ	5-18	ಪುನ	20-36	19
2	(2) ಮಂಗಳ	ದ್ವಾ	0-15	ಪುಷ್ಯ	18-30	20
3	ಬುಧ	ಚತು	51-52	ಆಶ್ಲೆ	15-9	21
4	(3) ಗುರು	ಪೌರ್ಣ	49-23	ಮಖಾ	13-40	22
5	(4) ಶುಕ್ರ	ಪಾಡ್ಯ	48-6	ಪುಬ್ಬ	13-18	23
6	ಶನಿ	ಬಿದಿ	47-58	ಉತ್ತ	14-1	24

(1) ಸರ್ವತ್ರೈಕಾದಶಿ. (2) ಪ್ರದೋಷ, ತೊಂಡನೂರು ಗೋಪಾಲಕೃಷ್ಣಸ್ವಾಮಿ ರಥ. (3) ನಾಗಮಂಗಲದ ಸೌಮ್ಯಕೇಶವಸ್ವಾಮಿ ರಥ, ಕಾಮದಹನ, (4) ಬೆಟ್ಟದ ಗಂಗಾಧರಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷದ್ವಿಷನ್ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಳಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಭವಂ ಸಚ್ಛತ್ರಮಾಲಾಕುಲಂ | ಶ್ರೀಮಂಚಿತ್ರಿಕೆಯಂಸದಾಪುರಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೩) ಮೈಸೂರ್ ಸ್ಟಾರ್ ಸ ೧೯೨೦ ನೆಯ ಇಸವಿ ಮಾರ್ಚಿ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೧೦

MYSORE GOVERNMENT ADVERTISEMENTS.

31

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintendent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬೆಳೆ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

8 ಬಸಪ್ಪಾ ಸಂಗನಬಸಪ್ಪಾ ಮಿಣಜಗಿ, ಧಾರವಾಡ.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 33

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಜ್ವರ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೩೦ ಔನ್ಸು ಬಾಟ್ಲಿ ೧ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಸಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ಬರಿ, ಕೊಬ್ಬರಿಯೆಣ್ಣೆ, ಶೀಗೆಕಾಯಿ, ಒಳ್ಳೆಯೆಣ್ಣೆ, ಸೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 5

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಸಂಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಕ್ಕ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
24 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷ್ಮೀಪಲಕ್ಕೆ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ, 6 ಸೀಸೆಗೆ 1-8-0. 12 ಕ್ಕೆ 2-13-0. 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
11 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಕ್ಕ. ಮದನೋದ್ಭವಗುಳಿಗೆ. ಇಲ್ಲಾ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 12

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ
17 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟು ಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಮಾರ್ಚಿ ತಾ|| ೭ನೆಯ ಭಾನುವಾರ

ಮಿಶ್ರವಿವಾಹದ ಬಿಲ್ಲು.

ಹಿಂದುಗಳಲ್ಲಿ ಭಿನ್ನಭಿನ್ನ ವರ್ಣಗಳೊಳಗೆ ಪರಸ್ಪರ ವಿವಾಹವು ನಡೆದರೂ ಅದು ಶಾಸ್ತ್ರದೂಷ್ಯವಲ್ಲವೆಂಬ ವಿಷಯಕ್ಕೆ ಒಂದು ಶಾಸನವಾಗಬೇಕೆಂಬುದಾಗಿ ಅ|| ಪಟೇಲ್‌ರವರು ಒಂದು ಬಿಲ್ಲನ್ನು ಸಾಮ್ರಾಜ್ಯಶಾಸನ ಸಭೆಯ ಪರ್ಯಾಲೋಚನೆಗೆ ತಂದಿದ್ದರಷ್ಟೆ. ಅದರ ವಿಷಯವು ಕಳೆದ ತಾ|| ೨೫-೨೬ರಲ್ಲಿ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಮೊಟ್ಟಮೊದಲು ಪಟೇಲರು ಆ ಬಿಲ್ಲಿನ ವಿಷಯವನ್ನು ಉಪಕ್ರಮಿಸುವಾಗ—"ಹಿಂದೂ ಮತದಲ್ಲಿರುವ ನಾಲ್ಕುವರ್ಣಗಳಲ್ಲೂ ಅಂತಶ್ಶಾಖೆಗಳು ಅನೇಕವಾಗಿವೆ. ಪ್ರತಿ ವರ್ಣದವರೂ ತಂತಮ್ಮ ಅಂತಶ್ಶಾಖೆಗಳೊಳಗೆ ವಿವಾಹ ಸಂಬಂಧವನ್ನು ಮಾಡಿಕೊಳ್ಳುವುದಕ್ಕೆ ಶಾಸ್ತ್ರವು ಸಂಮತಿಸುತ್ತದೆ. ಅಂಥ ವಿವಾಹಗಳು ಅನೇಕವಾಗಿ ಜರಗಿಯೂ ಇರುತ್ತವೆ. ಅಲ್ಲದೆ ಒಂದೊಂದು ವರ್ಣದವರು ಬೇರೆ ವರ್ಣದ ವಿವಾಹಸಂಬಂಧವನ್ನು ಮಾಡುವುದು ಕೂಡ ಉಂಟು. ಅಂಥ ವಿವಾಹಗಳು ಅನುಲೋಮವಿವಾಹ-ವಿಲೋಮವಿವಾಹ ಎಂದು ೨ ತೆರನಾಗಿವೆ. ಉತ್ತಮ ವರ್ಣದ ವರನು ಅಧಮವರ್ಣದ ಕನ್ಯೆಯನ್ನು ವಿವಾಹವಾದರೆ ಅದು ಅನುಲೋಮ ವಿವಾಹವೆನಿಸಿಕೊಳ್ಳುವುದು ಇದು ಶಾಸ್ತ್ರನಿಷಿದ್ಧವಲ್ಲ. ನೀಚವರ್ಣದ ವರನು ಉತ್ತಮವರ್ಣದ ಹೆಣ್ಣನ್ನು ಮದುವೆಯಾದರೆ ಅದು ವಿಲೋಮವಿವಾಹವೆನಿಸಿಕೊಳ್ಳುತ್ತದೆ ಇದು ಶಾಸ್ತ್ರನಿಷಿದ್ಧವು. ಈಗ ಉದ್ದೇಶಿಸಲ್ಪಟ್ಟಿರುವ ಬಿಲ್ಲಿನ ಉದ್ದೇಶವೇನೆಂದರೆ—ವರ್ಣಗಳ ಅಂತಶ್ಶಾಖೆಗಳಲ್ಲಿ ನಡೆಯುವ ವಿವಾಹವು ಶಾಸ್ತ್ರಸಮ್ಮತವೆಂದು ನಿರ್ಧರಿಸುವುದು ಮಾತ್ರವೇ ಅಲ್ಲದೆ, ವರ್ಣಾಂತರಗಳಲ್ಲಿ ಅನುಲೋಮ ವಿಲೋಮ ಭೇದವಿಲ್ಲದೆ ನಡೆಯುವ ವಿವಾಹಗಳೂ ಅಂಥ ಸಂಬಂಧದಿಂದ ಹುಟ್ಟಿದ ಸಂತಾನಗಳೂ ಕೂಡ ಶಾಸ್ತ್ರದೂಷ್ಯಗಳಲ್ಲವೆಂದು ನಿರ್ಣಯಿಸುವುದೇ ಇದರ ಉದ್ದೇಶವಾಗಿರುತ್ತದೆ. ಇದರಿಂದ ಹೊಸ ಆಚಾರವನ್ನೇನೂ ನಾವು ಸ್ಥಾಪಿಸಬೇಕೆಂದು ಉದ್ದೇಶಪಟ್ಟಿಲ್ಲವೆಂಬುದು ಗೊತ್ತೇ ಆಗುತ್ತದೆ. ಈ ಬಿಲ್ಲನ್ನು ಸಭೆಗೆ ನಾನು ೧೯೧೮ನೆ ವರ್ಷದ ಸೆಪ್ಟಂಬರ್ ತಿಂಗಳಲ್ಲೇ ಪ್ರವೇಶಗೊಳಿಸಿದೆನು. ಅಲ್ಲಿಂದ ಇದುವರೆಗೆ ೧೮ ತಿಂಗಳುಗಳು ಕಳೆದುವು. ಈ ಬಿಲ್ಲಿನ ಸಾಧಕಬಾಧಕಗಳನ್ನೆಲ್ಲಾ ಪ್ರಜೆಗಳು ಚೆನ್ನಾಗಿ ವಿಚಾರಮಾಡಲು ಅವಕಾಶ ಸಿಕ್ಕಿದಂತೆಯೇ ಆಯಿತು. ಆದುದರಿಂದ ಅವಸರ ಮಾಡಿ ಬಿಲ್ಲನ್ನು ಶಾಸನಗೊಳಿಸಿದರೆಂಬ ದೂರಿಗೂ ಅವಕಾಶವಿರುವುದಿಲ್ಲ. ಬರ್ಮಾ, ಅಸ್ಸಾಂ ಪ್ರಭುತ್ವಗಳವರು ಈ ಬಿಲ್ಲಿಗೆ ವಿರುದ್ಧವಾಗಿದ್ದಾರೆ. ಬಹುಮಂದಿಗಳು ಇದಕ್ಕೆ ಸುಮುಖರಾಗಿದ್ದಾರೆ. ಸಂಯುಕ್ತಪ್ರಾಂತದವರೂ ಕೊಡಗಿನವರೂ ಅನುಕೂಲರಾಗಿದ್ದಾರೆ. ಪಂಜಾಬು ಮದ್ರಾಸು ಬೊಂಬಾಯಿ ಪ್ರಭುತ್ವಗಳವರು ಅನುಕೂಲರಾಗಿದ್ದಾರೆ ದಿಲ್ಲಿ, ಬೀಹಾರು, ಒರಿಸ್ಸಾ, ಮಧ್ಯಪ್ರಾಂತ, ಬಂಗಾಳಾ, ಅಜ್ಮೀರು, ಇವುಗಳ ಪ್ರಭುತ್ವದವರು ಈ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವನ್ನೂ ತಿಳಿಯಬೇಕೆಂದು ಹೇಳಿರುತ್ತಾರೆ ಕಲ್ಕತ್ತಾ ಬೊಂಬಾಯಿ ಹೈಕೋರ್ಟುಗಳವರು ಆಕ್ಷೇಪಣೆ ಮಾಡಲಿಲ್ಲ. ಅಲಹಾಬಾದು ಹೈಕೋರ್ಟಿನವರು ಅನುಕೂಲರಾಗಿದ್ದಾರೆ. ಮಧ್ಯಪ್ರಾಂತದ ಕಮಿಷನರು ಸುಮುಖರಾಗಿದ್ದಾರೆ. ಮದ್ರಾಸು ಹೈಕೋರ್ಟಿನ ೭ ಮಂದಿ ಜಡ್ಜಿಗಳು ಅಭಿಪ್ರಾಯವನ್ನೇ ಕೊಡಲಿಲ್ಲ. ಜಸ್ಟಿಸ್ ಕುಮಾರಸ್ವಾಮಿಶಾಸ್ತ್ರಿಯವರು ಪ್ರತಿಕೂಲರಾಗಿಯೂ ಜಸ್ಟಿಸ್ ಸದಾಶಿವಯ್ಯರು ಸುಮುಖರಾಗಿಯೂ ಇದ್ದಾರೆ. ಬರ್ಮಾ, ಅಜ್ಮೀರು, ಕೋರ್ಟುಗಳವರು ಸುಮುಖರಾಗಿದ್ದಾರೆ. ಹಿಂದುಗಳಲ್ಲಿ ಬಹುಜನರು ಅನುಕೂಲಾಭಿಪ್ರಾಯವುಳ್ಳವರಾಗಿದ್ದಾರೆ ಹಿಂದೂಗಳಲ್ಲಿ ಬ್ರಾಹ್ಮಣರ ಹೊರತು ಇತರರೆಲ್ಲಾ ಸುಮುಖರಾಗಿಯೇ ಇದ್ದಾರೆ. ಬ್ರಾಹ್ಮಣರು ವ್ಯತಿರೇಕವಾಗಿದ್ದ ಮಾತ್ರದಿಂದಲೇ ಹಿಂದುಗಳೆಲ್ಲಾ ಹಾಗೆಯೇ ಇರುವರೆಂದು ಭಾವಿಸುವುದು ತಪ್ಪು. ಬ್ರಾಹ್ಮಣರಲ್ಲು ಕೂಡ ವಿದ್ಯಾವಂತರಾದನೇಕರು ಇದಕ್ಕೆ ಅನುಕೂಲರಾಗಿಯೇ ಇದ್ದಾರೆ. ಇದು ಶಾಸನವಾಗುವುದರಿಂದ ವರ್ಣಾಂತರ ವಿವಾಹಕ್ಕೆ ಹಿಂದುಗಳನ್ನೆಲ್ಲಾ ನಿರ್ಬಂಧಪಡಿಸುವುದೇನೂ ಇಲ್ಲ. ಇಷ್ಟವಿದ್ದವರು ಅಂಥ ವಿವಾಹವನ್ನು ಮಾಡಿಕೊಳ್ಳಲಿಕ್ಕೆ ಇದರಿಂದ ಸ್ವಾತಂತ್ರ್ಯವುಂಟಾಗುತ್ತದೆ" ಎಂದು ಹೇಳಿ ಈ ಬಿಲ್ಲನ್ನು ಪ್ರತ್ಯೇಕವಾದ ಒಂದು ಉಪಸಂಘದವರ ವಿಚಾರಕ್ಕೆ ಬಿಡಬಹುದೆಂದು ಸೂಚಿಸಿ ಆ ಸಂಘದ ಸಭಿಕರುಗಳ ಹೆಸರನ್ನು ಅವರು ವಿವರಿಸಿದರು. ಅದರ ಮೇಲೆ ವಿಶೇಷವಾಗಿ ವಾದೋಪವಾದಗಳು ನಡೆದುವು. ಕಾಶಿಂಬಜಾರು ಮಹಾರಾಜರು-ಈ ಬಿಲ್ಲು ಹಿಂದೂಧರ್ಮಕ್ಕೆ ವಿರುದ್ಧವಾದುದೆಂಬುದಾಗಿಯೂ, ನಿರರ್ಥಕವಾದುದೆಂಬುದಾಗಿಯೂ, ಇದು ಶಾಸನವಾದರೆ ಹಿಂದೂ ಆಚಾರವು ವಿಪರೀತವಾಗಿ ಮಾರ್ಪಟ್ಟು ಹೋಗುವುದೆಂಬುದಾಗಿಯೂ ಹೇಳಿ ಖಂಡಿಸಿದರು. ರಾಜಾ ರಾಮಪಾಲ್‌ಸಿಂಗ್‌ರವರು-ಇದು ಹಿಂದುಗಳ ಮನಸ್ಸನ್ನೆಲ್ಲಾ ಅತ್ಯಂತವಾಗಿ ನೋಯಿಸುವುದೆಂಬುದಾಗಿಯೂ, ಅದುಕಾರಣ ಮುಂದೆ ೧ ವರ್ಷದೊಳಗೆ ನೂತನ ಶಾಸನಸಭೆಯು ಏರ್ಪಡುವುದಾಗಿರುವುದರಿಂದ ಅದರಲ್ಲಿ ಇದರ ಚರ್ಚೆಯನ್ನು ಮಾಡಬಹುದಾದ ಕಾರಣ ಈಗ್ಗೆ ನಿಲ್ಲಿಸಬಿಡಬೇಕೆಂಬುದಾಗಿಯೂ ಹೇಳಿ ಪ್ರತಿಷೇಧಿಸಿದರು. ಅ|| ಶರ್ಮರವರು ಇದಕ್ಕೆ ಅನುಕೂಲ ಪ್ರತಿಕೂಲ ಭಾವವೆರಡನ್ನೂ ಖಂಡಿತವಾಗಿ ತಿಳಿಯಿಸದೆ, ಈ ಮಧ್ಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ವಿಷಯವನ್ನು ಪಟೇಲರು ಇದಕ್ಕೆ ಸಂಬಂಧಿಸಿ ಬ್ರಾಹ್ಮಣರೆಲ್ಲಾ ಇದಕ್ಕೆ ವಿಮುಖರೆಂದು ದೂರಿದುದಕ್ಕಾಗಿ ತಮಗೆ ಸಂತಾಪವಾಯಿತೆಂದು ಹೇಳಿದರು. ಅ|| ಸುರೇಂದ್ರನಾಥ ಬಾನರ್ಜಿಯವರು-ಈ ಬಿಲ್ಲಿನ ಉಪಪಾದನೆಯ ಸಮಯದಲ್ಲಿ ಬ್ರಾಹ್ಮಣಾಬ್ರಾಹ್ಮಣ ಭೇದವನ್ನು ತೋರಿಸಿ ಪಟೇಲರು ಬ್ರಾಹ್ಮಣದ್ವೇಷವನ್ನು ತುಂಬಿರುವ ಉಪನ್ಯಾಸಮಾಡಿದರೆಂದು ಅದನ್ನು ನಿಷೇಧಿಸಿದುದಲ್ಲದೆ, ಭರತಖಂಡದ ಚರಿತ್ರೆಯನ್ನು ನೋಡಿದರೆ ಬ್ರಾಹ್ಮಣರೇ ಮತಾಚಾರ ರಕ್ಷಣೆಯ ಭಾರವನ್ನು ಉದ್ದಕ್ಕೂ ವಹಿಸಿಕೊಂಡು ಬಂದಿರುವುದು ವ್ಯಕ್ತವಾಗುವುದೆಂಬುದಾಗಿಯೂ, ಇಂಗ್ಲೀಷರ ಆಧಿಪತ್ಯವು ಬಂದ ಮೇಲೂ ಕೂಡ ಅವರು ಆ ತಮ್ಮ ಸಂಪ್ರದಾಯವನ್ನು ಕಾಪಾಡಿಕೊಂಡು ಬಂದಿರುವರೆಂಬುದಕ್ಕೆ ರಾಜಾರಾಮಮೋಹನರಾಯಿ, ಈಶ್ವರಚಂದ್ರವಿದ್ಯಾಸಾಗರ, ಮಹರ್ಷಿದೇವೇಂದ್ರನಾಥ ಠಾಕೂರ್, ಸ್ವಾಮಿದಯಾನಂದ-ಈ ಬ್ರಾಹ್ಮಣಶ್ರೇಷ್ಠರ ಚರಿತ್ರೆಯೇ ನಿದರ್ಶನವೆಂತಲೂ ಹೇಳಿದರೇ ಹೊರತು ಬಿಲ್ಲಿನ ಉದ್ದೇಶಕ್ಕೆ ಅವರೇನೂ ಪ್ರತಿಭಟಿಸಲಿಲ್ಲ. ಇದರಿಂದ ಹಿಂದೂವಿವಾಹ ಸ್ವಭಾವಕ್ಕೂ ಆಚಾರಗಳ ಕಟ್ಟುನಿಟ್ಟಿಗೂ ಯಾವ ಭಂಗವೂ ಉಂಟಾಗುವದಿಲ್ಲವೆಂದೂ, ಕಾಲಸ್ಥಿತಿಗನುಸಾರವಾಗಿ ಸಮಯಾಚಾರಗಳು ಪರಿಷ್ಕಾರಗೊಳ್ಳಬೇಕಾದುದೂ ಮಾನವಜೀವಿತವು ಸುಧಾರಿಸಿಕೊಳ್ಳಬೇಕಾದುದೂ ವಿಹಿತವೆಂದೂ, ಸಾಂಘಿಕಾಭಿವೃದ್ಧಿಯಾಗದಿದ್ದರೆ ರಾಜಕೀಯಾಭಿವೃದ್ಧಿಯು ಆಗುವುದಿಲ್ಲವೆಂದೂ, ಈ ಬಿಲ್ಲು ಆವೆರಡು ತೆರದ ಅಭಿವೃದ್ಧಿಗೂ ಸಾಧಕವೆಂದೂ, ಆದರೆ ಇದರಿಂದ ಉಂಟಾಗತಕ್ಕ ಹಕ್ಕುಬಾಧ್ಯತೆಗಳ ವಿಷಯಕವಾದ ಸಮಸ್ಯೆಯನ್ನು ಸೆಲೆಕ್ಟ್‌ಕಮಿಟಿಯವರು ಜಾಗರೂಕತೆಯಿಂದ ಆಲೋಚಿಸಿ ತಕ್ಕ ಸುಧಾರಣೆ ಮಾಡಬೇಕೆಂದೂ ಹೇಳಿ, ಬಿಲ್ಲಿನ ಸೂಚನೆಯನ್ನು ತಾವು ಪುಷ್ಟೀಕರಿಸಿದರು. ಆ ಮಧ್ಯೆ ಸಭೆಯೊಳಗೆ ಬ್ರಾಹ್ಮಣ ಬ್ರಾಹ್ಮಣೇತರ ವಿಷಯಕವಾದ ಚರ್ಚೆಯು ಎಷ್ಟೋ ನಡೆದಿತು.

ಸಭಾಧ್ಯಕ್ಷರಾಗಿದ್ದ ಸರ್ ಜಾರ್ಜ್ ಲೌಂಡೆಸ್‌ರವರು-ಈ ಬ್ರಾಹ್ಮಣ ಬ್ರಾಹ್ಮಣೇತರ ಚರ್ಚೆಯು ಇಷ್ಟು ದೂರ ನಡೆದುದೇ ಸಾಕು ಎಂದು ಹೇಳಿ ನಿಲ್ಲಿಸಿಬಿಟ್ಟರು. ಅ|| ಶ್ರೀನಿವಾಸಶಾಸ್ತ್ರಿಯವರು-ಈ ಬಿಲ್ಲಿನಿಂದ ಹಿಂದೂಮತ ಜಾತಿಗಳಿಗೆ ಯಾವ ಉಪಹತಿಯೂ ತಟ್ಟುವುದಿಲ್ಲವೆಂದು ಹೇಳಿ ಅನುಕೂಲಾಭಿಪ್ರಾಯ ಕೊಟ್ಟರು. ಸೆಲೆಕ್ಟ್ ಕಮಿಟಿಗೆ ಒಪ್ಪಿಸಬಹುದೆಂದೂ ಹೇಳಿದರು. ಸರ್ ಉಮ್ಮರ್‌ಹಯಾತ್‌ಖಾನರು—ಇದು ಹಿಂದುಗಳಿಗೆ ಮಾತ್ರವೇ ಸಂಬಂಧಪಟ್ಟ ವಿಷಯವಾದುದರಿಂದ ಸೆಲೆಕ್ಟ್‌ಕಮಿಟಿಯಲ್ಲಿ ಮಹಮ್ಮದೀಯ ಸಭಿಕರು ಇರಕೂಡದು; ಢಕ್ಕಾ ವಿದ್ಯಾಪೀಠದ ಶಾಸನದ ಸಂದರ್ಭದಲ್ಲಿ ಹಿಂದೂಗಳು ಮಹಮ್ಮದೀಯರ ವಿಷಯದಲ್ಲಿ ಎಂಥ ಅಭಿಪ್ರಾಯವುಳ್ಳವರಾಗಿದ್ದಾರೆಂಬುದು ವ್ಯಕ್ತವಾಗಿದೆ. ಅದುಕಾರಣ ಮಹಮ್ಮದೀಯರು ಈ ಬಿಲ್ಲಿನ ಸಂಬಂಧದಲ್ಲಿ ಪ್ರವೇಶಗೊಳ್ಳಕೂಡದು ಎಂದರು. ಸರ್ ಗಂಗಾಧರ ಚಿಟ್ನಾವಿಸ್‌ರವರು-ಬಿಲ್ಲಿಗೆ ಅನುಕೂಲವಾಗಿ ಅಭಿಪ್ರಾಯಪಟ್ಟರು. ಅ|| ರಾಯಿಸೀತಾನಾಥರಾಯಿರವರು ಬಹು ಪ್ರಬಲವಾಗಿ ವಿರೋಧಿಸಿ, ಇದರಿಂದ ಹಿಂದೂಸಮಯಾಚಾರವೆಲ್ಲಾ ಕೆಟ್ಟುಹೋಗುವುದೆಂತಲೂ, ಒಂದು ವೇಳೆ ಇದು ಶಾಸನವಾಗಿ ಏರ್ಪಟ್ಟರೂ ಹಿಂದೂಜನಸಂಘವು ಇದನ್ನು ಅಂಗೀಕರಿಸುವುದಿಲ್ಲವೆಂತಲೂ, ಬಂಗಾಳಾದಲ್ಲಿ ಯಾರೂ ಇದನ್ನು ಅಂಗೀಕರಿಸುವುದಿಲ್ಲವೆಂತಲೂ ಹೇಳಿ ಖಂಡಿಸಿದರು. ಅ|| ಚಂದಾರವರು—ಹಿಂದೂಗಳ ಆಚಾರವನ್ನು ಕೆಡಿಸಬೇಕೆಂಬ ಉದ್ದೇಶದಿಂದ ಈ ಬಿಲ್ಲನ್ನು ತಂದಿರುವರೆಂದು ಯಾರೂ ಹೇಳಲಾರರು. ಇಂದೂರು ಮೊದಲಾದ ಸಂಸ್ಥಾನಗಳಲ್ಲಿ ಈ ಶಾಸನವು ಈ ಮೊದಲೇ ಏರ್ಪಟ್ಟಿರುವಾಗ ಸಾಮ್ರಾಜ್ಯಶಾಸನಸಭೆಯಲ್ಲಿ ಅಂಥ ಶಾಸನವು ಇನ್ನೂ ಆಗದಿರುವುದು ದುರದೃಷ್ಟವು. ಮುಖ್ಯವಾಗಿ ವಾರಸತ್ವವಿಷಯವಾಗಿ ಬಿಲ್ಲಿನಲ್ಲಿ ಸ್ಪಷ್ಟವಾದ ಸುಧಾರಣೆಯಾಗಬೇಕು. ಇಷ್ಟವುಳ್ಳವರು ವರ್ಣಾಂತರ ವಿವಾಹವನ್ನು ಮಾಡಿಕೊಳ್ಳಲಿಕ್ಕೂ, ಹಾಗೆ ಮಾಡಿಕೊಂಡವರನ್ನು ಇತರರು ಜಾತಿಭ್ರಷ್ಟರನ್ನಾಗಿ ಭಾವಿಸಿ ತೊಲಗಿಸಿದರೂ, ಅವರು ಆಸ್ತಿಯನ್ನು ಕಳೆದುಕೊಂಡು ಕೆಟ್ಟುಹೋಗದಂತೆ ಕಾಪಾಡುವುದಕ್ಕೂ ಇದರಿಂದ ಅವಕಾಶ ಸಿಕ್ಕುವಂತೆ ಮಾಡುವುದು ಪ್ರಭುತ್ವದವರಿಗೆ ಅವಶ್ಯಕವು ಎಂದು ಹೇಳಿ ಪುಷ್ಟೀಕರಿಸಿದರು. ಅ|| ಕಪರ್ದೆಯವರು-ಈ ಬಿಲ್ಲು ಶಾಸನವಾಗುವುದರಿಂದ ಹಿಂದೂವಿವಾಹ ಪಾವಿತ್ರ್ಯಕ್ಕಾಗಲಿ ವರ್ಣಭೇದದಾರ್ಢ್ಯಕ್ಕಾಗಲಿ ಯಾವ ಭಂಗವೂ ಉಂಟಾಗುವುದಿಲ್ಲ. ಇದುವರೆಗೆ ದೇಶದಲ್ಲಿ ಅಲ್ಲಲ್ಲಿ ಆಚರಣೆಯಲ್ಲಿರುವ ಪದ್ಧತಿಗೆ ಶಾಸನರೂಪವನ್ನು ಕಲ್ಪಿಸುವುದೇ ಈ ಬಿಲ್ಲಿನ ಉದ್ದೇಶವಾಗಿದೆ. ಅಂಥ ವರ್ಣಾಂತರ ವಿವಾಹವನ್ನು ಈಗಾಗಲೇ ಮಾಡಿಕೊಂಡು ತೊಂದರೆ ಪಡುತ್ತಿರುವವರ ಕ್ಷೇಮಕ್ಕೆ ಭಂಗಬರದಂತೆ ಇದು ಕಾಪಾಡುತ್ತದೆ ಎಂದು ಹೇಳಿ ಸಮರ್ಥಿಸಿದರು. ಅ|| ಸರ್ದಾರ್ ಸುಂದರಸಿಂಗ್‌ರವರು—ಇಂಥ ಶಾಸನವು ಎಂದಿಗಾದೀತೋ ಎಂದು ನಾನು ಇದಿರುನೋಡುತ್ತಿದ್ದೆನು. ಹಿಂದೂ ಸಂಘದಲ್ಲಿರುವ ಜಾತಿಭೇದ ಶೃಂಖಲೆಯನ್ನು ಚೆನ್ನಾಗಿ ಸಡಿಲಗೊಳಿಸುವುದಕ್ಕೆ ಇಂಥ ಶಾಸನವು ಬಹು ಸಹಾಯಕಾರಿಯಾಗುವುದು. ಅದುಕಾರಣ ಇದಕ್ಕೆ ನಾನು ಅನುಮೋದಿಸುತ್ತೇನೆ. ಸಿಕ್ ಜನರೆಲ್ಲಾ ಇದಕ್ಕೆ ಒಪ್ಪುತ್ತಾರೆ. ಎಂದರು. ಅ|| ರಂಗಸ್ವಾಮಯ್ಯಂಗಾರರು—ಇಂಥ ವರ್ಣಾಂತರ ವಿವಾಹವನ್ನು ಮನುವು ಒಪ್ಪಿಲ್ಲವಾದುದರಿಂದ ಪ್ರಭುತ್ವದವರು ಇಂಥ ಬಿಲ್ಲನ್ನು ಶಾಸನಗೊಳಿಸುವುದು ಅನ್ಯಾಯವೆಂದು ಖಂಡಿಸಿದರು. ಸರ್ ಪಜುಲ್ಭಾಯಿ ಕರೀಂಭಾಯಿಯವರು-ಮುಖ್ಯವಾಗಿ ಹಿಂದೂಗಳಿಗೆ ಸಂಬಂಧಿಸಿದ ಈ ಬಿಲ್ಲಿನ ವಿಷಯದಲ್ಲಿ ಅವರೊಳಗೇ ಭಿನ್ನಾಭಿಪ್ರಾಯವುಂಟಾಗಿರುವಾಗ ನಾನು ಇದರಲ್ಲಿ ಪ್ರವೇಶಿಸುವುದು ಸರಿಯಲ್ಲ. ವಾರಸತ್ವ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿಯೇ ಇಲ್ಲ. ಅದುಕಾರಣ ಬಿಲ್ಲು ಪರಿಪೂರ್ಣವಾಗಿಲ್ಲವೆಂದು ನನ್ನ ಅಭಿಪ್ರಾಯ ಎಂದರು. ಕಡೆಗೆ ಅ|| ಸಿಹ್ಮಾರವರು—ದೊಡ್ಡ ಉಪನ್ಯಾಸ ಮಾಡಿ "ರಾಯಿಸೀತಾನಾಥರಾಯಿರವರು ಈ ಬಿಲ್ಲನ್ನು ಓಡಿಸಿಬಿಡಬೇಕೆಂದು ಎಷ್ಟೋ ಪ್ರಯತ್ನಪಟ್ಟು ವಿಫಲರಾದರು. ಬಂಗಾಳಾದಲ್ಲಿ ಇದನ್ನು ಯಾರೂ ಒಪ್ಪುವುದಿಲ್ಲವೆಂದು ಅವರಾಡಿದ ಮಾತು ಸರಿಯಲ್ಲ. ಕಳೆದ ೩೦ ವರ್ಷಗಳಿಂದ ಬಂಗಾಳಾವಿಗೂ, ಭರತಖಂಡವೆಲ್ಲಕ್ಕೂ ದೊಡ್ಡಬ್ರಾಹ್ಮಣ ರಾಜಕೀಯ ನಾಯಕರಾಗಿರುವ ಸುರೇಂದ್ರನಾಥ ಬಾನರ್ಜಿಯವರು ಅನಾಮಧೇಯರೆ? ರಾಯಿಸೀತಾನಾಥರೂ, ಕಾಶಿಂಬಜಾರು ಮಹಾರಾಜರೂ ಆಡಿದ ಮಾತುಗಳಂಥ ಮಾತುಗಳನ್ನು ಈ ಸಭೆಯವರು ಕೇಳುವ ಕಾಲವೆಲ್ಲಾ ಹೋಯಿತು. ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿದರೆ ಅ|| ಶರ್ಮರವರು ಮಾಡಿದ ಸೂಚನೆಗಳಂಥ ಹಲವುಗಳನ್ನು ಬಿಲ್ಲಿನಲ್ಲಿ ಸೇರಿಸುವುದಕ್ಕೆ ಅವಕಾಶವಾಗುವುದು. ರಂಗಸ್ವಾಮಯ್ಯಂಗಾರರು ಈ ಬಿಲ್ಲಿಗೆ ವಿರೋಧಿಸಿದರು. ಆದರೆ 'ರಾಜಕೀಯ ವಿಷಯದಲ್ಲಿ ಮಾತ್ರ ಮಾರ್ಪುಗಳಾಗಬೇಕು, ಉಳಿದ ವಿಷಯಗಳಲ್ಲಿ ಯಾವ ಮಾರ್ಪನ್ನೂ ಮಾಡಕೂಡದು' ಎಂದು ಹೇಳುವ ಸ್ವರಾಜ್ಯವಾದಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ಪ್ರಭುತ್ವದವರ ಅಧಿಕಾರಗಳನ್ನು ತೊಲಗಿಸಿಬಿಡಬೇಕೆಂದು ಪ್ರಯತ್ನಿಸುವುದರಲ್ಲಿ ಈ ಅಯ್ಯಂಗಾರರು ಮೊಟ್ಟಮೊದಲನೆ ನಾಯಕರಾಗಿರುವರು. ಆದರೆ ತಮ್ಮ ಸ್ವದೇಶೀಯರಿಗೆ ಕೆಲವು ಸ್ವತ್ವಗಳನ್ನು ಕೊಡುವುದಕ್ಕೆ ಮಾತ್ರ ಇವರು ಅಂಗೀಕರಿಸಲಾರರು ನೋಡಿರಿ" ಎಂದು ಚುಚ್ಚುವಂಥ ಮಾತುಗಳನ್ನಾಡಿದರು. ಆಗ ಕಪರ್ದೆಯವರು ಎದ್ದು-ಸಭೆಯಲ್ಲಿ ಹೀಗೆ ವ್ಯಕ್ತಿಗಳ ಸ್ವವಿಷಯವನ್ನು ಕುರಿತು ವಿಮರ್ಶೆ ಮಾಡಬಹುದೆ? ಎಂದು ಕೇಳಲು, ಸಭಾಧ್ಯಕ್ಷರಾಗಿದ್ದ ಸರ್ ಜಾರ್ಜ್‌ಲೌಂಡೆಸ್‌ರವರು ಆಗಬಹುದೆಂದು ಉತ್ತರ ಕೊಟ್ಟರು. ಅಷ್ಟರಲ್ಲಿ ಸಿಹ್ಮರವರು ತಮ್ಮ ಉಪನ್ಯಾಸವನ್ನು ಮುಗಿಸುವುದಕ್ಕೆ ತೊಡಗಿ ಬಿಲ್ಲನ್ನು ಎಲ್ಲರೂ ಅಂಗೀಕರಿಸಬಹುದೆಂತಲೂ, ಇಂಥ ಸಂಸ್ಕರಣವು ಎಷ್ಟೋ ಕಾಲಕ್ಕೆ ಹಿಂದೆಯೇ ಆಗಬೇಕಾಗಿದ್ದಿತೆಂತಲೂ ಹೇಳಿದರು. ಮಹಮ್ಮದೀಯರನ್ನು ಸೆಲೆಕ್ಟ್ ಕಮಿಟಿಯಲ್ಲಿ ಸಭಿಕರನ್ನಾಗಿ ಸೇರಿಸಕೂಡದೆಂದು ನವಾಬ್ ಅಲಿಚೌಧರಿಯವರು ಕಠಿನವಾಗಿ ನುಡಿದರು.

ಅಧಿಕಾರಿ ಸಭಿಕರಾದ ಸರ್ ವಿಲಿಯಂವಿನ್ಸೆಂಟರು ಕಡೆಗೆ ಪ್ರಭುತ್ವಾಭಿಪ್ರಾಯವನ್ನು ಹೀಗೆ ಹೇಳಿದರು—ಈ ಬಿಲ್ಲನ್ನು ಪ್ರವೇಶಗೊಳಿಸುವುದರಲ್ಲಿ ಇದು ಯಾರಿಗೆ ಮುಖ್ಯವಾಗಿ ಸಂಬಂಧಿಸುವುದೋ ಅವರುಗಳ ಅಭಿಪ್ರಾಯಾನುಸಾರವಾಗಿ ಪ್ರಭುತ್ವದವರು ನಡೆದುಕೊಳ್ಳುವವರಾಗಿದ್ದಾರೆ. ಸ್ವಾತಂತ್ರ್ಯಪ್ರದವೂ ನ್ಯಾಯಾನುಸಾರವೂ ಆದ ಶಾಸನವನ್ನು ಕೇವಲ ಅಧಿಕಾರ ಸಭಿಕರ ಮತಾಧಿಕ್ಯ ಬಲದಿಂದ ಓಡಿಸಿಬಿಡಬಾರದೆಂಬುದು ಅಧಿಕಾರ ಸಭಿಕರುಗಳ ಉದ್ದೇಶವು. ಅಷ್ಟೇಹೊರತು ಹೆಚ್ಚುಮಂದಿ ಪ್ರಜೆಗಳು ಅಂಗೀಕರಿಸದಿರುವ ಶಾಸನವನ್ನು, ಅದರಿಂದ ತಮ್ಮ ಸಾಂಘಿಕಾಚಾರಗಳಿಗೆ ಭಂಗವಾಗುವುದೆಂದು ಅವರು ತಿಳಿಯುವಾಗ ಬಲವಂತವಾಗಿ ಅಂಥ ಬಿಲ್ಲನ್ನು ಪ್ರವೇಶಗೊಳಿಸಬಾರದೆಂಬುದೂ ಕೂಡ ಪ್ರಭುತ್ವದವರ ಉದ್ದೇಶವಾಗಿದೆ. ಮಹಮ್ಮದೀಯ ಸಭಿಕರು ಸೆಲೆಕ್ಟ್ ಕಮಿಟಿಯಲ್ಲಿ ಸೇರುವುದಿಲ್ಲವೆಂದು ನಿರಾಕರಿಸಿದುದಕ್ಕಾಗಿ ಪ್ರಭುತ್ವದವರು ಚಿಂತೆಪಡುತ್ತಾರೆ. ಆದರೂ ಅವರು ಕಮಿಟಿಯಲ್ಲಿ ಇದ್ದೇ ತೀರಬೇಕೆಂದಾಗಲಿ ಬೇಡವೆಂದಾಗಲಿ ಯಾರೂ ಒತ್ತಿಹೇಳಲಾರರು. ಸೀತಾನಾಥರಾಯಿಯವರು ಹೇಳಿದಂತೆ ಪ್ರಜೆಗಳ ವಿಮರ್ಶೆಗೋಸ್ಕರ ಪ್ರಕಟಿಸಬೇಕೆಂದರೂ ಸರ್ಕಾರದವರು ಅದಕ್ಕೆ ಆತಂಕವನ್ನು ಹೇಳುವುದಿಲ್ಲ" ಎಂದು ದೆಹಳೀದೀಪನ್ಯಾಯದ ಮಾತುಗಳನ್ನು ಆಡಿ ಮುಗಿಸಿದರು. ಕಡೆಗೆ ಅ|| ಪಟೇಲರು ಎಲ್ಲರ ವಾದಗಳಿಗೂ ಪ್ರತ್ಯುತ್ತರ ರೂಪವಾಗಿ ಒಂದು ಭಾಷಣವನ್ನು ಮಾಡಿ, ಬಿಲ್ಲನ್ನು ಬಲಪಡಿಸಿದವರಿಗೆಲ್ಲ ತಮ್ಮ ಕೃತಜ್ಞತೆಯನ್ನು ತಿಳಿಯಿಸಿದುದಲ್ಲದೆ, ಇದಕ್ಕೆ ಬ್ರಾಹ್ಮಣರು ಮಾತ್ರ ಆತಂಕಪಡಿಸುವರೆಂದು ತಾನು ತಪ್ಪುಮಾತಾಡಿದೆನೆಂದು ಹೇಳಿ ಅವರುಗಳನ್ನು ಸಮಾಧಾನಪಡಿಸಿ, ಶರ್ಮರವರೇ ಮೊದಲಾದವರು ಮಾಡಿದ ಸೂಚನೆಗಳ ಪ್ರಕಾರ ಸೆಲೆಕ್ಟ್ ಕಮಿಟಿಯಲ್ಲಿ ಸುಧಾರಣೆಗಳನ್ನು ಮಾಡಬಹುದೆಂದು ಹೇಳಿ, ಮುಂದೆ ಪ್ರಭುತ್ವದವರು ಬಾಧ್ಯತಾಯುತ ಪ್ರಭುತ್ವವನ್ನು ಭರತಖಂಡದಲ್ಲಿ ಸ್ಥಾಪಿಸುವವರಾಗಿದ್ದಾರೆ; ನಾನಾ ಜಾತಿಮತಭೇದಗಳು ಅದಕ್ಕೆ ಆತಂಕಕರವಾಗಿರುವುದೆಂದು ಅವರು ಹೇಳುತ್ತಾರೆ; ಅದುಕಾರಣ ಅಂಥ ಆತಂಕಗಳನ್ನು ಕ್ರಮೇಣ ತೊಲಗಿಸುವುದಕ್ಕೆ ಸಹಾಯಗೊಳಿಸುವುದು ಪ್ರಭುತ್ವದವರ ಧರ್ಮವಾಗಿರುತ್ತದೆ ಎಂದು ಹೇಳಿ, ಸರ್ ವಿನ್ಸೆಂಟರ ಸಂವರಣೆಗೆ ತಾವು ಅಂಗೀಕರಿಸಿದರು.

ಹೀಗೆ ಈ ಬಿಲ್ಲಿನ ಕಥಾಂತರವೆಲ್ಲಾ ಮುಗಿದು, ಅದು ಸೆಲೆಕ್ಟ್ ಕಮಿಟಿಯವರ ವಶಕ್ಕೆ ಕಳುಹಿಸಲ್ಪಟ್ಟಿತು. ಅವರು ಇದಕ್ಕೆ ನ್ಯೂನವಾಗಿರುವ ಅಂಶಗಳನ್ನೆಲ್ಲಾ ತುಂಬಿ ಸಂಪೂರ್ಣಗೊಳಿಸುವರೆಂಬುದರಲ್ಲೂ, ಮುಂದೆ ಇದು ಶಾಸನವಾಗಿ ಏರ್ಪಡುವುದೆಂಬುದರಲ್ಲೂ ಸಂಶಯವು ಕಾಣುವುದಿಲ್ಲ. ನಡೆದ ವಿಚಾರಗಳನ್ನೆಲ್ಲಾ ಪರ್ಯಾಲೋಚಿಸಿದರೆ ಜಾತಿಮತಭೇದಾದಿಗಳ ಕಟ್ಟುಗಳು ಶಿಥಿಲವಾದರೆ ದೇಶಕ್ಕೆ ಕ್ಷೇಮಕರವೆಂದು ತಿಳಿದಿರುವವರುಗಳೇ ಸಾಮ್ರಾಜ್ಯಶಾಸನ ಸಭೆಯಲ್ಲಿ ಹೆಚ್ಚುಮಂದಿಗಳಿರುವುದರಿಂದ, ಬಿಲ್ಲಿಗೆ ಪ್ರತಿಕೂಲತೆಯು ಕಡಿಮೆಯಾಯಿತೆಂದು ತೋರುವುದು. ಬಿಲ್ಲನ್ನು ಪ್ರವೇಶಗೊಳಿಸಿದ ಅ|| ಪಟೇಲರೇ ಇದು ವರ್ಣವಿಭೇದಾದಿಗಳ ಶಿಥಿಲತೆಗೆ ಸಹಾಯಗೊಳಿಸುವುದೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಹಾಗಾಗುವುದು ಅವಶ್ಯಕವೆಂದು ಇನ್ನು ಕೆಲರೂ ನುಡಿದಿದ್ದಾರೆ. ಹೀಗಿದ್ದೂ ವರ್ಣಾಶ್ರಮಾಚಾರಗಳ ಕಟ್ಟುನಿಟ್ಟಿಗೂ, ವಿವಾಹಪಾವಿತ್ರ್ಯಕ್ಕೂ ಇದರಿಂದ ಬಾಧಕವಾಗುವುದಿಲ್ಲವೆಂದು ಅವರುಗಳೇ ವಾದಿಸುವುದರಲ್ಲಿ ಎಷ್ಟುಮಟ್ಟಿಗೆ ಸತ್ಯವಿರುವುದೋ ನಾವರಿಯೆವು ಕೆರೆಯ ಕಟ್ಟೆಯಲ್ಲಿ ಒಂದುಮೋರಿಯನ್ನು ವಿಳಿಸಿದರೂ ಏರಿಯನ್ನು ಕಿತ್ತುಹಾಕಿದ ದೋಷವೇನೂ ಬರುವುದಿಲ್ಲವೆಂಬ ವಾದಕ್ಕೆ ಇದು ಸರಿಯಾಗಿದೆ. ಒಬ್ಬ ಬ್ರಾಹ್ಮಣಿತಿಯು ಒಬ್ಬ ಅಗಸನನ್ನೂ, ಒಬ್ಬ ಲಿಂಗವಂತನು ಒಬ್ಬ ಮೋಚಿಯವಳನ್ನೂ, ಒಬ್ಬ ಗೊಲ್ಲನು ಒಬ್ಬ ಕೋಮಟಗಿತ್ತಿಯನ್ನೂ, ಒಬ್ಬ ಬ್ರಾಹ್ಮಣನು ಒಬ್ಬ ನಾಯಿಂದರವಳನ್ನೂ ಮೋಹಿಸಿದರೆ, ಪರಸ್ಪರ ವಿವಾಹವನ್ನು ಮಾಡಿಕೊಳ್ಳಲು ಯಾವ ಪ್ರತಿಬಂಧಕವೂ ಭಯವೂ ಇಲ್ಲದಂತೆ ಈ ಶಾಸನವು ಮಾಡುವುದು. ಸರ್ ಕೃಷ್ಣಮೂರ್ತಿಗಳ ಕಾಲದಲ್ಲಿ ಕ್ರೈಸ್ತರು ಮತಭ್ರಷ್ಟರಿಗೆ ದಾಯಾದಸ್ವತ್ವವನ್ನುಂಟುಮಾಡಬೇಕೆಂದು ಪ್ರಯತ್ನಿಸಿದ್ದ ಶಾಸನಕ್ಕೂ ಇದಕ್ಕೂ ಇರುವ ಭೇದವು ಸ್ವಲ್ಪವೇ. ಸೆಲೆಕ್ಟ್ ಕಮಿಟಿಯವರು ದಾಯಾದಸ್ವತ್ವ ಸಂಬಂಧವನ್ನು ಇದಕ್ಕೆ ಸೇರಿಸದೆ ಬಿಟ್ಟುಬಿಟ್ಟರೆ ಮಾತ್ರ ಈ ಶಾಸನದ ಅನರ್ಥವ್ಯಾಪನೆಯು ಸ್ವಲ್ಪ ಕಡಮೆಯಾದೀತು.

ಪಶ್ಚಿಮದೇಶೀಯರ ಸ್ವಾತಂತ್ರ್ಯವಾಸನೆಗಳು ಈಗಾಗಲೇ ನಮ್ಮ ಯುವಕರಲ್ಲೂ ಯುವತಿಯರಲ್ಲೂ ಅಲ್ಪ ಸ್ವಲ್ಪ ವ್ಯಾಪಿಸಿರುವುದರಿಂದಲೇ ಸಂಘದಲ್ಲಿ ದುಸ್ಸಹವಾದ ವಿಕಾರಗಳುಂಟಾಗಿವೆ. ಇನ್ನು ವರ್ಣಾಂತರವಿವಾಹವು ಶಾಸನಬದ್ಧವಾಗಿಬಿಟ್ಟ ಮೇಲೆ ಪರಿಶುದ್ಧಾಶ್ರಮಗಳಂತಿದ್ದ ಶ್ರೋತ್ರಿಯಗೃಹಗಳ ಸದಾಚಾರವು ಎಷ್ಟುಮಟ್ಟಿಗುಳಿಯುವುದೋ ಹೇಳಬೇಕಾಗಿಲ್ಲ. ವರ್ಣಾಂತರ ದೇಹಸಂಬಂಧವನ್ನುಂಟುಮಾಡುವ ಶಾಸನಗಳಂಥವುಗಳೇ ಹುಟ್ಟುವಹೊತ್ತು ಭರತಖಂಡದಲ್ಲಿ ಪ್ರಾಪ್ತವಾಗಿರುವಾಗ, ಪಂಚಮರು ಅಸ್ಪೃಶ್ಯರೆಂದೂ ಅವರನ್ನು ನಮ್ಮ ಶಾಲೆಗಳಿಗೆ ಸೇರಿಸಿಕೊಳ್ಳಕೂಡದೆಂದೂ ನಾವು ತೊಡುವ ಹಠವು ಊರ್ಜಿತವಾಗುವ ಕಾಲವು ಉಳಿದಿದೆಯೆ? "ಕಾಲಾಯತಸ್ಮೈ ನಮಃ."

ಕರ್ಣಾಟಕ ರಾಮಾಯಣಸಂಗ್ರಹ.

ಭಾಮಿನೀಷಟ್ಪದೀರೂಪವಾಗಿ ರಚಿಸಲ್ಪಟ್ಟಿರುವ ಈ ಗ್ರಂಥವು ೬ ಕಾಂಡಗಳಿಂದ ೧೮೭೭ ಪದ್ಯಗಳನ್ನುಳ್ಳುದಾಗಿದೆ. ಪಾದಪಾದಕ್ಕೂ ಪ್ರತ್ಯೇಕ ಪಂಗ್ತಿಯಾಗಿ ಮುದ್ರಿಸಿರುವುದರಿಂದ ಗ್ರಂಥವು ಓದುವವರಿಗೆ ಅನುಕೂಲವಾಗಿ ೩೬೭ ಪುಟಗಳುಳ್ಳುದಾಗಿದೆ. ಇದರ ಬೆಲೆಯೆಷ್ಟೆಂಬುದನ್ನು ಗ್ರಂಥಕರ್ತರು ತಿಳಿಸಿಲ್ಲ. ಇದರ ಹೆಸರಿನಿಂದಲೇ ರಾಮಾಯಣಕಥೆಯನ್ನು ಸಂಗ್ರಹವಾಗಿ ಬರೆದ ಗ್ರಂಥವೆಂಬುದು ಗೊತ್ತಾಗುತ್ತದೆ ಮೈಸೂರು ಅರಮನೆಯ ಮುಜರಾಯಿ ಭಕ್ಷಿಯವರಾದ ಮ|| ಎಚ್ ಲಿಂಗರಾಜ ಅರಸಿನವರು ಇದನ್ನು ರಚಿಸಿದವರು. ಅವರು ೧೯೧೩ನೆ ವರ್ಷದಲ್ಲಿ ಈ ಗ್ರಂಥದ ಬಾಲಕಾಂಡವನ್ನು ಮಾತ್ರ ಶ್ರೀಮನ್ಮಹಾರಾಜರವರ ವರ್ಷ ವರ್ಧಂತಿಯ ಜ್ಞಾಪಕಾರ್ಥವಾಗಿ ರಚಿಸಿ ಒಪ್ಪಿಸಿದುದರಿಂದ, ಅವರು ಪರಾಮರಿಸಿ ಅದರ ಲಾಲಿತ್ಯವನ್ನು ಕಂಡು ಸಂತೋಷಿಸಿ, ಹೀಗೆಯೇ ರಾಮಾಯಣವನ್ನೆಲ್ಲಾ ಬರೆದು ಮುಗಿಸಿದರೆ ಅನುಕೂಲವಾಗುವುದೆಂದು ಪ್ರೋತ್ಸಾಹಿಸಿದಕಾರಣ ಇದನ್ನು ಸಾಂಗವಾಗಿ ರಚಿಸಿದಂತೆ ಗ್ರಂಥಕರ್ತರು ಪೀಠಿಕೆಯಲ್ಲಿ ತಿಳಿಯಿಸಿದ್ದಾರೆ. ಇದರ ಕವಿತೆಯು ಕೇವಲ ಲಲಿತವಾಗಿದೆ. ಬಲುಮಟ್ಟಿಗೂ ಶುದ್ಧವಾಗಿಯೇ ಇದೆ. ಕರ್ಣಾಟಕ ಭಾಷಾರತ್ನ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳು ಮೊದಲಾದ ಮೂವರು ಪಂಡಿತರು ಇದರಲ್ಲಿ ಕೈಹಾಕಿ ಪರಿಷ್ಕರಿಸಿರುವುದರಿಂದ ಪುಟಹಾಕಿದ ಚಿನ್ನದಂತೆ ಗ್ರಂಥದ ಉತ್ಕೃಷ್ಟತೆಯು ಹೆಚ್ಚಿದೆ ಪ್ರಾಸದ ತ್ರಾಸದಿಂದ ಕಷ್ಟಪಟ್ಟು ಸಂದರ್ಭೋಚಿತ ಭಾವಗಳಿಗೂ, ಭಾವೋಚಿತಗಳಾದ ಭಾಷೆಗಳಿಗೂ ಹ್ರಾಸವನ್ನುಂಟುಮಾಡಿಕೊಳ್ಳುವ ಲೋಪಗಳೂ, ಅನವಶ್ಯಕಗಳಾದ ಅವ್ಯಯಗಳ - ಚಿಂದಿ - ಗಳನ್ನು ತುಂಬಿ ಹೊಸೆಯುವ ದೋಷಗಳೂ ಬಹುಶಃ ಗ್ರಂಥದಲ್ಲಿ ಕಂಡುಬರುವುದಿಲ್ಲವಾದುದರಿಂದ ವರಕವಿತಾಸಂಪತ್ತು ಇದರಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಉದಾಹರಣೆಗಾಗಿ ಒಂದೆರಡು ಪದ್ಯಗಳನ್ನು ಇಲ್ಲಿ ಕೊಡುತ್ತೇವೆ—

ಮಂಜರನ ಮರಿಗಳಟಿಸರಸವೆ |
ಕುಂಜರೇಂದ್ರನೊಳಾಡಲೇಂ ಮೃ |
ತ್ಯುಂಜಯನ ಶಿಷ್ಯಂಗೆ ತನಗೆಲೆಸಾಟಿಯೇ ನೀನು ||
ನಂಜನುಂಬರೆ ಪಸಿವಿ ಗರಿತನ |
ರಂಜದಬಲಾವಧೆಗೆ ತಾಟಕೆ |
ಯಂ ಜಯಿಸಿ ದಬ್ಬರದ ಕೊಬ್ಬಿಂದುಬ್ಬಿ ನುಡಿದಪೆಯ ||
ಎಡದಕರದಿಂ ಸಿರಿಯಕೆಚ್ಚನು |
ಪಿಡಿದು ಸೆರಗನು ಬಲದಕರದಿಂ |
ದಡಿಗಡಿಗೆ ಸಾವಗಿಸುತೆಡಬಲಕಿಡದೆ ದಿಟ್ಟಿಯನು ||
ಅಡಿಯ ನೀಕ್ಷಿಪಳೆನಲು ಶಿರವನು |
ಬಿಡದೆ ಬಾಗಿಸಿ ತೂಗುತ್ಕೈದುವ |
ಬೆಡಗಿನಾನೆಯ ತೆರದೆ ಬಂದಳು ಸೀತೆಯೊಲವಿನಲಿ ||

ಶ್ಲಿಷ್ಟವಲ್ಲದ ಪದಬಂಧವುಳ್ಳುವಾದಕಾರಣ ಪದ್ಯಗಳು ವಾಚನ ಶ್ರವಣಗಳಿಗೆ ಸುಲಭವಾಗಿಯೂ ಇಂಪಾಗಿಯೂ ಇರುತ್ತ, ತರಂಗರಂಗದ ಮೇಲೆ ತೇಲುವ ತೆಪ್ಪದಂತೆ ಕಬಿತಾಶೈಲಿಯು ಸಾಗುತ್ತದೆ. ವಿಶೇಷ ರಸಜ್ಞರಂಜಕವಾದ ಪ್ರತಿಭಾಸಂಪತ್ತಿ ರಚನಾಸಂಪತ್ತಿಗಳಿಂದಲೂ ಶಬ್ದಾಲಂಕಾರಗಳಿಂದಲೂ ಇದು ಕೂಡಿಲ್ಲದಿದ್ದರೂ, ಕಳೆದ ೧ ಶತಮಾನದಲ್ಲಿ ಇಷ್ಟು ವಿಸ್ತಾರವಾಗಿಯೂ ಸರಳವಾಗಿಯೂ ಸುಬದ್ಧವಾಗಿಯೂ ಇರುವ ಷಟ್ಪದೀಕಾವ್ಯವಾವುದೂ ಹುಟ್ಟಿಲ್ಲವೆಂದೇ ಹೇಳಬಹುದು. ಶ್ರೀರಾಮಚರಿತವು ಎಷ್ಟುಮಂದಿಗಳಿಂದ ಎಷ್ಟುವಿಧವಾಗಿ ರಚಿಸಲ್ಪಟ್ಟರೂ ಓದುವವರಿಗೂ ಕೇಳುವವರಿಗೂ ಬೇಸರವನ್ನುಂಟುಮಾಡತಕ್ಕುದಲ್ಲ. ಅದರಲ್ಲಿ ನಿಸರ್ಗ ಕವಿತಾಪ್ರತಿಭೆಯಿಂದ ಆಯತ್ತವಾದ ಇಂಥ ಗ್ರಂಥವಿಷಯವನ್ನು ವರ್ಣಿಸುವುದೇನು? ಮ|| ಅರಸಿನವರು ದೈವಕೃಪಾಲಬ್ಧವಾದ ತಮ್ಮ ಕವಿತಾಶಕ್ತಿಯನ್ನು ಈ ಸದ್ಗ್ರಂಥರಚನೆಯಮೂಲಕ ಸಾರ್ಥಕಪಡಿಸಿದರು. ಅವರು ಇದೊಂದು ಹೊಸ ತೊಡವನ್ನು ಭಾಷಾಮಾತೆಯ ಕಂಠಕ್ಕಲಂಕರಿಸಿ ಭಾಷಾಸೇವಕರ ಸಂತೋಷಕ್ಕೂ ಕೃತಜ್ಞತೆಗೂ ಪಾತ್ರರಾದರು. ಮೈಸೂರು ರಾಜವಂಶದಲ್ಲಿ ಚಿಕ್ಕದೇವರಾಜ, ಚಾಮರಾಜ, ಸಂಜರಾಜ ಮೊದಲಾದ ಅನೇಕ ಮಂದಿಗಳು ಸ್ವತಃ ವಿದ್ವಾಂಸರಾಗಿಯೂ ಕವಿಗಳಾಗಿಯೂ ಅನೇಕ ಗದ್ಯ ಪದ್ಯ ಗ್ರಂಥಗಳನ್ನು ಹಿಂದೆ ರಚಿಸಿದ್ದಾರೆ. ಶ್ರೀ ಮುಮ್ಮಡಿ ಕೃಷ್ಣರಾಜರಂತೂ ಸಕಲವಿದ್ಯಾವಿಶಾರದರೂ ಎಷ್ಟೋ ಗ್ರಂಥಗಳ ನಿರ್ಮಾತೃಗಳೂ ಆಗಿದ್ದರು. ಅವರ ಕಾಲದಲ್ಲೇ ಇದ್ದ ಅಳಿಯಂದಿರು ಲಿಂಗರಾಜ ಅರಸಿನವರು ವಿಶೇಷ ರಸಿಕರಾಗಿ ಅನೇಕ ಕಾವ್ಯಗಳನ್ನು ಸುಮನೋಹರವಾಗಿ ಬರೆದಿರುವರು. ಕೈ|| ಚಾಮರಾಜಪ್ರಭುಗಳ ಕಾಲದಲ್ಲಿ ದರ್ಬಾರ್ ಭಕ್ಷಿಯವರಾಗಿದ್ದ ಮ|| ಹೆಚ್. ಲಿಂಗರಾಜ ಅರಸಿನವರು ಕೂಡ ಕವಿತಾಸಾಮರ್ಥ್ಯವನ್ನು ಪಡೆದು ಒಂದು ನಾಟಕವನ್ನು ರಚಿಸಿದ್ದರು. ಹೀಗೆ ಮೈಸೂರು ರಾಜರ ಬಂಧುವರ್ಗದಲ್ಲಿ ಪ್ರಾಚೀನವಾಗಿ ನಡೆದುಬಂದಿರುವ ಕವಿತಾಪ್ರಸಾದವನ್ನು ಈಗಣ ನಮ್ಮ ನಾಲ್ವಡಿ ಕೃಷ್ಣಪ್ರಭುಗಳ ಕಾಲದಲ್ಲಿ ಈ ನಮ್ಮ ಲಿಂಗರಾಜ ಅರಸರವರು ಈ ಗ್ರಂಥರಚನೆಯಿಂದ ಕಾಪಾಡಿ ಶಾಶ್ವತ ಯಶಸ್ಕರಾದರು.

ಮೈಸೂರು, ಮದರಾಸು, ಬೊಂಬಾಯಿ ಸರ್ಕಾರಗಳ ವಿದ್ಯಾಭ್ಯಾಸ ಶಾಖೆಯವರು ಈ ಗ್ರಂಥವನ್ನು ಮೆಟ್ರಿಕ್ ತರಗತಿಗಳ ಪಠ್ಯಪುಸ್ತಕವನ್ನಾಗಿಯೂ ಬಹುಮಾನಪುಸ್ತಕವನ್ನಾಗಿಯೂ ಅಂಗೀಕರಿಸಿ ಗುಣಗ್ರಾಹಕತೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮನ್ಮಹಾರಾಜರ ಪ್ರೋತ್ಸಾಹಕೇಷವು ಇಂಥ ಗ್ರಂಥೋದಯಕ್ಕೆ ಕಾರಣಭೂತವಾದುದರಿಂದ ಅವರ ವಿದ್ಯಾಭಿಮಾನವು ವಂದನೀಯವಾಗಿದೆ. ಈ ಗ್ರಂಥವು ಅರ್ಥವನ್ನು ಹೇಳುವವರ ಅವಶ್ಯಕತೆಯೇ ಇಲ್ಲದೆ ಕನ್ನಡವನ್ನು ಬಲ್ಲ ಬಾಲರೂ ಬಾಲೆಯರೂ ದೊಡ್ಡವರೂ ಸಹ ಓದಿ ಅಭಿಪ್ರಾಯ ಮಾಡಿಕೊಳ್ಳಬಹುದಾದಷ್ಟು ಸುಲಭವಾಗಿದೆ. ಮ|| ಲಿಂಗರಾಜ ಅರಸರವರ ಸಹಜಕವಿತಾಪ್ರತಿಭೆಯು ಪರಗ್ರಂಥದಾಸ್ಯವಿಲ್ಲದ ಇಂಥ ಸ್ವತಂತ್ರ ಕಾವ್ಯರಚನೆಗೆ ತೊಡಗಿದುದರಿಂದ, ಸ್ವಾತಂತ್ರ್ಯೇಚ್ಛೆಯೇ ಹೆಚ್ಚುತ್ತಿರುವ ಈಗಣಕಾಲದಲ್ಲಿ ಕನ್ನಡದೊಳಗೆ ಸ್ವತಂತ್ರಗ್ರಂಥಗಳು ಹುಟ್ಟುವುದೇ ವಿರಳವೆಂದು ಉಂಟಾಗಿರುವ ಕೊರತೆಯನ್ನು ಪರಿಹರಿಸಲು ಕೆಲಮಟ್ಟಿಗೆ ಸಾಧಕವಾಯಿತು.

ರಾಜಧಾನಿಯ ವೀರಶೈವ ವಿದ್ಯಾರ್ಥಿನಿಲಯ.

ಗುಂಡ್ಲುಪೇಟೆ ತಾ|| ಕಬ್ಬಳ್ಳಿಯ ಮ|| ಶ್ರೀಮಂತ ಕೆ. ಎಸ್. ಚೆನ್ನಬಸವಪ್ಪನವರು ರಾಜಧಾನಿಯಲ್ಲಿ ವೀರಶೈವ ವಿದ್ಯಾರ್ಥಿಗಳಿಗಾಗಿ ಒಂದು ಭವನವನ್ನು ಕಟ್ಟಿಸಿಕೊಡಲು ೩೦ ಸಹಸ್ರ ರೂ. ಗಳನ್ನು ಕೊಡುವುದಾಗಿ ವಾಗ್ದಾನಮಾಡಿದ್ದ ಸಂಗತಿಯು ನಮ್ಮ ಪತ್ರಿಕಾ ವಾಚಕರಿಗೆಲ್ಲಾ ಗೊತ್ತೇ ಇದೆಯಷ್ಟೆ. ಮಾಡಿದ ಧರ್ಮಸಂಕಲ್ಪವನ್ನು ಶೀಘ್ರವಾಗಿ ನೆರವೇರಿಸಬೇಕೆಂದು ಈ ಮಹಾಶಯರು ನಿಶ್ಚಯಿಸಿ, ಅರ್ಧ ಹಣ ಎಂದರೆ ೧೫ ಸಹಸ್ರ ರೂ. ಗಳನ್ನು ಮೈಸೂರು ಬ್ಯಾಂಕಿಗೆ ಕಟ್ಟಿ ಅದರ ರಸೀದಿಯನ್ನು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಪ್ರೆಸಿಡೆಂಟರಾದ ಮ|| ದಿ|| ಬ|| ಕೆ. ಪಿ. ಪುಟ್ಟಣ್ಣಚೆಟ್ಟರ ವಶಕ್ಕೆ ಸಲ್ಲಿಸಿ, ಮುಂದಣ ಕೆಲಸವನ್ನು ತ್ವರಿತವಾಗಿ ನಡೆಯಿಸಬೇಕೆಂದು ಪ್ರಾರ್ಥಿಸಿಕೊಂಡರೆಂದೂ, ಉಳಿದ ಹಣವನ್ನು ಶಂಕುಸ್ಥಾಪನ ಕಾಲದೊಳಗಾಗಿ ಕೊಟ್ಟುಬಿಡಲು ಸಿದ್ಧರಾಗಿರುವರೆಂದೂ ಕೇಳಿ ಸಂತೋಷಿಸುತ್ತೇವೆ. - ಗೃಹೀತ ಇವ ಕೇಶೇಷು ಮೃತ್ಯುನಾಧರ್ಮಮಾಚರೇತ್ - ಎಂಬ ನೀತಿಯಂತೆ ಧರ ಕಾರ್ಯವನ್ನು ನಾಳೆಯೆಂದು ಹೇಳದೆ ಸಾಧ್ಯವಾದಷ್ಟು ತ್ವರ್ಯವಾಗಿ ನಡೆಯಿಸುವುದೇ ಉತ್ತಮಪುರುಷರ ಲಕ್ಷಣ. ನಮ್ಮ ವಿದ್ಯಾಭಿವೃದ್ಧಿ ಫಂಡ್‌ಸಂಘದ ಅಧ್ಯಕ್ಷರೂ ಸೆಕ್ರೆಟರಿಯವರೂ ಮ್ಯಾ|| ಕಮಿಟಿಯ ಇತರ ಮೆಂಬರುಗಳೂ ಬೆಂಗಳೂರು ಜಯದೇವ ವೀರಶೈವಾಶ್ರಮದ ಸ್ಥಾಪನೆಗೆ ಪ್ರಯತ್ನಪಟ್ಟು ಜಯಶೀಲರಾದಂತೆ ಈ ಕಾರ್ಯದಲ್ಲೂ ಮಾಡಬೇಕಾದುದನ್ನು ಶೀಘ್ರವಾಗಿ ನೆರವೇರಿಸಿ, ಬರುವ ವರ್ಧಂತ್ಯುತ್ಸವದೊಳಗಾಗಿ ಶಂಕುಸ್ಥಾಪನಮಹೋತ್ಸವವು ಜರುಗುವುದಕ್ಕೆ ಅವಕಾಶ ಮಾಡಿಕೊಟ್ಟು ಧರ್ಮಕರ್ತರ ಉದ್ದೇಶವನ್ನು ಪೂರೈಸಿ, ಸಮಾಜದವರ ಕೃತಜ್ಞತಾ ವಂದನೆಗಳಿಗೆ ಅವರೂ ಮತ್ತು ಸಂಘದವರೂ ಪಾತ್ರರಾಗುವಂತೆ ಮಾಡುವರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯಲ್ಲಿ ಹೆಚ್ಚಾಗಿ ಆಲಿಕಲ್ಲಿನಿಂದ ಕೂಡಿದ ಮಳೆಯಾಯಿತು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಂಚಾರವನ್ನು ಮುಗಿಸಿಕೊಂಡು ಶ್ರೀಮನ್ಮಹಾರಾಜರು ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು.

ಬರುವ ತಾ|| ೨೮ ರಲ್ಲಿ ಮಿಡಗೇಸಿಯೊಳಗೆ ಒಂದು ವೀರಶೈವ ಪ್ರಾಂತಿಕಸಭೆಯು ನಡೆಯುವುದಾಗಿದೆ. ಸಭೆಗೆ ಬರತಕ್ಕ ಸ್ವಮತಸ್ಥರ ಊಟ ಉಪಚಾರಗಳಿಗೆಲ್ಲಾ ಸಭಾಪಾಲಕರು ತಕ್ಕ ಏರ್ಪಾಟುಗಳನ್ನು ಮಾಡಿದ್ದಾರೆ.

ತುಮಕೂರು ಡಿಸ್ಟ್ರಿಕ್ಟ್ ವೀರಶೈವ ಪ್ರಾಂತಿಕ ಸಭೆಯು ಸಿದ್ಧಗಂಗಾ ಕ್ಷೇತ್ರದಲ್ಲಿ ಮೊದಲೇ ಪ್ರಕಟಿಸಿದ್ದಂತೆ ಕಳೆದ ತಾ|| ೨೬ ರಲ್ಲಿ ತಿಪಟೂರಿನ ಮ್ಯು|| ವೈಸ್‌ಪ್ರೆಸಿಡೆಂಟರಾದ ಮ|| ಜಿ. ಕೆ. ಗುರಪ್ಪನವರ ಅಧ್ಯಕ್ಷತೆಯಿಂದ ಸಾಂಗವಾಗಿ ನೆರವೇರಿತೆಂದು ಕೇಳುತ್ತೇವೆ.

ಬಗ್ಗವಳ್ಳಿ ವೀರಶೈವ ಪ್ರಾಂತಿಕಸಭೆಯು ಕಳೆದ ಫೆಬ್ರವರಿ ತಾ|| ೨೯ ಮಾರ್ಚಿ ೧ನೆ ತಾರೀಖುಗಳಲ್ಲಿ ಸಾಂಗವಾಗಿ ನೆರವೇರಿತೆಂದೂ, ಲೆ|| ಕೌನ್ಸಿಲ್ ಮೆಂಬರಾಗಿರುವ ಮ|| ಗಡಲ ಬಸವಪ್ಪನವರ ಪ್ರಯತ್ನವಿಶೇಷದಿಂದ ಆ ಪ್ರಾಂತದ ೯ ಗ್ರಾಮದ ವೀರಶೈವರಲ್ಲಿದ್ದ ಪಾರ್ಟಿಗಳೆಲ್ಲಾ ತಪ್ಪಿ ಏಕವಾಯಿತೆಂದೂ ಕೇಳಿ ಸಂತೋಷಿಸುತ್ತೇವೆ.

ಬರುವ ಏಪ್ರಿಲ್ ತಿಂಗಳಲ್ಲಿ ಬೆಂಗಳೂರು ಹರಿಹರದ ಲೋಹಮಾರ್ಗವು ಮೈಸೂರು ಸರ್ಕಾರದ ಸ್ವಾಧೀನಕ್ಕೆ ಬರುವುದೆಂಬ ಸುದ್ದಿಯು ಕೆಲ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಾವು ವಿಚಾರಮಾಡಿದುದರಲ್ಲಿ ಅದು ಸುಳ್ಳೆಂದೂ, ಆ ಮಾರ್ಗವು ನಮ್ಮ ಸರ್ಕಾರದ ವಶವಾಗುವುದಕ್ಕೆ ಇನ್ನೂ ೧೬ ವರ್ಷಗಳಕಾಲ ಗಡುವು ಕಳೆಯಬೇಕಾಗಿದೆಯೆಂದೂ ಗೊತ್ತಾಯಿತು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಮ|| ಬಸವಯ್ಯನವರು ಅಮೂಲ್ಯವಾದ ಕಾರ್ಯವನ್ನು ಮಾಡಿದ್ದುದರಿಂದ ಅವರ ಗೌರವಾರ್ಥವಾಗಿ ಒಂದು ದಿನದ ಮೀಟಿಂಗನ್ನು ಮ್ಯುನಿಸಿಪಾಲಿಟಿಯು ನಿಲ್ಲಿಸಿದುದಲ್ಲದೆ ಮ್ಯು|| ಪ್ರೆಸಿಡೆಂಟರೇ ಮೊದಲಾದವರು ಅವರ ಗುಣಕಥನವನ್ನು ಮಾಡಿ, ಅವರ ಮೃತಿಯಿಂದ ತಮಗುಂಟಾದ ಸಂತಾಪವನ್ನು ಅವರ ಕುಟುಂಬದವರಿಗೆ ತಿಳಿಯಿಸುವ ನಿರ್ಧಾರವನ್ನು ಮಾಡಿದರು.

ಪಂಚಮರನ್ನು ಇತರರು ಓದುವ ಸ್ಕೂಲುಗಳಿಗೆ ಸೇರಿಸಬಾರದೆಂದೂ, ಆ ವಿಷಯದಲ್ಲಿ ಕೊಟ್ಟಿರುವ ಅಪ್ಪಣೆಯನ್ನು ಪುನರ್ವಿಮರ್ಶೆಮಾಡಿ ರದ್ದುಮಾಡಿಸಬೇಕೆಂದೂ ಪ್ರಜೆಗಳು ಶ್ರೀಮನ್ಮಹಾರಾಜರಿಗೂ ಅವರ ಸರ್ಕಾರಕ್ಕೂ ಬರೆದುಕೊಂಡಿದ್ದ ಅರ್ಜಿಗೆ, ಹಾಗೆ ಮಾಡಲಾಗುವುದಿಲ್ಲವೆಂದೂ, ಸರ್ಕಾರಿ ಮತ್ತು ಗ್ರಾಂಟಿನೇಡ್ ಸ್ಕೂಲುಗಳಿಗೆ ಪಂಚಮರು ಬರುವುದನ್ನು ತಪ್ಪಿಸಲಾಗುವುದಿಲ್ಲವೆಂದೂ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ.

ಕಳೆದ ಗುರುವಾರದ ದಿವಸ ಧ|| ಡಿ. ಬಸುಮಯ್ಯನವರ ಹಾಲಿನಲ್ಲಿ ಪುರವಾಸಿಗಳು ಲೋಕಸೇವಾರತ ಮ|| ಅಣ್ಣಯ್ಯಪಂಡಿತರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದು ಮಿ|| ಮಿರ್‌ಹಂಜಾಹುಸೇನ್‌ರವರಿಗೆ ಇನೆ ಎಕ್ಸಿಕ್ಯೂಟಿವ್ ಕೌನ್ಸಿಲರ್ ಪದವಿಯನ್ನೂ ಮ|| ಬ್ಯಾ|| ನಾಗಪ್ಪನವರಿಗೆ ೧ನೆ ತರಗತಿಯ ಸೆಷನ್ಸ್‌ಜಡ್ಜ್ ಪದವಿಗೆ ಪ್ರಮೋಷನನ್ನೂ ಕೊಟ್ಟುದಕ್ಕಾಗಿ ತಮಗುಂಟಾದ ಸಂತೋಷವನ್ನೂ ಕೃತಜ್ಞತೆಯನ್ನೂ ಶ್ರೀಮನ್ಮಹಾರಾಜರವರಿಗೆ ತಿಳಿಯಿಸುವ ರೆಜಲ್ಯೂಷನನ್ನು ಮಾಡಿದರು. ಸಭಾಧ್ಯಕ್ಷರೂ ಮ|| ಎಂ. ವೆಂಕಟಕೃಷ್ಣಯ್ಯನವರೂ ಸಹ ಆ ಇಬ್ಬರು ಮಹಾಶಯರ ಯೋಗ್ಯತಾಂಶಗಳನ್ನು ಕುರಿತು ಭಾಷಣಮಾಡಿದರು.

ಮ|| ಎಂ. ಬಸವಯ್ಯನವರು ಅಕಾಲದಲ್ಲಿ ಮೃತರಾದುದರಿಂದ ತಮಗುಂಟಾದ ವ್ಯಸನವನ್ನು ತೋರ್ಪಡಿಸುವುದಕ್ಕಾಗಿ ರಾಜಧಾನಿಯ ಪುರವಾಸಿಗಳು ಕಳೆದ ಬುಧವಾರ ಸಾಯಂಕಾಲ ಧರ್ಮಪ್ರಕಾಶ ಡಿ ಬಸುಮಯನವರ ಶಾಲಾಭವನದಲ್ಲಿ ಡಿಸ್ಟ್ರಿಕ್ಟ್‌ಜಡ್ಜ್ ಮ|| ಬಿ. ನಾಗಪ್ಪ ಬ್ಯಾ|| ಅಟ್‌ಲಾಯವರ ಅಧ್ಯಕ್ಷತೆಯಲ್ಲಿ ಕೂಡಿದ್ದರು. ಸಭಾಧ್ಯಕ್ಷರೂ. ಎಚ್. ಆರ್. ಕರಿಬಸವಶಾಸ್ತ್ರಿಗಳೂ, ಪಬ್ಲಿಕ್ ಪ್ರಾಸಿಕ್ಯೂಟರ್ ಎಂ. ಶ್ರೀನಿವಾಸಯ್ಯಂಗಾರರೂ ಸಹ ಗತಿಸಿದ ಬಸವಯ್ಯನವರ ಗುಣ ಸಾಮರ್ಥ್ಯ ದೇಶಕ್ಕೆ ಮಾಡಿದ ಹಿತ ಅವರ ಮೃತಿಯಿಂದ ಉಂಟಾದ ನಷ್ಟ ಇವುಗಳನ್ನೆಲ್ಲಾ ತಿಳಿಯಿಸಿ ಉಪನ್ಯಾಸ ಮಾಡಿದರು ವ್ಯಸನವನ್ನು ವ್ಯಕ್ತಪಡಿಸತಕ್ಕ ಮತ್ತೂ ಅದನ್ನು ಬಸವಯ್ಯನವರ ಕುಟುಂಬದವರಿಗೆ ಕಳುಹಿಸಿಕೊಡತಕ್ಕ ರೆಜಲ್ಯೂಷನ್ನನ್ನು ಮಿ|| ಮಹಮ್ಮದ್‌ಸೇಟರು ಸೂಚಿಸಿದರು. ಸಾ|| ಡಿ. ಬಸುಮಯ್ಯನವರು ಅನುಮೋದಿಸಿದರು. ಸಭಿಕರೆಲ್ಲರೂ ಅಂಗೀಕರಿಸಿದರು.

ಕಳೆದ ಬುಧವಾರ ಬೆಂಗಳೂರು ಪುರವಾಸಿಗಳು ದೊಡ್ಡಣ್ಣನವರ ಹಾಲಿನಲ್ಲಿ ಅದು ಹಿಡಿಯದಿರುವಂತೆ ಕಿಕ್ಕಿರಿದು ಸಭೆಗೂಡಿದ್ದರು. ಮಿ|| ಮಿರ್ ಹಂಜಾಹುಸೇನ್ ಸಾಹೇಬರು ಅಧ್ಯಕ್ಷರಾಗಿದ್ದರು. ಗತಿಸಿದ ಬಸವಯ್ಯನವರ ಜೀವಿತಚರಿತೆಯನ್ನೂ ದೇಶಸೇವೆಗಾಗಿ ಅವರು ನಡೆಯಿಸಿದ ಅಸಾಧಾರಣ ಕಾರ್ಯಗಳನ್ನೂ ಅವರ ಮೃತಿಯಿಂದ ದೇಶಕ್ಕೇ ಉಂಟಾದ ನಷ್ಟವನ್ನೂ ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಸಭಾಧ್ಯಕ್ಷರು ಮಾಡಿದರು. ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ತಂತಮ್ಮ ಪ್ರೈವೆಟ್ ಸೆಕ್ರೆಟರಿಗಳ ಮೂಲಕ ಕಳುಹಿಸಿದ್ದ ಸಾನುತಾಪಪತ್ರಗಳೂ, ದಿವಾನರು ಕೌನ್ಸಿಲರುಗಳು ಶ್ರೀಮನ್ನಿರಂಜನಜಗದ್ಗುರುಗಳವರು ಮೊದಲಾದವರು ಕಳುಹಿಸಿದ್ದ ಪತ್ರಗಳೂ ಸಭೆಯಲ್ಲಿ ಓದಲ್ಪಟ್ಟುವು. ಮ|| ಗಳಾದ ರಾಮಲಿಂಗರೆಡ್ಡಿ, ಕೆ. ಚಾಂಡಿ, ಶಂಕರನಾರಾಯಣರಾವ್, ರಾ|| ಬ|| ಅಣ್ಣಾಸಾಮಿ ಮೊದಲಿಯಾರ್, ಕೆ. ಎಚ್. ರಾಮಯ್ಯ, ಅಬ್ಬಾಸ್‌ಖಾನ್ ಮೊದಲಾದವರೆಲ್ಲಾ ಇಂಗ್ಲೀಷು ಕನ್ನಡ ಹಿಂದೂಸ್ಥಾನಿ ಭಾಷೆಗಳಲ್ಲಿ ಉಪನ್ಯಾಸ ಮಾಡಿದರು. ಅನುತಾಪಪ್ರದರ್ಶಕವಾದ ನಿರ್ಧಾರವೂ, ಅವರು ಮಾಡಿದ ದೇಶಸೇವೆಯು ಅಮೌಲ್ಯವಾದುದೆಂದು ದೇಶೀಯರೆಲ್ಲರೂ ಸ್ಮರಿಸುವರೆಂಬ ನಿರ್ಧಾರವೂ ಮಾಡಲ್ಪಟ್ಟುವು.

ಕೃತಜ್ಞತೆ.

ಗತಿಸಿದ ಮ|| ರಾ|| ಎಂ. ಬಸವಯ ಬಿ.ಎ., ಬಿ.ಎಲ್., ರವರ ಕುಟುಂಬಕ್ಕೆ ಮೈಸೂರು ದೇಶದ ಎಲ್ಲಾ ಭಾಗಗಳಿಂದಲೂ ಮತ್ತು ಹೊರಗಣ ದೇಶದಿಂದಲೂ ಸಮಸ್ತ ಕೋಮಿನ ದೊಡ್ಡಮನುಷ್ಯರೂ ಮತ್ತು ಜನಸಂಘದವರೂ ಅನುತಾಪ ಪತ್ರಿಕೆಗಳನ್ನು ಕಳುಹಿಸಿರುತ್ತಾರೆ. ಎಲ್ಲರಿಗೂ ಪ್ರತ್ಯೇಕವಾಗಿ ಉತ್ತರವನ್ನು ಕೊಡಲು ಅನುಕೂಲವಿಲ್ಲದ್ದರಿಂದ ಈ ಪತ್ರಿಕಾಮುಖಾಂತರ ನಮ್ಮ ಸಂಸಾರದ ಪರವಾಗಿ ನಮ್ಮ ಕೃತಜ್ಞತೆಯನ್ನು ತಿಳಿಸುತ್ತೇವೆ.

ಬಿ. ನಂಜಪ್ಪ, ಅಸಿಸ್ಟೆಂಟ್ ಸರ್ಜನ್.
ಬೆಂಗಳೂರು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಓಟರ್ ಮಹಾಜನರ ಸ|| ಕ್ಕೆ.
ವಿಜ್ಞಾಪನೆಗಳು

ಮೈಸೂರು ನ್ಯಾಯವಿಧಾಯಕಸಭೆಗೆ ನಾನು ಮೆಂಬರಾಗಿ ಚುನಾಯಿಸಲ್ಪಟ್ಟಿದ್ದೇನೆ. ಈ ಗೌರವವು ತಾವು ನನಗೆ ದಯವಿಟ್ಟು ಕೊಟ್ಟ ಓಟುಗಳ ಬಲದಿಂದ ಲಭಿಸಿದೆ. ಈ ನಿಮ್ಮ ಘನಸಹಾಯಕ್ಕಾಗಿ ತಮ್ಮೆಲ್ಲರಿಗೂ ಮತ್ತು ನನ್ನ ಪರವಾಗಿ ಓಟುಗಳನ್ನು ಕೊಡಿಸಲು ಪ್ರಯತ್ನಪಟ್ಟ ಇತರ ದೊಡ್ಡಮನುಷ್ಯರಿಗೂ ಅತ್ಯಂತ ಕೃತಜ್ಞನಾಗಿರುತ್ತೇನೆ. ಈ ಕೃತಜ್ಞತೆಯನ್ನು ಪ್ರತಿಯೊಬ್ಬರಿಗೂ ಬರೆದು ತಿಳಿಸಲು ಸಾಧ್ಯವಿಲ್ಲದಿರುವುದರಿಂದ ಈ ಪತ್ರಿಕಾಮೂಲಕ ತಮ್ಮೆಲ್ಲರಿಗೂ ನನ್ನ ವಂದನೆಗಳನ್ನರ್ಪಿಸುವುದಲ್ಲದೆ, ಈ ನನ್ನ ಸರ್ವೀಸಿನಲ್ಲಿ ಪ್ರಜಾಸಮುದಾಯದ ಪುರೋಭಿವೃದ್ಧಿಗಾಗಿಯೇ ತಮ್ಮೆಗಳ ಪರವಾಗಿ ಆಸಕ್ತಿಯಿಂದ ಕೆಲಸಮಾಡುತ್ತೇನೆಂದು ಶೃತಪಡಿಸುವ,

ತಮ್ಮ ವಿಧೇಯ—ಎಂ. ಅನಂತಯ್ಯಶೆಟ್ಟಿ,
ಅಡ್ವೋಕೇಟ್, ಚಿತ್ರದುರ್ಗ.

ಶಾಸ್ತ್ರಿಗಳು ಬೇಕು.

ವಿಜಾಪೂರ ಜಿಲ್ಲಾ ಹುನಗುಂದ ತಾಲ್ಲೂಕು ಪೈಕಿ ಕೂಡಲಸಂಗಮ ಕ್ಷೇತ್ರದ ಸಂಸ್ಕೃತ ವೈದಿಕ ಪಾಠಶಾಲೆಗೆ ತಕ್ಕಷ್ಟು ಜ್ಯೋತಿಷವನ್ನೂ ವಿಧಿವಿಧಾನಗಳನ್ನೂ ಬಲ್ಲ ಮತ್ತು ನಾಟಕಾಂತಸಾಹಿತ್ಯ ಪಾಠವಾಗಿರುವ ಒಬ್ಬ ಶಾಸ್ತ್ರಿಗಳು ಬೇಕಾಗಿದೆ. ಬಿರಲಿಚ್ಚೆಯುಳ್ಳವರು ಕೆಳಗೆ ಬರೆದ ವಿಳಾಸದವರೊಡನೆ ಮಾರ್ಚಿ ೧೫ ನೇ ತಾರೀಖಿನೊಳಗಾಗಿ ಪತ್ರವ್ಯವಹಾರ ಮಾಡಬೇಕು.

ರುದ್ರಪ್ಪಗೌಡ, ಗಿರಿಮಲ್ಲಪ್ಪಗೌಡ ಪಾಟೀಲ,
ಮುಕ್ಕಾಂ ಸಂಗಮ. ಕುಮಾರೇಶ್ವರ ಸಂಸ್ಕೃತ
ವೈದಿಕಪಾಠಶಾಲಾ ಚೇರ್ಮನ್.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಲ್ಲಿ ಕಂಡ ಅಭಿಪ್ರಾಯಕ್ಕೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ].

ಕೈ|| ಬಸವಯ್ಯನವರ ಸ್ಮಾರಕ.

ದೀರ್ಘಮಾತ್ಸರ್ಯವುಳ್ಳ ಪ್ರಾಣಿಗಳಲ್ಲಿ ಹಾವು ಮೊದಲನೆಯದೆಂದು ಜನವಾರ್ತೆಯಿದೆ. ಮೈಸೂರಿನ ಸಂಪದಭ್ಯುದಯವು ಅದಕ್ಕಿಂತಲೂ ಮೊದಲನೆಯದೆಂದು ಹೇಳಬಹುದು. ಅದು ಹಲ್ಲುಮುರಿದ ಹಾವಿನಂತಾಗಿದ್ದರೂ ಪರರನ್ನು ಕಚ್ಚುವ ಸ್ವಭಾವವನ್ನು ಇನ್ನೂ ಬಿಡಲಿಲ್ಲ. ಮ|| ಬಸವಯ್ಯನವರು ಜೀವಿಸಿರುವವರೆಗೂ ಅಹರ್ನಿಶಿಯೂ ಅವರಮೇಲೆ ಬುಸುಗುಟ್ಟುವುದೇ ಅದರ ಕೆಲಸವಾಗಿತ್ತು. ಅದಕೂ ವಿಷವನ್ನು ಬಗ್ಗಿಸಲೂ ಅದರಿಂ

ವಾಗಲಿಲ್ಲ. ಅವರು ಹಿಡಿದ ಕಾರ್ಯಗಳಲ್ಲೆಲ್ಲಾ ಜಯವನ್ನು ಸಂಪಾದಿಸಿಕೊಂಡೇ ಬಂದರು. "ಪಾಪೀಚಿರಾಯುಸ್ಸುಕೃತೀಗತಾಯುಃ" ಎಂಬ ನೀತಿವಚನದಂತೆ ಲೋಕಕಂಟಕರಾಗಿ ನೂರು ವರ್ಷ ಬಾಳುವ ದುರ್ಜನರಂತೆ ಅವರು ಭೂಮಿಯ ಮೇಲಿರದೆ ಇದ್ದಷ್ಟು ನಾಲ್ಕು ದಿನದಲ್ಲಿ ನೂರಾರು ವರ್ಷಗಳಲ್ಲಿ ಮಾಡಬಹುದಾಗಿದ್ದಷ್ಟು ಕೆಲಸವನ್ನು ಮಾಡಿ ಯಶಶ್ಶರೀರವನ್ನು ಬಿಟ್ಟು ಕಣ್ಮರೆಯಾದರು. ಅವರು ಸತ್ತರೂ, ಸಂಪದಭ್ಯುದಯಕ್ಕೆ ಅವರ ಮೇಲಿದ್ದ ಮಚ್ಚರವು ಇನ್ನೂ ಸಾಯಲಿಲ್ಲ. ಮ|| ಬಸವಯ್ಯನವರ ಸ್ಮಾರಕಸ್ಥಾಪನೆಗಾಗಿ ಯಾರೋ ಕೆಲವರು ಪ್ರಯತ್ನಪಟ್ಟಿರುವರಂತೆ! ಬಸವಯ್ಯನವರ ಕನವರಿಕೆಯಲ್ಲೇ ಇರುವ ಇದರ ಲೇಖಕರಿಗೆ ಆ ತೆರನಾದ ಸ್ವಪ್ನವು ಬಿದ್ದಿರಬಹುದು. ಅದು ಇವರಿಗೆ ಮಹೋತ್ಪಾತದರ್ಶನವಾದಂತೆ ಆಗಿರಬಹುದು. ಆದಕಾರಣ ದಿಗಿಲುಬಿದ್ದು ಅಂಥ ಪ್ರಯತ್ನವು ಮುಂದೆ ಸಾಗದಂತೆ ಮಾಡಬೇಕೆಂಬ ದುಸ್ಸಂಕಲ್ಪದಿಂದ ೧೨ ಲೇಖನಗಳು ಸಂಪದಭ್ಯುದಯಕ್ಕೆ ಬರೆಯಲ್ಪಟ್ಟಿವೆ. ಆ ಲೇಖನಗಳಲ್ಲಿ ಬಸವಯ್ಯನವರು ಮಾಡಿದ ಪ್ರಯತ್ನಗಳೆಲ್ಲಾ ಜಾತಿದ್ವೇಷ ಮತದ್ವೇಷಜನಕಗಳಾಗಿದ್ದವೆಂದು ಲೇಖಕರು ಹೇಳಿರುತ್ತಾರೆ. ಪರರ ಉಚ್ಛ್ರಾಯವನ್ನು ನೋಡಿ ಸೈರಿಸದೆ ಕರುಬುವುದೂ, ಪರರಲ್ಲಿ ಒಡಕು ಹುಟ್ಟಿಸಿ ತಮ್ಮ ಕಾರ್ಯ ಸಾಧಿಸಿಕೊಳ್ಳುವುದೂ, ಜಾತಿದ್ವೇಷ ಮತದ್ವೇಷಗಳ ಬೆಳೆಸುವಿಕೆಗಾಗಿ ಎರಡು ಹೊತ್ತು ತನ್ನ ಲೇಖನಗಳಿಂದ ಗೊಬ್ಬರ ಹಾಕುವುದೂ, ಸಂಪದಭ್ಯುದಯದ ಲೇಖಕರ ನಿತ್ಯಕರ್ಮವಾಗಿರುವುದನ್ನು ದೇಶಕ್ಕೆ ದೇಶವೇ ಕಂಡಿದೆ. ಕೋತಿಯು ಮೊಸರನ್ನವನ್ನು ತಿಂದು ಮೇಕೆಗೆ ಬಾಯಿಗೊರಸಿದಂತೆ ಇತರರ ಮೇಲೆ ತಮ್ಮ ದೋಷವನ್ನು ಆರೋಪಿಸಿ ಕೂಗಿಬಿಟ್ಟರೆ ಲೋಕವೆಲ್ಲಾ ನಿಜವೆಂದು ನಂಬಿ ಮರುಳಾಗುವುದೆಂಬ ಭ್ರಾಂತಿಯು ಇದರ ಲೇಖಕರಿಗೆ ಇನ್ನೂ ಬಿಡಲಿಲ್ಲ. ಮ|| ಬಸವಯ್ಯನವರಿಗೆ ಬೇರೆ ಸ್ಮಾರಕವೇ ಬೇಕಿಲ್ಲ. ಸಂಸ್ಥಾನದಲ್ಲಿ ಬ್ಯಾಕ್ವರ್ಡ್ ಡಿಪ್ರೆಸ್ಡ್ ಕ್ಲಾಸ್ ಸ್ಪೆಷಲ್ ಸ್ಕಾಲರ್‌ಷಿಪ್ಪುಗಳೇರ್ಪಾಡು, ಸಾರ್ವಜನಿಕ ವಿದ್ಯಾಪ್ರೋತ್ಸಾಹ, ಪ್ರತ್ಯೇಕ ಪ್ರಾತಿನಿಧ್ಯತತ್ವದ ಅವಲಂಬನೆ ಇತ್ಯಾದಿಗಳು ನಡೆದುದೂ ಇವೆಲ್ಲಕ್ಕಿಂತಲೂ ಅತಿಶಯವಾಗಿ ಪಟ್ಟಣಗಳು ಮೊದಲುಗೊಂಡು ಗ್ರಾಮಗಳವರೆಗಿರುವ ಹಿಂದುಳಿದ ಜನರಲ್ಲೆಲ್ಲಾ ಆತ್ಮೋದ್ಧಾರದ ಎಚ್ಚರಿಕೆ ಹುಟ್ಟಿದುದೂ ಸಹ ಎಂದೂ ಮರೆಯದ ಸ್ಮಾರಕಗಳಾಗಿರುತ್ತವೆ. ಒಂದುವೇಳೆ ಸಂಪದಭ್ಯುದಯದಲ್ಲಿ ಸ್ಮಾರಕ ಸಂಬಂಧವಾಗಿ ಇಂಥ ಲೇಖನಗಳು ಬಂದಿರುವುದರಿಂದ ಇವನ್ನು ನೋಡಿ ಜನರಲ್ಲಿ ಹುರುಪು ಹುಟ್ಟಿ ಸ್ಮಾರಕಪ್ರಯತ್ನಕ್ಕೆ ದಾರಿಯಾದರೂ ಆಗಬಹುದು. ಆ ಪ್ರಯತ್ನವು ಆರಂಭಿಸಲ್ಪಟ್ಟರೆ ೧ ಲಕ್ಷ ರೂ. ಗಳಾದರೂ ಕೂಡುವುದರಲ್ಲಿ ಸಂಶಯವಿಲ್ಲ. ಅದಕ್ಕೆ ಫಂಡು ಏರ್ಪಟ್ಟು ಸ್ಮಾರಕ ನಿರ್ಮಾಣವಾಗುವುದಾದರೆ ಮ|| ಬಸವಯ್ಯನವರನ್ನೂ ಮ|| ವೆಂಕಟಕೃಷ್ಣಯ್ಯನವರನ್ನೂ ಇದಿರು ಬದಿರಿಗೆ ನಿಲ್ಲಿಸಿರುವಂತೆ ಕಲ್ಪಿಸುವದನ್ನು ಮಾತ್ರ ಮರೆಯಬಾರದೆಂದು ನನ್ನ ಬಿನ್ನಹ ಏಕೆಂದರೆ-ಬಸವಯ್ಯನವರ ಸ್ಮಾರಕ ಕಲ್ಪನೆಗೆ ವೆಂಕಟಕೃಷ್ಣಯ್ಯನವರ ಪತ್ರಿಕೆಯ ಬರವಣಿಗೆಗಳೇ ಕಾರಣಗಳು.

ಎಂ. ಜಿ.

ಬೆಂಗಳೂರು.

ಬೆಂಗಳೂರು ವೀರಶೈವಾಶ್ರಮಕ್ಕೆ ಸಂಬಂಧಪಟ್ಟ ವೀರಶೈವ ತರುಣರ ಸಂಘದ ಆಶ್ರಯದಲ್ಲಿ, ಕೀರ್ತಿಶೇಷರಾದ ಮ|| ಬಸವಯ್ಯನವರ ಅಕಾಲಿಕ ಮತ್ತು ಆಕಸ್ಮಿಕ ಮೃತ್ಯುವಿನಿಂದ ಉಂಟಾದ ಮಹತ್ತರವಾದ ಪರಿತಾಪವನ್ನು ಸೂಚಿಸಲು ಕಳೆದ ತಾ|| ೨೦ ನೇ ಶುಕ್ರವಾರದ ದಿನ ಜನೋಪಕಾರಿ ದೊಡ್ಡಣ್ಣನವರ ಹಾಲಿನಲ್ಲಿ ಮ|| ರಾವ್ ಸಾಹೇಬ್ ಹೆಚ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಯು ನೆರೆದಿತ್ತು. ಆ ಸಭೆಯು ಕಂಟೋನ್ಮೆಂಟು ಮತ್ತು ಸಿಟಿ ನಿವಾಸಿಗಳಾದ ಮ|| ರಾವ್ ಬಹದೂರ್ ಬಿ. ಪಿ. ಅಣ್ಣಾಸ್ವಾಮಿ ಮೊದಲಿಯಾರ್ ಸಿ. ಐ. ಇ; ಗುಲಾಂ ಅಹಮದ್ ಕಲಾಮಿ, ಜಿ. ಪರಮಶಿವಯ್ಯ, ಬಿ.ಎ.ಎಲ್.ಎಲ್.ಬಿ; ಪಿ. ಮುನಿಬಸಪ್ಪ, ಟಿ. ರಾಚಪ್ಪ; ಟಿ. ನಂಜಪ್ಪ; ಟಿ. ಎಸ್. ನಂಜಪ್ಪ, ಎಂ. ಬಿ. ಸಿ. ಎಂ; ಮಾಧವನಾಯರ್ ಬಿ. ಎ; ಎಂ. ಸುಬ್ಬಯ್ಯ ಬಿ. ಎ; ಹೆಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಎಲ್. ಮೊದಲಾದ ಅನೇಕ ದೊಡ್ಡಮನುಷ್ಯರಿಂದ ಭರಿತವಾಗಿತ್ತು.

ಸಭೆಯ ಕಾರ್ಯಗಳು ನಿಯಮಿತ ಕಾಲಕ್ಕೆ ಸರಿಯಾಗಿ ಪ್ರಾರಂಭಿಸಲ್ಪಟ್ಟವು. ಅಧ್ಯಕ್ಷರು ಮೃದುಮಧುರ ಶೈಲಿಯಿಂದೊಡಗೂಡಿದ ವಾಕ್ಸರಣಿಯಿಂದ ದಿವಂಗತರಾದ ಮ|| ಬಸವಯ್ಯನವರ ಬಾಲ್ಯಾವಸ್ಥೆ ಮೊದಲ್ಗೊಂಡು ಇಂದಿನವರೆಗೂ ಚತುರತೆಯಿಂದೊಡಗೂಡಿದ ಅವರ ಚರಿತ್ರೆಯನ್ನು ವರ್ಣಿಸಿದರಲ್ಲದೆ, ಅವರು ಮೈಸೂರು ಸೀಮೆಯ ಹಿಂದುಳಿದ ಜನಗಳ ರಕ್ಷಕರಾಗಿ ಅವತರಿಸಿದವರೋ ಎಂಬಂತೆ ಇದ್ದು ತನ್ನ ಸಹೋದರ ದೇಶಬಾಂಧವರ ಅಭ್ಯುದಯಕ್ಕಾಗಿ ತಮ್ಮ ಸ್ವಾರ್ಥವನ್ನೆಲ್ಲಾ ಬಿಟ್ಟು, ದೇಹಾರೋಗ್ಯಕ್ಕೂ ಕೂಡ ಲಕ್ಷ್ಯಕೊಡದೆ, ಹಿಂದುಳಿದವರನ್ನು ಮುಂದಾಳುಗಳಾಗಿ ಮಾಡುವುದೇ ತಮ್ಮ ಕರ್ತವ್ಯವೆಂದು ಭಾವಿಸಿ, ಪರಪಂಗಡದವರು ಮಾಡುತ್ತಿದ್ದ ದೋಷಾರೋಪಣೆಗಳಿಗೆ ಗಮನ ಕೊಡದೆ, ಆರು ವರ್ಷಗಳೊಳಗೆ ಅವರು ಮಾಡಿರುವ ಅದ್ಭುತ ಕಾರ್ಯಗಳನ್ನು ಕೊಂಡಾಡಿದರು. ಶ್ರೋತೃಗಳೆಲ್ಲರೂ ಕೇಳಿ ಕಣ್ಣೀರು ಸುರಿಸುತ್ತಿದ್ದರು. ತರುವಾಯ ಸಂಘದ ಮೆಂಬರುಗಳಾದ ಮ|| ದಂಡಿಯಪ್ಪ, ಮ|| ಏಳುಸಿದ್ದಪ್ಪ, ಶ್ರೀಕಂಠಯ್ಯ ಮತ್ತು ಸಿದ್ದಯ್ಯನವರು ಮೇಲಿನ ವಿಷಗಳನ್ನೇ ಪುಷ್ಟೀಕರಿಸಿ ಮಾತನಾಡಿದರು.

ಆ ದಿನದ ಉಪನ್ಯಾಸಕರಾದ ಮ|| ಬಿ. ಎಲ್. ವಿಜಯದೇವ ಎಂ. ಎ. ಬಾರ್-ಅಟ್-ಲಾರವರು ಕೀರ್ತಿಶೇಷರಾದ ಮ|| ಬಸವಯ್ಯನವರು ಮೈಸೂರು ಸೀಮೆಯಲ್ಲಿ ಕೋಮುವಾರು ಪ್ರಾತಿನಿಧ್ಯಕ್ಕಾಗಿ ಎಷ್ಟು ಶ್ರಮಪಟ್ಟು ಹೋರಾಡಿದರೋ, ಅವರು ಜನ್ಮತಃ ವೀರಶೈವರಾದಾಗ್ಯೂ ಹಿಂದುಳಿದ ಜನಾಂಗದವರೆಲ್ಲರನ್ನೂ ತಮ್ಮವರೆಂದು ಭಾವಿಸಿ ಅವರ ಅಭ್ಯುದಯಕ್ಕಾಗಿ ತಮ್ಮ ದೇಹವನ್ನೇ ಹೇಗೆ ತ್ಯಾಗಮಾಡಿದರೋ, ಅವರೂ ಮತ್ತು ಅವರ ಜೊತೆಯವರೂ ನ್ಯಾಯವಿಧಾಯಕ ಸಭೆಯ ಮೆಂಬರಾಗಲು ಮ|| ಬಸವಯ್ಯನವರೇ ಹೇಗೆ ಕಾರಣಕರ್ತರಾಗಿದ್ದರೋ, ನಿಜವಾದ ದೇಶಭಕ್ತನೆಂಬುವುದು ಮ|| ಬಸವಯ್ಯನವರಿಗೆ ಹೇಗೆ ಸಲ್ಲುವುದೋ, ಅವರು ಗತಿಸಿಹೋದ ಕಾರಣ ಮುಂದೆ ನಮ್ಮ ಗತಿಯೇನೆಂದು ಆಶಾಭಂಗರಾಗದೆ, ಅವರ ಭೌತಿಕ ಶರೀರವೇ ವಿನಾ ಆತ್ಮಿಕಶರೀರವು ಹೋಗಿಲ್ಲವೆಂದು ನಂಬುತ್ತಾ ಪ್ರತಿಯೊಬ್ಬರೂ ಅವರ ಮೇಲ್ಪಂಕ್ತಿಯನ್ನನುಸರಿಸಿ ನಡೆದರೆ ಯಾವ ಸಂಶಯವೂ ಇಲ್ಲದೆ ತಮ್ಮ ಕಾರ್ಯಸಿದ್ಧಿಯು ಹೇಗೆ ಆಗುವುದೋ ಇತ್ಯಾದಿ ವಿಷಯಗಳನ್ನೆಲ್ಲಾ ಕುರಿತು ಸಭಿಕರೆಲ್ಲರೂ ಬೆರಗಾಗುವಂತೆ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿ ಮುಗಿಸಿದರು.

ಕೊನೆಯಲ್ಲಿ ಸಭಾಧ್ಯಕ್ಷರು ಬಹು ಯುಕ್ತಿಯುಕ್ತವಾದ ಭಾಷಣದಿಂದ ಸಭೆಯನ್ನು ಉಪಸಂಹಾರ ಮಾಡಿದರು. ಸಂಘದ ಸೆಕ್ರೆಟರಿಗಳಾದ ಮ|| ಗಂಗಾಧರಶ್ಯಾರವರು ಅಧ್ಯಕ್ಷರಿಗೂ ಮತ್ತು ಸಭಿಕರಿಗೂ ವಂದನೆಗಳನ್ನರ್ಪಿಸಲು ಸಭೆಯು ಬರಖಾಸ್ತಾಯಿತು.

ಈ ಕೆಳಗೆ ಕಂಡುಬರುವ ೨ ಠರಾವುಗಳು ಪಾಸುಮಾಡಲ್ಪಟ್ಟವು.

(೧) ಈ ಸಭಿಕರು ಗತಿಸಿದ ಮ|| ಬಸವಯ್ಯನವರ ಅಕಾಲಿಕ ಮತ್ತು ಆಕಸ್ಮಿಕ ಮರಣಕ್ಕಾಗಿ ದುಃಖವನ್ನು ಸೂಚಿಸುವುದಲ್ಲದೆ, ವಿಯೋಗದುಃಖಭರಿತರಾದ ಅವರ ಕುಟುಂಬದವರಿಗೆ ತಮ್ಮ ಸಹಾನುಭಾವವನ್ನು ತಿಳಿಸಬೇಕೆಂತಲೂ ಮತ್ತು (೨) ಅವರ ದೊಡ್ಡ ಭಾವಚಿತ್ರವೊಂದನ್ನು ಸಂಘದ ಕಟ್ಟಡದಲ್ಲಿಡಬೇಕೆಂತಲೂ ತೀರ್ಮಾನಿಸಲ್ಪಟ್ಟಿತು. ಸಭಿಕರೆಲ್ಲರೂ ಗೌರವಾರ್ಥವಾಗಿ ಸ್ವಲ್ಪಹೊತ್ತು ನಿಂತಿರಲು ಸರ್ವಾನುಮೋದನದಿಂದ ಪಾಸಾಯಿತು.

ಪುರನಿವಾಸಿ.

ವಿಜಾಪುರ.

ಶ್ರೀ ದೇಶಿಕಮೂರ್ತಿ ಶಂಭುಲಿಂಗಸ್ವಾಮಿ ಹಾವೇರಿ ಇವರು ದೇಶಸಂಚಾರ ಮಾಡುತ್ತ ವಿಜಾಪುರಪಟ್ಟಣಕ್ಕೆ ದಯಮಾಡಿಸಿ ಅಲ್ಲಿಯ ಭಕ್ತಮಹಾಶಯರ ಪ್ರಾರ್ಥನೆಯನ್ನು ಅಂಗೀಕರಿಸಿ ನಿಂತರು. ಭಕ್ತರ ವಿನಂತಿಯ ಮೇರೆಗೆ ಇಲ್ಲಿಯ ಭಕ್ತಮಹಾಶಯರಾದ ಮ|| ಬಸವಪ್ಪಶೆಟ್ಟರ ಈಜೇರಿ ಇವರ ದುಕಾನದ ಮಹಡಿಯ ಮೇಲೆ "ವೀರಶೈವ ಸಿದ್ಧಾಂತ ಶಿಖಾಮಣಿ" ಎಂಬ ಸಿದ್ಧಾಂತ ಶಾಸ್ತ್ರದ ಪ್ರವಚನವನ್ನು ಇದೇ ವರ್ಷ ಮಾರ್ಗಶೀರ್ಷ ಮಾಸ ಶುಕ್ಲಪಕ್ಷ ೧೨ ಗುರುವಾರ ದಿವಸದಿಂದ ಪ್ರಾರಂಭಿಸಿದರು. ಸಿದ್ಧಾಂತಶಾಸ್ತ್ರವು ಗಹನವಾದಾಗ್ಯಾದರೂ ಅದನ್ನು ದೃಷ್ಟಾಂತಗಳಿಂದ ವಿಷಯ ವಿವರಣೆ ಮಾಡುವಿಕೆ, ಅಸ್ಖಲಿತವಾದ ವಾಕ್ಪಟುತ್ವ ಇವುಗಳಿಂದ ವಿಷಯವು ಕೇಳುವವರ ಹೃದಯಂಗಮವಾಗುತ್ತ ನಡೆಯಿತು. ಇದಲ್ಲದೆ ಸ್ವಾಮಿಗಳವರು ಕಲಾಭಿಜ್ಞರೂ ಸಂಗೀತ ಸಾಹಿತ್ಯ ವೇದಾಂತ ಮೊದಲಾದ ಶಾಸ್ತ್ರಗಳನ್ನು ಅರಿತವರೂ ದ್ರವ್ಯ ಮೊದಲಾದ ವಿಷಯದಲ್ಲಿ ನಿವೃತ್ತಿಮಾರ್ಗದವರೂ ಇದ್ದ ಬಳಿಕ ಕೇಳುವದೇನು ? ಭಂಗಾರಕ್ಕೆ ಸುಗಂಧವು ಕೂಡಿದಂತೆ. ಪುರಾಣವು ಸರ್ವರಿಗೂ ಸುಬೋಧಕಾರಿಯಾಯಿತು. ತಂಬೂರಿಯನ್ನು ಸ್ವತಃ ಬಾರಿಸುತ್ತ ಪ್ರವಚನವನ್ನು ನಡೆಯಿಸುವಂಥವರಾದ್ದರಿಂದ ಇತರ ಯಾವ ಖರ್ಚೂ ಇಲ್ಲದೆ ಪುರಾಣವು ನಡೆಯಿಸಲ್ಪಟ್ಟಿತು. ವೈರಾಗ್ಯಶೀಲರಾದ ಶ್ರೀ...ಗಳವರ ಮುಖದಿಂದ ಪ್ರಕಟವಾದ ಮಹತ್ವ ಸಿದ್ಧಾಂತ ವಿಷಯವು ಅಮೌಲ್ಯವಾದದ್ದಲ್ಲದೆ, ಆ ಶಿವ ಸಿದ್ಧಾಂತ ಪ್ರವಚನವು ನಡೆದ ಕಾಲದ ಮಹತ್ವದ ಪ್ರಭಾವವೋ ಏನೋ ಎಂಬಂತೆ ನಡುನಡುವೆ ಆಕಸ್ಮಾತ್ತಾಗಿ ವಿಜಾಪುರ ಪುರಕ್ಕೆ ಶಿವಪ್ರೇರಣೆಯಿಂದ ದಯಮಾಡಿಸಿದ ಹಾಲಕೇರಿ, ಬೀಳೂರ, ಹಾನಗಲ್ಲ, ಇಲಕಲ್ಲ ಶ್ರೀಮನ್ ನಿರಂಜನ ಮಹಾಸ್ವಾಮಿಗಳವರ ಹಾಗೂ ಇನ್ನೂ ಅನೇಕ ಸ್ಥಳಗಳ ಶಿವಯೋಗಿಗಳ ದರ್ಶನಾನಂದದ ಮಹತ್ವಲಾಭವನ್ನು ಮಾಡಿಕೊಡುವದಾಯಿತು.

ಈ ಪುರಾಣವು ಈ ಹೊತ್ತು ಅಂದರೆ ಫಾಲ್ಗುಣ ಶುದ್ಧ ೭ ಗುರುವಾರ ದಿವಸ ಜಂಗಮ ಸಂತರ್ಪಣೆಯೊಡನೆ ಮುಗಿಸಿ ಮಂಗಲಾಚರಣ ಮಾಡಲ್ಪಟ್ಟಿತು. ಈ ಮಹತ್ವಚಿಂತನವನ್ನು ಬಯಸಿ, ತಾವೂ ಅನ್ಯರೂ ಕೃತಾರ್ಥರಾಗ ಮಾಡಿದ್ದು ವಿಜಾಪುರದ ಪ್ರಮುಖ ಭಕ್ತಮಹಾಶಯರಿಗೆ ಭೂಷಣವದೆ.

ಪ್ರೇಕ್ಷಕ.

ಶ್ರೀ ವೀರಶೈವಮತಸಂವರ್ಧಿನೀ ಸಭಾ, ಮುಡುಕದೊರೆ.

ಈ ಸಭೆಯ ಹದಿನೇಳನೆಯ ವಾರ್ಷಿಕ ಸಮಾರಂಭವು ೧೯೨೦ ನೇ ಜನವರಿ ೩೧ ಮತ್ತು ಫೆಬ್ರವರಿ ೧ ಈ ಎರಡು ದಿವಸಗಳಲ್ಲಿ ಸಾಂಗವಾಗಿ ನಡೆಯಿತು. ಮೊದಲನೆಯ ದಿವಸ ಮಧ್ಯಾಹ್ನಾನಂತರ ನಾಲ್ಕು ಗಂಟೆಗೆ, ಅನೇಕ ಸ್ಥಳಗಳಿಂದ ಬಂದಿದ್ದ ಮತವಾತ್ಸಲ್ಯಶೀಲರಾದ ಮಹನೀಯರನೇಕರು ಸಭೆಯನ್ನಲಂಕರಿಸಿದ್ದರು. ಸತ್ಕಾರಕ ಸಂಘಾಧ್ಯಕ್ಷರ ಭಾಷಣವಾದ ಮೇಲೆ ಸರ್ವಾನುಮತದಿಂದ ವೇ|| ಸಿದ್ಧಲಿಂಗಮುರಿದೇವರು ಸಭಾಧ್ಯಕ್ಷತೆಯನ್ನುವಹಿಸಿ, ಮತಾಭಿವೃದ್ಧಿಗೆ ಮಾಡಬೇಕಾದ ಸಲಹೆಗಳನ್ನೊಳಗೊಂಡ ಶ್ಲಾಘನೀಯವಾದೊಂದು ಉಪನ್ಯಾಸವನ್ನು ಮಾಡಿದರು. ಆಮೇಲೆ ಈ ಸಭಾ ಆಜೀವ ಸಭಾಧ್ಯಕ್ಷರ ಸೂಚನೆಯ ಮೇರೆ ಈ ಸಭೆಯವರು ಉದ್ದೇಶಿಸಿರುವ ಶ್ರೀ ಪಂಚಾಚಾರ್ಯರ ಪೀಠಸ್ಥಾಪನೆಗಾಗಿ ೨೫೦ ರೂ. ಗಳನ್ನು ವಾಗ್ದಾನ ಮಾಡಿದರು. ತರುವಾಯ ಮಹಾವಿದ್ವಾನ್ ಕರ್ನಾಟಕ ಭಾಷಾರತ್ನ ವೇ|| ಕಂಬಸವಶಾಸ್ತ್ರಿಗಳವರು ವೀರಶೈವಮತತತ್ವ ವಿಚಾರವಾಗಿ ಯುಕ್ತಿಯುಕ್ತವಾದೊಂದು ಭಾಷಣವನ್ನು ಮಾಡಿದರು.

ಎರಡನೆಯ ದಿನ ಸಾಯಂಕಾಲ ೫ ಘಂಟೆಗೆ ಬಹುಮಾನ ಸಭೆಯು ನೆರೆದಿತು. ಸಬ್‌ಡಿವಿಜನ್ ಆಫೀಸರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ಬಂದು ಸಭೆಯನ್ನಲಂಕರಿಸಿದ್ದರು. ಈ ಸಭಾ ಆಜೀವ ಸಭಾಧ್ಯಕ್ಷರು "ವಿಶಿಷ್ಟಾದ್ವೈತ ಮತತತ್ವವನ್ನು ಕುರಿತು ಹೃದಯಂಗಮವಾಗಿ ಉಪನ್ಯಾಸ ಮಾಡಿದರು.

ತರುವಾಯ ಕಳೆದ ವರ್ಷದ ಸಭಾರಿಪೋರ್ಟನ್ನು ಓದಿದ ಮೇಲೆ ಸಬ್‌ಡಿವಿಜನ್ ಆಫೀಸರವರು ಏಕಮತ್ಯ, ವಿದ್ಯಾಭ್ಯಾಸ, ಮತಗ್ರಂಥಗಳ ಪ್ರಸಾರ ಇವುಗಳ ವಿಷಯವಾಗಿ ಸ್ವಲ್ಪಕಾಲ ಮಾತನಾಡಿದರು. ವೇದಘೋಷವೂ, ಸಂಗೀತವೂ ಆದ ಮೇಲೆ ಸಭಿಕರಿಗೆ ಫಲಪುಷ್ಪ ಗಂಧ ತಾಂಬೂಲಗಳು ವಿನಿಯೋಗಿಸಲ್ಪಟ್ಟು, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯು ವಿಸರ್ಜಿಸಲ್ಪಟ್ಟಿತು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 19

ನಾವು ಎ. ಆಲ್‌ಬ್ಯುಕರ್ಕ್ಯು ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ. }
ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 21

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಸರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಆಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿದ್ದು, ಗುದ್ದವ್ಯಸಬೀನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈಕೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ಟಿಕೇಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಮಾರ್ಚಿ ತಾ|| ೭ ರಿಂದ ೧೯೨೦ ನೆಯ ಮಾರ್ಚಿ ತಾ|| ೧೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಫಾಲ್ಗುಣ ಬ|| ತದಿಗೆಯಿಂದ ಫಾಲ್ಗುಣ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
7	ಭಾನು	ತದಿ	49·5	ಹಸ್ತ	16·3	25
8	ಸೋಮ	ಚೌತಿ	51·40	ಚಿತ್ತ	19·17	26
9	ಮಂಗಳ	ಪಂಚ	55·18	ಸ್ವಾತಿ	23·41	27
10	ಬುಧ	ಷಷ್ಠಿ	60	ವಿಶಾಖ	29·5	28
11	[1]ಗುರು	ಷಷ್ಠಿ	0·18	ಅನೂ	35·15	29
12	ಶುಕ್ರ	ಸಪ್ತ	5·25	ಜ್ಯೇಷ್ಠ	41·48	30
13	ಶನಿ	ಅಷ್ಟ	10·46	ಮೂಲ	48·22	1

(1) ಚಿಟ್ಟಿಪಲ್ಲಿ ಮಹಾಬಲೇಶ್ವರಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಯಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀರ್ತಿತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಮಾರ್ಚಿ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೧೩

MYSORE GOVERNMENT ADVERTISEMENTS.

33

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಶನ್ ಏಜನ್ಸಿ

ಈ ವರುಷ ಇಲ್ಲಿ ಬೆಳೆ (ಹರದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

10 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 35

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೨.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ್, ಕಮಿಷನ್ ಏಜಂಟ್, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣಿ, ಶೀಗೆಕಾಯಿ, ವಳ್ಳೆಯೆಣ್ಣಿ, ಮೆಣಸಿಕಾಯಿ, ಆಲೂಗಡ್ಡಿ, ಬೆಳ್ಳುಳ್ಳಿ, ಉಳ್ಳಿಗಡ್ಡಿ, ಜೋಳ, ಗೋಧಿ, ಅಕ್ಕಿ, ಶೇಂಗಬ್ಯಾಳಿ, ಕಡಲೆಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಸಿಯಿಂದ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 7

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಮ್ಕು ತಂಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ.. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
26 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
13 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 14

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

19

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕಾರ್ಯಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ ಕೊಟ್ಟು ಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಮಾರ್ಚಿ ತಾ|| ೨೮ ನೆಯ ಭಾನುವಾರ.

ವೀರಶೈವರಲ್ಲಿ „ ನಿಪಾತಮುಖಿ "

ಮತದ ರಕ್ಷಣೆಯೂ ಏಳ್ಗೆಯೂ ಉಂಟಾಗಬೇಕಾದರೆ ಒಳಗೆ ಒಗ್ಗಟ್ಟು ಬಲಿದು, ಹೊರಗಣಿಂದ ಉಂಟಾಗುವ ಉಪಹತಿಯನ್ನು ನಿವಾರಿಸುವುದಕ್ಕೆ ಸಂಘಶಕ್ತಿಯನ್ನು ಉಪಯೋಗಿಸಿ, ಉಚ್ಚಧ್ಯೇಯವನ್ನಿಟ್ಟುಕೊಂಡು ಕೆಲಸಮಾಡುವ ಲವಲವಿಕೆಯು ಮತದ ಜನರಲ್ಲಿ ಹೆಚ್ಚಬೇಕು. ಇದಕ್ಕೆ ಭಿನ್ನಗಳಾದ ನಡತೆಗಳೂ ಭಾವಗಳೂ ತಲೆದೋರಿದ ಸಮಯದಲ್ಲಿ ಅವುಗಳ ಮೂಲೋತ್ಪಾಟನೆಗೆ ಮತದ ಮುಂದಾಳುಗಳೆನಿಸಿಕೊಂಡಿರುವ ವಿದ್ಯಾವಿವೇಕಸಂಪನ್ನರೂ ಧೀಮಂತರೂ ಶ್ರೀಮಂತರೂ ತಕ್ಕ ಪ್ರಯತ್ನಗಳನ್ನು ಮಾಡಬೇಕು. ಉಪೇಕ್ಷಿಸಿ ಅವರುಗಳು ತಮ್ಮ ಕರ್ತವ್ಯವನ್ನು ಮಾಡದೆಹೋದರೆ ಹಾರಿದ ಒಂದು ಕಿಡಿಯು ಕಾಲಕ್ರಮದಲ್ಲಿ ವನವನ್ನೇ ದಹಿಸುವಂತೆ ದುರ್ಭಾವ ಬೀಜವು ಮತದ ಹದಿಯನ್ನೇ ಸಡಿಲಗೊಳಿಸಿ ಮಹಾನಿಪಾತಕ್ಕೆ ಸಾಧಕವಾಗಿ ಪರಿಣಮಿಸುವುದು.

ಸದ್ಯದಲ್ಲಿ ವೀರಶೈವಮತದೊಳಗೆ ಯಾವ ದುರದೃಷ್ಟದಿಂದಲೋ ದುರ್ಭಾವಬೀಜವು ಮೊಳೆಯುತ್ತಿರುತ್ತದೆ. ಮೆದೆಗೆ ಬೆಂಕಿಯನ್ನಿಕ್ಕಿ ಅರಳನ್ನು ಆರಿಸಿಕೊಂಡು ತಿನ್ನುವಂಥ ಕೆಲಜನರು ತಮ್ಮ ವಿದ್ಯಾಬುದ್ಧಿಗಳನ್ನು "ವಿದ್ಯಾ ವಿವಾದಾಯ" ಎಂಬ ನೀತಿಯಂತೆ ಅಂತಃಕಲಹಾಭಿವೃದ್ಧಿಗೆ ಉಪಯೋಗಿಸಿ, ಅರಿಯದ ಜನರಲ್ಲಿ ದುರ್ಬೋಧನೆ ಮಾಡಿ, ಸಂಶಯವನ್ನೂ ಮಾತ್ಸರ್ಯವನ್ನೂ ಹುಟ್ಟಿಸಿ, ಒಡಕಿನಿಂದ ಕಾದಾಟವು ಅಭಿವೃದ್ಧಿಗೊಳ್ಳುವಂತೆ ಮಾಡುವಲ್ಲಿ ತತ್ಪರರಾಗಿರುತ್ತಾರೆ. ಇದರಿಂದ ಆಗಬಹುದಾದ ಅನರ್ಥಗಳಿಗೆ ಆಗಲೇ ಪ್ರಾರಂಭವಾಗಿದೆ. ಇದನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದರೂ ಮತದ ಮುಂದಾಳುಗಳು ತಕ್ಕ ನಿರೋಧೋಪಾಯವನ್ನು ಯೋಚಿಸದಿರುವುದು ಅವರ ಘನತೆಗೆ ಕಳಂಕಪ್ರಾಯವಾಗಿರುವುದು ಮಾತ್ರವೇ ಅಲ್ಲದೆ ಕರ್ತವ್ಯಶಕ್ತಿವಂಚನೆಯ ದೋಷವಾದರೂ ಅವರ ಮೊಡಲಿಗೆ ಬೀಳುವುದು.

ಈಚೆಗೆ ಕೆಲತರುಣರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಬಂದ ಕೂಡಲೇ ತಮ್ಮ ವಿದ್ಯೆಯನ್ನು ಮತಹಿತಕ್ಕೂ ಆತ್ಮಕೀರ್ತಿಗೂ ಸಾಧಕವಾಗುವಂತೆ ಉಪಯೋಗಿಸಿಕೊಳ್ಳದೆ ನಿರಾಭಾರಿಗಳ ಯಜ್ಞಕ್ಕೆ ಕಂಕಣ ಕಟ್ಟಿಕೊಂಡವರಂತೆ ಪ್ರಯತ್ನಿಸುತ್ತಿರುವರೆಂದು ಅನೇಕ ಜನರು ಆಡಿಕೊಳ್ಳುತ್ತಿರುವರು. ಅವರು ಹೀಗೆ ಉಜ್ಜುಗಿಸಿದೀಚೆಗೆ ಮತದ ಅಂತರಂಗದಲ್ಲಿ ವ್ಯವಸ್ಥೆಗೊಳ್ಳಬೇಕಾಗಿದ್ದ ಅನೇಕ ವಿಷಯಗಳು ಬಯಲಿಗ್ಗೆಬಿದ್ದು ಮತದ ಗೌರವಪ್ರತಿಷ್ಠೆಗಳಿಗೇ ಭಂಗಬರುವ ಕೆಲಸಗಳು ಅನೇಕವಾಗಿ ನಡೆಯಲುಪಕ್ರಮಿಸಿವೆ. ಇಂಥ ಕೆಲವರು ಶ್ರೀಜಗದ್ಗುರು ಕಾಶೀ ವಿಶ್ವಾರಾಧ್ಯಪೀಠದ ಮಹಾಸ್ವಾಮಿಗಳ ಬಳಿಯಲ್ಲಿಯೂ ಈಗಿನ ಉಜ್ಜಯಿನೀ ಜಗದ್ಗುರು ಸದ್ಧರ್ಮಸಿಂಹಾಸನ ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳಲ್ಲಿಯೂ ಆಶ್ರಯಗೊಂಡು ಇದ್ದರೆಂದು ಕೇಳಿದ್ದೆವು. ಇವರ ಸಂಗದಿಂದ ಅವರ ಮನೋಭಾವಗಳೂ ಯಾವರೀತಿಯಲ್ಲಿ ಪರಿಣಮಿಸಿವೆಯೋ ಎಂಬುದು ಅನೇಕರಲ್ಲಿ ಸಂಶಯವನ್ನುಂಟುಮಾಡಿದ್ದಿತು. ಕಳೆದ ತಾ|| ೨೫ ನೆ ಮೈಸೂರು ಸಂಪದಭ್ಯುದಯ ಸಂಚಿಕೆಯಲ್ಲಿ ಉಜ್ಜಯಿನಿಯ ಜಗದ್ಗುರು ಚರಪಟ್ಟಾಧಿಪತಿಗಳು, ದುರ್ಗದ ನಿರಂಜನ ಪೀಠದವರು ಮತಸಂಬಂಧವಾಗಿ ನಡೆಯಿಸಿದ್ದ ಒಂದು ಕಾರ್ಯಸಂಬಂಧವಾಗಿ ಪ್ರತಿಪತ್ರಿಕೆಯನ್ನು ಕೊಟ್ಟು ಮಾಡಿರುವ ಆರ್ಡರನ್ನು ತಮ್ಮ ಧೀಸಚಿವರ ಹೆಸರಿನಿಂದ ಪ್ರಕಟಿಸಿಕೊಂಡಿರುವುದನ್ನು ನೋಡಿದರೆ, ಇವರೂ ಹೇಗೆ ಅಗ್ರಹಪರವಶರಾಗಿ ಮತದ ಮಹಾನರ್ಥವನ್ನು ಲಕ್ಷಿಸದೆ ನಡೆಯುತ್ತಿರುವರೆಂಬುದು ವ್ಯಕ್ತವಾಗಿ, ಮತದ ರಕ್ಷಣದಂಥ ಘನತರ ಭಾರವನ್ನು ಹೊತ್ತ ಇಂಥವರ ಸ್ಥಿತಿಯೂ ಹೀಗಾಗಿರುವುದು ಮತದ ದುರ್ದೈವವೇ ಸರಿ ಎಂದು ವಿಷಾದಿಸಬೇಕಾಗಿ ಬಂದಿರುವುದು.

ನಮ್ಮ ಮತದ ಪಂಚಾಚಾರ್ಯಪೀಠಗಳವರೊಳಗೇ ಒಬ್ಬರು ಕೊಟ್ಟ ಬಹಿಷ್ಕಾರ ಪತ್ರಿಕೆಯ ಮೇಲೆ ಮತ್ತೊಂದು ಪೀಠದವರು ಶುದ್ಧಿಪತ್ರಿಕೆಯನ್ನು ಕೊಡುವುದೂ, ಒಬ್ಬರ ಶುದ್ಧಿಪತ್ರಿಕೆಯ ಮೇಲೆ ಮತ್ತೊಬ್ಬರು ಬಹಿಷ್ಕಾರ ಪತ್ರಿಕೆಯನ್ನು ಹುಟ್ಟಿಸುವುದೂ, ಒಂದೇ ಮತದವರಲ್ಲಿ ಪಟ್ಟದವರ ಪತ್ರಿಕೆಗೆ ವಿರುದ್ಧವಾಗಿ ಚರಪಟ್ಟದವರು ಪತ್ರಿಕೆಯನ್ನು ಕೊಡುವುದೂ ಸಹ ಹೊಸದಾದ ಸಂಗತಿಯೇನೂ ಅಲ್ಲ. ಇಂಥ ಕ್ರಿಯೆಗಳು ನಮ್ಮ ಮತದಲ್ಲೇ ಇವೆಯಂತಲ್ಲ, ದ್ವೈತಾದ್ವೈತಾದಿ ಮತಗಳ ಆಚಾರ್ಯಮತಗಳವರಲ್ಲೂ ಹೀಗೆಯೇ ನಡೆದೂ ನಡೆಯುತ್ತಲೂ ಇರುತ್ತವೆ. ಆದರೆ ಅವುಗಳನ್ನೆಲ್ಲಾ ವೃತ್ತಪತ್ರಿಕೆಗೆ ಬರೆದು ಬಯಲಿಗೆ ಹಾಕಿ ಒಂದು ಮತದವರ ಅಪಮಾನವನ್ನು ಮಾಡಿಸಬೇಕೆಂದು ಮತ್ತೊಂದು ಮತದವರು ಯತ್ನಿಸುವುದು ಮತದ ಗೌರವಕ್ಕೇ ಹಾನಿಕರವಲ್ಲದೆ ಭೂಷಣವಲ್ಲ. ಹೀಗೆ ಒಬ್ಬರು ಮಾಡಿದರೆ ಅದಕ್ಕೆ ಪ್ರತಿಯಾಗಿ ಮತ್ತೊಬ್ಬರೂ ಅಂಥ ಪ್ರತಿಪತ್ರಿಕೆಯನ್ನು ಬರೆದು ಅದನ್ನು ಬಯಲಿಗೆ ಹಾಕಿ ಪರಸ್ಪರ ಯೋಗ್ಯತಾದಿ ಚರ್ಚೆಗಳನ್ನು ಹೊರಗಣ ಜನರ ಮುಂದೆಲ್ಲಾ ಮಾಡಿಸುವುದು ಮತಕ್ಕೆ ಗೌರವವನ್ನು ತಂದಂತಾಗುವುದಿಲ್ಲ. ಮತಕ್ಕೆ ಉಂಟಾದ ಅಪಮಾನದಿಂದ ಮತಾಚಾರ್ಯರು ದೂರಸ್ಥರಾಗಿವುದು ಸಾಧ್ಯವಲ್ಲ. ಇದನ್ನು ನಮ್ಮ ಪೂಜ್ಯಪಾದರುಗಳೆಲ್ಲಾ ಶಾಂತಮನಸ್ಸಿನಿಂದ ಪರ್ಯಾಲೋಚಿಸುವವರಾಗಬೇಕು. ಮತ್ತು ಇಂಥ ಕೃತ್ಯಗಳನ್ನು ಇತರರು ಮಾಡುತ್ತಿದ್ದರೂ ತಮ್ಮ ಪದವಿಗೆ ಅನುಗುಣವಾದ ಗೌರವದಿಂದಲೂ ದೀರ್ಘದೃಷ್ಟಿಯಿಂದಲೂ ಅದನ್ನು ಅಧಿಕಾರ ಶಕ್ತಿಯಿಂದ ನಿರೋಧಿಸಿ ಮತಘನತೆಯನ್ನು ಇವರುಗಳು ಕಾಪಾಡುವವರಾಗಬೇಕು.

ಇನ್ನು ಪಟ್ಟಾಧಿಕಾರಿ ಸಮ್ಮೇಳನ ಸಂಬಂಧವಾಗಿ ೨ನೆ ಪ್ರಯತ್ನ ನಡೆದಿರುವ ವಿಷಯವನ್ನಾಲೋಚಿಸಿದರೆ ಸಮಾಜಕ್ಕೆ ಹಿತವನ್ನು ಮಾಡುವ ಭಾಗಕ್ಕಿಂತಲೂ ಅನರ್ಥಮಾಡುವ ಭಾಗವೇ ಅದರಲ್ಲಿ ಅಧಿಕವಾಗಿರುವುದೆಂದು ತೋರುವುದು. ನವಲಗುಂದದಲ್ಲಿ ಮೇ ತಿಂಗಳಲ್ಲಿ ನಡೆಯಲಿಕ್ಕಿರುವ ದ್ವಿತೀಯ ಸಂಮೇಳನದ ಪ್ರಕಟನ ಪತ್ರವನ್ನು ಈ ಪತ್ರದ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಆ ಸಭಾಕಾರ್ಯಕ್ರಮದ ಪಟ್ಟಿಯಲ್ಲಿ ವಿರಕ್ತರ ಪಟ್ಟದವರ ಕಲಹಕ್ಕೆ ಗುಂಪನ್ನು ಬಲಮಾಡಿ ಕಾದಾಡಿಸಲು ಸಾಧಕಗಳಾದ ವಿಷಯಗಳೇ ತುಂಬಿವೆ. ಇಂಥ ಸಂಮೇಳನಗಳು ನಡೆಯದಿರುವುದೇ ಒಳ್ಳೆಯದು. ಏಕೆಂದರೆ ಈರ್ಷ್ಯಾಸೂಯೆಗಳಿಂದ ನಡೆಯುವ ಈ ಸಭೆಗಳು ಕಡೆಕಡೆಗೆ ಎಷ್ಟು ಅನರ್ಥವನ್ನುಂಟುಮಾಡುವುವೋ ಹೇಳಲಿಕ್ಕಾಗದು. ಈ ಮಾತುಗಳನ್ನೆಲ್ಲಾ ನಾವು ಮತಹಿತದೃಷ್ಟಿಯೊಂದರಿಂದ ಆಡುತ್ತೇವೆಯೇ ಹೊರತು ಯಾವೊಂದುಪಕ್ಷಾಂಧತೆಯಿಂದಲೂ ಆಡುತ್ತಲಿಲ್ಲ. ಮತ್ತೂ ಈಗ ಇಂಥ ಚರ್ಚೆಗಳು ಮತಕ್ಕೆ ಅನವಶ್ಯಕಗಳೆಂತಲೂ, ಮತಶ್ರೇಯಸ್ಸಿಗಾಗಿ ಬೇರೆ ವಿಧದಲ್ಲಿ ಮಾಡಬೇಕಾದ ಕಾರ್ಯಗಳ ಭಾರವು ಸಮಾಜದ ಮೇಲೆ ವಿಶೇಷವಾಗಿರುವುದೆಂತಲೂ ಹಿಂದೆ ನಮ್ಮ ೨-೩ ಸಂಚಿಕೆಗಳ ಅಗ್ರಲೇಖನಗಳಲ್ಲಿ ಸ್ಪಷ್ಟಪಡಿಸಿಯೇ ಇರುವೆವು. ನಮ್ಮನ್ನು ನಿರಾಭಾರಿಗಳ ಪಕ್ಷವನ್ನು ವಹಿಸಿ ಮಾತನಾಡುವರೆಂದೂ, ಪಂಚಸಿಂಹಾಸನಗಳವರ ಜಗದ್ಗುರುತ್ವವನ್ನು ನಾವು ಸೈರಿಸದವರೆಂದೂ ತೆರೆಮರೆಯಲ್ಲಿ ಕೆಲವರು ಆಡಿಕೊಂಡಿರುವರು. ನ್ಯಾಯವೂ ಹಿತಪರಿಣಾಮಿಯೂ ಆದ ವಚನವನ್ನು ಆಡುವವರಲ್ಲಿ ವಿರುದ್ಧದೃಷ್ಟಿಯೂ ಜುಗುಪ್ಸೆಯೂ ಹುಟ್ಟುವಂಥ ತಂತ್ರಗಳನ್ನು ಮಾಡಿ, ಅಹಿತಪರಿಣಾಮಿಯಾದರೂ ಮೃದುವಾಗಿರುವ ವಚನಗಳನ್ನಾಡಿ ಸ್ವಾರ್ಥಸಾಧನೆ ಮಾಡಿಕೊಳ್ಳುವ ನೀಚರು ಪ್ರಭುಗಳ ಬಳಿಯಲ್ಲಿ ಕೆಲಕೆಲರಿರುವರೆಂಬುದು ಜಗದ್ವಿದಿತವಾದ ವಿಷಯವು. ಸ್ಟಾರ್ ಪತ್ರವು ಮತದ ಮತ್ತು ಮತಾಚಾರ್ಯರ ಗೌರವಾಭ್ಯುದಯಗಳಿಗಾಗಿ ತನ್ನ ತನುಧನಮನಗಳನ್ನೆಲ್ಲಾ ಆದಿಯಿಂದಲೂ ಹೇಗೆ ಸವೆಯಿಸಿರುವುದೆಂಬುದನ್ನು ಕಣ್ಣಿನಿಂದ ಕಾಣದ ಹಸುಕೂಸುಗಳಂಥವರು ತನ್ನ ಸ್ವಾರ್ಥೈಕಸಾಧಕತೆಯ ದೋಷವನ್ನು ಸ್ಟಾರಿನ ಮೇಲೆ ಹೊರಿಸುವುದಕ್ಕೆ ಉಜ್ಜುಗಿಸಿದ ಮಾತ್ರಕ್ಕೇ ಅದು ನಮ್ಮ ಸತ್ಯದೃಢಸಂಕಲ್ಪವನ್ನೂ ಬದ್ಧದೀಕ್ಷೆಯನ್ನೂ ಲೇಶವೂ ಕದಲಿಸಲಾರದು. ಮತಕ್ಕೆ ಹಿತವನ್ನು ಮಾಡುವವನು ಯಾವನೊಬ್ಬ ಪಾಮರನಾಗಿದ್ದರೂ ಅವನು ಶಿರಸಾವಂದ್ಯನೆಂಬುದೊಂದೇ ಸ್ಟಾರಿನ ದೃಢಶ್ರದ್ಧೆಯು. ಅದುಕಾರಣ ಮತಕ್ಕೆ ಅಭ್ಯುದಯವನ್ನು ಲೇಶಮಾತ್ರವಾಗಾದರೂ ಚಿಂತಿಸುವ ಯಾವುದೊಂದು ಪ್ರಯತ್ನವನ್ನೂ ಸ್ಟಾರ್ ಪತ್ರವು ಸರ್ವಾಂಗದಿಂದ ಸೇವಿಸಲೂ, ಮತಕ್ಕೆ ಲೇಶಮಾತ್ರ ಧಕ್ಕೆಯನ್ನು ತರುವ ಯಾವುದೊಂದು ಯತ್ನವನ್ನೂ ಸರ್ವಾತ್ಮನಾ ನಿಷೇಧಿಸಲೂ ನಿರ್ದಾಕ್ಷಿಣ್ಯವಾಗಿಯೂ ನಿರ್ಭಯವಾಗಿಯೂ ವರ್ತಿಸುವುದೆಂಬುದನ್ನು ವಾಚಕರೆಲ್ಲರೂ ಅರಿತೇ ಇರುತ್ತಾರೆ. ಸತ್ಯವಾಗಿ ತೋರಿದುದನ್ನು ನಿರ್ಮತ್ಸರಬುದ್ಧಿಯಿಂದ ಸ್ಟಾರ್‌ಪತ್ರವು ಆಡುವ ಮಾತುಗಳಲ್ಲಿ ಯಾರಿಗಾದರೂ ಅಸಂತೃಪ್ತಿಯುಂಟಾದರೆ ಉಪಾಯವಿಲ್ಲ. ಇದ್ದ ದೋಷವನ್ನು ಆಡಿತೋರಿಸುವಲ್ಲಿ ಅದನ್ನು ತಿದ್ದಿಕೊಳ್ಳುವಂತೆ ಮಾಡಿಕೊಳ್ಳಲೆಂಬುದು ಸ್ಟಾರಿನ ಉದ್ದೇಶವೇ ಹೊರತು ಅದರಿಂದ ಸ್ವಮತಸ್ಥರಾದ ಯಾರೊಬ್ಬರ ಮನಸ್ಸನ್ನೂ ನೋಯಿಸಬೇಕೆಂಬುದು ಇದರ ಉದ್ದೇಶವೇ ಅಲ್ಲ. ಈ ವಿಷಯವು ಹಾಗಿರಲಿ. ಪ್ರಯತ್ನಪಟ್ಟು ಅರ್ಥವ್ಯಯಾದಿ ಸಾಧ್ಯವಾದ ಸಮ್ಮೇಳನಗಳನ್ನು ನಡೆಯಿಸುವ ನವಲಗುಂದದ ಗುರುವರ್ಗ ದ್ವಿತೀಯ ಸಂಮೇಳನದ ಚಾಲಕರಾದ ಮಹನೀಯರು ಜಗದ್ಗುರುತ್ವ ವಿಮರ್ಶೆ ಎಂಬುದೇ ಮೊದಲಾದ ಪರಸ್ಪರಘರ್ಷಣದಿಂದ ಕಿಡಿಯನ್ನು ಹುಟ್ಟಿಸುವ ವಿಷಯಗಳ ವಿಚಾರವನ್ನು ಸಾಕುಮಾಡಿ, ಗುರುವರ್ಗದವರ ಸಾಮರ್ಥ್ಯಗಳನ್ನು ಹೆಚ್ಚಿಸುವ-ಮತದವರಲ್ಲಿ ಆಚಾರಲೋಪಗಳನ್ನು ದೂರಮಾಡುವ ಉಪಾಯಗಳನ್ನಾಲೋಚಿಸುವ-ಮತ್ತು ಹಿಂದುಹಿಂದಕ್ಕಿಂತಲೂ ಮುಂದುಮುಂದೆ ಮತದವರಲ್ಲಿ ಐಕ್ಯವು ವೃದ್ಧಿಗೊಳ್ಳುವಂತೆ ಮಾಡುವ ಮತಕ್ಕೆ ಪರಸಮಯದವರಿಂದ ತಟ್ಟುತ್ತಿರುವ ಅಗೌರವ ಮತ್ತು ಹಾನಿಗಳ ನಿರೋಧದ ಉಪಾಯಗಳನ್ನು ಪರ್ಯಾಲೋಚಿಸುವ ಕರ್ತವ್ಯವನ್ನು ಮುಖ್ಯವಾಗಿ ಪರಿಗ್ರಹಿಸುವವರಾಗಲಿ ಎಂಬುದೇ ನಮ್ಮ ಕೋರಿಕೆಯು.

ಇನ್ನು ಕಳೆದ ೧೯ ನೆ ತಾ|| ಶುಭೋದಯದಲ್ಲಿ "ಶುಭೋದಯದ ಮೇಲಿನ ಬಹಿಷ್ಕಾರವು ನಷ್ಟವಾಯಿತು" ಎಂಬ ಶಿರೋಲೇಖನದ ಬರವಣಿಗೆಯಲ್ಲಿ ಕಂಡ ವಿಷಯಗಳನ್ನು ನೋಡಿದಮೇಲಂತೂ ಈ ನಮ್ಮ ಅಗ್ರಲೇಖನದ ತಲೆಯ ಮೇಲೆ ಕೊಟ್ಟಿರುವಂತೆ "ವೀರಶೈವರಲ್ಲಿ ವಿನಿಪಾತಮುಖದ" ಉದಯವಾಯಿತೆಂಬ ಸ್ಫುರಣವು ಥಟ್ಟನೆ ನಮ್ಮ ಮನಸ್ಸಿಗೆ ಉಂಟಾಯಿತು. ಹುಬ್ಬಳ್ಳಿಯ ಮ|| ಸಿದ್ಧರಾಮಪ್ಪ ಪಾವಟೆಯವರು ಶುಭೋದಯದಲ್ಲಿ ಹಿಂದೆ ಬಂದಿದ್ದ ಅಪಮಾನಕಾರಕ ಲೇಖನದ ಮೇಲೆ ನಡೆಯಿಸಿದ ವ್ಯಾಜ್ಯಕ್ಕಾಗಿ ಅವರಿಗೆ ಮತದ ಕೃತಜ್ಞತೆಯನ್ನು ತಿಳಿಯಿಸುವ-ಮತ್ತು ಹಿಡಿದ ಕೆಲಸವನ್ನು ಮುಂದೆ ಮತದವರು ಕೊನೆಮುಟ್ಟಿಸುವುದಕ್ಕಾಗಿ ಬೊಂಬಾಯಿ ಸರಕಾರಕ್ಕೆ ಡೆಪ್ಯುಟೇಷನ್ ಹೋಗಬೇಕೆನ್ನುವ-ನಿರ್ಧಾರವನ್ನು ಅಖಿಲಭಾರತ ವೀರಶೈವ ಮಹಾಸಭೆಯು ಮಾಡಿರುವಾಗ, "ಬಳ್ಳಾರಿ, ಮೈಸೂರು, ಗೋಮಾಂತಕ ಪ್ರಾಂತ್ಯಗಳ ವೀರಶೈವ ಮಹಾಜನಗಳು ಸಭೆ ಮಾಡಿ ಚರ್ಚಿಸಿ, ಪಾವಟೆಯವರು ಮಾಡಿದ್ದ ಫಿರ್ಯಾದಿಯು ತಮಗೆ ಸಂಮತವಲ್ಲವೆಂದೂ, ಶುಭೋದಯದಲ್ಲಿ ಬಂದಿದ್ದ ಲೇಖವು ಲಿಂಗಾಯಿತ್ ಧರ್ಮಕ್ಕಾಗಲೀ ಧರ್ಮಗುರುಗಳಿಗಾಗಲೀ ಮಾನಹಾನಿಕರವಲ್ಲವೆಂದೂ ತೀರ್ಮಾನಿಸಿ, ಬೊಂಬಾಯಿ ಸರ್ಕಾರಕ್ಕೆ ೧೨೩ ಅರ್ಜಿಗಳನ್ನು ಬರೆದುಕೊಂಡಿದ್ದಾರೆ" ಎಂದು ಶುಭೋದಯವು ಈಗತಾನೇ ಬರೆದುಕೊಂಡಿರುವ ಮಾತು ನಿಜವಾಗಿದ್ದರೆ ವೀರಶೈವರಲ್ಲಿ ವಿನಿಪಾತಮುಖೋದಯವಾಯಿತೆಂದು ಹೇಳುವಲ್ಲಿ ಅಡ್ಡಿಯೇನುಂಟು? ಮಹಾಸಭೆಯ ಮುಖಕ್ಕೆ ಮಸಿ ಬಳಿದಂತೆ ಇಂಥ ವಿರುದ್ಧಪ್ರಯತ್ನವು ವೀರಶೈವದ್ರೋಹಿಗಳ ಛದ್ಮದಿಂದ ನಡೆದಿದ್ದೀತೇ ಹೊರತು ಮತ್ತೆ ಬೇರೆಯಲ್ಲ. ಇಂಥ ಸಭೆಯನ್ನು ಯಾವಲ್ಲಿ ಯಾರು ಸೇರಿ ನಡೆಯಿಸಿದರೆಂಬುದು ಯಾರಿಗೂ ಗೊತ್ತಿಲ್ಲ. ಆ ಅನರ್ಥಗಳೆಲ್ಲಾ ವಿಶ್ವಾಸದ್ರೋಹಿಗಳ ಪ್ರೇರಣೆಯಿಂದಲೂ ಆತ್ಮಬುದ್ಧಿವಿಹೀನರ ಔದಾಸೀನ್ಯದಿಂದಲೂ ನಡೆದಿರಬೇಕೆಂದು ಯೋಚಿಸಬೇಕಾಗಿರುತ್ತದೆ. ಶುಭೋದಯದ ಲೇಖನದ ನಿಜಸ್ಥಿತಿಯು ಚೆನ್ನಾಗಿ ಗೊತ್ತಾಗುವವರೆಗೂ ಈ ಸಂಬಂಧವಾಗಿ ಹೆಚ್ಚಿಗೆ ಮಾತನಾಡಲು ನಾವು ಅಪೇಕ್ಷಿಸುವುದಿಲ್ಲ. ಅಂತು ಮತದೊಳಗೆ ಒಡಕು ಹುಟ್ಟಿದರೆ ಪರಸ್ಪರ ನಿಗ್ರಹ ಬುದ್ಧಿಯಿಂದ ಆತ್ಮಹಾನಿಯನ್ನೂ ಲಕ್ಷಿಸದೆ ಜಾಲ್ಮಜನರು ಎಂಥ ಕೆಲಸವನ್ನು ಮಾಡುವುದಕ್ಕೂ ಹೇಸುವುದಿಲ್ಲ. ಅದರಿಂದ ೩ ನೆಯವರ ಲಾಭವಾಗುವುದು ಮಾತ್ರ ನಿಜ. ಇವೆಲ್ಲಾ ವಿನಿಪಾತಮುಖದ ಕುರುಹುಗಳೆಂಬುದು ನಮ್ಮ ಅಭಿಪ್ರಾಯವು. ಇದನ್ನು ಉಪೇಕ್ಷಿಸದೆ ನಮ್ಮ ಜಗದ್ಗುರು ಪೀಠಾಚಾರ್ಯರುಗಳೂ ಮಾನ್ಯರಾದ ಲೌಕಿಕಾಗ್ರೇಸರರೂ ನಿರ್ಮೂಲನಕ್ಕೆ ತಕ್ಕ ಪ್ರಯತ್ನವನ್ನು ಮಾಡದೆ ಅಲಕ್ಷೀಕರಿಸಿ, ಮತದ ಸುಧಾರಣೆ ಸುಧಾರಣೆಗೆ ಎಂದು ಬೇರೆ ಕಡೆಯಲ್ಲಿ ಅನೇಕ ವಿಧವಾಗಿ ದುಡಿಯುತ್ತಲಿದ್ದರೆ ಬೊಕ್ಕಸಕ್ಕೆ ಬಿದ್ದ ಕನ್ನವನ್ನು ಲಕ್ಷಿಸದೆ ಕಣ್ಣುಮುಚ್ಚಿಕೊಂಡು ಗಳಿಸುತ್ತಿರುವ ಜಾಣನ ಗಳಿಸಾಳುತನದಂತಾಗುವುದು ನಿಜ.

ಒಳದೇಶ ವೃತ್ತಾಂತಗಳು.

ಬರುವ ತಾ|| ೩೧ ನೆ ಬುಧವಾರ ನಂಜನಗೂಡಿನಲ್ಲಿ ದೊಡ್ಡಜಾತ್ರೆ (ಪಂಚರಥೋತ್ಸವವು) ನಡೆಯುತ್ತದೆ.

ಮೈಸೂರು ಡಿಸ್ಟ್ರಿಕ್ಟಿನ ತಾಲ್ಲೂಕುವಾರು ಅನೇಕ ಗ್ರಾಮಗಳಲ್ಲಿ ದನಗಳ ದೊಡ್ಡರೋಗವು ವ್ಯಾಪಿಸಿ ನಷ್ಟವನ್ನುಂಟುಮಾಡುತ್ತಿದೆ.

ಮಿ|| ವಿ. ಎ. ಡಾನಿ ಎಂ.ಎ., ಎಫ್.ಸಿ ಎಫ್. ಯವರು ನಮ್ಮ ಸಂಸ್ಥಾನದಲ್ಲಿ ೨ ವರ್ಷಕಾಲ ಸಬ್ ಅ|| ಜಿಯಾಲಜಿಸ್ಟಾಗಿ ನಿಯಮಿಸಲ್ಪಟ್ಟಿದ್ದಾರೆ.

ಅಮಲ್ದಾರರುಗಳಾದ ಮ|| ಜಿ. ಶ್ರೀಕಂಠರಾಯರು ಸಿರಾ ತಾಲ್ಲೂಕಿನಿಂದ ಹೆಗ್ಗಡದೇವನಕೋಟೆ ತಾಲ್ಲೂಕಿಗೂ, ಅಲ್ಲಿದ್ದ ಮ|| ಜಿ. ಎಂ. ನರಸಿಂಹನಾಯಕರು ಸಿರಾ ತಾಲ್ಲೂಕಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಳೆದಸಲ ಕೆಡ್ಡಾದಲ್ಲಿ ಹಿಡಿದ ಆನೆಗಳೊಳಗೆ ೨೪ನ್ನೂ ಅರಮನೆಗೆ ಇಟ್ಟುಕೊಂಡು ಉಳಿದ ೧೫ ಆನೆಗಳನ್ನು ಕಲ್ಲಿಕೋಟೆ ಪ್ರಾಂತಕ್ಕೆ ಕಳುಹಿಸಿ ಹರಾಜುಮಾಡಿಸಿದ್ದರಲ್ಲಿ ಅವುಗಳೆಲ್ಲಾ ಮರಿಗಳಾಗಿದ್ದರೂ ದಾಮಾಷಾ ಪ್ರತಿಯೊಂದಕ್ಕೂ ೩ ಸಾವಿರ ರೂ.ನಂತೆ ಮಾರಲ್ಪಟ್ಟಿರುವುವೆಂದು ತಿಳಿಯುತ್ತೇವೆ.

ಶ್ರೀಮನ್ಮಹಾರಾಜರವರು ತಮ್ಮ ಸೆಕ್ರಿಟರಿಗಳೊಡನೆ ಕಾಶ್ಮೀರ ದೇಶವನ್ನು ಕುರಿತು ಕಳೆದ ಸೋಮವಾರ ರಾತ್ರಿ ಅರಸೀಕೆರೆ ಲೋಹಮಾರ್ಗದ ಮೇಲೆ ಸ್ಪೆಷಲ್ ಟ್ರೇನಿನಲ್ಲಿ ಪ್ರಯಾಣ ಮಾಡಿದರು. ಮಹಾಮಾತೃಶ್ರೀಯವರೇ ಮೊದಲಾದವರು ನೀಲಗಿರಿಯಲ್ಲಿ ಬೇಸಗೆಯನ್ನು ಕಳೆಯುವವರಾಗಿರುವರು.

ಕೈ|| ಯ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಬೆಳ್ಳಾವೆ ಗ|| ವಿ. ಚೆನ್ನಪ್ಪನವರ ಅಂತ್ಯೇಷ್ಟಿ ಸಂಬಂಧವಾದ ಜಂಗಮಾರಾಧನ ಕಾಲದಲ್ಲಿ ತೆಗೆದ ೨ ರೂ.ಗಳನ್ನೂ ಮೇಡ್ಲೇರಿ ಮ|| ಮುಂಡಾಸದ ಹಾಲಪ್ಪನವರ ಕುಮಾರ ಮಾದಪ್ಪನವರ ಲಗ್ನದಲ್ಲಿ ತೆಗೆದ ೧ ರೂ.ನ್ನು ನಾವು ಕೃತಜ್ಞತೆಯಿಂದ ಅಂಗೀಕರಿಸಿರುತ್ತೇವೆ.

ರಾಜಧಾನಿಯಲ್ಲಿ ಕುಡಿಯುವ ನೀರಿಗೆ ಕೊರತೆಯುಂಟಾಗಿದೆ. ಮ್ಯುನಿಸಿಪಾಲಿಟಿಯವರು ನಲ್ಲಿಗಳಲ್ಲಿ ನೀರನ್ನೊದಗಿಸುವುದಕ್ಕೆ ಉಂಟಾದ ವಿಘ್ನವನ್ನು ಕುರಿತು ಪ್ರಜೆಗಳಿಗೆ ಮುಂದಾಗಿ ಯಾವ ಪ್ರಕಟನೆಯನ್ನೂ ಮಾಡುವ ಹವ್ಯಾಸವನ್ನೇ ಇಟ್ಟುಕೊಳ್ಳದಿರುವುದರಿಂದ ಕಳೆದ ಯುಗಾದಿ ಹಬ್ಬ ಮೊದಲಾದ ದಿನಗಳಲ್ಲಿ ಪುರನಿವಾಸಿಗಳು ನೀರಿಗಾಗಿ ಬಹಳ ತಾಪತ್ರಯವನ್ನನುಭವಿಸಿದರು.

ಈ ಕೆಳಗೆ ಕಂಡಂತೆ ಮುನ್ಸೀಫರುಗಳ ವರ್ಗಾವರ್ಗಿಯು ಮಾಡಲ್ಪಟ್ಟಿರುತ್ತದೆ. ಮ||ಗಳಾದ ಎಚ್. ಕೆ. ಶ್ರೀನಿವಾಸರಾಯರು ಶಿವಮೊಗ್ಗೆಯಿಂದ ಮೈಸೂರು ೧ ನೆ ಮುನ್ಸೀಫ್ ಕೋರ್ಟಿಗೆ, ಎ. ಶ್ರೀನಿವಾಸರಾಘವಾಚಾರರು ಬೆಂಗಳೂರು ೧ ನೆ ಮುನ್ಸೀಫ್ ಕೋರ್ಟಿನಿಂದ ಶಿವಮೊಗ್ಗೆಗೆ, ಎಸ್. ವೆಂಕಟಾಚಲಯ್ಯನವರು ಕೋಲಾರ್ ಚಿನ್ನದ ಗಣಿಯಿಂದ ಬೆಂಗಳೂರು ೧ನೆ ಮುನ್ಸೀಫ್ ಕೋರ್ಟಿಗೆ, ಎಚ್. ಕೆ. ವೀರಬಸವಯ್ಯನವರು ಬೆಂಗಳೂರು ೨ನೆ ಮುನ್ಸೀಫ್ ಕೋರ್ಟಿನಿಂದ ಚಿನ್ನದ ಗಣಿಗಳಿಗೆ.

ಮೈಸೂರು ದೇಶದ ಬೆಂಗಳೂರು ಕೋಲಾರ ಮೊದಲಾದ ಪಟ್ಟಣಗಳಲ್ಲಿ ತಾ|| ೧೯ ರಲ್ಲಿ ಖಿಲಾಫತ್ ಸಭೆಗಳು ಹಿಂದೂಮಹಮ್ಮದೀಯರ ಒಗ್ಗಟ್ಟಿನಿಂದ ನಡೆದು ನಿರ್ಧಾರಗಳಾಗಿರುವುವು. ಭಾಂತನಾಡಿನ ಮುಖ್ಯಮುಖ್ಯ ಪಟ್ಟಣಗಳಲ್ಲೆಲ್ಲಾ ಆ ದಿನ ಇದೇ ತರದ ಸಭೆಗಳೂ ನಿರ್ಧಾರಗಳೂ ಆಗಿರುವುವು. ಅಲ್ಲೆಲ್ಲಾ ಹಿಂದೂಮಹಮ್ಮದೀಯರು ಐಕ್ಯವಾಗಿ ಅಂಗಡಿಮುಂಗಟ್ಟುಗಳನ್ನು ಮುಚ್ಚಿ ನ್ಯಾಯಸಮ್ಮತವಾಗಿ ತಮ್ಮ ಅಭಿಪ್ರಾಯಗಳನ್ನು ನಿರ್ಧಾರಮಾಡಿ ಕಳುಹಿಸಿಕೊಟ್ಟಿರುವರು ಎಲ್ಲೂ ಗಲಾಟೆಯೇನೂ ನಡೆಯಲಿಲ್ಲ.

ಕಳೆದ ತಾ|| ೧೯ನೆ ಶುಕ್ರವಾರದ ದಿನ ಖಿಲಾಫತ್ ದಿನಾಚರಣೆಯು ರಾಜಧಾನಿಯಲ್ಲೂ ನಡೆದಿತು.. ಮಹಮ್ಮದೀಯ ಸಹೋದರರಲ್ಲಿ ತಮಗಿರುವ ಸಾನುಭೂತಿಯನ್ನು ಹಿಂದುಗಳು ಚೆನ್ನಾಗಿ ವ್ಯಕ್ತಪಡಿಸಿದರು. ಆ ದಿನ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಟೌನ್‌ಹಾಲಿನ ಆವರಣದಲ್ಲಿ ಹಿಂದೂಮಹಮ್ಮದೀಯರ ದೊಡ್ಡ ಕೂಟವು ಮಿ|| ಮಹಮ್ಮದ್ ಸೇಟರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಮಹಮ್ಮದೀಯರಿಗೆ ಆಂಗ್ಲಮಂತ್ರಿಮಂಡಲದವರು ಮೊದಲು ಮಾಡಿದ್ದ ವಾಗ್ದಾನಕ್ಕೆ ಭಂಗಬಂದುಕೊಳ್ಳದಂತೆ ತುರ್ಕಿ ಸುಲ್ತಾನರ ಅಧಿಕಾರವನ್ನು ಪೂರ್ವದಂತೆಯೇ ಉಳಿಸಿಕೊಡಬೇಕಾದುದು ಕರ್ತವ್ಯವೆಂಬ ವಿಷಯದ ಮೇಲೆ ಅಧ್ಯಕ್ಷರೂ ಮ||ಗಳಾದ ದೊಡ್ಡ ಮ ಜ್ಞನವರೂ, ಎಂ. ವೆಂಕಟಕೃಷ್ಣಯ್ಯನವರೂ ಭಾಷಣ ಮಾಡಿದರು. ಆ

ಫರ್ಸ್ಟ್ ಸ್ಟೇಟ್ ಸೆಕ್ರಿಟರಿಯವರಿಗೆ ತಂತ್ರೀವಾರ್ತೆಯಮೂಲಕ ಸಭೆಯ ನಿರ್ಧಾರವನ್ನು ಕಳುಹಿಸಿಕೊಡಬೇಕೆಂಬ ತೀರ್ಮಾನವಾಯಿತು.

ಕಳೆದ ತಾ|| ೨೫ ರ ಮಧ್ಯಾಹ್ನ ನಿಯಮನಿರ್ಮಾಣ ಸಭೆಯು ಯುವರಾಜ ಕಾಂತರಾಜ ಅರಸರವರ ಅಧ್ಯಕ್ಷತೆಯಿಂದ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಕೂಡಿದ್ದಿತು. ಎ|| ಕೌನ್ಸಿಲ್ ಮೆಂಬರುಗಳೂ ಉಳಿದ ಓದ್ಯೋಗಿಕ ಅನೌದ್ಯೋಗಿಕ ಸಭಾಸದರೆಲ್ಲರೂ ನೆರೆದಿದ್ದರು. ಆದಿಯಲ್ಲಿ ಸಭಿಕರನ್ನೆಲ್ಲಾ ಸ್ವಾಗತಿಸಿ ಅಧ್ಯಕ್ಷರು ದೀರ್ಘವಾಗಿ ಭಾಷಣವನ್ನು ಮಾಡಿದರು. ಸೆಕ್ರಿಟರಿಯವರು ರಿಪೋರ್ಟನ್ನು ಓದಿದನಂತರ, ಸಭಿಕರು ಅನೇಕ ವಿಷಯಗಳಲ್ಲಿ ಪ್ರಶ್ನೆಗಳನ್ನು ಮಾಡಿ ಉತ್ತರಗಳನ್ನು ಪಡೆದರು. ಅಧ್ಯಕ್ಷರು ಮಾಡಿದ ಭಾಷಣದಲ್ಲಿ ಕಂಡ ವಿಷಯಗಳೊಳಗೆ ಮ|| ಎಂ. ಬಸವಯ್ಯನವರು ಮಾಡಿದ ಅಸಾಧಾರಣ ದೇಶಸೇವೆಯ ವರ್ಣನವೂ, ಅವರ ಮೃತಿಯಿಂದ ಉಂಟಾದ ನಷ್ಟದ ವರ್ಣನವೂ ಸೇರಿದ್ದುವು. ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೂ, ರಾ|| ಸಾ|| ಎಚ್. ಚೆನ್ನಯ್ಯನವರೂ ದಿವಾನರ ವಂದನಪರವಾದ ಭಾಷಣಗಳನ್ನು ಮಾಡಿದರು. ಆದಾಯದ ಮೇಲಣ ತೆರಿಗೆಯನ್ನು ಹಾಕುವ ಸೂಚನೆಯು ಸಭೆಗೆ ಬಂದು ಚರ್ಚಿಸಲ್ಪಟ್ಟು ಪ್ಯಾಸಾಯಿತು. ಆ ಬಿಲ್ಲನ್ನು ವಿಮರ್ಶಿಸುವುದಕ್ಕಾಗಿ ಒಂದು ಸೆಲೆಕ್ಟ್ ಕಮಿಟಿಯು ಏರ್ಪಡಿಸಲ್ಪಟ್ಟಿತು.

ಲಗ್ನ ಮೊದಲಾದವುಗಳಲ್ಲಿ ಬಂದ ಫಂಡು.

1. ತಿರುಚನಾಪಲ್ಲಿ ಡಿ|| ಕೆಣ್ಣೂರು ಪೋಸ್ಟು ತಿರುತ್ತಲೆಯಾರು ಗ್ರಾಮದಲ್ಲಿರುವ ಸ್ಕೂಲ್ಮಾಸ್ಟರು ಮ|| ಕೂನಾ ಲಿಂಗಯ್ಯನವರಿಂದ ಇವರ ಮಗ ಚಿ|| ವೀರಯ್ಯನ ದೀಕ್ಷೆಯಲ್ಲಿ ತೆಗೆದದ್ದು 0-8-0 2. ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ದೇಶದ ಸಿದ್ಧಬಸಪ್ಪಶೆಟ್ಟರವರ ಮನೆ ಲಗ್ನದಲ್ಲಿ ತೆಗೆದದ್ದು ಮ|| ದೇಶದ ಯಜಮಾನ್ ಬಸಪ್ಪನವರ ಮೂಲಕ 5-0-0. 3. ಬೆಂಗಳೂರು ಸಿಟಿ ಅಕ್ಕಿಪೇಟೆಯಲ್ಲಿರುವ ಎಂಟಿಗಾನಹಳ್ಳಿ ಮ|| ಮಲ್ಲೇಶಪ್ಪನವರ ಮನೆ ಲಗ್ನದಲ್ಲಿ ಮ|| ದೇಶದ ಯಜಮಾನ್ ಬಸಪ್ಪನವರ ಮೂಲಕ 5-0-0. 4. ತುಮಕೂರು ತಾಲ್ಲೂಕು ಬೆಳ್ಳಾವೆಯಲ್ಲಿರುವ ಉಳ್ಳೀನಹಳ್ಳಿ ಮ|| ವೀರಭದ್ರಪ್ಪನವರ ಮಗಳ ಲಗ್ನದಲ್ಲಿ ಗಂಡಿನವರಿಂದ 2-0-0. ಹೆಣ್ಣಿನವರಿಂದ 1-0-0. ಅಡಿಕೆ ಅಂಗಡಿ ಮ|| ಬಿ. ಜಿ. ಸೋಮಣ್ಣನವರ ಮೂಲಕ 3-0-0. 5. ಶಿರಾದಲ್ಲಿರುವ ಕೋಡಿಗುಣೆ ಮಠದ ಅಟ್ಟಾರಿ ರುದ್ರಯ್ಯನವರು ಲಿಂಗೈಕ್ಯರಾದ್ದರಿಂದ ಅವರ ಜ್ಞಾಪಕಾರ್ಥವಾಗಿ ಮಹಾಗಣಾರಾಧನೆ ದಿವಸ ಅವರ ಮಕ್ಕಳು ಮ|| ರಾಚಯ್ಯನವರಿಂದ ಶಿರಾ ಹೋಳಿನ ಹಂಪಯ್ಯನವರ ಮಠದ ಪಟ್ಟಾಧ್ಯಕ್ಷರು ವೇ|| ಸಿದ್ಧಪ್ಪದೇವರ ಮೂಲಕ 2-0-0. ಮೇಲ್ಕಂಡ ಮೊಬಲಗು 15-8-0 ಯನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ } ಜಿ. ಪರಮಶಿವಯ್ಯ ಬಿ. ಎ. ಎಲ್. ಎಲ್. ಬಿ.,
24-3-20. } ಅಡ್ವೊಕೇಟ್.

ಧಾರವಾಡ ವೀರಶೈವ ತರುಣರ ಸಂಘ.

ಈ ಸಂಘದ ಸಾಧಾರಣ ಸಭೆಯು ತಾ|| 11-4-20 ನೇ ಆದಿತ್ಯವಾರ ಧಾರವಾಡ ಹಾವೇರಿಪೇಟೆಯಲ್ಲಿರುವ ವಿರಕ್ತಮಠದಲ್ಲಿ ಕೂಡುವುದು. ಸಭೆಯ ಕಾರ್ಯಕ್ರಮ:—ಪ್ರಾತಃಕಾಲ (೧) ಸಂಘದ ನಿಯಮಗಳನ್ನು ತಿದ್ದುವುದು. (೨) ಅನಿಶ್ಚಿತ ಪ್ರಶ್ನೆಗಳ ನಿಷ್ಕರ್ಷೆ. ಸಾಯಂಕಾಲ (೩) ಮ್ಯಾನೇಜಿಂಗ್ ಕಮಿಟಿಯ ನಿರ್ಮಾಣ. (Election.) (೪) ಮ್ಯಾ, ಕ ಯ. ಮುಂದಿನ ಕೆಲಸ. ಹೊತ್ತಿಗೆ ಸರಿಯಾಗಿ ಶಾಖಾ ಸಂಘದವರೂ ಮೆಂಬರರೂ ಇತರ ಹಿತಚಿಂತಕರೂ ಬರಬೇಕಾಗಿ ವಿನಂತಿ,

ಎಸ್. ಬಿ. ಹಿರೇಮಠ ಬಿ. ಎ.
ಅ|| ಜನ. ಸೆಕ್ರೆಟರಿ, ವೀ. ತ. ಸಂಘ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ
೨ ನೆಯ ಪಟ್ಟಚರಾಧಿಕಾರಿಗಳ ಸಮ್ಮೇಳನವು.

ಈ ಸಮ್ಮೇಳನವು ಧಾರವಾಡ ಜಿಲ್ಲಾ ಪೈಕಿ ನವಲಗುಂದದಲ್ಲಿ ಮೇ ೨೬-೨೭ ನೆಯ ತಾರೀಖುಗಳಲ್ಲಿ ಕೂಡುತ್ತದೆ. ಅಧ್ಯಕ್ಷಸ್ಥಾನವನ್ನು ಶ್ರೀ ಕಾಶೀಕ್ಷೇತ್ರದಲ್ಲಿದ್ದ ಹೂಲಿ ಬೃಹನ್ಮಠದ ಚರಪಟ್ಟಾಧ್ಯಕ್ಷ ಶ್ರೀ ನೀಲಕಂಠ ಶಿವಾಚಾರ್ಯರು ಸ್ವೀಕರಿಸುತ್ತಾರೆ. ಹಿಂದೂಸ್ಥಾನದ ಯಾವತ್ತು ಭಾಗದ ಪಟ್ಟಚರಮೂರ್ತಿಗಳು ದಯಮಾಡುತ್ತಾರೆ. ವೇ|| ಪ|| ಕಾವ್ಯತೀರ್ಥ ಕಾಶೀನಾಥಶಾಸ್ತ್ರಿಗಳೂ, ವೇ|| ಪ|| ಉಮಚಗಿ ಶಂಕರಶಾಸ್ತ್ರಿಗಳೂ ಮೊದಲಾದ ವಿದ್ವನ್ಮಣಿಗಳು ಯಾವತ್ತೂ ವಿಷಯಗಳ ಮೇಲೆ ವ್ಯಾಖ್ಯಾನಗಳನ್ನು ಕೊಡುತ್ತಾರೆ. ಲೇಖನಗಳನ್ನು ಬರೆದು ತಿಳಿಸುವವರು ಮೇ ೨೨ ತಾರೀಖಿನ ಒಳಗಾಗಿ ಕಳಿಸಬೇಕು. ವಿಷಯಗಳು.—೧ ಗುರುವರ್ಗದವರ ಐಕ್ಯವು, ೨ ಶ್ರೀಮತ್ಪಂಚಾಚಾರ್ಯರ ಸಿದ್ಧಾಂತವು, ೩ ಜಗದ್ಗುರುತ್ವವಿಮರ್ಶವು, ೪ ಪಟ್ಟಚರಾಧಿಕಾರಿಗಳ ಶಾಸ್ತ್ರೋಕ್ತ ಆಚರಣೆಗಳು, ೫ ಪಾವಟೆಯವರ ದುರ್ಲೇಖದ ಖಂಡನವು.

Secrtary, F. A Hallad.

ದಾವಣಗೆರೆ.

ವೀರಶೈವ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದೇನ ವರೆ:—ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಇಂಗ್ಲೀಷ್ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ದಾವಣಗೆರೆ ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲ್ಮಾಸ್ಟರುಗಳಿಗೂ ಸಹ ಶ್ರೀ ವಿರಕ್ತಮಠದಲ್ಲಿ ಊಟಕ್ಕೂ ಮತ್ತು ವಾಸಕ್ಕೂ ಏರ್ಪಡಿಸಲ್ಪಡುವುದು. ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ಈ ತಿಂಗಳ ಕೊನೆಯೊಳಗೆ ಬರೆದು ತಿಳಿಸಬೇಕು.

ವೀರಶೈವ ವಿದ್ಯಾವರ್ಧಕ ಸಂಘ.

ಬೀರೂರು.

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಕನ್ನಡ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಡೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ಸ್ಕೂಲ್ಮಾಸ್ಟರುಗಳಿಗೂ, ಮತ್ತು ಇತರರಿಗೂ ಭೋಜನಕ್ಕೂ ಮತ್ತು ವಾಸಸ್ಥಳಕ್ಕೂ ಬೀರೂರು ಎಚ್. ಎಂ. ಶಿವಲಿಂಗಪ್ಪಯ್ಯನವರು ಏರ್ಪಾಟು ಮಾಡಿರುತ್ತಾರೆ. ಬರತಕ್ಕವರು 8 ದಿವಸಗಳಿಗೆ ಮುಂಚಿತವಾಗಿ ಹೆಸರುಗಳನ್ನು ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕು.

ಎಚ್. ಎಂ. ಶಿವಲಿಂಗಪ್ಪಯ್ಯನವರು,
ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್, ಬೀರೂರು.

ಮೈಸೂರು.

ರಾಜಧಾನಿಯಲ್ಲಿ ನಡೆಯುವ ಇಂಗ್ಲೀಷು ಮತ್ತು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಪರಸ್ಥಳದಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮಾಮೂಲು ಮೇರೆ ಮುಡುಕುತೊರೆ ವೀರಶೈವ ಸಭಾಪರವಾಗಿ ಮೈಸೂರು ಶಿಲ್ಪಿಮೊಹಲ್ಲಾ ಗುರುಕಾರ್ ದೇವಣ್ಣನವರ ಮನೆ ಬೀದಿಯಲ್ಲಿರುವ ಮ್ಯುನಿಸಿಪಲ್ ಡೋರ್ ನಂಬರ್ 443 ನೇ ನಂಬರು ಮನೆಯ ಬಕ್ಷಿ ಚನ್ನಬಸಪ್ಪನವರ ಮಕ್ಕಳು ಸಿ. ಸೋಮಶೇಖರಯ್ಯನವರ ಮನೆಯಲ್ಲಿ ಊಟಕ್ಕೂ ಮತ್ತು ವಾಸಕ್ಕೂ ಏರ್ಪಾಡು ಮಾಡಿರುವುದರಿಂದ ಬರತಕ್ಕವರು 3 ದಿವಸ ಮುಂಚಿತವಾಗಿ ಡಿಟೋ ಸೋಮಶೇಖರಯ್ಯನವರಿಗೆ ತಿಳುಹಿಸತಕ್ಕದ್ದು.

ಎಂ. ಎಸ್. ಸಿದ್ಧಪ್ಪ ಅಂಡ್ ಬ್ರದರ್ಸ್.

ತುಮಕೂರು ಶ್ರೀ ವೀರಶೈವ ಸೇವಾಸಮಾಜ.

ವೀರಶೈವರಲ್ಲಿ ಭೋಜನ ಮಾಡತಕ್ಕ ಸಮಸ್ತ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಇದರಿಂದ ಸೂಚಿಸುವುದೇನಂದರೆ:—ಈ ಡಿಸ್ಟ್ರಿಕ್ಟ್ ಹೈಸ್ಕೂಲಿನಲ್ಲಿ 1920 ನೇ ಇಸವಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕವರಿಗೆ ಮಾತ್ರ ಮಾಮೂಲಿನಂತೆ ಈ ಊರು ವೀರಶೈವ ಬೋರ್ಡಿಂಗ್ ಸಂಘದವರು ಊಟಕ್ಕೆ ತಕ್ಕ ಏರ್ಪಾಡನ್ನು ಮಾಡಿರುತ್ತಾರೆ. ಬರತಕ್ಕವರ ಹೆಸರು ಮತ್ತು ಸ್ಥಳವನ್ನು ಕ್ರಮವಾಗಿ ಇದೇ ಮಾರ್ಚಿ 31 ನೆ ತಾರೀಖಿನೊಳಗಾಗಿ ಇದರಡಿ ನಮೂದಿಸಲ್ಪಡುವವರ ಅಡ್ರೆಸ್ಸಿಗೆ ಅಪ್ಲಿಕೇಷನ್ನಿನ ಮೂಲಕ ಬರೆದುಕೊಳ್ಳತಕ್ಕದ್ದು. ಜೊತೆಯಲ್ಲಿ ಹಾಸಿಗೆ ತಂಬಿಗೆ ವಗೈರೆಗಳನ್ನು ತರತಕ್ಕದ್ದು. ಗಲಭೆ ವಗೈರೆಗೆ ಅವಕಾಶವಿಲ್ಲದಂತೆ ಇರುವ ಬಗ್ಗೆ ಮೇಲ್ಕಂಡ ಸಂಘದವರು ನಿರ್ಣಯಿಸತಕ್ಕ ರೂಲ್ಸಿಗೆ ಸರ್ವರೂ ಬದ್ಧರಾಗಿರತಕ್ಕದ್ದು.

ಜಿ. ಎಸ್. ಕನ್ನಯ್ಯಶೆಟ್ಟರು,
ಅತ್ತಿಸಂಗಪ್ಪನವರು.

ಪತ್ರವ್ಯವಹಾರ.

ಪ್ರಜಾಸಮುದಾಯದ ಸಂತೋಷಕೂಟ ಚಿತ್ರದುರ್ಗ.

ಸುಪ್ರಸಿದ್ಧರಾದ ಅಡ್ವೊಕೇಟ್ ಮ|| ಎಂ. ಅನಂತಯ್ಯಶೆಟ್ಟರು ಮೈಸೂರು ನ್ಯಾಯವಿಧಾಯಕಸಭಾ ಮೆಂಬರಾದದ್ದಕ್ಕೆ ಅವರಿಗೆ ಅಡ್ರೆಸ್ಸನ್ನೊಪ್ಪಿಸಲು ಈ ಮಾಹೆ ತಾ|| ೧೧ ನೆ ಸಾಯಂಕಾಲ ಚಿತ್ರದುರ್ಗದ ಪಾರ್ಕಿನಲ್ಲಿ ಅತ್ಯಂತ ವಿಜೃಂಭಣೆಯಿಂದ ಇಲ್ಲಿನ ಪ್ರಜಾಸಮುದಾಯದ ಸಂತೋಷಕೂಟವು ನೆರೆಯಿಸಲ್ಪಟ್ಟಿತು. ನಮ್ಮ ವೈಸ್‌ಪ್ರೆಸಿಡೆಂಟರ ಪ್ರೀತಿಪೂರ್ವಕವಾದ ಏರ್ಪಾಡಿನಿಂದ ಪಾರ್ಕು ಶುಚಿಗೊಳಿಸಲ್ಪಟ್ಟು ಸಭಾ ನೆರೆಯಲು ಒಂದು ಡೇರಾ ಹಾಕಿ ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟಿತು. ಸಾಯಂಕಾಲ ೪ ಘಂಟೆಗೇನೇ ಫಾರ್‌ವರ್ಡ್, ಬ್ಯಾಕ್‌ವರ್ಡ್ ಮತ್ತು ಡಿಪ್ರೆಸ್ಡ್ ಕ್ಲಾಸಿನ ಜನಾಂಗದ ನಾನಾ ಜಾತಿಯ ಪ್ರಜೆಗಳು ತಂಡತಂಡವಾಗಿ ಬಂದು ಪಾರ್ಕು ಕಿಕ್ಕಿರಿಯುವಂತೆ ಸೇರಿದ್ದರು. ೫ ಘಂಟೆಗೆ ಇಲ್ಲಿನ ಎಲ್ಲಾ ಇಲಾಖೆಯ ಆಫೀಸರುಗಳೂ, ನೌಕರರೂ, ಅನೇಕರು ಲಾಯರುಗಳೂ ವಿದ್ಯಾರ್ಥಿಗಳೂ ಬಂದು ಸೇರಿದ್ದರು. ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದರು. ಪ್ರಜಾಪ್ರಮುಖರನೇಕರು ಮ|| ಎಂ. ಅನಂತಯ್ಯಶೆಟ್ಟರ ಬಂಗ್ಲೆಗೆ ಹೋಗಿ ಅವರನ್ನು ಬ್ಯಾಂಡ್ ವಾದ್ಯಗಳ ಘೋಷಣೆಯಿಂದ ಕರೆತಂದರು. ಪಾರ್ಕಿನ ಎಲ್ಲಾ ಭಾಗದಲ್ಲಿಯೂ ಜಾತಿವಾರಾಗಿ ಜನರು ಗುಂಪುಗುಂಪಾಗಿ ಕೂತುಕೊಂಡು ಮ|| ಸಾಹುಕಾರ್ ವೀರಭದ್ರಪ್ಪನವರು ದೊಡ ಯಲ್ಲಪ್ಪನವರು ಡಿ. ಕೆ. ನಾರಾಯಣಶೆಟ್ಟರು, ಇಟ್ಟಿಗೆ ಮಹಲಿಂಗಪ್ಪನವರು ವಗೈರೆ ದೊಡ್ಡಮನುಷ್ಯರ ಯಜಮಾನಿಕೆಯಲ್ಲಿ ಬಗೆಬಗೆಯಾಗಿ ಅಲ್ಲಿಯೇ ಸಿದ್ಧಗೊಳಿಸಲ್ಪಟ್ಟಿದ್ದ ಫಲಾಹಾರಗಳನ್ನು ಎಲ್ಲರೂ ಸ್ವೀಕರಿಸಿ ೬|| ಘಂಟೆಗೆ ಗ್ಯಾಸ್ ದೀಪಗಳ ಪ್ರಕಾಶದಲ್ಲಿ ಡೇರಾದಲ್ಲಿಯೂ, ಅದರ ಮುಂಭಾಗದ ಬೈಲಿನಲ್ಲಿಯೂ ಸಭೆಯು ನೆರೆಯಲ್ಪಟ್ಟಿತು. ಮ|| ವೀಣಾ ವೆಂಕಟೇಶಶಾಸ್ತ್ರಿಗಳು, ಮ|| ಬಿ. ಭೀಮರಾಜು ಮುಂತಾದವರ ಸಂಗೀತವು ಶ್ರಾವ್ಯವಾಗಿ ಮಾಡಲ್ಪಟ್ಟಿತು. ಏನು ಕಾರಣವೋ ನಮ್ಮ ಡೆಪ್ಯುಟಿ ಕಮಿಷನರವರು ತಾವು ಸಭೆಯ ಅಧ್ಯಕ್ಷತೆಯನ್ನು ವಹಿಸಲಾಗುವುದಿಲ್ಲವೆಂದು ಮೊದಲೇ ಅಪ್ಪಣೆ ಕೊಡಿಸಿದ್ದರ ಮೇಲೆ ಪ್ರಜೆಗಳಲ್ಲಿಯೇ ಒಬ್ಬರನ್ನು ಆಗ ಚುನಾಯಿಸಬೇಕಾಯಿತು. ಪ್ಲೀಡರ್ ಮ|| ಡಬ್ಲ್ಯು. ತಿರುಮಲರಾಯರವರು ಅಗ್ರಾಸನಾಧಿಪತ್ಯವನ್ನು ವಹಿಸಬೇಕೆಂದು ಮ|| ಲಾಡರ್ ಈಶ್ವರಪ್ಪನವರು ಸೂಚಿಸಿದ್ದನ್ನು ಪ್ಲೀಡರ್ ಮ|| ಭೀಮರಾಯರು ಅನುಮೋದಿಸಿ ಸರ್ವರೂ ಒಪ್ಪಿಕೊಂಡರು. ಕೂಡಲೆ ಮ|| ತಿರುಮಲರಾಯರವರು ಮ|| ಎಂ ಅನಂತಯ್ಯಶೆಟ್ಟರ ಪಕ್ಕದಲ್ಲಿ ಬಂದು ಸಭಾಲಂಕೃತರಾಗಿ, ಈ ಗೌರವಕ್ಕೋಸ್ಕರ ಸಭೆಗೆ ತಮ್ಮ ಕೃತಜ್ಞತೆಯನ್ನು ತೋರಿಸಿ, ಕಾರ್ಯಕ್ರಮವನ್ನು ತಿಳುಹಿಸಿದ್ದರ ಮೇಲೆ ಪ್ರಜೆಗಳ ಪರವಾಗಿ ಸಿದ್ಧಮಾಡಲ್ಪಟ್ಟಿದ್ದ ಕನ್ನಡ, ಹಿಂದೂಸ್ಥಾನಿ, ತೆಲುಗು ಭಾಷೆಗಳಲ್ಲಿನ ಅಡ್ರೆಸ್ಸನ್ನು ಕ್ರಮವಾಗಿ ಮ|| ಸಿದ್ಧನಂಜಪ್ಪನವರು, ಮೌ|| ಅಬ್ದುಲ್ ಜಲೀಲ್ ಸಾಹೇಬರು, ಮ|| ಹನುಮಂತರಾಜಯ್ಯನವರು ಓದಿದರು. ಮತ್ತು ಇಬ್ಬರು ವಿದ್ಯಾರ್ಥಿಗಳೆದ್ದು ಶ್ರೇಯಃಪ್ರಾರ್ಥನೆಯ ಹಾಡನ್ನು ಹೇಳುತ್ತಾ [illegible] ಆ ವಿಜ್ಞಾಪನಾ ಪತ್ರಿಕೆಗಳನ್ನು ಮ|| ಅನಂತಯ್ಯಶೆಟ್ಟರವರಿಗೆ ಒಪ್ಪಿಸಲಾಯಿತು. ಮ|| ತಿರುಮಲರಾಯರವರು ಸ್ವಾರಸ್ಯವಾಗಿ ಶೆಟ್ಟರವರ ಗುಣಕಥನದ ಭಾಷಣ ಮಾಡಿದರು. ಮ|| ಎಂ. ಅನಂತಯ್ಯಶೆಟ್ಟರವರು ಈ ಡಿಸ್ಟ್ರಿಕ್ಟಿನ ಪ್ರಜಾಸಮುದಾಯವು ನನ್ನಲ್ಲಿ ನಂಬಿಕೆಯಿಟ್ಟು ಹೆಚ್ಚಿನ ಓಟುಗಳನ್ನು ಕೊಟ್ಟ ಬಲದ ಮೇಲೆ ನಾನು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳಲ್ಲೊಬ್ಬನಾಗಿದ್ದೇನೆಂದೂ ಈ ತಮ್ಮ ಘನಸಹಾಯಕ್ಕಾಗಿಯೂ, ಚಿತ್ರದುರ್ಗದ ಪುರನಿವಾಸಿಗಳು ಈ ದಿವಸ ನನ್ನಲ್ಲಿ ತೋರಿಸಿದ ಪ್ರೀತಿವಿಶ್ವಾಸಗಳಿಗಾಗಿಯೂ ಅತ್ಯಂತ ಕೃತಜ್ಞನಾಗಿರುವುದಲ್ಲದೆ ಪ್ರಜಾಸೇವೆಯೇ ತನ್ನ ಮುಖ್ಯಕರ್ತವ್ಯವಾಗಿ ತಿಳಿಯುವೆನೆಂದೂ, ಎಲ್ಲರಿಗೂ ತಾವೆಲ್ಲರೂ ಸಹಾಯಕರಾಗಿದ್ದು ದೇಶಸೇವೆಗೆಯ ಕಾರ್ಯಕ್ರಮದಾಲೋಚನೆಯಲ್ಲಿ ನನ್ನ ಕರ್ತವ್ಯ ಕರ್ಮವನ್ನು ನೆರವೇರಿಸಬೇಕೆಂದೂ, ತಮ್ಮ ಅನಂತಾನಂತ ವಂದನೆಗಳೊಡನ ಭಾಷಣ ಮಾಡಿದರು. ಸರ್ವರಿಗೂ ಗಂಧಪುಷ್ಪ ತಾಂಬೂಲಾದಿಗಳನ್ನಿತ್ತ ನಂತರ ಸರ್ವರೂ ಎದ್ದು ನಮ್ಮ ಶ್ರೀಮನ್ಮಹಾರಾಜ ಯುವರಾಜ ಮಹಾಪ್ರಭುಗಳಿಗೂ, ನಮ್ಮ ದಿವಾನರವರಿಗೂ, ನಮ್ಮ ಘನ ಗೌರ್ನಮೆಂಟು ಲೆಜಿಸ್ಲೇಟಿವ್ ಕೌನ್ಸಿಲ್ಲಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತಾ ಸಭಾ ಬರಖಾಸ್ತುಗೊಳಿಸಿ ಮ|| ಎಂ ಅನಂತಯ್ಯಶೆಟ್ಟರನ್ನು ಅಗ್ರಾಸನಾಧಿಪರ ಸಮೇತ ಎಲ್ಲಾ ಜನರೂ ಬ್ಯಾಂಡ್ ವಾದ್ಯಗಳ ಘೋಷಣೆಯಿಂದಲೂ, ಕಹಳೆ ಶಬ್ದದಿಂದಲೂ, ಗ್ಯಾಸ್ ದೀಪಗಳ ಪ್ರಕಾಶದಿಂದಲೂ. ಬಾಣ, ಬಿರುಸುಗಳ ರಂಜಕತ್ವದಿಂದಲೂ ಟೌನ್ನಿನಲ್ಲಿನ ರಾಜಬೀದಿಗಳಲ್ಲಿ ಮೆರವಣಿಗೆಯಿಂದ ಕರೆದೊಯ್ದು ಅಲ್ಲಲ್ಲಿ ಜನರು ಸಮರ್ಪಿಸಿದ ಪುಷ್ಪಮಾಲಾಲಂಕಾರದಿಂದ ಅವರ ಮಂದಿರಕ್ಕೆ ಬಿಡಲಾಯಿತು.

ಪ್ರಜಾಸೇವಕ.

ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ೫ ನೆ ವಾರ್ಷಿಕೋತ್ಸವವು.
ಮು-ಹೂಲಿ.

ನಿನ್ನೆ ತಾ|| ೧೪-೩-೧೯೨೦ ನೇ ಶನಿವಾರ ಸಾಯಂಕಾಲದ ೫ ಘಂಟೆ ಸುಮಾರಕ್ಕೆ ಇಲ್ಲಿಯ ಬ್ರಾಹ್ಮಣಬ್ರಾಹ್ಮಣೇತರ ಮುಖಂಡರೊಂದಿಗೆ ಮೇಲೆ ಕಂಡ ವಾಚನಾಲಯದಲ್ಲಿ ೫ ನೇ ವಾರ್ಷಿಕ ಸಭೆಯು ಸೇರಿರಲು ಅಧ್ಯಕ್ಷಸ್ಥಾನವನ್ನು ಇಲ್ಲಿಯ "ಲೋಕಲ್‌ಬೋರ್ಡ್" ಮೆಂಬರರಾದ ಮ|| ಶಿವಪ್ಪನವರು ಚಿಕ್ಕರಡ್ಡಿಯವರು ಸರ್ವಾನುಮತದಿಂದ ಸ್ವೀಕರಿಸಿದರು.

(ಈ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳು.)

೧ ವಾಚನಾಲಯದಿಂದಾಗುವ ಲಾಭವು,
೨ ಹೂಲಿಯ ಪ್ರಾಚೀನತ್ವವೂ, ಆಗಿನ ಕರ್ನಾಟಕದ ಸಂಪತ್ತು,
೩ ಹೂಲಿಯೂ, ವೀರಶೈವ ಪ್ರಾಚೀನತ್ವವು.
೪ ಅರಟಾಳ ಗಿಲಗಂಚಿ ಹೈಸ್ಕೂಲೂ, ಬೆಳಗಾವಜಿಲ್ಲೆಯ ವೀರಶೈವಗುರು ಶಿಷ್ಯ ವರ್ಗದವರ ಮುಖ್ಯ ಕರ್ತವ್ಯವು.

೧ ನೆ ವಿಷಯದ ಮೇಲೆ ಇಲ್ಲಿಯ ಕನ್ನಡಶಾಲಾ ಮಿ|| ಹೆಡ್ಮಾಸ್ತರರೂ, ಧಾರವಾಡದಿಂದಾಗಮಿಸಿದ ಮಿ|| ಸಗರ ಇವರೂ ಸುಶ್ರಾವ್ಯವಾಗಿ ಭಾಷಣಮಾಡಿದರು. ೨ನೆ ವಿಷಯದಮೇಲೆ ಇಲ್ಲಿಯ ಹಿರೇಮಠದ ಎಸ್. ಎಂ. ಸಿದ್ಧಾಂತಿಗಳು ಈ ಗ್ರಾಮಗಳಲ್ಲಿರ್ಪ ಪ್ರಾಚೀನ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದ ಮಹಿಮರ ಮತ್ತು ಇಲ್ಲಿ ಶಾ|| ಶ|| ೯ನೇ ಶತಮಾನದಿಂದ ಮುಂದೆ ೧೩ನೇ ಶತಮಾನದವರೆಗೆ ಆಳಿದ ರಾಜರ ಇತಿಹಾಸವನ್ನು ಇಲ್ಲಿರ್ಪ ಶಿಲಾಲೇಖ ಮೊದಲಾದ ಬಲವತ್ತರ ಆಧಾರದಿಂದ ಸಿದ್ಧಪಡಿಸಿದರು. ೩ನೆ ವಿಷಯದ ಮೇಲೆ ಈ ವಾಚನಾಲಯದ ಮ|| ಬಸವಣ್ಣೆಪ್ಪ ಗೋರೋಬಾಳ ಇವರು ಇಲ್ಲಿ ಶಾ|| ಶ|| ೯ ನೇ ಶತಮಾನದಲ್ಲಿ ರಾಜನಾಗಿರ್ದ "ವೀರವಿಜಯರಸನು" ವೀರಶೈವನಿದ್ದು, ಇಲ್ಲಿಯ "ಬೃಹನ್ಮಠವನ್ನು" ಜೀರ್ಣೋದ್ಧಾರ ಮಾಡಿ, ಈ ಮಠದ ಸ್ವಾಮಿಗಳಿಗೆ ಉಮ್ಮಳಿ ಕೊಟ್ಟ ಬಗ್ಗೆ ಉಲ್ಲೇಖಿಸಿದ ಶಿಲಾಲೇಖದ ಆಧಾರದಿಂದಲೂ, ಈ ರಾಜನ ಕಾಲದಲ್ಲಿದ್ದ ಈ ಮಠದ ಪಟ್ಟದ ಸ್ವಾಮಿಗಳು ಮೂವತ್ತೊಂಭತ್ತನೇ ಪಟ್ಟದ ಸ್ವಾಮಿಗಳೆಂದೂ, ಈ ಮಠದ ಮೂಲಪುರುಷರು "ಶ್ರೀ ಸಿದ್ಧಚೈತನ್ಯ ಶಿವಾಚಾರ್ಯರು" ಶಾಲಿ|| ಶ|| ಪೂರ್ವದಲ್ಲಿ ೩೦೦ ವರ್ಷಗಳ ಹಿಂದೆ ಇದ್ದರೆಂದೂ, ಈ ಸ್ವಾಮಿಗಳ ತರುವಾಯ ಮುಂದೆ ಪಟ್ಟವಾಳಿದವರಲ್ಲಿ ಕೆಲವರು "ಭಾಷ್ಯ" ಕಾರರೂ, ಕೆಲವರು "ಗ್ರಂಥ" ಕಾರರೂ ಕೆಲವರು "ಕವಿಗಳೂ" ಆಗಿರುವರೆಂದೂ, ಅವರವರು ಬರೆದಿಟ್ಟ ಗ್ರಂಥಗಳಾಧಾರದಿಂದಲೂ ಈ ಮಠದ ೮ ನೆ ಪಟ್ಟದ ಸ್ವಾಮಿಗಳಾದ "೧ ನೆ ಸಿದ್ಧನಂದೀಶ್ವರ ಶಿವಾಚಾರ್ಯರು" ಬರೆದ "ಪಂಚವರ್ಣ ಮಹಾಸೂತ್ರಭಾಷ್ಯ" ನಂದ್ಯಾಲ "ನಂಜಾಚಾರ್ಯರು" ರಚಿಸಿದ "ಗುರುರಾಜಚರಿತ್ರೆ" ಇನ್ನೂ ಮೊದಲಾದ ಗ್ರಂಥಗಳಿಂದಲೂ, ಇಲ್ಲಿರ್ಪ ಶಿಲಾಲೇಖಗಳಾಧಾರದಿಂದಲೂ "ವೀರಶೈವ" ಪ್ರಾಚೀನತೆಯನ್ನು ಯಾವತ್ತರಿಗೂ ತಿಳಿಯುವಂತೆ ವಿಶದಗೊಳಿಸಿದ ಮೇಲೆ, ಮುಂದೆ "೪ ನೆ ವಿಷಯದ ಮೇಲೆ" ಎಸ್. ಎಂ. ಸಿದ್ಧಾಂತಿಗಳು ಭಾಷಣ ಮಾಡಿದ ಸಾರಾಂಶವೇನಂದರೆ:—ಸುಧಾರಿಸಿದ ಪಾಶ್ಚಾತ್ಯ ದೇಶದವರ ಗುರುವರ್ಗದವರಾದ "ಪೋಪರು" ಅನೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಅಲ್ಲಿಯ ಯಾವತ್ತರಿಗೂ ಸಾಂಪತ್ತಿಕ ಪದ್ಧತಿಯನ್ನೊದಗಿಸಿಕೊಟ್ಟಂತೆ ನವಿನ್ಯಾ ವೀರಶೈವ "ಗುರು" ವರ್ಗದವರೂ ಕಾರ್ಯವನ್ನು ಮಾಡಲಿಕ್ಕೆ ಕೈಕೊಂಡು, ತೀವ್ರ ಅಂಥ ವಿದ್ಯಾಲಯಗಳನ್ನು ಸ್ಥಾಪಿಸಿ ನವಿನ್ಯಾ ವೀರಶೈವರನ್ನು ಊರ್ಜಿತ ಸ್ಥಿತಿಗೆ ತರಬೇಕೆಂದೂ, ಈ ಕಾರ್ಯವನ್ನು ಕೈಕೊಂಡರೆ ತೀವ್ರವೇ ಅನೇಕ ವಿಶ್ವವಿದ್ಯಾಲಯಗಳೂ, ಗುರುಕುಲವಾಸಗಳೂ ಸ್ಥಾಪನೆಯಾಗುವಲ್ಲಿ ಏನೂ ಅಡ್ಡಿಯಿಲ್ಲವೆಂದೂ, ಈ ಕಾರ್ಯವನ್ನು ಮಾಡುವಲ್ಲಿ "ಗುರು" ವರ್ಗದವರು ಆಲಸ್ಯಮಾಡಬಾರದೆಂದೂ, ಇಂಥ ಕಾರ್ಯವನ್ನು ಕೈಕೊಂಡ ಗುರುವರ್ಗದವರಿಗೆ "ಶಿಷ್ಯ" ವರ್ಗದವರು ತನುಮನದಿಂದ ಸಹಾಯಮಾಡಬೇಕೆಂದೂ, ಸದ್ಯಃ "ಅರಟಾಳ ಗಿಲಗಂಚಿ" ಹೈಸ್ಕೂಲಿಗೆ ಬೇಕಾಗುವ ಸೌಕರ್ಯಕ್ಕಾಗಿ ವಿನಿಯೋಗಿಸುವ ಹಣದ ಸಹಾಯವನ್ನು ನವಿನ್ಯಾ ಬೆಳಗಾವ ಜಿಲ್ಲೆಯ ಗುರುವರ್ಗದವರು ತೀವ್ರಮಾಡುವ ವ್ಯವಸ್ಥೆಯನ್ನು ಕೈಕೊಳ್ಳಬೇಕೆಂದೂ, ಮತ್ತು ಈ ಹೈಸ್ಕೂಲು ಒಂದೇ ಒಂದು ವ್ಯಕ್ತಿಯದೆಂದು ಹೆಸರನ್ನು ಮುಂದೆ ಮಾಡದೆ, ಈ ದೇಶದಲ್ಲಿರ್ಪ ಅನೇಕ ಹೆಸರಿನ ನದಿಗಳು ಆ ಆ ಹೆಸರಿನ ವ್ಯಕ್ತಿಗೆ ಸಂಬಂಧಿಸದೆ ಯಾವತ್ತೂ ಸಚರಾಚರ ಪ್ರಾಣಿಗಳ ಜೀವನಕ್ಕೆ ಸಂಬಂಧಿಸಿದ ಉದಕವನ್ನು ಕೊಡತಕ್ಕವುಗಳಾಗಿರುವಂತೆ ಅನೇಕ ಹೆಸರಿನ ಹೈಸ್ಕೂಲುಗಳೂ ಗುರುಕುಲವಾಸಗಳೂ ಸ್ಥಾಪಿಸಲ್ಪಟ್ಟರೂ ಸ್ಥಾಪಿಸಿದ್ದರೂ ಅವುಗಳು ನವಿನ್ಯಾ ವೀರಶೈವ ಸಮಾಜದ ಸಾಂಪತ್ತಿಕ ಜೀವನವಾದ ಅಮೃತಮಯವಾಗಿರುವುವೆಂದೂ, ತಿಳಿದು ಶಿಷ್ಯವರ್ಗದವರು ತನುಮನಧನದಿಂದ ಸಹಾಯಮಾಡಬೇಕೆಂದೂ, ಈ ಕಾರ್ಯವನ್ನು ಅನೇಕ ಬಗೆಯಿಂದ ಮಾಡಲಿಕ್ಕೆ ಬರುವುದಿದ್ದು, ಈಗ್ಗೆ ನವಿನ್ಯಾ ವೀರಶೈವರ ಮನೆಗಳಲ್ಲಿ ಜರಗುವ ಶುಭಕಾರ್ಯಗಳಲ್ಲಿ ಅವರವರ ಸಾಂಪತ್ತಿಕ ಸ್ಥಿತಿಗನುಸರಿಸಿ "ಅರಟಾಳ ಗಿಲಗಂಚಿ ಹೈಸ್ಕೂಲ್ ಫಂಡ್" ಯೆಂದು ತೆಗೆಯಿಸಿ ಕಳುಹಿಸಬೇಕೆಂದೂ, ಈ ಹಣವನ್ನು ಬೆಳಗಾವಿಗೆ ಕಳಿಸಬೇಕಾಗುವದಿದ್ದು, ಬೆಳಗಾವಿಯಲ್ಲಿರ್ಪ ಮುಂದಾಳುಗಳು ರಾ|| ಬಾ|| ಅರಟಾಳ ವಿ ಎಸ್. ಓ ಇವರ ಅಧ್ಯಕ್ಷತೆಯ ಕೆಳಗೆ ತೀವ್ರ ಒಂದು ಸಭೆ ಸೇರಿಸಿ ಅಲ್ಲಿ ಒಂದು ಮೇಲೆ ಕಂಡ ಹೆಸರಿನ ಸಂಘವನ್ನು ಸ್ಥಾಪಿಸಿ ವಾರ್ತಾಪತ್ರಿಕೆ, ಮಾಸಪತ್ರಿಕೆಗಳಲ್ಲಿ ಪ್ರಕಟಗೊಳಿಸಿ ಕಾರ್ಯಕ್ಕೆ ಸಂಬಂಧಪಟ್ಟ ಗುರು-ಶಿಷ್ಯ ವರ್ಗದವರಿಗೆ ಎಚ್ಚರಿಕೆಗೊಳಿಸಬೇಕೆಂದೂ, ಈ ಕಾರ್ಯವನ್ನು ತೀವ್ರ ಕೈಕೊಳ್ಳುವಲ್ಲಿ ಆಲಸ್ಯಮಾಡಬಾರದೆಂದೂ, ಮೇಲೆ ಕಂಡ ಮಹನೀಯರಿಗೆ ವಿನಯಪೂರ್ವಕ ಸೂಚಿಸಬೇಕೆಂದೂ, ಉತ್ತಮವಾಗಿ ಜನರ ಹೃದಯದಲ್ಲಿ ಬಿಂಬಿಸುವಂತೆ ಉಪನ್ಯಾಸ ಮಾಡಿದ ಮೇಲೆ, ಇಲ್ಲಿಯ ರಾ|| ರಾ|| ಬಸವಲಿಂಗಪ್ಪ ಹನಸಿ ಮತ್ತು ಈ ವಾಚನಾಲಯದ ಸೆಕ್ರಿಟರಿ ಶಿ|| ರಾ|| ರಾ|| ಸಂಗಯ್ಯನವರು ಇವರುಗಳ ವಿವಾಹದಲ್ಲಿ ತೆಗೆದಿಟ್ಟ ಹಣವನ್ನು ಜಗದ್ಗುರು ಕಾಶಿ ಗುರುಕುಲವಾಸಕ್ಕೂ, ಮೇಲಿನ ಅರಟಾಳ ಗಿಲಗಂಚಿ ಹೈಸ್ಕೂಲಿಗೂ ಕಳಿಸುವಂತೆ ಒಪ್ಪಿದ ಮೇಲೆ, ಅರಟಾಳ ಗಿಲಗಂಚಿ ಹೈಸ್ಕೂಲ್ ಪ್ರೊಫೆಸರರಾದ ಮಿ|| ಬಸವನಾಳ ಎಂ ಎ. ಮಿ|| ಮುಮುದಪೂರ ಬಿ. ಎ. ಈ ಮೊದಲಾದ ಮಹನೀಯರುಗಳ ಅಭಿನಂದನಪರ ಭಾಷಣಗಳಾದ ಮೇಲೆ ಸದರಿ ವಾಚನಾಲಯದ ರಿಪೋರ್ಟು ಓದಲ್ಪಟ್ಟು, ಶಿರಸಂಗಿ ಸಂ|| ಗವಾಯಿಗಳಂದ ಶಿ|| ರಾ|| ರಾ|| ಗುರುಲಿಂಗಯ್ಯನವರು ಹಿರೇಮಠ ಇವರ ಗಾನದಿಂದ ಕೈ|| ಲಿಂಗಭೂಷ ಶಿರಸಂಗಿ ಇವರ ಮಂಗಳಪದ್ಯದೊಡನೆ ಜಗದ್ಗುರು ವಿಶ್ವಾರಾಧ್ಯ ಜಯಘೋಷದಿಂದ ೯ ಘಂಟೆಗೆ ಸಭಾವಿಸರ್ಜನೆಯಾಯಿತು.

ಸೆಕ್ರಿಟರಿ, ಜಗದ್ಗುರು ವಿಶ್ವಾರಾಧ್ಯ ವಾಚನಾಲಯ, ಹೂಲಿ.

ಕೈ. ಬೆಳ್ಳಾವೆ ಗ. ವಿ. ಚನ್ನಪ್ಪನವರು.

ತುಮಕೂರು ತಾ|| ಬೆಳ್ಳಾವೆಯಲ್ಲಿ ಸದ್ವಂಶಸ್ಥರಾದ ಗಟ್ಟಪ್ಪನವರ ವೀರಣ್ಣನವರ ಜ್ಯೇಷ್ಠಪುತ್ರರಾದ ಚೆನ್ನಪ್ಪನವರು 1860ರಲ್ಲಿ ಜನಿಸಿದರು. ಬಾಲ್ಯದಿಂದಲೂ ಇಹಪರಸಾಧನೆಗೆ ಅವಶ್ಯಕವಾದ ವಿದ್ಯಾಭ್ಯಾಸವನ್ನು ಮಾಡಿ, ಜಂಗಮಪ್ರೇಮಿಗಳಾಗಿಯೂ, ಧರ್ಮಶೀಲರಾಗಿಯೂ, ಸರ್ವರ ಪ್ರೀತಿಗೂ ಪಾತ್ರರಾಗಿದ್ದರು. ಅಲ್ಲದೆ ಧಾತು ಈಶ್ವರ ಸಂ|| ರದ ವೀರಕ್ಷಾಮದಲ್ಲಿ ಬಹುಜನ ಬಡವರಿಗೆ ಆಶ್ರಯದಾತರಾಗಿ ಅನ್ನೋದಕಗಳನ್ನು ಕೊಟ್ಟರು. ಅನೇಕ ಬಡವರಾದ ಮಠಾಧವರಿಗೆ ಶಿವಪ್ರೀತಿಯಿಂದ ಧರ್ಮಾರ್ಥವಾಗಿ ವಿವಾಹಗಳನ್ನು ನೆರವೇರಿಸಿದರು. ಸಾಕ್ಷಾತ್ ಶ್ರೀ ವಿಂಧ್ಯೇಶ್ವರನ ಅವತಾರದಂತಿದ್ದ ಕೈ|| ಯಜಮಾನ್ ವೀರಸಂಗಪ್ಪನವರು ಚಿರಸ್ಮರಣೀಯವಾಗಿರುವಂತೆ ನೆರವೇರಿಸಿರುವ ವೀರಶೈವ ಧರ್ಮರಕ್ಷಣ ಕಾರ್ಯದಲ್ಲಿ ಅವರಿಗೆ ಈ ಚನ್ನಪ್ಪನವರು ತುಮಕೂರು ಡಿಸ್ಟ್ರಿಕ್ಟಿನ ಕಾರ ಭಾಗಗಳಲ್ಲಿ ತುಂಬಾ ಸಹಾಯಕರಾಗಿದ್ದರು ಇವರಿಗಿದ್ದ ಧರ್ಮಾಸಕ್ತಿಯು ಅಪ್ರತಿಹತವಾದದ್ದು. ವೀರಶೈವಮತ ಸಂಬಂಧವಾದ ಯಾವ ಗ್ರಂಥಗಳಾಗಲೀ ವ್ಯವಹಾರಗಳಾಗಲೀ

ಲೀ ಪ್ರಚಾರವಾದೊಡನೆಯೇ ಅವುಗಳನ್ನು ಕೇಳಿಸಿ ಓದಬೇಕೆಂಬ ಲವಲವಿಕೆಯು ಇವರಿಗೆ ವಿಶೇಷವಾಗಿದ್ದಿತಲ್ಲದೆ ಎಷ್ಟೋ ಹಣವನ್ನು ಖರ್ಚುಮಾಡಿ ಸಂಗ್ರಹಿಸಿರುವ ಧರ್ಮಗ್ರಂಥಗಳ ಭಂಡಾರವು ಇವರ ಗ್ರಂಥಾಸಕ್ತಿಗೆ ನಿದರ್ಶನವಾಗಿರುವುದು. ಬೆಳ್ಳಾವೆಯಲ್ಲಿ ನಾಮಾವಶೇಷವಾಗಿದ್ದ ಶ್ರೀ ನಂದೀಶ್ವರ ದೇವಾಲಯ, ಶ್ರೀಮತ್ ಗಿರಾಸಮ್ಮಪಟ್ಟೇದ್ವಾರಾಲಯ ಮೊದಲಾದುವುಗಳನ್ನೆಲ್ಲಾ ಅಸಾಧಾರಣ ಸಾಹಸದಿಂದ ಜೀರ್ಣೋದ್ಧಾರ ಮಾಡಿ ದೇವತಾಪ್ರತಿಷ್ಠೆಗಳನ್ನು ಮಾಡಿಸಿ ಶಿವಪ್ರೀತಿಗೆ ಪಾತ್ರರಾದರು. ಈ ಬೆಳ್ಳಾವೆಯಲ್ಲಿ ವೀರಶೈವ ಸಮಾಜಕ್ಕೆ ರುದ್ರಭೂಮಿಯಿಲ್ಲದೆ ಉಂಟಾಗಿದ್ದ ಕೊರತೆಯನ್ನು ನೋಡಿ ಇವರು ಒಂದು ವಿಸ್ತಾರವಾದ ಪ್ರದೇಶವನ್ನು ಸ್ವಂತವಾಗಿ ಕೊಂಡು ಸಮಾಜದ ರುದ್ರಭೂಮಿಗಾಗಿ ವಿನಿಯೋಗಿಸಿ ಸರ್ವರ ಕೃತಜ್ಞತೆಗೂ ಪಾತ್ರರಾದರು. ಇವರ ಗುರುಭಕ್ತಿಯನ್ನಂತು ವಿವರಿಸಲು ಶಕ್ತಿ ಸಾಲದು. ಶ್ರೀ ಅಡವಿಸ್ವಾಮಿಗಳವರು ಶ್ರೀಶಂಕರ ಉರುಫ್ ಶ್ರೀಕಾರದ ಸ್ವಾಮಿಗಳವರು ಮತ್ತು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಶ್ರೀರಂಭಾಪುರೀ ಜಗದ್ಗುರು ಮಹಾಸ್ವಾಮಿಗಳು ಮತ್ತು ಶಿವಯೋಗೀಂದ್ರರಾದ ಶ್ರೀಮತ್ ಹಾನಗಲ್ ಕುಮಾರಮಹಾಸ್ವಾಮಿಗಳವರೇ ಮೊದಲಾದ ಶ್ರೀ ಪೂಜ್ಯಪಾದರುಗಳೆಲ್ಲಾ ಇವರ ನಿರ್ಮಲಭಕ್ತಿಯನ್ನು ಸ್ವೀಕರಿಸಿ ಸದಾ ಕೊಂಡಾಡುತ್ತಿದ್ದರು. ಶ್ರೀಕಾರದ ಶಿವಯೋಗೀಂದ್ರರು ಶಿವಸಾಯುಜ್ಯವನ್ನು ಹೊಂದಿದ ನಂತರ ಶ್ರೀಯವರ ಗದ್ದುಗೆಯ ಮೇಲೆ ಸಹಸ್ರಾರು ರೂಪಾಯಿಗಳನ್ನು ವೆಚ್ಚಮಾಡಿ ದೇವಾಲಯವನ್ನು ಕಟ್ಟಿಸಿ ಶಿವಲಿಂಗ ಪ್ರತಿಷ್ಠೆ ಮಾಡಿಸಿ ಅದರ ಜೀರ್ಣೋದ್ಧಾರಕ್ಕಾಗಿಯೂ ವ್ಯಕ್ತಿಗಳನ್ನು ನೇಮಿಸಿ ಕಂಡ ಎರಡು ದೇವಾಲಯಗಳೇ ನಾಡಿರುವಂತೆ ಏರ್ಪಡಿಸಿರುವರು. ಮತ್ತು ಪುರಾಣಪ್ರಸಿದ್ಧವಾದ ಕರ್ವಾಪುರೀ ಶ್ರೀಪ್ರಸನ್ನ ಸೋಮೇಶ್ವರ ಸ್ವಾಮಿಯವರ ಸನ್ನಿಧಾನದಲ್ಲಿ ಅಖಂಡ ನಂದಾದೀಪವು ಚಿರಕಾಲವೂ ಉರಿಯುತ್ತಿರುವಂತೆ ಸ್ವಂತವಾಗಿ ಶಾಶ್ವತವಾದ ಏರ್ಪಾಟು ಮಾಡಿರುವರು. ಇದೇ ಶ್ರೀ ಸ್ವಾಮಿಯವರಿಗೆ ಹಿತ್ತಾಳೆ ನಂದಿವಾಹನವನ್ನು ಮಾಡಿಸಿಕೊಟ್ಟು ಪ್ರತಿವರ್ಷವೂ ಗಿರಿಜಾಕಲ್ಯಾಣಮಹೋತ್ಸವವು ವೈಭವದಿಂದ ನಡೆಯುವಂತೆ ಮಾಡಿರುವರು. ಅಲ್ಲದೆ ಶ್ರೀ ಸ್ವಾಮಿಯವರ ರಥೋತ್ಸವಕ್ಕಾಗಿ ಭಾರಿಯಾದ ಕಲ್ಲುಗಾಲಿಗಳನ್ನು ಮಾಡಿಸಿಕೊಟ್ಟಿರುವರು. ಶ್ರೀ ರೇವಣಸಿದ್ಧೇಶ್ವರಸ್ವಾಮಿಯವರ ಶೈಲದಲ್ಲಿರುವ ಶ್ರೀ ರೇಣುಕಾಚಾರ್ಯರಿಗೆ ಉತ್ಸವಮೂರ್ತಿಯನ್ನು ಮನೋಹರವಾಗಿರುವಂತೆ ಮಾಡಿಸಿ ಸಮರ್ಪಿಸಿರುವರು. ಇವರಲ್ಲಿದ್ದ ಪರೋಪಕಾರಬುದ್ಧಿಯೂ ಭೂತದಯಾ ವಿಶ್ವಾಸ ಶ್ರದ್ಧೆಯೂ ಅನುಕರಣೀಯವಾದುವುಗಳು. ಬೆಳ್ಳಾವೆಗೆ ಸಮೀಪದಲ್ಲಿರುವ ಅಮ್ಮನಮಹಲ್ ಕಾವಲಿನ ಬಳಿ ಇವರ ಯಜಮಾನರಾದ ವೀರಣ್ಣನವರು ಕಟ್ಟಿಸಿದ್ದ ಚಿಕ್ಕಕೆರೆಯು ಶಿಥಿಲವಾಗಿ ನಿರುಪಯೋಗವಾಗಿದ್ದುದನ್ನು ಇವರು ಶ್ರಮಪಟ್ಟು ಜೀರ್ಣೋದ್ಧಾರ ಮಾಡಿ ಹತ್ತಾರು ಗ್ರಾಮಗಳ ದನಕರುಗಳಿಗೆಲ್ಲಾ ಉಪಯೋಗವಾಗುವಂತೆ ಮಾಡಿ ತಮ್ಮ ಯಜಮಾನರ ಸತ್ಸಂಕಲ್ಪವನ್ನು ಸಾರ್ಥಕಪಡಿಸಿದರು. ಈ ಬೆಳ್ಳಾವೆ ಹೋಬಳಿಗೆ ಸೇರಿದ ಜನಗಳಿಗೆಲ್ಲಾ ಪ್ರಯೋಜನಕರವಾಗಿರುವಂತೆ ಒಂದು ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿ ಅದರ ಸನ್ಮಾನನೀಯ ಸೆಕ್ರೆಟರಿಗಳಾಗಿ ಬಹಳ ದಕ್ಷತೆಯಿಂದ ಕಾರ್ಯನಿರ್ವಾಹ ಮಾಡುತ್ತಾ ಅತ್ಯಂತ ಪುರೋವೃದ್ಧಿಗೆ ತಂದು ಬಹುಜನ ಬಡವರಿಗೆ ಆಶ್ರಯರಾಗಿದ್ದರು. ಇವರ ಗುಣಾತಿಶಯಗಳಿಗಾಗಿ ಒಂದು ಭಂಗಾರದ ಪದಕವನ್ನು ಪ್ರಜೆಗಳು ಇವರಿಗೆ ಕೊಟ್ಟಿದ್ದರು. ಇಷ್ಟೇ ಅಲ್ಲದೆ ಇವರ ನಿರ್ಮಲವಾದ ದೇಶಾಭಿಮಾನವು ಸಹ ಸ್ತೋತ್ರಾರ್ಹವಾಗಿತ್ತು. ಸರ್ಕಾರಕ್ಕೆ ಭಾರಿಯಾಗಿ ಕಂದಾಯ ಕೊಡತಕ್ಕ ದೊಡ್ಡ ಜಮೀನ್ದಾರರೂ ಭಾರಿ ವರ್ತಕರೂ ಆಗಿದ್ದರು. ಇವರು ಗ್ರಾಮ ಪಂಚಾಯಿತಿ ಮೊದಲ್ಗೊಂಡು ಪ್ರಜಾಪ್ರತಿನಿಧಿಯವರೆಗೂ ಎಲ್ಲಾ ಸರ್ಕಾರಿ ಸಭೆಗಳಲ್ಲೂ ಭಾಗಿಗಳಾಗಿದ್ದರಲ್ಲದೆ ಈ ಪ್ರದೇಶದ ಪ್ರತಿಯೊಂದು ಕಾರ್ಯಗಳೂ ಇವರ ಅನುಬಂಧವಿಲ್ಲದೆ ನೆರವೇರುತ್ತಿರಲಿಲ್ಲ. ಇದಕ್ಕೆಲ್ಲಾ ಇವರಲ್ಲಿದ್ದ ಅನನ್ಯಸಾಧಾರಣ ಸುಗುಣಾತಿಶಯವೇ ಮೂಲಭೂತವಾಗಿದ್ದುವು. ಅನೇಕ ಸ್ವಮತದ ವೈದಿಕವಿದ್ವಜ್ಜನರಿಗೂ ಶಾಸ್ತ್ರಿಗಳಿಗೂ ಪಂಬಾ ಸಹಾಯಕರಾಗಿದ್ದರಲ್ಲದೆ ಶ್ರೀ ಪಾಲ್ಕುರಿಕೆ ಸೋಮಾರಾಧ್ಯರಿಂದ ವಿರಚಿತವಾದ ಶ್ರೀ ಬಸವೇಶ್ವರಸ್ತೋತ್ರ ಮಾಲಿಕೆಯಾದ ಅಕ್ಷರಾಂಕನ ಗದ್ಯವೆಂಬ ಪುರಾತನಗ್ರಂಥವನ್ನು ಮುದ್ರಣಮಾಡಿಸಿದ್ದರು. ಮಹಾತ್ಮರಾದ ಶ್ರೀಕಾರದ ಶಿವಯೋಗೀಂದ್ರರ ಚರಿತ್ರೆಯನ್ನು ಬಹಳ ಶ್ರಮಪಟ್ಟು ಸಂಗ್ರಹಿಸಿ ಬರೆಸಿದ್ದರು. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಯಥೋಚಿತವಾಗಿ ಸ್ವಹಸ್ತ ಪರಹಸ್ತಗಳಿಂದ ಸಹಾಯ ಮಾಡಿಸಿದ್ದರಲ್ಲದೆ ಇನ್ನೊಂದು ಉದಾತ್ತವಾದ ದಾನವು ನಡೆಯುವಂತೆಯೂ ಮಾಡಿದ್ದರು. ಸ್ವಮತದಲ್ಲಿ ಅನೇಕ ಬಡ ವಿದ್ಯಾರ್ಥಿಗಳಿಗೆ ಅಶನವಸನಗಳನ್ನೂ ಇತರ ಸಹಾಯಗಳನ್ನೂ ಮಾಡುತ್ತಿದ್ದರು. ತಮ್ಮ ಸೋದರಳಿಯರಾದ ಪ್ಲೀಡರ್ ಜೆ. ಕೆ. ಗುರುಸಂಗಾರ್ಯರ ವಿದ್ಯಾರ್ಜನೆಗೆ ಬಹಳಮಟ್ಟಿಗೂ ಸಹಾಯವನ್ನು ಮಾಡುತ್ತಾ ಅವರು ವಕೀಲರಾಗುವಂತೆ ಸಾಹಸಮಾಡಿದವರು ಸಹ ಈ ಮಹನೀಯರೇ. ಇಷ್ಟೇ ಅಲ್ಲದೆ ಇವರಲ್ಲಿ ಸ್ತ್ರೀವಿದ್ಯಾಭಿಮಾನವೂ ವಿಶೇಷವಾಗಿದ್ದಿತು. ಈ ಬೆಳ್ಳಾವೆಯಲ್ಲಿ 1895 ರಲ್ಲಿ ಒಂದು ಬಾಲಿಕಾಪಾಠಶಾಲೆಯನ್ನು ಸ್ಥಾಪಿಸಿ ಅಂದಿನಿಂದ ಇಲ್ಲಿಯವರೆಗೂ ಸ್ವಲ್ಪವಾಗಿ ಗ್ರಾಂಟ್ ಬರುತ್ತಿದ್ದಾಗ್ಯೂ ಉಳಿದ ವೆಚ್ಚಗಳನ್ನೆಲ್ಲಾ ತಾವೇ ವಹಿಸಿ ನಡೆಸಿಕೊಂಡು ಬಂದಿರುವರು. (ಘನ ಸರ್ಕಾರದವರು ಇದನ್ನು ಜಾಗ್ರತೆಯಾಗಿ ತಮ್ಮ ಆಡಳಿತಕ್ಕೆ ವಹಿಸಿಕೊಂಡು ಇವರ ಸತ್ಸಂಕಲ್ಪವನ್ನು ನೆರವೇರಿಸುವರೆಂದು ಕೋರಿಕೆ.) ಈ ಪಾಠಶಾಲೆಯಲ್ಲಿ ವ್ಯಾಸಂಗಮಾಡಿದ ಸ್ವಮತಪರಮತದ ಹಲವು ಬಾಲಿಕೆಯರು ಈಗಲೂ ಉತ್ತಮವಾದ ಸಾಧ್ವೀಮಣಿಗಳಾಗಿರುವರು. ವೀರಶೈವ ಬಾಲಕಿಯರಿಗೆ ಧರ್ಮಬೋಧವಾಗುವಂತೆ ಶಿವಕೀರ್ತನೆಗಳನ್ನೂ ಹಾಡುಗಳನ್ನೂ ಬರಸಬೇಕೆಂಬ ಕುತೂಹಲವು ಇವರಿಗೆ ಬಹಳವಾಗಿದ್ದಿತು. (ಈ ಸದುದ್ದೇಶವನ್ನು ನಮ್ಮ ಸಮಾಜದ ವಿದ್ವಜ್ಜನರು ಇನ್ನಾದರೂ ಜಾಗ್ರತೆಯಾಗಿ ಪೂರೈಸುವರೆಂದು ನಂಬುತ್ತೇನೆ.) ಧರ್ಮೋದ್ಧಾರಕರಾದ ಯಜಮಾನ್ ವೀರಸಂಗಪ್ಪನವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಹೋದವರ್ಷ ಗುರುಸಂಗಾರ್ಯರಿಂದ ಬೀರೂರಿನ ಮಹಾಸಭೆಯಲ್ಲಿ ಕೊಡಲ್ಪಟ್ಟ ವೀರಸಂಗಪ್ಪ ಮೆಮೋರಿಯಲ್ ಬಹುಮಾನವನ್ನು ಏರ್ಪಡಿಸಿದವರೇ ಇವರು ಮತ್ತು ಮೊನ್ನೆತಾನೇ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದ ವೀರಶೈವ ಕಾನ್ಫರೆನ್ಸನ್ನು ಏರ್ಪಡಿಸುವುದಕ್ಕೂ ಕೂಡ ಪ್ರಾರಂಭದಲ್ಲಿ ಇವರೇ ಮೂಲಕಾರಣರು. ಇಂಥಾ ಮಹನೀಯರು ತಮ್ಮ ಶಿವಸಾಯುಜ್ಯಕಾಲದ ಸಮೀಪದಲ್ಲೂ ಸಹ ಪ್ರದರ್ಶಿಸಿದ ವಿದ್ಯಾಭಿಮಾನವೂ ಧರ್ಮವಾತ್ಸಲ್ಯವೂ ಬಹಳ ಶ್ಲಾಘನೀಯವಾಗಿದ್ದುವು. ಏನೆಂದರೆ— ಅಶೇಷ ವೀರಶೈವ ಮಹಾಜನರ ವಂದನೆಗೂ ಪಾತ್ರರಾಗಿರುವ ಕೈ|| ರಾ|| ಬ|| ಧ|| ಪ್ರ|| ಗುಬ್ಬಿ ತೋಟದಪ್ಪನವರ ಹೆಸರನ್ನು ಚಿರಸ್ಮರಣೀಯವಾಗಿರುವಂತೆ ಮಾಡಬೇಕೆಂಬ ಉತ್ಸಾಹದಿಂದ ಅವರ ಹೆಸರಿನಲ್ಲಿ ಒಂದು ಬಹುಮಾನವನ್ನು ಮೈಸೂರು ಎಂಟರೆನ್ಸ್ ಪರೀಕ್ಷೆಯಲ್ಲಿ ವೀರಶೈವರಲ್ಲಿ ಎರಡನೆಯವರಾಗಿ ಉತ್ತೀರ್ಣರಾಗುವವರಿಗೆ ಕೊಡುವುದಾಗಿ (ಈ ಸಂಕಲ್ಪವನ್ನು ಇವರ ಅನುಜರಾದ ಬಸಪ್ಪನವರು ನೆರವೇರಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.) ಶ್ರೀ ಸಿದ್ಧಗಂಗಾಸನ್ನಿಧಿಯಲ್ಲಿ ಬಹಳ ಸಂತೋಷದಿಂದ ಮಾಡಿದರು. ಸುಜನಶಿರೋಮಣಿಗಳಲ್ಲಿ ಒಬ್ಬರಾದ ಈ ಮಹಾನುಭಾವರು ಯಾವ ವಿಧವಾದ ಯಾತನೆಗೂ ಸಿಲುಕದೆ 'ಶರಹರ ಸಾವು ಮರಣದಲ್ಲಿ' ಎಂಬ ಆರ್ಯೋಕ್ತಿಯಂತೆ ಅಂತ್ಯದಲ್ಲಿ ಯಾವ ಮಾಯಾಪಾಶಕ್ಕೂ ಬದ್ಧರಾಗದೆ ಕೆಲಂತ ಜ್ವರೋಪಾಧಿಯಿಂದ ಕಾಮಾರಿಯಾದ ಶ್ರೀ ಪರಶಿವನ ಪರಮಪಾವನವಾದ ಕಾಮದಹನದ ದಿನವೇ ಅಂದರೆ ಇದೇ ಫಾಲ್ಗುಣ ಶುದ್ಧ ೧೫ ಗುರುವಾರ ರಾತ್ರಿ ೨ ಗಂಟೆಯಲ್ಲಿ ಶಿವನಾಮಸಂಕೀರ್ತನೆಯುಳ್ಳಾಸಕ್ತರಾಗಿದ್ದು ಶಿವಸಾಯುಜ್ಯವನ್ನು ಹೊಂದಿದರು. ಇವರು 'ನುಡಿದಂತೆ ನಡೆ' ಎಂಬ ಲೋಕೋಕ್ತಿಯನ್ನು ಕೃತಕೃತ ನೆರವೇರಿಸುತ್ತಿದ್ದರು. ಇವರ ಯಾಜಮಾನ್ಯಕ್ಕೆ ಒಳಪಟ್ಟಿದ್ದ ಸುಮಾರು ೩೦ ಜನಸಂಖ್ಯೆಯುಳ್ಳ ದೊಡ್ಡ ಕುಟುಂಬರಥವು ಏಕಮತ್ಯವನ್ನೇ ನಿರಂತರವೂ ಮೂಲಮಂತ್ರವನ್ನಾಗಿಟ್ಟುಕೊಂಡು ಸಾಗುತ್ತಾ ಸರ್ವರ ಶ್ಲಾಘನೆಗೂ ಪಾತ್ರವಾಗಿರುವುದು. ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದ ಈ ಸತ್ಪುರುಷರಿಗೆ ಶ್ರೀಪರಶಿವನು ಶಾಂತಿಯನ್ನಿತ್ತು ಇವರ ಇಹಲೋಕದ ವಿಯೋಗವನ್ನು ಪಡೆದು ದುರ್ಭರವಾದ ದುಃಖಕ್ಕೆ ಈಡಾಗಿರುವ ಇವರ ಕುಟುಂಬದವರಿಗೆಲ್ಲಾ ಧೈರ್ಯಸ್ಥೈರ್ಯಗಳನ್ನು ದಯಪಾಲಿಸಿ ಈ ಮಹನೀಯರ ಸತ್ಪಥದಲ್ಲೇ ಸಾಗಿಸುತ್ತಾ ಬರಲಿ.

ಸ್ಥಳಿಕ.

ತ್ವರೆಮಾಡಿರಿ **ಸ್ವಲ್ಪವೇ ಪ್ರತಿಗಳು ಉಳಿದಿವೆ.**

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಂಬರಿಗಳು.

೧ ದಿವ್ಯಸುಂದರಿ ಅಥವಾ ದೀರ್ಘಪ್ರಯತ್ನ (ಉದ್ಯೋಗಿಕ)	ಬೆಲೆ ೧ ರೂ.
೨ ಸತ್ಯಪ್ರಕಾಶ (ಪೌರಾಣಿಕ)	೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ)	೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ —ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
ಆಲೂರ ಪೋ|| ಆಲೂರ ಹಾನಗಲ್ಲ ಜಿ|| ಧಾರವಾಡ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಸೂತ್ರೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳೀ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯುವೆಚ್ಚ ಬೇರೆ.

ಜಾಗ್ರತೆ. ಕಬ್ಬಿಣದ ನೇಗಲು. ಕರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೊಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 21

ನಾವು ಎ. ಆಲ್ ಬ್ರುಕ್ಕ್ಯಯರ್ ಕ್ಯ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸರ್ ೧೯೦೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 23

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸರ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಅದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂಡಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುಪ್ತವ್ಯಸನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈಹೂರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಸೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ಸೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಮಾರ್ಚಿ ತಾ|| ೨೮ ರಿಂದ ೧೯೨೦ನೆಯ ಏಪ್ರಿಲ್ ತಾ|| ೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ರೌದ್ರಿ ನಾಮ ಸಂವತ್ಸರದ ಚೈತ್ರಶುದ್ಧ ನವಮಿಯಿಂದ ಚೈತ್ರ ಶುದ್ಧ ಪೌರ್ಣಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನಮಾನ
28	1 ಭಾನು	ನವ	40-20	ಪುನ	41-9	16
29	2 ಸೋಮ	ದಶ	35-13	ಪುಷ್ಯ	37-53	17
30	3 ಮಂಗಳ	ಏಕಾ	30-48	ಆಶ್ಲೇ	35-18	18
31	4 ಬುಧ	ದ್ವಾ	27-16	ಮಖಾ	33-38	19
1	5 ಗುರು	ತ್ರಯೋ	24-44	ಪುಬ	32-58	20
2	6 ಶುಕ್ರ	ಚತು	23-22	ಉತ	33-25	21
3	7 ಶನಿ	ಪೌರ್ಣ	23-16	ಹಸ್ತ	35-6	22

(1) ಶ್ರೀರಾಮನವಮಿ, ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ. (2) ಮೇಲುಕೋಟೆ ವೈರಮುಡಿ ಉತ್ಸವ. (3) ಸರ್ವತ್ರೈಕಾದಶಿ. (4) ನಂಜನಗೂಡಿನಲ್ಲಿ ಪಂಚರಥ, ತಿರುಮಕೂಡ್ಲು ಅಗಸ್ತ್ಯೇಶ್ವರಸ್ವಾಮಿರಥ. (5) ಟಿ. ನರಸೀಪುರದಲ್ಲಿ ಬ್ರಹ್ಮಾದೋತ್ಸವ, ಮೇಲುಕೋಟೆ ಚಲುವರಾಯಸ್ವಾಮಿ ರಥ. (6) ಮಾಗಡಿ ರಂಗಸ್ವಾಮಿರಥ (7) ಟಿ. ನರಸೀಪುರದಲ್ಲಿ ಗುಂಜಾನರಸಿಂಹಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ... ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 121.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞ ನಕ್ಷತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 121.

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಏಪ್ರೆಲ್ ತಾರೀಖು ೪ ನೆಯ ಭಾನುವಾರ (ಸಂಚಿಕೆ ೧೪

MYSORE GOVERNMENT ADVERTISEMENTS.

34

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬಿಳಿ (ಹರದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

11 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 36

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧವ ಬಿಳುಪು ಮೊದಲಾದ್ದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮ ೦ ವಿ ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅಂಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ವಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ವಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 8

ಧಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಕಂಪ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
27 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ

ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರದ ಉತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
14 ವೈದ್ಯಶಾಲಾ, ಮೈಸೂರು.

ಇನಾಂ! ಇನಾಂ !!

ಒಂದಾಣೆ ಪೋಸ್ಟೇಜಿನ ಸ್ಟಾಂಪನ್ನು ಕಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 15

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿ ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ

20 ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿ ಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೋಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಲೀ ಪ್ರಚಾರವಾದೊಡನೆಯೇ ಅವುಗಳನ್ನು ತೇಖರಿಸಿ ಓದಬೇಕೆಂಬ ಲವಲವಿಕೆಯು ಇವರಿಗೆ ವಿಶೇಷವಾಗಿದ್ದಿತಲ್ಲದೆ ಎಷ್ಟೋ ಹಣವನ್ನು ಖರ್ಚುಮಾಡಿ ಸಂಗ್ರಹಿಸಿರುವ ಧರ್ಮಗ್ರಂಥಗಳ ಭಂಡಾರವು ಇವರ ಗ್ರಂಥಾಸಕ್ತಿಗೆ ನಿದರ್ಶನವಾಗಿರುವುದು. ಬೆಳ್ಳಾವೆಯಲ್ಲಿ ನಾಮಾವಶೇಷವಾಗಿದ್ದ ಶ್ರೀ ನಂದೀಶ್ವರ ದೇವಾಲಯ, ಶ್ರೀಮತ್ ಗಿರಿಜಾವೃಷಭೇಂದ್ರಾಲಯ ಮೊದಲಾದುವುಗಳನ್ನೆಲ್ಲಾ ಅಸಾಧಾರಣ ಸಾಹಸದಿಂದ ಜೀರ್ಣೋದ್ಧಾರ ಮಾಡಿ ದೇವತಾಪ್ರತಿಷ್ಠೆಗಳನ್ನು ಮಾಡಿಸಿ ಶಿವಪ್ರೀತಿಗೆ ಪಾತ್ರರಾದರು. ಈ ಬೆಳ್ಳಾವೆಯಲ್ಲಿ ವೀರಶೈವ ಸಮಾಜಕ್ಕೆ ರುದ್ರಭೂಮಿಯಿಲ್ಲದೆ ಉಂಟಾಗಿದ್ದ ಕೊರತೆಯನ್ನು ನೋಡಿ ಇವರು ಒಂದು ವಿಸ್ತಾರವಾದ ಪ್ರದೇಶವನ್ನು ಸ್ವಂತವಾಗಿ ಕೊಂಡು ಸಮಾಜದ ರುದ್ರಭೂಮಿಗಾಗಿ ವಿನಿಯೋಗಿಸಿ ಸರ್ವರ ಕೃತಜ್ಞತೆಗೂ ಪಾತ್ರರಾದರು. ಇವರ ಗುರುಭಕ್ತಿಯನ್ನಂತು ವಿವರಿಸಲು ಶಕ್ತಿ ಸಾಲದು. ಶ್ರೀ ಅಡವಿಸ್ವಾಮಿಗಳವರು ಶ್ರೀಶಂಕರ ಉರುಫ್ ಶ್ರೀಕಾರದ ಸ್ವಾಮಿಗಳವರು ಮತ್ತು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಶ್ರೀರಂಭಾಪುರೀ ಜಗದ್ಗುರು ಮಹಾಸ್ವಾಮಿಗಳು ಮತ್ತು ಶಿವಯೋಗೀಂದ್ರರಾದ ಶ್ರೀಮತ್ ಹಾನಗಲ್ ಕುಮಾರಮಹಾಸ್ವಾಮಿಗಳವರೇ ಮೊದಲಾದ ಶ್ರೀ ಪೂಜ್ಯಪಾದರುಗಳೆಲ್ಲಾ ಇವರ ನಿರ್ಮಲಭಕ್ತಿಯನ್ನು ಸ್ವೀಕರಿಸಿ ಸದಾ ಕೊಂಡಾಡುತ್ತಿದ್ದರು. ಶ್ರೀಕಾರದ ಶಿವಯೋಗೀಂದ್ರರು ಶಿವಸಾಯುಜ್ಯವನ್ನು ಹೊಂದಿದ ನಂತರ ಶ್ರೀಯವರ ಗದ್ದುಗೆಯ ಮೇಲೆ ಸಹಸ್ರಾರು ರೂಪಾಯಿಗಳನ್ನು ವೆಚ್ಚಮಾಡಿ ದೇವಾಲಯವನ್ನು ಕಟ್ಟಿಸಿ ಶಿವಲಿಂಗ ಪ್ರತಿಷ್ಠೆ ಮಾಡಿಸಿ ಅದರ ಜೀರ್ಣೋದ್ಧಾರಕ್ಕಾಗಿಯೂ ವೃತ್ತಿಗಳನ್ನು ಮೇಲೆ ಕಂಡ ಎರಡು ದೇವಾಲಯಗಳಿಗೆ ಮಾಡಿರುವಂತೆ ಏರ್ಪಡಿಸಿರುವರು. ಮತ್ತು ಪುರಾಣಪ್ರಸಿದ್ಧವಾದ ಕೊಮಾರ್ಪುರೀ ಶ್ರೀಪ್ರಸನ್ನ ಸೋಮೇಶ್ವರ ಸ್ವಾಮಿಯವರ ಸನ್ನಿಧಾನದಲ್ಲಿ ಅಖಂಡ ನಂದಾದೀಪವು ಚಿರಕಾಲವೂ ಉರಿಯುತ್ತಿರುವಂತೆ ಸ್ವಂತವಾಗಿ ಶಾಶ್ವತವಾದ ಏರ್ಪಾಟು ಮಾಡಿರುವರು. ಅದೇ ಶ್ರೀ ಸ್ವಾಮಿಯವರಿಗೆ ಹಿತ್ತಾಳೆ ನಂದಿವಾಹನವನ್ನು ಮಾಡಿಸಿಕೊಟ್ಟು ಪ್ರತಿವರ್ಷವೂ ಗಿರಿಜಾಕಲ್ಯಾಣಮಹೋತ್ಸವವು ವೈಭವದಿಂದ ನಡೆಯುವಂತೆ ಮಾಡಿರುವರು. ಅಲ್ಲದೆ ಶ್ರೀ ಸ್ವಾಮಿಯವರ ರಥೋತ್ಸವಕ್ಕಾಗಿ ಭಾರಿಯಾದ ಕಲ್ಲುಗಾಲಿಗಳನ್ನು ಮಾಡಿಸಿಕೊಟ್ಟಿರುವರು. ಶ್ರೀ ರೇವಣಸಿದ್ಧೇಶ್ವರಸ್ವಾಮಿಯವರ ಶೈಲದಲ್ಲಿರುವ ಶ್ರೀ ರೇಣುಕಾಂಬಾಯವರಿಗೆ ಉತ್ಸವಮೂರ್ತಿಯನ್ನು ಮನೋಹರವಾಗಿರುವಂತೆ ಮಾಡಿಸಿ ಸಮರ್ಪಿಸಿರುವರು. ಇವರಲ್ಲಿದ್ದ ಪರೋಪಕಾರಬುದ್ಧಿಯೂ ಭೂತದಯಾ ಪಕ್ಷಪಾತವೂ ಅನುಕರಣೀಯವಾದುವುಗಳು. ಬೆಳ್ಳಾವೆಗೆ ಸಮೀಪದಲ್ಲಿರುವ ಅಮ್ಮತಮಹಲ್ ಕಾವಲಿನ ಬಳಿ ಇವರ ಯಜಮಾನರಾದ ವೀರಣ್ಣನವರು ಕಟ್ಟಿಸಿದ್ದ ಚಿಕ್ಕಕೆರೆಯು ಶಿಥಿಲವಾಗಿ ನಿರುಪಯೋಗವಾಗಿದ್ದದ್ದನ್ನು ಇವರು ಶ್ರಮಪಟ್ಟು ಜೀರ್ಣೋದ್ಧಾರ ಮಾಡಿ ಹತ್ತಾರು ಗ್ರಾಮಗಳ ದನಕರುಗಳಿಗೆಲ್ಲಾ ಉಪಯೋಗವಾಗುವಂತೆ ಮಾಡಿ ತಮ್ಮ ಯಜಮಾನರ ಸತ್ಸಂಕಲ್ಪವನ್ನು ಸಾರ್ಥಕಪಡಿಸಿದರು. ಈ ಬೆಳ್ಳಾವೆ ಹೋಬಳಿಗೆ ಸೇರಿದ ಜನಗಳಿಗೆಲ್ಲಾ ಪ್ರಯೋಜನಕರವಾಗಿರುವಂತೆ ಒಂದು ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿ ಅದರ ಸನ್ಮಾನನೀಯ ಸೆಕ್ರಟರಿಗಳಾಗಿ ಬಹಳ ದಕ್ಷತೆಯಿಂದ ಕಾರ್ಯನಿರ್ವಾಹ ಮಾಡುತ್ತಾ ಅತ್ಯಂತ ಅಭಿವೃದ್ಧಿಗೆ ತಂದು ಬಹುಜನ ಬಡವರಿಗೆ ಆಶ್ರಯರಾಗಿದ್ದರು. ಇವರ ಗುಣಾತಿಶಯಗಳಿಗಾಗಿ ಒಂದು ಬಂಗಾರದ ಪದಕವನ್ನು ಪ್ರಜೆಗಳು ಇವರಿಗೆ ಕೊಟ್ಟಿದ್ದರು. ಇಷ್ಟೇ ಅಲ್ಲದೆ ಇವರ ನಿರ್ಮಲವಾದ ದೇಶಾಭಿಮಾನವು ಸಹ ಸ್ತೋತ್ರಾರ್ಹವಾಗಿತ್ತು. ಸರ್ಕಾರಕ್ಕೆ ಭಾರಿಯಾಗಿ ಕಂದಾಯ ಕೊಡತಕ್ಕ ದೊಡ್ಡ ಜಮೀನ್ದಾರರೂ ಭಾರಿ ವರ್ತಕರೂ ಆಗಿದ್ದರು. ಇವರು ಗ್ರಾಮ ಪಂಚಾಯಿತಿ ಮೊದಲ್ಗೊಂಡು ಪ್ರಜಾಪ್ರತಿನಿಧಿಯವರೆಗೂ ಎಲ್ಲಾ ಸರ್ಕಾರಿ ಸಭೆಗಳಲ್ಲೂ ಭಾಗಿಗಳಾಗಿದ್ದರಲ್ಲದೆ ಈ ಪ್ರದೇಶದ ಪ್ರತಿಯೊಂದು ಕಾರ್ಯಗಳೂ ಇವರ ಅನುಬಂಧವಿಲ್ಲದೆ ನೆರವೇರುತ್ತಿರಲಿಲ್ಲ. ಇದಕ್ಕೆಲ್ಲಾ ಇವರಲ್ಲಿದ್ದ ಅನನ್ಯಸಾಧಾರಣ ಸುಗುಣಾತಿಶಯವೇ ಮೂಲಭೂತವಾಗಿದ್ದುವು. ಅನೇಕ ಸ್ವಮತದ ವೈದಿಕವಿದ್ವಜ್ಜನರಿಗೂ ಶಾಸ್ತ್ರಿಗಳಿಗೂ ತುಂಬಾ ಸಹಾಯಕರಾಗಿದ್ದುದಲ್ಲದೆ ಶ್ರೀ ಪಾಲ್ಕುರಿಕೆ ಸೋಮಾರಾಧ್ಯರಿಂದ ವಿರಚಿತವಾದ ಶ್ರೀ ಬಸವೇಶ್ವರಸ್ತೋತ್ರ ಮಾಲಿಕೆಯಾದ ಅಕ್ಷರಾಂಕನ ಗದ್ಯವೆಂಬ ಪುರಾತನಗ್ರಂಥವನ್ನು ಮುದ್ರಣಮಾಡಿಸಿದ್ದರು. ಮಹಾತ್ಮರಾದ ಶ್ರೀಕಾರದ ಶಿವಯೋಗೀಂದ್ರರ ಚರಿತ್ರೆಯನ್ನು ಬಹಳ ಶ್ರಮಪಟ್ಟು ಸಂಗ್ರಹಿಸಿ ಬರೆಸಿದ್ದರು. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಯಥೋಚಿತವಾಗಿ ಸ್ವಹಸ್ತ ಪರಹಸ್ತಗಳಿಂದ ಸಹಾಯ ಮಾಡಿಸಿದ್ದರಲ್ಲದೆ ಇನ್ನೊಂದು ಉದಾತ್ತವಾದ ದಾನವು ನಡೆಯುವಂತೆಯೂ ಮಾಡಿದ್ದರು. ಸ್ವಮತದಲ್ಲಿ ಅನೇಕ ಬಡ ವಿದ್ಯಾರ್ಥಿಗಳಿಗೆ ಅಶನವಸನಗಳನ್ನೂ ಇತರ ಸಹಾಯಗಳನ್ನೂ ಮಾಡುತ್ತಿದ್ದರು. ತಮ್ಮ ಸೋದರಳಿಯರಾದ ಪ್ಲೀಡರ್ ಜಿ. ಕೆ. ಗುರುಸಂಗಾರ್ಯರ ವಿದ್ಯಾರ್ಜನೆಗೆ ಬಹಳಮಟ್ಟಿಗೂ ಸಹಾಯವನ್ನು ಮಾಡುತ್ತಾ ಅವರು ವಕೀಲರಾಗುವಂತೆ ಸಾಹಸಮಾಡಿದವರು ಸಹ ಈ ಮಹನೀಯರೇ. ಇಷ್ಟೇ ಅಲ್ಲದೆ ಇವರಲ್ಲಿ ಸ್ತ್ರೀವಿದ್ಯಾಭಿಮಾನವೂ ವಿಶೇಷವಾಗಿದ್ದಿತು. ಈ ಬೆಳ್ಳಾವೆಯಲ್ಲಿ 1895 ರಲ್ಲಿ ಒಂದು ಬಾಲಿಕಾಪಾಠಶಾಲೆಯನ್ನು ಸ್ಥಾಪಿಸಿ ಅಂದಿನಿಂದ ಇಲ್ಲಿಯವರೆಗೂ ಸ್ವಲ್ಪವಾಗಿ ಗ್ರ್ಯಾಂಟ್ ಬರುತ್ತಿದ್ದಾಗ್ಯೂ ಉಳಿದ ವೆಚ್ಚಗಳನ್ನೆಲ್ಲಾ ತಾವೇ ವಹಿಸಿ ನಡೆಸಿಕೊಂಡು ಬಂದಿರುವರು. (ಘನ ಸರ್ಕಾರದವರು ಇದನ್ನು ಜಾಗ್ರತೆಯಾಗಿ ತಮ್ಮ ಆಡಳಿತಕ್ಕೆ ವಹಿಸಿಕೊಂಡು ಇವರ ಸತ್ಸಂಕಲ್ಪವನ್ನು ನೆರವೇರಿಸುವರೆಂದು ಕೋರಿಕೆ.) ಈ ಪಾಠಶಾಲೆಯಲ್ಲಿ ವ್ಯಾಸಂಗಮಾಡಿದ ಸ್ವಮತಪರಮತದ ಹಲವು ಬಾಲಿಕೆಯರು ಈಗಲೂ ಉತ್ತಮವಾದ ಸಾಧ್ವೀಮಣಿಗಳಾಗಿರುವರು. ವೀರಶೈವ ಬಾಲಿಕೆಯರಿಗೆ ಧರ್ಮಬೋಧವಾಗುವಂತೆ ಶಿವಕೀರ್ತನೆಗಳನ್ನೂ ಹಾಡುಗಳನ್ನೂ ಬರಸಬೇಕೆಂಬ ಕುತೂಹಲವು ಇವರಿಗೆ ಬಹಳವಾಗಿದ್ದಿತು. (ಈ ಸದುದ್ದೇಶವನ್ನು ನಮ್ಮ ಸಮಾಜದ ವಿದ್ವಜ್ಜನರು ಇನ್ನಾದರೂ ಜಾಗ್ರತೆಯಾಗಿ ಪೂರೈಸುವರೆಂದು ನಂಬುತ್ತೇನೆ.) ಧರ್ಮೋದ್ಧಾರಕರಾದ ಯಜಮಾನ್ ವೀರಸಂಗಪ್ಪನವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಹೋದವರ್ಷ ಗುರುಸಂಗಾರ್ಯರಿಂದ ಬೇರೂರಿನ ಮಹಾಸಭೆಯಲ್ಲಿ ಕೊಡಲ್ಪಟ್ಟ ವೀರಸಂಗಪ್ಪ ಮೆಮೋರಿಯಲ್ ಬಹುಮಾನವನ್ನು ಏರ್ಪಡಿಸಿದವರೇ ಇವರು ಮತ್ತು ಮೊನ್ನೆತಾನೇ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದ ವೀರಶೈವ ಕಾನ್ಫರೆನ್ಸನ್ನು ಏರ್ಪಡಿಸುವುದಕ್ಕೂ ಕೂಡ ಪ್ರಾರಂಭದಲ್ಲಿ ಇವರೇ ಮೂಲಕಾರಣರು. ಇಂಥಾ ಮಹನೀಯರು ತಮ್ಮ ಶಿವಸಾಯುಜ್ಯಕಾಲದ ಸಮೀಪದಲ್ಲೂ ಸಹ ಪ್ರದರ್ಶಿಸಿದ ವಿದ್ಯಾಭಿಮಾನವೂ ಧರ್ಮವಾತ್ಸಲ್ಯವೂ ಬಹಳ ಶ್ಲಾಘನೀಯವಾಗಿದ್ದುವು. ಏನೆಂದರೆ—ಅಶೇಷ ವೀರಶೈವ ಮಹಾಜನರ ವಂದನೆಗೂ ಪಾತ್ರರಾಗಿರುವ ಶ್ರೈ॥ ರಾ॥ ಬ॥ ಧ॥ ಪ್ರ॥ ಗುಬ್ಬಿ ತೋಟದಪ್ಪನವರ ಹೆಸರನ್ನು ಚಿರಸ್ಮರಣೀಯವಾಗಿರುವಂತೆ ಮಾಡಬೇಕೆಂಬ ಉತ್ಸಾಹದಿಂದ ಅವರ ಹೆಸರಿನಲ್ಲಿ ಒಂದು ಬಹುಮಾನವನ್ನು ಮೈಸೂರು ಎಂಟರೆನ್ಸ್ ಪರೀಕ್ಷೆಯಲ್ಲಿ ವೀರಶೈವರಲ್ಲಿ ಎರಡನೆಯವರಾಗಿ ಉತ್ತೀರ್ಣರಾಗುವವರಿಗೆ ಕೊಡುವುದಾಗಿ (ಈ ಸಂಕಲ್ಪವನ್ನು ಇವರ ಅನುಜರಾದ ಬಸಪ್ಪನವರು ನೆರವೇರಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.) ಶ್ರೀ ಸಿದ್ಧಗಂಗಾಸನ್ನಿಧಿಯಲ್ಲಿ ಬಹಳ ಸಂತೋಷದಿಂದ ಮಾಡಿದರು. ಸುಜನಶಿರೋಮಣಿಗಳಲ್ಲಿ ಒಬ್ಬರಾದ ಈ ಮಹಾನುಭಾವರು ಯಾವ ವಿಧವಾದ ಯಾತನೆಗೂ ಸಿಲುಕದೆ 'ಶರಣರ ಸಾವು ಮರಣದಲ್ಲಿ' ಎಂಬ ಆರ್ಯೋಕ್ತಿಯಂತೆ ಅಂತ್ಯದಲ್ಲಿ ಯಾವ ಮಾಯಾಪಾಶಕ್ಕೂ ಬದ್ಧರಾಗದೆ ಕೊಂಚ ಜ್ವರೋಪಾಧಿಯಿಂದ ಕುಮಾರಿಯಾದ ಶ್ರೀ ಪರಶಿವನ ಪರಮಪಾವನವಾದ ಕಾಮದಹನದ ದಿನವೇ ಅಂದರೆ ಇದೇ ಫಾಲ್ಗುಣ ಶುದ್ಧ ೧೫ ಗುರುವಾರ ರಾತ್ರಿ ೨ ಗಂಟೆಯಲ್ಲಿ ಶಿವನಾಮಸಂಕೀರ್ತನೆಯುಳ್ಳವರಾಗಿದ್ದು ಶಿವಸಾಯುಜ್ಯವನ್ನು ಹೊಂದಿದರು. ಇವರು 'ನುಡಿದಂತೆ ನಡೆ' ಎಂಬ ಲೋಕೋಕ್ತಿಯನ್ನು ಕೃತ್ಯತಃ ನೆರವೇರಿಸುತ್ತಿದರು. ಇವರ ಯಜಮಾನ್ಯಕ್ಕೆ ಒಳಪಟ್ಟಿದ್ದ ಸುಮಾರು ೩೦ ಜನಸಂಖ್ಯೆಯುಳ್ಳ ದೊಡ್ಡ ಕುಟುಂಬರಥವು ಏಕಮತ್ಯವನ್ನೇ ನಿರಂತರವೂ ಮೂಲಮಂತ್ರವನ್ನಾಗಿಟ್ಟುಕೊಂಡು ಸಾಗುತ್ತಾ ಸರ್ವರ ಶ್ಲಾಘನೆಗೂ ಪಾತ್ರವಾಗಿರುವುದು. ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದ ಈ ಸತ್ಪುರುಷರಿಗೆ ಶ್ರೀಪರಶಿವನು ಶಾಂತಿಯನ್ನಿತ್ತು ಇವರ ಇಹಲೋಕದ ವಿಯೋಗವನ್ನು ಪಡೆದು ದುರ್ಭರವಾದ ದುಃಖಕ್ಕೆ ಈಡಾಗಿರುವ ಇವರ ಕುಟುಂಬದವರಿಗೆಲ್ಲಾ ಧೈರ್ಯಸ್ಥೈರ್ಯಗಳನ್ನು ದಯಪಾಲಿಸಿ ಈ ಮಹನೀಯರ ಸತ್ಪಥದಲ್ಲೇ ಸಾಗಿಸುತ್ತಾ ಬರಲಿ.

ಸ್ಥಳೀಕ.

ತ್ವರೆಮಾಡಿರಿ ಸ್ವಲ್ಪವೇ ಪ್ರತಿಗಳು ಉಳಿದಿವೆ.

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಬಂರಿಗಳು.

೧ ದಿವ್ಯಸುಂದರಿ ಅಥವಾ ದೀರ್ಘಪ್ರಯತ್ನ (ಉದ್ಯೋಗಿಕ)	ಬೆಲೆ ೧ ರೂ.
೨ ಸತ್ಯಪ್ರಕಾಶ (ಪೌರಾಣಿಕ)	೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ)	೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ—ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
ಆಲೂರ ಪೋ॥ ಆಲೂರ ಹಾನಗಲ್ಲ ಜಿ॥ ಧಾರವಾಡ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕ್ರೋಶೀ. —ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಫ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಹಂದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಾಗ್ರತೆ. ## ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 21

ನಾವು ಎ. ಆಲ್ ಬ್ಯುಕ್ಕಿಯರ್ ಕ್ಕಂ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಫ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ ಸನ್ ೧೯೬೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 23

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮಹವರ್ತಿಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ವತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೇಶೂಲಿ, ನಡುಶೂಲಿ, ವಾರಶೂಲಿ, ರೇಚಿಜಿಡ್ಡು, ಗುದವ್ಯಸನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅನ್ಮೋಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಮಾರ್ಚಿ ತಾ॥ ೨೮ ರಿಂದ ೧೯೨೦ನೆಯ ಏಪ್ರಿಲ್ ತಾ॥ ೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ರೌದ್ರಿ ನಾಮ ಸಂವತ್ಸರದ ಚೈತ್ರಶುದ್ಧ ನವಮಿಯಿಂದ ಚೈತ್ರ ಶುದ್ಧ ಪೌರ್ಣಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
28	[1]ಭಾನು	ನವ	40-20	ಪುನ	41.9	16
29	[2]ಸೋಮ	ದಶ	35-13	ಪುಷ್ಯ	37-53	17
30	[3]ಮಂಗಳ	ಏಕಾ	30-48	ಆಶ್ಲೇ	35-18	18
31	[4]ಬುಧ	ದ್ವಾ	27-16	ಮಘಾ	33-38	19
1	[5]ಗುರು	ತ್ರಯೋ	24-44	ಪುಫ	32-58	20
2	[6]ಶುಕ್ರ	ಚತು	23-22	ಉತ	33-25	21
3	[7]ಶನಿ	ಪೌರ್ಣ	23-16	ಹಸ್ತ	35-6	22

(1) ಶ್ರೀರಾಮನವಮಿ, ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ. (2) ಮೇಲುಕೋಟೆ ವೈರಮುಡಿ ಉತ್ಸವ. (3) ಸರ್ವೈಕಾದಶಿ. (4) ನಂಜನಗೂಡಿನಲ್ಲಿ ಪಂಚರಥ, ತಿರುಮಕೂಡ್ಲು ಅಗಸ್ತ್ಯೇಶ್ವರಸ್ವಾಮಿರಥ. (5) ಟಿ. ನರಸೀಪುರದಲ್ಲಿ ಪ್ರಹ್ಲಾದೋತ್ಸವ, ಮೇಲುಕೋಟೆ ಚೆಲುವರಾಯಸ್ವಾಮಿ ರಥ. (6) ಮಾಗಡಿ ರಂಗಸ್ವಾಮಿರಥ. (7) ಟಿ. ನರಸೀಪುರದಲ್ಲಿ ಗುಂಜಾನರಸಿಂಹಸ್ವಾಮಿ ರಥ.

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿಕ್ಕಿಷಾ | ಘನಪಕ್ಷಕೃತಾವತಾರಾ ಪಶ್ಯತ್ವಜ್ಞ ನಕ್ಷತ್ರ ಮೋಹರಾಜೀಯತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಯಂಸದಾಪುರಿಗೆ ಗೌರೀಶಾಮುಕಂಪೋಜ್ಜ್ವಲಂ ‖

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಏಪ್ರಿಲ್ ತಾರೀಖು ೪ ನೆಯ ಭಾನುವಾರ (ಸಂಚಿಕೆ ೧೪

MYSORE GOVERNMENT ADVERTISEMENTS.

34

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the metre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬಿಳೆ (ಹರದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

11 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್ಫ್ಲುಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 36

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯು ಸಂಬಂಧವ ಬಿಳುಪು ಮೊದಲಾದ್ದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮ ೦ ವಿ ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ವೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ್, ಕಮಿಷನ್ ಏಜಂಟ್, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಎಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೇಳ್ಳೆ, ಉಳ್ಳಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳೆ, ಕಡಲಿಬ್ಯಾಳೆ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚಪುಕಶಿಯಿಂದ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 8

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಶರತು. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ### ಇಂದ್ರಿಯಸ್ತಂಭನ ಗುಳಿಗೆ, ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
27 ಬಿ. ಪೋಸ್ಟ್ ಶಿರಸಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಮ್ಮ ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
14 ವೈದ್ಯಶಾಲಾ, ಮೈಸೂರು.

ಇನಾಂ! ಇನಾಂ !!

ಒಂದಾಣೆ ಪೋಸ್ಟೇಜಿನ ಸ್ಟಾಂಪನ್ನು ಕಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ### ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಉಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 15

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪ್ರಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

20

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ.ಗೆ ಕೊಟ್ಟುಬಿಡುವೆವು. ಅಪೇಕ್ಷಿಸುವವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಅಪೇಕ್ಷಿಸುವವರು ತರಿಸಿಕೊಳ್ಳಿರಿ.

ಏದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಏದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಏಪ್ರಿಲ್ ತಾ|| ೪ ನೆಯ ಭಾನುವಾರ.

ಮೈಸೂರು ನಿಯಮನಿರ್ಮಾಣಸಭೆ, ಮತ್ತು ಆದಾಯದ ಮೇಲಣ ತೆರಿಗೆ.

ಕಳೆದ ತಿಂಗಳಲ್ಲಿ ಕೂಡಿದ್ದ ಮೈಸೂರು ನಿಯಮನಿರ್ಮಾಣ ಸಭೆಯಲ್ಲಿ ನಡೆದ ವಿಷಯಗಳೊಳಗೆ ಆದಾಯದಮೇಲಣ ತೆರಿಗೆಯನ್ನು ವಿಧಿಸಿ ಎತ್ತಬೇಕೆಂದು ಸಭಿಕರೆಲ್ಲರೂ ಒಪ್ಪಿದ ವಿಷಯವು ಅತ್ಯಂತ ಮುಖ್ಯವಾಗಿರುತ್ತದೆ. ಬಹು ಕಾಲದಿಂದ ಚರ್ಚೆಗೆ ಬಂದು ನರಳುತ್ತಿದ್ದ ಈ ವಿಷಯವು ಈಗ ದಡವನ್ನು ಸೇರುವಂತಾದುದನ್ನು ಕಂಡು ಸಂತೋಷಿಸುತ್ತೇವೆ. ಸರ್ಕಾರಕ್ಕೆ ಈಗ ಆದಾಯಕ್ಕಿಂತಲೂ ವ್ಯಯವು ಹೆಚ್ಚಾಗಿ ಕಾರ್ಯನಿರ್ವಾಹ ಮಾಡುವದು ದುರ್ಭರವಾಗಿ ಬಂದಿರುವುದರಿಂದ ಇದನ್ನು ಗಮನಿಸಿ ಸಭಿಕರೆಲ್ಲರೂ ಏಕವಾಕ್ಯತೆಯಿಂದ ಅದನ್ನೊಪ್ಪಿದುದರಿಂದ, ಸರ್ಕಾರದ ಕಾರ್ಯನಿರ್ವಾಹಕ್ಕೆ ಸೌಕರ್ಯವನ್ನೊದಗಿಸಿಕೊಡುವುದರಲ್ಲಿ ಅವರುಗಳಿಗೆ ಇರುವ ಸಾನುಭೂತಿಯು ವ್ಯಕ್ತಪಟ್ಟಂತಾಯಿತು.

ಇದರ ಚರ್ಚೆಯ ಆರಂಭಕಾಲದಲ್ಲಿ ದಿವಾನರವರೂ ಫೈನಾನ್ಷಿಯಲ್ ಸೆಕ್ರೆಟರಿಯವರೂ ಅಪ್ಪಣೆಕೊಡಿಸಿದ ಮಾತುಗಳಲ್ಲಿ ಈಗ ದಾರಣೆಬಾಸಿಗಳ ಹೆಚ್ಚುಗೆಯಿಂದ ಸರ್ಕಾರದ ಸಣ್ಣ ಸಂಬಳದ ಉದ್ಯೋಗಿಗಳಿಗೆ ಉಂಟಾಗಿರುವ ಕಷ್ಟವನ್ನು ಕಡಿಮೆ ಮಾಡುವುದಕ್ಕೋಸುಗ ಅಲೋಯನ್ಸುಗಳನ್ನು ಕೊಡುವುದಕ್ಕಾಗಿ ವರ್ಷಕ್ಕೆ ೧೩ ಲಕ್ಷ ರೂ. ಗಳಷ್ಟು ಹೆಚ್ಚು ವೆಚ್ಚವು ಬೀಳುತ್ತಿದೆಯೆಂತಲೂ, ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳ ಬೆಲೆಯಲ್ಲಿ ಬಹಳ ಹೆಚ್ಚು ಕಡಿಮೆಯಾಗಿರುವುದರಿಂದ ಸೀಮೆಯೊಡನೆ ನಡೆಯಿಸಬೇಕಾದ ಹಣಕಾಸಿನ ವ್ಯವಹಾರದಿಂದ ನಮಗೆ ಕೆಲವು ಭಾಗಗಳಲ್ಲಿ ಆದಾಯ ಹೆಚ್ಚಿದರೂ ಕೆಲಭಾಗದಲ್ಲಿ ವೆಚ್ಚವು ಬಹಳ ಹೆಚ್ಚಿ ಆ ಭಾಗದಿಂದ ೩೦ ಲಕ್ಷದವರೆಗೆ ನಷ್ಟವಾಗುತ್ತಿರುವುದೆಂತಲೂ, ವರ್ಷ ೧ ಕ್ಕೆ ಸಂಸ್ಥಾನದ ಒಟ್ಟು ಆದಾಯಕ್ಕಿಂತಲೂ ವೆಚ್ಚವು ೧೪ ರಿಂದ ೧೭ ಲಕ್ಷದಷ್ಟು ಅಧಿಕವಾಗುವುದೆಂತಲೂ, ಇದರಮೇಲೆ ಉದ್ಯೋಗಸ್ಥರ ಸಂಬಳಗಳನ್ನು ಹೆಚ್ಚಿಸಬೇಕಾದುದಕ್ಕೆ ೧೩ ಲಕ್ಷ ರೂ. ಗಳೂ, ವಿದ್ಯಾಭಿವೃದ್ಧಿ, ಆರೋಗ್ಯಾಭಿವೃದ್ಧಿ, ವೈದ್ಯಸಾಹಾಯ್ಯಾಭಿವೃದ್ಧಿ ಮೊದಲಾದ ಈ ತೆರದ ಅವಶ್ಯಕಕಾರ್ಯಗಳಿಗೆ ವೆಚ್ಚ ಮಾಡಲು ಇನ್ನೂ ಹಣವು ಹೆಚ್ಚಾಗಿ ಬೇಕಾಗಿದೆಯೆಂತಲೂ ಗೊತ್ತಾಗುವುದು. ಇವಕ್ಕೆಲ್ಲಾ ಹಣವನ್ನು ಒದಗಿಸಬೇಕಾದುದು ಅತ್ಯವಶ್ಯಕವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಬೊಕ್ಕಸವೆಲ್ಲಾ ಸರ್. ವಿಶ್ವೇಶ್ವರಯ್ಯನವರ ಕಾಲದಲ್ಲೇ ಬರಿದಾಯಿತೆಂಬುದು ಗೊತ್ತೇ ಇದೆ. ಹೀಗಿರುವಾಗ ನೂತನಮಾರ್ಗಗಳಿಂದ ಆದಾಯವನ್ನು ಹೆಚ್ಚಿಸದಿದ್ದರೆ ಸಂಸ್ಥಾನದಲ್ಲಿ ಅವಶ್ಯಕಕಾರ್ಯಗಳ ನಿರ್ವಾಹಕ್ಕೂ ಪುರೋಭಿವೃದ್ಧಿಗಳಿಗೂ ದಾರಿಯೇ ಇಲ್ಲದಂತಾಗುವುದು. ಆದಾಯದ ಹೊಸ ಮಾರ್ಗಗಳನ್ನು ಗೊತ್ತುಮಾಡಿಕೊಳ್ಳಬೇಕಾದುದು ಪ್ರಭುತ್ವದವರಿಗೂ ಪ್ರಜೆಗಳಿಗೂ ಸಹ ಅವಶ್ಯಕವೆಂಬುದು ಸಿದ್ಧವಾಗಿದೆ. ಭೂಕಂದಾಯವು ಇದುವರೆಗೇ ಭಾರವಾಗಿರುವುದರಿಂದ ಬೇಸಾಯಗಾರರ ತಂಟೆಗೇ ಇನ್ನು ಹೋಗುವಹಾಗಿಲ್ಲ. ಹಲವರು ವಕೀಲತನ, ಲೇವಾದೇವಿ, ವ್ಯಾಪಾರ, ದೊಡ್ಡ ದೊಡ್ಡ ಸಂಬಳದ ಉದ್ಯೋಗ—ಮೊದಲಾದ ಕಸಬುಗಳಿಂದ ವಿಶೇಷವಾಗಿ ಧನಾರ್ಜನೆ ಮಾಡುತ್ತಿದ್ದರೂ ಸರ್ಕಾರಕ್ಕೆ ಅದರ ಒಂದು ಭಾಗವನ್ನು ಕಂದಾಯರೂಪದಿಂದ ಕೊಡುತ್ತಲೇ ಇರುವುದಿಲ್ಲ. ಅಂಥವರೆಲ್ಲಾ ವರಮಾನದಮೇಲಣ ತೆರಿಗೆಯನ್ನು ಕೊಡಬೇಕಾದುದು ಧರ್ಮವಾಗಿರುತ್ತದೆ. ವಿದ್ಯಾಭ್ಯಾಸಕ್ಕೆ ಬಹಳ ಉದಾರವಾಗಿ ನಮ್ಮ ಸರ್ಕಾರದವರು ವೆಚ್ಚಮಾಡುತ್ತ ಈಗ ಲೋ. ಸೆ. ತರಗತಿಗಳವರೆಗೂ ಎಲ್ಲ ಪಾಠಗಳೂ ಉಚಿತವಾಗಿ ನಡೆಯುವಂತೆ ಏರ್ಪಾಡು ಮಾಡಿಕೊಟ್ಟು, ಇನ್ನೂ ಇದೇ ತೆರದ ಸೌಕರ್ಯಗಳನ್ನು ದಿನಕ್ರಮೇಣ ಹೆಚ್ಚಿಸಿಕೊಡುವವರಾಗಿ ಇರುವುದರಿಂದ ಪ್ರಜೆಗಳಿಗೆ ತಂತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡಬೇಕಾದ ವ್ಯಯದ ಭಾರವು ಕಡಿಮೆಯಾಗುತ್ತಿರುವುದರಿಂದ ವಿದ್ಯಾಭ್ಯಾಸಕ್ಕಾಗಿ ಒಂದು ಅಲ್ಪಸ್ವಲ್ಪವಾದ ಹೊಸ ತೆರಿಗೆಯನ್ನು ಕೂಡ ಕೊಡುವುದು ಅನ್ಯಾಯವಲ್ಲ. ಈ ಕಾರಣದಿಂದಲೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೇಲೆ ಕಂಡ ೨ ತೆರದ ತೆರಿಗೆಗಳ ಕಲ್ಪನೆಗೂ ಸಭಿಕರು ಸಮ್ಮತಿಯನ್ನು ಕೊಟ್ಟಿದ್ದರು. ನಿಯಮನಿರ್ಮಾಣಸಭೆಯಲ್ಲಿ ವಿದ್ಯಾಭ್ಯಾಸದ ತೆರಿಗೆಯ ವಿಷಯವು ಸದ್ಯಃ ಪ್ರಸ್ತಾಪಕ್ಕೆ ಬರದಿದ್ದರೂ ಉತ್ತರೋತ್ತರ ಅದೂ ಈಡೇರತಕ್ಕುದಾಗಿದೆ. ವರಮಾನದ ತೆರಿಗೆಯು ಒಪ್ಪಲ್ಪಟ್ಟಂತಾಯಿತು. ಈ ತೆರಿಗೆಯನ್ನು ವಿಧಿಸಿ ತಡಮಾಡದೆ ಎತ್ತುವುದು ಅವಶ್ಯಕವೆಂಬ ವಿಷಯವಾಗಿ ಮ|| ಗಳಾದ-ಸಿ. ಆರ್. ರೆಡ್ಡಿ, ಬಿ. ಎ. ವಿಜಯದೇವ, ಎಚ್. ಜಿ. ಬಸವಪ್ಪ, ಎಂ. ಸುಬ್ಬಯ್ಯ, ಜೆ. ವಿ. ರಾಮಸ್ವಾಮಿಶೆಟ್ಟಿ, ಡಿ. ವೆಂಕಟೇಶಯ್ಯ, ರಾ|| ಬ|| ಎಂ. ಶ್ಯಾಮರಾವ್, ಎಂ. ರಾಮಚಂದ್ರರಾವ್, ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟಿ, ರಾ|| ಬ|| ಎಂ. ಸಿ. ರಂಗಯ್ಯಂಗಾರ್, ಮಹಮ್ಮದ್ ಅಬ್ಬಾಸ್ ಖಾನ್, ಕೆ. ಚಾಂಡಿ, ಎಂ. ವಿ. ನಾರಣಯ್ಯಂಗಾರ್ ರವರುಗಳು ಅನುಮೋದನೆ ಕೊಟ್ಟು ಮಾತನಾಡಿದರು. ಅದೆಲ್ಲಾ ಸಮರ್ಪಕವಾಗಿಯೇ ಇದ್ದಿತು. ಆದರೆ ಹೀಗೆ ವರಮಾನದ ಕಂದಾಯದ ಮೂಲಕ ಎತ್ತುವಳಿಯಾಗುವ ಹಣವನ್ನೆಲ್ಲಾ ವಿದ್ಯಾಭ್ಯಾಸಾಭಿವೃದ್ಧಿಗಾಗಿಯೇ ವಿನಿಯೋಗಿಸುವಂತಾಗಬೇಕೆಂದು ಮ|| ಗಳಾದ ವಿಜಯದೇವ, ಎಂ. ಸುಬ್ಬಯ್ಯ, ಅಬ್ಬಾಸ್ ಖಾನ್ ಮೊದಲಾದ ಕೆಲವರು ವಾದಿಸಿದರು. ಈ ಹಣವನ್ನು ಇಂಥ ಭಾಗಕ್ಕೇ ವಿನಿಯೋಗಿಸಬೇಕೆಂದು ನಿರ್ಬಂಧಪಡಿಸುವುದು ಉಚಿತವಲ್ಲವೆಂಬುದಾಗಿ ಮ|| ಗಳಾದ ಜೆ. ವಿ. ರಾಮಸ್ವಾಮಿಶೆಟ್ಟರೂ, ಡಿ. ವೆಂಕಟೇಶಯ್ಯನವರೂ, ಎಂ. ಶ್ಯಾಮರಾಯರೂ, ಕೆ. ಪಿ. ಪುಟ್ಟಣ್ಣಶೆಟ್ಟರೂ, ಕೆ. ಚಾಂಡಿಯವರೂ, ಎಂ. ವಿ. ನಾರಣಯ್ಯಂಗಾರರೂ ಕಾರಣಗಳನ್ನು ಕೊಟ್ಟು ಪ್ರತಿಯಾಗಿ ವಾದಿಸಿದರು. ಇದು ಯುಕ್ತವಾಗಿರುತ್ತದೆ. ವಿದ್ಯಾಭಿವೃದ್ಧಿಗೆ ಸರ್ಕಾರದವರು ಈಗ ವರ್ಷ ೧ ಕ್ಕೆ ೪೩ ಲಕ್ಷ ರೂ. ಗಳನ್ನು ವೆಚ್ಚಮಾಡುತ್ತಿದ್ದಾರೆ. ಇನ್ನು ಕೆಲ ವರ್ಷಗಳಲ್ಲಿ ಇದು ೬೦ ಲಕ್ಷಕ್ಕೂ ಏರುವುದಾಗಿದೆ. ಹೀಗೆ ಸರ್ಕಾರದವರೇ ಅದರ ಅವಶ್ಯಕತೆಯನ್ನು ಕಂಡುಹಿಡಿದು ವೆಚ್ಚಮಾಡುತ್ತಿರುವಾಗ ನಾವು ಈ ಹೊಸ ತೆರಿಗೆಯನ್ನು ವಿದ್ಯಾಭಿವೃದ್ಧಿಗೇ ವಿನಿಯೋಗಿಸಬೇಕೆಂದು ನಿರ್ಬಂಧಪಡಿಸಬೇಕಾದ ಅವಶ್ಯಕತೆಯೇನಿರುವುದು? ಒಂದುವೇಳೆ ಸರ್ಕಾರದವರು ಒಪ್ಪಿಕೊಳ್ಳುವರೆಂದು ಇಟ್ಟುಕೊಂಡರೆ ಈ ವರಮಾನದ ತೆರಿಗೆಯೇ ವಿದ್ಯಾಭಿವೃದ್ಧಿ ಕಾರ್ಯಗಳಿಗೆಲ್ಲಾ ಸಾಕಾದೀತೆ? ಸಾಲದೆಹೋದರೆ ಒದಗಿಸುವವರಾರು? ಸರ್ಕಾರದ ಬೊಕ್ಕಸವೇ ತಾನೇ? ಹೀಗಿರುವಾಗ ಮ|| ಶ್ಯಾಮರಾಯರು ಹೇಳಿದಂತೆ ಪ್ರಜೆಗಳ ದುಡ್ಡನ್ನೆಲ್ಲಾ ಶೇಖರಿಸಿಕೊಳ್ಳುವ ಬೊಕ್ಕಸಕ್ಕೇ ಇದನ್ನೂ ಹಾಕಿ, ಅದರ ಮೂಲಕವಾಗಿಯೇ ಅವಶ್ಯಕವಾದ ಭಾಗಗಳಿಗೆಲ್ಲಾ ವಿನಿಯೋಗಿಸುವ ವಿವೇಚನೆಯನ್ನು ಸರ್ಕಾರದ ಭಾಗಕ್ಕೇ ಬಿಡುವುದು ಲೇಸಲ್ಲವೆ? ಅಲ್ಲದೆ ಫೈನಾನ್ಷಿಯಲ್ ಸೆಕ್ರೆಟರಿಯವರು ಅಪ್ಪಣೆ ಕೊಡಿಸಿದಂತೆ ಈ ವರಮಾನದ ಕಂದಾಯದ ಹಣವನ್ನೇ ಬೇರೆ ತೆಗೆದಿಟ್ಟು ಪ್ರತ್ಯೇಕವಾಗಿ ಅದನ್ನು ವೆಚ್ಚಮಾಡಿಸುವಂತೆ ಲೆಕ್ಕಗಳನ್ನಿಡುವುದೂ ಬಹಳ ಪ್ರಯಾಸಕರವಾಗುವುದೆಂಬುದು ನ್ಯಾಯವಾದ ಅಭಿಪ್ರಾಯವಾಗಿರುತ್ತದೆ.

ಈ ಸಂದರ್ಭದಲ್ಲಿ ಮ|| ಎಂ. ಸುಬ್ಬಯ್ಯನವರು ಹೇಳಿದಂತೆ ಸರ್ಕಾರದವರು ತಮ್ಮ ಹೆಚ್ಚು ವೆಚ್ಚಗಳಿಗಾಗಿ ನೂತನ ಕಂದಾಯದ ಏರ್ಪಾಟೊಂದನ್ನೇ ಇಟ್ಟುಕೊಳ್ಳದೆ ವೆಚ್ಚದ ಭಾಗಗಳನ್ನು ಕಡಿಮೆಮಾಡುವ ಕಡೆಗೂ ಗಮನಿಸಬೇಕಾದುದು ಅತ್ಯವಶ್ಯಕವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಸರ್ಕಾರದವರು ಕಾರ್ಯನಿರ್ವಾಹಕ್ಕಾಗಿ ಅಧಿಕಾರಸ್ಥಾನಗಳ ಕಲ್ಪನೆಗೆ ಪ್ರತಿಯಾಗಿ ವ್ಯಕ್ತಿಗಳಿಗೋಸ್ಕರವಾಗಿ ಅಧಿಕಾರಸ್ಥಾನಗಳನ್ನು ಕಲ್ಪಿಸುತ್ತಿದ್ದಾರೆ. ಒಬ್ಬರು ಮಾಡುತ್ತಿದ್ದ ಮತ್ತು ಮಾಡಬಹುದಾದ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಇಬ್ಬರು ಮೂವರನ್ನು ನಿಯಮಿಸುತ್ತಿದ್ದಾರೆ. ಮತ್ತೂ ಸಂಬಳಗಳೂ ಅಲೋಯನ್ಸುಗಳೂ ಕೂಡ ಪ್ರಮಾಣವನ್ನು ಮೀರುತ್ತಲಿವೆ. ಈ ವಿಷಯದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಮೊದಲು ತಾವು ಸ್ವಾರ್ಥತ್ಯಾಗವನ್ನು ಮಾಡಿ, ಹೆಚ್ಚು ಸಂಬಳದ ಆಸೆಯನ್ನೂ ಅಲೋಯನ್ಸುಗಳ ಅಪೇಕ್ಷೆಯನ್ನೂ ಕಡಿಮೆ ಮಾಡಿ, ಮೇಲುಪಂತಿ ಹಾಕಿಕೊಟ್ಟು ಇತರರೆಲ್ಲಾ ಅದನ್ನು ಅನುಸರಿಸುವಂತೆ ಮಾಡಬೇಕು. ಮತ್ತೂ ಮ|| ವಿಜಯದೇವರವರು ಹೇಳಿದ ಒಂದು ವಿಷಯವು ಅವಶ್ಯಕವಾಗಿ ಗಮನೀಯವೆಂದು ನಾವೂ ಅಭಿಪ್ರಾಯಪಡುತ್ತೇವೆ. ಅದೇನೆಂದರೆ—ಈ ವರಮಾನದ ತೆರಿಗೆಯನ್ನು ಎತ್ತುವುದಕ್ಕೆ ಹೊಸದಾಗಿ ಬೇರೆ "ಸಿಬ್ಬಂದಿ"ಯನ್ನು ನೇಮಿಸಬಾರದು ಎಂಬುದೇ. ಹಣವು ಸಾಲದೆ ತಾಪತ್ರಯಪಡುತ್ತಿರುವ ಕಾಲದಲ್ಲಿ ಇಂಥ ಮಾರ್ಗವನ್ನನುಸರಿಸಬೇಕಾದುದು ಉಚಿತವೇ ಆಗಿರುತ್ತದೆ. ಇದನ್ನೆತ್ತುವುದಕ್ಕೆ ಹೊಸದಾಗಿ ಉದ್ಯೋಗಿಗಳನ್ನು ನೇಮಿಸಿ ಪ್ರತ್ಯೇಕ ಶಾಖೆಯನ್ನು ಕಲ್ಪಿಸುವುದರಿಂದ ಒಂದೆರಡು ಲಕ್ಷಗಳಾದರೂ ಅದರ ವೆಚ್ಚಕ್ಕೆ ಬೇಕಾಗಬಹುದು. ಅದಕ್ಕಿಂತಲೂ ಈಗಣ ರೆವಿನ್ಯೂ ಮತ್ತು ಮ್ಯುನಿಸಿಪಲ್ ಉದ್ಯೋಗಿಗಳಿಗೇ ಇದನ್ನು ವಹಿಸಿಬಿಡುವುದರಿಂದ ಬೇರೆ ವೆಚ್ಚವಿಲ್ಲದೆ ಆ ಕೆಲಸವೂ ನಡೆದುಹೋಗುವುದು. ಇದನ್ನು ಸರ್ಕಾರದವರು ತಪ್ಪದೆ ಗಮನಿಸುವರೆಂದು ನಂಬುತ್ತೇವೆ.

ಸಭಿಕರ ಏಕವಾಕ್ಯತೆಯಿಂದ ಈ ವಿಷಯವು ಒಪ್ಪಿಗೆಯನ್ನು ಪಡೆದಬಳಿಕ ಇದಕ್ಕೆ ಸಂಬಂಧಪಟ್ಟ ಬಿಲ್ಲಿನ ನ್ಯೂನಾತಿರೇಕವನ್ನು ಕುರಿತು ಚರ್ಚಿಸಿ ಅಭಿಪ್ರಾಯ ಕೊಡುವದಕ್ಕಾಗಿ ಮ||ಗಳಾದ ಮೀರ್ ಹಂಜಾಹುಸೇನ್, ಎಂ. ಎ. ಕೃಷ್ಣರಾವ್, ಸಿ. ಎಸ್. ಬಾಲಸುಂದರಂ ಅಯ್ಯರ್, ಕೆ. ಪಿ. ಪುಟ್ಟಣ್ಣಶೆಟ್ಟಿ, ಎಂ. ಸುಬ್ಬಯ್ಯ, ಎಚ್. ಜಿ. ಬಸಪ್ಪ, ಕೆ. ಚಾಂಡಿ, ಕೆ. ಶಂಕರನಾರಾಯಣರಾವ್, ಎಚ್. ವೆಂಕಟರಾಮಯ್ಯ, ಬಿ. ಅಬ್ದುಲ್ ರಹ್ಮಾನ್, ಎಂ. ಶ್ಯಾಮರಾವ್, ಎಂ. ಸಿ. ರಂಗಯ್ಯಂಗಾರ್ ಈ ದೊಡ್ಡ ಮನುಷ್ಯರುಗಳನ್ನು ಒಂದು ಉಪಸಂಘವನ್ನಾಗಿ ಪ್ರಭುತ್ವದವರು ಏರ್ಪಡಿಸಿದ್ದಾರೆ. ಅವರ ವರದಿಯು ಬಂದನಂತರ ಮುಂದಣ ಅಧಿವೇಶನದಲ್ಲಿ ಮರಳಿ ನಿಯಮನಿರ್ಮಾಣಸಭೆಗೆ ಒಂದು ವಾಚಿತವಾಗಿ ಸಭಿಕರ ಅನುಮತಿಯನ್ನು ಪಡೆದಬಳಿಕ ಶ್ರೀಮನ್ಮಹಾರಾಜರವರ ಅಂಗೀಕಾರವನ್ನು ಪಡೆದು ಇದು ವ್ಯವಹಾರಕ್ಕೆ ಬರುವುದಾಗಿದೆ.

ನಮ್ಮ ನೆರೆಹೊರೆಯ ಬ್ರಿಟಿಷ್ ಸೀಮೆಯೊಳಗೆಲ್ಲಾ ಈ ವರಮಾನದ ತೆರಿಗೆಯನ್ನು ಪ್ರಜೆಗಳು ಬಹುಕಾಲದಿಂದಲೂ ಕೊಡುತ್ತಿದ್ದಾರೆ. ನಮಗೆ ಮಾತ್ರ ಇದುವರೆಗೂ ಇದು ಇದ್ದಿರಲಿಲ್ಲ. ಇನ್ನು ಮೇಲೆ ಕೊಡಬೇಕಾಗುವುದು. ಆದರೆ ವರ್ಷಕ್ಕೆ ಬಹುಶಃ ೨ ಸಹಸ್ರ ರೂ. ಗಳಿಗೆ ಮೀರಿದ ವರಮಾನವುಳ್ಳ ಪುಷ್ಕಳವಾದ ಜನಮೇಲೆಯೇ ಈ ತೆರಿಗೆಯು ಅಲ್ಪ ಸ್ವಲ್ಪವಾಗಿ ಬೀಳುವುದರಿಂದ ಅವರಿಗೆ ಅದನ್ನು ಕೊಡುವುದು ಲಕ್ಷ್ಯವಾಗಿರುವುದಿಲ್ಲ. ಬಡಪ್ರಜೆಗಳ ತಲೆಯ ಮೇಲೆ ಇದರ ಭಾರವು ಬೀಳುವಹಾಗೇ ಇಲ್ಲ. ಅಂತೂ ಸರ್ಕಾರಕ್ಕೆ ಈ ಭಾಗದಿಂದ ಹತ್ತಾರು ಲಕ್ಷ ರೂ. ಗಳ ವರಮಾನವಾದರೆ ಎಷ್ಟೋ ಸಹಾಯವಾದಂತೆ ಆಗುತ್ತದೆ.

ಕಾಗದದ ಬರ.

ಯುದ್ಧಕಾಲಕ್ಕಿಂತಲೂ ಈಗ ಕಾಗದದ ಬೆಲೆಯು ಹೆಚ್ಚಿರುವುದು ಮಾತ್ರವೇ ಅಲ್ಲದೆ ದುಡ್ಡು ಕೊಟ್ಟರೂ ಸಿಕ್ಕುವುದೇ ಕಷ್ಟವಾಗಿರುತ್ತದೆ. ಈ ವಿಷಯದಲ್ಲಿ ಬೊಂಬಾಯಿಯ ಟೈಂಸ್ ಆಫ್ ಇಂಡಿಯಾ ಪತ್ರಿಕೆಯು ಹೀಗೆ ಹೇಳಿರುತ್ತದೆ. ಲೋಕದಲ್ಲಿ ಕಾಗದದ ವ್ಯಾಪಾರಕ್ಕೆ ಸಂಬಂಧಪಟ್ಟ ವರದಿಯನ್ನು ನೋಡಿದರೆ ಈಗ ಕಾಗದದ ಬರವು ಅಧಿಕವಾಗಿದೆಯೆಂದು ಗೊತ್ತಾಗುತ್ತದೆ. ಅಮೇರಿಕ, ಇಂಗ್ಲೆಂಡು, ಸ್ಕಾಂಡಿನೇವಿಯಾಗಳಲ್ಲಿರುವ ಕಾಗದದ ಯಂತ್ರಾಲಯಾಧಿಕಾರಿಗಳೊಡನೆ ೧-೨ ವರ್ಷಗಳ ವರೆಗೆ ತಮ ತಮಗೆ ಬೇಕಾದಷ್ಟು ಕಾಗದಗಳಿಗೆ ಜನರು ಈಗಾಗಲೇ ಒಪ್ಪಂದಗಳನ್ನು ಮಾಡಿಕೊಂಡುಬಿಟ್ಟಿದ್ದಾರೆ. ಯುದ್ಧಕಾಲಕ್ಕೆ ಮುಂಚೆ ಇದ್ದ ಬೆಲೆಗಿಂತಲೂ ಈಗ ಕಾಗದದ ಬೆಲೆಯು ೧ ಕ್ಕೆ ೬ ರಿಂದ ೯ ರಷ್ಟು ಏರಿಹೋಗಿದೆ. ಪ್ರತಿವಾರದಲ್ಲೂ ಬೆಲೆಯು ಏರುತ್ತಲೇ ಇದೆ. ೧೯೧೪ ನೆ ವರ್ಷದಲ್ಲಿ ಲಂಡನ್ ಪಟ್ಟಣದೊಳಗೆ ಪೌಂಡು ೧ ಕ್ಕೆ ೧ ಆಣೆ ಬೆಲೆಯುಳ್ಳದಾಗಿದ್ದ ಕಾಗದಕ್ಕೆ ಈಗ ೮ ಆಣೆ ಬೆಲೆಯಾಗಿದೆ. ಇಷ್ಟರಲ್ಲೇ ಅದು ೧೨ ಆಣೆಗೆ ಏರಬಹುದು. ಅಮೇರಿಕಾ ಕೆನಡಾ ದೇಶಗಳ ಕೆಲವು ವೃತ್ತಪತ್ರಿಕೆಗಳು ಕಾಗದದ ದುರ್ಭಿಕ್ಷದಿಂದ ಪ್ರಕಟನವನ್ನೇ ನಿಲ್ಲಿಸಿಬಿಡಬೇಕಾಗಿ ಬರಬಹುದೆಂದು ತಿಳಿಯಿಸಿರುತ್ತವೆ. ಇನ್ನು ಕೆಲವು ಪತ್ರಿಕೆಗಳು ಆಕೃತಿಗಳನ್ನು ಕಡಿಮೆಮಾಡುತ್ತಿವೆ. ಫ್ರಾನ್ಸ್ ಪತ್ರಿಕೆಗಳು ಚಂದಾ ಹಣವನ್ನು ೧ ಕ್ಕೆ ದ್ವಿಗುಣ ಮಾಡುವೆವೆಂದು ಪ್ರಕಟಿಸಿವೆ. ಪ್ರಪಂಚದ ಉಳಿದ ಭಾಗಗಳ ಸ್ಥಿತಿಯೂ ಹೀಗೆಯೇ ಇವೆ. ಕಾಗದದ ವ್ಯಾಪಾರ ಸ್ಥಿತಿಯನ್ನು ನೋಡಿದರೂ ಪ್ರಜಾಕ್ಷೇಮ ಸ್ಥಿತಿಯನ್ನು ವಿಚಾರ ಮಾಡಿದರೂ ಮುಂದಣ ಸ್ಥಿತಿಯು ಆಶಾಭಂಗಕರವಾಗಿಯೇ ಇದೆ.

ಮೈಸೂರು ರೈಲ್ವೆ.

ಈಗತಾನೇ ಪ್ರಕಟವಾಗಿರುವ ಮೈಸೂರು ಸ್ಟೇಟ್ ರೈಲ್ವೆಯ ಕಳೆದ ೧೯೧೮-೧೯ ನೆ ವರ್ಷದ ವರದಿಯನ್ನು ನೋಡುವಲ್ಲಿ ಅದು ದೇಶೀಯರಿಗೆಲ್ಲಾ ಮನೋವ್ಯಥೆಯನ್ನುಂಟುಮಾಡದೆಹೋಗುವುದಿಲ್ಲ. ಸಂಸ್ಥಾನದ ಲೋಹಮಾರ್ಗದಲ್ಲಿ ಎಂ. ಎಸ್. ಎಂ. ರೈಲ್ವೆ ಕಂಪೆನಿಯವರ ಆಡಳಿತದಲ್ಲಿರುವುದು ಹೋಗುತ್ತ ಉಳಿದ ೨೫೧ ಚಿಲ್ಲರೆ ಮೈಲಿಗಳ ಮಾರ್ಗವು ನಮ್ಮ ಸಂಸ್ಥಾನದ ಆಡಳಿತದಲ್ಲಿದ್ದಿತು. ಆಗ ನಡೆದಿರುವ ಆಯವ್ಯಯವನ್ನು ನೋಡುವಲ್ಲಿ ೧೯೧೬-೧೭ ನೇ ವರ್ಷದಲ್ಲಿ ವೆಚ್ಚ ಕಳೆದು ೧೭೭,೧೪೦ ರೂ. ಆದಾಯವಾಗಿದ್ದುದಕ್ಕೆ ಪ್ರತಿಯಾಗಿ ಪ್ರಸಕ್ತ ವರ್ಷದಲ್ಲಿ ೧೦,೮೦೦ ರೂ. ಗಳ ನಷ್ಟವೇ ಆಗಿರುವುದೆಂದು ಹೇಳಲ್ಪಟ್ಟಿರುತ್ತದೆ. ಅಲ್ಲದೆ ಆ ವರ್ಷದಲ್ಲಿ ಲೋಹಮಾರ್ಗದ ಮೇಲೆ ೬೮ ಪ್ರಮಾದಗಳು ಮನುಷ್ಯರಿಗೂ, ೨೮೮ ಪ್ರಮಾದಗಳು ದನಕರುಗಳಿಗೂ ೬೨ ಸಲ ಬಂಡಿಗಳು ಕಂಬಿಯಿಂದ ತಪ್ಪಿ ಬಿದ್ದುದೂ, ೪೦ ಸಲ ಇಂಜನ್ನುಗಳು ಕಂಬಿ ತಪ್ಪಿಹೋದುದೂ, ೪೨೪ ಅಲ್ಪಸ್ವಲ್ಪ ಪ್ರಮಾದಗಳೂ ಸಂಭವಿಸಿರುತ್ತವೆ. ಇದನ್ನೆಲ್ಲಾ ನೋಡಿದರೆ ನಮ್ಮ ರೈಲ್ವೆ ಶಾಖೆಯ ಕಾರ್ಯಭಾರದ ವಿಚಕ್ಷಣತೆಯೂ, ಮೇಲ್ವಿಚಾರಣೆಯೂ ಎಷ್ಟುಮಟ್ಟಿಗೆ ಶೋಚನೀಯವಾಗಿವೆಯೆಂಬುದು ಗೊತ್ತಾಗುತ್ತದೆ. ಒಂಟಿಗುಳಿಗಳ ಹಾವಳಿಯೂ ಸೋಂಬೇರಿಗಳಾದ ಅಸಮರ್ಥರನ್ನು ದೇಹಾನುಬಂಧ ಜಾತ್ಯನುಬಂಧಾದಿ ದೃಷ್ಟಿಗಳಿಂದ ಉದ್ಯೋಗಗಳಿಗೆ ಸೇರಿಸಿರುವುದೂ ಇಷ್ಟೆಲ್ಲಾ ಅನರ್ಥಕ್ಕೆ ಕಾರಣವಾಗಿರಬೇಕೆಂದು ಹೇಳಬೇಕಾಗುತ್ತದೆ. ಈ ರೈಲ್ವೆ ಶಾಖೆಗಾಗಿ ಸರ್ಕಾರವು ಮಾಡುತ್ತಿರುವ ಕೆಲಸವು ಒಡಕು ಗಡಿಗೆಯಲ್ಲಿ ನೀರನ್ನು ಹೊತ್ತ ಮಾಲಿಯ ಶ್ರಮದಂತಾಗಿರುತ್ತದೆ. ಇದರ ಮೇಲೆ ಮೈಸೂರು ಬೆಂಗಳೂರು ಮಧ್ಯದ ಮಾರ್ಗವು ಕೂಡ ನಮ್ಮ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲ್ಪಟ್ಟಿದೆ. ಇದರಲ್ಲಿ ಲಾಭವೂ ಯಶಸ್ಸೂ ದೊರೆಯಬೇಕಾದರೆ ನಿರ್ದಾಕ್ಷಿಣ್ಯವಾಗಿಯೂ, ಚಾತುರ್ಯದಿಂದಲೂ ಮೇಲ್ವಿಚಾರಣೆ ಮಾಡತಕ್ಕ ಸಮರ್ಥನಾದ ಆಂಗ್ಲೋದ್ಯೋಗಿಯೊಬ್ಬನನ್ನು ನಿಯಮಿಸಿ, ಆತನ ಮೂಲಕ ತಕ್ಕ ಸಂಸ್ಕರಣವನ್ನು ಮಾಡಿಸುವುದು ಅವಶ್ಯಕವೆಂದು ನಮಗೆ ತೋರುತ್ತದೆ.

ಒಳದೇಶ ವೃತ್ತಾಂತಗಳು.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರ ಅಧಿಕಾರದವಧಿಯು ಮುಂದಣ ವರ್ಷದ ಸೆಪ್ಟಂಬರ್ ತಿಂಗಳವರೆಗೂ ಹೆಚ್ಚಿಸಲ್ಪಟ್ಟಿರುತ್ತದೆ.

ದಿವಾನ್ ಸರ್ದಾರ್ ಕಾಂತರಾಜ ಅರಸಿನವರು ಬೇಸಗೆಯ ನಿಮಿತ್ತವಾಗಿ ನೀಲಗಿರಿಗೆ ಹೋಗಿ ೧ ತಿಂಗಳ ಕಾಲ ಅಲ್ಲಿ ವಾಸಮಾಡಿ ಬರುವವರಾಗಿದ್ದಾರೆ

ಬೆಂಗಳೂರಲ್ಲಿ ಆಕಾಶವಿಮಾನ ಸೈನ್ಯವು ಸ್ಥಾಪಿಸಲ್ಪಟ್ಟಿದೆ. ಇನ್ನು ಮೇಲೆ ಬೆಂಗಳೂರಿನಲ್ಲಿ ಆಕಾಶವಿಮಾನೋಡ್ಡಾಣವನ್ನು ಪ್ರಜೆಗಳೆಲ್ಲರೂ ನೋಡಬಲ್ಲರು

ರಾಜಧಾನಿಯಲ್ಲಿ ಬಿಸಿಲೂ ಜಲವೂ ದುಸ್ಸಹವಾಗಿವೆ. ರಾತ್ರಿ ವೇಳೆ ಸ್ವಲ್ಪ ಮೋಡವಾಡುತ್ತಲೂ ಅಕಸ್ಮಾತ್ ಮಿಂಚುತ್ತಲೂ ಇರುವುದರಿಂದ ಮಳೆಗಳು ಇಷ್ಟರಲ್ಲೇ ಬರುವಂತೆ ಕಾಣುತ್ತಿದೆ.

ನ್ಯಾಯನಿರ್ಮಾಣ ಸಭೆಯು ನೆರೆದ ಮರುದಿನಕ್ಕೆ ಆ ಸಭೆಯ ಸಭಿಕರನ್ನೆಲ್ಲಾ ದಿವಾನರವರು ತಮ್ಮ ಬಂಗಲೆಗೆ ಕರೆಯಿಸಿಕೊಂಡು ಅಲ್ಪಾಹಾರಗಳಿಂದಲೂ ವಿನೋದಗಳಿಂದಲೂ ಸತ್ಕರಿಸಿದರು.

ಕಳೆದ ವರ್ಷ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಬೆಂಕಿಯ ಅನಾಹುತದಿಂದ ಗುಡಿಸಲುಗಳು ಹಲವು ಕಡೆ ಸುಟ್ಟು ೨ ಲಕ್ಷ ರೂ. ಗಳ ಸೊತ್ತು ನಷ್ಟವಾಗಿರುವುದಲ್ಲದೆ ೩೬ ಮಂದಿಗಳು ಸತ್ತಿರುವರು.

ಬೆಂಗಳೂರು ಸೆಂಟರಲ್ ಕಾಲೇಜಿನ ಗಣಿತಬೋಧಕರಾಗಿದ್ದ ಮ|| ಬಿ. ಕೃಷ್ಣಯ್ಯಂಗಾರ್ ಬಿ. ಎ. ಯವರು ತಮ್ಮ ೩೩ ನೆಯ ವಯಸ್ಸಿನಲ್ಲಿ ಕಳೆದ ತಾ|| ೧೭ ರಲ್ಲಿ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಹಣದ ಕೊರತೆಯ ಕಾರಣದಿಂದ ಸಬ್ ತಾಲ್ಲೂಕುಗಳನ್ನೆಲ್ಲಾ ತಾಲ್ಲೂಕುಗಳನ್ನಾಗಿ ಮಾಡಬೇಕೆಂದಿದ್ದ ಏರ್ಪಾಡನ್ನು ಸದ್ಯಕ್ಕೆ ಸರ್ಕಾರದವರು ನಿಲ್ಲಿಸಿದ್ದಾರೆಂದು ನಿಯಮನಿರ್ಮಾಣಸಭೆಯಲ್ಲಿ ಸರ್ಕಾರದ ಪಕ್ಷದಿಂದ ಉತ್ತರ ಕೊಡಲ್ಪಟ್ಟಿದೆ.

ನಂಜನಗೂಡಿನಲ್ಲಿ ಕಳೆದ ಬುಧವಾರ ರಥೋತ್ಸವವು ಸಾಂಗವಾಗಿ ಜರುಗಿತು. ಆ ದಿನ ಮಧ್ಯಾಹ್ನವೇ ದೊಡ್ಡ ತೇರು ಹರಿದು ಸ್ಥಾನಕ್ಕೆ ನಿಂತಿತು. ಉಳಿದ ರಥಗಳು ಸಾಯಂಕಾಲದೊಳಗೆ ಹರಿದು ನಿಲೆಗೆ ಬಂದವು. ಪ್ಲೇಗಿನ ಸುದ್ದಿಯಿದ್ದುದರಿಂದ ಪರುಸೆಯು ಅತಿ ವಿಶೇಷವಾಗಿರಲಿಲ್ಲ.

ನಮ್ಮ ಸಂಸ್ಥಾನದ ಫುಡ್ ಕಂಟ್ರೋಲರು ಈ ತಿಂಗಳಲ್ಲಿ ನಮ್ಮ ಸಂಸ್ಥಾನಕ್ಕೆ ಪಂಜಾಬು ದೇಶದಿಂದ ೫೦೦ ಟನ್ ಕಡಲೆ ಕಡಲೆಬೇಳೆಗಳನ್ನು ತರಿಸಿಕೊಳ್ಳಲು ಏರ್ಪಾಟು ಮಾಡಿದ್ದಾರೆ. ರಿಜಿಸ್ಟರ್ಡ್ ವರ್ತಕರು ಫುಡ್ ಕಂಟ್ರೋಲರಿಗೆ ಬರೆದು ಬೇಕಾದಷ್ಟನ್ನು ತರಿಸಿಕೊಳ್ಳಬಹುದು.

ಬೆಂಗಳೂರು ಮ್ಯುನಿಸಿಪಲ್ ಡಿಪೋಗಳಲ್ಲಿ ಬರ್ಮಾ ಅಕ್ಕಿಯನ್ನು ಚಿಲ್ಲರೆಯಾಗಿ ಮಾರಿಸುತ್ತಿರುವುದಲ್ಲದೆ ಬೇಕಾದ ಗೃಹಸ್ಥರಿಗೆ ಪ್ರೊ. ಗ್ರೇನ್ ಡಿಪೋವಿನಿಂದ ಒಂದು ಸಲಕ್ಕೆ ೨ ಚೀಲಗಳಷ್ಟು ಅಕ್ಕಿಯನ್ನು ಕೊಡುವುದಕ್ಕೂ ಏರ್ಪಡಿಸಿದ್ದಾರೆ. ಅಂಥ ಚೀಲಗಳು ೨೨೫ ಟನ್ ತೂಕವುಳ್ಳವಾಗಿವೆ. ಪ್ರತಿಯೊಂದಕ್ಕೂ ಚೀಲ ಸಹಿತ ಬೆಲೆ ೧೮|| ರೂ.

ಮೈಸೂರು ವಿಶ್ವವಿದ್ಯಾಲಯ ಸಭಾ ಸಭಿಕತ್ವಕ್ಕೆ ರೆ|| ದಬ್ಲ್ಯು. ಇ. ಥಾಮ್ಸನ್ ರವರು ರಾಜೀನಾಮೆ ಕೊಟ್ಟುದರಿಂದ ಆ ಸ್ಥಾನಕ್ಕೆ ಮಹಾರಾಣೀ ಕಾಲೇಜು ಪಂಡಿತೆಯಾದ ಮಿಸ್. ಹೆನ್ಸ್ ಮನ್ ಎಂ. ಎ. ಯವರು ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ. ಇವರೂ ಸೇರಿ ಆ ಸಭೆಯಲ್ಲಿ ಮೂರು ಮಂದಿ ನಾರೀಮಣಿಯರು ಸಭಿಕೆಯರಾಗಿದ್ದಂತಾಯಿತು.

ನಮ್ಮ ಸಂಸ್ಥಾನದಲ್ಲಿ ೧೯೧೬-೧೭ ನೆ ವರ್ಷದಾರಭ್ಯ ೩ ವರ್ಷಗಳ ಕಾಲದಲ್ಲಿ ವಿಶ್ವವಿದ್ಯಾಲಯ ಸಂಬಂಧವಾದ ವೆಚ್ಚಗಳು ಒಟ್ಟು ೧೬,೨೭ ೭೫೧ ರೂ. ಗಳೆಂದೂ, ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸಗಳಿಗಾಗಿ ಆ ಮೂರು ವರ್ಷ ಕಾಲದಲ್ಲಿ ಮಾಡಲ್ಪಟ್ಟಿರುವ ಒಟ್ಟು ವೆಚ್ಚವು ೬೩,೭೩,೩೮೪ ರೂ ಗಳೆಂದೂ ಗೊತ್ತಾಗಿದೆ.

ಹೊಸೂರು ಕುದುರೆ ಡಿಪೋವಿನಿಂದ ಮಾಲೂರು ಸ್ಟೇಷನ್ನಿಗೆ ಕುದುರೆಗಳನ್ನು ಇಳಿಸಿ ತರುವುದಕ್ಕಾಗಿ ಹೋಗುತ್ತಿದ್ದ ಒಬ್ಬ ಮನುಷ್ಯನು ದಾರಿಯಲ್ಲಿ ವಿದ್ಯುಚ್ಛಕ್ತಿ ತಂತಿಯ ಮೇಲಕ್ಕೆ ಲಗಾಮನ್ನು ಎಸೆದು, ಅಲ್ಲೇ ಸಿಕ್ಕಿಕೊಂಡ ಅದನ್ನು ಎಳೆದುಕೊಳ್ಳುವುದಕ್ಕಾಗಿ ಕಂಬದ ಮೇಲೆ ಹತ್ತಿ ಲಗಾಮನ್ನು ಮುಟ್ಟಿದ ಕೂಡಲೇ ವಿದ್ಯುಚ್ಛಕ್ತಿಯು ಅವನ ಮೇಲೆ ಪ್ರವಹಿಸಿ, ಸುಟ್ಟು ಕರಕಾಗಿ ಕ್ಷಣಮಾತ್ರದಲ್ಲಿ ಸತ್ತನು.

ಮೈಸೂರಿನ ೧ನೆ ಮುನ್ಸೀಫರಾಗಿದ್ದ ಮ|| ಜಿ. ಸತ್ಯಾಜೀರಾಯರವರು ಸಬ್ ಜಡ್ಜಿಯವರಾಗಿ ಮಾಡಲ್ಪಟ್ಟು ಶಿವಮೊಗ್ಗೆಗೆ ಕಳುಹಿಸಲ್ಪಟ್ಟಿದ್ದಾರೆ. ಅವರಿದ್ದ ಸ್ಥಾನಕ್ಕೆ ಅಡ್ವೋಕೇಟ್ ಮ|| ಯು. ಡಿ. ನಾರಾಯಣಮೂರ್ತಿಯವರು ಆಕ್ಟಿಂಗ್ ಮುನ್ಸೀಫರಾಗಿ ನಿಯಮಿಸಲ್ಪಟ್ಟಿದ್ದಾರೆ. ಮ|| ಸತ್ಯಾಜೀರಾಯರಿಗಿಂತಲೂ ಸೀನಿಯರಾಗಿದ್ದವರಿಗೆ ಸಬ್ ಜಡ್ಜ್ ಸ್ಥಾನಕ್ಕೆ ಪ್ರಮೋಷನ್ ಕೊಡದೆ ತಪ್ಪಿಸುವುದಕ್ಕೇನು ಕಾರಣವೋ ಗೊತ್ತಾಗಲಿಲ್ಲ.

ಮರಿಮಲ್ಲಪ್ಪನವರ ಧರ್ಮದ ಟ್ರಸ್ಟ್ ಬೋರ್ಡಿಗೆ ಮಹಾರಾಜಾಕಾಲೇಜ್ ಪ್ರೊ|| ರೋಲೋರವರು ಮಿ|| ಟಿ. ಡೆನ್ಹಾಂರವರಿಗೆ ಪ್ರತಿಯಾಗಿ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ. ಮೆಂಬರುಗಳಲ್ಲಿ ಮ|| ಎ. ನರಸಿಹ್ಮಯ್ಯಂಗಾರ್, ಎ ರಾಮಣ್ಣ, ಎನ್. ಬಸಪ್ಪ ಇವರುಗಳ ಸ್ಥಾನಕ್ಕೆ ಮ|| ಗಳಾದ ರಂಗಾಚಾರ್, ಎಚ್. ನರಸಿಂಗರಾವ್, ಡಾ|| ಟಿ.ಎಸ್. ಸಿದ್ದಪ್ಪ ಈ ದೊಡ್ಡ ಮನುಷ್ಯರುಗಳು ಟ್ರಸ್ಟಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಚೆನ್ನರಾಯಪಟ್ಟಣದ ತಾ|| ಹಿಂದಲಹಳ್ಳಿಯಲ್ಲಿ ಮ|| ಸಾಹುಕಾರ್ ನಂಜಪ್ಪನವರು ಕಟ್ಟಿಸಿರುವ ಬಾಲಿಕಾ ಪಾಠಶಾಲೆಯ ಪ್ರಾರಂಭಮಹೋತ್ಸವವನ್ನು ನಮ್ಮ ದಿವಾನರವರು ಬರುವ ತಾ|| ೧೦ ರಲ್ಲಿ ನಡೆಯಿಸುವವರಾಗಿದ್ದಾರೆ. ಆ ಕಾಲಕ್ಕೆ ವಿದ್ಯಾಭ್ಯಾಸ ಶಾಖಾಧ್ಯಕ್ಷರಾದ ಮ|| ಸಿ. ರೆಡ್ಡಿಯವರೂ ದಯಮಾಡಿಸುವವರಾಗಿದ್ದಾರೆ. ಅದೇ ಕಾಲಕ್ಕೆ ಅದೇ ಊರಿನಲ್ಲಿ ರಾ|| ಸಾ|| ಎಚ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಆ ತಾಲ್ಲೂಕು ಒಕ್ಕಲಿಗರ ಸಭೆಯೂ ನಡೆಯುವುದು.

ನಮ್ಮ ದೇಶದಿಂದ ಬೊಂಬಾಯಿಗೆ ಹೋಗಿ ಕಳೆದ ೪ ವರ್ಷಗಳಿಂದ ಅಲ್ಲಿಯ ಟೆಕ್ನಿಲಾಜಿಕಲ್ ಇನ್ಸ್ಟಿಟ್ಯೂಟಿನಲ್ಲಿ ಸ್ಯಾನಿಟರಿ ಇಂಜಿನಿಯರಿಂಗ್ ಪ್ಲಂಬಿಂಗ್, ಸರ್ವೇಯಿಂಗ್, ಲೆವಲಿಂಗ್, ಡ್ರಾಯಿಂಗ್, ಬಿಲ್ಡಿಂಗ್, ಸ್ಯಾನಿಟರಿ ಫಿಟಿಂಗ್, ಪ್ರಾಕ್ಟಿಕಲ್ ಪಂಬ್ಲಿಂಗ್ ಈ ವಿದ್ಯೆಗಳನ್ನು ಅಭ್ಯಾಸ ಮಾಡುತ್ತಿದ್ದ ಮ|| ಗಳಾದ ಎಂ. ಎಸ್. ಮಾದಪ್ಪ, ಎಂ. ಎಸ್. ಲಕ್ಷ್ಮಣರಾವ್, ಆರಣಿ ಶೇಷಗಿರಿರಾವ್, ಸಿ. ನರಸಿಂಗರಾವ್, ಎಚ್. ಸಂಪತ್ತಯ್ಯಂಗಾರ್, ಸಯ್ಯದ್ ಅಹಮ್ಮದ್ ಹುಸೇನ್ ಎಂಬ ಈ ೬ ಮಂದಿ ವಿದ್ಯಾರ್ಥಿಗಳೂ ಉತ್ತೀರ್ಣರಾಗಿರುತ್ತಾರೆಂದು ಕೇಳಿ ಸಂತೋಷಿಸುತ್ತೇವೆ. ಇವರಲ್ಲಿ ಮ|| ಮಾದಪ್ಪನವರು ರಾಜಧಾನಿಯಲ್ಲಿ ಒಂದು ಪ್ರಸಿದ್ಧ ವೀರಶೈವ ಕುಟುಂಬಕ್ಕೆ ಸೇರಿದವರಾಗಿದ್ದಾರೆ.

ವರ್ತಮಾನಸಂಗ್ರಹ.

ರುಮೇನಿಯಾ ಯುವರಾಜರು ಭರತಖಂಡಕ್ಕೆ ಪ್ರಯಾಣಮಾಡಿ ಬರುತ್ತಿರುವರು.

ಸೀಮೆಗೆ ಹೋಗಿದ್ದ ಕಾಶ್ಮೀರ ಮಹಾರಾಜರು ಭರತಖಂಡಕ್ಕೆ ಹಿಂತಿರುಗಿಹೊರಟಿದ್ದಾರೆ.

ಶಿರಹಟ್ಟಿ ಸಂಗೀತ ನಾಟಕ ಸಭೆಯವರು ಮದ್ರಾಸಿಗೆ ಹೋಗಿ ಕಳೆದ ತಾ|| ೧ ರಿಂದ ಅಲ್ಲಿ ತಮ್ಮ ಪ್ರಯೋಗಗಳನ್ನು ನಡೆಯಿಸುತ್ತಿದ್ದಾರೆ.

ತುರ್ಕಿಯ ಸಂಧಿ ಪತ್ರವೆಲ್ಲಾ ಬರೆದು ಮುಗಿದಿದೆ. ಇಷ್ಟರಲ್ಲೇ ಪ್ರಚುರವಾಗುವುದರಲ್ಲಿದೆ. ಕಾನ್ಸ್ಟಾಂಟಿನೋಪಲ್ ಪಟ್ಟಣವನ್ನು ಆಂಗ್ಲೇಯ ಸೈನ್ಯವು ವಶಪಡಿಸಿಕೊಂಡಿದೆ. ಸುಲ್ತಾನರು ಅಲ್ಲೇ ಇದ್ದಾರೆ.

ಕರೆನ್ಸಿ ಕಮಿಟಿಯವರ ಸೂಚನೆಯನ್ನನುಸರಿಸಿ ಭರತಖಂಡ ಪ್ರಭುತ್ವದವರು ಇದೇ ಏಪ್ರಿಲ್ ತಾ|| ೧ ರಿಂದ ಪೌನುಗಳನ್ನು ರೂಪಾಯಿಗಳಾಗಿ ಮಾರ್ಪಡಿಸುವಾಗ ಪೌನು ೧ಕ್ಕೆ ೧೦ ರೂ. ಗಳ ಬೆಲೆಯೆಂದು ತೀರ್ಮಾನಿಸಿರುತ್ತಾರೆ. ಈ ಹೊಸ ದರದಂತೆಯೇ ಸರ್ಕಾರದ ಬಡ್ಜೆಟ್ಟೆಲ್ಲಾ ರಚಿಸಲ್ಪಡುವುದೆಂದು ಮದರಾಸ್ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದೆ.

ಅತಿಶಯ ಭಾಷಾಭಿಮಾನಪ್ರೇರಿತರಾಗಿ ದುಡಿಯುತ್ತಿದ್ದ ಧಾರವಾಡದ ಮ|| ಬಾಳಾಚಾರ್ಯ ಸಕ್ಕರಿ ಉರುಫ್ ಶಾಂತಕವಿಯವರು ಮೊನ್ನೆ ವಾರ ವೈಕುಂಠವಾಸಿಗಳಾದರೆಂದು ಕೇಳಿ ವಿಷಾದಿಸುತ್ತೇವೆ. ಬೊಂಬಾಯಿ ಕರ್ನಾಟಕದಲ್ಲಿ ಹೊಸದಾಗಿ ಸಸಂಗೀತ ನಾಟಕಗಳನ್ನು ರಚಿಸಿ ಕವಿತಾಭಿರುಚಿಯನ್ನು ಜನರಲ್ಲಿ ಹೆಚ್ಚಿಸಿ ಈಚೆಗೆ ಅದೇ ಉದ್ಯೋಗವನ್ನು ಬಲಪಡಿಸಿ ದೇಶಭಾಷಾಸೇವೆಯನ್ನು ಅಸಾಧಾರಣವಾಗಿ ಮಾಡುತ್ತಿದ್ದ ಈ ಮಹಾಶಯರ ಮೃತಿಯು ಕನ್ನಡನಾಡಿಗೆ ನಷ್ಟಕರವಾಯಿತೆಂದು ಹೇಳುವಲ್ಲಿ ಅಡ್ಡಿಯಿಲ್ಲ.

ಪ್ರಿನ್ಸ್ ಆಫ್ ವೇಲ್ಸ್ ರವರು ಬರುವ ಶೀತಕಾಲದಲ್ಲಿ ಭರತಖಂಡಕ್ಕೆ ಸಂದರ್ಶನವನ್ನು ಕೊಡುವವರಾಗಿದ್ದಾರೆ. ಆಗ್ಗೆ ಮದ್ರಾಸಿಗೂ ಬಂದು ಹೋಗಬೇಕೆಂದು ಅಲ್ಲಿಯ ಪ್ರಜೆಗಳು ಅವರನ್ನು ಪ್ರಾರ್ಥಿಸಿಕೊಳ್ಳಲು ಶೀಘ್ರವಾಗಿ ನಿಶ್ಚಯಿಸಿರುವುದಲ್ಲದೆ ವಿಜ್ಞಾಪನ ಪತ್ರಸಮರ್ಪಣಾದಿಗಳ ಮೂಲಕ ಉಚಿತ ರೀತಿಯಿಂದ ಸತ್ಕರಿಸಲು ಏರ್ಪಾಟು ಮಾಡುವವರಾಗಿದ್ದಾರೆ. ಮದ್ರಾಸಿಗೆ ಅವರು ದಯಮಾಡಿಸಿದ ಬಳಿಕ ನಮ್ಮ ಪ್ರಭುಗಳು ಮೈಸೂರಿಗೂ ಅವರನ್ನು ಬರಮಾಡಿಕೊಳ್ಳದೆ ಇರಲಾರರು. ಶ್ರೀ ಚಕ್ರವರ್ತಿ ಕುಮಾರರನ್ನು ಇಲ್ಲಿಯ ಪ್ರಜೆಗಳೂ ಉಚಿತರೀತಿಯಿಂದ ಗೌರವಿಸಲು ಸಿದ್ಧರಾಗಿರುವರು.

ಜರ್ಮನಿಯ ಸ್ಥಿತಿಯು ಅಶಾಂತವಾಗಿದೆ. ಈ ಮಧ್ಯೆ, ಡಾಕ್ಟರ್ ಕಾಪ್ ಎಂಬುವನ ಮುಖಂಡತನದಿಂದ ಕೆಲವರು ತಮ್ಮ ನೂತನ ಪ್ರಭುತ್ವವನ್ನು ಸಾರಿಕೊಂಡು ಎಬರ್ಟನ ಮಂತ್ರಿಕೂಟದ ಪ್ರಭುತ್ವಕ್ಕೆ ವಿರುದ್ಧವಾಗಿ ಚರಿಸುತ್ತ ಕಡೆಗೆ ನಿರ್ವಾಹ ಮಾಡಲು ಸಾಧ್ಯವಿಲ್ಲದೆ ೫ ದಿನಗಳೊಳಗೆ ತಲೆತಪ್ಪಿಸಿಕೊಂಡು ಹೋದರು. ಅದರಿಂದೀಚೆಗೆ ಕೂಲಿಕಾರಪಕ್ಷದವರು ದೇಶವನ್ನು ವಿಪ್ಲವಮಯವನ್ನಾಗಿ ಮಾಡಿದ್ದಾರೆ. ದಿನದಿನಕ್ಕೆ ಒಂದೊಂದು ತೆರೆದ ವಾರ್ತೆಗಳು ಅಲ್ಲಿಂದ ಬರುತ್ತವೆ. ಎಬರ್ಟ್ ಪ್ರಭುತ್ವದ ಮಂತ್ರಿವರ್ಗದವರು ರಾಜೀನಾಮೆ ಕೊಟ್ಟರೆಂದೂ ವಾನ್ ಮುಲ್ಲರ್ ಎಂಬ ಸೇನಾಪತಿಯು ಪ್ರಮುಖನಾಗಿ ನೂತನ ಮಂತ್ರಿವರ್ಗವನ್ನು ನಿಯಮಿಸುವನೆಂದೂ ಸುದ್ದಿ ಬಂದಿದ್ದಿತು. ಎಬರ್ಟ್ ಪ್ರಭುತ್ವ ಪ್ರತಿನಿಧಿಗಳು ಫ್ರಾನ್ಸಿಗೆ ಹೋಗಿ ತಮ್ಮ ದೇಶರಕ್ಷಣೆಗಾಗಿ ಸೇನಾಸಾಹಾಯವನ್ನು ಕೋರಿಕೊಂಡರು. ಅವರು ಸೇನೆಯನ್ನು ಕಳುಹಿಸುವಂತೆ ಕಾಣಲಿಲ್ಲ. ಬರ್ಲಿನ್ ಪಟ್ಟಣದ ಸಮೀಪದಲ್ಲಿ ೩|| ಸಾವಿರ ಫಿರಂಗಿಗಳು ಇದ್ದುದನ್ನು ಮಿತ್ರಮಂಡಲೀ ರಾಯಭಾರಿಗಳು ಕಂಡರಂತೆ. ಅವರ ಬಳಿಯಲ್ಲಿ ಒಟ್ಟು ೧೨ ಸಾವಿರ ಫಿರಂಗಿಗಳೂ ೬ ಸಾವಿರ ವಿಮಾನಗಳೂ ಈಗಲೂ ಇವೆಯಂತೆ. ಹೀಗೆ ವಿಮಾನಗಳನ್ನಿಟ್ಟುಕೊಂಡಿರುವುದು ಅವರು ಒಪ್ಪಿದ ಸಂಧಿನಿಬಂಧನೆಗೆ ವಿರುದ್ಧವಾಗಿದೆ. ಇವನ್ನೆಲ್ಲಾ ನೋಡಿದರೆ ಜರ್ಮನರ ಮಾಯಾತಂತ್ರಗಳು ಇನ್ನೂ ಅಪನಂಬುಗೆಯನ್ನೇ ಹುಟ್ಟಿಸುತ್ತಲಿವೆ.

ಲಗ್ನದ ಫಂಡು.

ಮೋಡ್ನೋರಿ ಮುಂಡಾಸದ ಮ|| ಹಾಲಪ್ಪನವರ ಪುತ್ರ ಚಿ|| ಮುಪ್ಪಣ್ಣನವರಿಗೆ ದಾವಣಗೆರೆ ಪಲ್ಲಾಗಟ್ಟೆ ಮ|| ಬಸಪ್ಪನವರ ಪುತ್ರಿ ಚಿ|| ಸೌ|| ಕೊಟ್ರಮ್ಮನವರನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. 9, ಹೆಣ್ಣಿನವರಿಂದ ರೂ. 6 ಅಂತು, ರೂ. 15 ಮ|| ಹಾಲಪ್ಪ ಮುಂಡಾಸ ಇವರ ಮೂಲಕ ಮೇಲ್ಕಂಡ ಮೊಬಲಗು 15 ರೂ. ಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ,
ತಾ|| 31—3—20

ಜಿ. ಪರಮಶಿವಯ್ಯ, ಬಿ.ಎ.ಎಲ್ ಎಲ್.ಬಿ.
ಸೆಕ್ರೆಟರಿ, ಮೈಸೂರು
ವೀರಶೈವ ವಿದ್ಯಾಭಿವೃದ್ಧಿ ಸಂಘ.

ಪತ್ರವ್ಯವಹಾರ.

ನವಲಗುಂದದ ಸಭೆ.

ನವಲಗುಂದದಲ್ಲಿ ಇದೇ ಮೇ ತಿಂಗಳು ಕೂಡುವ ಪಟ್ಟೆದಾರಾಧಿಕಾರಿಗಳ ಸಮ್ಮೇಳನದಲ್ಲಿ ನನ್ನ ಲೇಖನವನ್ನು ಖಂಡಿಸುವುದೊಂದು ವಿಷಯವನ್ನು ಇಟ್ಟಿರುವರು. ಬರೇ ತಮ್ಮ ಪಕ್ಷಕ್ಕೆ ಠರಾವನ್ನು ಪಾಸುಮಾಡುವುದರಿಂದ ಯಾವ ಲೇಖನದ ಖಂಡನವೂ ಆಗದು. ನಾನು ವಾದಿಸಲಿಕ್ಕೆ ಸ್ವತಃ ಸಿದ್ಧನಿರುತ್ತೇನೆ. ಮಧ್ಯಸ್ಥರನ್ನು ನೇಮಿಸಿ ವಾದಿಸಬೇಕು. ಸಭೆಯಲ್ಲಿ ಮಾತನಾಡಗೊಡದೆ ಕುಂದಗೋಳದಲ್ಲಿ ನಿರ್ಣಯಮಾಡಿದಂತೆ ಮಾಡಬಾರದು

ಸಿದ್ಧರಾಮಪ್ಪ ಪಾವಟೆ

ಶ್ರೀ ಸಿದ್ಧಲಿಂಗೇಶ್ವರ ಲೈಬ್ರರಿಯ ಪ್ರಥಮ ವಾರ್ಷಿಕ ವರ್ಧಂತ್ಯುತ್ಸವವು.

ಈ ದಿವಸ ಶ್ರೀ ಹುಕ್ಕೇರಿ ಮಠದಲ್ಲಿ ಮೇಲ್ಕಂಡ ಸಮಾರಂಭವು ಜರಗಿತು. ಈ ಸಭೆಯು ಶ್ರೀಮನ್ನಿರಂಜನ ಪರಮ ಪೂಜ್ಯ ಶ್ರೀ ಹಾನಗಲ್ಲು ಸ್ವಾಮಿಗಳವರ ಪಾದಸನ್ನಿಧಿಯಲ್ಲಿ ಜರಗಿತು. ಮೊದಲು ಸೆಕ್ರೆಟರಿಯವರು ವರ್ಷದಲ್ಲಿ ನಡೆದ ವೃತ್ತಾಂತವನ್ನೂ ಹಾಗೂ ವಾರ್ಷಿಕ ಲೆಕ್ಕದ ರಿಪೋರ್ಟನ್ನೂ ಓದಿದರು. ಅನಂತರ ಮ|| ಚನ್ನಪ್ಪಾ ಚವುಕೆಟ್ಟಿ ಇವರು ದಾನದ ವಿಷಯವಾಗಿಯೂ ಮಿ|| ಗಗನಾಥಮಾಸ್ತರ ಎಡಿಟರ್ ಸದ್ಗುರು ಇವರು ವಾಚನಾಲಯಗಳ ವಿಷಯವಾಗಿಯೂ, ಮ|| ಚನ್ನಬಸಪ್ಪಾ ಹಾಲಪ್ಪನವರ ಇವರು ಮಾತೃಭಾಷಾಭಿಮಾನದ ವಿಷಯವಾಗಿಯೂ ಸರಸವಾಗಿ ಉಪನ್ಯಾಸ ಮಾಡಿದರು. ಅನಂತರ ಸಭೆಯಲ್ಲಿ ರಿಪೋರ್ಟುಗಳು ಹಂಚಲ್ಪಟ್ಟವು. ತರುವಾಯ ಸಮಾರೋಪಣ ಭಾಷಣ ಮಾಡಿ ಹಾರ ತಾಂಬೂಲಗಳನ್ನು ಹಂಚಿ ಶ್ರೀ ಸ್ವಾಮಿಗಳವರ ಅಪ್ಪಣೆಪಡೆದು ಸಭೆಯು ವಿಸರ್ಜಿಸಲ್ಪಟ್ಟಿತು. [ಲೆಕ್ಕದ ರಿಪೋರ್ಟನ್ನು ಪ್ರಕಟಿಸಲು ಸ್ಥಳವಿಲ್ಲ. ಪ. ಪ್ರ.]

ಶ್ರೀಮದ್ವೀರಶೈವ ಸಮಾಜ ಸುಧಾರಣಸಂಘಸಭಾ, ವಿರಕ್ತಮಠ. ಜಡೆ; ತಾಲ್ಲೂಕು ಸೊರಬ.

ಮೇಲೆ ಕಂಡ ಸಭೆಯು ತಾ|| ೨೫-೩-೨೦ ನೆ ಗುರುವಾರ ಶ್ರೀ ದಕ್ಷಿಣಕಾಶೀ ಸಿಂಹಾಸನ ಚೌಡಯ್ಯದಾನಪುರ ಸಂಸ್ಥಾನ ಮಠಾಧ್ಯಕ್ಷರಾದ ವೇ|| ಅಪ್ಪಾಜಿ ಒಡೆಯರವರ ಅಧ್ಯಕ್ಷತೆಯ ಕೆಳಗೆ ಜಡೆ ವಿರಕ್ತಮಠದಲ್ಲಿ ಕೂಡಲ್ಪಟ್ಟಿತ್ತು. ಈ ಸೀಮೆಯ ವೀರಶೈವಪ್ರಮುಖ ಮಂದಿಗಳೆಲ್ಲರೂ ಸಭೆಗೆ ಆಗಮಿಸಿದ್ದರು. ವಿರಕ್ತಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ವೈದಿಕ ಪಾಠಶಾಲೆಯು ಶಾಶ್ವತವಾಗಿ ನಡೆಯುವಂತೆ ಮೂಲಧನವು ಶೇಖರಿಸಲ್ಪಡತಕ್ಕದ್ದು ಅವಶ್ಯವಾದದ್ದೆಂದು ಅಧ್ಯಕ್ಷರವರು ತಿಳಿಸಿದ್ದಲ್ಲದೆ, ತಾವು ಪಾಠಶಾಲೆಗೋಸ್ಕರ ಎರಡುನೂರು ರೂಪಾಯಿಗಳ ಉತ್ಪನ್ನವನ್ನು ಅಂದರೆ ಅಜಮಾಸು ೧೪ ರೂಪಾಯಿಗಳನ್ನು ಪ್ರತಿ ವರ್ಷವೂ ಸಹಾಯಮಾಡುವದಾಗಿ ವಾಗ್ದಾನ ಮಾಡಿದರು. ಮತ್ತು ಧರ್ಮಗ್ರಂಥಗಳ ಭಾಂಡಾರ (ಲಾಯಬ್ರರಿ) ಸ್ಥಾಪನೆಯು ಜನಗಳ ಜ್ಞಾನಾಭಿವೃದ್ಧಿಗೆ ಅವಶ್ಯಕವಾದದ್ದರಿಂದ ಅಂಥ ಲಾಯಬ್ರರಿಯು ಈ ವಿರಕ್ತಮಠದಲ್ಲಿ ಸ್ಥಾಪಿಸಲ್ಪಡುವುದು ಯುಕ್ತವಾದದ್ದೆಂದು ಸಭಿಕರಿಗೆ ತಿಳುವಳಿಕೆ ಕೊಟ್ಟು ಆ ಸಂಬಂಧ ೪ ರೂಪಾಯಿಗಳನ್ನು ಕೊಟ್ಟರು. ವೀರಶೈವ ಗೃಹಸ್ಥರ ಮನೆಗಳಲ್ಲಿ ನಡೆವ ಲಗ್ನಗಳಲ್ಲಿ ಗಂಡಿನವರು ೨ ರೂಪಾಯಿಗಳನ್ನೂ, ಹೆಣ್ಣಿನವರು ೧ ರೂಪಾಯನ್ನೂ ವಿದ್ಯಾಭಿವೃದ್ಧಿ ಫಂಡಿನ ಸಲುವಾಗಿ ಕೊಡತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು. ಸಭೆಗೆ ಆಗಮಿಸಿದ್ದವರ ಪೈಕಿ ಬಹಳ ಜನಗಳು ಪಾಠಶಾಲಾ ಸಂಬಂಧವಾಗಿಯೂ, ಲಾಯಬ್ರರಿ ಸಂಬಂಧವಾಗಿಯೂ ಧನಸಹಾಯ ಮಾಡುವುದಕ್ಕೆ ವಾಗ್ದಾನ ಮಾಡಿದರು. ಆ ಪೈಕಿ ಕೆಲವು ಹಣ ರೋಖು ವಸೂಲಾಯಿತು. (ಪಟ್ಟಿಯನ್ನು ಪ್ರಕಟಿಸಲು ಸ್ಥಳವಿಲ್ಲ. ಪ. ಪ್ರ.)

ದಾವಣಗೆರೆ.

ಶ್ರೀ ಸಿದ್ಧಾರೂಢ ಪ್ರಾಸಾದಿಕ ಹಳೆ ಹುಬ್ಬಳ್ಳಿ ಕರ್ನಾಟಕ ಸಂಗೀತ ನಾಟಕಮಂಡಳಿಯವರು ಇಲ್ಲಿಗೆ ಆಗಮಿಸಿದ್ದು, ತಮ್ಮ ಲೋಕಪ್ರಿಯವಾದ "ಶ್ರೀ ಪ್ರಭುವಿಜಯ, ಲಿಖಿತಲೀಲಾ, ಶೈವಶಾಂತಿ ಸಂಭ್ರಮ, ಪತಿವ್ರತಾಪ್ರಭಾವ, ಮೊದಲಾದ ನವೀನಾಖ್ಯಾನಗಳನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಭಕ್ತಿ, ಜ್ಞಾನ, ಸಾಸಭೀತಿ, ಆಜ್ಞಾಪರಣದಲ್ಲಿ ನಿಷ್ಠೆ, ಮೊದಲಾದ ಸದ್ಗುಣಗಳು ನೆಲಸುವಂತೆ, ತಮ್ಮ ಗಾನವೈಖರಿಯಿಂದಲೂ, ಆಶ್ಚರ್ಯಕರವಾದ ಸೀನರಿಗಳಿಂದಲೂ, ನೂತನ ಡ್ರೆಸ್ಸುಗಳಿಂದಲೂ ಅಭಿನಯಿಸಿ, ಗದಗ ಮೊದಲಾದ ಮಹಾಜನಗಳಿಂದ ಗೌರವಿಸಲ್ಪಟ್ಟಂತೆ, ಇಲ್ಲಿಯ ವೀರಶೈವ ಮಹಾಜನಗಳಿಂದಲೂ ಸುವರ್ಣ ಪದಕವನ್ನು ಪಡೆದು ಸಂಮಾನಿತರಾಗಿರುವರು.—ಈ ನಾಟಕಮಂಡಳಿಯಲ್ಲಿನ ಪಾತ್ರಧಾರಿಗಳು ಸಂಬಳಗಾರರಾಗಿರದೆ, ಧರ್ಮಾಭಿಮಾನದಿಂದ ಉಮೇದುವಾರರಾಗಿ ಕೆಲಸ ಮಾಡುತ್ತಿರುವುದರಿಂದಲೂ, ನಾಟಕದಲ್ಲಿನ ಸೀನರಿಗಳೂ, ಬೆಲೆಯುಳ್ಳ ಡ್ರೆಸ್ಸುಗಳೂ, ಮಹಾಜನಗಳಿಂದ ಮಾಡಲಿಗೆ ಉಚಿತವಾಗಿ ಕೊಡಲ್ಪಟ್ಟಿವೆ. ಈ ನಾಟಕ ಸಂಘದ ಪಾತ್ರಧಾರಿಗಳೆಲ್ಲಾ ವರ್ಕ್‌ಶಾಪಿನಲ್ಲಿ ಕೆಲಸಮಾಡುವುದರಿಂದಲೂ, ತಮ್ಮ ಸ್ವಂತ ನೌಕರಿಯ ಕೈಕಸಬಿನಿಂದಲೂ ತಮ್ಮ ಉಪಜೀವನವನ್ನು ಜರುಗಿಸುತ್ತಾ ಉಳಿದ ವಿಶ್ರಾಂತಕಾಲದಲ್ಲಿ, ಈ ತರದ ಬೋಧಪ್ರದ ನಾಟಕಗಳನ್ನು ಅಭಿನಯಿಸಿ, ಇದರಿಂದ ಬಂದ ಉತ್ಪನ್ನವನ್ನು ಈ ಕಂಪೆನಿಯ ಪುರೋಭಿವೃದ್ಧಿಗೆ ಕೊಡುತ್ತಿರುವುದನ್ನು ನೋಡಿದರೆ, ಇವರ ಧರ್ಮಾಭಿಮಾನವೂ, ಸ್ವಾರ್ಥತ್ಯಾಗವೂ ಶ್ಲಾಘನೀಯವಾಗಿರುವುದಲ್ಲದೆ ಅನುಕರಣೀಯವಾದದ್ದಾಗಿದೆ. ಕರ್ನಾಟಕ ನಾಟಕರಂಗದಲ್ಲಿನ ಮುಖ್ಯ ಆಖ್ಯಾನಗಳೆಂದರೆ—ಭಾರತ, ಇಲ್ಲವೆ ರಾಮಾಯಣದೊಳಗಿನ ಕಥೆಗಳೇ ಆಗಿರುವುವು. ಈ ಕಂಪನಿಯವರಾದರೋ ಕರ್ನಾಟಕದಲ್ಲಿ ಬಹು ಸಂಖ್ಯಾಕರಾದ ಶೈವರಿಗೆ ಅದರಲ್ಲೂ ವೀರಶೈವರಿಗೆ ಬೋಧಪ್ರದವಾದ ಮತ್ತು ಶಿವಭಕ್ತಿ, ಪ್ರಧಾನವಾದ ಆಖ್ಯಾನಗಳನ್ನೇ ಅಭಿನಯಿಸುತ್ತಿರುವುದರಿಂದ, ಈ ನಾಟಕಾವಲೋಕನಕ್ಕಾಗಿ ಶೈವಭಕ್ತರೆಲ್ಲರೂ ತಂಡೋಪತಂಡವಾಗಿ ಸೇರುವರು. ಮೊನ್ನೆ ಶ್ರೀ ಬಕ್ಕೇಶ್ವರಸ್ವಾಮಿ ವಾಚನಾಲಯಕ್ಕಾಗಿ "ಶ್ರೀ ಪ್ರಭುವಿಜಯ" ವೆಂಬ ನಾಟಕವನ್ನು ಆಡಿ ಅದರ ಉತ್ಪನ್ನವನ್ನೆಲ್ಲಾ ಶ್ರೀ ಸ್ವಾಮಿಗೆ ಸಮರ್ಪಿಸಿದ್ದು ತುಂಬಾ ಶ್ಲಾಘನೀಯವಾಗಿರುವುದಲ್ಲದೆ ಇವರ ಸ್ವಾಮಿ ಸೇವಾಭಿಲಾಷೆಯನ್ನು ವ್ಯಕ್ತಗೊಳಿಸಿದ್ದಾಗಿದೆ. ಪ್ರಭುವಿಜಯ ನಾಟಕದಲ್ಲಿ, ಪ್ರಭುದೇವ ಪಾತ್ರಧಾರಿಯ ಗಾನವೈಖರಿಯೂ, ಅಕ್ಕಮಹಾದೇವಿಯ ಪಾತ್ರಧಾರನ ಸಮಯೋಚಿತಾಭಿನಯವೂ ನೀತಿಬೋಧಕವೂ ಕೌಶಿಕರಂಜನ ಪಾತ್ರವನ್ನು ವಹಿಸಿದವನ ಪಶ್ಚಾತ್ತಾಪದಿಂದುಂಟಾದ ದುಃಖಾಶ್ರುಪುಲಕ ಗಾನಕೌಶಲ್ಯವೂ ಪ್ರೇಕ್ಷಕರನ್ನು ವಿಸ್ಮಯಗೊಳಿಸಿ, ಅಶ್ರುಧಾರೆಯನ್ನುಂಟುಮಾಡಿದವು. ಮೊದಲೇ ಭಕ್ತಿರಸಯುಕ್ತವಾದ ಆಖ್ಯಾನಗಳು ಅದರಲ್ಲೂ ಧರ್ಮಜಾಗೃತಿಯ ಮಹತ್ವಾಕಾಂಕ್ಷೆಯುಳ್ಳ ಪಾತ್ರಧಾರಿಗಳು. ಅಂದ ಮೇಲೆ ಪ್ರೇಕ್ಷಕರು ವಿಸ್ಮಯಗೊಳ್ಳುವುದರಲ್ಲಿ ಆಶ್ಚರ್ಯವೇನು? ಧರ್ಮಾಭಿಮಾನಿಗಳಾದ ಸಂಗೀತಜ್ಞರು ಈ ಕಂಪನಿಯಲ್ಲಿ ಉಮೇದುವಾರರಾಗಿ ಸೇರಿ ತನ್ಮೂಲಕ ಪ್ರೋತ್ಸಾಹಪಡಿಸುವುದು ಅವರ ಕರ್ತವ್ಯವಾಗಿರುವುದಲ್ಲದೆ ಯಾವತ್ತು ಕನ್ನಡಿಗರು ಇಂಥವರಿಗೆ ಉದಾರಾಶ್ರಯ ಕೊಟ್ಟು ಉತ್ತೇಜನಪಡಿಸಿ ಕೀರ್ತಿಭಾಜನರಾಗಲೆಂದು ಹಾರೈಸುವ,

ಬಿ. ಸಿ. ಎಂ.

ಶ್ರೀ ಬಕ್ಕೇಶ್ವರ ಸ್ವಾಮಿಯ ರಥೋತ್ಸವ, ದಾವಣಗೆರೆ.

ಕಳೆದ ಚೈತ್ರ ಶು|| ೫ ನೆಯ ಗುರುವಾರ ದಿವಸ, ಪದ್ಧತಿಯ ಮೇರೆಗೆ ಶ್ರೀ ಸ್ವಾಮಿಯ ರಥೋತ್ಸವವು ಈ ಸಾರಿ ಇಲ್ಲಿ ಅತ್ಯಂತ ಸಂಭ್ರಮದಿಂದಲೂ, ಉತ್ಸಾಹದಿಂದಲೂ ನಡೆಯಿತು. ಪುರವಾಸಿಗಳಾದ ವೀರಶೈವಪ್ರಮುಖರೂ, ದೈವದವರೂ ಮತ್ತು ಪರಮತಸ್ಥರಾದ ಕೆಲವು ಮಹಾಜನರೂ ಎಲ್ಲರೂ ಬಂದಿದ್ದು ತಮ್ಮ ತಮ್ಮ ನಿಷ್ಠಾಭಕ್ತಿಯನ್ನು ಸ್ವಾಮಿಗೆ ಸಮರ್ಪಿಸಿ ಉತ್ಸವವನ್ನು ಉಲ್ಲಾಸದಿಂದ ಸಾಂಗಗೊಳಿಸಿದರು. ಅನೇಕ ತರುಣ ಪುಢಾರಿಗಳು ಬಹು ಭಕ್ತಿಯಿಂದಲೂ, ಉತ್ಸಾಹದಿಂದಲೂ, ಶ್ರದ್ಧೆಯಿಂದಲೂ ತುಂಬಾ ಶ್ರಮವಹಿಸಿ ದೇವರ ಕಾರ್ಯವನ್ನು ಮಾಡಿದರು. ಮುಖ್ಯವಾಗಿ ಈ ಹಿಂದಿನ ಎಲ್ಲಾ ರಥೋತ್ಸವಗಳಿಗಿಂತಲೂ ಈ ಸಾರಿ ಆದದ್ದು ಒಂದು ವಿಧದಲ್ಲಿ ವಿಶೇಷವಾಗಿಯೇ ಆಯಿತೆಂದು ಧಾರಾಳವಾಗಿ ಹೇಳಬಹುದು. ಯಾಕೆಂದರೆ ಈ ದೈವಕಾರ್ಯದಲ್ಲಿ ಪೂರ್ವಸಂಪ್ರದಾಯಗಳೊಂದಿಗೆ ನವೀನ ಪದ್ಧತಿಗಳು ಸಮಾವೇಶವಾಗಿ ಉತ್ಸವವನ್ನು ಮತ್ತಷ್ಟು ಶೋಭಾಯಮಾನಗೊಳಿಸಿದುವು. ಅನೇಕ ರಥೋತ್ಸವಗಳಲ್ಲಿ ಸಾಧಾರಣವಾಗಿ ಆಗುತ್ತಿರುವಂತೆ ನರ್ತಕಿಯರ ನಾಚುಗಳೂ, ಮದ್ದು ಗುಂಡು ಪಟಾಕಿ ಮೊದಲಾದುವುಗಳನ್ನು ಹಾರಿಸುವಿಕೆಯೂ, ರಾತ್ರಿಯೆಲ್ಲಾ ಕರ್ಪೂರದ ಕೊಬರಿಗಳನ್ನು ಸುಟ್ಟು ಬೂದಿ ಮಾಡುವಿಕೆಯೂ ಇವ್ಯಾವೂ ಇಲ್ಲಿ ನಡೆಯಲಿಲ್ಲ. ಯಾಕೆಂದರೆ ದೇವಕಾರ್ಯದ ಚಾಲಕಜನರು ಇಂಥ ಕಾರ್ಯಗಳಲ್ಲಿ ವ್ಯರ್ಥವಾಗಿ ಹಣವನ್ನು ಖರ್ಚುಮಾಡುವಷ್ಟು ಜ್ಞಾನಶೂನ್ಯರಾಗಿರಲಿಲ್ಲ. ಎಲ್ಲಾ ಮತಸ್ಥರೂ ಕೇಳಿದ ಕೂಡಲೆ ಬಹು ಭಕ್ತಿಯಿಂದಲೂ ನಿರ್ವಿಕಾರ ಮನಸ್ಸಿನಿಂದಲೂ ಕೊಟ್ಟಂಥ ಹಣದಲ್ಲಿ ಕೆಲವು ಭಾಗವನ್ನು ಯೋಗ್ಯವಾದ ಕೆಲಸಗಳಿಗೆ ವೆಚ್ಚಮಾಡಿ ಉಳಿದ ಹಣವನ್ನು ಶೇಖರಿಸಿಟ್ಟಿರುವರೆಂದು ಕೇಳಿ ತುಂಬಾ ಸಂತೋಷವಾಯಿತು. ಈ ಹಣವೂ ಕೂಡ ಶ್ರೀ ಸ್ವಾಮಿಯ ಕಾರ್ಯಾಭಿವೃದ್ಧಿಯಲ್ಲಿಯೇ ಸದ್ವಿನಿಯೋಗವಾಗುವುದೆಂಬುದರಲ್ಲೇನೂ ಸಂದೇಹವಿಲ್ಲ.

ರಥೋತ್ಸವವಾದ ಮರುದಿವಸದಿಂದ ೪ ದಿವಸಗಳವರೆಗೆ ವಿದ್ಯಾರ್ಥಿಗಳಿಂದ ಬಹುಮಾನದ ಉಪನ್ಯಾಸ ಲೇಖನಗಳೂ ಶಿವಕಥಾ ಪಾಂಡಿತ್ಯದಲ್ಲಿ ನಿಸ್ಸೀಮರಾಗಿ ವಿಖ್ಯಾತಿಯನ್ನು ಪಡೆದಿರುವ ಬ್ರಹ್ಮಶ್ರೀ ಶಿವಪ್ಪಶಾಸ್ತ್ರಿಗಳಿಂದ ಮಧುರವಾದ ಮತ್ತು ಶಿವಕಥಾಕೀರ್ತನೆಯೂ ನಡೆದವು. ಬೊಂಬಾಯಿ ಇಲಾಖೆಯಲ್ಲಿ ಡಿ|| ಡಿ|| ಕಲೆಕ್ಟರ್ ಮತ್ತು ವೀರಶೈವಮತಸ್ಥರಾದ ಮಿ|| ಹಿರೇಮಠ ಬಿ. ಎಜಿ. ಇವರು ಉಪನ್ಯಾಸಗಳ ಸಭೆಗೆ ಅಧ್ಯಕ್ಷರಾಗಿದ್ದು, ಉತ್ತಮವಾಗಿ ವ್ಯಾಖ್ಯಾನವನ್ನು ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ಕೊಟ್ಟರು. ಈ ತೆರನಾಗಿ ಬಹುಮಾನಿಸುವುದು ವಿದ್ಯಾಭಿರುಚಿಯನ್ನು ಹೆಚ್ಚಿಸುವುದಕ್ಕೋಸ್ಕರವಲ್ಲವೆ? ಶಿವಕೀರ್ತನದ ಕೊನೆಯ ದಿವಸ ಸಾಯಂಕಾಲ, ಮೊದಲು ಗಾನವಿದ್ಯಾವಂತರಾದ ಮ|| ನಿಡಗುಂದಿ ಮಡಿವಾಳಪ್ಪನವರು ತಮ್ಮ ಸುಕಂಠದಿಂದುದ್ಭವವಾದ ಇಂಪಾದ ಸಂಗೀತದಿಂದ ಜನರನ್ನು ಮರುಳುಗೊಳಿಸಿದ ಮೇಲೆ, ಸಿಂಹನಾದದಿಂದ ಕೂಡಿದ ಶಿವಪ್ಪಶಾಸ್ತ್ರಿಗಳ ಕೀರ್ತನೆಯು ಅತ್ಯುತ್ಕೃಷ್ಟವಾಗಿ ಸಾಗಿತು. ಊರ ಅಮಲ್ದಾರರೂ ಸರ್ಕಾರಿ ನೌಕರರೂ, ದೊಡ್ಡ ದೊಡ್ಡ ಜನರೂ ಸೇರಿದ್ದರು. ಮಂಗಳವು ಮುಗಿದು ಅಭಿವಂದನ ಕಾರ್ಯವು ಆದ ಮೇಲೆ, ಶಾಸ್ತ್ರಿಗಳಿಗೆ ಒಂದು ಬಂಗಾರದ ಪದಕವೂ, ಧನವೂ, ಬಹುಮಾನಿಸಲ್ಪಟ್ಟವು. ಇಷ್ಟೇ ಅಲ್ಲ; ಶಿವಕೀರ್ತನೆಯಲ್ಲಿರುವ ತಮ್ಮ ಪ್ರೀತಿಯನ್ನು ಪ್ರದರ್ಶಿಸುವುದಕ್ಕಾಗಿ, ಅನೇಕ ಜನರು ಆರತಿಯ ತಟ್ಟೆಯಲ್ಲಿ ತಮ್ಮ ಭಕ್ತಿಯಿದ್ದಷ್ಟು, ಧನದಾನವನ್ನು ಮಾಡಿ ಶಾಸ್ತ್ರಿಗಳಿಗೆ ಅರ್ಪಿಸಿದರು. ತದನಂತರದಲ್ಲಿ, ಆಶೀರ್ವಾದ ತಾಂಬೂಲವನ್ನು ಸ್ವೀಕರಿಸುತ್ತಾ ಸಭೆಯು ವಿಸರ್ಜಿಸಿದ್ದರಿಂದ, ಎಲ್ಲರೂ ಮನೋಲ್ಲಾಸಗೊಂಡು ಜಯಘೋಷದೊಡನೆ ತೆರಳಿದರು. ಮುಂದಿನ ವರ್ಷ ಇದಕ್ಕಿಂತಲೂ ವಿಗಿಲಾಗಿಯೇ ಶ್ರೀ ಬಕ್ಕೇಶ್ವರಸ್ವಾಮಿಯ ರಥೋತ್ಸವವು ನಡೆಯಲೆಂದು ಹಾರೈಸುತ್ತೇವೆ.

ಜನವರಾಜ,

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕುಲಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂಡುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಉತ್ಸಾಹದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ವೃದ್ಧಿಯಾಗುವದು. ಕ್ರಯ ಶೀಸೆ 1ಕ್ಕೆ 1.0.0 ರೂ.

ಇಂಗ್ಲೀಷ್ ಡಾಕ್ಟರುಗಳು ಬಹು ದುಬಾರಿ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಿಲುಕಲಾಗಿ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ವರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ: —ಡಾಕ್ಟರ್ ಎಂ. ಪೀಟರ್,
3. ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ವಿ. ಎಸ್. ಪಾಣಿ ಕಂಪನಿ,
ಸಾಹುಕಾರಪೇಟೆ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 24

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತೆಯಾಗಿ ತಾ|| ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ನಾರಶೂಲಿ, ರೇಶ್ಮಿಜಿಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.



ನಮ್ಮಲ್ಲಿ ಕಿರ್ಲೊಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 22

ನಾವು ಎ. ಅಲ್ ಬ್ಯುಕ್ಯಾಯರ್ ಕ್ಯು ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್‌ಏಜಂಟ್ಸ್, ದಾವಣಗೆರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.

ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ	6—8—0
ಬೆಳ್ಳಿಯ ಸರಪಣಿ ಸಹಿತ ,,	9—8—0

ವಿಳಾಸ—ವೈಶ್ಯಲಕ್ಷ್ಮಿ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 265, ಮದರಾಸು.

ತ್ವರೆಮಾಡಿರಿ ಸ್ವಲ್ಪವೇ ಪ್ರತಿಗಳು ಉಳಿದಿವೆ.

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಂಬರಿಗಳು.

೧ ವಿದ್ಯಾಸುಂದರಿ ಅಥವಾ ದೀರ್ಘಪ್ರಯತ್ನ (ಉದ್ಯೋಗಿಕ)	ಬೆಲೆ ೧ ರೂ.
೨ ಸತ್ಯಪ್ರಕಾಶ (ಪೌರಾಣಿಕ)	೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ)	೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ — ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
2 ಆಲೂರ ಪೋ|| ಆಲೂರ ಹಾನಗಲ್ಲ ಜಿ|| ಧಾರವಾಡ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಗಣಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

೧೯೨೦ ನೆಯ ಇಸವಿ ಏಪ್ರಿಲ್ ತಾ|| ೪ ರಿಂದ ೧೯೨೦ ನೆಯ ಏಪ್ರಿಲ್ ತಾ|| ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಚೈತ್ರ ಬಹುಳ ಪಾಡ್ಯಮಿಯಿಂದ ಚೈತ್ರ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನ ಮಾಸ
4	ಸೋಮ	ಪಾಡ್ಯ	24-26	ಚಿತ್ತ	38-3	23
5	ಭಾನು	ಬಿದಿ	26-48	ಸ್ವಾತಿ	42-11	24
6	ಮಂಗಳ	ತದಿ	30-22	ವಿಶಾ	47-30	25
7	ಬುಧ	ಚೌತಿ	34-49	ಅನೂ	53-32	26
8	ಗುರು	ಪಂಚ	39-0	ಜ್ಯೇಷ್ಠ	60	27
9	ಶುಕ್ರ	ಷಷ್ಠಿ	45-11	ಜ್ಯೇಷ್ಠ	0-15	28
10	ಶನಿ	ಸಪ್ತ	50-19	ಮೂಲ	6-48	29

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾಶೀತಯಶಃಪ್ರತಾಪವಿಪುಲಂ ಸದ್ವೃತ್ತನೂಲಾಳುಲಂ | ಶ್ರೀಮಂಚಿತ್ರಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

(ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಏಪ್ರಿಲ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೧೫

MYSORE GOVERNMENT ADVERTISEMENTS.

35

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the imetre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರುಷ ಇಲ್ಲಿ ಬೆಳೆ (ಹರಡಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಬಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

12 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 37

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ದಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಚಚ್ಚುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೦ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ, ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ್, ಕಮಿಷನ್ ಏಜಂಟ್, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ವಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚಪಳತೆಯಿಂದ ಫಾಯದೇಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 9

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಔಷಧಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ,** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
28 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿಯುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
15 ವೈದ್ಯಶಾಲಾ, ಮೈಸೂರು.

ಇನಾಂ! ಇನಾಂ!

ಒಂದಾಣೆ ಪೋಸ್ಟೇಜಿನ ಸ್ಟಾಂಪನ್ನು ಕಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
2 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು 16

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

21

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶುಭಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವವು ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡೋ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಬಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವ್ಯಾಪ್ತ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
3. ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಸಲ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮಡುವೆ, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯವಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ಪಿ. ಪಿ. ಎಸ್. ಪಾಣಿ ಕಂಪನಿ,
ಸಾಹುಕಾರಪೇಟೆ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 24

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೫-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎರ್ಪೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮೆಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ಕಡ್ಡು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಕೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೆಡಹುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಬಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

ಜಾಗ್ರತೆ. **ಕಬ್ಬಿಣದ ನೇಗಿಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಮಂಗಳೂರು ಹೆಂಚುಗಳು. 22

ನಾವು ಎ. ಆಲ್ ಬ್ರುಕ್ಮ್ಯಯರ್ ಕ್ಕು ಅಂಡ್ ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸೆಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ. }

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ	6—8—0
ಬೆಳ್ಳಿಯ ಸರಪಣಿ ಸಹಿತ ,,	9—8—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ತ್ವರೆಮಾಡಿರಿ — ಸ್ವಲ್ಪವೇ ಪ್ರತಿಗಳು ಉಳಿದಿವೆ.

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಂಬರಿಗಳು.

೧ ದಿವ್ಯಸುಂದರಿ ಅಥವಾ ದೀರ್ಘಪ್ರಯತ್ನ (ಉದ್ಯೋಗಿಕ)	ಬೆಲೆ ೧ ರೂ.
೨ ಸತ್ಯಪ್ರಕಾಶ (ಪೌರಾಣಿಕ)	೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ)	೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ—ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
2 ಆಲೂರ ಪೋ|| ಆಲೂರ ಹಾನಗಲ್ಲ ಜಿ|| ಧಾರವಾಡ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟಿಯ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

೧೯೨೦ ನೆಯ ಇಸವಿ ಏಪ್ರಿಲ್ ತಾ|| ೪ ರಿಂದ ೧೯೨೦ ನೆಯ ಏಪ್ರಿಲ್ ತಾ|| ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಚೈತ್ರ ಬಹುಳ ಪಾಡ್ಯಮಿಯಿಂದ ಚೈತ್ರ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿವಾನ ಮಾಸ
4	ಸೋಮ	ಪಾಡ್ಯ	24.26	ಚಿತ್ತ	38.3	23
5	ಭಾನು	ಬಿದಿ	26.48	ಸ್ವಾತಿ	42.11	24
6	ಮಂಗಳ	ತದಿ	30.22	ವಿಶಾ	47.30	25
7	ಬುಧ	ಚೌತಿ	34.49	ಅನೂ	53.32	26
8	ಗುರು	ಪಂಚ	39.0	ಜ್ಯೇಷ್ಠ	60	27
9	ಶುಕ್ರ	ಷಷ್ಠಿ	45.11	ಜ್ಯೇಷ್ಠ	0.15	28
10	ಶನಿ	ಸಪ್ತ	50.19	ಮೂಲ	6.48	29

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಿನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀತಾಂಶೀತಯಶಃಪ್ರತಾಪವಿಪುಲಂ ಸದ್ವೃತ್ತನಾಲಾಕುಲಂ | ಶ್ರೀಮಂಚಿತ್ರಿತೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸಂ ೧೯೨೦ ನೆಯ ಇಸವಿ ಏಪ್ರಿಲ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೧೫

MYSORE GOVERNMENT ADVERTISEMENTS.

35

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the imetre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರಷ ಇಲ್ಲಿ ಬೆಳೆ (ಹಳದಿ) ಗೋಧಿಯ ಬೆಳೆಯು ಚನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಬಳ್ಳೆ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

12 ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ, ಧಾರವಾಡ.

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 37

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧಪ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೦ ಔನ್ಸು ಬಾಟ್ಲಿ ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ಕಾಪ್ಪಿ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ವಳ್ಳೆಯೆಣ್ಣೆ, ಮೆಣಸಿಕಾಯಿ, ಆಲುಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳೆ, ಕಡಲಿಬ್ಯಾಳೆ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 9

ಭಟಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ೫೨೬. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
28 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿಯುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಶಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
15 ವೈದ್ಯಶಾಲಾ, ಮೈಸೂರು.

ಇನಾಂ! ಇನಾಂ!

ಒಂದಾಣೆ ಪೋಸ್ಟೇಜಿನ ಸ್ಟಾಂಪನ್ನು ಕಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
2 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್‌ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು 16

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಸಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

21

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವವು ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಏಪ್ರಿಲ್ ತಾ|| ೧೧ ನೆಯ ಭಾನುವಾರ.

ಸವಿದೆಯ ಕ್ಷಾಮ.

ಒಂದು ಬಂಡಿ ಸವಿದೆಗೆ ೨೫ ರೂ. ಗಳನ್ನು ಕೊಟ್ಟು ಕೊಂಡುದನ್ನು ರಾಜಧಾನಿಯು ಹುಟ್ಟಿದಾರಭ್ಯ ಇದುವರೆಗೂ ಅನುಭವಿಸಿರಲಾರದು. ಈಗ ಅನುಭವಿಸಲೇಬೇಕಾಯಿತು. ನಾಲ್ಕಾರು ತಿಂಗಳುಗಳಿಂದಲೂ ಸವಿದೆಯ ತಗ್ಗಿನಿಂದ ಇಲ್ಲಿಯ ಪ್ರಜೆಗಳು ಅನುಭವಿಸುತ್ತಿರುವ ಕಷ್ಟವನ್ನು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಧನಿಕರಿಗೂ ಚೀಲಗಟ್ಟಲೆ ಸಂಬಳಗಳನ್ನು ಪಡೆಯುವ ಅಧಿಕಾರಿಗಳಿಗೂ ಇದರ ಕಷ್ಟವು ತಟ್ಟಿರಲಾರದು. ಆದರೆ ಅಂಥ ಜನರ ಸಂಖ್ಯೆಯು ಸ್ವಲ್ಪವಾಗಿರುವ ಕಾರಣ ಪ್ರಜಾಸಾಮಾನ್ಯವೆಲ್ಲಾ ಸವಿದೆಯ ದುರ್ಭಿಕ್ಷದ ಮೂಲಕವಾದ ತಾಪಗಳನ್ನು ನಿರುಪಾಯವಾಗಿ ಅನುಭವಿಸುತ್ತಿರುವುದು. ಹಲವರು ದಿನ ೧ ಕ್ಕೆ ಒಂದೇ ಹೊತ್ತು ಒಲೆಯನ್ನು ಹೊತ್ತಿಸುತ್ತಲಿರುವರು. ಅಭ್ಯಂಗನದ ಗೋಜನ್ನು ಅನೇಕರು ಬಿಟ್ಟೇಬಿಟ್ಟರು. ತಂಗೂಳನ್ನು ತಿಂದು ಎಂದೂ ಅರಿಯದವರು ಅದನ್ನು ದುರ್ನಿವಾರವಾಗಿ ಅನುಭವಿಸಬೇಕಾಗಿರುವುದು. ಪೂರ್ಣಪಕ್ವವಾಗದ ಅರಬೆಂತಿಯನ್ನು ತಿಂದು ಹಲವರು ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿರುವರು. ಗಾಳಿ ಬೆಳಕು ಬೆಂಕಿ ನೀರುಗಳ ಸಮೃದ್ಧಿಯಿಲ್ಲದ ಪ್ರಜೆಗಳು ಆರೋಗ್ಯವನ್ನು ಕಳೆದುಕೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಬಿಸಿಲುಕಾಲವಾದರೂ ರಾಜಧಾನಿಯಲ್ಲಿ ಪ್ಲೇಗು, ನ್ಯುಮೋನಿಯಾ, ಆಮಶಂಕೆ, ಕೆಮ್ಮಲು ಮೊದಲಾದ ರೋಗಗಳು ತಪ್ಪಿಲ್ಲ. ಪಟ್ಟಣದ ಶೃಂಗಾರದ ಸಡಗರಗಳೇನೂ ಕಡಿಮೆಯಿಲ್ಲ. ಮ|| ಶ್ರೀಕಂಠೇಶ್ವರಯ್ಯರಂಥ ಸಮರ್ಥರು ನಮ್ಮ ಪುರಾಧ್ಯಕ್ಷರಾಗಿದ್ದರೂ ಕಾಷ್ಠವ್ಯಸನವನ್ನು ಪುರನಿವಾಸಿಗಳಿಗೆ ತಪ್ಪಿಸದಿರುವುದು ಆಶ್ಚರ್ಯವೇ ಸರಿ. ನೆರೆಯ ಮದ್ರಾಸು ಅಧಿಪತ್ಯದಲ್ಲೂ ಮದ್ರಾಸು ಪಟ್ಟಣ ಮೊದಲಾದ ಹಲವು ಕಡೆಯಲ್ಲೂ ಹೀಗೆಯೇ ಸವಿದೆಯಬೆಲೆಯು ಹೆಚ್ಚಿಕೊಳ್ಳಲು, ಅಲ್ಲಿಯ ಪ್ರಭುತ್ವದವರು ಅಟವೀಶಾಖೆಯ ಮೂಲಕ ಕಷ್ಟವನ್ನು ತಕ್ಕ ಮಟ್ಟಿಗೆ ನಿವಾರಿಸಿಕೊಟ್ಟರು. ಬೆಂಗಳೂರಿನಲ್ಲೂ ಸರ್ಕಾರಿಡಿಪೋವನ್ನಿಡಿಸಿ ಸವಿದೆಯು ಸುಲಭವಾಗಿ ದೊರೆಯುವಂತೆ ಮಾಡಿರುವರು. ನಮ್ಮ ಮೈಸೂರು, ಸಮೀಪದಲ್ಲಿ ಸಮೃದ್ಧವಾಗಿ ಕಾಡುಗಳುಳ್ಳ ಡಿಸ್ಟ್ರಿಕ್ಟಿನಲ್ಲಿದ್ದರೂ ನಮ್ಮ ಪ್ರಭುತ್ವದವರಾಗಲಿ ಮ್ಯು|| ಅಧಿಕಾರಿಗಳಾಗಲಿ ತಕ್ಕ ಕರದೂದಿನಿಂದ ಉಚಿತವಾದ ಯಾವ ಏರ್ಪಾಟನ್ನೂ ಇನ್ನೂ ಮಾಡಿಸದೆ ಇರುವುದು ಅನ್ಯಾಯವಾಗಿದೆ.

ಸವಿದೆಯು ಇಲ್ಲಿ ಇಷ್ಟೊಂದು ತಗ್ಗಾಗುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸುವಲ್ಲಿ ಅಟವೀ ಶಾಖೆಯವರು ತಮ್ಮಲ್ಲಿನ ಉತ್ಪತ್ತಿಯನ್ನು ಹೆಚ್ಚುಮಾಡಿಸುವುದಕ್ಕಾಗಿ ಸವಿದೆಗಾಗಿ ಮೊದಲು ಉಪಯೋಗಿಸುತ್ತಿದ್ದ ದಿಂಡಲು ಮೊದಲಾದ ಕೆಲ ಜಾತಿಯ ಮರಗಳನ್ನು ಕೂಡ ಈಗ ಮೇಣದ ಉತ್ಪತ್ತಿಗಾಗಿ ಕಡಿಯಗೊಡಿಸದೆ ಹೋಗಿರುವುದು, ಮತ್ತು ಸಮೀಪವಿಪಿನದ ಸವಿದೆಯ ಮರಗಳೆಲ್ಲಾ ಕಡಿಯಲ್ಪಟ್ಟು ಆ ಸ್ಥಳದಲ್ಲಿ ಹೊಸ ಮರಗಳ ಉತ್ಪತ್ತಿಯಿಲ್ಲದೆ ಪಾಳಾಗಿ ಬಹುದೂರಕ್ಕೆ ಅಟವಿಯಲ್ಲಿ ಸವಿದೆಗಾಗಿ ಹೋಗಬೇಕಾಗಿರುವುದೂ, ಇದರ ಮೇಲೆ ಬಂಡಿಯ ಬಾಡಿಗೆಗಳು ಹೆಚ್ಚಿರುವುದೂ, ಇವೆಲ್ಲ ತೊಡಕುಗಳು ಸಾಲದೆ ರಾಜಧಾನಿಗೆ ಅಷ್ಟೂ ಇಷ್ಟೂ ಬಂದ ಸವಿದೆಯ ಬಂಡಿಗಳಲ್ಲಿ ಮುಕ್ಕಾಲುವಾಲನ್ನೆಲ್ಲಾ ಗಂಧದೆಣ್ಣೆ ಯಂತ್ರಾಲಯದವರು ಹೆಚ್ಚುಬೆಲೆಯನ್ನು ಕೊಟ್ಟು ಕೊಂಡು ದಿನ ೧ಕ್ಕೆ ೨೫-೩೦ ಬಂಡಿಗಳಿಗೆ ಕಡಿಮೆಯಿಲ್ಲದೆ ಸುರಿಸಿಕೊಳ್ಳುತ್ತಿರುವುದೂ, ಇದರಮೇಲೆ ಇಟ್ಟಿಗೆಗೂಡುಗಳ "ಗಿರಾಕಿ" ಇವೆಲ್ಲ ಸೇರಿ ಸವಿದೆಯ ಬೆಲೆಯನ್ನು ಹೆಚ್ಚಿಸಿಬಿಟ್ಟಿವೆಯೆಂದು ಗೊತ್ತಾಗುತ್ತದೆ. ಮುಖ್ಯವಾಗಿ ಗಂಧದೆಣ್ಣೆಯ ಯಂತ್ರಾಲಯದವರು ಬೇರೆ ಕಂಟ್ರಾಕ್ಟನ್ನು ಏರ್ಪಡಿಸಿಕೊಳ್ಳದೆ ಊರಿಗೆ ಬರುವ ಬಂಡಿಗಳಿಗೆ ಸರ್ಕಾರಿ ಹಣವನ್ನು ಮುಚ್ಚಾಬಟ್ಟೆಯಾಗಿ ಕೊಟ್ಟು ಕೊಳ್ಳುತ್ತಿರುವುದರಿಂದಲೇ ಇಷ್ಟು ಹೆಚ್ಚು ಬೆಲೆಯೇರಿತೆಂದು ಎಲ್ಲರ ಬಾಯಿಂದಲೂ ಒಂದೇ ಮಾತು ಬರುತ್ತಿದೆ. ಹೀಗಿರುವುದಾದರೆ ಸರ್ಕಾರಕ್ಕೆ ಗಂಧದೆಣ್ಣೆಯ ಯಂತ್ರವು ಚಿಂತಾಮಣಿಯಾಗಿದ್ದರೆ ಪುರನಿವಾಸಿಗಳ ಭಾಗಕ್ಕೆ ಅದನ್ನು ಚಿಂತಾಖಣಿಯೆಂದೇ ಹೇಳಬೇಕಾಯಿತು. ವಿದ್ಯುಚ್ಛಕ್ತಿಯ ಸಹಾಯದಿಂದ ಅದರ ಕೆಲಸವು ಸಾಗದೆ ಬರಿಯ ಸವಿದೆಯ ಭಕ್ಷಣದಿಂದಲೇ ಸಾಗಬೇಕಾಗಿದ್ದರೆ, ಅಂಥ ರಾಕ್ಷಸನನ್ನು ಪ್ರಭುತ್ವದವರು ರಾಜಧಾನಿಯ ನೆರೆಯಲ್ಲಿ ತಂದು ಕುಕ್ಕರಿಸಬೇಕಾಗಿದ್ದುದೇಕೋ ತಿಳಿಯಲಿಲ್ಲ. ಸಮೃದ್ಧವಾಗಿ ಮರಗಳು ಬಿದ್ದು ಉರುಳುತ್ತಿರುವ ಒಂದು ಮಹಾರಣ್ಯದಲ್ಲಿ ಅದಕ್ಕೆ ಮಂದಿರವನ್ನು ಕಟ್ಟಿಸಬಾರದಾಗಿದ್ದಿತೆ? ಈಗಲಾದರೂ ಪುರನಿವಾಸಿಗಳಿಗೆ ಬಿಕ್ಕಟ್ಟಾಗದಂತೆ ಬೇರೆದಾರಿಯಿಂದ ಎಂದೆಂದಿಗೂ ಸವಿದೆಗಳನ್ನು ಆ ಯಂತ್ರದ ಕೆಲಸಕ್ಕೆ ತರಿಸಿಕೊಳ್ಳಲು ಶಾಶ್ವತವಾದ ಏರ್ಪಾಟನ್ನು ಮಾಡಿಸುವುದು ಸಾಧ್ಯವಲ್ಲದಿದ್ದರೆ, ಯಾವುದಾದರೊಂದು ಕಾಡಿಗೇ ಅದನ್ನು ಹೊತ್ತುಹಾಕಿಸುವುದು ಅತ್ಯವಶ್ಯಕವು. ಹಾಗೆ ಮಾಡುವುದರಿಂದ ಸರ್ಕಾರಕ್ಕೂ ಸವಿದೆಯ ವೆಚ್ಚವು ಕಡಿಮೆಯಾಗಿ ಲಾಭವು ಇನ್ನಷ್ಟು ಹೆಚ್ಚುವುದು. ಪುರನಿವಾಸಿಗಳಿಗೂ ಸೌಖ್ಯವಾಗುವುದು. ನಮ್ಮ ಪುರಾಧಿಕಾರಿಗಳೂ ಪ್ರಭುತ್ವದವರೂ ಈ ಭಾಗದಲ್ಲಿ ಗಮನವನ್ನು ತ್ವರಿತವಾಗಿ ಕೊಟ್ಟು, ಯಾವ ರೀತಿಯಿಂದಲಾದರೂ ಸವಿದೆಯ ಕ್ಷಾಮವನ್ನು ತಪ್ಪಿಸದಿದ್ದರೆ ಮುಂದೆ ಬರುವ ಮುಂಗಾರಿನಲ್ಲಿ ವ್ಯವಸಾಯಗಾರರು ಬೇಸಾಯಕ್ಕೆ ನಿಂತರೆ ಸವಿದೆ ಬಂಡಿಗಳು ಬರುವುದು ಮತ್ತಷ್ಟು ಕಡಿಮೆಯಾಗಿ ಇನ್ನೂ ಅತಿಶಯವಾದ ಕಷ್ಟನಷ್ಟಗಳನ್ನೂ ಅನಾರೋಗ್ಯವನ್ನೂ ಪ್ರಜೆಗಳು ಅನುಭವಿಸಬೇಕಾಗಿ ಬರುವುದು ಖಂಡಿತ.

ಒಳದೇಶದ ವೃತ್ತಾಂತಗಳು.

ಕಳೆದ ತಾ|| ೩ ರಲ್ಲಿ ಬೆಂಗಳೂರಿನಲ್ಲಿ ಕರಗದ ಜಾತ್ರೆಯು ಎಂದಿನಂತೆ ಬಹಳ ವಿಜೃಂಭಣೆಯಿಂದ ನೆರವೇರಿತು.

ಸಂಪದಭ್ಯುದಯ ಸಮಾಜದ ವಾರ್ಷಿಕ ಸಮ್ಮೇಳನವು ವರ್ಧಂತೀ ಕಾಲದಲ್ಲಿ ಎಂದರೆ ಮೇ ತಾ|| ೩೧ ರಲ್ಲಿ ರಾಜಧಾನಿಯಲ್ಲಿ ನಡೆಯುವುದು.

ಅಮಲ್ದಾರರಾದ ಮ|| ಜಿ. ಎಂ. ನರಸಿಂಹನಾಯಕರವರು ಸಿರಾ ತಾಲ್ಲೂಕಿಗೆ ೨ ನೆ ತರಗತಿ ಮೇಜಿಸ್ಟ್ರೇಟ್ ಅಧಿಕಾರದೊಡನೆ ವರ್ಗಾಯಿಸಲ್ಪಟ್ಟಿದ್ದಾರೆ.

ಸಂಪದಭ್ಯುದಯಸಮಾಜದ ಡೆವಲಪ್‌ಮೆಂಟ್ ಬೋರ್ಡಿಗೆ ಮ|| ಎಂ. ಸುಬ್ಬಯ್ಯ ಬಿ.ಎ.ಯವರು ವಿದ್ಯಾಭ್ಯಾಸ ಶಾಖಾ ಸಭಿಕರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ತಾ|| ಅಮಲ್ದಾರರಾದ ಮಿ|| ಹೈದರಲ್ಲಿಖಾನ್‌ರವರು ತಾತ್ಕಾಲಿಕವಾಗಿ ಈ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಇನ್ನೂ ಮಳೆ ಬೀಳಲಿಲ್ಲ. ಸೆಕೆಯು ದುಸ್ಸಹವಾಗಿದೆ. ಸುತ್ತಮುತ್ತಣ ಗ್ರಾಮಗಳಲ್ಲಿ ಸ್ವಲ್ಪ ಮಳೆ ಬಿದ್ದು ಕೆಲ ಕಡೆ ಜೋಳವನ್ನು ಬಿತ್ತುತ್ತಿದ್ದಾರೆ.

ನಿನ್ನೆ ಶನಿವಾರ ಬೆಳಗಿನ ೮ ಗಂಟೆಗೆ ಬೆಂಗಳೂರು ಚಾಮರಾಜಪೇಟೆಯ ಕೆಂಪಾಂಬುಧಿ ಕೆರೆಯಲ್ಲಿ ಈಜುವ ಪಂಥವು ನಡೆಯಿತು. ಮ|| ಸಿ. ಎಸ್. ಬಾಲಸುಂದರಮಯ್ಯರ್‌ರವರು ಜಡ್ಜರಾಗಿದ್ದರು. ೨೫ ಮಂದಿ ತರುಣರು ಈ ಪಂಥಕ್ಕೆ ನಿಂತಿದ್ದರು.

ಮೈಸೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿರುವ ಮ|| ಎಸ್. ರಾಮಾನುಜಯ್ಯಂಗಾರರು ಶಿವಮೊಗ್ಗಕ್ಕೆ ಸಬ್ ರಿಜಿಸ್ಟ್ರಾರರಾಗಿ ವರ್ಗಮಾಡಲ್ಪಟ್ಟು, ಅಲ್ಲಿದ್ದ ಮ|| ಎಂ. ನರಸಿಂಹಾಚಾರರು ದೇವನಹಳ್ಳಿ ತಾಲ್ಲೂಕಿಗೆ ಸಬ್ ರಿಜಿಸ್ಟ್ರಾರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಯಾವದ್ಭಾರತ ಸಬ್ ಅ|| ಸರ್ಜನ್ನರುಗಳ ಸಭೆಯ ಮೈಸೂರು ಪ್ರಥಮಾಧಿವೇಶನವು ನಮ್ಮ ಸೀನಿಯರ್ ಸರ್ಜನರಾದ ರಾಜಕಾರ್ಯಪ್ರವೀಣ ಡಾ|| ಟಿ. ವಿ. ಅರ್ಮುಗಂ ಮೊದಲಿಯಾರ್‌ರವರ ಅಧ್ಯಕ್ಷತೆಯಿಂದ ಬೆಂಗಳೂರಿನಲ್ಲಿ ಕಳೆದ ಗುರುವಾರ ಶುಕ್ರವಾರಗಳ ದಿನ ನಡೆಯಿತು.

ಬರುವ ತಾ|| ೧೫-೧೬-೧೭ ರಲ್ಲಿ ಕೋಲಾರ ಡಿಸ್ಟ್ರಿಕ್ಟ್ ಕಾನ್ಫರೆನ್ಸೂ ಅದಕ್ಕೆ ಸಂಬಂಧಿಸಿದಂತೆ ಒಂದು ಡಿಸ್ಟ್ರಿಕ್ಟ್ ವಸ್ತುಪ್ರದರ್ಶನವೂ ನಡೆಯುವವು. ಅಲ್ಲದೆ ಪಂಚಮರ ಕಾನ್ಫರೆನ್ಸೂ, ಮಹಿಳೆಯರ ಸಭೆಯೂ, ವ್ಯವಸಾಯ, ನೆಯ್ಗೆ, ರೇಷ್ಮೆ ಇವುಗಳ ಪ್ರದರ್ಶನವೂ ಜರುಗುವುವು.

ಸಂಸ್ಥಾನದ ಡೆಪ್ಯುಟಿ ಕಮಿಷನರುಗಳ ಸಭೆಯು ಕಳೆದ ತಿಂಗಳು ತಾ|| ೩೧ ರಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಅಗ್ಗಿ ಕೌನ್ಸಿಲರುಗಳೂ ಜನರಲ್ ಸೆಕ್ರೆಟರಿಗಳೂ ರೆವಿನ್ಯೂ ಸೆಕ್ರೆಟರಿಯವರೂ ಸಹ ಸೇರಿದ್ದರು. ಡಿಸ್ಟ್ರಿಕ್ಟ್ ಪರಿಪಾಲನ ಪದ್ಧತಿಯನ್ನು ಕುರಿತು ಚರ್ಚಿಸುವುದೇ ಸಭೆಯ ಉದ್ದೇಶವಾಗಿದ್ದಿತು.

ಬರುವ ಮೇ ತಿಂಗಳಲ್ಲಿ ಧಾರವಾಡದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತನ್ನು ಕೂಡಿಸುವ ಪರ್ಯಾಲೋಚನೆಯೂ ಸಿದ್ಧತೆಯೂ ನಡೆದಿರುತ್ತದೆ. ಅದರ ಅಧ್ಯಕ್ಷತೆಯನ್ನು ವಹಿಸಬೇಕೆಂದು ಮ|| ವಿ. ಪಿ. ಮಾಧವರಾವ್ ಸಿ.ಐ.ಇ ಯವರು ಪ್ರಾರ್ಥಿಸಲ್ಪಟ್ಟಿರಲಾಗಿ, ರಾಯರು ಅದಕ್ಕೆ ಅನುಮತಿಯನ್ನು ಕೊಟ್ಟಿರುವರೆಂದು ಕೇಳುತ್ತೇವೆ.

ಮ|| ಕೆ. ಎಸ್. ಚಂದ್ರಶೇಖರಯ್ಯರವರು ಕಳೆದ ತಾ|| ೧ ರಲ್ಲಿ ಚೀಫ್ ಕೋರ್ಟಿನ ೨ನೆ ಜಡ್ಜಿ ಪದವಿಯನ್ನು ವಹಿಸಿದರು. ಮಿ|| ಬಿ. ಪ್ಲಮರ್‌ರವರು ೩ನೆ ಜಡ್ಜಿಯವರಾಗಿರುವರು. ಆದುಕಾರಣ ಮ|| ದೊರೆಸಾಮಯ್ಯರ್‌ರವರು ಮರಳಿ ತಮ್ಮ ಪೂರ್ವದ ಗ|| ಅಡ್ವೊಕೇಟ್ ಕೆಲಸಕ್ಕೆ ಬಂದರು. ಆ ಸ್ಥಾನದಲ್ಲಿದ್ದ ಮ|| ಕೆ. ಶಂಕರನಾರಾಯಣರಾಯರು ತಮ್ಮ ವಕೀಲ ಕೆಲಸಕ್ಕೆ ಹೋದರು.

ಸಂಸ್ಥಾನದ ಫೈನಾನ್ಷಿಯಲ್ ಕಮಿಟಿಗೆ ಅನೌದ್ಯೋಗಿಕ ಸಭಿಕರಾಗಿ ಈ ಕೆಳಗೆ ಕಂಡ ದೊಡ್ಡಮನುಷ್ಯರು ಸರ್ಕಾರದಿಂದ ಅಂಗೀಕರಿಸಲ್ಪಟ್ಟಿದ್ದಾರೆ.— ಮ|| ಗಳಾದ ಎಂ. ಸುಬ್ಬಯ್ಯನವರು, ಕೆ. ಸುಬ್ರಾಯಶೆಟ್ಟರು, ರಾ|| ಬ|| ಎಂ. ಸಿ. ರಂಗಯ್ಯಂಗಾರರು, ಎಸ್. ಆರ್. ಬಾಲಕೃಷ್ಣರಾಯರು, ಗುಲಾಂ ಅಹಮ್ಮದ್ ಕಲಾಮಿಯವರು, ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಯವರು.

ಮದ್ರಾಸ್ ಗೌರ್ನರವರು ಗುರುವಾರ ಅಲ್ಲಿಂದ ಹೊರಟು ಶುಕ್ರವಾರ ಬೆಳಗ್ಗೆ ಕೋಲಾರದ ಚಿನ್ನದ ಗಣಿಗಳಿಗೆ ಬಂದು, ಊರಿಗಂ, ಚಾಂಪಿಯನ್ ಗಣಿಗಳನ್ನು ನೋಡಿಕೊಂಡು ಅದೇ ಸಾಯಂಕಾಲ ಬೆಂಗಳೂರಿಗೆ ಬಂದರು. ಅಲ್ಲಿ ಒಂದು ದಿನವಿದ್ದು ಬ್ರಿಟಿಷ್ ರೆಸಿಡೆಂಟರೊಡನೆ ರಾಜಧಾನಿಗೆ ಈ ದಿನ ಬರುವವರಾಗಿರುವರು. ಇಲ್ಲಿಂದ ಮೋಟಾರಿನ ಮೇಲೆ ಮಡಕೇರಿಗೆ ಹೋಗಿ ಹಾಗೆಯೇ ನೀಲಗಿರಿಗೆ ತೆರಳುವರು.

ಅರಮನೆಯ ಡಾಕ್ಟರಾಗಿದ್ದ ಮ|| ಎಸ್. ರಂಗಣ್ಣನವರು ಇದೇ ತಿಂಗಳು ತಾ|| ೧೫ ರಿಂದ ಉದ್ಯೋಗನಿವೃತ್ತರಾಗುತ್ತಾರಾದ ಕಾರಣ ಆಸ್ಥಾನಕ್ಕೆ ಶಿವಸಮುದ್ರದಲ್ಲಿದ್ದ ೧ ನೆ ಗ್ರೇಡ್ ಅ|| ಸರ್ಜನ್ ಎ. ಶೇಷಗಿರಿರಾವ್ ಎಲ್. ಎಂ. ಅಂಡ್ ಎಸ್. ರವರೂ, ತರೀಕೆರೆ ಲೋಕಲ್ ಫಂಡ್ ಆಸ್ಪತ್ರೆಯಲ್ಲಿದ್ದ ಸಬ್ ಅ|| ಸರ್ಜನ್ ಮ|| ವಿ. ಶ್ರೀನಿವಾಸ ಮೊದಲಿಯಾರರು ಶಿವಸಮುದ್ರದ ಆಸ್ಪತ್ರೆಗೂ ವರ್ಗಾಯಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿದ್ದ ರೆ|| ಲೂಕಿಯ್ಯನವರು ಕಳೆದ ಮಂಗಳವಾರ ತಮ್ಮ ವಾರ್ಧಕ್ಯದಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಎಲ್ಲ ಪ್ರಜೆಗಳ ಕಷ್ಟಸುಖಗಳಲ್ಲೂ ಭಾಗಿಗಳಾಗಿಯೂ ಸರಸಿಗಳಾಗಿಯೂ ಇದ್ದರು. ಪ್ಲೇಗು ಇನ್‌ಫ್ಲುಯೆಂಜಾ ರೋಗದ ಹಾವಳಿಯ ಕಾಲದಲ್ಲಿ ಪ್ರಜೆಗಳಿಗೆ ಔಷಧಪಥ್ಯಗಳು ನಡೆಯುವಂತೆ ಮಾಡುವಲ್ಲೂ ಬಡಬಗ್ಗರಿಗೆ ಧೈರ್ಯ ವಿವೇಕವನ್ನು ಹೇಳುವಲ್ಲೂ ಬಹಳ ಪಾಡುಪಡುತ್ತಿದ್ದರು.

ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮಿ|| ಎ. ಕೆ. ಸಯ್ಯದ್ ತಾಜ್‌ಪೀರಾನ್ ಬಿ.ಎ.ಯವರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಕೆಲಸವನ್ನು ಆಕ್ಟಿಂಗಾಗಿ ನೋಡಲು ನಿಯಮಿಸಲ್ಪಟ್ಟಿದ್ದಾರೆ. ಅಲ್ಲಿನ ಡಿ|| ಕಮಿಷನರಾದ ಮ|| ಸಿ. ವೆಂಕಟರಾವ್‌ರವರು ೧|| ತಿಂಗಳ ರಜಾವನ್ನು ಪಡೆದಿದ್ದಾರೆ. ಮಿ|| ತಾಜ್‌ಪೀರಾನ್‌ರವರು ಇದ್ದ ಸ್ಥಾನಕ್ಕೆ ಮಿ|| ಜಿ. ಎಂ. ಮೇಸ್ತ್ರಿ ಬಿ.ಎ., ಎಲ್.ಎಲ್.ಬಿ. ಯವರು ರೆವಿನ್ಯೂ ಕಮಿಷನರ ಅಸಿಸ್ಟೆಂಟಾಗಿ ನಿಯಮಿಸಲ್ಪಟ್ಟಿದ್ದಾರೆ.

ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಬೆಂಗಳೂರು ಮ್ಯುನಿಸಿಪಾಲಿಟಿಯ ಅ|| ಪ್ರೆಸಿಡೆಂಟರಾಗಿ ಕಾರ್ಯಗಳನ್ನು ಶ್ಲಾಘನೀಯವಾಗಿ ನೆರವೇರಿಸಿದುದರಿಂದ ಅಲ್ಲಿಯ ಕೌನ್ಸಿಲರುಗಳು ಶೆಟ್ಟರ ಭಾವಚಿತ್ರವೊಂದನ್ನು ಬರೆಯಿಸಿ ಸರ್ಕಾರದಪ್ಪಣೆಯನ್ನು ಪಡೆದು ಮ್ಯು|| ಆಫೀಸಿನಲ್ಲಿರಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆಂದು ಕೇಳುತ್ತೇವೆ. ಆದರೆ ಇದಕ್ಕಿಂತಲೂ ಮ|| ಶೆಟ್ಟರ ಕಾಲದಲ್ಲಿ ನಡೆದಿರುವ ಯಾವುದಾದರೂ ಎಕ್ಸ್‌ಟೆನ್ಷನ್ನಿನ ಭಾಗಕ್ಕೋ ಮಾರ್ಗಕ್ಕೋ ಅವರ ಹೆಸರನ್ನಿಡಿಸುವಂತೆ ಮಾಡಿದ್ದರೆ ಸಮುಚಿತವಾಗುತ್ತಿದ್ದಿತೆಂದು ತೋರುವುದು.

ಬೆಂಗಳೂರು ಮಿಥಿಕ್ ಸೊಸೈಟಿ ಹಾಲಿನಲ್ಲಿ ಕಳೆದ ತಾ|| ೭ ರಲ್ಲಿ ರೆವ|| ಎ. ಎಂ. ಟೌಬಾರ್ಡ್ ಎಂ.ಎ. ಯವರ ಅಧ್ಯಕ್ಷತೆಯಲ್ಲಿ ಮ|| ಬಿ. ರಾಮಚಂದ್ರ ಮೊದಲಿಯಾರರು ಮೊದಲಿಯಾರರ ಪೂರ್ವೇತಿಹಾಸವನ್ನು ಕುರಿತು ಒಂದು ಭಾಷಣವನ್ನು ಮಾಡಿದರು. ಅದರಲ್ಲಿ ಮೊದಲಿಯಾರರು ದ್ರವಿಡಿಯನ್ನರಿಗೆ ಸೇರಿದ ಉತ್ತಮ ಜನವರ್ಗದವರಾಗಿ ಪ್ರಾಚೀನಕಾಲದಿಂದ ಬಂದಿರುವರೆಂದೂ, ದಕ್ಷಿಣದಲ್ಲಿ ಚಕ್ರವರ್ತಿತ್ವವನ್ನು ಅನುಭವಿಸಿದ ಚೋಳ, ಕೇರ, ಪಾಂಡ್ಯರಾಜರ ಕಾಲದಲ್ಲೆಲ್ಲಾ ಹೆಸರುಗೊಂಡ ನಾಗರಿಕರಾಗಿದ್ದರೆಂದೂ, ಅವರ ಪ್ರಾಚೀನರು ಒಳ್ಳೆಯ ಶೂರಭಟರಾಗಿಯೂ, ಗ್ರಂಥಕರ್ತರಾಗಿಯೂ, ಶಸ್ತ್ರಜ್ಞಾನಿಗಳಾಗಿಯೂ ಇದ್ದರೆಂದೂ ಮೊದಲಾಗಿ ಸಪ್ರಮಾಣವಾಗಿ ಪ್ರತಿಪಾದಿಸಿದರು.

ಬರುವ ಮೇ ತಿಂಗಳಲ್ಲಿ ಬೆಂಗಳೂರು ನಾಗರಿಕರು ಕೆಲವರು ಕರ್ನಾಟಕ ಕೀರ್ತನಕಾರರ ಸಮ್ಮೇಳನವನ್ನು ನಡೆಯಿಸಬೇಕೆಂದು ನಿರ್ಧರಿಸಿದ್ದಾರೆ. ಅದರ ಸ್ವಾಗತ ಸಂಘಕ್ಕೆ ರಾಜಸಭಾಭೂಷಣ ಮ|| ಕರ್ಪೂರ್ ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದಾರೆ. ಆಸ್ತಿಕ್ಯವೂ ಸದಾಚಾರ ಸದ್ಭಕ್ತಿಗಳೂ ಬಿಲವಾಗುತ್ತಿರುವ ಈ ಕಾಲದಲ್ಲಿ ಅವುಗಳನ್ನುದ್ಧರಿಸುವುದಕ್ಕೆ ವಿದ್ವತ್ತು ಸತ್ಪ್ರವರ್ತನೆ ಸದ್ಭಕ್ತಿ ಇವುಗಳು ಅಳವಟ್ಟಿರುವ ಕೀರ್ತನಕಾರರು ಸರ್ವಥಾ ಶಕ್ತರಾಗುವರೆಂಬುದಕ್ಕೆ ಸಂಶಯವಿಲ್ಲ. ಅಂಥಾ ಕೀರ್ತನಕಾರರು ಎಲ್ಲೆಲ್ಲೂ ಉದಯಿಸುವಂತೆಯೂ ಹೆಚ್ಚುವಂತೆಯೂ ಮಾಡುವುದೂ, ಅಂಥ ಕೀರ್ತನಕಾರರನ್ನು ಪೋಷಿಸುವುದೂ ಪ್ರೋತ್ಸಾಹಿಸುವುದೂ ಸಹ ದೇಶೀಯರೆಲ್ಲರಿಗೂ ಅವಶ್ಯಕರ್ತವ್ಯವು. ಬೆಂಗಳೂರು ಮಹಾಜನರು ಇದಕ್ಕೆ ಮುಂದಾಳುಗಳಾಗಿ ನಿಂತುದಕ್ಕಾಗಿ ಅವರನ್ನು ನಾವು ಅಭಿನಂದಿಸುವುದಲ್ಲದೆ ಉದ್ದಿಷ್ಟಪ್ರಯತ್ನವು ಯಶಸ್ವಿಯಾಗಿ ಜರುಗಲೆಂದು ಕೋರುತ್ತೇವೆ.

ಔತ್ತರೇಯ ವೀರಶೈವ ಬಂಧುಗಳಾದ ಮಿ|| ಗುಗ್ಗರಿ ಬಿ.ಎ. ಯವರನ್ನು ಐ.ಸಿ.ಎಸ್. ಪರೀಕ್ಷೆಗಾಗಿ ಕಳುಹಿಸಿಕೊಡಲು ನಮ್ಮ ಸಮಾಜದವರು ಚಂದಾ ಹಣವನ್ನು ಕೂಡಿಸಿ ಸೀಮೆಗೆ ಪ್ರಯಾಣಮಾಡಿಸಿದರಷ್ಟೆ. ಈಚೆಗೆ ಬೊಂಬಾಯಿ ಸರ್ಕಾರದವರ ಸೂಚನೆಯ ಮೇರೆಗೆ ಅವರಿಗೆ ಭರತಖಂಡದ ಸಿವಿಲ್ ಸರ್ವೀಸಿನಲ್ಲಿ ಪ್ರವೇಶವನ್ನು ಸಾಮ್ರಾಜ್ಯ ಸರ್ಕಾರದವರು ಕೊಡಲೊಪ್ಪಿ, ತತ್ಸಂಬಂಧವಾದ ಶಿಕ್ಷಣವನ್ನು ಸೀಮೆಯಲ್ಲಿ ಪಡೆದುಕೊಳ್ಳಲು ಅವರಿಗೆ ೨ ವರ್ಷಗಳ ಕಾಲ ಸರ್ಕಾರಿ ವೇತನವನ್ನು ಕೊಡಲು ಅಂಗೀಕರಿಸಿರುವರೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಈ ತೆರದ ಮಾನ್ಯತೆಯನ್ನು ಪಡೆದ ವೀರಶೈವರಲ್ಲಿ ಇವರೇ ಮೊದಲನೆಯವರಾಗಿರುತ್ತಾರೆ. ಪರೀಕ್ಷೆಗೆ ಕುಳಿತಿದ್ದರೂ ಉತ್ತೀರ್ಣರಾಗದೆ ಇರುತ್ತಿರಲಿಲ್ಲವೆಂಬ ನಂಬುಗೆಗೊಡುವಷ್ಟು ಮೇಧಾವಿಗಳಾಗಿದ್ದ ಇವರು ಪರೀಕ್ಷೆಯಲ್ಲುತ್ತೀರ್ಣರಾಗಿ ಬಂದು ಸಿವಿಲ್ ಸರ್ವೀಸಿಗೆ ಸೇರುವುದೇ ಉತ್ತಮ ಪಕ್ಷವಾಗುತ್ತಿದ್ದಿತೆಂದು ನಮ್ಮಭಿಪ್ರಾಯ. ಆದರೆ ವೇತನ ಕಲ್ಪನದ ಮೂಲಕ ಒಂದು ವಿಧದ ತೊಂದರೆಯನ್ನು ತಪ್ಪಿಸಿ ಸರ್ಕಾರದವರು ತೋರಿಸಿದ ಅಭಿಮಾನವು ಸಮಾಜದ ಕೃತಜ್ಞತೆಗೆ ಭಾಜನವಾಗಿ ಅಭಿನಂದನೀಯವಾಗಿರುತ್ತದೆ. ೨ ವರ್ಷ ಕಳೆದನಂತರ ಇವರು ಇಂಡಿಯನ್ ಸಿವಿಲ್ ಸರ್ವೆಂಟರಾಗಿ ಕೆಲಸದ ಮೇಲೆ ಬರುವರು.

ಭರತಖಂಡದ ವೃತ್ತಾಂತಗಳು.

ಜಲಿಯನ್‌ವಾಲಾಬಾಗ್ ಸ್ಮಾರಕನಿಧಿಗೆ ಬೊಂಬಾಯಿಯಲ್ಲೇ ಇದುವರೆಗೆ ೧,೯೩,೦೦೦ ರೂ. ಗಳು ಕೂಡಿವೆ.

ಹುಬ್ಬಳ್ಳಿಯಲ್ಲಿರುವ ರೈಲ್ವೆ ವರ್ಕ್‌ಷಾಪಿನವರೂ ಅಹಮ್ಮದಾಬಾದಿನ ದೂದಿ ಯಂತ್ರಾಲಯದವರೂ ಮುಷ್ಕರವನ್ನು ಬಿಟ್ಟು ಕೆಲಸಕ್ಕೆ ಸೇರಿದರು.

ಮಾರ್ಚಿ ತಿಂಗಳ ಕೊನೆಯವರೆಗೆ ನಡೆದ ೧೫ ತಿಂಗಳ ಕಾಲದಲ್ಲಿ ಟಾಟಾ ಇಂಡಸ್ಟ್ರಿಯಲ್ ಬ್ಯಾಂಕಿನ ಲಾಭವು ೧೬|| ಲಕ್ಷ ರೂ. ಆಗಿದೆ.

ಈ ವರ್ಷದ ಅಖಿಲ ಭಾರತೀಯಾಯುರ್ವೇದ ಸಭೆಯ ೧೧ನೆ ಅಧಿವೇಶನವು ಇಂದೂರು ಸಂಸ್ಥಾನದಲ್ಲಿ ಪಂಡಿತ ಡಿ|| ಗೋಪಾಲಾಚಾರ್ಲುಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮದ್ರಾಸು ಸರ್ಕಾರಿ ಮುದ್ರಣಾಲಯದ ಕೆಲಸಗಾರರು ಬಹುಶಃ ೧೫೦೦ ಮಂದಿಗಳು ಸಂಬಳವನ್ನು ಹೆಚ್ಚಿಸಿಕೊಡಬೇಕೆಂದು ಹಟ ಹಿಡಿದು ಕೆಲಸಕ್ಕೆ ಹೋಗದೆ ನಿಂತಿದ್ದಾರೆ.

ಕಲ್ಕತ್ತಾ ಬಳಿ ಹೂಗ್ಲಿ ನದಿಯ ಮೇಲೆ ಸುರಂಗದೊಳಗೆ ಹೋಗೆ ಬಂಡಿಗಳು ಓಡಾಡುವಂತೆ ಮಾಡಬೇಕೆಂಬ ಪ್ರಯತ್ನವು ಮಾಡಲ್ಪಟ್ಟಿದೆ. ಇಂಥ ಭೂಗರ್ಭ ಮಾರ್ಗವು ಸೀಮೆಯಲ್ಲಿದ್ದಿತೇ ಹೊರತು ಭರತಖಂಡದಲ್ಲಿರಲಿಲ್ಲ.

ಬರುವ ಶೀತಕಾಲದಲ್ಲಿ ತಮ್ಮ ಪಟ್ಟಣಕ್ಕೆ ದಯಮಾಡಿಸುವವರಾಗಿರುವ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸ್ವಾಗತಮರ್ಯಾದೆಗಳನ್ನು ತಕ್ಕ ರೀತಿಯಿಂದ ಮಾಡಲು ಯೋಚಿಸುವುದಕ್ಕಾಗಿ ಕಲ್ಕತ್ತಾ ಪುರನಿವಾಸಿಗಳು ಗೌರ್ನರವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು.

ರೊನಾಲ್ಡ್‌ಷೇರವರು ಕೆಲಸದಿಂದ ನಿವೃತ್ತರಾಗಿ ಆಸ್ಥಾನಕ್ಕೆ (ಬಂಗಾಳಾ ಗೌರ್ನರ್ ಪದವಿಗೆ) ಲಾರ್ಡ್ ಸಿಂಹರವರು ನಿಯಮಿಸಲ್ಪಡುವರೆಂಬ ವಾರ್ತೆಯು ಹಬ್ಬಿದೆ. ಆದರೆ ಲಾರ್ಡ್ ರೋನಾಲ್ಡ್‌ಷೇರವರು ಇನ್ನೂ ಕೆಲಸವನ್ನು ಬಿಡುವವರಾಗಿಲ್ಲವೆಂದು ಕೇಳುತ್ತೇವೆ

ವೈಸ್‌ರಾಯಿ ದಂಪತಿಗಳು ಬೊಂಬಾಯಿಯನ್ನು ಸಂದರ್ಶಿಸಿಕೊಂಡು ಗ್ವಾಲಿಯರ್ ಸಂಸ್ಥಾನಕ್ಕೆ ಹೋಗಿ ಅಲ್ಲಿಯ ಮಹಾರಾಜರ ಆತಿಥ್ಯವನ್ನು ಸ್ವೀಕರಿಸಿ, ಅವರ ರಾಜ್ಯಪರಿಪಾಲನ ನೈಪುಣ್ಯವನ್ನೂ ಯುದ್ಧಕಾಲದಲ್ಲಿ ಅವರು ಮಾಡಿದ ಸಹಾಯಗಳನ್ನೂ ಕೊಂಡಾಡಿದರು.

ಅಹಮ್ಮದಾಬಾದಿನಲ್ಲಿ ೨೫ ದೂದಿ ಯಂತ್ರಾಲಯಗಳ ಕೂಲಿಕಾರರು ಕೋರಿದಷ್ಟು ಸಂಬಳ ಮೊದಲಾದ ಅನುಕೂಲ್ಯವನ್ನು ತಮ್ಮ ಯಜಮಾನರುಗಳು ಮಾಡಿಕೊಡಲಿಲ್ಲವೆಂಬ ಕಾರಣದಿಂದ ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ಯಂತ್ರಾಲಯಗಳ ಬಾಗಿಲು ಮುಚ್ಚಿಹೋಗಿದ್ದುವು.

ಭರತಖಂಡದಿಂದ ಬೆಲೂಚಿಸ್ಥಾನ ಮತ್ತೂ ವಾಯವ್ಯದ ಎಲ್ಲೆಕಟ್ಟುಗಳ ಹೊರತು ಉಳಿದ ಈ ದೇಶದ ಪ್ರತಿಯೊಂದು ಪ್ರಾಂತಗಳಲ್ಲೂ ಆಹಾರ್ಯ ವಸ್ತುಗಳು ನಿರ್ಬಂಧವಿಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಳೆದ ಏಪ್ರಿಲ್ ತಾ|| ೧ ರಿಂದಲೂ ಸಾಗಬಹುದೆಂದು ಇಂಡಿಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ಧಾರವಾಡದಲ್ಲಿ ಕಳೆದವಾರ ನಡೆದ ೧೫ ಮೈಲಿಗಳ ದೂರ ಓಡುವ ಪಂದ್ಯಕ್ಕೆ ೧೦ ಜನ ಯುವಕರು ನಿಂತಿದ್ದರು. ಅವರಲ್ಲಿ ಸಂಗನಗೌಡ ಪಾಟೀಲ ಎಂಬಾತನು ೧ ಗಂಟೆ ೪೯ ನಿಮಿಷಗಳ ಕಾಲದಲ್ಲಿ ೧೫ ಮೈಲಿಗಳ ದೂರ ಓಡಿ ಮೊದಲನೆಯವನಾದನು. ಉಳಿದವರು ಎಷ್ಟೋ ಹೊತ್ತಿನಮೇಲೆ ಬಂದು ಸೇರಿದರು.

ಕಾಕಿನಾಡಾದಲ್ಲಿ ಈಡಿಗಜನರು ಸಭೆಗೂಡಿ ತಮ್ಮ ಜನರು ಹೆಂಡವನ್ನು ಇಳಿಸುವ ಕೆಟ್ಟ ಕಸಬನ್ನು ಬಿಟ್ಟು ವಿದ್ಯಾಬುದ್ಧಿಗಳನ್ನು ಕಲಿತು ಬೇರೆ ಉದ್ಯೋಗಗಳನ್ನು ಹಿಡಿದು ಮರ್ಯಾದೆಯಿಂದ ಬದುಕಬೇಕೆಂತಲೂ, ತಮ್ಮವರ ವಿದ್ಯಾಭಿವೃದ್ಧಿಗೆ ಫಂಡನ್ನು ಕೂಡಿಸಿ ಪ್ರೋತ್ಸಾಹಿಸಬೇಕೆಂತಲೂ, ಶಾಸನಸಭೆಯಲ್ಲಿ ತಮ್ಮ ಜನವರ್ಗದವರಿಗಾಗಿ ೨ ಸ್ಥಾನಗಳನ್ನು ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂತಲೂ ಮೊದಲಾಗಿ ತೀರ್ಮಾನಿಸಿದರು.

ಬಂಗಾಳಾ ಪ್ರಾಂತಿಕ ರಾಜಕೀಯ ಸಭೆಯು ಕಳೆದವಾರ ನಡೆಯಿತು. ಕಳೆದ ವರ್ಷ ಈ ಸಭೆಯಲ್ಲಿ ಉಗ್ರವಾದಿಗಳ ಮಾತುಗಾರಿಕೆಯೇ ಮುಂದಾಗಿದ್ದಿತು. ಈಸಲ ಮಿತವಾದಿಗಳ ಬಾಯಿ ಮುಂದಾಯಿತು. ನೂತನ ರಾಜಕೀಯ ಶಾಸನವನ್ನು ಒಪ್ಪಿಕೊಂಡು ಅದನ್ನು ಆಚರಣೆಗೆ ತರಲು ಸಹಾಯಕರಿಸುವ ನಿರ್ಧಾರವು ಹೆಚ್ಚು ಮಂದಿಗಳಿಂದ ಅನುಮೋದಿತವಾಯಿತು. ತಮಗೆ ನೈತಿಕವಿಜಯವು ಲಭಿಸಿತೆಂತಲೂ ಮುಂದಣ ವರ್ಷದ ಸ್ಥಿತಿಗತಿಗಳು ಇನ್ನೂ ಅನುಕೂಲಿಸುವುವೆಂತಲೂ ಮಿತವಾದಿ ಪ್ರಮುಖರು ಸಂತೋಷಭರಿತರಾಗಿದ್ದಾರೆ.

ಸರ್ಕಾರದವರು ಪವನು ೧ಕ್ಕೆ ೧೦ ರೂ. ಗಳಂತೆ ದರವನ್ನು ಸಾರಿದ್ದರೂ ಚಿನ್ನವು ಅಗ್ಗವಾದ ಹೊರತು ಆ ದರದಿಂದ ಮಾರ್ಪ ನಡೆಯುವುದಿಲ್ಲ. ಚಿನ್ನವನ್ನು ಕೊಳ್ಳುವ ಶ್ರೀಮಂತ ವ್ಯಾಪಾರಿಗಳು ತಾವಾಗಿಯೇ ಟೆಂಡರ್ ದರವನ್ನು ಏರಿಸಿ ವಿಪರೀತವಾಗಿ ಚಿನ್ನವನ್ನು ಕೊಂಡು ಗುಡ್ಡೆಹಾಕಿ ಇತರರಿಗೆ ಅದನ್ನು ಸಿಕ್ಕದಂತೆ ಮಾಡುವುದರಿಂದಲೇ ಚಿನ್ನದ ಬೆಲೆ ಇಳಿಯದೆ ಇದೆ. ಆ ಕ್ರಮವು ತಪ್ಪಿ, ಸೀಮೆಯಿಂದ ಯಾರು ಬೇಕಿದ್ದರೂ ಮಾರಾಟಕ್ಕೆ ಚಿನ್ನವನ್ನು ತರಿಸಿಕೊಳ್ಳುವ ಸ್ವಾತಂತ್ರ್ಯವು ದೊರೆತಲ್ಲದೆ ಪವನಿಗೆ ೧೦ ರೂಪಾಯಿಯ ಮಾರ್ಪ ವ್ಯವಹಾರಕ್ಕೆ ಬರಲಾರದು.

ಮದ್ರಾಸು ಶಾಸನಸಭೆಯಲ್ಲಿ ಬ್ರಾಹ್ಮಣೇತರರಿಗೆ ಪ್ರತ್ಯೇಕಪ್ರಾತಿನಿಧ್ಯವಾಗಿ ೨೮ ಸ್ಥಾನಗಳನ್ನು ವಿಂಗಡಿಸಲಾಗಬೇಕೆಂದು ಲಾರ್ಡ್ ಮೆಸ್ಟನ್‌ರವರು ಇಂಡ್ಯಾ ಸರ್ಕಾರಕ್ಕೆ ವರದಿಮಾಡಿರುವುದರಲ್ಲಿ ವೋಟರುಗಳ ಸಂಖ್ಯೆಯು ಬ್ರಾಹ್ಮಣೇತರರಲ್ಲೇ ಹೆಚ್ಚಾಗಿರುವುದರಿಂದ ಅವರು ತಮಗೆ ಬೇಕಾದವರಿಗೆ ವೋಟುಗಳನ್ನು ಕೊಟ್ಟುಕೊಳ್ಳಲು ಅವಕಾಶವಿರುವ ಕಾರಣ, ಅದಕ್ಕಿಂತ ಹೆಚ್ಚು ಸ್ಥಾನಗಳನ್ನು ಪ್ರತ್ಯೇಕಿಸಿಡುವುದು ಅನವಶ್ಯಕವೆಂದು ತಿಳಿಸಿರುತ್ತಾರೆ. ಇದರ ಮೇಲೆ ದಿ|| ಬ|| ತ್ಯಾಗರಾಯಶೆಟ್ಟರೇ ಮೊದಲಾದ ಬ್ರಾಹ್ಮಣೇತರರು ಸಭೆಗಳನ್ನು ಕೂಡಿಸಿ ಬ್ರಾಹ್ಮಣೇತರ ವೋಟರುಗಳೆಲ್ಲಾ ಬ್ರಾಹ್ಮಣರಿಗೊಬ್ಬರಿಗೂ ವೋಟನ್ನು ಕೊಡದೆ ತಮ್ಮವರಿಗೇ ಕೊಡುವಂತೆ ಮಾಡಬೇಕೆಂದು ಬೋಧಿಸಿ ಹುರಿದುಂಬಿಸುತ್ತಿದ್ದಾರೆ.

ಜರ್ಮನರು ಯುದ್ಧಾರಂಭಕಾಲದಲ್ಲಿ ಫ್ರಾನ್ಸ್‌ದೇಶಕ್ಕೆ ನಿರರ್ಗಳವಾಗಿ ನುಗ್ಗಿ ಬರುತ್ತಿದ್ದುದನ್ನು ಭರತಖಂಡದ ಸೈನಿಕರುತಾನೇ ತಡೆದು ನಿಲ್ಲಿಸಿದವರು? ಮಾರ್ನೆ ಮೊದಲಾದ ಸ್ಥಳಗಳಲ್ಲಿ ಆ ಸಮಯದೊಳಗೆ ಭಾರತೀಯ ಸೈನಿಕರು ತೋರಿಸಿದ ಅದ್ಭುತಸಾಹಸ ಪರಾಕ್ರಮಗಳ ಚಿತ್ರವನ್ನು ಕೆಲ ಫೋಟೋಗ್ರಾಫರುಗಳು ಪ್ರಾಣಾಪಾಯವನ್ನೂ ಲಕ್ಷಿಸದೆ ಫೋಟೋ ತೆಗೆದುಕೊಂಡಿರುವರು. ಅವುಗಳನ್ನು ಸಿನಿಮಾ ಪ್ರದರ್ಶನದ್ವಾರಾ ಈಗ ಭರತಖಂಡದಲ್ಲಿ ತೋರಿಸುವುದಕ್ಕೆ ಏರ್ಪಡಿಸಿರುವರು. ತಮ್ಮ ದೇಶದ ಸೈನಿಕರ ಅತ್ಯದ್ಭುತ ಪರಾಕ್ರಮಗಳನ್ನು ಕಿವಿಯಿಂದ ಕೇಳುತ್ತಿದ್ದ ಕೋಟ್ಯಂತರ ಭಾರತೀಯರಿಗೆ ಈಗ ಕಣ್ಣಾರ ನೋಡುವ ಸುಯೋಗವು ಒದಗಿರುವುದು. ಇಂಥ ಪ್ರದರ್ಶನವನ್ನು ಮದ್ರಾಸಿನಲ್ಲಿ ಡಾಕ್ಟರ್ ಗಾರ್ಡ್‌ವುಡ್‌ರವರು ಕಳೆದ ವಾರ ೮ ದಿನಗಳವರೆಗೂ ತೋರಿಸಿದರು. ನೋಟಕ್ಕೆ ಮದ್ರಾಸ್ ಗೌರ್ನರೇ ಮೊದಲಾದ ಲಕ್ಷಾಂತರ ಜನರು ಹೋಗಿ ನೋಡಿಬಂದರು. ಅದರಿಂದ ಬಂದ ಉತ್ಪತ್ತಿಯನ್ನೆಲ್ಲಾ ಡಾಕ್ಟರ್‌ರವರು ಇಂಡಿಯನ್ ರಿಲೀಫ್ ಫಂಡಿಗೆ ಕೊಡುವವರಾಗಿದ್ದಾರೆ.

ಬೊಂಬಾಯಿ ಪ್ರಾಂತಿಕ ರಾಜಕೀಯ ಸಭೆಯು ಸೊಲ್ಲಾಪುರದಲ್ಲಿ ಕೂಡಿದ್ದಿತು. ಅದಕ್ಕೆ ಉಗ್ರವಾದಿ ಮಿತವಾದಿ ಪಕ್ಷಗಳ ನಾಯಕರುಗಳು ಎಂದರೆ ತಿಲಕ್, ಕೇಳ್ಕರ್, ಪಟೇಲ್, ಆನಿಬೆಸೆಂಟ್, ಚಂದಾವರ್ಕರ್, ಪರಾಂಜಪೆ ಮೊದಲಾದನೇಕರು ಬಂದಿದ್ದರು. ಎನ್. ಸಿ. ಕೇಳ್ಕರ್‌ರವರು ಅಧ್ಯಕ್ಷರಾಗಿದ್ದರು. ಸಂಸ್ಕರಣಶಾಸನವನ್ನು ಕುರಿತು ಎರಡು ಪಕ್ಷದವರಿಗೂ ಬಹಳ ವಾದಾನುವಾದಗಳೂ ಖಂಡನಗಳೂ ಜರುಗಿದುವು. ಬರುವ ನಿಯಮ ನಿರ್ಮಾಣ ಸಭಾಸಭಿಕತ್ವಪ್ರಾಪ್ತಿಗಾಗಿ ಉಭಯ ಪಕ್ಷದವರೂ ತಾವು ಮುಂದಾಗಬೇಕು ತಾವು ಮುಂದಾಗಬೇಕೆಂಬ ಪ್ರಯತ್ನದಲ್ಲಿ ವೋಟರುಗಳ ಮನಸ್ಸನ್ನು ಆಕರ್ಷಿಸುವುದಕ್ಕೆ ಎಷ್ಟುಮಟ್ಟಿಗೆ ಪ್ರಯತ್ನಿಸುತ್ತಿರುವರೆಂಬುದು ಸಭೆಯಲ್ಲಿ ವ್ಯಕ್ತವಾಯಿತು. ಮಿತವಾದ ಪಕ್ಷದಿಂದ ಬಂದಿದ್ದ ಅನೇಕರಿಗೆ ತಕ್ಕಷ್ಟು ಟಿಕೀಟುಗಳು ಕೊಡಲ್ಪಡದಿದ್ದುದರಿಂದ ಗದ್ದಲವು ಹೆಚ್ಚಿ, ಕಲ್ಲುಗಳ ಮಳೆಯು ಸಭಾಮಂಟಪದ ಮೇಲೆ ಸುರಿಸಲ್ಪಟ್ಟಿತು. ರಕ್ತವೂ ಹರಿದಾಡಿತೆಂದು ಸುದ್ದಿ ಬಂದಿದೆ. ಸಂಸ್ಕರಣ ವಿಷಯದಲ್ಲಿ ಸಭಾಧ್ಯಕ್ಷರು ಭಾಷಣಮಾಡಿದುದರಲ್ಲಿ—ಭಾರತೀಯರು ಈ ನೂತನ ಶಾಸನವನ್ನು ಸಂತೃಪ್ತಿಯಿಂದ ಅಂಗೀಕರಿಸಲಾರರು. ಇದರಿಂದ ನಮಗೊದಗಿರುವ ಲಾಭವು ಬಹಳ ಸ್ವಲ್ಪ. ಆದುಕಾರಣ ತಿಲಕರೂ, ಲಜಪತರಾಯರೂ ಕೊಡುವ ಸೂಚನೆಯ ಪ್ರಕಾರ ನಾವು ಆಂದೋಳನವನ್ನು ನಡೆಯಿಸಬೇಕು ಎಂದು ಹೇಳಿದರು. ತಿಲಕರು ಈ ಸಂಬಂಧವಾದ ನಿರ್ಧಾರವನ್ನು ಹೀಗೆ ಸೂಚಿಸಿದರು. "ಅಮೃತಸರದ ದೇಶೀಯ ಮಹಾಸಭೆಯ ಮಾರ್ಗವನ್ನನುಸರಿಸಿ ಕಾಂಗ್ರೆಸ್ ಸಂಘಗಳೆಲ್ಲವೂ ನಡೆಯಬೇಕು. ಕಾಂಗ್ರೆಸ್ ಪಕ್ಷಾವಲಂಬಿಗಳನ್ನೇ ಶಾಸನಸಭೆಗೆ ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಡಬೇಕು ಎಂಬುದಾಗಿ ಈ ಸಭೆಯವರು ಕೋರುತ್ತಾರೆ." ಇದಕ್ಕೆ ಆನಿಬೆಸೆಂಟಮ್ಮನವರು ಒಂದು ಸವರಣವನ್ನು ಉಪಪಾದಿಸಿದರು. ಹೇಗೆಂದರೆ—"ಪರಿಪಾಲನ ಶಾಸನ ನಿರ್ಮಾಣವಿಷಯಗಳಲ್ಲಿ ಕಾಂಗ್ರೆಸ್ ಭಾವಗಳನ್ನು ಅಂಗೀಕರಿಸುವವರನ್ನು ಶಾಸನಸಭೆಗಳಿಗೆ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸಬೇಕು. ಈಗ ಕೊಡಲ್ಪಟ್ಟಿರುವ ಸಂಸ್ಕರಣ ಶಾಸನವನ್ನು ಸಿದ್ಧಾಂತದಿಂದ ಅನುಷ್ಠಾನಕ್ಕೆ ತಂದುಕೊಳ್ಳಬೇಕು." ಇದನ್ನು ಪರಾಂಜಪೆಯವರು ಬಲಪಡಿಸಿದರು. ಜಮುನಾದಾಸ್ ದ್ವಾರಕದಾಸ್‌ರವರು ಅನುಮೋದಿಸಿದರು. ಕಡೆಗೆ ಸಭಿಕರ ವೋಟಿಗಾಗಿ ಹಾಕಲು ಸವರಣ ಪಕ್ಷಕ್ಕೆ ೬೦೦ ಜನರೂ ತಿಲಕರ ಸೂಚನೆಗೆ ೧೫೦೦ ಜನರೂ ವೋಟನ್ನು ಕೊಟ್ಟುದರಿಂದ ತಿಲಕರ ಸೂಚನೆಯೇ ಜಯಗೊಂಡಿತು. ಇದೇ ಕಾಲದಲ್ಲಿ ತಾ|| ೩ ರಲ್ಲಿ ಸಂಘಸಂಸ್ಕರಣ ಸಭೆಯೂ ನಡೆಯಿತು. ದೇವಧರ್‌ರವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಭಾಷಣದಲ್ಲಿ ಜಾತಿಭೇದಗಳು ತಿರಸ್ಕರಿಸಲ್ಪಟ್ಟುವು. ಸ್ತ್ರೀ ಸ್ವಾತಂತ್ರ್ಯ, ನಿಮ್ನಜಾತ್ಯುದ್ಧಾರ, ಪಟೇಲರ ಮಿಶ್ರವಿವಾಹ ಬಿಲ್ಲಿನ ಅನುಮೋದನೆ, ವಿಧವಾಶ್ರಮಸುಸ್ಥಾಪನೆ, ಪ್ರೌಢಾವಿವಾಹ ಮೊದಲಾದವುಗಳಿಗೆ ಸಂಬಂಧಪಟ್ಟ ನಿರ್ಧಾರಗಳಾದುವು.

ವಿದೇಶ ವೃತ್ತಾಂತಗಳು.

ತುರ್ಕಿಯಲ್ಲಿ ಇದುವರೆಗಿದ್ದ ಸಾಲೀ ಪಾಷಾರವರ ಮಂತ್ರಿವರ್ಗದವರೆಲ್ಲಾ ರಾಜೀನಾಮೆ ಕೊಟ್ಟರು. ದಾಮೂದ್ ಫರೀದ್ ಪಾಷಾರವರು ನೂತನ ಮಂತ್ರಿವರ್ಗವನ್ನು ಏರ್ಪಡಿಸಿದ್ದಾರೆ.

ಖಿಲಾಫತ್ ಪ್ರತಿನಿಧಿಗಳು ಸೀಮೆಯಲ್ಲಿ ಮುಖ್ಯಮಂತ್ರಿ ಲಾಯಿಡ್ ಜಾರ್ಜ್ ಮೊದಲಾದವರೊಡನೆಲ್ಲಾ ಸಂಭಾಷಿಸಿ ತಮ್ಮಭಿಪ್ರಾಯಗಳನ್ನೆಲ್ಲಾ ತಿಳಿಸಿದುದಾಯಿತು. ಅವರು ಅಮೇರಿಕಾಕ್ಕೂ ಹೋಗಿಬರುವಂತೆ ಕಾಣುತ್ತದೆ.

ತುರ್ಕಿ ಸಂಧಿ ವಿಷಯದಲ್ಲಿ ಅಮೇರಿಕಾದವರು ಕೊಟ್ಟಿರುವ ಉತ್ತರದಲ್ಲಿ ಹೀಗೆ ತಿಳಿಯಿಸಿದ್ದಾರೆ.——ಕಾನ್‌ಸ್ಟಾಂಟಿನೋಪಲ್ಲಿನ ಹೊರಗಿರುವ ಪೂರ್ವ ಥ್ರೇಸ್‌ದೇಶವನ್ನು ಗ್ರೀಸಿಗೆ ಕೊಟ್ಟುಬಿಡಬೇಕು. ಅಡ್ರಿಯಾನೋಪಲ್, ಕಿರ್ಕ್‌ಕ್ಲೀಸ್ ಪ್ರದೇಶಗಳನ್ನೂ ಆ ಸುತ್ತಣ ರಾಷ್ಟ್ರಭಾಗಗಳನ್ನೂ ಬಲ್ಗೇರಿಯಾದಿಗೆ ಕೊಟ್ಟುಬಿಡಬೇಕು. ಅರ್ಮೀನಿಯನ್ನರ ನ್ಯಾಯವಾದ ಹಕ್ಕುಗಳಿಗೆ ಯಾವ ಅಭ್ಯಂತರವೂ ಒದಗವಕಾಶವಿಲ್ಲದಂತೆ ಆ ದೇಶದ ಎಲ್ಲೆಕಟ್ಟನ್ನು ನಿರ್ಧರಿಸಬೇಕು. ಅದರಲ್ಲೂ ಮುಖ್ಯವಾಗಿ ಅವರು ಸಮುದ್ರಕ್ಕೆ ಬಹಳ ಸಮೀಪದಲ್ಲಿರುವಂತೆ ಮಾಡಬೇಕು. ಟ್ರೆಬಿಜಾಂಡನ್ನು ಅರ್ಮೀನಿಯಾಕ್ಕೆ ಕೊಟ್ಟುಬಿಡಬೇಕು. ಮೆಸಪಟೋಮಿಯಾ, ಅರೇಬಿಯಾ, ಪಾಲಸ್ತೀನು, ಸಿರಿಯಾ ಈ ದೇಶಗಳನ್ನೂ ಉಳಿದ ದ್ವೀಪಗಳನ್ನೂ ಬಲವತ್ತರಜಾತಿಗಳ ಸ್ವಾಧೀನದಲ್ಲಿಡಬೇಕು.

ಜರ್ಮನಿಯಲ್ಲಿ ಡಾಕ್ಟರ್ ಕಾಪ್ ಎಂಬುವವನ ಹಾವಳಿಯನ್ನು ಅಡಗಿಸುವುದಕ್ಕಾಗಿ ಎಬರ್ಟ್ ಪ್ರಭುತ್ವದವರು ಜರ್ಮನ್ ಕೂಲಿಕಾರರನ್ನು ಎತ್ತಿಕಟ್ಟಿ, ಅವರಿಗೆ ಪ್ರಭುತ್ವಪಕ್ಷದ ಸೈನಿಕರ ಸಹಾಯವನ್ನು ಕೊಟ್ಟಿದ್ದರು. ಇದರಿಂದ ಕಾಪಿನ ಪರಾಭವವೇನೋ ಆಯಿತು. ಆದರೆ ಕಡೆಗೆ ಕೂಲಿಕಾರ ಪಕ್ಷದವರೂ ಪ್ರಭುತ್ವಸೈನಿಕರೂ ಒಂದಾಗಿ ಎಬರ್ಟ್‌ಪ್ರಭುತ್ವಕ್ಕೆ ಉಚ್ಚಾಟನೆ ಕೊಟ್ಟಿರುವರು. ಎಬರ್ಟ್ ಮೊದಲಾದವರು ಮಿತ್ರಮಂಡಲಿಯವರ ಬಳಿಗೆ ಹೋಗಿ ದೂರಿಟ್ಟುಕೊಳ್ಳುತ್ತ ಕುಳಿತಿರುವರು. ಜರ್ಮನಿಯಲ್ಲಿ ವಾನ್‌ಮುಲ್ಲರಿನ ಸಾರುಪತ್ಯವು ಈಗ ನಡೆಯುತ್ತಿರುವುದು. ಆದರೆ ಈ ಮಧ್ಯದ ಅವಾಂತರದಲ್ಲಿ ಹಿಂದಣ ಕೈಜರು ಯಾವುದಕ್ಕೂ ಪ್ರವೇಶಿಸುವುದಿಲ್ಲವೆಂದು ತಿರಸ್ಕರಿಸಿಬಿಟ್ಟು ವೈರಾಗ್ಯವನ್ನು ಧರಿಸಿರುವರು. ಮಿತ್ರಮಂಡಲಿಯವರು ಕೈಜರರ ವಿಚಾರಣೆಯನ್ನು ಮಾಡಿಯೇ ತೀರಬೇಕೆಂದಿದ್ದ ಮುಷ್ಕರವನ್ನು ಬಿಟ್ಟುಬಿಟ್ಟಿದ್ದಾರೆ.

"ಜರ್ಮನರು ಸಂಧಿನಿಬಂಧನೆಯಂತೆ ತಟಸ್ಥವಾಗಿರಬೇಕಾಗಿದ್ದ ಪ್ರದೇಶಗಳಿಗೆ ತಮ್ಮ ಸೈನ್ಯವನ್ನು ನುಗ್ಗಿಸಬಾರದು. ಆದರೆ ಅವನ್ನು ಮೀರಿ ತಾಟಸ್ಥಿಕ ಪ್ರದೇಶಗಳಿಗೆ ತಮ್ಮ ಸೈನಿಕರನ್ನು ನುಗ್ಗಿಸುತ್ತಿದ್ದಾರೆ. ಮತ್ತು ಅಲ್ಲಿರುವ ಪ್ರಜೆಗಳನ್ನು ಕ್ರೂರವಾಗಿ ಜರ್ಮನ್ ಸೈನಿಕರು ಹಿಂಸಿಸುತ್ತಿದ್ದಾರೆ. ಇದರಿಂದ ಜರ್ಮನರ ದ್ರೋಹಬುದ್ಧಿಯು ವಿದಿತವಾಗಿರುತ್ತದೆ. ಮುಂದೆ ಬಹಳ ಪ್ರಮಾದವು ಸಂಭವಿಸುವುದು. ಆದುಕಾರಣ ಅವರು ಹಾಗೆ ಪ್ರವೇಶಿಸದಂತೆ ಮಾಡುವುದಕ್ಕೆ ಫ್ರಾನ್ಸ್‌ದೇಶವು ತಕ್ಕ ಪ್ರಯತ್ನವನ್ನು ಮಾಡಿತು. ಬರ್ಲಿನ್ನಿನಲ್ಲಿರುವ ಅಧಿಕಾರಿಗಳು ತಮ್ಮ ವಾಗ್ದಾನದ ಪ್ರಕಾರ ನಡೆದುಕೊಳ್ಳಲಿಲ್ಲ. ಆದುದರಿಂದ ಇನ್ನುಮುಂದೆ ಸಂಭವಿಸುವ ಕದನದ ಬಾಧ್ಯತೆಯನ್ನು ಜರ್ಮನರೇ ವಹಿಸಬೇಕು. ಸಂಧಿನಿಬಂಧನೆಯ ಪ್ರಕಾರ ಫ್ರಾನ್ಸ್ ರಕ್ಷಣೆಗೆ ಯಾವ ಪ್ರಯತ್ನವನ್ನು ಮಾಡಬೇಕೋ ಮಿತ್ರಮಂಡಲಿಯವರು ಏಕೀಭವಿಸಿ ಅದನ್ನು ಮಾಡುವರು" ಎಂದು ಫ್ರಾನ್ಸ್ ಮುಖ್ಯಮಂತ್ರಿಯವರು ಹೇಳುತ್ತಾರೆ. ಇವರು ತಮ್ಮ ಸೈನ್ಯವನ್ನು ಮುಂಬರಿಸಿದ ವಾರ್ತೆ ಬಂದಿದೆ.

ಪತ್ರವ್ಯವಹಾರ.

ಶ್ರೀ ಬಸವೇಶ್ವರ ಜಯಂತಿ.

ಈ ಸಾರೆ ಶ್ರೀ ಬಸವೇಶ್ವರ ಜಯಂತಿಯು ವೈಶಾಖ ಶುದ್ಧ ೪ ಗುರುವಾರ (ತಾ|| ೨೨-೪-೧೯೨೦) ಬಂದಿರುವುದರಿಂದ ಪದ್ಧತಿಯ ಪ್ರಕಾರ ಸಕಲ ವೀರಶೈವ ಮತಾನುಯಾಯಿಗಳೂ ಈ ಮಹೋತ್ಸವವನ್ನು ಆಚರಿಸಿ ಪುಣ್ಯಭಾಗಿಗಳಾಗಬೇಕೆಂದು ಪ್ರಾರ್ಥನೆ.

ವೀರಶೈವ ಹಿತೋಪದೇಶಕ ಸಂಘ,
ದಾವಣಗೆರೆ.

ಹಾನಗಲ್ಲ ತಾ|| ಆಲೂರ್

ವೀರಶೈವ ವಾಚನ ಮಂದಿರದ ೧೪.ನೆ ಧಾರ್ಮಿಕ ಮಹೋತ್ಸವವು ತಾರೀಖು 7-5-20 ನೇ ಇಸವಿ ದಿವಸ ಪ್ರಾರಂಭವಾಗುವದು. ಆಗ ಧಾರ್ಮಿಕವ್ಯಾಖ್ಯಾನಗಳು ಜರಗುವವು. ಪ್ರಯುಕ್ತ ಧರ್ಮಸುಧಾರಣಾಪ್ರಿಯರಾದ ತಾವು ಈ ಮಹೋತ್ಸವ ಸಭಾಸ್ಥಾನವನ್ನಲಂಕರಿಸಿ ಸಹಾನುಭೂತಿಯನ್ನು ವ್ಯಕ್ತಪಡಿಸಿ ಸಮಾಜವೃಂದವನ್ನು ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ.

ಉಪನ್ಯಾಸಕ್ಕಿಟ್ಟ ವಿಷಯಗಳು.—

ಸ್ವಾಭಿಮಾನ, ಆಚರಣೆ, ಸಹಕಾರತ್ವ ಈ ಪ್ರಕಾರ ವಿಷಯಗಳನ್ನಿಟ್ಟಿದೆ. ಪ್ರತಿ ವಿಷಯಕ್ಕೂ ನಾಲ್ಕು ರೂ. ಮೇರೆಗೆ ಇನಾಮು ಕೊಡಲ್ಪಡುವುದು. ತಯಾರಿಸಿ ಕಳುಹಿಸುವವರು ಚಲೋಕಾಗದದ ಮೇಲೆ ತಾ|| ೩೦-೪-೨೦ ನೆ ಇಸವಿಯೊಳಗಾಗಿ ಮಂದಿರದ ಸೆಕ್ರೆಟರಿಯವರ ಕಡೆಗೆ ಕಳುಹಿಸತಕ್ಕದ್ದು.

ಧಾರ್ಮಿಕಮಹೋತ್ಸವ ಕಾರ್ಯದರ್ಶಿ,
ಚೇರ್ಮನ್ ವೀರಶೈವವಾಚನ ಮಂದಿರ.

ಪದವೀಪ್ರದಾನ.

ಶ್ರೀ ಕ್ಷೇತ್ರಕಾಶೀ ವೀರಶೈವ ವಿದ್ಯಾರ್ಥಿಮಂದಿರದಲ್ಲಿದ್ದು ವಿದ್ಯಾಭ್ಯಾಸ ಮಾಡಿ ತರ್ಕಶಾಸ್ತ್ರದ ಉತ್ತಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪಂ|| ವೇ|| ಕಲಿಗಣನಾಥಶಾಸ್ತ್ರೀ ಪಗಡದಿನ್ನಿ ಇವರಿಗೆ ಕಾಶೀ ಗೌರ್ನಮೆಂಟ್ ಸಂಸ್ಕೃತ ಕಾಲೇಜ್, ಟೀಕಮಾಣೀ ಕಾಲೇಜುಗಳ ಸುಪ್ರಸಿದ್ಧ ಪಂಡಿತರೂ, ಕಲ್ಕತ್ತಾ ಗೌರ್ನಮೆಂಟ್ ಕಾಲೇಜದ ಮಹಾಮಹೋಪಾಧ್ಯಾಯ ಪಂಡಿತರೂ ಕೂಡಿ ತಾ|| ೨೫-೩-೨೦ ರಲ್ಲಿ "ತರ್ಕವಾಗೀಶ" ಎಂಬ ಯೋಗ್ಯಪದವಿಯನ್ನು ಕೊಟ್ಟು ತಮ್ಮ ಗುಣಗ್ರಾಹಕತೆಯನ್ನು ವ್ಯಕ್ತಪಡಿಸಿದರು. ಇದಕ್ಕಾಗಿ ವಿದ್ಯಾರ್ಥಿಮಂದಿರದಲ್ಲಿ ಸಭೆಗೂಡಿಸಿ ವಿದ್ಯಾರ್ಥಿಗಳು ಈ ಪಂಡಿತವರ್ಯರಿಗೆ ಕೃತಜ್ಞತೆಯನ್ನು ಪ್ರಕಾಶ ಮಾಡಿ, ಸದರಿ ಶಾಸ್ತ್ರಿಗಳು ಇದರಂತೆ ಮುಂದೆಯೂ ಸನ್ಮಾನಿತರಾಗಿ ನಮ್ಮ ಸಮಾಜವನ್ನು ಅಲಂಕರಿಸಲೆಂದು ಪರಮೇಶ್ವರನನ್ನು ಪ್ರಾರ್ಥಿಸಿದರು.

ವ್ಯವಸ್ಥಾಪಕ ವಿ. ವಿ. ಮಂದಿರ.

ಯೋಗ್ಯತಾ ಪತ್ರಿಕಾ.

ಶ್ರೀ ವಿಶ್ವನಾಥಶ್ಶರಣ್ಯಂ

ಕರ್ನಾಟಕ ಪ್ರದೇಶಾಂತರ್ಗತ ರಾಯಚೂರು ಮಂಡಲಸ್ಥ ಸಿಂಧನೂರೀ ವಾಸ್ತವ್ಯಃ ಪಂಡಿತ ಶ್ರೀ ಪಂಚಾಕ್ಷರಶಾಸ್ತ್ರೀ ಪುತ್ರಃ, ನ್ಯಾಯಶೇಖರೀತ್ಯುಪಾಧಿಭೂಷಿತಸ್ಯ ಶ್ರೀ ಶ್ರೀ ಶಂಕರ ತರ್ಕರತ್ನಮಹಾಶಯಸ್ಯಾಂತೇವಾಸೀ ಪಂಡಿತ ಶ್ರೀ ವಾಮದೇವಶಾಸ್ತ್ರೀ (ಕಲಿಗಣನಾಥಶಾಸ್ತ್ರೀ) ಕಾಶ್ಯಾಂ ಸುಚಿರಾತ್ತರ್ಕಶಾಸ್ತ್ರಮಧೀತ್ಯ ತಸ್ಮಿನ್ ವ್ಯುತ್ಪತ್ತಿವಿಶೇಷಂ ಲಬ್ಧವಾನ್, ಪ್ರಶಂಸನೀಯ ಪ್ರತಿಭೋ ಬಹುಶಃ ಪರಿದೃಶ್ಯ ನ್ಯಾಯಶಾಸ್ತ್ರಾಧ್ಯಾಪನಪಾಟವಶ್ಚೇತ್ಯತೋ ಽಸ್ಮೈ ಸಚ್ಚರಿತ್ರಾಯ ಗುರುಭಕ್ತಾಯ ಚ ವಿದುಷೇ ಪ್ರಸನ್ನತಮೈರಸ್ಮಾಭಿಃ ಪ್ರದೀಯತೇ "ತರ್ಕವಾಗೀಶ" ಇತ್ಯುಪಾಧಿಃ. ಆಶಾಸ್ಮಹೇ ಚ ಸವಿಶುದ್ಧಚರಿತ್ರೇಣ ಅಧ್ಯಾಪನನೈಪುಣ್ಯೇನ ಚ ಸ್ವದೇಶಮಲಂಕರೋತು, ಚಿರಂಜೀವಿತಾದಿತಿ.

ತಾ|| ೨೫-೩-೧೯೨೦.

ಶ್ರೀ ಶ್ರೀಶಂಕರದೇವಶರ್ಮ ತರ್ಕರತ್ನಸ್ಯ। ವಾಮಾಚರಣನ್ಯಾಯಾಚಾರ್ಯಸ್ಯ। ಜೀವನಾಥಮಿಶ್ರಫಣಿಭೂಷಣತರ್ಕವಾಗೀಶಸ್ಯ। ಶ್ರೀಜಯಚಂದ್ರಶರ್ಮ ಭಟ್ಟಸಿದ್ಧಾಂತಭೂಷಣಸ್ಯ। ಮಹಾಮಹೋಪಾಧ್ಯಾಯ ಶ್ರೀಪ್ರಮಥನಾಥತರ್ಕಭೂಷಣಸ್ಯ।

ಸೇಡಂ, ಶ್ರೀ ಶಾಂತವೀರ ವೃಷಭೇಂದ್ರ ಪಾಠಶಾಲಾ.

ನಿಜಾಮ ಇಲಾಖಾ ಪೈಕಿ ಜಿಲ್ಲಾ ಗುಲಬುರ್ಗಾ ತಾಲ್ಲೂಕು ಸೇಡಮ್ಮಿನಲ್ಲಿರುವ ಸಮಸ್ತ ವೀರಶೈವರೂ ತಮ್ಮಲ್ಲಿರುವ ಧರ್ಮಗ್ಲಾನಿಯನ್ನು ತಿಳಿದು "ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿಭೂತಲೇತದಾತದಾವತಾರೋಯಂ ಗಣೇಶಾನಾಮಿತೀರಿತಃ" ಎಂಬುಕ್ತಿಯಂತೆ ಜಗದುದ್ಧಾರಕ್ಕಾಗಿ ಅವತರಿಸಿದ ಪ್ರಭುವಿನಂತಿರುವ ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರಸ್ವಾಮಿಗಳವರಿಗೆ ಬಿನ್ನೈಸಿಕೊಳ್ಳಲು ಧರ್ಮಸುಧಾರಣೆಗೆ ಮೂಲಾಧಾರವಾದ ಸಂಸ್ಕೃತ ಪಾಠಶಾಲೆಯೊಂದು ಈ ಸ್ಥಲದಲ್ಲಿರಬೇಕೆಂದು ಶ್ರೀಗಳು ನಿರೂಪಿಸಿದ ಮೇರೆಗೆ ಇದೇ ಶಕೆ ೧೮೪೨ ನೆ ರೌದ್ರಿನಾಮಸಂವತ್ಸರದ ಚೈತ್ರ ಶುದ್ಧ ದ್ವಿತೀಯಾ ಸೋಮವಾರ ಪ್ರಾತಃಕಾಲ ೧೧ ಗಂಟೆಗೆ ಶ್ರೀಗಳವರ ಮತ್ತು ಈ ಗ್ರಾಮದ ಪ್ರಸಿದ್ಧ ವೃಷಭೇಶ್ವರ ದೇವರ ಈ ಉಭಯರ (ಶಾಂತವೀರ ವೃಷಭೇಂದ್ರಾಭಿಧಾನದಿಂದ) ಸಂಸ್ಕೃತ ಪಾಠಶಾಲಾ ಸ್ಥಾಪಿಸಲ್ಪಟ್ಟು, ಈ ಶಾಲೆಗೆ ಧಾರವಾಡ ಜಿಲ್ಲಾ ಹಾವೇರಿ ತಾಲ್ಲೂಕ ಪೈಕಿ ಹೊಸರಿತ್ತಿ ಪಾಠಶಾಲಾಧ್ಯಾಪಕರಾಗಿದ್ದ ಚೆನ್ನೂರಮಠದ ವೇ|| ಗುದ್ಲೆಪ್ಪಶಾಸ್ತ್ರಿಗಳು ಅಧ್ಯಾಪಕರಾಗಿದ್ದಾರೆ. ಇಲ್ಲಿ ಸಂಸ್ಕೃತ, ಜ್ಯೋತಿಷ, ಪ್ರಾಕೃತ ಮುಂತಾದ ಪಾಠಗಳು ಸಕ್ರಮವಾಗಿ ಜರಗುತ್ತವೆ. ಓದತಕ್ಕ ಪರಸ್ಥಲದ ವಿದ್ಯಾರ್ಥಿಗಳಿಗೆ ಭೋಜನದ ವ್ಯವಸ್ಥಾ ಒಂದೇ ಕಡೆ ಮಾಡಿರುವದಲ್ಲದೆ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಬಟ್ಟೆ ಸಹ ಕೊಡಲ್ಪಡುವವು. ಬರತಕ್ಕವರಿಗೆ ರೈಲ್ ಛಾರ್ಜು ಕೊಡಲ್ಪಡುತ್ತದೆ. ವಿದ್ಯಾರ್ಥಿಗಳು ತಮ್ಮ ಯೋಗ್ಯವರ್ತನದ ಬಗ್ಗೆ ಗ್ರಾಮಸ್ಥರಿಂದಾಗಲಿ ಶಾಲಾಧ್ಯಾಪಕರಿಂದಾಗಲಿ ಸರ್ಟಿಫಿಕೇಟು ತೆಗೆದುಕೊಂಡು ಬರತಕ್ಕದ್ದು. ರಾಜಕೀಯ ವಿದ್ಯಾಭ್ಯಾಸದ ದೆಸೆಯಿಂದ ಇಂಗ್ಲೀಷ್, ಉರ್ದು, ಮರಾಠಿ, ಕನ್ನಡ ಇವುಗಳನ್ನು ಕಲಿಸತಕ್ಕ ಒಂದು ಸ್ಕೂಲು ಸ್ಥಾಪಿಸುವಂತೆ ಏರ್ಪಾಡಾಗಿದೆ. ಈ ಗ್ರಾಮವು ವಾಡಿ ಜಂಕ್ಷನ್ನಿನಿಂದ ಹೈದರಾಬಾದಿಗೆ ಹೋಗುವ ಮಾರ್ಗದಲ್ಲಿ ರೈಲ್ವೆಸ್ಟೇಷನ್ನಿರುವ ಸ್ಥಲವಾಗಿದೆ.

ವ್ಯವಸ್ಥಾಪಕರು
ಸಿದ್ಧಪ್ಪಾ ನಿಲವಂಗಿ, ಬಸವಲಿಂಗಪ್ಪಾ ಬಾಳಿ.

ಷೋಡಶಮಹಾಗಣಪೂಜಾ ಪಟ್ಟಾಧಿಕಾರ ಲಿಂಗಪ್ರತಿಷ್ಠಾ ಪ್ರಾಂತಿಕ ಸಭಾ, ಕೆಳದಿ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕು ಕೆಳದಿ ಸಂಸ್ಥಾನ ಹಿರೇಮಠದಲ್ಲಿ ಇದೇ ಸಂ|| ಚೈತ್ರ ಬ|| ೫ ಲಾಗಾಯಿತು ವೈಶಾಖ ಶು|| ೩ ವರೆಗೆ ನಿತ್ಯಸಾಂದ್ರಪೂಜಾ, ರುದ್ರಾಭಿಷೇಕ, ಗಣಾರಾಧನೆಯೂ ಮತ್ತು ಶು|| ೪ ಯ ಗುರುವಾರ ಶ್ರೀ ಶಿವೈಕ್ಯ ರೇವಣಸಿದ್ಧಸ್ವಾಮಿ ಪಟ್ಟಾಧ್ಯಕ್ಷರವರ ಗದ್ದುಗೆಯ ಮೇಲೆ ಶ್ರೀ ಶಿವಲಿಂಗ ಪ್ರತಿಷ್ಠೆಯೂ ರುದ್ರಾಭಿಷೇಕವೂ ಗಣಾರಾಧನೆಯೂ ೫ ಯ ಶುಕ್ರವಾರ ಸದರಿ ಶ್ರೀಗಳವರ ಉತ್ತರಾಧಿಕಾರಕ್ಕೆ ನಿಯಮಿಸಲ್ಪಟ್ಟ ರೇವಣಸಿದ್ಧ ದೇವರ ಪಟ್ಟಾಧಿಕಾರವೂ, ರುದ್ರಾಭಿಷೇಕವೂ ಗಣಾರಾಧನೆಯೂ ಮಧ್ಯಾಹ್ನ ಸಭಾ ಶಿವಭಜನಾ ಉಪನ್ಯಾಸ ಕೀರ್ತನ ಸಂಗೀತಗಳೂ ೬ ಯ ಶನಿವಾರ ಷೋಡಶ ಮಹಾಗಣಪೂಜಾ, ಏಕಾದಶ ರುದ್ರಾಭಿಷೇಕ ಗಣಾರಾಧನೆಯೂ, ಮಧ್ಯಾಹ್ನ ಸಭಾ ಶಿವಭಜನೆಯೂ ಶ್ರೀ ಶಿವೈಕ್ಯ ರೇವಣಸಿದ್ಧ ಸ್ವಾಮಿಗಳ ಪವಿತ್ರಚರಿತ್ರೆಯನ್ನು ಸವಿಸ್ತಾರವಾಗಿ ಓದಲ್ಪಟ್ಟನಂತರ ಉಪನ್ಯಾಸ ಕೀರ್ತನೆ, ಸಂಗೀತವೂ ಶ್ರೀ ಪಟ್ಟಾಧ್ಯಕ್ಷರ ಪಲ್ಲಕ್ಕಿ ಮಹೋತ್ಸವವೂ ಈರೀತಿ ಕಾರ್ಯಗಳು ನಡೆಯಬೇಕೆಂದು ಸರ್ವಸಮ್ಮತಿಯಿಂದ ಗುರುಹಿರಿಯರು ನಿಶ್ಚಯಿಸಿರುವದರಿಂದ, ಈ ಕಾರ್ಯಕ್ಕೆ ಅನೇಕ ಸ್ಥಳಗಳಿಂದ ಪರಮಪೂಜ್ಯ ನಿರಂಜನವರ್ಯರೂ ಗುರುವರೇಣ್ಯರಾದ ಸ್ಥಿರ ಚರಪಟ್ಟಾಧ್ಯಕ್ಷರೂ ಬಿಜಯಂಗೈಸುವರಾದ್ದರಿಂದ ಸಮಸ್ತ ವೀರಶೈವ ಮಹನೀಯರೂ ಈ ಮಂಗಲಕಾರ್ಯಕ್ಕೆ ತಮ್ಮ ಇಷ್ಟಮಿತ್ರ ಕುಟುಂಬದೊಡನೆ ಬಂದು ಈ ಮಹಾಕಾರ್ಯವನ್ನು ನೆರವೇರಿಸಿ ದಯಮಾಡಿಸಿರುವ ಮಹನೀಯರ ದರ್ಶನಾಶೀರ್ವಾದಗಳಿಗೆ ಪಾತ್ರರಾಗಿ ಈ ಕಾರ್ಯ ಫಲಗಳಿಗೆ ಭಾಗಿಗಳಾಗಬೇಕೆಂದು ಕೋರುವ ತಮ್ಮ (೧) ಕೆರೆಕೋಡಿಮಠದ ಗುರುಲಿಂಗಯ್ಯ (೨) ಮಳಲಗದ್ದೆ ಕೆಂಡದಪ್ಪಗೌಡ (೩) ಆಲ್ಲಿ ಬೂದ್ಯಪ್ಪಗೌಡ (೪) ಸಾಗರಪೇಟೆ ನಂಜಪ್ಪಶೆಟ್ಟಿ (೫) ಕಾನ್ಲೆ ಮರಿಯಪ್ಪಗೌಡ ಮುಂತಾದ ಶಿಷ್ಯಭಕ್ತಮಂಡಲಿಯವರು.

ಈ ಸಭೆಯಲ್ಲಿ ಜರಗತಕ್ಕ ವಿಷಯಗಳು—ಧರ್ಮನಿಷ್ಠೆ, ವಿದ್ಯಾಪ್ರಸಾರ, ಕೈಗಾರಿಕೆ, ವ್ಯವಸಾಯ, ಮಿತವ್ಯಯ, ಸಂಪದಭಿವೃದ್ಧಿಯ ಉಪಾಯಗಳು. ಸೂಚನಾ—(೧) ಶಿವಮೊಗ್ಗಾ ರೈಲ್‌ಸ್ಟೇಷನ್ ಮಾರ್ಗವಾಗಿ ಬರುವವರಿಗೆ ಶಿವಮೊಗ್ಗಾದಿಂದ ಸಾಗರಕ್ಕೆ ಮೋಟಾರ್ ವ ಗಾಡಿಗಳು ಸಿಗುತ್ತವೆ. (2) ಬ್ಯಾಡಗಿ ಸ್ಟೇಷನ್ ಮಾರ್ಗವಾಗಿ ಬರುವವರಿಗೆ ಗಾಡಿಗಳು ದೊರೆಯುತ್ತವೆ. ಶಿರಾಳಕೊಪ್ಪದ ಮಾರ್ಗವಾಗಿ ಬರಬಹುದು. (3) ಸಾಗರದಲ್ಲಿ ತಕ್ಕ ಅನುಕೂಲಗಳು ಕಲ್ಪಿಸಲ್ಪಟ್ಟವೆ. (4) ಪೂರ್ವಿಕರ ರಾಜಧಾನಿಯಾದ ಇಕ್ಕೇರಿ, ಕೆಳದಿ, ವರದಾಮೂಲ ಮುಂತಾದ ನೋಟಕ್ಕೆ ಅರ್ಹವಾದ ಸ್ಥಳಗಳಿವೆ. (5) ಬರುವವರು ಹಾಸಿಗೆ ಕಂಬಳಿ ವಗೈರೆ ತರತಕ್ಕದ್ದು. (6) ಜೋಗ್‌ಫಾಲ್ಸ್ ಇಲ್ಲಿಗೆ 18 ಮೈಲಿ ಇದೆ. ನೋಡಲರ್ಹವಾದ ಸ್ಥಳಗಳು ಹತ್ತಿರವಾಗಿವೆ. (7) ಈ ಕಾರ್ಯಕ್ಕೆ ಬರುವ ವೀರಶೈವ ಶಿವಕೀರ್ತನಕಾರರಿಗೆ ಪ್ರಯಾಣದ ಖರ್ಚು ಕೊಡುವದಲ್ಲದೆ ಸಂಸ್ಥಾನದ ಹೆಸರಿನ ಭಂಗಾರದ ಪದಕವು ಕೊಡಲ್ಪಡುವುದು (8) ಶ್ರೀ ಸ್ವಾಮಿಗಳ ಸ್ಮಾರಕಾರ್ಥವಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ವೀರಶೈವ ವಿದ್ಯಾರ್ಥಿಗಳಲ್ಲಿ ಮೊದಲು ಬಿ. ಎ. ಆದವರಿಗೆ ಮುಂದಿನ ಬಡ್ಡಿ ಸಹಿತ ಕೂಡಿಸಿ 100 ರೂಪಾಯಿ ಬಹುಮಾನವು ಕೊಡಲ್ಪಡುತ್ತದೆ. (9) ಸಭೆಗೆ ಬಂದ ವೀರಶೈವರ ವೈದಿಕರಿಗೂ ಗಣಾಯಿಗಳಿಗೂ ಶಾಸ್ತ್ರಿಗಳಿಗೂ ಇನ್ನೂ ಮುಂತಾದ ವಿದ್ಯಾವಂತರಿಗೂ ಬಹುಮಾನ ದೊರೆಯುವದು. (10) ಈ ಮೇಲ್ಕಂಡ ವಿಷಯಗಳ ಮೇಲೆ ಉಪನ್ಯಾಸ ಮಾಡತಕ್ಕವರು ತಮ್ಮ ಉಪನ್ಯಾಸವನ್ನು ಬರೆದು ಮುಂಚಿತವಾಗಿಯೇ ಈ ಸಂಸ್ಥಾನದ ಏಜಂಟರಾದ ಕೆರೆಕೋಡಿ ಮಠದ ಗುರುಲಿಂಗಯ್ಯನವರ ಕಡೆಗೆ ಕಳುಹಿಸತಕ್ಕದ್ದು. ಆಲೋಚನಾ ಕಮಿಟಿಯಲ್ಲಿ ಪಾಸಾದ ಉಪನ್ಯಾಸಗಳಿಗೆ ಮಾತ್ರ ಸಭೆಯಲ್ಲಿ ಅವಕಾಶ ಕೊಡಲ್ಪಡುವುದು. ಯಾವ ವಿಷಯಕ್ಕಾದರೂ ಮೇಲ್ಕಂಡ ಏಜಂಟರ ಕಡೆಗೇ ಪತ್ರವ್ಯವಹಾರ ಮಾಡತಕ್ಕದ್ದು. (11) ಶಿವೈಕ್ಯರಾದ ಈ ಮಠದ ಪಟ್ಟಾಧ್ಯಕ್ಷರ ಚರಿತ್ರೆಯನ್ನು ಗದ್ಯಪದ್ಯಾತ್ಮಕವಾಗಿ ಬರೆದವರಿಗೆ ಬಹುಮಾನ ಪ್ರಶಸ್ತಿ ಕೊಡಲ್ಪಡುವದು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 25

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಐವತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆತಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರಕ್ತಿ ಜಿಡ್ಡು, ಗುದದ್ವಾರನವೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಸಿದನೆಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋದು, ಮೈಕೊಂಬೀಳೋದು, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಮಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

ಜಾಗ್ರತೆ. **ತರಿಸಿಕೊಳ್ಳಿರಿ.**

ಕಬ್ಬಿಣದ ನೇಗಿಲು.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧು ಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 23

ನಾವು ಎ. ಅಲ್ ಬ್ಯುಕ್ಯುಯರ್ ಕು. ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಖುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
2 3. ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮಚುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
2 3. ಇರುಳಪ್ಪನಬೀದಿ, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
2 ಸಾಹುಕಾರಪೇಟೆ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಅರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ	1 ಕ್ಕೆ	6—8—0.
ಬೆಳ್ಳಿಯ ಸರಪಣಿ ಸಹಿತ	,,	9—8—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
2 ಪೋಸ್ಟ್ ಬಾಕ್ಸ್ ನಂ. 265, ಮದರಾಸು.

ತ್ವರೆಮಾಡಿರಿ **ಸ್ವಲ್ಪವೇ ಪ್ರತಿಗಳು ಉಳಿದಿವೆ.**

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಂಬರಿಗಳು.

೧ ದಿವ್ಯಸುಂದರಿ ಅಥವಾ ದೀರ್ಘಪ್ರಯತ್ನ (ಔದ್ಯೋಗಿಕ)	ಬೆಲೆ ೧॥ ರೂ.
೨ ಸತ್ಯಪ್ರಕಾಶ (ಪೌರಾಣಿಕ)	೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ)	೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ—ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
3 ಆಲೂರ ಪೋ॥ ಆಲೂರ ಹಾನಗಲ್ಲ ಜಿ॥ ಧಾರವಾಡ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಅದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಶಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಣ್ಣಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

೧೯೨೦ನೆಯ ಇಸವಿ ಏಪ್ರಿಲ್ ತಾ॥ ೧೧ ರಿಂದ ೧೯೨೦ನೆಯ ಏಪ್ರಿಲ್ ತಾ॥ ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಚೈತ್ರ ಬಹುಳ ಅಷ್ಟಮಿಯಿಂದ ಚೈತ್ರ ಬಹುಳ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿಷುವ ಮೇಷ
11	ಭಾನು	ಅಷ್ಟ	54-48	ಪೂಷಾ	13.0	30
12	ಸೋಮ	ನವ	58-28	ಉಷಾ	18-29	31
13	ಮಂಗಳ	ದಶ	60	ಶ್ರವ	22-54	1
14	ಬುಧ	ದಶ	0.8	ಧನಿ	26-18	2
15	ಗುರು	ಏಕಾ	1-6	ಶತ	28-18	3
16	ಶುಕ್ರ	ದ್ವಾ-ತ್ರ	0-48 59-10	ಪೂಭಾ	29-7	4
17	ಶನಿ	ಚತು	57-10	ಉಭಾ	28-46	5

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮದಿಗಕರಾಜಮಂಡಲಹಿತೈಷಾ | ಘನಪಥಕೃತಾವತಾರಾ ಸರ್ವಜ್ಞಸ್ತುತ ಮೋಹರಾಜೀಯಾಶ್ ‖
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೀಲಾಂಸುಧೀರಂಗದ | ಸ್ತ್ರೀಮಾಭೀಷ್ಟದಶೀಲ ನಾಕಲಿತ ಸಾದುಗ್ಧಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿತಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಏಪ್ರಿಲ್ ತಾರೀಖು ೧೮ ನೆಯ ಭಾನುವಾರ (ಸಂಚಿಕೆ ೧೬

MYSORE GOVERNMENT ADVERTISEMENTS.

36

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA,
Assistant Superintedent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the imetre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಪ್ರಾಮಾಣಿಕ ಜಂಗೀ ಕಮಿಷನ್ ಏಜನ್ಸಿ

ಈ ವರುಷ ಇಲ್ಲಿ ಬಳೆ (ಹರದ) ಗೋಧಿಯ ಬೆಳೆಯು ಚೆನ್ನಾಗಿ ಇದ್ದು ಮಾಲು ಹೇರಳವಾಗಿ ಬರುವಂತೆ ಅದೆ. ಯೋಗ್ಯ ಕಮಿಷನ್ ತಕ್ಕೊಂಡು ಒಳ್ಳೇ ದಕ್ಷತೆಯಿಂದಲೂ ಪ್ರಾಮಾಣಿಕತನದಿಂದಲೂ ಮಾಲು ರವಾನೆ ಮಾಡಲ್ಪಡುವದು. ಒಂದೇ ತಿಂಗಳಲ್ಲಿ ಮಾಲು ಬರಲಿಕ್ಕೆ ಪ್ರಾರಂಭವಾದೀತು. ಹೆಚ್ಚಿನ ಮಾಹಿತಿ ಪತ್ರ ಮುಖಾಂತರ ಅಥವ ಸಮಕ್ಷಮ.

13 ಬಸಪ್ಪಾ ಸಂಗನಬಸಪ್ಪಾ ಮಿಣಜಗಿ, ಧಾರವಾಡ.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 38

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ.

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಪಳ್ಳಿಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದೆ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 10

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. **ಸೇವಿಸಿ ನೋಡಿರಿ.**

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. **ಇಲ್ಲ.**

ಇಂದ್ರಿಯಸ್ತಂಭನ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ ಬಾಪಟ
29 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ತಮಾ ವ್ಯಕ್ತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
16 ವೈದ್ಯಶಾಲಾ, ಮೈಸೂರು.

ಇನಾಂ! **ಇನಾಂ !!**

ಒಂದಾಣೆ ಪೋಸ್ಟೇಜಿನ ಸ್ಟಾಂಪನ್ನು ಕಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
3 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್‌ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಇಲ್ಲ.**

ಮದನೋದ್ಭವಗುಳಿಗೆ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇವನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 17

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

22

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫)ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ. ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಂಭ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಏಪ್ರಿಲ್ ತಾ|| ೧೮ ನೆಯ ಭಾನುವಾರ.

ಒಕ್ಕಲಿಗರ ಅಭ್ಯುದಯಪ್ರಯತ್ನ.

ನಮ್ಮ ಸಂಸ್ಥಾನದಲ್ಲಿ ಒಕ್ಕಲಿಗ ಜನವರ್ಗದವರು ಸಂಖ್ಯೆಯಲ್ಲಿ ಅಗ್ರಸ್ಥಾನವನ್ನು ವಹಿಸಿದ್ದಾರೆ. ಅದುಕಾರಣ ಅವರ ಹೀನಸ್ಥಿತಿಯೇ ಆಗಲಿ ಉಚ್ಚಸ್ಥಿತಿಯೇ ಆಗಲಿ ಸಂಸ್ಥಾನದ ಹೀನೋಚ್ಚ ಸ್ಥಿತಿಗಳಿಗೆ ಹೆಚ್ಚು ಸಂಬಂಧಪಟ್ಟಿರುತ್ತವೆಂಬುದಕ್ಕೆ ಸಂಶಯವಿಲ್ಲ. ಈಚೆಗೆ ಅವರಲ್ಲಿ ವಿದ್ಯಾವಂತರಾದ ಕೆಲವು ಜನರು ಸ್ವಜನೋದ್ಧಾರಕ್ಕಾಗಿ ಕಂಕಣಕಟ್ಟಿ ನಿಂತು ಅವ್ಯಾಹತ ಪ್ರಯತ್ನಗಳನ್ನು ಮಾಡುತ್ತಿರುವುದರಿಂದ ಆ ಜನವರ್ಗದ ಅಭ್ಯುನ್ನತಿಗೆ ಎಷ್ಟೋ ದಾರಿಯಾಗುತ್ತಿರುವುದನ್ನು ಕಂಡು ನಾವು ಸಂತೋಷಿಸುತ್ತೇವೆ. ಮತ್ತು ಇಂಥ ಪ್ರಯತ್ನಗಳನ್ನು ಇನ್ನೂ ಅಭಿವೃದ್ಧಿಗೊಳಿಸಬೇಕೆಂತಲೂ, ಅವುಗಳೆಲ್ಲಾ ಸ್ವಜನರ ಸಾನುಭೂತಿಯು ಅವರಿಗೆ ದೊರೆದು ಸಂಕಲ್ಪಸಿದ್ಧಿಯಾಗಬೇಕೆಂತಲೂ ಹಾರಯಿಸುತ್ತೇವೆ. ಮ|| ರಾವ್‌ಸಾಹೇಬ್ ಚನ್ನಯ್ಯನವರು ಸರ್ಕಾರದ ಉದ್ಯೋಗದಿಂದ ನಿವೃತ್ತರಾದ ಬಳಿಕ "ಉದ್ಧರೇದಾತ್ಮನಾತ್ಮಾನಂ" ಎಂಬ ವಚನದಂತೆ ತಮ್ಮನ್ನು ತಾವೇ ಉದ್ಧರಿಸಿಕೊಳ್ಳಬೇಕೆಂಬ ತತ್ವವನ್ನು ಅನುಷ್ಠಾನದಲ್ಲಿಟ್ಟುಕೊಂಡು ತಮ್ಮ ಜಾತೀಯರಿಗೆಲ್ಲಾ ಅದನ್ನೇ ಬೋಧಿಸಿ ಹುರಿದುಂಬಿಸುತ್ತಿದ್ದಾರೆ. ಮ|| ಕೆ. ಎಚ್. ರಾಮಯ್ಯನವರು, ಮ|| ಎಂ. ಸುಬ್ಬಯ್ಯನವರು, ಮ|| ಬ್ಯಾರಿಸ್ಟರ್ ವಿಜಯದೇವರವರೇ ಮೊದಲಾದ ವಿದ್ಯಾವಂತರೂ, ಅವರಲ್ಲಿ ಧನಿಕರಾಗಿರುವ ಕೆಲ ಕುಲಾಭಿಮಾನಿಗಳೂ ವಿಶೇಷ ಶ್ರದ್ಧೆಯಿಂದ ಆತ್ಮಜನೋದ್ಧಾರಕಾರ್ಯದಲ್ಲಿ ತತ್ಪರರಾಗಿದ್ದಾರೆ. ಸರ್ಕಾರದ ಉದ್ಯೋಗದಲ್ಲಿರಲಿ, ಅಥವಾ ಅದರಿಂದ ನಿವೃತ್ತರಾಗಿರಲಿ, ವಿದ್ಯಾಸಂಪತ್ತಿಯಿಂದ ಆಧಿಕ್ಯವನ್ನು ಪಡೆದುಕೊಂಡಿರಲಿ, ಅಂಥವರೆಲ್ಲರಿಗೂ ಸ್ವಜನಾಭ್ಯುನ್ನತಿ ಸಾಧನೆಯೊಂದು ಮುಖ್ಯ ಲಕ್ಷ್ಯವಾಗಿದ್ದೇ ತೀರಬೇಕೆಂಬುದನ್ನು ಈ ಒಕ್ಕಲಿಗರ ಮುಂದಾಳುಗಳು ಇತರರಿಗೆಲ್ಲಾ ಮೇಲುಪಂಕ್ತಿ ಹಾಕಿದಂತೆ ಆಚರಿಸುತ್ತಿರುವುದನ್ನು ಕಂಡು ನಾವು ಅವರಿಗೆ ಧನ್ಯವಾದವನ್ನು ಮಾಡುತ್ತೇವೆ. ಸ್ವಾರ್ಥತ್ಯಾಗಮಾಡಿ ಪರಹಿತಬುದ್ಧಿಯಿಂದಲೂ ದೃಢವ್ರತದಿಂದಲೂ ಹೀಗೆ ಮಾಡಲ್ಪಡುತ್ತ ಬರುವ ಕಾರ್ಯಗಳು ಶೀಘ್ರ ಫಲಪ್ರದಗಳಾಗುವುದರಲ್ಲಿ ಸಂಶಯವಿಲ್ಲ.

ಎಲ್ಲಕ್ಕೂ ಮುಖ್ಯಾಧಾರವಾದ ವಿದ್ಯೆಯಲ್ಲಿ ಬಹಳ ಹಿಂದುಬಿದ್ದಿರುವ ತಮ್ಮವರನ್ನು ಅದರಲ್ಲಿ ಮುಂಬರಿಸುವುದಕ್ಕೂ, ಕೃಷಿ, ವ್ಯಾಪಾರ, ಕೈಗಾರಿಕೆಗಳಲ್ಲೂ, ರಾಜಕೀಯ ಸಂಬಂಧದಲ್ಲೂ ತಮ್ಮವರನ್ನು ವ್ಯಾಪಕರನ್ನಾಗಿ ಮಾಡುವುದಕ್ಕೂ ಈ ಮುಂದಾಳುಗಳು ವಿಶೇಷ ಲಕ್ಷ್ಯವನ್ನು ಕೊಟ್ಟಿರುತ್ತಾರೆ. ಇದುವರೆಗೆ ಇವರು ಮಾಡಿದ ಪ್ರಯತ್ನಗಳಲ್ಲಿ ಕೆಲವುಮಟ್ಟಿಗೆ ಆಗಲೇ ಫಲವನ್ನು ಪಡೆದು ಅನುಭವಿಸುವಂತೆ ಮಾಡಿರುತ್ತಾರೆ. ಅವರು ಮೊಟ್ಟಮೊದಲನೆಯದಾಗಿ ಏರ್ಪಡಿಸಿಕೊಂಡ ಸಂಘವೂ, ಸಂಘದ ವೃತ್ತಪತ್ರಿಕೆಯೂ ಆ ಜನರ ಅಭ್ಯುದಯಕ್ಕೆ ವಿಶೇಷ ಸಹಾಯಕವಾಗಿವೆ. ಅವಶ್ಯಕವಾಗಿರುವೆಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನೂ, ವಾಚನಾಲಯಗಳನ್ನೂ, ಪಾಠಶಾಲೆಗಳನ್ನೂ ಸ್ಥಾಪಿಸಿಕೊಳ್ಳುತ್ತಲಿದ್ದಾರೆ. ತಮ್ಮ ಬಡ ವಿದ್ಯಾರ್ಥಿಗಳಿಗೆ ಅನ್ನದಾನ ಧನಸಾಹಾಯ್ಯಾದಿಗಳನ್ನೂ ಪಾರಿತೋಷಕಪ್ರದಾನದಿಂದ ಪ್ರೋತ್ಸಾಹನವನ್ನೂ ಕಲ್ಪಿಸುತ್ತಿದ್ದಾರೆ. ತಾಲ್ಲೂಕುಗಳಲ್ಲಿ ತಮ್ಮ ಜನರ ಸಭೆಗಳನ್ನು ಕೂಡಿಸಿ, ಉತ್ತಮಬೋಧನೆಗಳನ್ನು ಕೊಟ್ಟು ಎಚ್ಚರುಗೊಳಿಸುತ್ತಿದ್ದಾರೆ. ಅಂಥ ಸಭೆಗಳಲ್ಲೆಲ್ಲಾ ಉದ್ದಿಷ್ಟಕಾರ್ಯಸಾಧನೆಗೆ ಅತ್ಯವಶ್ಯಕವಾದ ಧನನಿಧಿಯನ್ನು ಕೂಡಿಸುತ್ತಿದ್ದಾರೆ. ಈ ಉದ್ಬೋಧನೆಯಿಂದ ಅನೇಕ ಮಂದಿ ಒಕ್ಕಲಿಗರು ನವಚೇತನಗೊಂಡು ತಮ್ಮ ಜನರನ್ನು ಮುಂದಕ್ಕೆ ತರಿಸುವ ಕೆಲಸಕ್ಕಿಂತ ಮುಖ್ಯವಾದ ಕಾರ್ಯವು ಮತ್ತಾವುದೂ ಇಲ್ಲವೆಂದು ತಿಳಿದುಕೊಂಡು, ಇದೇ ನಿಜವಾದ ಸತ್ಪಾತ್ರವೆಂದು ಅರಿತು ಶಕ್ತಿವಂಚನೆಯಿಲ್ಲದೆ ಧನಸಾಹಾಯ್ಯ ಮಾಡುವುದಕ್ಕೆ ಮುಂದೆ ಬರುತ್ತಿದ್ದಾರೆ. ಇದರಿಂದ ಅವರಲ್ಲಿ ಅಂತರ್ಗತವಾಗಿದ್ದ ಸ್ವಕುಲಾಭಿಮಾನಜ್ಯೋತಿಯ ಪ್ರಕಾಶವು ಹೊರಬೀಳುವುದಕ್ಕೆ ಆಸ್ಪದವಾಗಿದೆ.

ಕಳೆದ ವಾರ ಹಾಸನ ಡಿಸ್ಟ್ರಿಕ್ಟ್ ಚೆನ್ನರಾಯಪಟ್ಟಣದ ತಾ|| ಹಿಂದಲಹಳ್ಳಿಯಲ್ಲಿ ದಿವಾನ್ ಕಾಂತರಾಜ ಅರಸರವರಿಂದ ನಡೆಯಿಸಲ್ಪಟ್ಟ ನೂತನ ಪಾಠಶಾಲಾ ಪ್ರವೇಶಮಹೋತ್ಸವ ಸಮಾರಂಭವೂ, ಅದೇ ಊರಿನಲ್ಲಿ ರಾ|| ಸಾ|| ಚೆನ್ನಯ್ಯನವರ ಅಧ್ಯಕ್ಷತೆಯಿಂದ ನಡೆದ ತಾಲ್ಲೂಕು ಒಕ್ಕಲಿಗರ ಸಭೆಯ ಕಾರ್ಯವಿಶೇಷಗಳೂ, ಒಕ್ಕಲಿಗರ ಮಂಡಲಿಯಲ್ಲಿ ಉದ್ಭೂತವಾಗಿರುವ ನವಚೇತನದ ಒಂದು ದೃಷ್ಟಾಂತವಾಗಿದ್ದುವು. ಆ ಊರಿನಲ್ಲಿ ಒಕ್ಕಲಿಗರೊಳಗೆ ಧನಿಕರಾಗಿರುವ ಮ|| ಮರಿಯಪ್ಪನವರ ನಂಜಪ್ಪನವರು ೧೧ ಸಾವಿರ ರೂ. ಗಳ ಧನವ್ಯಯದಿಂದ ಹೊಸದಾಗಿ ಒಂದು ಬಾಲಿಕಾ ಪಾಠಶಾಲೆಯನ್ನು ಕಟ್ಟಿಸಿ, ಅದರ ಪ್ರಾರಂಭೋತ್ಸವವನ್ನು ನಮ್ಮ ದಿವಾನರಿಂದ ಮಾಡಿಸಿ, ಅದಕ್ಕೆ ಪ್ರಥಮ ರಾಜಕುಮಾರಿಯವರ ಅಭಿಧಾನವನ್ನು ಎಂದರೆ "ಜಯಲಕ್ಷ್ಮೀವಿಲಾಸ ಬಾಲಿಕಾ ಪಾಠಶಾಲಾ" ಎಂಬ ಹೆಸರನ್ನು ಇಡಲು ಅವರನುಮತಿಯನ್ನು ಪಡೆದು ನೆರವೇರಿಸಿರುವರು. ಈ ಮಹೋತ್ಸವ ನಿರ್ವರ್ತನಕ್ಕೆ ಪ್ರಾರ್ಥಿತರಾದ ದಿವಾನರವರು ಸ್ವತಃ ದಯಮಾಡಿಸಿ ಧರ್ಮಕರ್ತರ ಉದ್ದೇಶವನ್ನು ಶ್ಲಾಘಿಸಿ, ಒಕ್ಕಲಿಗರ ವಿದ್ಯಾಭಿವೃದ್ಧಿಯು ಅವರ ಅಭ್ಯುನ್ನತಿಗೆ ವಿಶೇಷ ಸಾಧಕವಾಗುವುದೆಂಬ ವಿಷಯದಲ್ಲಿ ಉತ್ತೇಜನಕರವಾದ ಉಪದೇಶವನ್ನು ಮಾಡಿ, ಹಿಂದುಳಿದ ಜನವರ್ಗಗಳ ವಿದ್ಯಾಭಿವೃದ್ಧಿ ಮೊದಲಾದುವುಗಳಿಗಾಗಿ ಸರ್ಕಾರದವರು ಮಾಡುತ್ತಿರುವ ಪ್ರಯತ್ನಗಳನ್ನು ನೆನಪಿಗೆ ತಂದುಕೊಟ್ಟು, ಮ|| ರಡ್ಡಿಯವರು ಸಂಸ್ಥಾನದ ವಿದ್ಯಾಪ್ರಸಾರಣೆಗಾಗಿ ಪಡುತ್ತಿರುವ ಸಾಹಸಗಳನ್ನು ವಿವರಿಸಿ, ಅವರ ಮೆಮೋರಾಂಡಮ್ಮನ್ನು ಸರ್ಕಾರದವರು ಪರ್ಯಾಲೋಚಿಸುತ್ತ ಇಷ್ಟರಲ್ಲೇ ವ್ಯವಸ್ಥೆಗೊಳಿಸುವವರಾಗಿದ್ದಾರೆಂಬ ಸಂಗತಿಯನ್ನಪ್ಪಣೆಕೊಡಿಸಿ, ಧೈರ್ಯವಿತ್ತುದಲ್ಲದೆ ಮುಖ್ಯವಾಗಿ ಸರ್ಕಾರದವರು ಎಷ್ಟೇ ಸಹಾಯ ಪ್ರಯತ್ನಗಳನ್ನು ಮಾಡಿದರೂ ನಿಮ್ಮ ಸ್ವಪ್ರಯತ್ನವಿಲ್ಲದಿದ್ದರೆ ನಿಮ್ಮ ಉದ್ಧಾರವು ಸಾಂಗವಾಗಿ ನೆರವೇರುವುದಿಲ್ಲವೆಂಬ ತಾರಕಮಂತ್ರವನ್ನು ಉಪದೇಶಿಸಿರುತ್ತಾರೆ. ಇದನ್ನು ಸಂಸ್ಥಾನದ ಸಕಲ ಜನವರ್ಗಗಳೂ ಸರ್ವದಾ ಹೃದಯ ಫಲಕದ ಮೇಲೆ ಚಿತ್ರಿತಗೊಳಿಸಿಕೊಂಡು ಕೆಲಸ ಮಾಡುವುದು ಅವಶ್ಯಕವಾಗಿರುತ್ತದೆ.

ಇದೇ ಸಮಯದಲ್ಲಿ ನೆರೆದ ಒಕ್ಕಲಿಗರ ಸಭೆಯಲ್ಲಿ ಸಭಾಧ್ಯಕ್ಷರಾಗಿದ್ದ ರಾ|| ಸಾ|| ಚೆನ್ನಯ್ಯನವರೇ ಮೊದಲಾದ ಪ್ರಮುಖರು ಮಾಡಿದ ಹಿತೋಪದೇಶಗಳು ಆ ಜನಗಳಿಗೆಲ್ಲಾ ಜೀವನೌಷಧಗಳಂತಿರುತ್ತವೆ. ಮ|| ರಾಮಯ್ಯನವರ ಪತ್ನಿ ಸೌ|| ರೇವಮ್ಮನವರು ಆ ಕಾಲದ ಸಭೆಯಲ್ಲೂ ಇತರ ಕೆಲವರು ನಾರೀಮಣಿಯರು ತಮ್ಮ ಮಹಿಳಾಸಭೆಯಲ್ಲೂ ಮಾಡಿರುವ ಭಾಷಣಗಳು ಒಕ್ಕಲಿಗರ ಮಂಡಲಿಯಲ್ಲಿ ಸ್ತ್ರೀವಿದ್ಯಾಪ್ರಸಾರವು ಎಷ್ಟುಮಟ್ಟಿಗೆ ಆಗಲೇ ನಡೆದಿರುತ್ತದೆಯೆಂಬುದನ್ನು ನಿದರ್ಶನಪಡಿಸುತ್ತ ಅವರ ನಾರೀಮಂಡಲಿಯಲ್ಲಿ ವಿದ್ಯಾಭಿರುಚಿಯನ್ನು ಹೆಚ್ಚಿಸಲು ವಿಶೇಷ ಸಾಧಕವಾಗಿದ್ದುವು. ಅದೇ ಸಭೆಯಲ್ಲಿ ಸಂಘದ ಧನನಿಧಿಯ ಅಭಿವೃದ್ಧಿಗಾಗಿ ಮಾಡಿದ ಪ್ರಯತ್ನದಲ್ಲಿ ಒಟ್ಟು ೬|| ಸಾವಿರ ರೂ. ಗಳ ವಾಗ್ದಾನವಾಗಿ, ೪೧೯೮ ರೂ. ಗಳು ಆಗಲೇ ನಗದಾಗಿ ಕೊಡಲ್ಪಟ್ಟುವು. ಶ್ರವಣಬೆಳಗೊಳದಿಂದ ಸಭೆಗೆ ಬಂದಿದ್ದ ಜೈನಮತದ ಮ|| ಪದ್ಮರಾಜಯ್ಯನವರೇ ಮೊದಲಾದ ಮೂವರು ೧೦೦-೧೨೫ ರೂ. ಗಳಂತೆ ಧನಸಹಾಯ ಮಾಡಿ ತಮ್ಮ ಪರಹಿತ ಸರ್ವಸಮಾನದೃಷ್ಟಿಗಳನ್ನು ವ್ಯಕ್ತಗೊಳಿಸಿದರು.

ಹೀಗೆಯೇ ಒಕ್ಕಲಿಗ ಮಂಡಲಿಯವರು ಪ್ರತಿ ತಾಲ್ಲೂಕಿನಲ್ಲೂ ಸ್ವಜನರಲ್ಲಿ ಉದ್ಬೋಧನೆಯನ್ನುಂಟುಮಾಡುತ್ತ ಬಂದರೆ ಹತ್ತಿಪ್ಪತ್ತು ವರ್ಷಗಳಲ್ಲಿ ಅವರೊಳಗೆ ವಿದ್ಯಾಪ್ರಸಾರವೂ ಇತರಾಧಿಕ್ಯಗಳೂ ಚೆನ್ನಾಗಿ ವ್ಯಕ್ತವಾಗುತ್ತವೆಂಬುದರಲ್ಲೂ, ಅವ್ಯಾಹತ ಪ್ರಯತ್ನದಿಂದ ಒಂದು ಶತಮಾನ ಕಾಲದಲ್ಲಿ ಅವರು ರಾಜಕೀಯಾಧಿಕಾರಗಳಲ್ಲೂ ಆರ್ಥಿಕವೃತ್ತಿಗಳಲ್ಲೂ ವಿಶೇಷ ವ್ಯಾಪಕತೆಯನ್ನು ಪಡೆದುಕೊಂಡು ಸಂಖ್ಯಾಧಿಕ್ಯದಲ್ಲಿದ್ದ ತಮ್ಮ ಗೌರವವನ್ನು ಇತರ ಗುಣಗಳಿಂದಲೂ ಪಡೆದುಕೊಳ್ಳದೆಹೋಗಲಾರರೆಂದೂ ಹೇಳಬಹುದಾಗಿದೆ.

ಹಿಂದುಳಿದಿರುವ ಇತರ ಜನವರ್ಗಗಳೂ ಆತ್ಮಾಭಿಮಾನಶೂನ್ಯರಾಗಿ ಪರರದಾಸ್ಯದಲ್ಲಿ ಬಿದ್ದು ಅನಾಮಧೇಯರಾಗಿ ಬಾಳುತ್ತಿರುವುದಕ್ಕಿಂತಲೂ ಈ ಒಕ್ಕಲಿಗ ಮಂಡಲಿಯವರ ಕಾರ್ಯಶೂರತೆಯನ್ನು ನೋಡಿದಮೇಲಾದರೂ ತಂತಮ್ಮವರ ಉದ್ಧಾರಕ್ಕೆ ಬೇಕಾದ ಪ್ರಯತ್ನಗಳನ್ನು ಏಕೆ ಮಾಡಿಕೊಳ್ಳಬಾರದು? ಹಾಗೆ ಎಚ್ಚತ್ತು ಪ್ರಯತ್ನಪಡುವವರ ಆತುರವನ್ನು ಕಣ್ದುಂಬ ನೋಡಿ ಸಾಧ್ಯವಾದ ಸಾಹಾಯ್ಯಗಳನ್ನೆಲ್ಲಾ ಕೊಡಲು ನಮ್ಮ ಮಹಾಪ್ರಭುಗಳೂ ಅವರ ಸರ್ಕಾರವೂ ಕೈಚಾಚಿಕೊಂಡು ಕುಳಿತಿರುವಾಗ ಈ ಸಮಯವನ್ನು ವ್ಯರ್ಥವಾಗಿ ಕಳೆದುಕೊಳ್ಳಬಹುದೆ?

ಯೂರೋಪಿನಲ್ಲಿ ಮತ್ತೊಂದು ಚಕಮಕಿ.

ಗಣಿಗಳು ಹೆಚ್ಚಾಗಿರುವ ರೈನ್ ನದಿಯ ಬಳಿಯ ರುಹರ್ ಪ್ರಾಂತದಲ್ಲಿ ಈಗಣ ಜರ್ಮನ್ ಪ್ರಭುತ್ವಕ್ಕೆ ವಿರುದ್ಧವಾಗಿ ವಿಪ್ಲವವನ್ನುಂಟುಮಾಡುತ್ತಲಿರುವ ತಮ್ಮವರ ಹಾವಳಿಯನ್ನು ಅಡಗಿಸುವುದಕ್ಕಾಗಿ ಕೆಲವು ಸೈನ್ಯಗಳನ್ನು ಕಳುಹಿಸಲಿಕ್ಕೆ ಜರ್ಮನ್ ಪ್ರಭುತ್ವದವರು ಸಂಕಲ್ಪಿಸಿ, ಹಾಗೆ ಕಳುಹಿಸುವುದು ಸಂಧಿನಿಬಂಧನೆಗಳಿಗೆ ವಿರುದ್ಧವಾಗಿದ್ದುದರಿಂದ, ಕಳುಹಿಸಲೇಬೇಕಾಗಿ ಬಂದಿರುವ ಆವಶ್ಯಕತೆಯನ್ನು ಮಿತ್ರಮಂಡಲಿಯವರಿಗೆ ತಿಳಿಯಿಸಿದರು. ತಾವೇ ಅಲ್ಲಿಯ ವಿಪ್ಲವವನ್ನಡಗಿಸಬಲ್ಲೆವೆಂದೂ, ಒಂದುವೇಳೆ ಜರ್ಮನ್ ಸೈನ್ಯವು ಹೆಚ್ಚಾಗಿ ಅಲ್ಲಿಗೆ ಬಂದರೆ ತಮ್ಮ ಸೈನ್ಯಗಳನ್ನು ಹೆಚ್ಚಿಗೆ ಅಲ್ಲಿಗೆ ಕಳುಹಿಸಿ ಅಲ್ಲಿಯ ಕೆಲ ಪಟ್ಟಣಗಳನ್ನು ಮುಂದಾಗಿ ವಶಪಡಿಸಿಕೊಂಡಿರಬೇಕಾಗುವುದೆಂದೂ, ಮೊದಲೇ ನಮ್ಮ ಸೈನ್ಯವು ಅಲ್ಲಿಗೆ ಹೋಗಿರಬೇಕೆಂದೂ, ಮಿತ್ರಮಂಡಲಿಯವರ ಕಡೆಯ ಫ್ರೆಂಚರು ಉತ್ತರ ಕೊಟ್ಟರು. ಇದು ಸೇರುವುದರೊಳಗಾಗಿ ಜರ್ಮನರು ಸೈನ್ಯವನ್ನು ಆ ಪ್ರಾಂತಕ್ಕೆ ನುಗ್ಗಿಸಿದರು. ಅಷ್ಟರಲ್ಲಿ ಫ್ರೆಂಚರೂ ಕೂಡ ತಮ್ಮ ಸೈನ್ಯಗಳನ್ನು ಆ ಪ್ರಾಂತಕ್ಕೆ ಸಾಗಿಸಿ ಫ್ರಾಂಕ್‌ಫೋರ್ಟ್ ಮೊದಲಾದ ಪಟ್ಟಣಗಳನ್ನು ಆಕ್ರಮಿಸಿಕೊಂಡರು. ಇದರ ಮೇಲೆ ಜರ್ಮನ್ ಪ್ರಭುತ್ವದವರು ಫ್ರೆಂಚರ ಪ್ರವರ್ತನವನ್ನು ಅನ್ಯಾಯವೆಂದು ದೂರಿದುದಲ್ಲದೆ ತಾವು ರುಹರ್ ಪ್ರಾಂತ್ಯಕ್ಕೆ ಕೂಡಲೇ ಸೈನ್ಯವನ್ನು ಕಳುಹಿಸಿಕೊಡದಿದ್ದರೆ ತಮ್ಮ ಪ್ರಜಾಪ್ರಭುತ್ವವೇ ನಿರ್ಮೂಲವಾಗುವ ಸಂಭವವಿದ್ದಿತೆಂತಲೂ, ಅದಕ್ಕಾಗಿ ಕಳುಹಿಸಬೇಕಾಯಿತೇ ಹೊರತು ಮತ್ತಾವ ದುರುದ್ದೇಶವೂ ತಮಗಿರಲಿಲ್ಲವೆಂತಲೂ ಒಂದು ಲೇಖನವನ್ನು ಫ್ರಾನ್ಸಿಗೆ ಬರೆದರು. ಅದಕ್ಕೆ ಫ್ರೆಂಚರು ಒಂದು ಉತ್ತರಪತ್ರವನ್ನು ಬರೆದು ತಾವು ಮಾಡಿದ ಕೆಲಸವು ಅವಶ್ಯಕವೂ ನ್ಯಾಯವೂ ಆಗಿರುವುದೆಂದೂ, ಆತ್ಮರಕ್ಷಣೆಗಾಗಿ ಹಾಗೆ ಮಾಡಬೇಕಾಯಿತೆಂದೂ, ಮಿತ್ರಮಂಡಲಿಯವರೆಲ್ಲರ ಅನುಮತಿ ಪಡೆದೇ ಹಾಗೆ ಮಾಡಿದೆವೆಂದೂ ನಮ್ಮ ಅನುಮತಿಯನ್ನು ಪಡೆಯುವುದಕ್ಕೆ ಮುಂಚೆಯೇ ನೀವು ರುಹರ್ ಪ್ರಾಂತ್ಯಕ್ಕೆ ಸೈನ್ಯವನ್ನು ನುಗ್ಗಿಸಿರುವುದು ತಪ್ಪೆಂದೂ, ಸಂಧಿಯಲ್ಲಿ ಕೂಡ ಅನೇಕ ನಿಬಂಧನೆಗಳನ್ನು ನೀವು ಇದುವರೆಗೇ ಮೀರಿರುತ್ತೀರೆಂದೂ, ನೀವು ಈ ತಾಟಸ್ಥ್ಯ ಪ್ರದೇಶವನ್ನು ಬಿಟ್ಟು ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡರೆ ಕೂಡಲೇ ನಮ್ಮ ಸೈನ್ಯವನ್ನೂ ಹಿಂದಕ್ಕೆ ಕರೆಯಿಸಿಕೊಳ್ಳಲು ಸಿದ್ಧರಾಗಿದ್ದೇವೆಂದೂ, ಜರ್ಮನಿಯೊಡನೆ ನಾವು ಮೊದಲಿನಂತೆ ವ್ಯಾಪಾರಾದಿ ಸಂಬಂಧಗಳನ್ನು ನಡೆಯಿಸಲು ಇಚ್ಛಪಡುತ್ತೇವೆಂದೂ ತಿಳಿಯಿಸಿದರು. ಇತ್ತ ಮಿತ್ರಮಂಡಲಿಯವರಲ್ಲಿ ಇತರರೆಲ್ಲರ ಅನುಮತಿಯನ್ನು ಪಡೆಯದೆ ಫ್ರೆಂಚ್ ಪ್ರಭುತ್ವದವರೊಬ್ಬರೇ ತಮ್ಮ ಸೈನ್ಯಗಳನ್ನು ನುಗ್ಗಿಸಿದುದಕ್ಕಾಗಿ ಇತರರೆಲ್ಲಾ ಅಸಮಾಧಾನಪಟ್ಟು ಆ ಬಾಧ್ಯತೆಯನ್ನು ಫ್ರೆಂಚರದೇ ಎಂದು ಹೇಳಿದರು. ಮತ್ತು ಏಪ್ರಿಲ್ ತಾ|| ೧೦ ರೊಳಗೆ ನಿಮ್ಮ ಸೈನ್ಯವನ್ನೆಲ್ಲಾ ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ಜರ್ಮನರಿಗೆ ತಿಳಿಯಿಸಿದರು. ಬರುವ ಮೈ ತಾ|| ೧೦ ರ ವರೆಗೂ ಅಲ್ಲಿರುವುದಕ್ಕೆ ಅನುಮತಿಸಬೇಕೆಂದು ಜರ್ಮನರು ಮಿತ್ರಮಂಡಲಿಯವರನ್ನು ಕೇಳಿಕೊಂಡರು. ಈ ಮಧ್ಯದಲ್ಲಿ ಹೊಸದಾಗಿ ನುಗ್ಗಿದ ಫ್ರೆಂಚ್ ಸೈನ್ಯಕ್ಕೂ ಫ್ರಾಂಕ್‌ಫರ್ಟ್ ಪಟ್ಟಣದ ಜರ್ಮನ್ ಪ್ರಜೆಗಳಿಗೂ ಹೊಡೆದಾಟ ಬಡಿದಾಟಗಳಾಗಿ ಕೆಲವರು ಸತ್ತರು. ಕೋಲಾಹಲಗಳು ಸರಸರ ಹೆಚ್ಚಾಗಿ ಕೊನೆಗೆ ಶಾಂತವಾದಂತೆ ವರ್ತಮಾನಗಳು ಬಂದಿವೆ. ಅಮೇರಿಕಾ ಇಂಗ್ಲೆಂಡು ಮೊದಲಾದ ಮಿತ್ರಮಂಡಲಿಯವರು ಜರ್ಮನಿಗೆ ಬರೆದಂತೆ ಫ್ರಾನ್ಸಿಗೂ ಒಂದು ಪತ್ರವನ್ನು ಬರೆದು ನಿಮ್ಮ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ತಿಳಿಯಿಸಿದರು. ಜರ್ಮನರು ೨ ದಿನಗಳೊಳಗೆ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಸಿದ್ಧರಾಗಿದ್ದೇವೆಂದು ತಿಳಿಯಿಸಿದರು. ಮತ್ತು ಈಗಣ ನಡತೆಯಿಂದ ಇಂಗ್ಲೆಂಡಿನ ಮತ್ತು ಫ್ರಾನ್ಸಿನ ಮೈತ್ರಿಗೆ ಕೊರತೆಯೇನೂ ಬಂದಿಲ್ಲವೆಂದೂ, ಸ್ವಲ್ಪ ಅಭಿಪ್ರಾಯಭೇದವೇ ಹೊರತು ಮತ್ತೆ ಬೇರೆಯಿಲ್ಲವೆಂದೂ, ಪ್ರಪಂಚಶಾಂತಿಗೆ ಫ್ರಾನ್ಸ್ ಬ್ರಿಟನ್ನುಗಳ ಮೈತ್ರಿಯ ಒಡಂಬಡಿಕೆಯು ಅತ್ಯವಶ್ಯಕವೆಂದೂ, ಸೈನಿಕ ವಿಷಯದಲ್ಲಿ ಮಿತ್ರಮಂಡಲಿಯವರೊಳಗೆ ಒಂದು ದೇಶದವರು ಇತರರ ಅನುಮತಿಯನ್ನು ಪಡೆಯದೆಯೇ ಒಂದು ಕೆಲಸವನ್ನು ಮಾಡಿದರೆ ಆ ಬಾಧ್ಯತೆಯನ್ನು ಆ ಒಂದು ದೇಶ ಮಾತ್ರವೇ ಹೊರಬೇಕೆಂಬ ಅಂಶವನ್ನು ಸ್ಪಷ್ಟವಾಗಿ ಈ ಪ್ರಕಟನದಿಂದ ತಿಳಿಯಪಡಿಸಿರುವೆವೆಂದೂ, ತಟಸ್ಥಪ್ರದೇಶದಲ್ಲಿ ಅಶಾಂತಿ ಹುಟ್ಟಿದ್ದರೆ ಅದನ್ನು ಮಿತ್ರಮಂಡಲಿಯವರೆಲ್ಲರೂ ಅಥವಾ ಜರ್ಮನರು ನಿವಾರಿಸಬೇಕೆಂದೂ, ಈಗ ಆ ತಾಟಸ್ಥ್ಯ ಪ್ರದೇಶದಲ್ಲಿ ಪೋಲೀಸರಿಂದ ಶಾಂತಿಯನ್ನು ರಕ್ಷಿಸಬೇಕೇ ಹೊರತು ಯುದ್ಧ ಮಾಡಬೇಕಾದ ಅವಶ್ಯಕತೆಯಿಲ್ಲವೆಂಬುದು ನಮ್ಮ ಉದ್ದೇಶವೆಂದೂ, ನಿಯಮಿತಕಾಲದೊಳಗೆ ಜರ್ಮನರು ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳದಿದ್ದರೆ ಹಾಗೆ ಕರೆಯಿಸಿಕೊಳ್ಳುವಂತೆ ಮಾಡಲು ತಕ್ಕ ಕೆಲಸವನ್ನು ಕೈಗೊಳ್ಳಲಿಕ್ಕೆ ಗ್ರೇಟ್‌ಬ್ರಿಟನ್ನು ಸಿದ್ಧವಾಗಿರುವುದೆಂದೂ ಆಂಗ್ಲಪ್ರಭುತ್ವದವರು ಪ್ರಕಟಪಡಿಸಿದರು. ಮತ್ತು ರೂಹರ್ ಪ್ರಾಂತಕ್ಕೆ ಮಿತ್ರಮಂಡಲಿಯವರೆಲ್ಲಾ ಸೈನ್ಯವನ್ನು ಕಳುಹಿಸಬೇಕೆಂದು ನೀವು ಕೋರಿದಿರಿ. ಅದಕ್ಕೆ ನಾವುಗಳು ಇಷ್ಟಪಡಲಿಲ್ಲ. ಆದರ ಮೇಲೆ ನೀವೇ ಸ್ವತಂತ್ರಿಸಿ ಸೈನ್ಯವನ್ನು ಕಳುಹಿಸಿದ್ದೀರಿ. ಆದರೆ ನೀವು ಕೊಟ್ಟಿರುವ ಸಮಾಧಾನವು ನೀವು ಮಾಡಿದ ಕೆಲಸವನ್ನು ಸಮರ್ಥನ ಮಾಡಿರುತ್ತದೆ. ಆದರೆ ಎಲ್ಲರ ಅಭಿಪ್ರಾಯವೂ ಏಕವಾದಮೇಲೆ ಕಾರ್ಯವನ್ನು ಮಾಡುತ್ತಲಿದ್ದರೇನೆಯೇ ಮೈತ್ರಿಯು ಫಲೋನ್ಮುಖವಾಗಿ ವೃದ್ಧಿಗೊಳ್ಳುವುದು ಎಂದು ಫ್ರೆಂಚರಿಗೆ ಉತ್ತರವನ್ನು ಬರೆದರು. ಫ್ರೆಂಚರ ಕಾರ್ಯವನ್ನು ಇಂಗ್ಲೀಷರು ಆಕ್ಷೇಪಿಸಿ ಬರೆದುದಕ್ಕೆ ಜರ್ಮನ್ ಪತ್ರಿಕೆಗಳು ಸಂತೋಷಿಸಿದುವು. ಫ್ರಾನ್ಸು ಬ್ರಿಟನ್ನಿಗೆ ಉತ್ತರ ಕೊಟ್ಟುದರಲ್ಲಿ—ಇದರಿಂದ ನಮ್ಮ ನಿಮ್ಮ ಮೈತ್ರಿಗೆ ಯಾವ ಭಂಗವೂ ಬರುವುದಿಲ್ಲವೆಂದೂ, ನಮ್ಮ ವಿಧಾನವನ್ನು ಆಗಾಗ ಮಿತ್ರಮಂಡಲಿಯವರಿಗೆಲ್ಲಾ ತಿಳಿಯಿಸುತ್ತಲೇ ಬಂದಿರುವೆವೆಂದೂ, ಮತ್ತೆ ಕೆಲವು ಜರ್ಮನ್ ಸೈನ್ಯಗಳು ರೂಹರಿಗೆ ನುಗ್ಗುವುದರಲ್ಲಿದ್ದುದನ್ನು ನಾವು ತಿಳಿದು ಅದನ್ನು ನಿರೋಧಿಸುವುದಕ್ಕಾಗಿ ಮಿತ್ರಮಂಡಲಿಗೆಲ್ಲಾ ನಾವು ತಿಳಿಯಿಸಿದೆವೆಂದೂ, ಸಂಧಿನಿಬಂಧನೆಗಳಲ್ಲಿ ಅತ್ಯಂತ ಮುಖ್ಯವಾದ ಒಂದು ನಿಬಂಧನೆಯನ್ನು ಜರ್ಮನರು ಅತಿಕ್ರಮಿಸದಂತೆ ಮಾಡಲು ಯತ್ನಿಸಿದುದರಿಂದಲೇ ಇವೆಲ್ಲಾ ಸಂಭವಿಸಿದುವೆಂದೂ, ರೂಹರ್ ಪ್ರಾಂತಕ್ಕೆ ನೂತನ ಸೈನ್ಯವನ್ನು ತಾವು ಸಾಗಿಸುವುದಕ್ಕೆ ಮಿತ್ರಮಂಡಲಿಯ ಅನುಜ್ಞೆಯನ್ನು ಪಡೆಯದಿದ್ದರೆ ಫ್ರಾನ್ಸು ನಷ್ಟಪರಿಹಾರವನ್ನು ಕೋರದೆ ಬಿಡುವುದಿಲ್ಲವೆಂಬುದನ್ನು ಜರ್ಮನರೇ ತಿಳಿದುಕೊಂಡಿರುವರೆಂದೂ, ಸಂಧಿ ನಿಬಂಧನೆಗಳಲ್ಲಿ ಎಷ್ಟನ್ನೋ ಜರ್ಮನರು ಇದುವರೆಗೇ ಮೀರಿರುವರೆಂದೂ, ಹೀಗಿರುವಾಗ ರೂಹರ್ ಪ್ರಾಂತದ ಸೈನ್ಯವನ್ನು ಕೂಡಲೇ ಹಿಂದಿರುಗಿಸಿಕೊಳ್ಳುವೆವೆಂದು ಅವರಾಡುವ ಮಾತನ್ನು ಹೇಗೆ ನಂಬಬಹುದೆಂದೂ, ಈ ಜರ್ಮನಿಯ ತಪ್ಪಿತಗಳಿಂದ ಉಂಟಾಗುವ ಉಪದ್ರವಗಳನ್ನೆಲ್ಲಾ ನೀವು ಪರ್ಯಾಲೋಚಿಸದೆ ಜರ್ಮನರ ಮೇಲೆ ನೀವು ದಾಕ್ಷಿಣ್ಯವನ್ನು ತೋರಿಸಬಹುದೆ? ಎಂದೂ, ಜರ್ಮನರ ಸಂಧಿನಿಬಂಧನೆಗಳೆಲ್ಲಾ ವ್ಯವಹಾರಕ್ಕೆ ಬರುವಂತೆ ಮಾಡುವುದಕ್ಕೆ ಮಿತ್ರಮಂಡಲೀ ದೇಶಗಳೆಲ್ಲವೂ ಕೂಡಿ ಕೆಲಸ ಮಾಡುತ್ತಿರಬೇಕಾದುದು ಅವಶ್ಯಕವೆಂಬ ಸಂಗತಿಯು ಬ್ರಿಟನ್ನಿಗೆ ಎಷ್ಟು ಚೆನ್ನಾಗಿ ಗೊತ್ತಿರುವುದೋ ಫ್ರಾನ್ಸಿಗೂ ಹಾಗೇ ತಿಳಿದಿರುವುದೆಂದೂ, ರಷ್ಯಾ, ಬಾಲ್ಕನ್, ಚಿಕ್ಕ ಏಷ್ಯ, ತುರ್ಕಿ ಮೊದಲಾದ ಕಡೆಯ ಮಹಾ ಸಮಸ್ಯೆಗಳನ್ನೆಲ್ಲಾ ಪರಿಷ್ಕರಿಸಲು ಫ್ರಾನ್ಸ್ ಬ್ರಿಟನ್ನುಗಳ ಸ್ನೇಹವು ಅತ್ಯಾವಶ್ಯಕವೆಂದು ಕೂಡ ಫ್ರಾನ್ಸು ತಿಳಿದಿರುವುದೆಂದೂ, ಇದನ್ನೆಲ್ಲಾ ಆಲೋಚಿಸಿ ಅಂತರ್ಮಿತ್ರ ಸಮಸ್ಯೆಗಳಲ್ಲಾವುದನ್ನಾದರೂ ಪರಿಷ್ಕರಿಸಬೇಕಾಗಿ ಬಂದಾಗ ಎಲ್ಲರ ಸಮ್ಮತಿಯನ್ನೂ ಕೂಡ ಪಡೆದುಕೊಳ್ಳಲು ಫ್ರಾನ್ಸು ಸಿದ್ಧವಾಗಿರುವುದೆಂದೂ ತಿಳಿಯಪಡಿಸಿದುವು. ಇದರ ಮೇಲೆ ಇಂಗ್ಲೀಷರು ಮತ್ತೊಂದು ಪತ್ರವನ್ನು ಫ್ರಾನ್ಸಿಗೆ ಬರೆದು—ಜರ್ಮನ್ ಸೈನ್ಯವನ್ನು ನಿರಾಯುಧಗೊಳಿಸುವುದು, ನಷ್ಟ ಪರಿಹಾರವನ್ನು ತೆಗೆದುಕೊಳ್ಳುವುದು ಇತ್ಯಾದಿ ವಿಷಯಗಳಲ್ಲೆಲ್ಲಾ ಇಂಗ್ಲೀಷರು ಉಳಿದ ಮಿತ್ರಮಂಡಲಿಯವರೊಡನೆ ಕೂಡಿಯೇ ಕೆಲಸ ಮಾಡುವರೆಂದೂ, ಈಗಣ ವಿಷಯವು ಅದಲ್ಲವೆಂದೂ, ಸಂಧಿನಿಬಂಧನೆಯನ್ನು ಜರ್ಮನರು ನಡೆಯಿಸದೆ ಹೋಗಿರುವುದರಿಂದ ಇದು ಉಂಟಾಗಲಿಲ್ಲವೆಂದೂ, ರೂಹರಿನಲ್ಲಿ ಶಾಂತಿಸ್ಥಾಪನೆ ಮಾಡುವುದಕ್ಕೆ ಜರ್ಮನರಿಗೆ ಅವಕಾಶವನ್ನು ಸ್ವಲ್ಪಕಾಲದವರೆಗೆ ಕೊಟ್ಟು ಬಳಿಕ ಅವರ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವಂತೆ ಮಾಡಿ, ತದನಂತರ ಆ ಪ್ರಾಂತವನ್ನು ತಾಟಸ್ಥ್ಯವನ್ನಾಗಿ ಮಾಡಿಸಬೇಕೆಂಬುದೇ ನಮ್ಮುದ್ದೇಶವೆಂದೂ ಹೇಳಿ, ಇದುವರೆಗೆ ಮಾಡಿದಂತೆ ಮುಂದೆ ಫ್ರಾನ್ಸು ನಡೆಯುವಾರದೆಂದು ಎಚ್ಚರಿಕೆ ಕೊಟ್ಟು ಉಪಾಯದಿಂದ ಸದ್ಯದ ಪ್ರಸಕ್ತಿಯನ್ನು ಪರಸ್ಪರ ಚಾರಿಸಿರುವರು. ಬೆಲ್ಜಿಯಮ್ ಮಂತ್ರಿವರ್ಗದವರು ತಮ್ಮ ಪ್ರಭುವಿನ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಫ್ರಾನ್ಸಿನಲ್ಲಿ ತಮ್ಮ ಸ್ನೇಹವು ದೃಢವಾಗಿರುವುದೆಂದೂ, ಮಿತ್ರಮಂಡಲೀ ಏಕಮತ್ಯವನ್ನು ದೃಢಪಡಿಸುವುದಕ್ಕೂ ಫ್ರಾನ್ಸಿನ ಸಹಾಯಾರ್ಥವಾಗಿ ರೂಹರ್ ಪ್ರಾಂತಕ್ಕೆ ಒಂದು ಸೈನ್ಯವನ್ನು ಕಳುಹಿಸುವುದಕ್ಕೂ ನಿರ್ಧಾರವನ್ನು ಮಾಡಿದರು. ಇದರ ಮೇಲೆ ಸದ್ಯದ ಪರಿಸ್ಥಿತಿಯು ವಿಕೋಪಕ್ಕೆ ಬಾರದೆ ಶಾಂತವಾಗುತ್ತದೆಂದು ತೋರುತ್ತಲಿದೆ.

ಒಳದೇಶ ವೃತ್ತಾಂತಗಳು.

ಮದರಾಸಿನ ಪಿ. ಎ. ಎಸ್. ಪಾಣಿ ಕಂಪೆನಿಯವರ ಕ್ಯಾಟಲಾಗನ್ನು ಈ ಸಂಚಿಕೆಯ ಸಂಗಡ ಹಂಚಿದ್ದೇವೆ. ವಾಚಕರು ಅದನ್ನು ಗಮನಿಸಬೇಕು.

ಕಳೆದ ಭಾನುವಾರ-ಸೋಮವಾರಗಳಲ್ಲಿ ರಾಜಧಾನಿಯಲ್ಲಿ ಉತ್ತಮವಾದ ೨ ಹದ ಮಳೆಯಾದುವು. ಡಿಸ್ಟ್ರಿಕ್ಟಿನ ಹಲವು ಕಡೆ ಮಳೆಯಾಗಿರುವ ವರ್ತಮಾನಗಳು ಬಂದಿವೆ.

ಗ್ರ್ಯಾಂಟ್-ಇನ್-ಏಡ್ ಸ್ಕೂಲುಗಳಿಗೆ ಬೇಕಾದ ಗಡಿಯಾರಗಳನ್ನು ಒದಗಿಸಿಕೊಡುವ ಬಿಡುವ ಅಧಿಕಾರವನ್ನು ವಿದ್ಯಾಭ್ಯಾಸ ಶಾಖಾಧ್ಯಕ್ಷರಿಗೇ ಸರ್ಕಾರದವರು ವಹಿಸಿಕೊಟ್ಟಿರುತ್ತಾರೆ.

ರಾಜಧಾನಿಗೆ ದಯಮಾಡಿಸಿದ್ದ ದಿವಾನರವರು ೪ ದಿನಗಳ ಕಾಲ ಇಲ್ಲಿದ್ದು ಬಳಿಕ ತಾ|| ೧೪ ರಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಇಷ್ಟರಲ್ಲೇ ನೀಲಗಿರಿಗೆ ತೆರಳುವವರಾಗಿದ್ದಾರೆ.

ಅಮಲ್ದಾರರುಗಳಾದ ಮೆ|| ಅಬ್ದುಲ್ಲಾ ಷರೀಫ್‌ರವರು ಬೌರಿಂಗ್‌ಪೇಟೆಯಿಂದ ಮೈಸೂರಿಗೂ, ಮಿ|| ಎಚ್. ಡಾನೆಯವರು ಕೋಲಾರದಿಂದ ಬೌರಿಂಗ್‌ಪೇಟೆಗೂ, ಡೆ|| ಕಮಿಷನರ ಆಫೀಸಿನ ಮ|| ನಾರಾಯಣರಾಯರು ಕೋಲಾರದ ಅಮಲ್ದಾರಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಾವೇರೀನದಿಗೆ ಸೇತುವನ್ನು ಬನ್ನೂರಿನ ಬಳಿಯಲ್ಲಿ ಕಟ್ಟಬೇಕೋ ಅಥವಾ ಸೋಸಲೆಯ ಬಳಿಯಲ್ಲಿ ಕಟ್ಟಬೇಕೋ ಎಂಬ ವಿಚಾರದಲ್ಲಿ ಅವುದು ರಸ್ತೆಗಳನ್ನು ಪರೀಕ್ಷಿಸಿ ನೋಡಿದುದರಲ್ಲಿ ಸೋಸಲೆಯ ಬಳಿಯಲ್ಲಿ ಕಟ್ಟುವುದೇ ಅವಶ್ಯಕವೂ ಪ್ರಯೋಜಕವೂ ಆದುದೆಂದು ಸರ್ಕಾರಕ್ಕೆ ತೋರಿಬಂದಿರುವುದೆಂದು ಕೇಳುತ್ತೇವೆ.

ಬೆಂಗಳೂರಿನಲ್ಲಿ ನಡೆದ ಈಜುವ ಪಂದ್ಯದಲ್ಲಿ ಚೆನ್ನಪಟ್ಟಣದ ಮ|| ಮಾಧವರಾಯರೂ, ಕನಕಪಟ್ಟಿಯವರೂ ಗೆದ್ದು ಬಹುಮಾನಗಳನ್ನು ಪಡೆದರು. ಮ|| ಕರ್ಪೂರ್ ಶ್ರೀನಿವಾಸರಾಯರವರೂ, ಮ|| ಎಚ್. ಸಂಜೀವರಾಯರೂ, ಮ|| ವರದರಾಜಯ್ಯಂಗಾರ್ಯರೂ ಸಹ ನೀರನ್ನು ತುಳಿದು ಈಜುವುದೇ ಮೊದಲಾದ ಕೆಲವು ಅದ್ಭುತ ಸಾಹಸಗಳನ್ನು ಪ್ರದರ್ಶಿಸಿ ಪ್ರೇಕ್ಷಕರಿಗೆ ಆನಂದವನ್ನುಂಟುಮಾಡಿದರು.

ಮದರಾಸ್ ಗೌರ್ನರ್‌ರವರು ಪತ್ನೀ ಸಮೇತರಾಗಿ ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಿಂದ ನೆರವೇರಿಸಲ್ಪಟ್ಟ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಪರಿಗ್ರಹಿಸಿ, ಅರಮನೆ ಮೊದಲಾದ ನೋಡತಕ್ಕ ಭಾಗಗಳನ್ನು ನೋಡಿ ಸೋಮವಾರ ಮಡಕೇರಿಗೆ ದಯಮಾಡಿಸಿದರು. ಬಂದಾಗಲೂ ಹೋದಾಗಲೂ ಮರ್ಯಾದಾರ್ಥವಾಗಿ ೧೭-೧೭ ಗುಂಡುಗಳು ಹಾರಿಸಲ್ಪಟ್ಟುವು.

ರಾಜಧಾನಿಯ ಟ್ರಸ್ಟ್ ಬೋರ್ಡಿನವರು ಈ ವರ್ಷದಲ್ಲಿ ೬|| ಲಕ್ಷ ರೂ. ಗಳ ವ್ಯಯವನ್ನು ಮಾಡುವವರಾಗಿದ್ದಾರೆ. ಆದರೆ ಹೊಸದಾಗಿ ಮನೆ ಕಟ್ಟುವವರಿಗೆ ಸಾಲ ಕೊಡುವುದಕ್ಕೆ ಒಂದು ಕಾಸನ್ನೂ ಕೊಡುವವರಾಗಿಲ್ಲವಂತೆ. ಬಡಬಗ್ಗರು ಹೊಸ ಮನೆಗಳನ್ನು ಕಟ್ಟಿಕೊಳ್ಳಲು ಶಕ್ತಿಯಿಲ್ಲದೆ ಇದ್ದ ಮನೆಗಳನ್ನು ಕಳೆದುಕೊಂಡು ಅಲೆದರೂ ಇರುವ ಮನೆಗಳಲ್ಲೇ ಮಿತಿಮೀರಿ ಸೇರಿ ವಾಸಿಸುತ್ತ ಆರೋಗ್ಯವನ್ನು ಕಳೆದುಕೊಂಡು ಸತ್ತರೂ ಅದು ಮುಖ್ಯವಲ್ಲ; ಪುರದ ಅಲಂಕಾರವೇ ಮುಖ್ಯವೆಂಬ ಭ್ರಾಂತಿಯು ನಮ್ಮ ಟ್ರಸ್ಟ್ ಬೋರ್ಡಿಗೆ ಹಿಡಿದಿದೆ. ಇದಕ್ಕೆ ಔಷಧವೇ ಇಲ್ಲವೆ?

ಭರತಖಂಡದ ವೃತ್ತಾಂತಗಳು.

ಬೋಲ್ಷೆವಿಕ್ಕರು ೨೫ ಲಕ್ಷ ಪೌಂಡ್ ಬೆಲೆಯ ರೂಬೆಲ್ ನೋಟುಗಳನ್ನು ಭರತಖಂಡದಲ್ಲಿ ಹರಡಿದ್ದಾರೆಂಬ ಆಶ್ಚರ್ಯಕರವಾದ ವಾರ್ತೆಯು ಹುಟ್ಟಿದೆ.

ಖಿಲಾಫತ್ ವಿಷಯದಲ್ಲಿ ಕಾರ್ಯಗಳನ್ನು ಜರುಗಿಸುವುದಕ್ಕಾಗಿ ಮ|| ಗಾಂಧಿಯವರು ಬರುವ ತಾ|| ೨೦ ರಲ್ಲಿ ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆಂದು ತಿಳಿಯುತ್ತೇವೆ.

ಖಿಲಾಫತ್ ಮಹಾಸಭಾಧ್ಯಕ್ಷರಾದ ಮಿ|| ಷೌಕತಾಲಿಯವರು ಕಳೆದ ತಾ|| ೧೬ ರಲ್ಲಿ ಮದ್ರಾಸಿಗೆ ಬಂದರು. ಪ್ರಕೃತ ರಾಜಕೀಯ ಸ್ಥಿತಿಯನ್ನು ಕುರಿತು ಇವರು ಅಲ್ಲಿ ಕೆಲವುಪನ್ಯಾಸಗಳನ್ನು ಮಾಡುವವರಾಗಿದ್ದಾರೆ.

ಜಿ. ಐ. ಪಿ. ರೈಲ್ವೆ ವರ್ಕ್‌ಷಾಪಿನ ಜನರೆಲ್ಲರೂ ಗುಂಪುಕೂಡಿ ತಮ್ಮ ಕೆಲಸವನ್ನು ಬಿಟ್ಟು ಮುಷ್ಕರ ಹಿಡಿದರು. ಅವರಲ್ಲಿ ತುಂಟರಾಗಿದ್ದವರಿಗೆಲ್ಲಾ ಕಂಪೆನಿಯವರು ಸಂಬಳವನ್ನು ಕೊಟ್ಟು ಕೆಲಸದಿಂದ ತೆಗೆದುಹಾಕಿದರು.

ಬೊಂಬಾಯಿ ನಿಯಮ ನಿರ್ಮಾಣಸಭೆಗೂ ಸಾಮ್ರಾಜ್ಯಶಾಸನ ಸಭೆಗೂ ಸಭಿಕರನ್ನಾರಿಸುವ ವಿಷಯದಲ್ಲಿ ಮುಂದೆ ಈ ಅಧಿಪತ್ಯದಲ್ಲಿ ಅನೇಕ ಸಭೆಗಳನ್ನು ಪ್ರಜೆಗಳು ಕೂಡಿಸಬಹುದು. ಅವುಗಳಿಗೆ ಸರ್ಕಾರಿ ಉದ್ಯೋಗಿಗಳಾರೂ ಹೋಗಬಾರದೆಂದು ಸಭಾಯುತರಾದ ಬೊಂಬಾಯಿ ಗೌರ್ನರವರು ಅಪ್ಪಣೆಮಾಡಿದ್ದಾರೆ.

ಭರತಖಂಡ ಪ್ರಭುತ್ವದವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಗೋದುವೆಯನ್ನು ಸಾಗಿಸುವ ವಿಷಯದಲ್ಲಿ ಏರ್ಪಡಿಸಿರುವ ನಿರ್ಬಂಧವನ್ನು ಬರುವ ಸೆಪ್ಟೆಂಬರ್ ತಿಂಗಳವರೆಗೂ ತೆಗೆದುಹಾಕುವುದಿಲ್ಲವೆಂದು ಪ್ರಕಟಿಸಿದ್ದಾರೆ. ಬೆಲೆಯು ಬಹಳಮಟ್ಟಿಗೆ ಇಳಿದುಹೋದರೆ ಆಗ ನಿರ್ಬಂಧ ತಪ್ಪಿಸುವ ವಿಷಯವನ್ನು ಆಲೋಚಿಸುವರು.

ನೂತನ ರಾಜಕೀಯ ಶಾಸನ ಸಂಬಂಧವಾದ ನಿಯಮಗಳು ನಿರ್ಮಿಸಲ್ಪಡಬೇಕಾಗಿವೆ. ತತ್ಸಂಬಂಧವಾಗಿ ಅಭಿಪ್ರಾಯಗಳನ್ನು ಕೊಡುವುದಕ್ಕೆ ಈ ದೇಶದ ಉಗ್ರವಾದ ಪಕ್ಷೀಯರಾರಿಗೂ ಅವಕಾಶಕೊಡಲ್ಪಡಲಿಲ್ಲ. ಸೀಮೆಯಲ್ಲಾದರೂ ಮಿತ್ರಸಂಘದ ಇವರಿಗೆ ಅವಕಾಶಪಡೆದುಕೊಳ್ಳುವುದಕ್ಕಾಗಿ ಮ|| ಪಟೇಲರು ಕಾಂಗ್ರೆಸ್ ಸಂಘದ ಪಕ್ಷವಾಗಿ ಕಳೆದ ತಾ|| ೧೪ ರಲ್ಲಿ ಸೀಮೆಗೆ ಪ್ರಯಾಣಮಾಡಿದರು.

ಮದ್ರಾಸು ಸರ್ಕಾರಿ ಮುದ್ರಣಾಲಯದ ಕೆಲಸಗಾರರು ತಮಗೆ ಸಂಬಳವನ್ನು ಹೆಚ್ಚಿಸಿಕೊಡಬೇಕೆಂದು ಮುಷ್ಕರಹಿಡಿದು ೧೫ ದಿನಗಳಿಂದ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದರು. ಕಡೆಗೆ ಸರ್ಕಾರಿ ಸೆಕ್ರೆಟರಿಗಳು ತಾ|| ೧೪ ನೆಯ ಬುಧವಾರ ಬೆಳಗಿನ ೯ ಗಂಟೆಯೊಳಗೆ ಕೆಲಸಕ್ಕೆ ಬರದೆ ಯಾರು ನಿಲ್ಲುವರೋ ಅವರ ಸರ್ವೀಸೂ ಪೆನ್‌ಷನ್ನೂ ತೆಗೆದುಹಾಕಲ್ಪಡುವುದೆಂತಲೂ, ಕೆಲಸಕ್ಕೆ ಸೇರಿದ ಮೇಲೆ ಸಂಬಳಗಾರರ ಕೋರಿಕೆಗಳು ವಿಚಾರಿಸಲ್ಪಡುವುವೆಂತಲೂ ಪ್ರಕಟನಮಾಡಿದ ಮೇಲೆ ಕೆಲಸಗಾರರು ಯೋಚಿಸಿಕೊಂಡು ೧ ವಾರದವರೆಗೂ ತಮ್ಮ ದೂರನ್ನು ಕೇಳದಿದ್ದರೆ ಮುಂದೆ ಸರ್ಕಾರದವರಿಗೆ ಬಿನ್ನಯಿಸಿಕೊಳ್ಳೋಣವೆಂದು ನಿರ್ಧರಿಸಿ ಕೆಲಸಕ್ಕೆ ಸೇರಿಕೊಂಡರು.

ವಿದೇಶ ವೃತ್ತಾಂತಗಳು.

ಈಗ ಫ್ರೆಂಚರು ರುಹರ್ ಪ್ರಾಂತದಲ್ಲಿ ಜರ್ಮನರ ಫ್ರಾಂಕ್‌ಫೋರ್ಟ್, ಡಾರ್ಮ್‌ಸ್ಟಾಡಟ್, ಹಾನೌ, ಆಫೆನ್‌ಬಾಚ್, ಹಾಂಬರ್ಗ್, ವಿಯಸ್‌ಬೇಡನ್ ಇವಿಷ್ಟು ಪಟ್ಟಣಗಳನ್ನು ಆಕ್ರಮಿಸಿಕೊಂಡಿದ್ದಾರೆ.

ರೊಮೇನಿಯಾ ಯುವರಾಜರು ಏಪ್ರಿಲ್ ತಾ|| ೧೦ ರಲ್ಲಿ ಸಿಲೋನ ದ್ವೀಪದ ಕೊಲಂಬೋ ಪಟ್ಟಣದಲ್ಲಿ ಬಂದಿಳಿದರು. ಗೌರವಾರ್ಥವಾಗಿ ೨೧ ಗುಂಡು ಹಾರಿಸಲ್ಪಟ್ಟುವು. ಆ ದ್ವೀಪದಲ್ಲಿ ಅವರು ೧ ವಾರ ಕಾಲದ ವರೆಗೆ ಇರುವರು.

ಹಿಂದೆ ಫ್ರಾನ್ಸ್ ಮುಖ್ಯ ಮಂತ್ರಿಯವರೂ ಸಂಧಿ ಸಭಾಧ್ಯಕ್ಷರೂ ಆಗಿದ್ದ ಕ್ಲೆಮೆಂಕೋವರು ಈಗ ಕ್ಷಯರೋಗಪೀಡಿತರಾಗಿದ್ದಾರೆಂದೂ, [illegible] ಕ್ಷೀಣವಾಗಿವೆಯೆಂದೂ ವರ್ತಮಾನ ಬಂದಿದೆ. ಅವರು ಈಗ ಮಾಡುತ್ತಿರುವ ಸಂಚಾರದಲ್ಲಿ ಐರ್ಲೆಂಡಿಗೆ ಹೋಗುವುದನ್ನು ಬಿಟ್ಟು ಸ್ವದೇಶದ ಕಡೆಗೆ ತೆರಳಿದರು.

ಜೆರೂಸಲೇಮಿನ ಕಡೆ ಮರಳಿ ಜೂ ಮತಸ್ಥರಿಗೂ ಮಹಮ್ಮದೀಯರಿಗೂ ಪ್ರಾಣಾಂತಿಕವಾದ ಕಲಹಗಳು ನಡೆಯುತ್ತಲಿವೆ. ನಿರರ್ಗಳವಾಗಿ ಇಬ್ಬರೂ ಆಯುಧಗಳನ್ನುಪಯೋಗಿಸುತ್ತಿದ್ದಾರೆ. ಅರಬ್ಬಿಯವರಿಗೆ ಜೂ ಜನರ ಮೇಲೆ ಬಹಳ ಕೋಪಹುಟ್ಟಿದೆ. ಜಗಳವು ಹೆಚ್ಚಿದಾಗ ಆಂಗ್ಲ ಸೈನಿಕರು ನುಗ್ಗಿ ಸಮಾಧಾನಪಡಿಸುತ್ತಿದ್ದಾರೆ.

ಅಮೇರಿಕಾ ಪ್ರಭುತ್ವದವರು ನಿರ್ಬಂಧ ಸೈನಿಕಶಾಸನವನ್ನೇರ್ಪಡಿಸಬೇಕೆಂದು ಯೋಚಿಸುತ್ತಿದ್ದರು. ಕಡೆಗೆ ಅದು ಅವಶ್ಯಕವಿಲ್ಲವೆಂತಲೂ ಇಷ್ಟವುಳ್ಳ ೧೮ ರಿಂದ ೨೩ ವರ್ಷ ವಯಸ್ಸಿನೊಳಗಣ ತರುಣರು ಸೈನಿಕಶಿಕ್ಷಣವನ್ನು ಯಾವ ವರ್ಷದಲ್ಲಾದರೂ ೪ ತಿಂಗಳ ಕಾಲ ಮಾತ್ರ ಪಡೆಯಬಹುದೆಂತಲೂ ತೀರ್ಮಾನವಾಯಿತು.

ಸಂಧಿ ಸಂಬಂಧವಾದ ತೀರ್ಮಾನವನ್ನು ಕುರಿತು ಅಮೇರಿಕಾ ಪ್ರಭುತ್ವದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಳೆದ ತಾ|| ೧೦ ರಲ್ಲಿ ಚರ್ಚೆ ನಡೆದು ನಿಬಂಧನೆಗೆ ಅನುಕೂಲವಾಗಿ ೨೪೩ ಮಂದಿಗಳೂ ಪ್ರತಿಕೂಲವಾಗಿ ೧೫೦ ಮಂದಿಗಳೂ ಓಟು ಕೊಟ್ಟರು. ಇದರಿಂದ ಇನ್ನು ಮೇಲೆ ತೀರ್ಮಾನವು ಸೆನೇಟ್ ಸಭೆಗೆ ಕಳುಹಿಸಲ್ಪಡುವುದು.

ಅಮೇರಿಕಾದಲ್ಲಿ ರೈಲ್ವೆ ಕೆಲಸಗಾರರು ಮುಷ್ಕರಹಿಡಿದು ಕುಳಿತಿರುವುದರಿಂದ ೨೫ ಮಾರ್ಗಗಳಲ್ಲಿ ಬಂಡಿಗಳೇ ತಿರುಗಾಡುವುದಿಲ್ಲ. ಚಿಕಾಗೊ ಪಟ್ಟಣದಲ್ಲಿ ಈಗ ೫೦ ಸಾವಿರ ಜನರು ಕೆಲಸವಿಲ್ಲದೆ ಕುಳಿತಿದ್ದಾರೆ. ಇನ್ನೂ ಕೆಲಸ ಬಿಡುವ ಜನರ ಸಂಖ್ಯೆ ಹೆಚ್ಚುತ್ತಿದೆ. ಶಾಂತ ಮಹಾಸಮುದ್ರತೀರದ ರೈಲ್ವೆಗಳೆಲ್ಲವೂ ನಿಂತುಹೋಗುವುವೆಂದು ಭಯವಾಗುತ್ತಿದೆ.

ಪತ್ರವ್ಯವಹಾರ.

ಕೊಡಗನೂರು ಪಂಚಮ 2 ನೆ ಕಾನ್ಫರೆನ್ಸು.

ದಾವಣಗೆರೆ ತಾಲ್ಲೂಕು ಮಾಯಕೊಂಡ ಸಮ್ಮತು ಕೊಡಗನೂರು ಗ್ರಾಮದಲ್ಲಿ ತಾ|| 4-4-20 ನೆ ಭಾನುವಾರ ಮಧ್ಯಾಹ್ನ 1 ಘಂಟೆಯಲ್ಲಿ ಪಂಚಮರ ಕಾನ್ಫರೆನ್ಸು ದಾವಣಗೆರೆ ಸಬ್ ಡಿವಿಜನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕಾನ್ಫರೆನ್ಸಿಗೆ ಪೌರಸಾರ್ವಜನಿಕಸಭಾ ಸೆಕ್ರೆಟರಿಗಳವರೂ, ತಾಲ್ಲೂಕು ಅಮಲ್ದಾರರವರೂ, ಸ್ಕೂಲ್ ಅ|| ಇನ್ಸ್‌ಪೆಕ್ಟರವರೂ ಇನ್ನೂ ಮುಂತಾದ ದೊಡ್ಡ ಮನುಷ್ಯರೂ ಸಹ ದಯಮಾಡಿಸಿದ್ದರು. ಕಾನ್ಫರೆನ್ಸಿನಲ್ಲಿ ಪಂಚಮರ ವಿದ್ಯಾಭ್ಯಾಸ, ಕೈಗಾರಿಕೆ, ವ್ಯವಸಾಯ, ಅವರಿಗೆ ಸರ್ಕಾರದವರಿಂದ ಆಗಬೇಕಾದ ಸಹಾಯಗಳೂ ಮತ್ತು ಇನ್ನು ಕೆಲ ವಿಷಯಗಳೂ ಚರ್ಚಿಸಲ್ಪಟ್ಟು ಕೊನೆಗೆ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಮಧ್ಯಾಹ್ನ 4 ಘಂಟೆಗೆ ಸಭೆಯು ವಿಸರ್ಜಿಸಲ್ಪಟ್ಟಿತು. ಪ್ರತ್ಯಕ್ಷದರ್ಶಿ.

ಒಬ್ಬ ವೀರಶೈವ ಮಹನೀಯರ ಅಕಾಲ ಶೋಚನೀಯ ಮೃತ್ಯು.

ಜಗಲೂರು ತಾಲ್ಲೂಕು ಬಿಳಚೋಡು ಗ್ರಾಮದಲ್ಲಿ ಇದೇ ಏಪ್ರಿಲ್ 1 ರಲ್ಲಿ ಸುಪ್ರಸಿದ್ಧ ವಂಶಸ್ಥರಾಗಿಯೂ, ವೀರಶೈವ ಸಮಾಜಕ್ಕೆ ಭೂಷಣಪ್ರಾಯರಾಗಿಯೂ, ಡಿಸ್ಟ್ರಿಕ್ಟ್ ಬೋರ್ಡು, ತಾಲ್ಲೂಕು ಬೋರ್ಡು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಾಗಿಯೂ ಇದ್ದ ಮ|| ಶೆಟ್ಟರ ಪಾಪಣ್ಣನವರು ತಮ್ಮ ಭೌತಿಕ ದೇಹವನ್ನು ಬಿಟ್ಟು ಕೈಲಾಸವಾಸಿಗಳಾದರೆಂದು ತಿಳುಹಲು ಅತ್ಯಂತ ವಿಷಾದಪಡುತ್ತೇನೆ. ಇವರು ಜೀವಿತರಾಗಿರುವವರೆಗೂ ಒಳ್ಳೆಯ ಧರ್ಮಾಭಿಮಾನಿಗಳಾಗಿದ್ದರೆಂಬುದಕ್ಕೆ ಅನೇಕ ದೃಷ್ಟಾಂತಗಳುಂಟು. ಹೋದ ವರುಷದಲ್ಲಿ ಪ್ರಾಪ್ತಿಯಾಗಿದ್ದ ಭಯಂಕರವಾದ ಇನ್‌ಫ್ಲುಯಂಜಾ ಕಾಯಿಲೆಯಲ್ಲಿ ನರಳುತ್ತಿದ್ದ ಬಡಬಗ್ಗರಿಗೆ ಔಷಧಸಾಮಗ್ರಿಗಳನ್ನೂ, ಧನಧಾನ್ಯಗಳನ್ನೂ ಕೊಟ್ಟು, ಸಂರಕ್ಷಣೆಯನ್ನು ಮಾಡಿದ್ದರು. ಅಲ್ಲದೆ ಈ ಊರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಪುಸ್ತಕಭಂಡಾರಕ್ಕೆ ನೂರು ರೂಪಾಯಿಗಳನ್ನೂ, ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಆಜ್ಞಾನುಸಾರ ಚಿತ್ರದುರ್ಗದ ವೀರಶೈವ ಬೋರ್ಡಿಂಗಿಗೆ ಒಂದು ಸಹಸ್ರ ರೂಪಾಯಿಗಳನ್ನೂ ಉಚಿತವಾಗಿ ಕೊಟ್ಟಿರುವರು. ಕಟ್ಟಡವು ಪ್ರಾರಂಭವಾದ ಕೂಡಲೆ ಇನ್ನೂ ಹೆಚ್ಚಾಗಿ ಸಹಾಯ ಮಾಡುತ್ತೇವೆಂಬುದಾಗಿ ಶ್ರೀಗಳವರಿಗೆ ವಾಗ್ದಾನ ಮಾಡಿದ್ದರು. ಸುದೈವದಿಂದ ಇವರು ಇನ್ನೂ ಕೆಲಕಾಲ ಜೀವಿತರಾಗಿದ್ದಲ್ಲಿ ಇಂಥ ಮಹತ್ಕಾರ್ಯಗಳು ಎಷ್ಟೋ ನೆರವೇರತಕ್ಕುವುಗಳಾಗಿದ್ದುವು. ಸಮಾಜದ ದುರ್ದೈವದಿಂದ ಅಕಸ್ಮಾತ್ ಕಿಂಚಿತ್ ಜ್ವರದಿಂದ ಮಧ್ಯಮ ವಯಸ್ಸಿನಲ್ಲಿಯೇ ದಿವಂಗತರಾದುದರಿಂದ ವೀರಶೈವ ಸಮಾಜವೆಂಬ ವೇದಿಕೆಯ ಅಡಿಗಲ್ಲೊಂದು ಸಡಿಲಿದಂತಾಯಿತು. ಮಾಡತಕ್ಕದ್ದೇನು? ದೈವೇಚ್ಛೆಯು ಅಪ್ರತಿಹತವಾದದ್ದಲ್ಲವೇ? ಇವರಿಗೆ ಚಿಕ್ಕ ವಯಸ್ಸಿನವರಾದ ಪುತ್ರರುಂಟು. ಈ ಮಕ್ಕಳಿಗಾದರೂ ಪರಮಾತ್ಮನು ದೀರ್ಘಾಯುರಾರೋಗ್ಯವನ್ನೂ ಧಾರ್ಮಿಕ ಬುದ್ಧಿಯನ್ನೂ ದಯಪಾಲಿಸಿ ಕಾಪಾಡಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಸಮಾಜಸೇವಕ.

ಬೆಂಗಳೂರು ಸಿಟಿ ಮಾವಳ್ಳಿಗೆ ದಿವಾನ್ ಸಾಹೇಬರವರು ದಯಮಾಡಿದ್ದು.

ಇದೇ ಏಪ್ರಿಲ್ 6 ನೆ ಮಂಗಳವಾರ ಬೆಳಗ್ಗೆ 8 ಗಂಟೆಯ ಸಮಯಕ್ಕೆ ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರು, ಸ್ಯಾನಿಟರಿ ಕಮಿಷನರವರು, ಮ್ಯುನಿಸಿಪಲ್ ಪ್ರೆಸಿಡೆಂಟರು, ಇಂಜನಿಯರು, ಹೆಲ್ತ್ ಆಫೀಸರು ಮೊದಲಾದ ಅಧಿಕಾರಿಗಳು ಮಾವಳ್ಳಿಯ ಪೂರ್ವ ಭಾಗಕ್ಕೆ ಅಂದರೆ ಲಾಲ್‌ಬಾಗ್ ಪಶ್ಚಿಮದ ಕಡೆ ಒಂದು ದೊಡ್ಡ ರಸ್ತೆಯನ್ನು ಹಾಕಿ ಆ ಮೂಲಕ ಬಸವನಗುಡಿ ರಸ್ತೆಯನ್ನು ಕೋಟೆ ರಸ್ತೆಗೆ ಸೇರಿಸತಕ್ಕ ವಿಚಾರದಲ್ಲಿ ಅಜಮಾಯಿಷಿ ಬಗ್ಗೆ ದಯಮಾಡಿಸಿದ್ದರು. ಇಂಥಾ ಸುಸಮಯದಲ್ಲಿ ಇಲ್ಲಿನ ಮ್ಯುನಿಸಿಪಲ್ ಕಮಿಷನರವರೂ ಮತ್ತು ಹಿಂದುಳಿದಿರುವ ಪ್ರಜೆಗಳ ಉದ್ಧಾರಕ್ಕಾಗಿ ಪ್ರಯತ್ನಪಡುತ್ತಿರುವವರೂ ಆದ ಮ|| ಎಂ. ಸುಬ್ಬಯ್ಯನವರು ಸದರೀ ಮೊಹಲ್ಲಾದ ಪ್ರಜೆಗಳ ಸಮೇತ ಆದರಪೂರ್ವಕವಾಗಿ ಸುಸ್ವಾಗತವನ್ನು ಬಯಸಿದ ನಂತರ ಮ|| ಎಂ. ಸುಬ್ಬಯ್ಯನವರು ಮೇಲೆ ನಮೂದಿಸಿರುವಂತೆ ದೊಡ್ಡ ರಸ್ತೆಯು ಬೇಕೇಬೇಕಾದದ್ದು ಅವಶ್ಯಕವೆಂಬುದಕ್ಕೆ ಸಾಕಾದಷ್ಟು ಕಾರಣಗಳನ್ನು ವಿವರವಾಗಿ ಹೇಳಿದ್ದು ಅಲ್ಲದೆ ದಿವಾನ್ ಸಾಹೇಬರವರಿಗೆ ಅದಕ್ಕೆ ಸಂಬಂಧಪಟ್ಟ ಸ್ಥಳಗಳನ್ನು ಅಜಮಾಯಿಷಿ ಮಾಡುವಂತೆ ಪ್ರೇರೇಪಿಸಿ ತನ್ಮೂಲಕ ಇಂಥಾ ರಸ್ತೆಯನ್ನು ಮಾಡುವುದು ಬಹು ಪ್ರಯೋಜನಕಾರಿಯಾದದ್ದೆಂದು ಒಪ್ಪಂದಕ್ಕೆ ಬರುವಂತೆ ಮಾಡಿದರು. ಇದಾದ ನಂತರ ಸದರಿ ಸ್ಥಳದಲ್ಲಿ ನೂತನವಾಗಿ ಏರ್ಪಾಡು ಮಾಡಿರುವ "ಪರಸ್ಪರ ಸಹಾಯ ಸಂಘ" ರೀಡಿಂಗ್ ರೂಮು, ಧರ್ಮವಾಚನಶಾಲಾ ಇವುಗಳನ್ನು ತೋರಿಸಿ, ಮುಂದಕ್ಕೆ ವೆಸ್ಲಿಯನ್ ಮಿಷನ್ ಬಾಲಕಿಯರ ಸ್ಕೂಲಿಗೆ ದಯಮಾಡಿಸಲು, ಇವರುಗಳ ಆಗಮನವನ್ನೇ ನಿರೀಕ್ಷಣೆ ಮಾಡಿಕೊಂಡಿದ್ದ ಹೆಡ್ಮಾಸ್ಟರ್ ಮ|| ಸುಬ್ರಾಯಪ್ಪನವರು ಸ್ಕೂಲಿನೊಳಕ್ಕೆ ಕರೆದುಕೊಂಡು ಹೋದರು. ಬಾಲಕಿಯರೆಲ್ಲರೂ ದಿವಾನ್ ಸಾಹೇಬರವರ ಹೆಸರಿನ ಮೇಲೆ ಹೊಸದಾಗಿ ಕವನ ಮಾಡಿದ್ದ ಸುಸ್ವಾಗತದ ಹಾಡನ್ನು ಹೇಳಲಾಗಿ ಅಲ್ಲಿ ನೆರೆದಿದ್ದ ದೊಡ್ಡ ಮನುಷ್ಯರುಗಳೆಲ್ಲರೂ ಬಹು ಆನಂದಪಟ್ಟುಕೊಂಡರು. ಅಲ್ಲಿ ದಿವಾನ್ ಸಾಹೇಬರವರು ಹೆಡ್ಮಾಸ್ಟರನ್ನು ಕೇಳಿದ ಪ್ರಶ್ನೆಗಳಿಗೆಲ್ಲಾ ಅವರು ಸಮಯೋಚಿತವಾದ ಉತ್ತರವನ್ನು ಕೊಟ್ಟು ಹಾರ ಮೊದಲಾದುವುಗಳನ್ನು ಸಮರ್ಪಿಸಲು ಅವುಗಳನ್ನು ಸ್ವೀಕರಿಸಿ, ಮ|| ಸುಬ್ಬಯ್ಯನವರು ಪ್ರಜೆಗಳ ಸೌಕರ್ಯಗಳಿಗಾಗಿ ಮಾಡುತ್ತಿರುವ ಮೆಹನತ್ತನ್ನು ಕೊಂಡಾಡಿದರು. ಈ ಮಧ್ಯೆ ಅಲ್ಲಲ್ಲಿಯೇ ಜನರು ಹೇಳಿದ ತಮ್ಮ ಅಹವಾಲುಗಳನ್ನು ಬಹು ತಾಳ್ಮೆಯಿಂದ ಶಾಂತಚಿತ್ತರಾಗಿ ಕೇಳಿ ಅಂಥವುಗಳಿಗೆಲ್ಲಾ ಪ್ರಜಾನುಕೂಲವಾದ ಉತ್ತರಗಳನ್ನು ಹೇಳಿದ್ದು ಅನೇಕರಿಗೆ ಮಹದಾನಂದ ಉಂಟುಮಾಡಿತು. ಇದುವರೆಗೂ ಈ ಸ್ಥಳಕ್ಕೆ ದಿವಾನ್ ಸಾಹೇಬರವರು ದಯಮಾಡಿಸಿದ್ದು ಇದೇ ಮೊದಲನೆ ಸಲ.

ಪ್ರತ್ಯಕ್ಷದರ್ಶಿ.

ಶ್ರೀ ವೀರಭದ್ರಸ್ವಾಮಿಯ ರಥೋತ್ಸವ, ಹಳೇಪೇಟೆ ದಾವಣಗೆರೆ.

ಕಳೆದ ಚೈತ್ರ ಬ|| ೪ ನೆಯ ಬುಧವಾರ ಸಾಯಂಕಾಲಕ್ಕೆ ಸರಿಯಾಗಿ ಪದ್ಧತಿಯ ಮೇರೆಗೆ ರಥೋತ್ಸವವು, ಈ ಸಾರೆ ಇಲ್ಲಿ ಅತ್ಯಂತ ಸಂಭ್ರಮದಿಂದಲೂ, ಉತ್ಸಾಹದಿಂದಲೂ, ಮನೋರಂಜಕವಾಗಿಯೂ ನಡೆಯಿತು. ಇಲ್ಲಿಯ ವೀರಶೈವಪ್ರಮುಖರೂ, ವೈದಿಕರೂ, ಮತ್ತು ಪರಮತಸ್ಥರಾದ ಕೆಲವು ಮಹಾಜನರೂ ಈ ಸಮುದಾಯವೆಲ್ಲಾ ಆಗಮಿಸಿ ತಮ್ಮ ಹೃದಯದೊಳಗಿದ್ದ ನಿಜವಾದ ನಿಶ್ಚಲ ಭಕ್ತಿಯನ್ನು ವ್ಯಕ್ತಪಡಿಸಿ, ತನುಮನೋಧನಗಳಿಂದ ಸೇವಿಸಿ, ಉತ್ಸವವನ್ನು ಉಲ್ಲಾಸದಿಂದ ಸಾಂಗಗೊಳಿಸಿದರು. ಶ್ರೀ ಸ್ವಾಮಿಯವರ ರಥೋತ್ಸವವು ತಿರಿಗಿ ನೆಲೆಗೆ ನಿಲ್ಲುವುದಕ್ಕೆ ಮಧ್ಯರಾತ್ರಿಯ ಸಮಯವಾಯಿತು. ಆ ಬಳಿಕ ಸ್ವಾಮಿಯನ್ನು ಕೆಳಕ್ಕೆ ಇಳಿಸಿಕೊಂಡು ದೇವಸ್ಥಾನದ ಬಳಿಯಲ್ಲಿ ಹಾಕಿದ್ದ ಉಯ್ಯಾಲೆಯಲ್ಲಿ ಶ್ರೀ ಸ್ವಾಮಿಯನ್ನು ಮೂರ್ತ ಮಾಡಿಸಿ ಪೂಜೆ ಮಾಡಿಸಿದ ಬಳಿಕ, ಮುಂದುಗಡೆಯಲ್ಲಿ ನೆರೆದಿದ್ದ ವೀರಶೈವ ಭಕ್ತಮಾಹೇಶ್ವರ ಮಂಡಲಿಯವರು ಸೇರಿಕೊಂಡು ಶ್ರೀ ಸ್ವಾಮಿಯನ್ನು ಕುರಿತು ಅಲ್ಲಿ ನೆರೆದಿದ್ದ ಚಿಕ್ಕ ಚಿಕ್ಕ ಬಾಲಕರುಗಳಿಂದ ಪುರಾಣಪ್ರಸಿದ್ಧಗಳಾದ ಪವಾಡಗಳನ್ನು ಉದ್ಘೋಷಿಸಿದರು. ಆ ದಿವಸ ಸ್ವಾಮಿಯ ದೇವಸ್ಥಾನವನ್ನು ಚಪ್ಪರ ಗುಡಿ ತೋರಣ ಮೊದಲಾದವುಗಳಿಂದ ಅತಿಶೋಭಾಯಮಾನಗೊಳಿಸಿದ್ದರು. ಈ ಸಾರಿಯ ಉತ್ಸವವು ಪೂರ್ವ ಸಾಂಪ್ರದಾಯಗಳೊಂದಿಗೆ ನವೀನ ಪದ್ಧತಿಗಳನ್ನು ಆಶ್ರಯ ಮಾಡಿಕೊಂಡು ನಡೆಸಿದುದು ಮತ್ತಷ್ಟು ಶೋಭಾಯಮಾನಗೊಳಿಸಿದವು. ಈ ಹಿಂದ ಆದ ರಥೋತ್ಸವಗಳಲ್ಲಿ ಆದಂತೆ ಈ ಸಾರಿಯ ರಥೋತ್ಸವದಲ್ಲಿ ಲಕ್ಷ್ಮಿಯನ್ನು ವ್ಯಯಮಾಡುವ ದುಂದುಗಾರಿಕೆಯ ಕೆಲಸಗಳನ್ನು ವೀರಶೈವಪ್ರಮುಖರು ನಿಲ್ಲಿಸಿ ಆ ಧನವನ್ನು ಸದರಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಉಪಯೋಗಿಸುವಂತೆ ಮಾಡಿರುವ ಅಂಶವನ್ನು ಕೇಳಿ ಮನಸ್ಸಿಗೆ ತುಂಬಾ ಸಂತೋಷವಾಯಿತು. ಇಲ್ಲಿಯ ಪ್ರಮುಖರಾದವರು ತಮ್ಮ ತಮ್ಮ ನಿಜಭಕ್ತಿಯಿಂದ ಶ್ರೀ ಸ್ವಾಮಿಯ ರಥೋತ್ಸವವು ನಡೆಯುವ ಕಾಲಕ್ಕೆ ಸರಿಯಾಗಿ ಬಿಜಯಂಗೈಸಿ ಶ್ರೀ ಬಕ್ಕೇಶ್ವರಸ್ವಾಮಿಯ ರಥೋತ್ಸವದಂತೆ ಇದನ್ನೂ ಅಭಿವೃದ್ಧಿಗೆ ತರುತ್ತಾರೆಂದು ಇಲ್ಲಿಯ ಪುರವಾಸಿಗಳು ಪ್ರಮುಖರನ್ನು ಕೊಂಡಾಡಿದರು. ಆದುದರಿಂದ ಸ್ಥಳದ ಪ್ರಮುಖರು ಜಾಗ್ರತೆಯಿಂದ ಮುಂದಿನ ವರ್ಷದೊಳಗೆ ಶ್ರೀ ಉಭಯ ಸ್ವಾಮಿಗಳ ರಥೋತ್ಸವವನ್ನೂ ಊರ್ಜಿತಸ್ಥಿತಿಗೆ ತರುವರೆಂದು ನಮ್ಮ ಅಭಿಲಾಷೆ. ಇಲ್ಲಿಯ ವೀರಶೈವ ಪ್ರಮುಖ ಭಕ್ತಮಾಹೇಶ್ವರ ಮಂಡಲಿಯವರಿಗೆ ಶ್ರೀ ಉಭಯಸ್ವಾಮಿಯ ಆಶೀರ್ವಾದಗಳೂ ಇದ್ದು ತಮ್ಮ ಭಕ್ತರನ್ನು ಚಿರಸಾಮ್ರಾಜ್ಯಾದ್ಯಭಿವೃದ್ಧಿಯಿತ್ತು ಕಾಪಾಡಲೆಂದು ವಿನಂತಿ.

ಪ್ರತ್ಯಕ್ಷದರ್ಶಿ.

ಕರ್ನಾಟಕ ಸಾಹಿತ್ಯ ಪರಿಷತ್ತು, ಬಸವನಗುಡಿ, ಬೆಂಗಳೂರು.

ವಿಜ್ಞಾಪನೆಗಳು

೧. ಕರ್ನಾಟಕ ಸಾಹಿತ್ಯ ಪರಿಷತ್ತಿನ ಆರನೆಯ ಸಮ್ಮೇಳನವೂ ಐದನೆಯ ವಾರ್ಷಿಕಸಭೆಯೂ ಇದೇ ರೌದ್ರಿ ಸಂವತ್ಸರದ ಜ್ಯೇಷ್ಠ ಶು ೫ ಶನಿವಾರ (೧೯೨೦ ನೆ ಮೇ ೨೨) ಮೊದಲ್ಗೊಂಡು ಬಳ್ಳಾರಿಯ ಡಿಸ್ಟ್ರಿಕ್ಟಿಗೆ ಸೇರಿದ ಹೊಸಪೇಟೆಯಲ್ಲಿ ನಡೆಯುವಂತೆ ಏರ್ಪಾಡಾಗಿರುವುದರಿಂದ ತಾವು ಆ ಕಾಲಕ್ಕೆ ಹೊಸಪೇಟೆಗೆ ದಯಮಾಡಿಸಬೇಕೆಂದು ಪ್ರಾರ್ಥಿಸುತ್ತೇವೆ.

೨. ಸಮ್ಮೇಳನಕ್ಕೆ ಬರುವ ಪ್ರತಿಯೊಬ್ಬರೂ ಒಂದು ರೂಪಾಯಿಯ ಮೇರೆಗೆ ರುಸುಮನ್ನು ಕೊಡಬೇಕಾಗುವುದು.

೩. ಸಮ್ಮೇಳನಕ್ಕೆ ಬರುವವರ ಅನುಕೂಲ್ಯಕ್ಕಾಗಿ ಅವರು ಇಳಿದುಕೊಳ್ಳುವುದಕ್ಕೆ ಸ್ಥಳವೂ, ಭೋಜನದ ಏರ್ಪಾಡೂ, ಸಾಧ್ಯವಾದಮಟ್ಟಿಗೆ ಮಾಡಲಾಗುವುದು. ಇವುಗಳ ವೆಚ್ಚಕ್ಕಾಗಿ, ಪುರುಷರು ದಿನ ೧ಕ್ಕೆ ೨ ರೂಪಾಯಿಗಳನ್ನೂ, ಸ್ತ್ರೀಯರು ೧ ರೂಪಾಯಿಯನ್ನೂ, ಸೇವಕರು ಅರ್ಧರೂಪಾಯಿಯನ್ನೂ ಕೊಡಬೇಕಾಗುವುದು. ಈ ಅನುಕೂಲ್ಯಗಳನ್ನು ಅಪೇಕ್ಷಿಸುವವರು ತಾವು ಬರುವವರೆಷ್ಟು ಮಂದಿ ಎಂಬುದನ್ನೂ ಏಪ್ರಿಲ್ ೩೦ ನೆಯ ತೇದಿಯೊಳಗಾಗಿ ಹೊಸಪೇಟೆಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಯವರಿಗೆ ತಿಳಿಸುವುದಲ್ಲದೆ ಒಂದು ರೂಪಾಯಿಯ ಸಂಚಕಾರವನ್ನೂ ಕಳುಹಿಸತಕ್ಕದ್ದು.

೪. ಹೊಸಪೇಟೆಯಲ್ಲಿ ಸ್ವಾಗತಮಂಡಲಿಯ ಅಧ್ಯಕ್ಷತೆಯನ್ನು ವಹಿಸಲು ಮದರಾಸು ನ್ಯಾಯವಿಧಾಯಕ ಸಭೆಯ ಮೆಂಬರಾದ ಆನರಬಲ್ ಪಿ. ಶಿವರಾವ್ ಬಿ. ಎ., ಬಿ. ಎಲ್ ಅವರೂ, ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷತೆಯನ್ನು ವಹಿಸಲು ಹೊಸಪೇಟೆ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾದ ಮ|| ರಾ|| ಗುರುರಾಜಾರಾವ್, ಬಿ. ಎ ಅವರೂ ಒಪ್ಪಿರುತ್ತಾರೆ.

೫. ಸ್ವಾಗತ ಮಂಡಲಿಯ ಸದಸ್ಯರಾಗಲಪೇಕ್ಷಿಸುವ ಪ್ರತಿಯೊಬ್ಬರೂ ಐದುರೂಪಾಯಿಯ ರುಸುಮನ್ನು ಕೊಡತಕ್ಕದ್ದು.

೬. ಮೇ ೨೫ನೆ ತೇದಿ ಮಂಗಳವಾರದ ದಿವಸ ಹಂಪೆಯ ಶ್ರೀ ವಿರೂಪಾಕ್ಷೇಶ್ವರನ ದೇವಸ್ಥಾನದಲ್ಲಿ ಶ್ರೀ ಕರ್ನಾಟಕ ಮಹಿಳೆಯರು ಹೂವಿಳೆಯನ್ನು ಮಾಡುವಂತೆ ಏರ್ಪಾಡಾಗಿರುವುದರಿಂದ ತಾವು ಸಕುಟುಂಬವಾಗಿ ದಯಮಾಡಿಸಬೇಕೆಂದು ಕೋರಿದೆ.

೭. ಸಮ್ಮೇಳನದಲ್ಲಿ ಚರ್ಚಿಸಬೇಕಾಗಿರುವ ವಿಷಯಗಳೂ, ಹೇಳಬೇಕೆಂದಿರುವ ಉಪನ್ಯಾಸಗಳೂ ಪರಿಷತ್ತಿನಿಂದ ಮೊದಲೇ ಅಂಗೀಕೃತವಾಗಿರಬೇಕು. ಆದುದರಿಂದ ಅವುಗಳ ನಕಲನ್ನು ಏಪ್ರಿಲ್ ೩೦ನೆಯ ತೇದಿಯೊಳಗಾಗಿ ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು. ಉಪನ್ಯಾಸ ವಿಷಯಗಳು ಮುಂದೆ ಹೇಳುವವುಗಳಾಗಿರಬೇಕು: (೧) ಪ್ರಾಚೀನ ಅಥವಾ ನವೀನ ಗದ್ಯ ಅಥವಾ ಪದ್ಯಕಾವ್ಯಗಳು, (೨) ನಾಟಕಗಳು, (೩) ಕಾದಂಬರಿ (ನಾವೆಲು) ಗಳು, (೪) ವಿಜ್ಞಾನ, (೫) ಪ್ರಾಚೀನ ಅಥವಾ ನವೀನ ಇತಿಹಾಸಗಳು, (೬) ಸಾಮಾಜಿಕ ವಿಷಯಗಳು.

೮. ಪರಿಷತ್ತಿನ ನಿಬಂಧನೆಗಳಲ್ಲಿ ತಿದ್ದುಪಾಟುಗಳನ್ನು ಸೂಚಿಸಲಿಚ್ಛೆಯುಳ್ಳ ಸದಸ್ಯರು ತಮ್ಮ ಸೂಚನೆಗಳನ್ನು ಏಪ್ರಿಲ್ ೩೦ ನೆಯ ತೇದಿಯೊಳಗಾಗಿ ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು.

ಹೊಸಪೇಟೆಗೆ ೭ ಮೈಲುಗಳ ದೂರದಲ್ಲಿ, ಪ್ರಸಿದ್ಧಿಯನ್ನು ಹೊಂದಿದ ವಿಜಯನಗರದ ಚಕ್ರಾಧಿಪತ್ಯಕ್ಕೆ ಸಂಬಂಧಪಟ್ಟ ಬೀಳಾದ ಭಾರಿ ಅರಮನೆಯ ಕಟ್ಟಡಗಳೂ ದೇವಸ್ಥಾನಗಳೂ ಇರುವುವು. ಅವುಗಳಲ್ಲಿ ವಿಟ್ಠಲಸ್ವಾಮಿಯ ದೇವಾಲಯವು ಬಹಳ ಆಶ್ಚರ್ಯಕರವಾದುದು. ಋಷ್ಯಮೂಕ, ಮಾಲ್ಯವಂತ, ಹೇಮಕೂಟ, ಮಾತಂಗ, ಪಂಪಾಸರೋವರ ಮೊದಲಾದ ರಾಮಾಯಣ ಪ್ರಸಿದ್ಧವಾದ ಸ್ಥಳಗಳಿರುವುದು ಈ ಪ್ರಾಂತ್ಯದಲ್ಲಿಯೇ. ಅಲ್ಲಿ ತುಂಗಭದ್ರಾನದಿಯು ಬಹಳ ರಮ್ಯವಾಗಿರುವುದು. ಈ ನದಿಯ ಉತ್ತರಭಾಗದಲ್ಲಿ ಆನೆಗೊಂದಿ ಸಂಸ್ಥಾನವಿರುವುದು. ದೇಶವಾತ್ಸಲ್ಯವುಳ್ಳ ಪ್ರತಿಯೊಬ್ಬರೂ ಈ ಪ್ರಾಂತಗಳನ್ನು ಅಗತ್ಯವಾಗಿ ನೋಡಬೇಕು.

ನಂ. ವೆಂಕಟೇಶಯ್ಯಂಗಾರ್, ಗೌ|| ಕಾರ್ಯದರ್ಶಿ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 26

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೆ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಇಲ್ಲಿಯವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಆದರೂ ಬೇಕಾಗುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಮುದ್ರಕ್ಕೆ ಮಾಡದ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಚ್ಚಿಜಡ್ಡು, ಗುದ್ದವ್ಯವಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟೆಶೂಲಿ, ಹಡದನಂತು, ಸಣ್ಣಕೂಸುಗಳ ಬಾಲಗ್ರಹ, ಅರವು, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಿಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಷ್ಟ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಅದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ ಅದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲೆ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಅದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟಲ ಸೋಟಾ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

ಜಾಗ್ರತ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 24

ನಾವು ಎ. ಅಲ್ ಬ್ರುಕ್ಕ್ಯುಯರ್ ಕ್ಕ್ಮ ಅಂಡ್ ಸನ್ಸ್ ಎಂಬ ಹಂಚ ನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ. }
ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಉತ್ಪನ್ನವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ಪುಷ್ಟವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ: — ಡಾಕ್ಟರ್ ಎಂ. ಪೀಟರ್,
3 3. ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಜಿ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
3 3. ಇರುಳಪ್ಪನಬೀದಿ, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
3 ಸಾಹುಕಾರಪೇಟೆ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಹರಿದಾಸಿ	೦—೪—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ	6—8—0
ಬೆಳ್ಳಿಯ ಸರಪಣಿ ಸಹಿತ ,,	9—8—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
3 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ತ್ವರೆಮಾಡಿರಿ   ಸ್ವಲ್ಪವೇ ಪ್ರತಿಗಳು ಉಳಿದಿವೆ.

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಂಬರಿಗಳು.

೧ ದಿವ್ಯಸುಂದರಿ ಅಥವಾ ದೀರ್ಘಪ್ರಯತ್ನ (ಉದ್ಯೋಗಿಕ)	ಬೆಲೆ ೧ ರೂ.
೨ ಸತ್ಯಪ್ರಕಾಶ (ಪೌರಾಣಿಕ)	೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ)	೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ— ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
4 ಆಲೂರ ಪೋ॥ ಆಲೂರ ಹಾನಗಲ್ಲ ಜಿ॥ ಧಾರವಾಡ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಶರಣಪಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

[illegible] —ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತಸಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಳಿ, ಮೈಸೂರು.

೧೯೨೦ನೆಯ ಇಸವಿ ಏಪ್ರಿಲ್ ತಾ॥ ೧೮ ರಿಂದ ೧೯೨೦ನೆಯ ಏಪ್ರಿಲ್ ತಾ॥ ೨೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ರೌದ್ರಿನಾಮ ಸಂವತ್ಸರದ ಚೈತ್ರಬಹುಳ ಅಮಾವಾಸ್ಯೆಯಿಂದ ವೈಶಾಖಶುದ್ಧ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
18	¹ಭಾನು	ಅಮಾ	52-47	ರೇ	27-17	6
19	ಸೋಮ	ಪಾಡ್ಯ	48-38	ಅಶ್ವಿ	24-54	7
20	ಮಂಗಳ	ಬಿದಿ	43-17	ಭರ	21-49	8
21	ಬುಧ	ತದಿ	37-28	ಕೃತ್ತಿ	18-8	9
22	ಗುರು	ಚೌತಿ	30-21	ರೋಹಿ	14-5	10
23	ಶುಕ್ರ	ಪಂಚ	25-13	ಮೃಗ	9-56	11
24	ಶನಿ	ಷಷ್ಠಿ	19-13	ಆರ್ದ್ರಾ	5-47	12

(1) ಸರ್ವತ್ರ ಅಮಾವಾಸ್ಯಾ, ಕರಗವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸುಹಿತಾರಂಭೀರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಕ್ಷ್ಣದಶೀಲ ಸಾಕಲಿತ ಸಾಧುಗ್ರಾಮ್ಯಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ರೀಯಂಸದಾಪೂರಿಗೆ ಗೌರೀಶಾಸುತಂಪೋಷ್ಯಲಂ ॥

[ವಾರ್ಷಿಕಚಂದಾ ೧-೬-೦]   [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩)   ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಏಪ್ರಿಲ್ ತಾರೀಖು ೨೫ ನೆಯ ಭಾನುವಾರ   (ಸಂಚಿಕೆ ೧೭

MYSORE GOVERNMENT ADVERTISEMENTS.

37

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintedent,
Government Gardens.

MYSORE RAILWAYS.

NOTICE.

Reserved Accommodation,

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the imetre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 39

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಚಳುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೩—೦
ಹರಿದಾಸಿ	೦—೪—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶಿವಶಂಕರಪ್ಪಾ ಜೀರಿಗೆ

ಮರ್ಚಂಟ್, ಕಮಿಷನ್ ಏಜಂಟ್, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ಹುಪ್ಪ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಎಳ್ಳೆಯೆಣ್ಣೆ, ಮೆಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗೆಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲಿಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 11

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ.   ಸತ್ಯಮೇವ ಜಯತೇ.   ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ: **ಇಂದ್ರಿಯಸ್ತಂಭನ ಗುಳಿಗೆ,**   ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
30 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
17 ವೈದ್ಯಶಾಲಾ, ಮೈಸೂರು.

ಇನಾಂ !   ಇನಾಂ !!

ಒಂದಾಣೆ ಪೋಸ್ಟೇಜಿನ ಸ್ಟಾಂಪನ್ನು ಕಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
4 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್‌ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ   **ಮದನೋದ್ಭವಗುಳಿಗೆ.**   ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 18

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

23

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರ ಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶುಭಾದಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಅಂದ್ಯ ಶಕೆ ೧೮೪೫ ನೇ ರುಧಿರೋದ್ಗಾರಿನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಏಪ್ರಿಲ್ ತಾ|| ೨೫ ನೆಯ ಭಾನುವಾರ.

ಮದ್ರಾಸ್ ಖಿಲಾಫತ್ ಮಹಾಸಭೆ.

ಮಹಮ್ಮದಾಲಿ ಷೌಕತಾಲಿ ಎಂಬ ಮಹಮ್ಮದೀಯ ಸೋದರರುಗಳು ವಿಶೇಷವಾಗಿ ಸ್ವಮತಾಭಿಮಾನವುಳ್ಳವರುಗಳು. ಇವರುಗಳು ಯುದ್ಧಕಾಲದಲ್ಲಿ ಆಂಗ್ಲಪ್ರಭುತ್ವಕ್ಕೆ ವಿರುದ್ಧವಾಗಿ ತುರ್ಕಿ ಅಫ್ಘಾನಿಸ್ಥಾನದವರನ್ನು ಪ್ರೇರಿಸಿ ಭರತಖಂಡದ ಮೇಲೆ ದಾಳಿಯಿಡಿಸುವ ಪ್ರಯತ್ನದಲ್ಲಿದ್ದರೆಂಬ ಕಾರಣದಿಂದ ಸೆರೆಹಿಡಿಯಲ್ಪಟ್ಟಿದ್ದು, ಈಚೆಗೆ ಕಳೆದ ಡಿಸೆಂಬರಿನಲ್ಲಿ ಸಾರ್ವಭೌಮರ ನೂತನ ಸಂದೇಶದ ಪ್ರಕಾರ ಬಿಡುಗಡೆ ಹೊಂದಿದವರಲ್ಲಿ ಈ ಸಹೋದರರೂ ಸೇರಿದ್ದರು. ಇವರ ಬಂಧವಿಮೋಚನಕಾಲಕ್ಕೆ ಸರಿಯಾಗಿ ಕಾಲಿಫಟ್ ಸಮಸ್ಯೆಯು ಸಂಪ್ರಾಪ್ತವಾಗಿದ್ದುದರಿಂದ ತಮ್ಮ ನಿಸರ್ಗಸ್ವಮತಾಭಿಮಾನಕ್ಕೆ ಅನುಗುಣವಾಗಿ ಇವರು ಕಲೀಫ್ ರಾಜ್ಯದ ಸ್ಥಿತಿಸ್ಥಾಪನೆಗಾಗಿ ವಿಶೇಷ ಶ್ರಮಪಡುತ್ತಿದ್ದಾರೆ. ಅನುಜರಾದ ಮಹಮ್ಮದಾಲಿಯವರು ಸೀಮೆಗೆ ಹೋಗಿರುವ ಕಾಲಿಫಟ್ ಪ್ರತಿನಿಧಿಗಳಲ್ಲಿ ಪ್ರಮುಖರಾಗಿರುತ್ತಾರೆ. ಅಗ್ರಜರಾದ ಷೌಕತಾಲಿಯವರು ಭರತಖಂಡದಲ್ಲಿದ್ದುಕೊಂಡು ಆಂದೋಳನವನ್ನುಂಟುಮಾಡುತ್ತಿದ್ದಾರೆ. ಕಳೆದವಾರ ಇದೇ ಕಾರ್ಯಕ್ಕಾಗಿ ಇವರು ಮದ್ರಾಸಿಗೆ ಬಂದು, ಅಲ್ಲಿಯ ಜಾತೀಯವಾದಿಗಳಿಂದ ವಿಶೇಷವಾಗಿ ಸತ್ಕರಿಸಲ್ಪಟ್ಟು, ೨ ದಿನಗಳಲ್ಲಿ ನಡೆದ ಕಾಲಿಫಟ್ ಮಹಾಸಭೆಗಳಲ್ಲಿ ಅಧ್ಯಕ್ಷರಾಗಿದ್ದುಕೊಂಡು ಬಲು ಹುರುಕಾದ ಭಾಷಣಗಳನ್ನು ಮಾಡಿ ಪ್ರಜೆಗಳನ್ನು ಹುರಿದುಂಬಿಸಿದ್ದಾರೆ. ಮತ್ತು ಅವರ ಭಾಷಣಕ್ಕೆ ಅನುಗುಣಗಳಾದ ನಿರ್ಧಾರಗಳಾದರೂ ಸಭೆಯಲ್ಲಿ ಆಗಿರುತ್ತವೆ. ಸಭೆಗೆ ಮದ್ರಾಸು ಅಧಿಪತ್ಯದ ಅನೇಕ ಭಾಗಗಳಿಂದಲೇ ಅಲ್ಲದೆ ಬೆಂಗಳೂರು, ತಿರುವಾಂಕೂರು, ಹೈದರಾಬಾದು, ಗುಜರಾತು, ಬೊಂಬಾಯಿ, ಕಲ್ಕತ್ತಾ—ಮೊದಲಾದ ಪ್ರಾಂತಗಳಿಂದಲೂ ಅನೇಕಾನೇಕ ಮಹಮ್ಮದೀಯ ಮತಗುರುಗಳೂ ವಿದ್ವಾಂಸರೂ ಬಂದಿದ್ದರು. ಅಲ್ಲದೆ ಹಿಂದೂಗಳಲ್ಲಿ ರಾಜಕೀಯ ಪ್ರಮುಖರಾದ ಮ|| ಸೇಲಂ ವಿಜಯರಾಘವಾಚಾರ್, ಕಸ್ತೂರಿ ರಂಗಯ್ಯಂಗಾರ್, ಎಸ್. ಸತ್ಯಮೂರ್ತಿ, ಎ. ರಂಗಸ್ವಾಮಯ್ಯಂಗಾರ್, ಸಿ. ಪಿ. ರಾಮಸ್ವಾಮಯ್ಯರ್, ದಿ|| ಬ|| ಗೋವಿಂದರಾಘವಯ್ಯರ್, ಮೊದಲಾದವರೂ ಆನಿಬಿಸೆಂಟಮ್ಮನವರೂ ಬಂದಿದ್ದರು. ಒಟ್ಟು ೭-೮ ಸಾವಿರ ಮಂದಿ ಸಭೆಯಲ್ಲಿ ನೆರೆದಿದ್ದರು. ಯಾಕೂಬ್ ಹುಸೇನ್ ಸಾಹೇಬರು ಸ್ವಾಗತಸಂಘಾಧ್ಯಕ್ಷರಾಗಿದ್ದರು.

ಸಭಾಧ್ಯಕ್ಷರಾಗಿದ್ದ ಷೌಕತಾಲಿಯವರು ಮಾಡಿದ ಭಾಷಣದಲ್ಲಿ "ಇಂಗ್ಲೆಂಡು ದೇಶವು ಕೆಲವು ಕಾಲದಿಂದ ತನ್ನ ನೆರೆಹೊರೆಯ ದೇಶಗಳಲ್ಲಿ ಸ್ನೇಹವನ್ನು ಬೆಳಸುತ್ತ, ತನ್ನ ಪ್ರಖ್ಯಾತ ಶತ್ರುವಾದ ಜರ್ಮನಿಯನ್ನೂ ಚಿಕ್ಕಚಿಕ್ಕ ಮುಸಲ್ಮಾನ್ ದೇಶಗಳನ್ನೂ ಕೈಬಿಡುತ್ತ ಬಂದಿತು. ಮೊರಾಕೋವನ್ನೂ ಉತ್ತರ ಆಫ್ರಿಕಾವನ್ನೂ ಹಿಡಿದುಕೊಳ್ಳಲು ಫ್ರೆಂಚರಿಗೆ ಅವಕಾಶ ಕೊಟ್ಟಿತು. ಇಟಲಿಯು ಟ್ರಿಪೋಲಿಯನ್ನು ಆಕ್ರಮಿಸಿಕೊಳ್ಳುವಂತೆ ಮಾಡಿತು. ಪರ್ಷ್ಯವನ್ನು ರಷ್ಯಾವು ಸ್ವಾಧೀನಪಡಿಸಿಕೊಳ್ಳುವಂತೆ ಮಾಡಿತು. ಈಜಿಪ್ಟನ್ನು ತಾನೇ ಆಕ್ರಮಿಸಿತು. ಇದನ್ನೆಲ್ಲಾ ತುರ್ಕಿಯವರೂ ಇತರ ಮುಸಲ್ಮಾನರೂ ಎಷ್ಟೋ ಕಷ್ಟದಿಂದ ನೋಡಿಕೊಂಡು ಸೈರಿಸುತ್ತ ಬಂದರು. ಮತ್ತೂ ಇಂಗ್ಲೆಂಡನ್ನು ತಮ್ಮ ಮಿತ್ರನನ್ನಾಗಿ ತಿಳಿಯುವುದು ತಪ್ಪೆಂದು ಅವರು ಭಾವಿಸಿದರು. ಬಾಲ್ಕನ್ ಯುದ್ಧವು ಅವರ ಊಹೆಯನ್ನು ದೃಢಪಡಿಸಿತು. ಅದರ ಮೇಲೆ ಯೂರೋಪ್ ಮಹಾಯುದ್ಧವು ಆರಂಭವಾದ ಬಳಿಕ ತುರ್ಕಿಯು ಯಾವ ಪಕ್ಷಕ್ಕೆ ಸೇರಬೇಕಾಗಿದ್ದಿತೋ ಹಾಗೆ ಮಾಡಿದುದರಲ್ಲಿ ದೋಷವೇನೂ ಇಲ್ಲ" ಎಂದು ಆರಂಭಿಸಿ, ತುರ್ಕಿಯು ಶತ್ರುಕೋಟಿಯಲ್ಲಿ ಸೇರಿದುದೇ ನ್ಯಾಯವೆಂದು ಸಾಧಿಸಿ, ಕಡೆಗೆ ತುರ್ಕಿಯು ಸೋತರೂ ಧೈರ್ಯದಿಂದ ಯುದ್ಧಮಾಡಿ ತನ್ನ ಸಾಹಸವನ್ನು ಪ್ರಕಟಿಸಿತೆಂದು ಹೇಳಿ ತುರ್ಕಿ ಪಕ್ಷವನ್ನು ಸಮರ್ಥನ ಮಾಡಿದರು. ಆದರೆ ಅದು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಅದೂ ಅದರ ಜತೆಗಾರರ ಪಙ್ಕ್ತಿಯಲ್ಲಿ ಅನುಭವಿಸಬೇಕಾಗಿ ಬಂದಿರುವುದಕ್ಕಾಗಿ ಇವರು ಒಪ್ಪರು. ಈಗ ತುರ್ಕಿಗೆ ಕ್ಷಮೆಯನ್ನು ಕೊಟ್ಟು ಅದನ್ನು ಪೂರ್ವಸ್ಥಿತಿಯಲ್ಲೇ ಇರಿಸುವಂತೆ ಆಂಗ್ಲರು ಮಾಡಬೇಕೆಂದು ಇವರು ಹೇಳಿರುತ್ತಾರೆ. ಹೀಗೆ ಮಾಡುವುದಕ್ಕೆ ಭರತಖಂಡದ ದಾಕ್ಷಿಣ್ಯವನ್ನು ಮುಂದುಮಾಡುತ್ತಾರೆ. ಭರತಖಂಡದ ಹಿಂದೂ ಮುಸಲ್ಮಾನ್ ಸೈನ್ಯವು ಇಂಗ್ಲೀಷರಿಗೆ ಸಹಾಯ್ಯವಾಗಿ ಹೋಗದಿದ್ದರೆ ಇಂಗ್ಲೆಂಡು ಕಳೆದ ಯುದ್ಧದಲ್ಲಿ ಜಯಿಸುತ್ತಲೇ ಇರಲಿಲ್ಲವೆಂತಲೂ, ತುರ್ಕಿಪಕ್ಷಕ್ಕೇ ಜಯವಾಗುತ್ತಿದ್ದಿತೆಂತಲೂ, ಇಂಗ್ಲೆಂಡಿಗೆ ಒಳ್ಳೆಯ ಕಷ್ಟಕಾಲದಲ್ಲಿ ಧನಬಲ ಮನುಷ್ಯಬಲವನ್ನು ಭರತಖಂಡವು ಒದಗಿಸಿಕೊಟ್ಟು ಜಯಸಂಪಾದನೆ ಮಾಡಿಕೊಟ್ಟುದರಿಂದ, ಇಂಗ್ಲೆಂಡು ಈಗ ಅದಕ್ಕೆ ಪ್ರತಿಫಲವಾಗಿ ಭಾರತೀಯರ ಮೊರೆಯನ್ನು ಕೇಳಿ ತುರ್ಕಿಸಮಸ್ಯಾ ಪರಿಷ್ಕಾರದ ಭಾರವನ್ನೆಲ್ಲಾ ತನ್ನ ಮೇಲೆಯೇ ಹಾಕಿಕೊಂಡು, ಇತರ ಮಿತ್ರಮಂಡಲಿಯವರನ್ನು ಸಮಾಧಾನ ಪಡಿಸಿ, ಯುದ್ಧಕ್ಕೆ ಮುಂಚೆ ತುರ್ಕಿಯು ಯಾವ ಯಾವ ಪ್ರದೇಶದ ಮೇಲೆ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಿದ್ದಿತೋ ಅದನ್ನೆಲ್ಲಾ ತುರ್ಕಿಯ ಸ್ವಾಧೀನಗೊಳಿಸಬೇಕೆಂತಲೂ, ಆ ದೇಶಗಳ ಆರ್ಥಿಕಪರಿಸ್ಥಿತಿಯನ್ನು ಸಮಾಚೀನಗೊಳಿಸುವುದಕ್ಕೆ ಬೇಕಿದ್ದರೆ ತುರ್ಕಿಯಿಂದ ತಕ್ಕ ವಾಗ್ದಾನವನ್ನು ತೆಗೆದುಕೊಳ್ಳಬಹುದೆಂತಲೂ, ತುರ್ಕಿಯವರಿಗೂ ಅರಬ್ಬಿಯವರಿಗೂ ಸಂಧಿಮಾಡಬೇಕೆಂತಲೂ, ಮಹಮ್ಮದ್ ಪವಿತ್ರಕ್ಷೇತ್ರಗಳಾದ ಮಕ್ಕಾ, ಮದೀನಾ, ಜರೂಸಲೇಂ ಪ್ರಾಂತಗಳೂ, ಹಾಜೆಜ್, ಖಾಜೆಮೈನ್, ಸಮಾರಾ, ಬಾಗ್ದಾದ್–ಇವುಗಳೆಲ್ಲಾ ಖಲೀಫಾ ಪಾಲನೆಗೇ ಒಳಪಟ್ಟಿರಬೇಕೆಂತಲೂ, ನಮ್ಮ ಆದಿ ಗುರು ಮಹಮ್ಮದರು ಪ್ರಕಟಿಸಿರುವ ಪ್ರಕಾರ ಕೆಂಪುಸಮುದ್ರ, ಅರೇಬಿಯನ್ ಸಮುದ್ರ, ಪರ್ಷಿಯನ್ ಜಲಸಂಧಿ, ಯೂಫ್ರಟಿಸ್ ಟೈಗ್ರೀಸ್ ನದಿಗಳು, ಅವುಗಳ ಎಲ್ಲೆಯಲ್ಲಿರುವ ಅರೇಬಿಯಾ ದೇಶ-ಇವುಗಳೆಲ್ಲಾ ಮುಸಲ್ಮಾನರಲ್ಲದಿರುವ ಜನರ ಸ್ವಾಧೀನಕ್ಕೆ ಎಂದಿಗೂ ಹೋಗಕೂಡದೆಂತಲೂ, ಕಲೀಫಾರವರಿಗೆ ತಮ್ಮ ದೇಶದ ಮೇಲೆಲ್ಲಾ ಸ್ವತಂತ್ರಾಧಿಕಾರವಿದ್ದು ತಮ್ಮ ಯಾತ್ರಾಕ್ಷೇತ್ರಗಳನ್ನೆಲ್ಲಾ ಕಾಪಾಡುವ ಅಧಿಕಾರವೂ ಅದಕ್ಕೆ ತಕ್ಕ ಪರಿಕರಗಳೂ ಇದ್ದೇ ತೀರಬೇಕೆಂತಲೂ, ಇವರು ತಮ್ಮ ಆಶಯವನ್ನು ಸ್ಪಷ್ಟೀಕರಿಸಿದುದಲ್ಲದೆ, ಇದನ್ನು ಗ್ರೇಟ್‌ಬ್ರಿಟನ್ನು ನೆರವೇರಿಸಿಕೊಟ್ಟರೆ ಅದರ ಛತ್ರಾಶಯದೊಳಗೆ ಸುಖವಾಗಿ ತಾವೆಲ್ಲಾ ಬಾಳುವೆವೆಂದೂ, ಇಲ್ಲವಾದರೆ ಆಂಗ್ಲಸಾಮ್ರಾಜ್ಯವನ್ನೇ ಬಿಟ್ಟುಹೋಗುವೆವೆಂದೂ, ಇಸ್ಲಾಮಿಗೆ ವಿರುದ್ಧವಾಗಿರುವ ರಾಜನಿಗಾಗಲೀ ಪ್ರಭುತ್ವಕ್ಕಾಗಲೀ ಅಧೀನವಾಗಿರುವುದು ನರಕಲೋಕನಿವಾಸವೆಂಬುದೇ ನನ್ನಭಾವವೆಂತಲೂ, ಅದಕ್ಕಿಂತಲೂ ಪರಲೋಕ ಸೌಖ್ಯವೇ ನಮಗೆ ಮುಖ್ಯವೆಂತಲೂ ತಮ್ಮ ದೃಢಪ್ರತಿಜ್ಞೆಯನ್ನು ತಿಳಿಯಿಸಿದುದಲ್ಲದೆ, ತಮ್ಮ ಕೊನೆಯ ಪ್ರಯತ್ನಕ್ಕೆ ನಿಲ್ಲುವುದಕ್ಕೆ ಮುಂಚೆ ನಿಬಂಧನಾಸಿದ್ಧವಾದ ರಾಜಭಕ್ತಿಯಿಂದ ಆಂಗ್ಲ ಪ್ರಭುತ್ವದಲ್ಲಿ ಪ್ರಾರ್ಥನೆ ಮಾಡಿಕೊಳ್ಳಲು ತಕ್ಕ ರಾಯಭಾರವನ್ನು ಏರ್ಪಡಿಸಿರುವೆವೆಂದೂ, ಅದು ನಿಷ್ಫಲವಾಗುವುದಾದರೆ ಹಿಂದೂ ಮಹಮ್ಮದೀಯರೆಲ್ಲಾ ಒಂದಾಗಿ ಮ|| ಗಾಂಧಿಯವರ ನಾಯಕತ್ವದಿಂದ ಸತ್ಯಾಗ್ರಹವನ್ನವಲಂಬಿಸಿ ಯಾವ ವಿಷಯದಲ್ಲೂ ಪ್ರಭುತ್ವದವರಿಗೆ ಸಹಾಯ ಮಾಡದಿರುವುದಕ್ಕೆ ಏನೇನನ್ನಾಚರಿಸಬೇಕೋ ಅದಕ್ಕೆ ಒಂದು ಸಂಘವನ್ನು ಸ್ಥಾಪಿಸುವೆವೆಂತಲೂ, ಅದಕ್ಕೆ ಧೀರಾಗ್ರೇಸರರಾದ ಬಾಲಗಂಗಾಧರ ತಿಲಕರು ಸರ್ವಪ್ರಕಾರದಿಂದಲೂ ಸಹಾಯ ಮಾಡುವುದಕ್ಕೆ ವಾಗ್ದಾನಮಾಡಿದ್ದಾರೆಂತಲೂ, ಇನ್ನೂ ದೇಶದ ಮೇಲಿರುವ ಅನೇಕ ಪ್ರಮುಖರು ಇದಕ್ಕೆ ಸಹಾಯ ಮಾಡುವರೆಂತಲೂ, ಸಕಲ ಹಿಂದೂ, ಪಾರ್ಸಿ, ಕ್ರೈಸ್ತರುಗಳ ಸ್ನೇಹ ಸಾನುಭೂತಿಗಳನ್ನು ಕೋರುತ್ತೇವೆಂತಲೂ, ನಾವು ನಮ್ಮ ಇಷ್ಟಾರ್ಥಸಿದ್ಧಿಗಾಗಿ ಪ್ರಭುತ್ವಕ್ಕೆ ಸಹಾಯಮಾಡುವುದನ್ನು ಬಿಡುವುದು ಮಾತ್ರವೇ ಅಲ್ಲದೆ ಯುದ್ಧದ ಸಾಲ ಕೊಡುವುದನ್ನೂ ಚಂದಾ ಕೊಡುವುದನ್ನೂ ತಿರಸ್ಕರಿಸುವುದಕ್ಕೂ, ಪ್ರಭುತ್ವದವರಿಂದ ಕೊಡಲ್ಪಟ್ಟ ಬಿರುದುಗಳನ್ನೂ ಶಾಸನ ಸಭಾಸಭಿಕತ್ವವನ್ನು ನಿರಾಕರಿಸಿಬಿಡುವುದಕ್ಕೂ, ಸರ್ಕಾರದ ಸಿವಿಲ್ ಉದ್ಯೋಗಗಳಿಗೂ, ಪೊಲೀಸು, ಸೈನ್ಯ ಮೊದಲಾದ ಸೈನಿಕೋದ್ಯೋಗಗಳಿಗೂ ಪರಿತ್ಯಾಗ ಪತ್ರವನ್ನು ಕೊಡುವುದಕ್ಕೂ ಪ್ರಯತ್ನಮಾಡಲ್ಪಡುವುದೆಂತಲೂ, ಬಳಿಕ ಸರ್ಕಾರಕ್ಕೆ ಎಲ್ಲ ತೆರದ ಕಂದಾಯಗಳನ್ನು ಕೊಡುವುದನ್ನೂ ತಿರಸ್ಕರಿಸಲಾಗುವುದೆಂತಲೂ, ಹೀಗೆಲ್ಲಾ ಮಾಡುವುದೆಂದರೆ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದೆಂದೇ ಅರ್ಥವೆಂತಲೂ ಹೇಳಿದರು. ಕಡೆಗೆ ಈ ಕಾರ್ಯಸಾಧನೆಗೆಲ್ಲಾ ೩೦-೪೦ ಲಕ್ಷ ದ್ರವ್ಯವಾಗಬೇಕೆಂತಲೂ ಎಲ್ಲರೂ ಸಹಾಯಮಾಡಬೇಕೆಂತಲೂ ಕೋರಿದರು.

ಸಭೆಯಲ್ಲಿ ಉದ್ದೇಶಕ್ಕೆ ತಕ್ಕ ನಾಲ್ಕಾರು ನಿರ್ಧಾರಗಳಾದುವು. ಪ್ರಭುತ್ವದವರಿಗೆ ಸಹಾಯಮಾಡಬಾರದೆಂಬ ತೀರ್ಮಾನವೂ ಆಯಿತು. ಅದನ್ನು ಆಚರಣೆಗೆ ತಂದುದನ್ನು ತೋರಿಸುವುದಕ್ಕಾಗಿ ಸಭಿಕರಲ್ಲೊಬ್ಬ ಮಹಮ್ಮದೀಯರು ತಮಗೆ ಬಂದಿದ್ದ ಖಾನ್ ಬಹದೂರ್ ಬಿರುದನ್ನು ನಿರಾಕರಿಸಿಬಿಟ್ಟರು. ಕ್ರಮಪ್ರಕಾರ ಕಂದಾಯ ಕೊಡುವುದನ್ನು ನಿಲ್ಲಿಸಿಬಿಡುವವರೆಗೂ ಆಂದೋಳನವನ್ನು ಮಾಡಬೇಕೆಂಬ ನಿರ್ಧಾರವೂ ಆಯಿತು.

ಖಿಲಾಫತ್ ಸಮಸ್ಯೆಯ ಸಂಬಂಧವಾಗಿ ಮಹಮ್ಮದೀಯ ಸಹೋದರರ ಕಷ್ಟದಲ್ಲಿ ಹಿಂದೂಗಳು ಭಾಗಿಗಳಾಗಬೇಕಾದುದು ಯುಕ್ತವಾದರೂ, ಕಷ್ಟನಿವಾರಣೆಗಾಗಿ ಇವರು ನಿರ್ಧರಿಸುವ ಒರಟು ದಾರಿಯನ್ನು ಹಿಂದೂ ಸಂಘವೆಲ್ಲವೂ ಒಪ್ಪಲಾರದು. ಅನೇಕ ಮಹಮ್ಮದೀಯರೂ ಒಪ್ಪಲಾರರು. ಷೌಕತಾಲಿಯವರು ಹೇಳುವಂತೆ ಬ್ರಿಟನ್ನಿನ ಮೇಲೆ ತುರ್ಕಿಯ ವಿಷಯಕವಾದ ದ್ರೋಹಚಿಂತನೆಯನ್ನೇ ಸಮರ್ಥಿಸಿ, ಅದಕ್ಕೆ ಮುಯ್ಯಾಗಿ ತುರ್ಕಿಯು ಜರ್ಮನಿಯ ಕಡೆಗೆ ಸೇರಿತೆಂದು ಕೇಣಸರದ ಮಾತನ್ನು ಈಗ ಆಡುವುದು ಅಪ್ರಸ್ತುತವು. ಕೇಣವನ್ನು ಗೊಂಡ ತುರ್ಕಿಗೆ ಅದಕ್ಕೆ ತಕ್ಕ ಫಲವನ್ನು ಅನುಭವಿಸಲು ಬಿಡಬೇಕಾಗುವುದು. ಅದನ್ನು ಬಿಟ್ಟು ಭರತಖಂಡವು ಈ ಮಧ್ಯದಲ್ಲಿ ಪ್ರವರ್ತಿಸಿ, ತಾನು ಯುದ್ಧದಲ್ಲಿ ಮಾಡಿದ ಸಹಾಯವನ್ನು ತೋರಿಸಿ, ಅದರ ದಾಕ್ಷಿಣ್ಯದಿಂದ ತುರ್ಕಿಯನ್ನುದ್ಧಾರಮಾಡಬೇಕೆಂದು ಬೇಡುವುದೂ, ಅದನ್ನು ಕೊಡದಿದ್ದರೆ ಪ್ರತಿಕ್ರಿಯೆಯನ್ನು ಮಾಡುತ್ತೇವೆಂದು ಬೆದರಿಸುವುದೂ ಸಹ ಒಂದು ಕೈಯಲ್ಲಿ ಭಿಕ್ಷಾಪಾತ್ರೆಯನ್ನೂ ಒಂದು ಕೈಯಲ್ಲಿ ಕೋವಿಯನ್ನೂ ಹಿಡಿದುಕೊಂಡು ದಗುಡಭಿಕ್ಷೆ ಬೇಡಿದಂತಾಗುವುದು. ಅಲ್ಲದೆ ತುರ್ಕಿಯುದ್ಧಾರಕ್ಕಾಗಿ ಈಗ ಪ್ರವೇಶಿಸಿದ ಮಧ್ಯಸ್ಥಗಾರರು, ಬ್ರಿಟನ್ನು ಬಿಕ್ಕಟ್ಟಿನಲ್ಲಿ ಬಿದ್ದಿದ್ದಾಗ್ಗೆ ಶತ್ರು ಪಕ್ಷಕ್ಕೆ ಸೇರುತ್ತಿದ್ದ ತುರ್ಕಿಯನ್ನು ತಡೆಯುವುದಕ್ಕೆ ಯಾವುದೊಂದು ಯತ್ನವನ್ನೂ ಮಾಡದೆ ಹೋದುದೇಕೋ ? ಒಂದುವೇಳೆ ಶತ್ರುಮಂಡಲಿಗೇ ಜಯವಾಗಿದ್ದರೆ ತುರ್ಕಿ ಜರ್ಮನಿಗಳನ್ನು ಬೇಡಿ ಆಂಗ್ಲೋ ಸಾಮ್ರಾಜ್ಯವನ್ನು ಯಥಾಸ್ಥಿತವಾಗಿ ಉಳಿಯಿಸಲು ಈಗ ತುರ್ಕಿಗೆ ಸಹಾಯ ಮಾಡಲುದ್ದೇಶಿಸಿರುವಂತೆ ಆಗಲೂ ಮಾಡುತ್ತಿದ್ದರೆ ? ಮಾಡಿದ್ದರೆ ಅದು ಸಾಧ್ಯವಾಗುತ್ತಿತ್ತೆ ? ಸಂಧಿ ಪರಿಷ್ಕಾರವು ಒಂದು ರಾಷ್ಟ್ರದ ಅಧೀನದಲ್ಲಿಲ್ಲದಿರುವಾಗ ಬ್ರಿಟನ್ನೊಂದೇ ತನ್ನ ಜತೆಗಾರರ ಅಭಿಪ್ರಾಯವನ್ನೆಲ್ಲಾ ಧಿಕ್ಕರಿಸಿ, ತುರ್ಕಿಯುದ್ಧಾರಕ್ಕೆ ಸಹಾಯ ಮಾಡಿದರೆ ಅದು ನೆರವೇರುವುದೇ ? ಒಂದುವೇಳೆ ನೆರವೇರಿದರೂ ಮುಂದೆ ಈಗಣಂಥ ರಾಜಕೀಯ ಛಿದ್ರಗಳು ಯಾವಾಗಲಾದರೂ ಹುಟ್ಟಿದರೆ ಆಗ್ಗೆ ತುರ್ಕಿಯು ಬ್ರಿಟನ್ನಿಗೆ ವಿರುದ್ಧವಾಗಿ ಶತ್ರುಪಕ್ಷಕ್ಕೆ ಸೇರುವುದಿಲ್ಲವೆಂದು ಯಾರು ಭರವಸೆ ಕೊಡಬಲ್ಲರು ? ತುರ್ಕಿಯವರು ಭಾರತೀಯರ ಮಾತಿಗೆ ಕಟ್ಟುಬಿದ್ದಿರುವುದೆಲ್ಲಿ ? ಇತ್ಯಾದಿ ಪ್ರಶ್ನೆಗಳೆಲ್ಲಾ ಹುಟ್ಟುವುವು. ಗೆದ್ದವರು ತಮ್ಮ ಕಷ್ಟದ ಪರಿಮಾರ್ಜನಕ್ಕೆ ಉತ್ತರೋತ್ತರನಿಷ್ಕಂಟಕತೆಯನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡಿರುವುದು ಸಹಜವಾಗಿರುತ್ತದೆ. ಆದುಕಾರಣ ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ, ಸಾಮ್ರಾಜ್ಯದ ಮುಖ್ಯಭಾಗವಾದ ಭರತಖಂಡದ ಮಾತಿನ ದಾಕ್ಷಿಣ್ಯವನ್ನು ಮೀರಲಾರದ ಬ್ರಿಟನ್ನಿನ ಮೂಲಕ ಏರಿ ನೀರು ಎರಡೂ ಉಳಿದುಕೊಳ್ಳುವಂಥ ವ್ಯವಸ್ಥೆಯು ನಮಗೆ ಆಗಬೇಕಾಗಿದ್ದರೆ, ನಾವು ಬೆದರಿಸಿ ಕಾರ್ಯಸಾಧನೆ ಮಾಡಿಕೊಳ್ಳುತ್ತೇವೆಂಬ ಹಂಬಲನ್ನು ಬಿಡುವುದೇ ಲೇಸು. ಬ್ರಿಟನ್ನು ದಯಾದೃಷ್ಟಿಯಿಂದಲ್ಲದೆ ಅಂಜುಬುರುಕತನದಿಂದ ಇದನ್ನು ನೆರವೇರಿಸಿಕೊಡುವುದೆಂದು ಭಾವಿಸುವುದು ಭ್ರಮೆ. ಈ ಬಿರುನುಡಿ ಬೆದರಿಸುವಿಕೆಗಳಿಂದ ಬ್ರಿಟನ್ನಿನ ಹೃದಯವು ಮತ್ತಷ್ಟು ಕಠಿನವೇ ಆದೀತು. ಆಂಗ್ಲಛತ್ರಾಶ್ರಯ ಸಂಬಂಧವನ್ನು ಸಂಪೂರ್ಣವಾಗಿ ಕಳೆದುಕೊಂಡು ಸಂಪೂರ್ಣ ಸ್ವಾತಂತ್ರ್ಯದಿಂದ ಸುಖವನ್ನು ಅನುಭವಿಸಬಲ್ಲೆವೆಂದು ಸ್ವಪ್ನ ಕಾಣುತ್ತಿರುವ ಕೆಲವು ಜನ ಹೈಂದವರು ಇದೊಂದು ಸಾಧನ ಸಮಯವೆಂದು ಮಹಮ್ಮದೀಯ ಸಹೋದರರಿಗೆ ಸಹಾಯಕರಾಗಿ ನಿಂತರೂ ನಿಲ್ಲಬಹುದು. ಇದೆಲ್ಲಾ ವಾಮಮಾರ್ಗವಾಗಿರುವ ಕಾರಣ ತುರ್ಕಿಗೇ ಆಗಲೀ ಭರತಖಂಡಕ್ಕೇ ಆಗಲೀ ಈ ತೆರದ ಪ್ರವರ್ತನವು ಸುಖದಾಯಕವಾಗಲಾರದು. ಈ ನೆಪದಿಂದ ಭರತಖಂಡದಲ್ಲಿ ಒಂದು ಚಳವಳವೆದ್ದಂತಾಗುವುದು. ಸತ್ಯಾಗ್ರಹವು ದುರಾಗ್ರಹವಾಗುವುದು. ಸಾರ್ವಭೌಮರ ಸಂದೇಶದಲ್ಲಿ ಸೂಚಿಸಲ್ಪಟ್ಟ ಶಾಂತಿ ನಿರೀಕ್ಷೆಗೂ ಕೂಡ ಭಂಗವನ್ನು ತಂದ ದೋಷವು ಇದರಿಂದ ಭಾರತೀಯರ ಮೇಲೆ ಹೊತ್ತಂತಾಗುವುದು. ಆದುಕಾರಣ ಕಾಲಿಫಟ್ಟಿನ ವಿಷಯದಲ್ಲಿ ಪ್ರತಿಕ್ರಿಯೆಯ ಭಯಪ್ರದರ್ಶನವನ್ನು ಬಿಟ್ಟು ಸೌಮ್ಯಮಾರ್ಗದಲ್ಲಿ ಭಾರತೀಯರು ಪ್ರವರ್ತಿಸುವುದೇ ಸುಖಪರಿಣಾಮಿಯು.

ಒಳದೇಶ ವೃತ್ತಾಂತಗಳು.

ಕಳೆದ ವಾರ ಬೆಂಗಳೂರಿನಲ್ಲಿ ಅನುಕೂಲವಾದ ಮಳೆಯಾಗಿದೆ.

ದಸರಾ ಕಾಲದಲ್ಲಿ ನಡೆಯುತ್ತಿದ್ದ ವಸ್ತುಪ್ರದರ್ಶನವನ್ನು ಇತಃಪರ ೩ ವರ್ಷಕ್ಕೊಂದು ಸಲ ನಡೆಸುವಂತೆ ಸರ್ಕಾರದವರು ನಿರ್ಧರಿಸಿದ್ದಾರೆ. ಆದುಕಾರಣ ಇನ್ನೆರಡು ವರ್ಷವೂ ಪ್ರದರ್ಶನವಿಲ್ಲ. ಉಚಿತವಾಯಿತು.

ಡಾಕ್ಟರುಗಳಾದ ಮ|| ಬಿ. ನಂಜಪ್ಪನವರು ಹೆಡ್‌ಕ್ವಾರ್ಟರ್ ಎಸ್ಟಾಬ್ಲಿಷ್‌ಮೆಂಟಿನಿಂದ ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಮ|| ಸಿ. ಅಪ್ಪಾದೊರೆ ಮೊದಲಿಯಾರರು ವರ್ಗಾಯಿಸಲ್ಪಟ್ಟಿದ್ದಾರೆ.

ಆರಾಧ್ಯರ ಕಾನ್ಫರೆನ್ಸು ಈ ದಿವಸ ಬೆಳಗಿನ ೮ ಗಂಟೆಗೆ ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಸದ್ವಿದ್ಯಾ ಪಾಠಶಾಲೆಯ ಕಟ್ಟಡದಲ್ಲಿ ಮ|| ಬಿ. ಬಸವಾರಾಧ್ಯ, ಬಿ.ಎ.ಬಿ.ಎಲ್. ರವರ ಅಧ್ಯಕ್ಷತೆಯಲ್ಲಿ ಕೂಡುವುದಾಗಿದೆ.

ಸಂತೆಮರಹಳ್ಳಿ ಎಲ್ಲೆಕಟ್ಟಿನ ಉಸ್ತುವಾರಿ ಮೇಲಿದ್ದ ಅ|| ಪೊ|| ಸೂಪರಿಂಟೆಂಡೆಂಟ್ ಮಿ|| ನಟರಾಜಯ್ಯರು ೬ ವಾರ ರಜಾ ಪಡೆದಿರುವುದರಿಂದ ಆ ಸ್ಥಳಕ್ಕೆ ಮದ್ದಗಿರಿ ತಾ|| ಪೊ|| ಇನ್ಸ್‌ಪೆಕ್ಟರಾದ ಮಿ|| ಸಿ. ನಾರಿಸ್‌ರವರು ನಿಯಮಿತರಾಗಿದ್ದಾರೆ.

ಬೆಂಗಳೂರು ಕಲೇಜಿಯೇಟ್ ಹೈಸ್ಕೂಲಿನಲ್ಲಿ ಕಳೆದ ತಾ|| ೨೩ ರೊಳಗೆ ಬೊಂಬಾಯಿಯ ಮಿ|| ಎಂ. ಎ. ಜಿನ್ನಾರವರು ನೂತನ ರಾಜಕೀಯ ಶಾಸನ ಸಂಬಂಧವಾಗಿ ಉಪನ್ಯಾಸ ಮಾಡಿದರು. ಮಿ|| ಶಂಕರನಾರಾಯಣರಾಯರು ಅಧ್ಯಕ್ಷರಾಗಿದ್ದರು.

ಅ|| ಕಮಿಷನರುಗಳಾದ ಮ|| ಬಿ. ಟಿ. ಸೀತಾರಾಮಯ್ಯನವರು ಚಿಕ್ಕಮಗಳೂರು ಡಿ|| ಟ್ರಿಜರಿಯಿಂದ ಹಾಸನ ಡಿಸ್ಟ್ರಿಕ್ಟ್ ಟ್ರಿಜರಿಗೂ, ಮ|| ಬಿ. ಎಂ. ವೆಂಕಟೇಶಯ್ಯನವರು ಹಾಸನ ಡಿಸ್ಟ್ರಿಕ್ಟ್ ಟ್ರಿಜರಿಯಿಂದ ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರಿಜರಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ರೆ|| ಕಮಿಷನರಾದ ಮಿ|| ಕೆ. ಚಾಂಡಿಯವರು ೧೫ ದಿವಸಗಳ ರಜಾ ಪಡೆದಿರುವುದರಿಂದ ಅವರ ಮೊದಲನೆ ಅಸಿಸ್ಟೆಂಟರಾದ ಮಿ|| ಸಿ. ಎಸ್. ಕುಪ್ಪುಸ್ವಾಮಯ್ಯಂಗಾರರು ತಮ್ಮ ಕೆಲಸದ ಜತೆಯಲ್ಲಿ ರೆ|| ಕಮಿಷನರ ಕೆಲಸವನ್ನೂ ನೋಡಿಕೊಳ್ಳುವಂತೆ ಏರ್ಪಡಿಸಲ್ಪಟ್ಟಿರುವರು.

ಹಾಸನ ಡಿಸ್ಟ್ರಿಕ್ಟ್ ಡಿ|| ಕಮಿಷನರಾದ ಮ|| ಬಿ. ವೆಂಕೋಬರಾಯರು ೮ ದಿನಗಳ ರಜಾಪಡೆದಿರುವುದರಿಂದ ಆ ಕಾಲದಲ್ಲಿ ಅಲ್ಲಿಯ ಸಬ್ ಡಿವಿಜನ್ ಆಫೀಸರಾದ ಮ|| ಜಿ. ರುದ್ರಪ್ಪನವರು ತಮ್ಮ ಕೆಲಸದ ಜತೆಗೆ ಡಿ|| ಕಮಿಷನರ ಛಾರ್ಜನ್ನು ವಹಿಸಿರಲು ಅಪ್ಪಣೆಮಾಡಲ್ಪಟ್ಟಿದ್ದಾರೆ.

ತುಮಕೂರಿನ ಮ|| ಅಡ್ವೋಕೇಟ್ ರಂಗಯ್ಯಂಗಾರ್ಯರು ಅಲ್ಲಿಯ ಡಿ|| ಕಮಿಷನರಾದ ಮ|| ಸಿರ್ಸಿ ಆನಂದರಾಯರ ವಿಷಯದಲ್ಲಿ ನಿಂದಾಕರವಾದ ಲೇಖನವನ್ನು ವೃತ್ತಪತ್ರಿಕೆಗೆ ಬರೆದಿದ್ದ ಕಾರಣ ೨ ತಿಂಗಳ ವರೆಗೆ ಅವರು ಅಡ್ವೋಕೇಟ್ ಕೆಲಸವನ್ನು ಬಿಟ್ಟಿರಬೇಕೆಂಬ ದಂಡನೆಮಾಡಲ್ಪಟ್ಟಿರುವುದು.

ಬೆಂಗಳೂರು ಅರಳೆಪೇಟೆ ಮ|| ಯಜಮಾನ್ ಬಸವಪ್ಪನವರ ಜ್ಯೇಷ್ಠಕುಮಾರ ಮ|| ಗಂಗಪ್ಪನವರಿಗೆ ಮ|| ಶಂಕರಣ್ಣನವರ ಬಸವಪ್ಪನವರ ಕುಮಾರಿ ಸೌ|| ಶಿವಮ್ಮನನ್ನು ಕೊಟ್ಟು ವಿವಾಹಮಹೋತ್ಸವವು ಬೆಂಗಳೂರು ಅರಳೆಪೇಟೆ ಶಂ|| ಶಿವಪ್ಪನವರ ಮನೆಯಲ್ಲಿ ಕಳೆದ ತಾ|| ೨೨ ನೆ ಗುರುವಾರ ಬಹಳ ವಿಜೃಂಭಣೆಯಿಂದ ನಡೆಯಿತು.

ಮ|| ಎಂ. ಬಸವಯ್ಯನವರು ಗತಿಸಿದುದರಿಂದ ನಿಯಮ ನಿರ್ಮಾಣ ಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಅವರ ಸ್ಥಾನಕ್ಕೆ ಮತ್ತೊಬ್ಬರನ್ನು ಆರಿಸುವ ಕಾರ್ಯವು ಮೇ ತಿಂಗಳಲ್ಲಿ ಕೂಡುವ ಸಭೆಯಲ್ಲಿ ಜರುಗುತ್ತದೆ. ಅದಕ್ಕೆ ಉಮೇದುವಾರರಾಗಿ ನಿಲ್ಲಬೇಕೆನ್ನುವವರು ಮೇ ತಾ|| ೧೦ ರೊಳಗಾಗಿ ಚೀಫ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕಾಗಿದೆ.

ತುಮಕೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಎಂ. ಅಬ್ದುಲ್ ಹಕ್‌ರವರು ಮೆ ತಾ|| ೨೦ ರ ವರೆಗೆ ರಜಾಪಡೆದಿರುವುದರಿಂದ ತುಮಕೂರು ಡಿ|| ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾದ

|| ಎಂ. ಲಕ್ಷ್ಮಣಶಾಸ್ತ್ರಿಯವರು ತಮ್ಮ ಕೆಲಸದ ಜತೆಗೆ ಪೊಲೀಸ್ ಸೂ|| ದ್ಯೋಗವನ್ನು ನೋಡಿಕೊಳ್ಳುವಂತೆ ನಿಯಮಿತರಾಗಿದ್ದಾರೆ.

ನಮ್ಮ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರಾದ ಮ|| ಬಾ|| ಸುಂದರಯ್ಯನವರ ೨ನೆ ಮಗನೂ ೧೫ ವರ್ಷ ವಯಸ್ಕನೂ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಈ ಸಲ ಹೋಗಿದ್ದವನೂ ಚುರುಕುಬುದ್ಧಿಯು ವಿದ್ಯಾರ್ಥಿಯೂ ಆಗಿದ್ದ ಸುಬ್ರಹ್ಮಣ್ಯಂ ಎಂಬಾತನು ಕೆಲದಿನಗಳಿಂದ ಅಸ್ವಸ್ಥನಾಗಿದ್ದು ಕಳೆದ ತಾ|| ೨೧ ರ ಬೆಳಗ್ಗೆ ವಿಧಿವಶನಾದನೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಕೊನ್ನಿನ ಮತ್ತು ಇತರ ಸಾಂಕ್ರಾಮಿಕ ರೋಗಿಗಳ ವೈದ್ಯಾಲಯವು ಬೆಂಗಳೂರಿನ ಚಾಮರಾಜಮೊಹಲ್ಲಾ ಮೈಸೂರುರೋಡು ಎಕ್ಸ್‌ಟೆನ್ಷನ್ನಿನ ಬಳಿಯ ಬಯಲಿನಲ್ಲಿ ಕಟ್ಟಬಹುದೆಂದು ಸ್ಯಾನಿಟರಿ ಕಮಿಷನರು ಸೂಚನೆ ಕೊಟ್ಟಿರಲು, ದಿವಾನ್ ಸಾಹೇಬರವರು ಸ್ವತಃ ಆ ಸ್ಥಳವನ್ನು ಪರೀಕ್ಷಿಸಿ, ಅಂಥ ಕೆಟ್ಟ ರೋಗಗಳ ವೈದ್ಯಾಲಯವನ್ನು ಜನವಸತಿಯ ಸಮೀಪ ಸ್ಥಲದಲ್ಲಿ ಕಟ್ಟುವುದು ಅಪಾಯಕರವೆಂದು ಗೊತ್ತುಮಾಡಿ, ಆ ಸ್ಥಲವನ್ನು ನಿರಾಕರಿಸಿದರಂತೆ. ಸ್ಯಾನಿಟರಿ ಕಮಿಷನರಿಗೇ ಇಷ್ಟು ತಿಳಿಯದೆ ಹೋದುದು ಆಶ್ಚರ್ಯವೇ ಸರಿ.

ಭರತಖಂಡದ ವೃತ್ತಾಂತಗಳು.

ಪ್ರಿನ್ಸ್‌ಆಫ್‌ವೇಲ್ಸ್‌ರವರು ಬರುವ ಡಿಶಂಬರ್ ತಿಂಗಳ ಕಡೆಯಲ್ಲಿ ಭರತಖಂಡಕ್ಕೆ ಬಂದು ೩ ತಿಂಗಳ ಕಾಲ ಈ ದೇಶದಲ್ಲಿ ಸಂಚರಿಸುವರು.

ಸಾಮ್ರಾಜ್ಯಶಾಸನಸಭೆಯಲ್ಲಿ ಸಭಿಕರಾಗಿದ್ದ ಆ|| ರಾ|| ಬ|| ಸೀತಾನಾಥರಾಯರವರು ಕಳೆದ ತಾ|| ೧೨ ರಲ್ಲಿ ವಿಷಜ್ವರದಿಂದ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಬೊಂಬಾಯಿ ಕಲ್ಕತ್ತಾ ಟಂಕಸಾಲೆಗಳಲ್ಲಿ ಕಳೆದ ಮಾರ್ಚಿ ತಿಂಗಳವರೆಗೆ ೨ ಕೋಟಿಯ್ಯೂ ೫ ಲಕ್ಷ ಚಿಲ್ಲರೆ ರೂಪಾಯಿಗಳನ್ನು ಮುದ್ರಿಸಿದ್ದಾರೆ. ಕಳೆದ ೧೯೧೯ ನೆ ಏಪ್ರಿಲ್ ತಿಂಗಳಿಂದ ಈ ಮಾರ್ಚಿಯವರೆಗೂ ೩,೬೬,೨೬,೮೫೪ ರೂ.ಗಳನ್ನು ಮುದ್ರಿಸಿದ್ದಾರೆ.

ಪೆಷಾವರಿನಲ್ಲಿ ಒಬ್ಬ ಆಂಗ್ಲೋದ್ಯೋಗಿಯು ಮನೆಯಲ್ಲಿಲ್ಲದ ಕಾಲದಲ್ಲಿ ರಾತ್ರಿವೇಳೆ ಕೆಲವರು ಪಠಾಣರು ಮನೆಯನ್ನು ಮುತ್ತಿ ಬಾಗಿಲನ್ನೊಡೆದು ಒಳಗಿದ್ದ ಆತನ ಪತ್ನಿಯನ್ನು ಎತ್ತಿಕೊಂಡು ೨೫ ಮೈಲಿಗಳ ದೂರ ಹೋಗಿರಲು, ಸೈನಿಕರು ಹೋಗಿ ಸಾಹಸಮಾಡಿ ಆಕೆಯನ್ನು ಬಿಡಿಸಿ ತಂದರು.

ಕರಾಚಿಯಲ್ಲಿ ಕಳೆದ ತಾ|| ೧೩ ರಲ್ಲಿ ಬೆಂಕಿಬಿದ್ದು ೪ ಲಕ್ಷ ರೂ. ಬೆಲೆಯಿಂದ ಕೊಂಡಿದ್ದ ಲಕ್ಷಾಂತರ ದೂದಿಬೇಲುಗಳು ಭಸ್ಮವಾದುವೆಂದೂ ಅದರ ಈಗಣ ಬೆಲೆಯು ೧೨ ಲಕ್ಷವೆಂದೂ ಗೊತ್ತಾಗಿದೆ. ಈ ಕೆಲಸವು ಯಾರೋ ದುರ್ಮಾರ್ಗರಿಂದ ಮನಃಪೂರ್ವಕವಾಗಿ ಮಾಡಲ್ಪಟ್ಟಿರಬೇಕೆಂದು ಊಹಿಸಲ್ಪಟ್ಟಿದೆ.

ಕಳೆದವಾರ ಹೈದರಾಬಾದಿನಲ್ಲಿ ನೂತನವಾದ ಹೈಕೋರ್ಟು ಭವನದ ಪ್ರವೇಶ ಮಹೋತ್ಸವವು ಜರುಗಿತು. ನೈಜಾಂರವರು ಆಗಣ ಮಹಾಸಭೆಗೆ ದಯಮಾಡಿಸಿದ್ದರು. ಆ ಕಟ್ಟಡವು ಭರತಖಂಡದಲ್ಲಿರುವ ಎಲ್ಲಾ ಹೈಕೋರ್ಟು ಮಂದಿರಗಳಿಗಿಂತಲೂ ಭವ್ಯವಾಗಿರುತ್ತ ೨೦ ಲಕ್ಷ ರೂ. ಗಳ ವೆಚ್ಚದಿಂದ ಕಟ್ಟಲ್ಪಟ್ಟಿದೆ. ಶಿಲ್ಪಕಾರ್ಯವು ಶ್ಲಾಘನೀಯವಾಗಿ ಹೈದರಾಬಾದು ಪಟ್ಟಣಕ್ಕೆ ವಿಶೇಷಾಲಂಕಾರಭೂಷವಾಗಿದೆ.

ಭರತಖಂಡದಲ್ಲೆಲ್ಲಾ ಆಕಾಶವಿಮಾನಗಳ ಸಂಚಾರದೇರ್ಪಾಟನ್ನು ಮಾಡಿಸುವುದಕ್ಕಾಗಿ ಸೀಮೆಯಲ್ಲಿರುವ ರಾಯಲ್ ಏರೋ ಕ್ಲಬ್ಬಿನವರಿಂದ ನಿಯಮಿಸಲ್ಪಟ್ಟಿರುವ ಉದ್ಯೋಗಿಗಳು ಮದ್ರಾಸಿಗೆ ಬಂದು, ಅಲ್ಲಿಯ ಆಂಗ್ಲವರ್ತಕರೊಡನೆ ಮಾತನಾಡಿ ಒಂದು ಸಂಘವನ್ನು ಸ್ಥಾಪಿಸಿದರು. ಇವರು ಮದ್ರಾಸು ಪಟ್ಟಣದ ಮೇಲೆ ದಕ್ಷಿಣದೇಶದಲ್ಲೆಲ್ಲಾ ಆಕಾಶವಿಮಾನಗಳ ಸಂಚಾರದ ಏರ್ಪಾಟನ್ನು ಮಾಡುವವರಾಗಿದ್ದಾರೆ.

ಸೀಮೆಗೆ ಪ್ರಯಾಣ ಮಾಡಿದ ಲಾರ್ಡ್ ಸಿಂಹರವರಿಗೆ ಬೀಳ್ಕೊಡುವ ಸಮಾರಂಭವನ್ನು ಕಲ್ಕತ್ತಾದ ಇಂಡಿಯನ್ ಅಸೋಸಿಯೇಷನ್ನಿನವರು ಮಾಡಿದಾಗ್ಗೆ ಸಿಂಹರವರು ಮಾಡಿದ ಭಾಷಣದಲ್ಲಿ ಉಗ್ರವಾದಿಗಳ ಸಂಗವು ಮಿತವಾದಿಗಳಿಗೆ ತಕ್ಕುದಲ್ಲವೆಂದು ಮೊದಲಾಗಿ ಹೇಳಿ ಮಿತವಾದಿಗಳ ಪ್ರವರ್ತನವನ್ನು ಶ್ಲಾಘಿಸಿದರು. ಇದು ಈ ದೇಶದ ಉಗ್ರವಾದಿಗಳನ್ನೆಲ್ಲಾ ರೇಗಿಸಿಬಿಟ್ಟಿದೆ. ವಾಚಾಮಗೋಚರವಾಗಿ ಅವರನ್ನು ನಿಂದಿಸುವುದಕ್ಕೆ ತೊಡಗಿದ್ದಾರೆ.

ಮದ್ರಾಸಾಧಿಪತ್ಯದಲ್ಲಿ ಆಹಾರಧಾನ್ಯಗಳ ಮೇಲೆ ನಿರ್ಬಂಧವಿದ್ದಲ್ಲಿದ್ದವರೆಗೂ ಅಕ್ಕಿಯ ಬೆಲೆಯು ಒಂದು ಬಿಗಿಯಲ್ಲಿದ್ದಿತು. ನಿರ್ಬಂಧವು ತಪ್ಪಿಸಲ್ಪಟ್ಟ ಕೂಡಲೇ ವರ್ತಕರು ಬೆಲೆಯನ್ನು ಹೆಚ್ಚಿಸಿದರು. ಈಗ ಒಂದು ಕಡೆಯಿಂದ ಮತ್ತೊಂದು ಕಡೆಗೆ ಯಾವ ಧಾನ್ಯವನ್ನೂ ನಿರಾತಂಕವಾಗಿ ಸಾಗಿಸಬಹುದೆಂಬ ಅಪ್ಪಣೆಯಾದ ಬಳಿಕ ಉತ್ತರದೇಶದಿಂದ ಧಾನ್ಯಗಳು ದಕ್ಷಿಣದೇಶಕ್ಕೆ ವಿಶೇಷವಾಗಿ ಬರುತ್ತಿರುವುದರಿಂದ ಬೆಲೆಗಳು ಇಳಿಯುತ್ತಿವೆ.

ಜಪಾನರು ಬೊಂಬಾಯಿಯಲ್ಲಿ ಭೂಮಿಗಳನ್ನು ಕೊಂಡು ಸ್ಥಿರಾಸ್ತಿಯನ್ನು ಮಾಡುತ್ತಿದ್ದಾರೆ. ಇದು ಆಗಬಹುದೇ ? ಎಂದು ಸಾಮ್ರಾಜ್ಯಶಾಸನಸಭೆಯಲ್ಲಿ ಪ್ರಶ್ನೆಮಾಡಲ್ಪಡಲು, ವ್ಯಾಪಾರಾರ್ಥವಾಗಿ ಅವರು ಎಲ್ಲೋ ಅಲ್ಪಸ್ವಲ್ಪ ನಿವೇಶನವನ್ನು ಆರ್ಜಿಸುತ್ತಿದ್ದಾರೆಯೇ ಹೊರತು ವಿಸ್ತಾರವಾದ ಪ್ರದೇಶವನ್ನು ಕೊಳ್ಳುತ್ತಲಿಲ್ಲವೆಂತಲೂ, ಜಪಾನಿನಲ್ಲೂ ಇತರ ದೇಶೀಯರು ವ್ಯಾಪಾರಾರ್ಥವಾಗಿ ಮನೆಮಾರನ್ನು ಕೊಳ್ಳಲು ಅಲ್ಲಿನ ಪ್ರಭುತ್ವದವರು ಅವಕಾಶ ಕೊಟ್ಟದ್ದಾರೆಂತಲೂ ಉತ್ತರವು ಕೊಡಲ್ಪಟ್ಟಿತು.

೧೦೦ ರೂ. ನ ಸೃಷ್ಟನೆ ನೋಟುಗಳ ಹಾವಳಿಯು ವಿಶೇಷವಾಗಿದೆ. ಇಂಥ ಎಷ್ಟೋ ಸಹಸ್ರ ನೋಟುಗಳನ್ನು ಕಳ್ಳಿಸಿದ್ದ ಒಂದು ಕೇಸು ಈಗ ರಾಜಮಹೇಂದ್ರಿ ಸೆಷನ್ ಕೋರ್ಟಿನಲ್ಲಿ ವಿಚಾರಿಸಲ್ಪಡುತ್ತಿದೆ. ಅತ್ತ ತಿರುವಾಂಕೂರು ಸಂಸ್ಥಾನದಲ್ಲಿ ಟಿ. ಡಿ. ೩೬ ನಂಬರುಳ್ಳ ೧೦೦ ರೂ. ನ ಸೃಷ್ಟನೆನೋಟುಗಳು ಎಷ್ಟೋ ನಿರ್ಮಿಸಲ್ಪಟ್ಟು ವ್ಯವಹಾರಕ್ಕೆ ತರಲ್ಪಟ್ಟಿರುವುವೆಂದು ಕಂಡುಹಿಡಿಯಲ್ಪಟ್ಟಿವೆ. ಈ ನೋಟುಗಳಲ್ಲಿ ನೀರುಗೆರೆಯು ಕೂಡ ಕಾಣುವಹಾಗೆ ಮಾಡಿದ್ದಾರಂತೆ. ೧೦೦ ರೂ ನೋಟುಗಳನ್ನು ತೆಗೆದುಕೊಳ್ಳುವವರು ಎಚ್ಚರವಾಗಿರಬೇಕು.

ಬಂಗಾಳಾಕ್ಕೆ ಸೇರಿದ ಅಲಿಪೂರಿನ ಹತ್ತಿರದ ಒಂದು ಗ್ರಾಮದಲ್ಲಿರುವ ಆರೂನ್ ಮೇಸ್ತ್ರಿ ಎಂಬ ಕಂಟ್ರಾಕ್ಟರ ಮನೆಗೆ ೧೨ ಮಂದಿ ಪಂಜಾಬಿ ಮುಲಿಗಗಳ್ಳರು ರಾತ್ರಿವೇಳೆ ಕತ್ತಿಕಠಾರಿಗಳೊಡನೆ ನುಗ್ಗಿದರು. ಕೆಲರು ಹೊರಗೆ ಕಾವಲು ನಿಂತಿದ್ದರು. ಮನೆಯವರು ಕಳ್ಳರನ್ನು ನೋಡಿ ಕೂಗಿಕೊಳ್ಳಲಾಗಿ ಮಹಾದೇವನಾಗರು ಎಂಬ ಗ್ರಾಮಸ್ಥರು ನೂರಾರುಮಂದಿ ಓಡಿಬರಲು ಕಳ್ಳರಿಗೂ ಅವರಿಗೂ ಬಡಿದಾಟವಾಯಿತು. ಗ್ರಾಮಸ್ಥರ ಕೆಲರಿಗೆ ಗಾಯಗಳಾದುವು. ಒಬ್ಬ ಡಾಕ್ಟರು ಹಾರಿಸಿದ ತುಪಾಕಿಗುಂಡಿನಿಂದ ಒಬ್ಬ ಕಳ್ಳನು ಉರುಳಿದನು. ಇತರರಿಗೂ ಏಟುಬಿದ್ದಿತು. ಆ ಸ್ಥಳದಲ್ಲಿ ಕಳ್ಳರು ದೋಚಿಕೊಂಡಿದ್ದ ವಸ್ತುಗಳನ್ನೆಲ್ಲಾ ಅಲ್ಲೇ ಬಿಟ್ಟು ಏಟು ಬಿದ್ದ ತಮ್ಮ ಕಡೆಯವರನ್ನು ಹೊತ್ತುಕೊಂಡು ಓಡಿದರು.

ಕಳೆದ ತಾ|| ೧೦ ರಲ್ಲಿ ರುಮೇನಿಯಾ ಯುವರಾಜರು ಕೊಲೊಂಬೋವಿಗೆ ಬಂದಾಗ ೨೧ ಗುಂಡುಗಳು ಮರ್ಯಾದಾರ್ಥವಾಗಿ ಹಾರಿಸಲ್ಪಟ್ಟುವು. ಇವರು ಸಿಂಹಳದ್ವೀಪದಲ್ಲಿ ೧ ವಾರ ಕಾಲವಿದ್ದು ಅಲ್ಲಿಂದ ಹಡಗಿನ ಮೇಲೆಯೇ ಹೊರಟು ತಾ|| ೧೯ರಲ್ಲಿ ಬೊಂಬಾಯಿಯನ್ನು ಸೇರಿ ಅಲ್ಲಿಂದ ಮಹಾಬಲೇಶ್ವರಕ್ಕೆ ಹೋಗಿ ಅಲ್ಲಿ ೩ ದಿನಗಳಿದ್ದು ತಾ|| ೨೨ ರಲ್ಲಿ ಆಗ್ರಾಕ್ಕೆ ಹೋಗುವರು. ಅಲ್ಲಿಂದ ತಾ|| ೨೬ ರಲ್ಲಿ ಡಿಲ್ಲಿಗೆ ಹೋಗಿ, ಆ ರಾತ್ರಿಯೇ ಪಾಟಿಯಾಲಾ ಸಂಸ್ಥಾನಕ್ಕೆ ಹೋಗಿ ಮಹಾರಾಜರ ಆತಿಥ್ಯವನ್ನು ಪರಿಗ್ರಹಿಸಿ ತಾ|| ೩೦ ಕ್ಕೆ ಸಿಮ್ಲಾ ಪಟ್ಟಣವನ್ನು ಸೇರುವರು. ಅಲ್ಲಿಂದ ಮೇ ತಿಂಗಳು ಮೊದಲುವಾರದಲ್ಲಿ ಕಲಕತ್ತಾಕ್ಕೆ ಹೋಗಿ ಕೆಲದಿನಗಳಿದ್ದು ಬಳಿಕ ಭರತಖಂಡವನ್ನು ಬಿಟ್ಟು ಪೂರ್ವದೇಶಗಳಿಗೆ ತೆರಳುವರು ಎಂದು ಪ್ರಕಟವಾಗಿದೆ.

ಹಿಂದೆ ಅಫ್ಘಾನಿಸ್ಥಾನದವರಿಗೂ ಭರತಖಂಡಸರ್ಕಾರಕ್ಕೂ ಒಪ್ಪಂದವು ನಡೆದಾಗ್ಗೆ ಇನ್ನು ೬ ತಿಂಗಳ ಕಾಲದಲ್ಲಿ ಅಫ್ಘನ್ ಪ್ರಭುತ್ವದವರು ತಮ್ಮ ಅಕೃತ್ರಿಮಸ್ನೇಹ ವಿಶ್ವಾಸಗಳನ್ನು ತಮ್ಮ ನಡೆಯಿಂದ ದೃಢಪಡಿಸಿಕೊಂಡರೆ ಬಳಿಕ ಈಗಣ ನಿಬಂಧನೆಯಲ್ಲಿ ಅವಶ್ಯಕವಾದ ತಿದ್ದುಪಡೆಯನ್ನು ಮಾಡಿ ಶಾಶ್ವತ ಸಂಧಿನಿಬಂಧನೆಯನ್ನೇರ್ಪಡಿಸಬಹುದೆಂದು ಗೊತ್ತಾಗಿದ್ದಿತಷ್ಟೆ. ಆದರೆ ಆಗಣ ಒಪ್ಪಂದದಲ್ಲಿ ಅಮೀರರಿಗೆ ಪರರಾಜ್ಯಗಳವರೊಡನೆ ವ್ಯವಹಾರ ನಡೆಯಿಸುವಲ್ಲಿ ನಿರ್ಬಂಧವಿಲ್ಲದಿದ್ದುದರಿಂದ ಈ ಮಧ್ಯೆ ಅವರು ಬೋಲ್ಷಿವಿಕ್ಕರೊಡನೆ ಸಂಧಾನನಡೆಯಿಸುತ್ತಿರುವರೆಂಬ ಸುದ್ದಿ ಹುಟ್ಟಿದ್ದಿತು. ಅದರಲ್ಲಿ ನಿಜವೂ ಇರಬಹುದು. ಅಫ್ಘಾನಿಸ್ಥಾನದಲ್ಲಿ ಇಂಗ್ಲೀಷರನ್ನು ಕಂಡರಾಗದ ಕೆಲ ಜನರಿದ್ದಾರೆ. ಅವರು ಬೋಲ್ಷಿವಿಕ್ಕರೊಡನೆ ಸಂಧಾನಕ್ಕೆ ಏರ್ಪಡಿಸಿದ್ದರೂ ಇರಬಹುದು. ಬರುಬರುತ್ತ ಅಮೀರರಿಗೆ ಬೋಲ್ಷಿವಿಕ್ಕರ ಅನಾಯಕತನವು ತಮ್ಮ ಬುಡಕ್ಕೇ ಕೊಡಲಿಯಾಗುವ ಪರ್ಯವಸಾನವನ್ನುಂಟುಮಾಡಬಹುದೆಂಬ ಭೀತಿಯನ್ನುಂಟುಮಾಡಿದುದರಿಂದ ಬೋಲ್ಷಿವಿಕ್ ಸ್ನೇಹವನ್ನು ಅವರು ನಿರಾಕರಿಸಿ ಪ್ರಬಲರಾದ ಆಂಗ್ಲರನ್ನು ಒರಗಿ ಬಾಳುವುದೇ ಸುಖವೆಂದು ಭಾವಿಸಿದಂತೆ ಕಾಣುತ್ತದೆ. ಆದುಕಾರಣ ಹಿಂದಣ ಒಪ್ಪಂದದ ಪ್ರಕಾರಕ್ಕೆ ಶಾಶ್ವತಸಂಧಿಯನ್ನು ಮಾಡಿಕೊಳ್ಳಲು ಅವರು ತಮ್ಮ ವಿದೇಶಾಂಗಮಂತ್ರಿಯೂ ತಮ್ಮ ಮುಖ್ಯ ಪ್ರತಿನಿಧಿಯೂ ಆದ ಸರ್ದಾರ್ ಅಲಿಮಮ್ಮದ್‌ಬೇಗ್ ತರಾಯಿಯವರನ್ನೂ ಇತರ ಕೆಲ ಸಾಮಾಜಿಕರನ್ನೂ ತಮ್ಮ ಕಡೆಯ ರಾಯಭಾರಿಗಳನ್ನಾಗಿ ಭರತಖಂಡಕ್ಕೆ ಕಳುಹಿಸಿಕೊಟ್ಟಿರುವರು. ಅವರೆಲ್ಲಾ ಸಪರಿವಾರರಾಗಿ ಕಳೆದ ತಾ|| ೧೪ ರ ಮಧ್ಯಾಹ್ನ ಮಸ್ಸೂರಿಗೆ ಬಂದಿಳಿದರು. ಇಂಡ್ಯಾ ಸರ್ಕಾರದ ಕಡೆಯ ಅಧಿಕಾರಿಗಳು ಅವರಿಗೆ ಉಚಿತಮರ್ಯಾದೆಮಾಡಿ ೧೩ ಗುಂಡುಗಳನ್ನುಹಾರಿಸಿ ಸ್ವಾಗತಿಸಿದರು. ಇಂಗ್ಲೀಷ್ ಪ್ರತಿನಿಧಿಗಳೂ ಅಫ್ಘನ್ ಪ್ರತಿನಿಧಿಗಳೂ ತಾ|| ೧೬ ರಿಂದ ಸಭೆಗೂಡಿ ಸಂಭಾಷಿಸಿದರು. ಪರ್ಯವಸಾನವು ಸುಮುಖವಾಗಿ ಶಾಶ್ವತಸಂಧಿಗೆ ದಾರಿಮಾಡಿದೆಯೆಂದು ಗೊತ್ತಾಗುತ್ತದೆ.

ವಿದೇಶ ವೃತ್ತಾಂತಗಳು.

ಖಿಲಾಫತ್ ಪ್ರತಿನಿಧಿಗಳು ಲಂಡನ್ನಿನಿಂದ ಫ್ರಾನ್ಸಿಗೆ ಹೋಗಿರುತ್ತಾರೆ. ಇವರೊಡನೆ ಮಾತನಾಡಲಿಕ್ಕೆ ಸಂಧಿಸಭೆಯವರು ಅವಕಾಶ ಕೊಡಲಿಲ್ಲ.

ಐರ್ಲೆಂಡಿನಲ್ಲಿ ಕೂಲಿಕಾರರ ಮುಷ್ಕರವು ಬಹಳ ತೀಕ್ಷ್ಣವಾಗಿರುವುದರಿಂದ ಹೊಗೆಬಂಡಿ ಮೊದಲಾದವುಗಳೆಲ್ಲಾ ತಿರುಗಾಡದೆ ನಿಂತುಹೋಗಿವೆ. ಅಂಚೆಮನೆಗಳ ಬಾಗಿಲು ಹಾಕಿಹೋಗಿದೆ.

ಹಿಂದಣ ಜರ್ಮನ್ ಕೈಜರರ ಪತ್ನಿಯವರು ಗುಂಡಿಗೆಯ ನೋವಿನಿಂದ ತುಂಬಾ ಅಸ್ವಸ್ಥರಾಗಿ ಬದುಕುವ ಸ್ಥಿತಿಯಲ್ಲಿಲ್ಲವೆಂದು ಜರ್ಮನ್ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕೈಜರರೂ ಅನಾರೋಗ್ಯಸ್ಥಿತಿಯಲ್ಲಿದ್ದಾರೆಂದೂ ಪ್ರಕಟವಾಗಿದೆ.

ಬರ್ಲಿನ್ ಪಟ್ಟಣದಲ್ಲಿ ಜರ್ಮನ್ ಸರ್ಕಾರದವರು ವಿಪ್ಲವಕಾರರಿಗೆ ಭಯಪಟ್ಟು ತಮ್ಮ ಸರ್ಕಾರಿ ಆಫೀಸುಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ೨೦ ಮೋಟಾರ್ ಯಂತ್ರ ಫಿರಂಗಿಗಳನ್ನೂ ೧೫ ಟ್ಯಾಂಕುಗಳನ್ನೂ ಕಾವಲಿಗೆ ಇರಿಸಿಕೊಂಡಿದ್ದಾರೆ.

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಅಲೆಪ್ಪೋ ಮರಾಷುಗಳಿಗೆ ಮಧ್ಯದಲ್ಲಿರುವ ಎಯಿನ್‌ತಾಬು ಪಟ್ಟಣವು ೨ ತಿಂಗಳ ಕೆಳಗೆ ತುರ್ಕಿ ಜಾತೀಯವಾದಿಗಳ ವಶದಲ್ಲಿದ್ದಿತು. ಫ್ರೆಂಚ್ ಕಲೋನಿಯಲ್ ತುರುಪ್ ಸೈನಿಕರು ಈಗ ಅಲ್ಲಿದ್ದ ತುರುಕರಲ್ಲಿ ೧೧೦೦ ಜನರನ್ನು ಕೊಂದು ಉಳಿದವರನ್ನೆಲ್ಲಾ ಓಡಿಸಿ ತಾವೇ ಸ್ವಾಧೀನಪಡಿಸಿಕೊಂಡಿರುವರು.

ಐರ್ಲೆಂಡಿನಲ್ಲಿ ರಾಜಕೀಯ ನಿರ್ಬಂಧಿತರನೇಕರು ಕಾರಾಗೃಹದಲ್ಲಿ ಬಂದಿಗಳಾಗಿಡಲ್ಪಟ್ಟಿದ್ದರು. ಅವರುಗಳು ಆಹಾರವನ್ನು ಸ್ವೀಕರಿಸದೆ ಹಠತೊಟ್ಟು ಮಲಗಿದರು. ಅವರನ್ನು ಬಿಡಿಸಿಕೊಳ್ಳಲಿಕ್ಕಾಗಿ ಕೂಲಿಕಾರರು ಮೊದಲಾದ ಪ್ರಜೆಗಳೆಲ್ಲಾ ವಿಪ್ಲವವನ್ನೆಬ್ಬಿಸಿದರು ಹಠ ತೊಟ್ಟು ಕೆಲಸಕ್ಕೆ ಹೊರಡದೆ ನಿಂತರು. ಈಚೆಗೆ ಪ್ರಭುತ್ವದವರು ಅಂಥ ನಿರ್ಬಂಧಿತರನ್ನೆಲ್ಲಾ ಸೆರೆಯಿಂದ ಬಿಡುಗಡೆ ಮಾಡಿದ ಕಾರಣ ಪ್ರಜೆಗಳು ಸಂತೋಷದಿಂದ ಉತ್ಸವಗಳನ್ನು ಮಾಡಿದರು. ಇನ್ನುಮೇಲೆ ಮುಷ್ಕರಗಳು ತಪ್ಪಬಹುದು

ಸಂಧಿ ನಿಬಂಧನೆ ಪ್ರಕಾರ ಜರ್ಮನರು ಈ ಕೆಳಗೆ ಕಂಡಷ್ಟು ಯುದ್ಧಸಾಮಗ್ರಿಗಳನ್ನು ತಮ್ಮಲ್ಲಿರುವವುಗಳನ್ನು ನಾಶಗೊಳಿಸಬೇಕಾದವರಾಗಿದ್ದಾರೆ. ಅವರು ಹಾಗೆ ಮಾಡಿ ಸಂಧಿ ನಿಬಂಧನೆಯನ್ನು ನೆರವೇರಿಸುವಲ್ಲಿ ಬರವಸೆಯುಂಟೆಂದು ಆಂಗ್ಲ ಯುದ್ಧಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಜರ್ಮನ್ ಯುದ್ಧಸಾಮಗ್ರಿಗಳೆಷ್ಟೆಂದರೆ—ಯುದ್ಧದ ಫಿರಂಗಿಗಳು ೬೫೦೦, ಹೊವಿಟ್ಜರ್ ಎಂಬ ರಾಕ್ಷಸ ಫಿರಂಗಿಗಳು ೨೫೦೦, ದೊಡ್ಡ ಸಣ್ಣ ತುಪಾಕಿಗಳೆಲ್ಲಾ ಒಟ್ಟು ೧೭,೮೬೦, ಯುದ್ಧದ ವಿಮಾನಗಳು ೧೫ ಸಾವಿರ.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿ ಬಾನರ್ ಎಂಬುವರು ವಜ್ರಗಳನ್ನು ಕದಿಯುವುದರಲ್ಲಿ ಪ್ರಖ್ಯಾತಳಾಗಿದ್ದುದಲ್ಲದೆ, ಒಬ್ಬ ಪೊಲೀಸನ ಕೈಗೂ ನನ್ನ ಜೀವವಿರುವವರೆಗೂ ಸಿಕ್ಕುವುದಿಲ್ಲವೆಂದು ಪಂಥ ಮಾಡಿಕೊಂಡಿದ್ದಳು. ಕಳೆದ ಮಾರ್ಚಿ ತಾ|| ೫ ರಲ್ಲಿ ಈಕೆಯು ತನ್ನ ಜತೆಗಾರ್ತಿಯರೊಡನೆ ಒಂದು ರತ್ನದಂಗಡಿಯಲ್ಲಿ ಕದಿಯುವುದಕ್ಕಿದ್ದುದನ್ನು ಪೊಲೀಸರು ಕಂಡುಹಿಡಿಯಲು ಸಮೀಪಿಸುವಷ್ಟರಲ್ಲೇ ಈಕೆಯು ತನ್ನ ಚೀಲದಲ್ಲಿದ್ದ ಪಾಷಾಣವನ್ನು ಥಟ್ಟನೆ ನುಂಗಿ ಪ್ರಾಣವನ್ನು ಬಿಟ್ಟು ಪಂಥವನ್ನೀಡೇರಿಸಿದಳು.

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಮುಸ್ತಫಾಕೇಮಲ್ ಪಾಷಾರವರು ಸುಲ್ತಾನರಿಗೆ ವಿರುದ್ಧವಾಗಿ ಒಂದು ನೂತನ ಮಂತ್ರಿವರ್ಗವನ್ನೇರ್ಪಡಿಸಿ ಆದಷ್ಟು ಬೇಗನೆ ಅಂಗೋರಾದ ಹತ್ತಿರ ಶಾಸನ ಸಭೆಯನ್ನು ಕೂಡಿಸಬೇಕೆಂದು ಉದ್ದೇಶಿಸಿರುವರೆಂದೂ, ಸಭಿಕರ ಚುನಾವಣೆಯು ನಡೆಯುತ್ತಿದೆಯೆಂದೂ, ಈ ಕೇಮಲ್ ಪಾಷಾನನ್ನು ಹಿಡಿದು ದಂಡಿಸಬೇಕೆಂದು ಸುಲ್ತಾನರು ತಕ್ಕ ಏರ್ಪಾಡನ್ನು ಮಾಡಬೇಕೆಂದಿರುವರೆಂದೂ, ಈ ಜಾತೀಯವಾದಿ ಮುಖಂಡರನ್ನು ದಂಡಿಸುವುದಕ್ಕೆ ಸೇನೆಯು ಅಣಿಮಾಡಲ್ಪಟ್ಟಿರುವುದೆಂದೂ, ಬ್ರೂಸಾ ಪಟ್ಟಣವನ್ನು ಆಕ್ರಮಿಸಿಕೊಳ್ಳಲು ಜಾತೀಯ ನಾಯಕರು ಉದ್ದೇಶಿಸಿರುವರೆಂದೂ, ತುರ್ಕಿ ಸಂಧಿ ನಿಬಂಧನೆಯು ಪ್ರಕಟವಾದ ಕೂಡಲೇ ಇವೆಲ್ಲಾ ಶಾಂತವಾಗಿ ಆ ಬಳಿಕ ಮತ್ತೊಂದು ತೆರದ ಆಂದೋಳನವು ಆಸನ್ನವಾಗುವುದೆಂದೂ ಲಂಡನ್ ಟೈಮ್ಸ್ ಪತ್ರಿಕೆಗೆ ಕಾನ್‌ಸ್ಟಾಂಟಿನೋಪಲ್ಲಿನಿಂದ ಸುದ್ದಿ ಬಂದಿದೆ. ಕೇಮಲ್‌ಪಾಷಾನ ಮೇಲೆ ಯುದ್ಧಕ್ಕೆ ಆರಂಭವಾಗಿರುವ ಸುದ್ದಿಯೂ ಬಂದಿದೆ.

ಪತ್ರವ್ಯವಹಾರ.

ಸ್ತ್ರೀವಿದ್ಯಾಪ್ರೋತ್ಸಾಹದ ಉದಾಹರಣೆ.

ಧಾರವಾಡ ಜಿಲ್ಲಾ ತಬಕದ ಹೊನ್ನೀಹಳ್ಳಿಯ ಗೌಡಸಾನಿಯವರೂ ರಾ|| ಬ|| ಅರಟಾಳ ಸಾಹೇಬರ ತಂಗಿಯಂದಿರೂ ಆದ ಶ್ರೀಮತಿ ವೀರವ್ವ ಭ್ರತಾರ ಬಸನಗೌಡ ಪಾಟೀಲ ಇವರು ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಪ್ರವೇಶ ಪರೀಕ್ಷೆಯಲ್ಲಿ ೧ ನೆ ನಂಬರ ಪಡೆದ ಲಿಂಗಾಯತ ವಿದ್ಯಾರ್ಥಿನಿಗೆ ತಮ್ಮ ಹೆಸರಿನಿಂದ ಒಂದು ಶಿಷ್ಯವೃತ್ತಿಯನ್ನು ಕೊಡುವ ಬಗ್ಗೆ ಧಾರವಾಡ ಲಿಂಗಾಯತ ಎಜ್ಯುಕೇಷನಲ್ ಫಂಡಿಗೆ ಒಂದೂವರೆ ಸಾವಿರ ರೂಪಾಯಿ ಸಮರ್ಪಣೆ ಮಾಡಿದ್ದು ಹೋದ ವರ್ಷ ಪ್ರಸಿದ್ಧವಾಗಿರುತ್ತದಷ್ಟೆ. ಆ ಮೇರೆಗೆ ಸದರಿ ರಕಮಿನ ಬಡ್ಡಿಯ ಹಣದಲ್ಲಿ ಈ ವರ್ಷದ ಸ್ಕಾಲರ್‌ಶಿಪ್ಪು ಆ ಕಾಲೇಜಿನ ಮೆ|| ಲೇಡಿ ಸೂಪರಿಂಟೆಂಡೆಂಟ್ ಸಾಹೇಬರವರಿಂದ ಶಿಫಾರಸು ಹೊಂದಿದ ಶ್ರೀಮತಿ ಚನ್ನವ್ವಾ ಹೊಂಗಲ ಎಂಬ ವಿದ್ಯಾರ್ಥಿನಿಗೆ ಕೊಡಲ್ಪಟ್ಟಿತೆಂದು ತಿಳಿಸಲಿಕ್ಕೆ ಅತ್ಯಾನಂದವಾಗುತ್ತದೆ.

ಶ್ರೀಮತಿ ವೀರವ್ವನವರಿಗಿಂತ ಧನಿಕರಾದ ಎಷ್ಟೋ ಹೆಂಣುಮಕ್ಕಳು ನಮ್ಮ ಕರ್ನಾಟಕದಲ್ಲಿ ತುಂಬಿಕೊಂಡಿದ್ದರೂ ತಮಗೆ ದೇವರು ದಯಪಾಲಿಸಿದ ದುಡ್ಡಿನ ಸದುಪಯೋಗವನ್ನು ಇವರಂತೆ ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿಗಾಗಿ ಮಾಡಿದ ಉದಾಹರಣೆಗಳು ತೀರ ವಿರಳ. ಈ ಉದಾರಮತದ ಗೌಡಸಾನಿಯವರ ಶ್ಲಾಘನೆಯನ್ನು ಎಷ್ಟು ಮಾಡಿದರೂ ಸ್ವಲ್ಪವಿದೆ. ಇವರು ತಾವು ಸಮರ್ಪಿಸಿದ ಹಣದಿಂದ ಸ್ಕಾಲರ್‌ಶಿಪ್ಪು ಆರಂಭವಾದದ್ದನ್ನು ಕಣ್ಣಾರೆ ಕಂಡು ಆನಂದಿಸುತ್ತಿರುವರು. ತಾವು ಹಚ್ಚಿದ ಗಿಡದ ಹಣ್ಣನ್ನು ಸೇವಿಸಿ ಯಾರು ಆನಂದಪಡಲಿಕ್ಕಿಲ್ಲ ? ಈ ಸಾಧ್ವಿಯವರ ಅನುಕರಣವನ್ನು ಶ್ರೀಮಂತ ಸ್ತ್ರೀಯರು ಅವಶ್ಯವಾಗಿ ಅನುಸರಿಸಿ ಕರ್ನಾಟಕವನ್ನು ಬೆಳಗಲೆಂದು ಬಯಸುವೆನು.

ಬಸವಾರ್ಯ ಕಿತ್ತೂರ.

ಚಿತ್ರದುರ್ಗದ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕು ಧರ್ಮಪುರದ ಹೋಬಳಿ ವೇಣುಕಲ್ಲುಗುಡ್ಡದಲ್ಲಿರುವ ಹಾಲಪ್ಪಸ್ವಾಮಿ ಮಠದ ಪಟ್ಟಾಧ್ಯಕ್ಷರಾದ ಶ್ರೀ ವೀರಭದ್ರಸ್ವಾಮಿ ಮಹಾಸ್ವಾಮಿಗಳವರು ಪಾರಮಾರ್ಥ, ವೈದ್ಯ, ವೈದಿಕ, ಪೌರಾಣ, ಕವಿತೆ, ವ್ಯವಹಾರಿಕ ಮೊದಲಾದ ಸಮಸ್ತ ವಿಷಯಗಳಲ್ಲಿಯೂ ಸುಪ್ರಸಿದ್ಧರಾಗಿದ್ದು ಅನಂತ ಪ್ರದೇಶಗಳನ್ನು ಸಂಚರಿಸಿ, ತಮ್ಮ ಬೋಧನಾಶಕ್ತಿಯಿಂದ ಅಲ್ಲಲ್ಲಿ ಶಿವಲಿಂಗಪ್ರತಿಷ್ಠಾ, ಶಿವದೇವಾಲಯಸ್ಥಾಪನ, ದೇವಾಲಯ ಜೀರ್ಣೋದ್ಧಾರ, ಪೌರಾಣಪ್ರಸಂಗ, ಮೊದಲಾದ ಧರ್ಮಕಾರ್ಯಗಳನ್ನು ನಡೆಸುತ್ತಾ, ಲೀಲಾಮೂರ್ತಿಯಾಗಿ ಸಮಸ್ತ ವರ್ಣಾಶ್ರಮದವರಿಂದಲೂ ಸಂಮಾನಿತರಾಗಿದ್ದು, ಕಳೆದ ಮಾರ್ಚಿ ತಾ|| ೯ ರಲ್ಲಿ ತಮ್ಮ ೫೨ನೆ ವಯಸ್ಸಿನಲ್ಲಿ ಕೂನಬೇವು ಗ್ರಾಮದಲ್ಲಿ ಶಿವೈಕ್ಯರಾದರು. ಇವರ ಕೃಪಾಪಾತ್ರರಾದ ಗೊಂಚಿಕಾರ ಕೊಂಚೆ ತಿಪ್ಪಣ್ಣನವರು ಅನುಜರು ಅನುಯಾಯಿಗಳೇ ಮೊದಲಾದ ಬಂಧುಬಾಂಧವರಿಂದ ವಿಧ್ಯುಕ್ತವಾಗಿ ಸಂಸ್ಕಾರವು ನಡೆಯಿತು. ಇವರ ಅನುಜರು ಅನುಯಾಯಿಗಳ ಶಿಷ್ಯವೃಂದವೇ ಮೊದಲಾದ ಮಹನೀಯರುಗಳಿರಾ! ಈ ಮಹಾಸ್ವಾಮಿಗಳವರ ವಿಯೋಗದುಃಖದಲ್ಲಿ ನೀವು ಮಗ್ನರಾಗಿರದೆ ಮಹಾಸ್ವಾಮಿಯವರು ಕೈಕೊಂಡಿದ್ದ ಮಹತ್ಕಾರ್ಯಗಳಲ್ಲಿ ಉಳಿದಿರುವ ಕಾರ್ಯಗಳು ಅಂದರೆ ತಮ್ಮ ಉತ್ತರಾಧಿಕಾರಕ್ಕಾಗಿ ಚುನಾಯಿಸಿಕೊಂಡಿದ್ದು, ತಮ್ಮ ಆಶ್ರಯದಲ್ಲಿ ಮರಿಯಾಗಿ ನೇಮಿಸಿಕೊಂಡಿದ್ದ........ (ತಾಂಕವೀರಯ್ಯ) ನವರೆಂಬ ವಟುವಿನ ವಿದ್ಯಾಭ್ಯಾಸ ಮತ್ತು ಉತ್ತರಾಧಿಕಾರ ಸದರಿಯವರಿಂದ ರಚಿತವಾಗಿರುವ ಶ್ರೀಮದ್ರೇವಣಸಿದ್ಧೇಶ್ವರ ಪುರಾಣದ ಮುದ್ರಣ, ದೊಡ್ಡೇರಿಕೋಡಿ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ, ಚುಕ್ಕಣನಹಳ್ಳಿ ವಿ. ಬಿ. ಮ|| ಸಿದ್ಧಪ್ಪಯ್ಯನವರಿಗೆ ಅಭಯಪ್ರದಾನವಾಗಿದ್ದ ಏಕಾದಶರುದ್ರರ ಪೂಜೆಯೇ ಮೊದಲಾದ ಘನಕಾರ್ಯಗಳನ್ನು ಅವರ ಸಂಕಲ್ಪದಂತೆ ನೆರವೇರಿಸಿ ಸದರಿ ಮಹಾಸ್ವಾಮಿಗಳಲ್ಲಿ ನಿಮ್ಮಗಳಿಗಿದ್ದ ಅಭಿಮಾನ, ಭಕ್ತಿ, ವಿಶ್ವಾಸಗಳನ್ನು ಪ್ರದರ್ಶನ ಮಾಡಿ ಪುಣ್ಯಕೀರ್ತಿಗಳಿಗೆ ಭಾಜನರಾಗಬೇಕಾಗಿ ಪ್ರಾರ್ಥಿಸುವ,

ಮಹಾಸ್ವಾಮಿಗಳ ಕೃಪಾಪಾತ್ರನಾದ ಮುಖ್ಯಶಿಷ್ಯ.

[ಶಿವೈಕ್ಯ ಶ್ರೀ ವೀರಭದ್ರಸ್ವಾಮಿಗಳು ಶ್ರೀ ಗಿರಿರಾಜ ಸೂರ್ಯಸಿಂಹಾಸನ ಜಗದ್ಗುರು ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಬಹುಕಾಲ ಏಜಂಟರಾಗಿದ್ದು ಸಾಮರ್ಥ್ಯದಿಂದ ಕಾರ್ಯನಿರ್ವಾಹ ಮಾಡುತ್ತಿದ್ದರೆಂತಲೂ, ಈಗ ಆ ಸ್ಥಾನಕ್ಕೆ ಅವರ ಅನುಜಾತರಾದ ವಿ. ಎಂ. ಚಂದ್ರಶೇಖರಯ್ಯನವರು ನಿಯಮಿಸಲ್ಪಟ್ಟಿರುವರೆಂತಲೂ ತಿಳಿಯುತ್ತೇವೆ.—ಪ. ಪ್ರ.]

ಶುಭೋದಯವೂ ವೀರಶೈವರೂ.

ಶುಭೋದಯದಲ್ಲಿ ಪ್ರಸಿದ್ಧವಾದ ಲೇಖದ ಸಲುವಾಗಿ ಮ|| ಪಾವಟೆಯವರೊಬ್ಬರೇ ಜೊಂಕಕಟ್ಟಿ ಕೋರ್ಟಿನಲ್ಲಿ ವ್ಯಾಜ್ಯಮಾಡಿದ್ದೂ, ಮತ್ತು ಪಕ್ಷಪಾತದಿಂದ ತೀರ್ಪು ಮಾಡಲ್ಪಟ್ಟದ್ದೂ ಎಲ್ಲರಿಗೂ ಗೊತ್ತುಂಟು. ಮುಂದೆ ಅಪೀಲು ಮಾಡಿಸುವದಕ್ಕಾಗಿ ಗೌರ್ನರ್ ಸಾಹೇಬರಿಂದ ಅಪ್ಪಣೆಯನ್ನು ಪಡೆಯುವುದಕ್ಕೆ ವೀರಶೈವ ಮಹಾಸಭೆಯಲ್ಲಿ ಪ್ರತಿನಿಧಿಗಳನ್ನಾರಿಸಿದ್ದಾಯಿತೇ ಹೊರತು ನೆರವೇರಿಸಲ್ಪಡಲಿಲ್ಲ. ಈ ಮೊದಲೇ ಸರ್ಕಾರದವರು ಇದರಲ್ಲಿ ಕೈಹಾಕಲಾರೆವೆಂದು ಹೇಳಿಬಿಟ್ಟಿರುವರು. ನಮ್ಮ ಸ್ವಭಾವವಾದರೂ ಇಷ್ಟಕ್ಕೇ ತೃಪ್ತಿ ಹೊಂದಿ ಸುಮ್ಮನಾಗ[illegible]ದಾಗಿದೆ ! ಪರರು ನಮ್ಮನ್ನು ನಿಂದಿಸಲಿ, ಮತದೂಷಣೆ ಮಾಡಲಿ, ನಮ್ಮ ಸೊತ್ತನ್ನಪಹರಿಸಲಿ, ಹಕ್ಕುಬಾಧ್ಯತೆಗಳನ್ನು ಕಿತ್ತುಕೊಳ್ಳಲಿ ಆಗಲೂ ನಾವು ಸುಮ್ಮನಿರುವವರೇ !! ವ್ಯಾಜ್ಯವು ನಡೆದಾಗ ಮ|| ಪಾವಟೆಯವರಿಗೆ ಲೇಖಗಳಿಂದಲೂ ಮತ್ತು ಧನದಿಂದಲೂ ಎಷ್ಟು ಜನ ಎಷ್ಟು ಧನಸಹಾಯಮಾಡಿರುವರು ನೋಡಿರಿ !!! ಇದರಲ್ಲೂ ಕುಲಘಾತಕರದೊಂದು ಅವಾಂತರವೆದ್ದಿದೆ. ಇವರು ವ್ಯಕ್ತಿಯ ದ್ವೇಷಕ್ಕಾಗಿ ಮತ್ತು ತಮ್ಮ ಕೆಲಸದ ಸಾಧನೆಗಾಗಿ ಸಮಾಜದ ಬೇರನ್ನೇ ಕಡಿಯಲುದ್ಯುಕ್ತರಾಗಿರುವರು. ಇನ್ನೊಬ್ಬರನ್ನು ಹಿಂದುಹಾಕಿ ಇವರು ಮುಂದೆ ಬರಬೇಕಂತೆ ! ಮತನಿಂದೆ ಮಾಡಿದವರೇ ಇವರಿಗೆ ಸಹಾಯಕರು. ಅಹೋ, ಗುರುವರ್ಗದವರೇ ಇನ್ನು ಮುಂದೆ ನೀವು ಈ ಮಾರ್ಗದಲ್ಲಿ ಪ್ರವೇಶಿಸಿದ್ದಾದರೆ ಭಕ್ತರಾದ ನಾವು ನಿಮ್ಮ ಕಾಣಿಕೆ, ಮರ್ಯಾದೆ, ಮತ್ತು ಅಧಿಕಾರಗಳಿಗೆ ತಿಲಾಂಜಲಿಯನ್ನು ಬಿಟ್ಟೇವು, ಎಚ್ಚರಿಕೆ, ಎಚ್ಚರಿಕೆ. ಪರರು ನಮ್ಮ ಕತ್ತಿಗೆಯನ್ನು ಹಿಚುಕುವುದೂ ಒಂದೇ, ನಮ್ಮ ಮತದೂಷಣೆಯನ್ನು ಮಾಡುವದೂ ಒಂದೇ. ಇಂಥಾ ಸಮಯದಲ್ಲಿ ಒಳಭೇದಗಳನ್ನು ಬಿಟ್ಟು ಲೋಕದ ರೂಢಿಯಂತೆ ಮತದ್ವೇಷಿಗಳನ್ನು ಖಂಡಿಸುವುದು ನ್ಯಾಯವಾದದ್ದು. ಈ ಕಾಲದಲ್ಲಿ ಜನರು ಸ್ವಾತಂತ್ರ್ಯಪ್ರಿಯರಾಗಿದ್ದಾರೆ. ಯೂರೋಪಿನಲ್ಲಿ ಕ್ರೈಸ್ತರ ಗುರುವಾದ ದುರ್ಮಾರ್ಗಿಯಾದ ಪೋಪನ ಅಧಿಕಾರವನ್ನು ಮಾರ್ಟಿನ್‌ಲ್ಯೂಥರ್ ಮೊದಲಾದವರು ಕಿತ್ತುಹಾಕಿದರು. ಈಗ ಇಂಥಾ ಸಂಭವವೇ ಇರುವುದು.

ಆರ್. ಶ್ರೀನಿವಾಸಾಚಾರ್ಯನ ಲೇಖವು ಸಮಾಜದ ಉನ್ನತಿಯನ್ನು ಸಹಿಸಲಾರದೆ ಹೊಟ್ಟೆಯುರಿಯಿಂದ ಬರೆದದ್ದಾಗಿದೆ. ಪ್ರಭುಲಿಂಗಲೀಲೆಯನ್ನಾಗಲೀ, ಬಸವಪುರಾಣವನ್ನಾಗಲೀ ಅಥವಾ ಉಳಿದ ಯಾವದೇ ಗ್ರಂಥವನ್ನಾಗಲೀ ಆಳಿಕೆಗೆ ನೋಡಿ ಪರಿಶೋಧಿಸಿದರೂ ಈ ಲೇಖದ ತುಚ್ಛ ಅಭಿಪ್ರಾಯ

ವು ಹೊರಡುವುದೇ ಇಲ್ಲ. ಈ ಲೇಖಕನ ಮೂರ್ಖತ್ವವನ್ನು ನೋಡಿರಿ! ಪ್ರಭುಲಿಂಗಲೀಲೆಯಲ್ಲಿ ಅಲ್ಲಮನ ಪವಿತ್ರತೆ, ಮನೋನಿಶ್ಚಲತೆ, ಧರ್ಮತತ್ಪರತೆ ಮೊದಲಾದವುಗಳ ಔನ್ನತ್ಯವನ್ನು ವರ್ಣಿಸುವದೇ ಮುಖ್ಯತತ್ವವಾಗಿರುವದು. ಇದೇ ಗ್ರಂಥವು ಅಲ್ಲಮನು ಶಿವನ ಅವತಾರವೆಂದೂ, ಪಾರ್ವತಿಯು ಇವನ ನಿಜತ್ವವನ್ನು ಇಹಲೋಕದಲ್ಲಿ ಪರೀಕ್ಷಿಸಲು ಮಾಯೆಯೆಂಬ ಹೆಸರಿನಿಂದ ಬನವಸಿಯ ರಾಜನ ಮಗಳಾಗಿ ಜನಿಸಿ ಅಲ್ಲಮನನ್ನು ಮೋಹದ ಬಲೆಗೆ ಕೆಡಹಲು ಸಮರ್ಥಳಾಗಲಿಲ್ಲವೆಂದೂ, ಅಲ್ಲಮನು ಸಿದ್ಧರಾಮ, ಬಸವೇಶ್ವರ, ಮಹದೇವಿಯಕ್ಕ ಮರುಳಶಂಕರದೇವ ಮೊದಲಾದವರಿಗೆ ಇಷ್ಟಲಿಂಗಕ್ರಮವನ್ನು ಬೋಧಿಸಿದ್ದನ್ನೂ ಬಹು ಸರಸವಾಗಿ ವರ್ಣಿಸುತ್ತದೆ. ಇದಲ್ಲದೆ ಅಲ್ಲಮನು ಕೃತಯುಗದಲ್ಲಿ ಸ್ಥೂಲಕಾಯನೆಂಬ ಹೆಸರಿನ ಗಣೇಶ್ವರನೂ, ತ್ರೇತಾಯುಗದಲ್ಲಿ ಶೂನ್ಯಕಾಯನೆಂಬುವನೂ, ದ್ವಾಪರದಲ್ಲಿ ಅನಿಮಿಷನೆಂಬುವನೂ ಆಗಿದ್ದನೆಂದೂ, ಕಲಿಯುಗದಲ್ಲಿ ಅಲ್ಲಮನೆಂಬ ನಾಮವನ್ನು ಧರಿಸಿದ್ದನೆಂದೂ ಹೇಳುತ್ತಾನೆ. ಇದು ಗುರುವರ್ಗದವರಿಗೆ ಗೊತ್ತಿಲ್ಲವೆಂದಲ್ಲ. ಇದರಿಂದ ಆರ್. ಶ್ರೀನಿವಾಸಾಚಾರ್ಯನು ಅಕ್ಷರಶತ್ರುವೆಂದೂ, ಮೂರ್ಖಶಿಖಾಮಣಿಯೆಂದೂ, ಹಳ್ಳಿ ಕುರುಬನೆಂದೂ ಸಿದ್ಧವಾಗುವದು. ಇವನ ಗುರುಗಳಾದ ಮಾಧ್ವರಾಮಾನುಜ ಮೊದಲಾದವರು ಹೆಂಡದ ಪಾರ್ಟಿಯನ್ನು ಮಾಡಿದ್ದರೆಂದು ಹೇಳಿದರೆ ನಾನೂ ಶ್ರೀನಿವಾಸಾಚಾರಿಯಂತೆ ಅಧಮವರ್ಗಕ್ಕೆ ಸೇರುವೆನು. ಆದರೆ ಇದು ಉದಾತ್ತಮಾರ್ಗವಲ್ಲ. ಈ ಲೇಖಕ್ಕೆ ಅನುವು ಕೊಟ್ಟ ತಪ್ಪೊಂದಲ್ಲದೆ ತನ್ನದೇ ಸರಿಯೆಂದು ಮೂರ್ಖತನದಿಂದ ವಾಸುದೇವಾಚಾರ್ಯರು ಬೊಗಳುತ್ತಿರುವರು; ಶಹಬಾಸ್! ಶುಭೋದಯವೇ ಪರಧರ್ಮವನ್ನು ದೂಷಿಸುವದೇ ನಿನ್ನ ಪ್ರಧಾನವಾದ ಧರ್ಮತತ್ವವು ಎಷ್ಟು ಶ್ರೇಷ್ಠವಾದದ್ದು! ಕರ್ನಾಟಕವೃತ್ತವು ನಿನ್ನ ಮೂರ್ಖತನವನ್ನು ಬಿಡಿಸುವುದಕ್ಕಾಗಿ ನಿನ್ನ ಸಂಗಡ ಜಗಳವಾಡಿ ಬೇಸತ್ತಿತು. ಕಂಠೀರವನು ನಿನ್ನ ಕೃತಿಯು ಗರ್ಹ್ಯವಾದದ್ದೆಂದುಸುರಿದನು. ಕ್ಷಮೆಬೇಡುವದಕ್ಕೆ ಪ್ರಯತ್ನಿಸಿದ್ದು ಮರೆತೆಯೋ?

ಅಲ್ಲದೆ ಹೋಗಲಿ. ನಾವು ನಿಜವಾದ ಮತಾಭಿಮಾನಿಗಳಾಗಿದ್ದರೆ ಶುಭೋದಯಕ್ಕೆ ಒಂದು ಕಾಸಿನ ಉತ್ತೇಜನವನ್ನೂ ಕೊಡಬಾರದು. ಸರಿಯಾದ ವ್ಯವಸ್ಥೆಯಾಗದ ಹೊರತು ಶುಭೋದಯವು ಕೈಕೊಂಡ ಕಾರ್ಯಗಳಲ್ಲಿ ನಮ್ಮವರು ಸೇರಲು ಸಮ್ಮತಿಸಬಾರದು. ಆತ್ಮಗೌರವ, ಸ್ವಾಭಿಮಾನ, ಸ್ವಮತ ವಾಂಛಲ್ಯಾದಿಗಳಿಲ್ಲದವನು ಪ್ರಪಂಚದಲ್ಲಿದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ. ನಮ್ಮ ಗೌರವ, ಹಕ್ಕುಬಾಧ್ಯತೆಗಳನ್ನು ಕಾಯ್ದುಕೊಳ್ಳುವದರಲ್ಲಿ ನಾವು ಸಾಹಸದಿಂದಲೂ, ಧೈರ್ಯದಿಂದಲೂ, ನಿರ್ಭೀತಿಯಿಂದಲೂ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳಬೇಕು. ನ್ಯಾಶನಲ್ ಕಾಂಗ್ರೆಸ್ಸಿನವರು ರಾಜಕೀಯ ವಿಷಯದಲ್ಲಿಯೂ ಸಹ ಎಷ್ಟು ಧೈರ್ಯದಿಂದ ಮಾತಾಡುವರು ನೋಡಿರಿ. ತುರ್ಕಸ್ಥಾನದ ವಿಷಯವಾಗಿ ಮುಸಲ್ಮಾನರು ಎಷ್ಟು ಸಾಹಸಪಡುತ್ತಿರುವರು! ಪ್ರಯತ್ನವಿಲ್ಲದೆ ಫಲವು ಹೇಗೆ ದೊರಕುವದು? ಮೌನವನ್ನು ಧರಿಸಿದ್ದಾದರೆ ನಾವು ಹಿಂದುಳಿದ ವರ್ಗಗಳಲ್ಲಿ ಮೊದಲನೆಯವರಾಗಬಹುದು! ಸಭೆಗಳಲ್ಲಿ ಜೋರಾಗಿ ಮಾತಾಡುವುದರಿಂದಲೂ, ಡೆಪ್ಯುಟೇಷನ್ ಹೋಗುವದರಿಂದಲೂ ನಮ್ಮ ರೋದನವು ಸರಕಾರಕ್ಕೆ ವೇದ್ಯವಾಗುವದು. ಆ ಮೇಲೆ ಕಾರ್ಯವು ಕೈಗೂಡಬಹುದು. ನಾನು ಸಮಾಜದಲ್ಲಿ ಅಲ್ಪವ್ಯಕ್ತಿಯಾದಾಗ್ಯೂ, ನನ್ನ ಹೃದಯವು ಮತಾಭಿಮಾನದಿಂದ ಉಕ್ಕುತ್ತಿರುವದರಿಂದಲೂ ಮತ್ತು ಪರರು ಮಾಡಿದ ನಿಂದೆಯಿಂದ ಸಮಾಜದ ಒಂದು ಅಂಶವಾದ ನನ್ನ ದೇಹಕ್ಕೆ ಗಾಯವಾದದ್ದರಿಂದಲೂ ಈ ಲೇಖವನ್ನು ಬರೆದದ್ದಾಯಿತು. ಯಾರ ಮನಸ್ಸನ್ನೂ ನೋಯಿಸಬೇಕೆಂದು ನನ್ನ ಉದ್ದೇಶವಲ್ಲ. ಯಥಾರ್ಥವಾದವೇ ನನ್ನ ಉದ್ದೇಶ. ಸಮಾಜಬಾಂಧವರೆಲ್ಲರೂ ತಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಎಚ್ಚತ್ತು ಧೈರ್ಯಸಾಹಸಗಳನ್ನು ತಾಳಿ ಬಾಳಲೆಂದು ನನ್ನ ವಿಜ್ಞಾಪನೆಯುಂಟು.

ಯಗಟಿ.

ಗೃಹಕೃತ್ಯದ ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ತುಮಕೂರು ಡಿ॥ ತುಮಕೂರು ಟವರ್ ಕೋಟೆಯಲ್ಲಿ ಹಾಲಿ ಇರುವ ಕ್ಯಾತಸಂದ್ರದ ಸೊಂಡೇಕೊಪ್ಪದ ಹುಚ್ಚೀರಪ್ಪನ ಮಗ ಶಿವರುದ್ರಯ್ಯ ಉರುಫ್ ಅಯಣ್ಣನಾದ ನಾನೂ ನನ್ನ ಚಿಕ್ಕಪ್ಪ ವೀರಭದ್ರಪ್ಪನ ಮಗನಾದ ಈಗ್ಗೆ ಸುಮಾರು ೧॥ ವರುಷದಲ್ಲಿ ಪ್ಲೇಗಿನಿಂದ ಮೃತಪಟ್ಟ ಮುದ್ದವೀರಯ್ಯನು ಸಹಾ ಅವಿಭಕ್ತ ಕುಟುಂಬದ ಮೆಂಬರುಗಳಾಗಿರುತ್ತೇವೆ. ಷೆಡ್ಯೂಲ್ ಸ್ವತ್ತು ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತದ ಸ್ವತ್ತಾಗಿರುತ್ತೆ. ಸದರಿ ಮುದ್ದವೀರಯ್ಯನ ಮರಣಾನಂತರ ಷೆಡ್ಯೂಲ್ ಸ್ವತ್ತಿಗೆ ನಾನೇ ಮಾಲೀಕನಾಗಿಯೂ ಅನುಭವದಾರನಾಗಿಯೂ ಇರುತ್ತೇನೆ. ನನಗೆ ಆಗದ ಜನಗಳು ಷೆಡ್ಯೂಲ್ ಸ್ವತ್ತನ್ನು ಹೊತ್ತುಹಾಕಬೇಕೆಂಬ ದುರಾಲೋಚನೆಯಿಂದ ಸದರಿ ಮುದ್ದವೀರಯ್ಯನ ತಾಯಿ ಆದ ಹುಚ್ಚಮ್ಮನಿಂದ ಕ್ರಯ ಭೋಗ್ಯ ದಾನ ವಗೈರೆ ಮೂಲಕ ದಸ್ತಾವೇಜು ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಿರುವದಾಗಿ ಕೇಳುತ್ತೇನೆ. ಒಂದುವೇಳೆ ಯಾರಾದರೂ ಪರಭಾರೆ ಮಾಡಿಕೊಂಡಲ್ಲಿ ಅದರಿಂದ ಸದರಿಯವರಿಗೆ ಯಾವ ವಿಧವಾದ ಹಕ್ಕುಬಾಧ್ಯತೆ ಆಗಲಿ ಸ್ವಾಧೀನವಾಗಲಿ ಉಂಟಾಗುವುದಿಲ್ಲ. ಮತ್ತು ಅದರಿಂದ ನನಗೆ ಉಂಟಾಗುವ ಎಲ್ಲಾ ನಷ್ಟಗಳಿಗೂ ಸದರಿಯವರು ಬದ್ಧರಾಗಬೇಕಾಗುತ್ತೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

ಷೆಡ್ಯೂಲ್.

ತುಮಕೂರು ತಾಲ್ಲೂಕು [illegible]ಊರಡಗೆರೆ ಸಮ್ಮತು ಕ್ಯಾತಸಂದ್ರದಪೇಟೆಯಲ್ಲಿರುವ ಖಾನೇಷುಮಾರಿ ನಂಬರು ೧೪೬ ಮಾಳಿಗೆ ಹೆಂಚು ಮಿಶ್ರವಾದ ಅಂಗಡಿ ಮನೆಗೆ ಚಕ್ಕುಬಂದಿ ಪೂರ್ವಕ್ಕೆ ಹಾಲಿ ರಸ್ತೆ ಪಶ್ಚಿಮಕ್ಕೆ ಚನ್ನಬಸವಣ್ಣನ ಅಂಗಡಿ ಮನೆ ಉತ್ತರಕ್ಕೆ ಬೆಂಗಳೂರು ರಸ್ತೆ ದಕ್ಷಿಣಕ್ಕೆ ಅಗಳತಿ ಈ ಮಧ್ಯೆ ಇರುವ ಸ್ವತ್ತು ಒಂದು.

ಖಾನೇಷುಮಾರಿ ೯೦-೯೧-೯೨ ಮಾಳಿಗೆ ಹೆಂಚು ಮಿಶ್ರವಾದ ಅಂಗಡಿಗಳು ಮತ್ತು ಮನೆಗೆ ಚಕ್ಕುಬಂದಿ ಪೂರ್ವಕ್ಕೆ ಹಾಲಿ ನಂಜಯ್ಯನ ಅಂಗಡಿಮನೆ, ಪಶ್ಚಿಮಕ್ಕೆ ವೆಂಕಟಪತ್ಯಯ್ಯನ ಅಂಗಡಿಮನೆ, ಉತ್ತರಕ್ಕೆ ಹಳೇಪೇಟೆ ದಾರಿ, ದಕ್ಷಿಣಕ್ಕೆ ಬೆಂಗಳೂರು ರಸ್ತೆ ಈ ಮಧ್ಯೆ ಇರುವ ಸ್ವತ್ತು ಒಂದು ಜುಮ್ಲಾ ಎರಡು ಸ್ವತ್ತುಗಳು.

ಶಿವರುದ್ರಯ್ಯ ಉರುಫ್ ಅಯಣ್ಣ, ಹಾಲಿ ತುಮಕೂರು.

ತ್ವರೆಮಾಡಿರಿ **ಸ್ವಲ್ಪವೇ ಪ್ರತಿಗಳು ಉಳಿದಿವೆ.**

ಸರ್ವಾಂಗಸುಂದರಬೋಧಪ್ರದ ಸುರಸ

ಕಾದಂಬರಿಗಳು.

೧ ದಿವ್ಯಸುಂದರಿ ಅಥವಾ ದೀರ್ಘಪ್ರಯತ್ನ (ಐದ್ಯೋಗಿಕ) ಬೆಲೆ ೧ ರೂ.
೨ ಸತ್ಯಪ್ರಕಾಶ (ಪೌರಾಣಿಕ) ೦—೬—೦
೩ ವಿಚಿತ್ರಕಾರಸ್ಥಾನ (ಐತಿಹಾಸಿಕ) ೦—೧೨—೦

[ವಾಚನಾಭಿರುಚಿಯುಳ್ಳ ಪ್ರತಿಯೊಬ್ಬ ಕನ್ನಡಿಗನು ಇವುಗಳನ್ನು ಅವಶ್ಯವಾಗಿ ಓದಬೇಕು.]

ವಿಳಾಸ—ಬಸವಾರ್ಯ ಬೂದಿಹಾಳಮಠ, ಹೆಡ್ಮಾಸ್ತರ,
೬ ಆಲೂರ ಪೋ॥ ಆಲೂರ ಹಾನಗಲ್ಲ ಜಿ॥ ಧಾರವಾಡ.

ಜಾಗ್ರತೆ. ಕಬ್ಬಿಣದ ನೇಗಲು. **ಚಿಂತಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 25

ನಾವು ಎ. ಆಲ್ ಬ್ರಿಕ್ಕ್ಯಯರ್ ಕ್ಕೊ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.

ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
4 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟಿನ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವಿಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ಎ. ಎ. ಎಸ್. ವಾಣಿ ಕಂಪನಿ,
೬ ಸಾಹುಕಾರಪೇಟೆ, ಮದರಾಸು.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೂತುಕೊಂಡೇ ಇರುವದರಿಂದಲೂ 'ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡೋ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವವು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ವರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ ಪ್ರಪಂಚದ ಸುಖವನ್ನು ಮರೆಯುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
4 3. 'ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ 0.8.0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
4 3. ಇರುಳಪ್ಪನಬೀದಿ, ಮದರಾಸು.

೧೯೨೦ ನೆಯ ಇಸವಿ ಏಪ್ರಿಲ್ ತಾ॥ ೨೫ ರಿಂದ ೧೯೨೦ ನೆಯ ಮೇ ತಾ॥ ೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ವೈಶಾಖಶುದ್ಧ ಸಪ್ತಮಿಯಿಂದ ವೈಶಾಖಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷಮಾಸ
25	ಭಾನು	ಸಪ್ತ	13.33	ಪುನ	2.0	13
26	ಸೋಮ	ಅಷ್ಟ	8.23	ಆಶ್ಲೇ	55.30	14
27	ಮಂಗಳ	ನವ	3.55	ಮಘಾ	53.36	15
28	¹ಬುಧ	ದಶ	0.18 56.45	ಪುಫ	52.37	16
29	ಗುರು	ದ್ವಾ	55.38	ಉಫ	52.48	17
30	²ಶುಕ್ರ	ತ್ರಯೋ	55.22	ಹಸ್ತ	54.11	18
1	ಶನಿ	ಚತು	56.25	ಚಿತ್ರ	56.54	19

(1) ಮಂಡ್ಯದ ಜನಾರ್ದನಸ್ವಾಮಿರಥಃ. (2) ಪ್ರದೋಷಃ ಮಳೂರು ಅಪ್ರಮೇಯಸ್ವಾಮಿರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಕ್ಷಕೃತಾವತಾರಾ ಪಕ್ಷ್ಮಜ ನಕ್ಷತ್ರ ಮೋಹರಾಜೀಯೋತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತ್ತಿಲೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕ ಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

(ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಮೇ ತಾರೀಖು ೨ ನೆಯ ಭಾನುವಾರ (ಸಂಚಿಕೆ ೧೮

MYSORE GOVERNMENT ADVERTISEMENTS.

38

Government Botanci Gardens, Lal-Bagh, Bangalore.

(1) The office is open from 11 A.M. to 5 P.M. on all days except Sundays and Gazetted Holidays.

(2) The Saleroom is open to the Public from 8 to 11 A.M. and 2 to 5 P.M. on all days except Sundays and Gazetted holidays.

(3) Flower and Vegetable seeds, Creepers, Shrubs, Flower and Foliage plants, Succulents, Bulbs, Fruit trees, Ornamental and Forest trees, Economic plants and Cut flowers are available for sale.

(4) Donations of animals and birds to the ZOO are thankfully received.

H. C. JAVARAYA.
Assistant Superintendent,
Government Gardens.

MYSORE RAILWAYS.

NOTICE.

Reserved Accommodation.

The public are hereby informed that reserved accommodation in any class of carriages on all the sections of the Railways worked by the Mysore State can be secured on application to the Station Masters direct giving 24 hours previous notice for accommodationon the imetre guage lines and 48 hours previous notice for accommodation on the narrow guage lines. The terms etc., under which reserved accommodation can be secured may be ascertained from the Station Masters.

2. Exclusive accommodation for women travelling alone in third class is provided on all the trains carrying passengers but for those travelling in 1st and 2nd class carriages such accommodation can only be provided, when available, on 24 hours previous notice being given to the Station Master of the station at which such accommodation may be required.

3. The Railway administration cannot, however, guarantee to provide reservad accommodation at intermediate stations.

B. VENKOBA RAO,
Traffic Manager.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಪ್ರಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 40

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರ. ೨—೮—೦ ವಿ. ಪಿ. ಚಾರ್ಜು ರೂ. ೦—೧೨—೦
೨೪ ಡಿನ್ನು ಬಾಟ್ಲು ೧ಕ್ಕೆ ರೂ. ೩—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ವೀದಿ, ಪಾರ್ಕಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಟೀಕ ವೀರಶೈವ ವಿವಾಹವಿಧಿಃ	೦—೮—೦
ವಪೂಜಾವಿಧಿಃ	೦—೧೦—೦
ಾರುತೀರ್ಥಕಂಠಿ	೦—೩—೦
ಂಡಾಃ	೦—೪—೦
ಲ್ಲಿಂಗಲಬ್ಧ್ಯಾ (ಮುಕ್ತಿಸಾಧ್ಯ)ಸ	೦—೨—೦
ರುಚಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶಿವಶಂಕರಪ್ಪಾ ಜೇರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ಕುಸ್ಸ, ಕೊಬ್ರಿ, ಕೊಬ್ರಿಯೆಣ್ಣೆ, ಶೀಗೆಕಾಯಿ, ಎಳ್ಳೆಯೆಣ್ಣೆ, ಮೆಣಸಿನಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲೆಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಸಿಯಿಂದ ಫಾಯಿದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 12

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಶರತು. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿ ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ 'ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
31 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹಾ ವ್ಯಕ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
10 ವೈದ್ಯಶಾಲಾ, ಮೈಸೂರು.

ಇನಾಂ! ಆಲಸ್ಯಮಾಡಿದರೆ ದೊರೆಯಲಾರದು **ಇನಾಂ!!**

ತಮ್ಮ ವಿಳಾಸವನ್ನು ವಿವರವಾಗಿ ತಿಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
5 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್‌ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 19

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

24

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವೆವು ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಎದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಂಭ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಎದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಮೇ ತಾ|| ೨ ನೆಯ ಭಾನುವಾರ.

ನೇತ್ರಚಿಕಿತ್ಸೆ.

ಆಂಗ್ಲಪದ್ಧತಿಯ ಪ್ರಕಾರ ನೇತ್ರವೈದ್ಯ ವಿದ್ಯಾಭ್ಯಾಸವನ್ನು ಮಾಡಿದವರಿಂದಲೇ ನೇತ್ರಚಿಕಿತ್ಸೆ (ಪರೆ ತೆಗೆಯಿಸುವುದು) ಯನ್ನು ಮಾಡಿಸುವುದು ಲಾಭಕಾರಿಯೇ ಹೊರತು ಆ ಪರೆಯನ್ನು ಒಳಕ್ಕೇ ಅದಿಮಿಬಿಡುವ ಹಿಂದೂ ಯುನಾನಿ ಚಿಕಿತ್ಸಾಕ್ರಮಕ್ಕೆ ಒಳಪಡುವುದು ಹಿತಕರವಲ್ಲವೆಂದು ಮದ್ರಾಸು ಪಬ್ಲಿಸಿಟಿ ಬೋರ್ಡಿನವರು ಈ ಹಿಂದೆ ಒಂದು ಕರಪತ್ರವನ್ನು ಸಕಾರಣವಾದ ವಿವರಣದೊಡನೆ ಮುದ್ರಿಸಿದ್ದರು. ಈಗ ತಮ್ಮ ಮದ್ರಾಸಾಧಿಪತ್ಯದ ಪ್ರಜೆಗಳಲ್ಲಿ ಬಡವರಾಗಿರುವ ನೇತ್ರರೋಗಿಗಳೆಲ್ಲಾ ಸರ್ಕಾರದ ನೇತ್ರಚಿಕಿತ್ಸಾಲಯಗಳಿಗೆ ಹೋಗಿ ಗುಣಪಡಿಸಿಕೊಂಡು ಬರುವುದಕ್ಕೆ ಸಾಹಾಯ್ಯಕವಾದ ಏರ್ಪಾಟೊಂದನ್ನು ಮಾಡಿರುತ್ತಾರೆ. ಹೇಗೆಂದರೆ—ನೇತ್ರವೈದ್ಯದಲ್ಲಿ ಸಮರ್ಥರಾದ ಡಾಕ್ಟರುಗಳು ದೊರೆಯದಿರುವ ಸ್ಥಳಗಳಲ್ಲಿ ಯಾರಾದರೂ ನೇತ್ರರೋಗಗ್ರಸ್ತರಾಗಿ ಪರೆಯನ್ನು ತೆಗೆಯಿಸಬೇಕಾಗಿದ್ದರೆ, ಅಂಥವರು ಬಡವರಾಗಿದ್ದರೆ, ಅವರುಗಳಿಗೆ ಸ್ಯಾನಿಟರಿ ಇಲಾಖೆಯ ಅಧಿಕಾರಿಗಳಾಗಲೀ ಸಿವಿಲ್ ಸರ್ಜನರಾಗಲೀ ಸರ್ಕಾರಿ ಹಣವನ್ನು ವೆಚ್ಚಕ್ಕೆ ಕೊಟ್ಟು ಸರ್ಕಾರಿ ನೇತ್ರವೈದ್ಯಾಲಯಕ್ಕೆ ಕಳುಹಿಸಿಕೊಡಬೇಕೆಂದು ಅಪ್ಪಣೆ ಮಾಡಿದ್ದಾರೆ. ಮತ್ತು ಮದ್ರಾಸಿನಲ್ಲೊಂದು ಕಡೆಯೇ ಇಂಥ ವೈದ್ಯಾಲಯವಿದ್ದರೆ ದೂರಪ್ರದೇಶದವರಿಗೆ ಬರುವುದಕ್ಕೆ ಕಷ್ಟವಾಗುವುದೆಂದು ಯೋಚಿಸಿ, ವಿಶಾಖಪಟ್ಟಣ, ಮಧುರೆ, ತಂಜಾವೂರು ಈ ಪಟ್ಟಣಗಳಲ್ಲೂ ಪ್ರತ್ಯೇಕವಾಗಿ ನೇತ್ರವೈದ್ಯಾಲಯಗಳನ್ನು ಸ್ಥಾಪಿಸಿಕೊಟ್ಟಿರುತ್ತಾರೆ.

ಮದ್ರಾಸಾಧಿಪತ್ಯದಲ್ಲಿ ವಾಸಮಾಡಿಕೊಂಡಿರುವ ಬಡಬಗ್ಗರಾದ ನೇತ್ರರೋಗಿಗಳಿಗೆ ಈ ಮೇಲಣ ಸರ್ಕಾರದಪ್ಪಣೆಯಿಂದ ಎಷ್ಟೋ ಸಹಾಯವಾಗುವುದೆಂಬುದಕ್ಕೆ ಸಂಶಯವಿಲ್ಲ. ನಮ್ಮ ಮೈಸೂರು ಸಂಸ್ಥಾನದಲ್ಲೂ ಬೆಂಗಳೂರಿನಲ್ಲಿ ಲಾರ್ಡ್ ಮಿಂಟೋರವರ ಹೆಸರಿನ ಮೇಲೆ ಭವ್ಯವಾದ ನೇತ್ರವೈದ್ಯಾಲಯವನ್ನು ನಮ್ಮ ಸರ್ಕಾರದವರು ಕಟ್ಟಿಸಿದ್ದಾರೆ. ಸಮರ್ಥರಾದ ನೇತ್ರವೈದ್ಯರು ಅಲ್ಲಿಡಲ್ಪಟ್ಟಿದ್ದಾರೆ. ರಾಜಧಾನಿಯ ಕೃಷ್ಣರಾಜ ವೈದ್ಯಾಲಯದಲ್ಲೂ ನೇತ್ರಚಿಕಿತ್ಸೆಯು ನಡೆಯಿಸಲ್ಪಡುತ್ತಿದೆ. ಆದರೂ ರೈಲ್ವೆಬಾಡಿಗೆ ಮೊದಲಾದುವುಗಳನ್ನು ಕೊಟ್ಟುಕೊಂಡು ಬರಬಲ್ಲ ಸಂಸ್ಥಾನ ಪ್ರಜೆಗಳಿಗೂ ಮತ್ತು ಅವೆರಡು ಪಟ್ಟಣಗಳ ಪ್ರಜೆಗಳಿಗೂ ಮಾತ್ರ ಈ ವೈದ್ಯಾಲಯಗಳ ಪ್ರಯೋಜನವು ಲಭಿಸುತ್ತಿದೆಯೇ ಹೊರತು ವೆಚ್ಚಮಾಡಿಕೊಂಡು ಬರಲು ಶಕ್ತಿಯಿಲ್ಲದ ಬಡಬಗ್ಗರಾದ ಪರಸ್ಥಳಗಳ ನೇತ್ರರೋಗಿಗಳಿಗೆ ಈ ವೈದ್ಯಾಲಯಗಳಿದ್ದರೂ ಪ್ರಯೋಜನವಿಲ್ಲವಾಗಿದೆ. ಮದ್ರಾಸು ಸರ್ಕಾರದಂತೆ ನಮ್ಮ ಪ್ರಭುತ್ವದವರೂ ಏರ್ಪಡಿಸಿಕೊಟ್ಟರೆ ಅನೇಕ ದೀನಪ್ರಜೆಗಳಿಗೆ ನೇತ್ರದಾನ ಮಾಡಿದ ಪುಣ್ಯವು ಲಭಿಸುತ್ತದೆ.

ಭರತಖಂಡ ಲೋಹಮಾರ್ಗ ಶಾಖೆಯ ವರದಿ.

ಯುದ್ಧದಿಂದ ನಾನಾ ವಿಧವಾದ ಕ್ಷಾಮಬಾಧೆಗಳಿಗೆ ಪ್ರಜೆಗಳು ಈಡಾದರೂ ಲೋಹಮಾರ್ಗ ಸಂಘಗಳಿಗೆ ಮಾತ್ರ ದುರ್ಭಿಕ್ಷ ಭಯವೇ ಇಲ್ಲ. ಅವರುಗಳಿಗೆ ಕಲ್ಲಿದ್ದಲು ಕಡಿಮೆಯಾಯಿತು. ಇಂಜನ್ನುಗಳೂ ಇತರ ಸಾಮಗ್ರಿಗಳೂ ಸಿಕ್ಕದಂತಾದುವು. ಉಪಕರಣಗಳ ಬೆಲೆಯು ಹೆಚ್ಚಿತು. ಆದರೇನು ? ಬಾಡಿಗೆಗಳನ್ನು ರೈಲ್ವೆ ಕಂಪೆನಿಗಳು ಹೆಚ್ಚಿಸಿಬಿಟ್ಟುವು. ಇದರಿಂದ ಅವರ ಆದಾಯವು ವರ್ಷ ವರ್ಷಕ್ಕೆ ಹೆಚ್ಚುವಂತೆಯೇ ಆಯಿತು. ಈ ಭರತಖಂಡದ ಸ್ಟೇಟ್ ರೈಲ್ವೆಗಳ ಒಟ್ಟು ಆದಾಯವು ಕಳೆದ ವರ್ಷದಲ್ಲಿ ಆಗಿರುವಷ್ಟು ಹಿಂದೆ ಯಾವಾಗಲೂ ಆಗಿರಲಿಲ್ಲ. ಮತ್ತು ಬಜೆಟ್ ಅಂದಾಜಿಗಿಂತಲೂ ೫|| ಕೋಟಿಯಷ್ಟು ಆದಾಯವು ಹೆಚ್ಚಾಯಿತು. ಎಂದರೆ ೧೯೧೮-೧೯ ನೆ ವರ್ಷದ ಒಟ್ಟು ಉತ್ಪತ್ತಿಯು ೭೭೩೫೦೦೦೦೦ ರೂ.ಗಳೆಂದು ಗೊತ್ತಾಗುತ್ತದೆ. ಇದು ಕಳೆದ ೧೯೧೭-೧೮ ನೆ ವರ್ಷದ ಉತ್ಪತ್ತಿಗಿಂತಲೂ ೭ ಕೋಟಿಯೂ ೩೪ ಲಕ್ಷ ರೂ.ನಷ್ಟು ಹೆಚ್ಚಾಗಿರುವುದು. ಯುದ್ಧಾರಂಭವಾದಾರಭ್ಯ ಪ್ರತಿವರ್ಷವೂ ರೈಲ್ವೆಶಾಖಾ ವರಮಾನವು ಹೀಗೆಯೇ ಅಭಿವೃದ್ಧಿ ದಶೆಯಲ್ಲೇ ಇರುತ್ತದೆ. ಇದರ ಮೇಲೆ ಮತ್ತೊಂದು ವಿಶೇಷವೇನೆಂದರೆ ವೆಚ್ಚವು ದಿನ ದಿನಕ್ಕೆ ಕಡಿಮೆಯಾಗುತ್ತಿದೆ. ಬಡ್ಜೆಟ್ಟಿಗಿಂತ ಕಳೆದ ವರ್ಷದ ವೆಚ್ಚವು ೪೫ ಲಕ್ಷದಷ್ಟು ಕಡಿಮೆಯಾಗಿದೆ. ಇದರಿಂದ ರೈಲ್ವೆ ಸಂಘಗಳು ವಿಪರೀತ ಧನಾರ್ಜನೆಯನ್ನು ಮಾಡಿಕೊಳ್ಳುತ್ತಿರುವುವೆಂಬುದನ್ನು ಹೇಳಬೇಕಾಗಿಲ್ಲ. ಸ್ಟೇಟ್ ರೈಲ್ವೆಗಳ ಹೊರತು ಜಿಲ್ಲಾ ಬೋರ್ಡು ರೈಲ್ವೆಗಳ ಮತ್ತು ಸಂಸ್ಥಾನಗಳ ರೈಲ್ವೆಗಳ ವರಮಾನಗಳು ಕೂಡ ಹೆಚ್ಚಿರುವುವೆಂತಲೇ ವರದಿಯಿಂದ ಗೊತ್ತಾಗುತ್ತದೆ. ಆದರೆ ನಮ್ಮ ಮೈಸೂರು ಸಂಸ್ಥಾನದ ರೈಲ್ವೆಯ ವರಮಾನವು ಮಾತ್ರ ಈ ಪರಿಸ್ಥಿತಿಗೆಲ್ಲಾ ವಿರುದ್ಧವಾಗಿದೆ. ಈ ವೈಲಕ್ಷಣ್ಯಕ್ಕೆ ಕಾರಣವೇನೆಂಬುದನ್ನು ನಮ್ಮ ಪ್ರಭುತ್ವದವರು ತೀವ್ರದೃಷ್ಟಿಯಿಂದ ಅವಲೋಕಿಸಬೇಕಾಗಿದೆ.

ರೈಲ್ವೆ ಸಂಘಗಳಿಗೆ ವರಮಾನವು ಹೀಗೆ ವಿಪರೀತವಾಗಿ ಹೆಚ್ಚುತ್ತಿದ್ದರೂ ಅದಕ್ಕೆ ಪ್ರತಿಫಲವಾಗಿ ಪ್ರಯಾಣಿಕರಿಗೆ ಸೌಕರ್ಯಗಳನ್ನು ಆ ಕಂಪೆನಿಗಳವರು ಉಂಟುಮಾಡಿಕೊಡದಿರುವುದು ಮಾತ್ರ ಅನ್ಯಾಯವೂ ಖಂಡನೀಯವೂ ದಂಡನೀಯವೂ ಆದ ವಿಷಯವಾಗಿರುತ್ತದೆ. ರೈಲ್ವೆಯ ವರಮಾನದ ಹೆಚ್ಚುಭಾಗಕ್ಕೆ ೩ ನೆ ತರಗತಿಯ ಪ್ರಯಾಣಿಕರು ಕಾರಣಭೂತರು. ಅವರುಗಳ ಪ್ರಯಾಣ ಸೌಕರ್ಯದ ಲೋಪಗಳು ಸರ್ವವಿದಿತವಾಗಿವೆ. ಆದರೂ ಪರಿಹಾರ ಪ್ರಯತ್ನಗಳು ಮಾತ್ರ ನಡೆಯಿಸಲ್ಪಡುತ್ತಲಿಲ್ಲ. ಮ|| ಗಾಂಧಿಯವರಂಥವರು ಸತ್ಯಾಗ್ರಹವನ್ನು ಬೋಧಿಸಿ ೧-೨ ತಿಂಗಳ ಕಾಲ ರೈಲ್ವೆ ಪ್ರಯಾಣವನ್ನೇ ಪ್ರಜೆಗಳು ಬಿಟ್ಟುಬಿಡುವಂತೆ ಮಾಡಿದರೆ ರೈಲ್ವೆ ಕಂಪೆನಿಗಳವರು ಕಣ್ಣು ತೆರೆದಾರೋ ಏನೋ !

ನಮ್ಮ ಮೈಸೂರು ರೈಲ್ವೆಯ ಕೆಲಭಾಗವು ಕಂಪೆನಿ ಅಧೀನತೆಯಿಂದ ತಪ್ಪಿ ಸ್ವದೇಶಪ್ರಭುತ್ವಕ್ಕೆ ಒಳಪಟ್ಟಮೇಲೂ ಕೂಡ ಅಲ್ಲಿಯ ೩ ನೆ ತರಗತಿ ಪ್ರಯಾಣಿಕರ ಸೌಕರ್ಯವು ಮೊದಲಿಗಿಂತಲೂ ಹೀನವಾಯಿತೆಂಬುದನ್ನು ಹೇಳುವುದಕ್ಕೆ ವಿಷಾದವಾಗುತ್ತದೆ ಇದು ಪ್ರಭುತ್ವಕ್ಕೆ ಲಾಂಛನವು.

ಕಳೆದ ವರ್ಷದ ರೈಲ್ವೆ ಪ್ರಮಾದಗಳಿಂದ ೨೫೭೩ ಮಂದಿಗಳು ಮೃತರಾಗಿದ್ದಾರೆ. ೭೫೮೫ ಮಂದಿಗಳಿಗೆ ಗಾಯಗಳಾಗಿವೆ. ಕಳೆದ ವರ್ಷ ಹೊಸದಾಗಿ ಸ್ಥಾಪಿಸಲ್ಪಟ್ಟ ೩೬೫ ಮೈಲಿಗಳ ಮಾರ್ಗವೂ ಸೇರಿದರೆ ಒಟ್ಟು ಈ ದೇಶದಲ್ಲೆಲ್ಲಾ ೩೬೭೧೭ ಮೈಲಿಗಳ ಲೋಹಮಾರ್ಗವಿದ್ದಿತು.

ಆರಾಧ್ಯರ ಕಾನ್‌ಫರೆನ್ಸ್.

ಲಿಂಗಧಾರಿಗಳಲ್ಲಿ ಆರಾಧ್ಯರೆಂಬ ಹೆಸರನ್ನು ಪಡೆದಿರುವ ಒಂದು ವರ್ಗದವರುಂಟಷ್ಟೆ. ಇವರುಗಳ ಸಂಖ್ಯೆಯು ಮಿತವಾಗಿದೆ. ಅದರಲ್ಲೂ ಇವರ ವಸತಿಯು ಮೈಸೂರು ಡಿಸ್ಟ್ರಿಕ್ಟಿನಲ್ಲೇ ಹೆಚ್ಚು. ಅದುಕಾರಣ ತಮ್ಮವರ ವಿದ್ಯಾದಿ ಅಭ್ಯುನ್ನತಿಯನ್ನು ಕುರಿತು ಪರ್ಯಾಲೋಚಿಸುವುದಕ್ಕೆಂದು ಅವರೆಲ್ಲರಿಗೂ ಮಧ್ಯಪ್ರದೇಶವಾದ ರಾಜಧಾನಿಯಲ್ಲಿ ಒಂದು ಸಭೆಯನ್ನು ಕಳೆದ ಭಾನುವಾರ ಮ|| ಬಸವಾರಾಧ್ಯ ಬಿ.ಎ.ಬಿ.ಎಲ್. ರವರ ಅಧ್ಯಕ್ಷತೆಯಲ್ಲಿ ಈ ಜನರು ನೆರವೇರಿಸಿದರು. ಎಲ್ಲಾ ಕಡೆಯಿಂದಲೂ ಬಂದ ಅವರ ಪ್ರತಿನಿಧಿಗಳ ಸಂಖ್ಯೆಯು ೬೦-೭೦ ರ ವರೆಗೆ ಇದ್ದಿತು. ಉಳಿದ ನಾನಾಮತದ ಪ್ರೇಕ್ಷಕರ ಸಂಖ್ಯೆಯೂ ಅಷ್ಟೇ ಇದ್ದಿತು. ನಂಜನಗೂಡು ಪ್ಲೀಡರಾದ ಮ|| ಬಿ. ನಂಜುಂಡಾರಾಧ್ಯರು ಸ್ವಾಗತಪರ ಭಾಷಣವನ್ನು ಓದಿದ ಬಳಿಕ, ಮ|| ಬಸವಾರಾಧ್ಯರು ತಮ್ಮ ಭಾಷಣವನ್ನು ಮ|| ನಾಗಭೂಷಣಾರಾಧ್ಯರಿಂದ ಓದಿಸಿದರು. ವೀರಶೈವಮತಾಚಾರ್ಯರು ಪೂರ್ವದಲ್ಲಿ ಅನೇಕ ಗ್ರಂಥಗಳನ್ನು ರಚಿಸಿ ಲೋಕೋಪಕಾರ ಮಾಡಿ ಜಗತ್ಪ್ರಸಿದ್ಧರಾಗಿದ್ದರೆಂದೂ ಈಚಿನವರು ಅಂಥ ಯೋಗ್ಯತೆಯನ್ನು ಕಳೆದುಕೊಳ್ಳುತ್ತ ಬಂದುದರಿಂದ ಮತವೂ ಅದರ ಗೌರವವೂ ಕ್ಷೀಣಿಸಲವಕಾಶವಾಯಿತೆಂದೂ, ಅದುಕಾರಣ ವೈದಿಕ ಲೌಕಿಕವಿದ್ಯೆಯನ್ನು ಹೆಚ್ಚಿಸಬೇಕೆಂದೂ, ಮುಖ್ಯವಾಗಿ ತಮ್ಮ ಆರಾಧ್ಯರ ಅಭ್ಯುನ್ನತಿಗಾಗಿ ಪ್ರತ್ಯೇಕ ಪ್ರಯತ್ನವನ್ನು ಮಾಡುವುದೇ ಈಗಣ ಉದ್ದೇಶವೆಂದೂ ನಿರೂಪಿಸಿ, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಸ್ವರೂಪ ನಿರೂಪಣವನ್ನು ಅದರಲ್ಲಿ ಸಂಕ್ಷೇಪವಾಗಿ ಮಾಡಿದ್ದರು. ಬಳಿಕ ಮ|| ವೆಂಕಟಕೃಷ್ಣಯ್ಯನವರು ಕಾಲೋಚಿತವಾದ ಒಂದು ಉಪನ್ಯಾಸವನ್ನು ಸಭಾಧ್ಯಕ್ಷರ ಕೋರಿಕೆಯಂತೆ ಮಾಡಿದರು. ಅದರಲ್ಲಿ ಪುರುಷಯತ್ನ ಫಲವನ್ನು ದೃಷ್ಟಾಂತಪೂರ್ವಕವಾಗಿ ನಿರೂಪಿಸಿ, ಬಸವೇಶ್ವರನು ವೀರಶೈವಮತದ ಅಭ್ಯುನ್ನತಿಗಾಗಿ ಎಂಥ ಉದಾರಚಿತ್ತದಿಂದ ಹೇಗೆ ಪ್ರಯತ್ನಪಟ್ಟನೋ ಹಾಗೆ ಆದೇ ಹೆಸರನ್ನು ವಹಿಸಿರುವ ಮ|| ಬಸವಾರಾಧ್ಯರೂ ಯತ್ನಿಸಿ ಕಾರ್ಯ ಮಾಡಿದರೆ ಉದ್ದಿಷ್ಟ ಫಲವು ಸುಲಭವಾಗಿ ಲಭಿಸುವುದೆಂದೂ, ಸ್ವಜನಾಭ್ಯುನ್ನತಿಗೆ ಸರ್ವರೂ ಯಥಾಶಕ್ತಿ ಸಹಾಯ ಮಾಡುವುದು ಕರ್ತವ್ಯವೆಂದೂ, ನಾನು ಹೆಚ್ಚು ಅವನು ಕಡಮೆ ಎಂಬ ಭಾವಗಳೂ ವಾದಗಳೂ ಅನರ್ಥಕಾರಿಗಳೆಂದೂ, "ಆರಾಧ್ಯಹೋಂ" ಎಂಬುದೊಂದನ್ನು ಸ್ಥಾಪಿಸಿಕೊಂಡು ಅದರ ಮೂಲಕ ಸ್ವಜನರ ವಿದ್ಯಾಭಿವೃದ್ಧಿಗಳಿಗೆ ಈ ಜನರು ಪ್ರಯತ್ನಿಸುವುದು ಉಚಿತವೆಂದೂ ಮೊದಲಾಗಿ ಪ್ರತಿಪಾದಿಸಿದರು. ದಿವಾನರು, ಮಿ|| ರೆಡ್ಡಿಯವರು, ರಾ|| ಸಾ|| ಚನ್ನಯ್ಯನವರು ಸಭಾಕಾರ್ಯದಲ್ಲಿ ತಮ್ಮ ಸಾನುಭೂತಿಯನ್ನು ತೋರಿಸಿ ಪತ್ರಗಳನ್ನು ಬರೆದಿರುವರೆಂದು ಸಭಾಧ್ಯಕ್ಷರು ತಿಳಿಯಿಸಿದರು. ಗಂಧಪುಷ್ಪ ತಾಂಬೂಲಾದಿ ವಿನಿಯೋಗವಾದ ಬಳಿಕ ಸಭೆಯು ಉಪಸಂಹರಿಸಲ್ಪಟ್ಟಿತು. ಮಧ್ಯಾಹ್ನೋತ್ತರವೂ ಮರುದಿನವೂ ಸ್ವಕುಲಜನರೇ ಸೇರಿಕೊಂಡು ಫಂಡಿನ ಚಂದಾಪಟ್ಟಿ ಮೊದಲಾದುವುಗಳನ್ನು ಮಾಡಿಕೊಂಡರೆಂದು ಕೇಳಿದೆವು

ಈ ಆರಾಧ್ಯವರ್ಗದ ಕೆಲತರುಣರು ಈಚೆಗೆ ಒಂದು ವಕ್ರಮಾರ್ಗದಲ್ಲಿ ಪ್ರವರ್ತಿಸಿ, ವೀರಶೈವಮತದಲ್ಲಿ ಗದ್ದಲವನ್ನೆಬ್ಬಿಸಿ, ವೀರಶೈವಸಮಾಜದವರ ಪ್ರೀತಿಯನ್ನು ಕಳೆದುಕೊಳ್ಳಲು ದಾರಿ ಮಾಡಿಕೊಂಡಿರುತ್ತಾರೆ. ಅಂಥವರ ಪ್ರಯತ್ನ ಪ್ರೇರಣೆಗಳಿಂದಲೇ ಈ ನೂತನ ಸಭೆಯು ಉಪಕ್ರಮವಾಗಿರಬೇಕೆಂದು ರಾಜಧಾನಿಯ ಮತ್ತು ಈ ಸುತ್ತುಮುತ್ತಣ ವೀರಶೈವ ಪ್ರಜೆಗಳು ಸಂಶಯಪಡುತ್ತಿದ್ದರು. ಸಭಾ ಚಾಲಕರು ರಾಜಧಾನಿಯಂಥ ಪ್ರಮುಖಸ್ಥಳದಲ್ಲಿ ಈ ಸಭೆಯನ್ನು ಕೂಡಿಸಿದರೂ ಈ ಊರಿನ ವೀರಶೈವಮಂಡಲಿಗೆ ಆಹ್ವಾನವನ್ನು ಕೊಡದೆ ಪರಮತದವರ ಜತೆಗೆ ತಮಗೆ ಬೇಕಾದ ನಾಲ್ಕಾರು ಮಂದಿಗಳಿಗೆ ಮಾತ್ರ ಆಹ್ವಾನಪತ್ರಿಕೆಗಳನ್ನು ಕೊಟ್ಟು ಬರಮಾಡಿಕೊಂಡುದು ಆ ಸಂಶಯವನ್ನು ನಿವೃತ್ತಿ ಪಡಿಸಿತು. ತಮ್ಮ ವರ್ಗಕ್ಕೆ ವೀರಶೈವ ಸಮಾಜದವರ ಸಾಹಾಯ್ಯ ಸಾನುಭೂತಿಗಳೊಂದೂ ಅವಶ್ಯಕವಿಲ್ಲವೆಂದು ಧಿಕ್ಕರಿಸಿದವರ ಕೃತ್ಯದಂತೆ ಇವರು ನಡೆದುಕೊಂಡುದು ಅಷ್ಟೇನೂ ದೂರದೃಷ್ಟಿಯಾಗಿ ನಮಗೆ ತೋರುವುದಿಲ್ಲ. ಮ|| ಬಸವಾರಾಧ್ಯ ನಂಜುಂಡಾರಾಧ್ಯರಂಥವರು ಮುಂದಾಗಿ ನಿಂತುಕೊಂಡೂ ಹೀಗೆ ಮಾಡಿದುದಕ್ಕಾಗಿ ನಾವು ಆಶ್ಚರ್ಯಪಡುತ್ತೇವೆ. ಸರ್ವತಂತ್ರ ಸ್ವತಂತ್ರರಾಗಿ ನಾವು ಬಾಳಿಕೊಳ್ಳುತ್ತೇವೆಂಬ ಸಂಕಲ್ಪದಿಂದ ಬೇಕೆನ್ನುತ್ತಲೇ ಇದರ ಚಾಲಕರು ಹೀಗೆ ಮಾಡಿದ್ದರೆ ಯಾರೂ ಅಡ್ಡಿ ಮಾಡಲಾರರು. ಆದರೆ ಇಂಥ ಭಾವಗಳಿಗೂ ಪ್ರಯತ್ನಗಳಿಗೂ ಗ್ರಾಮಾಂತರದಲ್ಲಿರುವ ಇವರ ಜನವರ್ಗದವರು ಎಷ್ಟುಮಟ್ಟಿಗೆ ಅನುಮೋದಿಸಬಹುದೆಂಬುದು ಸಭೆಗೆ ಬಂದಿದ್ದ ಅವರ ಪ್ರತಿನಿಧಿ ಸಂಖ್ಯೆಯಿಂದಲೇ ವ್ಯಕ್ತವಾಗಿರುತ್ತದೆ. ಮತದಿಂದ ಸಿಡಿದು ಪ್ರತ್ಯೇಕವಾಗಿ ಬಾಳುತ್ತೇವೆಂದು ಈ ವರ್ಗದವರು ಸಂಕಲ್ಪಿಸಿಕೊಂಡರೆ ಅದರಿಂದ ಸಮಾಜಕ್ಕೆ ಲೇಶಮಾತ್ರವೂ ನಷ್ಟವೂ ಇಲ್ಲ; ಚಿಂತೆಯೂ ಇಲ್ಲ. ಆ ಪ್ರಯತ್ನವು ಅಲ್ಪಸಂಖ್ಯಾಕರಾದ ಇವರಲ್ಲಿನ ಕೆಲ ಉಪಪನ್ನರಿಗೆ ಬಾಧಾಕರವಾಗದೆಹೋದರೂ ಸಮಾಜಾಶ್ರಯದಿಂದಲೇ ಅಹರ್ನಿಶಿಯೂ ಕಾಲಯಾಪನೆ ಮಾಡಬೇಕಾದವರಾಗಿರುವ ಇತರರಿಗೆಲ್ಲಾ ಅನರ್ಥಪರಿಣಾಮಿಯಾಗದೆ ಹೋಗಲಾರದು.

ಬಸವೇಶ್ವರ ಜಯಂತ್ಯುತ್ಸವವು.

ವೀರಶೈವ ಮತಾಚಾರ್ಯ ಪರಂಪರೆಯ ಕರ್ತೃತ್ವಶಕ್ತಿಯೂ ಪ್ರಭಾವವೂ ಲೋಪಗೊಂಡು ವೀರಶೈವಾಚಾರವು ಅತ್ಯಂತ ಗುಪ್ತವಾಗಿಹೋಗಿದ್ದ ಕಾಲದಲ್ಲಿ ಯಾವ ಮಹೋದಯನ ಅವತಾರವಿಶೇಷವು ಧಾರೆಯಲ್ಲಿ ಶಿವಭಕ್ತಿ ಶಿವಾಚಾರಗಳ ಅಭ್ಯುನ್ನತಿಗೆ ನಿರತಿಶಯವಾದ ಸಾಧನವಾಗಿ ಪರಿಣಮಿಸಿತೋ ಅಂಥ ಮಹಾ ಬಸವೇಶ್ವರನ ಅವತರಣ ದಿನವನ್ನು ವೀರಶೈವರೆಲ್ಲರೂ ಚಿರಸ್ಮರಣೀಯವಾಗಿಟ್ಟುಕೊಂಡು ಪರ್ವದಿನವನ್ನಾಗಿ ಆಚರಿಸುವುದು ವಿಶೇಷವೇನೂ ಅಲ್ಲ. ಕಳೆದ ವೈಶಾಖ ಶುದ್ಧ ೫ ಯದಿನ ರೋಹಿಣೀ ನಕ್ಷತ್ರವು ಸಂಘಟಿಸಿದ್ದುದರಿಂದ ಆ ದಿವಸ ದೇಶದ ಸಕಲ ಭಾಗಗಳಲ್ಲೂ ವೀರಶೈವರು ಪರಮ ಪವಿತ್ರವಾದ ಆಚರಣೆಗಳಿಂದ ಕಾಲಕ್ಷೇಪವನ್ನು ಮಾಡಿರುವ ವಾರ್ತೆಗಳನ್ನು ಕುರಿತು ನಮಗೆ ಅನೇಕ ಲೇಖನಗಳು ಬಂದಿರುತ್ತವೆ. ಬಸವೇಶ ದೇವಾಲಯಗಳಲ್ಲಿ ರುದ್ರಾಭಿಷೇಕ ಪೂರ್ವಕ ಸಾಂಗ ಸಮರ್ಚನ ಶಿವಸಹಸ್ರ ಗಣಸಹಸ್ರ ಬಸವಸಹಸ್ರನಾಮ ಪಾರಾಯಣ, ಪುರಾಣ ಪಠನ ಶ್ರವಣ, ಬಸವೇಶಾವತಾರ ಮಹತ್ವ ಕಥನಪೂರ್ವಕವಾದ ಉಪನ್ಯಾಸ, ಗಣಾರಾಧನೆ; ಶಿವಕಥಾ ಶ್ರವಣ, ಸಂದಿಷ್ಟ ಸಮೇತವಾದ ಮಹೋತ್ಸವ ಇತ್ಯಾದಿಗಳೆಲ್ಲಾ ನಡೆದಿರುವುವು. ಈ ಸಂಬಂಧವಾದ ಲೇಖನಗಳನ್ನು ವಿಶ್ವಾಸಪೂರ್ವಕವಾಗಿ ಬರೆದುಕಳುಹಿರುವ ನಮ್ಮ ಸಮಾಜಬಾಂಧವರಿಗೆಲ್ಲಾ ನಾವು ಕೃತಜ್ಞತೆಯಿಂದ ವಂದಿಸುತ್ತೇವಲ್ಲದೆ, ಅವುಗಳನ್ನೆಲ್ಲಾ ಪ್ರಕಟಿಸಲು ಸ್ಥಳವಾಗದಿದ್ದುದಕ್ಕಾಗಿ ವಿಷಾದಪಟ್ಟು ಅವರುಗಳ ಕ್ಷಮೆಯನ್ನು ಬೇಡುತ್ತೇವೆ. ಸೊಲ್ಲಾಪುರದಲ್ಲಿ ನಾರೀಮಣಿಯರೇ ಸೇರಿ ಅತ್ಯಂತ ಭಕ್ತಿವಿಶೇಷದಿಂದ ನಡೆಯಿಸಿರುವ ಜಯಂತ್ಯುತ್ಸವ ವಿಶೇಷವು ಔತ್ತರೇಯ ವೀರಶೈವ ಮಹಿಳಾಮಂಡಲದಲ್ಲಿ ಕೂಡ ಜಾಗರೂಕವಾಗಿರುವ ಭಕ್ತಿಮತಾಭಿಮಾನಗಳಿಗೆ ನಿದರ್ಶಕವಾಗಿದೆ. ಹುಬ್ಬಳ್ಳಿಯಲ್ಲಿ ಆ ದಿವಸ ಮ್ಯುನಿಸಿಪಲ್ ಪಾಠಶಾಲೆಗಳಿಗೆಲ್ಲಾ ರಜೆಯನ್ನು ಕೊಟ್ಟಿದ್ದರು. ಈ ಉತ್ಸವ ಸಂಬಂಧವಾಗಿ ತಾ|| ೨೧-೨೨ ರಲ್ಲಿ ಕೂಡಿದ್ದ ಸಭೆಗೆ ಮ|| ಪಾವಟೆ ಸಿದ್ಧರಾಮಪ್ಪನವರು ಅಧ್ಯಕ್ಷರಾಗಿದ್ದು ಮ|| ಬೆಳಿಯಂಗಡಿ ಮಿ|| ಮಂಜಪ್ಪ ಹರ್ಡೇಕರ್ ಮ|| ಕಟ್ಟಿಮನಿ ಇವರುಗಳೆಲ್ಲಾ ಬಸವೇಶನ ಅವತಾರಮಹತ್ತ್ವಗಳನ್ನು ಕುರಿತು ಸುಬೋಧಪ್ರದವಾದ ಉಪನ್ಯಾಸಗಳನ್ನು ಮಾಡಿದರು. ಸ್ವಮತ ಪರಮತಗಳ ಪ್ರಮುಖರನೇಕರು ಸಭೆಗಳಿಗೆ ದಯಮಾಡಿಸಿದ್ದರು. ಆ ದಿನ ಸ್ಮರಣಾರ್ಥವಾಗಿ ಧರ್ಮಾರ್ಥವಾಚನಾಲಯವು ಸ್ಥಾಪಿಸಲ್ಪಟ್ಟಿತು. ರಜಾ ಪಡೆಯುವ ಹಿಂದೂ ಸರ್ಕಾರಿ ಹಬ್ಬಗಳ ಜತೆಗೆ ಈ ದಿನವನ್ನೂ ಸೇರಿಸುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ನಿರ್ಧಾರವು ಸಭೆಯಲ್ಲಾಯಿತು. ಮತ್ತು ಬಸವೇಶ್ವರ ವಚನವನ್ನು ಕಲಿತು ಪರೀಕ್ಷೆ ಕೊಡುವ ವಿದ್ಯಾರ್ಥಿಗಳಿಗೆ ಮುಂಬಣ ವರ್ಷದಿಂದ ಬಹುಮಾನ ಕೊಡಬೇಕೆಂಬ ಸೂಚನೆಯೂ ಆಯಿತು.

ತುರ್ಕಿಯ ಸಂಧಿ.

ಮಿತ್ರಮಂಡಲಿಯವರು ಕೂಡಿ ಏರ್ಪಡಿಸಿರುವ ತುರ್ಕಿ ಸಂಧಿ ಪತ್ರವೆಲ್ಲಾ ಸಿದ್ಧವಾಗಿದೆ. ಅದನ್ನು ಇದೇ ಮೇ ತಿಂಗಳು ತಾ|| ೧೦ ರಲ್ಲಿ ತುರ್ಕಿ ಪ್ರಭುತ್ವದವರಿಗೆ ತಿಳಿಯಿಸಲು ಗೊತ್ತುಮಾಡಿರುವರು. ತುರ್ಕಿ ಪ್ರಭುತ್ವದವರಾದರೊ ತಮ್ಮ ಪ್ರತಿನಿಧಿಗಳನ್ನು ತಾ|| ೧೨ ರಲ್ಲಿ ಕಳುಹಿಸಿಕೊಡಲು ಏರ್ಪಡಿಸಿದ್ದಾರೆ. ತುರ್ಕಿದೇಶ ವಿಭಾಗ ಮತ್ತು ಪರಿಪಾಲನ ವಿಷಯದಲ್ಲಿ ಸಂಧಿ ಸಭೆಯವರು ನಿರ್ಣಯವನ್ನು ಮಾಡಿರುವ ಸಂಗತಿಯು ಇದುವರೆಗೆ ಪ್ರಕಟವಾಗಿರುವ ತಂತೀವಾರ್ತೆಗಳಿಂದ—ಮೆಸಪೊಟೋಮಿಯಾ ಮತ್ತು ಪಾಲಸ್ತೀನು ಇವುಗಳ ಪರಿಪಾಲನ ಭಾರವು ಆಂಗ್ಲಪ್ರಭುತ್ವಕ್ಕೂ, ಸಿರಿಯಾ ದೇಶದ ರಕ್ಷಣ ಭಾರವು ಫ್ರಾನ್ಸಿಗೂ ಸೇರಬೇಕೆಂದು ನಿರ್ಣಯವಾಗಿದೆಯಂತೆ. ಆರ್ಮೀನಿಯಾದ ವಿಷಯದಲ್ಲಿ ಪ್ರೆ|| ವಿಲ್ಸನ್ನರವರೊಡನೆ ಇನ್ನೂ ಪತ್ರವ್ಯವಹಾರವನ್ನು ನಡೆಯಿಸುತ್ತಿರುವರಂತೆ. ಸ್ಮರ್ನಾ ಪ್ರಾಂತದ ಮೇಲಣ ಅಧಿಕಾರವು ಸದ್ಯಃ ತುರ್ಕಿಗೆ ಕೊಡಲ್ಪಟ್ಟು, ೫ ವರ್ಷ ಕಳೆದ ಮೇಲೆ ಸ್ಮರ್ನಾದ ಪಾರ್ಲಿಮೆಂಟು ಇಷ್ಟಪಡುವುದಾದರೆ ಅದು ಗ್ರೀಸಿನೊಡನೆ ಸೇರಿಕೊಳ್ಳಬಹುದು. ಗಲ್ಲಿಪೋಲಿಯನ್ನು ಮಿತ್ರಮಂಡಲಿಯವರು ಆಕ್ರಮಿಸಿಕೊಳ್ಳುವರು. ಡಾರ್ಡನಲ್ಸ್ ಜಲಸಂಧಿಯು ಸರ್ವದೇಶಗಳ ಹಡಗುಗಳ ಸಂಚಾರಕ್ಕೂ ಒಳಪಟ್ಟಿರುವುದು. ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಎಲ್ಲ ಮಿತ್ರಮಂಡಲೀ ದೇಶಗಳ ಸೈನ್ಯವೂ ಇಡಲ್ಪಡುವುದು. ಸಂಧಿ ಪತ್ರವನ್ನು ಓದಿ ಒಪ್ಪಿಸಿದ ಬಳಿಕ ಅದರಲ್ಲಿ ಕಂಡ ನಿಬಂಧನೆಯಂತೆ ತುರ್ಕಿಯನ್ನು ವಶಪಡಿಸಿಕೊಳ್ಳುವಲ್ಲಿ ಅವಶಕ್ಯವಾದ ತಕ್ಕ ಬಲಾತ್ಕಾರಗಳನ್ನು ಮಾಡುವುದಕ್ಕೂ ಸಂಧಿ ಸಭೆಯವರು ಸರಿಯಾದ ಏರ್ಪಾಟುಗಳನ್ನು ಸೈನಿಕಾಧಿಕಾರಿಗಳ ಮೂಲಕ ನಡೆಯಿಸಿರುವರು. ಸ್ಮರ್ನಾವೂ ಗ್ರೀಸಿಗೆ ಸೇರಿಕೊಂಡುಬಿಟ್ಟರೆ ತುರ್ಕಿಗೆ ಯೂರೋಪಿನಲ್ಲಿ ಚಟಲ್ಜಾ ಪಂಗ್ತಿಯ ವರೆಗಣ ದೇಶವಿಭಾಗದ ಮೇಲೆ ಮಾತ್ರವೇ ಅಧಿಕಾರವುಳಿದಂತಾಗುವುದು.

ಒಳದೇಶದ ವೃತ್ತಾಂತಗಳು.

ಬರುವ ಜೂನ್ ತಿಂಗಳು ತಾ|| ೮-೧೦ರಲ್ಲಿ ರಾಜಧಾನಿಯಲ್ಲಿ ಕುದುರೆಯ ಜೂಜುಗಳನ್ನು ನಡೆಯಿಸುವುದಕ್ಕೆ ಏರ್ಪಾಟಾಗುತ್ತಿದೆ.

ಮಹಾಮಾತೃಶ್ರೀಯವರು ಪರಿವಾರ ಸಮೇತ ಕಳೆದ ಭಾನುವಾರ ನೀಲಗಿರಿಗೆ ಗುಂಡ್ಲುಪೇಟೆ ಮಾರ್ಗವಾಗಿ ದಯಮಾಡಿಸಿದರು.

ಬೆಂಗಳೂರು ಕೋಟೆಯಲ್ಲಿರುವ ಸರ್ಕಾರಿ ಡಿಪೋವಿನಲ್ಲಿ ರೂ.ಗೆ ೫ ಮಣದಂತೆ ಸಮೆಯು ಮಾರಲ್ಪಡುತ್ತಿದೆಯಂತೆ. ಮೈಸೂರಿನಲ್ಲಿ ಮಾತ್ರ ಯಾವ ಏರ್ಪಾಟೂ ಆಗಿಲ್ಲ.

ಶ್ರೀಮನ್ಮಹಾರಾಜರವರು ಬದರಿಕಾಶ್ರಮ ಮೊದಲಾದ ಕ್ಷೇತ್ರಗಳ ಯಾತ್ರೆಯನ್ನು ಮಾಡಿಕೊಂಡು ಈಗ ಕಾಶ್ಮೀರದಲ್ಲಿ ಆರೋಗ್ಯವಾಗಿದ್ದಾರೆಂದು ವರ್ತಮಾನ ಕೇಳುತ್ತೇವೆ.

ಮಿ|| ಕೆ. ಮಥಾಯ್ ರವರು ೮ ದಿನಗಳ ರಜಾಪಡೆದಿರುವುದರಿಂದ ಅವರ ಅಸಿಸ್ಟೆಂಟರಾದ ಮ|| ಬಿ. ಮುದ್ದುಕೃಷ್ಣಪ್ಪನವರು ತಮ್ಮ ಕೆಲಸದ ಜತೆಗೆ ಫುಡ್ ಕಂಟ್ರೋಲರ ಛಾರ್ಜನ್ನೂ ವಹಿಸಿರುವಂತೆ ನಿಯಮಿಸಲ್ಪಟ್ಟಿದ್ದಾರೆ.

ನಂಜನಗೂಡು ಅಮಲ್ದಾರರಾದ ಮ|| ಕೆ. ಕೆ. ವೆಂಕಟಸ್ವಾಮಯ್ಯರು ೩ ತಿಂಗಳ ರಜಾಪಡೆದಿರುವುದರಿಂದ ಆ ಸ್ಥಳಕ್ಕೆ ಕೃಷ್ಣರಾಜ ಸಾಗರದ ಡೆ|| ಅಮಲ್ದಾರರಾದ ಮ|| ಶೇಷಗಿರಿರಾಯರು ಆಕ್ಟಿಂಗಾಗಿ ನಿಯಮಿಸಲ್ಪಟ್ಟಿದ್ದಾರೆ.

ವಸ್ತುಪ್ರದರ್ಶನವು ೩ ವರ್ಷಕ್ಕೊಂದು ಸಲ ನಡೆಯುವಂತೆ ಸರ್ಕಾರದವರು ಏರ್ಪಡಿಸಿರುವುದರಿಂದ ಪ್ರತಿ ವರ್ಷವೂ ೫ ಸಾವಿರದ ವೆಚ್ಚದೊಳಗೆ ಮದ್ರಾಸ್ ಪಾರ್ಕ್‌ಫೇರಿನ ರೀತಿಯಂತೆ ಒಂದು ನೋಟವನ್ನು ಏರ್ಪಡಿಸಲು ಸರ್ಕಾರದಪ್ಪಣೆಯಾಗಿದೆ.

ಧಾರವಾಡದಲ್ಲಿ ಕರ್ಣಾಟಕ ರಾಜಕೀಯ ಪರಿಷತ್ತು ಮ|| ವಿ. ಪಿ. ಮಾಧವರಾಯರ ಅಧ್ಯಕ್ಷತೆಯಿಂದ ಇದೇ ತಿಂಗಳು ತಾ|| ೧೨-೧೩-೧೪ ರಲ್ಲಿ ನಡೆಯುತ್ತದೆ. ಕರ್ಣಾಟಕ ಸಾಹಿತ್ಯ ಪರಿಷತ್ಸಮ್ಮೇಳನವು ತಾ|| ೨೨ ರಿಂದ ಆರಂಭಿಸಲ್ಪಡುತ್ತದೆ.

ಈ ದಿನ ರಾತ್ರಿ ಬೆಳಗಿನ ಜಾವದ ೫ ಗಂಟೆ ೨೧ ನಿಮಿಷಕ್ಕೆ ಚಂದ್ರಗ್ರಹಣದ ಆರಂಭವಾಗಿ ಮರುದಿನ ಹಗಲು ೯ ಗಂಟೆ ೨ ನಿಮಿಷಕ್ಕೆ ಬಿಡುವದು. ಚಂದ್ರನು ಗ್ರಸ್ತಾಸ್ತನಾಗುವುದರಿಂದ ಸೋಮವಾರ ರಾತ್ರಿ ಶುದ್ಧಚಂದ್ರಮಂಡಲ ದರ್ಶನಾನಂತರ ಭೋಜನವು ಉಕ್ತವಾಗಿದೆ.

ಶಾಸನಾನ್ವೇಷಣ ಶಾಖಾಧ್ಯಕ್ಷರಾದ ಪ್ರೊ|| ವಿ|| ವಿಚಕ್ಷಣ ರಾ|| ಬ|| ಮ|| ಆರ್. ನರಸಿಂಹಾಚಾರ್ ಎಂ.ಎ. ಯವರು ೩ ತಿಂಗಳ ರಜಾ ಪಡೆದಿರುವುದರಿಂದ ಅವರ ಅಸಿಸ್ಟೆಂಟರಾಗಿರುವ ಮ|| ಆರ್. ರಾಮರಾವ್ ಬಿ.ಎ. ಯವರು ತಮ್ಮ ಕೆಲಸದ ಜತೆಗೆ ಶಾಸನಾನ್ವೇಷಣ ಶಾಖಾಧ್ಯಕ್ಷ ಕಾರ್ಯವನ್ನೂ ನೋಡಿಕೊಳ್ಳುವಂತೆ ಅಪ್ಪಣೆಮಾಡಲ್ಪಟ್ಟಿದ್ದಾರೆ.

ಪತ್ರವ್ಯವಹಾರ.

ನವಲಗುಂದ ಸಭೆಯು.

ಮಧ್ಯಸ್ಥರನ್ನು ನೇಮಿಸಿ ನನ್ನ ಲೇಖವನ್ನು ಚರ್ಚಿಸಬೇಕೆಂದು ಸಭಾಚಾಲಕರಿಗೆ ಪ್ರಕಾಶಗೊಳಿಸಿದಾಗ್ಯೂ ಈ ವರೆಗೆ ನಮ್ಮ ಕಡೆಗೆ ಚಾಲಕರು ಮಧ್ಯಸ್ಥರ ಹೆಸರನ್ನು ತಿಳಿಸಿರುವುದಿಲ್ಲ. ದಿವಸಗಳು ಸಮೀಪಿಸಿದವು. ತೀವ್ರ ಮಧ್ಯಸ್ಥರನ್ನು ಆರಿಸಬೇಕು. ಹಾಗಿಲ್ಲದಿದ್ದರೆ ಲೇಖಖಂಡನವೆಂಬ ವಿಷಯವನ್ನು ತೆಗೆಯಬೇಕು. ಇಲ್ಲವಾದರೆ ನಮ್ಮ ಅಭಾವದಲ್ಲಿ ಮಾಡಿದ ಖಂಡನೋಕ್ತಿಗಳಿಂದ ನಮ್ಮ ಪಕ್ಷವೇ ಬಲವೆಂಬುದು ಸಿದ್ಧಾಂತ.

ಸಿದ್ಧರಾಮಪ್ಪ ಪಾವಟೆ.

ಹಿರೇಕೆರೂರ ವೀರಶೈವ ವಿದ್ಯಾವರ್ಧಕ ಸಂಘ.

ಹಿರೇಕೆರೂರು ತಾಲ್ಲೂಕು ವೀರಶೈವ ವಿದ್ಯಾವರ್ಧಕ ಸಂಘದವರು ಸ್ಥಾಪಿಸಿದ ಶ್ರೀ ಲಿಂಗರಾಜ ಇಂಗ್ಲೀಷ್ ಸ್ಕೂಲಿನ ಫಂಡಿನ ಉದ್ದಿಶ್ಯ ತಾಲ್ಲೂಕಿನಲ್ಲಿ ಸಂಚಾರ ಮಾಡಲಿಕ್ಕೆ ಹತ್ತಿದ್ದಾರೆ. ಶ್ರೀ ಪ್ರಣವಸ್ವರೂಪಿ ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯ ದೇವರ ಸದುಪದೇಶದಿಂದ ಎಲ್ಲ ಜನರೂ ಆನಂದದಿಂದ ಸಹಾಯದ ಮಳೆಗರೆಯುತ್ತಿರುವರು. ಶ್ರೀ ಪ್ರಪ್ರವಸ್ತರೂಪ ಚಿಕ್ಕೆರೂರ ವಿರಕ್ತಮಠದ ಶ್ರೀ ಶಿವಬಸವದೇವರು ಒಂದು ನೂರ ಒಂದು ರೂಪಾಯಿ ವರ್ಗಣಿ ಕೊಟ್ಟಿದ್ದಲ್ಲದೆ ೫ ಜನ ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿ ಅನ್ನದಾನ ಮಾಡಲಿಕ್ಕೆ ಒಪ್ಪಿಕೊಂಡಿರುತ್ತಾರೆ. ತೀವ್ರವೇ ಶ್ರೀ ಶಿವಬಸವ ಬೋರ್ಡಿಂಗು ಸ್ಥಾಪಿಸಲ್ಪಡುವುದು. ಪ್ರತಿಯೊಂದು ಗ್ರಾಮಕ್ಕೂ ಲೈಬ್ರರಿಗಳನ್ನು ಸ್ಥಾಪಿಸಿ ಅಲ್ಲಿ ಸ್ಟಾರು, ವಿಭಾಕರ, ಪ್ರಭೋಧ, ಕರ್ನಾಟಕ ವೃತ್ತ, ಚಂದ್ರೋದಯ, ಶುಭೋದಯಗಳನ್ನು ತರಿಸುವಂತೆ ಏರ್ಪಾಟು ಮಾಡಿರುತ್ತಾರೆ.

ಪ್ರತ್ಯಕ್ಷದರ್ಶಿ.

ಮದರಾಸ್ ಪ್ರಾಂತದ ವೀರಶೈವರು.

ಮಾಂಟೇಗ್ಯೂ ಚೇಮ್ಸ್‌ಫರ್ಡರ ಸ್ಕೀಮು, ಬಹುದಿವಸ ಶಿಫಾರಸಿನ ಪತ್ರರೂಪದಿಂದುಳಿಯದೆ ಸಂಪೂರ್ಣಾವಸ್ಥೆಯ ಕಾಯದೆಯಾಗಿ ಹೋಯಿತು. ಅದರ ರಚನೆಯ ಕಾಲಕ್ಕೆ ಮಾಂಟೇಗ್ಯೂ ಸಾಹೇಬರಿಗೆ ಅನೇಕ ಬಿಕ್ಕಟ್ಟಿನ ಪ್ರಶ್ನೆಗಳು ಮುಂದೆ ಬಂದು ನಿಂತವು. ಅವುಗಳಲ್ಲಿ ಜಾತಿವಾರ ಪ್ರಾತಿನಿಧ್ಯ (Communal Representation) ದ ಪ್ರಶ್ನವೆ ಒಂದಾಗಿತ್ತು. ತತ್ವದೃಷ್ಟಿಯಿಂದ ನೋಡಿದರೆ ಅದು ರಾಷ್ಟ್ರಕ್ಕೆ ಹಿತಕಾರಿಯಲ್ಲವೆಂದು ಯಾವ ಸಂಘದವರು) ಸ್ವಜನ ಸ್ವಾತಂತ್ರ್ಯವನ್ನು ನಮ್ಮ ಜನ್ಮವನ್ನೇ ದಂಡಿಸಿ ಸಂಪಾದಿಸುವದು ಜಗನ್ಮಾನ್ಯವೆಂಬದಾಗಿ ವರ್ತಿಸುತ್ತಿರುವರೋ ಅದೇ ಸ್ವರಾಜ್ಯ ಸಂಘದವರು) ಪ್ರಸಂಗಾನುಸಾರವಾಗಿ ಅವಶ್ಯಕತೆಯನ್ನು (Expediency) ಕಂಡುಕೊಳ್ಳದೇ ಜಾತಿವಾರ ಪ್ರಾತಿನಿಧ್ಯದ ವಿಷಯವನ್ನು ಪಾತಾಳಕ್ಕೆ ಇಳಿಸಬೇಕೆಂಬದಾಗಿ ಭಗೀರಥ ಪ್ರಯತ್ನ ಮಾಡಿದರು. ಮಾಂಟೇಗ್ಯೂ ಸಾಹೇಬರವರು ತಮ್ಮ ಹೊತ್ತಿಗೆಯಲ್ಲಿ ಪ್ರಾತಿನಿಧ್ಯದ ವಿಷಯವಾಗಿ ಉಗ್ರಟೀಕೆಯನ್ನು ಮಾಡಿದಾಗ, ತಾವು ಕೆಸರತ್ತು ಮಾಡಿದ್ದು ಫಲಕಾರಿಯಾಯಿತೆಂದು ಇವರು ಟೆರ್‌ಫುರ್ ಹಾರಾಡಿದರು. ಹಿಂದುಳಿದವರಿಗೇನೂ ಈ ತತ್ವವು ಜನ್ಮಸಿದ್ಧ ಹಕ್ಕೆಂಬದಾಗಿ ಸಾಧಿಸಲಿಲ್ಲ. ವಿದ್ಯಾವಿಹೀನತೆಯ ಮೂಲಕವಾಗಿ ಇವರುಗಳು ತಮ್ಮ ಹಿತವನ್ನು ಕಾಯ್ದುಕೊಳ್ಳುವದು ಕಠಿಣವಿರುವದರಿಂದ ಅದು ಸದ್ಯಕ್ಕೆ ಅವಶ್ಯಕವಿರುವುದೆಂದು ಹೊಡೆದಾಡಿದರು. ತತ್ವವನ್ನು ಮುಂದೆ ಮಾಡಿ ಕಣಿದಾಡಿದ ವಿಚಕ್ಷಣ ಬುದ್ಧಿಯ ಚಾಣಕ್ಯರು ಮತ್ಸರವನ್ನು ಮಾತ್ರ ಪ್ರದರ್ಶಿಸಿದರು. ಗಟ್ಟಿಕುಳವರಾದ ಮುಸಲ್ಮಾನರಿಗೆ ಕೊಟ್ಟಾಗ ಪಿಟ್ಟೆನ್ನಲಿಲ್ಲ. ಶೀಕರವೆಸೆಯಿಂದ ಏಟ್ಟಿ ವಿಸುಗಲಿಲ್ಲ. ಕುರಿಯಂತೆ ಸಭ್ಯರಾದ ಇತರ ಹಿಂದುಳಿದವರ ಮೇಲೆ ಮಾತ್ರ ಈಪ ಹುಲಿಯಂತೆ ಹರಿಹಾಯ್ದರು. ಗೆದ್ದ ಎತ್ತಿನ ಬಾಲವನ್ನು ಹಿಡಿಯುವದನ್ನು ಖಂಡಿಸಿದವರಾದ ಡಾ|| ನಾಯರವರು ಮಂಡಿಸಿದ ಮಾತನ್ನು ವಿಚಾರಿಸಿ ಜಾಯಿಂಟ್ ಕಮಿಟಿಯವರು ಮದ್ರಾಸು ಪ್ರಾಂತದ ಹಿಂದುಳಿದವರಿಗೂ ಮುಂಬಯಿಯ ಕೆಲವು ವಿಶಿಷ್ಟ ಜಾತಿಯವರಿಗೂ ಜಾತಿವಾರ ಪ್ರಾತಿನಿಧ್ಯವನ್ನು ದಯಪಾಲಿಸಿದರು. ಮದ್ರಾಸ್ ಪ್ರಾಂತದ ವೀರಶೈವರು ಈ ಹೊತ್ತಿನಲ್ಲಿ ಕೈಮುಚ್ಚಿಕೊಂಡು ಕೂಡ್ರುವ ಮಾತಲ್ಲ. ಅನುಮಾನಿಸತಕ್ಕದ್ದಿಲ್ಲ. ಬಳ್ಳಾರಿ ಮತ್ತು ಅನಂತಪುರಜಿಲ್ಲೆಗಳಲ್ಲಿ ನಮ್ಮವರೇ ಬಹುಭಾಗ (Mojority) ವಾಗಿರುವರಷ್ಟೆ. ಎಲೆಕ್ಷನ್ನದ ಮಾತು ಒತ್ತಟ್ಟಿಗಿರಲಿ. ಈಗ ದಯಪಾಲಿಸಿರುವ ಈ ಪ್ರಾತಿನಿಧ್ಯದ ಹಕ್ಕನ್ನು ಹೋಗಲಾಡಿಸಿಕೊಳ್ಳಬಾರದು. ದಿವಸವು ಸಮೀಪಿಸುತ್ತಿರುವದು. ತೀವ್ರವಾಗಿಯೇ ಮುಖಂಡರೆಲ್ಲರೂ ಸೇರಿ ಮಾತನಾಡಿಕೊಂಡು ಒಂದು ಡೆಪ್ಯುಟೇಷನನ್ನು ಮದ್ರಾಸಿನ ಬ್ರಾಹ್ಮಣೇತರ ಮುಖಂಡರ ಕಡೆಗೆ ಕಳಿಸಿ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳ ಸ್ಥಳಗಳನ್ನು ಸರ್ ಮೆಸ್ಟನ್ನರ ನಿರ್ಣಯದ ಪ್ರಕಾರವೇ ಆಗಲಿ, ಬೇರೆಯೇ ಆಗಲಿ ನಮ್ಮವರಿಗೆ ಕೊಡಬೇಕಾಗಿ ಪ್ರಾರ್ಥಿಸಬೇಕು. ದಿವಾನ್ ಬಹದ್ದೂರ್ ತ್ಯಾಗರಾಜ ಸೆಟ್ಟರನ್ನೂ ಕಂಡು ಅವರ ಸಹಾನುಭೂತಿಯನ್ನು ಪಡಕೊಂಡು ಈ ವಿಷಯವಾಗಿ ತಮ್ಮ ಶಕ್ತಿಯನ್ನು ವೆಚ್ಚ ಮಾಡಬೇಕೆಂದು ವಿನಂತಿ ಮಾಡಿಕೊಳ್ಳಬೇಕು. ಬಳ್ಳಾರಿ ಜಿಲ್ಲೆಯ ಮುಖಂಡರು ಇತ್ತಕಡೆಗೆ ಗಮನಿಸುವರೆಂದು ಈ ಮೂಲಕ ಕೋರುತ್ತೇನೆ.

ಎಸ್. ಬಿ. ಎಚ್.

ಮುಂಬಯಿಯ ವೀರಶೈವಾಶ್ರಮ.

(ಲೇಖಕ—"ಎಸ್")

"ನಮ್ಮ ಸಮಾಜಕ್ಕೆ ಅದು ಬೇಕು ಇದು ಬೇಕು ಅದನ್ನು ಮಾಡಬೇಕು ಇದನ್ನು ಮಾಡಬೇಕು" ಎಂದು ಹಲವು ತೆರದಿಂದ ಅಲದಮಟ್ಟೀ ಜಂಗಮರಂತೆ ಮಾತಾಡಿ ಮತ್ತು ಮುಂಜಾನೆ "ಜೋಬದ್ರ" ನಾಗಿ ಎಂದಿನಂತೆ ಜೋಯೆಂದು ಕೂಡ್ರುವದು ಲಿಂಗಾಯತರಲ್ಲಿ ಅಲ್ಲಲ್ಲಿ ಆಗಾಗ್ಗೆ ಕಂಡುಬರುತ್ತದೆಂಬುದು ಎಂದಿಗೂ ಸುಳ್ಳಲ್ಲ. ಗುಡ್ಡವನ್ನೇ ಕೆದರಿ ಇಲಿಯನ್ನು ತೆಗೆಯುವ ಪಾಂಡಿತ್ಯವು ಜಗತ್ತಿನಲ್ಲಿ ಯಾರಿಗಾದರೂ ಸಂಧಿಸಿದ್ದರೆ ಅದು ಇವರಿಗೇ ! ಪುಣ್ಯಾತ್ಮ ವಾರದ ಅಪ್ಪಾಸಾಹೇಬರು ದೀರ್ಘಾಲೋಚನೆಯಿಂದ ಮುಂಬಯಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಪಟ್ಟದ್ದು ಯಾತಕ್ಕೆ ? ಅದಕ್ಕೆ ಅನೇಕರು ನೂರ ಎಂಟು ತರದಿಂದ ಹಗಲಿರುಳು ಸಾಹಸಪಟ್ಟದ್ದು ಯಾತಕ್ಕೆ ? ಈ ಪ್ರಶ್ನೆಯು ಮಹಾಸಭೆಯ ಗದ್ದುಗೆಯ ತನಕ ಬಂದದ್ದಾದರೂ ಯಾತಕ್ಕೆ ? ಸಂಸ್ಥೆಗಾಗಿ ಫಂಡು ಕೂಡಿಸಿದ್ದಾದರೂ ಯಾತಕ್ಕೆ ? ಒಂದು ಊಟದ ಮನೆ (ಖಾನಾವಳಿ) ಯನ್ನು ಮಾಡಿ ಬಂದ ಜನರಿಗಾಗಿ ಊಟದ ವ್ಯವಸ್ಥೆಯನ್ನ ಮಾಡಲಿಕ್ಕೆ ? ಅತ್ತಿತ್ತ ಕಡೆಯವರ ಅಡಿಗೆಯು ರುಚಿ ಹತ್ತುವದಿಲ್ಲ; ನಮ್ಮ ಸೀಮೆಯದು ಬೇರೆಯೆನ್ನುವದಕ್ಕೆ !!! ಅಯ್ಯೋ ! ಕೃತಿಯಿಂದಲೂ ವಚನದಿಂದಲೂ ಈ ಉದಾತ್ತ ವಿಚಾರದಿಂದ ಹೊರಡಿಸಿದ ಸಂಸ್ಥೆಯ ಉತ್ಪಾದಕರ ಆತ್ಮಕ್ಕೆ ತಾಪವನ್ನು ಕೊಡಬಾರದೆಂಬ ಭೀತಿಯು ಬರಬಾರದೇ ? ಮುಂಬಯಿಯಲ್ಲಿ ಆಶ್ರಮವನ್ನು ಸ್ಥಾಪಿಸಿದ್ದು ಬರೇ ಹೊಟ್ಟೆಯ ಭರತಿಗಲ್ಲ. ನಾವು ನಾಲ್ಕು ಮಂದಿ ಕಲ್ಲಪ್ಪ ಮಲ್ಲಪ್ಪ ಎಂಬುವವರು ಒತ್ತಟ್ಟಿಗೆ ಇಳ್ಕೊಳ್ಳಬೇಕೆಂಬುದಕ್ಕಲ್ಲ. ಮುಂಬಯಿಯು ಯಾವತ್ತು ವಿಷಯದಿಂದಲೂ ಕೇಂದ್ರಸ್ಥಾನ. ಮಹತ್ತರವಾದ ಸ್ಥಳ. ಅದರಲ್ಲಿ ನಮ್ಮದೊಂದು ಸ್ವತಂತ್ರ ಸ್ಥಳವು ಬೇಕು. ಸಾರ್ವಜನಿಕರೀತಿಯ ಸಾಮಾಜಿಕವೇ ಆಗಲಿ ರಾಜಕಾರಣಸಂಬಂಧವಾದದ್ದೇ ಇರಲಿ. ಯಾವ ಕೆಲಸಮಾಡಬೇಕಾದರೂ ಇಂಥಾದ್ದೊಂದು ಸಂಸ್ಥೆಯು ಬೇಕು. ಬಂದವರು ಹೋದವರಿಗಾದರೂ ಸುವ್ಯವಸ್ಥೆಯಾಗಬೇಕು. ವಿದ್ಯಾಪ್ರಸಾರವಾಗಹತ್ತಿದ ಹಾಗೆ ಉಚ್ಚಶಿಕ್ಷಣಕ್ಕಾಗಿ ಬರುವ ವಿದ್ಯಾರ್ಥಿಸಂಖ್ಯೆಯು ಬೆಳೆಯುವುದರಿಂದ ಅವರಿಗೆ ಅನುಕೂಲವಾದ ಸ್ಥಳವು ಬೇಕು ಎಂಬದಾಗಿ ಮಹಾಸಭೆಯ ಮಂಟಪವೆಲ್ಲಾ ಕಿತ್ತುಬೀಳುವ ಹಾಗೆ ಮಾತಾಡಿದ್ದಕ್ಕೊ ಸಾರ್ಥಕವೇನು ? ರುಮಾಲುಗಳು ನೆಲಕ್ಕುರುಳುವ ಹಾಗೆ ತಲೆಯನ್ನಲ್ಲಾಡಿಸಿದವರೆತ್ತ ಹೋದರು ? ಅಂತು ಇಂಥ ಸಮಾಜದ ರಾಜಕಾರಣದಲ್ಲಿ ನಮ್ಮವರು ಹೆಚ್ಚು ಸೇರುವದು ಸಹಜವೇ ಅದೆ. ರಾಜಕೀಯ ರೀತಿಯಿಂದ ಯಾವದೇ ಕಾರಣದ ಸಲುವಾಗಿ ಏನಾದರೂ ಕೆಲಸ ಮಾಡಬೇಕಾದರೆ ಮುಂಬಯಿಯಲ್ಲಿ ಎಲ್ಲಿ ಮಾಡಬೇಕು ? ಮೊನ್ನೆಯೇ ಲಾರ್ಡ್ ಸಿಂಹರಿಗೆ ಅವರು ಬ್ರಾಹ್ಮಣೇತರರ ಪಕ್ಷದಿಂದ ಮಾತಾಡಿದ್ದಕ್ಕಾಗಿ ಪಾನಸುಪಾರಿಯನ್ನು ಮಾಡಬೇಕಾದ ವಿಚಾರ ಬಂದಿದ್ದಾಗ ಅದನ್ನೆಲ್ಲಿ ಮಾಡಬೇಕಾಗಿತ್ತು ? ಯಾವದಾದರೂ ಕಲ್ಲಪ್ಪ ಮಲ್ಲಪ್ಪನಂಗಡಿಯಲ್ಲಿಯೇ ಸರಿ !! ನೂರಾರು ಮಂದಿ ವಿದ್ಯಾರ್ಥಿಗಳೆತ್ತಹೋಗಬೇಕು ? ಇತ್ತ ಜಾತಿ ಸಂಬಂಧವಾದ ಕಟ್ಟು ! ಇತ್ತ ನಮ್ಮ ಸಮಾಜದವರ ಕಡೆಯಿಂದ ವ್ಯವಸ್ಥೆಯಾದರೂ ಪೂಜ್ಯ !! ಅಹೋ ! ವೀರಶೈವಾಶ್ರಮದ ಚಾಲಕರು ಒಳ್ಳೇ ಭಾರವನ್ನು ತಪ್ಪಿಸಿಕೊಂಡರು. ಆಶ್ರಮವನ್ನು ಒಬ್ಬರಿಗೆ ಮಾರಿದರು ! ಅವರು "ಯಕ್ಕಂಡೀ" ಮಠನನ್ನು ಮಾಡಿದರು ! ಖಾನಾವಳಿಯ ವ್ಯವಸ್ಥೆಯು ಸರಿಯಾಗಿರುವದು !! ಇನ್ನು ಆಶ್ರಮವಾದರೂ ಯಾತಕ್ಕೆ ? ಮಹಾರಾಯರೇ, ಆಶ್ರಮದ ಬಗ್ಗೆ ತಮ್ಮ ಕಲ್ಪನೆಯಾದರೂ ಏನು ? ಅದು ಆಶ್ರಮವು ಬರೇ ಮುಂಬಯಿಯದಾದರೂ ಹೇಗೆ? ಉದಾತ್ತಧ್ಯೇಯವನ್ನೆಲ್ಲಾ ಬದಿಗೊತ್ತಿ (ಮುಂದಿನ ಕೆಲಸವನ್ನು ಮಾಡುವದು ಬೇಡ) ಇದ್ದದ್ದನ್ನೆಲ್ಲಾ ಮೂಲೆಗುಂಪುಮಾಡುವುದಾದರೂ ಯಾವ ಜವಾಬದಾರಿಯಿಂದ ? ಈಯೆಲ್ಲಾ ಶೋಚನೀಯ ಪ್ರಸಂಗವನ್ನು ಸಮಾಜ ಮುಖಂಡರೂ, ನಾನು ಮುಂದೆ ನೀನು ಮುಂದೆ ಅನ್ನುವವರೂ, ದೊಡ್ಡಸ್ತಿಕೆ ಮುಖವಿಟ್ಟಿರುವವರೂ ದಿನಬೆಳಗಾದರೆ ಮುಂಬಯಿಗೆ ಹೋಗುತ್ತಿರಬಹುದು. ಕಣ್ಣಾರೆ ನೋಡಿರಬಹುದು. ಆದರೆ ಇದನ್ನು ಪರಿಚರಿಸುವದು ಮಾತ್ರ ಬೇಡ. ಮುಂಬಯಿಯ ಮುಖಂಡರೇ ಆಗಲಿ, ಇತರ ಹೊರಗಿನವರೇ ಆಗಲಿ ಇಷ್ಟೊಂದು ಕೆಲಸ ಮಾಡಲಿಕ್ಕೆ ಸತ್ವಹೀನರಾದರೆ ಮುಂದಿನ ಬಗೆ ? ಇವರು (ನಮ್ಮ ನಮ್ಮಲ್ಲಿಯ ಅನುಕೂಲಸ್ಥಿತಿಯನ್ನಾದರೂ ವ್ಯವಸ್ಥೆ ಮಾಡಿಕೊಳ್ಳದವರು) ರಾಜಕಾರಣದಲ್ಲಿ ಪಟುತ್ವವನ್ನು ತೋರಿಸುವ ರೀತಿಯು ಹೇಗೆ ? ಅಮೇರಿಕಾ ಯುರೋಪುಗಳಿಗೆ ಹೋಗಿ ನಿರ್ಜಲ ಪ್ರದೇಶದಲ್ಲಿ ಪಾತಾಳವನ್ನಾದರೂ ಕಂಡು ಇಷ್ಟಕಾರ್ಯಸಾಧಿಸಿಕೊಳ್ಳುವ ಸಾಹಸವು ಬೇಡ. ಇಷ್ಟಕ್ಕಾದರೂ ಕಾರ್ಯಸತ್ವಹೀನರಾದರೆ ಅದೊಂದು ಲಾಂಛನಾಸ್ಪದವಾದ ಮಾತಲ್ಲವೇ ? ಈ ವಿಷಯವು ಅತಿ ಮಹತ್ವದ್ದೆಂದು ವಿಶೇಷ ಹೇಳಬೇಕಾಗಿಲ್ಲ. ಮುಂಬಯಿಯಲ್ಲಿ ನಮ್ಮದೊಂದು ಸಾರ್ವಜನಿಕ ಸಂಸ್ಥೆಯು ಅವಶ್ಯ ಬೇಕಾಗಿದೆ. ಇತ್ತಕಡೆಗೆ ನಮ್ಮವರು ಲಕ್ಷಗೊಟ್ಟಾರೇನು ? ಮುಂಬಯಿಯಲ್ಲಿ ಸಂಸ್ಥೆಯ ಹೆಸರಿನಿಂದ ೩೦-೪೦ ಸಾವಿರ ಅವರಿವರ ತಿಜೋರಿಯಲ್ಲಿ ಅಡಗಿಕೊಂಡಿರುವುದನ್ನು ಯಾರಾದರೂ ಬೈಲಿಗೆ ತಂದು ಆಶ್ರಮದ ವ್ಯವಸ್ಥೆಯನ್ನು ಮಾಡಾರೇನು ?

ನವಲಗುಂದದ ಸಭೆಯೊ ? ಭಟ್ಟಂಗಿಗಳ ಬಡಾಯಿಯೊ ?

ಗುರುವರ್ಗದವರೆನಿಸಿಕೊಳ್ಳುವವರದೊಂದು ಸಭೆಯು ನವಲಗುಂದದಲ್ಲಿ ಕೂಡುವುದಷ್ಟೆ. ಅವರು ಮೊದಲೆಣಿಸಿದ ನಿರ್ಧಾರಗಳು ಅಶಾಸ್ತ್ರೀಯವಾದುವೆಂತಲೂ ಅವುಗಳನ್ನನುಸರಿಸುವುದರಿಂದ ವೀರಶೈವ ಸಮಾಜವು ರಸಾತಲಕ್ಕಿಳಿಯುವುದೆಂತಲೂ ವಿಚಾರಪರರಿಗೆ ಸಂಶಯವಿಲ್ಲದೆ ತೋರುವುದು. ಅದಕ್ಕಾಗಿಯೇ ಅವುಗಳಿಗೆ ನನ್ನ ವಿರೋಧ. ಇಂತಹ ನಿರ್ಧಾರಗಳಿಗೆ ಉದ್ಯಮಸ್ಥನವಾಗುವವರು ವೀರಶೈವ ಗುರುಗಳಲ್ಲ, ವೀರಶೈವರಲ್ಲ, ವೀರಶೈವ ಭಾಷಾತುರೆಂಬುದು ನನ್ನ ಪಕ್ಷ. ವೀರಶೈವ ಧರ್ಮಶಾಸ್ತ್ರದಿಂದ, ಗುರುತ್ವವು ಜನ್ಮಸಿದ್ಧವಾಗಿ ಯಾವ ವರ್ಗಕ್ಕೂ ಇಲ್ಲ. ಅದು ಸದಾಚಾರ ಸದ್ವಿದ್ಯೆ ಸದ್ವಂಶಗಳನ್ನವಲಂಬಿಸಿರುವುದು. ಸದ್ವಂಶವೆಂಬುದು ಜಾತಿಯಲ್ಲ, ಅದು ನಿರ್ದುಷ್ಟವಾದ ವಿವಾಹಸಂಬಂಧದಿಂದ ಸತೀಪತಿ ಭಾವವನ್ನು ಹೊಂದಿದ ಸ್ತ್ರೀಪುರುಷರಿಂದ ಪಿಂಡೋತ್ಪತ್ತಿಯನ್ನು ಅಪೇಕ್ಷಿಸುವುದು. ಸದ್ವಂಶಜತ್ವವು ಸರ್ವವೀರಶೈವರಿಗೂ ಅವಶ್ಯಕವು. ಅವರಲ್ಲಿ ಪ್ರವೃತ್ತಿಮಾರ್ಗವಿಡಿದು ದಾಸಭಕ್ತಿಯನ್ನು ಕೈಕೊಂಡವರು ಭಕ್ತರಾಗಿಯೂ, ನಿವೃತ್ತಿ ಮಾರ್ಗದಿಂದ ಸೋಹಂಭಕ್ತಿಯನ್ನು ಆಚರಿಸತಕ್ಕವರು ಮಾಹೇಶ್ವರರಾಗಿಯೂ ಚರಿಸುವರಲ್ಲದೆ ಭಿನ್ನಭಿನ್ನ ಜಾತಿಯವರಲ್ಲ. ತನ್ನ ಅರುಹೇ ಗುರುವಾಗಿಯೂ ನಿತ್ಯತ್ವವೇ ಲಿಂಗವಾಗಿಯೂ, ಆನಂದವೇ ಜಂಗಮವಾಗಿಯೂ ಬಾಹ್ಯದಲ್ಲಿ ತೋರುವುದಾದರೂ ಗುರುಮೂರ್ತಿಗಿಂತ ಜಂಗಮ ಮೂರ್ತಿಯು ಸರ್ವಅನುಭವದ ಅವಸಾನಭೂಮಿಯಾದುದರಿಂದ ಮಿಗಿಂದ ತತ್ವವಾಗಿರುವುದು. ಶ್ರೀಮನ್ನಿರಾಭಾರಿ ವಿರಕ್ತಮೂರ್ತಿಗಳೇ ಈ ಜಂಗಮತತ್ವದ ಬಾಹ್ಯಕುರುಹು. ಅರುಹೆ ಬಾಹ್ಯಕುರುಹಾದ ಗುರುಮೂರ್ತಿಯಿಂದಲೂ ವಂದ್ಯರು ಎಂಬುದೀಗ ನನ್ನ ಪಕ್ಷವು. ಶ್ರೀಮದನಾದಿ ವೀರಶೈವವನ್ನುದ್ಧರಿಸಿದ ಶ್ರೀಮದ್ರೇವಣಾದಿ ಪೂಜ್ಯರಾದ ಜಗದ್ಗುರುಗಳು ಇದೇ ತತ್ವವನ್ನು ಬೋಧಿಸಿರುವರು. ಅನಾದಿ ಜಂಗಮಮೂರ್ತಿಗಳಲ್ಲಿ ಅಮರ್ಯಾದಿತ ಭಕ್ತಿಭಾವವನ್ನು ವಹಿಸಿದ್ದರು. ಈಗ ಗುರುವರ್ಗದವರೆನಿಸಿಕೊಳ್ಳುವವರು ತರಡಲೆಣಿಸಿದ ದುರಭಿಪ್ರಾಯಗಳು ಅವರಿಂದ ಪ್ರಚಾರವಡೆದಿಲ್ಲ,

ಹೀಗಿರಲು ಕೆಂಡಗೋಳದ ದಿವಾಭೀತರು ತಮ್ಮ ಅಶುಭವಾದ ಘೂತ್ಕಾರದಿಂದ ವೀರಶೈವ ಸಮಾಜದ ಮರಣವನ್ನು ಸೂಚಿಸ ಹತ್ತಿರುವರು. ಭಕ್ತವರ್ಗದಲ್ಲಿ ಕೆಲವರು ಪ್ರಮುಖರು—ಇವರ ಪ್ರಮುಖತ್ವಕ್ಕೆ ಧಿಕ್ಕಾರವಿರಲಿ. ಶ್ರೀಮನ್ನಿರಂಜನ ಜಗದ್ಗುರು ಪೂಜ್ಯರಾದ ಪೀಠಸ್ಥರಲ್ಲಿ ಒಬ್ಬರಾದ ಚಿತ್ರದುರ್ಗದ ವಿರಕ್ತಸ್ವಾಮಿಗಳ ಮೇಲಿರುವ ತಮ್ಮ ಅಮಂಗಲ ಅಭದ್ರ ಅಸೂಯಾತ್ಮಕ ಬುದ್ಧಿಯಿಂದ ಈ ಘೂತ್ಕಾರಕ್ಕೆ ಪ್ರತಿ ಘೂತ್ಕಾರದಿಂದ ಬಲುಮೆಯನ್ನುಂಟುಮಾಡುತ್ತಲಿರುವರು. ಆದ್ಯ ಪಂಚಾಚಾರ್ಯ ಸಿದ್ಧಾಂತಕ್ಕೆ ಕಲಂಕ ತರುವ ತಮ್ಮ ಪಕ್ಷವನ್ನು ಆ ಪೂಜ್ಯರಾದರ ಹೆಸರಿನ ಮೇಲೆಯೇ ಪ್ರಚಾರಗೊಳಿಸ ಯತ್ನಿಸುವುದು ಧಾರ್ಷ್ಟ್ಯವೇ ಸರಿ. ಆ ಪೀಠಗಳು ಜಾಗ್ರತವಿರದ್ದರಿಂದ ಇಂತಹ ಕೃತಿಗಳಿಗೆ ಇಂಬಾಗಿರುವುದು. ವಿರಕ್ತಮೂರ್ತಿಗಳಲ್ಲಿ ವಾತ್ಸಲ್ಯಬುದ್ಧಿಯುಳ್ಳವರು ಆ ಪೀಠಗಳನ್ನಾಕ್ರಮಿಸಿ ತಾವು ಹಿಂದೆ ನಿಂತು ಜನರಿಗೆ ಉತ್ತೇಜನವನ್ನು ಕೊಡುತ್ತಿರುವರೆಂಬ ಶಂಕೆಯು ಸಹಜವಾಗಿ ಉತ್ಪನ್ನವಾಗುತ್ತದೆ. ಇಲ್ಲವಾದರೆ ಗೌಡಾಚಾರ್ಯರೆನಿಸುವ ಈ ಪಟ್ಟದರಾಧಿಕಾರಿಗಳು ತಮ್ಮಷ್ಟಕ್ಕೆ ಸಭೆಮಾಡಿ ವೀರಶೈವ ಧರ್ಮದಲ್ಲಿ ಅತಿ ಭಯಂಕರವಾದ ವಿಪರ್ಯಾಸಗಳನ್ನು ಮಾಡುವ ಹವ್ಯಾಸಕ್ಕೆ ಬೀಳುತ್ತಲಿರಲಿಲ್ಲ. ಕೆಂಡಗೋಳ ಸಭೆಯ ಎಂಡನೆಯವತಾರವಾದ ನವಲಗುಂದ ಸಭೆಗೆ ನಾನು ಪ್ರತಿಪಕ್ಷಿಯಾಗಿ ಮಧ್ಯಸ್ಥರ ಮುಖಾಂತರ ವಾದಿಸಲು ಸಿದ್ಧನಿರುವೆನೆಂದು ಪ್ರಕಟಿಸಿರುವೆನು. ಆದರೆ ಸಭೆಯು ಇದಕ್ಕೊಪ್ಪುವದಿಲ್ಲವೆಂಬುದು, ಗುರುಪುತ್ರನೆಂಬುವವರು ಧನಂಜಯದಲ್ಲಿ ೨೦-೪-೧೯೨೦ಕ್ಕೆ ಪ್ರಕಟಿಸಿದ ಲೇಖನದಿಂದ ಕಂಡುಬರುತ್ತಲಿದೆ.

ನಿಮ್ಮ ಮಾರ್ಗವು ಸತ್ಯವಿದ್ದರೆ ಪ್ರಕಾಶವಾಗಿ ವಾದಮಾಡಲು ಭಯವೇನು ? ನನಗೆ ಶಾಸ್ತ್ರಪರಿಚಯವಿಲ್ಲೆನ್ನುವಿರಲ್ಲ ? ಮತ್ತಷ್ಟು ನೆಟ್ಟಗೆ. ಗೆಲುವೆ ನಿಮ್ಮ ಸೆರಗಿನಲ್ಲಿ ಬಿದ್ದಿತು. ಮಧ್ಯಸ್ಥನಿರುವುದರಿಂದ ನನ್ನ ವಿತಂಡಾವಾದಕ್ಕೆ ಆಸ್ಪದವಿಲ್ಲ. ಪರಪಕ್ಷವನ್ನು ಮಾತಾಡಗೊಡಲಿಲ್ಲವೆಂಬ ಅಪವಾದವು ನಿಮ್ಮಿಂದ ದೂರವಾಗುವುದು. ಸಭಾಧ್ಯಕ್ಷರಾಗುವವರು ಏವಮಾದ್ಯನೇಕ ರಮಣೀಯ ಗುಣಗಣ ಮಣಿಮಾಲಾಮಂಡಿತರೆಂದು ಬರೆಯುತ್ತೀರಿ. ಸಂತೋಷ. ಅವರು ನನ್ನಂತಹ ಶಾಸ್ತ್ರಪರಿಚಯಹೀನಪಾಮರನನ್ನು ಉಃಫೆಂದು ಊದಿ ಕಳೆಯಬಹುದು. ಅದನ್ನು ಬಿಟ್ಟು ಬರೇ ಭಟ್ಟಂಗಿಗಳಂತೆ ಬಡಾಯಿ ಕೊಚ್ಚುವುದು ಸರಿಯಲ್ಲ. ಇದರಿಂದ ಜನವು ಮೋಸವಾಗದು. ಪ್ರತಿಪಕ್ಷದವರನ್ನು ವಾದಿಸಗೊಡದಿದ್ದರೆ ನಿಮ್ಮನ್ನು ವಿದ್ವಾಂಸರೆಂದು ಯಾರೂ ತಿಳಿಯರು. ಪೂರ್ವದ ಮತಸ್ಥಾಪಕರು ಚಾರ್ವಾಕರೊಡನೆ ಸಹ ವಾದಿಸಿರುವರು. ಶಾಸ್ತ್ರಬಾಹ್ಯವಾಗಿ ತರ್ಕಿಸುತ್ತಾರೆಂದು ಅವರನ್ನು ಬಿಟ್ಟಿಲ್ಲ. ನನ್ನ ವಾದವು ಶಾಸ್ತ್ರವಿರುದ್ಧವೆಂದು ಅನ್ನುವಿರಲ್ಲವೆ ? ಅದನ್ನು ಖಂಡಿಸುವ ತನಕ ನಿಮ್ಮ ಶಾಸ್ತ್ರೀಯ ಮಾರ್ಗವು ಸ್ಥಾಪಿತವಾಗಲಾರದು. ಡೊಂಬರಂತೆ ನಿಮ್ಮ ಡೊಳ್ಳು ನೀವೇ ಬಾರಿಸಿದರೆ ಆ ಡೊಳ್ಳು ಜಯಭೇರಿಯಾಗಲಾರದು. ಅಧ್ಯಕ್ಷರಾಗತಕ್ಕವರು ನೀವು ಹೇಳಿದಂತೆ ಅನೇಕ ಶಾಸ್ತ್ರಪರಿಣತರೊ ತದ್ವಿಪರೀತರೊ ಎಂಬುವಲ್ಲಿ ಅವರ ವರ್ತನವೇ ಪ್ರಮಾಣವಾಗುವುದು. ಮಧ್ಯಸ್ಥರ ಸಮಕ್ಷ ನನ್ನವಾದವನ್ನು ಮೊದಲು ಖಂಡಿಸಲಿ. ನಂತರ ತಮ್ಮ ಸಭೆಯ ಅಧ್ಯಕ್ಷರಾಗಿ ನಿರ್ಧಾರಗಳನ್ನು ಮಾಡಲಿ. ಪ್ರತಿ ಪಕ್ಷದವರನ್ನು ಮಾತಾಡಿಸಿ ಖಂಡಿಸುವುದು ಪಾಂಡಿತ್ಯವು; ಅದೇ ವಿದ್ವತ್ತೆಯು. ತಮ್ಮ ಮೈಕೆಸುವಿನಿಂದ ಮಂದಿಯ ಬಾಯಿ ಬಿಗಿಹಿಡಿದು ಕಾರ್ಯ ಸಾಧಿಸಲೆಣಿಸುವುದು ಆತತಾಯಿಗಳ ಅಥವಾ ಸುಲಿಗೆಗಾರರ ಅಮಂಗಳ ಅಶುದ್ಧ ಪಾಪಕರ ವೃತ್ತಿಯು. ವಿಭಾಕರ ಪತ್ರದ ಲೇಖನದಲ್ಲಿ ನಾನು ಕೊಟ್ಟ ಕಾರಣಗಳನ್ನೂ ಪ್ರಮಾಣಗಳನ್ನೂ ಖಂಡಿಸದೆ ಸಂಸ್ಕೃತ ಅರಿಯದವನೆಂತಲೂ ಆನೆಯ ಮುಂದಿನ ಆಡು ಎಂತಲೂ ನನ್ನನ್ನು ದೂಷಿಸಿ ನಿಮ್ಮಷ್ಟಕ್ಕೆ ನೀವು ಸಂತೋಷಪಡುತ್ತಿದ್ದರೆ ನಿಮಗೆ ಮಂಗಲವಾಗಲಿ. ಲೋಕಸ್ಥಿತಿಯ ಪರಿಚಯವೂ ಸದಸದ್ವಿವೇಕವೂ ಇದ್ದರೆ ವಾದಿಸಲು ಸಿದ್ಧರಾಗಿರಿ. ಇದಿರಾಳಿಯನ್ನು ಇದಿರಿಸಿ ಗಾಯಮಾಡಬಲ್ಲರೆ ವೀರನಲ್ಲದೆ ಸತ್ತು ಹೊಡೆದ ಹಗೆಯನ್ನು ಸಮಾಚಾರ ತೆಗೆದುಕೊಳ್ಳದವನು ಬಂಟನಲ್ಲ, ವೀರನಲ್ಲ, ಧೀರನಲ್ಲ. ಹೇಡಿ, ಪಂಡೆ. ಇದೀಗ ಗುರುಪುತ್ರನಿಗೂ ಅವನ ಗುರುವಿಗೂ ಉತ್ತರ.

ಸಿದ್ಧರಾಮಪ್ಪ, ದುಂಡಪ್ಪ, ಪಾವಟೆ.

ವೀರಶೈವ ಪ್ರಾಂತಿಕ ಸಭೆ, ಕೆಳದಿ.

ಕಳೆದ ತಾ|| ೨೩ ನೆ ಮಧ್ಯಾಹ್ನ ಶಿವಮೊಗ್ಗಾ ಡಿಸ್ಟ್ರಿಕ್ಟ್ ಪ್ರಾಂತಿಕ ವೀರಶೈವ ಮಹಾಸಭೆಯು ಸಾಗರ ಟೌನಿಗೆ ಸುಮಾರು ಐದು ಮೈಲಿ ಫಾಸಲೆಯಲ್ಲಿರುವ ಕೆಳದಿ ಎಂಬ ಚರಿತ್ರಾರ್ಹವಾದ ಗ್ರಾಮದಲ್ಲಿ ನಡೆಯಿತು. ಸುಮಾರು ೨೦೦೦ ಕ್ಕೆ ಮೇಲ್ಪಟ್ಟು ನಾನಾ ಕಡೆಯಿಂದ ಜನಗಳು ಬಂದು ಸೇರಿದ್ದರು. ಕೆಳದಿ ಹಿರೇಮಠದಲ್ಲಿ ಪಟ್ಟಾಧಿಕಾರಿಗಳಾಗಿದ್ದ ಶ್ರೀ ರೇವಣಸಿದ್ಧಸ್ವಾಮಿಗಳು ಸುಮಾರು ಒಂದು ವರ್ಷದ ಹಿಂದೆಯೇ ಶಿವೈಕ್ಯರಾದುದರಿಂದ ಅವರ ಸ್ಥಾನಕ್ಕೆ ಒಬ್ಬ ವಿದ್ಯಾವಂತರಾದ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ಮಾಡುವ ಕಾರ್ಯವು ಆ ದಿನವೇ ಪ್ರಾತಃಕಾಲ ನಡೆಯಿಸಲ್ಪಟ್ಟಿತು. ಈ ಪ್ರಾಂತಿಕ ಮಹಾಸಭೆಯ ಸ್ವಾಗತ ಸಂಘಾಧ್ಯಕ್ಷರಾದ ಸಾಗರದ ಕೆರೆಕೋಡಿ ಮಠದ ವೇ|| ಗುರುಲಿಂಗಯ್ಯನವರು ತಮ್ಮ ರಿಪೋರ್ಟನ್ನು ಓದಿದ ನಂತರ ಬೆಂಗಳೂರಲ್ಲಿ ಮುನಸೀಫರಾಗಿರುವ ಮ|| ಹೆಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಎಲ್. ರವರು ಸರ್ವಾನುಮತದಿಂದ ಸಭಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಅಧ್ಯಕ್ಷರ ಭಾಷಣವು ಕಾಲಾನುಗುಣವಾದ ಅನೇಕ ಸಲಹೆಗಳಿಂದ ಗರ್ಭೀಕೃತವಾಗಿತ್ತು. ಸಭೆಯಲ್ಲಿ ದೇಶೋನ್ನತಿಗೆ ಸಹಾಯವಾದ ಧರ್ಮನಿಷ್ಠೆ, ವಿದ್ಯಾಭ್ಯಾಸ, ಕೈಗಾರಿಕೆ, ವ್ಯವಸಾಯ, ಸಂಪದಭಿವೃದ್ಧಿ ಮುಂತಾದವುಗಳ ಮೇಲೆ ಭಾಷಣಗಳು ನಡೆದುವು. ಬಳಿಕ ತಾ|| ೨೪ ರ ಬೆಳಗೂ ಮಧ್ಯಾಹ್ನವೂ ಸಭೆಗೂಡಿದ್ದು..ಬೆಂಗಳೂರಲ್ಲಿ ಒಂದು ಮುದ್ರಣಾಲಯ ಮತ್ತು ಪುಸ್ತಕಭಂಡಾರದ ಅವಶ್ಯಕತೆ, ಬೆಂಗಳೂರಲ್ಲಿ ಕಟ್ಟಬೇಕೆಂದಿರುವ ವೀರಶೈವ ವಿದ್ಯಾರ್ಥಿನಿಲಯಕ್ಕೆ ಸರ್ಕಾರದಿಂದ ಕಟ್ಟಡದ ಗ್ರಾಂಟು, ಸಾಗರ, ಶಿಕಾರಿಪುರ, ಶಿವಾಳಕೊಪ್ಪ ಮತ್ತು ನೇಮತಿ ಗ್ರಾಮಗಳಲ್ಲಿ ವೀರಶೈವ ವಿದ್ಯಾರ್ಥಿನಿಲಯ[illegible] ಅವಶ್ಯಕತೆ, ಲೆಜಿಸ್ಲೇಟಿವ್ ಕೌನ್ಸಿಲ್ ಯಾ ನ್ಯಾಯನಿರ್ಮಾಣಸಭೆ, ಮ್ಯುನ್ಸಿಪಾಲಿಟಿ ಮೊದಲಾದ ರಾಜಕೀಯ ಸಂಸ್ಥೆಗಳಲ್ಲಿ ಪ್ರಜೆಗಳಿಗೆ ಹೆಚ್ಚು ಅಧಿಕಾರವನ್ನು ಮಹಾರಾಜರವರು ದಯಪಾಲಿಸಿದುದಕ್ಕಾಗಿ ಅವರಿಗೆ ಕೃತಜ್ಞತೆ-ಇವೇ ಮೊದಲಾದುವುಗಳ ಮೇಲೆ ನಿರ್ಧಾರಗಳು ಮಾಡಲ್ಪಟ್ಟುವು. ಶಿವಯೋಗಮಂದಿರದಿಂದ ಬಂದಿದ್ದ ಮ|| ಶ್ರೀನಿ ಬಿ. ಎ. ಯವರೂ, ಪ್ರಸಿದ್ಧಕೀರ್ತನಕಾರರಾದ ಮ|| ಬಸವಲಿಂಗಶಾಸ್ತ್ರಿಗಳೂ, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾದ ಹನಸ್ವಾಡಿ ಮೆ|| ಜಿ. ಬಸವಪ್ಪನವರೂ ಮೊದಲಾದವರು ಅತ್ಯುತ್ತಮ ಭಾಷಣಗಳನ್ನು ಮಾಡಿದರು. ಸ್ಥಳೀಯಾಧಿಕಾರಿವರ್ಗದವರೂ ಲೌಕಿಕ ಪ್ರಮುಖರೂ ನಿಬಿಡವಾಗಿ ಕಾನ್‌ಫರೆನ್ಸ್ ಚಾಲಕರ ಕೋರಿಕೆಯ ಮೇಲೆ ದಯಮಾಡಿಸಿದ್ದರು. ಕೆಳದಿಯ ಮಠಕ್ಕೆ ನೂತನಾಧಿಕಾರಿಗಳಾದ ಸ್ವಾಮಿಗಳಿಗೆ ಪೂಜ್ಯವರ್ಗದವರಿಂದ ಆಶೀರ್ವಾದಪೂರ್ವಕವಾದ ಮುಯ್ಯಿ ವಗೈರೆ ನಡೆದು ಶಿಷ್ಯಮಂಡಲಿಯಿಂದ ಕಾಣಿಕೆ ಕಪ್ಪಗಳು ಸಮರ್ಪಿಸಲ್ಪಟ್ಟವು. ಮತ್ತೂ ಸ್ವಾಮಿಗಳ ಉತ್ಸವವು ಕೆಳದಿ ಗ್ರಾಮದಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಸುಮಾರು ೫೦೦ ಜನಕ್ಕೆ ಮೇಲ್ಪಟ್ಟು ವೀರಶೈವ ಮಹಿಳೆಯರು ಪ್ರಾಂತಿಕ ಸಭೆಗೆ ದಯಮಾಡಿಸಿದ್ದರು. ಇವರ ಸಭೆಯು ಸಹ ಪ್ರತ್ಯೇಕ ೨೩ ಮತ್ತು ೨೪ ನೇ ಸಾಯಂಕಾಲಗಳಲ್ಲಿ ನಡೆದಿತು. ಶ್ರೀಮನ್ ಮಹಾರಾಜರವರಿಗೂ, ಯುವರಾಜರವರಿಗೂ ಕೆಳದಿಯ ಮಠದ ನೂತನ ಸ್ವಾಮಿಗಳವರಿಗೂ ಸಭೆಯ ಅಧ್ಯಕ್ಷರಿಗೂ ಜಯಘೋಷವಾಗಿ ಸಭೆಯು ಮುಕ್ತಾಯವಾಯಿತು. ಈ ಸಭೆಯು ಬಹಳ ವಿಚಕ್ಷಣೆಯಿಂದ ಸಮರ್ಪಕವಾಗಿ ನಡೆದ ಕೀರ್ತಿಯು ಶ್ರೀ ಹಾನುಗಲ್ ಸ್ವಾಮಿಗಳ ಅನವರತ ಶ್ರದ್ಧಾಪೂರ್ವಕವಾದ ಕೃಪಾಬಲಕ್ಕೂ ಸಾಗರದ ಕೆರೆಕೋಡೀ ಮಠದ ವೇ|| ಗುರುಲಿಂಗಯ್ಯನವರ ಗುರುಭಕ್ತಿಯಿಂದ ಕೂಡಿದ ಅವಿಶ್ರಾಂತಶ್ರಮೆಗೂ ಸೇರಿದುದಾಗಿರುತ್ತದೆ.

ಸಭಾಧ್ಯಕ್ಷರ ಭಾಷಣ. (ಮುಖ್ಯಾಂಶಗಳು ಮಾತ್ರ)

ಸಭಿಕ ಮಹಾಶಯರೇ

ಈಗ್ಗೆ ಸುಮಾರು ೧೪೯೯ ನೆಯ ಇಸವಿಯಲ್ಲಿ ಹಳೇಬೈಲು ಗ್ರಾಮದ ಚೌಡೇಗೌಡ ಮತ್ತು ಭದ್ರೇಗೌಡರೆಂಬ ಇಬ್ಬರು ವೀರಶೈವ ಸಹೋದರರಿಂದ ನಗರ ಚಕ್ರಾಧಿಪತ್ಯವು ಸ್ಥಾಪಿಸಲ್ಪಟ್ಟು ೧೭೬೩ ನೆಯ ಇಸವಿಯ ವರೆಗೂ ಅಂದರೆ ಸುಮಾರು ಎರಡುವರೆ ಶತಮಾನಗಳಿಗೆ ಮೇಲ್ಪಟ್ಟು ಕರ್ಣಾಟಕ ದೇಶದಲ್ಲಿ ಬಹಳ ಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡು, ಅನೇಕ ಪಂಡಿತೋತ್ತಮರಿಗೂ, ಕವಿತಾವಿಶಾರದರಿಗೂ ಆಶ್ರಯದಾತರಾಗಿದ್ದು ವಿಚಕ್ಷಣೆಯಿಂದಲೂ, ಸತ್ಯಸಂಧತೆಯಿಂದಲೂ, ನ್ಯಾಯಪರಿಶೀಲನೆಯಿಂದಲೂ ರಾಜ್ಯಭಾರ ಮಾಡಿದ ಈ ಕೆಳದಿಯ ಸಾರ್ವಭೌಮರ ವೃತ್ತಾಂತವು ತಮ್ಮೆಲ್ಲರಿಗೂ ನನಗಿಂತಲೂ ಹೆಚ್ಚಾಗಿ ತಿಳಿದ ಅಂಶವೇ ಆಗಿರುತ್ತದೆ. ಈಚೆಗೆ ಸಿಕ್ಕಿದ ಕೆಳದಿ ನೃಪವಿಜಯ ಕಾವ್ಯವೇ ಮುಂತಾದ ಗ್ರಂಥಗಳಿಂದ ನಗರದ ಚಕ್ರಾಧಿಪತ್ಯವು ಎಷ್ಟು ಕೀರ್ತಿಯುತವಾಗಿತ್ತೆಂಬುದೂ, ಆ ಕಾಲದ ನಮ್ಮ ವೀರಶೈವಮತವು ಈ ನಾಡಿನಲ್ಲಿ ಎಷ್ಟು ಉಚ್ಛ್ರಾಯಸ್ಥಿತಿಯಲ್ಲಿತ್ತೆಂಬುದೂ ಗೊತ್ತಾಗುತ್ತದೆ. ಆ ಗತವೈಭವವು ಈಗಲೂ ಈ ಪ್ರಾಂತ

ಅಲ್ಲಲ್ಲಿ ಕಂಡುಬರುವ ಗುಡಿ ಗೋಪುರಗಳಿಂದಲೂ, ಮಹತ್ತರವಾದ ಕೋಟಿ ಕೊತ್ತಲುಗಳಿಂದಲೂ, ಮತ್ತು ಯಾವನುತಪಕ್ಷಪಾತವೂ ಇಲ್ಲದೆ ಎಲ್ಲಾ ಪ್ರಭೇದದವರಿಗೂ ಉದಾರಪೂರ್ವಕವಾಗಿ ಕೊಟ್ಟಿರುವ ಮಾನ್ಯ, ಕೊಡುಗೆಗಳೂ, ಮಠ ಮಹಂತುಗಳೂ, ಕೆಳದಿಯ ರಾಜರುಗಳ ಆಸ್ತಿಕ ಬುದ್ಧಿಯನ್ನೂ, ಸಾಹಸ ಪರಾಕ್ರಮವನ್ನೂ, ವಿದ್ಯಾಪೌರಸಾಮಾಜಿಕ ಸುಧಾರಣೆಯಲ್ಲಿ ತೋರಿಸುತ್ತಿದ್ದ ಅಸಾಧಾರಣವಾದ ಅವರ ಔದಾರ್ಯವನ್ನೂ, ಈಗಲೂ ಪ್ರದರ್ಶಿಸುತ್ತಲಿವೆ.

ಈಗ ನಾವು ಯಾವ ಗುರುಮಠದ ಆಶ್ರಯದಿಂದ ಇಲ್ಲಿ ಸೇರಿರುತ್ತೇವೆಯೋ ಆ ಸಂಸ್ಥೆಯು ಕೆಳದಿಯ ಮಹಾರಾಜರುಗಳಿಂದ ತಮ್ಮ ಜನ್ಮಸಾರ್ಥಕ್ಯಕ್ಕೂ ಆಮುಷ್ಮಿಕ ಸಾಧನೆಗೂ ಸ್ಥಾಪಿಸಲ್ಪಟ್ಟು, ಆ ಪಟ್ಟಾಧಿಕಾರದ ಪರಂಪರೆಯು ಇದುವರೆಗೂ ಶಿಷ್ಯವರ್ಗಾನುಗುಣವಾಗಿ ನಡೆದುಬಂದು ಮೊನ್ನೆತಾನೇ ಶಿವೈಕ್ಯರಾದ ಶ್ರೀ ರೇವಣಸಿದ್ಧಸ್ವಾಮಿಗಳವರ ಕಾಲದಲ್ಲಿ ಪುನರುಜ್ಜೀವಿತವಾಗಿ ತನ್ಮೂಲಕ ಈ ಪ್ರಾಂತದ ವೀರಶೈವರ ಆಚಾರಾದಿಗಳಿಗೆ ಆಶ್ರಯವಾಗಿದ್ದು ನಗರರಾಜ್ಯದ ಪ್ರಶಸ್ತಿಯನ್ನೂ ಆಗ್ಗೆ ನಮ್ಮವರಿಗಿದ್ದ ಅತಿಶಯವಾದ ಗೌರವಪ್ರತಿಷ್ಠೆಗಳನ್ನೂ ಒಂದು ಹೆಗ್ಗುರುತಾಗಿ ತೋರಿಸುತ್ತಿದೆ.

ಪ್ರಕೃತಸ್ಥಿತಿಯಲ್ಲಿ ವೀರಶೈವಜನಾಂಗದವರು ಬಹಳಮಟ್ಟಿಗೆ ವಿದ್ಯಾಕೌಶಲಗಳಲ್ಲಿ ಹಿಂದೆ ಬಿದ್ದು ಆತ್ಮಾಭಿಮಾನಶೂನ್ಯರಾಗಿ ಅನಾಮಧೇಯತ್ವವನ್ನು ಹೊಂದಿ ಬಾಳುತ್ತಿರುವರು. ನಮ್ಮ ಸುದೈವದಿಂದ ಬ್ರಿಟಿಷ್ ಸಾರ್ವಭೌಮ ಚಕ್ರಾಧಿಪತ್ಯದಲ್ಲಿ ಈ ಭರತಖಂಡವು ಶಾಂತಿ ಸಮಾಧಾನಗಳಿಂದ ಪರಿಪೂರ್ಣವಾಗಿ, ಅದರಲ್ಲಿಯೂ ಮುಖ್ಯವಾಗಿ ಈ ನಮ್ಮ ಮೈಸೂರು ದೇಶವು ಹಗಲಿರುಳೂ ಎಲ್ಲಾ ಜನವರ್ಗದ ಅಭ್ಯುನ್ನತಿಯ ಚಿಂತನೆಯಲ್ಲಿ ಕಂಕಣಬದ್ಧರಾಗಿರುವ ಶ್ರೀಮನ್ಮಹಾರಾಜರವರ ಆಳ್ವಿಕೆಗೊಳಪಟ್ಟು, ಅವರ ಸರ್ಕಾರದಲ್ಲಿ ಜನೋಪಯುಕ್ತವಾದ ಅನೇಕ ಸುಧಾರಣಾ ಪರಂಪರೆಗಳು ನಡೆಯುತ್ತಿರುವ ಈ ಕಾಲದಲ್ಲಿ ನಮ್ಮವರು ಅಭಿವೃದ್ಧಿಗೆ ಬಾರದಿದ್ದರೆ ಇನ್ನೆಂದಿಗೂ ಬರಲಾರರೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ಮೈಸೂರು ಸಂಸ್ಥಾನದಲ್ಲಿ ವೀರಶೈವ ಜನವರ್ಗವು ಸಂಖ್ಯೆಯಲ್ಲಿ ಮಾತ್ರ ಉನ್ನತಸ್ಥಿತಿಯಲ್ಲಿರುತ್ತದೆ. ಆ ಸಂಖ್ಯಾನುಗುಣವಾಗಿ ಇವರಲ್ಲಿ ಕೃಷಿ, ವ್ಯಾಪಾರ ಕೈಗಾರಿಕೆ ರಾಜಕೀಯ ಸಂಬಂಧದಲ್ಲಿ ಹೆಚ್ಚು ವ್ಯಾಪನೆ ಮುಂತಾದ ನವಚೇತನದ ಅಭ್ಯುನ್ನತಿಯ ಚಿಹ್ನೆಗಳು ಸ್ವಲ್ಪವಾದರೂ ಗೋಚರವಾಗುತ್ತಿಲ್ಲ. ಈ ದುಸ್ಥಿತಿಯು ಸ್ವಜನೋದ್ಧಾರಕ್ಕಾಗಿ ಬದ್ಧಾದರರಾದ ಮುಂದಾಳುಗಳು ಅವ್ಯಾಹತ ಪ್ರಯತ್ನಗಳನ್ನು ಮಾಡದ ಹೊರತು ಹೋಗಲಾರದು. ಮುಖ್ಯವಾಗಿ "ಉದ್ಧರೇದಾತ್ಮನಾತ್ಮಾನಂ" ಅಂದರೆ ತಮ್ಮನ್ನು ತಾವೇ ಉದ್ಧರಿಸಿಕೊಳ್ಳಬೇಕೆಂಬ ಮುಖ್ಯತತ್ವವನ್ನು ನಮ್ಮವರು ಚೆನ್ನಾಗಿ ಮನಸ್ಸಿನಲ್ಲಿಟ್ಟು ಕಾರ್ಯೋನ್ಮುಖರಾಗಬೇಕು. ಪರರಿಂದ ನಮ್ಮ ಅಭ್ಯುದಯವು ಆಗಬೇಕೆಂತಲೂ, ಪರರು ನಮ್ಮ ಯೋಗ್ಯತಾಪರಿಶೀಲನೆ ಮಾಡಿ ನಮಗೆ ಸಲ್ಲಬೇಕಾದ ಮಾನಮನ್ನಣೆಗಳನ್ನು ಕೊಡಬೇಕೆಂತಲೂ, ನಾವು ಎಲ್ಲಿನವರೆಗೂ ಅಂಗಲಾಚಿಕೊಂಡು ಯಾವ ಪ್ರಯತ್ನವನ್ನೂ ಮಾಡದೆ ಕೈಯೊಡ್ಡಿ ಬೇಡಿಕೊಳ್ಳುತ್ತೇವೆಯೋ ಆ ವರೆಗೂ ಈ ದುಸ್ಥಿತಿಯಲ್ಲಿಯೇ ಇರುತ್ತೇವೆ. ಚೆನ್ನಾಗಿ ಪರಿಶೀಲನೆ ಮಾಡಿ ನೋಡಿದರೆ ಧರ್ಮಸಂಪತ್ತಿಯಲ್ಲದೆ ಈ ಮತವು ಹಿಂದುಳಿದಿಲ್ಲ. ಸಾಕ್ಷೀಭೂತರಾಗಿ ಅತನಿಯ ಶ್ರೀ ಶಿವಯೋಗಿಗಳು, ಶ್ರೀ ಹಾನಗಲ್ಲು ಸ್ವಾಮಿಗಳು ಮೊದಲಾದ ಮಹಾತ್ಮರು ನಮ್ಮಲ್ಲಿ ಈಗಲೂ ಅಲ್ಲಲ್ಲಿ ದೊರೆಯುತ್ತಾರೆ. ನಮ್ಮ ಮತಬೋಧನೆಗೆ ಸಹಕಾರಿಗಳಾದ ಗ್ರಂಥಗಳ ಕೊರತೆಯಿಂದ ಈ ಮತವು ನಶಿಸುತ್ತಿಲ್ಲ. ಕೋಂಟೆದಾರ್ಯರು, ಕೆರೆಯ ಪದ್ಮರಸರು, ಪಾಲ್ಕುರಿಕೆಯ ಸೋಮನಾಥರು, ಶಿವಪ್ರಕಾಶದೇಶಿಕರು, ಮೊದಲಾದ ಅನೇಕ ಉದ್ದಾಮ ಗ್ರಂಥಕಾರರಿಂದ ಲಕ್ಷೋಪಲಕ್ಷಗ್ರಂಥಗಳು ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಬರೆಯಲ್ಪಟ್ಟು ಈ ಮತದ ಪ್ರಾಶಸ್ತ್ಯವನ್ನು ಘೋರ್ಗರೆಯುತ್ತಿವೆ. ನಮ್ಮಲ್ಲಿ ಉದಾರಿಗಳೂ, ಕಾರ್ಯದಕ್ಷರೂ, ಇಲ್ಲದೆ ಈ ಮತವು ಹಾಳಾಗುತ್ತಿಲ್ಲ. ನಿದರ್ಶನಕ್ಕೆ ಕೀರ್ತಿಶೇಷರಾದ ಬಳ್ಳಾರಿಯ ಸಕ್ಕರೆ ಕರಡಪ್ಪನವರು, ಮೈಸೂರು ಭಕ್ತಿ ಮರಿಮಲ್ಲಪ್ಪನವರು, ವಾರದ ಮಲ್ಲಪ್ಪನವರು, ಶಿರಸಂಗಿ ದೇಶಾಯಿ ಶ್ರೀ ಲಿಂಗಪ್ಪ ಜಯಪ್ಪನವರು, ಗುಬ್ಬಿ ತೋಟದಪ್ಪನವರು, ಬೆಂಗಳೂರು ಸೋಲಬೆಲೆ ಸರಾಫ್ ನಂಜಪ್ಪ ಉರುಫ್ ಶ್ಯಾಮಣ್ಣನವರು, ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಮ॥ ಚೆನ್ನಬಸಪ್ಪನವರು ಮೊದಲಾದವರುಗಳಿಂದ ಮಾಡಲ್ಪಟ್ಟಿರುವ ಮತ್ತು ಮಾಡಲ್ಪಡುತ್ತಿರುವ ಅಮೋಘ ದಾನಧರ್ಮಗಳೂ, ಕೈಲಾಸವಾಸಿಗಳಾದ ವೀರಸಂಗಪ್ಪನವರು, ಗಿಲಗಂಜಿ ಗುರುಸಿದ್ದಪ್ಪನವರು, ಡಿ॥ ಇನ್ಸ್‌ಪೆಕ್ಟರ್ ಚೆನ್ನಬಸಪ್ಪನವರು, ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ., ಯವರು, ಮ॥ ರಾವ್ ಬಹದ್ದೂರ್ ಅರಟಾಳ್ ರುದ್ರಗೌಡರು, ಐ. ಎಸ್. ಒ. ಇವರೇ ಮುಂತಾದವರ ಕಾರ್ಯನಿರ್ವಾಹಕಶಕ್ತಿಯು ತಕ್ಕಷ್ಟು ಸಾಕ್ಷೀಭೂತಗಳಾಗಿರುತ್ತವೆ. (ಸಶೇಷ.)

ಗೃಹಕೃತ್ಯದ ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ತುಮಕೂರು ಡಿ॥ ತುಮಕೂರು ಟೌನ್ ಕೋಟೆಯಲ್ಲಿ ಹಾಲಿ ಇರುವ ಕ್ಯಾತ್ಸಂದ್ರದ ಸೊಂಡೇಕೊಪ್ಪದ ಹುಚ್ಚೀರಪ್ಪನ ಮಗ ಶಿವರುದ್ರಯ್ಯ ಉರುಫ್ ಅಯ್ಯಣ್ಣನಾದ ನಾನೂ ನನ್ನ ಚಿಕ್ಕಪ್ಪ ವೀರಭದ್ರಪ್ಪನ ಮಗನಾದ ಈಗ್ಗೆ ಸುಮಾರು ೧॥ ವರುಷದಲ್ಲಿ ಪ್ಲೇಗಿನಿಂದ ಮೃತಪಟ್ಟ ಮುದ್ದವೀರಯ್ಯನು ಸಹಾ ಅವಿಭಕ್ತ ಕುಟುಂಬದ ಮೆಂಬರುಗಳಾಗಿರುತ್ತೇವೆ. ಷೆಡ್ಯೂಲ್ ಸ್ವತ್ತು ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತದ ಸ್ವತ್ತಾಗಿರುತ್ತೆ. ಸದರಿ ಮುದ್ದವೀರಯ್ಯನ ಮರಣಾನಂತರ ಷೆಡ್ಯೂಲ್ ಸ್ವತ್ತಿಗೆ ನಾನೇ ಮಾಲೀಕನಾಗಿಯೂ ಅನುಭವದಾರನಾಗಿಯೂ ಇರುತ್ತೇನೆ. ನನಗೆ ಆಗದ ಜನಗಳು ಷೆಡ್ಯೂಲ್ ಸ್ವತ್ತನ್ನು ಹೊತ್ತುಹಾಕಬೇಕೆಂಬ ದುರಾಲೋಚನೆಯಿಂದ ಸದರಿ ಮುದ್ದವೀರಯ್ಯನ ತಾಯಿ ಆದ ಹುಚ್ಚಮ್ಮನಿಂದ ಕ್ರಯ ಭೋಗ್ಯ ದಾನ ವಗೈರೆ ಮೂಲಕ ಪರಬಾರೆ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಿರುವದಾಗಿ ಕೇಳುತ್ತೇವೆ. ಒಂದುವೇಳೆ ಯಾರಾದರೂ ಪರಭಾರ ಮಾಡಿಕೊಂಡಲ್ಲಿ ಅದರಿಂದ ಸದರಿಯವರಿಗೆ ಯಾವ ವಿಧವಾದ ಹಕ್ಕುಬಾಧ್ಯತೆ ಆಗಲಿ ಸ್ವಾಧೀನವಾಗಲಿ ಉಂಟಾಗುವುದಿಲ್ಲ. ಮತ್ತು ಅದರಿಂದ ನನಗೆ ಉಂಟಾಗುವ ಎಲ್ಲಾ ನಷ್ಟಗಳಿಗೂ ಸದರಿಯವರು ಬದ್ಧರಾಗಬೇಕಾಗುತ್ತೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

ಷೆಡ್ಯೂಲ್.

ತುಮಕೂರು ತಾಲ್ಲೂಕು ಊರಡಗೆರೆ ಸಮ್ಮತು ಕ್ಯಾತ್ಸಂದ್ರದಪೇಟೆಯಲ್ಲಿರುವ ಖಾನೇಷುಮಾರಿ ನಂಬರು ೮ ಮತ್ತು ೯ ಮಾಳಿಗೆ ಹೆಂಚು ಮಿಶ್ರವಾದ ಅಂಗಡಿ ಮನೆಗೆ ಚಕ್ಕುಬಂದಿ ಪೂರ್ವಕ್ಕೆ ಹಾಲಿ ರಸ್ತೆ ಪಶ್ಚಿಮಕ್ಕೆ ಚೆನ್ನಬಸವಣ್ಣನ ಅಂಗಡಿ ಮನೆ ಉತ್ತರಕ್ಕೆ ಬೆಂಗಳೂರು ರಸ್ತೆ ದಕ್ಷಿಣಕ್ಕೆ ಅಗಳತಿ ಈ ಮಧ್ಯೆ ಇರುವ ಸ್ವತ್ತು ಒಂದು.

ಖಾನೇಷುಮಾರಿ ೧೨೭ ಮತ್ತು ೧೨೮ ನೇ ಮಾಳಿಗ ಹೆಂಚು ಮಿಶ್ರವಾದ ಅಂಗಡಿಗಳು ಮತ್ತು ಮನೆಗೆ ಚಕ್ಕುಬಂದಿ ಪೂರ್ವಕ್ಕೆ ಹಾಲಿ ನಂಜಯ್ಯನ ಅಂಗಡಿಮನೆ, ಪಶ್ಚಿಮಕ್ಕೆ ವೆಂಕಟಪತ್ಯಯ್ಯನ ಅಂಗಡಿಮನೆ, ಉತ್ತರಕ್ಕೆ ಹಳೇಪೇಟೆ ದಾರಿ, ದಕ್ಷಿಣಕ್ಕೆ ಬೆಂಗಳೂರು ರಸ್ತೆ ಈ ಮಧ್ಯೆ ಅರುವ ಸ್ವತ್ತು ಒಂದು ಜುಮ್ಲಾ ಎರಡು ಸ್ವತ್ತುಗಳು.

ಶಿವರುದ್ರಯ್ಯ ಉರುಫ್ ಅಯ್ಯಣ್ಣ, ಹಾಲಿ ತುಮಕೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 26

ನಾವು ಎ. ಆಲ್ ಬ್ಯುಕ್ಯಾಯರ್ ಕ್ಯು ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವದಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ ಗೌಡರು ದಾವಣಗೆರೆ.	ವಿಳಾಸ:—ಎಚ್. ಪಿ. ಕರೇಗೌಡರ ಹಾಲಪ್ಪ ಶಿವಲಿಂಗಪ್ಪ, ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.

ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ		6—8—0
ಬೆಳ್ಳಿಯ ಸರಪಣಿ ಸಹಿತ	,,	9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
5 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರನನ್ನೂ, ಅನೇಕ ಪುರಾಣ ಕಥೆಗಳನ್ನೂ ಒತ್ತು ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟಿದ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಸಕೋತ್ತರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಸಹ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ವಾಣಿ ಕಂಪನಿ,
5 ಸಾಹುಕಾರಪೇಟೆ, ಮದರಾಸು.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಉತಶವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ: —ಡಾಕ್ಟರ್ ಎಂ. ಪೀಟರ್,
5 3. ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0.8.0.

ನಮ್ಮ ವಿಳಾಸ: —ವೈರಂ ಅಂಡ್ ಕೊ,
5 3. ಇರುಳಪ್ಪನಬೀದಿ, ಮದರಾಸು.

೧೯೨೦ ನೆಯ ಇಸವಿ ಮೇ ತಾ॥ ೨ ರಿಂದ ೧೯೨೦ ನೆಯ ಮೇ ತಾ॥ ೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ವೈಶಾಖಶುದ್ಧ ಪೌರ್ಣಿಮಿಯಿಂದ ವೈಶಾಖ ಬಹುಳ ಪಂಚಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
2	[1]ಭಾನು	ಪೌರ್ಣ	58-46	ಸ್ವಾತಿ	60	20
3	ಸೋಮ	ಪಾಡ್ಯ	60	ಸ್ವಾತಿ	1-23	21
4	ಮಂಗಳ	ಪಾಡ್ಯ	2-51	ವಿಶಾ	6-24	22
5	ಬುಧ	ಬಿದಿ	7-9	ಅನೂ	12-16	23
6	ಗುರು	ತದಿ	12-8	ಜ್ಯೇಷ್ಠ	18-40	24
7	ಶುಕ್ರ	ಚೌತಿ	17-15	ಮೂಲ	25-15	25
8	[2]ಶನಿ	ಪಂಚ	22-12	ಪೂಷಾ	31-37	26

(1) ಅರ್ಧನಾರೀಶ್ವರವ್ರತಂ, ಚಂದ್ರಗ್ರಹಣಂ. (2) ಮದ್ದೂರು ನೃಸಿಂಹಸ್ವಾಮಿರಥಃ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಶ್ರೀ ಅಡೆಲ್ಫಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತ್ಯೈಷಾ । ಭುವನಪಥಕೃತಾವತಾರಾ ಪತ್ರಜ್ಞನಪ್ರತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಳಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಫುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಮೇ ತಾರೀಖು ೯ ನೆಯ ಭಾನುವಾರ (ಸಂಚಿಕೆ ೧೯

GOVERNMENT OF MYSORE.
ELECTRICAL DEPARTMENT.

39

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking. Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand. First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies.

For further particulars apply to

(Sd·) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದಮದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 41

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦. ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವೀರಶೈವ ವಿವಾಹವಿಧಿಃ	೦—೮—೦
ಪೂಜಾವಿಧಿಃ	೦—೧೦—೦
ರುಶೀಲತಂತ್ರ	೦—[illegible]—೦
ವಾಸಿ	೦—೪—೦
ಲವಿದ್ಯಾ (ಮುಕ್ತಿಸಾಧ್ಯಾ	೦—೨—೦
ಶಿಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶಿವಶಂಕರಪ್ಪಾ ಜೇರಿಗೆ

ಮರ್ಚಂಟ, ಕಮಿಷನ್ ಏಜಂಟ, ಸೊಲ್ಲಾಪುರ,

ನಮ್ಮಲ್ಲಿ ಅರಿಶಿನ, ಅಡಿಕೆ, ಬೆಲ್ಲ, ಸಕ್ಕರಿ, ತುಪ್ಪ, ಕೊಬ್ಬರಿ, ಕೊಬ್ಬರಿಯೆಣ್ಣೆ, ಶೀಗೆಕಾಯಿ, ವಳ್ಳೆಯೆಣ್ಣೆ, ನುಣಸಿಕಾಯಿ, ಆಲೂಗಡ್ಡೆ, ಬೆಳ್ಳುಳ್ಳಿ, ಉಳ್ಳಿಗಡ್ಡೆ, ಜೋಳ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಕಡಲೆಬ್ಯಾಳಿ ಮುಂತಾದ ಯಾವತ್ತು ದಿನಸುಗಳ ಖರೀದಿ ಮತ್ತು ಬಿಕರಿ ಚವುಕಶಿಯಿಂದ ಫಾಯದೆಶೀರ ಮಾಡುತ್ತೇವೆ. ನಮ್ಮ ಅನುಭವ ತೊಗೊಂಡಲ್ಲಿ ಖಾತ್ರಿ ಆದೀತು. 13

ಭಪಕೀ ಜಾಹಿರಾತಿಗೆ ಮರುಳಾಗಬೇಡಿರಿ.

ಮಮ್ಮ ತಂಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿ ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ: —ಎನ್ ಭುಜಂಗರಾವ್ ಬಾಪಟ
32 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷ್ಮೀವಿಲಾಸ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆಯುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂಗಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕಂಥ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲುಡಿಸ್ತು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
19 **ವೈದ್ಯಶಾಲಾ, ಮೈಸೂರು.**

ಇನಾಂ! ಆಲಸ್ಯಮಾಡಿದರೆ ದೊರೆಯಲಾರದು ಇನಾಂ!!

ತಮ್ಮ ವಿಳಾಸವನ್ನು ವಿವರವಾಗಿ ತಿಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರೆವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
6 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 20

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಶ್ರೀ ರೌದ್ರಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

25

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿ ಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ, ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿಕಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ, ಪ್ರಿಂಟಿಂಗ್ ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂ. ಗೆ. ಕೊಟ್ಟುಬಿಡುವವು. ಅಪ್ಪೇಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಪಂಚಾಂಗಗಳು ದೇವನಾಗರಿ ಲಿಪಿಯಿಂದಲೂ ತಯಾರಿಸಿರುವವು. ಇಷ್ಟವುಳ್ಳವರು ತರಿಸಿಕೊಳ್ಳಿರಿ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಜಾಗ್ರತವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಹಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಮೇ ತಾ|| ೯ ನೆಯ ಭಾನುವಾರ.

ಸಂಸ್ಥಾನದ ಪರಸ್ಪರ ಸಹಾಯಸಂಘಗಳು.

ಈ ಶಾಖೆಗೆ ಸಂಬಂಧಪಟ್ಟ ೧೯೧೮-೧೯ ನೆ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ವರದಿಗೆ ಸಂಬಂಧಪಟ್ಟ ವರ್ಷದಲ್ಲಿ ಈ ಶಾಖೆಗೆ ಮ|| ಆರ್. ರಂಗರಾವ್ ಬಿ. ಎ. ಬಿ ಎಲ್. ರವರು ರಿಜಿಸ್ಟ್ರಾರರಾಗಿದ್ದರು. ಇಸ್ಸಿಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರರೂ, ಒಬ್ಬ ಪರ್ಸನಲ್ ಅಸಿಸ್ಟೆಂಟರೂ ಸಾಹಾಯ್ಯಕರಾಗಿದ್ದರು. ೩೭ ಇನ್ಸ್‌ಪೆಕ್ಟರುಗಳೂ, ೮ ಮಂದಿ ಆಡಿಟ್ ಇನ್ಸ್‌ಪೆಕ್ಟರುಗಳೂ ಸಹ ಕೆಲಸಮಾಡಿದರು. ಉಳಿದ ಸೂಪರ್‌ವೈಜರ್ ಮೊದಲಾದ ಸಿಬ್ಬಂದಿಗಳು ಯಥಾಪ್ರಕಾರವಾಗಿದ್ದುವು. ಪ್ರಸಕ್ತವರ್ಷದಲ್ಲಿ ಸಂಸ್ಥಾನದಲ್ಲೆಲ್ಲಾ ಈ ಸಂಘಗಳ ಸಂಖ್ಯೆಯು ೧೨೫೫ ಇದ್ದುದರಿಂದ ಅದರ ಹಿಂದಣ ವರ್ಷಕ್ಕಿಂತ ೧೫೭ ಹೆಚ್ಚಿದಂತಾಯಿತು. ಹಳೆಯವುಗಳಲ್ಲಿ ೯ ತೆಗೆದುಹಾಕಲ್ಪಟ್ಟುವು. ಒಟ್ಟು ಸಂಘಗಳ ಮೂಲಧನವು ಹಿಂದಣ ವರ್ಷದಲ್ಲಿ ೬೯,೦೪,೬೪೨ ರೂಪಾಯಿಗಳಾದ್ದುವು. ಈ ವರ್ಷದಲ್ಲಿ ೭೦,೯೮,೫೨೭ ಕ್ಕೆ ಹೆಚ್ಚಿತು. ಅವುಗಳಲ್ಲಿದ್ದ ಮೆಂಬರುಗಳ ಸಂಖ್ಯೆಯು ಕೂಡ ೬೧೧೭೬ ರಿಂದ ೬೬೬೫೫ ಕ್ಕೆ ಹೆಚ್ಚಿತು. ಈ ಸಂಘಗಳಲ್ಲಿ ನಡೆದಿರುವ ಲೇವಾದೇವಿ ವ್ಯಾಪಾರ ಕೈಗಾರಿಕೆ ಮೊದಲಾದ ಭಾಗಗಳಲ್ಲೆಲ್ಲಾ ನಡೆದಿರುವ ವ್ಯವಹರಣೆಯು ಹಿಂದಣ ವರ್ಷಕ್ಕಿಂತ ಈ ವರ್ಷದಲ್ಲಿ ಕಡಿಮೆಯಾದರೂ ಒಟ್ಟು ಆದಾಯವು ಹಿಂದಣ ವರ್ಷದಲ್ಲಿ ೬,೬೫,೯೭೨ ರೂ. ಇದ್ದುದು ಈ ವರ್ಷದಲ್ಲಿ ೬,೬೯,೦೬೫ ರೂ. ಗಳಾಗಿರುತ್ತದೆ.

ಪ್ರಸಕ್ತ ವರ್ಷದಲ್ಲಿ ಎಲ್ಲಾ ಸಂಘಗಳಲ್ಲೂ ಡಿಪಾಜಿಟ್ ಮಾಡಲ್ಪಟ್ಟ ಹಣವು ೨೪,೧೬,೧೨೫ ಆಗಿದ್ದಿತು. ಇದರಲ್ಲಿ ಅರ್ಧಭಾಗದಷ್ಟು ಬೆಂಗಳೂರು ಪಟ್ಟಣದ ಸಂಘಗಳ ಬ್ಯಾಂಕಿನಲ್ಲೇ ಇಡಲ್ಪಟ್ಟಿತು. ಎಲ್ಲ ಸಂಘಗಳಲ್ಲೂ ಒಟ್ಟು ೨,೪೨,೫೧,೬೧೯ ರೂ. ಗಳಷ್ಟು ಲೇವಾದೇವಿ ವ್ಯಾಪಾರ ಮೊದಲಾದುವು ನಡೆದಿರುತ್ತವೆ. ಈ ಶಾಖೆಗೆಲ್ಲಾ ಸರ್ಕಾರದಿಂದ ಆಗಿರುವ ವರ್ಷದ ವೆಚ್ಚವು ೯೧,೬೧೫ ರೂ. ಇದರ ಹಿಂದಣ ವರ್ಷ ೮೫,೪೮೮ ರೂ. ಆಗಿದ್ದಿತು. ಇದಲ್ಲದೆ ಸಂಘಗಳ ಸ್ವಂತದ ವೆಚ್ಚವು ೫,೫೧.೬೪೦ ರೂ. ಗಳಾಗಿರುತ್ತದೆ. ಈ ವೆಚ್ಚವು ಹಿಂದಣ ವರ್ಷ ೧,೬೪,೨೪೫ ಮಾತ್ರ ಆಗಿದ್ದಿತು. ಎಲ್ಲ ಸಂಘಗಳಲ್ಲೂ ಪ್ರಸಕ್ತವರ್ಷದವರೆಗೆ ಕೂಡಿರುವ ರಿಜರ್ವ್‌ಫಂಡು ೪೫೯೦೮೭ ರೂ. ಗಳಾಗಿರುತ್ತವೆ. ಹಿಂದಣ ವರ್ಷದವರೆಗೆ ಈ ಫಂಡು ೩,೩೦೫೪೯ ರೂ. ಆಗಿದ್ದಿತು. ಎಂದರೆ ಪ್ರಸಕ್ತವರ್ಷದಲ್ಲಿ ೧ ಲಕ್ಷ ರೂ. ನ ಮೇಲೆಯೇ ರಿಜರ್ವ್‌ಫಂಡಿಗೆ ಕೂಡಿಸಿದಂತಾಯಿತು.

ಈ ವಿವರಣವನ್ನೆಲ್ಲಾ ನೋಡಿದರೆ ವರದಿಗೆ ಸಂಬಂಧಪಟ್ಟ ವರ್ಷವು ಇಂಫ್ಲುಯೆಂಜಾವ್ಯಾಧಿ ಯುದ್ಧಕ್ಷಾಮ ಮೊದಲಾದ ಉಪಟಲಗಳಿಗೆ ಒಳಗಾಗಿದ್ದರೂ, ಅನೇಕ ವಿಧವಾದ ನಷ್ಟಕಷ್ಟಗಳಿಗೆ ದೇಶದ ಜನರು ಗುರಿಯಾಗಿದ್ದರೂ, ಈ ಶಾಖೆಯಲ್ಲಿ ನಡೆದಿರುವ ಕಾರ್ಯವು ನಿರಾಶೆಯನ್ನುಂಟುಮಾಡದೆ ಸಮಾಧಾನಕರವಾಗಿಯೇ ಜರುಗಿದೆಯೆಂದು ಹೇಳಬಹುದು. ಅದುಕಾರಣವೇ ಸರ್ಕಾರವೂ ಕೂಡ ಒಪ್ಪಿಕೊಂಡಿರುತ್ತದೆ. ನಮ್ಮ ಸಂಸ್ಥಾನದಲ್ಲಿ ಪರಸ್ಪರ ಸಹಾಯಸಂಘ ಶಾಖೆಯ ಸ್ಥಾಪನೆಯು ೧೯೦೫-೬ ರಲ್ಲಾಯಿತು. ಬಾಲ್ಯದಶೆಯಲ್ಲಿ ಇದರ ಅಭಿವೃದ್ಧಿಯು ಬಹಳ ಮಂದವಾಗಿದ್ದರೂ ಕಳೆದ ಕೆಲ ವರ್ಷಗಳಿಂದಲೂ ಚೆನ್ನಾಗಿ ಅಭಿವೃದ್ಧಿದಶೆಯಲ್ಲಿರುತ್ತದೆ. ಸಂಸ್ಥಾನದಲ್ಲಿರುವ ಈ ಸಂಘಗಳಲ್ಲಿ ಬಹುಭಾಗವು ಲೇವಾದೇವಿ ಸಂಘಗಳೇ ಆಗಿರುವುದರಿಂದ ಬೇಸಾಯಗಾರರು ವರ್ತಕರು ಕಸುಬುಗಾರರು ಮೊದಲಾದ ಜನರಿಗೆ ಸುಲಭವಾದ ಬಡ್ಡಿಯಿಂದ ಈ ಸಂಘಗಳು ಹಣವನ್ನು ಒದಗಿಸಲು ಅವಕಾಶವಾಗಿದೆ. ಹೆಚ್ಚು ಬಡ್ಡಿಯ ಅವಾಂತರವು ಈಗ ಎಷ್ಟೋಮಟ್ಟಿಗೆ ತಪ್ಪಿಹೋಗಿದೆ. ಅದರ ಜತೆಗೆ ಈಗ ಧಾನ್ಯದ ಬೆಲೆಯು ಏರಿರುವುದರಿಂದ ಬೇಸಾಯಗಾರರು ಬಲುಮಟ್ಟಿಗೆ ಚೇತರಿಸಿಕೊಳ್ಳಲು ಸಹಾಯವಾಯಿತು. ಈ ಸಂಘಗಳ ಮೂಲಕ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವುವೆಂದು ಮಾಡಲ್ಪಡುತ್ತಿರುವ ನಿರೀಕ್ಷಣೆಯು ಮಾತ್ರ ಸಫಲವಾಗುತ್ತಿಲ್ಲ. ಕೈಗಾರಿಕೆಯ ಸಂಘಗಳು ಹೆಸರಿಗೆ ಮಾತ್ರ ೩ ಇರುತ್ತವೆ. ವರ್ತಕತನವನ್ನು ನಡೆಯಿಸುವ ಸಂಘಗಳು ೫೯ ಇರುತ್ತವೆ. ಪ್ರಜೆಗಳಲ್ಲಿ ಪರಸ್ಪರ ಸಾಹಾಯ್ಯಫಲಜ್ಞಾನವು ತಕ್ಕಷ್ಟು ಇಲ್ಲದಿರುವುದೇ ಕೈಗಾರಿಕೆ ವ್ಯಾಪಾರ ಮೊದಲಾದುವುಗಳಿಗೆ ಸಂಬಂಧಪಟ್ಟ ಸಂಘಗಳು ಹೆಚ್ಚದಿರುವುದಕ್ಕೆ ಕಾರಣವಾಗಿದೆ. ಪ್ರಾಮಾಣಿಕತೆಯು ಜನರಲ್ಲಿ ಹೆಚ್ಚದ ಹೊರತು ಯಾವ ವಿಧವಾದ ಅಭ್ಯುದಯಕ್ಕೂ ಮಾರ್ಗವಾಗುವುದಿಲ್ಲ. ಸಂಘಗಳ ಉದ್ಧಾರಕ್ಕೆ ಅದೇ ಮುಖ್ಯವಾದ ಚೈತನ್ಯ. ನಂಬುಗೆಯ ಬಲವಿಲ್ಲದುದರಿಂದಲೇ ವ್ಯಾಪಾರ ಶಿಲ್ಪಸಂಘಗಳ ಕಲ್ಪನೆಗೆ ಜನರು ಬೆದರಬೇಕಾಗಿ ಬರುತ್ತದೆ. ಸರ್ಕಾರದವರಾದರೊ ಪರಸ್ಪರ ಸಹಾಯ ಸಂಘಗಳ ಮೂಲಕ ಪ್ರಜೆಗಳನ್ನು ಸರ್ವವಿಧವಾದ ಉದ್ಯೋಗಗಳಲ್ಲೂ ಮುಂದಕ್ಕೆ ಹತ್ತಿಸಿ ಉಪಪನ್ನರನ್ನು ಮಾಡಬೇಕೆಂಬ ಉದಾರಸಂಕಲ್ಪವುಳ್ಳವರಾಗಿರುತ್ತಾರೆ. ಆದರೆ ಪ್ರಜೆಗಳಲ್ಲಿ ಪರಸ್ಪರ ವಿಶ್ವಾಸ, ಆತ್ಮೋದ್ಧಾರದ ಚಿಂತೆ, ಕಾರ್ಯೋತ್ಸಾಹ, ಪ್ರಮಾಣಿಕತೆ ಇವುಗಳು ವೃದ್ಧಿಯಾದ ಹೊರತು ಉದ್ದೇಶವು ಸಂಪೂರ್ಣ ಸಫಲವಾಗುವುದಿಲ್ಲ. ಹತ್ತು ಜನರ "ಮೆಹನತ್ತೂ" ದುಡ್ಡೂ ಸೇರಿ ಸ್ಥಾಪಿಸಲ್ಪಡುವ ಕಾರ್ಯದಲ್ಲಿ ಒಂದು ವೇಳೆ ನಷ್ಟವಾದರೆ ಒಬ್ಬಾನೊಬ್ಬನೇ ಮುಳುಗಿಹೋಗದಿರುವುದಕ್ಕೂ ಲಾಭವಾದರೆ ಸರ್ವರೂ ಸಮನಾಗಿ ಅನುಭವಿಸಲಿಕ್ಕೂ ಅವಕಾಶವಿರುತ್ತದೆ "ಒಬ್ಬನಿಗೆ ಇಬ್ಬರು ಲೇಸು; ಹಬ್ಬಕ್ಕೆ ಮದುವೆ ಲೇಸು" ಎಂಬ ಗಾದೆಯನ್ನು ನಮ್ಮವರೆಲ್ಲರೂ ಕೇಳಿಯೇ ಇರುತ್ತಾರೆ. ಅದರ ತತ್ವದ ಘನತೆಯನ್ನು ಮಾತ್ರ ಪರ್ಯಾಲೋಚಿಸಿ ಕೆಲಸ ಮಾಡುವವರು ಕಡಿಮೆ. ಆತ್ಮಬುದ್ಧಿಯೂ ಲೋಕಪರಿಜ್ಞಾನವೂ ಪ್ರಜೆಗಳಲ್ಲಿ ರೂಢಮೂಲವಾಗುವವರೆಗೆ ಪ್ರಭುತ್ವದವರೂ ನಾಗರಿಕರಾದ ಪ್ರಜೆಗಳೂ ಪರಸ್ಪರ ಸಹಾಯ ಲಾಭವನ್ನು ಸಾಮಾನ್ಯಪ್ರಜೆಗಳಿಗೆ ಚೆನ್ನಾಗಿ ಮನದಟ್ಟಾಗುವಂತೆ ಮಾಡುವಲ್ಲಿ ಹೀಗೆಯೇ ಕೆಲಸಮಾಡುತ್ತ ಬಂದರೆ ದಿನಕ್ರಮೇಣ ದೇಶದಲ್ಲಿ ಶಿಲ್ಪವಾಣಿಜ್ಯಾದಿಗಳಿಗೆ ಸಂಬಂಧಪಟ್ಟ ಪರಸ್ಪರ ಸಹಾಯಸಂಘಗಳ ಸಂಖ್ಯೆಯು ಹೆಚ್ಚದೆ ಇರಲಾರವು.

ಒಳದೇಶ ವೃತ್ತಾಂತಗಳು.

ಕಳೆದ ೨ ವಾರಗಳಿಂದ ಮಳೆಯಿಲ್ಲ. ಹಲವು ಕಡೆ ಬಿತ್ತಿ ಪೈರು ಬಂದಿರುವ ಜೋಳವು ಒಣಗುತ್ತಿದೆ. ಗಾಳಿಯು ಬಲವಾಗಿ ಬೀಸುತ್ತಿದೆ. ಸೆಕೆಯು ಕಡಿಮೆ.

ನೀಲಗಿರಿಗೆ ದಯಮಾಡಿಸಿರುವ ದಿವಾನ್ ಮ|| ಕಾಂತರಾಜ ಅರಸಿನವರು ಬರುವ ತಾ|| ೧೫ ರಲ್ಲಿ ಹಿಂದಿರುಗಿ ಬೆಂಗಳೂರಿಗೆ ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ಏಪ್ರಿಲ್ ತಾ|| ೨೦ ಕ್ಕೆ ಕೊನೆಯಾದ ೧ ವಾರ ಕಾಲದಲ್ಲಿ ಸಂಸ್ಥಾನದ ಲೋಹಮಾರ್ಗಗಳ ಉತ್ಪತ್ತಿಯು ೧,೭೯,೯೨೭ ರೂ. ಇದಕ್ಕೆ ಹಿಂದಣ ವರ್ಷದ ಅದೇ ಒಂದು ವಾರಕಾಲದ ಉತ್ಪತ್ತಿಯು ೧,೪೩,೨೩೪ ರೂ. ಆಗಿದ್ದಿತು.

ಕೃಷ್ಣರಾಜಸಾಗರದ ಅಣೆಕಟ್ಟಿನ ಮಧ್ಯಭಾಗವು ಈ ವರ್ಷ ೭೫ ಅಡಿಗಳ ಎತ್ತರದವರೆಗೂ ಕಟ್ಟಲ್ಪಡುವುದು. ಇದರಿಂದ ಕಟ್ಟೆಯಲ್ಲಿ ಇನ್ನಷ್ಟು ಹೆಚ್ಚು ನೀರು ನಿಲ್ಲಲು ಅವಕಾಶವಾಗುವುದು. ಅನೇಕ ಪ್ರದೇಶವು ಮುಳುಗಡೆಗೆ ಬರುವುದು.

ಮುನ್ಸೀಫರುಗಳಾದ ಮ|| ಯು. ಡಿ. ನಾರಾಯಣಮೂರ್ತಿಯವರು ಮೈಸೂರು ೧ ನೆ ಮುನ್ಸೀಫ್ ಕೋರ್ಟಿನಿಂದ ಶ್ರೀರಂಗಪಟ್ಟಣಕ್ಕೂ, ಅಲ್ಲಿದ್ದ ಮ|| ಸಿ ಸುಬ್ರಹ್ಮಣ್ಯಯ್ಯರು ಬೆಂಗಳೂರು ೨ ನೆ ಮುನ್ಸೀಫ್ ಕೋರ್ಟಿಗೂ ವರ್ಗಮಾಡಲ್ಪಟ್ಟಿದ್ದಾರೆ.

ಮೈಸೂರು ರಾಜಾಸ್ಥಾನದ ಸಂಗೀತವಿದ್ವಾನ್ ಮ|| ರಾಚಪ್ಪನವರ ಸಂಗೀತವು ಕಳೆದ ತಾ|| ೧ ರಲ್ಲಿ ಮದ್ರಾಸು ಜಾರ್ಜ್‌ಟೌನ್ ಸೌಂದರ್ಯಮಹಲಿನಲ್ಲಿ ನಡೆದು ಸಭಿಕರು ಅತ್ಯಾನಂದಗೊಂಡು ಗಾಯಕರನ್ನು ವಿಶೇಷವಾಗಿ ಸನ್ಮಾನಿಸಿದರೆಂದು ಕೇಳಿದೆವು.

ಚಿತ್ರದುರ್ಗದ ತಾಲ್ಲೂಕು ಅ|| ಅಮಲ್ದಾರಾದ ಮಿ|| ಅಬ್ದುಲ್ ಸುಭಾನ್‌ರವರು ೨ ತಿಂಗಳ ರಜಾ ಪಡೆದಿರುವುದರಿಂದ ಹೊಸದುರ್ಗದ ತಾ|| ಆಕ್ಟಿಂಗ್ ಅಮಲ್ದಾರರಾಗಿರುವ ಮ|| ಬಿ. ನರಸಿಂಹಯ್ಯನವರು ಚಿತ್ರದುರ್ಗದ ಅ|| ಅಮಲ್ದಾರರಾಗಿ ನಿಯಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಮಿ. ಜಿ. ಆರಾವಮುದಯ್ಯಂಗಾರರು ೧೨ ದಿನಗಳ ರಜಾ ಪಡೆದಿರುವುದರಿಂದ ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸರಾದ ಮ|| ಎಂ. ಪಿ. ವಿಶ್ವನಾಥರಾವ್‌ರವರು ತಮ್ಮ ಕೆಲಸದ ಜತೆಗೆ ಬೆಂಗಳೂರು ಡಿ|| ಡೆ|| ಕಮಿಷನರ ಕೆಲಸವನ್ನೂ ನೋಡಿಕೊಳ್ಳುವಂತೆ ನಿಯಮಿಸಲ್ಪಟ್ಟಿದ್ದಾರೆ.

ಈ ಕೆಳಗೆ ಕಂಡ ಕ್ಕೈ|| ವೀರಸಂಗಪ್ಪನವರ ಅಗ್ರತಾಂಬೂಲದ ಬಗೆಯ ಧನವು ವಿಶ್ವಾಸದಿಂದ ಸ್ವೀಕರಿಸಲ್ಪಟ್ಟಿದೆ. ಗೊಂದೇನಹಳ್ಳಿ ಗ್ರಾಮದಲ್ಲಿ ಸ್ಥಾನಿಕ ಗುರಪ್ಪನವರ ಬಸಪ್ಪನವರು ನೆರವೇರಿಸಿದ ಧಾರ್ಮಿಕ ಸಭೆಯಲ್ಲಿ ೧ ರೂ. ಬೇರಿಕೆ ಸಂಸ್ಥಾನದಲ್ಲಿ ಶ್ರೀಮತಿ ನಂಜಮ್ಮಣ್ಣಿಯವರಿಂದ ನಡೆಯಿಸಿದ ಲಿಂಗಪ್ರತಿಷ್ಠಾ ಕಾಲದಲ್ಲಿ ತೆಗೆದುದು ೨ ರೂ. ಚಿದರಹಳ್ಳಿಯಲ್ಲಿ ಮ|| ಕಾಡಪ್ಪನವರ ವೀರಭದ್ರಪ್ಪನವರ ಲಗ್ನದಲ್ಲಿ ೧ ರೂ.

ಜುಲೈ ತಿಂಗಳಿಂದ ಬೆಂಗಳೂರಿನಲ್ಲಿ ಒಂದು ಸ್ಯಾನಿಟರಿ ಇನ್ಸ್‌ಪೆಕ್ಟರ್ ತರಗತಿಯು ಏರ್ಪಡಿಸಲ್ಪಡುವುದು. ಆದರೆ ತಕ್ಕಷ್ಟು ವಿದ್ಯಾರ್ಥಿಗಳು ಸೇರಬೇಕು. ಬಡವರಾದ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಇಲ್ಲಿ ಉಚಿತವಾಗಿ ವಿದ್ಯಾಭ್ಯಾಸ ಮಾಡಲು ತಂತಮ್ಮ ಡಿಸ್ಟ್ರಿಕ್ಟ್ ಡೆ|| ಕಮಿಷನರುಗಳ ಮೂಲಕ ಯೋಗ್ಯತಾಪತ್ರಗಳನ್ನು ಪಡೆದು ಅದರ ಸಮೇತ ಅರ್ಜಿಗಳನ್ನು ಬರೆದು ಡಿಸ್ಟ್ರಿಕ್ಟಿಗೆ ಒಪ್ಪೊಬ್ಬರಂತೆ ಬಂದು ಸೇರಬಹುದು.

ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ರಜಾವನ್ನು ಮುಗಿಸಿಕೊಂಡು ಉದ್ಯೋಗದ ಮೇಲೆ ಬರುವುದರಿಂದ ಈ ಕೆಳಗೆ ಕಂಡಂತೆ ಉದ್ಯೋಗಸ್ಥಾನಗಳ ವಿನಿಯೋಗವು ಮಾಡಲ್ಪಡುವುವೆಂದು ಕೇಳುತ್ತೇವೆ. ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ತಮ್ಮ ಪೂರ್ವದ ರೆ|| ಕಮಿಷನರ್ ಕೆಲಸಕ್ಕೆ, ಮಿ|| ಕೆ. ಚಾಂಡಿಯವರು ಎಕ್ಸೈಜ್ ಕಮಿಷನರ ಸ್ಥಾನಕ್ಕೆ, ಮ|| ಎಂ. ಎ. ನಾರಾಯಣಯ್ಯಂಗಾರರು ಬೆಂಗಳೂರು ಡಿ|| ಡೆ|| ಕಮಿಷನರ ಸ್ಥಾನಕ್ಕೆ. ಅಲ್ಲಿ ಈಗಿರುವ ಮ|| ಆರಾವಮುದಯ್ಯಂಗಾರರು ಮೂರು ತಿಂಗಳ ವಿಶ್ರಾಂತಿಗೆ.

ಮೈಸೂರು ಸಂತೆಪೇಟೆ ದಳ್ಳಾಳಿ ಬಸಪ್ಪನವರ ಮ|| ನಾಗಪ್ಪನವರು ತಮ್ಮ ಕುಮಾರಿ ಸೌ|| ತಿಪ್ಪಮ್ಮನನ್ನು ಕೊಡ್ಲಿಪೇಟೆ ಮ|| ವಿರೂಪಾಕ್ಷಪ್ಪಶೆಟ್ಟರ ಕುಮಾರ ಚಿ|| ಶಿವಲಿಂಗಶೆಟ್ಟಿಯೆಂಬ ವರನಿಗೆ ಕೊಟ್ಟು ಸ್ವಗೃಹದಲ್ಲಿ ನಡೆಯಿಸಿದ ವಿವಾಹಲಗ್ನ ಕಾಲದಲ್ಲಿ ಮೈಸೂರು ವಿದ್ಯಾಭಿವೃದ್ಧಿ ಫಂಡಿಗಾಗಿ ವಧುವಿನ ಕಡೆಯಿಂದ ೧ ರೂ. ವರನ ಕಡೆಯಿಂದ ತೆಗೆದ ೨ ರೂ. ಒಟ್ಟು ೩ ರೂ. ಗಳನ್ನು ಫಂಡು ಸೆಕ್ರಿಟರಿಯವರಲ್ಲಿಗೆ ಕಳುಹಿಸಿಕೊಟ್ಟು ಕ್ಕೈ|| ವೀರಸಂಗಪ್ಪನವರ ಅಗ್ರ ತಾಂಬೂಲಕ್ಕಾಗಿ ತೆಗೆದ ೧ ರೂ. ನ್ನು ನಾವು ಸ್ವೀಕರಿಸಿರುತ್ತೇವೆ

ಕನ್ನಂಬಾಡಿ ಕಟ್ಟೆಯನ್ನು ೧೩೦ ಅಡಿ ಕಟ್ಟುವ ವಿಷಯದಲ್ಲಿ ಮತ್ತೊಂದು ಪಂಚಾಯಿತಿಗೆಯು ನಡೆಯಬೇಕೆಂದು ಇಂಡ್ಯಾ ಕೌನ್ಸಿಲಿನವರು ಅಭಿಪ್ರಾಯ ಪಟ್ಟಕಾರಣ ಅದರ ಪ್ರಕಾರ, ಮದ್ರಾಸು ಸರ್ಕಾರ ಪಕ್ಷದ ಮತ್ತು ಮೈಸೂರು ಸರ್ಕಾರ ಪಕ್ಷದ ಅಧಿಕಾರಿಗಳೂ ಇಂಜನಿಯರೂ ಈಗ ನೀಲಗಿರಿಯಲ್ಲಿ ಕೂಡಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಸರ್ಕಾರದವರು ರಾಜ ಸಭಾಭೂಷಣ ಮ|| ಕರ್ಪೂರ ಶ್ರೀನಿವಾಸರಾಯರನ್ನು ತಿಂಗಳಿಗೆ ೩ ಸಾವಿರ ರೂ. ಸಂಬಳದ ಮೇಲೆ ೬ ತಿಂಗಳವರೆಗೆ ಈ ಕೆಲಸಕ್ಕಾಗಿ ನಿಯಮಿಸಿಕೊಂಡಿರುವುದಲ್ಲದೆ ಸಹಾಯಕ್ಕೆ ಚೀಫ್ ಇಂಜನಿಯರನ್ನೂ ಕಳುಹಿಸಿರುತ್ತಾರೆ. ೧ ನೆ ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರೂ ನಿಯುಕ್ತರಾಗಿದ್ದಾರೆ.

ರಾಜಧಾನಿಯಲ್ಲಿ ಕೈಗಾರಿಕೆ ಎಂಬ ಹೆಸರಿನ ಒಂದು ಮಾಸ ಪತ್ರವು ಉದಯಗೊಂಡು ಅದರ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಸಣ್ಣಸಣ್ಣ ಕೈಗಾರಿಕೆಗಳನ್ನು ತಿಳಿದುಕೊಂಡು ಅದರ ಅವಲಂಬನದಿಂದ ಸಂಪಾದನೆ ಮಾಡಿಕೊಂಡು ಬದುಕಬೇಕೆನ್ನುವವರಿಗೂ ಮನೆಯ ಉಪಯೋಗಕ್ಕಾಗಿ ಅಲ್ಪಸ್ವಲ್ಪವಾಗಿ ಶಿಲ್ಪಜ್ಞಾನವನ್ನು ಪಡೆದುಕೊಂಡಿರಬೇಕೆಂಬ ಗೃಹಸ್ಥರಿಗೂ ಉಪಯೋಗಕರಗಳಾದ ವಿಷಯಗಳು ಈ ಸಂಚಿಕೆಯಲ್ಲಿರುತ್ತವೆ. ಈಗ ಕೃಷಿ ವಿಷಯಕ್ಕೆ ಸಂಬಂಧಪಟ್ಟ ಲೇಖನಗಳೂ ಪುಸ್ತಕಗಳೂ ಮಾಸಪತ್ರಗಳೂ ಕೆಲವು ಪ್ರಕಟವಾಗಿಯೂ ಆಗುತ್ತಲೂ ಇವೆ. ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಸುಲಭವಾಗಿ ತಿಳಿಯಪಡಿಸುವ ವೃತ್ತಮಾಸಪತ್ರಿಕೆಗಳು ಮಾತ್ರ ಇರಲೇ ಇಲ್ಲ. ಆ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ಈ ನೂತನ ಪತ್ರವು ನಿವಾರಣೆ ಮಾಡೀತೆಂದು ನಿರೀಕ್ಷಿಸುತ್ತೇವೆ.

ಗೌ|| ಚೀಫ್ ಸೆಕ್ರಿಟರಿ ಮ|| ಬಾಲಸುಂದರಂ ಅಯ್ಯರವರ ದ್ವಿತೀಯ ಕುಮಾರರ ಶೋಚನೀಯ ಮೃತ್ಯುವಿಗೆ ಸಂಬಂಧಪಟ್ಟ ಕಾರಣವು ಈಚೆಗೆ ಪ್ರಕಟವಾಗಿದೆ. ಮೃತನಿಗೆ ಲಾಂಗಿವಿಯಿದ್ದುದರಿಂದ, ಪತ್ನಿಯೂ ಮಗನೂ ಅನುಮತಿ ಕೊಡದಿದ್ದರೂ ವೈದ್ಯರ ಅಭಿಪ್ರಾಯದ ಬರವಸೆಯ ಮೇಲೆ ತಂದೆಯವರು ಆಪರೇಷನ್ನಿಗೆ ಮಗನನ್ನು ಒಳಪಡಿಸಿದರೆಂತಲೂ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಆಪರೇಷನ್ ನಡೆಯಿಸುವಾಗ್ಗೆ ಅಲ್ಲೇ ಅತನು ಗತಾಸುವಾದನೆಂತಲೂ ಗೊತ್ತಾಗಿ ಎಲ್ಲರಿಗೂ ಮತ್ತಷ್ಟು ವ್ಯಸನಕರವಾಗಿರುತ್ತದೆ. ಶಸ್ತ್ರಚಿಕಿತ್ಸೆಯೆಂದರೆ ಜನರು ಭಯಪಡುತ್ತಿರುವ ಕಾಲದಲ್ಲಿ ದೊಡ್ಡ ಅಧಿಕಾರಿಗಳ ಮಗನ ಪಾಡೇ ಹಾಗೆ ಆಗಿರುವಾಗ ಉಳಿದವರ ಗತಿಯೇನೆಂದು ಜನರು ನಾನಾವಿಧವಾಗಿ ಭಯಪಡುವುದರಲ್ಲಿ ಆಶ್ಚರ್ಯವಿಲ್ಲ. ಮೃತನಿಗೆ ಕ್ಲೋರೋಫಾರಂ ಕೊಟ್ಟು ಶಸ್ತ್ರಚಿಕಿತ್ಸೆ ನಡೆಯಿಸಿದುದರಲ್ಲಿ ಯಾವ ಲೋಪವೂ ವೈದ್ಯರಿಂದ ನಡೆದಿಲ್ಲವೆಂದು ಸೀನಿಯರ್ ಸರ್ಜನರು ಪ್ರಕಟಿಸಿರುವರು.

ಚಿತ್ರದುರ್ಗದ ತಾ|| ದೊಡ್ಡಸಿದ್ದವ್ವನಹಳ್ಳಿಯ ಮ|| ತಿಪ್ಪೆರುದ್ರಪ್ಪ ಸಂಗಪ್ಪನವರು ತಮ್ಮ ಇಬ್ಬರು ಹೆಣ್ಣು ಮಕ್ಕಳ ಲಗ್ನದ ಜತೆಗೆ ಮತ್ತೆ ೪ ಧರ್ಮಾರ್ಥ ವಿವಾಹಗಳನ್ನು ಅತಿ ವಿಜೃಂಭಣೆಯಿಂದ ನಡೆಯಿಸಿ, ಅನ್ನದಾನಕ್ಕೇ ಸಾವಿರಾರು ರೂ. ಗಳನ್ನು ವೆಚ್ಚಮಾಡಿ, ಇತರ ವಿಧವಾದ ದುಂದು ವೆಚ್ಚಗಳನ್ನು ದೂರೀಕರಿಸಿ, ಚಿತ್ರದುರ್ಗದ ಮ|| ಭೀಮರಾಜುಯವರಿಂದ ೨ ದಿನ ಶಿವಕಥೆಗಳನ್ನು ಮಾಡಿಸಿ, ಅವರಿಗೆ ಸುವರ್ಣಕಂಕಣ ಪದಕಗಳನ್ನು ಬಹುಮಾನಿಸಿ, ವೀರಶೈವ ವಿದ್ಯಾವೃದ್ಧಿ ಫಂಡಿಗೆ ೫ ರೂ. ಗಳನ್ನು ಅರ್ಪಿಸಿದರೆಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ. ಇವರ ಧರ್ಮಬುದ್ಧಿಯನ್ನೂ ಸದಸದ್ವಿವೇಕವನ್ನೂ ಔದಾರ್ಯವನ್ನೂ ಕೊಂಡಾಡುತ್ತೇವೆ. ೩-೪ ಸಹಸ್ರ ರೂ. ಗಳ ವೆಚ್ಚದಿಂದ ಲಗ್ನವನ್ನು ನಡೆಯಿಸುವವರು ಶಾಶ್ವತವಾಗಿರುವ ವಿದ್ಯಾಭಿವೃದ್ಧಿ ಫಂಡಿಗೆ ಇನ್ನಷ್ಟು ಉಚಿತವಾದ ಔದಾರ್ಯವನ್ನು ತೋರಿಸಬೇಕಾದುದು ಅವಶ್ಯಕವಾಗಿತ್ತೆಂದು ಸೂಚಿಸುತ್ತೇವೆ.

೧೯೨೦-೨೧ ನೆ ವರ್ಷದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಗಳನ್ನು ಕೊಡಲು ಆಯಾ ಸ್ಥಳಗಳ ಕಮಿಟಿಗಳು ಏರ್ಪಡಿಸಲ್ಪಟ್ಟು, ಅವುಗಳ ಚೇರ್ಮನ್ನರಿಗೆ ವಿದ್ಯಾರ್ಥಿಗಳು ಅಪ್ಲಿಕೇಷನ್ನುಗಳನ್ನು ಕೊಟ್ಟುಕೊಳ್ಳಬಹುದೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದೆ. ಪ್ರತಿ ವರ್ಗದವರಿಗೂ ಆಯಾ ಗ್ರೇಡಿನಲ್ಲಿ ಎಷ್ಟೆಷ್ಟು ಜನಕ್ಕೆ ವೇತನಗಳು ಕೊಡಲ್ಪಡುವುವೆಂಬುದೂ ಕಾಣಿಸಲ್ಪಟ್ಟಿದೆ. ಅದರ ಪ್ರಕಾರ ಲಿಂಗಾಯತ ವಿದ್ಯಾರ್ಥಿಗಳಿಗೆ ೨ ನೆ ಗ್ರೇಡಿನಲ್ಲಿ ೧೦, ೩ ನೆ ಗ್ರೇಡಿನಲ್ಲಿ ೩೧, ೪ ನೆ ಗ್ರೇಡಿನಲ್ಲಿ ೭೩, ೫ ನೆ ಗ್ರೇಡಿನಲ್ಲಿ ೮೦ ವೇತನಗಳು ದೊರೆಯುವುವು. ಒಟ್ಟು ಹಿಂದುಳಿದ ವರ್ಗಗಳಿಗೆಲ್ಲಾ ೧ ಲಕ್ಷ ರೂ. ಗಳು ವೇತನಕ್ಕಾಗಿ ಕೊಡಲ್ಪಡುವುವು. ಆಯಾ ವರ್ಗಗಳ ಜನಸಂಖ್ಯೆಯ ಪ್ರಮಾಣಕ್ಕನುಸರಿಸಿ ವೇತನಗಳು ಹಂಚಿಹಾಕಲ್ಪಟ್ಟಿರುವುವು. ಸಂಸ್ಥಾನದ ಹಿಂದುಳಿದ ವರ್ಗಗಳೊಳಗೆ ಜನಸಂಖ್ಯೆಯಲ್ಲಿ ೧ ನೆಯವರು ಒಕ್ಕಲಿಗರೂ, ೨ ನೆಯವರು ಲಿಂಗಾಯತರೂ, ೩ ನೆಯವರು ಹೊಲೆಯರೂ, ೪ ನೆಯವರು ಕುರುಬರೂ, ೫ ನೆಯವರು ಮಾದಿಗರೂ, ೬ ನೆಯವರು ಮುಸಲ್ಮಾನರೂ, ೭ ನೆಯವರು ಬೇಡರೂ ಆಗಿದ್ದಾರೆ.

ವರ್ತಮಾನಸಂಗ್ರಹ.

ಆಂಗ್ಲ ಮುಖ್ಯಮಂತ್ರಿಯವರು ಕ್ಷಯರೋಗಚಿಹ್ನೆಯಿಂದ ಮಂಚ ಹಿಡಿದು ಮಲಗಿದ್ದಾರೆ.

ಅಲಿಘರ್ ವಿಶ್ವವಿದ್ಯಾಲಯವು ಕಾಶೀ ಹಿಂದೂ ವಿಶ್ವವಿದ್ಯಾಲಯ ಪದ್ಧತಿಯ ಪ್ರಕಾರ ಸ್ಥಾಪಿಸಲ್ಪಡುವುದು.

ಪೋಲರು ಬೊಲ್ಶೆವಿಕ್ಕರನ್ನು ಸೋಲಿಸಿ ಕೀವ್ ಪಟ್ಟಣ ಮೊದಲಾದುವುಗಳನ್ನು ಆಕ್ರಮಿಸಿದ್ದಾರೆ. ಬಹುಮಂದಿ ಸೈನಿಕರನ್ನೂ ವಿಶೇಷ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡಿದ್ದಾರೆ. ಸೋವಿಯಟ್ ಪ್ರಭುತ್ವದವರು ಸಂಧಿಗೆ ಪ್ರಯತ್ನಪಟ್ಟಿದ್ದಾರೆ.

ಸೀಮೆಗೆ ಹೋಗಿರುವ ಕಾಲಿಫೇಟ್ ಪ್ರತಿನಿಧಿಗಳು ಮಿ|| ಮಾಂಟೊಗ್ಯೂರವರೊಡನೆ ೧|| ಗಂಟೆ ಹೊತ್ತು ಮಾತನಾಡಿದರಂತೆ. ಅದರಿಂದ ಮಹಮ್ಮದೀಯ ಮತಧರ್ಮವು ಗೌರವಿಸಲ್ಪಡುವುವೆಂಬ ಆಸೆಯು ಪ್ರತಿನಿಧಿಗಳಿಗೆ ಇನ್ನೂ ತೊಲಗಲಿಲ್ಲವಂತೆ. ಸಂತೋಷವೇ ಸರಿ.

ಸೀಮೆಯಲ್ಲಿ ಸರ್ ಜಗದೀಶಚಂದ್ರ ಭೋಸ್‌ರವರು ತಾವು ವೃಕ್ಷಜಾತಿ ಸಂಬಂಧವಾಗಿ ಕಂಡುಹಿಡಿದಿರುವ ವಿಷಯಗಳನ್ನು ಯಂತ್ರಸಾಧನಗಳ ಮೂಲಕ ತೋರ್ಪಡಿಸಲು, ಅದೆಲ್ಲಾ ಸತ್ಯವಾದುದೆಂದು ಅಲ್ಲಿಯ ೮ ಮಂದಿ ಸುಪ್ರಸಿದ್ಧ ಶಾಸ್ತ್ರಜ್ಞರು ಒಪ್ಪಿಕೊಂಡಿರುತ್ತಾರೆ.

ಪಂಜಾಬಿನ ವಧೆಯಲ್ಲಿ ಪ್ರಸಿದ್ಧಿ ಪಡೆದ ಜನರಲ್ ಡಯರ್‌ರವರು ಕಳೆದ ತಿಂಗಳು ೬ ರಲ್ಲಿ ಸೀಮೆಗೆ ಪ್ರಯಾಣಮಾಡಿ ಲಂಡನ್ನಿಗೆ ಸೇರಿದ್ದಾರೆ. ಜಲಂಧರ್ ಸ್ಟೇಷನ್ನಿನಲ್ಲಿರುವ ಆಂಗ್ಲೋ ಇಂಡಿಯನ್ ಉದ್ಯೋಗಿಗಳೂ ಆಂಗ್ಲಸ್ತ್ರೀಯರೂ ಅವರನ್ನು ಮನ್ನಿಸಿ ಬೀಳ್ಕೊಟ್ಟರು.

ಈ ತಿಂಗಳು ತಾ|| ೨೫ ರಲ್ಲಿ ಸ್ಪಾ ಪಟ್ಟಣದಲ್ಲಿ ಮಿತ್ರಮಂಡಲೀ ರಾಜ್ಯಗಳವರ ಮುಖ್ಯಸಭೆಯು ಕೂಡುವುದು. ಅದಕ್ಕೆ ಜರ್ಮನ ಪ್ರಭುತ್ವ ಪ್ರತಿನಿಧಿಯೂ ಬರುವರು. ಸಂಧಿನಿಬಂಧನೆಯಂತೆ ಜರ್ಮನರು ನಡೆಸುಕೊಳ್ಳಬೇಕಾಗಿರುವ ಆರ್ಥಿಕಸಮಸ್ಯೆ ಮೊದಲಾದ ವಿಷಯಗಳೆಲ್ಲಾ ಖಂಡಿತವಾಗಿ ಪರಿಷ್ಕರಿಸಲ್ಪಡುವುವಾಗಿವೆ.

ಖಿಲಾಫತ್ ಸಭೆಗಳಲ್ಲಿ ಕ್ರೋಧವನ್ನೂ ದೂಷಣವನ್ನೂ ಪ್ರದರ್ಶಿಸುವುದು ಸರಿಯಲ್ಲ. ಆಂಗ್ಲಪ್ರಭುತ್ವದವರು ತುರ್ಕಿ ಸುಲ್ತಾನನಿಗೆ ಸಹಾಯಮಾಡಿದರೆ ಹಿಂದೂ ಮಹಮ್ಮದೀಯರ ಕೃತಜ್ಞತೆಗೆ ಪಾತ್ರರಾಗುತ್ತಾರೆ. ನಾವು ಕ್ರೋಧ ದೂಷಣೆಗಳನ್ನು ಮಾಡುವುದು ಸರಿಯಲ್ಲ. ಅದುದರಿಂದ ಇನ್ನು ಮುಂದೆ ನಾನು ಇಂಥ ಆಂದೋಳನಗಳಿಗೆ ಸೇರುವುದಿಲ್ಲ ಎಂಬದಾಗಿ ಢಕ್ಕಾ ನವಾಬರು ಪ್ರಕಟಿಸಿದ್ದಾರೆ.

ಮಿ|| ಜಾರ್ಜ್ ಆರುಂಡೇಲ್ ಎಂಬ ಯೂರೋಪ್ಯರು ಮದ್ರಾಸಿನ ನೀಲಕಂಠಶಾಸ್ತ್ರಿಯೆಂಬ ಸ್ಮಾರ್ತಬ್ರಾಹ್ಮಣರ ಕುಮಾರಿ ರುಕ್ಮಿಣಮ್ಮ ಎಂಬಾಕೆಯನ್ನು ಬೊಂಬಾಯಿಯಲ್ಲಿ ಕಳೆದ ತಿಂಗಳು ತಾ|| ೨೭ ರಲ್ಲಿ ಸಿವಿಲ್ ಮ್ಯಾರಿಯೇಜ್ ಆಕ್ಟಿನ ಪ್ರಕಾರ ಮದುವೆಯಾಗಿ ದಂಪತಿಗಳು ಮದ್ರಾಸಿಗೆ ಬಂದರು. ಅವರ ಮಿತ್ರರು ನಿಲ್ದಾಣದಲ್ಲಿ ಸ್ವಾಗತಮಾಡಿದರು. ಅಡ್ಯಾರಿನಲ್ಲಿ ದಿವ್ಯಜ್ಞಾನಸಭೆಯವರು ಔತಣದ ಮರ್ಯಾದೆಗಳನ್ನು ನಡೆಯಿಸಿದರು. ಈ ಸಂಬಂಧವನ್ನು ತಪ್ಪಿಸಲಿಕ್ಕೆ ಬ್ರಾಹ್ಮಣಪತ್ರಿಕೆಗಳು ಮಾಡಿದ ಕೋಲಾಹಲವೆಲ್ಲಾ ವ್ಯರ್ಥವಾದುವು.

ಅಫ್ಘಾನಿಸ್ಥಾನ ಅಮೀರರು ಮೊನ್ನೆ ತಾನೇ ತಮ್ಮ ತಂದೆಯವರ ಅಬ್ದಿಕವನ್ನು ನಡೆಯಿಸುವಾಗ್ಗೆ ಸಭೆಯಲ್ಲಿ ಒಂದು ಉಪನ್ಯಾಸವನ್ನು ಮಾಡಿ ಕಾಲೀಫತ್ತಿನ ವಿಷಯದಲ್ಲೂ ಕೆಲವು ಮಾತುಗಳನ್ನಾಡಿದರು. ಅದರಲ್ಲಿ ಭರತಖಂಡದ ಮಹಮ್ಮದೀಯರ ಕೋರಿಕೆಯಂತೆ ತುರ್ಕಿರಾಜ್ಯದ ಪರಿಷ್ಕಾರವಾಗದಿದ್ದರೆ ಮಹಮ್ಮದೀಯರೆಲ್ಲಾ ಧರ್ಮಯುದ್ಧವನ್ನು ಪ್ರಕಟಿಸುವರೆಂದೂ, ಅಥವಾ ಭರತಖಂಡವನ್ನೇ ಪರಿತ್ಯಾಗಮಾಡುವರೆಂದೂ, ಅವರಿಗೆ ಹಿಂದೂಗಳೂ ಸಹಾಯಕರಾಗುವರೆಂದೂ, ದೇಶತ್ಯಾಗಮಾಡಿ ಬರತಕ್ಕವರಿಗೆ ಅಫ್ಘಾನಿಸ್ಥಾನವು ಆಶ್ರಯಕೊಡಲು ಸಿದ್ಧವಾಗಿರುವುದೆಂದೂ ಅಡಿಕೋರಿಸಿರುವರು

ಲಗ್ನದ ಫಂಡು.

೧. ರಂಗಸಮುದ್ರದ ಮ|| ರಾ|| ಗ. ಮಲ್ಲಪ್ಪನವರ ಮನೆ ಲಗ್ನದಲ್ಲಿ ಮ|| ರಾ|| ಎಂ. ಚಿಕ್ಕಪ್ಪಯ್ಯನವರು ವಧೂವರರಿಂದ ತೆಗೆದುಕಳುಹಿಸಿದ್ದು ರೂ. ೩-೦-೦ ಮ|| ರಾ|| ಎಚ್. ಕೆ. ಮಲ್ಲಪ್ಪನವರ ಮೂಲಕ.

೨. ಮ|| ರಾ|| ದೋಣೆಹಳದ ವೀರಣ್ಣಗೌಡರ ಮಗನಿಗೆ ಮ|| ರಾ|| ಬಿ. ಸಿದ್ದಲಿಂಗಪ್ಪಶೆಟ್ಟರ ಮೊಮ್ಮಗಳನ್ನು ಕೊಟ್ಟು ನಡೆಸಿದ ವಿವಾಹದಲ್ಲಿ ಗಂಡಿನವರಿಂದ ರೂ. ೫, ಹೆಣ್ಣಿನವರಿಂದ ರೂ. ೫ ಅಂತು ರೂ. ೧೦, ಚಿಕ್ಕಮಗಳೂರು ಮ|| ಸಿ. ಬಿ. ಬಸವೇಗೌಡರ ಮೂಲಕ.

೩ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ರಾ|| ದಿಬ್ಬೂರು ರುದ್ರಪ್ಪನವರ ಮಕ್ಕಳು ಚಿ|| ವೀರಪ್ಪನವರಿಗೆ ಕೋಲಾರದ ದೇಶದ ಯಜಮಾನ್ ಮ|| ರಾ|| ಭೋಗಪ್ಪನವರ ಮಗಳು ಚಿ|| ಸೌ|| ನಂಜಮ್ಮನವರನ್ನು ಕೊಟ್ಟು ನಡೆಸಿದ ವಿವಾಹದಲ್ಲಿ ರೂ ೫, ಮ|| ರಾ|| ದೇಶದ ಯಜಮಾನ್ ಬಸಪ್ಪನವರ ಮೂಲಕ.

೪. ತಿರುಚನಾಪಲ್ಲಿ ಡಿ|| ಮುಸಿರಿ ತಾ|| ಸೆವಂತಾವಿನಪಟ್ಟಿ ಗ್ರಾಮದ ಸ್ಕೂಲ್‌ಮಾಸ್ಟರ್ ಮ|| ರಾ|| ಕಂದಸ್ವಾಮಿ ಅಯ್ಯರ್ ಯವರ ಮಗುವಿನ ಲಿಂಗಧಾರಣ ಮಹೋತ್ಸವ ಕಾಲದಲ್ಲಿ ತೆಗೆದದ್ದು ರೂ. ೧, ಮ|| ರಾ|| ಶಿವಪ್ರಕಾಶಂ ಅಯ್ಯರ್ ಯವರ ಮೂಲಕ.

೫. ಚಿಂತಾಮಣಿಯಲ್ಲಿರುವ ಉಪ್ಪಿನ ಅಂಗಡಿ ಮ|| ರಾ|| ಆರ್. ಬಸಪ್ಪಾರಾಧ್ಯರವರಿಂದ ಅವರ ದ್ವಿತೀಯ ಪುತ್ರ ಚಿ|| ಲಿಂಗಾರಾಧ್ಯರವರ ಲಗ್ನದಲ್ಲಿ ತೆಗೆದದ್ದು ರೂ. ೨.

ಮೇಲ್ಕಂಡ ಮೊಬಲಗು ರೂ. ೨೧ ಯನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ,
ತಾ|| 4-5-1920.

ಅಡ್ವೊಕೇಟ್ ಜಿ. ಪರಮಶಿವಯ್ಯ,
ಬಿ. ಎ., ಎಲ್. ಎಲ್. ಬಿ.,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡು ಸಂಘದ ಸೆಕ್ರೆಟರಿ.

ಪತ್ರವ್ಯವಹಾರ.

ವೀರಶೈವತರುಣರ ಸಮ್ಮೇಲನವು.

ವೀರಶೈವತರುಣರ ಸಮ್ಮೇಲನದ ಅಧಿವೇಶನದ ವಿಷಯಕ್ಕೆ ಭಿನ್ನಾಭಿಪ್ರಾಯವಿದ್ದು ಅದನ್ನು ಜನರಲ್ ಕಮಿಟಿಯ ಮೂಲಕ ನಿಷ್ಕರ್ಷಿಸಲು ಸಾಧ್ಯವಾಗಲಿಲ್ಲವಾದ್ದರಿಂದ ಈ ಸಾರೆಯ ಸಮ್ಮೇಲನವನ್ನು "ಸ್ಪೆಷಲ್ ಕಾನ್ಫರೆನ್ಸ್" ಎಂಬದಾಗಿ ನೆರವೇರಿಸಲು ಹಾವೇರಿಯ ತರುಣಮಂಡಳಿಯವರು ಒಪ್ಪಿಕೊಂಡಿದ್ದಾರೆಂದು ತಿಳುಹಿಸಲು ಸಂತೋಷವಾಗುತ್ತದೆ. ಸದರಿ ಸಮ್ಮೇಲನವು ಇದೇ ಮೇ ತಿಂಗಳ ೩೦-೩೧ ನೆಯ ತಾರೀಖುಗಳಲ್ಲಿ ಕೂಡುವುದು ನಿಶ್ಚಯವಾಗಿದೆ. ವಿಷಯ, ಅಧ್ಯಕ್ಷರು, ಮುಂತಾದ ಹೆಚ್ಚಿನ ಮಾಹಿತಿಯು ಹಿಂದಿನಿಂದ ಪ್ರಸಿದ್ಧಿಸಲಾಗುವುದು.

ಎಸ್. ಬಿ ಹಿರೇಮಠ,
ಆ. ಜನರಲ್ ಸೆಕ್ರೆಟರಿ, ವೀ. ತ. ಸಂಘ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಹುಬ್ಬಳ್ಳಿಯಲ್ಲಿರತಕ್ಕ ಮಿ|| ಸಿದ್ರಾಮಪ್ಪಾ ದುಂಡಪ್ಪಾ ಪಾವಟೆ ಇವರು ನವಲಗುಂದದ ಸಭೆಯಲ್ಲಿ ಮಧ್ಯಸ್ಥರನ್ನು ನಿಯಮಿಸಿ ವಾದಮಾಡಲಿಕ್ಕೆ ಬರುವೆವೆಂತಲೂ ಸಭೆಯಲ್ಲಿ ಆಸ್ಪದ ಕೊಡದಿದ್ದರೆ ಲೇಖಗಳ ಮೂಲಕವಾಗಿ ಉತ್ತರವನ್ನು ಕೊಡುವೆವೆಂತಲೂ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧಮಾಡಿದ್ದಾರೆ. ಇದು ಬಹಳ ಉತ್ತಮವೇ. ಆದರೆ ಈ ಸಭೆಯು ವಾದಾತ್ಮಕವಾದುದಲ್ಲ. ಅದಕಾರಣ ೨೬-೨೭ ನೆಯ ತಾರೀಖುಗಳಲ್ಲಿ ಪ್ರವೇಶವು ದೊರೆಯಲಾರದು. ೨೮ ನೆ ತಾರೀಖಿನ ದಿವಸದಲ್ಲಿ ವಾದಸಭೆಯು ನೆರವೇರಿಸಲ್ಪಡುವುದು. ಅಲ್ಲಿಗೆ ಮಧ್ಯಸ್ಥರನ್ನು ಕರಕೊಂಡು ಬರಬಹುದು. ಆಸ್ತಿಕಶಿರೋಮಣಿಗಳೂ ಯಥಾರ್ಥ ತತ್ವಜ್ಞರೂ ಸನಾತನ ಧರ್ಮಿಗಳೂ ಆದ ಮಹೋಪಾಧ್ಯಾಯರನ್ನು ಕಾಶಿ ಕಲಕತ್ತಾ ಪಟ್ಟಣಗಳಿಂದ ಕರೆಯಿಸಿ ಅವರನ್ನು ಮಧ್ಯಸ್ಥರನ್ನಾಗಿ ಮಾಡುವುದು ಅತ್ಯಂತ ಯೋಗ್ಯವಾದದ್ದಿರುತ್ತದೆ. ಶಾಸ್ತ್ರಾರ್ಥವು ಸಂಸ್ಕೃತದಲ್ಲಿ ಜರಗಬೇಕು. ಇಷ್ಟು ಧೈರ್ಯವು ಪಾವಟೆಯವರಿಗೆ ಇರದಿದ್ದರೆ ಲೇಖಗಳ ಮೂಲಕವಾಗಿಯಾದರೂ ಅವಶ್ಯವಾಗಿ ನಡೆಯಿಸತಕ್ಕದ್ದು.

ಸೆಕ್ರೆಟರಿ.
F.A. Hallad, 2nd Pattacharadhikaris Conference,
ನವಲಗುಂದ.

ಚಳ್ಳಕೆರೆ ತಾಲ್ಲೂಕು ಹಿರೇಹಳ್ಳಿ ಸ್ಕೂಲು.

ಈ ಗ್ರಾಮದಲ್ಲಿರುವ ವಿ. ಇ. ಬಾಯ್ಸ್‌ಸ್ಕೂಲನ್ನು ಪಕ್ಕಾ ಎ. ವಿ. ಸ್ಕೂಲನ್ನಾಗಿ ಪರಿವರ್ತನೆ ಮಾಡಬೇಕೆಂದು ಏರ್ಪಾಟು ಮಾಡಿರುವುದು ಸರಿಯಷ್ಟೆ. ಸದರಿ ಏರ್ಪಾಟಿನಂತೆ ಗ್ರಾಮದ ವಿದ್ಯಾಭಿಮಾನಿಗಳು ಕೋ.ಆ. ಸೊಸೈಟಿಯಲ್ಲಿಟ್ಟಿದ್ದ ೨,೫೦೦ ರೂಪಾಯಿಗಳನ್ನು ತಾಲ್ಲೂಕು ಟ್ರೆಜರಿಗೆ ಜಮಾಮಾಡಿಸಿ ರಸೀದಿ ಕಳುಹಿಸಿದಲ್ಲಿ ಕೂಡಲೇ ಆಸ್ಕೂಲ್ ಏರ್ಪಾಟು ಮಾಡಲಾಗುತ್ತೆಂದು ಕೊಡಲ್ಪಟ್ಟ ವಿದ್ಯಾಭ್ಯಾಸದ ಇಲಾಖಾ ಮೇಲ್ಪಟ್ಟ ಆಫೀಸರವರ ಹುಕುಂ ಪ್ರಕಾರ ಮೆಂಬರ್ ವಗೈರೆ ಗ್ರಾಮದ ವಿದ್ಯಾಭಿಮಾನಿಗಳು ಕಂಟ್ರಿಬ್ಯೂಷನ್ ಹಣವನ್ನು ತಾ|| ಟ್ರೆಜರಿಗೆ ಜಮಾಮಾಡಿಸಿ, ಇಲಾಖೆ ಆಫೀಸರವರಿಗೆ ರಸೀದಿ ಕಳುಹಿಸಿ, ನಮ್ಮ ರಾಜ್ಯದ ಪ್ರಜೆಗಳಿಗೆ ಸಕಲ ವಿಧದಿಂದಲೂ ವಿದ್ಯಾಭಿವೃದ್ಧಿಯನ್ನುಂಟುಮಾಡುತ್ತಾ, ದೇಶೋನ್ನತಿಯ ಕಾರ್ಯದಲ್ಲಿ ನಿರತರಾದವರ ಮಂಜೂರ್ ಹುಕುಂ ನಿರೀಕ್ಷಣೆಯಲ್ಲಿರುತ್ತಾರೆ. ಮತ್ತು ಈ ಚಳ್ಳಕೆರೆ ರೇಂಜಿಗೆ ದಯಮಾಡಿಸಿರುವ ಹ|| ಅ|| ಇನ್|| ಸಾ|| ರವರು ರೇಂಜಿನಲ್ಲೆಲ್ಲಾ ಸರ್ಕೀಟು ಮಾಡಿ ಪ್ರಜೆಗಳಿಗೆ ಹಿತೋಪದೇಶವನ್ನು ಮಾಡುತ್ತಾ, ವಿದ್ಯಾಭಿವೃದ್ಧಿಯನ್ನುಂಟುಮಾಡುತ್ತಾ, ಈ ಗ್ರಾಮಕ್ಕೂ ದಯಮಾಡಿಸಿ ಮೇಲ್ಕಂಡ ಕಾರ್ಯಕ್ಕೆ ತುಂಬಾ ಸಹಾಯ ಮಾಡಿರುವುದರಿಂದ ಈ ಗ್ರಾಮದ ವಿದ್ಯಾಭಿಮಾನಿಗಳು ಸದರಿ ಹ|| ಅ|| ಇನ್|| ಸಾ|| ರವರಿಗೂ, ಇವರ ಆಜ್ಞಾಧಾರಕರಾಗಿ ಗ್ರಾಮದಲ್ಲಿ ತುಂಬಾ ಮುತುವರ್ಜಿ ವಹಿಸಿ ಶ್ರದ್ಧೆಯಿಂದ ಕೆಲಸಮಾಡುತ್ತಿರುವ ಸ್ಕೂಲ್ ಹೆಡ್ಮಾಸ್ಟರು ಎಚ್. ಎಸ್. ತಿಪ್ಪಯ್ಯನವರಿಗೂ ತುಂಬಾ ಕೃತಜ್ಞತೆಯುಳ್ಳವರಾಗಿರುತ್ತಾರೆ.

ಓರ್ವ ವಿದ್ಯಾಭಿಮಾನಿ.

ಹಿರೇಕೆರೂರು.

ದಾವಣಗೆರೆ ವಿರಕ್ತಮಠದ ಪ್ರಣವಸ್ವರೂಪ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರು ಭಕ್ತರ ಉದ್ಧಾರದ ದೆಸೆಯಿಂದ ಹಿರೇಕೆರೂರು ತಾಲ್ಲೂಕಿನಲ್ಲಿ ಸಂಚಾರ ಮಾಡುತ್ತಿದ್ದಾರೆ. ಈ ತಾಲ್ಲೂಕಿನ ಹಳ್ಳಿಗಳನ್ನು ಹನ್ನೊಂದು ಗ್ರೂಪ್ ಮಾಡಿರುತ್ತದೆ. ಈಗ ಸ್ವಾಮಿಗಳು ಮಾಸೂರ ಗ್ರೂಪದಲ್ಲಿ ಇರುವರು. ಹಿರೇಕೆರೂರಲ್ಲಿ ಸ್ಥಾಪಿಸಿರುವ "ಶ್ರೀ ಲಿಂಗರಾಜ" ಎ. ವಿ. ಸ್ಕೂಲಿನ ದೆಸೆಯಿಂದ ಹಣದ ವಸೂಲಿಯು ನಡೆದಿರುತ್ತದೆ. ವೀರಶೈವ ಸಮಾಜದ ಉನ್ನತಿ ಆಗಬೇಕಾದರೆ ವಿದ್ಯಾಭ್ಯಾಸವು ಬೇಕೇಬೇಕು. ಆದರೆ ಈಗ ನಮ್ಮ ಸಮಾಜದಲ್ಲಿ ಅಜ್ಞಾನಮೂಲಕವಾಗಿ ಪಾರ್ಟಿಗಳೂ ಪಂಗಡಗಳೂ ಹುಟ್ಟಿ ಬಡಿದಾಟಗಳು ಅವ್ಯಾಹತವಾಗಿ ನಡೆದಿರುತ್ತವೆ. ಮಾಸೂರು ಗ್ರಾಮವು ಇದರಿಂದಲೇ ಹಾಳಾಗಿ ಹೋಗಿರುತ್ತದೆ. ಇದನ್ನು ನೋಡಿ ಸ್ವಾಮಿಗಳವರು ಕನಿಕರಪಟ್ಟು ಆ ಗ್ರಾಮದ ಮೂರು ಪಾರ್ಟಿಗಳನ್ನೂ ಏಕೀಕರಿಸಿದರು. ತಾರೀಖು ೨೬-೪-೨೦ ನೆ ಸೋಮವಾರ ದಿವಸ ಮಾಸೂರ ಗ್ರಾಮದ ವೀರಶೈವರೆಲ್ಲರೂ ಕೂಡಿ ಮಹಾಪರ್ವವನ್ನು ಮಾಡಿ ಶ್ರೀಗಳವರ ಪಲ್ಲಕ್ಕಿಯ ಉತ್ಸವವನ್ನು ಮಾಡಿದರು. ಪಂಚಕಲಶವನ್ನು ಏರಿಸಿದ ಪಲ್ಲಕ್ಕಿಯು ವಿರಕ್ತಮಠವನ್ನು ಬಿಟ್ಟ ಕೂಡಲೇ ಜನರ ಆನಂದವು ಮೇರೆತಪ್ಪಿ ಹೊರಚೆಲ್ಲಿತು. ಈ ಪ್ರಕಾರ ಅಲ್ಲಿಯ ವೀರಶೈವರೆಲ್ಲ ಒಂದಾಗಲು ಶ್ರೀ ಲಿಂಗರಾಜ ಸ್ಕೂಲಿಗೆ ಐದುನೂರು ರೂಪಾಯಿಗಳು ಕೂಡಲೇ ಎಣಿಸಲ್ಪಟ್ಟವು. ಮುಂದೆ ನಡೆದದ್ದನ್ನು ತಿಳಿಸುತ್ತ ಹೋಗುವೆವು.

ಪ್ರೇಕ್ಷಕ.

ಆಲದೂರು ಪ್ಲಾಂಟರ್ಸ್ ಅಸೋಸಿಯೇಷನ್.

ತಾ|| ೩೦-೪-೧೯೨೦ ನೆ ಶುಕ್ರವಾರ ೪ ಘಂಟೆಯಲ್ಲಿ ಇಲ್ಲಿಯ ಹಿಂದೂಸ್ಥಾನಿ ಸ್ಕೂಲಿನ ಮುಂಭಾಗದಲ್ಲಿ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ಈ ಸಂಘದ ಜನರಲ್ ಮೀಟಿಂಗು ನಡೆಯಿತು. ಪ್ರೆಸಿಡೆಂಟರಾದ ಮಿ|| ಸಿ. ಎಚ್. ಗಾಡ್ಫ್ರೀಯವರ ಗೈರ್ಹಾಜರಿಯಲ್ಲಿ ಹಾಸನ ಡಿಸ್ಟ್ರಿಕ್ಟಿನ ಪ್ರಸಿದ್ಧ ಕಾಫೀ ಪ್ಲಾಂಟರಾದ ಎ ಮಹಮದ್ ಹುಸೇನ್‌ರವರು ಅಧ್ಯಕ್ಷತೆಯನ್ನು ವಹಿಸಬೇಕೆಂದು ಸಭೆಯವರೆಲ್ಲರೂ ಕೇಳಿಕೊಂಡ ಮೇರೆ ಸದರಿಯವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಅನಂತರ ಸಂಘದ ಸೆಕ್ರೆಟರಿಯವರಿಂದ ಆದಾಯವೆಚ್ಚಗಳಿಂದ ಕೂಡಿದ ವರದಿಯು ಓದಲ್ಪಟ್ಟುದನ್ನು ಸಭೆಯವರೆಲ್ಲರೂ ಅನುಮೋದಿಸಿದರು. ಈ ಸಂಘಕ್ಕೆ ಚಂದಾ ಕೊಡಲೊಪ್ಪಿದವರೆಲ್ಲರಿಂದಲೂ ವಸೂಲಾಗಲ್ಪಟ್ಟ ಮೊಬಲಗು ೭೨೦-೦-೦ ರೂಪಾಯಿಗಳಾದುವು. ಮಿ|| ಎಚ್. ಗಾಡ್ಫ್ರೀಯವರು ಸೀಮೆಗೆ ಹೋದವರು ತಿರುಗಿ ಬರುವವರೆಗೆ ಆಲದೂರಿನ ಮುಖ್ಯ ಕಾಫಿಪ್ಲಾಂಟರು, ಮಿ|| ಕರೀಮೊಹ್ದೀನರವರು, ಪ್ರೆಸಿಡೆಂಟರಾಗಿರಬೇಕೆಂದು, ಸೆಕ್ರೆಟರಿಯವರು ಕೊಟ್ಟ ಅಭಿಪ್ರಾಯವು ಮಿ|| ಬಿ. ಪಿ. ಮಲ್ಲಪ್ಪನವರಿಂದಲೂ, ಮಿ|| ಆರೇಹಳ್ಳಿ ಲಾಲೂಸಾಹೇಬರಿಂದಲೂ, ಅನುಮೋದಿಸಲ್ಪಟ್ಟು ಸಂಘದಿಂದ ಖಾಯಂ ಮಾಡಲ್ಪಟ್ಟಿತಲ್ಲದೆ, ವೈಸ್ ಪ್ರೆಸಿಡೆಂಟರ ಸ್ಥಾನಕ್ಕೆ ಇಲ್ಲಿಯ ಹಿಂದೂ ಪ್ಲಾಂಟರುಗಳಲ್ಲಿ ಮುಖ್ಯರಾದ ಮಿ|| ಬಿ. ಪುಟ್ಟಣಶೆಟ್ಟರನ್ನು ನಿಯಮಿಸಬೇಕೆಂದು ಮಿ|| ಕಾ. ಷಾಪ್‌ಕೀಪರ್ ಇಸ್ಮಾಯಿಲ್ ಸಾಹೇಬರವರು ಅಭಿಪ್ರಾಯಕೊಟ್ಟದ್ದು, ಮಿ|| ನಜೀದ್ ಸಾಹೇಬರಿಂದ ಪುಷ್ಟೀಕರಿಸಿ ಹೇಳಲ್ಪಟ್ಟು ಸಂಘದಿಂದ ಖಾಯಂ ಮಾಡಲಾಯಿತು. ಅನಂತರ ಮಿ|| ಎ. ವಿ. ಅನ್ನಿಗೌಡರವರು ಈ ಸಂಘದ ಉಪಯುಕ್ತತೆಯನ್ನು ಕುರಿತು ಕನ್ನಡದಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡುವಾಗ್ಗೆ ಗತಿಸಿದ ಮ|| ಎಂ. ಬಸವಯ್ಯನವರ ಗುಣಕಥನವನ್ನು ಮಾಡಿದುದಲ್ಲದೆ, ಇವರ ಕುಟುಂಬದವರಿಗೆ ಸಂಘದ ಸಂತಾಪವನ್ನು ಸೂಚಿಸಬೇಕೆಂದೂ, ಇಲ್ಲಿಯ ರೀಡಿಂಗ್‌ರೂಮಿನಲ್ಲಿ ಇವರ ಭಾವಚಿತ್ರವನ್ನಿಡಬೇಕೆಂದೂ, ಸೂಚಿಸಿದುದು ಸಂಘದಿಂದ ಅನುಮೋದಿಸಲ್ಪಟ್ಟಿತು. ಮತ್ತು ಮಿ|| ನಜೀರ್ ಉಸ್ಮಾನ್ ಸಾಹೇಬರವರು ಉರ್ದುಭಾಷೆಯಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡಿದ ನಂತರ ಪತ್ನೀವಿಯೋಗವನ್ನು ಹೊಂದಿದ ಮಿ|| ಕೆ. ಬಿ. ಮಹಮದ್ ಹುಸೇನ್‌ರವರಿಗೆ ಸಂಘದ ಅನುತಾಪವನ್ನು ತಿಳಿಯಿಸಲಾಯಿತು. ಅಲ್ಲದೆ ಸೆಕ್ರೆಟರಿಯವರು ಇಲ್ಲಿಯವರೆಲ್ಲರ ವಿಶ್ವಾಸಕ್ಕೂ ಪಾತ್ರರಾಗಿದ್ದ ಮಿ|| ಸಿ. ಎಚ್. ಗಾಡ್ಫ್ರೀಯವರಿಗೆ ಸಂಘದ ಪರವಾಗಿ ವಂದಿಸಿದುದಲ್ಲದೆ ಇವರು ಸೀಮೆಯಿಂದ ಬಂದ ನಂತರ ಪುನಃ ತಮ್ಮ ಛಾರ್ಜನ್ನು ವಹಿಸಿಕೊಳ್ಳುವರೆಂದು ಸಭೆಯವರಿಗೆ ತಿಳಿಸಿದರು. ಅನಂತರ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ ಮಹಾರಾಜರವರಿಗೂ, ಶ್ರೀಮನ್ ಯುವರಾಜರವರಿಗೂ, ಯುವರಾಜ ಪುತ್ರರವರಿಗೂ, ನೂತನ ಮಂತ್ರಿವರ್ಯರಿಗೂ, ಅಧ್ಯಕ್ಷರವರಿಗೂ ಶುಭವಾದನವು ಮಾಡಲ್ಪಟ್ಟ ಮೇಲೆ ಫಲಪುಷ್ಪಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಸಿ. ಎಂ. ಎಸ್.

ಮೈದರಗಿ.

ಪದ್ಧತಿ ಪ್ರಕಾರ ದಾವಣಗೇರಿ ವೀರಶೈವ ಸಂಘದವರು ಪ್ರಸಿದ್ಧಿಪಡಿಸಿದ ಪ್ರಕಾರ ಇಲ್ಲಿಯ ಸಂಘದವರು ಮುಂಚಿತವಾಗಿ ಪ್ರೋಗ್ರಾಮ್ ಪ್ರಸಿದ್ಧಪಡಿಸಿ ಈ ಜಿಲ್ಲೆಯ ಎಲ್ಲಾ ಭಾಗದ ಮತಬಾಂಧವರಲ್ಲಿ ಜಾಗರೂಕತೆಯನ್ನು ಹುಟ್ಟಿಸಿ ವೈಶಾಖ ಶು|| ೪ ಗುರುವಾರ ಜಂಗಮ ಶಿವಾರ್ಚನೆ ಸಂತರ್ಪಣೆ ನಡೆದು ಸಂಜೆ ೪ ಘಂಟೆಗೆ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ತಾಲ್ಲೂಕು ಅಮಲ್ದಾರ್ ರಾವ್‌ಸಾಹೇಬ್ ಕೋನರಡ್ಡಿಯವರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆ ಕೂಡಿತ್ತು. ಮೊದಲು ರಾ|| ಶಾಂತಲಿಂಗಪ್ಪ ಇವರು ಶ್ರೀ ಬಸವೇಶ್ವರದೇವರು ಮಾಡಿದ ಕರ್ತವ್ಯ ಅವರ ಆಚಾರವಿಚಾರವನ್ನೂ ಮಹಿಮಾತಿಶಯದಿಂದ ನಮ್ಮ ಮತತತ್ವವನ್ನು ಯಾವ ಪ್ರಕಾರ ವಿಸ್ತಾರಪಡಿಸಿದರೆಂಬುದನ್ನೂ ಪ್ರತ್ಯೇಕವಾಗಿ ಸಭೆಯವರಿಗೆ ತಿಳಿಸಿ, ಅಂಥ ಮಹಿಮರ ಜಯಂತ್ಯುತ್ಸವವನ್ನು ಮಾಡುವದು ಎಷ್ಟು ಕರ್ತವ್ಯವದೆಯೆಂಬುದನ್ನು ಚನ್ನಾಗಿ ಹೇಳಿ ಇಂಥಾ ಮಹಿಮರಮೇಲೆ ಶುಭೋದಯ ಪತ್ರಕಾರನು ನಿಂದಿಸಿದ ಭಾಷಣದ ಖಂಡನವನ್ನು ಮಾಡಿ ನಿಷೇಧಿಸಿದರು. ಆ ಮೇಲೆ ಮಿ|| ಹೋಳಿಶೆಟ್ಟಿಯವರು ಶ್ರೀ ಬಸವೇಶ್ವರ ಐತಿಹಾಸಿಕ ಮಾಹಿತಿಯನ್ನು ಕುರಿತು ಮಹಾರಾಷ್ಟ್ರ ಭಾಷೆಯಲ್ಲಿ ಒಳ್ಳೇ ಪರಿಣಾಮಕಾರಕ ಭಾಷಣಮಾಡಿ ಶುಭೋದಯ ಪತ್ರಕರ್ತರ ಮೇಲೆ ಮ|| ಸಿದ್ರಾಮಪ್ಪ ಪಾವಟೆ ವಕೀಲ ಇವರು ಹೂಡಿದ ನ್ಯಾಯವು ಸತ್ಯವದೆಯೆಂದೂ, ಅವರು ನಮ್ಮ ಮತಕಾರ್ಯದಲ್ಲಿ ಎಷ್ಟು ದಕ್ಷರಾಗಿರುವರೆಂದೂ ಹೇಳಿ ಅವರ ಕಾರ್ಯಕ್ಕೆ ಪ್ರತ್ಯೇಕ ವೀರಶೈವ ಬಂಧುಗಳು ಸಹಾಯಕರಾಗಬೇಕೆಂದು ಜೋರಿನಿಂದ ಹೇಳಿದ ಕೂಡಲೇ ಎಲ್ಲರ ಮನಸ್ಸೂ ಏಕಾಗ್ರವಾಗಿ ಸಾಹಾನುಭೂತಿ ಸೂಚನೆ ಕೊಟ್ಟರು. ಆಮೇಲೆ ಅಧ್ಯಕ್ಷರು ಹೇಳಿದ್ದೇನಂದರೆ—ನಾನು ಪರಮತದವನಾಗಿದ್ದಾಗ್ಯೂ ನಿಮ್ಮ ಧರ್ಮತತ್ತ್ವವನ್ನು ನಾನು ತಿಳಿದುಕೊಂಡು ಅತ್ಯಾನಂದಪಟ್ಟಿದ್ದೇನೆ. ಮತ್ತು ಶ್ರೀ ಬಸವೇಶ್ವರನು ಮಹಿಮಾಪುರುಷನೆಂಬುದು ಚರಿತ್ರದಿಂದ ನನ್ನ ಮನವರಿಕೆಯಾಗಿದೆ. ಅವರು ಲಿಂಗಾಯತತತ್ವವನ್ನು ಚೆನ್ನಾಗಿ ದೃಢಪಡಿಸಿದರು, ಎಂದು ಹೇಳಿ ಮತ್ತು ಮ|| ಸಿದ್ರಾಮಪ್ಪ ಪಾವಟೆ ಇವರು ನನ್ನಸ್ನೇಹಿತರಿದ್ದು, ಕಾಯದೆ ಪಂಡಿತರಿರುವರು. ಅಂಥ ಮತಾಭಿಮಾನಿಗಳು ಸಿಗುವುದು ದುರ್ಲಭ. ಅವರು ಹಿಡಿದ ನ್ಯಾಯವು ಸತ್ಯವದೆಯೆಂದು ಹೇಳಿದರು. ಮತ್ತು ನಿಮ್ಮ ಗುರುವರ್ಗದವರಲ್ಲಿ ನಡೆದ ಕಲಹವು ಮತಕ್ಕೆ ಹಾನಿಕರವೆಂದು ಹೇಳಿ ಅನಾದಿಯಿಂದ ನಡೆದುಬಂದ ಶಾಸ್ತ್ರಸಮ್ಮತಕ್ಕೆ ವಿರುದ್ಧವಾಗಿ ಈಗ ಆಚರಿಸುವ ಪಟ್ಟಚರಮೂರ್ತಿಗಳ ಕೃತ್ಯವು ಅನ್ಯಾಯವೆಂದು ಹೇಳಿದರು. ಸಭೆಯಲ್ಲಿ ಪಾಸಾದ ಠರಾವು—(೧) ಶ್ರೀ ಬಸವೇಶ್ವರಜಯಂತಿಯನ್ನು ಎಲ್ಲಾ ಮತಾಭಿಮಾನಿಗಳೂ ಶಾಂತತನದಿಂದ ನಡೆಸುತ್ತಾ ಹೋಗಬೇಕು. (೨) ಶುಭೋದಯ ಪತ್ರಕಾರರ ಲೇಖನವನ್ನು ಈ ಸಭೆಯವರು ನಿಷೇಧಿಸಿ ಆ ಪತ್ರದ ಮೇಲೆ ಬಹಿಷ್ಕಾರ ಹಾಕಬೇಕು. (೩) ರಾ|| ಪಾವಟೆಯವರು ಹಿಡಿದ ಕಾರ್ಯವು ಸತ್ಯವದೆ. ಅವರು ಮಾಡುವ ಮತಕಾರ್ಯಕ್ಕೆ ಈ ಸಭೆಯವರು ಅಭಿನಂದಿಸಿ ಮುಂದೆ ನ್ಯಾಯ ನಡಿಸಲಿಕ್ಕೆ ಪುಷ್ಟೀಕರಿಸುತ್ತಾರೆ. (೪) ಪಟ್ಟಚರಮೂರ್ತಿಗಳು ನವಲಗುಂದದಲ್ಲಿ ಕೂಡಿಸುವ ಸಭೆಯು ಮತಕ್ಕೆ ಅತ್ಯಂತ ಹಾನಿಕರ ಕೃತ್ಯವೆಂದೂ ಅಜ್ಞಾನತನವೆಂದೂ ಆತ್ಮಘಾತಕಿಯೆಂದೂ, ಅವರು ಸದ್ಯದ ರಾಜಕಾರಣದ ಜ್ಞಾನಶೂನ್ಯರೆಂದೂ ಈ ಸಭೆಯವರು ಜೋರಿನಿಂದ ನಿಷೇಧಿಸುತ್ತಾರೆ. (೫) ರಾ|| ಪಾವಟೆಯವರು ಖಂಡನೆಯನ್ನು ಮಾಡಲಿಕ್ಕೆ ತಯಾರಿದ್ದು ಆಹ್ವಾನ ಮಾಡಿದಾಗ್ಯೂ, ನವಲಗುಂದ ನಾಟಕ ಪಡದಾದಲ್ಲಿ ಸಭೆ ಕೂಡಿ ಬಾಯಿಗೆ ಬಂದಂತೆ ನಿಂದಿಸುವದು ಅನ್ಯಾಯವೆಂದು ತಿಳಿದು ಸಮಸ್ತವೀರಶೈವ ಭಕ್ತರೂ ಅದಕ್ಕೆ ಲಕ್ಷ್ಯಕೊಡಬಾರದೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ. ಈ ಪ್ರಕಾರ ಸಭೆಯ ಕಾರ್ಯವು ಸಾಗಿ ಶ್ರೀ ಬಸವೇಶ್ವರನ ಫೋಟೋ ಮೆರವಣಿಗೆಯು ಉತ್ತಮವಾಗಿ ಸಾಗಿತು. ಎಲ್ಲಾ ದೇವಾಲಯಗಳಲ್ಲಿಯೂ ಅಂಗಡಿಗಳಲ್ಲಿಯೂ ದೀಪೋತ್ಸವವಾಯಿತು.

ವೀರಪ್ಪ ಗುರುಸೋಮಪ್ಪ ಲೋಣಿ.

ಕೆಳದಿ ಸಭೆಯ ಸಭಾಧ್ಯಕ್ಷರ ಭಾಷಣ

(ಹಿಂದಣ ಶೇಷ).

ನಮ್ಮ ಗುರುವರ್ಗ ಪೀಠಾಧಿಕಾರಿಗಳಲ್ಲಿಯೂ ಸಹ ಸ್ವಜನಾಭ್ಯುನ್ನತಿ ಸಾಧನೆಯನ್ನು ಮುಖ್ಯಲಕ್ಷ್ಯವಾಗಿಟ್ಟುಕೊಂಡು ಕೆಲಸಮಾಡುತ್ತಿರುವವರು ಇಲ್ಲದೆ ಈ ಜನಾಂಗವು ಅಧೋಗತಿಯನ್ನು ಹೊಂದುತ್ತಲಿಲ್ಲ. ದೃಷ್ಟಾಂತವಾಗಿ ಚಿತ್ರದುರ್ಗದ ಶೂನ್ಯಸಿಂಹಾಸನಾಧೀಶ್ವರ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರೂ, ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರೂ, ಮಾಡುತ್ತಿರುವ ದೃಢವ್ರತ ಕಾರ್ಯಗಳು ನಿದರ್ಶನವಾಗಿವೆ. ಇಷ್ಟೆಲ್ಲಾ ಇದ್ದಾಗ್ಯೂ ಮತ್ತಾವ ಕಾರಣದಿಂದ ಈ ಸಮಾಜವು ಹಿಂದುಳಿಯುತ್ತಾ ಬಂದಿರುತ್ತದೆ ಎಂಬುದನ್ನು ಪರಿಶೀಲನೆ ಮಾಡಿದರೆ ನಮ್ಮವರ ಲೌಕಿಕ ವಿದ್ಯಾಪ್ರಸರಣೆಯ ಅಭಾವವೇ ಮುಖ್ಯಕಾರಣವೆಂದು ಧಾರಾಳವಾಗಿ ಹೇಳಬಹುದು. ಈ ಕೊರತೆಯಿಂದ ನಮ್ಮಲ್ಲಿ ಕೃಷಿ ವಾಣಿಜ್ಯಾದಿ ಕಲಾಕೌಶಲ್ಯಗಳಲ್ಲಿ ನವೀನ ಮಾರ್ಗವನ್ನನುಸರಿಸಿ ನಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲದೆ ಕಾಲಕ್ರಮೇಣ ಪರದಾಸ್ಯವನ್ನು ಹೊಂದುತ್ತಿರುತ್ತೇವೆ. ಇದೇ ಕೊರತೆಯಿಂದ ಸರ್ಕಾರದಲ್ಲಿ ಉದ್ಯೋಗ, ರಾಜಕೀಯ ಸಂಬಂಧವಾದ ಸಂಸ್ಥೆಗಳಲ್ಲಿ ಹೆಚ್ಚು ವ್ಯಾಪನೆಯನ್ನು ಹೊಂದಲು ಸಾಕಾದಷ್ಟು ಅರ್ಹತೆಯು ಇಲ್ಲದಂತಾಗಿದೆ. ಇವೆಲ್ಲಕ್ಕಿಂತಲೂ ನಮ್ಮ ಮತತತ್ವವೇನೆಂಬುದನ್ನೂ, ಇದರ ಪ್ರಶಸ್ತಿ ಎಷ್ಟಿರುತ್ತೆಂಬುದನ್ನೂ ರಾಜಕೀಯ ಭಾಷೆಯಲ್ಲಿ ಪ್ರಚುರಿಸದ ಹೊರತು ಇತರರಿಗೆ ಗೊತ್ತಾಗುವಂತಿಲ್ಲ. ಈ ಅಜ್ಞಾನಾಂಧಕಾರವು ನಮ್ಮವರಲ್ಲಿ ಅನೇಕ ಪದವೀಧರರೂ, ವಿದ್ಯಾವಂತರೂ, ಎಂದು ಹೇಳಿಕೊಳ್ಳಲು ಅರ್ಹತೆಯುಳ್ಳವರಿಗೂ ಸಹ ವ್ಯಾಪಿಸಿ ಈ ಸುಪ್ರಸಿದ್ಧವಾದ ಮತವು ವೇದಸಮ್ಮತವಾದ ಮತವಲ್ಲವೇ ಎಂಬ ಸಂಶಯವನ್ನೂ ಸಹ ಹುಟ್ಟಿಸಿರುತ್ತದೆ. ಸಾಲದ್ದಕ್ಕೆ ನಮ್ಮ ಮತೋದ್ಧಾರಕರಾದ ಬಸವಾದಿಪ್ರಮಥರನ್ನೇ ದೂಷಿಸುವವರೆಗೂ ಪ್ರಬಲಿಸಿರುತ್ತದೆ. ಈ ಕೊರತೆಗಳನ್ನೆಲ್ಲಾ ಹೋಗಲಾಡಿಸುವಷ್ಟು ಧರ್ಮವಿದ್ಯಾಪ್ರಸರಣೆಯು ನಮ್ಮಲ್ಲಿ ಅತ್ಯವಶ್ಯಕವಾಗಿ ಬೇಕಾಗಿದೆ.

ಆದುದರಿಂದ ಈ ಅಂಧಕಾರವನ್ನು ಹೋಗಲಾಡಿಸಬೇಕಾದರೆ ರಾಜಕೀಯ ವಿದ್ಯೆಯಲ್ಲಿ ಪಾಂಡಿತ್ಯವನ್ನು ಸಂಪಾದಿಸಿರುವ, ಅದರಲ್ಲಿಯೂ ಮುಖ್ಯವಾಗಿ ಪಾಶ್ಚಾತ್ಯರೀತಿ ಮನಶ್ಶಾಸ್ತ್ರ, ತರ್ಕ, ನೀತಿ ಮತ್ತು ತತ್ವಶಾಸ್ತ್ರಗಳಲ್ಲಿಯೂ, ಆಧುನಿಕ ಪದ್ಧತಿಯ ಪ್ರಕಾರ ಪೂರ್ವಜರ ಚರಿತ್ರೆ, ಅರ್ಥಶಾಸ್ತ್ರ ಮುಂತಾದವುಗಳಲ್ಲಿಯೂ ನೈಪುಣ್ಯವನ್ನು ಪಡೆದಿರುವ ವಿದ್ವನ್ಮಣಿಗಳು ನಮ್ಮ ಮತಗ್ರಂಥಗಳ ಶೋಧನೆಗೆ ಅತ್ಯವಶ್ಯಕವಾಗಿ ಬೇಕಾಗಿದ್ದಾರೆ. ಇದರ ಅವಶ್ಯಕತೆಯನ್ನು ಎಲ್ಲಾ ಸಭೆಗಳಲ್ಲಿಯೂ ನುಡಿಯಲ್ಲಿ ಮಾತ್ರ ಹೇರಳವಾಗಿ ತೋರಿಸಿರುತ್ತೇವೆಯೇ ಹೊರತು ಫಲಕಾರಿಯಾಗುವ ಏನೊಂದು ಪ್ರಯತ್ನವೂ ಈವರೆಗೆ ನಡೆದಿಲ್ಲ. ಈ ಪ್ರಾಂತಿಕ ಸಭೆಯು ಇದೊಂದು ಕಾರ್ಯವನ್ನು ಮನಮುಟ್ಟಿ ಮಾಡಿ ಇದಕ್ಕೆ ಬೇಕಾಗುವ ಧನಸಹಾಯವನ್ನು ಸಜ್ಜುಗೊಳಿಸಿದರೆ ನಾವು ಇಲ್ಲಿ ಸೇರಿದುದಕ್ಕೆ ಸಾರ್ಥಕವಾಯಿತೆಂದು ಎಣಿಸುತ್ತೇನೆ. ಈ ಕಾರ್ಯಕ್ಕಾಗಿ ಮುಖ್ಯವಾಗಿ ಒಂದು ಮುದ್ರಾಲಯವೂ, ಒಂದು ಪುಸ್ತಕಭಂಡಾರವೂ ಸ್ಥಾಪಿಸಲ್ಪಡಬೇಕಾದದ್ದು ಅತ್ಯವಶ್ಯಕವಾಗಿರುತ್ತದೆ. ಇದಕ್ಕೆ ತಕ್ಕ ಸೌಕರ್ಯವಾದ ಸ್ಥಳವು ಬೆಂಗಳೂರು ವಿನಾ ಮತ್ತೆಲ್ಲಿಯೂ ಪ್ರಕೃತಸ್ಥಿತಿಯಲ್ಲಿ ಸಾಧ್ಯವಿಲ್ಲ. ಯಾತಕ್ಕೆಂದರೆ ಸರ್ಕಾರದವರು ದೊಡ್ಡ ಪುಸ್ತಕಭಂಡಾರವನ್ನೂ, ವಸ್ತುಪ್ರದರ್ಶನಶಾಲೆಯನ್ನೂ, ಲಿಪ್ಯನ್ವೇಷಣ ಆಫೀಸನ್ನೂ, ಮತ್ತು ಟಾಟಾರವರ ರೀಸರ್ಚ್ ಇನ್ಸ್ಟಿಟ್ಯೂಷನ್ ಮುಂತಾದ ಅನೇಕ ಸಾಧನ ಸೌಕರ್ಯಗಳನ್ನೂ ಬೆಂಗಳೂರು ಪಟ್ಟಣದಲ್ಲಿ ಸ್ಥಾಪಿಸಿರುತ್ತಾರೆ, ಮತ್ತು ನಮ್ಮ ಸಮಾಜಬಾಂಧವರಲ್ಲಿ ಯೋಗ್ಯರಾದ ಪ್ರಮುಖರು ತಕ್ಕಮಟ್ಟಿಗೆ ನಿಬಿಡವಾಗಿ ಅಲ್ಲಿ ನೆಲೆಗೊಂಡಿರುತ್ತಾರೆ. ಈ ಕಾರಣಗಳಿಂದ ಆ ಸ್ಥಳವು ಸರ್ವತೋಮುಖವಾಗಿ ಈ ಮಹಾಕಾರ್ಯಕ್ಕೆ ತಕ್ಕ ಸ್ಥಳವಾಗಿರುತ್ತದೆ. ಇದೂ ಅಲ್ಲದೆ ವೀರಶೈವ ಜನಾಂಗವು ಹೇರಳವಾಗಿರುವ ದಕ್ಷಿಣ ಮಹಾರಾಷ್ಟ್ರ (ಧಾರವಾಡ, ಬಿಜಾಪುರ, ಬೆಳಗಾಂ, ಸೊಲ್ಲಾಪುರ.) ನೈಜಾಂ ಇಲಾಖ (ರಾಯಚೂರು, ಗುಲ್ಬರ್ಗ) ಬಳ್ಳಾರಿ, ಅನಂತಪುರ, ಮೈಸೂರು, ಕೊಡಗು ಈ ಪ್ರಾಂತ್ಯಗಳಲ್ಲೆಲ್ಲಾ ಈ ಕೆಲಸಕ್ಕೆ ಆರೋಗ್ಯಾದಿ ಎಂತಹ ಸೌಕರ್ಯಗಳು ಬೆಂಗಳೂರಲ್ಲಿರುವಷ್ಟು ಮತ್ತಾವ ಪಟ್ಟಣಗಳಲ್ಲಿಯೂ ಇಲ್ಲವೆಂದು ದೃಢವಾಗಿ ಹೇಳಬಹುದು. ಈ ಕಾರಣದಿಂದಲೇ ಒಂದೆರಡು ವೀರಶೈವ ಮಹಾಸಭೆಗಳಲ್ಲಿಯೂ ಸಹ ಬೆಂಗಳೂರಿನಲ್ಲಿ ಪುಸ್ತಕಭಂಡಾರವನ್ನು ಸ್ಥಾಪಿಸಬೇಕೆಂದು ನಿರ್ಧರಿಸಲ್ಪಟ್ಟಿದೆ. ಈ ನಿರ್ಧಾರವು ಮಹಾಸಭಾ ರಿಪೋರ್ಟು ಯಾ ವರದಿಗಳಲ್ಲಿ ಪ್ರಕಟವಾಗುವುದರಲ್ಲಿ ಮಾತ್ರ ಪರ್ಯವಸಾನಗೊಂಡಿರುತ್ತೆಂಬುದು ತುಂಬಾ ಶೋಚನೀಯವಾಗಿರುತ್ತದೆ. ಈ ಕಾರ್ಯವು ಸಮಗ್ರವಾಗಿ ನಡೆಯಬೇಕಾದರೆ ಪ್ರಾಯಶಃ ಒಂದು ಲಕ್ಷ ರೂಪಾಯಿನ ಬಂಡವಾಳವಾದರೂ ಬೇಕಾಗುತ್ತದೆ. ಈ ಭಾರಿ ಮೊತ್ತವನ್ನು ಮಹಾಜನಗಳಿಂದ ಉಚಿತವಾಗಿ ಎತ್ತಬೇಕೆಂದರೆ ಶ್ರಮಸಾಧ್ಯವೂ, ಕಾಲವಿಳಂಬವೂ ಆಗಬಹುದು. ಮತ್ತು ಈ ಸಂಸ್ಥೆಯನ್ನು ಹೆಚ್ಚು ಬಂಡವಾಳವಿಟ್ಟು ನವೀನ ಯಂತ್ರಸಾಧನೆಗಳಿಂದ ಸ್ಥಾಪಿಸುವುದಾದರೆ ಇದೊಂದು ಲಾಭಕರವಾದ ಕೆಲಸವೇ

ಹೊರತು ಬರೀ ಗೌರವಪ್ರತಿಷ್ಠೆಗಳಲ್ಲಿ ಪರಿಣಮಿಸಿ ದುಡ್ಡು ವ್ಯಯವಾಗುವಂಥ ಕೆಲಸವಲ್ಲ. ಆದುದರಿಂದ ಇದನ್ನು ಷೇರುಗಳ ರೂಪದಿಂದಲೋ, ಡಿಬೆಂಚರುಗಳ ರೂಪದಿಂದಲೋ ಒಂದೊಂದು ಷೇರಿಗೆ ೧೦೦ ರೂಪಾಯಿಗಳ ಮೇರೆ ಒಂದು ೧,೦೦೦ ಷೇರುಗಳನ್ನು ಕೊಡಿಸುವುದು ಈ ಸಮಾಜಕ್ಕೆ ಒಂದು ಕಷ್ಟತರವಾದ ಕೆಲಸವಲ್ಲ. ಶ್ರೀ ಹಾನುಗಲ್ಲು ಕುಮಾರಸ್ವಾಮಿಗಳೇ ಮುಂತಾದ ಇಲ್ಲಿ ನೆರೆದಿರುವ ಪೂಜ್ಯಪಾದರುಗಳು ಈ ಕೆಲಸವನ್ನು ಕೈಕೊಂಡರೆ ಇದು ಕೆಲವು ತಿಂಗಳುಗಳಲ್ಲಿಯೇ ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯವನ್ನು ಈ ಗುರುಮಠದ ಪಟ್ಟಾಧ್ಯಕ್ಷರಾಗಿದ್ದು ಲಿಂಗೈಕ್ಯರಾದ ಶ್ರೀ ರೇವಣಸಿದ್ಧಸ್ವಾಮಿಗಳವರ ಜ್ಞಾಪಕಾರ್ಥವಾಗಿ ಮಾಡುವುದಾದರೆ ಆ ಮಹಾನುಭಾವರಲ್ಲಿ ಜನಗಳಿಗಿರುವ ಅದ್ಭುತವಾದ ಭಕ್ತಿವಾತ್ಸಲ್ಯಗಳು ಈ ಕಾರ್ಯವನ್ನು ಸಫಲಗೊಳಿಸಿ ಅವರ ಕೃಪಾಬಲದಿಂದ ಈ ಸಮಾಜವೇ ಸುಪವಿತ್ರವಾಗುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಮತ್ತು ಈ ಕಾರ್ಯದ ಮ್ಯಾನೇಜುಮೆಂಟು ವಿಚಾರದಲ್ಲಿಯೂ ನಾವು ವಿಶೇಷ ತೊಂದರೆಪಡಬೇಕಾದ ಸಂಭವವೂ ಇಲ್ಲ. ಮೈಸೂರು ಲಿಂಗಾಯತ ಎಜ್ಯುಕೇಷನ್ ಫಂಡು ಅಸೋಸಿಯೇಷನ್ ಯಾ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಭೆಯ ಕಾರ್ಯನಿರ್ವಾಹ ಮಂಡಲಿಯು (ಮ್ಯಾನೇಜಿಂಗ್ ಕಮಿಟಿ) ಬೆಂಗಳೂರಿನಲ್ಲಿ ಸ್ಥಾಪಿತವಾಗಿ ನಮ್ಮ ಮೈಸೂರು ದೇಶದಲ್ಲಿ ನಮ್ಮ ಸಮಾಜೋದ್ಧರಣ ಕಾರ್ಯಕ್ಕಾಗಿ ದುಡಿಯುತ್ತಿರುವ ಸಂಸ್ಥೆ ಎಂಬುದು ತಮ್ಮೆಲ್ಲರಿಗೂ ಗೊತ್ತೇ ಇದೆ. ಆ ಕಾರ್ಯನಿರ್ವಾಹ ಮಂಡಲಿಯ ಮೇಲ್ವಿಚಾರಣೆಗೆ ಈ ಮುದ್ರಾಲಯ ಮತ್ತು ಪುಸ್ತಕಭಂಡಾರವನ್ನು ವಹಿಸುವುದರಿಂದ ಈ ಕಾರ್ಯಕ್ಕೆ ಯಾವ ನ್ಯೂನಾತಿರೇಕವೂ ಇಲ್ಲದೆ ಸಾಂಗೋಪಾಂಗವಾಗಿ ನಡೆಯುವುದರಲ್ಲಿ ಸಂದೇಹವಿಲ್ಲ.

ಸಮಾಜಬಾಂಧವರೇ, ನಮ್ಮ ಏಳಿಗೆಗೆ ಬೇಕಾದ ಉಪಕರಣಗಳು ಅನೇಕವಾಗಿದ್ದು ಅವುಗಳೆಲ್ಲವನ್ನೂ ವೃಥಾ ಹರಟುವುದರಿಂದ ಕಾಲಯಾಪನೆ ಮಾಡದೆ ಮುಖ್ಯವಾದ ಒಂದು ಕಾರ್ಯವಾದರೂ ಈ ಸಭೆಯಲ್ಲಿ ಬಂಧುರವಾಗಿ ಆರಂಭವಾದರೆ ಸಾಕೆಂದು ಈ ವಿಷಯವನ್ನು ಸ್ವಲ್ಪ ಹೆಚ್ಚಾಗಿ ಪುಷ್ಟೀಕರಿಸಿ ನಿಮ್ಮ ಪರ್ಯಾಲೋಚನೆಗೆ ತಂದಿರುತ್ತೇನೆ. ಇದನ್ನು ತಾವುಗಳು ಪೂರ್ವಾಪರ ಚರ್ಚಿಸಿ ಒಡನೆಯೇ ಒಂದು ಕಾರ್ಯೋನ್ಮುಖವಾಗುವ ರೂಪವನ್ನು ಕೊಟ್ಟು, ಈ ಸತ್ಕಾರ್ಯದಲ್ಲಿ ತಾವು ಮುಂದಾಳುಗಳಾಗಿ ಮೇಲ್ಪಂಙ್ತಿಯನ್ನು ಹಾಕಿದಿರೆಂಬ ಯಶಸ್ಸಿಗೆ ಭಾಜನರಾಗುತ್ತೀರೆಂದು ಸಂಪೂರ್ಣವಾಗಿ ನಾನು ನಂಬಿರುತ್ತೇನೆ.

ಪ್ರಕೃತಸ್ಥಿತಿಯಲ್ಲಿ ನಾವು ಮಾಡಬೇಕಾದ ಮಹತ್ಕಾರ್ಯಗಳಲ್ಲಿ ಮೇಲ್ಕಂಡ ಘನತರವಾದ ಮುದ್ರಣಾಲಯ ಮತ್ತು ಪುಸ್ತಕಭಂಡಾರ ಕಾರ್ಯಭಾರವು ಇರುವಾಗ್ಗೆ ನಮ್ಮ ಸಮಾಜದಲ್ಲಿ ಕೆಲವರ ದೃಷ್ಟಿಪಥವು ವ್ಯರ್ಥವಾದ ಮತ್ತು ಒಡಕನ್ನು ಹುಟ್ಟಿಸುವಂತೆ ಪೂಜ್ಯವರ್ಗದಲ್ಲಿ ಉಚ್ಚನೀಚವೆಂಬ ಭೇದಬುದ್ಧಿಯನ್ನು ಕಲ್ಪಿಸುವುದರಲ್ಲಿ ಬಿದ್ದು ತಮ್ಮ ಸಾಹಸವನ್ನು ಈ ದುಷ್ಕಾರ್ಯದಲ್ಲಿ ವ್ಯಕ್ತಗೊಳಿಸುತ್ತಿರುವರು. ಒಂದು ಗುಂಪಿನವರು ವಿರಕ್ತರ ಪರವಾಗಿಯೂ ಮತ್ತೊಂದು ಗುಂಪಿನವರು ಆಚಾರ್ಯವರ್ಗದ ಪರವಾಗಿಯೂ ನಿಂತು ಒಬ್ಬರ ಮೇಲೆ ಮತ್ತೊಬ್ಬರು ನಿಂತು ಕಾದಿ ಕಚ್ಚಾಡುತ್ತಿರುವರು. ಈ ಪಕ್ಷಾಂಧತೆಯಲ್ಲಿ ಶಾಸ್ತ್ರಾಧಾರಗಳನ್ನೂ ಸಹ ತಮ್ಮ ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಂಡು ಅದರ ಮೇಲೆ ವ್ಯಾಖ್ಯಾನಗಳನ್ನು ತಮ್ಮ ತಮ್ಮ ದುರುದ್ದೇಶಕ್ಕೆ ಹೊಂದುವಂತೆ ವ್ಯಂಗ್ಯಾರ್ಥಗಳನ್ನು ಕಲ್ಪಿಸಿ ಉಭಯವಾದಿಗಳೂ ಬರೆದಿರುವುದನ್ನು ನೋಡಿದರೆ ಸಖೇದಾಶ್ಚರ್ಯವಾಗುತ್ತದೆ. ಮುಖ್ಯವಾಗಿ ಆಚಾರ್ಯಪೀಠದವರಲ್ಲಿ ಈವರೆಗೂ ಒಂದು ಕ್ರಮವೂ ಒಗ್ಗಟ್ಟೂ ಇಲ್ಲದೆ ಈ ಮಠದ ಧರ್ಮನಿಷ್ಠೆಗಳೂ, ಅನೂಚಾನವಾಗಿ ಬಂದ ಮತಪದ್ಧತಿಗಳೂ ಸಡಿಲ ಹೊಂದಿ ನಮ್ಮವರು ಕರ್ಮಭ್ರಷ್ಟರಾಗುತ್ತಿದ್ದಾರೆ. ಈ ದುಸ್ಥಿತಿಯು ನಮ್ಮ ಪುಣ್ಯೋದಯದಿಂದ ಪಂಚಾಚಾರ್ಯ ಪೀಠದವರು ಐಕಮತ್ಯವನ್ನು ಹೊಂದಿ ತೊಲಗುತ್ತಾ ಬರುತ್ತಿದೆ ಎಂದು ನಾನು ತಿಳಿಯುತ್ತೇನೆ. ಇದು ನಿಶ್ಚಯವಾಗಿರುವ ಪಕ್ಷದಲ್ಲಿ ನಮ್ಮ ಸಮಾಜಕ್ಕೆ ಒಂದು ಮಹೋಪಕಾರವಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಪಂಚಾಚಾರ್ಯ ಪೀಠಸ್ಥರಲ್ಲಿ ಐಕಮತ್ಯವು ಬಂದಿಗಾದರೂ ಉಂಟಾದೀತೆಂದು ನಾವು ಸ್ವಪ್ನೇಪಿ ಭಾವಿಸಿರಲಿಲ್ಲ. ಆದರೂ ಈ ಅಘಟಿತ ಪ್ರಯತ್ನವು ಹೇಗೋ ಫಲಕಾರಿಯಾಗಿರುತ್ತೆಂದರೆ ಆ ನಮ್ಮ ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಾದಿ ಪಂಚಾಚಾರ್ಯರ ಕೃಪಾಬಲವೆಂದು ಎಣಿಸುತ್ತೇನೆ. ಮುಖ್ಯವಾಗಿ ಒಬ್ಬರ ಅಭ್ಯುದಯವು ಮತ್ತೊಬ್ಬರ ಅಧೋಗತಿ ಎಂದು ತಿಳಿಯುವುದಕ್ಕಿಂತಲೂ ಹೆಚ್ಚು ಅವಿವೇಕವು ಲೋಕದಲ್ಲಿ ಯಾವುದೂ ಇಲ್ಲ. ಈಗಾಗಲೇ ಉಭಯವಾದಿಗಳ ಅತ್ಯಾಚಾರದಿಂದ ನಾವು ಪರಮತೀಯರ ಅವಹೇಳನೆಗೆ ಬೇಕಾದಷ್ಟು ಅವಕಾಶವನ್ನು ಕೊಟ್ಟಿರುತ್ತೇವೆ. ಈಗಲಾದರೂ ಒಂದು ಪಕ್ಷದವರು ಮತ್ತೊಂದು ಪಕ್ಷದವರ ಗೌರವಪ್ರತಿಷ್ಠೆಗಳನ್ನು ಸೌಮ್ಯದೃಷ್ಟಿಯಿಂದ ಪರ್ಯಾಲೋಚಿಸಿ ತಮ್ಮ ಅಂತರಂಗ ದ್ವೇಷಾಸೂಯೆಗಳನ್ನು ಬಿಡದಿದ್ದರೆ ಸಮಾಜವು ಈ ಉಭಯವಾದಿಗಳನ್ನೂ ದೂರೀಕರಿಸುವ ಪ್ರಯತ್ನವು ಕ್ಷಿಪ್ರದಲ್ಲಿಯೇ ಬರಬಹುದೆಂದು ಎಚ್ಚರಿಸುತ್ತೇನೆ. ಆ ದುಸ್ಥಿತಿಯು ಬಂದಾಗ ಪೂಜ್ಯವರ್ಗಕ್ಕೆ ಒಂದು ಕಳಂಕವು ಪ್ರಾಪ್ತವಾಗಿ ಆ ಕಳಂಕವನ್ನು ಹೋಗಲಾಡಿಸಿಕೊಳ್ಳಬೇಕಾದರೆ ಪುನಃ ಎಷ್ಟು ದೀರ್ಘಕಾಲ ಹಿಡಿಯುತ್ತೋ ಎಂದು ನಾನು ಸಂಶಯಪಡುತ್ತೇನೆ. ಮುಖ್ಯವಾಗಿ ಉಭಯಪಕ್ಷದಲ್ಲಿಯೂ ಹೆಚ್ಚು ವಿವೇಚನೆಯು ಹುಟ್ಟಿ ಅವರಲ್ಲಿಯೂ ವಿದ್ವಾಂಸರಾದವರು ಹೆಚ್ಚು ಶಾಂತಿಸಮಾಧಾನಗಳನ್ನು ತೋರ್ಪಡಿಸಿ ಈ ಭಿನ್ನಭಾವಗಳನ್ನು ಅಂಕುರದಲ್ಲಿಯೇ ಮುರಿದುಹಾಕುವ ಏರ್ಪಾಡನ್ನು ಮಾಡುತ್ತಾರೆಂದು ನಂಬುತ್ತೇನೆ.

(ಸಶೇಷ.)

ಜಾಹೀರನೋಟೀಸ್.

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದರೆ— ಹಿಮ್ಮತಲಾಲ ಚಿನ್ನ ಮಘನಲಾಲಗುಜ್ಜರ ಅಂ|| ನಂ|| ದಾರಬಾಸ ಕಾಯಿ ಮಣಿಬಾಯಿ ಕೋಮ ಘನಲಾಲಗುಜ್ಜರ ಎಂಬಾತನು ದಾವಣಗೇರಿಯಲ್ಲಿ ದಾವಣಗೇರಿ ಜಿನಿಂಗ ಫ್ಯಾಕ್ಟರಿಯ ಮಾಲೀಕನು ಇರುವನು. ಹೀಗಿದ್ದು ಈ ಹಿಮ್ಮತಲಾಲ ಈತನ ಮಲಅಣ್ಣನಾದ ಹೀರಾಲಾಲ ಎಂಬಾತನು ಸದರಿ ಜೀನನ್ನು ಈಗ ಮಾರಾಟ ಮಾಡುವ ಯೋಚನೆ ನಡಿಸಿದ್ದಾಗಿ ತಿಳಿಯುತ್ತದೆ. ಆವನಾದರೂ ಈಗ ವಯಸ್ಸಿಗೆ ಐಲಕಡಿಗೆ ಬಂದಿರುತ್ತಾನೆ. ಅವನಿಗೆ ವಿಶೇಷ ಮನಹಿತ ಇರುವುದಿಲ್ಲ. ಇತರ ಜನರ ಛಲಿತಾಪೆಗೆ ವ ಚಿತಾವಣಿಗೆ ಒಳಗಾಗಿ ಈ ಅಲ್ಪವಯಿಗೆ ಲುಕ್ಸಾನು ಮಾಡುವ ಇರಾದೆಯಿಂದ ಈ ಪ್ರಕಾರದ ಕೆಲಸ ನಡಿಸಿರುವನು. ಸದರಿ ಜೀನಫ್ಯಾಕ್ಟರಿಯು ಸದರಿ ಹೀರಾಲಾಲ ಒಬ್ಬನ ಮಾಲ್ಕೀದು ಇರುವದಿಲ್ಲ. ಅವನು ಮಾಡಿದ ಮಾಡಬಹುದಾದ ಯಾವದೋ ಒಂದು ತರದ ವ್ಯವಹಾರದಿಂದ ಈ ಅಲ್ಪವಯಿಹಿಮ್ಮತಲಾಲನು ಯಾವ ವಿಧದಿಂದಲೂ ಬದ್ಧನಲ್ಲ ವ ಬದ್ಧನಾಗಲಾರನು. ಅವನ ಕಡೆಯಿಂದ ಖರೀದಿ ವಗೈರೆ ತೆಗೆದುಕೊಂಡಲ್ಲಿ ಸದರಿ ಜೀನಫ್ಯಾಕ್ಟರಿ ಮೇಲೆ ಖರೀದಿ ಪಡಕೊಂಡವರಿಗೆ ಯಾವ ಪ್ರಕಾರದ ಮಾಲ್ಕಿ ವ ಹಕ್ಕು ಸಂಬಂಧ ಏನೂ ಉಂಟಾಗಲಿಕ್ಕಿಲ್ಲ. ಸದರಿ ಹಿರಾಲಾಲನು ಮನ್ನಾನೆ ಮಾಡಹತ್ತಿರುವದರಿಂದ ಯಾರೂ ಯಾವ ಪ್ರಕಾರದ ವ್ಯವಹಾರ ಜರ ಮಾಡಿದರೂ ಸಹ ಅದು ಈ ಅಲ್ಪವಯಿ ಮೇಲೆ ಅಗರ ಘರಾಣೇದ ಮೇಲೆ ಬಾಂಧಾಯಿಸಲಾರದು ತಿಳಿಯುವುದು.

ಲಾಲ್‌ಮಣಿ ಚುನೀಲಾಲ್ ಸಿ.

ಜಾಗ್ರತೆ. ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯು ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 27

ನಾವು ಎ. ಆಲ್ ಬ್ಯುಕ್ಯಯರ್ ಕ್ಕೊ ಅಂಡ್ ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟಿಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

6 ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂಕ್ತರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಲಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

6 ವಿಳಾಸ—ವಿ. ಎ. ಎಸ್. ವಾಣಿ ಕಂಪನಿ,
ಸಾಹುಕಾರಪೇಟೆ, ಮದರಾಸು.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಟಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
6 3. ಇರುಳಪ್ಪನಬೀದಿ, ಮದರಾಸು.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ಕುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ 0— 8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
6 3. ಇರುಳಪ್ಪನಬೀದಿ, ಮದರಾಸು.

೧೯೨೦ ನೆಯ ಇಸವಿ ಮೇ ತಾ|| ೯ ರಿಂದ ೧೯೨೦ ನೆಯ ಮೇ ತಾ|| ೧೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ರೌದ್ರಿನಾಮ ಸಂವತ್ಸರದ ವೈಶಾಖ ಬಹುಳ ಷಷ್ಠಿಯಿಂದ ವೈಶಾಖ ಬಹುಳ ದ್ವಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ವೃಷಭ
9	ಭಾನು	ಷಷ್ಠಿ	26-31	ಉಷಾ	33-27	27
10	ಸೋಮ	ಸಪ	29-54	ಶ್ರವ	42-9	28
11	ಮಂಗಳ	ಅಷ್ಟ	32-6	ಧನಿ	45-46	29
12	ಬುಧ	ನವ	33-1	ಶತ	48-7	30
13	ಗುರು	ದಶ	32-42	ಪೂಭಾ	49-14	1
14	¹ಶುಕ್ರ	ಏಕಾ	31-4	ಉಭಾ	49-4	2
15	²ಶನಿ	ದ್ವಾ	28-47	ರೇವ	47-52	3

(1) ಯುವರಾಜರವರ ವರ್ಧಂತಿ. (2) ಶನಿಪ್ರದೋಷ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿರೆಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಮೇ ತಾರೀಖು ೧೬ ನೆಯ ಭಾನುವಾರ (ಸಂಚಿಕೆ ೨೦

GOVERNMENT OF MYSORE.
ELECTRICAL DEPARTMENT.

40

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking.		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 12

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲು ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲುಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ। ೦—೮—೦
ಶಿವಪೂಜಾವಿಧಿ। ೦—೧೦—೦
ಚಾರುಶೀಲಚರಿತ್ರೆ ೦—೫—೦
ಪಂಚಾಮೃ ೦—೪—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧ)ನ ೦—೨—೦
ಗುರುಶಂಕರೇಶ್ವರ ಶತಕಂ ೦—೧—೦

ಅಂಚೆಯವೆಚ್ಚ ಬೇರೆ.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಮಮ್ಮ ೫೦೩. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
33 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಟಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
7 3. ಇರುಳಪ್ಪನಬೀದಿ, ಮದರಾಸು.

ಇನಾಂ! ಆಲಸ್ಯಮಾಡಿದರೆ ದೊರೆಯಲಾರದು ಇನಾಂ!!

ತಮ್ಮ ವಿಳಾಸವನ್ನು ವಿವರವಾಗಿ ತಿಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
7 2/4 ಸಿಂಗಣ್ಣನ ಬೀದಿ, ಪಾರ್ಕ್‌ಟೌನ್‌ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 21

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ವಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ವಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ ಕ್ರಯ ೧ ಕ್ಕೆ ೫—೦—೦
ವೀರಶೈವಸಭಾಕಂಠಮಾಲಾ ,, ೦—೨—೦
ಬಾಲಿಕಾಗೀತ ,, ೦—೨—೦
ನವಮುಗ್ಧರಕೀರ್ತನ ತರಂಗಿಣಿ ,, ೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ ,, ೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಕಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

26 ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷವೆಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಮೇ ತಾ|| ೧೬ ನೆಯ ಭಾನುವಾರ.

ಕರ್ಣಾಟಕ ರಾಜಕೀಯ ಸಭೆ.

ಕರ್ಣಾಟಕ ಸಾಹಿತ್ಯಸಭೆಗೆ ಉಗಮಸ್ಥಾನವಾದ ಧಾರವಾಡವೇ ಕರ್ಣಾಟಕ ರಾಜಕೀಯ ಸಭೆಗೂ ಉದಯಸ್ಥಾನವೆಂಬ ಹೆಸರನ್ನು ತಳೆದುಕೊಂಡುದು ಅಲ್ಲಿಯ ನಿವಾಸಿಗಳಲ್ಲಿ ಸದಾಜಾಗ್ರತವಾಗಿರುವ ಭಾಷಾಭಿಮಾನ ದೇಶಾಭಿಮಾನಗಳಿಗೆ ನಿದರ್ಶನಭೂತವಾಗಿದೆ. '' ಪರಿವರ್ತಿನಿಸಂಸಾರೇಮೃತಃಕೋವಾನಜಾಯತೇ | ಸಜಾತೋಯೇನಜಾತೇನಯಾತಿ ದೇಶಸ್ಸಮುನ್ನತಿಂ || '' ಎಂಬಂತೆ ದೇಶದಲ್ಲಿ ಹುಟ್ಟಿ ಸಾಯುವವರು ಎಷ್ಟೋ ಲಕ್ಷಾಂತರ ಮಂದಿಗಳುಂಟು. ಆದರೆ ಯಾವೊಬ್ಬನ ಜನ್ಮದಿಂದ ದೇಶವೇ ಉನ್ನತಿಶಿಖರವನ್ನೇರುವುದೋ ಅವನೇ ಹುಟ್ಟಿದವನೆನ್ನಿಸಿಕೊಳ್ಳುವವನು. ಉಳಿದವರು ಹುಟ್ಟಿದರೂ ಅಷ್ಟೇ, ಹುಟ್ಟದಿದ್ದರೂ ಅಷ್ಟೇ. ಈ ನೀತಿವಚನದ ದೃಷ್ಟಿಯಿಂದ ಪರ್ಯಾಲೋಚಿಸಿದರೆ ಧಾರ್ವಾಡದ ಪ್ರಮುಖರೇ ಕರ್ಣಾಟಕ ಮಾತೆಯ ಹೊಟ್ಟೆಯಲ್ಲಿ ನಿಜವಾಗಿ ಹುಟ್ಟಿದವರೆನ್ನಿಸಿಕೊಳ್ಳುವರು.

ಇತ್ತೀಚೆಗೆ ಬೊಂಬಾಯಿ ಕರ್ಣಾಟಕದಲ್ಲಿ ಉದಯಿಸಿರುವ ನೂತನ ಪ್ರಬೋಧಕ್ಕೆ ಅನುಗುಣವಾಗಿ ಅವರು ಕರ್ಣಾಟಕ ಭಾಷಾ ವ್ಯವಹಾರವುಳ್ಳ ದೇಶಭಾಗಗಳನ್ನೆಲ್ಲಾ ಒಂದು ಪ್ರತ್ಯೇಕ ರಾಷ್ಟ್ರವನ್ನಾಗಗೊಳಿಸಿದರೆ ಕರ್ಣಾಟಕದ ಅಭ್ಯುನ್ನತಿಗೆ ವಿಶೇಷಾವಕಾಶವಾಗುವುದೆಂದು ಯೋಚಿಸಿ, ನೆರೆಯ ಆಂಧ್ರದೇಶದವರ ಈ ತೆರದ ಪ್ರಯತ್ನದಂತೆ ತಾವೂ ತಮ್ಮ ಗಾಢ ದೇಶಾಭಿಮಾನವನ್ನು ವಿನಿಯೋಗಿಸಿಕೊಂಡು ಉದ್ದೇಶಸಿದ್ಧಿಗೆ ಈ ಕರ್ಣಾಟಕ ರಾಜಕೀಯಸಭಾ ಸಮ್ಮೇಳನವನ್ನು ಪ್ರಥಮ ಸಾಧನವನ್ನಾಗಿ ಕೈಕೊಂಡುದು ಪ್ರಶಂಸನೀಯವೇ ಆಗಿರುತ್ತದೆ.

ಈ ಪ್ರಥಮಸಭೆಯು ಧಾರವಾಡದಲ್ಲಿ ಕಳೆದ ಬುಧವಾರ ಮ|| ವಿ. ಪಿ. ಮಾಧವರಾವ್ ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ಕೂಡಿತು. ಸಭೆ ಕೂಡಲು ಇಟ್ಟಿದ್ದ ಸಮಯವು ಎಲ್ಲಕಡೆಯೂ ಕಲ್ಯಾಣಮಹೋತ್ಸವಗಳು ನಡೆಯತಕ್ಕ ಕಾಲವಾಗಿದ್ದರೂ ಮೈಸೂರು, ಮಂಗಳೂರು, ಮದ್ರಾಸು, ಬೊಂಬಾಯಿ ಪ್ರಾಂತಗಳಿಂದೆಲ್ಲಾ ಪ್ರತಿನಿಧಿಗಳು ಬಂದು ಸೇರಿದ್ದರು. ಸಭಾಧ್ಯಕ್ಷರು ಮಾಡಿದ ಭಾಷಣದೊಳಗೆ ರಾಜಕೀಯ ಸಂಬಂಧದಲ್ಲಿ ಕನ್ನಡನಾಡು ಹೊಂದಿರಬೇಕಾದ ಉನ್ನತಾಶಯಗಳ ದಿಗ್ದರ್ಶನವು ಮಾಡಲ್ಪಟ್ಟಿತು. ಮ|| ಮಾಧವರಾಯರು ಮ|| ತಿಲಕರ ಕೋಟಿಗೆ ಸೇರಿದವರಾದುದರಿಂದ ಆ ಪಕ್ಷಕ್ಕನುಸರಿಸಿದ ತೀಕ್ಷ್ಣವಾದಗಳೇ ಇವರ ಉಪದೇಶದಲ್ಲಿ ಮೂರ್ತಿಭವಿಸಿದ್ದುವು. ಇವರು ಮಾಡಿರುವ ಭಾಷಣದಲ್ಲಿ ಪ್ರಭುತ್ವದವರು ಭರತಖಂಡಕ್ಕೆ ನೂತನ ಸಂಸ್ಕರಣಗಳನ್ನು ಅನುಗ್ರಹಿಸುವುದಕ್ಕೆ ಮುಂಚೆಯೇ ಭಾಷಾಪ್ರಯುಕ್ತ ರಾಷ್ಟ್ರವಿಭಾಗವನ್ನು ಮಾಡಬೇಕಾಗಿದ್ದಿತೆಂದು ಹೇಳಿರುವರು.. ಈಗಣ ಸಂಸ್ಕರಣ ಶಾಸನವು ಅಸಂತೃಪ್ತಿಕರವೆಂತಲೂ, ಆಶಾಭಂಗಕರವೆಂತಲೂ, ಅಸಂಪೂರ್ಣವೆಂತಲೂ ನ್ಯಾ|| ಕಾಂಗ್ರೆಸ್ ಪಟ್ಟಿರುವ ಅಭಿಪ್ರಾಯವನ್ನು ತಾವು ವಿವರಿಸಿ ಆ ಶಾಸನವು ಆಚರಣಯೋಗ್ಯವಾಗಿಲ್ಲವೆಂತಲೂ ದೇಶಕ್ಕೆ ವಿಘಾತವೆಂತಲೂ ಹೇಳಿದುದಲ್ಲದೆ, ಪ್ರತ್ಯೇಕ ಸಾಂಘಿಕ ಪ್ರಾತಿನಿಧ್ಯವನ್ನು ಕೊಟ್ಟಿರುವುದು ಪ್ರಜೆಗಳಲ್ಲಿ ಕಲ್ಲೋಲವನ್ನುಂಟುಮಾಡಿ ದೇಶವನ್ನು ದುರ್ದಶೆಯಲ್ಲಿ ಮುಳುಗಿಸುವುದೆಂದೂ, ಈಗಣ ಸಂಸ್ಕರಣ ಶಾಸನವು ಹೋಗಿ ನೂತನಶಾಸನವು ಬೇಗನೆ ಏರ್ಪಡಬೇಕೆಂದೂ, ಅದಕ್ಕಾಗಿ ಭಾರತೀಯರೆಲ್ಲರೂ ತಮ್ಮ ಶಕ್ತಿಯನ್ನು ವಿನಿಯೋಗಿಸಿ ಆಂದೋಳನವನ್ನು ಮಾಡಬೇಕೆಂದೂ ಬೋಧಿಸಿರುವರು. ಉಗ್ರವಾದಿಗಳು ಮೊದಲಿಂದಲೂ ಹಾಡುತ್ತ ಬಂದಿರುವ ರಾಗಕ್ಕೆ ಇದೂ ಉಪಶ್ರುತಿಯೇ ಆಗಿದೆ. ದೇಶದಲ್ಲೆಲ್ಲಾ ಸೌಮ್ಯಪಕ್ಷವನ್ನು ಕುಗ್ಗಿಸಿ ತಮ್ಮ ಪಕ್ಷವನ್ನೇ ಹೆಚ್ಚಿಸಿಕೊಳ್ಳಬೇಕೆಂಬ ಉಗ್ರವಾದಿಗಳ ತಂತ್ರಕ್ಕೆ ಪ್ರೋದ್ಬಲವನ್ನು ಕೊಡುವುದಕ್ಕಾಗಿಯೇ ಈ ರಾಜಕೀಯ ಸಭೆಯು ಉಗ್ರವಾದ ಬೀಜಾರೋಪಣಕ್ಷೇತ್ರವಾಗಿ ಮಾಡಲ್ಪಟ್ಟಿರಬೇಕೆಂದು ಇದರಿಂದ ಕಾಣುತ್ತದೆ. ದೊರೆದಷ್ಟು ಸಂಸ್ಕರಣಲಾಭವನ್ನುಪಯೋಗಿಸಿಕೊಂಡು ದಿನಕ್ರಮೇಣ ದೇಶವನ್ನು ಉದ್ಧರಿಸಿಕೊಳ್ಳುವ ಉದ್ದೇಶವು ಈ ಉಗ್ರವಾದಿಗಳಿಗಿರುವುದಿಲ್ಲ. ಯಾವುದಾದರೊಂದು ಕಾರಣದಿಂದ ದೇಶದಲ್ಲಿ ಚಳವಳವನ್ನೂ ಸರ್ಕಾರದ ಕೆಲಸಗಳಿಗೆ ಪ್ರತಿರೋಧವನ್ನೂ ಆಚರಿಸುವುದೇ ಇವರ ತತ್ವವಾಗಿದೆ. ರಾಜಕೀಯ ವಿಚಾರದಲ್ಲಿ ಹಸುಗೂಸುಗಳಂತಿರುವ ಕನ್ನಡಿಗರ ಮೃದುಲ ಹಸ್ತಕ್ಕೆ ಈ ತೀಕ್ಷ್ಣಾಶಯಗಳೆಂಬ ಅಸಿಧಾರೆಯನ್ನು ಕೊಟ್ಟರೆ ಎಷ್ಟು ಆತ್ಮಘಾತವಾಗುವುದೋ ಹೇಳಬೇಕಾಗಿಲ್ಲ.

ರಾಯರು ಪಂಜಾಬಿನಲ್ಲಿ ನಡೆದ ಧೂರ್ತತಾ ವಿಷಯವಾಗಿ ಜನರ ಮನಸ್ಸು ಕರಗುವಂತೆಯೂ ಆಂಗ್ಲಜನರ ಮೇಲೆ ರೇಗುವಂತೆಯೂ ಮಾತನ್ನಾಡಿ, ಕರ್ಣಾಟಕಕ್ಕೆ ಭಾಷಾಪ್ರಯುಕ್ತ ರಾಷ್ಟ್ರವಿಭಾಗವಾಗಬೇಕೆನ್ನುವುದನ್ನು ಯುಕ್ತಿ ಯುಕ್ತವಾಗಿ ಪ್ರತಿಪಾದಿಸಿರುತ್ತಾರೆ. ವಂಗವಿಭಂಗವು ನಡೆದಾಗ ಅಲ್ಲಿನವರು ನಡೆಯಿಸಿದ ಆಂದೋಳನದ ಫಲವನ್ನು ದೃಷ್ಟಾಂತವಾಗಿ ತೋರಿಸಿ, ಭಾಷಾಪ್ರಯುಕ್ತ ರಾಷ್ಟ್ರಪ್ರಾಪ್ತಿಯ ಅವಶ್ಯಕತೆಯನ್ನು ನಿರೂಪಿಸಿದ್ದಾರೆ. ಭರತಖಂಡವನ್ನು ಆಸ್ಯಾಖಂಡದ ಬಾಲ್ಕನ್ ರಾಷ್ಟ್ರಗಳೆಂದು ಹೇಳಬಹುದೆಂತಲೂ, ಭರತಖಂಡದ ಪುನರ್ನಿರ್ಮಾಣವು ಸುಸ್ಥಿರವಾಗಿ ಉಳಿಯಬೇಕಾದರೆ ಜಾತಿಮತ ಭಾಷಾ ವಿಜ್ಞಾನ ಸಂಬಂಧಗಳನ್ನೆಲ್ಲಾ ನಿರಾಕರಿಸಲಾಗುವುದಿಲ್ಲವೆಂತಲೂ ಹೇಳಿರುತ್ತಾರೆ. ಹೀಗೆ ಜಾತಿ ಮತಗಳ ಸ್ಥಿರತೆಯೇ ದೇಶಾಭ್ಯುದಯ ಸಾಧಕಗಳೆಂದು ಅಪ್ಪಣೆ ಕೊಡಿಸುವ ಈ ರಾಯರೇ ಇದೇ ತಮ್ಮ ಭಾಷಣದಲ್ಲಿ ಪ್ರತ್ಯೇಕ ಸಾಂಘಿಕ ಪ್ರಾತಿನಿಧ್ಯದ ಮೇಲೆ ಮಾತ್ರ ಹರಿದುಬಿದ್ದಿರುವುದಕ್ಕೇನು ಕಾರಣವೋ ತಿಳಿಯಲಿಲ್ಲ. ಜಾತಿಮತಭೇದಾದಿಗಳೆಲ್ಲಾ ಅಳಿದಲ್ಲದೆ ಭರತಖಂಡದಲ್ಲಿ ಜಾತೀಯಭಾವವೂ, ಪುನರುದ್ಧರಣೆಯೂ ಆಗುವುದಿಲ್ಲವೆಂದು ಸಾರುವ ಸಂಘಸಂಸ್ಕರಣ ಪಕ್ಷದವರು ಒಂದುವೇಳೆ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ವಿರೋಧಿಸಿದರೂ ವಿರೋಧಿಸಬಹುದು. ವರ್ಣಾಶ್ರಮಾದಿ ಜೀರ್ಣೋದ್ಧಾರಕ ಪಕ್ಷದ ತಿಲಕರೂ ಅವರ ಶಿಷ್ಯರೂ ಇದನ್ನು ಪ್ರತಿರೋಧಿಸುವುದಕ್ಕೆ ಸ್ವಾರ್ಥಲೋಪಭಯವೇ ಕಾರಣವಲ್ಲದೆ ಮತ್ತಾವುದೂ ಇರಲಾರದು. ರಾಯರು ದೇಶಭಾಷಾಭಿಮಾನದಿಂದ ರಾಷ್ಟ್ರೀಯಾಭಿಮಾನವು ಚೆನ್ನಾಗಿ ವೃದ್ಧಿಹೊಂದುವುದೆಂಬುದನ್ನು ತೋರಿಸಲಿಕ್ಕೆ ವಂಗದೇಶ ಮಹಾರಾಷ್ಟ್ರದೇಶಗಳು ಮಾತೃಭಾಷಾರಾಧನೆಯನ್ನು ಚೆನ್ನಾಗಿ ಮಾಡಿದುದರಿಂದ ಅವು ಪ್ರಾಮುಖ್ಯಸ್ಥಾನವನ್ನಾಕ್ರಮಿಸಿರುವುದನ್ನೂ ಉಳಿದ ಕರ್ಣಾಟಕಾದಿ ದೇಶಗಳು ಮಾತೃಭಾಷಾರಾಧನೆಯಲ್ಲಿ ಹಿಂದೆಬಿದ್ದುದರಿಂದ ಜಾತೀಯಭಾವಗ್ರಹಣದಲ್ಲೂ ಹಿಂದಾಗಿ ಹೋಗಿರುವುದನ್ನೂ ಸಹ ನಿದರ್ಶನವಾಗಿ ಹೇಳಿರುವುದು ಯುಕ್ತವಾಗಿದೆ. ಕಡೆಯಲ್ಲಿ-ಕರ್ಣಾಟಕವು ಅನೇಕಮಂದಿ ಮತೋದ್ಧಾರಕರಿಗೆ ನಿಲಯವಾಗಿಯೂ, ಅನೇಕ ಸಾಮ್ರಾಜ್ಯಾಧಿಪತಿಗಳ ಆಧಿಕ್ಯವನ್ನು ಪ್ರಕಟಿಸಿದುದಾಗಿಯೂ, ಲಿಂಗಧಾರಿಗಳ ಉದ್ಯಮಕ್ಕೆ ಉಗಮಭೂಮಿಯಾಗಿಯೂ ಪೂರ್ವದಲ್ಲಿದ್ದು ಈಗ ತನ್ನ ಪ್ರಾಚೀನವೈಭವವನ್ನು ಮರಳಿ ಪಡೆದುಕೊಳ್ಳಬೇಕಾದರೆ ಕನ್ನಡಿಗರೆಲ್ಲರೂ ಎಚ್ಚತ್ತು ಪುನರುದ್ಧಾರಣ ಪ್ರಯತ್ನಗಳನ್ನು ಮಾಡಬೇಕೆಂತಲೂ, ಹಿಂದೂ, ಕೇಸರೀ, ಬೋಂಬೆಸಮಾಚಾರ, ಸ್ವದೇಶಮಿತ್ರನ್, ಆಂಧ್ರಪತ್ರಿಕಾ—ಇವುಗಳಂಥ ಆಂಗ್ಲಪತ್ರಿಕೆಯೇ ಆಗಲಿ ದೇಶಭಾಷಾಪತ್ರಿಕೆಯೇ ಆಗಲೀ ಕನ್ನಡನಾಡಿನಲ್ಲಿ ಉದಯಗೊಳ್ಳಬೇಕೆಂತಲೂ, ದೇಶಭಾಷಾದ್ವಾರವೇ ವಿಜ್ಞಾನಾಭಿವೃದ್ಧಿಯಾಗಬೇಕೆಂತಲೂ, ಶಿಲ್ಪವಾಣಿಜ್ಯಾದಿಗಳೆಲ್ಲಾ ತಲೆಯೆತ್ತಬೇಕೆಂತಲೂ, ಭಾಷಾಪ್ರಯುಕ್ತ ರಾಷ್ಟ್ರವಿಭಾಗವಾದರೆ ಇದರಲ್ಲಿ ೪೦ ಲಕ್ಷ ಪ್ರಜೆಗಳು ಇರುವರೆಂತಲೂ, ಕೊಡಗನ್ನು ಇದಕ್ಕೆ ಸೇರಿಸಿಕೊಳ್ಳಬೇಕೆಂತಲೂ, ಧಾರ್ವಾಡವನ್ನು ಈ ಕರ್ಣಾಟಕ ಪ್ರಾಂತಕ್ಕೆ ರಾಜಧಾನಿಯನ್ನಾಗಿ ಮಾಡಬಹುದೆಂತಲೂ, ಮಡಕೇರಿಯನ್ನು ಉಷ್ಣಕಾಲ ನಿವಾಸಯೋಗ್ಯಪ್ರದೇಶವನ್ನಾಗಿ ಅಂಗೀಕರಿಸಬಹುದೆಂತಲೂ, ಆದರೆ ಈ ಕರ್ಣಾಟಕ ರಾಷ್ಟ್ರನಿರ್ಮಾಣವೇ ನಮ್ಮ ಪ್ರಾಪ್ಯಸ್ಥಾನವನ್ನಾಗಿ ತಿಳಿದುಕೊಳ್ಳದೆ ಕನ್ನಡದ ಪ್ರಜೆಗಳನ್ನೆಲ್ಲಾ ಪ್ರಬೋಧಗೊಳಿಸಲು ಇದನ್ನು ಮುಖ್ಯ ಸಾಧನವನ್ನಾಗಿ ತಿಳಿದುಕೊಳ್ಳಬೇಕೆಂತಲೂ ಹೇಳಿ, ಹೀಗೆ ಪ್ರತ್ಯೇಕ ರಾಷ್ಟ್ರನಿರ್ಮಾಣದಿಂದ ಸಾಧಿಸುವ ಫಲಗಳನ್ನು ವಿವರಿಸಿ ತಮ್ಮ ಭಾಷಣವನ್ನು ಮುಗಿಸಿರುವರು. ತಾ|| ೧೩-೧೪ ರಲ್ಲೂ ಸಭಾಕಾರ್ಯಗಳು ನಡೆದು ಅನೇಕ ನಿರ್ಧಾರಗಳಾಗಿರುವುವು.

ಒಳದೇಶದ ವೃತ್ತಾಂತಗಳು.

ಧಾರವಾಡ ಪ್ರಾಂತದ ಹಿಂದುಳಿದ ಜನಾಂಗದವರು ಬೇರೆ ರಾಜಕೀಯ ಸಭೆಯನ್ನು ಇಷ್ಟರಲ್ಲೇ ಕೂಡಿಸುವವರಾಗಿದ್ದಾರೆ. ಅದರ ಮ್ಯಾನಿಫೆಸ್ಟೋವನ್ನು ಮುಂದಣವಾರ ಪ್ರಕಟಿಸುತ್ತೇವೆ.

ಬರುವ ತಾ|| ೧೯ ರಲ್ಲಿ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಿಯಮನಿರ್ಮಾಣ ಸಭೆಯು ಕೂಡುವುದು. ಆಗ್ಗೆ ಆದಾಯದ ಮೇಲಣ ತೆರಿಗೆಯ ವಿಷಯಕವಾದ ಸೆಲೆಕ್ಟ್ ಕಮಿಟಿಯವರ ವರದಿಯು ಬಂದು ಚರ್ಚಿಸಲ್ಪಡುವುದು.

ಮೈಸೂರು ವಿಶ್ವವಿದ್ಯಾಲಯದ ವೈಸ್‌ಛಾನ್ಸಲರುದ್ಯೋಗವನ್ನು ವಹಿಸಲಿಷ್ಟಪಡುವಿರಾ ? ಎಂದು ರಾಜಧಾನಿಯ ಅಡ್ವೋಕೇಟರಾದ ರಾ|| ಬ|| ಎಂ. ಸಿ. ರಂಗಯ್ಯಂಗಾರರನ್ನು ಸರ್ಕಾರದವರು ತಂತಿಯ ಮೂಲಕ ಕೇಳಿರುವುದಾಗಿ ತಿಳಿಯುತ್ತೇವೆ.

ಡಾಕ್ಟರ್ ಟಿ. ಎಸ್. ನಂಜಪ್ಪನವರ ಜ್ಯೇಷ್ಠ ಕುಮಾರ ಚನ್ನಪಟ್ಟಣದಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮ|| ಟಿ. ಎನ್. ಮಲ್ಲಪ್ಪನವರು ೧೦-೧೫ ದಿನಗಳಿಂದ ಅಸ್ವಸ್ಥರಾಗಿ ಕೃಷ್ಣರಾಜ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದು ಗುಣವನ್ನು ಹೊಂದದೆ ತಾ|| ೧೪ ರ ಬೆಳಿಗ್ಗೆ ವಿಧಿವಶರಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಇವರಿಗೆ ೩೩ ವರ್ಷ ವಯಸ್ಸು ಮಾತ್ರವಾಗಿದ್ದಿತು.

ಫುಡ್ ಕಂಟ್ರೋಲರ ಆಫೀಸಿನಿಂದ ಮಿ|| ಕೆ. ಮೆಥ್ಯೂರವರ ಸುಳ್ಳು ರುಜುಗೊಂಡ ೧೦೦೦ ರೂ. ನ ಒಂದು ಚೆಕ್ಕು ಮುರಿಸುವುದಕ್ಕಾಗಿ ಬೆಂಗಳೂರಲ್ಲಿರುವ ಮೈಸೂರು ಬ್ಯಾಂಕಿಗೆ ಬಂದಿದ್ದಿತು. ಅಲ್ಲಿನ ಉದ್ಯೋಗಿಗಳು ರುಜುವನ್ನು ನೋಡಿ ಸಂಶಯಪಟ್ಟು ನಿಜಸ್ಥಿತಿಯನ್ನರಿಯುವುದಕ್ಕಾಗಿ ಮಿ|| ಮೆಥ್ಯೂನರ ಆಫೀಸಿಗೆ ಕಳುಹಿಸಿಕೊಡಲು, ಇದರಿಂದ ಸಾವಕಾಶವಾದುದನ್ನು ಕಂಡು ಚೆಕ್ಕನ್ನು ತಂದಿದ್ದ ಆಸಾಮಿಯು ಎಚ್ಚತ್ತು ಹೇಗೋ ತಪ್ಪಿಸಿಕೊಂಡು ಓಡಿದನು. ಆ ಚೆಕ್ಕು ಈಗ ಪೋಲೀಸರ ಕೈಗೆ ಹೋಗಿ ಅವರು ಮುಂದಣಪತ್ತೆ ಕ್ರಮವನ್ನು ನಡೆಯಿಸುತ್ತಿರುವರು.

ರಾಜಬಂಧುವರ್ಗಕ್ಕೆ ಸೇರಿದ ಮ|| ಪುಟ್ಟಯ್ಯಾಜಿಅರಸಿನವರು ತಮ್ಮ ೭೦ ನೆ ವಯಸ್ಸಿನ ಮುಪ್ಪಿನಲ್ಲಿ ಕಳೆದ ತಾ|| ೯ ನೆ ಭಾನುವಾರ ತಾವು ವಾಸಮಾಡುತ್ತಿದ್ದ ಆಲನಹಳ್ಳಿ ಬಂಗಲೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಪೂರ್ವಾಚಾರ ಪರಾಯಣರಾಗಿಯೂ ದಾನಧರ್ಮ ಪರೋಪಕಾರಗಳಲ್ಲಿ ನಿರತರಾಗಿಯೂ ಇದ್ದರು. ಇವರ ಮಕ್ಕಳಲ್ಲಿ ಮ|| ಸುಬ್ರಹ್ಮಣ್ಯರಾಜ ಅರಸರು ಮಹಾರಾಜರ ಬಳಿಯಲ್ಲಿ ಕಾಮ್ದಾರರಾಗಿಯೂ, ಮ|| ಕೃಷ್ಣೇ ಅರಸಿನವರು ಇಂಪೀರಿಯಲ್ ಲ್ಯಾನ್ಸರ್ಸ್ ಸೈನ್ಯದಲ್ಲಿ ಸೇರಿ ರಣರಂಗಕ್ಕೆ ಹೋಗಿ ಸಂಮಾನಿತರಾಗಿ ಬಂದವರಾಗಿಯೂ ಇದ್ದಾರೆ.

ರಾಜಧಾನಿಯ ಕಾಶೀವಿಶ್ವನಾಥ ರೈಸ್‌ಮಿಲ್ ಕರ್ತರೂ ಮ್ಯು|| ಕೌನ್ಸಿಲರೂ ಆದ ಮ|| ಸಿ. ದೊಡ್ಡಯ್ಯನವರು ತಮ್ಮ ತೃತೀಯ ಕುಮಾರಿ ಸೌ|| ಪುಟ್ಟನರಸಮ್ಮನನ್ನು ಗುಂಡ್ಲುಪೇಟೆ ಜವಳಿ ಅಂಗಡಿ ಮ|| ಬೋರಯ್ಯನವರ ಕುಮಾರ ಚಿ|| ಅನ್ನದಾನಪ್ಪನಿಗೆ ಕೊಟ್ಟು ಕಳೆದ ಸೋಮವಾರ ತಮ್ಮ ಮನೆಯಲ್ಲಿ ವಿವಾಹಮಹೋತ್ಸವವನ್ನು ವಿಜೃಂಭಣೆಯಿಂದ ನಡೆಯಿಸಿದರು. ತಾ|| ೧೩ ನೆ ಗುರುವಾರ ಪುರಪ್ರಮುಖರನ್ನೆಲ್ಲಾ ಆರತ್ಯಕ್ಷತೆಗೆ ಬರಮಾಡಿಕೊಂಡು ವೈ|| ಶಿಖಾಮಣಿ ಶೇಷಣ್ಣನವರ ವೀಣಾವಾದನದಿಂದಲೂ, ವಿದ್ವಾನ್ ರಾಚಪ್ಪನವರ ಹಾಡುಗಾರಿಕೆಯಿಂದಲೂ ಸಭಿಕರನ್ನು ಆನಂದಗೊಳಿಸಿ ದಕ್ಷಿಣೆ ತಾಂಬೂಲಾದಿಗಳಿಂದ ಸನ್ಮಾನಿಸಿದರು. ವರಸಾಮ್ಯವು ಚೆನ್ನಾಗಿರುವ ದಂಪತಿಗಳನ್ನು ಸಭಿಕರೆಲ್ಲರೂ ನೋಡಿ ಸಂತೋಷಿಸಿ ಹರಸಿದರು.

ರಾಜಧಾನಿಯಲ್ಲಿದ್ದ ರಾಜಮಂತ್ರಪ್ರವೀಣ ಮ|| ಎಚ್. ವಿ. ನಂಜುಂಡಯ್ಯ ಎಂ. ಎ., ಎಂ. ಎಲ್. ಸಿ. ಐ. ಇ. ಯವರು (ವಿಶ್ವವಿದ್ಯಾಲಯದ ವೈಸ್‌ಛಾನ್ಸಲರು) ೮-೧೦ ದಿನಗಳಿಂದ ಅಸ್ವಸ್ಥರಾಗಿದ್ದು ಕಳೆದ ೭ ನೆ ಶುಕ್ರವಾರ ಸಾಯಂಕಾಲ ತಮ್ಮ ೬೦ ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ, ಇವರು ನಮ್ಮ ಸಂಸ್ಥಾನದಲ್ಲಿ ಮುನ್ಸೀಫ್‌ಗಿರಿ ಮೊದಲುಗೊಂಡು ಚೀಫ್ ಜಡ್ಜಿ ಪದವಿ, ೧ ನೆ ಕೌನ್ಸಿಲ್ ಪದವಿ ವರೆಗೂ ಏರಿ ಸ್ವಲ್ಪಕಾಲ ದಿವಾನ್‌ಗಿರಿಯನ್ನೂ ಆಕ್ಟಿಂಗಾಗಿ ಮಾಡಿದ್ದರು. ಉದ್ಯೋಗದಿಂದ ನಿವೃತ್ತರಾದ ಬಳಿಕ ನಮ್ಮ ವಿಶ್ವವಿದ್ಯಾಲಯವು ಸ್ಥಾಪಿತವಾದಾರಭ್ಯ ಆದರ ವೈಸ್‌ಛಾನ್ಸಲರಾಗಿ ನಿಯಮಿಸಲ್ಪಟ್ಟಿದ್ದರು. ಅಧಿಕಾರದಲ್ಲಿದ್ದರೂ ತಮ್ಮ ವಿದ್ವತ್ತನ್ನು ಪ್ರಜಾಹಿತಕ್ಕಾಗಿ ಉಪಯೋಗಿಸಬೇಕೆಂಬ ಉದ್ದೇಶದಿಂದ ವ್ಯವಹಾರದೀಪಿಕೆ ಮೊದಲಾದ ವ್ಯವಹಾರಶಾಸ್ತ್ರ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದರು. ಇವರ ವಿದ್ವತ್ತು ಸರ್ವತೋಮುಖವಾಗಿದ್ದಂತೆ ಹೃದಯವೂ ವಿಶಾಲವಾಗಿದ್ದರೆ ಮಂತ್ರಿಪದವಿಯನ್ನು ಕೂಡ ಕೆಲವು ಕಾಲ ನಿರ್ವಹಿಸಬಹುದಾಗಿತ್ತು. ಇಂಥ ವಿದ್ಯಾವಂತರ ವಿಯೋಗವು ನಮ್ಮ ದೇಶಕ್ಕೆ ಘಟಿಸಿದುದು ವಿಷಾದಸ್ಥಾನವು.

ಭರತಖಂಡದ ವೃತ್ತಾಂತಗಳು.

ಬೆಲ್ಜಿಯಮ್ಮಿನ ಬ್ರಸಲ್ಸ್ ಪಟ್ಟಣದಲ್ಲಿ ಕೂಡುವುದಕ್ಕಿರುವ ಆರ್ಥಿಕ ಸಭೆಗೆ ಭರತಖಂಡದ ಪ್ರತಿನಿಧಿಗಳಾಗಿ ಹೋಗುವವರೊಳಗೆ ಸರ್ ಫಜುಲ್‌ಭಾಯಿ ಕರೀಂಭಾಯಿಯವರೂ ಒಬ್ಬರಾಗಿದ್ದಾರೆ.

ಆಂಗ್ಲ ಯುವರಾಜರು ಭರತಖಂಡಕ್ಕೆ ದಯಮಾಡಿಸಿದಾಗ್ಗೆ ಹಾಂಡ್ಲೆ ಪೇಜ್ ವೈಮಾನಿಕ ಸಂಘದವರು ಬೊಂಬಾಯಿಯಿಂದ ೫೦ ಮೈಲಿಗಳ ದೂರ ಸಮುದ್ರದ ಮೇಲೆ ಹೋಗಿ ಯುವರಾಜರು ಬರುವ ಹಡಗಿನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಬೇಕೆಂದು ಯೋಚಿಸಿದ್ದಾರೆ.

ಬೊಂಬಾಯಿಯಲ್ಲಿ ೧೪೦ ಮಂದಿ ಮಾರ್ವಾಡಿಗಳು ೩೦ ಟೆಲಿಫೋನುಗಳ ೩ ಅಂತಸ್ತಿನ ಒಂದು ಭವನದಲ್ಲಿ ಸೇರಿ ಹತ್ತಿಯ ಜೂಜನ್ನಾಡುತ್ತಿದ್ದರು. ಪೋಲೀಸರು ಅವರನ್ನೂ ಅವರ ಬಳಿಯಲ್ಲಿದ್ದ ೧,೩೦,೦೦೦ ರೂ. ಲೆಕ್ಕದ ಬುಕ್ಕು ೨೦ ಕಬ್ಬಿಣದ ಪೆಟ್ಟಿಗೆ ಇವುಗಳ ಸಮೇತ ಹಿಡಿದಿದ್ದಾರೆ.

ಉತ್ತರ ಪಶ್ಚಿಮ ರೈಲ್ವೆ ಕಂಪೆನಿಯಲ್ಲಿ ಕೆಲಸ ಮಾಡುವ ಜನರು ಮುಷ್ಕರ ಹಿಡಿದು ಕೆಲಸ ಬಿಟ್ಟಿರುವುದರಿಂದ ಆ ಮಾರ್ಗದಲ್ಲಿ ಪ್ರಯಾಣಿಕರಿಗೆ ಟಿಕೆಟ್ಟುಗಳೇ ಕೊಡಲ್ಪಡುತ್ತಿಲ್ಲ. ಬಂಡಿಗಳ ತಿರುಗಾಟವು ನಿಂತುಹೋಗಿದೆ. ೧-೨ ತರಗತಿಯ ಪ್ರಯಾಣಿಕರೂ ಮತ್ತು ಅಂಚೆಯೂ ಮಾತ್ರ ಸಾಗಿಸಲ್ಪಡುತ್ತಿದ್ದಾರೆ.

ಕರಾಚಿ ಮೊದಲಾದ ಕಡೆಯಲ್ಲಿ ವಾಯುವಿನಲ್ಲಿ ೧೦೪ ರಿಂದ ೧೧೦ ಡಿಗ್ರಿಯ ವರೆಗೂ ಉಷ್ಣಾಧಿಕ್ಯವಾಗಿದೆ. ಪಶ್ಚಿಮವಾಯುವಿನ ಆಧಿಕ್ಯದಿಂದ ಕಾಶ್ಮೀರದಲ್ಲಿ ಮಳೆಯು ಬಿದ್ದು ಮಂಜು ಸುರಿಯುತ್ತಿದೆ. ಬಂಗಾಳಾ, ಬಿಹಾರು, ಅಸ್ಸಾಂ, ಬರ್ಮಾ, ಪೂರ್ವಪಂಜಾಬು, ಮಲಬಾರು ಈ ಕಡೆಗಳಲ್ಲೆಲ್ಲಾ ಮಳೆಯು ಬಿದ್ದಿದೆ.

ಬಂಗಾಳಾ ನಾಗಪೂರು ರೈಲ್ವೆಯಲ್ಲಿ ಹಿಂದೂ ಸಿಪಾಯಿಗಳ ವೇಷವನ್ನು ಧರಿಸಿದ ೭ ಮಂದಿ ಪ್ರಯಾಣಿಕರಲ್ಲಿ ೧೪೦೦೦ ರೂ. ಬೆಲೆ ಬಾಳುವ ಅಫೀಮು ಸಿಕ್ಕಿತು. ಕಲ್ಕತ್ತಾ ಎಕ್ಸೈಜು ಅಧಿಕಾರಿಗಳು ಇವರನ್ನು ಹಿಡಿದು ಸೆರೆಯಲ್ಲಿಟ್ಟಿದ್ದಾರೆ. ಮೋಸಗಾರರ ಬುದ್ಧಿಯು ಕುತಂತ್ರದಲ್ಲಿ ಎಷ್ಟುಮಟ್ಟಿಗೆ ಓಡುವುದೆಂಬುದಕ್ಕೆ ಇದೊಂದು ನಿದರ್ಶನ.

ಕಲ್ಲಿಕೋಟೆಯ ಏರ್ನಾಡು ತಾಲ್ಲೂಕಿಗೆ ಸೇರಿದ ವೆಲ್ಮಣ್ಣಿಯೆಂಬ ಗ್ರಾಮದ ಕಮ್ಮಾರನೊಬ್ಬನು ತನ್ನ ೨ ನೆ ಹೆಂಡತಿಯೊಡನೆ ಮೊದಲನೆ ಹೆಂಡತಿಯ ಮಗನು ಸಂಗಮಾಡಿಕೊಂಡಿರುವುದನ್ನು ಕಂಡು ಕೋಪದಿಂದ ಆ ಮಗನನ್ನು ತುಪಾಕಿಯಿಂದ ಹೊಡೆದು ಕೊಂದು ಪೋಲೀಸು ಠಾಣಾಕ್ಕೆ ಹೋಗಿ ನಡೆದ ಸಂಗತಿಯನ್ನು ತಾನೇ ಹೇಳಿ ಸೆರೆಯಲ್ಲಿರುವನು.

ಕಾಶ್ಮೀರ ಮಹಾರಾಜರು ಯುದ್ಧಕಾಲದಲ್ಲಿ ತಮ್ಮ ದೇಶದ ಇಂಪೀರಿಯಲ್ ಲ್ಯಾನ್ಸರ್ಸ್ ಸೈನ್ಯಕ್ಕಾಗಿ ವೆಚ್ಚಮಾಡಿದ್ದ ಹಣವನ್ನು ಇಂಡಿಯಾ ಸರ್ಕಾರದವರು ಹಿಂದಿರಿಗಿ ಕೊಡಬೇಕಾಗಿದ್ದಿತು. ಆ ಹಣವನ್ನು ೧೭೦೫೫೩೨ ರೂ. ಗಳನ್ನು ಮರಳಿ ತಮಗೆ ಕೊಡಬೇಕಾಗಿಲ್ಲವೆಂದೂ, ಅದನ್ನು ಯುದ್ಧದ ವೆಚ್ಚಕ್ಕಾಗಿ ಕೊಟ್ಟ ಚಂದಾದ್ರವ್ಯವಾಗಿ ತಿಳಿದುಕೊಳ್ಳಬೇಕೆಂದೂ ಮಹಾರಾಜರು ತಿಳಿಯಪಡಿಸಿದುದಕ್ಕಾಗಿ ಇಂಡಿಯಾ ಸರ್ಕಾರದವರು ಕೃತಜ್ಞತೆಯಿಂದ ವಂದಿಸಿದ್ದಾರೆ.

ವಿದೇಶ ವೃತ್ತಾಂತಗಳು.

ದೇಶಸಂಚಾರದಲ್ಲಿರುವ ಆಂಗ್ಲ ಯುವರಾಜರು ಈಗ ನ್ಯೂಜಿಲ್ಯಾಂಡಿನಲ್ಲಿದ್ದಾರೆ.

ಸ್ವೀಡನ್ ಯುವರಾಣಿಯವರು ಕಳೆದ ತಾ|| ೧ರಲ್ಲಿ ವಿಧಿವಶರಾದರು. ಇವರು ನಮ್ಮ ಚಕ್ರವರ್ತಿಯವರ ಚಿಕ್ಕಪ್ಪಂದಿರಾದ ಕನ್ನಾಟ್ ಪ್ರಭುಗಳ ಪುತ್ರಿಯವರು.

ಆಂಗ್ಲಮುಖ್ಯಮಂತ್ರಿ ಲಾಯಿಡ್ ಜಾರ್ಜರವರ ಶರೀರಸ್ಥಿತಿಯು ಆರೋಗ್ಯಕ್ಕೆ ಬಂದು ಅವರು ವಿಶ್ರಾಂತಿಗಾಗಿ ಸಮುದ್ರತೀರವಾಸಕ್ಕೆ ಹೋಗುವವರಾಗಿದ್ದಾರೆ.

ರುಮೇನಿಯಾದವರು ಪೋಲರೊಡನೆ ಸಂಧಿ ಮಾಡಿಕೊಂಡು ರಷ್ಯನರ ಮೇಲೆ ಯುದ್ಧಮಾಡಬೇಕೆಂಬ ಉದ್ದೇಶದಿಂದ ಅವರ ಮಂತ್ರಿಯು ಪೋಲರ ರಾಜಧಾನಿಯಾದ ವಾರ್ಸಾ ಪಟ್ಟಣಕ್ಕೆ ಹೋಗಿದ್ದಾರಂತೆ. ಮತ್ತು ಅವರು ಸೈನಿಕಸನ್ನಾಹವನ್ನೂ ಮಾಡಿಕೊಳ್ಳುತ್ತಿದ್ದಾರೆ.

ತುರ್ಕಿಗೆ ಸಂಬಂಧಿಸಿದ ಸಂಧಿನಿಯಮಗಳ ಪತ್ರವನ್ನು ತಾ|| ೧೧ ರಲ್ಲಿ ಮಿತ್ರಮಂಡಲಿ ಪ್ರತಿನಿಧಿ ಸಭೆಯವರು ಕೊಟ್ಟರು. ಇದಕ್ಕೆ ಉತ್ತರವನ್ನು ಕೊಡಲು ತುರ್ಕಿಯವರಿಗೆ ೧ ತಿಂಗಳ ಗಡುವನ್ನು ಕೊಟ್ಟಿರುತ್ತಾರೆ. ಸಂಧಿಪತ್ರವನ್ನು ಪಡೆದುಕೊಳ್ಳುವುದಕ್ಕಾಗಿ ತುರ್ಕಿಯಿಂದ ವರ್ಸೇಲ್ಸ್ ಪಟ್ಟಣಕ್ಕೆ ತುರ್ಕಿ ರಾಯಭಾರಿಗಳಾಗಿ ಟಾಫಿಕ್‌ಪಾಷಾ (ಅಧ್ಯಕ್ಷ) ರೆಸ್ಡಿದ್‌ಬೇ, ಸಾಹೆದ್ ಮ್ಲಾಬೇ, ಜೆಮಿಲ್‌ಪಾಷಾ, ಮಹಮ್ಮದ್ ಮುಖ್ತಾರ್ ಈ ೫ ಮಂದಿಗಳು ಹೋಗಿರುತ್ತಾರೆ.

ರಷ್ಯಾದ ಬೋಲ್ಷೆವಿಕ್ಕರನ್ನು ಪೋಲರು ಒಂದು ಕಡೆಯಲ್ಲಿ ಸೋಲಿಸಿ ಹಿಂದಕ್ಕೋಡಿಸುತ್ತ ಜಯದಮೇಲೆ ಜಯವನ್ನು ಸಂಪಾದಿಸಿ ಮುಂದಕ್ಕೆ ನುಗ್ಗುತ್ತಿದ್ದಾರೆ. ಅವರ ಸೈನ್ಯವು ೧|| ಲಕ್ಷವಿದೆ. ಅವರನ್ನು ಸೋಲಿಸುವುದಕ್ಕೆ ಬೋಲ್ಷೆವಿಕ್ಕರು ಅಪಾರಸೈನ್ಯವನ್ನು ಕೂಡಿಸಿ ಕಳುಹಿಸುತ್ತಿದ್ದಾರೆ. ಕೀವ್ ಪಟ್ಟಣವು ಪೋಲರ ಸ್ವಾಧೀನವಾಗಿದೆ. ಇತ್ತ ಉಕ್ರೇನಿಯನ್ನರು ರುಮೇನಿಯಾದವರ ಫಿರಂಗಿಗಳ ಸಹಾಯದಿಂದ ಬೋಲ್ಷೆವಿಕ್ಕರ ಮೇಲೆ ಯುದ್ಧಮಾಡಿ ಅವರ ಹಸ್ತದಲ್ಲಿದ್ದ ಒಡೆಸ್ಸಾ ಪಟ್ಟಣವನ್ನು ವಶಪಡಿಸಿಕೊಂಡರು.

ನಾಳೆ ತಾ|| ೨೫ ರಲ್ಲಿ ಸ್ಪಾ ಪಟ್ಟಣದಲ್ಲಿ ಸೇರುವುದಕ್ಕಿರುವ ಸಭೆಗೆ ಜರ್ಮನ್ ಪ್ರತಿನಿಧಿಯೂ ಬರುತ್ತಾರೆ. ಮುಖ್ಯವಾಗಿ ಜರ್ಮನ್ ಸೈನ್ಯವನ್ನು ನಿರಾಯುಧವಾಗಿ ಮಾಡಿ ಅವರ ಸಂಖ್ಯೆಯನ್ನು ತಗ್ಗಿಸುವ, ಮತ್ತು ಕೊಡಬೇಕಾದ ನಷ್ಟಪರಿಹಾರದ್ರವ್ಯದ ವಿಷಯಗಳು ಅಲ್ಲಿ ಇತ್ಯರ್ಥವಾಗುವುವು. ಈಗ ಯಾರ್ಯಾರಲ್ಲಿ ಎಷ್ಟೆಷ್ಟು ಸೈನ್ಯವಿರುವುದೆಂಬುದನ್ನು ಫ್ರಾನ್ಸ್ ಯುದ್ಧಮಂತ್ರಿಯವರು ಹೇಳಿರುತ್ತಾರೆ—ಜರ್ಮನರಲ್ಲಿ ೭೪೪೦೦೦, ಇಂಗ್ಲೀಷರಲ್ಲಿ (ಭರತಖಂಡದಲ್ಲಿರುವುದನ್ನು ಬಿಟ್ಟು) ೫೨೫೦೦೦, ಫ್ರಾನ್ಸಿನವರಲ್ಲಿ ೭೦೦೦೦೦, ಅಮೇರಿಕಾ ಸಂಯುಕ್ತರಾಷ್ಟ್ರದವರಲ್ಲಿ ೩೧೬೦೦೦.

ಮೈಸೂರು ಪ್ರಜಾಪ್ರತಿನಿಧಿ ಸಭಿಕರಲ್ಲಿ ವಿಜ್ಞಾಪನೆ.

ಮಹಾಶಯರೆ,

ಇದೇ ಮೇ ತಿಂಗಳು ತಾ|| ೨೪ ರಿಂದ ರಾಜಧಾನಿಯಲ್ಲಿ ಕೂಡುವುದಕ್ಕಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ತಾವುಗಳೆಲ್ಲರೂ ನಿಯಮನಿರ್ಮಾಣ ಸಭೆಯಲ್ಲಿ ಖಾಲಿಯಾಗಿರುವ ಮ|| ರಾ|| ಎಂ. ಬಸವಯ್ಯನವರ ಸ್ಥಾನಕ್ಕೆ ತಮ್ಮಗಳ ಪಕ್ಷದಿಂದ ಒಬ್ಬ ಮೆಂಬರನ್ನು ಆರಿಸಿ ಕಳುಹಿಸಬೇಕಾದ ವಿಷಯವು ತಮಗೆ ಗೊತ್ತೇ ಇದೆ. ಈಗ ನಾನು ತಮ್ಮಗಳ ಪ್ರತಿನಿಧಿಯಾಗಿ ನಿಯಮನಿರ್ಮಾಣ ಸಭೆಯಲ್ಲಿ ಸೇರಿ ದೇಶಸೇವೆ ಮಾಡಬೇಕೆಂಬ ಕುತೂಹಲದಿಂದಲೂ, ಮಿತ್ರಮಂಡಲಿಯವರ ಪ್ರೋತ್ಸಾಹದಿಂದಲೂ ಉಮೇದುವಾರನಾಗಿರುತ್ತೇನೆ.

ನಾನು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಅಸೋಸಿಯೇಷನ್ನಿನ ಆನರೆರಿ ಜನರಲ್ ಸೆಕ್ರೆಟರಿಯಾಗಿರುವುದಲ್ಲದೆ, ಆ ಅಸೋಸಿಯೇಷನ್ನಿನ ಪಕ್ಷದಿಂದ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿ ಚುನಾಯಿಸಲ್ಪಟ್ಟು ತಮ್ಮಗಳ ಮಧ್ಯದಲ್ಲಿ ದೇಶಸೇವೆ ಮಾಡುತ್ತಿರುವುದೂ, ಪ್ರಜಾಮಿತ್ರಮಂಡಲಿಯ ಜಾಯಿಂಟ್ ಸೆಕ್ರೆಟರಿಯಾಗಿರುವುದೂ, ಮತ್ತು ಸಂಪದಭ್ಯುದಯ ಸಮಾಜದ (ಎಕನಾಮಿಕ್ ಕಾನ್‌ಫರೆನ್ಸಿನ) ಸೆಂಟ್ರಲ್ ಬೋರ್ಡಿಗೆ ನೀವುಗಳು ನಿಮ್ಮ ಪಕ್ಷದಿಂದ ಒಬ್ಬ ಮೆಂಬರನ್ನಾಗಿ ನನ್ನನ್ನು ಚುನಾಯಿಸಿರುವುದೂ ಸಹ ನಿಮಗೆ ಗೊತ್ತೇ ಇದೆಯಷ್ಟೆ. ನನ್ನ ಮೇಲೆ ನೀವು ಪ್ರದರ್ಶಿಸಿರುವ ನಂಬುಗೆಗೂ ನಿರೀಕ್ಷಣೆಗೂ ಅನುಗುಣವಾಗಿ ಈಗಲೂ ನನ್ನ ಕರ್ತವ್ಯತತ್ಪರತೆಯ ಮೇಲೆ ವಿಶ್ವಾಸವಿಟ್ಟು ಆ ಸಮಯಕ್ಕೆ ಸಭೆಗೆ ತಾವು ದಯಮಾಡಿಸಿ ತಮ್ಮ ಅಮೋಘವಾದ ಓಟನ್ನು ನನಗೆ ಕೊಟ್ಟು ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸುವ,

ತಮ್ಮ ವಿಧೇಯ,

ಬೆಂಗಳೂರು ಸಿಟಿ,
ತಾ|| ೧೩-೫-೨೦.
ಜಿ. ಪರಮಶಿವಯ್ಯ,
ಬಿ.ಎ., ಎಲ್‌ಎಲ್.ಬಿ., ಅಡ್ವೊಕೇಟ್.

ಹಿಂದುಳಿದ ಜನಾಂಗಕ್ಕೆ ಸೇರಿದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಲ್ಲಿ ವಿಜ್ಞಾಪನೆ.

ಈ ಮೇ ತಿಂಗಳು ಆಖೈರಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಕಾಲದಲ್ಲಿ ಸೇರುವ ಪ್ರಜಾಪ್ರತಿನಿಧಿ ಸಭೆಯಿಂದ ನಿಯಮನಿರ್ಮಾಣ ಸಭೆಗೆ (ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ) ಪ್ರಜಾಮಿತ್ರಮಂಡಲಿಯ ಜನರಲ್ ಸೆಕ್ರೆಟರಿಯವರಾಗಿದ್ದು ದಿವಂಗತರಾದ ಮ|| ರಾ|| ಎಂ. ಬಸವಯ್ಯನವರ ಸ್ಥಾನಕ್ಕೆ ಒಬ್ಬ ಮೆಂಬರನ್ನು ತಾವುಗಳು ಚುನಾಯಿಸಬೇಕಾಗಿರುವುದು.

ಹಿಂದೆ ದಸರಾ ಕಾಲದಲ್ಲಿ ಮೈಸೂರಿನಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಗೆ ತಾವುಗಳು ದಯಮಾಡಿಸಿ ನಿಯಮನಿರ್ಮಾಣ ಸಭೆಗೆ ಮೆಂಬರುಗಳನ್ನು ಚುನಾಯಿಸಿ ದೇಶಾಭಿಮಾನವನ್ನು ಹೇಗೆ ವ್ಯಕ್ತಪಡಿಸಿರುವಿರೋ ಅದರಂತೆಯೇ ಈಗಲೂ ಸಹ ಹಿಂದುಳಿದ ಜನಾಂಗಕ್ಕೆ ಸೇರಿದ ಮೆಂಬರುಗಳಲ್ಲಿ ಒಬ್ಬರಾದ ಮತ್ತು ಪ್ರಜಾಮಿತ್ರಮಂಡಲಿಯ ಸೆಕ್ರೆಟರಿಯವರಾದ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.ಬಿ., ಯವರು ಉಮೇದುವಾರರಾಗಿ ನಿಂತಿರುತ್ತಾರಾಗಿ, ತಾವುಗಳು ಆ ಸಮಯಕ್ಕೆ ಏನು ಕೆಲಸವಿದ್ದಾಗ್ಯೂ ಬಿಟ್ಟು ಮೈಸೂರಿಗೆ ದಯಮಾಡಿಸಿ ಅವರಿಗೆ ಓಟನ್ನು ಕೊಡುವಿರೆಂದು ಪೂರ್ಣವಾಗಿ ನಂಬಿರುತ್ತೇನೆ.

ಬೆಂಗಳೂರು ಸಿಟಿ,
ತಾ|| 11-5-1920.
ಎಚ್. ಚನ್ನಯ್ಯ, ಪ್ರಸಿಡೆಂಟ್,
ಮೈಸೂರು ಪ್ರಜಾಮಿತ್ರಮಂಡಲಿ.

ಮ|| ಎಂ. ಬಸವಯ್ಯನವರ ಮೃತಿಯಿಂದ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲಿನಲ್ಲಿ ಖಾಲಿಯಾಗಿರುವ ಒಂದು ಸ್ಥಾನಕ್ಕೆ ಮತ್ತೊಬ್ಬರನ್ನು ಆರಿಸುವ ಕೆಲಸವು ಇದೇ ತಿಂಗಳು ಕೊನೆಯ ವಾರದಲ್ಲಿ ರಾಜಧಾನಿಯಲ್ಲಿ ಕೂಡುವ ಪ್ರಜಾಪ್ರತಿನಿಧಿಸಭೆಯಲ್ಲಿ ನಡೆಯುತ್ತದೆ.

ಹಿಂದೆ ಪ್ರಜಾಪ್ರತಿನಿಧಿಸಭಾ ಕಾಲದಲ್ಲಿ ನಾನು ಆಗಿಂದಾಗ್ಗೆ ಒಕ್ಕಲಿಗರ ಪತ್ರಿಕೆಯಲ್ಲಿ ಕೊಟ್ಟ ಸಲಹೆಗಳನ್ನು ನೀವು ಗಮನಕ್ಕೆ ತಂದುಕೊಂಡು ನಿಯಮನಿರ್ಮಾಣ ಸಭೆಗೆ ನಿಮ್ಮ ಬರವಸೆಗೆ ಪಾತ್ರರಾದ ಮೆಂಬರುಗಳನ್ನು ಚುನಾಯಿಸಿ ದೇಶಾಭಿಮಾನವನ್ನು ಹೇಗೆ ವ್ಯಕ್ತಪಡಿಸಿರುವಿರೋ ಅದರಂತೆಯೇ ಈಗಲೂ ಸಹ ಹಿಂದುಳಿದ ಜನಾಂಗಕ್ಕೆ ಸೇರಿದ ಮೆಂಬರುಗಳಲ್ಲಿ ಒಬ್ಬರಾದ ಬೆಂಗಳೂರಿನಲ್ಲಿ ಅಡ್ವೋಕೇಟರಾಗಿರುವ ಮ|| ಜಿ. ಪರಮಶಿವಯ್ಯ ಬಿ. ಎ., ಎಲ್‌ಎಲ್. ಬಿ., ಯವರು ಉಮೇದುವಾರರಾಗಿ ನಿಂತಿರುತ್ತಾರಾದಕಾರಣ, ತಾವುಗಳು ಆ ಸಮಯಕ್ಕೆ ಎಷ್ಟು ಕೆಲಸವಿದ್ದಾಗ್ಯೂ ಬಿಟ್ಟು ಮೈಸೂರಿಗೆ ದಯಮಾಡಿಸಿ ಅವರಿಗೇನೇ ನಿಮ್ಮ ಓಟನ್ನು ಕೊಡುವಿರೆಂದು ಪೂರ್ಣವಾಗಿ ನಂಬಿರುತ್ತೇನೆ.

ಬೆಂಗಳೂರು ಸಿಟಿ,
ತಾ|| ೧೨-೫-೨೦.
ಎಂ. ಸುಬ್ಬಯ್ಯ, ಬಿ. ಎ.,
ಜನರಲ್ ಸೆಕ್ರೆಟರಿ, ಒಕ್ಕಲಿಗರ ಸಂಘ.

ವೀ. ವಿ. ಫಂಡ್ ಸಂಘ.
ಲಗ್ನದ ಫಂಡು.

೧. ಕಾರ್ಕಾರ್ಹಳ್ಳಿ ಗುಡುಕಾರ್ ಮ|| ರಾ|| ಚೆನ್ನಬಸಪ್ಪನವರ ಕುಮಾರ್ತಿ ಚಿ|| ಸೌ|| ಭಾಗೀರಥಮ್ಮನವರನ್ನು ಬೆಳ್ಳಾವೆ ಮ|| ರಾ|| ಸಿದ್ದಲಿಂಗಪ್ಪನವರ ಕುಮಾರ ಚಿ|| ತೋಟದಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. ೫, ಹೆಣ್ಣಿನವರಿಂದ ರೂ. ೩ ಜುಮ್ಲಾ ೮-೦-೦.

೨. ಬೆಂಗಳೂರು ದಂಡಿನಲ್ಲಿರುವ ಮ|| ರಾ|| ಕೆಪ್ಪಣ್ಣನವರ ಕುಮಾರ್ತಿ ಚಿ|| ಸೌ|| ಬಸಮ್ಮನವರನ್ನು ದಂಡಿನಲ್ಲಿರುವ ಮ|| ರಾ|| ಪುಟ್ಟಣ್ಣನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ತೆಗೆದದ್ದು ಮ|| ರಾ|| ಎಸ್. ಕಳ್ಳಪ್ಪನವರ ಮೂಲಕ ರೂ. ೨.

೩. ಬೆಂಗಳೂರು ಫಲಸರ್ಕು ಮಳಿಗೆ ಸೊಲ್ಕುಂಟೆ ಶೆಟ್ಟರು ಮ|| ರಾ|| ಬಸಪ್ಪನವರ ಅಣ್ಣಂದಿರು ಮರಿಯಪ್ಪನವರ ಕುಮಾರ ಮ|| ರಾ|| ಗಂಗಾಧರಪ್ಪನವರಿಗೆ ಮ|| ರಾ|| ಗುಂಜೂರು ಶೆಟ್ಟರು ನೀಲಕಂಠಪ್ಪನವರ ಕುಮಾರ್ತಿ ಚಿ|| ಸೌ|| ಮಲ್ಲಮ್ಮನವರನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ವಧೂವರರಿಂದ ರೂ. ೧೦-೦-೦.

೪. ಧರ್ಮಪುರಿ ಗ್ರಾಮ ಮುನಸೀಫ್ ಮ|| ರಾ|| ಗಿರಿಮಲ್ಲಪ್ಪನವರ ಕುಮಾರ ಚಿ|| ಹುಚ್ಚವೀರಪ್ಪನವರಿಗೆ ತುಂಕೂರು ಮ|| ರಾ|| ಗುಬ್ಬಿನೆಂಬಣ್ಣನವರ ಕುಮಾರ್ತಿ ಚಿ|| ಸೌ|| ಸಿದ್ಧಬಸಮ್ಮನವರನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. ೩, ಬೆಂಗಳೂರು ಮಾಮೂಲುಪೇಟೆ ಕಾಯಂಗಡಿ ಮ|| ರಾ|| ಗುಬ್ಬಣ್ಣನವರಿಂದ ರೂ. ೫.

ಮೇಲ್ಕಂಡ ಮೊಬಲಗು ರೂ. ೨೮ ಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ,
ತಾ|| ೧೨-೫-೧೯೨೦.
ಅಡ್ವೋಕೇಟ್ ಜಿ. ಪರಮಶಿವಯ್ಯ,
ಬಿ. ಎ., ಎಲ್. ಎಲ್. ಬಿ.,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡು, ಸಂಘದ ಸೆಕ್ರೆಟರಿ.

ಪತ್ರವ್ಯವಹಾರ.

ಬಂಕಾಪುರ ವೀರಶೈವ ವಾಚನಾಲಯ.

ಈ ಹೊತ್ತಿನ ದಿವಸ ಶ್ರೀ ಸಿಗ್ಗಾವಿ ಪಟ್ಟದ ಸ್ವಾಮಿಗಳವರ ಆಶೀರ್ವಾದ ಬಲದಿಂದ ಇಲ್ಲಿಯ ಶ್ರೀಮಂತ ಅಪ್ಪಾಸಾಹೇಬ ಮಾಮಲೆ ದೇಸಾಯಿ ಇವರ ಅಧ್ಯಕ್ಷತೆಯ ಕೆಳಗೆ ತರುಣ ವೀರಶೈವ ವಾಚನಾಲಯದ ವಾರ್ಷಿಕ ಸಭೆಯು ಜರಗಿಸಲ್ಪಟ್ಟಿತು. ಸಭೆಯಲ್ಲಿ ಜಮಾಖರ್ಚು ಓದಲ್ಪಟ್ಟು ಉತ್ಸವದ ಭಾಷಣಗಳಾಗಿ ತಾಂಬೂಲ ಅತ್ತರ್ ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜನೆಯಾಯಿತು. ಈ ಸಭೆಗೆ ಇಲ್ಲಿಯ ಶ್ರೀ ಪಟ್ಟದ ಸ್ವಾಮಿಗಳು ಅರಳೆಲೆ ಮಠ ಇವರು ಆಗಮಿಸಿದ್ದರಿಂದ ಸಭೆಗೆ ಮತ್ತಿಷ್ಟು ಕಳೆಯೇರಿತು.

ಧಾರವಾಡದ ವೀರಶೈವಪ್ರಮುಖರಿಗೊಂದು ವಿನಂತಿ.

ಧಾರವಾಡ ಜಿಲ್ಲಾದ ವತಿಯಿಂದ ಮುಂಬೈ ಲೆ|| ಕೌನ್ಸಿಲಿನಲ್ಲಿ [illegible] ಸ್ಥಳಗಳು ಮೆಂಬರರ ಸಲುವಾಗಿ ಗೊತ್ತುಪಡಿಸಿವೆ. ನಮ್ಮ ವೀರಶೈವರಲ್ಲಿ ೩ ಜನರು ಉಮೇದುವಾರರಾಗಿ ನಿಲ್ಲುವರೆಂದು ಚಂದ್ರೋದಯಕರ್ತರು ತಿಳಿಸಿದ್ದರು. ಈಗ ಸ್ಥಳಗಳು ೨ ಆಗಿವೆ. ಉಮೇದುವಾರರು ೩ ಜನರಾಗಿದ್ದಾರೆ. ಈ ಬಗ್ಗೆ ಧಾರವಾಡ ಪ್ರಮುಖರು ತೀವ್ರ ಆಲೋಚನೆ ಮಾಡಿ ನಿಲ್ಲತಕ್ಕ ಉಮೇದುವಾರರನ್ನು ಗೊತ್ತುಪಡಿಸಿದರೆ ಅವರು ಪ್ರಯತ್ನಮಾಡಲಿಕ್ಕೆ ಸುರುವು ಮಾಡಬಹುದು. ತಾವು ಆಲೋಚನೆ ಮಾಡಿ ಇಬ್ಬರ ಹೆಸರನ್ನು ಖಾಯಂ ಮಾಡಿರಿ. ನಿಲ್ಲುವರೇ ಖಾಯಮಿಲ್ಲದಾಗ ಅವರು ಪ್ರಯತ್ನಮಾಡುವ ಬಗೆಯೆಂತು ? ಓರ್ವವೀರಶೈವ.

ದಾವಣಗೆರೆ.

ದಾವಣಗೆರೆ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡಲು ಅಪೇಕ್ಷೆ ಪಡುವ ಮೈಸೂರು ಸೀಮೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಫ್ರೀಯಾಗಿ ಊಟಕ್ಕೂ ವಸತಿಗೂ ಏರ್ಪಡಿಸಿದೆ. ಅಪೇಕ್ಷೆಯುಳ್ಳ ಬಡ ವಿದ್ಯಾರ್ಥಿಗಳು ಈ ತಿಂಗಳು ತಾರೀಖು ೨೭ ನೇ ಗುರುವಾರದೊಳಗಾಗಿ ತಮ್ಮ ಗ್ರಾಮದ ಪ್ರಮುಖ ೫ ಜನರ ಸಾಕ್ಷಿಯುಳ್ಳ ಸರಟಿಫಿಕೇಟ್ ಸೊಂದಿಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಬರಕೊಳ್ಳುವುದು. ಮತ್ತು ಜೂನ್ ೩ ನೆ ತಾರೀಖಿನ ದಿವಸ ಅರ್ಜಿ ವಿಮರ್ಶೆ ಆಗುವ ಪ್ರಯುಕ್ತ ತಾವು ಆ ದಿನ ಇಲ್ಲಿ ಹಾಜರು ಇರತಕ್ಕದ್ದು.

ಸೆಕ್ರೆಟರಿ ವೀರಶೈವ ವಿದ್ಯಾವರ್ಧಕ ಸಂಘದ ಫಂಡ್, ದಾವಣಗೆರೆ.

ರಾ|| ರಾ|| ಸೆಕ್ರೆಟರಿ ಪಟ್ಟಚರಾಧಿಕಾರಿ ಕಾನ್‌ಫರೆನ್ಸ್ ನವಲಗುಂದ ಇವರಿಗೆ.

ಶ|| ಶ|| ನಿಮ್ಮ ನೋಟೀಸನ್ನು ಇದೇ ಈಗ ಸ್ಟಾರ್‌ನಲ್ಲಿಯೂ ಶುಭೋದಯದಲ್ಲಿಯೂ ಕಂಡೆನು. ನಾನು ಮಧ್ಯಸ್ಥರನ್ನು ಕರತಂದರೆ ಬೇಕು ಬೇಡೆಂತ ವಾದವಾದೀತು. ಇದಲ್ಲದೆ, ನನಗೆ ಕಾಶೀ ಕಲ್ಕತ್ತಾದ ಕಡೆಯ ಪಂಡಿತರ ಪರಿಚಯವಿಲ್ಲ. ನೀವು ಬೇಕಾದ ಪರಮತೀಯ ಸಂಸ್ಕೃತ ಮಹಾಮಹೋಪಾಧ್ಯಾಯ ಪಂಡಿತರನ್ನು ಕರೆಸಿರಿ. ಅವರ ಸಮಕ್ಷ ಸಂಸ್ಕೃತದಲ್ಲಿಯೇ ವಾದ ಜರುಗಿಸಲು ನನ್ನ ಸಮ್ಮತಿಯದೆ. ನನಗೆ ತಾ|| ೧೬-೫-೧೯೨೦ ರ ತನಕ ಮಧ್ಯಸ್ಥರನ್ನು ನೇಮಿಸಿದ ವಿಷಯಕ್ಕೆ ತಿಳಿಸಿರಿ. ನೀವು ತಾ|| ೨೬-೨೭ ನೇ ಮೇಯಲ್ಲಿ ನಾನು ಸಭಾಪ್ರವೇಶ ಮಾಡಲಾಗದೆಂದು ಬರೆಯುತ್ತೀರಿ. ನಿಮ್ಮ ಇಷ್ಟವು. ಆದರೆ ಮಧ್ಯಸ್ಥರ ಮುಖಾಂತರ ವಾದಜರಗುವ ತನಕ ನನ್ನ ಲೇಖಖಂಡನ ವಿಷಯವಾಗಿ ಠರಾವ ಮಾಡಲಿಕ್ಕೆ ನಿಮಗೆ ಅಧಿಕಾರವಿಲ್ಲ. ಇದೇ ಈಗ ನಿಮಗೆ ಖಾಸಗಿ ಪತ್ರ ಬರೆದಂತೆ ಈ ಪ್ರಕಟ ಪತ್ರವನ್ನೂ ಬರೆದಿದೆ. ತಾ|| ೨೦-೫-೨೦ ಹಾವಟಿ ಸಿದ್ಧರಾಮಪ್ಪ.

ವಿವಾಹ ಮಹೋತ್ಸವ.

ತಾ|| 10-5-20 ನೇ ಸೋಮವಾರ ದಿನ ಮ|| ಫಲ್ಗುಣಿ ಮಂಜೇಗೌಡರ ಮಗ ದುಗ್ಗೇಗೌಡರಿಗೆ ಆಲದೂರು ದಾಖಲೆ ಕೆಶಾರದಹಳ್ಳಿ ಮ|| ದೇವೇಗೌಡರ ಕುಮಾರ್ತಿ ಚಿ|| ಸೌ|| ನಂಜಮ್ಮನೆಂಬ ವಧುವನ್ನು ತಂದು ಕೆಶಾರದಹಳ್ಳಿಯಲ್ಲಾದ ವಿವಾಹ ಕಾಲದಲ್ಲಿ ದಾರಾಮುಹೂರ್ತವಾದ ನಂತರ ಸಭೆಗೂಡಿದಾಗ್ಗೆ ಮ|| ರಾ|| ಬಿ. ಪುಟ್ಟಂಣಶೆಟ್ಟರವರ ಸೂಚನೆಯ ಮೇರೆ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಉದ್ದೇಶವನ್ನೂ ಇದರಿಂದ ವೀರಶೈವ ವಿದ್ಯಾರ್ಥಿಗಳಿಗುಂಟಾಗಿರುವ ಸೌಕರ್ಯಗಳನ್ನೂ ಕುರಿತು ಮ|| ಎ. ವಿ. ಅಮೃತಗೌಡರು ಭಾಷಣಮೂಲಕ ತಿಳಿಯ ಹೇಳಲು ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲದ ಬಗೆಗಾಗಿ ವರನ ಪಕ್ಷದಿಂದ 1-0-0 ಮತ್ತು ವೀ ವಿ. ಫಂಡಿಗೆ 2-0-0 ವಧುವಿನ ಪಕ್ಷದವರಾದ ಮ|| ಕೆಶಾರದಹಳ್ಳಿ ಸಿದ್ದೇಗೌಡರಿಂದ 2-0-0 ಅಂತೂ 5-0-0 ರೂಪಾಯಿಗಳು ವಸೂಲ್ ಬಂದವು. ಅನಂತರ ಸಭೆಯು ಬರಖಾಸ್ತಾಯಿತು. ಎ. ಅಮೃತಗೌಡ.

ಮಹಾಗಣಾರಾಧನೆ ಮತ್ತು ಉಪಸಭೆ.

ಶಿಕಾರಿಪುರ ತಾಲ್ಲೂಕು ದಕ್ಷಿಣ ಕೇದಾರಕ್ಷೇತ್ರ ಬೆಳಗಾವಿಯಲ್ಲಿ ಏಪ್ರಿಲ್ ತಾರೀಖು ೨೫ ನೆ ದಿವಸ ವಿರಕ್ತ ಮಠದಲ್ಲಿ ಅನೇಕ ವಟುಗಳಿಗೆ ದೀಕ್ಷಾ ಸಂಸ್ಕಾರವೂ ಸಾಲ್ಗಿ ಮಠದ ಶಿ|| ವೇ|| ಚೆನ್ನಬಸವಯ್ಯನವರ ಪುತ್ರ ವೀರಯ್ಯನೆಂಬ ವಟುವಿಗೆ ಸದರೀ ಮಠದ ಚೆನ್ನಬಸವ ಶಿವಯೋಗಿಗಳ ಉತ್ತರಾಧಿಕಾರಿತ್ವ ನಿಶ್ಚಯವೂ ಪಟ್ಟಚರಾಧಿಪತಿಗಳ ಸಮೂಹದೊಡನೆ ಜರಗಿತು. ತಾ|| 26 ರಲ್ಲಿ ಅನೇಕ ಭಕ್ತ ಮಾಹೇಶ್ವರರ ಸಂತರ್ಪಣ ಪೂರ್ವಕ ಶ್ರೀ ತ್ರಿಪುರಾಂತಕೇಶ್ವರನ ಪಟಾಂಗಣದಲ್ಲಿ ಧರ್ಮೋತ್ತೇಜಕ ಸಭೆಯು ಸೇರಿತು. ಅಧ್ಯಕ್ಷಸ್ಥಾನವನ್ನು ಶ್ರೀ ಕ್ಯಾಸನೂರ ಸಂಸ್ಥಾನದ ಪಂಡಿತ ಗುರುಬಸವಶಿವಾಚಾರ್ಯರವರು ವಹಿಸಿದ್ದರು. ಮ|| ಬಸವಣ್ಣೆಪ್ಪ ಹಿರೇಜಂಬೂರ ಇವರು ಸ್ವಾಗತ ಭಾಷಣದೊಡನೆ ಈ ಕ್ಷೇತ್ರದ ವಿಷಯದಲ್ಲಿ ವಿಸ್ತೃತ ಭಾಷಣವನ್ನು ಮಾಡಿದರು. ಜಡೆದ ಸ್ಕೂಲ ಮಾಸ್ತರ ವೇ|| ಕಲ್ಲಯ್ಯನವರು ವಿದ್ಯಾ ವಿಷಯದಲ್ಲಿಯೂ, ಉಡುಗಣಿ ರಾ|| ಬಸವಣ್ಣಪ್ಪನವರು ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿಯೂ ಮಾಳಗುಂಡಕೊಪ್ಪದ ವೇ|| ರುದ್ರಯ್ಯನವರು ಭಕ್ತಾಚಾರದ ವಿಷಯದಲ್ಲಿಯೂ, ವಿರಕ್ತ ಮಠದ ಮರಿದೇವರು ಮಾಹೇಶ್ವರಾಚಾರ ವಿಷಯದಲ್ಲಿಯೂ, ಮಾಸ್ತರ ರಾ|| ಶಿವರುದ್ರಪ್ಪನು ಕೃಷಿ ವಾಣಿಜ್ಯ ವಿಷಯದಲ್ಲಿಯೂ ಭಾಷಣ ಮಾಡಿದನಂತರ ಸದರಿ ವಿರಕ್ತ ಮಠದ ಚೆನ್ನಬಸವ ಶಿವಯೋಗಿಗಳು ಪ್ರಾಚೀನ ವೈದಿಕ ವಿರಕ್ತಾಶ್ರಮದ ವಿಷಯದಲ್ಲಿಯೂ, ದೀಕ್ಷಾಗುರುವೇ ಶಿಕ್ಷಾಗುರು ಮೋಕ್ಷಾಗುರುವಾಗುವನೆಂಬ ವಿಷಯದಲ್ಲಿಯೂ ಸರಳಭಾಷಣವನ್ನು ಮಾಡಿದರು. ಸದರಿ ವಿಷಯದ ಮೇಲೆ ಕಲ್ಲರಿ ಕಲ್ಲುಮನೆ ವಗೈರೆ ಮಠಗಳ ನಿರಂಜನ ಶ್ರೀಗಳವರಿಂದ ಬಂದಿದ್ದ ಭಾಷಣಗಳು ಓದಲ್ಪಟ್ಟವು. ಆ ನಂತರ ಅಧ್ಯಕ್ಷರವರು ವೀರಶೈವರ ವರ್ಣಾಶ್ರಮಧರ್ಮ ವಿಷಯವಾಗಿ ಸಪ್ರಮಾಣವಾಗಿ ಗಂಭೀರವಾದ ಭಾಷಣವನ್ನು ಮಾಡಿದರು. ಆ ವೇಳೆ ವೈದಿಕರ ವೇದಘೋಷದೊಡನೆ ಸಭೆಯು ಮುಗಿಸಲ್ಪಟ್ಟಿತು. ಓರ್ವಪ್ರೇಕ್ಷಕ.

ಬೇರಿಕೆ ಸಂಸ್ಥಾನದಲ್ಲಿ ನಡೆದ ಶಿವಲಿಂಗ ಪ್ರತಿಷ್ಠೆಯು.

ಶ್ರೀ ಪುಂಗನೂರು ಸಂಸ್ಥಾನದಲ್ಲಿರುವ ದೊಡ್ಡ ಮಠದ ಶ್ರೀ ಚರವರ್ಯ ಸಾಂಬಸದಾಶಿವ ಮಹಾಸ್ವಾಮಿಗಳವರ ಆಜ್ಞಾಧಾರಕರಾದ ಶ್ರೀಮನ್ ಮಹಾ ಮುಮ್ಮಡಿ ಅಂಕುಶಗಿರಿ ಸಂಸ್ಥಾನಾಧಿಪ ಶ್ರೀಮನ್ ಪುಟ್ಟಣ್ಣಮಹಾರಾಜ ವಂಶೋದ್ಭೂತ ಬಸವರಾಜಪ್ರಭುಗಳವರ ಪರಿಪಾಲನೆಗೊಳಪಟ್ಟ ಬೇರಿಕೆಗ್ರಾಮದಲ್ಲಿರುವ ನಂಜಮ್ಮಣ್ಣಿಯವರು ಬೇರಿಕೆಗ್ರಾಮದ ಪಶ್ಚಿಮಭಾಗದಲ್ಲಿ ಶ್ರೀ ಸಾಂಬಸದಾಶಿವಸ್ವಾಮಿಗಳಿಗೆ ನೂತನವಾದ ಒಂದು ಮಠವನ್ನು ಕಟ್ಟಿಸಿಕೊಟ್ಟು ಅದರ ಬಲಭಾಗದಲ್ಲಿ ಅಂದವಾದ ದೇವಾಲಯವನ್ನು ಕಟ್ಟಿಸಿ ನಿಗಮಾಗಮ ಪುರಾಣೇತಿಹಾಸ ಪ್ರಸಿದ್ಧ ಪರಾತ್ಪರ ಪರಮ ಶ್ರೀಕಂಠೇಶ್ವರಾಭಿಧೇಯ ನೂತನ ಶಿವಲಿಂಗಪ್ರತಿಷ್ಠೆಯು ವೈದಿಕಾಗಮವಿಧಿಗನುಸಾರವಾಗಿ ಇದೇ ರೌದ್ರಿನಾಮ ಸಂವತ್ಸರದ ವೈಶಾಖ ಶುದ್ಧ ೧೩ ಶುಕ್ರವಾರ ದಿವಸ ೧೦ ಗಳಿಗೆಗೆ ಸಲ್ಲುವ ಶುಭಕಟಕ ಲಗ್ನದಲ್ಲಿ ನಡೆಯಿಸಲ್ಪಟ್ಟಿತು. ಈ ಪ್ರತಿಷ್ಠಾಗಮ ಕಾರ್ಯವು ಮಾಗಡಿ ವೇ|| ಎಸ್. ವೀರಪ್ಪಶಾಸ್ತ್ರಿಗಳು ನೆಲಮಂಗಲದ ಮಹಂತಿನ ಮಠದ ವೇ|| ಆರ್. ಕೆಪ್ಪಣ್ಣಶಾಸ್ತ್ರಿಗಳು ಇವರುಗಳಿಂದ ವಿಧ್ಯುಕ್ತವಾಗಿ ಸಾಂಗವಾಗಿ ದಶಮಿಯಾರಭ್ಯ ೫ ದಿವಸದವರೆಗೂ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕೆ ಅತ್ತಿಬೆಲೆ ಶ್ರೀ ಜಡೇಸ್ವಾಮಿಗಳವರು ಆನೇಕಲ್ಲು ಶ್ರೀ ಸೋಮಶೇಖರಸ್ವಾಮಿಗಳವರು ಇನ್ನೂ ಅನೇಕ ಸಹಸ್ರಾರು ಜನ ಭಕ್ತ ಮಾಹೇಶ್ವರರು ದಯಮಾಡಿಸಿದ್ದರು. ಅಲ್ಲಿ ದಾಸೋಹ ಮೊದಲಾದ ಏರ್ಪಾಟುಗಳು ಬಹಳ ತೃಪ್ತಿಕರವಾಗಿಯೂ ವಿಚಕ್ಷಣೆಯಾಗಿಯೂ ನಡೆದುವು. ಈ ಕಾರ್ಯಕ್ಕೆ ದಯಮಾಡಿಸಿದ್ದ ಉಭಯಶಾಸ್ತ್ರಿಗಳಿಗೂ ಉಚಿತವಾದ ಸನ್ಮಾನಗಳು ನಡೆದುವು. ಆ ಕಾಲದಲ್ಲಿ ವೇ|| ಶಾಸ್ತ್ರಿಗಳವರು ಎದ್ದುನಿಂತು ಈಗ ಹಾಲಿ ನಡೆಯುತ್ತಿರುವ ಮೈಸೂರ್ ಸ್ಟಾರ್ ಪತ್ರಿಕೆಯಿಂದುಂಟಾಗಿರುವ ಪ್ರಯೋಜನವನ್ನೂ ಮತ್ತು ಕೈಲಾಸವಾಸಿ ಮ|| ವೈ. ವೀರಸಂಗಪ್ಪನವರು ಈ ಮಠಕ್ಕಾಗಿ ಮಾಡಿದ ಮಹೋಪಕಾರ ವಿಷಯಗಳನ್ನೂ ವಿವರಿಸಿ ಸ್ಟಾರ್ ಪತ್ರ ಚಿರಜೀವಿತೆಗಾಗಿ ಇಂಥಾ ಸದ್ಧರ್ಮಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯಾನುಸಾರ ಚಂದಾ ದ್ರವ್ಯಸಹಾಯ ಮಾಡಬೇಕೆಂದು ಉಪನ್ಯಾಸ ಮಾಡಿದ್ದರ ಮೇಲೆ ಶ್ರೀ ಚರವರ್ಯ ಸಾಂಬಸದಾಶಿವ ಸ್ವಾಮಿಗಳವರು ನಂಜಮ್ಮಣ್ಣಿಯವರಿಂದ ೨ ರೂಪಾಯಿಗಳನ್ನು ತೆಗಿಸಿ ವೈ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿಯೂ ಸ್ಟಾರ್ ಪತ್ರ ಚಿರಜೀವಿತೆಗಾಗಿಯೂ ಒಂದೊಂದು ರೂಪಾಯನ್ನು ತಾಂಬೂಲದೊಡನೆ ವೇ|| ಶಾಸ್ತ್ರಿಗಳವರ ಸುಪರ್ದಿಗೆ ಕೊಟ್ಟು ನೆರೆದಿದ್ದ ಭಕ್ತಮಾಹೇಶ್ವರರುಗಳಿಗೆ ಗಂಧ ಪುಷ್ಪ ದಕ್ಷಿಣಾ ತಾಂಬೂಲಾದಿಗಳು ಸಮರ್ಪಿಸಲ್ಪಟ್ಟವು. ಪ್ರತ್ಯಕ್ಷದರ್ಶಿ.

ದೇವತಾಸೇವೆಯಲ್ಲಿ ೨ ನೆ ಧಾರ್ಮಿಕ ಸಭೆ.

ತರೀಕೆರೆ ತಾಲ್ಲೂಕು ಅಜ್ಜಂಪುರದ ಸಮ್ಮತು ಗೊಂಡೇದಹಳ್ಳಿ ಗ್ರಾಮದ ಸ್ಥಾನಿಕ ಗುರಪ್ಪನವರ ಮಗ ಬಸಪ್ಪನವರು ಪ್ರತಿ ವರ್ಷದಂತೆ ಈ ವರ್ಷವೂ ತಾ|| ೧೫-೪-೨೦ ರಲ್ಲಿ ಪುರಾಣಪ್ರಸಿದ್ಧ ಶ್ರೀಮಜ್ಜಗದ್ಗುರು ಸೊನ್ನಲಾಪುರದ ಶ್ರೀಗುರು ಸಿದ್ಧರಾಮೇಶ್ವರಸ್ವಾಮಿಯವರನ್ನು ಗ್ರಾಮಸ್ಥರ ಸಹಾಯಬಲದಿಂದ ತನ್ನ ಸ್ವಗೃಹಕ್ಕೆ ದಯಮಾಡಿಸಿಕೊಂಡುಬಂದು ಮಹಾಪೂಜಾ ಮಹಾಗಣಾರಾಧನೆ ಸೇವೆ ನಡಿಸಿ ಉದಾರ ಧರ್ಮಖರ್ಚಿನಿಂದ ಶ್ರೀ ಸ್ವಾಮಿಯವರ ಕೃಪಾಶೀರ್ವಾದಕ್ಕೂ ಜನಾನುರಾಗಕ್ಕೂ ಪಾತ್ರರಾದರು. ಈ ಮಹೋತ್ಸವ ಸಮಯದಲ್ಲಿ ಜನಸಂದಣಿ ಸೇರುವುದನ್ನು ಅರಿತು ವೇ|| ಆರ್. ಚನ್ನಬಸವಾರಾಧ್ಯಸ್ವಾಮಿ ಅಜ್ಜಂಪುರದ ಹಿರೇಮಠ ಅವರು ಕಾಟಿಗನರೆ ಗ್ರಾಮಸ್ಥರಿಗೆ ಸಲಹೆ ಕೊಟ್ಟು ಆ ಗ್ರಾಮದ ಗಂಗಮ್ಮದೇವರ ಗುಗ್ಗುಲ ಮಹೋತ್ಸವದಲ್ಲಿಯೂ ಸದರಿ ಶ್ರೀಗುರು ಸಿದ್ಧರಾಮೇಶ್ವರಸ್ವಾಮಿಯವರ ಆಗಮನ ಮಹೋತ್ಸವದ ಸಮಯದಲ್ಲಿಯೂ ತಾ|| ೭-೪-೨೦ ನೆ ದಿವಸ ೧ ನೆ ಧಾರ್ಮಿಕ ಸಭೆಯು ಮ|| ರಾ|| ಅಜ್ಜಂಪುರದ ಶೆಟ್ಟರ ಎಸ್. ಸಿದ್ಧಪ್ಪನವರು ಸಾಹುಕಾರ್ ಮತ್ತು ಆನರೆರಿ ವೈಸ್-ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ನೆರೆದು ಗುರುದೇವತಾ ರಾಜಭಕ್ತಿ ವಿದ್ಯಾಪ್ರಸಾರ ಏಕಮತ್ಯ ಗ್ರಾಮಾಭಿವೃದ್ಧಿ ಇತ್ಯಾದಿಗಳ ಮೇಲೆ ಉಪನ್ಯಾಸಗಳು ನಡೆದಂತೆ ಜನಸಂದಣಿ ಸೇರುವ ಪ್ರತಿ ದೇವತಾದಿ ಶುಭಕಾರ್ಯಾದಿಗಳಲ್ಲಿಯೂ ಇಂಥ ಚಿಕ್ಕ ಚಿಕ್ಕ ಧಾರ್ಮಿಕ ಸಭೆಗಳು ಪ್ರತಿ ಗ್ರಾಮ ಹೋಬಳಿ ಇತ್ಯಾದಿ ಕ್ಷೇತ್ರಸ್ಥಾನಗಳಲ್ಲೂ ನಡೆದು ಮತಾಚಾರ ಧರ್ಮಪ್ರಚಾರವಾಗುವಂತೆ ಉತ್ತೇಜನ ಕೊಟ್ಟ ಆರಾಧ್ಯ ಸ್ವಾಮಿಯವರ ಸಲಹೆಯನ್ನು ಎಸ್. ಜಿ. ಬಸಪ್ಪ ಇವರು ಅಂಗೀಕರಿಸಿ ತಾ|| ೧೬-೪-೨೦ ನೆ ದಿವಸ ಶ್ರೀ ಸ್ವಾಮಿಯವರ ಬಿಡಾರದ ಮುಂಭಾಗದಲ್ಲಿ ಅಲಂಕರಿಸಿದ್ದ ಚಪ್ಪರದಲ್ಲಿ ಮ|| ರಾ|| ಶೆಟ್ಟರವರ ಅಧ್ಯಕ್ಷತೆಯಿಂದಲೇ ನೆರೆದು ಶ್ರೀಗುರು ಸಿದ್ಧರಾಮೇಶ್ವರಸ್ವಾಮಿಯವರ ಅವತಾರ ಮಹಿಮೆಗಳು ಅಷ್ಟಾವರಣ ಪಂಚಾಚಾರೋತ್ಪತ್ತಿ ಮಹತ್ವ ಇತ್ಯಾದಿಗಳ ಮೇಲೆ ಅಧ್ಯಕ್ಷರೂ ಮತ್ತು ಆರಾಧ್ಯ ಸ್ವಾಮಿಯವರೂ ಎಸ್. ಎಂ. ಯೋಗೀಶ್ವರ ಶಾಸ್ತ್ರಿಗಳೂ ಸಭಿಕರಿಗೆ ಭಕ್ತಿವಿಶ್ವಾಸ ಹುಟ್ಟುವಂತೆ ಭಾಷಣ ಮಾಡಿದರು. ಈ ಸಮಯದಲ್ಲಿ ಉದಾರವಾಗಿ ಖರ್ಚು ಮಾಡಿದ ಸದರಿ ಬಸಪ್ಪನವರು ವಿದ್ಯಾವಂತರಲ್ಲದೆ ಇದ್ದಾಗ್ಯೂ ಕೂಡ ಮತವಿಚಾರಗಳನ್ನು ಬೋಧಿಸುವ ಸ್ಟಾರ್ ಪತ್ರಿಕೆಗೆ ಚಂದಾದಾರರಾಗಬೇಕೆಂತಲೂ ಮತ್ತು ಮೈಸೂರು ವಿದ್ಯಾಭಿವೃದ್ಧಿ ಫಂಡಿಗೆ ೨-೦-೦ ಎರಡು ರೂಪಾಯಿಯೂ ಕೈ|| ವೈ. ವೀರಸಂಗಪ್ಪನವರ ಸ್ಮಾರಕ ಫಂಡಿಗೆ ೧-೦-೦ ರೂಪಾಯಿ, ಜುಮ್ಲಾ ಮನಿ ಆರ್ಡರ್ ಖರ್ಚು ವಗೈರೆ ೫-೮-೦ ಯನ್ನು ತೆಗಿಯಬೇಕೆಂದು ಆರಾಧ್ಯ ಸ್ವಾಮಿಯವರು ಸೂಚಿಸಿದ್ದನ್ನು ಅಧ್ಯಕ್ಷರು ಪುಷ್ಪೀಕರಿಸಿದ್ದರ ಮೇಲೆ ಬಸ

ಪ್ಪನವರ ಸಂಬಂಧಿ ಕಾಜಗನೂರೆ ಎಸ್. ಸಿದ್ದೇಗೌಡರು ಆರಾಧ್ಯಸ್ವಾಮಿಯವರ ವಶಕ್ಕೆ ಒಪ್ಪಿಸಿದರು. ನಂತರ ಅಧ್ಯಕ್ಷರಿಗೆ ಸುಗಂಧ ಪುಷ್ಪ ಹಾರ ತುರಾಯಿ ಒಪ್ಪಿಸಿದ ಮೇಲೆ ನಮ್ಮ ಜನಾಂಗದಲ್ಲಿ ಕೋಂವಾರು ಹಿಂದುಳಿದ ಜನಾಂಗದವರನ್ನು ಮುಂದಕ್ಕೆ ತರಲು ನಡುಕಟ್ಟಿದ್ದ ನ್ಯಾಯವಿಧಾಯಕ ಸಭಾ ಮೆಂಬರೂ ಮತ್ತು ಅಡ್ವೋಕೇಟರೂ ಆಗಿದ್ದ ಮ|| ರಾ|| ಎಂ. ಬಸವಯ್ಯನವರು ಬಿ. ಎ, ಬಿ. ಎಲ್. ಅವರ ಅಕಾಲಮರಣವನ್ನು ಸಭಿಕರಿಗೆ ಸೂಚಿಸಿ ವಿಷಾದ ಪ್ರದರ್ಶನವನ್ನು ಮಾಡಿದ್ದರಲ್ಲಿ ಮೃತರ ಆತ್ಮಕ್ಕೆ ಶಾಂತಿಯೂ ಬಂಧುವರ್ಗದವರಿಗೆ ಸಮಾಧಾನವೂ ಉಂಟಾಗಲೆಂದು ಸಭಿಕರು ಕೋರಿದರು ಅನಂತರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ದೇವತಾಭಕ್ತಿ ತತ್ಪರರಾದ ಬಸಪ್ಪನವರಿಗೂ ಗ್ರಾಮಸ್ಥರಿಗೂ ಶ್ರೇಯಃಪ್ರಾರ್ಥನೆ ಮಾಡಿ ಅಧ್ಯಕ್ಷರು ವಗೈರೆ ಸಭಿಕರಿಗೆ ಫಲತಾಂಬೂಲ ವಿನಿಯೋಗದಿಂದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು. ವೇ|| ಆರಾಧ್ಯಸ್ವಾಮಿಯವರ ಸಲಹೆಯಿಂದಲೇ ಫೆಬ್ರುವರಿ ಮಾಹೆಯಲ್ಲಿ ಬಗ್ಗವಳ್ಳಿ ಗ್ರಾಮದಲ್ಲಿ (ತರೀಕೆರೆ ತಾಲ್ಲೂಕು ವೀರಶೈವ ಕಾನ್ಫರೆನ್ಸ್) ನಡೆದದ್ದೆಂಬುದೂ ಅದರ ಮೇಲುಪಂಗ್ತಿ ಅನುಸರಿಸಿ ಗ್ರಾಮಾಂತರಗಳಲ್ಲಿ ಈ ಪ್ರಾಂತ ಧಾರ್ಮಿಕ ಸಭೆಗಳು ನಡೆಯುವಂತೆ ಏರ್ಪಡಿಸಿರುವದೂ ಸ್ತುತ್ಯವಾದದ್ದೆಂದು ಪ್ರತಿ ಗ್ರಾಮದವರೂ ದುಂದು ಖರ್ಚು ಮಾಡದೆ ಧಾರ್ಮಿಕ ಸಭಾಕಾರ್ಯದಲ್ಲಿ ಆಸಕ್ತರಾಗಬೇಕೆಂದೂ ಅಧ್ಯಕ್ಷರು ಸಭಿಕರಿಗೆ ಪ್ರೋತ್ಸಾಹಿಸಿ ಈ ಗ್ರಾಮದ ಮಠಸ್ಥರು ಗೌಡರು ಬುದ್ಧಿವಂತರು ಮೊದಲಾದವರು ಈ ಕಾರ್ಯದಲ್ಲಿ ಬದ್ಧಾದರರಾಗಿ ನಿಂತು ನಡಿಸಿ ಪುನಃ ಗ್ರಾಮದ ಐಕಮತ್ಯವನ್ನು ಸ್ಥಾಪಿಸಿದರು.

ಸ್ಥಳಿಕ.

ಕೆಳದಿ ಸಭೆಯ ಸಭಾಧ್ಯಕ್ಷರ ಭಾಷಣ.

(ಹಿಂದಣ ಶೇಷ.)

ಈ ಮಹಾಸಭೆಯಲ್ಲಿ ಮುಂದೆ ಚರ್ಚೆಯಾಗಬೇಕಾದ ವಿಷಯಗಳಲ್ಲಿ ಉಪನ್ಯಾಸಕರು ವಿಷಯಾಂತರ ಮಾಡದೆ ಆತ್ಮಜನೋದ್ಧಾರಕವಾದ ಸಲಹೆಗಳನ್ನು ಮಾಡಿ ಇಲ್ಲಿ ನೆರೆದಿರುವ ಸಭಿಕರ ಸಾನುಭೂತಿಯನ್ನು ಪಡೆಯುತ್ತಾರೆಂದು ನಾನು ಹಾರೈಸುತ್ತೇನೆ. ಧರ್ಮನಿಷ್ಠೆ ಇಲ್ಲದೆ ಯಾವ ಮತವೂ ಅಭಿವೃದ್ಧಿಗೆ ಬರಲಾರದು. ಧರ್ಮನಿಷ್ಠೆ ಇಲ್ಲದ ಜನಾಂಗವು ಜೀವವಿಲ್ಲದ ಕಳೇಬರದಂತೆ ಇರುತ್ತದೆ. ವಿದ್ಯಾಪ್ರಸಾರವು ನಮ್ಮ ಐಕ್ಯ ಸಹಾಯ ಸಂಪತ್ತಿಗೆ ಮುಖ್ಯ ಚೇತನವಾದುದೆಂದೂ ಮತ್ತು ಎಲ್ಲ ಸುಧಾರಣೆಗೂ ಮುಖ್ಯಾಧಾರವೆಂದೂ ಈ ಮೊದಲೇ ಅರಿಕೆ ಮಾಡಿರುತ್ತೇನೆ. ಈ ವಿಚಾರದಲ್ಲಿ ಶ್ರೀಮನ್ ನಿರಂಜನ ಚರವರ್ಯ ಅನಂತಪುರ ಮಠದ ಶ್ರೀ ಲಿಂಗಸ್ವಾಮಿಗಳವರ ಕೃಪಾಬಲ ಮತ್ತು ಸಹಾಯದಿಂದ ಶಿವಮೊಗ್ಗೆಯಲ್ಲಿ ಸ್ಥಾಪಿತವಾಗಿರುವ ನಗರಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಈ ಪ್ರಾಂತ್ಯದ ಜನರು ತಮ್ಮ ಶಕ್ತಿಮೀರಿ ಧನಸಹಾಯ ಮಾಡಲು ವಿಶೇಷ ಲಕ್ಷ್ಯ ಕೊಡಬೇಕೆಂದು ನಾನು ಒತ್ತಿ ಹೇಳುತ್ತೇನೆ. ಈ ಸಂಘದ ಮುಖ್ಯ ಚಾಲಕರಾದ ಎಕನಾಮಿಕ್ ಸೂಪರಿಂಟೆಂಡೆಂಟ್ ಮ|| ಸಿದ್ಧರಾಮಪ್ಪ. ಬಿ. ಎ. ಯವರೂ, ಹೋದಿಗೆರೆ ಸಾಹುಕಾರ್ ಮ|| ಅಡಿವಪ್ಪಶೆಟ್ಟರೂ, ಶಿವಮೊಗ್ಗೆಯ ನನ್ನ ಪ್ರಿಯಮಿತ್ರರಾದ ಮ|| ಜಿ. ಯಂ. ಕಾಡಪ್ಪನವರೂ, ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರಾದ ಮ|| ಹನಸವಾಡಿ ಜಿ. ಬಸವಪ್ಪನವರೂ, ನೆಲ್ಲೂರು ಮ|| ಹಾಲಪ್ಪಗೌಡರವರೂ ಇವರೇ ಮೊದಲಾದ ಈ ಪ್ರಾಂತದ ಮತಾಭಿಮಾನಿಗಳಿಗೆ ನಾನು ಈ ಸಮಾಜಪರವಾಗಿ ಧನ್ಯವಾದವನ್ನು ಮಾಡುತ್ತೇನೆ.

ಈ ಸಮಯದಲ್ಲಿ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ವೀರಶೈವ ವಿದ್ಯಾಭಿವೃದ್ಧಿ ಫಂಡನ್ನು ತಮ್ಮ ಮುಖ್ಯ ಜ್ಞಾಪಕಕ್ಕೆ ತರುವುದು ವಿಷಯಾಂತರವಾಗಲಾರದು. ಈ ಸಂಘವು ಮೈಸೂರು ದೇಶದ ಎಲ್ಲಾ ವೀರಶೈವರ ಪುರೋಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟು ಸುಮಾರು 60,000 ರೂಪಾಯಿಗಳವರೆಗೂ ಧನಸಂಚಯವಾಗಿರುತ್ತದೆ. ಈ ಮಲೆನಾಡು ಪ್ರಾಂತದಿಂದ ನಮ್ಮ ಜನಗಳಲ್ಲಿ ನಡೆಯುವ ಲಗ್ನ ವಗೈರೆ ವಿಶೇಷ ಕಾಲಗಳಲ್ಲಿ ಯಥೋಚಿತ ಧನಸಹಾಯವನ್ನು ಮಾಡುತ್ತಿಲ್ಲವೆಂದು ತಿಳಿಸಲು ನಾನು ತುಂಬಾ ವಿಷಾದಿಸುತ್ತೇನೆ. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಭೆಯು ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಅಂದರೆ ವೇತನ ಮುಂತಾದ ಧನಸಹಾಯದಿಂದ ಪ್ರೋತ್ಸಾಹನನ್ನು ಕಲ್ಪಿಸಿರುತ್ತದೆ. ಈ ಸಂಸ್ಥೆಯಿಂದ ಅನೇಕ ಬಡ ವಿದ್ಯಾರ್ಥಿಗಳು ಪ್ರೌಢ ವಿದ್ಯಾಭ್ಯಾಸವನ್ನು ಮಾಡಿ ಗೌರವವನ್ನು ಸಂಪಾದಿಸಿರುತ್ತಾರೆ. ಇವರುಗಳ ಪೈಕಿ ನನ್ನ ತಿಳುವಳಿಕೆಯಲ್ಲಿ ಕೆಲವರು ಈ ಮಲೆನಾಡು ಪ್ರಾಂತದವರೂ ಆಗಿರುತ್ತಾರೆ ಆದುದರಿಂದ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಧನರಾಶಿಯು ತನ್ನ ಉದ್ದಿಷ್ಟಕಾರ್ಯವನ್ನು ಕೈಲಾದ ಮಟ್ಟಿಗೂ ನಿರ್ವಂಚನೆಯಿಂದ ಮಾಡುತ್ತಾ ಬಂದಿರುತ್ತದೆ. ಇತಃ ಪರಃ ಈ ಪ್ರಾಂತದಲ್ಲಿ ಆ ಫಂಡಿಗೆ ತಕ್ಕ ಉತ್ತೇಜನವು ದೊರಕಿ ನಮ್ಮ ಬಾಂಧವರು ನವಚೇತನಗೊಂಡು ಅಭಿವೃದ್ಧಿಗೆ ಬರುತ್ತಾರೆಂದು ನಾನು ಹಾರೈಸುತ್ತೇನೆ. ಈ ಸಭೆಯಲ್ಲಿ ಕೈಗಾರಿಕೆ, ವ್ಯವಸಾಯ, ವಿಕ್ರಯ, ಮತ್ತು ಸಂಪದಭಿವೃದ್ಧಿ ಇವುಗಳ ವಿಷಯದಲ್ಲಿ ಜನೋಪಯುಕ್ತವಾದ ಸಲಹೆಗಳು ಬಂದು ತನ್ಮೂಲಕ ನಮ್ಮ ಸಮಾಜೋದ್ಧರಣ ಮಾತ್ರವೇ ಅಲ್ಲದೆ ದೇಶೋನ್ನತಿಯೂ ಆಗುತ್ತದೆಂದು ನಾನು ಕೋರುತ್ತೇನೆ.

ನಮ್ಮ ದಯಾಳು ಸರ್ಕಾರದವರು ಸರ್ವಸಮಾನ ದೃಷ್ಟಿಯಿಂದ ಎಲ್ಲಾ ಜನವರ್ಗದ ಪುರೋಭಿವೃದ್ಧಿಗಾಗಿ ಮಾಡುತ್ತಿರುವ ಅನೇಕ ಪ್ರಯತ್ನಗಳಲ್ಲಿ ನಮ್ಮವರು ವ್ಯಾಪಕರಾಗಿ ಮುಂದಾಳುಗಳಾಗಿ ಬರುತ್ತಾರೆಂದು ನಂಬಿರುತ್ತೇನೆ. ನಮ್ಮ ಜನಾಂಗವು ರಾಜಕೀಯ ಸಂಬಂಧಗಳಲ್ಲಿ ವ್ಯಾಪಕರಾಗದ ಹೊರತು ಸರ್ಕಾರದವರ ಕೃಪಾದೃಷ್ಟಿ ನಮ್ಮ ಮೇಲೆ ಚೆನ್ನಾಗಿ ಬಿದ್ದು ನಾವು ಅಭ್ಯುನ್ನತಸ್ಥಿತಿಗೆ ಬರಲು ಸುಲಭ ಸಾಧ್ಯವಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ದೃಷ್ಟಾಂತವಾಗಿ ಈ ಡಿಸ್ಟ್ರಿಕ್ಟಿನಲ್ಲಿ ಸಬಿಡವಾಗಿರುವ ನಮ್ಮ ಜನಾಂಗದವರು ಮತ್ತು ನಮ್ಮ ಶ್ರೇಯೋಭಿವೃದ್ಧಿಯಲ್ಲಿ ಸಹಿಷ್ಣುಗಳಾದ ಇತರರೂ ನಮ್ಮ ಮಿತ್ರರಾದ ಮ|| ಎಚ್. ಜಿ. ಬಸವಪ್ಪನವರನ್ನು ಮೈಸೂರು ನಿಯಮನಿರ್ಮಾಣ ಸಭೆಗೆ ಮೆಂಬರನ್ನಾಗಿ ಚುನಾಯಿಸುವುದರಲ್ಲಿ ತೋರಿಸಿದ ಅಭಿಮಾನಾತಿಶಯಗಳು ಈ ಡಿಸ್ಟ್ರಿಕ್ಟಿಗೂ ಈ ಸಮಾಜಕ್ಕೂ ಎಷ್ಟು ಭೂಷಣವೂ ಮತ್ತು ಎಷ್ಟು ಫಲಕಾರಿಯೂ ಆಗಿರುತ್ತೆಂದು ನಾನು ಹೇಳಬೇಕಾಗಿಲ್ಲ. ಇವರ ಚುನಾವಣೆಯಿಂದ ನಿಮ್ಮ ಅಭ್ಯುನ್ನತಿಯ ಸಾಧನೆಯು ನಿಮ್ಮ ಹಸ್ತಗತವಾಯಿತೆಂದು ನಾನು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಮುಖ್ಯವಾಗಿ ನಾವುಗಳು ಇಲ್ಲಿ ನೆರೆದಿರುವುದು ಈ ಪ್ರಾಂತಿಕ ಸಭೆಯ ಏರ್ಪಾಡಿಗಾಗಿಯೇ ಅಲ್ಲ. ಪ್ರಥಮತಃ ಈ ಸುಪ್ರಸಿದ್ಧವಾದ ಪುರಾತನ ಮಠದ ಪಟ್ಟಾಧಿಕಾರ ಸಂಸ್ಕರಣದಲ್ಲಿ ಭಾಗಿಗಳಾಗಿ ತನ್ಮೂಲಕ ಪುನೀತರಾಗಲು ನಾವು ಇಲ್ಲಿ ಸೇರಿರುತ್ತೇವೆ. ಈ ಸಭೆಯು ಈ ಪಟ್ಟಾಧಿಕಾರದ ಜತೆಗೆ ಒಂದು ಮುಖ್ಯಾಂಗವಾಗಿ ಏರ್ಪಟ್ಟಿದೆ. ಈ ಪಟ್ಟಾಧಿಕಾರಕಾರ್ಯಕ್ಕೆ ಯೋಗ್ಯರಾದ ಮೂರ್ತಿಗಳನ್ನು ಶಿವಯೋಗ ಸಾಧನೆಯೇ ಮೊದಲಾದ ಗುರುಕುಲಧರ್ಮದಲ್ಲಿ ನುರುಗುಡಿ ಮಾಡಿ ಈ ಮಠಕ್ಕೆ ಒದಗಿಸಿದ ಕೀರ್ತಿಯು ಆ ಮಹಾಶಿವಯೋಗಮಂದಿರಕ್ಕೆ ಸೇರಿರುತ್ತಾದ್ದರಿಂದ ಆ ಸಂಸ್ಥೆಯ ವಿಚಾರದಲ್ಲಿ ನಮ್ಮ ಕೃತಜ್ಞತೆಯನ್ನು ಎಷ್ಟು ತೋರಿಸಿದರೂ ಸಾಲದಾಗಿದೆ. ಪ್ರಕೃತ ಸ್ಥಿತಿಯಲ್ಲಿ ಈ ಸಂಸ್ಥೆಯು ಸಮಾಜದ ಧರ್ಮೋನ್ನತಿಗೆ ಕಲ್ಪವೃಕ್ಷಪ್ರಾಯವಾಗಿ ಪರಿಣಮಿಸಿದೆ ಈಗಾಗಲೇ ಅನೇಕ ಪ್ರದೇಶಗಳಲ್ಲಿ ಬಹಳ ಪ್ರಸಿದ್ಧವಾಗಿದ್ದ ಮಠ ಮಹಾಂತರುಗಳು ತಕ್ಕ ಮೂರ್ತಿಗಳು ದೊರೆಯದೆ ನಾಮಾವಶೇಷವಾಗುತ್ತಲಿವೆ. ಈ ದುಃಸ್ಥಿತಿಯಲ್ಲಿ ಶಿವಯೋಗ ಮಂದಿರವು ಶ್ರೀ ಹಾನುಗಲ್ಲು ಮಹಾಸ್ವಾಮಿಗಳವರ ಮತ್ತು ಇವರ ಸಹಕಾರಿಗಳಾದ ಧರ್ಮಾಭಿಮಾನಿಗಳ ಅವ್ಯಾಹತ ಪ್ರಯತ್ನ ವಿಶೇಷಗಳಿಂದಲೂ ಅವರುಗಳ ಮಹಿಮಾಬಲದಿಂದಲೂ ಸ್ಥಾಪಿತವಾಗಿ ಉಚ್ಛ್ರಾಯಸ್ಥಿತಿಗೆ ಬಂದಿರುವುದು ನಮ್ಮ ವೀರಶೈವರ ಧರ್ಮಗ್ಲಾನಿ ಎಂಬ ಅಂಧಕಾರವನ್ನು ಹೋಗಲಾಡಿಸುವುದಕ್ಕೆ ಉದಯಿಸಿದ ತಪಸ್ಸಿನ ತೇಜೋರಾಶಿ ಎಂದು ನಾನು ಭಾವಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಎಚ್. ಕೆ. ವೀರಬಸವಯ್ಯ, ಸಭಾಧ್ಯಕ್ಷ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 28

ನಾವು ಎ. ಅಲ್ ಬ್ಯುಕ್ಯುಯರ್ಕ್ ಆಂಡ್ ಸನ್ಸ್ ಎಂಬ ಹೆಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವದಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹೆಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ	1 ಕ್ಕೆ	6—8—0.
ಬೆಳ್ಳಿಯ ಸರಪಣಿ ಸಹಿತ	,,	9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
7 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
7 ಸಾಹುಕಾರಪೇಟೆ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಸಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೨ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ — ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. —ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಬಿಂಬಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೂ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
20 ವೈದ್ಯಶಾಲಾ, ಮೈಸೂರು.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಗಜ್ಜಿ, ತುರಿ, ಸವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
7 3. ಇರುಳಪ್ಪನಬೀದಿ, ಮದರಾಸು.

೧೯೨೦ ನೆಯ ಇಸವಿ ಮೇ ತಾ|| ೧೬ರಿಂದ ೧೯೨೦ನೆಯ ಮೇ ತಾ|| ೨೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ವೈಶಾಖ ಬಹುಳ ತ್ರಯೋದಶಿಯಿಂದ ಜ್ಯೇಷ್ಠ ಶುದ್ಧ ಪಂಚಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭ ಮಾಸ
16	ಭಾನು	ತ್ರಯೋ	24-35	ಅಶ್ವಿ	45-40	4
17	[1] ಸೋಮ	ಚತು	19-56	ಭರ	42-37	5
18	ಮಂಗಳ	ಅಮಾ	14-37	ಕೃತ್ತಿ	39-0	6
19	[2] ಬುಧ	ಪಾಡ್ಯ	8-53	ರೋಹಿ	34-55	7
20	ಗುರು	ಬಿದಿ-ಉ	2-48 54-0	ಮೃಗ	30-47	8
21	ಶುಕ್ರ	ಚೌತಿ	50-26	ಆರ್ದ್ರಾ	26-32	9
22	ಶನಿ	ಪಂಚ	44-45	ಪುನ	22-38	10

(1) ಸರ್ವತ್ರಾಮಾವಾಸ್ಯಾ. (2) ಪುಣ್ಯಾಗೌರೀವ್ರತಂ, ರಂಭಾವ್ರತಪ್ರಾರಂಭಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜನಸ್ಯ ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟಪದೀಲ ನಾಳಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ಗ ೧೯೨೦ ನೆಯ ಇಸವಿ ಮೇ ತಾರೀಖು ೨೩ ನೆಯ ಭಾನುವಾರ (ಸಂಚಿಕೆ ೨೧

GOVERNMENT OF MYSORE.
ELECTRICAL DEPARTMENT.

41

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2'50 as.	As. 6 per point of 60 Watts per month.
2. Heating & Cooking.		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1'75 as.	Rs. 6 per H. P.
Second 50 ,, or fraction thereof	1'25 as.	...
Third 50 ,, or above 150 B.T.U	'75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1'00 anna	Rs. 6 per H. P.
Motors above 50 and up to 100 H. P.	'875	Rs. 6 do.
Motors above 100 and up to 200 H. P.	'75	Rs. 6 do.

Discounts are allowed for large supplies.

For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 13

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸ ಬಾಟ್ಲಿ ೧ಕ್ಕೆ ರೂ. ೨-೮-೦ ವಿ ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦— ೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦— ೫—೦
ಹರಿದಾಸಿ	೦— ೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವನ್ನು ತರಿಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
31 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕೊರತವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ವಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಧಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
8 3. ಇರುಳಪ್ಪನಬೀದಿ, ಮದರಾಸು.

ಇನಾಂ ! **ಆಲಸ್ಯಮಾಡಿದರೆ ದೊರೆಯಲಾರದು** ಇನಾಂ !!

ತಮ್ಮ ವಿಳಾಸವನ್ನು ವಿವರವಾಗಿ ತಿಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರೆವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
8 2/4 ಶಿಂಗಣ್ಣನ ಬೀದಿ, ಪಾರ್ಕ್‌ಟೌನ್ ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 22

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಪದ್ಯಾತ್ಮಕ **ಶ್ರೀ ಶರಣ ಬಸವೇಶ್ವರ ಪುರಾಣ.** ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಕೋಳ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಮಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಮಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೩—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪ ಸಿದ್ದಪ್ಪ ತಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

---

27 **ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.**

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿ ಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಮೇ ತಾ|| ೨೩ ನೆಯ ಭಾನುವಾರ.

ನಿಯಮನಿರ್ಮಾಣಸಭೆಗೆ ಒಬ್ಬ ಸಭಿಕರು.

ಈ ಮುಂದಣ ವಾರ ರಾಜಧಾನಿಯೊಳಗೆ ನಡೆಯಲಿಕ್ಕಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಗತಿಸಿದ ಮ|| ಎಂ. ಬಸವಯ್ಯನವರ ಸ್ಥಾನಕ್ಕೆ ತಮ್ಮ ಒಬ್ಬ ಪ್ರತಿನಿಧಿಯನ್ನು ಪ್ರಜಾಪ್ರತಿನಿಧಿಸಭಾ ಸಭಿಕರು ಆರಿಸಿಕೊಡಬೇಕಾದ ಕಾರ್ಯವು ನಡೆಯುತ್ತದೆ. ಇದಕ್ಕೆ ಉಮೇದುವಾರರಾಗಿ ನಿಂತಿರುವವರೊಳಗೆ ಬೆಂಗಳೂರಿನ ಅಡ್ವೋಕೇಟರಾದ ಮ|| ಜಿ ಪರಮಶಿವಯ್ಯ ಬಿ.ಎ.ಎಲ್‌ಎಲ್.ಬಿ. ಯವರೂ ಒಬ್ಬರಾಗಿರುತ್ತಾರೆ. ಮ|| ಬಸವಯ್ಯನವರ ಮೃತಿಯಿಂದ ಹಿಂದುಳಿದ ಜನವರ್ಗಕ್ಕೆ ಎಷ್ಟು ನಷ್ಟವಾಯಿತೆಂಬುದನ್ನು ಹೇಳಬೇಕಾಗಿಲ್ಲ. ಅವರಂಥ ಸಮರ್ಥರು ನಮ್ಮಲ್ಲಿ ಡಿಸ್ಟ್ರಿಕ್ಟಿಗೊಬ್ಬೊಬ್ಬರಂತೆ ಉದಯಗೊಂಡರೆ ನಮ್ಮ ಅಭ್ಯುದಯವು ಅಪ್ರತಿಮವಾಗುವುದೆಂಬುದರಲ್ಲಿ ಸಂಶಯವೇ ಇಲ್ಲ. ಹಿಂದುಳಿದವರಲ್ಲಿ ಈಗ ಹುಟ್ಟಿರುವ ಉನ್ನತ್ಯಾಕಾಂಕ್ಷೆಯನ್ನೂ, ಕರ್ತವ್ಯಸ್ಫೂರ್ತಿಯನ್ನೂ ನೋಡಿದರೆ ದೈವಾನುಗ್ರಹದಿಂದ ಅಂಥ ಕಾಲವು ಸಂಭವಿಸುವುದು ದೂರವಾಗಿಲ್ಲವೆಂದು ತೋರುತ್ತದೆ. ದೇಶಸೇವಾ ಕಾರ್ಯದಲ್ಲಿ ಮ|| ಬಸವಯ್ಯನವರನ್ನು ಹಿಂಬಾಲಿಸಿ ಅವರ ಸ್ಥಾನವನ್ನು ಆಕ್ರಮಿಸಬಲ್ಲವರೆಂದು ತೋರ್ಪಡುತ್ತಿರುವವರಲ್ಲಿ ಈ ಪರಮಶಿವಯ್ಯನವರೂ ಒಬ್ಬರಾಗಿರುತ್ತಾರೆ. ಇವರು ಚಿಕ್ಕವಯಸ್ಸಿನವರಾದಾಗ್ಯೂ ವಿದ್ಯಾವಂತರಾಗಿಯೂ, ದೇಶಸೇವೆಗಾಗಿ ತಮ್ಮ ತನುಮನಗಳನ್ನು ಸಮರ್ಪಿಸಲು ಸರ್ವದಾ ನಿರತರಾಗಿಯೂ, ತಾರುಣ್ಯದ ಹುರುಪಿನಿಂದ ಕೆಲಸಮಾಡತಕ್ಕವರಾಗಿಯೂ, ಹಿಂದುಳಿದ ಜನವರ್ಗಗಳ ಸಂಗಡಕ್ಕೆ ಸೇರಿ ಅವರಭ್ಯುದಯವನ್ನೇ ಚಿಂತಿಸತಕ್ಕವರಾಗಿಯೂ ಇರುತ್ತಾರೆ. ಧನಾರ್ಜನೆಯೇ ಪರಮಗಮ್ಯಸ್ಥಾನವೆಂದು ತಿಳಿಯಲ್ಪಡತಕ್ಕ ಈಗಣ ಯೌವನವಯಸ್ಸಿನಲ್ಲೇ ಅವರು ತಮ್ಮ ಕಾಲದಲ್ಲಿ ವಿಶೇಷಭಾಗವನ್ನು ದೇಶಸೇವಾ ಕಾರ್ಯದಲ್ಲಿ ವಿನಿಯೋಗಿಸುತ್ತಿದ್ದಾರೆ. ಅವರ ಯೋಗ್ಯತಾವಿಶೇಷವನ್ನರಿತು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರು ತಮ್ಮ ಸಂಘದ ಗೌ|| ಜನರಲ್ ಸೆಕ್ರೆಟೆರಿ ಸ್ಥಾನವನ್ನು ವಹಿಸಿಕೊಟ್ಟು, ತಮ್ಮ ಸಂಘದ ಪಕ್ಷದಿಂದ ಪ್ರಜಾಪ್ರತಿನಿಧಿಸಭೆಗೆ ಪ್ರತಿನಿಧಿಯಾಗಿ ಕಳುಹಿಸಿಕೊಟ್ಟಿದ್ದಾರೆ. ಮ|| ಬಸವಯ್ಯನವರು ಗತಿಸಿದ ಮೇಲೆ ಪ್ರಜಾಮಿತ್ರಮಂಡಲಿಯವರು ತಮ್ಮ ಮಂಡಲಿಯ ಸೆಕ್ರೆಟರಿ ಸ್ಥಾನಕ್ಕೆ ಇವರನ್ನು ಆರಿಸಿ ನಿಯಮಿಸಿಕೊಂಡಿರುತ್ತಾರೆ. ಇದೇ ಅಲ್ಲದೆ ಕಳೆದ ಪ್ರಜಾಪ್ರತಿನಿಧಿ ಸಭಾಧಿವೇಶನದ ಕಾಲದಲ್ಲಿ ಸಂಪದಭ್ಯುದಯ ಸಮಾಜದ ಸೆಂಟರಲ್ ಬೋರ್ಡು ಸಭಿಕತ್ವಕ್ಕೆ ಇವರು ಉಮೇದುವಾರರಾಗಿ ನಿಂತಿರಲು, ಪ್ರತಿನಿಧಿಗಳ ಮತಗಳು ವಿಶೇಷವಾಗಿ ದೊರೆತು ಜಯಶಾಲಿಗಳಾಗಿರುತ್ತಾರೆ. ಇವರ ದೇಶಸೇವಾತತ್ಪರತೆಯು ಪ್ರಜಾವರ್ಗಕ್ಕೆ ಮೆಚ್ಚುಗೆಯಾಗಿದೆಯೆಂಬುದಕ್ಕೆ ಇವುಗಳೆಲ್ಲಾ ದೃಷ್ಟಾಂತಗಳಾಗಿರುತ್ತವೆ. ಇವರು ಈಗ ನಿಯಮನಿರ್ಮಾಣಸಭಾ ಸಭಿಕರಾಗಲು ಕುತೂಹಲಪಟ್ಟು ಅಭ್ಯರ್ಥಿಗಳಾಗಿ ನಿಂತಿರುವುದು ಹಿಂದುಳಿದ ಜನವರ್ಗಗಳಿಗೆ ಹಿತಕರವೂ ಸಂತೋಷಪ್ರದವೂ ಆಗಿರುತ್ತದೆ. ಇವರು ಹೀಗೆ ಪ್ರವೃತ್ತರಾದುದನ್ನು ಕಂಡು ಪ್ರಜಾಮಿತ್ರಮಂಡಲಿಯ ಅಧ್ಯಕ್ಷರೂ, ಒಕ್ಕಲಿಗರಸಂಘದ ಅಧ್ಯಕ್ಷರೂ, ಇವರಿಗೇ ಹಿಂದುಳಿದ ಜನವರ್ಗಗಳ ಪ್ರಜಾಪ್ರತಿನಿಧಿಗಳು ತಮ್ಮ ಓಟುಗಳನ್ನು ಕೊಟ್ಟು ನಿಯಮನಿರ್ಮಾಣ ಸಭೆಗೆ ನಮ್ಮ ಪಕ್ಷದ ಸಭಿಕರಾಗಿ ಬರುವಂತೆ ಮಾಡಬೇಕೆಂದು ವಿಜ್ಞಾಪಿಸಿಕೊಂಡಿರುತ್ತಾರೆ. ಅದನ್ನು ಈ ಸಂಚಿಕೆಯಲ್ಲೇ ಬೇರೆಕಡೆ ಮುದ್ರಿಸಿರುತ್ತೇವೆ. ಇಂಥವರಿಗೆ ಪ್ರಜೆಗಳ ಬೆಂಬಲವೂ ಪ್ರೋತ್ಸಾಹವೂ ಎಷ್ಟೆಷ್ಟು ದೊರೆದರೆ ಅಷ್ಟಷ್ಟು ಅವರ ಕಾರ್ಯನಿರ್ವಾಹ ಕುತೂಹಲವು ಉಜ್ವಲಗೊಳ್ಳುತ್ತದೆ. ಅದುಕಾರಣ ಇಂಥವರ ಕಾರ್ಯೋತ್ಸಾಹಕ್ಕೆ ಹಿಂದುಳಿದ ಜನವರ್ಗಗಳು ಉತ್ತೇಜನಕೊಟ್ಟು ತಮ್ಮ ಅಧ್ವರ್ಯುಗಳನ್ನಾಗಿ ಮಾಡಿಕೊಳ್ಳುವುದು ವಿಶೇಷ ಪ್ರಯೋಜಕವಾದುದರಿಂದ ತಮ್ಮಗಳ ಓಟನ್ನು ಇವರಿಗೆ ಕೊಟ್ಟು ನಿಯಮನಿರ್ಮಾಣ ಸಭೆಗೆ ತಮ್ಮ ಪ್ರತಿನಿಧಿಯಾಗಿ ಇವರೇ ಬರುವಂತೆ ಮಾಡಿಕೊಳ್ಳುವುದು ವಿಹಿತವಾಗಿರುತ್ತದೆ. ಕಳೆದ ಪ್ರತಿನಿಧಿಸಭಾಧಿವೇಶನ ಕಾಲದಲ್ಲಿ ಪ್ರಜಾಮಿತ್ರಮಂಡಲಿಯವರ ಸಂಕಲ್ಪವು ಸಿದ್ಧಿಗೆ ಬರುವಂತೆ ಹಿಂದುಳಿದ ಜನವರ್ಗಗಳೆಲ್ಲವೂ ಐಕಮತ್ಯದಿಂದ ಕೆಲಸಮಾಡಿ ಹೇಗೆ ಇಷ್ಟಾರ್ಥಸಿದ್ಧಿಯನ್ನು ಪಡೆದು ಆತ್ಮಗೌರವವನ್ನುಳಿಸಿಕೊಂಡರೋ ಅದರಂತೆಯೇ ಈಗಳೂ ಮಾಡಿ ತಮ್ಮ ಸ್ಥಿರಸಂಕಲ್ಪವನ್ನು ಕಾಪಾಡಿಕೊಳ್ಳದಿರಲಾರರೆಂದು ನಂಬುತ್ತೇವೆ.

ಪ್ರತ್ಯೇಕ ಪ್ರಾತಿನಿಧ್ಯತತ್ತ್ವವು ಹಿಂದುಳಿದವರ ಅಭ್ಯುನ್ನತಿಗೆ ಅವಶ್ಯಕವೆಂಬುದನ್ನು ಶ್ರೀಮನ್ಮಹಾರಾಜ ಸರ್ಕಾರದವರೂ ಇಂಡ್ಯಾ ಸರ್ಕಾರದವರೂ ಕೂಡ ಒಪ್ಪಿಕೊಂಡಿರುತ್ತಾರೆ. ಇದರ ಪ್ರಾಪ್ತಿಗಾಗಿ ನಾಮಿನೇಷನ್ನಿನ ಸೌಕರ್ಯವನ್ನು ಕೊಟ್ಟಿರುವುದಲ್ಲದೆ, ಆಯಾ ಜನವರ್ಗಗಳು ತಮ್ಮ ಓಟುಗಳನ್ನು ತಮ್ಮ ಬರವಸೆಗೆ ಪಾತ್ರರಾದ ತಮ್ಮ ಜನರಿಗೆ ಕೊಟ್ಟುಕೊಂಡು ತಮ್ಮ ಹಿತವನ್ನು ಸಾಧಿಸಿಕೊಳ್ಳಬಹುದೆಂದು ತಿಳಿಯಿಸಿರುತ್ತಾರೆ. ಮದ್ರಾಸು ಆಧಿಪತ್ಯದಲ್ಲಿ ನಿಯಮನಿರ್ಮಾಣ ಸಭೆಯ ಕೆಲವು ಸ್ಥಾನಗಳನ್ನು ಹಿಂದುಳಿದವರಿಗಾಗಿಯೇ ಪ್ರತ್ಯೇಕಿಸಿಟ್ಟಿರುತ್ತಾರೆ. ಹೀಗಿರುವಾಗ ನಮಗೆ ಕೊಡಲ್ಪಟ್ಟಿರುವ ಅವಕಾಶವನ್ನು ನಾವು ಉಪಯೋಗಿಸಿಕೊಳ್ಳದೆ ಹೋದರೆ ಅದು ನಮ್ಮ ಅವಿವೇಕಕ್ಕೆ ನಿದರ್ಶನವಾಗುತ್ತದೆ.

ರಾಜಕೀಯ ವಿಷಯದಲ್ಲಿ ಜಾತಿಮತ ಭೇದಗಳನ್ನು ಗಣಿಸದೆ ಕಾರ್ಯನಿರ್ವಾಹ ಶಕ್ತಿಯೊಂದನ್ನೇ ಗಮನಿಸಿ ಅಂಥವರಿಗೆ ತಮ್ಮ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೆಲವರು ಬೋಧಿಸುವುದುಂಟು. ಜಾತಿಮತ ಭೇದವನ್ನು ಗಣಿಸದೆ ಕೆಲಸ ಮಾಡತಕ್ಕ ಉದಾರತನವು ಅಂಥ ಬೋಧಕರಲ್ಲೂ ಕೂಡ ಮಾತಿನಲ್ಲಿದ್ದಂತೆ ಕಾರ್ಯದಲ್ಲಿರುವುದಿಲ್ಲ. ಮತಜಾತಿ ಧರ್ಮಗಳೂ ಅಭಿಮಾನಗಳೂ ನಮ್ಮ ಪ್ರಾಗ್ದೇಶೀಯರಲ್ಲಿ ರಕ್ತದೊಡನೆ ಅಂಟಿಬಂದಿರುವ ಗುಣಗಳಾಗಿವೆ. ಅವು ಬೇಕಾದಾಗ ತೊಟ್ಟುಕೊಂಡು ಬೇಡವಾದಾಗ ಕಳಚಿಬಿಡುವ ಅಂಗಿಯಂತಿರುವುದಿಲ್ಲ. ಅದುಕಾರಣ ರಾಜಕೀಯ ವಿಷಯದಲ್ಲೇ ಆಗಲೀ ಮತ್ತಾವ ಲೌಕಿಕ ವಿಷಯದಲ್ಲೇ ಆಗಲೀ ಆ ಸಂಬಂಧವು ಮಾನವನ ಜೀವಿತದಲ್ಲಿ ಸಮರಸವಾಗಿ ಇದ್ದೇಇರುತ್ತದೆ. ಆದುದರಿಂದ ''ಉದ್ಧರೇದಾತ್ಮನಾತ್ಮಾನಂ'' ಎಂಬಂತೆ ಹಿಂದುಳಿದ ಜನವರ್ಗಗಳವರು ತಮ್ಮವರ ಉದ್ಧಾರವನ್ನು ತಾವು ಮಾಡಿಕೊಳ್ಳಬೇಕಾಗಿದ್ದರೆ ತಮ್ಮವರಲ್ಲೇ ಮುಂದಕ್ಕೆ ಬರುವ ತೇಜಸ್ಫೂರ್ತಿಯುಳ್ಳವರನ್ನು ಕಂಡು ಅವರಿಗೆ ಪ್ರೋತ್ಸಾಹಿಸಿ ತಮ್ಮ ಮುಂದಾಳುಗಳನ್ನಾಗಿ ಮಾಡಿಕೊಳ್ಳುವುದರಲ್ಲಿ ಸ್ವಲ್ಪವೂ ಹಿಂದೆಗೆಯಬಾರದು.

ತುರ್ಕಿಯ ಗತಿ.

ತುರ್ಕಿಗೆ ವಿಧಿಸಲ್ಪಟ್ಟಿರುವ ಸಂಧಿನಿಬಂಧನೆಯ ನಿಯಮಗಳನ್ನು ಮತ್ತೊಂದು ಕಡೆ ಪ್ರಕಟಿಸಿರುತ್ತೇವೆ. ಅದನ್ನೆಲ್ಲಾ ನೋಡುವಲ್ಲಿ ತುರ್ಕಿಯ ಅಂಗಾಂಗವೆಲ್ಲಾ ಛಿನ್ನಭಿನ್ನವಾಗಿ ಒಂದು ಮಾಂಸದ ಮುದ್ದೆ ಮಾತ್ರವಾಗಿ ಅದು ಹೇಗೆ ಹೆಸರಿಗೆ ಉಳಿಯುವಂತಾಯಿತೆಂಬುದು ಇದರಿಂದ ವ್ಯಕ್ತವಾಗುತ್ತದೆ. ಸಂಧಿನಿಬಂಧನೆಯಂತೆ ನಡೆದರೆ ಯೂರೋಪು ಖಂಡದಲ್ಲಿ ಕಾನ್‌ಸ್ಟಾಂಟಿನೋಪಲ್ ಪಟ್ಟಣವೂ ಅದರ ಸುತ್ತಣ ಸ್ವಲ್ಪ ಪ್ರದೇಶಮಾತ್ರವೂ, ಏಷ್ಯಾ ತುರ್ಕಿಯಲ್ಲಿ ಮಹಮ್ಮದೀಯರು ಹೆಚ್ಚಾಗಿರುವ ಸ್ವಲ್ಪಭಾಗವೂ ಮಾತ್ರ ಸುಲ್ತಾನರ ಅಧೀನದಲ್ಲುಳಿಯುವಂತಾಗುವುದು. ಮಕ್ಕಾ ಮದೀನಾಗಳ ಮೇಲೆ ಸುಲ್ತಾನರಿಗಿದ್ದ ಅಧಿಕಾರವೂ ಕೂಡ ಅವರ ಕೈತಪ್ಪಿಹೋಗುವುದು. ಒಂದಾನೊಂದು ಕಾಲದಲ್ಲಿ ಯೂರೋಪು ಖಂಡವನ್ನೆಲ್ಲಾ ತನ್ನ ತೇಜಸ್ಸಿನಿಂದ ತತ್ತರಗೊಳಿಸುತ್ತಿದ್ದ ತುರ್ಕಿಗೆ ಈ ಅವಸ್ಥೆಯು ಪ್ರಾಪ್ತವಾದುದನ್ನು ಕಂಡು ಮಹಮ್ಮದೀಯರು ಮಾತ್ರವೇ ಅಲ್ಲದೆ ಇತರ ಜನಗಳೂ ಕೂಡ ಆಶ್ಚರ್ಯವಿಷಾದಗಳನ್ನು ತಳೆಯದೆ ಇರುವುದಕ್ಕಾಗುವುದಿಲ್ಲ. ಇದರಿಂದುಂಟಾದ ದುರ್ಭರಪರಿವೇದನೆಯನ್ನು ಮಹಮ್ಮದೀಯರು ತಾಳಿಕೊಳ್ಳುವುದು ಕಷ್ಟವೇ ಸರಿ.

ಇಂಥ ಸಂಧಿನಿಬಂಧನೆಯನ್ನು ವಿಧಿಸುವುದಕ್ಕೆ ಮಿತ್ರಮಂಡಲಿಯವರಿಗೆ ತುರ್ಕಿಯ ಮೇಲಿದ್ದ ವೈರಭಾವ ಮತ್ತು ಜಾತಿಪ್ರಯುಕ್ತವಾಗ ದುರಭಿಮಾನಗಳೇ ಕಾರಣವೆಂದು ಕೆಲರು ಹೇಳಬಹುದು. ಆದರೆ ತುರ್ಕಿಯು ಪ್ರಪಂಚಯುದ್ಧದ ಆಣಿಯಾದ ಸ್ಥಾನದಲ್ಲಿರುವುದರಿಂದ ಅದರ ಸಂಬಂಧದ ಮೂಲಕ ಪ್ರಪಂಚದಲ್ಲಿ ಮಹಾಯುದ್ಧವು ಸಂಭವಿಸದಂತೆ ಮಾಡಬೇಕಾದರೆ ತುರ್ಕಿಯನ್ನು ಕೈಕಾಲಿಲ್ಲದ ಮೊಂಡಕೊರಡಿನಂತೆ ಮಾಡಿಡುವುದೇ ಮುಖ್ಯೋಪಾಯವೆಂದು ಭಾವಿಸಿದುದೇ ಇಂಥ ಕಟ್ಟುನಿಟ್ಟಾದ ನಿಯಮಗಳ ರಚನೆಗೆ ಕಾರಣವಾಗಿರಬೇಕೆಂದು ಊಹಿಸಬಹುದಾಗಿದೆ. ಈ ಸಂದರ್ಭದಲ್ಲಿ ನಮ್ಮ ವೈಸ್ರಾಯರು ಒಂದು ಪ್ರಕಟನೆಯನ್ನು ತಾ|| ೧೫ ರಲ್ಲಿ ಮಾಡಿ, ಅದರೊಳಗೆ ಮಹಮ್ಮದೀಯರನ್ನು ಸಮಾಧಾನ ಪಡಿಸುವ ಕೆಲವು ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಯುದ್ಧಕ್ಕೆ ಮುಂಚೆ ಇಂಗ್ಲೀಷರು ತುರ್ಕಿಯಮೇಲೆ ಅಭಿಮಾನವಿಟ್ಟು ಸ್ನೇಹದಿಂದಲೇ ವರ್ತಿಸುತ್ತಿದ್ದರೆಂತಲೂ, ಯುದ್ಧಾರಂಭವಾದ ಕೂಡಲೇ ಶತ್ರುಪಕ್ಷಕ್ಕೆ ತುರ್ಕಿಯು ಸೇರದೆ ತಟಸ್ಥವಾಗಿದ್ದರೆ ಅದಕ್ಕೆ ಮತ್ತಷ್ಟು ರಾಜ್ಯಪ್ರಯೋಜನವನ್ನು ನಾವು ಮಾಡಿಕೊಡುವೆವೆಂದು ತಿಳಿಸಿದ್ದರೆಂತಲೂ ಅದನ್ನು ಲಕ್ಷ್ಯಮಾಡದೆ ತುರ್ಕಿಯು ಶತ್ರುಪಕ್ಷಕ್ಕೆ ಸೇರಿದುದರಿಂದಲೇ ಯುದ್ಧವು ಇಷ್ಟು ದೀರ್ಘಕಾಲ ನಡೆಯುವುದಕ್ಕೂ ಪ್ರಪಂಚವೆಲ್ಲಾ ಮಹಾನರ್ಥವನ್ನನುಭವಿಸಲಿಕ್ಕೂ ದಾರಿಯಾಯಿತೆಂತಲೂ, ಈಗ ನಡೆದ ಯುದ್ಧವು ಮತಮೂಲಕವಾದುದಲ್ಲವೆಂತಲೂ, ತುರ್ಕಿಯ ಕೃತಕರ್ಮಕ್ಕೆ ತಕ್ಕಫಲವಾಗಿರುವುದರಿಂದ ಮತವಿಷಯದಲ್ಲಿ ತಮಗೆ ಹಾನಿಯಾಯಿತೆಂದು ಮಹಮ್ಮದೀಯರು ತಿಳಿದುಕೊಳ್ಳಬೇಕಾದುದಿಲ್ಲವೆಂತಲೂ ಅವರು ಆಂಗ್ಲಛತ್ರಾಶ್ರಯದ ಕೆಳಗೆ ತಮ್ಮ ಪುರೋಭಿವೃದ್ಧಿಗಳಿಗೆ ಬೇಕಾದಷ್ಟು ಅವಕಾಶವನ್ನು ಪಡೆದುಕೊಂಡಿರುತ್ತಾರೆಂತಲೂ, ಅದು ಕಾರಣ ಈಗ ಉದ್ವಿಗ್ನರಾಗದೆ ಶಾಂತಿಯನ್ನು ತಾಳಿರಬೇಕೆಂತಲೂ ಮೊದಲಾಗಿ ಉಪದೇಶಿಸಿರುತ್ತಾರೆ. ಹೀಗೆ ಹೇಳುವುದು ಅವರ ಕರ್ತವ್ಯ. ಆದರೆ ಉಪಶಮನೋಕ್ತಿಯನ್ನು ಹೇಳುವುದು ಸುಲಭವಾಗಿರುವಂತೆ ಉಪಶಮನವನ್ನು ಮಾಡಿಕೊಳ್ಳುವುದು ಯಾರಿಗೂ ಸುಲಭವಾಗಿರುವುದಿಲ್ಲ. ಮಹಮ್ಮದೀಯ ಲೋಕವು ಈಗ ಹೇಗೆ ನಡೆದುಕೊಳ್ಳುವುದೆಂಬುದನ್ನು ಲೋಕವೇ ನಿರೀಕ್ಷಿಸುತ್ತಿರುವುದು. ಕೊಡಲ್ಪಟ್ಟಿರುವ ೧ ತಿಂಗಳ ಅವಧಿಯಲ್ಲಿ ತುರ್ಕಿಯು ತನ್ನ ಉತ್ತರವನ್ನು ಹೇಗೆ ತಿಳಿಯಿಸುವುದೋ ನೋಡಬೇಕು. ಒಂದು ವೇಳೆ ಅದು ಅಸಮಾಧಾನವನ್ನು ತೋರ್ಪಡಿಸಿದರೆ ಮಿತ್ರಮಂಡಲಿಯವರು ಬಲಾತ್ಕಾರಪಡಿಸುವುದಕ್ಕೂ ಸನ್ನದ್ಧರಾಗಿದ್ದಾರೆ. ಜರ್ಮನಿ ಆಸ್ಟ್ರಿಯಾಗಳಂಥ ಪ್ರಬಲರಾಷ್ಟ್ರಗಳೇ ಅಸಂಮತಿಯನ್ನು ತೋರಿಸಲಾರದೆ ಹೋಗಿರುವಾಗ ತುರ್ಕಿಯು ಮುಳಿದು ಕೂತರೆ ಅದು ಉಳಿಯುವುದುಂಟೆ? ಅದು ಕಾರಣ ತುರ್ಕಿಯೂ ಮತ್ತು ಅದರ ಅಭಿಮಾನವನ್ನು ಹೊತ್ತಿರುವ ಪ್ರಜೆಗಳೂ ಸಹ ಬೆದರಿಕೆ ಹಾಕುವ ಒರಟುತನವನ್ನು ಬಿಟ್ಟು ಸೌಜನ್ಯದ ಮೂಲಕ ಪ್ರವರ್ತಿಸಿ ನಿಬಂಧನೆಯ ಕ್ರೌರ್ಯವನ್ನು ಕಡಿಮೆಮಾಡಿಸಿಕೊಂಡು ಇದ್ದುದರಲ್ಲಿ ತಕ್ಕಷ್ಟು ಲಾಭವನ್ನು ಪಡೆದುಕೊಳ್ಳುವುದೇ ಪ್ರಶಸ್ತವಾದ ದಾರಿಯೆಂದು ಕಾಣುವುದು.

ಒಳದೇಶ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ತಾ|| ೨೮ ರಲ್ಲಿ ನಡೆಯುತ್ತದೆ.

ಶ್ರೀಮನ್ ಮಹಾರಾಜರವರು ಈ ದಿವಸ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆ.

ರಾಜಧಾನಿಯಲ್ಲಿ ಬರುವ ಜೂನ್ ತಾ|| ೮ ರಿಂದ ಕುದುರೆಯ ಜೂಜುಗಳು ನಡೆಯುವುವು.

ಎಂಪೈರ್‌ದಿನನಿಮಿತ್ತ ಬರುವ ತಾ|| ೨೪ ರಲ್ಲಿ ಎಲ್ಲ ಕೋರ್ಟು ಕಚೇರಿಗಳಿಗೂ ರಜಾ ಕೊಡಲ್ಪಟ್ಟಿದೆ.

ಬೆಂಗಳೂರಿನಲ್ಲಿ ಕಳೆದ ಭಾನುವಾರ ಸ್ವಲ್ಪ ಮಳೆ ಬಿದ್ದಿತು. ಮೈಸೂರು ಕಡೆ ಮಳೆಯೇ ಇಲ್ಲ. ಎದ್ದಿದ್ದ ಜೋಳದ ಪೈರೆಲ್ಲಾ ಒಣಗಿತು.

ಪ್ರಜಾಪ್ರತಿನಿಧಿ ಸಭೆಯು ತಾ|| ೨೪ ರಿಂದ ಆರಂಭಗೊಳ್ಳುವುದು. ಸಂಪದಭ್ಯುದಯ ಸಮಾಜದ ವಾರ್ಷಿಕಾಧಿವೇಶನವು ತಾ|| ೩೧ ರಲ್ಲಿ ನಡೆಯುವುದು.

ಕರ್ಣಾಟಕ ಸಾಹಿತ್ಯಪರಿಷತ್ಸಮ್ಮೇಳನವು ಬಳ್ಳಾರಿ ಜಿಲ್ಲಾ ಹೊಸಪೇಟೆಯಲ್ಲಿ ಕಳೆದ ತಾ|| ೧೯-೨೦ ರಲ್ಲಿ ಧಾರವಾಡದ ಸಾ|| ಬ|| ವಿ. ಆರ್. ಜೋಶಿಯವರ ಅಧ್ಯಕ್ಷತೆಯಲ್ಲಿ ನಡೆದಿತು.

ದಿವಾನ್ ಸರ್ದಾರ್ ಎಂ. ಕಾಂತರಾಜ ಅರಸಿನವರು ತಾ|| ೧೫ ರಲ್ಲಿ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸಿ, ತಾ|| ೧೬ ರ ರಾತ್ರಿ ಟ್ರೇನಿನಲ್ಲಿಹೊರಟು ತಾ|| ೧೭ ರ ಬೆಳಗ್ಗೆ ಬೆಂಗಳೂರನ್ನು ಸೇರಿದರು. ತಾ|| ೧೯ ರಲ್ಲಿ ನಿಯಮನಿರ್ಮಾಣ ಸಭೆಯನ್ನೂ ತಾ|| ೨೦ ರಲ್ಲಿ ಎಗ್ಸಿಕ್ಯುಟಿವ್ ಕೌನ್ಸಿಲ್ ಮೀಟಿಂಗನ್ನೂ ಮುಗಿಸಿಕೊಂಡು ಈ ದಿವಸ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆ.

ಲಗ್ನಕಾಲವಾದುದರಿಂದ ರೈಲ್ವೆ ಬಂಡಿಗಳಲ್ಲಿ ಹೋಗುವ ೩ ನೆ ತರಗತಿಯ ಪ್ರಯಾಣಿಕರ ದುರವಸ್ಥೆಯನ್ನು ಹೇಳತೀರದು. ತತ್ರಾಪಿ ತಕ್ಕಷ್ಟು ಬಂಡಿಗಳಿಲ್ಲದೆ ಅಕಾಲದಲ್ಲಿ ಬೆಂಗಳೂರು ಮೈಸೂರು ಮಾರ್ಗವನ್ನು ಸ್ವಾಧೀನಕ್ಕೆ ಪಡೆದುಕೊಂಡ ನಮ್ಮ ಸ್ಟೇಟ್ ರೈಲ್ವೆಯಲ್ಲಿ ಪ್ರಯಾಣ ಮಾಡತಕ್ಕ ೩ ನೆ ತರಗತಿಯವರ ಅವಸ್ಥೆಯಂತು ನರಕವಾಸಕ್ಕೆ ಸಮನಾಗಿದೆ. ಎಂದಿಗೆ ಈ ದುರವಸ್ಥೆಯನ್ನು ನಮ್ಮ ಸರ್ಕಾರದವರು ದೂರೀಕರಿಸಿ ಪ್ರಜೆಗಳಿಗೆ ಹಿತ ಮಾಡುತ್ತಾರೋ ತಿಳಿಯದು.

ಮೈಸೂರು ಬೆಂಗಳೂರು ಲೋಹಮಾರ್ಗದಲ್ಲಿ ಫ್ರೆಂಚರಾಕ್ಸ್ ಎಲಿಯೂರುಗಳ ಮಧ್ಯದ ಒಂದು ಹಳ್ಳಕ್ಕೆ ಕಟ್ಟಿರುವ ಸೇತುವಿನ ಕಮಾನು ಶಿಥಿಲವಾಗಿರುವುದರಿಂದ ಓಡಾಡುವ ಬಂಡಿಗಳ ವೇಗವು ಆ ಬಳಿಯಲ್ಲಿ ಕಡಿಮೆ ಮಾಡಲ್ಪಟ್ಟು ಉಪಾಯದಿಂದ ಸಾಗುತ್ತಲಿವೆ. ಅದರ ಜೀರ್ಣೋದ್ಧಾರಕ್ಕೆ ಯಾವ ಪ್ರಯತ್ನವೂ ನಡೆದಂತೆ ತೋರುವುದಿಲ್ಲ. ಮುಂದಣ ಮಳೆಗಾಲದಲ್ಲಿ ಅದರ ಅವಸ್ಥೆಯೇನಾಗುವುದೋ ತಿಳಿಯದು. ರೈಲ್ವೆ ಶಾಖೆಯವರು ಈಗಲೇ ಗಮನಕೊಟ್ಟು ಮುಂದಣ ಅಪಾಯವನ್ನು ತಪ್ಪಿಸುವುದು ಅವಶ್ಯಕ.

ಈಸಲ ರಾಜಧಾನಿಯಲ್ಲಿ ನಡೆದ ಮದುವೆಗಳೊಳಗೆ ಕೆಲವು ಬಹಳ ಧನವ್ಯಯದಿಂದಲೂ ಆಟ್ಟಹಾಸದಿಂದಲೂ ಜರುಗಿದುವು. ಅವುಗಳಲ್ಲೆಲ್ಲಾ ಮಿ|| ಮಹಮ್ಮದ್‌ಸೇಟರು ತಮ್ಮ ಸಹೋದರಿಯನ್ನು ಬೊಂಬಾಯಿಯ ಸೇಟರಿಗೆ ಕೊಟ್ಟು ನಡೆಯಿಸಿದ ಮದುವೆಯ ವೈಭವವು ಅತಿಶಯವಾಗಿದ್ದಿತು. ಈ ವಿವಾಹವು ೧ ಪಕ್ಷಕಾಲ ನಡೆದಿತು. ಸೇಟರು ಹೊರಗಿನಿಂದ ಬಂದಿದ್ದ ತಮ್ಮ ಆಪ್ತಬಾಂಧವ ಮಂಡಲಿಯನ್ನೆಲ್ಲಾ ವೆಲ್ಲಿಂಗ್ಟನ್ ಲಾಡ್ಜಿನಲ್ಲಿಳಿಸಿ ಸತ್ಕರಿಸುತ್ತಿದ್ದರು. ವಿವಾಹಕ್ಕೆ ಪುರದ ಸಕಲ ಪ್ರಮುಖ ಜನರೂ ಬರಮಾಡಿಕೊಳ್ಳಲ್ಪಟ್ಟಿದ್ದರು. ಮಿ|| ಮಹಮ್ಮದ್ ಸೇಟರೂ, ಅವರ ತಮ್ಮ ಮಿ|| ಸತಾರ್ ಸೇಟರೂ ತಮ್ಮ ಸೌಜನ್ಯಕ್ಕನುಗುಣವಾಗಿ ಸಕಲರನ್ನೂ ಪ್ರೀತಿ ವಿಶ್ವಾಸಗಳಿಂದ ಮರ್ಯಾದಿಸಿದರು. ಕಳೆದ ಭಾನುವಾರ ವರನನ್ನು ವೆಲ್ಲಿಂಗ್ಟನ್ ಲಾಡ್ಜಿನಿಂದ ಮೆರವಣಿಗೆ ಮಾಡಿ ಕರೆದುಕೊಂಡುಹೋದಾಗ ಎಲ್ಲಾ ಕೋಮಿನ ನಾಲ್ಕಾರು ಸಹಸ್ರ ಜನರು ಸೇರಿ ಉತ್ಸವದೊಡನೆ ಹೋದರು. ಗ್ಯಾಸ್‌ಲೈಟುಗಳೂ ಬಾಣಬಿರುಸುಗಳೂ ಅರಮನೆಯ ಜಲ್ಲೋ ಮೊದಲಾದ ಮರ್ಯಾದೆಗಳೂ, ಬೆಂಗಳೂರಿನಿಂದ ಬಂದಿದ್ದ ಮತ್ತು ಮೈಸೂರಿನ ಅನೇಕ ತರದ ಬ್ಯಾಂಡುಗಳೂ ಸಹ ಉತ್ಸವವೈಭವವನ್ನು ಅಪೂರ್ವಗೊಳಿಸಿದ್ದುವು. ಮಿ|| ಸೇಟರು ಮ್ಯುನಿಸಿಪಲ್ ಕೌನ್ಸಿಲ್ ಪ್ರಜಾಪ್ರತಿನಿಧಿ ಸಭೆ, ಡಿ|| ಬೋರ್ಡು ಮೊದಲಾದುವುಗಳಲ್ಲಿ ಮೆಂಬರಾಗಿ ಸೇರಿ ಗಣ್ಯತೆಯನ್ನು ಪಡೆದಿರುವುದೇ ಅಲ್ಲದೆ ದೊಡ್ಡ ಜವಳಿ ವರ್ತಕರಾಗಿ ಪ್ರಜಾಮಧ್ಯದಲ್ಲಿ ಅವರ ಪ್ರೀತಿವಿಶ್ವಾಸಗಳಿಗೆ ಎಷ್ಟುಮಟ್ಟಿಗೆ ಪಾತ್ರರಾಗಿದ್ದಾರೆಂಬುದು ಈ ಉತ್ಸವಕಾಲದಲ್ಲಿ ಚೆನ್ನಾಗಿ ಪ್ರದರ್ಶಿತವಾಯಿತು.

ತುರ್ಕಿ ಸಂಧಿ.

ತುರ್ಕಿ ದೇಶದ ವಿಷಯವಾಗಿ ಸಂಧಿ ಸಭೆಯವರು ನಿರ್ಧರಿಸಿದ ಸಂಧಿನಿಬಂಧನಾ ಪತ್ರವನ್ನು ತುರ್ಕಿ ರಾಯಭಾರಿಗಳಿಗೆ ಕಳೆದ ತಾ|| ೧೧ ರಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಫ್ರೆಂಚ್ ಸರ್ಕಾರದ ವಿದೇಶಾಂಗ ಮಂತ್ರಿಕಾರ್ಯಾಲಯದಲ್ಲಿ ಕೊಟ್ಟರು. ಇದಕ್ಕೆ ಪ್ರತ್ಯುತ್ತರವನ್ನು ಕೊಡಲು ತುರ್ಕಿ ಪ್ರಭುತ್ವದವರಿಗೆ ೧ ತಿಂಗಳ ವ್ಯವಧಿಯು ಕೊಡಲ್ಪಡುವುದೆಂದು ಫ್ರಾನ್ಸ್ ಮುಖ್ಯಮಂತ್ರಿಯವರಾದ ಮಿ|| ಮಿಲ್ಲಿರಾಂಡ್‌ರವರು ಹೇಳಿದರು. ತುರ್ಕಿ ಕಡೆಯ ಟೌಫಿಕ್ ಪಾಷಾರವರು ನಡುಗುತ್ತಿರುವ ಕೈಯಿಂದ ಅದನ್ನೀಸಿಕೊಂಡು, ಗದ್ಗದ ಕಂಠದಿಂದ 'ಸಂಧಿ ಪತ್ರಗಳು ನಮಗೆ ತಲಪಿವೆ' ಎಂದು ನುಡಿದರಂತೆ. ಈ ಕಾರ್ಯವೆಲ್ಲಾ ೫ ನಿಮಿಷ ಕಾಲದಲ್ಲಿ ಮುಗಿದಿತು. ಈ ನಿಬಂಧನೆಗಳ ಮುಖ್ಯಾಂಶವು ರುಟರ್ ತಂತ್ರೀವಾರ್ತೆಯ ಮೂಲಕ ಭರತಖಂಡಕ್ಕೆ ಬಂದಿದೆ. ಅದನ್ನೇ ಇಂಡಿಯಾ ಸರ್ಕಾರದವರು ಪ್ರಕಟಿಸಿ ಅದರೊಡನೆ ತಮ್ಮಭಿಪ್ರಾಯವನ್ನೂ ತಿಳಿಯಿಸಿದ್ದಾರೆ. ಆ ಸಂಧಿ ನಿಬಂಧನೆಗಳೆಲ್ಲಾ ೧೩ ಭಾಗ ಮಾಡಲ್ಪಟ್ಟಿವೆ. ಅವನ್ನು ಸಂಕ್ಷೇಪವಾಗಿ ಇಲ್ಲಿ ತಿಳಿಯಿಸುತ್ತೇವೆ. ೧ ನೆ ಭಾಗವು ಪೀಠಿಕಾ ರೂಪವಾಗಿದೆ. ಅದರಲ್ಲಿ ಜಾತೀಯ ಸಮಿತಿಯ ನಿಯಮಗಳೆಲ್ಲವೂ ಮತ್ತೊಂದು ಸಲ ಹೇಳಲ್ಪಟ್ಟಿವೆ. ೨ ನೆ ಭಾಗದಲ್ಲಿ ತುರ್ಕಿದೇಶಕ್ಕಿರಬೇಕಾದ ಎಲ್ಲೆಕಟ್ಟು ವಿವರಿಸಲ್ಪಟ್ಟಿದೆ. ಹೇಗೆಂದರೆ. ಪಶ್ಚಿಮದ ಎಲ್ಲೆಯು ಯೂರೋಪು ಖಂಡದ ಕಡೆಗೆ ಚೆಟಲಿಂಗ್ ಸಮೀಪದಿಂದ ಕೆಲಿಕಾಟಿಯ ವರೆಗೆ ವ್ಯಾಪಿಸಿದೆ. ಈ ನಿರ್ಣಯದಿಂದ ಡೆರ್ಕಾಸ್ ಸರಸ್ಸೂ ಇಸ್ಲಾಂಜಾವೂ ಚಟಲ್ಜಾಕ್ಯನ್ನವೂ ಸಹ ತುರ್ಕಿಗೆ ಸೇರಿರುವುವು. ಪೂರ್ವದ ಎಲ್ಲೆಯು ತುರ್ಕಿಗೂ ಅರ್ಮೇನಿಯಾದಿಗೂ ಮಧ್ಯದಲ್ಲಿರುವುದು. ಇದನ್ನು ಅಮೇರಿಕಾಧ್ಯಕ್ಷರು ನಿರ್ಣಯಿಸುವರು. ದಕ್ಷಿಣದ ಎಲ್ಲೆಯು ಜಾಯಿಹಾನ್ ನದೀ ಮುಖದಿಂದ ಬೋಜಂತಿ, ಅಕ್ಸಾಸ್ಕಿಯಾ. ಅಂಟಾಬು, ಯೂಫ್ರಾಜಾ, ಜಿಹಾನ್‌ನೊ ಈ ಪಂಕ್ತಿಯನ್ನನುಸರಿಸಿರುವುದು. ಈ ಹೇಳಲ್ಪಟ್ಟ ಪ್ರದೇಶಗಳು ತುರ್ಕಿಯಲ್ಲಿ ಸೇರಕೂಡದು. ಅವುಗಳ ವರೆಗೆ ತುರ್ಕಿ ಎಲ್ಲೆಯು ಇರತಕ್ಕುದು. ಅಲ್ಲಿಂದ ಈ ಎಲ್ಲೆಕಟ್ಟು ಪಾರಸೀಕ ದೇಶದ ಗಜ್ರುನಾಗು ವರೆಗೆ ವ್ಯಾಪಿಸುವುದು. ಸ್ಮರ್ನಾವು ಗ್ರೀಕರ ಪರಿಪಾಲನೆಗೆ ಒಳಪಟ್ಟಿರಬೇಕು. ಆದರೆ ಅದು ತುರುಕರ ಅಧೀನದಲ್ಲಿರುವುದು. ೩ ನೆ ಭಾಗದಲ್ಲಿ ರಾಜಕೀಯ ವಿಷಯವಿದೆ. ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ತುರ್ಕಿ ಪ್ರಭುತ್ವದವರಿಗೆ ಈಗ ಇರುವ ಬಾಧ್ಯತೆಗಳಾಗಲೀ ಬಿರುದುಗಳಾಗಲೀ ಹೋಗುವುದಿಲ್ಲ. ಆದರೆ ತುರ್ಕಿ ಪ್ರಭುತ್ವದವರು ನ್ಯಾಯವಾಗಿ ಈ ಸಂಧಿನಿಬಂಧನೆಗಳ ಪ್ರಕಾರ ನಡೆದುಕೊಳ್ಳದೆಹೋದರೆ ಈ ನಿಯಮವನ್ನೂ ಬದಲಾಯಿಸುವುದಕ್ಕೆ ಮಿತ್ರಮಂಡಲಿಯವರಿಗೆ ಅಧಿಕಾರವಿರುವುದು. ಜಲಸಂಧಿ ನಿರ್ಣಯ ವಿಷಯವಾಗಿ ಒಂದು ಸಂಘವೇರ್ಪಡುವುದು. ಈ ಸಂಘದವರಿಗೆ ಕಪ್ಪುಸಮುದ್ರದ ಮೇಲೂ ಬಾಸ್ಪರಸ್ ಸಮುದ್ರದೊಡನೆ ಸೇರುವ ಭಾಗವೆಲ್ಲದರಮೇಲೂ, ಮಧ್ಯಧರಾಸಮುದ್ರದ ಮೇಲೂ ಡಾರ್ಡನೆಲ್ಸ್ ಜಲಸಂಧಿಯು ಸಮುದ್ರದೊಡನೆ ಸೇರುವ ಪ್ರದೇಶಗಳೆಲ್ಲದರ ಮೇಲೂ, ಅದರ ಮುಂದೆ ೩ ಮೈಲಿಗಳ ದೂರದ ಪ್ರದೇಶಗಳ ಮೇಲೂ, ಇಷ್ಟೇ ಅಲ್ಲದೆ ಆ ಸಂಘದವರಿಗೆ ಅವಶ್ಯಕವೆಂದು ತೋರುವಷ್ಟು ಸಮುದ್ರತೀರಪ್ರದೇಶದ ಮೇಲೂ ಅಧಿಕಾರವಿರಬೇಕು. ಈ ಮೇಲೆ ಕಂಡ ಸಮುದ್ರ ಪ್ರದೇಶಗಳಲ್ಲಿ ನೌಕಾಪ್ರಯಾಣ ಮಾಡಲಿಕ್ಕೆ ಯುದ್ಧಕಾಲ ಶಾಂತಿಕಾಲಗಳೆರಡರಲ್ಲೂ ಯಾವ ಆತಂಕವೂ ಇಲ್ಲದಂತೆ ಈ ಸಂಘದವರು ನೋಡಿಕೊಳ್ಳುತ್ತಿರಬೇಕು. ಕುರ್ದಿಸ್ತಾನ್ ವಿಷಯದಲ್ಲಿ ಈ ಸಂಧಿಯು ವ್ಯವಹಾರಕ್ಕೆ ಬಂದ ನಂತರ ೬ ತಿಂಗಳ ಕಾಲದೊಳಗೆ ಯೂಫ್ರೆಟಿಸ್ಸಿಗೆ ಉತ್ತರದಲ್ಲಿರುವ ದೇಶದಲ್ಲಿ ಕುರ್ದು ಜನರು ಹೆಚ್ಚಾಗಿರುವ ಪ್ರದೇಶವೆಲ್ಲಾ ಅವರ ಅಧೀನದಲ್ಲೇ ಇರುವಂತೆ ಒಂದು ಸ್ವಪರಿಪಾಲನಕ್ರಮ ಪದ್ಧತಿಯನ್ನು ಫ್ರೆಂಚ್, ಇಟಲಿ, ಇಂಗ್ಲೀಷ್ ಪ್ರಭುತ್ವದವರಿಂದ ನಿಯಮಿಸಲ್ಪಡುವ ಒಂದು ಸಂಘದವರು ರಚಿಸಬೇಕು. ಆ ಸಂಘವು ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಕೂಡಬೇಕು. ಅವರು ರಚಿಸುವ ಪ್ರಣಾಳಿಕೆಯಲ್ಲಿ ಅಸ್ಸೀರಿಯನ್, ಚಾಲ್ಡಿಯನ್ ಮೊದಲಾದ ಚಿಕ್ಕ ಚಿಕ್ಕ ಜಾತಿಮತಗಳವರ ಸ್ವತ್ವಗಳಿಗೆ ಯಾವ ಭಂಗವೂ ಬರದಂಥ ಏರ್ಪಾಡುಗಳಿರಬೇಕು. ಹಾಗೆ ಮಾಡುವುದರಲ್ಲಿ ಏನಾದರೂ ವಿವಾದಾಸ್ಪದ ಸಮಸ್ಯೆಯುಂಟಾದರೆ ಅದನ್ನು ಪರಿಷ್ಕರಿಸಲು ಕುರ್ದು ಜನರ ಪಾರಸೀಕರ ಇಟಾಲಿಯನ್ನರ ಫ್ರೆಂಚರ ಇಂಗ್ಲೀಷರ ಪ್ರತಿನಿಧಿಗಳೆಲ್ಲಾ ಇರುವ ಮತ್ತೊಂದು ಸಂಘವು ನಿಯಮಿಸಲ್ಪಡುವುದು. ಇಷ್ಟಾದರೂ ೧ ವರ್ಷದೊಳಗೆ ಕುರ್ದು ಜನರಲ್ಲಿ ಹೆಚ್ಚು ಮಂದಿಗಳು ಸ್ವಪರಿಪಾಲನ ಮಾಡಿಕೊಳ್ಳಲು ಸಾಮರ್ಥ್ಯವನ್ನು ಪಡೆದು ತುರ್ಕಿಯಿಂದ ತಾವು ಪ್ರತ್ಯೇಕವಾಗಿ ಸ್ವಪರಿಪಾಲನೆ ಮಾಡಿಕೊಳ್ಳುತ್ತೇವೆಂದೂ ಅದಕ್ಕೆ ತಮಗೆ ಅಧಿಕಾರ ಕೊಡಬೇಕೆಂದೂ ಜಾತೀಯ ಸಮಿತಿಯವರನ್ನು ಕೋರಿಕೊಂಡರೆ ಸಮಿತಿಯವರು ಆಗ ಅವರ ಸಾಮರ್ಥ್ಯವನ್ನೂ ಸ್ಥಿತಿಗತಿಯನ್ನೂ ಪರಿಶೀಲಿಸಿ, ಅವರಿಗೆ ಸ್ವಪರಿಪಾಲನವನ್ನು ಕೊಡಬೇಕೆಂದು ಹೇಳಿದರೆ, ಆಗ್ಗೆ ತುರ್ಕಿಯವರು ಆ ಕುರ್ದು ಪ್ರದೇಶದ ಮೇಲೆ ತಮಗಿರುವ ಅಧಿಕಾರವನ್ನು ಬಿಟ್ಟುಕೊಟ್ಟು ಸ್ವಪರಿಪಾಲನವನ್ನು ಅವರಿಗೆ ಕೊಡುತ್ತೇನೆಂಬುದಕ್ಕೆ ತುರ್ಕಿಯವರು ಈಗಲೇ ಒಪ್ಪಿಕೊಳ್ಳಬೇಕು. ಹಾಗೆ ಕುರ್ದು ಜನರಿಗೆ ಪ್ರತ್ಯೇಕ ರಾಷ್ಟ್ರವು ದೊರೆಯುವಾಗ್ಗೆ ಮೋಸಲ್ ಮೊದಲಾದ ಇತರ ಕುರ್ದು ದೇಶಭಾಗದವರು ತಾವೂ ಆ ಸ್ವತಂತ್ರ ರಾಷ್ಟ್ರದೊಡನೆಯೇ ಸೇರಿಕೊಳ್ಳುತ್ತೇವೆಂದು ಕೋರುವುದಾದರೆ ಅವುಗಳನ್ನು ಈಗ ಅಧೀನಪಡಿಸಿಕೊಂಡಿರುವ ಮಿತ್ರಮಂಡಲೀ ದೇಶಗಳಲ್ಲಿ ಯಾರೂ ಅದಕ್ಕೆ ಆತಂಕ ಹೇಳಕೂಡದು. ಆಡ್ರಿಯಾನೋಪಲ್ ಪಟ್ಟಣದ ಸುತ್ತಣ ಪ್ರದೇಶದ ಪ್ರಜೆಗಳು ಅನೇಕ ಮತಜಾತಿ ಭಾಷಾಭೇದಗಳುಳ್ಳವರಾದಕಾರಣ ಅವರ ಸ್ವತ್ವವನ್ನು ಕಾಪಾಡಿಕೊಂಡಿರುವುದಕ್ಕೆ ಗ್ರೀಕು ಒಪ್ಪಿಕೊಂಡಿದೆ. ಪಾಲಸ್ತೀನು, ಮೆಸಪೊಟೋಮಿಯಾ, ಸಿರಿಯಾ ದೇಶಗಳು ತಾತ್ಕಾಲಿಕವಾಗಿ ಸ್ವತಂತ್ರ ದೇಶಗಳಾಗಿ ಭಾವಿಸಲ್ಪಡಬೇಕು. ಆದರೆ ರಾಜಕೀಯ ವಿಷಯದಲ್ಲಿ ತಕ್ಕ ಸಾಮರ್ಥ್ಯವು ಅವುಗಳಿಗೆ ಕುದುರುವವರೆಗೂ ಅವು ತಮ್ಮ ಸಂರಕ್ಷಕ ದೇಶಗಳ ಸಲಹೆಗಳನ್ನು ಕೋರಿ ವರ್ತಿಸುತ್ತಿರಬೇಕು. ಯಹೂದ್ಯರಿಗೆ ಪ್ರತ್ಯೇಕ ದೇಶವು ಏರ್ಪಡಿಸಿಕೊಡಲ್ಪಡುವುದೆಂದು ಆಂಗ್ಲಪ್ರಭುತ್ವದವರು 1918 ರಲ್ಲಿ ಮಾಡಿದ್ದ ಪ್ರಕಟನೆಯ ಪ್ರಕಾರ ಜರುಗಿಸುವುದಕ್ಕೆ ಪಾಲಸ್ತೀನಿನ ಸಂರಕ್ಷಕ ದೇಶವು ಒಪ್ಪಿ ನಡೆಸಿಕೊಡಬೇಕು. ಹೆಡ್ಜಾಜು ಸ್ವತಂತ್ರರಾಷ್ಟ್ರವಾಗಿರಬೇಕು. ಎಲ್ಲ ದೇಶಗಳ ಮಹಮ್ಮದೀಯ ಯಾತ್ರಿಕರೂ ಮೆಕ್ಕಾ ಮದೀನಾಗಳಿಗೆ ನಿರಾತಂಕವಾಗಿ ಹೋಗಿ ಬರಲನುಕೂಲವನ್ನು ಹೆಡ್ಜಾಜಿನ ಪ್ರಭುಗಳು ಮಾಡಿಕೊಡಲು ಒಪ್ಪಿಕೊಳ್ಳಬೇಕು. ಈಜಿಪ್ಟಿನ ಮೇಲಿರುವ ಅಧಿಕಾರವನ್ನೆಲ್ಲಾ ತುರ್ಕಿಯು ಬಿಟ್ಟುಬಿಡಬೇಕು. ಈಜಿಪ್ಟಿನ ಸಂಬಂಧವಾಗಿ ತುರ್ಕಿಯವರು ಮಾಡಿರುವ ಸಾಲವನ್ನೆಲ್ಲಾ ಇಂಗ್ಲೀಷರು ತೀರಿಸಿಕೊಳ್ಳುವರು. ೧೯೧೪ ನೆ ಡಿಸಂಬರ್ ತಾ|| ೧೮ ರ ವರೆಗೆ ಈಜಿಪ್ಟಿನಲ್ಲಿ ಮಾಮೂಲಾಗಿ ವಾಸಿಸುತ್ತಿದ್ದ ತುರುಕರೆಲ್ಲಾ ಈಜಿಪ್ಟ್ ಪ್ರಜೆಗಳಾಗಿ ಎಣಿಸಲ್ಪಡುವರೇ ಹೊರತು ತುರ್ಕಿಗೆ ಸಂಬಂಧಪಟ್ಟವರಾಗಿ ಎಣಿಸಲ್ಪಡುವುದಿಲ್ಲ. ಸೈಪ್ರಸ್ ನಡುಗಡ್ಡೆಯ ವಶೀಕರಣವು ಸ್ಥಿರೀಕೃತವಾಗಿದೆ. ಟ್ಯೂನಿಸ್ ಮೊರಾಕೋ ದೇಶಗಳು ಫ್ರಾನ್ಸ್ ಪರಿಪಾಲನೆಗೊಳಪಡುವುದಕ್ಕೆ ತುರ್ಕಿಯು ಒಪ್ಪಿಕೊಳ್ಳಬೇಕು. ಈಜಿಯನ್ ದ್ವೀಪ ತಬಿಯಾ ಇವುಗಳ ಮೇಲಿದ್ದ ಅಧಿಕಾರವನ್ನೆಲ್ಲಾ ತುರ್ಕಿಯು ಬಿಟ್ಟುಕೊಡಬೇಕು. ಇಟಲಿಯವರು ಆಕ್ರಮಿಸಿಕೊಂಡಿರುವ ಡೋಡಾಕನೀಸ್ ದ್ವೀಪಗಳ ಮೇಲೆ ತಮಗಿದ್ದ ಅಧಿಕಾರವನ್ನು ತುರ್ಕಿಯವರು ಇಟಲಿಗೆ ವಹಿಸಿಕೊಡಬೇಕು. ಈ ಸಂಧಿನಿಬಂಧನೆಗಳ ಪ್ರಕಾರ ಏರ್ಪಡುವ ರಾಷ್ಟ್ರಗಳಿಗೂ, ಇದುವರೆಗೆ ನಿರ್ಮಿತವಾಗಿರುವ ರಾಷ್ಟ್ರಗಳಿಗೂ ಮಿತ್ರಮಂಡಲಿಯವರಿಗೂ ಜರುಗಿರುವ ಸಾಮಾನ್ಯವಾದ ಒಡಂಬಡಿಕೆಗಳಿಗೆಲ್ಲಾ ತುರ್ಕಿಯವರು ಸಂಮತಿಸಬೇಕು. ಆ ಒಡಂಬಡಿಕೆಗಳಲ್ಲಿ ಕಂಡ ಎಲ್ಲೆಕಟ್ಟುಗಳನ್ನೂ ತುರ್ಕಿಯು ಒಪ್ಪಬೇಕು.

೪ ನೆ ಭಾಗದಲ್ಲಿ ಚಿಕ್ಕ ಚಿಕ್ಕ ಜಾತಿ ಪ್ರಜೆಗಳ ಸ್ವತ್ವಪರಿಪಾಲನೆಗೆ ಸಂಬಂಧಪಟ್ಟ ನಿಯಮಗಳು ತಿಳಿಯಿಸಲ್ಪಟ್ಟಿವೆ.

೫ ನೆ ಭಾಗದಲ್ಲಿ—ಸೇನಾಸಂಬಂಧವಾದ ನಿಯಮವು ಹೇಳಲ್ಪಟ್ಟಿದೆ. ಸುಲ್ತಾನರ ವಶದಲ್ಲಿ ಇನ್ನು ಮುಂದೆ ಅವರ ಅಂಗರಕ್ಷಕ ಸೈನ್ಯದಲ್ಲಿ ೭೦೦ ಮಂದಿಗಳು ಮಾತ್ರ ಇರಬೇಕು. ದೇಶಶಾಂತಿ ಸಂರಕ್ಷಣಾರ್ಥವಾಗಿ ಒಂದು ಸೈನ್ಯವಿರಬೇಕು. ನವೀನ ಸೈನ್ಯವನ್ನು ಒದಗಿಸಿಕೊಳ್ಳಬೇಕಾದ ಸಂದರ್ಭ ಬಿದ್ದರೆ ಅವನ್ನು ಎಲ್ಲಿಂದ ಒದಗಿಸಿಕೊಳ್ಳಬೇಕೋ ಅದು ನಿರ್ಧರಿಸಲ್ಪಡುವುದು. ಈ ಒಟ್ಟು ಸೈನ್ಯದ ಸಂಖ್ಯೆಯೆಲ್ಲಾ ೫೦ ಸಾವಿರದ ಒಳಗಿರಬೇಕು. ತುರ್ಕಿಯ ನೌಕಾ ಸೈನ್ಯದಲ್ಲಿ ೭ ಸ್ಲೂಪರುಗಳೂ ೬ ಟಾರ್ಪೆಡೋಗಳೂ ಮಾತ್ರ ಇರಬೇಕು. ಅದಕ್ಕಿಂತ ಹೆಚ್ಚಾಗಿರಕೂಡದು. ಇದರ ಹೊರತು ಇನ್ನು ಬೇರೆ ಭೂಜಲವಿಮಾನ ಸೈನ್ಯಗಳೊಂದೂ ಇರಕೂಡದು. ತುರ್ಕಿ ರೇವುಗಳಲ್ಲಿ ಈಗ ಹಿಡಿದು ಇಟ್ಟಿರುವ ಹಡಗುಗಳನ್ನೆಲ್ಲಾ ಅವರವರ ದೇಶಗಳಿಗೆ ಕೊಟ್ಟುಬಿಡಬೇಕು. ಈ ನಿಯಮಗಳನ್ನೆಲ್ಲಾ ಜರುಗಿಸುವಂತೆ ನೋಡಿಕೊಳ್ಳುವುದಕ್ಕೆ ಮಿತ್ರಮಂಡಲಿಯವರು ಒಂದು ಸಂಘವನ್ನೇರ್ಪಡಿಸುವರು.

೬ ನೆ ಭಾಗದಲ್ಲಿ ಯುದ್ಧದಲ್ಲಿ ಸತ್ತವರ ಗೋರಿಗಳಿರುವ ಪ್ರದೇಶದ ಮೇಲಣ ಅಧಿಕಾರವು ಮಿತ್ರಮಂಡಲೀ ದೇಶಗಳಿಗೆ ಸೇರಿರಬೇಕೆಂತಲೂ, ಯುದ್ಧದಲ್ಲಿ ಸೆರೆ ಹಿಡಿದಿರುವ ಬಂದಿಗಳನ್ನು ಅವರವರ ದೇಶಗಳಿಗೆ ಒಪ್ಪಿಸಿಕೊಡಬೇಕೆಂತಲೂ ಹೇಳಲ್ಪಟ್ಟಿದೆ.

೭ ನೆ ಭಾಗದಲ್ಲಿ—ಯುದ್ಧದಲ್ಲಿ ತಪ್ಪು ಮಾಡಿದವರನ್ನು ವಿಚಾರಿಸಿ ಶಿಕ್ಷಿಸುವುದಕ್ಕೆ ಮಿತ್ರಮಂಡಲೀ ದೇಶದವರಿಗೆ ತುರ್ಕಿಯವರು ಒಪ್ಪಿಸಿ ಕೊಡಬೇಕೆಂಬ ನಿಯಮವು ಹೇಳಲ್ಪಟ್ಟಿದೆ.

೮ ನೆ ಭಾಗದಲ್ಲಿ ಸಾಲದ ವಿಷಯವಿದೆ. ಯುದ್ಧಕ್ಕೆ ಮುಂಚೆ ತುರ್ಕಿಗೆ ೧೬೮೦ ಲಕ್ಷ ಪೌನ್ಗಳ ಸಾಲವಿದ್ದಿತು. ಯುದ್ಧಕಾಲದಲ್ಲಿ ೪೮೩೦ ಲಕ್ಷ ಪೌನ್ ಸಾಲವಾಯಿತು. ಒಟ್ಟು ೬೫ ಕೋಟಿ ಪೌನುಗಳ ಮೇಲೆಯೇ ಸಾಲವಿರುವುದು. ಯುದ್ಧಕ್ಕೆ ಮುಂಚೆಯೂ ಈಚೆಗೂ ತುರ್ಕಿಯಿಂದ ಒಡೆದುಹೋದ ತುರ್ಕಿರಾಷ್ಟ್ರಭಾಗಗಳೆಲ್ಲಾ ಈ ಸಾಲದಲ್ಲಿ ತಂತಮ್ಮ ಪರಿಮಾಣಕ್ಕೆ ತಕ್ಕಷ್ಟನ್ನು ವಹಿಸಿಕೊಂಡು ತೀರಿಸಬೇಕು. ತುರ್ಕಿಯು ಸ್ವಲ್ಪ ಭಾಗವನ್ನು ವಹಿಸಬೇಕು. ಇದನ್ನೆಲ್ಲಾ ವ್ಯವಸ್ಥೆಗೊಳಿಸುವುದಕ್ಕೆ ಒಂದು ಸಂಘವು ಏರ್ಪಡಿಸಲ್ಪಡುವುದು.

೯ ನೆ ಭಾಗದಲ್ಲಿ—೧೯೧೪ ನೆ ಅಕ್ಟೋಬರ್ ತಾ|| ೨೯ ಕ್ಕೆ ಹಿಂದೆ ತುರ್ಕಿ ದೇಶದಲ್ಲಿದ್ದ ಮಿತ್ರಮಂಡಲೀ ದೇಶೀಯರಿಗೂ ವರ್ತಕ ಸಂಘಗಳಿಗೂ ಪೂರ್ವದಲ್ಲಿ ಯಾವಯಾವತರದ ಬಾಧ್ಯತೆಗಳು ಕೊಡಲ್ಪಟ್ಟಿದ್ದವೋ ಅವನ್ನೆಲ್ಲಾ ಮರಳಿ ತುರ್ಕಿಯು ಕೊಡಬೇಕು. ಈಗ ಹಾಗೆ ಕೊಡುವುದರಿಂದ ಅಲ್ಲಿಯ ಪ್ರಜೆಗಳಿಗೆ ಏನಾದರೂ ಹಾನಿಯುಂಟಾಗುವುದೆಂದು ತೋರಿದರೆ ಅದಕ್ಕೆ ಪ್ರತಿಫಲವನ್ನು ಮಿತ್ರಮಂಡಲಿಯವರು ಆ ಪ್ರಜೆಗಳಿಗೆ ಕೊಡಿಸಿ, ಆ ಬಾಧ್ಯತೆಯನ್ನು ಮರಳಿ ಪಡೆಯುವಂತೆ ಮಾಡುವರು.

೧೦ ನೆ ಭಾಗದಲ್ಲಿ—ಮಿತ್ರಮಂಡಲೀ ವಿಮಾನಗಳು ತುರ್ಕಿ ದೇಶದ ಮೇಲೆ ಹಾರುಹೋಗುವುದಕ್ಕೂ, ಮಾರ್ಗಮಧ್ಯದಲ್ಲಿ ಅಂಥ ವಿಮಾನಗಳು ತುರ್ಕಿ ದೇಶದಲ್ಲಿ ಇಳಿಯುವುದಕ್ಕೂ ಯಾವ ಅಭ್ಯಂತರವೂ ಇರಕೂಡದೆಂದು ಹೇಳಲ್ಪಟ್ಟಿದೆ.

೧೧ ನೆ ಭಾಗದಲ್ಲಿ—ನೌಕಾಯಾನಗಳಿಗೆ ಯಾವ ಆತಂಕವೂ ಇರಕೂಡದೆಂದು ಹೇಳಲ್ಪಟ್ಟಿದೆ. ಈ ಕೆಳಗೆ ವಿವರಿಸಲ್ಪಟ್ಟಿರುವ ರೇವುಪಟ್ಟಣಗಳು ಎಲ್ಲ ಜಾತೀಯರ ಗಮನಾಗಮನಗಳಿಗೂ ಸಂಬಂಧಪಟ್ಟುವೆಂದು ಭಾವಿಸಲ್ಪಡುವುವು. ಆ ಪಟ್ಟಣಗಳಲ್ಲಿ ಎಲ್ಲ ಜಾತೀಯರಿಗೂ ಬಂದುಹೋಗುವುದಕ್ಕೆ ಆತಂಕವಿರಬಾರದು. ಅವು ಯಾವುವೆಂದರೆ—ಅಲಗ್ಸಾಂಡ್ರಿಯಾ. ಬಸಾರಾ, ಬಾಟೋಮು, ಕಾನ್‌ಸ್ಟಾಂಟಿನೋಪಲು, ಡಾಡಿಗಾತು, ಹಾಯಫಾ, ಹೈದರ್‌ಪಾಷಾ, ಸ್ಮರ್ನಾ, ಟ್ರಿಬಿಜಾಂಡು.

೧೨-೧೩ ಭಾಗಗಳಲ್ಲಿ ಕೂಲಿಕಾರರ ಕನ್ವೆನ್ಷನ್ನುಗಳಿಗೆ ತುರ್ಕಿಯೂ ಅಂಗೀಕರಿಸಬೇಕೆಂಬ ಮತ್ತು ಪುರಾತನ ಪ್ರದೇಶಗಳನ್ನು ಕುರಿತು ಕೆಲ ನೂತನ ಶಾಸನಗಳನ್ನು ಕಲ್ಪಿಸಲು ತುರ್ಕಿಯು ಒಪ್ಪಿಕೊಳ್ಳಬೇಕೆಂಬ ನಿಯಮಗಳು ಹೇಳಲ್ಪಟ್ಟಿವೆ.

ಮೈಸೂರು ಪ್ರಜಾಪ್ರತಿನಿಧಿ ಸಭಿಕರಲ್ಲಿ ವಿಜ್ಞಾಪನೆ.

ಮಹಾಶಯರೆ,

ಇದೇ ಮೇ ತಿಂಗಳು ತಾ|| ೨೪ ರಿಂದ ರಾಜಧಾನಿಯಲ್ಲಿ ಕೂಡುವುದಕ್ಕಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ತಾವುಗಳೆಲ್ಲರೂ ನಿಯಮನಿರ್ಮಾಣ ಸಭೆಯಲ್ಲಿ ಖಾಲಿಯಾಗಿರುವ ಮ|| ರಾ|| ಎಂ. ಬಸವಯ್ಯನವರ ಸ್ಥಾನಕ್ಕೆ ತಮ್ಮಗಳ ಪಕ್ಷದಿಂದ ಒಬ್ಬ ಮೆಂಬರನ್ನು ಆರಿಸಿ ಕಳುಹಿಸಬೇಕಾದ ವಿಷಯವು ತಮಗೆ ಗೊತ್ತೇ ಇದೆ. ಈಗ ನಾನು ತಮ್ಮಗಳ ಪ್ರತಿನಿಧಿಯಾಗಿ ನಿಯಮನಿರ್ಮಾಣ ಸಭೆಯಲ್ಲಿ ಸೇರಿ ದೇಶಸೇವೆ ಮಾಡಬೇಕೆಂಬ ಕುತೂಹಲದಿಂದಲೂ, ಮಿತ್ರಮಂಡಲಿಯವರ ಪ್ರೋತ್ಸಾಹದಿಂದಲೂ ಉಮೇದುವಾರನಾಗಿರುತ್ತೇನೆ.

ನಾನು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಅಸೋಸಿಯೇಷನ್ನಿನ ಆನರರಿ ಜನರಲ್ ಸೆಕ್ರೆಟರಿಯಾಗಿರುವುದಲ್ಲದೆ, ಆ ಅಸೋಸಿಯೇಷನ್ನಿನ ಪಕ್ಷದಿಂದ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿ ಚುನಾಯಿಸಲ್ಪಟ್ಟು ತಮ್ಮಗಳ ಮಧ್ಯದಲ್ಲಿ ದೇಶಸೇವೆ ಮಾಡುತ್ತಿರುವುದೂ, ಪ್ರಜಾಮಿತ್ರಮಂಡಲಿಯ ಜಾಯಿಂಟ್ ಸೆಕ್ರೆಟರಿಯಾಗಿರುವುದೂ, ಮತ್ತು ಸಂಪದಭ್ಯುದಯ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ಸೆಂಟ್ರಲ್ ಬೋರ್ಡಿಗೆ ನೀವುಗಳು ನಿಮ್ಮ ಪಕ್ಷದಿಂದ ಒಬ್ಬ ಮೆಂಬರನ್ನಾಗಿ ನನ್ನನ್ನು ಚುನಾಯಿಸಿರುವುದೂ ಸಹ ನಿಮಗೆ ಗೊತ್ತೇಇದೆಯಷ್ಟೆ. ನನ್ನ ಮೇಲೆ ನೀವು ಪ್ರದರ್ಶಿಸಿರುವ ನಂಬುಗೆಗೂ ನಿರೀಕ್ಷಣೆಗೂ ಅನುಗುಣವಾಗಿ ಈಗಲೂ ನನ್ನ ಕರ್ತವ್ಯತತ್ಪರತೆಯ ಮೇಲೆ ವಿಶ್ವಾಸವಿಟ್ಟು ಆ ಸಮಯಕ್ಕೆ ಸಭೆಗೆ ತಾವು ದಯಮಾಡಿಸಿ ತಮ್ಮ ಅಮೋಘವಾದ ಓಟನ್ನು ನನಗೆ ಕೊಟ್ಟು ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸುವ,

ತಮ್ಮ ವಿಧೇಯ,
ಬೆಂಗಳೂರು ಸಿಟಿ, ತಾ|| ೧೩-೫-೨೦. } **ಜಿ. ಪರಮಶಿವಯ್ಯ,**
ಬಿ.ಎ., ಎಲ್‌ಎಲ್.ಬಿ., ಅಡ್ವೊಕೇಟ್.

ಹಿಂದುಳಿದ ಜನಾಂಗಕ್ಕೆ ಸೇರಿದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಲ್ಲಿ ವಿಜ್ಞಾಪನೆ.

ಈ ಮೇ ತಿಂಗಳು ಆಖೈರಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಕಾಲದಲ್ಲಿ ಸೇರುವ ಪ್ರಜಾಪ್ರತಿನಿಧಿ ಸಭೆಯಿಂದ ನಿಯಮನಿರ್ಮಾಣ ಸಭೆಗೆ (ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ) ಪ್ರಜಾಮಿತ್ರಮಂಡಲಿಯ ಜನರಲ್ ಸೆಕ್ರೆಟರಿಯವರಾಗಿದ್ದು ದಿವಂಗತರಾದ ಮ|| ರಾ|| ಎಂ. ಬಸವಯ್ಯನವರ ಸ್ಥಾನಕ್ಕೆ ಒಬ್ಬ ಮೆಂಬರನ್ನು ತಾವುಗಳು ಚುನಾಯಿಸಬೇಕಾಗಿರುವುದು.

ಹಿಂದೆ ದಸರಾ ಕಾಲದಲ್ಲಿ ಮೈಸೂರಿನಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಗೆ ತಾವುಗಳು ದಯಮಾಡಿಸಿ ನಿಯಮನಿರ್ಮಾಣ ಸಭೆಗೆ ಮೆಂಬರುಗಳನ್ನು ಚುನಾಯಿಸಿ ದೇಶಾಭಿಮಾನವನ್ನು ಹೇಗೆ ವ್ಯಕ್ತಪಡಿಸಿರುವಿರೋ ಅದರಂತೆಯೇ ಈಗಲೂ ಸಹ ಹಿಂದುಳಿದ ಜನಾಂಗಕ್ಕೆ ಸೇರಿದ ಮೆಂಬರುಗಳಲ್ಲಿ ಒಬ್ಬರಾದ ಮತ್ತು ಪ್ರಜಾಮಿತ್ರಮಂಡಲಿಯ ಸೆಕ್ರೆಟರಿಯವರಾದ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ ಬಿ.ಎ.,ಎಲ್‌ಎಲ್.ಬಿ., ಯವರು ಉಮೇದುವಾರರಾಗಿ ನಿಂತಿರುತ್ತಾರಾಗಿ, ತಾವುಗಳು ಆ ಸಮಯಕ್ಕೆ ಏನು ಕೆಲಸವಿದ್ದಾಗ್ಯೂ ಬಿಟ್ಟು ಮೈಸೂರಿಗೆ ದಯಮಾಡಿಸಿ ಅವರಿಗೆ ಓಟನ್ನು ಕೊಡುವಿರೆಂದು ಪೂರ್ಣವಾಗಿ ನಂಬಿರುತ್ತೇನೆ.

ಬೆಂಗಳೂರು ಸಿಟಿ, ತಾ|| 11-5-1920. } **ಎಚ್. ಚೆನ್ನಯ್ಯ,** ಪ್ರೆಸಿಡೆಂಟ್,
ಮೈಸೂರು ಪ್ರಜಾಮಿತ್ರಮಂಡಲಿ.

ಮ|| ಎಂ. ಬಸವಯ್ಯನವರ ಮೃತಿಯಿಂದ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲಿನಲ್ಲಿ ಖಾಲಿಯಾಗಿರುವ ಒಂದು ಸ್ಥಾನಕ್ಕೆ ಮತ್ತೊಬ್ಬರನ್ನು ಆರಿಸುವ ಕೆಲಸವು ಇದೇ ತಿಂಗಳು ಕೊನೆಯ ವಾರದಲ್ಲಿ ರಾಜಧಾನಿಯಲ್ಲಿ ಕೂಡುವ ಪ್ರಜಾಪ್ರತಿನಿಧಿಸಭೆಯಲ್ಲಿ ನಡೆಯುತ್ತದೆ.

ಹಿಂದೆ ಪ್ರಜಾಪ್ರತಿನಿಧಿಸಭಾ ಕಾಲದಲ್ಲಿ ನಾನು ಆಗಿಂದಾಗ್ಗೆ ಒಕ್ಕಲಿಗರ ಪತ್ರಿಕೆಯಲ್ಲಿ ಕೊಟ್ಟ ಸಲಹೆಗಳನ್ನು ನೀವು ಗಮನಕ್ಕೆ ತಂದುಕೊಂಡು ನಿಯಮನಿರ್ಮಾಣ ಸಭೆಗೆ ನಿಮ್ಮ ಬರವಸೆಗೆ ಪಾತ್ರರಾದ ಮೆಂಬರುಗಳನ್ನು ಚುನಾಯಿಸಿ ದೇಶಾಭಿಮಾನವನ್ನು ಹೇಗೆ ವ್ಯಕ್ತಪಡಿಸಿರುವಿರೋ ಅದರಂತೆಯೇ ಈಗಲೂ ಸಹ ಹಿಂದುಳಿದ ಜನಾಂಗಕ್ಕೆ ಸೇರಿದ ಮೆಂಬರುಗಳಲ್ಲಿ ಒಬ್ಬರಾದ ಬೆಂಗಳೂರಿನಲ್ಲಿ ಅಡ್ವೋಕೇಟರಾಗಿರುವ ಮ|| ಜಿ. ಪರಮಶಿವಯ್ಯ ಬಿ. ಎ, ಎಲ್‌ಎಲ್. ಬಿ., ಯವರು ಉಮೇದುವಾರರಾಗಿ ನಿಂತಿರುತ್ತಾರಾದಕಾರಣ, ತಾವುಗಳು ಆ ಸಮಯಕ್ಕೆ ಎಷ್ಟು ಕೆಲಸವಿದ್ದಾಗ್ಯೂ ಬಿಟ್ಟು ಮೈಸೂರಿಗೆ ದಯಮಾಡಿಸಿ ಅವರಿಗೇನೇ ನಿಮ್ಮ ಓಟನ್ನು ಕೊಡುವಿರೆಂದು ಪೂರ್ಣವಾಗಿ ನಂಬಿರುತ್ತೇನೆ.

ಬೆಂಗಳೂರು ಸಿಟಿ, ತಾ|| ೧೨-೫-೨೦. } **ಎಂ. ಸುಬ್ಬಯ್ಯ, ಬಿ. ಎ.,**
ಜನರಲ್ ಸೆಕ್ರೆಟರಿ, ಒಕ್ಕಲಿಗರ ಸಂಘ.

ಪತ್ರವ್ಯವಹಾರ.

ವಿವಾಹಮಹೋತ್ಸವ.

ತಾ|| ೧೬-೫-೨೦ ನೆ ಭಾನುವಾರ ಶ್ರೀ ಅಜ್ಜೂರು ಮಠದ ವೈ|| ಸಿದ್ಧಪ್ಪಯ್ಯನವರ ಪುತ್ರ ಚಿ|| ರಾ|| ಸಣ್ಣಯ್ಯನವರಿಗೆ ವಸ್ತಾರೆ ಹೋಬಳಿ ಶುಕ್ರವಾರಪೇಟೆ ವೇ|| ನಂಜಪ್ಪಯ್ಯನವರ ಸಹೋದರಿ ಸಿದ್ಧನಂಜಮ್ಮನೆಂಬ ವಧುವನ್ನು ತಂದು ಶುಕ್ರವಾರಪೇಟೆಯಲ್ಲಾದ ವಿವಾಹಕಾಲದಲ್ಲಿ ಧಾರಾಮುಹೂರ್ತವಾದನಂತರ ಸಭೆ ಕೂಡಿದಾಗ್ಗೆ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಉದ್ದೇಶವನ್ನು ಮತ್ತು ಕೈ|| ವೈ. ವೀರಸಂಗಪ್ಪನವರು ನಮ್ಮ ವೀರಶೈವಮತದ ಅಭ್ಯುದಯಕ್ಕೋಸ್ಕರ ಮಾಡಿದ ದೃಢಪ್ರಯತ್ನಗಳನ್ನೂ ಕುರಿತು ಆಲದೂರು ಬಿ. ಪಿ. ಬಸಪ್ಪನವರು ಭಾಷಣ ಮೂಲಕ ಹೇಳಲು ವಧುವಿನ ಕಡೆಯಿಂದ ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲದ ಬಗ್ಗೆ ೧ ರೂ. ಮತ್ತು ವೀ|| ವಿ|| ಫಂಡಿಗೆ ೨ ರೂ. ವರನ ಕಡೆಯಿಂದ ವೀ|| ವಿ|| ಫಂಡಿಗೆ ೩ ರೂ. ಗಳು ವಸೂಲು ಬಂದುವು. ಅನಂತರ ಸಭೆಯು ಬರಖಾಸ್ತಾಯಿತು.

ಬಿ. ಪಿ. ಬಸಪ್ಪ, ವಿದ್ಯಾರ್ಥಿ, ಆಲದೂರು.

ಶಿಕಾರಿಪುರದ ತಾ|| ಶಿರಾಳಕೊಪ್ಪದಲ್ಲಿರುವ ಸಾಹುಕಾರ್ ಸೂರ್ಣಗಿ ಸಿದ್ಧಬಸವಪ್ಪನವರು ತಮ್ಮ ಅಣ್ಣಂದಿರಾದ ಶಿವಲಿಂಗಪ್ಪನವರ ಪುತ್ರಿ ಸೌ|| ವೀರಮ್ಮನೆಂಬ ಕನ್ಯೆಯನ್ನು ಮ|| ರಾಣಿಬೆನ್ನೂರು ಸೂ. ಶಂಕರಪ್ಪನೆಂಬ ವರನಿಗೂ ಸದರಿ ಶಿವಲಿಂಗಪ್ಪನವರ ದ್ವಿತೀಯ ಪುತ್ರ ಸಂಗಪ್ಪನೆಂಬ ವರನಿಗೆ ಶಿರಾಳಕೊಪ್ಪದ ಮ|| ಎಳಗೇರಿ ಮಹಾದೇವಪ್ಪನವರ ಜ್ಯೇಷ್ಠಪುತ್ರಿ ಸೌ|| ಶಿವಲಿಂಗಮ್ಮನೆಂಬ ಕನ್ಯೆಯನ್ನ ನಿಶ್ಚೈಸಿ ಈ ವಧೂವರರ ವಿವಾಹಕಾರ್ಯವು ಇದೇ ರೌದ್ರಿ ಸಂ|| ದ ವೈಶಾಖ ಶು ೧೩ ಶುಕ್ರವಾರ ಪ್ರಾತಃಕಾಲ ಮಿಥುನಲಗ್ನದಲ್ಲಿ ಪುರೋಹಿತರಿಂದ ವಿಧ್ಯುಕ್ತವಾಗಿ ನಡೆದನಂತರ, ಪ್ರಜಾಸೌಖ್ಯಕ್ಕೋಸ್ಕರ ನಮ್ಮ ಮಹಾರಾಜಾ ಸರ್ಕಾರದವರು ನೇಮಿಸಿರುವ ಮ|| ಎಚ್. ಕೆ. ಮಲ್ಲಪ್ಪನವರು ಆರೋಗ್ಯ ವಿದ್ಯಾ ಕೈಗಾರಿಕೆ ಕೃಷಿ ವ್ಯಾಪಾರ ಮೊದಲಾದ ವಿಷಯಗಳನ್ನು ಸರಸವಾಗಿ ಗಂಭೀರಧ್ವನಿಯಿಂದ ಫೋಟೋಗಳ ಮೂಲಕ ಬೋಧಿಸಿ ಜನಗಳ ಮೌಢ್ಯವನ್ನು ಹೋಗಲಾಡಿಸಿದ್ದರಿಂದ ಪ್ರೇರಿಸಿದ ಮಹಾರಾಜಾ ಸರ್ಕಾರದವರಿಗೆ ಭೂಷಣಪ್ರದವಾಗಿರುವುದೆಂದು ಸಭಿಕರೆಲ್ಲರೂ ಸಂತೋಷಪಟ್ಟರು. ಮತ್ತು ನಮ್ಮ ವೀರಶೈವ ಮತಧರ್ಮದ ಗ್ರಂಥಗಳನ್ನು ಸಂಗ್ರಹಿಸಿ ವೈದಿಕ ವಿದ್ಯೆಯನ್ನು ಅಭಿವೃದ್ಧಿಗೊಳಿಸಿದ ಕೈಲಾಸವಾಸಿಗಳಾದ ಯಜಮಾನ್ ವೀರಸಂಗಪ್ಪಯ್ಯನವರ ಸ್ಮರಣಾರ್ಥವಾಗಿ ಕಾರ್ಯಸ್ಥರಾದ ಸಿದ್ಧಬಸವಪ್ಪನವರು ಸಂತೋಷದಿಂದ ರೂ. ೧-೨-೦ ದಕ್ಷಿಣೆ ಸಹಿತ ಅಗ್ರ ತಾಂಬೂಲ ತೆಗೆದಿಟ್ಟನಂತರ ಭಕ್ತಮಾಹೇಶ್ವರರಿಗೂ ಪುರಜನರಿಗೂ ಸರ್ಕಾರಿ ಉದ್ಯೋಗಸ್ಥರಿಗೂ ಫಲ ತಾಂಬೂಲಗಳು ಕೊಟ್ಟು ನಮ್ಮನ್ನಾಳುವ ಇಂಡಿಯಾ ಚಕ್ರವರ್ತಿ ದಂಪತಿಗಳಿಗೂ, ಶ್ರೀಮನ್ ಮಹಾರಾಜ ಯುವರಾಜರಿಗೂ ವಧೂವರರಿಗೂ ಜಯವಾಗಲೆಂದು ಜಗದ್ರಕ್ಷಕರಾದ ಪಾರ್ವತೀಪರಮೇಶ್ವರರನ್ನು ಧ್ಯಾನಿಸಿ ಸಭಾಸಂಪೂರ್ಣಗೊಳಿಸಲ್ಪಟ್ಟಿತು.

ಪ್ರೇಕ್ಷಕ.

(ನೆಲಮಂಗಲದ ತಾಲ್ಲೂಕು ಗಬ್ಬೂರಲ್ಲಿ ನಡೆದ ವಿವಾಹಸಮಾರಂಭ.)

ಗಬ್ಬೂರು ಗ್ರಾಮದಲ್ಲಿರುವ ಮ|| ಶಾಂತವೀರಪ್ಪನವರ ಪುತ್ರ ಚಿ|| ಪುಟ್ಟವೀರಪ್ಪನೆಂಬ ವರನಿಗೆ ತುಮಕೂರಲ್ಲಿರುವ ಹುಲ್ಕುಂಟೆ ಸೋಮಶೇಖರಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನೆಂಬ ಕನ್ಯೆಯನ್ನು ತಂದುಕೊಂಡು 16-5-1920 ನೆ ಭಾನುವಾರ ದಿವ 12 ಗಂಟೆಗೆ ಸಲ್ಲುವ ಕಟಕಲಗ್ನದಲ್ಲಿ ಶಾಂತವೀರಪ್ಪನವರ ಸ್ವಗೃಹದಲ್ಲಿ ನೂತನವಾಗಿ ಪುಷ್ಪಗಳಿಂದ ರಚಿಸಿದ್ದ ಕಲ್ಯಾಣ ಮಂಟಪದಲ್ಲಿ ಪಾಣಿಗ್ರಹಣ ಮಹೋತ್ಸವವು ನೆಲಮಂಗಲದ ಮಹಂತಿನ ಮಠದ ವೇ|| ಆರ್. ಕಪ್ಪಣ್ಣಶಾಸ್ತ್ರಿಗಳು ಮತ್ತು ಮಂಟಾಳು ರುದ್ರಶಾಸ್ತ್ರಿಗಳಿಂದ ವಿಧಿವತ್ತಾಗಿ ನಡಿಸಲ್ಪಟ್ಟಿತು. ಈ ಕಲ್ಯಾಣ ಮಹೋತ್ಸವಕ್ಕೆ ತುಮಕೂರು ನೆಲಮಂಗಲ ಬೆಂಗಳೂರು ಮುಂತಾದ ಪ್ಯಾಟೆ ಮನೆಯವರು ಮತ್ತು ಇತರ ದೊಡ್ಡ ಮನುಷ್ಯರುಗಳಿಂದ ಸಭೆಯು ಅಲಂಕರಿಸಲ್ಪಟ್ಟಿತ್ತು. ಈ ಮಹೋತ್ಸವ ಕಾಲದಲ್ಲಿ ನೆರೆದಿದ್ದ ಸಭಾಮಧ್ಯದಲ್ಲಿ ಬೇಗೂರು ಮ|| ರಾ|| ಚಿಕ್ಕಣ್ಣಶೆಟ್ಟರವರು ಎದ್ದುನಿಂತು ಈಗ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ವಿಷಯವಾಗಿ ಸ್ವಲ್ಪಹೊತ್ತು ಉಪನ್ಯಾಸ ಮಾಡಿ ಇಂಥಾ ಶುಭಕಾಲದಲ್ಲಿ ಅವರವರ ಶಕ್ತ್ಯಾನುಸಾರ ಚಂದಾದ್ರವ್ಯಸಹಾಯ ಮಾಡಬೇಕೆಂದು ಸೂಚಿಸಿದರು. ಇದನ್ನು ನೆಲಮಂಗಲದ ಮ|| ರಾ|| ಬೆಂಚ್ ಮ್ಯಾಜಿಸ್ಟ್ರೇಟ್ ಎಂ. ಗುಬ್ಬಿ ಹುಚ್ಚಪ್ಪನವರು ಅನುಮೋದಿಸಿದರು. ಆ ಕಾಲದಲ್ಲಿ ಲಗ್ನಕರ್ತರಾದ ಮ|| ರಾ|| ಶಾಂತವೀರಪ್ಪನವರು ಬಹಳ ಉದಾರವಾದ ಮನಸ್ಸಿನಿಂದ 50 ರೂಪಾಯಿಗಳನ್ನೂ ವಧುವಿನ ಪರವಾಗಿ ಮ|| ರಾ|| ಸೋಮಶೇಖರಪ್ಪನವರು 10 ರೂಪಾಯಿಗಳನ್ನೂ ಜುಮ್ಲಾ 60 ರೂಪಾಯಿಗಳನ್ನು ಮೇಲ್ಕಂಡ ಎಂ. ಗುಬ್ಬಿ ಹುಚ್ಚಪ್ಪನವರ ಸುಪರ್ದಿಗೆ ಫಂಡಿಗೆ ಪಾವತಿ ಮಾಡುವಂತೆ ಕೊಟ್ಟರು. ನಂತರ ವೇ|| ಆರ್. ಕಪ್ಪಣ್ಣಶಾಸ್ತ್ರಿಗಳು ಎದ್ದುನಿಂತು ಕೈಲಾಸವಾಸಿಯಾದ ಮ|| ರಾ|| ವೈ ವೀರಸಂಗಪ್ಪನವರು ಈ ಮತಕ್ಕಾಗಿ ಮಾಡಿದ ಮಹೋಪಕಾರ ವಿಷಯಗಳನ್ನು ಮತ್ತು ಹಾಲಿ ನಡೆಯುತ್ತಿರುವ ಮೈಸೂರು ಸ್ಟಾರ್ ಪತ್ರಿಕೆಯಿಂದ ಉಂಟಾಗಿರುವ ಪ್ರಯೋಜನವನ್ನು ವಿವರಿಸಿ ಇವರ ಜ್ಞಾಪಕಾರ್ಥವಾಗಿ ಅಗ್ರತಾಂಬೂಲವು ತೆಗೆಯಬೇಕೆಂದು ಸೂಚಿಸಿದರು. ಇದಕ್ಕೆ ನೆಲಮಂಗಲದ ಮ|| ರಾ|| ಎಂ. ಹುಚ್ಚಪ್ಪನವರು ಪುಷ್ಟೀಕರಿಸಿ ಮಾತನಾಡಿದರು. ಸಭೆಯವರ ಸರ್ವಸಮ್ಮತದಂತೆ 2 ರೂಪಾಯಿಗಳ ಅಗ್ರತಾಂಬೂಲವು ತೆಗೆದು ವೇ|| ಶಾಸ್ತ್ರಿಗಳವರ ಸುಪರ್ದಿಗೆ ಕೊಡಲ್ಪಟ್ಟಿತು. ನಂತರ ನೆರೆದಿದ್ದ ಸಭೆಯವರಿಗೆ ಗಂಧ, ಪುಷ್ಪಹಾರ, ದಕ್ಷಿಣೆ, ತಾಂಬೂಲಗಳು ನಡೆಯಿಸಲ್ಪಟ್ಟಿತು. ಈ ಲಗ್ನ ಸಮಾರಂಭದಲ್ಲಿ ಎರಡು ಮೂರು ಸಹಸ್ರಾರು ಜನ ಭಕ್ತ ಮಾಹೇಶ್ವರರುಗಳಿಗೂ ಮತ್ತು ಇತರರಿಗೂ ಅನ್ನ ಸಂತರ್ಪಣೆಯು ಅತ್ಯಂತ ವಿಜರಣೆಯಿಂದ ನಡೆಸಲ್ಪಟ್ಟಿತು.

ಪ್ರತ್ಯಕ್ಷದರ್ಶೀ.

ನವಲಗುಂದದ ೨ ನೆಯ ಪಟ್ಟಚರಾಧಿಕಾರಿಗಳ ಸಮ್ಮೇಳನವೂ ಮತ್ತು ಅದರ ಸಂಬಂಧದ ವಿವಾದವೂ.

ಹುಬ್ಬಳ್ಳಿಯ ಮಿ|| ಸಿದರಾಮಪ್ಪಾ ದುಂಡಪ್ಪಾ ಪಾವಟೆ ಇವರು ಮೇಲ್ಕಂಡ ಸಭೆಯಲ್ಲಿ ತೀರ್ಮಾನಿಸತಕ್ಕ ವಿಷಯಗಳನ್ನು ಪೂರ್ವಭಾವಿಯಾಗಿ ತಮ್ಮಲ್ಲಿ ವಾದಿಸಿ ನಿರ್ಣೀತವಾದ ಅಂಶಗಳನ್ನು ಸಭೆಯಲ್ಲಿ ಆಲೋಚಿಸಲಾಯಿತು

ದೆಂದೂ, ಇಲ್ಲದಿದ್ದರೆ ಅದೇ ತರಹೆಯ ಒಂದನೆಯ ಸಭೆಯ ನಿರ್ಣಯಗಳಂತೆ ಅವುಗಳೂ ಕೂಡ ಏಕಪಕ್ಷದವುಗಳಾಗಬಹುದೆಂದೂ ಸಮಾಜದಲ್ಲಿ ಏಕಮತ್ಯವನ್ನು ಬೆಳಸುವ ಲೇಖನವನ್ನು ಬರೆದಿರಲು, ಅದಕ್ಕೆ ಕಲ್ಕತ್ತಾ, ಕಾಶೀ ಪಟ್ಟಣಗಳ ಮಹಾಮಹೋಪಾಧ್ಯಾಯರನ್ನು ಕರೆಸಿ ಅವರನ್ನು ಮಧ್ಯವರ್ತಿಗಳನ್ನು ಮಾಡಬೇಕೆಂದು ಮುಂಚಾಗಿ ಬರೆಸಿರುತ್ತಾರೆ. ಇವರ ಮೊದಲನೆಯ ಸಭೆಯಂತೆ ಎರಡನೆಯ ಸಭೆಯನ್ನೂ ನಡೆಸಿ ಅಸತ್ಯವಾದ ತೀರ್ಮಾನಗಳನ್ನು ನಡೆಸಿ ನಂತರ ಪಾವಟೆಯವರ ಸಲಹೆಯನ್ನು ಕೇಳಿ ಫಲವೇನು ? ಬರೀ ಲೇಖನಗಳ ಮೂಲಕ ವಿವಾದವು ನಡೆದು ಮತದವರಲ್ಲಿ ಅನೈಕಮತ್ಯವು ಬೇರೂರಿದ ಮೇಲೆ ತತ್ವವನ್ನು ತಿಳಿಸುವುದಕ್ಕಿಂತಲೂ ನಿಷ್ಪಕ್ಷಪಾತ ಬುದ್ಧಿಯಿಂದ ಮುಂಚೆಯೇ ಯಥಾರ್ಥ್ಯವನ್ನು ತಿಳಿಸುವುದು ಮೇಲಲ್ಲವೇ ? ಸಂಸ್ಕೃತದಲ್ಲಿಯೇ ವಾದಗಳನ್ನು ನಡೆಸಬೇಕೆಂದು ಅಪೇಕ್ಷಿಸುವರು. ಮತಧರ್ಮಗಳು ಸಂಸ್ಕೃತವನ್ನು ಬಲ್ಲವರಿಗೆ ಮಾತ್ರ ತಿಳಿದಿರುವವೋ ? ಅಥವಾ ಇತರ ಭಾಷೆಗಳನ್ನು ತಿಳಿದಿರುವವರಿಗೆ ಇವರ ಅಂತರಂಗದ ಸಲ್ಲಾಪವು ತಿಳಿಯಬಾರದೋ ? ಬಹಿರಂಗವಾಗಿ ಎಲ್ಲಾ ಭಾಷೆಗಳಲ್ಲಿಯೂ ಶಾಸ್ತ್ರಾರ್ಥ ವಿಚಾರ ಮಾಡಲಿಕ್ಕೆ ಅಭ್ಯಂತರವೇನಿರುವುದು ? ಉತ್ತರ ಹಿಂದೂಸ್ಥಾನದಲ್ಲಿ ಮಹಾಮಹೋಪಾಧ್ಯಾಯ ಪದವಿಯನ್ನು ಪಡೆದ ವೀರಶೈವರು ಇಲ್ಲಿರುವರು ? ಅವರಲ್ಲದೆ ಇತರ ಮತಗಳ ವಿಚಾರವನ್ನು ತಿಳಿದವರಾದ ಮಹಾಮಹೋಪಾಧ್ಯಾಯರನ್ನು ಕರೆಸಿದರೆ ಅವರು ವೀರಶೈವಮತದ ವಿವಾದಗಳನ್ನು ಹೇಗೆ ತೀರಿಸುವರು ? ಮತ್ತು ಅವರ ತೀರುವಳಿಯೂ ಕೂಡ ನಮ್ಮ ಹೊಸ ಪಂಡಿತರಾದ ಕಾಶೀನಾಥರವರ ಒಂದನೆಯ ಸಭೆಯ ತೀರ್ಮಾನಗಳಂತೆ ಧಿಕ್ಕಾರವೆಂಬ ಬಿರುದನ್ನು ಪಡೆಯಲಿಕ್ಕಿಲ್ಲವೇ ? ವೀರಶೈವರ ವಸತಿಯು ದಕ್ಷಿಣ ಹಿಂದೂಸ್ಥಾನದಲ್ಲಿ ವಿಶೇಷವಾಗಿದ್ದು ಅವರ ಲಕ್ಷಗಳ ಸಂಖ್ಯೆಯಲ್ಲಿ ಇವರ ವಿವಾದವನ್ನು ತೀರಿಸುವ ಮಹನೀಯರಾದ ಮತಧರ್ಮಜ್ಞರು ಒಬ್ಬರಿಬ್ಬರಾದರೂ ಇಲ್ಲವೇ ? ವೀರಶೈವರು ಹೆಚ್ಚಾಗಿಲ್ಲದ ಪ್ರಾಂತದಲ್ಲಿ ಈ ಮತಧರ್ಮಜ್ಞರಲ್ಲದವರು ಎಂಥಾ ಪಂಡಿತತ್ವವನ್ನು ಸಂಪಾದಿಸಿದ್ದಾಗ್ಯೂ ತಮಗೆ ತಿಳಿಯದ ಮತವಿಷಯವಾಗಿ ತೀರ್ಮಾನಗಳನ್ನು ನಡೆಸಲಿಕ್ಕೆ ಕೂತರೆ ಗೂಗೆಗಳು ಹಗಲಿನ ರಾಜ್ಯಾಧಿಕಾರವನ್ನು ಬಯಸಿದಂತಾಗುವುದಿಲ್ಲವೇ? ಇದನ್ನೆಲ್ಲಾ ನೋಡಿದರೆ ಈ ಸನ್ಮೇಳನದವರು ಅಲ್ಲಸಲ್ಲದ ವಿಧಿಗಳನ್ನು ಕಲ್ಪಿಸಿ ಸ್ವೇಚ್ಛಾಪರಾಯಣರಾಗುವರೆಂದು ತೋರುವುದು. ಹಾಗೆ ಮಾಡದೆ ದಕ್ಷಿಣ ಹಿಂದೂಸ್ಥಾನದಲ್ಲಿಯ ವೀರಶೈವ ಪಂಡಿತರನ್ನೇ ಸೇರಿಸಿ, ತಮ್ಮ ವಿಚಾರಗಳ ಸಿದ್ಧಾಂತಗಳನ್ನು ಮಾಡಲಿ; ಮತದ ಏಕಮತ್ಯವನ್ನುಂಟುಮಾಡಲಿ.

ಓರ್ವ ಮತಾಭಿಮಾನಿ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

8

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯಕರವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣವಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆವುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುವವು. ಕಾಲುಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0,

ನಮ್ಮ ವಿಳಾಸ:—ಶ್ರೀ ಸೀತಾರಾಘವ
21 ವೈದ್ಯಶಾಲಾ, ಮೈಸೂರು.

ಜಾಗ್ರತೆ. ## ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 29

ನಾವು ಎ. ಆಲ್ ಬ್ಯುಕ್ಯಾಯರ್ ಕ್ಯೊ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ, ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್‌ಏಜಂಟ್ಸ್, ದಾವಣಗೆರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್‌ಕೊ,
8 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
8 ಸಾಹುಕಾರಪೇಟೆ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದಿ ಗ್ರಂಥ.

ಪಂಚಕ್ಲೇಶಿ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ 27

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನನರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವೆ ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಡ್ಡು, ಗುಡ್ಡವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟನಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಮೇ ತಾ|| ೨೩ರಿಂದ ೧೯೨೦ನೆಯ ಮೇ ತಾ|| ೨೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಷಷ್ಠಿಯಿಂದ ಜ್ಯೇಷ್ಠ ಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭ ಮಾಸ
23	ಭಾನು	ಷಷ್ಠಿ	39.21	ಪುಷ್ಯ	19.9	11
24	ಸೋಮ	ಸಪ್ತ	34.47	ಆಶ್ಲೇ	16.13	12
25	ಮಂಗಳ	ಅಷ್ಟ	31.6	ಮಘಾ	14.11	13
26	ಬುಧ	ನವ	28.25	ಪುಬ್ಬ	13.3	14
27	ಗುರು	ದಶ	26.52	ಉತ್ತ	13.0	15
28	[1]ಶುಕ್ರ	ಏಕಾ	26.35	ಹಸ್ತ	14.11	16
29	[2]ಶನಿ	ದ್ವಾ	27.27	ಚಿತ್ತ	16.33	17

(1) ಸರ್ವತ್ರ ನಿರ್ಜಲೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ. (2) ಶನಿಪ್ರದೋಷ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಶರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷ್ಮಜ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮನಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪನಿಭಿಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಯಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಮೇ ತಾರೀಖು ೩೦ ನೆಯ ಭಾನುವಾರ (ಸಂಚಿಕೆ ೨೦

GOVERNMENT OF MYSORE.
ELECTRICAL DEPARTMENT.

42

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. **Lighting**	2'50 as.	As. 6 per point of 60 Watts per month.
2. **Heating & Cooking.**		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1'75 as.	Rs. 6 per H. P.
Second 50 ,, or fraction thereof	1'25 as.	...
Third 50 ,, or above 150 B.T.U	'75 as.	...
3. **Power Supply for Industries Rated Maximum demand in Electrical Horse Power.**		
Motors up to 20 H. P.	1 anna	Nil
Motors above 20 and up to 50 H. P.	1'00 anna	Rs. 6 per H. P.
Motors above 50 and up to 100 H. P.	'875	Rs. 6 do.
Motors above 100 and up to 200 H. P.	'75	Rs. 6 do.

Discounts are allowed for large supplies.

For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 44

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳಿಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಡಿಸ್ಸು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ## ಇಂದ್ರಿಯಸ್ತಂಭನ ಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
35 ಬಿ. ಪೋಸ್ಟ್ ತಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ಕ್ಷೀಣದೂಷಿತ ವೀರ್ಯವು ಗರ್ಭ ಕುಲಕವಾಗಲಾರದು ಅತ್ಯಂತ ಸಂಭೋಗ, ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
9 3. ಇರುಳಪ್ಪನಬೀದಿ, ಮದರಾಸು.

ಇನಾಂ ! ಆಲಸ್ಯಮಾಡಿದರೆ ದೊರೆಯಲಾರದು ಇನಾಂ !!

ತಮ್ಮ ವಿಳಾಸವನ್ನು ವಿವರವಾಗಿ ತಿಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
9 2/4 ಶಿಂಗಣ್ಣನ್‌ಬೀದಿ, ಪಾರ್ಕ್‌ಟೌನ್‌ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ## ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 23

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ, ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಪದ್ಯಾತ್ಮಕ ## ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮನುಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

28 ## ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಮೇ ತಾ|| ೩೦ ನೆಯ ಭಾನುವಾರ.

ಪ್ರಜಾಪ್ರತಿನಿಧಿ ಸಭೆ.

ವರ್ಷದಲ್ಲಿ ೨ ನೆ ಸಲ ನಡೆಯತಕ್ಕ ಅಧಿವೇಶನವು ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಮಯದಲ್ಲಿ ನಡೆಯತಕ್ಕುದೆಂದು ಅಪ್ಪಣೆಯಾದ ಬಳಿಕ ಅದರಂತೆ ಮೊದಲನೆಯ ಸಲ ಕೂಡಿದ ಸಭೆಯು ಇದೇ ಆಗಿರುತ್ತದೆ. ಮೇ ತಾ|| ೨೪ ರಲ್ಲಿ "ಎಂಪೈರ್ ಡೆ" ನಿಮಿತ್ತ ರಜಾಬರಲು, ತಾ|| ೨೫ ನೆ ಮಂಗಳವಾರ ೧೨ ಗಂಟೆಗೆ ಸಭೆಯು ಆರಂಭಗೊಂಡಿತು. ದಿವಾನರು ಅಧ್ಯಕ್ಷರಾಗಿದ್ದರು. ಕೌನ್ಸಿಲರುಗಳೂ ಶ್ರೀಮನ್ಮಹಾರಾಜರ ಪ್ರೈ|| ಸೆಕ್ರೆಟರಿಯವರೂ, ಶಾಖಾ ಮುಖ್ಯಾಧಿಕಾರಿಗಳೂ ಎಲ್ಲ ಡಿ|| ಕಮಿಷನರುಗಳೂ ಉನ್ನತಾಸನಗಳನ್ನಲಂಕರಿಸಿದ್ದರು. ಪ್ರತಿನಿಧಿಗಳು ೧೯೦ ರ ವರೆಗೆ ಬಂದಿದ್ದರು. ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ದಿನವಾದ ಶುಕ್ರವಾರವನ್ನು ಬಿಟ್ಟು ಶನಿವಾರದ ಸಾಯಂಕಾಲದ ವರೆಗೆ ಒಟ್ಟು ೪ ದಿನಗಳ ಕಾಲ ಸಭೆ ನಡೆದು ಮುಗಿದಿತು. ಎಂದಿನಂತೆ ದಿವಾನರು ಅಧ್ಯಕ್ಷರಾಗಿ ತಮ್ಮ ಭಾಷಣವನ್ನು ಮಾಡುವಾಗ್ಗೆ ಮೊದಲು ಸಭಿಕರಿಗೆ ಸುಸ್ವಾಗತಮಾಡಿದರು. ಈ ೨ ನೆ ಅಧಿವೇಶನದಲ್ಲಿ ಮುಖ್ಯವಾಗಿ ಸಂಸ್ಥಾನದ ಆಯವ್ಯಯ ವಿಷಯ ಚರ್ಚೆಯೇ ಮುಖ್ಯವಾದುದರಿಂದ ದಿವಾನರ ಭಾಷಣದಲ್ಲು ಕೂಡ ಅದೇ ವಿಷಯ ವಿವರಣೆಯೇ ಮುಖ್ಯವಾಗಿದ್ದಿತು. ಚರ್ಚೆಗಿಟ್ಟುಕೊಂಡಿದ್ದ ಸಾಮಾನ್ಯ ವಿಷಯಗಳು ೯೯ ಇದ್ದುದರಿಂದ ಆ ವಿಷಯ ಚರ್ಚೆಗೆ ೨ ದಿನವೂ ಬಜೆಟ್ ಚರ್ಚೆಗೆ ೨ ದಿನವೂ ಗೊತ್ತುಮಾಡಲ್ಪಟ್ಟಿತು. ೨೫-೨೬ ಇವೆರಡು ತಾರೀಖುಗಳಲ್ಲಿ ವಿಷಯ ಚರ್ಚೆಗಳನ್ನು ನಡೆಯಿಸಿದುದರಲ್ಲಿ ಒಟ್ಟು ೫೫ ವಿಷಯಗಳನ್ನು ಮಾತ್ರವೇ ಮುಗಿಸಲವಕಾಶವಾಯಿತು. ಉಳಿದುವು ಹಾಗೆಯೇ ನಿಂತುಹೋದುವು. ಕೆಲವುಗಳ ಹೊರತು ಅನೇಕ ವಿಷಯಗಳು ಹಿಂದೆ ಚರ್ಚೆಗೆ ಬಂದಿದ್ದ ಹಳೆಯ ವಿಷಯಗಳೇ ಆಗಿದ್ದುವು. ಡಿಸ್ಟ್ರಿಕ್ಟ್ ಡಿ|| ಕಮಿಷನರ ಕೈಗೆ ಹೋಗಿ ಜಾಲಿಸಲ್ಪಟ್ಟು ಬರುತ್ತಿದ್ದರೂ ವಿಷಯಗಳ ಪರಿಶೋಧನೆಯು ಚೆನ್ನಾಗಿ ನಡೆಯದಿರುವುದೇತಕ್ಕೋ ತಿಳಿಯಲಿಲ್ಲ. ಹಿಂದೆ ಒಂದೆರಡು ಸಲ ಕೂಲಂಕಷವಾಗಿ ನಡೆದುಹೋಗಿರುವ ವಿಷಯಗಳ ಚರ್ಚೆಯನ್ನೇ ಸಭಿಕರುಗಳು ಮತ್ತೆಮತ್ತೆ ತರುತ್ತಿರುವುದೂ, ವಿಶೇಷಾಂಶಗಳಿಲ್ಲದೆ ಒಬ್ಬರು ಹೇಳಿದ ವಿಷಯವನ್ನೇ ಮತ್ತೊಬ್ಬರು ಅನುವಾದ ಮಾಡುವುದಕ್ಕೆ ಪ್ರವರ್ತಿಸುವುದೂ ಸಹ ಕಠಿನವಾಗಿ ನಿರೋಧಿಸಲ್ಪಡದಿದ್ದರೆ ಸಭೆಯಲ್ಲಿ ವ್ಯರ್ಥವಾಗಿ ಹೋಗುತ್ತಿರುವ ಅಮೌಲ್ಯವಾದ ಕಾಲವನ್ನು ಸದ್ವಿನಿಯೋಗಪಡಿಸಿದಂತಾಗುವುದಿಲ್ಲ. ಶಾಂತರಾದ ನಮ್ಮ ದಿವಾನರವರ ಸೌಮ್ಯಸ್ವಭಾವದಿಂದ ಈ ಲೋಪಗಳ ನಿವಾರಣೆಗೆ ಮಾರ್ಗವಿಲ್ಲವಾಗಿದೆ.

ಬಜೆಟ್ಟಿನ ಚರ್ಚೆಗೆ ಈ ಸಭೆಯಲ್ಲಿ ಅವಕಾಶಕೊಟ್ಟಿರುವುದರಿಂದ ಎಷ್ಟುಮಟ್ಟಿಗೆ ಫಲಿತಾಂಶವಾಗುತ್ತಿದೆಯೆಂಬುದನ್ನು ನಾವು ಹೇಳಲಾರೆವು. ಬಜೆಟ್ಟಿನ ಚರ್ಚೆಯು ನಿಯಮನಿರ್ಮಾಣ ಸಭೆಯಲ್ಲೂ ನಡೆಯುತ್ತಿದೆ. ಅಲ್ಲದೆ ಫೈನಾನ್ಸಿಯಲ್ ಕಮಿಟಿಯವರೂ ಸಹ ಆಯವ್ಯಯ ವಿಷಯದಲ್ಲಿ ಪರ್ಯಾಲೋಚನೆ ನಡೆಯಿಸಿ ಸೂಚನೆಕೊಡುತ್ತಾರೆ. ಅವೆರಡು ಸಭೆಗಳಿಗೂ ಈ ಪ್ರಜಾಪ್ರತಿನಿಧಿ ಸಭೆಯಿಂದ ಪ್ರತಿನಿಧಿಗಳು ಕಳುಹಿಸಲ್ಪಡುತ್ತಾರೆ. ಅವರುಗಳು ಅಲ್ಲಿ ಕೊಡುವ ಸಲಹೆಗಳು ಪ್ರತಿನಿಧಿ ಸಭೆಯ ಸಲಹೆಗಳೆಂತಲೇ ಭಾವವು. ಹೀಗಿರುವಾಗ ಈ ಸಭೆಯಲ್ಲೂ ಇದರ ಚರ್ಚೆಗೆ ಅವಕಾಶಕೊಡಬೇಕಾದುದರ ಅವಶ್ಯಕತೆಯೇನೂ ಕಾಣುವುದಿಲ್ಲ. ಇದಲ್ಲದೆ ಇಲ್ಲಿ ನಡೆಸಲ್ಪಡುತ್ತಿರುವ ಚರ್ಚೆಗಳ ರೀತಿಯನ್ನು ನೋಡಿದರೆ ಸರ್ಕಾರದವರು ನಿರ್ಣಯಿಸಿರುವ ಬಜೆಟ್ಟಿನ ಮೇಲೆ ಯಾವ ರೂಪಾಂತರವನ್ನು ಉಂಟುಮಾಡಲಿಕ್ಕೂ ಇವು ಸಾಧಕವಾಗುವ ಹಾಗಿಲ್ಲ. ಈ ಆಯವ್ಯಯ ವಿಮರ್ಶೆಯು ಸುಲಭಸಾಧ್ಯವಲ್ಲದುದಾಗಿರುವುದರಿಂದ ಹಲವರು ಪ್ರತಿನಿಧಿಗಳು ಅದನ್ನು ಚೆನ್ನಾಗಿ ಅವಗಾಹನೆಮಾಡಿಕೊಳ್ಳದೆಯೇ ಅಸಂಬದ್ಧ ಪ್ರಶ್ನೆಗಳನ್ನು ಹಾಕಿ ಕಾಲವನ್ನು ಕಳೆಯುವರು. ಇದರಿಂದೆಲ್ಲಾ ಈ ಸಭೆಯಲ್ಲಿ ಬಜೆಟ್ ಚರ್ಚೆಯೆಂಬುದು ನೆಪಮಾತ್ರದ ಶಾಸ್ತ್ರವನ್ನು ಮುಗಿಸುವಂತೆ ಪರಿಣಮಿಸುತ್ತಿದೆಯೆಂದು ನಮ್ಮ ಭಾವವು. ಇದಕ್ಕಿಂತಲೂ ಉಪಯುಕ್ತ ವಿಷಯಗಳ ವಿಮರ್ಶೆಗೇ ಇನ್ನಷ್ಟು ಸಭಾಕಾಲವನ್ನು ವಿನಿಯೋಗಿಸುವುದು ಸಾರ್ಥಕವೆಂದು ತೋರುವುದು.

ದಿವಾನರ ಭಾಷಣದಲ್ಲಿ ಸಂಸ್ಥಾನದ ಆಯವ್ಯಯಗಳನ್ನು ನೇರ್ಪಿಗೆ ತಂದಿಡುವುದಕ್ಕೆ ಅವರು ಎಷ್ಟು ಜಾಗರೂಕತೆಯನ್ನು ವಹಿಸಿರುವರೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಕಳೆದ ವರ್ಷದ ಆದಾಯವು ೩ ಕೋಟಿಯೂ ೧೩ ಲಕ್ಷ ಚಿಲ್ಲರೆ ಆಗುತ್ತದೆಂದು ನಿರೀಕ್ಷಿಸಿದ್ದುದು ಕಡೆಯಲ್ಲಿ ೩ ಕೋಟಿಯೂ ೨೯ ಲಕ್ಷ ರೂ.ಗಳಾಗಿರುತ್ತವೆ. ವೆಚ್ಚವು ೩ ಕೋಟಿಯೂ ೫೪ ಲಕ್ಷವಾಗುತ್ತದೆಂದು ನಿರೀಕ್ಷಿಸಿದ್ದುದಕ್ಕೆ ಪ್ರತಿಯಾಗಿ ೩ ಕೋಟಿಯೂ ೭೨ ಲಕ್ಷವಾಗಿರುತ್ತದೆ. ಈ ೧೯೨೦-೨೧ ನೆ ವರ್ಷದ ಬಜೆಟ್ಟಿನಲ್ಲಿ ಆದಾಯವು ೩೧೫೧೫೦೦೦ ರೂ.ಗಳೆಂದೂ, ವ್ಯಯವು ೩೨೪೫೧೦೦೦ ರೂ.ಗಳೆಂದೂ ನಿರೀಕ್ಷಿಸಲ್ಪಟ್ಟಿದೆ. ಹೊಸದಾಗಿ ಹಾಕಬೇಕೆಂದಿರುವ ವರಮಾನದ ಮೇಲಣ ತೆರುಗೆಯು ೬ ಲಕ್ಷವಾಗಬಹುದೆಂದು ಯೋಚಿಸಿ, ಅದನ್ನೂ ಕೂಡಿಸಿ ಲೆಕ್ಕಹಾಕಿರುವುದರಲ್ಲಿ ವೆಚ್ಚಕ್ಕೆ ೯ ಲಕ್ಷಮಾತ್ರವೇ ಸಾಲದೆಂದು ಗೊತ್ತಾಗುತ್ತದೆ. ವರಮಾನದ ತೆಗೆರುಯು ಸೇರದೆಹೋದರೆ ೧೫ ಲಕ್ಷ ರೂ.ಗಳು ವೆಚ್ಚಕ್ಕೆ ಸಾಲದೆ ಹೋಗುವುವೆಂದು ಹೇಳಬೇಕಾಗುತ್ತದೆ. ದಿವಾನರ ಭಾಷಣದಲ್ಲಿ ಹೀಗೆ ಆದಾಯ ಕಡಿಮೆಯಾಗಿ ವ್ಯಯವು ಹೆಚ್ಚಾಗುವುದಕ್ಕೆ ಉಂಟಾಗಿರುವ ಕಾರಣಗಳೆಲ್ಲಾ ತಿಳಿಸಲ್ಪಟ್ಟಿವೆ. ಅದನ್ನೆಲ್ಲಾ ಹೇಳಿಬಿಟ್ಟು ಕಡೆಗೆ "ಇದರಿಂದ ಸಂಸ್ಥಾನದ ಆಯವ್ಯಯ ಸ್ಥಿತಿಯ ವಿಷಯದಲ್ಲಿ ಚಿಂತೆಗೆ ಕಾರಣವಿರುವುದಿಲ್ಲ; ಗಾಬರಿಗೆಂತೂ ಲೇಶಮಾತ್ರವೂ ಅವಕಾಶವಿರುವುದಿಲ್ಲ" ಎಂಬುದಾಗಿ ನಮ್ಮಗಳಿಗೆ ಭರವಸೆ ಕೊಟ್ಟಿರುತ್ತಾರೆ. ಮತ್ತು ಹೀಗೆ ಅವರಿಗೆ ಧೈರ್ಯವಿರುವುದರಿಂದಲೇ ವಿದ್ಯಾವೃದ್ಧಿ ವ್ಯವಸಾಯವೃದ್ಧಿ ಮೊದಲಾದ ಅವಶ್ಯಕರ್ತವ್ಯಗಳಿಗೆ ಮಾಡಬೇಕಾದ ಮುಂದಣ ಪ್ರಯತ್ನಗಳನ್ನು ನಾವು ನಿಲ್ಲಿಸುವುದಿಲ್ಲವೆಂದು ತಿಳಿಸಿರುವುದು ಸಂತೋಷಪ್ರದವಾಗಿದೆ. ಅದರಂತೆಯೇ ಈ ವರ್ಷ ವಿದ್ಯಾಭಿವೃದ್ಧಿಗಾಗಿ ೪೪ ಲಕ್ಷ ರೂ.ಗಳನ್ನು ವ್ಯಯ ಮಾಡಲು ನಿರ್ಧರಿಸಿರುವುದೂ ವೈದ್ಯಶಾಖೆಯ ಮತ್ತು ವ್ಯವಸಾಯ ಶಾಖೆಯ ವ್ಯಯಗಳನ್ನು ಹೆಚ್ಚಿಸಿರುವುದೂ ವಿದ್ಯಾಭ್ಯಾಸದ ಮೆಮೋರಾಂಡಮ್ಮಿನ ಪ್ರಕಾರ ಕಾರ್ಯಾರಂಭ ಮಾಡಲು ಈ ವರ್ಷಕ್ಕೆ ೩೨ ಲಕ್ಷ ರೂ. ಗಳನ್ನು ಪ್ರತ್ಯೇಕಿಸಿಟ್ಟಿರುವುದು ಕೂಡ ಸಮಾಧಾನಕರವಾಗಿವೆ. ಸಂಸ್ಥಾನಕ್ಕೆ ಲಾಭಕರಗಳಾದ ಹಲವು ಕಾಮಗಾರಿಗಳನ್ನು ಸರ್ಕಾರದವರು ಹಿಡಿದಿರುವುದರಿಂದ ಅವುಗಳನ್ನು ಅರ್ಧಾಂತ ಮಾಡದೆ ಮುಗಿಯಿಸಲೇಬೇಕಾಗುತ್ತದೆ. ಇದರಿಂದ ಮುಖ್ಯವಾಗಿ ವೆಚ್ಚದ ಸಂಖ್ಯೆಯು ಹೆಚ್ಚಾಗುತ್ತದೆ. ಆಯಾ ಶಾಖೆಗಳಲ್ಲಿ ವೆಚ್ಚವಾಗದೆ ನಿಂತಿರುವ ಹಣಗಳಿಂದಲೂ ಇತರ ರಿಜರ್ವ್ ಫಂಡುಗಳಿಂದಲೂ ೬೩ ಲಕ್ಷದಷ್ಟು ಹಣವನ್ನು ವಾರ್ಷಿಕವ್ಯಯಗಳಿಗಾಗಿ ಉಪಯೋಗಿಸಿಕೊಂಡಿದ್ದಾರೆ. ಇನ್ನು ಮುಂದೆಯೂ ಅಂಥ ಲಾಭಕರಗಳಾದ ಕಾಮಗಾರಿಗಳಿಗಾಗಿ ಎಷ್ಟೋ ಹಣವು ಬೇಕಾಗುತ್ತದೆ. ಈಗ ನಡೆಯುವ ವರ್ಷವೊಂದರಲ್ಲೇ ಅವಕ್ಕಾಗಿ ೯೬ ಲಕ್ಷ ರೂ. ಗಳು ಅವಶ್ಯಕವಾಗಿವೆಯಂತೆ. ಅಷ್ಟು ಹೆಚ್ಚು ಹಣವನ್ನು ಸರ್ಕಾರದವರಿಗೆ ಇನ್ನಾವ ಹುಟ್ಟುವಳಿಯಿಂದಲೂ ಒದಗಿಸಿಕೊಳ್ಳಲು ಸಾಧ್ಯವಲ್ಲದುದರಿಂದ ಸ್ವದೇಶದ ಮತ್ತೂ ಭರತಖಂಡದ ಪ್ರಜೆಗಳಿಂದೆಲ್ಲಾ ಸಾಲದರೂಪವಾಗಿ ಹಣವನ್ನು ಸಂಗ್ರಹಿಸಬೇಕೆಂದು ಉದ್ದೇಶಿಸಿರುತ್ತಾರೆ. ನಮ್ಮ ಬೊಕ್ಕಸದಲ್ಲಿ ಹಣವಿಲ್ಲದಿರುವುದರಿಂದ ಆದಾಯಕರವಾದ ಪ್ರತಿಷ್ಠಾಪನೆಗಾಗಿ ಸಾಲಮಾಡಿ ಹೀಗೆ ಬಂಡವಾಳವನ್ನು ಹಾಕುವುದೇನೂ ಆಕ್ಷೇಪಕರವಲ್ಲ. ನಿತ್ಯವ್ಯಯಕ್ಕಾಗಿ ನಾವು ಸಾಲಮಾಡಬೇಕಾಗುವುದೀಗ ದಿವಾಳಿಯ ದಾರಿಯಾಗುವುದು. ಅಂಥ ಭಯಂಕರ ಸ್ಥಿತಿಯು ಎಂದಿಗೂ ಬರದಿರಲೆಂಬುದೇ ನಮ್ಮ ಕೋರಿಕೆ. ಅಂಥ ಭಯಕ್ಕೆ ಕಾರಣವೇನೂ ಇಲ್ಲವೆಂದು ದಿವಾನರೇ ಅಭಯದಾನ ಮಾಡಿದ್ದಾರೆ. ನಿರೀಕ್ಷಿತವಾಗಿರತಕ್ಕ ಆಬ್ಕಾರಿ, ಫಾರೆಸ್ಟು ಮೊದಲಾದ ಕೆಲಶಾಖೆಗಳ ಆದಾಯವು ವರ್ಷಾಂತ್ಯದಲ್ಲಿ ಇನ್ನೂ ಬಹುಮಟ್ಟಿಗೆ ಹೆಚ್ಚದೆ ಇರಲಾರವೆಂದು ನಿರೀಕ್ಷಿಸಲು ಧೈರ್ಯವಿರುವಕಾರಣ, ವೆಚ್ಚಕ್ಕೆ ೯ ಲಕ್ಷ ರೂ. ಸಾಲದೆ ಹೋಗುವುದೆಂಬ ಯೋಚನೆಯನ್ನು ಇಟ್ಟುಕೊಳ್ಳಬೇಕಾಗಿ ತೋರುವುದಿಲ್ಲ. ಆದರೆ ಸಭೆಯಲ್ಲಿ ಬಹುಮಂದಿ ಪ್ರತಿನಿಧಿಗಳು ಹೇಳಿಕೊಂಡಂತೆ ಸರ್ಕಾರಿ ಕಾರ್ಯನಿರ್ವಾಹದ ಸಿಬ್ಬಂದಿಯನ್ನು ಕಡಿಮೆ ಹಾಕುವ ಕಡೆಗೆ ನಮ್ಮ ಸರ್ಕಾರದವರು ವಿಶೇಷ ಗಮನ ಕೊಡದಿದ್ದರೆ ದಿನೇ ದಿನೇ ಕೋಟಿಗಟ್ಟಲೆ ಅಭಿವೃದ್ಧಿಗೊಳ್ಳುತ್ತಿರುವ ಸಂಸ್ಥಾನದ ಆದಾಯವು ಪ್ರಜಾಸಮುದಾಯಕ್ಕೆ ಸಮಾಧಾನವನ್ನುಂಟುಮಾಡಲಾರದೆಂದು ಹೇಳಬೇಕಾಗುತ್ತದೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು.

ಕಳೆದ ತಾ|| ೨೮ ನೆ ಶುಕ್ರವಾರಕ್ಕೆ ನಮ್ಮ ಶ್ರೀಮನ್ಮಹಾರಾಜರವರಿಗೆ ೩೬ ನೆಯ ವರ್ಷವು ತುಂಬಿ ೩೭ಕ್ಕೆ ಆರಂಭವಾಯಿತು. ಆ ದಿನ ಬೆಳಗ್ಗೆ ಮಂಗಲಸ್ನಾನವಾಗುವಾಗ್ಗೆ ೩೭ ಗುಂಡುಗಳು ಹಾರಿಸಲ್ಪಟ್ಟುವು. ಆಹ್ನಿಕವನ್ನೂ ಗುರುವಾದ ಪೂಜೆಯನ್ನೂ ನೆರವೇರಿಸಿಕೊಂಡು ಶ್ರೀಮನ್ಮಹಾರಾಜರವರು ೧೦ ಗಂಟೆಗೆ ಅಂಬಾವಿಲಾಸಕ್ಕೆ ದಯಮಾಡಿಸಿ, ಭದ್ರಾಸನವನ್ನಲಂಕರಿಸಿದರು. ದಿವಾನರು, ಕೌನ್ಸಿಲರುಗಳು, ರಾಜಪಿಂಡೆಯವರು, ವೈದಿಕರು, ನಾನಾ ಅಧಿಕಾರಿಗಳು ಪ್ರಜಾಪ್ರತಿನಿಧಿಗಳು, ಪುರಪ್ರಮುಖರು ಮೊದಲಾದವರೆಲ್ಲಾ ವಸ್ತ್ರಾಲಂಕಾರ ಭೂಷಿತರಾಗಿ ಗೊತ್ತಾಗಿದ್ದ ಸ್ಥಳಗಳನ್ನಲಂಕರಿಸಿದ್ದರು. ಹೊರಗಡೆ ಸಕಲ ಸೈನ್ಯಗಳೂ ನಿಂತಿದ್ದುವು. ಮನೋಹರವಾದ ವಾದ್ಯವಾದನಗಳು ಜರುಗುತ್ತಿದ್ದುವು. ಸೈನಿಕರು ಸುರೂಟುಗಳನ್ನು ಮಾಡಿ ಮರ್ಯಾದಿಸಿದರು. ವೈದಿಕರು ಹರಸಿದರು. ಸಭಿಕರ ನಜರು ನಡೆದು ಪುಷ್ಪಹಾರಾದಿಗಳ ವಿನಿಯೋಗವಾದ ಬಳಿಕ ದರ್ಬಾರು ಮುಗಿದಿತು. ಮಧ್ಯಾಹ್ನೋತ್ತರ ಶ್ರೀಮನ್ಮಹಾರಾಜರವರು ದಿವ್ಯವಸ್ತ್ರಾಭರಣಾಲಂಕೃತರಾಗಿ ಅಶ್ವವನ್ನೇರಿ ಸಕಲ ಚತುರಂಗಬಲಪರಿವೃತರಾಗಿ ಕೋಟೆಯ ಉತ್ತರದ್ವಾರದಿಂದ ಉತ್ಸವಗೊಂಡು ದೊಡ್ಡಪೇಟೆಯ ಮಾರ್ಗವಾಗಿ ದೊಡ್ಡ ಬಂಗಲೆಯ ಬಯಲಿಗೆ ದಯಮಾಡಿಸಿದರು. ರಾಜವೀಧಿಯು ಮ್ಯುನಿಸಿಪಾಲಿಟಿಯವರಿಂದಲೂ, ಪ್ರಜೆಗಳಿಂದಲೂ ಧ್ವಜಪತಾಕ ವಿತಾನಕದಳೀಸ್ತಂಭ ತೋರಣಾದಿಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತು. ಅಲ್ಲಲ್ಲಿಗೆ ದೊಡ್ಡ ಮನುಷ್ಯರುಗಳ ಮನೆಯ ಮುಂದೆ ಶ್ರೀಮನ್ಮಹಾರಾಜರವರಿಗೆ ಫಲಪುಷ್ಪಗಳು ಸಮರ್ಪಿಸಲ್ಪಟ್ಟುವು. ಮ್ಯುನಿಸಿಪಲ್ ಕೌನ್ಸಿಲರುಗಳು ಸೆಂಟ್ರಲ್ ಸ್ಟೇಷನ್ನಿನ ಬಳಿಯಲ್ಲಿ ಹಾಕಿಸಿದ್ದ ಚಪ್ಪರದಲ್ಲಿ ಫಲಪುಷ್ಪಗಳನ್ನರ್ಪಿಸಿದರು. ದಾರಿಯುದ್ದಕ್ಕೂ ಸಹಸ್ರಾರು ಪ್ರಜೆಗಳು ಅಲಂಕೃತರಾಗಿ ನಿಂತು ಉತ್ಸವವನ್ನು ನೋಡಿ ಆನಂದಪಟ್ಟರು. ಪರಸ್ಥಳಗಳಿಂದಲೂ ತಕ್ಕಮಟ್ಟಿಗೆ ಈ ನೋಟದ ಜನರು ಬಂದಿದ್ದರು. ಶ್ರೀಮನ್ಮಹಾರಾಜರವರು ರೆಸಿಡೆನ್ಸಿಗೆ ಹೋದಕೂಡಲೇ ಸ್ವಲ ವಿಶ್ರಾಂತಿಗೊಂಡು ಸೇನಾಪಂಕ್ತಿಯು ನಿಂತಿದ್ದ ಅಂಗಳಕ್ಕೆ ಅಶ್ವಾರೂಢರಾಗಿ ದಯಮಾಡಿಸಿ, ಚೀಫ್ ಕಮ್ಯಾಂಡರ್ ಸರ್ದಾರ್ ಬಹದ್ದೂರ್ ಮಿ|| ಚಾಮೇ ಅರಸಿನವರಿಂದ ನಡೆಯಿಸಲ್ಪಟ್ಟ ಸೇನಾವಿನ್ಯಾಸವನ್ನು ಪರಾಮರಿಸಿ, ಸೈನಿಕರು ಸುರೂಟನ್ನು ಮಾಡಿದ ಬಳಿಕ ಅಲ್ಲಿಂದ ಬಂಗಲೆಗೆ ತೆರಳಿ ಸ್ವಲ್ಪಕಾಲವಿದ್ದು ರೆಸಿಡೆನ್ಸಿಯ ಪಶ್ಚಿಮದ್ವಾರದಿಂದ ಅನೇಕ ವಿದ್ಯುದ್ದೀಪಾಳಿಗಳಿಂದಲೂ ಗ್ಯಾಸ್‌ದೀಪ ಪಂಕ್ತಿಗಳಿಂದಲೂ ಪರಿವೃತರಾಗಿ, ಪ್ರೇಕ್ಷಕರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತ ದೀಪೋತ್ಸವದಿಂದ ಝಗಝಗಿಸುತ್ತಿದ್ದ ದೊಡ್ಡಬೀದಿ ಕಲ್ಯಾಣಿ ಮೈದಾನಗಳ ಮೂಲಕ ಅರಮನೆಯನ್ನು ಸೇರುವಲ್ಲಿಗೆ ರಾತ್ರಿ ೯ ಗಂಟೆಯಾಯಿತು. ಅದ್ಯಂತವಾಗಿ ಉತ್ಸವವು ಬಹಳ ಮನೋಹರವಾಗಿದ್ದಿತು. ಶ್ರೀಮನ್ ಯುವರಾಜರವರು ಯೂರೋಪಿಗೆ ದಯಮಾಡಿಸಿರುವುದರಿಂದ ಈ ವರ್ಷದ ಉತ್ಸವದಲ್ಲಿ ಅವರು ಸೇರಲವಕಾಶವಾಗಲಿಲ್ಲ. ೧ ವಾರದ ಹಿಂದೆ ಯೋಚನೆಗೆ ಅವಕಾಶವನ್ನು ಕೊಟ್ಟಿದ್ದ ಕಾಲಸ್ಥಿತಿಯು ಕಳೆದವಾರ ಸಂಸ್ಥಾನದ ಬಹುಕಡೆ ಬಿದ್ದ ಮಳೆಗಳಿಂದ ಸುಮುಖವಾಗಿ ಜನರಲ್ಲಿ ವಿಕಾಸವನ್ನುಂಟುಮಾಡಿರುವ ಕಾರಣ, ವರ್ಧಂತ್ಯುತ್ಸವದ ವೈಭವವು ಚೆನ್ನಾಗಿಯೇ ಸಾಗಿತು. ಸಂಪದಭ್ಯುದಯ ಸಮಾಜದ ಅಧಿವೇಶನದ ಜತೆಗೆ ಪ್ರಜಾಪ್ರತಿನಿಧಿ ಸಭೆಯೂ ಇದೇ ಕಾಲದಲ್ಲಿ ಕೂಡುವಂತೆ ಏರ್ಪಾಟಾದುದರಿಂದಲೂ, ಕೆಲವು ವರ್ಷಗಳಿಂದಲೂ ನಿಂತುಹೋಗಿದ್ದ ಕುದುರೆಯ ಜೂಜು ಈಸಲ ನಡೆಯಿಸಲ್ಪಡುವುದರಿಂದಲೂ, ಈ ವಾರವೂ ಮುಂದಣವಾರವೂ ರಾಜಧಾನಿಯು ಹಲವು ತೆರದ ಸಂಭ್ರಮಗಳಿಂದ ಕೂಡಿರುವುದು. ದೇಶದ ಸಕಲ ಪ್ರಜೆಗಳ ಅಭಿವೃದ್ಧಿ ಸುಖಶಾಂತಿಗಳಿಗೆಲ್ಲಾ ಮೂಲಭೂತರಾಗಿ ಅವರ ಶ್ರೇಯಸ್ಸನ್ನೇ ಅಹರ್ನಿಶಿಯೂ ಚಿಂತಿಸುತ್ತಿರುವ ನಮ್ಮ ಶ್ರೀಮನ್ ಮಹಾರಾಜರವರಿಗೆ ಇಂಥ ವರ್ಧಂತ್ಯುತ್ಸವಗಳು ಅನೇಕವಾಗಿ ನಡೆಯುತ್ತಿರುವಂತೆ ಜಗನ್ಮಾತೆಯು ಅನುಗ್ರಹಿಸಲಿ.

ನಿಯಮನಿರ್ಮಾಣಸಭೆಗೆ ಒಬ್ಬ ಮೆಂಬರು.

ಗತಿಸಿದ ಮ|| ಬಸವಯ್ಯನವರ ಮೃತಿಯಿಂದ ನಿಯಮನಿರ್ಮಾಣ ಸಭೆಯಲ್ಲಿ ತೆರವಾದ ಒಂದು ಸ್ಥಾನಕ್ಕೆ ಪ್ರಜಾಪ್ರತಿನಿಧಿಸಭೆಯಿಂದ ಒಬ್ಬ ಸಭಿಕರನ್ನು ಆರಿಸುವ ಕೆಲಸವು ಕಳೆದ ತಾ|| ೨೭ ರ ಮಧ್ಯಾಹ್ನ ೧೨ ಗಂಟೆಯಿಂದ ೫ ಗಂಟೆಯವರೆಗೆ ಜರುಗಿತು. ಇದಕ್ಕೆ ಅಭ್ಯರ್ಥಿಗಳಾಗಿ ಮ|| ಗಳಾದ ೧. ಕಣಿಕ ಕೃಷ್ಣಮೂರ್ತಿರಾಯರು ೨. ಎಸ್. ಆರ್. ಬಾಲಕೃಷ್ಣರಾವ್ ಬಿ. ಎ. ಎಲ್. ಎಲ್. ಬಿ. ಯವರು ೩. ಸಿ. ನರಸಿಂಹಯ್ಯ ಬಿ. ಎ., ಬಿ. ಎಲ್. ರವರು ೪. ಜಿ. ಪರಮಶಿವಯ್ಯ ಬಿ. ಎ., ಎಲ್ ಎಲ್. ಬಿ.ಯವರು, ೫. ಪುರುಷೋತ್ತಮಾನಂದಗಿರಿಬಾವಾಜಿಯವರು, ೬. ಸಿ. ವಾಸುದೇವರಾಯರು. ೭. ಕೆ. ಟಿ. ಶೇಷಯ್ಯ ಬಿ. ಎ., ಎಲ್ ಎಲ್. ಬಿ. ಯವರು ಹೀಗೆ ೭ ಮಂದಿಗಳು ನಿಂತಿದ್ದರು. ಆದರೆ ತಾ|| ೨೬ ರ ಸಾಯಂಕಾಲದೊಳಗಾಗಿ ಯೋಚಿಸಿಕೊಂಡು ೧. ೩. ೬. ೭. ನೆ ದೊಡ್ಡಮನುಷ್ಯರುಗಳು ತಮ್ಮ ಉಮೇದುವಾರುತನವನ್ನು ಹಿಂದಕ್ಕೆ ತೆಗೆದುಕೊಂಡು ತಮ್ಮ ಪಕ್ಷಕ್ಕೆಲ್ಲಾ ೨ ನೆಯವರಾದ ಮ|| ಶಿವಮೊಗ್ಗ ಎಸ್. ಆರ್. ಬಾಲಕೃಷ್ಣರಾಯರನ್ನು ನಿಲ್ಲಿಸಿದರು. ೫ ನೆಯ ಮ|| ಪುರುಷೋತ್ತಮಾನಂದಗಿರಿಯವರು ತಾ|| ೨೭ ನೆ ಮಧ್ಯಾಹ್ನ ಓಟುಗಳನ್ನು ಕೊಡಲಾರಂಭವಾದಾಗ ತಾವು ಉಮೇದುವಾರತನದಿಂದ ಹಿಂದೆಗೆದುಬಿಟ್ಟರು. ಹೀಗಾಗಿ ಮ|| ಗಳಾದ ಬಾಲಕೃಷ್ಣರಾಯರು, ಜಿ. ಪರಮಶಿವಯ್ಯನವರು ಈ ಇಬ್ಬರು ಅಡ್ವೊಕೇಟರುಗಳೇ ಉಮೇದುವಾರರಾಗಿ ನಿಂತಂತಾಯಿತು. ಪ್ರತಿನಿಧಿಗಳು ನಾಲ್ಕು ನಾಲ್ಕು ಮಂದಿಗಳು ಸಭಾ ಭವನದಿಂದ ಇಳಿದು ಹೋಗಿ ಹೊರಗಡೆ ಬಯಲಿನಲ್ಲಿ ಏರ್ಪಡಿಸಿದ್ದ ಗುಡಾರದಲ್ಲಿ ಸೆಕ್ರೆಟರಿಯೇಟಿನ ಉದ್ಯೋಗಿಗಳಾದ ಪೋಲಿಂಗ್ ಆಫೀಸರುಗಳ ಮೇಲ್ವಿಚಾರಣೆಯಲ್ಲಿಡಲ್ಪಟ್ಟಿದ್ದ ಪೆಟ್ಟಿಗೆಯಲ್ಲಿ ತಮಗೆ ಬೇಕಾದವರಿಗೆ ಓಟನ್ನು ಕೊಟ್ಟು ಕಾರ್ಡುಗಳನ್ನು ಹಾಕಿ ಬಂದರು. ಈ ಪ್ರೈಪೋಟಿಯು ಬಹಳ ಉತ್ಸಾಹದಿಂದಲೂ ಸ್ಪರ್ಧೆಯಿಂದಲೂ ನಡೆಯಿತು. ಮೊದಲನೆ ದಿನದ ಸಭೆಗೆ ೧೬೦ ಮಂದಿಗಳವರೆಗೆ ಮಾತ್ರವೇ ಪ್ರತಿನಿಧಿಗಳು ಬಂದಿದ್ದರು. ಈ ದಿವಸ ಇನ್ನೂ ೩೦ ಮಂದಿಗಳವರೆಗೆ ಪ್ರತಿನಿಧಿಗಳು ಬಂದು ೧೯೦ ಜನಗಳವರೆಗೆ ಓಟುಗಳನ್ನು ಕೊಟ್ಟರು. ೫ ಗಂಟೆ ಮುಗಿದ ಕೂಡಲೇ ಓಟುಗಳನ್ನು ಗಣನೆ ಮಾಡಿಸಿ ತರಿಸಿ, ದಿವಾನರವರು ತೇಲಿದ ಪರ್ಯವಸಾನವನ್ನು ಸಭೆಯ ಮುಂದೆ ಅಪ್ಪಣೆ ಕೊಡಿಸಿದುದರಲ್ಲಿ ಮ|| ಜಿ. ಪರಮಶಿವಯ್ಯನವರಿಗೆ ೯೬, ಮ|| ಎಸ್. ಆರ್. ಬಾಲಕೃಷ್ಣರಾಯರಿಗೆ ೯೩ ಓಟುಗಳು ದೊರೆತಿದ್ದುದರಿಂದ ಪರಮಶಿವಯ್ಯನವರೇ ನಿಯಮನಿರ್ಮಾಣಸಭಾ ಸಭಿಕರಾಗಿ ಆರಿಸಲ್ಪಟ್ಟರೆಂದು ಗೊತ್ತಾಯಿತು. ಸಭೆಯಲ್ಲಿದ್ದ ಹಿಂದುಳಿದ ಪಂಗಡಗಳ ಸಭಿಕರೆಲ್ಲಾ ತಮ್ಮ ಪಕ್ಷದ ಪ್ರತಿನಿಧಿಯು ಜಯಶಾಲಿಯಾಗಿ ಬಂದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಕಳೆದ ಸಂಚಿಕೆಯಲ್ಲಿ ನಾವು ಮ|| ಪರಮಶಿವಯ್ಯನವರ ಯೋಗ್ಯತಾವಿಶೇಷವನ್ನೂ ದೇಶಸೇವಾಕಾರ್ಯದಲ್ಲಿ ಅವರಿಗಿರುವ ಅಭಿನಿವೇಶವನ್ನೂ ಸ್ಪಷ್ಟವಾಗಿ ಬರೆದಿದ್ದೆವು. ಪ್ರಜಾಪ್ರತಿನಿಧಿಗಳಲ್ಲಿ ವಿಶೇಷ ಭಾಗದವರು ಗುಣಗ್ರಹಣ ಮಾಡಿ ತಮ್ಮಗಳ ಓಟುಗಳನ್ನು ಇವರಿಗೆ ಕೊಟ್ಟು ತಮ್ಮ ಪಕ್ಷದ ಸರಿಯಾದ ಪ್ರತಿನಿಧಿಯು ನಿಯಮನಿರ್ಮಾಣ ಸಭೆಗೆ ಬರುವಂತೆ ಮಾಡಿಕೊಂಡುದು ಅವರಿಗೆ ಭೂಷಣವಾಗಿರುತ್ತದೆ. ಈ ಕಾರಣದಿಂದ ಸಂಕಲ್ಪಸಿದ್ಧಿಯನ್ನು ಪಡೆದ ಪ್ರತಿನಿಧಿ ಮಹಾಶಯರನ್ನೂ ಮ|| ಪರಮಶಿವಯ್ಯನವರನ್ನೂ ನಾವು ಅಭಿನಂದಿಸುವುದಲ್ಲದೆ ಪ್ರತಿನಿಧಿಗಳು ತಮ್ಮಲ್ಲಿಟ್ಟ ಭರವಸೆಯನ್ನು ಸಾರ್ಥಕಪಡಿಸುವಂತೆ ಮ|| ಪರಮಶಿವಯ್ಯನವರು ನಿಯಮನಿರ್ಮಾಣ ಸಭೆಯಲ್ಲಿ ಕೆಲಸ ಮಾಡಿ, ಮ|| ಬಸವಯ್ಯನವರ ಅಭಾವದಿಂದುಂಟಾದ ಕೊರತೆಯನ್ನು ಕೆಲಮಟ್ಟಿಗಾದರೂ ನಿವಾರಿಸಿ ಇತೋಪ್ಯತಿಶಯವಾಗಿ ಸಹೋದರ ಪ್ರಜಾಪ್ರೀತಿಪಾತ್ರರೂ ಯಶೋವಂತರೂ ಆಗಲೆಂದು ಕೋರುತ್ತೇವೆ.

ಹಿಂದುಳಿದ ಜನವರ್ಗಗಳವರು ಎಚ್ಚತ್ತು ಹೀಗೆ ಕರ್ತವ್ಯದಕ್ಷರಾಗಿ ಐಕಮತ್ಯದಿಂದ ಕೆಲಸಮಾಡುತ್ತ ಬಂದರೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಬೇಡಿಕೊಳ್ಳತಕ್ಕ ಅವಶ್ಯಕತೆಯೇ ತಪ್ಪಿಹೋಗುವುದು. ಮತ್ತು ಹಿಂದುಳಿದವರೆಂದು ಹೇಳಿಕೊಳ್ಳುವ ಹೇಡಿತನದ ಗವಸಣಿಗೆಯನ್ನು ನಾವು ಎಷ್ಟೋ ಗಾವುದದ ದೂರಕ್ಕೆ ಝಾಡಿಸಿ ಒದೆದು ಬಿಡಬಹುದು. ಆತ್ಮೋದ್ಧಾರಕ್ಕೆ ಅತ್ಯಂತಾವಶ್ಯಕವಾದ ಇಂಥ ಐಕಮತ್ಯವೂ ಕರ್ತವ್ಯತತ್ಪರತೆಯೂ ಹಿಂದುಳಿದ ಜನವರ್ಗಗಳಲ್ಲಿ ಹೀಗೆಯೇ ಜಾಗರೂಕವಾಗಿರಲೆಂದು ಕೋರಿ ಅವರೆಲ್ಲರ ಶುಭವನ್ನೂ ಹಾರೈಸುತ್ತಿರುವೆವು.

ಒಳದೇಶ ವೃತ್ತಾಂತಗಳು.

ರಾಜಧಾನಿಯಲ್ಲಿ ಕಳೆದವಾರ ೨-೩ ದಿನ ಒಳ್ಳೆ ಮಳೆಗಳಾಗಿ ಕೆರೆ ಕಟ್ಟೆಗಳಿಗೆ ನೀರು ಬಂದಿದೆ. ಇನ್ನೂ ಮಳೆಯಾಗುವ ಚಿನ್ಹೆಗಳಿವೆ. ಈ ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲೆಲ್ಲಾ ಹೀಗೆಯೇ ಮಳೆಯಾಗಿರುವುದರಿಂದ ನಿಂತಿರುವ ಜೋಳದ ಪೈರಿಗೂ ಇತರ ವ್ಯವಸಾಯ ಕಾರ್ಯಗಳಿಗೂ ಅನುಕೂಲವಾಯಿತು.

ರಾಜಧಾನಿಯ ಮಿ|| ಮಹಮ್ಮದ್‌ಸೇಟ್‌ರವರು ತಮ್ಮ ಸಹೋದರಿಯವರ ಲಗ್ನವನ್ನು ಮಾಡಿದ ಸಂಬಂಧದಲ್ಲಿ ಕಳೆದ ಗುರುವಾರ ಸಾಯಂಕಾಲ ದಿವಾನರು ಇತರ ಸರ್ಕಾರಿ ಮುಖ್ಯಾಧಿಕಾರಿಗಳು ಪ್ರಜಾಪ್ರತಿನಿಧಿಗಳು ಪುರಪ್ರಮುಖರುಗಳು ಇವರಿಗೆಲ್ಲಾ ಆಹ್ವಾನವನ್ನು ಕೊಟ್ಟು ತಮ್ಮ ಬಂಗಲೆಗೆ ಬರಮಾಡಿಕೊಂಡು ಅಲ್ಪಾಹಾರಾದಿಗಳಿಂದ ಮರ್ಯಾದಿಸಿ ಸಂತೋಷಪಡಿಸಿದರು.

ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರು ಮುಂದಿನ ಚಳಿಗಾಲದಲ್ಲಿ ಭರತಖಂಡಕ್ಕೆ ದಯಮಾಡಿಸಿದಾಗ್ಗೆ ಮೈಸೂರಿಗೂ ಬಿಜಯಮಾಡಿಸುವುದಾಗಿ ಅಪ್ಪಣೆ ಮಾಡಿರುವರೆಂಬ ಸಂಗತಿಯನ್ನು ದಿವಾನರು ಪ್ರಜಾಪ್ರತಿನಿಧಿ ಸಭೆಯ ತಮ್ಮ ಭಾಷಣದ ಕಡೆಯಲ್ಲಿ ತಿಳಿಯಿಸಿದರು. ಪ್ರತಿನಿಧಿಗಳೆಲ್ಲರೂ ಇದನ್ನು ಕೇಳಿ ಸಂತೋಷಧ್ವನಿ ಮಾಡಿದರು. ಇವರ ಸತ್ಕಾರದ ವೆಚ್ಚಕ್ಕಾಗಿ ಸರ್ಕಾರದವರು ೮ ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಕಾಣಿಸಿದ್ದಾರೆ.

ಪ್ರತಿ ವರ್ಷದ ಮಹಾನವಮಿ ಮತ್ತು ವರ್ಧಂತ್ಯುತ್ಸವಗಳ ಕಾಲದಲ್ಲಿ ರಾಜಧಾನಿಯ ದೊಡ್ಡ ಪೋಸ್ಟಾಫೀಸಿನ ಇದಿರಿಗೆ ದೊಡ್ಡ ಗಡಿಯಾರದ ಸಮೀಪದಲ್ಲಿ ಪಾಠಶಾಲೆಗಳ ವಿದ್ಯಾರ್ಥಿನಿಯರೂ ಇತರ ಪ್ರೇಕ್ಷಕ ಸ್ತ್ರೀಯರೂ ಕೂತುಕೊಳ್ಳುವುದಕ್ಕಾಗಿ ಮರದ ಗ್ಯಾಲರಿಯು ಹಾಕಲ್ಪಡುತ್ತಿದ್ದಂತೆ ಈ ವರ್ಧಂತಿಯುತ್ಸವ ಕಾಲದಲ್ಲೂ ಹಾಕಲ್ಪಟ್ಟಿದ್ದು ಸಾವಿರಾರು ಬಾಲಿಕೆಯರೂ ವಯಸ್ಕರಾದ ಸ್ತ್ರೀಯರೂ ಕಿಕ್ಕಿರಿದು ಕುಳಿತಿದ್ದರು. ಶ್ರೀಮನ್ಮಹಾರಾಜರವರ ಸ್ವಾರಿಯು ಅರಮನೆಯಿಂದ ಹೊರಡುವುದಕ್ಕೆ ೪ ಗಂಟೆಗೆ ಮೊದಲು ಗ್ಯಾಲರಿಯ ಒಂದು ಭಾಗವು ಮುರಿದು ಹೋಗಿ ಹಂತಗಳ ಮೇಲೆ ಕುಳಿತಿದ್ದವರೆಲ್ಲರೂ ಕೆಳಗೆ ಬಿದ್ದುಬಿಟ್ಟರು. ಅವರಲ್ಲಿ ೬೦-೬೫ ಜನದವರೆಗೆ ಗಾಯಪಟ್ಟಿರುವುದಾಗಿಯೂ ಒಬ್ಬ ಹೆಂಗುಸಿನ ಕಾಲು ಮುರಿದುಹೋಗಿರುವುದಾಗಿಯೂ ಇನ್ನಿಬ್ಬರು ಹೆಂಗುಸರೂ ಮೃತಪಟ್ಟದಾಗಿಯೂ ಉಳಿದವರೆಲ್ಲಾ ಬಾಯಸ್ಕೌಟ್ಸ್ (ಸ್ವಯಂಯೋಧರುಗಳಿಂದ) ಉಪಚರಿಸಲ್ಪಟ್ಟು ಮೋಟಾರು ಬಂಡಿಗಳ ಮೇಲೆ ಕೃಷ್ಣರಾಜ ಆಸ್ಪತ್ರೆಗೆ ಕೂಡಲೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವುದಾಗಿಯೂ ಕೇಳುತ್ತೇವೆ. ಈ ಗ್ಯಾಲರಿಯನ್ನು ಜೋಡಿಸಿದ ಮ್ಯು|| ಇಂಜನಿಯರು ಸಸ್ಪೆಂಡ್ ಮಾಡಲ್ಪಟ್ಟಿರುವುದಾಗಿ ವದಂತಿಯಿದೆ. ಸಾವಿರಾರು ಜನರು ಕುಳಿತುಕೊಳ್ಳಲೇರ್ಪಡಿಸಿದ ಗ್ಯಾಲರಿಯ ಜೋಡಣೆಯು ಕ್ರಮವಾಗಿ ಮಾಡಲ್ಪಟ್ಟಿರುವುದೆ ಮತ್ತು ಅದರ ಕಾಲುಗಳೂ ಹಂತಗಳೂ ತಕ್ಕ ಭಾರವನ್ನು ತಡಿಯುವಷ್ಟು ಸಶಕ್ತವಾಗಿವೆಯೇ ಎಂಬುದನ್ನು ಮ್ಯುನಿಸಿಪಾಲಿಟಿಯ ಚೇರ್ಮನ್ನರು ಮೊದಲಾದ ಅಧಿಕಾರಿಗಳು ಮುಂದಾಗಿ ನೋಡಿ ಪರೀಕ್ಷಿಸಿದ್ದರೆ ಇಂತಹ ಅನಾಹುತವು ಆಗಲಿಕ್ಕೆ ಕಾರಣವಿರಲಿಲ್ಲವು. ಈ ಅನಾಹುತಕ್ಕೆ ಯಾರ ಅಜಾಗರೂಕತೆ ಕಾರಣವಾಗಿರುವುದೆಂಬುದು ಕಂಡುಹಿಡಿಯಲ್ಪಟ್ಟು ನಿರ್ದಾಕ್ಷಿಣ್ಯದಿಂದ ತಕ್ಕ ಶಿಕ್ಷೆಯು ವಿಧಿಸಲ್ಪಡದೆ ಇರಲಾರದೆಂದು ನಾವು ನಿರೀಕ್ಷಿಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ದಿವಾನ್‌ರವರು ಮಾಡಿದ ಭಾಷಣದ ಮುಖ್ಯಭಾಗಗಳು.

ಕಳೆದ ಸಂವತ್ಸರದಲ್ಲಿ ವ್ಯವಸಾಯದ ಸ್ಥಿತಿಗಳು ಬಹಳ ಅನುಕೂಲವಾಗಿದ್ದುವು; ಆಹಾರ ಧಾನ್ಯಗಳ ಬೆಳೆ ಉತ್ಕೃಷ್ಟವಾಗಿ ಆಯಿತು. 68 ಲಕ್ಷ ಪಲ್ಲ ರಾಗಿ. 41 ಲಕ್ಷ ಪಲ್ಲ ಭತ್ತ, 12 ಲಕ್ಷ ಪಲ್ಲ ಜೋಳ ಬೆಳೆ ಆದಂತೆ ತಿಳಿಯಬಂದಿದೆ. ಇದಕ್ಕೆ ಹಿಂದಿನ ಸಂವತ್ಸರದಲ್ಲಿ 30 ಲಕ್ಷ ಪಲ್ಲ ರಾಗಿ, 22 ಲಕ್ಷ ಪಲ್ಲ ಭತ್ತ, 7 ಲಕ್ಷ ಪಲ್ಲ ಜೋಳ ಮಾತ್ರ ಬೆಳೆ ಆಗಿರುತ್ತದೆ. ಇವನ್ನು ಕ್ಷಾಮಕಾಲವಾಗಿದ್ದ 1918 ನೆಯ ಇಸವಿಯಲ್ಲಿ ಉತ್ಪನ್ನವಾದ ಬೆಳೆಗೆ ಹೋಲಿಸಿ ನೋಡಿದರೆ ಈ ಸಂವತ್ಸರದ ಬೆಳೆಯು ತೃಪ್ತಿಕರವಾಗಿರುವುದು ಮಾತ್ರವೇ ಅಲ್ಲ. 1916-17 ಮತ್ತು 1917-18, ಈ ಸಂವತ್ಸರಗಳಲ್ಲಿ ಸ್ವಲ್ಪ ಹೆಚ್ಚಾಗಿ ಉತ್ಪತ್ತಿಯಾದ ಭತ್ತದ ಬೆಳೆಯನ್ನು ಬಿಟ್ಟರೆ ಮಿಕ್ಕಾದ ಆಹಾರಧಾನ್ಯಗಳ ಬೆಳೆಯ ವಿಷಯದಲ್ಲಿ ಕಳೆದ ಐದಾರು ವರುಷಗಳಿಗಿಂತ ಈ ವರ್ಷದಲ್ಲಿ ಆದದ್ದೇ ಸರ್ವೋತ್ತಮವಾದ ಬೆಳೆಯೆಂದು ಹೇಳಬಹುದು. ಇಂತಹ ಉತ್ಕೃಷ್ಟವಾದ ಬೆಳೆಯಾದರೂ ಧಾರಣೆವಾಸಿಗಳು ಮಾತ್ರ ಇಳಿಯಲಿಲ್ಲ. ನಾವು ನಿರೀಕ್ಷಿಸಿದ್ದುದಕ್ಕೆ ಪ್ರತಿಯಾಗಿ ಧಾರಣೆಗಳು 1919 ನೆಯ ಜುಲೈ ತಿಂಗಳಲ್ಲಿ ಕಂಡುಬಂದ ಕ್ಷಾಮದ ಧಾರಣೆಗಳಿಗಿಂತಲೂ ಸ್ವಲ್ಪಮಟ್ಟಿಗೆ ಇಳಿದಿದ್ದರೂ ಮಾಮೂಲ್ ಸ್ಥಿತಿಗೆ ಬರತಕ್ಕ ಚಿನ್ಹೆಗಳೇನೂ ಕಂಡುಬರಲಿಲ್ಲ. ಹೋದ ಜುಲೈ ತಿಂಗಳಲ್ಲಿ ಯುದ್ಧಕ್ಕೆ ಮುಂಚೆ ಇದ್ದ ಧಾರಣೆಗಿಂತ ಶೇಕಡಾ 143 ರಷ್ಟು ಹೆಚ್ಚು ಧಾರಣೆ ಇದ್ದದ್ದು ಈಗ ಸರಾಸರಿ ಸುಮಾರು ಶೇಕಡಾ 113 ರಷ್ಟು ಹೆಚ್ಚು ಧಾರಣೆಗೆ ನಿಂತಿರುತ್ತದೆ. ಇದರಿಂದ ಆಹಾರಧಾನ್ಯಗಳು ಇಲ್ಲಿಂದ ಹೊರಕ್ಕೆ ರಫ್ತು ಆಗದೆ ಇರುವುದಕ್ಕೆ ಬೇಕಾದ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕದಂತೆ ಇರಿಸಿರಬೇಕಾಗಿ ಬಂತು. ಅಲ್ಲದೆ, ವ್ಯಾಪಾರಿಗಳು ಧಾನ್ಯವನ್ನು ವಿಪರೀತ ಲಾಭಕ್ಕೆ ಮಾರುವುದನ್ನು ತಪ್ಪಿಸುವ ಉದ್ದೇಶದೊಡನೆ ಈ ದೇಶದಲ್ಲಿನ ಧಾನ್ಯದ ಜೊತೆಗೆ ಬರ್ಮಾ ದೇಶದಿಂದ ತಹಲ್‌ವರೆಗೆ 70¾ ಲಕ್ಷ ರೂಪಾಯಿ ಬೆಲೆ ಬಾಳುವ 45,750 ಟನ್ನು ಅಕ್ಕಿಯನ್ನು ಆಮದು ಮಾಡಲಾಯಿತು.

ಯಾವುದಾದರೊಂದು ವರ್ಷದಲ್ಲಿ ದುರ್ಭಿಕ್ಷವು ಸಂಭವಿಸುವುದರಿಂದ ಏರುವ ಧಾರಣೆವಾಸಿಗಳು ಇಳಿಯಬೇಕಾದರೆ ಸಾಧಾರಣವಾಗಿ ಎರಡು ಮೂರು ಉತ್ಕೃಷ್ಟವಾದ ಬೆಳೆ ಆಗಬೇಕಾದುದು ಆವಶ್ಯಕವಾಗಿರುವುದೆಂತ ಹೋದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಇಂಡಿಯಾ ದೇಶದ ನ್ಯಾಯವಿಧಾಯಕ ಸಭೆಯಲ್ಲಿ ಧಾರಣೆವಾಸಿಯು ಹೆಚ್ಚಿರುವ ವಿಷಯವನ್ನು ಕುರಿತು ಚರ್ಚಿಸುವಾಗ ಪ್ರಸ್ತಾಪಿಸಲ್ಪಟ್ಟಿತು. ಈ ವರುಷವೂ ಹೋದ ವರ್ಷದಂತೆಯೇ ಸುಭಿಕ್ಷವಾಗಿದ್ದು ಈಗ ಸ್ವಲ್ಪ ಇಳಿದಿರುವಂತೆ ಕಾಣುತ್ತಿರುವ ಆಹಾರ ಧಾನ್ಯಗಳ ಧಾರಣೆಯು ಬರಬರುತ್ತಾ ಇನ್ನೂ ವಿಶೇಷವಾಗಿ ಇಳಿಯುತ್ತ ಬಂದೀತೆಂದು ನಾವು ಹಾರೈಸೋಣ.

ಈ ವರ್ಷದಲ್ಲಿ ರೋಗಾದ್ಯುಪದ್ರವಗಳ ಹಾವಳಿಯು ವಿಶೇಷವಾಗಿಲ್ಲವೆಂಬುದನ್ನು ಕೇಳಿ ತಾವೆಲ್ಲರೂ ಸಂತೋಷಪಡಬಹುದು. ಆದರೂ ಅಕಸ್ಮಾತ್ ಉಪದ್ರವಗಳೇನಾದರೂ ಸಂಭವಿಸುವ ಸೂಚನೆಗಳು ಕಂಡುಬಂದುದೇ ಆದರೆ ತಕ್ಕ ನಿವಾರಣೋಪಾಯಗಳನ್ನು ಪೂರ್ವಭಾವಿಯಾಗಿ ಜಾರಿಗೆ ತರುವುದಕ್ಕಾಗಿ ಡಿಸ್ಟ್ರಿಕ್ಟು ಬೋರ್ಡುಗಳವರ ಮತ್ತು ಸಿಟಿ ಮ್ಯುನಿಸಿಪಾಲಿಟಿಗಳವರ ವಶದಲ್ಲಿ ತಕ್ಕಷ್ಟು ಹಣ ಇಟ್ಟಿರುವುದಾಗಿದೆ. ಸಂಸ್ಥಾನದ ಪ್ರಜೆಗಳ ಉಪಯೋಗಕ್ಕಾಗಿ ವೈದ್ಯ ವಿಚಾರದಲ್ಲಿ ಆಗಬೇಕಾದ ಅನುಕೂಲ್ಯಗಳನ್ನು ನಿರ್ಧರಿಸುವುದಕ್ಕಾಗಿ ಏರ್ಪಟ್ಟ ಮೆಡಿಕಲ್ ರಿಲೀಫ್ ಕಮಿಟಿಯವರು ಮಾಡಿರುವ ಮುಖ್ಯವಾದ ಶಿಫಾರಸ್ಸುಗಳನ್ನು ಸರ್ಕಾರದವರು ಮಂಜೂರ್ಮಾಡಿದ್ದಾರೆ. ಅಲ್ಲದೆ ಹಣವು ಒದಗಿದ ಹಾಗೆಲ್ಲಾ ಅವುಗಳನ್ನು ಜಾರಿಯಲ್ಲಿ ತರಲಾಗುವುದು. ಮಲೆನಾಡು ಪ್ರಾಂತ್ಯವಾದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಉಪಯೋಗವಾಗುವಂತೆ ಅಲ್ಲಿ ಈ ಕಾಲಕ್ಕೆ ತಕ್ಕಂತೆ ಭಾರೀ ಆಸ್ಪತ್ರೆಯೊಂದನ್ನು ಕಟ್ಟಬೇಕೆಂದು ಉದ್ದೇಶಿಸಿರುತ್ತದೆ. ಮಲೆನಾಡಿನ ಅಭಿವೃದ್ಧಿಗೆ ಸಂಬಂಧಪಟ್ಟ ಕಮಿಟಿಯ ರಚನೆಯನ್ನು ಪೂರ್ತಿಯಾಗಿ ಬದಲಾಯಿಸಿ ಅದಕ್ಕೆ ಸಂಸ್ಥಾನದ ಕೌನ್ಸಿಲರವರೊಬ್ಬರು ಅಧ್ಯಕ್ಷರಾಗಿರುವಂತೆ ಏರ್ಪಾಡು ಮಾಡಲಾಗಿದೆ. ಇದರಿಂದ ಮಲೆನಾಡು ಪ್ರಾಂತ್ಯಕ್ಕೇನೇ ಸಂಬಂಧಪಟ್ಟ ಕ್ಲಿಷ್ಟ ವಿಷಯಗಳು ಸರ್ವದಾ ಸರ್ಕಾರದವರ ಅವಗಾಹನೆಯಲ್ಲಿದ್ದು ತನ್ಮೂಲಕ ಆ ಪ್ರಾಂತದ ಸಾಧನ ಸಂಪತ್ತಿಗಳು ಅಲ್ಲಿಯ ಶ್ರೇಯೋಭಿವೃದ್ಧಿಗೆ ಸಹಕಾರಿಗಳಾಗುವುವೆಂದು ನಿರೀಕ್ಷಿಸಬಹುದಾಗಿದೆ.

ಇನ್ನು ನಾವು ಸಂಸ್ಥಾನದ ಬಜೆಟ್ಟನ್ನು ಪರಿಶೀಲಿಸುವುದಕ್ಕೆ ಪ್ರಾರಂಭಿಸುವೆವು.

1919-20 ನೆಯ ವರ್ಷದ ಬಜೆಟ್ಟು.

ಮೊದಲಿನ ಎಂಟು ತಿಂಗಳಲ್ಲಿ ವಸ್ತುತಃ ಉತ್ಪತ್ತಿಯಾದ ಹುಟ್ಟುವಳಿಯನ್ನೂ, ಉಳಿದ ನಾಲ್ಕು ತಿಂಗಳಲ್ಲಿ ಉತ್ಪತ್ತಿಯಾಗಬಹುದಾದ ಹುಟ್ಟುವಳಿಯನ್ನೂ ಗಣನೆಗೆ ತೆಗೆದುಕೊಂಡು ತಯಾರ್ಮಾಡಲ್ಪಟ್ಟ ತಿದ್ದುಪಾಟಾದ ಅಂದಾಜಿಗೆ ಅನುಸಾರವಾಗಿ 1919-20 ನೆಯ ವರುಷದ ಹುಟ್ಟುವಳಿಯು ಬಜೆಟ್‌ನಲ್ಲಿ ಕಾಣಿಸಿರುವ 313⅓ ಲಕ್ಷ ರೂಪಾಯಿಗೆ ಬದಲಾಗಿ 329 ಲಕ್ಷ ರೂಪಾಯಿ ಆಗುತ್ತದೆ. ಈ ವರ್ಷದ ಒಟ್ಟು ಖರ್ಚು ಮೊಬಲಗು 372 ಲಕ್ಷ ರೂಪಾಯಿ; ಈ ಪೈಕಿ 38⅓ ಲಕ್ಷ ರೂಪಾಯಿಯನ್ನು ಫೈನಾನ್ಷಲ್ ಸೆಟಲ್‌ಮೆಂಟ್ ಏರ್ಪಾಡಿನ ಪ್ರಕಾರ ವ್ಯವಸ್ಥೆಯಾದ ಇಲಾಖೆಗಳ ಶಿಲ್ಕುಗಳಿಗೂ ರಿಜರ್ವ್‌ಗಳಿಗೂ ಖರ್ಚುಹಾಕಿರುತ್ತದೆ. ಆದುದರಿಂದ, ಏಕ್ ಹುಟ್ಟುವಳಿಯಿಂದ ನಡೆಯಿಸುವ ನಿವ್ವಳ ಖರ್ಚು ಸುಮಾರು 333⅔ ಲಕ್ಷ ರೂಪಾಯಿ ಆದಂತಾಯಿತು. ಇದರಿಂದ ಒಟ್ಟು ಖರ್ಚಿಗಿಂತ ಹುಟ್ಟುವಳಿಯು 4⅔ ಲಕ್ಷ ರೂಪಾಯಿ ಕಡಿಮೆ ಬಿದ್ದಂತಾಯಿತು. ಬಜೆಟ್ಟಿನಲ್ಲಿ ಒಟ್ಟು ಖರ್ಚಿಗಾಗಿ 354⅔ ಲಕ್ಷ ರೂಪಾಯಿ ಒದಗಿಸಲ್ಪಟ್ಟಿತ್ತು; ಅದರಲ್ಲಿ 40⅓ ಲಕ್ಷ ರೂಪಾಯಿಯನ್ನು ಇಲಾಖೆಗಳ ಶಿಲ್ಕುಗಳಿಗೂ ರಿಜರ್ವ್‌ಗೂ ಖರ್ಚು ಹಾಕಿರುವುದರಿಂದ ಸುಮಾರು ⅓ ಲಕ್ಷ ರೂಪಾಯಿ ಕಮ್ಮಿಬಿದ್ದಂತಾಯಿತು.

ಬಜೆಟ್ ಮತ್ತು ರಿವೈಸ್ಡ್ ಎಸ್ಟಿಮೇಟುಗಳಲ್ಲಿ ಕಮ್ಮಿ ಬಿದ್ದಂತೆ ಕಂಡುಬಂದಿರುವುದು ಲೆಕ್ಕದಲ್ಲಿ ಮಾತ್ರ ಆಗಿರುತ್ತದೆ. ಎಂದರೆ ಈ ವರ್ಷದ ಹುಟ್ಟುವಳಿಗಳಿಂದ ಬೇರೆಬೇರೆ ಇಲಾಖೆಗಳ ಶಿಲ್ಕುಗಳಿಗೂ, ರಿಜರ್ವ್‌ಗಳಿಗೂ ಜಮಾ ಕಟ್ಟುವುದರಿಂದಲೂ ಅವುಗಳಿಗೆ ಖರ್ಚುಹಾಕುವುದರಿಂದಲೂ ಆರೀತಿ ಕಮ್ಮಿ ಬಿದ್ದಿರುತ್ತದೆಯೇ ಹೊರತು ಈ ವರ್ಷದಲ್ಲಿ ಉತ್ಪತ್ತಿಯಾದ ಹುಟ್ಟುವಳಿಯಿಂದಲೇ ಖರ್ಚು ವಹಿಸಿದುದರಿಂದ ಕಮ್ಮಿ ಬಿದ್ದಿಲ್ಲ. ರಿಜರ್ವ್ ಫಂಡುಗಳಿಂದ ನಡೆಯಿಸುವ ಜಮಾಖರ್ಚುಗಳ ತಿಸರೆಯನ್ನು ಒಂದು ಕ್ಷಣ ನಮ್ಮ ಅವಗಾಹನೆಗೆ ತೆಗೆದುಕೊಳ್ಳದೆ, ಈ ಸಂವತ್ಸರದಲ್ಲಿ ವಸ್ತುತಃ ನಡೆಯಿಸಲ್ಪಟ್ಟ ಎಲ್ಲಾ ಖರ್ಚುಗಳನ್ನೂ ಹಿಂದಿನ ವರ್ಷಗಳಲ್ಲಿ ಶೇಖರಮಾಡಿರುವ ಮೊತ್ತಕ್ಕೆ ಕೈ ಹಾಕುವುದಕ್ಕೆ ಮುಂಚಿತವಾಗಿ ಈ ವರ್ಷದ ಹುಟ್ಟುವಳಿಯಿಂದಲೇ ನಡೆಯಿಸಲಾಯಿತೆಂದು ಭಾವಿಸಿದ ಪಕ್ಷದಲ್ಲಿ, ಈ ವರ್ಷದ ಆದಾಯವ್ಯಯಗಳ ನಿಜವಾದ ಫಲಿತಾಂಶವನ್ನು ಸರಿಯಾಗಿ ಗ್ರಹಿಸುವುದಕ್ಕೆ ನಮಗೆ ಅನುಕೂಲವಾಗುವುದು.

ಪ್ರಸಕ್ತವರ್ಷದ ಬಜೆಟ್ಟಿನಲ್ಲಿ 313⅓ ಲಕ್ಷ ರೂಪಾಯಿ ಹುಟ್ಟುವಳಿಯನ್ನೂ, ಸರ್ವಿಸ್ ಇಲಾಖೆಗಳ ಮೇಲೆ 309¾ ಲಕ್ಷ ರೂಪಾಯಿ ಖರ್ಚನ್ನೂ ತೋರಿಸಿರುವುದರಿಂದ ಹುಟ್ಟುವಳಿಯು 3¾ ಲಕ್ಷ ರೂಪಾಯಿ ಜಾಸ್ತಿಯಾದಂತಾಯಿತು. ಲೆಕ್ಕದಲ್ಲಿ ಮಾತ್ರ ⅓ ಲಕ್ಷ ರೂಪಾಯಿ ಕಮ್ಮಿ ಬೀಳುವುದಕ್ಕೆ ರಿಜರ್ವ್ ಲೆಕ್ಕಕ್ಕೆ ಈ ವರ್ಷ ಸೇರಬೇಕಾದುದಕ್ಕಿಂತ 4⅓ ಲಕ್ಷ ರೂಪಾಯಿ ಜಾಸ್ತಿಯಾಗಿ ಸೇರಿಸಿದುದೇ ಕಾರಣವಾಗಿರುತ್ತದೆ. ಮುಂದೆ ನಾವು ವಿವರಿಸುವಂತೆ ಈ ವರ್ಷದ ಹುಟ್ಟುವಳಿಯು ಅನುಕೂಲವಾಗಿರುವುದರಿಂದ, ಹುಟ್ಟುವಳಿಗಳು ಬಜೆಟ್ಟಿಗಿಂತಲೂ 15⅓ ಲಕ್ಷ ರೂಪಾಯಿ ಹೆಚ್ಚಾಗಿ ಆದುವು. ಖರ್ಚು ಬಾಬಾದರೋ ಬೇರೆಬೇರೆ ಹೆಡ್ಡುಗಳಲ್ಲಿ ಹೆಚ್ಚಾಗಿ ವ್ಯತ್ಯಸ್ತವಾಗಿದ್ದರೂ ಒಟ್ಟಿನಲ್ಲಿ ಬಜೆಟ್ ಅಂಕೆಗೆ ಎಂದರೆ 309¾ ಲಕ್ಕೆ ಸ್ವಲ್ಪ ಹೆಚ್ಚು ಕಮ್ಮಿ ಸರಿಹೋಯಿತು. ಆದುದರಿಂದ ಈ ವರ್ಷದ ಜಮಾಖರ್ಚುಗಳ ಕಡೆಯವಾಸ್ತವಫಲಿತಾಂಶವೇನೆಂದರೆ, ನಾವು ಊಹಿಸಿದ್ದಂತೆ 3¾ ಲಕ್ಷ ರೂಪಾಯಿ ಮಿಗುತೆಯಾಗುವುದಕ್ಕೆ ಬದಲಾಗಿ 19½ ಲಕ್ಷ ರೂಪಾಯಿ ಮಿಗುತೆಯಾದಂತಾಯಿತು. ಮೊದಲೇ ಸೂಚಿಸಲ್ಪಟ್ಟ ಅಕೌಂಟು ನ್ಯೂನಾಂಶವು ವಾಪಸು ತೆಗೆದುಕೊಳ್ಳಲ್ಪಟ್ಟ ಮೊಬಲಗಿಗಿಂತ ಹೆಚ್ಚಾಗಿ 23.22 ಲಕ್ಷ ರೂಪಾಯಿಯನ್ನು ನಮ್ಮ ಅಕೌಂಟುಗಳಲ್ಲಿ ರಿಜರ್ವ್‌ಗಳಿಗೆ ಕಂಟ್ರಿಬ್ಯೂಷನ್ ಕೊಟ್ಟದ್ದರಿಂದ ಉಂಟಾಗಿರುತ್ತದೆ. ಅವುಗಳಿಗೆ ಏಕ್ ಜಮೆಗೆ ಸಿಕ್ಕಬಹುದಾದ ಸರ್‌ಪ್ಲಸ್ ಹುಟ್ಟುವಳಿಯಾದರೋ 19½ ಲಕ್ಷ ರೂಪಾಯಿ ಮಾತ್ರವೇ ಆಗಿದೆ.

ತಿದ್ದುಪಾಟಾದ ಅಂದಾಜಿಗೆ ಅನುಸಾರವಾಗಿ ನೌಕರಿ ಇಲಾಖೆಗಳಿಗಾಗಿ ಮಾಡಲ್ಪಟ್ಟ ಖರ್ಚುಗಳನ್ನು ಪರಿಶೀಲಿಸಿ ನೋಡಿದರೆ 19½ ಲಕ್ಷ ರೂಪಾಯಿ ಮಿಗುತೆಯಾಗಿದೆಯೆಂದೂ, ಲೆಕ್ಕದಲ್ಲಿನ ನ್ಯೂನಾಂಶವು ಫೈನಾನ್ಷಲ್ ಸೆಟಲ್‌ಮೆಂಟಿನ ಏರ್ಪಾಡನ್ನನುಸರಿಸಿ ಮಿ|| ದತ್ತರವರು ಶಿಫಾರಸ್ಸು ಮಾಡಿದಂತೆ ರಿಜರ್ವ್‌ಗಳಿಗೆ ಕಂಟ್ರಿಬ್ಯೂಷನ್ ಕೊಟ್ಟದ್ದರಿಂದ ಉಂಟಾಯಿತೆಂದೂ ತಿಳಿಯಬರುತ್ತದೆ. ಎಕ್ಸ್‌ಛೇಂಜಿನ ದರ ಹೆಚ್ಚಿದ್ದರಿಂದ ಇಂಗ್ಲಿಷ್ ನಾಣ್ಯದಲ್ಲಿ ಗಣನೆಯಾಗಿ ಬರತಕ್ಕ ಹುಟ್ಟುವಳಿಯು ಕಮ್ಮಿಯಾಗುವ ಅನಿರೀಕ್ಷಣೀಯವಾದ ಸಂಭವವು ಒದಗಿದ್ದರೂ ಕೂಡ, ಹೋದ ವರ್ಷ ಬಜೆಟ್ ಕಾಲದಲ್ಲಿ ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿಯೇ ಈ ವರ್ಷದಲ್ಲಿ ಹುಟ್ಟುವಳಿ ಆಗಿರುತ್ತದೆ.

ಇಂಗ್ಲೀಷ್ ನಾಣ್ಯರೂಪದಲ್ಲಿ ಹುಟ್ಟುವಳಿಯನ್ನು ಕೊಡುವ ಬಾಬುಗಳು ವಿನಾ, ಮಿಕ್ಕ ಮುಖ್ಯವಾದ ಎಲ್ಲಾ ಬಾಬುಗಳಲ್ಲಿಯೂ ಹುಟ್ಟುವಳಿಯು ಹೆಚ್ಚಿದೆ. ಹೋದ ವರ್ಷದಲ್ಲಿ ಬೆಳೆ ಚೆನ್ನಾಗಿ ಆದುದರಿಂದಲೂ, ಧಾರಣೆಗಳು ಇನ್ನೂ ಹೆಚ್ಚಾಗಿಯೇ ಇರುವುದರಿಂದಲೂ ರೈತರು 1918-19 ನೆಯ ವರ್ಷದಲ್ಲಿ ಕೊಡದೆ ನಿಲ್ಲಿಸಿಕೊಂಡಿದ್ದ ಕಂದಾಯದ ಸ್ವಲ್ಪ ಭಾಗವನ್ನು ಪಾವತಿ ಮಾಡುವುದಕ್ಕೆ ಸಾಧ್ಯವಾದ ಪ್ರಯುಕ್ತ ಜಮೀನ್ ಹುಟ್ಟುವಳಿಯು 1.43 ಲಕ್ಷ ರೂಪಾಯಿ ಹೆಚ್ಚಿತು. ಚರ್ಮ ಹದಮಾಡುವ ವ್ಯಾಪಾರದ ವಿಷಯದಲ್ಲಿ ಸರ್ಕಾರದವರು ತಮ್ಮ ಹತೋಟಿಯನ್ನು ತಪ್ಪಿಸಿದ ಪ್ರಯುಕ್ತ ಸದರೀ ಕಸಬು ಬದಾಯಿಸಬಹುದೆಂಬ ಊಹೆಯ ಮೇಲೆ ತಂಗಡಿಚಕ್ಕೆಗಳ ಹರಾಜಿನಲ್ಲಿ ವಿಶೇಷ ಹುಟ್ಟುವಳಿಯಾದ ಪ್ರಯುಕ್ತ ಫಾರೆಸ್ಟ್ ಬಾಬಿನ ಹುಟ್ಟುವಳಿಯಲ್ಲಿ 4.45 ಲಕ್ಷ ರೂಪಾಯಿಯಷ್ಟು ಹೆಚ್ಚಿಗೆಯು ಉಂಟಾಗಲು ಕಾರಣವಾಯಿತು. ಸ್ಟ್ಯಾಂಪು ಬಾಬಿನಲ್ಲಿ ನಮ್ಮ ಊಹೆಗೆ ಅನುಸಾರವಾಗಿ ಹುಟ್ಟುವಳಿ ಹೆಚ್ಚಲಿಲ್ಲ. ಆದರೂ ಆ ಬಾಬತು ಹುಟ್ಟುವಳಿಯು ತಕ್ಕಮಟ್ಟಿಗೆ ಹೆಚ್ಚುತ್ತಿರುವುದು ಸಂತೋಷಪ್ರದವಾಗಿದೆ. ಅದು 1916-17 ರಲ್ಲಿ 11⅓ ಲಕ್ಷವಿದ್ದುದು 1917-18 ರಲ್ಲಿ 12⅓ ಲಕ್ಷವಾಗಿ 1918-19 ರಲ್ಲಿ 12¾ ಲಕ್ಷಕ್ಕೆ ಹೆಚ್ಚಿತು. ಈ ವರ್ಷದಲ್ಲಿ 15 ಲಕ್ಷವಾಗಿದೆ. ಅದನ್ನು ಇನ್ನೂ ಹೆಚ್ಚಿಸುವ ವಿಷಯದಲ್ಲಿ ಸರ್ಕಾರದವರು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಈ ವರ್ಷದಲ್ಲಿ ಈ ರೀತಿ ಈ ಬಾಬಿನಲ್ಲಿ ಹುಟ್ಟುವಳಿ ಹೆಚ್ಚಿದ್ದು ಈ ದೇಶದಲ್ಲಿ ಮಾತ್ರವೇ ಅಲ್ಲದೆ ಬ್ರಿಟಿಷ್ ಅಧಿಪತ್ಯಗಳಲ್ಲಿಯೂ ಸಹ ಹೆಚ್ಚಿರುತ್ತದೆ. ಯುದ್ಧವು ನಿಂತ ಮೇಲೆ ವ್ಯಾಪಾರದಲ್ಲಿ ಅಧಿಕವಾಗಿ ಪ್ರಯತ್ನಗಳು ನಡೆಯುತ್ತಿರುವುದೇ ಇದಕ್ಕೆ ಕಾರಣವಾಗಿದೆ.

ಈಚೆಗೆ ಸರ್ಕಾರಕ್ಕೆ ಕಳುಹಿಸಲ್ಪಟ್ಟ ಕಚ್ಚಾ ಲೆಕ್ಕದ ಮೇರೆಗೆ 1918-19 ನೆಯ ವರ್ಷಕ್ಕೆ ಬೆಂಗಳೂರು ದಂಡಿನಲ್ಲಿ ಸರ್‌ಪ್ಲಸ್ ಹುಟ್ಟುವಳಿಯು 9.83 ಲಕ್ಷ ರೂಪಾಯಿ ಆಗಿರುತ್ತದೆ. ಇದು ಬಜೆಟ್ಟಿನಲ್ಲಿ ಕಾಣಿಸಿರುವುದಕ್ಕಿಂತಲೂ 7.83 ಲಕ್ಷ ರೂಪಾಯಿ ಹೆಚ್ಚಾಗಿದೆ. ಹೋದವರ್ಷದಲ್ಲಿ ಈ ಹುಟ್ಟುವಳಿ 7.45 ಲಕ್ಷವಿತ್ತು. ಆದಕಾರಣ ಈ ಹೆಚ್ಚು ಹುಟ್ಟುವಳಿಯು ಆಕಸ್ಮಾತ್ತಾಗಿ ಹೆಚ್ಚಿದ ಉತ್ಪತ್ತಿಯಲ್ಲ. ಹೋದ ವರ್ಷದಲ್ಲಿ ಕಮ್ಮಿಯಾಗಿ ಅಂದಾಜು ಮಾಡಲ್ಪಟ್ಟಿತ್ತೆಂಬುದನ್ನು ಸೂಚಿಸುತ್ತದೆ. ಬಡ್ಡಿಯ ಬಾಬಿನಲ್ಲಿ ಹುಟ್ಟುವಳಿಯು ಬಜೆಟ್ಟಿನಲ್ಲಿ ಕಂಡದ್ದಕಿಂತಲೂ 4.80 ಲಕ್ಷ ಹೆಚ್ಚಾಗಿದೆ. ಅದರ ಪೈಕಿ 3⅓ ಲಕ್ಷ 1917 ನೆಯ ಇಸವಿ ಜುಲೈ ಲಾಗಾಯಿತು ಗಂಧದ ಎಣ್ಣೆಯ ಕಾರ್ಖಾನೆಗಳಿಗೆ ಕೆಲಸ ನಡಿಸಲು ಮುಂಗಡ ಕೊಟ್ಟಿರುವ ಬಂಡವಾಳದ ಮೇಲಿನ ಬಡ್ಡಿಗಾಗಿ ಸದರೀ ಕಾರ್ಖಾನೆಗಳ ಹುಟ್ಟುವಳಿಯಿಂದ ಬಂದ ಮೊಬಲಗನ್ನು ವರ್ಗಾಯಿಸಿರುವುದೇ ಬಡ್ಡಿಯ ಬಾಬಿನಲ್ಲಿ ಹೆಚ್ಚುವುದಕ್ಕೆ ಕಾರಣ. ಉಳಿದ ಮೊಬಲಗು, ಲಂಡನ್ನಿನಲ್ಲಿದ್ದ ನಮ್ಮ ಕ್ಯಾಷ್ ಬ್ಯಾಲೆನ್ಸಿನ ಒಂದು ಭಾಗವನ್ನು ಅಲ್ಪಕಾಲದ ಡಿಪಾಜಿಟ್ಟಾಗಿ ಇಟ್ಟ ಪ್ರಯುಕ್ತ ಉತ್ಪನ್ನವಾದ ಬಡ್ಡಿಯಾಗಿದೆ. ರೈಲ್ವೆ ಬಾಬಿನಲ್ಲಿ ಹುಟ್ಟುವಳಿ ತೃಪ್ತಿಕರವಾಗಿದೆ; ಎಂದರೆ, ಬಜೆಟ್ಟಿನಲ್ಲಿ ನಿರೀಕ್ಷಿಸಿದ್ದ 12.52 ಲಕ್ಷಕ್ಕೆ ಪ್ರತಿಯಾಗಿ ರಿವೈಜಾದ ಎಸ್ಟಿಮೇಟಿನಲ್ಲಿ 18.45 ಲಕ್ಷಕ್ಕೆ ಹೆಚ್ಚಿರುವುದರಿಂದ 5.93 ಲಕ್ಷ ರೂಪಾಯಿ ಹೆಚ್ಚಿನದಾಗಾಯಿತು. ಯುದ್ಧಕಾಲದಲ್ಲಿ ಆಮದು ರಫ್ತು ವಿಷಯದಲ್ಲಿ ಹಾಕಲ್ಪಟ್ಟ ನಿರ್ಬಂಧಗಳ ದೆಸೆಯಿಂದ ರೈಲ್ವೆ ಬಾಬಿನಲ್ಲಿ ಎಷ್ಟು ಉತ್ಪತ್ತಿಯಾಗಬಹುದೆಂಬ ಅಂಶವು ನಿರ್ಧಾರವಾಗಿ ತಿಳಿಯದೇ ಇದ್ದದ್ದರಿಂದ ಬಜೆಟ್ಟಿನಲ್ಲಿ ಮೊತ್ತವಾಗಿ 55.35 ಲಕ್ಷ ರೂಪಾಯಿ ಉತ್ಪತ್ತಿಯು ತೋರಿಸಲ್ಪಟ್ಟಿತ್ತು. ಆದರೆ ವ್ಯಾಪಾರವು ಪುನಃ ಚೆನ್ನಾಗಿ ನಡೆದು ಪ್ರಯಾಣಿಕರು ಹೆಚ್ಚಾಗಿ ಪ್ರಯಾಣಮಾಡಿದುದರಿಂದ ಸದರಿ ಹುಟ್ಟುವಳಿಯು 57.70 ಲಕ್ಷವಾಗಬಹುದು. ರೈಲ್ವೆ ಬಾಬಿನಲ್ಲಿ ರಿಪೇರಿ ನಡಿಸುವುದೂ, ಹೊಸ ಸಾಮಾನುಗಳನ್ನು ಕೊಳ್ಳುವುದೂ ಸಹ ಕಷ್ಟಸಾಧ್ಯವಾದ ಪ್ರಯುಕ್ತ ಕೆಲಸ ನಡಿಸುವ ಖರ್ಚು ಕಡಿಮೆಯಾಯಿತು. ಈ ವರ್ಷದಲ್ಲಿ ಎಕ್ಸ್‌ಛೇಂಜು ದರವು ಹೆಚ್ಚಾದ್ದರಿಂದ ಸದರನ್ ಮರಾಟಾ ರೈಲ್ವೆ ಬಾಂಡುಗಳ ಮಾಲೀಕರಿಗೆ ಗ್ಯಾರಂಟೀ ಮಾಡಲ್ಪಟ್ಟ ಬಡ್ಡಿಯನ್ನು ಕೊಡುವುದರಲ್ಲಿ 1.60 ಲಕ್ಷ ರೂಪಾಯಿ ಮಿಗುತೆಯಾಗಿದೆ. ಸರ್ಕಾರದ ರೈಲ್ವೆ ಸ್ವತ್ತುಗಳಿಂದ ದಿನೇದಿನೇ ಹುಟ್ಟುವಳಿಯು ವೃದ್ಧಿ ಹೊಂದುತ್ತಿರುವುದೆಂದು ಮೆಂಬರುಗಳು ಕೇಳಿ ಸಂತೋಷಿಸಬಹುದು. 1917-18 ರಲ್ಲಿ ಒಟ್ಟು ಹುಟ್ಟುವಳಿ 46.54 ಲಕ್ಷವಿದ್ದದ್ದು 1918-19 ರಲ್ಲಿ 53 ಲಕ್ಷವಾಗಿ, ಪ್ರಸಕ್ತವರ್ಷದಲ್ಲಿ 58 ಲಕ್ಷವಾಗಿದೆ. ಮುಂದೆಯೂ ಒಂದೇ ಸ್ಥಿತಿಯಲ್ಲಿರಬಹುದಾದ ಹೆಚ್ಚಾದ ಒಟ್ಟು ಜಮಾಗಳಿಂದ ಹೆಚ್ಚು ಹುಟ್ಟುವಳಿಯಾಗುವುದೇ ಅಲ್ಲದೆ, ಗ್ಯಾರಂಟೀ ಮಾಡಲ್ಪಟ್ಟ ಬಡ್ಡಿಯಲ್ಲಿಯೂ, ಹೋದ ವರುಷ ಅಕ್ಟೋಬರು ತಿಂಗಳಲ್ಲಿ ಸಂಸ್ಥಾನದ ನಿರ್ವಹಣಕ್ಕೆ ಒಪ್ಪಿಸಲ್ಪಟ್ಟ ಬ್ರಾಂಚು ಲೈನುಗಳ ವರ್ಗಾವರ್ಗೀಯ ಪ್ರಯುಕ್ತ ಸದರನ್ ಮರಾಟಾ ರೈಲ್ವೆ ಕಂಪೆನಿಯವರಿಗೆ ಸರ್‌ಪ್ಲಸ್ ಲಾಭಗಳನ್ನು ಕೊಡುವುದರಲ್ಲಿಯೂ 2 ಲಕ್ಷ ರೂಪಾಯಿ ಬಾಯಮ್ನಾಗಿ ಹೆಚ್ಚಿದೆ. ಆದರೂ ಓಪನ್ ಲೈನುಗಳಿಗೆ ರಿಪೇರಿ ಮತ್ತು ರಿನ್ಯೂ ಕೆಲಸಗಳನ್ನು ಯುದ್ಧ ನಡೆಯುತ್ತಿದ್ದಾಗ ಮಾಡಲು ಆಗಲಿಲ್ಲವಾಗಿ, ಈಗ ಆ ಕೆಲಸಗಳಿಗೆ ಹೆಚ್ಚಾಗಿ ಗಮನ ಕೊಡಬೇಕಾಗಿರುತ್ತೆಂಬ ಅಂಶವನ್ನೂ, ಹಾಗೆಯೇ ಮುಂದಿನ ವರುಷಗಳಲ್ಲಿ ನಿಜವಾಗಿ ಹೆಚ್ಚುವ ಆಮದು ರಫ್ತುಗಳನ್ನು ಸರಿಯಾಗಿ ನೋಡಿಕೊಳ್ಳುವ ಬಗ್ಗೆ ರೈಲ್ವೆಗಾಡಿ ವಗೈರೆ ಸಾಮಾನುಗಳನ್ನು ಹೆಚ್ಚಾಗಿ ನಾವು ಇಡಬೇಕೆಂಬುವ ಅಂಶವನ್ನೂ ಮರೆಯಕೂಡದು.

1920-21 ನೆಯ ವರುಷದ ಬಜೆಟ್ಟು.

ಯುದ್ಧದ ದೆಸೆಯಿಂದ ಬೆಲೆಗಳು ಮಿತಿಮೀರಿ ಹೆಚ್ಚಿರುವುದರ ಜತೆಗೆ ರೂಪಾಯಿಯ ಎಕ್ಸ್‌ಛೇಂಜ್ ದರವು ಪದೇ ಪದೇ ವ್ಯತ್ಯಾಸವಾಗುತ್ತಿರುವ ಪ್ರಯುಕ್ತ ನಮ್ಮ ಹುಟ್ಟುವಳಿಯು ಬಹಳವಾಗಿ ಕಡಮೆ ಬಿದ್ದಿರುವುದು. ಇದರಿಂದ ನಮ್ಮ ದ್ರವ್ಯೋಪಪತ್ತಿಯ ಇತಿಹಾಸದಲ್ಲಿ 1920-21 ನೆಯ ವರುಷವು ಚಿರಸ್ಮರಣೀಯವಾಗಿ ನಿಲ್ಲುವುದು. ಸರ್ಕಾರದವರು ಬಹುಜಾಗರೂಕತೆಯಿಂದ ಆಲೋಚಿಸಿ ಈ ವರುಷದ ಬಜೆಟ್ಟು ಹುಟ್ಟುವಳಿಗಿಂತಲೂ ಜಾಸ್ತಿ ಖರ್ಚನ್ನು ತೋರಿಸುವ ಬಜೆಟ್ಟಾಗಿರಬೇಕೆಂದು ತೀರ್ಮಾನಿಸಿರುತ್ತಾರೆ. ಪ್ರಸಕ್ತ ವರ್ಷದಲ್ಲಿ ತಿದ್ದುಪಡಿಯಾದ ಅಂದಾಜಿನ ಮೇರೆಗೆ ಆಗುವ ಹುಟ್ಟುವಳಿ 329 ಲಕ್ಷ ರೂಪಾಯಿಗೆ ಪ್ರತಿಯಾಗಿ 1920-21 ನೆಯ ವರುಷದ ಬಜೆಟ್ಟಿನಲ್ಲಿ 315 ಲಕ್ಷ ಹುಟ್ಟುವಳಿಯನ್ನು ತೋರಿಸಿದೆ. ಎಕ್ಸ್‌ಚೇಂಜ್ ಮೂಲಕವಾಗಿ ಉಂಟಾಗಬಹುದಾದ ಪೂರಾ ನಷ್ಟವನ್ನು ಲೆಕ್ಕದಲ್ಲಿ ಒದಗಿಸುವುದು ಯುಕ್ತವೆಂದು ಆಲೋಚಿಸಿ ಆ ರೀತಿ ಮಾಡಲಾಯಿತು. ಒಂದು ವೇಳೆ ಈ ವಿಚಾರದಲ್ಲಿ ಸರ್ಕಾರದವರು ಮಾಡಿರುವ ಕೆಲವು ಏರ್ಪಾಡುಗಳಿಂದ ಈ ನಷ್ಟವು ಸ್ವಲ್ಪಮಟ್ಟಿಗೆ ಕಡಮೆಯಾದರೂ ಆಗಬಹುದು. ರೈಲ್ವೆ ಮತ್ತು ಇತರ ಕೆಲವು ಮುಖ್ಯವಾದ ಹುಟ್ಟುವಳಿಯ ಬಾಬುಗಳಲ್ಲಿ ಮುಂದೆಯೂ ಹೆಚ್ಚಿನ ವರಮಾನವನ್ನು ಎದುರು ನೋಡುವುದು ಯುಕ್ತವಲ್ಲವೆಂದು ಭಾವಿಸಲಾಗಿದೆ. ಏತಕ್ಕೆಂದರೆ ಸಮೀಪ ಕಾಲದಲ್ಲಿ ಮುಂದೆ ಇವು ಯಾವ ದಾರಿಯನ್ನು ಹಿಡಿಯುವವೆಂದು ಊಹಿಸಲು ಸೂಚನೆಯನ್ನು ಕೊಡುವ ಗೊತ್ತಾದ ಆಧಾರಗಳಿಲ್ಲ. ಬಜೆಟ್ಟಿನಲ್ಲಿ ಕಾಣಿಸಿರುವ ಖರ್ಚುಬಾಬುಗಳ ಒಟ್ಟು ತೇರೀಜು 387½ ಲಕ್ಷ ರೂಪಾಯಿ ಆಗಿದೆ. ಈ ಪೈಕಿ 62.99 ಲಕ್ಷ ರೂಪಾಯಿ ಇಲಾಖಾ ಶಿಲ್ಕುಗಳಿಂದಲೂ, ರಿಜರ್ವ್‌ಗಳಿಂದಲೂ ಮುಟ್ಟಿಸಿದ್ದಾಗಿದೆ. ಆದಕಾರಣ ಚಾಲ್ತಿ ಹುಟ್ಟುವಳಿಗೆ ಖರ್ಚು ಹಾಕಬೇಕಾದ ನಿವ್ವಳ ಮೊತ್ತ 324½ ಲಕ್ಷ ರೂಪಾಯಿ ಆಗುತ್ತದೆ. ಇದರಿಂದ ಹುಟ್ಟುವಳಿಯು ಖರ್ಚಿಗಿಂತ 9.36 ಲಕ್ಷ ರೂಪಾಯಿಯಷ್ಟು ಕಡಮೆ ಬಿದ್ದಂತಾಯಿತು.

ಇನ್ನು ಬಜೆಟ್ಟಿನ ಜಮಾ ಖರ್ಚು ಬಾಬುಗಳಲ್ಲಿನ ಪ್ರಧಾನಾಂಶಗಳನ್ನು ಸಂಗ್ರಹವಾಗಿ ವಿವರಿಸುವೆವು. ಹಿಂದಿನ ಬಾಕೀ ವಸೂಲಿ ಇಲ್ಲದ ಕಾರಣ ಲ್ಯಾಂಡ್ ರೆವಿನ್ಯೂ ಬಾಬಿನ ಜಮೆಯು ಪ್ರಸಕ್ತವರ್ಷದ ತಿದ್ದುಪಡಿಯಾದ ಅಂದಾಜಿಗಿಂತಲೂ ಒಂದು ಲಕ್ಷ ರೂಪಾಯಿ ಕಡಮೆ ಬೀಳುವುದೆಂಬದಾಗಿ ನಿರೀಕ್ಷಿಸಲಾಗಿದೆ. ಫಾರೆಸ್ಟು ಬಾಬಿನಲ್ಲಿ 11¾ ಲಕ್ಷದಷ್ಟು ಭಾರಿಯಾಗಿ ಹುಟ್ಟುವಳಿ ಕಮ್ಮಿಯಾಗುವ ಸಂಭವವಿದೆ. ಇದಕ್ಕೆ ಕಾರಣವೇನೆಂದರೆ ತಂಗಡಿ ಚಕ್ಕೆಗಳ ಗುತ್ತಿಗೆಯ ಬಾಬತು ಬರಬೇಕಾದ ಮೊಬಲಗಿನ ಪೈಕಿ ⅔ ರಷ್ಟು ಭಾಗವು ಈ ವರುಷವೇ ವಸೂಲಾಗುವುದಾಗಿದೆ. ಕ್ರಮವಾಗಿ ಹುಟ್ಟುವಳಿ ಹೆಚ್ಚುವುದನ್ನು ಪರ್ಯಾಲೋಚಿಸಿದರೆ ಎಕ್ಸೈಜ್ ಬಾಬಿನಲ್ಲಿ ಎರಡು ಲಕ್ಷ ರೂಪಾಯಿ ಹೆಚ್ಚಾಗಿ ಜಮೆಯಾಗಬಹುದೆಂದು ತೋರುತ್ತದೆ. ಈ ವರುಷದ ಆಖೈರಿನೊಳಗಾಗಿ ವರಮಾನದ ತೆರಿಗೆಯ ಮಸೂದೆಯು ಕಾನೂನಾಗಿ ಮಂಜೂರಾಗಬಹುದು. ಈ ಬಾಬತಿನ ವರಮಾನವು ಸುಮಾರು 6 ಲಕ್ಷ ರೂಪಾಯಿ ಆಗಬಹುದೆಂದು ಅಂದಾಜು ಮಾಡಿದೆ. ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿ ಬಾಬಿಗಾಗಿ. ತಿದ್ದುಪಡಿಯಾದ ಅಂದಾಜಿನಲ್ಲಿ ಕಾಣಿಸಿರುವ 9.83 ಲಕ್ಷ ರೂಪಾಯಿಗೆ ಪ್ರತಿಯಾಗಿ ಬಜೆಟ್ಟಿನಲ್ಲಿ 8 ಲಕ್ಷ ರೂಪಾಯಿಯ ಜಮೆಗೆ ಮಾತ್ರ ಅವಕಾಶಮಾಡಿದೆ. ಗಣಿಗಳ ಮೂಲಕವಾದ ಮತ್ತು ಕಾವೇರೀ ವಿದ್ಯುಚ್ಛಕ್ತಿಯ ಮೂಲಕವಾದ ಹುಟ್ಟುವಳಿಯು ಎಕ್ಸ್‌ಚೇಂಜಿನಿಂದ ಬರುವ ನಷ್ಟವೆಲ್ಲಕ್ಕೂ ಸಮವಾಗುವಷ್ಟು ಆಗುತ್ತದೆ. ಶ್ರೀಗಂಧದ ಎಣ್ಣೆಯ ಬಾಬತು ವರಮಾನವು ತಿದ್ದುಪಡಿಯಾದ ಅಂದಾಜಿನಲ್ಲಿ ಕಾಣಿಸಿರುವುದಕ್ಕಿಂತ 1¼ ಲಕ್ಷ ರೂಪಾಯಿ ಹೆಚ್ಚಾಗಿ ಜಮೆಯಾಗಬಹುದಾಗಿದೆ. ಇದಕ್ಕೆ ಕಾರಣವೇನೆಂದರೆ, ಬಡ್ಡಿ ಬಾಕಿ ಕೊಡಬೇಕಾದದ್ದು ಯಾವುದೂ ಇರುವುದಿಲ್ಲ. ರೈಲ್ವೆಗಳ ಮೂಲಕವಾದ ನಿವ್ವಳ ಹುಟ್ಟುವಳಿಯು ತಿದ್ದುಪಡಿಯಾದ ಅಂದಾಜಿನಲ್ಲಿ ಕಾಣಿಸಿರುವ 18½ ಲಕ್ಷಕ್ಕೆ ಬದಲಾಗಿ ಸುಮಾರು 17 ಲಕ್ಷ ರೂಪಾಯಿಯಷ್ಟು ಆಗಬಹುದೆಂದು ತೋರಿಬಂದಿದೆ.

ಸಶೇಷ.

ವಿಜ್ಞಾಪನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಜನರಲ್ ಕಮಿಟಿ ಮೀಟಿಂಗು 1920 ನೇ ಇಸವಿ ಜೂನ್ ತಾ|| 27 ನೆಯ ಭಾನುವಾರ ಸಾಯಂಕಾಲ 3 ಘಂಟೆಗೆ ಸರಿಯಾಗಿ ಬೆಂಗಳೂರಿನಲ್ಲಿರುವ ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ನಡೆಯಬೇಕೆಂದು ನಿರ್ಧಾರವಾಗಿರುವುದರಿಂದ ತಾವು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

(1) ಕಳೆದ ಜನರಲ್ ಕಮಿಟಿ ಮೀಟಿಂಗಿನ ತಾ|| 29-6-19 ರಿಂದ ತಾ|| 27-6-20 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.

(2) ಸೆಕ್ರೆಟರಿಯವರ ರಿಪೋರ್ಟು.

(3) ಆಫೀಸು ಬೇರರ್ಸುಗಳನ್ನೂ ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳನ್ನೂ ಚುನಾಯಿಸುವುದು.

(4) ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರನ್ನು ಚುನಾಯಿಸುವುದು.

(5) ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡಿಗೆ ಮೆಂಬರನ್ನು ಚುನಾಯಿಸುವುದು.

(6) ಶಿವಮೊಗ್ಗಾ ಡಿ|| ವೀರಶೈವ ಕಾನ್ಫರೆನ್ಸಿನವರು ಬೆಂಗಳೂರಿನಲ್ಲಿ ಒಂದು ಮುದ್ರಣಾಲಯವನ್ನೂ, ಮತಗ್ರಂಥಗಳ ಒಂದು ಪುಸ್ತಕಭಂಡಾರವನ್ನೂ ಸ್ಥಾಪಿಸಬೇಕೆಂದು ಮಾಡಿರುವ ನಿರ್ಧಾರಗಳನ್ನು ಪರ್ಯಾಲೋಚಿಸುವುದು.

(7) ವೀರಶೈವಮತ ವಿಚಾರವಾಗಿ ಇಂಗ್ಲೀಷಿನಲ್ಲಿ ಒಂದು ಗ್ರಂಥವನ್ನು ಬರೆಸತಕ್ಕ ವಿಷಯ.

(8) ಬೆಂಗಳೂರು ಮತ್ತು ಮೈಸೂರು ವೀರಶೈವ ವಿದ್ಯಾರ್ಥಿನಿಲಯಗಳ ವಿಚಾರ.

(9) ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರು ತಿಳುಹಿಸಲ್ಪಟ್ಟಿದ್ದು ಮೀಟಿಂಗಿನಲ್ಲಿ ಇಡಲ್ಪಟ್ಟೀತು).

ಬೆಂಗಳೂರು, 25-5-1920. } ಜಿ. ಪರಮಶಿವಯ್ಯ, ಬಿ.ಎ.,ಎಲ್.ಎಲ್.ಬಿ., ಸೆಕ್ರೆಟರಿ
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

9

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಬೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗೆಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಣಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲುಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
22 ವೈದ್ಯಶಾಲಾ, ಮೈಸೂರು.

ಜಾಗ್ರತೆ. ### ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೊಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 30

ನಾವು ಎ. ಆಲ್ ಬ್ರುಕ್ಕ್ಯರ್ ಕ್ಕು ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆನಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ. } ವಿಳಾಸ:—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲೀಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ		6—8—0.
ಬೆಳ್ಳಿಯ ಸರಪಣಿ ಸಹಿತ	,,	9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್‌ಕೊ,
9 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
9 ಸಾಹುಕಾರಪೇಟೆ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಷಟಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಅಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ 28

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಡ್ಡು, ಗುದ್ದಮ್ಮನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಆಳುಕೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಕ್ಕ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಮೇ ತಾ|| ೩೦ರಿಂದ ೧೯೨೦ ನೆಯ ಜೂನ್ ತಾ|| ೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಜ್ಯೇಷ್ಠ ಶುದ್ಧ ತ್ರಯೋದಶಿಯಿಂದ ಜ್ಯೇಷ್ಠ ಬಹುಳ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭ ಮಾಸ
30	ಭಾನು	ತ್ರಯೋ	29-40	ಸ್ವಾತಿ	20-11	18
31	ಸೋಮ	ಚತು	32-57	ವಿಶಾ	24-57	19
1	¹ಮಂಗಳ	ಪೌರ್ಣ	37-9	ಅನೂ	30-37	20
2	ಬುಧ	ಪಾಡ್ಯ	42-7	ಜ್ಯೇಷ್ಠ	36-56	21
3	ಗುರು	ಬಿದಿ	47-18	ಮೂಲ	43-39	22
4	ಶುಕ್ರ	ತದಿ	52-17	ಪೂಷಾ	50-7	23
5	²ಶನಿ	ಚೌತಿ	56-41	ಉಷಾ	56-5	24

(1) ಸಾವಿತ್ರಿವ್ರತಂ, ಭೂಮಿಪೂರ್ಣಿಮಾ. (2) ಸಂಕಟಹರಚತುರ್ಥಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುತ್ತದೆ.

ಮಹಿಸೂರಪುರೀಶಾನಾ ಶರಮಧಿಗತರಾಜಮಂಡಲಹಿತ್ಯಸಾ | ಘನಪಥಕೃತಾವತಾರಾ ಪಕ್ಷಾನ್ನಹೃತ ಮೋಹರಾಜೇಯಾತ್ |
ಶ್ರೀಮತ್ಕೃಷ್ಣನೃಪಾಲಿನುತ್ತಮಕಲಾಕೋಲಂಸುಧೀಂಗನ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ
ಕೀಮಾತೀತಯಶಃಪ್ರಕಾಶವಿಭಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯಂಪದಾಪೂರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧ ೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೩ ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಜೂನ್ ತಾರೀಖು ೬ ನೆಯ ಭಾನುವಾರ ಸಂಚಿಕೆ ೨೩

GOVERNMENT OF MYSORE.
ELECTRICAL DEPARTMENT.

43

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. **Lighting**	2·50 as.	As. 6 per point of 60 Watts per month.
2. **Heating & Cooking.**		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1·75 as.	Rs. 6 per H. P.
Second 50 „ or fraction thereof	1·25 as.	...
Third 50 „ or above 150 B.T.U	·75 as.	...
3. **Power Supply for Industries Rated Maximum demand in Electrical Horse Power.**		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies.

For further particulars apply to

(Sd.) B. D. NATH,
For Chief Electrical Engineer
to the Government of Mysore.

SUNKAL FARM, BANGALORE.

FOR SALE.

Acclimatised seeds and plants.

		Rs.	A.	P.
Soy Beans (Sojahispida or Glycine hispida) per lb		0	4	0
Velvet Beans (Stizolobiumsp)	„	0	4	0
Guinea grass (Panicum jumentorum)	„	3	0	0
Rhodes grass (Chloris virgata)	„	1	0	0
Russian Sunflower (Helianthus grandiflorus)	„	0	8	0
Maize, Moro (Zea Mays var.)	„	0	8	0
Tefri (Indigofera glandulosa)	„	0	4	0
Sisal hemp (Agave sisalana) bulbils 2 to 4" high per 1,000		25	0	0
do (Agave sisalana) plants ½ to 1½ ft. high per 1,000		25	0	0

Apply to—

Superintendent,
Government Gardens, BANGALORE.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಔಷಧಿ ### ಸತ್ಯಮೇವ ಜಯತೇ. ಗುಣಕೊಡುವದು.

(ಗುಣವಾಗದಿದ್ದರೆ ಹಣ ಪರತ)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ### ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
36 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮಾರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಸೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮಾ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
10 3. ಇರುಳಪ್ಪನಬೀದಿ, ಮದರಾಸು.

ಇನಾಂ! ಆಲಸ್ಯಮಾಡಿದರೆ ದೊರೆಯಲಾರದು ಇನಾಂ!!

ತಮ್ಮ ವಿಳಾಸವನ್ನು ವಿವರವಾಗಿ ತಿಳುಹಿಸತಕ್ಕವರಿಗೆ ರೌದ್ರಿ ಸಂವತ್ಸರದ ಪಂಚಾಂಗ ಸಹಿತ ಇರುವ 12 ಶೀಟುಗಳು 1920 ಏಪ್ರಿಲ್ ಮೊದಲು 1921 ಮಾರ್ಚಿವರಿವಿಗೂ ಇರುವ ಕ್ಯಾಲೆಂಡರನ್ನು ಕಳುಹಿಸಲ್ಪಡುವದು.

ವಿಳಾಸ—ಟಿ ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
10 2/4 ಶಿಂಗಣ್ಣನ್ ಬೀದಿ, ಪಾರ್ಕ್‌ಟೌನ್ ಪೋಸ್ಟ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ### ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 24

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ, ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಪದ್ಯಾತ್ಮಕ ### ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಖ್ಯರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿಲ್ಲದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಚಿಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ.ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಪಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

29 ### ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜೂನ್ ತಾ|| ೬ ನೆಯ ಭಾನುವಾರ.

ಹಂಟರ್‌ಸಂಘದ ವರದಿ.

೧ ವರ್ಷದ ಕೆಳಗೆ ಪಂಜಾಬಿನ ಅಮೃತಸರ ಮೊದಲಾದ ಪಟ್ಟಣಗಳಲ್ಲಿಯೂ ದಿಲ್ಲಿ ಬೊಂಬಾಯಿಗಳಲ್ಲಿಯೂ ಗದ್ದಲವೇಳಲಾಗಿ ಪ್ರಭುತ್ವದವರು ಸೈನಿಕರ ತುಪಾಕಿಗಳ ಪ್ರಯೋಗದಿಂದಲೂ, ವಿಮಾನಗಳ ಸಿಡಿಮದ್ದನ್ನು ಹಾಕುವುದರಿಂದಲೂ ಅನೇಕ ಪ್ರಜೆಗಳನ್ನು ಸುಟ್ಟು ಕೊಲ್ಲಿಸಿದರಷ್ಟೆ. ಇದು ಅನ್ಯಾಯವಾದ ಮಹಾ ಕ್ರೂರಕೃತ್ಯವೆಂದು ಪ್ರಪಂಚದಲ್ಲೆಲ್ಲಾ ಕೋಲಾಹಲವೆದ್ದುದರ ಮೇಲೆ ಇಂಡ್ಯಾ ಸರ್ಕಾರದವರು ವಿಚಾರಣೆಯಿಂದ ವರದಿಮಾಡುವುದಕ್ಕಾಗಿ ಸ್ಟೇಟ್ ಸೆಕ್ರೆಟರಿಯವರ ಅನುಮತಿಯ ಮೇಲೆ ಒಂದು ಸಂಘವನ್ನೇರ್ಪಡಿಸಿದರು. ಇದರಲ್ಲಿ ೫ ಮಂದಿ ಯೂರೋಪ್ಯರೂ ಮೂವರು ಭಾರತೀಯರೂ ಸಭಿಕರಾಗಿದ್ದರು. ಹಂಟರ್ ಎಂಬ ಮತ್ತೊಬ್ಬ ಯೂರೋಪ್ಯರು ಇದರ ಅಧ್ಯಕ್ಷರು. ಈ ಸಂಘದವರು ಆಯಾ ಪಟ್ಟಣಗಳಲ್ಲಿ ಕುರಿತು ವಿಚಾರಣೆ ನಡೆಯಿಸಿ ಸಿದ್ಧಮಾಡಿದ ೨೦೯ ಪುಟಗಳ ವರದಿಯನ್ನು ಸರ್ಕಾರದವರು ತಮ್ಮ ತೀರ್ಮಾನದೊಡನೆ ಈಗತಾನೇ ಪ್ರಕಟಿಸಿದ್ದಾರೆ. ಆ ವರದಿಯಲ್ಲಿ ೫ ಮಂದಿ ಯೂರೋಪ್ಯರದೇ ಒಂದು ರೀತಿಯಾಗಿದೆ. ಅದರಲ್ಲಿ ಸರ್ಕಾರದವರು ಗದ್ದಲವನ್ನಡಗಿಸುವುದಕ್ಕೆ ಸೈನಿಕಾಧಿಕಾರಿಗಳನ್ನು ಕೋರಿದುದೂ, ಆಗ್ಗೆ ಅವರು ಅವಲಂಬಿಸಿದ ಪದ್ಧತಿಯೂ ಕೂಡ ಸಮಯೋಚಿತವಾಗಿದ್ದಿತೆಂಬ ಭಾವವೇ ಮುಖ್ಯವಾಗಿದೆ. ಉಳಿದ ಮೂರು ಮಂದಿ ಭಾರತೀಯರು ಬರೆದಿರುವ ವರದಿಯಲ್ಲಿ-ಯೂರೋಪ್ಯರ ವರದಿಯಲ್ಲಿ ಕಂಡ ಕೆಲ ಭಾಗಗಳನ್ನು ಖಂಡಿಸಿ ಸೈನಿಕಾಧಿಕಾರಿಗಳು ಅವಲಂಬಿಸಿ ನಡೆಯಿಸಿದ ಪದ್ಧತಿಯು ಕ್ರೂರವೂ ಅಮಾನುಷವೂ ಆಗಿದ್ದಿತೆಂದು ಹೇಳಲ್ಪಟ್ಟಿದೆ. ಈ ಸಂಘದವರು ಮಾಡಿದ ವಿಚಾರಣೆಯಲ್ಲಿ ಬಹುಶಃ ಸರ್ಕಾರಿ ಅಧಿಕಾರಿ ಜನರೇ ಸಾಕ್ಷ್ಯಗಳಾಗಿದ್ದವರು. ಪ್ರಜಾಪಕ್ಷದ ಜನರ ಸಾಕ್ಷ್ಯಗಳನ್ನು ವಿಶೇಷವಾಗಿ ತೆಗೆದುಕೊಂಡು ಇದಕ್ಕೆ ಮೊದಲೇ ಕಾಂಗ್ರೆಸ್ ಸಂಘದವರು ವಿಚಾರಣೆ ನಡೆಯಿಸಿ ಬರೆದ ವರದಿಯನ್ನು ಅವರೇ ಪ್ರಕಟಿಸಿದ್ದರು. ಅದರಲ್ಲಿ ಸೈನಿಕಾಧಿಕಾರಿಗಳು ನಡೆಯಿಸಿದ ಕ್ರೂರಹಿಂಸೆಗಳ ಪ್ರಾಣಹತ್ಯೆಗಳ ವಿವರವೆಲ್ಲಾ ಸ್ಪಷ್ಟವಾಗಿರುತ್ತವೆ, ಮತ್ತು ಸೈನಿಕಶಾಸನವನ್ನು ಪ್ರಯೋಗಿಸಿದುದು ಅನ್ಯಾಯವೆಂದು ಕೂಡ ಹೇಳಲ್ಪಟ್ಟಿದೆ. ಈಗಣ ಯೂರೋಪ್ಯರ ವರದಿಯಲ್ಲಿ-ಪಂಜಾಬು ಮೊದಲಾದ ಕಡೆಗಳಲ್ಲಿ ಪ್ರಭುತ್ವದವರ ಮೇಲೆ ತಿರುಗಿಬೀಳುವ ಪ್ರಯತ್ನವು ಮಾಡಲ್ಪಟ್ಟಿತೆಂದೂ, ಅದಕ್ಕಾಗಿ ಸೈನಿಕಶಾಸನವನ್ನು ಪ್ರಯೋಗಿಸಬೇಕಾಯಿತೆಂದೂ, ಗಾಂಧಿಯವರ ಸತ್ಯಾಗ್ರಹವ್ರತೋದ್ಯಮವೇ ನೆಮ್ಮದಿಯಾಗಿದ್ದ ಪ್ರಜೆಗಳನ್ನು ಉದ್ರೇಕಗೊಳಿಸಲು ಕಾರಣವಾಯಿತೆಂದೂ, ಅದರ ಜತೆಗೆ ಆರ್ಥಿಕಸ್ಥಿತಿಯ ವಿಷಮದಶೆ, ಯುದ್ಧದಿಂದುಂಟಾಗಿದ್ದ ಬಳಲಿಕೆ, ಭಾರತಪ್ರಭುತ್ವವಿಧಾನ, ರೌಲತ್‌ಶಾಸನ ಇತ್ಯಾದಿಗಳೂ ಕೂಡ ಕಾರಣವಾಗಿದ್ದುವೆಂದೂ, ಆದರೆ ಬ್ರಿ|| ಜನರಲ್ ಡೈಯರ್ ಸೇನಾಪತಿಯು ಸೈನಿಕಶಾಸನವನ್ನು ಪ್ರಯೋಗಿಸುವಲ್ಲಿ ಸ್ವಲ್ಪ ತಪ್ಪಿತವನ್ನು ಮಾಡಿದರೆಂದೂ, ಇಂಡ್ಯಾ ಪ್ರಭುತ್ವದವರು ಈ ವಿಷಯದಲ್ಲಿ ಯಾವ ತಪ್ಪಿತವನ್ನೂ ಮಾಡಿಲ್ಲವೆಂದೂ ಸಹಾ ಹೇಳಲ್ಪಟ್ಟಿದೆ. ಇದರ ಮೇಲೆ ಇಂಡ್ಯಾ ಪ್ರಭುತ್ವದವರು ಕೊಟ್ಟ ಅಭಿಪ್ರಾಯವನ್ನು ನೋಡಿ ಸ್ಟೇಟ್‌ಸೆಕ್ರೆಟರಿಯವರು ಸಾರ್ವಭೌಮಪ್ರಭುತ್ವಪಕ್ಷದಿಂದ ಒಂದು ತೀರ್ಮಾನವನ್ನು ಕೊಟ್ಟಿರುತ್ತಾರೆ. ಅದರಲ್ಲಿ—ಜನರಲ್ ಡೈಯರು ಮುಂದಾಗಿ ಎಚ್ಚರಿಕೆ ಕೊಡದೆ ಹೆಚ್ಚು ಸೈನ್ಯದಿಂದ ಬಹಳ ಹೊತ್ತು ತುಪಾಕಿಗುಂಡುಗಳನ್ನು ನಿರಾಯುಧರಾದ ಪ್ರಜೆಗಳ ಮೇಲೆ ಹಾರಿಸಿ ಕೊಲ್ಲಿಸಿದುದು ತಪ್ಪೆಂದೂ, ಆದರೂ ಅಂಥ ಕಾರ್ಯವನ್ನು ಮಾಡದಿದ್ದರೆ ಗದ್ದಲವು ಬಹಳ ವಿಕೋಪಕ್ಕೆ ಬಂದುಬಿಡುತ್ತಿದ್ದಿತೆಂದೂ ಹೇಳಿ, ಭರತಖಂಡದ ಮುಖ್ಯ ಸೇನಾಪತಿಗಳು ಜನರಲ್ ಡೈಯರಿಗೆ ಆತನ ಉದ್ಯೋಗಕ್ಕೆ ರಾಜೀನಾಮೆ ಕೊಡುವಂತೆ ಮಾಡಿದುದನ್ನು ಸ್ಟೇಟ್ ಸೆಕ್ರೆಟರಿಯವರು ಒಪ್ಪಿಕೊಂಡಿದ್ದಾರೆ. ಇದರಿಂದ ಎಷ್ಟೋ ನೂರುಗಟ್ಟಲೆ ನಿರಪರಾಧಿ ನಿರಾಯುಧ ಪ್ರಾಣಿಗಳನ್ನು ಕೊಂದ ಡೈಯರ್ ದೊರೆಗಳಿಗೆ ಇಷ್ಟೇ ಶಿಕ್ಷೆಯಿಂದ ಪ್ರಾಯಶ್ಚಿತ್ತ ಕೊಟ್ಟಂತಾಯಿತು! ಇಷ್ಟೇ ಅಲ್ಲದೆ ಆ ಕಾಲದಲ್ಲಿ ಪಂಜಾಬಿನ ಲೆ|| ಗವರ್ನರಾಗಿದ್ದು ಇಂಥ ಅಡಳಿತಗಳಿಗೆಲ್ಲಾ ಮೂಲಭೂತರಾದ ಸರ್ ಮೈಕೇಲ್ ಒಡ್ವೈಯರ ವಿಷಯದಲ್ಲೂ ಕೂಡ ಸಾರ್ವಭೌಮ ಪ್ರಭುತ್ವದವರು ಅಭಿಮಾನವನ್ನೇ ತೋರಿಸಿದ್ದಾರೆ. ಒಡ್ವೈಯರು ನಿರ್ದೋಷಿಗಳೆಂದು ಇವರಿಗೆ ತೋರುವುದಿಲ್ಲವಂತೆ. ಆದರೂ ಅತ್ಯಂತ ವಿಷಮದಶೆಯಲ್ಲಿ ವಿಶೇಷ ಧೈರ್ಯಸ್ಥೈರ್ಯದಿಂದ ಸರ್ವಕಾರ್ಯಗಳನ್ನೂ ಉಚಿತರೀತಿಯಿಂದ ನಿರ್ವಹಿಸಿರುವುದಕ್ಕಾಗಿ ಅವರು ಪ್ರಶಂಸಾಪಾತ್ರರೇ ಆಗಿರುವರಂತೆ! ಹೀಗೆ ಸ್ಟೇಟ್‌ಸೆಕ್ರೆಟರಿಯವರು ಅಪ್ಪಣೆಕೊಡಿಸಿ, ಕಡೆಗೆ ಇನ್ನುಮುಂದೆ ಇಂಥ ಪ್ರಮಾದಗಳು ಸಂಭವಿಸದಂತೆ ಮಾಡಲ್ಪಡುವುವೆಂದೂ, ಸೈನಿಕಶಾಸನವು ಜಾಗರೂಕತೆಯಿಂದ ಪ್ರಯೋಗಿಸಲ್ಪಡುವುದೆಂದೂ, ಪ್ರಭುತ್ವವು ವಿಚ್ಛಿನ್ನವಾಗಿ ಹೋಗದಂತೆ ಮಾಡುವುದಕ್ಕೆ ಸೈನಿಕಶಾಸನವು ಅವಶ್ಯಕವಾದುದರಿಂದ, ಸಮಯವಂತು ನ್ಯೂನಾತಿರೇಕಕ್ಕೆಡೆಯಿಲ್ಲದಂತೆ ಅದನ್ನು ವಿನಿಯೋಗಿಸಲಾಗುವುದಲ್ಲವೆಂದೂ ಹೇಳಿ, ಕಷ್ಟತರವೂ ವಿಷಮವೂ ಆದ ವೈಸ್ರಾಯಿ ಪದವಿಯನ್ನು ಪ್ರಜೆಗಳ ಯೋಗಕ್ಷೇಮ ಚಿಂತನೆಯಿಂದ ವಿನಿಯೋಗಿಸಿದುದಕ್ಕಾಗಿ ಗ|| ಜನರಲ್ ಚೆಲಮ್ಸ್‌ಫರ್ಡ್‌ರವರ ಮೇಲೆ ಸಾರ್ವಭೌಮರ ವಿಶ್ವಾಸವು ಸಂಪೂರ್ಣವಾಗಿರುವುದೆಂದೂ ಕೂಡ ಅಪ್ಪಣೆ ಕೊಡಿಸಿರುವರು.

ಈ ಮೇಲೆ ಕಂಡ ಅಭಿಪ್ರಾಯದ ವರದಿಯನ್ನೂ ಅದರ ಮೇಲಣ ಸರ್ಕಾರದ ತೀರ್ಮಾನವನ್ನೂ ನೋಡಿ ಭರತಖಂಡದಲ್ಲಿ ಯಾವ ರಾಜಕೀಯ ಪಕ್ಷದವರೂ ಸಮಾಧಾನಗೊಂಡಿಲ್ಲ. ಆಳುವವರ ಕಣ್ಣೊರಸುವಂತೆ ಶಾಸ್ತ್ರಕ್ಕಾಗಿ ಹಂಟರ್ ಸಂಘದ ನಿರ್ಮಾಣವೂ ಅದರ ಫಲವೂ ಆಗಿರುವುವೇ ಹೊರತು ನಿಜವಾದ ಆಂಗ್ಲಧರ್ಮನೀತಿರಕ್ಷಣೆಗಳಿಗೆ ಇದರಿಂದ ಸಾಧಕವಾಗಲಿಲ್ಲವೆಂದು ಆಕ್ಷೇಪಗಳು ಎದ್ದಿರುವುವು. ನ್ಯಾಷನಲ್ ಕಾಂಗ್ರೆಸ್ ಸಂಘದವರು ಕಳೆದವಾರ ಕಾಶೀಪಟ್ಟಣದಲ್ಲಿ ಸಭೆಗೂಡಿದ್ದರು. ಅನಿಬೆಸೆಂಟ್, ಗಾಂಧಿ, ತಿಲಕ್, ಮಾಳವ್ಯ, ಸಿ. ಆರ್. ದಾಸ್, ಲಾಲಾಲಜಪತಿರಾಯಿ, ಕಪರ್ದಿ, ಡಾ|| ಕಿಚ್ಲೂ ಯಾಕೂಬ್ ಹುಸೇನ್ ಮೊದಲಾದ ಪ್ರಮುಖರೆಲ್ಲಾ ಬಂದಿದ್ದರು. ಇವರೆಲ್ಲರೂ ಪಂಡಿತ ಮೋತಿಲಾಲ್ ನೆಹ್ರೂರವರ ಅಧ್ಯಕ್ಷತೆಯಿಂದ ಹಂಟರ್ ಸಂಘದ ವರದಿಯನ್ನೂ ಕಾಂಗ್ರೆಸ್ ಸಂಘದ ವರದಿಯನ್ನೂ ಇಟ್ಟುಕೊಂಡು ವಿಮರ್ಶೆಮಾಡಿ, ಹಂಟರ್ ಸಂಘದಲ್ಲಿ ಯೂರೋಪ್ಯರು ಕೊಟ್ಟಿರುವ ಅಭಿಪ್ರಾಯವನ್ನೂ ಆ ವರದಿಯ ಮೇಲೆ ಇಂಡ್ಯಾ ಸರ್ಕಾರದವರೂ ಸ್ಟೇಟ್ ಸೆಕ್ರೆಟರಿಯವರೂ ಕೊಟ್ಟಿರುವ ಅಭಿಪ್ರಾಯಗಳನ್ನೂ ತೀವ್ರವಾಗಿ ಖಂಡಿಸಿದುದಲ್ಲದೆ, ತುರ್ಕಿ ಸಂಧಿನಿಯಮಗಳನ್ನೂ ಖಂಡಿಸಿದರು. ಅಲ್ಲದೆ ಖಿಲಾಫತ್ ಸಮಸ್ಯೆ, ಹಂಟರ್ ಸಂಘದ ವರದಿ, ನೂತನ ರಾಜಕೀಯ ಸಂಸ್ಕರಣ ನಿಬಂಧನೆ ಇವುಗಳಿಂದೆಲ್ಲಾ ಉಂಟಾಗಿರುವ ಪರಿಸ್ಥಿತಿಗಳನ್ನು ಗಮನಿಸುವುದಕ್ಕೂ, ಈಗ ಪ್ರಭುತ್ವದವರೊಡನೆ ಸಹಾಯನಿರಾಕರಣೆಯನ್ನು ಮಾಡುವುದು ಉಚಿತವೇ ಎಂಬುದನ್ನು ಆಲೋಚಿಸಲಿಕ್ಕೂ ಒಂದು ಪ್ರತ್ಯೇಕ ರಾಷ್ಟ್ರೀಯ ಮಹಾಸಭೆಯನ್ನು ಕೂಡಿಸಬೇಕೆಂದು ನಿಶ್ಚಯಿಸಿರುವರು. ಇದನ್ನು ಕಲ್ಕತ್ತಾದಲ್ಲಿ ಜರುಗಿಸಬೇಕೆಂದು ಸಿ. ಆರ್. ದಾಸ್‌ರವರು ಆಹ್ವಾನಿಸಿರುವರು. ಈ ಪರಿಸ್ಥಿತಿಗಳೆಲ್ಲಾ ಭರತಖಂಡದ ಭವಿಷ್ಯದ್ವೈಷಮ್ಯ ಸೂಚಕಗಳಾಗಿರುವುವು. ಯುವಸಾರ್ವಭೌಮರವರು ಭರತಖಂಡಕ್ಕೆ ದಯಮಾಡಿಸುವ ಸಂದರ್ಭದಲ್ಲಿ ರಾಜ್ಯದಲ್ಲಿರಬೇಕಾದ ಶಾಂತಿಯನ್ನು ರಕ್ಷಿಸುವುದಕ್ಕೆ ಇವುಗಳೆಲ್ಲಾ ಎಷ್ಟುಮಾತ್ರವೂ ಸಾಹಾಯ್ಯಕಗಳಾಗಿರುವುದಿಲ್ಲ. ಆಂಗ್ಲಧರ್ಮಕ್ಕೆ ಕಳಂಕದಾಯಕವಾದ ಮಹಾ ಕ್ರೂರಾಚರಣೆಯು ಪಂಜಾಬಿನಲ್ಲಿ ನಡೆದಿರುವಾಗ್ಗೆ ಅದಕ್ಕೆ ಕಾರಣಭೂತರಾದವರಲ್ಲಿ ಯಾರೊಬ್ಬರಿಗಾದರೂ ತಕ್ಕ ಶಾಸನವಾಗಿದ್ದರೆ ಭಾರತೀಯ ರೋಷಾಗ್ನಿಯು ಬಲುಮಟ್ಟಿಗೆ ಶಾಂತವಾಗಬಹುದಾಗಿದ್ದಿತು. ಈಗಣ ಹಂಟರ್ ಸಂಘದ ವರದಿಯೂ ಅದರ ಮೇಲಣ ಪ್ರಭುತ್ವಾಭಿಪ್ರಾಯವೂ ಸಹ ಜಾತಿವೈಷಮ್ಯಪೂರ್ಣವಾಗಿದೆಯೆಂದೇ ಭಾರತೀಯರು ಅಭಿಪ್ರಾಯ ಪಟ್ಟಿದ್ದಾರೆ.

ಪಾಠಶಾಲೆಗಳೂ ಪಂಚಮರೂ.

ಕಳೆದ ಪ್ರಜಾಪ್ರತಿನಿಧಿ ಸಭಾಧಿವೇಶನದಲ್ಲಿ ಸಭಿಕರಿಂದ ವಿಶೇಷವಾಗಿ ಅರಿಕೆ ಮಾಡಲ್ಪಟ್ಟ ಮುಖ್ಯ ವಿಷಯಗಳಿಗೆ ದಿವಾನರವರು ತಮ್ಮ ಉಪಸಂಹಾರ ಭಾಷಣದಲ್ಲಿ ಉತ್ತರ ಕೊಟ್ಟರು. ಅಂಥ ವಿಷಯಗಳಲ್ಲಿ ಪಂಚಮರನ್ನು ಇತರರ ಜತೆಯಲ್ಲಿ ಪಾಠಶಾಲೆಗೆ ಸೇರಿಸುವ ವಿಷಯವು ಒಂದಾಗಿದ್ದಿತು. ಸರ್ಕಾರಿ ಮತ್ತು ಗ್ರ್ಯಾಂಟ್‌ಏಡ್ ಶಾಲೆಗಳಿಗೆಲ್ಲಾ ಪಂಚಮ ವಿದ್ಯಾರ್ಥಿಗಳನ್ನು ಸೇರಿಸಬೇಕೆಂದು ಈಗ ಮಾಡಿರುವ ಸರ್ಕ್ಯುಲರನ್ನು ತೆಗೆದುಹಾಕಬೇಕೆಂಬ ಪಕ್ಷದಲ್ಲಿ ಮ|| ಲೋಕಸೇವಾನಿರತ ಅಣ್ಣಯ್ಯಪಂಡಿತರು, ಮ|| ಎಂ. ವೆಂಕಟಕೃಷ್ಣಯ್ಯನವರು, ಮ|| ಕೆ.ಟಿ. ಶೇಷಯ್ಯನವರು, ಮ|| ಕನ್ನಶೆಟ್ಟಪ್ಪನವರು, ಮ|| ವಿ ಶಾಮಯ್ಯಂಗಾರರು, ಮ|| ಎಚ್. ಕೃಷ್ಣಶಾಸ್ತ್ರಿಗಳು, ಮ|| ಸಿ. ನರಸಿಂಹಯ್ಯನವರು, ಮ|| ಬಿ. ನಾಗಪ್ಪಾಚಾರ್ಯರು, ಮ|| ಅರಸಿಂಗ್ರಾಚಾರ್ಯರು, ಮೇಲ್ಕೋಟೆ ಶ್ಯಾಮಯ್ಯಂಗಾರ್ಯರು ಇವರೆಲ್ಲಾ ಮಾತನಾಡಿದರು. ಇವರುಗಳ ಹೇಳಿಕೆಯ ಮುಖ್ಯಾಭಿಪ್ರಾಯವೇನೆಂದರೆ:-ಪಂಚಮರ ಅಭ್ಯುದಯವು ನಮಗೆ ಇಷ್ಟವೇ. ಆದರೆ ಅವರು ಕೊಳಕರು; ಸತ್ತ ಹೆಣಗಳನ್ನು ಕೂಡ ತಿನ್ನತಕ್ಕವರು, ಮದ್ಯಪಾಯಿಗಳು—ಇಂಥವರನ್ನು ಉತ್ತಮರ ಹುಡುಗರ ಜತೆಗೆ ಓದಲಿಕ್ಕೆ ಸೇರಿಸಿದರೆ ಇವರ ಸಂಗದಿಂದ ಅವರೂ ಕೆಡಲಿಕ್ಕೆ ಆಸ್ಪದವಾಗುತ್ತದೆ. ಆದಕಾರಣ ಇವರನ್ನು ಪ್ರತ್ಯೇಕ ಶಾಲೆಗಳಲ್ಲೀ ಇನ್ನು ಕೆಲಕಾಲ ಅಂದರೆ ೮-೧೦ ವರ್ಷಗಳ ವರೆಗಾದರೂ ಓದಿಸುತ್ತಿದ್ದು, ನಡೆನುಡಿಗಳಲ್ಲೂ ಆಹಾರದಲ್ಲೂ ಶುಚಿತನದಲ್ಲೂ ಯೋಗ್ಯರಾದ ನಂತರ ಇತರರ ಜತೆಗೆ ಸೇರಿಸಬಹುದು. ಶಾಂಕರವು ಬ್ರಾಹ್ಮಣರಿಗೆ ಮಾತ್ರವೇ ವಿರುದ್ಧವಲ್ಲ; ಇತರ ಹಿಂದುಗಳಿಗೂ ಅಸಮಾಧಾನವೇ. ಪ್ರಜಾಮತಕ್ಕೆ ವಿರುದ್ಧವಾಗಿ ಪದ್ಧತಿಗೆ ವಿರುದ್ಧವಾಗಿ ಬಲಾತ್ಕಾರವಾಗಿ ಇವರನ್ನು ಶಾಲೆಗಳಿಗೆ ಸೇರಿಸುವ ಅವಶ್ಯಕತೆಯೇನೂ ಇಲ್ಲ. ಸರ್ಕಾರದವರಿಗೆ ಸರ್ವರ ಕ್ಷೇಮಚಿಂತನೆಯೂ ಅವಶ್ಯಕ. ಒಬ್ಬರಿಗೆ ಹಿತವಾಗುವುದರಲ್ಲಿ ಮತ್ತೊಬ್ಬರಿಗೆ ಅಪಕಾರವಾಗಬಾರದು. ವ್ಯತ್ಯಾಸವು ನಮ್ಮ ಹಿಂದುಗಳಲ್ಲಿ ಮಾತ್ರವೇ ಇಲ್ಲ, ಯೂರೋಪಿಯನರಲ್ಲೂ ಇದೆ. ಅವರ ದರ್ಬಾರಿಗೆ ಇತರರನ್ನು ಸೇರಿಸುವುದಿಲ್ಲ. ರೈಲ್ವೆಗಳಲ್ಲೂ ಯೂರೋಪಿಯನ್ನರಿಗೆ ಪ್ರತ್ಯೇಕವಾದ ಕಂಪಾರ್ಟ್‌ಮೆಂಟ್ ಇಟ್ಟಿರುತ್ತಾರೆ. ಬಲಗೈ ಎಡಗೈಯವರಲ್ಲಿ ಅವರೇ ಒಬ್ಬರೊಡನೊಬ್ಬರು ಸೇರಿ ಒಂದು ಸ್ಕೂಲಿನಲ್ಲಿ ಓದುವುದಿಲ್ಲ. ಓದಿ ಉತ್ತಮಸ್ಥಿತಿಗೆ ಬಂದ ಪಂಚಮಜಾತಿಯ ದೊಡ್ಡ ಹುಡುಗರನ್ನು ಸೆಕೆಂಡರಿ ತರಗತಿಗಳಿಗೆ ಸೇರಿಸಿದರೂ ಸೇರಿಸಬಹುದು; ಬಾಲತರಗತಿಗಳಿಗೆ ಸೇರಿಸಬಾರದು. ಎಷ್ಟೋ ಕಡೆ ಪಂಚಮರ ಹುಡುಗರನ್ನು ಶಾಲೆಗಳಿಗೆ ಬಲಾತ್ಕಾರವಾಗಿ ಸೇರಿಸಿದ್ದರಿಂದ ಉಳಿದ ಹುಡುಗರೆಲ್ಲಾ ಬಿಟ್ಟು ಮನೆಯಲ್ಲಿ ಕುಳಿತಿದ್ದಾರೆ. ಅನೇಕ ಮಾಷ್ಟರುಗಳು ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋದರು. ಮದ್ರಾಸು ನಿಯಮನಿರ್ಮಾಣ ಸಭೆಯಲ್ಲಿ ಆ|| ರಾಜರವರು-ಸರ್ಕಾರಿ ಸ್ಕೂಲುಗಳಲ್ಲಿ ಪಂಚಮರನ್ನು ಕಡ್ಡಾಯವಾಗಿ ಸೇರಿಸಬೇಕು. ಕೂಡದೆಂದು ಹೇಳುವ ಏಡೆಡ್ ಸ್ಕೂಲುಗಳಿಗೆ ಗ್ರ್ಯಾಂಟನ್ನು ನಿಲ್ಲಿಸಬೇಕು; ಮೈಸೂರಿನಲ್ಲೂ ಹೀಗೆಮಾಡಿದ್ದಾರೆ ಎಂದು ಹೇಳಲು, ಅದಕ್ಕೆ ಮದ್ರಾಸು ಗೌರ್ನಮೆಂಟಿನವರು ನಿರೋಧಿಸಿ, ಮೈಸೂರು ಪಾಲಿಸಿಯು ಸರಿಯಾಗಿಲ್ಲವೆಂದು ಹೇಳಿದ್ದಾರೆ. ಈ ಬಲಾತ್ಕಾರ ಪದ್ಧತಿಯಿಂದ ಗ್ರಾಮಾಂತರದವರ ವಿದ್ಯಾಭ್ಯಾಸಕ್ಕೆ ಪ್ರತಿಬಂಧಕವಾಗಿದೆ. ಜನರೆಲ್ಲರೂ ಸಮಬುದ್ಧಿಯಿಂದ ನಡೆಯತಕ್ಕ ಕಾಲವು ಇನ್ನೂ ಬಂದಿಲ್ಲ. ಬರುವವರೆಗೂ ಪ್ರತ್ಯೇಕವಾದ ಏರ್ಪಾಟೇ ಇರಬೇಕು. ನಮ್ಮೊಡನೆ ಕಲಿಯುವಷ್ಟು ಯೋಗ್ಯತೆಯನ್ನು ಪಂಚಮರು ಸಂಪಾದಿಸಿಕೊಂಡುಬರಲಿ. ಸರ್ಕಾರವೂ ಪ್ರಜೆಗಳೂ ಸಹ ಧರ್ಮಶಾಸ್ತ್ರಸಮ್ಮತವಾಗಿ ನಡೆಯಬೇಕು. ಕ್ವೀನ್‌ವಿಕ್ಟೋರಿಯಾರವರ ಪ್ರೋಕ್ಲಮೇಷನ್ನಿನಲ್ಲಿ ಮತಜಾತಿ ವಿಷಯಕ್ಕೆ ಸರ್ಕಾರದವರು ಪ್ರವರ್ತಿಸುವುದಿಲ್ಲವೆಂದು ಹೇಳಿದ್ದಾರೆ. ನಮ್ಮ ಸರ್ಕಾರವೂ ಹಾಗೆಯೇ ಮಾಡಬೇಕು. ಪಂಚಮರಲ್ಲಿ ದವಲತ್ತು ಮಾಡಿದವರಿಲ್ಲ. ಇತರರೆಲ್ಲಾ ದವಲತ್ತು ಮಾಡಿದ್ದಾರೆ. ಪಂಚಮರು ಕಾಡುಮೃಗಗಳಾಗಿದ್ದವರು. ಈಗ ಅವರನ್ನು ತಂದು ಇತರರೊಡನೆ ಸೇರಿಸುವುದರಿಂದ ಹುಲಿಯನ್ನು ತಂದು ಜನರಮೇಲೆ ಬಿಟ್ಟಂತಾಗುವುದು. ಊರುಗಳಲ್ಲಿ ಹೊಲೆಯರಿಗೆ ಪ್ರತ್ಯೇಕವಾಗಿ ಜಾಗವಿರುತ್ತದೆ: ಸ್ಕೂಲೂ ಕೂಡ ಪ್ರತ್ಯೇಕವಾಗಿರಬೇಕು.

ಇದಕ್ಕೆ ವಿರೋಧವಾಗಿ ಮಾತನಾಡಿದವರಲ್ಲಿ ಮ|| ಗಳಾದ ಚಿಕ್ಕಮಗಳೂರಿನ ಸಿ. ಶ್ರೀನಿವಾಸರಾಯರು, ಬೆಂಗಳೂರಿನ ಮ|| ಗೋಪಾಲಸ್ವಾಮಯ್ಯರು ಇವರಿಬ್ಬರೂ ಬ್ರಾಹ್ಮಣರೇ ಆಗಿರುತ್ತಾರೆ. ಇವರಲ್ಲದೆ ಮ|| ಗಳಾದ ಪುರುಷೋತ್ತಮಾನಂದಗಿರಿ ಗೋಸ್ವಾಮಿಯವರೂ, ನಾರಾಯಣ ರೆಡ್ಡಿಯವರೂ, ಉಸ್ಮಾನ್‌ಖಾನರೂ, ಜಿ. ಪರಮಶಿವಯ್ಯನವರೂ ಸಹ ಪ್ರಮುಖರಾಗಿದ್ದರು. ಇವರುಗಳ ಹೇಳಿಕೆಯ ಮುಖ್ಯಾಭಿಪ್ರಾಯವೇನೆಂದರೆ:—ಪಂಚಮರನ್ನು ನಮ್ಮ ಸಮಾಜದಲ್ಲಿ [illegible] ಅವರು ಎಂದಿಗೂ ಮುಂದಕ್ಕೆ ಬರುವುದೇ ಇಲ್ಲ. ಅದರಿಂದ ನಮ್ಮಲ್ಲಿ ಅವರಿಗಿದ್ದ ವಿಧೇಯತೆಯೇ ತಪ್ಪಿಹೋಗುತ್ತದೆ. ಸಂಪೂರ್ಣವಾಗಿ ಎಂದೆಂದಿಗೂ ಅವರನ್ನು ಇತರರ ಜತೆಯಲ್ಲಿ ಸೇರಿಸಬಾರದೆಂದು ಇದುವರೆಗೆ ಮಾತನಾಡಿದ ನಿಷೇಧಕರಲ್ಲಿ ಯಾರೂ ಹೇಳಿಲ್ಲ. ಕೆಲವು ಕಾಲದ ವಾಯಿದೆಯನ್ನು ಮಾತ್ರ ಕೇಳುತ್ತಾರೆ. ಇನ್ನು ೧೦ ವರ್ಷ ಕಳೆದರೆ ಆಗ್ಗೆ ಇದೇ ಮೆಂಬರೇ ಇರುತ್ತಾರೆಯೇ? ಹೊಸದಾಗಿ ಬಂದವರು ಮತ್ತೆ ೧೦ ವರ್ಷ ವಾಯಿದೆಯನ್ನು ಕೇಳಬಹುದು. ಆಗ್ಗೆ ಬಂದ ದಿವಾನರೂ ಪ್ರಕಾರಾಂತರವಾಗಿ ಅಭಿಪ್ರಾಯ ಕೊಡಬಹುದು. ಆದುಕಾರಣ ವಾಯಿದೆ ಕೊಡಬೇಕಾದ ಅವಶ್ಯಕತೆಯಿಲ್ಲ. ಈಗಿರುವ ಸರ್ಕ್ಯುಲರನ್ನು ತೆಗೆಯಕೂಡದು, ಪಂಚಮರು ಓದಿಕೊಂಡರೆ ನಮ್ಮ ಜತೆಗೆ ಸಮಪಾಲಿಗೆ ಬರುತ್ತಾರೇನೋ ಎಂಬ ಶಂಕೆಯೇ ಅವರ ಸಂಗ ನಿಷೇಧವನ್ನು ಮಾಡುವವರ ಉದ್ದೇಶವಾಗಿರಬೇಕು. ರೈಲ್ವೆ ಮೊದಲಾದುವುಗಳಲ್ಲಿ ಅವರಿಗೆ ನಿರ್ಬಂಧವಿಲ್ಲ; ಸರ್ಕಾರಿ ಪಾಠಶಾಲೆಗಳಲ್ಲಿ ಏತಕ್ಕೆ? ನಮ್ಮ ಸ್ವಂತ ಮನೆಗಳಿಗಾದರೆ ಅವರನ್ನು ಬರದಿರುವಂತೆ ನಿರ್ಬಂಧಪಡಿಸಲು ನಮಗೆ ಹಕ್ಕಿದೆ. ಸರ್ಕಾರಕ್ಕೆ ಪಂಚಮರೂ ಸರಿಸಮಾನರಾದ ಪ್ರಜೆಗಳೇ ಆಗಿರುತ್ತಾರೆ. ಇತರರಿಗೆ ಇರುವಷ್ಟು ಹಕ್ಕು ಅವರಿಗೂ ಇದೆ. ಈಗ ಅವರಿಗಾಗಿ ಮಾಡಿರುವ ಆರ್ಡರು ನ್ಯಾಯವಾಗಿರುವುದು ಮಾತ್ರವೇ ಅಲ್ಲದೆ ಇದುವರೆಗೆ ನಡೆದಿದ್ದ ಅನ್ಯಾಯವನ್ನು ಪರಿಹರಿಸುತ್ತದೆ. ಅಲ್ಲದೆ ಪ್ರತ್ಯೇಕವಾಗಿಯೇ ಪಂಚಮರಿಗೋಸ್ಕರ ಪಾಠಶಾಲೆಗಳನ್ನು ಸ್ಥಾಪಿಸಿಕೊಡುವುದಾದರೆ ಎಷ್ಟು ವೆಚ್ಚವು ಹಿಡಿಯುತ್ತದೆಂಬುದನ್ನು ಆಲೋಚಿಸಬೇಕು. ಪಂಚಮರು ನಮ್ಮ ಎಲ್ಲಾ ಕೆಲಸಗಳಿಗೂ ಬೇಕು; ವಿದ್ಯಾಭ್ಯಾಸಕ್ಕೆ ಮಾತ್ರ ಬೇಡವೆಂದು ಹೇಳುವುದು ನ್ಯಾಯವಲ್ಲ. ತಿರುವಾಂಕೂರು ಮೊದಲಾದ ಕಡೆಗಳಲ್ಲಿ ಎಲ್ಲಾ ಬಾಲಕರೊಡನೆ ಅವರೂ ಸೇರಿ ಬರುವ ಪದ್ಧತಿಯಾಗಿದೆ. ಸರ್ಕಾರದ ಆರ್ಡರಿಗೆ ವಿರೋಧಿಸಬೇಕೆಂತಲೇ ಪ್ರವರ್ತಿಸುವುದು ಸರಿಯಲ್ಲ. ಪಂಚಮರು ಕ್ರೈಸ್ತರಾಗಿ ಬಂದರೆ ಆಗ ಮಾತ್ರ ಅವರನ್ನು ಹೀನೈಸದೆ ಜತೆಯಲ್ಲಿ ಕರೆದು ಮರ್ಯಾದಿಸುತ್ತೇವೆ. ನಮ್ಮ ಹಿಂದುಗಳಾಗಿರುವಾಗಲೇ ಅವರಿಗೆ ಆ ಮರ್ಯಾದೆಯನ್ನು ಏತಕ್ಕೆ ತೋರಿಸಕೂಡದು? ಸರ್ಕಾರದವರು ಸ್ಕೂಲುಗಳ ವಿಭಾಗ ಮಾಡಬೇಕಾದರೆ ಪಂಚಮರಿಗೆ ಬೇರೆ ಇತರರಿಗೆ ಬೇರೆ ಎಂದು ಮಾಡುವುದು ಸರಿಯಲ್ಲ. ಶಾಕಾಹಾರಿಗಳಿಗೆಲ್ಲಾ ಒಂದು ಸ್ಕೂಲು ಮಾಂಸಾಹಾರಿಗಳಿಗೆಲ್ಲಾ ಒಂದು ಸ್ಕೂಲು ಎಂದು ವಿಭಾಗ ಮಾಡಬಹುದಾಗಿದ್ದಿತು. ಅದೇನೂ ಇಲ್ಲ. ಈ ಪಂಚಮರು ಆದಿದ್ರಾವಿಡರು ಎಂದು ಹೇಳಿಕೊಳ್ಳುತ್ತಾರೆ. ಆರ್ಯರು ಬರುವುದಕ್ಕೆ ಮುಂಚೆ ತಾವೇ ದಕ್ಷಿಣ ಇಂಡಿಯಾದಲ್ಲಿ ಆಳಿಕೊಂಡಿದ್ದವರೆಂದು ಅವರ ಚರಿತ್ರೆಯನ್ನು ಹೇಳಿಕೊಳ್ಳುತ್ತಾರೆ, ಆದುಕಾರಣ ಅವರು ದವಲತ್ತು ಮಾಡಿದವರಲ್ಲವೆಂದು ಹೇಳುವುದು ನಿಜವಲ್ಲ. ಪಂಚಮರನ್ನು ಇತರ ಹುಡುಗರ ಜತೆಗೆ ಸೇರಿಸುವ ಕ್ರಮವು ಈಗತಾನೆ ಹೊಸದಾಗಿ ಹುಟ್ಟಿದುದಲ್ಲ. ಮೆಸರ್ಸ್ ರೈಸ್ ಭಾಭಾರವರ ಕಾಲದಲ್ಲೇ ಸರ್ಕಾರಿ ಶಾಲೆಗಳಿಗೆ ಎಲ್ಲಾ ಜಾತಿಯವರೂ ಸೇರಬಹುದೆಂದು ನಿರ್ಣಯ ಮಾಡಿದ್ದಾರೆ. ಮದ್ರಾಸು ನಿಯಮನಿರ್ಮಾಣ ಸಭೆಯಲ್ಲಿ ಆ|| ರಾಜರವರು ಮಾಡಿದ ಪ್ರಶ್ನೆಗೆ ಸರ್ಕಾರಿ ಶಾಲೆಗಳಲ್ಲಿ ಸೇರಿಸುವುದಕ್ಕೆ ಪ್ರತಿಬಂಧಕವಿಲ್ಲ; ಗ್ರ್ಯಾಂಟ್‌ಏಡ್ ಶಾಲೆಗಳಿಗೆ ಸೇರಿಸಲು ಲೋಕಲ್ ಬೋರ್ಡುಗಳವರು ಒಪ್ಪದಿದ್ದರೆ ನಾವು ಬಲಾತ್ಕರಿಸಲಾಗುವುದಿಲ್ಲವೆಂದು ಹೇಳಿದರೆ ಹೊರತು ಇನ್ನೇನೂ ಇಲ್ಲ. ಊಟಕ್ಕೂ ವಿದ್ಯಾಭ್ಯಾಸಕ್ಕೂ ಸಂಬಂಧವಿಲ್ಲ. ತಿರುವಾಂಕೂರಿನಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಪಂಚಮ ಪ್ರತಿನಿಧಿಗಳು ಮೆಂಬರಾಗಿದ್ದಾರೆ. ಈಗ ಅವರು ವಿದ್ಯಾವಂತರಾದರೆ ನಮಗೆ ಜೀತಮಾಡುವವರು ಸಿಕ್ಕುವುದಿಲ್ಲವೆಂಬ ಹೇತುವೇ ಅವರ ನಿಷೇಧಕ್ಕೆ ಮೂಲಕಾರಣವಾಗಿದೆ. ಅವರು ಕೊಳಕರಾಗಿದ್ದರೆ ಮೊದಲು ಸಾಂಕ್ರಾಮಿಕ ರೋಗವು ಅವರಿಗೆ ಬಂದು ಬಳಿಕ ನಮಗೂ ಬರುತ್ತದೆ. ನಮ್ಮ ಸಂಗದಿಂದ ಅವರು ಶುಚಿಗಳಾದರೆ ಅವರಿಗೂ ರೋಗ ಬರುವುದಿಲ್ಲ, ನಮಗೂ ಬರುವುದಿಲ್ಲ. ಅದು ಕಾರಣ ಜಾತಿ ಮತ ವಿಷಯಕ್ಕೂ ಇದಕ್ಕೂ ಸಂಬಂಧವಿಲ್ಲದುದರಿಂದ ವಿದ್ಯಾಭ್ಯಾಸ ವಿಷಯದಲ್ಲಿ ಪಕ್ಷಪಾತವಿಡದೆ ಈಗ ಅವರಿಗೆ ಕೊಟ್ಟಿರುವ ಉತ್ತೇಜನವನ್ನೇ ಬಲಪಡಿಸಬೇಕು. ಈ ವಿಷಯವಾಗಿ ದಿವಾನರವರು ಸಭೆಯ ಕೊನೆಯ ದಿವಸ ಕೊಟ್ಟ ಉತ್ತರದಲ್ಲಿ, ಮದ್ಯಪಾನ ಮಾಂಸಭಕ್ಷಣೆ ಮಾಡುತ್ತಾರೆಂಬ ಕಾರಣದಿಂದ ಪಂಚಮರನ್ನು ಇತರರೊಡನೆ ಸೇರಲಿಕ್ಕೆ ಅವಕಾಶ ಕೊಡಕೂಡದೆಂದು ಹೇಳುವ ವಾದವು ಸಮಂಜಸವಲ್ಲ. ಇತರರಲ್ಲೂ ಎಷ್ಟೋ ಜನರು ಅವುಗಳ ಸೇವನೆಯನ್ನು ಮಾಡತಕ್ಕವರಿದ್ದಾರೆ. ಉತ್ತಮರ ಸಹವಾಸದಿಂದ ಆ ಕೀಳು ಜನರೂ ಉತ್ತಮಸ್ಥಿತಿಗೆ ಬರುತ್ತಾರೆ. ಹಾಗಾಗಲೆಂಬುದೇ ಸರ್ಕಾರದ ಉದ್ದೇಶ. ಈಗಾಗಲೇ ಈ ಸರ್ಕ್ಯುಲರು ಜಾರಿಗೆ ಬಂದು ೨ ವರ್ಷಗಳಾದುವು. ಸಾಧಕ ಬಾಧಕಗಳನ್ನೆಲ್ಲಾ ಚೆನ್ನಾಗಿ ವಿಚಾರ ಮಾಡಿಯೇ ಶ್ರೀಮನ್ ಮಹಾರಾಜರವರ ಸರ್ಕಾರದವರು ಆ ಅಪ್ಪಣೆಯನ್ನು ಮಾಡಿದ್ದಾರೆ. ಜಪಾನಿನಲ್ಲೂ ೫ ವರ್ಷಕ್ಕೆ ಹಿಂದೆ ಇದೇ ತೆರದ ನಿರ್ಬಂಧಗಳಿದ್ದುವು. ಅಲ್ಲಿಯ ಉತ್ತಮ ವರ್ಗದ ಸಾಮುರಾಯಿಗಳೆಂಬುವವರು ಅದನ್ನೆಲ್ಲಾ ಬಿಟ್ಟುಕೊಟ್ಟು ಪರಸ್ಪರ ಕಲಿಯಲಿಕ್ಕೆ ಅವಕಾಶ ಮಾಡಿಕೊಂಡುದರಿಂದಲೇ ಆ ದೇಶವು ಇಷ್ಟು ಅಭ್ಯುನ್ನತಿಗೆ ಬಂದಿತು. ಯಾವ ವಿಷಯದಲ್ಲಿ ಒಂದು ಹೊಸ ಬದಲಾವಣೆಯಾಗುವ ಕಾಲದಲ್ಲಿ ಇಂಥ ಕೆಲಕೆಲವು ಹುಟ್ಟುವುದು ಸ್ವಭಾವ. ದಿನಕ್ರಮೇಣ ಸರಿಹೋಗುವುದು. ಅದು ಕಾರಣ ಈ ಸಂಬಂಧವಾದ ಹಿಂದೆ ಹುಟ್ಟಿರುವ ಸರ್ಕ್ಯುಲರನ್ನು ಬದಲಾಯಿಸಲು ಸರ್ಕಾರವು ಒಪ್ಪಪಡುವುದಿಲ್ಲ. ಪ್ರತ್ಯೇಕವಾಗಿ ಏರ್ಪಡಿಸಿಕೊಂಡ ಸ್ಕೂಲುಗಳಿಗೆ ಗ್ರ್ಯಾಂಟು ಕೊಡಲು ಯೋಚಿಸುತ್ತೇವೆ. ಈ ಅಪ್ಪಣೆಯಿಂದ ಸರ್ಕಾರದವರ ನಿಷ್ಕೃಷ್ಟವಾದ ದೃಢಸಂಕಲ್ಪವು ಚೆನ್ನಾಗಿ ವ್ಯಕ್ತವಾಗಿರುವುದು. ಇನ್ನು ಮುಂದೆ ಈ ಸಂಬಂಧವಾಗಿ ವಿರೋಧಿಸಿ ಮಾಡುವ ಪ್ರಯತ್ನಗಳೆಲ್ಲಾ ನಿಷ್ಫಲಗಳೆಂಬುದನ್ನು ಹೇಳಬೇಕಾಗಿಲ್ಲ.

ಒಳದೇಶದ ವೃತ್ತಾಂತಗಳು.

ಈ ತಿಂಗಳು ತಾ|| ೧೫ ರಲ್ಲಿ ಬೆಂಗಳೂರಿನಲ್ಲಿ ನಿಯಮನಿರ್ಮಾಣ ಸಭೆಯು ಕೂಡುವುದು.

ಅಸಿಸ್ಟೆಂಟ್ ಕಮಿಷನರಾದ ಮಿ|| ಎಂ. ಎಚ್. ಬಾಳರಾಜ ಅರಸಿನವರಿಗೆ ೧ ತಿಂಗಳ ಪ್ರಿವಿಲೇಜ್ ರಜದ ಜತೆಗೆ ಮತ್ತೆ ೫ ತಿಂಗಳ ಸಂಬಳವಿಲ್ಲದ ರಜವು ಕೊಡಲ್ಪಟ್ಟಿದೆ.

ಚೀಫ್ ಜಡ್ಜರಾದ ಸರ್ ಲೆಸ್ಲಿ ಮಿಲ್ಲರ್‌ರವರು ಸದ್ಯಕ್ಕೆ ತಮ್ಮ ಕೆಲಸದ ಜತೆಗೆ ಮೈಸೂರು ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಗಿರಿಯನ್ನೂ ನೋಡಿಕೊಳ್ಳುವಂತೆ ಅಪ್ಪಣೆ ಮಾಡಲ್ಪಟ್ಟಿದ್ದಾರೆ.

ಈ ವರ್ಷದ ಮೈಸೂರು ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲಿ ಮಿಸೆಸ್ ಕಾಕ್ಸ್‌ಸ್ಟ್ರಾಸ್‌ರವರು, ಶ್ರೀಮತಿ ರಂಗನಾಯಕಮ್ಮನವರು-ಈ ಇಬ್ಬರು ನಾರೀಮಣಿಯರೂ ಸೇರಿರುತ್ತಾರೆ.

ನವಲಗುಂದದ ಪಟ್ಟಚರಾಧಿಕಾರಿ ಸಮ್ಮೇಳನ ನಿಷೇಧ ಸಭಾ ಸಂಬಂಧವಾಗಿಯೂ ಇನ್ನೂ ಕೆಲ ವಿಷಯಕವಾಗಿಯೂ ನಮ್ಮಲ್ಲಿಗೆ ಅನೇಕ ಲೇಖನಗಳು ಬಂದಿವೆ. ಸ್ಥಳಾನುಕೂಲವಾದಂತೆ ಮುಂದಣ ಸಂಚಿಕೆಗಳಲ್ಲಿ ಪ್ರಕಟಿಸುವವರಾಗಿದ್ದೇವೆ.

ಸಂಪದಭ್ಯುದಯ ಸಮಾಜದ ೧೧ ನೆ ವಾರ್ಷಿಕಾಧಿವೇಶನವು ಕಳೆದ ತಾ|| ೧ ರಿಂದ ೩ ದಿನಗಳ ಕಾಲ ದಿವಾನರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಜರುಗಿತು. ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಅದರ ಮೆಂಬರುಗಳು ದಯಮಾಡಿಸಿದ್ದರು.

ರಾಜಧಾನಿಯ ಜೀವನ್ನರಾಯನಕಟ್ಟೆಯ ಬಳಿ ಅಂಗಳದಲ್ಲಿರುವ ಅಕ್ಕಿ ಮಿಲ್ಲನ್ನು ತೆಗೆದುಬಿಟ್ಟು ಬಯಲು ಮಾಡಿ ಅಲ್ಲಿ ಉತ್ತಮವಾದ ಉದ್ಯಾನವನ್ನು ರಚಿಸಬೇಕೆಂಬ ಯತ್ನವು ನಡೆದಿದೆಯೆಂದು ಕೇಳುತ್ತೇವೆ. ಇದೊಂದು ವೃಥಾ ಧನವ್ಯಯ ಸಾಧಕವಾದ ಅನ್ಯಾಯಪ್ರಯತ್ನವೆಂದು ನಮಗೆ ತೋರುವುದು.

ಚಳ್ಳಕೆರೆಯಲ್ಲಿ ಶ್ರೀ ಗಿರಿರಾಜಸೂರ್ಯ ಸಿಂಹಾಸನ ಜಗದ್ಗುರು ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಅನುಗ್ರಹದಿಂದ ಅನಾಥ ಬಾಲಕರ ವಿದ್ಯಾಭ್ಯಾಸಕ್ಕಾಗಿ ಒಂದು ಅನಾಥಾಲಯವು ಕಟ್ಟಲ್ಪಡುತ್ತಿದೆಯೆಂತಲೂ, ಈಗಾಗಲೇ ಶ್ರೀ ಗಿರಿರಾಜಧರ್ಮ ವಾಚಕಶಾಲೆಯು ಅಲ್ಲಿ ಆರಂಭಿಸಲ್ಪಟ್ಟಿದೆಯೆಂತಲೂ ಕೇಳುತ್ತೇವೆ.

ಪ್ರಜಾಪ್ರತಿನಿಧಿ ಸಭಾ ಸಭಿಕರಾಗಿ ಬರತಕ್ಕವರಿಗೆಲ್ಲಾ ರಾಜಾಸ್ಥಾನದಲ್ಲಿ ಖಾಸಾ ಹಾರದ ಮರ್ಯಾದೆಯನ್ನು ಅನುಗ್ರಹಿಸುವಂತೆ ಶ್ರೀಮನ್ ಮಹಾರಾಜರವರಲ್ಲಿ ತಾವು ಅರಿಕೆ ಮಾಡಬೇಕೆಂದು ಮ|| ಸಿ. ವಾಸುದೇವರಾಯರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರಿಗೆ ಬಿನ್ನೈಸಿಕೊಂಡರು. ಉತ್ತರವೇನೂ ದೊರೆಯಲಿಲ್ಲ.

ಮೈಸೂರು ವಿದ್ಯಾಪೀಠದಲ್ಲಿ ಎಂ. ಎ. ಪರೀಕ್ಷೆಯನ್ನು ಇಬ್ಬರು ನಾರೀಮಣಿಯರು ಕೊಟ್ಟರು. ಇವರಲ್ಲಿ ಶ್ರೀಮತಿ ಕನಕಲಕ್ಷ್ಮಮ್ಮನವರು ಮುಂದಣ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ತೆರಳುವವರಾಗಿದ್ದಾರೆ. ಇವರಿಗೆ ನಮ್ಮ ಸರ್ಕಾರದವರು ೩೦೦ ಪೌಂಡ್ ವಿದ್ಯಾರ್ಥಿ ವೇತನವನ್ನು ಕೊಡಲು ಅಪ್ಪಣೆ ಮಾಡಿದ್ದಾರೆ. ವಿದ್ಯಾರ್ಜನೆಗಾಗಿ ವಿದೇಶಕ್ಕೆ ತೆರಳುವ ಮೈಸೂರು ಬ್ರಾಹ್ಮಣ ಸ್ತ್ರೀಯರಲ್ಲಿ ಇವರೇ ಮೊದಲನೆಯವರು.

ಕಳೆದ ತಾ|| ೩೧ ರಲ್ಲಿ ದಿವಾನರವರು ಲೇಕ್‌ವ್ಯೂ ಬಂಗಲೆಯ ಆವರಣದಲ್ಲಿ ಪ್ರಜಾಪ್ರತಿನಿಧಿ ಸಭಾ ಸಭಿಕರಿಗೂ ಸರ್ಕಾರಿ ಅಧಿಕಾರಿಗಳಿಗೂ ಪುರಪ್ರಮುಖರಿಗೂ ಸಹ ಅಲ್ಪಾಹಾರದೇರ್ಪಾಟನ್ನು ಮಾಡಿ, ಟೆನಿಸ್ ಆಟ, ಸಂಗೀತಶ್ರವಣ ಮೊದಲಾದುವುಗಳಿಂದ ಆನಂದಪಡಿಸಿದರು. ಜಾತಿವಾರು ಬೇರೆ ಬೇರೆ ಗುಡಾರಗಳಲ್ಲಿ ಅಲ್ಪಾಹಾರಗಳಿಗೆ ಏರ್ಪಡಿಸಿದ್ದರು. ಅತಿಥಿಗಳೆಲ್ಲರೂ ಉಚಿತರೀತಿಯಿಂದ ಸತ್ಕೃತರಾಗಿ ಸಂತೋಷಪಟ್ಟು ತೆರಳಿದರು.

ಮೈಸೂರು ವೀರಶೈವ ವಿದ್ಯಾವರ್ಧಕ ಸಂಘದ ಸೆಕ್ರೆಟರಿಯವರಾದ ಮ|| ಜಿ. ಪರಮಶಿವಯ್ಯ, ಬಿ. ಎ., ಎಲ್‌ಎಲ್. ಬಿ., ಅಡ್ವೊಕೇಟ್ ಬೆಂಗಳೂರು, ಇವರು ನ್ಯಾಯವಿಧಾಯಕ ಸಭಾ ಮೆಂಬರಾಗಿ ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹುಮತದಿಂದ ಆರಿಸಲ್ಪಟ್ಟುದಕ್ಕಾಗಿ ತಮಗೆ ಓಟನ್ನು ಕೊಟ್ಟಂತಹ ಪ್ರಜಾಪ್ರತಿನಿಧಿ ಸಭಾ ಮೆಂಬರುಗಳಿಗೂ, ಅಭಿನಂದನವನ್ನು ತಿಳಿಸಿರುವ ಸ್ನೇಹಿತರು ಮತ್ತು ದೊಡ್ಡಮನುಷ್ಯರುಗಳಿಗೂ ತಮ್ಮ ಅನಂತ ವಂದನೆಗಳನ್ನು ಈ ಪತ್ರಿಕಾಮೂಲಕ ನಿವೇದಿಸುತ್ತಾರೆ.

ಕಳೆದ ತಿಂಗಳು ತಾ|| ೨೯ ರಲ್ಲಿ ಮೈಸೂರು ದೊಡ್ಡಕೆರೆ ಏರಿಯ ಮೇಲೆ ಪರಸ್ಥಳದ ಒಬ್ಬ ವೀರಶೈವನು ಬರುತ್ತಿರುವಾಗ್ಗೆ ೨ ಹದ್ದುಗಳು ಜಗಳವಾಡಿಕೊಂಡು ವಿದ್ಯುಚ್ಛಕ್ತಿ ತಂತಿಗಳ ಮೇಲೆ ಬಿದ್ದ ರಭಸಕ್ಕೆ ಅವು ಸತ್ತುದಲ್ಲದೆ ತಂತಿಯು ಕಿತ್ತುಹೋಗಿ ಆ ಮನುಷ್ಯನಿಗೆ ತಾಕಿದುದರಿಂದ ಅದರಲ್ಲಿನ ವಿದ್ಯುಚ್ಛಕ್ತಿಯು ಪ್ರವಹಿಸಿ ಆತನು ಸ್ವಲ್ಪ ಹೊತ್ತಿನಲ್ಲಿ ಅಲ್ಲೇ ಮೃತಪಟ್ಟನು. ಪಟ್ಟಣದಲ್ಲೆಲ್ಲಾ ಕಂಬಗಳ ಮೂಲಕ ತಂತಿಗಳನ್ನು ಹರಡಿರುವ ಈಗಣ ಪದ್ಧತಿಯನ್ನೇ ತಪ್ಪಿಸಿ, ಭೂಗರ್ಭದಲ್ಲಿ ಕೇಬಲ್ಲುಗಳ ಮೂಲಕ, ಶಕ್ತಿಯನ್ನು ಒದಗಿಸುವ ಏರ್ಪಾಟನ್ನು ಮಾಡಿದರೆ ಇಂಥ ಅಪಾಯಗಳಿಗೆ ಅವಕಾಶವಿರಲಾರದು.

ಈಸಲದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೋಲಾರದ ಮ|| ಗಿರಿಮಾಜಿರಾಯರೆಂಬ ಸಭಿಕರು ಕೊಟ್ಟ ಸೂಚನೆಗಳಲ್ಲಿ ಕೆಲವು ವಿಲಕ್ಷಣಗಳಾದ ಅಂಕಗಳಿದ್ದುವು. ಬ್ರಾಹ್ಮಣ ಬ್ರಾಹ್ಮಣೇತರ ಎಂಬದಾಗಿ ಈಗ ಹುಟ್ಟಿರುವ ಭೇದವನ್ನನುಸರಿಸಿ ಸರ್ಕಾರದವರು ಸಂಸ್ಥಾನವನ್ನು ವಿಭಾಗಮಾಡಿ ೧ ಭಾಗಕ್ಕೆ ಬ್ರಾಹ್ಮಣಾಧಿಕಾರಿಗಳನ್ನೂ ಮತ್ತೊಂದಕ್ಕೆ ಬ್ರಾಹ್ಮಣೇತರಾಧಿಕಾರಿಗಳನ್ನೂ ಸ್ವಲ್ಪ ಸಂಬಳದ ಮೇಲೆ ನಿಯಮಿಸಿ ರಾಜ್ಯಭಾರವನ್ನು ನಡೆಸುವ ಏರ್ಪಾಟು ಮಾಡಿದರೆ, ದೇಶಾಭಿಮಾನಕ್ಕಾಗಿ ಯಾರು ಎಷ್ಟುಮಟ್ಟಿಗೆ ಕಾರ್ಯನಿರ್ವಾಹ ಮಾಡುವರೆಂಬುದು ಗೊತ್ತಾದೀತು ಎಂದು ಹೇಳಿದರು. ಇದೇ ಮೆಂಬರು ಹಿಂದೆ ಒಂದು ಸಲ ಈಗ ವಿದ್ಯೆಯು ಅಗ್ಗವಾಗಿರುವುದರಿಂದ ೫೦೦ ರೂ. ಸಂಬಳ ಕೊಟ್ಟರೆ ಒಬ್ಬ ದಿವಾನರು ಸಿಕ್ಕುವರೆಂದು ಕೂಡ ಸಭೆಯಲ್ಲಿ ಆಡಿದ್ದರು. ಇವರ ವಿಲಕ್ಷಣ ಸೂಚನೆಯನ್ನು ಕೇಳಿ ಸಭಿಕರಲ್ಲನೇಕರು ನಕ್ಕರು.

ಬೊಂಬಾಯಿ ಕರ್ನಾಟಕದಲ್ಲಿ ವೀರಶೈವರಿಂದ ಪ್ರಕಟವಾಗುತ್ತಿದ್ದ ವೃತ್ತಪತ್ರಿಕೆಗಳಾಗಿ ವಿಭಾಕರ, ಚಂದ್ರೋದಯವೆಂಬ ಎರಡೇ ಪತ್ರಿಕೆಗಳಿದ್ದುವು. ಅವುಗಳಲ್ಲಿ ಮೊದಲನೆಯದು ೨-೩ ತಿಂಗಳಿಂದ ನಿಂತುಹೋಗಿರುವುದು. ೨ ನೆಯ ಪತ್ರಿಕೆಯು ಕೂಡ ನಿಂತುಹೋಯಿತೆಂಬ ವಾರ್ತೆಯನ್ನು ಕಳೆದ ವಾರದ ಚಂದ್ರೋದಯ ಪತ್ರದಿಂದ ತಿಳಿದು ವಿಶೇಷವಾಗಿ ಚಿಂತೆಪಟ್ಟೆವು. ಕಾಗದದ ದುರ್ಭಿಕ್ಷದಿಂದ ವಿದೇಶಗಳಲ್ಲೇ ಅನೇಕ ವೃತ್ತಪತ್ರಗಳು ನಾಮಾವಶೇಷವಾಗಿರುವುವು. ಪರೋಪಾಶ್ರಯದಲ್ಲಿರುವ ಬಡ ಹಿಂದೂಸ್ಥಾನದ ಅವಸ್ಥೆಯನ್ನು ಹೇಳುವುದೇನು? ಅದರಲ್ಲೂ ವಾಚನಾಭಿರುಚಿಯಲ್ಲಿ ತೀರ ಹಿಂದುಳಿದಿರುವ ನಮ್ಮ ಕನ್ನಡನಾಡಿನಲ್ಲಿ ವೃತ್ತಪತ್ರಿಕೆಗಳಿಗಿರುವ ಪ್ರೋತ್ಸಾಹವನ್ನು ಚಿಂತಿಸಿದರಂತೂ ಅವುಗಳ ಜೀವಿತದಲ್ಲಿ ಆಶ್ಚರ್ಯಗೊಳ್ಳಬೇಕೇ ಹೊರತು ವಿಶ್ರಾಂತಿಯಲ್ಲಿ ಆಶ್ಚರ್ಯಪಡಬೇಕಾದುದೇ ಇರುವುದಿಲ್ಲ, ಈಗಣ ದುರ್ಭಿಕ್ಷ ದುರ್ದಿನಗಳು ಕಳೆದಮೇಲಾದರೂ ಆ ಅವೆರಡು ಬಂಧುಗಳೂ ವಾಚಕರಿಗೆ ಮರಳಿ ದರ್ಶನವನ್ನೀಯುವಂತಾಗಲೆಂದು ಕೋರುತ್ತೇವೆ.

ವರ್ಧಂತಿಯ ದಿವಸ ಗ್ಯಾಲರಿಯು ಉರುಳಿಕೊಂಡು ನಡೆದ ಅಪಾಯದಲ್ಲಿ ಕೆಲವು ಮರಣಗಳು ಉಂಟಾದುವೆಂದೂ ಇಲ್ಲವೆಂದೂ ಸುದ್ದಿಗಳು ರಾಜಧಾನಿಯಲ್ಲಿ ಹುಟ್ಟಿದ್ದುವು. ಸರ್ಕಾರದವರು ಈಗ ಒಂದು ಪ್ರಕಟನೆಯನ್ನು ಮಾಡಿದ್ದಾರೆ. ಅದರಲ್ಲಿ ಮರಣವು ಆಗಲೇ ಇಲ್ಲವೆಂತಲೂ, ೪೯ ಜನರಿಗೆ ಸಾಮಾನ್ಯವಾದ ಪೆಟ್ಟುಗಳು ತಗುಲಿತೆಂತಲೂ, ೮ ಮಂದಿಗಳು ಹೆಚ್ಚು ಏಟು ತಿಂದು ವೈದ್ಯಶಾಲೆ ಚಿಕಿತ್ಸೆಯಲ್ಲಿ ಗುಣಗೊಳ್ಳುತ್ತಿರುವರೆಂದೂ ಒಬ್ಬರಿಗೆ ಒಂದು ಅಂಗವನ್ನು ಶಸ್ತ್ರರಿಸಬೇಕಾಯಿತೆಂದೂ ಹೇಳಲ್ಪಟ್ಟಿದೆ. ಶ್ರೀಮನ್ ಮಹಾರಾಜರವರು ವೈದ್ಯಶಾಲೆಗೆ ತಮ್ಮ ಹುಜೂರು ಸೆಕ್ರೆಟರಿ ಮೊದಲಾದವರನ್ನು ಕಳುಹಿ ಅಲ್ಲಿ ಚಿಕಿತ್ಸೆಗೊಳ್ಳುತ್ತಿದ್ದ ಜನರ ವಿಚಾರವನ್ನು ತಿಳಿದುಕೊಂಡರೆಂದು ಕೇಳುವಲ್ಲಿ ಈ ಅಪಾಯಕ್ಕೊಳಗಾದ ಪ್ರಜೆಗಳ ವಿಷಯದಲ್ಲಿ ಅವರಿಗೆ ಎಷ್ಟು ಅನುತಾಪವುಂಟಾಗಿರುವುದೆಂಬುದು ವ್ಯಕ್ತವಾಗುವುದು. ಈ ಅಪಾಯದಲ್ಲಿ ಯಾರಾದರೂ ಮೃತರಾದುದು ನಿಜವಾಗಿದ್ದರೆ ಅವರ ಸಂಬಂಧಿಗಳು ಹೊರಕ್ಕೆ ಬಂದು ಅದನ್ನು ನಿದರ್ಶನ ಪಡಿಸಬಹುದು.

ಮದ್ರಾಸು ಅಧಿಪತ್ಯಕ್ಕೆ ಸೇರಿದ ನೆಲ್ಲೂರಿನಲ್ಲಿ ರೆಡ್ಡಿಗಳ ೪ ನೆ ಮಹಾಸಭೆಯು ಕಳೆದವಾರ ನಡೆಯಿತು. ನಮ್ಮ ಸೀಮೆಯ ವಿದ್ಯಾಭ್ಯಾಸ ಶಾಖಾಧ್ಯಕ್ಷರಾದ ಮ|| ರಾಮಲಿಂಗರೆಡ್ಡಿಯವರು ಅದರ ಅಧ್ಯಕ್ಷರಾಗಿದ್ದರು. ಮ|| ಕೆ. ಎಚ್. ರಾಮಯ್ಯನವರು ಕೂಡ ಹೋಗಿದ್ದರು. ಬೊಂಬಾಯಿ ಹೈದರಾಬಾದು ಪ್ರಾಂತಗಳಿಂದಲೂ ಮದ್ರಾಸು ಅಧಿಪತ್ಯದ ಅನೇಕ ಭಾಗಗಳಿಂದಲೂ ರೆಡ್ಡಿ ಜನರು ಸಭೆಗೆ ಬಂದಿದ್ದರು. ಸಭಾಧ್ಯಕ್ಷರು ತಮ್ಮ ಜನರ ಆರ್ಥಿಕ ನೈತಿಕ ಸಾಂಘಿಕ ರಾಜಕೀಯ ಪುರೋವೃದ್ಧಿಗೆ ಅವಶ್ಯಕಗಳಾದ ಸಂಗತಿಗಳನ್ನು ತಮ್ಮ ಭಾಷಣದಲ್ಲಿ ಬಹು ಚೆನ್ನಾಗಿ ನಿರೂಪಿಸಿದರು. ಒಕ್ಕಲಿಗರ ಪತ್ರಿಕೆಯವರು ಅದನ್ನೆಲ್ಲಾ ಭಾಷಾಂತರಿಸಿ ಪ್ರಕಟಿಸಿದರೆ ಒಕ್ಕಲಿಗ ಜನವರ್ಗಕ್ಕೆ ಎಷ್ಟೋ ಉಪಯೋಗವಾಗುವುದು. (ತಕ್ಕಷ್ಟು ಸ್ಥಳಾವಕಾಶವಿದ್ದರೆ ನಾವೇ ಆ ಕೆಲಸವನ್ನು ಮಾಡುತ್ತಿದ್ದೆವು.) ಮೈಸೂರು ದೇಶದ ಒಕ್ಕಲಿಗರ ಪ್ರಯತ್ನವನ್ನು ಅವರುಉದಾಹರಣೆಯಾಗಿ ಕೊಟ್ಟು ಮ|| ಕೆ. ಎಚ್. ರಾಮಯ್ಯನವರೇ ಮೊದಲಾದವರ ಸಾಹಸಗಳನ್ನು ಕೊಂಡಾಡಿ, ಮೈಸೂರಿನ ಒಕ್ಕಲಿಗರು ಕನ್ನಡ ರೆಡ್ಡಿಗಳಾಗಿರಬಹುದೆಂದು ಹೇಳಿ, ಇವರು ಸಂಘವನ್ನೂ ಒಂದು ವಾರ್ತಾ ಪತ್ರಿಕೆಯನ್ನೂ ಸ್ಥಾಪಿಸಿಕೊಂಡು ಸ್ವಜನಾಭ್ಯುದಯಕ್ಕಾಗಿ ಪ್ರಯತ್ನಪಡುತ್ತಿರುವಂತೆ ಮದ್ರಾಸು ಪ್ರಾಂತದ ರೆಡ್ಡಿಗಳೂ ಪ್ರಯತ್ನಿಸಬೇಕೆಂತಲೂ, ಒಂದು ವೃತ್ತ ಪತ್ರಿಕೆಯನ್ನೂ ಒಂದು ಶಾಶ್ವತ ಸಂಘವನ್ನೂ ಸ್ಥಾಪಿಸಿಕೊಳ್ಳುವುದು ಪ್ರಥಮಕರ್ತವ್ಯವೆಂತಲೂ ಉಪದೇಶಿಸಿದರು. ಅದರ ಮೇಲೆ ಒಂದು ಸಂಘವು ಸ್ಥಾಪಿಸಲ್ಪಟ್ಟು ಅದಕ್ಕೆ ಮುನಗಾಲ್ ಜಮೀನ್ದಾರರಾದ ಮ|| ರಾಜಾನಾಯನಿ ವೆಂಕಟರಂಗಾರೆಡ್ಡಿ ರಾವ್ ಬಹದೂರ್ ಯವರು ಅಧ್ಯಕ್ಷರಾಗಿಯೂ, ಮ|| ಸಿ. ರಾಮಲಿಂಗರೆಡ್ಡಿಯವರು ಉಪಾಧ್ಯಕ್ಷರಾಗಿಯೂ ಇನ್ನು ೬ ಮಂದಿಗಳು ಮೆಂಬರುಗಳಾಗಿಯೂ ಮಾಡಲ್ಪಟ್ಟರು. ಆ ಕೂಡಲೇ ಏರ್ಪಟ್ಟ ವಿದ್ಯಾಭಿವೃದ್ಧಿ ಫಂಡಿಗೆ ೬೦,೦೦೦ ರೂ. ಗಳು ದಾನವಾಯಿತು. ೧೯,೬೩೨ ರೂ. ಗಳನ್ನು ವಾರ್ಷಿಕ ಚಂದಾರೂಪವಾಗಿ ಕೊಡಲು ಹಲವರು ವಾಗ್ದಾನಮಾಡಿದರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರು ಮಾಡಿದ ಭಾಷಣ.

(ಹಿಂದಣ ಶೇಷ.)

ಎಕ್ಸ್‌ಚೇಂಜ್ ದರವು ಹೆಚ್ಚಿದ ಪ್ರಯುಕ್ತ ಇಂಗ್ಲೀಷ್ ನಾಣ್ಯದಲ್ಲಿ ಗಣಿಸಲ್ಪಡುವ ಹುಟ್ಟುವಳಿಯ ಬಾಬುಗಳಿಂದ ಹುಟ್ಟುವಳಿಯು ಕಮ್ಮಿಯಾಗಿದ್ದಾಗ್ಯೂ ಕೂಡ, ಪ್ರಜೆಗಳ ವಿದ್ಯಾಭಿವೃದ್ಧಿಗೂ, ಭಾಗ್ಯಾಭಿವೃದ್ಧಿಗೂ ಸಂಬಂಧಪಟ್ಟ ಏರ್ಪಾಡುಗಳಿಗೆ ತಗಲುವ ಯಾವ ಖರ್ಚುಗಳನ್ನೂ ಕಮ್ಮಿ ಮಾಡದೆಯೇ ಕಮ್ಮಿ ಸಂಬಳದ ನೌಕರರ ಭತ್ಯಗಳು, ಆಹಾರಧಾನ್ಯಗಳ ಸರಬರಾಯಿಗೆ ಸಂಬಂಧಪಟ್ಟ ಕಾರ್ಯಗಳು, ವಿಖ್ಯಾತರಾದ ಮಹನೀಯರ ಆಗಮನ, ಸೈನ್ಯ ಮತ್ತು ಇತರ ಅಸಾಧಾರಣ ಖರ್ಚು ಇವುಗಳಿಗಾಗಿ ಚಾಲ್ತಿ ಹುಟ್ಟುವಳಿಯಿಂದಲೇ ಒಟ್ಟು ಸುಮಾರು 30 ಲಕ್ಷ ರೂಪಾಯಿಯನ್ನು ಒದಗಿಸಲಾಗಿದೆ. ಮುಂದಿನ ವರ್ಷವೂ ಸಹ ಈ ರೀತಿಯೇ ಮಾಡಲಾಗುವುದೆಂದು ನಾವು ನಿರೀಕ್ಷಿಸಲಾಗುವುದಿಲ್ಲ; ಏಕೆಂದರೆ, ಎಕ್ಸ್‌ಚೇಂಜಿನಿಂದಲೂ, ದುಬಾರಿ ಧಾರಣೆವಾಸಿಗಳಿಂದಲೂ ನಮ್ಮ ಹುಟ್ಟುವಳಿಯಲ್ಲಿಯೂ ಖರ್ಚುಗಳಲ್ಲಿಯೂ ಉಂಟಾಗುವ ವ್ಯತ್ಯಾಸಗಳಿಗಾಗಿ ನಾವು ತಕ್ಕ ಏರ್ಪಾಡುಗಳನ್ನು ಮಾಡಬೇಕಾಗುವುದು. ಇಂಡಿಯಾದೇಶಕ್ಕೆ ಎಕ್ಸ್‌ಚೇಂಜ್ ದರವನ್ನು ಹೆಚ್ಚಿಸಿದಲ್ಲಿ, ಧಾರಣೆವಾಸಿಗಳು ಕಮ್ಮಿಯಾಗುವುವೆಂಬ ಮತ್ತು ಇಂಡಿಯಾ ಸರ್ಕಾರದವರು ಇಂಗ್ಲೆಂಡಿಗೆ ಕಳುಹಿಸಬೇಕಾದ ಹಣದ ಬಾಬಿನಲ್ಲಿ ವಿಗುತಿಯುಂಟಾಗಿ ಇಂಡಿಯಾದೇಶದ ಅಭಿವೃದ್ಧಿಯನ್ನು ಮುಂಬರಿಸುವ ಬಗ್ಗೆ ವಿಶೇಷವಾಗಿ ಸರ್‌ಪ್ಲಸ್ ಹಣವು ಒದಗುವುದೆಂಬ ಮುಖ್ಯ ಕಾರಣಗಳಿಂದ ಇಂಡಿಯನ್ ಎಕ್ಸ್‌ಚೇಂಜ್ ಮತ್ತು ಕರೆನ್ಸಿ ಕಮಿಟಿಯವರು ಇಂಡಿಯಾ ದೇಶಕ್ಕೆ ಜಾಸ್ತಿ ಎಕ್ಸ್‌ಚೇಂಜ್ ದರವನ್ನು ಶಿಫಾರಸು ಮಾಡಿದರು. ಆದರೆ ಇದರಿಂದ ನಮಗೇನೋ ಪ್ರಯೋಜನವಾಗುವುದಕ್ಕೆ ಪ್ರತಿಯಾಗಿ ನಷ್ಟವುಂಟಾಗಿರುತ್ತದೆ. ಹೇಗೆಂದರೆ, ಧಾರಣವಾಸಿಗಳು ಏರುವುದರ ದುಷ್ಫಲಗಳು ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲಿಯೂ ಕಾಣಿಸಿಕೊಂಡಿರುವುದು ಮಾತ್ರವೇ ಅಲ್ಲದೆ ಎಕ್ಸ್‌ಚೇಂಜ್ ದರದಿಂದ ಹಠಾತ್ತಾಗಿ ನಮ್ಮ ವರಮಾನವು ತಗ್ಗಿಹೋಗಿರುವುದು. ಧಾರಣೆವಾಸಿಗಳು ದುಬಾರಿಯಾದ ಪ್ರಯುಕ್ತ ಸರ್ಕಾರದವರ ಸಹಜವಾದ ಖರ್ಚುಗಳು ಎಲ್ಲಾ ಮಾರ್ಗಗಳಲ್ಲಿಯೂ ವಿಶೇಷವಾಗಿ ಹೆಚ್ಚಿದಾಗ್ಯೂ ಸಹ, ಸಬಾರ್ಡಿನೇಟ್ ನೌಕರರಿಗೆ ಕೊಡುತ್ತಿರುವ ಭತ್ಯಗಳನ್ನು ಪುನರ್ವ್ಯವಸ್ಥೆ ಮಾಡುವುದು ಆಗತ್ಯವೆಂದು ಭಾವಿಸಿ ಆ ಬಗ್ಗೆ ೨೦ ಲಕ್ಷ ರೂಪಾಯಿಗಳನ್ನು ಒದಗಿಸಿರುತ್ತಾರೆ. ಈ ಕಾರಣಗಳ ದೆಸೆಯಿಂದ ಆದಾಯದ ತೆರಿಗೆಯ ಮೂಲಕ ಮೊದಲನೆಯ ವರ್ಷದಲ್ಲಿ ೬ ಲಕ್ಷ ರೂಪಾಯಿ ಮಾತ್ರ ಸಹಾಯವಾಗುವುದೆಂದು ಇಟ್ಟುಕೊಂಡಾಗ್ಯೂ ಸುಮಾರು ೫ ಲಕ್ಷ ರೂಪಾಯಿ ಖರ್ಚಿಗೆ ಸಾಲದೆ ಹೋಗಬಹುದೆಂದು ಸರ್ಕಾರದವರು ಭಾವಿಸುತ್ತಾರೆ. ಸಾಮಾನ್ಯವಾಗಿ ಬೆಳೆ ಚೆನ್ನಾಗಿ ಆದ್ದರಿಂದಲೂ, ವ್ಯಾಪಾರವು ಚುರುಕಾಗಿ ಮೊದಲಿನ ಸ್ಥಿತಿಗೆ ಬಂದಿರುವುದರಿಂದಲೂ ನಮ್ಮ ಹುಟ್ಟುವಳಿಯು ಹೆಚ್ಚುವ ಸಂಭವವು ಪ್ರಸಕ್ತವರ್ಷದ ತಿದ್ದುಪಾಟಾದ ಬಜೆಟ್ ಅಂದಾಜುಗಳಲ್ಲಿ ವಿಶೇಷ ಸ್ಪಷ್ಟವಾಗಿ ಗೋಚರಕ್ಕೆ ಬರುತ್ತಿರುವುದು ಶುಭಸೂಚಕವಾಗಿರುವುದು. ಜೀವನದ ಖರ್ಚಿಗೆ ತಕ್ಕಂತೆ ಜೀತವು ಹೆಚ್ಚುವವರೆಗೂ ಜನರಲ್ಲಿ ಅಸಮಾಧಾನವಿರತಕ್ಕದ್ದು ಸ್ವಭಾವವೇ ಸರಿ. ಆದರೂ ಈಗಿನ ದುಬಾರಿ ಧಾರಣೆವಾಸಿಗಳೇ ಮುಂದೆ ನಮ್ಮ ದೇಶದ ಸಂಪದಭಿವೃದ್ಧಿಗೆ ಬಹುಮಟ್ಟಿಗೆ ಕಾರಣವಾಗಬಹುದೆಂದು ಭಾವಿಸಬಹುದು. ಈ ಸಂಬಂಧದಲ್ಲಿ ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಸಭೆಯಲ್ಲಿ ಈಚೆಗೆ ಮಿ|| ಮ್ಯಾಂಟ್‌ರವರು ಮಾಡಿದ ಭಾಷಣದಿಂದ ಕೆಲವು ಮಾತುಗಳನ್ನು ಇಲ್ಲಿ ಸೂಚಿಸುವೆವು. ಮಿ|| ಮ್ಯಾಂಟ್‌ರವರು ಹೇಳಿದ್ದೇನೆಂದರೆ:—"ಬಹುಮಟ್ಟಿಗೆ ಭೂಮಿಯಿಂದಲೇ ವಿಶೇಷವಾಗಿ ದೊರೆಯುವ ಇಂಡಿಯಾ ದೇಶದ ಉತ್ಪತ್ತಿಗಳ ಬೆಲೆಯು ಶಾಶ್ವತವಾಗಿ ಏರುವುದರ ಜತೆಗೆ ಹೊರಗಿನಿಂದ ಬರುವ ಪದಾರ್ಥಗಳ ಬೆಲೆಯು ಅದಕ್ಕನುಗುಣವಾಗಿ ಏರದೆ ಇದ್ದಲ್ಲಿ ದೇಶಸ್ಥಿತಿಯು ಉತ್ತಮವಾಗಬಹುದೆಂದು ಭಾವಿಸಬಹುದು. ಹಿಂದೆ, ವ್ಯವಸಾಯಗಾರರ ದಾರಿದ್ರ್ಯವೇ ವಿದ್ಯಾಭ್ಯಾಸದ ವಿಸ್ತರಣೆಗೂ, ಮೇಲಾದ ಸಾಗುವಳಿಯ ವಿಧಾನಗಳನ್ನು ರೂಢಿಗೆ ತರುವುದಕ್ಕೂ ಮುಖ್ಯವಾದ ಅಡಚಣೆಯಾಗಿದ್ದಿತು. ವ್ಯವಸಾಯಗಾರರ ಆದಾಯವನ್ನು ಹೆಚ್ಚಿಸಿದಲ್ಲಿ ಉತ್ತಮವಾದ ವಿದ್ಯಾಭ್ಯಾಸವನ್ನು ಹೊಂದುವುದಕ್ಕೂ, ಮೇಲಾದ ವ್ಯವಸಾಯವಿಧಾನಗಳನ್ನು ರೂಢಿಗೆ ತರುವುದಕ್ಕೂ ಅವನಿಗೆ ಚೈತನ್ಯವುಂಟಾಗುವುದು ಮತ್ತು ಇವುಗಳಿಂದ ಅವನ ವರಮಾನವು ಮತ್ತಷ್ಟು ಹೆಚ್ಚಿ ಜೀವಸ್ಥಿತಿಯು ಉತ್ತಮಪಡುವುದು" ಹೀಗೆಂದು ಹೇಳಿರುವರು. ಸ್ವಾಭಾವಿಕವಾಗಿ ನಮ್ಮ ವರಮಾನವು ಹೆಚ್ಚುವುದರ ಜತೆಗೆ, ಶಿವನಸಮುದ್ರದ ವಿದ್ಯುಚ್ಛಕ್ತಿಯ ಸ್ಥಾಪನೆಯ ಬಡಾವಣೆಯಿಂದಲೂ, ಸರ್ಕಾರದವರು ಖರ್ಚುಮಾಡಿರುವ ಮೂಲಧನದಿಂದ ಅದಷ್ಟು ಬೇಗನೆ ಆದಾಯವನ್ನು ಹೊಂದಬೇಕೆಂದು ಪೂರೈಸಲ್ಪಡುತ್ತಿರುವ ಇತರ ಲಾಭಕರವಾದ ಕಾಮಗಾರಿಗಳಿಂದಲೂ ಹೆಚ್ಚು ಹುಟ್ಟುವಳಿಯು ಬರುವುದೆಂದು ನಾವು ಖಂಡಿತವಾಗಿರಬಹುದು. ವ್ಯಾಪಾರವು ಯಥಾಸ್ಥಿತಿಗೆ ಬರುತ್ತಲೇ ಪ್ರಪಂಚದ ಮುಖ್ಯವಾದ ಸ್ಥಳಗಳಿಂದೆಲ್ಲಾ ಮೈಸೂರಿನ ಗಂಧದೆಣ್ಣೆಗೆ ಇನ್ನೂ ಹೆಚ್ಚಾಗಿ ಗಿರಾಕಿಯುಂಟಾಗಿ ಸರ್ಕಾರದವರ ಸ್ವಂತ ಸ್ವಾಧೀನದಲ್ಲಿರುವ ಈ ಬಾಬಿನಿಂದ ಅಧಿಕವಾಗಿ ಲಾಭ ಬರುವುದೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ.

ಸಾಮಾನ್ಯ ವಿಷಯಗಳು.

ಮೇಲೆ ಸಂಸ್ಥಾನದ ಆದಾಯವ್ಯಯಗಳ ವಿಷಯವಾಗಿ ವಿವರಿಸಲ್ಪಟ್ಟ ಅಂಶಗಳಿಂದ ನಮ್ಮ ಸದ್ಯಸ್ಥಿತಿಯು ಹೇಗಿರುವುದೆಂಬುದು ತಮ್ಮ ಗೋಚರಕ್ಕೆ ಬಂದಿರಬಹುದೆಂದು ನಂಬುತ್ತೇವೆ. ಇದರಿಂದ ಸಂಸ್ಥಾನದ ಆಯವ್ಯಯ ಸ್ಥಿತಿಯ ವಿಷಯದಲ್ಲಿ ಚಿಂತೆಗೆ ಕಾರಣವಿರುವುದಿಲ್ಲ; ಗಾಬರಿಗಂತೂ ಲೇಶಮಾತ್ರವೂ ಅವಕಾಶವಿರುವುದಿಲ್ಲ ಎಂಬ ನಮ್ಮ ಅಭಿಪ್ರಾಯವನ್ನು ತಾವುಗಳೂ ಖಂಡಿತವಾಗಿ ಅನುಮೋದಿಸುವಿರೆಂದು ನಂಬುತ್ತೇವೆ. ಈ ಕಾರಣದಿಂದಲೇ ವಿದ್ಯಾಭ್ಯಾಸವನ್ನೂ ವ್ಯವಸಾಯವನ್ನೂ ಅಭಿವೃದ್ಧಿ ಪಡಿಸುವುದಕ್ಕೆ ಸಂಬಂಧಪಟ್ಟ ಏರ್ಪಾಡುಗಳನ್ನು ಮುಂದರಿಸುವ ತಮ್ಮ ಪ್ರಯತ್ನಗಳನ್ನು ನಿಲ್ಲಿಸಿಬಿಡುವುದು ಯುಕ್ತವಲ್ಲವೆಂದು ಸರ್ಕಾರದವರು ಭಾವಿಸಿರುವರು; ಆದರೆ ಅವುಗಳ ವೇಗವನ್ನು ಸ್ವಲ್ಪ ಕಮ್ಮಿ ಮಾಡುವುದು ವಿವೇಕವಾದದ್ದೆಂದು ಅವರು ಯೋಚಿಸಿರುವರು. ಬ್ರಿಟಿಷ್ ಇಂಡಿಯಾದೇಶದ ನಮ್ಮ ನೆರೆಹೊರೆಯವರು ಸರ್ಕಾರದ ಆಡಳಿತವನ್ನು ಎಲ್ಲಾ ಮಾರ್ಗಗಳಲ್ಲಿಯೂ ಅಭಿವೃದ್ಧಿ ಪಡಿಸುವುದಕ್ಕೆ ಎಷ್ಟೋ ಸ್ಥೈರ್ಯದಿಂದ ತೊಡಗಿರುವುದನ್ನು ನಾವು ಕಣ್ಣಾರ ನೋಡುತ್ತಾ ಸುಮ್ಮನಿರುವುದು ನಮಗೆ ಸಾಧ್ಯವೂ ಅಲ್ಲ; ನಾವು ಈ ಮೊದಲೇ ಸೂಚಿಸಿರುವಂತೆ ಹಾಗೆ ಮಾಡುವುದಕ್ಕೆ ಸರಿಯಾದ ಕಾರಣಗಳೂ ಇರುವುದಿಲ್ಲ. ನಮ್ಮ ರಾಜ್ಯಾಡಳಿತವು ಇನ್ನು ಮುಂದೆಯೂ ಅಭಿವೃದ್ಧಿಗೆ ಬರುತ್ತಾ ಇರಬೇಕಾದರೆ, ಸರ್ಕಾರದ ಖರ್ಚುಬಾಬುಗಳು ಹೆಚ್ಚುತ್ತಾ ಬಾರದಿದ್ದರೆ ವಿಧಿ ಇಲ್ಲ. ಆದರೂ ನಾವು ಖರ್ಚುಮಾಡುವ ಹಣವನ್ನು ವಿತರಣೆಯಿಂದ ವಿನಿಯೋಗಿಸಿದುವೇ ಆದರೆ ಸದರೀ ಖರ್ಚುಮಾಡಲ್ಪಟ್ಟ ಹಣಕ್ಕಿಂತ ಜಾಸ್ತಿಯಾಗಿಯೇ ಪ್ರಜೆಗಳ ಸಂಪತ್ತು ವೃದ್ಧಿ ಹೊಂದಿ ಆ ಮೂಲಕ ಪ್ರಜೆಗಳ ವರಮಾನದಲ್ಲಿ ಸರ್ಕಾರದ ಖರ್ಚುಗಳಿಗಾಗಿ ತಗಲುವ ಭಾಗವು ಪ್ರತಿವರ್ಷವೂ ಕಮ್ಮಿಯಾಗುತ್ತ ಹೋಗುವುದರಲ್ಲಿ ಸಂದೇಹವಿರುವುದಿಲ್ಲ. ಈ ಸಭೆಯವರ ಸಹಾಯದಿಂದಲೂ, ನಾಗರಿಕರಾದ ಮಹಾಜನರ ಅಭಿಪ್ರಾಯಾನುಸಾರವಾಗಿಯೂ ಖರ್ಚು ಮಾಡುವ ಹಣವನ್ನು ಸರ್ಕಾರದವರು ವಿತರಣೆಯಿಂದಲೇ ವಿನಿಯೋಗಿಸುತ್ತ ಬರುವ ಉದ್ದೇಶವುಳ್ಳವರಾಗಿರುವರೆಂತ ನಾವು ಪ್ರತ್ಯೇಕವಾಗಿ ತಮಗೆ ತಿಳಿಸಬೇಕಾದ ಪ್ರಕೃತವಿಲ್ಲ. ಈ ವಿಚಾರದಲ್ಲಿ ಜನಗಳಲ್ಲಿ ಉಂಟಾಗಬಹುದಾದ ಒಂದು ತಪ್ಪುತಿಳುವಳಿಕೆಯನ್ನು ತಿದ್ದುವುದು ಅವಶ್ಯಕವೆಂದು ಭಾವಿಸುತ್ತೇವೆ. ಸರ್ಕಾರದ ಹಣವನ್ನು ಖರ್ಚು ಮಾಡತಕ್ಕ ಯಾವುದೊಂದು ಇಲಾಖೆಯಲ್ಲಿಯೇ ಆಗಲಿ ಹಣವು ವ್ಯರ್ಥವಾಗಿ ಅಥವಾ ದುಂದಾಗಿ ಖರ್ಚಾಗುತ್ತಿದ್ದರೂ ನೋಡಿಕೊಂಡು ಸುಮ್ಮನೆ ಇರಬೇಕೆಂಬುದು ಸರ್ಕಾರದವರ ಉದ್ದೇಶವಾಗಿಲ್ಲ. ಪ್ರತಿಯೊಂದು ಇಲಾಖೆಯ ಖರ್ಚುಬಾಬುಗಳನ್ನೂ ಪರಿಶೀಲನೆ ಮಾಡಿನೋಡಿ ವ್ಯರ್ಥವಾಗಿ ಅಥವಾ ದುಂದಾಗಿ ಆಗುತ್ತಿರುವ ಖರ್ಚುಗಳನ್ನು ತಪ್ಪಿಸುವುದರಲ್ಲಿ ಸರ್ಕಾರದವರಿಗೆ ಸಹಾಯ ಮಾಡುವುದಕ್ಕೂ, ಅವಶ್ಯಕ ಬಿದ್ದಾಗ ಇಲಾಖೆಯ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುವುದಕ್ಕೆ ತೊಂದರೆಯುಂಟಾಗದಂತೆ ಖರ್ಚುಬಾಬುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಖೋತಾಮಾಡುವ ವಿಷಯದಲ್ಲಿ ಸಲಹೆಗಳನ್ನು ಕೊಡುವುದಕ್ಕೂ ಸಹ ಫೈನಾನ್ಸ್ ಕಮಿಟಿಯವರನ್ನು ಪ್ರಾರ್ಥಿಸಲಾಗುವುದು. ಈ ಕಮಿಟಿಯವರು ಸಂಸ್ಥಾನದ ಬಜೆಟ್ಟನ್ನು ತಯಾರು ಮಾಡುವುದರಲ್ಲಿ ಸರ್ಕಾರಿ ಆಫೀಸರುಗಳಿಗೆ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಸಹಾಯಮಾಡಿರುತ್ತಾರೆ. ಪ್ರಜಾಕ್ಷೇಮಕ್ಕಾಗಿ ಇವರು ವಿಶೇಷ ಶ್ರಮೆಯನ್ನು ವಹಿಸಿ ಕೆಲಸ ನಡೆಯಿಸಿರುವರೆಂಬ ಅಂಶವನ್ನು ಈ ಸಮಯದಲ್ಲಿ ತಮ್ಮ ಅವಗಾಹನೆಗೆ ತರಲು ನಾವು ಸಂತೋಷಿಸುತ್ತೇವೆ. ಇವರು ನಮ್ಮ ಪೂರ್ಣಕೃತಜ್ಞತೆಗೆ ಪಾತ್ರರಾಗಿರುವರು.

ಈ ವರ್ಷದ ಡಿಸೆಂಬರ್ ಆಖೈರಿನೊಳಗಾಗಿ ನಾವು ತೆಗೆಯಬೇಕೆಂದಿರುವ ಸರ್ಕಾರದ ಸಾಲದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿ ನಮ್ಮ ಭಾಷಣವನ್ನು ಪರಿಸಮಾಪ್ತಿಗೊಳಿಸುವೆವು ಈಗ ಪೂರೈಸುವುದರಲ್ಲಿರುವ ಲಾಭಕರವಾದ ಸರ್ಕಾರಿ ಕಾಮಗಳ ಮೂಲಧನದ ಖರ್ಚಿಗಾಗಿ ಪ್ರಸಕ್ತವರ್ಷದಲ್ಲಿ ೯೬ ಲಕ್ಷ ರೂಪಾಯಿ ಅವಶ್ಯಕವಾಗಿರುವುದು. ಬಜೆಟ್ಟಿನಲ್ಲಿ ತಪಶೀಲುಗಳನ್ನು ಕೊಟ್ಟಿದೆ; ಅವು ಯಾವುವೆಂದರೆ:—

ರೈಲ್ವೆಗಳು ಮತ್ತು ಟ್ರಾಮ್ವೆಗಳು	ರೂ. 25,00,000
ಕೃಷ್ಣರಾಜಸಾಗರ ಕಾಮಗಾರಿಗಳು	ರೂ. 16,19,000
ವಿದ್ಯುಚ್ಛಕ್ತಿಯ ಕಾಮಗಾರಿಗಳು	ರೂ. 20,00,000
ಕೈಗಾರಿಕೆ ಕಾಮಗಾರಿಗಳು	ರೂ. 31,00,000
ಇತರ ಕಾಮಕಾರಿಗಳು	ರೂ. 1,34,000
ಕೈಗಾರಿಕೆಗಳ ಇನ್‌ವೆಸ್ಟ್‌ಮೆಂಟ್	ರೂ. 3,00,000
ಜುಮ್ಲಾ	ರೂ. 96,23,000

ಮಿ|| ದತ್ತರವರು ನಮ್ಮ ಸಂಸ್ಥಾನದ ಆದಾಯವ್ಯಯಗಳ ಸ್ಥಿತಿಗಳನ್ನು ಪರೀಕ್ಷಿಸಿ ಬರೆದ ಲೇಖನದಲ್ಲಿ ಮೂಲಧನದ ಕಾಮಗಾರಿಗಳ ಖರ್ಚಿಗಾಗಿ 1920-21 ನೆಯ ವರ್ಷದ ಪ್ರಾರಂಭದವರೆಗೂ ಹಣವನ್ನು ಸಾಲಮಾಡಿ ತರಬೇಕಾಗಿರುವುದಿಲ್ಲವೆಂಬ ತೀರ್ಮಾನವನ್ನು ಸೂಚಿಸಿರುತ್ತಾರೆ. ಅವರ ಈ ತೀರ್ಮಾನವು ಅಕ್ಷರಶಃ ವಾಸ್ತವವಾಗಿ ಪರಿಣಮಿಸಿದೆ. ಸರ್ಕಾರದವರು ಮೂಲಧನದ ಕಾಮಗಾರಿಗಳನ್ನು ಇನ್ನು ಮುಂದೆ ತಮ್ಮ ಬಡ್ಡಿಯ ಬಾಬತು ಸೆಕ್ಯೂರಿಟಿಗಳನ್ನು ಮಾರಿದುದರಿಂದ ಬಂದ ಹಣದಿಂದ ನಡೆಸತಕ್ಕದ್ದು ಯುಕ್ತವಲ್ಲವೆಂದು ನಿರ್ಧರಿಸಿರುವರು. ಇಂತಹ ಕಾಮಗಾರಿಗಳನ್ನು ನಡೆಸುವುದಕ್ಕಾಗಿ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರಂತೆಯೇ ಪ್ರಜೆಗಳಿಂದ ಸಾಲ ತೆಗೆಯುವುದು ಯುಕ್ತವೆಂದು ಮಿ|| ದತ್ತರವರು ಬಲವಾಗಿ ಶಿಫಾರಸ್ ಮಾಡಿರುತ್ತಾರೆ. ಇಂಥಾ ಸಂದರ್ಭಗಳಲ್ಲಿ ಇಂಡಿಯಾ ಸರ್ಕಾರದವರೂ ಸುದಾ ಸಾಲ ತೆಗೆಯುವ ಪದ್ಧತಿಯನ್ನಿಟ್ಟುಕೊಂಡಿರುವರೆಂಬುದನ್ನು ನಮ್ಮ ಕ್ಷಾಮನಿವಾರಣಾರ್ಥದ ಹಣಕ್ಕೆ ಸಂಬಂಧಪಟ್ಟ ನಿಯಮವನ್ನು ಕುರಿತು ವಿಚಾರಮಾಡುವಲ್ಲಿ ಪ್ರಸ್ತಾಪಿಸಿರುವೆವು.

ಇಂಡಿಯಾ ಸರ್ಕಾರದವರ ಸಹಾಯದಿಂದ ಮೈಸೂರು ಸರ್ಕಾರದವರು ಸಾದರ್ಮಾಡುವ ಸಾಲಕ್ಕೆ ಇಂಡಿಯಾ ದೇಶದ ಎಲ್ಲಾ ಭಾಗಗಳಲ್ಲಿಯೂ ಚಂದಾ ವಸೂಲಾಗುವುದೆಂದು ನಂಬಿದೆ. ಪ್ರಕೃತದಲ್ಲಿರುವ ಏರ್ಪಾಡುಗಳ

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದ್ದು.

ಈ ವರ್ಷ ನಡೆದ ಬಿ. ಎ., ಎಂಟ್ರೆನ್ಸ್, ಎಸ್. ಎಸ್. ಎಲ್. ಸಿ. ಲೋವರ್‌ಸೆಕೆಂಡರಿ ಮತ್ತು ಲೋಕಲ್‌ಸರ್ವೀಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವೀರಶೈವ ವಿದ್ಯಾರ್ಥಿಗಳು ತಮ್ಮ ಹೆಸರು ವಿಳಾಸ ಓದುತ್ತಿರುವ ಸ್ಕೂಲು ಉತ್ತೀರ್ಣರಾದ ತರಗತಿ ಮೊದಲಾದ ಸಂಗತಿಗಳನ್ನು ವಿಶದವಾಗಿ ಬರೆದು ಈ ಜೂನ್ ತಾ|| ೨೦ ರೊಳಗೆ ತಿಳುಹಿಸಿದಲ್ಲಿ ಮೈಸೂರು ವಿದ್ಯಾವರ್ಧಕ ಸಂಘದ ವಾರ್ಷಿಕ ವರದಿಯಲ್ಲಿ ಆ ಸಂಗತಿಯು ಸೇರಿಸಲ್ಪಡುತ್ತದೆಯಾದುದರಿಂದ ತೇರ್ಗಡೆಯಾದ ವಿದ್ಯಾರ್ಥಿಗಳು ತಪ್ಪದೆ ತಿಳುಹತಕ್ಕದ್ದು.

ಜಿ. ಪರಮಶಿವಯ್ಯ ಬಿ. ಎ. ಎಲ್ ಎಲ್. ಬಿ. ಸೆಕ್ರೆಟರಿ
ವೀರಶೈವ ವಿದ್ಯಾವರ್ಧಕ ಸಂಘ, ಬೆಂಗಳೂರು.

ಮೇಲೆ ಮೈಸೂರು ಸರ್ಕಾರದ ಬಾಂಡುಗಳ ಮೇಲೆ ಬಡ್ಡಿಯು ಬ್ರಿಟಿಷ್ ಇಂಡಿಯಾ ಖಜಾನೆಗಳಲ್ಲೆಲ್ಲಾ ಪಾವತಿಯಾಗುವುದು. ಸರ್ಕಾರದ ಹುಟ್ಟುವಳಿಯ ಆಧಾರದ ಮೇಲೆ ಸಗೆಯಲ್ಪಡುವ ಈ ಸಾಲದ ಷರತ್ತುಗಳಿಂದಲೂ, ಅದನ್ನು ಚಲಾವಣೆ ಮಾಡುವುದಕ್ಕೂ ವರ್ಗಾಯಿಸುವುದಕ್ಕೂ ಕಲ್ಪಿಸುವ ಅನುಕೂಲ್ಯಗಳಿಂದಲೂ ಈ ಸಾಲಕ್ಕೆ ಜನಗಳು ಹೆಚ್ಚು ಹೆಚ್ಚಾಗಿ ಹಣ ಹಾಕುವರೆಂದು ನಿರೀಕ್ಷಿಸಿದೆ. ತಮಗೆ ವೇದ್ಯವೇ ಇರುವಂತೆ, ಯುದ್ಧದಿಂದ ಇಂಡಿಯಾ ದೇಶದ ವ್ಯಾಪಾರಕ್ಕೆ ಲಭಿಸಿರುವ ಪ್ರಯೋಜನಗಳಲ್ಲಿ ಮೈಸೂರು ದೇಶವೂ ಭಾಗಿಯಾಗಿರುವುದೆಂಬುದಕ್ಕೆ ಎಲ್ಲಾ ಕಡೆಗಳಲ್ಲಿಯೂ ಸೂಚನೆಗಳು ತಲೆದೋರುತ್ತಿವೆ. ಆದಕಾರಣ ಈ ಕಾಲದಲ್ಲಿ ಸರ್ಕಾರದವರು ತೆಗೆಯುವ ಸಾಲವು ನಂಬುಗೆಯಾದ ವರಮಾನವನ್ನು ತರುವುದಾಗಿರುವ ಪ್ರಯುಕ್ತ, ಆ ಸಾಲಕ್ಕೆ ನಮ್ಮ ಪ್ರಜೆಗಳು ಧಾರಾಳವಾಗಿ ಹಣ ಕೊಡುವುದು ಮೂಲಕ ಸುಮ್ಮನೆ ಹಣ ಬಚ್ಚಿಡುವುದು ತಪ್ಪಿ ಅವರಲ್ಲಿ ಮಿತವ್ಯಯ ಬುದ್ಧಿಯು ನೆಲೆಗೊಳ್ಳಲು ಸಹಕಾರಿಯಾಗುವುದೆಂದು ಸರ್ಕಾರದವರು ನಂಬುತ್ತಾರೆ. ಈ ಸಾಲಕ್ಕೆ ನಮ್ಮ ಸಂಸ್ಥಾನದ ಪ್ರಜೆಗಳೇ ಧಾರಾಳವಾಗಿ ಚಂದಾ ಹಾಕಿ ತನ್ಮೂಲಕ ಅದರ ಲಾಭವನ್ನು ಅವರುಗಳೇ ಅನುಭವಿಸುತ್ತಾ ಬರಬೇಕೆಂಬುದೇ ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರರವರ ವಿಶೇಷವಾದ ಕುತೂಹಲವಾಗಿರುತ್ತದೆ. ಈ ಮುಖ್ಯವಿಷಯದಲ್ಲಿ ತಾವೆಲ್ಲರೂ ಆಸಕ್ತಿಯಿಂದ ಸಹಾಯಮಾಡಬೇಕೆಂದು ಕೇಳಿಕೊಳ್ಳುವುದು ಅಪ್ರಯುಕ್ತವೂ ಅನಾವಶ್ಯಕವೂ ಆಗಿರುವುದೆಂದು ನಾವು ದೃಢವಾಗಿ ನಂಬುತ್ತೇವೆ.

ಈ ಭಾಷಣವನ್ನು ಪರಿಸಮಾಪ್ತಿಗೊಳಿಸುವುದಕ್ಕೆ ಮೊದಲು, ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಮುಂದಿನ ಚಳಿಗಾಲದಲ್ಲಿ ಇಂಡಿಯಾ ದೇಶಕ್ಕೆ ದಯಮಾಡಿಸುವ ವೇಳೆ ಮೈಸೂರು ಸಂಸ್ಥಾನಕ್ಕೂ ಬಿಜಮಾಡಿಸುವುದಾಗಿ ಅಪ್ಪಣೆ ದಯಪಾಲಿಸಿರುವರೆಂಬ ಸಂತೋಷಕರವಾದ ವರ್ತಮಾನವನ್ನು ತಮಗೆ ತಿಳಿಯಪಡಿಸುವ ಗೌರವವು ನಮಗೆ ಲಭಿಸಿರುವುದು. ಈ ಸಮಾಚಾರದಿಂದ ಸಂಸ್ಥಾನದ ಪ್ರಜೆಗಳೆಲ್ಲರೂ ಆನಂದಭರಿತರಾಗುವರೆಂತಲೂ, ಮಾನವಕೋಟಿಯ ಅಭ್ಯುದಯಕ್ಕೆ ಬಹಳ ಮಟ್ಟಿಗೆ ಕಾರಣಭೂತವಾದ ಬ್ರಿಟಿಷ್ ಸಾರ್ವಭೌಮ ಸಿಂಹಾಸನದ ಉತ್ತರಾಧಿಕಾರಿಗಳನ್ನು ಬರಮಾಡಿಕೊಂಡು ಗೌರವಿಸುವ ವಿಷಯದಲ್ಲಿ ಮೈಸೂರು ಸಂಸ್ಥಾನದ ಪ್ರಜೆಗಳು ತಮ್ಮ ಸಹಜವಾದ ಭಕ್ತ್ಯುತ್ಸಾಹಗಳನ್ನು ಪ್ರದರ್ಶಿಸುವರೆಂತಲೂ ನಾವು ದೃಢವಾಗಿ ನಂಬಿರುವೆವು.

ಎಂ. ಕಾಂತರಾಜ ಅರಸ್,
ಮೈಸೂರು ಸಂಸ್ಥಾನದ ದಿವಾನರವರು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸಿ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ. 1-0-0.

10

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷ್ಮೀವಿಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿವಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
23 ವೈದ್ಯಶಾಲಾ, ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪೆನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 31

ನಾವು ಎ. ಆಲ್ಬ್ರಕ್ಟ್ಯರ್ ಕ್ಯ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್ ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್ ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
10 ಪೋಸ್ಟ್ ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
10 ಸಾಹುಕಾರಪೇಟೆ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೬ ನೇ ಇಸ್ವಿಯ ೨೫ ನೇ ಅಕ್ಟೋಬರ ರಿಜಿಸ್ಟರ ಮಾಡಲ್ಪಟ್ಟ 29

ಅರ್ಕೂಶಫಾ ಅಥವಾ ಆರೋಗ್ಯಬಿಂದು

ಈ ಅರ್ಕೂಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮಹಿಮೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೮-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದ ಕಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕೂಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೋಘವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮೆಜಡ್ಡು, ಗುದದ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರಿವು, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಕೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಮಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೋಘ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎಂಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲೆ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೇಟೆ ಹೊರಟರೆ ಖರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ಪ್ರಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ಟಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕೂಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜೂನ್ ತಾ|| ೬ರಿಂದ ೧೯೨೦ ನೆಯ ಜೂನ್ ತಾ|| ೧೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಜ್ಯೇಷ್ಠ ಬಹುಳ ಪಂಚಮಿಯಿಂದ ಜ್ಯೇಷ್ಠ ಬಹುಳ ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭ ಮಾಸ
6	ಭಾನು	ಪಂಚ	60	ಶ್ರವ	60	25
7	ಸೋಮ	ಷಷ್ಠಿ	60	ಶ್ರವ	0-42	26
8	ಮಂಗಳ	ಷಷ್ಠಿ	1-52	ಧನಿ	4-31	27
9	ಬುಧ	ಸಪ್ತ	2-48	ಶತ	7-7	28
10	ಗುರು	ಅಷ್ಟ	2-28	ಪೂಭಾ	8-28	29
11	ಶುಕ್ರ	ನವ-ದಶ	0-51 57-54	ಉಭಾ	8-36	30
12	ಶನಿ	ಏಕಾ	54-50	ರೇವ	7-37	31

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ಯಾಪಿಟಲ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಶೀಲಾಂಸುಧೀಪುಂಗವ | ಸ್ತೋತ್ರಾಭಿಜ್ಞದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿಕೆಯಂಸದಾಪುರೆಗೆ ಗೌರೀಶಾಮುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಜೂನ್ ತಾರೀಖು ೧೩ ನೆಯ ಭಾನುವಾರ (ಸಂಚಿಕೆ ೨೪

GOVERNMENT OF MYSORE.
ELECTRICAL DEPARTMENT.

44

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. **Lighting**	2'50 as.	As. 6 per point of 60 Watts per month.
2. **Heating & Cooking.**		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1'75 as.	Rs. 6 per H. P.
Second 50 ,, or fraction thereof	1'25 as.	...
Third 50 ,, or above 150 B.T.U	'75 as.	...
3. **Power Supply for Industries Rated Maximum demand in Electrical Horse Power.**		
Motors up to 20 H. P.	1 anna	Nil
Motors above 20 and up to 50 H. P.	1'00 anna	Rs. 6 per H. P.
Motors above 50 and up to 100 H. P.	'875	Rs. 6 do.
Motors above 100 and up to 200 H. P.	'75	Rs. 6 dc.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲೂಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಬ್ರಹ್ಮಾಸ್ತ್ರವು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ) 45

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦
೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿಬಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಸ್ತು ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ.. ಇಂದ್ರಿಯಸ್ತಂಭನ ಗುಳಿಗೆ, ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
37 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮು (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ವ್ಯಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
11 3. ಇರುಳಪ್ಪನಬೀದಿ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಖ್ಯರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ವಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ವಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

30

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೩೦ ನೆ ಇಸವಿ ಜೂನ್ ತಾ|| ೧೫ ನೆಯ ಭಾನುವಾರ.

ಸಂಪದಭ್ಯುದಯ ಸಮಾಜ.

ಇದರ ೧೧ ನೆಯ ಅಧಿವೇಶನವು ಕಳೆದ ತಾ|| ೧ ರಿಂದ ೩ ದಿನಗಳಕಾಲ ದಿವಾನರ ಅಧ್ಯಕ್ಷತೆಯಲ್ಲಿ ನಡೆದು ಮುಗಿದಿತು. ಅಧ್ಯಕ್ಷರ ಆರಂಭಭಾಷಣವೂ, ವಿದ್ಯಾಭ್ಯಾಸದ ಬೋರ್ಡಿನವರೂ, ವ್ಯವಸಾಯದ ಮತ್ತು ಶಾಸ್ತ್ರಪರಿಶೋಧನೆಯ ಬೋರ್ಡಿನವರೂ, ಶಿಲ್ಪವಾಣಿಜ್ಯಗಳ ಬೋರ್ಡಿನವರೂ ಸಹ ಸಂಸ್ಥಾನದಲ್ಲಿ ನಡೆಯಿಸಿರತಕ್ಕ ಮತ್ತು ಮುಂದೆ ಮಾಡಲೆಣಿಸಿರುವ ಏರ್ಪಾಟುಗಳ ವಿವರಣಗಳ ಭಾಷಣವೂ, ಆಯಾ ಬೋರ್ಡಿಗೆ ಅಧ್ಯಕ್ಷರಾಗಿರುವ ಕೌನ್ಸಿಲರುಗಳೂ ಮತ್ತು ಕೈಗಾರಿಕೆಯ ಶಾಖೆಯ ಡೈರೆಕ್ಟರಾದ ಮಿ|| ಚಾಟರ್ಟನ್‍ರವರೂ ಮಾಡಿದ ಭಾಷಣಗಳೂ, ದಿವಾನರವರ ಉಪಸಂಹಾರ ಭಾಷಣವೂ, ಸಭಿಕರಿಂದ ನಡೆಯಿಸಲ್ಪಟ್ಟ ಚರ್ಚೆಗಳೂ ಸಹ ಸಂಸ್ಥಾನದಲ್ಲಿ ನಾನಾ ಮುಖದಿಂದ ಸಂಪದಭಿವೃದ್ಧಿ ಪ್ರಯತ್ನಗಳು ಎಷ್ಟು ಬದ್ಧೋತ್ಸಾಹದಿಂದ ಮಾಡಲ್ಪಡುತ್ತಿವೆಯೆಂಬುದನ್ನು ನಿದರ್ಶನಪಡಿಸತಕ್ಕವಾಗಿದ್ದುವು. ಈಸಮಾಜವು ಮೆ|| ಟಿ. ಆನಂದರಾಯರ ದಿವಾನಗಿರಿಯಲ್ಲಿ ಅಂಕುರಿಸಿತು; ಸರ್ ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಚೆನ್ನಾಗಿ ಪರಿಪೋಷಿತವಾಗಿ ಬಾಲ್ಯವನ್ನು ಕಳೆದಿತು. ಅವರಿಗೆ ಇದರ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ನಿರತಿಶಯವಾದ ಅಭಿಮಾನವಿದ್ದಿತು. ಅದಕ್ಕಾಗಿ ಅವರು ಹೇರಳವಾಗಿ ಈ ಶಾಖೆಯ ವೆಚ್ಚವನ್ನು ಮಾಡಿಸುತ್ತಿದ್ದರು. ಸದ್ಯಃ ಇದರ ಫಲವು ಕಣ್ಣಿಗೆ ಕಾಣಿಸುವುದಕ್ಕೆ ಅವಕಾಶವಿಲ್ಲದಿದ್ದುದು ಸಹಜವಾದುದರಿಂದ ದೇಶದ ಒಳಗಣ ಹೊರಗಣ ಅನೇಕರು ಇದು ವ್ಯರ್ಥವ್ಯಯವೆಂದು ಆಕ್ಷೇಪಿಸುತ್ತಿದ್ದರು. ಅವರು ಮಂತ್ರಿಪದವಿಯಿಂದ ನಿವೃತ್ತರಾದ ಬಳಿಕ ಈ ಸಮಾಜವು ಅನಾಥವಾಗಿ ನಾಮಾವಶೇಷವಾಗುವುದೆಂದು ಅನೇಕರು ಭಾವಿಸಿದ್ದರು. ಆದರೆ ಅವರಿರುವಾಗಲೇ ಇದನ್ನು ಶಾಶ್ವತಪಡಿಸುವ ಉತ್ತರವನ್ನು ಶ್ರೀಮನ್ಮಹಾರಾಜರವರು ದಯಪಾಲಿಸಿ, ಸರ್ ವಿಶ್ವೇಶ್ವರಯ್ಯನವರ ಮನಸ್ತೃಪ್ತಿಯನ್ನೂ, ಪ್ರಜೆಗಳ ಸಂಶಯ ನಿವಾರಣೆಯನ್ನೂ ಮಾಡಿದರು. ಈಗಣ ನಮ್ಮ ಸರದಾರ್ ಕಾಂತರಾಜ ಅರಸರವರ ದಿವಾನಗಿರಿಯಲ್ಲಿಯೂ ಕೂಡ ಇದಕ್ಕೆ ನವಯೌವನದಶೆಯು ಪ್ರಾಪ್ತವಾಗಿ ವಿಶೇಷ ಫಲೋನ್ಮುಖವಾಗುವ ಚಿಹ್ನೆಗಳು ಅವರ ಈ ಪ್ರಥಮಾಧ್ಯಕ್ಷತೆಯ ಅಧಿವೇಶನದಲ್ಲೇ ಕಂಡುಬಂದುದನ್ನು ನೋಡಿ ಸಂತೋಷಿಸುತ್ತೇವೆ. ಎಲ್ಲಕ್ಕೂ ಮೊಟ್ಟಮೊದಲು ಪ್ರಜಾಪ್ರತಿನಿಧಿ ಸಭಾಸ್ಥಾಪನದ ಮೂಲಕ ಇತರ ಸಂಸ್ಥಾನಗಳಿಗೆಲ್ಲ ಮಾರ್ಗದರ್ಶಕವಾದ ಮೈಸೂರು, ಈ ಸಂಪದಭ್ಯುದಯ ಸಮಾಜದ ಸ್ಥಾಪನ ಮೂಲಕವೂ ಮೇಲುಪಂಗ್ತಿಯಾಗೇರ್ಪಟ್ಟುದರ ಗೌರವವನ್ನು ಪಡೆದುಕೊಂಡಿರುತ್ತದೆ. ಬರಿಯ ಗೌರವಮಾತ್ರವೇ ಅಲ್ಲದೆ ದಿನಕ್ರಮೇಣ ಸಕಲ ಸಂಪತ್ತಿಗೂ ದಾರಿಮಾಡಿಕೊಡುವ ರಚನೆಯುಳ್ಳುದಾಗಿರುತ್ತದೆ. ಈ ಸಮಾಜದ ಸೆಂಟರಲ್ ಬೋರ್ಡುಗಳ ಕಾರ್ಯಾಚಾಲವೂ, ಸಭಿಕರ ಸಂಖ್ಯೆಯೂ, ಉಪಸಭೆಗಳ ಪರಿಮಿತಿಯೂ ಹೆಚ್ಚು ಹೆಚ್ಚುತ್ತ ಬಂದಿರುವುದು ಶುಭಲಕ್ಷಣವಾಗಿದೆ. ಸರ್ಕಾರದ ಸಭಿಕರು ಮಾತ್ರವೇ ಅಲ್ಲದೆ ಪ್ರಜಾಪಕ್ಷದವರಾಗಿ ಡಿಸ್ಟ್ರಿಕ್ಟ್ ಬೋರ್ಡುಗಳಿಂದಲೂ ಪ್ರಜಾಪ್ರತಿನಿಧಿ ಮಂಡಲದಿಂದಲೂ ಸಹ ಸಭಿಕರುಗಳು ಈ ಬೋರ್ಡುಗಳಿಗೆ ಆರಿಸಿ ಸೇರಿಸಲ್ಪಡುವಂತೆ ಮಾಡಿರುವ ಏರ್ಪಾಟು, ನಿಜವಾಗಿ ಪ್ರಜಾಭ್ಯುದಯಕ್ಕೆ ಅವಶ್ಯಕವಾದ ಕಾರ್ಯಗಳೇನೆಂಬುದನ್ನು ತಿಳಿದು ಆಚರಿಸಲು ಸರ್ಕಾರಕ್ಕೆ ವಿಶೇಷ ಸಾಹಾಯ್ಯಕವಾಗಿರುತ್ತದೆ, ಮತ್ತೂ ಸರ್ಕಾರದ ಸ್ವಚ್ಛಂದಪ್ರವೃತ್ತಿಗೂ ಎಡೆಗುಡದಂತೆ ಮಾಡುತಕ್ಕುದಾಗಿದೆ. ದೂರವಾಗಿ ಪರ್ಯಾಲೋಚಿಸಿದರೆ ಪ್ರಜಾಪ್ರತಿನಿಧಿ ಸಭೆಗಿಂತಲೂ ಹೆಚ್ಚಾದ ಪ್ರಯೋಜನವು ಈ ಸಮಾಜದ ಕಾರ್ಯಗಳಿಂದ ಆಗುವುದೆಂದು ಹೇಳಬಹುದಾಗಿದೆ. ಅದುಕಾರಣ ಈ ಸಮಾಜದ ಶಾಖಾಬೋರ್ಡುಗಳ ಉಪಶಾಖೆಗಳು ಸಂಸ್ಥಾನದಲ್ಲೆಲ್ಲಾ ವ್ಯಾಪಿಸಿ, ಇದರ ಪ್ರಯೋಜನಾಂಶವನ್ನು ಗಮನಕ್ಕೆ ತಂದು ಪ್ರಜೆಗಳೆಲ್ಲರೂ ಸಹಾಯಕರಾಗಿ ನಿಂತು ಕೆಲಸ ಮಾಡಿದರೆ ವಿದ್ಯಾವಿವೇಕಗಳೂ ಕೃಷಿ ವಾಣಿಜ್ಯ ಶಿಲ್ಪಾದಿ ಪರಿಮುಖವಾದ ಏಳ್ಗೆಗಳೂ ದೇಶದಲ್ಲಿ ತಾಂಡವಮಾಡುವಂತಾಗುವುವು. ಆದರೆ ದೇಶೀಯರ ಗಮನವು ಇತ್ತಕಡೆಗೆ ಇನ್ನೂ ಚೆನ್ನಾಗಿ ಪ್ರಸರಿಸಿಲ್ಲ. ಈ ಸಮಾಜವು ಮುಖ್ಯವಾಗಿ ಗಮನಿಸಬೇಕಾದ ವಿಷಯವಾವುವೆಂದರೆ:—ಈ ಸಂಬಂಧದ ಸಕಲ ವ್ಯವಹಾರಗಳೂ ಸರ್ವ ಪ್ರಜೆಗಳಿಗೂ ತಿಳುವಳಿಕೆಗೆ ಬರಲು ಸಾಧ್ಯವಾಗುವಂತೆ ದೇಶಭಾಷೆಯಲ್ಲೇ ನಡೆಯಬೇಕು. ಉಪಯೋಗಕರವಾಗಿರುವ ಅರ್ಥಸಾಧಕ ಪತ್ರಿಕೆಗೆ ಪ್ರೋತ್ಸಾಹವನ್ನು ಶಾಶ್ವತಗೊಳಿಸಿ, ವೃಥಾ ವಿಶೇಷ ಧನವ್ಯಯ ಸಾಧಕವಾಗಿರುವ ಹೆಚ್ಚು ಪ್ರಯೋಜಕವಲ್ಲದ ಎಕನಾಮಿಕ್ ಜರ್ನಲ್ಲನ್ನು ತೆಗೆದುಬಿಡಬೇಕು. ಈ ಸಮಾಜಶಾಖೆಯ ವ್ಯಯವನ್ನು ಪರಿಶೋಧನೆ ಮಾಡಿಸುವುದಕ್ಕೆ ಒಂದು ಸಂಘವನ್ನೇರ್ಪಡಿಸಿ, ಸಾಧ್ಯವಾದಷ್ಟು ಮಟ್ಟಿಗೆ ದುಂದನ್ನು ತೆಗೆದು, ಅವಶ್ಯಕಗಳಾದ ವೆಚ್ಚಗಳನ್ನೇ ಅಂಗೀಕರಿಸಬೇಕು. ನೇರವಾಗಿ ಸರ್ಕಾರಕ್ಕೆ ಆಗುವ ಲಾಭವನ್ನೇ ಸಂಪದಭ್ಯುದಯವನ್ನಾಗಿ ಪರಿಗ್ರಹಿಸುವುದಕ್ಕಿಂತಲೂ ಪ್ರಜೆಗಳಿಗೆ ಸಂಪದಭ್ಯುದಯದ ಮಾರ್ಗವನ್ನೇರ್ಪಡಿಸಿಕೊಟ್ಟು ಅವರ ಮೂಲಕವಾಗಿ ಸರ್ಕಾರದ ಬೊಕ್ಕಸಕ್ಕೆ ರಾಜಾದಾಯವನ್ನು ಹೆಚ್ಚಿಸಿಕೊಳ್ಳುವುದನ್ನೇ ಮುಖ್ಯ ಲಕ್ಷ್ಯವಾಗಿಟ್ಟುಕೊಳ್ಳಬೇಕು. ಉದಾಹರಣೆ—ವಿದ್ಯುಚ್ಛಕ್ತಿಯ ಆದಾಯಕ್ಕಾಗಿ ಕಬ್ಬಿನ ಗದ್ದೆಗಳಿಗೆ ಹಿಂದೆ ಒದಗಿಸುತ್ತಿದ್ದ ನೀರನ್ನು ತಪ್ಪಿಸುವುದು, ಗಂಧದೆಣ್ಣೆಯ ಕಾರ್ಯಾಲಯಕ್ಕಾಗಿ ಪ್ರಜೆಗಳೇ ಕೊಳ್ಳುತ್ತಿದ್ದ ಸವಿದೆಯನ್ನು ಪೋಟಾಪೋಟಿಯಿಂದ ಕೊಳ್ಳುವುದು—ಲಾಭಕರಗಳಾದ ಯಂತ್ರಪ್ರತಿಷ್ಠಾದಿಗಳನ್ನು ಪ್ರಜೆಗಳಿಗೆ ವಹಿಸಿಕೊಡದೆಹೋಗುವುದು—ಇತ್ಯಾದಿ ಕಾರ್ಯಗಳನ್ನು ಮಾಡಲಾಗದು.

ಪ್ರಜಾಪ್ರತಿನಿಧಿ ಸಭೆಯನ್ನು ಮುಗಿಸುವಾಗ್ಗೆ ದಿವಾನರು ಪ್ರತಿನಿಧಿಗಳಿಂದ ಕೇಳಲ್ಪಟ್ಟಿದ್ದ ಕೆಲವು ಮುಖ್ಯ ವಿಷಯಗಳಿಗೆಲ್ಲಾ ಉತ್ತರ ರೂಪವಾಗಿ ಒಂದು ಭಾಷಣವನ್ನು ಮಾಡಿದರು. ಅದರ ತಾತ್ಪರ್ಯವನ್ನು ಇಲ್ಲಿ ಪ್ರಕಟಿಸಿದ್ದೇವೆ.

ಕಳೆದ ನಾಲ್ಕು ದಿನಗಳಲ್ಲಿ ಮೈತ್ರಿಯಿಂದಲೂ ನಿಷ್ಕಪಟವಾಗಿಯೂ ನೀವುಗಳು ವಿಷಯ ಚರ್ಚೆಯನ್ನು ನಡೆಸಿದುದಕ್ಕಾಗಿ ನನ್ನ ಸಹೋದ್ಯೋಗಿಗಳ ಮತ್ತು ನನ್ನ ಪರವಾಗಿ ನಿಮ್ಮಗಳನ್ನು ವಂದಿಸುತ್ತೇನೆ. ಸರ್ಕಾರದ ಸಣ್ಣ ಉದ್ಯೋಗಿಗಳಿಗೆ ಈಗಣ ಹೆಚ್ಚು ದಾರಣೆಯ ಕಷ್ಟವನ್ನು ತಕ್ಕಮಟ್ಟಿಗಾದರೂ ಸಹಿಸಿಕೊಳ್ಳಲು ಅನುಕೂಲವಾಗುವಂತೆ ಅವರ ಸಂಬಳವನ್ನು ಹೆಚ್ಚಿಸಿಕೊಡಬೇಕೆಂಬುದಾಗಿರುವ ಸರ್ಕಾರದ ಉದ್ದೇಶವನ್ನು ನೀವುಗಳು ಅನುಮೋದಿಸಿರುವುದಕ್ಕಾಗಿ ಸಂತೋಷಿಸುತ್ತೇನೆ. ಅಂಥ ಸಹಾಯವನ್ನು ಆದಷ್ಟು ಬೇಗನೆ ನೆರವೇರಿಸಿಕೊಡುವುದರಲ್ಲಿ ನಿಮ್ಮಂತೆ ನಾನೂ ಅಭಿಪ್ರಾಯಪಟ್ಟಿದ್ದೇನೆ. ಈ ವಿಷಯವು ಫೈನಾನ್ಸ್ ಕಮಿಟಿಯವರಿಂದ ಬೇಗನೆ ಪರ್ಯಾಲೋಚಿಸಲ್ಪಟ್ಟು ಅದರ ಮೇಲೆ ಸರ್ಕಾರದಪ್ಪಣೆಯು ಕೂಡಲೇ ಕೊಡಲ್ಪಡುವುದೆಂದು ನಿಮಗೆ ಬರವಸೆ ಹೇಳುತ್ತೇನೆ. ಶಾನುಭೋಗರ ಸಾದಿಲ್ವಾರಿಗಾಗಿ ಅಲೋಯನ್ಸನ್ನು ಕೊಡಬೇಕೆಂಬ ಮತ್ತು ಅವರ ಪೋಟಿಗೆಯನ್ನು ಈಗಿನಂತೆ ಫಿರ್ಕಾವಾರಾಗಿ ಗೊತ್ತುಮಾಡಿಕೊಡುವ ಪದ್ಧತಿಯನ್ನು ತಪ್ಪಿಸಿ ಆಯಾ ಗ್ರಾಮದ ವರ್ಷದುತ್ಪತ್ತಿಯ ಮೇಲೆ ಗೊತ್ತುಮಾಡಿಕೊಡಬೇಕೆಂಬ ಆಲೋಚನೆಯು ಸರ್ಕಾರಕ್ಕಿದೆ. ಆ ಸಂಬಂಧವಾದ ಅಪ್ಪಣೆಯನ್ನು ಮುಂದಿನ ಸಭಾಕಾಲದೊಳಗಾಗಿ ಕೊಡುವೆವು. ಬೆಳೆಯಾಗದಿದ್ದ ವರ್ಷದಲ್ಲಿ ಆಯಾ ಭೂಕಂದಾಯವನ್ನು ಮನ್ನಿಸಬೇಕೆಂಬ ವಿಷಯವಾಗಿ ನೀವುಗಳು ಬಹಳ ಒತ್ತಿ ಹೇಳಿರುತ್ತೀರಿ. ಈ ಸಂಬಂಧವಾಗಿ ಬೊಂಬಾಯಿ ಅಧಿಪತ್ಯದಲ್ಲಿರುವ ಪದ್ಧತಿಯನ್ನು ತಕ್ಕಮಟ್ಟಿಗೆ ಅನುಸರಿಸಿಯೇ ಏರ್ಪಾಟನ್ನು ಮಾಡಿಕೊಡುತ್ತೇವೆ. ತೋಟಿತಳಾರಿಗಳ ಮಿರಾಸೆಯನ್ನು ಕೊಡುವ ವಿಚಾರದಲ್ಲಿ ಅಭ್ಯಂತರವುಂಟಾದಾಗ್ಗೆ ಈಗಣ ಪದ್ಧತಿಯನ್ನು ತಪ್ಪಿಸಿ ಕ್ಲುಪ್ತವಾದಷ್ಟು ಹಣವನ್ನು ಅವರಿಗೆ ಕೊಡುವುದರಿಂದ ರೈತರ ಮೇಲೆ ಹೊಸ ಭಾರವೇನೂ ಬೀಳುವ ಹಾಗಿಲ್ಲ. ರೈತರಿಗೂ ತೋಟಿತಳಾರಿಗಳಿಗೂ ಪರಸ್ಪರ ಭಿನ್ನಾಭಿಪ್ರಾಯವೇನಾದರೂ ಉಂಟಾದಲ್ಲಿ ಆ ಸಣ್ಣ ಗ್ರಾಮೋದ್ಯೋಗಿಗಳ ಮಿರಾಸೆಯನ್ನು ಮೊದಲೇ ನಿರ್ಧರಿಸಿರುವ ದರದ ಪ್ರಕಾರ ಕೊಡಲು ಅನುಕೂಲಿಸುವಂತೆ ಅದನ್ನು ನಿರ್ಧರಿಸಬೇಕೆಂದು ಸೂಚಿಸಲ್ಪಟ್ಟಿದೆ. ಈ ತೋಟಿ ತಳಾರಿಗಳು ವಸ್ತುತಃ ಸರ್ಕಾರಿ ಕೆಲಸ ಎಂದರೆ ಕಂದಾಯವನ್ನೆತ್ತುವ ಕೆಲಸವನ್ನು ಮಾಡಿಕೊಂಡಿರುವುದರಿಂದ ಗ್ರಾಮಸ್ಥರು ಅದಕ್ಕಾಗಿ ಇವರಿಗೆ ಸಹಾಯಮಾಡಬೇಕಾದುದೇನೂ ಇಲ್ಲವೆಂದು ಕೆಲ ಪ್ರತಿನಿಧಿಗಳು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದರೆ ಗ್ರಾಮದ ಫಸಲಿನ ಉತ್ಪತ್ತಿಯ ಮೇಲೆ ಸಾಧಾರಣದ ಒಂದು ವಂಯನ್ನು ಹಾಕಿ ಅದರಿಂದ ಈ ಜನರಿಗೆ ಅವರ ಕೆಲಸಕ್ಕಾಗಿ ಒಂದು ಮಿರಾಸೆಯನ್ನು ಕೊಡುವ ಪದ್ಧತಿಯು ಬಹುಕಾಲದಿಂದ ನಡೆದುಬಂದಿದೆ. ಈ ಪದ್ಧತಿಯನ್ನು ತೊಂದರೆಯೆಂದು ಈಗ ಭಾವಿಸುವ ಪಕ್ಷದಲ್ಲಿ ಇನ್ನೊಂದು ತೆರನಾಗಿ ಅವರಿಗೆ ಸಲ್ಲಿಸಲು ಏರ್ಪಡಿಸಿದಲ್ಲಿ ಮಾತ್ರವೇ ಈಗಣ ಪದ್ಧತಿಯನ್ನು ತಪ್ಪಿಸಲು ಸಾಧ್ಯವಾದೀತು. ಈ ವಿಚಾರದಲ್ಲಿ ಹೇಗೆ ಮಾಡಬಹುದೋ ಆ ವಿಧಾನವನ್ನು ಕುರಿತು ನಿಮ್ಮಲ್ಲಿ ಯಾರಾದರೂ ಬರೆದು ತಿಳಿಯಿಸಿದಲ್ಲಿ ಸರ್ಕಾರದವರು ಸಂತೋಷದಿಂದಲೂ ಎಚ್ಚರಿಕೆಯಿಂದಲೂ ಅದನ್ನು ಪರ್ಯಾಲೋಚಿಸುವರು. ದೊಡ್ಡ ಪಟ್ಟಣಗಳಲ್ಲಿ ಉಂಟಾಗಿರುವ ಸವಿದೆಯ ತೊಂದರೆಯನ್ನು ಕುರಿತು ನೀವುಗಳು ಬಹಳ ತೀಕ್ಷ್ಣವಾಗಿ ಚರ್ಚಿಸಿದಿರಿ. ಮೈಸೂರಲ್ಲಿರುವ ಗಂಧದೆಣ್ಣೆಯ ಕಾರ್ಯಾಲಯಕ್ಕೆ ಬೇಕಾಗುವ ಸವಿದೆಗಾಗಿ ಅವರು ಪ್ರಜೆಗಳೊಡನೆ ಸ್ಪರ್ಧಿಸದೆ ಪ್ರತ್ಯೇಕವಾಗಿ ಸವಿದೆಯನ್ನು ಒದಗಿಸಿಕೊಳ್ಳುವಂತೆ ಮಾಡಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ. ಸಣ್ಣ ಸಣ್ಣ ಮ್ಯುನಿಸಿಪಲ್ ಟವನ್ನುಗಳಿಗೆ ಬೇಕಾಗುವಷ್ಟು ಸವಿದೆಯನ್ನು ಒದಗಿಸಿಕೊಳ್ಳಲಿಕ್ಕಾಗಿ ಅಲ್ಲಿನವರು ಸವಿದೆಯ ಮರಗಳನ್ನು ಸಮೃದ್ಧವಾಗಿ ಬೆಳೆದುಕೊಳ್ಳುವ ಸಂಬಂಧದಲ್ಲಿ ಹುಟ್ಟಿರುವ ವಿಧಿಯನ್ನು ಹೆಚ್ಚು ಪ್ರಯೋಜಕವಾಗುವಂತೆ ಅನುಷ್ಠಾನಕ್ಕೆ ತಂದುಕೊಳ್ಳಬೇಕು. ಅದರ ತೊಂದರೆಯ ಪರಿಹಾರೋಪಾಯವು ಪ್ರಜೆಗಳ ಕೈಯಲ್ಲೇ ಇದೆ. ಸವಿದೆಯ ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳಸುವ ವಿಷಯದಲ್ಲಿ ನ್ಯಾಯವಾಗಿ ಆಗಬಹುದಾದ ಸಹಾಯವನ್ನೆಲ್ಲಾ ಒದಗಿಸಿಕೊಡಲು ಸರ್ಕಾರವು ಸಿದ್ಧವಾಗಿರುವುದು. ಸವಿದೆಯು ಹೆಚ್ಚಾಗಿ ಒದಗುವಂತಾದರೆ ಬೆಲೆಯು ಇಳಿದು ಅದಕ್ಕಾಗಿ ಜನರು ಮಾಡಬೇಕಾದ ವೆಚ್ಚವೂ ಕಡಿಮೆಯಾಗುವುದರಿಂದ ಕಾರಣ ಈ ವಿಷಯದಲ್ಲಿ ಪ್ರಜೆಗಳು ವಿಶೇಷ ಶ್ರದ್ಧೆಯನ್ನು ವಹಿಸಬೇಕು. ಜುಡಿಸಿಯಲ್ ಮತ್ತು ಎಗ್ಜಿಕ್ಯುಟಿವ್ ಕೆಲಸಗಳನ್ನು ಬೇರ್ಪಡಿಸಿದುದರಿಂದ ಸರ್ಕಾರಿ ಕೆಲಸಗಳು ಬಹಳ ತೃಪ್ತಿಕರವಾಗಿ ನಡೆಯುತ್ತಿರುವುದು ಸಂತೋಷಪ್ರದವಾಗಿದೆ. ಆದರೆ ಈಗ ಏರ್ಪಡಿಸಿರುವ ಸ್ಪೆ|| ಮೇಜಿಸ್ಟ್ರೇಟ್ ಕೋರ್ಟುಗಳ ಸಂಖ್ಯೆಯು ಕಡಿಮೆಯಾಗಿರುವುದರಿಂದಲೂ ದೂರದೂರದಲ್ಲಿರುವುದರಿಂದಲೂ ಪ್ರಜೆಗಳಿಗೆ ಸ್ವಲ್ಪ ತೊಂದರೆಯಾಗಿರುವುದು ನಿಜ. ಹಣವು ಒದಗಿದಂತೆ ಕೋರ್ಟುಗಳನ್ನು ಹೆಚ್ಚಿಸಿಕೊಡುವೆವು. ನಮ್ಮ ಸಹೋದ್ಯೋಗಿಗಳಾದ ೩ ನೆ ಕೌನ್ಸಿಲರು ತಿಳಿಸಿದಂತೆ ಅರ್ಹರಾದ ಜನರು ದೊರೆತಾಗ ಆ|| ಬೆಂಚ್ ಮೇಜಿಸ್ಟ್ರೇಟರುಗಳಿಗೆ ೨ ನೆ ತರಗತಿ ಮೇಜಿಸ್ಟ್ರೇಟ್ ಅಧಿಕಾರವನ್ನು ಕೊಡುವೆವು. ಆಗ್ಗೆ ಮೇಲೆ ಕಂಡ ಕೊರತೆಯು ತಕ್ಕಮಟ್ಟಿಗೆ ಪರಿಹಾರವಾಗುತ್ತದೆ. ಸೆಕೆಂಡರಿ ಮತ್ತು ಕಾಲೇಜು ತರಗತಿಗಳ ವಿದ್ಯಾಭ್ಯಾಸವನ್ನೂ ಉಚಿತವಾಗಿ ಮಾಡಿಸಿಕೊಡಬೇಕೆಂದು ತಿಳಿಯಿಸಿದ ವಿಷಯವಾಗಿ ಅದರಲ್ಲಿರುವ ತೊಂದರೆಗಳನ್ನು ಕುರಿತು ೧ ನೆಯ ಕೌನ್ಸಿಲರು ನಿಮ್ಮಗಳಿಗೆ ತಿಳಿಯಿಸಿದುದಕ್ಕಿಂತ ಹೆಚ್ಚಾಗಿ ನಾನು ಹೇಳಬೇಕಾದುದೇನೂ ಇಲ್ಲ. ಸೆಕೆಂಡರಿ ಮತ್ತು ಕಾಲೇಜು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಸಂಸ್ಥಾನದಲ್ಲಿ ಪಾಠಶಾಲೆಗಳಿಗೆ ಹೋಗುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯೊಡನೆ ಹೋಲಿಸಿ ನೋಡಿದರೆ ಇವರ ಸಂಖ್ಯೆಯು ೧೦೦ ಕ್ಕೆ ೩ ರಷ್ಟು ಆಗಿದೆ. ಇವರಲ್ಲಿ ಕಾಲುಭಾಗದ ವಿದ್ಯಾರ್ಥಿಗಳಿಗೆ ಉಚಿತವಾಗಿಯೇ ವಿದ್ಯಾಭ್ಯಾಸವು ನಡೆಯುತ್ತಿದೆ, ಅಥವಾ ವಿದ್ಯಾರ್ಥಿವೇತನವು ದೊರೆಯುತ್ತಿದೆ. ಅತ್ತ ಗ್ರಾಮಾಂತರದ ಜನರಾದರೋ ತಮ್ಮ ಗ್ರಾಮಪಾಠಶಾಲೆಗಳ ಪೋಷಣೆಗಾಗಿ ೩ ರಿಂದ ೪ ಲಕ್ಷ ರೂ. ಗಳವರೆಗೆ ದ್ರವ್ಯಸಹಾಯವನ್ನು ಅವರೇ ಮಾಡುತ್ತಿದ್ದಾರೆ. ಹೀಗಿರುವುದರಿಂದ ಸರ್ಕಾರದವರು ಪ್ರೌಢವಿದ್ಯಾಭ್ಯಾಸಕ್ಕಾಗಿ ಮುಟ್ಟುವ ವೆಚ್ಚವನ್ನೆಲ್ಲಾ ತಾವೇ ವಹಿಸಿಕೊಳ್ಳುವುದಕ್ಕಿಂತ ಮೊದಲೇ ಗ್ರಾಮಾಂತರದವರು ಹೊತ್ತುಕೊಂಡಿರುವ ಭಾರವನ್ನು ತಪ್ಪಿಸುವುದು ಅವಶ್ಯಕವೆಂಬುದನ್ನು ನೀವೇ ಒಪ್ಪಿಕೊಳ್ಳದಿರಲಾರಿರಿ. ಲೋ|| ಸೆ|| ವರೆಗಿನ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಿಸುವ ಏರ್ಪಾಟಿನಿಂದ ಆ ಭಾಗದಲ್ಲಿ ಬರುತ್ತಿದ್ದ ೧|| ಲಕ್ಷ ರೂ. ಗಳ ವರಮಾನವನ್ನು ನೀವೆಲ್ಲರೂ ತಿಳಿದಿರುವಂತೆಯೇ ಸರ್ಕಾರದವರು ಬಿಟ್ಟುಕೊಟ್ಟಿರುತ್ತಾರೆ. ಬಾಲವಿದ್ಯಾಭ್ಯಾಸವು ಸಾರ್ವತ್ರಿಕವಾಗಿಯೂ, ಉಚಿತವಾಗಿಯೂ, ಸ್ಥಿರವಾಗಿಯೂ ನಡೆಯುವಂತೆ ಮಾಡಲ್ಪಡುವವರೆಗೆ ಪ್ರೌಢವಿದ್ಯಾಭ್ಯಾಸಮೂಲಕವಾದ ವರಮಾನವನ್ನು ಈಗಿಂತಲೂ ಹೆಚ್ಚಾಗಿ ಬಿಟ್ಟುಕೊಡಲು ಆಗಲಾರದು. ಅದಕ್ಕೆ ನಾನು ಬರವಸೆ ಕೊಡಲಾರೆನು. ಶ್ರೀಮನ್ಮಹಾರಾಜರ ಪ್ರಜಾವರ್ಗದಲ್ಲಿ ಸಕಲರೂ ಸರ್ಕಾರಿ ಪಾಠಶಾಲೆಗಳಿಗೆ ಹೋಗಿ ಓದಬಹುದೆಂದು ಮಾಡಿರುವ ಅಪ್ಪಣೆಯನ್ನು ತೆಗೆದುಹಾಕಿ ಪಂಚಮರಿಗೆ ಪ್ರತ್ಯೇಕ ಪಾಠಶಾಲೆಗಳನ್ನೇರ್ಪಡಿಸಿಕೊಡಬೇಕೆಂಬ ವಿಚಾರವಾಗಿ ಬಹು ಸಾಮರ್ಥ್ಯದಿಂದ ವಾದಾನುವಾದಗಳನ್ನು ನಡೆಯಿಸಿರುತ್ತೀರಿ. ಜನಾಭಿಪ್ರಾಯವನ್ನು ತಿಳಿಯದೆ ಆತುರದಿಂದ ಈ ಅಪ್ಪಣೆಯು ಮಾಡಲ್ಪಟ್ಟುದರಿಂದಲೇ ಆ ಸರ್ಕಾರಿ ಅಪ್ಪಣೆಯ ವಿಷಯದಲ್ಲಿ ಜನರು ಹೀಗೆ ನಿರೋಧಿಸುವುದಕ್ಕೆ ಅವಕಾಶವಾಯಿತೆಂದು ತಿಳಿಯುತ್ತೇನೆ. ಆದರೆ ಈ ಸಂಬಂಧವಾಗಿ ಈ ಸಭೆಯಲ್ಲಿ ಮಾತನಾಡಿದ ಪ್ರತಿಯೊಬ್ಬ ಪ್ರತಿನಿಧಿಗಳೂ ಈ ಅಪ್ಪಣೆಯು ನ್ಯಾಯಬದ್ಧವಾದುದೆಂಬುದನ್ನೇನೋ ಒಪ್ಪಿಕೊಂಡಿರುತ್ತಾರೆ. ಜನರ ಅಭಿಪ್ರಾಯವನ್ನು ತಿದ್ದುವುದು ಸರ್ಕಾರದ ಕರ್ತವ್ಯವಾಗಿದೆ. ಅದುಕಾರಣ ಈ ವಿಷಯದಲ್ಲಿ ಅವರು ಸಂಕಲ್ಪಿಸಿರುವ ಕಾರ್ಯದಿಂದ ಹಿಂಜರಿಯಲು ಸಾಧ್ಯವಲ್ಲ. ಸರ್ಕಾರದವರ ಸೂಚನೆಯ ಪ್ರಕಾರ ವಿದ್ಯಾಭ್ಯಾಸ ಶಾಖೆಯ ಇನ್ಸ್‌ಪೆಕ್ಟರ್ ಜನರಲ್‍ರವರಿಂದ ಹುಟ್ಟಿರುವ ೧೯೩೦ ನೆ ವರ್ಷದ ೧೫ ನೆ ನಂಬರ್ ಸರ್ಕ್ಯುಲರಿನ ೨ ನೆ ಪರಿಶಿಷ್ಟವನ್ನು ನೀವು ನೋಡಬೇಕಾಗಿದೆ. ಪ್ರಜೆಗಳು ತಮ್ಮ ಮನಸ್ಸಾಕ್ಷಿಗನುಗುಣವಾಗಿ ಈ ಏರ್ಪಾಡನ್ನಾಕ್ಷೇಪಿಸಿ ಸ್ವತಂತ್ರವಾಗಿ ನೂತನ ಪಾಠಶಾಲೆಗಳನ್ನು ಸ್ಥಾಪಿಸಿಕೊಂಡರೆ ಅದಕ್ಕೆ ಗ್ರಾಂಟ್ ಕೊಡುವ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿರುವರೆಂದು ಗೊತ್ತಾಗುತ್ತದೆ. ಬೇರೆಬೇರೆ ಪಂಗಡಗಳವರಿಂದ ಸ್ಥಾಪಿಸಲ್ಪಟ್ಟ ಪಾಠಶಾಲೆಗಳು ಸಹಾಯವನ್ನು ಪಡೆಯಲು ಅರ್ಹವಾಗಿದ್ದಲ್ಲಿ ಅವುಗಳಿಗೆ ಗ್ರಾಂಟನ್ನು ಸಲ್ಲಿಸುವಂತೆ ಈಗ ಪುನಸ್ಸಮರ್ಪಣೆ ಮಾಡಲ್ಪಡುತ್ತಿರುವ ಗ್ರಾಂಟ್ ಇನ್ ಏಡ್ ಕೋಡಿನಲ್ಲಿ ಅವಕಾಶವು ಕಲ್ಪಿಸಲ್ಪಡುವುದು. ಗ್ರಾಂಟಿನೇಡ್ ಕೋಡನ್ನು ಅನುಷ್ಠಾನಕ್ಕೆ ತರುವಲ್ಲಿ ಹೆಚ್ಚಾದ ಸಾನುಭೂತಿಯೂ ಉಚಿತಜ್ಞತೆಯೂ ತೋರಿಸಲ್ಪಡುತ್ತ ಬರುವುದರಿಂದ ಎಲ್ಲ ಪಕ್ಷದವರಿಗೂ ತೃಪ್ತಿಯುಂಟಾಗಿ ಮನಸ್ತಾಪವು ನಿವಾರಣೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಪ್ರೆಸ್ ಆಕ್ಟನ್ನು ತೆಗೆದುಹಾಕಿಬಿಡಬೇಕೆಂಬ ವಿಷಯದಲ್ಲಿ ಬಹು ಕೌಶಲದಿಂದಲೂ, ಧೈರ್ಯದಿಂದಲೂ ಚರ್ಚೆಯು ನಡೆದಿರುತ್ತದೆ. ಈ ಆಕ್ಟನ್ನು ತೆಗೆದುಬಿಟ್ಟರೆ ಸಂಸ್ಥಾನದಲ್ಲಿ ಒಂದು ಇಂಗ್ಲೀಷ್ ದೈನಿಕ ಪತ್ರಿಕೆಯು ಹೊರಡಿಸಲ್ಪಡುವುದೆಂದು ಕೂಡ ತಿಳಿಯಿಸಲ್ಪಟ್ಟಿತು. ಈ ವಿಚಾರದಲ್ಲಿ ಪ್ರತಿನಿಧಿಗಳೊಳಗೇ ಭಿನ್ನಾಭಿಪ್ರಾಯವಿದೆ. ಈ ಆಕ್ಟನ್ನನುಸರಿಸಿ ಸರ್ಕಾರದವರು ಯಾವ ಕಾರ್ಯಭಾಗವನ್ನೂ ನಡೆಸುತ್ತಲಿಲ್ಲವೆಂದು ಅನೇಕರು ವಾದಿಸಿದ್ದಾರೆ. ಈ ಆಕ್ಟು ನಮ್ಮಲ್ಲಿ ಹುಟ್ಟಿ ೧೨ ವರ್ಷಗಳ ಮೇಲೆಯೇ ಆಗಿದ್ದರೂ ಇದುವರೆಗೂ ಈ ಆಕ್ಟನ್ನನುಸರಿಸಿ ಯಾರೊಬ್ಬರ ಮೇಲೂ ಯಾವ ಕಾರ್ಯಭಾರವನ್ನೂ ನಡೆಯಿಸಿಲ್ಲ. ಈ ಆಕ್ಟನ್ನು ನಿಷೇಧಿಸಿ ಒಂದು ವೃತ್ತಪತ್ರವು ಮಾತ್ರ ಪ್ರಕಟಗೊಳ್ಳದೆ ನಿಂತುಹೋಯಿತು. ಆದರೆ ಅನೇಕ ನೂತನ ಪತ್ರಿಕೆಗಳು ಅಂದಿನಿಂದಲೂ ಉದಯಗೊಂಡಿವೆ ಈ ಆಕ್ಟಿನಿಂದ ತಮಗುಂಟಾಗಿರುವ ಅಧಿಕಾರವನ್ನು ಸರ್ಕಾರದವರು ಕೇವಲ ಅನಿರ್ವಾಹ ಸಂದರ್ಭದಲ್ಲಿ ವಿನಾ ಉಪಯೋಗಿಸುವವರಾಗಿಲ್ಲವೆಂಬುದನ್ನು ನಿಮಗೆ ಬರವಸೆ ಕೊಟ್ಟು ಹೇಳುತ್ತೇನೆ. ಈ ಆಕ್ಟಿನಿಂದ ನ್ಯಾಯಮಾರ್ಗವನ್ನನುಸರಿಸುವ ಪತ್ರಿಕೆಗಳಿಗೆ ಯಾವ ವಿಧವಾದ ಅಡಚಣೆಯುಂಟಾಗಿದೆಯೆಂದೂ ನಾನು ನಂಬುವುದಿಲ್ಲ. ಈ ಆಕ್ಟನ್ನು ಸೌಮ್ಯಗೊಳಿಸಲು ಯಾವ ಬದಲಾವಣೆಯನ್ನು ಮಾಡಬಹುದೆಂಬುದನ್ನು ಬೇಕಿದ್ದರೆ ಸರ್ಕಾರದವರು ಪರ್ಯಾಲೋಚಿಸುವರು. (ಈ ಸಂಬಂಧದಲ್ಲಿ ದಿವಾನರು ಮಾತನಾಡುವಾಗ್ಗೆ ಇಂಗ್ಲೀಷ್ ದೈನಿಕ ಪತ್ರವು ಹುಟ್ಟಲಿಕ್ಕೆ ಪ್ರೆಸ್ ಆಕ್ಟೇ ತಡೆಯಾಗಿದೆಯೆಂಬುದನ್ನು ನಾನು ಒಪ್ಪುವುದಿಲ್ಲವೆಂತಲೂ, ಅದಕ್ಕೆ ತಕ್ಕ ಜನರ ಅಭಾವವೇ ಅಂಥ ದೈನಿಕ ಪತ್ರವು ಉದಯಗೊಳ್ಳದಿರುವುದಕ್ಕೆ ಕಾರಣವೆಂದು ನಾನು ತಿಳಿಯುತ್ತೇನೆಂತಲೂ ಬಾಯಿಮಾತಿನಲ್ಲಿ ಹೇಳಿದರು.) ಬಜೆಟ್ಟಿನ ಸಂಬಂಧದ ಕ್ಷೇಪಗಳಿಗೆಲ್ಲಾ ಫೈನಾನ್ಷಿಯಲ್ ಸೆಕ್ರಿಟೆರಿಯವರೇ ಉತ್ತರ ಹೇಳಿರುತ್ತಾರೆ. ನಾನು ಬೇರೆ ಹೇಳಬೇಕಾದುದಿಲ್ಲ. ಸರ್ಕಾರದುದ್ಯೋಗಿಗಳ ಸಂಬಳವು ಹೆಚ್ಚಾಗಿವೆಯೆಂಬ ವಿಷಯವಾಗಿ ಪದೇ ಪದೇ ಬಹಳವಾಗಿ ಚರ್ಚೆಯಾಗುತ್ತಿದೆ. ಆದರೆ ನಿಮ್ಮ ಪ್ರತಿನಿಧಿಗಳೇ ಫೈನಾನ್ಷಿಯಲ್ ಕಮಿಟಿಯಲ್ಲಿ ಸಭಿಕರಾಗಿದ್ದಾರೆ. ಆ ಕಮಿಟಿಯವರು ಕೂಲಂಕಷವಾಗಿ ಆ ವಿಷಯವನ್ನು ವಿಮರ್ಶಿಸುತ್ತಿದ್ದಾರೆ. ಅವರು ತಮ್ಮ ಸೂಚನೆಗಳನ್ನು ಹೊರಪಡಿಸುವವರೆಗೂ ಆ ಸಂಬಂಧವಾಗಿ ಆಕ್ಷೇಪಗಳನ್ನು ಮಾಡಬಾರದೆಂದು ಸೂಚಿಸುತ್ತೇನೆ.

ನಮ್ಮ ಶ್ರೀಮನ್ಮಹಾರಾಜರವರು ಕಳೆದ ತಾ|| ೨ ರಲ್ಲಿ ಲಂಡನ್ ಪಟ್ಟಣವನ್ನು ಸುರಕ್ಷಿತವಾಗಿ ಸೇರಿದರು.

ಬ್ರಿಟಿಷ್ ರೆಸಿಡೆಂಟರು ರಾಜಧಾನಿಗೆ ದಯಮಾಡಿಸಿರುತ್ತಾರೆ. ಅನೇಕ ಯೂರೋಪ್ಯ ದೇಶೀಯಾತಿಥಿಗಳು ಬಂದಿದ್ದಾರೆ. ಕುದುರೆಯ ಜೂಜುಗಳು ನಿನ್ನೆಗೆ ಮುಗಿದುವು. ಪಂಚಾನ ಆಟಗಳೂ ನಡೆದವು. ಕಳೆದ ಗುರುವಾರ ಅರಮನೆ ಕೋಟೆಬಾಗಿಲು ಮೊದಲಾದುವುಗಳ ಮೇಲೆ ವಿದ್ಯುದ್ದೀಪಾವಳಿಯು ಹೊತ್ತಿಸಲ್ಪಟ್ಟಿದ್ದಿತು. ಅತಿಥಿಗಳಿಗೆಲ್ಲ ಔತಣವು ನಡೆದಿತು. ಮಂಮಲ್ಲಪ್ಪನವರ ಹೈಸ್ಕೂಲಿನಿಂದ ಕಳೆದ ಸಲ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹೋಗಿದ್ದ ೮೦ ಮಂದಿಗಳಲ್ಲಿ ೪೫ ಮಂದಿಗಳು ಉತ್ತೀರ್ಣರಾಗಿದ್ದಾರೆ. ಇವರಲ್ಲಿ ೨೫ ಮಂದಿಗಳು ೩ ಗ್ರೂಪಿನಲ್ಲೂ ತೇರ್ಗಡೆಯಾಗಿದ್ದಾರೆ. ೩ ಗ್ರೂಪಿನಲ್ಲೂ ತೇರ್ಗಡೆಯಾಗಿರುವ ವೀರಶೈವ ವಿದ್ಯಾರ್ಥಿಗಳು ಮೂವರಾಗಿದ್ದಾರೆ. ಈ ವರ್ಷದಲ್ಲಿ ಉಂಟಾಗಿರುವಂಥ ಉತ್ತಮ ಫಲಿತಾಂಶವು ಆ ಸ್ಕೂಲಿನಲ್ಲಿ ಹಿಂದೆ ಆಗಿದ್ದುದೇ ಇಲ್ಲ.

ಪತ್ರವ್ಯವಹಾರ.

ಹಾವೇರಿ ವೀರಶೈವ ತರುಣರ ಸ್ಪೆಷಲ್ ಸಮ್ಮೇಲನ.

ಮೇ ತಿಂಗಳ ೩೦-೩೧ ನೆ ತಾ|| ಗಳ ದಿನ ಕೂಡಬೇಕಾಗಿದ್ದ ಸದರೀ ಸಮ್ಮೇಲನವನ್ನು ಕೆಲವು ಅನಿವಾರ್ಯ ಅಡಚಣೆಗಳ ಮೂಲಕ ದೀಪಾವಳಿಯ ಸೂಟಿಯಲ್ಲಿ ಕೂಡಿಸುವುದನ್ನು ಗೊತ್ತುಮಾಡಿದೆ. ಆದುದರಿಂದ ಸದ್ಯಕ್ಕೆ ತಹಕೂಬು ಇಟ್ಟಿದೆ. ವಿಶೇಷ ಮಾಹಿತಿಯನ್ನು ಹಿಂದಿನಿಂದ ಪ್ರಕಟಿಸಲಾಗುವುದು.

ಎಸ್. ಎನ್. ಬಸವನಾಳ, ಎಂ. ಎ.

ಮಾಸ್ತರರು ಬೇಕು.

ವಿಜಾಪುರ ಜಿಲ್ಲಾ ಹುನಗುಂದ ತಾಲ್ಲೂಕು ಪೈಕಿ ಕೂಡಲ ಸಂಗಮ ಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಶ್ರೀವಿಜಯಮಹಾಂತ ಎ. ವಿ. ಸ್ಕೂಲಿಗೆ ಗ್ರಾಜುಯೇಟ್ಸ್ ಅಂಡರ್ ಗ್ರಾಜುಯೇಟ್ಸ್ ಮೆಟ್ರಿಕ್ ಅಥವಾ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾದ ಮಾಸ್ತರರು ಬೇಕಾಗಿದ್ದಾರೆ. ಬರಲಿಚ್ಛೆಯುಳ್ಳವರು ಜೂನ್ ೨೫ ನೆ ತಾರೀಖಿನೊಳಗಾಗಿ ಕೆಳಗೆ ಬರೆದ ವಿಳಾಸದವರೊಡನೆ ಸಂಬಳವುಂತಾದುದನ್ನು ಕುರಿತು ಪತ್ರವ್ಯವಹಾರ ಮಾಡಬಹುದು, ಇಲ್ಲವೆ ಸಮಕ್ಷ ಭೇಟಿಯಾಗಿ ತಿಳಿದುಕೊಳ್ಳಬಹುದು.

ರುದ್ರಪ್ಪಗೌಡ ಗಿರಿಮಲ್ಲಪ್ಪಗೌಡ ಪಾಟೀಲ ಮುಖ್ಯಂ ಸಂಗಮ
ವಿಜಯ ಮಹಾಂತ ಎ. ವಿ. ಸ್ಕೂಲ್ ಚೇರಮನ್.

ಶ್ರೀ ಜಗದ್ಗುರು ಜಯದೇವ ವಿದ್ಯಾಸದನ ತುಮಕೂರು.

ಶ್ರೀ ಜಗದ್ಗುರು ಜಯದೇವ ವಿದ್ಯಾಸದನ ಎಂಬ ಹೆಸರಿನಿಂದ ತುಮಕೂರು ಡಿಸ್ಟ್ರಿಕ್ಟ್ ವೀರಶೈವ ಕಾನ್ಫರೆನ್ಸಿನವರು ಸ್ಥಾಪಿಸಿದ ವೀರಶೈವ ವಿದ್ಯಾರ್ಥಿನಿಲಯವು ಕಾಲೇಜ್ ಹೈಸ್ಕೂಲಿರುವ ತುಮಕೂರಿನಲ್ಲಿ ೧೯೩೦ ನೆ ಜುಲೈ ೧ ನೆ ತಾ|| ಲಾಗಾಯಿತು ತುಮಕೂರು ವೀರಶೈವಸೇವಾಸಮಾಜದವರಿಂದ ಪ್ರಾರಂಭಿಸಲ್ಪಡುತ್ತದೆ. ಇಲ್ಲಿನ ಹೈಸ್ಕೂಲು ಮತ್ತು ಮಿ|| ನಾರ್ಮಲ್ ಸ್ಕೂಲುಗಳಲ್ಲಿ ವ್ಯಾಸಂಗ ಮಾಡುವ ವೀರಶೈವ ವಿದ್ಯಾರ್ಥಿಗಳಿಗೆ ಈ ಸ್ಟೂಡೆಂಟ್ಸ್ ಹೋಮಿನಲ್ಲಿ ಸದ್ಯಃ ಡಿವೈಡಿಂಗ್ ಸಿಸ್ಟಂ (ಹಂಚಿಕೆ) ಪ್ರಕಾರ ಭೋಜನಕ್ಕೂ ವಾಸಕ್ಕೂ ಏರ್ಪಾಟು ಮಾಡಿದೆ. ಈ ನಿಲಯವು ಆರೋಗ್ಯವಾದ ಸ್ಥಳದಲ್ಲಿರುವದಲ್ಲದೆ ಸಂಯಾದ ಕಮಿಟಿಯ ಆಡಳಿತಕ್ಕೆ ಒಳಪಟ್ಟಿದೆ. ಇಲ್ಲಿ ವಾಸಮಾಡುವ ವಿದ್ಯಾರ್ಥಿಗಳು ಕಮಿಟಿಯವರ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು. ತುಮಕೂರಿನ ಹವಾ ಉತ್ತಮವಾಗಿರುವದಲ್ಲದೆ ಇಲ್ಲಿನ ಸ್ಕೂಲುಗಳಲ್ಲಿ ಪಾಠಗಳು ಬಹಳ ತೃಪ್ತಿಕರವಾಗಿ ನಡೆಯುತ್ತವೆ. ಈ ನಿಲಯಕ್ಕೆ ಸೇರಲು ಇಷ್ಟವುಳ್ಳ ವಿದ್ಯಾರ್ಥಿಗಳು ಜೂನ್ ೨೫ ನೆ ತಾರೀಖಿನೊಳಗಾಗಿ ನಮ್ಮಲ್ಲಿಗೆ ತಮ್ಮ ಪೋಷಕರ ರುಜುವಿನ ಅಪ್ಲಿಕೇಷನ್ ಕಳುಹಿಸಿಕೊಡತಕ್ಕದ್ದು, ಮತ್ತು ಹತ್ತು ರೂಪಾಯಿಗಳನ್ನು ಅಡ್ವಾನ್ಸಾಗಿ ಮನಿಯಾರ್ಡರ್ ಮಾಡತಕ್ಕದ್ದು.

ಪ್ಲೀಡರ್ ಜಿ. ಕೆ. ಗುರುಸಂಗಾರ,
ಜನರಲ್ ಸೆಕ್ರೆಟರಿ, ವೀರಶೈವ ಸೇವಾಸಮಾಜ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಜನರಲ್ ಕಮಿಟಿ ಮೀಟಿಂಗು.

ಮೇಲ್ಕಂಡ ಸಂಘದ ಜನರಲ್ ಕಮಿಟಿ ಮೀಟಿಂಗು ೨೭-೬-೧೯೩೦ ನೇ ಭಾನುವಾರ ನಡೆಯುವುದಾಗಿ ಪ್ರಕಟವಾಗಿರುವುದು ಸರಿಯಷ್ಟೆ. ಮೀಟಿಂಗಿನಲ್ಲಿ ಪರ್ಯಾಲೋಚಿಸಬೇಕೆಂದಿರುವ ವಿಷಯಗಳಪಟ್ಟಿಯನ್ನು ನೋಡಿದರೆ ಸಂಘದವರು ಅತ್ಯವಶ್ಯಕವಾಗಿ ಗಮನಿಸತಕ್ಕ ವಿಷಯ ಮಾತ್ರ ಪಟ್ಟಿಯಲ್ಲಿ ಸೇರಿರುವುದಿಲ್ಲ. ಅದಾವುದೆಂದರೆ—ಸಂಘದ ಧನರಾಶಿಯನ್ನು ವೃದ್ಧಿಗೊಳಿಸಲವಶ್ಯಕವಾಗಿ ಮಾಡಬೇಕಾದೇರ್ಪಾಡುಗಳ ವಿಚಾರವು. ಈ ಸಂಘದ ಸ್ಥಾಪನೆಯಾಗಿ ೧೫ ವರ್ಷಗಳಾದುವು. ದೈವಾನುಗ್ರಹದಿಂದ ಕೀರ್ತಿಶೇಷರಾದ ಕೈ|| ಸರಾಫ್ ರಾಮಣ್ಣನವರು ತಮ್ಮ ವಿಶಿಷ್ಟ ಆಸ್ತಿಯನ್ನೂ ಅಂದರೆ ಸುಮಾರು ೩೦,೦೦೦ ರೂ. ಯನ್ನು ಸಂಘಕ್ಕೆ ದಾನ ಮಾಡಿದ್ದರೆ ಈ ಧನರಾಶಿಗೆ ಇದುವರೆಗೆ ೫೦,೦೦೦ ರೂಪಾಯಿಯೂ ಸೇರುತ್ತಿರಲಿಲ್ಲ. ಇದುವರೆಗೆ ತಕ್ಕ ಪ್ರಯತ್ನ ಮಾಡಿದ್ದರೆ ೭,೦೦,೦೦೦ ಪ್ರಜೆಗಳಿರುವ ವೀರಶೈವ ಸಮಾಜದಿಂದ ವರುಷಕ್ಕೆ ಕನಿಷ್ಠ ಪಕ್ಷ ೧೦,೦೦೦ ರೂಪಾಯಿನಂತೆ ಧನವನ್ನು ಶೇಖರಿಸುವುದು ಕಷ್ಟವಾಗಿರುತ್ತಿರಲಿಲ್ಲ.

ವೀರಶೈವ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಸಮಾಜದ ಸುದೈವದಿಂದ ವೀರಶೈವರಲ್ಲಿ ಈಗೀಗ ವಿದ್ಯಾಕಾಂಕ್ಷೆಯು ಹೆಚ್ಚುತ್ತಿದೆ. ಈ ಸಮಯದಲ್ಲಿ ಸಂಘದವರು ವಿದ್ಯಾಭಿವೃದ್ಧಿಗೆ ವಿಶೇಷ ಪ್ರೋತ್ಸಾಹ ಕೊಡುವುದು ಅವಶ್ಯಕವಾಗಿದೆ. ಅದಕ್ಕೆ ಫಂಡಿನಲ್ಲಿ ತಕ್ಕಷ್ಟು ಚೈತನ್ಯವಿಲ್ಲ; ಧನಾಭಾವದಿಂದ ತಕ್ಕಷ್ಟು ಪ್ರೋತ್ಸಾಹ ಕೊಡಲು ಸಾಧ್ಯವಿಲ್ಲವೆಂದು ಹೇಳುವುದು ದೊಡ್ಡದಲ್ಲ. ಪ್ರಮುಖರು ೨-೩ ವರುಷಗಳವರೆಗೆ ಶ್ರದ್ಧೆಯಿಂದ ಕೆಲಸ ಮಾಡಿದರೆ ಅವರ ಪ್ರಯತ್ನವು ಸಾರ್ಥಕವಾಗದಿರದು. ಇದುವರೆಗೆ ಅವರು ತಕ್ಕ ಪ್ರಯತ್ನವನ್ನು ಮಾಡದೆ ಬೆಂಗಳೂರಿನಲ್ಲಿ ಕೆಲವು ಮೀಟಿಂಗುಗಳನ್ನು ಮಾತ್ರ ಕ್ರಮವಾಗಿ ಮಾಡುತ್ತಿರುವುದರಿಂದ ಗ್ರಾಮಾಂತರಗಳಲ್ಲಿರುವ ಅನೇಕ ವೀರಶೈವರಿಗೆ ಈ ಸಂಘದುದ್ದೇಶಗಳೇ ತಿಳಿದಿರುವುದಿಲ್ಲ. ವೀರಶೈವರು ಹೇರಳವಾಗಿರುವ ಪ್ರದೇಶಗಳಿಗೆ ಸಂಘದವರು ಆಗಿಂದಾಗ್ಗೆ ಡೆಪ್ಯುಟೇಷನ್ ಕಳುಹಿಸಿ ಕೊಡತಕ್ಕುದವಶ್ಯಕವಾಗಿದೆ. ವರ್ತಮಾನ ಪತ್ರಿಕೆಗಳಲ್ಲಿ ಸಂಘದ ಸದುದ್ದೇಶಗಳನ್ನೊಳಗೊಂಡಿರುವ ಪ್ರಕಟನೆಯೊಂದನ್ನು ಪ್ರತಿವಾರದಲ್ಲೂ ತಪ್ಪದೆ ಮುದ್ರಿಸುವಂತೆ ಮಾಡಬೇಕು. ಪ್ರಾಂತಿಕ ಸಭೆಗಳು, ದೇವತಾಕಾರ್ಯಗಳು, ಶ್ರೀಮಂತರ ಮನೆಗಳ ಲಗ್ನ ಮೊದಲಾದ ಶುಭಕಾರ್ಯಗಳು ನಡೆಯುವ ಸ್ಥಳಗಳಿಗೆ ಸಂಘದ ಪರವಾಗಿ ಮೆಂಬರುಗಳನ್ನು ಕಳುಹಿಸುವುದೇ ಮೊದಲಾದ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿದರೆ ಸಂಘದ ಧನರಾಶಿಯು ವೃದ್ಧಿಗೊಂಡು ತನ್ಮೂಲಕ ಸಮಾಜದೇಳ್ಗೆಯುಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನಾದರೂ ನಮ್ಮ ಸಮಾಜದ ಪ್ರಮುಖರು ತಮ್ಮ ಅಲಸತೆಯನ್ನು ದೂರ ಮಾಡಿ ಮುಂದಿನ ಮೀಟಿಂಗಿನಲ್ಲಿ ಮೇಲ್ಕಂಡವಿಚಾರಗಳನ್ನು ಪರ್ಯಾಲೋಚಿಸಿ ಸುವ್ಯವಸ್ಥೆ ಮಾಡುವವರಾಗಲೆಂದು ಪ್ರಾರ್ಥನೆ. "X."

ಪಟ್ಟಚರಾಧಿಕಾರಿ ಸಮ್ಮೇಲನ.

ನವಲಗುಂದದಲ್ಲಿ ಜರಗಬೇಕಾಗಿದ್ದ ೨ ನೆ ಪಟ್ಟಚರಾಧಿಕಾರಿಗಳ ಸಮ್ಮೇಲನದ ಆಹ್ವಾನ ಪತ್ರಿಕೆಯು ನನಗೆ ಬರದೆ ಇದ್ದರೂ ಯಥಾರ್ಥ ತತ್ವದ ವಿವೇಚನಕ್ಕಾಗಿ ನಾನು ನವಲಗುಂದಕ್ಕೆ ಹೋಗಿ ತಾ|| ೨೩-೫-೩೦ ನೆ ದಿವಸದ ಸಭೆಗೆ ಸ್ವತಃ ಹಾಜರ ಇದ್ದೆ. ಸಭೆಗೆ ೧೦-೧೫ ಜನ ಪಟ್ಟಚರಮೂರ್ತಿಗಳೂ, ಒಂದುನೂರು ಜನರವರೆಗೆ ಪ್ರೇಕ್ಷಕರೂ ಕೂಡಿದ್ದರು. ಅಲ್ಲಿ ನಡೆದ ವಿಷಯವೆಂದರೆ ಕಾರ್ಯಾಕಾರ್ಯಗಳ ವಿವೇಚನೆಯನ್ನು ಮಾಡದೆ ಕೇವಲ ನಿರಂಜನಮೂರ್ತಿಗಳ ನಿಂದೆಯನ್ನು ಮಾಡುವುದೇ ಮೂಲೋದ್ದೇಶವೆಂಬುವುದು ಅಲ್ಲಿ ನಡೆದ ವ್ಯಾಖ್ಯಾನಗಳಿಂದಲೇ ಕಂಡುಬಂತು. ಇನ್ನೊಂದು ಸಮಾಜ ವಿಘಾತಕ ವಿಷಯವೇನಂದರೆ:—"ಕೇವಲ ಪಂಚಾಚಾರ್ಯರ ಜಯಂತಿಯನ್ನು ಮಾಡಬೇಕಲ್ಲದೆ ವೀರಶೈವರು ಬಸವಜಯಂತಿಯನ್ನು ಸರ್ವಥಾ ಮಾಡಬಾರದು. ಮಾಡಿದರೆ ಬಸವೇಶ್ವರನೇ ಮತಸ್ಥಾಪಕನೆಂದು ನಾವೇ ಪರಮತೀಯರಿಗೆ ಹೇಳಿಕೊಟ್ಟಂತಾಗುತ್ತದೆ. ಆದ್ದರಿಂದ ಬಸವಜಯಂತಿಯನ್ನು ಮಾಡಬಾರದು" ಇತ್ಯಾದಿ ವಿಷಯವನ್ನು ಪ್ರತಿಪಾದಿಸಿ, ತಮ್ಮ ಗುರುವರ್ಗದ ಸಭೆಗೆ ಅಕ್ರಮವೆಂಬ ಕಲಂಕವನ್ನುಂಟುಮಾಡಿಕೊಂಡಿರುತ್ತಾರೆ. ಆದ್ದರಿಂದ ಇಂಥ ಅಗೌರವ, ಮತ್ತು ಅಪ್ರಯೋಜಕವಾದ ವಿಚಾರವನ್ನು ಸದಸದ್ವಿವೇಕವುಳ್ಳ ನಮ್ಮ ಸಮಾಜಬಾಂಧವರು ಸರ್ವಥಾ ಮನ್ನಿಸಬಾರದು. ಶ್ರೀಮತ್ಪಂಚಾಚಾರ್ಯರ ಜಯಂತಿಯನ್ನು ಮಾಡಬಾರದೆಂದು ನನ್ನ ಅಭಿಪ್ರಾಯವಿಲ್ಲ. ಆದರೆ ನಾಮಶೇಷವಾಗುತ್ತಿದ್ದ ನಮ್ಮ ಪವಿತ್ರಸಮಾಜವನ್ನುದ್ಧರಿಸಿದ ಪುಣ್ಯಶ್ಲೋಕ ಶ್ರೀ ಬಸವೇಶ್ವರನ ಜಯಂತಿಯನ್ನು ಮಾಡಿದರೆ ಆತನೇ ಮತಸ್ಥಾಪಕನಾಗುತ್ತಾನೆಂಬ ಇವರ ತಿಳುವಳಿಕೆ ಎಂಬ ಕೊರಡನ್ನು, ಪ್ರತಿ ವರ್ಷಗಳಲ್ಲಿ ಜರಗುತ್ತಿರುವ "ಕೈ|| ವಾ|| ಶ್ರೀಮಂತ ಶಿರಸಂಗಿಯ ಯಜಮಾನರ ಮತ್ತೂ ಕೈ|| ರಾ. ಬ. ವಾರದವರ" ಜಯಂತಿಗಳೆಂಬ ಸಾಣೇಕಲ್ಲಿಗೆ ತಿಕ್ಕಿದರೆ ಸುಗಂಧವಿರುವದೋ ದುರ್ಗಂಧವಿರುವದೋ ಸ್ಪಷ್ಟವಾಗಿ ತಿಳಿಯುತ್ತದೆ. ಇವರಲ್ಲಿ ಇವರ ಮುಖಹೀನತೆಯ ಇನ್ನೊಂದು ದೃಷ್ಟಾಂತವೆಂದರೆ ಮಿ|| ಪಾವಟೆಯವರ ದುರ್ಲೇಖದ ಖಂಡನೆಯನ್ನು ಸಭೆಯಲ್ಲ ಚರ್ಚೆಗೆ ಇಟ್ಟಿದ್ದರಷ್ಟೆ. ಆದರೆ ಪಾವಟೆಯವರು ನವಲಗುಂದಕ್ಕೆ ಬಂದು ಸ್ವತಃ ಶಾಂತರೀತಿಯಿಂದ ಚರ್ಚಿಸುತ್ತೇವೆಂದು ಬಹುಜನ ಪ್ರಮುಖ ಗೃಹಸ್ಥರೊಡನೆ ಹೇಳಿಕಳುಹಿಸಿದರೂ ಅದರಂತೆ ಪ್ರಮುಖರು ಸಭೆಯ ಚಾಲಕರನ್ನು ವಿಚಾರಿಸಿದಾಗ್ಗೂ ಒಪ್ಪದೆ, ಅಶಾಸ್ತ್ರೀಯ ಮತ್ತು ಅವಿದ್ಧತರ್ಕನದಿಂದ ಪಾವಟೆಯವರ ಲೇಖವನ್ನು ಖಂಡಿಸಿದೆವೆಂದು ಟಮಕಿಯನ್ನು ಬಾರಿಸಿದ್ದು ಇವರ ಪಂಡಿತಂಮನ್ಯತೆಯನ್ನೇ ವ್ಯಕ್ತಗೊಳಿಸಿದಂತಾಯಿತು. ಇರಲಿ. ಸಕಲ ಸಮಾಜಬಾಂಧವರಿಗೂ ನಿರಂಜನಮೂರ್ತಿಗಳಿಗೂ ನನ್ನ ನಮ್ರಸೂಚನೆ ಏನಂದರೆ:—ಕೆಲವು ನಿರಂಜನಮೂರ್ತಿಗಳು ಗುರುಸ್ಥಲದವರ ಹಕ್ಕಿನಲ್ಲಿ ತಮ್ಮ ಹಸ್ತಚಾಪಲ್ಯವನ್ನು ತೋರಿಸುತ್ತಾರೆಂಬ ಬಲವತ್ತರವಾದ ಅಪವಾದವುಂಟು. ಹಾಗಿದ್ದರೆ ಅವರು ಯೋಗ್ಯಸಮಯದಲ್ಲಿಯೇ ತಮ್ಮ ಮಾರ್ಗವನ್ನು ಸುಧಾರಿಸಿಕೊಳ್ಳುವುದುತ್ತಮ. ಭಕ್ತರಾದರೇ ಶಾಸ್ತ್ರವಿಚಾರ ಮತ್ತು ಪರಿಸ್ಥಿತಿಯ ದೃಷ್ಟಿಯಿಂದ ವರ್ತಿಸಬೇಕಲ್ಲದೆ ಏನಕೇನ ಪ್ರಕಾರೇಣ ಪ್ರಸಿದ್ಧಿಗೆ ಬರಬೇಕೆಂದು ಕೆಲವರು ಅಕ್ರಮವಾಗಿ ಬಾರಿಸುತ್ತಿರುವ ಡೊಳ್ಳಿನಗತ್ತಿನಂತೆ ಕುಣಿದು, ಪರಕೀಯ ಸಮಾಜದವರಲ್ಲಿ ಅದರಲ್ಲಿಯೂ ನವೀನ ಪರಿಸ್ಥಿತಿಯಲ್ಲಿ ಹಾಸ್ಯಕ್ಕೆ ಕಾರಣರಾಗಬಾರದೆಂದು ನನ್ನ ಸೂಚನೆಯುಂಟು

ಡಾಕ್ಟರ್ ಗಂಗಾಧರಸ್ವಾಮಿ,
ಪಟ್ಟಾಧಿಕಾರಿ ಹಿರೇಮಠ, ಎ. ವಿ. ಶಿ. ಗ್ರಾಂಟ್ ಇನ್ ಏಡ್
ಡಿಸ್ಪೆನ್ಸರಿ, ನಾಲತವಾಡ ಜಿ|| ವಿಜಾಪುರ.

ನವಲಗುಂದದ ಪಟ್ಟಚರಾಧಿಕಾರಿ ಸಮ್ಮೇಲನ ನಿಷೇಧ ಸಭಾ.

ಸಮ್ಮೇಲನದವರು ವೀರಶೈವಸಮಾಜವಿಭೇದಕವಾಗಿ ನಡೆಯಿಸಿದ ಕ್ರಮವನ್ನು ನಿಷೇಧಿಸಿ ಶ್ರೀಯುತ ಪಾವಟೆಯವರು ವಿಭಾಕರ ಪತ್ರದಲ್ಲಿ ಲೇಖನಗಳನ್ನು ಪ್ರಕಟಿಸಿದರು. ಅವುಗಳನ್ನು ಖಂಡಿಸುವುದೆಂಬೊಂದು ವಿಷಯವನ್ನು ಸಮ್ಮೇಲನದವರಿಟ್ಟುಕೊಂಡರು. ಆ ಬಗ್ಗೆ ಸಮ್ಮೇಲನಕ್ಕೂ ಶ್ರೀಯುತ ಪಾವಟೆಯವರಿಗೂ ತಾ|| ೧೦-೫-೧೯೩೦ ರ ತನಕ ನಡೆದ ಬಹಿರಂಗ ಪತ್ರವ್ಯವಹಾರವು ಸರ್ವರಿಗೂ ವಿದಿತವದೆ. ಮುಂದೆ ತಾರೀಖು ೧೮-೫-೧೯೩೦ ಕ್ಕೆ ಪಾವಟೆಯವರು ಸಮ್ಮೇಲನದವರಿಗೆ ಮತ್ತೊಂದು ಪತ್ರವನ್ನು "ನನಗೆ ಮೊದಲೇ ತಿಳಿಸಿದಂತೆ ಕಾಶೀ ಕಡೆಗೆ ಪಯಣವಿಲ್ಲ. ಮೇಲಾಗಿ ನಾನು ಕರೆಯಿಸಬಹುದಾದ ಪಂಡಿತರ ವಿಷಯಕ್ಕೆ ನೀವು ವಾದಿಸಬಹುದು. ಇತ್ತಕಡೆಗೆ ಪ್ರಸ್ತುತವಾದವನ್ನು ತಿಳಿದು ತಮ್ಮ ನಿರ್ಣಯವನ್ನು ಹೇಳಬಲ್ಲ ವಿದ್ವಾಂಸರು ಇಲ್ಲಿನ್ನಲಿಕ್ಕೆ ಬಾರದು. ನೀವು ಬೇಕಾದವರನ್ನು ಕರೆಯಿಸಿರಿ. ನಾನು ವಾದಕ್ಕೆ ಸಿದ್ಧನಿದ್ದೇನೆ. ನನ್ನ ಪರೋಕ್ಷದಲ್ಲಿ ನೀವು ಮಾಡಲೆಣಿಸಿದ ಖಂಡನವು ಖಂಡನವಾಗದು" ಎಂದು ವಿಧಃ ಪತ್ರ ಬರೆದರು. ಅದಕ್ಕೆ ಸಮ್ಮೇಲನದವರು ಸಮ್ಮತಿಸಲಿಲ್ಲ. "ಖಂಡನವನ್ನು ನಿಮ್ಮ ಸಮಕ್ಷವಾಗಿಯೇ ಮಾಡಬೇಕೆಂಬ ನಿಯಮವಿಲ್ಲ. ನೀವು ಸಮ್ಮೇಲನಸಭಾ ಪ್ರವೇಶ ಮಾಡಬಾರದು. ನಾವು ನಿಮ್ಮ ಲೇಖನ ಖಂಡನ ನಿರ್ಣಯ ಮಾಡಿದ ಬಳಿಕ ಕಾಶಿಯಿಂದ ಮೇಲೆ ವಿವರಿಸಿದ ವಿಶೇಷಣವುಳ್ಳ ಪಂಡಿತರನ್ನು ಕರತಂದರೆ ತಾ|| ೨೮-೫-೧೯೩೦ ಕ್ಕೆ ವಾದಮಾಡಬಹುದು" ಎಂದು ಉತ್ತರವನ್ನು ಕೊಟ್ಟರು. ವಾದದಿಂದ ಜಾರಲಿಕ್ಕೆ ಮಾಡಿದ ಈ ಯುಕ್ತಿಯು ಏನು ತೋರಿಸುತ್ತದೆಂಬುದು ಮೇಲೆಯೇ ಕಾಣುತ್ತದೆ. ವಾದವನ್ನು ಸಂಸ್ಕೃತದಲ್ಲಿಯೇ ಮಾಡಲಿಕ್ಕೆ ರಾ|| ರಾ|| ಪಾವಟೆಯವರು ಸಿದ್ಧರಿದ್ದರು. ವಾದವನ್ನು ತಿಳಿದು ನಿರ್ಣಯ ಹೇಳಲಿಕ್ಕೆ ತಕ್ಕ ಸಂಸ್ಕೃತ ವಿದ್ವಾಂಸರು ಇಡೀ ಕರ್ನಾಟಕದಲ್ಲಿಯೇ ಇಲ್ಲವೆ? ತಮ್ಮ ಕೂಡ ವಾದಮಾಡಲಿಕ್ಕೆ ಸಮ್ಮೇಲನವು ಸಿದ್ಧವಿಲ್ಲದ್ದರಿಂದ ಸಮ್ಮೇಲನ ನಿಷೇಧ ಸಭೆಯನ್ನು ಕೂಡಿಸಬೇಕೆಂದು ರಾ|| ರಾ|| ಪಾವಟೆಯವರು ಮನಸ್ಸು ಮಾಡಿದರು. ನವಲಗುಂದದಲ್ಲಿ ಪರಂಪರಾಗತವಾಗಿ ನಡೆದುಬಂದ ವೀರಶೈವಸಮಯನಿಷ್ಠರಾದ ಅನೇಕ ಪ್ರಮುಖರನ್ನು ಕೇಳದೆ ಸಮ್ಮೇಲನದವರು ತಮ್ಮ ಕಾರ್ಯಕ್ಕೆ ಅನುಕೂಲರಾಗಿರುವರೆಂದು ತೋರಿಸುವುದಕ್ಕಾಗಿ ತಮ್ಮ ಸಮ್ಮೇಲನದ ಸ್ವಾಗತಮಂಡಲಕ್ಕೆ ಅಧ್ಯಕ್ಷರೆಂತಲೂ ಕಾರ್ಯದರ್ಶಿಗಳೆಂತಲೂ ಸುಮ್ಮನೆ ಪ್ರಕಟಮಾಡಿದ್ದರು. ಅದರಿಂದ ಈ ಸಜ್ಜನರು ಸಂತಪ್ತರಾಗಿದ್ದರು. ರಾ|| ರಾ|| ಪಾವಟೆಯವರು ನಿಷೇಧ ಸಭೆಯನ್ನು ಮಾಡುವ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಕೇಳಲು, ಬಹಳ ಆನಂದದಿಂದ ಅನುಮೋದಿಸಿ ಅವರೆಲ್ಲಾ ಸಭಾಕಾರ್ಯವನ್ನು ಕೈಕೊಂಡರು. ಸಮ್ಮೇಲನದ ತಾರೀಖುಗಳಲ್ಲಿಯೇ ಸಭೆಯನ್ನಿಟ್ಟಿತು. ಸಭಾಧ್ಯಕ್ಷಸ್ಥಾನವನ್ನು "ಪಂಡಿತ ಗುರುಸಿದ್ಧದೇವರು ಯಕ್ಕುಂಡಿ" ಎಂಬ ವಿದ್ವಾಂಸರು ಸ್ವೀಕರಿಸಿದರು. ಈ ಮಹಾಶಯರು ಕಾಶಿಯಲ್ಲಿ ಅಧ್ಯಯನ ಮಾಡುತ್ತಿದ್ದು ಸಾಂಖ್ಯನ್ಯಾಯಶಾಸ್ತ್ರಗಳ ಹಲವು ಖಂಡಗಳ ಪರೀಕ್ಷೆ ಕೊಟ್ಟಿರುವರು. ತಮ್ಮ ಬಂಧುಗಳ ಸಮ್ಮೇಲನದ ಅಧ್ಯಕ್ಷರಾದ ಹೂಲಿ ಚರಮೂರ್ತಿಗಳೆನ್ನುವವರ ಅನ್ಯಾಯವು ಸಹಿಸದೆ ಇವರು ಸಭಾಧ್ಯಕ್ಷರಾಗಲಿಕ್ಕೆ ಒಪ್ಪಿದರು. ಸಭೆಗೆ ನವಲಗುಂದದ ಪ್ರಮುಖರಲ್ಲಿ ಒಬ್ಬಿಬ್ಬರನ್ನು ಬಿಟ್ಟು ಎಲ್ಲರೂ ಬಂದಿದ್ದರು. ಶಿ|| ರಾ|| ರಾ|| ವೀರಯ್ಯನವರು ಹಿರೇಮಠ, ಶಿ|| ರಾ|| ರಾ|| ಬಸವಲಿಂಗಯ್ಯನವರು ಹಿರೇಮಠ ಮೊದಲಾದ ಮಠಸ್ಥರೂ ಮ|| ರಾ|| ರಾ|| ಜಂಪಣ್ಣ ಶೆಟ್ಟರು ಮ|| ರಾ|| ರಾ|| ಚನ್ನಶೆಟ್ಟರು, ಮ|| ರಾ|| ರಾ|| ಕುಬಸದ ಗೋಳಪ್ಪನವರು, ಮ|| ರಾ|| ರಾ|| ಬ್ಯಾಹಟ್ಟಿ ಶಿವಲಿಂಗಪ್ಪನವರು ಮೊದಲಾದ ಭಕ್ತರೂ ಸಭೆಗೆ ಬಂದಿದ್ದರು. ಪರಸ್ಥಳದಲ್ಲಿ ಶಿ|| ರಾ|| ರಾ|| ಪಂಡಿತ ಗುರುಸಿದ್ಧದೇವರು, ಶಿ|| ರಾ|| ರಾ|| ಗುರುಮೂರ್ತಿಶಾಸ್ತ್ರಿ ಹಿರೇಮಠ ಮತ್ತು ರಾ|| ರಾ|| ವೀರಪ್ಪ ಕುದರೀಮೋತಿ ನರಗುಂದ, ರಾ|| ರಾ|| ಶಿವಪ್ಪ ಯಾವಗಲ್ ಹುಬ್ಬಳ್ಳಿ, ರಾ|| ರಾ|| ಪ್ರಭುಗೌಡರು ಅಣಸೂರ, ಮೊದಲಾದ ಪ್ರಮುಖರು ದಯಮಾಡಿಸಿದ್ದರು. ರಾ|| ರಾ|| ಪಾವಟೆಯವರೂ ಬಂದಿದ್ದರೆಂದು ಬೇರೆ ಹೇಳುವ ಕಾರಣವಿಲ್ಲ. ನವಲಗುಂದದ ಬ್ರಾಹ್ಮಣ ವೈಶ್ಯ ಮೊದಲಾದ ಪರಮತಸ್ಥರು ಸಹ ಸಭೆಗೆ ದಯಮಾಡಿಸಿದ್ದರು. ಸಭಾಕಾರ್ಯವು ಕೀರ್ತಿಶೇಷರಾದ ಕೈ|| ವಾ|| ಶಿರಸಂಗಿ ಸರ್ ದೇಸಾಯರವರ ಪೂರ್ವಜರಿಂದ ಸ್ಥಾಪಿಸಲ್ಪಟ್ಟ ಶ್ರೀ ಗಣಪತಿ ದೇವಾಲಯದಲ್ಲಿ ತಾ|| ೨೬-೫-೧೯೩೦ ರ ಸಾಯಂಕಾಲ ೫ ಘಂಟೆಗೆ ಪ್ರಾರಂಭವಾಯಿತು. ರಾ|| ರಾ|| ಜಂಪಣ್ಣಶೆಟ್ಟರು ಶಿಷ್ಟಾಚಾರದಂತೆ ಶ್ರೀಯುತ ಪಂಡಿತ ಗುರುಸಿದ್ಧದೇವರು ಸಭಾಧ್ಯಕ್ಷರಾಗಬೇಕೆಂದು ಸೂಚಿಸಿದರು. ಇದಕ್ಕೆ ರಾ|| ರಾ|| ಕುದರೀಮೋತಿ ವೀರಪ್ಪನವರು ಅನುಮೋದನ ಮಾಡಿ ಸರ್ವ ಸಭಿಕರೂ ಸಮ್ಮತಿಯನ್ನು ಕೊಡಲು ಆ ಪಂಡಿತರು ಅಧ್ಯಕ್ಷಸ್ಥಾನಾಪನ್ನರಾದರು. ಆ ಮೇಲೆ ರಾ|| ರಾ|| ಪಾವಟೆಯವರು "ಲಿಂಗಾಯತ ಧರ್ಮವೂ, ಅದರ ಗುರುಗಳೂ, ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಅವರು ಈ ಧರ್ಮವು ಅನಾದಿಯಿಂದಲೂ ವೈದಿಕತತ್ವವನ್ನೊಳಗೊಂಡು ನಡೆದುಬಂದಿರುವುದನ್ನೂ ಈ ಧರ್ಮದ ವೈದಿಕತ್ವವನ್ನೂ, ವಿಶ್ವವ್ಯಾಪಕತೆಯನ್ನೂ ವಿಶದಪಡಿಸಿ, ಸಾಕ್ಷಾತ್ ವೃಷಭೇಶ್ವರನ ಅಪರಾವತಾರನಾದ ಸರ್ವಲಿಂಗಾಯತರಿಗೂ ಸದಾವಂದ್ಯನಾದ ಬಸವೇಶನಿಂದ ಈ ಮತವು ಉದ್ಧಾರವಾಗಿ ನಡೆಯುತ್ತಿರುವ ಸಂದರ್ಭವನ್ನು ವ್ಯಕ್ತಪಡಿಸಿದರು. ಬಸವೇಶ್ವರನ ಕಾಲದಿಂದಿತ್ತ ಸುಮಾರು ಇಂದಿಗೆ ನೂರು ವರ್ಷಗಳ ಹಿಂದಿನವರೆಗೆ ಈ ಮತದ ಗುರುಪರಂಪರೆಯು ಧರ್ಮೋಪದೇಶವನ್ನು ಯಥಾಶಾಸ್ತ್ರಸಂಪ್ರದಾಯವಾಗಿ ಮಾಡುತ್ತಬಂದದ್ದರಿಂದ ಪರಮತೀಯರ ಅಭ್ಯರ್ಹಣಕ್ಕೂ ಈ ಲಿಂಗಾಯತ ಧರ್ಮತತ್ವಗಳು ಮಾನ್ಯವಾಗಿರುವ ವಿವರವನ್ನು ೧೯೧೮ ನೆ ಇಸವಿಯಲ್ಲಿ ಸಾಮಾಜಿಕ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ನಟೇಶನ್‍ರವರು ತಮ್ಮ ಅಧ್ಯಕ್ಷಸ್ಥಾನದಿಂದ ಮಾಡಿದ ಬಸವೇಶನ ಅಭಿನಂದನದಿಂದ ಸ್ಪಷ್ಟೀಕರಿಸಿದರು. ಆದರೆ ಇತ್ತಿತ್ತಲಾಗಿ ಈ ಗುರುವರ್ಗದವರೆನ್ನುವವರ ಸಂಕುಚಿತ ದೃಷ್ಟಿಗಳಾಗಿ ಅನ್ಯರನ್ನು ಬದಿಗಿಟ್ಟು ತಾವೇ ಮುಂದಕ್ಕೆ ಬರಬೇಕೆಂಬ ಉದ್ದೇಶದಿಂದ ನಡಿಸಿದ ಅಕೃತ್ಯಗಳನ್ನೂ ಅದರಲ್ಲಿಯೂ ವಿಶೇಷವಾಗಿ ಕಾಶೀನಾಥಶಾಸ್ತ್ರಿಗಳೂ ಅವರನ್ನು ಬೆಂಬಲಿಸುವ ಆಚಾರ್ಯಪೀಠಸ್ಥರೆನ್ನುವವರೂ ವೀರಶೈವಸಮಾಜದ ವಿಘಾತಕವಾಗಿಯೂ ಅಶಾಸ್ತ್ರೀಯವಾಗಿ ನಡೆದುಬಂದ ನಿರಂಜನ ಪೀಠಸ್ಥರ ಅಗೌರವಕರವಾಗಿಯೂ ನಡಿಸಿದ ಚಳವಳಿಯು ಗುರು ಲಿಂಗ ಜಂಗಮದ್ರೋಹಾತ್ಮಕವಾದುದೆಂದು ವ್ಯಕ್ತಪಡಿಸಿದರು. ಇದೇ ವಿಷಯವನ್ನು ಕುರಿತು ಶಿ|| ರಾ|| ರಾ|| ಪಂಡಿತ ಗುರುಮೂರ್ತಿಶಾಸ್ತ್ರಿ ಕಾವ್ಯತೀರ್ಥ ಕಜ್ಜರಿ ಹಿರೇಮಠ ಇವರು ಸುರಸವಾಗಿ ಭಾಷಣ ಮಾಡಿ, ಪಾವಟೆಯವರ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಇತರ ಸಭ್ಯರ ಭಾಷಣಗಳಾದ ಬಳಿಕ ಸಭೆಯಲ್ಲಿ ಕೆಳಗೆ ಬರೆದ ನಿರ್ಧಾರಗಳು ಸರ್ವಾನುಮತದಿಂದ ಮಾಡಲ್ಪಟ್ಟವು.

ಇಂದು ನವಲಗುಂದದಲ್ಲಿ ಕೂಡಿದ ಪಟ್ಟಚರಾಧಿಕಾರಿಗಳ ಸಮ್ಮೇಲನವು ನಮ್ಮ ಧರ್ಮಕ್ಕೂ ಸಮಾಜಕ್ಕೂ ವಿಘಾತಕವಾದದ್ದಿರುವದು. ಇದು ಪ್ರಚಾರಪಡಿಸಲೆಣಿಸಿದ ತತ್ವಗಳು ನಮ್ಮ ಪ್ರಾಚೀನ ಧರ್ಮತತ್ವಗಳಿಗೆ ವಿರೋಧವಾದವುಗಳು. ಇವುಗಳಿಗೆ ಯಾವ ಧರ್ಮಾಭಿಮಾನಿಯೂ ಒಪ್ಪಕೂಡದು.

ಈ ಸಭೆಯ ಅಧ್ಯಕ್ಷರು ಸಭಾಪರವಾಗಿ ರಾ|| ರಾ|| ಸಿದ್ಧರಾಮಪ್ಪ ಪಾವಟೆ ವಕೀಲ ಹುಬ್ಬಳ್ಳಿ ಇವರು ತೆಗೆದ ಪ್ರಶ್ನೆಗಳನ್ನು ಆಚಾರ್ಯಪೀಠಸ್ಥರೆನಿಸುವವರಿಗೆ ಕಳಿಸಬೇಕು.

ಇಷ್ಟು ಕಾರ್ಯವು ಮುಗಿದ ಬಳಿಕ ಆ ದಿವಸದ ಕ್ರಮವು ತೀರಿತು. ಮರುದಿವಸ ಬಸವೇಶ್ವರ ವಚನವೆಂಬ ವಿಷಯದ ಮೇಲೆ ರಾ|| ರಾ|| ಪಾವಟೆಯವರ ಉಪನ್ಯಾಸವಾಗುತ್ತದೆಂದು ಪ್ರಕಟಮಾಡಲ್ಪಟ್ಟಿತು.

ಹೇಗಾದರೂ ಕಾಶೀನಾಥ ಶಾಸ್ತ್ರಿಗಳಿಗೂ ಮ|| ರಾ|| ಪಾವಟೆಯವರಿಗೂ ವಿಧಃ ಚರ್ಚೆಯಿಂದಾದರೂ ಏಕಮತ್ಯವನ್ನುಂಟುಮಾಡಬೇಕೆಂಬ ಸದುದ್ದೇಶದಿಂದ ರಾ|| ರಾ|| ಪ್ರಭುಗೌಡರು ರಾ|| ರಾ|| ಕುದುರೀಮೋತಿ ವೀರಪ್ಪನವರು ರಾ|| ರಾ|| ಬಳ್ಳಾರಿ ಸಿಂದಿಗಿ ಸಿದ್ಧಪ್ಪನವರು ಮೊದಲಾದ ಪ್ರಮುಖರು ಪ್ರಯತ್ನಪಟ್ಟರು. ಪಾವಟೆಯವರು ಸದ್ಗೃಹಸ್ಥರ ಸಮಕ್ಷ ಕಾಶೀನಾಥಶಾಸ್ತ್ರಿಗಳೊಡನೆ ವಿಷಯ ಚರ್ಚಿಸಲಿಕ್ಕೆ ಒಡಂಬಟ್ಟರು. "ನನಗೆ ಸಭಾಪ್ರವೇಶವಿಲ್ಲದಿದ್ದರೂ ಅಡ್ಡಿಯಿಲ್ಲ, ಇಂದೇ ರಾತ್ರಿ ಕಾಶೀನಾಥ ಶಾಸ್ತ್ರಿಗಳು ಇಳಿದ ಹಿರೇಮಠದಲ್ಲಿ ಬಂದು ನಾಲ್ಕು ಜನ ಸಭ್ಯರ ಸಮಕ್ಷ ಚರ್ಚಿಸುತ್ತೇನೆ, ಪಕ್ಷಗಳ ಯುಕ್ತಾಯುಕ್ತತೆಯನ್ನು ಅವರು ತಮ್ಮಷ್ಟಕ್ಕಾದರೂ ತಿಳಕೊಳ್ಳಲಿ, ನಾಳೆ ತಮ್ಮ ಸಮ್ಮೇಲನದಲ್ಲಿ ನನಗೆ ಭಾಷಣ ಮಾಡಗೊಟ್ಟರಂತೂ ಒಳ್ಳೇ ಉತ್ತಮವು" ಎಂದು ಪಾವಟೆಯವರು ಒಡಂಬಟ್ಟರು. ಮೇಲೆ ಬರೆದ ಸದ್ಗೃಹಸ್ಥರೆಲ್ಲರೂ ಕಾಶೀನಾಥ ಶಾಸ್ತ್ರಿಗಳ ಹತ್ತರ ಈ ವಿಷಯ ಪ್ರಸ್ತಾಪಿಸಲಿಕ್ಕೆ ಹೋದರು. ಕಾಶೀನಾಥಶಾಸ್ತ್ರಿಗಳು ಯಾವದಕ್ಕೂ ಒಪ್ಪಲಿಲ್ಲ. ಪಾವಟೆಯವರೊಡನೆ ವಾದಮಾಡುವದೇ ತಮ್ಮ ಯೋಗ್ಯತೆಗೆ ಕುಂದಕವೆಂದುದಲ್ಲದೆ, ಈ ಬಂದಿದ್ದ ಗೃಹಸ್ಥರಿಗೆ ವಾದವಿಮರ್ಶನಮಾಡುವ ಯೋಗ್ಯತೆ ಇಲ್ಲ. ಯಾಕೆಂದರೆ ತಮ್ಮ ಪಂಡಿತವಾಣಿಯು ಅಷ್ಟು ಗಹನವಾದದ್ದು ಎಂದು ಹೇಳಿದರು.

ಈ ಅನ್ಯಾಯವನ್ನು ಕಂಡು ರಾ|| ರಾ|| ಪ್ರಭುಗೌಡರು ಮತ್ತು ರಾ|| ರಾ|| ವೀರಪ್ಪನವರು ನವಲಗುಂದದಲ್ಲಿ ಪಾವಟೆಯವರು ಇರುತ್ತ ವಿಷಯ ಚರ್ಚಿಸಲಿಕ್ಕೆ ಸಿದ್ಧರಾಗಿದ್ದರೂ ಸಮ್ಮೇಲನದವರು ಏಕಪಕ್ಷೀಯವಾಗಿ ಪಾವಟೆಯವರ ಪರೋಕ್ಷದಲ್ಲಿ ಅವರ ಲೇಖಖಂಡನವನ್ನು ಮಾಡಲು ದ್ಯುಕ್ತರಾಗುವದು ಅಪ್ರಶಸ್ತವಾದದ್ದು ಗರ್ಹಣೀಯವಾದದ್ದು ಎಂದು ಪ್ರಕಟನಪತ್ರಗಳನ್ನು ತಾ|| ೨೭-೫-೧೯೩೦ ರ ಪ್ರಾತಃಕಾಲ ಹಂಚಿದರು. ಸಾಯಂಕಾಲ ೫ ಗಂಟೆಗೆ ಸಭೆಯು ಕೂಡಿತು. ರಾ|| ರಾ|| ಪಾವಟೆಯವರ ಭಾಷಣವನ್ನು ಕೇಳಲಿಕ್ಕೆ ಸ್ಥಳೀಯ ಸರಕಾರಿ ಅಧಿಕಾರಸ್ಥರೂ ಮಾಮಲೇದಾರ ಸಾಹೇಬರು ಮೊದಲಾದವರೆಲ್ಲರೂ ಬಂದರು. ಲಿಂಗಾಯತ ಧರ್ಮತತ್ವಗಳನ್ನು ಸಾವಧಾನವಾಗಿ ವಿವರಿಸಿ ಹಲವು ಬಸವೇಶ ವಚನಗಳನ್ನು ಎತ್ತಿ, ಅವುಗಳಲ್ಲಿ ಅಡಕವಾಗಿರುವ ಉದಾತ್ತವೈದಿಕತತ್ವಗಳನ್ನು ಪರಮತೀಯರು ಸಹ ಒಪ್ಪುವಂತೆ ವಿವರಿಸಿದರು. ಅಷ್ಟರಲ್ಲಿ ಶ್ರೀಯುತ ಕೊಂಗವಾಡದ ವೀರಭದ್ರಶಾಸ್ತ್ರಿಗಳು ಪಟ್ಟಚರಾಧಿಕಾರಿಗಳ ಸಮ್ಮೇಲನಕ್ಕೆ ಪ್ರತಿನಿಧಿಗಳಾಗಿ ಬಂದವರು ಈ ನಿಷೇಧಸಭೆಗೆ ದಯಮಾಡಿಸಿದರು ಅವರು ತಾವು ಮಾತಾಡಲಿಕ್ಕೆ ಅಧ್ಯಕ್ಷರ ಅಪ್ಪಣೆಯನ್ನು ಕೇಳಿದರು. ಯಾರ ಬಾಯಿಗೂ ಅಗಳಿಯನ್ನು ಹಾಕದೆ ಭಾಷಣ ಸ್ವಾತಂತ್ರ್ಯ ತತ್ವದ ಮೇಲೆ ನಡೆದ ಈ ಸಭೆಯ ಅಧ್ಯಕ್ಷರು ಮತ್ತೊಂದು ವಿಚಾರ ಮಾಡದೆಯೇ ಅನುಮೋದನ ಕೊಟ್ಟರು. ನಿರೀಕ್ಷಿತವಾದಂತೆ ವಿರೋಧಭಾಷಣವು ಹೊರಡಲಿಲ್ಲ. ಈ ಮಹಾಶಯರು ಗುರುವರ್ಗ ಸಮ್ಮೇಲನದಲ್ಲಿ ಪಾವಟೆಯವರು ಪ್ರತ್ಯಕ್ಷವಾಗಿಲ್ಲದೆಯೇ ಅವರ ಮೇಲೆ ನಡೆಸಿದ ಬೈಗಳಮಳೆಯನ್ನು ಸಹಿಸಲಾರದೆ ತಾವು ಈ ಸಭೆಗೆ ಬಂದೆವೆಂತಲೂ, ಪಾವಟೆಯವರ ಮತವನ್ನು ಅಭಿನಂದಿಸುತ್ತೇವೆಂತಲೂ ಧೈರ್ಯದಿಂದ ತಮ್ಮ ಮನೋಗತವನ್ನು ನಿವೇದಿಸಿದರು. ಅನಂತರ ಕಾವ್ಯತೀರ್ಥ ಶಿ|| ರಾ|| ರಾ|| ಗುರುಮೂರ್ತಿಶಾಸ್ತ್ರಿಗಳ ಭಾಷಣವು "ಸಾಂಪ್ರತಸಮಾಜಸ್ಥಿತಿ" ಎಂಬ ವಿಷಯದ ಮೇಲೆ ಆಯಿತು. ಅವರು ಅನಾದಿಯಿಂದ ನಡೆದುಬಂದ ಲಿಂಗಾಯತ ಧರ್ಮತತ್ವಗಳು ಅಖಿಲಭಾರತ ಸಮಾಜದ ಉದ್ಧಾರಕ್ಕೆ ಹೇಗೆ ಸಹಾಯಕಾರಿಗಳಾಗಿರುವುವೆಂಬುದನ್ನು ವಿವರಿಸಿದರು. ಹಾಗು ಇತ್ತಿತ್ತಲಾಗಿ ಮಹಾತ್ಮಗಾಂಧಿಯಂಥ ಸಮಾಜಸುಧಾರಕರು ಕಂಡುಹಿಡಿಯುತ್ತಿರುವ ತತ್ವಗಳನ್ನು ಬಸವೇಶನು ೧೨ನೆ ಶತಮಾನದಲ್ಲಿಯೇ ಸಾರ್ವಜನೀನವಾಗಿ ವ್ಯವಹಾರದಲ್ಲಿ ತಂದದ್ದನ್ನು ಹೇಳಿ ಅಭಿನಂದಿಸಿದರು. ಇಷ್ಟಾದ ಬಳಿಕ ಸಭೆಯಲ್ಲಿ ೩ನೇ ನಿರ್ಧಾರವನ್ನು ರಾ|| ರಾ|| ಪ್ರಭುಗೌಡರು ತಂದರು. ಅದು ಸರ್ವಾನುಮತದಿಂದ ಒಪ್ಪಿಗೆಯಾಯಿತು. ಏನಂದರೆ. ರಾ|| ರಾ|| ಪಾವಟೆಯವರು ಊರಲ್ಲಿ ಇರುತ್ತಿದ್ದರೂ ತಮ್ಮ ಲೇಖನ ಸಮರ್ಥನ ಮಾಡಲಿಕ್ಕೆ ಸಿದ್ಧರಿದ್ದರೂ ಪಟ್ಟಚರಾಧಿಕಾರಿ ಸಮ್ಮೇಲನದವರು ತಮ್ಮ ಪಕ್ಷಕ್ಕೇ ಅವರ ಲೇಖನ ಖಂಡನ ಮಾಡುವದನ್ನು ಈಸಭೆಯು ನಿಷೇಧಿಸುತ್ತದೆ. ಈ ನಿರ್ಣಯವಾದ ನಂತರದಲ್ಲಿ ಅಧ್ಯಕ್ಷರ ಸಭಿಕರ ಭಾಷಣಕರ್ತರ ರಾ|| ರಾ|| ಪಾವಟೆಯವರ ಅಭಿನಂದನಗಳೂ ಸೌಗಂಧಿಕಾದಿ ಶಿಷ್ಟಾಚಾರಗಳೂ ಆದ ಬಳಿಕ ಸಭೆಯ ವಿಸರ್ಜನೆಯಾಯಿತು.

ಒಬ್ಬ ಪ್ರೇಕ್ಷಕ.

ಲಗ್ನದ ಫಂಡು.

೧. ಮೈಸೂರು ಸಂತೆಪೇಟೆ ದಳ್ಳಾಳಿ ಮ|| ರಾ|| ಬಸಟ್ಟಪ್ಪನವರು ತಮ್ಮ ಕುಮಾರ್ತಿ ಸೌ|| ತಿಪ್ಪಮ್ಮನನ್ನು ಕೊಪ್ಪಪೇಟೆ ಮ|| ರಾ|| ವಿರೂಪಾಕ್ಷಶೆಟ್ಟರಿಗೆ ಕೊಟ್ಟು ಮೈಸೂರಿನಲ್ಲಿ ನಡೆಸಿದ ಲಗ್ನದಲ್ಲಿ ಹೆಣ್ಣಿನ ಕಡೆಯವರಿಂದ ರೂ. ೧ ಗಂಡಿನ ಕಡೆಯವರಿಂದ ರೂ. ೨ ಅಂತು ರೂ. ೩, ವೇ|| ಎನ್. ಆರ್. ಕರಿಬಸವಶಾಸ್ತ್ರಿಗಳ ಮೂಲಕ.

೨. ಬಿಳಿಗೋಡು ಮುದ್ದಪ್ಪಶೆಟ್ಟರ ತಮ್ಮ ಮ|| ರಾ|| ಮಡಿವಾಳಪ್ಪನವರಿಗೆ ಸದರಿ ಗ್ರಾಮದ ಮ|| ರಾ|| ಮಡಿವಾಳಪ್ಪಶೆಟ್ಟರ ಕುಮಾರ್ತಿ ಸೌ|| ಚನ್ನಮ್ಮನವರನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. ೩, ಆಲೂರು ಪೋ|| ಮರಸು ಗ್ರಾಮದಲ್ಲಿರುವ ಮ|| ರಾ|| ಕೆ. ಸಿದ್ಧರಾಮಪ್ಪನವರ ಮೂಲಕ.

೩. ಎರಡನೆ ಧಾರ್ಮಿಕ ಸಭೆಯಲ್ಲಿ ವೇ|| ಆರ್. ಚನ್ನಬಸವಾರಾಧ್ಯಸ್ವಾಮಿಯವರು ತೆಗೆದದ್ದು, ಕಡೂರು ಡಿ|| ಅಜ್ಜಂಪುರ ಪೋ|| ಗೊಂಡೇದಹಳ್ಳಿ ಮ|| ಸ್ಥಾನಿಕ ಗುರಪ್ಪನವರ ಮಕ್ಕಳು ಬಸಪ್ಪನವರ ಮೂಲ್ಯ ಬಂದದ್ದು ಸ್ಟಾರ್ ಆಫೀಸು ಮ್ಯಾನೇಜರ ಮೂಲಕ ರೂ. ೩.

೪. ಹುಲಿಯೂರು ದುರ್ಗದ ಹೊಸಪೇಟೆಯಲ್ಲಿರುವ ಮ|| ರಾ|| ಎಡಿಯೂರು ಸಿದ್ಧಲಿಂಗಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಗಂಡಿನವರಿಂದ ರೂ. ೩. ಹೆಣ್ಣಿನವರಿಂದ ರೂ. ೨ ಅಂತು ರೂ. ೫ ಹುಲಿಯೂರು ದುರ್ಗದ ವೇ|| ಹುಚ್ಚಪ್ಪದೇವರಿಂದ.

೫. ಬೆಂಗಳೂರು ಹೊಸತರಗು ಮಂಡಿ ಋ|| ಶ್ರೀ|| ಗುರುಸಿದ್ಧಪ್ಪ ಹಿರೇಹಳ್ಳಿ ಅಡಿವಪ್ಪ ಇವರುಗಳ ತಮ್ಮಂದಿರು ಚಿ|| ರೇವಣ್ಣನವರಿಗೆ ಹಿರೇ

ಹಳ್ಳಿ ಮ|| ರಾ|| ಆದಿವಪ್ಪನವರ ಕುಮಾರ್ತಿ ಸೌ|| ಚನ್ನಮ್ಮನವರನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ಹೆಣ್ಣಿನವರಿಂದ ರೂ. ೩, ಗಂಡಿನವರಿಂದ ರೂ. ೨, ಅಂತು ರೂ. ೫. ಬೆಂಗಳೂರು ಸಿಟಿ ಬಿ. ಎಂ. ಬಸಪ್ಪನವರ ಮೂಲಕ.

೬. ಫಲ್ಗುಣಿ ಮಂಜೇಗೌಡರ ಮಗ ಚಿ|| ದುಗ್ಗೇಗೌಡರಿಗೆ ಆಲದೂರು ದಾಖಲೆ ಕೀಲೂರದಹಳ್ಳಿ ಮ|| ರಾ|| ದೇವೇಗೌಡರ ಕುಮಾರ್ತಿ ಸೌ|| ನಂಜಮ್ಮನವರನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. ೨ ಹೆಣ್ಣಿನವರಿಂದ ರೂ. ೨ ಅಂತು ರೂ. ೪, ಕಡೂರು ಡಿ|| ಆಲದೂರಿನಲ್ಲಿರುವ ಮ|| ರಾ|| ಎ. ವಿ. ಅಮೃತಗೌಡರ ಮೂಲಕ.

೭. ತುಮಕೂರು ತಾ|| ಕೋರದಲ್ಲಿರುವ ಮ|| ರಾ|| ಜಿ. ಶಾಂ. ಮಲ್ಲಪ್ಪನವರ ಕುಮಾರ್ತಿ ಸೌ|| ಸಿದ್ಧಮಲ್ಲಮ್ಮನವರನ್ನು ನೆಲಮಂಗಲದ ಮ|| ರಾ|| ಚನ್ನೀರಪ್ಪನವರ ಮಗ ಚಿ|| ಶಿವರುದ್ರಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಗಂಡಿನವರಿಂದ ರೂ. ೧-೮-೦ ಹೆಣ್ಣಿನವರಿಂದ ರೂ. ೧-೮-೦ ಅಂತು ರೂ. ೩, ಕೋರದ ಮಠದ ವೇ|| ಹಲಗಸ್ವಾರಾಧ್ಯರವರ ಮೂಲಕ.

೮. ಬೆಂಗಳೂರು ಅರಳೇಪೇಟೆ ಮ|| ರಾ|| ಶಂ. ಬಸವಣ್ಣನವರ ಕುಮಾರ್ತಿ ಸೌ|| ಶಿವಮ್ಮನವರನ್ನು ಬೆಂಗಳೂರು ಅರಳೇಪೇಟೆ ದೇಶದ ಯಜಮಾನ್ ಬಸಪ್ಪನವರ ಮಗ ಚಿ|| ಗಂಗಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಹೆಣ್ಣಿನವರಿಂದ ರೂ. ೧೦-೦-೦.

೯. ವಿಲೇಜ್ ಮುನಸೀಪ್ ಮ|| ರಾ|| ಮುದ್ದುಗೌಡರ ಮೂಲಕ:— (೧) ಸ್ವಾಯಿಸಂದ್ರದ ಮ|| ರಾ|| ಸಿದ್ದೇಗೌಡರ ಕುಮಾರ್ತಿ ಸೌ|| ಸಿದ್ದಮ್ಮನವರ ಲಗ್ನದಲ್ಲಿ ಹೆಣ್ಣಿನವರಿಂದ ರೂ. ೧-೦-೦. (೨) ಸದರಿ ಗ್ರಾಮದ ಮ|| ರಾ|| ಸಿದ್ದೇಗೌಡರ ಮಗ ಚಿ|| ಸಿದ್ದೇಗೌಡರ ಲಗ್ನದಲ್ಲಿ ಗಂಡಿನವರಿಂದ ರೂ. ೧. (೩) ಸದರಿ ಗ್ರಾಮದ ಮ|| ರಾ|| ವೀರೇಗೌಡರ ಮಗ ಚಿ|| ಗುರುವಾದಪ್ಪನವರ ಲಗ್ನದಲ್ಲಿ ಗಂಡಿನವರಿಂದ ರೂ. ೧. (೪) ಮಾರಪಲ್ಲಿ ಮ|| ರಾ|| ನಂಜುಂಡೇಗೌಡರ ಮಗ ಚಿ|| ಅಪ್ಪಾಜಿಗೌಡರ ಲಗ್ನದಲ್ಲಿ ಗಂಡಿನವರಿಂದ ರೂ. ೧. (೫) ಸೆಟ್ಟಿಪಲ್ಲಿ ಮ|| ರಾ|| ಅಪ್ಪಾಜಿಗೌಡರ ಮಗ ಮುದ್ದುಗೌಡರ ಲಗ್ನದಲ್ಲಿ ಗಂಡಿನವರಿಂದ ರೂ. ೧, ಅಂತು ರೂ. ೫.

೧೦. ನೆಲಮಂಗಲದ ತಾ|| ತ್ಯಾಮಗೊಂಡ್ಲು ಮ|| ರಾ|| ಸೆಟ್ಟರು ನಂಜುಂಡಪ್ಪನವರ ಕುಮಾರ್ತಿ ಸೌ|| ಗೌರಮ್ಮನವರ ನಿಷೇಕಪ್ರಸ್ತದಲ್ಲಿ ಬೆಂಗಳೂರು ಮ|| ರಾ|| ಮರಿಯಪ್ಪನವರಿಂದ ಮ|| ರಾ|| ಯಜಮಾನ್ ಜವಳಿ ಹುಚ್ಚಪ್ಪನವರ ಮೂಲಕ ರೂ. ೧.

೧೧. ಚಿಕ್ಕಾಯರಹಳ್ಳಿ ಪಟೇಲ್ ಮ|| ಶಂಭುಗೌಡರಿಂದ ಅವರ ಕುಮಾರ್ತಿಯ ಲಗ್ನದಲ್ಲಿ ೨ ರೂ. ವೇ|| ಎನ್. ಆರ್. ಕರಿಬಸವಶಾಸ್ತ್ರಿಗಳ ಮೂಲಕ.

ಮೇಲ್ಕಂಡ ಮೊಬಲಗು ರೂ. ೪೨, ಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ
ತಾ|| ೧೮-೫-೧೯.
ಅಡ್ವೋಕೇಟ್ ಜಿ. ಪರಮಶಿವಯ್ಯ ಬಿ. ಎ. ಎಲ್. ಎಲ್. ಬಿ. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಸೆಕ್ರೆಟರಿ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವವು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

11

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಳ್ಳೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 25

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೩ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಜಾಗ್ರತೆ. ## ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೊಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 32

ನಾವು ಎ. ಆಲ್ ಬ್ಯುಕ್ಯಾಯರ್ ಕ್ಕೆ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್‌ಕೊ,
11 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
11 ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ವೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಬ್ಬಿ ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
24 ವೈದ್ಯಶಾಲಾ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 30

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೋಗೆ ಹೂವು ಬೆಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿನ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜೂನ್ ತಾ|| ೧೩ರಿಂದ ೧೯೨೦ ನೆಯ ಜೂನ್ ತಾ|| ೧೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಜ್ಯೇಷ್ಠ ಬಹುಳ ದ್ವಾದಶಿಯಿಂದ ಆಷಾಢ ಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೈ-ಮಿ ಮಾಸ
13	ಭಾನು	ದ್ವಾ	50-12	ಆಶ್ವಿ	5-38	32
14	ಸೋಮ	ತ್ರಯೋ	44-45	ಭರ	2-56	1
15	ಮಂಗಳ	ಚತು	38-54	ರೋಹಿ	55-44	2
16	[1] ಬುಧ	ಅಮಾ	32-43	ಮೃಗ	51-34	3
17	ಗುರು	ಪಾಡ್ಯ	26-31	ಆರ್ದ್ರಾ	47-17	4
18	ಶುಕ್ರ	ಬಿದಿ	20-24	ಪುನ	43-41	5
19	ಶನಿ	ತದಿ	14-33	ಪುಷ್ಯ	39-34	6

(1) ಸರ್ವತ್ರ ಅಮಾವಾಸ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರು ಸ್ಟಾರ್

REGISTERED NO. M. 124.
REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಹಿತೈಷಾ | ಧನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯಂಸದಾಪುರಿಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಜೂನ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೫

GOVERNMENT OF MYSORE.
ELECTRICAL DEPARTMENT.

45

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking.		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 46

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಶಾಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಳ್ಳೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
38 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಖುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತನ್ನ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
13 3. ಇರುಳಪ್ಪನಬೀದಿ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪದ್ಯಾತ್ಮಕ **ಶ್ರೀ ಶರಣಬಸವೇಶ್ವರ ಪುರಾಣ.** ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ವಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಂಭವಾಗಿಯೂ ಮಾಡಿದ ಮಹತ್ವಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಕಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

31 **ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.**

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜೂನ್ ತಾ|| ೨೦ ನೆಯ ಭಾನುವಾರ.

ಬಡ್ಜೆಟ್ ಚರ್ಚೆ.

ನಮ್ಮ ಸಂಸ್ಥಾನದ ವಾರ್ಷಿಕಾದಾಯವು ೩ ಕೋಟಿಯ ವರೆಗೆ ಏರಿರುವುದೂ ವೆಚ್ಚವು ಅದಕ್ಕಿಂತ ಮೀರಿರುವುದೂ ಸಹ ಈ ವರ್ಷದ ಬಡ್ಜೆಟ್ಟಿನಿಂದ ಗೊತ್ತಾಗುತ್ತದೆಯಷ್ಟೆ? ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಡ್ಜೆಟ್ ಸಂಬಂಧವಾದ ಚರ್ಚೆಗಳು ನಡೆಯುವಾಗ್ಗೆ ಅನೇಕ ಸಭಿಕರು-ಕೆಲವು ಶಾಖೆಗಳಲ್ಲಿ ಅಪ್ರಕೃತವಾದ ಮತ್ತು ಮಿತಿಮೀರಿದ ವೆಚ್ಚಗಳು ಆಗುತ್ತಿವೆಯೆಂದೂ, ಒಬ್ಬರು ಮಾಡಬಹುದಾದ ಕೆಲಸಕ್ಕೆ ಈಗು ಇಬ್ಬರು ಮೂವರನ್ನು ನಿಯಮಿಸಿಕೊಳ್ಳುವ ಪದ್ಧತಿಯು ಪ್ರಾಪ್ತವಾಗಿದೆಯೆಂದೂ, ಸಂಬಳಗಳೂ ಅಲೋಯನ್ಸುಗಳೂ ಅಧಿಕವಾಗಿ ಕೊಡಲ್ಪಡುತ್ತಿವೆಯೆಂದೂ ಮೊದಲಾಗಿ ವಿಮರ್ಶಾಪೂರ್ವಕವಾಗಿ ಸೂಚಿಸಿದರು. ಮತ್ತು ವೆಚ್ಚಗಳನ್ನು ಬಿಗಿಹಿಡಿದು ಧನವನ್ನು ಮಿಗಿಸಿ ಸಾಲಮಾಡಬೇಕಾದ ಅವಶ್ಯಕತೆಯು ಸರ್ಕಾರಕ್ಕೆ ಉಂಟಾಗದಂತೆ ಮಾಡಬೇಕೆಂತಲೂ ಹೇಳಿದರು. ಆದರೆ ಈ ವಿಷಯಗಳಿಗೆಲ್ಲಾ ಸಭೆಯ ಕೊನೆಯಲ್ಲಿ ಫೈನಾನ್ಷಿಯಲ್ ಸೆಕ್ರೆಟರಿಯವರು ಉತ್ತರ ಕೊಡುವಾಗ್ಗೆ—"ವೆಚ್ಚವನ್ನು ಕಳೆದು ಹಣವನ್ನುಳಿಸಿ ಕೂಡಿಡುವುದು ಸರ್ಕಾರದ ಕೆಲಸವಲ್ಲ; ಅದು ಸಂಸಾರಿಗಳ ಕೆಲಸ. ಪ್ರಪಂಚದಲ್ಲಿ ಯಾವ ಸರ್ಕಾರವೂ ಹಾಗೆ ಹಣವನ್ನು ಕೂಡಿಸಿಡುವುದಿಲ್ಲ" ಎಂದು ಅಪ್ಪಣೆ ಕೊಡಿಸಿದುದನ್ನು ಕೇಳಿ ಸಭಿಕರಲ್ಲಿ ಹಲವರು ಬೆರಗಾದರು. ಈ ವಿಚಿತ್ರಸಿದ್ಧಾಂತಕ್ಕೆ ಏನು ಕಾರಣವೋ ಗೊತ್ತಾಗಲಿಲ್ಲ. ಆದಾಯದ ಹಣದಲ್ಲಿ ಸ್ವಲ್ಪವನ್ನೂ ಉಳಿಸದೆ ವೆಚ್ಚ ಮಾಡಬೇಕೆಂಬುದೇ ಸರ್ಕಾರದ ತತ್ವವಾಗಿರುವ ಪಕ್ಷಕ್ಕೆ ದೇಶದ ವರಮಾನದ ಹೆಚ್ಚುಗೆಯು ಪ್ರಜೆಗಳಿಗೆ ಸಂತೋಷಪ್ರದವಾಗಲಾರದು. ಏಕೆಂದರೆ ಆದಾಯವು ಅಭಿವೃದ್ಧಿಯಾಗುತ್ತ ಬಂದಂತೆಲ್ಲಾ ಈಗಣ ಸರ್ಕಾರಿಕ್ರಮದಲ್ಲಿ ರಾಜ್ಯಕಾರ್ಯನಿರ್ವಾಹದ "ಸಿಬ್ಬಂದಿಯ" ವೆಚ್ಚವು ಅಧಿಕವಾಗಿ ಬೆಳೆಯುತ್ತದೆ. ಹೆಚ್ಚು ವರಮಾನವಾದಷ್ಟೂ ಸಂಬಳಸಾಲಿಗೆಗಳನ್ನು ಪಡೆಯುವ ಉದ್ಯೋಗಿಗಳ ಸಂಖ್ಯೆಯು ಹೆಚ್ಚಿಹೋಗುತ್ತಿದೆಯೆಂಬುದೇ ಪ್ರಜೆಗಳ ಮನಸ್ಸಿನಲ್ಲಿ ಖಚಿತವಾಗಿ ಬಿಂಬಿಸಿರುತ್ತದೆ. ಹೊಸದಾಗಿ ಉದ್ಯೋಗಸ್ಥಾನ ನಿರ್ಮಾಣಗಳು ವಿಶೇಷವಾಗಿ ಮಾಡಲ್ಪಡುತ್ತಿರುವುದರಿಂದಲೇ ೧೫-೨೦ ರೂ. ಸಂಬಳಗಳಿಗೆ ದೊರೆಯುತ್ತಿದ್ದ ಗ್ರಾಜುಯೇಟರುಗಳು ಈಗ ೫೦-೬೦ ರೂ. ಗಳಿಗೂ ಕೂಡ ದೊರೆಯದಿರುವಂಥ ಸ್ಥಿತಿಯು ಪ್ರಾಪ್ತವಾಗಿದೆ. ಮಿ|| ಅಬ್ಬಾಸ್‌ಖಾನರೂ ಮ|| ಕರಣಿಕ ಕೃಷ್ಣಮೂರ್ತಿರಾಯರೂ ಸಹ ಕೆಲವು ಶಾಖೆಗಳಲ್ಲಿ ಅಧಿಕಾರಸ್ಥಾನ ನಿರ್ಮಾಣಗಳೂ ಅವುಗಳ ಸಿಬ್ಬಂದಿಗಳೂ ಎಷ್ಟುಮಟ್ಟಿಗೆ ಹೆಚ್ಚಿಹೋಗಿರುತ್ತವೆಯೆಂಬುದನ್ನು ವಿವರಣಪೂರ್ವಕವಾಗಿ ಸಭೆಯಲ್ಲಿ ಹೇಳಿತೋರಿಸಿರುವರು.

ಸರ್ಕಾರದವರು ಕಾರ್ಯನಿರ್ವಾಹದ ಸಿಬ್ಬಂದಿಗೆ ವಿಶೇಷ ಧನವ್ಯಯ ಮಾಡುವುದನ್ನು ಕಡಿಮೆಮಾಡಿ, ಹೆಚ್ಚಿನ ವರಮಾನದ ವಿಶೇಷ ಭಾಗವನ್ನು ಪ್ರಜೆಗಳು ಕೋರುವ ಆವಶ್ಯಕರ್ತವ್ಯಗಳನ್ನು ನೆರವೇರಿಸಿಕೊಡುವುದಕ್ಕೆ ಉಪಯೋಗಿಸಿದರೆ ಮಾತ್ರ ಅದರ ವಿಷಯದಲ್ಲಿ ಅಷ್ಟೇನೂ ಆಕ್ಷೇಪವಿರಲಾರದು. ಅದೇ ಸಭೆಯಲ್ಲಿ ಒಬ್ಬ ಪ್ರತಿನಿಧಿಯು ಒರಟೊರಟಾಗಿ ನಿರೂಪಿಸಿದರೂ ಒಂದು ವಿಷಯವು ಯುಕ್ತಿಯುಕ್ತವಾಗಿದ್ದಿತು. ಅದೇನೆಂದರೆ-"ಸರ್ಕಾರದವರು ಆದಾಯದ ಹೆಚ್ಚುಭಾಗವನ್ನೆಲ್ಲಾ ಸರ್ಕಾರಿ ಸಿಬ್ಬಂದಿಗೇ ಉಪಯೋಗಿಸಿಕೊಂಡುಬಿಟ್ಟು ಪ್ರಜೆಗಳು ಕೇಳಿದುದಕ್ಕೆಲ್ಲಾ ಹಣವಿಲ್ಲವೆಂಬ ಉತ್ತರವನ್ನೇ ಹೇಳುತ್ತೀರಿ. ಅದುಕಾರಣ, ರೈತರು ಕೇಳುವ ಪ್ರಾರ್ಥನೆಗಳನ್ನು ಈಡೇರಿಸಿಕೊಡುವುದಕ್ಕೆ ಇಷ್ಟು ಎಂದು ಭಾಗಿಸಿಟ್ಟು ಉಳಿದುದನ್ನು ಸರ್ಕಾರಿ ಸಿಬ್ಬಂದಿಗೆ ಉಪಯೋಗಿಸಿಕೊಳ್ಳಿರಿ" ಎಂದು ಹೇಳಿದರು. ಇದು ಒಪ್ಪತಕ್ಕ ಮಾತಾಗಿದೆ. ಸರ್ಕಾರಿ ಸಿಬ್ಬಂದಿಯು ಒಂದು ಪರಿಮಿತಿಯಲ್ಲಿ ನಿಂತಿದ್ದರೆ ಹೆಚ್ಚಿನ ವರಮಾನವನ್ನು ಪ್ರಜೆಗಳ ಕೊರತೆಗಳ ಪರಿಹಾರಕ್ಕಾಗಿ ಉಪಯೋಗಿಸಲು ಅವಕಾಶವಾದೀತು. ದೇಶದ ಹುಟ್ಟುವಳಿಯ ಮುಖ್ಯಭಾಗವೆಲ್ಲಾ ಗ್ರಾಮಾಂತರಗಳಿಂದಲೇ ಬರುತ್ತಿದ್ದರೂ ಆ ಗ್ರಾಮಾಂತರದವರಿಗೆ ಸರ್ಕಾರದಿಂದ ಪ್ರತಿಫಲವಾಗಿ ಮಾಡಿಕೊಡಬೇಕಾಗಿ ಬಿದ್ದಿರುವ ಭಾರವು ಸರ್ಕಾರದ ಮೇಲೆ ಅಳತೆಯಿಲ್ಲದಷ್ಟಿರುತ್ತದೆ. ಮುಖ್ಯವಾಗಿ ಆ ಗ್ರಾಮಗಳಿಗೆ ತಿರುಗಾಡುವ ಬಂಡಿಮಾರ್ಗ, ಕುಡಿಯುವ ನೀರಿನ ಆಶ್ರಯ-ಇದಿಷ್ಟನ್ನು ಸ್ಥಾಪಿಸಿಕೊಡಬೇಕಾದರೂ ಎಷ್ಟೋ ಕೋಟಿ ರೂ. ಗಳನ್ನು ಸರ್ಕಾರವು ವೆಚ್ಚಮಾಡಬೇಕಾಗುತ್ತದೆ. ಈ ಮುಖ್ಯಭಾರವನ್ನು ಹೇಗೆ ಇಳುಹಿಕೊಳ್ಳಬೇಕೆಂಬುದನ್ನು ಸರ್ಕಾರವು ಆಲೋಚಿಸುವುದಾದರೆ, ಒಡೆತನದಲ್ಲಿರುವ ಲೋಕಲ್‌ಬೋರ್ಡುಗಳ ತಲೆಗೇ ಆ ಭಾರವನ್ನೆಲ್ಲಾ ಕಟ್ಟಿಬಿಡದೆ ಸಂಸ್ಥಾನದ ಮೂಲಾದಾಯದಲ್ಲಿ ಕೆಲಭಾಗವನ್ನು ಪ್ರತಿವರ್ಷವೂ ಮೀಸಲಾಗಿ ಅದಕ್ಕೆ ತೆಗೆದಿಡುವುದೇ ಧರ್ಮವಾಗಿ ತೋರುವುದು. ಹೀಗೆ ಸರ್ಕಾರವು ಮಾಡುತ್ತಿದ್ದರೆ ಮಾತ್ರ ಬಂದ ಆದಾಯವನ್ನೆಲ್ಲಾ ಮಿಗಿಸದೆ ವೆಚ್ಚಮಾಡುವುದು ಸರ್ಕಾರದ ತತ್ವವೆಂದು ಹೇಳಿದರೂ ಆಕ್ಷೇಪವಿರಲಾರದು.

ಈಗ ಮಾಡಬೇಕಾಗಿರುವ ಸಾಲವು ಶಾಶ್ವತವಾಗಿ ಲಾಭವನ್ನು ಕೊಡುವ ಕಾಮಗಾರಿಗಳಿಗಾಗಿಯೇ ಹೊರತು ಸಿಬ್ಬಂದಿಯ ವೆಚ್ಚಕ್ಕೇನೂ ಅಲ್ಲವಾದ ಕಾರಣ ಸಾಲಮಾಡುವುದನ್ನು ಆಕ್ಷೇಪಿಸಲು ಕಾರಣವಿಲ್ಲವೆಂದು ಫೈ|| ಸೆಕ್ರೆಟರಿಯವರು ಅಪ್ಪಣೆ ಕೊಡಿಸಿರುತ್ತಾರೆ. ಸಿಬ್ಬಂದಿಯನ್ನು ಕೋತಮಾಡಿ ಬೊಕ್ಕಸದಲ್ಲಿ ಹಣವನ್ನು ಶೇಖರಿಸಿಟ್ಟರೆ ಲಾಭಪ್ರದವಾದ ಪ್ರತಿಷ್ಠಾಪನೆಗಳಿಗೆ ನಮ್ಮ ಹಣವನ್ನೇ ಉಪಯೋಗಿಸಿಕೊಳ್ಳುವಂತೆ ಮಾಡಬಹುದಾದಕಾರಣ ಪರರಿಂದ ಸಾಲವನ್ನು ಬೇಡಿ ತೆಗೆದುಕೊಂಡು ಅದಕ್ಕಾಗಿ ಬಡ್ಡಿಯನ್ನು ತೆರುವ ಕಷ್ಟವನ್ನೇ ತಪ್ಪಿಸಿಕೊಳ್ಳಬಹುದಲ್ಲವೆ? ಅಲ್ಲದೆ ಬೊಕ್ಕಸದಲ್ಲಿ ಹಣವು ಉಳಿದಿದ್ದರೆ ರೈತರ ಕೊರತೆಯನ್ನು ಪರಿಹರಿಸಿ, ಅವರ ಋಣಭಾರದಿಂದ ಸರ್ಕಾರವು ವಿಮುಕ್ತವಾಗಬಹುದಲ್ಲವೆ? ಸಣ್ಣ ಕುಟುಂಬವನ್ನು ಕಾಪಾಡಿಕೊಳ್ಳುವ ಸಂಸಾರಿಗೇ ಆಪನ್ನಿವಾರಣಾರ್ಥವಾಗಿ ಹಣವನ್ನು ಕೂಡಿಸಿಡುವುದು ಕರ್ತವ್ಯವಾಗಿರುವಾಗ, ದೇಶವೇ ಒಂದು ಕುಟುಂಬವಾಗಿ ಉಳ್ಳ ಸರ್ಕಾರಕ್ಕೆ ಆ ದ್ರವ್ಯಶೇಖರದ ಎಚ್ಚರಿಕೆಯು ಮತ್ತಷ್ಟು ಹೆಚ್ಚಾಗಿದ್ದರೆ ಸಾಧಕವೇ ಹೊರತು ಬಾಧಕವೇನೂ ಇಲ್ಲ. ಸರ್ ಕೃಷ್ಣಮೂರ್ತಿಯವರೂ, ಟಿ. ಆನಂದರಾಯರೂ ಸಹ ತಂತಮ್ಮ ದಿವಾನಗಿರಿಗಳಲ್ಲಿ ಬೊಕ್ಕಸದೊಳಗೆ ಹಣವನ್ನು ಗುಡ್ಡೆಮಾಡಿಟ್ಟಿದ್ದುದರ ಧೈರ್ಯದಿಂದಲೇ ಅವರನಂತರ ಬಂದ ಮಾಧವರಾಯರೂ ಸರ್ ವಿಶ್ವೇಶ್ವರಯ್ಯನವರೂ ದೊಡ್ಡದೊಡ್ಡ ಪ್ರತಿಷ್ಠಾಪನೆಗಳನ್ನು ಆರಂಭಿಸಲು ಅವಕಾಶವಾಯಿತು. ಇದೂ ಅಲ್ಲದೆ ವರ್ಷೇವರ್ಷೆ ತಕ್ಕಷ್ಟು ಹಣವನ್ನಾದರೂ ಉಳಿಸಿ ಕೂಡಿಡದೆ ಹೋದರೆ ಇದುವರೆಗೆ ಲೋಹಮಾರ್ಗ ಪ್ರತಿಷ್ಠಾಪನೆ ಮೊದಲಾದುವುಗಳಿಗಾಗಿ ನಾವು ಮಾಡಿಕೊಂಡಿರುವ ಕೋಟ್ಯಂತರ ಸಾಲವೂ ಅದಕ್ಕಾಗಿ ಕೊಡಬೇಕಾದ ಬಡ್ಡಿಯಭಾರವೂ ನಮಗೆ ತಪ್ಪುವುದು ಹೇಗೆ? ತಾವು ಗಳಿಸಿಕೊಟ್ಟ ಹಣವು ದುಂದುವೆಚ್ಚವಾಗದೆ ಅಷ್ಟೊ ಇಷ್ಟು ಬೊಕ್ಕಸದಲ್ಲಿ ಉಳಿಯಿಸಲ್ಪಟ್ಟಿದೆಯೆಂಬುದನ್ನು ಪ್ರಜೆಗಳು ಕೇಳಿದರೆ ಎಷ್ಟೋ ಸಮಾಧಾನಪಟ್ಟುಕೊಳ್ಳುವರು. ಅದಕ್ಕೂ ಅವಕಾಶವಿಲ್ಲದೆ, ಅವರಿಗೆ ಅವಶ್ಯವಾಗಿರುವ ಕೊರತೆಗಳ ನಿವಾರಣೆಗೂ ಹಣವಿಲ್ಲವೆಂಬ ಉತ್ತರವೇ ಬರುತ್ತಿರುವುದಾದರೆ ಮೇಲೆ ಕಂಡ ಫೈನಾನ್ಷಿಯಲ್ ತತ್ವವು ಯಾರಿಗೆ ಕ್ಷೇಮಕರ?

ಬೆಳ್ಳಿ.

ಬೆಳ್ಳಿಯ ಬೆಲೆಗೆ ಇದ್ದ ಮಹಾದಶೆಯು ಈಗ ಮುಗ್ಗರಿಸಿರುತ್ತದೆ. ಸೀಮೆಯಲ್ಲಿ ಅದನ್ನು ಕೊಳ್ಳುವ ಜನರು ಕಡಿಮೆಯಾಗಿಯೂ ಮಾರುವವರು ಹೆಚ್ಚಾಗಿಯೂ ಇರುವುದೂ, ಚೀನಾದವರು ಬೆಳ್ಳಿಯನ್ನು ಕೊಂಡುಕೊಳ್ಳದಿರುವುದೂ, ಬೆಳ್ಳಿಯ ಉತ್ಪತ್ತಿಗೆ ಮೂಲಸ್ಥಾನವಾದ ಅಮೇರಿಕಾದಲ್ಲಿ ಬೆಳ್ಳಿಯ ಬೆಲೆಯು ಇಳಿದು ಹೋಗಿರುವುದೂ ಸಹ ಬೆಳ್ಳಿಯ ಬೆಲೆಯನ್ನು ಇಳಿಮುಖ ಮಾಡುವುದಕ್ಕೆ ಕಾರಣವೆಂದು ಮೊನ್ನೆ ವಾರದ ವಾರ್ತೆಗಳಿಂದ ತಿಳಿದು ಬಂದಿದ್ದಿತು. ಲಂಡನ್ ಪಟ್ಟಣದಲ್ಲಿ ಫಿಬ್ರವರಿ ತಿಂಗಳಲ್ಲಿ ಬೆಳ್ಳಿಯ ಬೆಲೆ ೮೯|| ಸೆಂಟುಗಳಂತಿದ್ದುದು ಕಳೆದ ಜೂನ್ ತಾ|| ೯ ರಲ್ಲಿ 45½ ಸೆಂಟುಗಳಿಗೆ ಇಳಿದುಹೋಗಿದ್ದಿತು. ಈ ಪ್ರಕಾರಕ್ಕೆ ಲೆಕ್ಕಹಾಕಿದರೆ ತೋಲ ೧ ಕ್ಕೆ ೧ ಷಿಲ್ಲಿಂಗ್ ೫ ಪೆನ್ಸ್ ಬೆಲೆಯಾಯಿತು. ಇದರ ಮೇಲೆ ಪ್ರಭುತ್ವದವರು ಹೊಸ ರೂ. ಗಳನ್ನು ೧ ಷಿಲ್ಲಿಂಗ್ 5½ ಬೆಲೆಗೆ ಒಂದೊಂದರಂತೆ ರಚಿಸಬಹುದು. ಇನ್ನು ಮುಂದೆ ಬೆಳ್ಳಿ ಬೆಲೆಯು ಹೀಗೆಯೇ ತಗ್ಗಿಹೋದರೆ ರೂಪಾಯಿನ ಬೆಳ್ಳಿಯ ಬೆಲೆಯು ೫.೬ ಆಣೆ ಮಾತ್ರವೇ ಆಗಬಹುದೆಂದು ಬೊಂಬಾಯಿ ಪಟ್ಟಣದ ಸ್ಥಿತಿಗತಿಯನ್ನು ಚೆನ್ನಾಗಿ ಅರಿತವರು ಹೇಳುತ್ತಲಿದ್ದಾರೆ. ಆದರೆ ಸೀಮೆಯಲ್ಲಿ ಬೆಳ್ಳಿಯನ್ನೆಲ್ಲಾ ನಾಣ್ಯವನ್ನಾಗಿ ಮಾಡಿ ಸರ್ವತ್ರ ಉಪಯೋಗಿಸಿಕೊಳ್ಳುವಂತೆ ಮಾಡಿ ನೋಟುಗಳ ವ್ಯಾಪನೆಯನ್ನು ತಗ್ಗಿಸಿಬಿಟ್ಟರೆ ಬೆಳ್ಳಿಯ ಬೆಲೆ ತಗ್ಗುವಿಕೆಯ ನಷ್ಟವನ್ನು ತಪ್ಪಿಸಿಕೊಳ್ಳಬಹುದೆಂದು ಯೋಚಿಸುತ್ತಿರುವರು. ಮೊನ್ನೆ ಗುರುವಾರದಲ್ಲಿ ಬೊಂಬಾಯಿಯೊಳಗೆ ಬೆಳ್ಳಿಯ ಬೆಲೆಯು ೧೦೦ ತೊಲೆಗೆ ೮೦ ರೂ. ಆಗಿದ್ದಿತು. ಶುಕ್ರವಾರ ಮತ್ತೆ ೮೩-೬ ಕ್ಕೆ ಏರಿತು. ಚಿನ್ನದ ಬೆಲೆ ಮಾತ್ರ ವಿಶೇಷವಾಗಿ ಹೆಚ್ಚು ಕಡಿಮೆಯಾಗಿಲ್ಲ. ತೊಲೆ ೧ ಕ್ಕೆ ಕೊಳ್ಳುವ ಬೆಲೆ ೨೨ ರೂ. ಮಾರುವ ಬೆಲೆ ೨೨-೬೦ ಆಗಿದ್ದಿತು. ಹೀಗೆ ಚಿನ್ನ ಬೆಳ್ಳಿಗಳ ಬೆಲೆಯಿಳಿದರೂ ಬಟ್ಟೆಗಳ ಬೆಲೆಯು ಇಳಿಯುತ್ತಲಿಲ್ಲ. ಕಳೆದ ವಾರದಲ್ಲಿ ಬೊಂಬಾಯಿಯೊಳಗೆ ಬಟ್ಟೆಗಳ ಬೆಲೆಯು ೧೦೦ ಕ್ಕೆ ೧೦-೧೫ ರಷ್ಟು ಏರಿದ್ದಿತು.

ಬೆಂಗಳೂರು ವೀರಶೈವ ವಿದ್ಯಾರ್ಥಿಭವನ.

ಬೆಂಗಳೂರಿನಲ್ಲಿ ಕಟ್ಟಲ್ಪಡಲುದ್ದೇಶಿಸಿರುವ ಜಯದೇವ ವೀರಶೈವ ವಿದ್ಯಾರ್ಥಿನಿಲಯಕ್ಕೆ ತಗಲುವ ವೆಚ್ಚದಲ್ಲಿ ಅರ್ಧಭಾಗವನ್ನು ಕೊಡಲಿಕ್ಕಿಲ್ಲವೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆಂದು ಕೇಳುತ್ತೇವೆ. ಸರ್ಕಾರವು ವೆಚ್ಚದ ಭಾರವನ್ನೆಲ್ಲಾ ತಾನೇ ಹೊತ್ತು ವಿದ್ಯಾರ್ಥಿಭವನಗಳನ್ನು ಕಟ್ಟಿಸಬೇಕಾದುದು ಧರ್ಮವಾಗಿರುವಾಗ, ಅಂಥ ಕಾರ್ಯಕ್ಕೆ ತಾವೂ ಯಥೋಚಿತ ಸಾಹಾಯ್ಯವನ್ನು ಮಾಡುವುದಕ್ಕೆ ವೀರಶೈವರು ಸನ್ನದ್ಧರಾದುದೇ ತಪ್ಪಾಗಿರಬೇಕು. ವಿದ್ಯಾಪ್ರಸಾರದ ಸರ್ಕಾರದ ಉದ್ದೇಶಕ್ಕೆ ಬೆಂಬಲವಾಗುವುದರಲ್ಲಿ ಎಲ್ಲರಿಗಿಂತಲೂ ಮುಂದಾಳುಗಳಾಗಿರುವ ವೀರಶೈವರ ಯತ್ನಕ್ಕೆ ಗೌರ್ನಮೆಂಟಿನವರು ಇಂಥ ನಿರುತ್ಸಾಹವನ್ನೂ, ವಿಧಿಪ್ರಕಾರ ತಾವು ನಡೆದುಕೊಳ್ಳಬೇಕಾದ ಧರ್ಮಕ್ಕೆ ಭಂಗವನ್ನೂ, ಶಂಕುಸ್ಥಾಪನ ಕಾಲದಲ್ಲಿ ಶ್ರೀಮದ್ಯುವರಾಜರವರು ಅಪ್ಪಣೆಕೊಡಿಸಿದ ವಾಗ್ದಾನಕ್ಕೆ ಮಸಿಯನ್ನೂ ಹತ್ತಿಸುವಂಥ ಪರ್ಯವಸಾನವು ಉಚಿತಜ್ಞರಾದ ಶ್ರೀಮನ್ಮಹಾರಾಜರವರ ಪ್ರಭುತ್ವದಲ್ಲಿ ಎಂದಿಗೂ ಆಗಲಾರದೆಂದು ನಂಬುತ್ತೇವೆ. ತಕ್ಕ ಪ್ರಯತ್ನವನ್ನು ವೀ. ವಿ. ಫಂಡ್ ಸಂಘದ ಮ್ಯಾನೇಜಿಂಗ್ ಕಮಿಟಿಯವರೂ, ಇತರ ಪ್ರಮುಖರೂ ಕೈಕೊಳ್ಳದಿರಲಾರರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ತಾ|| ೧೫ ರಲ್ಲಿ ಬೆಂಗಳೂರಿನಲ್ಲಿ ಕೂಡಿದ ನಿಯಮನಿರ್ಮಾಣ ಸಭೆಯಲ್ಲಿ ವರಮಾನದ ತೆರಿಗೆಯ ಬಿಲ್ಲು ಸಭಿಕರಿಂದೆಲ್ಲಾ ಅನುಮೋದಿತವಾಯಿತು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ. ಬಸವಯ್ಯನವರ ಮೃತಿಯಿಂದ ತೆರವಾದ ಸ್ಥಾನಕ್ಕೆ ರಾ|| ಸಾ|| ಎಚ್. ಚೆನ್ನಯ್ಯನವರು ಸೇರಿಸಿಕೊಳ್ಳಲ್ಪಟ್ಟಿದ್ದಾರೆ.

ಬರುವ ಜುಲೈ ತಾ|| ೧ ರಿಂದ ತಮ್ಮ ಡಿಸ್ಟ್ರಿಕ್ಟಿನಲ್ಲಿ ಸಂಚಾರೋಪನ್ಯಾಸಕರು ಅವಶ್ಯಕವಿಲ್ಲವೆಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ನಿರ್ಧರಿಸಿದ್ದಾರೆ.

ಬೆಂಗಳೂರಿನಲ್ಲಿ ಕುರುಡಮೂಕರಾದ ಗಂಡು ಹೆಣ್ಣುಮಕ್ಕಳಿಗಾಗಿ ಒಂದು ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಅಲ್ಲಿಯ ಮ್ಯುನಿಸಿಪಾಲಿಟಿಯವರು ನಿರ್ಧರಿಸಿದ್ದಾರೆ.

ರಾಜಧಾನಿಯಲ್ಲಿ ಬರಿಯ ಮೋಡದ ಓಡಾಟವೇ ಹೊರತು ಮಳೆಯಾಗುತ್ತಲಿಲ್ಲ. ಸುತ್ತಮುತ್ತಣ ತಾಲ್ಲೂಕುಗಳಲ್ಲೂ ಮಳೆಯಿಲ್ಲದೆ ಜೋಳದ ಪೈರು ಬಾಡುತ್ತಲಿವೆ. ಗಾಳಿಯು ವಿಪರೀತವಾಗಿ ಬೀಸುತ್ತಿದೆ.

ಕುನ್ನೂರಿಗೆ ಚಿಕಿತ್ಸಾರ್ಥವಾಗಿ ಹೋಗಿದ್ದ ಬೊಂಬಾಯಿ ಗೌರ್ನರ್ ದಂಪತಿಗಳು ನಾಡಿದ್ದು ನಂಜನಗೂಡು ಮಾರ್ಗವಾಗಿ ರಾಜಧಾನಿಗೆ ದಯಮಾಡಿಸಿ, ಇಲ್ಲಿ ಶ್ರೀಮನ್ ಮಹಾರಾಜರ ಆತಿಥ್ಯದಲ್ಲಿ ೨ ದಿವಸಗಳಿರುವವರಾಗಿದ್ದಾರೆ.

ಎಚ್. ವಿ. ನಂಜುಂಡಯ್ಯನವರು ಗತಿಸಿದುದರಿಂದ ಕರ್ಣಾಟಕ ಸಾಹಿತ್ಯ ಪರಿಷತ್ತಿನವರ ಪ್ರಾರ್ಥನೆ ಮೇರೆಗೆ ಅದರ ಅಧ್ಯಕ್ಷತೆಯನ್ನು ಸರ್ದಾರ್ ಕಾಂತರಾಜ ಅರಸಿನವರು ವಹಿಸಲು ಅನುಮೋದಿಸಿದರೆಂದು ಕೇಳಿ ಅವರ ದೇಶಭಾಷಾಭಿಮಾನವನ್ನು ಅಭಿನಂದಿಸುತ್ತೇವೆ.

ಶ್ರೀ ಜೋಧಪುರ ಮಹಾರಾಜರವರು ಮೈಸೂರು ಕಾಡುಗಳಲ್ಲಿ ಬೇಟೆಯನ್ನು ತೀರಿಸಿಕೊಂಡು ರಾಜಧಾನಿಗೆ ದಯಮಾಡಿ ಖಾಸಬಂಗಲೆಯಲ್ಲಿ ಶ್ರೀಮನ್ ಮಹಾರಾಜರವರ ಆತಿಥ್ಯದಲ್ಲಿ ೪ ದಿನವಿದ್ದು ನೋಡತಕ್ಕ ಪ್ರದೇಶಗಳನ್ನೆಲ್ಲಾ ನೋಡಿಕೊಂಡು ಸ್ವದೇಶಕ್ಕೆ ತೆರಳಿದರು.

ಬರುವ ಜುಲೈ ತಾ|| ೧ ರಿಂದ ದಾವಣಗೆರೆಯಲ್ಲಿ ಒಂದು ಮುನ್ಸೀಫ್ ಕೋರ್ಟು ಆರಂಭಿಸಲ್ಪಡುತ್ತದೆ. ಇದಕ್ಕೆ ದಾವಣಗೆರೆಯೇ ಅಲ್ಲದೆ ಹರಿಹರ, ಹೊಳಲ್ಕೆರೆ, ಜಗಲೂರು, ಹೊಸದುರ್ಗ ತಾಲ್ಲೂಕುಗಳ ೫೦ ರೂ. ವರೆಗಣ ಸ್ಮಾಲ್ ಕಾಜು ವ್ಯಾಜ್ಯಗಳನ್ನೂ, ೨೫೦೦ ರೂ. ಒಳಗಣ ದಾವೆಗಳನ್ನೂ ಹಿಡಿಯಲು ಅಧಿಕಾರ ಕೊಡಲ್ಪಟ್ಟಿದೆ.

ಎ|| ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ದಾವಣಗೆರೆ ಹೈಸ್ಕೂಲಿನಲ್ಲಿ VI ಫಾರಂ ಕ್ಲಾಸನ್ನು ಇಡಲು ದಯಮಾಡಿ ಅಪ್ಪಣೆಯನ್ನು ಕೊಡಿಸಿರುತ್ತಾರಾದುದರಿಂದ ಈ ಕ್ಲಾಸಿಗೆ ಮತ್ತು ಇತರ ಕ್ಲಾಸುಗಳಿಗೆ ಸೇರಲು ಅಪೇಕ್ಷಿಸುವ ವಿದ್ಯಾರ್ಥಿಗಳೆಲ್ಲರೂ ಸಾಧ್ಯವಾದಷ್ಟು ಬೇಗನೆ ಹೈಸ್ಕೂಲ್ ಹೆಡ್ಮಾಸ್ಟರವರಿಗೆ ಅಪ್ಲಿಕೇಷನ್ ಹಾಕಿಕೊಳ್ಳಬಹುದಾಗಿ ತಿಳಿಸಿರುತ್ತಾರೆ.

ಬರುವ ತಾ|| ೨೭ ನೆ ಭಾನುವಾರ ಸಾಯಂಕಾಲ ಬೆಂಗಳೂರು ರಾ|| ಬ|| ತೋಟದಪ್ಪನವರ ಸತ್ರದಲ್ಲಿ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಜನರಲ್ ಕಮಿಟಿಯ ವಾರ್ಷಿಕಾಧಿವೇಶನವು ಕೂಡುತ್ತದೆ. ಮುಖ್ಯವಾದ ಕೆಲ ವಿಷಯಗಳು ಚರ್ಚಿಸಲ್ಪಡುತ್ತವೆಯಾದ ಕಾರಣ ಎಲ್ಲ ಡಿಸ್ಟ್ರಿಕ್ಟುಗಳ ಜನರಲ್ ಕಮಿಟಿ ಮೆಂಬರುಗಳೂ ಅಭಿಮಾನ ವಹಿಸಿ ದಯಮಾಡಿಸಬೇಕೆಂದು ಪ್ರಾರ್ಥಿಸಲ್ಪಟ್ಟಿದ್ದಾರೆ.

ಭರತಖಂಡದ ಲೋಹಮಾರ್ಗ ಸಂಘಗಳವರ ಟ್ರಾಫಿಕ್ ಕಮಿಟಿ ಸಭೆಯು ಇದೇ ತಿಂಗಳು ತಾ|| ೨೮ ರಲ್ಲಿ ಬೆಂಗಳೂರಿನಲ್ಲಿ ಕೂಡುವುದಾಗಿದೆ. ಇದರಲ್ಲಿ ಒಂದು ಕಂಪೆನಿಯವರ ಮಾರ್ಗಗಳ ಮೇಲೆ ಬಂದ ಪ್ರಯಾಣಿಕರು ಸಾಮಗ್ರಿಗಳು ಮೊದಲಾದುವನ್ನು ಬೇರೆ ಕಂಪೆನಿಯವರ ಮಾರ್ಗಗಳ ಮೇಲೆ ಸಾಗಿಸುವುದೇ ಮೊದಲಾದ ನಿಬಂಧನೆಗಳಲ್ಲಿರುವ ಕಾಠಿನ್ಯವನ್ನು ತಗ್ಗಿಸುವ ಆಲೋಚನೆಯನ್ನು ಮಾಡುವವರಾಗಿದ್ದಾರೆ.

ಮೈಸೂರು ದೇಶದಲ್ಲಿ ಬೆಂಗಳೂರು ಹರಿಹರ ಲೋಹಮಾರ್ಗದ ಆದಾಯವು ಬಹಳ ಸಮರ್ಪಕವಾಗಿದೆ. ಗುಬ್ಬಿಯಿಂದ ಹರಿಹರದವರೆಗೆ ಮಾರ್ಗ ಹಾಕುವುದಾಕ್ಕಾಗಿ ಮಾಡಿರುವ ೨ ಕೋಟಿ ರೂ. ಸಾಲಕ್ಕೆ ಸೇಕಡಾ ೪ ರೂ. ನಂತೆ ಬಡ್ಡಿ ಕೊಟ್ಟೂ ಮೇಲೆ ಸೇಕಡ ೪ ರೂ. ನಂತೆ ಲಾಭ ಬರುತ್ತಿದೆ. ಈ ಮಾರ್ಗವು ಎಂ. ಎಸ್. ಎಂ. ರೈಲ್ವೆ ಕಂಪೆನಿಯವರಿಂದ ರೂಢಿಸಲ್ಪಡುತ್ತಿದೆ. ಅವರಿಂದ ಮರಳಿ ನಮ್ಮ ಸರ್ಕಾರದವರು ವಶಪಡಿಸಿಕೊಳ್ಳಲಿಕ್ಕೆ ಇನ್ನೂ ೧೬ ವರ್ಷಗಳ ಗಡುವಿದೆಯಂತೆ.

ಸೀನಿಯರ್ ಸರ್ಜನ್ನರಾದ ರಾ|| ಬ|| ಟಿ. ಆರುಮೊಗಂ ಮೊದಲಿಯಾರರು ಮುಂದಣ ತಿಂಗಳ ಕಡೆಯಲ್ಲಿ ಕೆಲಸದಿಂದ ನಿವೃತ್ತರಾಗಲು ಸರ್ಕಾರದವರು ಅಪ್ಪಣೆಯನ್ನಿತ್ತು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾಕ್ಟರ್ ಸಿ. ಎ. ನಂಜಪ್ಪನವರನ್ನು ಮುಂದಣ ತಿಂಗಳು ತಾ|| ೧ ರಿಂದ ಸೀನಿಯರ್ ಸರ್ಜನರಾಗಿ ನಿಯಮಿಸಿರುವರೆಂದು ತಿಳಿಯಬರುತ್ತದೆ. ಆದರೆ ಕೃಷ್ಣರಾಜ ಆಸ್ಪತ್ರೆಯ ಮೆಡಿಕಲ್ ಆಫೀಸರುದ್ಯೋಗಕ್ಕೆ ಯಾರು ಬರುವರೆಂಬುದು ಇನ್ನೂ ಗೊತ್ತಾಗಿಲ್ಲವು.

ಸರ್ಕಾರದವರು ಫುಡ್ ಕಂಟ್ರೋಲರಾಗಿರುವ ಮಿ|| ಕೆ. ಮೆಥ್ಯೂ ರವರನ್ನು ಬೆಂಗಳೂರು ಮೈಸೂರು ಡಿಸ್ಟ್ರಿಕ್ಟುಗಳ ವರಮಾನದ ತೆರಿಗೆಯ ವಿಧಾಯಕ ಕಾರ್ಯದ ಯಜಮಾನ್ಯದ ಮೇಲೆ ನಿಯಮಿಸಿ, ಆ ಕಾರ್ಯದ ಅನುಭವವನ್ನು ಮಾಡಿಕೊಂಡು ಬರುವುದಕ್ಕಾಗಿ ಕೆಲ ಕಾಲದಮಟ್ಟಿಗೆ ಅವರನ್ನು ಮದರಾಸಿಗೆ ಕಳುಹಿಸಿಕೊಡುವರೆಂತಲೂ, ಉಳಿದ ಡಿಸ್ಟ್ರಿಕ್ಟುಗಳ ವರಮಾನದ ತೆರಿಗೆಯ ವಿಧಾಯಕ ಕಾರ್ಯವನ್ನೆಲ್ಲಾ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳಿಗೇ ವಹಿಸಿಕೊಡುವವರಾಗಿದ್ದಾರೆಂತಲೂ ಕೇಳುತ್ತೇವೆ.

ನಮ್ಮ ಸಂಸ್ಥಾನದ ಕೆಲವು ಲೋಹಮಾರ್ಗಗಳು ನಮ್ಮ ಸರ್ಕಾರದವರ ಅಧೀನಕ್ಕೆ ಬಂದಿದ್ದರೂ ತಕ್ಕಷ್ಟು ಬಂಡಿಗಳಿಲ್ಲದ ಕಾರಣದಿಂದ ಪ್ರಯಾಣಿಕರು ಇಕ್ಕಟ್ಟಾಗಿಯೂ ವಾಗನ್ನುಗಳಲ್ಲಿ ಕುಳಿತೂ ಹೋಗಬೇಕಾದ ಕಷ್ಟವು ತಪ್ಪಿರುವುದಿಲ್ಲ. ಆದರೆ ಈಗೀಗ ಹೊಸಬಂಡಿಗಳನ್ನು ಕಟ್ಟಿಸುತ್ತಿದ್ದಾರೆ. ಕೆಲ ಹೊಸ ಬಂಡಿಗಳು ಆಗಲೇ ಉಪಯೋಗಿಸಲ್ಪಡುತ್ತವೆ. ತಕ್ಕ ಲೋಹಸಾಮಗ್ರಿಗಳು ಬಂದಿಳಿದಿರುತ್ತವೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಪ್ರಯಾಣಿಕರ ಬಂಡಿಗಳ ನಿರ್ಮಾಣಕ್ಕಾಗಿಯೇ ೪ ಲಕ್ಷ ರೂ. ಗಳನ್ನು ವೆಚ್ಚಮಾಡಲು ಏರ್ಪಡಿಸಿದ್ದಾರೆ. ಒಂದೊಂದು ೩ ನೆ ತರಗತಿ ಪ್ರಯಾಣಿಕರ ಬಂಡಿಯ ನಿರ್ಮಾಣಕ್ಕೆ ಬಹುಶಃ ೨೦ ಸಾವಿರ ರೂ. ಗಳು ಮುಟ್ಟುವುವೆಂದೂ, ೧-೨ನೆ ತರಗತಿಯ ಬಂಡಿಗೆ ೨೫ ರಿಂದ ೩೦ ಸಾವಿರದ ವರೆಗೂ ವ್ಯಯವಾಗುವುದೆಂದೂ ತಿಳಿಯುತ್ತೇವೆ.

ಅತ್ತಿಗೋಡು ಮ|| ಬಸವಪ್ಪನವರು ೧-೨ ತಿಂಗಳಿಂದ ಅಸ್ವಸ್ಥರಾಗಿದ್ದು ಕಳೆದ ಭಾನುವಾರ ಮಧ್ಯಾಹ್ನ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ರಾಜಧಾನಿಯ ವೀರಶೈವಮಠದ ಹಳಬರಲ್ಲಿ ಒಬ್ಬರಾಗಿದ್ದರು. ಅಂತ್ಯಕಾಲದಲ್ಲಿ ೭೫ ವಯಸ್ಸು. ಇವರು ಸಾಧುಸ್ವಭಾವದವರಾಗಿಯೂ, ಯಥೋಚಿತವಾಗಿ ದಾನಧರ್ಮಪರಾಯಣರಾಗಿಯೂ, ನಿಷ್ಕಪಟಿಗಳಾಗಿಯೂ, ಉದಾರಿಗಳಾಗಿಯೂ ಇದ್ದರು. ಈಗಣ ಶಂಕರವಿಲಾಸ ಪಾಠಶಾಲೆಯನ್ನು ಇವರೇ ಕಟ್ಟಿಸಿಕೊಟ್ಟವರು. ಇವರಿಗೆ ಅರಮನೆಯಲ್ಲಿ ೨೫ ರೂಪಾಯಿ ವೇತನವಿದ್ದಿತು. ಮರಿಮಲ್ಲಪ್ಪನವರ ಧರ್ಮದ ಟ್ರಸ್ಟಿಗಳಲ್ಲಿ ಇವರು ಒಬ್ಬರಾಗಿದ್ದರು. ಇವರ ಗೌರವಾರ್ಥವಾಗಿ ಕಳೆದ ಸೋಮವಾರ ಆ ಹೈಸ್ಕೂಲಿಗೆ ರಜಾ ಕೊಡಲ್ಪಟ್ಟಿದ್ದಿತು.

ಕಳೆದ ವರ್ಧಂತಿಯ ಮಹೋತ್ಸವ ಕಾಲದಲ್ಲಿ ಜರುಗಿದ ಪ್ರಜಾಪ್ರತಿನಿಧಿ ಸಭೆಗೆ ದಯಮಾಡಿಸಿದ್ದ ವೀರಶೈವ ಮೆಂಬರುಗಳೆಲ್ಲರೂ ಮತಸಂಬಂಧವಾದ ಕೆಲ ವಿಷಯಗಳನ್ನು ಪರ್ಯಾಲೋಚಿಸುವ ಬಗೆಗೆ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಕೂಡಿದ್ದಾಗ್ಗೆ ಬೆಂಗಳೂರಿಗೆ ಬರುವ ವೀರಶೈವರಿಗೆ ತಕ್ಕ ಭೋಜನಶಾಲೆಯು ಇಲ್ಲದೆ ಬಹಳ

ತೊಂದರೆಯಾಗಿರುವ ಪ್ರಯುಕ್ತ ತೋಟದಪ್ಪನವರ ಸತ್ರದಲ್ಲಿ ಒಂದು ಭೋಜನಶಾಲೆಯ (ಹೋಟೆಲ)ನ್ನೇರ್ಪಡಿಸಿಕೊಡಬೇಕೆಂದು ಸೂಚಿಸಿದುದರಮೇಲೆ ಈ ತಾ|| ೨೭ ರಲ್ಲಿ ಬೆಂಗಳೂರಲ್ಲಿ ನಡೆಯುವ ವೀರಶೈವ ವಿದ್ಯಾವರ್ಧಕಫಂಡಿನ ವಾರ್ಷಿಕ ಸಮ್ಮೇಳನಕ್ಕೆ ಬರತಕ್ಕ ಮೆಂಬರುಗಳಿಗೆ ಅನುಕೂಲಿಸುವಂತೆ ಭೋಜನಶಾಲೆಯನ್ನೇರ್ಪಡಿಸಿಕೊಡುತ್ತೇವೆಂದು ದಿ|| ಬ|| ಸೆಟ್ಟರು ವಾಗ್ದಾನ ಮಾಡಿದ್ದರು. ಅದರಂತೆ ಏರ್ಪಾಟಾಗಿರುವುದೆ? ಎಂದು ಅನೇಕರು ನಮಗೆ ಬರೆದಿರುತ್ತಾರೆ. ಆದುದರಿಂದ ದಿ|| ಬ|| ಸೆಟ್ಟರು ಆ ರೀತಿ ಭೋಜನಶಾಲೆಯನ್ನು ಈವರೆಗೇರ್ಪಡಿಸದಿದ್ದಲ್ಲಿ ಈಗಲಾದರೂ ಮಾಡುವರೆಂದು ನಿರೀಕ್ಷಿಸುತ್ತೇವೆ.

ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿರುವ ವೀರಶೈವ ವಿದ್ಯಾರ್ಥಿಗಳಲ್ಲಿ ಕಳೆದ ಎಂಟ್ರನ್ಸ್ ಪರೀಕ್ಷೆಗೆ ಹೋಗಿದ್ದ ೮ ಜನರಲ್ಲಿ ನಾಲ್ವರೂ, ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹೋಗಿದ್ದ ೧೦ ಜನರಲ್ಲಿ ಒಬ್ಬನೂ ತೇರ್ಗಡೆ ಹೊಂದಿರುತ್ತಾರೆ. ಇದರ ಹಿಂದಣ ವರ್ಷದಲ್ಲಿ ಒಬ್ಬರೂ ತೇರ್ಗಡೆಯಾಗಿರಲಿಲ್ಲವು. ಈ ಸಲ ಇಷ್ಟು ಜನರಾದರೂ ಉತ್ತೀರ್ಣರಾದುದಕ್ಕಾಗಿ ಸಂತೋಷಿಸಬೇಕಾಗಿದೆ. ಬೆಂಗಳೂರು ವೀರಶೈವಾಶ್ರಮದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ೬ ಜನ ಹೋಗಿದ್ದುದಕ್ಕೆ ಮೂವರೂ, ಎನ್ಟ್ರನ್ಸ್ ಪರೀಕ್ಷೆಗೆ ಮೂವರು ಹೋಗಿದ್ದುದಕ್ಕೆ ಇಬ್ಬರೂ ಉತ್ತೀರ್ಣರಾಗಿರುವುದು ತೃಪ್ತಿಕರವಾಗಿದೆ. ಹೀಗೆ ಆಶ್ರಮದಲ್ಲಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚು ಜನ ತೇರ್ಗಡೆಯಾಗಿರುವುದಕ್ಕೂ ಸತ್ರದಲ್ಲಿರುವ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗಿರುವುದಕ್ಕೂ ಮೊದಲನೆಯದರಲ್ಲಿ ಅಶನವಸನಕ್ಕೆ ಸ್ವಂತ ದುಡ್ಡನ್ನು ವೆಚ್ಚಮಾಡಬೇಕಾಗಿರುವುದೂ ಎರಡನೆಯದರಲ್ಲಿ ಒಂದು ಕಾಸೂ ಖರ್ಚಿಲ್ಲದಿರುವುದೂ ಕಾರಣವಾಗಿದೆಯೆಂದು ಹೇಳಬಹುದು. ಈ ವೇಳೆ ಸತ್ರದ ಮೇಲ್ವಿಚಾರಕರು ದಾಕ್ಷಿಣ್ಯಕ್ಕೊಳಗಾಗದೆ ಬಹಳ ಕಟ್ಟುನಿಟ್ಟಿನಿಂದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಂಡಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಬೆಳ್ಳಿಯ ಬೆಲೆಯ ಮೇಲೆ ಇಟ್ಟಿದ್ದ ನಿರ್ಬಂಧವನ್ನು ಇಂಡಿಯಾ ಸರ್ಕಾರದವರು ಕಳೆದ ತಾ|| ೧೮ ರಿಂದ ತಪ್ಪಿಸಿಬಿಟ್ಟರು.

ಬೊಂಬಾಯಿ ವಿಶ್ವವಿದ್ಯಾಲಯದವರು ಲಾರ್ಡ್ ಸಿಂಹರವರಿಗೆ ಎಲ್. ಎಲ್. ಡಿ. ಪ್ರಶಸ್ತಿಯನ್ನು ಕೊಡಬೇಕೆಂದು ನಿರ್ಧರಿಸಿದ್ದಾರೆ

ಬಂಗಾಳಾ ಹೈಕೋರ್ಟು ಜಡ್ಜರಾಗಿದ್ದ ಸರ್ ಆಶುತೋಷ ಚೌಧರಿಯವರು ಕೆಲಸದಿಂದ ನಿವೃತ್ತರಾದರು. ಮರಳಿ ಇವರು ನ್ಯಾಯವಾದಿವೃತ್ತಿಯನ್ನವಲಂಬಿಸುವರು.

ನಮ್ಮ ಭರತಖಂಡದ ಸೈನಿಕರಲ್ಲಿ ೧೩೮೦೦೦ ಮಂದಿಗಳು ಈಗ ಹೊರಗಣ ದೇಶಗಳಲ್ಲಿದ್ದಾರೆ. ಅವರಿಗಾಗುವ ವೆಚ್ಚವನ್ನೆಲ್ಲಾ ಆಂಗ್ಲ ಸಾಮ್ರಾಜ್ಯ ಸರ್ಕಾರದವರೇ ವಹಿಸಿದ್ದಾರೆ.

ಟಾಟಾ ಕಂಪೆನಿಯವರು ಮೊನ್ನೆವಾರ ಬೊಂಬಾಯಿನಲ್ಲಿ ಗಜ ೧ ಕ್ಕೆ ೧೭೨೫ ರೂ. ಬೆಲೆಯ ಮೇರೆಗೆ ೧೧೩೫ ಚದರಗಜಗಳ ಭೂಮಿಯನ್ನು ೧೯೫೭೮೭೫ ರೂ. ಗಳಿಗೆ ಕೊಂಡುಕೊಂಡರು.

ಮಸ್ಸೂರಿ ಪಟ್ಟಣದಲ್ಲಿ ಅಫ್ಘನ್ ಸಂಧಿಗಾಗಿ ಕೂಡಿದ್ದ ಆಂಗ್ಲ ಪ್ರತಿನಿಧಿಗಳಿಗೆ ಇಂಫ್ಲುಯಂಜಾ ಜ್ವರವು ತಗುಲಿದುದರಿಂದ ಸಂಧಿ ಕಾರ್ಯಭಾರವು ನಿಂತಿದ್ದಿತು. ಈಗ ಮರಳಿ ತಾ|| ೧೨ ರಿಂದ ಸಂಧಿ ಸಭೆಗಳು ಜರುಗುತ್ತಿವೆ.

ಹುಚ್ಚು ಹಿಡಿದಿರುವ ಸಂಗತಿಯು ಸಂದೇಹಾಸ್ಪದವಾಗಿದ್ದ ಒಂದು ನಾಯಿಯು ಬೊಂಬಾಯಿ ಗೌರ್ನರ್ ದಂಪತಿಗಳನ್ನು ಸೋಂಕಿತ್ತೆಂಬ ಕಾರಣದಿಂದ ವೈದ್ಯರ ಹೇಳಿಕೆ ಮೇರೆಗೆ ಆ ದಂಪತಿಗಳು ಈಗ ಕೂನೂರಿಗೆ ಹೋಗಿ ಅಲ್ಲಿಯ ವಿಷಚಿಕಿತ್ಸಾಲಯದಲ್ಲಿ ಔಷಧವನ್ನು ಪಡೆಯುತ್ತಿದ್ದಾರೆ.

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋವಿಗೆ ಈಗ ಜರ್ಮನ್ ಸರಕುಗಳು ಮಾರಾಟಕ್ಕೆ ಬರಲಾರಂಭವಾಯಿತು. ಆದರೆ ಇವುಗಳ ಬೆಲೆಯು ಯುದ್ಧಕ್ಕೆ ಮುಂಚೆ ಅವರು ಹಾಕುತ್ತಿದ್ದ ಬೆಲೆಗಿಂತಲೂ ಸ್ವಲ್ಪ ಹೆಚ್ಚಾಗಿದೆಯಂತೆ; ಆದರೆ ಸರಕಿನ ಯೋಗ್ಯತೆಯು ಯುದ್ಧಕಾಲದಲ್ಲಿ ಜಪಾನರು ಒದಗಿಸುತ್ತಿದ್ದ ಸರಕುಗಳಿಗಿಂತ ಮೇಲಾಗಿದೆ.

ಬೊಂಬಾಯಿಯಲ್ಲಿ ಮೊನ್ನೆ ಸೋಮವಾರ ಬಲವಾದ ಮಳೆಯಾಯಿತು. ಸಮುದ್ರವು ೩ ದಿನಗಳಕಾಲ ಅಲ್ಲಕಲ್ಲೋಲವಾಗಿದ್ದು ಬುಧವಾರ ರಾತ್ರಿಯೆಲ್ಲಾ ಮತ್ತೆ ೨|| ಅಂಗುಲ ಮಳೆಯಾಯಿತು. ಗುರುವಾರ ಹಗಲೂ ರಾತ್ರಿಯೂ ಮಳೆ ಸುರಿದುದರಿಂದ ಊರಿನಲ್ಲಿ ಹಲವು ಕಡೆ ನೀರು ಪ್ರವಾಹದಂತೆ ಹರಿದಿತು. ಇನ್ನೂ ಮೋಡವಾಡುತ್ತಲೇ ಇದೆ.

ಕಳೆದ ತಿಂಗಳು ತಾ|| ೧೬ ರ ರಾತ್ರಿ ಪಂಜಾಬಿನ ಮೇಲ್ ಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ ಟಿಘ್‌ನೆಲ್ ಎಂಬ ಯುರೋಪ್ಯರನ್ನು ಕೊಂದ ಅಪರಾಧಿಯನ್ನು ಹಿಡಿದುಕೊಟ್ಟವರಿಗೆ ೫೦೦೦ ರೂ. ಬಹುಮಾನ ಕೊಡುವೆವೆಂದು ಅಲ್ಲಿಯ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಪ್ರಕಟಿಸಿದ್ದಾರೆ. ತಾವೂ ೫೦೦೦ ರೂ. ಕೊಡುವುದಾಗಿ ಈಸ್ಟ್ ಇಂಡಿಯನ್ ರೈಲ್ವೆಯವರೂ ಪ್ರಕಟಿಸಿದ್ದಾರೆ.

ಈಗಲೂ ಮೆಸಪೊಟೇಮಿಯಾದಲ್ಲೂ ಪಾರಸೀಕ ದೇಶದಲ್ಲೂ ಇಂಗ್ಲೀಷರ ೭೯೦೦೦ ಸೈನ್ಯವಿದೆ. ಇವರಲ್ಲಿ ೧೩೦೦೦ ಮಂದಿ ಇಂಗ್ಲೀಷ್ ಸೋಲ್ಜರರು, ೬೬೦೦೦ ಮಂದಿ ಭಾರತೀಯರು. ಇವರಿಗೆಲ್ಲಾ ವಾರ ೧ ಕ್ಕೆ ೪೭೫೦೦೦ ಪೌನ್ ವೆಚ್ಚವಾಗುತ್ತದೆ. ಇದರಲ್ಲಿ ಒಂದು ಕಾಸೂ ಭರತಖಂಡದ ಮೇಲೆ ಬೀಳುತ್ತಲಿಲ್ಲ. ಎಲ್ಲವನ್ನೂ ಆಂಗ್ಲ ಸಾಮ್ರಾಜ್ಯ ಪ್ರಭುತ್ವದವರೇ ವಹಿಸಿಕೊಂಡಿದ್ದಾರೆ.

ವೇಲೂರು ಪೊಲೀಸ್ ಟ್ರೇನಿಂಗ್ ಪಾಠಶಾಲೆಯಲ್ಲಿ ಸಂಕ್ಷಿಪ್ತ ಲಿಪಿಬೋಧಕರಾಗಿರುವ ಮ|| ಮಡಕಶಿರಾ ಶ್ರೀನಿವಾಸರಾವ್‌ರವರಿಗೆ ಈಗ ರಾವ್ ಸಾಹೇಬ್ ಬಿರುದು ಪ್ರಾಪ್ತವಾಗಿದೆ. ಇವರು ಸಂಕ್ಷಿಪ್ತ ಲಿಪಿಬೋಧನೆಯಲ್ಲಿ ೪೦ ವರ್ಷಗಳಿಂದ ಕೆಲಸಮಾಡುತ್ತ ತಮಿಳು, ತೆಲುಗು, ಕನ್ನಡ ಈ ದೇಶೀಯ ಭಾಷೆಗಳಿಗೆಲ್ಲಾ ಸಂಕ್ಷಿಪ್ತ ಲಿಪಿಯನ್ನು ಕಂಡುಹಿಡಿದು ರಚಿಸಿ ಸರ್ಕಾರದಿಂದ ಬಹುಮಾನವನ್ನು ಪಡೆದಿದ್ದಾರೆ.

ಅಮೃತಸರದ ಅನಾಹುತದ ವಿಷಯವು ತಮಗೆ ಸರಿಯಾಗಿ ತಿಳಿಯಲಿಲ್ಲವೆಂದೂ, ಅದುಕಾರಣ ಅದನ್ನು ಪ್ರಕಟಿಸಲಿಲ್ಲವೆಂದೂ ಹಿಂದೆ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದ್ದರು. ಈಗಲಾದರೊ ಪಂಜಾಬಿನಲ್ಲಿ ಆಗ ಲೆ|| ಗೌರ್ನರಾಗಿದ್ದ ಸರ್ ಮೈಕೇಲ್ ಓಡ್ವಯರ್‌ರವರು ೧೯೧೯ ನೆ ವರ್ಷದ ಜೂನ್ ತಾ|| ೩ ನೆ ದಿನ ಸ್ಟೇಟ್ ಸೆಕ್ರೆಟರಿಯವರೊಡನೆಯೂ, ಲಾರ್ಡ್ ಸಿಂಹರೊಡನೆಯೂ, ಹೋಲ್ಡರ್‌ನೆಸ್ ಮೊದಲಾದ ಇಂಡಿಯಾ ಆಫೀಸ್ ಸಭಿಕರೊಡನೆಯೂ ಆ ಸಂಬಂಧವಾದ ಎಲ್ಲ ವಿಷಯವನ್ನೂ ಸವಿಸ್ತಾರವಾಗಿ ತಿಳಿಸಿದ್ದೆನೆಂದು ಲಂಡನ್ ಟೈಮ್ಸ್ ಪತ್ರಿಕೆಗೆ ಈಗತಾನೇ ಅವರು ಬರೆದಿರುವ ಒಂದು ಲೇಖನದಲ್ಲಿ ಹೇಳಿರುತ್ತಾರೆ.

ಮದರಾಸು ಇಂಜನಿಯರಿಂಗ್ ಕಾಲೇಜು ಪ್ರಿನ್ಸಿಪಾಲರಿಗೆ ಅಸಿಸ್ಟೆಂಟರಾಗಿರುವ ಮ|| ಪಿ. ಸುಬ್ಬರಾವ್ ಬಿ. ಎ. ಯವರು ಹಾರ್ಮೋನಿಯಮ್ಮಿಗೆ ವಿದ್ಯುಚ್ಛಕ್ತಿ ಸಹಾಯವನ್ನೊದಗಿಸಿ, ಅದಕ್ಕೆ ಜೋಡಿಸಿರುವ ಕಡ್ಡಿಯನ್ನು ಜಲತರಂಗಿನ ಬಟ್ಟಲಿಗೆ ಸೋಂಕಿಸಿಟ್ಟು, ಹಾರ್ಮೋನಿಯಮ್ಮನ್ನು ನುಡಿಸಿದರೆ ತನಗೆತಾನೇ ವಿದ್ಯುಚ್ಛಕ್ತಿ ಸಹಾಯದಿಂದ ಜಲತರಂಗು ನುಡಿಯುವಂತಹ ಹೊಸ ಸಾಧನವೊಂದನ್ನು ಕಂಡುಹಿಡಿದಿದ್ದಾರೆ. ಇದುವರೆಗೆ ಇಂಥ ಪದ್ಧತಿಯನ್ನು ಯಾರೂ ಕಂಡುಹಿಡಿದಿರಲಿಲ್ಲ. ಈ ಸುಬ್ಬರಾಯರು ತಮ್ಮ ಪ್ರಯೋಗವನ್ನು ಕೆಲವು ದಿನಗಳ ಕೆಳಗೆ ಮದರಾಸಿನಲ್ಲಿ ಕೆಲ ಪ್ರಮುಖ ಜನರಿಗೆ ತೋರಿಸಿ ಸಂತೋಷಪಡಿಸಿದ್ದಾರೆ. ಇವರು ತಮ್ಮ ಯಂತ್ರಕ್ಕೆ ಪೇಟೆಂಟ್ ಪಡೆದು ಆರೀತಿಯ ಜಲತರಂಗುಗಳನ್ನು ಅನೇಕವಾಗಿ ನಿರ್ಮಿಸಿ ಮಾರಾಟಕ್ಕೆ ಇಡುವವರಾಗಿದ್ದಾರೆ.

ಹಂಟರ್ ಸಂಘದ ಅಧಿಕ ಸಂಖ್ಯಾಕರ ವರದಿಯನ್ನು ಮಿತವಾದಿಗಳು ಒಪ್ಪುವಂತೆ ಮಾಡುವುದಕ್ಕೆ ಆ|| ಸುರೇಂದ್ರನಾಥ ಬಾನರ್ಜಿಯವರು ಆ|| ಶ್ರೀನಿವಾಸಶಾಸ್ತ್ರಿ ಮೊದಲಾದವರಿಗೆ ತಂತೀವಾರ್ತೆಗಳನ್ನು ಕಳುಹಿಸಿದರೆಂದು ಉಗ್ರಪಕ್ಷದ ಅಮೃತಬಜಾರ್ ಪತ್ರಿಕಾಕರ್ತರಾದ ಬಾಬು ಮೋತೀಲಾಲ್ ಘೋಷ್‌ರವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದುದು ಸುಳ್ಳೆಂದು ಸುರೇಂದ್ರನಾಥ ಬಾನರ್ಜಿಯವರು ಮಾನನಷ್ಟಕ್ಕಾಗಿ ವ್ಯಾಜ್ಯ ಹೂಡಲು ಮೋತೀಲಾಲರಿಗೆ ನೋಟೀಸು ಕೊಡಿಸಿದರು. ಅದರ ಮೇಲೆ ಘೋಷರು ತಾವು ಸುಳ್ಳು ಸುದ್ದಿಯನ್ನು ನಂಬಿ ಪ್ರಕಟಿಸಿದೆನೆಂದು, ಅದಕ್ಕಾಗಿ ವಿಷಾದವನ್ನು ತೋರಿಸಿ, ಆ ಲೇಖನವನ್ನು ಹಿಂದಿರುಗಿಸಿಕೊಂಡಿದ್ದೇನೆಂದು ಪ್ರಕಟಿಸಿದರು. ಆದರೂ ಬಾನರ್ಜಿಯವರು ಸಮಾಧಾನಪಡದೆ ತಮ್ಮ ವಕೀಲರಿಗೆ ಕಾಗದಗಳನ್ನು ಕೊಟ್ಟು ವ್ಯಾಜ್ಯವನ್ನು ಹೂಡಲು ತಿಳಿಯಿಸಿದ್ದಾರೆ.

ಭರತಖಂಡದಿಂದ ದಕ್ಷಿಣಾಫ್ರಿಕಾಕ್ಕೆ ಹೋಗಿ ವಾಸವಾಗಿರುವ ಜನರಿಗೆ ಅಲ್ಲಿಯ ಕೆಂಪು ಜನರು ಆಗಾಗ್ಗೆ ಕೊಡುತ್ತಿರುವ ಬಾಧೆಗಳು ಲೋಕವಿದಿತವಷ್ಟೆ. ಅದರ ವಿಚಾರಣೆಗಾಗಿ ಈಚೆಗೆ ಏರ್ಪಡಿಸಲ್ಪಟ್ಟಿದ್ದ ಸಂಘದವರು ಮಾಡಿರುವ ವರದಿಯಲ್ಲಿ-ಅಲ್ಲಿಯ ಅಶಾಂತಿಯನ್ನು ತಪ್ಪಿಸಬೇಕಾದರೆ ಅಲ್ಲಿರುವ ಭಾರತೀಯರನ್ನೆಲ್ಲಾ ಮರಳಿ ಭರತಖಂಡಕ್ಕೆ ಕಳುಹಿಸಿಬಿಟ್ಟು ಅದಕ್ಕಾಗಿ ಅವರಿಗೆ ಸಂಭವಿಸುವ ನಷ್ಟಕ್ಕೆ ಪರಿಹಾರವನ್ನು ಕೊಡುವುದೇ ಉಪಾಯವೆಂದು ಸೂಚನೆ ಕೊಟ್ಟಿದ್ದಾರಂತೆ. ನೆಗಡಿಗೆ ಪರಿಹಾರವೇನೆಂದು ಕೇಳಿದರೆ ಮೂಗನ್ನು ಕೊಯ್ದುಬಿಡುವುದೇ ಚಿಕಿತ್ಸೆಯೆಂದು ಹೇಳಿದ ವೈದ್ಯನ ಸಲಹೆಗೆ ಈ ಸೂಚನೆಯು ಸರಿಯಾಗಿದೆ. ದಕ್ಷಿಣಾಫ್ರಿಕಾಕ್ಕೆ ಎಷ್ಟೋ ಕಾಲಕ್ಕೆ ಮುಂಚೆ ಹೋಗಿ ಅಲ್ಲಿ ಭೂಮಿಕಾಣಿಗಳನ್ನು ಸಂಪಾದಿಸಿಕೊಂಡು ನೆಲೆಯಾಗಿ ನಿಂತಿರುವ ಭಾರತೀಯರನೇಕರಿದ್ದಾರೆ. ಅವರೆಲ್ಲಾ ಈಗ ಎಲ್ಲೋ ಸ್ವಲ್ಪ ಪರಿಹಾರವನ್ನು ಪಡೆದುಕೊಂಡು ಆಸ್ತಿಯನ್ನೆಲ್ಲಾ ಬಿಟ್ಟು ಬರುವುದೆಂದರೆ ಅದು ಸಾಮಾನ್ಯವಾದ ನಷ್ಟವೆ? ಇದಕ್ಕೆ ಯಾರೂ ಒಪ್ಪಲಾರರು.

ಫಿಜಿ ದ್ವೀಪಕ್ಕೆ ಕೂಲಿ ನಾಲಿಗಾಗಿ ಅನೇಕ ಭಾರತೀಯರು ಹೋಗಿ ಸೇರಿರುವರಷ್ಟೆ. ಅಲ್ಲಿಯೂ ಇವರಿಗೆ ವಿಚಿತ್ರ ಹಿಂಸೆಗಳಿರುವುವು. ಕಳೆದವಾರ ಬಂದಿರುವ ವಾರ್ತೆಗಳನ್ನು ಕೇಳಿದರೆ ಅಮೃತಸರದಲ್ಲಾದ ಕ್ರೌರ್ಯದ ಪುನರಾವೃತ್ತಿಯೇ ಅಲ್ಲಿಯೂ ಆಗಿರುವಂತೆ ಕಾಣುತ್ತದೆ. ಅದೇನೆಂದರೆ—ಕೆಲ ಗ್ರಾಮಗಳಲ್ಲಿ ಕೆಲಸಮಾಡುತ್ತಿದ್ದ ಕೂಲಿಗಾರರು ತಮಗೆ ಹೆಚ್ಚು ಸಂಬಳವನ್ನು ಕೊಡಬೇಕೆಂದು ಕೋರಿ, ಅದು ದೊರೆಯದಿದ್ದುದರಿಂದ ಮುಷ್ಕರಹಿಡಿದು ಕೆಲಸವನ್ನು ಬಿಟ್ಟರು. ಮತ್ತು ಅಲ್ಲಿಯ ಭಾರತೀಯರೆಲ್ಲಾ ತಮ್ಮ ಪ್ರತಿನಿಧಿಗಳಾಗಿ ಕೆಲವರನ್ನು ಆ ದ್ವೀಪದ ಗೌರ್ನರ ಬಳಿಗೆ ಕಳುಹಿಸಿ, ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಅದನ್ನು ವಿಚಾರಿಸುವುದಕ್ಕಾಗಿ ಗೌರ್ನರು ಒಂದು ಸಂಘವನ್ನೇರ್ಪಡಿಸಿದರು. ಆದರ ಮೇಲೆ ಗದ್ದಲವೇನೂ ನಡೆಯದೆ ಶಾಂತವಾಗಿದ್ದಿತು. ಅಷ್ಟರಲ್ಲಿ ಕೆಲ ಭಾರತೀಯ ಸ್ತ್ರೀಯರು ಸೆರೆಹಿಡಿಯಲ್ಪಡುವವರಾಗಿದ್ದಾರೆಂಬ ವದಂತಿಯನ್ನು ಕೆಲ ಯುರೋಪ್ಯರು ಹುಟ್ಟಿಸಿದರು. ಆದರ ಮೇಲೆ ಒಂದು ಭಾರತ ಸ್ತ್ರೀಯರ ಸಭೆಯು ಕೂಡಿತು. ಅಲ್ಲಿಗೆ ಒಬ್ಬ ಯುರೋಪಿಯನ್ ಪೊಲೀಸು ಭಟನು ಹೋಗಿ ಒಬ್ಬ ಹೆಂಗುಸನ್ನು ದೊಣ್ಣೆಯಿಂದ ಹೊಡೆದನು. ಅವಳ ಸಹಾಯಕ್ಕೆ ಇನ್ನು ಕೆಲ ಮಂದಿ ಹೆಂಗುಸರು ಹೋದರು. ಅವರಿಗೂ ಏಟುಗಳು ಬಿದ್ದುವು. ಅದನ್ನು ಕಂಡು ಭಾರತೀಯ ಪುರುಷರನೇಕರು ಉದ್ರೇಕಗೊಂಡು ಪೊಲೀಸರ ಮೇಲೆ ಬಿದ್ದರು. ಮೂವರು ಪೊಲೀಸರಿಗೆ ಏಟು ಬಿದ್ದುವು. ಕೂಡಲೇ ಸರ್ಕಾರದವರು ದೇಶರಕ್ಷಣ ಸೈನ್ಯವನ್ನೂ, ಯಂತ್ರದ ಫಿರಂಗಿಗಳನ್ನೂ ಬರಮಾಡಿಸಿ, ಹಿಂದೂಜನರ ಮೇಲೆ ಗುಂಡು ಹೊಡೆಯಿಸಿದರು. ಕೆಲರು ಸತ್ತರು. ಕೆಲರಿಗೆ ಏಟುಬಿದ್ದು ಗಾಯಗಳಾದುವು. ಮತ್ತು ೨೦೦ ಮಂದಿಯ ಮೇಲೆಯೇ ಗಂಡಸರನ್ನೂ, ೩೦ ಮಂದಿ ಮೇಲೆಯೇ ಹೆಂಗುಸರನ್ನೂ ಸೆರೆ ಹಿಡಿದಿರುವರು. ಸೈನಿಕರು ಭಾರತೀಯರ ಮನೆಗಳನ್ನು ಮುತ್ತಿ ಒಳಕ್ಕೆ ನುಗ್ಗಿ ಬಹಳ ದೌರ್ಜನ್ಯಗಳನ್ನು ನಡೆಯಿಸಿದರಂತೆ. ಈಗ ಅಲ್ಲಿಯ ಸರ್ಕಾರದವರು ೫ ಮಂದಿಗಿಂತ ಹೆಚ್ಚಾಗಿ ಕೂಡಿ ಭಾರತೀಯರು ಬೀದಿಯಲ್ಲಿ ತಿರುಗಾಡಕೂಡದೆಂದೂ, ೭ ಮಂದಿಗಿಂತ ಹೆಚ್ಚಾಗಿ ಒಂದು ಕಡೆ ವಾಸಮಾಡಲಾಗದೆಂದೂ ಕಟ್ಟಪ್ಪಣೆ ಮಾಡಿದ್ದಾರಂತೆ.

ವಿದೇಶ ವೃತ್ತಾಂತಗಳು.

ಅಮೇರಿಕಾದಲ್ಲಿ ಕಾಗದದ ನಿರ್ಮಾಣಕ್ಕೆ ಈಗ ಒಂದು ಕಂಪೆನಿಯು ಸ್ಥಾಪಿತವಾಯಿತು. ಅವರ ವಶದಲ್ಲಿ ಕಾಗದದ ನಿರ್ಮಾಣಕ್ಕೆ ಅನುಕೂಲಿಸುವ ಮರಗಳುಳ್ಳ ೧೦ ಸಾವಿರ ಚದರಮೈಲಿಯ ಕಾಡು ಇದೆ. ವರ್ಷ ೧ ಕ್ಕೆ ೨|| ಲಕ್ಷ ಟನ್ ಕಾಗದವನ್ನು ಅವರು ನಿರ್ಮಿಸುವವರಾಗಿದ್ದಾರೆ.

ಕಳೆದ ಯುದ್ಧದಲ್ಲಿ ಆಯಾ ದೇಶಗಳವರಿಗೆ ಆಗಿರುವ ವೆಚ್ಚವು ಈ ಪ್ರಕಾರವಾಗಿರುವುದೆಂದು ಲೆಕ್ಕಹಾಕಲ್ಪಟ್ಟಿದೆ. ಇಂಗ್ಲೆಂಡಿಗೆ ೩೫೦ ಕೋಟಿ ಪೌನ್, ಇಟಲಿಗೆ ೧೯೦ ಕೋಟಿ ಪೌನ್, ಬೆಲ್ಜಿಯಮ್ಮಿಗೆ ೫೦ ಕೋಟಿ ಪೌನ್; ಫ್ರಾನ್ಸಿಗೆ ೫೮೫ ಕೋಟಿ ಪೌನ್, ಜರ್ಮನಿಗೆ ೮೭೦ ಕೋಟಿ ಪೌನ್.

ತುರ್ಕಿ ಸಂಧಿನಿಬಂಧನೆಯಲ್ಲಿ ಮಾರ್ಪಾಟಾಗುವ ಸೂಚನೆಗಳು ಕಾಣುತ್ತಿವೆ. ಇಂಗ್ಲೆಂಡಿನಲ್ಲೂ ಫ್ರಾನ್ಸಿನಲ್ಲೂ ಸಹ ತುರ್ಕಿಯ ಕಡೆ ಸಾನುಭೂತಿಗಳು ತೋರಿಸಲ್ಪಡುತ್ತಿರುವುದೂ, ಬೋಲ್ಷೆವಿಕ್ಕರು ಪರ್ಷಿಯಾದಲ್ಲಿ ಮುಂದುವರಿದು ನುಗ್ಗುತ್ತಿರುವುದೂ ಇತರ ಕೆಲ ಸನ್ನಿವೇಶಗಳೂ ಇದಕ್ಕೆ ಕಾರಣವಾಗಿರಬೇಕು. ಆಂಗ್ಲ ಮುಖ್ಯಮಂತ್ರಿಗಳ ಮನಸ್ಸು ದೋಲಾಯಮಾನವಾಗಿದೆ.

ಬೋಲ್ಷೆವಿಕ್ಕರು ಈಗ ಡ್ವೈನಾ ಬೆರಿಸೀನಾ ನದಿಗಳ ಮಧ್ಯದಲ್ಲಿ ಪೋಲರಿಂದ ಏಟುತಿಂದು ಹಿಮ್ಮೆಟ್ಟುತ್ತಿದ್ದಾರೆ. ಆದರೆ ಮತ್ತೊಂದು ಕಡೆ ಕೀವ್ ಪಟ್ಟಣವನ್ನು ಮರಳಿ ಹಿಡಿದುಕೊಂಡಿದ್ದಾರೆ. ಇವರು ಯುದ್ಧಕಾಲದಲ್ಲಿತೋರಿಸುತ್ತಿರುವ ಕ್ರೂರತನವು ಜರ್ಮನರ ಕೃತ್ಯವನ್ನು ಕೂಡ ಮೀರಿಸಿದೆ. ತಾವು ಸೆರೆಹಿಡಿದ ಪೋಲಿಷ್ ಸೈನಿಕರ ಕಣ್ಣನ್ನೆಲ್ಲಾ ಕಳೆದು ಕುರುಡರನ್ನು ಮಾಡಿಬಿಟ್ಟು ಬಿಡುತ್ತಿರುವರಂತೆ!

ತಮಗೆ ವಿಧಿಸಿರುವ ಸಂಧಿ ನಿಯಮಗಳನ್ನು ಕುರಿತು ಚರ್ಚಿಸಲಿಕ್ಕೆ ತುರ್ಕಿಯವರು ಷೇಕ್‌ಉಲ್ ಇಸ್ಲಾಂರವರ ಅಧ್ಯಕ್ಷತೆಯಿಂದ ಒಂದು ಸಂಘವನ್ನೇರ್ಪಡಿಸಿರುವರು. ಅವರು ಅದನ್ನೆಲ್ಲಾ ಪರಿಶೋಧಿಸಿದುದಾಯಿತು. ವರದಿಯನ್ನು ಬರೆಯುತ್ತಿದ್ದಾರೆ. ತಾವು ಕೊಡಬೇಕಾದ ಉತ್ತರಕ್ಕೆ ಗಡುವನ್ನು ಜುಲೈ ತಾ|| ೧೧ ರ ವರೆಗೆ ಹೆಚ್ಚಿಸಿ ಕೊಡಬೇಕೆಂದು ತುರ್ಕಿಯವರು ಕೋರಿ ಅಪ್ರಕಾರಕ್ಕೆ ಮಾಡಿಸಿಕೊಂಡಿದ್ದಾರೆ.

ಹಂಟರ್ ಸಂಘದ ವರದಿ ಮತ್ತು ಜನರಲ್ ಡಯ್ಯರಿನ ಕ್ರೂರಾಚರಣೆಯ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಇಷ್ಟರಲ್ಲೇ ಚರ್ಚೆಯು ನಡೆಯುವುದಾಗಿದೆ. ಜನರಲ್ ಡಯ್ಯರು ಆರ್ಮಿಕೌನ್ಸಿಲ್ಲಿಗೆ ತನ್ನ ಸಂಬಂಧವಾಗಿ ಒಂದು ವಿಜ್ಞಾಪನ ಪತ್ರವನ್ನು ಬರೆದುಕೊಂಡಿರುವುದರಿಂದ ಅದರ ಮೇಲೆ ಆರ್ಮಿ ಕೌನ್ಸಿಲ್ಲಿನವರು ಆಲೋಚಿಸುತ್ತಿರುವ ಕಾರಣ ಅವರ ತೀರ್ಮಾನವಾದ ಕೂಡಲೇ ಚರ್ಚೆಯು ನಡೆಯುವುದಾಗಿದೆ.

ಅಮೇರಿಕಾದಲ್ಲಿ ಹೊಸ ಚುನಾವಣೆಯು ನಡೆಯುತ್ತಿದೆ. ಅಲ್ಲಿಯ ರಿಪಬ್ಲಿಕನ್ ನೂತನ ಸಂಸ್ಥಾಪನೆಯವರು ಡಾ|| ವಿಲ್ಸನ್ನರ ಅಭಿಪ್ರಾಯಕ್ಕೆ ವಿರುದ್ಧರಾಗಿದ್ದಾರೆ. ವಾರ್ಸೇಲೀಸ್ ಪಟ್ಟಣದ ಸಂಧಿ ನಿಬಂಧನೆಯನ್ನೂ ಜಾತೀಯ ಸಮಿತಿಯನ್ನೂ ಒಪ್ಪದೆ ಇದ್ದಾರೆ. ಮತ್ತು ಆರ್ಮೀನಿಯಾ ಸಂರಕ್ಷಣ ಭಾರವನ್ನು ಅಮೇರಿಕಾವು ವಹಿಸಿಕೊಳ್ಳಬೇಕೆಂದು ಪ್ರ|| ವಿಲ್ಸನ್ನರವರು ಪಟ್ಟ ಅಭಿಪ್ರಾಯವನ್ನೂ ಇವರು ಖಂಡಿಸುತ್ತಿದ್ದಾರೆ.

ಈಗಣ ಯುದ್ಧವು ನಿಂತರೂ ಪ್ರಪಂಚದಲ್ಲಿ ಯುದ್ಧಾಭಿನಿವೇಶವು ನಿಂತಿಲ್ಲ. ಅಮೇರಿಕಾದವರು ಒಂದು ಹೊಸ ದೊಡ್ಡ ಯುದ್ಧದ ಹಡಗನ್ನು ಕಟ್ಟಿಸುತ್ತಿದ್ದಾರೆ. ಇದುವರೆಗೆ ಇಂಥ ದೊಡ್ಡ ಹಡಗನ್ನು ಯಾರೂ ಕಟ್ಟಿಲ್ಲ. ಅದರ ತೂಕ ೩೭೫೦೦ ಟನ್ನು. ಅದರಲ್ಲಿ ೧೮ ಅಂಗುಲದ ಬಾಯಿಯ ೧೨ ಫಿರಂಗಿಗಳಿಡಲ್ಪಡುವುವು. ಶತ್ರುಗಳ ಹಡಗುಗಳು ಎಲ್ಲೆಲ್ಲಿದ್ದರೂ ತಿಳಿದುಕೊಳ್ಳಬಹುದಾದ ಯಂತ್ರಗಳೂ ಇದರಲ್ಲಿರುವುವು.

ಯುದ್ಧಾರಂಭವಾದ ಬಳಿಕ ಅಂದರೆ ೧೯೧೪ ನೆ ಜೂನ್ ತಿಂಗಳಿಂದೀಚೆಗೆ ನಮ್ಮ ಚಕ್ರವರ್ತಿಯವರು ಯಾವ ದೊಡ್ಡ ದರಬಾರನ್ನೂ ನಡೆಯಿಸಿರಲಿಲ್ಲ. ಈಗ ಕಳೆದ ತಾ|| ೧೦ ರಲ್ಲಿ ಬಹು ಶೋಭಾಯಮಾನವಾದ ದರಬಾರನ್ನು ಚಕ್ರವರ್ತಿಯವರು ನಡೆಯಿಸಿದರು. ಆಗ ನಮ್ಮ ಮೈಸೂರು ಶ್ರೀ ಯುವರಾಜರವರಿಗೂ ಗ್ವಾಲಿಯರ್ ಮಹಾರಾಜರಿಗೂ, ನವನಗರ್ ಜಾಂ ಸಾಹೇಬರಿಗೂ ಸಹ ಚಕ್ರವರ್ತಿಯವರು ದರ್ಶನವಿತ್ತು ಮರ್ಯಾದಿಸಿದರು.

ಅಮೇರಿಕಾದ ರಿಪಬ್ಲಿಕನ್ ಪಾರ್ಲಿಮೆಂಟಿನಲ್ಲಿ ಅಲ್ಲಿಯ ಮೂಲನಿವಾಸಿಗಳಾದ ಕಪ್ಪು ಬಣ್ಣದ ನೀಗ್ರೋ ಜನರಿಗೆ ಸಭ್ಯತ್ವವು ದೊರೆಯುವುದು ದುರ್ಲಭ. ಈಗ ಅಂಥ ಒಬ್ಬ ನೀಗ್ರೋವಿಗೆ ಪ್ರತಿನಿಧಿತ್ವವನ್ನು ಕೊಡುವ ವಿಷಯದಲ್ಲಿ ಬಹಳ ತೀಕ್ಷ್ಣವಾಗಿ ಚರ್ಚೆನಡೆದು, ೧೨ ಜನರು ಅದಕ್ಕೆ ಅನುಕೂಲವಾಗಿಯೂ ೩ ಮಂದಿ ಪ್ರತಿಕೂಲವಾಗಿಯೂ ಅಭಿಪ್ರಾಯ ಕೊಟ್ಟುದರಿಂದ ಅವನನ್ನೇ ಮೆಂಬರಾಗಿ ಕಳುಹಿಸುವುದು ನಿರ್ಧರವಾಯಿತು.

ಸಂಧಿ ನಿಬಂಧನೆಯ ಪ್ರಕಾರ ಜರ್ಮನರು ತಮ್ಮ ಸೈನ್ಯವನ್ನು ೨ ಲಕ್ಷಕ್ಕೆ ಇಳಿಸಬೇಕಾಗಿದ್ದಿತು. ಸದ್ಯಃ ಹಾಗೆ ಮಾಡಲು ಸಾಧ್ಯವಿಲ್ಲವೆಂದೂ ಮುಂದೆ ೨ ಲಕ್ಷ ಸೈನ್ಯವನ್ನು ಶಾಶ್ವತವಾಗಿಟ್ಟುಕೊಳ್ಳಲು ತಮಗೆ ಅವಕಾಶಕೊಡಬೇಕೆಂದೂ ಜರ್ಮನ್ ಪ್ರಭುತ್ವದವರು ಮಿತ್ರಮಂಡಲಿಯವರಿಗೆ ಬರೆದಿದ್ದಾರೆ. ಹಿಂದೆ ಆಗಿರುವ ನಿರ್ಣಯಕ್ಕೆ ವ್ಯತಿರೇಕವಾಗಿ ನಡೆದುಕೊಳ್ಳಲಾಗುವುದಿಲ್ಲವೆಂದು ಇವರು ಉತ್ತರಕೊಟ್ಟಿದ್ದಾರೆ. ಆಡಿದ ಮಾತಿನಿಂದ ನುಣುಚಿಕೊಳ್ಳುವುದೇ ಜರ್ಮನರ ಹುಟ್ಟು ಗುಣವಾಗಿರಬೇಕು.

ಲಂಡನ್ನಿನಲ್ಲಿ ಪ್ರಪಂಚದ ಟೆನ್ನಿಸ್ ಆಟದ ಪಂಡಿತರೆಲ್ಲಾ ಸೇರಿ ಪಂಥಕಟ್ಟಿ ಟೆನ್ನಿಸ್ ಎಂಬ ಚೆಂಡಾಟವನ್ನಾಡಿದರು. ಅವರಲ್ಲೆಲ್ಲಾ ಸಿಮಿಡ್ಜು ಎಂಬ ಜಪಾನೀಯನು ಜಯಶೀಲನಾದನೆಂಬ ವಾರ್ತೆಯು ಪೂರ್ವದೇಶೀಯರನ್ನೆಲ್ಲಾ ಸಂತೋಷಪಡಿಸಿದೆ. ಈ ಸಿಮಿಡ್ಜುಯವರು ಜಪಾನಿನವರಾದರೂ ಅವರು ಕಲಕತ್ತಾದಲ್ಲಿ ಬಹುಕಾಲವಿದ್ದು ಟೆನ್ನಿಸ್ ಆಟವನ್ನ ಕಲಿತು ಸಮರ್ಥರಾದವರು. ತಕ್ಕ ಪ್ರೋತ್ಸಾಹವಿದ್ದರೆ ದೇಹಶಕ್ತಿ ಬುದ್ಧಿಶಕ್ತಿಗಳಲ್ಲೆಲ್ಲಾ ಪೂರ್ವದೇಶೀಯರು ಪಾಶ್ಚಾತ್ಯರಿಗೆ ಹಿಂದುಬೀಳುವವರಲ್ಲವೆಂಬುದಕ್ಕೆ ಆಗಾಗ್ಗೆ ಇಂಥ ನಿದರ್ಶನಗಳು ಸಂಭವಿಸುತ್ತಲೇ ಇರುವುವು.

ತುಮಕೂರು ೨ ನೆ ಮುನ್ಸೀಫ್ ಕೋರ್ಟಿನಲ್ಲಿ.

O. S. 666 of 1920.

ವಾದಿಗಳು:—	ಪ್ರತಿವಾದಿಗಳು:—
ತುಮಕೂರು ತಾ|| ಹೆಬ್ಬೂರು ಸಂ|| ಗಂಗೋನಹಳ್ಳಿಲಿರುವ ವೀರಶೈವಮಠದ	ಡಿಟೋ ಗಂಗೋನಹಳ್ಳಿಗೆ ಸೇರಿದ ಲಾಯದಲ್ಲಿರುವ
1. ಚಿಕ್ಕಬೋರೇಗೌಡನ ಮಗ ಬೋರಲಿಂಗೇಗೌಡ	1. ಖುದ್ದೂಸ್‌ಖಾನ್‌ಸಾಬರ ಮಗ ಖಾಸಿಂಖಾನ್
2. ಸಿದ್ದೇಗೌಡನ ಮಗ ಚಿಕ್ಕಣ್ಣ	2. ಖಾಸಿಂಖಾನ್ ಮಗ ದೂಲೇಖಾನ್‌ಸಾಬ್
3. ಲಿಂಗಣ್ಣನ ಮಗ ವೀರಪ್ಪ	3. ದಾದಫೀರ್‌ಖಾನ್‌ಸಾಬರ ಮಗ ರಾಜಾಖಾನ್‌ಸಾಬ್
4. ನಂಜಪ್ಪನ ಹೆಂಡತಿ ಚೆನ್ನಬಸಮ್ಮ	4. ಬೊಂಬಾಯಿ ಹುಸೇನ್‌ಖಾನ್‌ಸಾಬ್
5. ಬೋರೇಗೌಡನ ಮಗ ಬೋರಗುಂಡಯ್ಯ	5. ಮುಜಾವರ್ ಖಾನ್‌ಸಾಬರ ಮಗ ಖಾಸಿಂಖಾನ್‌ಸಾಬ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ:—

ದೊಡ್ಡಹೆಬ್ಬೂರು ಸಂ|| ಗಂಗೋನಹಳ್ಳಿಲಿರುವ ವಾದಿಗಳ ಸ್ವಾಧೀನದಲ್ಲಿರುವ ಸರ್ವೆ ನಂಬರು 33 ನೆ ಖುಷ್ಕಿ ಎಕ್ರೆ 2-13 ಆಕಾರ 2-8-0 ರೂಪಾಯಿನ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ ಷೇರಲ್ಲಿಖಾನ್‌ಸಾಬರ ಗದ್ದೆ ಪಶ್ಚಿಮಕ್ಕೆ ಸರ್ಕಾರಿ ಓಣಿ ಉತ್ತರಕ್ಕೆ ಕೆರೆ ಏರಿ ಮತ್ತು ಬಿರಾಂಖಾನ್‌ಸಾಬರ ಹೊಲಾ ದಕ್ಷಿಣಕ್ಕೆ ಪ|| ಬೋರಗುಂಡೇಗೌಡನ ಹೊಲಾ ಈ ಮಧ್ಯೆ ಇರುವ (ಹಲವು ಮರಗಳುಳ್ಳ) ಜಮೀನಿನಲ್ಲಿ ಈ ಮುಂದೆ ಯಾರೂ ಹೆಣಗಳನ್ನು ಹೂಳದಂತೆ ಶಾಶ್ವತವಾದ ಇನ್ಜಂಕ್ಷನ್ ಕೊಡಿಸಬೇಕೆಂದು ಈ ಕೋರ್ಟಿಗೆ ಅರ್ಜಿ ಹಾಕಿಕೊಂಡಿರುತ್ತಾರೆ. ಸದರಿ ವಾದಿಗಳ ದಾವೆಯು 16-7-20 ನೆ ತಾರೀಖಿಗೆ ಹಿಯರಿಂಗ್ ಇರುತ್ತೆ. ಆದಿನ ಮೇಲ್ಕಂಡ ವಾದಿಗಳ ದಾವಾದಂತೆ ಯಾಕೆ ಫೈಸಲ್ ಕೊಡಕೂಡದೆಂತ ಸಬುಬು ತೋರಿಸುವುದಕ್ಕೆ ಸದರಿ ಸ್ಥಿರಸೊತ್ತಿನಲ್ಲಿ ಹಕ್ಕಿರುವವರೆಲ್ಲರೂ ಈ ಕೋರ್ಟು ರೂಬರೂಬ್ ದಿವಿ 11 ಘಂಟೆಗೆ ಹಾಜರಾಗತಕ್ಕದ್ದು.

S. Venkata Ranga Iyengar,
II Munsiff.

ಪತ್ರವ್ಯವಹಾರ.

ಶ್ರೀಮನ್ಮಹಾರಾಜರವರ ವರ್ಷ ವರ್ಧಂತ್ಯುತ್ಸವ.

ದಾವಣಗೆರೆ ತಾಲ್ಲೂಕು ಪೈಕಿ ಅವರಗೆರೆ ಎ. ಇ. ಸ್ಕೂಲ್ ಮಾಸ್ಟರ್ ಕೆ. ಮರುಳಪ್ಪನವರು ತಮ್ಮ ಅತಿಶಯವಾದ ಪ್ರೋತ್ಸಾಹದಿಂದ ತಾ॥ ೨೮-೫-೨೦ ನೆ ಶುಕ್ರವಾರ ಸಾಯಂಕಾಲ ೪॥ ಘಂಟೆಗೆ ವಿದ್ಯಾಭಿಮಾನಿಗಳಾದ ಮ॥ ಪಟೇಲ್ ಭಿಮಪ್ಪನವರು ವೇ॥ ಮಠದ ಸಿದ್ದಪ್ಪಯ್ಯನವರು ಮ॥ ಗುಡಿಹಿಂದಲ ಕರಿಯಪ್ಪನವರು. ಮ॥ ಹಚ್ಚಟ್ಟಿ ಲಿಂಗಪ್ಪನವರು. ಮ॥ ಗಂ॥ ಬಸಪ್ಪನವರೇ ಮುಂತಾದ ಪುರಪ್ರಮುಖರನ್ನು ಬರಮಾಡಿಕೊಂಡು, ಪ್ರಾಣದೇವರ ದೇವಸ್ಥಾನದ ಮುಂಭಾಗದ ಬಯಲಿನಲ್ಲಿ ಸ್ಕೂಲ್ ಹುಡುಗರಿಂದ ವಿನೋದವಾದ ಆಟಗಳನ್ನಾಡಿಸಿ ಗೆದ್ದವರಿಗೆ ಯಥೋಚಿತವಾದ ಬಹುಮಾನಗಳನ್ನು ಕೊಡಿಸಿ ಪುನಃ ಅದೇ ದಿವಸ ರಾತ್ರಿ ೭ ಘಂಟೆಗೆ ವಿಶಾಲವಾದ ಪ್ರಾಣದೇವರ ದೇವಸ್ಥಾನದಲ್ಲಿ ಸಭೆ ಗೂಡಿ ತಳಿರುತೋರಣಕದಲೀಸ್ತಂಭಗಳಿಂದಲಂಕರಿಸಲ್ಪಟ್ಟ ಪೀಠದ ಮೇಲೆ ನಮ್ಮನ್ನಾಳುವ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರ ಭಾವಚಿತ್ರವನ್ನು ಮೂರ್ತಗೊಳಿಸಿ ಪುಷ್ಪಮಾಲಿಕೆಗಳಿಂದಲಂಕರಿಸಿ ಗಂಧ ಪತ್ರಪುಷ್ಪಾಕ್ಷತಾದಿಗಳಿಂದ ವಿಧ್ಯುಕ್ತಪ್ರಕಾರವಾಗಿ ಪೂಜಿಸಿ ಮ॥ ಕೆ. ಮರುಳಪ್ಪನವರ ಮತ್ತು ಸ್ಕೂಲ್ ಹುಡುಗರ ಇಂಪಾದ ಹಾಡುಗಾರಿಕೆಯಿಂದ ಸಭಿಕರನ್ನೆಲ್ಲಾ ಆನಂದಗೊಳಿಸಿ ವೇ॥ ಮಠದ ಚನ್ನಬಸವಯ್ಯನವರ ಪುಷ್ಪಾಂಜಲಿವ್ಯತ್ಪತ್ತಿಪಠನದಿಂದ ಸಭಿಕರೆಲ್ಲಾ ಅಕ್ಷತಾರೋಪಣಂಗೈದು ದೇವಸ್ಥಾನಗಳಲ್ಲೆಲ್ಲಾ ಮಂಗಳಾರತಿಯಂ ಮಾಡಿಸಿ ತತ್ಸಮಯೋಚಿತವಾದ ಪ್ರೋತ್ಸಾಹವಿಶಾರದರಾದ ವೇ॥ ಮಠದ ಚನ್ನಬಸವಯ್ಯನವರ ಪ್ರೋತ್ಸಾಹದಿಂದ ಕೈ॥ ವೈ॥ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಒಂದು ರೂಪಾಯಿ ತೆಗೆಸಿ ಅದನ್ನು ಮನಿಯಾರ್ಡರ್‌ದ್ವಾರಾ ಮೈಸೂರಿಗೆ ಕಳುಹಿಸುವ ಬಗ್ಗೆ ನಿಯಮಿಸಿದನಂತರ ನೆರೆದಿದ್ದ ನೂರಾರು ಮಂದಿ ಸಭಿಕರಿಗೆಲ್ಲಾ ತಾಂಬೂಲ ಸಹಿತ ಮಿಠಾಯಿ ಮಾವಿನಹಣ್ಣುಗಳನ್ನು ಹಂಚಿಸಿ ಅನಂತರ ಶ್ರೀಮನ್ ಮಹಾರಾಜರವರಿಗೂ ಶ್ರೀಮನ್ ಯುವರಾಜರವರಿಗೂ ಯುವರಾಜ ಪುತ್ರರಿಗೂ ನೂತನ ಮಂತ್ರಿವರ್ಯರಿಗೂ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟು ಜಯಘೋಷದೊಡನೆ ಸಭೆಯನ್ನು ಭರ್ಖಾಸ್ತು ಮಾಡಿ, ತತ್ಸಮಯಕ್ಕೆ ಪುಷ್ಪಮಾಲಿಕೆಗಳಿಂದಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಆರೋಹಣಂಗೈಸಿ ಭಾಜಾಭಜಂತ್ರಿಗಳ ರಭಸದಿಂದಲೂ ಪ್ರಜಾಮಂಡಲಿಯ ಜಯಘೋಷದಿಂದಲೂ ನೀರಿನ ಚಳಯದಿಂದ ಶಾಂತವಾಗಿದ್ದ ಪುರವೀಧಿಗಳಲ್ಲೆಲ್ಲಾ ಮಹೋತ್ಸವವನ್ನು ರಾತ್ರಿ ೧೨ ಘಂಟೆಯವರೆಗೂ ಬಹು ವಿಜೃಂಭಣೆಯಿಂದ ನೆರವೇರಿಸಿ ಜಯನಾದವನ್ನು ಮಾಡುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಪ್ರೇಕ್ಷಕ.

ಮಾಗಡಿ ತಾ॥ ಕನ್ನಡ ಗರ್ಲ್ಸ್ ಸ್ಕೂಲು.

ಅದಿನ ಪ್ರಾತಃಕಾಲ ಸ್ಕೂಲ್ ಕಟ್ಟಡವು ಕದಲೀಸ್ತಂಭಗಳಿಂದಲೂ ತೋರಣಗಳಿಂದಲೂ ಅಂದವಾಗಿ ಅಲಂಕರಿಸಲ್ಪಟ್ಟಿತು. ಅಲಂಕೃತ ಸ್ಥಲದಲ್ಲಿ ನಿಲ್ಲಿಸಲ್ಪಟ್ಟಿದ್ದ ಮೈಸೂರು ಧ್ವಜಪತಾಕೆಯ ಸವಿಾಪದಲ್ಲಿ ಉಪಾಧ್ಯಾಯ ಉಪಾಧ್ಯಾಯಿನಿಯರೂ ವಿದ್ಯಾರ್ಥಿನಿಯರೂ ಗ್ರಾಮಮುಖಂಡರೂ ಇತರರೂ ನೆರೆದಿದ್ದರು. ಬಾಲಕಿಯರಿಂದ ದೇವರ ಪ್ರಾರ್ಥನೆಮಾಡಿಸಿದ ತರುವಾಯ ಸರ್ವರೂ ಶ್ರೀಮನ್ ಮಹಾರಾಜರವರ ಭಾವಚಿತ್ರಕ್ಕೂ ಮೈಸೂರು ಪತಾಕೆಗೂ ಸಹ ಅಭಿವಂದಿಸಿದರು. ತರುವಾಯ ಸ್ಕೂಲ್ ಕಟ್ಟಡದಲ್ಲಿ ವಿದ್ಯಾರ್ಥಿನಿಯರಿಂದ ಆಟಪಾಟಗಳು ಆಡಿಸಲ್ಪಟ್ಟ ತರುವಾಯ ಎಲ್ಲರೂ ತಮ್ಮ ತಮ್ಮ ಮನೆಗೆ ತೆರಳಿದರು. ಮಧ್ಯಾಹ್ನ. 3 ಘಂಟೆಗೆ ಸರಿಯಾಗಿ ಗರ್ಲ್ಸ್ ಸ್ಕೂಲ್ ಕಟ್ಟಡದಲ್ಲಿ ಸ್ತ್ರೀ ಸಭೆಯು ಸೇರಿಸಲ್ಪಟ್ಟಿತು. ವಿದ್ಯಾರ್ಥಿನಿಯರೂ ಗ್ರಾಮದ ಅಶೇಷ ಪ್ರೌಢ ಸ್ತ್ರೀಯರೂ ಸಹ ನೆರೆದಿದ್ದರು. ತಾಲ್ಲೂಕು ಅಮಲ್ದಾರರವರಾದ ಮ॥ ರಾ॥ ಮಲ್ಲರಾಜೇ ಅರಸರ ಕುಟುಂಬ ಶ್ರೀಮತಿ ಮಾ॥ ಯವರಾದ ದೇವರಾಜಮ್ಮಣ್ಣಿಯವರು ಸಭಿಕರ ಕೋರಿಕೆಯಂತೆ ಅಗ್ರಾಸನವನ್ನು ವಹಿಸಿದರು. ದೇವರ ಪ್ರಾರ್ಥನೆಯು ನೆರವೇರಿಸಲ್ಪಟ್ಟಿತು. ಇಲ್ಲಿನ ಹೆ॥ ಮಾ॥ ರಾ॥ ಅಶ್ವತ್ಥಶಾಸ್ತ್ರಿಗಳು ದೇಶೋನ್ನತಿ ರಾಜಭಕ್ತಿ ಈ ವಿಷಯವಾಗಿ ಉಪನ್ಯಾಸ ಮಾಡಿದರು. ಸ್ಕೂಲ್ ಮ॥ ಅ॥ ಮಿ॥ ಎಸ್. ರಾಮಕ್ಕನವರು ಮೈಸೂರು ರಾಜವಂಶ ಪರಂಪರೆಯನ್ನು ಕುರಿತು ಉಪನ್ಯಾಸಮಾಡಿದರು. ವಿದ್ಯಾರ್ಥಿನಿ ಶ್ರೀ॥ ಪುಟ್ಟರಂಗಮ್ಮನವರು ಪ್ರಜೆಗಳಿಗೆ ರಾಜರಲ್ಲಿರಬೇಕಾದ ಕೃತಜ್ಞತೆಯನ್ನು ಕುರಿತು ಉಪನ್ಯಸಿಸಿದ ತರುವಾಯ ಪ್ರೌಢಸ್ತ್ರೀಯರ ಸಂಗೀತವು ನಡೆಯಿಸಲ್ಪಟ್ಟಿತು. ತರುವಾಯ ಆಟದಲ್ಲಿ ಗೆದ್ದ ವಿದ್ಯಾರ್ಥಿನಿಯರಿಗೆ ಇನಾಮುಗಳು ಹಂಚಲ್ಪಟ್ಟವು. ಆಗ ಅಗ್ರಾಸನಸ್ಥರು ಸ್ತ್ರೀಯರ ಪ್ರೌಢವಿದ್ಯಾಭ್ಯಾಸವನ್ನು ವರ್ಣಿಸಿ ಉಪನ್ಯಸಿಸಿದರು. ಅನಂತರ ಸಭಿಕರಿಗೂ ಸಭಾಧ್ಯಕ್ಷರಿಗೂ (ವಿದ್ಯಾರ್ಥಿನಿಯರಿಗೂ) ಗಂಧ ಪುಷ್ಪ ತಾಂಬೂಲಗಳೂ, ವಿದ್ಯಾರ್ಥಿನಿಯರಿಗೆ ಮಿಠಾಯಿ ಮೊದಲಾದ ತಿಂಡಿಯ ಸಾಮಾನುಗಳೂ ಹಂಚಲ್ಪಟ್ಟವು. ಆಮೇಲೆ ವಿದ್ಯಾರ್ಥಿನಿಯರಿಂದ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನರೂಪವಾದ ಮಂಗಳಗಾನವು ಮಾಡಿಸಲ್ಪಟ್ಟಿತು. ತರುವಾಯ ಸರ್ವರೂ ಏಕಕಂಠದಿಂದ ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿದರು. ಸಭೆಯು ಬರಖಾಸ್ತಾಯಿತು. ಇಲ್ಲಿನವರೆಲ್ಲರೂ ಈ ದಿನವನ್ನು ಅತ್ಯಾನಂದದಿಂದ ಕಳೆದರು.

ಸ್ಥಳಿಕ.

ಚೆನ್ನಗಿರಿ.

ಮಹೋತ್ಸವವು ತಾರೀಖು ೨೮-೫-೨೦ ನೆ ಶುಕ್ರವಾರ ದಿವಸ ತಳಿರು ತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಈ ಊರ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡೆದಿತು. ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಉಚಿತಾಸನದಲ್ಲಿ ಕುಳ್ಳಿರಿಸಿ ಸ್ಕೂಲ್ ಮಾಸ್ಟರುಗಳೂ ಸ್ಕೂಲು ಬಾಲಕರೂ ಪುರಪ್ರಮುಖರೂ ಸರ್ಕಾರಿ ನೌಕರರೂ ಸಹ ಪ್ರಾತಃಕಾಲ ೮ ಘಂಟೆ ಸಮಯದಲ್ಲಿ ಭಕ್ತಿಪೂರ್ವಕವಾಗಿ ಸ್ವಮತಾನುಸಾರವಾದ ವಂದನೆಗಳನ್ನು ಸಮರ್ಪಿಸಿದನಂತರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಬಾಲಕರಿಂದ ಆಟಗಳು ಆಡಿಸಲ್ಪಟ್ಟವು. ಮಧ್ಯಾಹ್ನ ೩ ಘಂಟೆ ಸಮಯದಲ್ಲಿ ತಾಲ್ಲೂಕು ಅಮಲ್ದಾರ್ ಮ॥ ಬಿ. ಸುಬ್ರಹ್ಮಣ್ಯಶಾಸ್ತ್ರಿಗಳವರೂ, ಮುನ್ಸಿಪಲ್ ವೈಸ್‌ಪ್ರೆಸಿಡೆಂಟ್ ಚಂ॥ ನಂಜುಂಡಯ್ಯನವರೂ, ಶಿರಸ್ತೇದಾರರವರೂ, ಪೊಲೀಸ್ ಇನ್ಸ್‌ಪೆಕ್ಟರವರೂ, ಡಿ. ಪಿ. ಡಬ್ಲ್ಯು. ಸ॥ ಡಿ॥ ಅ॥ ಶಿಂಗ್ರಯ್ಯಂಗಾರ್ಯರವರೂ ಕೋ-ಆಪರೇಟಿವ್ ಸೊಸೈಟಿ ಇನ್ಸ್‌ಪೆಕ್ಟರ್ ಎಸ್. ನಂಜಪ್ಪನವರೂ, ರಂಗಯ್ಯಂಗಾರರೂ ತಾಲ್ಲೂಕು ವೈಸ್‌ಪ್ರೆಸಿಡೆಂಟ್ ತರೀಕೆರೆ ಮಹಲಿಂಗಪ್ಪನವರೂ ಮತ್ತು ಮುನ್ಸಿಪಲ್ ಕೌನ್ಸಿಲರವರೂ ಎಲ್ಲಾ ಇಲಾಖೆಯ ನೌಕರರೂ ಪುರಪ್ರಮುಖರೂ ಇತರ ಪ್ರೇಕ್ಷಕರೂ ಇವರುಗಳಿಂದ ಎ. ವಿ. ಸ್ಕೂಲು ಕಟ್ಟಡವು ಮನೋಹರವಾಗಿತ್ತು. ಮ॥ ನಮ್ಮ ಅಮಲ್ದಾರರವರ ಅಧ್ಯಕ್ಷತೆಯಲ್ಲಿ ಮಿಾಟಿಂಗು ನಡಿಸಲ್ಪಟ್ಟಿತು. ಸ್ಕೂಲು ಅಸಿಸ್ಟೆಂಟ್ ಮಾಸ್ಟರು ಮ॥ ಜಿ. ಗೋವಿಂದರಾಯರೂ ಮ॥ ಹಾಲಪ್ಪನವರ ಮಠದ ಸಿದ್ದಯ್ಯನವರೂ ಕ್ರಮವಾಗಿ ರಾಜಭಕ್ತಿ ಮೈಸೂರು ದೇಶದ ಚರಿತ್ರ ಇವುಗಳ ವಿಷಯದಲ್ಲಿ ಸರಸವಾಗಿ ಉಪನ್ಯಾಸಮಾಡಿದರು. ಈ ಸಂತೋಷದ ಜ್ಞಾಪಕಾರ್ಥವಾಗಿ ಮು॥ ವೈ॥ ಪ್ರೆ॥ ನಂಜುಂಡಯ್ಯನವರು ಮ್ಯುನಿಸಿಪಾಲಿಟಿಯವರು ತರಿಸಿದ್ದ ಮಾವು ಸಂಪಿಗೆ ಈ ಸೊಸಿಗಳನ್ನು ಅಧ್ಯಕ್ಷರ ಹಸ್ತಗಳಿಂದ ನೆಡಿಸಿದರು. ಇದೇ ರೀತಿಯಾಗಿ ಅಲಂಕೃತ ಗೌರ್ನಮೆಂಟ್ ಗರ್ಲ್ಸ್‌ಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ ೮ ಘಂಟೆ ಸಮಯದಲ್ಲಿ ಉಚ್ಚಸ್ಥಾನದಲ್ಲಿ ಪ್ರತಿಷ್ಠಿಸಲ್ಪಟ್ಟಿದ್ದ ಮಹಾರಾಜರವರ ಭಾವಚಿತ್ರ ಬಾವುಟ ಇವುಗಳ ಮುಂಭಾಗದಲ್ಲಿ ಉಪಾಧ್ಯಾಯರೂ ಬಾಲಕಿಯರೂ ಯಥೋಚಿತವಾದ ವಂದನೆಗಳನ್ನು ಸಮರ್ಪಿಸಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ಗರ್ಲ್ಸ್ ಸ್ಕೂಲು ಕಟ್ಟಡವು ಪುರಪ್ರಮುಖರಾದ ಮತ್ತು ಪ್ರೇಕ್ಷಕರಾದ ಸ್ತ್ರೀಯರಿಂದ ಪೂರ್ಣವಾಗಿ ಶೋಭಿಸುತ್ತಿತ್ತು. ಮ॥ ರಾ॥ ಚಂ. ನಂಜುಂಡಯ್ಯನವರ ಪತ್ನಿಯವರಾದ ಶ್ರೀ. ಸೌ. ದೇವೀರಮ್ಮನವರು ಸಭೆಯವರ ಪ್ರಾರ್ಥನೆಯಂತೆ ಅಧ್ಯಕ್ಷಸ್ಥಾನವನ್ನು ವಹಿಸಿದರು. ದೇವರ ಸ್ತೋತ್ರವನ್ನು ಹೇಳಿದ ನಂತರ ಶ್ರೀ. ಸೌ. ತರೀಕೆರೆ ಮಹಲಿಂಗಪ್ಪನವರ ಪುತ್ರಿ ಸಿದ್ದಲಿಂಗಮ್ಮನವರು ಮತ್ತು ಮಿಡ್ವೈಫ್ ಶ್ರೀ. ಸೌ. ಮಾರ್ಕಮ್ಮನವರೂ ಸಹ ಉಪನ್ಯಾಸ ಮಾಡಿದರು. ತರುವಾಯ ಬಾಲಕಿಯರು ಪದ್ಯ, ಹಾಡು, ಸರಸವಾದ ಮಾತುಗಳು ಇವುಗಳಿಂದ ಸಭಿಕರನ್ನು ಸಂತೋಷಪಡಿಸಿದರು. ಹೆಡ್ಮಾಸ್ಟರವರು ಮೇಲ್ಕಂಡ ಬಾಲಕಿಯವರಿಗೆ ದ್ರವ್ಯರೂಪವಾದ ಬಹುಮಾನಗಳನ್ನು ಅಧ್ಯಕ್ಷರ ಹಸ್ತಗಳಿಂದ ಕೊಡಿಸಿದರು. ಸಭೆಯಲ್ಲಿ ಸೇರಿದ್ದವರ ಪೈಕಿ ಸುಮಾರು ೨೫ ಜನ ಸ್ತ್ರೀಯರು ತಮ್ಮ ತಮ್ಮ ಹೆಸರಿನಿಂದ ಬಡವರಾದ ಮತ್ತು ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳ ಬಾಲಕಿಯರಿಗೆ ಪುಸ್ತಕ ಸ್ಲೇಟ್ ಇವುಗಳನ್ನು ಬಹುಮಾನ ಕೊಟ್ಟದ್ದು ಸ್ತೋತ್ರಾರ್ಹವಾದದ್ದಾಗಿದೆ. ಅಧ್ಯಕ್ಷೆಯರ ಸಂಭಾಷಣವಾದನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಸಮರ್ಪಿಸಲ್ಪಟ್ಟು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ನಡೆದನಂತರ ಬಾಲಕಿಯರಿಗೆ ಮಾವಿನಹಣ್ಣು ತಿಂಡಿ ಹಂಚಲ್ಪಟ್ಟವು. ಸಾಯಂಕಾಲ ೬ ಘಂಟೆಗೆ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮಂಗಳ ವಾದ್ಯ ಘೋಷಗಳಿಂದಲೂ ಬಾಣಬಿರುಸು ಹಗಲಬತ್ತಿ ಮುಂತಾದವುಗಳಿಂದಲೂ ಪಟ್ಟಣದ ಮುಖ್ಯವಾದ ಬೀದಿಗಳಲ್ಲಿ ಮೆರವಣಿಗೆಯು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆಟಗಳಲ್ಲಿ ಉತ್ತೀರ್ಣರಾದ ಬಾಲಕಿಯರಿಗೆ ದ್ರವ್ಯರೂಪವಾದ ಬಹುಮಾನಗಳೂ ಮಾವಿನಹಣ್ಣು ತಿಂಡಿಯೂ ಹಂಚಲ್ಪಟ್ಟವು. ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಅಧ್ಯಕ್ಷರ ಸಂಭಾಷಣೆಯಾದ ನಂತರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟಿತು ಮ॥ ವೈ. ಪ್ರೆ. ಚಂ. ನಂಜುಂಡಯ್ಯನವರು ಕಾರ್ಯಗಳನ್ನು ಸಾಂಗಗೊಳಿಸಿದ್ದಕ್ಕಾಗಿ ಅಧ್ಯಕ್ಷರಿಗೆ ಸಭಿಕರ ಪರವಾಗಿ ವಂದನೆಗಳನ್ನು ಸಮರ್ಪಿಸಿ ಸಭೆಯು ಮುಕ್ತಾಯ ಮಾಡಲ್ಪಟ್ಟಿತು. ಇಷ್ಟು ಸಂತೋಷಕ್ಕೆ ಕಾರಣಭೂತರಾದ ಶ್ರೀಮನ್ ಮಹಾರಾಜರವರಿಗೂ ಅವರ ಕುಟುಂಬದವರಿಗೂ, ಆಯುರಾರೋಗ್ಯ ಐಶ್ವರ್ಯವನ್ನು ಅನುಗ್ರಹಿಸಲಿ ಎಂದು ಜಗದೀಶ್ವರನನ್ನು ಪ್ರಾರ್ಥಿಸಿದರು.

ಪ್ರತ್ಯಕ್ಷದರ್ಶಿ.

ಭೋಗಾವಿ.

ಧಾರವಾಡ ಜಿಲ್ಲಾ ಕೋಡ ತಾಲ್ಲೂಕು ಭೋಗಾವಿ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಮೃತ್ಯುಂಜಯ ಪ್ರಾಸಾದಿಕ ಕೆಂಭಾವಿ ಭೋಗಣ್ಣನವರ - ಮುನ್ಸಿಫಂಡಿನ ಧರ್ಮಾರ್ಥ ಪ್ರಾಥಮಿಕ ಶಾಲೆಯ - ೨ ನೆ ವಾರ್ಷಿಕೋತ್ಸವ ಸಮಾರಂಭವು ಮ॥ ರಾ॥ ದೊಡ್ಡ ಅಡಿವಪ್ಪ ಅಗ್ಗಳಬಸದ ಸಾ॥ ಹಿರೇಕೆರೂರ ಇವರ ಅಧ್ಯಕ್ಷತೆಯ ಕೆಳಗೆ ಬಹು ವಿಜೃಂಭಣೆಯಿಂದ ನಡೆಯಿತು. ಸಭೆಗೆಅನೇಕ ಜನ ಕಾಲೇಜು ವಿದ್ಯಾರ್ಥಿಗಳು ಮತ್ತು ಪ್ರೇಕ್ಷಕರು ಆಗಮಿಸಿದ್ದರು. ಕೆಳಗೆ ಬರೆದ ವಿಷಯಗಳ ಮೇಲೆ ಬಹಳ ಸರಸವಾಗಿ ಭಾಷಣಗಳುಜರುಗಿದವು. ಸ್ತ್ರೀ ಶಿಕ್ಷಣ:—ಮಿ॥ ತುಮ್ಮಿನಕಟ್ಟಿ ಎಂ. ಸಿ. ಇಂಟರ ಕ್ಲಾಸ ಫ. ಕಾಲೇಜು ಪುಣೆ, ಸಂಘಶಕ್ತಿ:—ಮಿ, ಉಕ್ಕುಂದ ಮಾಸ್ತರ ಹಾಂಸಭಾವಿ, ಆಂಗ್ಲವಿದ್ಯೆಯ ಮಹತ್ವ:—ಮಿ॥ ಚನ್ನಬಸಪ್ಪ ಮಾಸ್ತರಕೊಳ್ಳಿ ಹಾಂವಸಭಾವಿ, ಮತ್ತು ಮಿ॥ ಎಚ್. ಬಿ. ಕೆರೂರ ಸಾ॥ ಶಿರಗಂಬಿ; ಶಿಕ್ಷಣದ ಮಹತ್ವ:—ಮಿ॥ ಟಿ. ಆರ್. ನೆಸವಿ, ಒಕ್ಕಟ್ಟು:—ಮಿ॥ ಜಿ. ಎಫ್. ಹೂರಿಗಿ ಸಾ॥ ಸುಣಕಲ್ ಬಿದರಿ, ಈ ಪ್ರಕಾರ ಎಷ್ಟೋ ಜನರ ಉಪನ್ಯಾಸಗಳು ಉತ್ತಮರೀತಿಯಿಂದ ಜರಗಿದವು. ಈ ಶಾಲೆಯಿಂದ ಈ ವರುಷ ಒಬ್ಬ ವಿದ್ಯಾರ್ಥಿಯು ಹಾಂವಸಭಾವಿ ಇಂಗ್ಲೀಷ ಶಾಲೆಗೆ ಹೋಗಿರುತ್ತಾನೆ. ಇವನು - ಸಮಾಜಸೇವಾ - ವಿಷಯದ ಮೇಲೆ ಉತ್ತಮರೀತಿಯಿಂದ ಭಾಷಣ ಮಾಡಿದ್ದರಿಂದ ಈತನಿಗೆ ಅಧ್ಯಕ್ಷರು ೨ ರೂಪಾಯಿಗಳನ್ನು ಇನಾಮು ಕೊಟ್ಟರು. ಮ॥ ರಾ॥ ಉಜ್ಜನಗೌಡರು ನಾಗನಗೌಡರು ದೀವಿಗಿಹಳ್ಳಿ ೨ ರೂ. ಮ॥ ರಾ॥ ನಾರಾಯಣಪ್ಪನವರು ಕುಲಕರ್ಣಿ ಭೋಗಾವಿ ೫ ರೂ. ಹೀಗೆ ಇನಾಮು ಕೊಟ್ಟರು. ಇದೇ ಪ್ರಕಾರ ಕೆಲವು ಸದ್ಗೃಹಸ್ಥರು ವಿದ್ಯಾರ್ಥಿಗಳಿಗೆ ಉತ್ತೇಜನವಾಗುವಂತೆ ಇನಾಮುಗಳನ್ನು ಕೊಟ್ಟರು. ತರುವಾಯ ಇನಾಮುಗಳನ್ನು ಹಂಚಿ ಅಧ್ಯಕ್ಷರು ತಮ್ಮ ಸಮಾರೋಪಣದ ಭಾಷಣದಲ್ಲಿ ಯಾವತ್ತು ಸಭಿಕರ ಮನಸ್ಸಿಗೆ ಬಿಂಬಿಸುವಂತೆ ಭಾಷಣ ಮಾಡಿದ್ದಲ್ಲದೆ -ಹಿತೋಪದೇಶಸಂಘದ- ವತಿಯಿಂದ ಒಂದು -ವಾಚನಾಲಯ- ವನ್ನು ಸ್ಥಾಪಿಸಲಿಕ್ಕೆ ಸೂಚನೆಯನ್ನು ತಂದರು. ಸದರಿ ವಾಚನಾಲಯಕ್ಕೆ ಪುಸ್ತಕಗಳನ್ನು ತರಿಸುವುದಕ್ಕೋಸ್ಕರ ೧೦ ರೂ. ಗಳನ್ನು ಕೊಟ್ಟರು. ಮತ್ತು ಕೆಲವು ಸದ್ಗೃಹಸ್ಥರು ವರ್ತಮಾನಪತ್ರಗಳನ್ನೂ ಮತ್ತು ಮಾಸಿಕ ಪುಸ್ತಕಗಳನ್ನೂ ತರಿಸಿಕೊಡಲಿಕ್ಕೆ ವಾಗ್ದಾನ ಮಾಡಿದರು. ಅಲ್ಲದೆ ಶಾಲೆಯ ಉತ್ತೇಜನದ ಬಗ್ಗೆ ಹಣಕೊಟ್ಟ ಸದ್ಗೃಹಸ್ಥರ ಹೆಸರುಗಳು:—೫ ರೂ. ಶ್ರೀಯುತನಾರಾಯಣಪ್ಪನವರು ಕುಲಕರ್ಣಿಯವರು ಖರ್ಚಿನ ಸಲುವಾಗಿಕೊಟ್ಟರು. ೨ ರೂ. ಇನಾಮಿನಸಲುವಾಗಿ ಶ್ರೀಯುತ ಉಜ್ಜನಗೌಡರು ದೀವಿಗಿಹಳ್ಳಿಯವರು ಕೊಟ್ಟರು. ಹೋದವರ್ಷ ಇನಾಮಿನಬಗ್ಗೆ ವಾಗ್ದಾನ ಮಾಡಿದ ೧೦ ರೂಪಾಯಿಗಳ ಪೈಕಿ ೨ ರೂ. ಶ್ರೀಯುತ ಚನ್ನಬಸಪ್ಪ ಕೊಳ್ಳಿ ಮಾಸ್ತರ ಹಾಂಸಭಾವಿಯವರು ಕೊಟ್ಟರು. ಈ ಪ್ರಕಾರ ಕೆಲಸಗಳು ಜರುಗಿದ ನಂತರ ಹಾರ ತುರಾಯಿಗಳು ಹಂಚಲ್ಪಟ್ಟು ಮಂಗಲವಾಗಿ ಸಭೆಯ ವಿಸರ್ಜನವಾಯಿತು.

ಓರ್ವ ಪ್ರೇಕ್ಷಕ.

ಹರಪನಹಳ್ಳಿ.

ತಾ॥ ೨೮-೫-೨೦ ನೆ ತೇದಿಯಲ್ಲಿ ಹರಪನಹಳ್ಳಿ ಜೋಯಿಸರ ಕೇರಿ ಮಂಡಲಿಯವರು ಕನ್ನಡ ಭಾಷಾಭಿವೃದ್ಧಿ ಮಾಡಬೇಕೆಂಬುವ ಉದ್ದೇಶದಿಂದ ಮ॥ರಾ॥ರಾ॥ ಕೊಡ್ಲಿಗಿ ಶಿವರಾಯರ ಅಧ್ಯಕ್ಷತೆ ಕೆಳಗೆ ಸಭೆಯನ್ನು ಕೂಡಿಸಿ ಕರ್ನಾಟಕ ಶಾರದಾವಿಲಾಸವೆಂಬ ಹೆಸರಿನಿಂದ ವಾಚಾಲಯವನ್ನು ಸ್ಥಾಪನೆ ಮಾಡಿ ಅದಕ್ಕೆ ಕನ್ನಡವೇ ಮುಖ್ಯಭಾಷೆಯಾಗಿಟ್ಟು ಪ್ರತಿ ಆದಿತ್ಯವಾರ ಸಂಘ ಕೂಡಿಸಿ ಒಂದೊಂದು ವಿಷಯದ ಮೇಲೆ ಉಪನ್ಯಾಸವು ಜರುಗುವಂತೆ ಏರ್ಪಾಟು ಮಾಡಿ ಇದಕ್ಕೆ ಸಹಾಯವಾಗಿ ಒಂದು ಪುಸ್ತಕ ಭಂಡಾರವನ್ನು ಸಹ ಮಾಡಿದ್ದಾರೆ. ಇದಕ್ಕೆ ಬೇಕಾಗುವ ಖರ್ಚುಗಳಿಗೆ ಕನ್ನಡ ಭಾಷಾಭಿಮಾನಿಗಳು ಎದೆಗೊಟ್ಟು ನಿಂತು ಕಾರ್ಯವನ್ನು ಅತಿ ಉತ್ಸುಕತೆಯಿಂದ ನಡಿಸುತ್ತಾ ಇದ್ದಾರೆ. ಇದುವರಿಗೂ ತಮ್ಮ ಮಾತೃಭಾಷೆಯನ್ನು ಬಿಟ್ಟು ತೆಲಿಗಿನಲ್ಲೇ ಮಗ್ನರಾದವರಿಗೆ ಈಗ ಮಾತೃಭಕ್ತಿ ಹುಟ್ಟಿದ್ದಕ್ಕೆ ಬಹಳ ಆನಂದವಾಗಿದೆ. ಅವರಿಗೆ ಇದೇ ಭಕ್ತಿಯೇ ಸ್ಥಿರವಾಗಿರಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ಎ. ನರಸಿಂಹಯ್ಯ ಹೆಡ್ಮಾಸ್ಟರ್.

ವನಸಿಗ್ಗಲಿ.

ಆಯ್ಯಾ, ಮಹನೀಯರೆ—ಮಿರಜ ಇಲಾಖಾ ಲಕ್ಷ್ಮೇಶ್ವರ ತಾಲ್ಲೂಕಿಗೆ ಸೇರಿದ ಈ ವನಸಿಗ್ಗಲಿ ಗ್ರಾಮವು, ವೀರಶೈವಶ್ರೇಷ್ಠರು ಮತಾಭಿವೃದ್ಧಿಗೋಸುಗ ತನ್ನ ತನುಮನಧನಗಳನ್ನು ಸೂರೆಗೊಡುತ್ತಾನೆಂಬ ಸಿದ್ಧಾಂತದ ಉಕ್ತಿಗೆ ಅನುಸರಿಸಿ ತಮ್ಮ ಅಖಂಡ ಆಸ್ತಿಯನ್ನು ವೀರಶೈವ ಸಮಾಜಕ್ಕೆ ಅರ್ಪಿಸಿ ಸಮುದ್ರವಲಯಾಂಕಿತವಾದ ಭೂಮಂಡಲದಲ್ಲಿಯೂ ಪರಲೋಕದಲ್ಲಿಯೂ ಸ್ವಕೀಯಶುಭ್ರವಾದ ಯಶೋರಾಶಿಯನ್ನು ಸಾಂದ್ರವಾಗಿಯೂ ಆಚಂದ್ರಾರ್ಕವಾಗಿಯೂ ವ್ಯಾಪಿಸುವಂತೆ ಸ್ಥಿರಪಡಿಸಿದ ಶ್ರೀ ಕೈ॥ ವಾ॥ ಶ್ರೀಮಂತ ಲಿಂಗಪ್ಪಾ ಜಾಯಪ್ಪಾ ಸರದೇಸಾಯಿ ಸಂಸ್ಥಾನ ಶಿರಸಂಗಿ ಈ ಪುಣ್ಯಪುರುಷರ ಜನ್ಮಸ್ಥಾನವು ಇದ್ದ ಪ್ರಯುಕ್ತ ಈ ಗ್ರಾಮದ ವೀರಶೈವ ಪ್ರಮುಖರೂ ಇತರ ಮತೀಯರೂ ತಾ॥ ೨೦-೪-೧೯೨೦ ರಲ್ಲಿ ಈ ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಭೆಗೂಡಿಸಿ ಸರ್ವಾನುಮತದಿಂದ ಸದರಿ ಶ್ರೀಮಂತರ ಸ್ಮಾರಕಕ್ಕಾಗಿ ಒಂದು ವಾಚನಾಲಯವನ್ನೂ ಒಂದು ಇಂಗ್ಲೀಷ ಸ್ಕೂಲನ್ನೂ ಸ್ಥಾಪಿಸಬೇಕೆಂದು ನಿರ್ಣಯಿಸಿದರು. ರಾ॥ ರಾ॥ ಭೀಮಪ್ಪ ಬಸಪ್ಪ ಗೋಥಿ ಮೊದಲಾದ ಪ್ರಮುಖರು ವಿದ್ಯಾಭಿವೃದ್ಧಿಯ ಅಂಕುರ ರೂಪವಾದ ವಾಚನಾಲಯದ ಸತ್ಕಾರ್ಯವನ್ನು ಕೊನೆಗಾಣಿಸುತ್ತೇವೆಂದು ವಾಗ್ದಾನ ಮಾಡಿರುವರು. ಇವರ ಸಹಾಯಕ್ಕಾಗಿ ಶಿ॥ ರಾ॥ ರಾ॥ ಸಿದ್ಧರಾಮಯ್ಯ ಮುಳಗುಂದ ೩ ನೆ ವರ್ಷದ ಟ್ರೇಂಡಮಾಸ್ತರರೂ ರಾ॥ ರಾ॥ ವೀರಪ್ಪ ಬಸವಣ್ಣೆಪ್ಪ ಶೆಟ್ಟರೂ ಈ ವಾಚನಾಲಯದ ವರ್ಗಣಿಯನ್ನು ಅತ್ಯಂತ ಭಕ್ತಿಪೂರ್ವಕವಾಗಿ ವಸೂಲು ಮಾಡುತ್ತೇವೆಂದು ವಚನ ಕೊಟ್ಟರು. ರಾ॥ ರಾ॥ ಸಿದ್ದಪ್ಪ ನೀಲಪ್ಪ ಯಲಿಗಾರ ಸಾಹುಕಾರ ಈ ಉದಾರ ತರುಣರು ಈ ವಾಚನಾಲಯಕ್ಕೆ ಯೋಗ್ಯವಾದ ಸ್ಥಳವನ್ನು ತಯಾರಿಸಿಕೊಡುತ್ತೇವೆಂದು ವಚನ ಕೊಟ್ಟದ್ದಲ್ಲದೆ ಯೋಗ್ಯವರ್ಗಣಿಯನ್ನೂ ಕೊಡುವುದಕ್ಕೆ ಒಪ್ಪಿಕೊಂಡರು. ವನಸಿಗ್ಗಲೀ ಗ್ರಾಮದ ಪ್ರಸಿದ್ಧ ವ್ಯಾಪಾರಿಗಳಾದ ಶಿ॥ ರಾ॥ ರಾ॥ ಸಿದ್ಧಯ್ಯ ಸಂಗನಬಸಯ್ಯ ಕೊಡ್ಲ (ವ) ಶಿ॥ ರಾ॥ ರಾ॥ ಫಕ್ಕೀರಯ್ಯನವರ ಪುತ್ರರಾದ ಸಂಗಯ್ಯ ಕೊಡ್ಲಮಠ ಈ ಉದಾರ ಧನಿಕರು ಇಂಗ್ಲೀಷ ಸ್ಕೂಲು ನಿರಾಂತಕವಾಗಿ ನಡೆಯುವದಕ್ಕೆ ಧನಸಹಾಯ ಮಾಡುತ್ತೇವೆಂದು ಅಭಯವಚನವನ್ನು ಕೊಟ್ಟದ್ದಲ್ಲದೆ ಈ ಸ್ಕೂಲಿನ ಮೇಲೆ ವೀರಶೈವ ತರುಣನೂ ಸುಶೀಲನೂ ಆದ ಅಧ್ಯಾಪಕನನ್ನು ನೇಮಿಸಿಕೊಳ್ಳತಕ್ಕವರಿದ್ದೇವೆಂತಲೂ ಅವರಿಗೆ ದರ ತಿಂಗಳಿಗೆ ೨೫ ರೂಪಾಯಿಗಳಿಂದ ೩೦ ರೂಪಾಯಿಗಳವರೆಗೆ ಪಗಾರ ಕೊಡುತ್ತೇವೆಂತಲೂ ಜಾಹೀರಪಡಿಸುವುದಕ್ಕೆ ಈ ಸ್ಕೂಲಿನ ವ್ಯವಸ್ಥಾಪಕ ಕಾರ್ಯವನ್ನು ವಹಿಸಿದ ರಾ॥ ರಾ॥ ಗುರಪ್ಪ ಶೆಟ್ಟಿ ರಾಚಪ್ಪ ಶೆಟ್ಟಿ ಶಿಗ್ಲಿ ಇವರಿಗೆ ಸೂಚಿಸಿದರು. ವೀರಶೈವ ಮಹಾಶಯರೆ! ಆ ಪುಣ್ಯಚರಿತ್ರರ ಸ್ಮಾರಕಕ್ಕಾಗಿ ಇವರು ಯತ್ನಿಸಿದಂತೆ ನಿಮ್ಮ ನಿಮ್ಮ ಗ್ರಾಮಗಳಲ್ಲಿ ನೀವಾದರೂ ವೀರಶೈವ ಸಮಾಜದಿಂದ ೬೪ ನೆ ಪುರಾತನನೆಂಬ ಮೇಲಾದ ಪದವಿಯನ್ನು ಧರಿಸಿದ ಈ ಸತ್ಪುರುಷರ ಸ್ಮಾರಕಗಳಾದ ಸಂಸ್ಥೆಗಳನ್ನು ಸ್ಥಾಪಿಸಿ ಕೀರ್ತಿಗೂ ಪುಣ್ಯಕ್ಕೂ ಪಾತ್ರರಾಗಬೇಕೆಂದು ನಾನು ವಿನಯದಿಂದ ಬೇಡಿಕೊಳ್ಳುವೆನು.

ರಾಚಪ್ಪ ಶೆಟ್ಟಿ ಗುರಪ್ಪ ಶೆಟ್ಟಿ ಪೇನ್ಷಂಡ್ ಮಾಸ್ತರ, ಸಮಾಜ ಸೇವಕ.

ಶ್ರೀ ಮುರುಘೇಂದ್ರಪ್ರಸೀದ.

ಭರತಖಂಡದಲ್ಲಿ ಕೈಲಾಸದಂತೆ ಒಪ್ಪುವ ಅಥಣಿ ಪುರದಲ್ಲಿರುವ ವೀರಶೈವ ವಾಚನಾಲಯದ ಭವ್ಯವಾದ ಪಟಾಂಗಣದಲ್ಲಿ ಕಳೆದ ತಾ॥ ೩ ನೆ ಸಂಜೆಯ ೪ ಗಂಟೆಯಿಂದ ಏಳು ಗಂಟೆಯವರೆಗೆ ವೀರಶೈವ ಸಮಾಜದ ಸುಧಾರಣೆಯ ಹಾಗೂ ಶ್ರೀ ಬಸವೇಶ್ವರ ಫಂಡಿನ ಹಾಗೂ ಶ್ರೀ ಶಿವಯೋಗಿಶ್ವರರ ಕೃಪೆಯಿಂದ ನಡೆದು ಬಂದಿರುವ ಸಂಸ್ಕೃತ ಪಾಠಶಾಲೆ ಮುಂತಾದವುಗಳ ಬಗ್ಗೆ ವಿಷಯಗಳು ಚರ್ಚಿಸಲ್ಪಟ್ಟವು. ಆ ಸಭೆಗೆ ಅಥಣೀಪುರದ ಮೋಟಗಿ ಮಠದ ಶ್ರೀ ಚನ್ನಬಸವದೇವರು ಗಚ್ಚಿನಮಠ ಶ್ರೀ ಚನ್ನಬಸವದೇವರು ತೆಲಸಂಗದ ಪಟ್ಟದದೇವರು ಕೊಳಟಿನೂರ ಸ್ವಾಮಿಗಳು ಅಥಣಿ ಶ್ರೀಮನ್ ಮಹಾಶಿವಯೋಗಿಗಳವರ ಕೃಪಾ ಪಾತ್ರರಾದ ಶ್ರೀ ಮೃತ್ಯುಂಜಯಸ್ವಾಮಿಗಳು ಗದಗಿನ ಪಟ್ಟದದೇವರು ಛತ್ರಪತಿ ಸಂಸ್ಥಾನದ ಪೈಕಿ ಪಾರಗಾಂವಿ ಪಟ್ಟದದೇವರು ಇನ್ನೂ ಬೇರೆ ಮಾಹೇಶ್ವರಮೂರ್ತಿಗಳು ದಯಮಾಡಿಸಿದ್ದರು. ಇದಲ್ಲದೆ ಇಂಗ್ಲೀಷು, ಕನ್ನಡ, ಸಂಸ್ಕೃತ ವಿದ್ಯಾರ್ಥಿಗಳೂ ಪಾಠಶಾಲೆಯ ಅಧ್ಯಾಪಕರೂ ಈ ಪುರದ ಶೆಟ್ಟಿ ಸಾವುಕಾರರೂ ಸಂಸ್ಕೃತ ಪಾಠಶಾಲೆಯ ವೀರಶೈವತರುಣ ಕೌನ್ಸಿಲರೂ, ಗದಗ, ದಾವಣಗೇರಿ, ಹರಿಹರ ಮೊದಲಾದ ಸ್ಥಲಗಳ ಭಕ್ತರೂ ಹಾಜರಿದ್ದರು. ಒಟ್ಟಿಗೆ ಆ ಸಭೆಯು ನೋಡುವವರಿಗೆ ಮೃತ್ಯುಲೋಕದಲ್ಲಿ ಶಿವಸಭೆಯು ಇದೇ ಎಂದು ಭಾಸವಾಗುತ್ತಿತ್ತು. ಆಮೇಲೆ ಶಿವಭಜನೆಯು ಮಂಗಲವಾದ್ಯದೊಡನೆ ವಿದ್ಯಾರ್ಥಿಗಳಿಂದ ಮಾಡಲ್ಪಟ್ಟಿತು. ಮತ್ತು ಕಾಶಿಯಲ್ಲಿ ಬಹುಕಾಲ ಅಧ್ಯಯನ ಮಾಡಿದಂಥ ಪಾರಗಾವಿ ಪಟ್ಟದ ದೇವರನ್ನು ಅಧ್ಯಕ್ಷಸ್ಥಾನಕ್ಕೆ ನೇಮಿಸಿ, ಸಭೆಯ ಕೆಲಸವನ್ನು ಪ್ರಾರಂಭಮಾಡಿತು. ಕೆಲವು ವಿದ್ಯಾರ್ಥಿಗಳು ಧರ್ಮ ವಿದ್ಯೆ, ಮಿತ್ರತ್ವ ಮುಂತಾದ ವಿಷಯಗಳ ಮೇಲೆ ಬಹು ಚೆನ್ನಾಗಿ ಉಪನ್ಯಾಸಮಾಡಿದರು. ಮತ್ತು ಇಲ್ಲಿಯ ಸಂಸ್ಕೃತಪಾಠಶಾಲೆಯ ಅಧ್ಯಾಪಕರಾದ ಸಿದ್ಧಲಿಂಗಶಾಸ್ತ್ರಿಗಳು ವೀರಶೈವ ಧರ್ಮದ ತತ್ವಗಳನ್ನು ಎಲ್ಲರಿಗೂ ತಿಳಿಯುವಂತೆ ಸುಲಭಶೈಲಿಯಿಂದ ಪ್ರತಿಯೊಬ್ಬರ ಮನಸ್ಸಿಗೆ ನಡುವಂತೆ ವಿಶದಪಡಿಸಿದರು. ಆಮೇಲೆ ಗದಗಿನ ಪಟ್ಟದದೇವರು, ರಾವಸಾ॥ ಮಾಮಲೇದಾರ ತಾಲ್ಲೂಕು ಅಥಣಿ ಟಿ. ಎಸ್. ಕುಲಕರ್ಣಿ ಇವರು, ನಮ್ಮ ಪಾಠಶಾಲೆಯ ಬಗ್ಗೆ ಉತ್ತೇಜನಪರ ಅಭಿಪ್ರಾಯವನ್ನು ಬರೆದದ್ದನ್ನು ಎಲ್ಲರಿಗೂ ತಿಳಿಯುವಂತೆ ಓದಿ ತೋರಿಸಿದರು. ಆಮೇಲೆ ಅಧ್ಯಕ್ಷರು ಎದ್ದುನಿಂತು ಪೂರ್ವದ ನಮ್ಮ ಸಮಾಜದ ಸ್ಥಿತಿಗೂ ಸದ್ಯದ ಸಮಾಜದ ಸ್ಥಿತಿಗೂ ಆದ ರೂಪಾಂತರವನ್ನು ತಿಳಿಸಿ ಅದು ಮುಂದೆ ಸುಧಾರಿಸುವದಕ್ಕೆ ಬೇಕಾಗುವಂಥ ಬೋಧವನ್ನು ಕಾಲಸ್ಥಿತಿ ರೀತಿಗಳಿಗನುಸರಿಸಿ ಎಲ್ಲರಿಗೂ ಹೃದಯಂಗಮವಾಗುವಂತೆ ಹೇಳಿದರು ಮತ್ತು ಮಾದರಿಗೋಸುಗ ವರುಷವರುಷಕ್ಕೆ ಇಲ್ಲಿಯ ಸಂಸ್ಕೃತ ಪಾಠಶಾಲೆಯ ಶ್ರೀ ಬಸವೇಶ್ವರ ಫಂಡಿನ ವೀರಶೈವ ವಾಚನಾಲಯದ ಸಾದ್ಯಂತ ಸಂಗತಿಯು ಎಲ್ಲರಿಗೂ ವಿಶದವಾಗುವಂತೆ ರಿಪೋರ್ಟನ್ನು ಅಚ್ಚುಹಾಕಿಸಿ ಜಾಹೀರಪಡಿಸಬೇಕೆಂಬ ನಿರ್ಣಯವನ್ನು ಸಭೆಯವರ ಸರ್ವಾನುಮತದಿಂದ ಪಾಸಮಾಡಿಸಿದರು. ಆಮೇಲೆ ಶ್ರೀ ಮೃತ್ಯುಂಜಯಸ್ವಾಮಿಗಳು ಮಂಗಲವನ್ನು ಪಾಡಿ ನಮ್ಮ ಸಮಾಜಕ್ಕೆ ವಿಶೇಷ ಆಶ್ರಯವನ್ನು ಕೊಟ್ಟು ಕಾಪಾಡುವಂಥ ಮುಂಬಯಿ ಸರಕಾರದವರ ಅಭಿಮಾನ್ಯ ಮನ್ನಿಸಿ ಚಕ್ರವರ್ತಿಯಾದ ಶ್ರೀಮತ್ ಪಂಚಮ ಜಾರ್ಜಬಾದಶಹರವರಿಗೂ ಅವರ ಕುಟುಂಬದವರಿಗೂ ದೇವರು ಆಯುರಾರೋಗ್ಯವನ್ನು ಕೊಟ್ಟು ರಕ್ಷಿಸಲೆಂದು ಸಭಿಕರೊಡನೆ ಈಶನನ್ನು ಪ್ರಾರ್ಥಿಸಿದರು. ಮತ್ತು ಸಾರ್ವಭೌಮರವರ ಜಯಘೋಷಮಾಡಿ ಆಮೇಲೆ ಸಭಿಕರನ್ನು ತಾಂಬೂಲಾದಿಗಳಿಂದ ಸತ್ಕರಿಸಿದರು. ಇಲ್ಲಿಗೆ ಸಭೆಯ ವಿಸರ್ಜನೆಯಾಯಿತು.

ಸೆಕ್ರೆಟರಿ ವೀರಶೈವ ಸಂಘ
ಲಾಯಬ್ರರಿ, ಅಥಣಿ, ಜಿ॥ ಬೆಳಗಾಂವ.

ಚಿಕ್ಕಮಗಳೂರು ವೀರಶೈವಸಮಾಜ. (ರಿಜಿಸ್ಟರ್ಡ್)

ವೀರಶೈವ ಮಹನೀಯರೇ—

ಈ ಸಮಾಜವು ೧೯೧೯ ನೆ ಇಸವಿ ಅಕ್ಟೋಬರ್ ತಿಂಗಳಲ್ಲಿ ಇಲ್ಲಿಯ ವೀರಶೈವ ಮಹನೀಯರಿಂದ ಸ್ಥಾಪಿಸಲ್ಪಟ್ಟು ಇದನ್ನು ಶಾಶ್ವತಗೊಳಿಸಬೇ

ಉದ್ದೇಶದಿಂದ ಮೈಸೂರು ಸರ್ಕಾರದ ಜಾಯಿಂಟ್ ಸ್ಟಾಕ್ ಕಂಪೆನಿ ರು ೩ ನೆ ನಿಬಂಧನೆಯನ್ನನುಸರಿಸಿ ಗೌರ್ನಮೆಂಟಿನಲ್ಲಿ ರಿಜಿಸ್ಟರು ಮಾಡ ರುತ್ತದೆ. ವೀರಶೈವರಲ್ಲಿ ವಿದ್ಯೆ, ವ್ಯವಸಾಯ, ವಾಣಿಜ್ಯ, ಕೈಗಾರಿಕೆ, ಮತ್ಯ, ಮತಸುಧಾರಣೆ, ರಾಜಭಕ್ತಿ ಇವೇ ಮುಂತಾದುವುಗಳನ್ನು ಅಭಿ ಗೆ ತರತಕ್ಕದ್ದೇ ಈ ಸಮಾಜದ ಮುಖ್ಯ ಉದ್ದೇಶವಾಗಿದೆ. ಈ ಸಮಾ ಕೆಲಸವನ್ನು ಬಹಳ ದೂರದವರೆಗೆ ವ್ಯಾಪನೆಗೊಳಿಸಲು ಅನುಕೂಲವಾ ರದೆಂದು ಯೋಚಿಸಿ, ಸದ್ಯಕ್ಕೆ ಕಡೂರು ಡಿಸ್ಟ್ರಿಕ್ಟಿನ ಮಟ್ಟಿಗೆ ವ್ಯಾಪಿ ನಿಶ್ಚಯಿಸಲ್ಪಟ್ಟಿದೆ. ಈ ಸಮಾಜದ ಹೆಡ್ ಆಫೀಸು ಕಡೂರು ಡಿಸ್ಟ್ರಿ ಹೆಡ್‌ಕ್ವಾರ್ಟರ್ ಚಿಕ್ಕಮಗಳೂರಿನಲ್ಲಿಯೂ, ಬ್ರಾಂಚ್ ಆಫೀಸುಗಳು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿಯಾಗಲಿ ಅಥವಾ ವೀರಶೈವರ ಜನ ಗೆ ಅನುಗುಣವಾದ ಹೋಬಳಿ ಹೆಡ್‌ಕ್ವಾರ್ಟರಿನಲ್ಲಿಯಾಗಲಿ ಇದು ಂಡು ಒಂದಕ್ಕೊಂದು ಅನ್ಯೋನ್ಯದಿಂದ ಕೆಲಸಮಾಡುತ್ತಾ ವೀರಶೈವ ಜವನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂದು ಉದ್ದೇಶಿಸಲ್ಪಟ್ಟಿದೆ. ಈ ಯಕ್ಕೆ ಎಲ್ಲೋ ಕೆಲವು ಜನರು ಸೇರಿದರೆ ನಡೆಯುವುದು ಅಸಾಧ್ಯವೆಂ ಯಾರಿಗೆತಾನೇ ತಿಳಿಯದು? ಆದುದರಿಂದ ಕಡೂರು ಡಿಸ್ಟ್ರಿಕ್ಟಿನ ಸ್ತ ವೀರಶೈವ ಮಹನೀಯರೂ ತಮ್ಮ ತಮ್ಮಲ್ಲಿರುವ ಒಳಭೇದಗಳನ್ನು ಣಿಸದೆ ನಮ್ಮ ಸಮಾಜವು ಅಭಿವೃದ್ಧಿಗೆ ಬಂದೇತೀರಬೇಕೆಂದು ದನ್ನೇ ದಲ್ಲಿಟ್ಟು ಸಮಸ್ತ ವೀರಶೈವ ಮಹನೀಯರೂ ಒಂದೇ ಗೃಹಕೃತ್ಯಕ್ಕೆ ಬಂಧಪಟ್ಟವರಂತೆ ಭಾವಿಸಿ ಕೆಲಸ ನಡೆಸುತ್ತಾ ಬರುವ ಭಾಗದಲ್ಲಿ ಈ ಜವು ಉಚ್ಛ್ರಾಯಸ್ಥಿತಿಯನ್ನು ಹೊಂದದೆ ಇರಲಾರದೆಂದು ಪ್ರತಿ ವೀರಶೈವರೂ ನಿರೀಕ್ಷಿಸತಕ್ಕದ್ದಾಗಿದೆ. ಆದ ಪ್ರಯುಕ್ತ ಅಲ್ಪಜ್ಞ ನಾನು ಕಡೂರು ಡಿಸ್ಟ್ರಿಕ್ಟಿನ ಎಲ್ಲ ವೀರಶೈವ ಮಹನೀಯರಲ್ಲೂ ರ್ಥಿಸಿಕೊಳ್ಳುವುದೇನಂದರೆ:—ತಾವುಗಳು ಈ ಸಂಚಿಕೆಯನ್ನು ಓದಿ ಂದ ಕೊಡಲೆ ಅಲ್ಲಲ್ಲಿ ಒಂದೊಂದು ಬ್ರಾಂಚ್ ಸಮಾಜವನ್ನು ಸ್ಥಾಪಿಸಿ ಹೆಡ್ ಆಫೀಸಿಗೆ ಸಂಬಂಧವನ್ನುಂಟುಮಾಡಿಕೊಟ್ಟು ಸಮಾಜಾಭಿವೃದ್ಧಿಗೆ ಕಾರಿಗಳಾಗಿ ನಿಲ್ಲುವರೆಂದು ಬೇಡಿಕೊಳ್ಳುತ್ತೇನೆ. ಮತ್ತು ಮುಂದೆ ನಡೆ ವ - ಆಲ್ ಇಂಡಿಯಾ ವೀರಶೈವ ಕಾನ್ಫರೆನ್ಸಿಗೆ - (All India Virashiva Conference) ನಮ್ಮ ಡಿಸ್ಟ್ರಿಕ್ಟಿನ ಶೈವಸಮಾಜಾಭಿವೃದ್ಧಿ ಕಾರ್ಯಗಳನ್ನು ಕುರಿತು ವಿಜ್ಞಾಪಿಸಿಕೊಳ್ಳಲು ಬಾ ಅನುಕೂಲವಾಗುವುದು. ಈಗ ತಮ್ಮಲ್ಲಿ ಅಲ್ಲಲ್ಲಿ ಅನೇಕ ವಿಾಟಿಂಗಳೂ, ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿದ್ದಾಗ್ಯೂ ಅವುಗಳೆಲ್ಲವೂ ಕ್ರಮವಾಗಿ ನಡೆಸಲ್ಪಟ್ಟು ಶಾಶ್ವತಗೊಳಿಸಬೇಕೆಂಬುವುದೇ ಸಮಸ್ತ ಶೈವರ ಉದ್ದೇಶವಾಗಿರಬೇಕೆಂದು ಯಾರಿಗೆತಾನೇ ತಿಳಿಯದು? ಸಮಾ ಸ್ಥಾಪನೆ ಬಗೆಗೆ ವಿಷಯಗಳನ್ನು ಈ ಸಮಾಜದ ಸೆಕ್ರೆಟರಿಯವರಿಗೆ ತಿಳಿ ಲ್ಲಿ ತಮ್ಮಗಳ ಸೇವಕನಾಗಿ ವಿಜ್ಞಾಪಿಸಿಕೊಳ್ಳಲು ಸಿದ್ಧನಾಗಿರುವುದಲ್ಲದೆ ಸಮಾಜದ ಮೆಮೋರಾಂಡಮ್ ಮತ್ತು ನಿಬಂಧನೆಗಳನ್ನು ಮೈಸೂರು ರ್ ಎಡಿಟರವರನ್ನು ಬೇಡಿಕೊಂಡು ಪತ್ರಿಕಾ ಮುಖೇನ ತಮ್ಮೆಲ್ಲರ ಕ್ಕೆ ತರಲು ಪ್ರಯತ್ನಮಾಡಿದ್ದೇನೆ. ಏನೋ ಈ ಪತ್ರಿಕೆಯಲ್ಲಿ ಇದೊಂ ಸಮಾಚಾರವಿದೆಯೆಂದು ಭಾವಿಸದೆ ತಮ್ಮಗಳ ಚಿತ್ತವನ್ನು ಸಮಾ ಕಡೆಗೆ ತಿರುಗಿಸಿ ತಮ್ಮ ಸ್ವಂತ ಕಾರ್ಯಗಳ ಜತೆಗೆ ಇದೂ ಒಂದು ವೆಂದೆಣಿಸಿ ಸಮಾಜಾಭಿವೃದ್ಧಿ ಕಾರ್ಯಗಳಲ್ಲಿ ತೊಡಗಿ ಶಾಶ್ವತ ಕೀರ್ತಿ ನ್ನು ಸಂಪಾದಿಸಬೇಕೆಂದು ಬಹಳ ವಿನಯದಿಂದ ಬೇಡಿಕೊಳ್ಳುತ್ತೇನೆ. ರಂಭದಲ್ಲಿ ಎಷ್ಟೋ ವಿಘ್ನ ಪರಂಪರೆಗಳು ಒದಗಬಹುದು. ಆದಾಗ್ಯೂ ದನ್ನೆಲ್ಲಾ ಸಹಿಸಿಕೊಂಡು ದೂರದೃಷ್ಟಿಯಿಂದಲೂ ವಿಶೇಷ ತಾಳ್ಮೆಯಿಂದ ಕಾರ್ಯಗಳನ್ನು ನಡೆಸುತ್ತಾ ಬರುವ ಭಾಗದಲ್ಲಿ ಫಲವು ದೊರೆಯದೆ ಇರ ದೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿರುವುದರಿಂದ ಹೆಚ್ಚು ಅರಿಕೆ ಮಾಡಿಕೊಳ್ಳಲು ಅಶಕ್ತನು.

ಎಂ. ಪಿ. ಚೆಂದಯ್ಯ ಸೆಕ್ರೆಟರಿ, ವೀರಶೈವಸಮಾಜ ಚಿಕ್ಕಮಗಳೂರು.

ಗುರುತ್ವ ಪಟ್ಟಾಧಿಕಾರಕ್ಕೆ ಮೂರ್ತಿಗಳು ಬೇಕು.

ಕಡೂರು ತಾ॥ ಸಕ್ಕರಾಯಿ ಪಟ್ಟಣದ ಶ್ರೀಗುರು ಹಾಲುಸಿದ್ದೇ ರ ಸ್ವಾಮಿಯವರ ಮಠಕ್ಕೆ ಗುರುತ್ವ ಆಶ್ರಮಾಧಿಕಾರ ವಹಿಸಲು ತಕ್ಕಂ ಯರಾಗಿಯೂ ವಿದ್ಯಾವಿಚಾರಾದಿ ಸಮ್ಪನ್ನಶೀಲ ಶಿವಪೂಜಾಸಕ್ತರಾದ ಪ್ರಾ ವಯಸ್ಸಿನ ಒಬ್ಬರು ಬ್ರಹ್ಮಚರಾಶ್ರಮದಲ್ಲಿರುವ ಮಾಹೇಶ್ವರಮೂರ್ತಿಗ ಬೇಕಾಗಿದೆ. ಈ ಮಠವು ೪-೫ ಸಾವಿರ ಶಿಷ್ಯಮಂಡಲಿಯವರೂ ಮತ್ತು ಸ್ಥಿರ ಆಸ್ತಿಗಳಿಂದ ಕೂಡಿದ ಘನತೆಯುಳ್ಳ ಮಠವಾಗಿದೆ. (ಈ ಮ ನ್ನು) ಶಿಷ್ಯಮಂಡಲಿಯವರನ್ನು ರೂಢಿಸತಕ್ಕ ಪೂಜ್ಯತ್ವ ಹೊಂದತಕ್ಕ ರು ಮೇಲ್ಕಂಡ ಅಧಿಕಾರಕ್ಕೆ ದಯಮಾಡಿಸತಕ್ಕವರಿದ್ದರೆ ದಯವಿಟ್ಟು ಡ್ರೆಸ್ ವಗೈರೆಗಳನ್ನೂ ವಿದ್ಯಾಭ್ಯಾಸಂಗಾದಿಗಳನ್ನೂ ವಯಸ್ಸು ಶಾಖಾಸೂ ದಿ ಪ್ರವರಗಳನ್ನೂ, ತಮ್ಮ ಮಠಸ್ಥಲದ ವಂಶಾವಳಿಯನ್ನೂ, ಈ ಕೆಳಗಿ ವಿಳಾಸಕ್ಕೆ ಪತ್ರಪ್ರಸಂಗ ಬೆಳೆಸಿದರೆ ಈ ಕಾರ್ಯಾರಂಭದ ಶಿಷ್ಯಮಂಡಲಿಯ ಜನರಲ್ ವಿಾಟಿಂಗಿನ ಕಾಲಕ್ಕೆ ಅಂಥಾ ಮಹನೀಯರುಗಳನ್ನು ಬರಮಾ ಕೊಳ್ಳುವ ಯೋಗ್ಯ ಏರ್ಪಾಡು ಮಾಡಲ್ಪಡುತ್ತದೆ.

ಆರ್. ಚನ್ನಬಸವಾರಾಧ್ಯಸ್ವಾಮಿ, ಹಿರೇಮಠ,
ಅಜ್ಜಂಪುರ ಪೋಸ್ಟು, ಕಡೂರು ಡಿ॥

ಬಬಲೇಶ್ವರ.

ತಾ॥ ೧-೬-೨೦ ನೆ ದಿವಸ ಬಬಲೇಶ್ವರ ತಾಲ್ಲೂಕು ವಿಜಾಪೂರ ಈ ಮದ ಶ್ರೀ ಸಿದ್ಧರಾಮೇಶ್ವರ ಗುಡಿಯಲ್ಲಿ ವೇ॥ ಬಸವಯ್ಯಸ್ವಾಮಿ ಪುರಾಣಿ ಇವರ ಅಧ್ಯಕ್ಷತೆಯ ಕೆಳಗೆ ಹುಬ್ಬಳ್ಳಿ ವೇ॥ ಬಸವಣ್ಣಯ್ಯಾ ಸಾಲಿ ಇವರು ಹಿಂದುಳಿದ ಜನರು ಮುಂಬೈ ಕಾಯದೆ ಕೌನ್ಸಿಲಿಗೆ ತಮ್ಮ ರಿಂದ ಚುನಾಯಿಸಲ್ಪಡಬೇಕು; ಮತ್ತು ಅದರಿಂದಾಗುವ ಲಾಭ ು ಯಾವವು ಈ ವಿಷಯದ ಮೇಲೆ ಉಪನ್ಯಾಸ ಮಾಡಿದರು. ಸಭೆಗೆ ಸುಮಾರು ೫೦೦ ಜನರು ಬಂದಿದ್ದರು. ಸಭೆಯಲ್ಲಿ ಸರ್ವಾನುಮತದಿಂದ ದುಳಿದವರಿಗೇ ಓಟುಗಳನ್ನು ಹಾಕಬೇಕೆಂದು ಠರಾವು ಪಾಸಾಯಿತು. ರಂತೆಯೇ ಇತರ ಗ್ರಾಮಗಳಲ್ಲಿಯೂ ಸಭೆ ಕೂಡಿ ಮೇಲಿನಂತೆ ಠರಾ ಪಾಸು ಮಾಡಿದರೆ ಹಿಂದುಳಿದ ಜನವರ್ಗಗಳಿಗೆ ಕಲ್ಯಾಣವಾಗುವದೆಂದು ನು ನಂಬುತ್ತೇನೆ.

ನಿಮ್ಮ ಈ॥ ಹೊ.

ಅಭಿನಂದನ.

ವೀರಶೈವ ಮಹನೀಯರೇ—ತಾ॥ ೬ ಜೂನ್ ಸನ್ ೧೯೨೦ ನೆ ರ್ ಪತ್ರದ ಸಂಚಿಕೆಯಲ್ಲಿ ಮ॥ ಜಿ. ಪರಮಶಿವಯ್ಯ ಬಿ.ಎ.ಎಲ್‌ಎಲ್.ಬಿ. ಡ್ವೋಕೇಟ್ ಇವರು ಮೈಸೂರು ನಿಯಮನಿರ್ಮಾಣ ಸಭೆಯಲ್ಲಿ ಮತದಾರ ದ ಚುನಾಯಿಸಿಬಂದುದನ್ನು ತಿಳಿದು ನಮಗೆ ಉಂಟಾದ ಆನಂದಪ್ರವಾ ಮನದುಂಬಿ ಹೊರಸೂಸಲು ಅದಕ್ಕೆ ಸ್ಟಾರ್ ಪತ್ರದ ಪ್ರಣಾಳಿಕೆಯ ರಿಯನ್ನು ಕೊಟ್ಟಿರುತ್ತೇವೆ. ಮ॥ ಪರಮಶಿವಯ್ಯನವರಲ್ಲಿರುವ ಕಾರ್ಯದ ತೆ, ಪರೋಪಕಾರಬುದ್ಧಿ, ಸಮಾಜಸೇವಾತತ್ಪರತೆ ಮೊದಲಾದ ಅಮೌಲ್ಯ ದ ಯೋಗ್ಯತೆಯನ್ನು ಸ್ಟಾರ್ ಪತ್ರಿಕೆಯ ಒಂದೆರಡು ಸಂಚಿಕೆಗಳಲ್ಲಿ ರ್ಥವಾಗಿ ಪ್ರಕಟಿಸಿದ ಮ॥ ಎಚ್. ಚೆನ್ನಯ್ಯನವರು ಪ್ರೆಸಿಡೆಂಟ್ ಸೂರು ಪ್ರ [illegible] ಮಂಡಳಿ, ಎಂ. ಸುಬ್ಬಯ್ಯನವರು ಬಿ. ಎ. ಜನ
ರಲ್ ಸೆಕ್ರೆಟರಿ ಒಕ್ಕಲಿಗರಸಂಘ ಇವರೇ ಮೊದಲಾದ ಪ್ರಮುಖ ಪುರುಷರು ಮ॥ ಪರಮಶಿವಯ್ಯನವರಿಗೆ ಓಟು ಕೊಡುವುದರುದ್ದಿಶ್ಯ ಪ್ರೋತ್ಸಾಹಿಸಿದರು. ಅದರಂತೆ ಗುಣಜ್ಞರೂ ಕಾಲದೇಶಸ್ಥಿತಿಗಳನ್ನು ಚೆನ್ನಾಗಿ ತಿಳಿದವರೂ ಆದ ಮತದಾರರು ತಮ್ಮ ಮತಗಳನ್ನು ಕೊಟ್ಟು ಮ॥ ಪರಮಶಿವಯ್ಯನವರನ್ನು ನಿಯಮನಿರ್ಮಾಣಸಭೆಗೆ ಮೆಂಬರನ್ನು ಮಾಡಿ -ಉದ್ಧರೇದಾತ್ಮನಾತ್ಮಾನಂ- ಎಂಬ ಭಗವದುಕ್ತಿಯಂತೆ ಹಿಂದುಳಿದ ಮತವನ್ನು ಮುಂದೆ ತರಲು ದಾರಿಮಾಡಿಕೊಟ್ಟು ಸರ್ವರ ಸ್ತುತಿಗೆ ಪಾತ್ರರಾದರು. ಅದರಂತೆ ಮ॥ ಪರಮಶಿವಯ್ಯನವರಾದರೂ ತಮ್ಮಲ್ಲಿ ಈಗಿರುವ ಅಮೂಲ್ಯ ಗುಣಗಳನ್ನು ಜನರು ತಿಳಿದು ತಮ್ಮನ್ನು ಈ ಪದವಿಗೆ ಹೊಂದಿಸಿದರೆಂಬುದನ್ನು ಮನಸ್ಸಿಗೆ ತಂದು ಹಿಂದುಳಿದವರೇಳ್ಗೆಗೆ ಕಾರಣಗಳೆನಿಸುವ ಆಯಾ ಕಾರ್ಯಗಳನ್ನು ನೆರವೇರಿಸಿ ಅತ್ಯಾಶ್ಚರ್ಯವಾದ ಕೀರ್ತಿಗೆ ಭಾಜನರಾಗುವದಲ್ಲದೆ ಮುಂದೆ ಉನ್ನತಿಪರರಾಗಿ ಬರುವ ಸಮಾಜದ ತರುಣರಿಗೆ ಮಾರ್ಗದರ್ಶಕರಾಗಿ ಸರ್ವರ ಸ್ತುತಿಗೂ ನಿರ್ಮಲವಾದ ಕೀರ್ತಿಗೂ ಪಾತ್ರರಾಗಲೆಂದು ಮನಸಾ ಹಾರೈಸುವ,

ಶಿವಾನುಭವ ಚರಮೂರ್ತಿ ನಿಜಗುಣಸ್ವಾಮಿಗಳು,
ಕಿರೀಟಮಠ ಸೋಲಾಪುರ.

ಶ್ರೀ ಶಿವಪ್ರತಿಷ್ಠಾಮಹೋತ್ಸವ.

ನೈಜಾಂ ಇಲಾಖಾ ರಾಯಚೂರು ಗ್ರಾಮದ ವಾಸ್ತವ್ಯರಾದ ಶ್ರೀಯುತ ಉಪ್ಪಾರ ಗಂಗಪ್ಪ, ಜಂಬಯ್ಯನವರು ನೂತನವಾದ ಶಿವಾಲಯವನ್ನು ಬಹಳ ವ್ಯಯಪ್ರಯಾಸಗಳಿಂದ ಕಟ್ಟಿಸಿ ಅದರಲ್ಲಿ ಗತ ವೈಶಾಖ ಬ॥ ೯ ಬುಧವಾರ ಸುಮುಹೂರ್ತ ಕಾಲದಲ್ಲಿ ಶ್ರೀ ಶಿವ ಪ್ರತಿಷ್ಠೆಯನ್ನು ವಿಧ್ಯುಕ್ತವಾಗಿ ಮಾಡಿಸಿದರು. ಈ ಕಾರ್ಯಕ್ಕೆ ಸೊಲ್ಲಾಪುರದಿಂದ ಶ್ರೀಮಂತವಾರದವರ ಶಾಲಾಧ್ಯಾಪಕರಾದ ವೇ॥ ಪಂಡಿತ ಜಗದೀಶಶಾಸ್ತ್ರಿಗಳು, ವೇ॥ ಪೌರಾಣಿಕ ಬಸವಲಿಂಗಶಾಸ್ತ್ರಿಗಳವರು, ಶ್ರೀ ಹುಕ್ಕೇರಿ ಶಿವಲಿಂಗದೇವರು, ಕೆಲ ವಿದ್ಯಾರ್ಥಿಗಳು, ಮಾಸ್ಕಿ ಪರ್ವತಶಾಸ್ತ್ರಿಗಳು ಸಂಸ್ಕೃತ ಶಾಲಾಧ್ಯಾಪಕ ರಾಯಚೂರು, ವೇ॥ ಮಕ್ತಲ ಬಸವಲಿಂಗಪ್ಪನವರು ಆಗಮಿಸಿ ಇದ್ದರು. ಪ್ರತಿಷ್ಠಾಸಂಬಂಧಿ ಅಂಗಗಳಾದ ಸ್ವಸ್ತಿವಾಚನ, ಹವನ, ನವಗ್ರಹಬಲಿ, ಪೂಜಾದಿಗಳು ಬ॥ ೭ ಸೋಮವಾರದಿಂದಲೇ ಗಣಪತಿಯೊಡನೆ ಪ್ರಾರಂಭಗೊಂಡು, ೩ ದಿವಸ ಕಾರ್ಯವು ಸಕ್ರಮವಾಗಿ ಜರುಗಿ, ಮಹಾಗಣಾರಾಧನೆಯು ಪೂರೈಸಿತು. ಪ್ರತಿಷ್ಠಿಸಲ್ಪಟ್ಟ ಶ್ರೀ ಶಿವಲಿಂಗಕ್ಕೆ -ಜಂಬುನಾಥ- ನೆಂಬ ಅಭಿಧಾನವು ಇಡಲ್ಪಟ್ಟಿತು. ಮತಾಂತರದವರಾದರೂ ಇವರು ಆಚರಿಸಿ ತೋರಿಸಿರುವ ಅನುಪಮವಾದ ಶಿವಭಕ್ತಿಯು ಅನ್ಯರಿಗೆ ಮಾರ್ಗದರ್ಶಕವಾಯಿತು. ಯಜಮಾನ್ ಕೈ॥ ವೀರಸಂಗಪ್ಪನವರ ಸ್ಮಾರಕಕ್ಕಾಗಿ ೨ ರೂಪಾಯಿಗಳು ಕಳುಹಿಸಲ್ಪಟ್ಟವು. ಜಗದೀಶ್ವರನು ಕರ್ತೃಗಳಿಗೆ ಆಯುರಾರೋಗ್ಯೈಶ್ವರ್ಯಗಳನ್ನೂ ಇತೋಪ್ಯತಿಶಯವಾದ ಶಿವಭಕ್ತಿಯನ್ನೂ ಕೊಟ್ಟು ರಕ್ಷಿಸಲಿ.

ಓರ್ವ ಪ್ರತ್ಯಕ್ಷದರ್ಶಿ.

ಹಾಸನದ ಡಿ॥ ಆಲೂರಿನ ವಿಚಾರ.

ಆಯ್ಯಾ—ಈಗಿನ ಕಾಲದಲ್ಲಿ ನವನಾಗರಿಕತಾ ಲತೆಯು ಪುಷ್ಕಳವಾಗಿ ಎತ್ತೆತ್ತಲೂ ಆವರಿಸಿಕೊಂಡಿದ್ದರೂ ಕೆಲಕೆಲವು ಭಾಗಗಳಲ್ಲಿನ ನಮ್ಮ ವೀರಶೈವ ಸಹೋದರರು ಮಬ್ಬಿನಲ್ಲಿ ತಬ್ಬಿಬ್ಬಾಗಿ ಕುಳಿತುಕೊಂಡಿರುವುದನ್ನು ನೋಡಿ ವಿಷಾದಿಸಬೇಕಾಗಿದೆ. ಅವಿವೇಕದಿಂದ ಆಚರಣೆಗೆ ಬಂದಿರುವ ಹಳೇ ಕಂದಾಚಾರದ ಆಚರಣೆಗಳೆಂದರೆ ಅವರಿಗೆ ಬಲುಪ್ರೀತಿ. ಈಗಿನ ಕಾಲದ ತರುಣರೂ ಸಹ ಆಚಾರವ್ಯವಹಾರಾದಿಗಳಲ್ಲಿ ಸುಧಾರಣೆಗೆ ಬಾರದಿರುವುದು ಕೇವಲ ಶೋಚನೀಯವಾಗಿದೆ. ಆಲೂರಿನಲ್ಲಿ ನಡೆದ ಒಂದು ಲಗ್ನದಲ್ಲಿ ಪಂಚಪೀಠಗಳ ತಾಂಬೂಲ ಕೈ॥ ವೈ॥ ವೀರಸಂಗಪ್ಪನವರ ತಾಂಬೂಲ ವಿದ್ಯಾಭಿವೃದ್ಧಿ ಫಂಡಿನ ವಿಚಾರ ಬಂದಾಗ ತಮ್ಮಲ್ಲಿ ರೂಢಿಯಲ್ಲಿಲ್ಲವೆಂದು ಹೇಳಿದರು. ಇವರಿಗೆ ಕಂದಾಚಾರಗಳಲ್ಲಿ ಬಹಳ ಆಸಕ್ತಿಯಿರುವಂತೆ ಕಾಣುತ್ತದೆ. ಇದಲ್ಲದೆ ಇನ್ನೊಂದು ವಿಶೇಷವೇನಂದರೆ—ಸದರಿ ಲಗ್ನಕ್ಕೆ ಪುರೋಹಿತ್ಯಕ್ಕಾಗಿ ಬಂದಿದ್ದ ಶಾಸ್ತ್ರಿಗಳವರಿಂದ ಸ್ಥಳದ ಮಠದವರ ಹಕ್ಕು ಎಂಬದಾಗಿ ಅರ್ಧ ಸೌಮ್ಯವನ್ನು ಹಾಕಿಸಿಕೊಂಡರು. ಇದಾಗತಕ್ಕದ್ದಲ್ಲ. ಮಠದವರು ಸ್ವತಃ ವಿದ್ಯಾವಂತರಾಗಿ ಕಾರ್ಯ ನಡೆಸಿದ್ದರೆ ಅರ್ಧ ಹಿಸ್ಸೆ ಬರುತ್ತಿತ್ತೆಂದು ಹೇಳಿದ್ದಕ್ಕೆ-ನಮ್ಮ ಮಲಸೀಮೆಯಲ್ಲಿ ಇದೇ ಪದ್ಧತಿ ರೂಢಿಯಲ್ಲಿದೆ. ಸ್ಥಳದ ಮಠದವರು ವಿದ್ಯಾವಂತರಾದಾಗ ಅವರೇ ಕಾರ್ಯ ನಡೆಸಿಕೊಳ್ಳುತ್ತಾರೆಂದು ಹೇಳಿದರು. ಪಾಪ. ಶಾಸ್ತ್ರಿಗಳವರು ಯತ್ನವಿಲ್ಲದೆ ಕೊಡಬೇಕಾಗಿ ಬಂದಿತು. ಇದೆಂಥ ನಡತೆ! ಪುರೋಹಿತರು ಇಲ್ಲದಿರುವ ಸ್ಥಳಗಳಿಗೆ ದೂರದಿಂದ ಹೋಗತಕ್ಕ ಶಾಸ್ತ್ರಿಗಳಿಗೆ ಉತ್ಸಾಹಭಂಗವಾಗಿ ಒಂದು ಸಾರಿ ಹೋದವರು ಮತ್ತೊಂದು ಸಾರಿ ಹೋಗಲು ಹೇಗೆತಾನೇ ಇಷ್ಟಪಡುವರು? ಈ ವಿಚಾರವು ಸ್ಥಲದ ದೊಡ್ಡಮನುಷ್ಯರಿಗೂ ಯುಕ್ತವಾಗಿ ಕಾಣುವುದಿಲ್ಲ. ಸ್ಥಳದವರಿಗೆ ಒಂದು ವೇಳೆ ಸ್ಥಳದ ಮಠದವರಲ್ಲಿ ಪ್ರೀತಿ ಇರುವುದು ನಿಜವಾಗಿದ್ದಲ್ಲಿ ವಿದ್ಯಾಹೀನರಾಗಿರುವ ಮಠಸ್ಥರನ್ನು ವಿದ್ಯಾವಂತರನ್ನಾಗಿ ಮಾಡುವುದರಲ್ಲಿ ತಮ್ಮ ಮೊಹನತ್ತನ್ನು ಉಪಯೋಗಿಸಿ ಮತ್ತು ಅವಿವೇಕದಿಂದ ಆಚರಣೆಗೆ ಬಂದಿರತಕ್ಕ ಹಾಸ್ಯಾಸ್ಪದಗಳಾದ ಕಂದಾಚಾರಗಳನ್ನು ದೂರೀಕರಿಸಿ, ಆಚಾರವ್ಯವಹಾರಾದಿಗಳನ್ನು ಸರಿಪಡಿಸಿ ಯಶೋಭಾಗಿಗಳಾಗಬೇಕಾಗಿ ಪ್ರಾರ್ಥಿಸುವ,

ಒಬ್ಬ ಮತಾಭಿಮಾನಿ.

ಚರಪಟ್ಟಾಧ್ಯಕ್ಷ ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು ಹೂಲಿಬೃಹನ್ಮಠ, ಇವರ ಆಗಮನದಿಂದಾದ ಲಾಭವು.

ಶ್ರೀ ನೀಲಕಂಠ ಶಿವಾಚಾರ್ಯರು ನಮ್ಮ ಗ್ರಾಮವಾದ ಹೂಲಿಯಿಂದ ಮೊದಲು ಸೊಲ್ಲಾಪುರದಲ್ಲಿ ಕೈ॥ ವಾರದವರ ಪಾಠಶಾಲೆಯಲ್ಲಿ ಕೆಲವು ದಿವಸ ಅಧ್ಯಯನ ಮಾಡಿ ಶ್ರೀ ಕ್ಷೇತ್ರ ಕಾಶಿಗೆ ದಯಮಾಡಿಸಿ ಇಲ್ಲಿಗೆ ೭-೮ ವರ್ಷಗಳಾಗಿದ್ದವು. ಅಲ್ಲಿ ಅವರು ಸುರಕ್ಷಿತವಾಗಿ ಶಾಸ್ತ್ರಾಧ್ಯಯನ ಮಾಡಿ ಅಲ್ಲಿಂದ ಹೊರಟು ನಿನ್ನೆ ತಾ॥ ೧೭-೫-೧೯೨೦ ಕ್ಕೆ ಇಲ್ಲಿಗೆ ತಲ್ಪಲು ತತ್ಕ್ಷಣವೇ ಯಾವತ್ತೂ ಪುರಪ್ರಮುಖರಾದ ಶೆಟ್ಟಿ ಸಾಹುಕಾರರು ಶ್ರೀಗಳನ್ನು ಇದಿರ್ಗೊಂಡು ಪುರಪ್ರವೇಶ ಮಾಡಿಸಿದರು. ಮುಂದೆ ಶ್ರೀ ಸಿದ್ಧನಂಜೇಶ್ವರ ಗದ್ದಿಗೆಯು ರುದ್ರಾಭಿಷೇಕವು ಜರುಗಿ ಸಂಜೆ ೫ ಘಂಟೆ ಸುಮಾರಕ್ಕೆ ಇಲ್ಲಿಯ ಬಾಲಲೀಲಾಚರಪಟ್ಟಾಧ್ಯಕ್ಷ ಸಂಗಮೇಶ್ವರ ಮಹಾಸ್ವಾಮಿ ಸಾಂಬಯ್ಯನಮಠ ಇವರ ದರ್ಶನವನ್ನು ಯಾವತ್ತೂ ಪುರಪ್ರಮುಖರೊಡನೆ ತೆಗೆದುಕೊಂಡರು. ಶ್ರೀ ಶಿವಾಚಾರ್ಯರು ತಾ॥ ೧೮ ನೆ ದಿವಸ ಜಗದ್ಗುರು ವಿಶ್ವಾರಾಧ್ಯ ವಾಚನಾಲಯಕ್ಕೆ ಆಗಮಿಸಲು ಇಲ್ಲಿ ಶೀಘ್ರವೇ ಒಂದು ಸಭೆ ಸೇರಿತು. ಈ ಸಭೆಗೆ ಲೋಕಲ್‌ಬೋರ್ಡ್ ಮೆ॥ ಶಿವಪ್ಪರಡ್ಡಿ ಚಿಕ್ಕರಡ್ಡಿ ಇವರೂ ಸ್ಯಾನಿಟರಿ ಸೊಸೈಟಿ ಛೇರ್ಮನ್ ಮೆಂಬರರೂ ಗೌಡಕ್ಯಾನುಭೋಗರೂ ಮೊದಲಾದ ಮುಖಂಡರು ಸೇರಿರಲು, ಇಲ್ಲಿಯ ಕನ್ನಡ ಶಾಲಾ ಮಿ॥ ಧುಂಡೋ ಅನಂತ ಸೋರೇಬಾನ ಇವರು ಶ್ರೀಗಳವರ ಸ್ವಾಗತ ಮಾಡಿದ ಮೇಲೆ ಶ್ರೀ ಶಿವಾಚಾರ್ಯರು -ವಿದ್ಯೆ-ಯಿಂದಾಗುವ ಲಾಭ ಈ ವಿಷಯದ ಮೇಲೆ ೧-೨ ಘಂಟೆಯವರೆಗೆ ತಮ್ಮ ಮಂಜುಳ ವಾಣಿಯಿಂದ ಭಾಷಣ ಮಾಡಿದ ಮೇಲೆ ಮುಂದೆ ಜಗದ್ಗುರು ವಿಶ್ವಾರಾಧ್ಯ ಸ್ತೋತ್ರದೊಡನೆ ಸಭಾ ವಿಸರ್ಜನೆಯಾಗಿ ಶ್ರೀ ಶಿವಾಚಾರ್ಯರ ಆಶೀರ್ವಾದದೊಡನೆ ಯಾವತ್ತರೂ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಮುಂದೆ ಅಜೂಬಾಜು ಗ್ರಾಮಗಳಿಂದ ಅಂದರೆ ಉಗರಗೊಳ್ಳ, ಮುನವಳ್ಳಿ, ಶಿರಸಂಗಿ ಮೊದಲಾದ
ಗ್ರಾಮಗಳ ಪ್ರಮುಖರೂ, ಸದ್ಭಕ್ತರೂ ದರ್ಶನಾಶೀರ್ವಾದವನ್ನು ಪಡೆದು ತಮ್ಮ ತಮ್ಮ ಗ್ರಾಮಗಳಿಗೆ ಶ್ರೀಗಳು ಆಗಮಿಸಲಿಕ್ಕೆ ಬಿನ್ನಹವನ್ನು ಸೂಚಿಸಿದರು. ಮುಂದೆ ತಾ॥ ೨೪ ಚಂದ್ರವಾರ ರಾ॥ ಸಾ॥ ಸಾಗರಗಟ್ಟಿ ಮಾಮಲೇದಾರ್ ತಾ॥ ಪರ್ಸಗಡ ಇವರ ಆಗಮನವಿದ್ದು ಶ್ರೀ ಶಿವಾಚಾರ್ಯರ ದರ್ಶನ ತಕ್ಕೊಳ್ಳುವದಾಗಿ ತಿಳಿಸಲು, ಯಾವತ್ತರೂ ವ್ಯವಸ್ಥೆಯಿಟ್ಟಿದ್ದರು. ರಾ॥ ಸಾ॥ ರವರು ಮುಂಜಾನೆ ೧೦ ಘಂಟೆ ಸುಮಾರಕ್ಕೆ ಸನ್ನಿಧಿಗೆ ಆಗಮಿಸಿದರು. ಈ ಮಹನೀಯರು ಬಗವದ್ಭಕ್ತರೂ ಪ್ರಜಾಪಾಲಕರೂ ರಾಜನಿಷ್ಠರೂ ಎಂಬುವದು ಅವರು ಹೇಳಿದ -ರಾಜಪ್ರಜೆಯಿಂದಾಗುವ ಲಾಭ- ಈ ಭಾಷಣದಿಂದ ನಿದರ್ಶನವಾಯಿತು. ಮುಂದೆ ಶ್ರೀ ಶಿವಾಚಾರ್ಯರು -ಶಿವಜೀವೈಕ್ಯ-ಕ್ಕೂ ರಾ॥ ಸಾ॥ ಭಾಷಣಕ್ಕೂ ಸಮನ್ವಯ ಮಾಡಿ ಯಾವತ್ತರಿಗೂ ತಿಳಿಯುವಂತೆ ಹೇಳಿ ಆಶೀರ್ವಾದದೊಡನೆ ಯಾವತ್ತರಿಗೂ ಅಪ್ಪಣೆ ಕೊಟ್ಟರೆಂದು ತಿಳಿಸಲು ಆನಂದವಾಗಿರುತ್ತದೆ.

ಸೆಕ್ರೆಟರಿ ಜ॥ ವಿ॥ ವಾ॥ ಹೂಲಿ.

ಆಲೂರು.

ಹಾನಗಲ್ಲು ತಾಲ್ಲೂಕು ಆಲೂರಿನ ವೀರಶೈವ ವಾಚನಾಲಯದ ೧೪ ನೆ ವಾರ್ಷಿಕ ಮಹೋತ್ಸವವು ಹುಬ್ಬಳ್ಳಿಯ ಶ್ರೀಮಂತ ಸಿದ್ದಪ್ಪ ಚೆನ್ನಪ್ಪ ಕಮರೊಳ್ಳಿ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದಿತು. ಈಶಸ್ತವನ್ನ ಇಂಗ್ಲೀಷ್ ಶಾಲಾ ವಿದ್ಯಾರ್ಥಿಗಳ ಸಂಭಾಷಣಗಳು ನಡೆದ ನಂತರ ಸ್ವಾವಲಂಬನ, ಸಹಕಾರಿತ್ವ ಇವುಗಳ ಮೇಲೆ ಮಿ॥ ಹಂಪಣ್ಣನವರೂ, ಮಿ॥ ಬೂದಿಹಾಳ ಇವರೂ ಭಾಷಣ ಮಾಡಿದ ಬಳಿಕ ಮೆಂಬರರಾದ ಮಿ॥ ಅಕ್ಕಿ, ಮಿ॥ ಕಟಗಿ. ಮಿ॥ ಪಾಟೀಲ, ಮಂದಿರದ ಪ್ರೆಸಿಡೆಂಟ್ ಇವರುಗಳೆಲ್ಲಾ ಸಮಯೋಚಿತ ಭಾಷಣಗಳನ್ನು ಮಾಡಿದರು. ಸಭೆಯಲ್ಲಿ ಉಪನ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ೧೬ ರೂ.ಗಳ ಬಹುಮಾನವು ಕೊಡಲ್ಪಟ್ಟಿತು.

ಪ್ರೇಕ್ಷಕ.

ರಾಮದುರ್ಗ ಸಂಸ್ಥಾನದ ಲೇಖಕರೊಬ್ಬರು ಬರೆದಿರುವುದು:—

ಅವರಾದಿ ಗ್ರಾಮದಲ್ಲಿ ತಾ॥ ೧೦-೫-೨೦ ನೆ ದಿನ ಶ್ರೀಮನ್ನಿರಂಜನ ಫಲಾಹಾರದ ಸ್ವಾಮಿಗಳು ೪-೬ ವರ್ಷಗಳಿಂದ ಭಕ್ತರಲ್ಲಿ ಭಿಕ್ಷೆಯೆತ್ತಿದ ಬಹುಶಃ ೧೫ ಸಾವಿರ ರೂ.ಗಳ ವೆಚ್ಚದಿಂದ ೬೩ ಪುರಾತನರ ಪೂಜೆ ನಡೆಸಿದರು. ಇಲ್ಲಿಗೆ ಹೆಸರೆತ್ತಿಂದ ವೈರಾಗ್ಯ ಶೀಘಲ ನಿರಂಜನಮೂರ್ತಿಗಳೂ, ತಪೋಧನರಾದ ಪಟ್ಟಚರಾಧಿಕಾರಿಗಳೂ, ಸಮಾಜಕ್ಕೆ ತನುಮನಧನವನ್ನರ್ಪಿಸಿದ ಭಕ್ತಶಿರೋಮಣಿಗಳೂ, ನೀತಿಬೋಧಕರಾದ ಕೀರ್ತನಕಾರರೂ, ಸಿದ್ಧಾಂತಬೋಧಕರಾದ ಶಾಸ್ತ್ರಿಗಳೂ-ಇಂಥ ಯಾರೊಬ್ಬರೂ ಈ ದೊಡ್ಡ ಸಮಾರಂಭಕ್ಕೆ ಬಂದಿರಲಿಲ್ಲ. ಇದಕ್ಕೆ ಅನ್ಯಾಯವಾಗಿ ವೆಚ್ಚಮಾಡಿದ ಸಮಾಜದ ಹಣವನ್ನು ಸಂಸ್ಕೃತ ಕಲಿಯತಕ್ಕವರಿಗಾಗಲೀ, ಇಂಗ್ಲೀಷ್ ಕಲಿಯತಕ್ಕ ಅನಾಥ ವಿದ್ಯಾರ್ಥಿಗಳಿಗಾಗಲೀ, ವಿದ್ಯಾಭಿವೃದ್ಧಿ ಫಂಡಿಗಾಗಲೀ, ಶಿವಯೋಗಮಂದಿರ ಸಂಸ್ಥೆಗಾಗಲೀ ಕೊಟ್ಟಿದ್ದರೆ ಶಾಶ್ವತವಾದ ಕೀರ್ತಿಯು ಇವರಿಗೆ ಬರುತ್ತಿತ್ತು, ಶಿವಪ್ರೀತಿಯೂ ಆಗುತ್ತಿತ್ತು. ಸಮಾಜಕ್ಕೆ ಐಹಿಕಫಲವೂ ಆಗುತ್ತಿತ್ತು. ಇನ್ನು ಮುಂದಾದರೂ ಯಾರೂ ಈ ತೆರದಿಂದ ಸಮಾಜದ ದ್ರವ್ಯವನ್ನು ನಷ್ಟಪಡಿಸಬಾರದು.

ತುಮಕೂರು ತಾ॥ ಹೊನ್ನುಡಿಕೆ ಗ್ರಾಮ.

ಈ ಪ್ರಾಂತ ಮುಂಗಾರು ಮಳೆಯು ಸಕಾಲಕ್ಕೆ ಬಾರದೇ ಇದ್ದರೂ ಈ ಜೂನ್ ಆರಂಭದಲ್ಲಿ ಬಿದ್ದು ವ್ಯಾಕುಲಚಿತ್ತರಾಗಿದ್ದ ಜನಗಳ ಮನಸ್ಸನ್ನು ಸಮಾಧಾನಪಡಿಸಿದೆ. ಇಲ್ಲಿನ ಆರ್. ಎ. ವಿ. ಸ್ಕೂಲಿಗೆ ಬಾಲಕರು ವೃದ್ಧಿಸ್ಥಿತಿಯಲ್ಲಿ ಹೋಗುತ್ತಲಿಲ್ಲ: ಇದು ದೊಡ್ಡ ಸ್ಕೂಲಾದರೂ ಕನ್ನಡಕ್ಕೆ ಅಪ್ಪರ್ ಸೆಕೆಂಡರಿ ಪ್ಯಾಸ್ ಮಾಡಿದ ಮತ್ತು ೨೦-೨೫ ರೂ. ನ ತಲಬುಳ್ಳ ಗಟ್ಟ್ಯರಾದ ಮಾಸ್ಟರಿಲ್ಲದಿರುವುದು ಬಹು ತೊಂದರೆಯಾದುದರಿಂದ ಇದನ್ನು ವಿದ್ಯಾ ಇಲಾಖೆಯವರು ತುರ್ತ ಕ್ರಮಪಡಿಸಬೇಕಾಗಿ ಕೋರಿಕೆ. ಇಲ್ಲಿ ಇಂಗ್ಲೀಷ್ ಮಾಸ್ಟರಿಲ್ಲದ ಕೊರತೆಯನ್ನಂತೂ ಹೇಳತೀರದು. ಗ್ರಾಮಸ್ಥರು ೨೫ ರೂ. ತಲಬಿನ ಮಾಸ್ಟರನ್ನು ಕಳುಹಿಸಬೇಕೆಂದು ೧೫೦ ರೂ. ಗ್ರಾಂಟ್ ಮೊಬಲಗನ್ನು ಇರಸಾಲು ಮಾಡಿ ವರ್ಷಾಂತರವಾದರೂ ಒಬ್ಬ ಮಾಸ್ಟರನ್ನು ೮-೧೦ ದಿವಸಗಳ ಮಟ್ಟಿಗೆ ಕಳುಹಿಸಿ ವಾಯಿಂ ಕೆಲಸಕ್ಕೆ ಬೇರೆ ಕಡೆಗೆ ವರ್ಗಮಾಡಿಬಿಟ್ಟರು; ಇದರಿಂದ ಬಾಲಕರ ವಯಸ್ಸು ವೃಥಾ ಕಳೆದುಹೋಗುತ್ತಾ ಇವರ ತಂದೆತಾಯಿಗಳ ಮನಸ್ಸನ್ನು ವ್ಯಸನಪಡಿಸುವುದಲ್ಲದೆ, ಸರ್ಕಾರದವರಿಗೆ ಪಟ್ಟಣವಾಸದ ಬಾಲಕರು ಮಾತ್ರ ಮಕ್ಕಳಾಗಿದ್ದಂತೆಯೂ, ಗ್ರಾಮಾಂತರವಾಸದ ಮಕ್ಕಳು ಮಕ್ಕಳಲ್ಲದಂತೆಯೂ ತೋರಿಸುತ್ತಾ ಇವೆ. ಇಲ್ಲಿನ ಎ. ಇ. ಗರ್ಲ್ಸ್‌ಸ್ಕೂಲಿನ ಸ್ಥಿತಿಯಂತೂ ಮತ್ತೂ ಶೋಚನೀಯವಾಗಿದೆ. ಹಿಂದೆ ಇನ್ಸ್‌ಪೆಕ್ಟರಾಗಿದ್ದ ದಯಾಳುಗಳಾದ ಮ॥ ರಾ॥ ಮಾಧವರಾಯರೇ ಮೊದಲಾದವರು ಇಲ್ಲಿಗೆ ಗರ್ಲ್ಸ್‌ಸ್ಕೂಲು ಮಾಡಿಕೊಟ್ಟು ಹೆಡ್ಮಿಸ್ಟ್ರೆಸ್ ಮತ್ತು ಸಿಂಗಿಂಗ್ ಮಾಸ್ಟರು ಒಬ್ಬ ಜವಾನಿಯನ್ನು ಸಹ ಸ್ಕೂಲ್ ಸೌಕರ್ಯಕ್ಕಾಗಿ ಕೊಡಿಸಿದ್ದರು. ಆಗ್ಗೆ ಇದ್ದ ಮಾಸ್ಟರುಗಳು ಸಹ ಮುತುವರ್ಜಿಯಿಂದ ಕೆಲಸಮಾಡುತ್ತಿದ್ದರು. ಈಗ ಈ ಸ್ಕೂಲಿಗೆ ಈ ಗ್ರಾಮದಲ್ಲಿ ಸರಿಯಾದ ಕಟ್ಟಡವಿರುವುದಿಲ್ಲ. ಹೊಸ ಕಟ್ಟಡ ಕಟ್ಟಲು ಚಂದಾ ಕೊಡುವುದಕ್ಕೆ ಅನೇಕರು ಸಿದ್ಧರಾಗಿದ್ದಾರೆ. ಈ ಮಧ್ಯೆ ಸಿಂಗಿಂಗ್ ಮಾಸ್ಟರನ್ನೂ, ಜವಾನಿಯನ್ನೂ ಸಹ ಈ ಇಲಾಖೆಯವರು ಹಂಗಾಮಿಯಾಗಿಯೋ ಅಥವಾ ಪೂರ್ಣವಾಗಿಯೋ ತೆಗೆದು ಬಾಲಕಿಯರ ಸಂಖ್ಯೆಯು ಕಡಿಮೆಯಾಗಲು ಆಸ್ಪದ ಕೊಟ್ಟಿದ್ದಾರೆ. ದಯವಿಟ್ಟು ಎಂದಿನಂತೆ ಸಿಂಗಿಂಗ್ ಮಾಸ್ಟರನ್ನೂ ಜವಾನಿಯನ್ನೂ ಕೊಟ್ಟು ಸ್ಕೂಲು ಅಭಿವೃದ್ಧಿಗೆ ಬರುವಂತೆ ಮಾಡಬೇಕಾಗಿ ಪ್ರಾರ್ಥನೆ. ಸದ್ಯಃ ಇರುವ ಆರ್. ಎ. ವಿ. ಸ್ಕೂಲು ಕಟ್ಟಡಕ್ಕೆ ಹಿಂದೆ ತಾಲ್ಲೂಕು ಆಫೀಸರಾಗಿದ್ದ ಮೆ॥ ಬಾಲ್ ಸಾಹೇಬರವರು ಈ ಗ್ರಾಮಸ್ಥರಿಂದ ಚಂದಾ ವಸೂಲು ಮಾಡಿಸಿ ಶಾಶ್ವತವಾದ ಕಟ್ಟಡವಿರುವಂತೆ ಉಪಕಾರ ಮಾಡಿದರು. ಈಗ ಗರ್ಲ್ಸ್‌ಸ್ಕೂಲಿಗೆ ಸರಿಯಾದ ಕಟ್ಟಡವಿಲ್ಲದಿರುವುದನ್ನು ಈಗ ಇರುವ ತಾಲ್ಲೂಕು ಆಫೀಸರವರು ಗಮನಿಸಿ ಗ್ರಾಮಸ್ಥರಿಂದ ಚಂದಾ ವಸೂಲು ಮಾಡಿಸಿ ಅನುಕೂಲವಾದ ಕಟ್ಟಡ ಒದಗುವಂತೆ ಶಿಫಾರಸು ಮಾಡಿ ಹೆಚ್ಚಾದ ಯಶಸ್ಸನ್ನು ಪಡೆಯಬೇಕಾಗಿ ಕೋರಿಕೆ.

ಗ್ರಾಮವಾಸಿ.

ಕ್ಯಾಸಂದ್ರ.

ಇದೇ ರೌದ್ರಿನಾಮಸಂವತ್ಸರದ ಜ್ಯೇಷ್ಠ ಶುದ್ಧ ೧೦ ಗುರುವಾರ ತುಮಕೂರು ತಾ॥ ಕೆಸರುಮಡು ಗ್ರಾಮದ ಮ॥ ರಾ॥ ಗುರುಸಿದ್ದಪ್ಪನವರ ಪುತ್ರ ಚಿ॥ ರಾ॥ ಸಿದ್ದಪ್ಪನಿಗೆ ದೊಡ್ಡಬಳ್ಳಾಪುರದ ತಾಲ್ಲೂಕು ವಾಣಿಗರಹಳ್ಳಿ ಮ॥ ರಾ॥ ಮುದ್ದಪ್ಪನವರ ಪುತ್ರಿ ಚಿ॥ ಸೌ॥ ಹ॥ ಕುಂ॥ ಕೋ॥ ಗಂಗಮ್ಮನನ್ನು ತಂದು ಕ್ಯಾತ್ಸಂದ್ರದ ಮ॥ ರಾ॥ ಕರಿಬಸವಯ್ಯನವರ ಗುಬ್ಬಿ ಹುಚ್ಚಪ್ಪನವರು ಸ್ವಗೃಹದಲ್ಲಿ ನಡೆಸಿದ ವಿವಾಹ ಮಹೋತ್ಸವಕ್ಕೆ ನೆಲಮಂಗಲ ಹೊನ್ನುಡಿಕೆ ತುಮಕೂರು ಗೂಳೂರು ಬೆಳ್ಳಾವಿ ವಗೈರೆ ಪೇಟೆ ಮನೆಯವರು ನೆರೆದಿದ್ದರು ಲಗ್ನಕಾರ್ಯಗಳೆಲ್ಲವೂ ಆಗಮೋಕ್ತವಾಗಿ ವೇ॥ ಗೂಳೂರು ಪಟ್ಟದಸ್ವಾಮಿಗಳು ತುಮಕೂರು ವೇ॥ ಮಲ್ಲಿನಾಥಯ್ಯನವರುಗಳಿಂದ ನೆರವೇರಿಸಲ್ಪಟ್ಟಿತು. ಪಾಣಿಗ್ರಹಣ ಕಾಲದಲ್ಲಿ ನೆರೆದಿದ್ದ ಸಭೆಯಲ್ಲಿ ಕ್ಯಾತ್ಸಂದ್ರದ ಪೇಟೆ ಮ॥ ರಾ॥ ಚನ್ನಬಸವಪ್ಪಶೆಟ್ಟರು ಎದ್ದುನಿಂತು ಸಮಾಜದ ಪುರೋಭಿವೃದ್ಧಿಗಾಗಿ ಏರ್ಪಟ್ಟಿರತಕ್ಕ ವೀರಶೈವ ವಿದ್ಯಾಭಿವೃದ್ಧಿ ಫಂಡಿನ

ಕಿರೀಟವು ಮತ್ತು ಕೈ॥ ವೈ॥ ವೀರಸಂಗಪ್ಪನವರು ಮತಸೇವಾಕಾರ್ಯವೇ ಪರಮ ಧರ್ಮವೆಂದೆಣಿಸಿ ತಮ್ಮ ತನುಮನೋಧನವನ್ನೆಲ್ಲ ಸಮಾಜಕಾರ್ಯಕ್ಕೆ ವಿನಿಯೋಗಿಸಿ ನಮ್ಮ ಮತಕ್ಕೆ ಉಂಟಾಗಿದ್ದ ಅಜ್ಞಾನಾಂಧಕಾರವನ್ನು ತೊಲಗಿಸಿ ಮಹದುಪಕಾರ ಮಾಡಿದ್ದಕ್ಕೆ ಕೃತಜ್ಞತೆ, ಸ್ಟಾರ್ ಪತ್ರಿಕೆಯಿಂದಾಗತಕ್ಕ ಪ್ರಯೋಜನ ಅವರ ಚಿರ ಜೀವಿತ ಇವುಗಳಿಗಾಗಿ ಪ್ರತಿಯೊಬ್ಬ ವೀರಶೈವನೂ ಲಗ್ನಾದಿಕಾರ್ಯಗಳಲ್ಲಿ ಶಕ್ತಿ ವಂಚನೆಯಿಲ್ಲದೆ ಮಾಡತಕ್ಕ ಧನಸಹಾಯ ಇವುಗಳ ವಿಚಾರವಾಗಿ ಸರಸವಾಗಿ ಭಾಷಣ ಮಾಡಿದರು. ಇದನ್ನು ಶ್ರೀ॥ ಮಠದ ವೇ॥ ಚನ್ನಬಸವಯ್ಯನವರಾದಿಯಾಗಿ ಸಭಾಸದರೆಲ್ಲರೂ ಅನುಮೋದಿಸಿ ಮ॥ ರಾ॥ ಕೈ॥ ವೈ॥ ವೀರಸಂಗಪ್ಪನವರ ಹೆಸರಿನಿಂದ ತೆಗೆದ ಅಗ್ರತಾಂಬೂಲದ ಬಾಬತು (1-0-0) ವಿದ್ಯಾಭಿವೃದ್ಧಿ ಫಂಡಿಗಾಗಿ ವಧೂವರರ ಕಡೆಯಿಂದ ರೂ. 3 ಮುನ್ನಾ ನಾಲ್ಕು ರೂಪಾಯಿಗಳು ಚಂದಾ ತೆಗೆಸಿ ನಂತರ ಗಂಧ ಪುಷ್ಪತಾಂಬೂಲ ವಿನಿಯೋಗವಾಗಿ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಈ ರೌದ್ರಿ ಸಂ॥ ವೈಶಾಖ ೯ ಬುಧವಾರ ಕೃಷ್ಣರಾಜಪೇಟೆ ತಾ॥ ಬೂಕನಕೆರೆಯಲ್ಲಿ ಪ್ರಸಿದ್ಧ ಮನೆತನದವರಾದ ವೇ॥ ಚನ್ನಪ್ಪಶಾಸ್ತ್ರಿಗಳವರೊಬ್ಬರು ವೇ॥ ಗುರುಬಸವಶಾಸ್ತ್ರಿಗಳು ತಮ್ಮ ಕುಮಾರ ಚಿ॥ ಸಿದ್ಧಲಿಂಗದೇವರಿಗೆ ಅಮ್ಮನಹಟ್ಟಿಯ ಹುಚ್ಚಪ್ಪನವರ ಕುಮಾರಿ ಚಿ॥ ಸೌ॥ ಗೌರಮ್ಮನನ್ನು ತಂದೂ, ಮತ್ತು ಇವರ ಸಹೋದರರಾದ ವೇ॥ ಚನ್ನಪ್ಪಶಾಸ್ತ್ರಿಗಳ ಕುಮಾರ್ತಿ ಚಿ॥ ಸೌ॥ ಸೋಮಮ್ಮನನ್ನು ಹೊನ್ನುಡಿಕೆಯ ಶಿವರುದ್ರಯ್ಯನವರ ಕುಮಾರ ಚಿ॥ ರಾ॥ ರೇವಣ್ಣನವರಿಗೆ ಕೊಟ್ಟು ವಿಧ್ಯುಕ್ತವಾಗಿ ವಿವಾಹಮಹೋತ್ಸವಗಳನ್ನು ನೆರವೇರಿಸಿದರು. ವೇದಮೂರ್ತಿಗಳಾದ ಗುಬ್ಬಿ ಹೊಸಳ್ಳಿ ಮಠದ ಶ್ರೀ. ಪಟ್ಟದ ಶಂಕರದೇವರು ವೇ॥ ಗುರುವೀರಾರಾಧ್ಯರು, ಬಾಚಹಳ್ಳಿ ಸೋಮಪ್ಪಶಾಸ್ತ್ರಿಗಳು ಚಂದ್ರಶೇಖರಶಾಸ್ತ್ರಿಗಳು ಸೋಮಪ್ಪದೇವರು ಹೊನ್ನುಡಿಕೆಯ ರುದ್ರಯ್ಯನವರು ಮೊದಲಾದ ವೈದಿಕ ಮಂಡಲಿಯವರೂ ಅನೇಕ ಪರಪೇಟೆ ಮನೆಯ ಪ್ರಮುಖ ಶಿರೋಮಣಿಗಳೂ ಸ್ಥಳೀಯ ಪ್ರಮುಖರಾದ ಶ್ರೀಮಂತ ಸೋಮಶೆಟ್ಟರು ಮ॥ ರಾ॥ ಯಜಮಾನ್ ಮ॥ ಚನ್ನದೇವರು ಕಾಳಶೆಟ್ಟರು ಮ॥ ರಾ॥ ಶೇಕದಾರರು ಹ॥ ಮಹಮ್ಮದ್ ಅಲೀಬೇಗ್ ಸಾಹೇಬರು ಮೊದಲಾದವರು ಸಭೆಯನ್ನಲಂಕರಿಸಿದ್ದರು. ವೇ॥ ಹೊನ್ನುಡಿಕೆಯ ರುದ್ರಯ್ಯನವರು ವೇ॥ ಗುರುವೀರಾರಾಧ್ಯರು ಸಹ ಅನೇಕ ವಿಷಯಗಳನ್ನು ಕುರಿತು ರಸವತ್ತಾದ ಕಾಲೋಚಿತವಾದ ಉಪನ್ಯಾಸಗಳನ್ನು ಮಾಡಿ ಸಭಿಕರಿಗೆ ಆತ್ಮಾನಂದವನ್ನು ಉಂಟುಮಾಡಿದರು. ಅನಂತರ ಉಭಯಲಗ್ನ ಕರ್ತೃಗಳು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಎರಡೆರಡು ರೂಪಾಯಿಗಳನ್ನು ಕೈ॥ ವಾಸಿಗಳಾದ ವೈ॥ ವೀರಸಂಗಪ್ಪನವರ ಅಗ್ರತಾಂಬೂಲ ಮರ್ಯಾದೆಗಾಗಿ ಒಂದೊಂದು ರೂಪಾಯಿಗಳನ್ನೂ ಜ್ಞಾಪಕಾರ್ಥವಾಗಿ ತೆಗೆದು 6 ರೂಪಾಯಿಗಳನ್ನು ರವಾನೆಮಾಡತಕ್ಕ ಬಗೆಗೆ ಹೊ॥ ಟೆ॥ ರುದ್ರಯ್ಯನವರ ವಶಕ್ಕೆ ಕೊಟ್ಟರು. ಸಭಿಕರಿಗೆ ಗಂಧ ಪುಷ್ಪ ಫಲತಾಂಬೂಲಗಳನ್ನು ಹಂಚಿ ಸಭೆಯು ಬರಕಾಸ್ತು ಮಾಡಗಿರುತ್ತೆ.

ಪ್ರೇಕ್ಷಕ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

12

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ಕರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಆವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 26

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಜಾಗ್ರತೆ. ## ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 33

ನಾವು ಎ. ಆಲ್ ಬ್ಯುಕ್ಯಾಯರ್ ಕ್ಯ ಅಂಡ್ ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಡಿರೇಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
12 ಪೋಸ್ಟ್ ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
12 ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹಮಾ ವ್ಯಸನಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಮ್ಮ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
35 ವೈದ್ಯಶಾಲಾ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನ
ರಿಜಿಸ್ಟರ ಮಾಡಲ್ಪಟ್ಟ 31

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವ್ಯಾಗಿ ತಾ॥ ೧೦-೮-೧೯೦೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ, ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನುಭವಿಸತಕ್ಕದ್ದು ತವೇ ಎಂದು ತಿಳಿದು ಸ್ವೀಕಾರವಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗಿಸಿ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಲೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೆ, ಲಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿಡ್ಡು, ಗುದ್ದಪ್ಪನಬೇನೆ, ಹುರುಕುಳಜ್ಜಿ, ಗಜಕರ್ಣ, ಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಉತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಆಣೆ ತೊಲದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ, ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆ ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವಿ

೧೯೨೦ ನೆಯ ಇಸವಿ ಜೂನ್ ತಾ॥ ೨೦ರಿಂದ ೧೯೨೦ ನೆಯ ಜೂನ್ ತಾ॥ ೨೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಆಷಾಢ ಶುದ್ಧ ಚೌತಿಯಿಂದ ಆಷಾಢ ಶುದ್ಧ ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
20	ಭಾನು	ಚೌತಿ	8-50	ಆಶ್ಲೇ	36-28
21	ಸೋಮ	ಪಂಚ	4-37	ಮಖಾ	34-8
22	ಮಂಗಳ	ಷ-ಉ	0-48 56-40	ಪುಭ	32-45
22	ಬುಧ	ಅಷ್ಟ	55-35	ಉಭ	32-27
24	ಗುರು	ನವ	55-7	ಹಸ್ತ	33-20
25	ಶುಕ್ರ	ದಶ	55-57	ಚಿತ್ತ	35-24
26	[1]ಶನಿ	ಏಕಾ	58-3	ಸ್ವಾತಿ	39-9

(1) ಸ್ಮಾರ್ತಾನಾಂ ಮಂಜುಳ ಪ್ರಥಮ್ಮಕಾದಶಿ.

ಮೈಸೂರ್ : ವೈ. ವಿರೂಪಾಕ್ಷಯ [illegible]ಂದ ಕ್ವೀನ್ ಎಲೆಕ್ಟ್ರಿಕ್
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಶೀಮಾಶೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ರಿತಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಜೂನ್ ತಾರೀಖು ೨೭ ನೆಯ ಭಾನುವಾರ. (ಸಂಚಿಕೆ ೨೬

GOVERNMENT OF MYSORE.
ELECTRICAL DEPARTMENT.

46

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking.		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 47

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಚಳುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಡಿಸ್ನು ಬಾಟ್ಲು ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೩—೦
ಶಂಡಾಸಿ	೦—೪—೦
ಗುರುಶಂಕರದೇವ್ಯರ ಶತಕಂ	೦—೧—೦

ಅಂಚೆವೆಚ್ಚ ಬೇರೆ.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಪತ್ಯ ಇಲ್ಲ. ## ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ## ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
39 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು

ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
13 3. ಇರುಳಪ್ಪನಬೀದಿ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ —ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಕಸಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಮಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಮಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
ಸಾ॥ ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

---

32 ## ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜೂನ್ ತಾ|| ೨೭ ನೆಯ ಭಾನುವಾರ.

ಸೀನಿಯರ್ ಸರ್ಜನರು.

ಈಗ ಸಂಸ್ಥಾನದ ಸೀನಿಯರ್ ಸರ್ಜನರಾಗಿರುವ ರಾ|| ಬ|| ಡಾ|| ಟಿ. ವಿ ಆರ್ಮುಗಂ ಮೊದಲಿಯಾರರು ಬರುವ ಜುಲೈ ತಾ|| ೧ ರಿಂದ ನಿವೃತ್ತರಾಗುತ್ತಾರಾದ ಕಾರಣ, ಆ ಸ್ಥಾನಕ್ಕೆ ಡಾ|| ಸಿ. ಎ ನಂಜಪ್ಪನವರು ನಿಯಮಿಸಲ್ಪಟ್ಟಿರುತ್ತಾರೆ. ಈಗಿನ ಡಾಕ್ಟರುಗಳಲ್ಲೆಲ್ಲಾ ಇವರೇ ಸೀನಿಯರಾಗಿರುವ ಕಾರಣ, ಸೀನಿಯರ್ ಸರ್ಜನರ ಪದವಿಯನ್ನು ಡಾ|| ಆರ್ಮುಗಂ ಮೊದಲಿಯಾರರನಂತರ ವಹಿಸುವುದಕ್ಕೆ ನ್ಯಾಯವಾದ ಬಾಧ್ಯತೆಯನ್ನು ಮಾತ್ರವೇ ಅಲ್ಲದೆ ತಕ್ಕ ಅರ್ಹತೆಯನ್ನೂ ಪಡೆದಿರುತ್ತಾರಾದ ಕಾರಣ ಅದಕ್ಕಾಗಿ ನಾವು ಸಂತೋಷಿಸುತ್ತೇವೆ ಆದರೆ ಈ ಯೇರ್ಪಾಟಿನಿಂದ ಇವರಂಥ ಸಮರ್ಥರೂ ಗುಣಾಢ್ಯರೂ ಆದ ವೈದ್ಯಶಿಖಾಮಣಿಗಳ ಪ್ರತ್ಯಕ್ಷ ಚಿಕಿತ್ಸಾಲಾಭವನ್ನು ಪ್ರಜೆಗಳು ಕಳೆದುಕೊಳ್ಳಬೇಕಾಗುವುದನ್ನು ಪರ್ಯಾಲೋಚಿಸಿದರೆ ಮಾತ್ರ ವಿಷಾದಿಸಬೇಕಾಗುವುದು.

ನಮ್ಮ ಸಂಸ್ಥಾನದಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯು ಡಾ|| ಆರ್ಮುಗಂ ಮೊದಲಿಯಾರರ ಸಂಬಂಧದಿಂದ ದಕ್ಷಿಣ ಭರತಖಂಡದಲ್ಲೆಲ್ಲಾ ವಿಖ್ಯಾತಿಯನ್ನು ಪಡೆದುಕೊಂಡಿತು. ಅವರನಂತರ ಆ ವೈದ್ಯಾಲಯದ ಮುಖ್ಯ ವೈದ್ಯಪದವಿಗೆ ಡಾ|| ಸಿ. ಎ. ನಂಜಪ್ಪನವರು ಬಂದು ಅದೇ ಖ್ಯಾತಿಯನ್ನು ಉಳಿಯಿಸಿದರು.

ರಾಜಧಾನಿಯಲ್ಲಿ ದೊಡ್ಡದಾಗಿ ಕಟ್ಟಲ್ಪಟ್ಟ ನೂತನ ಕೃಷ್ಣರಾಜ ವೈದ್ಯಾಲಯವು ಮೇಜರ್ ಫ್ಲೋಕ್ಸ್‌ರವರ ಕಾಲದಲ್ಲಿ ಅವರ ಸೂಕ್ತಸೂಚನೆಗಳ ಮೇರೆಗೆ ಆರಂಭಗೊಂಡರೂ ಅವರು ಉದ್ಯೋಗವನ್ನು ಬಿಟ್ಟು ಬ್ರಿಟಿಷ್ ಸರ್ಕಾರಿಯುದ್ಯೋಗಕ್ಕೆ ತೆರಳಿ ಹೋಗಬೇಕಾಗಿ ಬಂದುದರಿಂದ, ಅವರಿಲ್ಲದ ಕೊರತೆಯನ್ನು ಡಾ|| ಸಿ. ಎ. ನಂಜಪ್ಪನವರು ಇಲ್ಲಿಗೆ ಬಂದಬಳಿಕ ಪರಿಹರಿಸಿ ಕೃಷ್ಣರಾಜ ವೈದ್ಯಾಲಯವನ್ನು ಸಚೇತನನೆನಿಸಿದರು. ಇವರ ಯಾಜಮಾನ್ಯದಿಂದ ಅಲ್ಲಿ ರೋಗಿಗಳಿಗೆ ನಡೆಯುತ್ತಿದ್ದ ಆದರೋಪಚಾರಗಳನ್ನೂ ಕುಶಲಚಿಕಿತ್ಸೆಗಳನ್ನೂ ಅಚ್ಚುಗಟ್ಟನ್ನೂ ಅನುಭವಿಸಿರುವ ಪ್ರಜೆಗಳು ಆ ವೈದ್ಯಾಲಯ ಸಂಬಂಧದಿಂದ ಇವರು ದೂರಂಗತರಾಗುವುದನ್ನು ಸೈರಿಸಿಕೊಳ್ಳುವುದು ಕಷ್ಟ. ಈ ವೈದ್ಯಾಲಯಕ್ಕೆ ಡಾ|| ಸಿ. ಎ. ನಂಜಪ್ಪನವರು ಪ್ರಾಣವಾಗಿದ್ದರು. ಇವರಿಗೆ ಅದು ದೇಹದಂತಿದ್ದಿತು.

ಮುಖ್ಯವಾಗಿ ಓದಿ ಪರೀಕ್ಷೆಗಳನ್ನು ಕೊಟ್ಟ ಮಾತ್ರದಿಂದಲೇ ಉತ್ತಮ ವೈದ್ಯರಾಗುವುದಿಲ್ಲ. ಜೀವಕಾರುಣ್ಯ, ಪಾಪಭೀತಿ, ನಿಸ್ಪೃಹತೆ, ಶೋಧಕಬುದ್ಧಿ, ಪರಹಿತಾದರ—ಇತ್ಯಾದಿ ಸದ್ಗುಣ ಸಂಪತ್ತಿಯಿಂದಲೇ ವೈದ್ಯತ್ವವು ಸಂಪೂರ್ಣವೆನಿಸಿಕೊಳ್ಳುವುದು. ಅಂಥ ಸುಗುಣವಿಭೂಷಿತರಲ್ಲದ ವೈದ್ಯರು ರೋಗಿಗಳ ಭಾಗಕ್ಕೆ ಯಮಕಿಂಕರರಾಗಿ ಕಾಣಿಸಿಕೊಳ್ಳುವರು. ವೈದ್ಯಾಲಯಗಳು ೩-೪ ಲಕ್ಷ ರೂ. ಗಳ ವೆಚ್ಚದಿಂದ ಕಟ್ಟಲ್ಪಟ್ಟು ಅಸಾಧಾರಣಗಳಾದ ಉಪಚಾರ ಸಾಧನಗಳನ್ನು ಹೊಂದಿ ಮನೋಹರಗಳಾಗಿದ್ದರೂ, ಅವುಗಳಲ್ಲಿ ಮೇಲೆ ಕಂಡಂತೆ ಗುಣಾಢ್ಯರಾದ ಸದ್ವೈದ್ಯರು ಇಲ್ಲದೆಹೋದರೆ ದೇವರಿಲ್ಲದ ದೇಗುಲದಂತೆ ನಿಷ್ಫಲವಾಗುವುವು. ಅದುಕಾರಣ ಎಲ್ಲಕಡೆಯ ವೈದ್ಯಾಲಯಗಳಿಗೂ ಅಂಥ ಉತ್ತಮೋತ್ತಮರನ್ನು ತಂದಿಡುವುದು ಸಾಧ್ಯವಲ್ಲದಿದ್ದರೂ ಸಂಸ್ಥಾನದ ಮುಖ್ಯಸ್ಥಲಗಳಾದ ಬೆಂಗಳೂರು ಮೈಸೂರುಗಳಲ್ಲಿರುವ ದೊಡ್ಡ ವೈದ್ಯಾಲಯಗಳಿಗಾದರೂ ಪರದೇಶಗಳಿಂದಲಾದರೂ ನಿಪುಣರೂ ಗುಣಾಢ್ಯರೂ ಆದ ವೈದ್ಯಶಿಖಾಮಣಿಗಳನ್ನು ತಂದಿಡುವುದು ಅತ್ಯಾವಶ್ಯಕವು. ಪ್ರಜಾಹಿತಕ್ಕಾಗಿ ಈ ಪ್ರಮುಖ ವೈದ್ಯಾಲಯಗಳನ್ನೇರ್ಪಡಿಸಿ ಅವುಗಳಿಗೋಸ್ಕರ ಲಕ್ಷಾಂತರ ವ್ಯಯವನ್ನು ಮಾಡಿಯೂ ಮಾಡಿಸುತ್ತಲೂ ಇರುವ ಸರ್ಕಾರದವರು ಆ ವೆಚ್ಚವನ್ನು ಸಾರ್ಥಕಪಡಿಸಿಕೊಳ್ಳಬೇಕಾದರೆ ಸಮರ್ಥರನ್ನು ತಂದಿಡುವುದೇ ಪ್ರಥಮಕರ್ತವ್ಯವೆಂಬುದನ್ನು ಅರಿಯದೆ ಇರಲಾರರು. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮ|| ಹೆಚ್. ಕೃಷ್ಣಶಾಸ್ತ್ರಿಗಳು ಬೆಂಗಳೂರು ವಿಕ್ಟೋರಿಯಾ ವೈದ್ಯಾಲಯಕ್ಕೆ ೨ ಸಾವಿರ ರೂ. ಗಳ ಸಂಬಳವನ್ನು ಕೊಟ್ಟಾದರೂ ಒಬ್ಬ ಆಂಗ್ಲವೈದ್ಯಶಿಖಾಮಣಿಯನ್ನು ತಂದಿರಿಸುವುದು ಅತ್ಯವಶ್ಯಕವೆಂದು ಕೊಟ್ಟ ಸೂಚನೆಯು ಅತ್ಯಂತ ಸಮರ್ಪಕವಾಗಿದ್ದಿತು. ಯೂರೋಪು ಖಂಡದಲ್ಲಿ ಈಗ ಯುದ್ಧವೆಲ್ಲಾ ನಿಂತಿರುವ ಕಾರಣ ಅನೇಕ ವೈದ್ಯರಿಗೆ ಬಿಡುವಾಗಿರುತ್ತದೆ. ಪ್ರಯತ್ನಪಟ್ಟು ಪರಿಶೋಧಿಸಿದರೆ ತಕ್ಕವರು ಸಿಕ್ಕದೆ ಹೋಗುವುದಿಲ್ಲ. ನಮ್ಮ ಗೌರ್ನಮೆಂಟಿನವರು ಸ್ವಲ್ಪ ಹೆಚ್ಚು ಸಂಬಳ ಕೊಡಬೇಕಾಗಿ ಬಂದರೂ ಹಿಂದೆಗೆಯದೆ ಅಂಥ ಸಮರ್ಥರಿಬ್ಬರನ್ನು ಆರಿಸಿ ತಂದು ಇವೆರಡು ವೈದ್ಯಾಲಯಗಳಿಗೂ ನಿಯಮಿಸಿದರೆ ಪ್ರಜೆಗಳಿಗೆ ಬಹಳ ಉಪಕಾರ ಮಾಡಿದಂತಾಗುವುದು, ಮತ್ತು ಈ ವೈದ್ಯಾಲಯಗಳ ಯಶಸ್ಸೂ ಕಾಪಾಡಲ್ಪಡುವುದು.

ಸೀಮೆಯ ಸಾಮಾನುಗಳು ಮತ್ತು ಕಲ್ಲಿದ್ದಲ ಕೊರತೆ.

ಯುದ್ಧವು ನಿಂತುಹೋಗಿದ್ದರೂ ಸೀಮೆಯ ಸಾಮಾನುಗಳು ನಮ್ಮ ದೇಶಕ್ಕೆ ಸಮೃದ್ಧವಾಗಿ ಏತಕ್ಕೆ ಬರುವುದಿಲ್ಲ? ಅವುಗಳ ಬೆಲೆಯು ಏತಕ್ಕೆ ಇಳಿಯಲಿಲ್ಲ? ಎಂಬುದಾಗಿ ಅನೇಕರು ಪ್ರಶ್ನೆಮಾಡುತ್ತಿರುವುದುಂಟು. ಪದಾರ್ಥಗಳು ಸಮೃದ್ಧವಾಗಿ ನಿರ್ಮಿತವಾಗುತ್ತಿದ್ದರೆ ನಮ್ಮ ದೇಶಗಳಿಗೆ ಅವು ವಿಶೇಷವಾಗಿ ಬರುತ್ತಿದ್ದುವು. ಆಗ ಅವುಗಳ ಬೆಲೆಯು ಇಳಿತರದಲ್ಲಿರುತ್ತಿದ್ದಿತು. ಸೀಮೆಯಲ್ಲಿ ಅವುಗಳ ನಿರ್ಮಾಣವೇ ವಿಶೇಷವಾಗಿ ಆಗುತ್ತಲಿಲ್ಲ. ಕಾರಣವೇನೆಂದರೆ— ಯೂರೋಪು ಖಂಡದ ಎಲ್ಲ ಪರಿಶ್ರಮಗಳಿಗೂ ಕಲ್ಲಿದ್ದಲೇ ಮುಖ್ಯಾಧಾರವು. ಈಗಲಾದರೋ ಅದು ತಕ್ಕಷ್ಟು ದೊರಕುತ್ತಲಿಲ್ಲ. ದೊರೆತಷ್ಟನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿಕೊಂಡು ಹೋಗುವುದಕ್ಕೆ ಸಾಧನಗಳು ಕಡಿಮೆ. ಲೋಹಮಾರ್ಗಗಳು ಯುದ್ಧದಿಂದ ಹಾಳಾಗಿವೆ. ಬಂಡಿಗಳು ಸಾಲವು. ಅಲ್ಲದೆ ಕಲ್ಲಿದ್ದಲು ಎಲ್ಲ ದೇಶಗಳಲ್ಲೂ ಉತ್ಪತ್ತಿಯಾಗುವುದಿಲ್ಲ. ಅದು ಅಪರಿಮಿತವಾಗಿ ಹುಟ್ಟುವ ದೇಶಗಳವರು ತಮ್ಮ ಕಲ್ಲಿದ್ದಲನ್ನು ಇತರ ದೇಶಗಳಿಗೆ ಕಳುಹಿಸಿಕೊಡುವುದಿಲ್ಲ. ಫ್ರಾನ್ಸ್ ದೇಶದ ಉತ್ತರಭಾಗದಲ್ಲಿ ಕಲ್ಲಿದ್ದಲ ಗಣಿಗಳುಂಟು. ಅವುಗಳನ್ನೆಲ್ಲಾ ಮರಳಿ ಸರಿಮಾಡಿಕೊಳ್ಳಲಾಗದಂತೆ ಜರ್ಮನರು ಯುದ್ಧಕಾಲದಲ್ಲಿ ಧ್ವಂಸಮಾಡಿಬಿಟ್ಟರು. ಇದಲ್ಲದೆ ಕಲ್ಲಿದ್ದಲ ಗಣಿಗಳಲ್ಲಿ ಕೆಲಸಮಾಡುತ್ತಿದ್ದವರು ದಿನೇ ದಿನೇ ದೇಹದಾರ್ಢ್ಯದಲ್ಲಿ ಕ್ಷೀಣಿಸಿಹೋಗುತ್ತಿದ್ದಾರಂತೆ. ಅಲ್ಲದೆ ಕೂಲಿಕಾರರು ತಮ್ಮ ಸಂಬಳವನ್ನು ಹೆಚ್ಚಿಸಿಕೊಳ್ಳಲಿಕ್ಕೂ ಗೆಯ್ಯುವ ಕಾಲವನ್ನು ಕಡಿಮೆಮಾಡಿಕೊಳ್ಳಲಿಕ್ಕೂ ಸಹ ಗಣಿಗಳ ಯಜಮಾನರೊಡನೆ ಬೆಳಗಿದ್ದರೆ ಮುಳಿಸಿಕೊಂಡು ಕೆಲಸಬಿಟ್ಟು ಹೋರಾಡುತ್ತಿದ್ದಾರೆ. ಈ ಅವಾಂತರವು ಯೂರೋಪಿನ ಪರಿಶ್ರಮಾಗಾರಗಳನ್ನೆಲ್ಲಾ ತತ್ತರಗೊಳಿಸಿಬಿಟ್ಟಿದೆ. ಅಲ್ಲದೆ ಪದಾರ್ಥನಿರ್ಮಾಣಕ್ಕೆ ಮೂಲವಾದ ಅಪಕ್ವವಸ್ತುಗಳು ಸಮೃದ್ಧವಾಗಿಯೂ ಅಗ್ಗವಾಗಿಯೂ ದೊರೆಯುತ್ತಲಿಲ್ಲ. ಇಷ್ಟೇ ಅಲ್ಲದೆ ಪದಾರ್ಥನಿರ್ಮಾಣಕ್ಕೆ ಅವಶ್ಯಕಗಳಾದ ಯಂತ್ರಸಾಮಗ್ರಿಗಳು ವಿಶೇಷವಾಗಿ ರಚಿಸಲ್ಪಡಬೇಕಾಗಿವೆ. ಹಿಂದೆ ಇದ್ದುವುಗಳಲ್ಲಿ ಹಲವು ಯುದ್ಧಕಾಲದಲ್ಲಿ ರಣಸಾಮಗ್ರಿಗಳ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲ್ಪಟ್ಟುವು. ಅಲ್ಲದೆ ರಷ್ಯಾ ಪೋಲಾಂಡು ಜರ್ಮನಿ ಮೊದಲಾದ ಕಡೆಗಳಲ್ಲಿ ಇನ್ನೂ ಶಾಂತಿಯೇ ಉಂಟಾಗಿಲ್ಲ. ಒಳತೋಟಿಗಳು ವಿಪರೀತವಾಗಿವೆ. ಎಲ್ಲೆಲ್ಲೂ ಆಹಾರ್ಯಪದಾರ್ಥಗಳು ಸಾಲದುದರಿಂದ ಕ್ಷಾಮವು ತಾಂಡವವಾಡುತ್ತಿದೆ. ಆಸ್ಟ್ರಿಯಾದಲ್ಲಿ ಹೊಟ್ಟೆಗಿಲ್ಲದೆ ಲಕ್ಷಾಂತರ ಜನರು ಸತ್ತರು; ಬದುಕಿರುವವರಲ್ಲಿ ಬಡವರು ೨೦ ಲಕ್ಷ ಜನರು ಪರರನ್ನು ಬೇಡಿ ಹೊಟ್ಟೆಹೊರೆದುಕೊಳ್ಳುತ್ತಿದ್ದಾರೆ. ಅಲ್ಲಿ ಕೂಲಿಕೊಟ್ಟು ಕೆಲಸಮಾಡುವಣವೆಂದರೆ ಯಂತ್ರಗಳಿಗೆ ಕಲ್ಲಿದ್ದಲಿಲ್ಲ. ಸರ್ವಿಯಾ ದೇಶದಲ್ಲಿ ಯುದ್ಧದಿಂದ ಮೂರನೆ ಒಂದು ಭಾಗದ ಪ್ರಜೆಗಳು ನಾಶವಾದರು. ಉಳಿದಿರುವವರಲ್ಲಿ ಹಲವರಿಗೆ ಬಹುಕಾಲ ಸಾಕಷ್ಟು ಆಹಾರ ದೊರೆಯದಿದ್ದುದರಿಂದ ಕ್ಷಯ ಮೊದಲಾದ ನಾನಾರೋಗಗಳಿಗೆ ತುತ್ತಾಗಿದ್ದಾರೆ. ಅದರ ಸುತ್ತಲೂ ಬೋಸ್ನಿಯೋ, ಹರ್ಜಗೋವಿನಾ, ಮಾಂಟಿನೀಗ್ರೊ ದೇಶಗಳ ಅವಸ್ಥೆಯು ಸರ್ವಿಯಾಕ್ಕಿಂತಲೂ ಭಯಂಕರವಾಗಿದೆ. ಹೀಗೆ ಯೂರೋಪು ಖಂಡದ ಸ್ಥಿತಿಯು ನಾನಾ ವಿಧದಲ್ಲಿ ಇನ್ನೂ ತೊಂದರೆಗೆ ಈಡಾಗಿರುವುದರಿಂದ ಮೊದಲಿನಂತೆ ಸಾಮಾನುಗಳು ಹೇರಳವಾಗಿ ನಿರ್ಮಿತವಾಗಲಿಕ್ಕೂ ವಿದೇಶಗಳಿಗೆ ಸಾಗಿಬರಲಿಕ್ಕೂ ಅವಕಾಶವಿಲ್ಲದಿರುವ ಕಾರಣ ನಮಗೆ ಅವು ಅಗ್ಗವಾಗಿ ಸಿಕ್ಕುತ್ತಲಿಲ್ಲ.

ನಮ್ಮ ಭರತಖಂಡದಲ್ಲಿ ಮೂಲ ವಸ್ತುಗಳಿಗೆ ಕೊರತೆಯಿಲ್ಲ. ಹಲವು ಕಡೆ ಕಲ್ಲಿದ್ದಲ ಅಪೇಕ್ಷೆಯೇ ಇಲ್ಲದೆ ಪ್ರವಾಹಗಳ ಪತನದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ತನ್ಮೂಲಕವೂ ಅಥವಾ ಕಾಡುಸವುದೆಗಳ ಮೂಲಕವೂ ಯಂತ್ರಗಳನ್ನು ನಡೆಯಿಸುವುದಕ್ಕೆ ಅವಕಾಶವಿದೆ. ಆದರೆ ಇಲ್ಲಿಯ ಪ್ರಜೆಗಳಿಗೆ ಆ ತೆರದ ಆರ್ಥಿಕ ಸಂಪಾದನೆಯ ಮೇಲೆ ಗಮನವು ಕಡಿಮೆ; ರಾಜಕೀಯ ವಿಷಯಕ್ಕೆ ಬಡಿದಾಡುವುದೇ ಹೆಚ್ಚು. ಅಲ್ಲದೆ ಈಗ ಪ್ರಯತ್ನಪಟ್ಟರೂ ತತ್ಕಾಲಕ್ಕೆ ಸಾಧ್ಯವಾಗುವುದಿಲ್ಲ. ಯಂತ್ರನಿರ್ಮಾಣವು ನಮ್ಮಲ್ಲಿ ಆಗುವಂತಿಲ್ಲ. ಅವುಗಳು ಸೀಮೆಯಿಂದಲೇ ಬರಬೇಕು. ಇದರಿಂದ "ಹಲ್ಲಿದ್ದವರಿಗೆ ಕಡಲೆಯಿಲ್ಲ ಕಡಲೆಯಿದ್ದವರಿಗೆ ಹಲ್ಲಿಲ್ಲ" ಎಂಬ ಗಾಥೆಯಂತೆ ಪ್ರಪಂಚದ ಸ್ಥಿತಿಯಾಗಿದೆ. ಅದುಕಾರಣ ಪೂರ್ವದ ಸ್ಥಿತಿಯು ಪ್ರಪಂಚದಲ್ಲಿ ಉಂಟಾಗಬೇಕಾದರೆ ಇನ್ನೂ ಕೆಲ ವರ್ಷಗಳೇ ಕಳೆಯಬೇಕೆಂದು ತೋರುತ್ತದೆ.

ಒಳದೇಶದ ವೃತ್ತಾಂತಗಳು.

ಹಿಂದುಳಿದ ವೇತನಗಳಿಗೆ ಹಳೆ ಪೈಕದವರೂ ಪಾತ್ರರೆಂದು ನಿರ್ಧರಿಸಿ, ಈಡಿಗರಿಗಾಗಿ ತೆಗೆದಿಟ್ಟಿರುವ ಹಣದಲ್ಲಿ ಇವರಿಗೂ ವೇತನವನ್ನು ಕೊಡತಕ್ಕದೆಂದು ಎ. ಇಕ್|| ಜನರಲ್‌ರವರು ಅಪ್ಪಣೆ ಮಾಡಿದ್ದಾರೆ.

ಮೈಸೂರು ಡಿಸ್ಟ್ರಿಕ್ಟಿನ ಹಲವು ಕಡೆ ಕಳೆದ ವಾರ ಸ್ವಲ್ಪ ಮಳೆಯಾದುದರಿಂದ ಜೋಳದ ಪೈರಿಗೆ ಅನುಕೂಲವಾಯಿತು. ಹುಣಸೂರು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಮಳೆಯು ಹೆಚ್ಚಾಗಿ ಪೈರು ಕೆಂಚು ಹಿಡಿದಿವೆ.

ಬೆಂಗಳೂರಿನಲ್ಲಿ ನಡೆಯಲಿಕ್ಕಿರುವ ಕೀರ್ತನ ಸಮ್ಮೇಳನವು ಬರುವ ಜುಲೈ ತಾ|| ೪ ರಿಂದ ೧೧ ರ ವರೆಗೆ ದಿ|| ಬ|| ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ನಡಯುವುದು. ಸಾಯಂಕಾಲದ ಹೊತ್ತು ಕೀರ್ತನೆಗಳೂ ಬೆಳಗಿನ ಹೊತ್ತು ಉಪನ್ಯಾಸಗಳೂ ನಡೆಯುವುವು.

ರಾಜಧಾನಿಯ ಕಲಿಜಿಯೇಟ್ ಹೈಸ್ಕೂಲಿನ ಹೆಡ್ಮಾಸ್ಟರಾಗಿದ್ದ ಮ|| ಕೃಷ್ಣಯ್ಯಂಗಾರರವರು ನಿವೃತ್ತರಾದುದರಿಂದ ಆ ಸ್ಥಳಕ್ಕೆ ಸಂಪದಭ್ಯುದಯ ಸಮಾಜದ ವಿದ್ಯಾಶಾಖಾ ಬೋರ್ಡಿನ ಸೆಕ್ರೆಟರಿಯಾಗಿದ್ದ ಮ|| ಕೆ. ಶ್ರೀ ನರಸಿಂಹಯ್ಯ, ಎಂ. ಎ. ಎಲ್. ಟಿ. ಯವರು ನಿಯಮಿಸಲ್ಪಟ್ಟಿರುವರು.

ಬೊಂಬಾಯಿ ಗೌರ್ನರ್ ದಂಪತಿಗಳು ಕಳೆದ ಮಂಗಳವಾರ ಸಾಯಂಕಾಲ ೫ ಘಂಟೆಗೆ ನೀಲಗಿರಿಯಿಂದ ಮೋಟಾರಿನ ಮೇಲೆ ರಾಜಧಾನಿಗೆ ದಯಮಾಡಿಸಿ ಶ್ರೀಮನ್ಮಹಾರಾಜರವರ ಆತಿಥ್ಯದಲ್ಲಿದ್ದು ಬುಧವಾರ ಸಾಯಂಕಾಲ ೬ ಘಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಬೊಂಬಾಯಿ ಕಡೆಗೆ ದಯಮಾಡಿದರು.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿ ಹೋಗುತ್ತಿದ್ದ ಒಂದು ಮೋಟಾರನ್ನು ನೋಡಿ ಒಂದು ಆಕಳು ಓಡಿಬಂದು ಅದರ ಮೇಲೆ ಬಿದ್ದು ತಿವಿಯಲಿಕ್ಕೆಂದು ಕೊಂಬುಗಳನ್ನು ಚಕ್ರಕ್ಕೆ ಚುಚ್ಚಲು ಬಂಡಿಯ ರಭಸದಿಂದ ಅದರ ಕೊಂಬು ಕಿತ್ತುಬಿದ್ದುದಲ್ಲದೆ ಆಕಳು ನೆಲಕ್ಕೆ ಅಪ್ಪಳಿಸಿಬಿದ್ದು ಸ್ವಲ್ಪ ಹೊತ್ತಿನಲ್ಲಿ ಸತ್ತಿತು.

ಬೆಂಗಳೂರಿಗೆ ಶ್ರೀ ಪ್ರಿನ್ಸ್-ಆಫ್-ವೇಲ್ಸ್ ರವರು ದಯಮಾಡಿಸಿದಾಗ್ಗೆ ಅವರ ಸತ್ಕಾರಕ್ಕೆ ೨೦೦೦ ರೂ. ಗಳನ್ನು ವೆಚ್ಚಮಾಡಿ ಒಂದು ವಿಜ್ಞಾಪನ ಪತ್ರವನ್ನು ಸಮರ್ಪಿಸಬೇಕೆಂದು ಕಂಟೋನ್ಮೆಂಟ್ ಮ್ಯುನಿಸಿಪಾಲಿಟಿಯವರು ನಿರ್ಧರಿಸಿದ್ದಾರೆ. ಈ ಶ್ರೀಮದ್ಯುವರಾಜರು ಮೈಸೂರು ದೇಶಕ್ಕೆ ದಯಮಾಡಿದಾಗ್ಗೆ ಒಟ್ಟು ೪ ದಿನಗಳು ಮಾತ್ರ ಈ ದೇಶದಲ್ಲಿರುತ್ತಾರೆ. ಅದರಲ್ಲಿ ೨ ದಿನಗಳ ಕಾಲ ರಾಜಧಾನಿಯಲ್ಲಿರುತ್ತಾರೆ.

ಕೆಲಕಾಲ ಮೈಸೂರು ಮಹಾರಾಜ ಕಾಲೇಜಿನಲ್ಲೂ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲೂ ಕನ್ನಡ ಪಂಡಿತರೂ ಮತ್ತು ವೆಸ್ಲಿಯನ್ ಮಿಷನ್ ಸಂಘದಲ್ಲಿ ಗ್ರಂಥಶೋಧಕರೂ ಆಗಿದ್ದ ವೇ|| ಬಿ. ಎಂ. ಸಿದ್ಧಲಿಂಗಶಾಸ್ತ್ರಿಗಳವರು ಕಳೆದ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಕಾಲದಲ್ಲಿ ಅರಮನೆ ಆಸ್ಥಾನ ವಿದ್ವಾಂಸರಾಗಿ ಸೇರಿಸಲ್ಪಟ್ಟರೆಂದು ತಿಳಿಯಸಲು ಸಂತೋಷಪಡುತ್ತೇವೆ. ಇವರು ಕನ್ನಡದಲ್ಲೂ ಸಂಸ್ಕೃತದಲ್ಲೂ ಒಳ್ಳೆ ಪಂಡಿತರಾಗಿರುತ್ತಾರೆ. ಇವರೂ ಸೇರಿ ಆಸ್ಥಾನದ ವಿದ್ವಾಂಸರುಗಳಲ್ಲಿ ನಾಲ್ವರು ವೀರಶೈವರಿರುವರು. ಹೀಗೆಯೇ ಅರ್ಹರಾದ ವಿದ್ವಾಂಸರುಗಳೆಲ್ಲರೂ ಸೇರಿಸಲ್ಪಡುವರಾಗಲೆಂದು ಹಾರೈಸುತ್ತೇವೆ.

ವರಮಾನದ ತೆರುಗೆಯ ಶಾಸನವು ಜುಲೈ ತಾ|| ೧೭ ರಲ್ಲಿ ಶ್ರೀಮನ್ಮಹಾರಾಜರ ಒಪ್ಪಿಗೆಯನ್ನು ಪಡೆಯಿತು. ಬರುವ ಜುಲೈ ೧ ರಿಂದ ಇದು ವ್ಯವಹಾರಕ್ಕೆ ಬರುವುದು. ಇದರ ಪ್ರಕಾರ ವರ್ಷಕ್ಕೆ ೨೪೦೦ ರೂ. ನಿಂದ ೯೦೦೦ ರೂ. ಒಳಗೆ ವರಮಾನವುಳ್ಳವರಿಂದ ರೂ. ೧ ಕ್ಕೆ ೩ ಪೈಯಂತೆಯೂ, ೯ ಸಾವಿರದ ಮೇಲೆ ೨೫ ಸಾವಿರದೊಳಗೆ ವರಮಾನವುಳ್ಳವರಿಂದ ರೂ. ಗೆ ೪|| ಪೈಯಂತೆಯೂ, ೨೫ ಸಾವಿರದಿಂದದ ೫೦ ಸಾವಿರದ ವರೆಗೆ ವರಮಾನವುಳ್ಳವರಿಂದ ರೂ. ಗೆ ೬ ಪೈಯಂತೆಯೂ, ೫೦ ರಿಂದ ೭೫ ಸಾವಿರದ ವರೆಗೆ ವರಮಾನವುಳ್ಳವರಿಂದ ರೂ. ಗೆ ೯ ಪೈಯಂತೆಯೂ, ೭೫ ಸಾವಿರಕ್ಕೆ ಮೇಲ್ಪಟ್ಟ ವರಮಾನವುಳ್ಳವರಿಂದೆಲ್ಲಾ ರೂ. ಗೆ ೧ ಆಣೆಯಂತೆಯೂ ತೆರುಗೆಯು ಎತ್ತಲ್ಪಡುವುದು. ವರ್ಷಕ್ಕೆ ೨೪೦೦ ರೂ. ಗೆ ಒಳಪಟ್ಟ ವರಮಾನವುಳ್ಳವರಿಗೆ ಈ ತೆರುಗೆಯಿಲ್ಲ. ಮೈಸೂರು ದೇಶದಲ್ಲಿರುವ ಹೊರದೇಶಗಳ ಕಂಪೆನಿಗಳವರು ಕೂಡ ಈ ತೆರುಗೆಯನ್ನು ಕೊಡಬೇಕು.

ಬಡವರಾದ ರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರೆಯುವುದಕ್ಕಾಗಿ ಡಿಸ್ಟ್ರಿಕ್ಟ್ ಆಸ್ಪತ್ರೆಗಳಿಗೆ ಕಳುಹಿಸಿಕೊಡುವುದಕ್ಕಾಗಿ ತಾಲ್ಲೂಕು ಬೋರ್ಡಿನವರು ವರ್ಷಕ್ಕೆ ೧೦ ರೂ. ಗಳ ವರೆಗೂ ಡಿಸ್ಟ್ರಿಕ್ಟು ಆಸ್ಪತ್ರೆಗಳಿಂದ ಬೆಂಗಳೂರು ಮೈಸೂರುಗಳಲ್ಲಿರುವ ದೊಡ್ಡ ಆಸ್ಪತ್ರೆಗಳಿಗೆ ರೋಗಿಗಳನ್ನು ಕಳುಹಿಸಿಕೊಡುವುದಕ್ಕೆ ವರ್ಷಕ್ಕೆ ಆಯಾ ಡಿಸ್ಟ್ರಿಕ್ಟ್ ಆಸ್ಪತ್ರೆಗಳವರು ೨೫ ರೂ. ಗಳವರೆಗೂ, ಬೆಂಗಳೂರು ಮೈಸೂರು ದೊಡ್ಡ ಆಸ್ಪತ್ರೆಗಳವರೂ ಮತ್ತು ಮಿಂಟೋ ಕಣ್ಣಾಸ್ಪತ್ರೆಯವರೂ ಸಹ ತಮ್ಮಲ್ಲಿಗೆ ಚಿಕಿತ್ಸೆಗೆ ಬಂದಿದ್ದ ಬಡ ರೋಗಿಗಳನ್ನು ಅವರವರ ಊರುಗಳಿಗೆ ಹಿಂದಿರುಗಿ ಕಳುಹಿಸಿಕೊಡುವ ಬಗೆಗೆ ವರ್ಷಕ್ಕೆ ೫೦ ರೂ. ಗಳವರೆಗೂ ವೆಚ್ಚಮಾಡಬಹುದೆಂದು ಸರ್ಕಾರದಪ್ಪಣೆಯಾಗಿದೆ. ಈ ಅಪ್ಪಣೆಯು ತಾಲ್ಲೂಕುವಾರು ಗ್ರಾಮಾಂತರಗಳ ಬಡಜನರಿಗೆ ಗೊತ್ತಿಲ್ಲ. ಗ್ರಾಮೋದ್ಯೋಗಿಗಳು ತಿಳಿಯಪಡಿಸಬೇಕು. ಗೊತ್ತಾದರೆ ನಿವಾರಣೀಯವಾದ ರೋಗಗಳಿಂದ ಮೃತ್ಯುವಶರಾಗುತ್ತಿರುವ ಅನೇಕ ಜನರು ಈ ಸಹಾಯವನ್ನು ಉಪಯೋಗಿಸಿಕೊಂಡು ಬದುಕಬಹುದು. ಸಹಾಯವನ್ನು ಕೋರುವವರ ಸಂಖ್ಯೆಯು ಹೆಚ್ಚಾದರೆ ಸರ್ಕಾರದವರೂ ಕೂಡ ಈ ಸಹಾಯದ್ರವ್ಯವನ್ನು ಹೆಚ್ಚಿಸಿಕೊಟ್ಟಾರು.

ಭರತಖಂಡದ ವೃತ್ತಾಂತಗಳು.

ಭರತಖಂಡದ ನಾರ್ತ್ ವೆಸ್ಟ್ ರೈಲ್ವೆಯ ಕೆಲಸಗಾರರು ಕಂಪೆನಿಯವರು ಕೊಟ್ಟಿದ್ದ ಬರವಸೆಯಂತೆ ಕೆಲಸಕ್ಕೆ ಸೇರಿದ್ದು ತಮ್ಮಲ್ಲಿ ೭ ಮಂದಿಯನ್ನು ತೆಗೆದು ಹಾಕಿಬಿಟ್ಟುದರಿಂದ ಮತ್ತೆ ೧೬ ಸಾವಿರ ಜನರು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ.

ಪದೇಪದೆ ಹಲವುಕಡೆ ಕೂಲಿಕಾರರು ಕೆಲಸಬಿಟ್ಟು ಮುಷ್ಕರ ಹಿಡಿದು ನಿಲ್ಲುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸಬೇಕೆಂದು ಮದ್ರಾಸು ವಾಣಿಜ್ಯ ಸಂಘದವರೂ ಕೈಗಾರಿಕೆಯ ಯಜಮಾನರೂ ನಿಶ್ಚಯಿಸಿರುವರು.

ಸೀಮೆಯಿಂದ ಭರತಖಂಡಕ್ಕೆ ಬರುವ ಅಂಚೆಯೆಲ್ಲಾ ಇನ್ನುಮುಂದೆ ಬೊಂಬಾಯಿಗೆ ಪ್ರತಿ ಸೋಮವಾರದ ದಿವಸವೇ ಬಂದು ಸೇರುವಂತೆ ಏರ್ಪಡಿಸುವವರಾಗಿದ್ದಾರೆ. ಅಲ್ಲಿಂದ ಬಂದ ಅಂಚೆಯು ಪ್ರತಿ ಬುಧವಾರ ಮದ್ರಾಸಿನಲ್ಲಿ ಕೊಡಲ್ಪಡುವುದು. ಇವಕ್ಕೆ ಹಿಂದೆ ಅಂಚೆಯ ಹಡಗು ಯಾವ ದಿನ ಬರುವುದೆಂಬುದು ಗೊತ್ತೇ ಇರುತ್ತಿರಲಿಲ್ಲ.

ಸದ್ಯದ ರಾಜಕೀಯ ವಿಷಯಗಳನ್ನು ಕುರಿತು ಪರ್ಯಾಲೋಚಿಸಲಿಕ್ಕೆ ಒಂದು ಪ್ರತ್ಯೇಕ ರಾಷ್ಟ್ರೀಯ ಮಹಾಸಭೆಯನ್ನು ಕೂಡಿಸಬೇಕೆಂದು ಕಾಂಗ್ರೆಸ್ ಸ್ಥಾಯಿ ಸಂಘದವರು ಕಾಶಿಯಲ್ಲಿ ನಿರ್ಧರಿಸಿರುವಷ್ಟೆ. ಅದರಂತೆ ಆ ಮಹಾಸಭೆಯು ಬರುವ ಆಕ್ಟೋಬರ್ ತಿಂಗಳೊಳಗಾಗಿ ಗಂಜಾಂ ಜಿಲ್ಲೆಗೆ ಸೇರಿದ ಬರ್ಹಾಂಪುರದಲ್ಲಿ ಕೂಡುವುದೆಂದು ನಿಶ್ಚಯವಾಗಿದೆ.

ಸೀಮೆಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರ ಆಫೀಸಿನ ವೆಚ್ಚದ ಭಾರವನ್ನೆಲ್ಲಾ ಭರತಖಂಡವೇ ಹೊತ್ತಿದ್ದಿತು. ಅದನ್ನು ಸಾಮ್ರಾಜ್ಯಸರ್ಕಾರವು ವಹಿಸಿಕೊಳ್ಳಬೇಕೆಂದು ಭಾರತೀಯರು ಕೇಳಿಕೊಳ್ಳುತ್ತಿದ್ದರು. ಬರುವ ಸರ್ಕಾರಿ ವರ್ಷದಿಂದಲೂ ಆ ಆಫೀಸಿನ ವೆಚ್ಚದಲ್ಲಿ ೨೩೬೫೦೦ ಪೌನುಗಳನ್ನು ತಾವು ವಹಿಸಿಕೊಳ್ಳುತ್ತೇವೆಂದು ಸಾಮ್ರಾಜ್ಯ ಸರ್ಕಾರದವರು ಹೇಳಿದ್ದಾರೆ.

ವಾಯುವ್ಯದ ಸರ್ಹದ್ದು ಪ್ರಾಂತದಲ್ಲಿ ತಂಟೆಮಾಡುತ್ತಿದ್ದ ಜನರಲ್ಲಿ ಮಹಸೂದ್‌ಜನರು ೧೮೯ ಗೌರ್ನಮೆಂಟ್ ಟಿಕ್ಕ ತುಪಾಕಿಗಳನ್ನು, ೨೫೦ ಟ್ರೈಬಲ್ ತುಪಾಕಿಗಳನ್ನೂ ೮೬೬೨ ರೂ. ಅರ್ಥದಂಡವನ್ನೂ ಆಂಗ್ಲೇಯರಿಗೆ ಒಪ್ಪಿಸಿದರು. ಅವರಲ್ಲಿ $\frac{1}{3}$ ಭಾಗ ಜನರು ನಮ್ಮವರು ಹೇಳಿದ ನಿಬಂಧನೆಗೆ ಒಪ್ಪಿಕೊಂಡರು. ಮಲ್ಲಿಕ್‌ಹುಸೇನನ ಒಕ್ಕಲಿನವರು ಹೊರತು ಅಬ್ದುಲ್ಲಾ ಪಕ್ಷದ ಮಲ್ಲಿಕ್ಕರೆಲ್ಲಾ ಸಂಧಿಮಾಡಿಕೊಳ್ಳುತ್ತೇವೆಂದು ತಂತೀವಾರ್ತೆ ಕೊಟ್ಟಿದ್ದಾರೆ.

ಕಾಥೆವಾಡಿಯ ಒಡೆ ವಿಪರೀತವಾದ ಬಿರುಗಾಳಿಯು ಬೀಸಿ ಕಡೆಗೆ ತುಂಬ ವೃಷ್ಟಿಯು ಸುರಿದಿತು. ಅದರಿಂದ ಅಪಾರವಾದ ನಷ್ಟವಾಯಿತು. ಊರುಕೇರಿ ಕಾಡುಗಳೆಲ್ಲಾ ನೀರು ಪ್ರವಾಹವಾಗಿ ಹರಿದಿತು. ಮನೆಯ ಮೇಲಿನ ಹಂದರಗಳೆಲ್ಲಾ ಎಲೆಯಂತೆ ಹಾರಿಹೋದುವು. ತಂತಿಕಂಬಗಳು ಉರುಳಿದುವು. ಅಂಚೆಯೂ ತಂತೀವಾರ್ತೆಗಳೂ ನಿಂತುಹೋದುವು. ರೈಲು ಬಂಡಿಗಳ ತಿರುಗಾಟವು ಸ್ವಲ್ಪ ಕಾಲ ನಿಂತುಹೋಯಿತು. ಎಲ್ಲೆಲ್ಲೂ ಮರಗಳು ಬುಡಕಿತ್ತು ಉರುಳಿದುವು. ಹಲವು ಸಾವಿರ ದನಕರುಗಳು ಸತ್ತವು.

ಬಿಶೋದಾಸ್ ಬಿಹಾರಿದಾಸ್ ಎಂಬ ಒಬ್ಬ ಅಲಿಪೂರಿನ ವರ್ತಕನು ತನ್ನ ಅಂಗಡಿ ಬಾಗಿಲನ್ನು ಹಾಕಿಕೊಂಡು ರಾತ್ರಿ ೯ ಗಂಟೆಯಲ್ಲಿ ತನ್ನ ಮನೆಗೆ ಹೋಗುತ್ತಿರುವಲ್ಲಿ ದಂಡಂಕಂಟೋನ್ಮೆಂಟಿನ ಹತ್ತಿರ ೫ ಮಂದಿಗಳು ಬಂದು ಆತನ ಮೇಲೆ ಬಿದ್ದು ಹೊಡೆದು ಕೊಂದು ಅವನಲ್ಲಿದ್ದ ಬೀಗದ ಕೈಯನ್ನು ತೆಗೆದುಕೊಂಡು ವಾಪಿಗೆ ಹೋಗಿ ಬೀಗವನ್ನು ತೆರೆದು ಒಳಗಿದ್ದ ೨೦ ಸಾವಿರ ರೂ. ಗಳನ್ನೂ ಕೆಲವು ನಗಗಳನ್ನೂ ಅಪಹರಿಸಿಕೊಂಡು ಹೋದರು. ಪೊಲೀಸರು ಕಳ್ಳರನ್ನು ತಡಕುತ್ತಿದ್ದಾರೆ.

ಭರತಖಂಡದ ಸರ್ಕಾರದವರು ಸೇಕಡಾ ೬-೫ ರೂ. ಗಳ ಬಡ್ಡಿಯ ಮೇರೆ ಬರುವ ಜುಲೈ ತಾ|| ೫ ರಿಂದ ಆಗಸ್ಟ್ ತಾ|| ೧೪ ರ ವರೆಗೆ ಸಾಲ ತೆಗೆಯುವರು. ಹಿಂದೆ ಯುದ್ಧ ಋಣದ ಪತ್ರವನ್ನು ಕೊಂಡು ೧೯೨೦-೨೧ ೨೨-೨೩ ವರ್ಷಗಳಲ್ಲಿ ಹಣವನ್ನು ಮರಳಿ ವಾಪಸ್ ಪಡೆಯಲು ಗೊತ್ತುಮಾಡಿಕೊಂಡು ಸಾಲಕೊಟ್ಟಿದ್ದವರು ಕೊಡಬೇಕಾಗಿದ್ದರೆ ಅವನ್ನು ಮುಂದೆ ೧೯೪೫-೧೯೫೦ ವರ್ಷಗಳ ಮಧ್ಯೆ ವಾಪಸ್ ಪಡೆಯುವ ಪತ್ರಗಳ ರೂಪದಲ್ಲಿ ಬದಲಾಯಿಸಿಕೊಳ್ಳಬಹುದೆಂದೂ ಅವಕಾಶ ಕೊಟ್ಟಿರುವರು.

ಪಂಜಾಬು ಮೇಲುಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಟಫನಲ್ ಎಂಬ ಯೂರೋಪ್ಯರನ್ನು ಯಾರೋ ಬಂಡಿಯಲ್ಲೇ ಕೊಲೆ ಮಾಡಿದರಷ್ಟೆ. ೧೦ ಸಾವಿರ ರೂ. ಬಹುಮಾನ ಕೊಡುತ್ತೇವೆಂದು ಪ್ರಕಟಮಾಡಿದ್ದರೂ ಕೊಲೆಪಾತಕನು ಇನ್ನೂ ಸಿಕ್ಕಿಲ್ಲ. ಆ ಹತ್ಯವನ್ನು ಪೊಲೀಸರು ವಿಚಾರಣೆ ಮಾಡಿದುದರಲ್ಲಿ ಅವರಿಗೆ ತೋರಿಬಂದ ವಿಷಯವನ್ನು ಪ್ರಕಟಿಸಿದ್ದಾರೆ. ಅದರ ಪ್ರಕಾರಕ್ಕೆ ಕೊಲೆಯು ಈರ್ಷ್ಯಾಸೂಯೆಯಿಂದ ನಡೆದುದಾಗಿಲ್ಲವೆಂದೂ ಅವನಲ್ಲಿದ್ದ ಹಣವನ್ನು ಕಳುವುದಕ್ಕಾಗಿಯೇ ಯಾವನೋ ದುಷ್ಟನು ಬಂಡಿ ಹೋಗುತ್ತಿರುವಾಗ ಕಿಟಕಿಯ ಹೊರಗೆ ನಿಂತು ಹೊಡೆದು ಬೀಳಿಸಿ ಬಳಿಕ ಒಳನುಗ್ಗಿ ಹೋರಾಡಿ ಕೊಂದಿರುವನೆಂದು ಗೊತ್ತಾಗುತ್ತದೆ.

ಫಿಂಡ್ಲೆ ಷಿ ಕ್ರಾಸ್ ಎಂಬುವವರು ರಾಯಲ್ ಸ್ಟಾಟಿಸ್ಟಿಕಲ್ ಸೊಸೈಟಿಯವರ ಇದಿರಿಗೆ ಯುದ್ಧದಿಂದ ಚಿನ್ನ ಬೆಳ್ಳಿಗಳ ಬೆಲೆಯು ಎಷ್ಟು ತಾರುಮಾರಾಯಿತೆಂಬುದನ್ನು ಕುರಿತು ಒಂದು ಉಪನ್ಯಾಸ ಮಾಡುವಾಗ್ಗೆ ಭರತಖಂಡವು ಕಳೆದ ೨೫ ವರ್ಷಗಳ ಕಾಲದಲ್ಲಿ ೨,೧೪,೭೭,೦೦೦ ಸವರನ್ ಭಂಗಾರವನ್ನು ಉಪಯೋಗಿಸಿಕೊಂಡಿದೆಯೆಂತಲೂ ಈಗ ಭರತಖಂಡದೊಳಗೆ ೯,೪೦,೦೦,೦೦೦ ಸವರನ್ನುಗಳ ಭಂಗಾರವು ಉಳಿದಿದೆಯೆಂತಲೂ ಈಗ ಹಿಂದುಸ್ಥಾನಕ್ಕೆ ಮುಖ್ಯವಾಗಿ ಬೇಕಾಗಿರುವುದು ವಿದ್ಯೆ ಧನಸಹಾಯ ಯಾನ ಸೌಕರ್ಯಗಳು. ಇವು ಮೂರನ್ನು ಸಂಪಡಿಸುವುದಕ್ಕಾಗಿ ಹೆಚ್ಚು ಭಂಗಾರವು ಆ ದೇಶಕ್ಕೆ ಒದಗಿದಲ್ಲದೆ ತೀರದು ಎಂತಲೂ ಹೇಳಿರುವರು.

ಪಂಜಾಬಿನ ಹತ್ಯೆಯಿಂದ ಸುಪ್ರಸಿದ್ಧನಾಗಿರುವ ಜನರಲ್ ಡಯರ್ ಸೇನಾನಿಯ ಕೇಸಿನ ವಿಚಾರಣೆಯನ್ನು ಸೀಮೆಯಲ್ಲಿ ಮಾಡುತ್ತಿದ್ದ ಸೈನಿಕ ಸಂಘದವರು ಆತನು ನಿರ್ದೋಷಿಯೆಂದು ತೀರ್ಮಾನಿಸಿದರಂತೆ. ಸ್ವದೇಶ ಸಂಸ್ಥಾನದಲ್ಲಿ ಉನ್ನತೋದ್ಯೋಗದಲ್ಲಿರುವ ಒಬ್ಬ ದೊಡ್ಡ ಹಿಂದೂ ಕುಟುಂಬಿಯು ಹಂಟರ್‌ಸಂಘದ ವರದಿಯನ್ನೆಲ್ಲಾ ತಾನು ಚೆನ್ನಾಗಿ ಓದಿದನೆಂದೂ ರಾಜದ್ರೋಹಬುದ್ಧಿಯು ಪಂಜಾಬು ಪ್ರಜೆಗಳಲ್ಲಿ ನಾಟಿಕೊಂಡಿದ್ದರಿಂದ ಅವರು ಪ್ರಭುತ್ವದ ಮೇಲೆ ತಿರುಗಿಬಿದ್ದರೆಂದೂ, ಸರ್ ಒಡ್ವಯರ್‌ರವರೂ ಜನರಲ್ ಡಯರ್‌ರವರೂ ಧೈರ್ಯಮಾಡದಿದ್ದರೆ ೧೮೫೭ ನೆ ವರ್ಷದಲ್ಲಿ ಭರತಖಂಡದಲ್ಲಿ ಉಂಟಾಗಿದ್ದ ಅಲ್ಲಕಲ್ಲೋಲವೇ ಮರಳಿ ಉಂಟಾಗುತ್ತಿದ್ದಿತೆಂತಲೂ, ೧೮೫೭ ನೆ ವರ್ಷದಲ್ಲಿ ಸರ್ ಒಡ್ವಯರ್‌ರಂಥವರು ಅಧಿಕಾರದಲ್ಲಿಲ್ಲದಿದ್ದುದರಿಂದಲೇ ಅಷ್ಟು ಅನರ್ಥವಾಯಿತೆಂತಲೂ ಪಯೋನಿಯರ್ ಪತ್ರಿಕೆಗೆ ಬರೆದಿದ್ದಾನಂತೆ.

ಭಂಗಾರವನ್ನೂ ವಿದೇಶದ ನಾಣ್ಯಗಳನ್ನೂ ಅನ್ಯ ದೇಶಗಳಿಂದ ಭರತಖಂಡಕ್ಕೆ ತರಿಸಿಕೊಳ್ಳುವ ವಿಷಯದಲ್ಲಿ ಏರ್ಪಟ್ಟಿದ್ದ ನಿರ್ಬಂಧವನ್ನು ಜೂನ್ ತಾ|| ೨೧ ರಿಂದ ತೆಗೆದು ಹಾಕಿಬಿಡುವೆವೆಂತಲೂ, ೧ ಮತ್ತು ½ ಸೌರನ್ನುಗಳನ್ನು ಲೀಗಲ್‌ಟೆಂಡರು ಮೂಲಕ ಕೊಡುತ್ತಿದ್ದುದನ್ನು ಇನ್ನು ಕೆಲಕಾಲದವರೆಗೆ ತಪ್ಪಿಸಿಬಿಡುವ ವಿಷಯದಲ್ಲಿ ಪ್ರತ್ಯೇಕ ಪ್ರಕಟನೆ ಮಾಡುವೆವೆಂತಲೂ, ಜುಲೈ ತಾ|| ೧೨ ರ ವರೆಗೆ ಯಾರು ತಂದುಕೊಟ್ಟರೂ ಸೌರನ್ ೧ ಕ್ಕೆ ೧೫ ರೂ. ನಂತೆ ಸರ್ಕಾರದವರು ತೆಗೆದುಕೊಳ್ಳುವರೆಂತಲೂ, ಆ ತಾರೀಖಿನ ನಂತರ ಇಂಗ್ಲೀಷ್ ಭಂಗಾರದ ನಾಣ್ಯಗಳನ್ನು ಹೊರದೇಶಗಳಿಂದ ಯಾರು ಬೇಕಿದ್ದರೂ ಸ್ವತಂತ್ರವಾಗಿ ತರಿಸಿಕೊಳ್ಳಬಹುದೆಂತಲೂ ಸೌರನ್ ಬೆಲೆಯು ೧೦ ರೂ. ಗಳಾಗಿರಬೇಕೆಂಬ ವಿಷಯಕ್ಕೆ ಒಂದು ಬಿಲ್ಲನ್ನು ಬರುವ ಸಾಮ್ರಾಜ್ಯ ಶಾಸನ ಸಭೆಗೆ ತರುವೆವೆಂತಲೂ ಸರ್ಕಾರದವರು ಪ್ರಕಟಿಸಿದ್ದಾರೆ. ಮತ್ತು ಜೂನ್ ತಾ|| ೨೩ ರಿಂದಾಚೆಗೆ ತಾವು ಮಾರುವ ಭಂಗಾರಕ್ಕೆ ಸವರನ್ ೧ ಕ್ಕೆ ೧೦ ರೂ. ಬೆಲೆಯಂತೆ ತೊಲಕ್ಕೆ ಆಗುವ ೧೫-೧೪-೧೦ ಕ್ಕೆ ಕಡಿಮೆಯಿಲ್ಲದ ಟೆಂಡರುಗಳನ್ನು ಅಂಗೀಕರಿಸುವೆವೆಂತಲೂ ತಿಳಿಸಿರುತ್ತಾರೆ. ಇದರಿಂದ ಚಿನ್ನದ ಬೆಲೆಯು ಬಲು ಬೇಗನೆ ಇಳಿದು ಹೋಗುವುದರಲ್ಲಿ ಸಂಶಯವಿಲ್ಲ.

ವಿದೇಶ ವೃತ್ತಾಂತಗಳು.

ಜರ್ಮನಿಯಲ್ಲಿ ನೂತನ ಮಂತ್ರಿವರ್ಗವು ಏರ್ಪಡಬೇಕಾಗಿದೆ. ಹಿಂದೆ ಇದ್ದ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟಿತು.

ಅಮೇರಿಕಾದಲ್ಲಿ ಸಕ್ಕರೆಗೆ ಕ್ಷಾಮ ಬಂದಿರುವುದರಿಂದ ಆ ದೇಶದಿಂದ ಹೊರಕ್ಕೆ ಯಾರೂ ಸಕ್ಕರೆಯನ್ನು ಸಾಗಿಸಲಾಗದೆಂದು ಕಟ್ಟುಮಾಡಿದ್ದಾರೆ.

ಸ್ಕಾಟ್ಲೆಂಡ್ ದೇಶದ ಅಬ್ರಡೀನ್ ಜಿಲ್ಲೆಯಲ್ಲಿ ೨ ಸಾವಿರ ಚದರಮೈಲಿಯ ಕಾಡಿಗೆ ಬೆಂಕಿ ಬಿದ್ದು ಅಪಾರ ನಷ್ಟವಾಯಿತು. ಕಾಡಿನಲ್ಲಿ ಅನೇಕ ಕೋಟ್ಯಂತರ ಜಂಕೆ ಮೊದಲಾದವುಗಳು ಸುಟ್ಟು ಭಸ್ಮವಾದುವು.

ಯುದ್ಧಕಾಲದಲ್ಲಿ ಇಂಗ್ಲೀಷರು ಫ್ರಾನ್ಸಿಗೆ ತೆಗೆದುಕೊಂಡುಹೋಗಿ ಅಲ್ಲಿ ಉಳಿದಿದ್ದ ಮದ್ದುಗುಂಡು ಮೊದಲಾದ ಸಾಮಾನುಗಳನ್ನು ಒಂದು ಇಂಗ್ಲೀಷ್ ಫ್ರೆಂಚ್ ಕಂಪೆನಿಯು ೨೦ ಲಕ್ಷ ಪೌನುಗಳಿಗೆ ಕೊಂಡುಕೊಂಡಿತು.

ತುರ್ಕಿಯ ಪ್ರತಿನಿಧಿಯಾದ ಮುಖ್ಯಮಂತ್ರಿಯು ವರ್ಸಲೀಸ್ ಪಟ್ಟಣಕ್ಕೆ ಬಂದು ಸಂಧಿಪತ್ರದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಇನ್ನಷ್ಟು ಕಾಲವನ್ನು ಹೆಚ್ಚಿಸಿಕೊಡಬೇಕೆಂದು ಸಂಧಿಸಭೆಯವರನ್ನು ಕೇಳಿಕೊಂಡಿರುವರಂತೆ.

ಈ ೧೯೨೦-೨೧ ನೆ ವರ್ಷದಲ್ಲಿ ಇಂಗ್ಲೀಷರ ಸೈನ್ಯವು ಈ ಕೆಳಗೆ ಕಂಡ ಪ್ರಕಾರ ಆಯಾಭಾಗದಲ್ಲಿರತಕ್ಕುದೆಂದು ನಿರ್ಣಯಿಸಲ್ಪಟ್ಟಿದೆ. ಟೆಂಟೋರಿಯಲ್ ಸೈನ್ಯ ೨,೩೬,೦೦೦ ಯುದ್ಧಕ್ಕೆ ಅಣಿಯಾಗಿರುವುದು ೩,೮೧,೦೦೦ ಬ್ರಿಟನ್ನಿನಲ್ಲಿ ೧೫,೦೦೦ ಜರ್ಮನಿಗೆ ಸೇರಿದ ರೈನ್ ನದೀ ಪ್ರಾಂತದಲ್ಲಿ ೧೬,೦೦೦ ಕಾನ್ಸ್ಟಾಂಟಿನೋಪಲ್ಲಿನಲ್ಲಿ ೨೧,೦೦೦ ಈಜಿಪ್ಟಿನಲ್ಲಿ ೩೦,೦೦೦ ಪಾಲಸ್ತೈನಿನಲ್ಲಿ ೨೨,೦೦೦ ಮೆಸಪೊಟೇಮಿಯಾದಲ್ಲಿ ೬೦,೦೦೦.

ಇದುವರೆಗೆ ತಂತಿಯಿಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಾರ್ತೆಗಳನ್ನು ಕಳುಹಿಸುವರೆಂಬ ಸುದ್ದಿಯನ್ನು ನಾವು ಕೇಳುತ್ತಿದ್ದೆವು. ಈಗಲಾದರೋ ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಯಂತ್ರಸಾಧನದ ಮೂಲಕ ಒಂದು ಕಡೆಯಲ್ಲಿ ಯಾರಾದರೂ ಹಾಡಿದರೆ ಎಷ್ಟೋ ದೂರದಲ್ಲಿರುವವರು ಅದನ್ನು ಕೇಳುವುದು ಸಾಧ್ಯವೆಂದು ಗೊತ್ತಾಗಿದೆ. ಮಾಡಂ ಮೆಲ್ಬಾ ಎಂಬುವಳು ಇಂಗ್ಲೆಂಡಿಗೆ ಸೇರಿದ ಚೆಲಮ್ಸ್‌ಫರ್ಡ್ ಎಂಬ ಗ್ರಾಮದಲ್ಲಿ ಕಳೆದ ತಾ|| ೧೫ ರಲ್ಲಿ ಕುಳಿತು ತಂತಿಯಿಲ್ಲದ ಟೆಲಿಫೋನಿನಲ್ಲಿ ಹಾಡಲಾಗಿ ಜರ್ಮನಿಗೆ ಸೇರಿದ ಬರ್ಲಿನ್ ಮೊದಲಾದ ಪಟ್ಟಣಗಳ ನಿವಾಸಿಗಳು ಆ ಹಾಡುಗಾರಿಕೆಯನ್ನು ಏಕಕಾಲದಲ್ಲಿ ಕೇಳಿದರು. ಅದೇ ಕಾಲದಲ್ಲಿ ಪ್ಯಾರಿಸ್ ಪಟ್ಟಣದವರು ಅದೇ ಹಾಡುಗಾರಿಕೆಯನ್ನು ಫೋನೋಗ್ರಾಫ್ ರಿಕಾರ್ಡಾಗಿ ಹಿಡಿದುಕೊಂಡಿರುವರು ಒಂದು ಖಂಡದಲ್ಲಿ ಕುಳಿತು ಹಾಡಿದರೆ ಬೇರೆ ಖಂಡದವರು ಕೂಡ ಆ ಸಂಗೀತವನ್ನು ಇನ್ನುಮೇಲೆ ಕೇಳಬಹುದು.

ಐರ್ಲೆಂಡಿನ ಅವಸ್ಥೆಯು ಭೀಕರವಾಗುತ್ತಲಿದೆ. ತಮಗೆ ಹೋಂರೂಲು ದೊರೆತರೆ ಸಾಕೆಂದು ಕೋರುತ್ತಿದ್ದ ಅಲ್ಲಿನ ಜನರು ಈಗ ತಮಗೆ ರಿಪಬ್ಲಿಕ್ ಎಂದರೆ ಸಂಪೂರ್ಣ ಸ್ವತಂತ್ರ ಪ್ರಜಾಪ್ರಭುತ್ವವಾಗಬೇಕೆಂದು ಸಂಕಲ್ಪಿಸಿಕೊಂಡಿದ್ದಾರೆ. ಆಂಗ್ಲ ಪ್ರಭುತ್ವದವರು ಅದಕ್ಕೆ ಒಪ್ಪುವುದಿಲ್ಲ. ಅದರಿಂದ ಐರ್ಲೆಂಡ್ ಕೆಥೋಲಿಕ್ ಪ್ರಜೆಗಳು ಪೋಲೀಸರ ಮೇಲೂ ಸೈನಿಕರ ಮೇಲೂ ಕೈಮಾಡಿ ಕೊಲ್ಲುವುದು, ಸರ್ಕಾರಿ ಕಾರ್ಯಾಲಯಗಳನ್ನು ಸುಡುವುದು, ಬೊಕ್ಕಸಗಳನ್ನು ದೋಚಿಕೊಳ್ಳುವುದು ಇತ್ಯಾದಿ ರಾಕ್ಷಸ ಕೃತ್ಯಗಳನ್ನು ಮಾಡುತ್ತಿದ್ದಾರೆ. ಇವರನ್ನು ಸಾಮೋಪಾಯದಿಂದ ವಶಪಡಿಸಿಕೊಳ್ಳುವುದು ಅಸಾಧ್ಯವಾದುದರಿಂದ ಸರ್ಕಾರದವರು ಸೈನ್ಯವನ್ನು ಹೆಚ್ಚಾಗಿ ಕಳುಹಿಸಿ ಅದರ ಬೆದರಿಕೆಯಿಂದ ವಶಪಡಿಸಿಕೊಳ್ಳಲು ಉದ್ದೇಶಿಸಿರುತ್ತಾರೆ. ಹೀಗೆ ಅಲ್ಲಿಗೆ ಹೋಗುವ ಸೈನ್ಯವನ್ನು ಹೊಗೆ ಬಂಡಿಯ ಮೇಲೆ ಸಾಗಿಸುವುದಿಲ್ಲವೆಂದು ಐರ್ಲೆಂಡಿನ ರೈಲ್ವೆ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ. "ನೀವು ಸೈನ್ಯವನ್ನೂ ಮದ್ದುಗುಂಡು ಮೊದಲಾದುವುಗಳನ್ನೂ ಐರ್ಲೆಂಡಿಗೆ ಕಳುಹಿಸುವುದನ್ನು ನಿಲ್ಲಿಸಿಬಿಟ್ಟರೆ ಐರ್ಲೆಂಡಿನ ಕ್ರೌರ್ಯವನ್ನೆಲ್ಲಾ ನಿಲ್ಲಿಸಿಬಿಡಬೇಕೆಂದು ರೈಲ್ವೆಕೆಲಸಗಾರರು ಐರ್ಲೆಂಡ್ ಪ್ರಜೆಗಳನ್ನು ಕೋರಿಕೊಳ್ಳುವರು" ಎಂಬುದಾಗಿ ರೈಲ್ವೆಕೆಲಸಗಾರರ ಮುಖ್ಯಸ್ಥರಾದ ಥಾಮಸ್‌ರವರು ಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರಲ್ಲಿ ಹೇಳಿಕೊಳ್ಳಲು, ಅದಕ್ಕೆ ತಾವು ಒಪ್ಪುವುದಿಲ್ಲವೆಂದು ಮಂತ್ರಿಯವರು ಹೇಳಿದರು. ಮತ್ತೆ ನಮ್ಮ ಸೈನ್ಯವನ್ನೂ ಮದ್ದುಗುಂಡುಗಳನ್ನೂ ಸಾಗಿಸುವುದಿಲ್ಲವೆಂದು ರೈಲ್ವೆಕೆಲಸಗಾರರು ನಿರಾಕರಿಸಿದ ಪಕ್ಷದಲ್ಲಿ ಸರ್ಕಾರದವರು ಐರ್ಲೆಂಡ್ ಲೋಹಮಾರ್ಗಗಳನ್ನೆಲ್ಲಾ ಮುಚ್ಚಿಬಿಡುವರು ಎಂತಲೂ ಹೇಳಿದರು. ಹಾಗಾದರೆ ಮುಂದಿನ ಸ್ಥಿತಿಯು ಬಹಳ ವಿಷಮವಾಗುವುದು ಎಂದು ಥಾಮಸ್‌ರವರು ಉತ್ತರ ಕೊಟ್ಟರು. ಈ ವೀರಾವೇಶಗಳನ್ನು ನೋಡಿದರೆ ಐರ್ಲೆಂಡ್ ಸಮಸ್ಯೆಯು ಮುಂದೆ ಬಹಳ ಭೀಕರವಾಗುವುದೇ ನಿಜವೆಂದು ಕಾಣುತ್ತದೆ.

ಪತ್ರವ್ಯವಹಾರ.

ಗುರುವರ್ಗ ವಿರಕ್ತಮೀಮಾಂಸೆ, ಮತ್ತು ಸಮಾಜವು

(ಲೇಖಕ ಚಂದ್ರಕಾಂತ ಬಿ. ಎ.)

ನಮ್ಮ ಭರತಖಂಡವೆಂಬುದು ಅನೇಕ ಧರ್ಮ ಜಾತಿ ಪಂಥಗಳ ಆಗರವಿರುತ್ತದೆ. ಆಯಾ ಧರ್ಮದವರು, ಆಯಾ ಜಾತಿಯವರು, ಆಯಾ ಪಂಥದವರು, ಆಯಾ ಪಂಗಡದವರು ತಮ್ಮ ತಮ್ಮ ದೃಷ್ಟಿಗೆ ಸರಿಯಾದ ಆಚಾರವಿಚಾರಗಳನ್ನೂ ಶಾಸ್ತ್ರೀಯ ದೃಷ್ಟಿಯಿಂದ ಒಪ್ಪಬಹುದಾದ ಧಾರ್ಮಿಕ ನಿಬಂಧನೆಗಳನ್ನೂ ಕಾಯ್ದುಕೊಂಡು ಸುವ್ಯವಸ್ಥೆಯಿಂದ ನಡೆಯಬೇಕಾದರೆ ಅವರವರು ತಮಗೆ ಹೊಳೆದ ಶಕ್ಯವಿದ್ದಮಟ್ಟಿಗೆ ಏರ್ಪಾಡುಗಳನ್ನು ಮಾಡಿರಬಹುದು. ಇಂಥ ಉತ್ತಮರೀತಿಯ ವ್ಯವಸ್ಥೆಯನ್ನು ಮಾಡಿಕೊಂಡವರಲ್ಲಿ ವೀರಶೈವ ಸಮಾಜವು ಒಂದಾಗಿದೆಯೆಂದು ಕೈಯೆತ್ತಿ ಹೇಳಬಹುದು. ಈಗಿನ ಸರಕಾರವು ತನ್ನ ಆಡಳಿತೆಯು ಸರಿಯಾಗಿ ನಡೆಯಬೇಕಾದರೆ ದೇಶವನ್ನು ಅನೇಕ ಪ್ರಾಂತವಾಗಿ ವಿಭಾಗಿಸಿ ಮತ್ತೆ ದರಲ್ಲಿ ಜಿಲ್ಲೆಗಳೆಂದೂ ತಾಲ್ಲೂಕುಗಳೆಂದೂ ಮಾಡಿ ಅವುಗಳಿಗೆ ಮುಖ್ಯಾಧಿಕಾರಿಗಳನ್ನು ಏರ್ಪಡಿಸಿ ಮತ್ತೆ ಮೇಲೆ ಹಳ್ಳಿಹಳ್ಳಿಗೆ ಪಾಟೀಲ ಮುಂತಾದವರನ್ನು ಮಾಡಿಟ್ಟಿರುವರಷ್ಟೆ. ಇದೇ ಕಲ್ಪನಾಶಕ್ತಿಯೇ ನಮ್ಮ ಪೂರ್ವಜರಲ್ಲಿ ಎಷ್ಟರಮಟ್ಟಿಗಿತ್ತೆಂಬುದು ಈಗಿನ ಮಠಮಾನ್ಯಗಳಿಂದಲೂ ಇಲಾಖಾದಾರರಿಂದಲೂ ಸಿಂಹಾಸನಪತಿಗಳಿಂದಲೂ ಒಡೆದು ಕಾಣುವದು. ಧಾರ್ಮಿಕರೀತಿಯಿಂದ ಇಷ್ಟೇ ಅಲ್ಲ. ಲೌಕಿಕ ರೀತಿಯಿಂದ ನೋಡಿದರೆ ಪ್ರತಿಯೊಂದು ಸಾಧಾರಣ ಹಿರೇಮಠಗಳ ರಚನೆಯನ್ನು ವಿಚಾರಿಸಿದರೆ ಮುಸಾಫರಮನೆ (Traveller's Bungalow) ಗಳಂತೆಯೂ, ಬಣಕಾರರು, ಕಟ್ಟೀಮನೆಯವರು, ಸೆಟ್ಟರು ಮುಂತಾದವರು ವ್ಯವಸ್ಥಾಪಕರೆಂತಲೂ (Concitiators) ಹೇಳಬಹುದು. ಬಹಿಷ್ಕಾರ ಮೊದಲಾದವುಗಳಿಂದ ಅಂತರ್ವ್ಯವಸ್ಥೆಗಳನ್ನು ಮಾಡಬಲ್ಲವರು ಮ್ಯಾಜಿಸ್ಟ್ರೇಟ (Magistrates) ರಂತಿರುವರು. ಇತರ ವೈಷ್ಣವ ಶೈವ ಮೊದಲಾದ ಹಿಂದೂ ಧರ್ಮಗಳಲ್ಲಿಯಾಗಲೀ, ಜೈನರಲ್ಲಾಗಲೀ, ಮುಸಲ್ಮಾನರಲ್ಲಾಗಲೀ ಲೌಕಿಕ ವೈಭವದಿಂದ ಮೆರೆಯುವ ಕ್ರೈಸ್ತರಲ್ಲಾಗಲೀ ಇಂಥ ಸಮಾಜವ್ಯವಸ್ಥೆಯಿಲ್ಲ. ಈ ಪ್ರಕಾರ ಜಗತ್ತಿನಲ್ಲಿ ಯಾವ ಧರ್ಮದಲ್ಲಿಯೂ ಇಲ್ಲದಂಥ ಉಪಾಯಗಳಿಂದ ವ್ಯವಸ್ಥೆಗೊಳಿಸಿದ ಈ ಸಮಾಜದ ಗತಿ ಈಗೇನಾಗಿರುವದು "ನಾನು ಹೆಚ್ಚು ನೀನು ಹೆಚ್ಚು" "ಯೂಯಂ ಯೂಯಂ ವಯಂ ವಯಂ" ಎಂಬ ಅಂತಃಕಲಹಗಳ ಇರುಕಿನಲ್ಲಿ ಸಿಕ್ಕಿ, ಸಮಾಜವು "ಒಲ್ಲೆನೋ ನಮ್ಮಪ್ಪಾ" ಎನ್ನುತ್ತಿರುವುದು. ಧಿಕ್ಕಾರ ಧಿಕ್ಕಾರ! ಇತ್ತಲಕ್ಷ ಕೊಡದವರಿಗೆ ಧಿಕ್ಕಾರ! ಸಮಾಜದ ಉತ್ಕರ್ಷವನ್ನು ನೋಡದವರಿಗೆ ಧಿಕ್ಕಾರ! ಅಲ್ಪವಾದ ರೀತಿಯಿಂದ ಒಡಲಬೇನೆಯನ್ನಿಬ್ಬಿಸುವವರಿಗೆ ಧಿಕ್ಕಾರ! ಸಮಾಜ ಕಲ್ಯಾಣದಸೋಗನ್ನು ಹೊತ್ತು ಆತ್ಮಪ್ರತಿಷ್ಠೆಗೆ ಹೆಣಗುವವರಿಗೆ ಧಿಕ್ಕಾರ! ಶಾಸ್ತ್ರಬಾಹಿರರಿಗೆ ಧಿಕ್ಕಾರ! ಕರ್ತವ್ಯಹೀನರಿಗೆ ಧಿಕ್ಕಾರ!!!

ಯಾವ ಕಾರಣದಿಂದ ಇಡೀ ವಿಶ್ವವನ್ನೇ ವ್ಯಾಪಿಸಬಹುದಾದಷ್ಟು ಉದಾರತತ್ವಗಳಿಂದ ನಮ್ಮ ಸಮಾಜವು ತುಂಬಿ ತುಳುಕುತ್ತಿರುವದೋ ಅದೇ ಕಾರಣದಿಂದ ನಮ್ಮಲ್ಲಿ ಹಲವು ಪಂಗಡಗಳೂ ಒಳಪಂಗಡಗಳೂ ಉಂಟು. ಇಷ್ಟರಿಂದಲೇ ಅನ್ಯ ಸಮಾಜದವರಿಗಿಂತಲೂ ನಮ್ಮ ಸಮಾಜದ ಪ್ರತಿಯೊಂದು ವ್ಯಕ್ತಿಯಲ್ಲಿ ಆತ್ಮಸಂಯಮನ, ಪರಸ್ಪರ ಪ್ರೀತಿ, ಪರಸ್ಪರ ವಿಶ್ವಾಸ, ನಿರಹಂಕಾರಿತ್ವವೆಂಬಿವುಗಳು ಹೆಚ್ಚು ಬಲವತ್ತರವಾಗಿ ನೆಲೆಗೊಳ್ಳಲಿಕ್ಕೆ ಬೇಕು. ಆತ್ಮಸಮದೃಷ್ಟಿಯು ಬೇಕು. ಪಂಗಡಪಂಗಡದವರಲ್ಲಿ "ಯೂಯಂ ವಯಂ, ವಯಂ ಯೂಯಂ" ಎಂಬ ಉದಾತ್ತನೀತಿಯು ಬೇಕು. ಅಂದರೆಯೇ ನಮ್ಮ ಸಮಾಜ. ಅಂದರೆಯೇ ನಮ್ಮ ಸಮಾಜದ ಇರುವಿಕೆ. ನಮ್ಮ ಸಮಾಜದ ವೈಭವ. ಇಲ್ಲದಿದ್ದರೆ ಅವ್ಯವಸ್ಥೆಯೇ ಮೊಟ್ಟೆ! ಕವ್‌ಬುವ್ವೆನ್ನುವ ಕಾಗೆಗಳ ಗೂಡು!! ಅಂದ ಮೇಲೆ ಇದರ ಜವಾಬುದಾರಿ ಯಾರದು? ಇದಕ್ಕೆ ಜವಾಬುದಾರರಾರು? ಎಲ್ಲ ಒಜ್ಜೆಯನ್ನು ಹೊತ್ತಿರುವ ಗುರುವರ್ಗದವರು. ಇನ್ನೊಂದು ರೀತಿಯಿಂದ ನಮ್ಮ ಸಮಾಜಕ್ಕೂ ಅನ್ಯಸಮಾಜಗಳಿಗೂ ವಿಶೇಷ ವೈಲಕ್ಷಣ್ಯವಿರುವದು. ಆ ಮಾತನ್ನು ಗುರುವರ್ಗದವರು ಯಾವಾಗಲೂ ತಮ್ಮ ಕಣ್ಣುಮುಂದಿರಿಸಿಕೊಳ್ಳತಕ್ಕದ್ದಾಗಿದೆ. ಆ ಮಾತೆಂದರೆ ನಮ್ಮ ಸಮಾಜದಲ್ಲಿ ವಿರಕ್ತಪದವಿಯನ್ನೇರಿರುವ ನಿರಂಜನಮೂರ್ತಿಗಳ ಸಮಾವೇಶವು "ವಿರಕ್ತಿ" ಶಬ್ದದಿಂದರೇ ವಿರಕ್ತನಾದವನು ಪ್ರಾಪಂಚಿಕ ಸಮಾಜಕ್ಕೆ ತನ್ನ ಯಾವ ಪ್ರಕಾರದಿಂದಲೂ ಸಂಬಂಧವಿಡದೆ ಸಿಡಿದು ವೈವಿಕ್ತತರನಾಗಿ ತಾದಾತ್ಮ್ಯನಾಗಿರುವನೆಂದು ಸಾಧಾರಣವಾಗಿ ಹೇಳಬಹುದು. ಆದರೆ ಶಾಸ್ತ್ರದೃಷ್ಟಿಯಿಂದ ನೋಡಲಿ, ಅಥವಾ ವ್ಯವಹಾರ ರೀತಿಯಿಂದಲೇ ನೋಡಲಿ; ನಮ್ಮ ಮಾತು ಹಾಗಿಲ್ಲ. ವಿರಕ್ತಿ ಶಬ್ದಕ್ಕೆ ಸಾಮಾನ್ಯವಾದ ಅರ್ಥವನ್ನು ಕಲ್ಪಿಸಿ ಅವರು ನಮ್ಮ ಸಮಾಜಕ್ಕೆ ಏನೂ ಸಂಬಂಧವಿಲ್ಲ, ಅವರು ಬರೇ ತಪೋಯೋಗತತ್ಪರರಾದವರು, ಗುಡ್ಡದಲ್ಲಿ ಸೇರತಕ್ಕವರು, ಕೈಗೆ ಬೂದಿ ಬಡಕೊಂಡು ಬೈರಾಗಿಗಳಂತೆ ತಿರುಗತಕ್ಕವರು ಎಂದು ಎಂದರೆ ಅದು ಗೌಣವಾಗುವುದು. ವಿರಕ್ತವರ್ಗದವರು ನಮ್ಮ ಧರ್ಮಕ್ಕೆ ಗುರುವರ್ಗದವರಷ್ಟೇ ಪೂಜ್ಯರು ಅಥವಾ ಹೆಚ್ಚಿಗೆ ಪೂಜ್ಯರು ಎಂಬ ಮಾತನ್ನು ಒತ್ತಟ್ಟಿಗಿಟ್ಟು ಬುನಾದಿಯಿಂದ ನಡೆದು ಬಂದ ಪದ್ಧತಿಯನ್ನು ನೋಡಿದರೂ ಅವರೂ ಸಮಾಜೋದ್ಧರಣೆಯ ಕೆಲಸದಲ್ಲಿ ಕೆಲವುಮಟ್ಟಿಗೆ ಭಾಗದಾರರಲ್ಲವೇ? ಅಂದ ಮೇಲೆ ಸಮಾಜೋತ್ಕರ್ಷಕ್ಕೆ ಮುಖ್ಯ ಜವಾಬುದಾರರಾದ ಗುರುವರ್ಗದವರಿಗೆ ಇಂಥ ಶ್ರೇಷ್ಠ ಸಹಾಯಕ ಮಂಡಲವು ಬೆಂಬಲವಾಗಿ ನಡುಕಟ್ಟಿ ನಿಂತಲ್ಲಿ ತಾವು ಧನ್ಯರೆಂದು ಹರ್ಷಿಸತಕ್ಕದ್ದು ಸಹಜಕವಾದ ಮಾತಲ್ಲವೇನು? ಇದನ್ನೆಲ್ಲ ಮರೆತು ಇವರು ಸನ್ಯಾಸಿಗಳು, ಇವರು ಬೈರಾಗಿಗಳು, ಇವರು ಅಲ್ಲಿರತಕ್ಕವರು ಇಲ್ಲಿರತಕ್ಕವರು, ಇವರು ಅಂಥವರು, ಇವರು ಇಂಥವರು, ಎಂಬದಾಗಿ ನಾನಾ ತರದಿಂದ ಹೆಸರಿಟ್ಟು, ಇಂಥ ಮಹತ್ವದವೇಳೆಯಲ್ಲಿ ನಮ್ಮ ಕಣ್ಣಲ್ಲಿ ನಮ್ಮ ಬೊಟ್ಟು ಚುಚ್ಚಿಕೊಂಡು ಸಮಾಧಾನ ತಾಳುವಂಥ ವೃತ್ತಿಯನ್ನು ಹಿಡಿಯುವದು ಜಾಣತನದ ಮಾತಾಗಬಲ್ಲದೇನು? ಇದರಿಂದ ಗುರುವರ್ಗದವರು ಈಗ ಎನ್ನುವಂತೆ ಅವರ ಹಕ್ಕುಗಳನ್ನು ವಿರಕ್ತವರ್ಗದವರು ಉಪಭೋಗಿಸಬೇಕು, ಅವುಗಳನ್ನು ಕಳಕೊಂಡು ತಾವು ಮಾತ್ರ ಮಿಟ್ಟುಮಿಸುಕದಂತಿರಬೇಕೆಂಬ ಅಭಿಪ್ರಾಯವಲ್ಲ. ವಿರಕ್ತವರ್ಗದವರಲ್ಲಿ ಎಷ್ಟೋ ನಿರಂಜನಮೂರ್ತಿಗಳು ಗುರುವರ್ಗದವರ ಕಾರ್ಯಗಳನ್ನು ಮಾಡುತ್ತಿರಬಹುದು; ಅವರ ಹಕ್ಕುಗಳನ್ನು ನಡೆಯಿಸುತ್ತಿರಬಹುದು; ಮಾನಮರ್ಯಾದೆಗಳನ್ನು ಕಾಣುತ್ತಿರಬಹುದು; ಪೂಜಾಸಂಭಾವನೆಗಳನ್ನು ಸ್ವೀಕರಿಸುತ್ತಿರಬಹುದು. ಈ ಎಲ್ಲ ಹಕ್ಕುಮರ್ಯಾದೆ ಮೊದಲಾದವುಗಳನ್ನು ವಿರಕ್ತಮಠದವರು ಬಲುಮೆಯಿಂದ ಅಪಹರಿಸಿಕೊಂಡಿರುವರೇನು? ಈ ಎಲ್ಲ ಅಧಿಕಾರಗಳೂ ನಮಗೇ ಸಲ್ಲತಕ್ಕದ್ದೆಂದು ಸಾಧಿಸಿದರೇನು? ಹಾಗಿಲ್ಲದಿದ್ದರೆ ಈ ತರಹ ಸದ್ಯಕ್ಕೆ ಎದ್ದಿರುವ ಉಗ್ರವಾದ ಕೋಲಾಹಲವಾದರೂ ಯಾತಕ್ಕೆ ಬೇಕು? ಅದೂ ಒತ್ತಟ್ಟಿಗಿರಲಿ. ಈಗ ಗುರುವರ್ಗದವರ ಚಿರವಳಿಯಲ್ಲಿ ಸೇರಿದ ಸಿಂಹಾಸನಾಧಿಪತಿಗಳೇ ಎಷ್ಟೊ ಸಾರಿ ನಿರಂಜನಮೂರ್ತಿಗಳ ವೈಭವಕ್ಕೆ ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ ಅನುಕೂಲರಾಗಿರಬಹುದೋ ಏನೋ! ಎಷ್ಟೋ ಗುರುಮಠಾಧ್ಯಕ್ಷರು ಅವರ ವೈಭವಕಾರ್ಯಗಳಲ್ಲಿ ನಡುಕಟ್ಟಿ ನಿಂತಿರಬಹುದೋ ಏನೋ! ಆ ಚಿರವಳಿಯಲ್ಲಿ ಸೇರಿದ ಎಷ್ಟು ಶಿಷ್ಯಮಂಡಲಿಯು ನಿರಂಜನಮೂರ್ತಿಗಳ ವೈಭವಕ್ಕಾಗಿ ಹೊಡೆದಾಡಿ ಗುರುಗಳೂ ಶಿಷ್ಯರೂ ಕೂಡಿಯೇ ಸಹಿಯೊಡನೆ ಸಿಕ್ಕಿಬಿದ್ದಿರುವರೋ ಏನೋ! ಅಂದ ಮೇಲೆ ಇದರ ಅರ್ಥವಾದರೂ ಏನು? ಈ ದ್ವಿಜಿಹ್ವಾವೃತ್ತಿಯು ಸಿದ್ಧವಾದದ್ದೇ ನಿಜವಾದರೆ ಅದಕ್ಕೆ ಜನರು ಏನೆಂದು ಹೆಸರಿಟ್ಟಾರು! ಇವೆಲ್ಲ ಮಾತುಗಳನ್ನು ಸಾರಾಸಾರವಾಗಿ ವಿಚಾರಮಾಡತಕ್ಕದ್ದಾಗಿದೆ. ಅದೂ ಒತ್ತಟ್ಟಿಗಿರಲಿ.

ಶಾಸ್ತ್ರದಿಂದ ಈಗ ಗುರುವರ್ಗದವರೆನ್ನುವಂತೆ ವಿರಕ್ತರು ಯಾವುದಕ್ಕೂ ಯೋಗ್ಯರಲ್ಲೆಂದು ಅವರಂತೆಯೇ ಗ್ರಹಿಸಿದರೂ, ಸದ್ಯಕ್ಕೆ ಎಬ್ಬಿಸಿರುವ ಕೋಲಾಹಲವಾದರೂ ಸರಿಯೆ? ಅಂದರೆ ಹಕ್ಕು (ಅಧಿಕಾರಗಳ ಸ್ವಾಮಿತ್ವ) ಗುರುವರ್ಗದವರದು. ಉಪಭೋಗಿಗಳು ವಿರಕ್ತರು. ಸ್ವಾಮಿತ್ವಕ್ಕೂ (Ownership) ಮತ್ತು ಉಪಭೋಗಕ್ಕೂ (Possession) ಯಾವಾಗಲೂ ಕಡುತರವಾದ ವೈರವಿರುವದೆಂದು ನ್ಯಾಯಶಾಸ್ತ್ರ ಪ್ರವೀಣರು (ವಕೀಲರು) ಹೇಳುತ್ತಾರೆ. ಅಂದರೆ ಸ್ವಾಮಿತ್ವವೂ ಉಪಭೋಗವೂ ಒಬ್ಬರಲ್ಲಿಯೇ ಸೇರಿದರೆ ಸರಿಯೇ ಸರಿ. ಸ್ವಾಮಿತ್ವವು ಒಬ್ಬರಲ್ಲಿ ಉಪಭೋಗವು ಒಬ್ಬರಲ್ಲಿ ಸೇರಿದರೆ, ಸ್ವಾಮಿಯು ಉಪಭೋಗವನ್ನು ಬಹು ದಿನಗಳಿಂದ ಕಳಕೊಂಡರೆ ಉಪಭೋಗಿಯೇ ಸ್ವಾಮಿ (Owner) ಯಾಗುವನಂತೆ! ಅಂದ ಮೇಲೆ ಬಹುದಿನದಿಂದ ನಡೆದುಬಂದಿರುವ ಪದ್ಧತಿಯನ್ನು ಸಡಿಲಿಸಬೇಕಾದರೆ ಈಗಿನ ಕೋಲಾಹಲವೇ? ಇದೂ ಬೇಡ.

ಮನುಷ್ಯನ ಸ್ವಭಾವವನ್ನು ವಿಚಾರಿಸಿದರೆ ಎಂಥ ಹಾದಿಯನ್ನು ಹಿಡಿದು ಹೋಗುವವನು ಸಹ ತನಗೆ ಸಿಕ್ಕಿದ್ದನ್ನು ತಿರುಗಿ ಕೊಡಬೇಕೆಂದರೆ ಮಿಡಿಮಿಡಿ ಮಿಡುಕುವನು. ಹೀಗಿದ್ದು ಬಹು ದಿನದಿಂದ ಅನುಭೋಗಿಸಿದ್ದನ್ನು ಎಲ್ಲರೂ ಮನಸಾ ಅರ್ಪಿಸಿದ್ದನ್ನು (ಶಾಸ್ತ್ರದಿಂದಲೇ ವಿರಕ್ತಮಠದವರು ಸಿದ್ಧಮಾಡಿ ತೋರಿಸುತ್ತೇವೆಂದು ಸಿದ್ಧರಿರುವರಂತೆ). ಜನ್ಮಸಿದ್ಧವಾದದ್ದನ್ನು ಬಿಟ್ಟುಕೊಡಬೇಕೆಂದರೆ ಎಂಥ ಕ್ಷುದ್ರಪ್ರಾಣಿಯಾದರೂ ಒಪ್ಪೀತೆ? ಇವೆಲ್ಲ ವಿಷಯಗಳನ್ನೂ ಗುರುವರ್ಗದವರು ಸಾರಾಸಾರ ವಿಚಾರಿಸತಕ್ಕ ಮಾತಾಗಿದೆಯಲ್ಲವೇ? ಅಂದ ಬಳಿಕ ತಾವು ಜಾಗರೂಕರಾಗಿ ತಮ್ಮ ಗತವೈಭವಗಳನ್ನು ಪಡಕೊಳ್ಳುವದು, ಹೋದ ಅಧಿಕಾರವನ್ನು ಹೊಂದುವದು, ಕಳಕೊಂಡ ಹಕ್ಕುಗಳನ್ನು ದೊರಕಿಸುವದು ಈ ಪ್ರಕಾರವಾಗಿ ಅಲ್ಲೋಲಕಲ್ಲೋಲ ಮಾಡುವದರಿಂದ ಅಲ್ಲ. ಸ್ವಚ್ಛಬಟ್ಟೆಯನ್ನುಡುವ ನೆರೆಯವರ ಅಂಗಳಗಳಿಗೆ ಕೆಸರನ್ನು ಸಿಡಿಸಿದರೆ ನಮ್ಮ ಅಂಗಳಗಳು ಎಂದೂ ಸ್ವಚ್ಛವಾಗಲಾರವು. ಮುಂದಿಯಲ್ಲಿರುವ ಹುಳುಕನ್ನು ಆರಿಸಿ ತೋರಿಸಿದರೆ ನಾವು ಸರಳರೆಂದು ಸಿದ್ಧವಾಗದು.

ನಾವು ಉಪೋದ್ಘಾತದಲ್ಲಿಯೇ ಹೇಳಿರುವ ಪ್ರಕಾರ ನಮ್ಮ ಧರ್ಮಕ್ಕೆ ಸಿಂಹಾಸನದವರೂ ಗುರುವರ್ಗದವರೂ ಕಾರಣೀಭೂತರಷ್ಟೆ. ಧಾರ್ಮಿಕ, ನೈತಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದವುಗಳಲ್ಲಿ ನಾವು ಅಲಕ್ಷಗೆಟ್ಟು ಹಿಂದೆಬಿದ್ದು ಹಿಂದುಳಿದ (Backward class) ವರ್ಗದವರೆಂಬ ಲಾಂಛನಾಸ್ಪದವಾದ ಬಿರುದಾವಳಿಯು ನಮ್ಮ ಬೆನ್ನಿಗೆ ಹತ್ತಿರುವದು. ನಮ್ಮ ಪೂರ್ವಜರು ಮಾಡಿದ ಶಾಸ್ತ್ರಗಳು ಮೂಲೆಗುಂಪಾಗಿವೆ. ನಿಬಂಧನೆಗಳು ಹಾಳಾಗಿಹೋಗಿವೆ. ಸಮಾಜದ ಕಟ್ಟು ಸಡಿಲದೆ, ಕಾರ್ಯಕಾರಿಗಳು ಕರ್ತವ್ಯಶೂನ್ಯರಾಗಿದ್ದಾರೆ. ಕಾರ್ಯದಕ್ಷತಾಹೀನರಾಗಿದ್ದಾರೆ. ವಿಪರೀತವಾದ ಆಚಾರ ವಿಚಾರಗಳು ನೆಲೆಗೊಳ್ಳುತ್ತಿರುವವು. ಅಂಥಿಂಥ ನಡೆನುಡಿಗಳು ಬಳಕೆಯಲ್ಲಿ ಬರುತ್ತಿರುವವು. ಒಳಪಂಗಡಗಳ ಸಂಬಂಧವಾಗಿ ಸಮಾಜವನ್ನೇ ಸೂರೆಗೊಳ್ಳುವ ಬಡಬಾಗ್ನಿಯು ಮೆಲ್ಲನೆ ಹೊತ್ತುತ್ತಿರುವದು. ಒಂದೊಂದೇ ಪಂಗಡಗಳು ಸಿಡಿದು ಪಂಚಸಿಂಹಾಸನಾಧಿಪತಿಗಳ ಅಧಿಕಾರದಿಂದ ಬಾಹ್ಯರಾಗುತ್ತಿರುವರು. ಧಾರ್ಮಿಕವಿದೆಯು ಹೇಳ ಹೆಸರಿಲ್ಲದಂತಾಗಿದೆ. ಸದ್ಯಃಕಾಲಕ್ಕೆ ಬೇಕಾಗಿರುವ ಶಿಕ್ಷಣವೂ ಇಲ್ಲ. ಉಚ್ಚಶಿಕ್ಷಣ ಪಡೆದವರು ಸಾವಿರಕ್ಕೆ ಒಂದು ಸಹ ಬೀಳುವದಿಲ್ಲ. ಸಾಧಾರಣ ಓದುಬಲ್ಲವರ ಸಂಖ್ಯೆಯು ಸಹ ನೂರಕ್ಕೆ ೩-೪ ಬೀಳಬೇಕಾದರೆ ಕುರಿಕೋಣ ಬಿದ್ದುಹೋಗುತ್ತದೆ. ಸಮಾಜದಲ್ಲಿ ನೂರಯೆಂಟು ಒಳಪಂಗಡಗಳು. ಒಂದೇ ಪಂಗಡದವರಲ್ಲಿಯೇ ಐಕಮತ್ಯವಿದೆಯೇ? ಅದೂ ಇಲ್ಲ. ಪೂಜಕವರ್ಗದಲ್ಲಿ ಗುರುವರ್ಗದವರು ವಿರಕ್ತರು. ಗುರುವರ್ಗದವರಲ್ಲಿ ಬೇರೆ ಬೇರೆ ಸಿಂಹಾಸನದವರು ಇಂದು ಒಂದೇ ಇದ್ದರೂ ನಾಳೆಗೆ ಇರುತ್ತಾರೆಂದು ಹೇಳುವದು ಕಷ್ಟ. ವಿರಕ್ತರಲ್ಲಿ ಸಮಯಭೇದಗಳು. ಈ ಪ್ರಕಾರವಾಗಿ ಸಮಾಜದಲ್ಲಿ ಎಷ್ಟು ಭಾಗ ವಿಭಾಗಗಳು! (Divisions and cross divisions! ಎಂಥ ಶೋಚನೀಯ ಪರಿಸ್ಥಿತಿಯು! ರಾಜಕೀಯದ ಮಾತಿನಿಂದಂತೂ ನಮ್ಮಕ್ಕೆ ಕಾರ್ಯಕ್ಷೇತ್ರದಲ್ಲಿ [illegible]

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜೂನ್ ತಾ|| ೨೭ ನೆಯ ಭಾನುವಾರ.

ಸೀನಿಯರ್ ಸರ್ಜನರು.

ಈಗ ಸಂಸ್ಥಾನದ ಸೀನಿಯರ್ ಸರ್ಜನರಾಗಿರುವ ರಾ|| ಬ|| ಡಾ|| ಟಿ. ವಿ ಆರ್ಮುಗಂ ಮೊದಲಿಯಾರರು ಬರುವ ಜುಲೈ ತಾ|| ೧ ರಿಂದ ನಿವೃತ್ತರಾಗುತ್ತಾರಾದ ಕಾರಣ, ಆ ಸ್ಥಾನಕ್ಕೆ ಡಾ|| ಸಿ. ಎ ನಂಜಪ್ಪನವರು ನಿಯಮಿಸಲ್ಪಟ್ಟಿರುತ್ತಾರೆ. ಈಗಿನ ಡಾಕ್ಟರುಗಳಲ್ಲೆಲ್ಲಾ ಇವರೇ ಸೀನಿಯರಾಗಿರುವ ಕಾರಣ, ಸೀನಿಯರ್ ಸರ್ಜನರ ಪದವಿಯನ್ನು ಡಾ|| ಆರ್ಮುಗಂ ಮೊದಲಿಯಾರರನಂತರ ವಹಿಸುವುದಕ್ಕೆ ನ್ಯಾಯವಾದ ಬಾಧ್ಯತೆಯನ್ನು ಮಾತ್ರವೇ ಅಲ್ಲದೆ ತಕ್ಕ ಅರ್ಹತೆಯನ್ನೂ ಪಡೆದಿರುತ್ತಾರಾದ ಕಾರಣ ಅದಕ್ಕಾಗಿ ನಾವು ಸಂತೋಷಿಸುತ್ತೇವೆ. ಆದರೆ ಈ ಯೇರ್ಪಾಟಿನಿಂದ ಇವರಂಥ ಸಮರ್ಥರೂ ಗುಣಾಢ್ಯರೂ ಆದ ವೈದ್ಯಶಿಖಾಮಣಿಗಳ ಪ್ರತ್ಯಕ್ಷ ಚಿಕಿತ್ಸಾಲಾಭವನ್ನು ಪ್ರಜೆಗಳು ಕಳೆದುಕೊಳ್ಳಬೇಕಾಗುವುದನ್ನು ಪರ್ಯಾಲೋಚಿಸಿದರೆ ಮಾತ್ರ ವಿಷಾದಿಸಬೇಕಾಗುವುದು.

ನಮ್ಮ ಸಂಸ್ಥಾನದಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯು ಡಾ|| ಆರ್ಮುಗಂ ಮೊದಲಿಯಾರರ ಸಂಬಂಧದಿಂದ ದಕ್ಷಿಣ ಭರತಖಂಡದಲ್ಲೆಲ್ಲಾ ವಿಖ್ಯಾತಿಯನ್ನು ಪಡೆದುಕೊಂಡಿತು. ಅವರನಂತರ ಆ ವೈದ್ಯಾಲಯದ ಮುಖ್ಯ ವೈದ್ಯಪದವಿಗೆ ಡಾ|| ಸಿ. ಎ. ನಂಜಪ್ಪನವರು ಬಂದು ಅದೇ ಖ್ಯಾತಿಯನ್ನು ಉಳಿಯಿಸಿದರು.

ರಾಜಧಾನಿಯಲ್ಲಿ ದೊಡ್ಡದಾಗಿ ಕಟ್ಟಲ್ಪಟ್ಟ ನೂತನ ಕೃಷ್ಣರಾಜ ವೈದ್ಯಾಲಯವು ಮೇಜರ್ ಫೋರ್ಕ್ಸರವರ ಕಾಲದಲ್ಲಿ ಅವರ ಸೂಕ್ತಸೂಚನೆಗಳ ಮೇರೆಗೆ ಆರಂಭಗೊಂಡರೂ ಅವರು ಉದ್ಯೋಗವನ್ನು ಬಿಟ್ಟು ಬ್ರಿಟಿಷ್ ಸರ್ಕಾರಿಯುದ್ಯೋಗಕ್ಕೆ ತೆರಳಿ ಹೋಗಬೇಕಾಗಿ ಬಂದುದರಿಂದ, ಅವರಿಲ್ಲದ ಕೊರತೆಯನ್ನು ಡಾ|| ಸಿ. ಎ. ನಂಜಪ್ಪನವರು ಇಲ್ಲಿಗೆ ಬಂದಬಳಿಕ ಪರಿಹರಿಸಿ ಕೃಷ್ಣರಾಜ ವೈದ್ಯಾಲಯವನ್ನು ಸಚೇತನವೆನಿಸಿದರು. ಇವರ ಯಾಜಮಾನ್ಯದಿಂದ ಅಲ್ಲಿ ರೋಗಿಗಳಿಗೆ ನಡೆಯುತ್ತಿದ್ದ ಆದರೋಪಚಾರಗಳನ್ನೂ ಕುಶಲಚಿಕಿತ್ಸೆಗಳನ್ನೂ ಅಚ್ಚುಗಟ್ಟನ್ನೂ ಅನುಭವಿಸಿರುವ ಪ್ರಜೆಗಳು ಆ ವೈದ್ಯಾಲಯ ಸಂಬಂಧದಿಂದ ಇವರು ದೂರಂಗತರಾಗುವುದನ್ನು ಸೈರಿಸಿಕೊಳ್ಳುವುದು ಕಷ್ಟ. ಈ ವೈದ್ಯಾಲಯಕ್ಕೆ ಡಾ|| ಸಿ. ಎ. ನಂಜಪ್ಪನವರು ಪ್ರಾಣವಾಗಿದ್ದರು. ಇವರಿಗೆ ಅದು ದೇಹದಂತಿದ್ದಿತು.

ಮುಖ್ಯವಾಗಿ ಓದಿ ಪರೀಕ್ಷೆಗಳನ್ನು ಕೊಟ್ಟ ಮಾತ್ರದಿಂದಲೇ ಉತ್ತಮ ವೈದ್ಯರಾಗುವುದಿಲ್ಲ. ಜೀವಕಾರುಣ್ಯ, ಪಾಪಭೀತಿ, ನಿಸ್ಪೃಹತೆ, ಶೋಧಕಬುದ್ಧಿ, ಪರಹಿತಾದರ-ಇತ್ಯಾದಿ ಸದ್ಗುಣ ಸಂಪತ್ತಿಯಿಂದಲೇ ವೈದ್ಯತ್ವವು ಸಂಪೂರ್ಣವೆನಿಸಿಕೊಳ್ಳುವುದು. ಅಂಥ ಸುಗುಣವಿಭೂಷಿತರಲ್ಲದ ವೈದ್ಯರು ರೋಗಿಗಳ ಭಾಗಕ್ಕೆ ಯಮಕಿಂಕರರಾಗಿ ಕಾಣಿಸಿಕೊಳ್ಳುವರು. ವೈದ್ಯಾಲಯಗಳು ೩-೪ ಲಕ್ಷ ರೂ. ಗಳ ವೆಚ್ಚದಿಂದ ಕಟ್ಟಲ್ಪಟ್ಟು ಅಸಾಧಾರಣಗಳಾದ ಉಪಚಾರ ಸಾಧನಗಳನ್ನು ಹೊಂದಿ ಮನೋಹರಗಳಾಗಿದ್ದರೂ, ಅವುಗಳಲ್ಲಿ ಮೇಲೆ ಕಂಡಂತೆ ಗುಣಾಢ್ಯರಾದ ಸದ್ವೈದ್ಯರು ಇಲ್ಲದೆಹೋದರೆ ದೇವರಿಲ್ಲದ ದೇಗುಲದಂತೆ ನಿಷ್ಫಲವಾಗುವುವು. ಅದುಕಾರಣ ಎಲ್ಲಕಡೆಯ ವೈದ್ಯಾಲಯಗಳಿಗೂ ಅಂಥ ಉತ್ತಮೋತ್ತಮರನ್ನು ತಂದಿಡುವುದು ಸಾಧ್ಯವಲ್ಲದಿದ್ದರೂ ಸಂಸ್ಥಾನಕ್ಕೆ ಮುಖ್ಯಸ್ಥಲಗಳಾದ ಬೆಂಗಳೂರು ಮೈಸೂರುಗಳಲ್ಲಿರುವ ದೊಡ್ಡ ವೈದ್ಯಾಲಯಗಳಿಗಾದರೂ ಪರದೇಶಗಳಿಂದಲಾದರೂ ನಿಪುಣರೂ ಗುಣಾಢ್ಯರೂ ಆದ ವೈದ್ಯಶಿಖಾಮಣಿಗಳನ್ನು ತಂದಿಡುವುದು ಅತ್ಯಾವಶ್ಯಕವು. ಪ್ರಜಾಹಿತಕ್ಕಾಗಿ ಈ ಪ್ರಮುಖ ವೈದ್ಯಾಲಯಗಳನ್ನೇರ್ಪಡಿಸಿ ಅವುಗಳಿಗೋಸ್ಕರ ಲಕ್ಷಾಂತರ ವ್ಯಯವನ್ನು ಮಾಡಿಯೂ ಮಾಡಿಸುತ್ತಲೂ ಇರುವ ಸರ್ಕಾರದವರು ಆ ವೆಚ್ಚವನ್ನು ಸಾರ್ಥಕಪಡಿಸಿಕೊಳ್ಳಬೇಕಾದರೆ ಸಮರ್ಥರನ್ನು ತಂದಿಡುವುದೇ ಪ್ರಥಮಕರ್ತವ್ಯವೆಂಬುದನ್ನು ಅರಿಯದೆ ಇರಲಾರರು. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮ|| ಹೆಚ್. ಕೃಷ್ಣಶಾಸ್ತ್ರಿಗಳು ಬೆಂಗಳೂರು ವಿಕ್ಟೋರಿಯಾ ವೈದ್ಯಾಲಯಕ್ಕೆ ೨ ಸಾವಿರ ರೂ. ಗಳ ಸಂಬಳವನ್ನು ಕೊಟ್ಟಾದರೂ ಒಬ್ಬ ಆಂಗ್ಲವೈದ್ಯಶಿಖಾಮಣಿಯನ್ನು ತಂದಿರಿಸುವುದು ಅತ್ಯವಶ್ಯಕವೆಂದು ಕೊಟ್ಟ ಸೂಚನೆಯು ಅತ್ಯಂತ ಸಮರ್ಪಕವಾಗಿದ್ದಿತು. ಯೂರೋಪು ಖಂಡದಲ್ಲಿ ಈಗ ಯುದ್ಧವೆಲ್ಲಾ ನಿಂತಿರುವ ಕಾರಣ ಅನೇಕ ವೈದ್ಯರಿಗೆ ಬಿಡುವಾಗಿರುತ್ತದೆ. ಪ್ರಯತ್ನಪಟ್ಟು ಪರಿಶೋಧಿಸಿದರೆ ತಕ್ಕವರು ಸಿಕ್ಕದೆ ಹೋಗುವುದಿಲ್ಲ. ನಮ್ಮ ಗೌರ್ನಮೆಂಟಿನವರು ಸ್ವಲ್ಪ ಹೆಚ್ಚು ಸಂಬಳ ಕೊಡಬೇಕಾಗಿ ಬಂದರೂ ಹಿಂದೆಗೆಯದೆ ಅಂಥ ಸಮರ್ಥರಿಬ್ಬರನ್ನು ಆರಿಸಿ ತಂದು ಇವೆರಡು ವೈದ್ಯಾಲಯಗಳಿಗೂ ನಿಯಮಿಸಿದರೆ ಪ್ರಜೆಗಳಿಗೆ ಬಹಳ ಉಪಕಾರ ಮಾಡಿದಂತಾಗುವುದು, ಮತ್ತು ಈ ವೈದ್ಯಾಲಯಗಳ ಯಶಸ್ಸೂ ಕಾಪಾಡಲ್ಪಡುವುದು.

ಸೀಮೆಯ ಸಾಮಾನುಗಳು ಮತ್ತು ಕಲ್ಲಿದ್ದಲ ಕೊರತೆ.

ಯುದ್ಧವು ನಿಂತುಹೋಗಿದ್ದರೂ ಸೀಮೆಯ ಸಾಮಾನುಗಳು ನಮ್ಮ ದೇಶಕ್ಕೆ ಸಮೃದ್ಧವಾಗಿ ಏತಕ್ಕೆ ಬರುವುದಿಲ್ಲ? ಅವುಗಳ ಬೆಲೆಯು ಏತಕ್ಕೆ ಇಳಿಯಲಿಲ್ಲ? ಎಂಬುದಾಗಿ ಅನೇಕರು ಪ್ರಶ್ನೆಮಾಡುತ್ತಿರುವುದುಂಟು. ಪದಾರ್ಥಗಳು ಸಮೃದ್ಧವಾಗಿ ನಿರ್ಮಿತವಾಗುತ್ತಿದ್ದರೆ ನಮ್ಮ ದೇಶಗಳಿಗೆ ಅವು ವಿಶೇಷವಾಗಿ ಬರುತ್ತಿದ್ದುವು. ಆಗ ಅವುಗಳ ಬೆಲೆಯು ಇಳಿತರದಲ್ಲಿರುತ್ತಿದ್ದಿತು. ಸೀಮೆಯಲ್ಲಿ ಅವುಗಳ ನಿರ್ಮಾಣವೇ ವಿಶೇಷವಾಗಿ ಆಗುತ್ತಿಲ್ಲ. ಕಾರಣವೇನೆಂದರೆ— ಯೂರೋಪು ಖಂಡದ ಎಲ್ಲ ಪರಿಶ್ರಮಗಳಿಗೂ ಕಲ್ಲಿದ್ದಲೇ ಮುಖ್ಯಾಧಾರವು. ಈಗಲಾದರೋ ಅದು ತಕ್ಕಷ್ಟು ದೊರಕುತ್ತಿಲ್ಲ. ದೊರೆತಷ್ಟನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿಕೊಂಡು ಹೋಗುವುದಕ್ಕೆ ಸಾಧನಗಳು ಕಡಿಮೆ. ಲೋಹಮಾರ್ಗಗಳು ಯುದ್ಧದಿಂದ ಹಾಳಾಗಿವೆ. ಬಂಡಿಗಳು ಸಾಲವು. ಅಲ್ಲದೆ ಕಲ್ಲಿದ್ದಲು ಎಲ್ಲ ದೇಶಗಳಲ್ಲೂ ಉತ್ಪತ್ತಿಯಾಗುವುದಿಲ್ಲ. ಅದು ಅಪರಿಮಿತವಾಗಿ ಹುಟ್ಟುವ ದೇಶಗಳವರು ತಮ್ಮ ಕಲ್ಲಿದ್ದಲನ್ನು ಇತರ ದೇಶಗಳಿಗೆ ಕಳುಹಿಸಿಕೊಡುವುದಿಲ್ಲ. ಫ್ರಾನ್ಸ್ ದೇಶದ ಉತ್ತರಭಾಗದಲ್ಲಿ ಕಲ್ಲಿದ್ದಲ ಗಣಿಗಳುಂಟು. ಅವುಗಳನ್ನೆಲ್ಲಾ ಮರಳಿ ಸರಿಮಾಡಿಕೊಳ್ಳಲಾಗದಂತೆ ಜರ್ಮನರು ಯುದ್ಧಕಾಲದಲ್ಲಿ ಧ್ವಂಸಮಾಡಿಬಿಟ್ಟರು. ಇದಲ್ಲದೆ ಕಲ್ಲಿದ್ದಲ ಗಣಿಗಳಲ್ಲಿ ಕೆಲಸಮಾಡುತ್ತಿದ್ದವರು ದಿನೇ ದಿನೇ ದೇಹದಾರ್ಢ್ಯದಲ್ಲಿ ಕ್ಷೀಣಿಸಿಹೋಗುತ್ತಿದ್ದಾರಂತೆ. ಅಲ್ಲದೆ ಕೂಲಿಕಾರರು ತಮ್ಮ ಸಂಬಳವನ್ನು ಹೆಚ್ಚಿಸಿಕೊಳ್ಳಲಿಕ್ಕೂ ಗೆಯ್ಯುವ ಕಾಲವನ್ನು ಕಡಿಮೆಮಾಡಿಕೊಳ್ಳಲಿಕ್ಕೂ ಸಹ ಗಣಿಗಳ ಯಜಮಾನರೊಡನೆ ಬೆಳಗೆದ್ದರೆ ಮುನಿಸಿಕೊಂಡು, ಕೆಲಸಬಿಟ್ಟು ಹೋರಾಡುತ್ತಿದ್ದಾರೆ. ಈ ಅವಾಂತರವು ಯೂರೋಪಿನ ಪರಿಶ್ರಮಾಗಾರಗಳನ್ನೆಲ್ಲಾ ತತ್ತರಗೊಳಿಸಿಬಿಟ್ಟಿದೆ. ಅಲ್ಲದೆ ಪದಾರ್ಥನಿರ್ಮಾಣಕ್ಕೆ ಮೂಲವಾದ ಅಪಕ್ವವಸ್ತುಗಳು ಸಮೃದ್ಧವಾಗಿಯೂ ಅಗ್ಗವಾಗಿಯೂ ದೊರೆಯುತ್ತಿಲ್ಲ. ಇಷ್ಟೇ ಅಲ್ಲದೆ ಪದಾರ್ಥನಿರ್ಮಾಣಕ್ಕೆ ಅವಶ್ಯಕಗಳಾದ ಯಂತ್ರಸಾಮಗ್ರಿಗಳು ವಿಶೇಷವಾಗಿ ರಚಿಸಲ್ಪಡಬೇಕಾಗಿವೆ. ಹಿಂದೆ ಇದ್ದುವುಗಳಲ್ಲಿ ಹಲವು ಯುದ್ಧಕಾಲದಲ್ಲಿ ರಣಸಾಮಗ್ರಿಗಳ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲ್ಪಟ್ಟುವು. ಅಲ್ಲದೆ ರಷ್ಯಾ ಪೋಲಾಂಡು ಜರ್ಮನಿ ಮೊದಲಾದ ಕಡೆಗಳಲ್ಲಿ ಇನ್ನೂ ಶಾಂತಿಯೇ ಉಂಟಾಗಿಲ್ಲ. ಒಳತೋಟಿಗಳು ವಿಪರೀತವಾಗಿವೆ. ಎಲ್ಲೆಲ್ಲೂ ಆಹಾರ್ಯಪದಾರ್ಥಗಳು ಸಾಲದುದರಿಂದ ಕ್ಷಾಮವು ತಾಂಡವವಾಡುತ್ತಿದೆ. ಆಸ್ಟ್ರಿಯಾದಲ್ಲಿ ಹೊಟ್ಟೆಗಿಲ್ಲದೆ ಲಕ್ಷಾಂತರ ಜನರು ಸತ್ತರು; ಬದುಕಿರುವವರಲ್ಲಿ ಬಡವರು ೨೦ ಲಕ್ಷ ಜನರು ಪರರನ್ನು ಬೇಡಿ ಹೊಟ್ಟೆಹೊರೆದುಕೊಳ್ಳುತ್ತಿದ್ದಾರೆ. ಅಲ್ಲಿ ಕೂಲಿಕೊಟ್ಟು ಕೆಲಸಮಾಡುವಣವೆಂದರೆ ಯಂತ್ರಗಳಿಗೆ ಕಲ್ಲಿದ್ದಲಿಲ್ಲ. ಸರ್ವಿಯಾ ದೇಶದಲ್ಲಿ ಯುದ್ಧದಿಂದ ಮೂರನೆ ಒಂದು ಭಾಗದ ಪ್ರಜೆಗಳು ನಾಶವಾದರು. ಉಳಿದಿರುವವರಲ್ಲಿ ಹಲವರಿಗೆ ಬಹುಕಾಲ ಸಾಕಷ್ಟು ಆಹಾರ ದೊರೆಯದಿದ್ದುದರಿಂದ ಕ್ಷಯ ಮೊದಲಾದ ನಾನಾರೋಗಗಳಿಗೆ ತುತ್ತಾಗಿದ್ದಾರೆ. ಅದರ ಸುತ್ತಲೂ ಬೋಸ್ನಿಯೋ, ಹರ್ಜೆಗೋವಿನಾ, ಮಾಂಟೆನೀಗ್ರೊ ದೇಶಗಳ ಅವಸ್ಥೆಯು ಸರ್ವಿಯಾಕ್ಕಿಂತಲೂ ಭಯಂಕರವಾಗಿದೆ. ಹೀಗೆ ಯೂರೋಪು ಖಂಡದ ಸ್ಥಿತಿಯು ನಾನಾ ವಿಧದಲ್ಲಿ ಇನ್ನೂ ತೊಂದರೆಗೆ ಈಡಾಗಿರುವುದರಿಂದ ಮೊದಲಿನಂತೆ ಸಾಮಾನುಗಳು ಹೇರಳವಾಗಿ ನಿರ್ಮಿತವಾಗಲಿಕ್ಕೂ ವಿದೇಶಗಳಿಗೆ ಸಾಗಿಬರಲಿಕ್ಕೂ ಅವಕಾಶವಿಲ್ಲದಿರುವ ಕಾರಣ ನಮಗೆ ಅವು ಅಗ್ಗವಾಗಿ ಸಿಕ್ಕುತ್ತಿಲ್ಲ.

ನಮ್ಮ ಭರತಖಂಡದಲ್ಲಿ ಮೂಲ ವಸ್ತುಗಳಿಗೆ ಕೊರತೆಯಿಲ್ಲ. ಹಲವು ಕಡೆ ಕಲ್ಲಿದ್ದಲ ಅಪೇಕ್ಷೆಯೇ ಇಲ್ಲದೆ ಪ್ರವಾಹಗಳ ಪತನದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ತನ್ಮೂಲಕವೂ ಅಥವಾ ಕಾಡುಸವಿದೆಗಳ ಮೂಲಕವೂ ಯಂತ್ರಗಳನ್ನು ನಡೆಯಿಸುವುದಕ್ಕೆ ಅವಕಾಶವಿದೆ. ಆದರೆ ಇಲ್ಲಿಯ ಪ್ರಜೆಗಳಿಗೆ ಆ ತೆರದ ಆರ್ಥಿಕ ಸಂಪಾದನೆಯ ಮೇಲೆ ಗಮನವು ಕಡಿಮೆ; ರಾಜಕೀಯ ವಿಷಯಕ್ಕೆ ಬಡಿದಾಡುವುದೇ ಹೆಚ್ಚು. ಅಲ್ಲದೆ ಈಗ ಪ್ರಯತ್ನಪಟ್ಟರೂ ತತ್ಕಾಲಕ್ಕೆ ಸಾಧ್ಯವಾಗುವುದಿಲ್ಲ. ಯಂತ್ರನಿರ್ಮಾಣವು ನಮ್ಮಲ್ಲಿ ಆಗುವಂತಿಲ್ಲ. ಅವುಗಳು ಸೀಮೆಯಿಂದಲೇ ಬರಬೇಕು. ಇದರಿಂದ "ಹಲ್ಲಿದ್ದವರಿಗೆ ಕಡಲೆಯಿಲ್ಲ ಕಡಲೆಯಿದ್ದವರಿಗೆ ಹಲ್ಲಿಲ್ಲ" ಎಂಬ ಗಾಥೆಯಂತೆ ಪ್ರಪಂಚದ ಸ್ಥಿತಿಯಾಗಿದೆ. ಅದುಕಾರಣ ಪೂರ್ವದ ಸ್ಥಿತಿಯು ಪ್ರಪಂಚದಲ್ಲಿ ಉಂಟಾಗಬೇಕಾದರೆ ಇನ್ನೂ ಕೆಲ ವರ್ಷಗಳೇ ಕಳೆಯಬೇಕೆಂದು ತೋರುತ್ತದೆ.

ಒಳದೇಶದ ವೃತ್ತಾಂತಗಳು.

ಹಿಂದುಳಿದ ವೇತನಗಳಿಗೆ ಹಳೆ ಪೈಕದವರೂ ಪಾತ್ರರೆಂದು ನಿರ್ಧರಿಸಿ, ಈಡಿಗರಿಗಾಗಿ ತೆಗೆದಿಟ್ಟಿರುವ ಹಣದಲ್ಲಿ ಇವರಿಗೂ ವೇತನವನ್ನು ಕೊಡತಕ್ಕದೆಂದು ಎ. ಇನ್|| ಜನರಲ್‌ರವರು ಅಪ್ಪಣೆ ಮಾಡಿದ್ದಾರೆ.

ಮೈಸೂರು ಡಿಸ್ಟ್ರಿಕ್ಟಿನ ಹಲವು ಕಡೆ ಕಳೆದ ವಾರ ಸ್ವಲ್ಪ ಮಳೆಯಾದುದರಿಂದ ಜೋಳದ ಪೈರಿಗೆ ಅನುಕೂಲವಾಯಿತು. ಹುಣಸೂರು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಮಳೆಯು ಹೆಚ್ಚಾಗಿ ಪೈರು ಕೆಂಚು ಹಿಡಿದಿವೆ.

ಬೆಂಗಳೂರಿನಲ್ಲಿ ನಡೆಯಲಿಕ್ಕಿರುವ ಕೀರ್ತನ ಸಮ್ಮೇಳನವು ಬರುವ ಜುಲೈ ತಾ|| ೪ ರಿಂದ ೧೧ ರ ವರೆಗೆ ದಿ|| ಬ|| ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು. ಸಾಯಂಕಾಲದ ಹೊತ್ತು ಕೀರ್ತನಗಳೂ ಬೆಳಗಿನ ಹೊತ್ತು ಉಪನ್ಯಾಸಗಳೂ ನಡೆಯುವುವು.

ರಾಜಧಾನಿಯ ಕಲಿಜಿಯೇಟ್ ಹೈಸ್ಕೂಲಿನ ಹೆಡ್ಮಾಸ್ಟರಾಗಿದ್ದ ಮ|| ಕೃಷ್ಣಯ್ಯಂಗಾರರವರು ನಿವೃತ್ತರಾದುದರಿಂದ ಆ ಸ್ಥಳಕ್ಕೆ ಸಂಪದಭ್ಯುದಯ ಸಮಾಜದ ವಿದ್ಯಾಶಾಖಾ ಬೋರ್ಡಿನ ಸೆಕ್ರೆಟರಿಯಾಗಿದ್ದ ಮ|| ಕೆ. ಶ್ರೀನರಸಿಂಹಯ್ಯ, ಎಂ. ಎ. ಎಲ್. ಟಿ. ಯವರು ನಿಯಮಿಸಲ್ಪಟ್ಟಿರುವರು.

ಬೊಂಬಾಯಿ ಗೌರ್ನರ್ ದಂಪತಿಗಳು ಕಳೆದ ಮಂಗಳವಾರ ಸಾಯಂಕಾಲ ೫ ಘಂಟೆಗೆ ನೀಲಗಿರಿಯಿಂದ ಮೋಟಾರಿನ ಮೇಲೆ ರಾಜಧಾನಿಗೆ ದಯಮಾಡಿ ಶ್ರೀಮನ್ಮಹಾರಾಜರವರ ಅತಿಥ್ಯದಲ್ಲಿದ್ದು ಬುಧವಾರ ಸಾಯಂಕಾಲ ೬ ಘಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಬೊಂಬಾಯಿ ಕಡೆಗೆ ದಯಮಾಡಿದರು.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿ ಹೋಗುತ್ತಿದ್ದ ಒಂದು ಮೋಟಾರನ್ನು ನೋಡಿ ಒಂದು ಆಕಳು ಓಡಿಬಂದು ಅದರ ಮೇಲೆ ಬಿದ್ದು ತಿವಿಯಲಿಕ್ಕೆಂದು ಕೊಂಬುಗಳನ್ನು ಚಕ್ರಕ್ಕೆ ಚುಚ್ಚಲು ಬಂಡಿಯ ರಭಸದಿಂದ ಅದರ ಕೊಂಬು ಕೀಚಿಬಿದ್ದುದಲ್ಲದೆ ಆಕಳು ನೆಲಕ್ಕೆ ಅಪ್ಪಳಿಸಿಬಿದ್ದು ಸ್ವಲ್ಪ ಹೊತ್ತಿನಲ್ಲಿ ಸತ್ತಿತು.

ಬೆಂಗಳೂರಿಗೆ ಶ್ರೀ ಪ್ರಿನ್ಸ್-ಆಫ್-ವೇಲ್ಸ್‌ರವರು ದಯಮಾಡಿಸಿದ್ದಾಗ ಅವರ ಸತ್ಕಾರಕ್ಕೆ ೨೦೦೦ ರೂ. ಗಳನ್ನು ವೆಚ್ಚಮಾಡಿ ಒಂದು ವಿಜ್ಞಾಪನ ಪತ್ರವನ್ನು ಸಮರ್ಪಿಸಬೇಕೆಂದು ಕಂಟೋನ್ಮೆಂಟ್ ಮ್ಯುನಿಸಿಪಾಲಿಟಿಯವರು ನಿರ್ಧರಿಸಿದ್ದಾರೆ. ಈ ಶ್ರೀಮದ್ಯುವರಾಜರು ಮೈಸೂರು ದೇಶಕ್ಕೆ ದಯಮಾಡಿದಾಗ್ಗೆ ಒಟ್ಟು ೪ ದಿನಗಳು ಮಾತ್ರ ಈ ದೇಶದಲ್ಲಿರುತ್ತಾರೆ. ಅದರಲ್ಲಿ ೨ ದಿನಗಳ ಕಾಲ ರಾಜಧಾನಿಯಲ್ಲಿರುತ್ತಾರೆ.

ಕೆಲಕಾಲ ಮೈಸೂರು ಮಹಾರಾಜ ಕಾಲೇಜಿನಲ್ಲೂ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲೂ ಕನ್ನಡ ಪಂಡಿತರೂ ಮತ್ತು ವೆಸ್ಲಿಯನ್ ಮಿಷನ್ ಸಂಘದಲ್ಲಿ ಗ್ರಂಥಶೋಧಕರೂ ಆಗಿದ್ದ ವೇ|| ಬಿ. ಎಂ. ಸಿದ್ಧಲಿಂಗಶಾಸ್ತ್ರಿಗಳವರು ಕಳೆದ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಕಾಲದಲ್ಲಿ ಅರಮನೆ ಆಸ್ಥಾನ ವಿದ್ವಾಂಸರಾಗಿ ಸೇರಿಸಲ್ಪಟ್ಟರೆಂದು ತಿಳಿಯಿಸಲು ಸಂತೋಷಪಡುತ್ತೇವೆ. ಇವರು ಕನ್ನಡದಲ್ಲೂ ಸಂಸ್ಕೃತದಲ್ಲೂ ಒಳ್ಳೆ ಪಂಡಿತರಾಗಿರುತ್ತಾರೆ. ಇವರೂ ಸೇರಿ ಆಸ್ಥಾನದ ವಿದ್ವಾಂಸರುಗಳಲ್ಲಿ ನಾಲ್ವರು ವೀರಶೈವರಿರುವರು. ಹೀಗೆಯೇ ಅರ್ಹರಾದ ವಿದ್ವಾಂಸರುಗಳೆಲ್ಲರೂ ಸೇರಿಸಲ್ಪಡುವರಾಗಲೆಂದು ಹಾರೈಸುತ್ತೇವೆ.

ವರಮಾನದ ತೆರಿಗೆಯ ಶಾಸನವು ಜುಲೈ ತಾ|| ೧೬ ರಲ್ಲಿ ಶ್ರೀಮನ್ಮಹಾರಾಜರ ಒಪ್ಪಿಗೆಯನ್ನು ಪಡೆಯಿತು. ಬರುವ ಜುಲೈ ೧ ರಿಂದ ಇದು ವ್ಯವಹಾರಕ್ಕೆ ಬರುವುದು. ಇದರ ಪ್ರಕಾರ ವರ್ಷಕ್ಕೆ ೨೪೦೦ ರೂ. ನಿಂದ ೯೦೦೦ ರೂ. ಒಳಗೆ ವರಮಾನವುಳ್ಳವರಿಂದ ರೂ. ೧ ಕ್ಕೆ ೩ ಪೈಯಂತೆಯೂ, ೯ ಸಾವಿರದ ಮೇಲೆ ೨೫ ಸಾವಿರದೊಳಗೆ ವರಮಾನವುಳ್ಳವರಿಂದ ರೂ. ಗೆ ೪|| ಪೈಯಂತೆಯೂ, ೨೫ ಸಾವಿರದಿಂದದ ೫೦ ಸಾವಿರದ ವರೆಗೆ ವರಮಾನವುಳ್ಳವರಿಂದ ರೂ. ಗೆ ೬ ಪೈಯಂತೆಯೂ, ೫೦ ರಿಂದ ೭೫ ಸಾವಿರದ ವರೆಗೆ ವರಮಾನವುಳ್ಳವರಿಂದ ರೂ. ಗೆ ೯ ಪೈಯಂತೆಯೂ, ೭೫ ಸಾವಿರಕ್ಕೆ ಮೇಲ್ಪಟ್ಟ ವರಮಾನವುಳ್ಳವರಿಂದೆಲ್ಲಾ ರೂ. ಗೆ ೧ ಆಣೆಯಂತೆಯೂ ತೆರಿಗೆಯು ಎತ್ತಲ್ಪಡುವುದು. ವರ್ಷಕ್ಕೆ ೨೪೦೦ ರೂ. ಗೆ ಒಳಪಟ್ಟ ವರಮಾನವುಳ್ಳವರಿಗೆ ಈ ತೆರಿಗೆಯಿಲ್ಲ. ಮೈಸೂರು ದೇಶದಲ್ಲಿರುವ ಹೊರದೇಶಗಳ ಕಂಪೆನಿಗಳವರು ಕೂಡ ಈ ತೆರಿಗೆಯನ್ನು ಕೊಡಬೇಕು.

ಬಡವರಾದ ರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರೆಯುವುದಕ್ಕಾಗಿ ಡಿಸ್ಟ್ರಿಕ್ಟ್ ಆಸ್ಪತ್ರೆಗಳಿಗೆ ಕಳುಹಿಸಿಕೊಡುವುದಕ್ಕಾಗಿ ತಾಲ್ಲೂಕು ಬೋರ್ಡಿನವರು ವರ್ಷಕ್ಕೆ ೧೦ ರೂ. ಗಳ ವರೆಗೂ ಡಿಸ್ಟ್ರಿಕ್ಟು ಆಸ್ಪತ್ರೆಗಳಿಂದ ಬೆಂಗಳೂರು ಮೈಸೂರುಗಳಲ್ಲಿರುವ ದೊಡ್ಡ ಆಸ್ಪತ್ರೆಗಳಿಗೆ ರೋಗಿಗಳನ್ನು ಕಳುಹಿಸಿಕೊಡುವುದಕ್ಕೆ ವರ್ಷಕ್ಕೆ ಆಯಾ ಡಿಸ್ಟ್ರಿಕ್ಟ್ ಆಸ್ಪತ್ರೆಗಳವರು ೨೫ ರೂ. ಗಳವರೆಗೂ, ಬೆಂಗಳೂರು ಮೈಸೂರು ದೊಡ್ಡ ಆಸ್ಪತ್ರೆಗಳವರೂ ಮತ್ತು ಮಿಂಟೋ ಕಣ್ಣಾಸ್ಪತ್ರೆಯವರೂ ಸಹ ತಮ್ಮಲ್ಲಿಗೆ ಚಿಕಿತ್ಸೆಗೆ ಬಂದಿದ್ದ ಬಡ ರೋಗಿಗಳನ್ನು ಅವರವರ ಊರುಗಳಿಗೆ ಹಿಂದಿರಿಗಿ ಕಳುಹಿಸಿಕೊಡುವ ಬಗೆಗೆ ವರ್ಷಕ್ಕೆ ೫೦ ರೂ. ಗಳವರೆಗೂ ವೆಚ್ಚಮಾಡಬಹುದೆಂದು ಸರ್ಕಾರದಪ್ಪಣೆಯಾಗಿದೆ. ಈ ಅಪ್ಪಣೆಯು ತಾಲ್ಲೂಕುವಾರು ಗ್ರಾಮಾಂತರಗಳ ಬಡಜನರಿಗೆ ಗೊತ್ತಿಲ್ಲ. ಗ್ರಾಮಉದ್ಯೋಗಿಗಳು ತಿಳಿಯಪಡಿಸಬೇಕು. ಗೊತ್ತಾದರೆ ನಿವಾರಣೀಯವಾದ ರೋಗಗಳಿಂದ ಮೃತ್ಯುವಶರಾಗುತ್ತಿರುವ ಅನೇಕ ಜನರು ಈ ಸಹಾಯವನ್ನು ಉಪಯೋಗಿಸಿಕೊಂಡು ಬದುಕಬಹುದು. ಸಹಾಯವನ್ನು ಕೋರುವವರ ಸಂಖ್ಯೆಯು ಹೆಚ್ಚಾದರೆ ಸರ್ಕಾರದವರೂ ಕೂಡ ಈ ಸಹಾಯದ್ರವ್ಯವನ್ನು ಹೆಚ್ಚಿಸಿಕೊಟ್ಟಾರು.

ಭರತಖಂಡದ ವೃತ್ತಾಂತಗಳು.

ಭರತಖಂಡದ ನಾರ್ತ್‌ವೆಸ್ಟ್ ರೈಲ್ವೆಯ ಕೆಲಸಗಾರರು ಕಂಪೆನಿಯವರು ಕೊಟ್ಟಿದ್ದ ಭರವಸೆಯಂತೆ ಕೆಲಸಕ್ಕೆ ಸೇರಿದ್ದು ತಮ್ಮಲ್ಲಿ ೬ ಮಂದಿಯನ್ನು ತೆಗೆದು ಹಾಕಿಬಿಟ್ಟುದರಿಂದ ಮತ್ತೆ ೧೬ ಸಾವಿರ ಜನರು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ.

ಪದೇಪದೇ ಹಲವುಕಡೆ ಕೂಲಿಕಾರರು ಕೆಲಸಬಿಟ್ಟು ಮುಷ್ಕರ ಹಿಡಿದು ನಿಲ್ಲುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸಬೇಕೆಂದು ಮದ್ರಾಸು ವಾಣಿಜ್ಯ ಸಂಘದವರೂ ಕೈಗಾರಿಕೆಯ ಯಜಮಾನರೂ ನಿಶ್ಚಯಿಸಿರುವರು.

ಸೀಮೆಯಿಂದ ಭರತಖಂಡಕ್ಕೆ ಬರುವ ಅಂಚೆಯೆಲ್ಲಾ ಇನ್ನುಮುಂದೆ ಬೊಂಬಾಯಿಗೆ ಪ್ರತಿ ಸೋಮವಾರದ ದಿವಸವೇ ಬಂದು ಸೇರುವಂತೆ ಏರ್ಪಡಿಸುವವರಾಗಿದ್ದಾರೆ. ಅಲ್ಲಿಂದ ಬಂದ ಅಂಚೆಯು ಪ್ರತಿ ಬುಧವಾರ ಮದ್ರಾಸಿನಲ್ಲಿ ಕೊಡಲ್ಪಡುವುದು. ಇದಕ್ಕೆ ಹಿಂದೆ ಅಂಚೆಯ ಹಡಗು ಯಾವ ದಿನ ಬರುವುದೆಂಬುದು ಗೊತ್ತೇ ಇರುತ್ತಿರಲಿಲ್ಲ.

ಸದ್ಯದ ರಾಜಕೀಯ ವಿಷಯಗಳನ್ನು ಕುರಿತು ಪರ್ಯಾಲೋಚಿಸಲಿಕ್ಕೆ ಒಂದು ಪ್ರತ್ಯೇಕ ರಾಷ್ಟ್ರೀಯ ಮಹಾಸಭೆಯನ್ನು ಕೂಡಿಸಬೇಕೆಂದು ಕಾಂಗ್ರೆಸ್ ಸ್ಥಾಯಿ ಸಂಘದವರು ಕಾಶಿಯಲ್ಲಿ ನಿರ್ಧರಿಸಿರುವಷ್ಟೆ. ಅದರಂತೆ ಆ ಮಹಾಸಭೆಯು ಬರುವ ಅಕ್ಟೋಬರ್ ತಿಂಗಳೊಳಗಾಗಿ ಗಂಜಾಂ ಜಿಲ್ಲೆಗೆ ಸೇರಿದ ಬರ್ಹಾಂಪುರದಲ್ಲಿ ಕೂಡುವುದೆಂದು ನಿಶ್ಚಯವಾಗಿದೆ.

ಸೀಮೆಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರ ಆಫೀಸಿನ ವೆಚ್ಚದ ಭಾರವೆಲ್ಲಾ ಭರತಖಂಡವೇ ಹೊತ್ತಿದ್ದಿತು. ಅದನ್ನು ಸಾಮ್ರಾಜ್ಯಸರ್ಕಾರವು ವಹಿಸಿಕೊಳ್ಳಬೇಕೆಂದು ಭಾರತೀಯರು ಕೇಳಿಕೊಳ್ಳುತ್ತಿದ್ದರು. ಬರುವ ಸರ್ಕಾರಿ ವರ್ಷದಿಂದಲೂ ಆ ಆಫೀಸಿನ ವೆಚ್ಚದಲ್ಲಿ ೨೩೬೧೦ ಪೌನುಗಳನ್ನು ತಾವು ವಹಿಸಿಕೊಳ್ಳುತ್ತೇವೆಂದು ಸಾಮ್ರಾಜ್ಯ ಸರ್ಕಾರದವರು ಹೇಳಿದ್ದಾರೆ.

ವಾಯವ್ಯದ ಸರಹದ್ದು ಪ್ರಾಂತದಲ್ಲಿ ತಂಟೆಮಾಡುತ್ತಿದ್ದ ಜನರಲ್ಲಿ ಮಹಮೂದ್‌ಜನರು ೧೮೯ ಗೌರ್ನಮೆಂಟ್ ಬಂದೂಕು ತುಪಾಕಿಗಳನ್ನು, ೨೫೦ ಟ್ರೈಬಲ್ ತುಪಾಕಿಗಳನ್ನೂ ೮೬೬೨ ರೂ. ಅರ್ಥದಂಡವನ್ನೂ ಆಂಗ್ಲೇಯರಿಗೆ ಒಪ್ಪಿಸಿದರು. ಅವರಲ್ಲಿ ⅓ ಭಾಗ ಜನರು ನಮ್ಮವರು ಹೇಳಿದ ನಿಬಂಧನೆಗೆ ಒಪ್ಪಿಕೊಂಡರು. ಮಲ್ಲಿಕ್‌ಹುಸೇನನ ಒಕ್ಕಲವರು ಹೊರತು ಅಬ್ದುಲ್ಲಾ ಪಕ್ಷದ ಮಲ್ಲಿಕ್ಕರೆಲ್ಲಾ ಸಂಧಿಮಾಡಿಕೊಳ್ಳುತ್ತೇವೆಂದು ತಂತ್ರೀವಾರ್ತೆ ಕೊಟ್ಟಿದ್ದಾರೆ.

ಕೊಫೆವಾಡಿಯ ಕಡೆ ವಿಪರೀತವಾದ ಬಿರುಗಾಳಿಯು ಬೀಸಿ ಕಡೆಗೆ ಕುಂಭವೃಷ್ಟಿಯು ಸುರಿಯಿತು. ಅದರಿಂದ ಅಪಾರವಾದ ನಷ್ಟವಾಯಿತು. ಊರುಕೇರಿ ಕಾಡುಗಳಲ್ಲೆಲ್ಲಾ ನೀರು ಪ್ರವಾಹವಾಗಿ ಹರಿಯಿತು. ಮನೆಗಳ ಮೇಲಣ ಹಂದರಗಳೆಲ್ಲಾ ಎಲೆಯಂತೆ ಹಾರಿಹೋದುವು. ತಂತಿಕಂಬಗಳು ಉರುಳಿದುವು. ಅಂಚೆಯೂ ತಂತ್ರೀವಾರ್ತೆಗಳೂ ನಿಂತುಹೋದುವು. ರೈಲುಬಂಡಿಗಳ ತಿರುಗಾಟವು ಸ್ವಲ್ಪ ಕಾಲ ನಿಂತುಹೋಯಿತು. ಎಲ್ಲೆಲ್ಲೂ ಮರಗಳು ಬುಡಕಿತ್ತು ಉರುಳಿದುವು. ಹಲವು ಸಾವಿರ ದನಕರುಗಳು ಸತ್ತವು.

ಬೆಸೊದಾಸ್ ಬಿಹಾರಿದಾಸ್ ಎಂಬ ಒಬ್ಬ ಅಲಿಘರಿನ ವರ್ತಕನು ತನ್ನ ಅಂಗಡಿ ಬಾಗಿಲನ್ನು ಹಾಕಿಕೊಂಡು ರಾತ್ರಿ ೯ ಗಂಟೆಯಲ್ಲಿ ತನ್ನ ಮನೆಗೆ ಹೋಗುತ್ತಿರುವಲ್ಲಿ ಡಂಡಂಕಂಟೋನ್ಮೆಂಟಿನ ಹತ್ತಿರ ೫ ಮಂದಿಗಳು ಬಂದು ಆತನ ಮೇಲೆ ಬಿದ್ದು ಹೊಡೆದು ಕೊಂದು ಅವನಲ್ಲಿದ್ದ ಬೀಗದ ಕೈಯನ್ನು ತೆಗೆದುಕೊಂಡು ಷಾಪಿಗೆ ಹೋಗಿ ಬೀಗವನ್ನು ತೆರೆದು ಒಳಗಿದ್ದ ೨೦ ಸಾವಿರ ರೂ. ಗಳನ್ನೂ ಕೆಲವು ನಗಗಳನ್ನೂ ಅಪಹರಿಸಿಕೊಂಡು ಹೋದರು. ಪೊಲೀಸರು ಕಳ್ಳರನ್ನು ತಡಕುತ್ತಿದ್ದಾರೆ.

ಭರತಖಂಡದ ಸರ್ಕಾರದವರು ಸೇಕಡಾ ೬-೫ ರೂ. ಗಳ ಬಡ್ಡಿಯ ಮೇರೆ ಬರುವ ಜುಲೈ ತಾ|| ೫ ರಿಂದ ಅಗಸ್ಟ್ ತಾ|| ೧೪ ರ ವರೆಗೆ ಸಾಲ ತೆಗೆಯುವರು. ಹಿಂದೆ ಯುದ್ಧಋಣದ ಪತ್ರವನ್ನು ಕೊಂಡು ೧೯೨೦-೨೧ ೨೨-೨೩ ವರ್ಷಗಳಲ್ಲಿ ಹಣವನ್ನು ಮರಳಿ ವಾಪಸ್ ಪಡೆಯಲು ಗೊತ್ತುಮಾಡಿಕೊಂಡು ಸಾಲಕೊಟ್ಟಿದ್ದವರು ಕೊಡಬೇಕಾಗಿದ್ದರೆ ಅವನ್ನು ಮುಂದೆ ೧೯೪೫-೧೯೫೦ ವರ್ಷಗಳ ಮಧ್ಯೆ ವಾಪಸ್ ಪಡೆಯುವ ಪತ್ರಗಳ ರೂಪದಲ್ಲಿ ಬದಲಾಯಿಸಿಕೊಳ್ಳಬಹುದೆಂದೂ ಅವಕಾಶ ಕೊಟ್ಟಿರುವರು.

ಪಂಜಾಬು ಮೇಲುಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಟಿಫನಲ್ ಎಂಬ ಯೂರೋಪ್ಯರನ್ನು ಯಾರೋ ಬಂಡಿಯಲ್ಲೇ ಕೊಲೆ ಮಾಡಿದರಷ್ಟೆ. ೧೦ ಸಾವಿರ ರೂ. ಬಹುಮಾನ ಕೊಡುತ್ತೇವೆಂದು ಪ್ರಕಟನಮಾಡಿದ್ದರೂ ಕೊಲೆಪಾತಕನು ಇನ್ನೂ ಸಿಕ್ಕಿಲ್ಲ. ಆ ಹತ್ಯವನ್ನು ಪೊಲೀಸರು ವಿಚಾರಣೆ ಮಾಡುವುದರಲ್ಲಿ ಅವರಿಗೆ ತೋರಿಬಂದ ವಿಷಯವನ್ನು ಪ್ರಕಟಿಸಿದ್ದಾರೆ. ಅದರ ಪ್ರಕಾರಕ್ಕೆ ಕೊಲೆಯು ಈರ್ಷ್ಯಾಸೂಯೆಯಿಂದ ನಡೆದುದಾಗಿಲ್ಲವೆಂದೂ ಅವನಲ್ಲಿದ್ದ ಹಣವನ್ನು ಕಳುವುದಕ್ಕಾಗಿಯೇ ಯಾವನೋ ದುಷ್ಟನು ಬಂಡಿ ಹೋಗುತ್ತಿರುವಾಗ ಕಿಟಕಿಯ ಹೊರಗೆ ನಿಂತು ಹೊಡೆದು ಬೀಳಿಸಿ ಬಳಿಕ ಒಳನುಗ್ಗಿ ಹೋರಾಡಿ ಕೊಂದಿರುವನೆಂದು ಗೊತ್ತಾಗುತ್ತದೆ.

ಫಿಡ್ಲೆಪಿ ಕ್ರಾಸ್ ಎಂಬುವವರು ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿಯವರ ಇದಿರಿಗೆ ಯುದ್ಧದಿಂದ ಚಿನ್ನ ಬೆಳ್ಳಿಗಳ ಬೆಲೆಯು ಎಷ್ಟು ತಾರುಮಾರಾಯಿತೆಂಬುದನ್ನು ಕುರಿತು ಒಂದು ಉಪನ್ಯಾಸ ಮಾಡುವಾಗ್ಗೆ ಭರತಖಂಡವು ಕಳೆದ ೨೫ ವರ್ಷಗಳ ಕಾಲದಲ್ಲಿ ೨,೧೪,೬೨,೦೦೦ ಸವರನ್ ಭಂಗಾರವನ್ನು ಉಪಯೋಗಿಸಿಕೊಂಡಿದೆಯೆಂತಲೂ ಈಗ ಭರತಖಂಡದೊಳಗೆ ೯,೪೦,೦೦,೦೦೦ ಸವರನ್ನುಗಳ ಭಂಗಾರವು ಉಳಿದಿದೆಯೆಂತಲೂ ಈಗ ಹಿಂದುಸ್ಥಾನಕ್ಕೆ ಮುಖ್ಯವಾಗಿ ಬೇಕಾಗಿರುವುದು ವಿದ್ಯೆ ಧನಸಹಾಯ ಯಾನ ಸೌಕರ್ಯಗಳು. ಇವು ಮೂರನ್ನು ಸಂಪಾದಿಸುವುದಕ್ಕಾಗಿ ಹೆಚ್ಚು ಭಂಗಾರವು ಆ ದೇಶಕ್ಕೆ ಒದಗಿದಲ್ಲದೆ ತೀರದು ಎಂತಲೂ ಹೇಳಿರುವರು.

ಪಂಜಾಬಿನ ಹತ್ಯೆಯಿಂದ ಸುಪ್ರಸಿದ್ಧನಾಗಿರುವ ಜನರಲ್ ಡಯರ್ ಸೇನಾನಿಯ ಕೇಸಿನ ವಿಚಾರಣೆಯನ್ನು ಸೀಮೆಯಲ್ಲಿ ಮಾಡುತ್ತಿದ್ದ ಸೈನಿಕ ಸಂಘದವರು ಆತನು ನಿರ್ದೋಷಿಯೆಂದು ತೀರ್ಮಾನಿಸಿದರಂತೆ. ಸ್ವದೇಶ ಸಂಸ್ಥಾನದಲ್ಲಿ ಉನ್ನತೋದ್ಯೋಗದಲ್ಲಿರುವ ಒಬ್ಬ ದೊಡ್ಡ ಹಿಂದೂ ಕುಟುಂಬಿಯು ಹಂಟರ್‌ಸಂಘದ ವರದಿಯನ್ನೆಲ್ಲಾ ತಾನು ಚೆನ್ನಾಗಿ ಓದಿದನೆಂದೂ ರಾಜದ್ರೋಹಬುದ್ಧಿಯು ಪಂಜಾಬು ಪ್ರಜೆಗಳಲ್ಲಿ ನಾಟಿಕೊಂಡಿದ್ದರಿಂದ ಅವರು ಪ್ರಭುತ್ವದ ಮೇಲೆ ತಿಂಗಿಬಿದ್ದರೆಂದೂ, ಸರ್ ಒಡ್ವಯರ್‌ರವರೂ ಜನರಲ್ ಡಯರ್‌ರವರೂ ಧೈರ್ಯಮಾಡದಿದ್ದರೆ ೧೮೫೭ ನೆ ವರ್ಷದಲ್ಲಿ ಭರತಖಂಡದಲ್ಲಿ ಉಂಟಾಗಿದ್ದ ಅಲ್ಲಕಲ್ಲೋಲವೇ ಮರಳಿ ಉಂಟಾಗುತ್ತಿದ್ದಿತೆಂತಲೂ, ೧೮೫೭ ನೆ ವರ್ಷದಲ್ಲಿ ಸರ್ ಒಡ್ವಯರ್‌ರಂಥವರು ಅಧಿಕಾರದಲ್ಲಿಲ್ಲದಿದ್ದುದರಿಂದಲೇ ಅಷ್ಟು ಅನರ್ಥವಾಯಿತೆಂತಲೂ ಪಯೋನಿಯರ್ ಪತ್ರಿಕೆಗೆ ಬರೆದಿದ್ದಾನಂತೆ.

ಭಂಗಾರವನ್ನೂ ವಿದೇಶದ ನಾಣ್ಯಗಳನ್ನೂ ಅನ್ಯ ದೇಶಗಳಿಂದ ಭರತಖಂಡಕ್ಕೆ ತರಿಸಿಕೊಳ್ಳುವ ವಿಷಯದಲ್ಲಿ ಏರ್ಪಟ್ಟಿದ್ದ ನಿರ್ಬಂಧವನ್ನು ಜೂನ್ ತಾ|| ೨೧ ರಿಂದ ತೆಗೆದು ಹಾಕಿಬಿಡುವೆವೆಂತಲೂ, ೧ ಮತ್ತು ½ ಸೌವರನ್ನುಗಳನ್ನು ಲೀಗಲ್‌ಟೆಂಡರು ಮೂಲಕ ಕೊಡುತ್ತಿದ್ದುದನ್ನು ಇನ್ನು ಕೆಲಕಾಲದವರೆಗೆ ತಪ್ಪಿಸಿಬಿಡುವ ವಿಷಯದಲ್ಲಿ ಪ್ರತ್ಯೇಕ ಪ್ರಕಟನೆ ಮಾಡುವೆವೆಂತಲೂ, ಜುಲೈ ತಾ|| ೧೨ ರ ವರೆಗೆ ಯಾರು ತಂದುಕೊಟ್ಟರೂ ಸೌವರನ್ ೧ ಕ್ಕೆ ೧೫ ರೂ. ನಂತೆ ಸರ್ಕಾರದವರು ತೆಗೆದುಕೊಳ್ಳುವರೆಂತಲೂ, ಆ ತಾರೀಖಿನ ನಂತರ ಇಂಗ್ಲೀಷ್ ಭಂಗಾರದ ನಾಣ್ಯಗಳನ್ನು ಹೊರದೇಶಗಳಿಂದ ಯಾರು ಬೇಕಿದ್ದರೂ ಸ್ವತಂತ್ರವಾಗಿ ತರಿಸಿಕೊಳ್ಳಬಹುದೆಂತಲೂ ಸೌವರನ್ ಬೆಲೆಯು ೧೦ ರೂ. ಗಳಾಗಿರಬೇಕೆಂಬ ವಿಷಯಕ್ಕೆ ಒಂದು ಬಿಲ್ಲನ್ನು ಬರುವ ಸಾಮ್ರಾಜ್ಯ ಶಾಸನ ಸಭೆಗೆ ತರುವೆವೆಂತಲೂ ಸರ್ಕಾರದವರು ಪ್ರಕಟಿಸಿದ್ದಾರೆ. ಮತ್ತು ಜೂನ್ ತಾ|| ೨೪ ರಿಂದಾಚೆಗೆ ತಾವು ಮಾರುವ ಭಂಗಾರಕ್ಕೆ ಸವರನ್ ೧ ಕ್ಕೆ ೧೦ ರೂ. ಬೆಲೆಯಂತೆ ತೊಲಕ್ಕೆ ಆಗುವ ೧೫-೧೪-೧೦ ಕ್ಕೆ ಕಡಿಮೆಯಿಲ್ಲದ ಟೆಂಡರುಗಳನ್ನು ಅಂಗೀಕರಿಸುವೆವೆಂತಲೂ ತಿಳಿಸಿರುತ್ತಾರೆ. ಇದರಿಂದ ಚಿನ್ನದ ಬೆಲೆಯು ಬಲು ಬೇಗನೆ ಇಳಿದು ಹೋಗುವುದರಲ್ಲಿ ಸಂಶಯವಿಲ್ಲ.

ವಿದೇಶ ವೃತ್ತಾಂತಗಳು.

ಜರ್ಮನಿಯಲ್ಲಿ ನೂತನ ಮಂತ್ರಿವರ್ಗವು ಏರ್ಪಡಬೇಕಾಗಿದೆ. ಹಿಂದೆ ಇದ್ದ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟಿತು.

ಅಮೇರಿಕಾದಲ್ಲಿ ಸಕ್ಕರೆಗೆ ಕ್ಷಾಮ ಬಂದಿರುವುದರಿಂದ ಆ ದೇಶದಿಂದ ಹೊರಕ್ಕೆ ಯಾರೂ ಸಕ್ಕರೆಯನ್ನು ಸಾಗಿಸಲಾಗದೆಂದು ಕಟ್ಟುಮಾಡಿದ್ದಾರೆ.

ಸ್ಕಾಟ್ಲೆಂಡ್ ದೇಶದ ಅಬ್ರಡೀನ್ ಜಿಲ್ಲೆಯಲ್ಲಿ ೨ ಸಾವಿರ ಚದರಮೈಲಿಯ ಕಾಡಿಗೆ ಬೆಂಕಿ ಬಿದ್ದು ಅಪಾರ ನಷ್ಟವಾಯಿತು. ಕಾಡಿನಲ್ಲಿ ಅನೇಕ ಕೋಟ್ಯಂತರ ಜಿಂಕೆ ಮೊದಲಾದವುಗಳು ಸುಟ್ಟು ಭಸ್ಮವಾದುವು.

ಯುದ್ಧಕಾಲದಲ್ಲಿ ಇಂಗ್ಲೀಷರು ಫ್ರಾನ್ಸಿಗೆ ತೆಗೆದುಕೊಂಡುಹೋಗಿ ಅಲ್ಲಿ ಉಳಿದಿದ್ದ ಮದ್ದುಗುಂಡು ಮೊದಲಾದ ಸಾಮಾನುಗಳನ್ನು ಒಂದು ಇಂಗ್ಲೀಷ್ ಫ್ರೆಂಚ್ ಕಂಪೆನಿಯು ೨೦ ಲಕ್ಷ ಪೌನುಗಳಿಗೆ ಕೊಂಡುಕೊಂಡಿತು.

ತುರ್ಕಿಯ ಪ್ರತಿನಿಧಿಯಾದ ಮುಖ್ಯಮಂತ್ರಿಯು ವರ್ಸೇಲೀಸ್ ಪಟ್ಟಣಕ್ಕೆ ಬಂದು ಸಂಧಿಪತ್ರದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಇನ್ನಷ್ಟು ಕಾಲವನ್ನು ಹೆಚ್ಚಿಸಿಕೊಡಬೇಕೆಂದು ಸಂಧಿಸಭೆಯವರನ್ನು ಕೇಳಿಕೊಂಡಿರುವರಂತೆ.

ಈ ೧೯೨೦-೨೧ ನೆ ವರ್ಷದಲ್ಲಿ ಇಂಗ್ಲೀಷರ ಸೈನ್ಯವು ಈ ಕೆಳಗೆ ಕಂಡ ಪ್ರಕಾರ ಆಯಾಭಾಗದಲ್ಲಿರತಕ್ಕದೆಂದು ನಿರ್ಣಯಿಸಲ್ಪಟ್ಟಿದೆ. ಟೆರಿಟೋರಿಯಲ್ ಸೈನ್ಯ ೨,೩೬,೦೦೦ ಯುದ್ಧಕ್ಕೆ ಅಣಿಯಾಗಿರುವುದು ೩,೮೧,೦೦೦ ಬ್ರಿಟನ್ನಿನಲ್ಲಿ ೧೫,೦೦೦ ಜರ್ಮನಿಗೆ ಸೇರಿದ ರೈನ್ ನದೀ ಪ್ರಾಂತದಲ್ಲಿ ೧೬,೦೦೦ ಕಾನ್‌ಸ್ಟಾಂಟಿನೋಪಲಿನಲ್ಲಿ ೨೧,೦೦೦ ಈಜಿಪ್ಟಿನಲ್ಲಿ ೩೦,೦೦೦ ಪಾಲೆಸ್ಟೈನಿನಲ್ಲಿ ೨೨,೦೦೦ ಮೆಸಪೊಟೇಮಿಯಾದಲ್ಲಿ ೬೦,೦೦೦.

ಇದುವರೆಗೆ ತಂತಿಯಿಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಾರ್ತೆಗಳನ್ನು ಕಳುಹಿಸುವರೆಂಬ ಸುದ್ದಿಯನ್ನು ನಾವು ಕೇಳುತ್ತಿದ್ದೆವು. ಈಗಲಾದರೋ ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಯಂತ್ರಸಾಧನದ ಮೂಲಕ ಒಂದು ಕಡೆಯಲ್ಲಿ ಯಾರಾದರೂ ಹಾಡಿದರೆ ಎಷ್ಟೋ ದೂರದಲ್ಲಿರುವವರು ಅದನ್ನು ಕೇಳುವುದು ಸಾಧ್ಯವೆಂದು ಗೊತ್ತಾಗಿದೆ. ಮಾಡಂ ಮೆಲ್ಬಾ ಎಂಬುವಳು ಇಂಗ್ಲೆಂಡಿಗೆ ಸೇರಿದ ಚೆಲಮ್ಸ್‌ಫರ್ಡ್ ಎಂಬ ಗ್ರಾಮದಲ್ಲಿ ಕಳೆದ ತಾ|| ೧೫ ರಲ್ಲಿ ಕುಳಿತು ತಂತಿಯಿಲ್ಲದ ಟೆಲಿಫೋನಿನಲ್ಲಿ ಹಾಡಲಾಗಿ ಜರ್ಮನಿಗೆ ಸೇರಿದ ಬರ್ಲಿನ್ ಮೊದಲಾದ ಪಟ್ಟಣಗಳ ನಿವಾಸಿಗಳು ಆ ಹಾಡುಗಾರಿಕೆಯನ್ನು ಏಕಕಾಲದಲ್ಲಿ ಕೇಳಿದರು. ಅದೇ ಕಾಲದಲ್ಲಿ ಪ್ಯಾರಿಸ್ ಪಟ್ಟಣದವರು ಅದೇ ಹಾಡುಗಾರಿಕೆಯನ್ನು ಫೋನೋಗ್ರಾಫ್ ರಿಕಾರ್ಡಾಗಿ ಹಿಡಿದುಕೊಂಡಿರುವರು. ಒಂದು ಖಂಡದಲ್ಲಿ ಕುಳಿತು ಹಾಡಿದರೆ ಬೇರೆ ಖಂಡದವರು ಕೂಡ ಆ ಸಂಗೀತವನ್ನು ಇನ್ನುಮೇಲೆ ಕೇಳಬಹುದು.

ಐರ್ಲೆಂಡಿನ ಅವಸ್ಥೆಯು ಭೀಕರವಾಗುತ್ತಲಿದೆ. ತಮಗೆ ಹೋಂರೂಲು ದೊರೆತರೆ ಸಾಕೆಂದು ಕೋರುತ್ತಿದ್ದ ಅಲ್ಲಿನ ಜನರು ಈಗ ತಮಗೆ ರಿಪಬ್ಲಿಕ್ ಎಂದರೆ ಸಂಪೂರ್ಣ ಸ್ವತಂತ್ರ ಪ್ರಜಾಪ್ರಭುತ್ವವಾಗಬೇಕೆಂದು ಸಂಕಲ್ಪಿಸಿಕೊಂಡಿದ್ದಾರೆ. ಆಂಗ್ಲ ಪ್ರಭುತ್ವದವರು ಅದಕ್ಕೆ ಒಪ್ಪುವುದಿಲ್ಲ. ಅದರಿಂದ ಐರ್ಲೆಂಡ್ ಕೆಥೋಲಿಕ್ ಪ್ರಜೆಗಳು ಪೊಲೀಸರ ಮೇಲೂ ಸೈನಿಕರ ಮೇಲೂ ಕೈಮಾಡಿ ಕೊಲ್ಲುವುದು, ಸರ್ಕಾರಿ ಕಾರ್ಯಾಲಯಗಳನ್ನು ಸುಡುವುದು, ಬೊಕ್ಕಸಗಳನ್ನು ದೋಚಿಕೊಳ್ಳುವುದು ಇತ್ಯಾದಿ ರಾಕ್ಷಸ ಕೃತ್ಯಗಳನ್ನು ಮಾಡುತ್ತಿದ್ದಾರೆ. ಇವರನ್ನು ಸಾಮೋಪಾಯದಿಂದ ವಶಪಡಿಸಿಕೊಳ್ಳುವುದು ಅಸಾಧ್ಯವಾದುದರಿಂದ ಸರ್ಕಾರದವರು ಸೈನ್ಯವನ್ನು ಹೆಚ್ಚಾಗಿ ಕಳುಹಿಸಿ ಅದರ ಬೆದರಿಕೆಯಿಂದ ವಶಪಡಿಸಿಕೊಳ್ಳಲು ಉದ್ದೇಶಿಸಿರುತ್ತಾರೆ. ಹೀಗೆ ಅಲ್ಲಿಗೆ ಹೋಗುವ ಸೈನ್ಯವನ್ನು ಹೊಗೆ ಬಂಡಿಯ ಮೇಲೆ ಸಾಗಿಸುವುದಿಲ್ಲವೆಂದು ಐರ್ಲೆಂಡಿನ ರೈಲ್ವೆ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ. "ನೀವು ಸೈನ್ಯವನ್ನೂ ಮದ್ದುಗುಂಡು ಮೊದಲಾದುವುಗಳನ್ನೂ ಐರ್ಲೆಂಡಿಗೆ ಕಳುಹಿಸುವುದನ್ನು ನಿಲ್ಲಿಸಿಬಿಟ್ಟರೆ ಐರ್ಲೆಂಡಿನ ಕ್ರೌರ್ಯವನ್ನೆಲ್ಲಾ ನಿಲ್ಲಿಸಿಬಿಡಬೇಕೆಂದು ರೈಲ್ವೆಕೆಲಸಗಾರರು ಐರ್ಲೆಂಡ್ ಪ್ರಜೆಗಳನ್ನು ಕೋರಿಕೊಳ್ಳುವರು" ಎಂಬುದಾಗಿ ರೈಲ್ವೆಕೆಲಸಗಾರರ ಮುಖ್ಯಸ್ಥರಾದ ಥಾಮಸ್‌ರವರು ಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರಲ್ಲಿ ಹೇಳಿಕೊಳ್ಳಲು, ಅದಕ್ಕೆ ತಾವು ಒಪ್ಪುವುದಿಲ್ಲವೆಂದು ಮಂತ್ರಿಯವರು ಹೇಳಿದರು. ಮತ್ತು ನಮ್ಮ ಸೈನ್ಯವನ್ನೂ ಮದ್ದುಗುಂಡುಗಳನ್ನೂ ಸಾಗಿಸುವುದಿಲ್ಲವೆಂದು ರೈಲ್ವೆಕೆಲಸಗಾರರು ನಿರಾಕರಿಸಿದ ಪಕ್ಷದಲ್ಲಿ ಸರ್ಕಾರದವರು ಐರ್ಲೆಂಡ್ ಲೋಹಮಾರ್ಗಗಳನ್ನೆಲ್ಲಾ ಮುಚ್ಚಿಬಿಡುವರು ಎಂತಲೂ ಹೇಳಿದರು. ಹಾಗಾದರೆ ಮುಂದಣ ಸ್ಥಿತಿಯು ಬಹಳ ವಿಷಮವಾಗುವುದು ಎಂದು ಥಾಮಸ್‌ರವರು ಉತ್ತರ ಕೊಟ್ಟರು. ಈ ವೀರಾವೇಶಗಳನ್ನು ನೋಡಿದರೆ ಐರ್ಲೆಂಡ್ ಸಮಸ್ಯೆಯು ಮುಂದೆ ಬಹಳ ಭೀಕರವಾಗುವುದೇ ನಿಜವೆಂದು ಕಾಣುತ್ತದೆ.

ಪತ್ರವ್ಯವಹಾರ.

ಗುರುವರ್ಗ ವಿರಕ್ತಮೀಮಾಂಸೆ, ಮತ್ತು ಸಮಾಜವು

(ಲೇಖಕ ಚಂದ್ರಕಾಂತ ಬಿ. ಎ.)

ನಮ್ಮ ಭರತಖಂಡವೆಂಬುದು ಅನೇಕ ಧರ್ಮ ಜಾತಿ ಪಂಥಗಳ ಆಗರವಿರುತ್ತದೆ. ಆಯಾ ಧರ್ಮದವರು, ಆಯಾ ಜಾತಿಯವರು, ಆಯಾ ಪಂಥದವರು, ಆಯಾ ಪಂಗಡದವರು ತಮ್ಮ ತಮ್ಮ ದೃಷ್ಟಿಗೆ ಸರಿಯಾದ ಆಚಾರವಿಚಾರಗಳನ್ನೂ ಶಾಸ್ತ್ರೀಯ ದೃಷ್ಟಿಯಿಂದ ಒಪ್ಪಬಹುದಾದ ಧಾರ್ಮಿಕ ನಿಬಂಧನೆಗಳನ್ನೂ ಕಾಯ್ದುಕೊಂಡು ಸುವ್ಯವಸ್ಥೆಯಿಂದ ನಡೆಯಬೇಕಾದರೆ ಅವರವರು ತಮಗೆ ಹೊಳೆದ ಶಕ್ತ್ಯಿದ್ದಮಟ್ಟಿಗೆ ಏರ್ಪಾಡುಗಳನ್ನು ಮಾಡಿರಬಹುದು. ಇಂಥ ಉತ್ತಮರೀತಿಯ ವ್ಯವಸ್ಥೆಯನ್ನು ಮಾಡಿಕೊಂಡವರಲ್ಲಿ ವೀರಶೈವ ಸಮಾಜವು ಒಂದಾಗಿದೆಯೆಂದು ಕೈಯೆತ್ತಿ ಹೇಳಬಹುದು. ಈಗಿನ ಸರಕಾರವು ತನ್ನ ಆಡಳಿತೆಯು ಸರಿಯಾಗಿ ನಡೆಯಬೇಕಾದರೆ ದೇಶವನ್ನು ಅನೇಕ ಪ್ರಾಂತವಾಗಿ ವಿಭಾಗಿಸಿ ಮತ್ತದರಲ್ಲಿ ಜಿಲ್ಲೆಗಳೆಂದೂ ತಾಲ್ಲೂಕುಗಳೆಂದೂ ಮಾಡಿ ಅವುಗಳಿಗೆ ಮುಖ್ಯಾಧಿಕಾರಿಗಳನ್ನು ಏರ್ಪಡಿಸಿ ಮತ್ತೆ ಮೇಲೆ ಹಳ್ಳಿಹಳ್ಳಿಗೆ ಪಾಟೀಲ ಮುಂತಾದವರನ್ನು ಮಾಡಿಟ್ಟಿರುವರಷ್ಟೆ. ಇದೇ ಕಲ್ಪನಾಶಕ್ತಿಯೇ ನಮ್ಮ ಪೂರ್ವಜರಲ್ಲಿ ಎಷ್ಟರಮಟ್ಟಿಗಿತ್ತೆಂಬುದು ಈಗಿನ ಗುರುಸ್ಥಾನಗಳಿಂದಲೂ ಇಲಾಖಾದಾರರಿಂದಲೂ ಸಿಂಹಾಸನದವರಿಂದಲೂ ಒಡೆದು ಕಾಣುವುದು. ಧಾರ್ಮಿಕರೀತಿಯಿಂದ ಇಷ್ಟೇ ಅಲ್ಲ. ಲೌಕಿಕ ರೀತಿಯಿಂದ ನೋಡಿದರೆ ಪ್ರತಿಯೊಂದು ಸಾಧಾರಣ ಹಿರೇಮಠಗಳ ರಚನೆಯನ್ನು ವಿಚಾರಿಸಿದರೆ ಮುಸಾಫರಖಾನೆ (Traveller's Bungalow) ಗಳಂತೆಯೂ, ಬಣಕಾರರು, ಕಟ್ಟೀಮನೆಯವರು, ಸೆಟ್ಟರು ಮುಂತಾದವರು ವ್ಯವಸ್ಥಾಪಕರೆಂತಲೂ (Concitiators) ಹೇಳಬಹುದು. ಬಹಿಷ್ಕಾರ ಮೊದಲಾದವುಗಳಿಂದ ಅಂತರ್ವ್ಯವಸ್ಥೆಗಳನ್ನು ಮಾಡಬಲ್ಲವರು ಮ್ಯಾಜಿಸ್ಟ್ರೇಟ (Magistrates) ರಂತಿರುವರು. ಇತರ ವೈಷ್ಣವ ಶೈವ ಮೊದಲಾದ ಹಿಂದೂ ಧರ್ಮಗಳಲ್ಲಿಯಾಗಲೀ, ಜೈನರಲ್ಲಾಗಲೀ, ಮುಸಲ್ಮಾನರಲ್ಲಾಗಲೀ ಲೌಕಿಕ ವೈಭವದಿಂದ ಮೆರೆಯುವ ಕ್ರೈಸ್ತರಲ್ಲಾಗಲೀ ಇಂಥ ಸಮಾಜವ್ಯವಸ್ಥೆಯಿಲ್ಲ. ಈ ಪ್ರಕಾರ ಜಗತ್ತಿನಲ್ಲಿ ಯಾವ ಧರ್ಮದಲ್ಲಿಯೂ ಇಲ್ಲದಂಥ ಉಪಾಯಗಳಿಂದ ವ್ಯವಸ್ಥೆಗೊಳಿಸಿದ ಈ ಸಮಾಜದ ಗತಿ ಈಗೇನಾಗಿರುವದು? "ನಾನು ಹೆಚ್ಚು ನೀನು ಹೆಚ್ಚು" "ಯೂಯಂ ಯೂಯಂ ವಯಂ ವಯಂ" ಎಂಬ ಅಂತಃಕಲಹಗಳ ಇರುಕಿನಲ್ಲಿ ಸಿಕ್ಕಿ, ಸಮಾಜವು "ಒಲ್ಲೆನೋ ನಮ್ಮಪ್ಪಾ" ಎನ್ನುತ್ತಿರುವುದು. ಧಿಕ್ಕಾರ ಧಿಕ್ಕಾರ! ಇತ್ತಲಕ್ಷ್ಯ ಕೊಡದವರಿಗೆ ಧಿಕ್ಕಾರ! ಸಮಾಜದ ಉತ್ಕರ್ಷವನ್ನು ನೋಡದವರಿಗೆ ಧಿಕ್ಕಾರ! ಅಲ್ಪವಾದ ರೀತಿಯಿಂದ ಒಡಲಬೇನೆಯನ್ನಿಬ್ಬಿಸುವವರಿಗೆ ಧಿಕ್ಕಾರ! ಸಮಾಜ ಕಲ್ಯಾಣದ ಸೋಗನ್ನು ಹೊತ್ತು ಆತ್ಮಪ್ರತಿಷ್ಠೆಗೆ ಹೆಣಗುವವರಿಗೆ ಧಿಕ್ಕಾರ! ಶಾಸ್ತ್ರಬಾಹಿರರಿಗೆ ಧಿಕ್ಕಾರ! ಕರ್ತವ್ಯಹೀನರಿಗೆ ಧಿಕ್ಕಾರ!!.

ಯಾವ ಕಾರಣದಿಂದ ಈಡೀ ವಿಶ್ವವನ್ನೇ ವ್ಯಾಪಿಸಬಹುದಾದಷ್ಟು ಉದಾರತತ್ವಗಳಿಂದ ನಮ್ಮ ಸಮಾಜವು ತುಂಬಿ ತುಳುಕುತ್ತಿರುವದೋ ಅದೇ ಕಾರಣದಿಂದ ನಮ್ಮಲ್ಲಿ ಹಲವು ಪಂಗಡಗಳೂ ಒಳಪಂಗಡಗಳೂ ಉಂಟು. ಇಷ್ಟರಿಂದಲೇ ಅನ್ಯ ಸಮಾಜದವರಿಗಿಂತಲೂ ನಮ್ಮ ಸಮಾಜದ ಪ್ರತಿಯೊಂದು ವ್ಯಕ್ತಿಯಲ್ಲಿ ಆತ್ಮಸಂಯಮನ, ಪರಸ್ಪರ ಪ್ರೀತಿ, ಪರಸ್ಪರ ವಿಶ್ವಾಸ, ನಿರಹಂಕಾರಿತ್ವವೆಂಬಿವುಗಳು ಹೆಚ್ಚು ಬಲವತ್ತರವಾಗಿ ನೆಲೆಗೊಳ್ಳಲಿಕ್ಕೆ ಬೇಕು. ಆತ್ಮಸಮದೃಷ್ಟಿಯು ಬೇಕು. ಪಂಗಡಪಂಗಡದವರಲ್ಲಿ "ಯೂಯಂ ವಯಂ, ವಯಂ ಯೂಯಂ" ಎಂಬ ಉದಾತ್ತನೀತಿಯು ಬೇಕು. ಅಂದರೆಯೇ ನಮ್ಮ ಸಮಾಜ. ಅಂದರೆಯೇ ನಮ್ಮ ಸಮಾಜದ ಇರುವಿಕೆ. ನಮ್ಮ ಸಮಾಜದ ವೈಭವ. ಇಲ್ಲವಿದ್ದರೆ ಅವ್ಯವಸ್ಥೆಯೇ ಮೊಟ್ಟ! ಕೆಸ್‌ಬುವ್ವೆನ್ನುವ ಕಾಗೆಗಳ ಗೂಡು!! ಅಂದ ಮೇಲೆ ಇದರ ಜವಾಬುದಾರಿ ಯಾರದು? ಇದಕ್ಕೆ ಜವಾಬುದಾರರಾರು? ಎಲ್ಲ ಒಜ್ಜೆಯನ್ನು ಹೊತ್ತಿರುವ ಗುರುವರ್ಗದವರು. ಇನ್ನೊಂದು ರೀತಿಯಿಂದ ನಮ್ಮ ಸಮಾಜಕ್ಕೂ ಅನ್ಯಸಮಾಜಗಳಿಗೂ ವಿಶೇಷ ವೈಲಕ್ಷಣ್ಯವಿರುವದು. ಆ ಮಾತನ್ನು ಗುರುವರ್ಗದವರು ಯಾವಾಗಲೂ ತಮ್ಮ ಕಣ್ಣು ಮುಂದಿರಿಸಿಕೊಳ್ಳತಕ್ಕದ್ದಾಗಿದೆ. ಆ ಮಾತೆಂದರೆ ನಮ್ಮ ಸಮಾಜದಲ್ಲಿ ವಿರಕ್ತಪದವಿಯನ್ನೇರಿರುವ ನಿರಂಜನಮೂರ್ತಿಗಳ ಸಮಾವೇಶವು "ವಿರಕ್ತ" ಶಬ್ದದಿಂದರೇ ವಿರಕ್ತನಾದವನು ಪ್ರಾಪಂಚಿಕ ಸಮಾಜಕ್ಕೆ ತನ್ನ ಯಾವ ಪ್ರಕಾರದಲ್ಲೂ ಸಂಬಂಧವಿಡದೆ ಸಿಡಿದು ದೈವಿಕತತ್ಪರನಾಗಿ ತಾದಾತ್ಮ್ಯನಾಗಿರುವನೆಂದು ಸಾಧಾರಣವಾಗಿ ಹೇಳಬಹುದು. ಆದರೆ ಶಾಸ್ತ್ರದೃಷ್ಟಿಯಿಂದ ನೋಡಲಿ, ಅಥವಾ ವ್ಯವಹಾರ ರೀತಿಯಿಂದಲೇ ನೋಡಲಿ; ನಮ್ಮ ಮಾತು ಹಾಗಿಲ್ಲ. ವಿರಕ್ತಶಬ್ದಕ್ಕೆ ಸಾಮಾನ್ಯವಾದ ಅರ್ಥವನ್ನು ಕಲ್ಪಿಸಿ ಅವರು ನಮ್ಮ ಸಮಾಜಕ್ಕೆ ಏನೂ ಸಂಬಂಧವಿಲ್ಲ, ಅವರು ಬರೇ ತಪೋಯೋಗತತ್ಪರರಾದವರು, ಗುಡ್ಡದಲ್ಲಿ ಸೇರತಕ್ಕವರು, ಕೈಗೆ ಬೂದಿ ಬಡಕೊಂಡು ಬೈರಾಗಿಗಳಂತೆ ತಿರುಗತಕ್ಕವರು ಎಂದು ಎಂದರೆ ಅದು ಗೌಣವಾಗುವುದು. ವಿರಕ್ತವರ್ಗದವರು ನಮ್ಮ ಧರ್ಮಕ್ಕೆ ಗುರುವರ್ಗದವರಷ್ಟೇ ಪೂಜ್ಯರು ಅಥವಾ ಹೆಚ್ಚಿಗೆ ಪೂಜ್ಯರು ಎಂಬ ಮಾತನ್ನು ಒತ್ತಟ್ಟಿಗಿಟ್ಟು ಬುನಾದಿಯಿಂದ ನಡೆದು ಬಂದ ಪದ್ಧತಿಯನ್ನು ನೋಡಿದರೂ ಅವರೂ ಸಮಾಜೋದ್ಧರಣೆಯ ಕೆಲಸದಲ್ಲಿ ಕೆಲವುಮಟ್ಟಿಗೆ ಭಾಗದಾರರಲ್ಲವೇ? ಅಂದ ಮೇಲೆ ಸಮಾಜೋತ್ಕರ್ಷಕ್ಕೆ ಮುಖ್ಯ ಜವಾಬುದಾರರಾದ ಗುರುವರ್ಗದವರಿಗೆ ಇಂಥ ಶ್ರೇಷ್ಠ ಸಹಾಯಕ ಮಂಡಲವು ಬೆಂಬಲವಾಗಿ ನಡುಕಟ್ಟಿ ನಿಂತಲ್ಲಿ ತಾವು ಧನ್ಯರೆಂದು ಹರ್ಷಿಸತಕ್ಕದ್ದು ಸಹಜಿಕವಾದ ಮಾತಲ್ಲವೇನು? ಇದನ್ನೆಲ್ಲ ಮರೆತು ಇವರು ಸನ್ಯಾಸಿಗಳು, ಇವರು ಬೈರಾಗಿಗಳು, ಇವರು ಅಲ್ಲಿರತಕ್ಕವರು ಇಲ್ಲಿರತಕ್ಕವರು, ಇವರು ಅಂಥವರು, ಇವರು ಇಂಥವರು, ಎಂಬದಾಗಿ ನಾನಾ ತರದಿಂದ ಹೆಸರಿಟ್ಟು, ಇಂಥ ಮಹತ್ವದವೇಳೆಯಲ್ಲಿ ನಮ್ಮ ಕಣ್ಣಲ್ಲಿ ನಮ್ಮ ಬೊಟ್ಟು ಚುಚ್ಚಿಕೊಂಡು ಸಮಾಧಾನ ತಾಳುವಂಥ ವೃತ್ತಿಯನ್ನು ಹಿಡಿಯುವದು ಜಾಣತನದ ಮಾತಾಗಬಲ್ಲದೇನು? ಇದರಿಂದ ಗುರುವರ್ಗದವರು ಈಗ ಎನ್ನುವಂತೆ ಅವರ ಹಕ್ಕುಗಳನ್ನು ವಿರಕ್ತವರ್ಗದವರು ಉಪಭೋಗಿಸಬೇಕು, ಅವುಗಳನ್ನು ಕಳಕೊಂಡು ತಾವು ಮಾತ್ರ ಮಿಟ್ಟುಮಿಸುಕದಂತಿರಬೇಕೆಂಬ ಅಭಿಪ್ರಾಯವಲ್ಲ. ವಿರಕ್ತವರ್ಗದವರಲ್ಲಿ ಎಷ್ಟೋ ನಿರಂಜನಮೂರ್ತಿಗಳು ಗುರುವರ್ಗದವರ ಕಾರ್ಯಗಳನ್ನು ಮಾಡುತ್ತಿರಬಹುದು; ಅವರ ಹಕ್ಕುಗಳನ್ನು ನಡೆಯಿಸುತ್ತಿರಬಹುದು; ಮಾನಮರ್ಯಾದೆಗಳನ್ನು ಕಾಣುತ್ತಿರಬಹುದು; ಪೂಜಾಸಂಭಾವನೆಗಳನ್ನು ಸ್ವೀಕರಿಸುತ್ತಿರಬಹುದು. ಈ ಎಲ್ಲ ಹಕ್ಕುಮರ್ಯಾದೆ ಮೊದಲಾದವುಗಳನ್ನು ವಿರಕ್ತಮಠದವರು ಬಲುಮೆಯಿಂದ ಅಪಹರಿಸಿಕೊಂಡಿರುವರೇನು? ಈ ಎಲ್ಲ ಅಧಿಕಾರಗಳೂ ನಮಗೇ ಸಲ್ಲತಕ್ಕದ್ದೆಂದು ಸಾಧಿಸಿದರೇನು? ಹಾಗಿಲ್ಲದಿದ್ದರೆ ಈ ತರಹ ಸದ್ಯಕ್ಕೆ ಎದ್ದಿರುವ ಉಗ್ರವಾದ ಕೋಲಾಹಲವಾದರೂ ಯಾತಕ್ಕೆ ಬೇಕು? ಅದೂ ಒತ್ತಟ್ಟಿಗಿರಲಿ. ಈಗ ಗುರುವರ್ಗದವರ ಚರವಳಿಯಲ್ಲಿ ಸೇರಿದ ಸಿಂಹಾಸನಾಧಿಪತಿಗಳೇ ಎಷ್ಟೊ ಸಾರಿ ನಿರಂಜನಮೂರ್ತಿಗಳ ವೈಭವಕ್ಕೆ ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ ಅನುಕೂಲರಾಗಿರಬಹುದೋ ಏನೋ! ಎಷ್ಟೋ ಗುರುಮಠಾಧ್ಯಕ್ಷರು ಅವರ ವೈಭವಕಾರ್ಯಗಳಲ್ಲಿ ನಡುಕಟ್ಟಿ ನಿಂತಿರಬಹುದೋ ಏನೋ! ಆ ಚರವಳಿಯಲ್ಲಿ ಸೇರಿದ ಎಷ್ಟು ಶಿಷ್ಯಮಂಡಲಿಯು ನಿರಂಜನಮೂರ್ತಿಗಳ ವೈಭವಕ್ಕಾಗಿ ಹೊಡೆದಾಡಿ ಗುರುಗಳೂ ಶಿಷ್ಯರೂ ಕೂಡಿಯೇ ಸಹಿಯೊಡನೆ ಸಿಕ್ಕಿಬಿದ್ದಿರುವರೋ ಏನೋ! ಅಂದ ಮೇಲೆ ಇದರ ಅರ್ಥವಾದರೂ ಏನು? ಈ ದ್ವಿಜಿಹ್ವಾವೃತ್ತಿಯು ಸಿದ್ಧವಾದದ್ದೇ ನಿಜವಾದರೆ ಅದಕ್ಕೆ ಜನರು ಏನೆಂದು ಹೆಸರಿಟ್ಟಾರು! ಇವೆಲ್ಲ ಮಾತುಗಳನ್ನು ಸಾರಾಸಾರವಾಗಿ ವಿಚಾರಮಾಡತಕ್ಕದ್ದಾಗಿದೆ. ಅದೂ ಒತ್ತಟ್ಟಿಗಿರಲಿ.

ಶಾಸ್ತ್ರದಿಂದ ಈಗ ಗುರುವರ್ಗದವರೆನ್ನುವಂತೆ ವಿರಕ್ತರು ಯಾವುದಕ್ಕೂ ಯೋಗ್ಯರಲ್ಲೆಂದು ಅವರಂತೆಯೇ ಗ್ರಹಿಸಿದರೂ, ಸದ್ಯಕ್ಕೆ ಎಬ್ಬಿಸಿರುವ ಕೋಲಾಹಲವಾದರೂ ಸರಿಯೆ? ಅಂದರೆ ಹಕ್ಕು (ಅಧಿಕಾರಿಗಳ ಸ್ವಾಮಿತ್ವವು) ಗುರುವರ್ಗದವರದು. ಉಪಭೋಗಿಗಳು ವಿರಕ್ತರು. ಸ್ವಾಮಿತ್ವಕ್ಕೂ (Ownership) ಮತ್ತು ಉಪಭೋಗಕ್ಕೂ (Possession) ಯಾವಾಗಲೂ ಕಡುತರವಾದ ವೈರವಿರುವದೆಂದು ನ್ಯಾಯಶಾಸ್ತ್ರ ಪ್ರವೀಣರು (ವಕೀಲರು) ಹೇಳುತ್ತಾರೆ. ಅಂದರೆ ಸ್ವಾಮಿತ್ವವೂ ಉಪಭೋಗವೂ ಒಬ್ಬರಲ್ಲಿಯೇ ಸೇರಿದರೆ ಸರಿಯೇ ಸರಿ. ಸ್ವಾಮಿತ್ವವು ಒಬ್ಬರಲ್ಲಿ ಉಪಭೋಗವು ಒಬ್ಬರಲ್ಲಿ ಸೇರಿದರೆ, ಸ್ವಾಮಿಯು ಉಪಭೋಗವನ್ನು ಬಹು ದಿನಗಳಿಂದ ಕಳಕೊಂಡರೆ ಉಪಭೋಗಿಯೇ ಸ್ವಾಮಿ (Owner) ಯಾಗುವನಂತೆ! ಅಂದ ಮೇಲೆ ಬಹುದಿನದಿಂದ ನಡೆದುಬಂದಿರುವ ಪದ್ಧತಿಯನ್ನು ಸಡಲಿಸಬೇಕಾದರೆ ಈಗಿನ ಕೋಲಾಹಲವೇ? ಇದೂ ಬೇಡ.

ಮನುಷ್ಯನ ಸ್ವಭಾವವನ್ನು ವಿಚಾರಿಸಿದರೆ ಎಂಥ ಹಾದಿಯನ್ನು ಹಿಡಿದು ಹೋಗುವವನು ಸಹ ತನಗೆ ಸಿಕ್ಕಿದ್ದನ್ನು ತಿರುಗಿ ಕೊಡಬೇಕೆಂದರೆ ಮಿಡಿಮಿಡಿ ಮಿಡುಕುವನು. ಹೀಗಿದ್ದು ಬಹು ದಿನದಿಂದ ಅನುಭೋಗಿಸಿದ್ದನ್ನು ಎಲ್ಲರೂ ಮನಸಾ ಅರ್ಪಿಸಿದ್ದನ್ನು (ಶಾಸ್ತ್ರದಿಂದಲೇ ವಿರಕ್ತಮಠದವರು ಸಿದ್ಧಮಾಡಿ ತೋರಿಸುತ್ತೇವೆಂದು ಸಿದ್ಧರಿರುವರಂತೆ). ಜನ್ಮಸಿದ್ಧವಾದದ್ದನ್ನು ಬಿಟ್ಟುಕೊಡಬೇಕೆಂದರೆ ಎಂಥ ಕ್ಷುದ್ರಪ್ರಾಣಿಯಾದರೂ ಒಪ್ಪೀತೆ? ಇವೆಲ್ಲ ವಿಷಯಗಳನ್ನೂ ಗುರುವರ್ಗದವರು ಸಾರಾಸಾರ ವಿಚಾರಿಸತಕ್ಕದ್ದಾಗಿದೆಯಲ್ಲವೇ? ಅಂದ ಬಳಿಕ ತಾವು ಜಾಗರೂಕರಾಗಿ ತಮ್ಮ ಗತವೈಭವಗಳನ್ನು ಪಡಕೊಳ್ಳುವದು, ಹೋದ ಅಧಿಕಾರವನ್ನು ಹೊಂದುವದು, ಕಳಕೊಂಡ ಹಕ್ಕುಗಳನ್ನು ದೊರಕಿಸುವದು ಈ ಪ್ರಕಾರವಾಗಿ ಅಲ್ಲೋಲಕಲ್ಲೋಲ ಮಾಡುವದರಿಂದ ಅಲ್ಲ. ಸ್ವಚ್ಛ ಬಟ್ಟೆಯನ್ನುಡುವ ನೆರೆಯವರ ಅಂಗಿಗಳಿಗೆ ಕೆಸರನ್ನು ಸಿಡಿಸಿದರೆ ನಮ್ಮ ಅಂಗಿಗಳು ಎಂದೂ ಸ್ವಚ್ಛವಾಗಲಾರವು. ಮುಂದಿಯಲ್ಲಿರುವ ಹುಳುಕನ್ನು ಆರಿಸಿ ತೋರಿಸಿದರೆ ನಾವು ಸರಳರೆಂದು ಸಿದ್ಧವಾಗದು.

ನಾವು ಉಪೋದ್ಘಾತದಲ್ಲಿಯೇ ಹೇಳಿರುವ ಪ್ರಕಾರ ನಮ್ಮ ಧರ್ಮಕ್ಕೆ ಸಿಂಹಾಸನದವರೂ ಗುರುವರ್ಗದವರೂ ಕಾರಣೀಭೂತರಷ್ಟೆ. ಧಾರ್ಮಿಕ, ನೈತಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದವುಗಳಲ್ಲಿ ನಾವು ಅಳತೆಗೆಟ್ಟು ಹಿಂದೆಬಿದ್ದು ಹಿಂದುಳಿದ (Backward class) ವರ್ಗದವರೆಂಬ ಲಾಂಛನಾಸ್ಪದವಾದ ಬಿರುದಾವಳಿಯು ನಮ್ಮ ಬೆನ್ನಿಗೆ ಹತ್ತಿರುವದು. ನಮ್ಮ ಪೂರ್ವಜರು ಮಾಡಿದ ಶಾಸ್ತ್ರಗಳು ಮೂಲೆಗುಂಪಾಗಿವೆ. ನಿಬಂಧನೆಗಳು ಹಾಳಾಗಿಹೋಗಿವೆ. ಸಮಾಜದ ಕಟ್ಟು ಸಡಿಲದೆ, ಕಾರ್ಯಕಾರಿಗಳು ಕರ್ತವ್ಯಶೂನ್ಯರಾಗಿದ್ದಾರೆ. ಕಾರ್ಯದಕ್ಷತಾಹೀನರಾಗಿದ್ದಾರೆ. ವಿಪರೀತವಾದ ಆಚಾರ ವಿಚಾರಗಳು ನೆಲೆಗೊಳ್ಳುತ್ತಿರುವವು. ಅಂಥಿಂಥ ನಡೆನುಡಿಗಳು ಬಳಕೆಯಲ್ಲಿ ಬರುತ್ತಿರುವವು. ಒಳಪಂಗಡಗಳ ಸಂಬಂಧವಾಗಿ ಸಮಾಜವನ್ನೇ ಸೂರೆಗೊಳ್ಳುವ ಬಡಬಾಗ್ನಿಯು ಮೆಲ್ಲನೆ ಹೊತ್ತುತ್ತಿರುವದು. ಒಂದೊಂದೇ ಪಂಗಡಗಳು ಸಿಡಿದು ಪಂಚಸಿಂಹಾಸನಾಧಿಪತಿಗಳ ಅಧಿಕಾರದಿಂದ ಬಾಹ್ಯರಾಗುತ್ತಿರುವರು. ಧಾರ್ಮಿಕವಿವೇಕಯು ಹೇಳ ಹೆಸರಿಲ್ಲದಂತಾಗಿದೆ. ಸದ್ಯಃಕಾಲಕ್ಕೆ ಬೇಕಾಗಿರುವ ಶಿಕ್ಷಣವೂ ಇಲ್ಲ. ಉಚ್ಚಶಿಕ್ಷಣ ಪಡೆದವರು ಸಾವಿರಕ್ಕೆ ಒಂದು ಸಹ ಬೀಳುವದಿಲ್ಲ. ಸಾಧಾರಣ ಓದಬಲ್ಲವರ ಸಂಖ್ಯೆಯು ಸಹ ನೂರಕ್ಕೆ ೩-೪ ಬೀಳಬೇಕಾದರೆ ಕುರಿಕೋಣ ಬಿದ್ದುಹೋಗುತ್ತದೆ. ಸಮಾಜದಲ್ಲಿ ನೂರಾರೆಂಟು ಒಳಪಂಗಡಗಳು. ಒಂದೇ ಪಂಗಡದವರಲ್ಲಿಯೇ ಐಕಮತ್ಯವಿದೆಯೇ? ಅದೂ ಇಲ್ಲ. ಪೂಜಕವರ್ಗದಲ್ಲಿ ಗುರುವರ್ಗದವರು ವಿರಕ್ತರು. ಗುರುವರ್ಗದವರಲ್ಲಿ ಬೇರೆ ಬೇರೆ ಸಿಂಹಾಸನದವರು ಇಂದು ಒಂದೇ ಇದ್ದರೂ ನಾಳೆಗೆ ಇರುತ್ತಾರೆಂದು ಹೇಳುವದು ಕಷ್ಟ. ವಿರಕ್ತರಲ್ಲಿ ಸಮಯಭೇದಗಳು. ಈ ಪ್ರಕಾರವಾಗಿ ಸಮಾಜದಲ್ಲಿ ಎಷ್ಟು ಭಾಗ ವಿಭಾಗಗಳು! (Divisions and cross divisions!) ಎಂಥ ಶೋಚನೀಯ ಪರಿಸ್ಥಿತಿಯು! ರಾಜಕೀಯದ ಮಾತಿನಿಂದಂತೂ ನಮ್ಮಕ್ಕೆ ಅನ್ಯಕ್ಷೇತ್ರದಲ್ಲಿ ನಮಗೆಷ್ಟು ಇಲ್ಲೀಕ್ಕೆ [illegible]

ಹದ ಏರುವ ದಿನಗಳಾಗಿವೆ. ಒಂದು ಕ್ಷಣಕ್ಕೆ ಹೆಚ್ಚು ಕಡಿಮೆ ಮಾಡಿದರೆ ಕಾವು ಏರುವಂತಿದೆ; ಕೆಲಸವು ಕೈಮೀರಿ ಹೋಗುವಂತಿದೆ. ಆಮೇಲೆ ಮಿಂಚಿದನಂತರ ಚಿಂತಿಸಿ ಫಲವೇನೆಂಬದಾಗಿ ಅಂಬುರುಳತನದ ಸಮಾಧಾನ ಹಚ್ಚಿಕೊಳ್ಳುವ ಸಂಭವವು ಬರುವಂತಿದೆ. ಶರ್ಯತ್ರಿನ ಓಟ! ಅದರಲ್ಲಿ ಒಂದು ತುಸು ಅಸಿಮಿಸಿ ನೋಡಿದರೆ ವಿಪರೀತವಾದ ಹಾನಿ ತಟ್ಟುವಂತಿದೆ. ಅಂಥ ಬೆಲೆಯುಳ್ಳ ವೇಳೆಯಲ್ಲಿ ಕಂಠೀರವರಾಗಿ ನಿಂತು ಸಮಾಜದ ಹಿತವನ್ನು ಸಾಧಿಸುವದು ಯಾರ ಕರ್ತವ್ಯವು? ನಾವೆಲ್ಲರೂ ಏಕೀಕರಿಸಿಕೊಂಡು ಆಟದಲ್ಲಿ ಅನ್ಯ ಸಮಾಜಬಾಂಧವರ ಕೂಡ ಕಾದಾಡಿ ಗೆದ್ದು ಬಂದದ್ದನ್ನು ನಾವು ನೋಡಿಕೊಳ್ಳುವದನ್ನು ಬಿಟ್ಟು ನಮ್ಮನಮ್ಮೊಳಗೇ ಒಬ್ಬರಮೇಲೊಬ್ಬರು ಬಿದ್ದು ಕುತ್ತಿಗೆ ಹಿಚಕಾಡುವದಕ್ಕೆ ಹಂಬಿಟ್ಟ ಬಗೆಗೆ ಜವಾಬದಾರರಾರು? ಇದನ್ನೆಲ್ಲ ನೋಡಗೇ, ಅವರು ಅಂಥವರು ಇವರು ಇಂಥವರು, ಅವರು ಪಂಡಿತರಲ್ಲ ಇವರು ಪಂಡಿತರಲ್ಲ ಅವರು ಓದಿಕೊಂಡಿಲ್ಲ, ಇವರಿಗೆ ಏನೂ ಬರುವದಿಲ್ಲವೆಂದು ಓಣಿಓಣಿ ಹಿಡಿದು ಕೂಗುತ್ತ ನಡೆದರೆ ಯಾವ ಹಿತವು ಉತ್ತಮರೀತಿಯಿಂದ ಸಾಧಿಸೀತು? ಏನಾದರೂ ಅನಿಷ್ಟವಿದ್ದಲ್ಲಿ ಅದನ್ನು ಹೋಗಲಾಡಿಸುವದಕ್ಕೆ ಯಾವ ಮಾರ್ಗವು ಉತ್ತಮತರದ್ದೆಂಬ ಬಗ್ಗೆ ವಿಚಾರಿಸಬಾರದೇನು? ಸ್ವಲ್ಪ ಲಾಭದ ದೆಸೆಯಿಂದ ಬಹಳ ಹಾನಿ ಮಾಡಿಕೊಳ್ಳಬಹುದೇನು? ಹಿಡಿ ಹುಲ್ಲಿಗೆ ಆಡಿ ಸಮಾಜದ ಹೊರೆ ಹುಲ್ಲು ಕಂಕೊಳ್ಳುವದು ಜಾಣತನದ ಲಕ್ಷಣವೇನು? ಈಗಿದ್ದಿರುವ ಗದ್ದಲದಿಂದ ಎಷ್ಟೋ ಪಂಗಡಗಳು ಸಿಂಹಾಸನಾಧಿಪತಿಗಳ ಅಧಿಕಾರ ಬಾಹ್ಯರಾಗುತ್ತಿದ್ದಾಗ್ಯೂ ಅದರಿಂದ ಮಾತ್ರ ಸಿಂಹಾಸನದ ಗೌರವಕ್ಕೆ ಹಾನಿಯು ತಟ್ಟಲಿಲ್ಲ; ಕೆಲವು ನಿರಂಜನಮೂರ್ತಿಗಳು ವೈಭವದಿಂದ ಮೆರೆದರೆ ಮಾತ್ರ ಹಾನಿ ತಟ್ಟಿತು! ಕೆಲವು ಪಂಗಡದ ಮುಖ್ಯಾಧಿಕಾರಿಗಳು (ಸಿಂಹಾಸನಾಧಿಕಾರ ಬಾಹ್ಯರು) ಜಗದ್ಗುರುತ್ವವನ್ನಿಟ್ಟುಕೊಂಡರೆ ಇವರಿಗೆ ಏನೂ ಆಗಲಿಲ್ಲ, ನಿರಂಜನರು ಹಚ್ಚಿಕೊಂಡರೆ ಇವರ ಗಂಟಲಿಗೆ ಗಾಣ!" ಎಂಬ ನಾನಾ ಉದ್ಗಾರಗಳಿಗೆ ಆಸ್ಪದವಾಗುವದಲ್ಲವೆ? ಅದರಲ್ಲಿಯೂ ಕಾಲದಿನಮಾನಗಳು ಸೂಕ್ಷ್ಮವಾಗಿ ಹೋಗಿವೆ. ನಾನು ಯಾರು ನೀನು ಯಾರೆಂದು ಕೇಳುವ ದಿನಗಳು ಬರುತ್ತಲಿವೆ. ವ್ಯಕ್ತಿಸ್ವಾತಂತ್ರ್ಯವು ಹೆಚ್ಚುತ್ತಿರುವದು. ಎಲ್ಲಿನೋಡಿದರೂ ಏನು ಬಡಕೊಂಡರೂ ಧರ್ಮಬಂಧನವು ಸಡಲುತ್ತ ನಡೆದಿರುವದು. ಇಂಥಾದ್ದರಲ್ಲಿ ಅತಿ ಜಾಣತನದಿಂದಲೂ ಒಳ್ಳೆಯ ಬುದ್ಧಿವಂತಿಕೆ (Policy) ಯಿಂದಲೂ ಕೆಲಸವನ್ನು ಸಾಧಿಸಿಕೊಳ್ಳುವದು ಲೇಸಲ್ಲವೆ? ಹಾಕಿದ ಗೆರೆಯನ್ನು ದಾಟುವವರಿಗೆ ಬೇಡವೆಂದರೆ ಬಿಡುವರೇನು? ಹೇಳಿದ ಮಾತನ್ನೇ ಕೇಳದವರಿಗೆ ಹೊತ್ತುಕೊಂಡು ಕುಣಿಯಬೇಡವೆಂದರೆ ಬಿಟ್ಟಾರೆ? ವಿರಕ್ತರ ವರ್ಚಸ್ಸು ಬಹು ಕಾಲದಿಂದ ಬದ್ಧದ್ದು. ಎಷ್ಟೋ ಗಾಢಶ್ರದ್ಧೆಯುಳ್ಳ ಭಕ್ತರಿರುವರು. ಇಷ್ಟು ಅಲ್ಲದೆ ಈಗಿನ ಸಮಾಜದೊಳಗಿನ ಪ್ರಕಾಶಕ್ಕೆ ನಿರಂಜನರೇ ಬಹ್ವಂಶದಿಂದ ಕಾರಣರು. ಬಹುಕಾಲದಿಂದ ನಡೆದುಬಂದಿರುವ ಪಾಠಶಾಲೆಗಳು ಅವರಿಂದ ಸ್ಥಾಪಿತವಾಗಿವೆ. ಗುರುವರ್ಗದ ಚರವಳಿಯಲ್ಲಿ ಸೇರಿದ ಎಷ್ಟೋ ಶಾಸ್ತ್ರಿಗಳು ಅವರಿಂದ ಶಿಕ್ಷಣ ಪಡೆದಿರುವರು. ಎಷ್ಟೊ ಗುರುಮೂರ್ತಿಗಳ ಮನಸ್ಸು ಸಮಾಜಾಭಿವೃದ್ಧಿಯ ಕಡೆಗೆ ಆಕರ್ಷಿಸಲ್ಪಟ್ಟಿದೆ. ವಿದ್ಯಾರ್ಥಿಗಳ ವಸತಿಗೃಹವು ಅವರಿಂದಲೇ ಸ್ಥಾಪಿತವಾಗಿದೆ. ಎಜ್ಯುಕೇಷನಲ್ ಫಂಡಿಗೂ ಅವರ ಪ್ರೋತ್ಸಾಹವಾಗಿದೆ. ಮುಖ್ಯವಾಗಿ ಶಿರಸಂಗೀಕರ ದೇಶಗತಿಯ ದಾನವು ಸಹ ಕೆಲಭಾಗದಿಂದ ಅವರಿಂದ ಜರುಗಿದ್ದು ಇರುತ್ತದೆ. ಈಗ ನಮ್ಮ ನಿಮ್ಮದೆಂದು ಬಡಿದಾಡುವ ಮಹಾಸಭೆಯು ಅವರ ಪ್ರಯತ್ನದಿಂದ ಆದದ್ದು ಇರುತ್ತದೆ. ಮೈಸೂರ ಸ್ಟಾರು ಅವರ ಪ್ರೋತ್ಸಾಹದಿಂದ ನಡೆದಿರುತ್ತದೆ. ಶಿವಯೋಗಮಂದಿರವು ಅವರಿಂದ ಸ್ಥಾಪಿತವಾಗಿದೆ. ಸ್ವತಃ ಧರ್ಮತರಂಗಿಣಿಯು ಅವರಿಂದ ಉತ್ಪನ್ನವಾದದ್ದು. ಎಷ್ಟೋ ಫಂಡುಗಳು ಅವರಿಂದ ಸ್ಥಾಪಿತವಾಗಿವೆ. ಎಷ್ಟೋ ಸ್ಕೂಲುಗಳು ಅವರಿಂದ ಸ್ಥಾಪನವಾಗುತ್ತಿರುವವು. ಎಷ್ಟೋ ವಿದ್ಯಾರ್ಥಿವಸತಿಗೃಹಗಳು ಅವರಿಂದ ತೆರೆಯಲ್ಪಡುತ್ತಲಿರುವವು. ಅಂದ ಮೇಲೆ ವಿರಕ್ತರಿಂದ ಸಮಾಜಕ್ಕೆ ಕಲ್ಯಾಣವಾಗಿಲ್ಲವೆಂದು ಅನ್ನಲಿಕ್ಕೆ ಯಾರ ನಾಲಿಗೆಯು ಎದ್ದೀತು? ಅವರನ್ನು ಸಮಾಜದಿಂದೊಗೆಯಲಿಕ್ಕೆ ಯಾರ ಮನಸ್ಸು ಹರಿದೀತು? ಅಂತೆಯೇ ಸಮಾಜದಲ್ಲಿ ಅವರ ವಿಷಯವಾಗಿ ಕುತ್ತಿಗೆಗೆ ಕುತ್ತಿಗೆಗಳನ್ನು ಕೊಡುವವರಿದ್ದಾರೆ; ಮನೆಮಾರುಗಳನ್ನು ಅವರಿಗೆ ಅರ್ಪಿಸುವವರಿದ್ದಾರೆ; ಅವರನ್ನು ತಲೆಯ ಮೇಲೆ ಹೊತ್ತುಕೊಳ್ಳುವವರಿದ್ದಾರೆ. ಅಂತೂ ಇಂತೂ ತನುಮನ ಧನಗಳೇ ಅವರದಾಗಿದ್ದಾರೆ. ಎಷ್ಟು ಬೆದರಿಕೆಗಳಿಗೂ ಹೆದರದವರಿದ್ದಾರೆ. ಸುಮ್ಮನೇ ನಾವು ಹೆಚ್ಚು ಅವರು ಕಡಿಮೆ, ಅವರು ಅಧಿಕಾರಶೂನ್ಯರು, ನಮ್ಮ ಅಧಿಕಾರ ಹಕ್ಕುಗಳನ್ನು ನಡೆಯಿಸುತ್ತಾರೆ ಎಂಬದಿಷ್ಟಕ್ಕೆ ಅವರ ಮೂಲಕ್ಕೆ ಕುಠಾರವನ್ನು ಹಾಕಬೇಕೆನ್ನುವ ಹೆಣಗಾಟದಲ್ಲಿ ಸಮಾಜಕ್ಕೆ ಎಷ್ಟು ಹಾನಿ ತಟ್ಟುವದೆಂಬುದನ್ನು ಯೋಚಿಸತಕ್ಕದ್ದಾಗಿದೆ. ಸಪ್ತಾಧಿಕಾರವನ್ನು ಸಂಪಾದಿಸಬೇಕೆನ್ನುವವರು ಎಷ್ಟೋ! ನಾವೇ ಜಗತ್ಕಾರಣರೆಂದು ಗ್ರಹಿಸಿಕೊಂಡಿರುವವರು ಎಷ್ಟೋ! ವ್ಯಕ್ತಿದ್ವೇಷಾಸೂಯೆಯುಳ್ಳವರೆಷ್ಟೋ! ಆಶಾಭಗ್ನರಾಗಿ ವಿರಕ್ತರ ವಿರುದ್ಧವಾಗಿ ಉದ್ವಿಗ್ನರಾದವರೆಷ್ಟೋ! ವಿರಕ್ತರನ್ನು ಹಿಂದೂಡಿದರೆ ನಮ್ಮ ಆಟವು ನಡೆಯುವದೆಂದು ಗುರಿಯಟ್ಟಿರುವವರೆಷ್ಟೋ!! ಇವರೆಲ್ಲರೂ ಸೇರಿ ಸುಮ್ಮನೆ ಪಂಚಸಿಂಹಾಸನದವರ ಹೆಸರಿನಿಂದ ಗದ್ದಲವನ್ನೆಬ್ಬಿಸಿ ಕಲಕುಮಲಕು ಮಾಡುವ ಕೋಲಾಹಲವು ಸರಿಯಾಗುವದೇ? ಗುರುವರ್ಗದವರು ಜಾಗರೂಕರಾಗಿರುವರೆಂಬುದನ್ನು ಮುಂದಿಡುತ್ತಿದ್ದರೆ ಇಷ್ಟುದಿನಗಳವರೆಗೂ ಯಾವ ಗುರುವರ್ಗದ ಮಹಾರಾಯನು ತನ್ನ ಜವಾಬ್ದಾರಿಗೆ ಸರಿಯಾಗಿ ಕಾರ್ಯವನ್ನು ನಿರ್ವಹಿಸಿರುವನು? ಯಾವ ಮಹಾರಾಯನು ಸಮಾಜಕಲ್ಯಾಣಕ್ಕೆ ನಡು ಕಟ್ಟಿ ನಿಂತಿರುವನು? ಸಮಾಜೋದ್ಧರಣೆಗೆ ತನ್ನ ಜನ್ಮವನ್ನೇ ಸಮರ್ಪಿಸಿರುವನು? ಯಾವ ಮಹಾರಾಯನು ಸ್ವಾರ್ಥತ್ಯಾಗದ ಕೆಲಸಮಾಡಿ ತನ್ನ ಉಜ್ವಲಸಮಾಜಸೇವಾ ಪ್ರೇಮವನ್ನು ತೋರಿಸಿರುವನು? ಗುರುವರ್ಗದವರು ದಾನಶೂರರಾಗಿ ಕೆಲಸ ಮಾಡಲಿಕ್ಕೆ ಶಕ್ತಿಹೀನರು; ನಿಸ್ಪೃಹತೆಯಿಂದ ಕೆಲಸ ಮಾಡಲಿಕ್ಕೆ ಹಿಂದು ಮುಂದೆ ಜಗ್ಗಾಟವನ್ನಿಟ್ಟುಕೊಂಡವರು; ಇಲ್ಲದಿದ್ದರೆ ಜಂಗುಹತ್ತಿ ಮೂಲೆಯಲ್ಲಿ ಕೂತುಕೊಂಡವರು. ಶಾಸ್ತ್ರಿಗಳಾದರೆ ಸರಿಯಾದ ವೇತನದೊಡನೆಗೆ ಪಾಠಶಾಲಾಧ್ಯಾಪಕರಾಗುವುದು; ದೊಡ್ಡಧ್ಯೇಯವಾದರೆ ಯಾವುದಾದರೊಂದು ಮಠಮಾನ್ಯಗಳ ಪಟ್ಟ ನೋಡುವದು ಇಷ್ಟೇ ಇವರ ಪವಿತ್ರ ಕರ್ತವ್ಯಗಳಾಗಿವೆ. ಕಾಶಿಗೆ ಹೋಗಿ ಎಷ್ಟೋ ಮಂದಿ ಪಂಡಿತರಾಗಿ ಬಂದಿರುವರು. ಎಷ್ಟೋಮಂದಿ "ತೀರ್ಥ ತೀರ್ಥ" ರಾಗಿ ಬಂದಿರುವರು. ಅವರನ್ನು ನೋಡಿದರೆ ಅವರಲ್ಲಿ ಯಾರು ತಮ್ಮ ಪ್ರತಿಷ್ಠೆಗೆ ಸಜ್ಜುಗೊಳಿಸುತ್ತಿರುವರು. ಯಾರು ಸಂಪಾದನೆ ಮುಖವಿಟ್ಟಿರುವರು, ಇದಕ್ಕೆಲ್ಲ ಯಾರು ಹೇಳಬೇಕು? ತಾನು ಮೂಲು ಹಾದಿಯನ್ನು ಹಿಡಿದು ಮಂದಿಗೆ ಬುದ್ಧಿಯನ್ನು ಹೇಳಬೇಕಂತೆ! ಇದರಿಂದ ವಿರಕ್ತ ವರ್ಗವೆಲ್ಲ ಮೂರ್ತಿಮಂತಸ್ವಾರ್ಥತ್ಯಾಗವಾಗಿದೆ, ಎಲ್ಲರೂ ಸಮಾಜೋದ್ಧರಣೆಗೆ ಅಭಿಮುಖರಾಗಿರುವರು. ಎಂಬದಾಗಿ ಹೇಳಬೇಕೆಂಬುದಲ್ಲ. ಅವರಾದರೂ ಗುರುವರ್ಗದವರಷ್ಟೆ? ಅಥವಾ ಅದಕ್ಕಿಂತಲೂ ಹೆಚ್ಚುಕಡಿಮೆ ಆಲಸರಾಗಿರಬಹುದು. ಆದರೆ ಗುರುವರ್ಗದವರಿಗೂ ಸಮಾಜಕ್ಕೂ ನಡುವೆ ಇರುವಷ್ಟು ನಿಕಟಸಂಬಂಧವು ಅವರ ನಡುವೆ ಇಲ್ಲ. ಇವರಷ್ಟು ಜವಾಬುದಾರರು ವಿರಕ್ತರಲ್ಲ. ಆದಕ್ಕೆಂತಲೇ ಇಷ್ಟು ಕನಿಕರದಿಂದ ಒತ್ತಿ ಗುರವರ್ಗದವರಿಗೆ ಹೇಳಬೇಕಾಗಿಲ್ಲ.

ಇದೀ ನಮ್ಮ ಸಮಾಜದವರಲ್ಲಿಯೇ ಗುರುವರ್ಗದವರು ಪ್ರತಿಯೊಂದು ಮಾತಿನಲ್ಲೂ ಹಿಂದೆಬಿದ್ದಿರುವರು. ಗುರುವರ್ಗದವರ ಮೇಲೆ ಅವರು ಜವಾಬುದಾರಿಯೇನು? ಅವರು ಇರುವ ಸ್ಥಿತಿಯೇನು? ಇವರು ಧಾರ್ಮಿಕ ನೈತಿಕ ಶಿಕ್ಷಣದ ಆಚಾರ್ಯವರ್ಯರಾದರೂ ಅದು ಅವರಲ್ಲಿಯೇ ಪೂಜ್ಯ! ಸಾಧಾರಣವಾಗಿ ಹಳ್ಳಿಯ, ಅದೇಕೆ ದೊಡ್ಡದೊಡ್ಡ ಊರುಗಳ, ಮಠಸ್ಥನಿಗೂ ಇತರ ಭಕ್ತಮಂಡಲಿಯಲ್ಲಿ ಒಬ್ಬ ಸಾಧಾರಣ ವ್ಯಕ್ತಿಗೂ ಒರೆಹಚ್ಚಿ ನೋಡಿದರೆ ಮಠಸ್ಥನಲ್ಲಿ ಯಾವ ತರದ ವಿಶಿಷ್ಟಗುಣಗಳೂ ಕಂಡುಬರುವದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇಂಥವರು ನಮ್ಮ ಸಮಾಜದಲ್ಲಿ ಆಚಾರ ಸ್ವಚ್ಛತೆಗಳನ್ನು ಕಲಿಸುವ ಶಿಕ್ಷಕರು! ಅವರದೊಂದು ಸಮೂಹವನ್ನು ನೋಡಿದರೆ ಇವರು ನಮ್ಮ ಸಮಾಜದವರೆಂದು ಹೇಳಲಿಕ್ಕೇ ನಾಚಿಕೆ ಬರುವಷ್ಟು ಸ್ವಚ್ಛತಾಪ್ರಿಯರಾಗಿರುವರು!! ಈ ಮಾತಿಗೆ ಕೆಲವರು "ಅವರು ಬಡವರೆಂದು ಮುಂದು ಮಾಡುತ್ತಾರೆ. ಒಳ್ಳೇ ಮಾತು! ಬಡತನಕ್ಕೂ ಸ್ವಚ್ಛತೆಗೂ ಏನು ಸಂಬಂಧ? ಇವರಿಗೆ ಧಾರ್ಮಿಕ ಶಿಕ್ಷಣವಿಲ್ಲ. ಆಚಾರ ಪದ್ಧತಿಗಳು ಗೊತ್ತಿಲ್ಲ. ಎಷ್ಟೋ ಸಾರಿ ಭಕ್ತರ ಕೈಯಲ್ಲಿ ಸಿಕ್ಕು "ಪ್ಯಾಪ್ಯಾ" ಎನ್ನುವ ಪ್ರಸಂಗಬರುತ್ತದೆ. ಇದರಿಂದಲೇ ನಮ್ಮ ಶಿಕ್ಷಿತರಲ್ಲಿ ಕೆಲವರ ಮನಸ್ಸಿನಲ್ಲಿ ಗುರುವರ್ಗದವರ ವಿಷಯದಲ್ಲಿ ಕುತ್ಸಿತಬುದ್ಧಿಯು ಹುಟ್ಟಿ ಇವರಿಗೇಕೆ ನಮಸ್ಕಾರ ಮಾಡಬೇಕು? ಇವರೇಕೆ ಹೆಚ್ಚಿನವರು ನಾವು ಯಾಕೆ ಕಡಿಮೆ? ಎಂಬ ವಿವಾದಾತ್ಮಕ ಉದ್ಗಾರಗಳನ್ನು ತೆಗೆಯುತ್ತಿರುವರು. ಇದರಿಂದಲೇ ಗುರುವರ್ಗದ ಗುರುತ್ವಕ್ಕೆ ಹುಳ ಹತ್ತುತ್ತಿರುವದು. ಪೂಜ್ಯತ್ವಕ್ಕೆ ಜಂಗು ಹತ್ತುತ್ತಿರುವದು. ಬ್ರಾಹ್ಮಣಸಮಾಜದೊಳಗಿನ ಭಟ್ಟರು ಆಚಾರ್ಯರನ್ನು ನೋಡಿರಿ. ಅವರ ಸ್ಥಿತಿಯೇನು? ಅವರಲ್ಲಿ ಗುಣಾಂಶವೆಷ್ಟಿರುವದು? ಪಾರ್ಸೀ ಗುರುಗಳ ಇರುವಿಕೆಯನ್ನು ನೋಡಿರಿ. ಹೆಚ್ಚಿನದು ಬೇಡ. ಅವರ ಸಿಸ್ತನ್ನು ನೋಡಿನೊಡನೆಯೇ ಒಂದು ತರಹದ ಮಾನ್ಯಭಾವನೆಯು ಉತ್ಪನ್ನವಾಗುವಂತಿರುವದು.

ಸಮಾಜದಲ್ಲಿ ಮಾಡತಕ್ಕ ಕೆಲಸಗಳು ಕಾಲುಮುರಿದುಕೊಂಡುಬಿದ್ದಿವೆ. ಪರಸ್ಪರ ವಿಘಾತಕರೂಪದ ಪಂಗಡಪಂಗಡದ ವ್ಯವಸ್ಥೆಗಳು ಬೇಕಾಗಿಲ್ಲ. ಇದೀ ನಮ್ಮ ಸಮಾಜದ ಹಿತವನ್ನೇ ಸಾಧಿಸುವ ಕೆಲಸಗಳು ಬೇಕಾಗಿವೆ. ರಾಜಕೀಯ ಸಂಬಂಧವಾದ ಕೆಲಸಗಳು ರಾಶಿಯಾಗಿ ಒಟ್ಟಿರುವವು. ಇದೀ ಸಮಾಜಕ್ಕೂ ಸಾಮಾನ್ಯವಾಗಿ ಅಲ್ಲಲ್ಲಿ ಮುದ್ರಣಾಲಯಗಳೂ ವರ್ತಮಾನ ಪತ್ರಗಳೂ ಬೇಕಾಗಿವೆ. ಇಂಗ್ಲೀಷ್ ಸ್ಕೂಲುಗಳ ವ್ಯವಸ್ಥೆಯನ್ನು ಮಾಡುವದಿದೆ. ಬೋರ್ಡಿಂಗುಗಳನ್ನು ಸ್ಥಾಪಿಸಬೇಕಾಗಿದೆ. ಮುಂಬಯಿ ಮದರಾಸುಗಳಲ್ಲಿ ಒಂದೊಂದು ವಿದ್ಯಾರ್ಥಿನಿಲಯಗಳು ಅವಶ್ಯ ಬೇಕಾಗಿವೆ. ಗುರುವರ್ಗದವರು ಇವನ್ನೆಲ್ಲ ಮಾಡುವದನ್ನು ಬಿಡಲಿ. ಇವು ನಮ್ಮ ಕಾರ್ಯಕ್ಷೇತ್ರದಲ್ಲಿ ಬರುವುದಿಲ್ಲವೆಂದು ಬಿಸುಡಲಿ ಇಂಥವುಗಳಿಗೆ ಅಡ್ಡಿಯಾಗದಂತೆ ಗುರುವರ್ಗದವರು ತಮಗೆ ಮತ್ತಿಷ್ಟು ನಿಕಟವಾದ ಕಾರ್ಯಗಳಿಗೆ ಕೈಹಾಕಲಿ. ಅಲ್ಲಲ್ಲಿ ಹಾಳುಬೀಳುವ ಪಾಠಶಾಲೆಗಳನ್ನು ಹಳ್ಳಿಹಳ್ಳಿಗೆ ಸ್ಥಾಪಿಸದೆ, ಒಂದು ಧರ್ಮಶಿಕ್ಷಣ ಮಹಾವಿದ್ಯಾಲಯವನ್ನು ಸ್ಥಾಪಿಸಲಿ, ಅಲ್ಲಿ ಸಂಸ್ಕೃತ ಮೂಲಕ ಧರ್ಮಶಾಸ್ತ್ರಗಳ ಶಿಕ್ಷಣವನ್ನು ಕೊಟ್ಟು ಆಚಾರವಿಚಾರ ಪದ್ಧತಿಗಳ ಅಭ್ಯಾಸದ ವ್ಯವಸ್ಥೆಯನ್ನು ಮಾಡಲಿ. ಅಲ್ಲಿ ಕಲಿತು ಶಿಕ್ಷಿತರಾದವರನ್ನೇ ಮಠಾಧಿಕಾರಕ್ಕೆ ಯೋಗ್ಯರೆಂದು ನಿಶ್ಚಯಿಸಲಿ. ಅವರಲ್ಲಿ ಸ್ವಾರ್ಥತ್ಯಾಗದ ಬೀಜವನ್ನು ಬಿತ್ತಲಿ. ಸಮಾಜಸೇವಾರುಚಿಯನ್ನು ಹುಟ್ಟಿಸಲಿ. ಧರ್ಮೋಪದೇಶಕರನ್ನು ತಯಾರು ಮಾಡಲಿ. ಧರ್ಮತತ್ವಗಳನ್ನು ಹಬ್ಬಿಸಲಿ. ಅನ್ಯಮತದವರಿಗೆ ತಮ್ಮ ಮತತತ್ವಗಳು ರುಚಿಸುವಂತೆ ಆಧುನಿಕ ಪದ್ಧತಿಯ ಪ್ರಕಾರ ಪುಸ್ತಕಮಾಲೆಗಳನ್ನು ಬರೆಯಿಸಿ ಅನ್ಯಭಾಷೆಗಳಲ್ಲಿಯೂ ಪಸರಿಸಲಿ. ಸದ್ಯಕ್ಕೆ ಅಜ್ಞಾನದ ಮೂಲಕ ನಮ್ಮವರಲ್ಲಿಯೇ ನಮ್ಮ ಧರ್ಮದ ವಿಷಯವಾಗಿ ಹುಟ್ಟುತ್ತಿರುವ ಉದಾಸೀನ್ಯವನ್ನೂ ಅನಾದರವನ್ನೂ ಕುತ್ಸಿತಬುದ್ಧಿಯನ್ನೂ ಹೋಗಲಾಡಿಸುವಂತೆ ವ್ಯವಸ್ಥೆ ಮಾಡಲಿ. ನಮ್ಮಲ್ಲಿ ಪಂಚಮಸಾಲಿಯವರು, ಬಣಜಿಗರು, ಸಾದರು, ನೊಣಬರು ಎಂಬದಾಗಿ ನಾನಾ ಒಳಪಂಗಡಗಳಿದ್ದು ಪರಸ್ಪರರಲ್ಲಿ ಅಂತರಂಗವಾಗಿ ಬೆಳೆಯುತ್ತಿರುವ ಮತ್ಸರವು ದೂರವಾಗಿ ಪ್ರೇಮವೂ ಐಕ್ಯವೂ ವಿಶ್ವಾಸವೂ ಬೆಳೆಯುವಂತೆ ಯತ್ನಿಸಲಿ. ಅನ್ಯಮತದವರ ಕೂಡ ಧಾರ್ಮಿಕ ವ್ಯಾಜ್ಯವುಂಟಾದರೆ ಸಮಾಜದ ಹಿತದ ಕಡೆಗೆ ಲಕ್ಷ ಗೊಟ್ಟು ಎಲ್ಲರೂ ಸಮತೆಯಿಂದ ಯೋಗ್ಯನಿರ್ಣಯದ ಬಗ್ಗೆ ಪ್ರಯತ್ನಮಾಡಲಿ. ಇಂತಹವುಗಳನ್ನೆಲ್ಲ ಎಸೆಯಮೇಲೆ ಒಟ್ಟಿಕೊಂಡು ಆಚತುರರಂತೆ ನಡೆಯುವದು ಎಂದಿಗೂ ಭೂಷಣವಾಗಲಾರದು. ಸಮಾಜದ ಪರಿಸ್ಥಿತಿಯನ್ನೂ ಅಂತರ್ಬಾಹ್ಯಸ್ವರೂಪವೆರಡನ್ನೂ ನೋಡಿದರೂ ನಾವು ಎಷ್ಟು ಮುಂದಾಲೋಚನೆಯಿಂದಲೂ, ಜಾಣತನದಿಂದಲೂ, ಪರಸ್ಪರ ಪ್ರೇಮದಿಂದಲೂ ಕೆಲಸಮಾಡಿದರೂ ಕಡಿಮೆಯೇ ಆದೆ

ಈ ಪ್ರಸಂಗದಲ್ಲಿ ವಿರಕ್ತ ವರ್ಗದವರೂ ಸಮತೋಲನಾ ಭಾವನೆಯಿಂದ ಪರಿಸ್ಥಿತಿಯನ್ನು ಪರೀಕ್ಷಿಸಿ ಉದಾರಧೋರಣವನ್ನು ಇಟ್ಟುಕೊಳ್ಳುವುದು ಆವಶ್ಯವೂ ಶ್ರೇಯಸ್ಕರವೂ ಆದೆ. ಗುರುವರ್ಗದವರಿಗೂ ವಿರಕ್ತರಿಗೂ ನಡುವೆ ಒಡಕು ಹುಟ್ಟುತ್ತಿರುವದು ಸಾಧಾರಣವಾಗಿ ಎರಡೇ ಮಾತುಗಳಿಂದ. ಪೂಜನೆಗೆ ಮುಖವಿಟ್ಟಿರುವದು; ಮತ್ತು ಧರ್ಮಕಾರ್ಯಗಳಲ್ಲಿ ಕೈಹಾಕುವದು. ಮೊದಲಿನದು ಯಾರಿಂದಲೂ ಬಗೆಹರಿಯದ ಮಾತು. ಅಂದರೆ ಶಾಸ್ತ್ರಸಮ್ಮತವಾಗಿಯೇ ವಿರಕ್ತರ ಪೂಜನೆಗೆ ಹಲ ಕೆಲವು ಆಧಾರಗಳು ಸಿಗಬಹುದು. ಅಥವಾ ಒಬ್ಬರ ಮೇಲೆ ಮತ್ತೊಬ್ಬರ ಪ್ರೇಮ, ಆದರ, ಪೂಜ್ಯಭಾವನೆ, ಭಕ್ತಿಗಳಿರುವದು ಆಯಾವ್ಯಕ್ತಿಗಳ ಮನಸ್ಸಿನ ಮೇಲೆ ಅವಲಂಬಿಸಿರುತ್ತವೆ.

ಎರಡನೆಯ ವಿಷಯವಾಗಿ ಮಾತ್ರ ಗುರುವರ್ಗದವರಿಗೆ ಸಮಾಧಾನ ಪಡಿಸುವದು ವಿರಕ್ತರ ಕೈಯ್ಯಲ್ಲಿಯೇ ಇರುತ್ತದೆ. ಧರ್ಮಕಾರ್ಯನಿರ್ವಾಹಕತ್ವವು ಭಕ್ತ ಗುರುವರ್ಗದವರ ಕಡೆಗೆ ಇರುವದೆಂದು ಶಾಸ್ತ್ರಗಳು ಹೇಳುತ್ತವೆ. ವಿರಕ್ತರೂ ಒಪ್ಪುತ್ತಾರೆ; ಮತ್ತು ಅದು ಎಲ್ಲರಿಗೂ ತಿಳಿಯುವ ಮಾತು. ಒಂದೊಂದು ನಿರಂಜನ ಪೀಠಕ್ಕೆ ಧರ್ಮಕಾರ್ಯಗಳನ್ನು ನೆರವೇರಿಸುವ ರೂಢಿಯು ಬಹುದಿನಗಳಿಂದ ಬಹು ಶತಕಗಳಿಂದ ಯಾವ ಕಾರಣದಿಂದಲೋ ಬಿದ್ದಿರಬಹುದು. ಆದರೆ ಆದರಿಂದಲೇ ಆ ಅಧಿಕಾರವುಳ್ಳವರ ಮನಸ್ಸು ನೋಯುತ್ತಿದ್ದರೆ ಅವುಗಳಿಂದ ಆದಷ್ಟು ತೀವ್ರ ಅಲಿಪ್ತರಾಗಿರುವದು ಬಹು ಭೂಷಣವಾದ ಮಾತಲ್ಲವೆ? ಧಾರ್ಮಿಕ ಕ್ಷೇತ್ರದಲ್ಲಿ ವಿರಕ್ತರು ಅಧಿಕಾರವಾಣಿಯಿಂದ ಕೈಹಾಕುವದರಿಂದ ಅನಿಷ್ಟವುಂಗದೇ ಇರದಿದ್ದರೂ ಅವರು ದೂರದೂರವಾಗಿಯೇ ಇರಬೇಕಾಗಿದ್ದ ಪಕ್ಷದಲ್ಲಿ ಅದರಿಂದ ಗಲಭೆಯುಂಟಾಗುತ್ತಿದ್ದರೆ ಅವರು ಎಷ್ಟು ದೂರದೃಷ್ಟಿಯಿಂದ ಸಾವರಿಸಿಕೊಳ್ಳತಕ್ಕದ್ದೆಂಬದನ್ನು ತಾವೇ ವಿಚಾರಮಾಡತಕ್ಕದ್ದಾಗಿದೆ.

ಸಮುದ್ರವು ಸಮಾಧಾನದಿಂದ ಇದ್ದರೇನೆಯೇ ಸಮುದ್ರಯಾನಗಳ ಕೆಲಸವು ಸರಿಯಾಗಿ ಸಾಗುತ್ತದೆಯಷ್ಟೆ. ಅದರಂತೆಯೇ ಸಮಾಜದ ಕೆಲಸ. ಸಮಾಜವು ಶಾಂತವಾಗಿರಬೇಕಾಗಿದ್ದರೆ. ಅವುಗಳಲ್ಲಿಯ ಪ್ರತಿಯೊಂದು ವ್ಯಕ್ತಿ ಮಾತ್ರವೂ ಯಾವಾಗಲೂ ಸಮಾಜದ ಹಿತದ ಕಡೆಗೆ ಲಕ್ಷ್ಯವಿಟ್ಟು ತನ್ನ ವೃತ್ತಿಯನ್ನು ಸುಧಾರಿಸಬೇಕಲ್ಲವೆ? ಆದುದರಿಂದಲೇ ಸದಾ ಸಮಾಜ ಹಿತಸಾಧನ (Constructive) ದ ಬಗ್ಗೆ ಬಡಿದಾಡಬೇಕೇ ಹೊರತು ವಿಘಾತಕ ಕಾರ್ಯಕ್ಕೆ (Destructive) ಮುಖವಿಡುವದು ಜಾಣರ ಲಕ್ಷಣವೇ ಅಲ್ಲ. ಇದರಿಂದಲೇ ಸಮಾಜದಲ್ಲಿ ಚಿತ್ರದುರ್ಗದವರ ಪಕ್ಷ, ಹಾನಗಲ್ಲವರ ಪಕ್ಷ, ಉಜ್ಜನಿಯವರ ಪಕ್ಷ, ಸಾವಟಿಯವರ ಪಕ್ಷಗಳೆಂಬದಾಗಿ ನಾನಾ ಬಗೆಯ ಬಿರುಗಾಳಿಗಳೆದ್ದು ಸಮಾಜದಲ್ಲಿ ಅತ್ಯುಗ್ರವಾದ ಕೋಲಾಹಲವುಂಟಾಗಿ ಅವರ ವಿರುದ್ಧ ಇವರು ಇವರ ವಿರುದ್ಧ ಅವರು ಬಡಿದಾಡುವದರಲ್ಲೇ ತಮ್ಮ ತಲೆಗಳನ್ನೇ ಖರ್ಚುಮಾಡುತ್ತಿರುವದು ಸಮಾಜದ ದುರ್ದೈವವಲ್ಲದೆ ಮತ್ತೇನು? ಸಂಪಾದಿಸದ ಪಾಂಡಿತ್ಯವನ್ನು ಧರ್ಮಪ್ರಸಾರ ಸಮಾಜ ಸುಧಾರಣೆಗಳಿಗೆ ವೆಚ್ಚಮಾಡುವದನ್ನು ಬಿಟ್ಟು ಪರಸ್ಪರರನ್ನು ಸದೆಬಡಿಯಲಿಕ್ಕೆ ವಿನಿಯೋಗಿಸಲಿ! ಸಮಾಜದ ಅಂತರ್ಬಾಹ್ಯ ವ್ಯವಸ್ಥೆಗಾಗಿ ವಿಚಾರಿಸುವದನ್ನು ಬಿಟ್ಟು ತಮ್ಮ ತಮ್ಮ ಹೆಸರಿಗೆ ಹೆಣಗಾಡಲಿ!! ಅಂತೂ ಇಂತೂ ಸಮಾಜವೇ ರಸಾತಳಕ್ಕಿಳಿಯುವಂತೆ ವರ್ತಿಸಲಿ!!! ಸಮಾಜದ ದುರ್ದೈವ.

ಚಂದ್ರೋದಯ.

ಕಾಗದದ ದುರ್ಭಿಕ್ಷತೆಯ ಮೂಲಕ ಹಾಗೂ ಪ್ರೆಸ್ಸಿನ ನೌಕರರ ತೊಂದರೆಯ ಮೂಲಕ ಚಂದ್ರೋದಯಪತ್ರವು ತಾತ್ಪೂರ್ತಿಕವಾಗಿ ನಿಲ್ಲಿಸಲ್ಪಟಿರುತ್ತದೆ. ಹೊಸವ್ಯವಸ್ಥೆಯನ್ನು ಮಾಡಿ ಚಂದ್ರೋದಯವನ್ನು ತೀವ್ರವಾಗಿ ಹೊರಡಿಸುವದರಲ್ಲಿ ಬರುವದು

ಗ. ಹು. ಹೊನ್ನಾಪುರಮಠ, ಸಂಪಾದಕ, ಚಂದ್ರೋದಯ.

ಲಕ್ಷ್ಮೇಶ್ವರ.

ಇಲ್ಲಿ ಮೊನ್ನೆ ತಾ|| ೧೬-೬-೩೦ ನೇ ಇಸವಿಯ ದಿವಸ ವೀರಶೈವ ತರುಣ ಸಂಘದ ವತಿಯಿಂದ ಬೆಳಗಾಂವ ಗಿಲಗಂಚಿ ಅರಟಾಳ ಹೈಸ್ಕೂಲಿನ ಮಾಸ್ತರರಾದ ಮ|| ಬಸವನಹಾಳ ಎಂ. ಎ. ಇವರ ವ್ಯಾಖ್ಯಾನವು ಜರುಗಿತು. ಸಭೆಯ ಅಧ್ಯಕ್ಷಸ್ಥಾನವನ್ನು ಮ|| ಪಿ ಎಚ್. ಗಂಜಳ ಬಿ. ಎ., ಎಲ್ ಎಲ್. ಬಿ. ವಕೀಲ, ಧಾರವಾಡ ಇವರು ವಹಿಸಿದ್ದರು. ಸಭೆಗೆ ಊರೊಳಗಿನ ಯಾವತ್ತೂ ಪ್ರಮುಖ ಜನರೂ ಮತ್ತು ವ್ಯಾಪಾರಸ್ಥರೂ ಬಂದಿದ್ದರು. ಮ|| ಬಸವನಹಾಳಯವರು ಸಮಾಜಸೇವಾ ವಿಷಯದ ಮೇಲೆ ಒಂದು ತಾಸಿನವರೆಗೆ ಜನರ ಮನಸ್ಸಿನ ಮೇಲೆ ಚೆನ್ನಾಗಿ ಪರಿಣಾಮವಾಗುವಂತೆ ಭಾಷಣ ಮಾಡಿದರು, ಇವರು ತಮ್ಮ ಭಾಷಣದಲ್ಲಿ ಸಮಾಜದ ಮತ್ತು ರಾಷ್ಟ್ರದ ಏಳಿಗೆಗೆ ಆಧಾರ ಸ್ತಂಭದಂತಿರುವ ವಿದ್ಯಾಪ್ರಸಾರಣೆಯಾಗಲಿಕ್ಕೆ ಅಲ್ಲಲ್ಲಿಗೆ ಶಾಲೆಗಳನ್ನೂ ಮತ್ತು ವಾಚನಾಲಯಗಳನ್ನು ಸ್ಥಾಪಿಸುವದಕ್ಕೆ ಪ್ರತಿಯೊಬ್ಬ ಮನುಷ್ಯನು ಮಾಡತಕ್ಕ ಕರ್ತವ್ಯಗಳನ್ನು ಕುರಿತು ಸರಸವಾಗಿ ಭಾಷಣ ಮಾಡಿದರು. ನಂತರ ಅಧ್ಯಕ್ಷರು ತಮ್ಮ ಸಮಾರೋಪಣಭಾಷಣದಲ್ಲಿ ಮ|| ಬಸವನಹಾಳಯವರ ಸ್ವಾರ್ಥತ್ಯಾಗ ಸಮಾಜಸೇವಾ ಮುಂತಾದ ಗುಣಗಳ ಶ್ಲಾಘನವಮಾಡಿ ವಿದ್ಯಾ ವ್ಯಾಪಾರ ಸಹಕಾರ ಮೊದಲಾದ ವಿಷಯಗಳನ್ನು ಕುರಿತು ಸರಸವಾಗಿ ಭಾಷಣವನ್ನು ಮಾಡಿದರು ಮ|| ಗಂಜಳ ಇವರು ತಮ್ಮ ಸಮಾಜದ ಗೋಕಾಕದ ವಿದ್ಯಾರ್ಥಿಯಾದ ಪತ್ರಾವಳಿಯವರು ಐ. ಸಿ. ಎಸ್. ಪರೀಕ್ಷೆಗೆ ವಿಲಾಯತಿಗೆ ಹೋಗುವರೆಂದೂ ಮತ್ತು, ಅವರ ಖರ್ಚಿನ ಸಲುವಾಗಿ ತಾವು ಫಂಡು ಎತ್ತಲಿಕ್ಕೆ ಬಂದ ಉದ್ದೇಶವನ್ನು ಸಭಿಕರಿಗೆ ತಿಳಿಸಿದರು. ನಂತರ ಜೈನಸಮಾಜದವರಿಂದ ೩೦೦ ರೂಪಾಯಿ ಮತ್ತು ಲಿಂಗಾಯತ ಸಮಾಜದ ವತಿಯಿಂದ ೧೫೦ ರೂಪಾಯಿಗಳ ಸಹಾಯವು ದೊರಕಿತು. ಇಷ್ಟಾದನಂತರ ಸಭೆಯ ಕಾರ್ಯವು ಮುಗಿದು ನಮ್ಮನ್ನಾಳುವ ಶ್ರೀಮಂತ ಸರಕಾರದ ಬಾಳಾಸಾಹೇಬರವರ ಹೆಸರಿನಿಂದ ಜಯಘೋಷವಾಗಿ ಸಭಾ ವಿಸರ್ಜನೆಯಾಯಿತು.

ತಮ್ಮ ಓರ್ವ ಪ್ರೇಕ್ಷಕ.

ಅನುಕರಣೀಯವಾದ ದಾನ.

ಹಿರೇಕರೂರ ತಾಲ್ಲೂಕು ಹಾಂವ್ಸಭಾವಿ ಎಂಬ ಗ್ರಾಮದಲ್ಲಿ ಈಗ ಎರಡು ವರ್ಷದ ಲಾಗಾಯಿತು. ಶ್ರೀ ಮೃತ್ಯುಂಜಯ (ಎ. ವಿ.) ಸ್ಕೂಲ ಸ್ಥಾಪನವಾಗಿದ್ದು ತಮ್ಮೆಲ್ಲರಿಗೆ ಶ್ರುತವಿರುವದಷ್ಟೇ. ಆದರೆ ಸದರಿ (ಎ. ವ್ಹಿ.) ಸ್ಕೂಲು ವೂರ್ಜಿತಸ್ಥಿತಿಗೆ ಬರುವ ಮೂಲ್ಯವಾಗಿ ಅಲ್ಲಿಯ ವೀರಶೈವ ಪ್ರಮುಖರು ತನು, ಮನ, ಧನಗಳು ಅರ್ಪಿಸಿ ಈಗ ಎಂಡು ಮೂರು ತಿಂಗಳಲಾಗಾಯಿತು, ಬಡ ವಿದ್ಯಾರ್ಥಿಗಳಿಗೆ ಊಟದ ಸಲುವಾಗಿ ಒಂದು ಬೋರ್ಡಿಂಗ್ ಸ್ಥಾಪನೆ ಮಾಡಿ ಈಗ ಇಪ್ಪತ್ತು ಇಪ್ಪತ್ತೈದು ಮಂದಿ ವಿದ್ಯಾರ್ಥಿಗಳು ಊಟಮಾಡಲೇರ್ಪಡಿಸಿರುವರು. ಅವರ ಯಾವತ್ತು ತಮ್ಮ ಮನೆ ಕೆಲಸಗಳನ್ನು ಬಿಟ್ಟು ಅಲ್ಲಲ್ಲಿ ತಿರುಗಿ ಕಾಲು ಮೂಟಲಾದುವುಗಳನ್ನು ಕೂಡಿಸುವ ಕೆಲಸಗಳನ್ನು ನೋಡಿ ಅದೇ ಸಮಾಪದಲ್ಲಿರುವ ದೀವಿಗಿಹಳ್ಳಿ ಗ್ರಾಮದ ಉಜ್ಜಪ್ಪ ಪಡಸಾಲೆಯವರು ಈಗ ಒಂದುವರೆವರ್ಷದ ಕೆಳಗೆ ಮೃತಪಟ್ಟದ್ದರಿಂದ ಅವರ ತಂಗಿಯಾದ ಹನುಮವ್ವಾ ಎಂಬ ನಾರೀಮಣಿಯು ಮತ್ತು ಅವರ ಅಣ್ಣಂದಿರ ಮಗನಾದ ಉಜ್ಜನಗವಡ ಎಂಬುವವರು ತಂಮೊಳಗೆ ವಿಚಾರ ಮಾಡಿ ನಾವಿಬ್ಬರೂ ಅನ್ಯಾಯವಾಗಿ ವ್ಯಾಜ್ಯಮಾಡುವದಕ್ಕಿಂತ ದಾನಗಳಲ್ಲಿ ಶ್ರೇಷ್ಠವಾದ ಅನ್ನದಾನ ವಿದ್ಯಾದಾನ ಇವುಗಳ ಬಗ್ಗೆ ಹಗಲಿರುಳೂ ಅವಿಶ್ರಾಂತಶ್ರಮಪಡುತ್ತಿರುವ ಶ್ರೀ ಹಾಂವ್ಸಭಾವಿ ವೀರಶೈವ ವಿದ್ಯಾವರ್ಧಕ ಸಂಘ ಸಂಸ್ಥೆಗೆ ದಾನಕೊಡುವೆನೆಂದು ವಾಗ್ದಾನ ಮಾಡಿ, ಮೇ ತಿಂಗಳ ತಾರೀಖು ೨೫ ರಲ್ಲಿ ಒಂದು ಮನೆಯನ್ನೂ ಹತ್ತು ಎಕರೆ ಜಮೀನನ್ನೂ ಆಗದೀ ಆನಂದದಿಂದಲೂ ಉತ್ಸಾಹದಿಂದಲೂ ನೊಂದಾಯಿಸಿ ಕೊಟ್ಟರು. ಅಯ್ಯಾ ವೀರಶೈವ ವಿದ್ಯಾರ್ಥಿಗಳೇ ಮೇಲಿನ ಉದಾರಮತಿಗಳು ಮಾಡಿದ ದಾನವು ಸಫಲವಾಗುವಂತೆ ನೀವು ಯಾವಾಗಲೂ ನಿರಾಸ ಆಗದಂತೆ ಹಗಲಿರುಳೂ ಶ್ರಮಪಟ್ಟು ಅಭ್ಯಾಸಮಾಡಿ ಪದವೀಧರರಾಗಿ ನಿರುದ್ಯೋಗಿಗಳೂ ಆಲಸ್ಯವಂತರೂ ಆಗದೇ ಈ ಸಂಘದ ಉತ್ತೇಜನಕರ್ತರಾಗಬೇಕೆಂದು ಬೇಡಿಕೊಳ್ಳುತ್ತೇನೆ. ಇವರಂತೆ ಆಶೀಷ ವೀರಶೈವ ಮಹನೀಯರೇ ನೋಡಿರಿ, ಈಗಿನ ಕಾಲದಲ್ಲಿ ಹೆಂಣುಮಗಳು ಸಹ ವ್ಯಾಜ್ಯಮಾಡಿ ಅನಾವ್ಯಯ ಮಾಡಬಾರದೆಂದು ವಿದ್ಯಾಪ್ರೋತ್ಸಾಹದ ಬಕೆಯಿಂದ ಅಮೂಲ್ಯವಾದ ದಾನಮಾಡಿರುವಳು. ಇಂಥ ವ್ಯಾಜ್ಯಗಳ ಬಗ್ಗೆ ಯಷ್ಟೋ ಕಡೆಗೆ ಕೋರ್ಟುಕಚೇರಿಗಳಲ್ಲಿ ವ್ಯಾಜ್ಯಗಳು ಮಾಡಿ ಹೊಟ್ಟೆಗೆ ಅನ್ನ ನೀರುಗಳಿಲ್ಲದೇ ವಕೀಲರ ಮನೆಯ ಬಾಗಿಲುಗಳನ್ನು ಕಾಯುತ ಮಾತೇಹೊತ್ತ ಗಂಡಸರೇ ತಾವೆಲ್ಲರೂ ಉದಾಹರಿಸಿದ ಹೆಂಣುಮಗಳ ಉದಾಹರಣೆ ತಕ್ಕೊಂಡು ನಾಚಿಕೆಪಟ್ಟು ವ್ಯಾಜ್ಯಗಳನ್ನು ಬಿಟ್ಟು ಕೋರ್ಟಿನ ದಾರಿಗೆ ಬುತ್ತಿಗಂಟು ಕಟ್ಟುವದಕ್ಕಿಂತಾ ಕೈಲಾಸದ ದಾರಿಗೆ ಬುತ್ತಿಗಂಟುಕಟ್ಟಿಕೊಂಡು ಸಮಾಜೋದ್ಧಾರದ ಯಶೋಭಾಗಿಗಳಾಗಬೇಕೆಂದು ಬೇಡಿಕೊಳ್ಳುತ್ತೇನೆ.

ರಾಮಪ್ಪ ಬಸಪ್ಪ ಬೆಟಗೇರಿ ಸಾ|| ಬ್ಯಾಡಿಗಿ.
ವೀರಶೈವ ವಿದ್ಯಾವರ್ಧಕ ಸಂಘ ಹಾಂವ್ಸಭಾವಿ.

ಧರ್ಮ ಸುಧಾರಣೆಯು.

ಎಲೈ ವೀರಶೈವ ಬಾಂಧವರೇ! ತಾ|| ೯-೬-೩೦ ಇಸವಿ ದಿವಸ ಬಂಕಾಪುರ ತಾಲ್ಲೂಕು ಪೈಕಿ ಇಂಗಳಗಿ ಗ್ರಾಮದಲ್ಲಿ ಶ್ರೀ ಗಂಜೀಗಟ್ಟಿ ಅಧ್ಯಕ್ಷತೆಯಲ್ಲಿ ಧರ್ಮಸುಧಾರಣೆಯದೊಂದು ಸಭೆಯು ನೆರೆದಿತ್ತು. ಈ ಸಭೆಯಲ್ಲಿ ಸದ್ಭಕ್ತರಾದ ಭಂವುಗೌಡಾ ಪಾಟೀಲ, ಹನುಮಂತರಾವ ಕುಲಕರ್ಣಿ, ವೀರನಗೌಡಾ ಪಾಟೀಲ, ಭಾವುಭಟ್ಟ ಜೋಯಿಸ, ಬಸನಗೌಡಾ ಪಾಟೀಲ್, ಬಸಪ್ಪಾ ತೋಟ್ಟಣ್ಣನವರ, ಬಸಪ್ಪಾ ಶಿಗ್ಗಾವಿ ಇವರೇ ಮೊದಲಾದ ಭಕ್ತಮಂಡಳಿಯು ಶ್ರೀಗಳ ದರ್ಶನಾಶೀರ್ವಾದ ಪಡೆಯುವದಕ್ಕಾಗಿಯೂ ಶಿವಧರ್ಮತತ್ವ ತಿಳಿಯುವದಕ್ಕಾಗಿಯೂ ನಿರ್ಮಲಾಂತಃಕರಣದಿಂದ ನೆರೆದಿದ್ದರು. ಸಭೆಯ ಪ್ರಾರಂಭದಲ್ಲಿ ಶ್ರೀಗಳು ಯಾವತ್ತು ಸದ್ಭಕ್ತರೊಡನೆ ಶಿವಭಜನೆ ಶಿವಧ್ಯಾನವನ್ನು ಮಾಡಿ ಶಿವಧರ್ಮತತ್ವದ ಮೇಲೆ ಯಥಾರ್ಥವಾದ ಭಾಷಣವನ್ನು ಅಸ್ಖಲಿತವಾಣಿಯಿಂದ ಮಾಡಿ, ಪ್ರತಿಯೊಬ್ಬರ ಮನಸ್ಸನ್ನು ಆನಂದಗೊಳಿಸಿದರು. ವಾಚಕರೇ ಈ ಭಾಷಣದ ಪರಿಣಾಮವು ಪ್ರತಿಯೊಬ್ಬ ಭಕ್ತಮಾಹೇಶ್ವರರಿಗೆ ಹೃದಯಂಗಮವಾಗಿಲ್ಲದೆ, ಸಮಾಜ



ಮಲಿಂಗರೆಡ್ಡಿ, ಎಂ. ಎ., ಯವರು.

ಮೈಸೂರು ಸ್ಟಾರ್.

ಇಸವಿ ನವಂಬರ್ ತಾ|| ೪ ನೆಯ ಭಾನುವಾರ.

ಮಲಿಂಗರೆಡ್ಡಿ, ಎಂ. ಎ., ಯವರಿಗೆ
ನಿಯ ಮಹಾಜನರ ಸತ್ಕಾರ.

ಕಳೆದ ತಾ|| ೧ ನೆಯ ಗುರು ಸೆಯ ಟವರ್ ಹಾಲಿನಲ್ಲಿ ಮ ರಾಮಲಿಂಗರೆಡ್ಡಿ ಎಂ. ಎ., ಯವರಿಗಾಗಿ ಮೈಸೂರು ಪುರನಿವಾಸಿಗಳಿಂದ ಒಂದು ಬಹಿರಂಗವಾದ ಗೌರವ ಸತ್ಕಾರಾಭಿನಂದನಮಹೋತ್ಸವವು ನೆರವೇರಿಸಲ್ಪಟ್ಟಿತು. ಸರ್ದಾರ್ ಕಾಂತರಾಜ ಅರಸ್ ಬಿ. ಎ.; ಸಿ. ಎಸ್. ಐ., ಯವರು ಅಧ್ಯಕ್ಷಪೀಠವನ್ನಲಂಕರಿಸಿದ್ದರು. ಈ ಉತ್ಸವಾರಂಭವು ೬|| ಗಂಟೆಗಾದರೂ, ಸಭಾಭವನಕ್ಕೆ ೫ ಗಂಟೆಯಿಂದಲೇ ಜನರು ಸೇರುವುದಕ್ಕಾರಂಭವಾದುದರಿಂದ ಸ್ಥಲ ಸಾಲದೆ || ಗಂಟೆಯೊಳಗಾಗಿ ಹೊರಬಾಗಿಲನ್ನು ಮುಚ್ಚಿ ಜನಸಂಮರ್ದವನ್ನು ತಡೆಯಬೇಕಾಗಿ ಬಂದಿತು. ಒಳಗೆಲ್ಲಾ ಲೇಶವೂ ಅವಕಾಶವಿಲ್ಲದಂತೆ ಜನರು ಸೇರಿದ್ದುದಲ್ಲದೆ ಮಾಡದಮೇಲೂ ಒಬ್ಬರಮೇಲೊಬ್ಬರು ನಿಂತಿದ್ದರು. ಹೊರಗಣ ಜಗತಿಯುನೋ ತುಂಬಿತುಳುಕುತ್ತಿದ್ದರು. ಒಳಗಿದ್ದವರಲ್ಲಿ ಸಾವಿರಾರುಜನ ಆಸನಗಳೇ ದೊರೆಯದೆ ನಿಂತಿರಬೇಕಾಗಿ ಬಂದಿತು. ಇಂಥ ಭೂತಪೂರ್ವವಾದ ಕೂಟವು ಟವರ್ ಹಾಲು ನಿರ್ಮಿತವಾದಾರ ಒಂದೆರಡುವೇಳೆ ಮಾತ್ರ ಆಗಿರಬಹುದು. ಸಭೆಗೆ ಆಗಮಿದ್ದವರಲ್ಲಿ ಸರ್ದಾರ್ ಲಕ್ಷ್ಮೀಕಾಂತರಾಜ ಅರಸ್, ಮ|| ಗದ ಎಂ. ಎಸ್. ಬಾಳರಾಜ ಅರಸ್, ಹೆಚ್. ನಂಜುಂಡರಾಜ ಸ್, ಹೆಚ್. ಲಿಂಗರಾಜ ಅರಸ್, ಚಿಕ್ಕೇ ಅರಸ್ ಮೊದಲಾ ಜಬಂಧುವರ್ಗದವರೂ, ದಿ|| ಬ|| ಚಕ್ರವರ್ತಿಯವರು ಮ|| ಎಕ್ಸೈಜ್ ಕಮಿಷನರ್, ಪಿ. ರಾಘವೇಂದ್ರರಾವ್, ಪ್ರೊ|| ಜನರಲ್ ಕೆ. ಆರ್. ಶ್ರೀನಿವಾಸಯ್ಯಂಗಾರ್, ಕೋ|| ಜಿಸ್ಟ್ರಾರ್ ಚಾಂಡಿಯವರು, ಮೈಸೂರು, ಬೆಂಗಳೂರು, ರ, ಚಿತ್ರದುರ್ಗ— ಈ ಡಿಸ್ಟ್ರಿಕ್ಟುಗಳ ಡಿ|| ಕಮಿಷ ರು, ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ ಮಿ||ಹಂಸಾಹುಸೇನ್ ಸಂಪದಭ್ಯುದಯಸಮಾಜದ ವಿದ್ಯಾಭ್ಯಾಸಶಾಖಾ ಸೆಕ್ರೆ ದ ಮಿ||ಡಿಸೋಜಾರವರು, ರಾಜಧಾನಿಯ ಮ್ಯು|| ಪ್ರೆಸಿ ು, ವೈಸ್ ಪ್ರೆಸಿಡೆಂಟರು ಮೊದಲಾದ ಅನೇಕಾಧಿಕಾರಿವರ್ಗ, ರಾಜಧಾನಿಯ ಎಲ್ಲಾ ಜನವರ್ಗಗಳ ಪ್ರಮುಖರೂ ಸಹ ಡೆಯ ಆಸನಗಳಲ್ಲಿ ವಿರಾಜಮಾನರಾಗಿದ್ದರು. ಅವರ ಯಲ್ಲಿ ಸಾವಿರಾರುಮಂದಿ ಪುರಜನರೂ ವಿದ್ಯಾರ್ಥಿಗಳೂ ಸಾಹದಿಂದ ನೆರೆದಿದ್ದರು. ಸರ್ದಾರ್ ಕಾಂತರಾಜ ಅರಸರವ ತ್ತು ಮ|| ರಾಮಲಿಂಗರೆಡ್ಡಿಯವರು ದಯಮಾಡಿಸಿದ ಕೂಡ ಡು ಬಾಜಿಸಲ್ಪಡುತ್ತಿರುವಾಗ್ಗೆ, ಸತ್ಕಾರಕಸಂಘದ ದ ಮಹಮ್ಮದ್ ಸೇಟರು, ಡಿ. ಬನುಮಯ್ಯನವರು, ಪುರು ಮಾನಂದಗಿರಿಬಾವಾಜಿಯವರು, ಸಾ|| ಕಾವೇರಿಪಟ್ಟಂ ಯಕಿಟ್ಟರು ಮೊದಲಾದವರು ಹೋಗಿ ಇದಿರ್ಗೊಂಡು ಸ ಪ್ರತ್ಯುತ್ಥಾನ ಕರತಾಡನಗಳಿಂದ ಸುಸ್ವಾಗತ ಮಾಡುತ್ತಿ ನ್ನತಾಸನಗಳಲ್ಲಿ ಕುಳ್ಳಿರಿಸಿದರು.

ಅತಿಥಿಗಳ ಸಂತೋಷಕ್ಕಾಗಿ ಮಾಡಿದ್ದ ಏರ್ಪಾಟುಗಳೊಳಗೆ ಮೊಟ್ಟಮೊದಲು ವೈಣಿಕಶಿಖಾಮಣಿ ಮ|| ಶೇಷಣ್ಣನವರ ವೀಣಾವಾದನವಾಯಿತು. ಜನಗಳ ಕಲಕಲದಲ್ಲಿ ಅದು ಮುಕ್ತಾಯವಾಯಿತು. ಬಳಿಕ ಸಂಗೀತ ವಿದ್ವಾನ್ ರಾಚೋಟಪ್ಪನವರ ಗಾನಾರಂಭವಾದಕೂಡಲೇ ಸಭೆಯು ನಿಶ್ಶಬ್ದವಾಗಿ ಕರ್ಣಾನಂದಗೊಂಡಿತು. ಬಳಿಕ ರಾಂಪೂರಿನ ಮಿ|| ಜೂಸೂಖಾನರ ಸಿತಾರ್ ವಾದ್ಯವಾದನವು ಇಂಪಾಗಿ ಸ್ವಲ್ಪಹೊತ್ತು ನಡೆದಿತು. ಬಳಿಕ ಗಾನವಿಶಾರದರಾದ ಮಿ|| ಈಸಾಸೇಟರು ಉರ್ದುಭಾಷೆಯಲ್ಲಿ ಮಿ|| ರಡ್ಡಿಯವರ ಗುಣಪ್ರಶಂಸೆ ಮಾಡಿ ರಚಿತವಾಗಿದ್ದ ಪದ್ಯಾವಳಿಯನ್ನು ಗಾನರಸ ಮಿಶ್ರಮಾಡಿ ಬಹಳ ಶ್ರಾವ್ಯವಾಗಿ ಓದಿದರು. ತದನಂತರ ಮೈಸೂರು ಎ. ವಿ. ಎ. ನಾಟಕ ಸಂಘದವರಿಂದ ಒಂದೆರಡು ಸೀನುಗಳು ಪ್ರದರ್ಶಿಸಲ್ಪಟ್ಟುದು ಮನೋಹರವಾಗಿದ್ದಿತು. ಬ್ಯಾಂಡಿನ ಬಾರಿಸುವಿಕೆಯೊಡನೆ ಇ

ದ್ದೇಶದಿಂದ ಪ್ರವಾಸ ನಾದ ಬಳಿಕ ಸಭ್ಯಾರಂಗ ಜಗತ್ತಿಯ ಮೇಲೆ ಎ
ಯೊ ಚಿಸುತ್ತಿದ್ದಾರೆ.

ಅದರ ಮತ್ತ ದರು. ಮೊದಲು ಕೊಡಗಿನ ರಿಟೈರ್ಡ್ ಸಬ್ ಜಡ್ಜರಾದ ರಾವ್ ಸಾಹೇಬ್ ಚೆನ್ನಯ್ಯನವರು ಇಂಗ್ಲೀಷ್ ಭಾಷೆಯಲ್ಲೂ, ಬಳಿಕ ಮ|| ಎಂ. ಬಸವಯ್ಯ ಬಿ. ಎ., ಬಿ. ಎಲ್., ರವರು ಕನ್ನಡದಲ್ಲೂ, ಅನಂತರ ಮಿ|| ಮಹಮ್ಮದ್ ಸೇಟರು ಉರ್ದುವಿನಲ್ಲೂ ಭಾಷಣಗಳನ್ನು ಮಾಡಿದರು. ಸ್ವಲ್ಪ ಹೆಚ್ಚುಕಡಿಮೆ ಎಲ್ಲ ಭಾಷಣಗಳ ಅಭಿಪ್ರಾಯವೂ ಒಂದೇ ರೀತಿಯಾಗಿದ್ದಿತು. ಅವುಗಳಲ್ಲಿ ಮ|| ಬಸವಯ್ಯನವರ ಭಾಷಣದ ಮುಖ್ಯಾಶಯವನ್ನು ಮಾತ್ರ ಇಲ್ಲಿ ತಿಳಿಯಿಸುತ್ತೇವೆ:—ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ತಮ್ಮ ಪ್ರಜಾಸಮುದಾಯದ ಸರ್ವಾಂಗವನ್ನೂ ವಿದ್ಯಾವಿವೇಕಾದಿಗಳಿಂದ ಪರಿಪುಷ್ಟಿಗೊಳಿಸಬೇಕಾದುದು ಅವಶ್ಯಕವೆಂದು ತಿಳಿದುಕೊಂಡಿರುವ ಈ ಸುಸಂಧಿಯಲ್ಲಿ ಆ ಕಾರ್ಯವನ್ನು ನಿರ್ವಹಿಸುವುದಕ್ಕೆ ಸಕಲ ವಿಧದಲ್ಲೂ ಸಮರ್ಥರಾಗಿರುವ ಮ|| ರಾಮಲಿಂಗರಡ್ಡಿಯವರನ್ನು ವಿದ್ಯಾಭ್ಯಾಸಶಾಖೆಯ ಇನ್ಸ್ಪೆಕ್ಟರ್ ಜನರಲ್ ಉದ್ಯೋಗಕ್ಕೆ ನಿಯಮಿಸಲು ಉದ್ದೇಶಪಟ್ಟಿರುವುದು ಬಹಳ ಪ್ರಶಸ್ತವಾಗಿರುತ್ತದೆ. ಮ|| ರಡ್ಡಿಯವರು ಸ್ವದೇಶ ವಿದೇಶಗಳಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಅನೇಕ ಡಿಗ್ರಿಗಳನ್ನು ಪಡೆದುಕೊಂಡಿರುವುದಲ್ಲದೆ ವಿದ್ಯಾರ್ಜನೆಗಾಗಿ ಪಾಶ್ಚಾತ್ಯ ದೇಶಗಳನ್ನು ಸಂಚರಿಸಿ, ಬೇಕಾದಷ್ಟು ಅನುಭವ ಪಡೆದುಕೊಂಡು ಬಂದುದಲ್ಲದೆ ಮತ್ತೊಂದು ಸಲ ಯೂರೋಪು, ಅಮೇರಿಕಾ, ಜಪಾನ್ ಮೊದಲಾದ ದೇಶಗಳಲ್ಲೆಲ್ಲಾ ಸಂಚರಿಸಿ, ಅಲ್ಲಿಯ ವಿದ್ಯಾಪೀಠಗಳ ರಚನೆ, ವಿದ್ಯಾಭ್ಯಾಸ ಸೌಕರ್ಯಗಳು, ಕೈಗಾರಿಕೆಗಳ ಪದ್ಧತಿ, ಕುಶಲ ವಿದ್ಯಾಪ್ರಾಚುರ್ಯ-ಇವುಗಳನ್ನೆಲ್ಲಾ ಅರಿತುಕೊಂಡು ಬಂದು; ನಮ್ಮ ಮೈಸೂರು ವಿಶ್ವವಿದ್ಯಾಲಯ ರಚನೆಗಾಗಿ ಎಷ್ಟೋ ಉಪಯುಕ್ತ ಸೂಚನೆಗಳನ್ನು ಮಾಡಿದವರಾಗಿರುತ್ತಾರೆ. ಇದುವರೆಗೆ ರಾಜಧಾನಿಯ ಮಹಾರಾಜಾ ಕಲಾಶಾಲೆಯಲ್ಲಿ ಬೋಧಕರೂ ಪ್ರಿನ್ಸಿಪಾಲರೂ ಆಗಿದ್ದುಕೊಂಡು ಆ ಕೆಲಸವನ್ನು ಬಹಳ ದಕ್ಷತೆಯಿಂದ ನೆರವೇರಿಸಿ ಒಳ್ಳೆ ಹೆಸರನ್ನು ಪಡೆದುಕೊಂಡಿರುತ್ತಾರೆ. ಮೈಸೂರುದೇಶದ ಪ್ರಜಾವರ್ಗದಲ್ಲಿ ಹಿಂದುಳಿದ ಜನರೇ ಸಂಪೂರ್ಣವಾಗಿರುವುದರಿಂದ ಅವರಲ್ಲಿ ವಿದ್ಯಾವಿಕಾಸವನ್ನುಂಟುಮಾಡುವ ಕೆಲಸಕ್ಕೆ ಇವರಂಥ ಕಾರ್ಯದಕ್ಷರ ಮತ್ತೂ ಪೂರ್ಣಾನುಭವಿಗಳ ಆವಶ್ಯಕತೆಯು ಬಹಳವಾಗಿದ್ದಿತು. ಇದನ್ನರಿತು ನಮ್ಮ ಶ್ರೀಮನ್ಮಹಾರಾಜರವರೂ ಅವರ ಸರ್ಕಾರದವರೂ ಸಹ ಮ|| ರಡ್ಡಿಯವರನ್ನು ನಿಯಮಿಸಿಕೊಳ್ಳಲಿರುವುದಕ್ಕಾಗಿ ಪ್ರಜೆಗಳೆಲ್ಲರೂ ಮುಖ್ಯವಾಗಿ ಹಿಂದುಳಿದ ಜನವರ್ಗದವರೆಲ್ಲರೂ ಅತ್ಯಂತ ಕೃತಜ್ಞರಾಗಿರುತ್ತಾರೆ. ದೇಶದಲ್ಲಿ ಯಾವುದಾದರೊಂದಂಗವು ಮುಂದಾಗಿದ್ದ ಮಾತ್ರಕ್ಕೇ ಅದು ಸರ್ವಾಂಗ ಪರಿಪುಷ್ಟವೆನಿಸಿಕೊಳ್ಳುವುದಿಲ್ಲ. ಒಂದೇ ಒಂದಂಗವನ್ನು ಮುಂದುಮಾಡಿಕೊಂಡಿರುವ ದೇಶವು ಪ್ರಪಂಚದಲ್ಲೆಲ್ಲೂ ಇರುವುದಿಲ್ಲ. ಸರ್ವಪ್ರಜೆಗಳ ಕಷ್ಟಸುಖಗಳನ್ನೂ ವಿಚಾರಿಸಿ ಅವರ ಕ್ಷೇಮವೇ ತಮ್ಮ ಕ್ಷೇಮವೆಂದು ಬಗೆದು ಸರ್ವರ ಪುರೋವೃದ್ಧಿಯನ್ನೂ ಬಯಸದಿರುವ ಅಧಿಕಾರಿಗಳು ದೇಶದಲ್ಲಿ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಸರ್ವರನ್ನೂ ಮುಂದಕ್ಕೆ ತರಬೇಕೆಂದು ಬಯಸತಕ್ಕ ಅಧಿಕಾರಿಗಳು ನಮ್ಮ ದೇಶದಲ್ಲಿ ಬಹಳ ವಿರಳರಾಗಿರುವುದು ನಮ್ಮ ದುರದೃಷ್ಟ. ಇಂಥ ಲೋಪವು ಮುಂದೆ ಪರಿಷ್ಕೃತವಾಗುತ್ತ ಬರಬೇಕು. ಹಿಂದುಳಿದ ಜನವರ್ಗದವರನ್ನು ವಿದ್ಯಾಪ್ರಸಾರದಿಂದ ಉದ್ಧರಿಸಬೇಕೆಂಬ ಉದ್ದೇಶದಿಂದಲೇ ಶ್ರೀಮನ್ಮಹಾರಾಜರವರು ೧ ಲಕ್ಷ ರೂ. ಗಳನ್ನು ಪ್ರತ್ಯೇಕವಾಗಿ ವೆಚ್ಚಮಾಡಲು ಅಪ್ಪಣೆ ಮಾಡಿರುವುದಕ್ಕಾಗಿ ನಾವೆಲ್ಲರೂ ಕೃತಜ್ಞತೆಯಿಂದ ಅವರನ್ನು ವಂದಿಸುತ್ತೇವೆ. ಮ|| ರಡ್ಡಿಯವರು ಈಗ ವಹಿಸುವುದರಲ್ಲಿರುವ ಉದ್ಯೋಗದ ಭಾರವು ಸಾಮಾನ್ಯವಾದುದಲ್ಲ. ಎಲ್ಲ ಶಾಖೆಗಳಿಗಿಂತಲೂ ವಿದ್ಯಾಭ್ಯಾಸಶಾಖೆಯು ಬಹಳ ಮುಖ್ಯವಾದುದು. ಇದರಿಂದ ಪ್ರಜಾವರ್ಗದ ಸಮುದ್ಧಾರಕ್ಕೆ ಅತ್ಯಂತ ಸಹಾಯವಾಗುವುದು. ಇದರ ಕಾರ್ಯನಿರ್ವಾಹದಲ್ಲಿ ಅನೇಕವಾದ ತೊಡಕುಗಳಿಲ್ಲದೆ ಇಲ್ಲ. ಬೇಕೆಂತಲೇ ಕೆಲರು ತೊಡಕುಗಳನ್ನೊಡ್ಡುತ್ತಲೂ, ಹಿಂದಕ್ಕೆ ಜಗ್ಗುತ್ತಲೂ ಬರುವರು. ಆದರೆ ಮ|| ರಡ್ಡಿಯವರು ಅವುಗಳೊಂದಕ್ಕೂ ಜಗ್ಗದೆ ತಮ್ಮ ಮೇಲೆ ಹೊರಿಸಲ್ಪಡಲಿಕ್ಕಿರುವ ವಿಶೇಷ ಉತ್ತರವಾದಿತ್ವವುಳ್ಳ ಕೆಲಸವನ್ನು ಪ್ರಜಾಸಾಮಾನ್ಯಕ್ಕೂ ಹಿತಕರವಾಗುವಂತೆ ನೆರವೇರಿಸಿ, ಈಗ ಇಲ್ಲಿ ಸೇರಿರುವ ಇಷ್ಟು ಸಹಸ್ರಾರುಜನರು ಅವರ ವಿಷಯದಲ್ಲಿ ಯಾವ ನಂಬುಗೆಯನ್ನಿಟ್ಟು ಅವರಿಗೆ ಸರ್ಕಾರದವರಿಂದ ಕೊಡಲ್ಪಡಲಿಕ್ಕಿರುವ ಉದ್ಯೋಗಕ್ಕಾಗಿ ತಮ್ಮ ಅಭಿನಂದನವನ್ನು ತಿಳಿಯಿಸಲು ನೆರೆದಿರುತ್ತಾರೋ, ಇವಿಷ್ಟು ತಲೆಯೊಂದಕ್ಕೂ ಸಾವಿರಾರು ಜನರಂತೆ ಅಭಿನಂದಿಸುವ ಸ್ಥಿತಿಯ ತಮ್ಮ ಉದ್ಯೋಗ ವಿಶ್ರಾಂತಿಕಾಲದಲ್ಲಿ ಪಡೆದುಕೊಳ್ಳುವ ಗಲೆಂದು ಕೋರುತ್ತೇವೆ.'' ಹೀಗೆ ಭಾಷಣಗಳಾದ ಬಳಿಕ ಗೂ ಸಭಾಧ್ಯಕ್ಷರಿಗೂ ಹಾರ ಗುಚ್ಛಗಳು ಅರ್ಪಿಸಲ್ಪಟ್ಟು ಅನಂತರ ಮ|| ರಡ್ಡಿಯವರು ಬಹಳ ಗಂಭೀರವೂ ಗಂಗಾಪ್ರವಾಹದಂತೆ ಅವಿಚ್ಛಿನ್ನವೂ ಆದ ವಾಣಿಯಿಂದ ಆಂಗ್ಲಭಾಷೆಯಲ್ಲಿ ಸ್ವಲ್ಪ ದೀರ್ಘವಾಗಿಯೇ ಪ್ರತ್ಯುತ್ತರ ಭಾಷಣವನ್ನು ಮಾ ತಮ್ಮ ವಿದ್ಯಾವೈದುಷ್ಯಾನುಭವಗಳನ್ನು ಈ ದೇಶೀಯರ ಕ್ಕಾಗಿ ವಿನಿಯೋಗಿಸಲು ಶ್ರೀಮನ್ಮಹಾರಾಜಾ ಸರ್ಕಾರದವ ಕೊಡಲ್ಪಡುವ ಅವಕಾಶವನ್ನು ಮನಸ್ಸಾಕ್ಷಿಗೆ ವಿರುದ್ಧವಿಲ್ಲ ಸರ್ವ ಪ್ರಜಾಸೇವೆಯನ್ನು ಮಾಡುವಲ್ಲಿ ವಿನಿಯೋಗಿಸಿ, ಪ್ರ ವರ್ಗದವರು ತಮ್ಮ ವಿಷಯದಲ್ಲಿಟ್ಟಿರುವ ಬರವಸೆಯನ್ನು ರ್ಥಕಪಡಿಸಲು ಪುರುಷಯತ್ನದಿಂದ ಸಾಧ್ಯವಾಗುವಷ್ಟು ಪ್ರ

ಒಳಗಾಗಿ ಕಾರ್ಯದರ್ಶಿಗಳಿಗೆ

ಮಾಡಲು ತಾವು ಸಿದ್ಧರಾಗಿರುತ್ತೇವೆಂತಲ ತಮ್ಮ ಹಾಶಯವು ಎಷ್ಟು ದೂರದಿಂದೂ ಸತ್ಯ ನ್ಯಾಯ ಧ ಳಿಗೆ ಲೋಪವಿಲ್ಲದಂತೆ ನೆರವೇರಿಸಬೇಕಾದುದು ಪ್ರ ತತ್ರಾಪಿ ವಿದ್ಯಾವಿವೇಕಸಂಪನ್ನನ ಮುಖ್ಯಕರ್ತವ್ಯವೆಂಬು ನಾನು ಸಂಪೂರ್ಣವಾಗಿ ತಿಳಿದಿರುವೆನೆಂತಲೂ, ಮುಖ್ಯ ದುಳಿದವರನ್ನು ಮುಂದಕ್ಕೆ ತರಲು ಪ್ರಯತ್ನಿಸಿದರೂ ಮು ದವರನ್ನು ಹಿಂದಕ್ಕೆ ಜಗ್ಗಿಸಬೇಕೆಂಬುದು ತಮ್ಮ ಉದ್ದೇ ವೆಂತಲೂ, ಮುಂದಾದವರ ಹಿತವಾದಗಳನ್ನು ಅಂಗೀ ಹಿಂದಾದವರು ನಡೆಯಬೇಕೆಂತಲೂ ಮೊದಲಾಗಿ ಪ್ರತಿ ರಾಜಧಾನಿಯ ಸಕಲ ಪ್ರಜಾವರ್ಗದವರೂ ಈ ದಿವಸ ನೆರವೇರಿಸಿದ ಸತ್ಕಾರವನ್ನು ತಾವು ಜೀವಿತಾಂತವಾಗಿ ಮರೆಯತಕ್ಕವರಲ್ಲವೆಂತಲೂ, ಅವರು ವಿಶೇಷ ತರವಾಗಿ ಮಾಡಿದ ಸತ್ಕಾರಕ್ಕೂ ಗುಣಗ್ರಹಣೈಕವಿಚಕ್ಷಣರಾದ ಸರ್ದಾರ್ ಕಾಂತರಾಜ ಅರಸಿನವರು ಈ ದಿನದ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದುದಕ್ಕೂ ತಮ್ಮ ಕೃತಜ್ಞತಾವಂದನೆಗಳನ್ನು ತಿಳಿಯಿಸಿ, ತ ಭಾಷಣವನ್ನು ಮುಗಿಸಿದರು.

ಬಳಿಕ ಸಭಾಧ್ಯಕ್ಷರಾದ ಸರ್'ದಾರ್ ಕಾಂತರಾಜ ಅರಸಿನವರು ಸಭಿಕರ ಅಖಂಡಕರಾಸ್ಫಾಲನದಿಂದ ಉತ್ತೇಜಿತರಾಗಿ ತಮ್ಮ ಉಪಸಂಹಾರ ಭಾಷಣವನ್ನು ಸಂಕ್ಷಿಪ್ತವಾಗಿದ್ದರೂ ಬಹಳ ಶ್ಲಾಘನೀಯವಾದ ಅಭಿಪ್ರಾಯಗಳಿಂದ ಕೂಡಿರಿಸಿದರು. ಅದರ ಮುಖ್ಯಾಂಶವೇನೆಂದರೆ—ಇದುವರೆಗೆ ಈ ಸಭೆಯಲ್ಲಿ ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಉರುದಿನಲ್ಲೂ ಶ್ಲಾಘನೀಯಗಳಾದ ಭಾಷಣಗಳನ್ನು ಬೇರೆಬೇರೆ ದೊಡ್ಡ ಮನುಷ್ಯರು ಮಾಡಿರುತ್ತಾರೆ. ಅವುಗಳಲ್ಲೆಲ್ಲಾ ಮ|| ರಡ್ಡಿಯವರ ಯೋಗ್ಯತಾವಿಶೇಷಗಳು ವ್ಯಕ್ತಪಟ್ಟೇ ಇರುತ್ತವೆ. ನಾನು ಇವುಗಳನ್ನೆಲ್ಲಾ ಬಿಟ್ಟು ೪ ನೆಯ ಭಾಷೆಯಲ್ಲಿ ಮಾತನಾಡಬೇಕಾದರೆ ತೆಲುಗಿನಲ್ಲಿ ಮಾತನಾಡಬೇಕು. ಆ ಭಾಷೆಯಲ್ಲಿ ಮ|| ರಡ್ಡಿಯವರು ವಿಶೇಷ ಪಾಂಡಿತ್ಯವುಳ್ಳವರಾದುದರಿಂದ ನಾನು ಅದರಲ್ಲಿ ಬಾಯಿ ಹಾಕುವ ಹಾಗಿಲ್ಲ. ಇವರು ಆಂಧ್ರದೇಶೀಯರಾದರೂ ನಮ್ಮ ವಿಶ್ವವಿದ್ಯಾನಿಲಯದ ಬೋಧನಕ್ರಮಗಳೆಲ್ಲಾ ದೇಶಭಾಷೆಯಾದ ಕನ್ನಡದಲ್ಲೇ ನಡೆಯುವಂತಾಗಬೇಕೆಂದು ಮೊದಲಿಂದಲೂ ವಾದಿಸುತ್ತ ಅನನ್ಯಸಾಧಾರಣವಾದ ಅಭಿಮಾನವನ್ನು ಭಾಷೆಯ ವಿಷಯದಲ್ಲಿ ವಹಿಸಿರುವರಾದಕಾರಣ ಆ ಕನ್ನಡದಲ್ಲೇ ನನ್ನ ಭಾಷಣವನ್ನು ಮಾಡುವುದು ವಿಹಿತವಾದುದೆಂದು ನಾನು ತಿಳಿಯುತ್ತೇನೆ. ಮ|| ರಡ್ಡಿಯವರನ್ನು ಸರ್ಕಾರದವರು ಮಹಾರಾಜಾಕಾಲೇಜ್ ಪ್ರಿನ್ಸಿಪಾಲ್ ಕೆಲಸದಿಂದ ಬಿಡುಗಡೆ ಮಾ ಬಳಿಕ ಅವರಿಗೆ ಮುಂದಣ ಉದ್ಯೋಗವನ್ನು ಕೊಡುವ ಯದಲ್ಲಿ ಪ್ರಜೆಗಳ ಅಭಿಪ್ರಾಯವು ಹೇಗಿರುವುದೋ ಎ ಸರ್ಕಾರದವರು ಸಂಶಯಪಡುತ್ತಿದ್ದರು. ಈ ದಿನ ಇಲ್ಲಿ ನೆರೆದಿರುವ ಅಸದೃಶವಾದ ಜನಸ್ತೋಮ ನಿಬಿಡವಾದ ಮಹಾಸಭೆಯ ಸ್ಥಿತಿಯನ್ನು ನೋಡುವಲ್ಲಿ ಅವರ ವಿಷಯದಲ್ಲಿ ಪ್ರಜೆಗಳ ಸಾನುಭೂತಿಯು ಎಷ್ಟು ಘನತರವಾಗಿದೆಯೆಂಬುದು ವ್ಯಕ್ತವಾಗಿರುವ ಕಾರಣ, ಸರ್ಕಾರದವರ ಮನಸ್ಸಿನಲ್ಲಿದ್ದ ಸಂಶಯವೆಲ್ಲಾ ನಿರ್ಮೂಲಿತವಾಗುವುದೆಂಬುದಕ್ಕೆ ಸಂಶಯವಿಲ್ಲ. ಯಾರೊಬ್ಬರ ಗುಣಾತಿಶಯವನ್ನು ಅರಿಯಬೇಕಾದರೂ ದೂರದಿಂದ ನೋಡಿದರೆ ಫಲವಿಲ್ಲ. ಸಹವಾಸ ಸಾಮೀಪ್ಯವರ್ತನವು ಅತ್ಯವಶ್ಯಕವು. ಮ|| ರಡ್ಡಿಯವರ ಗುಣಾತಿಶಯಗಳೆಂಥವುಗಳೆಂಬುದನ್ನು ಇಲ್ಲಿ ನೆರೆದಿರುವ ಅವರ ಸಹಸ್ರಾರು ವಿದ್ಯಾರ್ಥಿಗಳು ತಿಳಿದಿರುವ ಮಟ್ಟಿಗೆ ಇತರರು ತಿಳಿಯಲಾರರು. ಮ|| ರಡ್ಡಿಯವರು ಘನತರವಾದ ಪಂಡಿತರು ಮಾತ್ರವೇ ಅಲ್ಲದೆ ಭೂಮಂಡಲದ ಅನೇಕ ಪ್ರಸಿದ್ಧ ರಾಷ್ಟ್ರಗಳ ಮಹಾ ಮಹಾ ಪಂಡಿತರ ವಿದ್ಯಾಪೀಠಗಳ ಸಂಭಾಷಣ ಸಹವಾಸಾದಿಗಳಿಂದ ವಿಶೇಷವಾದ ಅನುಭವವನ್ನು ಪಡೆದಿರುವುದು ಮಾತ್ರವೇ ಅಲ್ಲದೆ ಕೈಗಾರಿಕೆ ಲಾದ ವಿದ್ಯೆಗಳಲ್ಲೂ ಕುಶಲರಾಗಿರುತ್ತಾರೆ. ಕಾರ್ಯನಿರ್ವಾಹ ಮಾಡುವುದರಲ್ಲಿ ಶ್ರೇಷ್ಠವಾದ ಚಟುವಟಿಕೆಯೂ ಅಭಿಮಾನವೂ ಇವರಲ್ಲಿ ಬಹಳವಾಗಿವೆ. ನಮಗೆ ಗುಣದಲ್ಲಿ ಲಕ್ಷ್ಯವಿರಬೇಕೇ ಹೊರತು ಸ್ವದೇಶದವನು, ವಿದೇಶದವನು, ಸ್ವಕುಲದವನು, ಪರಕುಲದವನು ಎಂಬ ಭೇದಭಾವದಿಂದ ಪ್ರಯೋಜನವಿಲ್ಲ. ''ಖಂಡಿತವಾದೀ ಲೋಕವಿರೋಧೀ'' ಎಂಬ ಗಾದೆಯು ಇರುವುದಷ್ಟೆ. ಮ|| ರಡ್ಡಿಯವರು ಹೊರಗೊಂದು ಒಳಗೊಂದು ತೋರಿಸುವ ವಂಚಕಸ್ವಭಾವದವರಲ್ಲ. ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆ ಬಂದ ಗೆ ಸೇರದು. ಈ ಅವರ ಸ್ವಭಾ

೧೧. ಕೃಷ್ಣರಾಜಪೇಟೆ

ಜೋರುತ್ತಿರಬಹುದು.
ಜೆಗಳು ಗುಣಕ್ಕೆ

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೈತಾವತಾರಾ ಪಶ್ಯಜ್ಞನಕ್ಷತ್ರನೋತರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]

[ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦)

(ಸಂಚಿಕೆ ೪೪

ಸಮಾಜದ ಹೊರ ಗೆದ್ದಿರುವ ಗದ್ದಲ

ಹಿಂದು ಇಬ್ಬರಂಬಲೀ ಗುರುವಿಗೇ ... ಗುರುತ್ವಕ್ಕೆ ಹುಳು ಹತ್ತುತ್ತಿರುವದು. ಪೂಜ್ಯತ್ವಕ್ಕೆ ಜಂಗು ಹತ್ತುತ್ತಿರುವದು. ಬ್ರಾಹ್ಮಣಸಮಾಜದೊಳಗಿನ ... ಗು ... ಭಾಗ್ಯಶಾಲಿ ಜನರು ...

ಶ್ರೀ ಶಿವಯೋಗಿಗಳ ಸಂಘ

ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಕ್ಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಲಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೪ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದ ನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೪ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದು ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದೆ ಕಾಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಶಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವಧರ್ಮದ ಜೀರ್ಣೋದ್ಧಾರಮಾಡಿ ಝುಂಡೆ ಹಚ್ಚಿದ ಅದ್ವಿತೀಯ ಶಂಭುವಿನ ಅವತಾರಿಯಾದ -ಶ್ರೀ ಕಲ್ಯಾಣ ಬಸವೇಶ್ವರದೇವರ- ಅರಿವ ಮೇಲಿಗಿದೆ. ...ವಿದ್ದು ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅದ್ಯಕರ್ತವ್ಯ ಅದೆ ಫುಲ್‍ಸ್ಕೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ೧ ಕ್ಕೆ ೮ ಆಣೆ ಸೀಪಿಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈ ಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುಸ್ಥಾಪಿತವಾಗಿದೆ. ಸ್ವತಃ ಧರ್ಮತರಂಗಿಣಿಯು ಅವರಿಂದ ... ರೂ. ೦-೧೨-೦ ಟಪಾಲ್ ಖರ್ಚು ಬೇರೆ. ...ತ್ರದೆ. ಫುಲ್‍ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‍ಸೈಜು ರೂ. ೦-೮-೦ ...

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೋಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೆ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೋಟೊ ಬೇರೆ ಬೇರೆ ಸಿಕ್ಕುತ್ತವೆ.

ಪುರವಣಿಗೇ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಕೊಳ್ಳಿರಿ.

ಗಂಗಪ್ಪಾ ಬಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪೆನಿ,
ಸೊಲ್ಲಾಪುರ ಸಿಟಿ.

ಸ್ಕೂಲಿನ ಮಾಸ್ತರರಾದ ಮ... ವು ಜರುಗಿತು. ಸಭೆಯ ... ಬಿ. ಎ., ಎಲ್ ಎಲ್. ...

...ವಿದ್ಯಾರ್ಥಿಯಾದ ...ಗೆ ಹೋಗುವ ...ಡು ಎತ್ತಲಿಕ್ಕೆ ...ಜೈನಸಮಾಜದ ...ಜದ ಪತಿಯಿಂದ ...ನಂತರ ಸಭೆಯ ...ದ ಬಾಳಾಸಾ ...ಕಿಯಾಯಿತು. ...ರ್ವ ಪ್ರೇಕ್ಷಕ. ...ಮದಲ್ಲಿ ಈಗ ...ವಿ.) ಸ್ಕೂಲ ...ರಿ ಸದರಿ (ಎ. ...ಲ್ಲಿಯ ವೀರಶೈವ

ಸಭೆಗೆ ಊರೊಳಗಿನ ಯಜಮಾನ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಇದು ಉಪಯೋಗವಿದೆ ರು. ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ...ತ್ರವೆ. ಈ ಮೇಲೆ ಹೇಳಿದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗು...ನಿಂದ ಗುಣಬಂದ ... ರೋಗಗಳು ಈ ಆರೋಗ್ಯ ಬಿಂ... ದೊರವಿರುತ್ತವೆ. ಈ ಆರೋ... ಇನಾಮು ಸಹ ಸರ್ಟಿಫಿಕೇಟು ಗದಿದ್ದರೂ ೧೭೦೦೦ ಬಾಟ್ಲಿಗಳು ... ತಯಾರ್ಮಾಡಿ (೭) ವರ್ಷ... ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅದ್ಭುತ... ವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ... ನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ... ಉತೂಲ ಬಾಟಲಿ ಒಂದಕ್ಕೆ 2 ರೂಪಾಯಿ. ... ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ... ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ... ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ...ದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆ... ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ... ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿ... ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ... ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿ... ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿ... ಬರೆಯಿರಿ.

ಹುಸೇನ ಸಾಹೇಬ ಮೋದೀನ ಸಾಹೇಬ ...

ಮುಕ್ಕಾಮ ಶಹಪೂರ, ಬೆಳಗಾಂವ.

34 ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮತತ್ವಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚ...ತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದ ...ಗುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಅಷ್ಟಾವರಣ, ಕರಣ...ಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ...ವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗು...ಣಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾ... ಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕು...ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶಿ...ಕನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇ...ಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ... ವಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ... ಶತಕಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರ... ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ವ... ವಳಿ ೬ ಆಣೆ; ರತ್ನಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ...
ಗ್ರಂಥಪ್ರಸಾರಕಮಂಡಲಿ, ಮೈಸೂ...

ಇತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

[ಔಷಧಗಳು ... ಶಾಸ್ತ್ರೋಕ್ತ]

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಮೂರುಕಾಸು!

50

ಕಣ್ಣುಬೇನೆಯ ಔಷಧ.—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರ್ಗವರು ಪ್ರತಿಯೊಂ... ರಲ್ಲೀ ಫ... ವರ್ಗದವರ ಮೇಲೆ ಅವರು ... ವಲ್ಲದೆ ಮ...

ಬಹು ಲಾಭ! ಸ್ವಲ್ಪ ಕ್ರಯ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಈ ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದು ಒಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.



ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರಪಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಛಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರದಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾ...

...ತ್ರಿ ಶಿವಜ್ಞಾನ ಮೊದಲಾದವುಗಳನ್ನು ಉದ್ಭವಗೊಳಿಸಲಿಕ್ಕೆ ಕಾರಣವಾಗಿತ್ತು. ಕಾರಣ, ವಾಚಕರೇ ನಮ್ಮ ವೀರಶೈವ ಮತದಲ್ಲಿ ಇಂಥ ...ಜ್ಞಾನಿಗಳಾದ ಗುರುಗಳು ನಮ್ಮ ಮತಸುಧಾರಣೆಗೆ ಅವಶ್ಯವಾಗಿ ...ಹೀಗಿರಲು ಈಗಿನ ಕಾಲದಲ್ಲಿ ಪ್ರತಿಯೊಂದು ಧರ್ಮದವರು ತಮ್ಮ ಧರ್ಮಸುಧಾರಣೆ ಮಾಡಿಕೊಳ್ಳುವ ಹಂಬಲದಲ್ಲಿ ಬಿದ್ದಿರಲು ನಮ್ಮ ... ಧರ್ಮ ಸುಧಾರಕರಾದ ಹಲವು ಗುರುಪೀಠಾಧಿಕಾರಿಗಳೂ ವಿದ್ವ...ಮಾತ್ರ ನಮ್ಮ ಧರ್ಮತತ್ವದ ಮೂಲ ರಹಸ್ಯದಲ್ಲಿ ವ್ಯತ್ಯಸ್ತ ...ಪಡಿಸಿಕೊಂಡು ಧರ್ಮಾಭ್ಯುದಯಕ್ಕೆ ವಿಘ್ನವಾಗುವಂತೆ ನಾವು ...ವು ಹೆಚ್ಚು ಎಂಬ ಅಭಿಮಾನದ ಭರದೊಳಗೆ ಬಿದ್ದು ತಮ್ಮ...ಗೆ ನಿರರ್ಥಕ ಕಲಹವನ್ನು ಬೆಳಸಿಕೊಂಡು ಜಗಜ್ಜನರಿಂದ ಅಪಕೀರ್ತಿಯನ್ನು ಪಡೆಯುತ್ತಿರುವರು. ಕಾರಣ ಎಲೈ ಮತಬಾಂಧವರೇ ನಮ್ಮ ...ಪೀಠಾಧಿಕಾರಿಗಳಾದ ಧರ್ಮಸುಧಾರಕರು ಅಲ್ಲಲ್ಲಿಗೆ ಧರ್ಮಸಂಸ್ಥೆ ಸ್ಥಾಪಿಸುವದು, ಧಾರ್ಮಿಕ ವಿದ್ಯೆಯ ಶಾಲೆಗಳನ್ನು ನಿರ್ಮಿಸುವದು ...ರಿಗೆ ಧರ್ಮೋಪದೇಶಮಾಡಿ ಅವರನ್ನು ಸನ್ಮಾರ್ಗಪ್ರವೃತ್ತರನ್ನಾ...ವ ಧರ್ಮೋದ್ಧರಣ ಉದ್ಯೋಗವನ್ನು ಬಿಟ್ಟು, ಈ ಗುರುವರ್ಗ ...ಕೆಲವು ಆಧುನಿಕ ಪಂಡಿತರ ಮೋಹಜಾಲದ ವಾಕ್ಯಗಳಿಗೆ ...ಗಾಲನ್ಯಾಯದಂತೆ) ಅಂದರೆ ಕಪಟೋಕ್ತಿಯುಳ್ಳ ನರಿಯು ಆನೆ...ಕುರಿತು ನಿನ್ನನ್ನು ಅರಣ್ಯರಾಜ್ಯಕ್ಕೆ ಪಟ್ಟಾಭಿಷೇಕ ಮಾಡುತ್ತೇ...ವಂಚಿಸಿ ಮಹಾಪಂಕದಲ್ಲಿ ಮುಳುಗಿಸಿದಂತೆ ಈ ಗುರುವರ್ಗದ ಕೆ... ಅಭಿಮಾನಭೂತ ಹಿಡಿದು ಮಹಾಪಾಪದಲ್ಲಿಯೂ ಜಗನ್ನಿಂದೆಯಲ್ಲಿ ಮುಳುಗುತ್ತಿರುವರು. ಆಧುನಿಕ ಪಂಡಿತರಿಂದ ಉತ್ತಾಧಿತವಾಗಿರುವ ...ಗುರುಗಳ ಕಲಹದ ಕಡೆಗೆ ಲಕ್ಷ ಕೊಡದೆ ಸಮಾಜಬಾಂಧವರಾದ ನೀ...ಪೂರ್ವೋಕ್ತ ಸದಾಚರಣೆಗನುಸಾರವಾಗಿ ನಡೆದುಕೊಳ್ಳಬೇಕಲ್ಲದೆ ...ಜ್ಞಾನಿಗಳಾದ ಗುರುಗಳು ದೊರೆಯುವವರೆಗೂ ಮೌನದಿಂದಿರುವ...ಲ್ಲದೆ ಈ ಕಲಹೋತ್ಪಾದಕ ಸಂಘಗಳಲ್ಲಿ ಸೇರಿಕೊಂಡು ಧರ್ಮವಿ...ಧಿಗಳನ್ನೂ ಧರ್ಮದೂಷಿತ ಭಾಷಣಗಳನ್ನೂ ಧರ್ಮನಿಂದಕರ ದ...ನ್ನೂ ಮಾಡಿಕೊಳ್ಳುವದರಿಂದ ಅತ್ಯಂತ ಪಾಪವು ಲಭಿಸುವದಲ್ಲದೆ ...ವು ದೊರೆಯಲಾರದು. ಕಾರಣ ಈ ಲೇಖವನ್ನು ನೋಡಿ ನೀವೆಲ್ಲ...ತರಾಗಿ ಶಿವಭಕ್ತಿಯಲ್ಲಿಯೇ ಕಾಲಕಳೆಯುವಿರೆಂದು ಪೂರ್ಣ ನಂ...

...ಧರ್ಮಾಭಿಮಾನಿ ಭರಮಗೌಡಾ ಬಸನಗೌಡಾ ಮುಲ್ಕಿ ಪಾಟೀಲ.

...ೀರು ಪಕ್ಷದವರಾದ ವೀರಶೈವರಿಗೊಂದು ವಿನಂತಿ.

...ಪತ್ರಿಕರ್ತರು ತಮ್ಮ ತಾ|| ೨೨ರ ಸಂಚಿಕೆಯಲ್ಲಿ ಮ|| ...ರ ಇವರನ್ನು ಸತ್ಕರಿಸಿ ಮ|| ಕಂಬಳಿಯವರನ್ನು ತಿರಸ್ಕರಿ...ಬಂದಲ ಭವಿಷ್ಯವನ್ನು ಇವರು ಹೇಳಲಿಕ್ಕೆ ಪ್ರಯತ್ನಮಾಡಿ ... ತಮ್ಮ ಭವಿಷ್ಯವಾಣಿಯು ನಿಜವಾಗುವದೆಂದು ನಂಬಿದ್ದಾ...ತಿಳಿಯದು. ಬ್ರಾಹ್ಮಣ ಪತ್ರಿಕರ್ತರಲ್ಲಿ ಕೆಲವರು ಲಿಂಗಾ...ೀದ ಹುಟ್ಟಿಸಲಿಕ್ಕೆ ಪ್ರಯತ್ನಮಾಡುತ್ತಾರೆ. ರಾಷ್ಟ್ರೀ...ಯತ ಉಮೇದವಾರರಿಗೆ ಬ್ರಾಹ್ಮಣ ಪತ್ರಿಕರ್ತರು ವ...ರು ಎಷ್ಟು ಓಟು ಹಾಕುತ್ತಾರೆಂಬುದನ್ನು ಇವರು ...ಲಿ. ರಾಷ್ಟ್ರೀಯಪಕ್ಷದ ಲಿಂಗಾಯತ ಉಮೇದವಾ...ಹ್ಮಣರು ಓಟು ಕೊಡಲಿಕ್ಕೂ ಕೊಡಸಲಿಕ್ಕೂ ಎಷ್ಟು ... ಆಗಿದ್ದಾರೇ ಇವರ ಮಳ್ಳತನಕ್ಕೆ ಬಿದ್ದು ನಮ್ಮಲ್ಲಿ ಕಲ...ಬೇಡರಿ. ಮ|| ಕಂಬಳಿಯವರನ್ನು ವಿಜಯ ಹಾಗು ರಾಜ...ಸದವರು ಇಷ್ಟು ಹೊತ್ತು ಹುರಿಯಲಿಕ್ಕೆ ಇವರಿಗೇನು ಅಸಮಾಧಾನ...ದೆ ? ಬ್ರಾಹ್ಮಣೇತರ ಸಭೆಯನ್ನು ಕೂಡಿಸಲಿಕ್ಕೆ ಇವರೊಬ್ಬರೇ ಪ್ರಯತ್ನ ಮಾಡಿರುವರೋ ಹ್ಯಾಗೆ? ಗದಿಗಿನಲ್ಲಿ ಕೆಲವು ವಕೀಲರು ಬಂದು ತಮಗೆ ...ಕೊಲವಿದ್ದ ಒಬ್ಬ ಬ್ರಾಹ್ಮಣೇತರರ ಸಂಗಡ ಸಭೆಮಾಡಿಸಿ ತಾವೇ ಠರಾ...ಗಳನ್ನು ಬರಕೊಟ್ಟು ಪತ್ರಗಳಲ್ಲಿ ಹಾಕಿಸಿ ಪ್ರಸಿದ್ಧಪಡಿಸಿರುತ್ತಾರೆ. ...ಇವರ ಚಳವಳಿ ನಡದದೆ. ದುರ್ದೈವಕ್ಕೆ ಬ್ರಾಹ್ಮಣೇತರರ ಪಕ್ಷದ ...ಗಳು ಬಂದಾಗಿವೆ. ಇವರ ಕೂಗಾಟವೇ ಕಿವಿಗೆ ಬೀಳುತ್ತವೆ. ಹು...ಯಲ್ಲಿ ಇರುವ ಎಲ್ಲ ಬ್ರಾಹ್ಮಣೇತರರು ಒಕ್ಕಟ್ಟಾಗಿ ಕೆಲಸ ಮಾಡ...ಹಗಿದ್ದಾರೆ. ಆದರಲ್ಲಿ ಜೈನರು ವೈಶ್ಯರು ಒಡ್ಡರು ಮರಾಠಾ ಜನರು ... ಜಾತಿಯವರು ಮುಖಂಡರು ಸೇರಿದ್ದಾರೆ. ಬ್ರಾಹ್ಮಣೇತರ ಸಭೆಯಲ್ಲಿ ...ವ ಆಗುವಂತೆ ವಿದ್ಯೆಯಲ್ಲಿ ಹಿಂದುಳಿದ ಜನರಿಗೆ ಹಿತಮಾಡತಕ್ಕಂಥ ...ಮೇದುವಾರರಿಗೆ ಓಟುಗಳನ್ನು ಕೊಡುವದು ಎಲ್ಲ ಬ್ರಾಹ್ಮಣೇತರರ ...ರ್ತವ್ಯವಾಗಿದೆ. ಹೀಗಿದ್ದು ಕಂಬಳಿಯವರ ಒಬ್ಬರ ಕೆಲಸವೇ ಸಾಧಿಸುವದೆಯೋ ಅಲ್ಲ. ಎಲ್ಲಾ ಜಾತಿಯ ಮುಖಂಡರು ಆ ಪರಿಷತ್ತಿನಲ್ಲಿ ಇರುವರೆ. ಬಹುಮತದಿಂದ ಪಾಸಾದ ಠರಾವನ್ನು ಜನರಿಗೆ ಸೂಚಿಸುವದು ...ಇದ್ದು ಕಂಬಳಿಯವರು ತಾವೇ ಆಗಲಿಕ್ಕೆ ಈ ಸಭೆಯನ್ನು ಕರೆದಿರುವರೆಂದು ಕೂಗುವ ಕುಹಕರ ಬುದ್ಧಿಗೆ ಏನೆಂದು ಹೆಸರಿಡಬೇಕು ? ಎಲ್ಲ...ಸದಾರರೂ ಬ್ರಾಹ್ಮಣೇತರರಿಗೆ ಓಟುಗಳನ್ನು ಕೊಡುವುದು ವಿಹಿತ. ...ಹ್ಮಣೇತರರೇ ವಿಜಯಕರ್ತರ ಸಹನಬುದ್ಧಿಯನ್ನು ವಿಚಾರಿಸಿರಿ. ತಮ್ಮ...ದಲ್ಲಿ ಶಕ್ತಿಶಿಕ್ಷಣವು ನಿಸ್ಸಾರವೆಂದು ಬರೆದಿರುವರು. ಅಂದ ಮೇಲೆ ...ಯಲ್ಲಿ ಹಿಂದುಳಿದ ಜಾತಿಯ ಜನರು ವಿದ್ಯೆಯಲ್ಲಿ ಮುಂದರಿಯಬೇಕೆಂ...ವರು ಎಷ್ಟುಮಟ್ಟಿಗೆ ಕನಕರಿಸುತ್ತಿರಬಹುದು ? ...ಬ್ರಾಹ್ಮಣೇತರರು ಶಕ್ತಿ ಶಿಕ್ಷಣದ ಬಗ್ಗೆ ಪ್ರಯತ್ನಮಾಡಿ ಯಾವತ್ತು ... ವಿದ್ಯೆ ಕಲಿತು ಮುಂದೆ ಬರಲಿ ಅಂತಾ ಪ್ರಯತ್ನಪಡುತ್ತಿರುವಾಗ್ಗೆ ...ಣರು ಇದಕ್ಕೆ ವಿರೋಧಿಗಳಾಗಿ ಪುಣೆ ಮ್ಯುನಿಸಿಪಾಲಿಟಿಯಲ್ಲಿ ನಾ|| ...ಪೆಯವರು ಶಕ್ತಿಶಿಕ್ಷಣದ ಠರಾವು ಪಾಸುಮಾಡಲಿಕ್ಕೆ ಒಂದು ರೆಗ್ಯು...ನ್ನು ತಂದಾಗ್ಗೆ ಬ್ರಾಹ್ಮಣೇತರರ ಅಹಿತವನ್ನು ಬಯಸತಕ್ಕಂಥಾ ...ರೀಯ ಪಕ್ಷದ ಬ್ರಾಹ್ಮಣರು ವಿರೋಧಿಸಿ ಸದರಿ ರೆಗ್ಯುಲೇಷನ್ನನ್ನು ಬಹುಮತದಿಂದ ರದ್ದು ಪಡಿಸಿದರು. ಇದರಮೇಲಿಂದ ಬ್ರಾಹ್ಮಣೇತ...ಹಿತವನ್ನು ಬ್ರಾಹ್ಮಣರು ಎಷ್ಟು ಬಗಿಸುವರೆಂಬುದನ್ನು ನೀವೇ ವಿಚಾರಿ... ಉಗ್ರಪಕ್ಷದವರು ಹೋಮ್‍ರೂಲು ಬೇಕು, ಯಾವತ್ತೂ ಜನರು ...ತಂತ್ರರಾಗಬೇಕು. ಅಂತೂ ಬಾಯಲ್ಲೇ ಹೇಳಿ ತಮ್ಮ ಕಾರ್ಯ ಸಾಧಿ...ರೆ. ಕೃತಿಯಲ್ಲಿ ಮಾತ್ರ ಬ್ರಾಹ್ಮಣೇತರರಿಗೆ ಅಹಿತ ಬಯಸುವುದನ್ನು ...ರೆ ಕಂಡು ನೀವು ಮಾತ್ರ ಮೋಸಹೋಗಬೇಡಿರಿ. ವಿದ್ಯಾದಕೇಂದ್ರವಾದ ಪುಣೆನಗರದಲ್ಲಿ ಶಕ್ತಿಶಿಕ್ಷಣದ ಠರಾವು ರದ್ದು ಆದದ್ದು ಕಂಡು ... ಬಹಳ ಆಶ್ಚರ್ಯವಾಗುತ್ತದೆ. ಇದರ ಮೇಲಿಂದ ವಿಚಾರವಂತ ಜನರು ಪೂರ್ಣ ಶೋಧ ಮಾಡಿ ನಿಮಗೆ ಹಿತಮಾಡುವಂಥಾ ಉಮೇದುವಾರರಿಗೆ ನಿಮ್ಮ ಓಟುಗಳನ್ನು ಕೊಡಿ ಅಂತ ನನ್ನ ವಿನಂತಿ ಅದೆ.

ಓರ್ವ ಬ್ರಾಹ್ಮಣೇತರ.

ಕರ್ನಾಟಕ ಬ್ರಾಹ್ಮಣೇತರ ಪರಿಷತ್ತು, ಹುಬ್ಬಳ್ಳಿ.

ವಿನಂತಿ ಪತ್ರ

ಬ್ರಾಹ್ಮಣೇತರ ಬಂಧುಗಳೇ.—ನಮ್ಮ ಕರ್ನಾಟಕ ಪ್ರಾಂತವು ಭರತಭೂಮಿಯ ಒಂದು ಭಾಗವಿದ್ದು, ಪೂರ್ವಕಾಲದಲ್ಲಿ ಇದು ಅತ್ಯಂತ ವೈಭವದೊಡನೆ ವಿರಾಜಿಸುತ್ತಿದ್ದ ಸಂಗತಿಯು ಇತಿಹಾಸ ಪ್ರಸಿದ್ಧವಿದೆ. ಇದನ್ನು ಚಾಲುಕ್ಯ, ಕದಂಬ, ರಾಷ್ಟ್ರಕೂಟ, ರಟ್ಟ, ಹೊಯ್ಸಳ ಮೊದಲಾದ ರಾಜರು ಅತ್ಯಂತ ಪರಾಕ್ರಮದಿಂದ ಪಾಲಿಸಿ, ಇದೇ ಕರ್ನಾಟಕವನ್ನು ಧಾರ್ಮಿಕ, ಸಾಮಾಜಿಕ, ನೈತಿಕ, ಆರ್ಥಿಕ ಮತ್ತು ಔದ್ಯೋಗಿಕ, ವಿಷಯಗಳಲ್ಲಿ ಭರತ ಭೂಮಿಯ ಉಳಿದ ಭಾಗಗಳಿಗಿಂತಲೂ ಮಿಗಿಲೆನಿಸಿದ್ದನ್ನಾಗಿ ಮಾಡಿದರು. ಇತ್ತಲೀಗ ಹಿಂದುಸ್ಥಾನಕ್ಕೊದಗಿದ ವಿಪತ ರಂಪರೆಗಳಿಂದ ಕರ್ನಾಟಕವು ಬಾಧಿಸಲ್ಪಟ್ಟು ಅದು ತನ್ನ ಪೂರ್ವವೈಭವವನ್ನು ಕಳೆದುಕೊಂಡು ಸದ್ಯಕ್ಕೆ ಅತ್ಯಂತ ದೈನ್ಯಾವಸ್ಥೆಯನ್ನೈದಿರುವುದು.

ಆದರೆ ಇತ್ತಲಾಗಿ ಸುದೈವಯೋಗದಿಂದ ನಮ್ಮ ಸಾರ್ವಭೌಮಬಾದಶಹರು ಇಡೀ ಹಿಂದುಸ್ಥಾನದಲ್ಲಿ ಜವಾಬದಾರ ರಾಜ್ಯಪದ್ಧತಿಯ ರಾಜಕೀಯ ಸುಧಾರಣೆಗಳ ಕಾಯದೆಯನ್ನು ಹೋದ ವರುಷ ಮಂಜೂರ ಮಾಡಿದ್ದರಿಂದ ಅದರ ವಿಶಿಷ್ಟಲಾಭವನ್ನು ಪಡೆಯುವದಕ್ಕಾಗಿ ಹಿಂದುಸ್ಥಾನದೊಳಗಿನ ಎಲ್ಲ ಸಮಾಜದವರೂ ತಮ್ಮ ತಮ್ಮ ಉದ್ಧಾರಕ್ಕಾಗಿಯೂ ಇಡೀ ಹಿಂದೀ ಜನರ ಆತ್ಮೋನ್ನತಿಗಾಗಿಯೂ ಪ್ರಯತ್ನಪಡುತ್ತಿರುವರು. ಸುಧಾರಣೆಕಾಯದೆಯಿಂದ ಹಿಂದುಸ್ಥಾನದ ರಾಜ್ಯಶಕಟವು ಕೆಲಮಟ್ಟಿಗೆ ಹಿಂದೀ ಜನರ ಆಡಳಿತೆಯಲ್ಲಿ ಕೊಡಲ್ಪಟ್ಟದ್ದರಿಂದ ಹಿಂದುಸ್ಥಾನದ ಪ್ರತಿಯೊಬ್ಬ ನಿವಾಸಿಯು ಈ ಶಕಟವನ್ನು ಸುಯಂತ್ರಿತವಾಗಿ ನಡೆಯಿಸಲು ಸಮರ್ಥನಾಗಬೇಕೆಂಬ ಸದುದ್ದೇಶದಿಂದ ಕೆಲವು ರಾಷ್ಟ್ರೀಯ ಮುಖಂಡರು ತಕ್ಕ ಸಾಧನಗಳನ್ನು ಯೋಚಿಸಹತ್ತಿದ್ದಾರೆ.

ಆದರೆ ಮತ್ತೆ ಕೆಲವು ಜನರು ಸ್ವದೇಶೋದ್ಧಾರ ಮಾಡುತ್ತೇವೆಂಬ ಸೋಗಿನಿಂದ ಲೋಕಮತವನ್ನು ತಮ್ಮ ಕಡೆಗೆ ಸೆಳಕೊಳ್ಳುವದಕ್ಕಾಗಿ ನಾನಾ ತರದ ವಿಕಟೋಪಾಯಗಳನ್ನು ಹೂಡುತ್ತಲಿದ್ದಾರೆ. ಈ ವಿಕಟೋಪಾಯದಿಂದ ಕರ್ನಾಟಕದ ಅಂದರೆ ಮುಖ್ಯವಾಗಿ ಬ್ರಾಹ್ಮಣೇತರರ ಹಿತವು ಸಾಧಿಸುವದಿಲ್ಲೆಂಬುದು ಸ್ಪಷ್ಟವಿದೆ.

ಉತ್ತರ ಹಿಂದುಸ್ಥಾನದ ಬ್ರಾಹ್ಮಣೇತರರು ಬಹಳ ಮಟ್ಟಿಗೆ ಸುಶಿಕ್ಷಿತರಾದದ್ದರಿಂದ ತಮ್ಮ ನೈಸರ್ಗಿಕ ಹಕ್ಕುಗಳೇನೆಂಬುದನ್ನು ತಿಳಿದು ಅವುಗಳ ರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥರಾಗಿದ್ದಾರೆ. ಇದರಂತೆಯೇ ಬಂಗಾಲ ಪ್ರಾಂತದ ಬ್ರಾಹ್ಮಣೇತರರು ತಮ್ಮ ಅಮಾನುಷ ಪ್ರತಿಭೆಯಿಂದ ತಮ್ಮ ಸರ್ವತರದ ಹಕ್ಕುಗಳನ್ನು ಕಾಯ್ದುಕೊಳ್ಳಲಿಕ್ಕೆ ಸಮರ್ಥರಾಗಿದ್ದಾರೆ. ಇದರಂತೆಯೇ ಗುಜರಾಥದವರೂ ಆಂಧ್ರರೂ ಬ್ರಾಹ್ಮಣೇತರರಲ್ಲಿ ಜಾಗ್ರತೆಯನ್ನುಂಟುಮಾಡಿ ಸುಧಾರಣೆಯ ಕಾಯದೆಯ ವಿಶಿಷ್ಟಲಾಭವನ್ನು ತಕ್ಕೊಳ್ಳಲು ಹವಣಿಸುತ್ತಿರುವರು. ಆದರೆ ಕರ್ನಾಟಕವು ಹಿಂದುಳಿದ ಭಾಗವಿದ್ದು ಇಲ್ಲಿ ಜಾಗ್ರತೆಯನ್ನು ಹುಟ್ಟಿಸುವದು ಅತ್ಯವಶ್ಯವಿದೆ. ಹೊಸ ಸುಧಾರಣೆಗಳನ್ನಯ ಲೋಕಮತಾನುರೋಧವಾಗಿ ರಾಜ್ಯಕಾರಭಾರವು ಸಾಗಿಸಲ್ಪಡುವದಾದ ಮೂಲಕ ಜನಸಾಮಾನ್ಯಕ್ಕೆ ಸುಧಾರಣೆಗಳ ಸ್ವರೂಪವನ್ನೂ ಮತಕೊಡುವವನ (Voter) ಕರ್ತವ್ಯವನ್ನೂ ಅವನ ನಿಜವಾದ ಹಿತಚಿಂತಕರು ತಿಳಿಸಿ ಹೇಳುವದು ಅತ್ಯವಶ್ಯವಾದದ್ದರಿಂದ ಕರ್ನಾಟಕದಲ್ಲಿ ಮುಖ್ಯವಾಗಿ ಜನಸಮೂಹವು ಬ್ರಾಹ್ಮಣೇತರರಾದಿದ್ದು ಅವರ ವಿಶಿಷ್ಟ ಹಿತಗಳೂ ಹಕ್ಕುಗಳೂ ಇತರರಿಂದ ಸಂರಕ್ಷಿಸಲ್ಪಡಲವಕಾಶವಿಲ್ಲದ್ದರಿಂದ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತನ್ನು ಕೂಡಿಸುವ ಅಗತ್ಯ ಬಿತ್ತು.

ಕರ್ನಾಟಕ ಬ್ರಾಹ್ಮಣೇತರ ಪರಿಷತ್ತನ್ನು ಯಾರಮೇಲಿನ ದ್ವೇಷಬುದ್ಧಿಯಿಂದಲೂ ಕೂಡಿಸುವುದಿಲ್ಲ, ಅಥವಾ ನಮ್ಮ ಕೆಲವು ಬ್ರಾಹ್ಮಣ ಬಂಧುಗಳು ಗಳಪುವಂತೆ ಸರ್ಕಾರದ ಚಿತಾವಣಿಯಿಂದಲೂ ಕೂಡಿಸುವುದಿಲ್ಲ. ಈ ಮಾತಿಗೆ ಮದ್ರಾಸದಲ್ಲಿ ಲಾರ್ಡ್ ಮೆಸ್ಟನ್ ಸಾಹೇಬರು ಮಾಡಿದ ನಿಕಾಲೆಯ ವಿರುದ್ಧ ನಡಿಸಿದ ಚಳವಳಿಯೇ ಒಂದು ಮುಖ್ಯ ಸಾಕ್ಷಿಯಾಗಿದೆ. ಹೊಟ್ಟೆನೋವಿನ ಬಾಧೆಯುಳ್ಳವನೇ ಔಷಧೋಪಚಾರ ಮಾಡಿಕೊಳ್ಳುವನೆಂಬ ನ್ಯಾಯದಂತೆ ಕರ್ನಾಟಕ ಬ್ರಾಹ್ಮಣೇತರರ ವಿಶಿಷ್ಟ ಹಿತಗಳೂ, ಹಕ್ಕುಗಳೂ, ಅನ್ಯರಿಂದ ಸೆಳೆಯಲ್ಪಡುವವನ್ನು ಅವರು ಕಣ್ಣಾರೆ ಕಂಡು ಈ ದುರವಸ್ಥೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಸ್ವಾವಲಂಬನ ಮಾರ್ಗವನ್ನು ಅಂಗೀಕರಿಸಬೇಕಾಯಿತು. ಈ ಕೆಲಸಕ್ಕಾಗಿ ಹುಬ್ಬಳ್ಳಿಯಲ್ಲಿ ತಾ|| ೨೫-೨೬ (ರವಿವಾರ ಮತ್ತು ಸೋಮವಾರ) ಜುಲೈ ಸನ್ ೧೯೨೦ ನೆ ದಿವಸ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತು ಕೂಡತಕ್ಕದ್ದಿದೆ. ಈ ಪರಿಷತ್ತಿನ ಸಮಯ (Creed) ವೇನಂದರೆ:—

೧. ಈ ಸುಧಾರಣೆಗಳಿಂದ ನಮಗೆ ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ಸಂಪೂರ್ಣ ಸ್ವರಾಜ್ಯವು ದೊರಕಲಿಲ್ಲಾದರೂ ಆ ಸ್ವರಾಜ್ಯಪ್ರಾಪ್ತಿಗೆ ಈ ಹೊಸ ಸುಧಾರಣೆಗಳು ಮೊದಲನೆಯ ಮೆಟ್ಟಲಾಗಿಯೂ, ನಿಜವಾದ ಸಾಧನವಾಗಿಯೂ ಇರುತ್ತವೆಂಬಲ್ಲಿ ಸಂಶಯವಿಲ್ಲ.

೨. ಹೀಗಿರುವದರಿಂದ ಸಾರ್ವಭೌಮ ಜಾರ್ಜ್‍ಬಾದಶಹರು ತಮ್ಮ ಉದಾತ್ತವಾದ ಪ್ರಕಟನಾ ಪತ್ರಿಕೆಯಲ್ಲಿ (Proclamation) ಇಚ್ಛಿಸಿದಂತೆ ಸರಕಾರದವರೊಡನೆ ಸಹಕಾರಿತನದಿಂದ ವರ್ತಿಸುವದು ಈ ಸುಧಾರಣೆಯ ಕಾಯದೆಯನ್ನು ಯಶಸ್ವಿಯಾಗಿ ಮಾಡಲಿಕ್ಕೆ ಅವಶ್ಯವೆಂದು ಈ ಪರಿಷತ್ತು ನಂಬುತ್ತದೆ.

೩. ಅಮೃತಸರದಲ್ಲಿ ನೆರೆದ ರಾಷ್ಟ್ರೀಯ ಸಭೆಯಲ್ಲಿ ಸುಧಾರಣೆಗಳ ಸಂಬಂಧವಾಗಿ ಮಾಡಿದ ನಿರ್ಧಾರಗಳನ್ನು ನಿರಾಕರಿಸುವದಲ್ಲದೆ, ತಮನುರೋಧವಾಗಿ ಇತರ ಪ್ರಾಂತಿಕ ಮತ್ತು ಜಿಲ್ಲಾ ಸಭೆಯವರು ಈ ರಾಷ್ಟ್ರೀಯ ಸಭೆಯ ಠರಾವನ್ನು ಒಪ್ಪಿಕೊಂಡವರೇ ಬರುವ ಕಾಯದೆ ಕೌನ್ಸಿಲ್ ಚುನಾವಣೆಗೆ ಉಮೇದುವಾರರಾಗಿ ನಿಲ್ಲಬೇಕೆಂದೂ, ಅಂಥವರಿಗೇ ಎಲ್ಲರೂ ಮತ (Vote) ಕೊಡಬೇಕೆಂದೂ ಮಾಡಿದ ಠರಾವುಗಳನ್ನು ಸಂಪೂರ್ಣವಾಗಿ ಈ ಪರಿಷತ್ತು ನಿರಾಕರಿಸುತ್ತದೆ.

೪. ಬ್ರಾಹ್ಮಣೇತರರ ಹಿತಗಳ ಮತ್ತು ಹಕ್ಕುಗಳ ಸಂರಕ್ಷಣಾರ್ಥವಾಗಿ ಯತ್ನಪಡುವದು ಅಂದರೆ ಮುಖ್ಯವಾಗಿ ಇವರಲ್ಲಿ ಅಲ್ಪಸಂಖ್ಯಾಕ ಸಮಾಜದವರ ಹಿತಗಳನ್ನೂ ಹಕ್ಕುಗಳನ್ನೂ ಕಾಪಾಡುವದು ಈ ಪರಿಷತ್ತಿನ ಉದ್ದೇಶವಾಗಿದೆ ಮತ್ತು ಜಾತಿವಾರ ಪ್ರಾತಿನಿಧ್ಯಪ್ರಾಪ್ತಿಗಾಗಿ ಈ ಪರಿಷತ್ತಿನವರು ಪ್ರಯತ್ನಪಡುವರು.

೫. ಇವೇ ಮೊದಲಾದ ಉದ್ದೇಶಗಳನ್ನು ಕಾರ್ಯತಃ ಸಫಲಗೊಳಿಸಲಿಕ್ಕೆ ಔದ್ಯೋಗಿಕ, ನೈತಿಕ, ಸಾಂಪತ್ತಿಕ ಸುಧಾರಣೆಗಳ ಬಗ್ಗೆ ಪ್ರಯತ್ನಪಡುವದೇ ಈ ಪರಿಷತ್ತಿನ ಮುಖ್ಯ ಕರ್ತವ್ಯವಾಗಿದೆ.

೬ ಮೇಲ್ಕಂಡ ಉದ್ದೇಶ ಮತ್ತು ಕಟ್ಟುಗಳಿಗೆ (Creed) ಸಮ್ಮತಿಸಿದ ಬ್ರಾಹ್ಮಣೇತರರೇ ಈ ಪರಿಷತ್ತಿನ ಸಭಾಸದರಾಗಬಹುದು.

ಈ ಪರಿಷತ್ತಿಗೆ ಮದ್ರಾಸಿನಲ್ಲಿ ಹೊರಡುವ ಪ್ರಸಿದ್ಧ ಜಸ್ಟಿಸ್ ಎಂಬ ವರ್ತಮಾನ ಪತ್ರದ ಸಂಪಾದಕರೂ, ಮದ್ರಾಸ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರೂ ಆದ ಸರ್ ತ್ಯಾಗರಾಜಚೆಟ್ಟಿಯವರು ಅಧ್ಯಕ್ಷಸ್ಥಾನವನ್ನು ವಹಿಸುವದಕ್ಕೆ ಸಮ್ಮತಿಸಿದ್ದಾರೆ. ಇದಕ್ಕೆ ಪುಣೆ, ಮುಂಬಯಿ, ಮದ್ರಾಸು, ಮೈಸೂರ, ನಿಜಾಮ ಇಲಾಖಾ ಮತ್ತು ಕೊಲ್ಹಾಪುರ ಮೊದಲಾದ ನಾಡುಗಳಲ್ಲಿರುವ ಸುಪ್ರಸಿದ್ಧರಾದ ಶ್ರೀಯುತ ವಾಲಚಂದ ರಾಮಚಂದ ಕೋಠಾರಿ ಸಂಪಾದಕ ಜಾಗರೂಕ ಮತ್ತು ಮಿ|| ಪಂಡಿತಪ್ಪಾ ಚಿಕ್ಕೋಡಿ ಸಂಪಾದಕ ವಿಭಾಕರ, ನಾಮದಾರ ರಾವಬಹದ್ದೂರ ಕೆ. ವಿ. ರೆಡ್ಡಿ, ಮೈಸೂರ ಒಕ್ಕಲಿಗರ ಸಂಘದ ಕಾರ್ಯದರ್ಶಿಗಳಾದ ಮಿ|| ದಾಸಪ್ಪಾ ಮತ್ತು ಅಡ್ವೋಕೇಟ್ ಮಿ|| ಜಿ.ಪರಮಶಿವಯ್ಯ ಮತ್ತು ದಿವಾನ್ ಬಹದ್ದೂರರಾದ ಜಾಧವರಾವ ಸಾ|| ಕೊಲ್ಹಾಪುರ ಮತ್ತು ಪುಣೆಯ ಹಾಯಕೋರ್ಟ ವಕೀಲರಾದ ಮಿ|| ಕೇಶವರಾವ ಬಾಗಡೆ ಪ್ರೊಫೆಸರ, ಎ. ಬಿ. ಲಠ್ಠೆ ಎಂ. ಎ. ಎಲ್. ಎಲ್. ಬಿ. ಮೊದಲಾದ ಬ್ರಾಹ್ಮಣೇತರ ಮುಖಂಡರು ಬರುವವರಿದ್ದಾರೆ. ಈ ಕಾರ್ಯಕ್ಕೆ ಮೊದಲನೇದಿದ್ದು ಕರ್ನಾಟಕದ ಸರ್ವಬ್ರಾಹ್ಮಣೇತರರೂ ಅಭಿಮಾನ ಪೂರ್ವಕವಾಗಿ ಸಭೆಗೆ ಬಂದು ಈ ಪ್ರಥಮ ಪರಿಷತ್ತಿನ ಕಾರ್ಯವನ್ನು ಯಶಸ್ವಿಯಾಗಿ ಮಾಡುವಿರೆಂದು ಕೋರುತ್ತೇವೆ

ತಿಕೀಟಿನ ದರಗಳು.

ರೂ ೨೫ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕೊಡುವವರು ದಾತೃಗಳೆಂದು ತಿಳಿಯಲ್ಪಡುವರು.

ಸ್ವಾಗತ ಸಂಘ.

ರೂ ೨೫	ಮೊದಲನೇ ವರ್ಗದ ಸಭಾಸದರು.	
ರೂ ೧೦	೨ ನೇ	,,
ರೂ ೫	೩ ನೇ	,,
ರೂ ೨	ಪ್ರತಿನಿಧಿ ಫೀ	,,

ಪ್ರೇಕ್ಷಕರು.

ರೂ ೫	೧ ನೇ ವರ್ಗ
ರೂ ೨	೨ ನೇ ವರ್ಗ
ರೂ ೧	೩ ನೇ ವರ್ಗ

ಊಟದ ವ್ಯವಸ್ಥೆಯ ಸಲುವಾಗಿ ತಾರೀಖು ೧೫ ಜುಲೈ ೧೯೨೦ ರ ಒಳಗಾಗಿ ಕಾರ್ಯದರ್ಶಿಗಳಿಗೆ ತಿಳಿಸತಕ್ಕದ್ದು.

ತಮ್ಮ ನಮ್ರ ಸೇವಕರಾದ
ಸ್ವಾಗತ ಸಂಘದ ಸದಸ್ಯರು:—

ಚನ್ನಬಸಪ್ಪಾ-ಶಿವಪ್ಪಾ ಮೆಣಸಿನಕಾಯಿ, ಡೀಕಪ್ಪಾ ಮಲ್ಲಪ್ಪಾ ಹುಬ್ಬಳ್ಳಿ, ಸಿದ್ದಪ್ಪಾ ಕಂಬಳಿ ವಕೀಲ ಹುಬ್ಬಳ್ಳಿ, ಸಿದ್ಧರಾಮಪ್ಪಾ ಪಾವಟೆ ವಕೀಲ ಹುಬ್ಬಳ್ಳಿ, ವೀರಭದ್ರಪ್ಪಾ ಅನಂತಪ್ಪಾ ಗುಡ್ಡದಕೇರಿ, ಹೂವಪ್ಪಾ ಮುಕುಂದಪ್ಪಾ ಸವಣೂರ ಹುಬ್ಬಳ್ಳಿ, ಯಲ್ಲಪ್ಪಾ ಪೂಜಾರಿ, ವೀರಪ್ಪಾ ಬಸಪ್ಪಾ ಬಿಳಿಅಂಗಡಿ ವಕೀಲ, ಪ್ರಭಪ್ಪಾ ಮಾಳಗಿ ವಕೀಲ ಹುಬ್ಬಳ್ಳಿ, ಪದ್ಮಪ್ಪಾ ಗುಂಜಾಳ ವಕೀಲ ಧಾರವಾಡ, ಭರಮಪ್ಪಾ ಬೀಳಗಿ, ಗಂಗಾರಾಮ ಕಲ್ಯಾಣಕರ, ಗಂಗಾಧರಪ್ಪಾ ಮುಳಗುಂದ ಸಾ|| ಗದಗಬೆಟಗೇರಿ, ಗಣಪತೆಪ್ಪಾ ಅಣ್ಣಪ್ಪಾ ಹಜಾರೆ, ಶೆಟ ಮಹಾರಮಲ್ಲ ಧೂಲಾಜಿ ಫಕ್ಕೀರಪ್ಪಾ ನಲವಡಿ ವಕೀಲ ಧಾರವಾಡ, ಅಂಬಾಸಾ ಕಲಬುರ್ಗಿ, ಬಳವಂತರಾವರ ಮಹೇಂದರಕರ ದೌಲತಪ್ಪಾ ಕಾಟಕರ, ಜೋತಿಬಾ ಜಾಧವ ಕಂಟ್ರಾಕ್ಟರ, ಡಾ. ಎ. ಎಸ್. ಪಾಟೀಲ, ಹಣಮಂತರಾವ ಸೂರ್ಯವಂಶಿ ವಕೀಲ ಧಾರವಾಡ, ಕೃಷ್ಣಗೌಡಾ ಪಾಟೀಲ, ಸಂಪಾಪತಿ ದೇಸಾಯಿ ಅಮ್ಮಿನಭಾವಿ, ಮಲ್ಲಪ್ಪಾ ದೇವೇಂದ್ರಪ್ಪಾ ಘೋಡಕೆ, ಮಹಾದೇವಪ್ಪಾ ಸವ್ವಾಸೇರ, ಚಿತಾಂಬರ ನರಸಪ್ಪಾ ಚಿತ್ರಗಾರ, ಪ್ರಭಾಕರ ವೀರಭದ್ರಪ್ಪಾ ಹಾರೂಮುಚಡಿ, ಗೋವಿಂದಸ್ವಾಮಿ ಕುಪ್ಪುಸ್ವಾಮಿ ಮುದಲಿಯಾರ, ಡಾ. ಎಸ್. ಎಮ್. ಹಿರೇಮಠ, ಹಣಮಂತಪ್ಪಾ ಚನ್ನಪ್ಪಾ ಬಾಗಲಕೋಟಿ.

ಹುಬ್ಬಳ್ಳಿ
ತಾ|| ೧೦ ಜೂನ ೧೯೨೦
ನ | ನಂಬರ | ೧೪

ಗಂಗಾಧರರಾವ ಅನೇಗುಂದಿ ವಕೀಲ.
ಟಿ. ಟಿ. ಮುದರಡ್ಡಿ.
ಚಂದ್ರಶೇಖರಪ್ಪಾ ಕೆಂಪಣ್ಣನವರ
ಕಾರ್ಯದರ್ಶಿಗಳು.

ಟೀಪ್ಪು.—ಪ್ರತಿನಿಧಿಗಳಂತಾಗಲಿ ಪ್ರೇಕ್ಷಕರಂತಾಗಲಿ ಪರಿಷತ್ಪ್ರವೇಶವು ಕಾರ್ಯಕಾರಿ ಮಂಡಳದವರ ಅನುಮತಿನ್ನು ಅವಲಂಬಿಸಿಯದೆ. ಸ್ಥಳಾನುಕೂಲತೆಗಾಗಿ ಈ ನಿಯಮವನ್ನು ಮಾಡಿದೆ.

ವೀ|| ವಿದ್ಯಾಭಿವೃದ್ಧಿ ಲಗ್ನದ ಫಂಡು.

೧. ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಸಾವಂದಶೆಟ್ಟರ ಬಂಡಪ್ಪನವರ ಮ|| ರಾ|| ಸಾವಂದಶೆಟ್ಟರ ಕುಮಾರ ಚಿ|| ಸೌ|| ಪಾರ್ವತಮ್ಮನವರನ್ನು ಬೆಂಗಳೂರು ಅರಳೆಪೇಟೆ ಅಡಕೆ ಅಂಗಡಿ ಚನ್ನಪ್ಪನವರ ಕುಮಾರರು ಮ|| ರಾ|| ಗಂಗಶೆಟ್ಟಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಗಂಡಿನವರಿಂದ ೨ ರೂ. ಹೆಣ್ಣಿನವರಿಂದ ೨ ರೂ. ಅಂತು ೪ ರೂ. ಗಳು ಮ|| ಯಜಮಾನ್ ಬಸಪ್ಪನವರ ಮೂಲಕ ಬಂದ ಜಮಾ ೪ ರೂ.

೨. ತುಮಕೂರು ಡಿ|| ಚಿಕ್ಕತೊಟ್ಲುಕೆರೆ ಮ|| ರಾ|| ಚನ್ನಪ್ಪನವರು ಮತ್ತು ರುದ್ರಪ್ಪನವರುಗಳ ಮನೆಯಲ್ಲಿ ನಡೆದ ಲಗ್ನದಲ್ಲಿ ತೊಟ್ಲುಕೆರೆ ಯಜಮಾನ್ ಸಿದ್ಧಲಿಂಗಯ್ಯನವರು ಮತ್ತು ಶೆಟ್ರು ಮ|| ಮಲ್ಲಪ್ಪನವರ ಮೂಲಕ.

೩. ಬೆಂಗಳೂರು ಡಿ|| ನೆಲಮಂಗಲದ ತಾ|| ಗಟ್ಟೂರು ಗ್ರಾಮದ ಮ|| ರಾ|| ಶಾಂತವೀರಪ್ಪನವರ ಮಕ್ಕಳು ಪುಟ್ಟವೀರಯ್ಯನೆಂಬ ವರನಿಗೆ ತುಮಕೂರು ಮ|| ರಾ|| ಸೋಮಶೇಖರಪ್ಪನವರ ಕುಮಾರ್ತಿ ಚಿ|| ಸೌ|| ಪಾರ್ವತಮ್ಮನೆಂಬ ವಧುವನ್ನು ತಂದು ನಡಸಿದ ಲಗ್ನದಲ್ಲಿ ವರನ ಕಡೆ ಮ|| ರಾ|| ಶಾಂತವೀರಪ್ಪನವರಿಂದ ೫೦ ರೂ. ಗಳು ವಧುವಿನ ಕಡೆಯಿಂದ ಮ|| ರಾ|| ಸೋಮಶೇಖರಪ್ಪನವರಿಂದ ೧೦ ರೂ. ಗಳು ಅಂತು ೬೦ ರೂ. ಗಳು ನೆಲಮಂಗಲದ ಬೆಂಚ್ ಮ್ಯಾಜಿಸ್ಟ್ರೇಟ್ ಮ|| ರಾ|| ಗುಬ್ಬಿ ಹುಚ್ಚಪ್ಪನವರ ಮೂಲಕ ೬೦ ರೂ.

೪. ಕೊರಟಗೆರೆ ಸಬ್ ತಾಲ್ಲೂಕು ಹೊಳವನಹಳ್ಳಿ ಹೋಬಳಿ ತೀತದಲ್ಲಿಗುವ ಐವಳಿ ಅಂಗಡಿ ಯಜಮಾನ್ ಭದ್ರಪ್ಪನವರು ಲಗ್ನಕಾಲದಲ್ಲಿ ತೆಗೆದು ಕಳುಹಿಸಿದ್ದು ೩ ರೂ.

೫. ಬಿ. ಓಂಕಾರಪ್ಪನಿಗೆ ಮ|| ಬಿ. ಸಿದ್ಧಲಿಂಗಪ್ಪಶೆಟ್ಟರ ಮಗ ಡಿ. ಆರ್. ರುದ್ರಪ್ಪನವರ ಮಗಳು ಸೌ|| ಪುಟ್ಟಮಲ್ಲಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ಚಿಕ್ಕಮಗಳೂರು ಕಾಫಿಪ್ಲಾಂಟರ್ ಮ|| ಬಿ. ಸಿದ್ಧಲಿಂಗಪ್ಪಶೆಟ್ಟರ ಮೂಲಕ ಬಂದ ಜಮಾ ೫ ರೂ.

೬. ಬೆಳ್ಳಾವೆ ಗ. ವಿ. ಚನ್ನಪ್ಪನವರ ಜಂಗಮಾರಾಧನೆ ಕಾಲದಲ್ಲಿ ಅವರ ತಮ್ಮಂದಿರು ಬಸೆಟ್ಟಪ್ಪನವರ ಮೂಲಕ ಬಂದ ಜಮಾ ೨ ರೂ.

೭. ತುರುವೇಕೆರೆ ಪೇಟೆ ಮಲ್ಲಿಶೆಟ್ಟರ ಮಕ್ಕಳು ಹೊನ್ನಶೆಟ್ಟರೆಂಬ ವರನಿಗೂ ಅರಸೀಕೆರೆ ತಾಲ್ಲೂಕು ಗಣಸಿ ಹೋಬಳಿ ಹುಲ್ಲೇಕೆರೆ ಕರಿಸಿದ್ದಯ್ಯನವರ ಕುಮಾರ್ತಿ ಸೌ|| ಮಲ್ಲಮ್ಮನಿಗೂ ನಡೆದ ವಿವಾಹದಲ್ಲಿ ಕಲ್ಲೂರು ಮಠದ ಅಡವಿ ರುದ್ರಯ್ಯನವರ ಮೂಲಕ ಬಂದ ಜಮಾ. ೨

೮. ಶಿವಗಂಗಾ ಯಜಮಾನ್ ತೋಟದಪ್ಪನವರ ಕುಮಾರ್ತಿ ಚಿ|| ಸೌ|| ಹೊನ್ನಮ್ಮನಿಗೂ ನೆಲಮಂಗಲದ ಪೇಟೆ ಶೆಟ್ರು ಮಲ್ಲಪ್ಪನವರಿಗೂ ನಡೆದ ವಿವಾಹದಲ್ಲಿ ವರನ ಕಡೆಯಿಂದ ೩ ರೂ. ವಧುವಿನ ಕಡೆಯಿಂದ ೨ ರೂ. ಅಂತು ೫ ರೂ. ಗಳು ಶಿವಗಂಗಾ ಪೇಟೆ ಶೆಟ್ರು ಗಂಗಾಧರಶೆಟ್ಟರ ಮೂಲಕ ಬಂದ ಜಮಾ ೫ ರೂ.

೯. ತುಮಕೂರು ತಾಲ್ಲೂಕು ಪೂರ್ಣಗೆರೆ ಗ್ರಾಮದ ಸೂಗಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಕ. ಚನ್ನಬಸಪ್ಪನವರ ಮೂಲಕ ಬಂದ ಜಮಾ ೩ ರೂ.

೧೦. ರಾಮಗಿರಿ ಮ|| ಗುರುಶಾಂತಪ್ಪನವರ ಮಕ್ಕಳು ಸಿದ್ಧಲಿಂಗಪ್ಪನವರಿಗೂ ಮತ್ತೋಡು ಶೆಟ್ರು ಕೊಟ್ರಪ್ಪನವರ ಮಗಳು ಸೌ|| ಗುರುಬಸಮ್ಮನಿಗೂ ನಡೆದ ವಿವಾಹದಲ್ಲಿ ಹೆಡ್ಮಾಸ್ಟರು ಜಿ. ಶಂಕರಯ್ಯನವರ ಮೂಲಕ ಬಂದ ಜಮಾ ೧ ರೂ.

೧೧. ಕೃಷ್ಣರಾಜಪೇಟೆ ತಾಲ್ಲೂಕು ಬೂಕನಕೆರೆ ವೀ|| ಗುರುಬಸವಶಾಸ್ತ್ರಿಗಳ ಮನೆಯಲ್ಲಿ ಇವರ ಪುತ್ರ ಚಿ|| ಸಿದ್ಧಲಿಂಗ ದೇವರಿಗೆ ಕುಮಾರ...

ರು ಅಮ್ಮಗಟ್ಟದ ಹುಚ್ಚಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ತಂದು ಮಾಡಿದ ಲಗ್ನದಲ್ಲಿ ೨ ರೂ. ಸದರೀ ಗ್ರಾಮದ ವೇ|| ಚನ್ನಪ್ಪಶಾಸ್ತ್ರಿಗಳ ಪುತ್ರಿ ಚಿ|| ಸೌ|| ಸೋಮಕ್ಕನನ್ನು ಹೊನ್ನುಡಿಕೆ ಗ್ರಾಮದ ಶಿಖರಪ್ಪನವರ ಪುತ್ರ ರೇವಣ್ಣಯ್ಯನಿಗೆ ಕೊಟ್ಟು ನಡಸಿದ ಲಗ್ನದಲ್ಲಿ ೨ ರೂ. ಅಂತು ೪ ರೂ ಗಳು ಹೊನ್ನುಡಿಕೆ ಯಜಮಾನ್ ರುದ್ರಪ್ಪನವರ ಮೂಲಕ ಬಂದ ಜಮಾ ೪ ರೂ.

೧೨. ತುಮಕೂರು ಎಲೆ ಅಂಗಡಿ ಮಲ್ಲಣ್ಣನವರ ಗುಬ್ಬಣ್ಣನವರ ಸಹೋದರಿ ಲಗ್ನದಲ್ಲಿ ಟಿ.ಯಂ. ವೀರಪ್ಪನವರ ಮೂಲಕ ಜಮಾ ೧೩ ರೂ.

೧೩ ಕೆಸೂರು ಡಿ|| ಆಲದೂರು ಮ|| ಎಂ. ಸಿ. ಚಂದ್ರಶೇಖರಯ್ಯನವರ ಮೂಲಕ ಬಂದ ಜಮಾ ೫ ರೂ.

೧೪. ತುಮಕೂರು ದೇಶದ ಯಜಮಾನ್ ಸಿದ್ಧಪ್ಪನವರು, ಶೆಟ್ಟರು ಚೆನ್ನಬಸಪ್ಪನವರು ಇವರ ಮೂಲಕ ಬಂದ ಜಮಾ ೫ ರೂ.

೧೫. ಬೆಳ್ಳಾವೆ ಅಡಿಕೆ ಮಂಡಿ ಜಿ. ಸಿ ಸೋಮಣ್ಣನವರ ಮೂಲಕ ಲಗ್ನಕಾಲದಲ್ಲಿ ಕಳುಹಿಸಿದ್ದು ಜಮಾ ೧೬ ರೂ.

೧೬. ಚಿತ್ರದುರ್ಗ ಡಿ|| ಬಿಳಚೋಡು ಗ್ರಾಮದ ಶೆಟ್ಟರು ಕಲಿವೀರಪ್ಪನವರು ಫಂಡಿಗೆ ವಾಗ್ದಾನ ಮಾಡಿದ್ದವರಿಂದ ತೆಗೆದು ಕಳುಹಿಸಿದ್ದು ಜಮಾ ೭ ರೂ.

೧೭. ಮ|| ಜಗನಿ ಹೊನ್ನಗಂಗಪ್ಪನವರಿಂದ ೩ ರೂ. ಹಾರೋಹಳ್ಳಿ ಮ|| ಬಸಪ್ಪನವರ ಪುಟ್ಟಣ್ಣನವರಿಂದ ೨ ರೂ. ಅಂತು ೫ ರೂ. ಅತ್ತಿಬೆಲೆ ಸಿದ್ದಬಸಪ್ಪನವರಿಂದ ಜಮಾ ೫ ರೂ.

೧೮. ಜಗಲೂರು ತಾಲ್ಲೂಕು ಮೆದಗಕೆರೆ ಪಟೇಲ್ ಮ|| ಚನ್ನಬಸಪ್ಪನವರ ಲಗ್ನದಲ್ಲಿ ಚಿತ್ರದುರ್ಗದ ಕೆ. ಹಾಲಪ್ಪ ಡಿ. ರುದ್ರಪ್ಪ ಇವರ ಮೂಲಕ ಜಮಾ ೫ ರೂ.

೧೯. ಕಾನಕಾನಹಳ್ಳಿ ತಾಲ್ಲೂಕು ಹಾರೋಹಳ್ಳಿ ಒಡೆಯರ್ ಚನ್ನವೀರಯ್ಯನವರ ಕುಮಾರ್ತಿ ಸೌ|| ಚನ್ನಮ್ಮನನ್ನು ಬಿಡದಿ ಜವಳಿಅಂಗಡಿ ವೀರಭದ್ರಪ್ಪನವರ ಕುಮಾರ ಶಿವರುದ್ರಯ್ಯನಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಬೆಂಗಳೂರು ಅಡಿಕೆ ಅಂಗಡಿ ಜಿ. ಗಂಗಪ್ಪನವರ ಮೂಲಕ ಬಂದ ಜಮಾ ೫ ರೂ.

೨೦. ತುಮಕೂರು ತಾ|| ಕ್ಯಾತಸಂದ್ರದ ಗುಬ್ಬಿ ಹುಚ್ಚಪ್ಪನವರ ಮನೆಯಲ್ಲಿ ಕೆಸರುವಾಡಿ ಗುರುಸಿದ್ದಪ್ಪನವರ ಮಗ ಸಿದ್ದಪ್ಪನಿಗೂ ವಾಣಿಗರಹಳ್ಳಿ ಮುದ್ದಪ್ಪನವರ ಮಗಳು ಗಂಗಮ್ಮನಿಗೂ ನಡೆದ ಲಗ್ನದಲ್ಲಿ ೩ ರೂ. ಪೆಂಮಾ ಚೆಟ್ಟಿದ ಮರಿಸಂಜಪ್ಪನವರ ಕರಿಬಸಪ್ಪನಿಗೂ ಬೆಂಗಳೂರು ಪುಟ್ಟಬಸಪ್ಪನವರ ಕುಮಾರ್ತಿ ಬಸಮ್ಮನಿಗೂ ಮೋಟಗಾನಹಳ್ಳಿಯಲ್ಲಿ ನಡೆದ ಲಗ್ನದಲ್ಲಿ ೪ ರೂ.ಗಳು ಅಂತು ೭ ರೂ. ಗಳು ಮನಿಯಾರ್ಡರ್ ಮೂಲಕ ಬಂದ ಚಾರ್ಜು ೨ ಆಣೆ ವಜಾ ೬-೧೪ ಗಳು ಸ್ಟಾರ್ ಆಫೀಸು ಮೇನೇಜರವರಿಂದ ಬಂದ ಜಮಾ ೬-೧೪-೦ ರೂ.

ಜಿ. ಪರಮಶಿವಯ್ಯ ಬಿ. ಎ. ಎಲ್ ಎಲ್. ಬಿ.
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸೆಕ್ರಿಟರಿ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವವು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

13

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. **ಇಲ್ಲ.**

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು 27

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಜಾಗ್ರತೆ. ## ಕಬ್ಬಿಣದ ನೇಗಲು **ಬರೆಯಿರಿ.**

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 34

ನಾವು ಎ. ಅಲ್ ಬ್ರುಕ್ಸ್‌ಯರ್ ಕ್ಕೊ ಅಂಡ್‌ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ

ಡಿರೇಯಂ ರಿಸ್ಟ್‌ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.

ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0
ಬೆಳ್ಳಿಯ ಸರಪಣಿ ಸಹಿತ ,, 9—8—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್‌ಕೊ,
13 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
13 ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಹಿತಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾಯು, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಮ್ಮಿ ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8.0. 12 ಕ್ಕೆ 2-13.0, 25 ಕ್ಕೆ 5-3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
36 ವೈದ್ಯಶಾಲಾ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೬೭ ನೇ ಇಸ್ವಿಯ ೨೫ ನೇ ಆಕ್ಟಿನ
ರಿಜಿಸ್ಟರ ಮಾಡಲ್ಪಟ್ಟ 32

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನನೀಯವಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲ್ಯೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಬತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನುಭವಿಸತಕ್ಕವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇದೀ ಕರ್ನಾಟಕದ ಎಕ್ಕಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರ ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗಪರಿಹಾರ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆ ರೋಗ, ಪಾಂಡುರೋಗ, ಗುಲ್ಮರೋಗ, ವಾತರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲ್ಯೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯುವದು, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಬಿಕ್ಕಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮೆಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಸಬ್ಬು, ಇಸ್ಬು, ಫಾಂಯಿವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ವಾರದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವು, ಮುಟ್ಟದೋಷ, ಹೊಸ ದೊಡ್ಡ ದಾಗೋಣ, ಮೈಹೊರಬೀಳೆ ಇಣ, ಸಣ್ಣ ಕೂಸುಗಳಿಗೆ ವೃದ್ಧರಿಗೆ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಟಿಕೋಲ ಬಾಟಲ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಮೂರು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತೆಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಬೋಟಿ ಹೊರಕರೆ ಎರಡು ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ಎ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇರದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಗಳು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿಕಾರ ಬಾಟಲ ಸೋಟಕ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂ.

೧೯೩೦ ನೆಯ ಇಸವಿ ಜೂನ್ ತಾ|| ೨೭ ರಿಂದ ೧೯೩೦ ನೆಯ ಜುಲೈ ತಾ|| ೩ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೫೨ ನೆಯ ಪ್ರಮೋದ ನಾಮ ಸಂವತ್ಸರದ ಆಷಾಢಶುದ್ಧ ದ್ವಾದಶಿಯಿಂದ ಆಷಾಢ ಬಹುಳ ಬಿದಿಗೆ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
27	[1] ಭಾನು	ದ್ವಾ	60	ವಿಶಾ	43-20
28	[2] ಸೋಮ	ದ್ವಾ	1-56	ಅನೂ	48-46
29	ಮಂಗಳ	ತ್ರಯೋ	6-3	ಜ್ಯೇಷ್ಠ	54-53
30	[3] ಬುಧ	ಚತು	10-49	ಮೂಲ	60
1	ಗುರು	ಪೌರ್ಣ	15-52	ಮೂಲ	1-45
2	ಶುಕ್ರ	ಪಾಡ್ಯ	20-42	ಪೂಷಾ	8-15
3	ಶನಿ	ಬಿದಿ	25-40	ಉಷಾ	14-13

(1) ವೈಷ್ಣವಾನಾಂ ಮಾಧ್ವಾನಾಂಚೈಕಾದಶಿ, ಶಯನದ್ವಾದಶಿ. (2) ಪ್ರದೋಷಃ. (3) ಪೂರ್ಣಿಮಾತಿಥಿಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಹಿತ್ಯಕಾ | ಭುವನಪಥಕೃತಾವತಾರಾ ಪಕ್ಷಜ್ಞ ನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಕೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀರ್ತಾಕೀರ್ತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತಿಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೩೦ ನೆಯ ಇಸವಿ ಜುಲೈ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೨೨

REGISTERED NO. M. 124.

GOVERNMENT OF MYSORE.
ELECTRICAL DEPARTMENT.

47

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.	
1. Lighting	2'50 as.	As. 6 per point of 60 Watts per month.	
2. Heating & Cooking. Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.	
For units of larger capacity than 20 points maximum demand. First 50 B. T. U. consumption	1'75 as.	Rs. 6	per H. P.
Second 50 ,, or fraction thereof	1'25 as.	...	
Third 50 ,, or above 150 B.T.U	'75 as.	...	

3. Power Supply for Industries Rated Maximum demand in Electrical Horse Power.

Motors up to 20 H. P.	1 anna	Nil	
Motors above 20 and up to 50 H. P.	1'00 anna	Rs. 6	per H. P.
Motors above 50 and up to 100 H. P.	'875	Rs. 6	do.
Motors above 100 and up to 200 H. P.	'75	Rs. 6	do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲ್ಯೂಯಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 48

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಡಿಸ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಪಂಚಾಂಗ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆವೆಚ್ಚ ಬೇರೆ.

ಧಪಕೇ ಜಾಹೀರಾತಿಗೆ ಮರುಳಾಗಬೇಡಿರಿ.

ನಮ್ಮ ಶರಿಸಿ. ## ಸತ್ಯಮೇವ ಜಯತೇ. **ಸೇವಿಸಿ ನೋಡಿರಿ.**

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ## ಇಂದ್ರಿಯಸ್ತಂಭನಗುಳಿಗೆ. **ಇಲ್ಲಾ.**

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
40 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗೂ ಕೊರಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
14 3. ಇರುಳಪ್ಪನಬೀದಿ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ —ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. —ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಷ್ಟಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪದ್ಯಾತ್ಮಕ ## ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ವಾತಿಶಯಗಳನ್ನು ತೋರಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ವಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಪಡಶೆಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

33 ## ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೫೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೫೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜುಲೈ ತಾ|| ೪ ನೆಯ ಭಾನುವಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ವಾರ್ಷಿಕ ಸಮ್ಮೇಳನ.

ಕಳೆದ ಭಾನುವಾರ ಈ ಸಮ್ಮೇಳನವು ಬೆಂಗಳೂರು ರಾ|| ಬ|| ತೋಟದಪ್ಪನವರ ಸತ್ರದಲ್ಲಿ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನಡೆದಿತು. ಇಷ್ಟುಸಲಕ್ಕಿಂತ ಈ ವರ್ಷದಲ್ಲಿ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಬಂದಿದ್ದ ಜನರಲ್ ಕಮಿಟಿ ಮೆಂಬರುಗಳ ಸಂಖ್ಯೆಯು ಹೆಚ್ಚಾಗಿದ್ದಿತು. ಕಳೆದ ವರ್ಷದ ಲೆಕ್ಕದ ಆಡಿಟರುಗಳ ವರದಿಯೂ, ಸೆಕ್ರೆಟರಿಯವರ ವರದಿಯೂ ಓದಲ್ಪಟ್ಟುವು. ಅದರ ಪ್ರಕಾರ ಹಿಂದಿನ ೧ ವರ್ಷಕಾಲದಲ್ಲಿ ಫಂಡಿಗೆ ೩೯೫೫-೧೫-೦ ಆದಾಯವೂ ,೫೫೭೧-೧೧-೦ ವ್ಯಯವೂ ಆಗಿವೆ. ಜಯದೇವ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವದ ವಿಶೇಷ ವ್ಯಯವು (೯೫೫-೧೩-೬) ಬಿದ್ದುದರಿಂದ ವೆಚ್ಚವು ಹೀಗೆ ಹೆಚ್ಚಿತು. ಆ ವರ್ಷದಲ್ಲಿ ಫಂಡಿನಿಂದ ೩೩ ಮಂದಿ ವಿದ್ಯಾರ್ಥಿಗಳಿಗೆ ತಲಾ ೫ ರೂ. ನಿಂದ ೧೦ ರೂ. ವರೆಗೆ ವೇತನರೂಪವಾಗಿ ೧೩೭೫-೧೧-೦ ರೂ.ನ್ನು ಕೊಟ್ಟಿರುತ್ತಾರೆ. ಅಲ್ಲದೆ ಶ್ರೀ ನಿರಂಜನ ಜಗದ್ಗುರು ಸಂಸ್ಥಾನದ ಕಡೆಯಿಂದ ಬಂದ ವಿದ್ಯಾರ್ಥಿವೇತನ ೬೨೮-೧೪-೦ ರೂ ಕೂಡ ಫಂಡಿನ ಕಾರ್ಯಕಾರಿ ಸಂಘದವರ ಮೂಲಕ ೧೬ ಮಂದಿ ವಿದ್ಯಾರ್ಥಿಗಳಿಗೆ ಸಲ್ಲಿಸಲ್ಪಟ್ಟಿದೆ. ಬೆಂಗಳೂರು ಮೈಸೂರು ವೀರಶೈವಛಾತ್ರಮಗಳಿಗೆ ೧೫೦ ರೂ. ಸಹಾಯದ್ರವ್ಯವು ಕೊಡಲ್ಪಟ್ಟಿದೆ. ಫಂಡಿನ ಮೂಲಧನವು ಸರ್ಕಾರಿ ಬೊಕ್ಕಸದಲ್ಲೂ ಮೈಸೂರು ಬ್ಯಾಂಕಿನಲ್ಲೂ ಒಟ್ಟು ೨೩,೦೦೦ ರೂ. ಗಳು ಇಡಲ್ಪಟ್ಟಿವೆ. ಕರೆಂಟ್ ಡಿಪಾಜಿಟ್ಟು ಮೊದಲಾದುವುಗಳ ರೂಪದಲ್ಲಿ ೫೫೦ ರೂ. ಗಳ ವರೆಗೆ ಇದೆ.

ಈ ಫಂಡು ಆರಂಭಗೊಂಡು ೧೫ ವರ್ಷಗಳಾಗಿದ್ದರೂ ಆ ಧೀರ್ಘಕಾಲಕ್ಕೆ ತಕ್ಕಂತೆ ಫಂಡು ವೃದ್ಧಿಗೊಳ್ಳದಿರುವುದು ಶೋಚನೀಯವಾಗಿದೆ. ಫಂಡಿನಲ್ಲಿ ಹಣವು ಹೆಚ್ಚಾಗಿ ಸೇರಿದಷ್ಟೂ ಹೆಚ್ಚು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅನುಕೂಲಿಸುವುದೆಂಬುದು ಗೊತ್ತೇ ಇದೆ. ತಕ್ಕಷ್ಟು ಉತ್ಪತ್ತಿಯಿಲ್ಲದುದರಿಂದ ಬಹು ಮಂದಿ ಬಡವಿದ್ಯಾರ್ಥಿಗಳಿಗೆ ಸಹಾಯ ದೊರೆಯದೆಯೂ, ಕೊಡತಕ್ಕ ವೇತನದ ಮೊತ್ತವು ಅವರವರ ವೆಚ್ಚಕ್ಕೆ ಸಾಲದೆಯೂ ಹೋಗುತ್ತಿದೆ. ಆದುಕಾರಣ ಫಂಡನ್ನು ಅಭಿವೃದ್ಧಿಪಡಿಸುವುದಕ್ಕೆ ಸಮಾಜಬಾಂಧವರೆಲ್ಲರೂ ಅಭಿಮಾನ ವಹಿಸಿ ಕೆಲಸಮಾಡಿದರೆ ಸಮಾಜದ ವಿದ್ಯಾಭಿವೃದ್ಧಿಗೆ ಈ ಫಂಡು ಶಾಶ್ವತವಾದ ಸಹಾಯವನ್ನು ಮಾಡಲು ಶಕ್ತವಾಗುವುದು. ಫಂಡಿನ ಅಭಿವೃದ್ಧಿಗಾಗಿ ಈ ಸಲದ ಸಭೆಯಲ್ಲಿ ನಿರ್ಧರಿಸಿದ ಒಂದು ಏರ್ಪಾಟು ಅತ್ಯುಪಯೋಗಕರವಾಗಿದೆಯೆಂದು ಹೇಳಬಹುದು. ಅದೇನೆಂದರೆ:—ವೀರಶೈವ ಜನಸಂಖ್ಯೆಯು ಹೆಚ್ಚಾಗಿರುವ ತಾಲ್ಲೂಕುಗಳಲ್ಲಿ ಒಂದೊಂದು ಕಾನ್ಫರೆನ್ಸನ್ನು ನಡೆಯಿಸಿ, ಆ ಸುತ್ತಣ ಮತಬಾಂಧವರಲ್ಲಿ ಸಮಾಜಾಭ್ಯುದಯ ಜಾಗರೂಕತೆಯನ್ನುಂಟುಮಾಡಿ ಫಂಡಿಗೆ ಧನಸಂಚಯವನ್ನು ಮಾಡಬೇಕೆಂದು ನಿರ್ಧರಿಸಲ್ಪಟ್ಟಿದೆ. ಉದಾರಿಗಳೂ, ಮತಾಭಿಮಾನಿಗಳೂ ಆಗಿರುವ ಸಮಾಜಬಾಂಧವರು ತಕ್ಕ ಉತ್ಸಾಹದಿಂದ ಪ್ರಯತ್ನಕ್ಕೆ ಆಹ್ವಾನವನ್ನು ಕೊಟ್ಟು, ತಂತಮ್ಮ ತಾಲ್ಲೂಕುಗಳಲ್ಲಿ ಕಾನ್ಫರೆನ್ಸುಗಳನ್ನು ಜರುಗಿಸುವುದಕ್ಕೆ ಏರ್ಪಡಿಸಿ, ಈ ಉದ್ದೇಶವನ್ನು ಸಫಲಗೊಳಿಸುವವರಾಗಲೆಂದು ಕೋರುತ್ತೇವೆ. ಈ ನಿರ್ಧರವಾಗುವ ಕಾಲಕ್ಕೆ ಸಭೆಯಲ್ಲಿದ್ದ ಮ|| ಕಬ್ಬಳ್ಳಿ ಚೆನ್ನಬಸವಪ್ಪನವರು (ಮೈಸೂರು ವೀರಶೈವ ವಿದ್ಯಾರ್ಥಿನಿಲಯ ಪ್ರತಿಷ್ಠಾಪನೆಗಾಗಿ ೩೦ ಸಾವಿರವನ್ನು ಕೊಟ್ಟಿರುವ ದಾನಶೂರರು) ಇಂಥ ಮೊದಲನೆಯ ಕಾನ್ಫರೆನ್ಸು ತಮ್ಮ ತಾಲ್ಲೂಕಿನಲ್ಲೇ (ಗುಂಡಲಪೇಟೆ) ಜರುಗುವುದಕ್ಕೆ ಕೋರಿಕೊಂಡು ಅನುಮತಿ ಪಡೆದುದು ಸದಾ ಜಾಗರೂಕವಾಗಿರುವ ಅವರ ನಿಶಿತ ಮತಾಭಿಮಾನಕ್ಕೆ ನಿದರ್ಶನವಾಗಿದ್ದಿತು. ಹೀಗೆ ತಾಲ್ಲೂಕು ಕಾನ್ಫರೆನ್ಸನ್ನು ನಡೆಯಿಸಲು ಉಳಿದ ಕಡೆಯವರಿಗೆಲ್ಲಾ ಮೇಲುಪಂಕ್ತಿ ಹಾಕುವ ಸುಯೋಗವು ಮ|| ಚೆನ್ನಬಸವಪ್ಪನವರಿಗೆ ಲಭ್ಯವಾದುದಕ್ಕಾಗಿ ನಾವು ಸಂತೋಷಿಸಿ ಅವರಿಗೆ ಧನ್ಯವಾದವನ್ನು ಮಾಡದೆ ಇರಲಾರೆವು.

ಫಂಡಿಗೆ ಸಹಾಯಮಾಡುವುದಕ್ಕಾಗಿ ಏರ್ಪಟ್ಟಿರುವ ಉಪಾಯಗಳಲ್ಲಿ ಲಗ್ನಕಾಲದೊಳಗೆ ಯಥೋಚಿತವಾದ ಕಾಣಿಕೆಯನ್ನು ತೆಗೆದುಕೊಡುವುದು ಒಂದು ಪದ್ಧತಿಯಾಗಿದೆಯಷ್ಟೆ. ಈ ಮೂಲಕವಾಗಿ ಕಳೆದ ವರ್ಷ ೫೭೧-೯-೦ ರೂ. ಮಾತ್ರ ಬಂದಿರುತ್ತದೆ. ಸಮಾಜದಲ್ಲಿ ಎಷ್ಟೋ ಸಾವಿರಾರು ಮದುವೆಗಳು ನಡೆದಿರುವಾಗ್ಗೆ ಇಷ್ಟು ಅಲ್ಪವಾದ ಹಣವು ಫಂಡಿಗೆ ಬಂದಿರುವುದು ತೃಪ್ತಿಕರವಲ್ಲ. ಫಂಡಿನ ಪ್ರಯೋಜನವನ್ನು ಗಮನಿಸಿ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಅಭಿಮಾನಶಾಲಿಗಳಾಗಿರುವ ಪ್ರಮುಖರು ಲಗ್ನಗಳಿಗೆ ಸೇರಿದ ಕಾಲದಲ್ಲಿ ತಿಳಿಯಹೇಳಿ ಕನಿಷ್ಠ ಪಕ್ಷ ಲಗ್ನ ೧ ಕ್ಕೆ ೫ ರೂ. ಗಳಂತೆಯಾದರೂ ಎತ್ತಿಸಿ ಕೂಡಲೇ ಫಂಡ್ ಸೆಕ್ರೆಟರಿಯವರಲ್ಲಿಗೆ ಕಳುಹಿಸಿಕೊಡುವಂತೆ ಮಾಡಬೇಕು. ಕೆಲವು ಕಡೆ ಎತ್ತಲ್ಪಟ್ಟಿರುವ ಹಣವು ಫಂಡಿಗೆ ಸಂದಾಯವಾಗದೆ ಅಲ್ಲಲ್ಲೇ ಕೆಲವರಲ್ಲಿ ನಿಂತಿದೆಯೆಂಬ ಪ್ರಸ್ತಾಪವು ಸಭೆಯಲ್ಲಿ ಬಂದಿದ್ದಿತು. ಹೀಗೆ ಮಾಡದೆ ಕೂಡಕೂಡಲೇ ಫಂಡಿಗೆ ಕಳುಹಿಸಿಕೊಡುತ್ತಬಂದರೆ ಎತ್ತಿಕೊಟ್ಟವರ ಉದ್ದೇಶವು ಸಾರ್ಥಕವಾಗುತ್ತದೆ; ಫಂಡಿಗೂ ಅನುಕೂಲವಾಗುತ್ತದೆ. ಪ್ರತಿಯೊಬ್ಬ ಜನರಲ್ ಕಮಿಟಿ ಮೆಂಬರುಗಳೂ, ಆಯಾ ಕಡೆಯ ಪುರೋಹಿತರುಗಳೂ, ಯಜಮಾನರುಗಳೂ, ಇತ್ತಕಡೆಗೆ ಹೆಚ್ಚು ಗಮನಕೊಡುವವರಾಗಬೇಕು. ಕಳೆದ ವರ್ಷ ಲಗ್ನದ ಕಾಣಿಕೆಗಳನ್ನು ಎತ್ತಿದ ಡಿಸ್ಟ್ರಿಕ್ಟುಗಳಲ್ಲಿ ತುಮಕೂರು ಮೊದಲನೆಯದಾಗಿರುತ್ತದೆ. ಅಲ್ಲಿಂದ ೨೦೬-೧೪-೦ ರೂ. ಗಳು ಬಂದಿವೆ. ಬೆಂಗಳೂರು ಡಿಸ್ಟ್ರಿಕ್ಟಿನಿಂದ ೧೬೨, ಮೈಸೂರು ೫೧-೪-೦, ಚಿತ್ರದುರ್ಗ ೩೬-೧೫-೦, ಹಾಸನ ೨೦-೦-೦, ಕಡೂರು ೧೧-೦-೦ ಕೋಲಾರ ೭-೦-೦ ಹೀಗೆ ಬಂದಿದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ಒಂದು ಕಾಸೂ ಬಂದಿಲ್ಲ. (ಈಚೆಗೆ ೧೦ ರೂ. ಬಂದಿರುವಂತೆ ಗೊತ್ತಾಯಿತು.) ಪ್ರಯತ್ನಪಟ್ಟರೆ ಡಿಸ್ಟ್ರಿಕ್ಟಿಗೆ ಒಂದೊಂದು ಸಾವಿರದಂತೆ ಲಗ್ನದ ಕಾಣಿಕೆಗಳನ್ನು ಕೂಡಿಸುವುದು ಅರಿದಲ್ಲ. ಸ್ಪರ್ಧೆಯಿಂದ ಮುಂದಣ ವರ್ಷದಲ್ಲಿ ಇದಕ್ಕೆ ಎಲ್ಲ ಕಡೆಯವರೂ ಪ್ರಯತ್ನಪಡುವವರಾಗಲೆಂದು ಹ್ರುತಪಡಿಸುತ್ತೇವೆ. ಮೈಸೂರು ದೇಶದ ಹೊರಗಣ ಸೇಲಂ, ತಿರುಚನಾಪಲ್ಲಿ ಈ ಕಡೆಗಳಿಂದಲೂ ಸ್ವಲ್ಪ ಕಾಣಿಕೆಯು ಬಂದಿರುತ್ತದೆ

ಕೈ|| ಸರಾಫ್ ಶ್ಯಾಮಣ್ಣನವರು ಫಂಡಿಗಾಗಿ ತಮ್ಮ ಆಸ್ತಿಯನ್ನೆಲ್ಲಾ ದಾನಮಾಡಿರುವುದರಲ್ಲಿ ಒಟ್ಟು ಕೂಡಬಹುದಾದ ೩೬ಸಾವಿರದೊಳಗೆ ಈಗ್ಗೆ ೨೧ಸಾವಿರ ರೂ.ಗಳು ಸಂದಿರುತ್ತವೆ. ಇದರ ಬಡ್ಡಿಯಿಂದಲೂ ಅವರ ಹೆಸರಿನ ಮೇಲೆ ವಿದ್ಯಾರ್ಥಿವೇತನಗಳನ್ನು ಈ ವರ್ಷದಿಂದ ಕೊಡಲು ನಿರ್ಧಾರವಾಗಿರುತ್ತದೆ. ಮತ್ತು ಮ|| ಪಿ. ಮುನಿಬಸಪ್ಪನವರು ತಮ್ಮ ಯಜಮಾನರ ಜ್ಞಾಪನಾರ್ಥವಾಗಿ ತೆಗೆದುಕೊಟ್ಟಿರುವ ೫೦೦೦ ರೂ. ಗಳ ಬಡ್ಡಿಯೂ ಕೂಡ ವೇತನಕ್ಕೆ ಅನುಕೂಲಿಸುತ್ತದೆ. ಪದ್ಧತಿಯಂತೆ ಶ್ರೀ ಜಗದ್ಗುರು ಸಂಸ್ಥಾನದ ಸಾಹಾಯ್ಯವೂ ಆಗಬಹುದು. ಇವೆಲ್ಲವೂ ಸೇರಿದರೆ ಈ ನಡೆಯುವ ವರ್ಷದಲ್ಲಿ ಹಿಂದಿಗಿಂತ ದ್ವಿಗುಣವಾಗಿ ವಿದ್ಯಾರ್ಥಿಗಳಿಗೆ ಸಹಾಯಮಾಡಲು ಅನುಕೂಲಿಸಬಹುದು.

ತಮ್ಮ ಜನರಲ್ಲಿ ವಿದ್ಯಾಪ್ರಸಾರವು ಚೆನ್ನಾಗಿ ಆಗಿ ಮುಂದಕ್ಕೆ ಬರಬೇಕೆಂಬ ಉದ್ದೇಶದಿಂದ ಈ ವಿದ್ಯಾಭಿವೃದ್ಧಿ ಫಂಡೇ ಅಲ್ಲದೆ ಶಿವಮೊಗ್ಗಾ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಚಳ್ಳಕೆರೆ ಮೊದಲಾದ ಕಡೆಗಳಲ್ಲಿ ವಿದ್ಯಾರ್ಥಿನಿಲಯ ಸ್ಥಾಪನೆ ಮೊದಲಾದ ಪ್ರಯತ್ನಗಳು ವೀರಶೈವರಿಂದ ನಡೆದೂ ನಡೆಯುತ್ತಲೂ ಇವೆ. ಆದರೆ ಫಲಿತಾಂಶವು ಮಾತ್ರ ತೃಪ್ತಿಕರವಾಗಿಲ್ಲ. ಕಳೆದವರ್ಷ ಬಿ. ಎ. ಪರೀಕ್ಷೆಯಲ್ಲಿ ನಮ್ಮವರು ೪ ಮಂದಿ ಮಾತ್ರವೇ ತೇರ್ಗಡೆ ಹೊಂದಿದ್ದಾರೆ, ಮತ್ತೊಬ್ಬರು ಒಂದುಭಾಗದಲ್ಲಿ ಮಾತ್ರ ಉತ್ತೀರ್ಣರಾಗಿದ್ದಾರೆ. ಎಂಟರನ್ಸ್ ಪರೀಕ್ಷೆಯಲ್ಲಿ ೧೬ ಜನರು ಉತ್ತೀರ್ಣರಾಗಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬಹುಶಃ ೨೫ ಮಂದಿ ಉತ್ತೀರ್ಣರಾಗಿರಬಹುದು. ಮ|| ಬಸವಾರಾಧ್ಯರ ಹೆಣ್ಣುಮಗು ಒಂದು, ಮತ್ತೊಂದು ಮಗು ಇವರಿಬ್ಬರು ಬಾಲೆಯರು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ಕೇಳಿದೆವು. ಇನ್ನು ಯಾವ ಯಾವ ಕಡೆಯಲ್ಲಿ ನಮ್ಮ ಬಾಲೆಯರು ಯಾವ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೋ ಅದು ತಿಳಿದಿಲ್ಲ. ಅಂತೂ ಸ್ತ್ರೀವಿದ್ಯಾಪ್ರಸಾರವು ನಮ್ಮಲ್ಲಿ ಬಹಳ ಕಡಿಮೆಯೆಂದೇ ಹೇಳಬೇಕಾಗಿರುವುದು. ಈ ಲೋಪವನ್ನು ಪ್ರತಿಯೊಬ್ಬರೂ ಪ್ರಯತ್ನಿಸಿ ತಪ್ಪಿಸಬೇಕು. ಮತ್ತು ತಮ್ಮ ಅಭ್ಯುದಯಕ್ಕಾಗಿ ಸಮಾಜದವರು ಎಷ್ಟು ಪ್ರಯತ್ನಗಳನ್ನೂ ಸಾಹಸಗಳನ್ನೂ ಪಡುತ್ತಿರುವರೆಂಬುದನ್ನು ವಿದ್ಯಾರ್ಥಿಗಳು ಸದಾ ಲಕ್ಷ್ಯದಲ್ಲಿಟ್ಟುಕೊಂಡು ಪಾಲುಮಾರಿಕೆಯಿಲ್ಲದೆ ಚಿಂತನೆಯನ್ನು ಮಾಡಿ ಬೇಗಬೇಗನೆ ಪರೀಕ್ಷೆಗಳನ್ನು ಕೊಟ್ಟು ಸಮಾಜಬಾಂಧವರ ಉದ್ದೇಶಗಳನ್ನು ಸಾರ್ಥಕಪಡಿಸಿ, ಉತ್ತರತ್ರ ಇಂಥ ಸಾಹಾಯ್ಯ ಪ್ರೋತ್ಸಾಹಗಳು ಅವರುಗಳಿಂದ ವಿದ್ಯಾರ್ಥಿಮಂಡಲಕ್ಕೆ ಇನ್ನೂ ಹೆಚ್ಚು ಹೆಚ್ಚಾಗಿ ದೊರೆಯುವಂತೆ ಮಾಡಿಕೊಳ್ಳಬೇಕು.

ಇದಲ್ಲದೆ ಸಮ್ಮೇಳನದಲ್ಲಿ ನಡೆದ ಕಾರ್ಯಗಳೊಳಗೆ ೨ ಲಕ್ಷ ರೂ.ಗಳ ಮೂಲಧನವನ್ನು ವೀರಶೈವ ಸಮಾಜದವರಿಂದ ಷೇರುಗಳ ರೂಪವಾಗಿ ಸಂಗ್ರಹಿಸಿ ಬೆಂಗಳೂರಿನಲ್ಲಿ ಒಂದು ದೊಡ್ಡ ಮುದ್ರಾಲಯವನ್ನೂ ಒಂದು ಗ್ರಂಥಭಂಡಾಗಾರವನ್ನೂ ಸ್ಥಾಪಿಸಿ ಸಮಾಜದ ಪಕ್ಷದಿಂದ ಇಂಗ್ಲೀಷ್ ಕನ್ನಡದ ವೃತ್ತಪತ್ರವನ್ನು ಪ್ರಕಟಿಸಬೇಕೆಂಬ ವಿಷಯವು ಅತ್ಯಂತ ಮುಖ್ಯವಾಗಿದ್ದಿತು. ಇದರ ವಿಧಿ ಮುಂತಾದುವುಗಳ ಏರ್ಪಾಡಿಗಾಗಿ ಒಂದು ಸಬ್ ಕಮಿಟಿಯು ಏರ್ಪಡಿಸಲ್ಪಟ್ಟಿತು. ಇದು ಬೇಗನೆ ಕಾರ್ಯೋನ್ಮುಖವಾಗಲೆಂದು ಕೋರುವೆವು. ಬಳಿಕ ಇಂಗ್ಲೀಷಿನಲ್ಲಿ ವೀರಶೈವಮತ ವಿಷಯವನ್ನು ಕುರಿತು ಒಂದು ಗ್ರಂಥವನ್ನು ಬರೆಯಿಸಬೇಕೆಂಬ ನಿರ್ಧರವಾಯಿತು. ಮ್ಯಾನೇಜಿಂಗ್ ಕಮಿಟಿಯ ಸಭಿಕರ ಆರಿಸುವಿಕೆಯಾಯಿತು. ಇನ್ನು ಮುಂದೆ ಒಂದು ಸಲ ಆರಿಸಲ್ಪಟ್ಟ ಸಭಿಕರೇ ಮೂರು ವರ್ಷಗಳವರೆಗೂ ಇರತಕ್ಕುದೆಂದು ನಿರ್ಧರವಾಯಿತು. ಸಂಘದಿಂದ ಪ್ರಜಾಪ್ರತಿನಿಧಿ ಸಭೆಗೆ ಮ|| ಅಡ್ವೋಕೇಟ್ ಜಿ. ಪರಮಶಿವಯ್ಯ, ಬಿ. ಎ. ಎಲ್ ಎಲ್. ಬಿ. ಯವರೂ, ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡಿಗೆ ಮ|| ಬುಳ್ಳಪ್ಪನವರೂ ಆರಿಸಲ್ಪಟ್ಟರು. ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಅಧ್ಯಕ್ಷರಾಗಿಯೂ, ಮ|| ಆರ್. ಪುಟ್ಟಣ್ಣ, ಬಿ. ಎ., ಬಿ. ಎಲ್. ರವರೇ ಉಪಾಧ್ಯಕ್ಷರಾಗಿಯೂ, ಮ|| ಜಿ. ಪರಮಶಿವಯ್ಯನವರೇ ಆನರರಿ ಸೆಕ್ರೆಟರಿಯಾಗಿಯೂ, ಮ|| ಎಚ್. ಕೆ. ಮಲ್ಲಪ್ಪನವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ನಿರ್ಧರಿಸಲ್ಪಟ್ಟರು. ಮ್ಯಾನೇಜಿಂಗ್ ಕಮಿಟಿಗೆ ೧೨ ಮಂದಿ ಸಭಿಕರು ಗೊತ್ತಾದರು. ಮ|| ಜಿ.ಕೆ. ಗುರುಸಂಗಾರ್ಯರಿಂದ ವಿದ್ಯಾಪ್ರೋತ್ಸಾಹಕ್ಕಾಗಿ ಏರ್ಪಡಿಸಲ್ಪಟ್ಟಿರುವ ರಜತಪಾತ್ರ ಬಹುಮಾನವು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೊದಲನೆಯವನಾಗಿ ಉತ್ತೀರ್ಣನಾಗಿದ್ದ ಮ|| ಎಲೆಸಿದ್ಧಲಿಂಗಪ್ಪಶೆಟ್ಟರ ಮಮ್ಮಗನಿಗೆ ಕೊಡಲ್ಪಟ್ಟಿತು.

ಒಳದೇಶದ ವೃತ್ತಾಂತಗಳು

ಈ ತಿಂಗಳಲ್ಲಿ ಬೆಂಗಳೂರಿನೊಳಗೆ ನಡೆಯುವ ಕುದುರೆ ಜೂಜಿಗೆ ಮದ್ರಾಸ್ ಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್ರವರು ದಯಮಾಡಿಸುವವರಾಗಿದ್ದಾರೆ.

ನಂಜನಗೂಡಿನಿಂದ ಗುಂಡಲುಪೇಟೆಗೆ ಮ|| ರಾ|| ಕಬ್ಬಳ್ಳಿ ಚೆನ್ನಬಸಪ್ಪನವರೇ ಮೊದಲಾದ ಕೆಲವರು ಸೇರಿ ಮೋಟಾರ್ ಸರ್ವೀಸನ್ನು ಏರ್ಪಡಿಸಿರುತ್ತಾರೆ. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಯಿತು.

ರಾಜಧಾನಿಯ ವೀರಶೈವರು ಕಳೆದ ತಾ|| ೨೭ ನೆ ಭಾನುವಾರ ಸಭೆಗೂಡಿ ಈಗಿರುವ ಶಂಕರವಿಲಾಸ ಪಾಠಶಾಲೆಯನ್ನು ಅಭಿವೃದ್ಧಿಸ್ಥಿತಿಗೆ ತರುವುದಕ್ಕೆ ಅವಶ್ಯಕವಾಗಿ ಬೇಕಾಗಿರುವ ಹಣವನ್ನು ಕೂಡಿಸಲು ತಕ್ಕ ಏರ್ಪಾಟನ್ನು ಪರ್ಯಾಲೋಚಿಸಿದರು.

ಬೆಂಗಳೂರಿನಲ್ಲಿರುವ ಬ್ರಹ್ಮ ಸಮಾಜದವರು ಗತಿಸಿದ ರಾ|| ಬ. ವೀರೇಶಲಿಂಗಂಪಂತುಲುಯವರ ಸ್ಮಾರಕವಾಗಿ ಸಾಂಘಿಕ ಕಾರ್ಯನಿರ್ವಹಣಕ್ಕೆ ಒಂದು ಭವನವನ್ನು ೧೦ ಸಾವಿರ ರೂ. ಗಳ ವೆಚ್ಚದಿಂದ ಕಟ್ಟಿಸಬೇಕೆಂದು ಪ್ರಯತ್ನಿಸಿರುವರು. ಇದಕ್ಕೆ ಇದುವರೆಗೆ ೪೦೦೦ ರೂ. ಗಳ ವರೆಗೆ ಚಂದಾ ಕೂಡಿರುವುದು.

ಇಂಪೀರಿಯಲ್ ಲ್ಯಾನ್ಸರುಗಳಿಗೋಸ್ಕರ ಯುದ್ಧಕಾಲದಲ್ಲಿ ಸಂಸ್ಥಾನಿಕರುಗಳು ವೆಚ್ಚಮಾಡಿದ್ದ ಹಣವನ್ನು ಇಂಡ್ಯಾ ಸರ್ಕಾರದವರು ಮರಳಿ ಅವರುಗಳಿಗೆ ಕೊಡಬೇಕಾಗಿದ್ದಿತು. ಈಗ ಅನೇಕ ಸಂಸ್ಥಾನಗಳವರು ಆ ಹಣವನ್ನು ಮರಳಿ ತಮಗೆ ಕೊಡಬೇಕಾದುದಿಲ್ಲವೆಂದು ತಿಳಿಯಸಿ ಬಿಟ್ಟಿರುತ್ತಾರೆ. ನಮ್ಮ ಮೈಸೂರು ಸಂಸ್ಥಾನದವರು ಕೂಡ ಅದಕ್ಕಾಗಿ ವೆಚ್ಚವಾಗಿದ್ದ ೧೩,೧೩,೬೧೧ ರೂ ಗಳನ್ನು ತಮಗೆ ಮರಳಿ ಕೊಡಬೇಕಾದುದಿಲ್ಲವೆಂದು ತಿಳಿಯಸಿ ಬಿಟ್ಟುಬಿಟ್ಟರು.

ಮ|| ಕೆ. ಕೃಷ್ಣರಾಯರು ಬೇರೆ ಕಡೆಗೆ ವರ್ಗವಾದುದರಿಂದ ಮರಿಮಲ್ಲಪ್ಪನವರ ಹೈಸ್ಕೂಲಿಗೆ ಅ|| ಮಾಸ್ಟರಾದ ಮ|| ಎಂ. ನರಸಿಂಹಮೂರ್ತಿಯವರು ಹೆಡ್ಮಾಸ್ಟರಾಗಿ ಮಾಡಲ್ಪಟ್ಟಿದ್ದಾರೆ. ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಂಬಂಧವಾದ ವಿನೋದಗಳೂ ಸಭೆಯೂ ಕಳೆದ ತಾ|| ೨೭ ರಲ್ಲಿ ಮ|| ಮೊ|| ಎಂ. ಬಸವಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದವು. ಹೆಡ್ಮಾಸ್ಟರ್ ಎಂ. ನರಸಿಂಹಮೂರ್ತಿಯವರು “ವಿದ್ಯಾರ್ಥಿಗಳ ಕರ್ತವ್ಯವು” ಎಂಬ ವಿಷಯದ ಮೇಲೆ ಉಪನ್ಯಾಸ ಮಾಡಿದರು. ಹುಡುಗರಿಗೆಲ್ಲಾ ಲಾಡು ಉಂಡೆಗಳನ್ನು ಹಂಚಿದರು.

ರಾಜಧಾನಿಯ ಸಂಸ್ಕೃತಕಲಾಶಾಲೆಯ ಪಕ್ಕದಲ್ಲಿರುವ ಶ್ರೀ ರುದ್ರೇಶ್ವರ ದೇವಸ್ಥಾನಕ್ಕೆ ಸೇರಿದ ಒಂದು ಹೊಸ ಕಟ್ಟಡದಲ್ಲಿ ಬಾಡಿಗೆಗಾರನು ನೆಲ್ಲುಹುಲ್ಲನ್ನು ತುಂಬಿಕೊಂಡಿದ್ದನು. ಅದಕ್ಕೆ ಕಳೆದ ತಾ|| ೨೫ ರಲ್ಲಿ ಬೆಂಕಿ ಬಿದ್ದು ಕಾಲು ಭಾಗವೆಲ್ಲಾ ಸುಟ್ಟುಹೋಗಿ ಮಾಲಿಕರಿಗೆ ನಷ್ಟವೂ, ದುಃಖವೂ ಉಂಟಾಯಿತು. ಆರಿಸುವುದಕ್ಕಾಗಿ ತಕ್ಕಷ್ಟು ನೀರು ಒದಗದೆ ಸುತ್ತಮುತ್ತಣ ಜನರು ಬಹಳ ಕಷ್ಟಪಟ್ಟು ಆರಿಸಿದರು. ತುಂಬಿದ ಕೇರಿಯಲ್ಲಿ ಇಂಥ ಅನರ್ಥವಾಗಿದ್ದರೆ ಬಹಳ ಮನೆಗಳು ಸುಟ್ಟುಹೋಗುತ್ತಿದ್ದುವು. ಆದರೆ ಇದು ಹೊರಚಾಗಿದ್ದಿತು. ಇದರಲ್ಲಿ ಕಂಡುಬಂದ ವಿಶೇಷವೇನೆಂದರೆ:—ರಾಜಧಾನಿಯಂಥ ಪ್ರಮುಖ ಪಟ್ಟಣದ ದೊಡ್ಡ ಮ್ಯುನಿಸಿಪಾಲಿಟಿಯವರಲ್ಲಿ ಬೆಂಕಿಯನ್ನಾರಿಸುವುದಕ್ಕೆ ಒಂದು ಪಂಪಾದರೂ ಇಲ್ಲದೆಹೋದುದು.

“ಮದ್ದೂರು ಮಳವಳ್ಳಿ ಮತ್ತು ಕೊಳ್ಳೆಗಾಲದ ಕೆಲವರು ದೊಡ್ಡ ಮನುಷ್ಯರು ಸೇರಿ ಮದ್ದೂರು ರೈಲ್ವೆ ಸ್ಟೇಷನ್ನಿನಿಂದ ಶಿವನಸಮುದ್ರ ಮತ್ತು ಕೊಳ್ಳೇಗಾಲಕ್ಕೆ ಹೋಗಿಬರುವ ಪ್ರಯಾಣಿಕರ ಅನುಕೂಲಕ್ಕಾಗಿ “ಮದ್ದೂರು ಕೊಳ್ಳೇಗಾಲ ಮೋಟಾರು ಕಂಪನಿ” ಎಂಬ ಸಂಘವನ್ನು ಸ್ಥಾಪಿಸಿರುತ್ತೇವೆ. ಇದೇ ಜುಲೈ ೨ ನೇ ತಾರೀಖಿನಿಂದ ಮೇಲ್ಕಂಡ ರಸ್ತೆಯಲ್ಲಿ ೨೦-೨೫ ಜನರನ್ನು ಕೂರಿಸುವ ಮೂರು ಮೋಟಾರು ಬಂಡಿಗಳು ತಿರುಗಾಡುವುವು. ಪ್ರಯಾಣಿಕರು ಆಯಾಯ ಸ್ಥಳಗಳಲ್ಲಿರುವ ಬ್ರಾಂಚ್ ಆಫೀಸುಗಳ ಏಜಂಟರಿಗೆ ಮೊದಲೇ ತಿಳಿಸಿದರೆ ಸ್ಥಳಾನುಕೂಲವು ಮೊದಲೇ ಸುಲಭವಾಗಿ ದೊರೆಯುವುದು.” ಎಂದು ಈ ಕಂಪನಿಯ ಮ್ಯಾನೇಜರು ತಿಳಿಸಿರುತ್ತಾರೆ. [illegible]೦ ಮೈಲಿಯಷ್ಟು ದೂರ ಪ್ರಯಾಣವನ್ನು ಜಟ್ಕಾ ಬಂಡಿಯ ಮೇಲೆ ಮಾಡಬೇಕಾಗಿದ್ದ ದುರವಸ್ಥೆಯು ಈ ಏರ್ಪಾಟಿನಿಂದ ದೂರವಾಗುವಂತಾಯಿತು.

ನಮ್ಮ ಸಂಸ್ಥಾನದಲ್ಲಿ ಮೊನ್ನೆ ವರ್ಷ ೪೦,೪೭೫ ಎಕರೆ ಭೂಮಿಯಲ್ಲಿ ಕಬ್ಬಿನ ಸಾಗುವಳಿ ಮಾಡಲ್ಪಟ್ಟಿದ್ದಿತು. ಕಳೆದ ವರ್ಷ ೩೫,೬೧೪ ಎಕರೆಗಳಲ್ಲಿ ಮಾತ್ರ ಕಬ್ಬಿನ ಸಾಗುವಳಿಯಾಗಿದೆ. ಎಂದರೆ ೪೮೬೧ ಎಕರೆಗಳ ವ್ಯವಸಾಯವು ಕಡಿಮೆಯಾಯಿತು. ಕೋಲಾರ ಹಾಸನ ಡಿಸ್ಟ್ರಿಕ್ಟುಗಳೆರಡರಿಂದಲೇ ೩೦೦೦ ಎಕರೆಗಳಲ್ಲಿ ಕಬ್ಬಿನ ವ್ಯವಸಾಯವು ಕಡಿಮೆಯಾಯಿತು. ಆಹಾರ ಧಾನ್ಯಗಳನ್ನು ಈ ಭೂಮಿಗಳಲ್ಲಿ ರೈತರು ಬೆಳೆದುಕೊಂಡುದರಿಂದಲೇ ಕಬ್ಬಿನ ಸಾಗುವಳಿಯು ಅಷ್ಟು ಕಡಿಮೆಯಾಯಿತಂತೆ. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಕಬ್ಬಿನ ಸಾಗುವಳಿಯು ಹೆಚ್ಚಾಯಿತು. ಒಟ್ಟು ಸಂಸ್ಥಾನದಲ್ಲೆಲ್ಲಾ ಮೊನ್ನೆ ವರ್ಷ ೩೨,೨೩,೪೦೧ ಮಣಗಳ ಬೆಲ್ಲವಾಗಿದ್ದು ಕಳೆದ ವರ್ಷ ೩೦,೬೩,೯೯೫ ಮಣಗಳಷ್ಟು ಬೆಲ್ಲವಾಗಿದೆ. ಎಂದರೆ ಮೊನ್ನೆ ವರ್ಷಕ್ಕಿಂತ ನಿನ್ನೆಯ ವರ್ಷ ೧೦೦ ಕ್ಕೆ ೫ ಪಾಲಿನಷ್ಟು ಕಡಮೆಯಾಯಿತು. ನಮ್ಮ ದೇಶದಲ್ಲಿ ಸಂಪದಭ್ಯುದಯಾರ್ಥವಾಗಿ ವಿಪರೀತ ಪ್ರಯತ್ನಗಳು ನಡೆಯುತ್ತಿದ್ದರೂ ಕೃಷಿ ವೃದ್ಧಿಗಾಗಿ ಲಕ್ಷಾಂತರ ವೆಚ್ಚವಾಗುತ್ತಿದ್ದರೂ, ಬೆಲ್ಲ ಸಕ್ಕರೆಗಳಿಗೆ ವಿಪರೀತ ಬೆಲೆಯಿರುವ ಈಗಣ ಕಾಲದಲ್ಲಿ ಕಬ್ಬಿನ ವ್ಯವಸಾಯವು ಹೆಚ್ಚುವುದಕ್ಕೆ ಪ್ರತಿಯಾಗಿ ಕಡಿಮೆಯಾಗುತ್ತಿರುವುದು ಎಷ್ಟು ವ್ಯಸನಕರ ! ಕಬ್ಬನ್ನು ಹೆಚ್ಚಾಗಿ ಬೆಳೆದರೆ ಲಾಭ ಬರುವುದೆಂಬುದನ್ನು ತಿಳಿಯದೆ ರೈತರು ಆ ಬೆಳಸನ್ನು ಕಡಿಮೆ ಮಾಡಿದರೆಂದು ಹೇಳಲಾಗುವುದಿಲ್ಲ. ನಾಲೆಗಳಲ್ಲಿ ಬೇಸಗೆಯ ನೀರು ಸರಿಯಾಗಿ ಒದಗದಿರುವ ಕಾರಣದಿಂದಲೇ ಈ ಕಬ್ಬಿನ ವ್ಯವಸಾಯಕ್ಕೆ ರೈತರು ಹಿಂದೆಗೆಯುತ್ತಿರುವರೆಂದು ಊಹಿಸಬೇಕಾಗುತ್ತದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಮ್ಯಾನೇಜಿಂಗ್ ಕಮಿಟಿಯವರು ಕಳೆದ ತಾ|| ೧೬ ನೆ ಶನಿವಾರ ಬೆಳಗ್ಗೆ ಬೆಂಗಳೂರಿನಲ್ಲಿ ದಿವಾನರ ಸನ್ನಿಧಿಗೆ ಡೆಪ್ಯುಟೇಷನ್ ಹೋಗಿ ಬೆಂಗಳೂರಿನಲ್ಲಿ ಕಟ್ಟಲ್ಪಡಲಿಕ್ಕಿರುವ ಜಯದೇವ ವೀರಶೈವ ವಿದ್ಯಾರ್ಥಿನಿಲಯಕ್ಕೆ ಸರ್ಕಾರದಿಂದ ಕೊಡಲ್ಪಡಬೇಕಾಗಿರುವ ಗ್ರಾಂಟಿನ ವಿಷಯವನ್ನು ಕುರಿತು ಅರಿಕೆ ಮಾಡಿದರೆಂದು ಕೇಳುತ್ತೇವೆ. ವಿದ್ಯಾಪ್ರಸಾರ ಕಾರ್ಯಕ್ಕಾಗಿ ಪ್ರಜೆಗಳಿಂದ ಆದಷ್ಟು ಸಹಾಯವನ್ನು ಪಡೆಯಲು ನಾನಾ ಪ್ರೋತ್ಸಾಹಗಳನ್ನು ಕಲ್ಪಿಸುತ್ತಿರುವ ಸರ್ಕಾರದವರೆ ತಮ್ಮ ಪ್ರೊಸಿಡಿಂಗ್ಸಿಗನುಸಾರವಾಗಿ ಹಾಸ್ಟಲಿನ ಕಟ್ಟಡಕ್ಕೆ ಪ್ರಜಾಪಕ್ಷದಿಂದ ಒದಗುವ ಹಣಕ್ಕೆ ಸಮನಾದಷ್ಟು ಹಣವನ್ನು ತಾವು ಕೊಡಬೇಕಾದುದು ನ್ಯಾಯ ಧರ್ಮಸಮ್ಮತವಾಗಿರುವಾಗ ಒಂದೇ ಸಲ ೪೦-೫೦

ಸಾವಿರ ರೂ. ಗಳನ್ನು ಕೊಡಬೇಕಾಗುವುದೆಂದು ಬೆದರಿ ವಚನಭಂಗ ಮಾಡಿಕೊಳ್ಳುವುದು ಧರ್ಮವೆ ? ಮತ್ತು ಈ ತಕ್ಷಣವೇ ಅಷ್ಟು ಹಣವನ್ನು ಒದಗಿಸಿಕೊಡುವುದಕ್ಕೆ ಬಡ್ಜೆಟ್ಟಿನಲ್ಲಿ ಅವಕಾಶವಾಡಿಕೊಳ್ಳಲಿಲ್ಲವೆಂದು ಅವರು ಹಿಂದೆಗೆಯುತ್ತಿದ್ದರೆ ಅದಕ್ಕೂ ಕಾರಣವಿಲ್ಲ. ಏಕೆಂದರೆ:—ಶ್ರೀ ಜಗದ್ಗುರುಗಳವರು ಈ ಕಟ್ಟಡಕ್ಕಾಗಿ ಇದುವರೆಗೇ ಸರ್ಕಾರಿ ಬೊಕ್ಕಸದಲ್ಲಿ ಡಿಪಾಜಿಟ್ ಮಾಡಿರುವ ೪೦ ಸಾವಿರ ರೂಪಾಯಿಗಳನ್ನು ಉಪಯೋಗಿಸಿಕೊಂಡು ಕೂಡಲೇ ಕೆಲಸಕ್ಕೆ ಆರಂಭ ಮಾಡಿಸಿ, ಅದು ಮುಗಿಯುವ ಹೊತ್ತಿಗೆ ಮುಂದಣ ವರ್ಷದ ಬಡ್ಜೆಟ್ಟಿನಲ್ಲಿ ಇದಕ್ಕೆ ಸರ್ಕಾರಿ ಗ್ರಾಂಟನ್ನು ಒದಗಿಸಬಹುದಾಗಿದೆ. ಆದುಕಾರಣ ಸರ್ಕಾರದವರು ತಮ್ಮ ಉದಾರ ಸಂಕಲ್ಪಕ್ಕೆ ಭಂಗ ತಂದುಕೊಂಡು, ಮುಂದೆ ಇಂಥ ಕಾರ್ಯಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರವೃತ್ತರಾಗತಕ್ಕ ಧರ್ಮಾತ್ಮರ ಉತ್ಸಾಹಕ್ಕೆಲ್ಲಾ ಭಂಗ ತರುವಂಥ ರೀತಿಗೆ ಅವಕಾಶವಾಡಿಕೊಳ್ಳದೆ ಉಚಿತವಾದ ಉತ್ತರವನ್ನು ಕೊಡುವರೆಂದು ನಂಬುತ್ತೇವೆ.

ಭರತಖಂಡದ ವೃತ್ತಾಂತಗಳು.

ಕಳೆದ ವಾರ ಬೊಂಬಾಯಿಯಲ್ಲಿ ಬಟ್ಟೆಗಳ ಬೆಲೆಯು ಸ್ವಲ್ಪ ಇಳಿತರದಲ್ಲಿದ್ದಿತು.

ಬೊಂಬಾಯಿಯಲ್ಲಿ ಗೋವಿಂದಮಾಧವನೆಂಬ ತರುಣನೂ, ಆತನ ತಂಗಿಯೂ ಸಹ ೪-೬ ತಿಂಗಳ ಕೆಳಗೆ ಮಹಮ್ಮದೀಯ ಮತಕ್ಕೆ ಸೇರಿಕೊಂಡಿದ್ದರು. ಇವರಿಬ್ಬರೂ ಆರ್ಯಸಮಾಜದವರಿಂದ ಪ್ರಾಯಶ್ಚಿತ್ತಗೊಂಡು ಕಳೆದ ತಾ|| ೧೮ ರಲ್ಲಿ ಮತ್ತೆ ಹಿಂದೂ ಮತಕ್ಕೆ ಸೇರಿಕೊಂಡರು.

ತುರ್ಕರ ಪವಿತ್ರಕ್ಷೇತ್ರವು ಇತರರ ವಶವಾಗುವುದನ್ನು ತಾನು ಸಹಿಸೆನೆಂತಲೂ ಈಗ ಆಂಗ್ಲರು ಮಿತ್ರತ್ವವನ್ನು ತೋರಿಸದೆಹೋದರೆ ತಾನು ಯಾವುದಕ್ಕಾದರೂ ಸಿದ್ಧನಾಗಿರುವೆನೆಂತಲೂ ಅಫ್ಘಾನಿಸ್ಥಾನ್ ಅಮೀರರು ಡಂಭವನ್ನು ಕೊಚ್ಚುತ್ತಿರುವರೆಂದು ತೆಹರಾನಿನ ಸುದ್ದಿಗಾರನು ಲಂಡನ್ ಟೈಮ್ಸ್ ಪತ್ರಿಕೆಗೆ ಬರೆದಿರುವನು.

ಮದರಾಸಿನ ತಿರುವಲಕ್ಕೇಣಿಯಲ್ಲಿ ಕಳೆದವಾರ ನೃಸಿಂಹಸ್ವಾಮಿ ರಥೋತ್ಸವವು ಜರುಗುವಾಗ್ಗೆ ರಥದ ಒಂದು ಭಾಗವು ಮುರಿದು ಉತ್ಸವಮೂರ್ತಿಯು ಕಳಚಿಕೊಂಡು ಕೆಳಕ್ಕೆ ಬೀಳುವಾಗ್ಗೆ ಒಬ್ಬನ ಮೇಲೆ ಬಿದ್ದುದರಿಂದ ಅವನು ಮೃತನಾದನು. ಇನ್ನೂ ಒಬ್ಬಿಬ್ಬರಿಗೆ ಗಾಯವಾಯಿತು. ದೇವರ ಕಿರೀಟದಲ್ಲಿದ್ದ ಕೆಲವು ರತ್ನಗಳು ಸಿಡಿದುಹೋದುವು.

ಪಶ್ಚಿಮ ಕರಾವಳಿಗಳಲ್ಲಿ ನಿನ್ನೆ ಮೊನ್ನೆ ವಾರಗಳಲ್ಲಿ ಸಾಧಾರಣ ಮಳೆಗಳಾಗಿವೆ. ತಿರುವಾಂಕೂರಿಗೆ ತಲೆಬಾಗಿಲಂತಿರುವ ಆಲೆಪ್ಪೊ ಎಂಬ ತೀರಪಟ್ಟಣದಲ್ಲಿ ಕಳೆದ ತಾ|| ೨೧ ರಲ್ಲಿ ಅತಿವೃಷ್ಟಿಯಾದುದರಿಂದ ಸಮುದ್ರವು ಉಕ್ಕೇರಿ ತೀರದ ಕಟ್ಟಡಗಳು ಕಳಚಿಬಿದ್ದುವು; ಎಷ್ಟೋ ತೆಂಗಿನಮರಗಳು ಬುಡಸಹಿತ ಕಿತ್ತುರುಳಿದುವು; ಮಾರ್ಗಗಳೆಲ್ಲಾ ನೀರಿನಲ್ಲಿ ಮುಳುಗಿದುವು.

ಫಿರೋಜಾಬಾದ್ ರೈಲ್ವೆಯಲ್ಲಿ ಇದಿರು ಬದರಾಗಿ ಬಂದ ೨ ಟ್ರೇನುಗಳು ಡಿಕ್ಕಿ ಹೊಡೆದ ಅನಾಹುತದಲ್ಲಿ ಸಿಕ್ಕಿ ಸತ್ತವರಲ್ಲಿ ಶಾಸನಸಭಾ ಸಭಿಕರಾದ ಠಾಕೂರ್ ಷಾಹಿಗೋವಿಂದಸಿಂಗ್ ಬಿ. ಎ. ಯವರೂ ಅವರ ಮಗನೂ, ಅಳಿಯನೂ ಸಹ ಸೇರಿದವರು. ಇವರ ಮೃತಿಯಿಂದ ತಮಗೆ ೧,೮೦,೦೦೦ ರೂ. ಗಳ ನಷ್ಟವಾಯಿತೆಂದು ಹೇಳಿ ಅದನ್ನು ಬರಮಾಡಿಕೊಳ್ಳಲಿಕ್ಕೆ ಅವರ ಬಂಧುಗಳು ಈಸ್ಟಿಂಡಿಯಾ ರೈಲ್ವೆಕಂಪನಿಯವರ ಮೇಲೆ ಆಗ್ರಾ ಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಿದ್ದಾರೆ.

ಕಲೀಫತ್ ಪ್ರತಿನಿಧಿಗಳು ತುರ್ಕೀ ಸುಲ್ತಾನರಿಗೆ ಒಂದು ಸಂತಾಪವಾರ್ತೆಯನ್ನು ಕೊಟ್ಟು ಅದರಲ್ಲಿ ಭರತಖಂಡದ ೭ ಕೋಟಿ ಮುಸಲ್ಮಾನರೂ ೨೫ ಕೋಟಿ ಇತರ ಜನರೂ ಸಹ ಕಲೀಫತ್ ಸಮಸ್ಯೆಯ ವಿಷಯದಲ್ಲಿ ಏಕಾಭಿಪ್ರಾಯವುಳ್ಳವರಾಗಿ ಸುಲ್ತಾನರ ಪಕ್ಷವಾಗಿರುವರೆಂತಲೂ, ದೇವರು ಆಜ್ಞಾಪಿಸಿದಂತೆ ನಿರ್ಭಯವಾಗಿಯೂ ನಿಸ್ಸಂಶಯನಾಗಿಯೂ ನಡೆದುಕೊಳ್ಳಲು ಸಿದ್ಧರಾಗಿರುವರೆಂತಲೂ, ಮತಕ್ಕಾಗಿ ಪ್ರಾಣವನ್ನಾದರೂ ಒಪ್ಪಿಸಲು ಆಯತ್ತರಾಗಿರುವರೆಂತಲೂ ಬಿನ್ನಯಿಸಿಕೊಂಡಿರುವರಂತೆ.

ಜುಲೈ ತಾ|| ೧೧ ರಿಂದಾಚೆಗೆ ಸವರನ್ನಿನ ಬೆಲೆಯು ೧೦ ರೂ. ಗಳಾಗಿರುವುದೆಂದು ಸರ್ಕಾರದವರು ಪ್ರಕಟಿಸಿರುವರಷ್ಟೆ. ಅದರ ಮೇಲೆ ಕೆಲಪ್ರಜೆಗಳು ಮುಂದೆ ಬರುವ ಸವರನ್ನುಗಳು ತೂಕದಲ್ಲೂ ಬಣ್ಣದಲ್ಲೂ ಕಡಿಮೆಯಾಗಿರುವುವೆಂದು ಸುದ್ದಿ ಹುಟ್ಟಿಸಿದ್ದರು. ಅದಕ್ಕಾಗಿ ಸರ್ಕಾರದವರು ಮತ್ತೊಂದು ಪ್ರಕಟನೆಯನ್ನು ಮಾಡಿ ಆ ಸುದ್ದಿಯು ಸುಳ್ಳೆಂತಲೂ ಮೊದಲಿನಂತೆಯೇ ಇರುವುವೆಂತಲೂ ತಿಳಿಯಸಿರುತ್ತಾರೆ. ಮತ್ತು ತಾ|| ೧೧ ರೀಚೆಗೂ ಆಚೆಗೂ ಸಹ ಪ್ರಜೆಗಳಿಗೆ ೧೦ ರೂ. ಗೆ ೧ ಸವರನ್ನಿನಂತೆ ಕೊಡಲು ಮಾತ್ರ ಬದ್ಧರಲ್ಲ.

ಕೊಲಂಬೋವಿಗೆ ಆಗಲೇ ಅಮೇರಿಕಾದ ಭಂಗಾರದ ನಾಣ್ಯಗಳು ಬರಲಿಕ್ಕೆ ಬಂದಿವೆಯಂತೆ. ನಮ್ಮ ಇಂಡ್ಯಾಸರ್ಕಾರದವರು ಇಷ್ಟರಲ್ಲೇ ಇನ್ನು ೨ ಸಲ ಭಂಗಾರದ ನಾಣ್ಯಗಳನ್ನು ಟೆಂಡರು ಮೂಲಕ ಮಾರುವರು. ಆ ಬಳಿಕ ಈ ದೇಶದ ಬ್ಯಾಂಕುಗಳೂ ವರ್ತಕರೂ ಸೀಮೆಯಿಂದ ಭಂಗಾರವನ್ನು ಸ್ವತಃ ಮಾರಾಟಕ್ಕೆ ತರಿಸಿಕೊಳ್ಳಬಹುದು. ಅದರಿಂದ ಈಗಾಗಲೇ ಭಂಗಾರದ ಬೆಲೆಯು ಬೊಂಬಾಯಲ್ಲಿಳಿಯುತ್ತಿರುವುದಲ್ಲದೆ ಕೊಳ್ಳುವವರೇ ಇಲ್ಲವಾಗಿದೆ. ಬರುವ ಜುಲೈ ತಾ|| ೧೫ ರಿಂದ ಈ ದೇಶದ ಚಿನ್ನದ ಗಟ್ಟಿಯ ಬೆಲೆಯನ್ನನುಸರಿಸಿ ಸವರನ್ನಿನ ಬೆಲೆಯಿರುವುದು.

ನಮ್ಮ ಚಕ್ರವರ್ತಿಯವರು ಯುವರಾಜ ಪದವಿಯಲ್ಲಿ ಭರತಖಂಡಕ್ಕೆ ದಯಮಾಡಿಸಿದಾಗ್ಗೆ ಬೊಂಬಾಯಿ ಷರೀಫರಾಗಿದ್ದ ಸರ್ ಸಾಪೂರ್ಜಿ ಬರೋಚಾರವರು ತಮ್ಮ ೭೫ ನೆ ವಯಸ್ಸಿನಲ್ಲಿ ಕಳೆದ ತಾ|| ೨೮ ರಲ್ಲಿ ಕಾಲಾಧೀನರಾದರು. ಇವರು ತಮ್ಮ ಜೀವಿತ ಕಾಲದಲ್ಲಿ ೫೦ ಲಕ್ಷ ರೂ. ಗಳಿಗೆ ಮೇಲ್ಪಟ್ಟು ದಾನಧರ್ಮ ಮಾಡಿದವರೂ ೨೭ ದೊಡ್ಡದೊಡ್ಡ ವರ್ತಕ ಸಂಘಗಳಲ್ಲಿ ಡೈರೆಕ್ಟರೂ ಆಗಿದ್ದರು. ೧೦ ರೂ. ಸಂಬಳದಲ್ಲಿ ರೈಲ್ವೆ ಕೆಲಸದಲ್ಲಿದ್ದು ಕ್ರಮೇಣ ವ್ಯಾಪಾರದಲ್ಲಿ ವೃದ್ಧಿಹೊಂದಿ ಕೋಟ್ಯಂತರ ಸಂಪಾದನೆ ಮಾಡಿದವರು. ಇವರ ಸ್ಮಾರಕಸ್ಥಾಪನೆಗಾಗಿ ಆಗಲೇ ೬೨ ಸಾವಿರ ರೂ. ಚಂದಾ ಕೂಡಿದೆ.

ಮ|| ಗಾಂಧಿಯವರೂ, ಕಲೀಫತ್ಸುನ್ನಿ ಪ್ರತಿನಿಧಿಗಳೂ ಸಹ ವೈಸ್ರಾಯರಿಗೆ ಒದೊಂದು ಬಿನ್ನಹಗಳನ್ನು ಬರೆದುಕೊಂಡು ಅದರಲ್ಲಿ ಹಿಂದೆ ಲಾರ್ಡ್ ಹಾರ್ಡಿಂಜ್ರವರು ದಕ್ಷಿಣಾಫ್ರಿಕಾ ಸಮಸ್ಯೆಯ ವಿಷಯವಾಗಿ ಭಾರತೀಯರ ಪಕ್ಷದಲ್ಲಿ ನಿಂತು ಹೆಣಗಾಡಿದಂತೆ ನೀವೂ ಕೂಡ ಈಗ ಭಾರತೀಯರ ಪಕ್ಷದಲ್ಲಿ ನಿಂತು ಕಾಲೀಫತ್ ಸಮಸ್ಯೆಯ ವಿಷಯವಾಗಿ ಪಾರ್ಲಿಮೆಂಟಿನವರೊಡನೆ ಹೋರಾಡಿ, ಮಹಮ್ಮದೀಯರ ಇಷ್ಟಕ್ಕೆ ಅನುಗುಣವಾಗಿ ತುರ್ಕಿ ಸಂಧಿಯ ವ್ಯವಸ್ಥೆಯನ್ನು ಮಾಡಿಸಬೇಕೆಂತಲೂ, ಹಾಗೆ ಮಾಡದೆಹೋದರೆ ನಾವುಗಳೆಲ್ಲಾ ಸರ್ಕಾರಕ್ಕೆ ಸಾಹಾಯ್ಯನಿರಾಕರಣ ಮಾಡುವ ಕ್ರಮವನ್ನು ಅನುಸರಿಸಬೇಕಾಗುವುದೆಂತಲೂ ತಿಳಿಯಪಡಿಸಿಕೊಂಡಿದ್ದಾರೆ.

ಕಲೀಫತ್ ಸಮಸ್ಯೆಯ ಸಂಬಂಧವಾಗಿ ಸರ್ಕಾರದ ಸಾಹಾಯ್ಯ ನಿರಾಕರಣವನ್ನು ಮಾಡಬೇಕೆಂದು ಈದೇಶದ ರಾಜಕೀಯ ಚಳವಳಿಗಾರರ ಪ್ರಮುಖರು ವಾದಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಗಳೂ ಹಾಗೆಯೇ ನಿರ್ಧಾರ ಮಾಡುತ್ತಿವೆ. ಆದರೆ ಮತ್ತೊಂದು ಕಡೆಯಲ್ಲಿ ಶಾಸನನಿರ್ಮಾಣ ಸಭೆಯ ಸಭಿಕತ್ವವನ್ನು ಸಂಪಾದಿಸುವುದಕ್ಕೆ ನಾಮುಂದೆ ತಾಮುಂದೆಯೆಂದು ಪ್ರಯತ್ನಗಳನ್ನು ನಡೆಯುಸುತ್ತಿದ್ದಾರೆ. ಈ ದ್ವಿಮುಖ ವರ್ತನದ ಚಾತುರ್ಯವು ವಿಜಾತೀಯವಾಗಿದೆ. ಲಾಲಾ ಲಜಪತರಾಯರವರು ಈಗ ಕಾಂಗ್ರೆಸ್ ಪಕ್ಷದವನಾರೂ ಶಾಸನ ಸಭಾಸಭಿಕತ್ವವನ್ನು ಪಡೆಯಲು ನಿಲ್ಲಕೂಡದೆಂತಲೂ ತಾವೂ ನಿಲ್ಲುವುದಿಲ್ಲವೆಂತಲೂ ಇತರರು ಒಂದುವೇಳೆ ನಿಂತರೆ ತಾವೂ ಡಿಫೆನ್ಸ್ ಕಮಿಟಿಯವರೂ ಪ್ರತಿರೋಧಿಸಿ ನಿಂತು ಅವರ ಪ್ರಯತ್ನಗಳನ್ನು ಸಾಗಗೊಡದಂತೆ ಮಾಡುವೆವೆಂತಲೂ ಪ್ರಕಟಿಸಿದ್ದಾರೆ. ಇದಕ್ಕೆ ಎಷ್ಟುಮಂದಿ ಕಾಂಗ್ರೆಸ್ ಪಕ್ಷೀಯರು ಮನಕೊಟ್ಟು ಕಟಿಬದ್ಧರಾಗುವರೋ ನೋಡಬೇಕು.

ವಿದೇಶ ವೃತ್ತಾಂತಗಳು.

ಮಿ|| ಫೆಹರನ್ಬಾಚಿ ಎಂಬುವವರು ಜರ್ಮನ್ ನೂತನ ಪ್ರಭುತ್ವದ ಮುಖ್ಯ ಮಂತ್ರಿಯಾಗಿ ಆರಿಸಿಕೊಳ್ಳಲ್ಪಟ್ಟಿದ್ದಾರೆ.

ಅಮೇರಿಕಾದ ರಿಪಬ್ಲಿಕ್ ಪ್ರಭುತ್ವಕ್ಕೆ ಹೊಸದಾಗಿ ನಡೆದ ಚುನಾವಣೆಯಲ್ಲಿ ಮ|| ಹಾರ್ಡಿಂಗ್ ಎಂಬುವವರು ಸಭಾಧ್ಯಕ್ಷರಾಗಿ ಬಂದಿದ್ದಾರೆ.

ತುರ್ಕಿಗೆ ಸೇರಿದ ಸ್ಮರ್ನಾವನ್ನು ಗ್ರೀಕ್ ಸೈನಿಕರು ಆಕ್ರಮಿಸಿಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ಎರಡು ಕಡೆಯವರಿಗೂ ಯುದ್ಧಗಳು ನಡೆದು ಪ್ರಾಣಹಾನಿಗಳಾಗುತ್ತಿವೆ. ತುರ್ಕಿಯವರ ಅನೇಕ ಯುದ್ಧ ಸಾಮಗ್ರಿಗಳೂ ಸೈನಿಕರೂ ಸಿಕ್ಕಿದ್ದಾರೆ.

ಬಾಲ್ಷೆವಿಕ್ಕರು ಪರ್ಷಿಯ ದೇಶದಲ್ಲಿ ಮುಂದುಮುಂದಕ್ಕೆ ಒತ್ತರಿಸಿಕೊಂಡು ಬರುತ್ತಿದ್ದಾರೆ. ಇಂಗ್ಲೀಷರು ತಕ್ಕಷ್ಟು ಧನಸಹಾಯ ಮೊದಲಾದುವುಗಳನ್ನು ಮಾಡದಿದ್ದರೆ ನಾವು ಬಾಲ್ಷೆವಿಕ್ಕರನ್ನು ತಡೆಯುವುದು ಕಷ್ಟವೆಂದು ಹೇಳಿ ಮುಖ್ಯ ಮಂತ್ರಿಯವರು ರಾಜೀನಾಮೆ ಕೊಟ್ಟರು.

ಬೋಲ್ಷೆವಿಕ್ಕರು ಕಾಕಸಸ್ ಪ್ರಾಂತದಲ್ಲಿ ನುಗ್ಗಿ ಅಲ್ಲಿರುವ ಮಹಮ್ಮದೀಯರ ಮನೆಮಠಗಳನ್ನು ದೋಚಿಕೊಂಡು ಬೆಂಕಿಯಿಕ್ಕಿ ಊರುಗಳನ್ನು ಸುಟ್ಟು ಹೆಂಗಸರನ್ನು ಸೆರೆ ಹಿಡಿದು ಬಹುಶಃ ೧೫೦೦ ಮಂದಿ ತುರುಕರನ್ನು ಕೊಂದಿರುವರೆಂದು ಕಾನ್ಸ್ಟಾಂಟಿನೋಪಲ್ ಪಟ್ಟಣದಿಂದ ಲಂಡನ್ ಟೈಮ್ಸ್ ಪತ್ರಿಕೆಗೆ ಸುದ್ದಿ ಹೋಗಿದೆ.

ತುರ್ಕಿಯ ಪ್ರತಿನಿಧಿಗಳು ಸಂಧಿಪತ್ರ ವಿಷಯವಾಗಿ ಪ್ರತ್ಯುತ್ತರವನ್ನು ಕೊಡಲು ಇನ್ನು ೧೫ ದಿನಗಳ ಅವಧಿಯನ್ನು ಕೇಳಿದರು. ಆಗುವುದಿಲ್ಲವೆಂದು ಮಿತ್ರಮಂಡಲಿಯವರು ಕಠಿನವಾಗಿ ನುಡಿದರು. ಅದರ ಮೇಲೆ ಪ್ರತಿನಿಧಿಗಳು ಕಳೆದ ತಾ|| ೨೬ರಲ್ಲೇ ಪ್ರತ್ಯುತ್ತರವನ್ನು ಕೊಟ್ಟರು. ಅಲ್ಪಸ್ವಲ್ಪ ಬದಲಾವಣೆಗಳನ್ನು ಕೇಳಿರುವರು.

ಮೆಸಪೊಟೇಮಿಯಾದಲ್ಲಿ ಅರಬ್ಬಿಯವರ ಪ್ರಭುತ್ವವು ಸ್ಥಾಪಿಸಲ್ಪಡುವುದೆಂದೂ ಅದಕ್ಕೆ ಹೆಡ್ಜಾಜಿನ ಪ್ರಭುಕುಮಾರರಾದ ಅಬ್ದುಲ್ಲಾಯವರು ಮೊದಲನೆ ಪ್ರಭುವಾಗಿ ಮಾಡಲ್ಪಡುವರೆಂತಲೂ, ಇವರ ರಾಜ್ಯಕಾರ್ಯದಲ್ಲಿ ನೀವು ಸಹಾಯ ಮಾಡಬೇಕೆಂದು ಸ್ಟೇಟ್ ಸೆಕ್ರೆಟರಿಯವರು ಎಚ್. ಎಚ್. ಆಗಾಖಾನರನ್ನು ಕೋರಿರುವರೆಂತಲೂ ಪ್ರಕಟವಾಗಿದೆ.

ಪ್ರತಿದಿನವೂ ಮದ್ಯವನ್ನು ಕುಡಿಯುವ ಮತ್ತು ಹುಚ್ಚು ಹಿಡಿದಿರುವ ಇಲ್ಲವೆ ಮೂರು ವರ್ಷಕಾಲ ಅಖಂಡವಾಗಿ ಬಿಟ್ಟುಹೋಗಿರುವ ಗಂಡನೊಡನೆ ವಿವಾಹಸಂಬಂಧವನ್ನು ಹೆಂಗುಸರು ಕಳೆದುಕೊಳ್ಳಬಹುದೆಂಬ ವಿಷಯಕವಾದ ಒಂದು ಬಿಲ್ಲು ಈಗತಾನೇ ಸೀಮೆಯಲ್ಲಿ ಲಾರ್ಡುಗಳ ಪಾರ್ಲಿಮೆಂಟಿನಲ್ಲಿ ೩ ಸಲವೂ ಅಂಗೀಕೃತವಾಯಿತು. ಇನ್ನು ಅದು ಕಾಮನ್ಸ್ ಸಭೆಗೆ ಬರುವುದು.

ಸೀಮೆಯಲ್ಲಿ ವಿಕ್ಕರ್ಸ್ ಕಂಪೆನಿಯವರು ಅಲ್ಯೂಮಿನಿಯಂ ಲೋಹದಲ್ಲಿ ಒಂದು ವಿಮಾನವನ್ನು ನಿರ್ಮಿಸಿದ್ದಾರೆ. ಅದು ೫೨೦ ಅಡಿಗಳ ಉದ್ದವೂ, ೮೦ ಅಡಿಗಳ ಎತ್ತರವೂ ಉಳ್ಳುದಾಗಿದೆ. ೧೨೬೦,೦೦೦ ಚದರಡಿಗಳ ಗ್ಯಾಸನ್ನು ತುಂಬಿಡುವುದಕ್ಕೆ ಅದರಲ್ಲಿ ಅವಕಾಶವಿರುವುದು. ಗಂಟೆಗೆ ೬೫ ಮೈಲಿಗಳಂತೆ ಒಂದಾವೃತ್ತಿಗೆ ಅಖಂಡವಾಗಿ ೪೦೦೦ ಮೈಲಿಗಳ ದೂರ ಇದು ಪ್ರಯಾಣ ಮಾಡಬಲ್ಲುದು. ವಿದೇಶೀಯ ಪ್ರಯಾಣಕ್ಕಾಗಿಯೇ ಇದು ಕಟ್ಟಲ್ಪಟ್ಟಿದೆ.

ತಮ್ಮ ಪ್ರಭುತ್ವವನ್ನು ಮಿತ್ರಮಂಡಲಿಯವರು ಒಪ್ಪಿಕೊಂಡರೆ ತಮ್ಮ ದಂಡಯಾತ್ರೆಯನ್ನು ನಿಲ್ಲಿಸುತ್ತೇವೆಂದು ಬಾಲ್ಷೆವಿಕ್ಕರು ಹೇಳುತ್ತಾರೆ. ಫ್ರೆಂಚರೇ ಮೊದಲಾದವರಾದರೋ ಪ್ರಭುತ್ವಕ್ಕಿರಬೇಕಾದ ಲಕ್ಷಣಗಳೆಲ್ಲಾ ಬಾಲ್ಷೆವಿಕ್ಕರಲ್ಲಿ ಇಲ್ಲದಿರುವಾಗ ನಾವು ಅವರ ಸಂಬಂಧವನ್ನಿಟ್ಟುಕೊಳ್ಳುವುದಿಲ್ಲ. ಮತ್ತು ಹಿಂದಿನ ರಷ್ಯಾ ಪ್ರಭುತ್ವದವರು ಇತರ ಪ್ರಭುತ್ವಗಳವರಲ್ಲಿ ಮಾಡಿರುವ ಸಾಲವನ್ನೆಲ್ಲಾ ತೀರಿಸುವುದಕ್ಕೆ ಇವರು ಒಪ್ಪಿಕೊಳ್ಳಬೇಕು. ಅಲ್ಲದೆ ಇವರು ಇಂಗ್ಲೀಷ್ ಕೂಲಿಕಾರ ಜನರನ್ನೆಲ್ಲಾ ತಿರುಗಿ ಬೀಳುವಂತೆ ಪ್ರೋತ್ಸಾಹ ಕೊಟ್ಟು ತಪ್ಪಿತವನ್ನು ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ.

ಬೆಳ್ಳಿಯ ಬೆಲೆಯು ಹೆಚ್ಚುವ ಸಂಭವವಿಲ್ಲವೆಂದು ಸೀಮೆಯಲ್ಲಿರುವ ಮಾಂಟುಗು ಕಂಪೆನಿಯವರು ಹೇಳುವುದಲ್ಲದೆ ಭರತಖಂಡದಲ್ಲಿ ಸಾರನ್ ಬೆಲೆಯ ಕಡೆಯ ದರವನ್ನು ೧೦ ರೂ. ಎಂದು ನಿರ್ಧರಿಸಿರುವರೇ ಹೊರತು ಅದರ ಹೆಚ್ಚು ದರವು ಇಷ್ಟೇ ಇರಬೇಕೆಂದು ನಿರ್ಣಯಿಸುವುದಿಲ್ಲವೆಂತಲೂ ಆದುಕಾರಣ ಚಿನ್ನದ ಗಟ್ಟಿಯ ಬೆಲೆಯನ್ನನುಸರಿಸಿ ಸವರನ್ನಿನ ಬೆಲೆಯು ಕೂಡ ೧೦ ರೂ. ಗೆ ಕಡಿಮೆಯಿಲ್ಲದೆ ಏರಿ ಇಳಿಯುತ್ತಿರಬಹುದೆಂತಲೂ ಹೀಗೆ ಬೆಲೆಯ ಬದಲಾವಣೆಯು ಸಾರನ್ನನ್ನು ಕರಗಿಸಕೂಡದೆಂಬ ಆಜ್ಞೆಯು ಮತ್ತೆ ಮಾಡಲ್ಪಡುವವರೆಗೂ ನಡೆಯುತ್ತಿರುವುದೆಂತಲೂ ಹೇಳಿರುತ್ತಾರೆ.

ಐರ್ಲೆಂಡಿನ ಲಂಡನ್ಡರಿ ಮೊದಲಾದ ಪಟ್ಟಣಗಳಲ್ಲಿ ಸರ್ಕಾರದವರ ಮೇಲೆ ಪ್ರಜೆಗಳು ನಿರ್ಭಯವಾಗಿ ತಿರುಗಿಬಿದ್ದು ಸೈನಿಕರ ಗುಂಡಿನೇಟುಗಳಿಗೆ ಗುರಿಯಾಗುತ್ತಿದ್ದಾರೆ. ಸರ್ಕಾರದವರ ಭಯವು ಪ್ರಜೆಗಳಿಗಿಲ್ಲ. ಅವರನ್ನು ನಿರ್ದಾಕ್ಷಿಣ್ಯವಾಗಿ ಸರ್ಕಾರದವರು ಕೊಲ್ಲಿಸುತ್ತಿದ್ದಾರೆ. ಹೊಸ ಸೈನ್ಯಗಳು ಅಲ್ಲಿ ಹೋಗಿ ಇಳಿಯುತ್ತಿವೆ. ಹಾವಳಿಗಾರರು ಲಂಡನ್ಡರಿ ಗೌರ್ನರ ಮಗನನ್ನು ಬೀದಿಯಲ್ಲಿ ಹೋಗುವಾಗ ತಡೆದು ಸರ್ಕಾರಿ ತುಪಾಕಿಗಳು ಎಲ್ಲಿವೆಯೋ ತೋರಿಸೆಂದು ಕೇಳಿದರು. ಆತನು ಹೇಳದೆ ಹೋದುದರ ಮೇಲೆ ಕೋಪಗೊಂಡು ಕೈಕಾಲು ಕಟ್ಟಿ ತುಪಾಕಿಗಳಿಂದ ಹೊಡೆದು ಕೊಂದುಹಾಕಿದರು. ಹಗಲು ರಾತ್ರಿಯೆನ್ನದೆ ಹೆಂಗಸರು ಮಕ್ಕಳು ಕೂಡ ಬಂದೂಕುಗಳನ್ನು ಹಿಡಿದು ಪೊಲೀಸರ ಮೇಲೂ ಸರ್ಕಾರದ ಜನರ ಮೇಲೂ ಗುಂಡುಗಳನ್ನು ಹಾರಿಸುತ್ತಲೂ ಸರ್ಕಾರಿ ಕಟ್ಟಡಗಳನ್ನು ಸುಡುತ್ತಲೂ ಇರುವರು, ಅಲ್ಲೆಲ್ಲಾ ಈಗ ಸೈನಿಕ ಶಾಸನವು ಸಾರಲ್ಪಟ್ಟಿರುವುದು. ಸರ್ಕಾರದವರು ಮಾಡಿದ ತೀಕ್ಷ್ಣ ಪ್ರಯತ್ನಗಳಿಂದ ಲಂಡನ್ಡರಿ ಮೊದಲಾದ ಕಡೆಗಳಲ್ಲಿ ಈಗ ಸ್ಥಿತಿಗತಿಯು ಸ್ವಲ್ಪ ಶಾಂತವಾಗಿದೆಯೆಂದು ವರ್ತಮಾನ ಬಂದಿದೆ.

ಪತ್ರವ್ಯವಹಾರ.

ರೆಡ್ಡಿ ಹಾಸ್ಟಲು.

ಬೆಂಗಳೂರಲ್ಲಿರುವ ರೆಡ್ಡಿ ಹಾಸ್ಟಲು ಹೋದವರ್ಷ ಬೇಸಿಗೆ ಕಾಲದ ರಜಾ ನಿಮಿತ್ತವಾಗಿ ಮುಚ್ಚಲ್ಪಟ್ಟಿತ್ತು, ಈಗ ಪುನಃ ಬಸವನಗುಡಿಯಲ್ಲಿ ಕಳೆದ ತಿಂಗಳು ತಾ|| ೫ ರಿಂದ ತೆರೆಯಲ್ಪಟ್ಟಿರುತ್ತದೆ. ಅಲ್ಲದೆ ಈ ವರ್ಷ ರೆಡ್ಡಿ ವಿದ್ಯಾರ್ಥಿಗಳ ಪೈಕಿ ಎಂಟ್ರನ್ಸು ಎಗ್ಝಾಮಿನೇಷನ್ನಿನಲ್ಲಿ ಮುನಿಸ್ವಾಮಿರೆಡ್ಡಿಯೂ, ಸ್ಕೂಲ್ ಫೈನಲ್ಲಿನಲ್ಲಿ ತಿಮ್ಮಾರೆಡ್ಡಿ, ಗುರುವಾರೆಡ್ಡಿ, ಎಲ್. ಮುನಿಸ್ವಾಮಿರೆಡ್ಡಿ, ಸಿದ್ದಪ್ಪ, ನಾಗಯ್ಯರೆಡ್ಡಿ ಇವರುಗಳೂ ತೇರ್ಗಡೆಯನ್ನು ಹೊಂದಿರುತ್ತಾರೆ. ಮುನಿಸ್ವಾಮಿರೆಡ್ಡಿ ವಿನಾ ಉಳಿದವರೆಲ್ಲರೂ ಹೋದವರ್ಷ ರೆಡ್ಡಿ ಹಾಸ್ಟಲಿನಲ್ಲಿದ್ದವರು.

ರಾಮಸ್ವಾಮಿ ರೆಡ್ಡಿ ಗಾರು.

ಚಿತ್ರದುರ್ಗದ ವೀರಶೈವ ವಿದ್ಯಾರ್ಥಿನಿಲಯ.

ಚಿತ್ರದುರ್ಗದಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಥಾನದಿಂದ ಉಚಿತವಾಗಿ ಏರ್ಪಡಿಸಿರುವ ವೀರಶೈವ ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಪೈಕಿ ಈ ವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹೋಗಿದ್ದ ೬ ಜನರ ಪೈಕಿ ೪ ಜನರು ಸಂಪೂರ್ಣವಾಗಿಯೂ, ಒಬ್ಬರು ೧ ಭಾಗದಲ್ಲಿಯೂ ತೇರ್ಗಡೆಯಾಗಿರುತ್ತಾರೆ. ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದ್ದ ಒಬ್ಬ ವಿದ್ಯಾರ್ಥಿಯು ತೇರ್ಗಡೆಯಾಗಿರುತ್ತಾನೆ. ಶ್ರೀ|| ಸಂಸ್ಥಾನದಿಂದ ಏರ್ಪಟ್ಟ ವಿದ್ಯಾರ್ಥಿ ನಿಲಯದಲ್ಲಿ ಸೇರಿದ ವಿದ್ಯಾರ್ಥಿಗಳು ಪ್ರತಿವರ್ಷವೂ ಹೆಚ್ಚು ಹೆಚ್ಚಾಗಿ ಉತ್ತೀರ್ಣರಾಗುತ್ತಿರುವುದು ಶ್ಲಾಘನೀಯವೂ ಸಮಾಜಕ್ಕೆ ಸಂತೋಷಪ್ರದವೂ ಆಗಿರುತ್ತದೆ. ನಮ್ಮ ಶ್ರೀ|| ಜಗದ್ಗುರುಗಳವರ ಅನ್ಯಾದೃಶವಾದ ಭಕ್ತ ಪ್ರೇಮವು ಇದರಿಂದ ವ್ಯಕ್ತವಾಗುತ್ತದೆ. ಭಕ್ತೋದ್ಧಾರಾರ್ಥವಾಗಿಯೇ ಗುರುಪದಾಲಂಕೃತರಾಗಿರುವ ನಮ್ಮ ಶ್ರೀ|| ಪಂಚಸಿಂಹಾಸನಾಧೀಶ್ವರರು ಶ್ರೀ|| ಜಗದ್ಗುರುಗಳವರನ್ನು ಉದಾಹರಣೆಯಾಗಿಟ್ಟುಕೊಂಡು ವಿದ್ಯಾಭಿವೃದ್ಧಿಗೆ ಪ್ರೋತ್ಸಾಹವನ್ನು ಕೊಟ್ಟು ಸಮಾಜೋತ್ಕರ್ಷತೆಯನ್ನುಂಟುಮಾಡದೆ ಇರಲಾರರೆಂದು ನಂಬುತ್ತೇನೆ.

“ಸಮಾಜಬಂಧು”

ಲಗ್ನದ ಫಂಡು.

ಶಿರಾ ತಾಲ್ಲೂಕು ಕಸಬಾ ಶಿರಾದಲ್ಲಿ ಇರುವ ಮಹಾರಾಜಶ್ರೀ ಹರಳಕಟ್ಟೆ ಬಸಪ್ಪನವರ ತಮ್ಮಂದಿರು ಮಲ್ಲಪ್ಪನವರಿಗೆ ತುಮಕೂರಲ್ಲಿ ಇರುವ ಮ|| ರಾ|| ವೀರಶೆಟ್ಟಪ್ಪನವರ ಕುಮಾರ್ತಿ ರುದ್ರಮ್ಮನನ್ನು ರೌದ್ರಿ ಸಂ|| ವೈಶಾಖ ಬ|| ರಲ್ಲೂ, ಇದೇ ಶಿರಾದಲ್ಲಿ ಇರುವ ಮ|| ಶ್ರೀ|| ಶಂಭುಯರಗುಂಟಪ್ಪನವರ ಕುಮಾರ್ತಿ ಗಂಗಮ್ಮನನ್ನು ಕೊಡಿಗೆ ತಾಲ್ಲೂಕು ಕಾನಾವಸ್ಯಯಲ್ಲಿ ಇರುವ ಮ|| ಲಿಂಗಪ್ಪನವರ ಕುಮಾರ ಬಸಪ್ಪನವರಿಗೂ ರೌದ್ರಿ ಸಂ|| ವೈಶಾಖ ಬ|| ೧೨ ರಲ್ಲೂ, ಈ ಉಭಯಲಗ್ನಗಳು ಶಿರಾ ಹೋಳಿನ ಹಂಪಯ್ಯನವರ ಮಠದ ಪಟ್ಟಾಧ್ಯಕ್ಷ ಸಿದ್ದಪ್ಪದೇವರು, ಶಿರಾಕೋಡೀಗನೀಮಠದ ರಾಚಯ್ಯನವರು ಸಹಾ ವಿಧಿಪ್ರಕಾರ ಲಗ್ನಗಳನ್ನು ಸಾಂಗಗೊಳಿಸಿ ವಿದ್ಯಾಭಿವೃದ್ಧಿ ಫಂಡಿಗೂ ಕೈ|| ವೀರಸಂಗಪ್ಪನವರ ಅಗ್ರತಾಂಬೂಲದ ವಿಷಯವಾಗಿಯೂ ಸೂಚಿಸಲು ಹರಳಕಟ್ಟೆ ಬಸಪ್ಪನವರು ಫಂಡಿಗಾಗಿ ಮೂರು ರೂಪಾಯಿ ಅಗ್ರ ತಾಂಬೂಲಕ್ಕಾಗಿ ಒಂದು ರೂಪಾಯಿ, ಶಂಭು ಯರಗುಂಟಪ್ಪನವರು ಫಂಡಿಗಾಗಿ ಎರಡು ರೂಪಾಯಿ ಅಗ್ರ ತಾಂಬೂಲಕ್ಕಾಗಿ ಒಂದು ರೂಪಾಯಿ ಈ ರೀತಿ ಸಹಾಯ ಮಾಡಿದರು. ಈ ಬಾಬತ್ತು ಎರಡು ರೂಪಾಯಿ ಮೈಸೂರಿಗೆ ಮ|| ವೈ. ವಿರುಪಾಕ್ಷಯ್ಯನವರ ಆಫೀಸಿಗೂ, ೫ ರೂಪಾಯಿಗಳು ವಿದ್ಯಾಭಿವೃದ್ಧಿ ಫಂಡಿನ ಸೆಕ್ರೆಟರಿ ಮ|| ಜಿ. ಪರಮಶಿವಯ್ಯನವರ ಆಫೀಸಿಗೂ ಮಣಿಯಾರ್ಡರು ಮಾಡಿದೆ.

ಬಾರಳ್ಳಿ ಅಮರಾದಿ ಸಂಸ್ಕೃತ ಪಾಠಶಾಲಾ

ಜಿಲ್ಲಾ ಬಿದರಕೋಟೆ.

ಈ ಪಾಠಶಾಲೆಯು ೮-೧೦ ವರ್ಷಗಳಿಂದ ನಡೆಯುತ್ತ ಬಂದು ಮಧ್ಯದಲ್ಲಿ ೨ ವರ್ಷ ಮಾತ್ರ ಶಾಸ್ತ್ರಿ ಜನರು ದೊರೆಯದೆ ಹೋದಕಾರಣ ಕುಂಠಿತವಾಗಿತ್ತು. ಆದಕ್ಕಾಗಿ ಈ ಪಾಠಶಾಲಾ ಕರ್ತರಾದ ಶ್ರೀ|| ಶಿ|| ಮುಧೋಳ ಮಠೀಯ ಚರವರ ಶಿವಲಿಂಗಸ್ವಾಮಿಗಳು ಚಿಂತಾವ್ಯಾಕುಲಿತ ಮನಸ್ಕರಾಗಿಯೂ ಮಿತಲಿಂಗಾರ್ಚಕರಾಗಿಯೂ ದೇಹಶ್ರಮವನ್ನು ಲಕ್ಷಿಸದೆ ಯಾವಾಗಲೂ ಸಂಚರಿಸಿ ಸ್ವಲ್ಪ ಮಟ್ಟಿಗೆ ದ್ರವ್ಯದ ಫಂಡನ್ನು ಕೂಡಿಸಿ ಸದರಿ ಶಾಲಾ ವಿದ್ಯಾರ್ಥಿಗಳಿಗೆ ಅನ್ನೋದಕದ ಕೊರತೆ ಬಾರದಂತೆ ಈ ಊರ ಸಕಲ ಸದ್ಭಕ್ತರುಗಳಿಂದ ಭೋಜನಾದಿಕಾರ್ಯಗಳಿಗೆ ಏರ್ಪಡಿಸಿ, ವೇ|| ಯಲೇರಿ ಬಸವರಾಜಶಾಸ್ತ್ರಿಗಳನ್ನು ಹೋದ ಸಿದ್ಧಾರ್ಥಿನಾಮ ಸಂವತ್ಸರದಲ್ಲಿ ಶಾಲಾಧ್ಯಾಪಕರನ್ನಾಗಿಯೂ ಸದರಿ ಗ್ರಾಮದ ಸದ್ಭಕ್ತ ಮ|| ರಾ|| ಗಣಂಗಳಪ್ಪಾ ಕೇದಾರಿ ಇವರನ್ನು ಸದರಿ ಶಾಲೆಯ ಸಕಲ ವ್ಯವಸ್ಥೆಗಳನ್ನೂ ಏರ್ಪಡಿಸುವದಕ್ಕಾಗಿ ಮೇನೇಜರನ್ನಾಗಿಯೂ ಮಾಡಿದರು. ಆದರೆ ಈ ಮಹನೀಯರ ಆಶೀರ್ವಾದ ಬಲದಿಂದ ಈ ವರೆಗೆ ಚನ್ನಾಗಿ ನಡೆಯುತ್ತ ಬಂದಿದೆ. ಅಲ್ಲದೆ ವಿದ್ಯಾರ್ಥಿಗಳೂ ಕೂಡ ಸಂಸ್ಕೃತ ಕಾವ್ಯಾದಿಗಳನ್ನು ಕನ್ನಡಕಾವ್ಯಾದಿಗಳನ್ನೂ ಅಭ್ಯಸಿಸುತ್ತಿರುವರು. ಈ ಶಾಲೆಯನ್ನು ಇದೇ ಪ್ರಕಾರ ನಡಿಸಿಕೊಡಲೆಂದು ಅನನ್ಯಭಾವನೆಯಿಂದ ಆ ಜಗನ್ನಿಯಾಮಕನಾದ ಪರಶಿವನನ್ನು ಪ್ರಾರ್ಥಿಸುವ

ಓರ್ವ ಮತಾಭಿಮಾನಿ.

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ತಾ|| ೨೬-೨-೧೯೨೦ ರಲ್ಲಿ ನೆರೆದಿದ್ದ ತುಮಕೂರು ಡಿಸ್ಟ್ರಿಕ್ಟಿನ ೧ ನೆ ಶ್ರೀಮದ್ವೀರಶೈವ ಪ್ರಾಂತಿಕ ಸಭೆಯವರು ಸರ್ವಾನುಮತಿಯಿಂದ ಮಾಡಿದ ರೆಜಲ್ಯೂಷನ್‌ಗಳು:—

(೧) ಗುರುವರ್ಗದವರಲ್ಲಾಗಲಿ, ಸಮಾಜದವರಲ್ಲಾಗಲಿ ಉಂಟಾಗಿರುವ ಮತ್ತು ಉಂಟಾಗಬಹುದಾದ ಭಿನ್ನಭಾವಗಳನ್ನು ಈ ಸಮಾಜದವರು ನಿಷೇಧಿಸಿ ಏಕಮತ್ಯವನ್ನು ಬಲಪಡಿಸುವುದಕ್ಕೋಸ್ಕರ ಅವಶ್ಯಕವಾದ ಸಲಹೆಗಳನ್ನು ಈ ಸಮಾಜದವರು ಸೂಚಿಸಬಹುದೆಂದು ಸರ್ವಾನುಮತಿಯಿಂದ ನಿರ್ಧರಿಸಿದೆ.

(೨) ತುಮಕೂರು ಡಿಸ್ಟ್ರಿಕ್ಟಿನಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ಸಾಧ್ಯವಾದಮಟ್ಟಿಗೂ ಮಿತವ್ಯಯದಿಂದ ನಡಿಸತಕ್ಕದ್ದೆಂತಲೂ ಮತ್ತು ಇಂಥ ಶುಭಸಮಯಗಳಲ್ಲಿ ಪ್ರತಿಯೊಬ್ಬರೂ ತಮ್ಮ ಶಕ್ತ್ಯನುಸಾರ ಈ ಪ್ರಾಂತಿಕ ವಿದ್ಯಾಫಂಡಿಗೆ ಧನಸಹಾಯ ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

(೩) (ಎ) ತುಮಕೂರು ಶ್ರೀ ಮುರುಘ ಮಠದಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳಿಂದ ಸ್ಥಾಪಿತವಾಗಿ ನಡೆಯುತ್ತಿದ್ದ ವೈದಿಕ ಪಾಠಶಾಲೆಯು ಹಾಲಿ ನಿಂತುಹೋಗಿರುವುದನ್ನು ಜೀರ್ಣೋದ್ಧಾರ ಮಾಡಬೇಕೆಂತಲೂ ಮತ್ತು (ಬಿ) ಈ ವಿಷಯದಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಬಿನ್ನಯಿಸಿಕೊಳ್ಳತಕ್ಕದ್ದೆಂತಲೂ ನಿರ್ಧರಿಸಲ್ಪಟ್ಟಿತು.

(೪) ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಮೆಮೋರಾಂಡಮ್ ವಿಚಾರದಲ್ಲಿ ವಿದ್ಯಾ ಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಸಿ. ಆರ್. ರೆಡ್ಡಿ, ಎಂ. ಎ. ಯವರು ಮಾಡಿರುವ ಸಲಹೆಗಳು ಜನೋಪಯುಕ್ತವಾಗಿರುವದರಿಂದ ಗೌರ್ನಮೆಂಟಿನವರು ಅವುಗಳನ್ನು ಅಂಗೀಕರಿಸಿ ಜಾರಿಯಲ್ಲಿ ತರಬೇಕೆಂದು ಈ ವೀರಶೈವ ಪ್ರಾಂತಿಕ ಸಭೆಯು ನಿರ್ಧರಿಸಿರುತ್ತದೆ. ಈ ನಿರ್ಧಾರದ ಒಂದೊಂದು ಕಾಪಿಯನ್ನು ಮೈಸೂರು ಗೌರ್ನಮೆಂಟಿನ ಛೀಫ್ ಸೆಕ್ರೆಟರಿಯವರಿಗೂ ಮತ್ತು ಸದರಿ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ ಕಳುಹಿಸತಕ್ಕದ್ದು.

(೫) ಹಿಂದುಳಿದ ಜನಗಳನ್ನು ಉದ್ಧರಿಸಲು ಕಂಕಣಬದ್ಧರಾಗಿದ್ದ ಮತ್ತು ಹಿಂದುಳಿದವರಿಗೆ ಸರ್ಕಾರಿ ವೇತನಗಳನ್ನು ಕಲ್ಪಿಸಿಕೊಡಲು ಪ್ರೇರಕರಾಗಿದ್ದ ಸುಪ್ರಸಿದ್ಧ ಅಡ್ವೋಕೇಟರಾದ ಮಿ|| ಎಂ. ಬಸವಯ್ಯ, ಬಿ. ಎ,

ಬಿ. ಎಲ್. ರವರು ಅಕಾಲದಲ್ಲಿ ಶಿವಲೋಕವನ್ನು ಕುರಿತು ತೆರಳಿದ ವಿಚಾರದಲ್ಲಿ ನಮಗೆ ಉಂಟಾಗಿರುವ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲ್ಪಟ್ಟಿತು.

(೬) ತುಮಕೂರು ಡಿಸ್ಟ್ರಿಕ್ಟಿನ ವೀರಶೈವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಒಂದು ವಿದ್ಯಾರ್ಥಿನಿಲಯವು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಂದ ಶ್ರೀ ಜಗದ್ಗುರು ಜಯದೇವ ವಿದ್ಯಾಸದನ ಎಂಬ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟು ಶ್ರೀ ಸಿದ್ಧಗಂಗಾಮಠದ ಉದ್ಧಾನಸ್ವಾಮಿಗಳವರ ಆಡಳಿತಕ್ಕೆ ಒಳಪಟ್ಟು ಇವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇರತಕ್ಕದ್ದು. ಈ ಕಮಿಟಿಗೆ ತುಮಕೂರು ಡಿಸ್ಟ್ರಿಕ್ಟಿನ ಎಲ್ಲಾ ಭಾಗಗಳಿಂದ ನಿಯಮಿಸಲ್ಪಟ್ಟ ಮೆಂಬರುಗಳಿರತಕ್ಕದ್ದು. ಇದಕ್ಕಾಗಿ ಒಂದು ಧನರಾಶಿಯನ್ನು ಈ ಸಭೆಯವರು ಏರ್ಪಡಿಸಿ ವಸೂಲಾಗುವ ಹಣವನ್ನು ಮೈಸೂರು ಗೌರ್ನಮೆಂಟ್ ಸೇವಿಂಗ್ಸ್‌ಬ್ಯಾಂಕಿನಲ್ಲಿ ಈ ಕಮಿಟಿಯ ಪ್ರೆಸಿಡೆಂಟರಾದ ಶ್ರೀ ಉದ್ಧಾನಸ್ವಾಮಿಗಳವರ ಹೆಸರಿನಲ್ಲಿ ಈ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ಇಡತಕ್ಕದ್ದು. ಮತ್ತು ಈ ಫಂಡಿಗೆ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದ ಆಶೀರ್ವಾದವಾಗಿ ಬರತಕ್ಕ ಹಣವೂ ಸೇರತಕ್ಕದ್ದು. ಮತ್ತು ಈ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಶ್ರೀ ಉದ್ಧಾನಸ್ವಾಮಿಗಳು ಈ ಧನರಾಶಿಗಾಗಿ ಅಲ್ಲಲ್ಲಿ ಸಂಚಾರ ಮಾಡಿ ಧನವನ್ನು ಶೇಖರಿಸಿ ಈ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ಕಮಿಟಿಯ ಪ್ರೆಸಿಡೆಂಟರಾದ ಶ್ರೀಯವರ ಹೆಸರಿನಲ್ಲಿ ಮೈಸೂರು ಗೌರ್ನಮೆಂಟ್ ಸೇವಿಂಗ್ಸ್‌ಬ್ಯಾಂಕಿನಲ್ಲಿ ಇಡತಕ್ಕದ್ದು. ಮತ್ತು ಈ ಫಂಡು ಸದರಿ ಕಮಿಟಿಯವರ ಮತ್ತು ಪ್ರೆಸಿಡೆಂಟರಾದ ಶ್ರೀ ಉದ್ಧಾನಸ್ವಾಮಿಗಳವರ ಆಡಳಿತದಲ್ಲಿ ಇರುತ್ತಾ, ಮೈಸೂರು ಲಿಂಗಾಯತ ಎಜ್ಯುಕೇಷನ್ ಫಂಡಿನ ಜನರಲ್ ಸೂಪರ್‌ವಿಷನ್ (ಅಂದರೆ ಸಾಧಾರಣ ಮೇಲ್ ತನಿಖೆಗೆ ಒಳಪಟ್ಟಿರತಕ್ಕದ್ದೆಂದು ಸರ್ವಾನುಮತಿಯಿಂದ ನಿರ್ಧರಿಸಲ್ಪಟ್ಟಿತು.

(೭) ತುಮಕೂರಿನಲ್ಲಿ ಸ್ಥಾಪಿಸಲ್ಪಡುವ ಶ್ರೀ ಜಗದ್ಗುರು ಜಯದೇವ ವಿದ್ಯಾಸದನದ ಫಂಡಿಗಾಗಿ ಧನಸಂಚಯವನ್ನು ಮಾಡುವ ಕಾರ್ಯಕ್ಕಾಗಿ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿ ಉಪನ್ಯಾಸಗಳ ಮೂಲಕ ಜನಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಮಿ|| ಹೆಚ್. ಕೆ. ಮಲ್ಲಪ್ಪನವರನ್ನು ೩ ತಿಂಗಳ ಮಟ್ಟಿಗೆ ಅಪೇಕ್ಷೆ ಮಾಡಿದ ಕಾಲದಲ್ಲಿ ಕಳುಹಿಸಿಕೊಡುವಂತೆ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಸಿ. ಆರ್. ರೆಡ್ಡಿ, ಎಂ. ಎ. ರವರನ್ನು ಕೇಳಿಕೊಳ್ಳುವಂತೆ ನಿರ್ಧರಿಸಲ್ಪಟ್ಟಿತು.

(೮) ೧೯೩೦ ನೆ ಏಪ್ರಿಲ್ ಕೊನೆಯಲ್ಲಿ ನಡೆಯುವ ಪರೀಕ್ಷೆಗಳಲ್ಲಿ ವೀರಶೈವರ ಪೈಕಿ ಒಂದು ಎರಡನೆಯವರಾಗಿ ಉತ್ತೀರ್ಣರಾಗುವವರಿಗೆ ಬಹುಮಾನಗಳನ್ನು ಕೊಡಲು ಸಂಕಲ್ಪಿಸಿ ಅತ್ಯಂತ ಸಂತೋಷದಿಂದ ವಾಗ್ದಾನ ಮಾಡಿರುವ ವಿದ್ಯಾಭಿಮಾನಿಗಳಾದ ವೀರಶೈವ ಮಹನೀಯರುಗಳ ವಾಗ್ದಾನಗಳನ್ನು ಈ ಸಭೆಯವರು ವಂದನಾಪೂರ್ವಕವಾಗಿ ಅಂಗೀಕರಿಸತಕ್ಕದ್ದು.

ಜಿ. ಕೆ. ಗುರಪ್ಪ, ಪ್ರೆಸಿಡೆಂಟ್.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರ್ಯೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವವು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ. 1-0-0.

14

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ಬಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. **ಇಲ್ಲ.**

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 28

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ ಬನವಾಸಿ ಉತ್ತರಕನಡಾ.

ಜಾಗ್ರತೆ. ## ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 35

ನಾವು ಎ. ಆಲ್ ಬ್ಯುಕ್ಯುಯರ್ ಕ್ಕ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
14 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1930 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ವಿ. ಎಸ್. ಪಾಣಿ ಕಂಪನಿ,
14 ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಶೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
27 ವೈದ್ಯಶಾಲಾ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೨೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 33

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಆದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ನುತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲೆ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೩೦ ನೆಯ ಇಸವಿ ಜುಲೈ ತಾ|| ೪ ರಿಂದ ೧೯೩೦ ನೆಯ ಜುಲೈ ತಾ|| ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೫೨ ನೆಯ ರೌದ್ರಿ ನಾಮ ಸಂವತ್ಸರದ ಆಷಾಢ ಬಹುಳ ತದಿಗೆಯಿಂದ ಆಷಾಢ ಬಹುಳ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ
4	ಭಾನು	ತದಿ	28-30	ಶ್ರವ	19-21	21
5	ಸೋಮ	ಚೌತಿ	30-49	ಧನಿ	23-29	22
6	ಮಂಗಳ	ಪಂಚ	31-49	ಶತ	26-24	23
7	[1]ಬುಧ	ಷಷ್ಠಿ	33-0	ಪೂಭಾ	28-3	24
8	[2]ಗು	ಸಪ್ತ	30-0	ಉಭಾ	28-27	25
9	[3]ಶುಕ್ರ	ಅಷ್ಟ	27-22	ರೇವ	27-41	26
10	ಶ	ನವ	23-37	ಅಶ್ವಿ	25-54	27

(1) ಯುವರಾಜರವರ ಕುಮಾರರವರ ವರ್ಧಂತಿ. (2) ಮೇಲುಕೋಟೆಯಲ್ಲಿ ಕೃಷ್ಣರಾಮುಡಿ ಉತ್ಸವ. (3) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ, ಆಡಿಶುಕ್ರವಾರ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೩೦ ನೆಯ ಇಸವಿ ಜುಲೈ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೨೮

GOVERNMENT OF MYSORE.
ELECTRICAL DEPARTMENT.

48

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. **Lighting**	2·50 as.	As. 6 per point of 60 Watts per month.
2. **Heating & Cooking.** Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand. First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...

3. Power Supply for Industries Rated Maximum demand in Electrical Horse Power.

Motors up to 20 H. P.	1 anna		Nil
Motors above 20 and up to 50 H. P.	1·00 anna	Rs. 6	per H. P.
Motors above 50 and up to 100 H. P.	·875	Rs. 6	do.
Motors above 100 and up to 200 H. P.	·75	Rs. 6	do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲೂಯನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 49

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಶಸ್ತ್ರ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಪಂಚಾಶಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. **ಸೇವಿಸಿ ನೋಡಿರಿ.**

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. **ಇಲ್ಲಾ.**

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ)ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
41 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು.

ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂ. ಪೀಟರ್,
15 3. ಇರುಳಪ್ಪನಬೀದಿ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪದ್ಯಾತ್ಮಕ ಶ್ರೀ ಶರಣಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೩—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ಧಪ್ಪಾ ತಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

---

34 ## ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿ ಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಬಿ. ಎಲ್. ರವರು ಈಕಾಲದಲ್ಲಿ ಶಿವಲೋಕವನ್ನು ಹೊಂದಿದ ವಿಚಾರದಲ್ಲಿ ನಮಗೆ ಉಂಟಾಗಿರುವ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲ್ಪಟ್ಟಿತು.

(೬) ತುಮಕೂರು ಡಿಸ್ಟ್ರಿಕ್ಟಿನ ವೀರಶೈವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಒಂದು ವಿದ್ಯಾರ್ಥಿನಿಲಯವು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಂದ ಶ್ರೀ ಜಗದ್ಗುರು ಜಯದೇವ ವಿದ್ಯಾಸದನ ಎಂಬ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟು ಶ್ರೀ ಸಿದ್ಧಗಂಗಾ ಮಠದ ಉದ್ದಾನಸ್ವಾಮಿಗಳವರ ಆಡಳಿತಕ್ಕೆ ಒಳಪಟ್ಟು ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇರತಕ್ಕದ್ದು. ಈ ಕಮಿಟಿಗೆ ತುಮಕೂರು ಡಿಸ್ಟ್ರಿಕ್ಟಿನ ಎಲ್ಲ ಭಾಗಗಳಿಂದ ನಿಯಮಿಸಲ್ಪಟ್ಟ ಮೆಂಬರುಗಳೀತಕ್ಕದ್ದು. ಇದಕ್ಕಾಗಿ ಒಂದು ಧನರಾಶಿಯನ್ನು ಈ ಸಭೆಯವರು ಏರ್ಪಡಿಸಿ ವಸೂಲಾಗುವ ಹಣವನ್ನು ಮೈಸೂರು ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಈ ಕಮಿಟಿಯ ಪ್ರೆಸಿಡೆಂಟರಾದ ಶ್ರೀ ಉದ್ದಾನಸ್ವಾಮಿಗಳವರ ಹೆಸರಿನಲ್ಲಿ ಈ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ಇಡತಕ್ಕದ್ದು. ಮತ್ತು ಈ ಫಂಡಿಗೆ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದ ಆಶೀರ್ವಾದವಾಗಿ ಬರತಕ್ಕ ಹಣವೂ ಸೇರತಕ್ಕದ್ದು. ಮತ್ತು ಈ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಶ್ರೀ ಉದ್ದಾನಸ್ವಾಮಿಗಳು ಈ ಧನರಾಶಿಗಾಗಿ ಅಲ್ಲಲ್ಲಿ ಸಂಚಾರ ಮಾಡಿ ಧನವನ್ನು ಶೇಖರಿಸಿ ಈ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ಕಮಿಟಿಯ ಪ್ರೆಸಿಡೆಂಟರಾದ ಶ್ರೀಯವರ ಹೆಸರಿನಲ್ಲಿ ಮೈಸೂರು ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡತಕ್ಕದ್ದು. ಮತ್ತು ಈ ಫಂಡು ಸದರಿ ಕಮಿಟಿಯವರ ಮತ್ತು ಪ್ರೆಸಿಡೆಂಟರಾದ ಶ್ರೀ ಉದ್ದಾನಸ್ವಾಮಿಗಳವರ ಆಡಳಿತದಲ್ಲಿ ಇರುತ್ತಾ, ಮೈಸೂರು ಲಿಂಗಾಯತ ಎಜ್ಯುಕೇಷನ್ ಫಂಡಿನ ಜನರಲ್ ಸೂಪರ್‌ವಿಷನ್ (ಅಂದರೆ ಸಾಧಾರಣ ಮೇಲ್ ತನಿಖೆಗೆ ಒಳಪಟ್ಟಿರತಕ್ಕದ್ದೆಂದು ಸರ್ವಾನುಮತಿಯಿಂದ ನಿರ್ಧರಿಸಲ್ಪಟ್ಟಿತು.

(೭) ತುಮಕೂರಿನಲ್ಲಿ ಸ್ಥಾಪಿಸಲ್ಪಡುವ ಶ್ರೀ ಜಗದ್ಗುರು ಜಯದೇವ ವಿದ್ಯಾಸದನದ ಫಂಡಿಗಾಗಿ ಧನಸಂಚಯವನ್ನು ಮಾಡುವ ಕಾರ್ಯಕ್ಕಾಗಿ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿ ಉಪನ್ಯಾಸಗಳ ಮೂಲಕ ಜನಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಮಿ|| ಹೆಚ್. ಕೆ. ಮಲ್ಲಪ್ಪನವರನ್ನು ೩ ತಿಂಗಳ ಮಟ್ಟಿಗೆ ಅಪೇಕ್ಷೆ ಮಾಡಿದ ಕಾಲದಲ್ಲಿ ಕಳುಹಿಸಿಕೊಡುವಂತೆ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಸಿ. ಆರ್. ರೆಡ್ಡಿ, ಎಂ. ಎ. ರವರನ್ನು ಕೇಳಿಕೊಳ್ಳುವಂತೆ ನಿರ್ಧರಿಸಲ್ಪಟ್ಟಿತು.

(೮) ೧೯೨೦ ನೆ ಏಪ್ರಿಲ್ ಕೊನೆಯಲ್ಲಿ ನಡೆಯುವ ಪರೀಕ್ಷೆಗಳಲ್ಲಿ ವೀರಶೈವರ ಪೈಕಿ ಒಂದು ಎರಡನೆಯವರಾಗಿ ಉತ್ತೀರ್ಣರಾಗುವವರಿಗೆ ಬಹುಮಾನಗಳನ್ನು ಕೊಡಲು ಸಂಕಲ್ಪಿಸಿ ಅತ್ಯಂತ ಸಂತೋಷದಿಂದ ವಾಗ್ದಾನ ಮಾಡಿರುವ ವಿದ್ಯಾಭಿಮಾನಿಗಳಾದ ವೀರಶೈವ ಮಹನೀಯರುಗಳ ವಾಗ್ದಾನಗಳನ್ನು ಈ ಸಭೆಯವರು ವಂದನಾಪೂರ್ವಕವಾಗಿ ಅಂಗೀಕರಿಸತಕ್ಕದ್ದು.

ಜಿ. ಕೆ. ಗುರಪ್ಪ, ಪ್ರೆಸಿಡೆಂಟ್.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ. 1-0-0.

14

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ಬಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್‍ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

28

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ ಬನವಾಸಿ ಉತ್ತರಕನಡಾ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು.

35

ನಾವು ಎ. ಆಲ್ ಬ್ರಿಕ್ಯಯರ್ ಕ್ಕೆ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸೆಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
14 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುತ್ತೆ. ಮತ್ತು ಈ ತಿಂಗಳೊಳಗಾ ತರಿಸಿಕೊಳ್ಳುವವರಿಗೆ 192) ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ವಾಣಿ ಕಂಪನಿ,
14 ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
27 ವೈದ್ಯಶಾಲಾ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೧೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 33

ಅರ್ಕಶಫಾ ಅಥವಾ ಆರೋಗ್ಯಬಿಂದು



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮ್ಮತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು,

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದರಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಿಡ್ಡು, ಗುದ್ದಪ್ಪನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜುಲೈ ತಾ|| ೪ ರಿಂದ ೧೯೨೦ ನೆಯ ಜುಲೈ ತಾ|| ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಆಷಾಢ ಬಹುಳ ತದಿಗೆಯಿಂದ ಆಷಾಢ ಬಹುಳ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ
4	ಭಾನು	ತದಿ	28-30	ಶ್ರವ	19-21	21
5	ಸೋಮ	ಚೌತಿ	30-49	ಧನಿ	23-29	22
6	ಮಂಗಳ	ಪಂಚ	31-49	ಶತ	26-24	23
7	1 ಬುಧ	ಷಷ್ಠಿ	33-0	ಪೂಭಾ	28-3	24
8	2 ಗು	ಸಪ್ತ	30-0	ಉಭಾ	28-27	25
9	3 ಶುಕ್ರ	ಅಷ್ಟ	27-22	ರೇವ	27-41	26
10	ಶ	ನವ	23-37	ಅಶ್ವಿ	25-54	27

(1) ಯುವರಾಜರವರ ಶುಭಜನನದ ವರ್ಧಂತಿ. (2) ಮೇಲುಕೋಟೆಯಲ್ಲಿ ಕೃಷ್ಣರಾಮುಡಿ ಉತ್ಸವ. (3) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ, ಆಡಿಶುಕ್ರವಾರ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವಪಕ್ಷಕೈತಾವತಾರಾ ಪಕ್ಷಜ್ಞ ಸಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತ್ರಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಜುಲೈ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೨೮

GOVERNMENT OF MYSORE.
ELECTRICAL DEPARTMENT.

48

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking. Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1·75 as.	Rs. 6 per H. P.
Second 50 „ or fraction thereof	1·25 as.	...
Third 50 „ or above 150 B.T.U	·75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
to the Government of Mysore.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 49

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲಿ ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ:	೦—೮—೦
ಶಿವಪೂಜಾವಿಧಿ:	೦—೧೦—೦
ಚಾರುಶೀಲಚರಿತ್ರೆ	೦—೫—೦
ಪಂಚಾಂಗ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ವಮ್ಮ ಸರಿಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್‍ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್‍ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
41 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್‍ಯವು ಗರ್ಭ ಉತ್ಪಾದಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು.

ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ: —ಡಾಕ್ಟರ್ ಎಂ. ಪೀಟರ್,
15 3. ಇರುಳಪ್ಪನಬೀದಿ, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪದ್ಯಾತ್ಮಕ ಶ್ರೀ ಶರಣಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೮—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

34

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜುಲೈ ತಾ|| ೧೧ನೆಯ ಭಾನುವಾರ.

ತುರ್ಕಿಸಂಧಿ.

ಮಿತ್ರಮಂಡಲಿಯವರು ಕೊಟ್ಟ ಸಂಧಿನಿಬಂಧನೆಗಳಿಗೆ ತುರ್ಕಿಪ್ರಭುತ್ವದವರು ಉತ್ತರ ಕೊಟ್ಟುದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಡಬೇಕೆಂದು ಕೇಳಿಕೊಂಡಿರುವರೆಂದು ಕಳೆದ ವಾರದ ತಂತಿವಾರ್ತೆಗಳಿಂದ ತಿಳಿಯಬರುತ್ತದೆ. ತುರ್ಕಿಯವರ ಅಭಿಪ್ರಾಯವೇನೆಂದರೆ—ಅರ್ಮೀನಿಯಾ, ಹೆಡ್ಜಾಜುಗಳಿಗೆ ಸ್ವಾತಂತ್ರ್ಯ ಕೊಡುವುದನ್ನೂ, ಟ್ಯೂನಿಸ್, ಮೊರಾಕೊಗಳ ಮೇಲೆ ಫ್ರೆಂಚರ ಅಧಿಕಾರವನ್ನೂ, ಲಿಬಿಯಾ, ಈಜಿಪ್ಟ್, ಈಜಿಯನ್ ದ್ವೀಪಗಳ ಮೇಲಿರುವ ತಮ್ಮ ಎಲ್ಲ ಬಾಧ್ಯತೆಗಳ ಪರಿತ್ಯಾಗವನ್ನೂ, ಸಿರಿಯಾ, ಮೆಸಪೊಟೇಮಿಯಾ, ಪಾಲಸ್ತೀನುಗಳು ಸ್ವತಂತ್ರವಾಗಿರುವುದನ್ನೂ, ಸೂಯಜು, ಏಡನ್, ಸೂಡಾನ್, ಸೈಪ್ರಸ್ಸುಗಳ ಮೇಲೆ ಆಂಗ್ಲರಿಗೆ ಇರುವ ಹಕ್ಕನ್ನೂ ಸಹ ತುರ್ಕಿಯವರು ಒಪ್ಪಿಕೊಂಡಿರುತ್ತಾರೆ. ಡಾರ್ಡಿನಲ್ಸ್ ಜಲಸಂಧಿಯಲ್ಲಿ ಎಲ್ಲರಿಗೂ ಪ್ರವೇಶದ ಅಧಿಕಾರವಿರುವುದಕ್ಕೂ, ಸದಾ ಅದನ್ನು ತೆರೆದಿಡುವುದಕ್ಕೂ ಒಪ್ಪಿಕೊಳ್ಳುತ್ತಾರೆ. ಆದರೆ ೧೮೮೮ ನೆ ವರ್ಷದಲ್ಲಿ ನಡೆದ ಕಾನ್‌ಸ್ಟಾಂಟಿನೋಪಲ್ ಸಂಧಿನಿಯಮದ ಪ್ರಕಾರ ಏರ್ಪಟ್ಟಿರುವ ಸೂಯೇಜ್ ಕಾಲ್ವೆಯ ಪರಿಪಾಲನ ವಿಷಯದಲ್ಲಿ ತಮಗಿರುವ ಹಕ್ಕನ್ನು ಮಾತ್ರ ಈ ಜಲಸಂಧಿಯ ವಿಷಯದಲ್ಲೂ ಇರುವಂತೆ ಮಾಡಿಕೊಡಬೇಕೆಂದು ಕೋರುತ್ತಾರೆ. ಮತ್ತು ಹೊಸದಾಗಿ ಏರ್ಪಡುವ ತುರ್ಕಿರಾಜ್ಯಕ್ಕೆ ಸ್ವತಂತ್ರವಾಗಿ ಹೋಗಿ ಬರುವ ಜಲಮಾರ್ಗವೊಂದಿರಬೇಕೆಂದು ಕೇಳುತ್ತಾರೆ. ಗ್ರೀಕರಿಗೆ ಥ್ರೇಸನ್ನೂ ಸ್ಮರ್ನಾವನ್ನೂ ಕೊಡುವುದಕ್ಕೂ ಅಂಗೀಕರಿಸದೆ ಆಕ್ಷೇಪಿಸಿರುತ್ತಾರೆ. ಸೇನೆಯನ್ನು ತಗ್ಗಿಸುವುದಕ್ಕೂ, ಧನಪರಿಹಾರದ ವಿಷಯದಲ್ಲಿ ಇತ್ಯರ್ಥಪಡಿಸಲು ಒಂದು ಸಂಘವನ್ನು ನಿಯಮಿಸುವುದಕ್ಕೂ ಒಪ್ಪಿಕೊಂಡಿರುತ್ತಾರೆ. ತುರ್ಕಿಗೆ ಕಾನ್‌ಸ್ಟಾಂಟಿನೋಪಲ್ ಪಟ್ಟಣವೇ ಮುಖ್ಯನಗರವಾಗಿರುವಂತೆ ಮಾಡಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಸ್ಟ್ರೇಯಿಟ್ಸ್ ಕಮಿಷನ್ನಿನಲ್ಲಿ ತಮಗೆ ಪ್ರಾತಿನಿಧ್ಯವಿರಬೇಕೆಂದೂ, ಹೆಡ್ಜಾಜು ಸ್ವತಂತ್ರವಾದರೂ ಅಲ್ಲಿಯ ಮಹಮ್ಮದೀಯ ಕ್ಷೇತ್ರದ ಮೇಲೆ ಕಾಲೀಫರಿಗೆ ಗೌರವಸ್ವಾತಂತ್ರ್ಯಗಳಿರಬೇಕೆಂದೂ ಕೋರುತ್ತಾರೆ. ಡಾರ್ಡಿನಲ್ಸ್ ಪಕ್ಕ ಮೊದಲಾದ ಕಡೆಗಳಲ್ಲಿ ಕೋಟೆಗಳನ್ನು ಕೆಡಹಿದುದನ್ನೂ ಆ ಪ್ರದೇಶಗಳನ್ನು ಮಿತ್ರಮಂಡಲೀ ಸೈನ್ಯಗಳು ಆಕ್ರಮಿಸಿರುವುದನ್ನೂ ಆಕ್ಷೇಪಿಸಿರುತ್ತಾರೆ. ಅರ್ಮೇನಿಯಾ ಸಿರಿಯಾ ಮೆಸಪೊಟೇಮಿಯಾಗಳ ಎಲ್ಲೆಕಟ್ಟನ್ನು ನಿರ್ಧರಿಸುವುದಕ್ಕೆ ಒಂದು ನಾನಾದೇಶೀಯ ಸಂಘವನ್ನೇರ್ಪಡಿಸಬೇಕೆಂದು ಕೇಳಿರುತ್ತಾರೆ.

ಇಷ್ಟೇ ತುರ್ಕಿಯವರು ಕೇಳುವ ಬದಲಾವಣೆಗಳಾಗಿದ್ದರೆ ಇದರಲ್ಲಿ ತುರ್ಕಿಯವರು ಬಲುಮಟ್ಟಿಗೆ ಸೌಜನ್ಯವನ್ನೇ ವ್ಯಕ್ತಪಡಿಸಿರುವರೆಂದು ಹೇಳಬೇಕಾಗುತ್ತದೆ. ಮಿತ್ರಮಂಡಲಿಯವರ ಸಂಧಿನಿಬಂಧನೆಗಳು ದುರ್ಭರಗಳಾಗಿದ್ದರೂ ಜರ್ಮನಿಯಂತೆ ತುರ್ಕಿಯವರು ಪ್ರತಿಭಟನವನ್ನೇನೂ ವ್ಯಕ್ತಪಡಿಸಿಲ್ಲ. ಸಂಧಿನಿಬಂಧನೆಯಂತೆ ನಡೆದರೆ ಪೂರ್ವದಲ್ಲಿದ್ದ ೬೧೧೦೦೦ ಚದರ ಮೈಲಿಗಳ ವಿಸ್ತಾರವಾಗಿದ್ದ ತುರ್ಕಿಸಾಮ್ರಾಜ್ಯವು ಈಗ ೫೦ ಸಾವಿರ ಚದರಮೈಲಿಗಳಷ್ಟು ಮಾತ್ರವೇ ಆಗುವುದು. ತನ್ನ ಸ್ವಸಂರಕ್ಷಣೆಗಾಗಿ ತನ್ನ ಸಾಮ್ರಾಜ್ಯಕ್ಕೆ ಇನ್ನಷ್ಟು ಭೂಮಿಯನ್ನು ಅದು ಕೋರಿಕೊಂಡರೆ ಅದನ್ನು ನಡೆಯಿಸಿ ಕೊಡುವುದೇನೂ ಹೆಚ್ಚಲ್ಲ. ಮರಳಿ ಯುದ್ಧಾರಂಭವಾದರೆ ತುರ್ಕಿಯಿಂದ ಪ್ರತಿಭಟನವಾಗದಿರುವುದಕ್ಕೆ ತಕ್ಕಷ್ಟು ನಿರ್ಬಂಧವಿರಬೇಕೆಂಬುದೇ ಸಂಧಿನಿಯಮದ ಮೂಲೋದ್ದೇಶವಾಗಿದ್ದರೆ ಥ್ರೇಸು ಸ್ಮರ್ನಾಗಳನ್ನು ತುರ್ಕಿಗೇ ಉಳಿಯಿಸಿಕೊಡುವುದೂ, ಕಾನ್‌ಸ್ಟಾಂಟಿನೋಪಲ್ ಸುತ್ತಣ ಜಲಮಾರ್ಗದ ಪರಿಪಾಲನ ಸಂಘದಲ್ಲಿ ತುರ್ಕಿಗೂ ಪ್ರಾತಿನಿಧ್ಯವನ್ನು ಕೊಡುವುದೂ ಕೂಡ ತಪ್ಪೇನೂ ಆಗಲಾರದು. ಪ್ರಸಂಗದ ಸ್ಥಿತಿಗತಿಯನ್ನೂ ತುರ್ಕಿಯವರ ಸೌಜನ್ಯವನ್ನೂ ಪರಿಗಣಿಸಿ ಅವರ ಇಷ್ಟಪೂರಣಕ್ಕೆ ತಕ್ಕಮಟ್ಟಿಗಾದರೂ ಮಿತ್ರಮಂಡಲಿಯವರು ಅವಕಾಶವನ್ನು ಕೊಡುವುದು ವಿಹಿತವು.

ಒಂದು ಕೋಟಿ ಸಾಲ.

ಮೈಸೂರು ಗೌರ್ನಮೆಂಟಿನವರು ಮೈಸೂರು ದೇಶೀಯರಿಂದ ೧ ಕೋಟಿ ರೂ. ಗಳ ಸಾಲವನ್ನು ಕೇಳಿರುವರು. ಈ ಸಂಬಂಧವಾದ ಪತ್ರಗಳನ್ನು ಅವರು ಈ ಜುಲೈ ತಾ|| ೧ ರಿಂದ ಸೆಪ್ಟಂಬರ್ ತಾ|| ೩೦ ರ ವರೆಗೆ ಮಾರುವರು. ೧೦೦ ರೂ.ನ ಪತ್ರವನ್ನು ೯೯ ರೂ. ಗಳಿಗೇ ಮಾರುವರು. ಅದಕ್ಕೆ ನೂರು ರೂಪಾಯಿಯಿಂದೇ ಲೆಕ್ಕ. ಬಡ್ಡಿಯನ್ನು ಸೇಕಡ ವರ್ಷಕ್ಕೆ 6¼ ರೂ. ನಂತೆ ೬ ತಿಂಗಳಿಗೊಂದು ಸಲದಂತೆ ಕೊಡುವರು. ಆಸಲು ೨೦ ವರ್ಷಗಳಲ್ಲಿ ಎಂದರೆ ೧೯೪೦ ನೆ ವರ್ಷದ ಅಕ್ಟೋಬರ್ ತಾ|| ೧ ರಲ್ಲಿ ಹಿಂದಕ್ಕೆ ಕೊಡಲ್ಪಡುವುದು. ಪತ್ರಗಳು ೨೫-೫೦-೧೦೦-೫೦೦-೧೦೦೦-೫೦೦೦ ರೂ.ಗಳ ಮೊತ್ತದಲ್ಲಿ ಅವರಿಗೆ ಬೇಕಾದಷ್ಟು ಮಾರಲ್ಪಡುವುವು. ಹೀಗೆ ಸಾಲವಾಗಿ ಕೊಡಲ್ಪಡುವ ಹಣದಮೇಲೆ ವರಮಾನದ ತೆರುಗೆಯಿಲ್ಲ. ಸಾಲ ಕೊಡಲು ಅಪೇಕ್ಷಿಸುವವರು ಅದಕ್ಕಾಗಿ ಏರ್ಪಟ್ಟಿರುವ ದರಖಾಸ್ತು ಫಾರಮ್ಮುಗಳಲ್ಲಿ ಬರೆದು, ಹಣವನ್ನು ನಗದಾಗಿ, ಅಥವಾ ಮೈಸೂರು ಬ್ಯಾಂಕು, ಬೆಂಗಳೂರಿನಲ್ಲಿರುವ ಮದ್ರಾಸು ಬ್ಯಾಂಕು, ಇಲ್ಲವೆ ಸರ್ಕಾರಿ ಬ್ಯಾಂಕುಗಳ ಮ್ಯಾನೇಜರ ಹೆಸರಿಗೆ ಬರೆದ ಚೆಕ್ಕುಗಳ ಮೂಲಕ ಸಲ್ಲಿಸಿ, ರಸೀದಿಯನ್ನು ಪಡೆಯಬಹುದು. ಹಣ ತಲ್ಪಿದಂದಿನಿಂದ ಬರುವ ಸೆಪ್ಟಂಬರ್ ತಾ|| ೩೦ ರ ವರೆಗಣ ಬಡ್ಡಿಯ ಸಮೇತ ಬಾಂಡುಗಳನ್ನು ಅವರಿವರಿಗೆ ಕೊಡುವರು. ಆ ಬಳಿಕ ೬ ತಿಂಗಳಿಗೊಂದುಸಲ ಮೇಲೆಕಂಡ ದರದಂತೆ ಬಡ್ಡಿಯನ್ನು ಕೊಡುತ್ತಿರುವರು. ಹೀಗೆ ಸಾಲವಾಗಿ ಕೊಡಲ್ಪಟ್ಟ ಹಣಕ್ಕೆ ಮೈಸೂರು ಸರ್ಕಾರದ ಆಸ್ತಿಯೂ ಹುಟ್ಟುವಳಿಯೂ ಹೊಣೆಯಾಗಿರುವುವು. ಇಂಡಿಯಾ ಸರ್ಕಾರದವರು ಕೂಡ ಈಗ ಸಾಲವನ್ನು ತೆಗೆಯುತ್ತಿದ್ದಾರೆ. ಆದರೆ ಅವರು ಸೇಕಡಾ ೬ ರೂ.ನಂತೆ ಬಡ್ಡಿಯನ್ನು ಕೊಡುತ್ತಾರೆ. ನಮ್ಮ ಸರ್ಕಾರದವರು 6¼ ಬಡ್ಡಿಯನ್ನು ಕೊಡಲು ಒಪ್ಪಿರುತ್ತಾರೆ. ಇಷ್ಟು ಹೆಚ್ಚು ಬಡ್ಡಿಯು ಸರ್ಕಾರದಿಂದ ಯಾವಾಗಲೂ ಕೊಡಲ್ಪಟ್ಟದಿಲ್ಲ. ಅದುಕಾರಣ ಸೇವಿಂಗ್ಸ್ ಬ್ಯಾಂಕು ಮೊದಲಾದವುಗಳಲ್ಲಿ ಹಣ ಹಾಕಿರುವವರೂ ತಮ್ಮ ಜೀವನಕ್ಕಾಗಿ ಹಣವನ್ನು ಕೂಡಿಹಾಕಿಕೊಂಡು ಬಡ್ಡಿಯಿಲ್ಲದಕಡೆ ಹಣವನ್ನು ಬಡ್ಡಿಗೆಕೊಟ್ಟು ಪೇಚಾಡುತ್ತಿರುವವರೂ, ಸರ್ಕಾರಕ್ಕೆ ಈಗ ೨೫ ರೂ. ಕೊಡಲುಗೊಂಡು ಎಷ್ಟು ಬೇಕಿದ್ದರೂ ಹಣವನ್ನು ಕೊಟ್ಟು ಬಡ್ಡಿಯನ್ನು ೬ ತಿಂಗಳಿಗೊಂದುಸಲದಂತೆ ಪಡೆದುಕೊಳ್ಳುತ್ತಿರಬಹುದು. ಹಣಕ್ಕೆ ಅಪಾಯವಿಲ್ಲ. ಬಾಂಡುಗಳನ್ನು ಅವಶ್ಯಕ ಬಿದ್ದಾಗ ಯಾರ ಹೆಸರಿಗಾದರೂ ವರ್ಗಾಯಿಸಬಹುದು. ಹೀಗೆ ಸಾಲ ಮಾಡಿದ ಹಣವನ್ನು ನಮ್ಮ ಸರ್ಕಾರದವರು ಶಾಶ್ವತವಾಗಿ ಸಂಸ್ಥಾನಕ್ಕೆ ಲಾಭವನ್ನು ಕೊಡುವ ಕಾಮಗಾರಿಗಳಿಗಾಗಿ ವ್ಯಯಮಾಡುವವರಾಗಿದ್ದಾರೆ. ಅದುಕಾರಣ ಶ್ರೀಮಂತರಾದಿಯಾಗಿ ಕೇವಲ ಬಡವರಿಗೂ ಸಹ ಉದಾರವಾದ ಬಡ್ಡಿಯನ್ನು ಪಡೆಯಲನುಕೂಲವಾಗುವಂತೆ ಏರ್ಪಡಿಸಿರುವ ಈ ಸಮಯವನ್ನು ನಮ್ಮ ದೇಶದ ಪ್ರಜೆಗಳು ಉಪಯೋಗಿಸಿಕೊಂಡು ತಾವೂ ಫಲವನ್ನು ಪಡೆದು, ಸರ್ಕಾರಕ್ಕೂ ಸಹಾಯವನ್ನು ಒದಗಿಸಿಕೊಟ್ಟವರಾಗಬಹುದು.

ಹೊಸ ತೆರುಗೆ.

ರಾಜಧಾನಿಯ ಮ್ಯುನಿಸಿಪಾಲಿಟಿಯವರು ಪುರನಿವಾಸಿಗಳ ಮೇಲೆ ಉದ್ಯೋಗದ ಮೇಲಣ ತೆರುಗೆಯನ್ನು ವಿಧಿಸಲು ಸಂಕಲ್ಪಿಸಿ, ೧ ತಿಂಗಳ ಗಡುವಿನಲ್ಲಿ ಯಾರಾದರೂ ಆಕ್ಷೇಪಣೆಯನ್ನು ತಿಳಿಯಿಸುವವರಿದ್ದರೆ ಮ್ಯು|| ಪ್ರಸಿಡೆಂಟರಿಗೆ ಬರೆದುಕೊಳ್ಳಬಹುದೆಂದು ವಿಧಿಸಿ, ವಿವರಣದ ಪ್ರಸಿದ್ಧಿಪತ್ರಿಕೆಯನ್ನು ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಇಂಥ ವಿಷಯವನ್ನು ದೇಶಭಾಷೆಯಲ್ಲಿ ಸ್ಥಲೀಯ ವೃತ್ತಪತ್ರಿಕೆಗಳಲ್ಲೂ ಅವಶ್ಯಕವಾಗಿ ಪ್ರಕಟಿಸಬೇಕಾಗಿದ್ದಿತು. ಈಗಲಾದರೂ ಹಾಗೆ ಮಾಡುವರೆಂದು ನಂಬುತ್ತೇವೆ.

ರಾಜಧಾನಿಯು ಹೆಸರಿಗೆ ದೊಡ್ಡದಾಗಿದ್ದರೂ ಇದರ ಆರ್ಥಿಕ ಸಂಪತ್ತು ದೊಡ್ಡದಾಗಿಲ್ಲ. ಇದು ಬೆಂಗಳೂರಿನಂಥ ದೊಡ್ಡ ವ್ಯಾಪಾರಸ್ಥಲವಲ್ಲ. ಇಲ್ಲಿಯ ನಿವಾಸಿಗಳಲ್ಲಿ ಬಡವರೇ ಹೆಚ್ಚು. ಈಗ ಬಿದ್ದಿರುವ ಮನೆಗಂದಾಯ ಮೊದಲಾದುವುಗಳನ್ನು ಕೊಡುವುದಕ್ಕೇ ಅನೇಕರಿಗೆ ಶಕ್ತಿಯಿಲ್ಲದ ಕಾರಣ ಆಗಾಗ್ಗೆ ತೆರುಗೆಯು ರಿಮಿಷನ್ ಮಾಡಲ್ಪಡುತ್ತಿರುವುದುಂಟು. ಹೀಗಿದ್ದರೂ ಪಟ್ಟಣವು ಎಲ್ಲಕಡೆಯೂ ವಿಸ್ತರಿಸಲ್ಪಡುತ್ತಲಿರುವುದರಿಂದ ಮಾರ್ಗಗಳ ಸಂಖ್ಯೆಯು ಹೆಚ್ಚಿ ಅದನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು, ಹೊಸ ಬಡಾವಣೆಗಳಿಗೆ ನೀರು ದೀಪ ಮೊದಲಾದುವುಗಳ ಸೌಕರ್ಯವನ್ನೊದಗಿಸುವುದು, ಶುಚೀಕರಣ, ಇವುಗಳಿಗೆಲ್ಲಾ ಹೆಚ್ಚು ಹೆಚ್ಚಾಗಿ ವೆಚ್ಚಮಾಡಬೇಕಾಗಿರುತ್ತದೆ. ಅದಕ್ಕಾಗಿ ಮ್ಯುನಿಸಿಪಾಲಿಟಿಯ ವರಮಾನವು ಹೆಚ್ಚಿಯೇ ತೀರಬೇಕಾಗಿದೆ. ಈ ಕಾರಣದಿಂದ ಈಗಣ ಪುರಾಭಿವೃದ್ಧಿಕಾರ್ಯವು ಈ ಊರಿಗೆ ಹೊಲಾರದ ಕಿರೀಟವನ್ನು ಸಣ್ಣ ತಲೆಗೆ ಸಿಕ್ಕಿಸಿದಂತಾಗಿದೆ. ಊರಿನಲ್ಲಿ ಸಾಂದ್ರವಾಗಿದ್ದ ಹಲವು ಮನೆಗಳನ್ನು ಒಡೆದು ಹಾಕಿ ಹೊರಗೆ ದೂರದೂರಲ್ಲಿ ಹೊಸಮನೆಗಳಿಗೆ ನಿವೇಶನಗಳನ್ನು ಕೊಟ್ಟಿರುವುದರಿಂದ ಬಹುಜನರು ಹೊಸಕಟ್ಟಡಗಳನ್ನು ಕಟ್ಟಲಿಕ್ಕೆ ಆರಂಭಿಸಿರುವುದರಿಂದ ಸಾಮಗ್ರಿಗಳ ಮತ್ತು ಕೂಲಿಯ ಬೆಲೆಗಳು ಹೆಚ್ಚಿ ಸಾಲಸೋಲಗಳನ್ನು ಮಾಡಿ ಕಟ್ಟಿದವರು ಬಡ್ಡಿ ಬೆಳೆದು ಮನೆಗಳನ್ನೇ ಕಳೆದುಕೊಂಡೂ ಕಳೆದುಕೊಳ್ಳುತ್ತಲೂ ಇದ್ದಾರೆ. ಬರುಬರುತ್ತ ರಾಜಧಾನಿಯ ವಾಸವು ಬಡಬಗ್ಗರಿಗೆ ಅಸಾಧ್ಯವಾಗುತ್ತಿದೆ. ಹೊಸ ತೆರುಗೆಯನ್ನು ವಿಧಿಸದಿದ್ದರೆ ಮ್ಯುನಿಸಿಪಾಲಿಟಿಯ ಕಾರ್ಯನಿರ್ವಾಹವಾಗುವ ಹಾಗಿಲ್ಲ; ಕೊಡಲುಪ್ರಜೆಗಳಿಗೆ ಯತ್ನವಿಲ್ಲ. ಈ ಸ್ಥಿತಿಯಿರುವಾಗ ಮ್ಯು|| ಕೌನ್ಸಿಲರುಗಳು ಸಿಬ್ಬಂದಿಯ ವೆಚ್ಚವನ್ನು ಕಡಿಮೆ ಮಾಡಲು ಏತಕ್ಕೆ ಯೋಚಿಸುವುದಿಲ್ಲವೋ ತಿಳಿಯಲಿಲ್ಲ. ಹೆಲ್ತ್ ಆಫೀಸರ ಸಂಬಳವು ೪೦೦ ಕ್ಕೆ ಹೆಚ್ಚಿಸಲ್ಪಟ್ಟಿದೆ. ಪ್ರಸಿಡೆಂಟರ ಸಹಾಯಕ್ಕೆ ವೈಸ್ ಪ್ರೆಸಿಡೆಂಟರೊಬ್ಬರೂ ಚೀಫ್ ಆಫೀಸರೊಬ್ಬರೂ ನಿಯಮಿತರಾಗಿದ್ದಾರೆ. ಆದರೂ ಕೆಲಸಗಳು ತ್ವರಿತವಾಗಿ ನಡೆಯುವುದಿಲ್ಲವೆಂಬ ದೂರು ತಪ್ಪಿಲ್ಲ. ಮ್ಯುನಿಸಿಪಾಲಿಟಿಯಲ್ಲಿ ಗೌರವಾರ್ಥವಾಗಿ ಕೆಲಸ ಮಾಡತಕ್ಕವರ ಕೆಲಸವು ಕಡಿಮೆಯಾಗಿ ಸಂಬಳಗಾರರ ಆಧಿಪತ್ಯವೇ ಹೆಚ್ಚಾಗಿದೆ. ಇದು ತಪ್ಪಿದ ಹೊರತು ಸಿಬ್ಬಂದಿಯ ಹೆಚ್ಚುಗೆಯು ಕಡಿಮೆಯಾಗುವುದಿಲ್ಲ. ಈಗಣ ಹೆಚ್ಚು ತೆರುಗೆಯನ್ನು ವಿಧಿಸುವ ವಿಷಯದಲ್ಲಿ ಪುರನಿವಾಸಿಗಳು ಸಭೆಗೂಡಿ ಈ ಕ್ಷಾಮದ ಕಾಲವು ತಪ್ಪುವವರೆಗಾದರೂ ಇದನ್ನು ವಿಧಿಸದೆ ನಿಲ್ಲಿಸುವಂತೆಯೂ, ಉತ್ತರತ್ರವಾದರೂ ೧೦೦ ರೂ. ಗೆ ಮೇಲ್ಪಟ್ಟು ಮಾಸಿಕಾದಾಯವುಳ್ಳವರ ಮೇಲೆ ಮಾತ್ರ ಈ ಉದ್ಯೋಗದ ತೆರುಗೆಯನ್ನು ವಿಧಿಸುವಂತೆಯೂ ಮಾಡಬೇಕೆಂದು ಕೇಳಿಕೊಳ್ಳುವುದು ಅವಶ್ಯಕ.

ಸರ್ಕಾರದವರು ಹೊಸದಾಗಿ ಏರ್ಪಡಿಸಿರುವ ವರಮಾನದ ತೆರುಗೆಯು ವರ್ಷಕ್ಕೆ ೨೪೦೦ ರೂ. ಗೆ ಮೀರಿದ ಆದಾಯವುಳ್ಳವರಿಗೆ ಬೀಳುತ್ತದೆ. ಅದಕ್ಕೆ ಕಡಮೆಯಾದ ಆದಾಯವುಳ್ಳವರಿಗೆ ಮಾತ್ರ ಈ ತೆರುಗೆಯು ಅನ್ವಯಿಸುತ್ತದೆ. ಕಂಪೆನಿಗಳು, ಕಂಟ್ರಾಕ್ಟರುಗಳು, ವ್ಯಾಪಾರಿಗಳು, ಹರಾಜುಗಾರರು, ಕಮಿಷನ್ ಏಜಂಟರು, ಬ್ಯಾಂಕರುಗಳು, ಲೇವಾದೇವಿಗಾರರು, ವರ್ತಮಾನ ಪತ್ರಿಕಾ ಸಂಪಾದಕರು ಮತ್ತು ಕರ್ತರು, ಬ್ಯಾರಿಸ್ಟರು ಅಡ್ವೋಕೇಟರು, ಹೈಕೋರ್ಟು ವಕೀಲರು, ಸಾಲಿಸಿಟರುಗಳು, ಪ್ಲೀಡರುಗಳು, ಲಾ ಏಜಂಟರು, ಎಲ್ಲ ತರದ ವೈದ್ಯರು, ಕಾರ್ಖಾನೆಗಳವರು, ಸಿವಿಲ್ ಇಂಜನಿಯರು, ಹೋಟಲಿನವರು, ಮನೆಕಟ್ಟುವ ಉದ್ಯೋಗದವರು, ಸರ್ವೆಯರು, ಮುದ್ರಾಯಂತ್ರಾಲಯದವರು, ಯಂತ್ರಶಾಲಾಧ್ಯಕ್ಷರು, ಎಲ್ಲ ತರದ ಕೈಗಾರಿಕೆಯ ಶಾಲಾಧ್ಯಕ್ಷರು, ಚಿತ್ರಗಾರರು, ಫೋಟೋಗ್ರಾಫರು, ಸರ್ಕಸ್ ಕಂಪೆನಿಯವರು, ನಾಟಕ ಸಂಘದವರು, ಸಂಗೀತಗಾರರು, ನರ್ತಕಿಯರು, ಪ್ರಾಣಿಗಳನ್ನು ಮಾರುವವರು, ಬಾಡಿಗೆ ಬಂಡಿಗಳನ್ನಿಟ್ಟಿರುವವರು, ಪೆನ್ಷನ್‌ದಾರರು ಇತ್ಯಾದಿ ಉದ್ಯೋಗಿಗಳೆಲ್ಲಾ ಈ ತೆರುಗೆಯನ್ನು ಕೊಡಲು ಬದ್ಧರಾಗುವರು.

ತೆರುಗೆಯ ಪರಿಮಿತಿ ಹೇಗೆಂದರೆ:—ತಿಂಗಳಿಗೆ ೨೦೦೦ ರೂ. ಅಥವಾ ಅದಕ್ಕೆ ಮೇಲ್ಪಟ್ಟು ವರಮಾನವಿದ್ದರೆ ವರ್ಷಕ್ಕೆ ೧೦೦ ರೂ. ತೆರುಗೆ.

೧ ತಿಂಗಳಿಗೆ.	ವರಮಾನ.		ವರ್ಷದ ತೆರುಗೆ.
,,	೧೫೦೦	ಕ್ಕೆ ಕಡಿಮೆಯಿಲ್ಲದಿದ್ದರೆ	೭೫
,,	೧೦೦೦	,,	೫೦
,,	೫೦೦	,,	೨೫
,,	೩೦೦	,,	೧೨
,,	೨೦೦	,,	೮
,,	೧೦೦	,,	೪
,,	೫೦	,,	೨
,,	೩೦	,,	೧

ತಿಂಗಳಿಗೆ ೩೦ ಕ್ಕೆ ಕಡಿಮೆಯಾದ ವರಮಾನವುಳ್ಳವರಿಗೆ ಈ ತೆರುಗೆಯಿಲ್ಲ.

ಒಳದೇಶದ ವೃತ್ತಾಂತಗಳು.

ಹಿಂದಲ ಹಳ್ಳಿಯ ನಿವಾಸಿಗಳು ಪ್ರಾರ್ಥಿಸಿಕೊಂಡ ಮೇರೆಗೆ ಅದಕ್ಕೆ ಕಾಂತರಾಜಪುರವೆಂಬ ಹೆಸರು ಇಡಲ್ಪಟ್ಟಿರುವುದು.

ಮಿ|| ವೇಣುಗೋಪಾಲಯ್ಯನವರೂ ಮಿ|| ಕೆ. ರೇವಣ್ಣನವರೂ ಸಹ ಅ|| ಕನ್ಸರ್ವೇಟರ್ ಸ್ಥಾನದಲ್ಲಿ ಸ್ಥಿರಗೊಳಿಸಲ್ಪಟ್ಟಿದ್ದಾರೆ.

ಅರಮನೆಯಲ್ಲಿ ಶ್ರೀ|| ಜಯಚಾಮರಾಜಒಡೆಯರವರ ವರ್ಷವರ್ಧಂತ್ಯುತ್ಸವವು ಕಳೆದ ಬುಧವಾರದಿಂದ ೩ ದಿನ ವಿಜೃಂಭಣೆಯಿಂದ ನಡೆಯಿತು.

ನರಸಿಂಹರಾಜಪುರದಲ್ಲಿ ಮುನ್ಸೀಫರಾಗಿದ್ದ ಮ|| ಎಸ್. ರಾಮಚಂದ್ರಶಾಸ್ತ್ರಿಗಳು ದಾವಣಗೆರೆಯ ಹೊಸ ಕೋರ್ಟಿಗೆ ಮುನ್ಸೀಫರಾಗಿ ನಿಯಮಿಸಲ್ಪಟ್ಟಿದ್ದಾರೆ

ನಂಜನಗೂಡಿನಲ್ಲಿ ಗಿರಿಜಾಕಲ್ಯಾಣ ಮಹೋತ್ಸವವು ಕಳೆದ ಸೋಮವಾರದಿಂದ ೪ ದಿನ ನಡೆಯಿತು. ಸುತ್ತುಮುತ್ತಣ ನಾಲ್ಕಾರು ಸಹಸ್ರ ಜನರು ದರ್ಶನಾರ್ಥವಾಗಿ ನೆರೆದಿದ್ದರು.

ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದ ಶ್ರೀನಿವಾಸಮೂರ್ತಿ ಎಂಬ ಗುಮಾಸ್ತನಿಗೆ ಸೆಷನ್ಸ್ ಕಮಿಟಾಗಿ ೧½ ವರ್ಷ ಕಾರಾಗೃಹವಾಸ ಶಿಕ್ಷೆಯೂ, ೩೦ ರೂ. ಅರ್ಥದಂಡವೂ ವಿಧಿಸಲ್ಪಟ್ಟಿತು.

ಬೆಂಗಳೂರು ಮತ್ತು ಮೈಸೂರು ಪಟ್ಟಣಗಳ ಮನೆ ಕೈಗಾರಿಕೆಗಳಲ್ಲಿ ನಿರ್ಮಿತಗಳಾದ ವಸ್ತುಗಳನ್ನು ಪ್ರತ್ಯೇಕವಾಗಿಡಿಸಿ ಮಾರಿಸಲಿಕ್ಕಾಗಿ ನಮ್ಮ ಸರ್ಕಾರದವರು ೨೫,೦೦೦ ರೂಪಾಯಿಗಳನ್ನೂ, ಸಿಬ್ಬಂದಿಯ ವೆಚ್ಚಕ್ಕೆ ೨೮೪೮ ರೂ. ಗಳನ್ನೂ ವೆಚ್ಚಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಮೈಸೂರು ಕೃಷ್ಣರಾಜೇಂದ್ರ ವೈದ್ಯಾಲಯಕ್ಕೆ ಮಿ|| ಬಿ. ಮಹಮ್ಮದ್‌ಉಸ್ಮಾನ್‌ಖಾನ್‌ರವರು ಮೆಡಿಕಲ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ. ಅವರು ಯೂರೋಪಿನಿಂದ ಹಿಂದಿರುಗಿ ಬರುವವರೆಗೆ ಆ ಕೆಲಸವನ್ನು ಈಗ ಅದೇ ವೈದ್ಯಾಲಯದ ಇನ್‌ಚಾರ್ಜಿನಲ್ಲಿರುವ ನೇತ್ರವೈದ್ಯರಾದ ಮಿ|| ಬಿ. ಕೆ. ನಾರಾಯಣರಾಯರವರು ತಮ್ಮ ಕೆಲಸದ ಜತೆಗೆ ವೈದ್ಯಾಲಯದ ಮೆಡಿಕಲ್ ಆಫೀಸರಾಗಿಯೂ ಮಿ|| ಟಿ. ಬಾಲಕೃಷ್ಣಮೊದಲಿಯಾರರು ಅದೇ ವೈದ್ಯಾಲಯದ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ ಇರತಕ್ಕದೆಂದು ಅಪ್ಪಣೆಯಾಗಿದೆ.

ಬೆಂಗಳೂರಿನ ಧಾನ್ಯದ ವರ್ತಕ ಸಂಘದವರು ಕಳೆದ ತಾ|| ೫ ರಲ್ಲಿ ಸಭೆ ಮಾಡಿದ್ದರು. ಕೌನ್ಸಿಲರ್ ಮಿ|| ಹಂಜಾಹುಸೇನ್, ಇನ್‌ಕಂಟ್ಯಾಕ್ಸ್ ಕಮಿಷನರಾದ ಮಿ|| ಕೆ. ಮೆಥಾನ್, [illegible] ವಿದ್ಯಾಶಾಖೆಗಳ ಸೆಕ್ರೆಟರಿಯಾದ ಮಿ|| ಡಿಸೋಜಾ, ವಾಣಿಜ್ಯಶಾಖೆಯ ಡೆ|| ಡೈರೆಕ್ಟರಾದ ಮಿ|| ಕೆ. ಎಚ್. ರಾಮಯ್ಯ ಇವರುಗಳನ್ನೆಲ್ಲಾ ಬರಮಾಡಿಕೊಂಡು ಅಲ್ಪಾಹಾರಾದಿಗಳಿಂದ ಸತ್ಕರಿಸಿದರು. ಮತ್ತು ಉಪಸಂಘದವರಿಂದ ರಚಿತವಾಗಿದ್ದ ಸಂಘದ ನಿಬಂಧನೆಗಳನ್ನು ಅಂಗೀಕರಿಸಿ ತಮ್ಮ ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂದು ನಿರ್ಧರಿಸಿದರು.

ಈ ಕೆಳಗೆ ಕಂಡಂತೆ ಅಮಲ್ದಾರುಗಳ ವರ್ಗಾವರ್ಗಿಯಾಗಿದೆ. ಸಬ್ ಪ್ರೋ|| ಅಮಲ್ದಾರರಾದ ಮಿ|| ಕೆ. ಸೂರಪ್ಪನವರು ಶ್ರೀರಂಗಪಟ್ಟಣದಿಂದ ಮೊಳಕಾಲ್ಮೂರಿಗೆ ಜ|| ಎಸ್. ಸುಬ್ಬರಾಯರವರು ಕೃಷ್ಣರಾಜಸಾಗರದ ಆಕ್ಟಿಂಗ್ ಡೆ|| ಅಮಲ್ದಾರಿಯಿಂದ ಶ್ರೀರಂಗಪಟ್ಟಣಕ್ಕೆ. ೪ ನೆ ತರಗತಿ ಆಕ್ಟಿಂಗ್ ಅಮಲ್ದಾರರಾಗಿ ಬೆಂಗಳೂರು ಡಿ|| ಕಮಿಷನರಾಫೀಸಿನ ಆಕ್ಟಿಂಗ್ ಹೆಡ್‌ಕ್ಲಾರ್ಕಾದ ಮಿ|| ಕೆ. ವೇದಾಂತಯ್ಯಂಗಾರರು ಕೃಷ್ಣರಾಜಸಾಗರದ ಸ್ಪೆಷಲ್ ಡೆಪ್ಯುಟಿ ಅಮಲ್ದಾರಿಗೆ. ಬೆಂಗಳೂರು ತಾಲ್ಲೂಕು ಶಿರಸ್ತೇದಾರರಾದ ಮಿ|| ಕೆ. ಸುಬ್ಬರಾವ್‌ನಾಯಕರವರು ಬೆಂಗಳೂರು ತಾಲ್ಲೂಕು ಡೆ|| ಅಮಲ್ದಾರಿಗೆ.

ಕನ್ನಂಬಾಡಿ ಅಣೆಕಟ್ಟಿನ ವಿಷಯವಾಗಿ ಇಂಡಿಯಾ ಸರ್ಕಾರದವರು ಏರ್ಪಡಿಸಿದ್ದ ಪಂಚಾಯಿತಿದಾರರು ಮಾಡಿದ್ದ ತೀರ್ಮಾನದ ಮೇಲೆ ಮದರಾಸು ಸರ್ಕಾರದವರು ಸ್ಟೇಟ್ ಸೆಕ್ರೆಟರಿಯವರಲ್ಲಿ ಅಪೀಲು ಮಾಡಿಕೊಂಡುದರಮೇಲೆ ಸ್ಟೇಟ್ ಸೆಕ್ರೆಟರಿಯವರು ಕೊಟ್ಟಿರುವ ಅಪ್ಪಣೆ ಮೇರೆಗೆ ನೀಲಗಿರಿಯಲ್ಲಿ ಮದ್ರಾಸು ಮೈಸೂರು ಪ್ರಭುತ್ವಗಳ ಪಕ್ಷದ ಇಂಜನಿಯರುಗಳು ವಾದೋಪವಾದಗಳನ್ನು ನಡೆಯಿಸಿದರು. ಕಟ್ಟೆಯೊಳಗೆ ಬೇಸಗೆ ಕಾಲದಲ್ಲಿ ಎಷ್ಟು ನೀರು ಹರಿಯುತ್ತಿರಬೇಕು ಅಣೆಕಟ್ಟು ಯಾರ ಮೇಲ್ವಿಚಾರಣೆಗೆ ಒಳಪಟ್ಟಿರಬೇಕು ಎಂಬ ಮುಖ್ಯ ವಿಷಯದಲ್ಲೇ ಈಗ ಭೇದಾಭಿಪ್ರಾಯಗಳು ಬಂದು ಚರ್ಚಿತವಾದುವು.

ಕಳೆದ ೪ ನೆ ತಾರೀಖಿನಲ್ಲಿ ಬ್ರಿಟಿಷ್ ರೆಸಿಡೆಂಟರಾದ ಅ|| ಎ. ಪಿ. ಬಾರ್ಟನ್‌ರವರು ಬೆಂಗಳೂರಿನಲ್ಲಿ ಒಂದು ಸಭೆ ಮಾಡಿ, ಯುದ್ಧದಲ್ಲಿ ಜಯಶಾಲಿಗಳಾಗಿ ಬಂದವರಿಗೆ ಸನ್ಮಾನಿಸುವುದಕ್ಕಾಗಿ ಅವರವರಿಗೆ ದೊರೆದಿರುವ ಪದಕಗಳನ್ನು ಕೊಟ್ಟರು. ಅನೇಕ ಮಂದಿ ದೇಶೀಯ ವಿದೇಶೀಯ ಸೇನಾಧಿಕಾರಿಗಳೂ, ನಮ್ಮ ದಿವಾನರೂ, ಮಿ|| ಆರ್ ಎಚ್. ಕೇಂಬಲ್‌ರವರೂ, ಸರ್ದಾರ್ ಬಹದ್ದೂರ್ ಚಾಮರಾಜ ಅರಸರೂ ಹೋಗಿದ್ದರು. ಬಹುಮಾನ ಪಡೆದುಕೊಂಡವರಲ್ಲಿ ಲೆ|| ಕ|| ಚಾಮರಾಜ ಅರಸರಿಗೆ ಇಂಡಿಯನ್ ಡಿಸ್ಟಿಂಗ್ವಿಷ್ಟ್ ಸರ್ವಿಸ್ ಪದಕವೂ, ಒಂದು ಕತ್ತಿಯೂ, ಮ|| ರಿಸಾಲ್ದಾರ್ ಬಿ. ಪಿ. ಕೃಷ್ಣೇ ಅರಸಿನವರಿಗೂ ಅದೇ ಬಹುಮಾನವೂ ಕೊಡಲ್ಪಟ್ಟುವು.

ಇದುವರೆಗೂ ಸರ್ಕಾರದವರು ವಿಧವಾವಿವಾಹ ಪದ್ಧತಿಯಿಲ್ಲದ ಜನವರ್ಗದ ವಿತಂತುಗಳಿಗೆ ಮಾತ್ರ ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದರು. ಇನ್ನು ಮುಂದೆ ಎಲ್ಲ ಜನವರ್ಗದ ವಿತಂತುಗಳಿಗೂ ವೇತನಗಳು ಈ ಕೆಳಗೆ ವಿವರಿಸುವಂತೆ ಕೊಡಲ್ಪಡತಕ್ಕದೆಂದು ವಿದ್ಯಾಶಾಖಾಧ್ಯಕ್ಷರು ಅಪ್ಪಣೆ ಮಾಡಿದ್ದಾರೆ. ಹೇಗೆಂದರೆ—ದೇಶಭಾಷೆಯ ಮಿಡಲ್ ಸ್ಕೂಲ್ ತರಗತಿಯವರೆಗಣ ವಿದ್ಯಾರ್ಥಿನಿಯರಿಗೆ ತಿಂಗಳೊಂದಕ್ಕೆ ತರಗತಿವಾರು ೩ ರಿಂದ ೫ ರೂ. ವರೆಗೆ. ಅಪ್ಪರ್‌ಸೆಕೆಂಡರಿ ತರಗತಿಯವರಿಗೆ ೬ ರೂ. ಆಂಗ್ಲೋ ವರ್ನಾಕ್ಯುಲರ್ ೪-೫ ನೇ ತರಗತಿಗಳ ಮತ್ತು ಲೋ|| ಸೆ|| ಟ್ರೈನಿಂಗ್ ತರಗತಿಯ ವಿದ್ಯಾರ್ಥಿನಿಯರಿಗೆ ೭ ರೂ. ಅಪ್ಪರ್‌ಸೆಕೆಂಡರಿ ಟ್ರೈನಿಂಗ್ ತರಗತಿಯ ಮತ್ತು ಹೈಸ್ಕೂಲು ೪-೫-೬ ನೆ ಫಾರಮ್ಮುಗಳ ವಿದ್ಯಾರ್ಥಿನಿಯರಿಗೆ ೮ ರೂ.

ನಮ್ಮ ಸಂಸ್ಥಾನದ ವ್ಯಾಪಾರಶಾಖಾ ಡೆಪ್ಯುಟಿ ಡೈರೆಕ್ಟರಾದ ಮ|| ಕೆ. ಎಚ್. ರಾಮಯ್ಯನವರು ಬೊಂಬಾಯಿ ಮದ್ರಾಸು ಪಟ್ಟಣಗಳಲ್ಲಿರುವಂತೆ ಧಾನ್ಯ ವರ್ತಕರುಗಳ ಸಂಘವೊಂದನ್ನು ಈ ದೇಶದಲ್ಲೂ ಸ್ಥಾಪಿಸಿಕೊಳ್ಳುವುದು ಪ್ರಯೋಜಕವೆಂದು ನಿಶ್ಚಯಿಸಿ, ಕಳೆದ ತಿಂಗಳು ತಾ|| ೩೦ ರಲ್ಲಿ ಒಂದು ವರ್ತಕರ ಸಭೆಯನ್ನು ಕೂಡಿಸಿ, ಇಂಥ ಸಂಘದ ಸ್ಥಾಪನೆಯಿಂದ ಆಗುವ ಪ್ರಯೋಜನವನ್ನು ಕುರಿತು ಉತ್ತಮವಾದ ಭಾಷಣವನ್ನು ಮಾಡಿದರು. ಸಭಿಕರು ಸಂತೋಷದಿಂದ ಅದಕ್ಕೆ ಅನುಮೋದಿಸಿದರು. ನವರಾತ್ರಿಯ ಕಾಲದಲ್ಲಿ ರಾಜಧಾನಿಯೊಳಗೆ ಒಂದು ವರ್ತಕ ಮಹಾಸಭೆಯನ್ನು ಕೂಡಿಸಬೇಕೆಂದು ಸೂಚಿಸಿದರು. ಈ ವರ್ತಕ ಸಂಘದ ಮ್ಯಾನೇಜಿಂಗ್ ಕಮಿಟಿಗೆ ಮ|| ಮಂಡಿ ಹರಿಯಣ್ಣನವರು ಅಧ್ಯಕ್ಷರಾಗಿರುವರು. ಸಂಘದ ನಿಬಂಧನೆಗಳ ರಚನೆಗೆ ಒಂದು ಉಪಸಂಘವು ಏರ್ಪಡಿಸಲ್ಪಟ್ಟಿತು. ಮತ್ತು ಸಂಘಕ್ಕೆ ೧೦೦ ರೂ. ನಂತೆ ಚಂದಾ ಧನವನ್ನು ಕೊಟ್ಟು ಇದುವರೆಗೆ ೬೫ ಮಂದಿ ವರ್ತಕರು ಆಜೀವಸಭಾಸದರಾಗಿ ಸೇರಿರುವರು.

ಈ ಕೆಳಗೆ ಹೇಳುವಂತೆ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಯಾಗಿದೆ. ಮಿ|| ಎಸ್. ತಿಮ್ಮಣ್ಣನವರು ಕೋಲಾರ ಡಿಸ್ಟ್ರಿಕ್ಟ್ ಖಜಾನೆಯಿಂದ ಚನ್ನರಾಯಪಟ್ಟಣದ ಸಬ್‌ಡಿವಿಜನ್ನಿಗೆ. ಮಿ|| ಬಿ. ಎಚ್. ಕೃಷ್ಣರಾಯರು ಎಕ್ಸೈಜ್ ಶಾಖೆಯಿಂದ ರೆವಿನ್ಯೂ ಶಾಖೆಗೆ ಹೋಗಿ ಕೋಲಾರ ಡಿಸ್ಟ್ರಿಕ್ಟ್ ಖಜಾನೆಗೆ. ಮಿ|| ಜಿ. ಸುಂದರರಾಯರು (ಪ್ರೊ|| ಅ|| ಕಮಿಷನರು) ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಗೆ. ಮಿ|| ಇ. ಎಚ್. ಥಾಮ್ಸನ್‌ರವರು ದಾವಣಗೆರೆ ಡಿವಿಜನ್ನಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟ್‌ಗಿರಿಗೆ ಮಿ|| ಅಬ್ದುಲ್‌ವಾಜೀದ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟ್ ಖಜಾನೆಯಿಂದ ದಾವಣಗೆರೆ ಡಿವಿಜನ್ನಿಗೆ. ಮಿ|| ಬಿ. ಎಂ. ವೆಂಕಟೇಶಯ್ಯನವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯಿಂದ ತುಮಕೂರು ಡಿಸ್ಟ್ರಿಕ್ಟ್ ಖಜಾನೆಗೆ. ಮಿ|| ಎಸ್. ರೂಟ್‌ನ್‌ರವರು ಪೊಲೀಸ್ ಶಾಖೆಯಿಂದ ಚಿತ್ರದುರ್ಗ ಡಿಸ್ಟ್ರಿಕ್ಟ್ ಖಜಾನೆಗೆ. ಮಿ|| ಎಂ. ರಾಮರಾವ್‌ರವರು ಸ್ಪೆಷಲ್ ಡ್ಯೂಟಿಯಿಂದ ಪೊಲೀಸ್ ಟ್ರೈನಿಂಗ್ ಸ್ಕೂಲ್ ಪ್ರಿನ್ಸಿಪಾಲ್ ಕೆಲಸಕ್ಕೆ. ಮಿ|| ಸಿ. ನಾರಾಯಣರಾಯರು ಪೊಲೀಸ್ ಶಾಖೆಯಿಂದ ಹಾಸನ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್‌ಗಿರಿಗೆ. ಮಿ|| ಸಿ. ಕೃಷ್ಣರಾವ್‌ರವರು ಚಿತ್ರದುರ್ಗ ಪೊಲೀಸ್ ಸೂಪರಿಂಟೆಂಡೆಂಟ್‌ಗಿರಿಯಿಂದ ಶಿವಮೊಗ್ಗಾ ಪೊಲೀಸ್ ಸೂಪರಿಂಟೆಂಡೆಂಟ್ ಸ್ಥಾನಕ್ಕೆ.

ಭರತಖಂಡದ ವೃತ್ತಾಂತಗಳು.

ಕಳೆದ ೧೯೧೮-೧೯ ನೆ ವರ್ಷದಲ್ಲಿ ಮದ್ರಾಸು ತೀರಗಳಿಂದ ಸೀಮೆಗೆ ೪½ ಕೋಟಿ ರೂ. ಬೆಲೆಯ ಹತ್ತಿಯು ಸಾಗಿಹೋಗಿದೆ.

ಬರುವ ೧೯೨೧ ನೆ ವರ್ಷದ ಮಾರ್ಚಿ ತಾ|| ೧೮ ರ ರಾತ್ರಿ ಭರತಖಂಡದಲ್ಲೆಲ್ಲಾ ಪ್ರಜಾಗಣತಿಯಾಗತಕ್ಕದ್ದೆಂದು ನಿಶ್ಚಯಿಸಲ್ಪಟ್ಟಿದೆ.

ಅಫ್ಘಾನಿಸ್ಥಾನ್ ಅಮೀರರು ಈಗತಾನೇ ಹೊಸದಾಗಿ ೧-೫-೨೫-೫೦-೧೦೦ ರೂ. ಗಳ ಕರೆನ್ಸಿ ನೋಟುಗಳನ್ನು ಮುದ್ರಿಸಿ ವ್ಯವಹಾರಕ್ಕೆ ತಂದಿದ್ದಾರೆ.

ಬೊಂಬಾಯಿನಿಂದ ಹಾಜೀಗೆ ಹೊರಡಲಿಕ್ಕಿದ್ದ ಯಾತ್ರಾರ್ಥಿಗಳಲ್ಲಿ ವಾಂತಿಭೇದಿಯುಪದ್ರವವುಂಟಾದುದರಿಂದ ಆ ಯಾತ್ರೆಗೆ ಹೊರಡಕೂಡದೆಂದು ನಿರ್ಬಂಧಪಡಿಸಲ್ಪಟ್ಟಿತು. ಆದರೆ ಈಗ ಆ ರೋಗವು ಶಮನವಾಗಿರುವುದರಿಂದ ಯಾತ್ರಾರ್ಥಿಗಳು ಬೊಂಬಾಯಿ ಮಾರ್ಗವಾಗಿ ಹೊರಡಬಹುದೆಂದು ಪ್ರಕಟವಾಗಿದೆ.

ಪಂಚಮರ ಪ್ರೋತ್ಸಾಹಕ್ಕೋಸ್ಕರ ಅಲ್ಲಲ್ಲಿ ಲೋಕಲ್ ಬೋರ್ಡುಗಳಿಗೆ ಅವರ ಪ್ರತಿನಿಧಿಯನ್ನು ನಾಮಿನೇಷನ್ನಿನ ಮೂಲಕ ಸೇರಿಸಿಕೊಳ್ಳುತ್ತಿರುವ ಪದ್ಧತಿಯನ್ನು ಕೇಳಿದ್ದೇವೆ. ಈಗ ಕೃಷ್ಣಾ ಜಿಲ್ಲಾ ಬೋರ್ಡಿಗೆ ಗುಡಿವಾಡ ತಾಲ್ಲೂಕು ಬೋರ್ಡಿನವರು ಒಬ್ಬ ಪಂಚಮನನ್ನೇ ತಮ್ಮ ಪ್ರತಿನಿಧಿಯನ್ನಾಗಿ ಆರಿಸಿ ಕಳುಹಿಸಿದರೆಂಬ ವಾರ್ತೆಯನ್ನು ಕೇಳುತ್ತೇವೆ.

ಪುದುಚೇರಿಯು ಫ್ರಾನ್ಸ್ ಪ್ರಭುತ್ವಕ್ಕೆ ಸೇರಿದೆಯಷ್ಟೆ. ಅಲ್ಲಿಯ ಪ್ರತಿ ಪಟ್ಟಣಗಳಲ್ಲೂ ಗ್ರಾಮಗಳಲ್ಲೂ ಸಹ ಶಿಲ್ಪವಾಣಿಜ್ಯಾದಿಗಳ ಅಭಿವೃದ್ಧಿಗಾಗಿ ಪ್ರಭುತ್ವದವರು ಪರಸ್ಪರ ಸಹಾಯಸಂಘಗಳನ್ನು ಸ್ಥಾಪಿಸಲು ಈಗ ತಾನೇ ಅಪ್ಪಣೆ ಮಾಡಿರುವುದಲ್ಲದೆ, ಕಸಬುದಾರರಿಗೆ ಬಂಡವಾಳಕ್ಕಾಗಿ ಸರ್ಕಾರದಿಂದ ಸಾಲವನ್ನು ಬಡ್ಡಿಯಿಲ್ಲದೆ ಕೊಡಲೂ ಸಹ ಏರ್ಪಡಿಸಿದ್ದಾರೆ.

ಅಮೇರಿಕಾದವರು ಬೊಂಬಾಯಿಯಿಂದ ಸಕ್ಕರೆಯನ್ನು ತಮ್ಮ ದೇಶಕ್ಕೆ ಸಾಗಿಸುತ್ತಿದ್ದಾರೆ. ಇದರಿಂದ ನಮ್ಮಲ್ಲಿ ಸಕ್ಕರೆಯ ಬೆಲೆಯು ಈಗ ಬಹಳ ಹೆಚ್ಚಿಹೋಗಿದೆ. ಇಲ್ಲಿಂದ ಅಕ್ಕಿ ಗೋಧುವೆ ಸಕ್ಕರೆ ಮೊದಲಾದುವುಗಳನ್ನು ಅನ್ಯದೇಶಗಳಿಗೆ ಕಳುಹಿಸಿಕೊಡದಂತೆ ಮಾಡುವುದು ಅವಶ್ಯಕವೆಂದು ಸರ್ಕಾರವನ್ನು ಕೋರಿಕೊಳ್ಳಬೇಕೆಂದು ಬೊಂಬಾಯಿ ಮ್ಯುನಿಸಿಪಾಲಿಟಿಯವರು ನಿರ್ಧರಿಸಿದ್ದಾರೆ.

ಕಲ್ಕತ್ತಾದಲ್ಲಿ ಇಬ್ಬರು ಪೋಲೀಸರು ಹಾರಿಸನ್ ರೋಡಿನ ಎಡೆಗೆ ಹೋಗುತ್ತಿದ್ದ ಒಬ್ಬ ಮನುಷ್ಯನನ್ನು ನೋಡಿ ಸಂಶಯದಿಂದ ದೇಹಪರಿಶೋಧನೆ ಮಾಡಲುಪಕ್ರಮಿಸಿದಾಗ ಆ ಮನುಷ್ಯನು ತನ್ನ ಜೇಬಿನಲ್ಲಿದ್ದ ರಿವಾಲ್ವರನ್ನು ತೆಗೆದು ಒಬ್ಬನನ್ನು ಹೊಡೆದು, ಹಿಮ್ಮೆಟ್ಟಿ ಬರುತ್ತಿದ್ದ ಮತ್ತೊಬ್ಬನ ಮೇಲೂ ಕೂಡ ಗುಂಡನ್ನು ಹಾರಿಸಿ ಓಡಿದನು. ಅವರಿಬ್ಬರೂ ವೈದ್ಯಾಲಯದಲ್ಲಿರುವರು. ಒಬ್ಬನು ಸಾಯುವ ಸ್ಥಿತಿಯಲ್ಲಿದ್ದಾನೆ.

ಕ್ರೈಸ್ತರು ತಮ್ಮ ಬೈಬಲನ್ನು ೫೧೧ ಭಾಷೆಗಳಲ್ಲಿ ಪರಿವರ್ತಿಸಿ ಪ್ರಪಂಚದಲ್ಲೆಲ್ಲಾ ಹರಡಿರುವರು. ಕಳೆದ ವರ್ಷ ಒಂದರಲ್ಲೇ ಅವರು ೯೦ ಲಕ್ಷ ಪ್ರತಿಗಳನ್ನೂ ಈ ವರ್ಷದ ಆರಂಭದಲ್ಲಿ ೪ ಲಕ್ಷ ಪ್ರತಿಗಳನ್ನೂ ಯುದ್ಧಕಾಲದಲ್ಲಿ ೭೫ ಭಾಷೆಗಳಲ್ಲಿ ಮುದ್ರಿಸಿ ೮ ಲಕ್ಷ ಪ್ರತಿಗಳನ್ನು ಯುದ್ಧಭೂಮಿಯಲ್ಲೂ ಹಂಚಿರುವರಂತೆ. ಇದರಿಂದ ಸ್ವಮತಪ್ರಸಾರದಲ್ಲಿ ಕ್ರೈಸ್ತಸಂಘದವರು ಎಷ್ಟು ದೃಢಪ್ರಯತ್ನಗಳನ್ನು ಮಾಡುತ್ತಿರುವರೆಂಬುದು ಗೊತ್ತಾಗುತ್ತದೆ.

ಬಂಗಾಳದ ಚಿನ್‌ಸುರಾಕ್ಕೆ ಸೇರಿದ ಕೋಟಾ ಎಂಬ ಗ್ರಾಮದಲ್ಲಿರುವ ಒಬ್ಬ ಮಹಮ್ಮದೀಯ ವರ್ತಕನ ಮನೆಗೆ ೩೦-೩೫ ಮಂದಿಗಳು ಆಯುಧಗಳೊಡನೆ ರಾತ್ರಿಹೊತ್ತು ನುಗ್ಗಿದರು. ಮನೆಯವರು ಎಚ್ಚತ್ತು ಕೂಗಿಕೊಳ್ಳಲಾಗಿ ಜನರು ಸೇರಿಕೊಳ್ಳಲು, ಗುಂಪಿನವರು ಓಡಿದರು. ಅವರ ಮೇಲೆ ಮನೆ ಯಜಮಾನನು ತುಪಾಕಿಯನ್ನು ಹಾರಿಸಲಾಗಿ ಒಬ್ಬನು ಸತ್ತುಬಿದ್ದನು. ಗುಂಪಿನವರು ಅವನನ್ನು ಸಾಗಿಸಿಕೊಂಡುಹೋಗಿ ಮಗ್ಗುಲಲ್ಲಿದ್ದ ಒಂದು ಅಡವಿಯಲ್ಲಿ ಆ ಹೆಣದ ತಲೆಯನ್ನು ಮಾತ್ರ ಕತ್ತರಿಸಿಕೊಂಡು ಮುಂಡವನ್ನು ಬಿಟ್ಟುಹೋದರು.

ಅಮೇರಿಕಾ ದೇಶಕ್ಕೆ ಹೋಗಿ ೯ ವರ್ಷಕಾಲ ವಾಸಮಾಡಿ, ಸಿನಿಮಾ ಫಿಲಿಮ್ಸ್ (ಚಿತ್ರದ ಪೇಪು) ಗಳನ್ನು ನಿರ್ಮಿಸುವ ಶಿಕ್ಷಣವನ್ನು ಪಡೆದು ಭರತಖಂಡಕ್ಕೆ ಬಂದು ಈಗ ಎಲ್ಲೆಲ್ಲೂ ಉಪಯೋಗಿಸಲ್ಪಡುತ್ತಲಿರುವ ಲಂಕಾದಹನ, ಹರಿಶ್ಚಂದ್ರ, ಶಕುಂತಲಾ, ಕಾಳಿಂಗಮರ್ದನ, ಭಸ್ಮಾಸುರದಹನ ಮೊದಲಾದ ಸಿನಿಮಾ ಚಿತ್ರಗಳನ್ನು ನಿರ್ಮಿಸಿದ ಸುಚಿತ್‌ಸಿಂಗ್ ಎಂಬುವರು ಕ್ಷಯರೋಗಗ್ರಸ್ತರಾಗಿ ಕಳೆದ ವಾರ ತಮ್ಮ ೩೨ ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ಕೇಳಿ ಅತ್ಯಂತವಾಗಿ ವಿಷಾದಿಸಬೇಕಾಗಿರುವುದು. ಇವರು ಈ ದೇಶಕ್ಕೆ ಬಂದು ತಮ್ಮ ಉದ್ಯೋಗವ್ಯಾಪನೆಗಾಗಿ ಒಂದು ಕಂಪೆನಿಯನ್ನು ಸ್ಥಾಪಿಸಿ ಇನ್ನೂ ಮೂರು ವರ್ಷ ತುಂಬಿರಲಿಲ್ಲ. ಕಂಪೆನಿಯಿಂದ ತಮ್ಮ ಜೀವನಕ್ಕೆ ತಕ್ಕಷ್ಟು ಮಾತ್ರ ಸಂಬಳ ಪಡೆದು ದೇಶಾಭಿಮಾನದಿಂದ ಕೆಲಸಮಾಡುತ್ತಿದ್ದರು. ಇಂಥವರ ಮೃತಿಯಿಂದ ಸ್ವದೇಶದಲ್ಲಿ ಬಹು ವೃದ್ಧಿಗೊಳ್ಳಬಹುದಾಗಿದ್ದ ಈ ಪರಿಶ್ರಮಕ್ಕೆ ದೊಡ್ಡ ಹಾನಿತಟ್ಟಿದಂತಾಯಿತು.

ಮ್ಯುನಿಸಿಪಲ್ ಬೋರ್ಡು, ಲೋಕಲ್ ಬೋರ್ಡುಗಳ ಕಾನ್‌ಫರೆನ್ಸನ್ನು ಮೈಸೂರು ಸಂಸ್ಥಾನದಲ್ಲಿ ಏರ್ಪಡಿಸಿ ೪-೫ ವರ್ಷಗಳಾದುವು. ಮದರಾಸು ಪ್ರಭುತ್ವದವರು ಈಗ ಅದರವಶ್ಯಕತೆಯನ್ನು ತಿಳಿದು, ಬರುವ ತಾ|| ೧೭ ರಲ್ಲಿ ಮದರಾಸಿನಲ್ಲಿ ನಡೆಯಿಸಲು ನಿಶ್ಚಯಿಸಿದ್ದಾರೆ, ಅಲ್ಲಿಯ ಗೌರ್ನರವರೇ ಅದರ ಅಧ್ಯಕ್ಷರಾಗುವರು. ಎಲ್ಲಾ ಜಿಲ್ಲಾ ಬೋರ್ಡು ಪ್ರಸಿಡೆಂಟರುಗಳೂ, ಮ್ಯುನಿಸಿಪಾಲಿಟಿ ಚೇರ್ಮನ್ನರೂ ಆಹ್ವಾನಿಸಲ್ಪಟ್ಟಿದ್ದಾರೆ. ಈ ಕಾನ್‌ಫರೆನ್ಸಿನಲ್ಲಿ ಸ್ಥಾನಿಕ ಸಂಘಗಳ ಉಪಯೋಗಕ್ಕಾಗಿ ಸರ್ಕಾರಿ ಉದ್ಯೋಗಿಗಳ ಸಹಾಯವನ್ನು ಕೊಡುವುದು, ಲೋಕಲ್ ಬೋರ್ಡುಗಳೂ, ಮ್ಯು|| ಸಂಘಗಳೂ ಸೇರಿ ಕೆಲಸ ಮಾಡುವುದು, ನೀರಿನ ಅನುಕೂಲ್ಯ, ಬಚ್ಚಲ ನೀರನ್ನು ಸಾಗಿಸುವುದು ಇವೇ ಮೊದಲಾದ ಸ್ಥಾನಿಕ ಕಾರ್ಯಗಳಿಗೆ ಸರ್ಕಾರದವರು ಶಾಸ್ತ್ರೀಯ ಸಹಾಯವನ್ನು ಕೊಡುವುದು, ಮ್ಯು|| ಬೋರ್ಡು, ಲೋ|| ಬೋರ್ಡುಗಳ ಕೆಲಸಗಾರರ ಸಂಬಳದ ಪರಿಮಿತಿಯನ್ನು ನಿರ್ಧರಿಸುವುದು, ಲೈಸೆನ್ಸ್ ಫೀಜನ್ನು ನಿರ್ಣಯಿಸುವುದು ಸ್ಥಾನಿಕ ಸಂಘಗಳು ನೆರವೇರಿಸಬೇಕಾದ ಕಾರ್ಯಗಳಿಗೆ ಎಸ್ಟಿಮೇಟನ್ನು ಸಿದ್ಧಮಾಡುವುದು, ಅವಶ್ಯಕ ಕಾರಗಳ ವೆಚ್ಚಕ್ಕಾಗಿ ಸಾಲಮಾಡುವ ಪದ್ಧತಿಯನ್ನು ಹೆಚ್ಚು ಪಡಿಸುವುದು, ಆದಾಯ ಮಾರ್ಗಗಳನ್ನು ವೃದ್ಧಿಪಡಿಸುವುದು, ಪಟ್ಟಣಗಳನ್ನು ಸರ್ವೆ ಮಾಡುವುದು ಈ ವಿಷಯಗಳು ಚರ್ಚಿಸಲ್ಪಡುವುವು.

ತುರ್ಕಿ ಸಂಧಿನಿಬಂಧನೆಯು ಪ್ರಕಟವಾದ ಮೇಲೆ ಹೈದರಾಬಾದ್ ನಿಜಾಮರವರು ತಮ್ಮ ಪ್ರಜೆಗಳಿಗಾಗಿ ಒಂದು ಪ್ರಕಟನೆಯನ್ನು ಮಾಡಿದರು. ಅದರಲ್ಲಿ "ಮುಸಲ್ಮಾನರ ಮತಾಭಿಪ್ರಾಯವನ್ನು ಗೌರವಿಸಬೇಕೆಂದು ಇಂಡಿಯಾ ಸರ್ಕಾರದವರಿಗೆ ನಾನು ಮುಸಲ್ಮಾನ್ ಪ್ರಭುವಾಗಿಯೂ ಮುಹೀಉಲ್ ಮಿಲ್ಲತ್ ವಾದ್ದೀನಾಗಿಯೂ ಎಷ್ಟೋ ಬಗೆಯಿಂದ ಹೇಳಿಕೊಂಡಿದ್ದೆನು. ಈಗ ತುರ್ಕಿ ಸಂಧಿಯು ಪ್ರಕಟಿತವಾಗಿದೆ. ಇದರೊಳಗೆ ಅನ್ಯಾಯವಾದುವುಗಳೂ ಮಹಮ್ಮದೀಯರಿಗೆ ಚಿಂತಾಜನಕವಾದುವುಗಳೂ ಆದ ಕೆಲ ನಿಬಂಧನೆಗಳಿರುವುವು. ವಿಷಮಸ್ಥಿತಿಯಲ್ಲಿ ಇಂಥ ಸಂಧಿಯು ಜರುಗಿರುವುದು. ಇದರ ವಿಷಯದಲ್ಲಿ ಇನ್ನು ಆಂದೋಲನ ನಡೆಯಿಸುವುದು ನಿರರ್ಥಕ ಮಾತ್ರವೇ ಅಲ್ಲದೆ ದೇಶಶಾಂತಿಗೆ ಭಂಗಕರವಾಗುವುದು. ಅದುಕಾರಣ ಅಂಥ ಕಿಲಾಫತ್ ಆಂದೋಳನವನ್ನು ನನ್ನ ರಾಜ್ಯದಲ್ಲಿ ಯಾರೂ ನಡೆಯಿಸಕೂಡದು" ಎಂದು ತಿಳಿಯಿಸಿದ್ದುದಲ್ಲದೆ, ತತ್ಸಂಬಂಧವಾಗಿ ಯಾವ ಸಭೆಯನ್ನು ಯಾರು ನಡೆಯಿಸಬೇಕಾದರೂ ಅಧಿಕಾರಿಗಳ ಅಪ್ಪಣೆಯನ್ನು ಮುಂದಾಗಿ ಪಡೆಯಬೇಕೆಂದು ವಿಧಿಸಿರುವರು. ಇದರ ಮೇಲೆ ಅನೇಕ ಉರ್ದು ಪತ್ರಿಕೆಗಳು ಅಸಮಾಧಾನ ಪಟ್ಟು ನಿಜಾಮರನ್ನು ನಾನಾವಿಧವಾಗಿ ನಿಂದಿಸುತ್ತಿರುವುದಲ್ಲದೆ, "ಮೋಹಿಉಲ್ ಮಿಲ್ಲತ್‌ವಾದ್ದೀನ್" ಎಂಬ ಬಿರುದಿಗೆ ನಿಜಾಮರು ಅರ್ಹರಲ್ಲವೆಂದೂ ಜರೆಯುತ್ತಿವೆ. ಇದನ್ನು ನೋಡಿ ನಿಜಾಮರು ಕಳೆದ ತಾ|| ೨೮ ರಲ್ಲಿ ಇನ್ನೊಂದು ಪ್ರಕಟನೆಯನ್ನು ಮಾಡಿ ಅದರೊಳಗೆ-ಭರತಖಂಡದ ಕೆಲವು ಉರ್ದು ಪತ್ರಿಕೆಗಳು ನನ್ನ ಪ್ರಕಟನೆಗೆ ಅಪಾರ್ಥವನ್ನು ಮಾಡಿಕೊಂಡು ನನ್ನನ್ನು ಜರೆಯುತ್ತಿರುವುದಲ್ಲದೆ ಮೋಹಿಉಲ್ ಕಿತಾಬಿಗೆ ನಾನು ಅನರ್ಹನೆಂದು ವಿಮರ್ಶಿಸಿರುತ್ತವೆ. ನನಗೆ ಆ ಕಿತಾಬಿನಲ್ಲಿ ಅಷ್ಟು ಗೌರವವಿಲ್ಲ. ಅದನ್ನು ಲಕ್ಷಿಸುವುದಿಲ್ಲ. ಅದನ್ನು ನಾನೇನೂ ಕೋರಿಕೊಳ್ಳಲಿಲ್ಲ. ಮಹಮ್ಮದೀಯ ಸಂಘದವರೇ ಬಲಾತ್ಕರಿಸಿ ಪರಿಗ್ರಹಿಸಬೇಕೆಂದು ಕೋರಿಕೊಂಡುದರಿಂದ ಅವರ ಮಾತನ್ನು ಕಿತ್ತುಹಾಕಲಾರದೆ ಸುಮ್ಮನಿದ್ದೆ. ನನ್ನ ಮೌನವನ್ನೇ ಅಂಗೀಕಾರ ಸೂಚಕವಾಗಿ ತಿಳಿದು ಅವರು ನನಗೆ ಆ ಬಿರುದನ್ನು ಕೊಟ್ಟರು. ಪ್ರಕೃತ ಸಂದರ್ಭದಲ್ಲಿ ನನಗೆ ವಂಶಪಾರಂಪರ್ಯವಾಗಿ ಬರುತ್ತಿರುವ ಆಸಿಫ್ ಜಾಹಜಾಹ್ ಉಲ್‌ಮುಲ್ಕ್ (ಆಂಗ್ಲಪ್ರಭುತ್ವದ ಮಿತ್ರ) ಎಂಬ ಮತ್ತು ಮೊನ್ನೆ ತಾನೇ ಅವರಿಂದ ನನಗೆ ಕೊಡಲ್ಪಟ್ಟಿರುವ ಎಗ್ಸಾಲ್ಟೆಡ್‌ಹೈನೆಸ್ ಎಂಬ ಬಿರುದುಗಳ ಮುಂದೆ ಈ ಮಹಮ್ಮದೀಯ ಕಿತಾಬು ಸಮುದ್ರದ ಮುಂದಣ ನೀರಿನ ಹನಿಯಂತಿರುವುದು. ಅದುಕಾರಣ ಇದನ್ನು ನಾನೇನೂ ಲಕ್ಷ್ಯಮಾಡುವುದಿಲ್ಲ. ಎಂದು ಎಕ್ಸ್‌ಟ್ರಾರ್ಡಿನರಿ ಗೆಜಟ್ಟಿನ ಮೂಲಕ ಪ್ರಕಟಿಸಿರುವರು.

ವಿದೇಶ ವೃತ್ತಾಂತಗಳು.

ರೊಮೇನಿಯಾ ಯುವರಾಜರು ಜಪಾನಿನ ಟೋಕಿಯೋ ಪಟ್ಟಣಕ್ಕೆ ಹೋಗಿ ಸೇರಿದರು. ಅಲ್ಲಿಯ ಪ್ರಜೆಗಳು ಇವರನ್ನು ಅತ್ಯಂತ ಸಂತೋಷದಿಂದ ಆದರಿಸಿದರು.

ಜಪಾನಿನ ಸಿಮುಡು ಯವರು ಕಳೆದ ತಾ|| ೨೮ ರಲ್ಲಿ ವಿಂಬಲ್ಡನ್ನಿನ ಹತ್ತಿರ ನಡೆದ ಪ್ರಪಂಚದ ದೊಡ್ಡ ಟೆನ್ನಿಸ್ ಪಂದ್ಯದ ಕಡೆಯಾಟದಲ್ಲಿ ವಿಲ್ಬರ್ಡ್ ಎಂಬ ಆಂಗ್ಲನನ್ನು ಗೆದ್ದು ಲೋಕವಿಖ್ಯಾತರಾದರು.

ಸೀಮೆಯಲ್ಲಿರುವ ಡೇಲಿ ಮೇಲ್ ಪತ್ರಿಕೆಗೆ ತಂತಿ ಸಹಾಯವಿಲ್ಲದೆ ಸಂಧಿಗ್ರಾಹಿಣೀಯಂತ್ರದ ಮೂಲಕ ವರ್ತಮಾನಗಳು ಬೇರೆಬೇರೆ ಕಡೆಯಿಂದ ಬಂದುಸೇರುವ ಏರ್ಪಾಟು ನಡೆಯಿಸಲ್ಪಟ್ಟಿರುವುದು.

ನಮ್ಮ ಸಾರ್ವಭೌಮರೂ ಅವರ ಪತ್ನಿಯವರೂ ಸಹ ೨ ಸಾವಿರ ಮೈಲಿಗಳ ಪ್ರಯಾಣ ಮಾಡಿಬರುವುದಕ್ಕೆ ಹೊರಟಿದ್ದಾರೆ. ಎಡಿಂಬರೋ ಸೌತ್‌ವೇಲ್ಸ್ ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿಕೊಂಡು ತಾ|| ೧೯ ಕ್ಕೆ ಸ್ವಸ್ಥಲವನ್ನು ಸೇರುವರು.

ಅಸ್ಮಾ ತುರ್ಕಿಯ ಕೋಟೆಗಳಲ್ಲಿದ್ದ ೮೦ ಫಿರಂಗಿಗಳನ್ನು ಆಂಗ್ಲ ಸೈನಿಕರು ನಾಶಪಡಿಸಿದರು. ಅಲ್ಲಿ ಕಾವಲುಗಾರರಾಗಿದ್ದ ತುರ್ಕಿ ಸೈನಿಕರನ್ನೆಲ್ಲಾ ನಿರಾಯುಧರನ್ನಾಗಿ ಮಾಡಿದರು. ಹಮುಡೆ ಎಂಬ ಕೋಟೆಯಲ್ಲಿ ಬಹಳವಾಗಿದ್ದ ದೊಡ್ಡದೊಡ್ಡ ಫಿರಂಗಿಗಳನ್ನೆಲ್ಲಾ ನುಚ್ಚುನೂರು ಮಾಡಿದರು.

ಬೆಲ್ಜಿಯಮ್ಮಿನ ಬ್ರಸಲ್ಸ್ ಪಟ್ಟಣದಲ್ಲಿ ಮಿತ್ರಮಂಡಲೀ ಮುಖ್ಯಮಂತ್ರಿಗಳ ಸಭೆಗೂಡಿದ್ದು ಜರ್ಮನರಿಂದ ಬರುವ ನಷ್ಟಪರಿಹಾರ ದ್ರವ್ಯವನ್ನು ಎಷ್ಟೆಷ್ಟು ಹಂಚಿಕೊಳ್ಳಬೇಕೆಂಬುದನ್ನು ನಿರ್ಧರಿಸಿದರು. ಹೇಗೆಂದರೆ:—ಫ್ರೆಂಚರಿಗೆ ೧೦೦ ರಲ್ಲಿ ೫೨ ರಂತೆ, ಇಂಗ್ಲೀಷರಿಗೆ ೨೨ ರಂತೆ, ಬೆಲ್ಜಿಯಮ್ಮಿಗೆ ೧೮ ರಂತೆ, ಉಳಿದುದು ಇಟಲಿ ಮೊದಲಾದುವಕ್ಕೆ.

ಸ್ಪಾ ಪಟ್ಟಣದಲ್ಲಿ ನಡೆದ ಸಭೆಗೆ ಮಿತ್ರಮಂಡಲಿಯವರೇ ಅಲ್ಲದೆ ಜರ್ಮನ್ ಪ್ರತಿನಿಧಿಯೂ ಬಂದಿದ್ದರು. ಅಲ್ಲಿ ನಿರ್ಣಯವಾದ ಪ್ರಕಾರ ಜರ್ಮನಿಯವರಿಗೆ ಮತ್ತೊಂದು ಸಂದೇಶವನ್ನು ಕಳುಹಿಸಿದರು. ಅದರಲ್ಲಿ ನಿಮ್ಮ ಯುದ್ಧಸಾಮಗ್ರಿಯನ್ನೆಲ್ಲಾ ಮಿತ್ರಮಂಡಲಿಯವರಿಗೊಪ್ಪಿಸಿ, ನಿರ್ಬಂಧ ಸೈನಿಕದೇರ್ಪಾಟನ್ನೆಲ್ಲಾ ತೊಲಗಿಸಬೇಕೆಂದು ತಿಳಿಯಿಸಿದ್ದಾರೆ.

ಜರ್ಮನರಿಗೆ ಈಗ ೨೬೫೦ ಕೋಟಿ ಮಾರ್ಕುಗಳ ಸಾಲವಿದೆಯಂತೆ. ಇದರಿಂದ ದೇಶವು ಬಹಳ ಕುಗ್ಗಿಹೋಗಿರುವುದಲ್ಲದೆ ತೆರುಗೆಗಳೂ ಪ್ರಜೆಗಳ ಮೇಲೆ ಬಹಳ ಹೆಚ್ಚಾಗಿ ವಿಧಿಸಲ್ಪಟ್ಟಿರುವುವೆಂತಲೂ, ಅದುಕಾರಣ ನಿಮ್ಮ ಸಂಧಿನಿಬಂಧನೆಯಲ್ಲಿ ನಮ್ಮನ್ನು ಕೇಳಿರುವ ನಷ್ಟಪರಿಹಾರದ ಮೊತ್ತವನ್ನು ತಗ್ಗಿಸಬೇಕೆಂತಲೂ ಜರ್ಮನ್ ಪ್ರಭುತ್ವದವರು ಮಿತ್ರಮಂಡಲಿಯವರನ್ನು ಕೇಳಿಕೊಂಡಿದ್ದಾರೆ.

ತಮಗೆ ವಿಧಿಸಿರುವ ಸಂಧಿನಿಬಂಧನೆಯ ಪ್ರಕಾರ ತಾವು ನಡೆದುಕೊಂಡು ಮುಗಿಯಿಸಿದಲ್ಲದೆ ತಮ್ಮ ನಾಣ್ಯವು ಉಳಿದುಕೊಂಡು ತಲೆಯೆತ್ತಿಕೊಳ್ಳಲು ಮಾರ್ಗವಾದೀತೇ ಹೊರತು ಇಲ್ಲದಿದ್ದರೆ ಸಾಧ್ಯವಲ್ಲವೆಂಬ ಬುದ್ಧಿಯು ಈಗಣ ಜರ್ಮನ್ ಪ್ರಭುತ್ವದವರಿಗೆ ಚೆನ್ನಾಗಿ ಗೊತ್ತಾಗಿದೆ. ಆ ಮಾತುಗಳನ್ನು ತಮ್ಮ ರಾಜಕೀಯ ಸಭೆಯಲ್ಲೇ ಅವರ ಮಂತ್ರಿವರ್ಗದವರು ಆಡುವುದಕ್ಕುಪಕ್ರಮಿಸಿದ್ದಾರೆ.

ಯುದ್ಧಕಾಲದಲ್ಲಿ ಜರ್ಮನರು ಅಮೇರಿಕಾದ ನ್ಯೂಯಾರ್ಕ್ ಪಟ್ಟಣದ ಮೇಲಕ್ಕೆ ಹೋಗಿ ಸಿಡಿಮದ್ದುಗಳನ್ನು ಹಾಕಬೇಕೆಂದು ಅದ್ಭುತವಾದ "ಎಲ್ ೭೧" ಗುರ್ತಿನ ದೊಡ್ಡ ವಿಮಾನವನ್ನು ಕಟ್ಟಿದ್ದರು. ಅದನ್ನು ಈಗಣ ಸಂಧಿನಿಬಂಧನೆಯ ಪ್ರಕಾರ ಅವರು ಮಿತ್ರಮಂಡಲಿಗೆ ಒಪ್ಪಿಸಿಬಿಟ್ಟರು. ಅದನ್ನು ಈಗ ಇಂಗ್ಲೆಂಡಿಗೆ ಸಾಗಿಸಿಕೊಂಡುಹೋದರು. ಅದಕ್ಕಿಂತ ದೊಡ್ಡ ವಿಮಾನವು ಪ್ರಪಂಚದಲ್ಲೇ ಇಲ್ಲ.

ಟಿಂಪವರಿ ಎಂಬ ಒಬ್ಬ ಆಂಗ್ಲ ಯಂತ್ರಕಾರನು ಒಂದು ನೂತನ ಯಂತ್ರವನ್ನು ಕಂಡುಹಿಡಿದಿದ್ದಾನೆ. ಇದಕ್ಕೆ ಇತರ ಯಂತ್ರಗಳಂತೆ ಕಲ್ಲಿದ್ದಲು, ಸೌದೆ, ಎಣ್ಣೆ ಮೊದಲಾದುವುಗಳ ಅವಶ್ಯಕತೆಯಿಲ್ಲವೆಂದು ಈತನು ತಿಳಿಯಿಸುತ್ತಾನೆ. ಯಂತ್ರದಲ್ಲಿ ಮಾಡಲ್ಪಟ್ಟಿರುವ ರಚನಾಕೌಶಲದಿಂದ ಯಂತ್ರಭಾಗಗಳಿಗೆ ಚಲನೆಯು ತಾನಾಗಿ ಹುಟ್ಟುವುದಂತೆ. ಇದು ಬಳಕೆಗೆ ಬಂದುಬಿಟ್ಟರೆ ಪರಿಶ್ರಮ ಪ್ರಪಂಚದಲ್ಲಿ ಅತ್ಯದ್ಭುತವಾದ ಮಾರ್ಪು ಉಂಟಾಗುವುದರಲ್ಲಿ ಸಂಶಯವಿಲ್ಲ. ನಮ್ಮ ಮೋಟಾರುಗಳು, ಎಂಜಿನ್ನುಗಳು ಮೊದಲಾದುವುಗಳಿಗೆ ಎಣ್ಣೆ ಇದ್ದಲುಗಳ ವೆಚ್ಚವೇ ತಪ್ಪಿಹೋಗುವುದು.

ಬೋಲ್ಷೆವಿಕ್ಕರ ಪ್ರವೇಶದಿಂದ ಪರ್ಷಿಯಾದ ರೆಷ್ಟ, ಎಂಜೇಲಿ, ಅಸ್ತಾರಾ ಪಟ್ಟಣಗಳ ಸ್ಥಿತಿಯು ಆಗಲೇ ವಿಷಮವಾಗಿದೆ. ಕುಚ್ಚಿಕ್‌ಖಾನ್ ಎಂಬಾತನು ತಾನು ಪರ್ಷಿಯಾ ಸೋವಿಯಟ್ ರಿಪಬ್ಲಿಕ್ ಪ್ರಭುತ್ವದ ಅಧ್ಯಕ್ಷನೆಂದು ಹೇಳಿಕೊಂಡು ಸ್ವಲ್ಪ ಸೈನ್ಯವನ್ನು ಕೂಡಿಸಿ ರೆಷ್ಟ ಪಟ್ಟಣದಲ್ಲಿರುವ ಪರ್ಷಿಯಾ ಕೋಸಕ್ ಸೈನಿಕರ ಸಾಲುಗೇರಿಯನ್ನು ಸುಟ್ಟು ೮೦೦ ಮಂದಿ ಸೈನಿಕರನ್ನು ಸೆರೆಹಿಡಿದಿರುವನು. ಮತ್ತು ಬೋಲ್ಷೆವಿಕ್ಕರನ್ನು ಸಂಧಾನ ನಡೆಯಿಸಿಕೊಂಡು ಅವರಿಗೆ ಪರ್ಷಿಯಾ ಮೆಸಪೊಟೇಮಿಯಗಳ ಮಾರ್ಗದಿಂದ ಭರತಖಂಡಕ್ಕೆ ಹೋಗಲು ಅವಕಾಶ ಮಾಡಿಕೊಡುತ್ತೇನೆಂದು ಹೇಳಿರುವನಂತೆ.

ನೋಟೀಸು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ವೀರಶೈವ ವಿದ್ಯಾರ್ಥಿಗಳು ಇದೇ ತಿಂಗಳು ತಾ|| ೩೧ ರ ಒಳಗಾಗಿ ಮೇಲ್ಕಂಡ ಸಂಘದ ಸೆಕ್ರೆಟರಿಯವರಿಗೆ ಗೊತ್ತಾದ ಅರ್ಜಿ ಫಾರಂ (Prescribed form) ನಲ್ಲಿ ಬರೆದುಕೊಳ್ಳತಕ್ಕದ್ದು. ಅರ್ಜಿ ಫಾರಂಗಳನ್ನು ಅಪೇಕ್ಷಿಸತಕ್ಕ ವಿದ್ಯಾರ್ಥಿಗಳು ಅರ್ಧಾಣೆ ಪೋಸ್ಟೇಜು ಸ್ಟಾಂಪನ್ನು ಕಳುಹಿಸಿದಲ್ಲಿ ರವಾನಿಸಲಾಗುತ್ತದೆ.

ಬೆಂಗಳೂರು
೬-೭-೨೦ } ಅಡ್ವೊಕೇಟ್ ಜಿ. ಪರಮಶಿವಯ್ಯ, ಬಿ. ಎ. ಎಲ್
ಎಲ್. ಬಿ. ಸೆಕ್ರೆಟರಿ, ಮೈಸೂರು ವೀರಶೈವ
ವಿದ್ಯಾಭಿವೃದ್ಧಿ ಸಂಘ.

ಪತ್ರವ್ಯವಹಾರ.

ಶ್ರೀ ಕ್ಷೇತ್ರಕಾಶಿ.

ಪ್ರತಿ ವರ್ಷದಂತೆ ಈ ವರ್ಷದಲ್ಲಿಯೂ ಕೆಳಗೆ ಕಾಣಿಸಿದಂತೆ ವೀರಶೈವ ವಿದ್ಯಾರ್ಥಿಮಂದಿರದಿಂದ ಸಂಸ್ಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು:—ಕಾಶೀ ಗೌರ್ನಮೆಂಟ್ ಕಾಲೇಜಿನಲ್ಲಿ (೧) ಪಂ|| ಮಹಾದೇವಶಾಸ್ತ್ರಿಗಳು ನ್ಯಾಯಮಧ್ಯಮ, ಕಲ್ಕತ್ತಾ ಗೌರ್ನಮೆಂಟ್ ಕಾಲೇಜಿನಲ್ಲಿ (೨) ಪಂ|| ಕಲಿಗಣನಾಥ ಶಾಸ್ತ್ರಿಗಳು "ತರ್ಕತೀರ್ಥ," (೩) ಪಂ|| ಗುರುಮೂರ್ತಿಶಾಸ್ತ್ರಿಗಳು "ಕಾವ್ಯತೀರ್ಥ," (೪) ಪಂ|| ಬಸವರಾಜಶಾಸ್ತ್ರಿಗಳು ಪಗಡದಿನ್ನಿ "ವ್ಯಾಕರಣ ಮಧ್ಯಮ," (೫) ಪಂ|| ಎಸ್. ಚಂದ್ರಶೇಖರ ಶಾಸ್ತ್ರಿಗಳು ಬೆಂಗಳೂರ "ನ್ಯಾಯಪ್ರಥಮ," (೬) ಪಂ|| ಎಂ. ಚಂದ್ರಶೇಖರಶಾಸ್ತ್ರಿಗಳು "ನ್ಯಾಯಪ್ರಥಮ; (೭) ಪಂ|| ಗುರುಬಸವಶಾಸ್ತ್ರಿಗಳು ಗಲಗಲಿ "ಕಾವ್ಯಪ್ರಥಮ."

ವ್ಯವಸ್ಥಾಪಕ
ವೀರಶೈವ ವಿದ್ಯಾರ್ಥಿಮಂದಿರ ಕಾಶಿ.

ವೀರಶೈವ ಹಿತೋಪದೇಶ ಸಂಘ.

ಬೆಳಗಾಂವ ತಾಲ್ಲೂಕ ಪೈಕಿ ಹುದಲಿ ಗ್ರಾಮದ ವೀರಶೈವರು ಶ್ರೀ ನಿರಂಜನಮೂರ್ತಿಗಳಾದ ದಾವಣಗೆರಿ ಮೃತ್ಯುಂಜಯ ಸ್ವಾಮಿಗಳವರನ್ನು ತಾ|| ೨೬-೬-೧೯೨೦ ನೆ ಇಸವಿ ದಿವಸ ಊರ ಜನರೆಲ್ಲರೂ ಕೂಡಿ ಮೆರವಣಿಗೆಯಿಂದ ಬರಮಾಡಿಕೊಂಡು ಅವರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿಸಿ ಕೆಲವು ಉಪನ್ಯಾಸಗಳು ನಡೆದ ನಂತರ ವೀರಶೈವ ಹಿತೋಪದೇಶಕ ಸಂಘವು ಸ್ಥಾಪಿಸಲ್ಪಟ್ಟಿತು. ಉದ್ದೇಶ (೧). ರಾಜಕೀಯ ವಿಷಯ ಅನ್ಯಮತದ ದೂಷಣೆ ಇವೆರಡನ್ನು ಬಿಟ್ಟು ಧರ್ಮನೀತಿ ನಿಜಮತ, ವಗೈರೆ ವಿಷಯಗಳನ್ನು ಉಪನ್ಯಾಸಮಾಡತಕ್ಕದ್ದು. (೨) ಪ್ರತಿ ಸೋಮವಾರಕ್ಕೊಂದಾವರ್ತಿ ದೈವದ ಮಠದಲ್ಲಿ ಸತ್‌ಕಥಾ ಪುರಾಣ ವಗೈರೆ ನಡೆಯತಕ್ಕದು.

ಈ ದಿವ್ಯಸಂಘದ ವತಿಯಿಂದ ಶ್ರೀ ಮೃತ್ಯುಂಜಯಸ್ವಾಮಿಗಳ ಅಧ್ಯಕ್ಷತೆ ಕೆಳಗೆ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಈ ಸಂಘದವರು ಧಾರವಾಡ ಮುರುಘಾಶ್ರೀಬೋರ್ಡಿಂಗಿಗೆ ಪ್ರತಿವರ್ಷ ಬೆಳೆದ ಪೀಕದಲ್ಲಿ ಒಂದು ಹೇರಿಗೆ ಇಂಗ್ರೇಜಿ ಅರ್ಧಸೇರಿನಂತೆ ಕೊಡಲಿಕ್ಕೆ ಒಪ್ಪಿದ್ದಾರೆ. ಮತ್ತು ಈ ಸಂಘದ ವತಿಯಿಂದ ಭಕ್ತಿಯಿಂದ ೩೫ ರೂ. ೪ ಆ. ಕೂಡಿಸಿಕೊಟ್ಟರು.

ಮ್ಯಾನೇಜರ್ ಬಸನಗೌಡಾ ಗೌಡಪ್ಪಾ ಪಾಟೀಲ, ಸಾ|| ಹುದಲಿ.

ಕೊ|| ನಾಟಕ ಸಂಘ.

ವಿ. ವಿ. ನಮ್ಮಲ್ಲಿ ಅಂದರೆ ಸಂಪಗಾಂವ ತಾಲ್ಲೂಕು ಬೆಳಗಾಂವ ಜಿಲ್ಲೆ ಪೈಕಿ ಬೈಲಹೊಂಗಲ ಮುಕ್ಕಾಮಿನಲ್ಲಿ ಸುಪ್ರಸಿದ್ಧ ಕೊಣ್ಣೂರ ಸಂಗೀತ ನಾಟಕ ಕಂಪೆನಿಯು ಇದೇ ತಿಂಗಳ ೧೩ ನೆ ತಾ|| ಗೆ ಬಂದು ತಮ್ಮ ಸಾಮಾಜಿಕ, ನೈತಿಕ, ಪೌರಾಣಿಕ, ಚಿತ್ತಾಹ್ಲಾದಕ, ಸಂಗೀತ ನಾಟಕಗಳನ್ನು ಉತ್ತಮ ಗಾಯಕರಿಂದಲೂ, ಸುಂದರ ನವನಟಿಯರಿಂದಲೂ, ಮಂಜುಲಸ್ವರಯುಕ್ತರಾದ ಬಾಲಕರಿಂದಲೂ ವಿದ್ಯುಲ್ಲತೆಯ ದೀವಿಗೆಗಳಿಂದಲೂ, ಹೊಸ ಡ್ರೆಸ್, ಸೀನ್ಸ್, ಟ್ರಾನ್ಸ್‌ಫರ ಸೀನ್ಸ್, ಚಿತ್ರ ವಿಚಿತ್ರವಾದ ಪರದೆಗಳಿಂದಲೂ ಕೂಡಿಕೊಂಡು ಲೋಕಮಾನ್ಯ ನಾಟಕಗಳನ್ನು ಆರಂಭಿಸಿ ಪ್ರೇಕ್ಷಕರ ಮತ್ತು ಕನ್ನಡ ಭಾಷಾಭಿಮಾನಿಗಳ ಮನೋರಂಜನ ಮಾಡುತ್ತಿರುವರು. ಪ್ರತಿ ನಾಟಕಕ್ಕೆ ಪ್ರೇಕ್ಷಕರಿಗೆ ಥಿಯೇಟರಿನಲ್ಲಿ ಸ್ಥಳ ದೊರೆಯದೆ ನಿರಾಶೆಪಟ್ಟು ಮನೆಗೆ ಹೋಗುತ್ತಿರುವುದನ್ನು ನೋಡಿದರೆ ಅವರ ನಾಟಕಗಳು ಎಷ್ಟು ಪ್ರಿಯತರವಾಗಿರುವವೆಂಬುವದು ಸಹ ಲಕ್ಷದಲ್ಲಿ ಬರುವಂತಿದೆ. ಪ್ರತಿ ಒಬ್ಬ ನಟನಟಿ ಪಾರ್ಟು ತೆಗೆದುಕೊಳ್ಳುವವರು ತಮ್ಮ ಭೂಮಿಕೆಯನ್ನು ಅತ್ಯುತ್ತಮರೀತಿ ಮಾಡಿ ಆನಂದಗೊಳಿಸುತ್ತಿರುವರು. ಈ ಕಂಪೆನಿಯು ಪ್ರಾರಂಭವಾಗಿ ೨೧ ವರ್ಷಗಳಾದವು. ವ್ಯವಸ್ಥೆಯು ಚೆನ್ನಾಗಿರುವುದು. ಉತ್ತಮೋತ್ತಮ ಮರಾಟಿ ಕಂಪೆನಿಗಳಲ್ಲಿ ಇದು ಎರಡನೇದಾಗಿಲ್ಲ. ಇವರು ಮುಂದಿನ ವಾರದಲ್ಲಿ ಬೆಳಗಾಂವಿಗೆ ಹೋಗುವವರಿದ್ದಾರೆ ಈಶ್ವರನು ಈ ಕಂಪೆನಿಯವರಿಗೆ ಆಯುರಾರೋಗ್ಯವನ್ನು ಕೊಟ್ಟು, ಸದಾ ಜಯವನ್ನೀಯಲೆಂದು ಆತನನ್ನು ಅನನ್ಯಭಾವದಿಂದ ಬೇಡಿಕೊಳ್ಳುವೆನು. ಈ ಕಂಪನಿಯವರು ಇದೇ ರೀತಿ ಭಾಷಾ ಮತ್ತು ದೇಶಸೇವೆಯನ್ನು ಮಾಡಲಿಕ್ಕೆ ಕನ್ನಡಿಗರು ಉತ್ತೇಜನ ಕೊಡಲೆಂದು ಅಪೇಕ್ಷಿಸುವ,

ಓರ್ವ ಕನ್ನಡಿಗ.

ವೀರಶೈವ ವಿದ್ಯಾಭಿವೃದ್ಧಿ ಸಂಘ.

ಲಗ್ನದ ಫಂಡು.

(೧) ಮಾಗಡಿ ತಾಲ್ಲೂಕು ತಿಪ್ಪಸಂದ್ರದ ಹೋಬಳಿ ಶಿವನಸಂದ್ರದ ಸಾವಂದಪ್ಪನವರ ಮಕ್ಕಳು ರುದ್ರಪ್ಪನವರಿಗೆ ತುಮಕೂರು ಹೊನ್ನುಡಿಕೆ ಗುರುಪಾದಪ್ಪನವರ ಮಗಳನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ಗಂಡಿನವರಿಂದ ೨ ರೂ, ಹೆಣ್ಣಿನವರಿಂದ ೧ ರೂ ಅಂತೂ ೩ ರೂ. ಗಳು ವೈ. ಕಪನಿಬಟ್ಟರ ಮೂಲಕ ಜಮಾ ೩-೦-೦.

(೨) ಜಿಗಣಿ ಮರಿಯಪ್ಪನವರ ಭಾವಮೈದುಂದಿರು ಮಾದಪ್ಪನವರ ಲಗ್ನದಲ್ಲಿ ಗಂಡಿನವರಿಂದ ೨ ರೂ. ಹೆಣ್ಣಿನವರಿಂದ ೧ ರೂ. ಅಂತೂ ೩ ರೂ. ಗಳು ಬೆಂಗಳೂರು ದೊಡ್ಡಪೇಟೆ ಅಪ್ಪಯ್ಯಶೆಟ್ಟರ ಪುಟ್ಟಪ್ಪನವರ ಮೂಲಕ ಜಮಾ ೩-೦-೦.

(೩) ಗುಬ್ಬಿ ಚನ್ನಮಲ್ಲಶೆಟ್ಟರ ಮನೆ ಲಗ್ನದಲ್ಲಿ ೫ ರೂ. ಶಿವರಾತ್ರಿ ಚಿಕ್ಕಗಂಗಪ್ಪನವರ ಲಗ್ನದಲ್ಲಿ ೫ ರೂ. ಗುಬ್ಬಿ ಕಾಯಿ ಹುಚ್ಚಪ್ಪನವರ ಲಗ್ನದಲ್ಲಿ ೩ ರೂ. ಗುಬ್ಬಿ ಹುಚ್ಚವೀರಪ್ಪನವರ ಮನೆ ಲಗ್ನದಲ್ಲಿ ೩ ರೂ. ಶಿವರಾತ್ರಪ್ಪನವರ ಮಗಳ ಲಗ್ನದಲ್ಲಿ ೫ ರೂ. ಬಿರಾಯಿ ಅಂಗಡಿ ತಿಪ್ಪಯ್ಯನವರ ಲಗ್ನದಲ್ಲಿ ೩ ರೂ. ವಾಣಿ ರುದ್ರಪ್ಪನವರ ಮಗಳ ಲಗ್ನದಲ್ಲಿ ೫ ರೂ. ವಾಣಿ ವೀರಶೆಟ್ಟರ ಮಗಳ ಲಗ್ನದಲ್ಲಿ ೫ ರೂ. ಚನ್ನಬಸವಣ್ಣನವರ ಮಗಳ ಲಗ್ನದಲ್ಲಿ ೧೨ ರೂ. ಬಿಡಸಾಲೆ ಚನ್ನಬಸವಣ್ಣನವರ ಮಗಳ ಲಗ್ನದಲ್ಲಿ ೫ ರೂ. ಸೆಟ್ಟಿಕುಂಟೆ ವೀರಪ್ಪನವರ ಮಗಳ ಲಗ್ನದಲ್ಲಿ ೧೨ ರೂ. ಅಂತೂ ೭೧ ರೂ. ಗಳು ಗುಬ್ಬಿ ಪೇಟೆ ಮ॥ ರಾ॥ ಶೆಟ್ಟರು ಅಪ್ಪಣ್ಣನವರು, ಮ॥ ಯಜಮಾನ್ ಹುಚ್ಚವೀರಪ್ಪನವರು ಇವರ ಮೂಲಕ ಜಮಾ ೭೧-೦-೦.

(೪) ತುಮಕೂರು ಹೊರಪೇಟೆ ಮ॥ ರಾ॥ ಟಿ. ಸಿ. ರೇವಣ್ಣನವರ ಮಗಳು ಚಿ॥ ಸೌ॥ ಪಾರ್ವತಮ್ಮನವರ ಲಗ್ನದಲ್ಲಿ ೨ ರೂ. ಮತ್ತು ದೊಡ್ಡಬಳ್ಳಾಪುರದ ತಾಲ್ಲೂಕು ದೊಡ್ಡರಾಯಪ್ಪನಹಳ್ಳಿ ಅತ್ತಿಗಂಗಪ್ಪನವರ ಕುಮಾರ ಬಿ. ಚಿಕ್ಕಪುಟ್ಟಯ್ಯನವರ ಲಗ್ನದಲ್ಲಿ ೨ ರೂ. ಅಂತೂ ೪ ರೂ. ಗಳು ಬೆಳ್ಳಾವೆ ಗ. ವಿ. ಚನ್ನಬಸೆಟ್ಟಪ್ಪನವರ ಮೂಲಕ ಜಮಾ ೪-೦-೦.

(೫) ಶಿರಾದಲ್ಲಿರುವ ಹೋಳಿ ಹಂಪಯ್ಯನವರ ಮಠದ ಪಟ್ಟಾಧ್ಯಕ್ಷರು ವೇ॥ ಸಿದ್ಧಪ್ಪನವರ ಮೂಲಕ ಲಗ್ನಕಾಲದಲ್ಲಿ ತೆಗೆದು ಕಳುಹಿಸಿದ ಬಾಬತ್ತು ಜಮಾ ರೂ. ೫-೦-೦.

(೬) ಬೆಂಗಳೂರು ಸಿಟಿ ಬಳೇಪೇಟೆ ಮುದ್ದಪ್ಪನವರ ಮಕ್ಕಳು ಬಸಪ್ಪನವರಿಗೆ ಚಾಮರಾಜಪೇಟೆ ಮಂಡಿ ರೇವಣ್ಣನವರ ಮಗಳು ಚಿ॥ ಸೌ॥ ರೇವಕ್ಕನವರನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ಗಂಡಿನವರಿಂದ ೫ ರೂ. ಹೆಣ್ಣಿನವರಿಂದ ೫ ರೂ. ಅಂತೂ ೧೦ ರೂ. ಗಳು ಬಳೇಪೇಟೆ ಮ॥ ರಾ॥ ಗುರುಸಿದ್ಧಪ್ಪನವರ ಮೂಲಕ ಜಮಾ ೧೦-೦-೦.

(೭) ಶಿಕಾರಿಪುರದ ವಿದ್ಯಾವರ್ಧಕ ಸಂಘದ ಸೆಕ್ರೆಟರಿಯವರಾದ ಮ॥ ರಾ॥ ಮದನಬಾವಿ ಚನ್ನವೀರಪ್ಪನವರ ಮೂಲಕ ದೂದಿಹಳ್ಳಿ ಚನ್ನಬಸಪ್ಪನವರಿಂದ ೧ ರೂ. ಹರಿಹರದ ಮುರಿಗೆಪ್ಪನವರಿಂದ ೧ ರೂ. ಪುರಾಣದ ಸಿದ್ಧರಾಮಯ್ಯನವರಿಂದ ೨ ರೂ. ಅರಿಸಿನಗೆರೆ ಶಿವಪ್ಪನವರಿಂದ ೨ ರೂ. ರಮಣೀ ಚನ್ನವೀರಪ್ಪನವರಿಂದ ೧ ರೂ. ಕೊಟ್ರಬಸಪ್ಪನವರಿಂದ ೧ ರೂ. ದಾವಣಗೆರೆ ಚನ್ನಪ್ಪನವರಿಂದ ೨ ರೂ. ಅಂತೂ ೧೦ ರೂ. ಗಳು ಮೇಲ್ಕಂಡವರಿಂದ ಜಮಾ ಬಂದಿದೆ. ಅಂತೂ ೧೦೬-೦-೦. N.B.—ಕಳೆದ ಜೂನ್ ಮಾಹೆ ೨೭ ನೆ ತಾ॥ ನ ಮೈಸೂರು ಸ್ಟಾರಿನಲ್ಲಿ ಪ್ರಕಟವಾಗಿರುವ ಲಗ್ನದ ಫಂಡಿನ ೨ ನೆ ಐಟಂ ಜಮಾ ರೂ. ೬ ಎಂಬುದು ಗಲ್ತಿನಿಂದ ಬದ್ದಿದೆ.

ಜಿ. ಪರಮಶಿವಯ್ಯ ಸೆಕ್ರೆಟರಿ,
ಮೈ॥ ವೀ॥ ವಿ॥ ಫಂಡ್ ಸಂಘ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ. 1-0-0.

15

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. **ಇಲ್ಲ.**

(ಗುಣವಾಗದಿದ್ದರೆ ಹಣ ವಾಪಸ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 29

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಜಾಗ್ರತೆ. ## ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೊಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 36

ನಾವು ಎ. ಆಲ್ ಬ್ಯುಕ್ಯಾಯರ್ ಕ್ಯ ಅಂಡ್‌ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆನಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್‌ಏಜಂಟ್ಸ್, ದಾವಣಗೆರೆ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್‌ಕೊ,
15 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ಎ. ಎ. ಎಸ್. ಪಾಣಿ ಕಂಪನಿ,
15 ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
38 ವೈದ್ಯಶಾಲಾ, ಮೈಸೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 34

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಕ್ಷಿಜಿಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈತೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜುಲೈ ತಾ॥ ೧೧ ರಿಂದ ೧೯೨೦ ನೆಯ ಜುಲೈ ತಾ॥ ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಆಷಾಢ ಬಹುಳ ದಶಮಿಯಿಂದ ಅಧಿಕ ಶ್ರಾವಣಶುದ್ಧ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುಕಟಕ
11	ಭಾನು	ದಶ	19.0	ಭರ	23.14	28
12	[1]ಸೋಮ	ಏಕಾ	13.42	ಕೃತ್ತಿ	19.51	29
13	[2]ಮಂಗಳ	ದ್ವಾ	7.57	ರೋಹಿ	16.2	30
14	ಬುಧ	ತ್ರ-ಉ	1.53 53.49	ಮೃಗ	12.0	31
15	[3]ಗುರು	ಅಮಾ	49.22	ಆರ್ದ್ರಾ	7.45	32
16	[4]ಶುಕ್ರ	ಪಾಡ್ಯ	43.33	ಪುನ	3.43	1
17	ಶನಿ	ಬಿದಿ	28.8	ಆಶ್ಲೇ	56.27	2

(1) ಸರ್ವತ್ರೈಕಾದಶಿ. (2) ಪ್ರದೋಷಃ. (3) ಸರ್ವತ್ರಾಮಾವಾಸ್ಯಾ, ಜ್ಯೋತಿಸ್ತಂಭವ್ರತಂ. (4) ಆದಿಶುಕ್ರವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಕ್ಷಕೃತಾವತಾರಾ ಪಕ್ಷಜ್ಞ ನಷ್ಟತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಭೂಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ರಿತೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸ೯ ೧೯೨೦ ನೆಯ ಇಸವಿ ಜುಲೈ ತಾರೀಖು ೧೮ ನೆಯ ಭಾನುವಾರ. (ಸಂಚಿಕೆ ೨೯

GOVERNMENT OF MYSORE.
ELECTRICAL DEPARTMENT.

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking. Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand. First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...
3. Power Supply for Industries Rated Maximum demand in Electrical Horse Power.		
Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
49 to the Government of Mysore.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ## ಸತ್ಯಮೇವ ಜಯತೇ. **ಸೇವಿಸಿ ನೋಡಿರಿ.**

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. **ಇಲ್ಲಾ.**

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
43 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಸೈಕಲ್ ಸವಾರರಿಗೆ ಭಯವೇ ಇಲ್ಲ.
ಸಿ. ಸಿ. ಎಸ್. ಪಂಚರ್‌ಪ್ರಿವೆಂಟಿಫ್.

ಇದುವರೆವಿಗೂ ನಿಮ್ಮ ಸೈಕಲ್ ಟ್ಯೂಬುಗಳಿಗೆ ಇದ್ದ ಪಂಚರಿನ ಭಯವು ಹೋಯಿತು. ಈ ಪಂಚರ್ ಪ್ರಿವೆಂಟಿಫ್ ಎಂಬ ಪೌಡರನ್ನು ನಿಮ್ಮ ಸೈಕಲ್ ಟ್ಯೂಬುಗಳಿಗೆ ಹಾಕಿದರೆ, ಸೂಜಿಯಿಂದಲೂ, ಮುಳ್ಳುಗಳಿಂದಲೂ ಮತ್ತು ಸಣ್ಣ ಮೊಳೆಗಳಿಂದಲೂ ಯಾವ ಅಪಾಯವೂ ಆಗುವುದಿಲ್ಲ. ಎಂಥಾ ರಸ್ತೆಯಲ್ಲಾದರೂ, ಎಷ್ಟು ಮೈಲಿಗಳಾದರೂ ನಿರ್ಭಯವಾಗಿ ಸವಾರಿ ಮಾಡಬಹುದು. ಈ ನಮ್ಮ ಪ್ರಿವೆಂಟಿಫ್ ಪೌಡರನ್ನು ಹಾಕಿದ ನಂತರ ನೀವೇ ಸೂಜಿಯಿಂದ ಚುಚ್ಚಿ ನಿಮ್ಮ ಮಿತ್ರರಿಗೆ ತೋರಿಸಬಹುದು. ನಮ್ಮ ಷಾಪಿನಲ್ಲಿ ಈ ಪೌಡರನ್ನು ಹಾಕಿರತಕ್ಕ ಚಕ್ರವನ್ನು ಇಟ್ಟಿರುತ್ತೇವೆ. ಕೊಳ್ಳತಕ್ಕವರು ಯಾರು ಬೇಕಾದರೂ ಬಂದು ಸೂಜಿಯಿಂದಲೂ ಮತ್ತು ಮೊಳೆಯಿಂದಲೂ ಚುಚ್ಚಿ ಪರೀಕ್ಷಿಸಬಹುದು. ಹಾಕತಕ್ಕ ವಿಧಾನ ಮುಂತಾದ್ದು ಪೆಟ್ಟಿಗೆ ಜೊತೆಯಲ್ಲಿರುತ್ತೆ. ತ್ವರೆಮಾಡಿ ತರಿಸಿಕೊಳ್ಳಿ.

ಎರಡು ಚಕ್ರಗಳಿಗೆ ಸಾಕಾಗುವ ಪೌಡರ್ ಮುಂತಾದ್ದು ಇರುವ ಪೆಟ್ಟಿ 1 ಕ್ಕೆ ಕ್ರಯ ರೂ. 6-0-0 ಮಾತ್ರ.
ಟಪ್ಪಾಲ್ ಮತ್ತು ಪ್ಯಾಕಿಂಗ್ ಪ್ರತ್ಯೇಕ.

ನಮ್ಮ ವಿಳಾಸ:—ಸಿಟಿ ಸೈಕಲ್ ಸ್ಟೋರ್ಸ್,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್‌ಕೊ,
16 ಪೋಸ್ಟ್‌ಬಾಕ್ಸ್ ನಂ. 265, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
39 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. **ಇಲ್ಲ.**

(ಗುಣವಾಗದಿದ್ದರೆ ಹಣ ವಾಪಸ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 30

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ 1-0-0.

16

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜುಲೈ ತಾ|| ೧೮ನೆಯ ಭಾನುವಾರ.

ಪಾರ್ಲಿಮೆಂಟಿನಲ್ಲಿ ಡಯರ್ ಸೇನಾನಿ ಶಿಕ್ಷೆಯ ಚರ್ಚೆ; ಆಂಗ್ಲಸದ್ಧರ್ಮದ ಪ್ರಕಾಶ.

ಕಳೆದ ತಾ|| ೮ ರಲ್ಲಿ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ (ಪ್ರಜಾಪ್ರತಿನಿಧಿ ಸಭೆ) ಯಲ್ಲಿ ನಡೆದಷ್ಟು ಪ್ರಬಲವಾದ ಚರ್ಚೆಯು ಈ ಮಧ್ಯೆ ಬಹುಕಾಲದಿಂದ ನಡೆದಿರಲಿಲ್ಲ. ವಿಷಯವು ಅಮೃತಸರದ ಪ್ರಜಾವಧೆಯನ್ನು ಮಾಡಿಸಿದ ಜನರಲ್ ಡಯರ್ ವಿಷಯದ ಚರ್ಚೆಯಾಗಿದ್ದಿತು. ಇದನ್ನು ನೋಡುವುದಕ್ಕಾಗಿ ಬಹುಮಂದಿ ಪ್ರಮುಖರು ಸಭೆಯನ್ನಲಂಕರಿಸಿದ್ದರು. ಅವರಲ್ಲಿ ಜನರಲ್ ಡಯರ್, ಸರ್ ಮೈಕೇಲ್ ಓಡ್ವಯರ್, ಸರ್ ಫ್ರಾನ್ಸಿಸ್ ಎಂಗ್ ಹಸ್ಬೆಂಡ್‌ರವರೂ, ಗಾಯಕ್ವಾರ್ ಮಹಾರಾಜರೂ, ಮೈಸೂರ ಶ್ರೀಮದ್ಯುವರಾಜರೂ, ಜಾಲ್ವಾರ್, ಕಪೂರ್ಥಲಾ, ಕೂಚ್‌ಬಿಹಾರ್, ಅಲ್ವಾರ್, ನವನಗರ್ ಸಂಸ್ಥಾನಗಳ ಪ್ರಭುಗಳೂ ಸಹ ದಯಮಾಡಿಸಿದ್ದರು.

ಇದಕ್ಕೆ ಮುಂಚೆ ಜನರಲ್ ಡೈಯರಿನ ಕೃತ್ಯವನ್ನು ಕುರಿತು ವಿಚಾರ ಮಾಡಿದ ಹಂಟರ್ ಸಂಘದವರು ಆತನು ಮಾಡಿದ ಕೆಲಸವು ತಪ್ಪಿತವೆಂದು ಹೇಳಿ ಇತಃಪರಃ ಭರತಖಂಡದಲ್ಲಿ ಆತನಿಗೆ ಕೆಲಸ ಕೊಡಕೂಡದೆಂದು ಹೇಳಿದ್ದರು. ಸೀಮೆಯಲ್ಲಿ ವಿಚಾರ ಮಾಡಿದ ಸೈನಿಕ ಸಂಘದವರಾದರೊ ಡಯರಿಗೆ ಆಂಗ್ಲ ಸಾಮ್ರಾಜ್ಯದಲ್ಲೆಲ್ಲೂ ಕೆಲಸ ಕೊಡಕೂಡದೆಂದು ಹೇಳಿರುವರು. ಪಾರ್ಲಿಮೆಂಟಿನಲ್ಲಿ ಈ ವಿಷಯವು ಚರ್ಚೆಗೆ ಬಂದಾಗ್ಗೆ ಜ|| ಡಯರಿಗೆ ಪ್ರತಿಕೂಲರಾದವರೇ ಅಲ್ಲದೆ ಅನುಕೂಲರಾದವರೂ ಅನೇಕರಿದ್ದರು. ಸ್ಟೇಟ್ ಸೆಕ್ರಟರಿ ಮಿ|| ಮಾಂಟೊಗ್‌ರವರು ಈ ಚರ್ಚೆಯನ್ನಾರಂಭಿಸಿದಾಗ್ಗೆ ಆಡಿದ ಮಾತುಗಳೂ, ಪ್ರತಿಪಕ್ಷದವರ ಅಭಿಪ್ರಾಯಗಳನ್ನು ಖಂಡಿಸುವಾಗ್ಗೆ ಮಾಡಿದ ವಾದಗಳೂ ಸಹ ಅವರಲ್ಲಿರುವ ನಿಶಿತವಾದ ಭರತಖಂಡಾಭಿಮಾನವನ್ನು ಮತ್ತೊಂದು ಸಲ ಪ್ರಪಂಚದ ಮುಂದೆ ತೋರ್ಪಡಿಸಿದುವು. ಅವರ ವಾದದ ಮುಖ್ಯಾಭಿಪ್ರಾಯವೇನೆಂದರೆ:—

“ಜನರಲ್ ಡಯರ್‌ರವರು ಪ್ರಜೆಗಳ ಮೇಲೆ ತುಪಾಕಿಗಳನ್ನು ಹಾರಿಸಿದರು. ಪಂಜಾಬ್ ಜನರಿಗೆ ಇದರಿಂದ ಬುದ್ಧಿ ಕಲಿಸುತ್ತೇವೆಂದು ಯೋಚಿಸಿ ಈ ಕ್ರೂರ ಕಾರ್ಯವನ್ನು ನಡೆಯಿಸಿದರು. ಅವರು ಮಾಡಿದ ಕೆಲಸಕ್ಕೆ ಮಿತಿಯೇ ಇರಲಿಲ್ಲ. ಪ್ರಜೆಗಳಿಗೆ ಭಯವನ್ನು ಹುಟ್ಟಿಸಿ ಅಗೌರವಪಡಿಸಿ ಅಡಗಿಸಿ ಭರತಖಂಡವನ್ನು ಆಂಗ್ಲಜನರು ಪರಿಪಾಲಿಸಬೇಕೆಂದು ಯೋಚಿಸಿರುವರೊ? ಅಥವಾ ಅಲ್ಲಿಯ ಪ್ರಜೆಗಳ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ಆ ದೇಶವನ್ನು ಪಾಲಿಸಬೇಕೆಂದಿರುವರೊ? ಭಾರತೀಯರಿಗೆ ಆಂಗ್ಲ ಸಾಮ್ರಾಜ್ಯದಲ್ಲಿ ಸಮಾನ ಭಾಗಿತ್ವವನ್ನು ಕಲ್ಪಿಸಿಕೊಡುವುದಕ್ಕಾಗಿ ಒಂದು ಕಡೆ ನಾವು ಸಂಸ್ಕರಣ ಶಾಸನವನ್ನು ಏರ್ಪಡಿಸಿದ್ದೇವೆ. ಮತ್ತೊಂದು ಕಡೆ ಹೀಗೆ ಪ್ರಜೆಗಳನ್ನು ಭಯಕಂಪಿತರನ್ನಾಗಿ ಮಾಡುವ ಪರಿಪಾಲನವನ್ನವಲಂಬಿಸುವುದಾದರೆ ನಮ್ಮ ಸಂಸ್ಕರಣ ಶಾಸನವು ನಿಷ್ಫಲವಾಗುತ್ತದೆ. ದೇಶದಲ್ಲಿ ಅಶಾಂತಿಯುಂಟಾಗದಂತೆ ಮಾಡುವುದಕ್ಕೆ ಅಲ್ಲಿಯ ಪ್ರಜೆಗಳೇ ನಮಗೆ ಸಹಾಯಮಾಡುತ್ತಿದ್ದಾರೆ. ಅಮೃತಸರದ ಗದ್ದಲದಲ್ಲಿ ೩೭ ಸಲ ತುಪಾಕಿಗಳನ್ನು ಹಾರಿಸಿದರು. ಅದರಲ್ಲಿ ಆಂಗ್ಲ ಸೈನಿಕ ಧರ್ಮವನ್ನು ಅತಿಕ್ರಮಿಸಿದರು. ಅದನ್ನೇ ಪ್ರಭುತ್ವದವರು ಆಕ್ಷೇಪಿಸಿದುದು. ಆಂಗ್ಲ ಸಾಮ್ರಾಜ್ಯವನ್ನು ನಾವು ಯಾವ ಉನ್ನತಾದರ್ಶದ ಮೇಲೆ ನಿರ್ಮಿಸಿದೆವೋ ಆ ಭಾವಕ್ಕೆ ಈ ಕಾರ್ಯವು ವ್ಯತಿರಿಕ್ತವಾಗಿರುವುದು. ಭಾರತೀಯರು ಹೇಳಿದಂತೆ ಕೇಳಿಕೊಂಡು ಬಾಗಿ ನಡೆದುಕೊಳ್ಳುತ್ತಿದ್ದವರೆಗೂ ಚೆನ್ನಾಗಿದ್ದಿತೆಂದೂ, ಯಾವಾಗ ಅವರು ವಿದ್ಯಾವಂತರಾಗಿ ದೇಶವನ್ನು ಉದ್ಧರಿಸಿಕೊಳ್ಳಲು ತತ್ಪರರಾಗುವರೋ ಆಗ ಅವರು ಆಂದೋಳನಕಾರಕರಾಗುವರೆಂದೂ ಕೆಲರು ಅಭಿಪ್ರಾಯಪಡುತ್ತಾರೆ. ಆದರೆ ರಾಜ್ಯಪರಿಪಾಲನೆಯಲ್ಲಿ ನಮ್ಮ ವರ್ಣಾಧಿಕ್ಯವಿರಬೇಕೆ? ನಮಗೆ ಪ್ರಜೆಗಳು ದಾಸರಾಗಿಯೇ ಇರಬೇಕೆ? ಅಥವಾ ಅವರೂ ನಾವೂ ಒಂದೇ ಎಂಬ ಸಮಭಾವನೆಯಿಂದ ಕಲಸಿ ನಡೆದುಕೊಂಡುಹೋಗಬೇಕೆ? ಮೊದಲನೆಯವರ ಸಿದ್ಧಾಂತವನ್ನೇ ಅನುಸರಿಸುವುದಾದರೆ ಹಿಂದುಮುಂದೆ ನೋಡಬೇಕಾದವಶ್ಯಕತೆಯಿಲ್ಲದೆ ಕತ್ತಿಯನ್ನೆತ್ತಿ ಹಿಡಿದು ಪರಿಪಾಲನೆ ಮಾಡಬೇಕು. ಹಾಗೆ ಮಾಡುವುದಾದರೆ ಪ್ರಪಂಚದ ನಾಗರಿಕ ಪ್ರಜೆಗಳೆಲ್ಲರೂ ನಮ್ಮನ್ನು ದ್ವೇಷಿಸಿ ದೇಶದಿಂದ ಹೊರಕ್ಕೆ ದೂಡಿಬಿಡುವರು. ಆದುಕಾರಣ ಆಂಗ್ಲ ಸಾಮ್ರಾಜ್ಯವು ಸ್ಥಿರವಾಗಿರುವಂತೆಯೂ, ಆಂಗ್ಲ ಭಾರತೀಯ ಸಂಬಂಧವು ದೃಢವಾಗುವಂತೆಯೂ ತಕ್ಕ ನಿರ್ಣಯವನ್ನು ಈ ಸಭೆಯವರು ಮಾಡಬೇಕು” ಎಂದು ಹೇಳಿದರು.

ಇದಕ್ಕೆ ವಿರುದ್ಧವಾಗಿ ಸರ್ ಎಡ್ವರ್ಡ್ ಕಾರ್ಸನ್, ಜನರಲ್ ಹಂಟರ್‌ವೆಸ್ಟನ್, ಕರ್ನಲ್ ಜೇಮ್ಸ್, ಜಾನ್ ಹೇಕ್ಸ್, ಚಾರ್ಲ್ಸ್‌ಪಾಮರ್, ಗ್ರಿಸ್ ಈ ಸಭಿಕರುಗಳು ವಾದಮಾಡಿದರು. ಇವರುಗಳ ಅಭಿಪ್ರಾಯವೇನೆಂದರೆ:—“ಮಾಂಟೊಗ್‌ರವರ ವಾದವು ಯುಕ್ತವಾಗಿಲ್ಲ. ಡಯರು ೩೪ ವರ್ಷದಿಂದ ಸರ್ಕಾರಿ ಉದ್ಯೋಗದಲ್ಲಿದ್ದವರು. ಅವರಿಗೆ ಅನ್ಯಾಯವಾಗಕೂಡದು. ಅವರ ವಾಙ್ಮೂಲವನ್ನೆಲ್ಲಾ ಕೇಳಿ ನ್ಯಾಯವಿಮರ್ಶೆ ಮಾಡಿ ಅವರನ್ನು ಶಿಕ್ಷಿಸುವಿರಾ? ಅಥವಾ ಯಾವುದನ್ನೂ ಮಾಡದೆ ಮುಂದಾಗಿಯೇ ಅವರನ್ನು ಅಗೌರವಪಡಿಸುತ್ತೀರಾ? ಭರತಖಂಡದಲ್ಲಿ ವಿಪ್ಲವವುಂಟಾಯಿತು. ಅದನ್ನು ಡಯರು ಶಾಂತಪಡಿಸಿದರು. ಅವರ ದೋಷವೇನು? ನಾವು ಅವರ ವಿಷಯದಲ್ಲಿ ಅಷ್ಟು ಕಠಿನವಾದ ಪಟ್ಟನ್ನು ಹಿಡಿಯಕೂಡದು. ಮಿತತ್ವವನ್ನು ತೋರ್ಪಡಿಸಬೇಕು. ಅಮೃತಸರದಲ್ಲಿ ಆಗಿನ ವಿಪರೀತ ಸ್ಥಿತಿಯಲ್ಲಿ ಎಷ್ಟು ಸೈನ್ಯವನ್ನು ಉಪಯೋಗಿಸಬೇಕಾಗಿತ್ತೋ ಅದು ಇತರರಿಗೆ ಹೇಗೆ ತಿಳಿಯುವುದು? ಅದು ಸೇನಾಪತಿ ಡೈಯರಿಗೇ ತಿಳಿಯತಕ್ಕದು. ಭರತಖಂಡದಲ್ಲಿ ಅಂಥ ವಿಪ್ಲವವು ಇದುವರೆಗೂ ಜರುಗಿರಲಿಲ್ಲ. ಡಯರು ಅದನ್ನನುಸರಿಸಿದರು. ಅವರು ಭರತಖಂಡವನ್ನುಳುಹಿದರು. ಅವರು ಹಾಗೆ ಮಾಡದಿದ್ದರೆ ಬಹಳ ಅನರ್ಥವಾಗುತ್ತಿದ್ದಿತು. ನಾವು ಈಗ ಅವರಿಗೆ ನ್ಯಾಯವನ್ನುಂಟುಮಾಡಿಕೊಡಬೇಕು. ಈಗ ಮಾಂಟೊಗ್‌ರವರು ಹೇಳಿದ ಮಾತುಗಳನ್ನು ಕೇಳಿದ ಬಳಿಕ ಪೂರ್ವದೇಶದಲ್ಲಿ ನಮ್ಮ ಸೇನೆಗಳಿಗೆ ನಂಬುಗೆಯು ತಪ್ಪಿಹೋಗುವುದು. ಒಂದುವೇಳೆ ಡಯರ್‌ರವರು ತಪ್ಪಿತವನ್ನು ಮಾಡಿದರೆಂದು ಇಟ್ಟುಕೊಂಡರೂ ಅದರ ಫಲವನ್ನು ಅವರೊಬ್ಬರೇ ಅನುಭವಿಸಬೇಕೆ? ಇಂಥ ಪದ್ಧತಿಯನ್ನು ನಾವು ಹಾಕಿಬಿಟ್ಟರೆ ಸಮಯಬಿದ್ದಾಗ ನಮ್ಮ ಉದ್ಯೋಗಿಗಳು ಏನೆಂದುಕೊಳ್ಳುವರು! ೬ ತಿಂಗಳೋ ವರ್ಷವೋ ಕಳೆದರೆ ಮಂತ್ರಿವರ್ಗದವರೂ ಕಾಮನ್ಸ್ ಸಭೆಯವರೂ ಯಾವ ತೊಸಗಲನ್ನು ತೆಗೆದು ತಂಟೆ ತಂದಿಕ್ಕುವರೋ ಎಂದು ಭಯಪಟ್ಟುಕೊಳ್ಳುವರು. ಅಧಿಕಾರಿಗಳೂ ಕೂಡ ತಮ್ಮ ಧರ್ಮವನ್ನು ಸರಿಯಾಗಿ ನೆರವೇರಿಸಲಾರರು.”

ಈ ರೀತಿಯಾಗಿ ಮಾಡಿದ ವಾದವನ್ನೆಲ್ಲಾ ಖಂಡಿಸಿದವರಲ್ಲಿ ಮಿ|| ಗಳಾದ ಅಸ್ಕ್ವಿತ್, ಬೀಸ್ಲೂರ್, ಅರ್ನಾಲ್ಡ್‌ಬೆನ್ನೆಟ್, ಕರ್ನಲ್ ವೆಡ್ಜ್‌ವುಡ್, ಕ್ಲೈನ್ಸ್‌ರವರು ಪ್ರಮುಖರು. ಇವರುಗಳ ವಾದದ ಮುಖ್ಯಾಭಿಪ್ರಾಯವೇನೆಂದರೆ:—

“ಡಯರಿಗೆ ಈಗ ವಿಧಿಸಿರುವ ಶಿಕ್ಷೆಯನ್ನು ಇಂಡ್ಯಾ ಸರ್ಕಾರವೂ ಆಂಗ್ಲ ಮಂತ್ರಿಮಂಡಲವೂ ಸೈನಿಕ ಸಂಘದವರೂ ಒಪ್ಪಿಕೊಂಡಿದ್ದಾರೆ. ವಿಚಾರಣೆಯೆಲ್ಲಾ ಸರಿಯಾಗಿ ಜರುಗಿದೆ. ಅಮೃತಸರದ ಸಿವಿಲ್ ಅಧಿಕಾರಿಗಳು ತಮ್ಮ ಧರ್ಮವನ್ನು ಸರಿಯಾಗಿ ನೆರವೇರಿಸಲಿಲ್ಲ. ಇಂಡ್ಯಾ ಸರ್ಕಾರದವರೂ ಕೂಡ ಅವರ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲಾರರು. ಪ್ರಜೆಗಳಿಗೆ ಮಾಡಿದ ದಾರುಣ ಕೃತ್ಯಕ್ಕೆ ಯಾರು ಬಾಧ್ಯರೋ ತಿಳಿದು ಅವರನ್ನು ಶಿಕ್ಷಿಸಿ ಭಾರತೀಯರಿಗೆ ನ್ಯಾಯವನ್ನುಂಟುಮಾಡಿ ಕೊಡಬೇಕು. ಮಾಂಟೊಗ್‌ರವರ ಮೇಲೆ ಕೆಲವರು ಅಲ್ಲಸಲ್ಲದ ನಿಂದೆಯನ್ನಾರೋಪಿಸುವರು. ಅದು ಸರಿಯಲ್ಲ. ಸರ್ಕಾರದವರು ಮಾಡಿದ ಕೆಲಸವು ಸರಿಯಾಗಿದೆ. ಡಯರು ಆಂಗ್ಲರಿಗೆ ಅಪಾರವಾದ ಕಳಂಕವನ್ನುಂಟುಮಾಡಿದರು. ಭರತಖಂಡದಲ್ಲಿ ಅಗಾಧವಾದ ರಾಜದ್ರೋಹಕೂಟವೇನೂ ಇಲ್ಲ. ಅಲ್ಲಿಯ ಪ್ರಜೆಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗುವಂತೆ ನಾವು ರಕ್ಷಿಸಬೇಕು. ಅಧಿಕಾರಿಗಳು ಈ ವಿಷಯವಾಗಿ ಮಾಡಿದ ನಿರ್ಣಯವು ಸರಿಯಾಗಿದೆ. ಅದನ್ನು ಈ ಸಭಿಕರು ಪರಿಪಾಲಿಸುವುದೇ ಯುಕ್ತವು.”

ಸೈನಿಕ ಮಂತ್ರಿಯವರಾದ ಮಿ|| ವಿನ್‌ಸ್ಟನ್ ಚರ್ಚಿಲ್‌ರವರು:—“ವಿಚಾರಣೆ ನಡೆಯಿಸಿದ ಸೈನಿಕ ಸಭೆಯವರಲ್ಲಿ ಭಿನ್ನಾಭಿಪ್ರಾಯವೇನೂ ಬಂದಿಲ್ಲ. ಎಲ್ಲರೂ ವಿಚಾರ ಮಾಡಿ ಡಯ್ಯರನ್ನು ಉದ್ಯೋಗದಿಂದ ತಪ್ಪಿಸಿದೆವು. ಜಲಿಯನ್‌ವಾಲಾ ತೋಟದಲ್ಲಿ ಅವರು ನಡೆಯಿಸಿದ ಘೋರ ರಕ್ತಪಾತವು ಮತ್ತೆಲ್ಲೂ ಜರುಗಿದುದಿಲ್ಲ. ಅಲ್ಲಿ ಸೇರಿದ್ದ ಪ್ರಜೆಗಳು ಯಾರ ಮೇಲೂ ತಿರುಗಿ ಬಿದ್ದವರಲ್ಲ. ಅವರ ಬಳಿಯಲ್ಲಿ ಆಯುಧಗಳಿದ್ದುವೆ? ಇದನ್ನೆಲ್ಲಾ ಸೈನಿಕೋದ್ಯೋಗಿಯು ಗಮನಿಸಬೇಕಾಗಿದ್ದಿತು. ಪ್ರಜೆಗಳನ್ನು ಭಯಪಡಿಸಿ ಆಳುವ ವಿಧಾನಕ್ಕೆ ಯಾರೂ ಒಪ್ಪಕೂಡದು. ಡಯ್ಯರು ಭರತಖಂಡವನ್ನುದ್ಧರಿಸಲಿಲ್ಲ. ಅವರು ಸೂಚಿಸುವ ಸಿದ್ಧಾಂತವನ್ನು ಅನುಸರಿಸಿ ಆಂಗ್ಲ ಸಾಮ್ರಾಜ್ಯವು ಭರತಖಂಡದಲ್ಲಿ ನಿಂತಿಲ್ಲ. ಅದಕ್ಕೆ ಭಿನ್ನವಾದ ಧರ್ಮವನ್ನೇ ಅದು ಆಶ್ರಯಿಸಿರುವುದು. ದೇಹಬಲಧರ್ಮವನ್ನಾಶ್ರಯಿಸಿ ಯಾವ ಸಾಮ್ರಾಜ್ಯವೂ ನಿಲ್ಲಲಾರದು. ಅದಕ್ಕೆ ಅಂಗೀಕರಿಸಿದ ಸಾಮ್ರಾಜ್ಯಕ್ಕೆ ವಿನಾಶವುಂಟಾಗುವುದು. ಪ್ರಜೆಗಳೊಡನೆ ವಿಶ್ವಾಸದಿಂದ ಕಲೆತು ಕೆಲಸಮಾಡುವುದೇ ಆಂಗ್ಲರಿಗೆ ಸಮ್ಮತವಾದುದು. ಆ ರಾಜನೀತಿಯು ಭರತಖಂಡದಲ್ಲಿ ಜಯಶಾಲಿಯಾದಂತೆ ಮತ್ತೆಲ್ಲೂ ಆಗಿಲ್ಲ.”

ಜನರಲ್ ಡಯ್ಯರು ತಮ್ಮ ಕೆಲಸದ ಸಂಬಂಧವಾಗಿ ಹೇಳಿಕೊಂಡ ಸ್ಟೇಟ್‌ಮೆಂಟಿನಲ್ಲಿ:—“ನನ್ನ ಹೇಳಿಕೆಯನ್ನು ಸೈನಿಕ ಸಂಘದವರು ಕೇಳಿಕೊಳ್ಳಲಿಲ್ಲ. ನಾನು ಅಮೃತಸರದಲ್ಲಿ ನಡೆಯಿಸಿದ ಕೆಲಸವು ನ್ಯಾಯವಾದುದು. ಆಗಿನ ಸಂದರ್ಭಕ್ಕೆ ಹಾಗೆ ಮಾಡುವುದೇ ಯುಕ್ತವಾಗಿದ್ದಿತು. ಅದನ್ನು ನಾನು ಸದುದ್ದೇಶದಿಂದಲೇ ಮಾಡಿದೆ. ಅದಕ್ಕೆ ತಕ್ಕ ಕಾರಣವಿಲ್ಲದೆ ಇರಲಿಲ್ಲ. ನಾನು ನಿರಪರಾಧಿ. ನನಗೆ ನ್ಯಾಯವನ್ನು ಅನುಗ್ರಹಿಸಬೇಕು. ನನಗೆ ಉದ್ಯೋಗದಿಂದ ತೊಲಗಿಸುವ ಶಿಕ್ಷೆ ವಿಧಿಸಿರುವುದನ್ನು ತೆಗೆದುಹಾಕಬೇಕು. ನಾನು ಉದ್ಯೋಗದಲ್ಲಿರುವುದರಿಂದ ಮೇಲ್ಪಟ್ಟ ಉದ್ಯೋಗಿಗಳಿಗೆ ಕಷ್ಟ ಬರುವುದಾಗಿದ್ದರೆ ಅವರ ರಕ್ಷಣೆಗಾಗಿ ನನ್ನನ್ನು ಪಾತಾಳಕ್ಕೆ ತುಳಿಯುವುದು ಧರ್ಮವಲ್ಲ. ಪಂಜಾಬಿನಲ್ಲಿ ರಾಜದ್ರೋಹಲಕ್ಷಣವು ತೋರಿದುದರಿಂದ ನಾನು ವಿವೇಕ ಪೂರ್ವಕವಾಗಿ ಪೂರ್ವಾಪರವಿಚಾರಮಾಡಿ ಆ ಕೆಲಸವನ್ನು ಮಾಡಿದುದರಿಂದಲೇ ಶಾಂತಿಯುಂಟಾಯಿತು. ಉಳಿದಕಡೆ ವಿದ್ರೋಹ ಹುಟ್ಟುವುದೂ ತಪ್ಪಿತು. ನಾನು ಹಾಗೆ ಮಾಡದಿದ್ದರೆ ಆಂಗ್ಲ ಪ್ರಭುತ್ವಕ್ಕೇ ಎಷ್ಟೋ ಹಾನಿ ಹುಟ್ಟುತ್ತಿದ್ದಿತು. ಇದನ್ನೆಲ್ಲಾ ವಿಚಾರಮಾಡಿ ನನ್ನ ನಿರ್ದೋಷಿತ್ವವನ್ನು ದೃಢಪಡಿಸಬೇಕು. ವಿಪ್ಲವವನ್ನಡಗಿಸಿದವರನ್ನು ರಕ್ಷಿಸುತ್ತೇವೆಂದು ಇಂಡ್ಯಾ ಸರ್ಕಾರದವರು ಅಭಯ ಕೊಟ್ಟಿದ್ದರು. ಆದುಕಾರಣ ನನ್ನನ್ನು ಉದ್ಯೋಗದಿಂದ ತೊಲಗಿಸದೆ ರಕ್ಷಿಸಬೇಕು.”

ಇದೆಲ್ಲಾ ಮುಗಿದ ಬಳಿಕ ಸ್ಟೇಟ್ ಸೆಕ್ರಟರಿಯವರು ಸರ್ವಾಂಗ ಸುಂದರವಾದ ಭಾಷಣವೊಂದನ್ನು ಮಾಡಿದರು. ಅದರ ಮುಖ್ಯಾಶಯವೇನೆಂದರೆ:—

“ಈಗ ಪ್ರಭುತ್ವದವರು ಮಾಡಿದ ನಿರ್ಣಯವನ್ನು ಸಭಿಕರು ಒಪ್ಪಿಕೊಳ್ಳಬೇಕು; ಇಲ್ಲವೆ ತಿರಸ್ಕರಿಸಬೇಕು. ಹಂಟರ್ ಸಂಘದವರು ಬಹುದೂರ ಪರ್ಯಾಲೋಚಿಸಿ ತೀರ್ಮಾನಿಸಿರುವುದರಲ್ಲಿ ತಮ್ಮ ಧರ್ಮವನ್ನು ಸರಿಯಾಗಿ ನೆರವೇರಿಸಿರುವರು. ಅದರ ಯೂರೋಪ್ಯ ಸಭಿಕರನ್ನು ಕುರಿತು ಕೆಲರು ಆಕ್ಷೇಪಿಸಿದುದು ಯೋಗ್ಯವಲ್ಲ. ಅದರಂತೆ ಭಾರತೀಯ ಸಭಿಕರನ್ನು ಕುರಿತು ಮಾಡಿದ ಆಕ್ಷೇಪಣೆಯೂ ಸರಿಯಲ್ಲ. ಪ್ರಜೆಗಳು ತೆವಳಿಕೊಂಡು ಹೋಗಬೇಕೆಂದೂ, ಆಂಗ್ಲಜನರನ್ನು ಕಂಡರೆ ಸಲಾಮು ಮಾಡಬೇಕೆಂದೂ ಅಮೃತಸರದ ಅಧಿಕಾರಿಗಳು ವಿಧಿಸಿದುದು ಸರಿಯಲ್ಲ. ಪ್ರಜೆಗಳನ್ನು ಅಗೌರವಪಡಿಸುವುದಕ್ಕಾಗಿ ಹೀಗೆ ಮಾಡಿದಂತಿದೆ. ಭಾರತೀಯರ ಪ್ರೀತಿವಿಶ್ವಾಸಗಳಿಗೆ ನಾವು ಪಾತ್ರರಾಗಬೇಕಾಗಿದ್ದರೆ ನಾವು ಅವರೆಲ್ಲರೊಡನೆಯೂ ಸಮಾನಭಾವದಿಂದ ಪ್ರವರ್ತಿಸಿ ಆದರಿಸಬೇಕು. ಪಾರ್ಲಿಮೆಂಟಿನವರು ಆ ವಿಷಯದಲ್ಲಿ ಕಟ್ಟುನಿಟ್ಟನ್ನೇರ್ಪಡಿಸಬೇಕು. ಪ್ರಜೆಗಳ ಸ್ವಾತಂತ್ರ್ಯಕ್ಕೆ ಭಂಗತರುವಂಥ ಹಳೆಯ ಶಾಸನಗಳಿದ್ದರೆ ಅವನ್ನು ಬದಲಾಯಿಸಬೇಕು. ಪ್ರಜೆಗಳನ್ನು ಭಯಪಡಿಸುವ ಪದ್ಧತಿಯು ಒಂದು ಸಲ ಒಪ್ಪಿತವಾದರೆ ಅದೇ ಮುಂದೆ ನಡೆದು ಬರುವುದು. ಅದಕ್ಕೆ ಮಿತಿಮೇರೆಗಳು ಕಾಣಿಸವು. ಅಂಥ ಪದ್ಧತಿಯು ಸಾಮ್ರಾಜ್ಯಧರ್ಮಕ್ಕೂ ನೂತನಭಾವವಿಕಾಸಗಳಿಗೂ ವ್ಯತಿರೇಕವಾದುದೆಂತಲೂ, ಅದನ್ನನುಸರಿಸುವುದರಿಂದ ಪರಿಪಾಲನ ವಿಧಾನವು ಸುಗಮವಾಗುವುದಿಲ್ಲವೆಂತಲೂ ಆಂಗ್ಲ ಪ್ರಜೆಗಳೂ ಭಾರತೀಯರೂ ಏಕಮತ್ಯದಿಂದ ಕಲಕಲವನ್ನೆಬ್ಬಿಸುವವರೆಗೂ ಆ ಪದ್ಧತಿಯು ಜರುಗುತ್ತಲೇ ಇರುವುದು. ಆಂಗ್ಲ ಸಾಮ್ರಾಜ್ಯದಲ್ಲಿ ಭರತಖಂಡಕ್ಕೆ ಸಮಾನವಾದ ಹಕ್ಕನ್ನು ಕೊಡಬೇಕು. ಮತ್ತು ಅವರಿಗೆ ನಾವು ಹೀಗೆ ಹೇಳಬೇಕು. ಏನೆಂದರೆ:—‘ನಮ್ಮ ಪ್ರಾಣವು ನಮಗೆಷ್ಟು ಪವಿತ್ರವೋ ಭಾರತೀಯರ ಪ್ರಾಣವೂ ಅಷ್ಟೇ ಪವಿತ್ರವಾದುವುಗಳು. ಭಾರತೀಯರ ಗೌರವವನ್ನು ನಾವು ಮೊದಲು ಕಾಪಾಡಿ ಅದರಿಂದ ಆಂಗ್ಲೇಯರ ಗೌರವವನ್ನು ಕಾಪಾಡಬೇಕೆಂದಿರುವೆವು. ದೇಶದಲ್ಲಿ ಅರಾಜಕವಿಲ್ಲದಂತೆ ಮಾಡಿ ನಾವು ಪ್ರಜಾಸಂಘಗಳನ್ನು ವೃದ್ಧಿಪಡಿಸಬೇಕೆಂದಿರುವೆವು.”

ಈ ಚರ್ಚೆಗಳೆಲ್ಲಾ ನಡೆಯುವಾಗ ಮಿ|| ಮಾಂಟೊಗ್‌ರವರಿಗೂ ಗ್ರಿಸ್ ಮೊದಲಾದ ಡಯರ್ ಪಕ್ಷದ ಸಭಿಕರಿಗೂ ವೀರಾವೇಶದ ಕೋಪಪೂರಿತವಾದ ಮಾತುಕತೆಗಳೆಲ್ಲಾ ನಡೆದುವು. ನೀವು ಕೆಲಸಕ್ಕೆ ರಾಜೀನಾಮೆ ಕೊಡಬೇಕೆಂದು ಕೂಡ ಮಿ|| ಗ್ರಿಸ್‌ರವರು ಮಾಂಟೊಗರಿಗೆ ಹೇಳಿ, ಅವರನ್ನು ತೀವ್ರವಾಗಿ ಖಂಡಿಸಿದರು. ಮಧ್ಯದಲ್ಲಿ ಇತರರು ಬಂದು ಸಮಾಧಾನಪಡಿಸಬೇಕಾಯಿತು. ಇದೆಲ್ಲಾ ಮುಗಿದ ಬಳಿಕ ಮಿ|| ಬೋನರ್‌ಲಾರವರು ಎದ್ದುನಿಂತು-ಜನರಲ್ ಡಯರನ್ನು ಕುರಿತು ಮಾಡಿದ ಪ್ರಕಟನೆಯು ಮಂತ್ರಿವರ್ಗದವರೆಲ್ಲಾ ಕೂಡಿ ನಿರ್ಣಯಿಸಿದುದೆಂತಲೂ, ಅವರಿಗೆ ಈ ವಿಧವಾದ ಪರ್ಯವಸಾನವುಂಟಾದುದಕ್ಕೆ ವಿಚಾರಿಸಬೇಕಾಗಿದೆಯೆಂತಲೂ ಹೇಳಿ, ತಮ್ಮ ಸಾನುಭೂತಿಯನ್ನು ತೋರಿಸಿ, ಕೊನೆಗೆ ಅವರು ತಪ್ಪು ಕೆಲಸವನ್ನು ಮಾಡಿದವರೆಂದು ನಿರ್ಧರವಾಗಿರುವ ಕಾರಣ ಪ್ರಭುತ್ವದವರು ಅವರನ್ನು ತಪ್ಪುಮಾಡಿದವರೆಂದು ಹೇಳದೆ ಇರಲಿಕ್ಕಾಗುವುದಿಲ್ಲವೆಂದು ತೀರ್ಮಾನವನ್ನು ಹೇಳಿದರು.

ಜನರಲ್ ಡಯರಿನ ಅವತಾರವು ಹೀಗೆ ಪೂರ್ತಿಯಾಯಿತು. ಈ ಸಂಬಂಧದ ಪಾರ್ಲಿಮೆಂಟಿನ ಚರ್ಚೆಯು ಆಂಗ್ಲ ರಾಜಧರ್ಮದ ಉದಾತ್ತತ್ವವನ್ನು ನಮಗೆ ಗೋಚರಪಡಿಸಿಕೊಟ್ಟಿತು. ಧರ್ಮಸ್ವರೂಪವಾಗಿರುವ ಅವರ ಪಾರ್ಲಿಮೆಂಟು, ನಿರ್ಮಲವಾದ ಕಣ್ಣು ತನ್ನಲ್ಲಿ ಬಿದ್ದ ಕಸಕಡ್ಡಿಗಳನ್ನು ಕಡೆಗೊತ್ತಿಬಿಡುವಂತೆ ಅನ್ಯಾಯ ಅಧರ್ಮಗಳನ್ನು ಹೇಗೆ ತಳ್ಳುಪಡಿ ಮಾಡಿ ಸತ್ಯ ನ್ಯಾಯಗಳನ್ನು ಉದ್ಧರಿಸುವುದೆಂಬುದನ್ನು ನಿದರ್ಶನಪಡಿಸಿ ಮಿ|| ಮಾಂಟೊಗ್‌ರವರು ತಮ್ಮ ಪ್ರತಿಪಕ್ಷದ ಬಲವತ್ತರತೆಯನ್ನೂ ಆತ್ಮಹಿತವನ್ನೂ ಕೂಡ ಗಣಿಸದೆ, ಆಂಗ್ಲ ಸದ್ಧರ್ಮ ಪ್ರಕಾಶನಕ್ಕಾಗಿಯೂ, ತಮ್ಮ ಸ್ವಾತಂತ್ರ್ಯಪ್ರಿಯತೆಯ ಪ್ರಕಟನಕ್ಕಾಗಿಯೂ ತಮ್ಮ ವಿಚಕ್ಷಣತೆಯನ್ನೆಲ್ಲಾ ವಿನಿಯೋಗಿಸಿ ವಾದಮಾಡಿ ಜಯಶೀಲರಾದುದಕ್ಕಾಗಿಯೂ, ಭರತಖಂಡದ ಮೇಲೆ ಅವರು ಒಂದೇ ವಿಧವಾಗಿ ಇಟ್ಟಿರುವ ಅಭಿಮಾನಾತಿಶಯಕ್ಕಾಗಿಯೂ ನಾವು ಸಂಪೂರ್ಣವಾಗಿ ಅವರನ್ನು ಅಭಿನಂದಿಸುವೆವು. ಭಾರತ ಪರಿಪಾಲನ ವಿಷಯದಲ್ಲಿ ಮಿ|| ಮಾಂಟೊಗ್‌ರವರೂ, ಮಿ|| ಚರ್ಚಿಲ್‌ರವರೂ ಅಪ್ಪಣೆ ಕೊಡಿಸಿರುವ ವಾಕ್ಯಗಳು ಭರತಖಂಡವನ್ನು ಆಳಲಿಕ್ಕೆ ಬರುವ ಅಧಿಕಾರಿಗಳಿಗೆಲ್ಲಾ ಆದರ್ಶಭೂತವಾಗಿರಲಿಕ್ಕೆ ಯೋಗ್ಯವಾದುಗಳು. ಈ ವಿಚಾರವಾಗಿ ಮಂತ್ರಿಮಂಡಲದವರೂ ಪಾರ್ಲಿಮೆಂಟಿನ ವಿಶೇಷಸಂಖ್ಯಾಕರೂ ಜನರಲ್ ಡಯರಿಗೆ ಮಾಡಿದ ಶಿಕ್ಷೆಯು ಭಾರತೀಯರಿಗೆ ಆಂಗ್ಲರ ಸದ್ಧರ್ಮಪ್ರಿಯತೆಯಲ್ಲಿಟ್ಟಿರುವ ವಿಶ್ವಾಸವನ್ನು ದೃಢಪಡಿಸಲು ಸಾಧಕವಾಯಿತು. ಭರತಖಂಡದ ವಿಷಯದಲ್ಲಿ ಅವರು ಈ ಸಂದರ್ಭದೊಳಗೆ ತೋರಿಸಿದ ಗೌರವಕ್ಕೆ ನಾವು ಕೃತಜ್ಞತೆಯನ್ನು ತೋರಿಸುವುದು ಯುಕ್ತವಾಗಿದ್ದರೆ ಅಮೃತಸರದ ವಧೆಯ ವಿಷಯವನ್ನು ಕುರಿತು ಇನ್ನು ಯಾವ ಕೂಗನ್ನೂ ನಾವು ಎತ್ತಬಾರದು. ಏಕೆಂದರೆ-ನಮ್ಮ ಹಿಂದಿನವರು ಕೈ ದುಡುಕಿನ ತಪ್ಪಿತವನ್ನು ಮಾಡಿದ ದೊಡ್ಡವರನ್ನು ಶಿಕ್ಷಿಸಬೇಕಾದರೆ ಅವರ ಅಂಗಿಯ ಮುಂದೋಳನ್ನು ಕತ್ತರಿಸಿಬಿಡುತ್ತಿದ್ದರಂತೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಮೈಸೂರುಗಳ ವರಮಾನದ ತೆರಿಗೆಯ ಕಲೆಕ್ಟರ ಕೆಲಸಕ್ಕೆ ಮ|| ಹೆಬ್ಬಿಕರ್‌ರವರು ನಿಯಮಿಸಲ್ಪಟ್ಟಿದ್ದಾರೆ.

ಬರುವ ನವರಾತ್ರಿಕಾಲದ ಪ್ರಜಾಪ್ರತಿನಿಧಿ ಸಭೆಯು ಅಕ್ಟೋಬರ್ ತಾ|| ೨೫ ರಲ್ಲಿ ಆರಂಭಿಸಲ್ಪಡುವುದೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಕೃಷ್ಣರಾಜಸಾಗರ ಕಟ್ಟೆಯ ಮಧ್ಯಭಾಗವು ೭೫ ಅಡಿಯಷ್ಟು ಎದ್ದಿದೆ. ಕಳೆದ ವಾರ ಕಟ್ಟೆಯ ಮೇಲೆ ೫ ಅಡಿಯಷ್ಟು ಪ್ರವಾಹವು ದುಮುಕುತ್ತಿದ್ದಿತು. ಮೈಸೂರಿನಿಂದ ಬಹುಜನರು ಹೋಗಿ ನೋಡಿಕೊಂಡುಬರುತ್ತಿದ್ದಾರೆ. ಎಡತೊರೆ ಮೈಸೂರಿನ ಮಧ್ಯದಲ್ಲಿದ್ದ ಲಕ್ಷ್ಮಣತೀರ್ಥ ನದಿಯ ಹಳೆ ಸೇತುವು ನೀರಿನಲ್ಲಿ ಮುಳುಗಿಹೋಯಿತು.

ರಾಜಧಾನಿಯಲ್ಲಿ ಬಹುದಿನದಿಂದ ಕೆಲವು ಮನೆಗಳೊಳಗೆ ಜೂಜನಕಟ್ಟೆಯಾಗಿದೆಯೆಂದು ಸುದ್ದಿಯಿದ್ದಿತು. ಮೊನ್ನೆ ವಾರದಲ್ಲಿ ಪೋಲೀಸರು ಚಾಮುಂಡಿ ಹೋಟೆಲಿನ ಮಗ್ಗುಲ ಒಂದು ಮನೆಯಲ್ಲಿ ಜೂಜುಗಾರರಿರುವ ಸುದ್ದಿಯನ್ನು ತಿಳಿದು ಹಠಾತ್ತಾಗಿ ನುಗ್ಗಿ ೩೦-೩೫ ಮಂದಿಗಳವರೆಗೆ ಹಿಡಿದರು. ವಿಚಾರಣೆಯಲ್ಲಿ ೫-೧೦ ರೂ. ಗಳ ಮೇರೆಗೆ ಅರ್ಥದಂಡವು ವಿಧಿಸಲ್ಪಟ್ಟಿತು.

ಬೆಂಗಳೂರಿನಲ್ಲಿ ಕೂಡಿದ್ದ ರೈಲ್ವೆ ಸಂಘದವರು ೩ ನೆ ತರಗತಿ ಪ್ರಯಾಣಿಕರ ಬಾಡಿಗೆಯನ್ನು ಸೇಕಡಾ ೨೨ ರಷ್ಟು ಹೆಚ್ಚಿಸಲು ಯೋಚಿಸಿದರೆಂದು ಕೇಳುತ್ತೇವೆ. ಯುದ್ಧಾರಂಭವಾದ ಮೇಲೆ ಒಂದು ಸಲ ಸೇಕಡಾ ೨೨ ರಷ್ಟನ್ನು ಹೆಚ್ಚಿಸಿದ್ದರು. ಮತ್ತೆ ಇನ್ನಷ್ಟು ಹೆಚ್ಚಿಸುವುದು ಶುದ್ಧ ಅನ್ಯಾಯ. ಏಕೆಂದರೆ:—೩ ನೆ ತರಗತಿ ಪ್ರಯಾಣಿಕರಿಗೆ ಅವರು ಮಾಡಿಕೊಟ್ಟಿರುವ ಸೌಕರ್ಯಗಳು ತೀರ ಕಡಿಮೆ.

ಕಾಗದವು ತಗ್ಗಾದ ಕಾರಣದಿಂದಲೋ ಏನೋ ನಮ್ಮ ಮೈಸೂರು ಸರ್ಕಾರದವರು ವೃತ್ತಪತ್ರಿಕೆಗಳಿಗೆ ಕಳುಹಿಸಿಕೊಡುತ್ತಿದ್ದ ಸರ್ಕಾರಿ ಅಪ್ಪಣೆಗಳ ಕಾಪಿಗಳನ್ನು ನಿಲ್ಲಿಸಿಬಿಟ್ಟರು. ಆದರೆ ಮದ್ರಾಸು ಸರ್ಕಾರದವರಿಗೆ ಈ ತೆರದ ಸಂಕುಚಿತ ಬುದ್ಧಿ ಹುಟ್ಟಲಿಲ್ಲ. ಅಲ್ಲಿಯ ಪಬ್ಲಿಸಿಟಿ ಬೀರೋವಿನವರು ಮಾಡತಕ್ಕ ಪ್ರಕಟನೆಗಳು ಸ್ವದೇಶ ಪತ್ರಿಕೆಗಳಿಗೇ ಅಲ್ಲದೆ ನಮ್ಮ ಮೈಸೂರಿನ ವೃತ್ತಪತ್ರಿಕೆಗಳಿಗೂ ಕಳುಹಿಸಿಕೊಡಲ್ಪಡುತ್ತಿವೆ. ದೇಶೀಯರಿಗೆ ನಿಜವಾದ ಉಪಯೋಗವನ್ನು ಇವುಗಳಿಂದ ಉಂಟುಮಾಡಿಕೊಡಬೇಕೆಂಬ ತತ್ವವನ್ನು ಅವರು ಬಹುಮಟ್ಟಿಗೆ ಸಾರ್ಥಕಪಡಿಸುತ್ತಿದ್ದಾರೆಂಬುದು ಇತ್ತೀಚೆಗೆ ಅವರು ಅಖಂಡವಾಗಿ ಪ್ರಕಟಿಸುತ್ತಿರುವ ಪತ್ರಿಕೆಗಳಿಂದ ವ್ಯಕ್ತವಾಗುತ್ತದೆ. ಅಗತಾನೇ ಹುಟ್ಟಿದ ಕೂಸುಗಳಿಗೆ ಮಾಡತಕ್ಕ ಆರೈಕೆಯನ್ನು ಕುರಿತು ಅವರು ಈ ಹಿಂದೆ ಒಂದು ಪ್ರಕಟನೆಯನ್ನು ಮಾಡಿದ್ದರು. ಅದರಲ್ಲಿ ಕಂಡ ಅಭಿಪ್ರಾಯವನ್ನನುಸರಿಸಿ ಜೋಗುಳ ಹಾಡನ್ನು ರಚಿಸಿಕೊಟ್ಟವರಿಗೆ ೩೦ ರೂ. ಗಳ ಬಹುಮಾನವನ್ನು ಕೊಡುತ್ತೇವೆಂದು ಮಂಗಳೂರು ಕಲೆಕ್ಟರರು ಪ್ರಸಿದ್ಧಪಡಿಸಿದ್ದಾರೆ.

ಈ ಕೆಳಗೆ ಕಂಡಂತೆ ಅಸಿಸ್ಟೆಂಟ್ ಕಮಿಷನರ ವರ್ಗಾವರ್ಗಿಯಾಗಿದೆ. ಮೈಸೂರು ಸಿಟಿ ಮೆಜಿಸ್ಟ್ರೇಟರಾಗಿರುವ ಮ|| ಡಿ. ಶ್ರೀನಿವಾಸಯ್ಯಂಗಾರರು ರೆವಿನ್ಯೂ ಸೆಕ್ರೆಟರಿಯವರಿಗೆ ಅಂಡರ್ ಸೆಕ್ರೆಟರಿಯಾಗಿ. ಬೆಂಗಳೂರು ಸಿಟಿ ಮೆಜಿಸ್ಟ್ರೇಟರಾದ ಮ|| ಬಿ. ಬಸವಾರಾಧ್ಯರು ಮೈಸೂರು ಸಿಟಿ ಮೆಜಿಸ್ಟ್ರೇಟರಾಗಿ. ರೆ|| ಕಮಿಷನರಾಫೀಸಿನಲ್ಲಿದ್ದ ಮಿ|| ಸಯ್ಯದ್ ತಾಜ್‌ಪೀರಾನ್‌ರವರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾಗಿ. ಹಾಸನದ ಸಬ್ ಡಿವಿಜನ್ ಆಫೀಸರಾಗಿದ್ದ ಮಿ|| ಜಿ. ರುದ್ರಪ್ಪನವರು ರೆ|| ಕಮಿಷನರ ಅಸಿಸ್ಟೆಂಟರಾಗಿ. ಮಿ|| ಎಸ್. ರಾಬರ್ಟ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಹಾಸನ್ ಡಿವಿಜನ್ನಿಗೆ. ಮಿ|| ಎಸ್. ನಾರಾಯಣರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿ|| ಕಮಿಷನರ ಆಫೀಸಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿಗೆ. ಮ|| ಎಂ. ಎಸ್. ಹಯಗ್ರೀವರಾಯರು ಪಿ. ಡಬ್ಲ್ಯು. ಡಿ. ಸ್ಪೆಷಲ್ ಡ್ಯೂಟಿಯಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ. ಪ್ರಿ|| ರಜಾದಮೇಲಿರುವ ಮಿ|| ಜಿ. ಎಂ. ವೆಂಕ್ರಯವರು ಎಕ್ಸೈಜ್ ಕಮಿಷನರ ಹೆಡ್‌ಕ್ವಾರ್ಟರ್ ಅಸಿಸ್ಟೆಂಟರಾಗಿ.

ಮೈಸೂರು ವ್ಯವಸಾಯಿಕ ಮತ್ತು ಪರೀಕ್ಷಕ ಸಂಘದವರಿಂದ ನೂತನವಾಗಿ ಕನ್ನಡ ಭಾಷೆಯಲ್ಲಿ ಪ್ರಕಟಿಸಲ್ಪಡುವ ತ್ರೈಮಾಸಿಕ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಇದು ಈವರೆಗೆ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟವಾಗುತ್ತಿದ್ದಿತು. ಆದರೆ ವ್ಯವಸಾಯ ವಿಚಾರದಲ್ಲಿ ಶಾಸ್ತ್ರರೀತಿಯಾಗಿ ಸುಧಾರಿಸಿದ ಕ್ರಮಗಳನ್ನು ರೈತರು ತಿಳಿಯಬೇಕಾದುದು ಅವಶ್ಯಕವಾದುದರಿಂದ ಕನ್ನಡದಲ್ಲೂ ಪ್ರಕಟಿಸಲ್ಪಡಬೇಕೆಂಬುದು ಸಂಘದವರಿಗೆ ತೋರಿದುದರ ಮೇಲೆ ಈ ಪ್ರಥಮ ಸಂಚಿಕೆಯು ಹೊರಟಿರುತ್ತದೆ. ಈ ಸಂಚಿಕೆಯಲ್ಲಿ ಹುಣಿಸೆ ಮತ್ತು ಸೀಗೆ ಮರಗಳ ವ್ಯವಸಾಯ, ಹೆಬ್ಬಾಳದಲ್ಲಿ ಹಾಲು ಮಾರುವವರ ಪರಸ್ಪರ ಸಹಾಯಸಂಘದ ಸಂಕ್ಷೇಪ ಚರಿತ್ರೆ, ಶಿವಮೊಗ್ಗೆಯಲ್ಲಿ ಎಚ್—೨೨ ಎಂಬ ರಾಗಿಯ ಬೆಳೆಗಳನ್ನು ನಾಶಮಾಡುವ ಶತ್ರು ಸಸ್ಯಗಳು, ಕಬ್ಬನ್ನು ಕೊರೆಯುವ ಹುಳ, ಭೂಮಿಗೆ ಸುಣ್ಣಕಲ್ಲನ್ನೂ ಸುಣ್ಣವನ್ನೂ ಗೊಬ್ಬರವಾಗಿ ಉಪಯೋಗಿಸುವುದು ಇತ್ಯಾದಿ ಬೇಸಾಯಕ್ಕುಪಯುಕ್ತವಾದ ವಿಷಯಗಳು ಬರೆಯಲ್ಪಟ್ಟಿವೆ. ಸಂಘದ ಮೆಂಬರುಗಳಿಗೆ ಇದು ಉಚಿತವಾಗಿ ದೊರೆಯುವುದು. ಇತರರಿಗೆ ವಾರ್ಷಿಕ ಚಂದಾ ೨ ರೂ. ಬಿಡಿ ಪತ್ರಿಕೆ ೧ ಕ್ಕೆ ೧೨ ಆಣೆ. ಈ ಪತ್ರಿಕೆಯು ರೈತರಿಗೆ ಅತ್ಯಂತೋಪಯೋಗವಾಗುವುದರಿಂದ ಇದನ್ನು ಪ್ರತಿ ತಿಂಗಳಲ್ಲೂ ಪ್ರಕಟಿಸುವುದು ಅತ್ಯಾವಶ್ಯಕವು ಮತ್ತು ಚಂದಾ ದ್ರವ್ಯವನ್ನು ಕಡಿಮೆ ಮಾಡಿದರೆ ಬಹು ಪ್ರತಿಗಳು ವಿಕ್ರಯವಾಗಬಹುದು. ಈ ವಿಚಾರವನ್ನು ಸಂಘದವರು ಗಮನಿಸುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಪ್ರತ್ಯೇಕ ದೇಶೀಯ ಮಹಾಸಭೆಯನ್ನು ಕಲ್ಕತ್ತಾ ಪಟ್ಟಣದಲ್ಲಿ ಕೂಡಿಸಬೇಕೆಂದು ನಿರ್ಣಯವಾಯಿತು.

ಬೊಂಬಾಯಿಯಲ್ಲಿ ಮೊನ್ನೆ ನಿನ್ನೆ ವಾರಗಳಲ್ಲಿ ಹೆಚ್ಚು ಮಳೆ ಬಿದ್ದುದರಿಂದ ಅಲ್ಲಿ ತೋರುತ್ತಿದ್ದ ಕ್ಷಾಮಚಿಹ್ನೆಯು ಶಾಂತವಾಗಬಹುದು.

ಭರತಖಂಡದಲ್ಲಿ ಒಂದು ಶಾಸನವನ್ನು ಏರ್ಪಡಿಸಿ ಶಿನ್ಮಾಲಕ ಗೋವಧೆಯನ್ನು ನಿಲ್ಲಿಸಬೇಕೆಂದು ಮಿ|| ಖುರ್‌ಸೇಟ್ಜಿ ಸೊರಾಬ್ಜಿ ಜಸ್ವಾವಾಲಾರವರು ಸ್ಟೇಟ್ ಸೆಕ್ರೆಟರಿಯವರಿಗೆ ಬಿನ್ನೈಸಿಕೊಂಡಿದ್ದಾರೆ.

ಬೊಂಬಾಯಿ ಪಾರ್ಸಿ ಸೆಂಟರಲ್ ಸಂಘದವರು ಕಳೆದ ತಾ|| ೧೧ರಲ್ಲಿ ಸಭೆಗೂಡಿ ತಮ್ಮ ವರ್ಗದವರಿಗೆ ಶಾಸನ ಸಭೆಗಳೊಳಗೆ ಪ್ರತ್ಯೇಕ ಪ್ರಾತಿನಿಧ್ಯವೇ ಆಗಲಿ, ಅಥವಾ ಕೆಲವು ನಿಯಮಿತ ಸ್ಥಳಗಳೇ ಆಗಲಿ ಕೊಡಲ್ಪಡಬೇಕೆಂದು ನಿರ್ಧಾರ ಮಾಡಿ ಸ್ಟೇಟ್ ಸೆಕ್ರೆಟರಿಯವರಿಗೆ ತಂತೀವಾರ್ತೆಯನ್ನು ಕಳುಹಿಸಿದ್ದಾರೆ.

ಮುಂದೆ ಜರಗುವ ಸಾಮ್ರಾಜ್ಯಶಾಸನ ಸಭೆಯಲ್ಲಿ ಆ|| ಕಪರ್ದಿಯವರು ಹಾಲುಕೊಡುವ ಹಸುಗಳನ್ನೂ, ಬೇಸಾಯದ ಎತ್ತುಗಳನ್ನೂ ಕೊಲ್ಲದಿರುವಂತೆಯೂ, ಭರತಖಂಡದಿಂದ ಹೊರಕ್ಕೆ ಈ ಪಶುಜಾತಿಯನ್ನು ಸಾಗಿಸದಂತೆಯೂ ನಿಷೇಧಿಸುವ ವಿಧಿಯನ್ನೇರ್ಪಡಿಸಬೇಕೆಂಬ ತೀರ್ಮಾನವನ್ನು ಚರ್ಚೆಗೆ ತರುವವರಾಗಿದ್ದಾರೆ.

ನೀಲಗಿರಿಗೆ ಸೇರಿದ ಕುನ್ನೂರಿನಲ್ಲಿರುವ ಆನಂದಾಶ್ರಮದಲ್ಲಿ ಪೂರ್ವದೇಶೀಯ ವಿಜ್ಞಾನಬೋಧನೆಗಾಗಿ ದೇಶಭಾಷೆಯ ಒಂದು ಕಲಾಶಾಲೆಯನ್ನು ಸ್ಥಾಪಿಸಲು ಮಹರ್ಷಿ ಶಿವದಯಾನಂದರವರು ಪ್ರಯತ್ನಿಸಿದ್ದಾರೆ. ಇದಕ್ಕೆ ಮದರಾಸು ಗೌರ್ನರವರು ಅಧ್ಯಕ್ಷರಾಗಿಯೂ, ಅಲ್ಲಿಯ ವಿದ್ಯಾಶಾಖಾಧ್ಯಕ್ಷರು ಉಪಾಧ್ಯಕ್ಷರಾಗಿಯೂ ಇರಲು ಒಪ್ಪಿಕೊಂಡಿದ್ದಾರೆ.

ಭರತಖಂಡದಲ್ಲಿ ಲೋಹಮಾರ್ಗಸ್ಥಾಪನೆಗೆ ಆರಂಭವಾದುದು ೧೮೪೫ನೆ ವರ್ಷದಲ್ಲಿ. ಅಲ್ಲಿಂದೀಚೆಗೆ ಇದುವರೆಗಿನ ೭೫ ವರ್ಷಕಾಲದಲ್ಲಿ ೩೬೬೧೬ ಮೈಲಿಗಳ ಲೋಹಮಾರ್ಗಸ್ಥಾಪನೆಯಾಗಿದೆ. ಈ ಶಾಖೆಯಿಂದ ವೆಚ್ಚ ಕಳೆದು ಇಂಡಿಯಾ ಸರ್ಕಾರಕ್ಕೆ ವರ್ಷಂಪ್ರತಿ ೨೦ ಕೋಟಿ ರೂ. ಗಳಷ್ಟು ವರಮಾನವಾಗುತ್ತಿದೆ. ಕಳೆದ ವರ್ಷ ರೈಲ್ವೆಗಳಲ್ಲಿ ೪೫ ಕೋಟಿ ಜನರು ಪ್ರಯಾಣಮಾಡಿದ್ದಾರೆ. ಅವರಲ್ಲಿ ೧ ಕೋಟಿ ಜನರು ೧-೨ ನೆ ತರಗತಿಯ ಪ್ರಯಾಣಿಕರು. ಉಳಿದವರೆಲ್ಲಾ ೩ ನೆ ತರಗತಿಯವರು.

ಜನರಲ್ ಡಯರ್‌ರವರು ಅಮೃತಸರದಲ್ಲಿ ಮಾಡಿಸಿದ ಕೊಲೆಗೆ ಗುರಿಯಾದವರಲ್ಲಿ ತಮ್ಮ ಮಗನೂ ಸೇರಿದ್ದನಾದ ಕಾರಣ ಡಯರ ಮೇಲೂ, ಓಡ್ವಯರ ಮೇಲೂ ಲಂಡನ್ನಿನ ಕಿಂಗ್ಸ್‌ಬೆಂಚು ಕೋರ್ಟಿನಲ್ಲಿ ಅಮೃತಸರದ ಡಾಕ್ಟರ್ ಮುನೀರಾಂರವರು ಕ್ರಿಮಿನಲ್ ವ್ಯಾಜ್ಯವನ್ನು ಹೂಡುವವರಾಗಿದ್ದಾರೆ. ಇದರಂತೆ ಇನ್ನೂ ನಾಲ್ಕು ವ್ಯಾಜ್ಯಗಳು ಕೂಡ ಅವರುಗಳ ಮೇಲೆ ಪ್ರಿವಿ ಕೌನ್ಸಿಲಿನಲ್ಲಿ ಹೂಡಲ್ಪಡುವುದರಲ್ಲಿವೆ. ಈ ವ್ಯಾಜ್ಯಕ್ಕೆ ಲಕ್ಷಾಂತರ ದ್ರವ್ಯವು ಬೇಕಾಗುವುದರಿಂದ ಮುನೀರಾಮರವರು ಅಷ್ಟನ್ನು ವೆಚ್ಚಮಾಡಲು ಅಶಕ್ತರಾಗಿರುವ ಕಾರಣ ಪ್ರಜೆಗಳು ಧನಸಹಾಯ ಮಾಡಬೇಕೆಂದು ಮರಾಠಾ ಪತ್ರಿಕೆಯು ಹೇಳಿರುತ್ತದೆ.

ಸರ್ಕಾರದವರು ೧೧ ನೆ ತಾರೀಖು ಮಧ್ಯಾಹ್ನದವರೆಗೂ ಸವರನ್ ೧ ಕ್ಕೆ ೧೫ ರೂ. ಗಳಂತೆ ಸಲ್ಲಿಸಿದರು. ಚಿನ್ನದ ಗಟ್ಟಿಯನ್ನು ತೊಲೆಗೆ ೧೫-೧೦-೪ ಬೆಲೆಗೆ ಕೊಡಲು ಸಿದ್ಧರಾಗಿದ್ದರೂ ವರ್ತಕರು ೨೧-೧-೫ ರವರೆಗೆ ಹೆಚ್ಚಿಸಿ ಹರಾಜಿನಲ್ಲಿ ೧೩೪೮೫೦ ತೊಲೆಗಳ ಬಂಗಾರವನ್ನು ತೆಗೆದುಕೊಂಡರು. ಸರ್ಕಾರದವರು ತಮ್ಮಲ್ಲಿರುವ ಚಿನ್ನವನ್ನು ಮಾರುವುದೆಲ್ಲಾ ಆಗಸ್ಟ ತಾ|| ೪ ಕ್ಕೆ ಮುಗಿಯುವುದಂತೆ. ಈಗ ಪ್ರಜೆಗಳು ಬೆಳ್ಳಿ ಚಿನ್ನಗಳನ್ನು ಸ್ವತಂತ್ರವಾಗಿ ವಿದೇಶಗಳಿಂದ ತರಿಸಿಕೊಳ್ಳಬಹುದಾಗಿದೆ. ಬರುವ ವಾರದಲ್ಲಿ ಸೀಮೆಯಿಂದ ಇವುಗಳು ಬರುವುದರಲ್ಲಿವೆ. ಸೀಮೆ ಹುಂಡಿಯ ಎಕ್ಸ್‌ಛೇಂಜ್ ಬೆಲೆಯು ೧-೧೦ ಇರುವುದರಿಂದ ಆ ಬೆಲೆಯನ್ನನುಸರಿಸಿ ಸವರನ್ ಬೆಲೆಯು ೧೧ ರೂ. ಆಗಬಹುದಾಗಿದೆ. ಕಾನೂನಾದ ಬಳಿಕ ಸರ್ಕಾರದವರು ೧೦ ರೂ. ಗೆ ಮಾರಬಹುದು. ಬೆಳ್ಳಿಯನ್ನು ಅಮೆರಿಕಾ ಪ್ರಭುತ್ವದವರು ಕೊಳ್ಳುತ್ತಿದ್ದುದರಿಂದ ಬೆಳ್ಳಿಯ ಬೆಲೆಯು ಮತ್ತೆ ಸ್ವಲ್ಪ ಏರಿತು. ತೊಲೆಗೆ ೯೯ ರೂ. ಯಂತೆ ಬೊಂಬಾಯಿ ಬೆಲೆ ಇದೆ.

ಅಹಮ್ಮದಾಬಾದ್ ಸ್ವರಾಜ್ಯ ಸಂಘದವರು ಖಿಲಾಫತ್ ಪ್ರಶ್ನೆ ಮತ್ತು ಅಮೃತಸರದ ಕೊಲೆ ಇವುಗಳ ವಿಷಯದಲ್ಲಿ ಆಂಗ್ಲ ಪ್ರಭುತ್ವದವರು ಸರಿಯಾದ ಅಪ್ಪಣೆಯನ್ನು ಮಾಡದಿರುವುದರಿಂದ ಈ ದೇಶಕ್ಕೆ ಬರುವವರಾಗಿರುವ ಶ್ರೀಮನ್ ಯುವರಾಜರವರಿಗೆ ಸ್ವಾಗತ ಮರ್ಯಾದೆಗಳನ್ನು ಆಚರಿಸಬಾರದೆಂದು ತೀರ್ಮಾನ ಮಾಡಿದ್ದಾರೆ. ಇನ್ನು ಕೆಲ ಪತ್ರಿಕೆಗಳೂ ಇದೇ ಧ್ವನಿಯನ್ನು ತೋರಿಸಿವೆ. ರಾಜರು ಯಾವ ಪಕ್ಷಕ್ಕೂ ಸೇರದೆ ಇರುವವರಾದ ಕಾರಣ ಇಂಥ ಪ್ರವರ್ತನವು ಅಸಾಧುವಾದುದೆಂದೂ, ಆಂಗ್ಲ ಪ್ರಭು ಸಂಬಂಧವನ್ನು ಕಳೆದುಕೊಳ್ಳಬೇಕೆನ್ನುವವರು ಇಂಥ ಅವಮಾನವನ್ನು ಮಾಡಲು ಉದ್ದೇಶಗೊಂಡಂತೆ ಆಗುವುದೆಂದೂ, ಆದುಕಾರಣ ಅಖಿಲಭಾರತ ಸ್ವರಾಜ್ಯ ಸಮಿತಿಯ ಅಧ್ಯಕ್ಷರಾದ ಗಾಂಧಿಯವರು ಈ ತೀರ್ಮಾನವನ್ನು ಹೊಡೆದುಹಾಕಬೇಕೆಂದೂ, ಇಲ್ಲದಿದ್ದರೆ ತಮ್ಮ ಪದವಿಗೆ ರಾಜೀನಾಮೆಯನ್ನಾದರೂ ಕೊಡಬೇಕೆಂದೂ ಆನಿಬೆಸೆಂಟಮ್ಮನವರು ಹೇಳಿರುತ್ತಾರೆ. ಇದಕ್ಕೆ ಉತ್ತರವಾಗಿ ಗಾಂಧಿಯವರು ಎಂಗ್ ಇಂಡಿಯಾ ಪತ್ರಿಕೆಯೊಳಗೆ ಬರೆದಿರುವ ಲೇಖನದಲ್ಲಿ—ನಾವು ಪ್ರಕೃತಸ್ಥಿತಿಯನ್ನು ನೋಡಿ ಯುವರಾಜರ ಸ್ವಾಗತವನ್ನು ದೂರೀಕರಿಸುವವರಾಗಿದ್ದೇವೆಂತಲೂ, ಆದರೆ ಪ್ರಭುಗಳು ಕಕ್ಷಿಗಳಿಗೆ ಸಿಲ್ಕದವರಾದುದರಿಂದ ಅಂಥವರನ್ನು ಪ್ರಭುತ್ವಾಧಿಕಾರಿಗಳು ತಮ್ಮ ಕಕ್ಷಿಗೆ ಸೇರಿಸಿಕೊಳ್ಳುವುದನ್ನು ನಾವು ಒಪ್ಪಲಾರೆವೆಂತಲೂ, ಯುವರಾಜರನ್ನು ಈ ದೇಶಕ್ಕೆ ಕರೆಯಿಸಿಬಿಟ್ಟು ಉತ್ಸವಗೊಳಿಸಿ ಕಳುಹಿಸಿಬಿಡುವುದರಿಂದ ಆಂಗ್ಲಧರ್ಮ ಪರಿಪಾಲನೆಯಲ್ಲಿ ಈ ದೇಶವು ಸುಖಸಮೃದ್ಧವಾಗಿದೆಯೆಂದು ಪ್ರಪಂಚಕ್ಕೆ ತೋರ್ಪಡಿಸಿ ಮೋಸಗೊಳಿಸಿಬಿಡುತ್ತಾರೆಂತಲೂ, ಅಂಥ ಮಂತ್ರಿಗಳ ಕೈಬೊಂಬೆಯಂತೆ ಇರುವುದಕ್ಕೆ ತಮಗೆ ಇಷ್ಟವಿಲ್ಲವೆಂತಲೂ, ಪ್ರಭುತ್ವದವರು ತಮ್ಮ ಮಂತ್ರಿಗಳ ಮೂಲಕ ಖಿಲಾಫತ್ ಪ್ರಶ್ನೆಯನ್ನೂ ಪಂಜಾಬು ವ್ಯವಹಾರವನ್ನೂ ನ್ಯಾಯಸಮ್ಮತವಾಗಿ ವ್ಯವಸ್ಥೆಗೊಳಿಸಿದರೆ ನಾವು ಮನಃಪೂರ್ವಕವಾಗಿ ಸ್ವಾಗತ ಮಾಡುವೆವೆಂತಲೂ, ಹಾಗೆ ಮಾಡದೆ ಬಲಾತ್ಕಾರದಿಂದ ಯುವರಾಜರನ್ನು ಈ ದೇಶಕ್ಕೆ ಬರಮಾಡಿಸಲಿ ದೇಶೀಯರು ನಿರ್ವಾಹವಿಲ್ಲದೆ ಅವರ ಸ್ವಾಗತವನ್ನು ದೂರೀಕರಿಸಬೇಕಾಗುವುದೆಂತಲೂ ಎಂದು ಹೇಳಿರುತ್ತಾರೆ

ವಿದೇಶ ವೃತ್ತಾಂತಗಳು.

ಅಮೇರಿಕಾ ಸಂಯುಕ್ತ ರಾಜ್ಯಗಳ ಅಧ್ಯಕ್ಷ ಪದವಿಗೆ ರಿಪಬ್ಲಿಕನ್ನರ ಪಕ್ಷದಲ್ಲಿ ಸಿನೇಟರ್ ಹಾರ್ಡಿಂಜರವರೂ ಡಿಮೋಕ್ರಾಟಿಕ್ ಪಕ್ಷದಲ್ಲಿ ಕಾಕ್ಸ್‌ರವರೂ ಜಯಶೀಲರಾಗಿ ಬಂದಿರುತ್ತಾರೆ. ಇವರಿಬ್ಬರೂ ವೃತ್ತಪತ್ರಿಕಾಧಿಪತಿಗಳು. ಮತ್ತು ಓಹಿಯೋ ಜಿಲ್ಲಾ ನಿವಾಸಿಗಳು. ಇವರಿಬ್ಬರಲ್ಲಿ ಯಾರು ಜಯಶಾಲಿಗಳಾಗುವರೋ ಇಷ್ಟರಲ್ಲೇ ಗೊತ್ತಾಗುತ್ತದೆ. ವೃತ್ತಪತ್ರಿಕಾಕರ್ತರು ಒಂದಾನೊಂದು ದೊಡ್ಡ ರಾಷ್ಟ್ರದ ಅಧ್ಯಕ್ಷ ಪದವಿಗೆ ಬರುವಂತಾಗಿರುವುದನ್ನು ನೋಡಿದರೆ ಪಶ್ಚಿಮ ದೇಶದಲ್ಲಿ ವಾರ್ತಾಪತ್ರಿಕೆಗಳಿಗೆ ಇರುವ ಪ್ರಾಮುಖ್ಯವೂ ಘನತೆಯೂ ಎಷ್ಟೆಂಬುದು ಗೊತ್ತಾಗದಿರಲಾರದು.

ತುರ್ಕಿ ಪ್ರತಿನಿಧಿಗಳು ಸಂಧಿ ನಿಯಮದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಯಿಸಿಬಿಟ್ಟು ಸ್ವದೇಶಕ್ಕೆ ಹೋದರು. ಮಿತ್ರಮಂಡಲಿಯವರು ಅದರ ಮೇಲೆ ಏನು ಅಭಿಪ್ರಾಯ ಕೊಡುವರೋ ನೋಡಬೇಕು. ಈ ಮಧ್ಯೆ ಗ್ರೀಕರು ಏಷ್ಯಾ ಮೈನರಿನಲ್ಲಿ ಆಂಗ್ಲ ಸೈನ್ಯದ ಸಹಾಯದಿಂದ ತುರ್ಕಿ ಜಾತೀಯ ಸೈನ್ಯದ ಮೇಲೆ ಯುದ್ಧ ಮಾಡಿ ಸೋಲಿಸಿ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಿದ್ದಾರೆ. ಬಾಲಿಕೆಸ್ಸಾರಿನ ಹತ್ತಿರ ತುರುಕರು ಬಹಳ ಸೋತರು. ಬಾಸ್ಪರಸ್ಸಿನ ಇದಿರಿಗಿರುವ ಬೆಯಿಕೋಜು ಎಂಬ ಸ್ಥಲವನ್ನು ತುರ್ಕರು ಆಕ್ರಮಿಸಿದುದರಿಂದ ಮಿತ್ರಮಂಡಲೀ ಸೈನ್ಯಗಳು ಹಿಂದಕ್ಕೆ ಸರಿದುವು.

ತುರ್ಕಿಯವರು ಕೊಟ್ಟ ಪ್ರತ್ಯುತ್ತರವನ್ನು ಕುರಿತು ಮಿತ್ರಮಂಡಲಿಯವರು ಸ್ಪಾ ಪಟ್ಟಣದ ಸಭೆಯಲ್ಲಿ ಆಲೋಚಿಸಿದರು. ಸಂಧಿ ನಿಯಮಗಳಲ್ಲಿ ಕಂಡಿರುವ ಮೂಲಸೂತ್ರವನ್ನು ಅವರು ಬದಲಾಯಿಸುವವರಾಗಿಲ್ಲವಂತೆ. ತುರ್ಕಿಯವರಿಗೆ ಕೊಡಬೇಕಾದ ಪ್ರತ್ಯುತ್ತರವನ್ನು ನಿರ್ಣಯಿಸಲಿಕ್ಕೆ ಒಂದು ಉಪಸಂಘವನ್ನು ಏರ್ಪಡಿಸಿದರು. ಅವರು ಸೇನಾಧಿಕಾರಿಗಳೊಡನೆ ಆಲೋಚಿಸುವರು. ಸಣ್ಣಪುಟ್ಟ ವಿಷಯಗಳನ್ನು ಕುರಿತು ಮಾಡಬೇಕಾದ ಸುಧಾರಣೆಗಳನ್ನು ಅವರು ನಿರ್ಧರಿಸುವರು. ಅದನ್ನು ತುರ್ಕಿಯವರಿಗೆ ತಿಳಿಯಿಸಿ, ಆ ಬಳಿಕ ೧೦ ದಿನಗಳೊಳಗೆ ಮರುಮಾತಾಡದೆ ತುರ್ಕಿಯವರು ಸಂಧಿ ಪತ್ರಕ್ಕೆ ರುಜು ಹಾಕಬೇಕೆಂದು ತಿಳಿಯಿಸುವವರಾಗಿದ್ದಾರೆ.

ಈಗಣ ಗ್ರೀಸ್ ದೇಶದ ರಾಜರಾದ ಅಲಗ್ಜಾಂಡ್ರಾರವರು ಯುವರಾಜರಾಗಿದ್ದಾಗ ತಮ್ಮ ರಾಜವಾಸದಲ್ಲಿದ್ದ ಕರ್ನಲ್ ಮೇನಸ್‌ರವರ ಕುಮಾರಿಯು ಬಹು ಸುಂದರಿಯಾಗಿದ್ದುದರಿಂದ ಆಕೆಯನ್ನು ಮೋಹಿಸಿದ್ದು ಆಕೆಯನ್ನೇ ಮದುವೆಯಾದರು. ಇಕೆಯು ರಾಜಕುಟುಂಬದವಳಲ್ಲವಾದುದರಿಂದ ಇಂಥ ಸಂಬಂಧವನ್ನು ಆ ದೇಶದ ಪ್ರಜೆಗಳು ಒಪ್ಪದೆ ಇರುವರು. ಪ್ರಭುವಾದರೊ “ತಾನು ಪತ್ನೀಸಮೇತನಾಗಿ ರಾಜಧಾನಿಗೆ ಬರಲು ತನ್ನ ಪ್ರಜೆಗಳು ಒಪ್ಪದೆ ಹೋದರೆ ರಾಜ್ಯವನ್ನಾದರೂ ಬಿಟ್ಟೇನು ಆ ಸುಂದರಿಯನ್ನು ಬಿಡಲೊಲ್ಲೆ” ನೆಂದು ಮಂತ್ರಿಯೊಡನೆ ಹೇಳಿದರಂತೆ. ಇದರ ಮೇಲೆ ಮಂತ್ರಿಯು ಆ ದೇಶದಲ್ಲಿ ಪ್ರಜಾಪ್ರಭುತ್ವವಿಧಾನವನ್ನು ವ್ಯವಹಾರಕ್ಕೆ ತರುವುದರಲ್ಲಿದ್ದಾರೆ.

ನಮ್ಮ ಯುವ ಸಾರ್ವಭೌಮರಾದ ಪ್ರಿನ್ಸ್ ಆಫ್‌ವೇಲ್ಸ್‌ರವರು ಈಗ ಆಸ್ಟ್ರೇಲಿಯಾದಲ್ಲಿ ಸಂಚರಿಸುತ್ತಿರುವರು. ಒಂದುಕಡೆ ಅವರು ಪ್ರಯಾಣ ಮಾಡುತ್ತಿರುವಾಗ ಅವರು ಕುಳಿತಿದ್ದ ಸೆಲೂನ್ ಬಂಡಿಯು ಪಟ್ಟಿತಪ್ಪಿ ಉರುಳಿತು. ಅವರೂ ಅವರ ಜತೆಯಲ್ಲಿ ಮಾತನಾಡುತ್ತ ಕುಳಿತಿದ್ದ ಅಡ್ಮಿರಲ್ ಹಾಲ್ಸಿಯವರು ಸಹ ಕಿಟಕಿಗಳಿಂದ ಹೊರಕ್ಕೆ ಅಪಾಯವಿಲ್ಲದೆ ದುಮಿಕಿ ಉಳಿದವರೆಲ್ಲಾ ಬಂಡಿಯಿಂದ ಹೊರಕ್ಕೆ ಬರುವವರೆಗೂ ನೋಡುತ್ತ ನಿಂತಿದ್ದು, ಎಲ್ಲವೂ ನೇರ್ಪಟ್ಟನಂತರ ಬಂಡಿಯನ್ನೇರಿ ನಿಂತುಕೊಂಡಾಗ ಪ್ರಜೆಗಳೆಲ್ಲರೂ ಸಂತೋಷಧ್ವನಿಮಾಡಿದರು. ಆಗ ಯುವರಾಜರು ಕಿರುನಗೆನಗುತಾ, “ನನ್ನ ಸಂಚಾರದ ಪ್ರೋಗ್ರಾಮಿನಲ್ಲಿ ಕಾಣದೆ ಇದ್ದ ಇಂಥ ಏನತ್ತೊಂದು ಸಂಭವಿಸಿದುದರಿಂದ ನನಗೆ ಈ ಮೂಲಕ ಸ್ವಲ್ಪ ವಿರಾಮವು ಸಿಕ್ಕಲಾಸ್ಪದವಾಯಿತು” ಎಂದು ನುಡಿದರಂತೆ.

ಸ್ಪಾ ಪಟ್ಟಣದಲ್ಲಿ ಕೂಡಿದ್ದ ಸಂಧಿ ಸಭೆಯಲ್ಲಿ ಆಂಗ್ಲ ಮುಖ್ಯಮಂತ್ರಿಯವರು ಜರ್ಮನ್ ಮಂತ್ರಿಯವರನ್ನು ಕುರಿತು—ಅವರ ಸೇನಾ ಸಂಖ್ಯೆಯನ್ನು ಕೂಡಲೇ ತಗ್ಗಿಸಬೇಕೆಂದೂ, ಯುದ್ಧಸಾಮಗ್ರಿಯನ್ನು ನಾಶಗೊಳಿಸಬೇಕೆಂದೂ, ಹಾಗೆ ಮಾಡಿಸುವುದರಲ್ಲಿ ಮಿತ್ರಮಂಡಲಿಯವರಿಗಿರುವ ದೃಢ ನಿಶ್ಚಯವನ್ನು ತಿಳಿಸಿದರು. ಅಕ್ಟೋಬರ್ ತಿಂಗಳೊಳಗೆ ಜರ್ಮನ್ ಸೈನ್ಯವು ೧|| ಲಕ್ಷಕ್ಕೆ ತಗ್ಗಬೇಕೆಂದೂ, ನಿರ್ಬಂಧ ಸೇನಾಶಿಕ್ಷಣ ವಿಧಾನವನ್ನೆಲ್ಲಾ ತೆಗೆದುಬಿಡಬೇಕೆಂದೂ, ಪ್ರಜೆಗಳ ಅಧೀನದಲ್ಲಿರುವ ಆಯುಧಗಳನ್ನೆಲ್ಲಾ ಕಸಿದುಕೊಳ್ಳಬೇಕೆಂದೂ, ಮೊದಲಾದ ನಿಯಮಗಳನ್ನು ಮಿತ್ರಮಂಡಲಿಯವರು ಜರ್ಮನರಿಗೆ ಖಂಡಿತವಾಗಿ ತಿಳಿಯಿಸಿದರು. ಇದರಂತೆ ಜರ್ಮನರು ಆಚರಿಸದೆ ಹೋದರೆ ಮಿತ್ರಮಂಡಲೀ ಸೈನ್ಯಗಳು ಇನ್ನೂ ಕೆಲ ಜರ್ಮನ್ ಪಟ್ಟಣಗಳನ್ನು ಆಕ್ರಮಿಸಿಕೊಳ್ಳುವುವೆಂದು ಆಂಗ್ಲ ಮುಖ್ಯಮಂತ್ರಿಯವರು ಹೇಳಿ ಎಚ್ಚರಿಸಿದರು. ಇವನ್ನೆಲ್ಲಾ ಜರ್ಮನ್ ಪ್ರತಿನಿಧಿಯಾದ ಹೇರ್ ಸಿಮನ್ಸ್‌ರವರು ಕೇಳಿಕೊಂಡು, ತಮ್ಮ ಪ್ರಭುತ್ವದವರೊಡನೆ ಇದನ್ನೆಲ್ಲಾ ತಿಳಿಯಿಸುವುದಾಗಿ ಹೇಳಿದರು. ಕಡೆಗೆ ಜರ್ಮನರು ಇದಕ್ಕೆಲ್ಲಾ ಒಪ್ಪಿ ನಿಯಮ ಪತ್ರಕ್ಕೆ ರುಜು ಹಾಕಿದರೆಂಬ ಸುದ್ದಿ ಬಂದಿದೆ.

ಅಮೇರಿಕಾದ ನ್ಯೂಯಾರ್ಕ್ ಜಲ್ಲೆಗೆ ಸೇರಿದ ನಾಟಕಶಾಲೆಯಲ್ಲಿ ಕೋಲ್ಮನ್ ಎಂಬೊಬ್ಬ ಪಾತ್ರಧಾರಿಯ ಕಂಠಸ್ವರವು ಮಧುರವಾಗಿದ್ದುದರಿಂದ ಅವನು ಕಳ್ಳನಾಗಿದ್ದರೂ ಅವನನ್ನು ವರಿಸಿ ಒಳ್ಳೆದಾರಿಗೆ ತರಬೇಕೆಂದು ಜೂಲಿಯಾ ಐರೆನ್ ಎಂಬ ಯುವತಿಯು ಆತನನ್ನು ಮದುವೆಯಾದಳು. ೪ ನೆ ದಿನವೇ ಆತನು ತನ್ನ ಹೊಸ ಹೆಂಡತಿಗಾಗಿ ಒಂದು ಕಂಠಾಭರಣವನ್ನು ಕದ್ದು ಪೋಲೀಸರ ಕೈಗೆ ಸಿಕ್ಕಿದನು. ವಿಚಾರಣೆಗೊಳಪಡಿಸಿದಾಗ ಪತ್ನಿಯ ಸಂಗಡ ತನ್ನನ್ನೂ ಅಪರಾಧಿಸ್ಥಾನಕ್ಕೆ ಸೇರಿಸಿಕೊಳ್ಳಬೇಕೆಂತಲೂ, ತನ್ನ ಬಲವಂತದಿಂದಲೇ ಆತನು ಕಳವು ಮಾಡಿದನೆಂತಲೂ ಪತ್ನಿಯು ಹೇಳಿಕೊಂಡಳು. ಆದರೆ ಗಂಡನ ಮೇಲೆ ತಪ್ಪಿತವು ಸ್ಪಷ್ಟಪಟ್ಟುದರಿಂದ ದಂಡಾಧಿಕಾರಿಯು ಅವನಿಗೆ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು. ಗಂಡನೊಡನೆ ತಾನೂ ಕಾರಾಗೃಹಕ್ಕೆ ಹೋಗುತ್ತೇನೆಂದು ಪತ್ನಿಯು ಹಠಮಾಡಿ ಗೋಳಾಡಿದಳು. ನೀನು ಅತ್ತೆಯಮನೆಯಲ್ಲಿರೆಂದು ದಂಡಾಧಿಕಾರಿ ಹೇಳಿದರೂ, “ನಾನು ನನ್ನ ಗಂಡನನ್ನು ಮದುವೆಯಾಗಿರುವೆನು; ಅವನನ್ನು ಬಿಟ್ಟಿರಲಾರೆ. ಅವನ ಸುಖದುಃಖಗಳಲ್ಲಿ ನಾನೂ ಭಾಗಿನಿಯು. ಆತನು ಉತ್ತಮನು ಯೋಗ್ಯನು ಎಂಬುದಾಗಿ ನಾನು ಎಷ್ಟೋ ಜನರೊಡನೆ ಹೇಳಿಕೊಂಡಿದ್ದೆ. ಈಗ ಅಂಥವನನ್ನು ಕೈಬಿಟ್ಟು ಬೇರೆಯಿದ್ದರೆ ನಾನು ಸುಳ್ಳುಗಾತಿಯಾಗುತ್ತೇನೆ. ನಾನು ಗಂಡನನ್ನು ಬಿಟ್ಟು ಬೇರೆ ಕಡೆಯಿರುವುದಕ್ಕಿಂತಲೂ ಅವನು ಕಾರಾಗೃಹವಿಮುಕ್ತನಾಗಿ ಬರುವವರೆಗೂ ಈ ಕೋರ್ಟಿನ ಮನೆಯಲ್ಲೇ ಇರುತ್ತೇನೆ.” ಎಂದು ಕಣ್ಣೀರನ್ನು ಸುರಿಸುತ್ತ ಬೇಡಿಕೊಂಡಳು. ದಂಡಾಧಿಕಾರಿಗೆ ದಯೆ ಹುಟ್ಟಿತು. ವಿಧಿಯಿಲ್ಲದೆ ಆ ಸತಿಪತಿಗಳಿಬ್ಬರನ್ನೂ ಕಾರಾಗೃಹಕ್ಕೆ ಕಳುಹಿಸಿದನು. ಕಾರಾಗೃಹಕ್ಕೆ ಕರೆದುಕೊಂಡು ಹೋಗುವ ಬಂಡಿಯಲ್ಲಿ ಅವರಿಬ್ಬರೂ ಸಂತೋಷದಿಂದ ಕುಳಿತು ಸ್ವಲ್ಪವೂ ಚಿಂತೆಪಡದೆ ಆನಂದದಿಂದ ಒಬ್ಬರನ್ನೊಬ್ಬರು ಆಲಿಂಗಿಸಿ ಮುದ್ದಾಡುತ್ತ ಸರಸಲಾಪಗಳನ್ನು ಮಾಡಿಕೊಂಡು ಉಲ್ಲಾಸದಿಂದ ಕಾರಾಗೃಹಕ್ಕೆ ಹೋದರು.

ಪತ್ರವ್ಯವಹಾರ.

ಕ್ಲೋಸ್‌ಪೇಟೆ ಸಬ್ ತಾ|| ಹಾಗಲಿಹಳ್ಳಿ.

ಈ ಗ್ರಾಮವು ೧೧೦ ಮನೆಗಳುಳ್ಳದ್ದಾಗಿಯೂ ೧೦೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ. ಈ ಗ್ರಾಮಕ್ಕೆ ವಿದ್ಯಾ ಇಲಾಖೆಯವರು ೧೯೧೫ ನೆ ಇಸವಿಯಲ್ಲಿ ೧ ಗ್ರಾಂಟು ಸ್ಕೂಲು ಮಂಜೂರ್ಮಾಡಿದ್ದಾರೆ. ಸ್ಕೂಲು ಕಟ್ಟಡವಿಲ್ಲದೆ ಬಾಡಿಗೆ ಮನೆಯಲ್ಲಿ ಇದೆ. ತಾ|| ೮-೧೦-೧೬ ರಲ್ಲಿ ತಾಲ್ಲೂಕು ಅಮಲ್ದಾರ್ ಮ|| ಶ್ರೀಕಂಠಯ್ಯನವರು ದಯಮಾಡಿಸಿ ಸ್ಕೂಲು ಕಟ್ಟಡದ ವಿಚಾರವಾಗಿ ಇದ್ದ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಚಂದಾಪಟ್ಟಿ ಹಾಕಿ ಸುಗ್ಗಯ್ಯ, ತಿಮ್ಮಯ್ಯ, ಮರಿಯಪ್ಪ ವಗೈರೆಯವರಿಂದ ೩೦ ರೂಪಾಯಿಗಳನ್ನು ವಸೂಲ್ಮಾಡಿ ಪಟೇಲ್ ಮುನಿತಿಮ್ಮೇಗೌಡನ ವಶಕ್ಕೆ ಕೊಟ್ಟು ರಶೀತಿ ಕೊಡಿಸಿದರು. ಪುನಃ ಚಂದಾಪಟ್ಟಿಯಂತೆ ವಸೂಲಾಗಲಿಲ್ಲ. ಈಚೆಗೆ ಬಂದ ಅಮಲ್ದಾರರುಗಳಿಗೆ ಹೇಳಿಕೊಂಡಾಗ್ಯೂ ಅವರುಗಳು ಮನಸ್ಕರಿಸಲಿಲ್ಲ. ಈಗ ಸ್ಕೂಲು ಕಟ್ಟಡವಿಲ್ಲದೆ ಬಾಲಕರಿಗೆ ತುಂಬಾ ತೊಂದರೆಯಾಗಿರುವುದರಿಂದ ಈ ವಿಷಯವನ್ನು ವಿದ್ಯಾ ಇಲಾಖೆಯವರು ಗಮನಕ್ಕೆ ತೆಗೆದುಕೊಂಡು ಈ ಗ್ರಾಂಟು ತಪ್ಪಿಸಿ ಎಲಿಮೆಂಟರ್ ಸ್ಕೂಲನ್ನಾಗಿ ಮಾಡುವರೆಂದೂ ಈಗ ನಮ್ಮ ತಾಲ್ಲೂಕಿಗೆ ದಯಮಾಡಿಸಿರುವ ಮ|| ಪಿ. ಕೆ. ದೊರೆಸ್ವಾಮಯ್ಯನವರು ಗ್ರಾಮಕ್ಕೆ ದಯಮಾಡಿ ಚಂದಾಪಟ್ಟಿಯಂತೆ ವಸೂಲ್‌ಮಾಡಿಸಿ ಕಟ್ಟಡವನ್ನ ಕಟ್ಟಿಸಲು ಏರ್ಪಾಡುಮಾಡಿ ನಮ್ಮಗಳಿಗೆ ವಿದ್ಯಾದಾನ ಮಾಡುತ್ತಾರೆಂದು ನಂಬಿರುತ್ತೇವೆ.

ವಿದ್ಯಾಭಿಮಾನಿ.

ಧಾರವಾಡ ಜಿಲ್ಲಾ ನಲವಡಿಯಲ್ಲಿ ಕೂಡಿದ ಕರ್ನಾಟಕ ಹಾಲುಮತ (ಕುರುಬರ) ವಿದ್ಯಾವರ್ಧಕ ಮತ್ತು ಸಾಮಾಜಿಕ ೧ ನೆ ಮಹಾಸಭೆ.

ಈ ಮಹಾಸಭೆಯು ತಾ|| ೩ ಮತ್ತು ೪ ನೆ ಜುಲೈ ೧೯೨೦ ನೆ ಇಸವಿಯ ಶನಿವಾರ ಮತ್ತು ರವಿವಾರ ಈ ಎರಡು ದಿವಸಗಳಲ್ಲಿ ಶ್ರೀಮಂತ ಮ|| ರಾ|| ಸೋಮನಗೌಡ, ಬಸವನಗೌಡ ಪಾಟೀಲ ಸಾ|| ಹಲ್ಲಾಪುರ ಈ ಮಹನೀಯರ ಅಧ್ಯಕ್ಷತೆಯಲ್ಲಿ ಕ್ರಮರೀತಿಯಿಂದ ಜರುಗಿತು. ತಾ|| ೨-೭-೧೯೨೦ನೆ ಇಸವಿಯ ಶುಕ್ರವಾರ ರಾತ್ರಿ “ಪಂಚಮ ಜಾರ್ಜ್ ಬಾದಶಹರ” ಭಾವಪಟದ ಮತ್ತು ಅಧ್ಯಕ್ಷರ ಮೆರವಣಿಗೆಯು ಒಳ್ಳೇ ವಿಜೃಂಭಣೆಯಿಂದ ಆಯಿತು. ಶನಿವಾರ ಮುಂಜಾನೆ ಭವ್ಯವಾದ ಮತ್ತು ನಾನಾ ರೀತಿಯಿಂದ ಅಲಂಕರಿಸಲ್ಪಟ್ಟಂಥ ಮಂಟಪದಲ್ಲಿ ಸಭೆಯ ಕೆಲಸವು ನಡೆಯಿತು. ಸಭೆಗೆ ಮೈಸೂರು, ಮದ್ರಾಸು, ನಿಜಾಮಸ್ಟೇಟ್, ಧಾರವಾಡ, ವಿಜಾಪುರ, ಬೆಳಗಾಂವ, ಸಾಂಗಲಿ, ಜಮಖಂಡಿ, ಬುರಜ, ಸವಣೂರು, ರಾಮದುರ್ಗ ಮೊದಲಾದ ಬ್ರಿಟಿಷ್ ಮತ್ತು ಸಂಸ್ಥಾನಗಳ ಹದ್ದಿನ ಪ್ರತಿನಿಧಿಗಳು ಸುಮಾರು ಎರಡು ಸಾವಿರದವರೆಗೆ ಕೂಡಿದ್ದರು. ಮತ್ತು ಸಭೆಗೆ ಸಮಸ್ತ ಹಾಲುಮತದ ಗುರುವರ್ಗದವರು ದಯಮಾಡಿಸಿದ್ದರು. ಇದಲ್ಲದೆ ಸಭೆಗೆ ಸಹಕಾರೀ ಖಾತೆಯಿಂದ ಮೆ|| ಜಗತ್ತಾಪ ನೈಟ್ ಸ್ಕೂಲು ಇನ್ಸ್‌ಪೆಕ್ಟರ್, ಮಿ|| ಗೋವಿಂದಗೌಡ ಪಾಟೀಲ ಹುಲಕೋಟಿ ಆನರರಿ ಆರ್ಗನಾಯಜರ, ಶೇತಕಿ ಖಾತೆಯಿಂದ ಮೆ|| ರಾಮಗೌಡ ಹುಲಕೋಟಿ ಬಿ. ಎ ಜಿ. ಹೆಡ್ಮಾಸ್ತರ ಶೇತಕಿ ಶಾಲಾ ದೇವೀ ಹೊಸೂರ, ವಿದ್ಯಾಖಾತೆಯಿಂದ ಮೆ|| ಭಂಡಿವಾಡ ಬಿ. ಎ. ಅಸಿಸ್ಟೆಂಟ್ ಡೆ|| ಎ|| ಇನ್ಸ್‌ಪೆಕ್ಟರ್ ಧಾರವಾಡ, ಈ ಸರ್ಕಾರಿ ಅಧಿಕಾರಸ್ಥರೂ, ಮಿ|| ನಲವಡಿ ವಕೀಲ ಮಿ|| ತಿಮ್ಮಪ್ಪ ಮುದರಡ್ಡಿ, ಮಿ|| ಸಿದ್ಧನಗೌಡ ಪಾಟೀಲ ಹುಲಕೋಟಿ, ಮಿ|| ವೆಂಕಟಕೃಷ್ಣಯ್ಯ ಬೆಂಗಳೂರು ಮೊದಲಾದ ಪರಮತೀಯ ಸಭ್ಯ ಗೃಹಸ್ಥರೂ ಆಗಮಿಸಿದ್ದರು. ಸಭೆಯಲ್ಲಿ ವಿದ್ಯಾಭಿವೃದ್ಧಿ, ಸಹಕಾರಿತನ, ಆರೋಗ್ಯರಕ್ಷಣೆ, ಸಮಾಜಸುಧಾರಣೆ, ಒಕ್ಕಲತನ ಸುಧಾರಣೆ, ವ್ಯಾಪಾರೋದ್ಯೋಗ ಈ ವಿಷಯಗಳ ಮೇಲೆ ಅಧಿಕಾರಯುಕ್ತವಾಣಿಯಿಂದ ಮಾತಾಡಲು ಯೋಗ್ಯರಾದ ಸಭ್ಯ ಗೃಹಸ್ಥರು ಭಾಷಣ ಮಾಡಿದರು. “ಕರ್ನಾಟಕ ಹಾಲುಮತ ವಿದ್ಯಾವರ್ಧಕ” ಸಂಘಸ್ಥಾಪನೆಗಾಗಿ ೨೦ ಜನರ ಒಂದು ಕಮಿಟಿಯು ನೇಮಿಸಲ್ಪಟ್ಟಿತು. “ಸಂಘದ ಫಂಡಿಗೆ” ೩೦೦೦ ರೂ. ಗಳ ವಾಗ್ದಾನಗಳಾಗಿ ಸುಮಾರು ೮೦೦-೯೦೦ ರವರೆಗೆ ರೋಖ ವಸೂಲಾಯಿತು. ಸಭೆಯಲ್ಲಿ ಕೆಳಗೆ ಬರೆದ ಠರಾವುಗಳು ಸರ್ವಾನುಮತದಿಂದ ಪಾಸಾದವು.

(೧) ರಾಜನಿಷ್ಠೆ, ಹೊಸ ಸುಧಾರಣೆಯ ಬಗ್ಗೆ ಆಭಾರ, ಪ್ರಿನ್ಸ್ ಆಫ್‌ವೇಲ್ಸರಿಗೆ ಸ್ವಾಗತ. (೨) ಬಲಾತ್ಕಾರಿಕ ಶಿಕ್ಷಣ, ಹಾಯಸ್ಕೂಲು ಕಾಲೇಜು ಕನ್ನಡ ಟ್ರೇನಿಂಗ್ ಕಾಲೇಜುಗಳಲ್ಲಿ ಹಾಲುಮತ ವಿದ್ಯಾರ್ಥಿಗಳಿಗೆ ಮಾಫಿ ವೇತನ, ಸುಲಭಪ್ರವೇಶ ಸಿಗಬೇಕು. (೩) ಹಾಲುಮತದ ವಿದ್ಯಾವಂತರಿಗೆ ಎಲ್ಲಾ ಖಾತೆಗಳಲ್ಲಿ ನವಕರಿಗಳನ್ನು ಮೊದಲು ಕೊಡಬೇಕು. ಮಿ|| ಬಸಪ್ಪ ಫಕೀರಪ್ಪ ಕಲ್ಲಣ್ಣನವರ ಸಾ|| ನಲವಡಿ ಸೆಕ್ರೆಟರಿ ಕರ್ನಾಟಕ ಹಾಲುಮತ ವಿ. ಸಾ. ೧ ನೆ ಮಹಾಸಭೆ.

ಮಿ|| ಶಿವಲಿಂಗಪ್ಪ ಫಕೀರಪ್ಪ ಗೆರೂಡಿ ಸಾ|| ಎರೇಬೂದಿಹಳ್ಳಿ, ಮಿ|| ವಟ್ಟದಪ್ಪ ವೀರಬಸಪ್ಪ ದಾಸಪ್ಪನವರ ಸಾ|| ಕುಂದೂರು, ಮಿ|| ಬಸಲಿಂಗಪ್ಪ ಮಲ್ಲಪ್ಪ ಕಸಲವಾಳದ ಮೊದಲಾದವರು ನವಕರಿಯಿಲ್ಲದೆ ನಿರಾಶೆಯುಳ್ಳವರಾದದ್ದಕ್ಕಾಗಿ ಸಭೆಯ ವಿಷಾದ. ಮತ್ತು ಸದರೀಯವರಿಗೆ ನವಕರಿ ಕೊಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ.

(೪) ಗ್ರಾಮಪಂಚಾಯತಿ ಪದ್ಧತಿಯು ತೀವ್ರ ಪ್ರಾರಂಭಿಸಲ್ಪಡಬೇಕು. (೫) ಹಾಲುಮತ ಸಹಕಾರಿ ಸಂಘಸ್ಥಾಪನೆ. (೬) ಮಿ|| ನಲವಡಿ ವಕೀಲ, ಮಿ|| ತಿಮ್ಮಪ್ಪ ಮುದರಡ್ಡಿ, ಮಿ|| ಸಿದ್ಧನಗೌಡ ಪಾಟೀಲ ಹುಲಕೋಟಿ, ಮಿ|| ದೇವನಗೌಡ ಪಾಟೀಲ ಬಿ. ಎ ಮಿ|| ಕೆಂಚನಗೌಡ ಪಾಟೀಲ ಮಿ|| ಬಸಯ್ಯ ರಾಚಯ್ಯ ಕುರಹಟ್ಟಿ ಮಠ ಈ ಸಭ್ಯ ಗೃಹಸ್ಥರು ವಿದ್ಯಾವರ್ಧಕ ಕಮಿಟಿಯ ಆನರರಿ ಮೆಂಬರರು ಆಗಬೇಕು.

ಬಸಪ ಫಕೀರಪ್ಪ ಕಲ್ಲಣ್ಣನವರ ಸೆಕ್ರೆಟರಿ.

ಹೊಸ ಪುಸ್ತಕಗಳು.

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.

ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.

ರಾ|| ಬ|| ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.

ಸ್ವಕರ್ತವ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 50

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬೆಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಜಾಗ್ರತೆ. ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**



ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 37

ನಾವು ಎ. ಆಲ್ ಬ್ಯುಕ್ಯಾಯರ್ ಕ್ಯೊ ಅಂಡ್‌ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ ಗೌಡರು ದಾವಣಗೆರೆ.	ವಿಳಾಸ:—ಎನ್. ಪಿ. ಕರೇಗೌಡರ ಹಾಲಪ್ಪ ಶಿವಲಿಂಗಪ್ಪ, ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣವು ಪದ್ಯಾತ್ಮಕ

ಮಹಾಶಯರೆ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ತರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾನುಭಾವರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೮—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

35

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆದ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕೂ ಉರಿಯೂ ಕ್ಷಣಮಾತ್ರದಲ್ಲಿ ಮಾಯವಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

16 ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
ಸಾಹುಕಾರಪೇಟೆ, ಮದರಾಸು.

ಹೊಸಶೋಧ! * ಓಂ * ಹೊಸ ಶೋಧ!!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಸ್ಯಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)



ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕುರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1-ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

16 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:—ಡಾಕ್ಟರ್ ಎಂಪಿಟರ್, 8 ಇರುಳಪ್ಪನಬೀದಿ ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 35

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ಯತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತಮ್ಮ, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈಕೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಕ್ಕ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜುಲೈ ತಾ|| ೧೮ ರಿಂದ ೧೯೨೦ ನೆಯ ಜುಲೈ ತಾ|| ೨೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಅಧಿಕಶ್ರಾವಣಶುದ್ಧ ತದಿಗೆಯಿಂದ ಅಧಿಕಶ್ರಾವಣ ಶುದ್ಧ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
18	ಭಾನು	ತದಿ	33-25	ಮಖಾ	53-54	3
19	ಸೋಮ	ಚೌತಿ	29-46	ಪುಬ	52-14	4
20	ಮಂಗಳ	ಪಂಚ	26-43	ಉಭ	51-39	5
21	ಬುಧ	ಷಷ್ಠಿ	24-56	ಹಸ್ತ	52-9	6
22	ಗುರು	ಸಪ್ತ	24-24	ಚಿತ್ತ	53-57	7
23	ಶುಕ್ರ	ಅಷ್ಟ	25-8	ಸ್ವಾತಿ	56-59	8
24	ಶನಿ	ನವ	27-7	ವಿಶಾ	60	9

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ ನಕ್ಷತ್ರ ಮೋಹರಾಜೀಯತೇ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀರ್ತ್ಯಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿಕೆಯುಂಸದಾಪೂರೆಗೆ ಗೋಚರಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಜುಲೈ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೩೦

GOVERNMENT OF MYSORE.
ELECTRICAL DEPARTMENT.

Electrical Energy is supplied at the following rates for lighting, heating, cooking and industrial purposes in the cities of Mysore and Bangalore, C & M Station, Bangalore and Robertsonpet, Kolar Gold Fields.

	Rate per B.T.U.	Minimum monthly charge.
1. Lighting	2·50 as.	As. 6 per point of 60 Watts per month.
2. Heating & Cooking.		
Small household appliances up to an equivalent of 20 points (1200 Watts) maximum demand at any one time. This is included in lighting service and charge levied on only the higher of the two individual services.	do.	do.
For units of larger capacity than 20 points maximum demand.		
First 50 B. T. U. consumption	1·75 as.	Rs. 6 per H. P.
Second 50 ,, or fraction thereof	1·25 as.	...
Third 50 ,, or above 150 B.T.U	·75 as.	...

3. Power Supply for Industries Rated Maximum demand in Electrical Horse Power.

Motors up to 20 H. P.	1 anna	Nil
Motors above 20 and up to 50 H. P.	1·00 anna	Rs. 6 per H. P.
Motors above 50 and up to 100 H. P.	·875	Rs. 6 do.
Motors above 100 and up to 200 H. P.	·75	Rs. 6 do.

Discounts are allowed for large supplies. For further particulars apply to

(Sd.) B. D. NATH,
For Chief Electrical Engineer
50 to the Government of Mysore.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ. ## ಇಂದ್ರಿಯಸ್ತಂಭನ ಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳಿಸಿಕೊಡುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
43 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ರೇಡಿಯಂ ರಿಸ್ಟ್ ವಾಚ್.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆತೋರಿಸುವ ಗಡಿಯಾರ.



ಇತರ ಗಡಿಯಾರಗಳಲ್ಲಿ ಕತ್ತಲಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಹಗಲಿನಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಕೈಯಲ್ಲಿ ಕಟ್ಟಲು ಸರಪಣಿ, ಇಂಗ್ಲಿಷ್‌ಪಟ್ಟಿ ಸಹ ಇರುವದು.

ಚರ್ಮದ ಪಟ್ಟಿ ಸಹಿತ ಗಡಿಯಾರ 1 ಕ್ಕೆ 6—8—0.
ಬೆಳ್ಳಿಯ ಸರಪಣಿ ಸಹಿತ ,, 9—8—0.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
17 ಪೋಸ್ಟ್‌ಬಾಕ್ಸ್ ನಂ. 266, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು,ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
30 ವೈದ್ಯಶಾಲಾ,ಮೈಸೂರು.

ಸೀಮೆ ತಲೆದಿಂಬುಗಳು.



ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ 1-0-0.

17

ಎಲೆಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ,
8 ಇರುಳಪ್ಪನಬೀದಿ, ಮದರಾಸು.

ಹೊಸ ಪುಸ್ತಕಗಳು. 2



ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.

ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.

ರಾ|| ಬ|| ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.

ಸ್ವಕರ್ತವ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಹೊಸಶೋಧ! * ಓಂ * ಹೊಸ ಶೋಧ!!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
2 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 31

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡ

ಮೈಸೂರು ಸ್ಟಾರ್.

೧೯೨೦ ನೆ ಇಸವಿ ಜುಲೈ ತಾ|| ೨೫ನೆಯ ಭಾನುವಾರ.

ಯುದ್ಧವು ಮುಗಿದಿತೆ? ಶಾಂತಿಯು ಸ್ಥಾಪಿತವಾಯಿತೆ?

ಈ ಪ್ರಶ್ನೆಗೆ ಉತ್ತರ ಕೊಡಬೇಕಾದವರು ಪ್ರಪಂಚದ ಪರಿಸ್ಥಿತಿಯನ್ನವಲೋಕಿಸಿದರೆ "ಇಲ್ಲ"ವೆಂತಲೇ ಹೇಳಬೇಕಾಗುವುದು. ಲೋಕವನ್ನೆಲ್ಲಾ ಏಕಛತ್ರಾಧಿಪತ್ಯವನ್ನಾಗಿ ಮಾಡಬೇಕೆಂಬ ಜರ್ಮನರ ದುಷ್ಟಸಂಕಲ್ಪವನ್ನು ಹಾಳುಮಾಡಿ, ಅವರ ದೌರ್ಜನ್ಯಭೀತಿಯಿಂದ ಲೋಕವನ್ನು ಕಾಪಾಡಿ. ಸಣ್ಣ ಸಣ್ಣ ರಾಜ್ಯಗಳ ಸ್ವಾತಂತ್ರ್ಯವನ್ನು ಸಂರಕ್ಷಿಸಿ, ಲೋಕದಲ್ಲಿ ನಾಗರಕತೆಯನ್ನೂ ಪ್ರಜಾಸ್ವಾಮ್ಯವನ್ನೂ ನೆಲೆಗೊಳಿಸುವುದಕ್ಕೆ ಆಂಗ್ಲಪ್ರಭುತ್ವದವರೂ ಅಮೇರಿಕಾ ಸಂಯುಕ್ತರಾಷ್ಟ್ರಪ್ರಭುತ್ವದವರೂ ಕಳೆದ ಮಹಾಯುದ್ಧದಲ್ಲಿ ತೊಡಗಿದರೆಂದು ಹಲವು ಬಾರಿ ಸಾರಲ್ಪಟ್ಟಿತು. ಪ್ರೆ|| ವಿಲ್ಸನ್‌ರವರು ಮೇಲಣ ಉದ್ದೇಶದ ಸಾಧನೆಗಾಗಿಯೇ ೧೪ ಸೂತ್ರಗಳನ್ನು ಸೂಚಿಸಿ ಸಂಧಿನಿಬಂಧನೆಯನ್ನೇರ್ಪಡಿಸಿದರು. ಅದಕ್ಕಾಗಿಯೇ ಎಂದು ನಾನಾದೇಶಸಂಘವು ಏರ್ಪಟ್ಟಿತು. ಆದರೆ ಅವುಗಳ ಫಲವು ಮಾತ್ರ ವಿಪರೀತವಾಗಿ ತೋರುತ್ತಿರುವುದೇ ಹೊರತು ಸಾರ್ಥಕಮುಖವಾಗಿಲ್ಲ. ಯುದ್ಧಾಗ್ನಿಯು ಒಂದು ಕಡೆ ಆರಿಸಲ್ಪಟ್ಟರೆ ಮತ್ತೊಂದು ಕಡೆ ಉರಿಯುತ್ತಲೇ ಇದೆ. ಕೆಲಕಡೆ ಮೇಲೆ ಉರಿಯಾರಿದಂತೆ ತೋರಿದರೂ ಒಳಗೊಳಗೆ ಕ್ರೋಧಾಗ್ನಿಯು ಕವರುತ್ತಲಿದೆ. ಆರ್ಥಿಕಸಮಸ್ಯಾ ಸಂಘರ್ಷಣೆಯು ಒಂದುಕಡೆ ಕಲಹಾಗ್ನಿಯನ್ನು ಹೊತ್ತಿಸುತ್ತಲಿದೆ. ಆಹಾರ್ಯಸಮಸ್ಯೆಯು ಲೋಕವನ್ನೆಲ್ಲಾ ಕ್ಷೋಭೆಗೊಳಿಸುತ್ತಿದೆ. ಸ್ವಾರ್ಥತ್ಯಾಗಮೂಲಕವಲ್ಲದ ಪರೋಪದೇಶ ಪ್ರಾವೀಣ್ಯವು ಜಗತ್ತನ್ನು ವಂಚಿಸಬೇಕೆಂದು ಹವಣಿಸುತ್ತಿರುವುದರಿಂದ ನಿಜವಾದ ಶಾಂತಿಯು ರೂಢಮೂಲವಾಗುವುದು ದುಸ್ತರವಾಗಿದೆ. ರಷ್ಯಾದಲ್ಲಿ ಉದಯಗೊಂಡ ಬೋಲ್ಷೆವಿಕ್ ತತ್ತ್ವವು ಪ್ರಪಂಚವನ್ನೇ ವ್ಯಾಪಿಸಿ ಅಶಾಂತಿಮಯವನ್ನಾಗಿ ಮಾಡುವಂತಿದೆ. ರಷ್ಯಾದೇಶದಲ್ಲಿ ಬೋಲ್ಷೆವಿಕ್ಕರಿಗೂ, ಪೋಲರಿಗೂ, ಉಕ್ರೇನಿಯನ್ನರಿಗೂ ಯುದ್ಧವು ತೀಕ್ಷ್ಣವಾಗಿ ನಡೆಯುತ್ತಿದೆ. ಕಾಕಸಸ್ಸಿನಲ್ಲಿ ಜಾರ್ಜಿಯನ್ನರೂ ಅಜರ್ಬಯಿ ಜನರೂ ಪರಸ್ಪರ ಕಾದಾಡುತ್ತಿದ್ದಾರೆ. ತುರ್ಕಿಯಲ್ಲಿ ಪ್ರಭುತ್ವಪಕ್ಷದವರಿಗೂ ಜಾತೀಯವಾದಿಗಳಿಗೂ ಕದನವಾಗುತ್ತಿದೆ. ಮತ್ತೊಂದು ಕಡೆ ಆರ್ಮೇನಿಯನ್ನರಿಗೂ ತುರುಕರಿಗೂ ಕಾಳಗವಾಗುತ್ತಿದೆ. ಗ್ರೀಕರೂ ಫ್ರೆಂಚರೂ ಇಂಗ್ಲೀಷರೂ ಇಟಲಿಯವರೂ ಸಹ ತುರುಕರ ಮೇಲೆ ಕಾದಾಡುತ್ತಿದ್ದಾರೆ. ಮೆಸಪೊಟೇಮಿಯಾದಲ್ಲಿ ಅಂತಃಕಲಹವು ಪ್ರಬಲವಾಗಿದೆ. ಜುಗೋಸ್ಲಾವರೂ ಜಕೋಸ್ಲಾವಕ್ಕರೂ ಯುದ್ಧಕ್ಕೆ ಹವಣಿಸಿಕೊಳ್ಳುತ್ತಿದ್ದಾರೆ. ಪಾರಸೀಕ ದೇಶದಲ್ಲಿ ಇತ್ತಂಡವಾಗಿ ಕೆಲವರು ಸ್ವತಂತ್ರಪ್ರಭುತ್ವವನ್ನು ಸಾರಿಕೊಂಡು ಪ್ರಭುತ್ವದವರ ಮೇಲೆ ತಿರುಗಿಬಿದ್ದಿದ್ದಾರೆ. ಬಲ್ಗೇರಿಯನ್ನರಿಗೂ ಸರ್ವಿಯನ್ನರಿಗೂ ಒಳಗಿರುವ ಕ್ರೋಧಾಗ್ನಿಯು ಆರಿಲ್ಲ. ಕಾಲುಕೆರೆದು ಜಗಳ ತೆಗೆಯುವುದರಲ್ಲೇ ಇದ್ದಾರೆ. ಜರ್ಮನಿಯಲ್ಲಿ ನೂತನಪ್ರಭುತ್ವವು ದೃಢಮೂಲವಾಗಿಲ್ಲ. ರಾಜಪ್ರಭುತ್ವಾಭಿಮಾನಿಗಳು ಅನುಕೂಲಸಮಯವನ್ನೇ ನಿರೀಕ್ಷಿಸುತ್ತಿದ್ದಾರೆ. ಯೂರೋಪಿನ ಎಲ್ಲ ದೇಶಗಳಲ್ಲೂ ಕೂಲಿಕಾರರ ವಿಪ್ಲವವು ದವಾಗ್ನಿಯಂತೆ ಹರಡುತ್ತಿದೆ. ಐರ್ಲ್ಯಾಂಡಿನಲ್ಲಿ ಅವಿಚ್ಛಿನ್ನವಾಗಿ ಹತ್ಯೆಗಳೂ ವಿಪ್ಲವ ಯತ್ನಗಳೂ ಜರುಗಿರುತ್ತವೆ. ಏಷ್ಯಾಖಂಡದಲ್ಲೂ ಕೂಡ ಜಪಾನರು ಚೀನಾವನ್ನೂ ಕೋರಿಯಾವನ್ನೂ ತುರಿದು ಮುಕ್ಕಲು ಹವಣಿಸಿಕೊಂಡು ಹಟಸಾಧಿಸುತ್ತಿದ್ದಾರೆ. ಭರತಖಂಡದಲ್ಲಿ ನಾನಾತೆರದ ಅಸಮಾಧಾನಗಳು ಮನೆಮಾಡಿಕೊಂಡಿವೆ. ಹೀಗೆ ಪ್ರಪಂಚದ ಸ್ಥಿತಿಯು ಅಶಾಂತಿಮಯವಾಗಿದೆ. ದೇಹಬಲದಿಂದ ಉದ್ದೇಶಸಾಫಲ್ಯವುಂಟಾಗುವುದಿಲ್ಲವೆಂಬಂಶವನ್ನು ಜರ್ಮನರ ಪರಾಜಯದಿಂದ ಮಿತ್ರಮಂಡಲಿಯವರು ತಿಳಿದುಕೊಂಡಿದ್ದರೂ, ಸ್ವಲಾಭಾಪೇಕ್ಷೆಯನ್ನು ಬಿಡಲಾರರು. ತಮ್ಮಲ್ಲಿ ಲೋಭ ಕ್ರೋಧಾದಿಗಳ ಶಾಂತಿಯನ್ನು ಮೊಟ್ಟಮೊದಲು ಸ್ಥಾಪಿಸಿಕೊಳ್ಳಲಾರದವರು ಜಗಚ್ಛಾಂತಿಯನ್ನು ಬಾಹುಬಲದಿಂದ ಸ್ಥಾಪಿಸುವುದಕ್ಕೆ ಎದುವರೆಗೆ ಪ್ರಯತ್ನಿಸುತ್ತಿದ್ದರೂ ಇಷ್ಟಸಿದ್ಧಿಯನ್ನು ಪಡೆಯುವುದು ದುಸ್ತರವು. ಅವರು ಬಲಾತ್ಕಾರದಿಂದ ಸ್ಥಾಪಿಸುವ ಶಾಂತಿಯು ಕ್ಷಣಿಕವಾಗಿದ್ದೀತೇ ಹೊರತು ಶಾಶ್ವತವಾಗಿರಲಾರದು. ಇದುವರೆಗಣ ಪ್ರಯತ್ನದಿಂದ ನಿಜಶಾಂತಿಗೆ ತಕ್ಕ ಮಾರ್ಗವು ಸ್ಥಾಪಿತವಾಗಲಿಲ್ಲವೆಂಬುದು ಗೊತ್ತಾಗಿರುವಾಗ ತಕ್ಕ ಮಾರ್ಗವು ಯಾವುದೆಂಬುದನ್ನು ಯೂರೋಪಿನ ರಾಜನೀತಿಜ್ಞರೆಲ್ಲರೂ ಅರಿತುಕೊಳ್ಳುವುದು ಶ್ರೇಯಸ್ಕರವು. ಮಿತ್ರಮಂಡಲಿಯವರು ಧರ್ಮಬಲದಿಂದ ಅಜಾತಶತ್ರುಗಳಾದಾಗ ಲೋಕಶಾಂತಿಯು ಸ್ಥಾಪಿತವಾಗುವುದು. ಯುದ್ಧವು ಯಾವಾಗಕೊನೆಮುಟ್ಟುವುದೆಂಬ ವಿಷಯದಲ್ಲಿ ಆಂಗ್ಲಸರ್ಕಾರದವರು ಈಗತಾನೇ ಮಾಡಿರುವ ಒಂದು ಪ್ರಕಟನೆಯಲ್ಲಿ "ಶತ್ರುಗಳು ಬಹುಮಂದಿ ಇದ್ದಾರೆ. ಅವರೊಡನೆ ಪ್ರತ್ಯೇಕ ಪ್ರತ್ಯೇಕವಾಗಿ ಸಮಾಧಾನ ಮಾಡಿಕೊಳ್ಳುತ್ತಿದ್ದೇವೆ. ಶತ್ರುಗಳೊಳಗೆ ಕೊನೆಯವರೊಡನೆ ಯಾವಾಗ ಸಂಧಿ ಜರುಗಿ ಪತ್ರಕ್ಕೆ ರುಜುವಾಗುವುದೋ ಆಗ ಯುದ್ಧವು ಮುಗಿದಿತೆಂದು ಭಾವಿಸಬೇಕು" ಎಂದು ಹೇಳಿರುತ್ತಾರೆ. ನಿರ್ಬಂಧದಿಂದ ಪತ್ರಕ್ಕೆ ರುಜುಮಾಡಿದವರು ಬೋನಿನಲ್ಲಿ ಕೂಡಿದ ಹುಲಿಯಂತಿದ್ದಾರೇ ಹೊರತು ಸಾಕಿದ ಹುಲ್ಲೆಯಂತಾದಾರೆ?

ತುರ್ಕಿಯ ಭವಿತವ್ಯತೆ.

ತುರ್ಕಿಯ ಸಮಸ್ಯೆಯು ಯಾವ ದೆಸೆಗೆ ಮುಟ್ಟುವುದೆಂಬುದು ಈಗ ಪ್ರತಿಯೊಬ್ಬರ ನಿರೀಕ್ಷಣೆಯಲ್ಲಿದೆ. ಸಂಧಿನಿಬಂಧನೆಗಳಿಗೆ ತುರ್ಕಿಪ್ರಭುತ್ವದವರು ಕೊಟ್ಟ ಉತ್ತರದಲ್ಲಿ ಅವರು ಕೇಳಿಕೊಂಡಿದ್ದ ಬದಲಾವಣೆಗಳನ್ನು ಮಾಡಿಕೊಡಲು ಮಿತ್ರಮಂಡಲಿಯವರು ಒಪ್ಪಲಿಲ್ಲ. ಮುಖ್ಯವಾಗಿ ಥ್ರೇಸು, ಸ್ಮರ್ನಾ, ಸಿರಿಯಾ, ಅರ್ಮೇನಿಯಾ ದೇಶಗಳ ಎಲ್ಲೆಕಟ್ಟನ್ನು ತುರ್ಕಿಯವರ ಅಪೇಕ್ಷೆಯಂತೆ ಬದಲಾಯಿಸಲಾಗುವುದಿಲ್ಲವೆಂದು ಹೇಳಿಬಿಟ್ಟಿದ್ದಾರೆ. ಡಾರ್ಡಿನಲ್ಸ್ ಜಲಸಂಧಿಯ ಮೇಲೆ ಇತರರ ಜತೆಗೆ ತುರ್ಕಿಗೂ ಅಧಿಕಾರವಿರಬಹುದೆಂದು ಒಪ್ಪಿಕೊಂಡಿದ್ದಾರೆ. ಹಿಂದೆ ತುರ್ಕಿಯು ಯುದ್ಧಕ್ಕೆ ಪ್ರವೇಶಿಸಿದುದರಿಂದ ಯುದ್ಧವು ಬಹಳ ಕಾಲ ಬೆಳೆದು ಮಿತ್ರಮಂಡಲಿಯವರಿಗೆ ಎಷ್ಟೋ ಲಕ್ಷ ಸೈನ್ಯದ ಮತ್ತು ಅನೇಕ ಕೋಟಿ ದ್ರವ್ಯದ ನಷ್ಟವಾಯಿತೆಂತಲೂ, ಅದುಕಾರಣ ನಾಗರಕತಾ ಪ್ರಪಂಚದಲ್ಲಿ ಮರಳಿ ತುರ್ಕಿಯಿಂದ ಇಂಥ ಅಪಚಾರಗಳು ನಡೆಯದಂತೆ ಮಾಡುವುದು ಅವಶ್ಯಕವೆಂತಲೂ, ತುರುಕರು ನಡೆಯಿಸಿದ ಕ್ರೌರ್ಯದಿಂದ ಅವರು ಇತರ ಪ್ರಜೆಗಳ ಮೇಲೆ ಅಧಿಕಾರ ನಡೆಯಿಸುವುದಕ್ಕೆ ಅರ್ಹರಲ್ಲವೆಂಬ ವಿಷಯವು ವ್ಯಕ್ತವಾಗಿದೆಯೆಂತಲೂ, ಈಗ ನಾವು ಹೇಳಿರುವ ಸಂಧಿನಿಯಮಗಳಿಗೆ ಒಪ್ಪಿ ತುರ್ಕಿಯು ಜುಲೈ ತಾ|| ೨೭ ರೊಳಗೆ ರುಜು ಮಾಡದಿದ್ದರೂ, ಏಷ್ಯಾಮೈನರಿನಲ್ಲಿ ವಿಪ್ಲವವನ್ನಡಗಿಸಿ ಮರಳಿ ಅಧಿಕಾರವನ್ನು ಸ್ಥಾಪಿಸಲಾರದೆಹೋದರೂ, ತುರುಕರನ್ನು ಬಲಾತ್ಕರಿಸಿ ಯೂರೋಪುಖಂಡದಿಂದಲೇ ಹೊರಡಿಸಲು ತಕ್ಕ ಪ್ರಯತ್ನವನ್ನು ಮಾಡುವೆವೆಂತಲೂ ಖಂಡಿತವಾಗಿ ತಿಳಿಯಿಸಿಬಿಟ್ಟಿದ್ದಾರೆ. ಇದರಿಂದ ತಾವು ಹೇಳಿದಂತೆ ಕೇಳದಿದ್ದರೆ ಯುದ್ಧವನ್ನಾರಂಭಿಸಿ ತುರ್ಕಿಯನ್ನು ಯೂರೋಪಿನಲ್ಲಿ ನಾಮಾವಶೇಷ ಮಾಡುವುದಕ್ಕೆ ಮಿತ್ರಮಂಡಲಿಯವರು ಸಿದ್ಧರಾಗಿರುವರೆಂಬುದು ಸ್ಪಷ್ಟವಾಗಿದೆ. ತುರ್ಕಿಯ ಮುಖ್ಯ ವಜೀರನು ಸ್ಥಿತಿಗತಿಗಳನ್ನು ಪರ್ಯಾಲೋಚಿಸಿ ಸಂಧಿ ಪತ್ರಕ್ಕೆ ಒಪ್ಪಿ ರುಜು ಮಾಡುವುದೇ ಲೇಸೆಂತಲೂ, ಹಾಗಿಲ್ಲದಿದ್ದರೆ ಗ್ರೀಕರು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಆಕ್ರಮಿಸಿಕೊಳ್ಳುವರೆಂತಲೂ ಅಭಿಪ್ರಾಯಪಟ್ಟಿರುವನಂತೆ. ಅಧಿಕಾರಿಗಳಲ್ಲಿ ಬಹುಜನರ ಅಭಿಪ್ರಾಯವು ಹಾಗೆಯೇ ಇದೆಯಂತೆ. ಆದರೆ ತುರ್ಕಿಯ ಪ್ರಜೆಗಳಲ್ಲಿ ಬಹುಭಾಗದವರಿಗೆ ಈಗಣ ಪ್ರಭುತ್ವದ ಮೇಲೆ ವಿಶ್ವಾಸವಿಲ್ಲ. ಪ್ರಭುತ್ವದ ಮೇಲೆಯೇ ತಿರುಗಿಬಿದ್ದಿದ್ದಾರೆ. ಸಂಧಿಗೆ ತುರ್ಕಿ ಪ್ರಭುತ್ವದವರು ಒಪ್ಪಿದರೂ ಇವರು ಸುಮ್ಮನೆ ಒಪ್ಪಲಾರರು. ಜಾತೀಯವಾದಿಗಳಾದ ಆ ತುರ್ಕಿ ಪ್ರಜೆಗಳಲ್ಲಿ ಕೇಮಲ್‌ಪಾಷಾ, ಎನ್ವರ್ ಪಾಷಾ ಮೊದಲಾದವರು ಪ್ರೋತ್ಸಾಹಿಸಿ ೩-೪ ಲಕ್ಷ ಸೈನ್ಯಗಳನ್ನು ಕೂಡಿಸಿರುತ್ತಾರೆಂದು ವರ್ತಮಾನವಿದೆ. ಮಕ್ಕಾ ಯಾತ್ರೆಗೆಂದು ಭರತಖಂಡದಿಂದ ೫೦-೬೦ ಸಹಸ್ರ ಮಹಮ್ಮದೀಯರು ಹೊರಡುವುದರಲ್ಲಿದ್ದಾರೆಂದು ಖಿಲಾಫತ್ ಸಂಘದವರು ಹೇಳುತ್ತಿದ್ದಾರೆ. ಅಷ್ಟು ಜನರನ್ನು ತುರ್ಕಿಗೆ ಸಾಗಿಸಲು ಅವಕಾಶವಿಲ್ಲವೆಂದೂ, ರೋಗದ ಭಯವಿದೆಯೆಂದೂ ಆಂಗ್ಲಪ್ರಭುತ್ವದವರು ಹೇಳುತ್ತಿದ್ದಾರೆ. ಹುತ್ತುವಿನ ಡೊಂಕನ್ನು ಹಾವೇ ಬಲ್ಲುದು. ಬೋಲ್ಷೆವಿಕ್ಕರ ನೆರವಿನಿಂದ ಮಿತ್ರಮಂಡಲಿಗೆ ಪ್ರತೀಕಾರವನ್ನು ಮಾಡುವೆವೆಂದು ಭಾವಿಸಿ ಕೆಲ ತುರುಷ್ಕರು ಯುದ್ಧದಲ್ಲಿ ಅಭಿನಿವೇಶವುಳ್ಳವರಾಗಿರಬಹುದು. ಆದರೆ ಮಿತ್ರಮಂಡಲಿಯವರು ಆಗಲೇ ಬೋಲ್ಷೆವಿಕ್ಕರೊಡನೆ ಸಂಧಿಗೆ ಪ್ರಯತ್ನಿಸಿದ ಚಿಹ್ನೆಗಳು ತೋರುತ್ತಿವೆ. ರಷ್ಯಾ ಬೋಲ್ಷೆವಿಕ್ಕರೂ ಮಿತ್ರಮಂಡಲಿಯವರೂ ಒಂದಾದರೆ ತುರ್ಕಿಯ ಮೇಲೆ ಯೂರೋಪು ಹಿಂಡವೇ ಕವಿದುಬಿದ್ದು ಇದನ್ನು ನಿರ್ನಾಮಗೊಳಿಸುವುದು ಅಸಂಭವವಲ್ಲ. ಸ್ಥಿತಿಗತಿಗಳು ಹೀಗಿರುವಾಗ ಖಿಲಾಫತ್‌ಸಂಘದವರ ಮತ್ತು ಜಾತೀಯವಾದಿಗಳ ಮೊಂಡತನವು ತುರ್ಕಿಗೆ ಯಾವ ಹಿತವನ್ನುಂಟುಮಾಡಿಕೊಡುವುದೋ ಹೇಳುವುದು ಕಷ್ಟ. ಇವರಿವರ ಜಗಳದಲ್ಲಿ ತುರ್ಕಿಯು ಸಂಪೂರ್ಣವಾಗಿ ಕೆಟ್ಟುಹೋಗುವುದಕ್ಕಿಂತಲೂ, ಗ್ರ್ಯಾಂಡ್ ವಜೀರನೇ ಮೊದಲಾದವರ ಅಭಿಪ್ರಾಯದಂತೆ ಕುಟುಕುಜೀವವಾಗಿಯಾದರೂ ಯೂರೋಪಿನಲ್ಲಿ ತುರ್ಕಿಯು ಉಳಿದುಕೊಳ್ಳುವಂಥ ದಾರಿ ಮಾಡಿಕೊಳ್ಳುವುದೇ ಲೇಸಾಗಿ ಕಾಣುತ್ತದೆ. ಮಹಮ್ಮದೀಯ ಪ್ರಪಂಚವೆಲ್ಲವೂ ಈಗಣ ವಿಷಮಸ್ಥಿತಿಯಲ್ಲಿ ತುರ್ಕಿಯನ್ನು ಯೋಗ್ಯವಾದ ಮಾರ್ಗದಲ್ಲಿ ನಡೆಯಿಸಿ ಕಾಪಾಡಿಕೊಳ್ಳುವುದು ಲೇಸು.

ಮದರಾಸಿನ ದಿ|| ಬ|| ಸರ್. ಪಿ. ತ್ಯಾಗರಾಯಶೆಟ್ಟಿ, ಬಿ. ಎ. ಕೆ. ಟಿ. ಯವರನ್ನು ಬೆಂಗಳೂರು ಪ್ರಜಾಮಿತ್ರಮಂಡಲಿಯವರು ಸತ್ಕರಿಸಿದುದು.

ಮದರಾಸಿನ ಮ್ಯುನಿಸಿಪಲ್ ಕಾರ್ಪೊರೇಷನ್ನಿನ ಆನರರಿ ಪ್ರೆಸಿಡೆಂಟರೂ, ಮದರಾಸಿನ ನಿಯಮನಿರ್ಮಾಣ ಸಭಾಸಭಿಕರೂ ಆದ ಸರ್ ತ್ಯಾಗರಾಯಶೆಟ್ಟರು ಹುಬ್ಬಳ್ಳಿಯಲ್ಲಿ ಈ ತಾ|| ೨೫ ಮತ್ತು ೨೬ ರಲ್ಲಿ ಕೂಡುವ ಹಿಂದುಳಿದ ಜನವರ್ಗದ ಮಹಾಸಭೆಯ ಅಧ್ಯಕ್ಷತೆಯನ್ನು ಸ್ವೀಕರಿಸುವುದಕ್ಕಾಗಿ ಕಳೆದ ತಾ|| ೨೧ ರ ಬೆಳಗ್ಗೆ ತಮ್ಮ ಕುಮಾರರೊಡನೆ ಮದರಾಸ್ ಮೇಲ್ವಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ನಿಲ್ದಾಣದಲ್ಲಿ ಪ್ರಜಾಮಿತ್ರಮಂಡಲಿಯ ಅಧ್ಯಕ್ಷರಾದ ರಾವ್ ಸಾಹೇಬ್ ಎಚ್. ಚನ್ನಯ್ಯನವರು, ಸೆಕ್ರೆಟರಿ ಮ|| ಜಿ. ಪರಮಶಿವಯ್ಯನವರು, ಬೆಂಗಳೂರು ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮಿ|| ಅಬ್ಬಾಸ್‌ಖಾನರವರು, ಮ|| ಗಳಾದ ಆರ್ ಪಿ. ಮುನಿಬಸಪ್ಪನವರು. ಅಡ್ವೋಕೇಟ್ ಬಿ. ರಾಮಸ್ವಾಮಿಸೆಟ್ಟರು, ಟಿ. ರಾಚಪ್ಪನವರು, ಅಡ್ವೋಕೇಟ್ ಬಲಿಜಯವರು, ಜಿ. ಸಿದ್ವೀರಪ್ಪನವರು, ಸಾ|| ಡಿ. ಆದಪ್ಪನವರು, ಎ. ಎಂ. ತಂಗವೇಲು ಮೊದಲಿಯಾರರು, ಎಸ್. ವಿ. ರಾಮಸ್ವಾಮಿ ಮೊದಲಿಯಾರರು, ತುಮಕೂರಿನ ಜಿ. ಚಿನ್ನಪ್ಪನವರು ಮೊದಲಾದ ನೂರಾರು ದೊಡ್ಡಮನುಷ್ಯರುಗಳ ಸಮೇತ ತ್ಯಾಗರಾಯಶೆಟ್ಟರನ್ನು ಇದಿರ್ಗೊಂಡು ಪುಷ್ಪಹಾರ ಗಂಧವನ್ನೊಪ್ಪಿಸಿ ಶುಭಾಗಮನವನ್ನು ಬಯಸಿದರು.

ಮಧ್ಯಾಹ್ನಾನಂತರ ಪ್ರಜಾಮಿತ್ರಮಂಡಲಿಯವರು ಅತಿಥಿಗಳಿಗೆ ವಿಜ್ಞಾಪನ ಪತ್ರವನ್ನೊಪ್ಪಿಸುವುದಕ್ಕಾಗಿ ಬಳೇಪೇಟೆಯಲ್ಲಿರುವ ಥಿಯೇಟರ್ ಮೆಜಸ್ಟಿಕ್ ಮಂದಿರಕ್ಕೆ ಬರಮಾಡಿಕೊಂಡು ಸೆಟ್ಟರು ಮಂದಿರದ ಮಂಟಪದ ಮೇಲುಗಡೆಯಲ್ಲಿ ಅಲ್ಪಾಹಾರದಿಂದ ಸತ್ಕರಿಸಿದರು. ಸಭೆಗೆ ಬಂದಿದ್ದವರಲ್ಲಿ ಪ್ರಾಯಶಃ ೨೦೦ ಜನ ದೊಡ್ಡಮನುಷ್ಯರುಗಳಿಗೂ ಅಲ್ಪಾಹಾರ ಮಾಡಿಸಲ್ಪಟ್ಟಿತು. ಅನಂತರ ಎಲ್ಲರೂ ಸಭಾಮಂದಿರಕ್ಕೆ ದಯಮಾಡಿಸಿದ ಮೇಲೆ ಸಭಿಕರ ಪ್ರಾರ್ಥನೆಯಂತೆ ಖಾನ್ ಬಹದ್ದೂರ್ ಹಾಜಿ ಇಸ್ಮಾಯಿಲ್ ಸೇಟ್ ರವರು ಅಧ್ಯಕ್ಷತೆಯನ್ನು ವಹಿಸಿದರು. ಅವರ ಬಲ ಪಕ್ಕದಲ್ಲಿ ಸರ್. ಸೆಟ್ಟರೂ ಎಡಪಕ್ಕದಲ್ಲಿ ರಾ|| ಸಾ|| ಚನ್ನಯ್ಯನವರೂ ಉನ್ನತಾಸನಾಸೀನರಾದರು. ಸರ್ ಸೆಟ್ಟರ ಬಾಲ್ಯಸ್ನೇಹಿತರಾದ ರಿಟೈರ್ಡ್ ಡಿ|| ಕೆ|| ಎಂ. ಚಂಗಯ್ಯಶೆಟ್ಟರು ಅವರ ಪಕ್ಕದಲ್ಲೇ ಕುಳಿತಿದ್ದರು. ಇವರ ಮುಂಭಾಗದಲ್ಲೂ ಉಭಯಪಾರ್ಶ್ವಗಳಲ್ಲೂ ಇನ್ಕಂಟ್ಯಾಕ್ಸ್ ಕಮಿಷನರ್ ಮಿ|| ಮೆಥಾಕ್‌ರವರು, ಕೈಗಾರಿಕೆಯ ಡಿ|| ಡೈರೆಕ್ಟರ್ ಮ|| ಕೆ. ಎಚ್. ರಾಮಯ್ಯನವರು, ಮ್ಯುನಿಸಿಪಲ್ ಚೀಫ್ ಆಫೀಸರ್ ಮ|| ರಾಜೋಜಿರಾಯರು ಮುಕ್ತ ಕೆಲ ಸರ್ಕಾರಿಯಧಿಕಾರಿಗಳು, ಮ|| ಕೆ. ಶಂಕರನಾರಾಯಣರಾಯರು, ಬಿ. ರಾಮಸ್ವಾಮಿಶೆಟ್ಟರು, ಕೆಂಪಣ್ಣನವರು, ಬಲಜರವರು, ನಾರಾಯಣಮೂರ್ತಿಯವರು, ನಾರಾಯಶೆಟ್ಟರು ಮೊದಲಾಗಿ ಲಾಯರುಗಳೂ, ವೈಸ್ ಪ್ರೆಸಿಡೆಂಟ್ ಮಿ|| ಅಬ್ಬಾಸ್‌ಖಾನರೇ ಮೊದಲಾದ ಕೆಲ ಮಹಮ್ಮದೀಯ ದೊಡ್ಡಮನುಷ್ಯರುಗಳೂ ಪಿ. ನಮಶ್ಶಿವಾಯಶೆಟ್ಟರು, ತಂಗವೇಲು ಮೊದಲಿಯಾರರು, ರಾ|| ರಾ|| ಚಲುವರಾಯ ಮೊದಲಿಯಾರರು, ಎಂ. ಜಿ. ನಾಗಪ್ಪನವರು, ಕೆ. ರಾಚಪ್ಪನವರು ಮೊದಲಾದ ದಂಡಿನ ದೊಡ್ಡಮನುಷ್ಯರುಗಳೂ ಡಿ|| ಆದಪ್ಪನವರು, ಪಿ. ಎಂ. ಬಸಪ್ಪನವರು, ಜಿ. ಸಿದ್ವೀರಪ್ಪನವರು, ಎಂ. ಸುಬ್ಬಯ್ಯನವರು, ಮೊದಲಾದ ಮ್ಯುನಿಸಿಪಲ್ ಕೌನ್ಸಿಲರುಗಳೂ, ಇತರ ದೊಡ್ಡಮನುಷ್ಯರೂ ಸೇರಿ ೧೦೦೦ ಕ್ಕೆ ಮೇಲ್ಪಟ್ಟು ಜನರು ಸೇರಿದ್ದರು.

ಅಧ್ಯಕ್ಷರಾದ ಖಾನ್ ಬಹದೂರ್ ಹಾಜಿ ಇಸ್ಮಾಯಿಲ್‌ಸೇಟರು ಸರ್ ಶೆಟ್ಟರ ಗುಣಪ್ರಶಂಸಾಪರವಾದ ಭಾಷಣವನ್ನು ಮಾಡಿದ ಮೇಲೆ, ಪ್ರಜಾಮಿತ್ರಮಂಡಲಿಯ ಅಧ್ಯಕ್ಷರಾದ ರಾ|| ಸಾ|| ಚನ್ನಯ್ಯನವರು ವಿಜ್ಞಾಪನ ಪತ್ರಿಕೆಯನ್ನು ಇಂಗ್ಲೀಷಿನಲ್ಲಿ ಓದಿದರು. ಇದರ ಕನ್ನಡಪತ್ರಿಕೆಯು ಸೆಕ್ರೆಟರಿ ಮ|| ಜಿ. ಪರಮಶಿವಯ್ಯನವರಿಂದಲೂ, ತೆಲುಗಿನದು ಅಡ್ವೊಕೇಟ್ ಮ|| ನಾರಾಯಣಮೂರ್ತಿಯವರಿಂದಲೂ (ವೈಶ್ಯರು) ಓದಲ್ಪಟ್ಟುವು. ಅನಂತರ ಮ|| ಚಂಗಯ್ಯಶೆಟ್ಟರು ತಾವೂ ಸರ್ ತ್ಯಾಗರಾಜಶೆಟ್ಟರೂ ಬಾಲ್ಯದಾರಭ್ಯ ಬಿ. ಎ. ಪರೀಕ್ಷೆಯವರೆಗೂ ವ್ಯಾಸಂಗ ಮಾಡುವಾಗ್ಗೆ ಸರ್ ಶೆಟ್ಟರು ಧೈರ್ಯೋತ್ಸಾಹಿಗಳಾಗಿದ್ದುದನ್ನೂ ಅದರಂತೆಯೇ ಈಗ ಅನೇಕ ಹಿಂದುಳಿದ ಪ್ರಜೆಗಳ ಕ್ಷೇಮಸೌಕರ್ಯಗಳಲ್ಲಿ ತೊಡಗಿ ಖ್ಯಾತಿವಂತರಾಗಿರುವುದನ್ನೂ ಕುರಿತು ಪ್ರಶಂಸಿಸಿದರು. ಮತ್ತು ಇವರಂತೆಯೇ ಗತಿಸಿದ ಎಂ. ಬಸವಯ್ಯನವರು ಹಿಂದುಳಿದ ಜನವರ್ಗದವರನ್ನು ವಿದ್ಯಾಬುದ್ಧಿಗಳಲ್ಲಿ ಮುಂದುವರಿಸುವುದಕ್ಕಾಗಿ ಪಾಟುಪಡುತ್ತಿದ್ದುದು ಚಿರಸ್ಮರಣೀಯವಾಗಿರುವುದಲ್ಲದೆ ಮುಂದಿನ ಏಳಿಗೆಗೆ ಮಾರ್ಗದರ್ಶಕರಾಗಿದ್ದರು ಎಂದು ಹೇಳಿದರು. ಅನಂತರ ಸರ್. ತ್ಯಾಗರಾಜಸೆಟ್ಟರು ಎದ್ದು—ನಾನು ಈ ಬೆಂಗಳೂರು ಪಟ್ಟಣಕ್ಕೆ ಬಂದುದು ಇದೇ ಮೊದಲಾದುದಾದರೂ ಇಲ್ಲಿ ಕೈ|| ಬಸವಯ್ಯನವರು, ಮ|| ಚಂಗಯ್ಯಶೆಟ್ಟರು ಇನ್ನೂ ಅನೇಕರು ಸ್ನೇಹಿತರಿದ್ದುದರಿಂದ ಈ ಸ್ಥಳಕ್ಕೆ ನಾನು ಹೊಸಬನಲ್ಲ. ಖಾನ್ ಬಹದ್ದೂರ್ ರವರೂ ಪ್ರಜಾಮಿತ್ರಮಂಡಲಿಯವರೂ ನಾನು ಮದರಾಸಿನ ಮ್ಯುನಿಸಿಪಲ್ ಕಾರ್ಪೊರೇಷನ್ನಿನ ಮತ್ತು ಸೌತ್ ಇಂಡಿಯನ್ ಲಿಬರಲ್ ಫೆಡರೇಷನ್ ಅಧ್ಯಕ್ಷನಾಗಿರುವೆನೆಂದೂ, ಬ್ರಾಹ್ಮಣೇತರರ ಪುರೋಭಿವೃದ್ಧಿಗಾಗಿ ಪಾಟುಪಡುತ್ತಿರುವೆನೆಂದೂ, ನೇಗಿಯ ಕ್ರಮವನ್ನು ಬಹಳಮಟ್ಟಿಗೆ ಸುಧಾರಿಸಿ ನೇಯಿಕಾರರಿಗೆ ಬಹಳ ಉಪಕಾರ ಮಾಡಿರುವೆನೆಂದೂ ತಮ್ಮ ವಿಜ್ಞಾಪನ ಪತ್ರದಲ್ಲಿ ಸೂಚಿಸಿರುತ್ತಾರೆ. ನಾನು ಕಳೆದ ೩೦-೩೫ ವರ್ಷಗಳಿಂದಲೂ ಮ್ಯುನಿಸಿಪಲ್ ಕೌನ್ಸಿಲರಾಗಿ ಈಗ ಅದರ ಅಧ್ಯಕ್ಷನಾಗಿದ್ದೇನೆ. ಮತ್ತು ಪೌರಕಾರ್ಯನಿರ್ವಾಹಸಂಘದಲ್ಲೂ ಸೌತ್ ಇಂಡಿಯನ್ ಫೆಡರೇಷನ್ನಿನಲ್ಲೂ ನನ್ನ ಕೈಲಾದಮಟ್ಟಿಗೆ ಜನಸೇವೆಯನ್ನು ಮಾಡುತ್ತಿರುವೆನು. ಬ್ರಾಹ್ಮಣೇತರರ ಅಭಿವೃದ್ಧಿಯ ವಿಚಾರದಲ್ಲಿ ತತ್ರಾಪಿ ಎಲ್ಲಾ ಕೌನ್ಸಿಲಿನಲ್ಲೂ ಸರ್ಕಾರಿಯುದ್ಯೋಗಗಳಲ್ಲೂ ಪ್ರಜಾಪ್ರಾತಿನಿಧ್ಯತತ್ತ್ವವನ್ನು ಸಂಪಾದಿಸುವ ವಿಚಾರದಲ್ಲಿ ನನ್ನ ಪರಮಮಿತ್ರರಾದ ಗತಿಸಿದ ಡಾಕ್ಟರ್ ನಾಯರ್‌ರವರು ಬಹಳ ಸಹಾಯಕರಾಗಿದ್ದರು. ಅಂಥವರ ಸಹಾಯವು ತಪ್ಪಿದುದಕ್ಕಾಗಿ ಬಹಳವಾಗಿ ವಿಷಾದಿಸುತ್ತೇನೆ.

ಮೈಸೂರು ದೇಶದ ಹಿಂದುಳಿದ ಜನಾಂಗದವರು ವಿದ್ಯೆಯಲ್ಲೂ, ಬುದ್ಧಿಯಲ್ಲೂ ಅಭಿವೃದ್ಧಿಯನ್ನು ಹೊಂದಿ ಸಾಕಷ್ಟು ಸರ್ಕಾರಿಯುದ್ಯೋಗವನ್ನು ಸಂಪಾದಿಸಿಕೊಳ್ಳಬೇಕೆಂಬ ಉದ್ದೇಶದಿಂದ ತಮ್ಮ ಸ್ವಂತ ಕೆಲಸವನ್ನೂ ಬಿಟ್ಟು ಅಹೋರಾತ್ರಿ ಕಷ್ಟಪಡುತ್ತಿದ್ದ ಮತ್ತು ಈ ಪ್ರಜಾಮಿತ್ರ ಮಂಡಲಿಯ ಸ್ಥಾಪಕರಾದ ಗತಿಸಿದ ಮ|| ಬಸವಯ್ಯನವರು ನನ್ನಲ್ಲಿ ವಿಶೇಷ ಅಭಿಮಾನವನ್ನಿಟ್ಟು ನನ್ನನ್ನು "ತಾತಾ" ಎಂದು ಸದಾ ಸಂಬೋಧಿಸುತ್ತಿದ್ದರು. ಶ್ರೀಮನ್ ಮಹಾರಾಜರವರಲ್ಲಿಗೆ ಡೆಪ್ಯುಟೇಷನ್ ಹೋಗಿದ್ದಾಗ್ಗೆ ಹಿಂದುಳಿದ ಜನಾಂಗದವರ ಅಭಿವೃದ್ಧಿಯ ವಿಚಾರದಲ್ಲಿ ತಕ್ಕ ಸಾಹಾಯ್ಯ ಮಾಡುವುದಾಗಿ ಪ್ರಭುಗಳು ಅಪ್ಪಣೆಯನ್ನು ಕೊಡಿಸಿದ್ದರೆಂದು ಮ|| ಬಸವಯ್ಯನವರು ಹೇಳಿದ್ದರು. ಇಂಥಹ ಪ್ರಜಾಕ್ಷೇಮಚಿಂತಕರಾದ ಮಹಾರಾಜರವರನ್ನು ಪಡೆದಿರುವ ನೀವುಗಳು ಧನ್ಯರು. ಅದುಕಾರಣ ನೀವುಗಳು ಮ|| ಬಸವಯ್ಯನವರ ಮೇಲ್ಪಂಕ್ತಿಯನ್ನನುಸರಿಸಿ ಹಿಂದುಳಿದವರನ್ನು ವಿದ್ಯಾವಂತರನ್ನಾಗಿ ಮಾಡಿ ಸರ್ಕಾರಿಯುದ್ಯೋಗಗಳಲ್ಲೂ ವ್ಯವಸಾಯ ಕೈಗಾರಿಕೆಗಳಲ್ಲೂ ಅಭಿವೃದ್ಧಿಯನ್ನು ಹೊಂದಲು ಸರ್ವ ಪ್ರಯತ್ನ ಮಾಡಬೇಕು. ಹೀಗೆ ಮಾಡುವುದರಲ್ಲಿ ಈಗ ಎಲ್ಲ ಭಾಗದಲ್ಲೂ ಮುಂದುವರಿದಿರುವ ಬ್ರಾಹ್ಮಣರನ್ನು ಹಿಂದಕ್ಕೆ ದೂಡಬೇಕೆಂಬುದು ನನ್ನ ತಾತ್ಪರ್ಯವಲ್ಲ. ಸರ್ಕಾರಿ ಉದ್ಯೋಗಗಳೆಲ್ಲವೂ ತಮ್ಮ ಭಾಗಕ್ಕೇ ಬಂದುದೆಂದು ಅವರು ತಿಳಿದುಕೊಂಡಿರುವುದನ್ನು ಮಾತ್ರ ತಪ್ಪಿಸಬೇಕು. ಬ್ರಾಹ್ಮಣರು ಪೂರ್ವದಂತೆ ವಿದ್ಯಾವಂತರುಗಳಾಗಿ ಹಿಂದುಳಿದವರ ಶ್ರೇಯಃಪ್ರಾರ್ಥನೆಯನ್ನು ಮಾಡಿಕೊಂಡಿದ್ದುದರಿಂದ ಸರ್ವಸಮ್ಮಾನ್ಯರಾಗಿದ್ದರು. ಈಗ ಅದನ್ನು ಬಿಟ್ಟು ನಾವುಗಳು ಮಾಡುವ ಕಾರ್ಯಗಳಲ್ಲಿ ತೊಡಗಿ ನಮ್ಮನ್ನು ಕನಿಷ್ಠರನ್ನಾಗಿ ಭಾವಿಸುತ್ತಿರುವುದು ಮಾತ್ರ ವಿಷಾದಕರವಾಗಿದೆ. ಪ್ರಜೆಗಳನ್ನು ಪುತ್ರನಿರ್ವಿಶೇಷವಾಗಿ ಕಾಣುತ್ತಿರುವ ಮಹಾರಾಜರವರ ಆಳ್ವಿಕೆಯಲ್ಲೂ ಸ್ವದೇಶಾಭಿಮಾನವುಳ್ಳ ಸರ್ದಾರ್ ಕಾಂತರಾಜ ಅರಸಿನವರ ದಿವಾನ್‌ಗಿರಿಯಲ್ಲೂ ನಿಮ್ಮಗಳಿಗೆ ತಕ್ಕ ಪುರೋಭಿವೃದ್ಧಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ನಿಮ್ಮ ಸರ್ಕಾರದವರು ಕೈಗಾರಿಕೆಯಭಿವೃದ್ಧಿಗಾಗಿ ಬಹಳ ಏರ್ಪಾಟನ್ನು ಮಾಡಿರುವರು. ಈ ಊರಿನಲ್ಲಿ ಸ್ಥಾಪಿತವಾಗಿರುವ ಸರ್ಕಾರಿ ಲೋಹದ ಕಾರ್ಯಾಲಯವನ್ನು ನೋಡಿದೆನು. ಅಲ್ಲಿ ಕೆಲಸಗಳು ಬಹಳ ಸಮರ್ಪಕವಾಗಿ ನಡೆಯುತ್ತಿವೆ. ಆದರೆ ಸರ್ಕಾರದವರು ಇಂಥವುಗಳನ್ನು ಸ್ಥಾಪಿಸಿ ಪ್ರಜೆಗಳಿಗೆ ಬಿಟ್ಟುಕೊಡತಕ್ಕುದು ಒಳ್ಳೆಯದು. ನಾನು ವೃದ್ಧನಾದುದರಿಂದ ಹೆಚ್ಚು ಪ್ರಸ್ತಾಪಿಸಲಾರೆ. ಈ ದೇಶಭಾಷೆಯಾದ ಕನ್ನಡವು ನನಗೆ ತಿಳಿಯುವುದಿಲ್ಲವಾದುದರಿಂದ ನನ್ನ ಭಾಷಣದ ಸಾರಾಂಶವನ್ನು ರಾ|| ಸಾ|| ಚನ್ನಯ್ಯನವರು ತಿಳಿಸುವರು ಎಂದು ಹೇಳಿ, ಪಕ್ಕದಲ್ಲಿಡಲ್ಪಟ್ಟಿದ್ದ ಕೈ|| ಬಸವಯ್ಯನವರ ಛಾಯಾಚಿತ್ರಪಟದ ಮೇಲುಮುಸುಕನ್ನು ತೆರೆದು ಅವರಲ್ಲಿ ತಮಗಿದ್ದ ವಿಶೇಷ ವಿಶ್ವಾಸವನ್ನೂ ಅವರನ್ನು ಕಳೆದುಕೊಂಡುದಕ್ಕಾಗಿ ಕಣ್ಣೀರಿನೊಡನೆ ತಮ್ಮ ವ್ಯಸನವನ್ನೂ ಪ್ರದರ್ಶಿಸಿದರು. ಅನಂತರ ಅಧ್ಯಕ್ಷರಿಗೆ ಪುಷ್ಪಹಾರಗುಚ್ಛ ವೊಪ್ಪಿಸಲ್ಪಟ್ಟು ಚಕ್ರವರ್ತಿಗಳವರಿಗೂ ಶ್ರೀಮನ್ ಮಹಾರಾಜರವರಿಗೂ ತ್ರಿವಾರಜಯಘೋಷಗಳು ಮಾಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನ ಹೈಗ್ರೌಂಡಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ವಿದ್ಯುಚ್ಛಕ್ತಿಯನ್ನೊದಗಿಸುವ ಭವನದ ಆರಂಭ ಮಹೋತ್ಸವವನ್ನು ಕಳೆದ ತಾ|| ೨೦ ರಲ್ಲಿ ದಿವಾನ್ ಸರ್ದಾರ್ ಕಾಂತರಾಜ ಅರಸಿನವರು ನೆರವೇರಿಸಿದರು.

ಚೀಫ್ ಎಲಕ್ಟ್ರಿಕಲ್ ಇಂಜನಿಯರಾದ ಮಿ|| ಎಸ್. ಜಿ. ಫೋರ್ಬ್ಸ್‌ರವರು ಸೀಮೆಗೆ ಪ್ರಯಾಣ ಮಾಡಿದರು. ಅವರು ಬರುವವರೆಗೆ ಆಸ್ಥಾನದಲ್ಲಿ ಮಿ|| ಎಸ್. ಡಿ. ಎಸ್. ಅಯ್ಯಂಗಾರರು ನಿಯಮಿಸಲ್ಪಟ್ಟಿದ್ದಾರೆ.

ಸಾಗರಕಟ್ಟೆಯ ಬಳಿಯ ಹಳೆಯ ಸೇತುವು ನೀರಿನಲ್ಲಿ ಮುಳುಗಿತು. ಬೋಳನಹಳ್ಳಿಯ ಬಳಿಯ ಹೊಸ ಸೇತುವಿನ ಮೇಲೆ ಮೈಸೂರು ಎಡತೊರೆ ಕಡೆಯ ಬಂಡಿಗಳ ಸಂಚಾರಕ್ಕೆ ಕಳೆದ ಸೋಮವಾರದಿಂದ ಆರಂಭವಾಗಿದೆ.

ನಿನ್ನೆ ದಿನ ನಡೆದ ರಾಜಧಾನಿಯ ಮ್ಯು|| ಕೌನ್ಸಿಲಿನಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಮ|| ಧರ್ಮಪ್ರಕಾಶ ಡಿ. ಬನುಮಯ್ಯನವರು, ಎನ್. ಸೆಟ್ಟೂಜಿರಾಯರು, ಶೆಟ್ಟಪ್ಪಸಿದ್ದಪ್ಪನವರು, ಎಂ. ಮಾದಪ್ಪನವರು ಸಹ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು.

ಮೈಸೂರು ಗೌರ್ನಮೆಂಟಿನವರು ತೆಗೆಯಲಿಕ್ಕಿರುವ ಸಾಲವನ್ನು ಮೈಸೂರಿನ ಹೊರಗಣ ಜನರಿಂದಲೂ ತೆಗೆಯಲು ಏರ್ಪಡಿಸುತ್ತಿದ್ದಾರೆ. ಮತ್ತು ಕಡಿಮೆ ಬೆಲೆಯ ಬಾಂಡು ೭೫ ರೂ. ನದಾಗಿದ್ದುದನ್ನು ೧೨|| ರೂ. ಗೆ ಇಳಿಯಿಸುವುದರಲ್ಲಿದ್ದಾರೆ.

ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಸಂಘದವರು ಬರುವ ಆಗಸ್ಟ್ ತಾ|| ೧ ರಿಂದ ೩ ನೆ ತರಗತಿಯ ಬಾಡಿಗೆಯನ್ನು ಮೈಲಿಯೊಂದಕ್ಕೆ ೩|| ಕಾಸಿನಂತೆ ಮಾಡಿರುತ್ತಾರೆ. ಇದುವರೆಗೆ ೩ ಕಾಸಿನಂತೆ ಇದ್ದಿತು. ನಿಲ್ಲಿಸಲ್ಪಟ್ಟಿದ್ದ ಸೀಜನ್ ಟಿಕೆಟ್ಟಿನ ಏರ್ಪಾಟೆಲ್ಲಾ ಮತ್ತೆ ಆರಂಭಿಸಲ್ಪಡುವುವು.

ರಾಜಧಾನಿಯ ಹಳೆ ಅಗ್ರಹಾರದಲ್ಲಿರುವ ಮ್ಯು|| ಕೌನ್ಸಿಲರ್ ಮ|| ಶೆಟ್ಟಪ್ಪ ಸಿದ್ದಪ್ಪನವರು ಮು|| ಭಕ್ಷಿ ಮ|| ಎಚ್. ಲಿಂಗರಾಜ ಅರಸರವರಿಂದ ರಚಿಸಲ್ಪಟ್ಟಿರುವ ರಾಮಾಯಣ ಪುರಾಣವನ್ನು ಓದಿಸಲು ಏರ್ಪಡಿಸಿರುತ್ತಾರೆ. ಪ್ರತಿ ದಿನವೂ ನೂರಾರು ಜನರು ಬಂದು ಶ್ರವಣ ಮಾಡಿಕೊಂಡು ಹೋಗುತ್ತಿದ್ದಾರೆ.

ಗುಂಡಲುಪೇಟೆ ತಾಲ್ಲೂಕು ವೀರಶೈವ ಸಭೆಯನ್ನು ಆಗಸ್ಟು ತಿಂಗಳು ಕಡೆಯ ವಾರದಲ್ಲಿ ಗುಂಡಲುಪೇಟೆಯಲ್ಲಿ ನಡೆಯಿಸಬೇಕೆಂದು ಆ ತಾಲ್ಲೂಕಿನ ಪ್ರಮುಖ ವೀರಶೈವರು ಮ|| ಕಬ್ಬಳ್ಳಿ ಚೆನ್ನಬಸವಪ್ಪನವರ ಮನೆಯಲ್ಲಿ ಪ್ರಿಲಿಮನರಿ ಮೀಟಿಂಗು ಮಾಡಿ ನಿರ್ಧರಿಸಿರುತ್ತಾರೆ. ಆ ತಾಲ್ಲೂಕಿನ ವೀರಶೈವರೆಲ್ಲರೂ ಈ ಕಾರ್ಯಕ್ಕೆ ಸಹಾಯಕರಾಗಿ ನಿಂತು ನೆರವೇರಿಸಿ ಕೀರ್ತಿ ಪಡೆದುಕೊಳ್ಳುವವರಾಗಬೇಕು.

ಮೈಸೂರು ದೇಶದ ಬಯಲು ಸೀಮೆಯಲ್ಲಿ ಕೆರೆಕಟ್ಟೆಗಳಿಗೆ ನೀರು ಬರುವಂಥ ದೊಡ್ಡ ಮಳೆಗಳು ಆಗಿಯೇ ಇಲ್ಲ. ಮಲೆಸೀಮೆಯಲ್ಲಿ ಮಾತ್ರ ಅಧಿಕವೃಷ್ಟಿಯಾಗಿದೆ. ಮೈಸೂರು ತಿ|| ನರಸಿಪುರ, ನಂಜನಗೂಡು, ಚಾಮರಾಜನಗರ ಈ ತಾಲ್ಲೂಕುಗಳಲ್ಲಿ ಜೋಳದ ಬೆಳಸು ೮ ಆಣೆಯಿಂದ ೧೨ ಆಣೆಯಷ್ಟು ಆಗಿದೆಯೆಂದು ತಿಳಿಯುತ್ತೇವೆ. ಪೇಟೆಯಲ್ಲಿ ದಾರಣೆವಾಸಿಗಳು ಸ್ವಲ್ಪ ಇಳಿತರದಲ್ಲಿವೆ. ಗುಂಟೂರು ಕಡೆಯ ಅಕ್ಕಿಯು ಒಂದು ರೂ. ಗೆ [illegible] ಸೇರಿನಂತೆ ಮಾರಲ್ಪಡುತ್ತಿರುವುದರಿಂದ ಬತ್ತದ ಬೆಲೆಯು ಏರಲಿಲ್ಲ.

ಸರ್ಕಾರದ ಸ್ವಲ್ಪ ಸಂಬಳದ ಉದ್ಯೋಗಿಗಳಿಗೆ ಇದುವರೆಗೆ ಕೊಡುತ್ತಿದ್ದ ಯುದ್ಧದ ಮತ್ತೂ ಧಾನ್ಯದ ಅಲೋಯನ್ಸುಗಳನ್ನು ತಪ್ಪಿಸಿ ಈ ತಿಂಗಳಾರಭ್ಯ ಈ ಕೆಳಗೆ ಕಂಡತೆ ಒಂದು ನಿಯತವಾದ ಅಲೋಯನ್ಸನ್ನು ಮತ್ತೊಂದು ಅಪ್ಪಣೆ ಕೊಡುವವರೆಗೂ ಪ್ರತಿ ತಿಂಗಳೂ ಸಲ್ಲಿಸುತ್ತಿರಬೇಕೆಂದು ಸರ್ಕಾರದ ಪ್ಪಣೆಯಾಗಿದೆ. ಹೇಗೆಂದರೆ.—೪-೫ ರೂ. ಸಂಬಳದವರಿಗೆ ಅದಕ್ಕೆ ಸಮನಾಗಿ ಹೆಚ್ಚಿಗೆ. ೫ ರಿಂದ ೧೦ ರೂ. ವರೆಗಣ ಸಂಬಳದವರಿಗೆ ತಿಂಗಳಿಗೆ ೫ ರೂ. ಹೆಚ್ಚಿಗೆ. ೧೦ ರಿಂದ ೧೫ ರವರೆಗೆ ೬ ರೂ. ೧೫ ರಿಂದ ೧೯ ರೊಳಗೆ ೭ ರೂ. ೧೯ ರೂ. ಸಂಬಳದವರಿಗೆ ೮ ರೂ. ೧೯ ರಿಂದ ೧೦೦ ರೂ.ಗಳ ವರೆಗಣ ಸಂಬಳದವರಿಗೆ ೧೦ ರೂ. ಈ ವಿಧಿಯು ವಿದ್ಯಾಭ್ಯಾಸ ಶಾಖೆಯವರಿಗೆ ಅನ್ವಯಿಸುವುದಿಲ್ಲ. ಅವರಿಗೆ ಪ್ರತ್ಯೇಕ ವಿಧಿಯು ಮಾಡಲ್ಪಡುವುದು.

ರಾಜಧಾನಿಯ ಕೆಲವು ಲಾಯರುಗಳು ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾದ ಜ್ಯಾ|| ನಾಗಪ್ಪನವರ ಮೇಲೆ ದೂರನ್ನು ಬರೆದು ಗೌರ್ನಮೆಂಟಿಗೆ ಕಳುಹಿಸಿಕೊಂಡಿದ್ದಾರಂತೆ. ಈಸಲ್ಲದ ಪ್ರಯತ್ನಕ್ಕೆ ನಿಷ್ಪಕ್ಷಪಾತಿಗಳಾದ ಅನೇಕ ಮಂದಿ ಅಡ್ವೋಕೇಟರು ಒಪ್ಪಿಲ್ಲವೆಂದು ಕೇಳುತ್ತೇವೆ. ಮ|| ನಾಗಪ್ಪನವರು ಇದಕ್ಕೆ ಮುಂಚೆ ಜಡ್ಜರಾಗಿದ್ದ ಸ್ಥಳಗಳಲ್ಲೆಲ್ಲಾ ತಮ್ಮ ನಿಷ್ಪಕ್ಷಪಾತ ನ್ಯಾಯವಿಮರ್ಶಾ ಶಕ್ತಿಯಿಂದ ಪ್ರಜೆಗಳ ಮತ್ತು ಪ್ರಭುತ್ವದವರ ಮೆಚ್ಚುಗೆಯನ್ನು ಪಡೆದು ಬಂದಿರುತ್ತಾರೆ. ಇಲ್ಲಿಗೆ ಬಂದು ೨ ವರ್ಷಕ್ಕೆ ಸಮೀಪಿಸಿತು. ಇಲ್ಲಿಯೂ ಅವರು ತಮ್ಮ ಕಾರ್ಯವನ್ನು ಸಮರ್ಪಕವಾಗಿ ನೆರವೇರಿಸಿ ಪ್ರಜಾದರ ಪಾತ್ರರಾಗಿರುತ್ತಾರೆ. ಹೀಗಿದ್ದರೂ ಕೆಲವರು ಇಂಥ ಪ್ರವರ್ತನವನ್ನು ಮಾಡಿರುವುದಕ್ಕೆ ಯಾವುದೋ ಸ್ವಕೀಯಕಾರಣ ವಿರಬೇಕು.

ಕೃಷ್ಣರಾಜ ಸಾಗರದಲ್ಲಿ ೭೫ ಅಡಿಯ ಕಟ್ಟೆಯ ಮೇಲೆ ೮-೯ ಅಡಿಗಳಷ್ಟು ನೀರು ಪತನವಾಗುತ್ತಲಿದ್ದಿತು. ಈಗಲೂ ಸ್ವಲ್ಪ ಕಡಿಮೆಯಾಗಿ ಹಾಗೆಯೇ ಪ್ರವಾಹವಿದೆ. ಪಶ್ಚಿಮದ ಘಟ್ಟಗಳಲ್ಲಿ ಈಸಲ ಹೆಚ್ಚು ಮಳೆ ಬೀಳುತ್ತಿರುವುದರಿಂದ ಅಧಿಕ ಪ್ರವಾಹವು ೨ ವಾರಗಳಿಂದಲೂ ಹೀಗೆ ನಿಲ್ಲಲು ಅವಕಾಶವಾಗಿದೆ. ಮೈಸೂರಿಂದ ಪ್ರತಿ ದಿನವೂ ೧-೨ ಸಾವಿರ ಜನರು ಹೋಗಿ ನೋಡಿಕೊಂಡು ಬರುತ್ತಿದ್ದಾರೆ. ರೈಲ್ವೆಯಲ್ಲಿ ಜನರ ಸಂಮರ್ದವು ಅತಿಶಯವಾಗಿ ಪ್ರಯಾಣವೇ ಕಷ್ಟವಾಗಿದೆ. ಯತ್ನವಿಲ್ಲದೆ ಬಹು ಜನರು ಕಾಲುದಾರಿಯಲ್ಲೇ ಹೋಗಿ ಬರುತ್ತಿದ್ದಾರೆ. ಕಳೆದ ಭಾನುವಾರ ಸ್ಪೆಷಲ್ ಟ್ರೇನಿನಿಂದ ಜನರನ್ನು ಸಾಗಿಸಬೇಕಾಯಿತು. ಶಿವನಸಮುದ್ರದ ಜಲಪಾತಕ್ಕಿಂತಲೂ ಇಲ್ಲಿಯ ಜಲಪಾತವು ಅಗಾಧವಾಗಿಯೂ ಪ್ರೇಕ್ಷಣೀಯವಾಗಿಯೂ ಇರುತ್ತದೆ. ಕಟ್ಟೆಯಲ್ಲಿರುವ ಅಧಿಕಾರಿಗಳು ಜನಸ್ತೋಮಕ್ಕೆ ಅಪಾಯ ಸಂಭವಿಸದಂತೆ ಕೆಲಕೆಲರನ್ನೇ ಕಟ್ಟೆಯ ಮೇಲೆ ಹತ್ತಿಸಿ ನೋಡಿಸಿ ಕಳುಹಿಸಿ ಕೊಡುವ ಏರ್ಪಾಡು ಮಾಡಿರುತ್ತಾರೆ.

ಬೆಂಗಳೂರಿನಲ್ಲಿ ಸರ್ಕಾರಿ ಮುದ್ರಣಾಲಯದ ಕಂಪಾಜಿಟರುಗಳು ತಮ್ಮ ಸಂಬಳವನ್ನು ಸೇಕಡಾ ೩೦ ರಷ್ಟು ಹೆಚ್ಚಿಸಿಕೊಡಬೇಕೆಂದು ಕೇಳುತ್ತ ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆಯೂ. ಅಲ್ಲಿಯ ಅಧಿಕಾರಿಗಳು ಮೈಸೂರಿನಲ್ಲಿರುವ ಬ್ರಾಂಚ್ ಪ್ರೆಸ್ಸಿನಿಂದ ೩೦ ಮಂದಿ ಕಂಪಾಜಿಟರುಗಳನ್ನು ಬರಮಾಡಿಕೊಂಡು ಕೆಲಸ ಮಾಡಿಸುತ್ತಲೂ ಇದ್ದಾರೆ. ಅಧಿಕಾರಿಗಳು ಯುದ್ಧಾರಂಭವಾದೀಚೆಗೆ ಇವರುಗಳ ಸಂಬಳವನ್ನು ಸೇಕಡ ೫೦ ರಷ್ಟನ್ನು ಹೆಚ್ಚಿಸಿಕೊಟ್ಟಿದ್ದಾರಂತೆ. ಅದುಕಾರಣ ಅವರು ಈಗ ಸಂಬಳವನ್ನು ಮತ್ತೆ ಹೆಚ್ಚಿಸಿಕೊಡಲು ಇಷ್ಟಪಡುವುದಿಲ್ಲ. ಕಂಪಾಜಿಟರುಗಳು ಗೌ|| ಜನರಲ್ ಸೆಕ್ರೆಟರಿಯವರಲ್ಲಿಗೂ ಕೌನ್ಸಿಲರ ಬಳಿಗೂ ಹೋಗಿ ಹೇಳಿಕೊಂಡರು. ಫಲವೇನೂ ಆಗಲಿಲ್ಲ. ತಮಗೆ ಮುಂದಾಗಿ ಹೇಳಿಕೊಳ್ಳದೆ ಥಟ್ಟನೆ ಕೆಲಸ ಬಿಟ್ಟು ಮುಷ್ಕರ ಹಿಡಿದು ನಿಂತುಬಿಟ್ಟು ಕೆಲಸಕ್ಕೆ ತೊಂದರೆ ಮಾಡಿದ ಸಂಬಳಗಾರರ ಮೇಲೆ ಅಧಿಕಾರಿಗಳಿಗೆ ಆಗ್ರಹವಂತೆ. ಇವರುಗಳು ಮರಳಿ ಕೆಲಸಕ್ಕೆ ಬರಬೇಕಾದರೆ ತಮ್ಮ ತಪ್ಪಿಗೆ ಕ್ಷಮಾಪಣೆ ಕೇಳಿಕೊಳ್ಳಬೇಕಾಗಿದೆ. ಹಾಗೆ ಮಾಡಿದರೆ ಮರಳಿ ಇವರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಅಧಿಕಾರಿಗಳು ಒಪ್ಪುತ್ತಾರೆ.

ಭರತಖಂಡದ ವೃತ್ತಾಂತಗಳು.

ಈ ವರ್ಷ ಭರತಖಂಡದಲ್ಲೂ, ಅಮೇರಿಕಾದಲ್ಲೂ, ಈಜಿಪ್ಟಿನಲ್ಲೂ ಹತ್ತಿಯ ಬೆಳಸು ಚೆನ್ನಾಗಿ ಆಗುವುದೆಂದು ಚಿಹ್ನೆಗಳು ಕಂಡುಬಂದಿವೆ.

ಬಂಗಾಳದಲ್ಲಿ ಮಳೆ ಹೆಚ್ಚಾಗಿ ಪ್ರವಾಹಗಳು ದಡವಿಮೀರಿ ಹರಿಯಲು ಪ್ರಾರಂಭಿಸಿವೆ. ಪುರಗ್ರಾಮಗಳ ರಕ್ಷಣೆಗೆ ಅಧಿಕಾರಿಗಳು ತ್ವರೆಪಡುತ್ತಿದ್ದಾರೆ.

ಬಳ್ಳಾರಿ ಪ್ರಾಂತಿಕ ರಾಜಕೀಯ ಸಭೆಯು ಇದೇ ತಿಂಗಳು ತಾ|| ೨೮-೨೯ ರಲ್ಲಿ ದಿ|| ಬ|| ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ಕಲ್ಕತ್ತಾದಲ್ಲೂ, ಸಿಮ್ಲಾದಲ್ಲೂ, ದಿಲ್ಲಿಯಲ್ಲೂ ಇರುವ ಸರ್ಕಾರಿ ಮುದ್ರಾಲಯದ ಕೆಲಸಗಾರರು ಸಂಬಳ ಸಾಲದೆಂದು ಮುಷ್ಕರ ಹಿಡಿದು ಕೆಲಸ ಬಿಟ್ಟಿದ್ದಾರೆ.

ಮಲಬಾರಿನಲ್ಲಿ ಅತಿವೃಷ್ಟಿಯಾಗಿದೆ. ಮನೆಮಠಗಳು ಕುಸಿದುಬಿದ್ದು ಮರಗಳು ಉರುಳಿ, ಮಾರ್ಗಗಳು ಕಟ್ಟಿ, ಪೈರುಗಳು ಹಾಳಾಗಿ ಜನರು ದೋಣಿಗಳ ಮೇಲೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತಿದ್ದಾರೆ.

ಮದರಾಸಿನ ನುಂಗಂಬಾಕಿನಲ್ಲಿ ಬ್ರಾಹ್ಮಣ ಜಾತಿಯವರಿಗೆ ಕನ್ಯೆಯನ್ನಾಗಲೀ ವರನನ್ನಾಗಲೀ ದೊರಕಿಸಿಕೊಡುವ ಕಮಿಷನ್ ಸಂಘವೊಂದು ಏರ್ಪಾಟಾಗಿದೆ. ಈ ವ್ಯಾಪಾರದ ಏಜನ್ಸಿಯೊಂದು ಇದುವರೆಗೆ ಇಲ್ಲದಿದ್ದಿತು. ಅದೂ ನೆರವೇರಿತು.

ಭರತಖಂಡದ ಸಂಸ್ಕರಣ ಶಾಸನ ನಿಬಂಧನವನ್ನು ಲಾರ್ಡುಗಳ ಸಭೆಯಲ್ಲಿ ಲಾರ್ಡ್ ಸಿನ್ಹರವರು ಅಂಗೀಕಾರಕ್ಕೆ ತರಲು, ಇದರ ಚರ್ಚೆಗೆ ಇನ್ನಷ್ಟು ಸಾವಕಾಶ ಮಾಡಬೇಕೆಂದು ಲಾರ್ಡ್ ಆಂಪ್ಥಿಲ್‌ರವರು ಮಾಡಿದ ಅಡ್ಡಿಯು ನಡೆಯದೆ ಪ್ರಾಸಾಯಿತು.

ಭರತಖಂಡದ ಹಲವು ಕಡೆಯಲ್ಲಿ ಕಳೆದ ವಾರ ಮಳೆಯಾದುದರಿಂದ ಆಹಾರಪದಾರ್ಥಗಳ ಬೆಲೆಯು ಇಳಿಮುಖವಾಯಿತು. ಈ ಶ್ರಾವಣಮಾಸದಲ್ಲಿ ಬೀಳುವ ಮಳೆಯ ಸ್ಥಿತಿಗತಿಯನ್ನೇ ಮುಂದಣ ಬೆಳಸೂ, ಧಾರಣೆಯೂ ಬಹುಮಟ್ಟಿಗೆ ಅವಲಂಬಿಸಿಕೊಂಡಿರುವುದು.

ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸರ ಸ್ವಾಗತದ ಏರ್ಪಾಟಿನ ಪರ್ಯಾಲೋಚನೆಗಾಗಿ ಬೊಂಬಾಯಿಯ ಸ್ವಾಗತಸಂಘದವರು ಗೌರ್ನರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಚಂದಾ ಕೂಡಿಸುವುದು ಪುರಾಲಂಕಾರ ಮೊದಲಾದ ವಿಷಯಗಳನ್ನು ನಿರ್ಧರಿಸಿದರು. ಯುವರಾಜರ ಆಗಮನ ಜ್ಞಾಪಕಾರ್ಥವಾಗಿ ಮಕ್ಕಳ ವೈದ್ಯಾಲಯವೊಂದನ್ನು ಆ ಪಟ್ಟಣದಲ್ಲಿ ಸ್ಥಾಪಿಸಬೇಕೆಂದು ಗೊತ್ತುಮಾಡಿದರು.

ಪ್ರಜಾಮಿತ್ರಮಂಡಲಿಯವರು ಸರ್ ಪಿ. ತ್ಯಾಗರಾಜ ಸೆಟ್ಟರವರಿಗೆ ಒಪ್ಪಿಸಿದ ವಿಜ್ಞಾಪನಪತ್ರಿಕೆ.

ಮಹನೀಯರೇ,—

ಈ ಮೈಸೂರು ಸಂಸ್ಥಾನದ ಹಿಂದುಳಿದ ಜನವರ್ಗದ ಪಂಗಡಗಳಿಗೆ ಪ್ರತಿನಿಧಿ ಸ್ವರೂಪವಾದ ಮೈಸೂರು ಪ್ರಜಾಮಿತ್ರಮಂಡಲಿಯ ಮೆಂಬರುಗಳಾದ ನಾವುಗಳು ಬೆಂಗಳೂರು ನಗರಕ್ಕೆ ತಾವು ಪ್ರಥಮತಃ ದಯಮಾಡಿಸಿದುದರ ಸಂತೋಷಾರ್ಥವಾಗಿ ನಮ್ಮ ಮನಃಪೂರ್ವಕವಾದ ಅಭಿನಂದನೆಯನ್ನು ತಮಗೆ ಸಮರ್ಪಿಸಲು ಅನುಜ್ಞೆಯನ್ನು ಅಪೇಕ್ಷಿಸುತ್ತೇವೆ

ಪ್ರಜೋಪಕಾರಾರ್ಥವಾಗಿ ತಾವು ಮಾಡಿರುವ ಅಮೂಲ್ಯವಾದ ಸೇವೆಯನ್ನೂ. ಮದರಾಸಾಧಿಪತ್ಯದಲ್ಲಿ ತಾವು ಪಡೆದಿರುವ ಗೌರವವನ್ನೂ ನಾವು ಬಲ್ಲೆವು. ಪ್ರಜೆಗಳಿಗೂ ದೇಶಕ್ಕೂ ತಾವು ಮಾಡಿರುವ ಅಮೂಲ್ಯವಾದ ಮತ್ತು ಶ್ರೇಯಸ್ಕರವಾದ ಸೇವೆಯನ್ನು ಮೆಚ್ಚಿಕೊಂಡು ಚಕ್ರವರ್ತಿ ಸಾರ್ವಭೌಮರವರು ತಮಗೆ ಅನುಗ್ರಹಿಸಿರುವ ನೈಟ್‌ಹುಡ್ ಎಂಬ ಶ್ರೇಷ್ಠವಾದ ಬಿರುದಿನ ಗೌರವಾರ್ಥವಾಗಿ ನಮ್ಮ ಹೃದಯಪೂರ್ವಕವಾದ ಅಭಿನಂದನೆಗಳನ್ನು ತಮಗೆ ಈ ಸಂದರ್ಭದಲ್ಲಿ ಸಮರ್ಪಿಸುತ್ತೇವೆ.

ಮಹನೀಯರೆ, ಲೋಕಲ್ ಸೆಲ್ಫ್ ಗೌರ್ನಮೆಂಟೆಂಬ ಸ್ಥಳೀಯ ಸ್ವಪರಿಪಾಲನೆಯ ಏರ್ಪಾಟಿನ ಅಭಿವೃದ್ಧಿಗಾಗಿ ತಾವು ಬಹಳ ಶ್ರಮಪಟ್ಟಿದ್ದೀರಿ. ಪ್ರಕೃತ ಮದರಾಸಿನಲ್ಲಿ ಕಂಡುಬರುವ ನಗರಕಾರ್ಯನಿರ್ವಹಣೆಯ ಉತ್ಸುಕತೆಯು ಆ ಭಾಗದಲ್ಲಿ ತಮ್ಮ ಅವಿಶ್ರಾಂತವಾದ ಪ್ರಯತ್ನಗಳಿಗೆ ನಿದರ್ಶನವಾಗಿದೆ. ಮದರಾಸಿನ ಮುಖ್ಯವಾದ ಭಾಗಗಳಲ್ಲೊಂದಕ್ಕೆ ತಾವು ಮುನಿಸಿಪಲ್ ಕಮಿಷನರಾಗಿ ಪೌರಕಾರ್ಯಪರಿಷ್ಕರಣೆಗೋಸ್ಕರ ಸಾಹಸದಿಂದ ಹೋರಾಡಿದ್ದೀರಿ. ಈ ಕಾರ್ಯಭಾಗದಲ್ಲಿ ತಾವು ತೋರಿಸಿದ ಶ್ರದ್ಧಾಸಕ್ತಿ ಉತ್ಸಾಹಗಳು ತಮ್ಮ ಹೆಸರನ್ನು ಪೌರಕಾರ್ಯಾಗ್ರೇಸರರ ಶ್ರೇಣಿಗೆ ಸೇರಿಸಿರುವುವು. ಇದರ ಫಲಸ್ವರೂಪವಾಗಿ ಈಗ ತಾವು ಮದರಾಸು ನಗರದ ಪೌರಕಾರ್ಯ ನಿರ್ವಾಹಕಮಂಡಲಿಯ ಅಧ್ಯಕ್ಷರಾಗಿರುತ್ತೀರಿ. ಸ್ಥಳೀಯ ಕಾರ್ಯಗಳಲ್ಲಿ ಭಾರತೀಯರಿಗೆ ಸ್ವಪರಿಪಾಲನೆಯ ಸೌಲಭ್ಯಗಳನ್ನು ಒದಗಿಸಿಕೊಡಲು ಮುಂದಾಳುಗಳಾಗಿದ್ದವರಿಗೆ ಇದು ತಕ್ಕ ಸಂಭಾವನೆಯೇ ಸರಿ.

ತಾವು ಮುಖ್ಯವಾಗಿ ನೆಯ್ಗೆ ಕೈಗಾರಿಕೆಯ ಅಭಿವೃದ್ಧಿಯಲ್ಲಾಸಕ್ತರಾಗಿ ತಮ್ಮ ಪಂಗಡಕ್ಕೆ ವಿಶೇಷ ಸೇವೆಯನ್ನು ಮಾಡಿದ್ದೀರೆಂದು ಕೇಳಿದ್ದೇವೆ. ದೊಡ್ಡ ಭೂಪ್ರದೇಶಗಳನ್ನು ಸಾಗುವಳಿಗೆ ತರುವುದರ ಮೂಲಕವೂ ಶಾಸ್ತ್ರೀಯವಾದ ನೂತನ ಕ್ರಮಗಳನ್ನು ಆಚರಣೆಗೆ ತರುವುದರ ಮೂಲಕವೂ ತಾವು ವ್ಯವಸಾಯದಲ್ಲಿಯೂ ಸಹ ವಿಶೇಷಾಸಕ್ತಿಯನ್ನು ವ್ಯಕ್ತಪಡಿಸಿದ್ದೀರಿ. ತಾವು ಉತ್ಸಾಹಶೀಲರಾದ ವರ್ತಕರೇ ಆಗಿರುವುದರಿಂದ ಸಾಮಾನ್ಯವಾಗಿ ವ್ಯಾಪಾರಾಭಿವೃದ್ಧಿಯಲ್ಲಿ ಗಾಢವಾದ ಶ್ರದ್ಧೆಯುಳ್ಳವರಾಗಿದ್ದೀರಿ; ಮತ್ತು ಅನೇಕ ವರ್ಷಗಳಿಂದ ದಕ್ಷಿಣ ಇಂಡಿಯಾ ವ್ಯಾಪಾರಸಂಘದ ಅಧ್ಯಕ್ಷರಾಗಿ ವ್ಯಾಪಾರಮಾಡುವ ಪಂಗಡದವರಿಗೆ ಅಸಮಾನವಾದ ಸಹಾಯವನ್ನು ಮಾಡಿದ್ದೀರಿ.

ಮದರಾಸು ಪಟ್ಟಣದ ನಿವಾಸಿಗಳಲ್ಲಿ ಮುಂದಾಳುಗಳಾಗಿ ತಾವು ಮಾಡಿರುವ ಕಾರ್ಯಗಳಲ್ಲಿ ಮದರಾಸಿನ ನಿಯಮನಿರ್ಮಾಣ ಸಭೆಯ ಮೆಂಬರಾಗಿಯೂ, ಮದರಾಸು ವಿಶ್ವವಿದ್ಯಾಲಯದ ಪ್ರಥಮ ಪದವೀಧರರಾದ ತಾವು ಅದರ ಫೆಲೊ ಎಂಬ ಸದಸ್ಯರಾಗಿಯೂ, ಪಚ್ಚೆಯಪ್ಪನವರ ಚಾರಿಟೀಸ್ ಎಂಬ ಧರ್ಮಸಂಸ್ಥೆಗಳಿಗೆ ಟ್ರಸ್ಟಿಯೆಂಬ ಮೇಲ್ವಿಚಾರಣಕರ್ತರಾಗಿಯೂ, ವಿವಿಧ ಕೈಗಾರಿಕೆಯ ಪ್ರದರ್ಶನಗಳಿಗೂ ಹಲವು ಜನೋಪಕಾರವಾದ ಕಾರ್ಯಗಳಿಗೂ ಅಧ್ಯಕ್ಷರಾಗಿಯೂ ಮಾಡಿರುವ ಅಮೂಲ್ಯವಾದ ಸತ್ಕಾರ್ಯಗಳನ್ನು ನಾವು ಹೆಚ್ಚಾಗಿ ವರ್ಣಿಸಬೇಕಾದುದಿಲ್ಲ. ಮುಖ್ಯವಾಗಿ ತಾವು ಕಯ್ಗೊಂಡ ಕಾರ್ಯಗಳಲ್ಲೆಲ್ಲಾ ತಮ್ಮ ಯೋಗ್ಯತಾವಿಶೇಷಗಳನ್ನೂ ವ್ಯಕ್ತಿವಿಶೇಷತ್ವವನ್ನೂ ಖಚಿತಗೊಳಿಸಿರುವಿರೆಂದು ಹೇಳಿದರೆ ಸಾಕಾಗಿದೆ.

ಮಹಾಶಯರೆ, ತಾವು ಮಾಡಿದ ಮಹತ್ಕಾರ್ಯಗಳಲ್ಲೆಲ್ಲಾ ನಮ್ಮ ದೇಶದ ಹಿಂದುಳಿದ ಮತ್ತು ನಿಮ್ನಜಾತಿಯ ಪಂಗಡಗಳ ಉದ್ಧಾರಾರ್ಥವಾಗಿ ಏರ್ಪಡಿಸಿದ ಸಂಸ್ಥೆಯಷ್ಟು ಜನರಿಗೆ ತಿಳಿವಳಿಕೆಯನ್ನುಂಟುಮಾಡಲು ಶಾಶ್ವತವೂ ಉತ್ಸಾಹಜನಕವೂ ಉಪಯುಕ್ತವೂ ಆದುದು ಮತ್ತೊಂದಿಲ್ಲ. ಧೈರ್ಯಶಾಲಿಯೂ ವಿದ್ಯಾವಿಶಾರದರೂ ದೇಶಾಭಿಮಾನಿಯೂ ಆಗಿದ್ದು ದಿವಂಗತರಾದ ಡಾಕ್ಟರ್ ಟಿ. ಎಂ. ನಾಯರ್‌ರವರ ಸಹಾಯ ಸಹಕಾರಗಳಿಂದ "ಜಸ್ಟಿಸ್" ಎಂಬ ವರ್ತಮಾನ ಪತ್ರಿಕೆಯನ್ನು ತಮ್ಮ ಆಶ್ರಯದಲ್ಲಿ ಪ್ರಾರಂಭಿಸಿದುದರ ಮೂಲಕ ನಮ್ಮ ದೇಶದ ಲಕ್ಷಾಂತರ ಪ್ರಜೆಗಳನ್ನು ನಿದ್ರೆಯಿಂದೆಚ್ಚರುಗೊಳಿಸಿ ಸಾಮಾಜಿಕ ನ್ಯಾಯ ಸರಿಸಮಾನತ್ವಗಳೆಂಬ ಅಗ್ನಿಯನ್ನು ಪ್ರಜ್ವಲಗೊಳಿಸುವುದಕ್ಕಾಗಿ ಪ್ರಜಾಸತ್ತಾತ್ಮಕ ಪರಿಪಾಲನೆಯೆಂಬ ಜ್ಯೋತಿಯನ್ನು ತೋರಿಸುವುದರಲ್ಲಿ ತಾವು ಕಾರಣಭೂತರಾಗಿದ್ದೀರಿ. ತಮ್ಮ ಪ್ರಯತ್ನದಲ್ಲಿ ತಾವು ಜಯಶಾಲಿಗಳಾಗಿದ್ದೀರಿ; ಪ್ರಕೃತ ಕಂಡುಬರುತ್ತಿರುವ ಏಕಮತ್ಯ, ಅನ್ಯೋನ್ಯ ಜವಾಬ್ದಾರಿ ಮತ್ತು ತಿಳಿವಳಿಕೆಗಳು ತಮ್ಮ ಉತ್ತೇಜನ ಮೇಲ್ಪಂಕ್ತಿ ಮತ್ತು ನಿರ್ಭಯವಾದ ಮುಂದಾಳುತನಗಳಿಂದಲೇ ಉಂಟಾಗಿರುತ್ತವೆ.

ಯಾರ ಅಕಾಲಿಕ ಮರಣದಿದುಂಟಾದ ವಿಯೋಗದುಃಖವನ್ನು ಇಂದಿನವರೆಗೂ ಅನುಭವಿಸುತ್ತಿರುವೆವೋ ಆ ದಿವಂಗತರಾದ ಮೆ|| ಎಂ. ಬಸವಯ್ಯ, ಬಿ.ಎ., ಬಿ.ಎಲ್., ಯವರ ಅಸಮಾನವಾದ ಶ್ರದ್ಧೆಯಿಂದಲೂ ಹಿಂದೆಗೆಯದ ಧೈರ್ಯದಿಂದಲೂ ಈ ಮಂಡಲಿಯು ನಮ್ಮ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿತೆಂಬುದನ್ನು ತಾವು ಬಲ್ಲಿರಿ. ಶತಮಾನಗಳಿಂದಲೂ ಉಪೇಕ್ಷೆಯಿಂದ ಕೈಬಿಡಲ್ಪಟ್ಟಿದ್ದ ಹಿಂದುಳಿದ ಮತ್ತು ನಿಮ್ನಜಾತಿಯ ಜನವರ್ಗದ ಹಕ್ಕುಬಾಧ್ಯತೆಗಳಿಗಾಗಿ ಮೆ|| ಬಸವಯ್ಯನವರು ಸಂಸ್ಥಾನದ ಪ್ರಜಾಪ್ರಾತಿನಿಧ್ಯವುಳ್ಳ ಸಭೆಗಳಲ್ಲೆಲ್ಲಾ ದಕ್ಷತೆಯಿಂದಲೂ ಧೈರ್ಯದಿಂದಲೂ ಹೋರಾಡಿದರು. ನಾವುಗಳು ಈ ದಿನ ಇಲ್ಲಿ ಯಾವುದರ ಆಶ್ರಯದಲ್ಲಿ ನೆರೆದಿರುವೆವೋ ಆ ಮೈಸೂರು ಪ್ರಜಾಮಿತ್ರಮಂಡಲಿಯನ್ನು ಮೆ|| ಬಸವಯ್ಯನವರು ಏರ್ಪಡಿಸಿ ಅಲ್ಲಲ್ಲಿ ಚದುರಿಹೋಗಿರುವ ವಿವಿಧ ಪಂಗಡಗಳನ್ನು

ಒಟ್ಟುಗೂಡಿಸಿ, ಬಹುಕಾಲದಿಂದಲೂ ಇರುವ ಹಿಂದುಳಿದವರ ಕುಂದುಕೊರತೆಗಳಿಗೆ ಪರಿಹಾರವನ್ನು ಬೇಡಿಕೊಳ್ಳುವದಕ್ಕಾಗಿ ಶ್ರೀಮನ್ಮಹಾರಾಜಾ ಸಾಹೇಬರವರ ಬಳಿಗೆ ಹೋಗಿ ಅವರ ಸಂದರ್ಶನವನ್ನು ಪಡೆದರು. ತಮ್ಮ ಪ್ರಜೆಗಳೆಲ್ಲರ ಸಮಾನವಾದ ಮೇಲ್ಮೆಯನ್ನು ಸರ್ವದಾ ಬಯಸುತ್ತಿರುವ ನಮ್ಮ ಪ್ರೀತಿಪಾತ್ರರಾದ ಮಹಾರಾಜರವರು ಆಗ ಸಾನುಭೂತಿಯನ್ನು ಸೂಚಿಸುವ ಉತ್ತೇಜನಕಾರಿಯೂ ಉದಾರವಾದ ಆಶ್ರಯವೂ ಆದ ಪ್ರತ್ಯುತ್ತರವನ್ನು ದಯಪಾಲಿಸಿದರು. ಮೆ|| ಬಸವಯ್ಯನವರಿಂದ ಆರಂಭಿಸಲ್ಪಟ್ಟ ಕಾರ್ಯಭಾಗದ ಫಲಸ್ವರೂಪವಾಗಿ ಇಲ್ಲಿಯ ಹಿಂದುಳಿದ ಜನವರ್ಗದವರು ತಂತಮ್ಮ ಸಹಜವಾದ ಹಕ್ಕುಬಾಧ್ಯತೆಗಳನ್ನು ಕ್ರಮೇಣ ಅನುಭವಕ್ಕೆ ತಂದುಕೊಳ್ಳುತ್ತಿದ್ದಾರೆ; ಅವರ ತರುಣರ ವಿದ್ಯಾಭ್ಯಾಸಕ್ಕೆ ನಮ್ಮ ಸರ್ಕಾರದವರು ಹೆಚ್ಚು ಗಮನವನ್ನು ಕೊಡುತ್ತಿರುವರಲ್ಲದೆ ಕೆಲವು ವರ್ಷಗಳಿಂದೀಚೆಗೆ ವಿದ್ಯಾಭ್ಯಾಸದ ಏರ್ಪಾಟಿನಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಗಳನ್ನು ರೂಢಿಗೆ ತರಲುಪಕ್ರಮಿಸಿ, ಹಿಂದುಳಿದ ಜನವರ್ಗದವರಿಗೆ ವಿದ್ಯಾರ್ಥಿವೇತನಗಳನ್ನು ದಯಪಾಲಿಸುತ್ತಿದ್ದಾರೆ. ಈ ಪಂಗಡಗಳ ಪ್ರತಿನಿಧಿಗಳು ತಮ್ಮ ಜನಸಂಖ್ಯೆಗನುಸಾರವಾಗಿ ಪ್ರತ್ಯಕ್ಷ ಚುನಾವಣೆಗಳ ಮೂಲಕ ಪ್ರಜಾಪ್ರಾತಿನಿಧ್ಯವುಳ್ಳ ಸಭೆಗಳಿಗೆ ಬರುತ್ತಿದ್ದಾರೆ; ಮತ್ತೂ ಜನರ ಏಳಿಗೆಗಾಗಿ ಈ ಪಂಗಡಗಳ ವಿದ್ಯಾವಂತರಾದ ಜನರನ್ನು ಸರ್ಕಾರಿ ಕೆಲಸಗಳಿಗೆ ಸೇರಿಸಿಕೊಳ್ಳುವುದರ ಅವಶ್ಯಕತೆಯೂ ನ್ಯಾಯವೂ ಸರ್ಕಾರದವರಿಗೆ ಗೋಚರವಾಗಿದೆ. ಈ ತಿದ್ದುಪಾಟಿನ ಏರ್ಪಾಟುಗಳಿಗಾಗಿ ದಿವಂಗತರಾದ ಮ|| ಬಸವಯ್ಯನವರಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಚಳವಳಿಯನ್ನು ಹುಟ್ಟಿಸಿದ ಮೆ|| ಬಸವಯ್ಯನವರ ವಿಷಯದಲ್ಲಿ ನಮ್ಮಗಳಿಗೆ ಎಷ್ಟು ಗೌರವವೂ ವಿಶ್ವಾಸವೂ ಇರುವುದೆಂಬುದರ ಸೂಚನಾರ್ಥವಾಗಿ ಅವರ ಭಾವಚಿತ್ರವನ್ನು ದಯೆಯಿಟ್ಟು ಪ್ರಕಾಶಪಡಿಸಲು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇವೆ; ಈ ಭಾವಚಿತ್ರವು ಪ್ರಜಾಮಿತ್ರಮಂಡಲಿಯ ಕಾರ್ಯಮಂದಿರದಲ್ಲಿ ಇಡಲ್ಪಡುವುದು. ದಿವಂಗತರಾದ ಮ|| ಬಸವಯ್ಯನವರ ಹಾಗೆ ಜನಸಾಮಾನ್ಯರ ಮೇಲ್ಮೆಗಾಗಿಯೇ ಪಾಟುಪಡುತ್ತಿರುವ ಈ ಕಾರ್ಯವನ್ನು ನೆರವೇರಿಸಲು ತಕ್ಕವರಾದ ತಮ್ಮಂತಹ ಮಹನೀಯರು ದೊರೆದುದು ನಮ್ಮ ಭಾಗ್ಯವೆಂದು ಹರ್ಷಿಸುತ್ತೇವೆ.

ಮಹನೀಯರೆ, ಈ ಸಭೆಗೆ ದಯಮಾಡಿಸಿ ನಮ್ಮಗಳಿಂದ ಅಭಿನಂದನಪತ್ರಿಕೆಯನ್ನು ಸ್ವೀಕರಿಸುವಂತೆ ಕೇಳಿಕೊಂಡ ಪ್ರಾರ್ಥನೆಯನ್ನು ದಯೆಟ್ಟು ಅಂಗೀಕರಿಸಿದುದಕ್ಕಾಗಿ ನಾವುಗಳು ತಮಗೆ ವಂದಿಸುತ್ತೇವೆ. ತಾವು ಯಾವುದಕ್ಕೆ ತಮ್ಮ ಜೀವಮಾನವನ್ನೆಲ್ಲಾ ಧಾರೆಯೆರೆದಿರುವಿರೋ ಆ ಲೋಕೋಪಕಾರ ಕಾರ್ಯಗಳ ಪ್ರಯೋಜನಾರ್ಥವಾಗಿ ಇಷ್ಟಾರ್ಥದಾಯಕನಾದ ಭಗವಂತನು ತಮಗೆ ದೀರ್ಘಾಯುರಾರೋಗ್ಯೈಶ್ವರ್ಯಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಬೆಂಗಳೂರು, } . ಇತಿ ತಮ್ಮ ಹಿತೈಷಿಗಳಾದ
ಜುಲೈ 21-1920. } ಪ್ರಜಾಮಿತ್ರಮಂಡಲಿಯ ಮೆಂಬರುಗಳು.

ಸರ್ಪ ಚೇಳುಗಳ ವಿಷಧ್ವಂಸಿನಿ

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಚಳಕಿ ಉರಿಯೂ ಕ್ಷಣಮಾತ್ರದಲ್ಲಿ ವಾಸಿಯಾಗುವವು. ಈ ಔಷಧವು ಚೇಳಿನ ಹೊಡೆತಕ್ಕೆ ಮಾತ್ರವಲ್ಲ. ಹಾವು, ನಾಯಿ, ನರಿ, ಬೆಕ್ಕು, ಕೋತಿ, ಮುಂತಾದ ವಿಷಜಂತುಗಳ ಕಡಿತಕ್ಕೂ ದಿವ್ಯೌಷಧ. ಇದರಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂ. ಬಹುಮಾನ ಕೊಡುವೆವು. ಮತ್ತು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 1920 ನೇ ಇಸವಿ ಕ್ಯಾಲೆಂಡರು ಬಹುಮಾನವಾಗಿ ಕೊಡುವೆವು.

ಕ್ರಯ ಡಬ್ಬಿ 1ಕ್ಕೆ 0—8—0, ಡಜನ್ 1ಕ್ಕೆ 5—0—0.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
ಸಾಹುಕಾರಪೇಟೆ, ಮದರಾಸು.

17

ಜಾಗ್ರತೆ. ಕಬ್ಬಿಣದ ನೇಗಿಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧು ಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 38

ನಾವು ಎ. ಆಲ್ಬ್ರುಕ್ಕ್ಯಯರ್ ಕ್ಕ ಅಂಡ್ ಸನ್ಸ್ ಎಂಬ ಹೆಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್ ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದು ತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ } ವಿಳಾಸ:—ಎಚ್. ಪಿ. ಕರೇಗೌಡರ
ಗೌಡರು ದಾವಣಗೆರೆ. } ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಖ್ಯರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕಂದಿನಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಮಾತಿಶಯಂಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಮಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಕಥಾಕಂಠಮಾಲಾ	,,	೦—೩—೦
ಬಾಲಲೀಲಾಗೀತ	,,	೦—೩—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೩—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ಧಪ್ಪಾ ಪಡಶೆಟ್ಟಿ,
36 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸ್ಯಾಂಡೋ ಆಯಿಲ್.
(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಉತ್ಪತ್ತಿಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು, ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು. ಕ್ರಯ ಶೀಸೆ 1ಕ್ಕೆ 1-0-0 ರೂ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ
ಸುಖಾನಂದ
17 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮಾ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.
ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:-ಡಾಕ್ಟರ್ ಎಂ. ಪೀಟರ್,
3. ಇರುಳಪ್ಪನವೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ.	೦—೮—೦
ಶಿವಪೂಜಾವಿಧಿ.	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 36

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನಸಂಗಿಳೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿಡ್ಡು, ಗುದ್ದವ್ರನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈಮೊಡಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ಕೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೇಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟವಗ್ಗೆರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಜುಲೈ ತಾ|| ೨೫ ರಿಂದ ೧೯೨೦ ನೆಯ ಜುಲೈ ತಾ|| ೩೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಅಧಿಕಶ್ರಾವಣಶುದ್ಧ ದಶಮಿಯಿಂದ ಅಧಿಕಶ್ರಾವಣಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
25	ಭಾನು	ದಶ	30-12	ವಿಶಾ	1-54	10
26	ಸೋಮ	ಏಕಾ	34-26	ಅನೂ	7-10	11
27	ಮಂಗಳ	ದ್ವಾದ	39-6	ಜ್ಯೇಷ್ಠ	13-56	12
28	¹ಬುಧ	ತ್ರಯೊ	44-13	ಮೂಲ	19-43	13
29	ಗುರು	ಚತು	49-14	ಪೂಷಾ	26-16	14
30	²ಶುಕ್ರ	ಪೌರ್ಣ	53-50	ಉಷಾ	32-27	15
31	ಶನಿ	ಪಾಡ್ಯ	57-22	ಶ್ರವ	37-52	16

(1) ಪ್ರದೋಷ. (2) ಯಜುರುಪಾಕರ್ಮ, ಅಡಿಶುಕ್ರವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಳಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತವಾಣಾಕುಲಂ | ಕ್ಷೇಮಂಚೈತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಆಗಸ್ಟ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೩೦

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಆಗಸ್ಟ ತಾ|| ೧ ನೆಯ ಭಾನುವಾರ.

ಬ್ರಾಹ್ಮಣೇತರರ ಕರ್ಣಾಟಕ ರಾಜಕೀಯ ಪರಿಷತ್ತು

ಹುಬ್ಬಳ್ಳಿಯಲ್ಲಿ ಕಳೆದವಾರ ನಡೆದ ಪರಿಷತ್ತಿನ ನಡೆವಳಿಕೆಯ ವಿವರಣವುಳ್ಳ ಲೇಖನವನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ಅದನ್ನಾದ್ಯಂತವಾಗಿ ನೋಡಲಾಗಿ ಪರಿಷತ್ಸಮಾರಂಭವು ಅಭೂತಪೂರ್ವವಾಗಿ ಮಹಾ ವೈಭವದಿಂದ ಜರುಗಿತೆಂದು ಹೇಳಲಿಕ್ಕೆ ಸಂಶಯವಿಲ್ಲ. ನಮ್ಮ ಔತ್ತರೇಯ ಬಂಧುಗಳಲ್ಲಿ ಆತ್ಮೋದ್ಧರಣ ಸಾಹಸವು ಎಷ್ಟುಮಟ್ಟಿಗೆ ಹೆಪ್ಪುಗಟ್ಟಿ ಅಂತರ್ನಿಗೂಢವಾಗಿದ್ದಿತೆಂಬುದನ್ನು ನಿದರ್ಶನ ಪಡಿಸಲಿಕ್ಕೆ ಇದು ಸಾಕಾದ ದೃಷ್ಟಾಂತವಾಗಿದ್ದಿತು ಸ್ವಲ್ಪ ಕಾಲಾತೀತವಾಗಿ ಮಾಡಿದ ಇಷ್ಟು ಚಳವಳವನ್ನೂ ಸಾಹಸವನ್ನೂ ೨-೩ ವರ್ಷಗಳಿಗೆ ಮುಂಚೆಯೇ ಇವರುಗಳು ನಡೆಯಿಸಿದ್ದರೆ ಮದ್ರಾಸು ಅಧಿಪತ್ಯದವರಿಗೆ ದೊರೆದಂಥ ಪ್ರತ್ಯೇಕ ಪ್ರಾತಿನಿಧ್ಯಫಲವು ಇವರಿಗೂ ದೊರೆಯುವುದು ಅಸಾಧ್ಯವೇನೂ ಆಗುತ್ತಿರಲಿಲ್ಲ. ಗತಿಸಿದ ನಾಯರಂಥ ಮತ್ತು ಬದುಕಿರುವ ಸರ್ ತ್ಯಾಗರಾಜಶೆಟ್ಟರಂಥ ನಿಸ್ಸೀಮ ರಾಷ್ಟ್ರಭಕ್ತಾಧ್ವರ್ಯುಗಳು ಉತ್ತರ ಕರ್ಣಾಟಕದ ಹಿಂದುಳಿದವರಲ್ಲಿ ಉದಯಗೊಳ್ಳದಿದ್ದುದೇ ಅಲ್ಲಿ ತಕ್ಕಷ್ಟು ಚಳವಳಿಯಾಗದಿದ್ದುದಕ್ಕೆ ಕಾರಣವೆನ್ನಬೇಕು. ಪ್ರಭುತ್ವದವರ ವರದಾನದಿಂದ ಪಡೆಯಲಾಗಲೆ ಹೋದ ಅಂಥ ಪ್ರಾತಿನಿಧ್ಯವನ್ನು ಈಗ ಸ್ವಸಹಾಯ ಆತ್ಮಸಾಹಸ ಏಕಮತ್ಯ ಬಲಗಳಿಂದ ಇವರು ಪಡೆದುಕೊಳ್ಳಬೇಕಾಗಿ ಬಂದಿರುವುದು. ಲಾರ್ಡುಗಳ ಪಾರ್ಲಿಮೆಂಟಿನಲ್ಲಿ ಮೊನ್ನೆವಾರ ಪ್ರತ್ಯೇಕ ಪ್ರಾತಿನಿಧ್ಯದ ವಿಷಯವನ್ನೆತ್ತಿ ವಾದಿಸಿದ ಲಾರ್ಡ್ ಆಂಪ್ಥಿಲ್‌ರವರು ಈಚೆಗೆ ಭರತಖಂಡದ ಬ್ರಾಹ್ಮಣೇತರ ಸಂಘದವರಿಗೆ ತಿಳಿಯಿಸಿರುವ ಪ್ರಕಟನೆಯಲ್ಲಿ ಬ್ರಾಹ್ಮಣೇತರರು ಅವರ ಗತಿಯನ್ನು ಅವರೇ ನೋಡಿಕೊಳ್ಳಬೇಕೆಂದು ತಿಳಿಯಿಸಿರುತ್ತಾರೆ. ಈ ಕಾರಣದಿಂದಲೂ ಕೂಡ ಹಿಂದುಳಿದ ಜನವರ್ಗಗಳು ಶಾಸನಸಭೆ ಮೊದಲಾದುವುಗಳಲ್ಲಿ ತಮ್ಮ ಪ್ರಾತಿನಿಧ್ಯವು ತಕ್ಕಷ್ಟು ಇರುವುದಕ್ಕೆ ಮಾಡಬೇಕಾದ ಸಾಹಸಗಳನ್ನು ಮಾಡದೆ ಉಪೇಕ್ಷಿಸಲಾಗದು. ಇಂಥ ಪ್ರಯತ್ನವನ್ನು ತಕ್ಕ ರೀತಿಯಿಂದ ಕೈಗೊಂಡುದಕ್ಕಾಗಿ ಹಿಂದುಳಿದ ಔತ್ತರೇಯ ಬಂಧುಗಳನ್ನು ನಾವು ಅಭಿನಂದಿಸದೆ ಇರಲಾರೆವು.

ತಮ್ಮ ದೇಶವು ವೃದ್ಧಿಗೆ ಬರಬೇಕು ತಾವು ಸುಖವಾಗಿಯೂ ಗೌರವದಿಂದಲೂ ಬದುಕಬೇಕು ಎಂಬ ಆಶಯವು ಭರತಖಂಡದ ಮುಂಬರಿದ ಜನವರ್ಗಕ್ಕಿರುವಂತೆಯೇ ಹಿಂದುಳಿದ ಜನವರ್ಗದವರಿಗೂ ಇರುವುದು ಅಸ್ವಭಾವವಲ್ಲ. ದೇಶೀಯ ಲಾಭಾಲಾಭಗಳನ್ನು ಪಡೆಯುವ ವಿಷಯದಲ್ಲಿ ಸಕಲ ಪ್ರಜೆಗಳಿಗೂ ಸಮಾನವಾದ ಸ್ವಾತಂತ್ರ್ಯವೂ ಬಾಧ್ಯತೆಯೂ ಇದ್ದೇ ಇರುವುವು. ಇದರಲ್ಲಿ ಕಾಲವೈಚಿತ್ರ್ಯದಿಂದ ಸಂಭವಿಸಿದ್ದ ವೈಷಮ್ಯಗಳು ಶಾಶ್ವತವಾಗಿ ಉಳಿಯತಕ್ಕವಲ್ಲ. "ನ್ಯಗ್ರೋಧಬೀಜಂ ಕಿಲಂ ಸಿಡಿದೇಂ ಪೆರ್ಮರನಾಗದೇ?" ಎಂಬ ನೀತಿಯಂತೆ ಇಂದು ಕ್ಷುಲ್ಲಕನಾಗಿದ್ದಾತನು ಕಾಲಕರ್ಮವಶದಿಂದ ಘನತಮನಾಗುವುದು ಅಸಂಭವವಲ್ಲ. ರಾಜಕೀಯ ಗಂಧವೇ ಇಲ್ಲದೆ ಪಶುವರ್ಗದಂತೆ ಕೇವಲ ಉದರಂಭರಣ ಪರಾಯಣರಾಗಿದ್ದವರು ಎಂದೆಂದೂ ಹಾಗೆಯೇ ಉಳಿದಿರಬೇಕೆಂಬುದು ವಿಧಿಕೃತವಲ್ಲ. ಮಲಗಿದ್ದವರು ಜೀವಾಂತವಾಗಿಯೂ ಮಲಗಿರುವುದಿಲ್ಲ. ಎಚ್ಚರುಗೊಂಡೇ ತೀರಬೇಕು. ಬಹು ಯುಗಾಂತರದಿಂದ ಕತ್ತಲೆಯ ಮುಚ್ಚುಗೋಣಿಯಲ್ಲಿಡಲ್ಪಟ್ಟಿದ್ದ ಭಾರತೀಯ ದೀನಜನಾವಳಿಗೆ ಈಗ ಆಂಗ್ಲ ಸಾಮ್ರಾಜ್ಯ ಸೂರ್ಯೋದಯ ದರ್ಶನದಿಂದ ಆತ್ಮಜ್ಞಾನದ ಬೆಳಕೂ ಸ್ವಾತಂತ್ರ್ಯಮಂದಮಾರುತದ ಬೀಸುವಿಕೆಯೂ ಪ್ರಾಪ್ತವಾಗಿ ಸರ್ವತೋಮುಖವಾದ ಏಳ್ಗೆಯೆಂಬ ಆರೋಗ್ಯವನ್ನು ಪಡೆಯಲು ಅಭೂತಪೂರ್ವವಾದ ಸನ್ನಿವೇಶವು ದೊರೆದಿರುತ್ತದೆ. ಈ ಸಂಧಿಯನ್ನು ವ್ಯರ್ಥಗೊಳಿಸದೆ ಅವರು ಆತ್ಮೋದ್ಧಾರಕ್ಕಾಗಿ ವಿವಿಧ ಪ್ರಯತ್ನಗಳನ್ನು ಮಾಡಿಕೊಳ್ಳುತ್ತಿದ್ದರೆ ಅದನ್ನು ಕಂಡು ಇವರ ನೆರೆಯವರೇ ಇವರನ್ನು ಹಗೆಮಾಡುವುದೇಕೆ? ಹೀಯಾಳಿಸುವುದೇಕೆ? ಪರಿಹಾಸಮಾಡುವುದೇಕೆ? ಇಲ್ಲದ ತೊಡಕುಗಳನ್ನೊಡ್ಡುವುದೇಕೆ? ತಮ್ಮ ಅಗ್ರೇಸರತ್ವವನ್ನೊಪ್ಪಿಕೊಳ್ಳದೆ ತಾವು ಹಾಡುವ ಪಲ್ಲವಿಗೆ ಪದವನ್ನು ಜೋಡಿಸಿ ಹಾಡದೆ ಇದ್ದಮಾತ್ರದಿಂದಲೇ ಇವರುಗಳು ಮಚ್ಚರಿಸುವುದೇಕೆ? ಒಬ್ಬನ ಪ್ರಕೃತಿಗೆ ಮೊಸರು ಒಗ್ಗುತ್ತಿದ್ದರೆ ಮತ್ತೊಬ್ಬನ ಪ್ರಕೃತಿಗೆ ಹಾಲೇ ಒಗ್ಗುತ್ತಿರಬಹುದು. ಹಾಲುಣ್ಣುವವನು ಅದರ ಗುಣವನ್ನು ಬೇಕಿದ್ದರೆ ಹೊಗಳಿಕೊಳ್ಳಲಿ. ಮೊಸರುಣ್ಣುವವನನ್ನು ಹೀಯಾಳಿಸುವುದೇಕೆ? ಅದರಲ್ಲಿ ಇಲ್ಲದ ದೋಷವನ್ನಾರೋಪಿಸುವುದೇಕೆ? ಭರತಖಂಡದಲ್ಲಿ ವೇದಗಳೂ ಬ್ರಹ್ಮಸೂತ್ರಗಳೂ ಒಂದೊಂದೇ ಇದ್ದರೂ ಅದರ ಮೇಲೆಯೇ ಭಿನ್ನಭಿನ್ನ ಸಿದ್ಧಾಂತಗಳಿಂದ ಅನೇಕ ಮತಗಳು ಹುಟ್ಟಿ ಅನಾದಿಯಾಗಿ ನಡೆದುಬರುತ್ತಿರುವಾಗ ರಾಜಕೀಯ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದೊಂದಾಶ್ಚರ್ಯವೆ? ಉಗ್ರಪಕ್ಷದ ರಾಷ್ಟ್ರೀಯವಾದಿಗಳಲ್ಲಿ ಅನೇಕರು ಆಂಗ್ಲರ ಅಧಿಕಾರವನ್ನು ಭರತಖಂಡದಲ್ಲಿರದಂತೆ ಮಾಡಿದರೇನೆಯೇ ದೇಶಕ್ಕೆ ಕ್ಷೇಮವೆಂದು ಯೋಚಿಸಿ ಯಾವ ಯಾವ ಕಾರಣದಿಂದಲೋ ಆಂಗ್ಲರ ಮೇಲೆ ದೋಷವನ್ನಾರೋಪಿಸಿ, ಅವರಲ್ಲಿ ಇತರರಿಗೆಲ್ಲಾ ದ್ವೇಷ ಹುಟ್ಟುವಂತೆ ಮಾಡಿ, ಸರ್ಕಾರದ ಕೆಲಸಗಳಿಗೆ ಅಡ್ಡಿಯನ್ನೊಡ್ಡಿ ಚಳವಳವನ್ನು ನಡೆಯಿಸುವುದರಿಂದಲೇ ದೇಶೋದ್ಧಾರವಾಗುವುದೆಂದು ಜನಗಳಿಗೆ ಬೋಧಿಸುತ್ತಾರೆ. ಆದರೆ ಕೋಟ್ಯನುಕೋಟಿ ಪ್ರಜೆಗಳು ಇದಕ್ಕೆ ಒಪ್ಪುವುದಿಲ್ಲ. ೩೩ ಕೋಟಿ ಜನಸಂಖ್ಯೆಯುಳ್ಳ ಇಷ್ಟು ದೊಡ್ಡರಾಜ್ಯಕ್ಕೆ ಏಕಸೂತ್ರದಲ್ಲಿಟ್ಟುಕೊಂಡು ಆಳತಕ್ಕ ಮಹಾಪ್ರಭುತ್ವಾಶ್ರಯವಿಲ್ಲದಿದ್ದರೆ ಇದು ಸುಖಶಾಂತಿಯಿಂದ ಬಾಳುವುದಿಲ್ಲವೆಂಬುದನ್ನು ಬಹುಕಾಲದ ಇತಿಹಾಸಾನುಭವದಿಂದ ದೃಢಪಡಿಸಿಕೊಂಡಿರುವ ಜನರು, ಅಭೂತಪೂರ್ವವಾದ ಶಾಂತಿಸುಖಗಳನ್ನು ಈ ದೇಶಕ್ಕೆ ಉಂಟುಮಾಡಿಕೊಟ್ಟಿರುವ ಸದ್ಧರ್ಮಬಲವುಳ್ಳ ಆಂಗ್ಲ ಪ್ರಭುತ್ವಾಶ್ರಯದಿಂದಲೇ ತಮ್ಮ ಉದ್ಧಾರವಾಗಬೇಕೆಂದು ತಿಳಿದುಕೊಂಡಿದ್ದಾರೆ. ಹೀಗಿರುವಾಗ ಇಂಥ ಭಿನ್ನಾಭಿಪ್ರಾಯವುಳ್ಳವರು ಒಂದೇ ಮುಖದಲ್ಲಿ ನಡೆಯುವುದೆಂತು? ಅವರವರಿಗೆ ವಿಹಿತವಾಗಿ ತೋರಿದ ಮಾರ್ಗದಲ್ಲಿ ಸ್ವಲ್ಪದೂರ ನಡೆದು ಅಲ್ಪಸ್ವಲ್ಪ ಫಲಾನುಭವವನ್ನು ಅದರಿಂದ ಹೊಂದಿದಲ್ಲದೆ ತಂತಮ್ಮ ಮಾರ್ಗಗಳಲ್ಲಿ ಒಳ್ಳೆಯ ಕೆಟ್ಟ ಪರಿಣಾಮ ಸೂಚನೆಯನ್ನು ಗೊತ್ತುಮಾಡಿಕೊಳ್ಳುವುದು ಸಾಧ್ಯವಲ್ಲ. ಹಾಗಾಗುವವರೆಗೂ ಅವರವರ ಸ್ವಾತಂತ್ರ್ಯಕ್ಕೆ ಇತರರು ಅಡ್ಡಿಮಾಡುವುದು ಪರಸ್ಪರ ವಿಘಾತಕ್ಕೆ ಹೇತುವೇ ಹೊರತು ಮತ್ತೇನೂ ಅಲ್ಲ.

ಉಗ್ರಪಕ್ಷೀಯರಾದ ಕೆಲವರು ಯಾವ ಯಾವ ಕಾರಣದಿಂದಲೋ ಬೇರೆ ತೆರನಾದ ಧ್ಯೇಯವನ್ನಿಟ್ಟುಕೊಂಡು ತಮಗೆ ಅನುಕೂಲವಾದ ಅಭಿಪ್ರಾಯದ ಸಭೆಯನ್ನು ನೆರವೇರಿಸಿಕೊಳ್ಳಲು ಅವರು ಸ್ವತಂತ್ರವಾಗಿರುವಂತೆಯೇ ಅಂಥ ಅಭಿಪ್ರಾಯಗಳನ್ನು ಒಪ್ಪದ ಜನರು ತಮ್ಮ ಮತಕ್ಕೆ ಅನುಕೂಲವಾದ ಸಭೆಗಳನ್ನು ಪ್ರತ್ಯೇಕವಾಗಿ ಮಾಡಿಕೊಳ್ಳಲು ಇವರೂ ಸ್ವತಂತ್ರರಾಗಿಯೇ ಇದ್ದಾರೆ. ಇಂಥಸಭೆಗಳನ್ನು ಆತ್ಮಲಾಭಾರ್ಥವಾಗಿ ಎಂದರೆ ಶಾಸನಸಭೆ ಮೊದಲಾದುವುಗಳಲ್ಲಿ ತಮ್ಮ ಸಭಿಕತ್ವ ಪ್ರಾಪ್ತಿಗಾಗಿ ಇವರು ಮಾಡಿಕೊಳ್ಳುತ್ತಾರೆಂಬುದೊಂದು ದೋಷವನ್ನು ದೊಡ್ಡದನ್ನಾಗಿ ಮಾಡಿ ಇತರರು ಇವರ ಮೇಲೆ ಹೊರಿಸುವರಾದರೆ, ಅಂಥ ದೋಷದಿಂದ ಅವರೇನು ಅಲಿಪ್ತರಾಗಿರುವರೆ? ತಮ್ಮ ಆದರ್ಶಗಳಿಗೆ ಬದ್ಧರಾದವರಿಗೇ ಓಟರುಗಳು ಮತವನ್ನು ಕೊಡಬೇಕೆಂಬ ಸಂಕೇತದ ಕಟ್ಟನ್ನು ಅವರೇಕೆ ಮಾಡಿಕೊಂಡರು? ತಾವೇ ವಿದ್ಯಾವಂತರು, ತಾವೇ ಬುದ್ಧಿವಂತರು, ತಾವೇ ದೇಶಪ್ರತಿನಿಧಿಗಳಾಗಿ ನಿಲ್ಲುವುದಕ್ಕೆ ಅರ್ಹರು ಎಂದು ಅವರು ಕಲ್ಪಾದಿಯಿಂದ ಹೇಳಿಕೊಳ್ಳುತ್ತ ಬಂದಿದ್ದಂತೆ ಇನ್ನೂ ಎದುವರೆಗೆ ಹೇಳಿಕೊಳ್ಳುತ್ತಿರುವರು? ಆ ಸ್ಥಲಕ್ಕೆ ಇತರರು ಕಲ್ಪಾಂತದವರೆಗೂ ಬರಲೇಕೂಡದೆ? ಇತರರೂ ತಮ್ಮಂತೆಯೇ ದೇಶಭಾರವಹನದಲ್ಲಿ ಸಮಭಾಗಿಗಳೆಂಬ ಉದಾತ್ತ ಸುಜನಗುಣವು ಇವರಿಗೇಕಿಲ್ಲ? ಅದಿಲ್ಲದಿದ್ದರೆ ಇವರೆಂಥ ದೇಶಭಕ್ತರು? ಇಂಥವರಿಗೆ ದೇಶದ ಪ್ರಾತಿನಿಧ್ಯವನ್ನೆಲ್ಲಾ ಒಪ್ಪಿಸಿಬಿಟ್ಟು ಇತರರು ಸುಮ್ಮನೆ ಕೈಕಟ್ಟಿ ಕುಳಿತುಕೊಂಡರೆ ಗತಿಯೇನು? ಇದುವರೆಗೆ ಹಾಗೆ ತಟಸ್ಥಭಾವದಿಂದ ಕುಳಿತು ಪಡೆದುಕೊಂಡ ಫಲವು ಸಾಕು. ಇನ್ನಾದರೂ ಎಚ್ಚತ್ತು ಅವರವರ ಶಕ್ತಿಗೆ ತಕ್ಕಷ್ಟು ತಮಗೆ ಸಾಧ್ಯವಾದಷ್ಟು ರಾಜಕೀಯ ಭಾರವನ್ನು ಹೊರಲು ಎಲ್ಲ ಪ್ರಜೆಗಳೂ ಸನ್ನದ್ಧರಾಗುವುದೇ ವಿಹಿತವು.

ಈ ವಿಚಾರದಿಂದಲೇ ಹುಬ್ಬಳ್ಳಿಯಲ್ಲಿ ನೆರೆದ ಸಭೆಯು ಸರ್ವಾಂಗಸುಂದರವಾಗಿ ಪೂರೈಸಿತೆಂದು ಕೇಳುವುದಕ್ಕೆ ಸಂತೋಷವಾಗುತ್ತದೆ. ಇಂಥ ವಿಚಾರವನ್ನು ಪ್ರತಿಯೊಬ್ಬ ಹಿಂದುಳಿದ ಜನವರ್ಗದವರ ತಲೆಗೂ ಹತ್ತಿಸಲಿಕ್ಕೆ ತಮ್ಮ ಲಕ್ಷಾಂತರ ಧನವ್ಯಯವನ್ನೂ ದೇಹಶ್ರಮವನ್ನೂ ಲೆಕ್ಕಿಸದೆ ಕೆಲಸಮಾಡುತ್ತಲಿರುವ ಸರ್ ತ್ಯಾಗರಾಜಸೆಟ್ಟರಂಥ ಮಹನೀಯರ ಅಧ್ಯಕ್ಷತೆಯು ಈ ಸಭೆಗೆ ದೊರೆತುದು ಭವಿಷ್ಯಚ್ಛುಭಸೂಚಕವೆಂದೇ ಹೇಳಬೇಕು ಇಂಥ ಸಭೆಯನ್ನು ಭಾರತಧರ್ಮೋಜ್ಜೀವನ ದೀಕ್ಷಿತರಾದ ಕೈ|| ಶಿವಾಜಿಯವರ ವಂಶೀಯರಾದ ಶ್ರೀಮಾನ್ ಕೊಲ್ಹಾಪುರದ ಮಹಾರಾಜರವರಂಥವರು ಸ್ವತಃ ಬಂದು ಅಲಂಕರಿಸಿದುದು, ಅರಣ್ಯದಲ್ಲಿ ಅಲೆಯುತ್ತಿದ್ದ ಪಾಂಡುಪುತ್ರರಿಗೆ ಅಕ್ಷಯಪಾತ್ರೆಯು ದೊರೆದಂತೆಯೇ ಸರಿ. ಸರ್ ಶೆಟ್ಟಿಯವರು ಮ|| ಗಳಾದ ಮುದಿರೆಡ್ಡಿ, ರಾಮಸ್ವಾಮಿ ಮೊದಲಿಯಾರರು ಮೊದಲಾದ ಧೀಮಂತರುಗಳು ಸಭೆಯಲ್ಲಿ ಮಾಡಿದ ಸ್ಫೂರ್ತಿದಾಯಕವಾದ ಆವೇಶಪರಿಪೂರ್ಣ ಭಾಷಣಗಳು ಸಭಾಜನರಲ್ಲಿ ವಿಲಕ್ಷಣವಾದ ವಿಚಾರತರಂಗಗಳನ್ನೂ ಆತ್ಮೋದ್ಧಾರದೀಕ್ಷಾವಾಂಛೆಯನ್ನೂ ಏಕಮತ್ಯಸ್ಪೃಹೆಯನ್ನೂ ನಿರತಿಶಯವಾಗಿ ಹುಟ್ಟಿಸಿದುವೆನ್ನುವುದಕ್ಕೆ ಪ್ರತಿಯೊಬ್ಬರ ಅಂಗೇಂದ್ರಿಯಗಳಲ್ಲಿ ತೋರುತ್ತಿದ್ದ ಲಕ್ಷಣಾತಿಶಯಗಳೇ ಗುರುತಾಗಿದ್ದುವು. ತಕ್ಕ ಚಳವಳವನ್ನು ಉತ್ತರ ಕರ್ನಾಟಕದಲ್ಲಿ ಹುಟ್ಟಿಸಲಿಕ್ಕೆ ಪ್ರಮುಖಸಾಧನವಾದ ವೃತ್ತಪತ್ರವನ್ನು ರಾಜಭಾಷಾ ದೇಶಭಾಷೆಗಳಲ್ಲಿ ಹೊರಡಿಸಲಿಕ್ಕೆ ಬದ್ಧಸಂಕಲ್ಪವಾದುದೂ, ಅದಕ್ಕೆ ಶ್ರೀ ಛತ್ರಪತಿ ಮಹಾರಾಜರೇ ಮೊದಲಾದ ಸಭಿಕರನೇಕರ ಉದಾರಾಶ್ರಯವು ಅಲ್ಲೇ ದೊರೆದುದೂ, ಸಭಿಕರಲ್ಲಿ ಉಂಟಾದ ಪರಿಣಾಮದ ಮುಖ್ಯ ನಿದರ್ಶನವಾಗಿದ್ದಿತು. ಈ ಯತ್ನವು ಸಾಧ್ಯವಾದಷ್ಟು ಬೇಗನೆ ಕಾರ್ಯೋನ್ಮುಖವಾಗುವಂತೆ ಮಾಡಿ, ಹಿಂದುಳಿದವರು ತತ್ಕಾಲಕ್ಕೆ ವಿದ್ಯೆಯಲ್ಲಿ ಹಿಂದಾಗಿದ್ದರೂ ಆತ್ಮೋದ್ಧಾರ ಕಾರ್ಯದಲ್ಲಿ ಎಂದೂ ಹಿಂದಾದವರಲ್ಲವೆಂಬುದನ್ನು ಲೋಕದ ನಿದರ್ಶನಕ್ಕೆ ತಂದುಕೊಡುವವರಾಗಬೇಕು.

ಸಭಾಧ್ಯಕ್ಷರಾದ ಸರ್ ತ್ಯಾಗರಾಜಶೆಟ್ಟರು ಮಾಡಿರುವ ಭಾಷಣವು ಅವರಲ್ಲಿರುವ ಕರ್ತೃತ್ವಶಕ್ತಿ ದೀರ್ಘದೃಷ್ಟಿ ದೇಶಾಭಿಮಾನಗಳಿಗೆ ಅನುಗುಣವಾಗಿ ಚುರುಕಾಗಿರುವುದು. ಸ್ವಜನೋದ್ಧಾರವೊಂದೇ ಅವರ ಸರ್ವೇಂದ್ರಿಯ ಲಕ್ಷ್ಯವಾಗಿರುವುದರಿಂದ ಅದಕ್ಕೆ ಪ್ರತಿಬಂಧಕವಾಗಿರುವ ಯಾವುದೊಂದು ಪರ್ವತಗಾತ್ರದ ಆತಂಕವನ್ನೂ ಅವರು ಎಷ್ಟು ತುಚ್ಛವಾಗಿ ಎಣಿಸಿಕೊಂಡಿರುವರೆಂಬುದು ಇದರಿಂದ ಗೊತ್ತಾಗುವುದು. ಇದ್ದ ಪರಿಸ್ಥಿತಿಯನ್ನು ಲೋಕದಮುಂದೆ ತಂದಿಡುವುದರಲ್ಲಿ ಅವರಿಗೆ ಸ್ವಲ್ಪವೂ ಮುಚ್ಚುಮರೆಯ ಅವಶ್ಯಕತೆಯಿರಲಿಲ್ಲವೆಂದೂ, ಗುಣದೋಷಗಳ ಆವಿಷ್ಕರಣವನ್ನು ಇದ್ದಕ್ಕಿದ್ದಂತೆಯೇ ಮಾಡದೆ ಇದ್ದರೆ ಜನಸಮುದಾಯದಲ್ಲಿ ತಕ್ಕ ಎಚ್ಚರುಂಟಾಗುವುದಿಲ್ಲವೆಂದೂ, ಅವರು ಸಂಪೂರ್ಣವಾಗಿ ತಿಳಿದುಕೊಂಡಿರುವುದರಿಂದ, ವಿಶೇಷವಿಚಾರ ಪರಿಪೂರ್ತವಾದ ಅಂಥ ಗಂಭೀರಭಾಷಣವನ್ನು ಸಿಂಹಗರ್ಜನೆಯಿಂದ ಮಾಡಿ ಬೊಂಬಾಯಿ ಕರ್ನಾಟಕವೆಲ್ಲಾ ಪ್ರತಿಧ್ವನಿಸುವಂತೆ ಮಾಡಿರುವರು. ಟಿ. ಎಂ. ನಾಯರರಂಥ ಬಲಭುಜವು ಕಡಿದುಹೋದರೂ ಸರ್ ಶೆಟ್ಟಿಯವರು ತಮ್ಮ ಇಂಥ ಅಪರವಯಸ್ಸಿನಲ್ಲಿಯೂ ದೇಶೋದ್ಧಾರಕ್ಕೋಸ್ಕರ ಅರ್ಥತ್ಯಾಗ ಸುಖತ್ಯಾಗಾದಿಗಳನ್ನು ಮಾಡುವುದಕ್ಕೆ ಲೇಶವೂ ಹಿಂದೆಗೆಯದಿರುವರು. ಕಳೆದ ಒಂದು ಪಕ್ಷದಲ್ಲಿ ಇವರು ಇಂಥ ದೇಶಹಿತ ಕಾರ್ಯಕ್ಕಾಗಿಯೇ ಸಾವಿರಾರು ಮೈಲುಗಳ ಸಂಚಾರವನ್ನು ಮಾಡಿರುವರು. ಕಂಚಿ, ವಾಲಾಜೆ, ಚಂಗಲ್ಪಟ್ಟು ಮೊದಲಾದ ಕಡೆಗಳಿಗೆ ಹೋಗಿ ಅಲ್ಲೆಲ್ಲಾ ರಾಜೋಚಿತ ಸನ್ಮಾನಗಳನ್ನು ಪಡೆದು ಸಮಯೋಚಿತ ಭಾಷಣಗಳಿಂದ ಪ್ರಜೆಗಳಲ್ಲಿ ಪ್ರಬೋಧವನ್ನುಂಟುಮಾಡಿ ಬಂದರು. ಹುಬ್ಬಳ್ಳಿಯಲ್ಲಿ ಇವರಿಗೆ ನಡೆದ ಮರ್ಯಾದಾ ವೈಭವವೂ ಕೂಡ ಆ ಪಟ್ಟಣಕ್ಕೆ ಅಶ್ರುತದೃಷ್ಟಪೂರ್ವವಾಗಿದ್ದಿತು. ದೇಶಕಲ್ಯಾಣಕ್ಕಾಗಿ ವಿಶೇಷ ಪರಿತ್ಯಾಗವನ್ನು ಮಾಡಿಯೂ ಮಾಡುತ್ತಲೂ ಮಾಡುವವರಾಗಿಯೂ ಇರುವ ಈ ನರಪುಂಗವರಿಗೆ ತ್ಯಾಗರಾಜನೆಂಬ ಹೆಸರು ಸಂಪೂರ್ಣವಾಗಿ ಅನ್ವರ್ಥವಾಗಿರುತ್ತದೆ. ಇಂಥ ಪುರುಷಶ್ರೇಷ್ಠರೇ ದೇಶದ ಭಾಗ್ಯಸ್ವರೂಪರಾಗಿರುತ್ತಾರೆ. ಆದುಕಾರಣ ಚಿರಕಾಲ ಇಂಥವರ ಉಪಯೋಗವು ನಮ್ಮ ದೇಶಕ್ಕೆ ಒದಗುವಂತೆಯೂ ಇವರು ತಾವು ಬಿತ್ತಿದ ಫಲವನ್ನು ಪ್ರತ್ಯಕ್ಷತಃ ನೋಡಿ ಆನಂದಿಸುವಂತೆಯೂ, ಜಗದೀಶ್ವರನು ಇವರಿಗೆ ದೀರ್ಘಾಯುರಾರೋಗ್ಯವನ್ನು ಅನುಗ್ರಹಿಸಲೆಂದೂ, ಇವರಿಂದ ಉತ್ತರ ಕರ್ನಾಟಕದಲ್ಲಿ ನಡಲ್ಪಟ್ಟ ಪರಿಷತ್ಸಸಿಯು ಶಾಖೋಪಶಾಖೆಗಳಾಗಿ ವೃದ್ಧಿಗೊಂಡು ದೇಶೀಯರಿಗೆ ಬೇಗನೆ ಸತ್ಫಲಪ್ರದವಾಗಲೆಂದೂ ಕೋರುವೆವು.

ಪರಿಷತ್ತನ್ನು ಯಶಸ್ವಿಯಾಗಿ ನೆರವೇರಿಸುವಲ್ಲಿ ಅವಿಶ್ರಾಂತ ಶ್ರಮಪಟ್ಟ ಅದರ ಮುಖ್ಯ ಚಾಲಕರು ತಮ್ಮ ಸಹೋದರ ಪ್ರಜೆಗಳೆಲ್ಲರ ಕೃತಜ್ಞತೆಗೂ ಪಾತ್ರರು. ಆದರೆ ಸಭೆಯನ್ನು ಸಲಕ್ಷಣವಾಗಿ ೩ ದಿನ ನೆರವೇರಿಸಿಬಿಟ್ಟ ಮಾತ್ರದಿಂದಲೇ ಚರಿತಾರ್ಥವಾಗಲಿಲ್ಲ. ಸಭಾಧ್ಯಕ್ಷರೂ ಉಳಿದ ಮುಂದಾಳುಗಳೂ ಸಭೆಯಲ್ಲಿ ಮಾಡಿದ ಉಪದೇಶಗಳನ್ನು ಸರ್ವರೂ ಮನನಮಾಡಿ, ಆತ್ಮೋದ್ಧಾರಕ್ಕೆ ತಮ್ಮ ಉತ್ತರೋತ್ತರ ಕರ್ತವ್ಯವನ್ನು ಸಿದ್ಧಾಂತಪಡಿಸಿಕೊಂಡು, ಜಾಗರೂಕರಾಗಿ ನಡೆದು, ಸಭೋದ್ದೇಶವನ್ನು ಸಾರ್ಥಕಪಡಿಸುವಲ್ಲಿ ವ್ಯಗ್ರರೂ ಏಕಮತ್ಯವುಳ್ಳವರೂ ಆಗಬೇಕು. ತಮ್ಮ ನೆರೆಹೊರೆಯವರಲ್ಲೆಲ್ಲಾ ಅದೇ ತೆರದ ಕರ್ತವ್ಯಜಾಗರೂಕತೆಯನ್ನು ಉಂಟುಮಾಡುವಲ್ಲಿ ಆಲಸರಾಗಬಾರದು. ಹಾಗಾದರೇನೆಯೇ ಸಭೆಯನ್ನು ನೆರವೇರಿಸಲಿಕ್ಕೆ ಮಾಡಿದ ವ್ಯಯವೂ ಪಟ್ಟ ಶ್ರಮವೂ ಸಾರ್ಥಕವಾದೀತು.

ಕರ್ನಾಟಕ ಬ್ರಾಹ್ಮಣೇತರ ಪರಿಷತ್ತು, ಹುಬ್ಬಳ್ಳಿ.

(ನಮ್ಮ ಸ್ವಂತ ವಿಲೇಖಕರಿಂದ.)

ಸಭಾಮಂಟಪವು.—ಹುಬ್ಬಳ್ಳಿಯ ಮೂರು ಸಾವಿರ ಮಠದ ಕಾರ್ಟ ಪ್ರೆಸ್ ಕಟ್ಟಡದ ವಿಶಾಲವಾದ ಆವರಣದಲ್ಲಿ ಬಲು ದೊಡ್ಡದಾದ ಮಂಟಪವು ಹಾಕಲ್ಪಟ್ಟು ನಾನಾ ಬಗೆಯಿಂದ ಶೃಂಗರಿಸಲ್ಪಟ್ಟಿದ್ದಿತು. ಮಂಟಪದ ಮಧ್ಯಭಾಗದಲ್ಲಿ ಎತ್ತರವಾದ ಜಗತಿಯು ಹಾಕಲ್ಪಟ್ಟಿದ್ದು ಅಧ್ಯಕ್ಷರೂ ಸನ್ಮಾನನೀಯರೂ ಕುಳಿತುಕೊಳ್ಳಲು ಉಚಿತಾಸನಗಳು ಏರ್ಪಡಿಸಲ್ಪಟ್ಟಿದ್ದುವು. ಜಗತಿಯ ಕೆಳಭಾಗದಲ್ಲಿ ತ್ರಿಕೋಣಾಕಾರವಾಗಿ ವೃತ್ತಪತ್ರಿಕೆಗಳ ವಿಲೇಖಕರುಗಳಿಗೂ ಪ್ರತಿನಿಧಿಗಳಿಗೂ ಪ್ರೇಕ್ಷಕರುಗಳಿಗೂ ಆಸನಗಳು ಹಾಕಲ್ಪಟ್ಟಿದ್ದುವು. ರೈಲ್ವೆ ಸ್ಟೇಷನ್ನಿನಿಂದ ಮಂಟಪದ ವರೆಗೂ ಮಾರ್ಗದಲ್ಲಿ ಅಲ್ಲಲ್ಲಿಗೆ ತೋರಣಗಳು ಕಟ್ಟಲ್ಪಟ್ಟು "ಬ್ರಾಹ್ಮಣೇತರ ಪರಿಷತ್ತು ಜಯಶೀಲವಾಗಲಿ" ಎಂದು ಬರೆಯಲ್ಪಟ್ಟಿದ್ದಿತು.

ಭೋಜನದೇರ್ಪಾಟು.—ಸಭಾಮಂಟಪದ ಮುಂಗಡೆಯ ಕಟ್ಟಡದಲ್ಲಿ ಲಿಂಗವಂತರು, ರಡ್ಡಿಗಳು, ವೈಶ್ಯರು, ಮೊದಲಾದವರ ಭೋಜನಕ್ಕೂ ಅಲ್ಪಾಹಾರಕ್ಕೂ ಬೇರೆ ಬೇರೆ ಸ್ಥಳಗಳು ಕಲ್ಪಿಸಲ್ಪಟ್ಟಿದ್ದು ಊಟದ ಸಕಲ ಸಾಮಗ್ರಿಗಳೂ ಸಿದ್ಧಗೊಳಿಸಲ್ಪಟ್ಟಿದ್ದು ಬಂದ್ಯ ಜನರನ್ನು ಸತ್ಕರಿಸಲು ಬಹಳ ಉತ್ಸಾಹಶಾಲಿಗಳೂ, ಶ್ರದ್ಧಾಳುಗಳೂ ಆದವರು ನಿಯಮಿಸಲ್ಪಟ್ಟಿದ್ದರು. ಇದಲ್ಲದೆ ಊರಿನ ಬೇರೆಕಡೆ ಅಧ್ಯಕ್ಷರು ಮೊದಲಾದವರುಗಳಿಗೆ ಬಿಡಾರಗಳು ಸಿದ್ಧಗೊಳಿಸಲ್ಪಟ್ಟಿದ್ದುವು.

ಸ್ವಯಂಸೇವಕರು (ವಾಲಂಟಿಯರು)ಗಳು.—ರೈಲ್ವೆ ಬಂಡಿಗಳಲ್ಲಿ ಬಂದಂತಹ ಪ್ರತಿನಿಧಿಗಳು ಪ್ರೇಕ್ಷಕರು ಮೊದಲಾದವರನ್ನು ಸ್ಟೇಷನ್ನಿನಲ್ಲಿ ಇದಿರ್ಗೊಂಡು ಅವರುಗಳನ್ನು ಬಂಡಿಗಳಲ್ಲಿ ಕುಳ್ಳಿರಿಸಿ ಬಿಡಾರಗಳಿಗೆ ಕರೆದುಕೊಂಡು ಹೋಗಿ ಬಿಟ್ಟು ಅವರುಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳಲೂ, ಸಭಾಮಂದಿರದಲ್ಲಿ ಪ್ರತಿನಿಧಿ ಪ್ರೇಕ್ಷಕ ಮೊದಲಾದವರುಗಳನ್ನು ಅವರವರ ಸ್ಥಾನಗಳಲ್ಲಿ ಕುಳ್ಳಿರಿಸಿ ಗದ್ದಲವಾಗದಂತೆ ನೋಡಿಕೊಳ್ಳಲೂ ವ್ಯಾಪಾರಿ ವರ್ಗಕ್ಕೆ ಸೇರಿದ ೨೦೦ ಜನ ತರುಣರು ಡಾಕ್ಟರ್ ಎಸ್. ಎಂ. ಹಿರೇಮಠ (ಇವರಾದರೂ ತರುಣರೇ) ಇವರ ಯಾಜಮಾನ್ಯದಲ್ಲಿ ಸ್ವಯಂ ಸೇವಕರುಗಳಾಗಿದ್ದರು.

ಪರಸ್ಥಳಿಕರು.—ಬೊಂಬಾಯಿ, ಪೂನಾ, ಸತಾರ, ಬೆಳಗಾಂ, ನಿಪ್ಪಾಣಿ, ಧಾರವಾಡ, ಗದಗ, ಬಳ್ಳಾರಿ, ಅಥಣಿ, ಬಾಗಲಕೋಟೆ, ಬಿಜಾಪುರ, ಸೊಲ್ಲಾಪುರ, ರಾಯಿಚೂರು, ಗುಲ್ಬರ್ಗ, ಬ್ಯಾಡಗಿ, ಹಾವೇರಿ, ರಾಣಿಬೆನ್ನೂರು, ದಾವಣಗೆರೆ, ಮೊಳಕಾಲ್ಮೂರು, ಬೆಂಗಳೂರು, ಮೈಸೂರು ಮೊದಲಾದ ಸ್ಥಳಗಳಿಂದ ಸಾವಿರಾರುಗಟ್ಟಲೆ ತಾ|| ೨೪ ರಿಂದ ರೈಲು ಬಂಡಿಗಳಲ್ಲಿ ಕಿಕ್ಕಿರಿದು ಬರುತ್ತಿದ್ದರು. ಹೀಗೆ ತಂಡತಂಡವಾಗಿ ಜನರು ಬರುತ್ತಿದ್ದುದನ್ನು ದಾರಿಯುದ್ದಕ್ಕೂ ರೈಲ್ವೆ ಸ್ಟೇಷನ್ನುಗಳಲ್ಲಿ ಬ್ರಾಹ್ಮಣಜನರು ನೋಡಿ ದಿಗ್ಭ್ರಾಂತರಾದರು; ಹಾಗೂ ತಮ್ಮ ಅಸೂಯೆಯನ್ನು ಮುಖಭಾವದಿಂದ ವ್ಯಕ್ತಪಡಿಸುತ್ತಿದ್ದರು.

ಅಧ್ಯಕ್ಷರ ಆಗಮನ.—ಸರ್ ಪಿ. ತ್ಯಾಗರಾಯಸೆಟ್ಟಿ, ಬಿ.ಎ., ಕೆಟಿ. ಯವರು ತಮ್ಮ ಪುತ್ರರು ಮತ್ತು ಸ್ನೇಹಿತರುಗಳೊಡನೆ ತಾ|| ೨೪ರ ರಾತ್ರಿ ಪೂನಾ ಮೇಲು ಬಂಡಿಯಲ್ಲಿ ಬೆಂಗಳೂರು ದಂಡಿನಿಂದ ಹೊರಟು ದಾರಿಯುದ್ದಕ್ಕೂ ದೊಡ್ಡದೊಡ್ಡ ಸ್ಟೇಷನ್ನುಗಳಲ್ಲಿ ಬ್ರಾಹ್ಮಣೇತರ ದೊಡ್ಡ ಮನುಷ್ಯರುಗಳಿಂದೊಪ್ಪಿಸಲ್ಪಟ್ಟ ಪುಷ್ಪಹಾರ ಗುಚ್ಛಗಳನ್ನೂ ತೋರಿಸಿದ ಮರ್ಯಾದೆಯನ್ನೂ ಸ್ವೀಕರಿಸಿ ತಾ|| ೨೫ರ ಮಧ್ಯಾಹ್ನ ೧೨ ಗಂಟೆಗೆ ಹುಬ್ಬಳ್ಳಿಯ ಸಿಲ್ದಾಣದಲ್ಲಿಳಿದರು. ಅಲ್ಲಿ ನಿರೀಕ್ಷಿಸಿಕೊಂಡಿದ್ದ ಸ್ವಾಗತ ಸಂಘದ ಮೆಂಬರುಗಳೂ ಸೆಕ್ರೆಟರಿಗಳೂ ಇದಿರ್ಗೊಂಡು ಪುಷ್ಪಹಾರ ಗುಚ್ಛವನ್ನೊಪ್ಪಿಸಿದ ನಂತರ ಮೆಂಬರುಗಳ ಪರಿಚಯ ಮಾಡಿಸಲ್ಪಟ್ಟು ಅಧ್ಯಕ್ಷರನ್ನೂ ಮಿತ್ರಮಂಡಲಿಯನ್ನೂ ಮೋಟಾರು ಮತ್ತು ಕುದುರೆ ಬಂಡಿಗಳಲ್ಲಿ ಕುಳ್ಳಿರಿಸಿ ಹುಬ್ಬಳ್ಳಿಯ ಮುಖ್ಯ ವಿಧಿಗಳಲ್ಲಿ ವಾದ್ಯ ವಿಶೇಷ ಸಮೇತ ಮೆರವಣಿಗೆಯನ್ನು ಮಾಡಿದರು. ದಾರಿಯುದ್ದಕ್ಕೂ ಜನರು ಮನೆಗಳ ಮುಂಗಡೆಯೂ ಮಾಡಿಗಳ ಮೇಲೂ ನಿಂತುಕೊಂಡು ಸರ್ ತ್ಯಾಗರಾಜರು ಬರುತಲೇ ತ್ಯಾಗರಾಜಕಿಜೈ ಎಂಬ ಜಯಧ್ವನಿಯನ್ನು ಮಾಡುತ ಅವರ ದರ್ಶನದಿಂದ ತಮ್ಮ ಸಂತೋಷವನ್ನು ಮುಖ ಮುದ್ರೆಯಿಂದಲೂ ಕರತಾಡನದಿಂದಲೂ ಪ್ರದರ್ಶಿಸುತ್ತಿದ್ದರು. ವಾಲಂಟಿಯರುಗಳು ಗದ್ದಲಕ್ಕೆ ಆಸ್ಪದವಿಲ್ಲದಂತೆ ಬಹಳ ದಕ್ಷತೆಯಿಂದ ಉತ್ಸವವನ್ನು ಸಾಂಗಗೊಳಿಸಿದರು. ಸರ್ ತ್ಯಾಗರಾಜರು ಉತ್ಸವವನ್ನು ಪೂರೈಸಿಕೊಂಡು ತನುಗಾಗಿ ಏರ್ಪಡಿಸಿದ್ದ ಬಿಡಾರವನ್ನು ತಲುಪುವ ಹೊತ್ತಿಗೆ ಮಧ್ಯಾಹ್ನ ೧ ಗಂಟೆಯ ಮೇಲಾಗಿದ್ದಿತು.

ಕೊಲ್ಲಾಪುರದ ಮಹಾರಾಜರ ಆಗಮನ.—ಕೊಲ್ಲಾಪುರದ ಶ್ರೀಮಾನ್ ಮಹಾರಾಜ ಶಾಹು ಛತ್ರಪತಿಯವರ ಸ್ವಾರಿಯು ಮಿತಪರಿವಾರದೊಡನೆ ತಾ|| ೨೫ರ ಮಧ್ಯಾಹ್ನ ೨|| ಗಂಟೆಯಲ್ಲಿ ಪೂನಾ ಮೇಲು ಬಂಡಿಯಲ್ಲಿ ಚಿತ್ತೈಸಿತು. ಮಹಾರಾಜರವರ ದರ್ಶನಾಪೇಕ್ಷಿಗಳಾಗಿ ಸಿಲ್ದಾಣದ ಒಳಗೂ ಹೊರಗೂ ಸ್ಥಳ ಪರಸ್ಥಳದ ಸಾವಿರಾರು ಜನರು ಕಿಕ್ಕಿರಿದು ನಿಂತಿದ್ದರು. ಮಹಾರಾಜರ ಸ್ವಾರಿಯು ಬಂಡಿಯಿಂದಿಳಿಯುತಲೆ ಬ್ಯಾಂಡ್ ವಾದ್ಯಗಳು ಭೋರ್ಗರೆದುವು. ಸಾಮಾಜಿಕ ಪರಿಷತ್ತಿನ ಸ್ವಾಗತ ಸಂಘದವರು ಶ್ರೀಯವರಿಗೆ ಪುಷ್ಪಹಾರ ಗುಚ್ಛಗಳನ್ನೊಪ್ಪಿಸಿ ಸಂಘದ ಮೆಂಬರುಗಳ ಮತ್ತು ಇತರ ದೊಡ್ಡ ಮನುಷ್ಯರ ಪರಿಚಯವನ್ನು ಮಾಡಿಸಿದ ಮೇಲೆ ಶ್ರೀಯವರು ಮೋಟಾರು ಬಂಡಿಯಲ್ಲಿ ಕುಳಿತು ಅವೂರಲ್ಲಿರುವ ತಮ್ಮ ಸ್ವಂತ ಬಂಗಲೆಗೆ ದಯಮಾಡಿಸಿದರು. ದಾರಿಯ ಇಕ್ಕೆಲದಲ್ಲೂ ಪ್ರೇಕ್ಷಕರು ಕಿಕ್ಕಿರಿದು ನಿಂತಿದ್ದು ಶಾಹುಛತ್ರಪತಿ ಮಹಾರಾಜಕಿಜೈ ಎಂಬ ಜಯಘೋಷವೂ ಕರತಾಡನವೂ ದಿಙ್ಮಂಡಲವನ್ನು ಭೇದಿಸಿದುವು.

ಮಹಾರಾಜರವರ ಮತ್ತು ಸರ್ ತ್ಯಾಗರಾಯಸೆಟ್ಟರ ಊರು ಮೆರವಣಿಗೆಯು.—ಶ್ರೀಮಾನ್ ಮಹಾರಾಜರವರ ಅಲ್ಪಾಹಾರ ಮತ್ತು ವಿಶ್ರಮಾನಂತರ ಶ್ರೀಯವರನ್ನೂ ಮತ್ತು ಸರ್ ಸೆಟ್ಟರನ್ನೂ ಮೋಟಾರು ಬಂಡಿಯಲ್ಲಿ ಕುಳ್ಳಿರಿಸಿ ಉತ್ಸವವು ಹೊರಡಿಸಲ್ಪಟ್ಟಿತು. ಮೋಟಾರು ಬಂಡಿಯ ಹಿಂದುಗಡೆ ಮಹಾರಾಜರವರ ಸೆಕ್ರೆಟರಿಯೂ ಪರಿವಾರದವರೂ, ಸೆಟ್ಟರ ಪುತ್ರರೂ ಮಿತ್ರರೂ ಕುಳಿತಿರುವ ಕುದುರೆಯ ಬಂಡಿಗಳೂ ಸಾಲಾಗಿ ಬರುತ್ತಿದ್ದುವು. ಮುಂದುಗಡೆ ಸ್ವಾಗತಸಂಘದವರೂ, ಪುರಪ್ರಮುಖರೂ, ಪ್ರತಿನಿಧಿಗಳೂ ಪ್ರೇಕ್ಷರುಗಳೂ ಸೇರಿ ೪೦-೫೦ ಸಾವಿರದ ಮೇಲೆಯೇ ಜನರು ಗುಂಪುಕೂಡಿ ನಡೆಯುತ್ತಿದ್ದರು. ಮನೆಗಳ ಮಾಡಗಳ ಮೇಲೂ ಮಾರ್ಗದ ಇಕ್ಕೆಲದಲ್ಲೂ ಗಂಡುಸರೂ ಹೆಂಗುಸರೂ ಮಕ್ಕಳೂ ಕಿಕ್ಕಿರಿದು ನಿಂತುಕೊಂಡು "ಶಾಹು ಛತ್ರಪತಿ ಮಹಾರಾಜಕಿಜೈ, ತ್ಯಾಗರಾಜಕಿಜೈ" ಎಂದು ಮಾಡುತ್ತಿದ್ದ ಜಯಘೋಷವು ದಿಙ್ಮಂಡಲವನ್ನು ವ್ಯಾಪಿಸಿ ಜನರ ಕಿವಿಗಳನ್ನು ಕಿವುಡುಮಾಡುತ್ತಿದ್ದುವು. ಅಲ್ಲಲ್ಲಿಗೆ ಮಹಾಶಯರುಗಳ ಮೇಲೆ ಪುಷ್ಪವೃಷ್ಟಿಯು ಕರೆಯಲ್ಪಡುತಿದ್ದಿತು. ೬೦-೭೦ ವರ್ಷದ ವೃದ್ಧರುಗಳು ಇಂಥ ಮಹೋತ್ಸವವು ಇಷ್ಟು ನಿರ್ವಿಘ್ನವಾಗಿಯೂ, ವೈಭವದಿಂದಲೂ ಎಂದೂ ಆಗಿರಲಿಲ್ಲವೆಂದು ಹೇಳಿಕೊಂಡು ಸಂತೋಷಪಡುತ್ತಿದ್ದುದಲ್ಲದೆ ಪೂನಾ, ಬೊಂಬಾಯಿ, ಮದ್ರಾಸು ಮೊದಲಾಗಿ ದೊಡ್ಡ ಪಟ್ಟಣಗಳಿಂದ ಬಂದಿದ್ದ ಪ್ರತಿನಿಧಿಗಳು ವೈಸ್‌ರಾಯರ ಮತ್ತು ಯುವರಾಜರ ಮೆರವಣಿಗೆಯು ಸಹ ಇಷ್ಟು ವೈಭವದಿಂದ ನಡೆದಿಲ್ಲವೆಂದು ಹೇಳುತ ಆನಂದಪರವಶರಾಗಿದ್ದರು. ನೆಲದಮೇಲಿ ಇರುವೆಗಳು ಸಹ ತಿರುಗಾಡಲು ಸ್ಥಳವಿಲ್ಲದಂತೆ ಜನರ ಸಮ್ಮರ್ದವಿದ್ದುದರಿಂದ ಯಾರಿಗೆ ಯಾವ ಅಪಾಯವು ಸಂಭವಿಸುವುದೋ ಎಂಬ ಭಯವು ತೋರಿದ್ದಿತಾದರೂ ಸ್ವಯಂ ಸೇವಕರುಗಳು ಬಹಳ ವಿಚಕ್ಷಣೆಯಿಂದಲೂ ಎಚ್ಚರಿಕೆಯಿಂದಲೂ ಸಾಹಸದಿಂದಲೂ ಗದ್ದಲಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳುತಲಿದ್ದುದರಿಂದ ಯಾವುದೊಂದು ಅಪಾಯಕ್ಕೂ ಅವಕಾಶವಾಗಲಿಲ್ಲವು. ಮೆರವಣಿಗೆಯು ಬಂಗಲೆಯಿಂದ ೩|| ಗಂಟೆಯಲ್ಲಿ ಹೊರಟುದು ಸಭಾಮಂಟಪದ ಹತ್ತಿರಕ್ಕೆ ಬರುವಾಗ್ಗೆ ೫ ಗಂಟೆಯಾಗಿದ್ದಿತು. ಅಲ್ಲಿ ಸರ್ ಸೆಟ್ಟರು ಬಂಡಿಯಿಂದಿಳಿದು ಸಭಾಮಂದಿರಕ್ಕೆ ದಯಮಾಡಿಸಿದರು. ಅನಂತರ ಮಹಾರಾಜರ ಸ್ವಾರಿಯು ಉತ್ಸವದೊಡನೆ ತಮ್ಮ ಬಂಗಲೆಗೆ ಚಿತ್ತೈಸಿತು. ಮಧ್ಯಾಹ್ನದಿಂದ ಮಳೆಯು ಬಹಳವಾಗಿ ಭಯಪಡಿಸುತ್ತಿದ್ದುದು ದೈವಾನುಗ್ರಹದಿಂದ ಉತ್ಸವವು ಮುಗಿಯುವವರೆಗೂ ಜಾರದೆ ತಡೆದುದರಿಂದ "ಬ್ರಾಹ್ಮಣೇತರರು ತಮ್ಮ ಆತ್ಮೋದ್ಧಾರಕ್ಕಾಗಿ ಮಾಡುವ ಕಾರ್ಯದಲ್ಲಿ ಪರಮೇಶ್ವರನು ಸಹಾಯಕನಾಗಿರುವನೆಂಬುದಕ್ಕೆ ಇದು ದೃಷ್ಟಾಂತವೆಂದು" ನೆರೆದಿದ್ದ ಸಾವಿರಾರು ಜನರೆಲ್ಲರೂ ಅಂದುಕೊಂಡು ಸಂತೋಷಮಗ್ನರಾಗಿದ್ದರು.

ಸಭಾರಂಭವು.—ಸರ್ ತ್ಯಾಗರಾಜರು ಉತ್ಸವದಿಂದ ಸಭಾಮಂದಿರದ ದ್ವಾರಕ್ಕೆ ದಯಮಾಡುತ್ತಲೆ ವಾದ್ಯಗಳು ಭೋರ್ಗರೆದುವು; ಸ್ವಾಗತಸಂಘಾಧ್ಯಕ್ಷರೂ, ಸೆಕ್ರೆಟರಿಗಳೂ, ಸದಸ್ಯರುಗಳೂ ದ್ವಾರದಲ್ಲಿದಿರ್ಗೊಂಡು ಮರ್ಯಾದಿಸಿ ಮಂಟಪದೊಳಕ್ಕೆ ಕರೆದುಕೊಂಡು ಬಂದು ಜಗತಿಯ ಮೇಲೇರ್ಪಡಿಸಿದ್ದ ಆಸನದಲ್ಲಿ ಕುಳ್ಳಿರಿಸಿದರು. ಸಭೆಯಲ್ಲಿ ನೆರೆದಿದ್ದ ೪-೫ ಸಹಸ್ರ ಜನರೆಲ್ಲರೂ ಎದ್ದುನಿಂತು ಸರ್ ತ್ಯಾಗರಾಜಕಿಜೈ ಎಂದು ಪದೇಪದೇ ಘೋಷಮಾಡುತ್ತಿದ್ದರು. ಸ್ವಾಗತಸಂಘಾಧ್ಯಕ್ಷರಾದ ಮ|| ಸಿದ್ಧರಾಮಪ್ಪ ಪಾವಟೆ ಬಿ. ಎ., ಎಲ್ ಎಲ್. ಬಿ., ಯವರು ಜಗತಿಯ ಮುಂಗಡೆ ಉಪನ್ಯಾಸಕರಿಗಾಗಿ ಏರ್ಪಡಿಸಿದ್ದ ಪೀಠದಮೇಲೆ ನಿಂತು ಅಧ್ಯಕ್ಷರ ಸ್ವಾಗತಪರ ಭಾಷಣವನ್ನು ಕನ್ನಡದಲ್ಲಿ ಸುವಾಣಿಯಿಂದ ಮಾಡಿದರು. ಅನಂತರ ಮ|| ಎಸ್. ಕಂಬಳಿ ವಕೀಲರು ಸರ್ ತ್ಯಾಗರಾಜಸೆಟ್ಟರು ಅಧ್ಯಕ್ಷಸ್ಥಾನವನ್ನಲಂಕರಿಸಬೇಕೆಂದು ಸೂಚನೆ ಕೊಡುವಲ್ಲಿ ಸರ್ ಸೆಟ್ಟರು ಬ್ರಾಹ್ಮಣೇತರರ ಆತ್ಮೋದ್ಧಾರಕಾಗಿ ತಮ್ಮ ತನುಮನ ಧನವನ್ನು ಸೂರೆಕೊಟ್ಟು ಹಗಲೂ ಇರುಳೂ ಅವಿಶ್ರಾಂತಶ್ರಮಪಟ್ಟು ಮಾಡುತ್ತಿರುವ ಸೇವೆಯನ್ನು ಸಭಿಕರ ಮನದಟ್ಟಾಗುವಂತೆ ಬಹಳ ಕಳಕಳಿಯಿಂದ ತಿಳಿಸಿದರು. ಪ್ರೊಫೆಸರ್ ಲಟ್ಟೆ ಎಂ. ಎ. ಯವರು ಮರಾಠಿ ಭಾಷೆಯಲ್ಲಿ ಬಹು ಗಂಭೀರವಾಗಿಯೂ ಉತ್ಸಾಹಪೂರಿತವಾಯೂ ಪ್ರಸ್ತಾಪಿಸಿ ಅನುಮೋದನವನ್ನು ಕೊಟ್ಟರು. ಅನಂತರ ಮ||ಮುದಿರಡ್ಡಿಯವರು ಹಾಸ್ಯರಸಪೂರಿತವಾದ ಭಾಷಣವನ್ನು ಮಾಡಿ ಪುಷ್ಟೀಕರಿಸಿದರು. ಅನಂತರ ಸಭಿಕರು ತಮ್ಮ ಸಮ್ಮತಿಯನ್ನು ಕರತಾಡನಗಳ ಮೂಲಕ ತಿಳಿಸಿದರು. ಆಗ ಸರ್ ತ್ಯಾಗರಾಜರು ಸಭಿಕರ ಸಂತೋಷೋದ್ಗಾರುಗಳು ಆಗುತ್ತಿರುವಾಗ್ಗೆ ಅಧ್ಯಕ್ಷಪೀಠವನ್ನಲಂಕರಿಸಿದರು. ಮ|| ಆನೆಗುಂದಿಯವರು ಅಧ್ಯಕ್ಷರ ಕೊರಳಿಗೆ ಪುಷ್ಪಮಾಲಿಕೆಯನ್ನು ಹಾಕಿದಮೇಲೆ ಅಧ್ಯಕ್ಷರು ಎದ್ದುನಿಂತು ಬ್ರಾಹ್ಮಣೇತರ ಜನಾಂಗಕ್ಕೆ ತಾರಕೋಪದೇಶರೂಪವಾದ ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಕೊಂಚ ಓದಿದ ಮೇಲೆ ಉಳಿದುದನ್ನು ಮದ್ರಾಸ್ ಹೈಕೋರ್ಟು ವಕೀಲರಾದ ಮತ್ತು ಡಾಕ್ಟರ್ ನಾಯರ್‌ರವರ ಕೂಡ ಸೀಮೆಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಸಂಪಾದಿಸುವುದಕ್ಕಾಗಿ ಸೀಮೆಗೆ ಹೋಗಿದ್ದ ಮ|| ರಾಮಸ್ವಾಮಿ ಮೊದಲಿಯಾರ್ ಬಿ. ಎ., ಬಿ. ಎಲ್., ರವರು ಓದಿಹೇಳಿದರು. ಈ ಭಾಷಣದ ಸ್ವಾರಸ್ಯವನ್ನು ತಿಳಿದು ಸಭಿಕರು ಪದೇ ಪದೇ ಕರತಾಡನಗಳನ್ನು ಮಾಡುವುದರ ಮೂಲಕ ತಮ್ಮ ಆನಂದವನ್ನು ಪ್ರದರ್ಶಿಸುತ್ತಿದ್ದರು. ಈ ಭಾಷಣದ ಕನ್ನಡ ಪ್ರತಿಯು ಮ|| ಸಿದ್ಧರಾಮಪ್ಪ ಪಾವಟೆಯವರಿಂದ ಬಹು ಲಲಿತವಾಗಿ ಓದಲ್ಪಟ್ಟಿತು. ಅನಂತರ ವಿಷಯನಿಯಾಮಕ ಸಭೆಯೂ ಅದರ ಮೆಂಬರುಗಳೂ ಗೊತ್ತುಮಾಡಲ್ಪಟ್ಟು ಸಭೆಯು ಮಾರನೆ ಬೆಳಗ್ಗೆ ಕೂಡುವುದಾಗಿ ತಿಳುಹಲ್ಪಟ್ಟು ವಿಸರ್ಜಿಸಲ್ಪಟ್ಟಿತು. ಅಷ್ಟು ಹೊತ್ತಿಗೆ ರಾತ್ರಿ ೯|| ಗಂಟೆಯಾಗಿದ್ದಿತು.

ಸಭೆಗೆ ಆಗಮಿಸಿದ್ದ ಪ್ರಮುಖರು—ಜುನಂಪಟ್ ಜಮೀನ್ದಾರರು, ಆನರಬಲ್ ಮ|| ವಿಜಯರಾಘವ ಮೊದಲಿಯಾರರು, ಮ|| ಜಂಬುಲಿಂಗಮೊದಲಿಯಾರರು, ಪ್ರೊಫೆಸರ್ ಲಟ್ಟೆ ಎಂ. ಎ. ಯವರು, ಮ|| ಪಂಡಿತಪ್ಪ ಚಿಕ್ಕೋಡಿ, ಮ|| ಜಾಧವರಾವ್, ಮ|| ಶಿವಮೂರ್ತಿಸ್ವಾಮಿ ಕಾನಾಬರ್ಗಿ ಮಠ ಇವರು ಮೊದಲಾದವರು ಬೆಳಗಾವಿನಿಂದಲೂ, ರಾವ್‌ಸಾಹೇಬ್ ಶಾಂತವೀರಪ್ಪಣ್ಣ ಮೆಣಸಿನಕಾಯಿಯವರು, ಮ|| ಮೂಗಪ್ಪಣ್ಣ ಸವದತ್ತಿಯವರು, ಮ|| ಗದಗಯ್ಯ ಹೊನ್ನಾಪುರಮಠ ಇವರು ಮೊದಲಾದವರು ಧಾರವಾಡದಿಂದಲೂ, ಮ|| ಮಾಸ್ತಿ ಮೊದಲಾದವರು ಗದಗಿನಿಂದಲೂ, ಮ|| ಸಿಂದಗಿ ಬಸಪ್ಪನವರು ಮೊದಲಾದವರು ಬಳ್ಳಾರಿಯಿಂದಲೂ, ಟಿ. ಎಂ. ಷಡಕ್ಷರಪ್ಪಯ್ಯನವರು ಮೈಸೂರು ಮಠದ ಚನ್ನವೀರಪ್ಪಯ್ಯನವರು ಮತ್ತೊಬ್ಬ ವೈಶ್ಯದೊಡ್ಡಮನುಷ್ಯರು ದಾವಣಗೆರೆಯಿಂದಲೂ, ಒಬ್ಬ ದೇವಾಂಗದ ದೊಡ್ಡಮನುಷ್ಯರು ಮೊಳಕಾಲ್ಮೂರುವಿನಿಂದಲೂ, ಪ್ರಜಾಮಿತ್ರಮಂಡಲಿ ಅಧ್ಯಕ್ಷರಾದ ರಾವ್‌ಸಾಹೇಬ್ ಚನ್ನಯ್ಯನವರು, ಸೆಕ್ರೆಟರಿಯವರಾದ ಮ|| ಜಿ. ಪರಮಶಿವಯ್ಯ, ಬಿ. ಎ. ಎಲ್ ಎಲ್. ಬಿ. ರವರು, ಮೆಂಬರುಗಳಾದ ಮ|| ಪಿ. ಎಂ. ಬಸಪ್ಪನವರು, ಮ|| ಟಿ. ರಾಜಪ್ಪನವರು ಮತ್ತು ಕೆಲ ದೇವಾಂಗದ ದೊಡ್ಡ ಮನುಷ್ಯರುಗಳು ಬೆಂಗಳೂರಿನಿಂದಲೂ ಬಂದಿದ್ದರಲ್ಲದೆ ಸೊಲ್ಲಾಪುರ, ಬಾಗಲಕೋಟೆ, ಬಿಜಾಪುರ, ರಾಯಚೂರು, ಗದ್ವಾಲ ಮೊದಲಾದ ಸ್ಥಳಗಳಿಂದಲೂ ಬೊಂಬಾಯಿ ಪೂನಾ ಪಟ್ಟಣಗಳಿಂದಲೂ ಜೈನ, ಮರಾಟ ವೈಶ್ಯ, ರಡ್ಡಿ, ಲಿಂಗಾಯಿತ ದೊಡ್ಡ ಮನುಷ್ಯರುಗಳನೇಕರು ಪ್ರತಿನಿಧಿಗಳಾಗಿ ದಯಮಾಡಿಸಿದ್ದರು.

೨ನೆಯ ದಿವಸದ ಸಭೆ.

ತಾ|| ೨೬ ರ ಬೆಳಗ್ಗೆ ೮|| ಗಂಟೆಗೆ ಸಭಾರಂಭವಾಗಿ ನಿರ್ಧಾರಗಳ ಸೂಚನ, ಅನುಮೋದನ ಮತ್ತು ಪುಷ್ಟೀಕರಣ ಭಾಷಣಗಳು ಮ|| ಗಳಾದ ಕಂಬಳಿ, ಬಿಳೆಯಂಗಡಿ, ಆನೆಗುಂದಿ, ಮುದಿರಡ್ಡಿ, ನಲವಡಿ ಪಾವಟೆ, ಪ್ರೊಫೆಸರ್ ಲಟ್ಟೆ ಮೊದಲಾದವರುಗಳಿಂದ ಯುಕ್ತಿಯುಕ್ತವಾಗಿಯೂ, ಆವೇಶಪೂರಿತವಾಗಿಯೂ ಕಾಲೋಚಿತವಾದ ನಿದರ್ಶನಗಳಿಂದ ಮಾಡಲ್ಪಟ್ಟುವು. ಶ್ರೋತೃಗಳು ಭಾಷಣಗಳಿಂದ ತಮಗುಂಟಾದ ಆನಂದವನ್ನು ಕರತಾಡನಗಳಿಂದಲೂ ಕ್ರೋಧವನ್ನು "ನಾಚುಗೆಕೇಡು" ಎಂಬ ಶಬ್ದೋಚ್ಚಾರಣೆಯಿಂದಲೂ ಪದೇಪದೇ ಹೊರಪಡಿಸುತ್ತಿದ್ದರು. ಈ ರೀತಿ ೧೧ ಗಂಟೆಯವರೆಗೆ ನಡೆದು ಭೋಜನಕ್ಕಾಗಿ ೨ ಗಂಟೆಯವರೆಗೆ ವಿರಮಿಸಲ್ಪಟ್ಟಿದ್ದು, ಪುನಃ ೨|| ಗಂಟೆಗೆ ಸಭೆ ಕೂಡಿ ಬೇರೆ ನಿರ್ಧಾರಗಳೂ ತತ್ಸಂಬಧವಾದ ಭಾಷಣಗಳೂ ಮಾಡಲ್ಪಟ್ಟುವು. ಸಾಯಂಕಾಲ ೪|| ಗಂಟೆ ಸಮಯಕ್ಕೆ ಶ್ರೀಮನ್ ಕೊಲ್ಲಾಪುರ ಮಹಾರಾಜರ ಸ್ವಾರಿಯು ತಮ್ಮ ಸೆಕ್ರೆಟರಿಯವರೊಡನೆ ಸಭೆಗೆ ಚಿತ್ತೈಸಿತು. ಆಗ ಮ|| ಕಂಬಳಿ ಮೊದಲಾದ ದೊಡ್ಡಮನುಷ್ಯರು ಮಂದಿರದ ಬಳಿ ವಾದ್ಯಘೋಷದೊಡನೆ ಶ್ರೀಯವರನ್ನಿದಿರ್ಗೊಂಡು ಮರ್ಯಾದಿಸಿ ಒಳಕ್ಕೆ ಕರೆದುಕೊಂಡುಬಂದರು. ಆಗ ಸಭಿಕರೆಲ್ಲರೂ ಎದ್ದುನಿಂತು ಶಾಹುಛತ್ರಪತಿ ಮಹಾರಾಜಕಿ ಜೈ. ಎಂಬ ಜಯಘೋಷದಿಂದ ಕರತಾಡನಗಳನ್ನು ಮಾಡುತ್ತಿರುವಲ್ಲಿ ಶ್ರೀಯವರು ಅಧ್ಯಕ್ಷರ ಎಡಪಾರ್ಶ್ವದಲ್ಲಿ ಉಚಿತಾಸನಾಸೀನರಾದರು. ಆಗಲೂ ಕೆಲ ನಿರ್ಧಾರಗಳನ್ನು ಮಾಡುವಾಗ್ಗೆ ಮ|| ಗಳಾದ ಕಂಬಳಿ, ರಾಮಸ್ವಾಮಿ ಮೊದಲಿಯಾರ್, ಪ್ರೊಫೆಸರ್ ಲಟ್ಟೆ, ಮುದಿರಡ್ಡಿ, ಬಿಳಿಯಂಗಡಿ, ಪಂಡಿತಪ್ಪ ಚಿಕ್ಕೋಡಿ ಇವರುಗಳು ನಿದರ್ಶನಪೂರ್ವಕವಾಗಿ ಶ್ರೋತೃಜನರ ಮನಸ್ಸಿನಲ್ಲಿ ನಾಟುವಂತೆ ಆವೇಶಪೂರಿತವಾದ ಭಾಷಣಗಳನ್ನು ಮಾಡಿದರು. ಅಷ್ಟುಹೊತ್ತಿಗೆ ೧|| ಗಂಟೆಯಾಗಲು ಮಹಾರಾಜರವರು ಸಭೆಯನ್ನು ಬಿಟ್ಟು ತಮ್ಮ ಬಿಡಾರಕ್ಕೆ ದಯಮಾಡಿಸಿದರು. ಅನಂತರ ಬ್ರಾಹ್ಮಣೇತರಪರವಾದ ವೃತ್ತಪತ್ರಿಕೆಗಳಿಲ್ಲದಿರುವುದರಿಂದ ತಮ್ಮ ಮನೋಭಿಪ್ರಾಯಗಳನ್ನು ಹೊರಗೆ ಹಾಕುವುದಕ್ಕೆ ಯತ್ನವಿಲ್ಲವಾಗಿದೆಯೆಂತಲೂ ಈಗಿರುವ ಬ್ರಾಹ್ಮಣರ ಪತ್ರಿಕೆಗಳು ಈ ಸಭೆಯು ನಡೆಯು

, ಇದಕ್ಕೆ ಕೊಲ್ಲಾಪುರದ ಮಹಾರಾಜರವರು ದ
ದಿಲ್ಲವೆಂದೂ ಮೃತ್ಯುಯೋಗದಲ್ಲಿ ಸಭೆಕೂಡುವ
ಸುತವಾಗುವುದೆಂದೂ, ಜಲಪ್ರಳಯವಾಗುವಂಥ
ದು ವಿಘಾತವಾಗುವುದೆಂದೂ ಮೊದಲಾಗಿ ಭವಿ
ದಿದ್ದುವೆಂತಲೂ ಇವುಗಳನ್ನು ಖಂಡಿಸಿ ನಿಜಸ್ಥಿತಿ
ಲು ಸ್ವಂತ ಪತ್ರವಿಲ್ಲದಿರುವುದರಿಂದ ಇಂಗ್ಲೀಷು,
, ಮರಾಠಿ ಭಾಷೆಗಳಲ್ಲಿ ವೃತ್ತಪತ್ರಿಕೆಗಳನ್ನು
ಜಾಯಿಂಟ್ ಸ್ಟಾಕ್ ಕಂಪೆನಿಯಿಂದ ಒಂದು
ಯವನ್ನಿಡುವುದಾವಶ್ಯಕವೆಂತಲೂ ಮರಾಠಿ ಕನ್ನ
ಭಾಷಣಗಳು ಮಾಡಲ್ಪಟ್ಟುವು. ಅಲ್ಲಿಗೆ ರಾತ್ರಿ
ಗಲು ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣ
ಸಂಘದವರ, ಪುರನಿವಾಸಿಗಳ ಆಭಾರವನ್ನು ಮಾ
ವಾಯ ಮ|| ನಲವಡಿ, ಕಂಬಳಿ, ಪ್ರ|| ಲಟ್ಟೆ,
ಸ್ವಾಮಿ, ಮುದಿರಡ್ಡಿ ಮೊದಲಾದವರು ಅಧ್ಯಕ್ಷರು
ಕಾರ್ಯಗಳನ್ನೆಲ್ಲಾ ಬಿಟ್ಟು ಬ್ರಾಹ್ಮಣೇತರರ ಆ
ಕಾರ್ಯದಲ್ಲಿ ಬದ್ಧಾದರರಾಗಿ ಅರ್ಥಶ್ರಮ, ದೇಹ
ಲಕ್ಷ್ಮಿಸದೆ ಇಷ್ಟು ದೂರ ಪ್ರಯಾಣಮಾಡಿ ಬಂ
ಲೋಕಾನುಭವಪೂರ್ಣವಾದ ಮಹೋಪದೇಶವನ್ನು
ದಕ್ಷತೆಯಿಂದಲೂ ವಿಚಕ್ಷಣೆಯಿಂದಲೂ ಸಭಾ
ಜಯಜಯವೆನಿಸಿದುದಕ್ಕಾಗಿ ಅನಂತ ವಂದನೆಗಳ
ಸಭಾಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಿಸುವ
ಟ್ಟಿ ಕೆಲಸಮಾಡಿದ ಸ್ಥಳಿಕ ಮಹಾಶಯರುಗಳ
ತಶ್ರಮದಿಂದ ಕೆಲಸಮಾಡಿದ ವಾಲಂಟಿಯರುಗ
ಗಳು ತಿಳುಹಲ್ಪಟ್ಟುವು. ಮುಂದಣ ವರ್ಷ ಬ್ರಾ
ಷತ್ತು ಬೆಳಗಾವಿನಲ್ಲಿ ನಡಿಸಲು ಪಂಡಿತಪ್ಪ ಚಿ
ರು ಆಮಂತ್ರಣವನ್ನು ಕೊಟ್ಟರು. ಇದಕ್ಕಾಗಿ ಸ
ಂದೋದ್ಗಾರವನ್ನು ಮಾಡಿದರು. ಅನಂತರ ಅಧ್ಯ
ರುಗೂ ಪುಷ್ಪಹಾರ ಗುಚ್ಛಗಳು ಸಮರ್ಪಿಸಲ್ಪಟ್ಟು
, ಕೊಲ್ಲಾಪುರದ ಮಹಾರಾಜರವರ ಮತ್ತು
ಜರ ಆಯುರಾರೋಗ್ಯವು ಬಯಸಲ್ಪಟ್ಟು ತ್ರಿ
ಷದಿಂದ ಸಭೆಯ ಕಾರ್ಯವು ಕೊನೆಗಂಡಿತು.

ಳದೇಶದ ವೃತ್ತಾಂತಗಳು.

ಟ್ಟ ಜಡ್ಜಿಗಳ ವರ್ಗಾವರ್ಗಿಯನ್ನು ಅನೇಕ ಪತ್ರಿ
ಸಿರುವುವು. ನಾವು ವಿಚಾರಮಾಡಿದುದರಲ್ಲಿ ಇ
ದವೆಂದು ಗೊತ್ತಾಯಿತು.
ದ ವ್ರಜೇಂದ್ರನಾಥಸೀಲ್‌ರವರು ನಮ್ಮ ವಿಶ್ವವಿ
ವೈಸ್ ಚಾನ್ಸಿಲರ್ ಕೆಲಸಕ್ಕೆ ನಿಯಮಿಸಿಕೊಳ್ಳ
ಇವರ ಸಂಬಳ ೩೦೦೦ ರೂ.
ಶ್ರೀಮನ್ಮಹಾರಾಜರವರ ಸಡ್ಡಕರಾದ ಗೊಂಡಾ
ದ ಯುವರಾಜರವರು ಬರುವ ವಾರದಲ್ಲಿ ರಾಜ
ಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.
ಯಲ್ಲಿ ಕರ್ನಾಟಕ ಪರಿಷತ್ತು ನಡೆದು ಮುಗಿದ
ಸಾಮಾಜಿಕ ಪರಿಷತ್ತು ಶ್ರೀಮಾನ್ ಕೊಲ್ಲಾಪುರದ
ಅಧ್ಯಕ್ಷತೆಯಲ್ಲಿ ನೆರೆದಿತು. ಮೊದಲಸಭೆಗಿಂತ
ನೆರೆದಿದ್ದ ಜನಸಂಖ್ಯೆಯು ಅಧಿಕವಾಗಿತ್ತು.
ನಲ್ಲಿ ದೊಡ್ಡಕಳ್ಳತನವನ್ನು ನಡೆಯಿಸಿ ಸಿಕ್ಕಿಬಿ
ದಾಸನೆಂಬುವವನ ಮಾತಿನ ಮೇಲೆ ಅವನ ಕ
ಕಳ್ಳರನ್ನೂ ಗೊತ್ತುಮಾಡುತ್ತೇವೆಂದು ದಿಲ್ಲಿಕಡೆಗೆ
ಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂ
ನರಸಿಂಹಶಾಸ್ತ್ರಿಗಳೂ ಅ|| ಸೂ|| ಮಿ|| ಸಿರಾಜು
ಸಹ ಇಲ್ಲಿ ಸಿಕ್ಕಿದ್ದ ಒಬ್ಬ ಕಳ್ಳನನ್ನೂ ಕಳೆದು
ಗಯ್ಯಾಗಿ ಬಂದರೆಂದು ಕೇಳುತ್ತೇವೆ. ನಮ್ಮ
ಜೆಗೆ ಒಳ್ಳೆ ಕೀರ್ತಿ ತಂದರು.

ವರ್ತಮಾನಸಂಗ್ರಹ.

ಆಡ್ರಿಯಾನೋಪಲ್ ಪಟ್ಟಣವನ್ನು ಹಿಡಿದು
ಸ್ವಲ್ಪರಲ್ಲೇ ಅಲೆಗ್ಸಾಂಡರ್ ರಾಜರು ಆ ಪಟ್ಟಣ
ಸುವವರಾಗಿದ್ದಾರೆ.
ಾಲಗಂಗಾಧರತಿಲಕರವರು ೮-೧೦ ದಿನಗಳಿಂದ
ಧಿಗೀಡಾಗಿ ಬೊಂಬಾಯಿ ಸರ್ದಾರ್ ಗೃಹದಲ್ಲಿ
ಯಲ್ಲಿರುವರೆಂದು ಸುದ್ದಿಬಂದಿದೆ.
ಮವರ ಸಾತ್ವಿಕನಿರೋಧದಿಂದ ಹಿಂದೆ ಎಷ್ಟೋ
ತು. ಈಗಣ ಅವರ ಸಹಾಯನಿರಾಕರಣ ಪದ್ಧತಿ
ಕರವಾಗಿದೆ. ಹಿಂದೆ ಸರ್ಕಾರದವರು ಸುಮ್ಮನಿ
ರುವುದಿಲ್ಲ. ಈ ವಿಷಯದಲ್ಲಿ ತಕ್ಕ ಪ್ರತಿಬಂಧ
ನ್ನು ಇಂಡ್ಯಾ ಸರ್ಕಾರದರು ತೆಗೆದುಕೊಳ್ಳುವ
ಕ್ಕಾವೂ ಸಹಾಯ ಮಾಡುವೆವು ಎಂದು ಸ್ಟೇಟ್
ರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ. ಗಾಂಧಿ
ಗಗೊಳ್ಳುವರೊ ?
ಯಿಯಲ್ಲಿ ಮುಲ್ಜಿಜೇತಾಬಜಾರ್ ಎಂಬಲ್ಲಿಯ
ಅಂಗಡಿಗಳು ಸುಟ್ಟುಹೋದುವು. ಒಂದು ದಿನವೆ
ರವಾಗಿ ಉರಿದಿತು. ಆರಿಸುವ ಪ್ರಯತ್ನದಲ್ಲಿ
ಂಡ ಮೂವರನ್ನು ಆಸ್ಪತ್ರೆಯಲ್ಲಿ ಹಾಕಿದ್ದಾರೆ.
ವಾದ ಬಟ್ಟೆಗಳ ನಷ್ಟ ಮಾತ್ರವೇ ಅಲ್ಲದೆ
ಕಬ್ಬಿಣದ ಪೆಟ್ಟಿಗೆಗಳೊಳಗೆ ಮಡಗಿದ್ದ ನಗಗ

ಳು ಕರೆನ್ಸಿನೋಟುಗಳೆಲ್ಲಾ ಸುಟ್ಟುಹೋದುದರಿಂದ ವಿಪರೀತ ನಷ್ಟವಾಗಿದೆ ಇದರಿಂದ ಮುಂದೆ ಬಟ್ಟೆಗಳ ಬೆಲೆಯು ಎಷ್ಟು ಹೆಚ್ಚುವುದೋ ಎಂಬ ಭೀತಿಯುಂಟಾಗಿದೆ.

ತುರ್ಕಿ ಪ್ರಭುತ್ವದವರು ಮಿತ್ರಮಂಡಲಿಯವರ ಸಂಧಿನಿಬಂಧನೆಗಳಿಗೆಲ್ಲಾ ಒಪ್ಪಿ ರುಜುಮಾಡಲು ಸಂಮತಿಸಿರುವರೆಂಬುದು ಖಂಡಿತವಾಯಿತು. ತುರ್ಕಿಯ ವೃತ್ತಪತ್ರಿಕೆಗಳೆಲ್ಲಾ ಏಕಕಂಠವಾಗಿ ಅದನ್ನೇ ಒಪ್ಪಿರುತ್ತವೆ. ಹೀಗಿರುವಾಗ ಇನ್ನು ಭರತಖಂಡದವರು ಕಾಲೀಫತ್ತಿಗೋಸ್ಕರ ಆಂದೋಳನ ನಡೆಯಿಸುವುದರಿಂದ ಫಲವೇನು? ಹಠದಿಂದ ಇನ್ನೇನಾದರೂ ಚಳವಳವನ್ನು ಮಾಡುವುದಾದರೆ ಅದು ತುರ್ಕಿ ಕ್ಷೇಮಾಭಿಮಾನಕ್ಕಲ್ಲದೆ ಆಂಗ್ಲರಮೇಲಣ ದ್ವೇಷಕ್ಕಾಗಿ ದೇಶದಲ್ಲಿ ಅಶಾಂತಿಯನ್ನು ಹುಟ್ಟಿಸುವ ಉದ್ದೇಶದಿಂದಲೇ ಮಾಡಲ್ಪಡುವುದೆಂದು ಸಿದ್ಧಾಂತಿಸಲು ಅವಕಾಶವಾಗುವುದು.

---

೮ ನೇ ಪುಟದಿಂದ ಮುಂದುವರಿದುದು.

೧೯೧೯ ನೆ ಇಸವಿಯ ಇಂಡಿಯಾ ಸರಕಾರದ ಕಾಯಿದೆ.

ಈ ೧೯೧೯ ನೇ ಇಸವಿಯ ಕಾಯಿದೆಯು ಈ ನಾಡಿನ ರಾಜಕೀಯ ಇತಿಹಾಸದಲ್ಲಿ ಒಂದು ಪ್ರಸಿದ್ಧವಾದ ಪ್ರಗತಿಯೆಂದು ಹೇಳಬೇಕು. ಪೂರ್ಣ ಜವಾಬದಾರ ರಾಜ್ಯ ಪದ್ಧತಿಯ ಪ್ರಾಪ್ತಿಗೆ ಈ ಸುಧಾರಣೆಗಳು ಮುಖ್ಯ ಸೋಪಾನವೆಂದು ಬ್ರಾಹ್ಮಣೇತರರು ಭಾವಿಸುವರು. ನಮ್ಮ ನಾಡಿನ ಸದ್ಯಸ್ಥಿತಿಯ ಮೇಲಿಂದ ಮತ್ತು ನಮ್ಮ ಜನಸಮೂಹವು ವಿದ್ಯೆಯಲ್ಲಿ ಹಿಂದುಳಿದಿರುವದರಮೇಲಿಂದ ನೋಡಲಾಗಿ, ಈಗಿನ ಸುಧಾರಣೆಗಳಗಿಂತ ಹೆಚ್ಚಿನ ಬದಲಾವಣೆಗಳಿಂದ ರಾಜ್ಯಕ್ಕೆ ಮುಖ್ಯವಾಗಿ ಜನ ಸಾಮಾನ್ಯರಿಗೆ ವಿಶೇಷ ಲಾಭವಾಗದೆ, ಕೆಲವು ವಿಶಿಷ್ಟ ಮತ್ತು ವಿರಳ ವರ್ಗದವರ ಕಯ್ಯಲ್ಲಿ ಅಧಿಕಾರವು ನಿಂತು, ಜನಸಾಮಾನ್ಯ ಹಿತದ ವಿರುದ್ಧ ಅದರ ದುರುಪಯೋಗವಾಗಿ ರಾಜಕೀಯ ಪುರೋಭಿವೃದ್ಧಿಗೆ ತಡೆಯಾಗುವದು. ವ್ಯಕ್ತಿಗಳಂತೆ ರಾಷ್ಟ್ರಗಳು ಕ್ರಮವಾಗಿ ಬೆಳೆಯುವವು. ಅವುಗಳಿಗೆ ಬಾಲ್ಯಾವಸ್ಥೆ, ತಾರುಣ್ಯಾವಸ್ಥೆ, ಯೌವನಾವಸ್ಥೆ ಮೊದಲಾದ ಅವಸ್ಥೆಗಳಿರುವವು. ಉಳಿದ ಎಲ್ಲ ಸಮಾಜಗಳಿಗಿಂತ ಯಾವದಾದರೊಂದೇ ಸಮಾಜವು ಮುಂದುವರಿದಿದ್ದರೆ ಅದು ಅನಾರೋಗ್ಯ ಲಕ್ಷಣವೆನಿಸುವದು. ನಮ್ಮ ಶರೀರಸ್ಥಿತಿಯಲ್ಲಿ ಆನೆಗಾಲು ಎಂಬ ರೋಗ ವಿಶೇಷವು ದೇಹದ ಬೆಳವಣಿಗೆಯ ಮತ್ತು ಆರೋಗ್ಯದ ಲಕ್ಷಣವಲ್ಲದಿರುವಂತೆ, ರಾಜನೀತಿಯಲ್ಲಿ ಸಹ ಒಂದು ವಿಶಿಷ್ಟ ಸಮಾಜದ ಪ್ರಗತಿಯು ಇಡೀ ರಾಷ್ಟ್ರದ ಪ್ರಗತಿಯಾಗಲಾರದು. ಏಕ ಪಕ್ಷೀಯವಾದೀ ಪ್ರಗತಿಯನ್ನು ನೋಡಿ, ರಾಜಕೀಯ ಸಂಸ್ಥೆಗಳ ಮತ್ತು ರಾಜಕೀಯ ಉತ್‌ಕ್ರಾಂತಿಜ್ಞಾನವುಳ್ಳವರು ಸಂತೋಷ ಪಡಲಾರರು. ನಮ್ಮ ಬ್ರಾಹ್ಮಣರಲ್ಲಿ ಅನೇಕರು ಈ ಸುಧಾರಣೆಗಳು ಅಪೂರ್ತಿಯುಳ್ಳವು, ಅಸಮಾಧಾನಕರ ವಾದವು, ಮತ್ತು ನಿರಾಶಾ ಜನಕವಾದವು ಎಂದು ತಿಳಿದು ದೇಶದ ಕ್ರಮಾನುಗತ ಅಭ್ಯುದಯಕ್ಕೆ ವಿಘ್ನ ತರುತ್ತ ತಮ್ಮ ಉಚ್ಚ ಸ್ಥಾನದಲ್ಲಿ ಕುಳಿತುಕೊಳ್ಳಲಿ. ಬ್ರಾಹ್ಮಣೇತರರಾದ ನಾವು ಮಾತ್ರ ಈ ಸುಧಾರಣೆಗಳನ್ನು ದೇಶಹಿತಕ್ಕಾಗಿ ಉಪಯೋಗಿಸಿ, ಬೇರೆಯವರಿಗೆ ಅಲ್ಲದಿದ್ದರೂ ನಮಗೆ ನಾವೇ ಈ ಜವಾಬದಾರ ರಾಜ್ಯಪದ್ಧತಿಯನ್ನು ನಡಿಸಲು ಯೋಗ್ಯರಿರುವದನ್ನು ಮನವರಿಕೆ ಮಾಡಿಕೊಳ್ಳಬೇಕು. ದೇಶದಲ್ಲಿಯ ಯಾವದೊಂದು ಸಮಾಜವು ಉಳಿದ ಸಮಾಜದವರನ್ನು ದೂರೀಕರಿಸುವದು ಯೋಗ್ಯವಲ್ಲಾದ್ದರಿಂದ ಸರ್ವ ಸಮಾಜಗಳಿಗೂ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತು; ಆದರೆ ಹಾಗೆ ಮಾಡದೆ ಭಿನ್ನ ಭಿನ್ನ ಸಮಾಜಗಳಿಗೆ ಯೋಗ್ಯ ಮತ್ತು ಸಾಕಷ್ಟು ಪ್ರಾತಿನಿಧ್ಯವನ್ನು ಕೊಡದ ಮೂಲಕ ಸುಧಾರಣೆಗಳು ಅಪೂರ್ತಿಯುಳ್ಳವಾಗಿವೆ. ಸುಧಾರಣೆಯ ಕಾಯಿದೆ ಯಶಸ್ವಿಯಾಗಬೇಕಾದರೆ, ಬ್ರಾಹ್ಮಣೇತರ ವರ್ಗದವರಿಗೆ ಸಾಕಷ್ಟು ಪ್ರಾತಿನಿಧ್ಯವು ದೊರೆಯಬೇಕಾದದ್ದು ಅವಶ್ಯವದೆ. ಈ ಮಹತ್ವದ ಮಾತಿನಲ್ಲಿ ನಮ್ಮ ಇಲಾಖೆಯ ಬ್ರಾಹ್ಮಣೇತರರಿಗಿಂತ ನಿಮಗೆ ಹೆಚ್ಚು ಕೆಡಕು ಉಂಟಾಗಿದೆ. ಹಿಂದೂ ಸಮಾಜದಲ್ಲಿ ಬ್ರಾಹ್ಮಣೇತರರು ನೂರಕ್ಕೆ ೯೫ ರಂತೆ ಇದ್ದು ಚುನಾವಣೆಯಿಂದ ಅವರಿಗೆ ನೂರಕ್ಕೆ ೯೫ ರಂತೆ ಸ್ಥಾನಗಳು ಬರಬೇಕಾಗುತ್ತಿದ್ದು, ಮರಾಟರ ಮತ್ತು ತತ್ಸಮ ಜಾತಿಯವರಿಗೆ ಕೂಡಿ ಒಟ್ಟು ೭ ಜಾಗೆಗಳು ಕಾದಿಟ್ಟುದು ಬಹಳ ಅನ್ಯಾಯದ ಸಂಗತಿಯು. ಆದರೂ ನಿಮ್ಮ ದೀರ್ಘಪ್ರಯತ್ನ ಸ್ವಾಭಿಮಾನ ಸಮಾಜ ಹಿತ ಮತ್ತು ರಾಷ್ಟ್ರಹಿತ ಮೊದಲಾದ ಮಂಗಲಕರವಾದ ಭಾವನೆಗಳ ನಿಮ್ಮ ಪಕ್ಷವು ನ್ಯಾಯವಾಗಿದ್ದರೂ ಸರಕಾರದವರು ಕೊಡದದ್ದನ್ನು ನೀವು ನಿಮ್ಮ ಸ್ವಂತ ಪ್ರಯತ್ನದಿಂದ ಮುಂದಿನ ಚುನಾವಣೆಯಲ್ಲಿ ನಿಮ್ಮದಾಗಿ ಮಾಡಿಕೊಳ್ಳುವಂತೆ ಈಗಿನಿಂದಲೇ ಸನ್ನದ್ಧರಾಗಬೇಕು.

ಬರುವ ಚುನಾವಣೆಗಳು.

ನವೀನ ನಿಯಮ ನಿರ್ಮಾಣ ಸಭೆಗಳ ಚುನಾವಣೆಗಳು ವಿಶೇಷ ಚಮತ್ಕಾರವುಳ್ಳವಾಗಿ ತೋರಹತ್ತಿವೆ. ನಮ್ಮ ಬ್ರಾಹ್ಮಣ ಮಿತ್ರರು ತಮ್ಮ ಕಾರ್ಯವನ್ನು ಸಾಧಿಸುವದಕ್ಕಾಗಿ ನ್ಯಾಯಾನ್ಯಾಯ ಸಾಧನೆಗಳ ಸಹಾಯವನ್ನವಲಂಬಿಸಿರುವರು. ಅಮೃತಸರದಲ್ಲಿ ನೆರೆದ ರಾಷ್ಟ್ರೀಯ ಸಭೆಯವರು ಸುಧಾರಣೆಗಳ ಬಗ್ಗೆ ಮಾಡಿದ ನಿರ್ಣಯವನ್ನು ಸತ್ಕರಿಸುವವರೇ ನಿಯಮ ನಿರ್ಮಾಣ (ಸಭೆ, ಲೆಜಿಸ್ಲೇಟಿವ್ ಅಸೆಂಬ್ಲಿ) ಕಾವುನ್ಸಿಲ್ ಆಫ ಸ್ಟೇಟ ಇವುಗಳಿಗೆ ಉಮೇದವಾರರಾಗಿ ನಿಲ್ಲಬೇಕು. ಅವರೇ ಆರಿಸಿ ಬರಬೇಕು. ಹೀಗೆಂದು ಸಾರುತ್ತಾರೆ. ಕಾಂಗ್ರೆಸ್ ಬಗ್ಗೆ, ಅದರ ಕಾರ್ಯಕ್ರಮದ ಬಗ್ಗೆ ಮತ್ತು ಅದರ ಸದ್ಯದ ನಿಕೃಷ್ಟ ಸ್ಥಿತಿಯ ಬಗ್ಗೆ ಮೊದಲೇ ಹೇಳಿದ್ದೇನೆ. ಇದರಿಂದ ನಿಮಗೆ ಗೊತ್ತಾಗುವದೇನಂದರೆ—ಈ ಚಹಾಲರ ಕಟ್ಟಿನಿಂದ ಕೇವಲ ಬ್ರಾಹ್ಮಣರನ್ನೂ, ಮತ್ತು ತಮ್ಮ ಸ್ವಾಭಿಮಾನ ಸ್ವಂತ ಗೌರವವನ್ನೂ ಮರೆತು ಬ್ರಾಹ್ಮಣ ಮುಂದಾಳುಗಳನ್ನು ಪೂಜಿಸುವ ಹವ್ಯಾಸವುಳ್ಳ-ತಮ್ಮ ಸ್ವಂತ ವಿಚಾರವಿಲ್ಲದ-ಬ್ರಾಹ್ಮಣರು ಹೇಳಿದಂತೆ ನಡೆಯುವ-ಬ್ರಾಹ್ಮಣೇತರರನ್ನೂ ಜನರು ಆರಿಸಬೇಕೆಂಬುದು ಇವರ ಅಭಿಪ್ರಾಯವೆಂದು ಧ್ವನಿತವಾಗುತ್ತದೆ. ಈ ಕಾಂಗ್ರೆಸ್ಸು ಸಾರ್ವಜನಿಕ ಸಂಸ್ಥೆಯು ಹೌದೋ ಅಲ್ಲೋ ಇದರ ವಿಚಾರ ಒತ್ತಟ್ಟಿಗಿರಲಿ. ಪ್ರತಿ ವರುಷ ಬದಲಾಗುತ್ತಿರುವ ಯಾವದೊಂದು ಸಂಸ್ಥೆಯ ನಿರ್ಣಯಗಳಿಂದ ಎಲ್ಲರೂ ಬದ್ಧಾದರರಾಗಬೇಕೆಂದೂ ಅವರು ಅದರಂತೆ ಮಾಡಬೇಕೆಂದೂ ಹವಣಿಸುವದು ಮೂರ್ಖತನದ ಲಕ್ಷಣ. ಕೆಲವು ಜನರಿಗೆ ಈ ನಿರ್ಣಯಗಳು ಸೇರಲಿಲ್ಲವೆಂದು ತಿಳಿಯುವೆ. ಈ ಅಲ್ಪ ಸಂಖ್ಯಾಕರು ತಮ್ಮ ಪಕ್ಷವನ್ನು ಬೆಳಿಸಿ ಮುಂದಿನ ವರುಷ ಆ ನಿರ್ಣಯಗಳನ್ನು ಅಂದರೆ ಹೋದ ವರುಷ ತಮಗೆ ಅಸಮಾಧಾನಕರವೆಂದು ತೋರಿದ ನಿರ್ಣಯಗಳನ್ನು ಮುಂದಿನ ವರುಷ ಬದಲಾಯಿಸಬಹುದು. ಅಮೃತಸರ ಕಾಂಗ್ರೆಸ್ ನಿರ್ಣಯಗಳು ಮಿಡೇಸ್ ಮತ್ತು ಪರ್ಷಿಯನ್ ಜನರ ಕಾನೂನುಗಳಂತೆ ಅಥವಾ ಬದಲಾಯಿಸದೆ ಇದ್ದ ಮನುವಿನ ಧರ್ಮಶಾಸ್ತ್ರದಂತೆ ಅಲ್ಲ. ಈ ನಿರ್ಣಯಗಳ ಮಹತ್ವವು ಹೇಗೇ ಇರಲಿ. ಅವು ಬ್ರಾಹ್ಮಣೇತರರಾದ ಯೋಗ್ಯ ಜನರು ಮುಂದಿನ ಚುನಾವಣೆಯಲ್ಲಿ ಆರಿಸಿ ಬರಬಾರದು, ತಾವೇ ಎಲ್ಲ ಜಾಗೆಗಳನ್ನೂ ಆಕ್ರಮಿಸಬೇಕು ಎಂಬದಾಗಿ ರಾಜಕೀಯ ಬ್ರಾಹ್ಮಣರು ಒಡ್ಡಿದ ಒಂದು ಬಲೆಯು. ಆದ್ದರಿಂದ ನಿಜವಾದ ಬ್ರಾಹ್ಮಣೇತರರು ರಾಜಕೀಯ ಬ್ರಾಹ್ಮಣರ ಈ ಸೋಗನ್ನು ಬೈಲಿಗಿಟ್ಟು ಅವರ ಕಾಪಟ್ಯವನ್ನು ಹೊರಗೆಡವಿ ಬ್ರಾಹ್ಮಣೇತರರು ಪರಸ್ಪರ ಒಡೆಯದೆ ಐಕ್ಯಭಾವದಿಂದ ವರ್ತಿಸಿ, ನಿಜವಾದ ಬ್ರಾಹ್ಮಣೇತರರಿಗೆ ಮಾತ್ರ ಮತ ಕೊಡಬೇಕು. ನಮ್ಮ ಮದ್ರಾಸ್ ಪ್ರಾಂತದೊಳಗೆ ಚುನಾವಣೆಗಳಲ್ಲಿ ರಾಜಕೀಯ ಬ್ರಾಹ್ಮಣರು ನಡಿಸುವ ಕುಟಿಲೋಪಾಯಗಳು ಎಲ್ಲರಿಗೂ ಪರಿಚಯವಾಗಿರುವ ಕಾರಣ ಅವಕ್ಕೆ ಯಾರೂ ಮೋಸಹೋಗರು. ಬ್ರಾಹ್ಮಣೇತರರಲ್ಲಿ ತಮ್ಮತಮ್ಮೊಳಗೆ ಮತಭೇದವಿದ್ದಾಗ್ಗೂ, ಮುಂದಿನ ನಿಯಮ ನಿರ್ಮಾಣ ಸಭೆ ಮೊದಲಾದವುಗಳು ಜನಪ್ರತಿನಿಧಿ ಸ್ವರೂಪವುಳ್ಳವಾಗಿಯೂ ಮತ್ತು ನವೀನ ಸುಧಾರಣೆಗಳು ಜನ ಸಾಮಾನ್ಯರ ಹಿತಕ್ಕಾಗಿ ಲೋಕಸತ್ತಾತ್ಮಕ ಬುದ್ಧಿಯಿಂದ ಉಪಯೋಗಿಸಲ್ಪಡಬೇಕಾದವಾಗಿಯೂ ಆಗಬೇಕಾದರೆ ಈ ಬ್ರಾಹ್ಮಣರ ಕುಟಿಲತನ, ಮಂಗಮುಲಕು, ತಾರು, ತಿಗಡಿ, ಒಳಸಂಚು ಸ್ವಾರ್ಥ ಪರಾಯಣತೆ ಇವೆಲ್ಲವುಗಳ ವಿರುದ್ಧ ಬ್ರಾಹ್ಮಣೇತರರು ಧೈರ್ಯದಿಂದ ಹೋರಾಡಬೇಕೆಂಬ ಮಾತಿನಲ್ಲಿ ನಿಜವಾದ ಬ್ರಾಹ್ಮಣೇತರರಲ್ಲಿ ಐಕ್ಯಮತವಿದೆ. ನಮ್ಮ ಪ್ರಾಂತದ ಜನರಿಗೆ ನಾನು ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಂಡಿರುವಂತೆ ನಿಮಗೂ ಮನಃಪೂರ್ವಕವಾಗಿ ಬಿನ್ನೈಸಿಕೊಳ್ಳುವದೇನಂದರೆ.—"ಬ್ರಾಹ್ಮಣನಿಗೆ ಮತ ಕೊಡಬೇಡಿರಿ, ರಾಜಕೀಯ ಬ್ರಾಹ್ಮಣನಲ್ಲಿ ವಿಶ್ವಾಸವಿಡಬೇಡಿರಿ" ಒಬ್ಬ ಬ್ರಾಹ್ಮಣೇತರನ ವಿರುದ್ಧ ಮತ್ತೊಬ್ಬ ಬ್ರಾಹ್ಮಣೇತರನನ್ನು ನಿಲ್ಲಿಸಿ, ತಮ್ಮ ಪಕ್ಷದ ಬ್ರಾಹ್ಮಣೇತರ ಉಮೇದವಾರನ ವಿಷಯವಾಗಿ ನಿಮಗೆ ಬಹಳ ಪ್ರಕಾರದಿಂದ ಮನವೊಲಿಸುವರು. ಹೀಗೆ ನಮ್ಮ ನಮ್ಮೊಳಗೆ ಕಲಹವೆಬ್ಬಿಸಿ ತಾವು ಸುಲಭವಾಗಿ ಆರಿಸಿ ಬರುವಂತೆ ಮಾಡಿಕೊಳ್ಳುವರು. ನಿಮ್ಮ ತಾಲ್ಲೂಕು ಜಿಲ್ಲೆಗಳಲ್ಲಿ ಈ ನೀಚ ಕಪಟೋಪಾಯಗಳನ್ನು ಅತಂತ್ರಪಡಿಸುವದಕ್ಕೆ ನೀವು ಹೆಚ್ಚು ಪ್ರಯತ್ನಶೀಲರಾಗಬೇಕು. ಇದಕ್ಕಾಗಿ ಪ್ರತಿ ತಾಲ್ಲೂಕಿನಲ್ಲಿ ಪ್ರತಿ ಜಿಲ್ಲೆಗಳಲ್ಲಿ ಬ್ರಾಹ್ಮಣೇತರ ಸಮಾಜದವರ ಮುಖ್ಯ ಮುಖ್ಯ ಜನರನ್ನು ಕೂಡಿಸಿ ಅವರದೊಂದು ಸಂಘವನ್ನೂ ಕಮಿಟಿಯನ್ನೂ ಸ್ಥಾಪಿಸಿ, ಆ ಕಮಿಟಿಯ ದ್ವಾರಾ ನಿಮ್ಮ ತಂಟೆಗಳನ್ನು ತೀರಿಸಿಕೊಳ್ಳಬೇಕು. ಮತ್ತು ನಿಮ್ಮಲ್ಲಿ ಯಾವ ಉಮೇದುವಾರರು ಯೋಗ್ಯರು ಎಂಬುದನ್ನು ಅವರಿಂದ ಗೊತ್ತುಪಡಿಸಿಕೊಂಡು, ಅದರಲ್ಲಿ ಅಚಲವಾಗದಂತೆ ಒಮ್ಮನಸ್ಸಿನಿಂದ ಕಡೆತನಕ ಕಾದಾಡಬೇಕು. ನಿಮ್ಮ ಉದ್ಧಾರವು ನಿಮ್ಮ ಕೈಯಲ್ಲಿಯೇ ಇರುವದು. ಇದನ್ನು ಚೆನ್ನಾಗಿ ನೆನಪಿನಲ್ಲಿಡಿರಿ. ಬರುವ ಕೌನ್ಸಿಲ್ ಚುನಾವಣೆಯಲ್ಲಿ ನೀವು ಜಯಶೀಲರಾಗದಿದ್ದರೆ (ದೇವರು ಇದನ್ನು ತಪ್ಪಿಸಲಿ) ನಿಮ್ಮ ಆಳಿಗಾಲವು ಬಂದಿತೆಂದು ತಿಳಿಯಿರಿ. ಬರ ಬರುತ್ತ ನೀವು ಅಧೋಗತಿಗಿಳಿದು ಕಡೆಗೆ ರಾಜಕೀಯ ಅಂಶದಲ್ಲಿ ಹೇಳ ಹೆಸರಿಲ್ಲದಂತಾಗುವಿರಿ. ಮತ್ತು ನಿಮ್ಮ ಸ್ಥಾನದಲ್ಲಿ ನಿಮ್ಮ ಭಾವನೆ ಮತ್ತು ನಿಮ್ಮ ಧ್ಯೇಯಗಳ ಸಂಬಂಧವಾಗಿ ಸ್ವಲ್ಪವಾದರೂ ಅನುಕಂಪ-ಸಹಾನುಭೂತಿ ಇಲ್ಲದವರು ಬಂದು, ನಿಮ್ಮ ಪ್ರತಿನಿಧಿಗಳ ಹೆಸರಿನಿಂದ ಈಗ ಕಾಯದ ಕೌನ್ಸಿಲ್ಲದಲ್ಲಿ ನಿಮಗಿರತಕ್ಕ ಅಲ್ಪಸ್ವಲ್ಪ ವರ್ಚಸ್ಸನ್ನು ಕೂಡ ಹಾಳುಮಾಡುವರು. ಇದನ್ನು ನೀವು ನೆನಪಿನಲ್ಲಿಡಿರಿ.

ಖಿಲಾಫತ್ ಮತ್ತು ಅಸಹಕಾರಿತನದ ಪ್ರಶ್ನೆ.

ನಮ್ಮ ನಾಡಿನವರ ಲಕ್ಷ್ಯವು ಈಗ ವಿಶೇಷವಾಗಿ ಖಿಲಾಫೇಟ್ ಪ್ರಶ್ನದ ಸಂಬಂಧವಾಗಿ ನಡೆದಿರುವ ಚಳವಳಿಯ ಕಡೆಗೆ ತಿರುಗಿದೆ. ನಮ್ಮ ಮುಸಲ್ಮಾನ ಬಂಧುಗಳ ಈಗಿನ ದುಃಖದಾಯಕಸ್ಥಿತಿಯ ಬಗ್ಗೆ ಅವರೊಡನೆ ನಮ್ಮ ಸಹಾನುಭೂತಿಯೂ ನಮ್ಮ ಭ್ರಾತೃಪ್ರೇಮವೂ ಯಾವ ರೀತಿಯಿಂದಲೂ ಕಡಿಮೆಯಾಗಿಲ್ಲ. ಪೂರ್ವಕಾಲದಿಂದ ಯಾರು ಮುಸಲ್ಮಾನ ಸಮಾಜದ ಮುಂದಾಳುವಾಗಿದ್ದರೋ, ಯಾರ ದೇಹವು ಅನೇಕ ಪ್ರಕಾರ ಪವಿತ್ರ ಕಲ್ಪನೆಗಳಿಂದ ಹೆಚ್ಚು ಪವಿತ್ರವಾಗಿ ಎಣಿಸಲ್ಪಟ್ಟಿರುವ

ದೋ ಅಂಥಾ ಖಿಲೀಪರು ಈಗ ತಮ್ಮ ಪೂರ್ವ ವೈಭವದಿಂದ ಮುಕ್ತರಾಗಿ ಮಾಡಲ್ಪಟ್ಟು ಒಬ್ಬ ಸಾಮಾನ್ಯ ಜನರಂಥ ಸ್ಥಿತಿಯಲ್ಲಿ ಇಡಲ್ಪಟ್ಟಿದ್ದನ್ನು ನೋಡಿ ಯಾವ ಮುಸಲ್ಮಾನ ಬಂಧುವಿಗೆ ದುಃಖವೆನಿಸಲಿಕ್ಕಿಲ್ಲ? ಮತ್ತು ಹೀಗಾಗುವದು ಅವರಿಗೆ ಸ್ವಾಭಾವಿಕವು. ಈ ದೇಶದ ಪ್ರತಿನಿಧಿ ಸ್ವರೂಪರಾದ ವೈಸರಾಯರೂ ಸ್ಟೇಟ್ ಸೆಕ್ರಟರಿಯವರೂ ಮುಸಲ್ಮಾನರ ಸಲುವಾಗಿ ಎಷ್ಟು ಒತ್ತಾಯದಿಂದ ಸಂಧಿ ಪರಿಷತ್ತಿನಲ್ಲಿ ಅವರ ಹಿತವನ್ನುದ್ದೇಶಿಸಿ ಹೇಳತಕ್ಕುದೆಲ್ಲವನ್ನೂ ಹೇಳಿದರೂ ನಮ್ಮ ಮುಸಲ್ಮಾನ ಬಂಧುಗಳು ಆಶಿಸಿದಂತೆ ಸಂಧಿ ಪರಿಷತ್ತಿನವರು ನಿರ್ಣಯಮಾಡದಿರುವದನ್ನು ನೋಡಿ ನನಗೆ ಅತ್ಯಂತ ದುಃಖವಾಗುತ್ತದೆ. ಆದರೆ ಕೆಲಜಹಾಲರ ಚಿತಾವಣೆಯ ಮೇರೆಗೆ ಕೆಲವು ಮುಸಲ್ಮಾನ ಜಹಾಲರು ಅನುಸರಿಸಿದ ಮಾರ್ಗವನ್ನು, ಯಾವ ನಿಜವಾದ ದೇಶಭಕ್ತನೂ, ಒಳಗೂ ಹೊರಗೂ ನಿಜವಾಗಿರುವ ಯಾವ ಹಿಂದೀ ಮನುಷ್ಯನೂ ಅಂಗೀಕಾರಮಾಡಲಿಕ್ಕಿಲ್ಲ. ಈ ಅಸಹಕಾರಿತನವು ನಮ್ಮ ಆಳರಸರನ್ನು ಹೆದರಿಸುವ ಕುರಿತು ನಡಿಸಿದ ಕೇವಲ ಒಣ ಬಡಾಯಿಯ ಮಾತಾಗಿರದೆ ನಿಜವಾಗಿದ್ದು, ಅದರಂತೆ ಕಾರ್ಯತಃ ಮಾಡತೊಡಗಿದರೆ ದೇಶದಲ್ಲಿ ಅರಾಜಕತ್ವವು ಹಬ್ಬುವದರಲ್ಲಿ ಸಂಶಯವಿಲ್ಲ. ಒಂದು ಸಮಾಜದಲ್ಲಿಯ ಕೆಲವರ ಮನೋವೇಧಕ ದುಃಖದ ಸಲುವಾಗಿ (ಈ ದುಃಖವು ನಿಜವಾಗಿದ್ದರೂ) ಇಡೀ ನಾಡಿನ ಶಾಂತತೆಯನ್ನೂ ಸುವ್ಯವಸ್ಥೆಯನ್ನೂ ಕೆಡಿಸಿಬಿಡುವದಕ್ಕೆ ನಾನೆಂದೂ ಸಮ್ಮತಿಸಲಾರೆನು. ನಮ್ಮ ರಾಜನೀತಿ ಪಟುಗಳು ತಾವು ಹಗಲೆಲ್ಲ ಹೇಳಿಕೊಳ್ಳುವಂತೆ, ತಾವು ಮೊದಲು ಹಿಂದವಾಸಿಗಳು, ಬಳಿಕ ಹಿಂದು ಜನರು, ಮುಸಲ್ಮಾನರು, ಕ್ರಿಶ್ಚಿಯನ್ನರು ಎಂತ ಅನ್ನುವರು. ತದನುಸಾರವಾಗಿ ಯಾವದೊಂದು ವರ್ಗದ ಅಥವಾ ಸಮಾಜದ ಹಿತಕ್ಕಿಂತ ದೇಶದ ಹಿತವು ಹೆಚ್ಚಿನದೆಂದು ಭಾವಿಸಿದರೆ, ಈ ಅಸಹಕಾರಿತನವನ್ನು ಅಂಗೀಕಾರ ಮಾಡುವದು ಒಂದು ಅಪರಾಧ ಮಾಡಿದ್ದಕ್ಕೆ ಸರಿಯಾಗುವದು. ಯಾಕಂದರೆ ಅಸಹಕಾರಿತ್ವದ ಅಂಗೀಕರಣವೆಂದರೆ ಹಿಂದುಸ್ಥಾನದಲ್ಲಿ ದಂಗೆಗೆ ಆಮಂತ್ರಣ ಕೊಟ್ಟಂತಾಗುವದು. ಸುದೈವದಿಂದ ನಮ್ಮ ಅನೇಕ ಮುಸಲ್ಮಾನ ಬಂಧುಗಳು ಈ ದುಸ್ತತ್ವಕ್ಕೆ ವಿರೋಧಿಗಳಿರುವರು. ಭಾಷಣಕ್ಕಾಗಿ ಸಾರ್ವಜನಿಕ ಕಟ್ಟೆಗಳನ್ನು ತುಳಿದಾಡುತ್ತಿರುವ ರಾಜಕೀಯ ಬುರುಡೆಮಲ್ಲರ ಮಾತುಗಳನ್ನು ಕೇಳುವದಕ್ಕಿಂತ ಜಾಣರೂ ಅನುಭವಿಗಳೂ ಶ್ರೇಷ್ಠ ರಾಜನೀತಿ ವಿಶಾರದರೂ ಮುತ್ಸದ್ದಿಗಳೂ ಆದ ಹೈದರಾಬಾದ ನಿಜಾಮ ಮತ್ತು ಗ್ವಾಲಿಯರ್ ಮಹಾರಾಜರ ಅಭಿಪ್ರಾಯದಂತೆ ನಾನು ಮಾತಿನಲ್ಲಿ ಅಭಿಪ್ರಾಯವುಳ್ಳವನಾಗಿರುವೆನೆಂದು ಪ್ರಸಿದ್ಧವಾಗಿ ಹೇಳುತ್ತೇನೆ. ಈ ಕೃತ್ರಿಮ ಚಳವಳಿಗೆ ಇನ್ನು ಪ್ರೋತ್ಸಾಹ ಕೊಡಕೂಡದೆಂದು ನಿಮಗೆ ಮನಃಪೂರ್ವಕವಾಗಿ ಬಿನ್ನವಿಸಿಕೊಳ್ಳುವೆನು. ಯಾಕಂದರೆ, ನಮ್ಮ ಕಯ್ಯಲ್ಲಿ ಸುಧಾರಣೆ ಮಾಡತಕ್ಕ ಕೆಲಸಗಳು ಅನೇಕವಾಗಿದ್ದು, ನಮ್ಮ ಸರ್ವಶಕ್ತಿಯನ್ನೂ ಬುದ್ಧಿಯನ್ನೂ ಘಾತಕವಾದ ಮತ್ತು ವ್ಯರ್ಥವಾದ ಪ್ರಯತ್ನಗಳಲ್ಲಿ ವೆಚ್ಚ ಮಾಡಬಾರದು.

ಸರ್ ಪಿ. ತ್ಯಾಗರಾಯ ಚೆಟ್ಟಿಯವರ ಭಾಷಣವು.

ಬಂಧು ಭಗಿನಿಯರೆ, ಪ್ರತಿನಿಧಿಗಳೆ,—ಇತಿಹಾಸ ಪ್ರಸಿದ್ಧವಾದೀ ಪಟ್ಟಣದಲ್ಲಿ ನೆರೆದ ಮೊದಲನೆಯ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ನನಗೆ ಕೊಟ್ಟು ನನ್ನನ್ನು ಗೌರವಿಸಿದುದಕ್ಕಾಗಿ ನಿಮ್ಮೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಆದರೂ ಈ ಮಹತ್ತರವಾದ ಸ್ಥಾನಕ್ಕೆ ನನಗಿಂತಲೂ ಹೆಚ್ಚು ಯೋಗ್ಯತಾ ಸಂಪನ್ನರಾದವರನ್ನು ನೀವು ಆರಿಸಿದ್ದರೆ ಬಹು ಚೆನ್ನಾಗಿತ್ತೆಂದು ತಿಳಿಯುತ್ತೇನೆ. ಈ ಕಾರ್ಯಕ್ಕೆ ನಾನು ಸರಿಯಾದವನೆಂದು ಭಾವಿಸಲಿಲ್ಲಾದರೂ ನಿಮ್ಮ ಆಮಂತ್ರಣವನ್ನು ಮನ್ನಿಸುವದು ನನ್ನ ಕರ್ತವ್ಯವೆನಿಸಿತು. ನಿಮ್ಮ ಕ್ಷೇಮಾತಿಶಯದಲ್ಲಿ ನಾನೆಷ್ಟು ಆಶಾಪೂರಿತನಾಗಿರುವೆನೆಂಬುದನ್ನು ತೋರಿಸಲಿಕ್ಕೂ, ನಿಮ್ಮ ಪ್ರತಿಯೊಂದು ಕಾರ್ಯದಲ್ಲಿ ಸಹಾನುಭೂತಿಪರರಾದ ಕರ್ನಾಟಕದ ಬಂಧು ಭಗಿನಿಯರ ಕಲ್ಯಾಣಾಭ್ಯುದಯವಿಷಯದಲ್ಲಿ ಹೆಚ್ಚು ಆದರಭಾವವುಳ್ಳ ನಮ್ಮ ಮದ್ರಾಸು ಪ್ರಾಂತದ ಬ್ರಾಹ್ಮಣೇತರ ಸಮಾಜದವರ ಆನಂದವಾರ್ತೆಯನ್ನೂ ವಂದನೆಗಳನ್ನೂ ನಿಮಗೆ ಸಮರ್ಪಿಸುವದಕ್ಕಾಗಿಯೂ ಈ ದಿನ ನಿಮ್ಮೆದುರಿಗೆ ಬರಲು ಸಾಹಸ ಮಾಡಿರುವೆನು. ಸ್ವಯಂ ನಿರ್ಣಯ ಮಾರ್ಗದಲ್ಲಿ ಕಾಲಿಟ್ಟ ನಿಮ್ಮ ಪ್ರಯತ್ನಗಳನ್ನು ದಕ್ಷಿಣ ಹಿಂದುಸ್ಥಾನವಾಸಿಗಳಾದ ನಾವು ಎಷ್ಟು ಕುತೂಹಲದಿಂದಲೂ ಆದರಭಾವದಿಂದಲೂ ನಿರೀಕ್ಷಿಸುತ್ತಿದ್ದೇವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಹಿಂದುಸ್ಥಾನದ ಬ್ರಾಹ್ಮಣೇತರ ಸಮಾಜಗಳ ಪುನರುಜ್ಜೀವನ ಕಾರ್ಯದಲ್ಲಿ ನಾವು ನಿಮಗೆ ಮನಃಪೂರ್ವಕವಾಗಿ ಬೆಂಬಲವಾಗಿರುವೆವೆಂಬುದನ್ನು ಖಂಡಿತವಾಗಿ ಹೇಳುತ್ತೇನೆ.

ನಾಲ್ಕು ವರುಷಗಳ ಹಿಂದೆ ಮದ್ರಾಸಿನಲ್ಲಿ ಉಗಮಗೊಂಡ ಈ ಬ್ರಾಹ್ಮಣೇತರ ಚಳವಳಿಯು ಉಳಿದ ಕಡೆಯ ಬ್ರಾಹ್ಮಣೇತರರ ಮನಸ್ಸಿಗೆ ಬಂದಿರುವದೆಂಬುದನ್ನು ನೋಡಿ ನನಗೆ ಸಮಾಧಾನವೆನಿಸುತ್ತದೆ. ಹಿಂದುಸ್ಥಾನದ ಅನೇಕ ಪ್ರಾಂತಗಳಲ್ಲಿಯ ಮತ್ತು ದೇಶೀಯ ಸಂಸ್ಥಾನಗಳಲ್ಲಿರುವ ಬ್ರಾಹ್ಮಣೇತರ ಬಂಧುಗಳು ತಮ್ಮ ಹಿತವೂ ಉದ್ಧಾರವೂ ತಮ್ಮ ಕಯ್ಯಲ್ಲಿರುವದಾಗಿ ಮನಗಂಡಿದ್ದಾರೆ. ಹಿಂದುಸ್ಥಾನದ ರಾಜಕರಣದಲ್ಲಿ ತಾವು ಸಂಪೂರ್ಣವಾಗಿ ಲೋಪಗೊಳ್ಳಬಾರದು ಆದರಲ್ಲಿ ತಮ್ಮ ಹೆಸರು ಉಳಿಯಬೇಕೆಂದು ಇಚ್ಛಿಸುವ ಬ್ರಾಹ್ಮಣೇತರರು ತಮ್ಮ ತಮ್ಮ ಸಮಾಜ ಸುಧಾರಣೆಗಾಗಿ ಸರ್ವತೋಮುಖವಾಗಿ ಪ್ರಯತ್ನಶೀಲರಾಗಬೇಕು. ಬರಹಾಮಪುರದಿಂದ ತುತಿಕೋರಿನವರೆಗೆ ಇರುವ ಮದ್ರಾಸು ಪ್ರಾಂತದ ಬ್ರಾಹ್ಮಣೇತರರಲ್ಲದೆ ಮಹಾರಾಷ್ಟ್ರ, ಕರ್ನಾಟಕ, ಬೆಂಗಾಲ ಮತ್ತು ಮೈಸೂರು ತ್ರಾವಣಕೋರ ಕೊಚಿನ ಮೊದಲಾದ ಸಂಸ್ಥಾನಗಳಲ್ಲಿಯ ಬ್ರಾಹ್ಮಣೇತರರು ಸಹ ಹಿಂದುಸ್ಥಾನದ ಭಾವೀ ಅಭ್ಯುದಯವು ತಮ್ಮ ಸ್ವಂತ ಪ್ರಯತ್ನದ ಮೇಲೆಯೂ ತಮ್ಮ ತಮ್ಮ ಸಮಾಜ ಸ್ಥಿತಿಯ ಸುಧಾರಣೆಯ ಕಾರ್ಯದಲ್ಲಿ ತಾವು ತೋರಿಸುವ ಒಮ್ಮನಸ್ಸಿನ ಆಸಕ್ತಿಯ ಮೇಲೆಯೂ ಅವಲಂಬಿಸುವುದಾಗಿ ಮನಗಂಡಿರುವರು. ಇದೊಂದು ವಿಶೇಷ ಸಂಗತಿಯೇ ಸರಿ.

ನಮ್ಮ ಟೀಕಾಚಾರ್ಯರು ನಮ್ಮ ವಿಷಯವಾಗಿ ಏನಂದಾಗ್ಯೂ, ಬ್ರಾಹ್ಮಣೇತರ ಲೋಕಸಮುದಾಯವು ರಾಜಕೀಯದ ಮಾತಿನಲ್ಲಿಯೂ ಸಾಮಾಜಿಕ ಬಾಬಿನಲ್ಲಿಯೂ ಶಿಕ್ಷಣ ವಿಷಯದಲ್ಲಿಯೂ ಮಾಡತಕ್ಕ ಪ್ರಗತಿಪರ ಪ್ರಯತ್ನದ ಮೇಲೆ ಹಿಂದುಸ್ಥಾನದ ಭಾವೀ ಸ್ಥಿತಿಯು ಅವಲಂಬಿಸಿರುವದಾಗಿ ನನಗೆ ಪೂರ್ಣ ನಂಬಿಕೆಯುಂಟು. ಈ ಪುನರ್ಘಟನಾತ್ಮಕ ಚಳವಳಿಯು ಸಾಂಪ್ರತ ಕಾಲದ ಶುಭಶಕುನವೆಂದೂ, ರಾಜಕೀಯ ವಿಷಯದಲ್ಲಿ ನಮ್ಮ ಮನಸ್ಸು ಜಾಗ್ರತಗೊಂಡದ್ದರ ದ್ಯೋತಕವೆಂದೂ ತಿಳಿದು, ಅದನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಅನೇಕ ಶತಮಾನಗಳಿಂದ ನಡೆದು ಬಂದ ಸಾಮಾಜಿಕ ನಿರ್ಬಂಧ ಬಲಾತ್ಕಾರ ಮೊದಲಾದವುಗಳಿಂದ ರಾಜಕೀಯ ಸಂಬಂಧವಾಗಿ ನಮ್ಮಲ್ಲಿರತಕ್ಕ ಮನೋದೇವತೆಯಂತೆ ನಾವು ಅಡಗಿಹೋಗಿರುತ್ತೇವೆ. ಈ ದುಸ್ಥಿತಿಯಿಂದ ನಮ್ಮನ್ನು ಎಚ್ಚರಗೊಳಿಸಿ ನಮ್ಮ ಮನೋದೇವತೆಯನ್ನು ಪ್ರಜ್ವಲಗೊಳಿಸಿ ಇದರ ಸಹಾಯದಿಂದ ನಮ್ಮ ಹಕ್ಕುಗಳನ್ನೂ, ಸ್ವಾತಂತ್ರ್ಯವನ್ನೂ, ವಿಶೇಷ ಅಧಿಕಾರವನ್ನೂ ಮತ್ತು ನಮ್ಮ ಹೀನಸ್ಥಿತಿಯನ್ನೂ ತಿಳಕೊಳ್ಳುವುದಕ್ಕಾಗಿ ಈಗಿನ ಚಳವಳಿಯಂತಹ ಪ್ರೋತ್ಸಾಹಗಳು ನಮಗೆ ಅತ್ಯವಶ್ಯಕವಿರುತ್ತವೆ.

ನಭೋಮಂಡಲದಲ್ಲಿರುವ ನಕ್ಷತ್ರಗಳಷ್ಟು ಅಸಂಖ್ಯಾತರಾದ ನಮ್ಮ ಟೀಕಾ ಕರ್ತರು ಹಿಂದುಸ್ಥಾನದ ಇತಿಹಾಸದಲ್ಲಿ ಮೊದಲನೆಯದಾದ ಲೋಕಸತ್ತಾತ್ಮಕ ನಮ್ಮಾ ಚಳವಳಿಯನ್ನು ಕುರಿತು ಹೀಗನ್ನುವರು;—ಕೆಲವು ತೀರ ಸ್ವಲ್ಪ ಭಿನ್ನ ಜವಾಬದಾರ ಜನರು ತಮ್ಮ ಸ್ವಂತ ಲಾಭಕ್ಕಾಗಿ ಎಬ್ಬಿಸಿದ ಒಂದು ಮತದವರ ಚಟುವಟಿಕೆಯೆಂದೂ, ಒಂದು ವಿಶಿಷ್ಟ ವರ್ಗದವರ ದ್ವೇಷಕ್ಕಾಗಿ ಕೈಕೊಂಡ ಮಾರ್ಗವೆಂದೂ, ದೇಶದ ಹಿತವು ಸ್ವಲ್ಪವಾದರೂ ಮನಸ್ಸಿನಲ್ಲಿಲ್ಲದೆ ಅದರ ಪ್ರಗತಿಯನ್ನು ಕೋರದ ಪ್ರತೀಕಾರಕ ಜನರ ಮಂಡಲವೆಂದೂ, ಇದಲ್ಲದೆ ಅತ್ಯಂತ ಸಿಟ್ಟು ಮತ್ತು ಕಡು ದ್ವೇಷ ಇವುಗಳಿಗೀಡಾಗಿ ನಾವು ನಮ್ಮ ಜನ್ಮ ಭೂಮಿಗೆ ಬಲು ದೊಡ್ಡ ಅಕಲ್ಯಾಣವನ್ನು ಮಾಡುತ್ತಿರುವೆವೆಂದೂ, ಹೀಗೆ ಅನೇಕ ಪ್ರಕಾರವಾಗಿ ನಮ್ಮ ಎದುರಾಳಿಗಳು ನಮ್ಮ ಚಟುವಟಿಕೆಯ ಬಗ್ಗೆ ಆಡಿಕೊಳ್ಳಹತ್ತಿರುವರು. ಮತ್ತು ಯಾವುದಾದರೊಂದು ಹೊಸ ಸುಧಾರಣೆಯು ಪ್ರಚಾರದಲ್ಲಿ ಬಂದರೆ, ಅದರಿಂದ ತಮ್ಮ ನಿರೂಢವಾದ ಹಿತಗಳಿಗೂ ಹಕ್ಕುಗಳಿಗೂ ಬಾಧೆ ತಟ್ಟುವದೆಂಬ ಭೀತಿಯಿಂದ ಸರ್ವಪ್ರಕಾರದ ಪ್ರಗತಿಗೆ ಅಡ್ಡ ಬರುವ ಇಲ್ಲಿಯ ಕೆಲವು ಜನರೊಂದಿಗೆ ನಾವು ಸೇರಿಕೊಂಡಿರುತ್ತೇವೆಂಬ ಆರೋಪವನ್ನು (ಈ ಆರೋಪವು ಸುಳ್ಳೆಂದು ತಮಗೆ ಗೊತ್ತಿದ್ದರೂ) ನಮ್ಮ ಎದುರಾಳಿಗಳು ನಮ್ಮ ಮೇಲೆ ಹೊರಿಸಲು ಹಿಂಜರಿಯುವದಿಲ್ಲ. ಅಸಂಬಂಧವಾದೀನುಡಿಗಳನ್ನು ಖಂಡಿಸುವದಕ್ಕಾಗಿ ನಿಮ್ಮ ಅಮೌಲ್ಯ ಕಾಲವನ್ನು ಕಳೆಯಲು ನನ್ನ ಮನಸ್ಸಿನಲ್ಲಿಲ್ಲದಿದ್ದರೂ ನಾವು ಸುಮ್ಮನಿರುವದರಿಂದ ಅವರು ಮತ್ತಿಷ್ಟು ನಾಚಿಕೆಗೇಡಿಗಳಾಗಿ ಸುಳ್ಳಾಡುವದರಿಂದ ಮತ್ತು ಅವರ ನಿಂದಾವಚನಗಳಿಗೆ ನಾವು ಸಮರ್ಪಕವಾಗಿ ಉತ್ತರ ಕೊಡದೆ ಉಳಿದಲ್ಲಿ ಅದೇ ಅವರ ಸುಳ್ಳಿಗೆ ಪುಷ್ಟಿ ಕೊಟ್ಟಂತಾಗುವದರಿಂದ ಸ್ವಲ್ಪ ವಿಸ್ತಾರಪೂರ್ವಕವಾಗಿ ಅವರ ಆಕ್ಷೇಪಗಳನ್ನು ಖಂಡಿಸುವದು ಅವಶ್ಯವಿದೆ.

ಈ ಮಾತಿನ ಬಗ್ಗೆ ನನ್ನ ಮನಸ್ಸಿನಲ್ಲಿ ಹಿಂದಕ್ಕೆ ಸ್ವಲ್ಪ ಸಂಶಯವುಂಟಾಗಿದ್ದರೂ ಅದೆಲ್ಲ ಈಗ ಪೂರ್ಣವಾಗಿ ಅಳಿದು ಹೋಗಿ ನಿಮ್ಮೆದುರಿಗೆ ನಿರ್ಭಿಡೆಯಿಂದ ಹೇಳುವದೇನಂದರೆ-ಕೇವಲ ನಮ್ಮ ಅಸ್ತಿತ್ವ ಸ್ಥಿರೀಕರಣಕ್ಕಾಗಿ ಈಗ ನಾಲ್ಕು ವರುಷಗಳಿಂದ ನಡಿಸಿದ ನಮ್ಮಾ ಘನಘೋರ ಹೋರಾಟದ ಮೇಲಿಂದ ಏತನ್ಮಧ್ಯದಲ್ಲಿ ನಮ್ಮ ಅನುಭವಕ್ಕೆ ಬಂದ ಈ ದೇಶದ ರಾಜಕಾರಸ್ಥಾನದ ಅಂತರ್ಗತ ವ್ಯವಹಾರದ ಮೇಲಿಂದ ನಮಗೆ ಕಾಣುವಂತೆ ನಡಿಸಿದ ಒಳಸಂಚು, ಸೂಕ್ಷ್ಮತಂತ್ರ ಮಂತ್ರಗಳು,
ಲಜ್ಜಾಸ್ಪದವಾದ ಮಸಲತು ಫಿತೂರಿಗಳು, ಅಸ
ಕ್ತಿ ಕುಯುಕ್ತಿಗಳು, ಈ ಪ್ರಕಾರದ ಕಪಟೋ
ಟೋಪಾಯಗಳ ಅನುಭವದ ಮೇಲಿಂದ, ಈ ನಾ
ಉಳಿದ ಕಡೆಯಲ್ಲಿ ಈ ಕಾಲಕ್ಕೆ ಹೆಸರುಗೊಂಡಿ
ಣೇತರ ಚಳವಳಿಯೊಂದೇ ನಿಜವಾಗಿ ಈ ದೇಶ
ಜನರ ಸುಖಶಾಂತಿಗಳಿಗೂ ಅವರ ಸಂಪದಭ್ಯುದ
ಲಕಾರಣವೆಂದು ನಾನು ಸಾರಿ ಹೇಳುವೆನು. ಬ್ರಾ
ಹ್ಮಣೇತರ ಚಳವಳಿಗಳು ಯಥಾರ್ಥವಾಗಿ ಲೋ
ವಾದವುಗಳಿದ್ದು, ಇನ್ನೇ ಭರತಖಂಡದ ಏಳ್ಗೆಗೆ
ಗಳಾಗಿವೆ. ಯಾಕಂದರೆ, ನಾವು ಕೈಕೊಂಡ
ನಮ್ಮ ಬೇಡುವಿಕೆಯೂ ನ್ಯಾಯ ನೀತಿ ಯುಕ್ತ
ಗಳಿಗೆ ಸಮ್ಮತವಾಗಿದ್ದು ನಮ್ಮಾ ಪುರಾತನ
ಮುಂದೆ ಘನತರವಾದ ಹೆಚ್ಚಳವನ್ನು ಪಡೆಯಲ
ತವಾಗಿದೆ.

ಪ್ರಿಯ ಪ್ರತಿನಿಧಿಗಳೇ, ಬ್ರಿಟಿಶ ಸರ್ಕಾರ
ಳಗಿನ ಪರಸ್ಪರ ಜಗಳಾಟದಿಂದ ತಾವು ಸುಖವಾ
ಮಾಧಾನವಾಗಿ ರಾಜ್ಯವಾಳಕೊಂಡಿರಬೇಕೆಂದು
ಅಲ್ಲಿಯೂ ವರ್ಗ ವರ್ಗಗಳಲ್ಲಿಯೂ ಬೇರೆ ಬೇರೆ
ಲ್ಲಿಯೂ ಕಲಹವೆಬ್ಬಿಸಿ, ಇದರಿಂದ ತಮ್ಮ
ತಕ್ಕೆ ಲೋಪ ಬಾರದಂತೆ ಜನರನ್ನು ಅಗಲಿಸು
ನಮ್ಮ ಪ್ರಿಯ ಮಿತ್ರರು ಪದೇ ಪದೇ ನಮಗೆ
ಆದರೆ ಸರ್ಕಾರದವರನುಮತಿಯಿಂದ ಅವರ
ಖಂಡಿಸಲಿಕ್ಕೆ ನಾನು ನಿಂತಿಲ್ಲ. ನಾನು ಇಷ್ಟೇ
ಯಲ್ಲಾ-ಶ್ರೀರಾಮಚಂದ್ರನ ಕಾಲದಿಂದ ಇದ
ರಲ್ಲಿ ಭೇದಮಾಡಿ, ಅದರ ವಿಶಿಷ್ಟ ಲಾಭವನ್ನು
ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತ ಬರುವ
ಪುಣರಾದ ಜನರ ಬಾಯಿಂದ ಈ ಆರೋಪವು (
ರ್ಥವು ಹೇಗೇ ಇರಲಿ) ಬರುವದು. ಅತಿ ಲಾಂಛನ
ಯು. ಜನರಲ್ಲಿ ಪರಸ್ಪರ ಭೇದವನ್ನು ಹುಟ್ಟಿಸು
ತ್ಯಂತ ಚಾಣಾಕ್ಷರೆನಿಸಿಕೊಂಡ ಸಮಾಜದವರು
ಪವನ್ನು ಬೇರೆಯವರ ಮೇಲೆ ಹೊರಿಸುವದಕ್ಕೆ
ಪಡತಕ್ಕದ್ದು. ಇಷ್ಟೇ ಅಲ್ಲ ಯಾರು ತಮ್ಮನ್ನು
ಕಾಳಜಿಯಿಂದ ಪ್ರೀತಿಯಿಂದ ನೋಡಿದ್ದಾರೋ,
ತಮಗೆ ರಾಜ್ಯಕಾರಭಾರದಲ್ಲಿ ವಿಪುಲವಾಗಿ ಸಹಾ
ರೋ, ಅಂಥಾ ಪರಕೀಯ ಸರಕಾರಕ್ಕೆ ಇಂಥ
ಹೊರಿಸುತ್ತಾರೆಂದರೆ ಅದು ಮತ್ತಿಷ್ಟು ಗರ್ಹ
ಹ್ಮಣೇತರರ ನಡುವೆ ಜಾತಿ ಜಾತಿಗಳ ನಡುವೆ ರ
ರರ ನಡುವೆ ನಾಯಡು ನಾಯುಡುಗಳ ನಡು
ಜಗಳವೆಬ್ಬಿಸಿ, ತಮ್ಮ ಆಧಿಕ್ಯವನ್ನು ಕಾಯ್ದು ಕೊ
ಜನರೇ ಅಲ್ಲವೇ ಸರಕಾರದವರ ಮೇಲಿನ ಪದ್ಧ
ರೆ ಜನರಲ್ಲಿ ಭೇದ ಹುಟ್ಟಿಸಿ ಆಳುವ ಪದ್ಧತಿಯ
ಬಾಯಿ ಹಿಡಿದಷ್ಟು ಒಳಿತವಾಗಿ ಮಾತಾಡು
ಎಲೆಯಲ್ಲಿ ಕತ್ತೆ ಸತ್ತು ಬಿದ್ದಿರುವುದನ್ನೇ
ಎಲೆಯಲ್ಲಿ ನೊಣ ಸತ್ತು ಬಿದ್ದದ್ದನ್ನು
ಈ ಜನರಿಗೆ ಏನು ಅಧಿಕಾರವಿದೆ? ದಕ್ಷಿಣ
ನದಲ್ಲಿಯ ಬ್ರಾಹ್ಮಣೇತರ ಚಳವಳಿಯ ವಿಷ
ನಾಲ್ಕು ವರುಷದ ಇತಿಹಾಸ ಅಂದರೆ ಅದರ
ಮತ್ತು ಈಗಿನ ಅದರ ಬಲಾಢ್ಯ ಸ್ಥಿತಿಯ ಇ
ದಿನೋಡಿರಿ. ಅದರಿಂದ ನಿಮಗ ಆಶ್ಚರ್ಯವೆ
ಯಾಕಂದರೆ ಈ ಭಟ್ಟರು ತಮ್ಮ ಕುಲದ ಪರಂ
ವನ್ನು ಮರೆಯದೆ ಈ ಬ್ರಾಹ್ಮಣೇತರ ಚಳವ
ಜನನ ಕ್ರಿಯೆಯನ್ನು ವಿಧ್ಯುಕ್ತವಾಗಿ ಮಾಡಲ
ಣದ ಮಾರ್ಗನಿರೀಕ್ಷಣೆ ಮಾಡದ, ದಕ್ಷಿಣೆಯನ
ರೆಂದು ಕೇಳದೆ, ತಾವಾಗಿಯೇ ಬಂದು, ಈ ಮ
ದ ಕ್ಷಣದಲ್ಲಿಯೇ ಕೊಲ್ಲಲು ಯತ್ನ ಮಾಡಿದರು
ಯ ಪ್ರಯತ್ನವು ಸಾಗದ್ದರಿಂದ, ಕೂಸು ಬಹ
ಕುವದಿಲ್ಲವೆಂದು ಹೇಳತೊಡಗಿದರು. ಮತ್ತು
ಬ್ರಾಹ್ಮಣಭಟ್ಟರು ನಮ್ಮ ಬ್ರಾಹ್ಮಣೇತರ
ಬಾಲಕನು ಭೂಮಿಯ ಮೇಲೆ ಇಲ್ಲದಂತೆ ಕ
ಕೊಲ್ಲಲ್ಪಡಲೆಂದು ದೇವರಿಗೆ ಪ್ರತಿದಿನವೂ ಪ್ರಾರ್ಥ
ದ್ದಾರೆ. ಆದರೆ ದುಃಖದ ಸಂಗತಿಯೆಂದರೆ,
ಕಾಲವು ಹೋಯಿತು! ತಿರುಗಿ ಅಂಥ ಕಾಲವು
ರದು. ಇದರ ದೆಸೆಯಿಂದ ನಮ್ಮ ಭಟ್ಟರು ಬ
ಮ್ಮಾನದಲ್ಲಿರುವರು. ಹೀಗೆ ನಿರಾಶೆಯುಳ್ಳವರಾ
ಆಳಿಕೆಯಲ್ಲಿ ತಮ್ಮ ಆಧಿಕ್ಯವು ಕಡಿಮೆಯಾದದ್ದ
ದೊಂದಿಗೆ ಭಟ್ಟರದೊಂದು ದುಃಖದ ದೂರು

ಆದರೆ ಸಭ್ಯಗೃಹಸ್ಥರೇ, ನಾವೀಕಾಯ
ದ್ವೇಷ ಬುದ್ಧಿಯಿಂದ ಪ್ರೇರಿತರಾಗಿದ್ದೇವೆಂದೂ,

ಕಳೆದ ತಾ|| ೧೫ ರಲ್ಲಿ ಬೊಂಬಾಯಿ ಗೌರ್ನರರವರು ಧಾರ್ವಾಡಕ್ಕೆ ಬಂದು ಅಲ್ಲಿಯ ಕಲಾಶಾಲೆಯ ಪ್ರವೇಶ ಸಮಾರಂಭವನ್ನು ನಡೆಯಿಸಿ ಆ ದಿವಸವೇ ಹಿಂತಿರಿಗಿ ತೆರಳಿದರು. ಹಿಂದೆ ಸದರ್ನ ಮಾರಾಟಾ ರೈಲ್ವೆಯವರು ಆಫೀಸನ್ನು ಮಾಡಿಕೊಂಡಿದ್ದ ಕಟ್ಟಡವನ್ನೇ ಸರ್ಕಾರದವರು ಕೊಂಡುಕೊಂಡು ಈ ಕಲಾಶಾಲೆಗೆ ಕೊಟ್ಟಿರುತ್ತಾರೆ. ಅದರ ಪ್ರವೇಶೋತ್ಸವವೇ ಈಗ ಜರುಗಿತು. ಆ ಕಾಲದಲ್ಲಿ ಗೌರ್ನರರವರು ಮಾಡಿದ ಭಾಷಣದಲ್ಲಿ ಕಲಾಶಾಲೆಗಾಗಿ ದ್ರವ್ಯಸಹಾಯ ಮಾಡಿದ ವೀರಶೈವರೇ ಮೊದಲಾದ ಜನವರ್ಗದವರ ಔದಾರ್ಯವನ್ನು ಕೊಂಡಾಡಿ, ವಿದ್ಯಾರ್ಥಿಗಳಿಗೆ ಉಪದೇಶ ಮಾಡಿದುದರಲ್ಲಿ ನೀವೆಲ್ಲಾ ವಿದ್ಯಾಭ್ಯಾಸ ಮುಗಿಸಿಕೊಂಡು ಹೊರಬಿದ್ದ ಕೂಡಲೇ ರಾಜಕೀಯ ವಿಷಯದಲ್ಲಿ ಪಾರಂಗತರೆಂದು ಪ್ರವರ್ತಿಸುವ ಕೆಲವರಂತೆ ನಡೆದುಕೊಳ್ಳದೆ ಜನರಲ್ ಪಿಟ್ ಗೋಖಲೆ ಮೊದಲಾದವರಂತೆ ಲೋಕಾನುಭವವನ್ನು ಪಡೆದು ರಾಜಕೀಯ ವಿಷಯದಲ್ಲೇ ಅಲ್ಲದೆ ಆರ್ಥಿಕ ವಿಷಯದಲ್ಲೂ ನಾಯಕತ್ವವನ್ನು ವಹಿಸುವವರಾಗಿರಿ ಸದ್ಯ ಈ ದೇಶಕ್ಕೆ ಜಡಿಮಳೆಯಂತೆ ಅಖಂಡವಾಗಿ ವಾಗ್ಜಾಲವನ್ನು ಸುರಿಸತಕ್ಕ ನಾಯಕರು ಬೇಕಾಗಿಲ್ಲ. ತಮ್ಮ ಸತ್ಪ್ರವರ್ತನದಿಂದ ನಾಯಕತ್ವವನ್ನು ಸಂಪಾದಿಸಿ ಪ್ರಜೆಗಳನ್ನು ಸನ್ಮಾರ್ಗದಲ್ಲಿ ನಡೆಯಿಸಿಕೊಳ್ಳತಕ್ಕವರು ಬೇಕು ಎಂದು ಮೊದಲಾಗಿ ಹೇಳಿದರು.

ಗೌ|| ಪಂಡಿತ ಮದನಮೋಹನ ಮಾಳವ್ಯಂವರು ಹಿ
ಲಯದ ಫಂಡಿಗಾಗಿ ಹಣವನ್ನು ಕೂಡಿಸಲು ಬೊಂಬಾ
ಅಲ್ಲಿಯ ಉದಾರ ಧನಿಕರಿಂದ ೧೭ ಲಕ್ಷ ರೂ. ಗಳ
ಅವರಲ್ಲಿ ಖಿಂಟಿಂವುಕಂಜ ಭವನದ ಸೇಟ್ ಮಲ್‌ರಾಜ್
ಕಂದಾಸ್, ತುಲಸೀದಾಸ್ ಗೋವರ್ಧನದಾಸ್ ಖಟ್ಟೊ
ದೂ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿ
ಹವನ್ನು "ಮೆಕಂಜ" ಹೆಸರಿನಿಂದ ಕಟ್ಟಿಸುವದಕ್ಕೆಂದು
ಗಳನ್ನು ಕೊಟ್ಟರು. ವಿದ್ಯಾರ್ಥಿಗಳ ವಸತಿ ಗೃಹಸ
ನಾಲ್ಕು ಮಂದಿ ಕೊಟ್ಯಾಧೀಶ್ವರರು ೨೫೦೦೦ ರೂ. ಗ
ರುವರು.

ನೆಯಲ್ಲಿ ನಾವು ಬ್ರಾಹ್ಮಣ ದ್ವೇಷಿಗಳೆಂದೂ, ನಮ್ಮ ಊರ ಕೆಲವು ದೀಡ ಶಹಣೆಯರು ನಾವು ದ್ವೇಷ ಮಂತ್ರಪಾತಕರೆಂದೂ ಹಲವು ಬಗೆಯಿಂದ ನಮ್ಮನ್ನು ನಿಂದಿಸುವರು. ಅವರೀ ಆರೋಪವು ಯೋಗ್ಯವಾದದ್ದೋ ಹೇಗೆಂಬುದನ್ನು ನೀವು ನಿರಭಿಮಾನದಿಂದ ವಿಚಾರ ಮಾಡಬೇಕು. ಈ ಆರೋಪಕ್ಕೆ ನಮ್ಮ ಮಿತ್ರರಾದ ಒಬ್ಬ ಸರ್ ಜಾನ್ ರೀಸ್ ಸಾಹೇಬರು ಪುಷ್ಟೀಕರಣ ಮಾಡಿದ್ದಾರೆ. ಯಾವ ಹೇತುವಿನಿಂದೆಂಬದನ್ನು ಆಡಿ ತೋರಿಸದೆ ಇರುವದು ಒಳ್ಳೇದು. ಈ ಸಾಹೇಬರು ತಾವು ಹಿಂದುಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಬಿಸಿಲಿನೊಳಗೆ ದುಡಿದು ದುಡಿದು ಸಾಯಬೇಕಾಯಿತೆಂದೂ ಈ ದೇಶದ ಕಲ್ಯಾಣಕ್ಕಾಗಿ ತಾವು ಬಲು ಕಷ್ಟಪಟ್ಟವೆಂದೂ, ಈಗಲೂ ನಮ್ಮೆಲ್ಲರ ಹಿತಕ್ಕಾಗಿ ಬಹಳ ಚಿಂತಾಕ್ರಾಂತರಾಗಿದ್ದೇವೆಂದೂ ತಮ್ಮಷ್ಟಕ್ಕೆ ತಾವೇ ಹೊಗಳಿಕೊಂಡಿರುವರು. ಈ ಸಾಹೇಬರು ನಮ್ಮ ಸಲುವಾಗಿ ಎಷ್ಟು ಕಷ್ಟ ಪಟ್ಟರು; ಇದಕ್ಕಾಗಿ ನಾವು ಅವರಿಗೆ ಎಷ್ಟು ಕೃತಜ್ಞರಾಗಿರಬೇಕೆಂಬುದನ್ನೂ ಅವರ ಜೀವನ ಚರಿತ್ರೆಯ ಒಂದು ವಾಕ್ಯವನ್ನೂ ಇಲ್ಲಿ ಉದಾಹರಿಸುವೆನು. ಮದ್ರಾಸಿನಲ್ಲಿ ತಮ್ಮ ಸರಕಾರೀ ಕೆಲಸದ ಬಗ್ಗೆ ಸಾಹೇಬರು ಹೀಗೆ ಬರೆದುಕೊಂಡಿರುವರು:—"ಬಳಿಕ ನಾನು ಮದ್ರಾಸ್ ಹಾಯ್ ಕೋರ್ಟಿನ ಡೆಪ್ಯುಟೀ ರಜಿಸ್ಟ್ರಾರ್ ಆದೆನು. ಮುಂಜಾನೆ ಬೇಟೆ ನಾಯಿಗಳೊಂದಿಗೆ ನರಿಯ ಬೇಟೆಯಾಡಿ ಬಂದು ಕೋರ್ಟಿನಲ್ಲಿ ನ್ಯಾಯಾಧೀಶರ ಕಳಬದಿಯಲ್ಲಿ ಕೂತದ್ದು ನೆನಪಿಗೆ ಬರುತ್ತದೆ. ಮುಂಜಾನೆ ಬೇಟೆಯಾಡಿದ್ದರಿಂದ ಚೆನ್ನಾಗಿ ಊಟ ಮಾಡದೆ ಕೋರ್ಟಿಗೆ ಬಂದು ಕುಳಿತ ಕೂಡಲೆ ತೂಗಡಿಕೆ ಬರುತ್ತಿತ್ತು. ಅನಂತರ ನಿದ್ದೆ ಬರುತ್ತಿತ್ತು. ಆಗ್ಗೆ ನನ್ನ ಮುಸಲಮಾನ ಜಾತಿಯ ಸಿಪಾಯಿಯು ನನ್ನ ಅಂಗಿಯನ್ನು ಜಗ್ಗಿ, ಸಾಹೇಬ ಏಳಿರಿ ಏಳಿರಿ ನ್ಯಾಯಾಧೀಶರು ಕರೆಯುತ್ತಾರೆ ಎನ್ನುತ್ತಿದ್ದನು." ಹೀಗೆ ತನ್ನ ಬಾಯಿಂದಲೇ ಒಡಂಬಟ್ಟ ಮನುಷ್ಯನು ನಮ್ಮ ನಾಡಿನ ಕಲ್ಯಾಣಕ್ಕಾಗಿ ಎಷ್ಟು ಶ್ರಮಪಟ್ಟಿರುವನೆಂದೂ ಮತ್ತು ವಿರಬಹುದೆಂದು ಹಿಂದುಸ್ಥಾನದ ಜನರ ವಿಷಯವಾಗಿ ಇವನಿಗೆ ಎಷ್ಟು ಜ್ಞಾನ ನೀವೇ ವಿಚಾರಿಸಬಹುದು.

ಯಾವನಾದರೊಬ್ಬನು ತನ್ನ ಸಮಾಜೋದ್ಧಾರಕ್ಕಾಗಿ ಶ್ರಮವಹಿಸಿ ಸರಳ ಬುದ್ಧಿಯಿಂದ ದುಡಿಯಲು ಪ್ರಯತ್ನಿಸಿದರೆ ಅದಕ್ಕೆ ದ್ವೇಷವೆನ್ನಬಹುದೋ ಹೇಗೆಂಬುದನ್ನು 'ಜಡ ಅಶಿಕ್ಷಿತ' ನಾದ ನಾನು ನಮ್ಮ ಭೂದೇವರಿಗೆ (ಬ್ರಾಹ್ಮಣರಿಗೆ) ಮತ್ತು ಅವರ ಪೂಜಕರಿಗೆ ಕೇಳುತ್ತೇನೆ. ದೇವರ ಮತ್ತು ಮನುಷ್ಯನ ದೃಷ್ಟಿಯಲ್ಲಿ ಎಲ್ಲರೂ ಸಮಾನರೆಂದೂ, ಜನರೊಳಗಿನ ಭೇದಗಳು ಮನುಷ್ಯ ಕೃತವಿದ್ದು ಕೃತ್ರಿಮವೆಂದೂ ಇವು ಒಂದು ವಿಶಿಷ್ಟ ವರ್ಣದವರ ಲಾಭಕ್ಕಾಗಿ ಕಲ್ಪಿಸಿದವುಗಳಲ್ಲದೆ ಸರ್ವಜೀವದಯಾಪರನಾದ ಪರಮಾತ್ಮನಿಂದ ಮಾಡಲ್ಪಟ್ಟವುಗಳಲ್ಲವೆಂದೂ ಯಾವನಾದರೊಬ್ಬನು ತನ್ನವರಿಗೆ ಉಪದೇಶ ಮಾಡಲು ಹವಣಿಸಿದರೆ ಅದು ದ್ವೇಷವೋ? ಸರಕಾರದ ಮಂತ್ರಾಲೋಚನಾ ಸಭೆಗಳಲ್ಲಿ ಎಲ್ಲ ಸಮಾಜದ ಜನರು ಅವರವರ ಸಂಖ್ಯಾನುಗುಣವಾಗಿ ಪ್ರತಿನಿಧಿಗಳಾಗಿ ಇರಬೇಕೆಂದೂ, ಮುಖ್ಯವಾಗಿ ಜನರ ಅಭ್ಯುದಯವನ್ನು ಕೋರದೆ ಕೇವಲ ತಮ್ಮ ಸ್ವಂತ ಹೆಚ್ಚಳವನ್ನು ಬಯಸುತ್ತಿರುವ ಯಾವುದಾದರೊಂದೇ ಸಮಾಜದ ಜನರು ಹೆಚ್ಚು ಪ್ರಮಾಣದಿಂದ ಇರಕೂಡದೆಂದೂ ಬೇಡಿಕೊಳ್ಳುವದು ಬ್ರಾಹ್ಮಣದ್ವೇಷ ಮಾಡಿದಂತಾಗುವದೋ? ಪ್ರತಿಯೊಂದು ವರ್ಗದವರ ಕೂಡ ಮಾಡುವ ವ್ಯವಹಾರದಲ್ಲಿ ನ್ಯಾಯ ನೀತಿಗಳು ಯಥಾರ್ಥವಾಗಿರಬೇಕು; ಯಾವನೊಬ್ಬನು ಉಚ್ಚವರ್ಣದಲ್ಲಿ ಹುಟ್ಟಿದನೆಂಬುದೊಂದೇ ಕಾರಣದಿಂದ ಅಥವಾ ಯಾವುದಾದರೊಂದು ಸಮಾಜಕ್ಕೆ ವಿದ್ಯಾಬುದ್ಧಿಗಳನ್ನು ಕಲಿತುಕೊಳ್ಳಲಿಕ್ಕೆ ಹೆಚ್ಚು ಸುಸಂಧಿಯು ದೊರಕಿ ಅದರಿಂದ ಮುಂದೆ ಬಂದಿದ್ದರೆ ಅಷ್ಟರಿಂದ ಅವರು ತಮಗಿಂತ ಹಿಂದಾಗಿ ಕಲಿತು ತಮ್ಮಷ್ಟೇ ಬುದ್ಧಿಶಕ್ತಿಯನ್ನು ಸಂಪಾದಿಸಿ ತಮ್ಮ ಸ್ಥಾನವನ್ನು ಆಕ್ರಮಿಸಿ ಬಂದರೆ ಅವರನ್ನು ಮನ್ನಿಸದೆ ಹಿಂದಕ್ಕೆ ದಬ್ಬಿಕೊಡಬಾರದು ಎಂದು ಹೇಳುತ್ತುವದು ದ್ವೇಷ ಮಂತ್ರ ಪಠಣವೋ? ಈ ಪ್ರಕಾರದ ಸದುದ್ದೇಶ ಪ್ರೇರಿತವಾದ ಕಾರ್ಯಗಳೂ ಧ್ಯೇಯಗಳೂ ನೀತಿ ತತ್ವಗಳೂ ಬ್ರಾಹ್ಮಣದ್ವೇಷ ಸೂಚಕವೆಂದು ಯಾರಾದರೂ ಹೇಳುತ್ತ ಕುಳಿತರೆ ಅಂಥಾ ಬ್ರಾಹ್ಮಣದ್ವೇಷಿಯೆನಿಸಿಕೊಳ್ಳಲಿಕ್ಕೆ ನಾನು ನಾಚುವದಿಲ್ಲ. ಮತ್ತು ಈ ಜನರ ಬೈಗಳಕ್ಕೂ ಶಾಪಕ್ಕೂ ನಾನು ಲಕ್ಷ್ಯಗೊಡುವದಿಲ್ಲ. ಇವರ ಬೈಗಳದಿಂದ ಮತ್ತು ಕ್ಷುದ್ರ ಟೀಕೆಯಿಂದ ನಾನು ಬಲು ಗಟ್ಟಿಗನಾಗಿದ್ದೇನೆಂದು ಅಭಿಮಾನದಿಂದ ಹೇಳುತ್ತೇನೆ. ಯಾಕಂದರೆ ಇವರ ನಿಂದಾ ಪ್ರಚುರ ಬೈಗಳ ಶಾಪ ಚೇಷ್ಟೆಗಳೆಂಬ ಬಿರುಗಾಳಿಯ ಹೊಡೆತದ ಅನುಭವವು ನನಗೆ ಚೆನ್ನಾಗಿ ಆಗಿದೆ. ಈ ಬ್ರಾಹ್ಮಣೇತರ ಚಳವಳಿಗೆ ನಮ್ಮ ಬ್ರಾಹ್ಮಣ ಮಿತ್ರರು ಮೊಟ್ಟಮೊದಲು "ಜಟ್ಟಿನಾಯರ" ಚಳವಳಿಯೆಂದು ಚೇಷ್ಟೆಯಿಂದ ಕರೆಯಲ್ಪಟ್ಟಿತು. ಅದೇ ಈಗ ನನ್ನ ಪರಮ ಮಿತ್ರನೂ ಸಹಾಯಕನೂ ಆದ ಕೈ. ಡಾಕ್ಟರ ನಾಯರ ಇವರ ಮರಣದನಂತರ ಚೇತರಿಸಿಗೊಂಡು ಬೆಳೆಯುತ್ತಾ ನಡೆದಿರುವುದು. ಈ ನಾಡಿನಲ್ಲಿ ಕೈ. ಡಾಕ್ಟರ ನಾಯರನಂಥ ಶೂರನೂ ವೀರನೂ ಧೀರನೂ ಸರಳ ಹೃದಯನೂ ಪ್ರಾಮಾಣಿಕನೂ ಸಿಗುವದು ಅತಿ ದುರ್ಲಭ. ಕೈ. ಡಾಕ್ಟರ ನಾಯರರು ತಾವು ಪ್ರಾರಂಭಿಸಿದ ಈ ಕಾರ್ಯದಲ್ಲಿ ತಮ್ಮ ಪ್ರಾಣವನ್ನೇ ಆಹುತಿಯಾಗಿ ಕೊಟ್ಟರು. ಜನ್ಮಭೂಮಿಯನ್ನು ಬಿಟ್ಟು ಪರನಾಡಿನಲ್ಲಿ ಅವರ ಪ್ರಾಣ ವಿಯೋಗ ಸಮಯದಲ್ಲಿಯೂ ಕೂಡ ಈ ಬ್ರಾಹ್ಮಣೇತರ ಚಳವಳಿಗೆ ಪರಮಾತ್ಮನು ಸಂಪೂರ್ಣ ಯಶಸ್ಸು ಕೊಡಲೆಂದು ಶಕ್ತಿಹೀನವಾದ ತುಟಿಗಳ ಸಹಾಯದಿಂದ ಪ್ರಾರ್ಥನೆ ಮಾಡಿ ತೋರಿಸಿದರು. ನಮ್ಮಾ ವೀರಮಿತ್ರನೂ ಶೂರನಾಯಕನೂ ವ್ಯರ್ಥವಾಗಿ ಪ್ರಾಣ ಕೊಡಲಿಲ್ಲ. ಅವನ ಹೆಸರು ಮಂತ್ರಶಕ್ತಿಯುಳ್ಳದ್ದಾಗಿದೆ ಅವನ ನಡೆಯು ನಮಗೂ ನಮ್ಮ ಮುಂದಿನ ಜನಾಂಗಕ್ಕೂ ಅವನು ಆಶಿಸಿದ ಇಷ್ಟ ಫಲಪ್ರಾಪ್ತಿಗಾಗಿ ಚೈತನ್ಯಪ್ರದವಾದದ್ದೂ ಆಗಿದೆ.

"ಈಗಿನ ರಾಜ್ಯ ಕಾರಭಾರವು ನಿರಂಕುಶ ಪ್ರಭುತ್ವವುಳ್ಳದ್ದಾಗಿರುವದರಿಂದ ರಾಜ ಸೇವಕರ ಪ್ರಭುತ್ವವು ಅದು ಕೆಲವೆಡೆಯಲ್ಲಿ ಒಳಿತಾಗಿದ್ದರೂ ಇಲ್ಲದಂತಾಗಬೇಕು. ಯುರೋಪಿಯನ್ನರು ಹಿಂದುಜನರ ವಶಕ್ಕೆ ರಾಜ್ಯಸೂತ್ರಗಳನ್ನೊಪ್ಪಿಸಬೇಕು. ಇದರಿಂದ ಶೀಘ್ರದಲ್ಲಿಯೇ ಹಿಂದುಸ್ಥಾನದಲ್ಲಿ ಸ್ವರಾಜ್ಯ ಭೋಗವು ಉದಯಿಸುವದು" ಹೀಗೆ ಸರಕಾರವನ್ನು ಕುರಿತು ಆಡಿಕೊಳ್ಳುವದರಲ್ಲಿ ನಮ್ಮ ಮಿತ್ರರು ಬೇಸರ ಪಡುವದಿಲ್ಲ. ಪರಕೀಯ ಸರಕಾರವನ್ನು ದ್ವೇಷ ಮಾಡುವದರಲ್ಲಿ ಅವರು ಹಿಂದೆ ಮುಂದೆ ನೋಡುವದಿಲ್ಲ. ಪರಕೀಯ ಆಳರಸರಿಂದ ರಾಜ್ಯಕಾರಭಾರವನ್ನು ಕಿಳಿದುಕೊಳ್ಳುವದು ದ್ವೇಷವೆನಿಸದಿದ್ದರೆ ಮತಾಭಿಮಾನದಲ್ಲಿ ಹೆಚ್ಚು ಸೊಕ್ಕಿನವರಾದ ನಮ್ಮ ಬ್ರಾಹ್ಮಣ ಅಧಿಕಾರಿಗಳಿಂದ ಸಾಮಾಜಿಕ ರಾಜಕೀಯ ಮತ್ತು ಧಾರ್ಮಿಕ ಹಕ್ಕುಗಳನ್ನು ಕಸುಗೊಳ್ಳಲು ಪ್ರಯತ್ನ ಮಾಡುವದು ದ್ವೇಷವೆಂದು ಹೆಸರಿಡಲು ಹೇಗಾದೀತು? ಹಿಂದುಸ್ಥಾನದ ಜನರಿಗೆ ಪರಕೀಯರ ಪ್ರಭುತ್ವಕ್ಕಿಂತಲೂ ಕೈ ಬೆರಳಿನಷ್ಟು ಅಲ್ಪ ಸಂಖ್ಯೆಯುಳ್ಳ ಬ್ರಾಹ್ಮಣರ ಪ್ರಭುತ್ವವು ಹೆಚ್ಚು ಸೇರುವದೆಂದು ಒಬ್ಬ ತಲೆ ತಿರುಕ ಬ್ರಾಹ್ಮಣ ಮಾಸ್ತರನು ಅಂದದ್ದನ್ನು ನಿಷೇಧ ಮಾಡಿ ಖಂಡಿಸ ಹತ್ತಿದರೆ, ಅದಕ್ಕೆ ಬ್ರಾಹ್ಮಣದ್ವೇಷವೆಂದು ಅನ್ನುವದು ಯುಕ್ತವೋ?

ದೊಡ್ಡ ದೊಡ್ಡ ಅಧಿಕಾರಸ್ಥಾನಗಳು ಯುರೋಪಿಯನ್ನರನ್ನು ಬಿಡಿಸಿ ತಮಗೆ ಕೊಡಬೇಕೆಂದು ನಮ್ಮ ಮಿತ್ರರು ನಿರ್ಭಯದಿಂದ ಕೇಳಿಕೊಳ್ಳುವದು ದ್ವೇಷ ಮಂತ್ರ ಪಠಣವೆನಿಸದಿದ್ದರೆ, ಬ್ರಾಹ್ಮಣೇತರರಾದ ನಾವು ಸರಕಾರದ ಎಲ್ಲ ಅಧಿಕಾರಸ್ಥಾನಗಳನ್ನೂ ಬ್ರಾಹ್ಮಣರಿಗೊಬ್ಬರಿಗೇ ಮೊಕ್ತೆಯಿಂದ ಕೊಡಬಾರದೆಂದೂ, ಬಿಳೀ ಬಣ್ಣದವರ ಪ್ರಭುತ್ವವನ್ನು ತಪ್ಪಿಸಿ ಅರಿಸಿನವರ್ಣದ ಜನರ ಪ್ರಭುತ್ವವನ್ನು ಸೇರಿಸಲಿಕ್ಕೆ ಪ್ರಯತ್ನ ಪಡುವವರ ಕಾರ್ಯವನ್ನು ವಿರೋಧಿಸಿದರೆ ಅದಕ್ಕೆ ಅಡ್ಡಿ ತಂದರೆ ನಮಗೇಕೆ ದ್ವೇಷಮಂತ್ರಪಾತಕರೆಂದು ಕರೆಯಬೇಕು? ಯುರೋಪಿಯನ್ನರು ತಾವು ಬ್ರಾಹ್ಮಣರಿಗಿಂತ ರಾಜ್ಯಕಾರಭಾರದಲ್ಲಿ ಹೆಚ್ಚು ದಕ್ಷರೂ ಯೋಗ್ಯತಾಸಂಪನ್ನರೂ ಮತ್ತು ಬುದ್ಧಿಮತ್ತೆಯಲ್ಲಿ ಶ್ರೇಷ್ಠರೂ ಎಂದು ಹೇಳಿದ ಕ್ಷಣವೇ ನಮ್ಮ ಮಿತ್ರರು ಅವರ ಮೇಲೆ ರೇಗಿಸಿ ಹೋಗುವಂತೆ, ಹಿಂದುಸ್ಥಾನದಲ್ಲಿ ಉಳಿದ ಜನರಿಗಿಂತ ಬ್ರಾಹ್ಮಣರೇ ಹೆಚ್ಚು ಬುದ್ಧಿವಂತರೂ ವಿಚಾರಶೀಲರೂ ಎಂದರೆ ಈ ನಿಂದಾಪವಾದವನ್ನು ಉಳಿದವರು ಅನ್ನಿಸಿಕೊಂಡು ಸುಮ್ಮನಿರಬೇಕೋ ಅಥವಾ ಸಿಟ್ಟಿಗೇಳಬೇಕೋ ನೀವೇ ಹೇಳಬೇಕು. ನಮ್ಮ ಮಿತ್ರರು ಮಾತ್ರ ನಾವು ಸುಮ್ಮನಿರಬೇಕೆಂದು ಇಚ್ಛಿಸುತ್ತಾರೆ. ಇವೆಲ್ಲ ಸಂಗತಿಗಳನ್ನು ಸೂಕ್ಷ್ಮರೀತಿಯಿಂದ ವಿಚಾರಿಸುವದು ಅತ್ಯಂತ ಅವಶ್ಯವಾಗಿದೆ. ಇವರ ಆಟವು ಬೈಲಿಗೆ ಬಿದ್ದುದರಿಂದಲೂ ಯೂರೋಪಿಯನ್ನರ ಕಡೆಯಿಂದ ಅಧಿಕಾರವನ್ನೂ, ಆಧಿಕ್ಯಸ್ಥಾನವನ್ನೂ ಬೇಡುವದರಲ್ಲಿ ಇವರ ನಿಜವಾದ ಇಂಗಿತವು ಜನರಿಗೆ ಈಗ ಗೊತ್ತಾದ್ದರಿಂದಲೂ, ನಮ್ಮ ಮಿತ್ರರು ನಿರಾಶೆಯಿಂದ ಮತ್ತು ಮನೋವ್ಯಥೆಯಿಂದ ಬೆಂದುಕೊಂಡು ನಮ್ಮ ಚಳವಳಿಗೆ ಇಲ್ಲದ ಸಲ್ಲದ ಹೆಸರಿಟ್ಟು ಜನರ ಮನಸ್ಸನ್ನು ನಮ್ಮ ವಿಷಯವಾಗಿ ನಮ್ಮ ಕಾರ್ಯದ ವಿಷಯವಾಗಿ ಕಲುಷಿತವಾಗಿ ಮಾಡಲು ಹವಣಿಸುತ್ತಿರುವರು.

ರಾಜಕೀಯ ಅತಿರೇಕ, ಮತ್ತು ಸಮಾಜ ವಿಷಯಕ ಮತಾಂಧತೆ.

ಹಿಂದುಸ್ಥಾನದ ರಾಜಕರಣದಲ್ಲಿ ಕಂಡುಬರುವ ಇನ್ನೊಂದು ವಿಲಕ್ಷಣ ಚಮತ್ಕಾರದ ಕಡೆಗೆ ನಿಮ್ಮ ಲಕ್ಷ್ಯವನ್ನು ತಿರುಗಿಸುವೆ. ನಮ್ಮ ಜಹಾಲಮಿತ್ರರು ಅಥವಾ ರಾಷ್ಟ್ರೀಯ ಪಕ್ಷದವರು, ಅಥವಾ ಸ್ವರಾಜ್ಯವಾದಿಗಳು, ಈಗಲೇ ಸ್ವರಾಜ್ಯ ನಡಿಸಲಿಕ್ಕೆ ಯೋಗ್ಯರಿದ್ದೇವೆಂತಲೂ, ಇದರ ವಿರುದ್ಧ ಯಾವನಾದರೂ ಮಾತಾಡಿದರೆ, ಅವನು ತನ್ನ ಜನ್ಮ ಸಿದ್ಧವಾದ ಹಕ್ಕನ್ನು ಹಣದಾಶೆಗಾಗಿ ಪರಕೀಯ ಆಳರಸರಿಗೆ ಮಾರಗೊಟ್ಟ ದೇಶ ವಂಚಕನೆಂದೂ, ಪ್ರತೀಕಾರಕನೆಂದೂ, ಅನ್ನಲಿಕ್ಕೆ ಹೇಸುವದಿಲ್ಲ; ಬೇಸರ ಪಡುವದಿಲ್ಲ. ನಮ್ಮ ಮಿತ್ರರು ಬ್ರಿಟಿಷರನ್ನು ಗಂಟು ಕಟ್ಟಿಸಿ ಹೊರಗೆ ಹಾಕಿ ತಾವು ರಾಜ್ಯ ಸೂತ್ರಗಳನ್ನು ಕೈಯಲ್ಲಿ ತಕ್ಕೊಳ್ಳುವದೊಂದೇ ತಡ; ನಮ್ಮ ಭರತ ಖಂಡವು ನಾರದರ ಕಾಲದಲ್ಲಿದ್ದಂತೆ ಪುನಃ ಪವಿತ್ರ ಭೂಮಿಯೆನಿಸುವದು. ಎಲ್ಲ ಕಡೆಯಲ್ಲಿ ಸುಖ ಸಮೃದ್ಧಿಗಳುಂಟಾಗುವವು. ಮಳೆ ಬೆಳೆಗಳಿಲ್ಲದ ಕ್ಷಾಮಕಾಲವು ಈ ಭೂಮಿಯಿಂದ ಹೇಳ ಹೆಸರಿಲ್ಲದಂತಾಗಿ, ಸರ್ವತ್ರ ಸಂತೋಷದ ನಗೆಯು ತುಂಬಿ ತುಳುಕುವದು. ಒಂದು ಕಾಲದಲ್ಲಿ ಪರಮ ಪವಿತ್ರವಾದೀ ನಾಡು ಪುನಃ ಸಾಧುಸಂತರ ನಿವಾಸಸ್ಥಾನವಾಗಿಯೂ, ಅವತಾರ ಪುರುಷರ ಆವಾಸ ಭೂಮಿಯಾಗಿಯೂ, ಪರಿಣಮಿಸುವದು. ಹಾಲು ಜೇನುತುಪ್ಪ ಹೊರಸೂಸುವದು; ಅಂದರೆ ಪಂಚಾಮೃತದ ಮಳೆಗರೆಯುವದು!

ಬಾಂಧವರೇ, ಇದನ್ನು ಕೇಳಿ ತಾವು ಉಬ್ಬುಬ್ಬಿ ನಗಬೇಕೆಂತ ನನ್ನ ಪ್ರಯತ್ನವಿಲ್ಲ. ಆದರೂ ಇವರ ಭವಿಷ್ಯವು ಸಫಲವಾಗಲೆಂದು ನಾನು ಅನ್ನಲಾರೆ. ನಮ್ಮ ಮಿತ್ರರು ಪರಕೀಯರಾದ ನಮ್ಮ ಸರಕಾರದವರನ್ನು ಹೊರಸೂಕುವದರಲ್ಲಿ ಜಯಶೀಲರಾದರೆ, ನಮ್ಮ ಭೂಮಿಯ ಮೇಲೆ ಹಾಲು ಜೇನುತುಪ್ಪ ಇವು ಸಂದೇಹವಿಲ್ಲದೆ ಹೊರಚಲ್ಲಿ ಹರಿಯುವವು ಎಂದು ನನಗೆ ಈಗ ಪೂರ್ಣ ನಂಬಿಗೆ ಯುಂಟಾಗಿದೆ. ಆದರೆ ಯಾರ ಸಲುವಾಗಿ ಅವು ಹರಿಯುವವು? ಈ ಮಾತಿನಲ್ಲಿ ನೀವು ಸರ್ವಥಾ ಭ್ರಾಂತಿಯಲ್ಲಿರಕೂಡದು. ಅಂತಹ ಸುದಿನವು ಬರುವದೆಂದು ಗ್ರಹಿಸಿದರೂ ನಿಮ್ಮ ನೀರೊಡೆಯುವನಾಲಿಗೆಯೂ ಹಸಿವೆಯಿಂದ ಬಳಲುತ್ತಿರುವ ನಿಮ್ಮ ಉದರವೂ ಅದರಿಂದ ಶಾಂತಿಯನ್ನು ಹೊಂದುವವೆಂಬದಾಗಿ ಕ್ಷಣ ಮಾತ್ರವೂ ತಿಳಿಯಕೂಡದು. ಸೇನಾನಾಯಕರಾದ ನಮ್ಮ ದರ್ಭಂಗಾ ಮಹಾರಾಜರ ಮತ್ತು ಇವರ ಪರಿಚರ್ಯದವರಾದ ಪಂಡಿತ ಮದನಮೋಹನ ಮಾಲವಿಯಾ ಮತ್ತು ಮದ್ರಾಸದ ಶ್ರೀಯುತ ಬಿ ಆರ್. ರಾಮಚಂದ್ರ ಅಯ್ಯರ ಈ ಸದ್ಗೃಹಸ್ಥರುಗಳಿಂದ ಸ್ವರಾಜ್ಯವು ಸ್ಥಾಪಿತವಾಗಿ ವರ್ಣಾಶ್ರಮಧರ್ಮಪತಾಕೆಯು ನಿಲ್ಲಿಸಲ್ಪಟ್ಟರೆ, ಹಿಂದುಸ್ಥಾನವು ಮತ್ತೊಮ್ಮೆ ನಮ್ಮ ಬ್ರಾಹ್ಮಣ ಬಂಧುಗಳ ಉಪಯೋಗಕ್ಕಾಗಿ ಹಾಲು ಜೇನುತುಪ್ಪದಿಂದ ಮಿತಿಮೀರಿ ತುಂಬಿಹೋಗುವದು. ಆದರೆ ಈ ಸುಖಶಾಂತಿ ಪ್ರಗತಿ ಸೂಚಕ ನವಯುಗದಲ್ಲಿ ನಮ್ಮ ಪರಮಮಿತ್ರರಾದ ದಿವಾನ ಬಹದ್ದೂರು ಶೇಷಗಿರಿರಾಯರು ಸ್ಥಾನಿಕ ಕಾರ್ಯದರ್ಶಿಗಳಾದರಂತೂ ಹಾಲು ಜೇನುತುಪ್ಪದೊಡನೆ ತುಪ್ಪವೂ ಕೂಡಿಕೊಂಡು ಹರಿಯಬಹುದು. ಆ ಮೇಲೆ ವೇದಾಭ್ಯಾಸ ಮಾಡುವವನ ಕಣ್ಣು ಕೀಳಿಸಲ್ಪಡುವವು. ಆ ಪವಿತ್ರ ಗ್ರಂಥಗಳನ್ನು ಕಿವಿಯಿಂದ ಕೇಳಿದ ಮಾತ್ರಕ್ಕೇ ಕಿವಿಗಳಲ್ಲಿ ಕಾದ ಉಕ್ಕಿನ ರಸವು ಹೊಯ್ಯಲ್ಪಡುವದು. ಹೀಗೆ ಪುರಾತನ ಕಟ್ಟು ಕಾನೂನುಗಳು ಪ್ರಚಾರದಲ್ಲಿ ಬರುವವು. ಮತ್ತೊಮ್ಮೆ ಬ್ರಾಹ್ಮಣರನ್ನು ತಡವಿ ಸಿಟ್ಟಿಗೆಬ್ಬಿಸಿದ್ದಾದರೆ ನಿಮಗೆ ಗಲ್ಲಿಗೇರಿಸಿಕೊಳ್ಳುವ ಗೌರವವು ಪ್ರಾಪ್ತವಾಗುವದು. ಪುನಃ ನಿಮ್ಮ ರಾಜರಿಗೂ ಜಮೀನ್ದಾರರಿಗೂ ಭೂದೇವರನ್ನು ಪೂಜಿಸುವದೂ, ಅವರ ದೇಹವನ್ನು ಪವಿತ್ರವಾಗಿಯೂ, ಯಾವ ಪ್ರಕಾರದ ಶಿಕ್ಷೆಯಿಂದಲೂ ಬಾಧಿಸಲ್ಪಡದಂಥಾದ್ದಾಗಿಯೂ ರಕ್ಷಿಸಿಕೊಂಡಿರುವದು ಅವರ ಮುಖ್ಯ ಧರ್ಮವೆಂದೂ, ಮೋಕ್ಷೈಕಮಾರ್ಗವೆಂದೂ, ಅವರಿಗೆ ಉಪದೇಶವಾಗುವದು. ಬಳಿಕ ಧರ್ಮಶಾಸ್ತ್ರಗಳು ಪರಿಶೋಧಿಸಲ್ಪಡುವವು. ಆಗ್ಗೆ ಈಗ ಪ್ರಚಲಿತವಿದ್ದ ದಂಡಶಾಸ್ತ್ರವು (ಪಿನಲ್ ಕೋಡು) ಪ್ರಾಚೀನಕಾಲದ ಕಾಡುಜನರ ಅಸತ್ಯವಾದ ಮತ್ತು ಭಯಂಕರವಾದ ಜ್ಞಾಪಕದ ಪುಸ್ತಕವೆಂದು ತಿಳಿದು ಯಜ್ಞಯಾಗಾದಿಗಳಲ್ಲಿ ಸುಡಲ್ಪಡುವದು. ಆಹಾ! ಈ ಭಾವೀ ಸ್ಥಿತಿಯನ್ನು ಮನಸ್ಸಿನಲ್ಲಿ ತಂದರೆ ನನ್ನ ಮೈತುಂಬಾ ಮುಳ್ಳೇಳುವವು.

ವರ್ಣಾಶ್ರಮ—ಭವಿಷ್ಯತ್ ಕಾಲದ ಬೆದರಿಕೆ.

ಆದರೆ ಬಾಂಧವರೆ, ನಿಮ್ಮ ಗತಿಯೂ ಈ ಸಾಮಾನ್ಯ ಜನರ ಸ್ಥಿತಿಯೂ ನಮ್ಮ ವರ್ಣಾಶ್ರಮಧರ್ಮವಾದಿಗಳು ಅಧಿಕಾರಾರೂಢರಾಗಿ ರಾಜ್ಯವಾಳಹತ್ತಿದರೆ ಹೇಗಾಗುವುದೆಂದು ನಿಮ್ಮ ಕಲ್ಪನೆಯುದೆ? ಬ್ರಿಟಿಶ್ ಸರಕಾರದ ಬಲವು ಪರಿಪೂರ್ಣವಾಗಿದ್ದೂ ನಮ್ಮ ಬಾದಶಹರು ತಮ್ಮ ಪ್ರಜೆಗಳು ಯಾವ ವರ್ಣದವರು ಜಾತಿಯವರು ವರ್ಗದವರು ಧರ್ಮದವರು ಇದ್ದಾಗ್ಯೂ ಎಲ್ಲರನ್ನೂ ಒಂದೇಪ್ರಕಾರವಾಗಿ ಕಾಣುತ್ತೇವೆಂಬದಾಗಿ ತಾತ್ವಿಕ ರೀತಿಯಿಂದಾದರೂ ಆಶ್ವಾಸನ ಕೊಟ್ಟಿದ್ದರೂ, ನಮ್ಮ ವರ್ಣಾಶ್ರಮ ಪಂಥಿಗಳು ಹಳೆಯ ನಾಲ್ಕು ವರ್ಣಗಳು ಹೊಸದಾಗಿ ಪ್ರಚಾರದಲ್ಲಿ ಬರಬೇಕು ಮತ್ತು ಮನುವು ನಿರ್ದಿಷ್ಟಗೊಳಿಸಿದ ಉದ್ಯೋಗದಂಧೆಗಳನ್ನು ಆಯಾ ಜಾತಿಯವರು ಅನುಸರಿಸಬೇಕು, ಹೀಗೆಂದು ಸಭೆಗಳಲ್ಲಿ ಪ್ರಸಿದ್ಧರೀತಿಯಿಂದ ಹೇಳುತ್ತಿರುವಾಗ, ಇಂಥವರು ಅಧಿಕಾರಾರೂಢರಾದ ಪಕ್ಷದಲ್ಲಿ ಅವರ ಕಾರ್ಯಕ್ರಮವು ಹೇಗಾಗುವದೆಂದು ನೀವು ಯೋಚಿಸಿರುವಿರಾ? ಈ ವರ್ಣಾಶ್ರಮವಾದಿಗಳು ಈಗ ಎರಡು ವರುಷಗಳತನಕ ಬಾಯಿ ಮುಚ್ಚಿಕೊಂಡು ಸುಮ್ಮನೇ ಕುಳಿತಿದ್ದರು; ಅರ್ಥಾತ್ ಅಡಗಿಕೊಂಡಿದ್ದರು. ಯಾಕಂದರೆ ಸುಧಾರಣೆಯ ಕಾಯಿದೆಯು ಆಗೋಸುಗ ನಮ್ಮ ಮಿತ್ರರು ಈ ಬ್ರಾಹ್ಮಣೇತರ ಚಳವಳಿಯೆಂಬುದು ಕೆಲವು ಅಪ್ರಸಿದ್ಧ ಜನರ ಗದ್ದಲವೆಂದು ಸುಳ್ಳಾಡಿ ಬ್ರಿಟಿಷರನ್ನು ತಕ್ಕಿಸಬೇಕಾಗಿತ್ತು. ಯಾಕಂದರೆ ಬ್ರಾಹ್ಮಣರಲ್ಲಿಯೂ ಬ್ರಾಹ್ಮಣೇತರರಲ್ಲಿಯೂ ತೀವ್ರತರವಾದ ಮತಭೇದವಿರುವದೆಂದು ಅವರು ಒಪ್ಪಿದ್ದರೆ ಈಗಿನ ಸುಧಾರಣೆಗಳು ಸಿಗುವದು ಸ್ವಲ್ಪ ಕಠಿಣವಿತ್ತು. ಆದುದರಿಂದ ನಮ್ಮ ಬ್ರಾಹ್ಮಣ ಬಂಧುಗಳು ಬ್ರಿಟಿಷರಿಗೆ ಅಸಹ್ಯವಾಗಿ ತೋರುವ ವರ್ಣಾಶ್ರಮವಾದವನ್ನು ನಿಲ್ಲಿಸಿ ಬ್ರಾಹ್ಮಣೇತರ ಚಳವಳಿಗೆ ಮಹತ್ವವನ್ನು ಕೊಡದಿರಬೇಕಾಯಿತು. ಸುಧಾರಣೆಗಳು ದೊರೆತೊಡನೆಯೇ ನಮ್ಮ ವರ್ಣಾಶ್ರಮವಾದಿಗಳು ತಮ್ಮ ಮುಸುಕನ್ನು ಚೆಲ್ಲಿಕೊಟ್ಟು ಬೈಲಿಗೆ ಬಂದಿರುತ್ತಾರೆ. ಈ ವರ್ಣಾಶ್ರಮ ಧರ್ಮ ಸಭೆಗೆ ಒಬ್ಬ ಬ್ರಾಹ್ಮಣೇತರನೂ ಸದಸ್ಯನಿರುವದಿಲ್ಲ. ಆದರೂ ರಾಜಕೀಯ ಪರಿಷತ್ತಿನ ಬೆನ್ನ ಹಿಂದೆಯೇ ವರ್ಣಾಶ್ರಮಧರ್ಮ ಪರಿಷತ್ತನ್ನೂ ನೆರೆಯಿಸುವರು. ಈ ವರ್ಣಾಶ್ರಮಧರ್ಮವಾದಿಗಳ ಧ್ಯೇಯವು ಜಾತಿ ಪದ್ಧತಿಯನ್ನ ಮೊದಲಿನಂತೆ ಪುನರುಜ್ಜೀವನಗೊಳಿಸಿ ಪರಿಶುದ್ಧ ಮಾಡಿ, ಉಳಿದ ಎಲ್ಲ ಜಾತಿಯವರು ಮಾತ್ರ ಮನುಧರ್ಮಶಾಸ್ತ್ರದಲ್ಲಿ ಹೇಳಿದಂಥ ಉದ್ಯೋಗದಲ್ಲಿ ನಿರತರಾಗಿರಬೇಕೆಂದಿದೆ, ಆದರೆ ಎಲ್ಲ ಧರ್ಮಕ್ಕೂ ಮಿಗಿಲಾದ ಬ್ರಾಹ್ಮಣರಿಗೆ ಮಾತ್ರ ಈ ಕಟ್ಟಳೆಯ ಬಂಧನವಿರುವದಿಲ್ಲ. ನಮ್ಮ ಬ್ರಾಹ್ಮಣ ಮಿತ್ರರು ವಿಪುಲಧನವನ್ನೆತ್ತಿ ಬಡಿಯುವ ವಕೀಲರೂ, ವ್ಯಾಪಾರಿಗಳೂ, ದೋಭೀ ಖಾನಾ ಮ್ಯಾನೇಜರರೂ ಗಡಂಗು ಮತ್ತು ಸೆರೆದ ಅಂಗಡಿಗಳನ್ನು ತಪಾಸ ಮಾಡುವ ಅಮಲ್ದಾರರೂ, ಮೀನ ಮತ್ತು ಮಾಂಸದಂಗಡಿಗಳ ಮೇಲ್ವಿಚಾರಕರೂ ಅಂದರೆ ಯಾವದಂಥೆ-ಉದ್ಯೋಗ-ನೌಕರಿಯಿಂದ ಇವರಿಗೆ ತಕ್ಕಮಟ್ಟಿಗೆ

ಒಳ್ಳೆಯ ಸಂಬಳ ಅಥವಾ ಲಾಭಬರುವದೋ ಅಂತಹ ಎಲ್ಲ ಪ್ರಕಾರದ ಹೋರೆಗಳನ್ನೂ ಸಂತೋಷದಿಂದ ಸ್ವೀಕರಿಸಿಯೂ, ಬ್ರಾಹ್ಮಣರು ವರ್ಣಾಶ್ರಮಧರ್ಮ ಪರಿಪಾಲಕರು ಎಂದು ಹೊಗಳಿಸಿಕೊಳ್ಳುವರು. ಬ್ರಾಹ್ಮಣೇತರರು ಮಾತ್ರ ಮನುಸ್ಮೃತಿಯಲ್ಲಿ ಹೇಳಿದ ಉದ್ಯೋಗ ವ್ಯವಸಾಯ ನೌಕರಿಗಳನ್ನು ವಹಿಸಿ ಧರ್ಮಗುರುಗಳಾದ ಬ್ರಾಹ್ಮಣರ ಸುಖೋಪಭೋಗಕ್ಕೆ ಬೇಕಾದ ಸರ್ವತರದ ಸೇವಾಕಾರ್ಯಗಳನ್ನೂ ಮಾಡಿ ಅವರಿಗೆ ಸಮಾಧಾನಗೊಳಿಸಬೇಕು. ನುಡಿಯಂತೆ ನಡೆಯುಳ್ಳ ಮತ್ತು ತನ್ನೊಳಗೆ ಮನಗಂಡಂತೆ ವರ್ತಿಸತಕ್ಕ ಬ್ರಾಹ್ಮಣನಿಗೆ ನಾನು ಬಹಳವಾಗಿ ಆದರಭಾವವನ್ನು ತೋರಿಸುವೆನು. ಆದರೆ ಸಂಸಾರಿಗಳಂತೆ ನಾನಾತರದ ಉದ್ಯೋಗದಲ್ಲಿ ಸೇರಿ "ವಿಷಾರಾಮ" ದಲ್ಲಿ ಹೊತ್ತುಗಳೆಯುತ್ತಿರುವ ಬ್ರಾಹ್ಮಣ ವಕೀಲರು ಮೊದಲಾದ ಉದ್ಯೋಗಸ್ಥ ಜನರ ಮುಂದೆ ತಾವು ವರ್ಣಾಶ್ರಮ ಧರ್ಮದಂತೆ ನಡೆಯುತಕ್ಕವರೆಂದು ಜಂಭದ ರಗಳೆ ಕೊಚ್ಚುವವರನ್ನು ನೋಡಿ ನನಗೆ ಇವರ ನೀಚ ಕಾಪಟ್ಯದ ಬಗ್ಗೆ ತಲೆ ಬೇಸರಿಕೆಯುಂಟಾಗಿದೆ. ಇಂತಹ ಸ್ವಾರ್ಥ ಪರಾಯಣರೂ ಸರಳತನ ಸತ್ಯ ಇವುಗಳಿಗೆ ಪ್ರತೀಕಾರ ಮಾಡುವವರು ಸಾಮಾಜಿಕ ಪ್ರಗತಿಗೆ ಅಡ್ಡ ಬರುವವರೂ ಆದ ಈ ತರದ ಜನರೊಡನೆ ನಾವು ಕೈಲಾದ ಮಟ್ಟಿಗೆ ಕಾದಾಡಬೇಕು. ಇಂತಹ ಕುತ್ಸಿತ ವಿಚಾರಗಳನ್ನೂ ನೀಚತತ್ವಗಳನ್ನೂ ನಮ್ಮ ದೇಶದಿಂದ ಕಿತ್ತುಹಾಕಿದ ಹೊರತು ನಮಗೆ ಶಾಂತಿ ಸಮಾಧಾನವುಂಟಾಗಲಾರದು.

ವರ್ಣಾಶ್ರಮ ಧರ್ಮವಾದಿಗಳ ಧ್ಯೇಯ.

ವರ್ಣಾಶ್ರಮಧರ್ಮವಾದಿಗಳು ಅವರ ಮತ ಸಿದ್ಧಾಂತ ವಿಷಯವಾಗಿ ನಿಮ್ಮ ಅಭಿಪ್ರಾಯವು ಹೇಗಿದ್ದರೂ ತಮ್ಮ ಅಂತರೀಯ ಧ್ಯೇಯವನ್ನು ರಹಸ್ಯವಾಗಿಟ್ಟುಕೊಂಡಿಲ್ಲ. ಸಾಂಪ್ರತ ಬ್ರಾಹ್ಮಣೇತರರಲ್ಲಿ ಹರಡುತ್ತಿರುವ ಸ್ವಾಭಿಮಾನವನ್ನೂ, ತಮ್ಮ ಸ್ವಂತದ ಬಗ್ಗೆ ಇವರಿಗಿರುವ ಪೂಜ್ಯಭಾವವನ್ನೂ ಹಾಳುಮಾಡಿ ಇವರ ಮೇಲೆ ತಮ್ಮ ಅಂಕೆ ಅಧಿಕಾರಗಳು ಸಡಿಲಾಗದೆ ತಮ್ಮ ಹಿಡಿತದಲ್ಲಿಯೇ ಇವರನ್ನು ಇಟ್ಟುಕೊಳ್ಳಬೇಕೆಂದು ಹವಣಿಸುತ್ತಿರುವರು. ಬ್ರಾಹ್ಮಣರ ಶಾಶ್ವತ ಶ್ರೇಷ್ಠತೆಯನ್ನು ಅಲ್ಲಗಳೆಯುವಂಥ-ಬ್ರಾಹ್ಮಣರಿಗೆ ಸಮಾನರು ಯಾರೂ ಇಲ್ಲೆಂಬ ನುಡಿಯನ್ನು ನಿಷೇಧಿಸಿ ವಿರೋಧಿಸುವಂಥ-ಅಬದ್ಧ ಜನರು ಹಾಳಾಗಲೆಂದೂ ದೇವರ ಕ್ಷೋಭೆಯು ಇವರ ಮೇಲೆ ಉಂಟಾಗಲೆಂದೂ ದೇವರಿಗೆಬೇಡಿಕೊಳ್ಳಲು ಹಿಂಜರಿಯುವದಿಲ್ಲ. ಈ ವರ್ಣಾಶ್ರಮ ಧರ್ಮವಾದಿಗಳ ಮುಖ್ಯ ಮುದ್ರಿಕೆಯೆಂದರೆ—"ಉತ್ತಮಬ್ರಾಹ್ಮಣೇತರನಿಗಿಂತ ಕನಿಷ್ಠ ಬ್ರಾಹ್ಮಣನು ಮೇಲು; ಬ್ರಾಹ್ಮಣೇತರನು ಬುದ್ಧಿಯಲ್ಲಿ ಅಂತಃಕರಣದಲ್ಲಿ ಎಷ್ಟೇಯೋಗ್ಯನಿದ್ದರೂ ಅವನು ಬ್ರಾಹ್ಮಣನನ್ನು ಸರಿಗಟ್ಟಲಾರನು" ಈ ಮಾತಿನ ಸತ್ಯಾಸತ್ಯದ ಬಗ್ಗೆ ಹೋದ ತಿಂಗಳು ವರ್ಣಾಶ್ರಮ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ ರಾಷ್ಟ್ರೀಯ ಪಕ್ಷದ ಒಬ್ಬ ಎಮ್. ಜಿ. ರಾಮಚಂದ್ರ ಅಯ್ಯರ್ ಬಿ. ಎ. ಎಲ್ ಎಲ್. ಬಿ. ತಿನವಳ್ಳಿ ಇವರು ಬ್ರಾಹ್ಮಣರಿಗೆ ಮಾಡಿದ ಉಪದೇಶದೊಳಗಿನ ಒಂದು ಉಪದೇಶವಾಕ್ಯವನ್ನು ಉದಾಹರಿಸುತ್ತೇನೆ—"ಗೌರವಕ್ಕೆ ಸಲ್ಲತಕ್ಕ ಯಾವ ಗುಣವೂ ಯೋಗ್ಯತೆಯೂ ನಿಮ್ಮ ಬ್ರಾಹ್ಮಣ ಪುರೋಹಿತರಲ್ಲಿ ಪಂಚಾಂಗಭಟ್ಟರಲ್ಲಿ ಇಲ್ಲವೆಂದು ಬ್ರಾಹ್ಮಣೇತರ ಹಿಂದುಗಳು ತಿಳಿದಿರುತ್ತಾರೆ. ಈ ಕಾರಣದಿಂದ ಅವರು ಬ್ರಾಹ್ಮಣೇತರರಲ್ಲಿಯ ಯಾವನೊಬ್ಬ ಭಕ್ತಿವಂತನನ್ನೋ ಧರ್ಮಿಷ್ಠನನ್ನೋ ಕರೆದು ಅವರಿಗೆ ತಮ್ಮ ಪಿತೃಗಳ ಆತ್ಮಶಾಂತಿಗಾಗಿ ಪಿಂಡಪ್ರದಾನಮಾಡಿಕೊಳ್ಳಲಿಕ್ಕೆ ಬರುವದೆಂದು ನಂಬಿಕೊಂಡಿದ್ದಾರೆ. ಆದರೆ ಇಂತಹ ಸಂಗತಿಗಳು ಅವರವರ ವಿಚಾರಗಳ ಮೇಲೆ ಸರ್ವಥಾ ಅವಲಂಬಿಸಿಲ್ಲ. ಅಗ್ನಿಯ ಸ್ಥಾನದಲ್ಲಿ ಒಬ್ಬ ಶುದ್ಧ ಆಚರಣೆಯುಳ್ಳ ಚನ್ನಾಗಿ ತೊಳೆಯಲ್ಪಟ್ಟ ಶೂದ್ರಭಕ್ತನ ಅಂಗೈ ಯೋಗ್ಯವಾದುದೆಂದು ಎಲ್ಲಿಯೂ ಹೇಳಿಲ್ಲ. ನಾನು ಒಂದು ರಕಮನ್ನು ಮನಿಯಾರ್ಡರ ಮೂಲಕ ಕಳಿಸಬೇಕಾಗಿದ್ದರೆ ಟಪಾಲ ಕಚೇರಿಗೆ ಹೋಗಿ ನಿಯಮಗಳಿಗನುಸರಿಸಿ ಮನಿಯಾರ್ಡರ ನಮೂನೆಯನ್ನು ಬರೆದು ಹಣವನ್ನು ಮನಿಯಾರ್ಡರ ಕಾರಕೂನನ ಕಡೆಗೆ ಕೊಡಬೇಕಾಗುವದು. ಆದರೆ ಟಪಾಲ ಆಫೀಸು ಹೊಲಸು ಜಾಗೆಯಲ್ಲಿರುವದಾಗಿಯೂ ಮನಿಯಾರ್ಡರ ಕಾರಕೂನನು ಮಾಸಿದ ಕಯ್ಯುಳ್ಳವನೂ ತೋರಿಕೆಯಲ್ಲಿ ಅಸಹ್ಯಾಳನೂ ಆಶೆಬುರುಕನೂ ಇರುವನೆಂಬುದಾಗಿಯೂ ಕಲ್ಪಿಸೋಣ. ಈ ತರದ ಟಪಾಲ ಕಚೇರಿಯನ್ನೂ ಮನಿಯಾರ್ಡರ ಕಾರಕೂನನನ್ನೂ ನಮೂನೆಗಳನ್ನೂ ಬಿಟ್ಟುಕೊಟ್ಟು ಉತ್ತಮ ಹವೆಯುಳ್ಳ ಸ್ವಚ್ಛಸ್ಥಳದ ಮೇಲೆ ಕಟ್ಟಿಸಿದ ಡಿಸ್ಟ್ರಿಕ್ಟ್ ಜಡ್ಜ ಸಾಹೇಬರ ತೋಟದಲ್ಲಿರುವ ಒಂದು ಭವ್ಯ ಮಂದಿರಕ್ಕೆ ಹೋಗಿ ಅಲ್ಲಿಟ್ಟ ಒಂದು ಸುಂದರವಾದ ಪೆಟ್ಟಿಗೆಯಲ್ಲಿ ನಾನು ಹಣವಿಟ್ಟು ಬಂದರೆ ಅದು ಮದ್ರಾಸಿನಲ್ಲಿರುವ ನನ್ನ ಗೆಳೆಯನಿಗೆ ಮುಟ್ಟುವದೋ ?"

ಮೇಲಿನ ತರ್ಕಪಾಂಡಿತ್ಯವು ಬ್ರಾಹ್ಮಣ ವಕೀಲನಿಗೆ ಶೋಭಿಸುವಂಥಾದ್ದಾಗಿದೆ. ಇದರ ಮೇಲೆ ಹೆಚ್ಚಿನ ಟೀಕೆಯು ಅವಶ್ಯವಿಲ್ಲ. ಇದೇ ಗೃಹಸ್ಥನು ಕಳೆದ ಪ್ರಾಂತಿಕ ಪರಿಷತ್ತಿನಲ್ಲಿ ವರ್ಣಾಶ್ರಮ ಧರ್ಮವಾದಿಗಳ ವಿರೋಧವಾಗಿ ಏನೂ ಮಾತಾಡಲೂ ಬಾರದೆಂತಲೂ, ಮಾತನಾಡಿದರೆ ಪಸಂದು. ಹರಿಯಲಿಕ್ಕಿಲ್ಲೆಂತ ಹಿಂದೂ ಸಮಾಜ ಸುಧಾರಣಾ ಸಂಘದ ಅಧ್ಯಕ್ಷನೂ ಮತ್ತು ಪ್ರಾಂತಿಕ ಪರಿಷತ್ತಿಗೆ ಅಧ್ಯಕ್ಷನೂ ಆದ ಎಮ್. ಎಸ್. ಅಯ್ಯಂಗಾರ್ ಇವರಿಗೆ ಒಂದು ಪತ್ರವನ್ನು ಬಹಿರಂಗವಾಗಿ ಬರೆದುಕೊಂಡ ಸಂಗತಿಯನ್ನು ನಿಮಗೆ ತಿಳಿಸುವೆನು. ಈ ಪತ್ರಕ್ಕೆ ಹೆದರಿ ನಮ್ಮ ಸಮಾಜ ಸುಧಾರಣಾ ಧುರೀಣರು ಪ್ರಾಂತಿಕ ಪರಿಷತ್ತಿನ ತಮ್ಮ ಭಾಷಣದಲ್ಲಿ ವರ್ಣಾಶ್ರಮಧರ್ಮ ಮತ್ತು ಸಮಾಜ ಸುಧಾರಣೆ ಇವುಗಳ ಬಗ್ಗೆ ಚಕಾರ ಶಬ್ದವನ್ನಾದರೂ ಉಲ್ಲೇಖ ಮಾಡಲಿಲ್ಲ. ಇಷ್ಟೇ ಅಲ್ಲ. ಅದೇ ಪರಿಷತ್ತಿನಲ್ಲಿ ಆ ದಿವಸವೇ ಜರಗಿದ ಸಾಮಾಜಿಕ ಪರಿಷತ್ತಿನಲ್ಲಿ ಇವರು ಯಾವ ಕಾರ್ಯವನ್ನೂ ಕೈಕೊಳ್ಳದೆ ಸುಮ್ಮನೆ ಕುಳಿತಿದ್ದರು. ಜಿ. ಎಸ್. ರಾಮಚಂದ್ರ ಅಯ್ಯರರ ನೇತೃತ್ವದ ಕೆಳಗೆ ಕೂಡಿದ ವರ್ಣಾಶ್ರಮ ಧರ್ಮವಾದಿಗಳೆಲ್ಲರೂ ಸಾಮಾಜಿಕ ಪರಿಷತ್ತಿಗೆ ಮುತ್ತಿಗೆ ಹಾಕಿ ಅದು ನಡೆಯದಂತೆ ಗೊಂದಲವೆಬ್ಬಿಸಿದ್ದರಿಂದ ಮುರಿದುಹೋಯಿತು. ಇದೇ ವೇಳೆಯಲ್ಲಿ ನಮ್ಮ ಸಮಾಜ ಸುಧಾರಣೆಯ ಅಧ್ವರ್ಯುಗಳಾದವರು ಅದಕ್ಕೆ ಜಯವಾಗಲೆಂದು ದೇವರಿಗೆ ಹರಿಕೆ ಹೊರುತ್ತಿದ್ದರು. ಇಷ್ಟಕ್ಕೆ ತೃಪ್ತರಾಗದೆ ಅವರು ಕಲ್ಲದ ಕುರುಚಿ ಬ್ರಾಹ್ಮಣರಿಗೆ ಸಮಾಜ ಸುಧಾರಣೆಯಲ್ಲಿ ಸಹನಶೀಲತೆಯನ್ನು ವಹಿಸಿರೆಂದು ಅಂಗಲಾಚಿ ಬಿದ್ದು ಬೇಡಿಕೊಂಡರು. ನಮ್ಮ ಬ್ರಾಹ್ಮಣ ರಾಜಕರಣ ಪಟುಗಳಿಗೆ ಸಮಾಜಸುಧಾರಣೆಯೊಂದು ವಿನೋದದ ಆಟವೆಂದು ಯಾರು ತಿಳಿಯಲಿಕ್ಕಿಲ್ಲ ? ರಾಜಕೀಯ ಗುಂಪಿನಲ್ಲಿ ಯಾರು ವರ್ಣಾಶ್ರಮ ಧರ್ಮತತ್ವಗಳನ್ನು ಅಲ್ಲಗಳೆಯಲು ಧೈರ್ಯ ತಾಳಿರುವರು ? ಇದು ನಿಶ್ಚಯವಾಗಿ ಬ್ರಾಹ್ಮಣ ಅಧಿಕಾರದ ಗುರುತಲ್ಲವೆ ?

ಒಂದು ದುಷ್ಟ ಸಿದ್ಧಾಂತ.

ರಾಜಕೀಯ ಪರಿಷತ್ತಿನಲ್ಲಿ ಸಮಾಜ ಸುಧಾರಣೆಗೆ ಸಂಬಂಧಪಟ್ಟ ಯಾವ ಪ್ರಶ್ನವನ್ನೂ ತರಕೂಡದೆಂಬದಾಗಿ ನಮ್ಮ ಜಹಾಲ ಮಿತ್ರರು ಪದೇ ಪದೆ ಜನರಿಗೆ ಬೋಧಮಾಡುತ್ತಿರುವ ಸಂಗತಿಯನ್ನು ನಿಮಗೆ ತಿಳಿಸಬೇಕಾಯಿತು. ಇದು ದೇಶಹಿತದೃಷ್ಟಿಯಿಂದ ಕೆಡಕು ಸಿದ್ಧಾಂತವೆಂದು ನಾನು ಅನ್ನುತ್ತೇನೆ. ಇವರು ತಮ್ಮ ರಾಜಕೀಯ ಪರಿಷತ್ತಿನಲ್ಲಿ ಸರಕಾರದವರನ್ನು ಬಯ್ಯುವದರಲ್ಲಿ ನಾಮುಂದೆ ನಾಮುಂದೆ ಎಂಬದಾಗಿ ಹೋರಾಡಿ ಕೇವಲ ತಮ್ಮ ವಾಕ್ಪಾಂಡಿತ್ಯವೊಂದನ್ನೇ ತೋರಿಸಿ ದೊಡ್ಡ ದೇಶಾಭಿಮಾನಿಗಳೂ ರಾಜಕರಣ ಪಟುಗಳೂ ಎಂಬದಾಗಿ ತಿಳಕೊಳ್ಳುವರು. ಈ ನಮ್ಮ ಜಹಾಲ ಪಕ್ಷದ ಮಿತ್ರರು ನಮಗೆ ಆಗ್ರಹ ಪೂರ್ವಕವಾಗಿ ಹೇಳುವದೇನಂದರೆ—ಮೊದಲು ನಾವೆಲ್ಲರೂ ಕೂಡಿ ಇಂಗ್ರೇಜಿ ಸರಕಾರದವರ ಕಯ್ಯಿಂದ ಅಧಿಕಾರವನ್ನು ಕಸುಕೊಳ್ಳೋಣ; ಪ್ರಸಂಗ ಸಾಧಿಸಿದರೆ ಅವರನ್ನು ಪೂರಾ ಓಡಿಸಿಬಿಡೋಣ. ಈ ಕಾರ್ಯವು ಸಫಲಗೊಂಡ ಬಳಿಕ ನಮ್ಮೊಳಗಿನ ತಂಟೆ ತಕರಾರು ಕೊಡ ತಕೊಳ್ಳುವದನ್ನು ಸಾವಕಾಶವಾಗಿ ಸಮಾಧಾನದಿಂದ ಕೂತು ಹಿಂದಿನಿಂದ ಬಗೆಹರಿಸಿಕೊಳ್ಳೋಣ ಎನ್ನುವರು. ಆದರೆ ಬಾಂಧವರೆ, ಈ ಸೂಚನೆಯಲ್ಲಿ ಅಡಕವಾಗಿರುವ ಕಪಟತಂತ್ರ (ಗಾಂಪರನ್ನುವ ಬೆರಿಕೆತನ)ವನ್ನು ಕುರಿತು ಚನ್ನಾಗಿ ವಿಚಾರಿಸುವ. ನಮ್ಮ ಬ್ರಾಹ್ಮಣ ಬಂಧುಗಳು ಬ್ರಿಟಿಸ್ ಅಧಿಕಾರಸ್ಥರನ್ನು ದೂರಮಾಡಿ ಅವರ ಸ್ಥಾನವನ್ನು ತಾವು ಆಕ್ರಮಿಸಿ ನಮ್ಮ ಮಿತ್ರರಾದ ವ್ಹಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಆಶಿಸಿದಂತೆ ಬ್ರಾಹ್ಮಣರ ಪ್ರಭುತ್ವವನ್ನು ಸ್ಥಾಪಿಸಿದಲ್ಲಿ, ಬ್ರಾಹ್ಮಣೇತರರಾದ ನಮಗೆ ಬೇಕಾಗುವ ಸೌಕರ್ಯ ಸೌಲತ್ತುಗಳ ಪ್ರಾಪ್ತಿಗಾಗಿ ನಮ್ಮ ರಾಜಕೀಯ ಮತ್ತು ಧಾರ್ಮಿಕ ಬ್ರಾಹ್ಮಣ ಗುರುಗಳ ಕಡೆಗೆ ಹೋಗಿ ಬೇಡಿಕೊಳ್ಳಹೇಳುವರು. ಇದಕ್ಕಾಗಿ ನಾವು ಅವರೆದುರಿಗೆ ಕೈಮುಗಿದುಕೊಂಡು ನಿಲ್ಲಬೇಕಾದೀತು. ಈ ರಾಜ ಕರಣ ಪಟುಗಳ ಮನದಲ್ಲಿ ದೇಶಹಿತವಾಗಬೇಕೆಂಬ ಕಲ್ಪನೆ ಬಂದಿದ್ದರೆ, ಇವರ ಅಂತಃಕರಣವು ಹೇಳಿಕೊಳ್ಳುವ ಹಳ್ಳಿಯವರ ಬಗ್ಗೆ ಮತ್ತು ದುಡಿಯುವ ಕೂಲಿಕಾರರ ಬಗ್ಗೆ ಶುದ್ಧವಾಗಿದ್ದರೆ, ಒಪ್ಪತ್ತುಂಡು ದುಡಿದುಡಿದು ಸಾಯುತ್ತಿರುವ ಬಡಬಗ್ಗರ ಸ್ಥಿತಿಯು ಸುಧಾರಣೆಯಾಗಬೇಕೆಂದು ಇವರು ಕಳಕಳಿಯುಳ್ಳವರಾಗಿದ್ದರೆ ಸಾಮಾನ್ಯ ಜನರ ಸಾಮಾಜಿಕ ಅಡಚಣೆಗಳೂ ಮತ್ತು ಉಚ್ಚ ವರ್ಣದವರೆನ್ನಿಸಿಕೊಳ್ಳುವವರು ಹೀನ ವರ್ಣದವರೆಂದು ಕರೆಯಿಸಿಕೊಳ್ಳುವವರ ಮೇಲೆ ನಡೆಸಿದ ಬಲತ್ಕಾರ ಜುಲುಮೆಗಳೂ ಇವೆಲ್ಲವುಗಳ ಪರಿಹಾರಕ್ಕಾಗಿ ಇವರು ಅಂತಃಕರಣ ಪೂರ್ವಕವಾಗಿ ಪ್ರಯತ್ನಪಡುವವರಾಗಿದ್ದರೆ ಥೀ ಮಾರಿತನದಿಂದ ರಾಜಕೀಯ ಸಭೆಗಳಲ್ಲಿ ಸಾಮಾಜಿಕ ಸುಧಾರಣೆಯ ಪ್ರಶ್ನವನ್ನು ಬರಗೊಡದಂತೆಮಾಡುತ್ತಿದ್ದಿಲ್ಲ. ಹಾಗಾದರೆ ಈ ಬಗ್ಗೆ ಇವರು ಅತ್ಯಂತ ಅನುಕಂಪೋದ್ರೇಕವಾಗಿ ಹಗಲಿರುಳೂ ಮಾತಾಡುವ ಕಾರಣವೇನೆಂದು ಕೇಳಬಹುದು, ಅದಕ್ಕೆ ಸಮಾಧಾನವೇನಂದರೆ—"ಬ್ರಿಟಿಷ ಅಧಿಕಾರಸ್ಥರ ನಿರಂಕುಶ ಆಡಳಿತದಿಂದ ದೇಶಹಿತಕ್ಕೂ ದೇಶದ ಸಾಮಾನ್ಯ ಜನರಿಗೂ ಏನೂ ಹಿತವಾಗಿಲ್ಲ. ಇದೆಲ್ಲ ಅಡಚಣೆಯ ದೂರಾಗಬೇಕಾದರೆ ರಾಜ್ಯ ಸೂತ್ರಗಳು ಕೋಶಗಳು ನಮ್ಮ ಸ್ವಾಧೀನವಾಗಬೇಕು. ಹಾಗೆ ಮಾಡಿದರೆ ನಮ್ಮ ದೇಶದ ದುರವಸ್ಥೆಯು ಇಲ್ಲದಂತಾಗುವದು" ಎಂದು ನೆವ ಹೇಳಿ ಆಳರಸ (ನೌಕರ ಶಾಹಿ) ರನ್ನು ಬೈದು ತಮ್ಮ ಕಾರ್ಯ ಸಾಧಿಸಬೇಕಾದ್ದರಿಂದ ಅದರ ಸಾಧನೆಗಾಗಿ ಈ ತರದ ಮಾತುಗಳನ್ನು ಮುಂದೆ ಮಾಡುವರು. ಆದರೆ ನಿಜವಾದ ಮುತ್ಸದ್ದಿಯು ಜನಸಮುದಾಯಕ್ಕೆ ಆದಷ್ಟು ಹೆಚ್ಚು ಲೇಸನ್ನು ಮಾಡುವ ಧ್ಯೇಯವನ್ನಿಟ್ಟುಕೊಂಡಿರುವನು. ಮತ್ತು ಅನ್ಯರಿಂದ ಪ್ರಾಪ್ತವಾದ ಬಂಧನಗಳನ್ನು ದೂರಮಾಡುವ ಪೂರ್ವದಲ್ಲಿ ತನ್ನಿಂದಾದ ಬಂಧನಗಳನ್ನು ಮೊದಲು ತಗೆಯಲು ಹವಣಿಸುವನು. ಆದರೆ ನಮ್ಮ ಬ್ರಾಹ್ಮಣ ಮುತ್ಸದ್ದಿಗಳು ಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ತಾವು ಕೇಳುತ್ತಿರುವಾಗ, ಈ ದೇಶದ ಕ್ರೂರ ಪದ್ಧತಿಗಳಿಂದ ಅತಿಶಯವಾಗಿ ಬಂಧಿಸಲ್ಪಟ್ಟ ಜನರ ಬಗ್ಗೆ ಸ್ವಲ್ಪವಾದರೂ ಹೆಣಗಾಡದೆ ಇರುವರು !

ನಮ್ಮ ಪಂಚಮ ಬಂಧುಗಳ ಪ್ರಶ್ನೆ.

ಮೇಲಿನ ವಿಚಾರ ಸರಣಿಯ ದೆಸೆಯಿಂದ ನಾನು ಒಂದು ಮಹತ್ವ ವಿಷಯದ ಬಗ್ಗೆ ಅಂದರೆ ನಮ್ಮ ಪಂಚಮ ಬಾಂಧವರ ಸ್ಥಿತಿ ವಿಷಯವನ್ನು ನಿಮ್ಮ ಲಕ್ಷ್ಯಕ್ಕೆ ಅವಶ್ಯಕವಾಗಿ ತರಬೇಕಾಯಿತು. ಬ್ರಾಹ್ಮಣೇತರರಲ್ಲಿ ಕೆಲವು ಅಶಿಕ್ಷಿತರು, ಹಿರಿಯರ ಮಾರ್ಗದಲ್ಲಿಯೇ ಹೊಂದಿಕೊಂಡಿರುವವರು (Conservative) ಬ್ರಾಹ್ಮಣ ಪುರೋಹಿತರು ಧರ್ಮಶಾಸ್ತ್ರಗಳ ಮೇಲೆ ಮಾಡಿರುವ ಕೆಲವು ಅಪಾರ್ಥಗಳನ್ನು ನಂಬಿ, ಅವರಂತೆ ತಮ್ಮ ಉಳಿದ ಬಾಂಧವರಿಂದ ಅಲಿಪ್ತರಾಗಿಯೂ ದೂರರಾಗಿಯೂ ಇರಲೆಣಿಸಿರುತ್ತಾರೆ. ಈ ಪ್ರಕಾರವಾದ ನಿರ್ದಾಕ್ಷಿಣ್ಯ ವರ್ತನೆಯನ್ನು ಯಾರೂ ಸಮರ್ಥನ ಮಾಡರು. ಮತ್ತು ಸಮರ್ಥನ ಮಾಡುವದು ವಿಹಿತವಲ್ಲ. ಈ ಬಾಬಿನಲ್ಲಿ ನಾವು ನಮ್ಮ ತಪ್ಪನ್ನು ಒಪ್ಪಿಕೊಂಡು ಮುಂದೆ ಅದು ಆಗದಂತೆ ನಡೆಯಬೇಕು. ಬ್ರಾಹ್ಮಣೇತರ ಚಳವಳಿಗೆ ಗೆಲವು ಸಿಗಬೇಕಾದರೆ, ಅದು ಸಾಮಾಜಿಕ ಮತ್ತು ಧಾರ್ಮಿಕ ಬಲಾತ್ಕಾರ ಜುಲುಮೆಯ ವಿರುದ್ಧ ನಡಿಸಿದ್ದಾಗಿ ತಿಳಿದುಕೊಂಡು ಸ್ವತಂತ್ರತೆ, ಸಮಾನತ್ವ, ಮತ್ತು ಬಂಧುಪ್ರೇಮವೆಂಬ ಶಾಶ್ವತವಾದ ತತ್ವಾಧಾರಗಳ ಮೇಲೆ ನಿಲ್ಲಬೇಕಾದುದು ಅವಶ್ಯ. ಇದಕ್ಕಾಗಿ ಪ್ರತಿಯೊಬ್ಬ ಬ್ರಾಹ್ಮಣೇತರನೂ ತನ್ನ ಕೈಲಾದಷ್ಟು ಮಟ್ಟಿಗೆ ನಮ್ಮ ಪಂಚಮ ಬಂಧುಗಳ ಉದ್ಧಾರಕ್ಕಾಗಿ ಪ್ರಯತ್ನಮಾಡಬೇಕು. ಆದರೆ ಇದನ್ನು ಆ ಪಂಚಮರಿಗೊಂದು ಉಪಕಾರವನ್ನು ಮಾಡುತ್ತೇವೆಂಬ ದುರಭಿಮಾನ ಭಾವನೆಯಿಂದ ಮಾಡದೆ, ನಾವು ಹಿಂದೆ ಅವರ ವಿಷಯವಾಗಿ ಮಾಡಿದ ಪಾಪದ ಪ್ರಾಯಶ್ಚಿತ್ತ ಬುದ್ಧಿಯಿಂದಲೂ, ನಮ್ಮ ಕೈಯಿಂದ ಪಾಪವು ಘಟಿಸಲ್ಪಟ್ಟಂಥ ಆ ಪಂಚಮ ಸಮಾಜದ ಸೇವೆಯನ್ನು ಮಾಡಲಿಕ್ಕೆ ನಮಗೊಂದು ಸಂಧಿಯು ಪ್ರಾಪ್ತವಾಯಿತೆಂಬ ಕೃತಜ್ಞತಾಬುದ್ಧಿಯಿಂದಲೂ; ಅತ್ಯಂತ ನಮ್ರಭಾವದಿಂದಲೂ ಪಂಚಮ ಸಮಾಜೋದ್ಧಾರ ಕಾರ್ಯದಲ್ಲಿ ಮನಸ್ಸು ಹಾಕಬೇಕು. ದುರ್ಬಲರ, ಮತ್ತು ಉಚ್ಚ ವರ್ಣದವರೆನಿಸುವವರ ದುರ್ವರ್ತನೆಗೀಡಾದವರ, ಪಕ್ಷವನ್ನು ಹಿಡಿದು ಅನೇಕ ತರದ ಬಿಕ್ಕಟ್ಟಿನ ಪ್ರಸಂಗದಲ್ಲಿ ಕೂಡ ಧೈರ್ಯದಿಂದ ಅವರ ಉನ್ನತಿಗಾಗಿ ಸಾಹಸಪಡುವವರೂ ಉದಾರಮನಸ್ಕರೂ ಕೊಲ್ಲಾಪುರ ಸಂಸ್ಥಾನದ ರಾಜರೂ ಆದ ಶ್ರೀ ಛತ್ರಪತಿ ಮಹಾರಾಜರಿಗೆ ನಮ್ಮ ಕೃತಜ್ಞತೆಯನ್ನೂ ನಮ್ರ ನಮಸ್ಕಾರಗಳನ್ನೂ ಅರ್ಪಿಸುವ. ಬಾಂಧವರೇ, ನಮ್ಮ ಪಂಚಮ ಬಂಧುಗಳ ಪ್ರಶ್ನೆಯು ಸಮಾಧಾನಕರವಾಗಿ ಬಿಡಿಸಲ್ಪಡದಿದ್ದರೆ, ಅದರಿಂದ ದೇಶಕ್ಕೆ ಬಹಳ ಕೆಡಕಾಗುವುದು. ಈ ಕೆಡುಕನ್ನು ನಾವು ಹೋಗಲಾಡಿಸುವವರೆಗೂ ದೈನ್ಯದಿಂದಲೂ ನಾಚಿಕೆಯಿಂದಲೂ ತಲೆ ಬಗ್ಗಿಸಿಕೊಂಡಿರಬೇಕಾಗುವದು. ಯಾಕಂದರೆ:—

ದಾಸರಿರ್ದಹರೈಸೆಯಿಳೆಯೊಳ | ಗೋಸರಿಸದಿಹ ಸತ್ಯಕಾ
ರ್ಯದೆ | ವಿಾಸಲಹ ಧೈರ್ಯದಲೆ ವಿಸುಪಾ ಆರ್ಯರೇನೀವು||
ಈ ಸಹೋದರರಡಿಮೆ ಸಂಕಲೆ | ಗಾಸಿಯದು ನಿಮಗಾಗದಿ
ರ್ದೊಡೆ | ಚಾಸೆ ಯಿದು ಬಿಡುಗಡೆಗೆ ಸಲ್ಲದ ಅಡಿಮೈಸೀವು||೧||
ಸತ್ಯ ಮಾರ್ಗದ ದಿಟ್ಟತನದಲಿ | ಮೊತ್ತವಾಗೊಬ್ಬಬ್ಬರಾದೊಡೆ|
ಯುತ್ತಮದ ಧೈರ್ಯದಲಿ ನಿಲ್ಲದ ಹೇಡಿಗಳದಡಿಮೆ || ವಿತ್ತಸತಿ
ಸುತ ಮಿತ್ರ ಮೋಹದಿ | ಸುತ್ತಿ ಬಳಲುತ ಸುತ್ತಿ ಬಳಲುತ |
ವಿತ್ತಿಗೊಳಗಹ ಮನುಜರೆಂತೋ ನಾಡನೆತ್ತುವರು ||೨||

ಹಿಂದುಸ್ಥಾನದ ರಾಷ್ಟ್ರೀಯ ಸಭೆ.

ಈ ಸಭೆಯ ವಿಷಯವಾಗಿ ನಾವು ಹೆಚ್ಚು ಸರಳತನದಿಂದ ಮಾತಾಡಬೇಕಾಗಿದೆ. ಈ ಸಂಸ್ಥೆಯ ಬಗ್ಗೆ ಪೂರ್ವದಲ್ಲಿ ಅನೇಕ ವಿದ್ಯಾವಂತರು ತಮ್ಮ ಆದರವನ್ನೂ ಮತ್ತು ಕೌತುಕವನ್ನೂ ವ್ಯಕ್ತಪಡಿಸುತ್ತಿದ್ದರು. ಆದರೆ ಪಾಪ! ಅದಕ್ಕೆ ಕೆಟ್ಟ ದಿನಗಳು ಬಂದಿದ್ದು ದುರ್ಗತಿಗೀಡಾಗಿದೆ. ಜನರಿಂದ ಹೆಸರಿಡಿಸಿಕೊಳ್ಳುವ ಹೊತ್ತು ಬಂದಿದೆ. ಭಾರತಮಾತೆಯ ಹಿರಿಯ ಮಕ್ಕಳ ಹೆಸರಿನಿಂದ ಪರಿಶುದ್ಧವಾಗಿದ್ದ ಈ ಮಹತ್ತರವಾದ ರಾಷ್ಟ್ರೀಯ ಸಂಸ್ಥೆಯು ಇಷ್ಟು ಹೀನದಶೆಯನ್ನೈದಿರುವದಲ್ಲಾ! ಅದರ ಪೂರ್ವ ವೈಭವವನ್ನು ನೆನಪಿಗೆ ತರುವಂಥಾದ್ದೇನೊಂದೂ ಉಳಿದಿಲ್ಲ. ಸರ್ ಫಿರೋಜಶಹ ಮೇಥಾ, ಹ್ಯೂಮ್, ಬಾನರ್ಜಿ, ತಯಾಬ್ಜಿ, ಸೇಲಂ ರಾಮಸ್ವಾಮಿ ಮೊದಲಿಯಾರ್ ಮೊದಲಾದ ಮೇಧಾವಿಗಳೂ ನೀತಿವಂತರೂ ಕಲೆತು ಯಾವ ಸಂಸ್ಥೆಯ ನಿಯತಿಯನ್ನು ಕುರಿತು ವಿಚಾರಿಸುತ್ತಿದ್ದರೋ ಅಂತಹ ಸಂಘವು ಈಗ ದುರಾಶೆಯುಳ್ಳ ಗತ್ತುಗಾರ ರಾಜಕರಣ ಪಟುಗಳಿಂದ ಸ್ವಾರ್ಥಸಾಧಕರಾದ ಪೋಕರೀ ಜನರಿಂದ ತಲೆತಿರುಕ ಬಾಲವಕ್ತೃತ್ವಶಾಲಿಗಳಿಂದ ಮತ್ತು ಹೊತ್ತುಬಂದಂತೆ ಕುಣಿಯುವ ಸ್ವಭಾವವುಳ್ಳ ಜನರಿಂದ ತುಂಬಿಕೊಂಡಿರುವದರಿಂದ, ಮತ್ತು ಅದರ ಸ್ವರೂಪವು ಕಪಟನಟನೆಯುಳ್ಳದ್ದಾದುದರಿಂದ, ಅದರ ಬಗ್ಗೆ ನಮ್ಮಲ್ಲಿ ಅನುಕಂಪವೂ ಆದರವೂ ಪೂಜ್ಯಭಾವವೂ ಅಳಿದುಹೋಗಿದೆ. ಈಗಣ ಸ್ಥಿತಿಯಲ್ಲಿ ಅದರ ರಾಷ್ಟ್ರೀಯ ಸ್ವರೂಪವು ಅಳಿದುಹೋಗಿ ಅದು ಕೇವಲ ಬ್ರಾಹ್ಮಣರ ಗುಂಪಾಗಿ ಪರಿಣಮಿಸಿದೆ. ಯಾಕೆಂದರೆ-ಬ್ರಾಹ್ಮಣರ ಪ್ರತಿಷ್ಠೆಯನ್ನು ಹೆಚ್ಚಿಸುವದೂ ಅವರ ಪ್ರಭಾವವನ್ನು ಅಭಿವೃದ್ಧಿಗೊಳಿಸುವದೂ ಅದರ ಕಾರಸ್ಥಾನವಾಗಿದೆ. ನಿಯಮಿತ ಜನರ ಮಂತ್ರಾಲೋಚನೆಗೂ ಅವರ ಕೂಟಕೃತ್ಯಕ್ಕೂ (ಒಳಸಂಚಿಗೂ) ಇಂಬುಗೊಟ್ಟದ್ದೊಂದು ನಮ್ಮ ದೇಶದ ದುರ್ದೈವ. ಅಂಥಾದ್ದರಲ್ಲಿ ನಮ್ಮ ದೇಶದ ರಾಜನೀತಿಯಲ್ಲಿ ತೀರಾ ಅಜ್ಞಳಾದ ಒಬ್ಬ ಐರ್ಲಂಡದ ಅಮ್ಮನು ಅಧ್ಯಕ್ಷಳಾದಂದಿನಿಂದಂತೂ ಅದರ ಸ್ವರೂಪವು ಮತ್ತಿಷ್ಟು ಬದಲಾಯಿಸಿದೆ. ಅಂದಿನಿಂದ ರಾಷ್ಟ್ರೀಯ ಸಭೆಯು ಹೀನದಶೆಯನ್ನೈದುತ್ತಾಬಂದಿರುವದು. ಪ್ರತಿ ವರುಷ ಈ ಸಂಸ್ಥೆಯ ವಿಚಾರಗಳೂ ಹವಣಿಕೆಯೂ ವಿಧಾನವೂ ಸ್ವಾರ್ಥ ಮತ್ತು ದುರಭಿಮಾನ ಪ್ರೇರಣೆಯಿಂದ ಮರ್ಯಾದೆಗೆಟ್ಟ ತಿಳಿಗೇಡಿತನದ ಅತಿರೇಕದಲ್ಲಿ ಮತ್ತು ಒರಟುತನದ ಸುಖಚಿಂತನೆಯಲ್ಲಿ ಮುಳುಗಿರುತ್ತವೆ.

ಅರ್ಥಾತ್ ದೀರ್ಘಾಲೋಚನೆ ನೀತಿಮತ್ತೆ ಮತ್ತು ಲೋಕಕಲ್ಯಾಣ ಇವೆಲ್ಲ ಅದರ ನೇತ್ರಗಳಲ್ಲಿ ತೋರದುವಾಗಿವೆ. ಈ ಸಂಸ್ಥೆಯ ಮುಂದಾಳುಗಳು ತಮ್ಮ ಭಾಷಣವನ್ನ ಶಾಂತಚಿತ್ತದಿಂದ ಜನರು ಕೇಳುವ ಹಕ್ಕನ್ನು ಕೂಡ ನಷ್ಟಪಡಿಸಿಕೊಂಡಿದ್ದಾರೆ; ಕಂಡಕಂಡವರನ್ನು ಸಂತವಿಸಬೇಕೆಂಬ ಅವರ ಮೂರ್ಖಹವಣಿಕೆಯಿಂದ ವಿತಂಡವಾದ ಕಪಟತಂತ್ರ ಮತ್ತು ಸ್ವಮೋಸ ಮೊದಲಾದ ದುರ್ಗುಣಗಳಲ್ಲಿ ಅವರು ಸಂಪೂರ್ಣವಾಗಿ ಮುಳುಗಿಹೋಗಿರುವರು. ಇನ್ನು ಮುಂದೆ ಅವರಾಡಿದುದನ್ನು ಯಥಾರ್ಥವೆಂದು ತಿಳಿಯುವದೂ ಅಥವಾ ಅವರ ಸ್ವತ್ವಗಳ ಮತ್ತು ಕಾರ್ಯಕ್ರಮದ ಉಪಪತ್ತಿಯನ್ನು ಗ್ರಹಿಸಲು ಪ್ರಯತ್ನಿಸುವುದೂ ನಿಷ್ಫಲ. ಎಷ್ಟೆಷ್ಟು ತಮ್ಮ ಭಾಷಣಗಳು ಅಳತೆಗೆಡುವವೋ, ಬೇಡುವಿಕೆಗಳು ಅಬದ್ಧವಿರುವವೋ ನುಡಿಗಳು ನಿಜಾಂಶದಿಂದ ದೂರಾಗಿರುತ್ತವೋ ಅಷ್ಟಷ್ಟು ಹೆಚ್ಚಿಗೆ ಅವರ ದೇಶಾಭಿಮಾನವು ಪ್ರಕಾಶಗೊಳ್ಳುವದೆಂದು ನಮ್ಮೊ ರಾಜನೀತಿ ಧುರೀಣರು ನಂಬಿರಬಹುದು. "ಆಹಹ! ಜನರನ್ನು ತಕ್ಕಿಸಲಿಕ್ಕೆ ಒಮ್ಮೆ ಆರಂಭವು ಮಾಡಿದರೆ ಎಷ್ಟೆಷ್ಟು ತೊಡಕಿನಲ್ಲಿ ಸುಳಿದಾಡಬೇಕಾಗುವದು ನೋಡಿರಿ. ಬಹುಜನರು ಕೂಡಿದುದೇ ಒಂದು ಮಹತ್ವದ ಸಂಗತಿಯೆನಿಸಿದರೆ ಅಥವಾ ಅವರ ಮಾನಸಿಕ ಪ್ರಗತಿಯ ಲಕ್ಷಣವೆಂದು ಹೇಳುವದಾದರೆ, ಒಬ್ಬ ದಾಕ್ಷಿಣಾತ್ಯ ರಾಜನೀತಿಜ್ಞನು ಬಲು ಹೆಮ್ಮೆಯಿಂದ ಈ ಅಸಂಯತ (unrnly) ಪ್ರೇಕ್ಷಕ ಮಂಡಳಿಗೆ ಆತ್ಮಜ್ಞಾನ ಜಾಗೃತಿಯುಳ್ಳ ಲೋಕಮತ ಅಂದರೆ ತಮ್ಮ ಕರ್ತವ್ಯಜ್ಞಾನ ಮಂಡಿತರಾದ ಲೋಕಸಮುದಾಯವೆಂದು ಅನ್ನುವಂತೆ ಯಾರಾದರೂ ಕರೆಯುವದಾದರೆ, ಈ ದೇಶದ ನಿಜಸ್ಥಿಯನ್ನರಿಯದ ಒಳಗೆ ನಡೆಯುವ ಕಪಟಜಾಲದ ಬಗ್ಗೆ ಏನೂ ಗೊತ್ತಿಲ್ಲದ ಒಬ್ಬ ಪರದೇಶದವನು ನಮ್ಮ ರಾಷ್ಟ್ರೀಯ ಸಂಸ್ಥೆಗಳನ್ನು ನೋಡಿ ನಮ್ಮೊ ಭಾರತ ವರ್ಷವು ರಾಜನೀತಿಯಲ್ಲಿ ಬಲುಬೇಗನೆ ಮುಂದೊರೆದಿರುವದೆಂದು ಬಹಳವಾಗಿ ಕೌತುಕ ಪಡುವನು. ಆದರೆ ದುರ್ದೈವದಿಂದ ಅದರೊಳಗಿನ ಕಾರಸ್ಥಾನದ ವಿಷಯವಾಗಿ ಸಂಪೂರ್ಣ ಜ್ಞಾನವಿದ್ದ ನಾವು ಅದರಿಂದ ಎಂದೂ ಮೋಸಹೋಗಲಾರೆವು. ಏನೇನು ಸುಳ್ಳು ಕೊಚ್ಚಿ ಕೂಡಿಸುತ್ತಾರೆಂಬುದು ಯಾರಿಗೆ ಗೊತ್ತಿಲ್ಲ ? ಎಷ್ಟು ಸುಳ್ಳು ಆಶೆ ತೋರಿಸುತ್ತಾರೆ. ಸುಳ್ಳು ವಿಚಾರಗಳನ್ನು ಹರಡುತ್ತಾರೆ, ಸುಳ್ಳು ಮಹತ್ವಾಕಾಂಕ್ಷೆಗಳನ್ನು ಹುಟ್ಟಿಸುತ್ತಾರೆಂಬುದು ಯಾರಿಗೆ ಗೊತ್ತಿಲ್ಲ? ತಮ್ಮ ಸ್ವಂತ ಅಭಿಪ್ರಾಯವೇನೂ ಇಲ್ಲದ ಕೆಲವು ಸೂತ್ರದ ಗೊಂಬೆಯಂತಿರುವ ಹೆಸರಿಗೆ ರಾಜಕಾರ್ಯ ಧುರೀಣರು (Political weather-cocks) ತಮ್ಮ ಯಜಮಾನರು ಹೇಳಿ ಕೊಟ್ಟಂತೆ ಅಶಿಕ್ಷಿತರ ಮತ್ತು ಅಜ್ಞಾನಿಗಳ ಮುಂದೆ ಮನಬಲ್ಲಂತೆ ಕೊಡುತ್ತಿರುವ ವಚನಗಳಂತೆ ಮುಂದೆ ವರ್ತಿಸಬೇಕಾದೀತೆಂದು ಇವರಿಗೆ ಪಾಪ! ಕನಸು ಮನಸಿನಲ್ಲಿ ಸಹ ಹೊಳೆಯುವದಿಲ್ಲ. ಮುಸಲ್ಮಾನ ಜನರನ್ನು ತಮ್ಮ ಕಡೆಗೆ ಮಾಡಿಕೊಳ್ಳುವದು ಅವಶ್ಯವಿದ್ದಿಲ್ಲ. ಅವರನ್ನು ಸಮಾಧಾನ ಪಡಿಸುವದಕ್ಕಾಗಿ ಖಿಲಾಫತ್ ಪ್ರಶ್ನೆಯ ವಿಷಯವಾಗಿ ಸಹಾನುಭೂತಿಯನ್ನು ತೋರಿಸುವರು. ಬ್ರಿಟಿಷ ಉಚ್ಚ ಅಮಲ್ದಾರರನ್ನು ಹೆದರಿಸಿ ಮುಸಲ್ಮಾನರಿಗೆ ಪೂರ್ಣ ಸಹಾಯ ಮಾಡುತ್ತೇವೆಂದು ತೋರಿಸುವದಕ್ಕಾಗಿ ಸರಕಾರದೊಂದಿಗೆ ಸಹಕಾರಿತನವನ್ನು ಕೂಡ ಬಿಡುತ್ತೇವೆಂದು ಹೇಳುವರು. ಹೀಗೆ ಮಾಡಿ ತುಸು ಕರ್ಚಿನಿಂದ ರಾಜಕೀಯ ವಿಚಾರದಲ್ಲಿ ಶಾಬಾಸಕಿಯನ್ನು ಮತ್ತು ಸ್ವಾರ್ಥತ್ಯಾಗದ ಸೋಗನ್ನು ಹಾಕಿಕೊಂಡು ಮೆರೆಯುವರು. ಮತ್ತು ಬ್ರಾಹ್ಮಣರಲ್ಲದವರನ್ನು ಅಂದರೆ ಹಿಂದೂ ಜನರಲ್ಲಿ ಬ್ರಾಹ್ಮಣೇತರರ ಮನಸ್ಸನ್ನು ಒಲಿಸಿಕೊಳ್ಳುವದಕ್ಕಾಗಿ ಅವರು ಬೇಡಿದ್ದನ್ನು ಅಂದರೆ ಕಡಿಮೆ ಕರದ ಭೂಮಿಯನ್ನು ಉಚಿತವಾಗಿ ದಾನ ಕೊಡೋಣ, ನಿರಂತರವಾದ ನೀರಿನ ಪುರವಠೆ ಮೊದಲಾದವುಗಳು ಅವರಿಗೆ ಒದಗುವಂತೆ ಮಾಡಿಕೊಡುವೆವೆಂದು ಹೇಳುವರು. ಸ್ವಲ್ಪ ದಿವಸಗಳಲ್ಲಿ ಅವರ (ಬಡರೈತರ) ಕಷ್ಟ ನಷ್ಟಗಳು ನೀಗಿ ಅವರ ದಾರಿದ್ರ್ಯವು ದೂರವಾಗಿ ಅವರು ಶಾಶ್ವತ ಸುಖದಲ್ಲಿ ತೇಲಾಡುವ ಪ್ರಸಂಗ ಬರುವದೆಂಬದಾಗಿ ಅವರು ಮನಸ್ಸಿನಲ್ಲಿ ಮಾಡಿಕೊಳ್ಳುವಂತೆ ನಟಿಸುವರು. ಆದರೆ ಸಭ್ಯಗೃಹಸ್ಥರೇ ಈ ಉಪದೇಶಕರು ಈ ದೇಶಹಿತಚಿಂತಕರ ಸೋಗು ಹಾಕಿಕೊಂಡವರು ಕಡೆಗೂ ಬೈಲಿಗೆ ಬರಲಾರರು ಅಂದರೆ ಇವರ ಅಂತರ್ಗತ ಕಾಪಟ್ಯವು ಜನರಿಗೆ ಕಡೆತನಕ ತಿಳಿಯಲಾರದೆಂದು ನೀವು ತಿಳಿಯುವಿರೇನು ? ಇವರ ತಾರತಿಗಡಿಯು ಕಡೆತನಕ ನಡೆಯುವದು ಅದು ಯಾರಿಗೂ ಪತ್ತೇ ಹತ್ತಲಾರದೆಂದು ನೀವು ತಿಳಿಯಕೂಡದು. ಅಂತಹ ದಿನವು ಬಂದೇ ಬರುವದು. ಆಗ್ಗೆ ಕಳವಳಗೊಂಡ ಜನರು ಇವರನ್ನು ದಾರಿಯಲ್ಲಿ ತಡೆದು ನುಡಿದಂತೆ ಮಾಡಿಕೊಡಿರೆಂದು ಗಟ್ಟಿಯಾಗಿ ಕೇಳುವರು. ಇಲ್ಲದಿದ್ದರೆ ಸುಳ್ಳುಗಾರರೆಂದು ಅವರನ್ನು ಕಂಭಕ್ಕೇರಿಸುವರು. ನಾನು ಜನ್ಮದಿಂದಲೂ ವೃತ್ತಿಯಿಂದಲೂ ಭವಿಷ್ಯ ಹೇಳುವವನಲ್ಲ. ಆದರೂ ಇವರ ಲೆಕ್ಕವನ್ನು ಕೇಳುವ ದಿವಸಗಳು ಸಮೀಪಿಸಿವೆ. ಆಗ್ಗೆ ನಮ್ಮ ಮಿತ್ರರು ದೊಡ್ಡ ಧ್ವನಿಮಾಡಿ ಜೋರಿನಿಂದ ಹೇಳಿದ್ದೆಲ್ಲವನ್ನೂ ನುಂಗಿಕೊಂಡು ಕೂಡ್ರಬೇಕಾದೀತು. ಅಂತಹ ಕರ್ಮವಿಪಾಕದ ಕಾಲವು ಒದಗಿತೆಂದರೆ ಪರಮಾತ್ಮನು ಅವರ ಆತ್ಮದ ಕಡೆಗೆ ಕರುಣಾದೃಷ್ಟಿಯನ್ನಿಡಲಿ.

ರಾಜಕೀಯ ಕಿಡಿಗೇಡಿತನವೇ ಜಹಾಲ ಪಕ್ಷದವರ ಹಂಚಿಕೆ ಉಪಾಯ.

ಈ ಉಗ್ರ ಪಕ್ಷದವರು ನಡಿಸಿದ ಕಾರ್ಯದ ಮೇಲಿಂದ ಇವರ ಅಂತಿಮಹೇತುವೇನಿರುವದೆಂಬುದು ಸರ್ವರಿಗೂ ಗೊತ್ತಾದ ಮಾತು. ನಿಜವಾದ ರಾಷ್ಟ್ರಭಕ್ತನೂ ಜನರ ಕಲ್ಯಾಣವನ್ನು ಮನಮುಟ್ಟಿ ಬಯಸುವವನೂ ನಮ್ಮ ಜಹಾಲ ಮಿತ್ರರು ಅನುಸರಿಸಿದ ತಂತ್ರಗಳನ್ನು ಎಂದೂ ನಡಿಸನು. ಜನರಿಂದ ತಾವು ನಾಸ್ಯರೂ ಮಹಿಮರೂ ಎಂಬದಾಗಿ ಕರೆಯಲ್ಪಡಬೇಕೆಂಬ ಹುಚ್ಚು ಇಚ್ಛೆಯಿಂದ ಈ ದೇಶದಲ್ಲಿ ಮುಂದೆ ಆಗಬಹುದಾದ ಏನಾದರೊಂದು ವ್ಯತೀಪಾತದಿಂದ ತಮಗೇನು ಹಾನಿಯಾಗದೆಂದು ಪೂರ್ಣ ಅರಿಕೆ ಇದ್ದು ಅದರ ಮುಂದಿನ ಪರಿಣಾಮವನ್ನು ಲೆಕ್ಕಿಸದೆ ಈ ದೇಶದ ಭಾವೀಗತಿಯ ಬಗ್ಗೆ ಸಹ ಪರವೆಯಿಲ್ಲದೆ ನಮ್ಮ ಜಹಾಲರು ಸರ್ವತ್ರ ಭಾವೀ ರಾಜಕ್ರಾಂತಿಯ ಬೀಜಗಳನ್ನು ಬಿತ್ತುತ್ತ ನಡೆದಿರುವರು. ತತ್ವಜ್ಞಾನಾಭ್ಯಾಸದ ಮರೆಯಲ್ಲಿ ನಮ್ಮ ರಾಜಕೀಯ ಸುಖವಸ್ತುಗಳು ತಿಳಿದಾಗಲಿ ಅಥವಾ ತಿಳಿಯದಾಗಲಿ ನವೀನ ಕಲ್ಪನೆ ಮತ್ತು ಸಿದ್ಧಾಂತಗಳ ವ್ಯಾವಹಾರಿಕ ದೃಷ್ಟಿಯ ಕಡೆಗೆ ನೋಡದೆ ಅವುಗಳಿಂದಾಗುವ ಭಾವೀ ವಿಪತ್ತುಗಳಿಗೆ ಕಣ್ಣು ಮುಚ್ಚಿಕೊಂಡು ಅವುಗಳನ್ನು ಪ್ರಕಟಗೊಳಿಸುವರು. ಈ ರಾಜಕೀಯ ಕಿಡಿಗೇಡಿ ಜನರನ್ನು ಸಮಾಜದ ಸಂಪರ್ಕದಿಂದ ಸರ್ವ ಉಪಾಯ ಮಾಡಿ ದೂರಿಡಬೇಕು. ಒಮ್ಮೆ ಈ ಬೇಗೆಗೆ ಅವಕಾಶ ಕೊಟ್ಟರೆ ಅದು ದುರ್ಬಲ ವಸ್ತುಗಳನ್ನು ಸುಡುತ್ತ ಹೋಗಿ ಕಡೆಗೆ ನಮ್ಮೀನಾಡನ್ನು ಯಾವ ಭವಣೆಗೆ ತರುವದೋ ಯಾರು ಬಲ್ಲರು ? ಸದ್ಯಕ್ಕೆ ಕೆಲವರು ಈಗ ಎರಡು ವರುಷದ ಹಿಂದೆ ಗಾಳಿಬಿತ್ತಿ ಸುಂಟರಗಾಳಿಯ ಪೀಕು ತಗೊಂಡಿರುವರು. ಅಂದರೆ ಅಲ್ಲದ ಕೆಲಸಕ್ಕೆ ಕೈ ಹಾಕಿ ಇಲ್ಲದ ವಿಪತ್ತನ್ನು ಅನುಭೋಗಿಸಿರುವರು. ನಮ್ಮೀನಾಡಿನ ಆಧುನಿಕ ಶೋಚನೀಯ ಸ್ಥಿತಿಗೆ ಮುಖ್ಯಕಾರಣವೆಂದರೆ ಶ್ರೀಮತಿ ಬಿಝಾಂಟಬಾಯಿಯವರೇ. ಶ್ರೀಯುತ ಸಿ. ಪಿ. ರಾಮಸ್ವಾಮಿ ಇವರು ಈ ಬಾಯಿಯವರ ಪ್ರಧಾನ ಪರಿಚಾರಕರಿದ್ದು ಒಮ್ಮೆ ಸ್ವರಾಜ್ಯ ಸಂಘದ ಕಾರ್ಯದರ್ಶಿಗಳೂ ಇದ್ದರು. ಇವರು ೧೯೧೭ ಮತ್ತು ೧೯೧೮ ನೇ ಸಾಲಿನಲ್ಲಿ ಇಂಗ್ರೇಜೀ ರಾಜ್ಯವನ್ನು ಧಿಕ್ಕರಿಸುವದರಲ್ಲಿ ಮೊದಲಿಗರಾಗಿದ್ದರು. ರಾಜಕರಣದಲ್ಲಿ ಏಕರೂಪತೆಯನ್ನಿಟ್ಟುಕೊಂಡಿರುವ ಪ್ರಾಗತಿಕ ಪಕ್ಷದ ಮಾದರಿ ಪುರುಷರು ಶ್ರೀಯುತ ಶಾಸ್ತ್ರಿಯವರು.-ಹೀಗೆ ಮೂರೂ ಪಕ್ಷದ ರಾಜನೀತಿವಂತರು ಈಗ ತಮ್ಮ ಮೂರ್ಖತನದ ಪರಿಣಾಮವನ್ನು ಅನುಭವಿಸುತ್ತಿದ್ದಾರೆ. ಮತ್ತು ಸಾಮಾನ್ಯ ಜನಸಮೂಹದ ಮನಸ್ಸನ್ನು ಪ್ರಕೋಪಿಸಿದರು. ಅವರ ಕ್ರೋಧಾಗ್ನಿಯು ಹೊತ್ತುವಂತೆ ಮಾಡಿದರು. ಇದಕ್ಕಾಗಿ ತಾವು ಮಾಡಿದ ದೊಡ್ಡ ತಪ್ಪನ್ನು ಒಪ್ಪಿಕೊಂಡಿದ್ದಾರೆ ಈ ತಮ್ಮ ತಪ್ಪು ಇವರಿಗೆ ಬಹಳ ತಡವಾಗಿ ತಿಳಿಯಿತು. ಜಹಾಲರ ಗುಂಪಿನಿಂದ ಇವರನ್ನು ಹಿಂದಕ್ಕೆ ದೂಡಿರುತ್ತಾರೆ. ಅಲ್ಲಿ ಇವರಿಗೆ ಹಿಂದುಳಿಯಬೇಕಾಯಿತು. ಇಷ್ಟೇ ಅಲ್ಲ. ಇವರು ಮಾತಾಡಲಿಕ್ಕೆ ಎದ್ದು ನಿಂತರೆ ಪ್ರೇಕ್ಷಕರು ಇವರನ್ನು ಕೇಕೆ ಹೊಡೆದು ನಿಲ್ಲಿಸಿ ನಗೆಗೇಡು ಮಾಡಿ ಮಾತಾಡಗೊಡರು. ಇದೆಲ್ಲಾ ಮರೆತು ಕಳೆದ ಮದ್ರಾಸ್ ಪ್ರಾಂತಿಕ ಸಭೆಯಲ್ಲಿ ನಮ್ಮ ಪ್ರಾಗತಿಕ ಪಕ್ಷದವರು ತಮ್ಮ ಜಹಾಲ ಬಂಧುಗಳನ್ನು ಅಪ್ಪಿಕೊಳ್ಳ ಹೋದಾಗ್ಗೆ ಅವರು ಹೇಗೆ ನಡಿಸಿಕೊಂಡರೆಂಬುದು ದೇವರು ನೋಡತಕ್ಕದ್ದಾಗಿದ್ದಿತು. ಪೂರ್ಣಕುಂಭಾಭಿಷೇಕಗಳ ದಿನಗಳು ಹೋದವು. ನಮ್ಮ ಲೋಕನಾಯಕ ನಾಯಕಿಯರ ಸುತ್ತಲೂ ನೆರೆಯುತ್ತಿದ್ದ ಜನ ಸಮೂಹವು ಈಗ ಕರಗಿ ಹೋಯಿತು. ಈಗ ಇವರನ್ನು ಯಾರೂ ಮಾತಾಡಿಸುವದಿಲ್ಲ. ಮತ್ತು ಇವರ ವೈಭವಕ್ಕೂ ಅಳಿಗಾಲ ಬಂದಿತು. ಇವರು ಇಷ್ಟು ಹೀನ ದಶೆಗೆ ಮುಟ್ಟಿರುವರಲ್ಲಾ ಪಾಪ! ಇವರಿಗೆ ನಮಸ್ಕಾರ ಸಾಧಾರಣ ಶರಣಾರ್ಥಿ ಮಾಡತಕ್ಕವರೂ ಅವರ ಪಕ್ಷಕ್ಕೆ ಬರತಕ್ಕವರೂ ಆ ಸಭೆಯಲ್ಲಿ ಯಾರೂ ಸಿಗಲಿಲ್ಲ. ನಮ್ಮ ಜಹಾಲಪಕ್ಷದ ಕೆಲವು ಮಿತ್ರರು ತಮ್ಮ ಕರ್ಮದ ಫಲವನ್ನು ಬಲು ಬೇಗನೆ ಅನುಭವಿಸಬೇಕಾಯಿತು. ಇದು ಶೋಚನೀಯವಲ್ಲವೇ ?

ಈ ಮೂರೂ ಪಕ್ಷದ ರಾಜನೀತಿವಂತರ ಅದೃಷ್ಟದಂತೆ ಇವರ ಸೂತ್ರದ ಗೊಂಬೆಯಂತಿರುವ ಅನುಯಾಯಿಗಳು ನಮ್ಮ ಈಚೆಗಾದ ಮದ್ರಾಸ್ ಪರಿಷತ್ತಿನ ಅಧ್ಯಕ್ಷನಂತೆ ಹೊತ್ತು ಬಂದತ್ತ ಹೋಗುತ್ತಿರುವರು. ಇವರಲ್ಲಿ ಸ್ವತಂತ್ರ ವಿಚಾರ ಸ್ವಂತ ನಿರ್ಧಾರ ಸ್ವಂತ ಇತ್ಯರ್ಥ ಕರಣಶಕ್ತಿ ಈ ಮೊದಲಾದ ಯಾವ ಗುಣಗಳೂ ಶಕ್ತಿಗಳೂ ಇಲ್ಲೇ ಇಲ್ಲ. ನಮ್ಮ ಎದುರಾಳಿಗಳ ಗುಂಪಿನಿಂದ ಅಧ್ಯಕ್ಷನಾದ ಶ್ರೀಯುತ ಎಸ್. ಶ್ರೀನಿವಾಸ ಅಯ್ಯಂಗಾರನಂಥ ರಾಜಕಾರ್ಯ ಧುರೀಣರು ತಯಾರಾಗುತ್ತಿದ್ದರೆ ಅದೊಂದು ನಮಗೆ ಸಂತೋಷವೇ. ಯಾಕೆಂದರೆ ಸ್ವಲ್ಪ ದಿವಸಗಳಲ್ಲಿಯೇ ಇವರೆಲ್ಲ ಇಲ್ಲದಂತಾಗುವರು. ಮತ್ತು ನಮ್ಮ ಸರ್ವೆಂಟ್ ಆಫ್ ಇಂಡಿಯಾ ದವರಂತೆ ಅವರಿಗೂ ಬಿಕ್ಕಿಬಿಕ್ಕಿ ಅಳುವ ಪ್ರಸಂಗ ಬರುವದು.

ಜಂಗುಳಿಯ ಸತ್ತಾವಿರುದ್ಧ ಲೋಕಸತ್ತಾ.

ಈ ಬಗ್ಗೆ ನಾವು ಬಹಳ ಹುಡುಕುವ ಅವಶ್ಯವಿಲ್ಲ. ದೇವರನ್ನೂ ಧನಲಕ್ಷ್ಮಿಯನ್ನೂ ಇಬ್ಬರನ್ನೂ ನೀವು ಪೂಜಿಸಲಾರಿರಿ. ರಾಷ್ಟ್ರೀಯ ಸಭೆ (ಕಾಂಗ್ರೆಸ) ಯಂಥ ಜಂಗುಳಿಗಳ ಕ್ಷುಧಾಶಾಂತಿಯನ್ನು ಮಾಡಿ ನಿಮ್ಮ ಅಂತರ್ಗತ ಮನೋದೇವತಾಪ್ರೇರಣೆಯಂತೆ ನಡೆಯುತ್ತೇವೆಂದು ಭಾವಿಸುವದು ತೀರಾ ತಪ್ಪು. ಒಮ್ಮೆ ತಪ್ಪು ಹಜ್ಜೆ ಇಟ್ಟರೆ, ಒಮ್ಮೆ ಜನರಂಜನೆಗಾಗಿ ಅಂತರಂಗದ ಮನೋದೇವತೆಯನ್ನು ಮರೆತರೆ, ವಿವೇಕ ಮತ್ತು ನ್ಯಾಯ ಇವೆರಡೂ ಮೆರೆಯುವ ಸ್ಥಾನದಲ್ಲಿ ಸೈತಾನನನ್ನು ಕೂಡ್ರಿಸಿ ನಿಮ್ಮ ವಿವೇಕವನ್ನು ಹಾಳುಮಾಡಿಕೊಂಡರೆ, ನೀವು ಒಂದು ಒತ್ತರವಾಗಿ ಹರಿಯುವ ಪ್ರವಾಹದಲ್ಲಿ ನಿಮ್ಮನ್ನು ಚಲ್ಲಿಕೊಟ್ಟಂತಾಗುವದು. ಈ ಪ್ರವಾಹವು ನೀವು ನಷ್ಟವಾಗುವ ಮೊದಲೇ ನಿಮ್ಮನ್ನು ಸಾವಿರ ಚೂರಾಗಿ ಮಾಡಿ ಬಿಡುವದು. ಇದರಂತೆ ನಮ್ಮ ರಾಜಕರಣ ವಿಶಾರದರು ಮಿತಿಮೀರಿದ ರಾಗದ್ವೇಷವುಳ್ಳ ಮತ್ತು ತನ್ನ ಸ್ವಂತ ಪೂಜ್ಯತ್ವಕ್ಕಾಗಿ ಬೇಕಾದುದನ್ನು ಮಾಡಲೆಳಸುವ ಐರ್ಲಂಡದ ಅಮ್ಮನವರ ಅಂಕೆಗೆ ತಮ್ಮ ವಿವೇಕವನ್ನೂ ಚಿತ್ತಸ್ವಾಸ್ಥ್ಯವನ್ನೂ ಎಂದು ಒಪ್ಪಿಸಿಕೊಟ್ಟರೋ ಆಗ್ಗೇನೇ ತಪ್ಪು ಹಜ್ಜೆಯನ್ನಿಟ್ಟರು. ಕೆಡಕು ದಾರಿಯನ್ನು ಮೆಟ್ಟಿದರು. ಪ್ರತಿವರುಷ ಇವರಲ್ಲಿ ರಾಜನೀತಿ ನೈಪುಣ್ಯವು ಏನೂ ಇಲ್ಲವೆಂದು ವ್ಯಕ್ತಪಡಿಸುತ್ತ ಕಠಿಣವಾದ ತೊಡಕಿನಲ್ಲಿ ಬಿದ್ದಿರುವರು. ತಟಸ್ಥ ವಿರೋಧದ ಅಂಜಿಕೆಯಿಂದ ಸತ್ಯಾಗ್ರಹದಿಂದ ಸರಕಾರದೊಡನೆ ಅಸಹಕಾರಿತನವು, ಹೀಗೆ ಒಂದರ ಹಿಂದೊಂದು ಕಠಿಣೋಪಾಯಗಳು ಶಾಶ್ವತವಾದ ನರಕಯಾತನೆಗೀಡು ಮಾಡಿರುತ್ತವೆ. ಸ್ವಲ್ಪ ಕಾಲದಲ್ಲಿಯೇ ನಮ್ಮ ಕಾಂಗ್ರೆಸ್ಸದ ಜಂಗುಳಿಗಳು ಸಿನ್ ಫೇನ್ ಜನರ ಸಿದ್ಧಾಂತಗಳನ್ನು ಅಂಗೀಕರಿಸುವರು. ಅಲ್ಲಿಂದ ರಕ್ತಪಾತ ರಾಜಕ್ರಾಂತಿಯೇ ಮುಂದಿನ ಮಾರ್ಗ. ಹಿಂದುಸ್ಥಾನದಲ್ಲಿ ಬಹು ಸಂಖ್ಯಾಕರಾದ ನೀವು ಬ್ರಾಹ್ಮಣೇತರರು ಈ ಸಮಯದಲ್ಲಿ ಎಚ್ಚರಗೊಳ್ಳದೆ ಮೈಗಳ್ಳರೂ ದಾಕ್ಷಿಣ್ಯಪರರೂ ಆದಲ್ಲಿ ದುರ್ದೈವಕ್ಕಾವಾಸ ಭೂಮಿಯೆನಿಸಿದ ಐರ್ಲಂಡದ ಸ್ಥಿತಿಯೇ ನಮ್ಮೀನಾಡಿಗೆ ತಲ್ಪುವದು. ಆಗ್ಗೆ ನಮ್ಮ ರಾಜನೀತಿವಂತರನ್ನು ಸೃಷ್ಟಿಸಿದ ಜಂಗುಳಿಗಳೇ ಅವರನ್ನು ತಮ್ಮ ದೊಂಬಿತನಕ್ಕೆ ಆಹುತಿಯಾಗಿ ಮಾಡಿ ಬಿಡುವರು. ಆಗ್ಗೆ ತಮ್ಮ ವಿವೇಕವನ್ನು ಅನ್ಯರ ಆಗ್ರಹಕ್ಕಾಗಿ ಬಿಟ್ಟುಗೊಟ್ಟ ಜನರಿಗೆ ಪಶ್ಚಾತ್ತಾಪಬುದ್ಧಿಯು ಬಂದರೆ ಪ್ರಯೋಜನವೇನು ? ನಮ್ಮ ಬ್ರಾಹ್ಮಣೇತರ ಮಿತ್ರರೆ, ಈ ಸೂತ್ರದ ಗೊಂಬೆಯಂತಿರುವ ಜನರ ಅದೃಷ್ಟವು ಮುಂದೆ ಹ್ಯಾಗಾದರೂ ಆಗಲಿ, ಈ ನಡಂತರದಲ್ಲಿ ಪದವಿಗೆ ಹೊಂದಿದ ರಾಜಕೀಯಜನರ ಸಲುವಾಗಿ ನೀವು ನಿಮ್ಮ ಸ್ವಂತ ಹಿತವನ್ನೂ ನಿಮ್ಮ ದೇಶದ ಹಿತವನ್ನೂ ಬಿಟ್ಟುಕೊಡುವಿರೋ ? ಪುನಃ ಈ ನಾಡನ್ನು ಅರಾಜಕತ್ವದಲ್ಲಿ ರಕ್ತಪಾತದಲ್ಲಿ ಕೆಡವಿ ತಮ್ಮ ಹೆಚ್ಚಳವೊಂದನ್ನೇ ಬಯಸಿ ಕೆಲಸ ಮಾಡುತ್ತಿರುವ ಭೀಷಣರಾದ ಸಾಹಸಿಗಳ ಆಟದ ಗೊಂಬೆಯಂತೆ ಅದನ್ನು ನಡಿಸುವದನ್ನು ನೋಡಲು ನೀವು ಸಿದ್ಧರಾಗಿರುವಿರೋ ? ಈ ನಿಮ್ಮ ದುಃಖಭಾಜನವಾದ ನಾಡು ಹಿಂದಕ್ಕೆ ಅನೇಕ ಪರಸ್ಪರ ಜಗಳಾಟಗಳು ಪರಕೀಯರ ದೌಡುಗಳು ರಕ್ತಪಾತ ಇವೆಲ್ಲ ಅನಾಹುತಗಳನ್ನು ಬಹಳವಾಗಿ ಕಣ್ಣಿನಿಂದ ನೋಡುತ್ತಿದ್ದು ಪುನಃ ಅದೇ ಸ್ಥಿತಿಯಲ್ಲಿ ಅದು ಚಲ್ಲಲ್ಪಡುವದನ್ನು ನೋಡುತ್ತಿರುವಿರೋ ? ಹಳಿಯುವದರಲ್ಲಿ ದುರ್ಭಾಷಣದಲ್ಲಿ ಬಯ್ಗುಳದಲ್ಲಿ ಮತ್ತು ನಿಂದಾವಚನಗಳಲ್ಲಿ ದುಂದುಮಾಡುತ್ತಿರುವ ಬಾಯ್ಬಡಿಕ ಸಾಹಸಿಗರ ಹೋರಾಡುವ ಧೈರ್ಯವು ಸಾಕಷ್ಟು ನಿಮಗಿಲ್ಲವೆಂದು ತಿಳಿದು ಮುಂದಕ್ಕೆ ಬೀಳದೆ ಹಿಂದುಳಿಯಲೆಣಿಸುವಿರೋ ? ಹೀಗಾದಲ್ಲಿ, ಈ ನಾಡಿಗೆ ಆಧಾರಭೂತರಾದ ಭೂಮಿಯ ಸಾಗುವಳಿಯಿಂದ ಜೀವಿಸುವ ಮತ್ತು ಸರಕಾರಕ್ಕೆ ತೆರಿಗೆ ಕೊಡುವಂಥ ಬ್ರಾಹ್ಮಣೇತರರಾದ ನೀವೇ ಹೆಚ್ಚಾಗಿ ನಷ್ಟಪಡುವವರು ಎಂಬುದನ್ನು ನೆನಪಿನಲ್ಲಿಡಿರಿ. ಜಮೀನು ಧಾರಣ ಮಾಡುವ ವರ್ಗದ ಪ್ರತಿನಿಧಿಗಳು ನೀವೇಯಲ್ಲವೇ ? ಸಾಹುಕಾರರ ಕೂಲಿಕಾರರ ಪ್ರತಿನಿಧಿಗಳು ನೀವೆಯಲ್ಲವೇ ? ಈ ನಾಡಿನ ಪುನರುಜ್ಜೀವನ ಕಾರ್ಯದಲ್ಲಿ ಯಾರು ತಮ್ಮ ಪ್ರಾಣರಕ್ತವನ್ನು ಸೂರೆ ಮಾಡಿರುವರೋ ಅಂತಹ ಬ್ರಾಹ್ಮಣೇತರರು ನೀವೇಯಲ್ಲವೆ ? ಈ ದೊಂಬಿಯಿಂದ ಈ ರಾಜಕ್ರಾಂತಿಯಿಂದ ಈ ರಕ್ತಪಾತದಿಂದ ಸುಮ್ಮ ಸುಮ್ಮನೆ ಕೊಳ್ಳೆ ಮಾಡುವ ಸ್ವಭಾವವುಳ್ಳ ನಿನ್ನೆ ಕಣ್ದೆರೆದವರಿಗೆ ಏನೂ ಹಾನಿಯೂ ಕಷ್ಟವೂ ಆಗದು. ನಿಮ್ಮ ಫಲಪ್ರದವಾದ ಹೊಲಗಳಲ್ಲಿ ಮಾನವ ರಕ್ತವನ್ನು ಹರಿಯಗೊಡುವಿರೋ ? ನಿಮ್ಮ ಬೆಳೆಗಳು ತುಳಿಯಲ್ಪಡುವದನ್ನೂ, ನಿಮ್ಮ ಮನೆಯು ಹೊಲೆಗಲಸಲ್ಪಡುವಂತೆ ಕದಾಚಿತ್ ನಿಮ್ಮ ಸ್ತ್ರೀಯರ ಮಾನಕ್ಕೂ ನಿಮ್ಮ ಮಕ್ಕಳ ಪ್ರಾಣಕ್ಕೂ ಅಪಾಯ ತಟ್ಟುವಂತೆ ಸಂಭವಿಸುವ ಕ್ರಿಯೆಗಳನ್ನೂ ನೋಡಿ ಸುಮ್ಮನಿರುವಿರೋ ? ಇದೆಲ್ಲ ಆಗಗೊಡದಂತೆ ನಿಮ್ಮ ಇಚ್ಛೆಯಿದ್ದಲ್ಲಿ ನಾನು ನಿಮಗೆ ಕೇಳುವದೇನಂದರೆ—ನಿಮಗೆ ಪವಿತ್ರವೆನಿಸಿದ ಸರ್ವವಸ್ತುಗಳ ಹೆಸರಿನಿಂದ ನಿಮ್ಮ ನಾಡಿನ ಸಲುವಾಗಿ ನಿಮ್ಮಲ್ಲಿರುವ ಪ್ರೇಮದ ಹೆಸರಿನಿಂದ ನಾನು ನಿಮಗೆ ಉದ್ಬೋಧಿಸುವದೇನಂದರೆ:—ನಿಮ್ಮ ಮೇಲೆ ಪೂರ್ಣವಾಗಿ ಅವಲಂಬಿಸಿರುವ ಈ ಸಾಮಾನ್ಯ ಜನರ (Democracy) ಸಲುವಾಗಿ ನೀವು ಮಾತಾಡಬೇಕು. ಇನ್ನು ಮೇಲೆ ಯಾವ ತರದ ಅಸಂಬದ್ಧಪ್ರಲಾಪವನ್ನೂ ಅನರ್ಥವನ್ನೂ ತಡೆಯಲಾರೆವೆಂದು ಪ್ರಕಟವಾಗಿ ನಿರ್ಭಿಡೆಯಿಂದ ಹೇಳಬೇಕು. ಈ ವೈದೇಶಿಕ ವೃಕ್ಷನೆನಿಸುವ ರಾಷ್ಟ್ರೀಯ ಜಂಗುಳಿತನವನ್ನು ಬೇರುಬೆರಸೆ ಕಿತ್ತುಹಾಕಿ ಅದನ್ನು ಈ ನಾಡಿನಿಂದ ಹೊರಗಟ್ಟಿ ಆ ಸ್ಥಾನದಲ್ಲಿ ಮುಂದೆ ದೊಡ್ಡ ಮರವಾಗಿ ಬೆಳೆಯುವ ಲೋಕಸತ್ತಾರೂಪ ಆಗಿಯನ್ನು ಊರುತ್ತೇವೆಂದು ಹೇಳಿರಿ. ಈ ಲೋಕಸತ್ತಾರೂಪ ವೃಕ್ಷದ ಆಶ್ರಯದಿಂದಲೇ ಅದರ ತಂಪಾದ ನೆರಳಿನಲ್ಲಿಯೇ ನಮ್ಮ ನಾಡಿಗೆ ಸುಖಶಾಂತಿಗಳೂ ಆನಂದೋಲ್ಲಾಸಗಳೂ ಭಾವೀ ವೈಭವದ ಆಶೆಯೂ ಉಂಟಾಗಬಹುದು. ಇದನ್ನುಳಿದು ಬೇರೆ ಯಾತರಿಂದಲೂ ಆಗದು. ಪೂರ್ವವೈಭವ ದೊಡ್ಡಸ್ತಿಕೆಯ ಬಗ್ಗೆ ತಪ್ಪು ಗ್ರಹಿಕೆಯ ಭ್ರಮೆಯಲ್ಲುಳಿಯಬೇಡಿರಿ. ಮತ್ತು ಇದರಿಂದ ಯಾರ ಸಿಟ್ಟಿಗೂ ಕ್ಷೋಭೆಗೂ ನೀವು ಪಾತ್ರರಾಗುವಿರೆಂದು ತಿಳಿಯಬೇಡಿರಿ. ನಾವು ಮಾಡುವದೆಲ್ಲ "ನಡೆವ ಹಿತಕ್ಕಾಗಿಯೇ. ಶ್ರೀಯುತ ಗಾಂಧಿಯವರು ಸ್ವತಃ ಸಾಧು ಪುರುಷರು ಇರಬಹುದು. ಆದರೆ

ರಾಜಕರಣ ವಿಷಯದ ಅವರ ಅಭಿಪ್ರಾಯಕ್ಕೂ ನಮ್ಮ ಅಭಿಪ್ರಾಯಕ್ಕೂ ಬಲು ಅಭ್ಯಂತರವಿದೆ. ದುರಭಿಮಾನದ ಕಲ್ಪನೆಯಿಂದ ಈ ಕಾಂಗ್ರೆಸ್ಸನ್ನು ಮುರಿದುಬಿಡಲು ಸಂದೇಹಪಡಬೇಡಿರಿ. ಅದರ ಬದಲು ಒಂದು ನಿಜವಾದ ಉದಾರವಾದ ದೊಡ್ಡದಾದ ಸಂಸ್ಥೆಯು ಬೆಳೆಯುವದು. ಅದೇ ಈ ನಾಡಿನ ಲೋಕಸತ್ತಾತ್ಮಕ ಪ್ರಾತಿನಿಧ್ಯಪರಸಂಸ್ಥೆ ಯೆನಿಸುವದು. ಮತ್ತು ಅದರ ದೇದೀಪ್ಯಮಾನ ಕಿರಣಗಳ ಸಹಾಯದಿಂದ ರಾಜಕರಣ ವ್ಯವಹಾರದಿಂದ ನಷ್ಟಪಟ್ಟ ಅನೇಕ ಜನರು ಚೇತರಿಸಿಕೊಂಡು ಮುಂದೆ ಅದನ್ನು ಒಂದು ಸುಖನಿವಾಸದಂತೆ ಕಾಣುವರು.

ನಮ್ಮ ಮುಂದಿನ ಕಾರ್ಯ.

ಬಾಂಧವ ಪ್ರತಿನಿಧಿಗಳೇ, ನಾವು ಈಗ ಒಂದು ನವಯುಗದಲ್ಲಿ ಪ್ರವೇಶ ಮಾಡಿರುವೆವು. ಈಗ ನಮ್ಮ ನಾಡು ಅದರಲ್ಲಿ ವಾಸಮಾಡುವ ನಮ್ಮ ಪ್ರತಿಯೊಬ್ಬರಿಂದ ತಮ್ಮ ಉತ್ತಮ ಮಕ್ಕಳನ್ನು ತನ್ನ ಸಲುವಾಗಿ ದುಡಿಯಬೇಡುತ್ತದೆ. ಈ ವರೆಗೆ ನಾವು ಶಾಂತರೀತಿಯಿಂದ ನಮ್ಮ ವ್ಯವಹಾರ ಉದ್ದಿಮೆ ಜೀವನ ವೃತ್ತಿಗಳನ್ನು ಬಿಣವಿಡಾಯವಿಲ್ಲದೆ ಸಾಗಿಸುತ್ತಬಂದೆವು. ಮತ್ತು ನಮ್ಮ ಸಲುವಾಗಿ ಬೇರೆಯವರಿಗೆ ಮಾತಾಡಗೊಟ್ಟೆವು. ನಮ್ಮ ಸಲುವಾಗಿ ಅವರು ಅಧಿಕಾರ ಹೊಂದಿ ಪ್ರಕಾಶಿಸಗೊಟ್ಟೆವು. ನಮ್ಮ ನಾಡಿನ ಭಾವಿಸ್ಥಿತಿಯನ್ನು ರೂಪಗೊಳಿಸತಕ್ಕ ಸರಕಾರದ ಧೋರಣವನ್ನು ನಿರ್ದೇಶಗೊಳಿಸಲಿಕ್ಕೆ ಈ ಕಾರ್ಯಗಳನ್ನು ನಾವೇ ಮಾಡಿಕೊಳ್ಳುವ ಸಮಯವು ಈಗ ಪ್ರಾಪ್ತವಾಗಿದೆ. ನಿಮ್ಮ ನಾಡಿನ ಆಡಳಿತದಲ್ಲಿ ನೀವು ಹೆಚ್ಚು ಪಾಲು ತೆಗೆದುಕೊಂಡು ಕೆಲಸಮಾಡಹತ್ತಿದರೆ, ಬೇಗನೆ ಅಮಲಿನಲ್ಲಿ ಬರತಕ್ಕ ಹೊಸ ಸುಧಾರಣೆಗಳಿಂದ ನಿಮ್ಮ ಸಾಮಾನ್ಯ ಜನಸಮೂಹಕ್ಕೆ ಬಹಳ ಹಿತವಾಗುವಂತೆ ಮಾಡಬಹುದು. ಆದರೆ ನಿಮ್ಮ ಸಲುವಾಗಿ ಅನ್ಯರು ಮೊದಲಿನಂತೆ ಮಾತಾಡಿಕೊಂಡಿರುವಂತೆ ನೀವು ನಿಶ್ಚಿಂತರಾಗಿದ್ದರೆ, ಅಂದರೆ ನಿಮ್ಮ ದೇಶದ ಆಡಳಿತದ ಭಾರವನ್ನು ನೀವು ವಹಿಸದೆ ಮೊದಲಿನಂತೆ ಬೇರೆಯವರ ಸ್ವಾಧೀನ ಮಾಡಿಬಿಟ್ಟರೆ, ಅದರಿಂದ ನಿಮಗೆ ಬಹಳ ಹಾನಿ ತಟ್ಟುವದರಲ್ಲಿ ಏನೂ ಸಂದೇಹವಿಲ್ಲ. ಪ್ರಾಗತಿಕ ಪಕ್ಷದವರು ಸುಧಾರಣಾಕಾಯಿದೆಯು ಜಯಪ್ರದವಾಗುವ ಹೇತುವಿನಿಂದ ಕೆಲಸಮಾಡಲಿ; ನಮ್ಮ ಜಹಾಲ ಪಕ್ಷದವರು ಸುಧಾರಣಾಕಾಯಿದೆಯನ್ನು ಮೂಲೆಗುಂಪು ಮಾಡುವ ಉದ್ದೇಶದಿಂದ ಪ್ರಾಗತಿಕ ಪಕ್ಷದವರೊಡನೆ ಬಡಿದಾಡಲಿ. ಪ್ರಾಗತಿಕ ಪಕ್ಷದವರೂ ಅಲ್ಲದ, ಜಹಾಲ ಪಕ್ಷದವರೂ ಅಲ್ಲದ, ಕೇವಲ ಜನಸಾಮಾನ್ಯ ಪಕ್ಷದವರಾದ ಬ್ರಾಹ್ಮಣೇತರರಾದ ನೀವು ಮಾತ್ರ ಮುಖ್ಯವಾಗಿ ಲೋಕಸೇವೆಯೊಂದೇ ಹೇತುವಿನಿಂದ ಮತ್ತು ನಮ್ಮ ಕೈಯಿಂದಾದಷ್ಟು ಯಾವತ್ತೂ ಜನಸಮೂಹಕ್ಕೆ ಸುಖಶಾಂತಿಗಳನ್ನು ದೊರಕಿಸಿಕೊಡುವ ಒಂದೇ ಉದ್ದೇಶದಿಂದ ಈ ನ್ಯಾಯವಿಧಾಯಕ ಸಭೆಗಳಲ್ಲಿ ಬಹು ಜನರು ಸೇರಿಕೊಂಡು ಕೆಲಸ ಮಾಡಿರಿ.

ಸಂಕ್ಷೋಭೆ ಇದೇ ಸಾಧ್ಯವಸ್ತುವಲ್ಲ.

ರಾಜಕೀಯ ಮಾತಿನಲ್ಲಿ ನಮ್ಮ ಜಹಾಲ ಮಿತ್ರರ ವಿಶ್ವಾಸವು ಹೇಗೇ ಇರಲಿ, ಬ್ರಾಹ್ಮಣೇತರರಾದ ನಾವು ಅನಿಷ್ಟಪರಿಹಾರಕ್ಕಾಗಿ ಮಾಡುವ ಸಂಕ್ಷೋಭೆಯು (agitation) ಸಾಧ್ಯವಸ್ತುವಲ್ಲ, ಅದು ಕೇವಲ ಸಾಧನವಾಗಿದೆ ಎಂದು ತಿಳಿಯುವೆವು. ಯಾವುದೊಂದು ರಾಷ್ಟ್ರವು ಕೇವಲ ವಾಗಾಡಂಬರದ ಹುಚ್ಚುಚ್ಚು ಮಾತುಗಳಿಂದ ಏಳಿಗೆಯನ್ನು ಹೊಂದದು. ಜನಸಾಮಾನ್ಯರೊಡನೆ ಸೇರಿಕೊಂಡು ಅವರಿಗೆ ಹಿತವಾಗುವಂತೆ ಎಲ್ಲ ಬಗೆಯಾಗಿ ಪ್ರಾಮಾಣಿಕತನದಿಂದ ದುಡಿದು ಕೆಲಸಮಾಡುವದರ ಮೇಲೆ ಮುಖ್ಯವಾಗಿ ದೇಶದ ನಿಜವಾದ ಪ್ರಗತಿಯು ಅವಲಂಬಿಸಿದೆ. ನಮ್ಮ ನಾಡನ್ನು ಹಿಡಿಕೊಂಡು ನಾವು ಮುಂದೊರೆಯಬೇಕಾದರೆ ಹೆಚ್ಚು ಬಲವುಳ್ಳ ಒಳ್ಳೆ ಸುವ್ಯವಸ್ಥಿತವಾದ ಪಾಶ್ಚಿಮಾತ್ಯ ರಾಷ್ಟ್ರಗಳ ಕೂಡ ನಾವು ಸ್ಪರ್ಧೆಯಿಂದ ವ್ಯವಹರಿಸಬೇಕಾದ ರಾಷ್ಟ್ರಗಳ ಸ್ನೇಹ ಸಂಘದಲ್ಲಿ ನಮಗೂ ಸ್ಥಳವು ದೊರೆಯಬೇಕಾದರೆ ನಮ್ಮಷ್ಟಕ್ಕೆ ನಮ್ಮೊಳಗೆ ನಾವು ಶೋಧಮಾಡುವದು ಅವಶ್ಯವಿದೆ. ಮತ್ತು ನಮ್ಮ ಅಂತಃಕರಣವನ್ನು ಪರೀಕ್ಷೆ ಮಾಡಿ ಒಳಗೂ ಹೊರಗೂ ಸುಧಾರಿಸಲು ನಾವು ಯತ್ನಪಡಬೇಕು. ಜನರಲ್ಲಿ ಪರಸ್ಪರ ಸಹಾಯ ಮಾಡುವ ಬುದ್ಧಿಯನ್ನು ಅಂಕುರಗೊಳಿಸುವದೂ, ಬರೀ ವಿಶ್ವವಿದ್ಯಾಲಯದ ಪದವಿಗಳ ಬದಲು ಔದ್ಯೋಗಿಕ ಮಾರ್ಗಕ್ಕೆ ಉತ್ತೇಜನ ಕೊಡುವದೂ, ಜನಸಾಮಾನ್ಯರಿಗೂ ಶಿಕ್ಷಣ ಕೊಡುವದೂ, ಸಹಕಾರಿ ಸಂಘಗಳನ್ನು ಅಭಿವೃದ್ಧಿಗೊಳಿಸುವದೂ, ಭೌತಿಕ ಶಾಸ್ತ್ರದಲ್ಲಿ ಹೆಚ್ಚು ಶೋಧ ಮಾಡುವದೂ ಇವೇ ಮುಂತಾದ ಕಾರ್ಯಗಳಲ್ಲಿ ನಾವು ಶ್ರಮಪಡಬೇಕಾದುದು ಅವಶ್ಯವಾದದ್ದು.

ನಮ್ಮ ಶಿಕ್ಷಣಪದ್ಧತಿ.

ಈ ದೇಶದಲ್ಲಿ ಪ್ರಚಲಿತವಿರುವ ಶಿಕ್ಷಣ ಪದ್ಧತಿಯಿಂದ ಇಲ್ಲಿಯ ಮುಖ್ಯನಿವಾಸಿಗಳಾದ ಸಾಮಾನ್ಯಜನರಿಗೆ ಸಾಮಾಜಿಕ ರೀತಿಯಿಂದ ಬಹಳ ಅನ್ಯಾಯವೂ ಅನರ್ಥವೂ ಘಟಿಸಿದೆ. ಅವರಿಗೆ ಸಮಾನವಾದ ಅನುವನ್ನು ಕೊಟ್ಟಿರುವದಿಲ್ಲ; ಅವರ ಬುದ್ಧಿಶಕ್ತಿಯನ್ನು ಕೊಂದು, ಒಕ್ಕಲತನ, ನೇಯ್ಗೆ ಮೊದಲಾದ ಕೈಗಾರಿಕೆಯ ಕೆಲಸದಿಂದ ಅವರನ್ನು ಬಿಡಿಸಿ ಕಾಗದ ಗೀಚುವ ಕಾರಕೂನರಾಗಿ ಮಾಡಿದೆ. ಈ ಕಾರಕೂನರಿಂದ ನಮ್ಮ ನಾಡಿಗೆ ಏನೂ ಲಾಭವಾಗಲಿಲ್ಲ. ಇದರಿಂದ ನಮ್ಮ ದೇಶದ ಆರ್ಥಿಕಸಂಪತ್ತಿಗೆ ಬಹಳ ಅಪಾಯವಾಗಿದೆ. ಈಗಿನ ವಿದ್ಯಾದಾನ ಕ್ರಮವನ್ನು ನೋಡಲಾಗಿ, ಮಧ್ಯಮ ಪ್ರತಿ ಶಿಕ್ಷಣಕ್ಕೂ ಪ್ರೌಢವಿದ್ಯಾ ಶಿಕ್ಷಣಕ್ಕೂ ಹೆಚ್ಚು ಗಮನ ಕೊಟ್ಟು, ಪ್ರಾಥಮಿಕ ಶಿಕ್ಷಣವನ್ನು ಬಿಟ್ಟು ಅದಕ್ಕೆ ಹೆಚ್ಚು ಹಾನಿಯನ್ನು ಮಾಡಿದೆ. ಹಳ್ಳಿಯ ರೈತರ ವಿದ್ಯಾಪ್ರಸಾರಕ್ಕೆ ಸೌಕರ್ಯಗಳನ್ನುಂಟುಮಾಡಿಕೊಡದೆ, ನಗರನಿವಾಸಿಗಳ ವಿದ್ಯಾಪ್ರಸಾರಕ್ಕಾಗಿ ಹೆಚ್ಚು ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ. ಜನರಿಂದ ಬರುವ ಕರದ ಹಣದಿಂದ ಕೆಲವು ವಿಶಿಷ್ಟವರ್ಗದವರ ಉಪಯೋಗಕ್ಕಾಗಿರುವ ಹೆಚ್ಚು ಪ್ರೌಢವಿದ್ಯಾಲಯಗಳನ್ನೂ ವಿದ್ಯಾಪೀಠಗಳನ್ನೂ ಕಟ್ಟಿಸಿ, ಎಲ್ಲ ಹಣವನ್ನೂ ದುಂದಿನಿಂದ ವೆಚ್ಚಮಾಡಿದ್ದಾರೆ. ಆದರೆ ಜನಸಾಮಾನ್ಯರಿಗೆ ಕರಕೊಡುವವರ ಮಕ್ಕಳಿಗೆ ಓದಲಿಕ್ಕೂ ಬರೆಯಲಿಕ್ಕೂ ಗಣಿತ ಕಲಿಸಲಿಕ್ಕೂ ಏನೂ ಖರ್ಚುಮಾಡಿಲ್ಲ. ಅರ್ಥಾತ್ ಜನಸಾಮಾನ್ಯರ ಶಿಕ್ಷಣಕ್ಕೆ ಏನೂ ಪ್ರಯತ್ನ ಮಾಡಲಿಲ್ಲ; ಏನೂ ಖರ್ಚು ಮಾಡಲಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಬಿಟ್ಟು ಕೇವಲ ಮಧ್ಯಮಪ್ರತಿ ಶಿಕ್ಷಣ ಪ್ರಸಾರವೂ ಈ ಮಧ್ಯಮ ಮತ್ತು ಉಚ್ಚ ಶಿಕ್ಷಣವೂ ಹೆಚ್ಚು ಪ್ರಸಾರವಾಗಬೇಕೆಂದು ಕೆಲವು ವಿದ್ಯಾವಂತರು ಎಡೆಬಿಡದೆ ನಡಿಸಿದ ಆಕ್ರೋಶದಿಂದ ಈ ಪರಿಣಾಮವಾಗಿದೆಯೆಂದು ಹೇಳಬಹುದು.

ವಿದ್ಯಾವಂತರಾದ ಹಿಂದೂ ಜನರು ಪ್ರಾಥಮಿಕ ವಿದ್ಯಾಪ್ರಸಾರ ಮಾಡುವ ಮಾತಿನಲ್ಲಿ ಹೆಚ್ಚು ಆಶೆಯುಳ್ಳವರಿದ್ದಾರೆ. ಆದರೆ ಅವರು ತಮ್ಮ ಮಾತಿನಲ್ಲಿ ತಮ್ಮ ಆಶೆಯಂತೆ ಅದನ್ನು ಯಾವಾಗಲೂ ಪ್ರಚಾರದಲ್ಲಿ ತರುವದಿಲ್ಲ. ಒಮ್ಮೆ ಮದ್ರಾಸ್ ಕಾಯಿದೆ ಕೌನ್ಸಿಲ್‌ನಲ್ಲಿ ಲೋಕಲ್ ಬೋರ್ಡಿನವರಿಗೆ ತಮ್ಮ ಹದ್ದಿನಲ್ಲಿ ಬಲಾತ್ಕಾರ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸುವ ಅಧಿಕಾರ ಕೊಡುವ ಬಗ್ಗೆ ಮತ್ತು ಇದರ ಬಗ್ಗೆ ಯಾವದಾದರೊಂದು ತೆರಿಗೆ ಕಟ್ಟುವ ಅವಶ್ಯಕತೆ ಬಂದಲ್ಲಿ ಹಾಗೆ ಮಾಡುವ ಬಗ್ಗೆ ಚರ್ಚೆ ನಡೆದಿತ್ತು. ಆ ಮಾತಿನ ನಿರ್ಣಯದ ಚರ್ಚೆಯ ವೇಳೆಯಲ್ಲಿ ಒಂದು ಮ್ಯುನಿಸಿಪಾಲಟಿಯ ಛೇರ್‌ಮನ್ನರೂ ಹೋಮ್‌ರೂಲ್ ಸಂಘದ ಮೆಂಬರೂ ಆದ ಒಬ್ಬ ಸಭಾಸದನು "ಸರಕಾರದವರು ಈ ಶಿಕ್ಷಣದ ಪೂರ್ಣ ವೆಚ್ಚವನ್ನು ವಹಿಸಿಕೊಂಡರೆ ತಮ್ಮದೇನೂ ಅಡ್ಡಿಯಿಲ್ಲ. ಆದರೆ ಮ್ಯುನಿಸಿಪಾಲಿಟಿಯವರು ಅಥವಾ ಲೋಕಲ್ ಬೋರ್ಡಿನವರು ಇದಕ್ಕಾಗಿ ಒಂದು ಹೊಸ ತೆರಿಗೆ ಕೂಡ್ರಿಸಬೇಕೆಂದು ಹೇಳಿದರೆ ಅದಕ್ಕೆ ತಮ್ಮ ತಕರಾರು ಇರುತ್ತದೆ" ಎಂದು ಬಲು ಉದಾರಬುದ್ಧಿಯಿಂದ ಹೇಳಿದನು. ಪ್ರಾಥಮಿಕ ಶಿಕ್ಷಣದ ಬಗ್ಗೆ ಅರ್ಥಾತ್ ಜನಸಮೂಹದ ಶಿಕ್ಷಣ ಪ್ರಸಾರಕ್ಕಾಗಿ ಕೆಲವು ಶಿಕ್ಷಿತ ವರ್ಗದವರ ಮನಸ್ಸಿನ ಒಲವು ಹೇಗಿರುವುದೆಂದು ತೋರಿಸಲಿಕ್ಕೆ ಮೇಲಿನ ಉದಾಹರಣೆ ಸಾಕು. ಪ್ರಾಥಮಿಕ ಶಿಕ್ಷಣ ಪ್ರಸಾರವು ಕುಂಠಿತವಾಗಲಿಕ್ಕೆ ನಮ್ಮಲ್ಲಿಯ ಕೆಲವು ಶಿಕ್ಷಿತರ ಮತ್ತು ದುರಾಶೆಯುಳ್ಳ ವಿದ್ಯಾವಂತರ ನಡತೆಯೇ ಕಾರಣವೆಂದು ಲಾರ್ಡ್ ಕರ್ಜನ್ ದೊರೆಗಳು ಅನ್ನುವದು ಯಥಾರ್ಥವಾದದ್ದು.

ಸಾರ್ವಜನಿಕ ಕಾರ್ಯಾಸಕ್ತರಾದವರು ವಿದ್ಯಾಪ್ರಸಕ್ತಿಯಲ್ಲಿ ಜಪಾನ್ ದೇಶದ ಉದಾಹರಣೆಯು ಈ ದೇಶದವರಿಂದ ಅನುಕರಿಸಲುತಕ್ಕುದೆಂದು ಹೇಳಿ ಅಲ್ಲಿಯ ವಿವರಣೆಗಳನ್ನು ಯಾವಾಗಲೂ ಉದಾಹರಿಸಿರುವರು. ಜಪಾನ್ ದೇಶದಲ್ಲಿ ಶಾಲೆಗೆ ಹೋಗತಕ್ಕ ಜನರಲ್ಲಿ ನೂರಕ್ಕೆ ೨-೬ ಜನರು ವಾಙ್ಮಯ ಅಭ್ಯಾಸಕ್ಕೆ ನಿಲ್ಲುವರು. ನೂರಕ್ಕೆ ೫೫ ಜನರು ವಿಶಿಷ್ಟ ಕಲೆಯನ್ನು ಕಲಿಯಲಿಕ್ಕೆ ಹೋಗುವರು. ಆದರೆ ಹಿಂದೂಸ್ಥಾನದಲ್ಲಿ ನೂರಕ್ಕೆ ೧೨-೪ ಜನರು ವಾಙ್ಮಯಾಭ್ಯಾಸ ಮಾಡುವರು. ನೂರಕ್ಕೆ ೫ ಜನರು ವಿಶಿಷ್ಟಕಲೆಯನ್ನು ಕಲಿಯುವರು. ಜಪಾನಿನ ಜನಸಂಖ್ಯೆಯು ೫,೨೦,೦೦೦೦೦ ಇದ್ದು ಅದರಲ್ಲಿ ೭,೫೦೦ ವಿದ್ಯಾರ್ಥಿಗಳು ಪ್ರೌಢವಿದ್ಯಾಲಯದಲ್ಲಿ ಮತ್ತು ೨,೯೦,೦೦೦ ವಿದ್ಯಾರ್ಥಿಗಳು ವಿಶಿಷ್ಟ ಕಲೆಯನ್ನು ಕಲಿಸುವ ಶಾಲೆಯಲ್ಲಿ ಓದುವರು. ಆದರೆ ೩೨,೫೦,೦೦೦೦೦ ಜನಸಂಖ್ಯೆಯುಳ್ಳ ಬ್ರಿಟಿಷ್ ಹಿಂದುಸ್ಥಾನದಲ್ಲಿ ೩೬,೦೦೦ ವಿದ್ಯಾರ್ಥಿಗಳು ಪ್ರೌಢವಿದ್ಯಾಲಯದಲ್ಲಿ, ಕೇವಲ ೧೨,೦೦೦ ವಿದ್ಯಾರ್ಥಿಗಳು ವಿಶಿಷ್ಟ ಕಲಾಭವನ (Technical School) ದಲ್ಲಿ ಓದುತ್ತಾರೆ. ಇದರಿಂದ ಜಪಾನಿನಲ್ಲಿ ಕೊಡುವ ಶಿಕ್ಷಣ ಪದ್ಧತಿಯು ಹೇಗೆ ಫಲಪ್ರದವಾಗಿದೆಯೆಂಬುದು ಮತ್ತು ಹಿಂದುಸ್ಥಾನದಲ್ಲಿರುವ ಶಿಕ್ಷಣಪದ್ಧತಿಯು ಯಾಕೆ ಅಪಜಯಕ್ಕೆ ಕಾರಣವಾಗಿರುವದೆಂಬುದು ಮನವರಿಕೆಯಾಗುವದು. "ಇಂಗ್ಲೆಂಡ್, ಐರ್ಲೆಂಡ್ ಸ್ಕಾಟ್ಲೆಂಡ್ ಹೀಗೆ ಮೂರು ನಾಡುಗಳಲ್ಲಿರುವ ಪ್ರತಿಯೊಂದು ಮಗುವಿಗೆ ಅದರ ಬುದ್ಧಿಗೆ ನಿಲುಕುವಷ್ಟು ಅದರ ಶಕ್ತಿಗೆ ಸರಿಯಾದಷ್ಟು ವಿದ್ಯಾಬುದ್ಧಿಗಳು ಸಂಪಾದನೆಯಾಗುವಂತೆ ಹೀನಕುಲದವರ ಶಾಲೆಗಳನ್ನು ಹಿಡಿದುಕೊಂಡು ವಿಶ್ವವಿದ್ಯಾಲಯಪರ್ಯಂತದ ಶಿಕ್ಷಣಾಲಯ ತರಗತಿಗಳನ್ನು ಸ್ಥಾಪಿಸುವದು ನಮ್ಮ ಕರ್ತವ್ಯ"ವೆಂದು ವಿದ್ಯಾಗುರುಗಳಾದ ಹಕ್ಸಲೆ ಸಾಹೇಬರು ಅಭಿಪ್ರಾಯವುಳ್ಳವರಿದ್ದಾರೆ. ಇದೇ ತತ್ವವನ್ನು ಶಿಕ್ಷಣ ವಿಷಯವಾಗಿ ಜಪಾನಿನವರು ಅಂಗೀಕರಿಸಿದ್ದಾರೆ. ಆದರೆ ದುರ್ದೈವದಿಂದ ಈ ನಾಡಿನ (ಹಿಂದುಸ್ಥಾನದ) ಪದ್ಧತಿಯು ಬೇರೆ. ಇಲ್ಲಿ ಬಾಲಕನ ಸ್ವಂತ ಬುದ್ಧಿಶಕ್ತಿಯ ಮೇಲೆ ಶಿಕ್ಷಣವು ಅವಲಂಬಿಸಿಲ್ಲ. ತಂದೆತಾಯಿಗಳು ಇಚ್ಛಿಸಿದಷ್ಟು ಅವನು ಕಲಿಯಬೇಕು. ಅವನ ಬುದ್ಧಿಮತ್ತೆಯು ಹೇಗಿದ್ದರೂ ಚಿಂತೆಯಿಲ್ಲ. ಇದರ ಪರಿಣಾಮವು ಇಷ್ಟಾಗಿದೆಯಲ್ಲಾ-ಅನೇಕರು ಇದಕ್ಕೆ ಅಯೋಗ್ಯರಿದ್ದರೂ ವಿಶ್ವವಿದ್ಯಾಲಯದ ಉಚ್ಚ ಪರೀಕ್ಷೆಯವರೆಗೆ ಅಭ್ಯಾಸ ಮಾಡಿ ಬಂದು ಅದನ್ನು ವ್ಯವಹಾರದಲ್ಲಿ ಪರೀಕ್ಷೆ ಮಾಡಲು, ತಾವು ಕಲಿತ ವಿದ್ಯೆಯಿಂದ ಏನೂ ಉಪಯೋಗವಾಗುವಂತಿಲ್ಲಾದ್ದರಿಂದ ಪ್ರಪಂಚದಲ್ಲಿ ದುಃಖಿಗಳೆನಿಸಿಕೊಳ್ಳುವರು. ಸರ್ಕಾರದವರು ಹುಡುಗರ ಬುದ್ಧಿಯ ಮೆಟ್ಟನ್ನು ತಿಳಕೊಂಡು ಹದವರಿತು ಅವರಿಗೆ ತಕ್ಕ ಶಿಕ್ಷಣವನ್ನು ಯೋಜಿಸಬೇಕು. ಹೀಗೆ ಮಾಡೋಣದರಿಂದ ಮಾತ್ರ ಅವರ ಬಾಳುವೆಯು ಸುಖಕರವಾಗುವದು. ಕೈಗಾರಿಕೆಯ ಮನೆತನದ ಮಕ್ಕಳಿಗೆ ಮತ್ತು ಕೂಲಿಕಾರರ ಮಕ್ಕಳಿಗೆ ಜಪಾನದ ಅಥವಾ ಅದಕ್ಕೂ ಪ್ರಶಸ್ತವಾದ ಸ್ವಿಡ್ಜರ್ಲೆಂಡಿನ ಶಿಕ್ಷಣ ಪದ್ಧತಿಯನ್ನು ನಾವ ಇಲ್ಲಿ ಸ್ವೀಕಾರಮಾಡಬೇಕು. ಸ್ವಿಡ್ಜರ್ಲೆಂಡಿನಲ್ಲಿ ಪ್ರಾಥಮಿ ವಿಶಿಷ್ಟ ಕಲಾಶಾಲೆಗಳೂ ಉಚ್ಚ ಕಲಾಶಾಲೆಗಳೂ ಇರುವದ ದ ಎಲ್ಲ ಉದ್ಯೋಗಗಳ ಜ್ಞಾನವುಳ್ಳ ಜನರು ಸಿಗುವರು. ಅ ರಿಂದ ಬೇಕಾದವರಿಗೆ ಬೇಕಾದ ಕಲೆಯ ಶಿಕ್ಷಣವನ್ನು ಕೊ ಲು ಅನುಕೂಲವಿದೆ. ಇದರದಲ್ಲಿ ಒಂದು ಮಹತ್ವದ ಸಂಗ ಏನಂದರೆ,—ಯಾವ್ಯಾವ ಭಾಗಕ್ಕೆ ಯಾವ್ಯಾವ ಜನರಿಗೆ ಯಾ ವ್ಯಾವ ತರದ ಶಿಕ್ಷಣವನ್ನು ಕೊಡತಕ್ಕದ್ದೋ ಅದಕ್ಕನುಕೂ ವಾಗಿಯೇ ಶಿಕ್ಷಣಾಲಯಗಳು ಅಲ್ಲಿ ಸ್ಥಾಪಿಸಲ್ಪಟ್ಟಿವೆ. ಇಂ ಅನುಕೂಲತೆಯು ನಮ್ಮ ನಾಡಿನಲ್ಲಿ ಆಗುವದು ಅತ್ಯವಶ್ಯವಿದೆ.

ನೋಟೀಸ್.

ಕೊಟ್ಟೂರುವಾಸಿ ಮಾರ್ವಾಡಿ ಮುಲ್ತಾನುಮಲ್ಲು ಹಸ್ತಿಮಲ್ಲು ಇವರು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ. ಹಿರಿಯೂರು ತಾಲ್ಲೂಕು ಧರ್ಮಪುರದ ಸಮ್ಮತ್ತು ವೇಣುಕಲ್ಲು ಗುಡ್ಡದವಾ ಮುಸಲ್ಮಾನರ ಲಾಲುಕಾನ್ ಸಾಬರ ಮಕ್ಕಳು ಗೌಸ್‌ಖಾನ್ ಸಾಬ್ ಎಂಬುವರು ಈಗ್ಗೆ ಸುಮಾರು ಒಂದುವರೆ ವರುಷದ ಕೆಳಗೆ ನಮ್ಮಲ್ಲಿ 700 ರೂಪಾಯಿಗಳಿಗೆ ಜವಳಿ ಖರೀದಿಮಾಡಿಕೊಂಡು ಆ ದಿನವೆ 200 ರೂಪಾಯಿಗಳು ನಮಗೆ ಕೊಟ್ಟು ಬಾಕಿ ಆಗುವ 500 ರೂಪಾಯಿಗಳಿಗೆ 1 ವಾರದೊಳಗಾಗಿ ಕೊಡುವದಾಗಿ ವಾಯಿದೆ ಮಾಡಿಕೊಂಡು ಸದರಿ ಮಾಲು ಸಹ ನಮ್ಮಲ್ಲಿಯೆ ಬಿಟ್ಟುಹೋಗಿ ಈ ತಹಲ್‌ವರಿಗೂ ನೋಟೀಸು ಮೂಲಕ ತಿಳಿಯಪಡಿಸಿದಾಗ್ಯೂ ಬಾಂದೆ ಕಾಲಹರಣ ಮಾಡುತ್ತಾ ಇರುವ ಸಬೂಬಿನಿಂದ ಸದರಿ ಮಾಲನ್ನು ಈ ಸಾಲಿನ ಆಗಸ್ಟ ತಾರೀಖು 30 ರಲ್ಲಿ ಕೊಟ್ಟೂರುಪೇಟೆ ಪಬ್ಲಿಕ್ ಬಜಾರದಲ್ಲಿ ಹರಾಜುಮಾಡಲ್ಪಡುತ್ತೆ. ಸದರಿ ಕ್ರಯದಾರರು ಹರಾಜು ತಾರೀಖಿನೊಳಗಾಗಿ ನೊಕ್ತ ಬಂದು ಲೆಖ್ಖಾಚಾರ ಮಾಡಿಕೊಂಡು ಸದರಿ ಮಾಲು ತೆಗೆದುಕೊಂಡು ಹೋಗಬಹುದು. ಇಲ್ಲವಾದರೆ ಹರಾಜಿನಲ್ಲಿ ನಿಲ್ಲಬಹುದಾದ ಅಖೈರು ಸವಾಲಿನ ಮೊಬಲಗನ್ನು ಅಸಲು ಮತ್ತು ಹರಾಜು ತಾರೀಖಿನವರೆಗಿನ ಬಡ್ಡಿ ಸಹಾ ವಜಾ ಹೋಗುತ್ತಾ ಬಾಕಿ ಆಗಬಹುದಾದ ಮೊಬಲಗಿಗೆ ಸದರಿ ಗೌಸ್‌ಖಾನ್ ಸಾಬರ ಮೇಲೆ ಲಾಯಕ್ ಆದ ಕೋರ್ಟಿನಲ್ಲಿ ಕ್ರಮ ನಡಿಸಲ್ಪಡುತ್ತೆ. ಇದ್ದ ಸಂಗತಿ ಶೃತಪಡಿಸಿರುತ್ತೆ.

14-7-1920.
ಮುಲ್ತಾನುಮಲ್ಲು ಹಸ್ತಿಮಲ್ಲು
ಇವರ ದಸಕತ್ತಿಗೆ ಕಲ್ಲಿಂಗಪ್ಪ ಮೆರ್ಧಿಕೆರೆ,
ತಾಲ್ಲೂಕು ಜಗಳೂರು.

ನೋಟೀಸ್.

ಮಂಡ್ಯದ ತಾಲ್ಲೂಕು ಮದ್ದೂರು ಹೋಬಳಿ ನೀಲಕಂಠನಹಳ್ಳಿ ಗ್ರಾಮದಲ್ಲಿರುವ ಮೇಗಳಹಟ್ಟಿ ರಾಮಾರಾಧ್ಯರ ಮಕ್ಕಳು ಬಸವಾರಾಧ್ಯರು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ —ನನ್ನ ತಮ್ಮನಾದ ಪೌತಿ ಸಿದ್ಧರಾಮಾರಾಧ್ಯನ ಹೆಂಡತಿ ಗೌರಮ್ಮನು ನಮ್ಮ ಪಿತರಾರ್ಜಿತ ಮತ್ತು ಸ್ವಯಾರ್ಜಿತವಾದ ಷೆಡ್ಯೂಲಿನಲ್ಲಿ ಕಂಡ ಸ್ವತ್ತುಗಳನ್ನು ಪರಾಧೀನ ಮಾಡುತ್ತಾಳೆಂದು ವರ್ತಮಾನ ಕೇಳುತ್ತೇನೆ. ಷೆಡ್ಯೂಲಿನಲ್ಲಿ ಕಂಡ ಸ್ವತ್ತುಗಳನ್ನು ಸದರಿ ಗೌರಮ್ಮನಿಗೆ ಕ್ರಯ, ಭೋಗ್ಯ, ಆಧಾರ, ದಾನ, ವಗೈರೆಯೇನು ಮಾಡುವುದಕ್ಕೂ ಹಕ್ಕಿರುವುದಿಲ್ಲ. ಯಾರಾದರು ಪರಾಧೀನ ಮಾಡಿಕೊಂಡಲ್ಲಿ ಅದರಿಂದ ನನಗೆ ಉಂಟಾಗುವ ಎಲ್ಲಾ ನಷ್ಟಗಳಿಗೂ ಪರಾಧೀನ ಮಾಡಿಕೊಂಡವರು ಬದ್ಧರಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸಿರುತ್ತೆ. ಷೆಡ್ಯೂಲ್ ಮಂಡ್ಯದ ತಾಲ್ಲೂಕು ಮದ್ದೂರು ಹೋಬಳಿ ನೀಲಕಂಠನಹಳ್ಳಿ ಗ್ರಾಮದಲ್ಲಿರುವದು ಪೂರ್ವಕ್ಕೆ ಪಶ್ಚಿಮಕ್ಕೆ ಸಹ ಗಲ್ಲಿ ಉತ್ತರಕ್ಕೆ ಬೀದಿ. ದಕ್ಷಿಣಕ್ಕೆ ನನ್ನ ಹಿತ್ತಲು, ಈ ಮಧ್ಯೆ ಇರುವ ಹೆಂಚಿನ ಮನೆಯಲ್ಲಿ ಉತ್ತರ ಕಡೆ ಮೂರು ಅಂಕಣ ಮನೆ ಮೂರು ಅಂಕಣ ಮನೆ ಮುಂದಣ ಬೈಟಕ್ ಜಾಗ ಪೂರ್ವಕ್ಕೆ ವೀರಭದ್ರದೇವರ ಇನಾಮತಿ ಜಮೀನು ಪಶ್ಚಿಮಕ್ಕೆ ಕದಂಬನದಿ ಉತ್ತರಕ್ಕೆ ಮರಿನಿಂಗಮ್ಮನ ಜಮೀನು ದಕ್ಷಿಣಕ್ಕೆ ಸೋಮಾರಾಧ್ಯರ ಜಮೀನು ಈ ಮಧ್ಯೆ ಇರುವ ಸರ್ವೆ 13 ನೇ ಪೈಕಿ 1 ನೇ ನಂಬರ್ ಜಮೀನಿನಲ್ಲಿ ಉತ್ತರ ಕಡೆ ಸುಮಾರು 30 ಕುಂಟೆ ಆಕಾರ ಹನ್ನೆರಡು ಆಣಾ. ಹಾಗಲಹಳ್ಳಿ ಗ್ರಾಮದಲ್ಲಿ ಪೂರ್ವಕ್ಕೆ ಸಿದ್ಧಲಿಂಗೇಗೌಡನ ಗದ್ದೆ. ಪಶ್ಚಿಮಕ್ಕೆ ರಾಮನರಸಯ್ಯ ವಗೈರೆಯರ ಗದ್ದೆ ಉತ್ತರಕ್ಕೆ ಓಣಿದಾರಿ ದಕ್ಷಿಣಕ್ಕೆ ಹಾಗಲಹಳ್ಳಿ ರೈತರ ಗದ್ದೆ ಈ ಮಧ್ಯೆ ಇರುವ ಸರ್ವೆ 1298 ನೇ ಪೈಕಿ ಮೂರನೆ ತರಿ ಜಮೀನಿನಲ್ಲಿ ಪಶ್ಚಿಮ ಕಡೆ ಸುಮಾರು ಹದಿನೈದು ಗುಂಟೆ ಆಕಾರ 1-6-8 ಪೈ ಮತ್ತು ಚರಾಸ್ತಿಗಳು ಸಹಾ.

ತಾ|| 28-7-1920
ಬಸವಾರಾಧ್ಯರ ರುಜು.

೧೯೨೦ನೆಯ ಇಸವಿ ಆಗಸ್ಟ ತಾ|| ೧ರಿಂದ ೧೯೨೦ನೆಯ ಆಗಸ್ಟ ತಾ|| ೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರನಾಮ ಸಂವತ್ಸರದ ಅಧಿಕಶ್ರಾವಣ ಬಹುಳ ಬಿದಿಗೆಯಿಂದ ಅಧಿಕಶ್ರಾವಣ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
1	ಭಾನು	ಬಿದಿ	59-56	ಧನಿ	42-15	17
2	ಸೋಮ	ತದಿ	60	ಶತ	45-28	18
3	ಮಂಗಳ	ತದಿ	0-25	ಪೂಭಾ	47-25	19
4	ಬುಧ	ಚೌ-ಪಂ	0-17 59-22	ಉಭಾ	48-6	20
5	ಗುರು	ಷಷ್ಠಿ	57-0	ರೇವ	47-38	21
6	ಶುಕ್ರ	ಸಪ್ತ	53-21	ಅಶ್ವಿ	45-58	22
7	ಶನಿ	ಅಷ್ಟ	48-41	ಭರ	43-36	23

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಯಜ್ಞನಪ್ಯತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟಪದೇಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸೆ ೧೯೨೦ ನೆಯ ಇಸವಿ ಆಗಸ್ಟ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೩೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
31 ವೈದ್ಯಶಾಲಾ, ಮೈಸೂರು.

ಹೊಸಶೋಧ ! • ಓಂ • ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವ, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ಎ. ಆರ್. ಬ್ರದರ್ಸ್ ಮತ್ತು ಕಂಪೆನಿ,
3 ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಗುರುಶೀಲತಂತ್ರ	೦—೫—೦
ಪಂಚಾಸಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು. 3

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.
ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.
ರಾ|| ಬ|| ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.
ಸ್ವತಂತ್ರ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.
ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 39

ನಾವು ಎ. ಆಲ್ ಬ್ಯುಕ್ಯಾನರ್ ಕ್ಯ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುಕರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎ. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರರನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೩—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಪಡಸಲ್ಲು,
37 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬುರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬುರ್ಗಾ.

18 ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಬೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ 1—0—0.

ವಿಳಾಸ—ರಾಜ್‌ವಾಚ್ ಅಂಡ್ ಕೊ. 3 ಇರುಳಪ್ಪನ ಬೀದಿ ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಶಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ತುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೪ ಗುಳಿಗೆಗಳಿಗೆ ೮ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರತ್ಯೇಕ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
44 ಬಿ. ಪೋಸ್ಟ ಶಿರ್ಶಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಬೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಮ್ನಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಅದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ಕ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧೪ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಆಗಸ್ಟ್ ತಾ|| ೮ ನೆಯ ಭಾನುವಾರ.

ಸ್ವರ್ಗವಾಸಿ ಶ್ರೀ|| ಬಾಲಗಂಗಾಧರ ತಿಲಕರು.

ರಾಜಕೀಯ ರಣರಂಗದಲ್ಲಿ ಮಹಾ ರಥಿಕರಂತೆ ಹೋರಾಡಿ ಲೋಕೋತ್ತರ ಯಶಸ್ಸನ್ನು ಸಂಪಾದಿಸಿದ ಶ್ರೀಮಾನ್ ಬಾಲಗಂಗಾಧರತಿಲಕರವರು ಕಳೆದತಿಂಗಳು ತಾ|| ೩೧ ನೆ ಸ್ಥಿರವಾರ ರಾತ್ರಿ ೧೨||| ಗಂಟೆಯಲ್ಲಿ ಬೊಂಬಾಯಿ ಪಟ್ಟಣದ ಸರದಾರ್ ಗೃಹದಲ್ಲಿ ವಿಧಿವಶರಾದರೆಂಬ ವಾರ್ತೆಯನ್ನು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ಇವರ ಜೀವಿತಚರಿತ್ರವು ಸರ್ವವಿಶ್ರುತವಾಗಿರುವುದರಿಂದ ಅದನ್ನು ವಿವರಿಸಿ ಹೇಳಬೇಕಾಗಿಲ್ಲವಾದರೂ ವಿಯೋಗಕಾಲದಲ್ಲಿ ಪ್ರಿಯ ವಸ್ತುವಿನ ವಿಶಿಷ್ಟಗುಣಚರಿತಾದಿಗಳು ನೆನಪಿಗೆ ಬರುವುದು ಸ್ವಭಾವವಾದ ಕಾರಣ ಅವರಲ್ಲಿದ್ದ ಉದಾತ್ತ ಗುಣಗಣವನ್ನು ಮಾತ್ರ ವಿವರಿಸುತ್ತೇವೆ.

ಇವರು ಬಾಲ್ಯದಿಂದಲೂ ಸ್ವಾತಂತ್ರ್ಯಪ್ರಿಯರೂ ಹಠಗಾರರೂ ಆಗಿದ್ದರು. ಯೌವನದಲ್ಲಿ ಲಾ ಪರೀಕ್ಷೆಯನ್ನು ಕೊಟ್ಟರು. ಸರ್ಕಾರದ ಉದ್ಯೋಗಕ್ಕೆ ಸೇರಿಕೊಂಡು ಉದರಂಭರಣ ಮಾಡಿಕೊಳ್ಳುವುದು ಇವರ ಮನಸ್ಸಿಗೆ ಸೇರಲಿಲ್ಲ. ದೇಶಹಿತಚಿಂತನೆಯೇ ತನ್ನ ಜನ್ಮದ ಪುರುಷಾರ್ಥವೆಂದು ಆಗಲೇ ಸಂಕಲ್ಪಿಸಿದರು. ಕೈ|| ಚಿಪಳೂಣಕರರಂಥವರ ಉದಾತ್ತಾದರ್ಶವು ಇವರಲ್ಲಿ ಆ ವಿಧವಾದ ಸಂಸ್ಕೃತಿಯನ್ನು ಚಿಕ್ಕಂದಿನಲ್ಲೇ ಉಂಟುಮಾಡಿದ್ದಿತು. ಅದುಕಾರಣ ಪರದಾಸ್ಯವನ್ನು ತೃಣೀಕರಿಸಿಬಿಟ್ಟು ತನ್ನ ಜತೆಗಾರರಾದ ಕೆಲರೊಡನೆ ಸೇರಿ ತಮ್ಮ ಜನ್ಮಸ್ಥಲವಾದ ಪೂನಾ ನಗರದಲ್ಲಿ ಸ್ವತಂತ್ರವಾದ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅಲ್ಲಿ ದೇಶೀಯರಿಗೆ ವಿದ್ಯಾದಾನವನ್ನು ಮಾಡಲುಪಕ್ರಮಿಸಿದರು. ಅದು ಈಗ "ಫರ್ಗ್ಯುಸನ್ ಕಾಲೇಜು" ಎಂಬ ಹೆಸರಿನಿಂದ ಪ್ರಖ್ಯಾತವಾಗಿ ನಡೆಯುತ್ತಿದೆ.

ಪ್ರಜೆಗಳಲ್ಲಿ ರಾಜಕೀಯ ವಿಷಯಜ್ಞಾನವನ್ನೂ ಆತ್ಮಶಕ್ತಿವಿಕಾಸವನ್ನೂ ಉಂಟುಮಾಡದಿದ್ದರೆ ದೇಶೋದ್ಧಾರವಾಗುವುದಿಲ್ಲವೆಂದು ತಿಳಿದು, "ಕೇಸರಿ" ಎಂಬ ದೇಶಭಾಷಾ ಪತ್ರಿಕೆಯನ್ನೂ, ಮರಾಟ್ಟಾ ಎಂಬ ಆಂಗ್ಲಪತ್ರಿಕೆಯನ್ನೂ ಪ್ರಕಟಿಸಲಾರಂಭಿಸಿದರು. ಅವುಗಳು ಮಾಡುತ್ತಿರುವ ಗರ್ಜನೆಯು ಚತುರ್ದಿಕ್ಕನ್ನೂ ಈಗಳೂ ಗಡಗುಟ್ಟಿಸುತ್ತಿರುವುದು. ಈ ಪತ್ರಿಕೆಗಳಲ್ಲಿ ಬರುತ್ತಿದ್ದ ಲೇಖನಗಳು ಇವರ ಸಂಕಲ್ಪಗಳನ್ನೂ ವಿಚಾರಗಳನ್ನೂ ತರಂಗತರಂಗವಾಗಿ ಹೊರಗೆಡಹುತ್ತಿದ್ದುವು. "ಪ್ರಜೆಗಳ ಅನುಮತಿಯಿಲ್ಲದೆ ಯಾವೊಬ್ಬ ವಿದೇಶೀಯನೂ ಅನ್ಯದೇಶವನ್ನು ಪಾಲಿಸುವುದು ನ್ಯಾಯವಲ್ಲ" ಎಂಬುದೇ ಇವರ ಮುಖ್ಯಾಭಿಪ್ರಾಯವಾಗಿದ್ದಿತು. ಇವರ ಈ ವಿಧವಾದ ರಾಜಕೀಯ ಸಿದ್ಧಾಂತವು ವಿದೇಶೀಯರಾದ ಪ್ರಭುಗಳಿಗೆ ಎಷ್ಟುಮಟ್ಟಿಗೆ ಸಮಾಧಾನಕರವಾಗಿರಬಹುದೆಂಬುದನ್ನು ಹೇಳಬೇಕಾಗಿಲ್ಲ. ಈ ಸಿದ್ಧಾಂತಕ್ಕನುಸರಿಸಿ ಇವರಿಂದ ಹೊರಹೊರಡುತ್ತಿದ್ದ ವಿಚಾರಗಳು ತೀಕ್ಷ್ಣತರವಾಗಿ ಪ್ರಭುತ್ವದವರಿಗೆ ತೋರುತ್ತಬಂದಂತೆಯೇ ಪ್ರಜಾವರ್ಗದಲ್ಲೂ ಕೆಲವರಿಗೆ ತೋರುತ್ತಬಂದುವು. ದೇಶಭಕ್ತಶಿರೋಮಣಿಗಳಾದ ಕೈ|| ಗೋಖಲೆ ಸರ್ ಮೇಥಾ ಮೊದಲಾದ ಮಹನೀಯರುಗಳೂ ಕೂಡ ತಿಲಕರ ಕೆಲ ಅಭಿಪ್ರಾಯಗಳನ್ನು ಒಪ್ಪುತ್ತಿರಲಿಲ್ಲ. ಇವರವರ ರಾಜಕೀಯಪ್ರವೃತ್ತಿಗಳು ಕಟ್ಟಕಡೆಯವರೆಗೂ ಭಿನ್ನವಾಗಿಯೇ ಇದ್ದುವು. "ನಮಗೆ ದಾಸ್ಯವು ಬೇಕಿಲ್ಲ ನಮ್ಮ ದೇಶವನ್ನು ನಾವು ಆಳಿಕೊಳ್ಳಬೇಕು" ಎಂಬ ತತ್ತ್ವವನ್ನು ಕಟ್ಟಕಡೆಯವರೆಗೂ ತಿಲಕರು ಸಾರುತ್ತ, ಆಂಗ್ಲಪ್ರಭುತ್ವಾಧಿಕಾರಿಗಳ ಕಾರ್ಯನಿರ್ವಾಹ ಕ್ರಮದಲ್ಲಿ ದೋಷೋದ್ಘಾಟನೆಗಳನ್ನು ಮಾಡುತ್ತ, ತಮ್ಮ ಉದ್ದೇಶಸಾಧನೆಗೆ ಉಚಿತವೆಂದು ತಮಗೆ ತೋರಿದ ದಾರಿಯಲ್ಲಿ ಯಾವ ವಿಘ್ನ ಬಂದರೂ ಗಣಿಸದೆ ಒಂದೇ ಬಿಗಿಪಟ್ಟಿನಿಂದ ನಡೆಯುತ್ತ, ಆ ವಿಧವಾದ ತಮ್ಮ ಉಪದೇಶದಿಂದ ಪ್ರಜೆಗಳ ಮನಸ್ಸಿನಲ್ಲಿಯೂ ಅದೇ ಭಾವವನ್ನು ಪ್ರಬಲಗೊಳಿಸುತ್ತ ಬಂದರು. ಸರ್ ಮೇಥಾ, ಗೋಖಲೆ ಮೊದಲಾದ ಸೌಮ್ಯಮಾರ್ಗಗಾಮಿಗಳು ಜೀವಿಸಿರುವವರೆಗೂ ಭಾರತರಾಷ್ಟ್ರೀಯಮಹಾಸಭೆಯು ತಿಲಕರ ಅಭಿಪ್ರಾಯಕ್ಕೆ ಪೂರ್ಣಾಧೀನವಾಗಿರಲಿಲ್ಲ. ಕೆಲಕಾಲ ಇವರು ಅದಕ್ಕೆ ಎರವಾಗಿಯೇ ಇರಬೇಕಾಯಿತು. ಆದರೂ ತಮ್ಮ ನಡೆನುಡಿಗಳನ್ನು ಇವರು ಬದಲಾಯಿಸಿಕೊಳ್ಳದೆ ಅಚಲದಂತೆ ಸ್ಥಿರಸಂಕಲ್ಪದಲ್ಲೇ ಇದ್ದರು. ಯುದ್ಧಾರಂಭವಾದೀಚೆಗೆ ರಾಷ್ಟ್ರೀಯ ಸಭೆಯ ಒಲವೂ ಇವರ ಮತಕ್ಕೇ ತಿರುಗಿತು. ಅದರ ಬಹುಮುಖ್ಯಪಾತ್ರವು ಇವರಿಗೇ ಸೇರಿದ್ದಿತು. ೧೮೮೫ ನೆ ವರ್ಷದಿಂದ ತಮ್ಮ ಜೀವಾಂತದವರೆಗೂ ಇವರು ತಮ್ಮ ದೇಶೋದ್ಧಾರ ಸಂಕಲ್ಪವನ್ನು ಅಖಂಡವಾಗಿ ನಡೆಯಿಸುತ್ತ ಬಂದರು. ದೇಶಾರಾಧನೆಯೇ ಪರಮತಪಸ್ಸೆಂದು ತಿಳಿದಿದ್ದ ಈ ಮಹನೀಯರು ಸಾಮಾಜಿಕ ವಿಷಯದಲ್ಲಿ ಈಗಣ ಸಂಸ್ಕರಣವಾದಿಗಳೊಡನೆ ಸಹಾನುಭೂತಿಯುಳ್ಳವರಾಗಿರಲಿಲ್ಲ. ಮೊದಲು ನಮಗೆ ರಾಜಕೀಯ ಮುಕ್ತಿಯುಂಟಾದರೆ ಬಳಿಕ ಸಾಮಾಜಿಕಾದಿ ವಿಷಯಗಳನ್ನು ಯೋಚಿಸಬೇಕೆಂದು ಹೇಳುತ್ತಿದ್ದರು. ಈ ಕಾರಣದಿಂದ ಸಮಾಜಸಂಸ್ಕರಣವಾದಿಗಳಿಗೂ ಇವರಿಗೂ ಸೇರಿಕೆಯಿರಲಿಲ್ಲ. ಇವರು ಕೇವಲ ಪೂರ್ವಾಚಾರ ಶರಣ್ಯರಾಗಿದ್ದರೂ ತನ್ನ ದೇಶಾರಾಧನೆಯ ನಿಶ್ಚಯವ್ರತದ ಮುಂದೆ ಆ ಆಚಾರಲೋಪಕ್ಕೂ ಕೂಡ ಹಿಮ್ಮೆಟ್ಟದೆ ಸಮುದ್ರಯಾನವನ್ನು ಮಾಡಿ ಬಂದರು. ದೇಶಸೇವಾ ತಪಸ್ಸಿನಲ್ಲಿ ನಿಮಗ್ನರಾಗಿದ್ದ ಈ ಮಹನೀಯರು ತನುಧನಪ್ರಾಣಾದಿಗಳೊಂದನ್ನೂ ಲಕ್ಷ್ಯಮಾಡಿದವರಲ್ಲ; ಕಡೆಗೆ ಮೃತ್ಯುವಿಗೂ ಕೂಡ ಹೆದರಿದವರಲ್ಲ. ಇಂಥವರು ಐಹಿಕನಿರ್ಬಂಧಗಳಿಗೆ ಹೆದರುವುದುಂಟೆ? ಮಹತ್ಕಾರ್ಯದಲ್ಲಿ ತೊಡಗಿದವರಿಗೆ ಕಾರ್ಯಮಹತ್ವಕ್ಕೆ ತಕ್ಕಂತೆ ಎಡರುಗಳಾದರೂ ಮಹತ್ತರವಾಗಿ ಸಂಘಟಿಸುವುದುಂಟು. ಅಂಥ ವಿಘ್ನಪರಂಪರೆಗಳು ಅನೇಕವಾಗಿ ಇವರಿಗೂ ಒದಗಿದುವು. ಈ ಕರ್ಮಯೋಗಿಯು ಅದೊಂದಕ್ಕೂ ಜಗ್ಗಲಿಲ್ಲ. "ಪದಂ ನ ಚಲಂತಿ ಧೀರಾಃ || ಪ್ರಾರಬ್ಧಮುತ್ತಮಗುಣಾ ನ ಪರಿತ್ಯಜಂತಿ" ಎಂಬ ವಚನಾರ್ಥಗಳಿಗೆ ನಿದರ್ಶನಭೂತರಂತೆ ಇವರು ಆಚರಿಸಿದರು. ಈ ಸ್ಥಿರಸಂಕಲ್ಪದಿಂದಲೇ ಇವರು ಕಾರಾಗೃಹವಾಸವನ್ನೂ ಕೂಡ ೨ ಸಲ ಅನುಭವಿಸಲು ಹಿಂಜರಿಯಲಿಲ್ಲ. ಕೇಸರೀ ಪತ್ರದಲ್ಲಿ ಇವರು ಬರೆದ ಬರೆವಣಿಗೆಗಳು ಪ್ರಜೆಗಳನ್ನು ರಾಜದ್ರೋಹಿಗಳನ್ನಾಗಿಯೂ ವಿಪ್ಲವಕಾರಕರನ್ನಾಗಿಯೂ ಮಾಡಲು ಸಾಧಕವಾಗಿದ್ದುವೆಂದು ಹೇಳಿ, ಪ್ರಭುತ್ವದವರು ಇವರಿಗೆ ೬ ವರ್ಷ ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸಿ ಮಾಂಡಲೆ ಪಟ್ಟಣದ ಕೋಟೆಯಲ್ಲಿ ನಿರ್ಬಂಧದಲ್ಲಿಟ್ಟರು. ಆತ್ಮದುರಭಿಮಾನವನ್ನೇ ದೂರೀಕರಿಸಿದ್ದ ಈ ಪುರುಷತಿಲಕರಿಗೆ ಅದರಿಂದ ನಿರುತ್ಸಾಹವಾಗಲೀ ಸಂಕಲ್ಪಚ್ಯುತಿಯಾಗಲೀ ಆಗುವುದುಂಟೆ? ಜನ್ಮವೇ ಪರಾರ್ಥವಾದುದೆಂದು ತಿಳಿದು ಅವತರಿಸಿದ್ದ ಮಹಾತ್ಮರು ಆ ನಿರ್ಬಂಧದ ಕಾಲವನ್ನಾದರೂ ವ್ಯರ್ಥಗೊಳಿಸುವುದುಂಟೆ? ಆ ಕಾಲವನ್ನೂ ಸ್ಥಲವನ್ನೂ ಆಚಂದ್ರಾರ್ಕಸ್ಮರಣೀಯವಾಗಿ ಉಳಿಯುವಂತೆ ಮಾಡಿದರು. ಎಂದರೆ "ಗೀತಾರಹಸ್ಯ"ವೆಂಬ ಉದ್ಗ್ರಂಥವು ಆ ಕಾಲದಲ್ಲಿ ಇವರಿಂದ ಅವತರಿಸಿ ಲೋಕವಿಕಾಸಮಾಡುವುದಕ್ಕೂ ಕರ್ಮಯೋಗಸ್ಥಿರೀಕರಣಕ್ಕೂ ಸಾಧಕವಾಗಿ ಪರಿಣಮಿಸಿತು. ಆಗ ದೀರ್ಘಕಾಲ ಕಾರಾಗೃಹಪ್ರಾಪ್ತಿಯು ತಿಲಕರಿಗೆ ಉಂಟಾಗದಿದ್ದರೆ ಸದಾ ರಾಜಕೀಯ ವಿಚಾರದಲ್ಲೇ ತಗುಲಿಕೊಂಡಿದ್ದ ತಿಲಕರಿಂದ ಇಂಥ ಉದ್ಗ್ರಂಥರಚನೆಯಾಗುವುದಕ್ಕೆ ಅವಕಾಶವೇ ಆಗುತ್ತಿರಲಿಲ್ಲ. ಸುಖದುಃಖಗಳನ್ನೂ ಮಾನಾಪಮಾನಗಳನ್ನೂ ಸಮನಾಗಿಯೇ ತಿಳಿದು ಭೌತಿಕ ಲೋಕಯಾತ್ರೆಯನ್ನು ಮಾಡುತ್ತಿದ್ದ ಈ ಮಹನೀಯರಿಗೆ ಕಾರಾಗೃಹ ವಿಮುಕ್ತಿಯಾಗುವುದರೊಳಗಾಗಿ ಅರ್ಧಾಂಗನಿಯಾದ ಧರ್ಮಪತ್ನೀವಿಯೋಗವೂ ಕೂಡ ಪ್ರಾಪ್ತವಾಯಿತು. ಸರ್ವವೂ ಈಶ್ವರೇಚ್ಛೆಯೆಂದು ತಿಳಿದು "ನಾಭುಕ್ತಂ ಕ್ಷೀಯತೇ ಕರ್ಮ" ಎಂದು ಅನುಭವಿಸಿದರು. ಬಂಧನವಿಮುಕ್ತಿಯಾದ ಕೂಡಲೇ ಇವರ ದೇಶಾರಾಧನತಪಸ್ಸು ಮೇಘಾವರಣದಿಂದ ನಿರ್ಮುಕ್ತವಾದ ಸೂರ್ಯತೇಜಸ್ಸಿನಂತೆ ಮತ್ತಷ್ಟು ಪ್ರಜ್ವಲವಾಯಿತು. ಆಗ್ಗೆ ೬೦ ವರ್ಷ ವಯಸ್ಸು ಇವರಿಗೆ ಸಮೀಪಿಸಿದ್ದರೂ ನವತರುಣರಂತೆ ದೇಶ ಕಾರ್ಯ ಮಾಡಲು ತೊಡಗಿದರು. ಆಗಣ ಮಹಾಯುದ್ಧ ಸಮಯವು ಇವರ ಸ್ವರಾಜ್ಯ ಸಾಧನ ಸಂಕಲ್ಪಕ್ಕೆ ಅನುಕೂಲ ಋತುವಾಗಿದ್ದಿತು. ಆಗಣ ರಾಜಕೀಯ ವಾತಾವರಣದಲ್ಲಿ ಸ್ವಾತಂತ್ರ್ಯ ಸಿದ್ಧಾಂತವೇ ತುಂಬಿತುಳುಕಾಡುತ್ತಿದ್ದಿತು. ಇದೇ ಸಮಯದಲ್ಲಿ ಇವರು ತಮ್ಮ ಸ್ವರಾಜ್ಯ ಸಂಪಾದನ ಭಾವೋದ್ದೀಪನಕ್ಕಾಗಿ ವಿಶೇಷ ಚಳವಳವನ್ನುಂಟುಮಾಡಲು ಮೊದಲಿಗಿಂತ ನೂರುಪಟ್ಟು ಮಿಗಿಲಾಗಿ ಕೆಲಸಮಾಡಲುಪಕ್ರಮಿಸಿದರು. ಸ್ವದೇಶದಲ್ಲೇ ಅಲ್ಲದೆ ಸೀಮೆಗೂ ಕೂಡ ಹೋಗಿ, ದೀರ್ಘಕಾಲ ಅಲ್ಲಿ ನಿಂತು ಸಾಹಸಮಾಡಿ ಬಂದರು. ಕೊನೆಯವರೆಗೂ ಅದೇ ಸಾಹಸದಲ್ಲಿದ್ದರು. ತಾವು ಈಗಲೇ ಜೀವಿತಯಾತ್ರೆಯನ್ನು ಮುಗಿಸುವವರಾಗಿಲ್ಲವೆಂದೂ ಈಗಣ ನೂತನ ರಾಜಕೀಯ ಸಂಸ್ಕರಣಗಳು ಅಪೂರ್ಣವಾದುವುಗಳಾಗಿರುವುದರಿಂದ ಅವನ್ನು ವ್ಯರ್ಥಗೊಳಿಸಿ ಸಾರ್ಥಕವಾದ ಸಂಸ್ಕರಣಗಳನ್ನು ಒದಗಿಸಿಕೊಳ್ಳಲು ಸಾಹಸಪಡಬೇಕೆಂದೂ ನಿರ್ಧರಿಸಿ ಅದಕ್ಕಾಗಿ ತಕ್ಕ ಬಲವನ್ನು ಸಿದ್ಧಪಡಿಸುತ್ತಿದ್ದರು. ಹೀಗಿರುವಲ್ಲಿ ಅನಿರೀಕ್ಷಿತವಾಗಿ ಇವರಿಗೆ ಅಕಾಲಿಕ ಮರಣವು ಸಂಭವಿಸಿದುದು ತುಂಬಾ ವಿಷಾದಸ್ಥಾನವೆನ್ನುವುದರಲ್ಲಿ ಸಂಶಯವಿಲ್ಲ. ನರಲೋಕದಲ್ಲಿ ಎಂಥ ಶೂರಧೀರಪುರುಷನಾದರೂ ಮೃತ್ಯುವಿಗೆ ಇದಿರೆ? ಪ್ರಾಕೃತಿಕ ವಸ್ತುಜಾಲವೆಲ್ಲವೂ ಕಾಲಾಧೀನವೇ ತಾನೇ?

ರಾಜಕೀಯ ವಿಷಯದಲ್ಲಿ ನಡೆಯುತ್ತಿರುವ ಈಗಣ ಚಳವಳಿಯಲ್ಲಿ ಸಹಾಯನಿರಾಕರಣತತ್ತ್ವವು ಇವರಿಗೆ ಅನುಮತವಾಗಿರಲಿಲ್ಲ. ತಮ್ಮ ಕೊನೆಯ ಅಸ್ವಸ್ಥತೆಯ ಕಾಲದಲ್ಲೂ ಬಾಯ್ಬಿಟ್ಟು ಅದನ್ನು ಹೇಳಿದ್ದರಂತೆ. ಪ್ರತ್ಯೇಕಪ್ರಾತಿನಿಧ್ಯ ತತ್ತ್ವಕ್ಕೂ ಇವರು ವಿಮುಖರು. ರಾಜಕೀಯ ವಿಷಯದಲ್ಲಿ ಹೀಗೆ ಭಿನ್ನಾಭಿಪ್ರಾಯವಿರುವುದೇನೂ ಅರಿದಲ್ಲ; ದೋಷವೂ ಅಲ್ಲ. ಇವರಲ್ಲಿದ್ದ ಶೋಧಕಬುದ್ಧಿಯು ಅಚುಂಬಿತವಾಗಿದ್ದಿತು. ಆರ್ಯರ ಪೂರ್ವನಿವಾಸಸ್ಥಲವನ್ನು ಕುರಿತು ಇವರು ಬರೆದಿರುವ ಗ್ರಂಥವೂ, ಭಗವದ್ಗೀತೆಗೆ ಪೂರ್ವಾಚಾರ್ಯರುಗಳೆಲ್ಲಾ ಕರ್ಮನಿರಸನಪರವಾಗಿ ಬರೆದಿರುವ ವ್ಯಾಖ್ಯಾನವನ್ನು ನಿರೋಧಿಸಿ, ಅದು ಕರ್ಮಯೋಗಬೋಧಕವಾದುದೆಂದು ಸಿದ್ಧಾಂತಮಾಡಿ ಇವರು ಬರೆದಿರುವ ಗೀತಾರಹಸ್ಯಗ್ರಂಥವೂ, ಮತ್ತು ರಾಜಕೀಯ ಕ್ಷೇತ್ರದಲ್ಲಿ ನೂತನ ಭಾವೋದ್ದೀಪನೆಗಾಗಿ ಇವರು ಆಗಾಗ್ಗೆ ಮಾಡುತ್ತಿದ್ದ ನಿರೂಪಣೆಗಳೂ ಇವರ ಅಸಾಧಾರಣ ಶೋಧಕಬುದ್ಧಿಯನ್ನು ಜಗತ್ತಿನ ಕಣ್ಣಮುಂದಿಟ್ಟಿರುವುವು.

ಭಾರತಮಾತೆಯ ಹೊಟ್ಟೆಯಲ್ಲಿ ಹುಟ್ಟಿದುದಕ್ಕೆ ಆಕೆಯ ಋಣವನ್ನು ತೀರಿಸುವವರು ಬಹಳ ವಿರಳರು. ಅಂಥ ವಿರಳರಲ್ಲೂ ತಿಲಕರಂಥ ಧೀರತಿಲಕರು ಅತ್ಯಂತ ವಿರಳರು. ಜಗತ್ತಿನಲ್ಲಿ ಆತ್ಮಾರಾಧಕರೇ ಹೆಚ್ಚು. ಆ ಆತ್ಮಾರಾಧಕರಿಗೂ ಪಶುಪಕ್ಷಿಮೃಗಾದಿಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ. ಅವರ ಜನ್ಮಾಜನ್ಮಗಳೆರಡೂ ಸಮಫಲಾತ್ಮಕವಾದುವುಗಳೇ. ದೇಶಾರಾಧನ ಜೀವಿತವುಳ್ಳವರು ಮಾತ್ರ ಹಾಗಲ್ಲ. ಅವರು ಒಂದು ವಿಧದಲ್ಲಿ ಅಜರಾಮರರೆಂದೇ ಹೇಳಬಹುದು. ನಮ್ಮ ಚರ್ಮಚಕ್ಷುಸ್ಸಿಗೆ ಗೋಚರಿಸುವ ಅವರ ಸ್ಥೂಲದೇಹವು ಮರೆಯಾದರೂ ಅವರ ಜೀವಿತದಲ್ಲಿ ಸ್ಫುಟಗಳಾದ ಸದ್ಗುಣಗಳೂ ಕರ್ಮವಿಶೇಷಗಳೂ ವಿಚಾರತರಂಗಗಳೂ ಅಚ್ಯುತವಾಗಿ ಉಳಿದಿರುವುವು. ಅವರು ಯಶಃಕಾಯದಿಂದ ಜಗತ್ತಿನ ಮುಂದೆ ಶಿಕ್ಷಕರಾಗಿ ನಿಂತಿರುವರು. ಈಗಣ ರಾಜಕೀಯ ವಿಷಮಸಮಯದಲ್ಲಿ ತಿಲಕರ ಪ್ರತ್ಯಕ್ಷಸಹಾಯವು ಪ್ರಜಾವರ್ಗಕ್ಕೆ ದೊರೆಯದಂತೆ ಆದುದು ದುರ್ಭರವಾದ ಸಂಕಟವು. ಇವರ ನಿಧನದಿಂದ ಭಾರತಲೋಕಪ್ರಕಾಶಕ ಜ್ಯೋತಿರ್ಮಂಡಲದಲ್ಲಿ ಅಸಾಧಾರಣ ತೇಜಃಪುಂಜವಾದ ನಕ್ಷತ್ರವೊಂದು ಕಣ್ಮರೆಯಾದಂತಾಯಿತು.

ತಿಲಕರ ಮೃತಿ.

ಇವರಿಗೆ ಜುಲೈ ತಾ|| ೨ ನೆ ವಾರದಲ್ಲಿ ಚಳಿಜ್ವರವು ಪ್ರಾಪ್ತವಾಯಿತು. ಅದರಿಂದ ಬಹಳ ದುರ್ಬಲರಾದರು. ಗುಣವಾದ ಬಳಿಕ ಬೊಂಬಾಯಿಗೆ ಹೋದರು. ಜುಲೈ ತಾ|| ೨೩ ಕ್ಕೆ ಅವರ ೬೫ ನೆ ವರ್ಷ ವರ್ಧಂತಿ ದಿನವಾದುದರಿಂದ ಆ ಉತ್ಸವಕ್ಕಾಗಿ ಕೊಲಾಬಾ ಜಿಲ್ಲೆಯವರ ಪ್ರಾರ್ಥನೆ ಮೇರೆಗೆ ತಿಲಕರು ಅಲ್ಲಿಗೆ ಹೋಗಿದ್ದರು. ಅಲ್ಲಿಂದ ಹಿಂದಿರುಗಿ ಬಂದಾಗಣಿಂದ ಇವರಿಗೆ ಮರಳಿ ಆರೋಗ್ಯ ತಪ್ಪಿತು. ಜುಲೈ ತಾ|| ೨೬ ರಲ್ಲಿ ಇವರ ಸ್ಥಿತಿ ಪ್ರಮಾದಕರವಾಯಿತು. ನ್ಯುಮೋನಿಯಾ ಲಕ್ಷಣಗಳು ಹೆಚ್ಚಾದುವು. ಸಮೀಪದಲ್ಲಿದ್ದ ಆಪ್ತಬಾಂಧವರು ಭಯಪಡುತ್ತಿರಲಾಗಿ ನಾನು ಈಗಲೇ ಸಾಯುವುದಿಲ್ಲವೆಂದು ತಾವೇ ಹೇಳುತ್ತ ಅವರನ್ನೆಲ್ಲಾ ಸಮಾಧಾನಪಡಿಸುತ್ತಿದ್ದರು. ತಾ|| ೨೮ನೆ ಬುಧವಾರ ಬೆಳಗ್ಗೆ ಜ್ವರವು ತಗ್ಗಿಹೋಯಿತು. ನಾಡಿಯೂ ಕೂಡ ಸರಿಯಾದ ಸ್ಥಿತಿಯಲ್ಲಿದ್ದಿತು. ಆ ದಿನ ಮಧ್ಯಾಹ್ನದಿಂದ ಜ್ವರ ಹೆಚ್ಚಿತು. ಹೃದಯವು ದುರ್ಬಲವಾಗುತ್ತಲೂ ಹೊಟ್ಟೆಯುಬ್ಬರಿಸುತ್ತಲೂ ಬಂದಿತು. ದೊಡ್ಡ ದೊಡ್ಡ ವೈದ್ಯರು ಚಿಕಿತ್ಸೆಯನ್ನು ಅಹರ್ನಿಶಿಯೂ ಮಾಡುತ್ತಿದ್ದರು. ಗುರುವಾರ ಶುಕ್ರವಾರಗಳ ಸ್ಥಿತಿಯು ಒಂದೇ ಸಮನಾಗಿದ್ದಿತು. ಈ ಅಸ್ವಸ್ಥತೆಯ ಕಾಲದಲ್ಲಿ ರಾಜಕೀಯ ವಿಷಯಪ್ರಸಂಗವನ್ನೇ ಅವರು ಬಿಟ್ಟುಬಿಟ್ಟು, ಆಧ್ಯಾತ್ಮಿಕಕ್ಕೆ ಭಾವಮನೋಬುದ್ಧಿಗಳನ್ನು ತಿರುಗಿಸಿದುದು ಅವರ ಸುಕೃತ ವಿಶೇಷವೇ ಸರಿ. ಚಿರಕಾಲವಾಗಿ ಐಹಿಕಾಭಿಮಾನಗಳು ಅವರಲ್ಲಿ ಅಂಟಿಬಂದಿದ್ದರೂ ಕ್ಷಣಿಕಗಳಾದ ಆ ವಿಷಯಗಳನ್ನೆಲ್ಲಾ ತೊರೆದು ಶಾಶ್ವತ ಪದವಿಯ ಕಡೆಗೆ ಸಂಸ್ಕಾರವು ಅವರನ್ನು ಮರಳಿಸಿ ನಿಜಭಕ್ತಿಗೆ ಸಂಧಿಸಿದುದು ಅವರ ವಿಷಯದಲ್ಲಿ ಉಂಟಾದ ದೈವಾನುಗ್ರಹಕ್ಕೆ ನಿದರ್ಶನವು. ಆ ಕಾಲದಲ್ಲಿ ಇವರು ಭಗವದ್ಗೀತೆಯಲ್ಲಿ ತಮಗೆ ಪ್ರಿಯವಾಗಿದ್ದ ಕೆಲ ಶ್ಲೋಕಗಳನ್ನು ಓದಿಸುತ್ತಲೂ, ಕೇಳುತ್ತಲೂ, ಅರ್ಥವಿಚಾರ ಮಾಡುತ್ತಲೂ ಇದ್ದರು. ಗೀತೆಯ ೮ ನೆ ಅಧ್ಯಾಯದ ಏಳನೆ ಶ್ಲೋಕವನ್ನು ಸದಾ ಉಚ್ಚರಿಸುತ್ತಿದ್ದರು. ಬುಧವಾರ ಸಾಯಂಕಾಲ ಸ್ಮೃತಿತಪ್ಪುವುದಕ್ಕಾರಂಭಿಸಿ ಸನ್ನಿಪಾತ ಲಕ್ಷಣವು ಹೆಚ್ಚುತ್ತಬಂದಿತು. ಗುರುವಾರ ಶುಕ್ರವಾರಗಳಲ್ಲಿ ಇವರನ್ನು ಮಾಡದಿಂದ ಕೆಳಕ್ಕಿಳಿಸಿ ಮೂರಾವರ್ತಿ ಮಲಗಿಸಿದರು. ಆಗ ಸ್ಮೃತಿಯೇ ಇರಲಿಲ್ಲ. ಶನಿವಾರ ಬೆಳಗಿನ ಸ್ಥಿತಿಯು ಸ್ವಲ್ಪ ಅನುಕೂಲವಾಗಿ ಕಂಡಿತು. ಮಧ್ಯಾಹ್ನ ಮತ್ತೆ ವಿಷಮಸ್ಥಿತಿಯು ಬಲವಾಗಿ ಸ್ಮರಣೆ ತಪ್ಪಿ ಹೃದಯದೌರ್ಬಲ್ಯವುಂಟಾಗಿ, ನಾಡಿಯು ಸ್ತಬ್ಧವಾಗಲುಪಕ್ರಮಿಸಿತು. ರಾತ್ರಿ ೧೧|| ಗಂಟೆಗೆ ಮರಣವೇದನೆಯು ಪ್ರಬಲವಾಯಿತು. ೧೨||| ಗಂಟೆಗೆ ದೇಹವನ್ನು ಬಿಟ್ಟರು. ಅವರ ಗಂಡು ಹೆಣ್ಣು ಮಕ್ಕಳೂ ಆಪ್ತೇಷ್ಟರೂ ಸಮೀಪದಲ್ಲೇ ಇದ್ದರು. ಬೆಳಗಾಗುವುದರೊಳಗೆ ಬೊಂಬಾಯಿ ಪಟ್ಟಣದಲ್ಲೆಲ್ಲಾ ಸುದ್ದಿ ಹರಡಿತು. ಜನರು ಗುಂಪುಗುಂಪಾಗಿ ಸರ್ದಾರ್ ಗೃಹದ ಮುಂದೆ ಬಂದು ತುಂಬಿಬಿಟ್ಟರು. ೯ ಗಂಟೆ ಹೊತ್ತಿಗೆ ಆ ಬೀದಿಯೆಲ್ಲಾ ಕಾಲಿಕ್ಕಲು ತಾವಿಲ್ಲದಂತೆ ಜನರಿಂದ ನಿಬಿಡವಾಯಿತು. ಪ್ರಜೆಗಳದೀನಪ್ರಾರ್ಥನೆಗಾಗಿ ತಿಲಕರ ದೇಹವನ್ನು ಮಾಡದಿಂದ ಕೆಳಕ್ಕಿಳಿಸಿ ಜನರಿದಿರಿಗೆ ಕುಳ್ಳಿರಿಸಿದರು. ಆ ಬೀದಿಯಲ್ಲಿ ಟ್ರಾಂ ಮೊದಲಾದ ಎಲ್ಲಾ ತೆರದ ಬಂಡಿಗಳ ತಿರುಗಾಟವೂ ಕಟ್ಟಾಯಿತು. ಶವವನ್ನು ಪುಷ್ಪಮಾಲಾಲಂಕೃತವಾದ ಮಂಟಪದಲ್ಲಿ ದಹನಭೂಮಿಗೆ ಉತ್ಸವವಾಗಿ ಹೊರಡಿಸುವುದಕ್ಕೆ ಮಧ್ಯಾಹ್ನ ೧ ಗಂಟೆಯಾಯಿತು. ಶವದ ಜತೆಗೆ ಲಕ್ಷಾಂತರ ಜನರು ಹೊರಟರು, ದಾರಿಯುದ್ದಕ್ಕೂ ಲಕ್ಷಾಂತರ ಜನರು ನಿಂತು ಪುಷ್ಪವೃಷ್ಟಿಯನ್ನು ಕರೆದು ಕಣ್ಣೀರು ಸುರಿಸುತ್ತಿದ್ದರು. ಒಡನೆ ೫೦ ಭಜನೆ ಕೂಟದವರು ಕೀರ್ತನೆ ಮಾಡಿಕೊಂಡುಹೋಗುತ್ತಿದ್ದರು. ಗಾಂಧಿ, ಕಪರ್ದಿ, ಮೌಂಜಿ, ಕರಂದಿಕರ್, ಚೌಕತಾಲಿ, ಜೋಟಾನಿ, ಬಾಪ್ಟಿಸ್ಟಾ ಮೊದಲಾದ ಪ್ರಮುಖ ಮಿತ್ರಮಂಡಲಿಯವರೆಲ್ಲಾ ಹೋಗುತ್ತಿದ್ದರು. ಮಳೆಯು ಅಖಂಡವಾಗಿ ಸುರಿಯುತ್ತಿದ್ದರೂ ಜನರು ಅದನ್ನು ಲೆಕ್ಕಿಸದೆ ಬೋಳುಮಂಡೆಯಲ್ಲೇ ಹೋಗುತ್ತಿದ್ದರು. ಗಾಂಧಿ, ಚೌಕತಾಲಿ ಮೊದಲಾದವರೆಲ್ಲಾ ಶವವನ್ನು ಹೊತ್ತರು. ಇವರ ದಹನಕ್ಕೋಸ್ಕರ ಪ್ರತ್ಯೇಕವಾಗಿ ಚೌಪಾಟಿ ಎಂಬ ಸೈಕತ ಸ್ಥಲವನ್ನು ಉಪಯೋಗಿಸಿಕೊಳ್ಳಲು ಸರ್ಕಾರದವರು ಅನುಮತಿ ಕೊಟ್ಟಿದ್ದರು. ಅಲ್ಲಿಗೆ ಸೇರುವುದಕ್ಕೆ ೩ ಗಂಟೆಯಾಯಿತು. ಗಂಧದ ಕೊರಡುಗಳನ್ನು ಪೇರಿಸಿ ಅದರ ಮೇಲೆ ತಿಲಕರ ದೇಹವನ್ನು ಮಲಗಿಸಿ ಉತ್ತರಕ್ರಿಯೆಗಳನ್ನು ಅವರ ಇಬ್ಬರು ಗಂಡುಮಕ್ಕಳೂ ನೆರವೇರಿಸಿದರು. ಅದೆಲ್ಲಾ ಮುಗಿಯುವ ಹೊತ್ತಿಗೆ ೫ ಗಂಟೆಯಾಯಿತು. ಪಂಜಾಬಿನಿಂದ ಆಗತಾನೇ ಬಂದ ಲಾಲಾ ಲಜಪತಿರಾಯಿರವರು ತಿಲಕರ ಜೀವಿತ ಚರಿತ್ರವನ್ನು ಕುರಿತು ಉಪನ್ಯಾಸವನ್ನು ಮಾಡಿ ನೆರೆದಿದ್ದ ಜನರನ್ನೆಲ್ಲಾ ಶೋಕಸಾಗರದಲ್ಲಿ ಮುಳುಗಿಸಿದರು. ಶನಿವಾರ ರಾತ್ರಿಯೇ ಪುಣೆಗೆ ಮೃತಿಯ ಸುದ್ದಿ ಹೋಗಲು, ಬೆಳಗ್ಗೆ ಅಲ್ಲಿಯ ಪ್ರಜೆಗಳು ೨ ಸ್ಪೆಷಲ್ ಟ್ರೇನಿನಲ್ಲಿ ಬೊಂಬಾಯಿಗೆ ಬಂದು ಶವವನ್ನು ಪುಣೆಗೆ ಸಾಗಿಸಿಕೊಂಡುಹೋಗಲು ಯತ್ನಿಸಿದರು. ಬೊಂಬಾಯಿಯವರು ಅದಕ್ಕೆ ಅವಕಾಶ ಕೊಡಲಿಲ್ಲ. ತಿಲಕರ ಮಕ್ಕಳುಗಳು ಅಸ್ಥಿಗಳನ್ನು ತಾ|| ೪ ರಲ್ಲಿ ಪುಣೆಗೆ ತಂದರು. ನಿಲ್ದಾಣದಲ್ಲಿ ೨೦ ಸಹಸ್ರ ಜನರು ಕೂಡಿದ್ದರು. ಅಸ್ಥಿಗಳನ್ನು ಪಲ್ಲಕ್ಕಿಯಲ್ಲಿಟ್ಟು ಊರಿನಲ್ಲೆಲ್ಲಾ ಮೆರವಣಿಗೆ ಮಾಡಿಕೊಂಡು ಮನೆಗೆ ಸೇರಿದರು. ತಾ|| ೧೦ ನೆಯ ದಿನ ಅವನ್ನು ತ್ರಿವೇಣಿಯಲ್ಲಿ ಬಿಡುವುದಕ್ಕಾಗಿ ಪ್ರಯಾಗಕ್ಕೆ ತೆಗೆದುಕೊಂಡುಹೋಗುವವರಾಗಿದ್ದಾರೆ.

ತಿಲಕರ ನಿಧನವಾರ್ತೆಯನ್ನು ಕೇಳಿ ಕಲ್ಕತ್ತಾ, ಡಿಲ್ಲಿ, ಆಗ್ರಾ, ಮದರಾಸು, ಲಕ್ನೋ, ಕರಾಚಿ ಮೊದಲಾದ ಎಲ್ಲಾ ಪಟ್ಟಣಗಳಲ್ಲೂ ಜನರು ಅಂಗಡಿಮುಂಗಟ್ಟುಗಳನ್ನು ಮುಚ್ಚಿದರು. ಎಲ್ಲೆಲ್ಲೂ ದುಃಖಪ್ರದರ್ಶನ ಸಭೆಗಳಾಗಿರುವುವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ಶುಕ್ರವಾರ ಬೆಂಗಳೂರಿಗೆ ಚಿತ್ತೈಸಿದುದಾಗಿ ತಿಳಿಯಬರುತ್ತದೆ.

ಕಳೆದ ಬುಧವಾರ ಅರಸೀಕೆರೆ ಮಾರ್ಗವಾಗಿ ಶ್ರೀಮನ್ ಮಹಾರಾಣಿಯವರು ದಯಮಾಡಿಸಿದರು. ಅದೇ ಒಂಡಿಯಲ್ಲೇ ನಮ್ಮ ಮಹಾರಾಜರ ಸಡ್ಡಕಂದಿರಾದ ಗೊಂಡಾಲ್ ಯುವರಾಜರವರು ದಯಮಾಡಿಸಿ ಶ್ರೀಮನ್ ಮಹಾರಾಜರವರ ಆತಿಥ್ಯದಲ್ಲಿರುವರು.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುಪೇಟೆ ತಾಲ್ಲೂಕಿನ ವೀರಶೈವರು ತಾಲ್ಲೂಕು ವೀರಶೈವ ಸಭೆಯನ್ನು ಈ ಆಗಸ್ಟ್ ೨೮ ರಲ್ಲಿ ಗುಂಡ್ಲುಪೇಟೆಯಲ್ಲಿ ಬ|| ಬ|| ರಾಜಸಭಾಭೂಷಣ ಮ|| ಕೆ. ಪಿ. ಪುಟ್ಟಣ್ಣಸೆಟ್ಟಿ, ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ನಡೆಯಿಸಬೇಕೆಂದು ನಿರ್ಧರಿಸಿರುವರೆಂದು ಕೇಳಿ ಸಂತೋಷಿಸುತ್ತೇವೆ. ಇದರ ಸಂಬಂಧವಾದ ಪತ್ರವ್ಯವಹಾರವು ಮತ್ತೊಂದು ಕಡೆ ಕೊಡಲ್ಪಟ್ಟಿರುತ್ತದೆ. ದಿ|| ಬ|| ಮ|| ಪುಟ್ಟಣ್ಣಸೆಟ್ಟರು ಅಧ್ಯಕ್ಷತೆಯನ್ನು ವಹಿಸಲು ಸಮ್ಮತಿಸಿ ಮತ್ತು ವಿದ್ಯಾವಂತರುಗಳು ೧-೨ ದಿನಗಳಮಟ್ಟಿಗೆ ವಿರಾಮಮಾಡಿಕೊಂಡು ಸಭೆಗೆ ದಯಮಾಡಿ ಸಭೆಯನ್ನಲಂಕರಿಸಿ ಆ ತಾಲ್ಲೂಕಿನ ವೀರಶೈವರ ಮಹಾಭಿಮಾನೌತ್ಸುಕ್ಯಗಳನ್ನು ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ. ಇದರಿಂದ ಇತರ ತಾಲ್ಲೂಕಿನ ವೀರಶೈವರೂ ಇಂತಹ ಸಭೆಗಳನ್ನು ನೆರವೇರಿಸಲು ಉತ್ಸಾಹಗೊಳಿಸಲ್ಪಟ್ಟಂತಾಗುವುದು.

ಭರತಖಂಡದ ವೃತ್ತಾಂತಗಳು.

ಕಲ್ಕತ್ತಾ ಪ್ರಾಂತದಲ್ಲಿ ಅತಿವೃಷ್ಟಿಯಿಂದ ೧೫೦ ಚದರ ಮೈಲಿಗಳಷ್ಟು ಪ್ರದೇಶವು ನೀರಿನಲ್ಲಿ ಮುಳುಗಿಹೋಗಿ ಬಹಳ ಮನೆಗಳು ಕುಸಿದು ಬಿದ್ದುವು.

ಕಲ್ಕತ್ತಾದಲ್ಲಿ ಸೆಪ್ಟಂಬರ್ ತಾ|| ೪-೫-೬ ರಲ್ಲಿ ಕೂಡುವ ಪ್ರತ್ಯೇಕ ದೇಶೀಯ ಮಹಾಸಭೆಯ ಅಧ್ಯಕ್ಷತೆಯನ್ನು ಲಾಲಾ ಲಜಪತಿರಾಯಿರವರಿಗೆ ಕೊಡಬೇಕೆಂದು ಮಹಾ ಸಭಾಸ್ಥಾಯಿ ಸಂಘದವರು ನಿರ್ಣಯಿಸಿದ್ದಾರೆ.

ಸಂಗೀತಗಾರ್ತಿಯರಲ್ಲಿ ಅತ್ಯಂತ ವಿದುಷಿಯೆಂದು ಪ್ರಸಿದ್ಧಳಾಗಿದ್ದ ಕಂಚಿಯ ಧನಕೋಟಿಯು ಸ್ವರ್ಗಸ್ಥಳಾದಳು. ಆಕೆಯ ಸಹೋದರಿಯ ಮಗನಾದ ಸುಬ್ರಹ್ಮಣ್ಯಂ ಎಂಬಾತನು ತಮ್ಮ ದೊಡ್ಡಮ್ಮನ ಖ್ಯಾತಿಯನ್ನು ಉಳಿಯಿಸುವಂತಿದ್ದಾನಂತೆ.

ಪಶ್ಚಿಮ ಹಿಂದೂಸ್ಥಾನ ಲಿಬರಲ್ ಸಂಘದವರು ಸರ್ ವಾಚಾರವರ ಅಧ್ಯಕ್ಷತೆಯಿಂದ ಬೊಂಬಾಯಿಯಲ್ಲಿ ಸಭೆಗೂಡಿ, ಗಾಂಧಿಯವರ ಸಹಾಯ ನಿರಾಕರಣ ತತ್ವವನ್ನು ಅಲ್ಲಗಳೆದುದಲ್ಲದೆ, ಸತ್ಯಾಗ್ರಹ ಪದ್ಧತಿಯಂತೆಯೇ ಇದೂ ಅನರ್ಥಕಾರಿಯಾದುದರಿಂದ ಇದನ್ನು ಈಗಣ ಸಮಯದಲ್ಲಿ ಅವಲಂಬಿಸುವುದನ್ನು ಕುರಿತು ಖಂಡಿಸುವ ತೀರ್ಮಾನವನ್ನು ಮಾಡಿದರು.

ಬಾಲಕೃಷ್ಣನ್ ಎಂಬ ಮತ್ತು ಅಮಾಸೆ ಮುಪ್ಪನ್ ಎಂಬ ಇಬ್ಬರು ಪಂಚಮರು ಕ್ರಮವಾಗಿ ತಿರುಚನಾಪಲ್ಲಿ ಜಿಲ್ಲಾಬೋರ್ಡಿಗೂ ಶ್ರೀರಂಗದ ಮ್ಯುನಿಸಿಪಲ್ ಕೌನ್ಸಿಲಿಗೂ ಮೆಂಬರುಗಳಾಗಿ ನಿಯಮಿಸಲ್ಪಟ್ಟರು. ಕಳೆದ ತಾ|| ೨೪ ರಲ್ಲಿ ಇವರು ಮೀಟಿಂಗಿಗಾಗಿ ಸಭೆಗೆ ಬಂದು ಕುಳಿತಾಗ ಚೇರ್ಮೆನ್ನರ ಹೊರತು ಇತರ ಸಭಿಕರಾರೂ ಬರಲಿಲ್ಲವಾದುದರಿಂದ ಬಹಳ ಹೊತ್ತು ಕಾದಿದ್ದು ಹಾಗೆಯೇ ಹೊರಟುಹೋದರಂತೆ.

ಸಿಲೋನ್ ಪ್ರಭುತ್ವದವರು ೧|| ಲಕ್ಷ ಸವರನ್ನುಗಳನ್ನು ೧೪ ರೂ. ಬೆಲೆಯ ಮೇರೆಗೆ ಮೊನ್ನೆ ತಾನೇ ಮಾರಿದ್ದಾರೆ. ಬರುಬರುತ್ತ ಸವರನ್ನುಗಳ ಬೆಲೆಯು ಇಳಿದುಹೋಗುವುದಾದ ಕಾರಣ ಪ್ರಜೆಗಳು ಆತುರಪಟ್ಟು ಸವರನ್ನುಗಳನ್ನು ಈಗಲೇ ಕೊಳ್ಳುವುದು ಅವಿವೇಕವೆಂದು ಮದ್ರಾಸು ಸರ್ಕಾರ ಪ್ರಚುರಣ ಸಂಘದವರು ಪ್ರಕಟಿಸಿದ್ದಾರೆ. ಕಳೆದ ವಾರ ಸೀಮೆಯಿಂದ ೪ ಲಕ್ಷ ಸವರನ್ನುಗಳು ೧ ಹಡಗಿನಲ್ಲಿ ಭರತಖಂಡಕ್ಕೆ ಬಂದುವು.

ಪೋಸ್ಟಲ್ ಸಂಘದವರ ಸಲಹೆ ಪ್ರಕಾರ ಸರ್ಕಾರದವರು ಅಂಚೆಯ ಶಾಖೆಯ ರನ್ನರುಗಳು ಪೋಸ್ಟ್ ಪೀವನ್ನುಗಳು ಮೊದಲಾದವರ ಸಂಬಳವನ್ನೆಲ್ಲಾ ಹೆಚ್ಚಿಸಲು ಒಪ್ಪಿಕೊಂಡರು. ಮತ್ತು ಅಂಚೆಯ ಗುಮಾಸ್ತೆಯರು ಮೊದಲಾದವರ ಸಂಬಳವನ್ನು ಹೆಚ್ಚಿಸುವ ವಿಷಯವಾಗಿಯೂ ಆಲೋಚಿಸುತ್ತಿದ್ದಾರೆ. ಆದರೆ ಹೀಗೆ ಹೆಚ್ಚಿಸಿದರೆ ೧ ಕೋಟಿ ರೂ. ನಷ್ಟು ವೆಚ್ಚವು ಹೆಚ್ಚುವುದಂತೆ. ಅದಕ್ಕಾಗಿ ಭರತಖಂಡದ ಅಂಚೆಯ ದರಗಳನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಯೋಚಿಸುತ್ತಿದ್ದಾರೆ.

ಮೆಯಿನಾ ಎಂಬ ೧೬ ವರ್ಷದ ತರುಣಿಯು ಹೊಟ್ಟೆಗಿಲ್ಲದೆ ತಿರುಪಕ್ಕಾಗಿ ಗಂಡು ವೇಷವನ್ನು ಹಾಕಿಕೊಂಡು ಅಲೆಯುತ್ತಿರಲು ಪೊಲೀಸರು ಹಿಡಿದು ಕ್ರಿ. ಪ್ರೊ. ಕೋಡು ೧೧೦ ನೆ ಸೆಕ್ಷನ್ ಪ್ರಕಾರ ದಂಡಾಧಿಕಾರಿಯಿಂದ ಶಿಕ್ಷೆ ಮಾಡಿಸಿದರು. ಅದರ ಮೇಲೆ ಜಿಲ್ಲಾ ಮೇಜಿಸ್ಟ್ರೇಟರಲ್ಲಿ ಅಪ್ಪೀಲಾಗಲಾಗಿ ಅಂಥ ವೇಷಾಂತರವು ಪರರನ್ನು ಮೋಸಪಡಿಸಲಿಕ್ಕಾಗಲೀ ಇನ್ನಾವ ದುಷ್ಕಾರ್ಯವನ್ನಾಚರಿಸಲಿಕ್ಕಾಗಲೀ ಧರಿಸಲ್ಪಟ್ಟಿದ್ದರೆ ಶಿಕ್ಷಾರ್ಹವೇ ಹೊರತು ಅನ್ಯಥಾ ಇದ್ದರೆ ದಂಡನಾರ್ಹವಲ್ಲವೆಂದು ಹೇಳಿ ಶಿಕ್ಷೆಯನ್ನು ತಪ್ಪಿಸಿಬಿಟ್ಟರು.

ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರು ಸಾಮ್ರಾಜ್ಯಕ್ಕೆ ಸೇರಿದ ಅಮೇರಿಕಾದ ಕೆನಡಾ ಆಸ್ಟ್ರೇಲಿಯ ನ್ಯೂಜಿಲ್ಯಾಂಡ್‌ಗಳಲ್ಲಿ ಬಹುಕಾಲದಿಂದ ಸಂಚಾರ ಮಾಡುತ್ತ ದೇಹಾರೋಗ್ಯವು ಕುಂದಿರುವುದರಿಂದ ಭರತಖಂಡಕ್ಕೆ ಅವರು ದಯಮಾಡಿಸಲಿಕ್ಕಿದ್ದ ಕಾಲವು ಇನ್ನಷ್ಟು ಮುಂದಕ್ಕೆ ಬೀಳುವುದೆಂದು ಕೆಲ ಪತ್ರಿಕೆಗಳು ಹೇಳಿರುತ್ತವೆ. ಅವರು ಸ್ವಲ್ಪಕಾಲ ವಿಶ್ರಾಂತಿ ತೆಗೆದುಕೊಳ್ಳುವುದು ಅವಶ್ಯಕವೆಂದು ಡಾಕ್ಟರುಗಳು ಹೇಳಿದ್ದಾರಂತೆ. ಆದರೆ ಭರತಖಂಡದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲೆಲ್ಲಾ ಸತ್ಕಾರದೇರ್ಪಾಟಿನ ಸನ್ನಾಹಗಳು ನಡೆಯುತ್ತಲೇ ಇವೆ. ಅವರ ಆಗಮನವು ನಿಂತುಹೋಯಿತೆಂಬ ವಿಷಯವಾಗಿ ಸರ್ಕಾರದ ಪ್ರಕಟನೆ ಯಾವುದೂ ಆಗಿಲ್ಲ.

ಸರ್ ನಾರಾಯಣಚಂದ್ರಾವರ್ಕರ್, ಆ|| ಗೋಕುಲದಾಸ್ ಪರೇಖ್, ಜಮುನಾದಾಸ್, ದ್ವಾರಕದಾಸ್ ಮೊದಲಾದ ಮಿತವಾದಿ ಮಹಾಜನರು ತಮ್ಮ ರುಜುವಿನಿಂದ ಒಂದು ಪ್ರಕಟನ ಪತ್ರವನ್ನು ಹೊರಡಿಸಿ, ಅದರಲ್ಲಿ ಈಗಿನ ವಿಷಮಸಮಯದಲ್ಲಿ ದೂರದೃಷ್ಟಿಯನ್ನೂ ರಾಜ[illegible]ಯ ಪರಿಜ್ಞಾನವನ್ನೂ ಜ[illegible]ನ್ನಾಗಿ ಉಪಯೋಗಿಸಬೇಕೆಂದೂ, ದೇಶದ ಕಷ್ಟ[illegible]ವನ್ನು ತೊಲಗಿಸುವುದಕ್ಕೆ ಗಾಂಧಿಯವರ ಸಹಾಯ ನಿರಾಕರಣ ಪದ್ಧತಿಯು ಸಾಧಕವಲ್ಲವೆಂದೂ, ಅದು ದೇಶಕ್ಕೆ ಅರಿಷ್ಟವನ್ನುಂಟುಮಾಡಿ ಅಭಿವೃದ್ಧಿಗೆ ಭಂಗವನ್ನೇ ತರುವುದೆಂದೂ, ದೇಶದ ಬುದ್ಧಿವಂತರುಗಳು ಈ ಪದ್ಧತಿಗೆ ವಿರೋಧಿಗಳಾಗಿದ್ದರೂ ಗಾಂಧಿಯವರ ಮಾತಿಗೆ ಕಟ್ಟು ಬಿದ್ದು ನಡೆಯಿಸಿದರೆ ಕೇಡು ತಪ್ಪದೆಂದೂ ತಿಳಿಯಿಸಿದ್ದಾರೆ.

ಗಣಿತ ವಿದ್ಯೆಯಲ್ಲಿ ಅಸಾಧಾರಣ ಜ್ಞಾನವನ್ನು ಹೊಂದಿ ಮದ್ರಾಸು ಸರ್ಕಾರದ ಸಹಾಯದಿಂದ ಸೀಮೆಗೆ ಹೋಗಿ ೩ ವರ್ಷಕಾಲ ಆ ಶಾಸ್ತ್ರದಲ್ಲಿ ಅಸದೃಶಪಾಂಡಿತ್ಯವನ್ನು ಸಂಪಾದಿಸಿ ದೇಹಾನಾರೋಗ್ಯದಿಂದ ೧೯೧೯ ನೆ ವರ್ಷದಲ್ಲಿ ಭರತಖಂಡಕ್ಕೆ ಬಂದು ವಿಧಿವಶರಾದ ಮದರಾಸಿನ ರಾಮಾನುಜಂರವರ ಜೀವಿತಚರಿತ್ರವನ್ನು ಕುರಿತು ಪ್ರಖ್ಯಾತ ತತ್ವಶಾಸ್ತ್ರಜ್ಞರಾದ ಮಿ|| ಜಿ. ಹೆಚ್. ಹಾರ್ಡಿಯವರು ಒಂದು ಲೇಖನವನ್ನು ಬರೆದಿರುತ್ತಾರೆ. ಅದರ ಕೊನೆಯಲ್ಲಿ ಹೀಗೆ ಹೇಳಿದ್ದಾರೆ.—"ರಾಮಾನುಜಂರವರ ಶಕ್ತಿ ಸಾಮರ್ಥ್ಯವನ್ನು ಗ್ರಹಿಸಿದವರು ಗಣಿತ ಶಾಸ್ತ್ರಜ್ಞರಲ್ಲಿ ಕೆಲವು ಮಂದಿಗಳೇ. ಆತನು ಬೋಧಿಸಿದ ಗಣಿತ ಸೂತ್ರಗಳು ಅತ್ಯದ್ಭುತವಾದುವುಗಳು. ಇದುವರೆಗೆ ಪಾಶ್ಚಾತ್ಯ ದೇಶಗಳಲ್ಲಿ ಇಂಥ ಪಂಡಿತರನ್ನು ನಾನು ಕಾಣಲಿಲ್ಲ. ಆತನು ಈಗಣ ಕಾಲಕ್ಕೆ ಪ್ರಪಂಚದಲ್ಲಿ ಗಣಿತಶಾಸ್ತ್ರದ ನೂತನ ಸಿದ್ಧಾಂತಗಳನ್ನು ಪ್ರಬೋಧಿಸಿದಾತನೆಂದೇ ಹೇಳಬಹುದು. ಈತನು ಗತಿಸಿದರೂ ಈತನ ಹೆಸರನ್ನು ಗಣಿತ ಶಾಸ್ತ್ರಜ್ಞಪ್ರಪಂಚವು ಮರೆಯದು. ಅದು ಚಿರಸ್ಮರಣೀಯವಾಗಿರುವುದು" ಎಂಬುದಾಗಿ. ಇಂಥ ಲೋಕೋತ್ತರ ಯಶಸ್ಸನ್ನು ಸಂಪಾದಿಸಿದ ರಾಮಾನುಜಂರವರು ಬದುಕಿದ್ದುದು ೩೨ ವರ್ಷಕಾಲ ಮಾತ್ರವೇ. "ವಿದ್ವಾನ್ ಧನಾಢ್ಯೋನತುದೀರ್ಘಜೀವೀ."

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

1-8-1920 ನೇ ಮುರ್ಕ್ಕುಂ ನೋಟೀಸ್.

ಇದರಿಂದ ಮೈಸೂರು ಸಿಟಿಯಲ್ಲಿರತಕ್ಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿರತಕ್ಕ ಈ ಕೆಳಗೆ ಕಂಡ ಬೈಲಾಗಳು, ನಿಬಂಧನೆಗಳು ಮತ್ತು ತಿದ್ದುಪಡಿಗಳ ವಿಷಯದಲ್ಲಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ತೆಗೆದುಕೊಳ್ಳಲು ಕ್ಲುಪ್ತಮಾಡಿದ್ದ ಕಾಲದ ಅವಧಿಯನ್ನು ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ 31-7-1920 ನೇ ಮುರ್ಕ್ಕುಂ ತೀರ್ಮಾನವನ್ನು ಅನುಸರಿಸಿ 1920 ನೇ ಇಸವಿ ಆಗಸ್ಟ್ ಆಖೈರುವರೆಗೂ ಹೆಚ್ಚುಮಾಡಿರುತ್ತೆ.

ಸದರಿ ಬೈಲಾಗಳು, ನಿಬಂಧನೆಗಳು ಮತ್ತು ತಿದ್ದುಪಡಿಗಳ ಅಚ್ಚಾದ ಕಾಪಿಗಳನ್ನು ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿಟ್ಟಿರುತ್ತೆ. ಇಷ್ಟವುಳ್ಳವರು ಆಫೀಸು ವೇಳೆಯಲ್ಲಿ ಬಂದು ಇವುಗಳನ್ನು ಮುಫತ್ತಾಗಿ ನೋಡಬಹುದು.

ನಂ.	ನಿಬಂಧನೆಗಳು	ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿದ ತಾರೀಖು
1.	ಕಟ್ಟಡಗಳ ಬೈಲಾಗಳ ತಿದ್ದುಪಡಿ.	27-5-1920 3-6-1920 10-6-1920
2.	ಮೋಟಾರ್‌ಗಾಡಿಗಳು ವಗೈರೆಗಳ ನಂಬರಿಂಗ್ ಮತ್ತು ರಿಜಿಸ್ಟ್ರೇಷನ್ ವಿಚಾರದ ಬೈಲಾಗಳು.	13-5-1920
3.	ಕಸಬು ವಗೈರೆ ಮೇಲೆ ಕಂದಾಯ ಹಾಕಲು ರೂಲ್ಸುಗಳು.	17-6-1920 24-6-1920 1-7-1920
4.	ತೆರಿಗೆಗಳ ಷೆಡ್ಯೂಲ್ ತಿದ್ದುಪಡಿ (ಪೋಸ್ಟಾಫೀಸಿನ ಮೂಲಕ ಪಾರ್ಸೆಲ್‌ನಲ್ಲಿ ಬರುವ ಜವಳಿಮೇಲೆ ಆಕ್ಟ್ರಾಯ ತೆರಿಗೆಯ ವಿನಾಯತಿಯನ್ನು ವಜಾಮಾಡುವ ವಿಚಾರ.)	3-6-1920 10-6-1920 17-6-1920
5.	ತೆರಿಗೆಗಳ ಷೆಡ್ಯೂಲ್ ತಿದ್ದುಪಡಿ (ಮೊಹತರ್ಫಾ ಗಾಡಿ ಕಂದಾಯಕ್ಕೆ ಬದಲಾಗಿ ಮ್ಯುನಿಸಿಪಲ್ ರೆಗ್ಯುಲೇಷನ್ 59 (ii) ನೇ ಸೆಕ್ಷನ್ ರೀತ್ಯಾ ಕಂದಾಯ ದಾಖಲ್ ಮಾಡುವ ವಿಚಾರ.)	3-6-1920 10-6-1920 17-6-1920

ಸಿ. ಶ್ರೀಕಂಠೇಶ್ವರ ಅಯ್ಯರ್,
ಆನರರಿ ಪ್ರೆಸಿಡೆಂಟ್.

ಪತ್ರವ್ಯವಹಾರ.

ಗುಂಡ್ಲುಪೇಟೆ ತಾಲ್ಲೂಕು ವೀರಶೈವ ಸಭೆ.

ಈ ಸಭೆಯ ನಿರ್ವರ್ತನಕ್ಕಾಗಿ ಆಲೋಚನಾಸಭೆಯು ಈ ತಾರೀಖು ೪-೮-೧೯೨೦ ರಲ್ಲಿ ಗುಂಡ್ಲುಪೇಟೆ ತಾ|| ವೀರನಪುರದಲ್ಲಿ ಸೇರತಕ್ಕದಾಗಿ ನಿರ್ಧರಿಸಲ್ಪಟ್ಟು ಅಲ್ಲಿಗೆ ತಾಲ್ಲೂಕಿನ ಎಲ್ಲಾ ಗ್ರಾಮದ ವೀರಶೈವರೂ ಬರಬೇಕೆಂದು ಆಹ್ವಾನಪತ್ರಿಕೆಗಳು ಕಳುಹಲ್ಪಟ್ಟಿದ್ದುವು.

ಅದರ ಮೇಲೆ ಈ ತಾಲ್ಲೂಕಿನ ಮುಖ್ಯಾಲುಪಾಲು ಗ್ರಾಮಗಳ ವೀರಶೈವರು ೪೦೦ ಜನರಿಗೆ ಮೇಲ್ಪಟ್ಟು ಕಳೆದ ತಾ|| ೪-೮-೨೦ ರಲ್ಲಿ ವೀರನಪುರಕ್ಕೆ ದಯಮಾಡಿಸಿದ್ದರು. ಅದಕ್ಕಾಗಿ ಆ ಗ್ರಾಮವು ತಳಿರುತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತಲ್ಲದೆ ಮ|| ಗಳಾದ ಪುಟ್ಟಣ್ಣ ಮತ್ತು ಕಂಗೋಳಪ್ಪ ಈ ಸಹೋದರರ ವಿಶಾಲವಾದ ಹಟ್ಟಿಯು ಸಭೆ ಕೂಡಲು ಮೇಲ್ಕಟ್ಟುಗಳಿಂದಲೂ ನಾನಾಬಣ್ಣದ ಬಟ್ಟೆಗಳಿಂದ ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದಿತು. ಮುದುಗೂರು ವೇ|| ಶ್ರೀ ಚೆನ್ನಬಸವಸ್ವಾಮಿಗಳು ಮ|| ಗಳಾದ ಗುರುಕಾರ್ ನಂಜಪ್ಪನವರು, ಕಲ್ಲಹಳ್ಳಿ ಪಟೇಲ್ ಚಿಕ್ಕಮಲ್ಲಪ್ಪನವರು, ಕಬ್ಬಹಳ್ಳಿ ಸಾಹುಕಾರ್ ಚನ್ನಬಸಪ್ಪನವರು, ಪುತ್ತನಪುರದ ಚಿಕ್ಕಮಲ್ಲಪ್ಪನವರು ಹಂಗಳದ ಸಿದ್ಧಲಿಂಗಪ್ಪಶೆಟ್ಟರು, ಯರಿಯೂರು ಚಿಕ್ಕಮಲ್ಲಪ್ಪನವರು, ಡಿಟೊ ಮುದ್ದುಬಸಪ್ಪನವರು ಮೊದಲಾದ ದೊಡ್ಡ ಮನುಷ್ಯರುಗಳು ದಯಮಾಡಿಸಿದ್ದರು.

ಈ ಸಮಾರಂಭಕ್ಕಾಗಿ ಪರಸ್ಥಳದಿಂದ ಬರಮಾಡಲ್ಪಟ್ಟಿದ್ದ ವಾದ್ಯವು ಘೋಷಿಸುತ್ತಿರುವಾಗ ಸಭಾರಂಭವಾಯಿತು. ಮೈಸೂರಿನಿಂದ ಬಂದಿದ್ದ ಮ|| ವೈ. ವಿರೂಪಾಕ್ಷಯ್ಯನವರು ಸಭಾಧ್ಯಕ್ಷತೆಯನ್ನು ವಹಿಸಬೇಕೆಂದು ಮ|| ಗುರುಕಾರ್ ನಂಜಪ್ಪನವರು ಸೂಚಿಸಿದುದನ್ನು ಮ|| ಕಬ್ಬ[illegible] ಚನ್ನಬಸಪ್ಪನವರು ಪುಷ್ಟೀಕರಿಸಿದರು. ಮತ್ತು ಸಭಿಕರೊಬ್ಬರು ಕರ[illegible] ಮೂಲಕ ಅನುಮೋದನವನ್ನು ಕೊಟ್ಟರು. ಆಗ ಮ|| ವಿರೂಪಾಕ್ಷಯ್ಯನವರು [illegible] ಯಾವಾಗಿನ್ನಕ್ಷಸ್ಥಾನವನ್ನು ಅಲಂಕರಿಸಿ, ವಿದ್ಯೆಯಲ್ಲಿ ಬಹಳ ಅಭಿ[illegible] ಯು[illegible]ವ ಜನಾಂಗದವರು ಎಲ್ಲಾ ಭಾಗದಲ್ಲೂ ಎಷ್ಟರ ವೃದ್ಧಿಯನ್ನು ಹೊಂದಿ[illegible] ಸಂಪಾದಿಸಿಕೊಂಡು ವಿದ್ಯೆಯಲ್ಲಿ ಹಿಂದುಮಟ್ಟಿಗೆ ಗೌರವ ಪ್ರತಿಷ್ಠೆಗಳನ[illegible]ಹೊಂದಿರುವರೆಂಬುದು ನಿಮಗೆಲ್ಲಾ ತಿಳಿದವರನ್ನು ತಮ್ಮ ಅಧೀನದಲ್ಲಿಟ್ಟು [illegible] ಗೌರವಪ್ರತಿಷ್ಠೆಗಳನ್ನು ಸಂಪಾದಿಸಿದೇ ಇರುತ್ತದೆ. ನಾವಾದರೂ ಅವರಂತೆ [illegible]ಗಳಾದ ವ್ಯವಸಾಯ ವ್ಯಾಸಂಗದಲ್ಲೂ ನಮ್ಮ ಜೀವನೋಪಾಯದ ಕಸಬೇ[illegible] ವಿದ್ಯಾಭಿವೃದ್ಧಿ ಪ್ರಸಾರಗಳಲ್ಲಿ ಅಭಿವೃದ್ಧಿಯನ್ನು ಹೊಂದಲಿಕ್ಕೂ ನ[illegible] ವಿದ್ಯೆಯನ್ನು ಯಾಗುವುದು ಅತ್ಯಂತ ಅವಶ್ಯಕವು. ಸಮಸ್ತ ಪ್ರಜೆಗಳು[illegible] ತರಗತಿಯ ಕಲಿಯಲು ಅನೇಕ ಸೌಕರ್ಯಗಳು ಅಂದರೆ ಲೋವರ್‌ಸೆಕೆಂಡರಿ [illegible] ವರೆಗೂ ಸ್ಕೂಲುಫೀಯನ್ನು ತೆಗೆದುಬಿಟ್ಟಿರುತ್ತಾರೆ. ಅಲ್ಲದೆ ಪ್ರತಿ[illegible] ಗಂಡು ಹೆಣ್ಣು ಮಕ್ಕಳೂ ವಿದ್ಯಾವಂತರಾಗಬೇಕೆಂಬ ಸದುದ್ದೇಶದಿಂದ ಬಲಾತ್ಕಾರ ವಿದ್ಯಾಭ್ಯಾಸಕ್ರಮವು ಜಾರಿಗೆ ತರಲ್ಪಟ್ಟಿದೆ. ಇಷ್ಟೊಂದು ಸೌಲಭ್ಯಗಳನ್ನು ಪ್ರಜಾವಾತ್ಸಲ್ಯಶೀಲರಾದ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರು ಕಲ್ಪಿಸಿಕೊಟ್ಟಿರುವಾಗ್ಗೆ ನಮ್ಮ ವೀರಶೈವ ಬಂಧುಗಳು ಮೊದಲಿನಂತೆ ಅಲಕ್ಷ್ಯದಿಂದಿರದೆ ತಮ್ಮ ಹೆಣ್ಣು ಗಂಡು ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುವುದು ಅತ್ಯಾವಶ್ಯಕವೆಂದು ಹೇಳಿ, ಮೈಸೂರು ಸಂಸ್ಥಾನದ ವೀರಶೈವ ಜನಾಂಗದವರ ಪುರೋಭಿವೃದ್ಧಿಗಾಗಿ ಬೆಂಗಳೂರಲ್ಲೇರ್ಪಟ್ಟಿರುವ ವಿದ್ಯಾವರ್ಧಕ ಫಂಡಿನ ಸಂಘದವರು ಮಾಡುತ್ತಿರುವ ಕೆಲಸಗಳನ್ನು ವಿವರಿಸಿದುದಲ್ಲದೆ ಈ ಫಂಡನ್ನಭಿವೃದ್ಧಿಗೊಳಿಸಲು ಪ್ರತಿಯೊಂದು ತಾಲ್ಲೂಕಿನಲ್ಲೂ ಕಾನ್ಫರೆನ್ಸುಗಳನ್ನು ನಡಿಸಬೇಕಾದವಶ್ಯಕತೆಯನ್ನು ಸಭಿಕರ ಮನಸ್ಸಿಗೆ ಹಿಡಿಯುವಂತೆ ಹೇಳಿದರು. ಅದರಮೇಲೆ ಸಭಿಕರೆಲ್ಲರೂ ಈ ತಾ|| ೨೮-೮-೨೦ ರಲ್ಲಿ ಗುಂಡ್ಲುಪೇಟೆಯಲ್ಲಿ ಮೊದಲನೆಯ ತಾಲ್ಲೂಕು ಕಾನ್ಫರೆನ್ಸನ್ನು ನಡೆಯಿಸಬೇಕೆಂದು ಏಕವಾಕ್ಯತೆಯಿಂದ ಹೇಳಿದುದರ ಮೇಲೆ ಆ ಪ್ರಕಾರ ನಿರ್ಧಾರವು ಮಾಡಲ್ಪಟ್ಟು ಒಂದು ಸ್ವಾಗತ ಸಂಘವೇರ್ಪಡಿಸಲ್ಪಟ್ಟು ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ಮೆಂಬರುಗಳಾಗಿ ನಿಯಮಿಸಲ್ಪಟ್ಟರು.—

ಮ|| ಗಳಾದ

1. ಗುರುಕಾರ್ ನಂಜಪ್ಪನವರು (ಚೇರ್ಮನ್) 2. ಕಲ್ಲಹಳ್ಳಿ ಚಿಕ್ಕಮಲ್ಲಪ್ಪನವರು ಮತ್ತು 3. ಕಬ್ಬಹಳ್ಳಿ ಸಾಹುಕಾರ್ ಚನ್ನಬಸಪ್ಪನವರು ಸೆಕ್ರೆಟರಿಗಳು 4. ಪುತ್ತನಪುರದ ಚಿಕ್ಕಮಲ್ಲಪ್ಪನವರು, 5. ಹಂಗಳದ ಸಿದ್ಧಲಿಂಗಪ್ಪನವರು, 6. ಬಾಚಳ್ಳಿ ಹುಚ್ಚಪ್ಪನವರು, 7. ಯರಿಯೂರು ಗುರುಕಾರ್ ಮುದ್ದುಬಸಪ್ಪನವರು, 8. ಯರಿಯೂರು ಚಿಕ್ಕಮಲ್ಲಪ್ಪನವರು, 9. ತೆಂಕಣಾಂಬಿ ಪಟೇಲ್ ಲಿಂಗಶೆಟ್ಟರು, 10. ಹೊಂಗಹಳ್ಳಿ ಪುಟ್ಟಮಾದಪ್ಪನವರು, 11. ವೀರನಪುರದ ಪುಟ್ಟಣ್ಣನವರು, 12. ಕುರುಬರಹುಂಡಿ ಪುಟ್ಟಣ್ಣನವರು, 13. ಮೂಡಗೂರು ಸುಬ್ಬಣ್ಣನವರು, 14. ಚೆನ್ನಒಡೆಯಪುರದ ಪುಟ್ಟಣನವರು, 15 ಮಾದಾಪಟ್ಟಣದ ಪಟೇಲ್ ಬಸಪ್ಪನವರು, 16 ತ್ರಿಯಂಬಕಪುರದಲ್ಲಿರುವ ಬಲಚವಾಡಿ ನಂಜಪ್ಪನವರು, 17. ಹಂಗಳದ ಚೆನ್ನವೀರಪ್ಪನವರು, 18. ಒಡೆಯನಪುರದ ಕೆಂಪಣ್ಣನವರು, 19. ಶಾದ್ರಹಳ್ಳಿ ಅಧಿಕಾರಪ್ಪನವರು, 20. ಪಡಗೂರು ವ|| ಒಡೇರಪ್ಪನವರು, 21. ಹುಚ್ಚನಪುರದ ಚಿಕ್ಕಸುಬ್ಬಪ್ಪನವರು, 22. ಹೆಗ್ಗಡಹಳ್ಳಿ ಪಟೇಲ್ ಮಾದಪ್ಪನವರು, 23. ಕಣ್ಣೆಗಹಳ್ಳಿ ಸುಬ್ಬಣ್ಣನವರು, 24. ಮಾದಹಳ್ಳಿ ಚೆನ್ನಮಲ್ಲಪ್ಪನವರು, 25. ಕಿಲಗೆರೆ ಕಾಳಪ್ಪನವರು, 26. ಹಿರಿಕಾಟಿ ಭೋಗಪ್ಪನವರು, 27. ಹಿರಿಕಾಟಿ ಹೊಸಹಟ್ಟಿ ಸಿದ್ದಪ್ಪನವರು, 28. ನೇಸಹಳ್ಳಿ ಶಿವರಾಮಪ್ಪನವರು, 29. ಹಕ್ಕಲಪುರದ ವೀರಪ್ಪನವರು.

ವೈದ್ಯ ವಿದ್ಯೆಯನ್ನಭ್ಯಸಿಸುವ ಹೆಂಗುಸರಿಗೆ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ಪ್ರೋತ್ಸಾಹಿಸಲು ಬೊಂಬಾಯಿ ಸರ್ಕಾರದವರು ಏರ್ಪಡಿಸಿದ್ದಾರೆ. ಆ ಆಧಿಪತ್ಯದ ೪ ಡಿವಿಜನ್ನುಗಳಿಗೂ ಒಂದೊಂದು ವೇತನಕ್ಕೆ ತಿಂಗಳಿಗೆ ೪೦ ರೂ. ಗಳಂತೆ ೫ ವರ್ಷಗಳವರೆಗೆ ಕೋರ್ಸು ಮುಗಿಯುವತನಕ ಕೊಡುವರು. ಅವರು ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲೋದಬೇಕು. ಲೇಡಿ ಹಾರ್ಡಿಂಜ್ ವೈದ್ಯ ಕಲಾಶಾಲೆಯಲ್ಲೋದುವ ಸಿಂಧು ದೇಶದ ವಿದ್ಯಾರ್ಥಿನಿಯರಿಗೆ ೭ ವರ್ಷಗಳವರೆಗೆ ವೇತನಗಳನ್ನು ಕೊಡುವರು. ಅಲ್ಲದೆ ಆ ಆಧಿಪತ್ಯಕ್ಕೆ ಸೇರಿದ ೨೬ ಜಿಲ್ಲೆಗಳಲ್ಲೂ ಜಿಲ್ಲೆಯೊಂದಕ್ಕೆ ಒಂದೊಂದರಂತೆ ತಿಂಗಳಿಗೆ ೨೦ ರೂ. ನ ಪ್ರಕಾರದ ವೇತನಗಳು ಕೊಡಲ್ಪಡುವುವು. ಈ ವಿದ್ಯಾರ್ಥಿನಿಯರು ಪುನೆ, ಹೈದರಾಬಾದು, ಅಹಮ್ಮದಾಬಾದ್ ಮೊದಲಾದ ಸ್ಥಲಗಳಲ್ಲಿರುವ ಕಲಾಶಾಲೆಗಳಲ್ಲಿ ಓದಬೇಕು. ಯಾವುದಾದರೂ ಜಿಲ್ಲೆಯಿಂದ ವಿದ್ಯಾರ್ಥಿನಿಯರು ದೊರೆಯದೆ ಹೋದ ಪಕ್ಷದಲ್ಲಿ ಅಲ್ಲಿಯ ವೇತನವನ್ನು ಇತರ ಜಿಲ್ಲೆಯಿಂದ ಹೆಚ್ಚಾಗಿಬರುವ ವಿದ್ಯಾರ್ಥಿನಿಯರಿಗೆ ಕೊಡುವರು.

೨. ತಾಲ್ಲೂಕಿನ ಹೊರಗಡೆಯಿಂದ ಬರುವವರ ಭೋಜನಾದ್ಯುಪಚಾರಗಳಿಗೂ ಇತರ ಖರ್ಚಿಗೂ ಚಂದಾಹಣವು ಕೊಡಿಸಲ್ಪಡಬೇಕಾಗಿ ನಿರ್ಧರಿಸಲ್ಪಟ್ಟಿತು (ಆ ಕೂಡಲೆ ಚಂದಾ ಪಟ್ಟಿಯು ಬರೆಯಲ್ಪಟ್ಟು ನಗದು ಹಣ ಸಹ ವಸೂಲ್ಮಾಡಲ್ಪಟ್ಟಿತು).

೩. ಈ ತಾಲ್ಲೂಕು ಕಾನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಬೇಕಾಗಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ., ಯವರನ್ನು ಸ್ವಾಗತ ಸಂಘಾಧ್ಯಕ್ಷರು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರವಾಯಿತು.

ತರುವಾಯ ಅಧ್ಯಕ್ಷರು ಈ ದಿವಸದ ಸಭೆಯ ಕಾರ್ಯವನ್ನು ನೆರವೇರಿಸಿದುದಕ್ಕಾಗಿ ಅವರಿಗೆ ಸಭಾಪರವಾದ ವಂದನೆಗಳನ್ನು ಮ|| ಗುರಿಕಾರ್ ನಂಜಪ್ಪನವರು ಅರ್ಪಿಸಿದುದಲ್ಲದೆ ವೀರನಪುರದ ವೀರಶೈವ ಬಂಧುಗಳು ಸಭೆಗೆ ಬಂದಂತಹ ಜನರನ್ನು ಬಹಳ ಶ್ರದ್ಧಾಭಿಮಾನದಿಂದ ಸತ್ಕರಿಸಿದುದಕ್ಕಾಗಿ ಸಭಿಕರ ಪರವಾಗಿ ವಂದನೆಗಳನ್ನು ತಿಳಿಸಿದರು. ಆವೇಳೆ ಶ್ರೀಗಳವರಿಗೂ, ಅಧ್ಯಕ್ಷರಿಗೂ, ಸಭಿಕರಿಗೂ ಗಂಧ ಪುಷ್ಪಮಾಲಿಕೆಗಳೂ ತಾಂಬೂಲವೂ ಕೊಡಲ್ಪಟ್ಟು ಸಭೆಯು ವಾದ್ಯಘೋಷದೊಡನೆ ವಿಸರ್ಜಿಸಲ್ಪಟ್ಟಿತು. ಮ|| ಗುರುಕಾರ್ ಮಾದಪ್ಪನವರು ೧-೨ ದಿವಸಗಳು ಮುಂದಾಗಿ ವೀರನಪುರಕ್ಕೆ ದಯಮಾಡಿಸಿ ಸಭಾಕಾರ್ಯವು ಸುಲಲಿತವಾಗಿ ನಡೆಯಲು ಸಾಧ್ಯವಾದೇರ್ಪಾಟನ್ನು ಮಾಡುವ ವಿಚಾರದಲ್ಲಿ ಬೇಕಾದ ಸೂಚನೆಯನ್ನು ಕೊಟ್ಟುದಲ್ಲದೆ ತಾವೂ ಬಹಳ ಶ್ರಮವನ್ನು ವಹಿಸಿ ಕೆಲಸಮಾಡಿದುದೂ, ಪುಟ್ಟಣ್ಣನವರು, ಕೆಂಗೊಳ್ಳಪ್ಪನವರು ಮೊದಲಾಗಿ ವೀರನಪುರದ ವೀರಶೈವರು ಬಂದವರನ್ನೆಲ್ಲಾ ಭೋಜನಾದ್ಯುಪಚಾರಗಳಿಂದ ಸತ್ಕರಿಸಿದುದೂ ವಂದನೀಯವಾಗಿದೆ. ಈ ತಾ|| ೨೮ ರಲ್ಲಿ ನಡೆಯುವ ತಾಲ್ಲೂಕು ಕಾನ್ಫರೆನ್ಸನ್ನು ಮ|| ಗುರುಕಾರ್ ನಂಜಪ್ಪನವರು, ಮ|| ಕಲ್ಲಹಳ್ಳಿ ಚಿಕ್ಕಮಲ್ಲಪ್ಪನವರು, ಮ|| ಕಬ್ಬಹಳ್ಳಿ ಚನ್ನಬಸಪ್ಪನವರು ಮೊದಲಾಗಿ ಸ್ವಾಗತ ಸಂಘದವರು ಹೆಚ್ಚು ಶ್ರದ್ಧೆಯನ್ನು ವಹಿಸಿ ಅತ್ಯಂತ ಸಮರ್ಪಕವಾಗಿ ನೆರವೇರಿಸಿ ಇತರ ತಾಲ್ಲೂಕುಗಳ ವೀರಶೈವ ಬಂಧುಗಳಿಗೆ ಮಾರ್ಗದರ್ಶಕರಾಗುವರೆಂದು ನಂಬುತ್ತೇನೆ.

ಪ್ರತ್ಯಕ್ಷದ್ರಷ್ಟ.

ವೀರಶೈವರ ಬೋರ್ಡಿಂಗು ಹೌಸ್ ಚಳ್ಳಕೆರೆ.

ಶ್ರೀ ಗಿರಿರಾಜಸೂರ್ಯಸಿಂಹಾಸನಾಧ್ಯಕ್ಷ ವೀರಭದ್ರ ದೇಶಿಕೇಂದ್ರ [illegible] ವೀರಶೈವ ಜಗದ್ಗುರು ಚರಪಟ್ಟಾ[illegible] ಚಳ್ಳಕೆರೆ ತಾಲ್ಲೂಕು ಕಸಬಾ [illegible] ಸಿಂಹಾಸ್ವಾಮಿಗಳವರು ಚಿತ್ರದುರ್ಗದ ಡಿ|| ಹಿಂಭಾಗದಲ್ಲಿ ಸುಮಾರು [illegible] ಯಿ. ಶ್ರೀ ಚಳ್ಳಕೆರೆಯಲ್ಲಿ ವೀರಭದ್ರ ದೇವಸ್ಥಾನದ ಮಾದ ಕಟ್ಟಡವನ್ನು ಸರಿಸಿಂದು ಹತ್ತು ಸಾವಿರ ರೂಪಾಯಿಗಳು ಖರ್ಚಾಗಬಹುದು ವಿದ್ಯಾಭ್ಯಾ[illegible] ಪ್ರಚಿನ್ನು ಪ್ರಾರಂಭಿಸಿರುವುದಲ್ಲದೆ ವೀರಶೈವ ಅನಾಥ ಬಾಲಕರ ಲಾಗಾ[illegible]ಕ್ಕಾಗಿ ಒಂದು ವೀರಶೈವ ಬೋರ್ಡಿಂಗು ತಾ|| ೩-೬-೨೦ ರ ಗಳ[illegible]ಮಿತು ಸ್ಥಾಪಿಸಲ್ಪಟ್ಟು ನಡೆಯುತ್ತಿದೆ. ಇದರಲ್ಲಿ ೫ ಜನ ವಿದ್ಯಾರ್ಥಿ[illegible] ಸದ್ಯ ಅಭ್ಯಾಸಮಾಡುತ್ತಿರುತ್ತಾರೆ. ಬೋರ್ಡಿಂಗಿನ ವ್ಯವಸ್ಥೆಗಳನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀಗಳವರಿಂದ ಮ್ಯಾನೇಜಿಂಗ್ ಕಮಿಟಿಯು ಚುನಾಯಿಸಲ್ಪಟ್ಟಿದೆ. ಈ ಮೆಂಬರುಗಳ ಪೈಕಿ ಒಬ್ಬರಾದ ಮ|| ರಾ|| ಚನ್ನವೀರಪ್ಪನವರಿಂದ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆ ಜ್ಯೋತಿಷಪಾಠವು ಉಚಿತವಾಗಿ ಹೇಳಲ್ಪಡುತ್ತದೆ. ಈಗ ಸ್ಥಾಪಿಸಲ್ಪಟ್ಟಿರುವ ಶ್ರೀ ಗಿರಿರಾಜ ವೀರಶೈವ ಬೋರ್ಡಿಂಗು ಆಚಂದ್ರಾರ್ಕವಾಗಿ ಸ್ಥಿರವಾಗಿರುವುದಕ್ಕಾಗಿ ಶ್ರೀಗಳವರು ಸಾಕಾದಷ್ಟು ದ್ರವ್ಯವನ್ನು ಸೇವಿಂಗ್ಸ್ ಮಾಡಲು ಉದಾರತೆಯನ್ನು ವ್ಯಕ್ತಗೊಳಿಸಿರುವುದರಿಂದ ಈ ಭಾಗದ ಸಮಸ್ತ ವೀರಶೈವರೂ ಸಂತೋಷಮಗ್ನರಾಗಿರುವರು.

ಎಚ್. ಎಂ. ಮುದ್ದವೀರಯ್ಯ,
ಬೋರ್ಡಿಂಗ್ ಸೆಕ್ರಟರಿ.

ಕಜ್ಜರಿ.

ಧಾರವಾಡ ಜಿಲ್ಲಾ ರಾಣೆಬೆನ್ನೂರ ತಾಲ್ಲೂಕ ಪೈಕಿ ಕಜ್ಜರಿ ಎಂಬ ನಮ್ಮ ಗ್ರಾಮದ ಹಿರೇಮಠದ ಸಿದ್ಧಯ್ಯನವರ ಸುಪುತ್ರರಾದ ಪಂ|| ಗುರುಮೂರ್ತಿಶಾಸ್ತ್ರಿಗಳು ಈ ವರ್ಷ ಕಲ್ಕತ್ತಾ ಕಾಲೇಜಿನಲ್ಲಿ ಸಾಹಿತ್ಯದ ಅಂತಿಮ ಪರೀಕ್ಷೆಯನ್ನು ಕೊಟ್ಟು ಕಲ್ಕತ್ತಾ ಯೂನಿವರ್ಸಿಟಿಯಿಂದ "ಕಾವ್ಯತೀರ್ಥ" ಎಂಬ ಪದವಿಯನ್ನು ಸಂಪಾದಿಸಿಕೊಂಡುಬಂದದ್ದರಿಂದ ತಮಗುಂಟಾದ ಸಂತೋಷವನ್ನು ವ್ಯಕ್ತಪಡಿಸುವದಕ್ಕಾಗಿ ತಾ|| ೧೫-೭-೧೯೨೦ನೆ ಗುರುವಾರ ಈ ಗ್ರಾಮದ ಪ್ರಮುಖರ ಒಂದು ಸಭೆ ಸೇರಿತ್ತು. ಸಭಾಜನರ ಪ್ರಾರ್ಥನೆಯಂತೆ ಮೊದಲು ಶಾಸ್ತ್ರಿಗಳು ಸ್ವತಃ ರಚಿಸಿದ್ದ "ಸುಭದ್ರಾಕಲ್ಯಾಣ" ವೆಂಬ ಕೀರ್ತನೆಯನ್ನು ಬಹು ಸರಸವಾಗಿ ಮಾಡಿದರು. ಮಧ್ಯದಲ್ಲಿ ಪ್ರಸಂಗಕ್ಕನುಸರಿಸಿ ಹೇಳಿದ ಧರ್ಮ, ನೀತಿ, ವಿದ್ಯಾ, ಐಕ್ಯ, ಮಾತೃಭಾಷಾ, ವಾಙ್ಮಯ ಮುಂತಾದ ವಿಷಯಗಳನ್ನು ಕೇಳಿ ಶ್ರೋತೃಗಳು ತಲ್ಲೀನರಾದರು. ಅನಂತರ ಇಲ್ಲಿಯ ಶಾಲಾಮಾಸ್ತರರು-ಪಂ|| ಗುರುಮೂರ್ತಿಶಾಸ್ತ್ರಿಗಳು ಪ್ರಥಮದಲ್ಲಿ ಸೊಲ್ಲಾಪುರದ ವಾರದವರ ಪಾಠಶಾಲೆಯಲ್ಲಿ ಚೆನ್ನಾಗಿ ಓದಿ ಅನಂತರ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಅನುಗ್ರಹಪೂರ್ವಕವಾದ ಧನಸಹಾಯವನ್ನು ಹೊಂದಿ ವಿದ್ಯಾಪೀಠವಾದ ಶ್ರೀ ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿರುವ ವೀರಶೈವ ವಿದ್ಯಾರ್ಥಿ ಮಂದಿರದಲ್ಲಿದ್ದು ೫-೬ ವರ್ಷಗಳ ಪರ್ಯಂತರ ಪರಿಶ್ರಮದಿಂದ ಗಣಿತ ಮತ್ತು ಸಾಹಿತ್ಯಗಳನ್ನು ಅಧ್ಯಯನ ಮಾಡಿ, ಬಂಗಾಳಾ ಯೂನಿವರ್ಸಿಟಿಯಿಂದ "ಕಾವ್ಯತೀರ್ಥ" ಎಂಬ ಉಪಾಧಿಯನ್ನು ಪಡೆದುಬಂದದ್ದು ನಮ್ಮ ಗ್ರಾಮಕ್ಕೇ ಯಾಕೆ ನಮ್ಮ ಜಿಲ್ಲೆಗೇ ಭೂಷಣವಾಯಿತೆಂದೂ ಮತ್ತು ಇವರ ಸುಶೀಲಾದಿ ಗುಣಗಳಿಗೆ ಮೆಚ್ಚಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಇವರನ್ನು ತಿಪಟೂರು ಆನಂದಾಶ್ರಮದ ವೀರಶೈವ ಪಾಠಶಾಲೆಗೆ ಪ್ರಧಾನಾಧ್ಯಾಪಕ ಸ್ಥಳಕ್ಕೆ ಇದೇ ಆಗಸ್ಟ ತಿಂಗಳ ಮೊದಲನೇ ತಾರೀಖಿನಿಂದ ನೇಮಿಸಿರುವರೆಂದೂ ಶಾಸ್ತ್ರಿಗಳು ಅಲ್ಲಿ ಉತ್ತರೋತ್ತರ ಕೀರ್ತಿಯನ್ನು ಸಂಪಾದಿಸಲೆಂದೂ ಹೇಳಿದ ನಂತರ ಗಂಧಪುಷ್ಪ ತಾಂಬೂಲಾದಿಗಳ ಮನ್ನಣೆಯಾಗಿ ಸಭಾ ವಿಸರ್ಜನೆಯಾಯಿತು.

ಓರ್ವಸಭಿಕ.

ನೋಟೀಸ್.

ನಂಜನಗೂಡು ತಾಲ್ಲೂಕು ದೊಡ್ಡಕೌಲಂದೆ ಹೋಬಳಿ ದ್ಯಾವನೂರು ಗ್ರಾಮದಲ್ಲಿರುವ ಹಿರೀಕಂಠಿ ಗೌರಯ್ಯನ ಮಗ ಲಿಂಗಯ್ಯನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ನನಗೆ ಸುಮಾರು ೧೫-೧೬ ವರ್ಷದ ಸೋಮಯ್ಯ ಉರುಫ್ ಬಂಡನೆಂಬ ಮೈನರ್ ಹುಡುಗನಿರುತ್ತಾರೆ. ಈ ಹುಡುಗನಿಗೆ ನನಗೆ ಆಗದವರಾದ ಕೆಲವರು ಪ್ರೇರಣೆ ಮಾಡಿ, ಜೂಜು ವಗೈರೆ ಕೆಟ್ಟ ಕೆಲಸಗಳಿಗೆ ಪ್ರವೇಶಿಸಿ ನನ್ನ ಪಿತಾರ್ಜಿತ ಮತ್ತು ಸ್ವಯಾರ್ಜಿತದ ಆಸ್ತಿಗೆ ಭಂಗಪಡಿಸಬೇಕೆಂಬ ಇರಾದೆಯಿಂದ ಸಾಲಾ ಕೊಟ್ಟು ಆಧಾರ. ರಿಜಿಸ್ಟರ್ ವಗೈರೆ ಮಾಡಿಸಿಕೊಳ್ಳಬೇಕೆಂತ ಪ್ರಯತ್ನಪಟ್ಟಿದ್ದಾರೆ. ಈ ಮೈನರ್ ಹುಡುಗ ಮನೆ ಬಿಟ್ಟು ೫-೬ ತಿಂಗಳಾಯಿತು. ಈ ವಿಚಾರದಲ್ಲಿ ಹಜರ್ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ಅರ್ಜಿ ಸಹ ಕೊಟ್ಟಿದೆ. ಈ ಮೈನರ್ ಹುಡುಗನಿಗೆ ಸಾಲ ಕೊಡುವುದೇ ಆಗಲಿ, ಅವನ ಮೂಲಕ ಬರೆಯಿಸಿಕೊಳ್ಳುವ ಎಲ್ಲಾ ದಸ್ತೈವಜುಗಳಿಗೆ ನಾನಾಗಲಿ, ನನ್ನ ಆಸ್ತಿಯಾಗಲಿ ಈಡಾಗಲು ಕಾರಣವಿರುವುದಿಲ್ಲ. ಮೈನರ್ ಹುಡುಗನಿಗೆ ಇದರ ಮೇಲೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಅಂಥಾ ಸಾಲಾ ಕೊಟ್ಟು ಯಾದಸ್ತೈವಜು ಬರೆಸಿಕೊಂಡವರಿಗೆ ಊರ್ಜಿತವಾಗಲಾರದೆಂಬ ಅಂಶ ಈ ಮೂಲಕ ತಿಳಿಯಪಡಿಸಿದೆ.

ಹಿರೀಕಂಠಿ ಗೌರಯ್ಯನ ಮಗ ಲಿಂಗಯ್ಯ.

ಹಂಟಿಂಗ್ ಗಡಿಯಾರ.

ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲ್ಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯಿತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳ ವರೆವಿಗೂ ಬಾಳಿಕೆ ಬರುವದು. ಕ್ರಯ ೧ ಕ್ಕೆ ೬-೦-೦.

ವಿಳಾಸ:-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ|| ಬಾ|| ನಂ. 265,
18 ಮದರಾಸು.



ಲಿಂಗದ ಕಾಯಿಗಳು.

ಈ ಲಿಂಗದ ಕಾಯಿಗಳು ಸಾ[illegible] ಜರ್ಮನ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುವು.

ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕೊಕ್ಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.



ಬೆಸ್ಟ ಫೌಂಟನ್‌ಪೆನ್ನಾ.

ಈ ನಕ್ಷೆಯಲ್ಲಿ ಕಾಣುವ ಫೌಂಟೆನ್ ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 1—12—0.
12 ಕ್ಕೆ 18—0—0.

DURBAR SOAP

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮದುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
18 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ ಆಕ್ಟನಂತೆ ರಿಜಿಸ್ಟರ ಮಾಡಲ್ಪಟ್ಟ 37

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೫-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲುಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ. ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಿಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದೆನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅನ್ಮೋಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎಂಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿಯ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಆಗಸ್ಟ ತಾ|| ೮ರಿಂದ ೧೯೨೦ನೆಯ ಆಗಸ್ಟ ತಾ|| ೧೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಅಧಿಕಶ್ರಾವಣ ಬಹುಳ ನವಮಿಯಿಂದ ಅಧಿಕಶ್ರಾವಣ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶಕಟ ಮಾಸ
8	ಭಾನು	ನವ	43-23	ಕೃತ್ತಿ	40-15	24
9	ಸೋಮ	ದಶ	37-34	ರೋಹಿ	36-27	25
10	[1]ಮಂಗಳ	ಏಕಾ	31-24	ಮೃಗ	32-20	26
11	[2]ಬುಧ	ದ್ವಾ	25-14	ಆದ್ರಾ	28-3	27
12	ಗುರು	ತ್ರಯೋ	19-8	ಪುನ	23-56	28
13	[3]ಶುಕ್ರ	ಚತು	13-16	ಪುಷ್ಯ	20-5	29
14	ಶನಿ	ಅಮಾ	7-55	ಆಶ್ಲೇ	16-44	30

(1) ಸರ್ವತ್ರೈಕಾದಶಿ. (2) ಪ್ರದೋಷಃ. (3) ಸರ್ವತ್ರಾ ಅಮಾವಾಸ್ಯಾ, ಅಡಿಶುಕ್ರವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಕ್ಷದ್ವಯ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಭೃಂಗವ | ತ್ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

(ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಆಗಸ್ಟ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೩೩

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾವಧಿ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0,

ನಮ್ಮ ವಿಳಾಸ:—ಶ್ರೀ ಸೀತಾರಾಘವ
32 ವೈದ್ಯಶಾಲಾ, ಮೈಸೂರು.

ಹೊಸಶೋಧ ! * ಓಂ * ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಅತ್ಯಕ್ರುಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ಸದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೆ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪೆನಿ,
4 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ ।	೦—೮—೦
ಶಿವಪೂಜಾವಿಧಿ ।	೦—೧೦—೦
ಚಾರುಶೀಲಚರಿತ್ರೆ	೦—೫—೦
ಹಂಪಾಶಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು. 4

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.
ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.
ರಾ|| ಬ|| ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.
ಸ್ವಕರ್ತವ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 40

ನಾವು ಎ. ಅಲ್ ಬ್ಯುಕ್ಯುಯರ್ ಕ್ಯ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು. ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ(ಪತ್ರ)ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ ಗೌಡರು ದಾವಣಗೆರೆ. }
ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ತಿಳಿದು ರಚಿಸಿರುತ್ತೇನೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣೀ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
38 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧-ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ. ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

19 ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ 1—0—0.

ವಿಳಾಸ—ರಾಘವಾಚ್ ಅಂಡ್ ಕೊ, 3 ಇರುಳಪ್ಪನ ಬೀದಿ ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭಕ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲ 1 ಕ್ಕೆ 2-8-0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
45 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ವಾನುಭವಾಮೃತ ೬ಆಣೆ; ರಹಸ್ಯ ಕಥೆ ೨ಆಣೆ; ಶಂಕರಲಿಂಗಕಂದ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಆಗಸ್ಟ್ ತಾ|| ೧೫ ನೆಯ ಭಾನುವಾರ.

ಬೋಲ್ಷೆವಿಕ್ಕರು ಪೋಲರು ಮತ್ತು ಮಿತ್ರಮಂಡಲಿಯವರು.

ಬೋಲ್ಷೆವಿಕ್ ಪ್ರಭುತ್ವವನ್ನು ನ್ಯಾಯವಾದ ನಾಗರಿಕ ಪ್ರಭುತ್ವವೆಂದು ಮಿತ್ರಮಂಡಲಿಯವರು ಒಪ್ಪಿದುದಿಲ್ಲ. ಆದರೆ ಈಗ ಅವರೊಡನೆ ಒಪ್ಪಂದವಾದರೆ ಸಾಕೆಂಬ ಅವಸ್ಥೆ ಬಂದಂತಾಗಿದೆ. ಪ್ರಪಂಚದಲ್ಲಿ ಶಾಂತಿಯುಂಟಾಗಬೇಕಾದರೆ ಬ್ರಿಟಿಷ್, ಫ್ರಾನ್ಸ್, ಜರ್ಮನಿ, ರಷ್ಯಾ, ಅಮೆರಿಕಾ, ಜಪಾನ್ ಇವುಗಳೆಲ್ಲಾ ಒಮ್ಮುಖವಾಗಿ ಸೇರಿದಲ್ಲದೆ ಸಾಧ್ಯವಿಲ್ಲವೆಂದು ಪ್ರಾಜ್ಞರೆಲ್ಲಾ ಒಪ್ಪಿಕೊಳ್ಳುತ್ತಾರೆ. ರಷ್ಯಾದಂಥ ದೊಡ್ಡ ದೇಶದಲ್ಲಿ ಬೋಲ್ಷೆವಿಕ್ ತತ್ವವು ಹರಡಿ, ಉಳಿದ ಕಡೆಯಲ್ಲೆಲ್ಲಾ ದ್ವೇಷಬುದ್ಧಿಯಿಂದ ಅದರ ಸೋಂಕನ್ನು ಹರಡಿಸಲವಕಾಶವಿರುತ್ತಿದ್ದರೆ ಶಾಂತಿಯೆಂಬುದು ಸ್ವಪ್ನೇಪಿ ದುರ್ಲಭವಾಗುವುದು. ಈಚೆಗೆ ಬೋಲ್ಷೆವಿಕ್ಕರು ಬಹಳ ಪ್ರಬಲರಾಗುತ್ತ ಬಂದರು. ಪೋಲಂಡಿನವರ ಕೈಹೀನವಾಯಿತು. ಇತ್ತ ಪಾರಸೀಕರೂ ಬೋಲ್ಷೆವಿಕ್ಕರನ್ನು ತಡೆಯಲಾರದೆ ಇರುವರು. ಅಫ್ಘಾನಿಸ್ಥಾನದ ವರೆಗೂ ಅವರು ನುಗ್ಗಿ ಬಂದಿರುವರು. ಇಂಥ ಸ್ಥಿತಿಯಲ್ಲಿ ಮಿತ್ರಮಂಡಲಿಯವರು ಉದಾಸೀನರಾಗಿರುವುದು ಅಸಂಭವವಷ್ಟೆ. ಅದುಕಾರಣ ಅವರು ಒಂದು ರಾಜತಂತ್ರಕ್ಕೆ ಆರಂಭಿಸಿರುವರು. ಅಮೇರಿಕಾವು ರಷ್ಯಾ ಬೋಲ್ಷೆವಿಕ್ಕರೊಡನೆ ವ್ಯಾಪಾರ ನಡೆಯಿಸುವ ಸಂಧಿಗೆ ಒಪ್ಪಿಕೊಂಡಿತು. ಇಂಗ್ಲೀಷರೂ ಹಾಗೆಯೇ ಸೋವಿಯಟ್ಟರೊಡನೆ ವ್ಯಾಪಾರ ನಡೆಯಿಸುವುದಕ್ಕೆ ಅಂಗೀಕರಿಸಿದರು. ಈಚೆಗೆ ಪೋಲರು ಬೋಲ್ಷೆವಿಕ್ಕರಿಗೆ ಸೋತುದರಿಂದ ಸಂಧಿ ಮಾಡಿಕೊಳ್ಳಬೇಕೆಂಬ ಆತುರವು ಅವರಿಗೆ ಹುಟ್ಟಿತು. ಇದರ ಮೇಲೆ ಪೋಲಂಡಿನವರ ಕೋರಿಕೆಯಂತೆ ಇಂಗ್ಲೀಷರು ಮಧ್ಯದಲ್ಲಿ ಪ್ರವರ್ತಿಸಿ, ಪೋಲರೊಡನೆ ನೀವು ತಾತ್ಕಾಲಿಕ ಸಂಧಿಯನ್ನು ಮಾಡಿಕೊಳ್ಳಬೇಕೆಂದೂ, ಪೋಲರು ತಮ್ಮ ಸೈನ್ಯವನ್ನು ೫೦ ಮೈಲಿಗಳ ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದೂ, ಪೋಲಂಡ್ ರಂಗಕ್ಕೆ ೫೦ ಮೈಲಿಗಳ ದೂರದಲ್ಲಿ ಬೋಲ್ಷೆವಿಕ್ ಸೈನ್ಯಗಳು ಇರಬೇಕೆಂದೂ. ಇದಕ್ಕೆ ತಪ್ಪಿ ಬೋಲ್ಷೆವಿಕ್ಕರು ೧ ಅಡಿ ಮುಂದಕ್ಕೆ ಹೋದರೂ ಪೋಲಂಡಿಗೆ ಮಿತ್ರಮಂಡಲಿಯವರು ಸಹಾಯ ಮಾಡುವರೆಂದೂ, ಶಾಶ್ವತ ಸಂಧಿಯು ಲಂಡನ್ನಿನಲ್ಲಿ ನಡೆಯಬೇಕೆಂದೂ, ಪೋಲಂಡಿನ ಸಂಧಿ ಮುಗಿದ ಕೂಡಲೇ ಅದರ ಸುತ್ತಣ ಲುಥಿನಿಯಾ, ಫಿನ್ಲಂಡ್, ಎಸ್ಥೋನಿಯಾ ರಾಜ್ಯಗಳೊಡನೆಯೂ ಸಂಧಿಯಾಗಬೇಕೆಂದೂ, ಆಂಗ್ಲ ಮಂತ್ರಿಯವರು ಬೋಲ್ಷೆವಿಕ್ ಪ್ರಭುತ್ವಕ್ಕೆ ತಿಳಿಯಪಡಿಸಿದರು. ಅಲ್ಲದೆ ಬೋಲ್ಷೆವಿಕ್ಕರು ಹೀಗೆ ಸಂಧಿ ಸಮುಸ್ಯೆಗಾಗಿ ಲಂಡನ್ನಿಗೆ ಬಂದಾಗ್ಗೆ ಆಂಗ್ಲ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ರಾಜಕೀಯ ವಿಷಯಗಳನ್ನೆತ್ತಕೂಡದೆಂದೂ, ಆಂಗ್ಲ ದೇಶದಲ್ಲಿ ಬೋಲ್ಷೆವಿಕ್ ತತ್ವವ್ಯಾಪನೆಗೆ ಪ್ರವರ್ತಿಸಕೂಡದೆಂದೂ, ಮತ್ತೂ ಏಷ್ಯಾ ಖಂಡದಲ್ಲಿ ತಮ್ಮ ಪ್ರವರ್ತನದ ವ್ಯಾಪನೆಯನ್ನೂ, ತಾವು ನಡೆಯಿಸುತ್ತಿರುವ ಯುದ್ಧವನ್ನೂ ನಿಲ್ಲಿಸಿಬಿಡಬೇಕೆಂದೂ, ಹಾಗೆ ಮಾಡದಿದ್ದರೆ ಈ ರಾಯಭಾರವನ್ನೇ ನಡೆಯಿಸಲಾಗದೆಂದೂ, ಹೀಗೆ ನಡೆದರೆ ತಾತ್ಕಾಲಿಕಯುದ್ಧ ವಿರಾಮವು ಜರುಗಿ ಮುಂದೆ ಮಿತ್ರಮಂಡಲಿಯವರು ರಷ್ಯಾ ಸೋವಿಯಟ್ಟರೊಡನೆ ವ್ಯಾಪಾರ ನಡೆಯಿಸುವುದಕ್ಕೆ ನಂಬುಗೆ ಹುಟ್ಟುವುದೆಂದೂ ಹೇಳಿ, ಇದರ ಪ್ರತ್ಯುತ್ತರವನ್ನು ಕೊಡುವುದಕ್ಕೆ ೮ ದಿನಗಳ ಕಾಲವ್ಯವಧಿಯನ್ನು ಕೊಟ್ಟು ತಿಳಿಯಪಡಿಸಿದರು. ಇದಕ್ಕೆ ಉಳಿದ ಮಿತ್ರಮಂಡಲಿಯವರೆಲ್ಲಾ ಅನುಮೋದಿಸಿದರು. ಈಚೆಗೆ ಬೋಲ್ಷೆವಿಕ್ಕರು ತಾತ್ಕಾಲಿಕ ಸಂಧಿಮಾಡಿಕೊಳ್ಳಲು ಒಪ್ಪಿದವರಂತೆ ನಟಿಸಿದರು. ಅವರ ಪ್ರತಿನಿಧಿಗಳಾಗಿ ಕ್ರಾಸಿನ್, ಕಾಮಿನಾಫ್‌ರವರುಗಳು ಲಂಡನ್ನಿಗೆ ಬಂದಿರುವರು. ಅವರೊಡನೆ ಮುಖ್ಯಮಂತ್ರಿ ಲಾಯಿಡ್ ಜಾರ್ಜರೂ ಬೋನರ್ಲಾರವರೂ ಮಾತನಾಡಿದರು. ಸಂಭಾಷಣೆ ನಡೆದುದರಲ್ಲಿ ಬೋಲ್ಷೆವಿಕ್ಕರು ನಿಜವಾಗಿ ಸಂಧಿಯನ್ನು ಕೋರಿ ಪ್ರಯತ್ನಪಡುತ್ತಿರುವಂತೆ ಕಾಣುವುದಿಲ್ಲವೆಂದು ಮುಖ್ಯ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು. ಆದರ ಮೇಲೆ ಮಿತ್ರಮಂಡಲಿಯವರು ಬೋಲ್ಷೆವಿಕ್ಕರಿಗೆ ಕಳೆದ ತಾ|| ೨೯ ರಲ್ಲಿ ಖಂಡಿತವಾದ ಪತ್ರವನ್ನು ಬರೆದು ಉತ್ತರವನ್ನು ಕೇಳಿದರು. ಹಾಗೂ ಹೀಗೂ ಕಾಲಯಾಪನೆ ಮಾಡುತ್ತ ಈ ಸಂಧಿಯಲ್ಲಿ ಪೋಲಂಡನ್ನೆಲ್ಲಾ ವಶಪಡಿಸಿಕೊಂಡು ಬಿಡಬೇಕೆಂದು ಅವರು ದುಸ್ಸಂಕಲ್ಪವನ್ನು ಮಾಡಿಕೊಂಡಿರುವಂತೆ ಕಾಣುತ್ತದೆ. ಪೋಲಂಡಿನ ರಾಜಧಾನಿಯಾದ ವಾರ್ಸಾ ಪಟ್ಟಣಕ್ಕೆ ೩೦ ಮೈಲಿಗಳ ದೂರದವರೆಗೂ ಬೋಲ್ಷೆವಿಕ್ಕರು ನುಗ್ಗಿ ಹೋಗಿದ್ದಾರೆ. ಇದುವರೆಗೆ ಅವರು ಆಕ್ರಮಿಸಿದ ಪೋಲಂಡ್ ದೇಶಭಾಗದಲ್ಲಿ ತಮ್ಮ ಸೋವಿಯಟ್ ಪ್ರಭುತ್ವವನ್ನು ಸ್ಥಾಪಿಸಿ, ಆದಕ್ಕೆ ಪೋಲಂಡ್ ದೇಶೀಯನೇ ಆದ ಜೆರ್ಝಿನ್ಸ್ಕಿ ಯೆಂಬುವವನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಮತ್ತು ಪೋಲಂಡಿನಲ್ಲಿ ಈಗಿರುವ ಪ್ರಭುತ್ವವನ್ನು ತೊಲಗಿಸಿ ಸೋವಿಯಟ್ ಪ್ರಜಾಪ್ರಭುತ್ವವನ್ನು ಆ ದೇಶದಲ್ಲೆಲ್ಲಾ ಸ್ಥಾಪಿಸಿದರೇನೆಯೇ ಅಲ್ಲಿ ಶಾಂತಿಯು ನೆಲೆಗೊಳ್ಳುವುದೆಂದು ಒಂದು ಪ್ರಕಟನೆಯನ್ನು ಮಾಡಿದ್ದಾರಂತೆ. ಇದರಿಂದೆಲ್ಲಾ ಅವರು ಪೋಲಂಡನ್ನು ಸಂಪೂರ್ಣವಾಗಿ ಸ್ವಾಹಾಮಾಡುವುದರಲ್ಲೇ ಬದ್ಧಕಂಕಣರಾಗಿದ್ದಾರೆಂಬುದು ವ್ಯಕ್ತವಾಗುತ್ತದೆ. ಈ ಮಧ್ಯೆ ಅವರು ಜರ್ಮನರೊಡನೆ ಒಂದು ಸಂಧಿಯನ್ನು ಮಾಡಿಕೊಂಡಿದ್ದಾರೆಂದು ಲಂಡನ್ ಟೈಮ್ಸ್ ಪತ್ರಿಕೆಗೆ ನಂಬುಗೆಯಾದ ಕಡೆಯಿಂದ ವಾರ್ತೆ ಬಂದಿದೆಯಂತೆ. ಗುಟ್ಟಾಗಿ ಅವರವರಿಗೆ ನಡೆದಿರುವ ಈ ಸಂಧಿಯಲ್ಲಿ ರಷ್ಯನರು ಪೋಲಂಡಿನಲ್ಲಿರುವ ಯುದ್ಧಸಾಮಗ್ರಿ ಆಹಾರ ಸಾಮಗ್ರಿಗಳನ್ನೆಲ್ಲಾ ವಶಪಡಿಸಿಕೊಂಡು ಅದನ್ನು ಗೆದ್ದು, ಜರ್ಮನರಿಗೆ ಅದನ್ನು ಒಪ್ಪಿಸಿಬಿಡುವಂತೆಯೂ, ಅದಕ್ಕೆ ಪ್ರತಿಯಾಗಿ ಜರ್ಮನಿಯು ರಷ್ಯಾವಿಗೆ ವಸ್ತ್ರ ಸಾಮಗ್ರಿಗಳನ್ನೂ, ಕೂಲಿ ಜನರನ್ನೂ ಒದಗಿಸಿಕೊಡುವಂತೆಯೂ, ರಷ್ಯನರು ಜರ್ಮನಿಗೆ ವಿಶೇಷವಾಗಿ ಸಾಲವನ್ನು ಕೊಡುವಂತೆಯೂ ಏರ್ಪಾಟು ಜರುಗಿದೆಯಂತೆ. ವಾರ್ಸಾ ಪಟ್ಟಣದಲ್ಲಿದ್ದ ಇಂಗ್ಲೀಷ್ ಫ್ರೆಂಚ್ ರಾಯಭಾರಿಗಳೂ ಮಿತ್ರಮಂಡಲೀ ಪ್ರಜೆಗಳು ಸಹ ಆ ಪಟ್ಟಣವನ್ನು ಬಿಟ್ಟುಬಿಟ್ಟರೆಂದು ವಾರ್ತೆ ಬಂದಿದೆ. ಸ್ಥಿತಿಯೇನೋ ವಿಷಮವಾಗಿಯೇ ಇದೆ. ಮಿತ್ರಮಂಡಲಿಗೂ ಬೋಲ್ಷೆವಿಕ್ಕರಿಗೂ ಸಂಧಿಯೇ ನಡೆಯುವುದೋ ಅಥವಾ ಯುದ್ಧವೇ ಸಂಪ್ರಾಪ್ತವಾಗುವುದೋ ಹೇಳುವುದು ಕಷ್ಟವಾಗಿದೆ. ಪೋಲಂಡಿನ ಯುದ್ಧಭೂಮಿಗೆ ತೀರ ಸಮೀಪದಲ್ಲಿ ಫ್ರಾನ್ಸ್ ಸೈನ್ಯಗಳು ಹೋಗಿರುತ್ತ, ಪೋಲರೊಡನೆ ಕೂಡಿ ಬೋಲ್ಷೆವಿಕ್ಕರ ಮೇಲೆ ಯುದ್ಧಮಾಡಲು ತಮ್ಮ ಪ್ರಭುತ್ವದವರ ಉತ್ತರವನ್ನು ನಿರೀಕ್ಷಿಸುತ್ತಿವೆಯಂತೆ. ಫ್ರೆಂಚರು ಪೋಲರಿಗೆ ಸಹಾಯವಾಗಿ ಹಣವನ್ನೂ ಯುದ್ಧ ಸಾಮಗ್ರಿಗಳನ್ನೂ ಕಳುಹಿಸುವುಕ್ಕೆ ಸಿದ್ಧರಾಗಿದ್ದಾರೆ. ಇಂಗ್ಲೀಷರಿಗೆ ಬೋಲ್ಷೆವಿಕ್ಕರನ್ನು ಮಣಿಸುವುದಕ್ಕೆ ಅವರ ಮೇಲೆ ತಮ್ಮ ಸೈನ್ಯಗಳನ್ನು ಕಳುಹಿಸಿಕೊಡಲು ಇಷ್ಟವಿಲ್ಲ. ಪೋಲರಿಗೆ ಯುದ್ಧಸಾಮಗ್ರಿಗಳನ್ನು ಒದಗಿಸಿಯೋ ಸಮುದ್ರ ಮಾರ್ಗಗಳನ್ನು ಕಟ್ಟಿ ಆಹಾರ್ಯಾದಿ ಸಾಮಗ್ರಿಗಳನ್ನು ರಷ್ಯಾಕ್ಕೆ ಕಳುಹಿಸಿಕೊಡದಂತೆಯೋ ಮಾಡಿ, ಈ ನಿರ್ಬಂಧ ಮಾರ್ಗವನ್ನು ಪ್ರಯೋಗಿಸಬೇಕೆಂದು ಯೋಚಿಸಿದ್ದಾರೆ. ಇದೂ ಅಲ್ಲದೆ ಪೋಲಂಡಿಗೆ ಮಿತ್ರಮಂಡಲೀ ಸೈನ್ಯಗಳು ಹೋಗಬೇಕಾದರೆ ಜರ್ಮನಿಯನ್ನು ಹಾಯ್ದೇ ಹೋಗಬೇಕಾಗುತ್ತದೆ. ಅದಕ್ಕೆ ಜರ್ಮನರು ದಾರಿ ಕೊಡುವುದಿಲ್ಲವೆಂದೂ, ತಮ್ಮ ತಾಟಸ್ಥ್ಯಕ್ಕೆ ಭಂಗ ಬರುವುದೆಂದೂ ನೆವ ಹೇಳುತ್ತಾರೆ. ಇಷ್ಟರಮೇಲೆ ಯೂರೋಪಿನ ಕೂಲಿಕಾರರೆಲ್ಲಾ ಸಭೆಗಳನ್ನು ಮಾಡಿ, ಮರಳಿ ಇಂಗ್ಲೀಷರೂ, ಫ್ರೆಂಚರೂ ಪೋಲಂಡರಿಗೆ ಸಹಾಯವಾಗಿ ಯುದ್ಧಕ್ಕೆ ಆರಂಭಿಸಿದರೆ ತಾವೊಬ್ಬರೂ ಯಾವ ಕೆಲಸಕ್ಕೂ ಹೋಗದೆ ನಿಂತುಬಿಡಬೇಕೆಂದು ನಿರ್ಧಾರ ಮಾಡಿ ಎಚ್ಚರ ಕೊಡುತ್ತಿದ್ದಾರೆ. ತಮ್ಮ ದೇಶದ ಪೂರ್ವದ ಎಲ್ಲೆಕಟ್ಟನ್ನು (ಪೋಲಂಡಿನ ಮಗ್ಗುಲು) ಸಂರಕ್ಷಿಸಿಕೊಳ್ಳಲಿಕ್ಕೆ ಆ ಭಾಗದ ಜರ್ಮನರೇ ಒಂದು ಸೈನ್ಯವಾಗಿ ಏರ್ಪಟ್ಟಿದ್ದಾರೆಂದೂ, ಅವರನ್ನೆಲ್ಲಾ ಸಕ್ರಮ ಸೈನ್ಯವನ್ನಾಗಿ ಸರ್ಕಾರದವರು ಅಂಗೀಕರಿಸಬೇಕಾಗಿದೆಯೆಂದೂ ಅದಕ್ಕೆ ಮಿತ್ರಮಂಡಲಿಯವರು ಒಪ್ಪಿಗೆ ಕೊಡಬೇಕೆಂದೂ ಜರ್ಮನ್ ಪ್ರಭುತ್ವದವರು ಮಿತ್ರಮಂಡಲಿಯವರನ್ನು ಲಿಖಿತಮೂಲಕವಾಗಿ ಕೇಳಿಕೊಂಡಿದ್ದಾರೆ. ಈಚೆಗೆ ಬೋಲ್ಷೆವಿಕ್ಕರು ಮಿತ್ರಮಂಡಲಿಯವರ ಪತ್ರಕ್ಕೆ ಉತ್ತರವನ್ನು ಕೊಟ್ಟಿದ್ದಾರಂತೆ. ಆದರಲ್ಲಿ ಪೋಲರೂ, ರಷ್ಯನರೂ ಮಾಡಿಕೊಳ್ಳುವ ಒಪ್ಪಂದದಲ್ಲಿ ಮಿತ್ರಮಂಡಲಿಯವರು ಪ್ರವೇಶಿಸಬೇಕಾದ ಪ್ರಕೃತವಿಲ್ಲವೆಂದು ತಿಳಿಯಿಸಿದ್ದಾರಂತೆ. ಮತ್ತು ತಮಗೂ ಜರ್ಮನರಿಗೂ ಪೋಲಂಡಿನಲ್ಲಿ ಯಾವಾಗ ಹೋಗಿಬರಲಿಕ್ಕೂ ಅಭ್ಯಂತರವಿಲ್ಲದಂತೆ ಮಾಡಿಕೊಳ್ಳಬೇಕೆಂಬುದು ಅವರ ಉದ್ದೇಶವಂತೆ. ಎಂದರೆ ಜರ್ಮನಿಗೂ, ರಷ್ಯನರಿಗೂ ಮಧ್ಯದಲ್ಲಿ ಪೋಲಂಡಿನಂಥ ಸ್ವತಂತ್ರ ರಾಷ್ಟ್ರವಿರಕೂಡದೆಂಬುದೇ ಅವರ ಭಾವವಾಗಿದೆ. ಇಂಥ ವಿಷಮಸ್ಥಿತಿಯಲ್ಲಿ ಮಿತ್ರಮಂಡಲಿಯವರು ಹೇಗೆ ನಡೆದುಕೊಳ್ಳುವರೋ ನೋಡಬೇಕಾಗಿದೆ. ಪೋಲರಿಗೂ, ರಷ್ಯನರಿಗೂ ಹೇಗಾದರೂ ಸಂಧಿ ಮಾಡಬೇಕೆಂದು ಇಂಗ್ಲೀಷರು ಎಷ್ಟೋ ಪ್ರಯತ್ನಪಟ್ಟರು ಅದನ್ನು ರಷ್ಯನರು ಕೇಳಲಿಲ್ಲ. ಪೋಲರಿಗೆ ರಷ್ಯನರು ಮಂಕುಬೂದಿಯೆರಚಿದಂತೆ ಕಾಣುತ್ತದೆ. ಮಿತ್ರಮಂಡಲಿಯವರನ್ನು ಹೊರಚ್ಚು ಮಾಡಿ ತಾವೇ ಪೋಲರೊಡನೆ ನಿನ್ನೆ ತಾ|| ೧೧ ರಲ್ಲಿ ಸಂಧಿ ಮಾಡಿಕೊಳ್ಳಲು ಏರ್ಪಡಿಸಿಕೊಂಡಿದ್ದರು. ಆ ಸಂಧಿ ಹೇಗಾಗುವುದೋ ಯುದ್ಧಶಾಂತಿಗೆ ಅದು ಅವಕಾಶ ಕೊಡುವುದೋ ಅಭಿವೃದ್ಧಿಪಡಿಸುವುದಕ್ಕೆ ಅವಕಾಶ ಮಾಡುವುದೋ ನೋಡಬೇಕಾಗಿದೆ.

ಐರ್ಲಂಡು.

ಐರ್ಲಂಡಿನಲ್ಲಿ ನಡೆಯುತ್ತಿರುವ ಅತ್ಯಾಚಾರಗಳು ಕೊನೆಮುಟ್ಟಿಲ್ಲ. ಅಲ್ಲಿನವರಿಗೆ ರಿಪಬ್ಲಿಕ್ (ಪೂರ್ಣ ಸ್ವತಂತ್ರಪ್ರಭುತ್ವ)ವನ್ನು ಕೊಡುವುದು ಹಾಗಿರಲಿ; ಅಧಿನಿವೇಶಗಳಲ್ಲಿರತಕ್ಕ ಪ್ರಜಾಪ್ರಭುತ್ವವನ್ನು ಕೊಡುವುದಕ್ಕೂ ಆಂಗ್ಲ ಪ್ರಭುತ್ವದವರು ಒಪ್ಪುವುದಿಲ್ಲ. ಪಾರ್ಲಿಮೆಂಟನಲ್ಲಿ ಮಿ|| ಆಸ್ಕ್ವಿತ್‌ರವರಿಗೂ (ಹಿಂದಣ ಮಂತ್ರಿ) ಲಾಯಿಡ್‌ಜಾರ್ಜರಿಗೂ (ಈಗಣ ಮಂತ್ರಿ) ಈ ಸಂಬಂಧವಾಗಿ ಚರ್ಚೆ ನಡೆದುದರಲ್ಲಿ ಆಸ್ಕ್ವಿತ್ತರು ಅಧಿನಿವೇಶಗಳ ರೀತಿಯ ಪ್ರಭುತ್ವವನ್ನು ಕೊಡಲು ನಾವು ಆಗ ಸಿದ್ಧವಾಗಿಲ್ಲದಿದ್ದರೂ ಈಗ ನಾವು ಸಿದ್ಧರಾಗಿದ್ದೇವೆಂದು ಹೇಳಲು, ಅದು ವಿವೇಕವಿಲ್ಲದ ಯೋಚನೆಯೆಂದು ಲಾಯಿಡ್ ಜಾರ್ಜರು ಉತ್ತರ ಕೊಟ್ಟುದಲ್ಲದೆ, ನಾವು ಅಂಥ ಸ್ವಪರಿಪಾಲನೆಯನ್ನು ಅವರಿಗೆ ಕೊಟ್ಟುಬಿಟ್ಟರೆ ಭೂಸೈನ್ಯ ನೌಕಾ ಸೈನ್ಯಗಳನ್ನು ಅವರು ಸ್ವತಂತ್ರವಾಗಿ ಇಟ್ಟುಕೊಳ್ಳುವರೆಂದೂ, ಐರ್ಲಂಡಿಗೆ ಅತಿ ಪ್ರಮಾದಕರವಾದ ರೇವೆಗಳಿರುವುವೆಂದೂ, ಅಪ್ಪಾದರೂ ಅಂಥ ಅಧಿನಿವೇಶ ಪ್ರಭುತ್ವವನ್ನು ಪಡೆದು ತೃಪ್ತಿಗೊಳ್ಳುವುದಕ್ಕೆ ಐರ್ಲಂಡಿನವರೇ ಒಪ್ಪುವುದಿಲ್ಲವೆಂದೂ ಹೇಳಿದರು. ಈಚೆಗೆ ಐರ್ಲಂಡಿನ ದುರಂತ ಕೃತ್ಯಗಳನ್ನು ನಿಲ್ಲಿಸಿ ಶಾಂತಿಸ್ಥಾಪನೆ ಮಾಡುವುದಕ್ಕೆ ಒಂದು ನಿರ್ಬಂಧ ಶಾಸನವನ್ನು ಪಾರ್ಲಿಮೆಂಟಿನವರು ನಿರ್ಮಿಸಿದರು. ಈ ಸಂಬಂಧವಾದ ಚರ್ಚೆ ನಡೆಯುವಾಗ ಡಲ್ವಿನ್ ಎಂಬ ಐರಿಷ್ ಜಾತೀಯ ವಾದಿಯು ಬಹಳ ಉದ್ರೇಕಗೊಂಡು ಆ ಬಿಲ್ಲಿನ ವಿಷಯವಾಗಿ ಖಂಡನೆಮಾಡುತ್ತ ನಿಯಮವಿರುದ್ಧವಾಗಿ ಪ್ರವರ್ತಿಸಿದುದರಿಂದ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಸ್ಪೀಕರು ಆ ಸಭಿಕನನ್ನು ಸಭೆಯಿಂದಾಚೆಗೆ ಕಳುಹಿಸಿಬಿಟ್ಟರು. ಆತನ ಜತೆಯಲ್ಲೇ ಇತರ ನೇಷನಲಿಸ್ಟ್ ಸಭಿಕರೂ ಕೆಲ ಲೇಬರ್ ಪಾರ್ಟಿಯವರೂ ಹೊರಟುಹೋದರು. ಇನ್ನು ಮೇಲೆ ಐರ್ಲಂಡಿನಲ್ಲಿ ನಿರ್ಬಂಧ ಶಾಸನವು ವ್ಯವಹಾರಕ್ಕೆ ತರಲ್ಪಡುವುದು. ಈ ಮಧ್ಯೆ ಐರ್ಲಂಡಿನಲ್ಲಿ ವರ್ತಕರೇ ಮೊದಲಾದವರು ಒಂದು ದೊಡ್ಡ ಸಭೆ ಕೂಡಿ, ಅಧಿನಿವೇಶಗಳಿಗೆ ಕೊಟ್ಟಿರುವಂಥ ಪ್ರಭುತ್ವವನ್ನು ತಮಗೆ ಕೊಟ್ಟರೆ ಸಾಕೆಂದು ತೀರ್ಮಾನ ಮಾಡಿದರೆಂಬ ವಾರ್ತೆ ಬಂದಿದೆ. ಇದು ಅಲ್ಸ್ಟರ್ ಪ್ರಜೆಗಳ ಅಭಿಪ್ರಾಯವಾಗಿರಬೇಕು. ಈ ಸಭೆಗೆ ಅನೇಕ ಮಂದಿ ಯೂನಿಯನಿಸ್ಟರೂ, ನೇಷನಲಿಸ್ಟರೂ ಹೋಗಿದ್ದರು.

ಶ್ರೀ ಜಗದ್ಗುರು ಏಕೋರಾಮ ಪೀಠಾಧಿಪತಿಗಳ ಮುಕ್ತಿ.

ಹಿಮವತ್ಕೇದಾರದ ಜಗದ್ಗುರು ಶ್ರೀ ಏಕೋರಾಮ ಪೀಠಾಸೀನರಾಗಿದ್ದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಬೀರೂರು ಮಹಾಸಭಾ ಕಾಲಕ್ಕೆ ದಯಮಾಡಿಸಿದ್ದು ಈಚೆಗೆ ಬಳ್ಳಾರಿ ಜಿಲ್ಲೆಯಲ್ಲಿ ಸಂಚಾರಮಾಡುತ್ತಿದ್ದು ಕೂಡ್ಲಿಗಿಯಲ್ಲಿ ಅಸ್ವಸ್ಥರಾಗಿ ಉಜ್ಜಯಿನಿಗೆ ದಯಮಾಡಿಸಿ ಅಲ್ಲಿಯೇ ಕಳೆದ ಆಷಾಢಬಹುಳ ೩೦ ಗುರುವಾರ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ಸದ್ಧರ್ಮಪೀಠದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಅಪ್ಪಣೆಮೇರೆಗೆ ಇವರ ಉತ್ತರಕ್ರಿಯೆಗಳು ಮಹಾ ವೈಭವದಿಂದ ಜರುಗಿದುವೆಂದು ಕೇಳುತ್ತೇವೆ. ಏಕೋರಾಮ ಪೀಠವು ಶ್ರೀ ಶಂಕರಾಚಾರ್ಯರಿಗಿಂತಲೂ ಪ್ರಾಚೀನವಾದುದು. ಪ್ರಸಿದ್ಧವಾದ ಕೇದಾರೇಶ್ವರ ದೇವಾಲಯವು ಈ ಮಠಾಧಿಪತ್ಯಕ್ಕೆ ಒಳಪಟ್ಟುದು. ಆ ಪ್ರಾಂತದ ಸಕಲ ವರ್ಣಾಶ್ರಮಗಳ ಮೇಲೂ ಈ ಮಠಾಧಿಕಾರಿಗಳಿಗೆ ಅಧಿಕಾರವಿರುವುದು. ನೂರಾರು ಬಹು ಪ್ರಾಚೀನ ದಾನಶಾಸನಗಳಿರುವುವು. ಬಹಳ ಘನತರವಾದ ಆಸ್ತಿಗಳೂ ಇರುವುವಂತೆ. ಆದರೂ ೭೫ ಸಾವಿರ ರೂ.ಗಳ ಸಾಲದ ಹೊರೆಯಿರುವುದರಿಂದ ಅದನ್ನು ತೀರಿಸಲಿಕ್ಕಾಗಿ ಸಮಾಜದವರಿಗೆ ಈ ಗತಿಸಿದ ಸ್ವಾಮಿಗಳೇ ಕೆಲಕಾಲಕ್ಕೆ ಮುಂಚೆ ನಿವೇದಿಸಿಕೊಂಡಿದ್ದರು. ಇಂಥ ಪ್ರಾಚೀನಪೀಠದ ಸಮುದ್ಧಾರ ಕಾರ್ಯವನ್ನು ಸಮಾಜದವರು ಉಪೇಕ್ಷಿಸತಕ್ಕುದಾಗಿಲ್ಲ. ಒಬ್ಬಿಬ್ಬ ಕುಶಲರನ್ನು ಕೇದಾರ ಪ್ರಾಂತಕ್ಕೆ ಕಳುಹಿಸಿಕೊಟ್ಟು, ವಸ್ತುಸ್ಥಿತಿಯನ್ನೆಲ್ಲಾ ಸರಿಯಾಗಿ ಗೊತ್ತುಮಾಡಿ ಆ ಸಾಲವನ್ನು ಬಗೆಹರಿಸುವುದಕ್ಕಾಗಿಯೇ ಒಂದು ನಿಧಿಯನ್ನು ಚಂದಾ ಮೂಲಕ ಸಮಾಜದವರಿಂದ ಎತ್ತಲು ಏರ್ಪಡಿಸಬಹುದಾಗಿದೆ. ಯಾವ ಪ್ರಾಂತದವರು ಇದಕ್ಕೆ ಮುಂದಾಗಿ ಬಂದರೂ ಅವರಿಗೆ ಇಹಪರ ಶ್ರೇಯಸ್ಸುಗಳೆರಡೂ ಉಂಟು. ಸಮಾಜದವರೆಲ್ಲಾ ಅದಕ್ಕೆ ಹಸ್ತಾವಲಂಬನವನ್ನೀಯುವುದರಲ್ಲಿ ಸಂಶಯವಿಲ್ಲ. ಗತಿಸಿದ ಶಿವಲಿಂಗ ಶಿವಾಚಾರ್ಯಸ್ವಾಮಿಗಳು ದ್ರಾವಿಡದೇಶೀಯರಾಗಿದ್ದರು. ಇನ್ನುಮುಂದೆ ಕನ್ನಡದೇಶದ ಮಾಹೇಶ್ವರ ಸಂಪ್ರದಾಯದ ವಿದ್ಯಾವಂತರೊಬ್ಬರನ್ನು ಆ ಪೀಠಕ್ಕೆ ಅಧಿಕಾರಿಗಳನ್ನಾಗಿ ಮಾಡುವ ವಿಷಯದಲ್ಲಿಯೂ ತ್ವರ್ಯವಾದ ಏರ್ಪಾಟನ್ನು ಸಮಾಜಬಾಂಧವರು ಕೈಕೊಳ್ಳದಿರಲಾರರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು.

ಮಹಾಮಾತೃಶ್ರೀಯವರೇ ಮೊದಲಾದ ರಾಣಿವಾಸದವರು ಕಳೆದ ಸೋಮವಾರ ಸ್ಪೆಷಲ್ ಟ್ರೇನಿನಲ್ಲಿ ಬೆಂಗಳೂರಿಗೆ ತೆರಳಿದರು.

ಗುಂಡುಲುಪೇಟೆ ತಾಲ್ಲೂಕು ಬೇಗೂರು ಮೊದಲಾದ ಗ್ರಾಮಗಳಲ್ಲಿ ಪ್ಲೇಗು ಆರಂಭವಾಗಿ ಹೊರಗೆ ಗುಡಿಸಲುಗಳನ್ನು ಹಾಕುತ್ತಲಿದ್ದಾರಂತೆ.

ರಾಜಧಾನಿಯ ಟವರ್‌ಹಾಲಿನ ಆವರಣದಲ್ಲಿ ಫಲಪುಷ್ಪ ಪ್ರದರ್ಶನವು ನಿನ್ನೆಯಿಂದ ಆರಂಭವಾಯಿತು. ಈ ದಿನ ಬೆಳಗ್ಗೆ ಸ್ತ್ರೀಯರಿಗೂ, ಮಧ್ಯಾಹ್ನ ಗಂಡುಸರಿಗೂ ನೋಡಲಿಕ್ಕೆ ಅವಕಾಶವಿರುವುದು.

ಕಪಿನೀ ನದಿಗೆ ತಿ|| ನರಸೀಪುರದ ಹತ್ತಿರವೂ, ಕಾವೇರೀ ನದಿಗೆ ಸೋಸಲೆಯ ಹತ್ತಿರವೂ ಸೇತುಗಳನ್ನು ಕಟ್ಟತಕ್ಕುದೆಂದು ಸರ್ಕಾರದವರು ಕಡೆಯ ತೀರ್ಮಾನವನ್ನು ಮಾಡಿರುವರೆಂದು ಕೇಳುತ್ತೇವೆ. ಇದು ಯುಕ್ತವಾದ ತೀರ್ಮಾನ.

೫ ರೂ. ಗಳಿಂದ ೧೦೦ ರೂ. ಗಳವರೆಗಣ ಸಂಬಳಗಾರರಿಗೆ ಒಂದು ನೂತನ ನಿಯಮ ಪ್ರಕಾರ ಅಲೋಯೆನ್ಸ್ ಕೊಡಲು ಕಳೆದ ತಿಂಗಳಲ್ಲಿ ಸರ್ಕಾರದವರು ಮಾಡಿದ ಏರ್ಪಾಟನ್ನೇ ಸದ್ಯಕ್ಕೆ ವಿದ್ಯಾಭ್ಯಾಸದ ಶಾಖೆಯವರಿಗೂ ಅನ್ವಯಿಸುವಂತೆ ಅಪ್ಪಣೆ ಮಾಡಿದ್ದಾರೆ.

ಮ|| ಗಾಂಧಿಯವರೂ ಷೌಕತಾಲಿಯವರೂ ಬೆಂಗಳೂರಿಗೆ ಬರಲಿಲ್ಲ. ಬೊಂಬಾಯಿಯಿಂದ ನೇರವಾಗಿ ಕಳೆದ ತಾ|| ೧೨ ರಲ್ಲಿ ಮದ್ರಾಸಿಗೆ ಹೋದರು. ಅಲ್ಲಿಯ ನಿಲ್ದಾಣದಲ್ಲಿ ೫೦-೬೦ ಸಾವಿರ ಜನರು ಉತ್ಸಾಹದಿಂದ ಕಾದಿದ್ದು ಬರಮಾಡಿಕೊಂಡರು. ಮುಂದಣವಾರದಲ್ಲಿ ಬೆಂಗಳೂರಿಗೆ ಬರುವರಂತೆ.

ದಿವಾನ್ ಸರ್ದಾರ್ ಕಾಂತರಾಜ ಅರಸ್ ಬಿ. ಎ., ಸಿ. ಎಸ್. ಐ. ಯವರು ಒಂದು ತಿಂಗಳ ರಜವನ್ನು ಪಡೆದು ಉತ್ತರ ಹಿಂದೂಸ್ಥಾನದ ಕಡೆಗೆ ತೆರಳಿದರು. ಅವರು ಬರುವವರೆಗೆ ೧ ನೆ ಕೌನ್ಸಿಲರ್ ಮಿ|| ಎ. ಆರ್. ಬಾನರ್ಜಿಯವರು ಆಕ್ಟಿಂಗ್ ದಿವಾನರಾಗಿರುವರು.

ಬೆಂಗಳೂರು ಸೆಂಟರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ೩೦ ವರ್ಷಗಳಿಂದ ಕೆಲಸ ಮಾಡಿ ಈಗ ತಾನೇ ವಿಶ್ರಾಂತಿ ಪಡೆದ ಪ್ರಿನ್ಸಿಪಾಲ್ ಮಿ|| ಟೇಟ್‌ರವರಿಗೆ ಅವರ ಪೂರ್ವದ ಮತ್ತು ಈಗಿನ ವಿದ್ಯಾರ್ಥಿಗಳೆಲ್ಲಾ ಸೇರಿ ಸತ್ಕರಿಸಿ ವಿಜ್ಞಾಪನ ಪತ್ರಗಳನ್ನು ಬೆಳ್ಳಿಯ ಮತ್ತು ಗಂಧದ ಪೆಟ್ಟಿಗೆಯಲ್ಲಿಟ್ಟು ಅರ್ಪಿಸಿದರು. ಈ ಕಾಲೇಜು ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ೨ ಬಹುಮಾನಗಳನ್ನು ತಾವು ಕೊಡುವುದಾಗಿ ಮಿ|| ಟೇಟ್‌ರವರು ವಾಗ್ದಾನ ಮಾಡಿದರು.

ಮ|| ಬೇಲೂರು ಕೇಶವಮೂರ್ತಿ ದಾಸರವರು ರಾಜಧಾನಿಯ ಟವರ್‌ಹಾಲಿನಲ್ಲಿ ಶಂಕರವಿಜಯವನ್ನೂ, ಪ್ರಹ್ಲಾದ ಚರಿತ್ರೆಯನ್ನೂ ಕೀರ್ತನ ಮಾಡಿದರು. ಇವರ ಕೀರ್ತನ ವಿಧಾನವು ಈಗಣ ಕಾಲಕ್ಕೆ ತಕ್ಕುದಾಗಿ ಸರ್ವಮತಸಮಾದರಣೀಯವಾಗಿದೆ. ೪-೫ ಭಾಷೆಗಳ ಜ್ಞಾನವು ಇವರಿಗಿರುವುದಲ್ಲದೆ ಸಂದರ್ಭ ಶಕ್ತಿಯು ಚೆನ್ನಾಗಿದೆ. ಸಮಯೋಚಿತೋದಾಹರಣ ಸಂಭಾರಗಳು ಸಂಪೂರ್ಣವಾಗಿವೆ. ಈ ಕಾರಣದಿಂದ. ಚಿತ್ತಾಕರ್ಷಕವಾದ ಇವರ ಕೀರ್ತನವನ್ನು ಕೇಳಿ ಸಂತುಷ್ಟರಾದ ಪುರನಿವಾಸಿಗಳು ಕಳೆದ ಗುರುವಾರ ರತ್ನಾವಳೀ ನಾಟಕ ಮಂದಿರದಲ್ಲಿ ಇವರಿಗೆ ಸುವರ್ಣ ಪದಕವನ್ನಿತ್ತು ಸಂಭಾವಿಸಿದರು.

ತಿಲಕರ ನಿಧನದಲ್ಲಿ ಅನುತಾಪಪ್ರದರ್ಶನಾರ್ಥವಾದ ಸಭೆಗಳೂ, ನಿರ್ಧಾರಗಳೂ, ಕೀರ್ತನಗಳೂ, ಉದ್ಯೋಗ ವಿರಾಮಗಳೂ ಅವರ ಮೃತದಿನದಿಂದ ಮೊನ್ನೆಯವರೆಗೂ ಭರತಖಂಡದ ಎಲ್ಲಾ ಪಟ್ಟಣಗಳಲ್ಲೂ ಮಿತಿಯಿಲ್ಲದೆ ನಡೆದಿರುವುವು. ನಮ್ಮ ರಾಜಧಾನಿಯಲ್ಲಿ ರಿಟೈರ್ಡ್ ಪೊ|| ಸೂಪರಿಂಟೆಂಡೆಂಟ್ ಮಿ|| ಮಹಮ್ಮದ್ ಜಾಫರ್ ಸಾಹೇಬರ ಅಧ್ಯಕ್ಷತೆಯಲ್ಲೂ, ಬೆಂಗಳೂರಿನಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲೂ ಸಭೆಗೂಡಿ ಅನುತಾಪಸೂಚಕ ಭಾಷಣಗಳೂ ನಿರ್ಧಾರಗಳೂ ಮಾಡಲ್ಪಟ್ಟುವು. ೨ ಕಡೆಯೂ ೧೦ ನೆಯ ದಿನವಾದ ಕಳೆದ ಸೋಮವಾರ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು.

ಪರೀಕ್ಷೆಯಲ್ಲುತ್ತೀರ್ಣರಾಗದಿರುವ ಗ್ರಾಂಟ್ ಸ್ಕೂಲ್ ಮಾಸ್ಟರುಗಳನ್ನು ಕೂಡ ಇದುವರೆಗೆ ಟ್ರೇನಿಂಗ್ ಶಾಲೆಗಳಿಗೆ ಸೇರಿಸಿಕೊಳ್ಳುತ್ತಿದ್ದರು. ಇತಃಪರಃ ಅದನ್ನು ತಪ್ಪಿಸಿ ಉತ್ತೀರ್ಣರಾದ ಮ್ಯಾಸ್ಟರುಗಳನ್ನೇ ಸೆಕೆಂಡರಿ ಉಪಾಧ್ಯಾಯ ಪರೀಕ್ಷೆಗೆ ಓದಲು ಸೇರಿಸಿಕೊಳ್ಳುವಂತೆಯೂ ಅಂಥ ತಲೆಯೊಬ್ಬರಿಗೆ ೧೦ ರೂ ನಂತೆ ೧೦೦ ಮಂದಿಗಳಿಗೆ ವೇತನಗಳನ್ನು ಕೊಡುವಂತೆಯೂ ಏರ್ಪಡಿಸಿ, ಮೈಸೂರು, ಬೆಂಗಳೂರು, ತುಮಕೂರು, ಹಾಸನ, ಕೋಲಾರ, ಶಿವಮೊಗ್ಗಾ, ಚಿತ್ರದುರ್ಗ ಈ ಪಟ್ಟಣಗಳಲ್ಲಿರುವ ಟ್ರೇನಿಂಗ್ ಶಾಲೆಗಳಲ್ಲಿ ಓದಿಕೊಳ್ಳಲು ಸರ್ಕಾರದವರು ಏರ್ಪಡಿಸಿದ್ದಾರೆ. ಇದಕ್ಕೆ ಸೇರಲಪೇಕ್ಷೆಯುಳ್ಳ ಮಾಸ್ಟರುಗಳು ಬರುವ ಸೆಪ್ಟಂಬರು ತಿಂಗಳ ಕೊನೆಯೊಳಗಾಗಿ ಆಯಾ ಕಡೆಯ ಶಾಲಾ ಇನ್ಸ್‌ಪೆಕ್ಟರುಗಳಿಗೆ ಬರೆದುಕೊಳ್ಳಬಹುದು.

ಭರತಖಂಡದ ವೃತ್ತಾಂತಗಳು.

ದಿಲ್ಲಿಯಲ್ಲಿ ಕೆಲ ದಿನಗಳ ಕೆಳಗೆ ಸುರಿದ ವಿಪರೀತ ವೃಷ್ಟಿಯಿಂದ ಅಲ್ಲಿ ಮಲೇರಿಯಾ ರೋಗವು ಉತ್ಪನ್ನವಾಗಿದೆ.

ಭರತಖಂಡದಿಂದ ಇದುವರೆಗೆ ೧೦ ಸಾವಿರ ಮಹಮ್ಮದೀಯರು ಆಫ್ಘಾನಿಸ್ಥಾನಕ್ಕೆ ಒಕ್ಕಲು ಹೋಗಿರುತ್ತಾರೆ.

ಲಾರ್ಡ್ ಸಿನ್ಹರವರಿಗೆ ಬೀಹಾರ್ ಒರಿಸ್ಸಾ ಪ್ರಾಂತದ ಲೆ|| ಗೌರ್ನರ್ ಪದವಿಯು ಕೊಡಲ್ಪಟ್ಟಿದೆಯೆಂದು ಪ್ರಕಟವಾಗಿದೆ.

ಬೋಲ್ಷೆವಿಕ್ಕರ ಪ್ರಯತ್ನವು ಕಾಬೂಲ್ ಅಮೀರರಿಗೆ ಜುಗುಪ್ಸೆ ಹುಟ್ಟಿಸಿರುವುದರಿಂದ ತಮ್ಮ ದೇಶದಲ್ಲಿ ರಷ್ಯನರು ವಾಸಿಸುತ್ತಿರುವ ಮನೆಗಳನ್ನು ಕಾಯುವುದಕ್ಕೆ ಪ್ರತ್ಯೇಕ ಸೈನ್ಯವನ್ನು ನಿಯಮಿಸಿದ್ದಾರೆ.

ಇಂಡ್ಯಾ ಸರ್ಕಾರದವರು ಸೇಕಡಾ ೬ ರೂ. ಬಡ್ಡಿಯ ಮೇರೆಗೆ ತೆಗೆಯುತ್ತಿರುವ ೧೦ ವರ್ಷ ಗಡುವಿನ ಸಾಲಕ್ಕೆ ಈ ತಿಂಗಳು ತಾ|| ೧೦ ರೊಳಗೆ ೨೨ ಕೋಟಿ ರೂ. ಗಳ ಮೇಲೆಯೇ ದರಖಾಸ್ತು ಬಂದಿದ್ದಿತು.

ಬೊಂಬಾಯಿಯಲ್ಲಿ ವ್ಯಾಪಾರಾಭಿವೃದ್ಧಿಯು ದಿನದಿನಕ್ಕೆ ಅಧಿಕವಾಗುತ್ತಿದೆ. ಈಗ ಆ ಪಟ್ಟಣದ ಸುತ್ತಲೂ ಇರುವ ಬಂದರುಗಳು ಸಾಲದೆ ಇನ್ನೊಂದು ಹೊಸ ಬಂದರನ್ನು (ಹಡಗು ನಿಲ್ಲುವ ಸ್ಥಾನ) ಕಟ್ಟಲು ಯತ್ನಿಸಿದ್ದಾರೆ.

ಭರತಖಂಡದ ಮದ್ರಾಸು, ದಿಲ್ಲಿ, ಬೊಂಬಾಯಿ ಮೊದಲಾದ ಪಟ್ಟಣಗಳಲ್ಲೆಲ್ಲಾ ಮನೆಗಳ ಬಾಡಿಗೆಯು ಹೆಚ್ಚಿಕೊಂಡಿರುವುದರಿಂದ ಅದನ್ನು ಒಂದು ಮಿತಿಗೆ ನಿಲ್ಲಿಸುವ ಕಾನೂನನ್ನು ಮಾಡಿಸಬೇಕೆಂಬುದಾಗಿ ಪ್ರಜೆಗಳು ಯತ್ನಿಸಿದ್ದಾರೆ.

ಖಿಲಾಪತ್ ಸಂಘ ಸಂಬಂಧವಾದ ರಾಜದ್ರೋಹಾತ್ಮಕ ಪತ್ರಿಕೆಯೊಂದನ್ನು ದಿಲ್ಲಿಯ ಇಂಡ್ಯಾ ಪ್ರೆಸ್ಸಿನವರು ಮುದ್ರಣ ಮಾಡಿಕೊಟ್ಟುದಕ್ಕಾಗಿ ಅಲ್ಲಿಯ ದಂಡಾಧಿಕಾರಿಗಳು ಆ ಪ್ರೆಸ್ಸಧಿಕಾರಿಗಳಿಗೆ ನೋಟೀಸುಕೊಟ್ಟು ೧ ವಾರದೊಳಗೆ ೨೦೦೦ ರೂ. ಗಳ ಹೊಣೆ ಹಣವನ್ನು ಕಟ್ಟಬೇಕೆಂತಲೂ ಅದುವರೆಗೆ ಮುದ್ರಣ ಕಾರ್ಯವನ್ನು ನಡೆಯಿಸಲಾಗದೆಂತಲೂ ತಿಳಿಯಿಸಿದ್ದಾರೆ.

ಅತಿವೃಷ್ಟಿಯಿಂದ ಬಂಗಾಳಾ ಒರಿಸ್ಸಾ ಮೊದಲಾದ ಪೂರ್ವಭಾಗಗಳಲ್ಲಿ ಬಹಳ ನಷ್ಟವಾಗಿದೆ. ನೂರಾರು ಗ್ರಾಮಗಳು ಜಲಸಮಾಧಿಗೊಂಡುವು. ೬೦ ಚದರ ಮೈಲಿಗಳಷ್ಟು ಸ್ಥಲಕ್ಕೆ ನೀರು ತುಂಬಿ ಗದ್ದೆ ಪೈರುಗಳೆಲ್ಲಾ ಕೊಚ್ಚಿಹೋದುವು. ೩೫ ಸಾವಿರ ಪ್ರಜೆಗಳು ನಿಲ್ಲುವುದಕ್ಕೆ ಆಶ್ರಯವಿಲ್ಲದೆ ಅಲೆಯುತ್ತಿದ್ದಾರೆ. ಕಲ್ಕತ್ತಾ ಪಟ್ಟಣದಲ್ಲಿ ಬೀದಿಗಳೆಲ್ಲಾ ನೀರಿನಮಯವಾಗಿ ಬಂಡಿಗಳ ತಿರುಗಾಟವು ಕಟ್ಟಾಯಿತು. ಅಮೃತ ಬಜಾರ್ ಪತ್ರಿಕೆಯ ಕಾರ್ಯಾಲಯಕ್ಕೆ ನೀರು ನುಗ್ಗಿ ಒಂದು ದಿನದ ಪತ್ರಿಕೆಯು ನಿಂತುಹೋಯಿತು.

ಮಹಮ್ಮದೀಯ ಮತಾನುಸಾರವಾಗಿ ಗೋವಧೆಯು ನಿಷಿದ್ಧವಲ್ಲದಿದ್ದರೂ, ಅನೇಕ ವಿಧದಿಂದ ದೇಶಕ್ಕೆ ಉಪಯೋಗಕಾರಿಯಾಗಿರುವ ಆ ಪ್ರಾಣಿಗಳನ್ನು ತಮ್ಮ ಸಂಸ್ಥಾನದಲ್ಲಿ ಹಬ್ಬದ ದಿನಗಳೊಳಗೆ ಯಾರೂ ಕೊಲ್ಲಕೂಡದೆಂದು ಹೈದರಾಬಾದ್ ನಿಜಾಮರವರು ಆಜ್ಞಾಪಿಸಿದ್ದಾರೆ. ಮಹಮ್ಮದೀಯ ಪ್ರಭುಗಳೇ ಹೀಗೆ ಆಜ್ಞೆಮಾಡಿ ಗೋವಧೆಯನ್ನು ನಿಷೇಧಿಸಿರುವಾಗ, ಹಿಂದೂ ಪ್ರಭುಗಳೆಲ್ಲರೂ ತಂತಮ್ಮ ಸಂಸ್ಥಾನಗಳಲ್ಲಿ ಇದೇ ರೀತಿಯಾದ ಅಪ್ಪಣೆಯನ್ನೇಕೆ ಮಾಡಬಾರದು ? ಈಗ ಮಹಮ್ಮದೀಯ ಪ್ರಮುಖರನೇಕರು ತಮ್ಮ ಸಭೆಗಳಲ್ಲಿ ಗೋವಧೆಯನ್ನು ಮಾಡಬಾರದೆಂಬ ವಿಷಯವಾಗಿ ಉಪನ್ಯಾಸ ಮಾಡುತ್ತಲೂ ನಿರ್ಧಾರ ಮಾಡುತ್ತಲೂ ಇದ್ದಾರೆ. ಮೌಲಾನಾ ಅಬ್ದುಲ್ ಬಾದಿಯವರೂ, ಹಕೀಂ ಅಜ್ಮಾಲ್ ಖಾನರೂ ಇಂಥ ಕೆಲಸದಲ್ಲಿ ಮುಂದಾಳುಗಳಾಗಿದ್ದಾರೆ. ಮಹಮ್ಮದಾಲಿ ಷೌಕತಾಲಿಯವರುಗಳು ಗೋಮಾಂಸಭಕ್ಷಣೆಯನ್ನೇ ಪರಿತ್ಯಾಗ ಮಾಡಿದರು. ಮಹಮ್ಮದೀಯರಲ್ಲಿ ಈ ತೆರದ ಪ್ರವೃತ್ತಿಯು ರೂಢಮೂಲವಾದರೆ ಹಿಂದೂ ಮುಸಲ್ಮಾನರಲ್ಲಿ ಐಕ್ಯವು ವಿಶೇಷವಾಗಿ ವೃದ್ಧಿಗೊಳ್ಳುವುದು.

ವಿದೇಶ ವೃತ್ತಾಂತಗಳು.

ಸಂಧಿಪತ್ರಕ್ಕೆ ತುರುಕರು ಕಳೆದ ತಾ|| ೧೦ ರಲ್ಲಿ ರುಜು ಮಾಡಿದರು.

ಭರತಖಂಡದ ಬಹುಮಂದಿ ವರ್ತಕರು ಬೆಳ್ಳಿಗಾಗಿಯೂ, ಥಂಗಾರಕ್ಕಾಗಿಯೂ ಸೀಮೆಯ ಮಾಂಟೆಗ್ಯೂ ಕಂಪೆನಿಯವರಿಗೆ ಆರ್ಡರುಗಳುಗಳನ್ನು ವಿಶೇಷವಾಗಿ ಕಳುಹಿಸುತ್ತಿದ್ದಾರಂತೆ.

ಫ್ರೆಂಚ್ ಸರ್ಕಾರದವರು ಪ್ಯಾರಿಸ್ ಪಟ್ಟಣದಲ್ಲಿ ಮಹಮ್ಮದೀಯ ಪಾಠಶಾಲೆಯೊಂದನ್ನು ಸ್ಥಾಪಿಸಲಿಕ್ಕೆ ೫ ಲಕ್ಷ ಫ್ರಾಂಕುಗಳನ್ನು ಕೊಡಲು ಪಾರ್ಲಿಮೆಂಟಿನಲ್ಲಿ ನಿರ್ಧರಿಸಿದ್ದಾರೆ.

ಜರ್ಮನ್ ಪಾರ್ಲಿಮೆಂಟಿನವರು ಮಿತ್ರಮಂಡಲಿಯವರ ಸಂಧಿನಿಬಂಧನೆಗಳಂತೆ ನಡೆದುಕೊಳ್ಳಲು ಮನಃಪೂರ್ವಕವಾಗಿ ಪ್ರಯತ್ನಿಸಿದಂತೆ ಕಾಣುತ್ತದೆ. ನಿರ್ಬಂಧ ಸೈನಿಕ ಶಿಕ್ಷಣ ಪದ್ಧತಿಯನ್ನು ತಪ್ಪಿಸುವ ಕಾನೂನನ್ನು ಮಾಡಬೇಕೆಂಬ ವಿಷಯವು ಅವರ ಪಾರ್ಲಿಮೆಂಟಿನ ಚರ್ಚೆಗೆ ಬಂದಿದೆ.

ಸ್ಟೇಟ್‌ಸೆಕ್ರಟರಿ ಮಿ|| ಮಾಂಟೂಗ್‌ರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಮಾಡಬೇಕೆಂಬ ವಿಷಯಕ್ಕೆ ಪಾರ್ಲಿಮೆಂಟಿನ ಯೂನಿಯನ್ ಪಕ್ಷದ ನೂರಾರು ಮಂದಿ ಮೆಂಬರುಗಳು ರುಜು ಹಾಕಿದ ಮಹಜರೊಂದನ್ನು ಮುಖ್ಯಮಂತ್ರಿಯವರಿಗೆ ಒಪ್ಪಿಸಿ ಪ್ರತ್ಯಕ್ಷ ಸಂಭಾಷಣೆ ಮಾಡಬೇಕೆಂದು ಕೇಳಿಕೊಳ್ಳಲು, ಅದನ್ನು ಮುಖ್ಯಮಂತ್ರಿಯವರು ನಿರಾಕರಿಸಿಬಿಟ್ಟರು.

ಐರ್ಲಂಡಿನಲ್ಲಿ ಸಿನ್‌ಫಿನಿಯನರ ಹಾವಳಿಯು ತಪ್ಪಲಿಲ್ಲ. ಅವರ ಹಾವಳಿಯಿಂದ ಕಳೆದ ಜುಲೈ ತಿಂಗಳೊಂದರಲ್ಲೇ ೧೫ ಮಂದಿ ಪೋಲೀಸರೂ, ೪ ಮಂದಿ ಸೈನಿಕರೂ, ೩ ಮಂದಿ ಸಿವಿಲ್ ಉದ್ಯೋಗಿಗಳೂ, ಕೊಲ್ಲಲ್ಪಟ್ಟಿರುವರು. ೩೦ ಮಂದಿ ಪೋಲೀಸರಿಗೂ, ೨೨ ಮಂದಿ ಸೈನಿಕರಿಗೂ ೫ ಮಂದಿ ಸಿವಿಲ್ ಉದ್ಯೋಗಿಗಳಿಗೂ ಏಟು ಬಿದ್ದಿರುವುವು. ಮೇ ಜೂನ್ ತಿಂಗಳಲ್ಲಿ ೧೫೫ ಮನೆಗಳನ್ನು ಸುಟ್ಟಿರುವರು.

ಐರ್ಲಂಡಿನವರು ಎಷ್ಟು ಹಾವಳಿ ಮಾಡಿದರೂ ಅದಕ್ಕೆ ಹೆದರಿ ಆಂಗ್ಲ ಪ್ರಭುತ್ವದವರು ಅವರಿಗೆ ಸಂಪೂರ್ಣ ಸ್ವಾತಂತ್ರ್ಯವುಳ್ಳ ರಿಪಬ್ಲಿಕ್ ಪ್ರಭುತ್ವವನ್ನು ಕೊಡುವವರಾಗಿಲ್ಲ. ಐರ್ಲಂಡಿಗೆ ನಾವು ಅಂಥ ಸ್ವತಂತ್ರಾಧಿಕಾರವನ್ನು ಕೊಟ್ಟುಬಿಟ್ಟರೆ ಆಂಗ್ಲ ಸಾಮ್ರಾಜ್ಯವು ಆತ್ಮಹತ್ಯ ಮಾಡಿಕೊಂಡಂತಾಗುವುದೆಂದು ಮುಖ್ಯಮಂತ್ರಿಯವರು ಆಡಿ ತೋರಿಸಿರುತ್ತಾರೆ. ಪೂರ್ಣ ಸಮರ್ಥನಾದ ಒಬ್ಬ ಧೀರ ಸೇನಾನಿಯ ಕೈಕೆಳಗೆ ಬಲವಾದ ಸೈನ್ಯವನ್ನು ಐರ್ಲಂಡಿಗೆ ಕಳುಹಿಸಿ ಅಲ್ಲಿಯ ದೌರ್ಜನ್ಯವನ್ನು ಅಣಗಿಸಬೇಕೆಂದು ನಿಶ್ಚಯಿಸಿದ್ದಾರೆ.

ಮಿತ್ರಮಂಡಲಿಯವರು ಸಂಧಿ ಸಭೆಯಲ್ಲಿ ಗೊತ್ತುಮಾಡಿದ್ದ ಎಲ್ಲೆಯನ್ನು ಮೀರಿ ಪೋಲಂಡಿನವರು ರಷ್ಯಾ ದೇಶಕ್ಕೆ ನುಗ್ಗಿ ದುರಾಸೆಯಿಂದ ಯುದ್ಧವನ್ನುಂಟುಮಾಡಿಕೊಂಡು ಈಗ ಬಹಳ ಪರಾಜಿತರಾದರು. ಅವರು ಸಂಧಿಯನ್ನಪೇಕ್ಷಿಸುತ್ತಿದ್ದಾರೆ. ಅದಕ್ಕೊಪ್ಪಿ ತಾತ್ಕಾಲಿಕ ಸಂಧಿ ನಿಯಮಗಳನ್ನು ಗೊತ್ತುಮಾಡುವುದಕ್ಕಾಗಿ ಬೋಲ್ಷೆವಿಕ್ ಪ್ರತಿನಿಧಿಗಳು ಒಪ್ಪಿದ್ದಾರೆ. ಆದರೆ ಅವರ ಸೈನಿಕರು ಬೇರೆ ಕಡೆ ಯುದ್ಧವನ್ನು ನಿಲ್ಲಿಸದೆ ಪೋಲಂಡಿನೊಳಕ್ಕೆ ನುಗ್ಗಿ ಬೆಸ್ಟ್‌ಲಿಟೋವಿಸ್ಕ್ ಮೊದಲಾದ ಪಟ್ಟಣಗಳನ್ನು ಆಕ್ರಮಿಸಿಕೊಂಡಿದ್ದಾರೆ. ಅವರ ಜೂಣಿಯ ಸೈನ್ಯಗಳು ಪೋಲಂಡನ್ನು ಹಾಯ್ದು ಜರ್ಮನಿ ಎಲ್ಲೆಗೆ ಹೋಗಿ ಸೇರುವುದರಲ್ಲಿವೆ. ಕೆಲ ಕಡೆ ಪೋಲಂಡ್ ಪ್ರಜೆಗಳು ನಿರ್ವಾಹವಿಲ್ಲದೆ ಬೋಲ್ಷೆವಿಕ್ಕರಿಗೆ ಶರಣನ್ನುಹೊಗುತ್ತಿದ್ದಾರೆ.

ಕಳೆದ ತಾ|| ೨೯ ರಲ್ಲಿ ಲಂಡನ್ ಪಟ್ಟಣದೊಳಗೆ ಅಲ್ಲಿರುವ ಹಿಂದೂ ಸಂಸ್ಥಾನಾಧಿಪತಿಗಳು ಒಂದು ದೊಡ್ಡ ಔತಣವನ್ನು ಮಾಡಿಸಿದರು. ಅದಕ್ಕೆ ಅಲ್ವಾರ್, ಕಪುರ್ಥಲಾ, ಕುಚ್ ಬಿಹಾರ್, ಝಾಲ್ವಾರ್, ಪುದುಕೋಟೆ, ಔಂಧ್, ನವನಗರ್ ಈ ಸಂಸ್ಥಾನಗಳ ಪ್ರಭುಗಳೂ ಮೈಸೂರಿನ ಯುವರಾಜರೂ ದಯಮಾಡಿಸಿದ್ದರು. ಬರೋಡಾ ಮಹಾರಾಜರು ತಮಗೆ ಬರಲನುಕೂಲವಾಗಲಿಲ್ಲವೆಂದು ವಿಚಾರಪಟ್ಟು ತಿಳಿಸಿಕೊಂಡಿದ್ದರು. ಲಾರ್ಡ್ ಕರ್ಜನ್, ಲಾರ್ಡ್ ಕ್ರೂ, ಲಾರ್ಡ್ ಸಿನ್ಹ, ವಿನ್ಸ್ಟನ್ ಚರ್ಚ್‌ಹಿಲ್ ಮೊದಲಾದ ಅನೇಕ ಮಂದಿಗಳು ದಯಮಾಡಿಸಿದ್ದರು. ಮಿ|| ಮಾಂಟೂಗರವರು ಸಭಾಧ್ಯಕ್ಷರಾಗಿ ಯುದ್ಧ ಸಮಯದಲ್ಲಿ ಹಿಂದೂ ದೇಶದ ಸಂಸ್ಥಾನಾಧಿಪತಿಗಳು ಮಾಡಿದ ಸಹಾಯಗಳನ್ನೂ ಆಂಗ್ಲ ಪ್ರಭುತ್ವದ ಮೇಲೆ ಅವರಿಗಿರುವ ಭಕ್ತಿವಿಶ್ವಾಸಗಳನ್ನು ಹೊಗಳಿದರು. ಅಲ್ವಾರ್ ಮಹಾರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ-ಕಷ್ಟಸಮಯದಲ್ಲೂ ಒಳ್ಳೇ ಕಾಲದಲ್ಲೂ ಸಂಸ್ಥಾನಾಧಿಪತಿಗಳು ಆಂಗ್ಲ ಪ್ರಭುತ್ವ ಪಕ್ಷವಾಗಿಯೇ ಇರುವರೆಂತಲೂ, ಆಂಗ್ಲರಿಗೆ ಭರತಖಂಡದ ಮೇಲೆ ತುಂಬಾ ಅಭಿಮಾನವಿರುವುದೆಂತಲೂ ಹೇಳಿದರು. ಕಪರ್ಥಲಾಮಹಾರಾಜರೂ, ನವನಗರದ ಜಾಂ ಸಾಹೇಬರೂ ಸಹ ಉಪನ್ಯಾಸ ಮಾಡಿದರು. ಭರತಖಂಡದಲ್ಲಿ ವಿಪ್ಲವವುಂಟಾಗಿದ್ದಿತೆಂತಲೂ ಅದನ್ನು ಸೈನಿಕರು ನಿಲ್ಲಿಸಿದರೆಂತಲೂ ಹೇಳುವ ಮಾತುಗಳು ಸುಳ್ಳೆಂತಲೂ, ಯುವರಾಜರು ಭರತಖಂಡಕ್ಕೆ ದಯಮಾಡಿಸಿದರೆ ಸಕಲ ಸಂಸ್ಥಾನಾಧಿಪತಿಗಳ ರಾಜಭಕ್ತಿಗಳೂ ವ್ಯಕ್ತಪಡುವುವೆಂತಲೂ ಹೇಳಿದರು. ಕಡೆಗೆ ಲಾರ್ಡ್ ಕರ್ಜನ್ನರು ಭಾಷಣ ಮಾಡಿ, ಆಂಗ್ಲ ಸಾಮ್ರಾಜ್ಯಕ್ಕೆ ಹಿಂದೂ ಸಂಸ್ಥಾನಾಧಿಪತಿಗಳ ಸಹಾಯವು ಅತ್ಯವಶ್ಯಕವೆಂತಲೂ, ಈ ವಿಷಯದಲ್ಲಿ ಅವರು ಪಡೆದುಕೊಂಡಿರುವ ಕೀರ್ತಿ ಪ್ರತಿಷ್ಠೆಗಳನ್ನು ಹೀಗೆಯೇ ಅವರು ಕಾಪಾಡಿಕೊಳ್ಳಬೇಕೆಂತಲೂ ಹೇಳಿದರು.

ವೀರಶೈವ ವಿದ್ಯಾಭಿವೃದ್ಧಿ ಸಂಘ.

ಲಗ್ನದ ಫಂಡು.

೧. ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಮ|| ರಾ|| ಚನ್ನಬಸಪ್ಪನವರಿಂದ ಅವರ ಮಕ್ಕಳು ಸುಬ್ಬಣ್ಣನೆಂಬುವರಿಗೆ ೯ ನೆ ವರ್ಷದ ವರ್ಧಂತಿ ಉತ್ಸವವು ನಡೆದ ಕಾಲದಲ್ಲಿ ಫಂಡಿಗೆ ತೆಗೆದು ಕಳುಹಿಸಿದ್ದು ಜಮಾ ೫-೦-೦

೨. ತಿರುಚನಾಪಳ್ಳಿ ಡಿ|| ಮುಸಿರಿ ತಾಲ್ಲೂಕು ತೊರೆಯೂರು ಗ್ರಾಮದ ಕಂಗಾಣಿ ಅರುಣಾಚಲ ಶೆಟ್ಟರವರ ಸತ್ರದಲ್ಲಿ ತಾ|| ೪-೬-೨೦ ರಲ್ಲಿ ನಡೆದ ಲಗ್ನದಲ್ಲಿ ಮ|| ರಾ|| ಶಿವಪ್ರಕಾಶ ಅಯ್ಯರ್‌ರವರ ಮೂಲಕ ಜಮಾ ೧-೦-೦

೩. ತಿರುಚನಾಪಳ್ಳಿ ಡಿ|| ಚೆಟ್ಟಿರಬಟ್ಟಿ ಸ್ಕೂಲ್ ಮಾಸ್ಟರ್ ವೀರಯ್ಯನವರ ತಾಯಿಯವರು ಮೃತವಾದ ಜ್ಞಾಪಕಾರ್ಥವಾಗಿ ತೆಗೆದದ್ದು ಮ|| ರಾ|| ಶಿವಪ್ರಕಾಶ ಅಯ್ಯರ್‌ರವರ ಮೂಲಕ ಜಮಾ ೧-೦-೦.

೪. ಬೆಂಗಳೂರುಕಂಟೋನ್ಮೆಂಟಿನಲ್ಲಿರುವ ಕಂಟ್ರಾಕ್ಟರ್ ಮ|| ರಾ|| ಎಂ. ಜಿ. ನಾಗಪ್ಪನವರಿಂದ ೧೯೧೫ ನೆ ಇಸವಿಯಲ್ಲಿ ನಡೆದ ಕಾನ್‌ಫರೆನ್ಸಿನಲ್ಲಿ ವಾಗ್ದಾನ ಮಾಡಿದ್ದ ಮೊಬಲಗು ಜಮಾ ೧೦೦-೦-೦.

ಈ ಮೇಲ್ಕಂಡ ೧೦೭ ರೂ. ಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

ಬೆಂಗಳೂರು ಸಿಟಿ,
ತಾ|| ೧೧-೮-೨೦.

ಅಡ್ವೋಕೇಟ್ ಜಿ. ಪರಮಶಿವಯ್ಯ,
ಬಿ. ಎ. ಎಲ್. ಎಲ್. ಬಿ.,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡು, ಸಂಘದ ಸೆಕ್ರೆಟರಿ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ,

1-8-1920 ನೇ ಮರ್ಕುಂ ನೋಟೀಸ್.

ಇದರಿಂದ ಮೈಸೂರು ಸಿಟಿಯಲ್ಲಿರತಕ್ಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿರತಕ್ಕ ಈ ಕೆಳಗೆ ಕಂಡ ಬೈಲಾಗಳು, ನಿಬಂಧನೆಗಳು ಮತ್ತು ತಿದ್ದುಪಡಿಗಳ ವಿಷಯದಲ್ಲಿ ಆಕ್ಷೇಪಣೆಗಳೂ ಅಥವಾ ಸಲಹೆಗಳನ್ನು ತೆಗೆದುಕೊಳ್ಳಲು ಕ್ಲುಪ್ತಮಾಡಿದ್ದ ಕಾಲದ ಅವಧಿಯನ್ನು ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ 31-7-1920 ನೇ ಮರ್ಕುಂ ತೀರ್ಮಾನವನ್ನು ಅನುಸರಿಸಿ 1920 ನೇ ಇಸವಿ ಆಗಸ್ಟ್ ಆಖೈರುವರೆಗೂ ಹೆಚ್ಚು ಮಾಡಿರುತ್ತೆ.

ಸದರಿ ಬೈಲಾಗಳು, ನಿಬಂಧನೆಗಳು ಮತ್ತು ತಿದ್ದುಪಡಿಗಳ ಅಚ್ಚಾದ ಕಾಪಿಗಳನ್ನು ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿಟ್ಟಿರುತ್ತೆ. ಇಷ್ಟವುಳ್ಳವರು ಆಫೀಸು ವೇಳೆಯಲ್ಲಿ ಬಂದು ಇವುಗಳನ್ನು ಮುಫತ್ತಾಗಿ ನೋಡಬಹುದು.

ನಂ.	ನಿಬಂಧನೆಗಳು	ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿದ ತಾರೀಖು
1.	ಕಟ್ಟಡಗಳ ಬೈಲಾಗಳ ತಿದ್ದುಪಡಿ.	27-5-1920 3-6-1920 10-6-1920
2.	ಮೋಟಾರ್‌ಗಾಡಿಗಳು ವಗೈರೆಗಳ ನಂಬರಿಂಗ್ ಮತ್ತು ರಿಜಿಸ್ಟ್ರೇಷನ್ ವಿಚಾರ ಬೈಲಾಗಳು.	13-5-1920
3.	ಕಸಬು ವಗೈರೆ ಮೇಲೆ ಕಂದಾಯ ಹಾಕಲು ರೂಲ್ಸುಗಳು.	17-6-1920 24-6-1920 1-7-1920
4.	ತೆರಿಗೆಗಳ ಷೆಡ್ಯೂಲ್ ತಿದ್ದುಪಡಿ (ಪೋಸ್ಟಾಫೀಸಿನ ಮೂಲಕ ಪಾರ್ಸೆಲ್‌ನಲ್ಲಿ ಬರುವ ಜವಳೀಮೇಲೆ ಆಕ್ಟ್ರಾಯ್ ತೆರಿಗೆಯ ವಿನಾಯತಿಯನ್ನು ವಜಾಮಾಡುವ ವಿಚಾರ.)	3-6-1920 10-6-1920 17-6-1920
5.	ತೆರಿಗೆಗಳ ಷೆಡ್ಯೂಲ್ ತಿದ್ದುಪಡಿ (ಮೊಹತರ್ಫಾ ಗಾಡಿ ಕಂದಾಯಕ್ಕೆ ಬದಲಾಗಿ ಮ್ಯುನಿಸಿಪಲ್ ರೆಗ್ಯುಲೇಷನ್ 59 (ii) ನೇ ಸೆಕ್ಷನ್ ರೀತ್ಯಾ ಕಂದಾಯ ದಾಖಲ್ ಮಾಡುವ ವಿಚಾರ.)	3-6-1920 10-6-1920 17-6-1920

ಸಿ. ಶ್ರೀಕಂಠೇಶ್ವರ ಅಯ್ಯರ್,
ಆನರರಿ ಪ್ರೆಸಿಡೆಂಟ್.

ಪತ್ರವ್ಯವಹಾರ.

ಮೊಳಕಾಲ್ಮುರು ತಾ|| ಬೊಮ್ಮಗೊಂಡನಕೆರೆ ಆರ್. ಎ. ವಿ. ಸ್ಕೂಲು.

ಈ ಸ್ಕೂಲಿನಿಂದ ಕಳೆದ ವರ್ಷ ಎಲ್. ಎಸ್. ಪರೀಕ್ಷೆಗೆ ಹೋಗಿದ್ದ ೨ ಜನರು ತೇರ್ಗಡೆಯಾಗಿದ್ದರು. ಈ ವರ್ಷವೂ ಹೋಗಿದ್ದ ೪ ಮಂದಿಯೂ ತೇರ್ಗಡೆ ಹೊಂದಿರುತ್ತಾರೆ. ಇದು ರಾ|| ಕೆ|| ಮಾ|| ಜಿ. ತಿಪ್ಪೆರುದ್ರಪ್ಪನವರ ಮೆಹನತ್ತನ್ನು ವ್ಯಕ್ತಪಡಿಸುತ್ತದೆ. ಇದಕ್ಕೆ ತಕ್ಕ ಫಲವು ಲಭಿಸಲೆಂದು ಹಾರೈಸುವ ವಿದ್ಯಾಭಿಮಾನಿ.

ಪ್ರಜಾಪ್ರತಿನಿಧಿ ಮೆಂಬರುಗಳು ದಯವಿಟ್ಟು ಪರ್ಯಾಲೋಚನೆಗೆ ತರತಕ್ಕ ಮುಖ್ಯವಿಚಾರ (ಗೋವಧೆಯನ್ನು ನಿಲ್ಲಿಸುವದು).

೧೯೨೦ ನೆಯ ಅಕ್ಟೋಬರ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆಯುವ ಪ್ರಜಾಪ್ರತಿನಿಧಿ ಮಹಾ ಸಭೆಯಲ್ಲಿ ತಾವುಗಳು ಏಕಮನಸ್ಕರಾಗಿ ಸಂತೋಷದಿಂದ ನಾನು ಮಹಾ ಸಭೆಗೆ ಕಳುಹಿಸಿರುವ (ಗೋವಧೆಯನ್ನು ನಿಲ್ಲಿಸುವುದಕ್ಕೆ ಕಾನೂನು ಮಾಡುವ ಬಗ್ಗೆ) ಸಬ್ಜೆಕ್ಟ್ ವಿಚಾರದಲ್ಲಿ ಚರ್ಚಿಸಿ ಶ್ರೀಮನ್ಮಹಾರಾಜರವರ ಸರ್ಕಾರದವರು ಅತ್ಯಾವಶ್ಯಕವಾಗಿ ಗೋವಧೆ ನಿಲ್ಲಿಸುವಂತೆ ಕಾನೂನು ಮಾಡಬೇಕೆಂದು ಸರ್ವರೂ ಅರಿಕೆ ಮಾಡಬೇಕೆಂದು ನನ್ನ ಕೋರಿಕೆ. ಜನನಾರಭ್ಯ ಮರಣಾಂತದವರೆಗೂ ಬಡವರಾದಿಯಾಗಿ ರಾಜಾಧಿರಾಜ ಸಾರ್ವಭೌಮರವರಿಗೂ ಸಹ ಹಾಲು, ಮೊಸರು, ಬೆಣ್ಣೆ, ತುಪ್ಪ ಇವು ಮುಂತಾಗಿ ಬೇಕೇಬೇಕು. ವ್ಯವಸಾಯಕ್ಕೂ ಭಾರ ಎಳೆಸುವುದಕ್ಕೂ ಮುಂತಾಗಿ ಎತ್ತುಗಳು ಬೇಕೇಬೇಕು. ಇವುಗಳಿಂದ ಆಗತಕ್ಕ ಪ್ರಯೋಜನಗಳನ್ನು ಎಷ್ಟು ವರ್ಣಿಸಿದರೂ ಸಾಲದೆಂಬುದು ಸರ್ವರಿಗೂ ತಿಳಿದ ವಿಚಾರವೇ ಆಗಿದೆ. ಇಂಥಾ ಮಾತೃಪ್ರಾಯವಾದ ಗೋವುಗಳನ್ನು ಕೊಲ್ಲುವುದು ನಮ್ಮ ಹಿಂದೂ ಧರ್ಮಕ್ಕೆ ಬಹಳ ವಿರುದ್ಧವಾಗಿದೆ. ಮಾಂಸಾಹಾರಿಗಳ ಆಹಾರಕ್ಕೆ ಕೋಳಿ, ಮೀನು, ಕುರಿ, ಬಾತು ಮುಂತಾದುವುಗಳ ಮಾಂಸವಿದೆ ಗೋವಧೆ ಅವಶ್ಯವಿಲ್ಲವೆಂದು ಸಂದೇಹವಿಲ್ಲದೆ ಹೇಳಬಹುದಲ್ಲವೆ ? ಕಾಶ್ಮೀರ, ಬರೋಡ, ಕಾಠೇವಾಡ, ಜಯಪುರ, ಜೋಧಪುರ ಮುಂತಾದ ದೇಶಗಳಲ್ಲಿ ದನಗಳನ್ನು ಕೊಲ್ಲಕೂಡದೆಂದು ಆಜ್ಞೆ ಮಾಡಿರುತ್ತಾರೆ. ಅಲ್ಲದೆ ಪಂಜಾಬಿನಲ್ಲಿ ಅಮೀರರು ಬಂದಿದ್ದಾಗ ಹಸುಗಳನ್ನು ಕೊಲ್ಲಕೂಡದೆಂದು ಹುಕುಂ ಮಾಡಿದ್ದರು. ಅಲ್ಲದೆ ಭರತಖಂಡದಲ್ಲಿ ಒಂದು ಶಾಸನವನ್ನು ಏರ್ಪಡಿಸಿ ತನ್ಮೂಲಕ ಗೋವಧೆಯನ್ನು ನಿಲ್ಲಿಸಬೇಕೆಂದು ಮಿ|| ಖರಸೇಟ್‌ಜಿ ಸೊರಾಬಜಿ ಜೇಸಾವಾಲಾರವರು ಸ್ಟೇಟ್ ಸೆಕ್ರೆಟರಿಯವರಿಗೆ ಬಿನ್ನಯಿಸಿಕೊಂಡಿರುತ್ತಾರೆ. ಮುಂದೆ ಜರಗುವ ಸಾಮ್ರಾಜ್ಯ ಮಹಾಸಭೆಯಲ್ಲಿ ಆ|| ಕಪರ್ದಿಯವರು ಹಾಲು ಕೊಡುವ ಹಸುಗಳನ್ನೂ, ಬೇಸಾಯದ ಎತ್ತುಗಳನ್ನೂ ಕೊಲ್ಲದಿರುವಂತೆ ಮುಂತಾಗಿ ವಿಧಿಯನ್ನೇರ್ಪಡಿಸಬೇಕೆಂಬ ತೀರ್ಮಾನವನ್ನು ಚರ್ಚೆಗೆ ತರುವವರಾಗಿರುತ್ತಾರೆ. ಆದ್ದರಿಂದ ನಾವುಗಳು ಘನಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರ ಘನ ಸರ್ಕಾರದವರು ಕೃಪೆಗೈದು ನಮ್ಮ ಮೈಸೂರು ಸೀಮೆಯಲ್ಲಿ ಗೋವಧೆಯನ್ನು ನಿಲ್ಲಿಸಿ ರಾಜ್ಯ ಸಂಪದಭಿವೃದ್ಧಿಯನ್ನೂ, ಹಿಂದೂ ಧರ್ಮವನ್ನೂ ಕಾಪಾಡುವಂತೆಯೂ ಸಭಾಧ್ಯಕ್ಷರಾದ ನೂತನ ಮಂತ್ರಿವರ್ಯರನ್ನೂ ಉಪಮಂತ್ರಿಗಳನ್ನೂ ನಾವುಗಳು ಪ್ರಾರ್ಥಿಸಿಕೊಳ್ಳುವುದಕ್ಕೆ ತಾವುಗಳೂ ಗಮನ ಕೊಡುವಿರೆಂದು ಸಂಪೂರ್ಣವಾಗಿ ನಂಬಿರುತ್ತೇನೆ.

ಕಾಫಿಪ್ಲಾಂಟರ್ ಡಿ. ನಂಜೇಗೌಡ, ಪ್ರಜಾಪ್ರತಿನಿಧಿಸಭಾ
ಮೆಂಬರ್, ಮಂಜರಾಬಾದು ತಾಲ್ಲೂಕು.

ತುಂಕೂರು.

ಈ ಪ್ರದೇಶದಲ್ಲಿ ಇದುವರೆಗೂ ಸರಿಯಾಗಿ ಮಳೆ ಬೀಳದೆ ವಿಶೇಷ ಗಾಳಿ ಬೀಸುತ್ತಿರುವದು. ಬಿತ್ತನೆ ಕೆಲಸವೇ ಸಂಪೂರ್ಣವಾಗಿ ನಡೆದಿರುವುದಿಲ್ಲ. ದಿನಸಿ ಧಾರಣೆಗಳಂತೂ ವಿಪರೀತ ಏರುತ್ತಿರುವದರಿಂದ ಪ್ರಜೆಗಳಿಗೆ ಹಾಹಾಕಾರವುಂಟಾಗಿರುವದು. ಸರ್ವಶಕ್ತನಾದ ಭಗವಂತನೇ ದಯಮಾಡಿ ಈ ಕಷ್ಟವನ್ನು ಪರಿಹರಿಸಬೇಕಾಗಿದ್ದರೂ ಪ್ರಜೆಗಳು ಸಹ ಧರ್ಮದಲ್ಲಿ ದೃಷ್ಟಿಯಿಟ್ಟು ಪಾಪಭೀತರಾಗಿ ಜಪತಪಾದಿ ಸತ್ಕರ್ಮಾಚರಣೆಗಳಿಂದ ದೈವ ಪ್ರೀತಿಗೆ ಪಾತ್ರರಾಗಬೇಕಾದದ್ದು ಮುಖ್ಯ ಕರ್ತವ್ಯವಷ್ಟೆ? ಇಂಥಾ ವಿಷಮಕಾಲದಲ್ಲಿ ಇಲ್ಲಿ ಉಂಟಾಗಿರುವ ಸೌದೆಯ ಕಷ್ಟವನ್ನು ಎಷ್ಟು ಹೇಳಿದರೂ ಸ್ವಲ್ಪವೇ. ಜಂಗಲು ಬಹು ಸಮೀಪವಾಗಿರುವ ಈ ಪಟ್ಟಣದಲ್ಲೇ ಇಂಥಾ ಕ್ಷಾಮವಾದರೆ ಬಡವರ ಗತಿಯೇನು ? 0-3-0 ಗೆ ದೊರೆಯುತ್ತಿದ್ದ ಒಂದು ಹೊರೆಗೆ 1-0-0 ರೂ. ಗೆ ಹೆಚ್ಚಾಗಿ ಕೊಟ್ಟರೂ ಸಿಕ್ಕುವದೇ ದುರ್ಲಭ. ಗಾಡಿಗಳಂತೂ ಬರುವದೇ ಅಪರೂಪ. ಹಾಗೂ ಹೀಗೂ ಒಂದೊಂದು ಬಂದರೆ ಉಪಪನ್ನರಿಗೂ ದಾಕ್ಷಿಣ್ಯದವರಿಗೂ ಸಹ ಸಾಲುವದಿಲ್ಲ. ಈಗಲಾದರೂ ಫಾರೆಸ್ಟ್ ಅಧಿಕಾರಿಗಳು ಈ ಸಂಕಟವನ್ನು ದಯವಿಟ್ಟು ಗಮನಿಸಿ ಬಡವರ ಗೋಳನ್ನು ತಪ್ಪಿಸುವರೆಂದು ನಂಬಿದೆ

ಮ್ಯುನಿಸಿಪಾಲಿಟಿಯ ಅವ್ಯವಸ್ಥೆಯನ್ನು ಹೇಳತೀರದು. ಕೆಲವು ಕಡೆ ಕಸದ ಗುಡ್ಡೆಗಳು ಸಾಗದೆ ಹುಲ್ಲು ಬೆಳೆದು ಶೋಭಿಸುತ್ತವೆ. ಇಂಥಾ ದೊಡ್ಡ ಟೌನಿನಲ್ಲೇ ಪಕ್ಷಪಾತವು ತುಂಬಿ ತುಳುಕುತ್ತಿದ್ದರೆ ಗ್ರಾಮಾಂತರಗಳ ಗತಿ ಏನು? ಅವು ಎಷ್ಟೋ ಉತ್ತಮವೆನ್ನಬಹುದು. ಬಡವರ ಕ್ಷೇಮವನ್ನು ವೈಸ್ ಪ್ರೆಸಿಡೆಂಟರವರು ಗಮನಿಸಬೇಕಾಗಿಲ್ಲವೊ ? ಅನೇಕ ಸಣ್ಣ ಸಣ್ಣಗಲ್ಲಿಗಳಲ್ಲಿ ದೀಪಗಳನ್ನು ಸರಿಯಾಗಿ ಹಚ್ಚುವದಿಲ್ಲ; ಹಚ್ಚಿದರೂ ಕೂಡ ರಾತ್ರಿ 7, 8, 9 ಘಂಟೆಯೊಳಗಾಗಿ ಆರಿಹೋಗುವವು. ಎಲ್ಲೋ ಒಂದೊಂದು ಮಿಣುಗುಟ್ಟುತ್ತಿರುವದು ಸಹ ಅಪರೂಪವಲ್ಲ. ಹೀಗಾಗುತ್ತಿರುವದರಿಂದ ಕತ್ತಲು ಕಾಲದಲ್ಲಿ ಉಂಟಾಗುವ ಕಷ್ಟನಷ್ಟಗಳನ್ನು ಅನುಭವಿಸುವರೇ ಬಲ್ಲರು. ಕೆಲವು ಕಡೆ ಲಾಂದ್ರಗಳೇ ಸಾಲವು. ಕೆಲವು ಭಾಗಗಳಲ್ಲಿ ನಾಲ್ಕಾರು ಮಾರಿಗೆ ಒಂದೊಂದು ಲಾಂದ್ರಗಳಿರಬಹುದು. ಇದೇಕೆ ? ಎಕ್ಸ್‌ಟೆನ್‌ಷನ್ ಅಗ್ರಹಾರ ಮೊದಲಾದ ಭಾಗಗಳಲ್ಲಿರುವ ಪ್ರಜೆಗಳಿಗೆ ಕ್ಷೇಮವುಂಟಾದರೆ ಬಾಕಿಯವರು ಕಂದಾಯ ಕೊಡುವದಿಲ್ಲವೊ ? ಅವರು ಕಷ್ಟಪಡಬೇಕು ಇದು ಯಾವಧರ್ಮ ? ಕೆಲವು ಗಲ್ಲಿಗಳಲ್ಲಿ ಚರಂಡಿಗಳಲ್ಲಿ ರೊಚ್ಚು ಸಾಗದೆ ನಿಂತು ಅಸಹ್ಯವೂ ಅನಾರೋಗ್ಯವಾಗಿದ್ದರೂ ಹಲವು ರಸ್ತೆಗಳು ಕೆಸರಿನ ಮಡುಗಳಾಗಿ ಬಹುಮಟ್ಟಿಗೆ ಗಿಪೇರಿಗಳಾಗಿವೆ. ರೋಡುಗಳ ದುರಸ್ತೀನೋ ಗಣೇಶನ ಮದುವೆಯಂತೆ ಸಾಗುತ್ತಲೇ ಇರುವದು. ಇನ್ನುಮೇಲಾದರೂ ನಮ್ಮ ವೈಸ್ ಪ್ರೆಸಿಡೆಂಟ್ ಸಾ|| ರವರು ಈ ಲೋಪಗಳನ್ನು ಸರಿಪಡಿಸಿ ಹಿಂದಿನವರನ್ನು ನುರೆಸುವದರ ಮೂಲಕ ಯಶೋವಂತರಾಗುವರೆಂದು ಕೋರುತ್ತೇನೆ.

ಸಾಲದ್ದಕ್ಕೆ ಪ್ರಜಾಪಕ್ಷದ ಪ್ರೆಸಿಡೇಟರನ್ನು ಚುನಾಯಿಸಬೇಕಂತೆ ! ಹಾಗೇನಾದರೂ ಆದರೆ ಬಡವರ ಕ್ಷೇಮಕ್ಕೆ ಪಾರವೇ ಇಲ್ಲ ! ಡಿ|| ದೆಪ್ಯುಟಿ ಕಮಿಷನರ್ ಸಾ|| ರವರ ಯಾಜಮಾನ್ಯವು ಸಾಕಂತೆ ! ಇಷ್ಟು ಉನ್ನತಸ್ಥಿತಿಯನ್ನು ಈ ಪಟ್ಟಣವು ಪಡೆಯಲು ಸಧ್ಯ ! ಖಂಡಿತವಾಗಿಯೂ ಸಿದ್ಧವಾಗಿರುವದಿಲ್ಲ. ಆದರೂ ವಿಚಕ್ಷಣಶೀಲರೂ ಬುದ್ಧಿಶಾಲಿಗಳೂ ಆದ ನಮ್ಮ ಕೌನ್ಸಿಲರುಗಳು ತಾವು ಪ್ರಜೆಗಳ ಪ್ರತಿನಿಧಿಗಳೆಂಬುದನ್ನು ಜ್ಞಾಪಕದಲ್ಲಿಟ್ಟು ಅವರ ಕ್ಷೇಮಕ್ಕಾಗಿ ವಾತ್ಸಲ್ಯದಿಂದ ಕೆಲಸ ಮಾಡುವ ಹಿಂದುಳಿದ ಜನಾಂಗದವರನ್ನೇ ದೂರಾಲೋಚನೆಯಿಂದ ಚುನಾಯಿಸಲು ಇತರರ ಮರುಳುಮಾತಿಗೆ ಬೆರಗಾಗದೆ ತಮ್ಮ ಕರ್ತವ್ಯಭಾರವನ್ನು ಸಾರ್ಥಕಪಡಿಸಿ ಪ್ರಜೆಗಳ ಮೆಚ್ಚುಗೆಗೆ ಪಾತ್ರರಾಗಿ ತಮ್ಮ ಜವಾಬ್ದಾರಿಯನ್ನು ನೆರವೇರಿಸಬೇಕಾಗಿದೆ. ಹಾಗಲ್ಲದಿದ್ದರೆ ಸರ್ಕಾರದಿಂದಲೇ ಪ್ರೆಸಿಡೆಂಟರನ್ನು ನಾಮಿನೇಟ್ ಮಾಡುವುದೇ ಉತ್ತಮಪಕ್ಷ. ಇದನ್ನು ಸರ್ವರೂ ಗಮನಿಸಿ ತಮ್ಮ ಕ್ಷೇಮಗಳನ್ನು ನೋಡಿಕೊಳ್ಳುವರೆಂದು ನಂಬುತ್ತೇನೆ. ಇತರ ವಿಷಯಗಳನ್ನು ಮತ್ತೊಮ್ಮೆ ಬರೆಯುತ್ತೇನೆ. ಕ್ಷಮೆಯಿರಲಿ. ರಾಮಣ್ಣ, ಪುರನಿವಾಸಿ

ಹಂಟಿಂಗ್ ಗಡಿಯಾರ.

ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲ್ಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳ ವರವಿಗೂ ಬಾಳಿಕೆ ಬರುವದು. ಕ್ರಯ ೧ ಕ್ಕೆ ೬-೦-೦.

ವಿಳಾಸಃ-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ|| ಬಾ|| ನಂ. 265,
19 ಮದರಾಸು.

ಲಿಂಗದ ಕಾಯಿಗಳು.

ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೆಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.



ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಚಿಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ಬೆಸ್ಟ್ ಪೌಂಟನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.



ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಲೇಪನಾಸಿನ ಬುಕ್ಕಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸಃ—ವೈರಂ ಅಂಡ್ ಕೊ,
19 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಅಕ್ಟನಂತೆ
ರಿಜಿಸ್ಟರ ಮಾಡಲ್ಪಟ್ಟ 38

ಅರ್ಕುಶಫಾ ಅಥವಾ ಆರೋಗ್ಯಬಿಂದು



ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಆದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಸರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಷ್ಮೆಜಿಡ್ಡು, ಗುದದ್ವಾನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟೆ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಆಗಸ್ಟ ತಾ|| ೧೫ರಿಂದ ೧೯೨೦ನೆಯ ಆಗಸ್ಟ ತಾ|| ೨೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ನಿಜಶ್ರಾವಣ ಶುದ್ಧ ಪಾಡ್ಯಮಿಯಿಂದ ನಿಜಶ್ರಾವಣ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕ.ಸಿಂ ಮಾಸ
15	[1] ಭಾನು	ಪಾ-ಉ	3-13 55-33	ಮಘಾ	14-6	31
16	ಸೋಮ	ತದಿ	55-48	ಪುಬ್ಬ	12-16	1
17	[2] ಮಂಗಳ	ಚೌತಿ	54-2	ಉಫ	11-26	2
18	[3] ಬುಧ	ಪಂಚ	53-31	ಹಸ್ತ	11-43	3
19	ಗುರು	ಷಷ್ಠಿ	54-14	ಚಿತ್ತ	13-15	4
20	ಶುಕ್ರ	ಸಪ್ತ	56-6	ಸ್ವಾತಿ	16-4	5
21	[4] ಶನಿ	ಅಷ್ಟ	59-12	ವಿಶಾ	20-0	6

(1) ಸಂಪದ್ಗೌರೀವ್ರತಂ. (2) ನಾಗರಚೌತಿ. (3) ಗರುಡಪಂಚಮಿ, ಚಿತ್ರನೇಮಿವ್ರತಂ. (4) ಶ್ರಾವಣಶನಿವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿತಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಆಗಸ್ಟ ತಾರೀಖು ೨೨ ನೆಯ ಭಾನುವಾರ. (ಸಂಚಿಕೆ ೩೪

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸಃ—ಶ್ರೀ ಸೀತಾರಾಘವ
33 ವೈದ್ಯಶಾಲಾ, ಮೈಸೂರು.

ಹೊಸಶೋಧ ! * ಓಂ * ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ :—ಎಹ್. ಆರ್. ಬ್ರದರ್ಸ ಮತ್ತು ಕಂಪೆನಿ,
5 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಂಪಾಸಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು. 5

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.
ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.
ರಾ|| ಬ|| ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.
ಸ್ವಕರ್ತವ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೀಕರ್, ದಾವಣಗೆರೆ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 41

ನಾವು ಎ. ಆಲ್ ಬ್ಯುಕ್ಯುಯರ್ ಕ್ಯ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿಂದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೮—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಆಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
39 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇನೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

20 ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಘವಾಚ್ ಅಂಡ್‌ಕೊ, 3 ಇರುಳಪ್ಪನ ಬೀದಿ ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಒಮ್ಮೆ ತರಿಸಿ **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
46 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ರೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಕಗಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಆಗಸ್ಟ್ ತಾ|| ೨೨ ನೆಯ ಭಾನುವಾರ.

ಕೈಗಾರಿಕೆ ಯಂತ್ರಗಾರಿಕೆಗಳ ಅಭಿವೃದ್ಧಿ.

ದೇಶದ ಸಂಪದಭಿವೃದ್ಧಿಗೆ ಕೈಗಾರಿಕೆ ಯಂತ್ರಗಾರಿಕೆಗಳ ವ್ಯಾಪನೆಯು ಆಧಾರಭೂತವಾಗಿರುತ್ತದೆ. ವ್ಯವಸಾಯದ ಅಭಿರುಚಿಯೇ ಅಂಟಿಬಂದಿರುವ ನಮ್ಮ ದೇಶದಲ್ಲಿ ಕೈಗಾರಿಕೆ ಯಂತ್ರಗಾರಿಕೆಗಳನ್ನು ವಿಶೇಷವಾಗಿ ವ್ಯಾಪನೆಗೊಳಿಸುವ ಕೆಲಸವು ಸುಲಭಸಾಧ್ಯವಾಗಿಲ್ಲ. ಅದಕ್ಕೆ ಕಾಲವೂ ಸಾಹಸ ಪ್ರೋತ್ಸಾಹಗಳೂ ವಿಶೇಷವಾಗಿ ಬೇಕು. ನಮ್ಮ ಪ್ರಭುಗಳಿಗೆ ಈ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ವಿಶೇಷವಾದ ಕುತೂಹಲವಿದೆ. ಆದರೆ ಅದಕ್ಕಾಗಿ ನಡೆಯುತ್ತಿರುವ ವೆಚ್ಚಗಳೂ ಕಾರ್ಯವಿಧಾನಗಳೂ ಸಮರ್ಪಕವಾಗಿಲ್ಲ. ಅರ್ಥಶಾಸ್ತ್ರದ ಮುಖ್ಯತತ್ತ್ವವು ಮಿತವ್ಯಯವಾಗಿರುತ್ತದೆ. ನಮ್ಮ ದೇಶದ ಕೈಗಾರಿಕೆಯ ಶಾಖೆಯಲ್ಲಾದರೊ ದುಂದು ಮಿತಿಮೀರಿರುತ್ತದೆಂಬದೂರು ಎಲ್ಲರ ಬಾಯಲ್ಲೂ ಇದೆ. ಸ್ವಂತ ಬಂಡವಾಳವನ್ನು ಹಾಕಿಕೊಂಡಿರುವ ಯಾವೊಬ್ಬ ಕಾರೇಗಾರನಾಗಲೀ ವರ್ತಕನೇ ಆಗಲೀ ಸರ್ಕಾರದ ಉದ್ಯೋಗಿಗಳು ಮಾಡುತ್ತಿರುವಷ್ಟು ದುಂದನ್ನು ಎಂದಿಗೂ ಮಾಡುವುದಿಲ್ಲವೆಂಬುದು ಸಿದ್ಧವು. ಆದುಕಾರಣ ಕೈಗಾರಿಕೆಗಳನ್ನಾಗಲೀ ಯಂತ್ರಗಾರಿಕೆಗಳನ್ನಾಗಲೀ ಸರ್ಕಾರದವರೇ ಸ್ವತಃ ಮಾಡಿಸುವುದಕ್ಕಿಂತಲೂ ಪ್ರಜೆಗಳೇ ಸ್ವತಂತ್ರಿಸಿ ನಡೆಯಿಸುವುದರಲ್ಲಿ ಅಧಿಕ ಲಾಭವುಂಟು. ಆದರೆ ಅಂಥ ಕೆಲಸಗಳಿಗೆ ಆದಿಭಾಗದಲ್ಲಿ ಸರ್ಕಾರದಿಂದ ತಕ್ಕ ಸಾಹಾಯ್ಯಗಳು ಒದಗುತ್ತ ಬರಬೇಕು. ಕೆಲಕಾಲ ಹೊಸ ಹೊಸ ಯಂತ್ರಗಾರಿಕೆಗಳನ್ನು ಸರ್ಕಾರದವರೇ ಆರಂಭಿಸಿ ನಡೆಯಿಸಿ ಲಾಭಕರವಾಗಿರುವುದನ್ನು ತೋರಿಸಿಕೊಟ್ಟು ಆ ಪ್ರತಿಷ್ಠಾಪನೆಗಳನ್ನೆಲ್ಲಾ ಪ್ರಜೆಗಳಿಗೇ ವಹಿಸಿಕೊಡುತ್ತ ಬರಬೇಕು. ಪ್ರಜೆಗಳ ಮೇಲೆ ಪೈಪೋಟಿಗೆ ನಿಂತು ಸರ್ಕಾರದವರೇ ಶಾಶ್ವತವಾಗಿ ಅಂಥ ಪ್ರತಿಷ್ಠಾಪನೆಗಳನ್ನು ನಡೆಯಿಸುತ್ತಿರುವುದು ತಪ್ಪು. ಹೊಸಹೊಸ ಕೈಗಾರಿಕೆಗಳನ್ನು ಆರಂಭಮಾಡಿ ತೋರಿಸಿಕೊಡುವುದು ಮಾತ್ರವೇ ಸರ್ಕಾರದ ಕೆಲಸವಾಗಿರಬೇಕು.

ಜಪಾನ್ ದೇಶದಲ್ಲಿ ಕೈಗಾರಿಕೆ ಯಂತ್ರಗಾರಿಕೆಗಳು ಪಾಶ್ಚಾತ್ಯ ದೇಶಗಳೊಡನೆ ಸ್ಪರ್ಧಿಸುವಷ್ಟು ಉತ್ತಮಸ್ಥಿತಿಗೆ ಬಲು ಬೇಗನೆ ಬಂದುದಕ್ಕೆ ಅಲ್ಲಿಯ ಪ್ರಭುತ್ವದವರು ಎಂಥ ಕ್ರಮವನ್ನು ಅನುಸರಿಸಿದರೆಂಬುದನ್ನು ಈ ಕೆಳಗಣ ವಿವರಣದಿಂದ ತಿಳಿಯಬಹದು.—ಜಪಾನ್ ಸರ್ಕಾರದವರು ಪಾಶ್ಚಾತ್ಯದೇಶಪದ್ಧತಿಯನ್ನನುಸರಿಸಿ ರೇಶ್ಮೆದಾರವನ್ನು ಮಾಡುವ ದೊಡ್ಡಯಂತ್ರಾಗಾರವನ್ನು ಮೊಟ್ಟಮೊದಲು ತಮ್ಮ ದೇಶದಲ್ಲಿ ೧೮೭೨ ನೇ ವರ್ಷದಲ್ಲಿ ಸ್ಥಾಪಿಸಿದರು. ಅಲ್ಲಿ ಕೆಲಸವನ್ನು ಕಲಿತ ಜನರು ಆ ದೇಶದ ನಾನಾ ಕಡೆಗೆ ಹೋಗಿ ಆ ಪದ್ಧತಿಯನ್ನು ವ್ಯಾಪನೆಗೊಳಿಸಿದರು. ಮತ್ತು ಆ ಸರ್ಕಾರಿ ಕಾರ್ಯಾಲಯವನ್ನು ನೋಡಿ ಅನೇಕಮಂದಿ ಶ್ರೀಮಂತರು ಅದೇ ತೆರದ ಯಂತ್ರಾಲಯಗಳನ್ನು ಅನೇಕವಾಗಿ ಸ್ಥಾಪಿಸಿದರು. ೧೮೭೭ ನೆ ವರ್ಷದಲ್ಲಿ ಹಾಗೆಯೇ ಉಣ್ಣೆಯ ಯಂತ್ರಾಲಯವೊಂದನ್ನು ಸರ್ಕಾರದವರು ಸ್ಥಾಪಿಸಿದರು. ಅದನ್ನು ಪ್ರಜೆಗಳು ನೋಡಿ ೧೦ ವರ್ಷ ಕಾಲದಲ್ಲಿ ದೇಶದೊಳಗೆಲ್ಲಾ ಅದೇ ತೆರದ ಯಂತ್ರಾಲಯಗಳನ್ನು ಎಷ್ಟೋ ಸ್ಥಾಪಿಸಿಬಿಟ್ಟರು. ೧೮೮೧ ನೆ ವರ್ಷದಲ್ಲಿ ಹತ್ತಿಯ ನೂಲನ್ನು ನಿರ್ಮಿಸುವ ಒಂದು ಯಂತ್ರಾಗಾರವನ್ನು ಸ್ಥಾಪಿಸಿದುದಲ್ಲದೆ ೨೦೦೦ ಕದರುಗಳುಳ್ಳ ೧೦ ಯಂತ್ರಗಳಿಗೆ ಬೇಕಾಗುವಷ್ಟು ಸಾಮಾನುಗಳನ್ನು ವಿದೇಶಗಳಿಂದ ತರಿಸಿ, ಬೇರೆ ಬೇರೆ ವರ್ತಕಸಂಘದವರಿಗೆ ಕೊಟ್ಟು, ಬಂಡವಾಳವನ್ನೂ ಕೂಡ ೧೦ ವರ್ಷಗಳಲ್ಲಿ ಕಂತುವಾರಾಗಿ ತೀರಿಸಿಕೊಳ್ಳುವ ಒಪ್ಪಂದದಿಂದ ಸರ್ಕಾರದವರೇ ಕೊಟ್ಟು ಪ್ರೋತ್ಸಾಹಿಸಿದರು. ೧೮೮೩ ನೆ ವರ್ಷದಲ್ಲಿ ಹೀಗೆಯೇ ನಾರಿನ ಯಂತ್ರವನ್ನು ಸ್ಥಾಪಿಸಲಿಕ್ಕೆ ಒಂದು ಸಂಘದವರಿಗೆ ದ್ರವ್ಯಸಹಾಯ ಮೊದಲಾದುವುಗಳನ್ನು ಮಾಡಿಕೊಟ್ಟರು. ೫ ವರ್ಷಗೊಳಗಾಗಿ ಅದು ಒಂದು ದೊಡ್ಡ ಪ್ರತಿಷ್ಠಾಪನೆಯಾಗಿ ವೃದ್ಧಿಹೊಂದಿತು. ೧೮೭೫ ನೆ ವರ್ಷದಲ್ಲಿ ಆ ಸರ್ಕಾರದವರು ಒಂದು ಸಿಮೆಂಟ್ ಮಾಡುವ ಯಂತ್ರಾಲಯವನ್ನೂ ೧೮೭೬ ರಲ್ಲಿ ಗಾಜುಮಾಡುವ ಒಂದು ಯಂತ್ರಾಲಯವನ್ನೂ ಹೊಸದಾಗಿ ಸ್ಥಾಪಿಸಿದರು. ಮತ್ತು ಅದೇ ವರ್ಷದಲ್ಲಿ ಅಲ್ಲಿಯ ಸರ್ಕಾರಿ ಪ್ರಿಂಟಿಂಗ್ ಬೀರೋವಿನವರು ಕಾಗದವನ್ನು ನಿರ್ಮಿಸುವ ಒಂದು ದೊಡ್ಡ ಯಂತ್ರಾಲಯವನ್ನು ಸ್ಥಾಪಿಸಿ, ಯೂರೋಪು ಖಂಡದಲ್ಲಿ ನಿರ್ಮಿಸುವಂಥ ಕಾಗದಗಳನ್ನು ಮಾಡಿಸಲುಪಕ್ರಮಿಸಿದುದಲ್ಲದೆ, ಪೂರ್ವದಿಂದಲೂ ತಮ್ಮಲ್ಲಿ ಆಗುತ್ತಿದ್ದ ಕಾಗದದ ಮಾದರಿಯನ್ನು ಮತ್ತಷ್ಟು ಉತ್ತಮಪಡಿಸಿಕೊಂಡು ಆ ಕೈಗಾರಿಕೆಯನ್ನು ಬಹಳ ಬಲಪಡಿಸಿದರು. ಆದರಂತೆಯೇ ಈಚೀಚೆಗೆ ಯಂತ್ರಗಳನ್ನೂ, ಸಾಬೂನುಗಳನ್ನೂ, ಪಿಂಗಾಣಿ ಸಾಮಾನುಗಳನ್ನೂ, ಮುದ್ರಾಕ್ಷರಗಳನ್ನೂ, ಬೆಂಕಿಕಡ್ಡಿಗಳನ್ನೂ ನಿರ್ಮಿಸುವ ನಾನಾತರದ ಯಂತ್ರಾಲಯ ಸ್ಥಾಪನೆಗಳನ್ನು ಎಷ್ಟೋ ಮಾಡಿದರು. ಅವೆಲ್ಲವೂ ಈಗ ಎಲ್ಲ ಪೇಟೆಗಳಲ್ಲೂ ವಿದೇಶಸಾಮಗ್ರಿಗಳೊಡನೆ ಸ್ಪರ್ಧೆಮಾಡುತ್ತ ಜಯಶೀಲವಾಗಿ ವಿಶೇಷ ಲಾಭವನ್ನು ಕೊಡುವ ಸಾಮಗ್ರಿಗಳನ್ನು ನಿರ್ಮಿಸುತ್ತಿರುವುವು. ಇವನ್ನೆಲ್ಲಾ ಸಂಪೂರ್ಣಲಾಭಕರವಾದ ಸ್ಥಿತಿಗೆ ಬರುವವರೆಗೂ ಸರ್ಕಾರದವರೇ ನಡೆಯಿಸಿ, ಅವುಗಳಲ್ಲಿ ಅನೇಕಾನೇಕ ಕಾರೇಗಾರರು ಕುಶಲರಾಗುವಂತೆ ಮಾಡಿ, ಕಡೆಕಡೆಗೆ ಅಂಥ ಯಂತ್ರಾಲಯಗಳನ್ನು ಪ್ರಜೆಗಳೇ ಆಸೆಯಿಂದ ಕೋರಿಕೊಳ್ಳುವಂತೆ ಮಾಡಿದರು. ಇಂಥ ಯಂತ್ರಾಲಯಗಳನ್ನು ನೋಡಿ ಪ್ರಜೆಗಳೇ ಹೊಸಹೊಸದಾಗಿ ಸ್ವತಂತ್ರ ಯಂತ್ರಾಲಯಗಳನ್ನು ಸ್ಥಾಪಿಸಿಕೊಂಡೂ ಇರುವರು. ಪ್ರಜೆಗಳು ಹೀಗೆ ಯಂತ್ರಾಲಯಗಳನ್ನು ತಾವು ತಾವೇ ನಡೆಯಿಸುತ್ತ ಬಂದುದನ್ನು ಕಂಡು ಸರ್ಕಾರದವರು ತಮ್ಮ ಅಧೀನದಲ್ಲಿ ಉಳಿದಿದ್ದ ಯಂತ್ರಾಲಯಗಳನ್ನೆಲ್ಲಾ ಪ್ರಜೆಗಳಿಗೇ ಮಾರಿಬಿಟ್ಟರು. ಅಲ್ಲಿಯ ಸರ್ಕಾರದವರು ಮಾತ್ರವೇ ಹೀಗೆ ಕೈಗಾರಿಕೆಗಳ ಅಭಿವೃದ್ಧಿಗೆ ಮಾರ್ಗದರ್ಶಕರಾದರೆಂಬಂತಿಲ್ಲ. ಅಲ್ಲಿಯ ದೊಡ್ಡ ದೊಡ್ಡ ಪಟ್ಟಣಗಳ ಮ್ಯುನಿಸಿಪಾಲಿಟಿಗಳೂ ಕೂಡ ಇಂಥ ಕೆಲಸಗಳನ್ನು ಮಾಡಿರುವುವು. ಕ್ಯೋತೋ ಪಟ್ಟಣದ ಮ್ಯುನಿಸಿಪಾಲಿಟಿಯವರು ೧೮೭೦ ನೆ ವರ್ಷದಲ್ಲಿ ಒಂದು ರಸಾಯನ ಪರಿಶೋಧನಾಲಯವನ್ನು ಸ್ಥಾಪಿಸಿ ಅದರಲ್ಲಿ ರಂಗುಗಳನ್ನೂ, ಪಿಂಗಾಣಿ ಸಾಮಾನುಗಳನ್ನೂ, ಸಾಬೂನುಗಳನ್ನೂ ನಿರ್ಮಿಸುವ ರೀತಿಯನ್ನು ಗೊತ್ತುಮಾಡಿದರು. ಮತ್ತು ಕೆಲ ಮಂದಿ ನೆಯ್ಗೆಯವರನ್ನು ಫ್ರಾನ್ಸಿನ ಲಯೋನ್ ಪಟ್ಟಣಕ್ಕೆ ಕಳುಹಿಸಿ, ಅಲ್ಲಿ ಬೂಟಾದಾರಿ ನೆಯ್ಗೆಯ ಕೆಲಸಗಳನ್ನು ಕಲಿತುಕೊಂಡುಬಂದವರಿಂದ ತಮ್ಮಲ್ಲೂ ಆ ತೆರದ ನೆಯ್ಗೆಯನ್ನು ವೃದ್ಧಿಪಡಿಸಿದರು. ಇತರ ಅನೇಕ ಮ್ಯುನಿಸಿಪಾಲಿಟಿಗಳು ಹೀಗೆಯೇ ಕೃಷಿಯ ಅಭಿವೃದ್ಧಿಗೂ, ಶಿಲ್ಪದ ಅಭಿವೃದ್ಧಿಗೂ ಧನಸಹಾಯವನ್ನೂ, ಯಂತ್ರಸಹಾಯವನ್ನೂ, ಶಾಸ್ತ್ರೀಯ ಸಹಾಯವನ್ನೂ ಒದಗಿಸಿಕೊಟ್ಟು ದೇಶಾಭ್ಯುದಯಕ್ಕೆ ಸಾಹಸಪಟ್ಟೂ ಪಡುತ್ತಲೂ ಇರುವುವು.

ದೇಶವನ್ನು ಮುಂದಕ್ಕೆ ತರಬೇಕೆಂಬ ಕಾಂಕ್ಷೆಯೇ ನಿಜವಾಗುಳ್ಳ ಪ್ರತಿಯೊಂದು ಪ್ರಭುತ್ವದವರೂ ಹೀಗಲ್ಲವೆ ಮಾಡಬೇಕು ? ಪ್ರಜೆಗಳ ಅಭ್ಯುದಯವೇ ಸರ್ಕಾರದ ಗಮ್ಯಸ್ಥಾನವೆಂಬುದನ್ನು ಸರ್ಕಾರದ ಪ್ರತಿಯೊಬ್ಬ ಉದ್ಯೋಗಿಯೂ ತಿಳಿದಿದ್ದ ಕಡೆಯಲ್ಲಿ ಮಾತ್ರವೇ ಇಂಥ ಏರ್ಪಾಟುಗಳು ನಡೆದಾವು. ನಮ್ಮ ಮೈಸೂರು ಪ್ರಭುತ್ವದ ಉದ್ಯೋಗಿಗಳಲ್ಲಿ ಎಷ್ಟುಜನರು ಇಂಥ ಭಾವದಿಂದ ವರ್ತಿಸುತ್ತಿರಬಹುದು ? ಕಳೆದ ನವರಾತ್ರಿ ಕಾಲದ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಸಭಿಕರು "ಸರ್ಕಾರದವರು ಇದುವರೆಗೆ ನಡೆಯಿಸಿ ಲಾಭಕರವೆಂದು ತೋರಿಬಂದಿರುವ ಗಂಧದೆಣ್ಣೆಯ ಯಂತ್ರಾಲಯಗಳನ್ನು ಪ್ರಜೆಗಳಿಗೆ ವಹಿಸಿಕೊಡಬೇಕು" ಎಂಬ ವಿಷಯವೊಂದನ್ನು ವಿಜ್ಞಾಪಿಸಿದರು. ಇದನ್ನು ಕೇಳುತ್ತಲೇ ಸರ್ಕಾರದ ಕೌನ್ಸಿಲರೊಬ್ಬರ ಕಣ್ಣು ನಿಂಬೆಹಣ್ಣಿನಷ್ಟು ದಪ್ಪವಾಯಿತು. "ಏನಿರೀ ನೀವು ಕೇಳುವುದು ? ಗಂಧದಮರದ ಉತ್ಪತ್ತಿಯು ನಿಮಗೆ ಸೇರುತ್ತದೆಯೇ ? ಅದರ ಹುಟ್ಟುವಳಿಯೂ ಸರ್ಕಾರಕ್ಕೆ ಸೇರಿದುದು, ಅದರ ಎಣ್ಣೆಯೂ ಸರ್ಕಾರಕ್ಕೆ ಸೇರತಕ್ಕುದು, ಅದುಸಾಧಾರಣವಾದ ಕೈಗಾರಿಕೆಗೆ ಸೇರಿದುದಲ್ಲ" ಎಂದು ಹೇಳಿ ಗದರಿಸಿ ಕುಳ್ಳಿರಿಸಿಬಿಟ್ಟರು. ಈ ಸಿದ್ಧಾಂತವು ಹೇಗಿದೆ ನೋಡಿದಿರಾ ? ಪ್ರಜೆಗಳ ಅಭಿವೃದ್ಧಿಯೇ ಸರ್ಕಾರದ ಭಾಗ್ಯವೆಂಬುದಾಗಿ ತಿಳಿದವರ ಉತ್ತರವು ಹೀಗಿದ್ದೀತೇ ? ಗಂಧದ ಮರವು ಸರ್ಕಾರಕ್ಕೆ ಸೇರಿದುದು ನಿಜ. ಅದನ್ನು ಪುಗಸಟ್ಟೆ ಕೊಡಬೇಕೆಂದು ಯಾರೂ ಕೇಳುವುದಿಲ್ಲವಷ್ಟೆ. ಗಂಧದೆಣ್ಣೆಯ ಕಾರ್ಯಾಲಯ ಸ್ಥಾಪನೆಯಾಗುವುದಕ್ಕೆ ಮುಂಚೆ ಆ ಮರವನ್ನೆಲ್ಲಾ ಸರ್ಕಾರದವರು ಪರರಿಗೆ ಮಾರುತ್ತಿರಲಿಲ್ಲವೊ ? ಅದು ತನಗೇ ಸೇರಿದುದೆಂದು ತೆಯ್ದು ಅದರ ಗಂಧವನ್ನು ಸರ್ಕಾರವೇ ಲೇಪಿಸಿಕೊಳ್ಳುತ್ತಿರಲಿಲ್ಲವಷ್ಟೆ ? ಕೋಲಾರದ ಭೂಗರ್ಭದಲ್ಲಿರುವ ಚಿನ್ನವನ್ನು ರೂಢಿಸಲಿಕ್ಕೆ ಪರದೇಶೀಯರಿಗೆ ನಮ್ಮ ಸರ್ಕಾರವು ಕೊಡುವಾಗ ಇಂಥ ಸಿದ್ಧಾಂತವನ್ನು ಬೋಧಿಸುವ ಕೌನ್ಸಿಲರು ಆಗ ಇಲ್ಲದೆ ಹೋದುದು ಸಂಸ್ಥಾನದ ದುರದೃಷ್ಟವು !

ಶ್ರೀಮಚ್ಚಕ್ರವರ್ತಿಯವರ ಅಪ್ಪಣೆ.

(ಯುವರಾಜರವರ ಆಗಮನವು ನಿಂತುಹೋಯಿತು.)

ನಮ್ಮ ಪ್ರಿಯ ಸಾರ್ವಭೌಮರವರು ಭರತಖಂಡದ ವೈಸ್ರಾಯರಿಗೂ ದೇಶೀಯ ಸಂಸ್ಥಾನಾಧಿಪತಿಗಳಿಗೂ ಪ್ರಜೆಗಳಿಗೂ ಸಹ ಹೀಗೆ ಪ್ರಕಟನೆಯನ್ನು ಕಳುಹಿಸಿರುತ್ತಾರೆ.—"ನಿಮಗಾಗಿ ನಾನು ಕಳೆದ ೧೯೧೯ ನೆ ಡಿಸಂಬರು ತಿಂಗಳಲ್ಲಿ ಕಳುಹಿಸಿಕೊಟ್ಟ ರಾಜಸಂದೇಶದಲ್ಲಿ ಭಾರತ ರಾಜಕೀಯಾಭಿವೃದ್ಧಿ ವಿಷಯವಾಗಿ ನಮಗಿರುವ ಸಂತೋಷವನ್ನು ವ್ಯಕ್ತಪಡಿಸಿ, ಆ ಸಂತೋಷಸೂಚಕವಾಗಿ ನೂತನ ಶಾಸನಸಭೆಗಳನ್ನು ಆರಂಭಿಸಲಿಕ್ಕಾಗಿ ನಮ್ಮ ಪ್ರಿಯ ಪುತ್ರನಾದ ವೇಲ್ಸ್ ಯುವರಾಜನನ್ನು ಈ ಶೀತಕಾಲದಲ್ಲಿ ಕಳುಹಿಸಿಕೊಡುವೆವೆಂದು ಪ್ರಕಟಿಸಿದೆವು. ಆದರೆ ನಮ್ಮ ಪ್ರಿಯ ಪುತ್ರನು ಎಷ್ಟೋ ದೇಶಗಳಲ್ಲಿ ಸಂಚಾರ ಮಾಡಿ ಬಹಳ ಬಳಲಿರುವುದರಿಂದ ಮತ್ತೆ ಅಷ್ಟು ದೂರ ಪ್ರಯಾಣಮಾಡಿ ಬರಲಾರನು. ಆದುದರಿಂದ ಸದ್ಯಃ ಆತನ ಪ್ರಯಾಣವು ನಿಲ್ಲಿಸಲ್ಪಟ್ಟಿತು. ಹೀಗೆ ಮಾಡುವುದರಿಂದ ಭಾರತೀಯರಿಗೆ ಆಶಾಭಂಗವುಂಟಾಗುವುದೆಂಬುದು ನನ್ನ ಮನಸ್ಸಿಗೆ ಕಷ್ಟವಾಗಿದ್ದರೂ ಪ್ರಯಾಣವನ್ನು ನಿಲ್ಲಿಸದಿದ್ದರೆ ತೀರದು. ಆತನ ಕ್ಷೇಮವನ್ನು ಎಲ್ಲರೂ ಕೋರುವಿರೆಂದು ನಾನು ನಂಬುತ್ತೇನೆ. ಸದ್ಯಃ ಆತನಿಗಿರುವ ಬಳಲಿಕೆಯು ತಗ್ಗಿದ ಕೂಡಲೆ ಮುಂದಣವರ್ಷದ ಶೀತಕಾಲದಲ್ಲಾದರೂ ಆತನನ್ನು ತಪ್ಪದೆ ಕಳುಹಿಸಿಕೊಡುವುದಕ್ಕೆ ಯತ್ನಿಸುವೆವು. ಇಷ್ಟರಲ್ಲಿ ಭರತಖಂಡಕ್ಕೆ ಕೊಡಲ್ಪಡಲಿಕ್ಕಿರುವ ಸ್ವಾತಂತ್ರ್ಯ ವಿಷಯದಲ್ಲಿ ನಮಗಿರುವ ಸಂತೋಷವನ್ನು ಸೂಚಿಸುವುದಕ್ಕಾಗಿ ನಮ್ಮ ಕುಮಾರನಿಗೆ ಪ್ರತಿಯಾಗಿ ನಮ್ಮ ಚಿಕ್ಕಪ್ಪಂದಿರಾದ ಡ್ಯೂಕಾಫ್ ಕೆನಾಟ್‌ರವರನ್ನು ಕಳುಹಿಸಿ ಕೊಡುತ್ತೇವೆ. ಅವರು ಸಂಸ್ಥಾನಾಧೀಶರ ಸಭೆಯನ್ನೂ ಸ್ಟೇಟ್ ಕೌನ್ಸಿಲ್ ಶಾಸನ ಸಭೆಗಳನ್ನೂ ಉಪಕ್ರಮಿಸಿ, ಜರುಗಬೇಕಾದ ಕಾರ್ಯಗಳನ್ನೆಲ್ಲಾ ಜರುಗಿಸಿ, ನಮ್ಮ ಸಂದೇಶವನ್ನು ಆಗ್ಗೆ ನಿಮಗೆ ತಿಳಿಯಪಡಿಸುವರು."

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಸೀಮೆಯಿಂದ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಮೈಸೂರಿಗೆ ಬಂದು ಸೇರುವವರಾಗಿದ್ದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬೆಂಕಿಪುರ ಎಂಬ ಗ್ರಾಮದ ಹೆಸರನ್ನು ಭದ್ರಪುರಿ ಎಂಬುದಾಗಿ ಬರುವ ಅಕ್ಟೋಬರ್ ತಿಂಗಳಿಂದ ಕರೆಯತಕ್ಕುದೆಂದು ಸರ್ಕಾರದವರು ವಿಧಿಸಿದ್ದಾರೆ.

ಕಳೆದ ಸೋಮವಾರ ಮಖೆಯ ಮಳೆಯು ಹುಟ್ಟಿತು. ಈಗ ಸ್ವಲ್ಪ ಮಳೆಯ ಚಿಹ್ನೆಯು ಕಾಣುತ್ತಿದೆ. ಹಲವುಕಡೆ ರಾಗಿಯ ಜೋಳದ ಪೈರುಗಳು ಮಳೆಯಿಲ್ಲದೆ ಒಣಗಿಹೋದುವು.

ಮೆ|| ಬಿ. ಜಿ. ಅಪ್ಪಾದೊರೆ ಮೊದಲಿಯಾರ್ ಬಿ. ಎ. ಬಿ. ಎಸ್. ಸಿ. ಯವರು ೧ ವರ್ಷದ ವರೆಗೆ ಕೈಗಾರಿಕೆ ಮತ್ತು ವ್ಯಾಪಾರ ಶಾಖೆಯಲ್ಲಿ ಸೆಂಟರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪಿನ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ದಿವಾನ್ ಸರ್ದಾರ್ ಕಾಂತರಾಜ ಅರಸಿನವರು ತಮ್ಮ ದೇಹಾರೋಗ್ಯಾರ್ಥವಾಗಿ ಉತ್ತರ ದೇಶ ಸಂಚಾರ ಮಾಡಲು ಒಂದು ತಿಂಗಳ ರಜವನ್ನು ಪಡೆದು ಕಳೆದ ತಾ|| ೧೨ ರಲ್ಲಿ ೧ನೆ ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರಿಗೆ ದಿವಾನ್‌ಗಿರಿಯನ್ನು ವಹಿಸಿ ತೆರಳಿದರು.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ನಿನ್ನೆ ತಾ|| ೨೧ ನೆ ಶನಿವಾರ ಹಗಲು ೧೦|| ಘಂಟೆಗೆ ಸಕಲ ಬಿರುದಾವಳಿಗಳೊಡನೆ ಶಿವಗಂಗೆಯ ಪುರಪ್ರವೇಶ ಮಾಡಿ ಅಲ್ಲಿಯ ಭಕ್ತರ ಕೈಂಕರ್ಯವನ್ನು ಪರಿಗ್ರಹಿಸಲು ಏರ್ಪಾಟಾಗಿ, ಅದರಂತೆ ನೆರವೇರಿತು.

ಶ್ರೀಮನ್ಮಹಾರಾಜರು ಆಕ್ಟಿಂಗ್ ದಿವಾನರೊಡನೆಯೂ, ಹುಜೂರು ಸೆಕ್ರಟೆರಿಯವರೊಡನೆಯೂ ಕಳೆದ ಗುರುವಾರ ಬೆಳಗ್ಗೆ ಬೆಂಗಳೂರು ವಿಕ್ಟೋರಿಯಾ ವೈದ್ಯಶಾಲೆಗೆ ಹೋಗಿ ೨೦ ನಿಮಿಷಗಳ ವರೆಗಿದ್ದು ಎಲ್ಲವನ್ನೂ ಪರಾಮರಿಸಿ, ಅಲ್ಲಿ ಅನೇಕ ಬದಲಾವಣೆ ಮಾಡಬೇಕಾಗಿರುವುದನ್ನು ಸೂಚಿಸಿ ದಯಮಾಡಿಸಿದರು.

ಮ|| ಗಾಂಧಿಯವರೂ, ಮಿ|| ಷೌಕತಾಲಿಯವರೂ ಸಹ ಈ ದಿವಸ ಶಾಲ್ಯದಿಂದ ಮೋಟಾರಿನ ಮೇಲೆ ಬೆಂಗಳೂರು ದಂಡಿಗೆ ಬಂದು ಈ ಸಾಯಂಕಾಲವೇ ಮುಂದಕ್ಕೆ ಪ್ರಯಾಣ ಮಾಡುವವರಾಗಿದ್ದಾರೆ. ಈ ದಿನ ಹಗಲು ೫ ಘಂಟೆಗೆ ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ನಿನ ಬಳಿಯಲ್ಲಿ ಬಹಿರಂಗ ಸತ್ಕಾರ ಸಮಾರಂಭಕ್ಕೆ ಪ್ರಜೆಗಳು ಏರ್ಪಡಿಸಿದ್ದಾರೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಕೆಲ ದಿನಗಳಿಂದ ಕಳ್ಳತನವನ್ನು ನಡೆಯಿಸುತ್ತಿದ್ದನೆಂಬ ತಪ್ಪಿತದಿಂದ ಪೊಲೀಸರಿಗೆ ಸಿಕ್ಕಿಬಿದ್ದು ವಿಚಾರಣೆಗಾಗಿ ಕಾರಾಗೃಹದಲ್ಲಿಡಲ್ಪಟ್ಟಿದ್ದ ಒಬ್ಬ ಆಂಗ್ಲೋ ಇಂಡಿಯನ್ ಬಂದಿಯು ತನ್ನ ಕೊಟ್ಟಡಿಯಲ್ಲಿದ್ದ ಮೇಜಿನಮೇಲೆ ಒಂದು ಕುರ್ಚಿಯನ್ನು ಹಾಕಿ ಹತ್ತಿ ಕಿಟಕಿಯ ಕಬ್ಬಿಣದ ಸಲಾಕಿಗಳನ್ನು ಮುರಿದು ಅದರ ದ್ವಾರಾ ನುಸಿದು ಓಡಿಹೋಗಿರುವನು.

ಶ್ರೀರಂಗಪಟ್ಟಣದ ತಾಲ್ಲೂಕು ಉಪಾಧ್ಯಾಯರ ಸಂಘದ ಕೂಟವು ಕಳೆದ ೧೪ ನೆ ತಾ|| ಶನಿವಾರ ಸರ್ಕಲ್ ಇನ್ಸ್‌ಪೆಕ್ಟರ್ ಮ|| ಡಿ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದಿತು. ಸಂಘದ ರಿಪೋರ್ಟನ್ನು ಸೆಕ್ರಟರಿ ಮ|| ಬಿ. ಎ. ಶಿವರಾಮಯ್ಯನವರು ಓದಿದ ನಂತರ ಲೆ|| ಕೌನ್ಸಿಲ್ ಮೆಂಬರೂ, ಸ್ಕೂಲ್ ಅಟೆಂಡೆಂಟ್ ಆಫೀಸರೂ ಆದ ಮ|| ಎಸ್. ಎ. ಜವರಯ್ಯನವರು ಉಪಾಧ್ಯಾಯರಿಗೆ ಬುದ್ಧಿವಾದಗಳು ಎಂಬ ವಿಷಯವಾಗಿ ಯುಕ್ತಿಯುಕ್ತವಾದ ಉಪನ್ಯಾಸವನ್ನು ಮಾಡಿದರು.

ಈ ಕೆಳಗೆ ಕಂಡಂತೆ ಪೊಲೀಸ್ ಸೂಪರಿಂಟೆಂಡೆಂಟರ ವರ್ಗಾವರ್ಗಿಗಳಾಗಿವೆ. ಮ|| ಎಸ್. ಎನ್. ಶ್ರೀ ನರಸಿಂಹಶಾಸ್ತ್ರಿಗಳು ಬೆಂಗಳೂರು ಡಿಸ್ಟ್ರಿಕ್ಟಿನಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ. ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾಗಿದ್ದ ಮಿ|| ಟಿ. ಕೆ. ಅಬ್ದುಲ್ ಖಾದರ್‌ರವರು ಬೆಂಗಳೂರು ಡಿಸ್ಟ್ರಿಕ್ಟಿಗೆ. ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮ|| ಎಸ್. ನಾರಾಯಣರಾವ್‌ರವರು ಪೊ|| ಇನ್|| ಜನರಲ್‌ರ ಅಸಿಸ್ಟೆಂಟರಾಗಿ. ತರೀಕೆರೆಯ ೨ ನೆ ತರಗತಿ ಮೇಜಿಸ್ಟ್ರೇಟರಾಗಿದ್ದ ಮ|| ಎ. ಗೋಪಾಲರಾವ್‌ರವರು ಕೋಲಾರ ಡಿಸ್ಟ್ರಿಕ್ಟಿಗೆ.

ಶ್ರೀರಂಗಪಟ್ಟಣದ ಗೌರ್ನಮೆಂಟ್ ಆನರರಿ ಲೆಕ್ಚರರೂ ಮತ್ತು ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಚೇರ್‌ಮೆನ್‌ರವರೂ ಆದ ಮ|| ಎನ್. ಸಿದ್ದಲಿಂಗಯ್ಯದೇವರು ತಮ್ಮ ತೋಟದಲ್ಲಿ ತಾವೇ ಸ್ವತಃ ಬೆಳೆದು ಪ್ರದರ್ಶಿಸಿದ್ದ ಅತ್ಯುತ್ತಮವಾದ ತೆಂಗಿನಕಾಯಿಗಳು, ಪರಮಾಯಿಷಿಯಾದ ತರಹೆವಾರಿ ಬಾಳೇಗೊನೆಗಳು, ಶ್ರೇಷ್ಠತರವಾದ ನಿಂಬೇಹಣ್ಣು ಮೊದಲಾದ ನಮ್ಮ ದೇಶದ ಹಣ್ಣುಗಳಿಗೆ ಮೊನ್ನೆ ಮೈಸೂರು ಟೌನ್‌ಹಾಲಿನಲ್ಲಿ ನಡೆದ ಫಲಪುಷ್ಪಪ್ರದರ್ಶನದಲ್ಲಿ ಎಂದಿನಂತೆ ಈ ಸಲವೂ ಉತ್ತಮ ತರಗತಿಯ ಅನೇಕ ಬಹುಮಾನಗಳು ದೊರೆತವೆಂದೂ ಮತ್ತು ವ್ಯವಸಾಯದ ಕಸಬಿನಲ್ಲಿ ಪ್ರವೀಣರಾದ ಇವರನ್ನು ಆ ಪ್ರದರ್ಶನಕ್ಕೆ ಒಬ್ಬ ಜಡ್ಜಿಯಾಗಿ ಆ ಕಮಿಟಿಯವರು ನೇಮಿಸಿಕೊಂಡಿದ್ದರೆಂದೂ ಸಂತೋಷದಿಂದ ತಿಳಿಸುತ್ತೇವೆ.

ಮರಿಮಲ್ಲಪ್ಪನವರ ಹೈಸ್ಕೂಲಿನ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಸಹ ಕಳೆದ ಬುಧವಾರ ಸ್ಕೂಲು ಹಾಲಿನಲ್ಲಿ ಅನೇಕ ದೊಡ್ಡಮನುಷ್ಯರನ್ನು ಆಹ್ವಾನಿಸಿ ಸಭೆಗೂಡಿ, ಕಳೆದ ೧|| ವರ್ಷದಿಂದ ಅಲ್ಲಿಯ ಹೆಡ್ಮಾಸ್ಟರಾಗಿದ್ದು ಟ್ರೇನಿಂಗ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಕೆಲಸಕ್ಕೆ ವರ್ಗವಾಗಿ ಹೋದ ಮ|| ಕೆ. ಕೃಷ್ಣರಾಯರಲ್ಲೂ ಈಗಣ ಹೆಡ್ಮಾಸ್ಟರಾಗಿರುವ ಮ|| ಎಂ. ನರಸಿಂಹಮೂರ್ತಿಯವರಲ್ಲೂ ತಮಗಿರುವ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸುವುದಕ್ಕೆ ಉಭಯರಿಗೂ ಒಂದೊಂದು ವಿಜ್ಞಾಪನ ಪತ್ರಗಳನ್ನರ್ಪಿಸಿದರು. ಉಭಯರೂ ಸಮಯೋಚಿತವಾದ ಉತ್ತರಗಳನ್ನು ಕೊಟ್ಟರು. ಅಧ್ಯಕ್ಷರಾಗಿದ್ದ ಮಿ|| ರೋಲೋಯವರು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಹಿತಬೋಧಕವಾದ ಉಪನ್ಯಾಸವನ್ನು ಮಾಡಿದರು. ಮ|| ಎಂ. ವೆಂಕಟಕೃಷ್ಣಯ್ಯನವರು ಕೈ|| ಮರಿಮಲ್ಲಪ್ಪನವರು ತಮ್ಮ ಯಾವದಾರ್ಜಿತವನ್ನೂ ಈ ಶಾಲಾ ಸ್ಥಾಪನೆಗೆ ವಿನಿಯೋಗಿಸಿದ ಪೂರ್ವ ಚರಿತ್ರೆಯನ್ನು ಹೇಳಿದರು.

ಭರತಖಂಡದ ವೃತ್ತಾಂತಗಳು.

ನೂತನ ಸಂಸ್ಕರಣಶಾಸನದ ಪ್ರಕಾರ ಏರ್ಪಡುವ ಶಾಸನ ಸಭೆಗಳ ಮೆಂಬರುಗಳನ್ನು ಆರಿಸುವಿಕೆಯು ಬೊಂಬಾಯಿಯಲ್ಲಿ ನವಂಬರ್ ತಾ|| ೧೬-೧೮-೨೨ ರಲ್ಲಿ ಜರುಗುವುದು.

ವೈಸ್‌ರಾಯರ ಕಾರ್ಯನಿರ್ವಾಹಕ ಸಭೆಯಲ್ಲಿ ಡಾಕ್ಟರ್ ತೇಜಬಹದ್ದೂರ್ ಸಪ್ರೂಯವರು ಸರ್ ಜಾರ್ಜ್ ಲೌಂಡೆಸ್‌ರವರ ಸ್ಥಾನದಲ್ಲಿ ಲಾ ಮೆಂಬರಾಗಿ ನಿಯಮಿಸಿಕೊಳ್ಳಲ್ಪಟ್ಟರು.

ಜನರಲ್ ಡಯ್ಯರು ದೋಷಿಯೆಂದು ಹೌಸ್ ಆಫ್ ಕಾಮನ್ಸಿನಲ್ಲಿ ತೀರ್ಮಾನವಾಗಿದ್ದಿತಷ್ಟೆ. ಹೌಸ್ ಆಫ್ ಲಾರ್ಡ್ಸಿನಲ್ಲಿ ಆತನು ತಪ್ಪಿತಸ್ಥನಲ್ಲವೆಂದು ೧೨೯ ಜನರೂ ತಪ್ಪಿತಸ್ಥನೆಂದು ೮೬ ಜನರೂ ಓಟುಕೊಟ್ಟರು. ಲಾರ್ಡುಗಳ ಆತ್ಮಜನಾಭಿಮಾನದ ಪರಾಕಾಷ್ಠದಶೆಯು ಇದರಿಂದ ವ್ಯಕ್ತವಾಯಿತು.

ವೈಸ್‌ರಾಯರ ಶಾಸನಸಭೆಯಲ್ಲಿ ತೆರವಾದ ಆ|| ಬಿ. ಎನ್. ಶರ್ಮರವರ ಸ್ಥಾನಕ್ಕೆ ಆ|| ಪಿ. ರಾಮರಾಯಣಿ ಎಂ. ಎ. ರವರು ಹೆಚ್ಚು ಓಟನ್ನು ಪಡೆದು ಆರಿಸಿಬಂದರು. ಅದೇ ಸಭೆಯಲ್ಲಿನ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟ ಸರ್ ಫಜುಲ್‌ಭಾಯಿ ಕರೀಂಭಾಯಿರವರ ಸ್ಥಾನಕ್ಕೆ ತಾತಾ ಅಂಡ್ ಸನ್ಸ್ ಕಂಪೆನಿಗೆ ಸಂಬಂಧಪಟ್ಟ ಆ|| ಡಿ. ತಾತಾರವರು ಆರಿಸಲ್ಪಟ್ಟರು.

ಸೀಮೆಯಲ್ಲಿರುವ ಸರ್ ರವೀಂದ್ರನಾಥ ಠಾಕೂರ್‌ರವರೇ ಮೊದಲಾದ ಕೆಲ ಭಾರತೀಯ ಪ್ರಮುಖರು ಮುಖ್ಯಮಂತ್ರಿಯವರಿಗೆ ಒಂದು ಅರ್ಜಿಯನ್ನು ಬರೆದುಕೊಂಡು, ಈಗ ಭರತಖಂಡದಲ್ಲಿ ಪ್ರಜೆಗಳಿಗೂ ಅಧಿಕಾರಿಗಳಿಗೂ ಮಧ್ಯದಲ್ಲಿ ವೃದ್ಧಿಹೊಂದುತ್ತಿರುವ ಮನಸ್ತಾಪಗಳನ್ನು ತಪ್ಪಿಸಬೇಕಾದರೆ ಮಿ|| ಮಾಂಟೊಗ್‌ರವರನ್ನು ಅಲ್ಲಿಯ ವೈಸ್ರಾಯಿಗಿರಿಗೆ ನಿಯಮಿಸುವುದು ಅವಶ್ಯಕವೆಂದು ತಿಳಿಯಿಸಿಕೊಂಡಿರುವರು.

ಮದರಾಸಿನಲ್ಲಿ ಮ|| ಗಾಂಧಿಯವರೂ ಮಿ|| ಷೌಕತಾಲಿಯವರೂ ಉಪನ್ಯಾಸಗಳನ್ನು ಮಾಡಿದರು. ಸಹಾಯ ನಿರಾಕರಣತತ್ತ್ವದ ಪ್ರಯೋಜನವನ್ನು ಬೋಧಿಸಿದರು. ಈಚೆಗೆ ಅಲ್ಲಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಸಭೆಮಾಡಿ ಸಹಾಯ ನಿರಾಕರಣ ತತ್ತ್ವವನ್ನು ಕುರಿತು ಚರ್ಚಿಸಿದಾಗ, ಅನುಕೂಲವಾಗಿ ಕೆಲವರೂ ಪ್ರತಿಕೂಲವಾಗಿ ಕೆಲವರೂ ಬಹಳ ವೀರಾವೇಶದಿಂದ ವಾದಿಸಿದರು. ಯಾವುದೂ ಕೊನೆಮುಟ್ಟಲಿಲ್ಲ

ತಿಲಕರವರ ಮರಣವಾರ್ತೆಯನ್ನು ಕೇಳಿ ಧಾರವಾಡದ ಮ್ಯುನ್ಸಿಪಾಲಿಟಿಯವರು ತಮ್ಮ ಶಾಲೆಗಳನ್ನು ಮುಚ್ಚಿಸಿದುದನ್ನು ಅಲ್ಲಿಯ ಕಲೆಕ್ಟರು ಆಕ್ಷೇಪಿಸಿ ಮ್ಯುನ್ಸಿಪಾಲಿಟಿಯನ್ನು ಸಸ್ಪೆಂಡ್ ಮಾಡುತ್ತೇನೆಂದು ಬೆದರಿಸಿದರು. ಅದಕ್ಕೆ ಮ್ಯುನ್ಸಿಪಾಲಿಟಿಯವರು ಬೆದರದೆ ಉತ್ತರವನ್ನು ಕೊಟ್ಟುದರ ಮೇಲೆ ಬೊಂಬಾಯಿ ಸರ್ಕಾರದವರ ಅಪ್ಪಣೆ ಮೇರೆಗೆ ಕಲೆಕ್ಟರರು ಮ್ಯುನ್ಸಿಪಾಲಿಟಿಯ ಕ್ಷಮಾಪಣೆಯನ್ನು ಕೇಳಿ ತಮ್ಮ ಅಪ್ಪಣೆಯನ್ನು ಹಿಂದಕ್ಕೆ ತೆಗೆದುಕೊಂಡರು.

WANTED.

An L.C.E. or B. E. with special knowledge in Mechanical Engineering for the post of the Chief officer of the Bijapur City Municipality on a monthly salary of Rs. 250 rising to Rs. 300 by an annual increment of Rs. 10. Applicants should be willing to serve at least for five years and submit their applications with testimonials of having got administrative capacity before the 13th November 1920. The appointment will be made subject to the approval of Government. The application should necessarily give the following particulars:—

(1) Present employment whether permanent or temporary. (2) Present pay. (3) Period of service put in. (4) Caste. (5) Age. (6) Whether expariened in Municipal service.

Municipal Office,
Bijapur, 12-8-1920.

P. A. DESAI,
President,
Bijapur City Municipality.

ಭರತಖಂಡದ ಬೀಹಾರ್ ಒರಿಸ್ಸಾ ಪ್ರಾಂತಕ್ಕೆ ಲಾರ್ಡ್ ಸಿನ್ಹರವರೂ, ಸಂಯುಕ್ತ ಪ್ರಾಂತಗಳಿಗೆ ಸರ್ ಹಾರ್ಕೋರ್ಟ್ ಬಟ್ಲರ್‌ರವರೂ, ಪಂಜಾಬಿಗೆ ಸರ್ ಎಡ್ವರ್ಡ್ ಮೆಕ್ಲಗನ್‌ರವರೂ, ಮಧ್ಯಪ್ರಾಂತಕ್ಕೆ ಸರ್ ಎಫ್. ಜಿ. ಸ್ಲೈರವರೂ, ಅಸ್ಸಾಮಿಗೆ ಸರ್ ವಿಲಿಯಂ ಹೆರಿಸ್‌ರವರೂ ಲೆ|| ಗೌರ್ನರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ. ಲಾರ್ಡ್ ಸಿನ್ಹರವರು ಲೆ|| ಗೌರ್ನರಾಗಿ ನಿಯಮಿಸಲ್ಪಟ್ಟುದರಿಂದ ಭಾರತೀಯರಿಗೆ ಇಂಥ ದೊಡ್ಡ ಪದವಿಯು ದೊರೆದುದಕ್ಕೆ ಇದೇ ಮೊದಲು.

ಬೊಂಬಾಯಿಯಲ್ಲಿ ಅನ್ನವಿಲ್ಲದೆ ಅನೇಕ ಮಂದಿ ಭಿಕ್ಷಗಾರರು ಬೀದಿಬೀದಿಗಳಲ್ಲೇ ಸಾಯುತ್ತಿರುವರಂತೆ. ಕಳೆದ ೧೫ ದಿನಗಳಿಂದ ಸತ್ತಿರುವ ಭಿಕ್ಷಗಾರರಲ್ಲಿ ಹಸಿವಿನಿಂದ ಸತ್ತವರ ಸಂಖ್ಯೆಯೇ ಹೆಚ್ಚಾಗಿದೆಯಂತೆ. ಈ ಪರಿತಾಪಕರವಾದ ಸ್ಥಿತಿಯನ್ನು ತಪ್ಪಿಸಲಿಕ್ಕಾಗಿ ಅವರಿಗೆ ಗುಡಿಸಲುಗಳನ್ನು ಕಟ್ಟಿ ಅನ್ನಕ್ಕೆ ದಾರಿಮಾಡಿಕೊಡಲಿಕ್ಕಾಗಿ ಅಲ್ಲಿಯಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಒಂದು ಸಭೆಗೂಡಿ ಪರ್ಯಾಲೋಚಿಸಿ, ೮ ಲಕ್ಷ ರೂ. ಗಳ ಚಂದಾಹಣವನ್ನು ಕೂಡಿಸಬೇಕೆಂದು ನಿರ್ಧರಿಸಿರುವರು.

ಇ ಸ್ತಿ ಹಾ ರ್.

ತಾರೀಖು 17 ನೇ ಜುಲೈ 1920.

ಮೈಸೂರು ಸ್ಟೇಟ್ ಲೈಫ್ ಇನ್‌ಷೂರೆನ್ಸ್ ಏರ್ಪಾಡಿನಲ್ಲಿ ತಮ್ಮ ಜೀವಗಳನ್ನು ವಿಮೆ ಮಾಡಿರುವ ಸರ್ಕಾರದ ಆಫೀಸರಿಗೂ ಅಂಥಾ ಆಫೀಸರಲ್ಲದ ಇತರರಿಗೂ ಮತ್ತು ಹಾಗೆ ವಿಮೇ ಮಾಡಿರುವವರು ಮೃತಪಟ್ಟಿರುವ ಸಂದರ್ಭಗಳಲ್ಲಿ ಅವರ ವಾರಸುದಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:-

1930 ನೇ ಸೆಪ್ಟಂಬರು 30 ನೇ ತಾರೀಖಿನೊಳಗಾಗಿ ಪಾವತಿಯಾಗತಕ್ಕ ಮೊಬಲಗಿಗೆ ಉಂಟಾಗುವ ಹಕ್ಕನ್ನು ಸ್ಪಷ್ಟವಾದ ಮತ್ತು ಪೂರ್ತಿಯಾದ ರುಜುವಾತನ್ನು ಕೊಟ್ಟಲ್ಲಿ ಹಕ್ಕುದಾರರ ಅಪೇಕ್ಷೆಯ ಮೇಲೆ ಮೈಸೂರು ಸರ್ಕಾರದ ಶೇಕಡ 6¼ ರಂತೆ ಬಡ್ಡಿಯುಳ್ಳ ಸಾಲಕ್ಕೆ ಚಂದಾ ಮಾಡಿ, ಸಾಲದ ಇಸ್ತಿಹಾರಿನಲ್ಲಿ ವಿಮರಿಸಿರುವವುಗಳ ಪೈಕಿ ಅವರಿಗೆ ಬೇಕಾದ ಅಂಕಿತದ ಬಾಂಡುಗಳನ್ನು ಕೊಡಲಾಗುವುದು. ಈ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳಲಿಚ್ಛೈಸುವವರು ತಮ್ಮ ಅಭಿಪ್ರಾಯವನ್ನು ತಕ್ಷಣ ಈ ಕೆಳಗೆ ರುಜುಮಾಡಿರುವವರಿಗೆ ದಯವಿಟ್ಟು ತಿಳಿಸಬೇಕು. ಮತ್ತು ಕೂಡಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವದಕ್ಕಾಗಿ ತಮ್ಮ ಹಕ್ಕುಗಳನ್ನು ತ್ವರಿತವಾಗಿ ರುಜುವಾತು ಸ್ಥಾಪಿಸಕೊಡತಕ್ಕದ್ದು. ವಿಮೆಯ ಮೊಬಲಗು ಹಕ್ಕುದಾರರು ಅಪೇಕ್ಷಿಸುವ ಅಂಕಿತ ಮೊಬಲಗುಗಳ ಬಾಂಡುಗಳನ್ನು ಕೊಳ್ಳುವದಕ್ಕೆ ಸರಿಹೋಗದ ಪಕ್ಷದಲ್ಲಿ, ಬಾಕೀ ಬೀಳುವ ಮೊಬಲಗನ್ನು ಸಂಸ್ಥಾನದ ಯಾವ ಖಜಾನೆಗಾದರೂ ಕಟ್ಟಿ, ಅದರ ರಶೀತಿಯನ್ನು ಮುಂದಿನ ನಡವಳಿಗೆ ಬಗ್ಗೆ ಈ ಆಫೀಸಿಗೆ ರವಾನಿಸಬಹುದು. ಅಥವಾ ಅಪೇಕ್ಷಿತ ಅಂಕಿತ ಮೊಬಲಗಿಗೆ ಕೇವಲ ಸಮೀಪವಾಗಿರುವ ಮೊಬಲಗಿನ ಬಾಂಡುಗಳೊಂದಿಗೆ ನಿಂತ ಹಣವನ್ನು ನಗದಾಗಿ ವಾಪಸು ಕೊಡಲಾಗುವುದು.

ಟಿ. ಸತ್ಯರಾಜಚೆಟ್ಟಿ, ಸೆಕ್ರಟರಿ,
ಮೈಸೂರು ಸರ್ಕಾರದ ಇನ್‌ಷೂರೆನ್ಸ್ ಕಮಿಟಿ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

1-8-1920 ನೇ ಮರ್ಕುಂ ನೋಟೀಸ್.

ಇದರಿಂದ ಮೈಸೂರು ಸಿಟಿಯಲ್ಲಿರತಕ್ಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿರತಕ್ಕ ಈ ಕೆಳಗೆ ಕಂಡ ಬೈಲಾಗಳು, ನಿಬಂಧನೆಗಳು ಮತ್ತು ತಿದ್ದುಪಡಿಗಳ ವಿಷಯದಲ್ಲಿ ಆಕ್ಷೇಪಣೆಗಳೂ ಅಥವಾ ಸಲಹೆಗಳನ್ನು ತೆಗೆದುಕೊಳ್ಳಲು ಕ್ಲುಪ್ತಮಾಡಿದ್ದ ಕಾಲದ ಅವಧಿಯನ್ನು ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ 31-7-1920 ನೇ ಮರ್ಕುಂ ತೀರ್ಮಾನವನ್ನು ಅನುಸರಿಸಿ 1920 ನೇ ಇಸವಿ ಆಗಸ್ಟ್ ಆಖೈರುವರೆಗೂ ಹೆಚ್ಚುಮಾಡಿರುತ್ತೆ.

ಸದರಿ ಬೈಲಾಗಳು, ನಿಬಂಧನೆಗಳು ಮತ್ತು ತಿದ್ದುಪಡಿಗಳ ಅಚ್ಚಾದ ಕಾಪಿಗಳನ್ನು ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿಟ್ಟಿರುತ್ತೆ. ಇಷ್ಟವುಳ್ಳವರು ಆಫೀಸು ವೇಳೆಯಲ್ಲಿ ಬಂದು ಇವುಗಳನ್ನು ಮುಫತ್ತಾಗಿ ನೋಡಬಹುದು.

ನಂ.	ನಿಬಂಧನೆಗಳು	ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿದ ತಾರೀಖು
1.	ಕಟ್ಟಡಗಳ ಬೈಲಾಗಳ ತಿದ್ದುಪಡಿ.	27-5-1920 3-6-1920 10-6-1920
2.	ಮೋಟಾರ್‌ಗಾಡಿಗಳು ವಗೈರೆಗಳ ನಂಬರಿಂಗ್ ಮತ್ತು ರಿಜಿಸ್ಟ್ರೇಷನ್ ವಿಚಾರ ಬೈಲಾಗಳು.	13-5-1920
3.	ಕಸಬು ವಗೈರೆ ಮೇಲೆ ಕಂದಾಯ ಹಾಕಲು ರೂಲ್ಸುಗಳು.	17-6-1920 24-6-1920 1-7-1920
4.	ತೆರಿಗೆಗಳ ಷೆಡ್ಯೂಲ್ ತಿದ್ದುಪಡಿ (ಪೋಸ್ಟಾಫೀಸಿನ ಮೂಲಕ ಪಾರ್ಸಲ್‌ನಲ್ಲಿ ಬರುವ ಜವಳಿಮೇಲೆ ಆಕ್ಟ್ರಾಯಿ ತೆರಿಗೆಯ ವಿನಾಯತಿಯನ್ನು ವಜಾರಮಾಡುವ ವಿಚಾರ.)	3-6-1920 10-6-1920 17-6-1920
5.	ತೆರಿಗೆಗಳ ಷೆಡ್ಯೂಲ್ ತಿದ್ದುಪಡಿ (ಮೋಟರ್‌ಕಾರ್ ಗಾಡಿ ಕಂದಾಯಕ್ಕೆ ಬದಲಾಗಿ ಮ್ಯುನಿಸಿಪಲ್ ರೆಗ್ಯುಲೇಷನ್ 59 (ii) ನೇ ಸೆಕ್ಷನ್ ರೀತ್ಯಾ ಕಂದಾಯ ದಾಖಲ್ ಮಾಡುವ ವಿಚಾರ.)	3-6-1920 10-6-1920 17-6-1920

ಸಿ. ಶ್ರೀಕಂಠೇಶ್ವರ ಅಯರ್,
ಆನರರಿ ಪ್ರೆಸಿಡೆಂಟ್.

ಚಿನ್ನದ ಸವರನ್ನುಗಳು.

(ಪಬ್ಲಿಸಿಟಿ ಬೋರ್ಡಿನಿಂದ.)

ಈಚೆಗೆ ಸರಕಾರದವರು, ಸವರನ್ನುಗಳ ವಿಷಯವಾಗಿ ಮಾಡಿದ ಏರ್ಪಾಡಿನಿಂದ, ಇಲ್ಲಿ ಬಹಳ ಜನಕ್ಕೆ ಅಸಮಾಧಾನವುಂಟಾದಂತೆ ತಿಳಿದು ಬಂದಿದೆ. ಇದಕ್ಕಾಗಿ ಅನೇಕ ಜನರು, ಈಗಲೂ ಸವರನ್ನುಗಳ ಬೆಲೆಯು ತನಗೆತಾನೇ ಏರುತ್ತಿರುವ ಕಾರಣವೇನೆಂದು, ಅದರ ನಿಜಾಂಶವನ್ನು ತಿಳಿಸಬೇಕೆಂಬುದಾಗಿ ನಮಗೆ (ಪಬ್ಲಿಸಿಟಿ ಬೋರ್ಡಿಗೆ) ಬರೆಯುತ್ತಿರುವರು. ಇದಕ್ಕಾಗಿ ನಾವು ಮದರಾಸಿನ ನಾನಾ ಕಡೆಗಳಲ್ಲಿ ವಿಚಾರಿಸಿ, ಇಲ್ಲಿನ ಅಕೌಂಟೆಂಟ್ ಜನರಲ್‌ರವರ, ಮತ್ತು ಬೇರೆಬೇರೆ ಅರ್ಥ ಶಾಸ್ತ್ರಜ್ಞರ ಅಭಿಪ್ರಾಯಗಳನ್ನೂ ತಿಳಿದುಕೊಂಡು, ಅದನ್ನು ಜನಗಳ ತಿಳವಳಿಕೆಗಾಗಿ ಈ ಕೆಳಗೆ ಪ್ರಕಟಿಸಿರುತ್ತೇವೆ.

ಕಳೆದ ಜೂನ್ ತಿಂಗಳಲ್ಲಿ ಇಂಡಿಯಾ ಸರಕಾರದವರು, ಸವರನ್ ಒಂದಕ್ಕೆ 15 ರೂಪಾಯಿಗಳಂತೆ ತೆಗೆದುಕೊಳ್ಳಬೇಕೆಂದು ಹಿಂದೆಮಾಡಿದ್ದ ನಿಬಂಧನೆಯನ್ನು ತಪ್ಪಿಸಿ, ಇನ್ನು ಮುಂದೆ ಸರಕಾರದವರಾಗಲಿ, ಇತರರಾಗಲಿ, ಸವರನ್ ಒಂದಕ್ಕೆ 10 ರೂಪಾಯಿಗಳಂತೆಯೇ ಒಪ್ಪಿಕೊಳ್ಳಬೇಕೆಂಬ ಹೊಸ ನಿಬಂಧನೆಯನ್ನು ಮಾಡುವದಾಗಿಯೂ, ಅದೇ ವಿಷಯವಾಗಿ ಇಂಡಿಯಾ ಸರ್ಕಾರದ ನ್ಯಾಯ ವಿಧಾಯಕ ಸಭೆಯಲ್ಲಿ ಒಂದು ಹೊಸ ಕಾಯಿದೆಯನ್ನು ತರುವುದಾಗಿಯೂ, ಪ್ರಕಟಿಸಿದ್ದರು. ಮತ್ತು ಅದೇ ಪ್ರಕಟನೆಯಲ್ಲಿ ಇತರ ದೇಶಗಳಿಂದ ಇಂಡಿಯಾ ದೇಶಕ್ಕೆ ಬಂಗಾರದ ಗಟ್ಟಿಗಳನ್ನು ತರಕೂಡದೆಂಬ ನಿರ್ಬಂಧವನ್ನು ತಪ್ಪಿಸಿರುವುದಾಗಿಯೂ, 1920 ನೇ ಜೂಲೈ 12 ನೇ ತಾರೀಖಿನಿಂದಾಚೆಗೆ ಸವರನ್ನುಗಳ ವಿಷಯದಲ್ಲಿಯೂ ಈ ನಿರ್ಬಂಧವನ್ನು ತಪ್ಪಿಸಿಬಿಡುವುದಾಗಿಯೂ ತಿಳಿಸಿದ್ದರು. ಮತ್ತು ಮೇಲ್ಕಂಡ ತಾರೀಖಿನೊಳಗಾಗಿ ಯಾರಾದರೂ ತಮ್ಮಲ್ಲಿರುವ ಸವರನ್ನುಗಳನ್ನು ಮದರಾಸಿನಲ್ಲಿರುವ ಕರೆನ್ಸೀ ಆಫೀಸಿಗೆ ತಂದುಕೊಟ್ಟರೆ ಸವರನ್ ಒಂದಕ್ಕೆ 15 ರೂಪಾಯಿಗಳಂತೆ ಕೊಟ್ಟು ತಾವು ತೆಗೆದುಕೊಳ್ಳುವುದಾಗಿಯೂ ಆ ಪ್ರಕಟನೆಯಲ್ಲಿಯೇ ಕಾಣಿಸಿದ್ದರು. ಇದು ಎಲ್ಲರಿಗೂ ತಿಳಿದ ವಿಷಯವೇ.

ಹೀಗೆ ಸರ್ಕಾರದವರು, ಜುಲೈ ತಿಂಗಳ 12 ನೇ ತಾರೀಖಿನೊಳಗಾಗಿ ಸವರನ್ನುಗಳನ್ನು ತಂದುಕೊಟ್ಟವರಿಗೆ, ಮದರಾಸು ಕರೆನ್ಸಿ ಆಫೀಸಿನಲ್ಲಿ ಸವರನ್ ಒಂದಕ್ಕೆ 15 ರೂಪಾಯಿಗಳ ಮೇರೆ ಕೊಟ್ಟು ತೆಗೆದುಕೊಳ್ಳುವುದಾಗಿ ಸೂಚಿಸಿದ ಉದ್ದೇಶವೇನು ? ಸರಕಾರದವರು ಇಲ್ಲಿನ ಜನಗಳಲ್ಲಿರುವ ಸವರನ್ನುಗಳನ್ನೆಲ್ಲಾ ತರಿಸಿಕೊಂಡು, ಅಮೇರಿಕಾ ಖಂಡಕ್ಕೆ ಕಳುಹಿಸುವದಕ್ಕಾಗಿಯೇ ಈ ಉಪಾಯವನ್ನು ಮಾಡಿರುವರೆಂದು ಅಲ್ಲಲ್ಲಿ ಪ್ರವಾದಗಳು ಹೊರಟಿರುವುವು. ಕೆಳಗೆ ಕಾಣಿಸಿದ ವಿಷಯಗಳಿಂದ, ಇದು ನಿರಾಧಾರವಾದ ಸುಳ್ಳು ಪ್ರವಾದಗಳೆಂದು ಚೆನ್ನಾಗಿ ತಿಳಿಯಬಹುದು. ಏನೆಂದರೆ, ಸರ್ಕಾರದವರು ಇಲ್ಲಿನ ಜನರ ಉಪಯೋಗಕ್ಕಾಗಿ ಆಗಾಗ 15 ದಿನಗಳಿಗೊಂದಾವರ್ತಿ ಇತರ ದೇಶಗಳಿಂದ ಬಂಗಾರದ ಗಟ್ಟಿಗಳನ್ನು ತರಿಸಿ, ಒಂದು ಸವರನ್ ತೂಕದಷ್ಟು ಬಂಗಾರಕ್ಕೆ 13, 14 ರೂಪಾಯಿಗಳಂತೆ ಬೆಲೆಗೆ ಕೊಡುತ್ತಿದ್ದರು. ಈಗಲೂ ಹಾಗೆಯೇ ಕೊಡುತ್ತಿರುವರು. ಹೀಗಿರುವಾಗ ಸರಕಾರದವರು ಇಲ್ಲಿಂದ ಬಂಗಾರವನ್ನು ತೆಗೆದು ಅಮೇರಿಕಾ ದೇಶಕ್ಕೆ ಕಳುಹಿಸಬೇಕಾಗಿದ್ದರೆ ಇಲ್ಲಿ ಸವರನ್ ಒಂದಕ್ಕೆ 15 ರೂಪಾಯಿಗಳಂತೆ ಬೆಲೆ ಕೊಟ್ಟು ತೆಗೆಯುತಿದ್ದರೇ ? ತಾವೇ ಒಂದು ಸವರನ್ ತೂಕದ ಬಂಗಾರವನ್ನು ಇಲ್ಲಿ ೧೪ ರೂಪಾಯಿಗಳಂತೆ ಕೊಟ್ಟು, ಇಲ್ಲಿಂದ ೧೫ ರೂಪಾಯಿಗಳ ಮೇರೆ ತೆಗೆದು ಕಳುಹಿಸುವದರಿಂದ ಲಾಭವೇನು ? ಆದುದರಿಂದ ಸವರನ್ ಒಂದಕ್ಕೆ ೧೫ ರೂಪಾಯಿಗಳಂತೆ ಕೊಡುವದಾಗಿ ಸರಕಾರದವರು ಪ್ರಕಟಿಸಿದುದು, ಇಲ್ಲಿ ಸವರನ್ನುಗಳನ್ನು ಇಟ್ಟುಕೊಂಡಿರತಕ್ಕವರು ನಷ್ಟಪಡಬಾರದೆಂಬುದಕ್ಕಾಗಿಯೇ ಹೊರತು ಬೇರೆಯಲ್ಲ. ಇದಕ್ಕೆ ಮೊದಲು ಇಲ್ಲಿ ಅನೇಕ ಜನರು ಹಿಂದಿನ ನಿಬಂಧನೆಯಂತೆ ಸವರನ್ ಒಂದಕ್ಕೆ ೧೫ ರೂಪಾಯಿಗಳ ಮೇರೆ ಕೊಟ್ಟು ತೆಗೆದಿಟ್ಟಿರಬಹುದು. ಸರಕಾರದವರು ಈಗ ಅಕಸ್ಮಾತ್ತಾಗಿ ಆ ನಿಬಂಧನೆಯನ್ನು ತಪ್ಪಿಸಿಬಿಟ್ಟರೆ, ಸವರನ್ನುಗಳ ಬೆಲೆಯು ತಗ್ಗಿ, ಅನೇಕ ಜನಗಳು ನಷ್ಟಪಡಬೇಕಾಗುವುದು. ಸವರನ್ನುಗಳ ಬೆಲೆಯು ಬಹಳ ಮಟ್ಟಿಗೆ ತಗ್ಗಿಹೋಗಬಹುದೆಂದು ಸರಕಾರದವರು ಊಹಿಸುವುದಕ್ಕೆ ಈ ಕೆಳಗೆ ಕಾಣಿಸಿದ ಎರಡು ಮೂರು ಕಾರಣಗಳುಂಟು.

(೧) ಸರಕಾರದವರು ಇಲ್ಲಿನ ಜನರಿಗೆ ಹೊರಗಿನಿಂದ ತರಿಸಿಕೊಡುತ್ತಿರುವ ಬಂಗಾರದ ಬೆಲೆಯು ಸವರನ್ ಒಂದಕ್ಕೆ ೧೪ ರೂಪಾಯಿಗಳಿಗಿಂತ ಕಡಿಮೆಯಾಗಿಯೇ ಬೀಳುತ್ತಿರುವುದು.

(೨) ಇತರ ದೇಶಗಳಲ್ಲಿಯೂ ಬಂಗಾರದ ಬೆಲೆಯು ಇದೇ ರೀತಿಯಲ್ಲಿರುವುದು.

(೩) ಹೊರಗಿನಿಂದ ಇಲ್ಲಿಗೆ ಬಂಗಾರವನ್ನು ತರಿಸಕೂಡದೆಂಬ ನಿರ್ಬಂಧವನ್ನೂ ಈಗ ತಪ್ಪಿಸಿರುವುದರಿಂದ, ಇಲ್ಲಿಗೆ ವಿಶೇಷವಾಗಿ ಬಂಗಾರದ ಗಟ್ಟಿಗಳು ಬಂದು ಬೆಲೆಯು ತಗ್ಗಿಹೋಗಬಹುದು.

ಈ ಮೇಲೆ ಹೇಳಿದ ಕಾರಣಗಳಿಂದ ಇಲ್ಲಿ ಬಂಗಾರದ ಬೆಲೆಯು ಬಹಳವಾಗಿ ತಗ್ಗಿಹೋಗಿ ಅದರಿಂದ ಇಲ್ಲಿ ಸವರನ್ನುಗಳನ್ನು ಇಟ್ಟುಕೊಂಡಿರತಕ್ಕವರಿಗೆ ನಷ್ಟವಾಗಬಹುದೆಂಬುದಕ್ಕಾಗಿಯೇ ಸರಕಾರದವರು ಜನಗಳಿಗೆ ಆ ನಷ್ಟವನ್ನು ತಪ್ಪಿಸಬೇಕೆಂದು ಯೋಚಿಸಿ, ಜೂಲೈ ೧೨ ನೇ ತಾರೀಖಿನ ವರೆಗೆ, ಕರೆನ್ಸೀ ಆಫೀಸಿನಲ್ಲಿ ಸವರನ್ ಒಂದಕ್ಕೆ ೧೫ ರೂಪಾಯಿಗಳಂತೆ ಕೊಟ್ಟು ತೆಗೆದುಕೊಳ್ಳುವದಾಗಿ ಪ್ರಕಟಿಸಿದರು.

ಆದರೆ ವಾಸ್ತವದಲ್ಲಿ, ಇಲ್ಲಿ ಸವರನ್ನುಗಳ ಬೆಲೆಯು ಇಳಿಯದೆ, ಇನ್ನೂ ಹೆಚ್ಚುತ್ತಾ ಬಂದಿದೆಯೆಂಬುದೇನೋ ನಿಜವೇ ! ಇದಕ್ಕೆ ಕಾರಣವೇನು ? ಇದಕ್ಕೆ ಕಾರಣವಾಗಿ ಈ ಕೆಳಗೆ ಕಂಡ ಎರಡು ಸುಳ್ಳು ಪ್ರವಾದಗಳು ಜನರಲ್ಲಿ ಹರಡಿಕೊಂಡಿವೆ.

(೧) ಸರಕಾರದವರು ಇಲ್ಲಿನ ಬಂಗಾರವನ್ನೆಲ್ಲಾ ಅಮೇರಿಕಾಕ್ಕೆ ಕಳುಹಿಸುವದಕ್ಕಾಗಿ ತರಿಸಿಕೊಳ್ಳುತ್ತಿರುವರೆಂಬುದೊಂದು.

(೨) ಮುಂದೆ ಸರಕಾರದವರು ಇಲ್ಲಿ ಚಲಾವಣೆಗೆ ಬಿಡುವ ಸವರನ್ನುಗಳಲ್ಲಿ ಬಂಗಾರದ ಬಣ್ಣವೂ ತೂಕವೂ ಬಹಳ ಮಟ್ಟವಾಗಿರುವುದೆಂಬುದು ಎರಡನೆಯದು.

ಇವೆರಡೂ ನಿರಾಧಾರವಾದ ಸುಳ್ಳು ಮಾತುಗಳು. ಅನೇಕ ಜನರು ಈ ಪ್ರವಾದವನ್ನೇ ನಂಬಿಕೊಂಡು, ಗುಜರಾತಿಯವರಲ್ಲಿಯೂ, ಅಕ್ಕಸಾಲಿಗರಲ್ಲಿಯೂ ಅವರು ಕೇಳಿದ ಬೆಲೆಯನ್ನು ಕೊಟ್ಟು ಆತುರದಿಂದ ಸವರನ್ನುಗಳನ್ನು ಕೊಂಡುಕೊಳ್ಳುತ್ತಿರುವಹಾಗೆ ತಿಳಿದು ಬಂದಿದೆ.

ಅಂತವರು ಆತುರಪಡದೆ, ಸವರನ್ನುಗಳನ್ನು ತೆಗೆಯುವದಕ್ಕೆ ಮೊದಲು ಈ ಕೆಳಗೆ ಕಂಡ ವಿಷಯಗಳನ್ನು ಚೆನ್ನಾಗಿ ಯೋಚಿಸಬೇಕು.

(೧) ಈಗ್ಗೆ ಸ್ವಲ್ಪ ದಿವಸಗಳ ಹಿಂದೆ, ಎಂದರೆ ಜೂಲೈ 21 ನೇ ತಾರೀಖಿನಲ್ಲಿ ಕೂಡ, ಸರಕಾರದವರು 1,295,500 ತೊಲೆಗಳ ತೂಕದಷ್ಟು ಬಂ

ಕಲ್ಕತ್ತಾದಲ್ಲಿ ಸೆಪ್ಟಂಬರ್ ತಾ|| ೪, ೫, ೬, ೭ ರಲ್ಲಿ ಕೂಡಲಿಕ್ಕಿರುವ ದೇಶೀಯ ಮಹಾಸಭೆಯ ಮಂಟಪವು ೧೨ ಸಾವಿರ ಜನರಿಗೆ ಹಿಡಿಯುವಷ್ಟು ವಿಶಾಲವಾಗಿ ನಿರ್ಮಿಸಲ್ಪಡುತ್ತಿದೆ. ಸಭೆಗೆ ಲಾಲಾಲಜಪತಿರಾಯರು ಅಧ್ಯಕ್ಷರಾಗುವರು. ಪ್ರೇಕ್ಷಕರಿಗೆ ೫೦-೨೦-೧೫-೧೦-೫ ರೂ. ಗಳ ಟಿಕಿಟ್ಟುಗಳು ಏರ್ಪಡಿಸಲ್ಪಟ್ಟಿವೆ.

ಗಾರವನ್ನು, ಈ ದೇಶದ ಜನರಿಗೆ ಹರಾಜಿನ ಮೂಲಕವಾಗಿ ವಿಕ್ರಯಿಸಿರುವರು. ಇದರಲ್ಲಿ ತೊಲೆಯೊಂದಕ್ಕೆ 22 ರೂಪಾಯಿ 11 ಪೈಗಳಂತೆ ಬೆಲೆ ಬಿದ್ದಿದೆ. ಇದರಿಂದ ಒಂದು ಸವರಣ್ ತೂಕದ ಬಂಗಾರಕ್ಕೆ 13-13.6 ಪೈಗಳ ಬೆಲೆಯು ಬಿದ್ದಂತಾಗುವುದು.

(೨) ಇದಲ್ಲದೆ ಮುಂದೆ ಆಗಸ್ಟು ತಿಂಗಳ 4 ಮತ್ತು 19 ನೇ ತಾರೀಖುಗಳಲ್ಲಿಯೂ, ಅದರಿಂದಾಚೆಗೆ ಸೆಪ್ಟಂಬರ್ ಮೊದಲನೇ ತಾರೀಖಿನಲ್ಲಿಯೂ ಸರಕಾರದವರು ತಿರುಗಿ 3,750,000 ತೊಲೆಗಳ ತೂಕದಷ್ಟು ಬಂಗಾರವನ್ನು ಬೆಲೆಗೆ ಕೊಡುವುದಾಗಿ ಪ್ರಕಟಿಸಿರುವರು.

(೩) ಬಂಗಾರದ ಗಟ್ಟಿಗಳನ್ನೂ, ಸವರನ್ನುಗಳನ್ನೂ ಇತರ ದೇಶಗಳಿಂದ ಇಲ್ಲಿಗೆ ತರಿಸಕೂಡದೆಂಬ ನಿರ್ಬಂಧವನ್ನೂ ತಪ್ಪಿಸಿರುವರು. ನ್ಯೂಯಾರ್ಕಿಗೂ ಇಲ್ಲಿಗೂ ನಡೆಯುವ ನಾಣ್ಯಗಳ ಬದಲಾವಣೆಯಲ್ಲಿ ಈಗ ನ್ಯೂಯಾರ್ಕಿನಲ್ಲಿ ಸವರಣ್ ಒಂದಕ್ಕೆ ಸುಮಾರು 13-12-0 ರಂತೆ ಬೆಲೆ ಬೀಳುವ ಹಾಗಿದೆ. ಕಳೆದ ಜೂನ್ 25 ನೇ ತಾರೀಖಿನಲ್ಲಿ ಇಂಗ್ಲೆಂಡಿನಲ್ಲಿ ಒಂದು ಸವರನ್ನಿನ ಬೆಲೆಯು 13-12-0 ಮಾತ್ರವೇ ಇದ್ದಿತು.

ಈ ಕಾರಣಗಳಿಂದ ಇಂಡಿಯಾ ದೇಶದಲ್ಲಿಯೂ ಸ್ವಲ್ಪ ದಿನಗಳೊಳಗಾಗಿಯೇ ಸವರನ್ನುಗಳ ಬೆಲೆಯು 15 ರೂಪಾಯಿಗಳಿಗಿಂತ ಬಹಳ ಮಟ್ಟಿಗೆ ತಗ್ಗಿಹೋಗುವ ಸಂಭವವುಂಟು. ಆದುದರಿಂದ ಇಲ್ಲಿ ಸವರನ್ನುಗಳನ್ನು ತೆಗೆಯಬೇಕೆಂಬ ಆಸೆಯುಳ್ಳವರು ಸ್ವಲ್ಪ ದಿನಗಳವರೆಗೆ ನಿರೀಕ್ಷಿಸುವುದು ಒಳ್ಳೆಯದು.

ಇದು ಹೇಗಿದ್ದರೂ, ಇಲ್ಲಿನ ಜನರು ಸ್ಪಷ್ಟವಾಗಿ ತಿಳಿಯಬೇಕಾದ ಅಂಶವೇನೆಂದರೆ, ಇಂಡಿಯಾ ಸರಕಾರದವರು 10 ರೂಪಾಯಿಗಳ ಬೆಲೆಗೆ ತಾವು ಸವರನ್ನುಗಳನ್ನು ಕೊಡುವುದಾಗಿ ಹಿಂದೆ ಯಾವಾಗಲೂ ಪ್ರಕಟಿಸಿಲ್ಲ. ಇದಕ್ಕೆ ಹಿಂದೆ ಸವರಣ್ ಒಂದಕ್ಕೆ 15 ರೂಪಾಯಿಗಳ ಬೆಲೆಯನ್ನು ನಿರ್ಣಯಿಸಿದ್ದಾಗಲೂ ಕೂಡ 15 ರೂಪಾಯಿಗಳನ್ನು ತಂದು ಕೊಟ್ಟವರಿಗೆಲ್ಲಾ ಸವರನ್ನುಗಳನ್ನು ಕೊಡುವುದಕ್ಕೆ ಸರಕಾರದವರು ಬದ್ಧರಾಗಿರಲಿಲ್ಲ.

ಹೇಗಿದ್ದರೂ ಈಗ ಇಂಡಿಯಾ ಸರಕಾರದಲ್ಲಿ ಸವರನ್ನುಗಳನ್ನು 10 ರೂಪಾಯಿಗಳಿಗೆ ಸರಿಮಾಡುವ ಪ್ರಯತ್ನಗಳೇನೋ ನಡೆಯುತ್ತಿರುವುವು. ಇದೇ ವಿಚಾರದಲ್ಲಿ ನಾಣ್ಯ ನಿರ್ಣಯ ಸಭೆಯವರು (ಕರೆನ್ಸೀಕಮಿಷನ್) ಕೊಟ್ಟ ಸೂಚನೆಯನ್ನು ಅಂಗೀಕರಿಸಿ, ಇಂಡಿಯಾ ಸೆಕ್ರೆಟರಿಯವರು, ಒಂದು ಸವರನ್ನಿಗೆ 10 ರೂಪಾಯಿಗಳು ಸಮವಾಗುವಂತೆ ರೂಪಾಯಿಗಳ ಬೆಲೆಯನ್ನೇ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು, ಇಂಡಿಯಾ ಸರಕಾರಕ್ಕೆ ಸೂಚಿಸಿರುವರು. ಇದರಂತೆ ಆಚರಣೆಗೆ ತರುವುದಕ್ಕೆ ಎಷ್ಟೋ ತೊಂದರೆಗಳುಂಟು. ಆದುದರಿಂದ ಈ ಉದ್ದೇಶವು ಪೂರ್ತಿಹೊಂದುವುದಕ್ಕೆ ಎಷ್ಟು ದಿನಗಳು ಹಿಡಿಯಬಹುದೆಂದು ಈಗಲೇ ಹೇಳುವುದಕ್ಕೆ ಸಾಧ್ಯವಲ್ಲ. ಆದರೆ ಇಂಡಿಯಾ ಸರಕಾರದವರು, ಈಗ್ಗೆ ಕೆಲವು ದಿನಗಳ ಕೆಳಗೆ, ಸವರನ್ನುಗಳ ಬೆಲೆಯು 10 ರೂಪಾಯಿಗಳು ಮಾತ್ರವೇ ಇರಬೇಕೆಂಬ ನಿಬಂಧನೆಯನ್ನು, ಶೀಘ್ರದಲ್ಲಿಯೇ ನ್ಯಾಯ ವಿಧಾಯಕ ಸಭೆಯವರ ಮುಂದೆ ತಂದು ತೀರ್ಮಾನಿಸುವದಾಗಿ ಸೂಚಿಸಿದ್ದರು. ಈ ಎಲ್ಲಾ ಕಾರಣಗಳಿಂದ, ಇಂಡಿಯಾ ಸರಕಾರದವರು ರೂಪಾಯಿಗಳ ಬೆಲೆಯನ್ನು ಹೆಚ್ಚಿಸಿಯಾದರೂ, ಸವರನ್ನುಗಳ ಬೆಲೆಯನ್ನು 10 ರೂಪಾಯಿಗಳಿಗೆ ಸರಿ ಮಾಡುವ ಪ್ರಯತ್ನದಲ್ಲಿಯೇ ಇನ್ನೂ ಇರುವರೆಂದು ಸ್ಪಷ್ಟವಾಗಿ ತಿಳಿಯಬಹುದು.

ಪತ್ರವ್ಯವಹಾರ.

ಕೈ॥ ಪ್ಲೀಡರ್ ಸಿದ್ದನಂಜಪ್ಪನವರು.

ಚಿತ್ರದುರ್ಗದಲ್ಲಿ ಹೆಸರುವಾಸಿಯಾದ ವಕೀಲರೂ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡು ವೈಸ್‌ಪ್ರೆಸಿಡೆಂಟರೂ, ಎಕನಾಮಿಕ್ ಸೆಂಟ್ರಲ್ ಕಮಿಟಿ ಮೆಂಬರರೂ ಆಗಿದ್ದ ಮ॥ ರಾ॥ ಸಿದ್ದನಂಜಪ್ಪನವರು ೨-೩ ದಿನಗಳಿಂದ ಅಸ್ವಸ್ಥರಾಗಿದ್ದು ಡಾಕ್ಟರುಗಳಿಂದ ಬಹು ಎಚ್ಚರಿಕೆಯೊಡನೆ ಚಿಕಿತ್ಸೆ ಮಾಡಲ್ಪಟ್ಟಾಗ್ಯೂ ಗುಣ ಹೊಂದದೆ, ತಾ॥ ೧೩ ನೆ ಬೆಳಗ್ಗೆ ೯ ಘಂಟೆಗೆ ತಮ್ಮ ೪೫ ನೆಯ ವರ್ಷ ವಯಸ್ಸಿನಲ್ಲಿ ಶಿವಾಧೀನರಾದರು. ಈ ದುಃಖಕರವಾದ ವಾರ್ತೆಯು ೧೦ ನಿಮಿಷಗಳೊಳಗಾಗಿ ಊರಲ್ಲೆಲ್ಲಾ ಹರಡಿತು. ಪಟ್ಟಣದಲ್ಲಿರುವ ಎಲ್ಲಾ ಕೋಮಿನ ದೊಡ್ಡಮನುಷ್ಯರುಗಳೂ, ಸರ್ಕಾರಿ ಅಧಿಕಾರಿಗಳೂ ಇತರ ಜನರೂ ತಂಡತಂಡವಾಗಿ ಬಂದು ನೋಡಿ ಸಂತಾಪವನ್ನು ಹೊಂದಿದರು. ವರ್ತಕರು ಅಂಗಡಿಗಳನ್ನು ಮುಚ್ಚಿ ತಮ್ಮ ದುಃಖಪ್ರದರ್ಶನವನ್ನು ಮಾಡಿದರು. ಶವದೊಂದಿಗೆ ಅನೇಕ ಜನರು ಸ್ಮಶಾನದವರೆಗೂ ಹೋಗಿದ್ದರು. ಮಧ್ಯಾಹ್ನಕ್ಕೆ ಯಥಾವಿಧಿಯಾಗಿ ಶವ ಸಂಸ್ಕಾರವು ನಡೆಯಿತು. ಇವರು ವಿದ್ಯಾವಂತರಾಗಿಯೂ, ಸತ್ಯವಾದಿಗಳಾಗಿಯೂ, ಪರೋಪಕಾರಿಗಳಾಗಿಯೂ, ದಯಾದಾಕ್ಷಿಣ್ಯ ನಿರಹಂಕಾರ ಸೌಶೀಲ್ಯಾದಿ ಸದ್ಗುಣಗಳಿಂದ ಕೂಡಿದವರಾಗಿಯೂ, ದೇಶಹಿತೈಷಿಗಳಾಗಿಯೂ ಇದ್ದರು. ಚಿತ್ರದುರ್ಗ ಡಿಸ್ಟ್ರಿಕ್ಟಿನ ವೀರಶೈವರಲ್ಲಿ ಅಗ್ರಗಣ್ಯರಾಗಿ ಘನತೆಯನ್ನು ಪಡೆದಿದ್ದ ಇವರ ಅಕಾಲಮರಣದಿಂದ ವೀರಶೈವ ಮತಕ್ಕೇ ಒಂದು ನಷ್ಟವುಂಟಾಯಿತೆಂದು ಹೇಳಲು ಅಡ್ಡಿಯಿಲ್ಲ. ಇಂತಹ ಗುಣಾಢ್ಯರೂ, ಮತೋನ್ನತಿಯ ಕಾರ್ಯಗಳಲ್ಲಿ ಉತ್ಸಾಹಶೀಲರೂ ದೊರೆಯುವುದು ವಿರಳ. ದುಸ್ಸಹವಾದ ಇವರ ವಿಯೋಗದುಃಖವನ್ನನುಭವಿಸಲು ಒಂದು ವಾರದ ಕೆಳಗೆ ಹೆತ್ತು ಪುತ್ರವಿಯೋಗವನ್ನು ಹೊಂದಿ ಅಸ್ವಸ್ಥತೆಯಲ್ಲಿರುವ ಇವರ ಪತ್ನಿಯೂ, ಚಿಕ್ಕ ವಯಸ್ಸಿನ ೩ ಜನ ಮಕ್ಕಳೂ ಇದ್ದಾರೆ. ಇವರಿಗೆ ದುಃಖೋಪಶಮನ ಶಕ್ತಿಯನ್ನೂ, ಮೃತರ ಆತ್ಮಕ್ಕೆ ಶಾಂತಿಯನ್ನೂ ಪರಮೇಶ್ವರನು ಕರುಣಿಸಲಿ.

ರಾಮಾಯಣ ಪುರಾಣ.

ಮ॥ ರಾ॥ ಮುಜರಾಯಿ ಭಕ್ಷಿ ಎಚ್. ಲಿಂಗರಾಜೇ ಅರಸಿನವರಿಂದ ವಿರಚಿತವಾಗಿರುವ ಕನ್ನಡ ರಾಮಾಯಣವನ್ನು ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ದೊಡ್ಡ ಅಂಗಡೀಬೀದಿಯಲ್ಲಿರುವ ಭಕ್ತಾದಿಗಳು ಈಗ್ಗೆ ೨ ತಿಂಗಳಿಂದ ಓದಿಸಿ ಇದೇ ಮಾಹೆ ೧೫ ನೆ ತಾ॥ ಭಾನುವಾರ ಭಕ್ತಾದಿಗಳ ಸಹಾಯದಿಂದ ಪಟ್ಟಾಭಿಷೇಕ ನಡೆಸಿ ಬ್ರಾಹ್ಮಣರಿಗೂ, ಲಿಂಗಾಯತರಿಗೂ, ಸಾವಿರಾರು ಜನ ಬಡಬಗ್ಗರಿಗೂ ಮ॥ ರಾ॥ ಗಳಾದ ಅಕ್ಕಿ ಅಂಗಡಿ ಟಿ. ನಾರಾಯಣಪ್ಪನವರು, ಮಂಡಿ ದಾಸಪ್ಪನವರು, ಮ್ಯುನಿಸಿಪಲ್ ಕೌನ್ಸಿಲರ್ ಸೆಟ್ಟಿಟ್ಟಿ-ಸಿದ್ದಪ್ಪನವರು ಆ ದಿನ ಮಧ್ಯಾಹ್ನ ೧ ಘಂಟೆಯಿಂದ ಸಾಯಂಕಾಲ ೫ ಘಂಟೆ ವರೆಗೂ ಮೃಷ್ಟಾನ್ನ ಸಂತರ್ಪಣೆ ನಡೆಸಿದರು. ಇದೇ ರಾತ್ರಿ ಮಂಗಳಾರತಿಗೆ ಮ॥ ರಾ॥ ಗಳಾದ ಎಚ್. ಲಿಂಗರಾಜೇಅರಸಿನವರು, ಬಿ. ಸುಬ್ಬರಾಯರು, ಬಿ. ರಾಮಕೃಷ್ಣರಾಯರು, ಎಚ್. ಸೀತಾರಾಮಯ್ಯನವರು, ಗೋಪಾಲಕೃಷ್ಣೇ ಅರಸಿನವರು, ಟಿ. ಕೃಷ್ಣರಾಯರು, ಎಂ.ಎಸ್. ಕೃಷ್ಣರಾಯರು. ವೇ॥ ಸಿದ್ಧಲಿಂಗಶಾಸ್ತ್ರಿಗಳು, ಎಂ. ಕೆ. ಮಾಧವರಾಯರು, ಇವರೇ ಮೊದಲಾಗಿ ಇನ್ನೂ ಅನೇಕ ದೊಡ್ಡಮನುಷ್ಯರೂ, ವರ್ತಕ ಮಹಾಜನಗಳೂ ದಯಮಾಡಿಸಿದ್ದರು. ಮಂಗಳವಾದ ನಂತರ ಎಲ್ಲರಿಗೂ ಹಾರಾ ತುರಾಯಿ ಪ್ರಸಾದ ಕೊಡಲಾಯಿತು. ಅನಂತರ ಭಕ್ತಾದಿಗಳ ಸಹಾಯದಿಂದ ತಯಾರಿಸಿದ ಬಿರುದುಬಿಲ್ಲೆಗಳನ್ನು ಸಿದ್ಧಲಿಂಗಶಾಸ್ತ್ರಿಗಳ ಮೂಲಕ ಪುರಾಣ ಓದಿದವರಿಗೂ, ಅರ್ಥವನ್ನು ಹೇಳಿದವರಿಗೂ ಕೊಡಿಸಲಾಯಿತು. ೧೬ ನೆ ತಾ॥ ಮಂಗಳವಾರ ಬೆಳಗ್ಗೆ ೮ ಘಂಟೆಯಿಂದ ೧೨ ಘಂಟೆ ವರೆಗೂ ಅನೇಕ ಸಾಧು ಜನಗಳಿಗೆ ಅರ್ಧ ಸೇರು ಅಕ್ಕಿ ಲವಾಜಮೆಯನ್ನು ಮ॥ ರಾ॥ ಟಿ. ನಾರಾಯಣಪ್ಪನವರು ತಾವೇ ಖುದ್ದಾಗಿ ಕೊಟ್ಟರು. ಇದೇ ರೀತಿಯಾಗಿ ಜನಗಳು ಶಿವಪುರಾಣ ಮತ್ತು ವಿಷ್ಣುಪುರಾಣಗಳನ್ನು ಓದಿಸಿ ಸದ್ಗುಣಶಾಲಿಗಳಾಗಿ ಇಹದಲ್ಲಿ ಸೌಖ್ಯವನ್ನೂ, ಪರಲೋಕದಲ್ಲಿ ಸದ್ಗತಿಯನ್ನೂ ಹೊಂದಲೆಂದು ಕೋರಿಕೆ.

ಹಂಟಿಂಗ್ ಗಡಿಯಾರ.



ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲ್ಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳ ವರೆವಿಗೂ ಬಾಳಿಕೆ ಬರುವದು. ಕ್ರಯ ೧ ಕ್ಕೆ ೬-೦-೦.

ವಿಳಾಸ:-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ॥ ಬಾ॥ ನಂ. 265,
20 ಮದರಾಸು.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ಬೆಸ್ಟ್ ಪೌಂಟನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಪೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು.



ಕ್ರಯ 1 ಕ್ಕೆ ರೂ. 0—8—0.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
20 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಸ್ಟರ ಮಾಡಲ್ಪಟ್ಟಿ 39

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಜಾಗವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಕರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿಡ್ಡು, ಗುದದ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಜೊತೆ ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಆಗಸ್ಟ್ ತಾ॥ ೨೨ರಿಂದ ೧೯೨೦ನೆಯ ಆಗಸ್ಟ್ ತಾ॥ ೨೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ನಿಜಶ್ರಾವಣ ಶುದ್ಧ ನವಮಿಯಿಂದ ನಿಜಶ್ರಾವಣ ಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
22	ಭಾನು	ನವ	60	ಅನೂ	25-1	7
23	ಸೋಮ	ನವ	3-54	ಜ್ಯೇ	30-58	8
24	1 ಮಂಗಳ	ದಶ	8-48	ಮೂ	37-24	9
25	2 ಬುಧ	ಏಕಾ	13-52	ಪೂಷಾ	43-58	10
26	3 ಗುರು	ದ್ವಾದ	18-47	ಉಷಾ	50-23	11
27	4 ಶುಕ್ರ	ತ್ರಯೋ	23-17	ಶ್ರವ	56-4	12
28	5 ಶನಿ	ಚತು	29-53	ಧನಿ	60	13

(1) ಮಂಗಳಗೌರೀವ್ರತಂ. (2) ಸರ್ವತ್ರೈಕಾದಶಿ. (3) ಪ್ರದೋಷಃ. (4) ರುಗುಪಾಕರ್ಮ, ವರಮಹಾಲಕ್ಷ್ಮೀವ್ರತಂ. (5) ಶ್ರಾವಣಶನಿವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯತ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚೆತ್ತ್ರೀಯಂಸದಾಪುರೀಗೆ ಗೌರೀಶಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಆಗಸ್ಟ್ ತಾರೀಖು ೨೯ ನೆಯ ಭಾನುವಾರ. (ಸಂಚಿಕೆ ೩೪

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಅವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
34 ವೈದ್ಯಶಾಲಾ, ಮೈಸೂರು.

ಹೊಸಶೋಧ ! * ಓಂ * ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
6 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಶಂಭಾಸಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು. 6

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.

ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.
ರಾ॥ ಬ॥ ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.
ಸ್ವಕರ್ತವ್ಯ, ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 42

ನಾವು ಎ. ಆಲ್ ಬ್ರುಕ್ಕ್ಯಯರ್ ಕ್ಯ, ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜೆಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
40 ಸಾ॥ ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ, ಜಿಲ್ಲಾ ಗುಲ್ಬರ್ಗಾ.

21 ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ 1—0—0.

ವಿಳಾಸ—ರಾಜ್‌ವಾಚ್ ಅಂಡ್ ಕೊ, 3 ಇರುಳಪ್ಪನ ಬೀದಿ ಮದರಾಸು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ **ಸತ್ಯಮೇವ ಜಯ್ಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣವನ್ನು ಹಿಂ

ಧಾತುಪೌಷ್ಟಿಕ, ಕಾಮೋತ್ತೇಜಕೊಂಡು ಕರುಣಾಢ್ಯಕವಾದ

ಪಥ್ಯ ಇಂದ್ರಿಯಸ್ತ[illegible], ಕಿಟ್ಟರ ರುದ್ರಪ್ಪನ[illegible] ಇಲ್ಲಾ.
[illegible] ಮಂಟಪದಲ್ಲಿ ರಚಿಸಿದ್ದ ಸಿಸ್ಮಿ[illegible]

ಜನನೇಂದ್ರಿಯದ ಶಿಥಿಲತೆ, ಸ್ವಿದಿಕಮಂಡಳಿಯವರು ಮಂಗಳವಂ ಪಾಪ್ನಾವಸೆ, ಮೊದಲಾದುವು ಈ ಗು[illegible]ರಾದ ವೇ॥ ಸಿದ್ಧರಾಮಯ್ಯನವರು ಈಗ್ಗೆ ಧಾತುಪೌಷ್ಟಿಕ, ವೀರ್ಯವರ್ಧಕ, ಸ್ಥಳದ ಪ್ರಮುಖರೂ ಕೈ॥ ಸಾಹುಕಾರ್ ನೋತ್ಸಾಹಕ, ಇಂದ್ರಿಯಸ್ತಂಭಕ ಬಿನ್ನಹದಂತೆ ಮಹಾಸ್ವಾಮಿ ಪಾದವು ಈಲೆ ಹುಟ್ಟಿರುವ ಎಲ್ಲ ತರಹದ ಬಗ್ಗೆ ಸಮಯಾನುಕೂಲವಾಯಿತು ಎಂಬ ವಿಷಕಟಿಶೂಲೆ, ವಾತರೋಗವು, ಮು[illegible]ಪನ್ಯಾಸವನ್ನು ಮಾಡಿದರು. ಮೇಲಣ ಗವಿ[illegible] ಶಾಂತಿಯುಕ್ತ[illegible] ಆಷ್ಟಾವರಣ ವಿಚಾರವಾಗಿ ಶಾಸ್ತ್ರೀಯವಾದ ಗುತ್ತದೆ. ಒಬ್ಬರಿಗೆ [illegible] ಮಾಡಿದರು. ನಂತರ ಬೆಂಗಳೂರಿನ ಕೈ॥ ಧರ್ಮಗೆಗಳಿಗೆ ೪ ರೂಪಾಯಿ. ಈ ಗು[illegible]ರುವ ಮತ್ತು ವೀರಶೈವ ಅಸೋಸಿಯೇಷನ್ನಿಲ ಉಪಯೋಗಿಸಿದರೆ ಉತ್ತಮ[illegible]ದ್ಯೆಯಿಂದ ಸಮಾಜಕ್ಕೆ ಉಂಟಾಗತಕ್ಕ

ಇಂದ್ರಿಯಸ್ತಂಭನ್ಯಾಗಿ ಶ್ರೀ ಮಹಾಪಾದವು ಅವ್ಯಾಹ

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದು ಸೌಖ್ಯಗಳನ್ನೂ, ಈ ಪೀಠವನ್ನು ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಿಪುಣತೆ[illegible] ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
47 ಬಿ. ಪೋಸ್ಟ್ ಶಿರ್ಶಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕ್ಲೋಶೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ಲೆವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವಿಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ಆಣೆ; ರತ್ನಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಶ್ನೋತ್ತರಿ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿ[illegible]ವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ [illegible] ಯಾರೂ ಬರೆಯಬಾರದು.

[illegible]ಗಳನ್ನು ಏಮೆ ಮಾ[illegible]ಬಸವಶಾಸ್ತ್ರಿ,
ಆಫೀಸರಲ್ಲದ ಇತರರಿಗೂ [illegible] ಮೈಸೂರು.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಆಗಸ್ಟ್ ತಾ|| ೨೯ ನೆಯ ಭಾನುವಾರ.

ಸಾಮ್ರಾಜ್ಯಶಾಸನಸಭೆ.

ಪೂರ್ವಪದ್ಧತಿಯ ಪ್ರಕಾರ ಕೂಡುತ್ತಿದ್ದ ಸಾಮ್ರಾಜ್ಯ ಶಾಸನಸಭೆಗಳಲ್ಲಿ ಕಟ್ಟಕಡೆಯದಾದ ಈ ಸಭೆಯು ಕಳೆದ ತಾ|| ೨೦ ರಲ್ಲಿ ಸಿಮ್ಲಾ ಪಟ್ಟಣದಲ್ಲಿ ವೈಸ್ರಾಯರ ಅಧ್ಯಕ್ಷತೆಯಿಂದ ಆರಂಭಗೊಂಡಿತು. ವೈಸ್ರಾಯರು ಆರಂಭೋಪನ್ಯಾಸದಲ್ಲಿ ಕಾಲೋಚಿತವಾದ ಮುಖ್ಯವಿಷಯಗಳನೇಕವನ್ನು ಹಿಡಿದು ಪ್ರಸ್ತಾವಿಸಿದರು. ಮೊಟ್ಟಮೊದಲು ಶ್ರೀಮಾನ್ ಯುವರಾಜರವರು ವಿದೇಶಸಂಚಾರದಿಂದ ಹೆಚ್ಚು ಬಳಲಿ ಈ ದೇಶಕ್ಕೆ ಸದ್ಯಃ ಬಾರದೆ ನಿಂತುಹೋದುದಕ್ಕಾಗಿ ಅವರನ್ನು ಸ್ವಾಗತಿಸಲು ಕುತೂಹಲಗೊಂಡಿದ್ದ ಭಾರತೀಯರಿಗೆ ಆಶಾಭಂಗವಾದುದನ್ನೂ ಆದರೂ ಚಕ್ರವರ್ತಿಯವರ ಚಿಕ್ಕಪ್ಪಂದಿರಾದ ಡ್ಯೂಕ್ ಆಫ್ ಕೆನ್ನಾಟ್‌ರವರು ದಯಮಾಡಿಸಿ ನೂತನ ಸಂಸ್ಕರಣಗಳನ್ನಾರಂಭಿಸುವುದಕ್ಕಿರುವುದರಿಂದ ಅವರಿಗೆ ತಕ್ಕ ಸ್ವಾಗತವನ್ನು ನಾವೆಲ್ಲರೂ ಮಾಡಬೇಕಾಗಿರುವುದನ್ನೂ ಸೂಚಿಸಿದರು. ಬಳಿಕ ವೈಸ್ರಾಯಿ ಕಾರ್ಯಕಾರಿ ಸಭೆಗೆ ಅ|| ಶರ್ಮರವರೂ ಸಪ್ರೂರವರೂ ಸಭಿಕರಾಗಿ ಸೇರಿದುದನ್ನು ಕುರಿತು ಸಂತೋಷವನ್ನು ವ್ಯಕ್ತಪಡಿಸಿ, ಅ|| ಸೀತಾನಾಥರಾಯರವರ ಮೃತಿಗಾಗಿ ವಿಷಾದವನ್ನು ತೋರಿಸಿ, ನೂತನ ರಾಜಕೀಯ ಸಂಸ್ಕರಣ ನಿಬಂಧನೆಗಳು ಪಾರ್ಲಿಮೆಂಟಿನವರಿಂದ ಇಷ್ಟು ಬೇಗನೆ ಅನುಮೋದನೆಗೊಂಡು, ಶೀಘ್ರವಾಗಿ ನಮ್ಮ ದೇಶದಲ್ಲಿ ಅನುಷ್ಠಾನಕ್ಕೆ ಬರಲಿಕ್ಕಿರುವುದನ್ನು ಕುರಿತು ತಮಗುಂಟಾಗಿರುವ ಆನಂದವನ್ನು ಹೊರಗೆಡಹಿದರು. ತಮ್ಮ ಕಾಲದಲ್ಲಿ ಬೀಜಾವಾಪನೆಗೊಂಡ ಈ ಸಂಸ್ಕರಣವು ತಮ್ಮ ಕಣ್ಣೆದುರಿಗೇ ಮೊಳೆತು ಗಿಡವಾಗುವುದನ್ನು ಇವರು ನೋಡಬೇಕೆಂದಿರುವುದರಿಂದ ಇಷ್ಟು ಬೇಗನೆ ಅದು ವಿಘ್ನಗಳನ್ನೆಲ್ಲಾ ದಬ್ಬಿ ವ್ಯವಹಾರಕ್ಕೆ ಬರುವಂತಾದುದನ್ನು ಕಂಡು ಸಂತೋಷಿಸುವುದು ಸಹಜವೇ ಸರಿ. ಈ ಸಂಸ್ಕರಣವು ಆಶಾಭಂಗಕರವೆಂದೂ ಅದನ್ನು ವ್ಯರ್ಥಗೊಳಿಸಬೇಕೆಂದೂ ಇರುವ ಈ ದೇಶದ ಕೆಲ ಜನರಿಗೆ ಮಾತ್ರ ವೈಸ್ರಾಯರ ಈ ಸಂತೋಷವು ಹಿತವಾಗಿರಲಾರದು. ಬಳಿಕ ವೈಸ್ರಾಯರು ಪ್ರಕೃತ ಕಾಲದಲ್ಲಿ ಮುಖ್ಯಸಮಸ್ಯೆಗಳಾಗಿ ನಿಂತಿರುವ ಪಂಜಾಬಿನ ವಿಷಯವನ್ನೂ ತುರ್ಕಿ ವಿಷಯವನ್ನೂ ಕುರಿತು ಮಾತನಾಡಿರುವರು. ಹಂಟರ್ ಕಮಿಟಿಯವರು ಮಾಡಿದ ವರದಿಯ ಮೇಲೆ ಇಂಡ್ಯಾ ಸರ್ಕಾರದವರೂ ಸ[illegible] ಪ್ರಭುತ್ವದವರೂ ಪಟ್ಟಿರುವ ಅಭಿಪ್ರಾಯಗಳನ್ನು ಒಪ್ಪದವರು, ಆ ತೀರ್ಮಾನಗಳನ್ನು ಕುರಿತು ಅಸಮಾಧಾನವನ್ನು ಪಟ್ಟಿರುವವರು ಇಲ್ಲಿ ಕೆಲವರು ಇರುವರೆಂದೂ, ಆದರೆ ಹಿಂದೆ ಜರುಗಿಹೋದುದಕ್ಕೇ ವಿಮರ್ಶೆಮಾಡುತ್ತಾ ಕುಳಿತುಕೊಳ್ಳುವುದಕ್ಕಿಂತಲೂ ನೂತನ ಶಾಸನಗಳ ಮೂಲಕ ದೇಶಹಿತಸಾಧನೆ ಮಾಡಿಕೊಳ್ಳುವುದರ ಕಡೆಗೆ ದೃಷ್ಟಿಯನ್ನು ತಿರುಗಿಸುವುದೇ ವಿಹಿತವೆಂದೂ ಉಪದೇಶಮಾಡಿ ಅದನ್ನು ಅಷ್ಟಕ್ಕೇ ಮುಗಿಸಿದರು. ಲಾರ್ಡುಗಳ ಸಭೆಯಲ್ಲಿ ಜನರಲ್ ಡಯರಿನ ವಿಷಯದಲ್ಲಿ ಪಟ್ಟ ದುರ್ಣಯಾಭಿಪ್ರಾಯವನ್ನು ಕುರಿತು ಒಂದು ಮಾತನ್ನೂ ವೈಸ್ರಾಯರು ಆಡದಿದ್ದುದೂ, ಅಮೃತಸರ ಮೊದಲಾದ ಕಡೆಯಲ್ಲಿ ನಡೆದುಹೋದ ಅತ್ಯಾಚಾರಕ್ಕೆ ಈಗಲಾದರೂ ತಾವು ವಿಷಾದವನ್ನು ವ್ಯಕ್ತಪಡಿಸದೆ ಹೋದುದೂ ಸಮಾಧಾನಕರವಾಗಲಿಲ್ಲ.

ತುರ್ಕಿ ವಿಷಯವನ್ನು ಮಾತನಾಡುವಾಗ್ಗೆ-ತುರ್ಕಿ ಸಂಧಿ ಸಂಬಂಧವಾಗಿ ಸಾಮ್ರಾಜ್ಯಪ್ರಭುತ್ವದವರಿಗೆ ನಾವು ಹೇಳಬೇಕಾಗಿದ್ದುದನ್ನೆಲ್ಲಾ ಹೇಳಿ ಮುಗಿಸಿರುವುದು ನಿಮಗೆಲ್ಲಾ ತಿಳಿದೇ ಇರುವುದೆಂದೂ, ಹೀಗಿದ್ದರೂ ಇಲ್ಲಿಯ ಮಹಮ್ಮದೀಯರು ಸಹಾಯನಿರಾಕರಣ ಪ್ರಯತ್ನದಲ್ಲಿ ವ್ಯರ್ಥವಾಗಿ ತೊಡಗಿರುವುದು ಅನ್ಯಾಯವೆಂದೂ, ಅದು ದೇಶಕ್ಕೂ ಸಂಘಕ್ಕೂ ಅತ್ಯಂತಾನರ್ಥಕಾರಿಯೆಂದೂ, ದೇಶದ ದೂರದರ್ಶಿಗಳಾದ ಬುದ್ಧಿವಂತರನೇಕರು ಇದರ ವಿಷಯದಲ್ಲಿ ಪ್ರತಿಕೂಲರಾಗಿರುವುದರಿಂದ ನಾವು ಉಪೇಕ್ಷಿಸಿರುತ್ತೇವೆಂದೂ ಹೇಳಿದುದಲ್ಲದೆ, ಈ ತತ್ತ್ವದಂತೆ ವಕೀಲರೆಲ್ಲರೂ ತಮ್ಮ ಉದ್ಯೋಗವನ್ನು ಬಿಡುವುದುಂಟೆ? ಎಂದು ಉದಾಹರಿಸಿ, ಆಚರಣಯೋಗ್ಯವಲ್ಲದ ಈ ತತ್ತ್ವಕ್ಕಾಗಿ ಪಾಟುಪಡುವುದು ವ್ಯರ್ಥವೆಂದೂ, ಇದರ ವಿಷಯದಲ್ಲಿ ಏನು ಮಾಡಬಹುದೋ ಅದನ್ನು ನಮಗೇ ಸ್ಟೇಟ್ ಸೆಕ್ರೆಟರಿಯವರು ವಹಿಸಿಬಿಟ್ಟಿರುವರೆಂದೂ ಹೇಳಿದರು. ಇದರಿಂದ ಸಹಾಯನಿರಾಕರಣ ಚಳವಳಿಯ ವಿಷಯದಲ್ಲಿ ಇಂಡ್ಯಾ ಸರ್ಕಾರದವರು ಸದ್ಯಃ ಉಪೇಕ್ಷೆಯನ್ನೇ ಮದ್ದನ್ನಾಗಿ ತಿಳಿದಿರುವರೆಂದು ಗೊತ್ತಾಗುತ್ತದೆ.

ಬಳಿಕ ಆರ್ಥಿಕ ಸ್ಥಿತಿಯನ್ನು ಕುರಿತು ಮಾತನಾಡಿದುದರಲ್ಲಿ-ಕಳೆದ ಜೂನ್ ತಿಂಗಳ ಕಡೆಯ ವರೆಗೆ ಈ ದೇಶದಿಂದ ಹೊರಕ್ಕೆ ಕಳುಹಿಸಿಕೊಟ್ಟ ಸಾಮಾನುಗಳಿಗಿಂತ ಹೊರಗಣಿಂದ ಇಲ್ಲಿಗೆ ಬಂದ ಸಾಮಾನುಗಳೇ ೩ ಕೋಟಿ ರೂ. ಬೆಲೆಯಷ್ಟು ಹೆಚ್ಚಾಗಿದ್ದಿತೆಂದೂ, ಯುದ್ಧಕಾಲದಲ್ಲಿ ಈ ದೇಶದಿಂದ ವಿಶೇಷವಾಗಿ ಸಾಮಗ್ರಿಗಳನ್ನು ತರಿಸಿಕೊಳ್ಳುತ್ತಿದ್ದವರು ಈಗ ಬೇಡವೆಂದು ಹೇಳುತ್ತಿದ್ದಾರೆಂದೂ, ಜಪಾನಿನವರು ಈ ದೇಶದ ಹತ್ತಿಯನ್ನು ಕೊಳ್ಳುವುದನ್ನೇ ತಪ್ಪಿಸಿಬಿಟ್ಟ[illegible] ಅದರಿಂದ ಇಲ್ಲಿ ಹತ್ತಿಯು ಬಿದ್ದುಹೋಗಿದೆ[illegible]ಯಿತು. ಅನಂತದಲ್ಲಿ ಕ್ಷಾಮಬಾಧೆ ಹೆಚ್ಚ ಬಾರದೆನ್ನುವುದ[illegible] ಬೆಳೆಗಳನ್ನು ಸಿದ್ಧಲಿಂ ಇಲ್ಲಿಂದ ಆಹಾರ್ಯ ವಸ್ತುಗಳ[illegible] ಅರ್ಥವನ್ನು ಹೇಳಿದವರ[illegible]ವೆಂದೂ ತಿಳಿಯಿಸಿದರು. ನಾಣ್ಯಗಳ ಮತ್ತು ಚಿನ್ನ ಬೆಳ್ಳಿಗಳ ವಿಷಯವಾಗಿ ಮಾತನಾಡುವಾಗ್ಗೆ-ಚಿನ್ನ ಬೆಳ್ಳಿಗಳನ್ನು ಹೊರಗಣಿಂದ ಈ ದೇಶಕ್ಕೆ ತರಿಸಿಕೊಳ್ಳಲು ಇದ್ದ ನಿರ್ಬಂಧವನ್ನು ತಪ್ಪಿಸಿರುವುದಲ್ಲದೆ, ಸವರನ್ನುಗಳ ಬೆಲೆಯನ್ನು ೧೫ ರೂ. ನಿಂದ ೧೦ ರೂ. ಗೆ ಇಳಿಯಿಸುವವರಾಗಿದ್ದೇವೆಂದೂ, ಕಳೆದ ೨ ತಿಂಗಳ ಕಾಲದಲ್ಲಿ ನೋಟುಗಳಿಗೆ ಪ್ರತಿಯಾಗಿ ೧೨ ಕೋಟಿಯೂ, ೩೮ ಲಕ್ಷ ಬೆಳ್ಳಿಯ ರೂ. ಗಳು ಬಂದಿವೆಯೆಂದೂ, ನಮ್ಮಲ್ಲಿ ನಾಣ್ಯಗಳ ಸಮೃದ್ಧಿಯು ಸಮರ್ಪಕವಾಗಿದೆಯೆಂದೂ, ಈ ಹಿಂದೆ ಸರ್ಕಾರದವರು ಮಾಡಿದ್ದ ಅಪ್ಪಣೆಯ ಪ್ರಕಾರ ೬೦ ಲಕ್ಷ ಸವರನ್ನುಗಳನ್ನು ರೂ. ಗಳನ್ನಾಗಿ ಜನರು ಮಾರ್ಪಡಿಸಿಕೊಂಡರೆಂದೂ ಹೇಳಿರುತ್ತಾರೆ. ನಾಣ್ಯದ ವಿಷಯದ ಶಾಸನವು ಈ ಸಭೆಯಲ್ಲೇ ಚರ್ಚಿಸಲ್ಪಡಲಿಕ್ಕಿರುವುದರಿಂದ ಇಲ್ಲಿ ವಿಧಿಯಾಗಿ ಏರ್ಪಟ್ಟರೆ ಸರ್ಕಾರದ ಉದ್ದೇಶ ಪ್ರಕಾರ ಸವರನ್ನಿನ ೧೦ ನೆ ೧ ಭಾಗದ ಬೆಲೆಯು ೧ ರೂಪಾಯಿಗೆ ಮಾಡಲ್ಪಡುತ್ತದೆ.

ಕಡೆಗೆ ದೇಶದ ಕೂಲಿಕಾರ ಜನರ ಕಷ್ಟವನ್ನು ನಿವಾರಣೆ ಮಾಡುವ ವಿಷಯದಲ್ಲಿ ಯಜಮಾನರುಗಳು ಉದಾರಚಿತ್ತರೂ, ಕರುಣಾಶಾಲಿಗಳೂ ಆಗಿರಬೇಕೆಂದೂ, ಅವರು ಮುಷ್ಕರ ಹಿಡಿದು ಕೆಲಸ ಬಿಟ್ಟ ಮೇಲೆ ಅವರು ಹೇಳಿದಂತೆ ಇವರು ಒಪ್ಪಿಕೊಳ್ಳುವುದಕ್ಕಿಂತಲೂ ಮೊದಲೇ ಸ್ವಲ್ಪದಯೆಯನ್ನು ತೋರಿಸುವುದುತ್ತಮವೆಂದೂ ಹಿತಬೋಧೆ ಮಾಡಿರುವುದಲ್ಲದೆ, ಈ ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಈಗ ವಿಶೇಷ ಪ್ರಯತ್ನಗಳನ್ನು ಮಾಡಬೇಕಾದ ಅವಶ್ಯಕತೆಯನ್ನು ಸೂಚಿಸಿದರು. ಆಫ್ಘನ್ ದೇಶಕ್ಕೆ ಭರತಖಂಡದಿಂದ ಕೈಬರ್ ಕಣಿವೆಯ ಮಾರ್ಗವಾಗಿ ಜಾಮ್ರೂದು ಪಟ್ಟಣದವರೆಗೆ ಲೋಹಮಾರ್ಗವನ್ನು ಸ್ಥಾಪಿಸಲು ಸ್ಟೇಟ್ ಸೆಕ್ರೆಟರಿಯವರ ಅಪ್ಪಣೆ ದೊರೆದಿರುವುದನ್ನೂ, ಅಲ್ಲಿಯವರೆಗೆ ಆಫ್ಘನ್ ಪ್ರಭುತ್ವದವರೂ ಅತ್ತಣಿಂದ ತಮ್ಮ ರೈಲ್ವೆಯನ್ನು ಏರ್ಪಡಿಸಿದರೆ ಉಭಯ ದೇಶಗಳವರಿಗೂ ಸಂಚಾರಾನುಕೂಲ್ಯವಾಗುವುದೆಂದು ವೈಸ್‌ರಾಯರು ತಿಳಿಯಪಡಿಸಿರುವರು. ಇದರಿಂದ ಆ ದೇಶಕ್ಕೂ ಈ ದೇಶಕ್ಕೂ ಸಂಬಂಧಗಳು ಹೆಚ್ಚುವುದಕ್ಕೆ ಅವಕಾಶವಾಗುವುದೆಂದು ಹೇಳಬಹುದು.

ವೈಸ್‌ರಾಯರ ಉಪನ್ಯಾಸವೆಲ್ಲಾ ಮುಗಿದ ಬಳಿಕ ಆ ದಿನವೂ ಮರು ದಿನದಿಂದಲೂ ಪ್ರಶ್ನೋತ್ತರಗಳು ನಡೆದು ಕೆಲ ಬಿಲ್ಲುಗಳು ಶಾಸನಗಳಾಗಿ ಏರ್ಪಟ್ಟುವು.

ರಾಮಾಯಣ ಸಂಗ್ರಹ.

ಮ|| ಮುಜರಾಯಿ ಭಕ್ಷಿ ಎಚ್. ಲಿಂಗರಾಜ ಅರಸಿನವರಿಂದ ನೂತನವಾಗಿ ರಚಿಸಲ್ಪಟ್ಟಿರುವ ರಾಮಾಯಣ ಸಂಗ್ರಹವು ಎಷ್ಟು ಬೇಗನೆ ಜನಾನುರಾಗಕ್ಕೆ ಪಾತ್ರವಾಗುತ್ತಬಂದಿರುವುದೆಂಬದನ್ನು ನೋಡಿ ನಾವು ಬಹಳ ಸಂತೋಷಿಸುತ್ತೇವೆ. ಈಗಾಗಲೇ ೨-೩ ವಿದ್ಯಾಪೀಠದವರು ಅದನ್ನು ಪಾಠಶಾಲೆಗಳಿಗೆ ಪಠ್ಯಪುಸ್ತಕವನ್ನಾಗಿ ಅಂಗೀಕರಿಸಿರುವರು. ಆಸ್ತಿಕ ಜನರು ಅತ್ಯಾದರದಿಂದ ಪಾರಾಯಣಗಳಿಗೂ, ಪುರಾಣಶ್ರವಣಕ್ಕಾಗಿಯೂ ವಿಶೇಷವಾಗಿ ಅದನ್ನು ಉಪಯೋಗಿಸಿಕೊಳ್ಳುತ್ತಿರುವರು. ಹಳೆ ಅಗ್ರಹಾರದಲ್ಲಿ ಅತಿ ವೈಭವದಿಂದ ಪುರಾಣಶ್ರವಣವು ನಡೆದು ಮೊನ್ನೆತಾನೇ ಮುಗಿದಿತು. ಮಂಡಿಬೀದಿಯಲ್ಲಿ ಶ್ರೀ ಕಾಳಿಕಾಂಬಾ ದೇವಸ್ಥಾನದಲ್ಲಿ ವಿಶ್ವಕರ್ಮ ಮತಸ್ಥರೂ ಇತರರೂ ಸೇರಿ ಮ|| ಚವಳಿ ಅಂಗಡಿ ತಮ್ಮಯ್ಯನವರಿಂದ ಓದಿಸಿ, ಮ|| ಶಂಕರಾಚಾರ್ ಬಿ. ಎ. ಯವರಿಂದ ಅರ್ಥವನ್ನು ಹೇಳಿಸಿ, ೨ ತಿಂಗಳ ಕಾಲ ಶ್ರವಣ ಮಾಡಿ ಕಳೆದ ಭಾನುವಾರ ಪಟ್ಟಾಭಿಷೇಕ ಮಹೋತ್ಸವವನ್ನು ಜರುಗಿಸಿ ಪುರಾಣದ ಮಂಗಳವಂ ಮಾಡಿಸಿದರು. ಆ ದಿನ ೧-೨ ಸಹಸ್ರ ಜನರು ಸಭೆಯಲ್ಲಿ ಸೇರಿದ್ದರು. ಮ|| ಲೋಕಹಿತೈಷಿ ನಂಜುಂಡರಾಜೇ ಅರಸಿನವರು, ಮ|| ಎಚ್. ಲಿಂಗರಾಜೇ ಅರಸಿನವರೇ ಮೊದಲಾದ ರಾಜಬಂಧುವರ್ಗದವರೂ, ಮ|| ವಿ. ಎನ್. ನರಸಿಹ್ಮಯ್ಯಂಗಾರ್, ಮ|| ಶಿಲ್ಪವಿಶಾರದ ಬಿ. ಸುಬ್ಬರಾವ್ ಮೊದಲಾದ ಅನೇಕ ದೊಡ್ಡ ಮನುಷ್ಯರೂ, ಅನೇಕ ಮಂದಿ ಆಸ್ಥಾನ ವಿದ್ವಾಂಸರುಗಳೂ, ಇತರ ಪಂಡಿತರುಗಳೂ ನೆರೆದಿದ್ದರು. ಮಂಗಳವಾದ ನಂತರ ಗ್ರಂಥದ ಯೋಗ್ಯತೆ, ಓದುಗಾರಿಕೆಯ ಸೊಂಪು, ಅರ್ಥಮಾಡಿದವರ ಸಾಮರ್ಥ್ಯ ಇವುಗಳನ್ನು ಶ್ಲಾಘಿಸಿ ವಿದ್ವಾಂಸರುಗಳಾದ ಬಿ. ವೆಂಕಟರಮಣಶಾಸ್ತ್ರಿಗಳು, ತರ್ಕತೀರ್ಥ ಶಾಂತರಾಜಶಾಸ್ತ್ರಿಗಳು, ಬಿ. ಎಂ. ಸಿದ್ಧಲಿಂಗಶಾಸ್ತ್ರಿಗಳು ಇವರುಗಳ ಮತ್ತು ಪುರುಷೋತ್ತಮಾನಂದಗಿರಿ ಬಾವಾಜಿಯವರ ಶ್ರಾವ್ಯಭಾಷಣಗಳಾದುವು. ಓದಿದವರಿಗೂ, ಅರ್ಥ ಹೇಳಿದವರಿಗೂ ಒಂದೊಂದು ಸುವರ್ಣಪದಕಗಳೂ, ಭಂಗಾರದ ಕಂಕಣಗಳೂ ವೇ|| ಸಿದ್ಧಲಿಂಗಶಾಸ್ತ್ರಿಗಳ ಮೂಲಕ ಕೊಡಿಸಲ್ಪಟ್ಟುವು. ಗ್ರಂಥಕರ್ತರೂ ಕೂಡ ಸಭೆಯಲ್ಲೇ ಇದ್ದರೂ ಅವರಿಗೆ ಯಾರೂ ಯಾವ ಬಿರುದನ್ನೂ ಕೊಡಲಸಮರ್ಥರು. ಹಿಂದೆ ಭೋಜರಾಜನು ಮಹಾಕವಿಗಳ ಕವಿತೆಗೆ ಅಕ್ಷರ ಲಕ್ಷದಂತೆ ಬಹುಮಾನ ಮಾಡುತ್ತಿದ್ದನಂತೆ. ಈಗ ಅಂಥವರಾರಿರುವರು? ಈಗ ಮ|| ಲಿಂಗರಾಜೇ ಅರಸಿನವರು ಈ ಗ್ರಂಥರತ್ನವನ್ನು ರಚಿಸಿ ಶ್ರೀಮನ್ ಮಹಾರಾಜರವರ ಪಾದಕ್ಕೆ ಸಮರ್ಪಿಸಿದುದರಿಂದ ಇದು ಅವರಿಂದ ಪಾಲಿತವಾಗಿರುವುದು. ಪ್ರಜೆಗಳೆಲ್ಲರೂ ಕಣ್ಣಿಗೆ ಒತ್ತಿಕೊಂಡು ಇದನ್ನು ಲಾಲಿಸುತ್ತಿರುವರು. ದಿನದಿನಕ್ಕೆ ಇದು ಕನ್ನಡನಾಡಿನಲ್ಲೆಲ್ಲಾ ವ್ಯಾಪಕತೆಯನ್ನು ಪಡೆದು ಯಶಸ್ವಿಯಾಗುತ್ತಿರುವುದು. "ತಟಾಕಂಧನನಿಕ್ಷೇಪೋ ಬ್ರಹ್ಮಸ್ಥಾಪಶ್ಶಿವಾಲಯಃ| ವನಾನಿಸತ್ಕೃತೀಃಪುತ್ರಸ್ಸಪ್ತಸಂತಾನಮುಚ್ಯತೇ||" ಎಂಬಂತೆ ಹೇಳಲ್ಪಟ್ಟಿರುವ ಸಪ್ತಸಂತಾನಗಳಲ್ಲಿ ಈ ಕಾವ್ಯವೆಂಬ ತಮ್ಮ ಸಂತಾನದ ವ್ಯಾಪಕತೆಯನ್ನು ಕಣ್ಣಾರ ನೋಡುತ್ತಿರುವ ಭಾಗ್ಯಕ್ಕಿಂತ ದೊಡ್ಡ ಭಾಗ್ಯವೂ, ಬಹುಮಾನವೂ ನಮ್ಮ ಅರಸಿನವರಿಗೆ ಯಾವುದೂ ಇರಲಾರದು. ಹೆತ್ತ ತಂದೆಗಳಿಗೆ ಮಕ್ಕಳ ಪುರೋವೃದ್ಧಿಯನ್ನು ನೋಡುವುದಕ್ಕಿಂತ ಮಿಂಚಿದ ಆನಂದವುಂಟೇ? ಮ|| ಅರಸಿನವರ ಭಾಗ್ಯೋದಯವು ಘನತರವಾದುದು. ಈ ಗ್ರಂಥವು ಇಷ್ಟು ಬೇಗನೆ ವ್ಯಾಪಕತೆಯನ್ನೂ, ಜನಾನುರಾಗವನ್ನೂ ಸಂಪಾದಿಸಿಕೊಳ್ಳುವುದಕ್ಕೆ ಅದರ ಲಾಲಿತ್ಯವೊಂದೇ ಮುಖ್ಯಕಾರಣವೆಂದು ನಾವು ತಿಳಿಯುವುದಿಲ್ಲ. ಅನೇಕ ವಿದ್ವತ್ಕವಿತೆಗಳೂ ಕೇವಲ ಕವಿತೆಗಳೂ ಹುಟ್ಟಿದಲ್ಲಿಯೇ ಮುಗ್ಗುಗ್ಗಿ ಬಿದ್ದಿರುವುದನ್ನೂ ಕೆಲ ಗ್ರಂಥಗಳು ಅತ್ಯಂತ ವ್ಯಾಪಕತೆಯನ್ನು ಪಡೆದು ಪಂಡಿತಪಾಮರರುಗಳಿಂದೆಲ್ಲಾ ಸೇವಿಸಲ್ಪಡುತ್ತಿರುವುದನ್ನೂ ನೋಡಿದರೆ ಗ್ರಂಥರಚನೆಯ ಮುಹೂರ್ತ ವಿಶೇಷ ಕರ್ತೃವಿನ ಸುಕೃತ ವಿಶೇಷಗಳೇ ಅವುಗಳ ವ್ಯಾಪಕತೆಗೆ ಮುಖ್ಯಸಾಧನಗಳಾಗಿರುವುವೆಂದು ಹೇಳಬೇಕಾಗುತ್ತದೆ. ಮುಖ್ಯವಾಗಿ ಈ ರಚನೆಯಿಂದ ಮ|| ಎಚ್. ಲಿಂಗರಾಜ ಅರಸಿನವರು ಧನ್ಯಜನ್ಮರಾದರು. ಅವರಿಗೆ ಕನ್ನಡಿಗರೆಲ್ಲರೂ ಕೃತಜ್ಞರು. ಈ ಕಾವ್ಯರತ್ನಕ್ಕೆ ಓದುಗಾರಿಕೆ ಅರ್ಥವಿವರಣೆಗಳೆಂಬ ಕುಂದಣಗೆಲಸಗಳನ್ನು ಮಾಡುವ ಪೌರಾಣಿಕರು ಕೂಡ ಪ್ರಶಂಸನೀಯರೇ ಆಗಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಕಳೆದ ವಾರ ಬೆಂಗಳೂರು ಪ್ರಾಂತದಲ್ಲಿ ಒಳ್ಳೆಯ ಮಳೆಗಳಾದುವೆಂದು ಕೇಳುತ್ತೇವೆ. ಮೈಸೂರಿನಕಡೆ ಮಳೆ ಸಾಲದು.

ಈ ವಾರದಲ್ಲಿ ನಡೆಯಬೇಕಾಗಿದ್ದ ಗುಂಡಲುಪೇಟೆ ತಾಲ್ಲೂಕು ವೀರಶೈವಸಭೆಯು ಪ್ಲೇಗಿನ ಪ್ರತಿಬಂಧಕದಿಂದ ಮುಂದಕ್ಕೆ ಹಾಕಲ್ಪಟ್ಟಿರುವುದು. ಕಾಲವನ್ನು ಮುಂದೆ ತಿಳಿಯಿಸಲಾಗುವುದು.

ಕಳೆದ ಸೋಮವಾರ ಮಧ್ಯಾಹ್ನ ಭಾವನಗರದ ಮಹಾರಾಜರು ಬೆಂಗಳೂರಿಂದ ಮೋಟಾರಿನ ಮೇಲೆ ರಾಜಧಾನಿಗೆ ದಯಮಾಡಿಸಿ ಅರಮನೆಯ ಆತಿಥ್ಯದಲ್ಲಿರುವರು. ಅವರು ಬಂದಾಗ ಗೌರವಾರ್ಥವಾದ ೧೧ ಗುಂಡುಗಳು ಹಾರಿಸಲ್ಪಟ್ಟುವು.

ಸಂಸ್ಥಾನದ ಸೈನ್ಯ ಶಾಖೆಯಲ್ಲಿ ಕಮಿಷನ್ಡ್ ಅಥವಾ ನಾನ್‌ಕಮಿಷನ್ಡ್ ಆಫೀಸರಾಗಿದ್ದು ಪೆನ್‌ಷನ್ ಪಡೆಯುತ್ತಿರುವವರೆಲ್ಲಾ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿಯೂ ಓಟರಾಗಿಯೂ ಇರಲು ಅರ್ಹರೆಂದು ಈಗತಾನೇ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ಶ್ರೀ ನಿರಂಜನ ಜಗದ್ಗುರು ಮಹಾಸ್ವಾಮಿಗಳವರ ಸ್ವಾರಿಯು ನಿನ್ನೆ ಶನಿವಾರದ ದಿವಸ ಶಿವಗಂಗೆಯಿಂದ ನೆಲಮಂಗಲ ತಾಲ್ಲೂಕು ದೇವರ ಹೊಸಹಳ್ಳಿಗೆ ದಯಮಾಡಿಸಿ, ಅಲ್ಲಿಂದ ೩೧ ನೆ ಮಂಗಳವಾರ ಬೆಳಗಿನ ೧೦|| ಘಂಟೆಗೆ ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ದಯಮಾಡಿಸುವುದಾಗಿದೆ.

ಸರ್ಕಾರದವರು ಸೆಪ್ಟಂಬರ್ ತಾ|| ೧ ರಿಂದ ಮೈಸೂರು ಅರ್ಥಸಾಧಕ ಪತ್ರಿಕೆಯ ಸಂಪಾದಕತ್ವಕ್ಕೆ ಮ|| ಎಂ. ಗೋಪಾಲಯ್ಯಂಗಾರರನ್ನು ನಿಯಮಿಸಿ, ವಿದ್ಯಾಶಾಖಾ ಕಾರ್ಯದರ್ಶಿಗಳ ಮೇಲ್ವಿಚಾರಣೆ ಕೆಳಗೆ ಕೆಲಸ ಸಾಗುವಂತೆ ಮಾಡಿರುವರು. ಮ|| ಗೋಪಾಲಯ್ಯಂಗಾರರು ಬಹುಕಾಲ ಮೈಸೂರಿನಲ್ಲಿ ಸ್ಟಾಂಡರ್ಡ್ ಎಂಬ ಆಂಗ್ಲ ಪತ್ರಿಕೆಯನ್ನೂ, ನಡೆಗನ್ನಡಿ ಎಂಬ ಕನ್ನಡದ ಪತ್ರಿಕೆಯನ್ನೂ ಸಾಮರ್ಥ್ಯದಿಂದ ನಡೆಯಿಸಿದ ದೇಶಾಭಿಮಾನಿಗಳು. ಈಚೆಗೆ ಕೆಲ ವರ್ಷಗಳಿಂದ ಇವರೂ ಇವರ ಸಹೋದರರಾದ ಮ|| ಕೃಷ್ಣಯ್ಯಂಗಾರರೂ ಅಲಹಾಬಾದಿನಲ್ಲಿ ಪ್ರಕಟವಾಗುವ ಟ್ರಿಬ್ಯೂನ್ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಸೇರಿ ಕೆಲಸಮಾಡುತ್ತಿದ್ದರು. ಇವರ ಆಧಿಪತ್ಯದಲ್ಲಿ ನಮ್ಮ ಅರ್ಥಸಾಧಕ ಪತ್ರಿಕೆಯು ಇನ್ನೂ ಅತಿಶಯವಾದ ದೇಶಸೇವೆಯನ್ನು ಮಾಡಿ ವೃದ್ಧಿಗೆ ಬರದಿರಲಾರರೆಂದು ನಂಬುತ್ತೇವೆ.

ರಾಜಧಾನಿಯ ಮಹಮ್ಮದೀಯರು ದೊಡ್ಡಪೇಟೆಯ ತಮ್ಮ ಕ್ಲಬ್ಬಿನಲ್ಲಿ ಕಳೆದ ತಾ|| ೨೫ ರಲ್ಲಿ ಮಿ|| ಮಹಮ್ಮದ್‌ಸೇಟರ ಅಧ್ಯಕ್ಷತೆಯಿಂದ ಸಭೆಗೂಡಿ, ತಮ್ಮ ಸಹೋದರರಾದ ಹಿಂದೂಪ್ರಜೆಗಳಿಗೆ ಮನೋವ್ಯಥೆಯನ್ನುಂಟುಮಾಡತಕ್ಕ ಗೋವಧೆಯನ್ನು ಇನ್ನುಮುಂದೆ ತಮ್ಮ ಹಬ್ಬಗಳ ಕಾಲದಲ್ಲಿ ಮಾಡಕೂಡದೆಂದು ಶಪಥಪೂರ್ವಕವಾಗಿ ನಿರ್ಣಯಮಾಡಿದರು. ಹೀಗೆ ಅವರು ತೋರಿಸಿದ ಪ್ರೀತಿವಿಶ್ವಾಸಗಳಿಗಾಗಿ ರಾಜಧಾನಿಯ ಎಲ್ಲ ಕೋಮಿನ ಹಿಂದೂಗಳೂ ಸಂತೋಷಪಟ್ಟು ಮರುದಿನವೇ ಟೌನ್‌ಹಾಲಿನಲ್ಲಿ ಮಹಾಸಭೆಗೂಡಿ ಮಹಮ್ಮದೀಯರಿಗೆ ತಮ್ಮ ಸಂತೋಷಕೃತಜ್ಞತೆಗಳನ್ನು ತಿಳಿಸುವ ನಿರ್ಧಾರ ಮಾಡಿದರು. ಹಬ್ಬದ ದಿನಗಳಲ್ಲಿ ಮಾತ್ರವೇ ಅಲ್ಲದೆ ಯಾವಾಗ್ಗೂ ಗೋಮಾಂಸಭಕ್ಷಣೆ ಮಾಡುವುದಿಲ್ಲವೆಂದು ನಮ್ಮ ಮಹಮ್ಮದೀಯ ಸಹೋದರರು ಶಪಥಮಾಡಿ ಅದರಂತೆ ಆಚರಿಸುತ್ತ ಬಂದರೆ ಅತ್ಯಂತ ದೇಶೋಪಕಾರವಾಗುವುದು.

ಧಾರವಾಡ ಜಿಲ್ಲೆಯ ವತನದಾರ ಗೌಡ ಶಾನುಭೋಗರ ಹಿತಚಿಂತನೆಗಾಗಿ ಪ್ರಥಮ ಪರಿಷತ್ತನ್ನು ಇಷ್ಟರಲ್ಲೇ ಕೂಡಿಸಬೇಕೆಂಬ ಯೋಜನೆಯು ನಡೆದು, ಗದಗಿನ ಮಹಾಲಕ್ಷ್ಮೀ ಥಿಯೇಟರಿನಲ್ಲಿ ಕಳೆದ ತಾ|| ೮-೮-೨೦ ರಲ್ಲಿ ರಾ|| ರಾ|| ಕರವೀರಪ್ಪ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಸಭೆಯಲ್ಲಿ ಅದರ ಸತ್ಕಾರಕ ಸಂಘಕ್ಕೆ ರಾ|| ರಾ|| ಗುರುರಾವ ಕುರ್ತುಕೋಟಿ ವಕೀಲರು ಧಾರವಾಡ ಇವರು ಚೇರ್ಮನ್ನರಾಗಿಯೂ, ರಾ|| ರಾ|| ಬರಮಗೌಡ ಪಾಟೀಲ ಉಮಚಗಿಯವರು ವೈಸ್ ಚೇರ್ಮನ್ನರಾಗಿಯೂ ಆರಿಸಲ್ಪಟ್ಟಿರುವರು. ಪರಿಷತ್ತಿನ ಅಧ್ಯಕ್ಷರ ಹೆಸರು, ಕೂಡುವಕಾಲ ಮೊದಲಾದವು ಮುಂದೆ ತಿಳಿಸಲ್ಪಡುವುವು. ಈ ಪರಿಷತ್ತಿನಲ್ಲಿ ರಾಜಕೀಯ ವಿಷಯವೇನೂ ಚರ್ಚಿಸಲ್ಪಡದೆ ಕೇವಲ ಗೌಡ ಕುಲಕರ್ಣಿಗಳಿಗೆ ಸಂಬಂಧಿಸಿದ ಕಷ್ಟಸುಖಗಳ ವಿಷಯಕ್ಕೆ ಮಾತ್ರ ಪರ್ಯಾಲೋಚನೆ ನಡೆಯುವುದರಿಂದ ಜಾತಿ ಮತಭೇದವನ್ನಿಡದೆ ಎಲ್ಲ ವತನಗೌಡ ಶಾನುಬೋಗರೂ ಇದಕ್ಕೆ ಅಂಗವಾಗಿ ಸೇರಬೇಕೆಂದು ಕಾರ್ಯದರ್ಶಿಗಳ ಈ ಮೂಲಕ ಪ್ರಾರ್ಥಿಸಿರುತ್ತಾರೆ.

ಕಳೆದ ತಾ|| ೨೧ ನೆ ಶನಿವಾರ ಮ|| ಗಾಂಧಿಯವರೂ, ಮಿ|| ಷೌಕತಾಲಿಯವರೂ, ಮಿ|| ಯಾಕೂಬ್‌ಹುಸೇನರೂ ಶಾಲ್ಯದಿಂದ ಮೋಟಾರಿನ ಮೇಲೆ ಬೆಂಗಳೂರು ದಂಡಿಗೆ ದಯಮಾಡಿಸಿದರು. ಅವರ ಸಂದರ್ಶನಕ್ಕಾಗಿ ಸ್ಥಳದ ಜನರೇ ಅಲ್ಲದೆ ೨ ಸ್ಪೆಷಲ್ ಟ್ರೇನುಗಳಿಂದ ಸಾವಿರಾರು ಜನರು ಹೋಗಿದ್ದರು. ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ನಿನ ಹೊರ ಮಗ್ಗುಲ ಬೈಲಿನಲ್ಲಿ ಬಹುಶಃ ೪೦ ಸಹಸ್ರ ಜನರು ಅಪೂರ್ವತರವಾಗಿ ಕೂಡಿರುವಲ್ಲಿ ಗಾಂಧಿಯವರೂ ಷೌಕತಾಲಿಯವರೂ ಪಂಜಾಬಿನ ಅತ್ಯಾಚಾರ ತುರ್ಕಿಯ ಸಂಧಿಗಳ ವಿಷಯಕವಾಗಿ ನಡೆದಿರುವ ಅನ್ಯಾಯವನ್ನೂ, ಪ್ರಜೆಗಳು ಸಹಾಯ ನಿರಾಕರಣತತ್ತ್ವವನ್ನು ಅನುಸರಿಸಬೇಕಾದ ಅವಶ್ಯಕತೆಯನ್ನೂ ಕುರಿತು ಹಿಂದುಸ್ಥಾನಿಯಲ್ಲಿಯೂ ಉರುದುವಿನಲ್ಲಿಯೂ ಭಾಷಣಗಳನ್ನು ಮಾಡಿದರು. ಅವರು ೪ ಗಂಟೆಯಕಾಲ ಅಲ್ಲಿದ್ದು ಬಳಿಕ ಮದ್ರಾಸಿನ ಮಾರ್ಗವಾಗಿ ಪ್ರಯಾಣಮಾಡಿದರು. ಅಲ್ಲಿಯ ಖಿಲಾಫತ್ ಕಮಿಟಿಯವರು ಕೂಡಿಸಿದ್ದ ೨೫ ಸಹಸ್ರ ರೂ. ಗಳು ಇವರುಗಳಿಗೆ ಒಪ್ಪಿಸಲ್ಪಟ್ಟುವೆಂದು ಕೇಳುತ್ತೇವೆ.

ಪತ್ರವ್ಯವಹಾರ.

ನೋಟೀಸ್.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡಿನ ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ಮೈಸೂರ ದೇಶದ ವೀರಶೈವ ಬಡ ವಿದ್ಯಾರ್ಥಿಗಳು ಬರುವ ನವಂಬರ್ ತಾರೀಖು ೧೦ ರೊಳಗಾಗಿ ಮೇಲ್ಕಂಡ ಸಂಘದ ಪ್ರೆಸಿಡೆಂಟರವರಿಗೆ ಅರ್ಜಿಬರೆಸುಕೊಳ್ಳತಕ್ಕದ್ದು.

ಸೆಕ್ರಟರಿ
ದಾವಣಗೆರೆ
೨೪-೮-೧೯೨೦
ವೀರಶೈವ ವಿದ್ಯಾವರ್ಧಕ ಫಂಡಿನ ಸಂಘ,
ದಾವಣಗೆರೆ.

ಶಿಡ್ಲಘಟ್ಟದಲ್ಲಿ ಪ್ರಜಾಮಿತ್ರಮಂಡಲಿಯ ಸ್ಥಾಪನೆ.

ಈ ಊರಿನ ವೀರಶೈವರಲ್ಲಿ ಗಣ್ಯರಾದ ಮ್ಯುನಿಸಿಪಲ್ ಕೌನ್ಸಿಲರ್ ಎಸ್. ಹಂಪಯ್ಯನವರು ಪ್ರಜಾಪಕ್ಷವಾಗಿ ಶ್ರಮಪಟ್ಟು ಕೆಲಸಮಾಡುತ್ತ ಈಗ್ಗೆ ಸುಮಾರು 14 ವರ್ಷಗಳ ಹಿಂದೆಯೇ ಈ ಊರಲ್ಲಿ ಒಂದು ಫ್ರೀ ರೀಡಿಂಗ್ ರೂಮನ್ನು ಏರ್ಪಡಿಸಿ ನಡಿಸಿಕೊಂಡು ಬಂದಿರುವದರಲ್ಲಿ ನಾನಾ ಕೋಮಿನ ಹಿಂದೂ ಜನಾಂಗದವರಲ್ಲೂ, ಮುಸಲ್ಮಾನ್ ಜನಾಂಗದಲ್ಲೂ ತುಂಬಾ ವಿಶ್ವಾಸಕ್ಕೆ ಪಾತ್ರರಾಗಿರುವದರ ಗುರುತಾಗಿ ಇವರಿಗೆ ಡಿಸ್ಟ್ರಿಕ್ಟ್ ಬೋರ್ಡ್ ಸೆಂಟ್ರಲ್ ಇಂಡಸ್ಟ್ರೀಸ್ ಬೋರ್ಡ್ ಡೆವಲಪ್‌ಮೆಂಟ್ ಆಫ್ ಸಿರಿಕಲ್‌ಚರಲ್ ಸಬ್ ಕಮಿಟಿ, ರೆಪ್ರೆಜೆಂಟೇಟೀವ್ ಅಸಂಬ್ಲಿ ಮುಂತಾದುವುಗಳ ಮೆಂಬರು ಪದವಿಯು ದೊರೆತಿರುವದಕ್ಕೆ ಮಹಾಜನರು ಸಂತುಷ್ಟರಾಗಿ, ಇವರನ್ನು ಸನ್ಮಾನಿಸಲು ಇದೇ ತಾ|| 15 ನೆಯ ಭಾನುವಾರ ಇವರ ಮಹಡಿಯ ಮೇಲೆ ದೊಡ್ಡ ಸಭೆ ಸೇರಿದ್ದರು. ಹಿಂದುಳಿದ ಜನಾಂಗದವರಾದ ಎಲ್ಲಾ ಕೋಮಿನ ಮುಖಂಡರೂ, ಮುಸಲ್ಮಾನ್ ಕ್ರಿಶ್ಚಿಯನ್ ದೊಡ್ಡ ಮನುಷ್ಯರೂ, ಸುಮಾರು ಎರಡುನೂರು ಮಂದಿ ವರೆಗೆ ಹಾಜರಾಗಿ, ತಮ್ಮಗಳ ಪರವಾಗಿ ಮ್ಯುನಿಸಿಪಲ್ ಕೌನ್ಸಿಲರ್ ಮ|| ಎಸ್. ಗೋಪಾಲಸ್ವಾಮಿನಾಯುಡುಯವರಿಂದ, ಒಂದು ಅಡ್ರೆಸ್ಸನ್ನು ಓದಿಸಿ ಒಪ್ಪಿಸಿದರು. ಇದರಲ್ಲಿ ಮ|| ಎಸ್. ಹಂಪಯ್ಯನವರ ಗುಣಕಥನವು ಮಾಡಲ್ಪಟ್ಟಿದ್ದಲ್ಲದೆ, ಇವರಿಗೆ ಲೆಜಿಸ್ಲೇಟೀವ್ ಕೌನ್ಸಿಲ್ ಮೆಂಬರ್ ಪದವಿಯೂ ದೊರೆಯುವಂತೆ, ದೇವರು ಅನುಗ್ರಹಿಸಲೆಂದು ಪ್ರಾರ್ಥಿಸಲ್ಪಟ್ಟಿದ್ದಿತು. ಈ ಸಭೆಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳೂ ತಾಲ್ಲೂಕು ಬೋರ್ಡ್ ಮೆಂಬರುಗಳೂ ಆದ ಮ|| ದೊಂತಿ ನಾರಣಪ್ಪ ಶೆಟ್ಟರು, ಮ|| ರಾಮೇಗೌಡರು, ಮ|| ಎಸ್. ಹಂಪಯ್ಯನವರು, ಮ|| ಬೈರೇಗೌಡರು, ಮ|| ಜಿ. ತಮ್ಮಣ್ಣನವರು, ಮ|| ಎಸ್. ಗೋಪಾಲಸ್ವಾಮಿನಾಯುಡುಯವರು, ಮ|| ದೊಡ್ಡ ಅಲ್ಲೀಸಾಹೇಬರವರು ಸಹ ಮುಂದಾಳುಗಳಾಗಿದ್ದರು. ಮಹಾಜನರ ಕೋರಿಕೆಯಂತೆ ಈ ಊರಲ್ಲಿ ಪ್ರಜಾಮಿತ್ರಮಂಡಲಿ ಎಂಬ ಸಂಘವು ಸ್ಥಾಪಿತವಾಗಬೇಕೆಂತಲೂ ಇಂಥ ಸಂಘವು ಬೆಂಗಳೂರಲ್ಲಿರುವದರಲ್ಲಿ ಯಾವ್ಯಾವ ಅನುಕೂಲತೆಗಳುಂಟಾಗಿವೆ ಎಂಬುದನ್ನು ಕುರಿತು ಉಪನ್ಯಾಸಮಾಡಲು ಅಪೇಕ್ಷಿಸಿದ ಮೇರೆಗೆ ಮ|| ಎಸ್. ಹಂಪಯ್ಯನವರು ಬೆಂಗಳೂರು ಪ್ರಜಾಮಿತ್ರಮಂಡಲಿಯ ಮುಖಂಡರ ಹೆಸರುಗಳನ್ನು ತಿಳಿಸಿ, ಅವರು ನಮಗಾಗಿ ಶ್ರಮಪಡುತ್ತಿರುವುದನ್ನು ವಿವರವಾಗಿ ತಿಳಿಸಿದ್ದಲ್ಲದೆ, ಸದರಿ ಸಂಘಸ್ಥಾಪಕರಾಗಿದ್ದು ಅದರ ಸೆಕ್ರೆಟರಿಯ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸಿ ಕೀರ್ತಿಶಾಲಿಗಳಾದ, ಕೈ|| ಮ|| ಎಂ. ಬಸವಯ್ಯನವರ ಜೀವಿತ ಚರಿತ್ರೆಯನ್ನು ವಿವರಿಸಿದರು. ಮತ್ತು ಮದ್ರಾಸಿನ ಮು|| ಪ್ರೆಸಿಡೆಂಟರವರಾದ ಶ್ರೀಯುತ ಸರ್ ಪಿ. ತ್ಯಾಗರಾಯಶೆಟ್ಟಿರವರು ಬೆಂಗಳೂರಲ್ಲಿ ಪ್ರಜಾಮಿತ್ರಮಂಡಲಿಯವರಿಂದ ಸತ್ಕರಿಸಲ್ಪಟ್ಟ ವಿಚಾರವೂ, ಹುಬ್ಬಳ್ಳಿಯಲ್ಲಿ ನಡೆದ ಬ್ರಾಹ್ಮಣೇತರ ಪರಿಷತ್ತಿನ ನಡವಳಿಕೆಯೂ, ವಿವರವಾಗಿ ಪ್ರಕಟವಾಗಿದ್ದ ಮೈಸೂರು ಸ್ಟಾರ್ ಪತ್ರಿಕೆಯ ಸಂಚಿಕೆಗಳನ್ನು ಓದಿ ತಿಳಿಸಲ್ಪಟ್ಟುವು. ಸಭಿಕರೆಲ್ಲರೂ ಒಗ್ಗಟ್ಟಿನ ಪ್ರಭಾವದ ಆವೇಶಯುಕ್ತರಾಗಿ ಈ ದಿನವೇ ಶಿಡ್ಲಘಟ್ಟದ ಪ್ರಜಾಮಿತ್ರಮಂಡಲಿ ಎಂಬ ಸಂಘವು ಏರ್ಪಾಡಾಗಬೇಕೆಂತಲೂ ಇದಕ್ಕೆ ಮ|| ಎಸ್. ಹಂಪಯ್ಯನವರು ಪ್ರೆಸಿಡೆಂಟರಾಗಿಯೂ, ಮ|| ಬೈರೇಗೌಡರವರು, ಮತ್ತು ಮ|| ಗೋಪಾಲಸ್ವಾಮಿನಾಯುಡುಯವರು ಜಾಯಿಂಟ್ ಸೆಕ್ರೆಟರಿಯವರಾಗಿಯೂ, ಇರುವಂತೆ ತೀರ್ಮಾನಿಸಿದರು. ಮುಂದೆ ಇದರ ಕಾರ್ಯನಿರ್ವಾಹಕ್ಕೆ 7 ಮಂದಿ ಮ್ಯುನಿಸಿಪಲ್ ಮೆಂಬರುಗಳ ಜೊತೆಗೆ ಕೆಲವು ಮುಖಂಡರು ಸೇರಿದ ಒಂದು ಕಮಿಟಿಯೂ ಏರ್ಪಾಡಾಗಿ ತಾವಾಗಿ ಮುಂದುವರಿದು ಕೆಲಸ ಮಾಡಲು ತಿಳಿಸಿದ 60 ಮಂದಿ ಮುಖಂಡರುಗಳ ಹೆಸರನ್ನು ಜನರಲ್ ಮೆಂಬರುಗಳಾಗಿ ರಿಕಾರ್ಡ್ ಮಾಡಲಾಯಿತು. ಬೆಂಗಳೂರು ಪ್ರಜಾಮಿತ್ರಮಂಡಲಿಯವರ ಸಲಹೆಗಳನ್ನು ಪಡೆದು ಇದರ ಕೆಲಸಗಳನ್ನು ನೆಡಸಬೇಕೆಂದು ತೀರ್ಮಾನವಾಯಿತು. ಮ|| ಎಂ. ಬಸವಯ್ಯನವರ ವಿಯೋಗದಿಂದ ನಮ್ಮಗಳಿಗುಂಟಾಗಿರುವ ಅನುತಾಪವನ್ನು ಅವರ ಕುಟುಂಬದವರಿಗೂ ಬೆಂಗಳೂರು ಪ್ರ|| ಮಿ|| ಮಂಡಲಿ ಸೆಕ್ರೆಟರಿಯವರಾದ ಮ|| ಜಿ. ಪರಮಶಿವಯ್ಯ, ಬಿ. ಎ. ಎಲ್ ಎಲ್. ಬಿ. ಯವರಿಗೂ ತಿಳಿಸಬೇಕೆಂದು ತೀರ್ಮಾನವಾಯಿತು. ಇಂತಹ ಸೌಕರ್ಯಗಳಿಗೆ ಸಹಾಯಮಾಡುತ್ತಿರುವ ಮೈ|| ಸ್ಟಾರ್ ಪತ್ರಿಕಾಕರ್ತರಿಗೆ ವಂದನೆ ಮಾಡಲಾಯಿತು. ಶ್ರೀಮನ್ ಮಹಾರಾಜರವರ ಶ್ರೀಮನ್ ಯುವರಾಜರವರ ಶ್ರೇಯಃಪ್ರಾರ್ಥನೆ ಮೂಲಕ ಸಭಾ ಭಂಗವಾಯಿತು.

ಬೆಂಗಳೂರಿನ ವೀರಶೈವರು ಮತ್ತು ಅವರ ಮಠಗಳು.

ಮೈಸೂರು ದೇಶದಲ್ಲಿ ಬೆಂಗಳೂರು ಹೇಗೆ ಗಣ್ಯವಾಗಿರುವುದೋ ಹಾಗೆಯೇ ಬೆಂಗಳೂರಿನಲ್ಲಿರತಕ್ಕ ವೀರಶೈವ ವಿದ್ಯಾವಂತರುಗಳೂ, ಸರ್ಕಾರಿ ಉದ್ಯೋಗಸ್ಥರೂ, ವರ್ತಕರೂ ಸಹ ಮೈಸೂರು ದೇಶದ ವೀರಶೈವರಲ್ಲಿ ಗಣ್ಯರೆಂದು ಭಾವಿಸಲ್ಪಟ್ಟಿರುವರು. ಹೀಗಿದ್ದಾಗ್ಗೂ ಬೆಂಗಳೂರಿನ ವೀರಶೈವರು ತಮ್ಮ ಮತದ ಧರ್ಮವನ್ನು ಕಾಪಾಡಲು ಮುಖ್ಯಾಧಾರಗಳಾದ ಮಠಗಳನ್ನು ಮಾತ್ರ ಯಾವ ಕಾರಣದಿಂದಲೋ ಕೇವಲ ಹೀನಸ್ಥಿತಿಗೆ ತಂದಿರುವುದನ್ನು ನೋಡಿ ಮತಾಭಿಮಾನಿಯಾದ ಪ್ರತಿಯೊಬ್ಬನಿಗೂ ಸಂಕಟವಾಗದಿರಲಾರದು. ಬೆಂಗಳೂರಿನ ವೀರಶೈವ ದೊಡ್ಡಮನುಷ್ಯರು ಇದನ್ನೆಲ್ಲಾ ಹೇಗೆ ಸಹಿಸಿಕೊಂಡಿರುತ್ತಾರೋ, ಏನುಕಾರಣದಿಂದ ಸುಮ್ಮನಿರುವರೋ ಎಂಬ ಶಂಕೆಯು ನನ್ನನ್ನು ಬಹಳ ಬಾಧಿಸುತ್ತಲಿರುವುದರಿಂದ ಈ ಲೇಖನವನ್ನು ಬರೆಯಬೇಕಾಯಿತು.

ಉದಾಹರಣೆಗಾಗಿ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮಹಂತಿನ ಮಠವನ್ನು ತೆಗೆದುಕೊಳ್ಳಬಹುದು. ಆ ಮಠದ ಮೂರ್ತಿಗಳು ಶಿವಾಧೀನರಾಗಿ ಸುಮಾರು ೩೦ ವರ್ಷಗಳಿಗೆ ಮೇಲ್ಪಟ್ಟಿರಬಹುದು. ಅಂದಿನಿಂದಲೂ ಮತ್ತೊಬ್ಬ ಮೂರ್ತಿಯನ್ನು ನೇಮಿಸದೆ ಮಠವನ್ನು ಹಾಳುಗೆಡವಿರುವ ದೋಷವು ಯಾರಿಗೆ ತಗಲಬೇಕು? ಇದಕ್ಕೆ ಕಾರಣರಾರು? ಎಷ್ಟೋ ಮಂದಿ ವಿದ್ಯಾವಂತರೂ, ವರ್ತಕರೂ, ಐಶ್ವರ್ಯವಂತರೂ, ಸರ್ಕಾರಿ ಉದ್ಯೋಗಸ್ಥರೂ ಇದ್ದಾಗ್ಗೂ ಯಾರಿಗೂ ಇದರ ಮೇಲೆ ಗಮನವೇ ಇಲ್ಲವೆ? ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ. ಯವರು ಅಧ್ಯಕ್ಷರಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡು ಸಂಘದವರೂ ಕಣ್ಣುಮುಚ್ಚಿಕೊಂಡಿರುವರೆ? ಇಪ್ಪತ್ತನೆ ಶತಮಾನದಲ್ಲೂ ಇಂಥ ಅವ್ಯವಸ್ಥೆಯುಂಟೆ?

ಮಹಂತಿನಮಠದ ವಿಚಾರದಲ್ಲಿ ಕೆಲವರು ಮತಾಭಿಮಾನಿಗಳು ಬೆಂಗಳೂರು ತಾ|| ಅಮಲ್ದಾರರವರಲ್ಲಿ ತಾ|| ೧೯-೯-೧೯೧೮ ರಲ್ಲಿ ಒಂದು ಅರ್ಜಿಯನ್ನು ಹಾಕಿಕೊಳ್ಳಲು ಅದು ವಿಚಾರಣೆ ನಡೆದು 'ಚಿಕ್ಕಪೇಟೆಯಲ್ಲಿರುವ ಮಹಂತಿನಮಠದ ಮಿಸ್‌ಮ್ಯಾನೇಜ್‌ಮೆಂಟು (Mismanagment) ವಿಷಯ' ಎಂಬ ಒಂದು ದೊಡ್ಡಗ್ರಂಥವಾಗಿರುವುದು. ಈ ಮಠದ ಅವ್ಯವಸ್ಥೆಯನ್ನೆಲ್ಲಾ ಕುರಿತು ಆಗಿನ ಅಮಲ್ದಾರರವರು ೩-೫-೧೯೧೦ ರಲ್ಲಿ ಒಂದು ರಿಪೋರ್ಟನ್ನು ತಯಾರುಮಾಡಿದರು. ಇದಾದನಂತರ ಬೆಂಗಳೂರು ಡಿ|| ಡೆಪ್ಯುಟಿ ಕಮಿಷನರವರು ಸಹ ೯-೫-೧೯೧೧ ರಲ್ಲಿ ಒಂದು ರಿಪೋರ್ಟನ್ನು ಬರೆದು ಮಠದ ಹೀನಸ್ಥಿತಿಯನ್ನು ನೋಡಿ ಕನಿಕರಗೊಂಡು, ಅದರ ಸುವ್ಯವಸ್ಥೆಗಾಗಿ ಸರ್ಕಾರದವರು ತಕ್ಕ ಏರ್ಪಾಟನ್ನು ಮಾಡುವುದು ಯುಕ್ತವೆಂದು ಸರ್ಕಾರದವರಿಗೆ ಸೂಚಿಸಿದರು. ವೀರಶೈವರ ದೌರ್ಭಾಗ್ಯಕ್ಕೆ ಸರ್ಕಾರದವರೂ ಸಹ ಈ ವಿಚಾರವನ್ನು ಅಷ್ಟಕ್ಕೇ ಕೈಬಿಟ್ಟರು.

ಈ ಮಠಕ್ಕೆ ಸೇರಿದ ೩ ಅಂಗಡಿಗಳೂ, ೧ ಗಾಡಿಖಾನೆಯೂ, ೧ ಸೌದೆ ಅಂಗಡಿಯೂ, ೧ ಮನೆಯೂ ೨ ಕೊಠಡಿಗಳೂ ಇರುವುವು. ಇವುಗಳೆಲ್ಲಾ ರಸ್ತೆ ಕಡೆ ಇರುತ್ತವೆ. ಗೌಡರ ವೀರಭದ್ರಪ್ಪನವರ ಸ್ವಾಧೀನದಲ್ಲಿರುವ ಗಾಡಿಖಾನೆಯನ್ನು ಅವರ ಪವಿತನಂತರ ಶೆಟ್ಟರು ಯಜಮಾನರುಗಳು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವರಂತೆ. ಗುಬ್ಬಿ ಕೋಟಿದಪ್ಪನವರು ದಿವಂಗತರಾದ ಮೇಲೆ ಅವರ ಸ್ವಾಧೀನದಲ್ಲಿದ್ದ ಸ್ವತ್ತನ್ನು ಸಹ ತಮ್ಮ ವಶಕ್ಕೆ ತೆಗೆದುಕೊಂಡಿರುವರಂತೆ. ಅಂಗಡಿಗಳಂತೂ ಕಂಡವರ ಪಾಲಾಗಿವೆ. ಮಿಠಾಯಿ ಲಕ್ಷ್ಮಣಯ್ಯ ಎಂಬುವರು ಒಬ್ಬ ಶಾಂತವೀರಯ್ಯ ಎಂಬುವರಿಗೆ ೮-೧೦-೧೮೮೫ ರಲ್ಲಿ ಒಂದು ಬಾಡಿಗೆ ಕಾಗದವನ್ನು ಬರೆದುಕೊಟ್ಟು ಅದರ ಆಧಾರದ ಮೇಲೆ ಅವರ ಸಂತತಿಯವರು ಈಗಲೂ ಅದನ್ನು ಅನುಭವಿಸುತ್ತಲಿರುವರು. ಬೆಂಗಳೂರು ತಾ|| ಹನುಮಂತಪುರದ ಸರ್ವೆ ೬ನೆ ನಂಬರು ಜಮೀನು ಬಾಗಾಯಿತು ೩ ಎಕರೆ ೩ ಗುಂಟೆಗೆ ಆಕಾರ ೨೫ ಉಳ್ಳ ಮಠದ ಬಾಬತು ಜಮೀನು ಏನಾಗಿದೆಯೆಂಬುದು ಯಾರಿಗೂ ತಿಳಿಯದು. ೧೬-೧೧-೧೯೧೯ ರಲ್ಲಿ ಶೆಟ್ಟರು ಯಜಮಾನರು ಇದನ್ನೆಲ್ಲಾ ಸರಿಯಾದ ಸ್ಥಿತಿಗೆ ತರುತ್ತೇವೆಂತಲೂ, ಯೋಗ್ಯರಾದ ಸ್ವಾಮಿಗಳನ್ನು ನೇಮಿಸುತ್ತೇವೆಂತಲೂ ವಗೈರೆ ಸರ್ಕಾರದವರಲ್ಲಿ ಹೇಳಿಕೆ ಕೊಟ್ಟಿರುವರಂತೆ. ಬೆಂಗಳೂರಿನಲ್ಲಿ ಯೋಗ್ಯರಾದ ಸ್ವಾಮಿಗಳು ದೊರೆಯದ್ದರಿಂದಲೋ ಏನೋ ಮಠವು ಇನ್ನೂ ಪಾಳೇ ಬಿದ್ದಿದೆ. ಮಠದ ಸ್ವತ್ತುಗಳಿಂದ ಬರತಕ್ಕ ಅಲ್ಪಸ್ವಲ್ಪ ಉತ್ಪನ್ನವು ಹೇಗೆ ವಿನಿಯೋಗವಾಗುತ್ತಿದೆಯೆಂಬುದು ಯಾರಿಗೂ ಗೊತ್ತಿಲ್ಲ. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದವರು ಕಳೆದ ಜೂನ್ ತಿಂಗಳಲ್ಲಿ ನಡೆದ ಜನರಲ್ ಕಮಿಟಿ ಮೀಟಿಂಗಿನಲ್ಲಿ ಇದರ ಚರ್ಚೆಯನ್ನು ತರಲು, ಆಗ್ಗೆ ಮೀಟಿಂಗಿಗೆ ದಯಮಾಡಿಸಿದ್ದ ಶೆಟ್ಟರು ಯಜಮಾನರು ಒಂದು ವಾರದಲ್ಲಿ ಎಲ್ಲವನ್ನೂ 'ಸರಿಮಾಡಿಬಿಡುತ್ತೇವೆ' ಎಂದು ಹೇಳಿದರು. ಇದುವರೆಗೆ ಏನು ಮಾಡಿರುತ್ತಾರೆಂಬುದನ್ನು ಸಂಘದವರಿಗೇನಾದರೂ ಗೊತ್ತಾಗಿದ್ದ ಪಕ್ಷಕ್ಕೆ ಜನಗಳ ತಿಳುವಳಿಕೆಗಾಗಿ ಪ್ರಕಟಿಸಬೇಕಾಗಿ ಕೋರುತ್ತೇನೆ. ಈಗ್ಗೆ ಕೆಲವು ದಿವಸಗಳ ಹಿಂದೆ ಬೆಂಗಳೂರಿನ ಕೆಲವು ಪ್ರಮುಖವೀರಶೈವ ವರ್ತಕರು ಇದರ ವಿಚಾರದಲ್ಲಿ ತಕ್ಕ ಏರ್ಪಾಟನ್ನು ಮಾಡಲು ಶೆಟ್ಟರು ಯಜಮಾನರಿಗೆ ಲಿಖಿತಮೂಲಕ ಕೇಳಿಕೊಂಡಿರುವುದಾಗಿ ವರ್ತಮಾನವಿದೆ. ಇದರಿಂದಾಗಬಹುದಾದ ಫಲಿತಾಂಶದ ನಿರೀಕ್ಷಣೆಯಿಂದ, ಇನ್ನೂ ಹೇಳಬೇಕಾದ ವಿಚಾರಗಳನೇಕವಿದ್ದಾಗ್ಗೂ ಇಲ್ಲಿಗೆ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ ಮತಾಭಿಮಾನಿ.

[ಈ ಮಠದ ಆಸ್ತಿಗಳನ್ನು ಸುವ್ಯವಸ್ಥೆಗೆ ತಂದು ಅದರ ಆದಾಯವನ್ನೆಲ್ಲಾ ಮಠದ ಸಂಸ್ಕೃತ ವಿದ್ಯಾಪ್ರೋತ್ಸಾಹಕ್ಕೆ ವಿನಿಯೋಗಿಸುವ ಸಂಕಲ್ಪವು ಅಲ್ಲಿಯ ಶೆಟ್ಟರು ಯಜಮಾನರುಗಳಿಗಿದೆಯೆಂಬುದನ್ನು ನಾವು ಬಲ್ಲೆವು. 'ಗೃಹೀತ ಇವಕೇಶೇಷು ಮೃತ್ಯುನಾಧರ್ಮಮಾಚರೇತ್' ಎಂಬ ನೀತಿಯಂತೆ ಇವರುಗಳು ಈ ಧರ್ಮಕಾರ್ಯವನ್ನು ಸದ್ವಿನಿಯೋಗಕ್ಕೆ ಆದಷ್ಟು ಬೇಗನೆ ಅನುಕೂಲಪಡಿಸಿ ಯಶಃಪುಣ್ಯಗಳಿಗೆ ಭಾಗಿಗಳಾಗುವರೆಂದು ನಂಬುತ್ತೇವೆ.
ಪ. ಪ್ರ.]

ಶಿವಗಂಗೆ.

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಸಂಸ್ಥಾನದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಮಾಗಡಿ ಮಾರ್ಗವಾಗಿ ಸಂಚಾರ ಮಾಡಿಕೊಂಡು ತಮ್ಮ ಅಧಿಕಾರಕ್ಕೊಳಪಟ್ಟ ಬಂಡೆ ಮಠಕ್ಕೆ ಚಿತ್ತೈಸಿ ಅಲ್ಲಿನ ಶ್ರೀಗಳವರಿಂದ ತೃಪ್ತಿಕರವಾದ ಭಿಕ್ಷಾಪಾದಪೂಜಾ ಮೊದಲಾದ ಸೇವಾದಿಗಳಂ ಸ್ವೀಕರಿಸಿ ಶಿವಗಂಗಾ ಕ್ಷೇತ್ರದಲ್ಲಿರುವ ಪರ್ವತಶಾಖಾ ಕಂಬಾಳ ಸಂಸ್ಥಾನ ಮತ್ತು ರಂಭಾಪುರೀ ಪೀಠವಿಡಿಶಾಖೆಯ ಮೇಲಣಗವಿಸಂಸ್ಥಾನ ಮಠಗಳಿಗೆ ಸಹ ದಯಮಾಡಿಸಿ, ಪಟ್ಟದ ಶ್ರೀ ಮಹಾಸ್ವಾಮಿಗಳವರಿಂದ ಅರ್ಪಿತವಾದ ಭಿಕ್ಷಾಪಾದಪೂಜಾದಿ ಸೇವೆಗಳಂ ಕೈಕೊಂಡು, ಈ ಶಿವಗಂಗಾ ಕ್ಷೇತ್ರ ನಿವಾಸಿಗಳಾದ ಪುರಪ್ರಮುಖರ ಮತ್ತು ದೈವದವರ ಪ್ರಾರ್ಥನೆಯಂತೆ ತಾ|| ೨೧-೮-೨೦ ಸ್ಥಿರವಾರ ೧೦|| ಘಂಟೆಗೆ ಸರಿಯಾಗಿ ಪೂರ್ವದಿಕ್ಕಿನ ಉಪ್ಪರಿಗೆ ಮಹಾದ್ವಾರದಾಚೆಯ ಹೈರೋಡಿನಲ್ಲಿ ಪಲ್ಲವತೋರಣಾದ್ಯಲಂಕೃತವಾಗಿ ರಚಿಸಿದ್ದ ಮನೋಹರವಾದ ಚಪ್ಪರಕ್ಕೆ ಮಹಾಸ್ವಾಮಿ ಸ್ವಾರಿಯು ಸಮಸ್ತ ಬಿರುದಾವಳಿಗಳೊಡನೆ ಆಗಮಿಸುವುದರೊಳಗಾಗಿ ಶಿವಗಂಗಾ ಪೇಟೆ ಶೆಟ್ಟರು ಯಜಮಾನರು ಶ್ರೀಮಂತರು ಮೊದಲಾದ ದೈವದವರು ಅನೇಕ ಪೇಟೆ ಮನೆಯವರು ಸಹ ೩-೪ ಸಾವಿರ ಪ್ರಜೆಗಳು ಫಲಪುಷ್ಪ ತಾಂಬೂಲಾದಿಗಳಿಂದ ಇದಿರ್ಗೊಂಡು ಬಂದು ಸಾಷ್ಟಾಂಗ ಪ್ರಣಾಮ ಮಾಡಲು, ಸರ್ವರನ್ನೂ ಉಚಿತ ರೀತಿಯಿಂದನುಗ್ರಹಿಸಿ, ಅವರ ಬಿನ್ನಹವಂ ಕೈಕೊಂಡು, ಪೂರ್ವಾದ್ರಿಯೊಳ್ ಸೂರ್ಯನುದಯವಾದಂತೆ ರಮಣೀಯವಾದ ಬೆಳ್ಳಿ ಪಲ್ಲಕ್ಕಿಯನ್ನು ಪರಬ್ರಹ್ಮತೇಜಃಪುಂಜವಾದ ಮಹಾಸ್ವಾಮಿ ಪಾದವು ಅಲಂಕರಿಸಿ, ಅನೇಕ ವಾದ್ಯಘೋಷಗಳಿಂದಲೂ, ಬಿರುದಾವಳಿಗಳಿಂದಲೂ ಹಸ್ತ್ಯಶ್ವರಥ ಪದಾತಿ ಸಂದೋಹಗಳಿಂದಲೂ ಪುರಾಭಿಮುಖವಾಗಿ ಉತ್ಸವವು ಆರಂಭವಾಗಲು, ಪಲ್ಲಕ್ಕಿಯ ಮುಂಭಾಗದಲ್ಲಿ ವೇ|| ಗಳಾದ ಮಾಗಡಿ ವೀರಪ್ಪಶಾಸ್ತ್ರಿಗಳು, ಶಿವಗಂಗೆ ಶ್ರೀಕಂಠಶಾಸ್ತ್ರಿಗಳು ಮೊದಲಾದ ಅನೇಕ ವೈದಿಕ ಮಂಡಲಿಯವರು ವೇದಮಂತ್ರಗಳೊಡನೆ ಜಯಘೋಷವಂ ಮಾಡುತ್ತಿರಲು ಮೇಲಣ ಗವಿ ಸಂಸ್ಥಾನದ ಏಜಂಟರೂ ಬಂಡೆ ಮಠದ ಶ್ರೀಗಳು ಮೊದಲಾದ ವಿರಕ್ತ ಮೂರ್ತಿಗಳೂ ಪಲ್ಲಕ್ಕಿಯ ಉಭಯಪಾರ್ಶ್ವಗಳಲ್ಲಿಯೂ ಆಗಮಿಸುತ್ತಿರಲು, ಗುಬ್ಬಿಯಿಂದ ಬಂದಿದ್ದ ಶಿವಭಜನಾ ಕೂಟದವರು ಸಂಗೀತಗಾಯನಗಳೊಡನೆ ಸ್ತುತಿಘೋಷವಂ ಮಾಡುತ್ತಿರಲು, ಸರ್ಕಾರದ ಅಧಿಕಾರಿಗಳಾದ ಮೆ|| ಸಬ್ ಡಿವಿಜನ್ ಆಫೀಸರವರು, ನೆಲಮಂಗಲದ ತಾಲ್ಲೂಕು ಅಮಲ್ದಾರರವರು, ಹೆಡ್‌ಕ್ವಾರ್ಟರು ಇನ್‌ಸ್ಪೆಕ್ಟರು, ತಾಲ್ಲೂಕು ಪೋಲೀಸು ಇನ್‌ಸ್ಪೆಕ್ಟರು, ಜಮಾದಾರರು, ದಫೇದಾರರುಗಳು, ಪೋಲೀಸು ಸಿಬ್ಬಂದಿಗಳೊಡನೆ ಮುತವರ್ಜಿಯನ್ನು ವಹಿಸಿ ಚಟುವಟಿಕೆಯಿಂದ ತೃಪ್ತಿಕರವಾದ ಏರ್ಪಾಟನ್ನು ಮಾಡಿರಲು, ರಂಭಾಸ್ತಂಭಾದಿ ತಳಿರುತೋರಣಗಳಿಂದಲೂ, ಚಿತ್ರತರವಾದ ಭುವನೇಶ್ವರಿಗಳಿಂದಲೂ ಶೋಭಿತವಾದ ರಾಜಬೀದಿಯಲ್ಲಿ ಉತ್ಸವವು ಬೆಳೆದಿತು. ಮಹಮ್ಮದೀಯರು ಏರ್ಪಡಿಸಿದ್ದ ಚಪ್ಪರದಲ್ಲಿ ಅವರುಗಳು ಮನೋಹರವಾದ ಉಪನ್ಯಾಸ ಪೂರ್ವಕವಾಗಿ ಒಪ್ಪಿಸಿದ ಅಡ್ರೆಸ್ಸನ್ನು ಸ್ವೀಕರಿಸಿ, ಬೆಂಡೆಕೆರೆ ಮಠದ ಮುಂಭಾಗದಲ್ಲೂ, ದೇಶದ ಮಠ, ಮಹಂತಿನಮಠಗಳ ಮುಂಭಾಗದಲ್ಲೂ ಹಾಕಿದ್ದ ರಮಣೀಯವಾದ ಆರ್ಚುಗಳು ಮತ್ತು ಸುಂದರವಾದ ಚಪ್ಪರಗಳಲ್ಲಿಯೂ, ಆ ಮುಂದೆ ಮ|| ರಾ|| ಸಾಹುಕಾರ್ ರೇವಣ್ಣ ಸಿದ್ಧಲಿಂಗಪ್ಪನವರ ಮನೆ ಮುಂದೆ ವಿಚಿತ್ರ ರಚನೆಗಳಿಂದ ನಿರ್ಮಿಸಲ್ಪಟ್ಟ ಭುವನೇಶ್ವರಿಯಲ್ಲಿಯೂ ಫಲಪುಷ್ಪಾದಿಗಳು ಸಮರ್ಪಿಸಲ್ಪಟ್ಟುವು. ಸಾಹುಕಾರರ ಮಗ ಜಿ. ರೇವಣಸಿದ್ಧಪ್ಪ ಮೊದಲಾದವರಿಂದ ನಿರ್ಮಿಸಲ್ಪಟ್ಟಿದ್ದ ತಾಂತ್ರಿಕವಾದ ತುಂಬೆಹುವ್ವಿನ ವೃಷ್ಟಿಯು ಸುರಿಸಲ್ಪಟ್ಟಿತು. ಅನಂತರ ಬಾಲಿಕೆಯರುಗಳಿಂದ ರಚಿಸಲ್ಪಟ್ಟಿದ್ದ ರತ್ನದಾರತಿಯು ಮಂಗಳಸ್ತುತಿಗಳೊಡನೆ ಮಹಾಪಾದಕ್ಕೆ ಸಮರ್ಪಿಸಲ್ಪಟ್ಟಿತು. ಯಜಮಾನ್ ಮ|| ರಾ|| ಎನ್. ಹೊನ್ನಪ್ಪನವರು ತಮ್ಮ ಮನೆ ಮುಂದೆ ನವನಾಗರಿಕತೆಯಿಂದ ಇಂಗ್ಲೀಷು ಅಡ್ರೆಸ್ಸಿನ ಕಮಾನನ್ನು ಹಾಕಿಸಿದ್ದರು. ಇಲ್ಲೆಲ್ಲಾ ಫಲಪುಷ್ಪಾದಿ ಸಮರ್ಪಣೆಯನ್ನಾಂತುಕೊಂಡು ಕರುಣಾದೃಷ್ಟಿ ಮಂದಹಾಸಗಳಿಂದ ಭಕ್ತನಿಚಯವನ್ನನುಗ್ರಹಿಸುತ್ತಾ, ಶೆಟ್ಟರ ರುದ್ರಪ್ಪನವರ ನೂತನಗೃಹದಲ್ಲಿ ರಚಿಸಲ್ಪಟ್ಟಿದ್ದ ದರ್ಬಾರು ಮಂಟಪದಲ್ಲಿ ರಚಿಸಿದ್ದ ಸಿಹ್ಮಪೀಠಕ್ಕೆ ಸ್ವಾರಿಯು ಬಿಜಯಂಗೈಸಿತು. ವೈದಿಕಮಂಡಲಿಯವರು ಮಂಗಳವಂ ಪಾಡಿದರು. ಸಂಸ್ಥಾನದ ಸುಬೇದಾರರಾದ ವೇ|| ಸಿದ್ಧರಾಮಯ್ಯನವರು ಈಗ್ಗೆ ೧೨ ವರುಷದ ಮುಂಚೆಯೇ ಈ ಸ್ಥಳದ ಪ್ರಮುಖರೂ ಕೈ|| ಸಾಹುಕಾರ್ ಲಿಂಗಣ್ಣನವರೂ ಸಹ ಒಪ್ಪಿಸಿದ್ದ ಬಿನ್ನಹದಂತೆ ಮಹಾಸ್ವಾಮಿ ಪಾದವು ಈ ಶಿವಕ್ಷೇತ್ರಕ್ಕೆ ಆಗಮಿಸಲು ಈಗ ಸಮಯಾನುಕೂಲವಾಯಿತು ಎಂಬ ವಿಷಯವಾಗಿ ಮನೋಹರವಾದ ಉಪನ್ಯಾಸವನ್ನು ಮಾಡಿದರು. ಮೇಲಣ ಗವಿ ಸಂ|| ಸಿದ್ಧಬಸವಶಾಸ್ತ್ರಿಗಳು ಅಷ್ಟಾವರಣ ವಿಚಾರವಾಗಿ ಶಾಸ್ತ್ರೀಯವಾದ ಮನೋಹರ ಭಾಷಣವನ್ನು ಮಾಡಿದರು. ನಂತರ ಬೆಂಗಳೂರಿನ ಕೈ|| ಧರ್ಮದರ್ಶಿ ತೋಟದಪ್ಪನವರ ಸತ್ರದಲ್ಲಿರುವ ಮತ್ತು ವೀರಶೈವ ಅಸೋಸಿಯೇಷನ್ನಿನ ವಿದ್ಯಾರ್ಥಿಗಳು ರಾಜಕೀಯ ವಿದ್ಯೆಯಿಂದ ಸಮಾಜಕ್ಕೆ ಉಂಟಾಗತಕ್ಕ ಪ್ರಯೋಜನವನ್ನೂ, ವಿದ್ಯಾಭ್ಯುದಯಕ್ಕಾಗಿ ಶ್ರೀ ಮಹಾಪಾದವು ಅವ್ಯಾಹತವಾಗಿ ನಡೆಯಿಸುತ್ತಿರುವ ಸಹಾಯ ಪ್ರೋತ್ಸಾಹಗಳನ್ನೂ, ಈ ಪೀಠವನ್ನು ಮಹಾಪಾದವು ಅಲಂಕರಿಸಿದಾಗಿನಿಂದ ಮತಾಭ್ಯುದಯಕ್ಕಾಗಿ ನಡೆಯಿಸಿರುವ ಕಾರ್ಯಗಳನ್ನೂ ಕುರಿತು ಉಪನ್ಯಾಸವಂಮಾಡಿದರು. ಮತ್ತು ಶ್ರೀಗಳ ಮೇಲೆ ರಚಿಸಿದ್ದ ಪದ್ಯಗಳನ್ನು ಓದಿದರು. ಕಡೆಗೆ ಶ್ರೀ ಶ್ರೀಗಳವರು ಪವಿತ್ರತರವಾದ ವಾಣಿಯಿಂದ ಸಮಯೋಚಿತವಾಗಿ ಭಕ್ತಿಜ್ಞಾನ, ಮತಾಭಿಮಾನ, ಏಕಮತ್ಯ ಪ್ರಯೋಜನ ವಿಷಯಗಳನ್ನು ಶಾಸ್ತ್ರಸಾರ ವಚನಗಳಿಂದ ಅಪ್ಪಣೆಕೊಡಿಸಿ ಸರ್ವರಿಗೂ ಆಶೀರ್ವಾದವಂ ದಯಪಾಲಿಸಿದರು. ಕರತಾಡನ ಮೊದಲಾದ ಜಯಘೋಷದಿಂದ ಸಭೆಯು ಭರಕಾಸ್ತಾಯಿತು. ಕೂಡಿದ್ದ ಮಹಾಸಮುದಾಯಕ್ಕೆಲ್ಲಾ ಸ್ಥಳೀಯರು ಸತ್ರದಲ್ಲಿ ದಾಸೋಹದ ಏರ್ಪಾಟನ್ನು ಸಮರ್ಪಕವಾಗಿ ನಡೆಸಿದ್ದರು. ತಾ|| ೨೩ ನೆ ಶ್ರಾವಣ ಸೋಮವಾರದ ದಿವಸ ಮ|| ರಾ|| ಸಾಹುಕಾರ್ ರೇವಣ್ಣನವರು ಶ್ರೀಗಳವರನ್ನು ತಮ್ಮ ಮನೆಗೆ ಬಿನ್ನಹಪೂರ್ವಕವಾಗಿ ಬಿಜಯಂಗೈಸಿಕೊಂಡು ಬಂದು ಪಾದಪೂಜೆಯಂ ಮಾಡಿ ಐದು ಸಾವಿರ ರೂ. ಗಳ ಭಿಕ್ಷೆಯನ್ನರ್ಪಿಸಿದರು. ಈ ಶ್ರೀಮಂತರು ಹೀಗೆ ಸಮಯೋಚಿತ ಸತ್ಪಾತ್ರದಲ್ಲಿ ತೋರಿಸಿದ ವಿತರಣ ಭಕ್ತಿಗಳು ರನ್ನಕ್ಕೆ ಕುಂದಣವಿಟ್ಟಂತೆ ಅವರ ಸಂಪತ್ತಿಗೆ ಸಾರ್ಥಕ ಭೂಷಣವಾಗಿ ಒಪ್ಪಿತು. ಅಲ್ಲದೆ ಸನ್ನಿಧಿಯ ಕೃಪಾಶೀರ್ವಾದಗಳಿಗೆ ಅವರನ್ನು ವಿಶೇಷ ಪಾತ್ರವನ್ನಾಗಿ ಮಾಡಿತು. ಮತ್ತು ತಾ|| ೨೪ ನೆ ಮಂಗಳವಾರ ಸಾಹುಕಾರ್ ಸಿದ್ಧಲಿಂಗಣ್ಣನವರು ತಮ್ಮ ಮನೆಗೆ ಮಹಾಪಾದ ಸ್ವಾರಿಯಂ ಉತ್ಸವ ಪೂರ್ವಕ ಬಿಜಮಾಡಿಸಿಕೊಂಡು, ತಮ್ಮ ಗೌರವಕ್ಕೆ ತಕ್ಕಂತೆ ಭಕ್ತಿಪೂರ್ವಕವಾದ ಪಾದಪೂಜೆಗಳಂ ಸಾಂಗಗೊಳಿಸಿ, ಒಂದು ಸಾವಿರ ರೂಪಾಯಿ ಭಿಕ್ಷೆಯನ್ನು ಅರ್ಪಿಸಿ ಸ್ತವನೀಯರಾದರು. ಸುತ್ತಮುತ್ತಣಿಂದ ಬಂದಿದ್ದ ಅಪಾರ ಜನಸ್ತೋಮವು ಈ ಸ್ಥಳಕ್ಕೆ ಅತ್ಯಪೂರ್ವತರವಾಗಿದ್ದ ಈ ಮಹೋತ್ಸವವನ್ನು ದರ್ಶನ ಮಾಡಿ ತಮ್ಮ ಜನ್ಮವೇ ಪುನೀತವಾದುದೆಂದು ಸಂತೋಷಪಟ್ಟು ಯಥಾಶಕ್ತಿ ಪಾದಕಾಣಿಕೆಗಳನ್ನಿತ್ತು ಆಶೀರ್ವಾದವಂ ಪಡೆದು ತೆರಳಿದರು.

ಸ್ಥಳವಾಸಿ.

ನೋಟೀಸ್.

ಯಾವತ್ತು ಜನರಿಗೆ ಈ ಕೆಳಗೆ ಸಹಿಮಾಡಿದವರಿಂದ ತಿಳಿಸುವದೇನಂದರೆ ಮೈಸೂರು ಇಲಾಖಾ ಚಿತ್ರದುರ್ಗ ಡಿ|| ಹರಿಹರ ಗ್ರಾಮದಲ್ಲಿ ಲಿಂಗಪ್ಪಾಗುರುಲಿಂಗಪ್ಪಾ ಸಜ್ಜನಶೆಟ್ಟಿ ಅಂತ ನಾಮದಿಂದ ಅಂಗಡಿ ಇಟ್ಟಿದ್ದು ಸದರಿ ಅಂಗಡಿ ಬಂದುಮಾಡಿರುತ್ತೇನೆ. ಸದರಿ ಅಂಗಡಿ ಹೆಸರಿನಿಂದ ಯಾರಾದರೂ ಮಾಲುವಗೈರೆ ಯಾವತರದ ಕೊಡತಕ್ಕೊಳ್ಳುವ ವ್ಯವಹಾರ ಮಾಡಬಾರದು. ಜರ ಮಾಡಿದ್ದಾದಗೆ ಅದರ ಜವಾಬ್ದಾರಿ ನಮ್ಮದಿರುವದಿಲ್ಲಾ ತಿಳಿಯುವದು. ಕೆ. ಲಿಂಗಪ್ಪಾ ಗುರುಲಿಂಗಪ್ಪಾ ಸಜ್ಜನಶೆಟ್ಟಿ, ಬ್ಯಾಡಗಿ.

ಇಸ್ತಿಹಾರ್.

ತಾರೀಖು 17 ನೇ ಜುಲೈ 1920. 6—2

ಮೈಸೂರು ಸ್ಟೇಟ್ ಲೈಫ್ ಇನ್‌ಷೂರೆನ್ಸ್ ಏರ್ಪಾಡಿನಲ್ಲಿ ತಮ್ಮ ಜೀವಗಳನ್ನು ವಿಮೆ ಮಾಡಿರುವ ಸರ್ಕಾರದ ಆಫೀಸರಿಗೂ ಅಂಥಾ ಆಫೀಸರಲ್ಲದ ಇತರರಿಗೂ ಮತ್ತು ಹಾಗೆ ವಿ

ಮೇ ಮಾಡಿರುವವರು ಮೃತಪಟ್ಟಿರುವ ಸಂದರ್ಭಗಳಲ್ಲಿ ಅವರ ವಾರಸುದಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:-

1920 ನೇ ಸೆಪ್ಟಂಬರು 30 ನೇ ತಾರೀಖಿನೊಳಗಾಗಿ ಪಾವತಿಯಾಗತಕ್ಕ ಮೊಬಲಗಿಗೆ ಉಂಟಾಗುವ ಹಕ್ಕನ್ನು ಸ್ಪಷ್ಟವಾದ ಮತ್ತು ಪೂರ್ತಿಯಾದ ರುಜುವಾತನ್ನು ಕೊಟ್ಟಲ್ಲಿ ಹಕ್ಕುದಾರರ ಅಪೇಕ್ಷೆಯ ಮೇಲೆ ಮೈಸೂರು ಸರ್ಕಾರದ ಶೇಕಡ 6¼ ರಂತೆ ಬಡ್ಡಿಯುಳ್ಳ ಸಾಲಕ್ಕೆ ಚಂದಾ ಮಾಡಿ, ಸಾಲದ ಇಸ್ತಿಹಾರಿನಲ್ಲಿ ವಿವರಿಸಿರುವವುಗಳ ಪೈಕಿ ಅವರಿಗೆ ಬೇಕಾದ ಅಂಕಿತದ ಬಾಂಡುಗಳನ್ನು ಕೊಡಲಾಗುವುದು. ಈ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳಲಿಚ್ಛೈಸುವವರು ತಮ್ಮ ಅಭಿಪ್ರಾಯವನ್ನು ತಕ್ಷಣ ಈ ಕೆಳಗೆ ರುಜುಮಾಡಿರುವವರಿಗೆ ದಯವಿಟ್ಟು ತಿಳಿಸಬೇಕು. ಮತ್ತು ಕೂಡಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವದಕ್ಕಾಗಿ ತಮ್ಮ ಹಕ್ಕುಗಳನ್ನು ತ್ವರಿತವಾಗಿ ರುಜುವಾತು ಸ್ಥಾಪಿಸಿಕೊಡತಕ್ಕದ್ದು. ವಿಮೆಯ ಮೊಬಲಗು ಹಕ್ಕುದಾರರು ಅಪೇಕ್ಷಿಸುವ ಅಂಕಿತ ಮೊಬಲಗುಗಳ ಬಾಂಡುಗಳನ್ನು ಕೊಳ್ಳುವದಕ್ಕೆ ಸರಿಹೋಗದ ಪಕ್ಷದಲ್ಲಿ, ಬಾಕೀ ಬೀಳುವ ಮೊಬಲಗನ್ನು ಸಂಸ್ಥಾನದ ಯಾವ ಖಜಾನೆಗಾದರೂ ಕಟ್ಟಿ, ಅದರ ರಶೀತಿಯನ್ನು ಮುಂದಿನ ನಡವಳಿಗೆ ಬಗ್ಗೆ ಈ ಆಫೀಸಿಗೆ ರವಾನಿಸಬಹುದು. ಅಥವಾ ಅಪೇಕ್ಷಿತ ಅಂಕಿತ ಮೊಬಲಗಿಗೆ ಕೇವಲ ಸಮೀಪವಾಗಿರುವ ಮೊಬಲಗಿನ ಬಾಂಡುಗಳೊಂದಿಗೆ ನಿಂತ ಹಣವನ್ನು ನಗದಾಗಿ ವಾಪಸು ಕೊಡಲಾಗುವುದು.

ಟಿ. ಸತ್ಯರಾಜಚೆಟ್ಟಿ, ಸೆಕ್ರಟರಿ,
ಮೈಸೂರು ಸರ್ಕಾರದ ಇನ್ಷೂರೆನ್ಸ್ ಕಮಿಟಿ.

WANTED.

4—2

An L.C.E. or B. E. with special knowledge in Mechanical Engineering for the post of the Chief officer of the Bijapur City Municipality on a monthly salary of Rs. 250 rising to Rs. 300 by an annual increment of Rs. 10. Applicants should be willing to serve at least for five years and submit their applications with testimonials of having got administrative capacity before the 13th November 1920. The appointment will be made subject to the approval of Government. The application should necessarily give the following particulars:—

(1) Present employment whether permanent or temporary. (2) Present pay. (3) Period of service put in. (4) Caste. (5) Age. (6) Whether experienced in Municipal service.

Municipal Office, Bijapur, 12-8-1920.
P. A. DESAI,
President,
Bijapur City Municipality.

THE MYSORE DASARA FAIR 1920.

NOTICE.

3—1

In connection with the ensuing Dasara Fair to be held at Mysore City from Wednesday the 20th October 1920, tenders are invited for putting up and managing the following courts of amusement etc:—

- (1) Meery-go-round
- (2) Feats of strength
- (3) Wrestling
- (4) Bioscope
- (5) Mimicry
- (6) Slight of hand
- (7) Motor ride
- (8) Dramas
- (9) Lucky dips
- (10) Indian Restaurant
- (11) European „
- (12) Music (instrumental & vocal)

and (13) Thatti fencing of 3000 ft. of 6 ft. height.

2. Applications will be received up to 15th September 1920.

3. All tenders to be addressed to the Secretary, Dasara Fair Committee, Exhibition Buildings, Mysore.

4. The acceptance or rejection of any tender rests finally with the Dasara Fair Committee.

5. As soon as a tender is accepted, the successful tenderer will be duly informed and he will thereafter be required to execute an agreement for running the amusement court etc., according to the trems to be decided by the Committee and to deposit 5% of the accepted tender amount as a guarantee for the fulfilment of the contract.

6. In default of the tenderer to act up to his agreement, the deposit made by him will be liable to be forfeited.

7. The Committee is not bound to give any reasons for the rejection of any tender nor intimation of such rejection will be given.

8. Further particulars may be obtained on application to the undersigned.

Exhibition Buildings,
Mysore.
15th Agust, 1920.

M. S. Ramachndra Rao,
Secretary,
Dasara Fair Committee,
Mysore.

ಹಂಟಿಂಗ್ ಗಡಿಯಾರ.



ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲ್ಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳ ವರಿವಿಗೂ ಬಾಳಿಕೆ ಬರುವದು. ಕ್ರಯ ೧ ಕ್ಕೆ ೬-೦-೦.

ವಿಳಾಸ:-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ|| ಬಾ|| ನಂ. 265,
21 ಮದರಾಸು.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ "ಜರ್ಮನ್" ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ಬೆಸ್ಟ್ ಪೌಂಟನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.



ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀನುಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 1—12—0.
12 ಕ್ಕೆ 18—0—0.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ಕುರ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
21 ೩, ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 40

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿದಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ವ[illegible] ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆತಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಳರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಕಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ರನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇವಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಆಗಸ್ಟ್ ತಾ|| ೨೯ರಿಂದ ೧೯೨೦ನೆಯ ಸೆಪ್ಟಂಬರ್ ತಾ|| ೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ನಿಜಶ್ರಾವಣ ಶುದ್ಧ ಪೌರ್ಣಿಮೆಯಿಂದ ನಿಜಶ್ರಾವಣ ಬಹುಳ ಷಷ್ಠಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
29	[1] ಭಾನು	ಪೌರ್ಣ	20-24	ಧನಿ	0-16	14
30	ಸೋಮ	ಪಾಡ್ಯ	30-43	ಶತ	3-42	15
31	[2] ಮಂಗಳ	ಬಿದಿ	30-42	ಪೂಭಾ	5-53	16
1	ಬುಧ	ತದಿ	29-27	ಉಭಾ	6-50	17
2	ಗುರು	ಚೌತಿ	26-58	ರೇವ	6-34	18
3	[3] ಶುಕ್ರ	ಪಂಚ	24-21	ಅಶ್ವಿ	5-18	19
4	[4] ಶನಿ	ಷಷ್ಠಿ	19-0	ಭರ	3-2	20

(1) ಯಜುರುಪಾಕರ್ಮ. (2) ಮಂಗಳಗೌರೀವ್ರತಂ. (3) ಪ್ರಸನ್ನಕೃಷ್ಣಸ್ವಾಮಿ ರಥಃ. (4) ಶ್ರಾವಣಶನಿವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

(ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಸೆಪ್ಟಂಬರ್ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೩೬

ಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
35 ವೈದ್ಯಶಾಲಾ, ಮೈಸೂರು.

ಹೊಸಶೋಧ ! • ಓಂ • ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೪ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ :—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
7 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಲ ವೀರಶೈವ ವಿವಾಹವಿಧಿ.	೦—೮—೦
ವಪೂಜಾವಿಧಿ.	೦—೧೦—೨
ಾರುತೀಲೆಚರಿತ್ರೆ	೦—೩—೦
ಂದಿವಾಸಿ	೦—೪—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

7

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.
ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.
ರಾ|| ಬ|| ವಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.
ಸ್ವಕರ್ತವ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು.

43

ನಾವು ಎ. ಆಲ್ ಬ್ಯಾಕ್ಯುಯರ್ ಕ್ಯೊ ಅಂಡ್ ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಖ್ಯರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಸಂಗ್ರಹಮಾಲಾ	,,	೦—೨—೦
ಬಾಲಲೀಲಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ಧಪ್ಪಾ ಕಡಕಲ್ಲು,
41 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ವಾರಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಎಲೆಕ್ಟ್ರಿಕ್ ದೀಪ.

22

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಆವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್ ಕೊ, 3 ಇರುಳಪ್ಪನ ಬೀದಿ ಮದರಾಸು.

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯವರ್ಧಕವಾದ

ಪಥ್ಯ ಇಂದ್ರಿಯಸ್ತಂಭನ ಗುಳಿಗೆ, ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮೇದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭನಗುಳಿಗೆಯನ್ನು ಸೇವಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
48 ಬಿ. ಪೋಸ್ಟ್ ಶಿರ್ಸಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಸ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ರೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ: (ಸಟೀಕ) ೬ ಆಣೆ; ಸ್ತುತಿಮುಕ್ತಾವಳಿ ೬ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಸೆಪ್ಟೆಂಬರ್ ತಾ|| ೫ನೆಯ ಭಾನುವಾರ.

ಶ್ರೀಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್.

ರಾಜಧಾನಿಯಲ್ಲಿ ಮೇಲೆ ಕಂಡ ಹೆಸರಿನಿಂದ ಒಂದಾನೊಂದು ಹತ್ತಿಯ ಯಂತ್ರಾಗಾರವು ಸ್ಥಾಪಿಸಲ್ಪಡಲಿಕ್ಕಿರುವುದೆಂಬ ವಿಷಯವು ಕೆಲಕಾಲದಿಂದ ಕರ್ಣಾಕರ್ಣಿಕೆಯಾಗಿದ್ದಿತಷ್ಟೆ? ಅದು ಇಷ್ಟರಲ್ಲೇ ಕಾರ್ಯರೂಪಕ್ಕೆ ಬರುವುದರಲ್ಲಿದೆಯೆಂಬುದನ್ನು ಕಂಡು ಸಂತೋಷಿಸುತ್ತೇವೆ. ಈ ಪ್ರತಿಷ್ಠಾಪನೆಗೆ ಸಂಬಂಧಪಟ್ಟ ವಿವರಣೆಯ ಪ್ರಕಟನಪತ್ರಿಕೆಯನ್ನು ಈ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ.

ನಮ್ಮ ಭರತಖಂಡದಲ್ಲಿ ಈಗ ಬಟ್ಟೆಗಳ ಭೋಗಾಸಕ್ತಿಯು ದಿನದಿನಕ್ಕೆ ಪ್ರಬಲಿಸುತ್ತಿದೆ. ಬಿಳಿಯ ಬಟ್ಟೆಗಳನ್ನು ಕಾಣುವುದು ಅಪರೂಪವಾಗಿದ್ದ ಗ್ರಾಮಾಂತರಗಳಲ್ಲೆಲ್ಲಾ ಕಂಬಳಿಗಳನ್ನು ಕಾಣುವುದು ಅಪರೂಪವಾಗುತ್ತಿದೆ. ಇದರಿಂದ ಕನಿಷ್ಠಪಕ್ಷ ನಮ್ಮ ದೇಶದಲ್ಲಿ ವರ್ಷಕ್ಕೆ ೧೫೦ ಕೋಟಿ ರೂ.ಗಳ ಬೆಲೆಯ ಬಟ್ಟೆಗಳು ಬಳಸಲ್ಪಡುವುವೆಂದು ಲೆಕ್ಕಹಾಕಲ್ಪಟ್ಟಿದೆ. ನಮ್ಮ ದೇಶದಲ್ಲಿ ಹೆಚ್ಚು ಕಡಿಮೆ ನಿರ್ಮಾಣವಾಗುತ್ತಿರುವ ಬಟ್ಟೆಗಳೆಲ್ಲಾ ೫೦ ಕೋಟಿ ರೂ. ನೊಳಗೇ ಇರುತ್ತವೆ. ಇನ್ನು ೧೦೦ ಕೋಟಿ ರೂ. ಗಳ ಬಟ್ಟೆಗಳನ್ನು ಪರದೇಶಗಳಿಂದ ವರ್ಷೇ ವರ್ಷೇ ತರಿಸಿಕೊಳ್ಳಬೇಕಾಗುತ್ತಿದೆ. ಇದರಿಂದ ನಮ್ಮ ಭರತಖಂಡದಲ್ಲಿ ನೆಯ್ಗೆಯ ಕೈಗಾರಿಕೆ ಅಥವಾ ಯಂತ್ರಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಬೇಕಾದಷ್ಟು ಅವಕಾಶವೂ ಅವಶ್ಯಕತೆಯೂ ಇದೆಯೆಂಬುದು ಸಿದ್ಧವಾಗಿರುತ್ತದೆ. ದೇಶಕ್ಕೆ ಕೈಗಾರಿಕೆಯ ಏಳ್ಗೆಯಿಂದ ಪ್ರಯೋಜನವೆ? ಯಂತ್ರಗಾರಿಕೆಯ ಅಭಿವೃದ್ಧಿಯಿಂದ ಪ್ರಯೋಜನವೆ? ಎಂಬುದರ ವಿಚಾರವೂ, ಯಂತ್ರಾಲಯಾಭಿವೃದ್ಧಿಯಿಂದ ಕೈಗಾರಿಕೆಗಳಿಗೆ ಹಾನಿಯಾಗುವುದೆಂಬ ವಿಚಾರವೂ ಹಾಗಿರಲಿ; ಬಟ್ಟೆಗಳ ಉತ್ಪಾದನವನ್ನು ಹೆಚ್ಚಿಸಬೇಕೆಂಬ ವಿಷಯವು ಮಾತ್ರ ನಿರ್ವಿವಾದವು. ಈಗ ಭರತಖಂಡದಲ್ಲಿ ಬೆಳೆಯುವ ಹತ್ತಿಯನ್ನೆಲ್ಲಾ ಈ ದೇಶದ ಯಂತ್ರಾಲಯಗಳೂ ಕೈರಾಟೆಗಳೂ ಉಪಯೋಗಿಸಿಕೊಳ್ಳಲಾರವು. ಈ ದೇಶದಲ್ಲೆಲ್ಲಾ ೨೬೨ ಹತ್ತಿಯ ಯಂತ್ರಾಲಯಗಳು ಮಾತ್ರವೇ ಇರುತ್ತವೆ. ಈ ದೇಶದ ಹತ್ತಿಯಲ್ಲಿ ೨೦||| ಲಕ್ಷ ಮೂಟೆಗಳಷ್ಟು ಮಾತ್ರವೇ ಈ ದೇಶದಲ್ಲಿ ನೂಲನ್ನು ಮಾಡಲಿಕ್ಕೂ ಬಟ್ಟೆಯನ್ನು ನೆಯ್ಯಲಿಕ್ಕೂ ಉಪಯೋಗಿಸಿಕೊಳ್ಳುತ್ತಾರೆ. ಉಳಿದ ೧೬ಲಕ್ಷ ಮೂಟೆಗಳಷ್ಟು ಹತ್ತಿಯು ವಿದೇಶಗಳಿಗೆ ಮಾರಲ್ಪಡುತ್ತಿದೆ. ಇಲ್ಲಿಂದ ಅಗ್ಗವಾಗಿ ಅದನ್ನು ಕೊಂಡ ಪರದೇಶೀಯರು ಅದನ್ನು ನೂಲನ್ನಾಗಿಯೂ ಬಟ್ಟೆಯನ್ನಾಗಿಯೂ ಮಾಡಿ ೧ಕ್ಕೆ ಎರಡುಮೂರರ ಬೆಲೆಗೆ ಅದನ್ನೇ ನಮ್ಮ ದೇಶಕ್ಕೆ ಮಾರಿ ಲಾಭ ಸಂಪಾದಿಸುತ್ತಿದ್ದಾರೆ. ಈಚೆಗೆ ಜಪಾನಿನವರು ನಮ್ಮ ದೇಶದ ಹತ್ತಿಯನ್ನು ಕೊಳ್ಳುವುದನ್ನು ಬಿಟ್ಟುಬಿಟ್ಟಿರುವುದರಿಂದ ಹತ್ತಿಯ ಬೆಲೆಯು ಇಳಿದುಹೋಗಿ, ಅದನ್ನು ಬೆಳೆದವರೂ ಅದರ ವ್ಯಾಪಾರಿಗಳೂ ಬಹಳ ನಷ್ಟವನ್ನನುಭವಿಸುತ್ತಿದ್ದಾರೆ. ನಮ್ಮ ದೇಶದ ಹತ್ತಿಯನ್ನೆಲ್ಲಾ ನಾವೇ ಉಪಯೋಗಿಸುವಷ್ಟು ಯಂತ್ರಾಲಯಗಳು ನಮ್ಮಲ್ಲಿ ಸ್ಥಾಪಿತವಾದರೆ ನಮ್ಮ ದೇಶದ ಹತ್ತಿಯ ಬೇಸಾಯಗಾರರಿಗೂ ಲಾಭವಾಗಬಹುದು; ದೇಶೀಯರಿಗೆ ಹತ್ತಿಯ ಸರಕುಗಳೂ ಸುಲಭವಾಗಿ ದೊರೆಯಬಹುದು. ಕೆಲವರ್ಷಗಳಿಂದ ಬಟ್ಟೆಯ ವ್ಯಾಪಾರಿಗಳಿಗೂ ಯಂತ್ರಾಲಯದವರಿಗೂ ಎಷ್ಟು ಘನತರವಾದ ಲಾಭವು ಸಿಕ್ಕಿರುವುದೆಂಬುದನ್ನು ಅವಲೋಕಿಸಿದರೂ, ಮೇಲೆ ತಿಳಿಸಿದಂತೆ ಹತ್ತಿಯ ಯಂತ್ರಾಲಯಗಳ ಹೆಚ್ಚುವಿಕೆಗೆ ಇರುವ ಅವಶ್ಯಕತೆಯನ್ನು ಪರಿಭಾವಿಸಿದರೂ ಮೈಸೂರು ದೇಶಕ್ಕೆ ಮುಖ್ಯನಗರವಾದ ಈ ಪಟ್ಟಣದಲ್ಲಿ ಇಂಥ ನೂತನ ಯಂತ್ರಗಾರಪ್ರತಿಷ್ಠಾಪನೆ ಮಾಡಲು ಉದ್ದೇಶಪಟ್ಟವರ ಸಂಕಲ್ಪವು ವಿಶೇಷತಃ ಅಭಿನಂದನೀಯವಾಗದೆ ಹೋಗಲಾರದು. ಮೈಸೂರು ಡಿಸ್ಟ್ರಿಕ್ಟಿನ ಪೂರ್ವದಕ್ಷಿಣದಿಕ್ಕುಗಳ ತಾಲ್ಲೂಕುಗಳಲ್ಲಿ ಹತ್ತಿಯ ಬೇಸಾಯಕ್ಕೆ ಅನುಕೂಲವಾದ ಕೃಷ್ಣಭೂಮಿಗಳು ವಿಶೇಷವಾಗಿವೆ. ಕೆಲಕಡೆಗಳಲ್ಲಿ ಅದರ ಬೇಸಾಯವು ಈಗಲೂ ರೂಢಿಯಲ್ಲಿದೆ. ಹತ್ತಿಯನ್ನು ವಿಶೇಷವಾಗಿ ಕೊಳ್ಳುವ ಇಂಥ ಯಂತ್ರಾಲಯವೊಂದು ಈ ಡಿಸ್ಟ್ರಿಕ್ಟಿನಲ್ಲಿ ಸ್ಥಾಪಿತವಾದರೆ ಅದರ ವ್ಯವಸಾಯವು ಈ ಸುತ್ತಿನಲ್ಲಿ ವಿಶೇಷತಃ ಅಭಿವೃದ್ಧಿಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ಕಾರಣದಿಂದ ದೇಶದ ಸಂಪದಭ್ಯುದಯಕ್ಕೂ, ಇದರಲ್ಲಿ ಪ್ರವೃತ್ತಿಸಿದವರಿಗೆ ಲಾಭವನ್ನೀಯುವುದಕ್ಕೂ ಇದು ಅನುಕೂಲವಾದ ಪ್ರತಿಷ್ಠಾಪನೆಯೆಂದು ಕಂಡುಬಂದುದರಿಂದಲೇ ದೀರ್ಘಾಲೋಚನಪರರಾದ ಶ್ರೀಮನ್ಮಹಾರಾಜರವರು ಈ ಯಂತ್ರಾಲಯಕ್ಕೆ ತಮ್ಮ ಶುಭನಾಮಾಂಕಿತವನ್ನಿಡಲು ಅನುಗ್ರಹ ಮಾಡಿ, ಇದರ ೫ ಲಕ್ಷ ರೂ.ಗಳ ಷೇರುಗಳನ್ನು ತಾವೇ ಪಡೆದುಕೊಂಡಿರುತ್ತಾರೆ. ದೇಶಾಭಿಮಾನಿಗಳೂ, ಶ್ರೀಮಂತರೂ, ತರುಣಸಾಹಸಿಗಳೂ ಆದ ಮ|| ವರ್ಧಮಾನಯ್ಯನವರೂ, ಅವರಿಗೆ ಸಮಜೋಡಿಯಾಗಿ ಉತ್ಸಾಹಶೀಲರಾಗಿರುವ ಮ|| ಬಿ. ಕೆ. ಗರುಡಾಚಾರ್ಯರೂ, ಮ|| ಬಿ. ಸೀತಾರಾಮಾಚಾರ್ಯರೂ ಕಂಪೆನಿಯಾಗಿ ನಿಂತು ಇದರ ಮ್ಯಾನೇಜ್‌ಮೆಂಟನ್ನು ನಡೆಯಿಸುವವರಾಗಿದ್ದಾರೆ. ಹೆಸರಾದ ವರ್ತಕರೂ ಶ್ರೀಮಂತರೂ ವಿಶ್ವಾಸಪಾತ್ರರೂ ಆದ ದೊಡ್ಡ ಮನುಷ್ಯರುಗಳು ಇದಕ್ಕೆ ಡೈರೆಕ್ಟರುಗಳಾಗಿ ನಿಂತಿರುವುದೂ, ಅನೇಕ ನೂತನ ಪ್ರತಿಷ್ಠಾಪನೆಗಳಿಗೆ ಹಸ್ತಾವಲಂಬವನ್ನಿತ್ತು ಅವುಗಳನ್ನೆಲ್ಲಾ ಜಯಶೀಲವಾಗಿ ಮುಂದಕ್ಕೆ ತಂದು ಪ್ರಸಿದ್ಧರಾಗಿರುವ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರು ಡೈರೆಕ್ಟರ ಸಂಘಕ್ಕೆ ಚೇರ್ಮನ್ನರಾಗಿರುವುದೂ, ಈ ಪ್ರತಿಷ್ಠಾಪನೆಯ ಬರವಸೆಯನ್ನು ಹೆಚ್ಚಿಸಿರುತ್ತವೆ. ಇಷ್ಟೆಲ್ಲಾ ಸಹಕಾರ ಸಂಪತ್ತಿಯಿದ್ದರೂ ಕಾರ್ಯಾನುಭವವುಳ್ಳವರಿಲ್ಲದಿದ್ದರೆ ಪ್ರಯೋಜನವು ಸಂಶಯಾಸ್ಪದವಾಗಬಹುದಾಗಿದ್ದಿತು. ಆ ಲೋಪಕ್ಕೂ ಅವಕಾಶವಿಲ್ಲದಂತೆ ಮಾಡಿರುವುದು ಈ ಪ್ರತಿಷ್ಠಾಪನೆಯ ಸರ್ವಾಂಗಸಂಪೂರ್ಣತೆಯನ್ನು ವ್ಯಕ್ತಪಡಿಸಿರುತ್ತದೆ. ಅದೇನಂದರೆ—ಕಳೆದ ೨೨ ವರ್ಷಗಳಿಂದಲೂ ಇಂಥ ದೂದಿಯ ಯಂತ್ರಾಲಯಗಳ ಕೆಲಸದ ಮೇಲ್ವಿಚಾರಣೆಯಲ್ಲಿ ಪೂರ್ಣಾನುಭವಗೊಂಡು ಬೆಂಗಳೂರು ಬಿನ್ನಿ ಕಂಪನಿಯ ಯಂತ್ರಾಲಯವನ್ನು ಈಗಣ ಮಹೋನ್ನತಸ್ಥಿತಿಗೆ ತರಲು ಯಾರ ಕೌಶಲ್ಯವು ಕಾರಣವಾಗಿದ್ದಿತೋ ಅಂಥ ತಜ್ಞರಾದ ಮಿ|| ಟಾಮಿ ಎಂಬ ಯೂರೋಪ್ಯ ದೊಡ್ಡಮನುಷ್ಯರ ಸಾಹಾಯ್ಯವನ್ನು ಇದಕ್ಕೆ ಪಡೆದುಕೊಂಡು ಕಾರ್ಯಾರಂಭ ಮಾಡಿರುತ್ತಾರೆ. ಇದರಿಂದ ಉಂಟಾಗಬಹುದಾದ ಲಾಭಗಳು ಶ್ರೀಮಂತರ ಪಾಲಿಗೇ ಅಲ್ಲದೆ ಬಡಬಗ್ಗರಿಗೂ ಯಥೋಚಿತವಾಗಿ ಬರಲೆಂಬ ಉದಾರಚಿತ್ತದಿಂದಲೇ ಇದರ ಷೇರೊಂದೊಂದರ ಬೆಲೆಯನ್ನು ೫೦ ರೂ. ನಷ್ಟು ಸುಲಭವಾಗಿ ಏರ್ಪಡಿಸಿರುತ್ತಾರೆ. ಹಾಗಿಲ್ಲದಿದ್ದರೆ ಇದಕ್ಕೆ ಬೇಕಾಗಿರುವ ೪೦ಲಕ್ಷ ರೂ. ಗಳನ್ನು ಕೆಲಮಂದಿಗಳೇ ವಹಿಸಿಕೊಳ್ಳುವುದು ದೊಡ್ಡದಾಗಿರಲಿಲ್ಲ. ಈ ಮೇಲೆಕಂಡ ವಿದ್ಯಮಾನಗಳು ಸಂಪೂರ್ಣವಾಗಿ ಬರವಸೆಯನ್ನು ಕೊಡತಕ್ಕುವಾಗಿರುವುದರಿಂದಲೇ ಗೊತ್ತಾಗಿದ್ದಷ್ಟು ಷೇರುಗಳಲ್ಲಿ ಬಹುಭಾಗವು ಆಗಲೇ ಕೊಳ್ಳಲ್ಪಟ್ಟು ಮುಗಿಯುತ್ತ ಬಂದಿರುವುವೆಂತಲೂ, ಅಲ್ಪಸ್ವಲ್ಪ ಉಳಿದಿರುವುವೆಂತಲೂ ಕೇಳುತ್ತೇವೆ.

ಲಾಭದಾಯಕವಾಗಿ ತೋರುತ್ತಿರುವ ಈ ಪ್ರತಿಷ್ಠಾಪನೆಯೂ ಉಳಿದಿರುವ ಷೇರುಗಳೂ ಕೂಡ ಆಲಸ್ಯ ಮಾಡಿದವರಿಗೆ ಸಿಕ್ಕಲಾರವು. ನಮ್ಮ ದೇಶೀಯರು ಇಂಥ ದೊಡ್ಡ ಪ್ರತಿಷ್ಠಾಪನೆಗೆ ಪ್ರಯತ್ನಪಟ್ಟುದು ನಮ್ಮ ದೇಶಕ್ಕೆ ಕೀರ್ತಿಪ್ರದವಾಗಿರುವುದು. ಸ್ವಲ್ಪ ಕಾಲದೊಳಗೇ ಕಾರ್ಯಾರಂಭವಾಗಲಿಕ್ಕಿರುವ ಈ ಪ್ರಯತ್ನಕ್ಕೆ ಶ್ರೀಜಗದಂಬಿಕೆಯು ಸಂಪೂರ್ಣ ಜಯವನ್ನುಂಟುಮಾಡಲೆಂದು ಕೋರುವೆವು.

ಗೋರಕ್ಷಣೆ.

ಸದ್ಯಃ ಖಿಲಾಪತ್ತಿನ ಸಂಬಂಧದಿಂದ ಸಹಾಯನಿರಾಕರಣ ತತ್ತ್ವಕ್ಕೆ ಹುರುವು ಬಂದಿದೆ. ದೂರದಲ್ಲಿರುವ ಅದರ ಫಲಾಫಲಗಳು ಹೇಗಾದರೂ ಇರಲಿ, ಸಮೀಪಸ್ಥವಾಗಿ ಒಂದು ಫಲೋದಯವು ಇದರಿಂದ ನಮಗಾಗಿರುವುದು ಸಂತೋಷಸ್ಥಾನವು. ಖಿಲಾಫತ್ ಸಂಬಂಧದಿಂದ ಹಿಂದೂ ಮಹಮ್ಮದೀಯರಲ್ಲಿ ಐಕ್ಯವು ದೃಢಪಡುವ ಛಾಯೆ ಬಿದ್ದಿರುವುದು. ಈ ಐಕ್ಯದ ದೃಢೀಕರಣಕ್ಕಾಗಿ ಮಹಮ್ಮದೀಯ ಸೋದರರು ಗೋವಧಾರೂಪಹಿಂಸಾಕೃತ್ಯವನ್ನು ತಾವು ನಿಷೇಧಿಸಿ, ತನ್ಮೂಲಕ ತಮ್ಮ ಹಿಂದೂಸಹೋದರರ ಮನಸ್ಸನ್ನು ಸೂರೆಗೊಳ್ಳುವ ಕೆಲಸವನ್ನು ಒತ್ತರದಿಂದ ನಡೆಯಿಸಿರುವರು. ಭಾರತೀಯರಿಗೆ ಇದು ಘನತರವಾದ ಸದ್ಯಃಫಲವೆಂದು ಹೇಳುವಲ್ಲಿ ಅಡ್ಡಿಯಿಲ್ಲ. ಕಳೆದವರ್ಷ ಅಮೃತಸರ ಪಟ್ಟಣದಲ್ಲಿ ಕೂಡಿದ್ದ ಮಹಮ್ಮದೀಯ ಮಹಾಸಭೆಯವರು ಗೋಮಾಂಸ ಭಕ್ಷಣೆಯನ್ನು ಮಹಮ್ಮದೀಯರೆಲ್ಲರೂ ಪರಿತ್ಯಜಿಸಬೇಕೆಂದು ತೀರ್ಮಾನಿಸಿದರು. ಶೌಕತಾಲಿ ಮೊದಲಾದ ಮಹಮ್ಮದೀಯ ಪ್ರಮುಖರನೇಕರು ಗೋಮಾಂಸವನ್ನು ಸುತರಾಂ ಪರಿತ್ಯಜಿಸಿ, ತಮ್ಮ ಮತೀಯರಿಗೆಲ್ಲಾ ಹಾಗೆ ಆಚರಿಸಲು ಬೋಧಿಸುತ್ತಿರುವರು. ದೊಡ್ಡದೊಡ್ಡ ಮೌಲ್ವಿಗಳೂ ಖಾಜಿಗಳೂ ಇದೇ ಬೋಧೆಯನ್ನು ಮಾಡುತ್ತಿರುವರು. ಕಳೆದ ಬಕ್ರೀದ್ ಹಬ್ಬದ ಮುಂಗಡೆಯಲ್ಲಿ ಭರತಖಂಡದ ಹಲವು ಪಟ್ಟಣಗಳಲ್ಲಿ ಮಹಮ್ಮದೀಯ ಸಹೋದರರು ಗೋವಧೆಯನ್ನು ಮಾಡಕೂಡದೆಂಬ ವಿಷಯದಲ್ಲಿ ನಿರ್ಧಾರಮಾಡಿರುವರು. ನಮ್ಮ ರಾಜಧಾನಿಯಲ್ಲೂ ಕೂಡ ಹೀಗೆಯೇ ಆಚರಿಸಿದುದಲ್ಲದೆ ಮಿ|| ಮಹಮ್ಮದ್‌ಸೇಟರೇ ಮುಂದಾಗಿ ನಿಂತು ಒಂದು ಗೋರಕ್ಷಣ ಸಮಾಜವನ್ನು ಸ್ಥಾಪಿಸಿ ಅದಕ್ಕೆ ಆಗಲೇ ಹಿಂದೂ ಮಹಮ್ಮದೀಯ ಪ್ರಮುಖರನೇಕರು ಸಾವಿರಾರು ರೂ.ಗಳ ಚಂದಾವನ್ನು ಕೂಡಿಸಿರುವರು. ಹಿಂದೂಮುಸಲ್ಮಾನರಲ್ಲಿ ದ್ವೇಷ ವೃದ್ಧಿಯಾಗುವುದಕ್ಕೆ ಗೋವಧೆಯೇ ಮುಖ್ಯಕಾರಣ. ಅಂಥ ದ್ವೇಷವನ್ನು ನಿರ್ಮೂಲಗೊಳಿಸಿ ಪರಸ್ಪರ ಪ್ರೀತಿವಿಶ್ವಾಸಗಳನ್ನು ವೃದ್ಧಿಪಡಿಸುವುದಕ್ಕೆ ಮಹಮ್ಮದೀಯರು ಗೋವಧಾ ಗೋಮಾಂಸಭಕ್ಷಣೆಗಳನ್ನು ದೂರೀಕರಿಸುವುದೇ ಮುಖ್ಯೋಪಾಯ. ಈ ತತ್ತ್ವವನ್ನರಿತೇ ಹಿಂದಣ ಮಹಮ್ಮದೀಯ ಚಕ್ರವರ್ತಿಗಳನೇಕರು ಗೋವಧೆಯನ್ನು ನಿಷೇಧಿಸಿದ್ದರು. ಕಾಬೂಲಿನ ಅಮೀರರು ತಮ್ಮ ದೇಶದಲ್ಲಿ ಗೋವಧೆಯನ್ನು ನಿಲ್ಲಿಸಿಬಿಟ್ಟಿರುವರು. ನೈಜಾಮರು ಕೂಡ ಬಕ್ರೀದಿನಲ್ಲಿ ಗೋವಧೆಯನ್ನು ಮಾಡಕೂಡದೆಂದು ನೊನ್ನೆತಾನೇ ರಾಜಾಜ್ಞೆ ಮಾಡಿರುವರು. ಬರೋಡಾ, ಕೊಲ್ಹಾಪುರ, ಕಾಶ್ಮೀರ, ಭೂಪಾಲ ಮೊದಲಾದ ಅನೇಕ ಸಂಸ್ಥಾನಗಳಲ್ಲಿ ಗೋವಧೆಯು ಶಾಸನಮೂಲಕ ನಿಷೇಧಿಸಲ್ಪಟ್ಟಿರುವುದು. ಇವೆಲ್ಲಕ್ಕೂ ಅತಿಶಯವಾಗಿ ಕಲ್ಕತ್ತಾ ಮ್ಯುನಿಸಿಪಾಲಿಟಿಯವರು ತಮ್ಮ ಪಟ್ಟಣದ ಎಲ್ಲೆಯಲ್ಲಿ ಗೋಮಾಂಸವನ್ನು ಯಾರೂ ಮಾರಕೂಡದೆಂದು ಕಟ್ಟಪ್ಪಣೆಯನ್ನು ಮಾಡಿರುವರೆಂಬ ವಾರ್ತೆಯು ಈಗತಾನೇ ಬಂದಿರುತ್ತದೆ. ಇದೆಲ್ಲಾ ಗೋಮಾತೆಯ ದುರದೃಷ್ಟ ಪರಿಹಾರಕಾಲದ ಶುಭಸೂಚನೆಯಾಗಿ ಕಾಣುತ್ತಿದೆ. ಗೋವಧೆಯಿಂದಲೂ, ಗೋಮಾಂಸಭಕ್ಷಣದಿಂದಲೂ, ಉತ್ತಮಜಾತಿಯ ಹೋರಿಗಳು ಈ ದೇಶದಿಂದ ಅನ್ಯದೇಶಗಳಿಗೆ ವಿಶೇಷವಾಗಿ ಸಾಗಿಸಲ್ಪಡುತ್ತಿ ವುದರಿಂದಲೂ, ನಮ್ಮ ದೇಶದಲ್ಲಿ ಪಶುಜಾತಿಯು ಕ್ಷೀಣಿಸಿ ಹಾಲು ಮೊಸರುಗಳಿಗೂ ವ್ಯವಸಾಯದ ಕೆಲಸಗಳಿಗೂ ಕೊರತೆಯು ಬಂದಿರುತ್ತದೆ. ಹಣಕ್ಕೆ ಆರು ಸೇರು ಬೆಣ್ಣೆ ರುತ್ತಿದ್ದ ಸ್ಥಳಗಳಲ್ಲಿ ರೂಪಾಯಿಗೆ ಆರುಪಾವು ಬೆಣ್ಣೆ ಮಾ ಹೊತ್ತ ಬಂದಿರುವುದನ್ನು ಯಾರುಕಾಣರು? ೧೯೧೬ನೆ ವ ಮೊದಲುಗೊಂಡು ೧೯೧೯ ನೆ ವರ್ಷದ ವರೆಗಣ ಮೂರು ವತ್ಸರ ಕಾಲದಲ್ಲಿ ಭರತಖಂಡದ ೩೩ ಪಟ್ಟಣಗಳಲ್ಲಿ ೧೪೬೦ ಪಶುಗಳು ಮಾಂಸಕ್ಕಾಗಿ ಕೊಲ್ಲಲ್ಪಟ್ಟಿರುವಂತೆ ಆ ಪಟ್ಟಣ ಮ್ಯುನಿಸಿಪಲ್ ಲೆಕ್ಕಗಳಿಂದ ಗೊತ್ತಾಗಿರುತ್ತದೆ. ಹೀಗಿರು ಭರತಖಂಡದಲ್ಲೆಲ್ಲಾ ವರ್ಷಕ್ಕೆ ಎಷ್ಟುಲಕ್ಷ ಪಶುಗಳು ಕ ಲ್ಪಡುತ್ತಿರಬಹುದು! ಮಹಮ್ಮದೀಯರು ಖಿಲಾಫತ್ ವೈ ಗ್ಯಕ್ಕಾಗಿ ಹಿಂದೂ ಮೈತ್ರಿಯನ್ನು ಸಂಪಾದಿಸುವ ಮ ಗೋವಧಾ ಪರಿತ್ಯಾಗವನ್ನು ನಡೆಯಿಸದೆ, ದೇಶಕ್ಕೆ ಅಮೂ ಧನವಾಗಿರುವ ಪಶುಜಾತಿಯ ರಕ್ಷಣೆಯು ಆರ್ಥಿಕದೃಷ್ಟಿ ದ ಎಷ್ಟು ಆವಶ್ಯಕವಾದುದೆಂಬುದನ್ನು ಗಮನಿಸಿ, ಶಾಶ್ವತ ಗಿ ಇದೇ ವ್ರತವನ್ನು ಅಂಗೀಕರಿಸುವವರಾಗಬೇಕು. ಮ ಪ್ರತಿಯೊಬ್ಬ ಹಿಂದೂ ಸಂಸ್ಥಾನಿಕರೂ ತಂತಮ್ಮ ದೇಶಗಳ ಶುವಧೆಯನ್ನು ಶಾಸನದ ಮೂಲಕ ನಿಷೇಧಿಸುವುದಕ್ಕೆ ಉ ಗಿಸಿ ಪುಣ್ಯಕೀರ್ತಿಗಳ ಜತೆಗೆ ದೇಶದ ಪಶುಸಂರಕ್ಷಣೆಯನ್ನು ಡಿದಲಾಭವನ್ನೂ ಸಂಪಾದಿಸುವವರಾಗಬೇಕು. ಕಲ್ಕತ್ತಾ ನ್ಸಿಪಾಲಿಟಿಯವರ ಮೇಲುಪಂಕ್ತಿಯನ್ನನುಸರಿಸಿ ಎಲ್ಲ ಪಟ್ಟ ಳ ಮುನ್ಸಿಪಾಲಿಟಿಗಳೂ ಗೋಮಾಂಸ ವಿಕ್ರಯವನ್ನು ನಿ ವುದರಲ್ಲಿ ಹಿಂದೆಗೆಯಬಾರದು. ಇಷ್ಟೆಲ್ಲಾ ಕೆಲಸಗಳು ನಡೆ ಗೋಮಾಂಸಭಕ್ಷಣೆಯನ್ನು ಬಿಡಲಾರದ ಕ್ರಿಸ್ತಭಕ್ತರಾದ ದೇಶಪ್ರಭುತ್ವದವರಿಂದಲೂ ಅದರ ವಧಾಪರಿತ್ಯಾಗಕ್ಕೆ ಬ ಶಾಸನವನ್ನು ಮಾಡಿಸುವುದು ಭಾರತೀಯರಿಗೆ ಕಷ್ಟಕರವ ಕೆಲಸವಾಗಲಾರದು, ಅಥವಾ ನಾಚಿಗೆಗೊಂಡು ಅವರು ಅವರೇ ಅದನ್ನು ನಿಷೇಧಿಸಬೇಕಾಗಿಯೇ ಬರುವುದು.

ಈಜಿಪ್ಟಿಗೆ ಸ್ವಾತಂತ್ರ್ಯ.

ತುರ್ಕಿಯ ಪರಿಪಾಲನೆಯಿಂದ ತಪ್ಪಿ ಆಂಗ್ಲರ ಕೈಗೆ ದ ಈಜಿಪ್ಟ್ ದೇಶವು ದಿನಕ್ರಮೇಣ ತನ್ನಲ್ಲಿರುವ ಸ್ವಾತಂತ್ರ್ಯೇ ಚ್ಛೆಯನ್ನು ನಾನಾವಿಧದಲ್ಲಿ ಹೊರ ಹಾಕುತ್ತ ಬಂದಿತು. ಯ ಜಾತೀಯ ವಾದಿಗಳು ನಾನಾ ತೆರದ ಆಂದೋಳನವ ಮಾಡುತ್ತ ಬಂದರು. ಕಡೆಗೆ ವಿಪ್ಲವವೂ ಉಂಟಾಗುವ ಗೆ ಬಂದಿತು. ಸಾಮ್ರಾಜ್ಯ ಪ್ರಭುತ್ವದವರು ಅದಕ್ಕೆ ಸ್ವಾತಂತ್ರ್ಯಗಳನ್ನು ಕೊಡಲು ಪ್ರಯತ್ನಿಸಿದರು. ಅದಕ್ಕೆ ಯ ಪ್ರಜೆಗಳು ಒಪ್ಪದೆ ಹೋದರು. ಕಡೆಗೆ ಈಜಿಪ್ಟಿನ ರಾ ಭಾರಿಗಳೂ ಆಂಗ್ಲ ಸಾಮ್ರಾಜ್ಯದ ರಾಯಭಾರಿಗಳೂ ಕ ಮಾತನಾಡಿದುದರಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಈಜಿ ಕೊಡುವ ವಿಷಯದಲ್ಲಿ ಸಮಾಧಾನವು ನಡೆದಿತೆಂದು ಕಳೆದ ರದ ತಂತ್ರೀವಾರ್ತೆಗಳಿಂದ ಗೊತ್ತಾಗುತ್ತದೆ. ಆ ನಿಬಂಧ ಲಿಲ್ಲಾ ಸಾಂಗವಾಗಿ ಇನ್ನೂ ತಿಳಿದಿಲ್ಲ. ಈಜಿಪ್ಟ್ ದೇ ಮೇಲೆ ಇತರರು ದಂಡೆತ್ತಿ ಬಂದರೆ ಅದನ್ನು ರಕ್ಷಿಸುವ ಬಾಧ ಯು ಆಂಗ್ಲರಿಗೇ ಇರತಕ್ಕುದೆಂತಲೂ, ನೈಲ್ ನದಿಯ ಕ ಗಳಲ್ಲಿ ಆಂಗ್ಲರಿಗಿರುವ ಬಾಧ್ಯತೆಗಳು ಯಥಾಪ್ರಕಾರ ಇ ಕ್ಕುದೆಂತಲೂ, ಯುದ್ಧಕಾಲಗಳಲ್ಲಿ ಆಂಗ್ಲರು ಈಜಿಪ್ಟ್ ದ ದಲ್ಲಿ ನುಗ್ಗಿ ಹೋಗುವುದಕ್ಕೆ ಅವಕಾಶ ವಿರಬೇಕೆಂತಲೂ, ಕ್ಕೆ ತಕ್ಕ ಸೌಕರ್ಯಗಳನ್ನು ಈಜಿಪ್ಟ್ ಪ್ರಭುತ್ವದವರು ಒ ಸಬೇಕೆಂತಲೂ, ಸುಯೇಜ್ ಕಾಲ್ವೆಯ ಪಕ್ಕದಲ್ಲಿ ಆಂಗ್ ಸೈನ್ಯವನ್ನಿರಿಸಬಹುದೆಂತಲೂ, ವಿದೇಶದವರೊಡನೆ ಸಂಬಂ ನ್ನು ಈಜಿಪ್ಟಿನವರು ಇಟ್ಟುಕೊಳ್ಳಬಹುದೆಂತಲೂ, ಆದರೆ ಅ ಸಂಬಂಧವು ಆಂಗ್ಲರ ನಿಯಮಕ್ಕೆ ವಿರುದ್ಧವಾಗಿರಕೂಡದೆ ಲೂ, ಈಜಿಪ್ಟಿನ ರಾಯಭಾರಿಗಳು ಪರದೇಶಗಳಲ್ಲಿರಬಹುದೆ ಲೂ, ಅಲ್ಲಿರುವ ಆಂಗ್ಲಾಧಿಕಾರಿಗಳ ಹಕ್ಕುಗಳು ಈಜಿಪ್ಟ ರಿಂದ ರಕ್ಷಿಸಲ್ಪಡಬೇಕೆಂತಲೂ, ಈಗ ಆ ದೇಶದಲ್ಲಿರುವ ಮ ಮುಂದೆ ನಿಯಮಿತರಾಗಿ ಬರುವ ಆಂಗ್ಲೋದ್ಯೋಗಿಗಳು ಈ ಪ್ಟ್ ಪ್ರಭುತ್ವಕ್ಕೆ ಬಾಧ್ಯರಾಗಿರಬೇಕೆಂತಲೂ ಮೊದಲಾಗಿ ನಿ ಧನೆಗಳಾಗಿರುವುವಂತೆ. ಈ ನಿಬಂಧನೆಗಳೆಲ್ಲಾ ಇನ್ನು ಮೇ ಈಜಿಪ್ಟಿನ ಮತ್ತು ಇಂಗ್ಲೀಷರ ಪಾರ್ಲಿಮೆಂಟುಗಳ ಒಪ್ಪಿ ಹೋಗಿ ಅಲ್ಲಿ ಅನುಮೋದಿಸಲ್ಪಟ್ಟ ಬಳಿಕ, ಇದೆಲ್ಲಾ ಸ ಯೇಪಾರ್ಟಿನಲ್ಲಿ ಸೇರಿ ವ್ಯವಸ್ಥೆಯಾಗುವುದು. ಆಗ್ಗೆ ಈಜಿ ದೇಶವು ಆಂಗ್ಲ ದೇಶಕ್ಕೆ ಅಧೀನವಾದುದೆನಿಸಿಕೊಳ್ಳದೆ ವಿ ದೇಶವಾಗಿ ಪರಿಣಮಿಸುವುದು. ಇದರಿಂದ ಆಂಗ್ಲ ಸಾಮ ಜ್ಯಕ್ಕೆ ಒಂದು ಪಕ್ಕದ ಶೂಲೆಯು ನಿವೃತ್ತವಾದಂತಾಗುವು ಐರ್ಲಂಡಿನ ವಿಷಯವೂ ಹೀಗೆಯೇ ವ್ಯವಸ್ಥೆಯಾದರೆ ಮತ್ತೊ ದು ಪಕ್ಕದ ಶೂಲೆಯೂ ನಿವೃತ್ತಿಯಾದೀತು. ಇವೆಲ್ಲಾ ವ ದಬಳಿಕ ಭರತಖಂಡದ ಸ್ವರಾಜ್ಯವಾದಿಗಳ ಕಾಂಕ್ಷೆಗೆ ಮ ಷ್ಟು ಕಾವು ಬರುವುದರಲ್ಲಾಶ್ಚರ್ಯವಿಲ್ಲ. ಆದರೆ ಈಜಿಪ್ಟಿನ ಪರಿಣಾಮವನ್ನು ನೋಡುವಲ್ಲಿ ಆಶ್ರಿತ ರಾಜ್ಯಗಳಿಗೆ ಉ ಕಾಲವರಿತು ಸ್ವಾತಂತ್ರ್ಯಪ್ರದಾನ ಮಾಡುವಲ್ಲಿ ಆಂಗ್ಲ ಸಾಮ ಜ್ಯವು ಹಿಂದೆಗೆಯುವುದಿಲ್ಲವೆಂಬುದು ವ್ಯಕ್ತವಾಗುತ್ತದೆ.

ಮೆಸಪೊಟೇಮಿಯಾ.

ಸಾಮ್ರಾಜ್ಯ ಪ್ರಭುತ್ವದವರು ಈಜಿಪ್ಟಿನ ಭಾರವನ್ನು ದುಕೊಳ್ಳುವಂತೆ ಮೆಸಪೊಟೇಮಿಯಾದ ಭಾರವನ್ನೂ ಕಳೆ ಕೊಳ್ಳುವ ಯೋಚನೆಯಲ್ಲಿರುವರೆಂದು ಗೊತ್ತಾಗುತ್ತದೆ. ಇದರಿಂದ ನಮ್ಮ ಭರತಖಂಡಕ್ಕೂ ಎಷ್ಟೋ ಹಿತವೆಂದು ಹೇಳಬಹುದು. ಮೆಸಪೊಟೇಮಿಯಾದ ರಕ್ಷಣೆಗೆ ಈಗ ೮೦,೦೦೦ ಕ್ಕೆ ಕಡಿಮೆಯಿಲ್ಲದಷ್ಟು ಸೈನ್ಯವಿಡಲ್ಪಟ್ಟಿದೆ. ಅದಕ್ಕೆ ಕೋಟ್ಯಂತರ ಸವರನ್ನುಗಳ ವೆಚ್ಚವು ಹಿಡಿಯುತ್ತಿದೆ. ನಮ್ಮ ದೇಶದ ಸೈನ್ಯವೇ ಅಲ್ಲಿ ವಿಶೇಷವಾಗಿದೆ. ಅದರ ವೆಚ್ಚದ ಕೆಲಭಾಗವನ್ನು ಭರತಖಂಡದ ತಲೆಯ ಮೇಲೂ ಹಾಕಬೇಕೆಂದಿದ್ದರು. ಮೆಸಪೊಟೇಮಿಯಾದಲ್ಲಿ ಹೆಚ್ಚಾಗಿರುವ ಜನರು ಅರಬ್ಬಿಯನ್ನರಾಗಿರುತ್ತಾರೆ. ಸ್ವಾತಂತ್ರ್ಯಕಾಮುಕರಾದ ಈ ಜನರಿಗೆ ಕಳೆದ ಯುದ್ಧದಿಂದ ತುರ್ಕಿಯ ಅಧಿಪತ್ಯದ ಕೈಕೆಳಗಣ ನಿರ್ಬಂಧದ ಬಾಳು ತಪ್ಪಿದರೂ ಅದಕ್ಕೆ ಪ್ರತಿಯಾಗಿ ಈಗ ಇಂಗ್ಲೀಷರ ಕೈಕೆಳಗೆ ಬಾಳುವುದು ಸೇರಲಿಲ್ಲ. ಬೇಗಾದರೆ ಅಲ್ಲಲ್ಲಿ ಇಂಗ್ಲೀಷ್ ಸೈನಿಕರ ಮೇಲೆ ಕಾಳಗಗಳನ್ನು ನಡೆಯಿಸುತ್ತಲೇ ಇರುವರು. ಈ ಒರಟು ಜನರನ್ನು ನಾಗರಿಕತೆಗೆ ತಂದು, ಆ ದೇಶದ ಪರಿಪಾಲನೆಯನ್ನು ಉತ್ತಮ ರೀತಿಯಿಂದ ಆಳಿಕೊಳ್ಳುವ ಸಾಮರ್ಥ್ಯವು ಅವರಿಗೆ ಬಂದ ಬಳಿಕ ಅವರಿಗೇ ಅದರ ಪಾಲನ ಭಾರವನ್ನು ವಹಿಸಬೇಕೆಂದು ಸಾಮ್ರಾಜ್ಯಪ್ರಭುತ್ವದವರು ಯೋಚಿಸಿದ್ದರು. ಆದರೆ ಅದು ಕೂಡಿಬರಲಿಲ್ಲ. ಸೇನಾ ಭಯದಿಂದ ಮೆಸಪೊಟೇಮಿಯಾದ ಅರಬ್ಬಿ ಜನರನ್ನು ಆಳಿಕೊಂಡು ಹೋಗುವುದು ಸುಲಭ ಕಾರ್ಯವಾಗಲಿಲ್ಲ. ಇದಕ್ಕಾಗಿ ಬಹುಜನ ಧನನಷ್ಟವನ್ನು ಆಂಗ್ಲಪ್ರಭುತ್ವದವರು ಸಹಿಸಬೇಕಾಗಿರುವುದು. ಇಂಥ ಭಾರವು ನಮಗೇಕೆಂದು ಆಂಗ್ಲಮಹಾಜನರು ತಮ್ಮ ಪ್ರಭುತ್ವದವರನ್ನು ಆಕ್ಷೇಪಿಸುತ್ತಿದ್ದರು. ಇದರಮೇಲೆ ಕಟ್ಟಕಡೆಗೆ ಆಂಗ್ಲಮಂತ್ರಿಮಂಡಲದವರು ಮೆಸಪೊಟೇಮಿಯಾದಲ್ಲಿ ಅರಬ್ಬಿಯನರಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಅಲ್ಲಿರುವ ತಮ್ಮ ಹೆಚ್ಚು ಸೈನ್ಯವನ್ನೆಲ್ಲಾ ತೆಗೆದುಬಿಟ್ಟು, ತಮ್ಮ ಒತ್ತಾಸೆಯಿಂದ ಅರಬ್ಬಿಯನರು ದೇಶಪಾಲನ ಕ್ರಮವನ್ನು ಸುವ್ಯವಸ್ಥೆಗೊಳಿಸಿಕೊಂಡಿರುವಂತೆ ಏರ್ಪಡಿಸುವವರಾಗಿದ್ದಾರೆಂಬ ವಾರ್ತೆ ಬಂದಿರುತ್ತದೆ. ಸಂಸಾರವು ಹೆಚ್ಚಿದಷ್ಟೂ ಯಜಮಾನನ ತಾಪತ್ರಯಗಳು ಹೆಚ್ಚುವಂತೆ, ರಾಜ್ಯವೈಶಾಲ್ಯವು ಹೆಚ್ಚಿದಷ್ಟೂ ಪರಿಪಾಲನವು ದುರ್ಭರವಾಗುವುದು ಸಹಜವಾಗಿದೆ. ಆಂಗ್ಲ ಪ್ರಭುತ್ವದವರು ರಾಜ್ಯಾಕ್ರಮಣ ದುರಾಶೆಯನ್ನು ದೂರೀಕರಿಸಿ, ಸ್ವಾತಂತ್ರ್ಯೇಚ್ಛುಗಳಿಗೆ ಅದರ ಫಲವನ್ನನುಭವಿಸಲು ಅವಕಾಶ ಕೊಡುತ್ತ ಬಂದು, ಅಧೀನರಾಜ್ಯಗಳನ್ನೆಲ್ಲಾ ಮಿತ್ರ ರಾಜ್ಯಗಳನ್ನಾಗಿ ಮಾಡಿಕೊಂಡರೆ ಅವರಿಗೆ ಪರಿಪಾಲನ ಕ್ಲೇಶವೂ ಕಡಿಮೆಯಾಗುವುದಲ್ಲದೆ, ಪ್ರಪಂಚದಲ್ಲಿ ಅಶಾಂತಿ ಅತೃಪ್ತಿಗಳೂ ಬಲುಮಟ್ಟಿಗೆ ಕಡಿಮೆಯಾಗುವುವು.

ವಿ. ಪಿ. ಬಾಂಗಿಗಳು.

ಪ್ರತಿಯೊಂದು ವಿ. ಪಿ. ಯನ್ನೂ ರಿಜಿಸ್ಟರ್ಮಾಡಿಯೇ ಕಳುಹಿಸಬೇಕೆಂದು ಅಂಚೆಯ ಶಾಖೆಯವರು ಈ ಸೆಪ್ಟೆಂಬರ್ ತಾ|| ೧ ರಿಂದ ಏರ್ಪಡಿಸಿದ್ದಾರೆ. ಇದರಿಂದ ಇನ್ನುಮೇಲೆ ವಿ. ಪಿ. ಮೂಲಕ ಪುಸ್ತಕಗಳನ್ನಾಗಲೀ ವೃತ್ತಪತ್ರಿಕೆಗಳನ್ನಾಗಲೀ ಇನ್ನಾವ ಸಾಮಾನುಗಳನ್ನೇ ಆಗಲೀ ತರಿಸಿಕೊಳ್ಳಬೇಕಾದವರು ಇದುವರೆಗೆ ಕೊಡುತ್ತಿದ್ದ ಪೋಸ್ಟೇಜೇ ಅಲ್ಲದೆ ಪ್ರತಿಯೊಂದು ಬಾಂಗಿಗೂ ಸಣ್ಣದೇ ಆಗಿರಲಿ ದೊಡ್ಡದೇ ಆಗಿರಲಿ ಎರಡಾಣೆಯನ್ನು ಹೆಚ್ಚಾಗಿ ಕೊಡಬೇಕಾಯಿತು. ನಾಲ್ಕಾಣೆಯ ಒಂದು ಪುಸ್ತಕವನ್ನು ತರಿಸಿಕೊಳ್ಳತಕ್ಕವರು, ಅದು ೧೦ ರೂ. ತೂಕದೊಳಗಿದ್ದರೆ ಅದಕ್ಕೆ ೬ ಪೈ. ೫ ರೂ. ನೊಳಗಣ ಹಣದ ಕಮಿಷನ್ನಿಗಾಗಿ ೧ ಆಣೆ. ರಿಜಿಸ್ಟ್ರೇಷನ್ ಛಾರ್ಜು ೨ ಆಣೆ. ಹೀಗೆ ಒಟ್ಟು ಪೋಸ್ಟಿಗಾಗಿ ೩|| ಆಣೆಯನ್ನೂ ಪುಸ್ತಕದ ಬೆಲೆಗಾಗಿ ೪ ಆಣೆಯನ್ನೂ ಕೊಡಬೇಕಾಗುವುದು. ತಮ್ಮ ಶಾಖೆಯ ಉದ್ಯೋಗಿಗಳಿಗೆಲ್ಲಾ ಮೊನ್ನೆತಾನೇ ಅಂಚೆಯ ಶಾಖೆಯವರು ಸಂಬಳಗಳನ್ನು ಹೆಚ್ಚಿಸಿದ ಕಾರಣ ಆ ಶಾಖೆಯ ವೆಚ್ಚವು ಸ್ವಲ್ಪ ಹೆಚ್ಚಿದುದು ನಿಜ. ಆದರೆ ವಿ. ಪಿ. ಬಾಂಗಿಯ ವಿಷಯವಾಗಿ ಹೀಗೆ ಮಾಡಿದುದರಿಂದ ಅವರ ಹೊಸ ವೆಚ್ಚದ ಭಾರಕ್ಕಿಂತಲೂ ಆದಾಯವೇ ನಾಲ್ಕುಪಟ್ಟು ಮಿಗಿಲಾಗಬಹುದು. ಈ ಹೊಸಭಾರವು ವಿ. ಪಿ. ತರಿಸಿಕೊಳ್ಳುವ ಪ್ರಜೆಗಳ ಮೇಲೆಯೇ ಬೀಳುವುದು. ವಿ. ಪಿ. ಗಳನ್ನು ರಿಜಿಸ್ಟರ್ಮಾಡಿ ಕಳುಹಿಸಿಕೊಡುವವರಿಂದ ಅವುಗಳ ಮನಿಯಾರ್ಡರ್ ಕಮಿಷನ್ನನ್ನು ಅಂಚೆಯವರು ಕಟ್ಟಿಸಿಕೊಳ್ಳುವುದಿಲ್ಲ. ಅದನ್ನು ಪಾವತಿ ತೆಗೆದುಕೊಳ್ಳುವವರಿಂದ ಪೋಸ್ಟ್ ಪೀವನ್ನುಗಳು ವಸೂಲುಮಾಡಿಕೊಳ್ಳುವರು. ಉಳಿದ ಪೋಸ್ಟೇಜೆಲ್ಲಾ ಮೊದಲೇ ಸಂದಾಯವಾಗಿರುವುದು. ಆದರೆ ಗ್ರಾಮಾಂತರಗಳಲ್ಲಿ ಪೋಸ್ಟ್ ಪೀವನ್ನುಗಳು ಬಾಂಗಿಮೇಲೆ ಹಾಕಿರುವ ಹಣಕ್ಕಿಂತಲೂ ಹೆಚ್ಚಿಗೆ ಹಣವನ್ನು ಅರಿಯದ ಜನರಿಂದ ವಸೂಲುಮಾಡಿಕೊಳ್ಳುತ್ತಿರುವರೆಂಬ ದೂರು ಈ ಮೊದಲೇ ಇದ್ದಿತು. ಇನ್ನುಮೇಲೆ ಅಂಥ ಹಾವಳಿಯು ಗ್ರಾಮಾಂತರಗಳಲ್ಲಿ ಇನ್ನಷ್ಟು ಹೆಚ್ಚಬಹುದು. ಇಂಥ ಅನರ್ಥಗಳಿಗೆ ಅವಕಾಶ ಕೊಡುವ ಈ ಯೇರ್ಪಾಟಿನ ಮೂಲಕ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಿಂತಲೂ ಪೋಸ್ಟ್ ಕಾರ್ಡುಗಳ ಬೆಲೆಯನ್ನು ೩ ಕಾಸಿನಿಂದ ೧ ದುಡ್ಡಿಗೆ ಏರಿಸಿದ್ದರೆ ಅಷ್ಟು ಬಾಧಕವಾಗಿರುತ್ತಿರಲಿಲ್ಲ. ಈಗಣ ಏರ್ಪಾಟು ಪುನರ್ವಿಮರ್ಶನೀಯವಾಗಿರುತ್ತದೆ. ಇದರ ವಿಷಯದಲ್ಲಿ ದೂರುಗಳೂ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ವಿ. ಪಿ. ಬಾಂಗಿಗಳು ಹಿಂದಿರುಗಿಸಲ್ಪಟ್ಟರೆ ಕಳುಹಿಸಿದವರಿಗೆ ಮತ್ತಷ್ಟು ನಷ್ಟವು ಹೆಚ್ಚಾಗುತ್ತದೆ. ಈ ಕಾರಣದಿಂದ ನಮಗಾದರೂ ಪತ್ರಿಕೆಗಳನ್ನು ಚಂದಾಹಣಕ್ಕೆ ವಿ. ಪಿ. ಮಾಡುವ ಪದ್ಧತಿಯನ್ನು ತಪ್ಪಿಸಬೇಕೆಂಬ ಯೋಚನೆಯು ಹುಟ್ಟಿದೆ.

ಸಹಾಯ ನಿರಾಕರಣ.

ಪಂಜಾಬಿನಲ್ಲಿ ಜ|| ಡಯರಿಂದ ನಡೆದ ಪ್ರಜಾ ಸಂಹಾರದ ವಿಷಯದಲ್ಲಿ ಆಂಗ್ಲ ಪ್ರಭುತ್ವದವರಿಂದ ಸರಿಯಾದ ತೀರ್ಮಾನವಾಗಲಿಲ್ಲವೆಂತಲೂ, ತುರ್ಕಿ ಸಂಧಿಯ ಸಂಬಂಧದಲ್ಲಿ ಆಂಗ್ಲಾಧಿಕಾರಿಗಳು ತಮ್ಮ ಪೂರ್ವದ ವಾಗ್ದಾನಕ್ಕೆ ವಿರುದ್ಧವಾಗಿ ನಡೆದು ಅನ್ಯಾಯ ಮಾಡಿರುವರೆಂತಲೂ, ಈ ಕಾರಣದಿಂದ ಅವೆರಡರ ವಿಷಯದಲ್ಲೂ ಪ್ರಭುತ್ವದವರು ನ್ಯಾಯವಾದ ಏರ್ಪಾಟನ್ನು ಮಾಡುವವರೆಗೂ ಅವರ ಸರ್ಕಾರಕ್ಕೆ ಪ್ರಜೆಗಳು ಸಾನುಭೂತಿಯಿಂದ ನಡೆಯದಿರುವುದೇ ನ್ಯಾಯಶಾಸ್ತ್ರವಿರುದ್ಧವಲ್ಲದ ಆಂದೋಳನವೆಂತಲೂ, ಮ|| ಗಾಂಧಿಯವರು ನಿರ್ಧರಿಸಿ, ಆ ತತ್ತ್ವದ ಅವಲಂಬನೆಗಾಗಿ ದೇಶದ ಪ್ರಜೆಗಳಿಗೆಲ್ಲಾ ಬೋಧಿಸುತ್ತಲಿದ್ದಾರಷ್ಟೆ? ಇದೇ ಸಹಾಯನಿರಾಕರಣವೆನಿಸಿಕೊಂಡಿರುವುದು. ಪ್ರಜೆಗಳಿಗೆ ಸಮರ್ಪಕವಲ್ಲದ ಕೃತ್ಯಗಳು ಪ್ರಭುತ್ವದವರಿಂದ ನಡೆಸಲ್ಪಡುತ್ತಿದ್ದರೆ ಅದರಿಂದುಂಟಾಗುವ ಬಾಧೆಯನ್ನು ಸೈರಿಸಿಕೊಳ್ಳಲಾರದ ಪ್ರಜೆಗಳು ತಮ್ಮ ತನು ಧನ ಪ್ರಾಣಗಳ ಮೇಲಣ ಅಭಿಮಾನವನ್ನೆಲ್ಲಾ ತೊರೆದು ಪ್ರಭುತ್ವದ ಮೇಲೆ ತಿರುಗಿಬಿದ್ದು ವಿಪ್ಲವ ಮೂಲಕವಾಗಿ ಇಷ್ಟಾವಾಪ್ತಿಯನ್ನು ಮಾಡಿಕೊಳ್ಳುವುದು ಒಂದು ವಿಧ. ಇದು ಉಭಯತಃ ಅನರ್ಥಕಾರಿಯಾದ ಕಠಿನ ಮಾರ್ಗ. ಪ್ರಬಲರಾಗಿರುವ ಪ್ರಭುತ್ವದವರು ಅಧರ್ಮದಿಂದ ನಡೆಯುತ್ತಿದ್ದರೆ ಅದಕ್ಕೆ ಪ್ರತಿಭಟಿಸದೆ ಅವರು ಶಿಕ್ಷಿಸಿದರೂ ಅದಕ್ಕೆ ತಲೆಯೊಡ್ಡಿ, ಅವರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ ಸಹಾಯವನ್ನೂ ಮಾಡದೆ ಬಾಳಿ, ಹೀಗೆ ಪ್ರಜಾಸಾಹಾಯ್ಯವನ್ನು ತಪ್ಪಿಸುವುದರಿಂದ, ವಿಧಿಯಿಲ್ಲದೆ ಪ್ರಜೆಗಳ ಇಷ್ಟಾಪೂರ್ತಿ ಮಾಡಲು ತಲೆಬಗ್ಗಿ ಸರ್ಕಾರವು ಬರುವಂತೆ ಮಾಡಿಕೊಳ್ಳಬೇಕೆಂಬುದೇ ಸಾತ್ತ್ವಿಕ ಮಾರ್ಗ. ಇಂಥ ಸಾತ್ತ್ವಿಕ ಪದ್ಧತಿಯಿಂದ ಮ|| ಗಾಂಧಿಯವರು ದಕ್ಷಿಣಾಫ್ರಿಕಾದಲ್ಲೂ, ಭರತಖಂಡದ ಚಾಂಪರಾಣ್ ಖೈರಾ ಜಿಲ್ಲೆಗಳಲ್ಲೂ ಕೆಲಮಟ್ಟಿಗೆ ಇಷ್ಟಾರ್ಥವನ್ನು ಪಡೆದು ಅನುಭವಗೊಂಡಿದ್ದಾರೆ. ಪ್ರಕೃತದ ಪಂಜಾಬಿನ ಮತ್ತು ಖಿಲಾಪತ್ತಿನ ಸಮಸೆಗಳಲ್ಲೂ ಅದೇ ತೆರದ ತತ್ತ್ವಾವಲಂಬನೆಯನ್ನು ಭಾರತೀಯರೆಲ್ಲರೂ ಮಾಡಿದರೆ ಇಷ್ಟಾರ್ಥಸಿದ್ಧಿಯಾಗುವುದೆಂದು ನಂಬಿ ಬೋಧಿಸುತ್ತಿದ್ದಾರೆ.

ಅವರು ಹೇಳುವ ಸಹಾಯನಿರಾಕರಣ ಕ್ರಮವು ನಾಲ್ಕು ವಿಭಾಗ ಮಾಡಲ್ಪಟ್ಟಿರುವುದು. ಮೊಟ್ಟಮೊದಲನೆಯ ಮತ್ತು ೨ ನೆಯ ಭಾಗಗಳಲ್ಲಿ- ಸರ್ಕಾರದಿಂದ ಕೊಡಲ್ಪಟ್ಟಿರುವ ಬಿರುದುಗಳನ್ನು ಪರಿತ್ಯಜಿಸುವುದು, ಸರ್ಕಾರದ ಸಹಾಯ ಪಡೆಯುವ ಪಾಠಶಾಲೆಗಳಿಗೆ ತಮ್ಮ ಹುಡುಗರನ್ನು ಕಳುಹಿಸದಿರುವುದು, ಶಾಸನ ಸಭೆಗಳಿಗೆ ಸಭಿಕರಾಗಿ ಸೇರದಿರುವುದು, ವಕೀಲರು ತಮ್ಮ ವೃತ್ತಿಗಳನ್ನು ಪರಿತ್ಯಜಿಸುವುದು, ಸರ್ಕಾರಿ ಸಿವಿಲ್ ಉದ್ಯೋಗಗಳನ್ನು ಬಿಟ್ಟುಬಿಡುವುದು, ಇತ್ಯಾದಿಗಳಿರುತ್ತವೆ. ೩.೪ ನೆ ಭಾಗಗಳಲ್ಲಿ ಸೈನ್ಯ ಮತ್ತು ಪೊಲೀಸು ಶಾಖೆಯಲ್ಲಿರುವ ಜನರೆಲ್ಲಾ ತಂತಮ್ಮ ಉದ್ಯೋಗಗಳನ್ನು ಬಿಡುವುದು, ಸರ್ಕಾರಕ್ಕೆ ಕಂದಾಯವನ್ನು ಕೊಡದೆ ನಿಲ್ಲಿಸಿಬಿಡುವುದು ಇತ್ಯಾದಿಯಾಗಿರುತ್ತವೆ. ಇವುಗಳಲ್ಲಿ ೧.೨ ನೆ ಭಾಗದ ಕ್ರಿಯೆಗಳು ವಿದ್ಯಾಧಿಕರಾಗಿರತಕ್ಕ ನಾಗರಿಕ ಜನರು ಅವಲಂಬಿಸಬಹುದಾದ ಕೃತ್ಯಗಳಾದುದರಿಂದ, ಅವನ್ನು ದೌರ್ಜನ್ಯಕ್ಕೆಡೆಯಿಲ್ಲದಂತೆ ಸುಲಭವಾಗಿ ಮೊದಲು ಆಚರಣೆಗೆ ತರಿಸಬಹುದೆಂದೂ, ೩.೪ ನೆಯವುಗಳನ್ನು ಜನಸಾಮಾನ್ಯದಲ್ಲಿ ಕಡೆಕಡೆಗೆ ಆಚರಣೆಗೆ ತರಿಸಬಹುದೆಂದೂ ಮ|| ಗಾಂಧಿಯವರು ಆಲೋಚಿಸಿ ಹೀಗೆ ಕ್ರಮಾಂತರವನ್ನೇರ್ಪಡಿಸಿದ್ದಾರೆ.

ಅಷ್ಟಾಂಗಯೋಗವು ಮಹಾಸಿದ್ಧಿಪ್ರದವಾಗಿದ್ದರೂ ಅದರ ಸಾಧನವು ಸುಲಭವಾಗಿಲ್ಲದಿರುವಂತೆ ಈ ಸಹಾಯನಿರಾಕರಣ ತತ್ತ್ವವಾದರೂ ದೇಶಕ್ಕೆ ಸುಲಭಸಾಧ್ಯವಾಗಿಲ್ಲ. ಈ ತತ್ತ್ವದ ಕ್ರಮಾನುಷ್ಠಾನವು ಕೇವಲ ಸಾತ್ತ್ವಿಕಮೂರ್ತಿಗಳಾಗಿರುವ ಮ|| ಗಾಂಧಿಯವರಂಥ ಸ್ವಾರ್ಥತ್ಯಾಗಿಗಳಿಗೆ ಸಾಧ್ಯವೇ ಹೊರತು ಅರಿಷಡ್ವರ್ಗಗಳಿಗೆ ಅಧೀನರಾಗಿರುವ ಕೇವಲ ರಾಜಸತಾಮಸಾತ್ಮಕರಿಗೆಲ್ಲಾ ಸುಲಭಸಾಧ್ಯವಲ್ಲ. ಅನಧಿಕಾರಿಗೆ ಮಾಡುವ ಉಪದೇಶವೂ ಅವನ ವಿಪರೀತಾನುಷ್ಠಾನವೂ ದುಷ್ಪರಿಣಾಮವನ್ನೀಯುವಂತೆ ಸಹಾಯನಿರಾಕರಣದಂಥ ಪವಿತ್ರತತ್ತ್ವವೂ ಕೂಡ ಅನಧಿಕಾರಿಗಳಾಗಿರತಕ್ಕ ಜನಸಾಮಾನ್ಯದ ಅವಲಂಬನೆಯಿಂದ ಅನರ್ಥಕ್ಕೇ ಹೇತುವಾಗದೆ ಇರಲಾರದು. ಕಳೆದ ಬಕ್ರೀದಿನ ದಿವಸ ಖೈರಾ ಡಿಪ್ಯುಟಿ ಕಮಿಷನರಾದ ಮಿ|| ವಿಲ್ಲೋಬಿಯವರನ್ನು ಮನೆಗೆ ನುಗ್ಗಿ ಒಬ್ಬ ಮಹಮ್ಮದೀಯನು ಕೊಂದುದೂ ಅದಕ್ಕೆ ಖಿಲಾಪತ್ತಿನ ವಿಷಯವೇ ಕಾರಣವಾಗಿದ್ದಿತೆಂಬುದೂ ಸಹ ಖಿಲಾಪತ್ತಿನ ಆಂದೋಳನವು ಎಷ್ಟು ಸೌಮ್ಯತರವಾಗಿ ಆರಂಭಿಸಲ್ಪಟ್ಟರೂ ಅನಧಿಕಾರಿಗಳಾಶ್ರಯದಿಂದ ಒಂದಲ್ಲ ಒಂದು ಸಲ ದೌರ್ಜನ್ಯಕ್ಕೆ ಹೇಗೆ ಎಡೆಗೊಡುವುದೆಂಬುದಕ್ಕೆ ನಿದರ್ಶನವಾಗಿರುವುದು. ಅಲ್ಲದೆ ರಾಜಕೀಯಪ್ರಮುಖರಲ್ಲೇ ಈ ವಿಷಯದಲ್ಲಿ ಐಕಮತ್ಯವಿರುವುದಿಲ್ಲ. ಗತಿಸಿದ ಬಾಲಗಂಗಾಧರ ತಿಲಕರು ಕೂಡ ರಾಜಸಧರ್ಮಾಚಾರಿಗಳಾಗಿದ್ದುದರಿಂದ ಈ ಸಾತ್ತ್ವಿಕಧರ್ಮಕ್ಕೆ ಅವರು ಒಲಿದಿರಲಿಲ್ಲ. ಶಾಸನ ಸಭೆಗಳನ್ನು ತ್ಯಜಿಸುವುದೇ ಮೊದಲಾದ ಸಹಾಯನಿರಾಕರಣಕ್ಕೆ ಅವರು ಒಪ್ಪಿರಲಿಲ್ಲ. ಎಲ್ಲ ತೆರದ ರಾಜಕೀಯ ಚಳವಳಿಗಳಲ್ಲಿ ನಾವು ಮುಂದೆಂದು ಬರುತ್ತಿರುವ ವಕೀಲ ಮಂಡಲಿಯಲ್ಲಿ ಯಾರೊಬ್ಬರೂ ಈ ಸಹಾಯ ನಿರಾಕರಣತತ್ತ್ವವನ್ನು ಗೌರವಿಸಿ ತಮ್ಮ ವೃತ್ತಿಯನ್ನು ಬಿಟ್ಟುಕೊಟ್ಟವರಿಲ್ಲ. ಇಲ್ಲವೆನಿಸಿಕೊಳ್ಳಬಾರದುದಕ್ಕೋ ಎಂಬಂತೆ ೨೦-೩೦ ಮಂದಿಗಳು ತಮ್ಮ ಬಿರುದುಗಳನ್ನು (ಆದಾಯವನ್ನೀಯದೆ ಮೂಲೆಗೆ ಮುಟ್ಟಾಗಿ ಬಿದ್ದಿದ್ದುವನ್ನು) ಮಾತ್ರ ತ್ಯಜಿಸಿಬಿಟ್ಟಿರಬಹುದು.

ಮ|| ಗಾಂಧಿಯವರು ಬೋಧಿಸುವ ಸಹಾಯ ನಿರಾಕರಣದಲ್ಲೂ ಕೂಡ ವಿದೇಶೀಯ ಪ್ರಭುತ್ವದವರೊಡನೆ ಸಹಾಯವನ್ನು ತ್ಯಜಿಸಬೇಕೆಂದು ಉಪದೇಶಿಸುವರೇ ಹೊರತು ವಿದೇಶ ವಸ್ತುಗಳ ಬಹಿಷ್ಕಾರವನ್ನು ಮಾತ್ರ ಸೂಚಿಸುವುದಿಲ್ಲ. ಅದು ಅಸಾಧ್ಯವೆಂದು ಹೇಳುತ್ತಾರೆ. ಗಾಂಧಿಯವರು ತಮ್ಮ ಪಕ್ಷದ ವರ್ತಕರ ಮೇಲಣ ಅಭಿಮಾನದಿಂದ ಹೀಗೆ ಆಡುತ್ತಾರೆಂದು ಅವರ ವಿರುದ್ಧರಾದ ವಕೀಲ ಪಕ್ಷದವರು ಅದಕ್ಕೆ ಹೆಸರಿಡುತ್ತಿದ್ದಾರೆ. ಹೀಗಾಗಿ ಗಾಂಧಿಯವರ ಸಹಾಯ ನಿರಾಕರಣ ಚಳವಳಿಕ್ಕೆ ತಕ್ಕ ಯಶಸ್ಸು ಬರುವ ಲಕ್ಷಣಗಳು ಕಾಣುವುದಿಲ್ಲ. ಮದ್ರಾಸಿಗೆ ನಿನ್ನೆತಾನೇ ಮ|| ಗಾಂಧಿಯವರು ಮೊದಲು ದಯಮಾಡಿಸಿದಾಗ್ಗೆ ನಿಲ್ದಾಣದ ಬಳಿಗೆ ಅಲ್ಲಿಯ ರಾಜಕೀಯ ಪ್ರಮುಖರನೇಕರು ಹೋಗಿ ಅಸಾಧಾರಣವಾದ ಮರ್ಯಾದೆಯಿಂದ ಇದಿರ್ಗೊಂಡು ಅವರುಪನ್ಯಾಸಗಳನ್ನೂ ಅಭಿಪ್ರಾಯಗಳನ್ನೂ ಕೇಳಿಕೊಂಡು, ಬಳಿಕ ಅವರು ಮತ್ತೊಂದುಸಲ ಅಂಬೂರಿನಿಂದ ಮದ್ರಾಸಿಗೆ ಬರುವಾಗ್ಗೆ ನಿಲ್ದಾಣಕ್ಕೆ ಬಂದು ಯಾರೂ ಮುಖವನ್ನೇ ತೋರಿಸಲಿಲ್ಲವೆಂದು ಅಲ್ಲಿಯ ಸ್ಥಳಿಕ ಪತ್ರಿಕೆಯೊಂದು ಬರೆದಿರುವುದನ್ನು ನೋಡಿದರೂ ಕೂಡ ಮ|| ಗಾಂಧಿಯವರ ಸದ್ಯದ ಚಳವಳಿಗೆ ಪುರಸ್ಕಾರವು ಎಷ್ಟುಮಟ್ಟಿಗಿದೆಯೆಂಬುದು ವ್ಯಕ್ತವಾಗುತ್ತದೆ. ಇಂಥ ಸುಳುವನ್ನು ತಿಳಿದೇ ಮ|| ಲಾರ್ಡ್ ಸಿಹ್ನರವರು "ಔದಾಸೀನ್ಯವೇ ಅದಕ್ಕೆ ಮದ್ದು" ಎಂದು ಪಾರ್ಲಿಮೆಂಟಿನಲ್ಲಿ ಅದಿ ತೋರಿಸಿದ್ದಾರೆ. ಸಾಧನದ ಶಕ್ತಿಯೇ ಹೀಗಿರುವಾಗ ಅದರಿಂದ ಸಾಧ್ಯವಾಗತಕ್ಕ ಫಲದ ವಿಷಯವನ್ನು ಹೇಳುವುದೇನು? ಪಂಜಾಬಿನ ವಿಷಯವನ್ನು ಗತಗೋಷ್ಠಿಯೆಂದು ಪ್ರಭುತ್ವದವರು ದಬ್ಬುತ್ತಲಿರುವರು. ಖಿಲಾಪತ್ತಿನ ವಿಷಯದಲ್ಲಿ ಸೀಮೆಗೆ ಹೋಗಿದ್ದ ರಾಯಭಾರಿಗಳಾದ ಮಿ|| ಮಹಮ್ಮದಾಲಿಯವರು ತಮ್ಮ ಪ್ರಯತ್ನಗಳೊಂದೂ ಫಲಿಸಲಿಲ್ಲವೆಂದು ಬರೆದಿರುವರು. ಸ್ವತಃ ತುರ್ಕಿ ಪ್ರಭುತ್ವದವರೇ ಸಂಧಿ ಪತ್ರಕ್ಕೆ ಒಪ್ಪಿಗೆಯ ರುಜುವನ್ನು ಹಾಕಿರುವರು. ಹೀಗಿರುವಾಗ ಈ ಸಹಾಯ ನಿರಾಕರಣ ಚಳವಳಿಯು ಎಷ್ಟುಮಟ್ಟಿಗೆ ಫಲಪ್ರದವಾಗುವುದೋ ತಿಳಿಯಲಿಲ್ಲ. ಹೋಗಲಿ. ದೇಶವು ತೃಪ್ತವಾಗಿ ಶಾಂತವಾಗಿದೆಯೆನ್ನುವುದಕ್ಕಿಂತಲೂ ಅತೃಪ್ತಿಯಲ್ಲೂ ಅಶಾಂತಿಯಲ್ಲೂ ಇದೆಯೆಂದು ಹೇಳಿಸಿಕೊಳ್ಳುವುದರಲ್ಲಿ ಫಲವಿಲ್ಲದೆ ಇಲ್ಲ. ಆದರೆ ವಿಪರೀತಕ್ಕೆ ಬಾರದಿರಬೇಕು.

ಒಳದೇಶದ ವೃತ್ತಾಂತಗಳು.

ಮ|| ಎಂ. ವೆಂಕಟಕೃಷ್ಣಯ್ಯನವರು ಅಧ್ಯಕ್ಷತೆಯಲ್ಲಿ ಶ್ಯಾನುಭೋಗರ ೫ ನೆ ವಾರ್ಷಿಕಾಧಿವೇಶನವು ಕಳೆದ ತಾ|| ೧-೨ ರಲ್ಲಿ ನಡೆದಿತು.

೧ ತಿಂಗಳಿಂದಲೂ ರಾಜಧಾನಿಯಲ್ಲಿದ್ದ ಗೊಂಡಾರ್ ಸಂಸ್ಥಾನದ ರಾಜರು ಪತ್ನೀ ಪರಿವಾರ ಸಮೇತರಾಗಿ ಕಳೆದ ಸೋಮವಾರ ಬೆಂಗಳೂರು ಮಾರ್ಗವಾಗಿ ತರಳಿದರು.

ಮಳೆಯಿಲ್ಲದೆ ಬೆಂಗಾರಾಗಿದ್ದ ಬೆಂಗಳೂರು, ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಕಳೆದ ವಾರ ಕೆಲ ಹದ ಮಳೆಗಳಾದುವೆಂದೂ, ಬಿತ್ತನೆಯ ಕೆಲಸವು ಆರಂಭವಾಗಿದೆಯೆಂದೂ ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಾಲಿಟಿಯ ದರಬಾರಿನ ಅಂತರ್ವ್ಯವಸ್ಥೆಯು ಹೇಗಿದೆಯೋ ದೇವರೇ ಬಲ್ಲ. ಆಗಾಗಣ ವೆಚ್ಚದ ಅವಸರಕ್ಕೆ ಮೈಸೂರು ಬ್ಯಾಂಕಿನಿಂದ ತರಿಸಿಕೊಂಡ ಹಣಕ್ಕಾಗಿ ಬಡ್ಡಿಯನ್ನೇ ೨೬೦ ರೂ. ಗಳವರೆಗೆ ತೆತ್ತಿರುವರಂತೆ.

ಸಂಸ್ಥಾನದ ವಿದ್ಯುಚ್ಛಕ್ತಿ ಶಾಖೆಯಲ್ಲಿ ೧ ಲಕ್ಷದ ೨೦ ಸಾವಿರ ರೂ. ಗಳ ವರೆಗೆ ಆ ಶಾಖೆಯ ಕೆಲವರಿಂದ ಅಪಹರಿಸಲ್ಪಟ್ಟು ಆ ಸಂಬಂಧವಾದ ವಿಚಾರಣೆಗಳು ನಡೆಯುತ್ತಿವೆಯೆಂದೂ, ಆಕ್ಟಿಂಗ್ ದಿವಾನರವರ ಸಹಸ್ರಾಕ್ಷತೆಯಿಂದ ಇದು ಹೊರಬಿದ್ದಿದೆಯೆಂದೂ ಕೇಳುತ್ತೇವೆ. ಇಂಥ ಅಗಾಧವಾದ ದ್ರೋಹವು ಸರ್ಕಾರದ ಉದ್ಯೋಗಿಗಳಲ್ಲಿ ನಡೆದಿದೆಯೆಂಬುದನ್ನು ಕೇಳಿ ಪ್ರಜೆಗಳು ಬಹಳ ಸಂಕಟಪಡದೆ ಇರಲಾರರು. ಸರ್ಕಾರದ ಎಷ್ಟು ಮೂಲೆಗಳಲ್ಲಿ ಇಂಥ ದುರ್ಗುಣಗಳು ಬಿದ್ದಿವೆಯೋ ತಿಳಿಯದು. ವಿಚಾರಮಾಡತಕ್ಕ ಪ್ರಭುಗಳಾಗಬೇಕು. ಇಂಥ ದ್ರೋಹಿಗಳನ್ನು ತೀಕ್ಷ್ಣವಾದ ದಂಡನೆಗಳಿಂದಲೂ, ದರ್ಪದಿಂದಲೂ ಹುಟ್ಟಡಗಿಸದಿದ್ದರೆ, ಸ್ವಾಮಿ ದ್ರೋಹವೂ ಲಂಚುಗೊಳಿತನದ ಪ್ರಜಾದ್ರೋಹವೂ ಸರ್ಕಾರದಲ್ಲಿ ತನ್ಮಯವಾಗಿ ಕ್ಷಯಕ್ಕೆ ಕಾರಣವಾಗುವವು.

ಕಳೆದ ವರ್ಷ ಒಕ್ಕಲಿಗ ಜನವರ್ಗದವರು ಸಂಸ್ಥಾನದ ಬೇರೆ ಬೇರೆ ತಾಲ್ಲೂಕುಗಳಲ್ಲಿ ೬ ಸಭೆಗಳನ್ನು ನಡೆಯಿಸಿದ್ದಾರೆ. ೬ ನೆ ಸಭೆಯು ಕಳೆದ ತಾ|| ೨೨ ರಲ್ಲಿ ದೊಡ್ಡಬಳ್ಳಾಪುರದಲ್ಲಿ ಮ|| ಬಿ. ಪುಟ್ಟಯ್ಯ ಬಿ. ಎ. ಯವರ ಅಧ್ಯಕ್ಷತೆಯಿಂದ ನಡೆದಿತು. ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರು ಅದರ ಆರಂಭೋತ್ಸವವನ್ನು ನಡೆಯಿಸಿ, ಉತ್ತೇಜನಪರವಾದ ಭಾಷಣವನ್ನು ಮಾಡಿದರು. ಮ|| ಪುಟ್ಟಯ್ಯನವರ ಭಾಷಣವು ತಮ್ಮ ಜನವರ್ಗಗಳಿಗೆಲ್ಲಾ ಹಿತಬೋಧೆಯನ್ನು ಮಾಡತಕ್ಕುದಾಗಿದ್ದಿತು. ಕಳೆದ ಒಂದು ವರ್ಷದಲ್ಲಿ ಅವರ ಸಂಘದ ಕಾರ್ಯಗಳಿಗಾಗಿ ೧೪ ಸಾವಿರ ರೂ. ಚಂದಾ ಹಣವು ಅವರ ಜನರಿಂದ ಕೊಡಲ್ಪಟ್ಟಿದೆಯೆಂದು ಗೊತ್ತಾಗುತ್ತದೆ. ಆ ಜನವರ್ಗದ ಮುಂದಾಳುಗಳ ಅಭಿಮಾನ ಪ್ರಯತ್ನಗಳೇ ಅವರ ಈ ವಿಧವಾದ ಅಭಿವೃದ್ಧಿಗೆ ಕಾರಣವಾಗಿರುತ್ತವೆ.

ಭರತಖಂಡದ ವೃತ್ತಾಂತಗಳು.

ಲಾರ್ಡ್ ಚೆಲಮ್ಸ್‌ಫರ್ಡ್‌ರವರ ವೈಸ್ರಾಯಿಗಿರಿ ಅವಧಿಯು ಮುಗಿದ ಬಳಿಕ ಆಸ್ಥಾನಕ್ಕೆ ಲಾರ್ಡ್‌ವಿಲ್ಲೋರವರು ಬರುವರೆಂದು ಸುದ್ದಿಯಿದೆ.

ಈ ದೇಶಕ್ಕೆ ದಯಮಾಡಲಿಕ್ಕಿರುವ ಡ್ಯೂಕ್ ಆಫ್ ಕನ್ನಾಟ್‌ರವರನ್ನು ಕರೆದುಕೊಂಡುಬರಲು ಪೋರ್ಟ್ಸ್‌ಮತ್ ತೀರಪಟ್ಟಣದಲ್ಲಿ ಮಲಯಾ ಎಂಬ ಯುದ್ಧನೌಕೆಯು ಸಿದ್ಧಮಾಡಲ್ಪಡುತ್ತಿದೆ.

ಬೊಂಬಾಯಿಯಲ್ಲಿ ವರ್ಷಕ್ಕೊಂದುಸಲ ಸಮುದ್ರಕ್ಕೆ ತೆಂಗಿನಕಾಯನ್ನರ್ಪಿಸುವ ದೊಡ್ಡ ಹಬ್ಬವು ನಡೆಯುತ್ತದೆ. ಕಳೆದ ವಾರ ನಡೆದ ಈ ಹಬ್ಬದ ಗದ್ದಲದಲ್ಲಿ ಜನಸಮ್ಮರ್ದದಿಂದ ೬ ಮಂದಿ ಹಿಂದುಗಳು ಸತ್ತರು.

ಕಲ್ಕತ್ತಾದಲ್ಲಿ ಈಗ ಕೂಡಿರುವ ರಾಜಕೀಯ ಮಹಾ ಸಭೆಯ ಮಂಟಪದಲ್ಲಿ ಭಾರತೀಯ ಬಾಲವಿಧವೆಯರಿಗೆ ಪುನರ್ವಿವಾಹವನ್ನು ಆಚರಣೆಯಲ್ಲಿ ತರಿಸುವ ವಿಷಯವನ್ನು ನಿರ್ಧರಿಸುವುದಕ್ಕಾಗಿ ಸ್ವಾಮಿ ಶ್ರದ್ಧಾನಂದರ ಆಧಿಪತ್ಯದಿಂದ ಒಂದು ಮಹಾಸಭೆ ಕೂಡುವುದಾಗಿದೆ.

ಅಫ್ಘಾನಿಸ್ಥಾನಕ್ಕೂ ತುರ್ಕಿಗೂ ಮಧ್ಯದಲ್ಲಿರುವ ಎಲ್ಲೆಯ ಪ್ರದೇಶಗಳನ್ನು ಆಕ್ರಮಿಸುವ ಪ್ರಯತ್ನದಲ್ಲಿ ಬೋಲ್ಷೆವಿಕ್ಕರು ತೊಡಗಿದ್ದಾರಂತೆ. ಬೊಖಾರ ಪಟ್ಟಣವನ್ನು ಹಿಡಿದುಕೊಳ್ಳುವುದಕ್ಕಾಗಿ ಅವರು ಅಲ್ಲಿಗೆ ೬ ಮೈಲಿಗಳ ದೂರದಲ್ಲಿರುವ ಕಾರ್ಗಾರ್ಕ ಎಂಬ ಸ್ಥಳದಲ್ಲಿ ಸೈನ್ಯವನ್ನೂ ವಿಮಾನಗಳನ್ನೂ ಕೂಡಿಸುತ್ತಿರುವರಂತೆ.

ಕಳೆದ ವಾರ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ನಾಣ್ಯಗಳ ಸಂಬಂಧವಾದ ಎಂದರೆ ಪೌನಿಗೆ ೧೦ ರೂಪಾಯಿಗಳಂತೆ ಏರ್ಪಡಿಸುವ ಸಂಬಂಧವಾದ ಬಿಲ್ಲು ಚರ್ಚೆಗೆ ತರಲ್ಪಟ್ಟಿತು. ವಾದಾನುವಾದಗಳು ನಡೆದು ಕಡೆಗೆ ಅಮೋದಿತವಾಗ

ಸರ್ಕಾರಿ ಗೆಜೆಟ್ಟಿನಲ್ಲಿ ಬಿಲ್ಲನ್ನು ಪ್ರಕಟಿಸಲು ಅಪ್ಪಣೆ ಕೊಡಲ್ಪಟ್ಟಿತು. ಅದರ ವಿವರವನ್ನು ಮುಂದೆ ಪ್ರಕಟಿಸುತ್ತೇವೆ.

ಕಳೆದ ತಾ|| ೨೮ ರಲ್ಲಿ ಬೊಂಬಾಯಿ ಪಟ್ಟಣದಲ್ಲಿ ಅಲ್ಲಿಯ ಷರೀಫ್‌ರವರ ಅಧ್ಯಕ್ಷತೆಯಿಂದ ಒಂದು ಸಭೆಗೂಡಿತ್ತು. ಗೋವಧೆಯನ್ನು ನಿಲ್ಲಿಸುವುದು, ಪಶುಜಾತಿಯನ್ನು ಭರತಖಂಡದಿಂದ ಅನ್ಯದೇಶಗಳಿಗೆ ಸಾಗಿಸುವುದನ್ನು ತಡೆಯುವುದು, ಮೇವಿನ ಕೊರತೆಯ ನಿವಾರಣೆ-ಈ ವಿಷಯಗಳನ್ನು ಯೋಚಿಸುವುದೇ ಸಭೆಯ ಉದ್ದೇಶವಾಗಿದ್ದುದರಿಂದ ಸಭೆಗೆ ಹಿಂದೂ ಮಹಮ್ಮದೀಯ ಪಾರ್ಶಿ ಮೊದಲಾದ ಜನರೆಲ್ಲಾ ಅಸಂಖ್ಯಾಕರಾಗಿ ತಮ್ಮ ಅಂಗಡಿಗಳನ್ನು ಮುಚ್ಚಿ ಬಂದು ಸೇರಿದ್ದರು. ಮದನಮೋಹನ ಮಾಳವ್ಯರವರು ಪಶುವಧೆಯನ್ನು ನಿಲ್ಲಿಸಬೇಕು, ಪಶುಗಳನ್ನು ಅನ್ಯದೇಶಗಳಿಗೆ ಸಾಗಿಸುವುದನ್ನು ತಪ್ಪಿಸಬೇಕು ಎಂದು ಪ್ರಭುತ್ವದವರನ್ನು ಪ್ರಾರ್ಥಿಸಬೇಕೆಂಬ ತೀರ್ಮಾನವನ್ನು ಸೂಚಿಸಿ ಉತ್ತಮ ಭಾಷಣ ಮಾಡಿದರು. ಅದನ್ನು ಅ|| ಪಟೇಲರವರು ಪುಷ್ಟೀಕರಿಸಿದರು. ಬಳಿಕ ಜೋಸೆಫ್ ಬಾಪ್ಟಿಸ್ಟಾರವರು, ಮಧ್ಯಪ್ರಾಂತದ ಸಾಗೂರಿನ ಹತ್ತಿರ ಸರ್ಕಾರದವರು ಗೋವಧಾಶಾಲೆಯನ್ನು ಕಟ್ಟಿಸಲು ಕಲ್ಪಿಸಿರುವುದನ್ನು ನಿಲ್ಲಿಸಬೇಕು ಎಂಬ ವಿಷಯದ ನಿರ್ಧಾರವನ್ನು ಸೂಚಿಸಿದರು. ಎಲ್ಲರೂ ಅನುಮೋದಿಸಿದರು. ಈ ವಿಷಯವಾಗಿ ವೈಸ್‌ರಾಯರಿಗೆ ವಿಜ್ಞಾಪನೆ ಮಾಡಿಕೊಳ್ಳಬೇಕೆಂದು ತೀರ್ಮಾನವಾಯಿತು.

ಖಿಲಾಪತ್ ಸಂಬಂಧವಾಗಿ ಉತ್ತರ ಹಿಂದೂಸ್ಥಾನದ ೧೦-೨೦ ಸಾವಿರಕ್ಕೆ ಮೀರಿದ ಮುಸಲ್ಮಾನರು ಕೆರೆಯೊಡನೆ ಮುಳಿಸಿಕೊಂಡ ಗಾಥೆಯಂತೆ ಭರತಖಂಡವನ್ನೇ ಬಿಟ್ಟು ಆಪ್ಘಾನಿಸ್ಥಾನಕ್ಕೆ ಹೋಗಿ ಸೇರಿಕೊಳ್ಳುತ್ತೇವೆಂದು ನಿರ್ಧರಿಸಿ, ತಮ್ಮ ಆಸ್ತಿಗಳನ್ನೆಲ್ಲಾ ಅರಕ್ಕೆ ಮೂರಾಗಿ ಮಾರಿಕೊಂಡು ಹೋದರು. ಅಲ್ಲಿಗೆ ಹೋದ ಈ ಜನರು ಪಡುತ್ತಿರುವ ಕಷ್ಟಗಳನ್ನು ಕೇಳಿದರೆ ಎದೆಯು ನೀರಾಗುತ್ತದೆ. ಹೋದವರಲ್ಲಿ ತರುಣರಾಗಿದ್ದವರನ್ನು ಸೈನ್ಯದಲ್ಲಿ ೧೨ ರೂ. ಸಂಬಳದ ಮೇಲೆ ಬಲಾತ್ಕಾರದಿಂದ ಸೇರಿಸಿಕೊಂಡರಂತೆ. ಸೇರಲಿಷ್ಟವಿಲ್ಲದವರಿಗೆ ತಿಂಡಿತೀರ್ಥಗಳನ್ನೂ ಹಿಂದಿರುಗಿಹೋಗಲು ಅಪ್ಪಣೆ ಚೀಟಿಯನ್ನೂ ಕೊಡದೆಹೋದರಂತೆ. ಅನೇಕರು ಹಿಂದಿರುಗಿ ಬರುವಾಗ ಹೆಂಗುಸರೂ ಮಕ್ಕಳೂ ಗರ್ಭಿಣಿಯರೂ ಕುಡಿಯಲು ನೀರೂ ಹೊಟ್ಟೆಗೆ ಕೂಳೂ ಇಲ್ಲದೆ ಬಿಸಿಲಿಗೆ ತಾಳಲಾರದೆ ಬಟ್ಟೆಬರೆಗಳನ್ನು ಮಾರಿಕೊಂಡು ಸಾಗಿಬರುತ್ತ ಮಾರ್ಗದಲ್ಲೇ ಎಷ್ಟೋ ಮಂದಿ ಸತ್ತರು. ಆಫ್ಘನ್ ದೇಶದ ವೈಭವವನ್ನು ಎಷ್ಟೋ ಹೊಗಳಿ ಭ್ರಮೆ ಹುಟ್ಟಿಸಿ ಇಲ್ಲಿಂದ ಈ ಜನರನ್ನು ವಲಸೆ ಕರೆದುಕೊಂಡುಹೋದ ಮೌಲ್ವಿಗಳು ಮರಳಿ ಭರತಖಂಡಕ್ಕೆ ಬಂದು ಮುಖವನ್ನು ತೋರಿಸಲಿಕ್ಕಿಲ್ಲದೆ ಅಲ್ಲೇ ಉಳಿದುಕೊಂಡರಂತೆ. ಕೆಲವರು ತುರ್ಕಿಗೆ ಹೋಗಬೇಕೆಂದು ಪ್ರಯಾಣ ಮಾಡಿದರಂತೆ. ತನ್ನ ದೇಶದಲ್ಲಿ ಅರಾಜಕ ವಿಪ್ಲವವನ್ನು ಹುಟ್ಟಿಸುವುದಕ್ಕೆ ಬಂದಗೂಢಚಾರರೆಂದು ತಿಳಿದು ಅಮೀರರು ಇವರೊಳಗಣ ೪೦೦ ಜನರನ್ನು ಹಿಡಿಯಿಸಿ ಸೆರೆ ಹಾಕಿದರಂತೆ. ಸಹಸ್ರಾರು ಜನರು ಅಪ್ಘಾನಿಸ್ಥಾನಕ್ಕೆ ಒಂದೇ ಸಲ ಹೋದುದರಿಂದ ಅಲ್ಲಿ ೭ ಕಾಸಿಗೊಂದರಂತೆ ಸಿಕ್ಕುತ್ತಿದ್ದ ರೊಟ್ಟಿಗೆ ೪ ಆಣೆ ಬೆಲೆಯಾಯಿತಂತೆ. ಹೆಂಗುಸರು ತಮ್ಮ ಮಕ್ಕಳನ್ನು ಸಾಕಲಾರದೆ ಅಲ್ಲಲ್ಲೇ ಬಿಟ್ಟುಹೋಗುತ್ತಿರುವರು. ಈ ಅವಾಂತರವನ್ನು ನೋಡಿ ಸೈರಿಸಲಾರದೆ ಅಮೀರರು ಇನ್ನುಮುಂದೆ ಯಾವ ಮುಸಲ್ಮಾನರೂ ನಮ್ಮಲ್ಲಿಗೆ ಹೀಗೆ ವಲಸೆಬರಕೂಡದೆಂದು ಆಜ್ಞೆ ಮಾಡಿರುವರು.

ಕಲ್ಕತ್ತಾದಲ್ಲಿ ನಿನ್ನೆಯಿಂದ ಕೂಡಿರುವ ಪ್ರತ್ಯೇಕ ದೇಶೀಯ ಮಹಾಸಭೆಯ ಕೆಲಸವು ಬಹಳ ಉತ್ಸಾಹದಿಂದಲೂ ವಿಸ್ತಾರವಾದ ಜನಸಂಖ್ಯೆಯಿಂದಲೂ ನಡೆಯುತ್ತಿದೆ. ಬೊಂಬಾಯಿಂದ ೩೦೦ ರ ವರೆಗೂ ಮದ್ರಾಸಿನಿಂದ ೨೫೦ ರ ವರೆಗೂ ಪ್ರತಿನಿಧಿಗಳು ಎರಡೆರಡು ಸ್ಪೆಷಲ್ ಟ್ರೇನುಗಳ ಮೇಲೆ ಹೋಗಿದ್ದಾರೆ. ಉಳಿದ ಕಡೆಗಳಿಂದಲೂ ಹೀಗೆಯೇ ವಿಶೇಷ ಸಂಖ್ಯಾಕರಾದ ಪ್ರತಿನಿಧಿಗಳು ಹೋಗಿದ್ದಾರೆ. ಬೊಂಬಾಯಿಯಿಂದ ಹೊರಟ ಖಿಲಾಪತ್ ಪ್ರತಿನಿಧಿಗಳ ಸ್ಪೆಷಲ್ ಟ್ರೇನಿನಲ್ಲಿ ಮ|| ಗಾಂಧಿ, ಷೌಕತಾಲಿ, ಕಿಚ್ಲೂ, ಅಬ್ಬಾಸ್, ತಯಾಬ್ಜಿ ಮೊದಲಾದವರೂ, ಸ್ವರಾಜ್ಯ ಸಂಘದವರ ಸ್ಪೆಷಲ್ ಟ್ರೇನಿನಲ್ಲಿ ಮಿ|| ಗಳಾದ ಕೇಲ್ಕರ್, ಜಿನ್ನಾ, ಬಾಪ್ಟಿಸ್ಟಾ, ಜಮುನಾದಾಸ್ ಮೊದಲಾದವರೂ ಹೋಗಿರುವರು. ಸಭಾಧ್ಯಕ್ಷರಾದ ಲಾಲಾ ಲಜಪತಿರಾಯಿರವರು ೫೦ ಮಂದಿ ಪ್ರತಿನಿಧಿಗಳೊಡನೆ ಲಾಹೋರಿನಿಂದ ಹೊರಟರು. ಅವರು ಕುಳಿತಿದ್ದ ಬಂಡಿಯ ಮೇಲೆ ಕೆಂಪುಬಣ್ಣದ ಧ್ವಜಪತಾಕೆಯನ್ನು ಎತ್ತಿ ಕಟ್ಟಿದ್ದರು. ಈ ಸಭೆಗಾಗಿ ಕಲ್ಕತ್ತೆಯಲ್ಲಿ ನಿರ್ಮಿಸಲ್ಪಟ್ಟಿರುವ ಮಂಟಪವು ೧೪೦೦೦ ಜನರು ಕುಳಿತುಕೊಳ್ಳುವಷ್ಟು ವಿಶಾಲವಾಗಿ ವಿದ್ಯುಚ್ಛಕ್ತಿಯ ಬಜ್ಜಣಿಗಳೂ ದೀಪಗಳೂ ಸಹ ಇಡಲ್ಪಟ್ಟಿವೆ. ಈ ಸಭೆಗೆ ನೀವುಗಳು ಬಂದು ನಿಮ್ಮ ಅಭಿಪ್ರಾಯಗಳನ್ನು ತಿಳಿಯಿಸಿ ಏಕಮುಖವಾಗಿ ರಾಜ್ಯಶ್ರೀಯಸ್ಸಾಧನ ಮಾರ್ಗವನ್ನು ಹಿಡಿಯಬೇಕೆಂದು ಮಿತವಾದಿ ಪತ್ರಪ್ರಮುಖರಾದ ಅ|| ಸುರೇಂದ್ರನಾಥ ಬಾನರ್ಜಿ ಮೊದಲಾದವರಿಗೆ ಲಾಲಾ ಲಜಪತಿರಾಯಿರವರು ಪತ್ರವನ್ನು ಬರೆದಿದ್ದರು. ಅದಕ್ಕೆ "ಸಹಾಯ ನಿರಾಕರಣ ತತ್ವವನ್ನು ಅಂಗೀಕರಿಸುವ ಜನರೇ ಸಭೆಗೆ ಬಹುಜನರು ಬರುತ್ತಾರೆ. ಆ ತತ್ವವು ದೇಶಕ್ಕೆ ಅನರ್ಥಕಾರಿ. ಅದಕ್ಕೆ ನಾನು ಸಮ್ಮತಿಸುವುದಿಲ್ಲ. ಸಭೆಗೆ ಬಂದು ನಮ್ಮಭಿಪ್ರಾಯವನ್ನು ಹೇಳಿದರೆ ಅರಣ್ಯರೋದನದಂತಾಗುತ್ತದೆ. ಅದುಕಾರಣ ಬರಲಿಷ್ಟವಿಲ್ಲ"ವೆಂದು ಉತ್ತರ ಕೊಟ್ಟಿರುವರು. ಮ|| ಸಿ. ಪಿ. ರಾಮಸ್ವಾಮಯ್ಯನವರೂ ಹೀಗೆಯೇ ಉತ್ತರ ಕೊಟ್ಟರು. ಅನಿಬೆಸೆಂಟಮ್ಮ, ಶಾಸ್ತ್ರಿ ಇತ್ಯಾದಿ ಕೆಲ ಮಿತವಾದಿಗಳು ಹೋಗಿದ್ದಾರೆ.

ಪತ್ರವ್ಯವಹಾರ.

ಮುಂಡರಗಿ.

ಗದಗದ ತಾಲ್ಲೂಕು ಪೇಟಾ ಮುಂಡರಗಿಯಲ್ಲಿ ಸ್ಥಾಪನವಾಗಿರುವ ದವಾಖಾನೆಯ ಹೊಸ ಬಿಲ್ಡಿಂಗಿನ (ಇಮಾರತು) ಬಾಗಲು ತೆರೆಯುವ ಸಮಾರಂಭವು ತಾ|| ೭-೮-೧೯೨೦ ನೆ ಇಸವಿ ದಿವಸ ಧಾರವಾಡದ ರಾ|| ಬ|| ಶ್ರೀನಿವಾಸರಾವ್ ರೊಡ್ಡ ಸಾಹೇಬರವರ ಹಸ್ತದಿಂದ ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಆ ದಿವಸ ಬಿಲ್ಡಿಂಗನ್ನು ತಳಿರುತೋರಣಾದಿಗಳಿಂದಲಂಕರಿಸಿ ಸಾಯಂಕಾಲ ೪ ಘಂಟೆಗೆ ಮೆ|| ಶಿರಾಳೆ ಮಹಲ್ಕರಿಯವರೂ, ವೆಂಕಟರಾವ್ ನಾಡಗೌಡರೂ, ಪುರಪ್ರಮುಖರಾದ ಮ|| ರಾ|| ಶೆಟ್ಟರ ನಂಜಪ್ಪನವರು, ಸಾಹುಕಾರ್ ಇಲ್ಲೂರು ರಂಗಪ್ಪನವರು, ಕೆ. ಗೋವಿಂದರಾಯರು, ಇನ್ನೂ ಅನೇಕ ಜನಸ್ತೋಮವು ಕೂಡಿ ಸಭೆ ಭರಾಯಿಸಿತು. ಕೂಡಲೆ ಶ್ರೀ ಪುರಾಣಿಕ ಮಠದ ವಿರೂಪಾಕ್ಷಯ್ಯನವರಿಂದ ಈಶಸ್ತವನ ಮಂಗಲಶ್ಲೋಕಗಳೂ, ಜೋಗನೋಸ್ತ್ರೀ ಮುಂತಾದವರಿಂದ ಗಾಯನ ಹೇಳಲ್ಪಟ್ಟವು. ತರುವಾಯ ಶಾಲಾ ಹೆಡ್ಮಾಸ್ತರಾದ ಗೋಪಾಲಾಚಾರ ಗೊಗ್ಗಿ ಇವರು ಆರೋಗ್ಯ ರಕ್ಷಣೆ ವಿಷಯವಾಗಿ ಭಾಷಣ ಮಾಡಿದರು. ಇದೇ ವಿಷಯವನ್ನು ಇನ್ನುಳಿದ ಕೆಲವರು ಪುಷ್ಟೀಕರಿಸಿದರು. ಬಳಿಕ ರಾವ್ ಬಹದ್ದೂರ್‌ರವರು ಸಕಲ ಪ್ರಾಣಿಗಳೂ ತಮ್ಮ ಶರೀರರಕ್ಷಣೆ ಮಾಡಿಕೊಳ್ಳುವದು ಆದ್ಯಕರ್ತವ್ಯವೆಂತಲೂ ಆರೋಗ್ಯದ ಕಡೆಗೆ ಪೂರ್ಣ ಲಕ್ಷ ಇಡತಕ್ಕದ್ದೆಂತಲೂ ಅನಾದರ ಮಾಡಿದ್ದಾದರೆ ಮುಂದೆ ಉಂಟಾಗುವ ಭಯಂಕರ ಪರಿಣಾಮಗಳನ್ನು ಅನೇಕ ಉದಾಹರಣೆಗಳಿಂದಲೂ ಅನುಭವದೃಷ್ಟಾಂತಗಳಿಂದಲೂ ಯಾವತ್ತು ಜನರ ಮನದಲ್ಲಿ ಬಿಂಬಿಸುವಂತೆ ಚನ್ನಾಗಿ ಬೋಧೆ ಮಾಡಿದರು. ನಂತರ ಶ್ರೀಮದಿಂಡಿಯಾ ಚಕ್ರವರ್ತಿಗಳವರಿಗೆ ಜಯವಾಗಲೆಂದು ಪ್ರಾರ್ಥಿಸಿ, ತಾಂಬೂಲ ಗಂಧದ್ರವ್ಯ ಪುಷ್ಪಹಾರಾದಿಗಳು ಅರ್ಪಿಸಲ್ಪಟ್ಟು ಸಭಾ ವಿಸರ್ಜನೆ ಆಯಿತು.

ಪ್ರೇಕ್ಷಕ.

ಅರಸೀಕೆರೆ ತಾಲ್ಲೂಕು ದೊಡ್ಡಮೇಟಿಕುರಿಕೆ.

ಈ ಗ್ರಾಮದ ಜನಗಳೆಲ್ಲರೂ ತಮ್ಮ ತಮ್ಮ ಜಮೀನುಗಳನ್ನು ಬಿತ್ತನೆಗೆ ಸಿದ್ಧಪಡಿಸಿಕೊಂಡು ಎರಡು ತಿಂಗಳು ನಿರೀಕ್ಷಿಸಿದಾಗ್ಯೂ ಮಳೆ ಬಾರದೆ ತುಂಬಾ ಯೋಚನೆಗೀಡಾಗಿದ್ದರು. ಈಗ ೨-೩ ದಿವಸಗಳಿಂದಲೂ ಸೋನೆ ಮಳೆ ಬರುತ್ತಿರುವುದರಿಂದ ಜನರೆಲ್ಲರೂ ಸಂತೋಷಚಿತ್ತದಿಂದ ಹಗಲಿರುಳೂ ಜಮೀನುಗಳ ಬಿತ್ತನೆ ಕೆಲಸ ಪೂರೈಸಿಗೊಳಿಸುತ್ತಿರುತ್ತಾರೆ. ಈ ಗ್ರಾಮದ ಜಮೀನ್ದಾರ್ ಎಂ. ಎಚ್. ಹರಿಯಣ್ಣನವರು ಪ್ರಜೆಗಳ ಹಿತಕ್ಕಾಗಿ ಬಹು ದಿನದಿಂದಲೂ ತಮ್ಮ ಶ್ರಮವನ್ನು ಎಣಿಸದೆ ಕೆಲಸಮಾಡುತ್ತಿರುತ್ತಾರೆ. ಈ ಮಹನೀಯರು ಈಚೆಗೆ ಅನೇಕ ಜನಗಳಿಗೆ ಇಂಗ್ಲೀಷ್ ನೇಗಿಲುಗಳನ್ನು ಉಪಯೋಗಿಸುವುದರಿಂದ ಉಂಟಾಗುವ ಅನುಕೂಲತೆಗಳನ್ನೆಲ್ಲಾ ಅವಗಾಹನೆಗೆ ತಂದು ಸುತ್ತಮುತ್ತಲ ಗ್ರಾಮದ ಜನರಿಗೆಲ್ಲಾ ಅನೇಕವಾಗಿ ಇಂಗ್ಲೀಷ್ ನೇಗಿಲುಗಳನ್ನು ತರಿಸಿಕೊಟ್ಟು ತೆಂಗಿನತೋಟದ ವ್ಯವಸಾಯ ಅತ್ಯಂತ ಅಭಿವೃದ್ಧಿಗೆ ಬರುವಂತೆ ಮಾಡಿದ್ದಾರೆ. ಇವರು ಈ ರೀತಿ ಶ್ರಮ ವಹಿಸುತ್ತಿರುವುದು ಸ್ತೋತ್ರಾರ್ಹವಾದದ್ದು. ಈ ಗ್ರಾಮದ ಚಿಕ್ಕ ಸೊಸೈಟಿಗೆ ಇವರು ಸೆಕ್ರೆಟರಿಯಾಗಿ ನಿಂತು ತುಂಬಾ ಅಭಿವೃದ್ಧಿಗೆ ಬರುವಂತೆ ಮಾಡಿದ್ದಾರೆ. ಈ ಸೊಸೈಟಿಯು ಮೈಸೂರು ಗೌರ್ನಮೆಂಟ್ ಸಾಲಕ್ಕಾಗಿ ಕೂಡಿಟ್ಟಿದ್ದ ರಿಜರ್ವ್ ಫಂಡಿನಲ್ಲಿ ೮೦೦ ರೂಪಾಯಿಗಳನ್ನು ಕೊಟ್ಟಿರುತ್ತದೆ. ಈ ತಾಲ್ಲೂಕಿನ ಅರ್ಬ ಲಿಮಿಟೆಡ್ ಸೊಸೈಟಿಗಳಲ್ಲಿ ಹೆಚ್ಚಾದ ರಿಜರ್ವ್ ಫಂಡನ್ನು ಕೂಡಿಟ್ಟಿರುವುದರಲ್ಲಿ ಮೊದಲನೆಯದಾಗಿದೆ. ಈ ಗ್ರಾಮಕ್ಕೆ ೩ ಮೈಲಿ ಫಾಸಲೆಯಲ್ಲಿರುವ ಹಲ್ಕೂರಿನಲ್ಲಿ ಶಿಕಾರಿದಾರನೊಬ್ಬನು ಸಮೀಪದ ಕಾಡಿನಲ್ಲಿ ಜನರಿಗೂ ಮತ್ತು ದನಕರುಗಳಿಗೂ ತೊಂದರೆಯನ್ನು ಕೊಡುತ್ತಿದ್ದ ಒಂದು ಭಾರಿ ಹುಲಿಯನ್ನು ಶಿಕಾರಿ ಮಾಡಿದ್ದಾನೆ. ಈತನಿಗೆ ಸರ್ಕಾರದವರ ಪ್ರೋತ್ಸಾಹವು ದೊರೆಯುತ್ತದೆಂಬುವುದರಲ್ಲಿ ಸಂಶಯವಿಲ್ಲ. ಈ ಗ್ರಾಮದ ವಿ. ಇ. ಸ್ಕೂಲ್ ಹೆಡ್ಮಾಸ್ತರು ಹಿಂದುಳಿದ ಬಾಲಕರ ವಿದ್ಯಾಪ್ರೋತ್ಸಾಹಕ್ಕೆ ಹೆಚ್ಚು ಜಾಗ್ರತೆ ಕೊಡುತ್ತಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ.

ಚಳ್ಳಕೆರೆ ತಾಲ್ಲೂಕು ದೊಡ್ಡೇರಿ.

ಇದೇ ಮಾಹೆ ತಾ|| ೨೨ ನೆ ಭಾನುವಾರ ಪ್ರಾತಃಕಾಲ ೮ ಘಂಟೆಗೆ ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಿ. ರಾಮಲಿಂಗರೆಡ್ಡಿ ಎಂ. ಎ. ಯವರ ಸವಾರಿಯು ಈ ಊರಿಗೆ ಚಿತ್ತೈಸಿತು. ಸ್ಕೂಲುಗಳ ಕ|| ಮೆಂಬರುಗಳೂ, ಪುರಪ್ರಮುಖರೂ ಸಹ ಹಾಜರಿದ್ದು ಸುಖಾಗಮನವನ್ನು ಬಯಸಿದರು. ನಂತರ ಸಾಹೇಬರವರು ಹಿಂದೂಸ್ಥಾನಿ ಸ್ಕೂಲಿಗೆ ಬಿಜಯಂಗೈಸಿ ಪರಾಂಬರಿಸಿ ಹಾಲಿ ಕಟ್ಟುತ್ತಿರುವ ಹೊಸ ಸ್ಕೂಲ್ ಕಟ್ಟಡದ ವಿಷಯದಲ್ಲಿ ನಡೆಯುತ್ತಿರುವ ಜಿಜ್ಞಾಸವನ್ನು ಪರಿಹರಿಸಿಕೊಡುವುದಾಗಿ ಅಭಯವನ್ನಿತ್ತು ಕನ್ನಡ ಬಾಯ್ಸ್ ಸ್ಕೂಲಿಗೆ ದಯಮಾಡಿಸಿ ಸ್ಕೂಲಿನ ವಿದ್ಯಮಾನಗಳನ್ನೂ, ಸ್ಕೂಲ್ ಅಭಿವೃದ್ಧಿಸ್ಥಿತಿಯನ್ನೂ ನೋಡಿ ಸಂತೋಷಪಟ್ಟುದಲ್ಲದೆ ಸ್ಕೂಲಿಗೆ ಮತ್ತೊಬ್ಬ ಸಹಾಯೋಪಾಧ್ಯಾಯರನ್ನೂ, ಸ್ಕೂಲಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಎಲ್ಲಾ ಸಾಮಾನುಗಳನ್ನೂ ಮತ್ತು ಮೆಂಬರುಗಳ ಪ್ರಾರ್ಥನೆಯಂತೆ ಇಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ನಡೆಯುವುದಕ್ಕಾಗಿ ಒಬ್ಬ ಇಂಗ್ಲೀಷ್ ಟೀಚರನ್ನೂ ಸಹ ದಯಪಾಲಿಸುವುದಾಗಿ ವಾಗ್ದಾನ ಮಾಡಿ, ಗರ್ಲ್ಸ್ ಸ್ಕೂಲ್, ಪಂಚಮ ಸ್ಕೂಲುಗಳನ್ನು ಪರಾಂಬರಿಸಿ ಇಲ್ಲಿಗೂ ಅವಶ್ಯಕ ಸಾಮಾನುಗಳನ್ನು ಸಪ್ಲೈ ಮಾಡುವುದಾಗಿ ಅಪ್ಪಣೆ ಕೊಡಿಸಿ ಸದರಿ ಗ್ರಾಮದವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಸಂತೋಷದೊಡನೆ ಚಳ್ಳಕೆರೆಗೆ ದಯಮಾಡಿಸಿದರು.

ಶ್ರದ್ಧಾಳುಗಳಾದ ಕನ್ನಡ ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರ್ ಮ|| ರಾ|| ಜಿ. ಶ್ರೀನಿವಾಸರಾಯರವರ ಮೆಹನತ್ತಿನಿಂದ ಉತ್ತರೋತ್ತರ ಈ ಸ್ಕೂಲು ಇನ್ನೂ ಅಭಿವೃದ್ಧಿಸ್ಥಿತಿಗೆ ಬರುವುದಾಗಿ ಶುಭಚಿಹ್ನೆಗಳು ಮೊಳೆದೋರುತ್ತಿವೆ. ಇಲ್ಲಿಗೆ ತಾ|| ೨೪ ರಲ್ಲಿ ಮೆ|| ಹ|| ರೆವಿನ್ಯೂ ಕಮೀಷನರ್ ಸಾಹೇಬರವರ ಸವಾರಿಯು ದಯಮಾಡಿಸಿ ಹೊಸ ಗ್ರಾಮ ಬಡಾವಣೆಯ ವಿಷಯದಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟು ಅಹವಾಲುಗಳನ್ನು ವಿಚಾರಿಸಿಕೊಂಡು ದಯಮಾಡಿಸಿದರು.

ಸ್ಥಳಿಕ.

"ಮುಂಬೈ ಪ್ರಾಂತದ ಕಾಯಿದೆ ಕೌನ್ಸಿಲೂ ಮತ್ತು ಉಮೇದುವಾರರು."

"ಸುಧಾರಣೆ, ಸುಧಾರಣೆ" ಯೆಂದು ಹಗಲಿರುಳೂ ಕನವರಿಸುವ ನಮ್ಮ ಭಾರತೀಯರಿಗೆ ಸುಧಾರಣೆಯೆಂಬ ನಾಟಕವನ್ನು ಸ್ವರಾಜ್ಯವೆಂಬ ನಾಟಕಗೃಹದ ರಂಗಸ್ಥಳದ ಮೇಲೆ ಪ್ರಯೋಗಮಾಡಿ ತೋರಿಸುವದಕ್ಕೋಸ್ಕರವಾಗಿ, ನಮ್ಮನ್ನಾಳುವ ಶ್ರೀ ಪಂಚಮ ಜಾರ್ಜಭೂಪರು ಆ ನಾಟಕದಲ್ಲಿ ಅಡಕವಾಗಿರುವ ಖಾತೆಗಳ ¼ ಭಾಗವನ್ನು ದಯಪಾಲಿಸಿದ್ದಾರೆ. ಪ್ರಯೋಗವನ್ನು ಮಾಡಲಿಕ್ಕೆ ನಮ್ಮ ಕೆಲ ಸಮಾಜಬಂಧುಗಳು ಸ್ವಾತಂತ್ರ್ಯ ಪ್ರಾತಿನಿಧ್ಯಗಳನ್ನು ದೊರಕಿಸಿದರು. ಆದರೆ ದುರ್ದೈವದಿಂದ ನಮ್ಮ ಲಿಂಗಾಯತ ಬಂಧುಗಳು ತಮ್ಮ ಮತದಾರರ ಸಂಖ್ಯೆಯು ಬಹಳುಂಟೆಂಬ ಹೆಮ್ಮೆಯಿಂದಲೋ ಅಥವಾ ಹೆಡಿತನದಿಂದಲೋ ಅಥವಾ ತಾವು ಮುಂದುವರಿದವರೆಂದು ಸರಕಾರದವರು ತಮಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವದಿಲ್ಲೆಂಬ ನಿಶ್ಚಯಾರ್ಥದಿಂದಲೋ ಆ ಗೋಜಿಗೆ ವಿಶೇಷವಾಗಿ ಹೋಗಲಿಲ್ಲ. ಮತ್ತು ಸ್ವಂತ ಪ್ರಾತಿನಿಧ್ಯವನ್ನು ದೊರಕಿಸಲಿಲ್ಲ. ಆಯಿತು ಮಿಂಚಿಹೋದ ಮಾತಿಗೆ ಮಿಡುಕಿದರೂ ಬಾರದು. ಕಾರಣ ಇನ್ನಾದರೂ ಆ ರಂಗಸ್ಥಳದ ಮೇಲೆ ನಮ್ಮ ಉಳಿದ ಯಾವತ್ತು ಬಂಧುಗಳು ಪ್ರಯೋಗದ ದೆಸೆಯಿಂದ ವಿಶ್ವಪ್ರಯತ್ನಮಾಡಬರುವಂತೆ ನಮ್ಮ ಲಿಂಗಾಯತ ಬಂಧುಗಳಾದರೂ ಕೂಡ ಪ್ರಯತ್ನವಡಬೇಕಾಗಿರುತ್ತದಷ್ಟೇ? ಅಂತೆಯೇ ಅವರು ಮಾಡಲಿಕ್ಕೆ ಹತ್ತಿದ್ದಾರೆ.

ನಮ್ಮ ಧಾರವಾಡ ಜಿಲ್ಲೆಯಿಂದ ಆರಿಸಿಬರಬೇಕಾದ ಇಬ್ಬರು ಮೆಂಬರರ ಸ್ಥಳದಲ್ಲಿ ಈ ವರುಷದ ಚುನಾವಣೆಯಲ್ಲಿ ಇಬ್ಬರು ಬ್ರಾಹ್ಮಣರು ಇಬ್ಬರು ರಾಷ್ಟ್ರೀಯ ಸಭೆಯ ಅನುಯಾಯಿಗಳೆಂದೆನ್ನುವ ಲಿಂಗಾಯತರು, ಮತ್ತು ಇಬ್ಬರು ಲಿಂಗಾಯತರು, ಹೀಗೆ ಆರುಮಂದಿ ಉಮೇದುವಾರರು ನಿಂತಿದ್ದಾರೆ. ಇವರ ಪ್ರಶಂಸೆಯನ್ನು ಅ[illegible] ವರ್ಗಮಾಡಿ ನಮ್ಮ ಧಾರವಾಡದಕಾಯಿನೆ ಪಂಡಿತರು, ದೇಶದ (ಬ್ರಾಹ್ಮಣರ) ಹಿತಚಿಂತಕರು ಶುಭೋದಯಪತ್ರಕಾರರು ಮತ್ತು ನೇರಿಲಾಗಿ ದೊಡ್ಡ ಮಹನೀಯರಾದ ರಾ|| ಕೆರೂರ ವಾಸುದೇವಾಚಾರ್ಯರು ಒಳ್ಳೇ ದಕ್ಷತೆಯಿಂದ ಮಾಡಿದ್ದಾರೆ. ಶಾಬಾಸ್! ಆಚಾರ್ಯರೇ, ನಿಮ್ಮ ಚಾತುರ್ಯಕ್ಕೆ ಬೆಲೆ ಯಿಲ್ಲ!! ಇರಲಿ. ಈ ಮಹನೀಯರು, ಮಾನವನಿಗೆ ಹುಟ್ಟುತ್ತಲೇ "ಸಾವು" ಅಂಟಿದಂತೆ "ಬುದ್ಧಿವಂತಿಕೆಯೂ" ಅಂಟಿರುತ್ತದೆಂದೂ, ರಾಷ್ಟ್ರೀಯ ಸಭೆಯ ಅನುಯಾಯಿಗಳೂ ಮತ್ತು ವಯೋವೃದ್ಧರೂ ಮೆಂಬರರಾಗಲಿಕ್ಕೆ ಯೋಗ್ಯರೆಂದೂ ಮತ್ತು ಅವರ ವಿಚಾರಗಳು ಶ್ರೇಷ್ಠತಮವಾದುವುಗಳೆಂದೂ ತಿಳಕೊಂಡಂತೆ ಕಾಣಿಸುತ್ತದೆ. ಹೇ ಆಚಾರ್ಯರೇ, ಹಾಗೆ ತಿಳಿಯಬೇಡಿರಿ. ನಿಮ್ಮಂತೆ ನಮಗೂ ವಿರುದ್ಧವಾಗಿ ಆರು ವಿವರ್ಗಗಳನ್ನು ಮಾಡಲಿಕ್ಕೆ ಬರುವಂತಿಲ್ಲವೆಂತಲ್ಲ. ಆದರೆ ನಾವು ಮಾತ್ರ ಆ ಫಾಜೀಲ ಕೆಲಸಕ್ಕೆ ಹೋಗುವದಿಲ್ಲ. ನೀವಾದರೂ ಇನ್ನುಮೇಲೆ ಅಂಥ ಫಾಜೀಲ ಕೆಲಸದಲ್ಲಿ ಕೈಹಾಕಬೇಡಿರಿ. ಬಹು ಎಚ್ಚರಿಕೆ!

ಹೇ ನನ್ನ ಕರ್ನಾಟಕ ಬಂಧುಗಳೇ, ಈ ಆಚಾರ್ಯರ ಜೊಳ್ಳುಮಾತಿಗೆ ಕಿವಿಗೊಡಬೇಡಿರಿ. ರಾಷ್ಟ್ರೀಯ ಸಭಾನುಯಾಯಿಗಳಾದ ಮಾತ್ರದಲ್ಲಿ ಅವರು ಬುದ್ಧಿವಂತರಾಗಲಿಲ್ಲ. ಸಾರಾಸಾರ ವಿಚಾರಮಾಡಿರಿ. ಮೊದಲು ಯಾವ ಮನುಷ್ಯನೂ ಬುದ್ಧಿವಂತನಿರುವದಿಲ್ಲ; ಸ್ವಲ್ಪ ತಪ್ಪಬಹುದು. ತಪ್ಪಿದರೂ ಅಡ್ಡಿಯಿಲ್ಲ; ನಾವು ಹಾಗೇ ಕೈಬಿಟ್ಟರೆ ಬುದ್ಧಿವಂತರಾಗುವದೆಂದಿಗೆ? ಅನುಭವ ಆಗುವದೆಂದಿಗೆ? ನಮ್ಮಗಳಿಗೆ ಹಿತವಾಗುವದೆಂದಿಗೆ? ಕಾರಣ ನೀವು (ಕ) ವರ್ಗದ ಉಮೇದವಾರರಿಗೆ ಮತ ಕೊಡಬೇಕೇ ಹೊರತು (ಅ) ವರ್ಗದ ಬ್ರಾಹ್ಮಣ ಮತ್ತು ಬ್ರಾಹ್ಮಣರ ಅಡಕಿನಲ್ಲಿರುವ (ಬ) ವರ್ಗದ ಲಿಂಗಾಯತ ಉಮೇದವಾರರಿಗೆ ಕೊಡಬಾರದು. ಯಾಕೆಂದರೆ—ಅವರು (ಕ) ನಿಮ್ಮ ಹಿತಕ್ಕೋಸ್ಕರ ಬದ್ಧಕಂಕಣರಾಗಿ ನಿಂತಿರುತ್ತಾರೆಂಬುವದು ಅವರ ಪತ್ರಗಳಿಂದ ಸ್ಪಷ್ಟವಾಗಿರುವದಲ್ಲದೆ ಅವರು ಇಲ್ಲಿಯವರೆಗೆ ಮಾಡಿದ ಮೇಲ್ತರದ ಸಾರ್ವಜನಿಕ ಕೆಲಸಗಳೇ ಸಾಕ್ಷಿಯಾಗಿವೆ. (ಬ) ವರ್ಗದವರು ಲಿಂಗಾಯತರಾದಾಗ್ಯೂ ಜಹಾಲ ಬ್ರಾಹ್ಮಣರ ಸಂದಿಯಲ್ಲಿ ನಿಂತು ಅವರು ಹೇಳಿದಂತೆ ಕುಣಿಯಲಿಕ್ಕೆ ಹತ್ತಿದ್ದಾರೆ. ಕಾರಣ ಅವರಿಗೆ ಕೊಡಬೇಡಿರಿ.

ಕರ್ನಾಟಕ ಬಂಧುಗಳೇ, ಈ ಜಹಾಲಪತ್ರಕಾರರ ಮಾರ್ಮಿಕ ಕೈಚಳಕು ನೋಡಿರಿ. ಬ್ರಾಹ್ಮಣರ ಅಡಕಿನಲ್ಲಿರುವ (ಬ) ವರ್ಗದ ಲಿಂಗಾಯತರೂ ರಾಷ್ಟ್ರೀಯ ಸಭಾನುಯಾಯಿಗಳೆಂದೆನಿಸಿಕೊಳ್ಳುವವರೂ ಮತ್ತು ಧಾರವಾಡದ ಸುಪ್ರಸಿದ್ಧ ಲಿಂಗಾಯತ ವಕೀಲರಾದ ರಾ|| ಕೌಲಕರ್ಣಿ ಉಮೇದವಾರರಿಗೆ, ಬಹಳ ಮತಗಳು ಬೀಳುತ್ತವೆಂದು ತಿಳಿದು, ಯಾವಾಗಲೂ ಜಹಾಲರ ಬಾಲದ ಮೇಲಿನ ನೊಣವನ್ನೋಡಿಸುವವರಾದ ರಾ|| ಹೊನ್ನಾಪುರ ಮಠ ಲಿಂಗಾಯತ ವಕೀಲರಿಗೆ ತಮ್ಮ ಜಾಗಾ ಬಿಟ್ಟುಕೊಡಬೇಕೆಂದು ಉಪದೇಶಮಾಡಿದ್ದಾರೆ. ಆಹಹಾ! ಎಷ್ಟು ಕಳೆ! ಇರಲಿ. ಅವರ ಉದ್ದೇಶವಿಷ್ಟೇ. ಹ್ಯಾಗಾದರೂ ಮಾಡಿ, ಇಬ್ಬರ ಜಗಳ (ಬ. ಮತ್ತು ಕ. ವರ್ಗದ) ಮೂರನೇ (ಅ. ವರ್ಗ) ಯವನಿಗೆ ಲಾಭ ಮಾಡುವದೊಂದೇ ಕಾರಣ. ಈ ಪೊಳ್ಳುಮಾತಿಗೆ ಕಿವಿಗೊಡಬೇಡಿರಿ. ಅವು ವಿಷದಿಂದ ತುಂಬಿ ಕೆಂಡದಲ್ಲಿ ಹಾಲು ಇರುವ ಕೊಡದಂತೆ ಇರುತ್ತವೆ. ಬಂಧುಗಳೇ ಯಾವಾಗಲೂ ನಿಮ್ಮ ಹಿತಚಿಂತನೆಯಲ್ಲಿರುವ ಶ್ರೀಯುತ ಕಂಬಳಿ ಮತ್ತು ಶ್ರೀಯುತ ಹುಲಕೋಟಿಯವರಿಗೆ ನಿಮ್ಮ ಮತಗಳನ್ನು ಕೊಡಿರಿ.

ಇನ್ನು ನಮ್ಮ ತರುಣ ಲಿಂಗಾಯತ ಉಮೇದುವಾರರಿಗೆ ಹೇಳಿಕೊಳ್ಳುವದೇನಂದರೆ.—ಮಹನೀಯರೆ, ಆ ಜಹಾಲಪತ್ರಕಾರರು ತಮ್ಮನ್ನು (ಕ) ವರ್ಗಕ್ಕೆ ತಂದದ್ದನ್ನು ಅಳಿಸಿ (ಅ) ವರ್ಗಕ್ಕೆ ಬರುವ ವಿಶ್ವಪ್ರಯತ್ನಮಾಡಬೇಕೆಂತಲೂ, ನಾಗಟ್ಟಿ, ನೀಗಟ್ಟಿಯೆಂದು ಹುಬ್ಬಳ್ಳಿ ಧಾರವಾಡಗಳನ್ನು ಹಿಡಿಕೊಂಡು ಕೂಡ್ರಬಾರದೆಂತಲೂ, ಬರೇ ಆತ್ಮ ಪೌರುಷದ ಪತ್ರಗಳಿಂದ ಮತದಾರರು ಮತಕೊಡುತ್ತಾರೆಂದು ತಿಳಿಯಕೂಡದೆಂತಲೂ, ಅತ್ತಿತ್ತ ಅಡ್ಡಾಡಿ ವ್ಯಾಖ್ಯಾನಗಳನ್ನು ಕೊಟ್ಟು ತಮ್ಮ ಧ್ಯೇಯಗಳಾಗಿ ಇಟ್ಟುಕೊಂಡ ಕೆಲಸಗಳನ್ನು ಅವರ ಮೇಲೆ ಬಿಂಬಿಸುವಂತೆ ಮಾಡಬೇಕೆಂತಲೂ ನನಗೆ ತೋಚುತ್ತದೆ. ಮೇಲಿನ ಸೂಚನೆಗಳನ್ನು ಮನಸ್ಸಿನಲ್ಲಿ ತಂದರೇನೇ ನೀವು (ಕ) ವರ್ಗವನ್ನು ಅಳಿಸುವಿರಿ, ಇಲ್ಲದಿದ್ದರೆ ಅಳಿಸಲಾರಿರಿ. ಆತ್ಮ ಪೌರುಷದ ಪತ್ರಗಳು ಮತದಾರರ ಮನಸ್ಸಿನಲ್ಲಿ ವಿಪರೀತ ಕಲ್ಪನೆ ಹುಟ್ಟಿಸುತ್ತವೆ. ದೇಶಹಿತಚಿಂತಕರೇ, ನಾನು ಕರ್ನಾಟಕ; ಅದರಲ್ಲಿ ಲಿಂಗಾಯತ ಮತದಾರರ ಯಾದಿಯಲ್ಲಿ ಮತ್ತು ಶುಭೋದಯಪತ್ರವನ್ನೋದಿ ದುಃಖವನ್ನು ಸಹಿಸಿದವರಲ್ಲಿ ಒಬ್ಬನಾದ್ದರಿಂದ ಇಷ್ಟೆಲ್ಲ ಬರೆದಿದ್ದೇನೆ. ಕಾರಣ ಮಹನೀಯರೇ, ಕೈಕಟ್ಟಿಕೊಂಡು ಕೂಡ್ರಬೇಡಿರಿ; ಕೈಬಿಚ್ಚಿರಿ. ವೇಳೆಯು ಸಮೀಪಿಸಿರುವದರಿಂದ ಬೇಗನೆ ಅತ್ತಿತ್ತ ಅಡ್ಡಾಡಿ ವ್ಯಾಖ್ಯಾನಕೊಡಿರಿ. ಮತ್ತು ಮತದಾರರ ಮನಸ್ಸಿನಲ್ಲಿ ನಿಮ್ಮ ಧ್ಯೇಯಗಳನ್ನು ಬಿಂಬಿಸಿರಿ. ಅಂದರೆ ನಿಮಗೆ ನಿಜವಾಗಿ ಜಯವು ಸಿಗುವದು.

ಕೋಡ ತಾಲ್ಲೂಕಿನಲ್ಲಂತೂ ತಮ್ಮಗಳ ದರ್ಶನವಿಲ್ಲ. ಶ್ರೀಯುತ ಕಂಬಳಿಯವರೆಲ್ಲಿದ್ದಾರೋ ಗೊತ್ತಿಲ್ಲ. ಅವರ ಪತ್ರಗಳ ದರ್ಶನವಿಲ್ಲ. ಜನರಿಗದೊಂದು ಗೂಢವಾದಂಥಾದ್ದಾಗಿದೆ. ಕಾರಣ ತಡಮಾಡದೆ ಸನ್ನಾಹಮಾಡಲಿಕ್ಕೆ ಅಣಿಯಾಗಿರಿ, ಹೆದರಬೇಡಿರಿ. ಜಯದೇವತೆಯು ತಮ್ಮ ಬೆನ್ನ ಹಿಂದೆ ಇರುತ್ತಾಳೆ. ಇಷ್ಟೇ ಹೇಳಿ ನನ್ನ ಅಲ್ಪ ವಿಚಾರಗಳ ಲೇಖನವನ್ನು ಈ ಹೊತ್ತಿಗೆ ಮುಗಿಸುತ್ತೇನೆ. ಹೊತ್ತು ಬಂದಾಗ ಮತ್ತೆ ತೆಗೆಯುವೆನು.

ಒಬ್ಬ ಸತ್ಯವಾದಿ.

ಹಂಟಿಂಗ್ ಗಡಿಯಾರ.

ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳವರಿಗೂ ಬಾಳಿಕೆ ಬರುವದು. ಕ್ರಯ ೧ ಕ್ಕೆ ೭-೦-೦.

ವಿಳಾಸ:-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ|| ಬಾ|| ನಂ. 265,
33 ಮದರಾಸು.

(ಪ್ರಾಸ್ಪೆಕ್ಟಸ್ಸಿನ ನಕಲು ಬೆಂಗಳೂರಿನಲ್ಲಿರುವ ಮೈಸೂರು ಸೀಮೆಯ ಜಾಯಿಂಟ್ ಸ್ಟಾಕ್ ಕಂಪೆನಿ ರೆಜಿಸ್ಟ್ರಾರ್‌ರವರಲ್ಲಿ ದಾಖಲ್ ಮಾಡಿರುತ್ತೆ.)

ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್.

(ಶ್ರೀಮನ್ ಮಹಾರಾಜರವರ ಉದಾರಾಶ್ರಯಕ್ಕೊಳಪಟ್ಟು ಸ್ಥಾಪಿತವಾದದ್ದು.)

ಮೂಲಧನ ರೂ. **40,00,000.**

ಷೇರು ಒಂದಕ್ಕೆ 50 ರೂ. ವಂತೆ 80,000 ಷೇರುಗಳಾಗಿ ವಿಭಾಗಿಸಲ್ಪಟ್ಟಿದೆ.

ಷೇರು ಮೊಬಲಗನ್ನು ಪಾವತಿಮಾಡುವ ಕ್ರಮ.

ರೂ. 5 ದರಖಾಸ್ತಿನ ಕೂಡ.

ರೂ. 5 ಷೇರ್ ಹಂಚಿದ ಮೇಲೆ.

ಉಳಿದ ಮೊಬಲಗನ್ನು ಎರಡು ತಿಂಗಳ ಅವಧಿಗೆ ಕಡಮೆಯಿಲ್ಲದ ವಾಯಿದೆಯಲ್ಲಿ ಷೇರ್ ಒಂದಕ್ಕೆ ರೂ. 5 ರಂತೆ ಪಾವತಿಮಾಡತಕ್ಕದ್ದು.

ಡೈರೆಕ್ಟರುಗಳು.

ಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಎಸ್‌ಕ್ವೈರ್, ಸಿ. ಐ. ಇ., ರಿಟೈರ್ಡ್ ಂಬರ್ ಆಫ್ ಕೌನ್ಸಿಲ್ (ಛೇರ್‌ಮನ್.)
ಕೆ. ಗರುಡಾಚಾರ್, ಎಸ್‌ಕ್ವೈರ್, ಮರ್ಚಂಟ್ ಮತ್ತು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆನರೆರಿ ಪ್ರೆಸಿಡೆಂ, ಬೆಂಗಳೂರು ಸಿಟಿ.
ಂಡಿ ಹರಿಯಣ್ಣ, ಎಸ್‌ಕ್ವೈರ್, ಮರ್ಚೆಂಟ್, ಬೆಂಗಳೂರು ಸಿಟಿ.
ಆದೆಪ್ಪ, ಎಸ್‌ಕ್ವೈರ್, ಬೆಂಗಳೂರು ಸಿಟಿ.
ಾಜಶಿಲ್ಪಿ ವಿಶಾರದ ರಾವ್ ಬಹದ್ದೂರ್ ಬಿ. ಸುಬ್ಬರಾವ್, ಎಸ್‌ಕ್ವೈರ್, ರಿಟೈರ್ಡ್ ಚೀಫ್ ಇನ್‌ಜನಿಯರ್, ೈಸೂರು.
ಂಗ್ರಿ ನಂಜಪ್ಪ, ಎಸ್‌ಕ್ವೈರ್, ಮರ್ಚೆಂಟ್, ತಿಪ್ಟೂರು.
ರ್ಮ ಪ್ರಕಾಶ ಡಿ. ಬನುಮಯ್ಯ, ಎಸ್‌ಕ್ವೈರ್, ಮರ್ಚೆಂಟ್, ಮೈಸೂರು.
ಸೀತಾರಾಮಾಚಾರ್, ಎಸ್‌ಕ್ವೈರ್, ಬಿ. ಇ., ಇನ್‌ಜನಿಯರ್, ಮೈಸೂರು (ಸ್ಪೆಷಲ್).
ಎಂ. ಎಲ್. ವರ್ಧಮಾನಯ್ಯ, ಎಸ್‌ಕ್ವೈರ್, ಮರ್ಚೆಂಟ್, ಮೈಸೂರು (ಸ್ಪೆಷಲ್).
ದಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ (ಪ್ಲಾಲಿಸ್ ಡೈರೆಕ್ಟರ್).

ಬ್ಯಾಂಕರ್ಸ್.

ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.
ದಿ ಈಸ್ಟರನ್ ಬ್ಯಾಂಕ್, ಲಿಮಿಟೆಡ್.
ದಿ ಟಾಟಾ ಇಂಡಸ್ಟ್ರಿಯಲ್ ಬ್ಯಾಂಕ್, ಲಿಮಿಟೆಡ್.

ಆಡಿಟರುಗಳು.

ಮೆಸ್ಸರ್ಸ್ ಫ್ರೇಸರ್ ಅಂಡ್ ರಾಸ್, ಛಾರ್ಟರ್ಡ್ ಅಕೌಂಟೆಂಟರು, ಮದರಾಸ್.

ಲೀಗಲ್ ಅಡ್ವೈಜರುಗಳು.

ಮೆಸ್ಸರ್ಸ್ ರಾಘವಯ್ಯ ನಗಿನ್‌ದಾಸ್ ಕಂಪನಿ, ಸಾಲಿಸಿಟರ್ಸ್, ಬೊಂಬಾಯಿ.
ಮಿ|| ಎ. ಕೃಷ್ಣರಾವ್, ಅಡ್ವೋಕೇಟ್, ಮೈಸೂರು.

ಏಜಂಟರು.

ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ.,
ಪೋಸ್ಟ್ ಬಾಕ್ಸ್ ನಂ. 101, ಮೈಸೂರು.

ರೆಜಿಸ್ಟರ್ಡ್ ಆಫೀಸ್.

ಈದಿಗ, ಮೈಸೂರು.

ಪ್ರಾಸ್ಪೆಕ್ಟಸ್ (ವಿಷಯ ವಿವರಣೆ.)

ಈ ಕಂಪನಿಯ ಮೆಮೋರಾಂಡಂ ಆಫ್ ಅಸೋಸಿಯೇಷನ್ ಎಂಬುವದರಲ್ಲಿ ನಮೂದಿಸಿರುವ ಉದ್ದೇಶಗಳ
ೋಸ್ಕರ ಮುಖ್ಯವಾಗಿ ಮೈಸೂರು ಪಟ್ಟಣದಲ್ಲಿ ಅಥವಾ ಅದಕ್ಕೆ ಸಮೀಪವಾಗಿ ಉತ್ತಮತರಹದ ಯಂತ್ರಗಳಿಂದ
ಡದೆ ನೂಲುವ ಮತ್ತು ನೇಯುವ ಹತ್ತಿಯ ಕಾರ್ಖಾನೆಯನ್ನು ಸ್ಥಾಪಿಸಿ ಕೆಲಸಮಾಡುವುದಕ್ಕೋಸ್ಕರ ಏರ್ಪಾಡಿ
ುತ್ತೆ. ಹಿಂದುಸ್ಥಾನದಲ್ಲಿ ನೇಗೆಯ ಕಾರ್ಖಾನೆಗಳು ಹೆಚ್ಚುತ್ತಿದ್ದಾಗ್ಯೂ ನಮ್ಮ ಇಂಡಿಯಾ ದೇಶಕ್ಕೆ ಬೇಕಾಗುವ
ಟ್ಟೆಗಳ ಪೈಕಿ ಶೇಕಡಾ ೩೫ ರಷ್ಟು ಮಾತ್ರ ತಯಾರಾಗುತ್ತಲಿವೆ. ಉಳಿದ ೬೫ ಭಾಗದಷ್ಟು ಪರದೇಶಗಳಿಂದ
ಾಗಿ ಬರುತ್ತಿರುವದು ಸಕಲರಿಗೂ ತಿಳಿದ ಅಂಶವಾಗಿದೆ. ಹಿಂದುಸ್ಥಾನದ ನೇಗೆಯ ಕಾರ್ಖಾನೆಗಳಲ್ಲಿ ತಯಾರಾದ
ಟ್ಟೆ ಬರೆಗಳು ಸಾಕಾಗದೆ ೧೯೧೯-೨೦ ನೇ ಸಾಲಿನಲ್ಲಿ ಅನ್ಯದೇಶಗಳಿಂದ ಸುಮಾರು ೫೦ ಕೋಟಿ ರೂಪಾಯಿಗಳ
ಬೆಲೆಬಾಳುವ ಬಟ್ಟೆಗಳು ಈ ದೇಶಕ್ಕೆ ತರಿಸಲ್ಪಟ್ಟಿರುತ್ತೆ. ಅನ್ಯದೇಶದಿಂದ ಇಷ್ಟು ವಿಶೇಷವಾಗಿ ರಫ್ತಾಗುತ್ತಿರುವ
ಟ್ಟೆಗಳನ್ನು ತಯಾರ್ಮಾಡುವ ಕಾರ್ಖಾನೆಗಳನ್ನು ಹೆಚ್ಚಿಸುವದಕ್ಕೆ ವಿಶೇಷವಾಗಿ ಅವಕಾಶವಿರುತ್ತದೆ. ನಮ್ಮ ಸಂ
ಸ್ಥಾನದಲ್ಲಾದರೊ ಹತ್ತಿ ಬೆಳೆಯುವ ಪ್ರದೇಶಗಳು ತುಂಬಾ ಸಮೀಪದಲ್ಲೇ ಇರುತ್ತವೆ. ಕೆಲಸಗಾರರು ಸುಲಭವಾಗಿ
ದಗುತ್ತಾರೆ. ವಿದ್ಯುಚ್ಛಕ್ತಿಯ ಸೌಲಭ್ಯವೂ ನೀರಿನ ಅನುಕೂಲ್ಯವೂ ವಿಶೇಷವಾಗಿರುತ್ತವೆ.

ಈ ಮೇಲ್ಕಂಡ ಅನುಕೂಲಗಳೆಲ್ಲವೂ ಇರುವಾಗ್ಗೆ ಮೈಸೂರಿನಲ್ಲಿ ನೂಲುವ ಮತ್ತು ನೇಯುವ ಕಾರ್ಖಾನೆ
ಯನ್ನು ಸ್ಥಾಪಿಸುವದರಿಂದ ಹೆಚ್ಚು ಲಾಭವೂ ಮತ್ತು ಪ್ರಯೋಜನವೂ ಆಗುತ್ತೆನ್ನುವದರಲ್ಲಿ ಸಂಶಯವಿಲ್ಲ.

ಈ ಕಾರ್ಖಾನೆಯ ಕೆಲಸವನ್ನು ಜಾಗ್ರತೆಯಲ್ಲಿಯೇ ಪ್ರಾರಂಭಿಸಬೇಕೆಂಬ ಉದ್ದೇಶದಿಂದ ೨೫,೦೦೦ ನೂ
ವ ರಾಟೆಗಳು ಇಡಲ್ಪಡುತ್ತೆ. ಕೆಲಸ ನಡೆಯುತ್ತಿರುವಾಗ್ಗೆ ನೇಯುವ ಯಂತ್ರಗಳು ಮತ್ತೂ ಹೆಚ್ಚಾಗಿ ಇಡಲ್ಪಡುತ್ತೆ.

ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ.
ಸ್. ಐ., ಜಿ. ಬಿ. ಇ. ರವರು ಕೃಪಾಪೂರಿತರಾಗಿ ಈ ಕಾರ್ಖಾನೆಗೆ ತಮ್ಮ ನಾಮಾಂಕಿತವನ್ನು ದಯಪಾಲಿಸಿ
ರುತ್ತಾರಲ್ಲದೆ ಈ ಕಸಬನ್ನು ಪ್ರೋತ್ಸಾಹಿಸಬೇಕೆಂಬ ಕುತೂಹಲಯುಕ್ತರಾಗಿ ಈ ಕಂಪನಿಯಲ್ಲಿ ತಮಗೋಸ್ಕರ
ಹದಲಕ್ಷ ರೂಪಾಯಿಗಳ ಮೂಲಧನದ ಷೇರುಗಳನ್ನು ತೆಗೆದುಕೊಳ್ಳುವುದಾಗಿ ಅನುಜ್ಞೆಯನ್ನಿತ್ತಿರುವರು.

ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ., ರವರು ಈ ಕಂಪನಿಯ ಏಜೆಂಟರಾಗಿ ನಿಂತು
ಕಾರ್ಯ ನಡಿಸುವುದಾಗಿ ಒಪ್ಪಿಕೊಂಡಿರುತ್ತಾರೆ. ಈಗಾಗಲೇ ಇವರು ಇಂಗ್ಲಾಂಡಿನಿಂದ ಸರ್ವೋತ್ತಮವಾದ ಯಂತ್ರ
ಸಾಮಗ್ರಿಗಳನ್ನು ತರಿಸಲು ಏರ್ಪಾಡನ್ನು ಮಾಡಿರುವರು.

ಷೇರುಗಳನ್ನು ಹಂಚುವಿಕೆ.

ಡೈರೆಕ್ಟರುಗಳು ೪೦,೦೦೦ ಷೇರುಗಳು ಬಿಕರಿ ಆದ ಒಡನೆಯೇ ಷೇರುಗಳನ್ನು ಹಂಚಿಕೆಮಾಡುತ್ತಾರೆ.

ಒಪ್ಪಂದ (ಅಗ್ರಿಮೆಂಟ್).

ಈ ಕಾರ್ಖಾನೆಯ ಕಟ್ಟಡವನ್ನು ಕಟ್ಟಿಸಿ ಯಂತ್ರಗಳನ್ನಿಟ್ಟು ಕೆಲಸ ನಡಿಸಿಕೊಂಡು ಬರಲು ಈ ಕಂಪನಿ
ಗೂ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ ಯವರಿಗೂ ಒಪ್ಪಂದಗಳಾಗಿರುವ ಷರತ್ತುಗಳೇನಂ
ದರೆ:—ಸದರೀ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ ಯವರು ಅಥವಾ ಅವರ ಉತ್ತರಾಧಿಕಾ
ರಿಗಳು ಅಥವಾ ಅವರಿಂದ ಅಧಿಕಾರಪಡೆದವರು ಕರಾರಿನಲ್ಲಿ ನಮೂದಿಸಿರುವ ಷರತ್ತುಗಳಿಗನುಸಾರವಾಗಿ ಈ ಕಂಪನಿ
ರೆಜಿಸ್ಟರ್ ಆದ ದಿನಾಂಕದಿಂದ ೨೫ ವರುಷಗಳವರೆಗೆ ಈ ಕಂಪನಿಯ ಮ್ಯಾನೇಜಿಂಗ್ ಏಜೆಂಟರಾಗಿ ಇರತಕ್ಕದ್ದು.
ಈ ಒಪ್ಪಂದದ ಪ್ರಕಾರ ಮ್ಯಾನೇಜಿಂಗ್ ಏಜೆಂಟರವರಿಗೆ ಈ ಕಂಪನಿಯ ನಿವ್ವಳ ನಫೆಯಲ್ಲಿ ಶೇಕಡಾ ೧೦ ರಂತೆ
ಪ್ರತಿಫಲ ಸಲ್ಲತಕ್ಕದ್ದು. ಇದಲ್ಲದೆ ಮಾಹೆ ಒಂದಕ್ಕೆ ೧,೦೦೦ ರೂಪಾಯಿಗಳನ್ನು ಅಥವಾ ಕಾಲಕಾಲಕ್ಕೆ ಡೈರೆಕ್ಟ
ರುಗಳು ಗೊತ್ತುಮಾಡುವ ಹೆಚ್ಚು ಮೊತ್ತವನ್ನು ಆಫೀಸು ಅಲೋಯನ್ಸು ಎಂಬದಾಗಿ ಕೊಡತಕ್ಕದ್ದು.

ಈ ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ಡೈರೆಕ್ಟರುಗಳನ್ನು ಮತ್ತು ಅವರಿಗೆ ಸಲ್ಲುವ
ಪ್ರತಿಫಲವನ್ನು ಕುರಿತು ನಮೂದಾಗಿರುವ ಅಂಶಗಳೇನೆಂದರೆ:—

ಈ ಕಂಪೆನಿಗೆ ಡೈರೆಕ್ಟರಾಗತಕ್ಕವರು ೧೫,೦೦೦ ರೂಪಾಯಿ ಕಿಮ್ಮತ್ತು ಉಳ್ಳ ೩೦೦ ಷೇರುಗಳನ್ನಾದರೂ
ತಮ್ಮ ಸ್ವಂತ ಹೆಸರಿನಲ್ಲಿ ಪಡೆದಿರತಕ್ಕದ್ದು. ಪ್ರಾರಂಭದಲ್ಲಿ ಡೈರೆಕ್ಟರಾಗತಕ್ಕವರಿಗೆ ಈ ಷರತ್ತಿನ ನಿರ್ಬಂಧವಿರಬೇ
ಕಾದದ್ದಿಲ್ಲ; ಆದರೂ ಕೇವಲವಾದ ಒಂದು ತಿಂಗಳ ಅವಧಿಯೊಳಗಾಗಿ ವಿಧಾಯಕವಾಗಿರುವಷ್ಟು ಷೇರುಗಳನ್ನು
ಅವರು ಪಡೆದುಕೊಂಡೇತೀರಬೇಕು. ಅವರು ಒಂದುವೇಳೆ ಮಾಡದೆ ಇದ್ದಲ್ಲಿ ಮೇಲೆ ನಮೂದಿಸಿರುವಷ್ಟು ಷೇರುಗ
ಳನ್ನು ಅವರು ಪಡೆದುಕೊಂಡಿದ್ದಾರೆಂದೇ ಭಾವಿಸಲ್ಪಡತಕ್ಕದ್ದು; ಮತ್ತು ಕೂಡಲೇ ಅವರಿಗೆ ಅಷ್ಟು ಷೇರುಗಳನ್ನು
ಹಂಚಿಕೆಯಲ್ಲಿ ತೆಗೆದಿಡತಕ್ಕದ್ದು.

ಡೈರೆಕ್ಟರುಗಳ ಆಸಕ್ತಿ.

ಡೈರೆಕ್ಟರುಗಳಾದ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯನವರೂ, ಬಿ. ಕೆ. ಗರುಡಾಚಾರ್ಯರವರೂ, ಬಿ. ಸೀತಾರಾಮಾಚಾರ್ಯರವರೂ ಮೇಲೆ ನಮೂದಿಸಿರುವಂತೆ ಮ್ಯಾನೇಜಿಂಗ್ ಏಜಂಟರಾದ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕಂಪೆನಿಯ ಮೆಂಬರುಗಳಾಗಿರುತ್ತಾರೆ. ಅಲ್ಲದೆ ಮ್ಯಾನೇಜಿಂಗ್ ಏಜಂಟರ ಪರಂಗೆ ಈ ಮಿಲ್ಲಿನ ಕೆಲಸಗಳನ್ನು ನೋಡಿಕೊಳ್ಳಲು ದೊರೆಯುವ ಪ್ರತಿಫಲದಲ್ಲಿ ಇವರು ಭಾಗಿಗಳಾಗಿರುತ್ತಾರೆ.

ಈ ಕಂಪೆನಿಯ ಮೆಮೋರಾಂಡಂ ಆಫ್ ಅಸೋಸಿಯೇಷನ್ ಪ್ರತಿಯು ಈ ಪ್ರಾಸ್ಪೆಕ್ಟಸ್ಸಿಗೆ ಲಗತ್ತುಮಾಡಲ್ಪಟ್ಟಿರುತ್ತದೆ. ಅದು ಈ ಪ್ರಾಸ್ಪೆಕ್ಟಸ್ಸಿನ ಒಂದು ಭಾಗವಾಗಿರುತ್ತದೆ.

ಆರಂಭದ ಖರ್ಚು.

ಈ ಕಂಪೆನಿಯನ್ನು ಪ್ರಾರಂಭಿಸಿ ಪ್ರಚಾರಮಾಡುವುದಕ್ಕೆ ಆಗತಕ್ಕ ಖರ್ಚುಗಳು 10,000 ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ಮೊಬಲಗಿನಲ್ಲಿ ಕೆಳಗೆ ವಿವರಿಸುವ ದಳ್ಳಾಳಿಯು ಸೇರುವುದಿಲ್ಲ. ಆ ಬಾಬತು ಪ್ರಾರಂಭದ ಖರ್ಚುಗಳನ್ನು ಕಂಪೆನಿಯು ಪಾವತಿ ಮಾಡತಕ್ಕದ್ದು.

ದಳ್ಳಾಳಿ.

ಈ ಕಂಪೆನಿಯಿಂದ ಅಂಗೀಕರಿಸಲಟ್ಟ ಬ್ರೋಕರ್ಸ್ ಯಾನೆ ದಳ್ಳಾಳಿಗಳ ಮೂಲಕ ಬರತಕ್ಕ ದರಖಾಸ್ತುಗಳ ಸಂಬಂಧದಲ್ಲಿ ಶೇಕಡಾ ಒಂದರಂತೆ ದಳ್ಳಾಳಿ ಕೊಡಲ್ಪಡುವುದು.

ಷೇರುಗಳ ದರಖಾಸ್ತು.

ಈ ಪ್ರಾಸ್ಪೆಕ್ಟಸ್ಸಿನ ಕೂಡ ಜಂಟಿಸಿರುವ ನಮೂನೆಯ ಫಾರಂನಲ್ಲೇ ದರಖಾಸ್ತುಗಳನ್ನು ಬರೆದು ದರಖಾಸ್ತಿಗೆ ಅನುಗುಣವಾದ ಮೊಬಲಗಿನ ಸಮೇತ ಕಂಪೆನಿಯ ಮೇಲ್ಕಂಡ ಬ್ಯಾಂಕರುಗಳ ಪೈಕಿ ಒಬ್ಬರಿಗೆ ರವಾನೆ ಮಾಡತಕ್ಕದ್ದು.

ಈ ಕಂಪೆನಿಯ ಷೇರುಗಳನ್ನು ಬಿಕರಿಗೆ ಇಟ್ಟಿರುವ ವಿಷಯದಲ್ಲಿ ಒಂದು ನಿರ್ಬಂಧವನ್ನು ಕಲ್ಪಿಸಲಾಗಿದೆ. ಅದೇನೆಂದರೆ—ಷೇರುಗಳನ್ನು ಹಂಚಿಕೆಮಾಡಿಕೊಟ್ಟ ಬಳಿಕ ಎಂಟು ತಿಂಗಳು ಕಳೆಯುವ ವರೆಗೂ ಷೇರ್ ಸರ್ಟಿಫಿಕೇಟುಗಳು ಬಟವಾಡೆಗೆ ಸಿದ್ಧಪಡುವುದಿಲ್ಲ.

ಷೇರುಗಳನ್ನು ಹಂಚಿಕೊಡದ ಸಂದರ್ಭದಲ್ಲಿ ಅದಕ್ಕಾಗಿ ಕಳುಹಿದ ಡಿಪಾಜಿಟ್ಟನ್ನು ಪೂರಾ ವಾಪಸು ಮಾಡಲಾಗುತ್ತದೆ; ಒಂದುವೇಳೆ ಅಪೇಕ್ಷಿಸಿದಷ್ಟಕ್ಕಿಂತಲೂ ಕಡಮೆ ಸಂಖ್ಯೆಯ ಷೇರುಗಳನ್ನು ಹಂಚಿಕೊಟ್ಟಲ್ಲಿ, ಡಿಪಾಜಿಟ್ ಪೈಕಿ ಉಳಿಕೆಯಾಗುವ ಮೊಬಲಗನ್ನು ಷೇರ್ ಖಿಸ್ತುಗಳಿಗೆ ಜಮಾ ಕಟ್ಟಿಕೊಳ್ಳಲಾಗುವುದು.

ಷೇರುಗಳನ್ನು ಹಂಚಿಕೆಯಾದ ಮೇಲೆ ಪಡೆದುಕೊಂಡವರು ಮುಂದಣ ಖಿಸ್ತುಗಳನ್ನು ವಾಯಿದೆಯಲ್ಲಿ ಪಾವತಿ ಮಾಡದೆ ತಪ್ಪಿದರೆ ಅಂಥವರು ಮೊದಲೇ ಪಾವತಿ ಮಾಡಿರುವ ಮೊಬಲಗುಗಳನ್ನು ಕಳೆದುಕೊಳ್ಳುವರು.

ಪ್ರಾಸ್ಪೆಕ್ಟಸ್ಸುಗಳನ್ನೂ ದರಖಾಸ್ತು ನಮೂನೆಗಳನ್ನೂ ಈ ಕಂಪೆನಿಯ ಬ್ಯಾಂಕರುಗಳಲ್ಲೂ ಅಥವಾ ಕಂಪೆನಿಯ ರೆಜಿಸ್ಟರ್ಡ್ ಆಫೀಸಿನಲ್ಲೂ ಪಡೆಯಬಹುದು.

ಕೆ. ಪಿ. ಪುಟ್ಟಣ್ಣಶೆಟ್ಟಿ.	ಎಸ್. ನಂಜಪ್ಪ.
ಬಿ. ಕೆ. ಗರುಡಾಚಾರ್.	ಡಿ. ಬನುಮಯ್ಯ.
ಎಂ. ಹರಿಯಣ್ಣ.	ಬಿ. ಸೀತಾರಾಮಾಚಾರ್.
ಡಿ. ಆದೆಪ್ಪ.	ಎಂ. ಎಲ್. ವರ್ಧಮಾನಯ್ಯ.
ಬಿ. ಸುಬ್ಬರಾವ್.	ವಿ. ರಂಗಸಾಮಿ ಅಯ್ಯಂಗಾರ್.

ಮೈಸೂರು,
ತಾ||..............................

ಈ ಕಂಪೆನಿಯ ಬ್ಯಾಂಕರಿಗೆ ಈ ಫಾರಂ ಕೂಡ ಮೊಬಲಗು ಪಾವತಿ ಮಾಡಿದರೆ, ಅವರು ಕಂಪೆನಿ ಮ್ಯಾನೇಜಿಂಗ್ ಏಜೆಂಟರಿಗೆ ಅದ್ದೇ ಕೆಡಿಸಸನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್.

(1917ನೇ ಇಸವಿ VIIIನೇ ನಂ. ಮೈಸೂರು ರೆಗ್ಯುಲೇಷನ್ನಿಗೆ ಅನುಸಾರವಾಗಿ ರೆಜಿಸ್ಟರ್ ಮಾಡಲ್ಪಟ್ಟಿದೆ.)

ಮೂಲಧನ ರೂ. ೪೦,೦೦,೦೦೦

ಷೇರು ೧ ಕ್ಕೆ ೫೦ ರೂ. ಪ್ರಕಾರ ೮೦,೦೦೦ ಷೇರುಗಳಾಗಿ ವಿಂಗಡಿಸಿದೆ.

ಮೈಸೂರು ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್,

ಡೈರೆಕ್ಟರವರ ಸಮಕ್ಷಮಕ್ಕೆ.

ಅಯ್ಯಾ,

ಮೇಲ್ಕಂಡ ಕಂಪೆನಿಯಲ್ಲಿ ನನಗೆ (ನಮಗೆ) ಬೇಕಾಗಿರುವ.........ಷೇರುಗಳಿಗೆ, ಷೇರು ಒಂದಕ್ಕೆ ಐದು ರೂಪಾಯಿ ಪ್ರಕಾರ ಆಗುವ ಡಿಪಾಜಟ್ಟು ಮೊಬಲಗು.......... ರೂಪಾಯಿಗಳನ್ನು ಈ ದಿವಸ ನಿಮ್ಮ ಬ್ಯಾಂಕರ್ಸ್‌ಗಳಿಗೆ ಪಾವತಿ ಮಾಡಿರುತ್ತೇನೆ (ವೆ). ಪ್ರಾಸ್ಪೆಕ್ಟಸ್ಸಿನಲ್ಲಿ ನಮೂದಾಗಿರುವ ಷರತುಗಳಿಗೆ ಅನುಗುಣವಾಗಿ ಮೇಲ್ಕಂಡಷ್ಟು ಷೇರುಗಳನ್ನಾಗಲಿ ಅಥವಾ ಕಡಮೆಯಾಗಾಗಲಿ ದಯವಿಟ್ಟು ಕೊಡಬೇಕಾಗಿ ಕೋರುತ್ತೇನೆ (ವೆ); ಮತ್ತು ಕಂಪನಿಯ ಮೆಮೋರಾಂಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನಲ್ಲಿ ಕಂಡ ನಿಯಮಗಳಿಗೆ ಅನುಸಾರವಾಗಿ ನೀವು ಕೊಡುವಷ್ಟು ಷೇರುಗಳನ್ನು ಅಂಗೀಕರಿಸುತ್ತೇನೆ (ವೆ).

ರುಜು...S.P. Gunasekhar..........
ಪೂರ್ತಾ ಹೆಸರು...S.P. Gunasekhar.....
ಕಸಬು...............................
ಮೇಲುವಿಳಾಸ...No. 9 Kumara Park Ext, B'lore
ತಾರೀಖು...Dt. 10–5–1949 (Nineteen forty nine)

(ಬ್ಯಾಂಕರ್ಸ್ ರಶೀತಿ.)

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್.

ಡಿಪಾಜಿಟ್ ಮೊಬಲಿಗ್ಗೆ ಕೊಡಲ್ಪಟ್ಟ ರಶೀತಿ.

ನಂ..........
ಮ|| ರಾ||..................ರಿಂದ ಷೇರು ೧ ಕ್ಕೆ ಐದು ರೂಪಾಯಿ ಪ್ರಕಾರ
..............ರೂಪಾಯಿಗಳು............ಷೇರುಗಳಿಗೆ ಡಿಪಾಜಿಟ್ಟು ಬಂದಿರುತ್ತೆ.
ರೂ.........   ರುಜು

(ಷೇರ್‌ದಾರರುಗಳು ಷೇರ್ ಸರ್ಟಿಫಿಕೇಟ್ ಪಡೆಯುವವರೆಗೂ ಈ ರಶೀತಿಯನ್ನು ಜೋಪಾನವಾಗಿ ಇಟ್ಟುಕೊಂಡಿರತಕ್ಕದ್ದು.)

ಇಸ್ತಿಹಾರ್.

ತಾರೀಖು 17 ನೇ ಜುಲೈ 1920. 6—3

ಮೈಸೂರು ಸ್ಟೇಟ್ ಲೈಫ್ ಇನ್‌ಷೂರೆನ್ಸ್ ಏರ್ಪಾಡಿನಲ್ಲಿ ತಮ್ಮ ಜೀವಗಳನ್ನು ವಿಮೆ ಮಾಡಿರುವ ಸರ್ಕಾರದ ಆಫೀಸರಿಗೂ ಅಂಥಾ ಆಫೀಸರಲ್ಲದ ಇತರರಿಗೂ ಮತ್ತು ಹಾಗೆ ವಿಮೇ ಮಾಡಿರುವವರು ಮೃತಪಟ್ಟಿರುವ ಸಂದರ್ಭಗಳಲ್ಲಿ ಅವರ ವಾರಸುದಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:-

1920 ನೇ ಸೆಪ್ಟಂಬರು 30 ನೇ ತಾರೀಖಿನೊಳಗಾಗಿ ಪಾವತಿಯಾಗತಕ್ಕ ಮೊಬಲಗಿಗೆ ಉಂಟಾಗುವ ಹಕ್ಕನ್ನು ಸ್ಪಷ್ಟವಾದ ಮತ್ತು ಪೂರ್ತಿಯಾದ ರುಜುವಾತನ್ನು ಕೊಟ್ಟಲ್ಲಿ ಹಕ್ಕುದಾರರ ಅಪೇಕ್ಷೆಯ ಮೇಲೆ ಮೈಸೂರು ಸರ್ಕಾರದ ಶೇಕಡ 6¼ ರಂತೆ ಬಡ್ಡಿಯುಳ್ಳ ಸಾಲಕ್ಕೆ ಚಂದಾ ಮಾಡಿ, ಸಾಲದ ಇಸ್ತಿಹಾರಿನಲ್ಲಿ ವಿವರಿಸಿರುವವುಗಳ ಪೈಕಿ ಅವರಿಗೆ ಬೇಕಾದ ಅಂಕಿತದ ಬಾಂಡುಗಳನ್ನು ಕೊಡಲಾಗುವುದು. ಈ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳಲಿಚ್ಛೈಸುವವರು ತಮ್ಮ ಅಭಿಪ್ರಾಯವನ್ನು ತಕ್ಷಣ ಈ ಕೆಳಗೆ ರುಜುಮಾಡಿರುವವರಿಗೆ ದಯವಿಟ್ಟು ತಿಳಿಸಬೇಕು. ಮತ್ತು ಕೂಡಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವದಕ್ಕಾಗಿ ತಮ್ಮ ಹಕ್ಕುಗಳನ್ನು ತ್ವರಿತವಾಗಿ ರುಜುವಾತು ಸ್ಥಾಪಿಸಿಕೊಡತಕ್ಕದ್ದು. ವಿಮೆಯ ಮೊಬಲಗು ಹಕ್ಕುದಾರರು ಅಪೇಕ್ಷಿಸುವ ಅಂಕಿತ ಮೊಬಲಗುಗಳ ಬಾಂಡುಗಳನ್ನು ಕೊಳ್ಳುವದಕ್ಕೆ ಸರಿಹೋಗದ ಪಕ್ಷದಲ್ಲಿ, ಬಾಕೀ ಬೀಳುವ ಮೊಬಲಗನ್ನು ಸಂಸ್ಥಾನದ ಯಾವ ಖಜಾನೆಗಾದರೂ ಕಟ್ಟಿ, ಅದರ ರಶೀತಿಯನ್ನು ಮುಂದಿನ ನಡವಳಿಗೆ ಬಗ್ಗೆ ಈ ಆಫೀಸಿಗೆ ರವಾನಿಸಬಹುದು. ಅಥವಾ ಅಪೇಕ್ಷಿತ ಅಂಕಿತ ಮೊಬಲಗಿಗೆ ಕೇವಲ ಸಮೀಪವಾಗಿರುವ ಮೊಬಲಗಿನ ಬಾಂಡುಗಳೊಂದಿಗೆ ನಿಂತ ಹಣವನ್ನು ನಗದಾಗಿ ವಾಪಸು ಕೊಡಲಾಗುವುದು.

ಟಿ. ಸತ್ಯರಾಜಚೆಟ್ಟಿ, ಸೆಕ್ರೆಟರಿ,
ಮೈಸೂರು ಸರ್ಕಾರದ ಇನ್‌ಷೂರೆನ್ಸ್ ಕಮಿಟಿ.

WANTED.

4—3

An L.C.E. or B. E. with special knowledge in Mechanical Engineering for the post of the Chief officer of the Bijapur City Municipality on a monthly salary of Rs. 250 rising to Rs. 300 by an annual increment of Rs. 10. Applicants should be willing to serve at least for five years and submit their applications with testimonials of having got administrative capacity before the 13th November 1920. The appointment will be made subject to the approval of Government. The application should necessarily give the following particulars:—

(1) Present employment whether permanent or temporary. (2) Present pay. (3) Period of service put in. (4) Caste. (5) Age. (6) Whether experienced in Municipal service.

Municipal Office,
Bijapur, 12-8-1920.

P. A. DESAI,
President,
Bijapur City Municipality.

THE MYSORE DASARA FAIR 1920.

NOTICE.

3—2

In connection with the ensuing Dasara Fair to be held at Mysore City from Wednesday the 20th October 1920, tenders are invited for putting up and managing the following courts of amusement etc:—

(1) Meery-go-round
(2) Feats of strength
(3) Wrestling
(4) Bioscope
(5) Mimicry
(6) Slight of hand
(7) Motor ride
(8) Dramas
(9) Lucky dips
(10) Indian Restaurant
(11) European „
(12) Music (instrumental & vocal)

and (13) Thatti fencing of 3000 ft. of 6 ft. height.

2. Applications will be received up to 15th September 1920.

3. All tenders to be addressed to the Secretary, Dasara Fair Committee, Exhibition Buildings, Mysore.

4. The acceptance or rejection of any tender rests finally with the Dasara Fair Committee.

5. As soon as a tender is accepted, the successful tenderer will be duly informed and he will thereafter be required to execute an agreement for running the amusement court etc., according to the trems to be decided by the Committee and to deposit 5% of the accepted tender amount as a guarantee for the fulfilment of the contract.

6. In default of the tenderer to act up to his agreement, the deposit made by him will be liable to be forfeited.

7. The Committee is not bound to give any reasons for the rejection of any tender nor intimation of such rejection will be given.

8. Further particulars may be obtained on application to the undersigned.

Exhibition Buildings,
Mysore.
15th Agust, 1920.

M. S. Ramachndra Rao,
Secretary,
Dasara Fair Committee,
Mysore.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವದು. ಭಾರವಿರುವದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ಬೆಸ್ಟ್ ಪೌಂಟೆನ್‌ಪೆನ್ನು.

ಈ ನಕ್ಷೆಯಲ್ಲಿ ಕಾಣುವ ಪೌಂಟೆನ್‌ಪೆನ್ನಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೆನ್ನ 1 ಕ್ಕೆ ರೂ. 1—8—0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು.



ಕ್ರಯ 1 ಕ್ಕೆ ರೂ. 0—8—0.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆಮರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 1—12—0.
12 ಕ್ಕೆ 18—0—0.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ಕುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
22 3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧ

ಇಂಡಿಯಾ ಸರಕಾರದಲ್ಲಿ ಸನ್ ೧೯೧೭ ನೇ ಇಸ್ವಿಯ ೨೫ ನೇ ಆಕ್ಟ

ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನ[illegible]ಯಾಗಿ ತಾ॥ ೧೦-೮-೧೯೦೮ ನೇ ಇಸ್ವಿಯಿಂದ ತಾ॥ ೧-೯-೧೯೧[illegible] ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮ[illegible] ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆ[illegible]ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾ[illegible] ಅಂತು ಈವರೆಗೆವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊ[illegible]ತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔ[illegible] ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ [illegible] ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು [illegible]ತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿ[illegible] ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾ[illegible] ಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ[illegible] ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರು[illegible] ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔ[illegible] ವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇವೆ. [illegible] ಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಬಳ[illegible] ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಭರ[illegible] ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ[illegible]ರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, [illegible] ರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, [illegible] ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಸ[illegible] ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು [illegible] ಲೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, [illegible] ಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂ[illegible] ವಾರಶೂಲಿ, ರೇಷ್ಮಿಜಡ್ಡು, ಗುದದ್ವಾರದಬೇನೆ, ಹುರುಕುಕಜ್ಜಿ, ಗಜಕರ್ಣ, [illegible] ಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, [illegible] ದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊ[illegible] ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿ[illegible] ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ[illegible] ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರ[illegible] ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು [illegible] ಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ [illegible] ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇ[illegible] ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷ[illegible] ಕೊಡುತ್ತೇವೆ, ಇವಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿ[illegible] ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ [illegible]ರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊ[illegible]ಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂ[illegible] ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊ[illegible]ತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್[illegible] ತಿಕೀಟ ಲಗತ ಇದದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯ[illegible] ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ [illegible] ಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥ[illegible] ಕನ್ನಡದಲ್ಲಿ ನಾಮ ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ ಆಫೀಸ್ ಶಹಪೂರ, ಬೆಳಗಾಂವ

೧೯೨೦ನೆಯ ಇಸವಿ ಸೆಪ್ಟಂಬರ್ ತಾ॥ ೫ರಿಂದ ೧೯೨೦ನೆಯ ಸೆಪ್ಟಂಬರ್ ತಾ॥ ೧೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ನೆಯ ರೌದ್ರಿ ನಾಮ ಸಂವತ್ಸರದ ನಿಜಶ್ರಾವಣ ಬಹುಳ ಸಪ್ತಮಿಯಿಂದ ನಿಜಶ್ರಾವಣ ಬಹುಳ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾ
5	1 ಭಾನು	ಸಪ್ತ	13-53	ರೋಹಿ	56-41	21
6	ಸೋಮ	ಅಷ್ಟ	8-17	ಮೃಗ	52-6	22
7	2 ಮಂಗಳ	ನವ-ಉ	2-17 53-56	ಆದ್ರಾ	48-19	23
8	ಬುಧ	ಏಕಾ	50-5	ಪುನ	44-3	24
9	ಗುರು	ದ್ವಾದ	44-12	ಪುಷ್ಯ	40-5	25
10	ಶುಕ್ರ	ತ್ರಯೋ	38-56	ಆಶ್ಲೇ	36-32	26
11	3 ಶನಿ	ಚತು	34-12	ಮಘಾ	33-33	27

(1) ಜನ್ಮಾಷ್ಟಮಿ, ದಶಫಲವ್ರತಂ. (2) ಮಂಗಳಗೌರೀವ್ರತಂ. (3) ಶ್ರಾವಣಶನಿವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯಕಾ | ಭುವನಪಥಕೃತಾವತಾರಾ ಪಕ್ಷಜ್ಞನಹೃತ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರಸಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೩-೪-೦]

ಸಂಪುಟ ೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಸೆಪ್ಟಂಬರ್ ತಾರೀಖು ೧೨ ನೆಯ ಭಾನುವಾರ. (ಸಂಚಿಕೆ ೩೭

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೀವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

36

ಹೊಸಶೋಧ ! • ಓಂ • ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸವಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
8 ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೧—೧೨—೦
ಶಿವಪೂಜಾವಿಧಿ।	೦—೧೪—೦
ಚಾರುಶೀಲೆಚರಿತ್ರೆ	೦—೯—೦
ಹರಿಹಾಸಿ	೦—೮—೦

ಹೊಸ ಪುಸ್ತಕಗಳು.

8

ಮಹಾತ್ಮಗಾಂಧಿ ಇವರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ಕ್ರಯ ೦-೧೨-೦.

ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦.

ರಾ॥ ಬ॥ ಪಾರದ ಮಲ್ಲಪ್ಪನವರ ಸಚಿತ್ರ ಚರಿತ್ರೆ ೦-೧೨-೦.

ಸ್ವಕರ್ತವ್ಯ ಸಿದ್ಧಾಂತ ೦-೮-೦. ಬುದ್ಧಿಯ ಮಾತು ೦-೪-೦. ಆಧುನಿಕ ಜರ್ಮನಿ ೦-೪-೦. ಪತಿತೋದ್ಧಾರ ೦-೪-೦.

ವಿಳಾಸ:—ಎಂ. ಎಂ. ಹರ್ಡೀಕರ್, ದಾವಣಗೆರೆ.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು.

44

ನಾವು ಎ. ಆಲ್ ಬ್ಯುಕ್ಕ್ಯಯರ್ ಕ್ಕೊ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೩—೦
ಬಾಲಿಕಾಗೀತ	,,	೦—೩—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
ಸಾ॥ ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

42

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಎಲೆಕ್ಟ್ರಿಕ್ ದೀಪ.

23



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್‌ಕೊ, 3 ಇರುಳಪ್ಪನ ಬೀದಿ ಮದರಾಸು.

ಭಪಕೇ ಜಾಹೀರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಬಾತಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿ ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
49 ಬಿ. ಪೋಸ್ಟ ಶಿರ್ಶಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಖ್ಯಾನವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿಸಲಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದಿ ಗ್ರಂಥ.

ಪಂಚಕೋಶೀ.—ಬೆಲೆ ೧—೩—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೩—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕಸಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ; ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸೂಚನೆ.

ಪದ್ಧತಿಯ ಪ್ರಕಾರ ಗಣೇಶನ ಹಬ್ಬದುದ್ದೇಶದಿಂದ ಸೆಪ್ಟಂಬರ್ ತಾ|| ೧೯ ನೆಯ 'ಮೈಸೂರು ಸ್ಟಾರ್' ಸಂಚಿಕೆಯು ಹೊರಡುವುದಿಲ್ಲ. ಪ. ಪ್ರ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಸೆಪ್ಟಂಬರ್ ತಾ|| ೧೨ನೆಯ ಭಾನುವಾರ.

ದೇಶೀಯ ಮಹಾಸಭೆ.

ಕಳೆದ ತಾ|| ೪ ರಿಂದ ಈ ಸಭೆಯು ಕಲ್ಕತ್ತಾ ಪಟ್ಟಣದಲ್ಲಿ ಮ|| ಲಾಲಾಲಜಪತಿರಾಯಿರವರ ಅಧ್ಯಕ್ಷತೆಯಿಂದ ಆರಂಭಗೊಂಡು ನಡೆದಿತು. ತಾ|| ೨ ರಲ್ಲೇ ಸಭಾಧ್ಯಕ್ಷರು ಆ ಪಟ್ಟಣಕ್ಕೆ ದಯಮಾಡಿಸಲು ಸತ್ಕಾರಕ ಸಂಘದವರು ೮ ಕುದುರೆಗಳನ್ನು ಹೂಡಿದ ಬಂಡಿಯಲ್ಲಿ ಲಾಲಾರವರನ್ನು ಕುಳ್ಳಿರಿಸಿ ಬಹು ವೈಭವದಿಂದ ಮೆರೆವಣಿಗೆ ಮಾಡಿ ಕರೆದುಕೊಂಡುಹೋದರು. ಸಭೆಗೆ ೫|| ಸಾವಿರ ಮಂದಿ ಪ್ರತಿನಿಧಿಗಳು ಬಂದಿದ್ದರೆಂದು ಅಮೃತಬಜಾರ್ ಪತ್ರಿಕೆಯು ಬರೆದಿರುತ್ತದೆ. ಭರತಖಂಡವೆಲ್ಲವೂ ಸ್ವರಾಜ್ಯಕಾಂಕ್ಷೆಯಲ್ಲಿ ಮುಳುಗಿದೆಯೆಂದೂ ಇದು ಸ್ವರಾಜ್ಯಪ್ರಾಪ್ತಿಗೆ ಅರ್ಹವಾಗಿದೆಯೆಂದೂ ಹೇಳಲ್ಪಡುತ್ತಿರುವಾಗ, ಇಂಥ ರಾಷ್ಟ್ರೀಯ ಸಭೆಗೆ ೩೩ ಕೋಟಿ ಪ್ರಜೆಗಳ ಪ್ರತಿನಿಧಿಗಳಾಗಿ ೫-೬ ಸಾವಿರ ಮಂದಿಗಳು ಹೋಗುವುದೆಂದರೆ ಆಶ್ಚರ್ಯವಲ್ಲವೆ? ವಿದ್ಯಾಧಿಕರಾದ ಕೆಲವರಿಗೆ ಹೊರತು ಪ್ರಜಾಸಾಮಾನ್ಯಕ್ಕೆ ರಾಜಕೀಯ ಜ್ಞಾನವೇ ಆಗಲಿ ಯಾವತೆರದ ರಾಜಕೀಯ ಕಾಂಕ್ಷೆಗಳೇ ಆಗಲಿ ಇನ್ನೂ ಉದಯಗೊಂಡಿಲ್ಲವೆಂಬುದನ್ನು ಇದರಿಂದ ನಿಸ್ಸಂಶಯವಾಗಿ ತಿಳಿದುಕೊಳ್ಳಬಹುದಾಗಿದೆ. ಸಭೆಯ ಸತ್ಕಾರಸಂಘಕ್ಕೆ ಮ|| ವ್ಯೋಮಕೇಶಚಕ್ರವರ್ತಿಯವರು ಅಧ್ಯಕ್ಷರಾಗಿದ್ದರು. ಮಧ್ಯಕಾಲದಲ್ಲಿ ಕೂಡಿದ ಈ ಪ್ರತ್ಯೇಕ ದೇಶೀಯ ಮಹಾಸಭೆಯ ಕಾರ್ಯಗಳಲ್ಲಿ ಸಹಾಯನಿರಾಕರಣತತ್ತ್ವವು ದೇಶದಿಂದ ಅಂಗೀಕರಿಸಲ್ಪಡಬೇಕೆ ? ಬೇಡವೆ ? ಅಂಗೀಕೃತವಾದರೆ ಅದರ ವಿಧಾನವೇನು ? ಎಂಬುದರ ಪರಿಷ್ಕಾರವೇ ಮುಖ್ಯವಾದುದಾಗಿದ್ದಿತು. ಸತ್ಕಾರಕ ಸಂಘಾಧ್ಯಕ್ಷರ ಭಾಷಣದಲ್ಲೇ ಆಗಲೀ ಸಭಾಧ್ಯಕ್ಷರ ಭಾಷಣದಲ್ಲೇ ಆಗಲಿ ಈ ಸಂಬಂಧವಾಗಿ ಅವರ ಸ್ವಂತದ ಅಭಿಪ್ರಾಯಗಳು ತಿಳಿಯಿಸಲ್ಪಡಲೇ ಇಲ್ಲ. ಈ ಸಂಬಂಧವಾಗಿ ಭಿನ್ನಾಭಿಪ್ರಾಯಗಳು ದೇಶದಲ್ಲಿ ಪ್ರಬಲವಾಗಿರುವುದೇ ಇದಕ್ಕೆ ಕಾರಣ. ಆದುದರಿಂದ ಸಭೆಯಲ್ಲೇ ಇದರ ಪರಿಷ್ಕಾರವಾಗಲೆಂದು ಅವರು ಬಿಟ್ಟುಬಿಟ್ಟರು. ಅಧ್ಯಕ್ಷರ ಭಾಷಣವು ಮುದ್ರಿತವಾದ ಫುಲ್‌ಸ್ಕೇಪ್ ೫೧ ಪುಟಗಳಷ್ಟು ವಿಸ್ತಾರವಾಗಿದ್ದಿತು. ಅದರಲ್ಲಿ ವಿಶೇಷಭಾಗವು ಪಂಜಾಬಿನ ಹತ್ಯೆಗಳು, ಅಲ್ಲಿಯ ಲೆ|| ಗೌರ್ನರಾಗಿದ್ದ ಸರ್ ಮೈಕೇಲ್ ಒಡ್ವಯರ್‌ರವರ ಕಾರ್ಯಭಾರಗಳು, ಪಂಜಾಬು ಹತ್ಯೆಯ ಸಂಬಂಧವಾಗಿ ಕಾಂಗ್ರೆಸ್ ಪಕ್ಷದವರೂ ಹಂಟರ್ ಸಂಘದವರೂ ನಡೆಯಿಸಿದ ವಿಚಾರಣೆ, ಕಡೆಗೆ ಪ್ರಭುತ್ವದವರ ತೀರ್ಮಾನ, ಪಾರ್ಲಿಮೆಂಟಿನ ಅಭಿಪ್ರಾಯ ಇತ್ಯಾದಿ ವಿಷಯಗಳ ವಿವರಣೆಯನ್ನೇ ಒಳಗೊಂಡಿದ್ದಿತು. ಮತ್ತು ಆ ಪ್ರತಿಭಾಗದಲ್ಲಿಯೂ ಉಪಯೋಗಿಸಿರುವ ವಾಕ್ಯಸರಣಿಯೂ ವಿಷಯನಿರೂಪಣೆಯೂ ಸಭಿಕರಲ್ಲೆಲ್ಲಾ ಭಾವೋದ್ರೇಕವನ್ನುಂಟುಮಾಡುವುದಾಗಿದ್ದಿತು. ಮತ್ತು ತುರ್ಕಿ ಸಂಧಿವಿಷಯದಲ್ಲಿ ನಡೆದಿರುವ ಅನ್ಯಾಯವನ್ನು ಕುರಿತು ವಿವರಿಸಿ, ತುರ್ಕಿಯ ಉದ್ಧಾರಕ್ಕೆ ಭಾರತೀಯರೆಲ್ಲರೂ ಮಹಮ್ಮದೀಯ ಸೋದರರೊಡನೆ ನಡುಕಟ್ಟಿ ನಿಲ್ಲುವುದು ಯುಕ್ತವೆಂದೂ, ಆಂಗ್ಲಸಾಮ್ರಾಜ್ಯವು ಏಷ್ಯಾಖಂಡದಲ್ಲಿ ಇನ್ನೂ ವಿಸ್ತರಿಸುವುದು ಬಹಳ ಅಪಾಯಕರವೆಂದೂ, ತುರ್ಕಿಯು ಸ್ವತಂತ್ರವಾಗಿರಬೇಕೆಂದೂ ಹೇಳಿದುದಲ್ಲದೆ, ನೂತನಸಂಸ್ಕರಣ ವಿಷಯದಲ್ಲಿ ಅದರ ನಿಬಂಧನೆಗಳು ಪೂರ್ಣ ನಿರಾಶಾಜನಕವೆಂದೂ, ಸಹಾಯನಿರಾಕರಣ ವಿಷಯದಲ್ಲಿ ಈ ಸಭೆಯಲ್ಲಿ ಆಗುವ ತೀರ್ಮಾನದಂತೆ ನಡೆಯಲು ದೇಶೀಯರೆಲ್ಲರೂ ಸಿದ್ಧರಾಗಿರಬೇಕೆಂದೂ, ಪರಸಹಾಯವನ್ನಪೇಕ್ಷಿಸದೆ ಸ್ವಸಹಾಯಾವಲಂಬನೆಗೊಳ್ಳದಿದ್ದರೆ ರಾಜಕೀಯ ಮೋಕ್ಷವುಂಟಾಗುವುದಿಲ್ಲವೆಂದೂ ಹೇಳಿದರು. ಇವರು ಸ್ವತಃ ಪಂಜಾಬಿನವರಾದುದರಿಂದ ಸರ್ ಮೈಕೇಲ್ ಒಡ್ವಯರ್‌ರವರ ಕಾರ್ಯಭಾರದಿಂದ ಆ ದೇಶದಲ್ಲುಂಟಾದ ವಿಪರೀತಗಳನ್ನೆಲ್ಲಾ ಬಹು ಮನೋವೇಧಕವಾಗಿ ವರ್ಣಿಸಿರುವುದರ ಹೊರತು ಇವರ ಭಾಷಣದಲ್ಲಿ ವಿಶೇಷವೇನೂ ತೋರಲಿಲ್ಲ.

ಭಾನುವಾರದಿಂದ ವಿಷಯ ನಿರ್ಧಾರಕ ಸಭೆಯು ಕೂಡಿ ೩ ದಿನಗಳ ಕಾಲ ಬಹು ದೀರ್ಘವಾದ ವಾದಾನುವಾದಗಳು ನಡೆದುವು. ತಮ್ಮ ಇಷ್ಟಾರ್ಥಪೂರಣಕ್ಕಾಗಿ ಸಭೆಗಳಲ್ಲಿ ನಿರ್ಧಾರ ಮಾಡುವುದೂ, ಪ್ರಭುತ್ವದವರನ್ನು ಬೇಡಿಕೊಳ್ಳುವುದೂ, ಅವರ ಕೃಪಾನುಗ್ರಹಗಳಲ್ಲಿ ವಿಶ್ವಾಸವಿಡುವುದೂ ಇದೆಲ್ಲಾ ನಿಷ್ಪ್ರಯೋಜನವೆಂದು ಸಿದ್ಧವಾಗಿರುವ ಕಾರಣ, ಆ ಕಾಲವು ಗತಿಸಿಹೋಗಿರುವುದೆಂತಲೂ, ಸಹಾಯನಿರಾಕರಣದಿಂದಲೇ ನಮ್ಮ ಇಷ್ಟಾರ್ಥಗಳನ್ನು ಪಡೆಯಬೇಕಾಗಿರುವುದೆಂತಲೂ, ಒಂದು ಪಕ್ಷದವರು ವಾದಿಸುತ್ತಿರುವರು. ಇದು ಉಪಯೋಗಸಾಧ್ಯವಲ್ಲ; ಅನರ್ಥಕಾರಿಯಾಗಿ ಪರಿಣಮಿಸಬಹುದಾದ ಕಾರಣ ದೇಶಕ್ಕೆ ಸದ್ಯಃ ತಕ್ಕುದಲ್ಲವೆಂದು ಕೆಲವರೂ, ಸಹಾಯನಿರಾಕರಣವನ್ನು ಖಿಲಾಪತ್ ಪಂಜಾಬು ವಿಷಯಗಳಿಗೆ ಮಾತ್ರ ಸಂಬಂಧಿಸಿಟ್ಟುಕೊಳ್ಳದೆ ಸ್ವರಾಜ್ಯಸಾಧನೆಯಾಗುವವರೆಗೂ ಸಹಾಯನಿರಾಕರಣವನ್ನವಲಂಬಿಸಬೇಕೆಂದು ಕೆಲವರೂ, ಬರೀ ಸಹಾಯನಿರಾಕರಣವೇ ಅಲ್ಲದೆ ವಿದೇಶವಸ್ತುಬಹಿಷ್ಕಾರವನ್ನು ಅಂಗೀಕರಿಸಬೇಕೆಂದು ಕೆಲವರೂ, ಹೀಗೆ ಭಿನ್ನಭಿನ್ನ ಅಭಿಪ್ರಾಯಗಳು ನಿರರ್ಗಳವಾಗಿ ಹೊರಟು ಚರ್ಚಿತವಾದುವು. ಅತ್ಯುಗ್ರವಾದಿಗಳು ಕೆಲರು ಇನ್ನು ೬ ತಿಂಗಳಲ್ಲಿ ಸ್ವರಾಜ್ಯವನ್ನು ಸಂಪಾದಿಸಿಕೊಂಡುಬಿಡಬೇಕೆಂದು ಉದ್ಘೋಷಿಸಿದರು. ಈ ವಾದಕ್ಕೆ ಮಿ|| ಬ್ಯಾಪ್ಟಿಸ್ಟಾರವರೇ ಅಗ್ರೇಸರರು. ವಿಷಯನಿರ್ಧಾರ ಸಭೆಯಲ್ಲಿ ಸಹಾಯನಿರಾಕರಣ ವಿಷಯಕ ಚರ್ಚೆಗಳು ಬಂದಾಗ್ಗೆ ಸಭಾನಾಯಕರೆಲ್ಲರೂ ಬಹುಶಃ ಗಾಂಧಿಯವರ ತತ್ವಕ್ಕೆ ವಿಮುಖತೆಯನ್ನೇ ತೋರಿಸಿದರು. ಶಾಸನ ಸಭೆಯ ಸಭಿಕತ್ವಕ್ಕೆ ಯಾರೂ ಉಮೇದುವಾರರಾಗಿ ನಿಲ್ಲಕೂಡದೆಂಬ ಮಾತಿಗೆ ಬಂಗಾಳಾ ದೇಶೀಯರೂ, ಜಿನ್ನಾ, ವಿ. ಪಿ. ಮಾಧವರಾವ್ ಮೊದಲಾದವರೂ ಒಪ್ಪಲಿಲ್ಲ.

ವಿಷಯ ನಿರ್ಧಾರಕ ಸಭೆಯಲ್ಲಿ ಸಹಾಯನಿರಾಕರಣ ತತ್ವಕ್ಕೆ ಅನುಕೂಲರಾದವರ ಸಂಖ್ಯೆಯೇ ಹೆಚ್ಚಾಗಿರುವಂತೆ ಮಾಡಿಕೊಂಡಿದ್ದರಂತೆ. ಆದರಿಂದ ಅತ್ತಕಡೆಗೆ ಹೆಚ್ಚು ಮತಗಳು ದೊರೆದರೂ, ಸಹಾಯನಿರಾಕರಣ ವಿಧಾನವನ್ನು ಕುರಿತು ಬಹು ಪರಿಯಾದ ಉಪಸೂಚನೆಗಳು ಬಂದುವು. ತೀವ್ರವಾದ ಚರ್ಚೆಗಳು ನಡೆದುವು. ಕಡೆಗೆ ಮಂಗಳವಾರ ಸಾಯಂಕಾಲದ ವರೆಗೂ ವಿಷಯನಿರ್ಧಾರ ಸಭಾ ಚರ್ಚೆಗಳೇ ನಡೆದು, ಈ ಕೆಳಗೆ ಹೇಳುವ ರೀತಿಯಲ್ಲಿ ತೀರ್ಮಾನವನ್ನು ಸಭೆಯ ಮುಂದಿಡತಕ್ಕುದೆಂದು ನಿರ್ಣಯವಾಯಿತು :—ಖಿಲಾಪತ್ ಸಂಬಂಧವಾಗಿ ಇಂಡ್ಯಾ ಸರ್ಕಾರವೂ ಸಾಮ್ರಾಜ್ಯಸರ್ಕಾರವೂ ತಮ್ಮ ಧರ್ಮವನ್ನು ಸರಿಯಾಗಿ ನೆರವೇರಿಸದೆಯೂ, ಮುಖ್ಯಮಂತ್ರಿಯವರು ತಮ್ಮ ವಾಗ್ದಾನಕ್ಕೆ ತಪ್ಪಿಯೂ ಹೋದುದರಿಂದ ಮಹಮ್ಮದೀಯ ಸೋದರರಿಗೆ ಉಂಟಾಗಿರುವ ವಿಪತ್ತನ್ನು ತೊಲಗಿಸಲಿಕ್ಕೆ ಮಹಮ್ಮದೀಯೇತರರೆಲ್ಲರೂ ಅವರಿಗೆ ಸಹಾಯಮಾಡಬೇಕಾದುದು ಕರ್ತವ್ಯವಾಗಿ ಪರಿಣಮಿಸಿದುದರಿಂದಲೂ, ಮತ್ತು ಪಂಜಾಬಿನಲ್ಲಿ ನಿರಪರಾಧಿಗಳನ್ನು ಕೊಂದ ಅಧಿಕಾರಿಗಳನ್ನು ಶಿಕ್ಷಿಸುವುದರಲ್ಲಿಯೂ ಪಂಜಾಬು ಪ್ರಜೆಗಳನ್ನು ಕಾಪಾಡುವುದರಲ್ಲಿಯೂ ಮೇಲೆ ಕಂಡ ೨ ಸರ್ಕಾರಗಳೂ ಕೂಡ ತಮ್ಮ ಧರ್ಮವನ್ನು ಸರಿಯಾಗಿ ನೆರವೇರಿಸದೆಹೋಗಿರುವುದರಿಂದಲೂ, ಸರ್ ಓಡ್ವಯರನ್ನು ಸುಮ್ಮನೆ ಬಿಟ್ಟುಬಿಟ್ಟುದರಿಂದಲೂ, ಪಾರ್ಲಿಮೆಂಟಿನಲ್ಲಿ ಭಾರತೀಯರ ಮೇಲೆ ಈ ಸಂಬಂಧವಾಗಿ ತಕ್ಕಂತೆ ಸಾನುಭೂತಿಯನ್ನು ತೋರಿಸದೆಹೋದುದರಿಂದಲೂ, ನಿನ್ನೆ ತಾನೇ ಕೂಡಿದ ಸಾಮ್ರಾಜ್ಯಶಾಸನ ಸಭೆಯಲ್ಲಿ ವೈಸ್‌ರಾಯರು ಮಾಡಿದ ಭಾಷಣದಲ್ಲಿ ಈ ಸಂಬಂಧವಾಗಿ ಸ್ವಲ್ಪವೂ ಪಶ್ಚಾತ್ತಾಪವನ್ನು ತೋರಿಸದೆಹೋಗಿರುವುದರಿಂದಲೂ, ಈ ವಿಷಯವಾಗಿ ತಕ್ಕ ನ್ಯಾಯವು ಜರುಗದೆಹೋದರೆ ದೇಶದಲ್ಲಿ ಸಂತೃಪ್ತಿಯುಂಟಾಗಲಾರದೆಂತಲೂ, ಇಂಥ ದುರ್ನಯವು ಇನ್ನು ಮುಂದೆ ಜರುಗದಂತೆ ಮಾಡುವುದಕ್ಕೂ, ಜಾತೀಯ ಗೌರವವನ್ನು ಕಾಪಾಡಿಕೊಳ್ಳುವುದಕ್ಕೂ ಸ್ವರಾಜ್ಯಸ್ಥಾಪನವೇ ಫಲಪ್ರದ ಮಾರ್ಗವೆಂತಲೂ ಈ ಸಭೆಯ ಅಭಿಪ್ರಾಯವಾಗಿರುತ್ತದೆ. ಈ ಸ್ವರಾಜ್ಯಸಾಧನೆಗೆ ಹಿಂಸಾರಹಿತವಾದ ಸಹಾಯನಿರಾಕರಣವನ್ನು ಅನುಷ್ಠಾನಕ್ಕೆ ತರುವುದೇ ಮಾರ್ಗವಾಗಿದೆ. ಪ್ರಭುತ್ವದವರು ಮೇಲ್ತರಗತಿಯ ಪ್ರಜೆಗಳಿಗೆ ಬಿರುದನ್ನು ಕೊಟ್ಟು ಅವರನ್ನು ವಶಪಡಿಸಿಕೊಂಡು, ತಮ್ಮ ಇಷ್ಟಾರ್ಥಸಿದ್ಧಿಯನ್ನು ಮಾಡಿಕೊಳ್ಳುತ್ತಿದ್ದಾರೆ. ಇದು ಪ್ರಜಾಭಿಪ್ರಾಯವೃದ್ಧಿಗೆ ಭಂಗಕರವಾಗಿದೆ. ಅದು ಕಾರಣ ಪ್ರಜೆಗಳು ಅಂಥ ಬಿರುದುಗಳನ್ನು ತ್ಯಜಿಸುವ ಸ್ವಾರ್ಥತ್ಯಾಗವನ್ನು ಮಾಡಬೇಕು. ಗೌರವಾರ್ಥವಾಗಿ ಮಾಡುವ ಸರ್ಕಾರಿ ಉದ್ಯೋಗಗಳನ್ನು ಬಿಡಬೇಕು. ಸ್ಥಾನಿಕ ಸಭೆಗಳಲ್ಲಿ ಸರ್ಕಾರದಿಂದ ಕೊಡಲ್ಪಡುವ ಸಭಿಕತ್ವವನ್ನು ಒಪ್ಪಬಾರದು. ಸರ್ಕಾರದವರು ಮಾಡುವ ದರ್ಬಾರುಗಳಿಗೂ ಔತಣಗಳಿಗೂ ಹೋಗಬಾರದು. ಸರ್ಕಾರಿ ಶಾಲೆಗಳಿಗೆ ಅಥವಾ ಗ್ರಾಂಟ್ ನೇಡ್ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವುದನ್ನು ಕ್ರಮೇಣ ತಪ್ಪಿಸಿ, ಪ್ರತ್ಯೇಕವಾಗಿ ಜಾತೀಯ ವಿದ್ಯಾಲಯಗಳನ್ನು ಸ್ಥಾಪಿಸಿಕೊಂಡು ಅಲ್ಲಿಗೆ ಕಳುಹಿಸುತ್ತಬರಬೇಕು. ಸರ್ಕಾರಿ ಕೋರ್ಟುಗಳಿಗೆ ಕಕ್ಷಿದಾರರೂ ವಕೀಲರೂ ಹೋಗುವುದನ್ನು ಕ್ರಮೇಣ ಬಿಟ್ಟುಬಿಟ್ಟು ಪ್ರಜೆಗಳೇ ಪಂಚಾಯತಿ ಕೋರ್ಟನ್ನು ಸ್ಥಾಪಿಸಿಕೊಳ್ಳಬೇಕು. ಮೆಸಪೊಟೇಮಿಯಾಕ್ಕೆ ಭಾರತೀಯರಾರೂ ಸೈನಿಕರಾಗಿಯೂ, ಗುಮಾಸ್ತೆಯರಾಗಿಯೂ, ಕೂಲಿಗಳಾಗಿಯೂ ಹೋಗಬಾರದು. ಬರುವ ಶಾಸನ ಸಭೆಗಳಿಗೆ ಯಾರೂ ಉಮೇದುವಾರರಾಗಿ ನಿಲ್ಲಕೂಡದು. ನಿಂತಿದ್ದವರು ಹಿಂದೆಗೆದುಕೊಳ್ಳಬೇಕು. ಕಾಂಗ್ರೆಸ್ಸಿನ ನಿರ್ಣಯಕ್ಕೆ ವಿರುದ್ಧವಾಗಿ ನಿಲ್ಲತಕ್ಕ ಉಮೇದುವಾರರಾರಿಗೂ ಓಟನ್ನು ಕೊಡಕೂಡದು. ವಿದೇಶ ವಸ್ತುಗಳನ್ನು ಬಹಿಷ್ಕರಿಸಬೇಕು. ಮೊದಲು ವಿದೇಶದ ಬಟ್ಟೆಗಳಿಗೆ ಬಹಿಷ್ಕಾರ ಹಾಕಿ ಪ್ರತಿಯೊಬ್ಬರೂ ಮನೆಗಳಲ್ಲಿ ಹತ್ತಿಯಿಂದ ನೂಲುಗಳನ್ನು ಮಾಡುವ ರಾಟೆಗಳನ್ನು ಹಾಕಿ ಸ್ವದೇಶದ ಬಟ್ಟೆಗಳನ್ನು ಕೈಮಗ್ಗಗಳಲ್ಲಿ ನೇಯಿಸುವುದಕ್ಕೆ ಸಹಾಯಮಾಡಬೇಕು.'' ಹೀಗೆ ತೀರ್ಮಾನವಾಗತಕ್ಕುದೆಂದು ನಿರ್ಧರಿಸಲ್ಪಟ್ಟಿತು. ಮರುದಿನ ಸಭೆಯಲ್ಲಿ ಗಾಂಧಿಯವರು ಈ ತೀರ್ಮಾನವನ್ನು ಸೂಚಿಸಿದರು. ಅದರ ಮೇಲೆ ಉಪಸೂಚನೆಗಳನ್ನು ಅನೇಕರು ತಂದರು. ಯಾವುದೂ ಕೆಂದಲಿಲ್ಲ. ಮುಂದಣ ಕಾಂಗ್ರೆಸ್ಸಿನ ತನಕ ಈ ವಿಷಯವನ್ನು ನಿಲ್ಲಿಸಬೇಕೆಂದರು. ಅದೂ ನಡೆಯಲಿಲ್ಲ. ಕಡೆಗೆ ಓಟನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರವಾಗಿ ಮರುದಿನಕ್ಕೆ ನಿಲ್ಲಿಸಿದರು. ಕಡೆಗೆ ಬಹುಮತವು ಗಾಂಧಿಯವರ ತೀರ್ಮಾನದಂತೆಯೇ ಬಂದಿರಬೇಕು.

ಈ ಸಲದ ಸಭೆಗೆ ಬೇಕೆಂದೇ ಹಲವು ಜನರು ಸಹಾಯನಿರಾಕರಣಾಭಿಮಾನಿಗಳು ಹೋಗಿ ತಮ್ಮ ಮಾತನ್ನು ಗೆಲಿಸಿಕೊಳ್ಳುವುದಕ್ಕಾಗಿ ಹೆಚ್ಚು ಓಟುಗಳು ಬರುವಂತೆ ಮಾಡಿ ಈ ನಿರ್ಧಾರವನ್ನು ಮಾಡಿಕೊಂಡರೇ ಹೊರತು ದೀರ್ಘಾಲೋಚನಪರರಾದ ವಿದ್ಯಾಧಿಕರೂ ದೇಶಭಕ್ತರೂ ಹಳಬರೂ ಮತ್ತು ಪ್ರಜಾಸಾಮಾನ್ಯವೂ ಇಂಥ ಸಹಾಯನಿರಾಕರಣತತ್ವಕ್ಕೆ ಒಡಂಬಟ್ಟಿತು. ಇದು ಅತ್ಯಾಚಾರಕ್ಕೂ ಹಿಂಸೆಗೂ ಎಡೆಗುಡದೆ ಹೇಗೆ ಸಾಗಿಸಲ್ಪಡುವುದೆಂಬುದು ಮುಂದೆ ತಾನಾಗಿ ಗೊತ್ತಾಗುವುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅನುಸರಿಸಲ್ಪಡುವ ಉದ್ಯಮಗಳನ್ನು ನೋಡಿ ಇಲ್ಲಿಯೂ ಸರ್ಕಾರಕ್ಕೆ ಬಹಿಷ್ಕಾರಹಾಕುತ್ತೇವೆನ್ನುವುದು '' ಆನೆಗೂ ಒಂದು ಬರೆಯಾದರೆ ಸೊಳ್ಳೆಗೂ ಒಂದು ಬರೆ '' ಎಂಬಂತೆ ಆಗುತ್ತದೆ. ಭರತಖಂಡವು ಆಂಗ್ಲ ಸಾಮ್ರಾಜ್ಯದಿಂದ ಎಷ್ಟೋ ಉಪಕಾರವನ್ನು ಹೊಂದಿದೆ. ಇದುವರೆಗೆ ಅದರಿಂದ ನಾನಾತರದ ವಿಕಾಸವನ್ನು ಹೊಂದಿದೆ. ಇನ್ನೂ ಅವರಿಂದ ಹೊಂದಬೇಕಾದ ಫಲಗಳು ಅನೇಕವಾಗಿವೆ. ನಮ್ಮ ದೇಶವನ್ನು ನಾವೇ ಆಳಿಕೊಳ್ಳುವಂಥ ಯೋಗವು ಕಾಲಾಂತರದಲ್ಲಿ ಬರಬೇಕಾಗಿದೆ. ದೇಶದಲ್ಲಿ ಅರ್ಧಭಾಗದ ಜನರಾದರೂ ಸ್ವರಾಜ್ಯಾಪೇಕ್ಷೆಯುಳ್ಳವರಾಗುವ ಕಾಲವು ಬರಬೇಕು. ಕೆಲ ವಿದ್ಯಾಧಿಕರಿಗೆ ಮಾತ್ರ ತತ್‌ಕ್ಷಣಸ್ವರಾಜ್ಯವು ಬೇಕಾಗಿದೆಯೇ ಹೊರತು ಉಳಿದ ಪ್ರಜಾಸಾಮಾನ್ಯಕ್ಕೆಲ್ಲಾ ಕ್ರಮಾಂತರ ಸ್ವರಾಜ್ಯವೇ ಅಪೇಕ್ಷಣೀಯವು. ಈಗಣ ಸಂಸ್ಕರಣಗಳು ಕ್ರಮಾಂತರ ಸ್ವರಾಜ್ಯಪ್ರಾಪ್ತಿಗೆ ಮೊದಲನೆಯ ಮೆಟ್ಟಿಲಾಗಿದೆಯೆಂಬುದನ್ನು ದೇಶಹಿತಕಾಮುಕರಾದ ಸಾತ್ವಿಕರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಬೇರೆ ಬೇರೆ ಕಾರಣಗಳನ್ನು ಹೇಳಿಕೊಂಡು ಆ ನೆವದಿಂದ ಸಹಾಯ ನಿರಾಕರಣಾದಿ ಆಂದೋಳನ ಮಾಡಿದರೆ ದೇಶದ ಶಾಂತಿಗೆ ಭಂಗಬರುವುದೇ ನಿಜವಾಗಿ ತೋರುತ್ತದೆ. ಬರುಬರುತ್ತ ಕಾಂಗ್ರೆಸ್ಸಿನ ಅವಸ್ಥೆಯು ಕಟ್ಟು ಹರಿದ ಪಂಜಿನಂತಾಗಿದೆ. ಅನುಭವಿಗಳು ಮೂಲೆಯಪಾಲಾದರು. ತುಂಟ ಜನರು ದೇಶವನ್ನು ರಾಜಾಗ್ರಹಕ್ಕೆ ಪಾತ್ರವನ್ನಾಗಿ ಮಾಡಿ, ಹದಕ್ಕೆ ಬರುತ್ತಿದ್ದ ಪಾಕವನ್ನು ಎಲ್ಲಿ ಹಾಳ್ಮಾಡಿ ಮಡಗುವರೋ ತಿಳಿಯದು. '' ದೇಶಕ್ಕಾಗಿ ಸರ್ವವನ್ನೂ ಧಾರೆಯೆರೆದು ಪ್ರಾಣತ್ಯಾಗಕ್ಕೂ ಕೂಡ ಸಿದ್ಧರಾಗಿಲ್ಲದೆ ಹೋದರೆ ನಮಗೆ ಸ್ವಾತಂತ್ರ್ಯವು ಸಿದ್ಧಿಸದು ; ವಿಪ್ಲವಕ್ಕೂ ಹೆದರದೆ ಸಂಸಿದ್ಧರಾಗಿರಬೇಕು ; ನಾನು ಸಕಲವನ್ನೂ ಪರಿತ್ಯಜಿಸುವುದಕ್ಕೆ ಈಗಿಂದೀಗಲೇ ಸಿದ್ಧನಾಗಿದ್ದೇನೆ '' ಎಂಬುದಾಗಿ ಲಜಪತಿರಾಯಿರಂಥವರು ಸಭಾಧ್ಯಕ್ಷ ಪೀಠದಲ್ಲಿ ಕುಳಿತು ಆಡುತ್ತಿರುವಾಗ್ಗೆ, ಹಿಂದು ಮುಂದನ್ನು ನೋಡದ ತರುಣರ ಮನಸ್ಸಿನಲ್ಲಿ ಇದನ್ನು ಕೇಳಿ ಎಂಥ ಭಾವಗಳು ಉದಯವಾಗಬಹುದೆಂಬುದನ್ನು ಹೇಳಬೇಕಾಗಿಲ್ಲ. ಈ ಸ್ಥಿತಿಗತಿಗಳೆಲ್ಲಾ ದೇಶವನ್ನು ಅಲ್ಲೋಲಕಲ್ಲೋಲ ಮಾಡುವುದಕ್ಕೆ ಸಹಾಯಕವಾಗಿರುತ್ತವೆ.

ಖಿಲಾಪತ್ ಮಹಾಸಭೆಯೂ ಕೂಡ ಮಿ|| ಜಿನ್ನಾರವರ ಅಧ್ಯಕ್ಷತೆಯಿಂದ ಕಲ್ಕತ್ತೆಯೊಳಗೆ ತಾ|| ೫ ರಲ್ಲಿ ಕೂಡಿ ಅವರೂ ಸಹಾಯನಿರಾಕರಣೆಯ ನಿರ್ಧಾರವನ್ನು ಮಾಡಿರುತ್ತಾರೆ. ದೇಶದವರೆಲ್ಲಾ ಸಾತ್ವಿಕರಾಗಿರುವರೆಂದು ತಿಳಿದುಕೊಂಡು ಈ ಸಹಾಯ ನಿರಾಕರಣ ಬೀಜವನ್ನು ಸರ್ವತ್ರ ನಡುವುದಕ್ಕೆ ಮಾಡಿರುವ ಈ ಪ್ರಯತ್ನದಿಂದ ಅತ್ಯಾಚಾರಗಳಿಗೆ ದಾರಿಯಾಗದೆ ಇರುವುದು ಅತ್ಯಂತ ದುರ್ಲಭ. ಆಗ್ಗೆ ಐರ್ಲೆಂಡಿನ ಸಿನ್‌ಫಿನಿಯನರ ದುರಾಗತಕ್ಕೇ ಅಂಜದ ಸಾಮ್ರಾಜ್ಯ ಪ್ರಭುತ್ವದವರು ಈ ದೇಶದವರ ಗೊಡ್ಡು ಬೆದರಿಕೆಗೆ ಹೆದರುವುದು ನಿಜವೆ ? ವಿಪ್ಲವಕ್ಕೂ ಹೆದರದೆ ಭರತಖಂಡವು ನಿಂತರೆ, ೨೦೦ ವರ್ಷಗಳಾದರೂ ಐರ್ಲೆಂಡಿಗೆ ಸಿಕ್ಕದಿದ್ದ ಸ್ವರಾಜ್ಯವು ೨೦೦೦ ವರ್ಷಗಳಾದರೂ ಭರತಖಂಡಕ್ಕೆ ಸಿದ್ಧಿಸಲಾರದ ಸ್ಥಿತಿಯು ಬರಬಹುದು.

ಭರತಖಂಡದ ವಿದ್ಯಾಭ್ಯಾಸ ವಿಧಾನವನ್ನು ಕುರಿತು ಒಬ್ಬ ಪಾಶ್ಚಾತ್ಯ ಪಂಡಿತರ ಅಭಿಪ್ರಾಯ.

ಮದರಾಸು ಪಚ್ಚಪ್ಪ ಕಲಾಶಾಲೆಯ ಪ್ರಿನ್ಸಿಪಾಲರಾದ ಮಿ|| ಸಿ. ಎಲ್. ರೇರವರು ಕಳೆದ ತಿಂಗಳ ತಾ|| ೨೬ ರಲ್ಲಿ ಕೆಲ್ಲೆಟ್ ಭವನದೊಳಗೆ ಮಾಡಿದ ವಿದ್ಯಾಭ್ಯಾಸ ವಿಷಯಕವಾದ ಉಪನ್ಯಾಸದೊಳಗೆ ಗಮನೀಯವಾದ ವಿಷಯಗಳನೇಕವಿದ್ದುವು. ಅವುಗಳ ಮುಖ್ಯಭಾಗವನ್ನು ಇಲ್ಲಿ ತಿಳಿಯಿಸುತ್ತೇವೆ.—

ವಿದ್ಯಾರ್ಥಿಗಳಿಗೆ ಅವರ ಬುದ್ಧಿಯನ್ನು ಅವರೇ ಸ್ವತಂತ್ರವಾಗಿ ವಿಕಾಸಪಡಿಸಿಕೊಳ್ಳಲಿಕ್ಕೆ ಸೌಕರ್ಯವನ್ನುಂಟುಮಾಡಿಕೊಟ್ಟಿರುವ ವಿದ್ಯೆಯೇ ''ವಿದ್ಯೆ'' ಎಂದು ಹೇಳಿಸಿಕೊಳ್ಳತಕ್ಕುದು. ಅವರಿಗೆ ಯಾವ ನಿರ್ಬಂಧವೂ ಇರಕೂಡದು.

ನಮ್ಮ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳನ್ನು ಪರೀಕ್ಷೆಯಲ್ಲುತ್ತೀರ್ಣರಾಗುವಂತೆ ಮಾಡುವುದರ ಹೊರತು ಅವರ ಆತ್ಮವಿಕಾಸಕ್ಕೆ ಮಾರ್ಗವನ್ನು ತೋರಿಸಿಕೊಡುವುವಾಗಿಲ್ಲ. ಅನ್ಯದೇಶಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿಸುವುದು ಮತ್ತೊಂದು ತಪ್ಪು. ಯುವಕರಿಗೆ ಸಚ್ಛೀಲವೇರ್ಪಡುವುದಕ್ಕೆ ಅವರಿಗೆ ಒದಗಿರುವ ಪರಿಸ್ಥಿತಿಗಳೇ ಮುಖ್ಯಾಧಾರಗಳು. ಅವರ ಶೀಲಪ್ರಬೋಧವು ಅವರ ವಿದ್ಯಾಗುರುಗಳ ಮೇಲೆ ಆಧಾರಗೊಂಡಿರುವುದು. ಗುರುವಿನಂತೆ ವಿದ್ಯಾರ್ಥಿಗಳೂ ಆಗುವರು.

ಭರತಖಂಡವು ಬಹಳ ಬಡದೇಶವು. ಅದುಕಾರಣ ದೊಡ್ಡ ದೊಡ್ಡ ದೇಶಗಳಲ್ಲಿರುವ ವಿದ್ಯಾವಿಧಾನವನ್ನು ಈ ದೇಶಕ್ಕೆ ಉಪಯೋಗಿಸಬಾರದು. ನಾವು ಭರತಖಂಡದ ಆರ್ಥಿಕ ಪರಿಸ್ಥಿತಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಅವಶ್ಯಕಗಳಾದ ವಿದ್ಯೆಯನ್ನು ಕಲಿಸಬೇಕು. ಹಾಗಾದರೇ ಜನಸಾಮಾನ್ಯವೂ ವಿದ್ಯೆಯನ್ನು ಆತುರದಿಂದ ಅರ್ಜಿಸುವುದು. ಆರ್ಥಿಕ ಶಾಸ್ತ್ರವನ್ನು ಸರ್ಕಾರಿ ಉದ್ಯೋಗವನ್ನೂ ಸಂಪಾದಿಸಲಿಕ್ಕಾಗಿ ಕಲಿಯುತ್ತಿರುವರೇ ಹೊರತು ದೇಶದ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂಬ ದೃಢಸಂಕಲ್ಪದಿಂದ ಕಲಿಯುತ್ತಲಿಲ್ಲ. ಆದೇ ದೊಡ್ಡ ಲೋಪವು.

ಉಪಾಧ್ಯಾಯರು ವಿದ್ಯಾರ್ಥಿಗಳಮೇಲೆ ತಮ್ಮ ಅಧಿಕಾರ ನಡೆಯಿಸುವುದನ್ನು ಬಿಟ್ಟುಬಿಡಬೇಕು. ಬರುಬರುತ್ತ ಭರತಖಂಡದಲ್ಲಿ ವಿದ್ಯೆಯು ವರ್ತಕತನದಂತೆ ನಡೆಯುತ್ತಿದೆ. ವಾಣಿಜ್ಯದಲ್ಲಿ ಲಾಭನಷ್ಟಗಳಿಗಾಗಿ ವರ್ತಕರು ಹೇಗೆ ಪಾಟುಪಡುವರೋ ಹಾಗೆ ವಿದ್ಯಾವಿಷಯದಲ್ಲೂ ಕೂಡ ಲಾಭಕ್ಕೋಸ್ಕರವಲ್ಲದೆ ನಿಜವಾದ ದೇಶಾಭಿವೃದ್ಧಿಗಾಗಿ ಪಾಟುಪಡುತ್ತಲಿಲ್ಲ. ಈಸ್ಟಿಂಡಿಯಾ ಕಂಪೆನಿಯವರು ಬಂದು ಈ ದೇಶದ ವಿದ್ಯೆಯನ್ನು ಸಂಪೂರ್ಣವಾಗಿ ವರ್ತಕತನವಾಗಿ ಮಾರ್ಪುಗೊಳಿಸಿಬಿಟ್ಟರು. ನಮ್ಮ ವಿಶ್ವವಿದ್ಯಾಲಯಗಳವರೂ ಅದೇ ವಿಧಾನವನ್ನೇ ಅವಲಂಬಿಸಿದರು. ಇದನ್ನೆಲ್ಲಾ ತೊಲಗಿಸಿಬಿಡಬೇಕು. ಆತ್ಮವಿಕಾಸಾರ್ಥವಾಗಿ ವಿದ್ಯಾಭ್ಯಾಸ ಮಾಡಿಸಬೇಕು.

ಉಪಾಧ್ಯಾಯರುಗಳು ತ್ರಿಕರಣಶುದ್ಧಿಯಾಗಿ ಬಾಲಕರಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕಾಗಿದ್ದರೆ ಅವರಿಗೆ ಉದಾರವಾಗಿ ವೇತನಗಳನ್ನು ಕೊಡಬೇಕು. ಉಪಾಧ್ಯಾಯರ ವ್ಯಕ್ತಿತ್ವದ ಮೇಲೆಯೇ ವಿದ್ಯಾರ್ಥಿಗಳ ಶೀಲವು ಆಧಾರಪಟ್ಟುಕೊಂಡಿರುವುದೆಂಬುದಕ್ಕೆ ಬುದ್ಧನೇ ದೃಷ್ಟಾಂತ. ಜನಸಾಮಾನ್ಯವು ತಮ್ಮಷ್ಟಿಗೆ ತಾವೇ ರಾಜಕೀಯ ವ್ಯವಹಾರಗಳನ್ನೆಲ್ಲಾ ಪರಿಷ್ಕರಿಸಿಕೊಳ್ಳುವ ಸಾಮರ್ಥ್ಯವುಳ್ಳವರಾಗುವವರೆಗೂ ಪ್ರಜಾಸ್ವಾಮ್ಯವನ್ನು ನಾವು ಪಡೆಯಲಾರೆವು. ಅವರಿಗೆ ಅಂಥ ಸಾಮರ್ಥ್ಯ ಬರುವಂತೆ ವಿದ್ಯಾಭ್ಯಾಸವನ್ನು ನಾವು ಮಾಡಿಸಬೇಕು. ಎಲ್ಲೋ ಕೆಲ ಬುದ್ಧಿವಂತರು ದೇಶೀಯ ಮಹಾಸಭೆಗೆ ಹೋಗಿಬಿಟ್ಟ ಮಾತ್ರದಿಂದಲೇ ಪ್ರಜಾಸ್ವಾಮ್ಯವು ಸಿದ್ಧಿಸಲಾರದು. ಭರತಖಂಡದಲ್ಲೂ ಒಂದು ಕಾರ್ಮಿಕ ವಿದ್ಯಾಸಂಘವನ್ನು ಸ್ಥಾಪಿಸಿ, ವಿಶ್ವವಿದ್ಯಾಲಯ ಪದವೀಧರರೆಂಬ ವಿದ್ಯಾಧಿಕ ಜನರು ಗ್ರಾಮಗಳಿಗೆ ಹೋಗಿ ಅಲ್ಲಿಯ ಜನರಿಗೆ ವಿಶ್ವವಿದ್ಯಾಲಯದ ವಿದ್ಯೆಯನ್ನೂ ಸ್ಥಾನಿಕ ಪರಿಪಾಲನ ವಿಧಾನವನ್ನೂ ಗ್ರಾಮ ಪರಿಪಾಲನ ರೀತಿಗಳನ್ನೂ ಸಾರಸ್ವತ ವಿಷಯಗಳನ್ನೂ ಕುರಿತು ಬೋಧಿಸಿ ಅವರಲ್ಲಿ ವಿವೇಕವಿಕಾಸವನ್ನುಂಟುಮಾಡಬೇಕು. ವಿದ್ಯಾರ್ಥಿಗಳಿಗೆ ಇಷ್ಟವಲ್ಲದ ವಿಷಯವನ್ನು ಬೋಧಿಸಬಾರದು. ಅವರಿಗೆ ಇಷ್ಟರಾದ ಉಪಾಧ್ಯಾಯರನ್ನೇ ನಿಯಮಿಸಬೇಕು. ಪ್ರಾರಂಭವಿದ್ಯಾಭ್ಯಾಸ ಕಾಲದಿಂದಲೇ ದೊಡ್ಡ ದೊಡ್ಡ ಪಂಡಿತರನ್ನು ಉಪಾಧ್ಯಾಯತ್ವಕ್ಕೆ ನಿಯಮಿಸಬೇಕು.

ಭರತಖಂಡದಲ್ಲಿ ದೇಶಭಾಷೆಗಳು ಕ್ಷೀಣಿಸುತ್ತಿವೆ. ಕನಿಷ್ಠಪಕ್ಷ ೪ ನೆ ಫಾರಮ್ಮಿನವರೆಗಾದರೂ ದೇಶಭಾಷಾ ಮೂಲಕವಾಗಿಯೇ ವಿದ್ಯೆಯನ್ನು ಕಲಿಸಬೇಕು. ಪರರ ಮೇಲೆ ಒರಗಿಕೊಂಡಿರುವವರೆಗೂ ನಮಗೆ ಮುಕ್ತಿಯಿಲ್ಲ. ವಿದೇಶೀಯರನ್ನೇ ನಾವು ನಚ್ಚಿಕೊಂಡಿರುವವರೆಗೂ ಅವರು ನಮ್ಮನ್ನು ಕಡುಬಡವರನ್ನಾಗಿ ಮಾಡಲು ಯೋಚಿಸುವರೇ ಹೊರತು ನಮ್ಮ ಮೇಲೆ ಸಾನುಭೂತಿಯನ್ನು ತೋರಿಸರು. ಅದುಕಾರಣ ನಾವು ನಮ್ಮ ಮೇಲೆ ಆಧಾರಪಟ್ಟುಕೊಂಡಿರಬೇಕು. ನಿಜವಾಗಿ ನಮಗೆ ಪ್ರಜಾಸ್ವಾಮ್ಯವು ಸಿದ್ಧಿಸಬೇಕಾದರೆ ಗ್ರಾಮಸ್ಥರುಗಳನ್ನು ಸ್ಥಳಿಕ ಸರಕಾರಗಳ ಕೆಲಸದಲ್ಲಿ ಅಭಿಮಾನಾನುಭವವುಳ್ಳವರಾಗುವಂತೆ ಮಾಡಬೇಕು. ನಮ್ಮ ಗೌರವಕ್ಕೆ ಕಡಿಮೆಯೆಂದು ಆಲೋಚಿಸದೆ ಗ್ರಾಮಗಳಿಗೆ ಹೋಗಿ ಅಲ್ಲಿಯ ಪ್ರಜೆಗಳೊಡನೆ ಕಲೆತು ಅವರಲ್ಲಿ ಪ್ರಬೋಧವುಂಟಾಗುವಂತೆ ಮಾಡಬೇಕು.

ವಿಶ್ವವಿದ್ಯಾಲಯಗಳವರು ದೇಶದಲ್ಲಿರುವ ಸಕಲಜನವರ್ಗಗಳವರೊಡನೆಯೂ ಸಹಕಾರಭಾವದಿಂದ ಪ್ರವರ್ತಿಸಿ ಸಹಾಯಮಾಡಬೇಕು. ದೊಡ್ಡ ಆದರ್ಶವನ್ನು ಕಣ್ಣೆದುರಿಗೆ ಇಟ್ಟುಕೊಂಡು ಕೆಲಸಮಾಡಿದರೆ ನಾವೂ ಅಷ್ಟು ದೊಡ್ಡವರೇ ಆಗುವುದರಲ್ಲಿ ಸಂಶಯವಿಲ್ಲ.

ಪ್ರಭುತ್ವದವರು ಪ್ರಾರಂಭ ವಿದ್ಯಾಭ್ಯಾಸವನ್ನು ನಿರ್ಬಂಧವಾಗಿ ಮಾಡಿಸಿ ಓದುವುದು ಬರೆಯುವುದು ಲೆಕ್ಕ ಇವುಗಳನ್ನು ಪ್ರತಿಯೊಬ್ಬರಿಗೂ ಕಲಿಸಿಕೊಟ್ಟೇತೀರಬೇಕು. ನಾವು ಆತ್ಮಲಾಭ ಮಾಡಿಕೊಳ್ಳುವುದಕ್ಕಾಗಿಯೇ ಹುಟ್ಟಿಲ್ಲ; ಸೋದರಭಾವದಿಂದ ಪ್ರವರ್ತಿಸಿ ಪರಸ್ಪರ ಸಹಾಯ ಮಾಡುವುದಕ್ಕೆ ಯತ್ನಿಸಬೇಕು.

ವಿದ್ಯಾರ್ಥಿಗಳು ವಿವಾದಕ್ಕೆಡೆಗೊಡದಂತೆ ರಾಜಕೀಯ ವಿಷಯವನ್ನು ಚರ್ಚಿಸಬಹುದು. ಉತ್ತಮ ಬೋಧಕರು ದೊರೆದಿದ್ದರೆ ನಿಷ್ಕಳಂಕವಾಗಿ ರಾಜಕೀಯ ವಿಷಯವನ್ನು ಕೂಡ ಅರಿತುಕೊಳ್ಳಬಹುದು. ನಮ್ಮ ಪ್ರಜೆಗಳಿಗೆ ಸ್ವದೇಶಚರಿತ್ರೆಯೇ ಗೊತ್ತಿಲ್ಲ. ಭಾರತೀಯರು ಭರತಖಂಡದ ಚರಿತ್ರೆಯನ್ನೇ ಚೆನ್ನಾಗಿ ತಿಳಿದುಕೊಳ್ಳದೆ ಆಂಗ್ಲದೇಶ ಚರಿತ್ರವನ್ನೂ ಭೂಗೋಳಶಾಸ್ತ್ರವನ್ನೂ ಉರುಹಾಕುತ್ತಾರೆ. ನಮ್ಮ ದೇಶಚರಿತ್ರವನ್ನೂ ನಮ್ಮ ದೇಶಭಾಷೆಯನ್ನೂ ನಾವು ಚೆನ್ನಾಗಿ ಕಲಿಯಬೇಕು.

ವರ್ಣಭೇದಗಳ ಕಲಹ.

ಭರತಖಂಡದಲ್ಲಿ ದ್ವಿಜಾದಿವರ್ಣಭೇದಗಳು ಒಂದು ಭಾವದಿಂದ ಪರಸ್ಪರ ಕಾದಾಡುತ್ತಿದ್ದರೆ ವಿದೇಶಗಳಲ್ಲಿ ಶುಕ್ಲಾದಿ ವರ್ಣಭೇದಗಳಿಗಾಗಿ ಪರಸ್ಪರ ಕಾದಾಟವಾಗುತ್ತಿದೆ. ಪಶ್ಚಿಮದೇಶದ ಶ್ವೇತಜನಗಳು ಆಫ್ರಿಕಾ ಮೊದಲಾದುವುಗಳಲ್ಲಿರುವ ಅಲ್ಲಿಯ ಮೂಲನಿವಾಸಿಗಳಾದ ಕಪ್ಪುಜನರನ್ನು ಅಣಗಿಸಿ, ತಾವೇ ದೇಶಾಕ್ರಮಣ ಮಾಡಿ, ಸುಖಾನುಭವವನ್ನೂ ಅರಸುತನವನ್ನೂ ತಮ್ಮ ಪಾಲಿಗೆ ಬಂದುದನ್ನಾಗಿಯೂ, ದುಡಿಮೆಯನ್ನೂ ದಾಸ್ಯವನ್ನೂ ಕಪ್ಪುಜನರ ಪಾಲಿಗೆ ಬಂದುದನ್ನಾಗಿಯೂ ಭಾವಿಸಿ, ಕಪ್ಪುಜನರನ್ನು ಹಲವು ತೆರದಲ್ಲಿ ಹತ್ತಿಕ್ಕುತ್ತಿದ್ದಾರೆ. ಇದನ್ನು ಸೈರಿಸಿಕೊಳ್ಳಲಾರದೆ ಕಪ್ಪುಜನರು ಆಗಿಂದಾಗ್ಗೆ ವಿಜೃಂಭಿಸಿ ಕದನ ಮಾಡುತ್ತಲೂ, ತಮ್ಮ ಅಶಕ್ತತೆಯಿಂದ ಪರಾಹತರಾಗಿ ಕುಳಿತು ಗುರುಗುಟ್ಟುತ್ತಲೂ ಇರುತ್ತಾರೆ. ಆ ಶ್ವೇತಜಾತಿಯವರಾದರೋ ಈ ಕಪ್ಪುತೊಗಲಿನ ಜನರನ್ನು ಅಷ್ಟೇನೂ ಲಕ್ಷ್ಯದಲ್ಲೇ ಇಟ್ಟುಕೊಂಡಿಲ್ಲ. ಆದರೆ ಚೀನಾ ಜಪಾನುಗಳ ಪೀತವರ್ಣದ ಜನರ ವಿಷಯದಲ್ಲಿ ಮಾತ್ರ ಇವರಿಗೆ ದಿಗಿಲು ಇದ್ದೇಇದೆ. ಈಗಳಾದರೊ ಆಫ್ರಿಕಾದ ಕಪ್ಪುತೊಗಲಿನ ನೀಗ್ರೋಜನರು ತೀರ ರೋಸಿಹೋಗಿ, ತಮ್ಮ ಪ್ರತಿರೋಧಿಗಳಾದ ಶ್ವೇತಜನರ ಮುಂದೆ ಎದೆಚಾಚಿ ನಿಂತು, ತಮ್ಮ ಆಫ್ರಿಕಾಖಂಡವನ್ನು ತಮ್ಮವರಿಗೇ ಬಿಟ್ಟುಬಿಟ್ಟುಹೋಗಿರೆಂದು ಹೇಳುವ ಸ್ಥಿತಿಗೆ ಬಂದಿದ್ದಾರೆ. ಅಮೇರಿಕಾದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ವೆಸ್ಟ್ಇಂಡೀಸ್ ದ್ವೀಪಗಳಿಂದಲೂ ನಾನಾ ಬ್ರಿಟಿಷ್ ರಾಜ್ಯಗಳಿಂದಲೂ ಬಂದಿದ್ದ ನೀಗ್ರೋಜನರೆಲ್ಲಾ ಒಂದು ಮಹಾಸಭೆಯಾಗಿ ಸೇರಿ, ತಮ್ಮ ಹಕ್ಕುಬಾಧ್ಯತೆಗಳನ್ನು ಕುರಿತು ತೀವ್ರವಾಗಿ ಚರ್ಚಿಸಿ, ತಮ್ಮ ಆಫ್ರಿಕಾವನ್ನು ತಮ್ಮವರಿಗೇ ಬಿಟ್ಟುಕೊಡಬೇಕೆಂಬುದಾಗಿ ಮುಖ್ಯವಾದ ತೀರ್ಮಾನವನ್ನು ಮಾಡಿರುವರು. ಪ್ರಪಂಚವೇ ಈಗ ಸ್ವಾತಂತ್ರ್ಯಪ್ರಬೋಧದಲ್ಲಿ ಮುಳುಗಿ ತೇಲಾಡುತ್ತಿರುವಾಗ ಈ ನೀಗ್ರೋ ಜನರಲ್ಲೂ ಇಂಥ ಸ್ವತಂತ್ರಭಾವತೀವ್ರತೆಯು ವಿಜೃಂಭಣೆಗೊಂಡುದೇನೂ ಆಶ್ಚರ್ಯವಲ್ಲ. ಸಣ್ಣಸಣ್ಣ ದೇಶಗಳ ಮತ್ತು ಜನಾಂಗಗಳ ಸ್ವಾತಂತ್ರ್ಯರಕ್ಷಣೆಯೇ ತಮ್ಮ ಯುದ್ಧಪ್ರವೇಶದ ಉದ್ದೇಶವೆಂದು ಹೇಳುತ್ತ ಬಂದಿರುವ ಆಂಗ್ಲರೂ ಮತ್ತು ಅಮೇರಿಕನ್ನರೂ ಈ ನೀಗ್ರೋಜನರ ಸ್ವಾತಂತ್ರ್ಯೇಚ್ಛಾ ಸಮಸ್ಯೆಯನ್ನು ಹೇಗೆ ಪರಿಪೂರ್ಣ ಮಾಡುವರೋ ನೋಡಬೇಕು.

ಪೋಲರು ಮತ್ತು ಬೋಲ್ಷೆವಿಕ್ಕರು.

ಪೋಲಂಡಿನವರ ಮತ್ತು ರಷ್ಯನರ ಯುದ್ಧ ವಿದ್ಯಮಾನಕ್ಕೆ ಕಳೆದ ೧ ಪಕ್ಷದಿಂದೀಚೆಗೆ ತಲೆಕೆಳಗಾಯಿತು. ಪೋಲರ ವಾರ್ಸಾಪಟ್ಟಣವು ಇನ್ನೇನು ಶತ್ರುಗಳ ವಶವಾಯಿತು ಎನ್ನುವಮಟ್ಟಿಗೆ ಬಂದಿದ್ದಿತಷ್ಟೆ. ಈಚೆಗೆ ಆದ ಮಹಾಯುದ್ಧಗಳಲ್ಲಿ ಪೋಲರಿಗೆ ಜಯದ ಮೇಲೆ ಜಯಗಳಾಗಿ ಶತ್ರುಗಳು ಬಹುದೂರ ಹಿಮ್ಮೆಟ್ಟಿಹೋದರು. ಅವರ ಕಡೆಯೂ ಲಕ್ಷದಷ್ಟು ಸೈನಿಕರು ಪೋಲರಿಗೆ ಸೆರೆಸಿಕ್ಕಿಹೋದರು. ರಷ್ಯನರಲ್ಲಿದ್ದ ಒಟ್ಟು ಬಂದೂಕುಗಳಲ್ಲಿ ⅓ ಭಾಗವೂ ೩೦೦ ಫಿರಂಗಿಗಳೂ, ವಿಶೇಷವಾಗಿ ಇತರ ಯುದ್ಧ ಸಾಮಗ್ರಿಗಳೂ ಸಿಕ್ಕಿಹೋಗಿರುವುವು. ಅಲ್ಲದೆ ಪೂರ್ವ ಪ್ರಷ್ಯಾದಲ್ಲಿ ನುಗ್ಗಿದ ರಷ್ಯನ್ ಬಲದಲ್ಲಿ ೬೦ ಸಾವಿರದಷ್ಟು ಮಂದಿಯನ್ನು ಜರ್ಮನರು ಹಿಡಿದು ನಿರಾಯುಧರನ್ನಾಗಿ ಮಾಡಿರುವರು. ರಷ್ಯನರು ಈಗ ಪೋಲಂಡಿನ ಎಲ್ಲೆಯನ್ನೆಲ್ಲಾ ಬಿಟ್ಟು ತಮ್ಮ ದೇಶದೊಳಕ್ಕೆ ಚೆಲ್ಲಾಪಿಲ್ಲಿಯಾಗಿ ಓಡಿಹೋಗುತ್ತಿದ್ದಾರೆ. ಉತ್ತರಭಾಗದಲ್ಲಿ ಪೋಲರು ೪ ದಿನಗಳಲ್ಲಿ ೧೨೫ ಮೈಲಿಗಳ ಅಗಲಕ್ಕೆ ೭೫ ಮೈಲಿಗಳಷ್ಟು ದೂರ ಶತ್ರುಗಳನ್ನು ಅಟ್ಟಿಕೊಂಡು ಓಡಿಸಿರುವರು. ಒಟ್ಟು ೮ ದಿನಗಳಲ್ಲಿ ೧೨೦ ಮೈಲಿಗಳು ಮುಂದಕ್ಕೆ ಸಾಗಿರುವರು. ದಕ್ಷಿಣದಲ್ಲೂ ರಷ್ಯನರಿಗೆ ತುಂಬಾ ಪರಾಜಯವಾಗಿರುವುದು. ಪೋಲಂಡಿನಲ್ಲಿ ಬೋಲ್ಷೆವಿಕ್ಕರ ೨೧ ಪಟಾಲಮ್ಮುಗಳಿದ್ದುವು. ಅವುಗಳಲ್ಲಿ ೬ ಪೂರ್ಣವಾಗಿ ಹಾಳಾದುವು; ೮ ರಲ್ಲಿ ಕೆಲಕೆಲಭಾಗ ನಾಶವಾಯಿತು; ಇನ್ನುಳಿದವುಗಳಲ್ಲಿ ಬಹಳ ಮಂದಿ ಸತ್ತಿರುವರು. ಫ್ರೆಂಚರು ಪೋಲರಿಗೆ ತಮ್ಮ ಸೇನಾಪತಿಗಳ ಸಹಾಯವನ್ನು ಕೊಟ್ಟು ನಡೆಯಿಸಿದುದರಿಂದಲೇ ಅವರಿಗೆ ಇಂಥ ಜಯಪರಿಣಾಮವುಂಟಾಯಿತೆಂದು ಪ್ರಕಟವಾಗಿದೆ. ತಮ್ಮವರಿಗೆ ಹೀಗೆ ಆದ ವಿಪರೀತವಾದ ಅಪಜಯವನ್ನು ನೋಡಿ ದಿಗಿಲುಬಿದ್ದು, ಲಂಡನ್ನಿನಲ್ಲಿದ್ದ ಕಾಮಿನಾ[illegible]ರವರು ರಷ್ಯಾ ದೇಶಕ್ಕೆ ಹೋಗಿ, ಪುನಃ ದೊಡ್ಡ ಸೈನ್ಯವನ್ನು ಕೂಡಿಸುತ್ತಿದ್ದಾರಂತೆ. ಕೂಲಿಕಾರರನ್ನೆಲ್ಲಾ ಕೆಲಸಬಿಡಿಸಿ ಸೈನ್ಯಕ್ಕೆ ಸೇರಿಸಿ ಪೋಲರ ಮೇಲೆ ಬೀಳಿಸಿ ಮತ್ತೆ ಇವರನ್ನು ಸೋಲಿಸಬೇಕೆಂದು ದೊಡ್ಡ ಪ್ರಯತ್ನವನ್ನು ಬೋಲ್ಷೆವಿಕ್ಕರು ಮಾಡುತ್ತಿರುವ ಹಾಗೆ ವರ್ತಮಾನಗಳು ಬಂದಿದ್ದುವು. ಆದ್ದರಿಂದ ಬೋಲ್ಷೆವಿಕ್ಕರು ಪೋಲರೊಡನೆ ಸಂಧಿಮಾಡಿಕೊಳ್ಳಲು ಒಪ್ಪುವುದನ್ನು ನೋಡಿದರೆ ಅದರ ಕೈ ಸ್ವಲ್ಪ ಹಿಂದಾಯಿತೆಂತಲೇ ಹೇಳಬೇಕಾಗುತ್ತದೆ. ರಿಗಾ ಪಟ್ಟಣದಲ್ಲಿ ಅವರವರಿಗೆ ಸಂಧಿಯಾಗುವುದರಲ್ಲಿದೆ.

ಐರ್ಲೆಂಡಿನ ಸ್ಥಿತಿ.

ಅಲ್ಲಿಯ ಘೋರತರ ಪರಿತಾಪಕರ ಸ್ಥಿತಿಯು ದಿನದಿನಕ್ಕೆ ವಿಷಮವಾಗುತ್ತಲೇ ಇದೆ. ಸೆರೆಗೆ ಹಾಕಿಕೊಂಡಿರುವ ಕಾರ್ಕ್ ಪಟ್ಟಣದ ಮೇಯರ್‌ರವರು (ಸಿನ್‌ಫೀನರ ಒಬ್ಬ ಪ್ರಮುಖ) ದಕ್ಷಿಣ ವಾರ್ಕ್ ಕಾರಾಗೃಹದಲ್ಲಿ ೨೫ ದಿನಗಳಿಂದಲೂ ಆಹಾರವನ್ನು ತೆಗೆದುಕೊಳ್ಳದೆ ಉಪವಾಸವಾಗಿರುವಕಾರಣ, ಇಂದು ನಾಳೆ ಸಾಯುವ ಸ್ಥಿತಿಯಲ್ಲಿದ್ದಾರೆ. ಇವರಂತೆ ಇನ್ನೂ ೧೦-೧೨ ಮಂದಿ ಬಂದಿಗಳು ೨೦ ದಿನಗಳಿಂದಲೂ ಉಪವಾಸದಲ್ಲಿದ್ದಾರೆ. ಮೇಯರನ್ನು ಬಿಡಿಸಿಕೊಡಬೇಕೆಂದು ಅವರ ಪಕ್ಷೀಯರು ಸಾರ್ವಭೌಮರವರಿಗೆ ಬಿನ್ನೈಸಿಕೊಂಡಿದ್ದ ಪತ್ರದ ವಿಷಯದಲ್ಲಿ-ಅವರು ಮಂತ್ರಿಮಂಡಲದವರ ಅಭಿಪ್ರಾಯವನ್ನು ಕೇಳಲಾಗಿ, ಬಿಟ್ಟುಕೊಡಲಾಗುವುದಿಲ್ಲವೆಂದು ಅವರುಗಳು ಅಭಿಪ್ರಾಯಪಟ್ಟರು. ಒಬ್ಬಾನೊಬ್ಬ ವಿಷಯದಲ್ಲಿ ಮಂತ್ರಿಗಳ ಅಭಿಪ್ರಾಯವನ್ನು ಮೀರಿ ವಿರುದ್ಧವಾಗಿ ಉತ್ತರಕೊಡುವುದು ಸರಿಯಲ್ಲವೆಂದು ಚಕ್ರವರ್ತಿಯವರು ಉತ್ತರಕೊಡಿಸಿಬಿಟ್ಟರು. ಬೆಲ್ಫಾಸ್ಟ್ ಮೊದಲಾದ ನಗರಗಳಲ್ಲಿ ಸಿನ್‌ಫೀನರುಗಳಿಗೂ ಪ್ರಭುತ್ವ ಪಕ್ಷದ ಸೈನಿಕರಿಗೂ ನಿರಂತರ ಕದನಗಳಾಗುತ್ತಿವೆ; ಎಷ್ಟೋ ಮರಣಗಳು ಸಂಭವಿಸುತ್ತಿವೆ. ವಿಪ್ಲವಕಾರರು ಅನೇಕ ಮಂದಿ ಪೋಲೀಸರನ್ನು ಕೊಂದರು; ಎಷ್ಟೋ ಸರಕಾರಿ ಕಟ್ಟಡಗಳನ್ನೂ ಗೃಹಸ್ಥರ ಮನೆಗಳನ್ನೂ ಕೆಡಹಿ ಬೆಂಕಿಯಿಕ್ಕಿ ಸುಡುತ್ತಿರುವರು. ಬೆಲ್ಫಾಸ್ಟ್ ನಗರದಲ್ಲಿ ಬೀದಿಗಳೆಲ್ಲಾ ಸೈನಿಕರ ಕಾವಲಿನಲ್ಲಿರುವುವು; ಫಿರಂಗಿ ಬಂಡಿಗಳು ಸಿದ್ಧವಾಗಿ ನಿಂತಿರುವುವು. ಎಲ್ಲೆಲ್ಲೂ ಅಶಾಂತಿ ಹೆಚ್ಚುತ್ತಿದೆ. ಪ್ರಭುತ್ವದವರು ಸೈನಿಕ ಬಲವನ್ನು ಹೆಚ್ಚಿಸಿ ದೌರ್ಜನ್ಯವನ್ನು ಅಣಗಿಸಬೇಕೆಂಬ ಸಂಕಲ್ಪವನ್ನು ಬಿಟ್ಟಿಲ್ಲ.

ಒಳದೇಶದ ವೃತ್ತಾಂತಗಳು.

ಸರ್ದಾರ್ ಕಾಂತರಾಜ ಅರಸಿನವರು ಬರುವ ತಾ|| ೧೩ ರಲ್ಲಿ ರಜಾವನ್ನು ಮುಗಿಸಿಕೊಂಡು ದಿವಾನ್‌ಗಿರಿಯನ್ನು ವಹಿಸಿಕೊಳ್ಳುವವರಾಗಿದ್ದಾರೆಂದು ಕೇಳುತ್ತೇವೆ.

ಮಹಾಮಾತೃಶ್ರೀಯವರೆ ಮೊದಲಾದ ರಾಣಿವಾಸದವರು ಕಳೆದ ಬುಧವಾರ ರಾತ್ರಿಯ ಟ್ರೇನಿನಲ್ಲಿ ಬೆಂಗಳೂರಿಂದ ಹೊರಟು ಗುರುವಾರ ಬೆಳಗ್ಗೆ ರಾಜಧಾನಿಯನ್ನು ಸೇರಿದರು.

ರಾಜಧಾನಿಯಲ್ಲಿ ಪ್ಲೇಗು ಸ್ವಲ್ಪ ತಲೆಯೆತ್ತುವಂತಿದೆ. ಒಂದೊಂದು ದಿನ ಪ್ಲೇಗಿನಿಂದ ೪-೫ ಮರಣಗಳಾಗಲುಪಕ್ರಮಿಸಿದೆ. ಡಿಸ್ಟ್ರಿಕ್ಟಿನ ಹಲವು ಗ್ರಾಮಗಳಲ್ಲಿ ಇದು ವ್ಯಾಪಿಸಿರುತ್ತದೆ.

ಹೊಸದಾಗಿ ಏರ್ಪಡಿಸಿದ ಅಲೋಯನ್ಸ್ ಕ್ರಮವನ್ನು ರಾಜಧಾನಿಯ ಮ್ಯುನಿಸಿಪಲ್ ನೌಕರರಿಗೂ ಅನ್ವಯಿಸಬಹುದೆಂಬ ಗೌರ್ನಮೆಂಟಿನ ಅಪ್ಪಣೆಯಂತೆ ಕಳೆದ ಜುಲೈಯಾರಭ್ಯ ನಡೆಯಿಸಲು ಮ್ಯುನಿಸಿಪಲ್ ಕೌನ್ಸಿಲರವರು ಒಪ್ಪಿದ್ದಾರೆ.

ಬರುವ ಅಕ್ಟೋಬರ್ ತಾ|| ೧ ರಿಂದ ನಮ್ಮ ದೇಶದ ಹೊಗೆಬಂಡಿಗಳ ಬಾಡಿಗೆಯು ಮೈಲಿಗೆ ಅರ್ಧಕಾಸಿನಷ್ಟು ಹೆಚ್ಚಿಸಲ್ಪಡುತ್ತದೆ. ಎಂದರೆ ಮೇಲ್ ಬಂಡಿಗೆ ೩ ನೆ ತರಗತಿಯಲ್ಲಿ ಮೈಲಿ ೧ ಕ್ಕೆ ೩|| ಪೈ. ಇತರ ಬಂಡಿಗಳಲ್ಲಿ ಮೈಲಿ ೧ ಕ್ಕೆ ೩ ಪೈ. ಯಂತೆ.

ಕೌನ್ಸಿಲರ್ ಮಿ|| ಮೀರ್ ಹಂಜಾಹುಸೇನ್ ಸಾಹೇಬರವರ ಶತವೃದ್ಧಮಾತೆಯವರು ಕಳೆದ ತಾ|| ೩ ರಲ್ಲಿ ರಾಜಧಾನಿಯಲ್ಲಿರುವ ಅವರ ಗೃಹದಲ್ಲಿ ಕಾಲವಾದರು. ಅಂತ್ಯಕಾಲಕ್ಕೆ ಮಿ|| ಹಂಜಾಹುಸೇನ್‌ರವರು ಬೆಂಗಳೂರಿನಿಂದ ದಯಮಾಡಿಸಿ ಉತ್ತರಕ್ರಿಯೆಗಳನ್ನು ಯಥಾವಿಧಿಯಾಗಿ ಜರುಗಿಸಿದರು.

ಮೆ|| ಎ. ಆರ್. ಬಾನರ್ಜಿಯವರು ಸಿಮ್ಲಾ ಪಟ್ಟಣಕ್ಕೆ ವೈಸ್ರಾಯರ ದರ್ಶನಕ್ಕಾಗಿ ಕಳೆದ ಮಂಗಳವಾರ ರಾತ್ರಿ ಪ್ರಯಾಣಮಾಡಿದರು. ಬ್ರಿಟಿಷ್ ರೆಸಿಡೆಂಟರೂ ಕೂಡ ಹೋಗಿರುವರು. ಇವರು ಹೋಗಿರುವ ರಾಜ್ಯಕಾರ್ಯದಲ್ಲಿ ಕನ್ನಂಬಾಡಿಯ ಅಣೆಕಟ್ಟಿನ ವಿಷಯವೇ ಮುಖ್ಯವಾದುದೆಂದು ಪ್ರಕಟವಾಗಿದೆ.

ನಮ್ಮ ಸರ್ಕಾರದವರು ತೆಗೆಯಲಿಕ್ಕೆ ಉದ್ದೇಶಿಸಿರುವ ೧ ಕೋಟಿ ಸಾಲಕ್ಕೆ ಇದುವರೆಗೆ ೬೦ ಲಕ್ಷ ರೂ. ಗಳು ದೊರೆತಿರುವುವಂತೆ. ಮೈಸೂರು ದೇಶದ ಹೊರಗಣ ಬ್ರಿಟಿಷ್ ಸೀಮೆಯವರೂ ಈ ಸಾಲದ ಪತ್ರವನ್ನು ಕೊಂಡುಕೊಳ್ಳಬಹುದೆಂದು ಈಗ ಏರ್ಪಡಿಸಿರುತ್ತಾರೆ. ಆ ಹಣಕ್ಕೆ ಅವರುಗಳಿಗೆ ಇಂಗ್ಲೀಷ್ ಖಜಾನೆಗಳಲ್ಲೇ ಬಡ್ಡಿಯು ಸಲ್ಲುವಂತೆಯೂ, ಆ ಬಡ್ಡಿ ಹಣದ ಮೇಲೆ ಆ ಸರ್ಕಾರದವರು ವರಮಾನದ ತೆರುಗೆಯನ್ನು ವಿಧಿಸದಂತೆಯೂ ಏರ್ಪಾಟು ಮಾಡಿಸಲಾಗಿದೆ.

ಈ ವರ್ಷ ಮೈಸೂರು ದೇಶದ ವಿದೇಶವಿದ್ಯಾರ್ಥಿವೇತನಗಳು ಈ ಕೆಳಗಣ ೫ ಮಂದಿಗಳಿಗೆ ಕೊಡಲ್ಪಟ್ಟಿವೆ. ಎ. ಸುಬ್ಬರಾವ್‌ರವರಿಗೆ ಭೂಗರ್ಭಶಾಸ್ತ್ರಾಭ್ಯಾಸಕ್ಕಾಗಿ, ಡಿ. ಎಸ್. ಅಣ್ಣಯ್ಯನವರಿಗೆ ಸಕ್ಕರೆಯ ಕೈಗಾರಿಕೆಯನ್ನು ಕಲಿಯಲು, ಎಲ್. ಎಸ್. ಸುಬ್ರಹ್ಮಣ್ಯಯ್ಯರಿಗೆ ಆರಣ್ಯಕ ವಿದ್ಯಾಭ್ಯಾಸಕ್ಕಾಗಿ. ಎ. ಎನ್. ರಾಘವಾಚಾರ್‌ಯವರಿಗೆ ಯಂತ್ರ ವಿದ್ಯಾಭ್ಯಾಸಕ್ಕಾಗಿ. ಸುಲ್ತಾನ್ ಮೊಹಿಯುದ್ದೀನರಿಗೆ ವಿದ್ಯಾಭ್ಯಾಸ ವಿಧಾನಶಿಕ್ಷಣಕ್ಕಾಗಿ. ಇವಲ್ಲದೆ ಅ|| ಸರ್ಜನ್ ಶೇಷಾಚಲಂ ಮೊದಲ್ಯಾರರಿಗೆ ಶಸ್ತ್ರಚಿಕಿತ್ಸಾಭ್ಯಾಸಕ್ಕಾಗಿಯೂ, ಇನ್ನೊಬ್ಬರಿಗೆ ರಸಾಯನಶಾಸ್ತ್ರಾಭ್ಯಾಸಕ್ಕಾಗಿಯೂ ಸಹ ೨ ವೇತನಗಳು ಕೊಡಲ್ಪಡುವುವು.

ಪತ್ರವ್ಯವಹಾರ.

೧೦ ನೆಯ ಶ್ರೀಮದ್ವೀರಶೈವ ಮಹಾಸಭೆ.

ಡಿಸೆಂಬರ್ ತಿಂಗಳು ಸಮೀಪಿಸಿತು. ಈ ಸಾರೆಯ ಮಹಾಸಭೆಯು ಎಲ್ಲಿ ಸೇರುವುದೋ ಇನ್ನೂ ಗೊತ್ತಾಗಿಲ್ಲ. ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯವರೂ ಮಹಾಸಭಾ ಚಿರಸ್ಥಾಯಿ ಫಂಡಿನವರೂ ಈ ವಿಷಯವಾಗಿ ಇನ್ನೂ ಪ್ರಯತ್ನಿಸಿದಂತೆ ತೋರುವುದಿಲ್ಲ. ಸಮಾಜದ ಪ್ರಮುಖರಿಂದ ಕೂಡಿದ ಈ ಕಮಿಟಿಗಳೇ ಈ ಪ್ರಕಾರ ನಿದ್ರಾವಸ್ಥೆಯಲ್ಲಿದ್ದರೆ ಗಾಢನಿದ್ರೆಯಲ್ಲಿರುವ ಈ ಸಮಾಜವನ್ನು ಎಚ್ಚರಗೊಳಿಸುವವರಾರು ? ಸಮಾಜದ ಮುಂದಾಳುಗಳೇ ತಮ್ಮ ಮೇಲಿರುವ ಈ ಕಾಲದ ಜವಾಬ್ದಾರಿಯನ್ನರಿತು ಸಕಾಲದಲ್ಲಿ ಕಾರ್ಯತತ್ಪರರಾಗದಿದ್ದರೆ ಆ ಸಮಾಜದ ಹೀನದೀನಸ್ಥಿತಿಗಳನ್ನು ನಿವಾರಣೆ ಮಾಡುವವರಾರು ? ಸಮಾಜೋದ್ಧಾರದ ಈ ಪವಿತ್ರಕಾರ್ಯಕ್ಕೆ ಅನೇಕ ಧನಿಕರು ಬೇಕಾದಷ್ಟು ದ್ರವ್ಯವನ್ನು ಕೊಟ್ಟರೂ ಕೂಡ ಸಮಾಜವನ್ನು ಸುಪಥಕ್ಕೆ ತೆಗೆದುಕೊಂಡುಹೋಗತಕ್ಕ ಆ ಸಮಾಜದ ವಿದ್ವಾಂಸರೇ ಈ ಪ್ರಕಾರ ಸಮಾಜದ ಕಾರ್ಯವನ್ನು ಮರೆತು ಸ್ವಕಾರ್ಯಧುರೀಣರಾಗಿಬಿಟ್ಟರೆ ಸಮಾಜದ ದುಸ್ಥಿತಿಯು ನಿವಾರಣೆಯಾಗುವುದೆಂದು ? ಇದು ಸಮಾಜದ ಪ್ರಮುಖರಿಗೆ ಭೂಷಣಪ್ರದವಾದುದೇ ? ಅಲ್ಲ ಅಲ್ಲ. ಈಗಲಾದರೂ ಈ ಉಭಯ ಕಮಿಟಿಯವರು ತಮ್ಮ ಕರ್ತವ್ಯವನ್ನು ಜಾಗ್ರತೆ ಮಾಡಿ ಸಮಾಜದವರ ಕೃತಜ್ಞತೆಗೆ ಪಾತ್ರರಾಗಬೇಕಾಗಿ ಪ್ರಾರ್ಥನೆ. ಸಮಾಜಬಂಧು.

ಕೊಣ್ಣೂರ ಕನ್ನಡ ಸಂಗೀತ ನಾಟಕ ಕಂಪೆನಿ.

ಕೊಣ್ಣೂರ ಕನ್ನಡ ಸಂಗೀತ ನಾಟಕಮಂಡಳಿಯವರು ತಮ್ಮ ಸುಪ್ರಸಿದ್ಧ ಮತ್ತು ಜನಮನೋರಂಜಕಗಳಾದ ಸೌಭದ್ರ, ದುರಾತ್ಮ ರಾವಣ, ಬಸವವಿಜಯ, ತುಕಾರಾಮ, ಮೃಚ್ಛಕಟಿಕ, ಶನಿಪ್ರಭಾವ ಮುಂತಾದ ನಾಟಕಗಳನ್ನು ಬೆಳಗಾಂವಿಯಲ್ಲಿ ತಾ|| ೫-೭-೧೯೩೦ ರಿಂದ ಪ್ರಾರಂಭ ಮಾಡಿ ವಿದ್ಯುಲ್ಲತೆಯ ದೀವಿಗೆಗಳಿಂದಲೂ, ಚಿತ್ರವಿಚಿತ್ರಗಳಾದ ಸೀನರಿ, ಪರದೆ, ಡ್ರೆಸ್ಸುಗಳಿಂದಲೂ, ಮಂಜುಳವಾದ ಗಾಯನ ದುರಂಧರರಿಂದಲೂ ತರತರದ ನಾಚುಗಳಿಂದಲೂ ಬೆಳಗಾಂವಿಯ ನಾಗರಿಕರ ಮನಸ್ಸನ್ನು ಆಹ್ಲಾದಪಡಿಸಿದರು ಪ್ರತಿ ನಾಟಕಕ್ಕೆ ಪ್ರೇಕ್ಷಕರ ದಟ್ಟಣೆಯು ಅವರ್ಣನೀಯವಾಗುತ್ತಿತ್ತು. ತಾ|| ೧೪-೮-೩೦ ನೆ ಶನಿವಾರ ರಾತ್ರಿ ಬೆಳಗಾಂವಿ ಜಿಲ್ಲೆಯವರ ವತಿಯಿಂದ ನಾಮದಾರ ದತ್ತಾತ್ರೇಯ ವೆಂಕಟೇಶಬೆಳವಿ ಮ|| ರಾ|| ಗಂಗಾಧರರಾವ್ ದೇಶಪಾಂಡೆ, ಪಂಡಿತ ರಾಯಪ್ಪ ಚಿಕ್ಕೋಡಿ ಇವರ ಭಾಷಣಗಳಾಗಿ ಖಾನ್ ಬಹದ್ದೂರ್ ಅವರ ದೇಶಿರ ನವರೋಜಿ, ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಲೋಕಲ್‌ಬೋರ್ಡು, ಮತ್ತು ಸುಪ್ರಸಿದ್ಧ ಗವಯಿ ಶಿ. ರಾ. ರಾ. ರಾಚಯ್ಯಾಸ್ವಾಮಿ ಹಿರೇಮಠ ಬೆಳವಿ ಇವರಿಗೆ ಅರ್ಪಿಸಿ "ಭಾರತಗಂಧರ್ವ" ಈ ಬಹುಮಾನದ ಪದವಿಯನ್ನು ಕೊಟ್ಟು ಕಂಪನಿಯವರನ್ನು ಗೌರವಿಸಿದರು ಅದರಂತೆ ತಾ|| ೧೬-೮-೩೦ನೆ ದಿವಸ ಮೃಚ್ಛಕಟಿಕ ನಾಟಕಪ್ರಯೋಗ ಮಾಡಿದಾಗ್ಗೆ ಕಣಬರಗಿ ಗ್ರಾಮದ ಪ್ರಸಿದ್ಧ ಸಾಹುಕಾರ ಬಂಡೋಪಂತ ಕುಲಕರ್ಣಿ ಇವರು ಒಂದು ಸುವರ್ಣದ ಪದಕವನ್ನು ಡಾಕ್ಟರ್ ಸವನೂರ ಎಲ್. ಎಂ. ಅಂಡ್ ಎಸ್. ಇವರ ಹಸ್ತದಿಂದ ಕಂಪನಿಯವರಿಗೆ ಕೊಟ್ಟು ಸುಪ್ರಸಿದ್ಧ ಮರಾಟಿ ಕಂಪನಿಗಳಲ್ಲಿ ಈ ಕಂಪನಿಯು ಎರಡನೆಯದಾಗಿಯೂ ಕನ್ನಡದಲ್ಲಿ ಮೊದಲನೆಯದಾಗಿಯೂ ಇರುವದೆಂದು ತಿಳಿಸಿದರು. ನಂತರ ಮೃಚ್ಛಕಟಿಕ ನಾಟಕವನ್ನು ಕನ್ನಡದಲ್ಲಿ ಮಾಡಿದ ಕವಿರತ್ನ ಮ|| ರಾ|| ಸಿದ್ಧಗಿರಿಯಪ್ಪಾ ರೇವಪ್ಪಾ ಸೊಬರದ ಕನ್ನಡ ಶಾಲೆಯ ಹೆಡ್ಮಾಸ್ತರ್ ಧಾರವಾಡ ಇವರಿಗೆ ಬಹುಮಾನಾರ್ಥವಾಗಿ ಒಂದು ಜರದ ಸೆಲ್ಲೆಯನ್ನು ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರು ಕೊಟ್ಟು, ಸದರೀ ಮಾಸ್ತರರು ಅನೇಕ ಕನ್ನಡ ಗ್ರಂಥಗಳನ್ನೂ ನಾಟಕಗಳನ್ನೂ ಬರೆದು ಕನ್ನಡ ಸೇವೆಯನ್ನು ಮನಮುಟ್ಟಿ ಮಾಡುತ್ತಿರುವದನ್ನು ಕೊಂಡಾಡಿದರು. ಸ್ವಾಮಿಗಳವರ ವ್ಯಾಖ್ಯಾನಕ್ಕೆ ಪ್ರೇಕ್ಷಕ ಜನರು ಆನಂದಭರಿತರಾಗಿ ಕರತಾಡನದಿಂದ ಆಗಾಗ್ಗೆ ಅವರನ್ನು ಶ್ಲಾಘಿಸಿದರು. ಇಷ್ಟಾದ ನಂತರ ಕನ್ನಡ ಕವಿರತ್ನ ಸೊಬರದ ಇವರು ಕೊಣ್ಣೂರ ಕಂಪೆನಿಯ ಚಾಲಕರ ಆಭಾರವನ್ನು ಮನ್ನಿಸಿದರು. ಅದರಂತೆ ಶನಿಪ್ರಭಾವ, ಸೌಭದ್ರ ನಾಟಕಗಳನ್ನು ಮಾಡಿದ ವೇ|| ರಾ|| ರಾ|| ವೆಂಕಟಾಚಾರ್ಯ ಮಂಡಿಗೆ ಇವರ ಬುದ್ಧಿಕೌಶಲ್ಯವನ್ನೂ ಕನ್ನಡಭಾಷಾಸೇವೆಯ ಬಗ್ಗೆ ಅವರಲ್ಲಿರುವ ಅಭಿಮಾನವನ್ನೂ ಸ್ವಾಮಿಗಳವರು ಸ್ವಲ್ಪದರಲ್ಲಿಯೇ ವರ್ಣಿಸಿ, ನಾಟಕಗಳಲ್ಲಿ ಬೇಕಾಗುವ ವಿಷಯಗಳನ್ನೂ, ಅದರಿಂದ ಜನರು ಕಲಿಯಬೇಕಾದ ರೀತಿಗಳನ್ನೂ ನೋಡಿದ ಸಂಗತಿಗಳನ್ನು ರೂಢಿಯಲ್ಲಿ ತಂದು ಧರ್ಮ ಜಾಗ್ರತೆ, ಈಶಸೇವೆ, ರಾಜನಿಷ್ಠತೆ, ಪರಸ್ಪರ ಸಹಾಯ, ದುಷ್ಟರಿಂದ ದೂರವಿರುವಿಕೆ, ಮುಂತಾದ ಮಹತ್ವದ ವಿಷಯಗಳ ಪ್ರತಿಪಾದನವನ್ನು ಬಹಳ ಸರಸವಾಗಿ ಮಾಡಿ ಜನರನ್ನು ಆನಂದಗೊಳಿಸಿದರು.

ಓರ್ವಪ್ರೇಕ್ಷಕ.

ಶ್ರೀ ಜಗದ್ಗುರು ಮುರಘರಾಜೇಂದ್ರ ಫ್ರೀ ಬೋರ್ಡಿಂಗ್, ಧಾರವಾಡ.

ಇಲ್ಲಿಯ ಫ್ರೀ ಬೋರ್ಡಿಂಗಿನ ಚೇರ್ಮನ್ನರು ಯಾವತ್ತು ವಿದ್ಯಾರ್ಥಿಗಳನ್ನು ಕರೆದುಕೊಂಡು ತಾರೀಖು ೧೩-೭-೩೦ ನೇ ದಿವಸ ಅಥಣಿ ಶ್ರೀ ಶಿವಯೋಗಿಗಳ ದರ್ಶನಕ್ಕೆ ಹೋಗಿದ್ದರು. ಮಾರನೇ ದಿವಸ ಮಠದಲ್ಲಿ ಸಭೆ ಗೂಡಿ, ಅಲ್ಲಿಯ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಉಪದೇಶ ರೂಪವಾಗಿ ಧರ್ಮ ಸಂಬಂಧ ವ್ಯಾಖ್ಯಾನಮಾಡಿದ್ದರು. ಆ ವೇಳೆ ಶ್ರೀ ಮೃತ್ಯುಂಜಯ ಸ್ವಾಮಿಗಳು ಈ ವರ್ಷ ಬೋರ್ಡಿಂಗಿನಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪಾಸಾದ ೧ ಹಿರೇಮಠ ಜ. ಎಸ್. ೨ ಸಾಲಿ ಎಸ್. ಜಿ. ೩ ದುಂದೂರ ಕೆ. ಬಿ. ಈ ಮೂರು ಜನ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೆ ೧೦ ರೂ. ಯಂತೆ, ೬ ನೇ ಇಯತ್ತೆಯಲ್ಲಿ ಪಾಸಾದ ೧೦ ಜನ ವಿದ್ಯಾರ್ಥಿಗಳಿಗೆ ೫ ರೂ. ಯಂತೆ, ಮತ್ತು ೫ ನೇ ಇಯತ್ತೆಯಲ್ಲಿ ಪಾಸಾದ ೩ ಜನ ವಿದ್ಯಾರ್ಥಿಗಳಿಗೆ ೨|| ರೂ. ಯಂತೆ ಶ್ರೀ ಶಿವಯೋಗಿಗಳ ಸನ್ನಿಧಿಯಲ್ಲಿ ಇನಾಮು ಕೊಟ್ಟರು. ತಾರೀಖು ೧೫-೭-೩೦ ನೇ ದಿವಸ ಸಾಯಂಕಾಲಕ್ಕೆ ಅಲ್ಲಿಯ ವೀರಶೈವ ಸಂಘದವರು, ವೀರಶೈವ ಸೋಷಿಯಲ್ ಲೈಬ್ರರಿಯಲ್ಲಿ ಧಾರವಾಡ ಫ್ರೀಬೋರ್ಡಿಂಗಿನ ಚೇರ್ಮನ್ನರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿಸಿದ್ದರು. ಸಭೆಗೆ ಊರೊಳಗಿನ ಯಾವತ್ತು ವೀರಶೈವ ಪ್ರಮುಖರು ಬಂದಿದ್ದರು. ಸಭೆಯಲ್ಲಿ ಧಾರವಾಡ ಫ್ರೀಬೋರ್ಡಿಂಗಿನ ವಿದ್ಯಾರ್ಥಿಗಳು ಮತ್ತು ಅಥಣಿ ತರುಣಸಂಘದ ಮೆಂಬರರು ವಿದ್ಯಾ, ಸಮಾಜಸೇವಾ, ಬೋರ್ಡಿಂಗುಗಳ ಅವಶ್ಯಕತೆ, ಮುಂತಾದ ವಿಷಯಗಳ ಮೇಲೆ ಅಸ್ಖಲಿತ ವಾಣಿಯಿಂದ ಭಾಷಣಮಾಡಿದರು. ಆ ವೇಳೆ ಅಲ್ಲಿಯ ಶಾಸ್ತ್ರಿಗಳೂ ಮತ್ತು ಕಾಶಿಯಿಂದ ಬಂದ ಶ್ರೀಮನ್ನಿರಂಜನ ಗುರುಸಿದ್ಧದೇವರು ಧಾರ್ಮಿಕ ಉನ್ನತಿಯ ಬಗ್ಗೆ ಎಲ್ಲರಲ್ಲಿಯೂ ಧರ್ಮಜಾಗ್ರತೆಯಾಗುವಂತೆ ತಮ್ಮ ಮಂಜುಳ ವಾಣಿಯಿಂದ ಜನರ ಮನಸ್ಸನ್ನು ಆನಂದಗೊಳಿಸಿದರು. ಇಷ್ಟಾದ ಮೇಲೆ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಸ್ವಾಮಿಗಳ ಆಶೀರ್ವಾದ ಪೂರ್ವಕ ಭಾಷಣವಾಯಿತು. ಅನಂತರ ಅಧ್ಯಕ್ಷರು ಸಮಾರೋಪಭಾಷಣ ಮಾಡಿದನಂತರ ಅಲ್ಲಿ ಸ್ಥಾಪಿಸಲ್ಪಡುವ ಫ್ರೀ ಬೋರ್ಡಿಂಗಿಗೆ ಧಾರವಾಡ ಬೋರ್ಡಿಂಗ್ ಕಮಿಟಿಯ ವತಿಯಿಂದ ೫೧ ರೂ. ಕೊಟ್ಟರು. ಇಷ್ಟಾದನಂತರ ಅಂದಿನ ದಿವಸದ ಸಭೆಯ ಕೆಲಸವು ಮುಗಿಯಿತು. ತಾರೀಖು ೧೬-೭-೩೦ ನೇ ದಿವಸ ಪುನಃ ಅದೇ ಸ್ಥಳದಲ್ಲಿ ವೆ|| ಪಟ್ಟದದೇವರು ಕೆಲಸಂಗಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಲ್ಲಿ ಸ್ಥಾಪಿಸಲ್ಪಡುವ ಫ್ರೀ ಬೋರ್ಡಿಂಗಿಗೆ ಅಧ್ಯಕ್ಷರು ೫೧ ರೂ. ವಾಗ್ದಾನ ಮಾಡಿದರು. ತಾರೀಖು ೧೩-೭-೩೦ ನೇ ದಿವಸ ಯಾವತ್ತೂ ವಿದ್ಯಾರ್ಥಿಗಳು ಮಹಾ ತಪಸ್ವಿಗಳಿಂದ ಅಷ್ಟಾವರಣ ಆಶೀರ್ವಾದ ಹೊಂದಿ ಧಾರವಾಡಕ್ಕೆ ಸುಖರೂಪವಾಗಿ ಬಂದು ಮುಟ್ಟಿದರು.

ಅಯ್ಯಾ ವೀರಶೈವ ಬಾಂಧವರೇ ವಿದ್ಯೆಯಲ್ಲಿ ದಕ್ಷಿಣ ಕಾಶಿಯಂತಿರುವ ಮತ್ತು ಕರ್ನಾಟಕ ಪ್ರಾಂತಕ್ಕೆ ವಿದ್ಯೆಯಲ್ಲಿ ಕೇಂದ್ರಸ್ಥಾನವಾಗಿರುವ ಧಾರವಾಡದಲ್ಲಿ ಇಂಥ ಫ್ರೀ ಬೋರ್ಡಿಂಗಿನ ಅವಶ್ಯಕತೆಯು ಎಷ್ಟು ಇರುತ್ತದೆಂಬದನ್ನು ಬೇರೆ ಹೇಳುವ ಕಾರಣವಿಲ್ಲ. ಈಗ ಸದ್ಯಕ್ಕೆ ಈ ಬೋರ್ಡಿಂಗಿನಲ್ಲಿ ೬ ಜನ ಕಾಲೇಜು ವಿದ್ಯಾರ್ಥಿಗಳೂ, ೧೫ ಜನ ಮ್ಯಾಟ್ರಿಕ್‌ಕ್ಲಾಸಿನ ವಿದ್ಯಾರ್ಥಿಗಳೂ, ೬ ನೇ ಕ್ಲಾಸಿನ ೬ ಜನರೂ, ೫ ನೇ ಕ್ಲಾಸಿನ ೪ ಜನರೂ ಮತ್ತು ೩-೪ ಕ್ಲಾಸಿನ ೪ ಜನ ವಿದ್ಯಾರ್ಥಿಗಳೂ ಅಂತು ೩೫ ಜನ ವಿದ್ಯಾರ್ಥಿಗಳಿರುವರು. ಈಗ ೩ ವರ್ಷದ ಲಾಗಾಯಿತು ನಡೆದು ಬಂದಿರುವ ಈ ಸಂಸ್ಥೆಗೆ ದೊಡ್ಡ ದೊಡ್ಡ ಮಹನೀಯರು ವರ್ಗಣೀ ರೂಪದಿಂದ ಸಹಾಯ ಮಾಡುತ್ತ ಬಂದಿರುವರು. ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಸ್ವಾಮಿಗಳು ಕೈಕೊಂಡಿರುವ ಈ ಮಹಾಕಾರ್ಯಕ್ಕೆ ಯಾವತ್ತು ವೀರಶೈವ ಬಾಂಧವರು ತಮ್ಮ ತನು, ಮನ, ಧನದಿಂದ ವೀರಶೈವ ತರುಣರಿಗೆ ವಿದ್ಯಾಭಿವೃದ್ಧಿ ಯಾಗಲಿಕ್ಕೆ ಸಹಾಯಮಾಡಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ ಹೊಂದಬೇಕೆಂದು ಇಚ್ಛಿಸುವ.

ನೀಲಕಂಠಪ್ಪ ಗುರುಸಿದ್ಧಪ್ಪ.

ವಿಜಯವೋ-ಅಪಜಯವೋ ?

ಸುಳ್ಳಿನ ಸುಗ್ಗಿ.

ಡಾಂಭಿಕಸ್ವರಾಜ್ಯವಾದಿಗಳೂ ಅವಿಚಾರದ ಬಿರುಗಾಳಿಯೂ.

ವಿಜಯಕಾರರು ತಾ|| ೨೪ ನೆ ಆಗಸ್ಟಿನ ತಮ್ಮ ಪತ್ರದಲ್ಲಿ "ಕಂಬಳಿಯವರ ಕುಹಕತನವು" ಎಂಬ ಲೇಖವನ್ನು ಪ್ರಕಟಿಸಿರುತ್ತಾರೆ. ಆ ಲೇಖವು ಅಸತ್ಯವಿಧಾನಗಳಿಂದ ತುಂಬಿದ್ದೂ, ಅವಿಚಾರದ್ದೂ, ಕಿಡಿಗೇಡಿತನದ್ದೂ ಇರುತ್ತದೆ. ವಿಜಯಕಾರರೇ ! ಅರ್ಥದ ಅನರ್ಥ ಮಾಡಿ ಬರೆಯುವುದರಲ್ಲಿಯೂ, ಪ್ರಸಿದ್ಧಿಸುವುದರಲ್ಲಿಯೂ ನಿಮ್ಮ ಜನರಿಗಿರುವ ಜಾಣ್ಮೆಯನ್ನು ನೋಡಿ ಎಲ್ಲರೂ ತಲೆದೂಗಿದರು. ಸುಳ್ಳು ಹೇಳುವುದರಲ್ಲಿಯೂ, ಬರೆಯುವುದರಲ್ಲಿಯೂ, ಮತ್ತು ಪ್ರಸಿದ್ಧಿಸುವುದರಲ್ಲಿಯೂ ನಾವೇಲು ನೀವೇಲು ಎಂದು ಉಗ್ರವಾದಿಗಳು ಮೇಲಾಡುತ್ತಿರುವುದು ಎಲ್ಲರಿಗೂ ಗೊತ್ತಿದ್ದ ಮಾತೇ. ಅದರಲ್ಲಿ ವಿಜಯದ ತಾ|| ೨೪ ನೆ ಆಗಸ್ಟಿನ ಪತ್ರದಲ್ಲಿ "ಕಂಬಳಿಯವರ ಕುಹಕತನ" ಎಂಬ ಲೇಖವನ್ನು ಬರೆದ ಮಹಾಶಯರು ಮೇಲಾಟಗರಲ್ಲಿ ಮೊದಲನೇ ನಂಬರು ಬಂದ ಬಗ್ಗೆ ಗದಗಿನ ಆ ಹೊತ್ತಿನ ಸಭೆಯಲ್ಲಿ ಹಾಜರ್ ಇದ್ದವರು ಅವರ ಬುದ್ಧಿಗೆ ಮೆಚ್ಚಿ "ಹೆಚ್ಚಿನ ಸುಳ್ಳ" ನೆಂಬ ಬಹುಮಾನದ ಬಿರುದು ಕೊಟ್ಟರು. ಧನ್ಯ ! ಲೇಖಕ ಮಹಾಶಯನೇ, ನೀನೇ ಧನ್ಯ ! ಕರ್ನಾಟಕ ಮಾತೆಯೇ ನೋಡು, ನಿನ್ನಲ್ಲಿ ಎಂಥ ದಿವ್ಯ ರತ್ನಗಳು ಹೊರಬೀಳುತ್ತಿರುವವು ! ಅಂದ ಮೇಲೆ ನಿನಗೇನು ಕಡಿಮೆ ? ವಾಚಕರ ಅವಗಾಹನೆಗಾಗಿ ಸಭೆಯ ಸ್ವಲ್ಪ ನಿಜವೃತ್ತಾಂತವನ್ನು ಕೊಡುವೆನು. ತಾ|| ೧೯ ನೆ ಆಗಸ್ಟ ದಿನ ಎಲ್. ಎಲ್. ಬಿ. ವಕೀಲರಲ್ಲದಂಥ ಮಿ|| ಕುರ್ತಕೋಟಿ ಇವರ ಅಧ್ಯಕ್ಷತೆಯ ಕೆಳಗೆ ಬ್ಯಾರಿಸ್ಟರ ಬ್ಯಾಪ್ಟಿಸ್ತಾ ಇವರ ವ್ಯಾಖ್ಯಾನದ ಸಲುವಾಗಿ ಮಹಾಲಕ್ಷ್ಮೀ ಥಿಯೇಟರದಲ್ಲಿ ಸಭೆ ಕೂಡಿತ್ತು. ಸಭೆಗೆ ಜೋಶಿ ಕರಿಗುದರಿ ಮೊದಲಾದವರು ಬಂದಿದ್ದರು. ೧೦-೧೫ ಜನ ಲಿಂಗಾಯತರ ಹೊರತಾಗಿ ಸಭೆಯಲ್ಲಿ ಬ್ರಾಹ್ಮಣರೇ ವಿಶೇಷ ತುಂಬಿದ್ದರು. ಅಜಮಾಸ ೩೦೦-೪೦೦ ಜನರಾಗಬಹುದು. ಎಲ್ಲಕ್ಕೂ ಮೊದಲು ಡಾಕ್ಟರ್ ವೆಂಕೋಬರಾವ್ ಹುಯಿಲಗೋಳ ಇವರು ಬ್ಯಾರಿಸ್ಟರ್ ಸಾಹೇಬರ ಪರಿಚಯವನ್ನು ಕೆಳಗೆ ಬರೆದಂತೆ ಮಾಡಿಕೊಟ್ಟರು. "ಲಿಂಗಾಯತರಿಗೂ ಬ್ರಾಹ್ಮಣರಿಗೂ ತ್ರಿಯಂಬಕೇಶ್ವರ ದೇವಸ್ಥಾನದ ಸಲುವಾಗಿ ನಡೆದ ವ್ಯಾಜ್ಯದಲ್ಲಿ ಬ್ರಾಹ್ಮಣರ ಪಕ್ಷಕ್ಕೆ ಬ್ರಾಹ್ಮಣರಿಂದ ಆರಿಸಿ ಕಳುಹಲ್ಪಟ್ಟ ಬ್ಯಾಪ್ಟಿಸ್ತಾ ಇವರು" ಹೇಗಿದೆ ಪರಿಚಯ ಮಾಡಿಕೊಡುವ ಪದ್ಧತಿಯು? ಆ ಮೇಲೆ ಡಾಕ್ಟರು ಹೇಳಿದಂತೆ ಬ್ರಾಹ್ಮಣ ಪಕ್ಷಾಭಿಮಾನಿಯಾದ ಬ್ಯಾರಿಸ್ಟರ್ ಬ್ಯಾಪ್ಟಿಸ್ತಾ ಇವರ ವ್ಯಾಖ್ಯಾನವು ಇಂಗ್ಲೀಷಿನಲ್ಲಿ ಆಯಿತು. ಅದನ್ನು ಕನ್ನಡದಲ್ಲಿ ಹೇಳಲಿಕ್ಕೆ ಮಿ|| ಜೋಶಿ ಇವರಿಗೆ ಅಧ್ಯಕ್ಷರು ಅಪ್ಪಣೆ ಕೊಟ್ಟರು. "ಯೇನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋಭವ" ಎಂಬಂತೆ ಯಾವ ರೀತಿಯಿಂದಾದರೂ ಮುಂದೆ ಬರಲಿಕ್ಕೆ ಹಾತೊರೆಯುವ ಜೋಶಿಯವರು ಹೇಳಿದಷ್ಟು ಮಾಡದೆ ತಮ್ಮ ವಕೀಲಿಯ ಪಾಂಡಿತ್ಯವನ್ನು ಬೆರಸಿ ಕೆಳ ಬರೆದಂತೆ ಹೇಳಲುಪಕ್ರಮಿಸಿದರು.

ತಿಲಕ ಗುಣಾನುವಾದವನ್ನು ಒಂದೆರಡು ಮಾತಿನಲ್ಲಿ ಮಾಡಿ ಮುಂ ಕೌನ್ಸಿಲ ವಿಷಯಕ್ಕೆ ಓಡಿದರು. ಅವರು ಅಂದದ್ದು—ನಾವು ಈ ಸಾ ಯ ಚುನಾವಣೆಯಲ್ಲಿ ಬ್ರಾಹ್ಮಣೇತರರಿಗೆ ಮತ ಕೊಟ್ಟು ಅವರನ್ನೇ ನಾವಣೆಯಲ್ಲಿ ಆರಿಸಿಬರುವಂತೆ ಮಾಡಬೇಕೆಂದು ಧಾರವಾಡದ ಸಭೆಯ ಠರಾವು ಮಾಡಿದ್ದೆವು. ಮತ್ತು ಶಿವಮೂರ್ತಿಗಳಾದ ಹೊನ್ನಾಪುರಮಠ ರನ್ನು ನಾವೇ ಉಮೇದುವಾರರಾಗಿ ನಿಲ್ಲಿಸಿದ್ದೆವು. ಆದರೆ ಹುಬ್ಬಳ್ಳಿಯ ಬ್ರಾಹ್ಮಣೇತರರ ಪರಿಷತ್ತು ಕೂಡಿದ್ದರಿಂದ ಬ್ರಾಹ್ಮಣರು ನಿಂತೇ ತೀರ ಕಾಯಿತು. ಈಗಾದರೂ ಬ್ರಾಹ್ಮಣೇತರರು ಮತ್ತೊಂದು ಸಭೆಗೂಡಿಸಿ ಬ್ಬಳ್ಳಿಯಲ್ಲಿ ಪಾಸಾದ ಠರಾವನ್ನು ನಿಷೇಧಿಸಿದರೆ ಈಗ ನಿಂತ ಮಿ|| ಕರಿಗ ರಿ ಮೊದಲಾದವರು ಆತ್ಮ ಉಮೇದವಾರಿಯನ್ನು ಫರತ ತಕ್ಕೊಳ್ಳ ತಯಾರ್ ಇರುವರೆಂದೂ, ಇದರಂತೆ ಮಾಡಿದರೆ ಎಲ್ಲ ಬ್ರಾಹ್ಮಣ ಒಪ್ಪುವರೆಂದೂ, ಒಂದು ಹುಸಿಗುಂಡು ಹಾರಿಸಿದರು. ನೋಡಿದಿರಾ ಸೋಗಲಾಡಿತನವನ್ನು ? ಆಗ್ಗೆ ಅಲ್ಲಿ ಕೂಡಿದ ಎಲ್ಲ ಬ್ರಾಹ್ಮಣರೂ ಹೊ ಹೀಗೆ ಮಾಡಿದರೆ ಎಲ್ಲರಿಗೂ ಒಪ್ಪಿಗೆ, ಒಪ್ಪಿಗೆಯೆಂದು ತಾಳಕ್ಕೆ ಸರಿಯಾಗಿ ಕುಣಿಸಿದರು. ಆ ನೋಟವು ಬಹು ಪ್ರೇಕ್ಷಣೀಯವಾಗಿತ್ತು. ತಮ್ಮ ಯನ್ನು ಬೇಯಿಸಿಕೊಳ್ಳಲಿಕ್ಕೆ ಉಪ್ಪು ಕಾರ ಹಚ್ಚಿ ಇಲ್ಲದ್ದನ್ನು ಹೇಳಿ ರನ್ನು ಮೋಸಗೊಳಿಸುವ ಇವರ ಕುಹಕತನವನ್ನು ನೋಡಿ, ಮಿ|| ಕೆ ಇವರು ಕೆಲವು ಪ್ರಶ್ನೆಗಳನ್ನು ನಿಮಗೆ ಕೇಳತಕ್ಕದ್ದಿದೆ ಎಂದು ಎದ್ದು ರು. ಇವರು ಹೇಳುವದೊಂದೇ ತಡ ತಮ್ಮ ಹುರುಡೆಲ್ಲ ಹೊರಬೀ ದೆಂದು ತಿಳಿದು, ಕೆಲವು ಹುಂಬರು ಗೊಂದಲವನ್ನು ಎಬ್ಬಿಸಿದರು. ವಾದಿಗಳ ಸ್ವಭಾವವೇ ಅಂಥಾದ್ದು. ಪೋಲೀಸ್ ಅಧಿಕಾರಿಗಳಿಂದ ತಕ್ಕ ಭಾವನೆ ಹೊಂದಿ ಸುಮ್ಮನಾದರು. ಆ ಮೇಲೆ ಕೋಟಿ ಇವರು ಕೆಳಗೆ ದಂತೆ ಪ್ರಶ್ನೆಮಾಡಿದರು. ಮಿ|| ಜೋಷಿ ಇವರು ಬ್ರಾಹ್ಮಣೇತರರಿಗೇ ಕೊಟ್ಟು ಅವರನ್ನೇ ಚುನಾಯಿಸಬೇಕೆಂದು ಧಾರವಾಡದ ಕಾಂಗ್ರೆಸ ನಲ್ಲಿ ಠರಾವು ಮಾಡಿದ್ದೆವು ಎಂದು ಮೊದಲಾಗಿ ಹೇಳಿದರಷ್ಟೆ. ಆದ ನಿಮ್ಮ ಧಾರವಾಡದ ಸಭೆಯಲ್ಲಿ ಠರಾವು ಪಾಸು ಮಾಡಿದ್ದು ತೋರಿಸ ರೋ ? ಯಾವ ಜಾತಿಯವನೇ ಇರಲಿ ರಾಷ್ಟ್ರೀಯ ಪಕ್ಷದವನಿದ್ದರ ತು ಅವನಿಗೇ ಮತ ಕೊಡಿರೆಂದು ಸಾರುತ್ತ ಬಂದ ನೀವು ಮಿ|| ಹೊನ ರಮಠ ಮತ್ತು ಮಿ|| ಕುಲಕರ್ಣಿ ಇವರು ಬ್ರಾಹ್ಮಣೇತರರಿದ್ದು, ರಾಷ್ಟ್ರೀ ಯ ಪಕ್ಷದವರೆಂದು ಅವರೂ ನೀವೂ ಕೂಡೇ ಒಪ್ಪಿಕೊಂಡಿರಲು, ಮತ ನಿಮಗೆ ಕೌನ್ಸಿಲದ ಹೊಸ ಉಮೇದುವಾರಿಯು ? ಎಂದು ಕೇಳಿದ ಲೇ ಮುಗಿಲಿನ ಕಡೆಗೆ ಮೋರೆ ಮಾಡಿದರು. ಒಬ್ಬರ ಕಿವಿಯನ್ನೊಬ್ಬರು ದಿ ನೋಡಿದರು. ಆದರೂ ಏನೂ ತೋಚಲಿಲ್ಲವು. ಹೇಳದೇಬಿಟ್ಟರೆ ರು ಹೇಡಿಗಳೆನ್ನುವರು; ಹೇಳೇನಂದರೆ ಹುರುಳಿಲ್ಲ. ಹೀಗಾಗಿ ಅಡಕತ್ತ ಅಡಿಕೆಸಿಕ್ಕಿದಂತೆ ಕಿಲಬಿಲ ಒದ್ದಾಡಿದರು. ಹೂರಣವು ಹೊರಬಿದ್ದ ಹಳಹಳಸಿದರು. ಸಭೆಯು ಯಾವಾಗ್ಗೆ ಬಿಟ್ಟೀತು ಯಾವಾಗ್ಗೆ ಪಲಾ ಸೂತ್ರ ಹೇಳೇವೆಂದು ಹಾತೊರೆಯುತ್ತಿದ್ದರು. ಅಂಥ ಸಮಯದಲ್ಲಿ ದ ಇವರು (ಛೆ ಅಲ್ಲ ತಪ್ಪಿತು) ದೇವುದಾಟಣೆ ಇವರು ಮಾತಾಡಲಿಕ್ಕೆ ಅಧ್ಯ ಪರವಾನಗಿ ಕೇಳಿದರು. ಪರವಾನಗಿಯು ಸಿಕ್ಕಿತೇ ? ಇಲ್ಲ ಇಲ್ಲ ನಿ ವಾಗಿ ಸಿಗಲಿಲ್ಲ. ಇದಲ್ಲದೆ ಹುಲಕೋಟಿಯ ರಂಗನಗೌಡರು ಹುಬ್ಬ ಸಭೆಯಲ್ಲಿ ಪಾಸಾದ ಠರಾವು ನನಗೆ ಮಾನ್ಯವಿಲ್ಲ ಅಂತ ಹೇಳಲಿಲ್ಲ. ದ್ದು "ವಿಜಯ" ದಲ್ಲಿ ಯಾವನೋ ಒಬ್ಬ ಅವಿಚಾರಿಯು ಸ್ವಕಲ್ಪನೆ ಸುಳ್ಳುಸುದ್ದಿಯನ್ನು ಜಡಲಿಕ್ಕೆ ಹವಣಿಸಿದ್ದಾನೆ. ಅವನಿಗೆ ಬುದ್ಧಿಭ್ರಮೆ ಗಿರಬಹುದೇನು ? ಛೇ ! ಹಾವಿನ ಬಾಯಲ್ಲಿ ಹಾಲುಸುದಾ ವಿಷವಾಗು ಖಲನಿಗೆ ಗುಣವುಸುದಾ ದೋಷದಂತೆ ಕಾಣುತ್ತದೆ. ಅಂದ ಮೇಲೆ ಸ್ವಭಾವಕ್ಕೆ ಅವನಾದರೂ ಏನು ಮಾಡಾನು ? ಪಾಪ ! ನಾವಾದರೂ ಧ ಕೊಡಿಸಿ ಅವನ ಹುಚ್ಚು ಬಿಡಿಸಬೇಕೆಂದರೆ ಸ್ವಭಾವಕ್ಕೆ ಔಷಧವಿಲ್ಲವ ಮತ್ತೆ ಇದೇನು ಹೊಸ ಸುದ್ದಿಯು ? ಕರ್ನಾಟಕ ವೃತ್ತಕರ್ತರು ತಾರೀಖು ೨೪ ನೆ ಪತ್ರದಲ್ಲಿ "ನಮ್ಮ ಪ್ರತಿನಿಧಿಗಳಾರು" ಎಂಬ ಲೇ ನ್ನು ಪ್ರಕಟಿಸಿರುವರು. ಅದರಲ್ಲಿ ಅವರು "ಕಾಯದೆ ಕೌನ್ಸಿಲದ ದಲ್ಲಿ ಕಾಯದೆಗಳ ಮೂಲತತ್ವಗಳ ಜ್ಞಾನವೂ ಬೇಕಾಗಿರುವದರಿಂದ ಹ ಕೋರ್ಟಿನಿಂದ ಸನದು ಪಡೆದ ವಕೀಲರಿಗೆ ಈ ಜ್ಞಾನವು ಇರತಕ್ಕದ್ದೆ ಬದಾಗಿ ನಾವು ನಿರ್ವಿವಾದವಾಗಿ ಗ್ರಹಿಸಬಹುದಾಗಿದೆ" ಎಂದು ಬ ತಾರೆ. ಅಂ ವೇಳೆ ಮಿ|| ಹೊನ್ನಾಪುರಮಠ ಮತ್ತು ಮಿ|| ಕುಲಕರ್ಣಿ ಇವರಿಗೆ ಕಾ ಯದೆ ಜ್ಞಾನವಿಲ್ಲವೆನ್ನುವಿರೇನು ? ಅದರ ಸಲುವಾಗಿ ಅವರಿಗೆ ಹೈ ಕೋರ್ಟಿನ ಸನ್ನದು ಪಡೆದು ಬರಹೇಳುವಿರೇನು ? ತಿಳಿಯಿತು ಓ ! ಮಿ|| ಹೊನ್ನಾಪುರಮಠ ಮತ್ತು ಮಿ|| ಕುಲಕರ್ಣಿ ! ಹೇಗಿದೆ ಜಹಾಲ ಬಹಾದ್ದೂರ ರ ಜಾಲವು ! ಇನ್ನಾದರೂ ಎಚ್ಚತ್ತು ಇವರ ಮಾಯಾಜಾಲದಲ್ಲಿ ಬಿದ್ದು ಬಳಲುವುದನ್ನು ಬಿಡುವಿರೇನು ? ಬ್ರಾಹ್ಮಣೇತರರೇ! ಕರ್ನಾಟಕದಲ್ಲಿ ಕಾಯಾ, ವಾಚಾ, ಮಾನಸದಿಂದ ರಾಷ್ಟ್ರಸೇವೆ ಮಾಡುವವರೇ ತೀರ ಕ ಮೆ. ಮನಸ್ಸಿನಲ್ಲಿ ಒಂದು. ಕೃತಿಯಲ್ಲಿ ಒಂದು, ಈತರವಾಗಿರುವ ಡಾಂಭಿಕಸ್ವರಾಜ್ಯವಾದಿಗಳೇ ತುಂಬಿರುವರು. ಅವರು ನಾನು ರಾಷ್ಟ್ರೀಯ ಪಕ್ಷದವ, ಆ ಪಕ್ಷದವ, ಈ ಪಕ್ಷದವ ಎಂದು ನಿಮ್ಮ ಕಡೆಗೆ ಮತ ಕೊಡಿರೆಂದು ಬರಬಹುದು. ಮೂಲ ಅಮೃತಸರ ಕಾಂಗ್ರೆಸ್ಸಿನಲ್ಲಿ ರಾಷ್ಟ್ರೀಯ ಪಕ್ಷದವರಿಗೇ ಮತ ಕೊಡಬೇಕೆಂದು ಠರಾವು ಪಾಸಾಗಲಿಲ್ಲ. ಹಾಗೇ ಅದ ತಮ್ಮ ಪಕ್ಷದವರು ಕೌನ್ಸಿಲದಲ್ಲಿ ಆರಿಸಿ ಬರುವದು ಶಕ್ಯವಿಲ್ಲವೆಂದು ಳಿದು, ಉಗ್ರವಾದಿಗಳ ಗುರುಗಳಿಂದ ಸೊಲ್ಲಾಪುರದ ಸಭೆಯಲ್ಲಿ ಬಿತ್ತಿದ ವು. ಇದು ಮುಂದೆ ಇದರ ಮೊಳಕೆಯು ಧಾರವಾಡದಲ್ಲಿ ಕೂಡಿದ ಣರ ಸಭೆಯಲ್ಲಿ ಮೂಡಿತು. ಸೊಲ್ಲಾಪುರ ಮತ್ತು ಧಾರವಾಡ ಸಭೆಗಳಲ್ಲಿ ಎಷ್ಟೋ ಸುಶಿಕ್ಷಿತರು ಇದಕ್ಕೆ ವಿರೋಧಿಸಿದರು. ಈಗ ಉಮೇದುವಾರರಾಗಿ ನಿಂತ ಮಿ|| ಕರಿಗುದರಿ ಹೊನ್ನಾಪುರಮಠ ಇವರೇ ಈ ಠರಾವು ಈ ಸಭೆಯಲ್ಲಿ ಬೇಡ; ಇದರಿಂದ ಕರ್ನಾಟಕದಲ್ಲಿ ಏಕೀಕರಣವಾಗದೆ ಷಕ್ಕೆ ಕಾರಣವಾಗುತ್ತದೆಂದು ಬಹುಪರಿಯಾಗಿ ಹೇಳಿನೋಡಿದರು. ಎಲ್ಲಿ ಚಾರಕ್ಕೆ ಆಸ್ಪದವಿಲ್ಲವೋ ಅಲ್ಲಿ ಇವರ ಮಾತುಗಳನ್ನು ಕೇಳುವವರಾರು ? ಇಂಥ ಮತ್ಸರಗ್ರಸ್ತ ಹಠವಾದಿಗಳೇ ಬ್ರಾಹ್ಮಣೇತರ ಪಂಕ್ತಿನ ಉಗಮಕ್ಕೆ ಕಾರಣರಾದರು. ಕರ್ನಾಟಕ ಮಾತೆಯೇ ಇಂಥ ಸ್ವಾರ್ಥಪರಾಯಣರಾದ ಡಾಂಭಿಕರಿಂದಲೇ ನೀನು ನಿನ್ನ ಪೂರ್ವವೈಭವವನ್ನು ಕಳೆದುಕೊಳ್ಳಬೇಕಾಯಿತು. ಮತ್ತು ಈಗಾದರೂ ಇವರೇ ನಿನ್ನ ಉತ್ಕರ್ಷಕ್ಕೆ ಅಡ್ಡ ಬರುವವರು. ಇರಲಿ, ಮತದಾರರೇ, ಕರ್ನಾಟಕದಲ್ಲಿ ಬ್ರಾಹ್ಮಣರ ವೃತ್ತಪತ್ರಗಳೇ ಬಹಳವಿರುವವು. ಕಾಗೆಯು ತನ್ನ ಮಗನಿಗೆ ಕೋಗಿಲೆಯೆಂಬಂತೆ ತಮ್ಮ ಪಕ್ಷವು ಹೇಗೇ ಇರಲಿ; ಅದನ್ನೇ ಸಮರ್ಥನ ಮಾಡಿ ಬರೆಯುತ್ತಿರುವರು. "ಇಬ್ಬರ ನ್ಯಾಯ ಮೂರನೆಯವನ ಆಯ" ಎಂಬಂತೆ ಬ್ರಾಹ್ಮಣೇತರರಲ್ಲಿ ಜಗಳ ಹುಟ್ಟಿ ಅದರ ಲಾಭವನ್ನು ಅನಾಯಾಸವಾಗಿ ಮಾಡಿಕೊಂಡು ಇವರು ಕೌನ್ಸಿಲಿನಲ್ಲಿ ಕೂಡ್ರಲಿಕ್ಕೆ ಹವಣಿಸುತ್ತಿರುವರು. ಇಂಥವರ ಮೋಹಜಾಲಕ್ಕೆ ಬಿದ್ದು ನೀವೂ ಅವರಂತೇ ಕುಣಿದರೆ, ಹಿಂದಿನಿಂದ ಅವರು ನಿಮ್ಮ ಅಜ್ಞಾನಕ್ಕೆ ಕೈಹೊಡೆದು ನಗುವರಲ್ಲದೆ, "ಕೊಡಲಿಯ ಕಾವು ಕುಲಕ್ಕೆ ಮೃತ್ಯು" ಎಂಬಂತೆ ನೀವೇ ನಿಮ್ಮ ಸ್ವಜನರ ಘಾತಮಾಡಿದಂತಾಗುವದರಿಂದ, ಅವರ ರೋಷಕ್ಕೂ ಗುರಿಯಾಗುವಿರಿ. ಯಾರು ಬ್ರಾಹ್ಮಣೇತರರಿದ್ದು ಬ್ರಾಹ್ಮಣೇತರರ ಹಿತವನ್ನು ಬಯಸುವದಿಲ್ಲವೋ ಅವರಿಗೆ ಬ್ರಾಹ್ಮಣೇತರರೆನ್ನುವ ಬಗೆ ಹೇಗೆ ? ಆದುದರಿಂದ ("Look before you leap") ಎಂಬಂತೆ ಸಾರಾಸಾರ ವಿಚಾರ ಮಾಡಿ ನಿಮ್ಮ ಮತಗಳನ್ನು ಕೊಡಿರಿ. ನೀವು ಕೊಟ್ಟ ಮತಗಳಿಂದಲೇ ನಿಮ್ಮ ಯೋಗ್ಯತೆಯು ಒಡೆದು ಕಾಣುವದು. ಮತ್ತು ರಾಷ್ಟ್ರದ ಉನ್ನತಿಯು ಅಥವಾ ಅವನತಿಯು ನೀವು ಕೊಡುವ ಮತಗಳ ಮೇಲೆಯೇ ಅವಲಂಬಿಸಿರುತ್ತದೆ. "ಮಂಗನ ಕೈಯಲ್ಲಿಯ ಮಾಣಿಕ್ಯದಂತೆ" ನಿಮ್ಮ ಓಟನ್ನು ವ್ಯರ್ಥಮಾಡಿಕೊಳ್ಳಬೇಡಿರಿ. ಇಷ್ಟೇ ನನ್ನ ಸೂಚನೆಯು. ಓ ! ಮಿ|| ಜೋಶಿ ಕರಿಗುದರಿಯವರೇ, ಮಿ|| ಕೋಟಿ ಇವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟದ್ದು ತ್ರಿಕರಣಪೂರ್ವಕ ಹೇಳುವಿರೇನು ? ಹೇಳಿದ್ದರೆ ಏನು ಹೇಳಿದಿರಿ ? ಇಲ್ಲವಾದರೆ ಈಗಲಾದರೂ ಆ ಪ್ರಶ್ನೆಗೆ ಏನು ಉತ್ತರ ಕೊಡುವಿರಿ ? "ವಿಜಯ" ಕಾರರೇ ನಿಮಗೊಂದು ಸೂಚನೆಯನ್ನು ಮಾಡಿ ಈ ಲೇಖವನ್ನು ಮುಗಿಸುವೆನು. ಬ್ರಾಹ್ಮಣೇತರರನ್ನು ಕುಗ್ಗಿಸಬೇಕೆಂಬ ವಿಚಾರದಿಂದ ಪ್ರಸಿದ್ಧಿಸಲ್ಪಡುವ ನಿಮ್ಮ ನಿಂದ್ಯ ಲೇಖನಗಳಿಂದಲೇ ದುರ್ಜನನ ದೂರು ಸಜ್ಜನನ ಉತ್ಕರ್ಷಕ್ಕೆ ಕಾರಣವಾಯಿತೆಂಬಂತೆ, "ಬ್ರಾಹ್ಮಣೇತರರಿಗೆ ವಿಜಯವು, ನಿಮಗೆ ಮಾತ್ರ ಅಪಜಯವು" ಎಂಬುದನ್ನು ಸೆರಗಿನಲ್ಲಿ ಗಂಟು ಹಾಕಿಕೊಳ್ಳಿರಿ.

ಯಥಾರ್ಥವಾದಿ.

ಹಂಟಿಂಗ್ ಗಡಿಯಾರ.

ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲ್ಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳ ವರಿವಿಗೂ ಬಾಳಿ ಬರುವದು. ಕ್ರಯ ೧ ಕ್ಕೆ ೭-೮-೦.

ವಿಳಾಸ:-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ|| ಬಾ|| ನಂ. 265,
23 ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಪತ್ಯ ಮದನೋದ್ಭವ ಗುಳಿಗೆ. ಇಲ್ಲ.
(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು 32

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

(ಪ್ರಾಸ್ಪೆಕ್ಟಸ್ಸಿನ ನಕಲು ಬೆಂಗಳೂರಲ್ಲಿರುವ ಮೈಸೂರು ಸೀಮೆಯ ಜಾಯಿಂಟ್ ಸ್ಟಾಕ್ ಕಂಪೆನಿ ರೆಜಿಸ್ಟ್ರಾರ್‌ರವರಲ್ಲಿ ದಾಖಲ್ ಮಾಡಿರುತ್ತೆ.)

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್.

(ಶ್ರೀಮತ್ ಮಹಾರಾಜರವರ ಉದಾರಾಶ್ರಯಕ್ಕೊಳಪಟ್ಟು ಸ್ಥಾಪಿತವಾದದ್ದು.)

ಮೂಲಧನ ರೂ. 40,00,000.

ಷೇರು ಒಂದಕ್ಕೆ 50 ರೂ. ನಂತೆ 80,000 ಷೇರುಗಳಾಗಿ ವಿಭಾಗಿಸಲ್ಪಟ್ಟಿದೆ.

ಷೇರು ಮೊಬಲಗನ್ನು ಪಾವತಿಮಾಡುವ ಕ್ರಮ.

ರೂ. 5 ದರಖಾಸ್ತಿನ ಕೂಡ.
ರೂ. 5 ಷೇರ್ ಹಂಚಿದ ಮೇಲೆ.
ಉಳಿದ ಮೊಬಲಗನ್ನು ಎರಡು ತಿಂಗಳ ಅವಧಿಗೆ ಕಡಮೆಯಿಲ್ಲದ ವಾಯಿದೆಯಲ್ಲಿ
ಷೇರ್ ಒಂದಕ್ಕೆ ರೂ. 5 ರಂತೆ ಪಾವತಿಮಾಡತಕ್ಕದ್ದು.

ಡೈರೆಕ್ಟರುಗಳು.

ಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಎಸ್‌ಕ್ವೈರ್, ಸಿ. ಐ. ಇ., ರಿಟೈರ್ಡ್ ಂಬರ್ ಆಫ್ ಕೌನ್ಸಿಲ್ (ಛೇರ್‌ಮನ್.)
. ಕೆ. ಗರುಡಾಚಾರ್, ಎಸ್‌ಕ್ವೈರ್, ಮರ್ಚಂಟ್ ಮತ್ತು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆನರರಿ ಪ್ರೆಸಿಡೆಂ ್, ಬೆಂಗಳೂರು ಸಿಟಿ.
ುಂಡಿ ಹರಿಯಣ್ಣ, ಎಸ್‌ಕ್ವೈರ್, ಮರ್ಚೆಂಟ್, ಬೆಂಗಳೂರು ಸಿಟಿ.
. ಆದೆಪ್ಪ, ಎಸ್‌ಕ್ವೈರ್, ಬೆಂಗಳೂರು ಸಿಟಿ.
ಾಜಶಿಲ್ಪಿ ವಿಶಾರದ ರಾವ್ ಬಹದ್ದೂರ್ ಬಿ. ಸುಬ್ಬರಾವ್, ಎಸ್‌ಕ್ವೈರ್, ರಿಟೈರ್ಡ್ ಚೀಫ್ ಇನ್‌ಜನಿಯರ್, ್ಯಸೂರು.
ಿಂಗ್ರಿ ನಂಜಪ್ಪ, ಎಸ್‌ಕ್ವೈರ್, ಮರ್ಚೆಂಟ್, ತಿಪ್ಟೂರು.
ರ್ಮಪ್ರಕಾಶ ಡಿ. ಬನುಮಯ್ಯ, ಎಸ್‌ಕ್ವೈರ್, ಮರ್ಚೆಂಟ್, ಮೈಸೂರು.
ಬಿ ಸೀತಾರಾಮಾಚಾರ್, ಎಸ್‌ಕ್ವೈರ್, ಬಿ. ಇ., ಇನ್‌ಜನಿಯರ್, ಮೈಸೂರು (ಸ್ಪೆಷಲ್).
ಎಂ. ಎಲ್. ವರ್ಧಮಾನಯ್ಯ, ಎಸ್‌ಕ್ವೈರ್, ಮರ್ಚೆಂಟ್, ಮೈಸೂರು (ಸ್ಪೆಷಲ್).
ದಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ (ಎಕ್ಸ್‌ ಅಫಿಶಿಯೋ ಡೈರೆಕ್ಟರ್).

ಬ್ಯಾಂಕರ್ಸ್.

ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.
ದಿ ಈಸ್ಟರನ್ ಬ್ಯಾಂಕ್, ಲಿಮಿಟೆಡ್.
ದಿ ಟಾಟಾ ಇಂಡಸ್ಟ್ರಿಯಲ್ ಬ್ಯಾಂಕ್, ಲಿಮಿಟೆಡ್.

ಆಡಿಟರುಗಳು.

ಮೆಸ್ಸರ್ಸ್ ಫ್ರೇಸರ್ ಅಂಡ್ ರಾಸ್, ಛಾರ್ಟೆಡ್ ಅಕೌಂಟೆಂಟರು, ಮದರಾಸ್.

ಲೀಗಲ್ ಅಡ್ವೈಜರುಗಳು.

ಮೆಸ್ಸರ್ಸ್ ರಾಘವಯ್ಯ ನಗಿನ್‌ದಾಸ್ ಕಂಪನಿ, ಸಾಲಿಸಿಟರ್ಸ್, ಬೊಂಬಾಯಿ.
ಮಿ|| ಎ. ಕೃಷ್ಣರಾವ್, ಅಡ್ವೊಕೇಟ್, ಮೈಸೂರು.

ಏಜಂಟರು.

ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ.,
ಪೋಸ್ಟ್ ಬಾಕ್ಸ್ ನಂ. 101, ಮೈಸೂರು.

ರೆಜಿಸ್ಟರ್ಡ್ ಆಫೀಸ್.

ಈದಿಗ, ಮೈಸೂರು.

ಪ್ರಾಸ್ಪೆಕ್ಟಸ್ (ವಿಷಯ ವಿವರಣೆ.)

ಈ ಕಂಪನಿಯ ಮೆಮೋರಾಂಡಂ ಆಫ್ ಅಸೋಸಿಯೇಷನ್ ಎಂಬುವದರಲ್ಲಿ ನಮೂದಿಸಿರುವ ಉದ್ದೇಶಗಳ ೇಸ್ಕರ ಮುಖ್ಯವಾಗಿ ಮೈಸೂರು ಪಟ್ಟಣದಲ್ಲಿ ಅಥವಾ ಅದಕ್ಕೆ ಸಮೀಪವಾಗಿ ಉತ್ತಮತರಹದ ಯಂತ್ರಗಳಿಂದ ಿದ ನೂಲುವ ಮತ್ತು ನೇಯುವ ಹತ್ತಿಯ ಕಾರ್ಖಾನೆಯನ್ನು ಸ್ಥಾಪಿಸಿ ಕೆಲಸಮಾಡುವುದಕ್ಕೋಸ್ಕರ ಏರ್ಪಡಿ ುತ್ತೆ. ಹಿಂದುಸ್ಥಾನದಲ್ಲಿ ನೇಗೆಯ ಕಾರ್ಖಾನೆಗಳು ಹೆಚ್ಚುತ್ತಿದ್ದಾಗ್ಯೂ ನಮ್ಮ ಇಂಡಿಯಾ ದೇಶಕ್ಕೆ ಬೇಕಾಗುವ ್ಟಗಳ ಪೈಕಿ ಶೇಕಡಾ ೩೫ ರಷ್ಟು ಮಾತ್ರ ತಯಾರಾಗುತ್ತಲಿವೆ. ಉಳಿದ ೬೫ ಭಾಗದಷ್ಟು ಪರದೇಶಗಳಿಂದ ಾಗಿ ಬರುತ್ತಿರುವದು ಸಕಲರಿಗೂ ತಿಳಿದ ಅಂಶವಾಗಿದೆ. ಹಿಂದುಸ್ಥಾನದ ನೇಗೆಯ ಕಾರ್ಖಾನೆಗಳಲ್ಲಿ ತಯಾರಾದ ್ಟ ಬರೆಗಳು ಸಾಕಾಗದೆ ೧೯೧೯-೨೦ ನೇ ಸಾಲಿನಲ್ಲಿ ಅನ್ಯದೇಶಗಳಿಂದ ಸುಮಾರು ೫೦ ಕೋಟಿ ರೂಪಾಯಿಗಳ ಬಾಳುವ ಬಟ್ಟೆಗಳು ಈ ದೇಶಕ್ಕೆ ತರಿಸಲ್ಪಟ್ಟಿರುತ್ತೆ. ಅನ್ಯದೇಶದಿಂದ ಇಷ್ಟು ವಿಶೇಷವಾಗಿ ರಫ್ತಾಗುತ್ತಿರುವ ್ಟಗಳನ್ನು ತಯಾರ್ಮಾಡುವ ಕಾರ್ಖಾನೆಗಳನ್ನು ಹೆಚ್ಚಿಸುವದಕ್ಕೆ ವಿಶೇಷವಾಗಿ ಅವಕಾಶವಿರುತ್ತದೆ. ನಮ್ಮ ಸಂ ನದಲ್ಲಾದರೊ ಹತ್ತಿ ಬೆಳೆಯುವ ಪ್ರದೇಶಗಳು ತುಂಬಾ ಸಮೀಪದಲ್ಲೇ ಇರುತ್ತವೆ. ಕೆಲಸಗಾರರು ಸುಲಭವಾಗಿ ಗುತ್ತಾರೆ. ವಿದ್ಯುಚ್ಛಕ್ತಿಯ ಸೌಲಭ್ಯವೂ ನೀರಿನ ಅನುಕೂಲ್ಯವೂ ವಿಶೇಷವಾಗಿರುತ್ತವೆ.

ಈ ಮೇಲ್ಕಂಡ ಅನುಕೂಲಗಳೆಲ್ಲವೂ ಇರುವಾಗ್ಗೆ ಮೈಸೂರಿನಲ್ಲಿ ನೂಲುವ ಮತ್ತು ನೇಯುವ ಕಾರ್ಖಾನೆ ನ್ನು ಸ್ಥಾಪಿಸುವದರಿಂದ ಹೆಚ್ಚು ಲಾಭವೂ ಮತ್ತು ಪ್ರಯೋಜನವೂ ಆಗುತ್ತೆನ್ನುವುದರಲ್ಲಿ ಸಂಶಯವಿಲ್ಲ.

ಈ ಕಾರ್ಖಾನೆಯ ಕೆಲಸವನ್ನು ಜಾಗ್ರತೆಯಲ್ಲಿಯೇ ಪ್ರಾರಂಭಿಸಬೇಕೆಂಬ ಉದ್ದೇಶದಿಂದ ೨೫,೦೦೦ ಸ ವ ರಾಟೆಗಳು ಇಡಲ್ಪಡುತ್ತ. ಕೆಲಸ ನಡೆಯುತ್ತಿರುವಾಗ್ಗೆ ನೇಯುವ ಯಂತ್ರಗಳು ಮತ್ತೂ ಹೆಚ್ಚಾಗಿ ಇಡಲ್ಪಡುತ್ತ.

ಮೈಸೂರು ಸಂಸ್ಥಾನದ ಶ್ರೀಮತ್ ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ್. ಐ., ಜಿ. ಬಿ. ಇ. ರವರು ಕೃಪಾಪೂರಿತರಾಗಿ ಈ ಕಾರ್ಖಾನೆಗೆ ತಮ್ಮ ನಾಮಾಂಕಿತವನ್ನು ದಯಪಾಲಿಸಿ ತ್ತಾರಲ್ಲದೆ ಈ ಕಸಬನ್ನು ಪ್ರೋತ್ಸಾಹಿಸಬೇಕೆಂಬ ಕುತೂಹಲಯುಕ್ತರಾಗಿ ಈ ಕಂಪನಿಯಲ್ಲಿ ತಮಗೋಸ್ಕರ ುಲಕ್ಷ ರೂಪಾಯಿಗಳ ಮೂಲಧನದ ಷೇರುಗಳನ್ನು ತೆಗೆದುಕೊಳ್ಳುವುದಾಗಿ ಅನುಜ್ಞೆಯನ್ನಿತ್ತಿರುವರು.

ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ., ರವರು ಈ ಕಂಪನಿಯ ಏಜೆಂಟರಾಗಿ ನಿಂತು ಾರ್ಯ ನಡಿಸುವುದಾಗಿ ಒಪ್ಪಿಕೊಂಡಿರುತ್ತಾರೆ. ಈಗಾಗಲೇ ಅವರು ಇಂಗ್ಲಾಂಡಿನಿಂದ ಸರ್ವೋತ್ತಮವಾದ ಯಂತ್ರ ಾಮಗ್ರಿಗಳನ್ನು ತರಿಸಲು ಏರ್ಪಾಡನ್ನು ಮಾಡಿರುವರು.

ಷೇರುಗಳನ್ನು ಹಂಚುವಿಕೆ.

ಡೈರೆಕ್ಟರುಗಳು ೪೦,೦೦೦ ಷೇರುಗಳು ಬಿಕರಿ ಆದ ಒಡನೆಯೇ ಷೇರುಗಳನ್ನು ಹಂಚಿಕೆಮಾಡುತ್ತಾರೆ.

ಒಪ್ಪಂದ (ಅಗ್ರಿಮೆಂಟ್).

ಈ ಕಾರ್ಖಾನೆಯ ಕಟ್ಟಡವನ್ನು ಕಟ್ಟಿಸಿ ಯಂತ್ರಗಳನ್ನಿಟ್ಟು ಕೆಲಸ ನಡಿಸಿಕೊಂಡು ಬರಲು ಈ ಕಂಪನಿ ು ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ ಯವರಿಗೂ ಒಪ್ಪಂದಗಳಾಗಿರುವ ಷರತ್ತುಗಳೇನಂ ್: —ಸದರೀ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕೋ ಯವರು ಅಥವಾ ಅವರ ಉತ್ತರಾಧಿಕಾ ಗಳು ಅಥವಾ ಅವರಿಂದ ಅಧಿಕಾರಪಡೆದವರು ಕರಾರಿನಲ್ಲಿ ನಮೂದಿಸಿರುವ ಷರತ್ತುಗಳಿಗನುಸಾರವಾಗಿ ಈ ಕಂಪನಿ ಜಿಸ್ಟರ್ ಆದ ಲಾಗಾಯಿತು ೨೫ ವರುಷಗಳವರೆಗೆ ಈ ಕಂಪನಿಯ ಮ್ಯಾನೇಜಿಂಗ್ ಏಜೆಂಟರಾಗಿ ಇರತಕ್ಕದ್ದು. ಒಪ್ಪಂದದ ಪ್ರಕಾರ ಮ್ಯಾನೇಜಿಂಗ್ ಏಜೆಂಟರವರಿಗೆ ಈ ಕಂಪನಿಯ ನಿವ್ವಳ ನಫೆಯಲ್ಲಿ ಶೇಕಡಾ ೧೦ ರಂತೆ ್ರತಿಫಲ ಸಲ್ಲತಕ್ಕದ್ದು. ಇದಲ್ಲದೆ ಮಾಹೆ ಒಂದಕ್ಕೆ ೧,೦೦೦ ರೂಪಾಯಿಗಳನ್ನು ಅಥವಾ ಕಾಲಕಾಲಕ್ಕೆ ಡೈರೆಕ್ಟ ಗಳು ಗೊತ್ತುಮಾಡುವ ಹೆಚ್ಚು ಮೊತ್ತವನ್ನು ಆಫೀಸು ಅಲೋಯನ್ಸು ಎಂಬದಾಗಿ ಕೊಡತಕ್ಕದ್ದು.

ಈ ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ಡೈರೆಕ್ಟರುಗಳನ್ನು ಮತ್ತು ಅವರಿಗೆ ಸಲ್ಲುವ ್ರತಿಫಲವನ್ನು ಕುರಿತು ನಮೂದಾಗಿರುವ ಅಂಶಗಳೇನೆಂದರೆ:—

ಈ ಕಂಪೆನಿಗೆ ಡೈರೆಕ್ಟರಾಗತಕ್ಕವರು ೧೫,೦೦೦ ರೂಪಾಯಿ ಕಿಮ್ಮತ್ತು ಉಳ್ಳ ೩೦೦ ಷೇರುಗಳನ್ನಾದರೂ ನ್ನು ಸ್ವಂತ ಹೆಸರಿನಲ್ಲಿ ಪಡೆದಿರತಕ್ಕದ್ದು. ಪ್ರಾರಂಭದಲ್ಲಿ ಡೈರೆಕ್ಟರಾಗತಕ್ಕವರಿಗೆ ಈ ಷರತ್ತಿನ ನಿರ್ಬಂಧವಿರಬೇ ಿದ್ದಿಲ್ಲ; ಆದರೂ ಹೀಮಿತವಾದ ಒಂದು ತಿಂಗಳ ಅವಧಿಯೊಳಗಾಗಿ ನಿಧಾಯಕವಾಗಿರುವಷ್ಟು ಷೇರುಗಳನ್ನು ಅವರು ಪಡೆದುಕೊಂಡೇ ತೀರಬೇಕು. ಅವರು ಒಂದುವೇಳೆ ಮಾಡದೆ ಇದ್ದಲ್ಲಿ ಮೇಲೆ ನಮೂದಿಸಿರುವಷ್ಟು ಷೇರುಗಳನ್ನು ಅವರು ಪಡೆದುಕೊಂಡಿದ್ದಾರೆಂದೇ ಭಾವಿಸಲ್ಪಡತಕ್ಕದ್ದು; ಮತ್ತು ಕೂಡಲೇ ಅವರಿಗೆ ಅಷ್ಟು ಷೇರುಗಳನ್ನು ಹಂಚಿಕೆಯಲ್ಲಿ ತೆಗೆದಿಡತಕ್ಕದ್ದು.

ಡೈರೆಕ್ಟರುಗಳ ಆಸಕ್ತಿ.

ಡೈರೆಕ್ಟರುಗಳಾದ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯನವರೂ, ಬಿ. ಕೆ. ಗರುಡಾಚಾರ್ಯರವರೂ, ಬಿ. ಸೀತಾರಾಮಾಚಾರ್ಯರವರೂ ಮೇಲೆ ನಮೂದಿಸಿರುವಂತೆ ಮ್ಯಾನೇಜಿಂಗ್ ಏಜಂಟರಾದ ಮೆಸ್ಸರ್ಸ್ ಎಂ. ಎಲ್. ವರ್ಧಮಾನಯ್ಯ ಅಂಡ್ ಕಂಪೆನಿಯ ಮೆಂಬರುಗಳಾಗಿರುತ್ತಾರೆ. ಅಲ್ಲದೆ ಮ್ಯಾನೇಜಿಂಗ್ ಏಜಂಟರ ಫರಂಗೆ ಈ ಮಿಲ್ಲಿನ ಕೆಲಸಗಳನ್ನು ನೋಡಿಕೊಳ್ಳಲು ದೊರೆಯುವ ಪ್ರತಿಫಲದಲ್ಲಿ ಅವರು ಭಾಗಿಗಳಾಗಿರುತ್ತಾರೆ.

ಈ ಕಂಪೆನಿಯ ಮೆಮೋರಾಂಡಂ ಆಫ್ ಅಸೋಸಿಯೇಷನ್ ಪ್ರತಿಯು ಈ ಪ್ರಾಸ್ಪೆಕ್ಟಸ್ಸಿಗೆ ಲಗತ್ತುಮಾಡಲ್ಪಟ್ಟಿರುತ್ತದೆ. ಅದು ಈ ಪ್ರಾಸ್ಪೆಕ್ಟಸ್ಸಿನ ಒಂದು ಭಾಗವಾಗಿರುತ್ತದೆ.

ಆರಂಭದ ಖರ್ಚು.

ಈ ಕಂಪೆನಿಯನ್ನು ಪ್ರಾರಂಭಿಸಿ ಪ್ರಚಾರಮಾಡುವುದಕ್ಕೆ ಆಗತಕ್ಕ ಖರ್ಚುಗಳು 10,000 ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ಮೊಬಲಗಿನಲ್ಲಿ ಕೆಳಗೆ ವಿವರಿಸುವ ದಳ್ಳಾಳಿಯು ಸೇರುವುದಿಲ್ಲ. ಆ ಬಾಬತು ಪ್ರಾರಂಭದ ಖರ್ಚುಗಳನ್ನು ಕಂಪೆನಿಯು ಪಾವತಿ ಮಾಡತಕ್ಕದ್ದು.

ದಳ್ಳಾಳಿ.

ಈ ಕಂಪೆನಿಯಿಂದ ಅಂಗೀಕರಿಸಲ್ಪಟ್ಟ ಬ್ರೋಕರ್ಸ್ ಯಾನೆ ದಳ್ಳಾಳಿಗಳ ಮೂಲಕ ಬರತಕ್ಕ ದರಖಾಸ್ತುಗಳ ಸಂಬಂಧದಲ್ಲಿ ಶೇಕಡಾ ಒಂದರಂತೆ ದಳ್ಳಾಳಿ ಕೊಡಲ್ಪಡುವುದು.

ಷೇರುಗಳ ದರಖಾಸ್ತು.

ಈ ಪ್ರಾಸ್ಪೆಕ್ಟಸ್ಸಿನ ಕೂಡ ಜಂಟಿಸಿರುವ ನಮೂನೆಯ ಫಾರಂನಲ್ಲೇ ದರಖಾಸ್ತುಗಳನ್ನು ಬರೆದು ದರಖಾಸ್ತಿಗೆ ಅನುಗುಣವಾದ ಮೊಬಲಗಿನ ಸಮೇತ ಕಂಪೆನಿಯ ಮೇಲ್ಕಂಡ ಬ್ಯಾಂಕರುಗಳ ಪೈಕಿ ಒಬ್ಬರಿಗೆ ರವಾನೆ ಮಾಡತಕ್ಕದ್ದು.

ಈ ಕಂಪಿನಿಯ ಷೇರುಗಳನ್ನು ಬಿಕರಿಗೆ ಇಟ್ಟಿರುವ ವಿಷಯದಲ್ಲಿ ಒಂದು ನಿರ್ಬಂಧವನ್ನು ಕಲ್ಪಿಸಲಾಗಿದೆ. ಅದೇನೆಂದರೆ—ಷೇರುಗಳನ್ನು ಹಂಚಿಕೆಮಾಡಿಕೊಟ್ಟ ಬಳಿಕ ಎಂಟು ತಿಂಗಳು ಕಳೆಯುವ ವರೆಗೂ ಷೇರ್ ಸರ್ಟಿಫಿಕೇಟುಗಳು ಬಟವಾಡೆಗೆ ಸಿದ್ಧ ಪಡುವುದಿಲ್ಲ.

ಷೇರುಗಳನ್ನು ಹಂಚಿಕೊಡದ ಸಂದರ್ಭದಲ್ಲಿ ಅದಕ್ಕಾಗಿ ಕಳುಹಿದ ಡಿಪಾಜಿಟ್ಟನ್ನು ಪೂರ್ತಾ ವಾಪಸು ಮಾಡಲಾಗುತ್ತದೆ; ಒಂದುವೇಳೆ ಅಪೇಕ್ಷಿಸಿದಷ್ಟಕ್ಕಿಂತಲೂ ಕಡಮೆ ಸಂಖ್ಯೆಯ ಷೇರುಗಳನ್ನು ಹಂಚಿಕೊಟ್ಟಲ್ಲಿ, ಡಿಪಾಜಿಟ್ ಪೈಕಿ ಉಳಿಕೆಯಾಗುವ ಮೊಬಲಗನ್ನು ಷೇರ್ ಬಿಸ್ತುಗಳಿಗೆ ಜಮಾ ಕಟ್ಟಿಕೊಳ್ಳಲಾಗುವುದು.

ಷೇರುಗಳನ್ನು ಹಂಚಿಕೆಯಾದ ಮೇಲೆ ಪಡೆದುಕೊಂಡವರು ಮುಂದಣ ಬಿಸ್ತುಗಳನ್ನು ವಾಯಿದೆಯಲ್ಲಿ ಪಾವತಿ ಮಾಡದೆ ತಪ್ಪಿದರೆ ಅಂಥವರು ಮೊದಲೇ ಪಾವತಿ ಮಾಡಿರುವ ಮೊಬಲಗುಗಳನ್ನು ಕಳೆದುಕೊಳ್ಳುವರು.

ಪ್ರಾಸ್ಪೆಕ್ಟಸ್ಸುಗಳನ್ನೂ ದರಖಾಸ್ತು ನಮೂನೆಗಳನ್ನೂ ಈ ಕಂಪೆನಿಯ ಬ್ಯಾಂಕರುಗಳಲ್ಲೂ ಅಥವಾ ಕಂಪೆನಿಯ ರೆಜಿಸ್ಟರ್ಡ್ ಆಫೀಸಿನಲ್ಲೂ ಪಡೆಯಬಹುದು.

ಕೆ. ಪಿ. ಪುಟ್ಟಣ್ಣಶೆಟ್ಟಿ.	ಎಸ್. ನಂಜಪ್ಪ.
ಬಿ. ಕೆ. ಗರುಡಾಚಾರ್.	ಡಿ. ಬನುಮಯ್ಯ.
ಎಂ. ಹರಿಯಣ್ಣ.	ಬಿ. ಸೀತಾರಾಮಾಚಾರ್.
ಡಿ. ಆದೆಪ್ಪ.	ಎಂ. ಎಲ್. ವರ್ಧಮಾನಯ್ಯ.
ಬಿ. ಸುಬ್ಬರಾವ್.	ವಿ. ರಂಗಸಾಮಿ ಅಯ್ಯಂಗಾರ್.

ಮೈಸೂರು,
ತಾ||..............................

ಕಂಪೆನಿಯ ಬ್ಯಾಂಕರಿಗೆ ಈ ಫಾರಂ ಕೂಡ ಮೊಬಲಗು ಪಾವತಿ ಮಾಡಿದಲ್ಲಿ, ಅವರು ಕಂಪೆನಿ ಸೆಕ್ರೆಟರಿ ಅಥವಾ ಮ್ಯಾನೇಜಿಂಗ್ ಏಜೆಂಟರಿಗೆ ಈ ಫಾರಂನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್.

(1917ನೇ ಇಸವಿ VIIIನೇ ನಂ. ಮೈಸೂರು ರೆಗ್ಯುಲೇಷನ್ನಿಗೆ ಅನುಸಾರವಾಗಿ ರೆಜಿಸ್ಟರ್ ಮಾಡಲ್ಪಟ್ಟಿದೆ.)

ಮೂಲಧನ ರೂ. ೪೦,೦೦,೦೦೦

ಷೇರು ೧ ಕ್ಕೆ ೫೦ ರೂ. ಪ್ರಕಾರ ೮೦,೦೦೦ ಷೇರುಗಳಾಗಿ ವಿಂಗಡಿಸಿದೆ.

ಮೈಸೂರು ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್,
ಡೈರೆಕ್ಟರವರ ಸಮಕ್ಷಮಕ್ಕೆ.

ಅಯ್ಯಾ,

ಮೇಲ್ಕಂಡ ಕಂಪೆನಿಯಲ್ಲಿ ನನಗೆ (ನಮಗೆ) ಬೇಕಾಗಿರುವ.........ಷೇರುಗಳಿಗೆ, ಷೇರು ಒಂದಕ್ಕೆ ಐದು ರೂಪಾಯಿ ಪ್ರಕಾರ ಆಗುವ ಡಿಪಾಜಿಟ್ಟು ಮೊಬಲಗು......... ರೂಪಾಯಿಗಳನ್ನು ಈ ದಿವಸ ನಿಮ್ಮ ಬ್ಯಾಂಕರ್ಸ್‌ಗಳಿಗೆ ಪಾವತಿ ಮಾಡಿರುತ್ತೇನೆ (ವೆ). ಪ್ರಾಸ್ಪೆಕ್ಟಸ್ಸಿನಲ್ಲಿ ನಮೂದಾಗಿರುವ ಷರತುಗಳಿಗೆ ಅನುಗುಣವಾಗಿ ಮೇಲ್ಕಂಡಷ್ಟು ಷೇರುಗಳನ್ನಾಗಲಿ ಅಥವಾ ಕಡಮೆಯಾಗಾಗಲಿ ದಯವಿಟ್ಟು ಕೊಡಬೇಕಾಗಿ ಕೋರುತ್ತೇನೆ (ವೆ); ಮತ್ತು ಕಂಪನಿಯ ಮೆಮೋರಾಂಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನಲ್ಲಿ ಕಂಡ ನಿಯಮಗಳಿಗೆ ಅನುಸಾರವಾಗಿ ನೀವು ಕೊಡುವಷ್ಟು ಷೇರುಗಳನ್ನು ಅಂಗೀಕರಿಸುತ್ತೇನೆ (ವೆ).

ರುಜು.......................................
ಪೂರ್ತಾ ಹೆಸರು..................................
ಕಸಬು.......................................
ಮೇಲುವಿಳಾಸ...................................
ತಾರೀಖು.....................................

(ಬ್ಯಾಂಕರ್ಸ್ ರಶೀತಿ.)

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್.
ಡಿಪಾಜಿಟ್ ಮೊಬಲಿಗ್ಗೆ ಕೊಡಲ್ಪಟ್ಟ ರಶೀತಿ.

ನಂ...........

ಮ|| ರಾ||..................ರಿಂದ ಷೇರು ೧ ಕ್ಕೆ ಐದು ರೂಪಾಯಿ ಪ್ರಕಾರ ....ರೂಪಾಯಿಗಳು..............ಷೇರುಗಳಿಗೆ ಡಿಪಾಜಿಟ್ಟು ಬಂದಿರುತ್ತೆ.

ರೂ.........   ರುಜು

(ಷೇರ್‌ದಾರರುಗಳು ಷೇರ್ ಸರ್ಟಿಫಿಕೇಟ್ ಪಡೆಯುವವರೆಗೂ ಈ ರಶೀತಿಯನ್ನು ಜೋಪಾನವಾಗಿ ಇಟ್ಟುಕೊಂಡಿರತಕ್ಕದ್ದು.)

ಇಸ್ತಿಹಾರ್.

ತಾರೀಖು 17 ನೇ ಜುಲೈ 1920. 6—4

ಮೈಸೂರು ಸ್ಟೇಟ್ ಲೈಫ್ ಇನ್ಷೂರೆನ್ಸ್ ಏರ್ಪಾಡಿನಲ್ಲಿ ತಮ್ಮ ಜೀವಗಳನ್ನು ವಿಮೆ ಮಾಡಿರುವ ಸರ್ಕಾರದ ಆಫೀಸರಿಗೂ ಅಂಥಾ ಆಫೀಸರಲ್ಲದ ಇತರರಿಗೂ ಮತ್ತು ಹಾಗೆ ವಿಮೇ ಮಾಡಿರುವವರು ಮೃತಪಟ್ಟಿರುವ ಸಂದರ್ಭಗಳಲ್ಲಿ ಅವರ ವಾರಸುದಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:—

1920 ನೇ ಸೆಪ್ಟಂಬರು 30 ನೇ ತಾರೀಖಿನೊಳಗಾಗಿ ಪಾವತಿಯಾಗತಕ್ಕ ಮೊಬಲಗಿಗೆ ಉಂಟಾಗುವ ಹಕ್ಕನ್ನು ಸ್ಪಷ್ಟವಾದ ಮತ್ತು ಪೂರ್ತಿಯಾದ ರುಜುವಾತನ್ನು ಕೊಟ್ಟಲ್ಲಿ ಹಕ್ಕುದಾರರ ಅಪೇಕ್ಷೆಯ ಮೇಲೆ ಮೈಸೂರು ಸರ್ಕಾರದ ಶೇಕಡ 6½ ರಂತೆ ಬಡ್ಡಿಯುಳ್ಳ ಸಾಲಕ್ಕೆ ಚಂದಾ ಮಾಡಿ, ಸಾಲದ ಇಸ್ತಿಹಾರಿನಲ್ಲಿ ವಿವರಿಸಿರುವವುಗಳ ಪೈಕಿ ಅವರಿಗೆ ಬೇಕಾದ ಅಂಕಿತದ ಬಾಂಡುಗಳನ್ನು ಕೊಡಲಾಗುವುದು. ಈ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳಲಿಚ್ಛೈಸುವವರು ತಮ್ಮ ಅಭಿಪ್ರಾಯವನ್ನು ತಕ್ಷಣ ಈ ಕೆಳಗೆ ರುಜುಮಾಡಿರುವವರಿಗೆ ದಯವಿಟ್ಟು ತಿಳಿಸಬೇಕು. ಮತ್ತು ಕೂಡಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವದಕ್ಕಾಗಿ ತಮ್ಮ ಹಕ್ಕುಗಳನ್ನು ತ್ವರಿತವಾಗಿ ರುಜುವಾತು ಸ್ಥಾಪಿಸಕೊಡತಕ್ಕದ್ದು. ವಿಮೆಯ ಮೊಬಲಗು ಹಕ್ಕುದಾರರು ಅಪೇಕ್ಷಿಸುವ ಅಂಕಿತ ಮೊಬಲಗುಗಳ ಬಾಂಡುಗಳನ್ನು ಕೊಳ್ಳುವದಕ್ಕೆ ಸರಿಹೋಗದ ಪಕ್ಷದಲ್ಲಿ, ಬಾಕೀ ಬೀಳುವ ಮೊಬಲಗನ್ನು ಸಂಸ್ಥಾನದ ಯಾವ ಖಜಾನೆಗಾದರೂ ಕಟ್ಟಿ, ಅದರ ರಶೀತಿಯನ್ನು ಮುಂದಿನ ನಡವಳಿಗೆ ಬಗ್ಗೆ ಈ ಆಫೀಸಿಗೆ ರವಾನಿಸಬಹುದು. ಅಥವಾ ಅಪೇಕ್ಷಿತ ಅಂಕಿತ ಮೊಬಲಗಿಗೆ ಕೇವಲ ಸಮೀಪವಾಗಿರುವ ಮೊಬಲಗಿನ ಬಾಂಡುಗಳೊಂದಿಗೆ ನಿಂತ ಹಣವನ್ನು ನಗದಾಗಿ ವಾಪಸು ಕೊಡಲಾಗುವುದು.

ಟಿ. ಸತ್ಯರಾಜಚೆಟ್ಟಿ, ಸೆಕ್ರೆಟರಿ,
ಮೈಸೂರು ಸರ್ಕಾರದ ಇನ್ಷೂರೆನ್ಸ್ ಕಮಿಟಿ.

WANTED.

4—4

An L.C.E. or B. E. with special knowledge in Mechanical Engineering for the post of the Chief officer of the Bijapur City Municipality on a monthly salary of Rs. 250 rising to Rs. 300 by an annual increment of Rs. 10. Applicants should be willing to serve at least for five years and submit their applications wi h testimonials of having got administrative capacity before the 13th November 1920. The appointment will be made subject to the approval of Government. The application should necessarily give the following particulars:—

(1) Present employment whether permanent or temporary. (2) Present pay. (3) Period of service put in. (4) Caste. (5) Age. (6) Whether exparienced in Municipal service.

Municipal Office, Bijapur. 12-8-1920.
P. A. DESAI,
President,
Bijapur City Municipality.

THE MYSORE DASARA FAIR 1920.

NOTICE.

3—3

In connection with the ensuing Dasara Fair to be held at Mysore City from Wednesday the 20th October 1920, tenders are invited for putting up and managing the following courts of amusement etc:—

(1) Meery-go-round
(2) Feats of strength
(3) Wrestling
(4) Bioscope
(5) Mimicry
(5) Slight of hand
(7) Motor ride
(8) Dramas
(9) Lucky dips
(10) Indian Restaurant
(11) European „
(12) Music (instrumental & vocal)

and (13) Thatti fencing of 3000 ft. of 6 ft. height.

2. Applications will be received up to 15th September 1920.

3. All tenders to be addressed to the Secretary, Dasara Fair Committee, Exhibition Buildings, Mysore.

4. The acceptance or rejection of any tender rests finally with the Dasara Fair Committee.

5. As soon as a tender is accepted, the successful tenderer will be duly informed and he will thereafter be required to execute an agreement for running the amusement court etc., according to the trems to be decided by the Committee and to deposit 5% of the accepted tender amount as a guarantee for the fulfilment of the contract.

6. In default of the tenderer to act up to his agreement, the deposit made by him will be liable to be forfeited.

7. The Committee is not bound to give any reasons for the rejection of any tender nor intimation of such rejection will be given.

8. Further particulars may be obtained on application to the undersigned.

Exhibition Buildings,
Mysore.
15th Agust, 1920.

M. S. Ramachndra Rao,
Secretary,
Dasara Fair Committee,
Mysore.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬಿಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ಬೆಸ್ಟ್ ಪೌಂಟೇನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟೇನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಪೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು. ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆಮರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ.	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಟಿಕ್ಸಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

23

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧ

ಇಂಡಿಯಾ ಸರಕಾರದಲ್ಲಿ ಸನ್ ೧೯೧೭ ನೇ ಇಸ್ವಿಯ ೨೫ ನೇ ಅ
ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮ ಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ವ ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾ ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತ ತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔ ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ತರೇ ಎಂದುತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿ ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾ ಲೇ ಗುಣಹೊಂದಿದಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರು ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔ ವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಬ ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದು ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ರಣ ಮಾಡಿಕೊಳ್ಳಬೇಕು.

ರೋಗದ ನಾಮುಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿ ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಲೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡು ವಾರಶೂಲಿ, ರೇಶ್ಮಿಜಡ್ಡು, ಗುಡ್ಡವ್ವನಬೇನೆ, ಹುರುಕುಕಜ್ಜಿ, ಗಜಕರ್ಣ ಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಆಣೆ ಕೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದು ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದು ದರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಸರತ ತಕ್ಕೊ ತ್ತೇವೆ. ಮತ್ತು ಹೆಚ್ಚಿನ ಮಾಹಿತಿ ಕ್ಯಾಟಲಾಗು ಬೇಕಾದಲ್ಲಿ ಫ್ರೀ ಕಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆ ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಕಾರ ಬಾಟಲ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲಿಷ್ ಅ ಕನ್ನಡದಲ್ಲಿ ನಾಮ ಮತ್ತು ಪೋಸ್ಟವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇ

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂ

೧೯೨೦ನೆಯ ಇಸವಿ ಸೆಪ್ಟಂಬರ್ ತಾ|| ೧೨ರಿಂದ ೧೯೨೦ನೆಯ ಸೆ ಬರ್ ತಾ|| ೧೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ನೆಯ ರ ನಾಮ ಸಂವತ್ಸರದ ನಿಜಶ್ರಾವಣ ಬಹುಳ ಅಮಾವಾಸ್ಯೆಯಿಂದ ಭಾದ್ರ ಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
12	ಭಾನು	ಅಮಾ	30-18	ಪೂಫ	31-36
13	ಸೋಮ	ಪಾಡ್ಯ	27-26	ಉಫ	30-32
14	[1]ಮಂಗಳ	ಬಿದಿ	25-37	ಹಸ್ತ	30-6
15	[2]ಬುಧ	ತದಿ	25-6	ಚಿತ್ತ	31-56
16	[3]ಗುರು	ಚೌತಿ	25-47	ಸ್ವಾತಿ	34-17
17	[4]ಶುಕ್ರ	ಪಂಚ	27-48	ವಿಶಾ	37-53
18	ಶನಿ	ಷಷ್ಠಿ	30-56	ಅನೂ	42-42

(1) ಸಾಮಗೋಪಾಕರ್ಮ, ಮೊಹರಂ ಪ್ರಾರಂಭ. (2) ಸ್ವ ರೀವ್ರತಂ. (3) ಸಿದ್ಧಿವಿನಾಯಕವ್ರತಂ. (4) ಋಷಿಪಂಚಮಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಧುರೀಣಾರಾ ಪರಮಧಿಗತರಾಜಮಂಡಲಹಿತ್ಕೃಷಾ | ಘನಪಕ್ಷಕೃತಾವತಾರಾ ಪಕ್ಷ್ಯಜ್ಞ ನಪ್ತೃಕ ನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೋಲಂಸುಧೀಪುಂಗವ | ಸ್ತೋನಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀಮಾತೀತಯಶಃಪ್ರತಾಪವಿಭೂಲಂ ಸದ್ವೃತ್ತಮಾಲಾಕುಲಂ | ಪ್ರೇಮುಂಚಿತ್ರಿಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಸೆಪ್ಟಂಬರ್ ತಾರೀಖು ೧೯ ನೆಯ ಭಾನುವಾರ (ಸಂಚಿಕೆ ೩೯

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ತರಿಸಿ ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭ ತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ, ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟಿ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
50 ಖ. ಪೋಸ್ಟ ಶಿರ್ಸಿ, ಉತ್ತರಕಾನಡಾ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಶಸೂಕ್ತರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಶತಕ ೨ಆಣೆ; ಶಂಕರಲಿಂಗಕಂದಂ ೧೪ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

24

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1ಕ್ಕೆ ರೂ 1—0—0.

ವಿಳಾಸ—ರಾಸ್‌ವಾಚ್ ಅಂಡ್‌ಕೊ, 3 ಇರುಳಪ್ಪನ ಬೀದಿ ಮದರಾಸು.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬಿಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0, 1—12—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ಬೆಸ್ಟ್ ಪೌಂಟೇನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟೇನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಪೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು. ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆಮರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ.	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಟಿಕ್ಸಿ ಡಬ್ಬಿ 1 ಕ್ಕೆ	0—8—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

24

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಅವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು,ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
37 ವೈದ್ಯಶಾಲಾ,ಮೈಸೂರು.

ಹೊಸಶೋಧ ! * ಓಂ * ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
9 ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ.	೦—೧೨—೦
ಶಿವಪೂಜಾವಿಧಿ.	೦—೧೪—೦
ಚಾರುಶೀಲೆಚರಿತ್ರೆ	೦—೯—೦
ಚಂಡಾಸಿ	೦—೮—೦

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಸೆಪ್ಟೆಂಬರ್ ತಾ|| ೨೬ನೆಯ ಭಾನುವಾರ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಶ್ರೀಜಗದ್ಗುರುಗಳ ಸಂಚಾರ.

ಶ್ರೀಮನ್ಮಹಾ ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಇದುವರೆಗೆ ಸಿದ್ಧಗಂಗಾ ಕ್ಷೇತ್ರದಲ್ಲಿದ್ದು ಈಗ ತುಮಕೂರು ತಾಲ್ಲೂಕಿನ ಗೂಳೂರು, ಹೊನ್ನುಡಿಕೆ ಮೊದಲಾದ ಕಡೆಯ ಸಂಚಾರದಲ್ಲಿರುವುದಾಗಿದೆ. ಇಷ್ಟರಲ್ಲೇ ತುಮಕೂರು ಗುಬ್ಬಿ ಪಟ್ಟಣಗಳಿಗೆ ಶ್ರೀಗಳು ದಯಮಾಡಿಸುವವರಾಗಿದ್ದಾರೆಂದೂ, ತುಮಕೂರಿನಲ್ಲಿ "ಶ್ರೀ ಜಗದ್ಗುರು ಜಯದೇವ ವಿದ್ಯಾಸದನ" ವೆಂಬ ಹೆಸರಿನಿಂದ ಸ್ಥಾಪಿಸಲ್ಪಡಲಿಕ್ಕಿರುವ ವಿದ್ಯಾರ್ಥಿನಿಲಯದ ವೆಚ್ಚಕ್ಕಾಗಿ ಬೇಕಾಗುವ ಧನರಾಶಿಯನ್ನು ಆ ಪ್ರಾಂತದ ತಮ್ಮ ಸಂಚಾರ ಕಾಲದಲ್ಲಿ ಒದಗಿದ ಭಿಕ್ಷೆಯಿಂದ ಪೂರೈಸಿಕೊಡಲು ಅಪ್ಪಣೆ ಮಾಡಿರುವರೆಂದೂ, ಈ ಸಂಚಿಕೆಯ ಬೇರೆಕಡೆ ಮುದ್ರಿಸಿರುವ ತುಮಕೂರು ಪತ್ರವ್ಯವಹಾರದಿಂದ ವ್ಯಕ್ತವಾಗುತ್ತದೆ. ಮಾನ್ಯ ಶ್ರೀಗಳವರ ಈ ಅಪ್ಪಣೆಯನ್ನು ಕೇಳಿ ನಾವು ಅತ್ಯಂತವಾಗಿ ಸಂತೋಷಿಸುತ್ತೇವೆ. ತುಮಕೂರು ಡಿಸ್ಟ್ರಿಕ್ಟು ಹೆಚ್ಚಾದ ವೀರಶೈವ ಜನಸಂಖ್ಯೆಯುಳ್ಳುದಾಗಿದೆ. ಅಲ್ಲದೆ ಈಗ ರಾಜಕೀಯ ವಿದ್ಯಾಭ್ಯಾಸ ಮಾಡುತ್ತಿರುವ ವೀರಶೈವ ವಿದ್ಯಾರ್ಥಿಗಳಲ್ಲಿ ತುಮಕೂರು ಡಿಸ್ಟ್ರಿಕ್ಟಿನ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚಿನದಾಗಿದೆಯೆಂದು ತಿಳಿದಿದ್ದೇವೆ. ಅಲ್ಲದೆ ಕಳೆದವರ್ಷ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಲಗ್ನಕಾಲದ ಕಾಣಿಕೆಗಳನ್ನು ಎತ್ತಿಸಿಕೊಟ್ಟಿರುವುದರಲ್ಲೂ ತುಮಕೂರು ಡಿಸ್ಟ್ರಿಕ್ಟೇ ಮೊದಲನೆಯದಾಗಿದೆಯೆಂಬುದು ನಮ್ಮ ವಾಚಕರಿಗೆ ಗೊತ್ತೇ ಇದೆ. ವಿಜಯನಗರ ಸಂಸ್ಥಾನವು ಹಾಳಾದ ಬಳಿಕ ಅಲ್ಲಿದ್ದ ಅನೇಕಾನೇಕ ಮಠಪತಿಗಳೂ ಸದಾಚಾರಧುರೀಣ ಭಕ್ತಮಾಹೇಶ್ವರಾದಿಗಳೂ ಸಹ ದಕ್ಷಿಣಕ್ಕೆ ಬಂದು ಶಿವಗಂಗೆ ಗೂಳೂರು ಮೊದಲಾದ ಈ ಪ್ರಾಂತದಲ್ಲೇ ಮಠಮಾನ್ಯಗಳನ್ನು ಮಾಡಿಕೊಂಡು ನೆಲಸಿದರೆಂಬ ಸಂಗತಿಯು ಇತಿಹಾಸ ಪ್ರಸಿದ್ಧವಾಗಿದೆ. ಈಗಲೂ ಈ ಡಿಸ್ಟ್ರಿಕ್ಟಿನಲ್ಲಿ ನಮ್ಮವರು ಮತಾಭಿಮಾನ ಕಾರ್ಯಗಳಲ್ಲೂ ಕೃಷಿ ವಾಣಿಜ್ಯಾದಿ ವೃತ್ತಿಗಳಲ್ಲೂ ಮುಂಬರಿದು ಕೆಲಸಮಾಡುತ್ತ ಸಮಾಜಕ್ಕೆ ಅಲಂಕಾರಪ್ರಾಯರಾಗಿರುತ್ತಾರೆ. ಮೈಸೂರಿನ ವೀರಶೈವ ವಿದ್ಯಾಭಿವೃದ್ಧಿ ಫಂಡು ಮೊಟ್ಟಮೊದಲು ಮ|| ಪಿ. ಮಹಾದೇವಯ್ಯನವರಿಂದ ಆರಂಭಿಸಲ್ಪಟ್ಟುದು ಇಲ್ಲಿಯೇನೇ. ಪುರೋವೃದ್ಧಿಯಲ್ಲಿ ಹೆಚ್ಚಾದ ಲವಲವಿಕೆಯನ್ನು ತೋರಿಸುತ್ತಿರುವ ಇಂಥ ಡಿಸ್ಟ್ರಿಕ್ಟಿನಲ್ಲಿ ಅದಕ್ಕೆ ಸಹಾಯಕವಾದ ಯಾವ ಪ್ರತಿಷ್ಠಾಪನೆಯನ್ನು ನೆರವೇರಿಸಿದರೂ ಉತ್ತಮ ಫಲಪ್ರಾಪ್ತಿಯಾಗುವುದೆಂಬುದಕ್ಕೆ ಸಂಶಯವಿಲ್ಲ. ಸದ್ಯಃ ತುಮಕೂರಿನಲ್ಲಿ ಹೈಸ್ಕೂಲಿನವರೆಗೂ ವಿದ್ಯಾಭ್ಯಾಸ ಮಾಡಲು ಅವಕಾಶವಿರುತ್ತದೆ. ಸುತ್ತುಮುತ್ತಣ ವೀರಶೈವ ವಿದ್ಯಾರ್ಥಿಗಳೆಲ್ಲಾ ಇಲ್ಲಿ ನಿಂತು ಅಲ್ಲಿಯವರೆಗಣ ವಿದ್ಯಾಭ್ಯಾಸ ಮಾಡಲು ಅನುಕೂಲ್ಯವಿರುತ್ತದೆ. ಆದರೆ ಅದಕ್ಕೆ ತಕ್ಕ ವಿದ್ಯಾರ್ಥಿಭವನವು ಇಲ್ಲದೆ ಇರುವುದು ದೊಡ್ಡ ಕೊರತೆಯಾಗಿರುವುದು. ಇದನ್ನು ಪರಿಹರಿಸಲು ತುಮಕೂರಿನ ಕೆಲಮಂದಿ ಅಭಿಮಾನಿಗಳು ಬಹಳ ಕುತೂಹಲ ಪಡುತ್ತಿದ್ದರು. ಕಳೆದವರ್ಷ ಸಿದ್ಧಗಂಗಾ ಕ್ಷೇತ್ರದಲ್ಲಿ ಒಂದು ಪ್ರಾಂತಿಕ ಸಭೆಯನ್ನು ನಡೆಯಿಸಿದಾಗ್ಗೆ ಇದೇ ವಿಷಯವನ್ನು ಚರ್ಚಿಸಿ, ಈ ಕಾರ್ಯವನ್ನು ಈಡೇರಿಸಿಕೊಡಲು ಕಲ್ಪತರುವಿನ ಮರೆಹೊಕ್ಕಂತೆ ಶ್ರೀ ಜಗದ್ಗುರುಗಳ ಪಾದಕ್ಕೆ ಬಿನ್ನಯಿಸಿ ಮರೆಹೊಕ್ಕಿದ್ದರು. ಅವರ ಪ್ರಾರ್ಥನೆಯು ನೆರವೇರುವ ಕಾಲವು ಈಗ ಒದಗಿತು.

ವರ್ಷಕಾಲದ ಮೇಘವು ಇಳಿಬಿದ್ದ ಸ್ಥಲವೆಲ್ಲವೂ ಮಳೆಬೆಳೆಗಳಿಂದ ಸಮೃದ್ಧವಾಗಿ ಹೋಗುವಂತೆ, ಶ್ರೀ ಜಗದ್ಗುರುಗಳ ಪದವಿನ್ಯಾಸವಾದ ಪ್ರದೇಶವೆಲ್ಲವೂ ಭಕ್ತಿಭಾವದಿಂದಲೂ ಧಾರ್ಮಿಕಜಾಗೃತಿಯಿಂದಲೂ ವಿದ್ಯಾಭ್ಯುದಯ ಪ್ರೋತ್ಸಾಹಕ ಪ್ರತಿಷ್ಠಾಪನೆಗಳಿಂದಲೂ ವಿಕಸಿತವಾಗಿ ಹೋಗುವುವೆಂಬುದನ್ನು ಸಮಾಜವೆಲ್ಲವೂ ಚೆನ್ನಾಗಿ ಕಂಡುಕೊಂಡಿದೆ. ಅದುಕಾರಣವೇ ವರ್ಷಾಗಮನವನ್ನೇ ಕರ್ಷಕರು ಇದಿರುನೋಡುತ್ತಿರುವಂತೆ ಭಕ್ತವಿತತಿಯು ಈ ನಮ್ಮ ಪೂಜ್ಯಪಾದರ ಘನಶರಾಗಮನವನ್ನೇ ಹಾರೈಸಿಕೊಂಡಿರುತ್ತಾರೆ. ಈ ಶ್ರೀ ಪಾದವನ್ನು ಕುರಿತು ಒಬ್ಬ ಕವಿಯು:—

ಕಂ|| ಶರಧಿಮುಗಿಲ್ಗಿತ್ತಾನೀರ್ |
ದರೆಯೊಳ್ ಮಳೆಯಾಗಿ ಸುರಿದು ಬೆಳಸಾಗಿಪವೋಲ್ ||
ಗುರುವರ ನಿಮಗೀಭಕ್ತರ್ |
ನೆರೆದರ್ಪಿಪ ಕಾಣ್ಕೆ ಮಠಕೆ ಹಿತಕರಮಕ್ಕುಂ ||
ಭಾ|| ಷ|| ನಾಡಜನರದರಿಂದೆನಿಮ್ಮಂ |
ಬೇಡಿ ಬಿನ್ನಹಮಾಡಿ ಕರೆದೊ !
ಯ್ದಾಡಿರದ ಸಮ್ಮುದದೆ ಭಿಕ್ಷೆಯ ನೀಡಿ ಸೇವಿಪುದು||
ನೋಡೆ ಸಹಜಂ ಸಾರ್ಥಮೆನಿಪುದು |
ಕಾಡಿ ಧನಮಂ ಸುಲಿದು ಮಠದೊಳ್ |
ಕೂಡಿಡುವ ಗುರುನಾಮಕರ್ ನಿಮಗೆಂತುಸರಿವರ್ಪರ್ ||

ಎಂಬುದಾಗಿ ರಚಿಸಿ ಹೇಳಿರುವ ಪದ್ಯಗಳು ಉತ್ಪ್ರೇಕ್ಷೆಯೇನೂ ಇಲ್ಲದೆ ಸ್ವಭಾವೋಕ್ತಿಗಳಾಗಿರುವುವು. ಭಕ್ತ ಜನರಿಂದಲರ್ಪಿಸಲ್ಪಟ್ಟ ಕಾಣಿಕೆಗಳನ್ನು ಸ್ವೋಪಭೋಗಕ್ಕೇ ಆಗಲೀ ತಮ್ಮ ಪೂರ್ವಾಶ್ರಮದ ಸಂಬಂಧಿಗಳ ಉದ್ಧಾರಕ್ಕೇ ಆಗಲೀ ಉಪಯೋಗಿಸಬೇಕೆಂಬ ನೆನಹು ಈ ಶ್ರೀಗಳವರಿಗೆ ಸ್ವಪ್ನದಲ್ಲೂ ಇರುವುದಿಲ್ಲ. ಸಮಾಜವೇ ಇವರ ಕುಟುಂಬವಾಗಿರುವುದು. ಅದರ ಉದ್ಧಾರಚಿಂತೆಯೇ ನಿತ್ಯತಪಸ್ಸಾಗಿರುವುದು. ಈ ಕಾರಣದಿಂದಲೇ ಇವರ ಪ್ರವೇಶಿಸಿದ ಪ್ರಾಂತಗಳಲ್ಲಿ ವಿದ್ಯಾರ್ಥಿನಿಲಯಗಳೂ ಆಶ್ರಮಗಳೂ ಪಾಠಶಾಲೆಗಳೂ ಮಠೋದ್ಧಾರಕ್ರಿಯೆಗಳೂ ಅನಂತವಾಗಿ ನಡೆದು ಬರುತ್ತಿರುವುವು. ಪ್ರತಿವರ್ಷವೂ ಸಹ ಸ್ವಾರು ರೂ. ಗಳು ವಿದ್ಯಾರ್ಥಿಗಳಿಗೆ ವೇತನವಾಗಿ ಕೊಡಲ್ಪಡುತ್ತಿರುವುವು. ಅತ್ತ ತಿಪಟೂರಿನಲ್ಲಿ ಭವ್ಯವಾದ ವೀರಶೈವಾನಂದಾಶ್ರಮವು ಸ್ಥಾಪಿತವಾಗಿ, ಅದರಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೂ ವಿದ್ಯಾರ್ಥಿಗಳ ಅನ್ನೋದಕಗಳಿಗೂ ಶಾಶ್ವತಪ್ರತಿಷ್ಠಾಪನೆ ನಡೆದುದು ಈ ಮಹಾಸ್ವಾಮಿಗಳ ಕಾರುಣ್ಯವಿಶೇಷದಿಂದಲೇ. ಇತ್ತ ಬೆಂಗಳೂರಿನಲ್ಲಿ ಜಯದೇವ ವಿದ್ಯಾರ್ಥಿಭವನವು ದೊಡ್ಡದಾಗಿ ನಿರ್ಮಾಣವಾಗುವುದಕ್ಕೂ ಇವರ ಕೃಪೆಯೇ ಕಾರಣ. ಇವೆರಡರ ಮಧ್ಯದಲ್ಲಿರುವ ತುಮಕೂರಿನಲ್ಲಿ ಶಾಶ್ವತಮತೋಪಕಾರಿಯಾದ ಪ್ರತಿಷ್ಠಾಪನೆಯೊಂದು ಇಲ್ಲದಿದ್ದ ದೊಡ್ಡ ಕೊರತೆಯು ಈಗ ಪರಿಹಾರಗೊಳ್ಳುವ ಕಾಲವೂ ಈ ಶ್ರೀಗಳ ಮುಂದಲೇ ಒದಗಿದಂತಾಯಿತು. ಜಗಜ್ಜನರ ಫಲಾಫಲಗಳಿಗೆ ಅವರ ಕರ್ಮವೇ ಮೂಲವಾಗಿದ್ದರೂ ಈಶ್ವರನು ಸಾಕ್ಷೀಭೂತನಾಗಿ ಅವರವರ ಕರ್ಮಕ್ಕೆ ತಕ್ಕ ಫಲಾನುಭೋಗವನ್ನು ಮಾಡಿಸಲು ನಿಮಿತ್ತಮಾತ್ರನಾಗಿರುವಂತೆ ಭಕ್ತರು ಸಮಾಜಕ್ಕಾಗಿ ಮಾಡುವ ಸೇವೆಯ ಫಲವನ್ನು ಅವರವರೇ ಉಣ್ಣುವಂತೆ ಮಾಡಿಸುವುದಕ್ಕೆ ಶ್ರೀಜಗದ್ಗುರುಗಳು ಸಾಕ್ಷೀಭೂತರಾಗಿ ನಿಮಿತ್ತ ಮಾತ್ರರಾಗಿರುವರು. ಈ ತತ್ತ್ವವನ್ನರಿತು ತುಮಕೂರು ಡಿಸ್ಟ್ರಿಕ್ಟಿನ ಸಕಲ ವೀರಶೈವ ಪ್ರಜೆಗಳೂ ಈ ಸಮಯದಲ್ಲಿ ತಪ್ಪದೆ ಶ್ರೀಜಗದ್ಗುರುಗಳ ದರ್ಶನಾಶೀರ್ವಾದಗಳಿಗೆ ಪಾತ್ರರಾಗಿ, ಈಗ ಮತಹಿತಾರ್ಥವಾಗಿ ಸ್ಥಾಪನೆಗೊಳ್ಳಲಿಕ್ಕಿರುವ ವಿದ್ಯಾರ್ಥಿಭವನವು ತಮ್ಮ ಮುಂದಣ ಪೀಳಿಗೆಯ ವಿದ್ಯಾರ್ಥಿವೃಂದಕ್ಕೆಲ್ಲಾ ಶಾಶ್ವತ ಪ್ರಯೋಜನಕಾರಿಯಾಗುವುದಾದಕಾರಣ ಅದರ ಸ್ಥಾಪನೆಯ ಸಂಕಲ್ಪದಿಂದಲೇ ಡಿಸ್ಟ್ರಿಕ್ಟಿನಲ್ಲಿ ಸಂಚರಿಸುತ್ತಿರುವ ಶ್ರೀ ಶ್ರೀ ಸನ್ನಿಧಿಯಲ್ಲಿ ಭಕ್ತಿಶಕ್ತಿವಂಚನೆಯಿಲ್ಲದೆ ಕಾಣಿಕೆಗಳನ್ನರ್ಪಿಸಿ ಶ್ರೀಗುರುಸೇವೆ ಸಮಾಜಸೇವೆ ಆತ್ಮಹಿತಗಳೆಂಬ ತ್ರಿವಿಧ ಫಲಗಳನ್ನೂ ಪಡೆದುಕೊಂಡು ಕೃತಾರ್ಥರಾಗಲು ಹಿಂದೆಗೆಯಬಾರದೆಂದು ಸೂಚಿಸುತ್ತೇವೆ. ತುಮಕೂರು ಪಟ್ಟಣದ ವೀರಶೈವರಲ್ಲಿ ತುಚ್ಛ ಕಾರಣಗಳಿಂದ ಉಂಟಾಗಿದ್ದ ಇಬ್ಬಾಗವು ಶ್ರೀ ಜಗದ್ಗುರುಗಳ ಸಮಾಗಮ ಸುಯೋಗ ಸಂಭವದಿಂದ ಕಳೆದುಹೋಗಿ ಏಕಮತ್ಯವುಂಟಾಯಿತೆಂಬುದನ್ನು ಕೇಳಿ ಸಂತೋಷಿಸುತ್ತೇವೆ. ಇದು ಉಭಯ ಪಕ್ಷದವರ ಸೌಜನ್ಯಕ್ಕೂ ಭೂಷಣವೆಂದು ಹೇಳಿ ಅವರನ್ನಭಿನಂದಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಗೌರೀಗಣೇಶನ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದು ಶನಿವಾರ ಬೆಂಗಳೂರಿಗೆ ತೆರಳಿದರು.

ಸಿಮ್ಲಾಕ್ಕೆ ದಯಮಾಡಿಸಿದ್ದ ಕೌನ್ಸಿಲರ್ ಮ|| ಎ. ಸಿ. ಬಾನರ್ಜಿಯವರು ಕಳೆದ ಮಂಗಳವಾರ ಬೆಂಗಳೂರಿಗೆ ದಯಮಾಡಿಸಿದರು.

ನವರಾತ್ರಿಯ ಕಾಲದಲ್ಲಿ ನಡೆಯುತ್ತಿದ್ದ ಪರಸ್ಪರ ಸಹಾಯಕ ಸಂಘಗಳ ಅಧಿವೇಶನವು ಈ ವರ್ಷ ನಡೆಯುವುದಾಗಿಲ್ಲವೆಂದು ಕೇಳಿದೆವು.

ಮ|| ರಾ|| ನಾಗವಾಲದ ಪಟೇಲ್ ಮಲ್ಲಣ್ಣನವರು ಮೈಸೂರು ತಾಲ್ಲೂಕು ಬೋರ್ಡಿನ ವೈಸ್‌ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವರು.

ಹೇಮಾವತೀ ನದಿಗೆ ಅಕ್ಕಿಹೆಬ್ಬಾಳಿನ ಹತ್ತಿರ ಸೇತುವೆಯನ್ನು ಕಟ್ಟಲು ಸರ್ಕಾರದವರು ನಿರ್ಧರಿಸಿರುವರು. ಮಂದಗೆರೆ ಬಳಿಯಲ್ಲಿ ಕಟ್ಟುವ ಯೋಚನೆಯು ತಪ್ಪಿತು.

ಬೆಂಗಳೂರಿನಲ್ಲಿ ಮ|| ಸಿ. ಆರ್. ರಡ್ಡಿಯವರ ಅಧ್ಯಕ್ಷತೆಯಲ್ಲಿ ವಿದ್ಯಾಭ್ಯಾಸ ಶಾಖೆಯವರ ಸಭೆಯು ಇದೇ ತಿಂಗಳು ತಾ|| ೨೮-೨೯-೩೦ ರಲ್ಲಿ ನಡೆಯುವುದು.

ವಸ್ತುಪ್ರದರ್ಶನಕ್ಕೆ ಪ್ರತಿಯಾಗಿ ನವರಾತ್ರಿ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯಿಸುವುದಕ್ಕೆ ಏರ್ಪಟ್ಟಿರುವ ಫೇರು ಅಕ್ಟೋಬರ್ ತಾ|| ೨೮ ರಿಂದ ಆರಂಭವಾಗುವುದು.

ಫಾರೆಸ್ಟ್ ಸೆಟಲ್ಮೆಂಟ್ ಆಫೀಸರಾಗಿದ್ದ ಮ|| ಟಿ. ಚೊಕ್ಕಣ್ಣ ಬಿ. ಎ. ಯವರು ಕಳೆದ ತಾ|| ೬ ರಿಂದ ಉದ್ಯೋಗನಿವೃತ್ತರಾದರು. ಅವರೊಡನೆಯೇ ಆ ಸ್ಥಾನವೂ ತೆಗೆದುಹಾಕಲ್ಪಟ್ಟಿತು.

ಬ್ರಿಟಿಷ್ ರೆಸಿಡೆಂಟರಾದ ಅ|| ಡಬ್ಲ್ಯೂ. ಪಿ. ಬಾರ್ಟನ್ ರವರು ಸತೀ ಸಮೇತರಾಗಿ ಕಳೆದ ಭಾನುವಾರ ರಾಜಧಾನಿಗೆ ಬಂದು ಸೋಮವಾರ ಬೆಳಗ್ಗೆ ನಂಜನಗೂಡು ಮಾರ್ಗವಾಗಿ ನೀಲಗಿರಿಗೆ ತೆರಳಿದರು.

ಕಳೆದ ಗಣೇಶ ಚತುರ್ಥಿಯ ದಿನ ರಾಜಧಾನಿಯಲ್ಲಿ ಘನತರವಾದ (೧||| ಇಂಚು) ಮಳೆಯಾಗಿ ಕೆರೆ ಕಟ್ಟೆಗಳಿಗೆ ನೀರು ಬಂದಿತು. ಅದುರಿಂದೀಚೆಗೂ ಆಗಾಗ್ಗೆ ಮಳೆಯಾಗುತ್ತಿದೆ. ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲಿ ಮಳೆಯಾದ ವರ್ತಮಾನವಿದೆ.

ಬೆಂಗಳೂರಿನಲ್ಲಿ ಕಟ್ಟಲ್ಪಡಲಿಕ್ಕಿರುವ ಶ್ರೀ ಜಯದೇವ ವೀರಶೈವ ವಿದ್ಯಾರ್ಥಿಭವನಕ್ಕೆ ನಮ್ಮ ಸರ್ಕಾರದವರು ೧೦ ಸಾವಿರ ರೂ. ಬೆಲೆ ಬಾಳುವ ಜಾಗವನ್ನು ಉಚಿತವಾಗಿ ಕೊಟ್ಟಿರುವುದಲ್ಲದೆ ೨೦ ಸಾವಿರ ರೂ. ಗಳನ್ನು ನಗದಾಗಿಯೂ ಕೊಡಲು ಅಪ್ಪಣೆ ಮಾಡಿದರೆಂದು ಕೇಳುತ್ತೇವೆ.

ನಂಜನಗೂಡಿನಿಂದ ಕಾಕನಕೋಟೆಗೆ ಹಾಕಬೇಕೆಂದು ಉದ್ದೇಶಿಸಿರುವ ಲೋಹಮಾರ್ಗಕ್ಕಾಗಿ ಸರ್ವೆಕೆಲಸವು ನಡೆಯುತ್ತಿರುವುದು. ಮತ್ತು ಮಾನಂದವಾಡಿಯಿಂದ ಕಾಕನಕೋಟೆಗೆ ಲೋಹಮಾರ್ಗವನ್ನು ತಂದು ಸೇರಿಸುವ ಅಧಿಕಾರವು ಸೌತಿಂಡಿಯನ್ ರೈಲ್ವೆಯವರಿಗೆ ವಹಿಸಲ್ಪಟ್ಟಿರುವುದು.

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಆದಿದ್ರಾವಿಡ ಸಂಘದವರು ಪ್ರಜಾಪ್ರತಿನಿಧಿ ಸಭೆಗೆ ತಮ್ಮ ಪ್ರತಿನಿಧಿಯಾಗಿ ಮ|| ಮುರುಗೇಶಂ ಪಿಳ್ಳೆಯೆಂಬುವರನ್ನು ಆರಿಸಿದ್ದಾರೆ. ಇದರಿಂದ ಇನ್ನು ಮೇಲೆ ನಮ್ಮ ಪ್ರಜಾಪ್ರತಿನಿಧಿ ಸಭೆಯನ್ನು ಒಬ್ಬ ಪಂಚಮ ಪ್ರತಿನಿಧಿಯು ಅಲಂಕರಿಸುವಂತಾಯಿತು.

ಲೆ|| ಕೌನ್ಸಿಲ್ ಮೆಂಬರ್ ಉಮೇದುವಾರಿಯಲ್ಲಿ ತೊಡಗಿದ್ದ ಧಾರ್ವಾಡ ಚಂದ್ರೋದಯ ಪತ್ರಕಾರರು ಸ್ಪೆ|| ಕಾಂಗ್ರೆಸ್ಸಿನ ನಿರ್ಣಯದ ಪ್ರಕಾರ ತಮ್ಮ ಉಮೇದುವಾರಿಯನ್ನು ಬಿಟ್ಟುಕೊಟ್ಟ ಕಾರಣ ಆ ಕಾರ್ಯಭಾರವು ತಪ್ಪಿ, ಈಗ ಚಂದ್ರೋದಯ ಪತ್ರವನ್ನು ಮರಳಿ ಪ್ರಕಟಿಸಲಾರಂಭಿಸಿದ್ದಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾಗಿದ್ದ ಮ|| ಶ್ರೀ ನರಸಿಹ್ಮಶಾಸ್ತ್ರಿಗಳಿಗೆ ಮಂಕುಬೂದಿಯೆರಚಿ ನುಣುಚಿಕೊಂಡಿದ್ದ ಗಜಚೋರನನ್ನು ಶಾಸ್ತ್ರಿಗಳು ನಗಗಳ ಸಮೇತ ಈಚೆಗೆ ಹಿಡಿದುತಂದರೆಂದು ಕೇಳುತ್ತೇವೆ. ಕಳೆದುಕೊಂಡಿದ್ದ ಗೌರವಕ್ಕೆ ದ್ವಿಗುಣವಾದ ಕೀರ್ತಿ ಬಂದಂತಾಯಿತು.

ರಾಜಧಾನಿಯಲ್ಲಿ ಕಟ್ಟಲ್ಪಡುತ್ತಿದ್ದ ಕಲೆಜಿಯೇಟ್ ಹೈಸ್ಕೂಲ್ ಕಟ್ಟಡದ ಪ್ರವೇಶಮಹೋತ್ಸವವು ಬರುವ ತಾ|| ೬ ರಲ್ಲಿ ನಡೆಯುವುದಕ್ಕಿದೆಯೆಂದೂ, ಮ|| ಬ್ರಜೇಂದ್ರನಾಥ ಸೀಲ್ ರವರು ಮುಂದಣ ಜನವರಿಯಲ್ಲಿ ಬಂದು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಪದವಿಯನ್ನು ವಹಿಸುವರೆಂದೂ ಕೇಳುತ್ತೇವೆ.

ಮೊಹರಂ ಹಬ್ಬದ ಉತ್ಸವಗಳೆಲ್ಲಾ ಯಾವ ಗಲಾಟೆಯೂ ಇಲ್ಲದೆ ಕಳೆದ ಶುಕ್ರವಾರಕ್ಕೆ ಮುಗಿದುವು. ಶುಕ್ರವಾರ ಎಲ್ಲಾ ಕೋರ್ಟುಕಚೇರಿಗಳಿಗೂ ಶಾಲೆಗಳಿಗೂ ರಜಾ ಕೊಡಲ್ಪಟ್ಟಿದ್ದಿತು. ಉತ್ಸವದ ಗದ್ದಲದಲ್ಲಿ ಒಂದು ಬಂಡಿಗೆ ಕಟ್ಟಿದ್ದ ಎತ್ತು ಬೆದರಿ ಓಡಿದುದರಿಂದ ಕೆಲವರ ಮೇಲೆ ಬಂಡಿ ಹರಿದು ಒಬ್ಬ ಹುಡುಗನಿಗೆ ಬಹಳ ಅಪಾಯವಾಗಿರುವುದಂತೆ.

ಕೃಷ್ಣರಾಜಸಾಗರದ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರಾದ ಮ|| ಟಿ. ಧರ್ಮರಾಜಶೆಟ್ಟಿಯವರು ಅಸ್ವಸ್ಥರಾದುದರಿಂದ ಮೊಟಾರಿನ ಮೇಲೆ ರಾಜಧಾನಿಗೆ ತರಲ್ಪಟ್ಟು ಕೃಷ್ಣರಾಜ ವೈದ್ಯಾಲಯದಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ನಿಸ್ಪೃಹರೂ, ಶಾಂತರೂ, ಸತ್ಯಪ್ರೇಮಿಗಳೂ ಆದ ಈ ಸತ್ಪುರುಷರಿಗೆ ಬೇಗನೆ ಆರೋಗ್ಯವಾಗಲೆಂದು ಅನೇಕ ಪ್ರಜೆಗಳು ಪ್ರಾರ್ಥಿಸುತ್ತಿರುವರು.

ಸೀನಿಯರ್ ಸರ್ಜನ್ ಡಾ|| ಸಿ. ನಂಜಪ್ಪನವರು ತುಂಬಾ ಅಸ್ವಸ್ಥರಾಗಿ, ದರ್ಬಾರ್ ಸರ್ಜನ್ ರಾ|| ಬ|| ಡಿ|| ಆರ್ಮುಗಂ ಮೊದಲಿಯಾರರಿಂದ ಶಸ್ತ್ರಚಿಕಿತ್ಸೆ ಮಾಡಲ್ಪಟ್ಟಿರುವರೆಂದು ಕೇಳುತ್ತೇವೆ. ಈ ಸದ್ಗುಣಾಢ್ಯರಿಗೆ ಬೇಗನೆ ಆರೋಗ್ಯವುಂಟಾಗಲೆಂದು ಕೋರುವೆವು. ಇವರಿಗೆ ೩ ತಿಂಗಳ ರಜವು ಕೊಡಲ್ಪಟ್ಟು ಡಾ|| ಮೈಲ್ವಾನ್ ರವರು ತಮ್ಮ ಕೆಲಸದೊಡನೆ ಆಕ್ಟಿಂಗ್ ಸೀನಿಯರ್ ಸರ್ಜನರಾಗಿ ನೇಮಿಸಲ್ಪಟ್ಟಿರುವರು.

ಮ|| ಎ. ಆರ್. ಬಾನರ್ಜಿಯವರ ೧ ತಿಂಗಳ ಆಕ್ಟಿಂಗ್ ದಿವಾನ್ ಗಿರಿಯಲ್ಲಿ ಮೂರು ತಾಲ್ಲೂಕುಗಳ ಅಮಲ್ದಾರರಿಗೆ ಚುಟಿಕಿ ಬಿದ್ದಿತೆಂದು ಕೇಳುತ್ತೇವೆ. ಮುಖ್ಯಾಧಿಕಾರಿಗಳು ಸ್ವತಃ ಚಟುವಟಿಕೆಯಿಂದ ನಡೆದು, ಕೈಕೆಳಗಣ ಸೋಂಬೇರಿಗಳೂ ದುರ್ವೃತ್ತರೂ ಆದ ಉದ್ಯೋಗಿಗಳನ್ನು ನಿರ್ದಾಕ್ಷಿಣ್ಯದಿಂದ ದಂಡಿಸದೆಹೋದರೆ ಸರ್ಕಾರದ ಕಾರ್ಯಭಾಗಗಳು ಬಹಳ ಶೈಥಿಲ್ಯ ಹೊಂದುವುದಲ್ಲದೆ ನಿರ್ಭಯವಾದ ಅತ್ಯಾಚಾರಗಳು ಪ್ರಬಲಿಸಿ ದೇಶಕ್ಕೆ ಅರಿಷ್ಟವುಂಟಾಗುವುದು.

ಬೆಂಗಳೂರು ಮಿಥಿಕ್ ಸೊಸೈಟಿಯವರು ಡಾಲಿ ಹಾಲಿನಲ್ಲಿ ಕಳೆದ ತಾ|| ೧೫ ರಲ್ಲಿ ಕೂಡಿಸಿದ್ದ ಸಭೆಯಲ್ಲಿ ಮ|| ಬಿ. ಪುಟ್ಟಯ್ಯನವರು ಚಿಕ್ಕದೇವರಾಜೊಡೆಯರವರ ಚರಿತ್ರೆಯನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅವರ ಕಾಲದಲ್ಲಿ ವಿಶಾಲಾಕ್ಷಪಂಡಿತನೂ ತಿರುಮಲಾರ್ಯನೂ ೭೦೦ ಮಂದಿ ಜಂಗಮರ ಹತ್ಯೆಯನ್ನು ನಡೆಯಿಸಿದ ಚರಿತ್ರಗತ ಸುಪ್ರಸಿದ್ಧ ವಿಷಯವನ್ನು ಯಥಾವತ್ ಹೇಳಿದರು. ಆದರೆ ಸಭೆಯಲ್ಲಿದ್ದ ರಾ|| ಬ|| ಆರ್. ನರಸಿಹ್ಮಾಚಾರ್ಯರು ಅದು ಹಾಗೆ ಸಂಭವಿಸಿತೆಂದು ನಂಬುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರು. ಶೈವವಾಗಿದ್ದ ಅರಸು ಮನೆತನವು ವೈಷ್ಣವವಾಗಿ ಪರಿಣಮಿಸಿದ ಆಗಣ ಸಂದರ್ಭದಲ್ಲಿ ರಾಜಬಂಧುವರ್ಗದೊಳಗೇ ಪ್ರತ್ಯಕ್ಷ ಪ್ರಭುವನ್ನೇ ಅಸಡ್ಡೆ ಮಾಡುವಂಥ ತಿಕ್ಕಾಟವು ಹುಟ್ಟಿದ್ದಿತು.ಶೈವದಲ್ಲಿ ಜಿಗುಪ್ಸೆ ಹುಟ್ಟಿ ಅನೂಚಾನವಾಗಿ ಬಂದಿದ್ದ ಅದರ ಸಂಬಂಧವನ್ನೇ ತ್ಯಜಿಸಿಬಿಡಬೇಕೆಂಬ ಬುದ್ಧಿಯುಂಟಾಗಬೇಕಾದರೆ ಎಂಥೆಂಥ ಅಗಾಧ ಕಾರ್ಯಗಳು ನಡೆದಿರಬೇಕೆಂಬುದನ್ನು ಸುಲಭವಾಗಿ ಊಹಿಸಬಹುದಾಗಿದೆ. ಭರತಖಂಡದ ಮತಮತಾಂತರಗಳ ಹೊಯ್ದಾಟದಲ್ಲಿ ಎಂಥೆಂಥ ವಿಷಮ ಘಟನಾವಳಿಗಳು ನಡೆದುಹೋಗಿವೆಯೆಂಬುದನ್ನು ಬಲ್ಲವರು ಇದನ್ನಾಶ್ಚರ್ಯಕರವೆಂದು ಎಂದಿಗೂ ಭಾಷಿಸಲಾರರು.

ಭರತಖಂಡದ ವೃತ್ತಾಂತಗಳು.

ಚಕ್ರವರ್ತಿಯವರ ಚಿಕ್ಕಪ್ಪಂದಿರಾದ ಡ್ಯೂಕ್ ಆಫ್ ಕನಾಟ್ ರವರು ಮದರಾಸಿಗೆ ಬರುವ ಜನವರಿ ತಾ|| ೧೦ ರಲ್ಲಿ ಬಂದು ೧೫ ರಲ್ಲಿ ಅಲ್ಲಿಂದ ತೆರಳುವರು.

ದೇಶೀಯ ಮಹಾಸಭಾ ಕಾರ್ಯದರ್ಶಿ ಪದವಿಗೆ ಅ|| ಗೋಕರ್ಣನಾಥಮಿಶ್ರರವರು ರಾಜೀನಾಮೆ ಕೊಟ್ಟುದರಿಂದ ಮಿ|| ಪಟೇಲ್ ರವರು ಕಾರ್ಯದರ್ಶಿತ್ವವನ್ನಂಗೀಕರಿಸಿದರು.

ಆಗ್ರಾ ಪಟ್ಟಣದಲ್ಲಿ ಹಿಂದೂ ಮಹಮ್ಮದೀಯರ ಪರಸ್ಪರ ದ್ವೇಷವು ಶಾಂತವಾಗಿಲ್ಲ. ಬೀದಿಯಲ್ಲೇ ಎರಡು ಪಕ್ಷದವರಿಗೂ ಹೋರಾಟಗಳಾಗುತ್ತಿವೆ. ಅದನ್ನಣಗಿಸುವುದಕ್ಕಾಗಿ ಪೊಲೀಸ್ ಕಾವಲು ಇಡಲ್ಪಟ್ಟಿದೆ.

ಈಗಣ ಬೊಂಬಾಯಿ ಗೌರ್ನರೋ, ಅಥವಾ ಮದ್ರಾಸ್ ಗೌರ್ನರ್ ಲಾರ್ಡ್‌ವಿಲ್ಲಿಂಗ್ಡನ್ ರವರೋ ಇಲ್ಲವೆ ಮಾರ್ಷಲ್ ಹೇಗ್ ರವರೋ ಮುಂದಣ ವೈಸ್ರಾಯರಾಗಿ ನಿಯಮಿಸಲ್ಪಡುವರೆಂಬ ವಾರ್ತೆ ಹುಟ್ಟಿದೆ.

ಕಳೆದ ವಾರದಲ್ಲಿ ಬೊಂಬಾಯಲ್ಲಿ ಚಿನ್ನ ಬೆಳ್ಳಿಗಳ ಬೆಲೆಯು ಮತ್ತಷ್ಟು ಏರಿತು. ಚಿನ್ನವು ತೊಲೆಗೆ || ರೂ. ನಷ್ಟೂ ಬೆಳ್ಳಿಯು ೧ ರೂ. ನಷ್ಟೂ ಹೆಚ್ಚಿತು. ಹತ್ತಿಯ ವ್ಯಾಪಾರವು ಉತ್ಸಾಹಕರವಾಗಿಲ್ಲ. ಈ ವ್ಯಾಪಾರಿಗಳೆಲ್ಲಾ ಬಹು ನಷ್ಟವನ್ನು ಹೊಂದಿಯೂ ಹೊಂದುತ್ತಲೂ ಇದ್ದಾರೆ.

ಕಲ್ಕತ್ತಾದಲ್ಲಿ ಮಾರ್ವಾಡಿ ವರ್ತಕರೆಲ್ಲಾ ಪಂಡಿತ ಮದನಮೋಹನ ಮಾಳವ್ಯರವರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ೧ ಕೋಟಿ ಮೂಲಧನದಿಂದ ೧ ಗೋಶಾಲೆಯನ್ನು ಸ್ಥಾಪಿಸಿ, ಉತ್ತಮವಾದ ಹಾಲನ್ನು ಪಟ್ಟಣಿಗರಿಗೆ ಮಾರಿಸುವ ಕಂಪನಿಯೊಂದನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿದರು. ಸಭೆಯಲ್ಲೇ ೨೫ ಲಕ್ಷ ರೂ. ಗಳ ಚಂದಾ ಕೂಡಿತು.

ನೂತನ ರಾಜಕೀಯ ಸಂಸ್ಕರಣದ ಪ್ರಕಾರ ಏರ್ಪಡುವ ಮುಖ್ಯೋದ್ಯೋಗಸ್ಥಾನಗಳಿಗೆ ಈ ಕೆಳಗೆ ಕಂಡಂತೆ ಅಧಿಕಾರಿಗಳು ನಿಯಮಿಸಲ್ಪಟ್ಟಿದ್ದಾರೆ. ಸಾಮ್ರಾಜ್ಯ ಶಾಸನ ಸಭೆಯ ಅಧ್ಯಕ್ಷತೆಗೆ ಮಿ|| ಎ. ಎಫ್. ವೈಟ್ ರವರು. ಸ್ಟೇಟ್ ಕೌನ್ಸಿಲ್ಲಿಗೆ ಮಿ|| ಎ. ಎಫ್. ಮಡ್ಡಿಮೇನ್ ರವರು. ಹೈ ಕಮಿಷನರ್ ಪದವಿಗೆ ಸರ್ ವಿಲಿಯಂ ಮೇಯರ್ ರವರು.

ಮಧ್ಯಪ್ರಾಂತಕ್ಕೆ ಸೇರಿದ ನಾಗರ್ ಜಿಲ್ಲೆಯ ರತನಾ ಎಂಬ ಕಡೆಯಲ್ಲಿ ಪಶುಗಳನ್ನು ಕೊಂದು ಅವುಗಳ ಮಾಂಸವನ್ನೂ ತೊಗಲನ್ನೂ ಹದಮಾಡಿ ಮಾರುವ ಉದ್ಯೋಗಕ್ಕಾಗಿ ಒಂದು ಕಂಪನಿಯವರಿಗೆ ಅಲ್ಲಿಯ ಸರ್ಕಾರದವರು ಅಪ್ಪಣೆ ಚೀಟಿಯನ್ನು ಕೊಟ್ಟಿದ್ದರು. ಈ ಕಂಪನಿಯವರು ಅಲ್ಲಿ ದಿನ ೧ಕ್ಕೆ ಸಾವಿರಾರು ಪಶುಗಳನ್ನು ಕೊಲ್ಲುವವರಾಗಿದ್ದರು. ಇದನ್ನು ತಿಳಿದು ಭರತಖಂಡದ ಮುಖ್ಯಮುಖ್ಯ ಪಟ್ಟಣಗಳಲ್ಲೆಲ್ಲಾ ಸಭೆ ಮಾಡಿ ನಿಷೇಧಿಸಿ, ಅನೇಕ ಮಹಜರುಗಳನ್ನು ಸರ್ಕಾರಕ್ಕೆ ಬಿನ್ನೈಸಿಕೊಳ್ಳಲಾಗಿ ಅವರು ಪ್ರಜಾಭಿಪ್ರಾಯವನ್ನು ಗೌರವಿಸಿ ಆ ಅಪ್ಪಣೆಯನ್ನು ಹಿಂದೆಗೆದುಕೊಂಡುಬಿಟ್ಟರು.

ಪಂಜಾಬು ಹತ್ಯೆಯ ವಿಷಯದಲ್ಲೂ ಹಂಟರ್ ಸಂಘದ ವರದಿಯ ವಿಷಯದಲ್ಲೂ ಸಾಮ್ರಾಜ್ಯಶಾಸನ ಸಭೆಯಲ್ಲಿ ಚರ್ಚೆ ನಡೆಯಿಸುವುದಕ್ಕೆ ಅವಕಾಶ ಕೊಡುತ್ತೇವೆಂದು ಪ್ರಭುತ್ವದವರು ವಾಗ್ದಾನಮಾಡಿದ್ದು, ಈಗ ಕಳೆದ ಸಭೆಯಲ್ಲಿ ಅದರ ವಿಚಾರವು ಮರಳಿ ಜಾತಿ ವೈರವನ್ನು ವೃದ್ಧಿಪಡಿಸುವುದಾದ ಕಾರಣ ಅದರ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ವೈಸ್ರಾಯರು ನಿರಾಕರಿಸಿಬಿಟ್ಟರೆಂಬ ಕಾರಣದಿಂದ ಸಾಮ್ರಾಜ್ಯ ಶಾಸನಸಭೆಯಲ್ಲಿ ಚರ್ಚೆಗಿಡಬೇಕೆಂದು ತಿಳಿಸಿಕೊಂಡಿದ್ದ ತಮ್ಮ ತೀರ್ಮಾನಗಳನ್ನೆಲ್ಲಾ ಅ|| ಗಳಾದ ಶ್ರೀನಿವಾಸಶಾಸ್ತ್ರಿ, ಸಚ್ಚಿದಾನಂದಸಿಹ್ಮ, ಕೆ. ಕೆ. ಚಂದಾ, ಕೆ. ವಿ. ರಂಗಸ್ವಾಮಯ್ಯಂಗಾರ್ ಇವರುಗಳೆಲ್ಲಾ ಉಪಸಂಹರಿಸಿಕೊಂಡು ಬಿಟ್ಟರು. ಅ|| ಪಟೇಲ್ ರವರು ಸಹಾಯನಿರಾಕರಣತತ್ತ್ವವನ್ನನುಸರಿಸಿ ಸಾಮ್ರಾಜ್ಯಶಾಸನಸಭೆಯಲ್ಲಿದ್ದ ತಮ್ಮ ಸಭಿಕತ್ವಕ್ಕೆ ರಾಜೀನಾಮೆ ಕೊಟ್ಟರು.

ಪ್ರತ್ಯೇಕ ದೇಶೀಯ ಮಹಾಸಭೆಯಾದೀಚೆಗೆ ಸಹಾಯನಿರಾಕರಣತತ್ತ್ವವಿಧಾನ ವಿಷಯದಲ್ಲಿ ನಾನಾ ತೆರದ ಅಭಿಪ್ರಾಯಗಳೂ ನಡತೆಗಳೂ ಸ್ವರಾಜ್ಯವಾದಿಗಳಲ್ಲಿ ಗೋಚರಿಸುತ್ತಿವೆ. ಗಾಂಧಿಯವರ ವಿಧಾನವನ್ನು ನಿಂದಿಸುತ್ತಿದ್ದ ಬಾಪ್ಟಿಸ್ಟಾ ಮೊದಲಾದ ಡೆಮೋಕ್ರೆಟಿಕ್ ಪಕ್ಷದವರೂ ಕೂಡ ಈಗ ಸಹಾಯನಿರಾಕರಣವನ್ನು ಅಂಗೀಕರಿಸಿ, ಮುಂದಣ ಕೌನ್ಸಿಲಿನ ಸಭ್ಯತ್ವಕ್ಕಾಗಿ ತಾವು ಮಾಡಿಕೊಂಡಿದ್ದ ಉಮೇದುವಾರಿಗಳನ್ನು ಬಿಟ್ಟುಕೊಟ್ಟಿದ್ದಾರೆ. ಬಂಗಾಳಾ, ಬೊಂಬಾಯಿ, ಮದರಾಸು, ಪಂಜಾಬು ಮೊದಲಾದ ಪ್ರಾಂತಗಳಲ್ಲೆಲ್ಲಾ ಅನೇಕರು ಹೀಗೆಯೇ ಮಾಡಿದ್ದಾರೆ. ಆದರೆ ತಕ್ಕಷ್ಟು ಓಟು ತಮಗೆ ದೊರೆಯಲಾರದೆಂದು ಅಧೈರ್ಯಪಟ್ಟು ಚಿಂತಿಸುತ್ತಿದ್ದವರಿಗೆ ಈ ಸಮಯವು ಒಳ್ಳೆ ಅನುಕೂಲವಾಗಿ ಪರಿಣಮಿಸಿದುದರಿಂದ, ಸಹಾಯನಿರಾಕರಣತತ್ತ್ವವನ್ನಂಗೀಕರಿಸಿದೆವೆಂಬ ನೆಪವನ್ನು ತೋರಿಸಿ ಅನೇಕರು ಕೌನ್ಸಿಲ್ ಉಮೇದುವಾರಿಯನ್ನು ಬಿಟ್ಟು ಗೌರವವನ್ನುಳಿಹಿಕೊಳ್ಳುತ್ತಿರುವರು.

ಬೊಂಬಾಯಿಯಲ್ಲಿ ಅಂಚೆಯ ಮತ್ತು ತಂತ್ರೀವಾರ್ತೆಯ ಆಳುಗಳೆಲ್ಲಾ ಮತ್ತೆ ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ. ಸರ್ಕಾರದವರು ೧೯೧೮ನೆ ವರ್ಷದಿಂದ ಇದುವರೆಗೆ ಅವರುಗಳ ಸಂಬಳವನ್ನು ೫ ಸಲ ಹೆಚ್ಚಿಸಿಕೊಟ್ಟಿದ್ದಾರೆ. ೧೯೧೪ ರಲ್ಲಿ ೧೭ ರೂ. ಸಂಬಳವಿದ್ದವರಿಗೆ ಈಗ ೪೫ ರೂಪಾಯಿಯೂ ೧೨ ರೂ. ಸಂಬಳವಿದ್ದವರಿಗೆ ಈಗ ೨೦. ರೂ. ಗಳೂ, ಪ್ರತಿಯೊಬ್ಬ ಟೆಲಿಗ್ರಾಫ್ ಆಳಿಗೆ ೪೧|| ರೂ. ಗಳೂ ಸಂಬಳವಾಗಿ ಕೊಡಲ್ಪಡುತ್ತಿವೆ. ಇದೂ ಸಾಲದೆಂದ. ಅವರುಗಳು ಹಠತೊಟ್ಟಿದ್ದಾರೆ. ಅಂಚೆಯ ಶಾಖೆಯವರು (ಬಾಲಭಟರುಗಳಿಂದಲೂ ಗುಮಾಸ್ತೆಯರುಗಳಿಂದಲೂ ಅಂಚೆಯನ್ನೂ ತಂತ್ರೀವಾರ್ತೆಗಳನ್ನೂ ಹಂಚುತ್ತಿದ್ದಾರೆ. ಮನಿಯಾರ್ಡರುಗಳನ್ನು ಅಂಚೆಮನೆಗೇ ಬಂದು ಜನರು ತೆಗೆದುಕೊಳ್ಳಬೇಕೆಂದು ಏರ್ಪಡಿಸಿದ್ದಾರೆ. ಅನೇಕ ವರ್ತಕಸಂಘದವರು ಅಂಚೆಯ ಶಾಖೆಯವರಿಗೆ ಸಹಾಯ ಮಾಡುತ್ತಿದ್ದಾರೆ. ಬಾಪ್ಟಿಸ್ಟಾರವರು ಈ ಮುಷ್ಕರಗಾರರ ಪಕ್ಷವಾಗಿ ನಿಂತು ವಾದಿಸುತ್ತಿದ್ದಾರೆ. ದೇಶದಲ್ಲಿ ಸರ್ಕಾರದ ಕಾರ್ಯಗಳಿಗೆ ಅಡ್ಡಿಯನ್ನು ಮಾಡಬೇಕೆನ್ನುತ್ತಿರುವ ಕೆಲ ಸ್ವರಾಜ್ಯವಾದಿಗಳ ಬೆಂಬಲದಿಂದ ನಮ್ಮ ದೇಶದ ಕೂಲಿನಾಲಿ ಮಾಡುವ ಜನರೂ ಪಾಶ್ಚಾತ್ಯದೇಶದ ವಿಪತ್ತನ್ನು ನಮ್ಮ ದೇಶಕ್ಕೂ ಹಬ್ಬಿಸಿ ಅನರ್ಥಮಾಡುತ್ತಿದ್ದಾರೆ.

ಪ್ರಪಂಚದಲ್ಲಿ ಹಳೆಯದಾಗಿ ಬಿಸುಡುವ ಜೋಡುಗಳನ್ನು ಒಟ್ಟಿದರೆ ವರ್ಷ ೧ ಕ್ಕೆ ೧ ಬೆಟ್ಟದಷ್ಟು ರಾಶಿಯಾಗಬಹುದಷ್ಟೆ. ಇದಿಷ್ಟೂ ವ್ಯರ್ಥವಾಗಿ ಹೋಗುತ್ತಿದೆ. ಇದರಿಂದ ಏನಾದರೂ ಪ್ರಯೋಜನಮಾಡಿಕೊಳ್ಳುವುದು ಸಾಧ್ಯವೇ ಎಂದು ಶಾಸ್ತ್ರಜ್ಞರು ಇದುವರೆಗೆ ಅನೇಕ ಪರೀಕ್ಷೆಗಳನ್ನು ನಡೆಯಿಸಿ ಕೆಲವು ಸಂಗತಿಗಳನ್ನು ಗೊತ್ತುಮಾಡಿದ್ದಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಹುಜನ ಸಂಚಾರವಿರುವ ಮಾರ್ಗಗಳಲ್ಲಿ ವಿಪರೀತವಾಗಿ ಧೂಳಿಯೇಳುವುದುಂಟಷ್ಟೆ. ಅದನ್ನು ಅಣಗಿಸುವುದಕ್ಕೆ ಕೆಲ ಎಣ್ಣೆಯ ಮಿಶ್ರಣವನ್ನು ಈಗ ಉಪಯೋಗಿಸುತ್ತಿದ್ದಾರೆ. ಈ ಹಳೆಯ ಜೋಡುಗಳಿಂದ ಒಂದು ತೆರದ ಪದಾರ್ಥವನ್ನು ನಿರ್ಮಾಣಮಾಡಿ ಮಾರ್ಗಗಳಿಗೆ ಉಪಯೋಗಿಸಿದರೆ ಧೂಳಿಯೇಳುವುದೇ ಇಲ್ಲವಂತೆ. ಬಹುಶಃ ೮೯ ಸಾವಿರ ಹಳೆಯ ಜೋಡುಗಳನ್ನು ಉಪಯೋಗಿಸಿದರೆ ೨೪ ಅಡಿಗಳ ಅಗಲವುಳ್ಳ ಮಾರ್ಗಕ್ಕೆ ೧ ಮೈಲಿಯ ದೂರ ೪ ಅಂಗುಲದಷ್ಟು ದಪ್ಪನಾದ ಹಾಸನ್ನು ನಿರ್ಮಿಸಬಹುದಂತೆ. ಮತ್ತು ಈ ಜೋಡುಗಳನ್ನು ಸ್ವಲ್ಪ ಸುಟ್ಟರೆ ಒಂದು ತರದ ಇದ್ದಲಾಗಿ ಅದನ್ನು ಸಕ್ಕರೆ ಮೊದಲಾದುವುಗಳನ್ನು ಶುಭ್ರಗೊಳಿಸುವುದಕ್ಕೆ ಉಪಯೋಗಿಸಬಹುದಂತೆ. ಮತ್ತು ಈ ಹಳೆ ಜೋಡುಗಳನ್ನು ಭೂಮಿಗೆ ಉತ್ತಮವಾದ ಗೊಬ್ಬರವಾಗಿಯೂ ಉಪಯೋಗಿಸಬಹುದು.

ವಿದೇಶದ ವೃತ್ತಾಂತಗಳು.

ಲಾರ್ಡ್ ಸಿಂಹರವರು ಸೀಮೆಯಿಂದ ಭರತಖಂಡಕ್ಕೆ ಕಳೆದ ತಾ|| ೧೦ ರಲ್ಲಿ ಹೊರಟರು.

ಚೀನಾದಲ್ಲಿ ವೀರಕ್ಷಾಮವು ಪ್ರಾಪ್ತವಾಗಿದೆ. ಮನೆಯ ಜಮಾನರು ಮಕ್ಕಳುಮರಿಗಳಿಗೂ ಹೆಂಡರಿಗೂ ಅನ್ನವನ್ನು ಹಾಕಲಾರದೆ ಔಷಧವನ್ನು ಹಾಕಿ ಅವರುಗಳನ್ನು ಕೊಂದುಬಿಡುತ್ತಿರುವರಂತೆ! ೩-೪ ಕೋಟಿ ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ.

ಬಾಕೂ ಪಟ್ಟಣದಲ್ಲಿ ಬೋಲ್ಷೆವಿಕ್ಕರ ಒಂದು ಸಭೆಯು ಕೂಡುವುದಾಗಿದೆ. ಅದಕ್ಕೆ ಭರತಖಂಡದಿಂದಲೂ ಕೆಲ ಬೋಲ್ಷೆವಿಕ್ ಪಕ್ಷಾಭಿಮಾನಿಗಳು ಹೋಗಿದ್ದಾರಂತೆ. ತುರ್ಕಿಯ ಎನ್ವರ್ ಪಾಷಾರವರೂ ಹೋಗಿದ್ದಾರಂತೆ.

ಹಿಂದೆ ಫ್ರಾನ್ಸಿನ ಮಂತ್ರೀಶ್ವರರಾಗಿದ್ದ ಮಿ|| ಕ್ಲೆಮೆಂಕೋರವರು ಬರುವ ತಿಂಗಳಲ್ಲಿ ಭರತಖಂಡಕ್ಕೆ ಬಂದು ಕಲ್ಕತ್ತಾವಿಗೂ, ಅಲ್ಲಿಂದ ಹಿಮವತ್ಪರ್ವತಕ್ಕೂ ಹೋಗಿ ಈ ವರ್ಷದ ಕಡೆಯಲ್ಲಿ ಸ್ವದೇಶಕ್ಕೆ ತೆರಳುವವರಾಗಿದ್ದಾರೆ. ಇಲ್ಲಿಯ ರಾಜಕೀಯ ಧೋರಣವನ್ನು ಅವಲೋಕಿಸುವುದೂ ಅವರ ಉದ್ದೇಶವಾಗಿದೆ.

ತುರ್ಕಿ ಸುಲ್ತಾನರು ಸಂಧಿಗೆ ಒಪ್ಪಿದರೂ ಅವರ ಯುವರಾಜರಿಗೆ ಅದು ಒಪ್ಪಿಗೆಯಾಗಿಲ್ಲ. ಅವರು ಆ ದೇಶದ ನೇಷನಲಿಸ್ಟರೊಡನೆ ಕೂಡಿಕೊಳ್ಳಬೇಕೆಂಬ ಇಚ್ಛೆಯಿಂದ ಅನಟೋಲಿಯಾವಿಗೆ ಹೋಗುವುದಕ್ಕುಜ್ಜುಗಿಸಿರಲು, ಅವರನ್ನೂ ಅವರ ಮೋಟಾರನ್ನೂ ದೋಣಿಗಳನ್ನೂ ಪ್ರಭುತ್ವಪಕ್ಷದವರು ಹಿಡಿದುಕೊಂಡರು.

ಬೋಲ್ಷೆವಿಕ್ಕರು ಬೊಖಾರಾದ ಮೇಲೆ ದಂಡೆತ್ತಿ ಬರುತ್ತಿರುವುದರಿಂದ ಅಲ್ಲಿಯ ಅಮೀರರು ಅಫ್ಘಾನಸ್ಥಾನದ ಅಮೀರರ ಮರೆಹೊಗಬೇಕೆಂದಿದ್ದಾರಂತೆ. ಮತ್ತು ಬೋಲ್ಷೆವಿಕ್ಕರು ದಕ್ಷಿಣ ಚೀನಾದಲ್ಲಿ ನುಗ್ಗಿ ಅಲ್ಲಿಯ ಪ್ರಜೆಗಳಲ್ಲಿರುವ ಆಹಾರವಸ್ತುಗಳನ್ನೂ ಧನಕನಕಗಳನ್ನೂ ದೋಚಿಕೊಳ್ಳುತ್ತಿರುವರು.

ಮಾಂಚಸ್ಟರ್ ಪಟ್ಟಣದಲ್ಲಿರುವ ದೊಡ್ಡ ದೊಡ್ಡ ಬಟ್ಟೆ ವ್ಯಾಪಾರದ ಕಂಪೆನಿಗಳು ಬಟ್ಟೆಗಳ ಬೆಲೆಯನ್ನು ಇಳಿಯಿಸುವುದಕ್ಕೆ ಈಗೀಗ ಆರಂಭಿಸಿರುತ್ತಾರೆ. ಸೇಕಡ ೫ ರಷ್ಟು ಬೆಲೆಯನ್ನು ಇಳಿಯಿಸಿ ಅವರುಗಳು ಪ್ರಕಟನೆಗೊಳಿಸಿದ್ದಾರೆ. ೨೦೦೦ ರಕಂ ಬಟ್ಟೆಗಳ ಬೆಲೆಯು ಈಗ ಇಳಿದುಹೋಗಿದೆ. ಆದರೆ ನಮ್ಮ ದೇಶದ ವರ್ತಕರು ಏನುಮಾಡುತ್ತಾರೊ ನೋಡಬೇಕು.

ಚೀನಾದವರ ದುರವಸ್ಥೆಯು ಪರಿತಾಪಕಾರವಾಗಿದೆ. ಈಗ ಅಲ್ಲಿಯ ಪ್ರಭುತ್ವದವರಿಗೆ ತಿಂಗಳಿಗೆ ೬|| ಲಕ್ಷ ಸವರನ್ ಆದಾಯವಿದ್ದರೆ ವೆಚ್ಚವು ೨೦ ಲಕ್ಷ ಸವರನ್ನುಗಳಾಗುತ್ತಿವೆಯಂತೆ. ಕ್ಷಾಮದ ಬಾಧೆಯೊಂದುಕಡೆ. ಉಳಿದ ರಾಜಕೀಯ ವ್ಯಯಭಾರವೊಂದು ಕಡೆ. ಹೀಗಾಗಿ ಅಲ್ಲಿಯ ಪ್ರಭುತ್ವದವರು ೬೧೦ ಲಕ್ಷ ಡಾಲರುಗಳ ಸಾಲವನ್ನು ಮಾಡಲು ನಿಶ್ಚಯಿಸಿದ್ದಾರೆ.

ಇಟಲಿಯೊಳಗೆ ಕಳೆದ ೧೯೦೯ ನೆ ವರ್ಷದಲ್ಲಿ ಮೆಸ್ಸೀನಾದ ಹತ್ತಿರ ಸಂಭವಿಸಿದಂಥ ಭೂಕಂಪವೇ ಈಗಲೂ ಸಂಭವಿಸಿ ಬಹು ನಷ್ಟವಾಯಿತು. ನೂರಾರು ಮೈಲಿಗಳಷ್ಟು ದೂರ ಭೂಮಿಯು ಬಿರುಕುಬಿಟ್ಟಿತು. ಸಾವಿರಾರು ಮನೆಮಠಗಳು ಶಿಥಿಲವಾದುವು. ನೂರಾರು ಹೆಣಗಳು ಸಿಕ್ಕಿದುವು. ೨೦ ಸಾವಿರ ಜನರು ನಿರಾಶ್ರಿತರಾದರು. ಸರ್ಕಾರದವರು ಅನ್ನಪಾನಗಳನ್ನು ಕೊಡಿಸಿ ಗುಡಿಸಲನ್ನು ಕಟ್ಟಿಸಿ ನಿರಾಶ್ರಿತರಿಗೆ ಸಹಾಯಮಾಡುತ್ತಿರುವರು.

ಐರ್ಲಂಡಿನ ಉಲ್ಲೋಲಕಲ್ಲೋಲ ಸ್ಥಿತಿಯೂ ರಕ್ತಪಾತವೂ ಇನ್ನೂ ನಿಲ್ಲಲಿಲ್ಲ. ಸರ್ಕಾರದವರ ಪ್ರವರ್ತನದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಸೆರೆಮನೆಯಲ್ಲಿಡಲ್ಪಟ್ಟಿರುವ ಕಾರ್ಕ್ ಪಟ್ಟಣದ ಮೇಯರೂ ಅವರ ಜತೆಯ ೩೦-೪೦ ಜನರೂ ಸಹ ಆಹಾರವನ್ನು ಬಿಟ್ಟು ಇಲ್ಲಿಗೆ ೪೫ ದಿವಸಗಳಾದುವು. ಆದರೂ ಅವರು ಬದುಕಿರುವುದನ್ನು ನೋಡಿ ಅನೇಕರು ಆಶ್ಚರಿಪಡುತ್ತಿದ್ದಾರೆ. ಆಹಾರವಿಲ್ಲದೆ ಎಷ್ಟುಕಾಲ ಬದುಕಿರುವುದು ಸಾಧ್ಯವೆಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಫ್ರಾನ್ಸ್ ಅಧ್ಯಕ್ಷರಾಗಿರುವ ಡೆಶ್ಚನಲ್ ರವರು ಮನೋವೈಕಲ್ಯದಿಂದಲೂ ದೇಹಾಸ್ವಸ್ಥತೆಯಿಂದಲೂ ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ. ಒಂದು ಸಲ ಅವರು ಹೊಗೆಬಂಡಿಯಿಂದ ಬಿದ್ದುಬಿಟ್ಟರು. ಮೊನ್ನೆತಾನೇ ಒಂದು ಕೊಳದಲ್ಲಿ ಬಿದ್ದುಬಿಟ್ಟಿದ್ದು ಬದುಕಿಸಲ್ಪಟ್ಟರು. ಹಿಂದಣ ಪ್ರಸಿಡೆಂಟ್ ಪಾಯಿಂಕೇರರೂ, ಮತ್ತು ಕ್ಲೆಮೆಂಕೋರವರೂ ಕೂಡ ಈಗ ಅಧ್ಯಕ್ಷಪದವಿಯ ಉಮೇದುಗಾರಿಕೆಯು ಒಲ್ಲೆವೆಂದು ತಿರಸ್ಕರಿಸಿಬಿಟ್ಟರು. ಮಿಲ್ಲರಾಂಡ್ ಎಂಬ ಈಗಣ ಮಂತ್ರಿಗಳು ಅಧ್ಯಕ್ಷರಾಗುವುದಾದರೆ ದೇಶವೆಲ್ಲವೂ ಒಪ್ಪುವಂತಿದೆ. ಆದರೆ ಅವರೂ ನನಗೆ ಬೇಡವೆಂದು ಹೇಳುತ್ತಾರೆ.

ಜರ್ಮನ್ ಕೈಜರಿಗೆ ತನ್ನ ಕೃತಕರ್ಮಕ್ಕೆ ಇನ್ನೂ ಪಶ್ಚಾತ್ತಾಪವುಂಟಾದಂತೆ ತೋರುವುದಿಲ್ಲ. ಏಕೆಂದರೆ-ಜರ್ಮನ್ ಸೈನಿಕೋದ್ಯೋಗಿಗಳು ಟಾನೆಂಬರ್ಗ್ ಪಟ್ಟಣದಲ್ಲಿ ಮೊನ್ನೆತಾನೇ ಯುದ್ಧ ಸಾಂವತ್ಸರಿಕೋತ್ಸವವನ್ನು ನಡೆಯಿಸಿದಾಗ್ಗೆ ಅಲ್ಲಿಗೆ ಕೈಜರರು ಅಭಿನಂದನರೂಪ ತಂತೀವಾರ್ತೆಯನ್ನು ಕಳುಹಿಸಿ, ಅದರಲ್ಲಿ "ಸೈನಿಕೋದ್ಯೋಗಿಗಳು ನನ್ನ ಯುದ್ಧವನ್ನು ಜ್ಞಾಪಕದಲ್ಲಿಟ್ಟುಕೊಂಡಿರುವುದಕ್ಕಾಗಿ ನಾನು ಸಂತೋಷಿಸುತ್ತೇನೆ. ನನ್ನ ಪಿತೃಭೂಮಿಯು ಮತ್ತೊಂದು ಟಾನೆಂಬರ್ಗ್ ಯುದ್ಧವನ್ನು ಕಣ್ಣಿಂದ ನೋಡಲಿ ಎಂದು ನಾನು ಕೋರುತ್ತೇನೆ." ಎಂದು ತಿಳಿಯಿಸಿರುವರಂತೆ. ಈ ಕರಾಳ ಮೂರ್ತಿಗೆ ತಲೆಯುರುಳುವವರೆಗೂ ಯುದ್ಧಾಭಿನಿವೇಶವು ಶಾಂತವಾಗುವಂತೆ ತೋರುವುದಿಲ್ಲ.

ಅಮೇರಿಕಾ ನ್ಯೂಯಾರ್ಕ್ ಪಟ್ಟಣದ ನಡುಭಾಗದಲ್ಲಿರುವ ವಾಲ್ ಸ್ಟ್ರೀಟ್ ಎಂಬ ಬೀದಿಯಲ್ಲಿ ಕಳೆದ ತಾ|| ೧೬ ರಲ್ಲಿ ಹಗಲಿನ ಹೊತ್ತೇ ಅಭೂತಪೂರ್ವವಾದ ಅನರ್ಥವು ಪ್ರಾಪ್ತವಾಯಿತು. ಆ ಬೀದಿಯಲ್ಲಿ ಸಿಡಿಮದ್ದುಗಳನ್ನು ತುಂಬಿಕೊಂಡು ಹೋಗುತ್ತಿದ್ದ ಬಂಡಿಗೆ ಮತ್ತೊಂದು ಬಂಡಿಯು ಡಿಕ್ಕಿ ಹೊಡೆದುದರಿಂದ ಮದ್ದು ಸಿಡಿದು ಆ ಬೀದಿಯಲ್ಲೆಲ್ಲಾ ವಿಪರೀತಾನರ್ಥವನ್ನು ಮಾಡಿತಂತೆ. ಮಾರ್ಗವು ಅಗಾಧವಾಗಿ ಡೊಗರು ಬಿದ್ದಿತು. ಶಬ್ದವು ನೂರಾರು ಸಿಡಿಲಿನ ಗರ್ಜನೆಯಂತೆ ಆಗಿ ಪಟ್ಟಣಿಗರನ್ನೆಲ್ಲಾ ಎದೆ ಬಿರಿಯಿಸಿತು. ಬೆಂಕಿ ಜ್ವಾಲೆಯು ೫-೬ ಅಂತಸ್ತಿನ ಮಾಡದ ಮಟ್ಟಕ್ಕೆ ಎದ್ದಿತು. ಆ ಬಳಿಯಲ್ಲಿದ್ದ ದೊಡ್ಡ ದೊಡ್ಡ ಕಂಪೆನಿಗಳೂ ಅಂಗಡಿಗಳೂ ಹಾಳಾದವು. ೩೩ ಜನರು ಸತ್ತರು. ೪೦೦-೬೦೦ ಜನರಿಗೆ ಬಲವಾದ ಪೆಟ್ಟುಗಳು ಬಿದ್ದುವು. ೨೦ ಲಕ್ಷ ಡಾಲರುಗಳವರೆಗೆ ನಷ್ಟವು ಸಂಭವಿಸಿರಬೇಕೆಂದು ಯೋಚಿಸಲ್ಪಟ್ಟಿದೆ. ಆ ಬೀದಿಯ ಎಲ್ಲಾ ಮನೆಗಳ ಗಾಜು ಕಿಟಿಕಿಗಳೂ ಬಾಗಿಲುಗಳೂ ಹಾಳಾದುವು. ಬೀದಿಯೆಲ್ಲಾ ಗಾಜಿನ ಚೂರುಗಳಿಂದಲೂ ಇಟ್ಟಿಗೆ ಮುರುಕುಗಳಿಂದಲೂ ತುಂಬಿಹೋಯಿತು. ಸರ್ಕಾರ ಖಜಾನೆ ದೇವಾಲಯ ಮೊದಲಾದುವುಗಳನ್ನು ಕಾಯಲು ಸೈನಿಕರನ್ನು ಏರ್ಪಡಿಸಿದ್ದಾರೆ. ಸಂಭವಿಸಿದ ಪ್ರಮಾದಕ್ಕೆ ಬೇರೆ ಬೇರೆ ಕಾರಣಗಳು ಹೇಳಲ್ಪಡುತ್ತಿವೆ. ಇನ್ನೂ ಪರಿಶೋಧನೆಯು ನಡೆಯುತ್ತಿದೆ. ಬಂಡಿಗಳು ಡಿಕ್ಕಿ ಹೊಡೆದುದರಿಂದ ಈ ಅನರ್ಥವಾಯಿತೆಂಬುದು ಸುಳ್ಳಂತೆ. ಬೋಲ್ಷೆವಿಕ್ಕರ ಪ್ರಯತ್ನದಿಂದ ಇದು ನಡೆದಿದೆಯೆಂದು ಊಹಿಸಲ್ಪಟ್ಟಿದೆ. ಅಲ್ಲಿರುವ ಫ್ರಾನ್ಸ್ ಹೈ ಕಮಿಷನರಿಗೆ ಇದಕ್ಕೆ ಮೊದಲುದಿನವೇ ಹೆಸರಿಲ್ಲದೆ ಬರೆದುಬಂದಿದ್ದ ಒಂದು ಪತ್ರದಲ್ಲಿ "ಮಧ್ಯಾಹ್ನ ೩|| ಗಂಟೆಗೆ ಈ ಬೀದಿಯಲ್ಲಿ ದೊಡ್ಡ ಅನರ್ಥವಾಗುತ್ತದೆ. ಎಚ್ಚರಿಕೆ" ಎಂದು ಬರೆಯಲ್ಪಟ್ಟಿದ್ದಿತಂತೆ. ಇದರ ಮೇಲೆ ಇದು ಪ್ರಯತ್ನಪೂರ್ವಕವಾಗಿ ಮಾಡಲ್ಪಟ್ಟ ಅತ್ಯಾಚಾರವೆಂದು ಸಿದ್ಧವಾಗಿರುತ್ತದೆ.

ಅಮೇರಿಕನ್ ರೋಮಹರಿ ಪೌಡರ್.

(ಕೇಶನಾಶಿನಿ ಪುಡಿ).

ಇದು ವಿಲಾಯತಿಯಲ್ಲಿ ತಯಾರಾದದ್ದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಪುಡಿಯನ್ನು ಸವರಿದ ಮಾತ್ರಕ್ಕೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆಯುವದು ಕ್ರಯ ಡಬ್ಬ 1 ಕ್ಕೆ 0—12—0.

ವಿಳಾಸ:—ಮರಾಠ ಟ್ರೇಡಿಂಗ್ ಕಂಪೆನಿ ತಗಡು
ಸಿಟು ಸ್ವತಂತ್ರ ಪ್ರಾತಿನಿಧ್ಯ

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬ-ಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

ಪ್ಯಾರಿಷ್ ಶಾಲ್.

ಚಳಿಗಾಲದಲ್ಲಿಯೂ, ಮಳೆಗಾಲದಲ್ಲಿಯೂ ಹೊದಿಯಲಿಕ್ಕೆ ಬಹು ಲಾಯಖಾದದ್ದು. ಪ್ರಯಾಣಿಕರೂ, ಇತರರೂ, ಪ್ರತಿ ದಿನವೂ ಉಪಯೋಗಿಸಬಹುದು. ಬಣ್ಣ ಹೋಗದು. 5 ಮೊಳ ಉದ್ದವು, 2½ ಮೊಳ ಅಗಲವು ಇದೆ. ಕ್ರಯ ಶಾಲು 1ಕ್ಕೆ 5—0—0

ಕಂಬಳಿ ಟೋಪಿ.

ಈ ಟೋಪಿಗಳು ಸಾಚ ಉಲ್ಲನ್ ದಾರದಿಂದ ತಯಾರಿಸಿದೆ ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರಿವಿಗೂ ಉಪಯೋಗಿಸಬಹುದು.

ಕ್ರಯ ಉಲ್ಲನ್ ಟೋಪಿ 1 ಕ್ಕೆ 1—6—0

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಕರ್ಣಾಟಕ ರಾಮಾಯಣಸಂಗ್ರಹವು. 1

ಶ್ರೀ ರಾಮನಚರಿತ್ರೆಯು ಮೊದಲು ವಾಲ್ಮೀಕಿ ಋಷಿಯಿಂದ ಸಂಸ್ಕೃತದಲ್ಲಿ ಬರೆಯಲ್ಪಟ್ಟಿತು. ಆ ಮೇಲೆ ಅನೇಕ ಜನ ಕವಿಗಳು ಕನ್ನಡದಲ್ಲಿ ಬರದು ಇದ್ದಾಗ್ಯೂ ಆ ಗ್ರಂಥಗಳು ಸರ್ವರಿಗೂ ಸುಲಭಗಳಾಗಿ ಇಲ್ಲಾ. ಈ ಲೋಪವನ್ನು ಪರಿಹರಿಸಬೇಕೆಂಬ ಉದ್ದೇಶದಿಂದ ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ ಮ॥ ರಾ॥ ಮುಜರಾಯ ಭಕ್ಷಿಗಳವರಾದ ಎಚ್. ಲಿಂಗರಾಜೇ ಅರಸಿನವರು ಬಿಡಿಗನ್ನಡದಿಂದ ಭಾಮಿನೀ ಷಟ್ಪದಿ ಪದ್ಯ ರೂಪದಲ್ಲಿ ರಚಿಸಿರುವರು. ಈ ಗ್ರಂಥವು ಹೊರಗೆ ಬಂದ ಒಂದೆರಡು ತಿಂಗಳೊಳಗಾಗಿ ಕನ್ನಡ ನಾಡಿನೊಳಗೆಲ್ಲಾ ಪ್ರಚಾರಕ್ಕೆ ಬಂದು ಬಿಟ್ಟಿರುತ್ತದೆ. ಇದರಿಂದಲೇ ಇದರ ವಿಷಯದಲ್ಲಿ ಹೆಚ್ಚು ಹೊಗಳಬೇಕಾಗಿಲ್ಲ. ಅಪೇಕ್ಷೆಯುಳ್ಳವರು ತರಿಸಿ ಓದಿ ಶ್ರೀ ರಾಮಕಥಾಮೃತವನ್ನು ಸುಲಭವಾಗಿ ಪಾನ ಮಾಡಿ ಆನಂದಿಸತಕ್ಕದ್ದು. ಪುಸ್ತಕ ದೊರೆಯುವಸ್ಥಳ.—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಡೀಲರ್ಸ್ ಕೃಷ್ಣರಾಜ ಮೊಹಲ್ಲಾ ಮೈಸೂರು.

ಹಂಟಿಂಗ್ ಗಡಿಯಾರ.

ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಎರಡು ಕಡೆಯೂ ನಿಕ್ಕಲಿನ ಮುಚ್ಚಳವಿದೆ. ನೋಡಲಿಕ್ಕೆ ಬಹು ಚೆನ್ನಾಗಿದೆ. ಇದು ವಿಲಾಯತಿಯಲ್ಲಿ ತಯಾರಿಸಿದ್ದು. ಒಂದು ಗಡಿಯಾರವಿದ್ದರೆ ಬಹಳ ದಿನಗಳ ವರಿವಿಗೂ ಬಾಳಿಕೆ ಬರುವದು. ಕ್ರಯ ೧ ಕ್ಕೆ ೬-೦-೦.

ವಿಳಾಸ:-ಧೈರ್ಯಲಕ್ಷ್ಮಿ ಅಂಡ್ ಕೋ,
ಪೋ॥ ಬಾ॥ ನಂ. 265,
24 ಮದರಾಸು.

ಸತ್ಯಮೇವ ಜಯತೇ.

ಧಾತುಪುಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಪಕ್ಕ ಮದನೋದ್ಭವ ಗುಳಿಗೆ. ಇಲ್ಲ.
(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 33

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ, ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. [illegible] ಬನವಾಸಿ ಉತ್ತರಕನಡಾ.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 45

ನಾವು ಎ. ಆಲ್ ಬ್ಯುಕ್ಕ್ಯುಯರ್ ಕ್ಕ್ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗ್ಯೆರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗ್ಯೆರೆ ಸಂಗತಿ ಪತ್ರ ಮುಖಾಂತರ ತಿಳಿದುಕರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿಂದ ಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ಧಪ್ಪಾ ತಡಕಲ್ಲು,
43 ಸಾ॥ ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಇಸ್ತಿಹಾರ್.

ತಾರೀಖು 17 ನೇ ಜುಲೈ 1920. 6—5

ಮೈಸೂರು ಸ್ಟೇಟ್ ಲೈಫ್ ಇನ್‌ಷೂರೆನ್ಸ್ ಏರ್ಪಾಡಿನಲ್ಲಿ ತಮ್ಮ ಜೀವಗಳನ್ನು ವಿಮೆ ಮಾಡಿರುವ ಸರ್ಕಾರದ ಆಫೀಸರಿಗೂ ಅಂಥಾ ಆಫೀಸರಲ್ಲದ ಇತರರಿಗೂ ಮತ್ತು ಹಾಗೆ ವಿಮೆ ಮಾಡಿರುವವರು ಮೃತಪಟ್ಟಿರುವ ಸಂದರ್ಭಗಳಲ್ಲಿ ಅವರ ವಾರಸುದಾರರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

1920 ನೇ ಸೆಪ್ಟಂಬರು 30 ನೇ ತಾರೀಖಿನೊಳಗಾಗಿ ಪಾವತಿಯಾಗತಕ್ಕ ಮೊಬಲಗಿಗೆ ಉಂಟಾಗುವ ಹಕ್ಕನ್ನು ಸ್ಪಷ್ಟವಾದ ಮತ್ತು ಪೂರ್ತಿಯಾದ ರುಜುವಾತನ್ನು ಕೊಟ್ಟಲ್ಲಿ ಹಕ್ಕುದಾರರ ಅಪೇಕ್ಷೆಯ ಮೇಲೆ ಮೈಸೂರು ಸರ್ಕಾರದ ಶೇಕಡ 6¼ ರಂತೆ ಬಡ್ಡಿಯುಳ್ಳ ಸಾಲಕ್ಕೆ ಚಂದಾ ಮಾಡಿ, ಸಾಲದ ಇಸ್ತಿಹಾರಿನಲ್ಲಿ ವಿವರಿಸಿರುವವುಗಳ ಪೈಕಿ ಅವರಿಗೆ ಬೇಕಾದ ಅಂಕಿತದ ಬಾಂಡುಗಳನ್ನು ಕೊಡಲಾಗುವುದು. ಈ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳಲಿಚ್ಛೈಸುವವರು ತಮ್ಮ ಅಭಿಪ್ರಾಯವನ್ನು ತಕ್ಷಣ ಈ ಕೆಳಗೆ ರುಜುಮಾಡಿರುವವರಿಗೆ ದಯವಿಟ್ಟು ತಿಳಿಸಬೇಕು. ಮತ್ತು ಕೂಡಲೇ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವದಕ್ಕಾಗಿ ತಮ್ಮ ಹಕ್ಕುಗಳನ್ನು ತ್ವರಿತವಾಗಿ ರುಜುವಾತು ಸ್ಥಾಪಿಸಕೊಡತಕ್ಕದ್ದು. ವಿಮೆಯ ಮೊಬಲಗು ಹಕ್ಕುದಾರರು ಅಪೇಕ್ಷಿಸುವ ಅಂಕಿತ ಮೊಬಲಗುಗಳ ಬಾಂಡುಗಳನ್ನು ಕೊಳ್ಳುವದಕ್ಕೆ ಸರಿಹೋಗದ ಪಕ್ಷದಲ್ಲಿ, ಬಾಕೀ ಬೀಳುವ ಮೊಬಲಗನ್ನು ಸಂಸ್ಥಾನದ ಯಾವ ಖಜಾನೆಗಾದರೂ ಕಟ್ಟಿ, ಅದರ ರಶೀತಿಯನ್ನು ಮುಂದಿನ ನಡವಳಿಗೆ ಬಗ್ಗೆ ಈ ಆಫೀಸಿಗೆ ರವಾನಿಸಬಹುದು. ಅಥವಾ ಅಪೇಕ್ಷಿತ ಅಂಕಿತ ಮೊಬಲಗಿಗೆ ಕೇವಲ ಸಮೀಪವಾಗಿರುವ ಮೊಬಲಗಿನ ಬಾಂಡುಗಳೊಂದಿಗೆ ನಿಂತ ಹಣವನ್ನು ನಗದಾಗಿ ವಾಪಸು ಕೊಡಲಾಗುವುದು.

ಟಿ. ಸತ್ಯರಾಜಚೆಟ್ಟಿ, ಸೆಕ್ರಟರಿ,
ಮೈಸೂರು ಸರ್ಕಾರದ ಇನ್‌ಷೂರೆನ್ಸ್ ಕಮಿಟಿ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 43

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿದಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರವಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಳರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಯೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರಬಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್‌ವಗ್ಯೆರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಸೆಪ್ಟಂಬರ್ ತಾ॥ ೨೬ ರಿಂದ ೧೯೨೦ ನೆಯ ಅಕ್ಟೋಬರ್ ತಾ॥ ೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಭಾದ್ರಪದ ಶುದ್ಧ ತ್ರಯೋದಶಿಯಿಂದ ಭಾದ್ರಪದ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
26	ಭಾನು	ತ್ರಯೋ	1-16	ಶತ	22-11	11
27	(1) ಸೋಮ	ಚತು	2-37	ಪೂಭಾ	24-42	12
28	(2) ಮಂಗಳ	ಪೌರ್ಣ	2-43	ಉಭಾ	25-57	13
29	ಬುಧ	ಪಾ.ಬಿ	1-34 58-20	ರೇವ	25-57	14
30	ಗುರು	ತದಿ	56-25	ಅಶ್ವಿ	24-52	15
1	ಶುಕ್ರ	ಚೌತಿ	51-55	ಭರ	22-47	16
2	ಶನಿ	ಪಂಚ	46-47	ಕೃತ್ತಿ	19-55	17

(1) ಅನಂತಪದ್ಮನಾಭವ್ರತಂ, ಉಮಾಮಹೇಶ್ವರವ್ರತಂ. (2) ಅಪರಪಕ್ಷಾರಂಭಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪತ್ರವ್ಯವಹಾರ.

ಹುಕ್ಕೇರಿ.

ತಾ॥ ೨೨-೮-೨೦ ನೆ ದಿವಸ ವಿರಕ್ತಮಠದ ಶ್ರೀ ಶಿವಲಿಂಗದೇವರ ಅಧ್ಯಕ್ಷತೆಯಲ್ಲಿ ಜಂಗೀಜಾಹೀರ ಸಭೆಯು ಕೂಡಿಸಲ್ಪಟ್ಟಿತು. ಎಲ್ಲ ಜಾತಿಯ ಬ್ರಾಹ್ಮಣೇತರರೂ ಬಂದಿದ್ದರು. ಬೆಳಗಾಂವದಿಂದ ಸುಪ್ರಸಿದ್ಧ ಚೌಗುಲೆ ಬಿ. ಎ. ಎಲ್. ಎಲ್. ಬಿ. ಇವರು ಮುಂಬೈ ಕಾಯದೆ ಕೌನ್ಸಿಲ್ಲಿಗೆ ಮತ ಕೊಡಬೇಕಾದರೆ ಯಾರಿಗೆ ಕೊಡಬೇಕೆಂಬ ವಿಚಾರ ಮಾಡಿ ಕೊಡಿರಿ ಎಂಬ ವಿಷಯಕ್ಕೆ ಅನೇಕ ಉದಾಹರಣೆ ಕೊಟ್ಟು ಹೇಳಿದರು. ಇದೇ ವಿಷಯವಾಗಿ ಸಾಖರೆ ಎಂ. ಎ. ಲತ್ತೆ ಬಿ. ಎ., ಎಲ್. ಬಿ. ವಕೀಲ ಉಭಯರೂ ಒಂದೊಂದು ತಾಸಿನವರೆಗೆ ಮಾತನಾಡಿ ಸಾವಿರಾರು ಜನರ ಮನಸ್ಸನ್ನು ಆಕರ್ಷಣಮಾಡಿಬಿಟ್ಟರು. ಇದೇ ವಿಷಯದ ಮೇಲೆ ಅನೇಕ ಜನರ ಭಾಷಣವಾದನಂತರ ಅಧ್ಯಕ್ಷರು ಇದೇ ವಿಷಯವನ್ನು ಪುಷ್ಟೀಕರಿಸಿ ಹೇಳಿದರು. ಈ ಸಭೆಯು ಬ್ರಾಹ್ಮಣೇತರರದು ಎಂಬ ಶಬ್ದ ಬರಲಿಕ್ಕೆ ಕಾರಣವೇನೆಂದರೆ: - ನಾವು ವಿದ್ಯೆಯಿಂದ ಹಿಂದೆ ಬಿದ್ದಿರುವೆವು ವಿದ್ಯಾಧಿಕರಾಗಿರುವವರಿಗೆ ಬ್ರಾಹ್ಮಣರೆಂದೂ ವಿದ್ಯೆಯಲ್ಲಿ ಹಿಂದೆ ಬಿದ್ದಿರುವವರಿಗೆ ತದಿತರರೆಂದೂ ಸಂಕೇತವು ಮಾತ್ರ. ವಿಚಾರತಃ ನಾವು ಎಲ್ಲರೂ ಬ್ರಾಹ್ಮಣರೇ ಎಂದು ವೇದ ಉಪನಿಷತ್ ವಾಕ್ಯಗಳ ಆಧಾರಗಳನ್ನು ಕೊಟ್ಟು ಹೇಳಿದರು. ಮತ್ತು ಮುಂಬೈ ಕಾಯದೆ ಕೌನ್ಸಿಲ್ಲಿಗೆ ಪಂಡಿತಪ್ಪಾ ಚಿಕ್ಕೋಡಿ ಬಿ. ಎ. ಮತ್ತು ಚೌಗುಲೆ ಇವರಿಗೆ ಮತ ಕೊಡಬೇಕೆಂದು ಠರಾವಾಗಿ ದಿಲ್ಲಿ ಕಾಯದೆ ಕೌನ್ಸಿಲ್ಲಿಗೆ ಲತ್ತೆ ಬಿ. ಎ. ಎಲ್. ಎಲ್. ಬಿ. ವಕೀಲ ಇವರು ನಿಂತಿರುವರು. ಇವರಿಗೆ ಮನಮುಟ್ಟಿ ಸಹಾಯ ಮಾಡುತ್ತೇವೆಂದು ಸರ್ವರೂ ಹೇಳಿದ ನಂತರ ಠರಾವು ಪಾಸಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಬಡ ಸ್ಕೂಲ್‌ಮಾಸ್ತರುಗಳ ಗೋಳಾಟ.

ಅಯ್ಯಾ, ಘನವೆತ್ತ ನಮ್ಮ ಸರ್ಕಾರದವರು ವಿಲೇಜ್ ಸ್ಕೂಲ್ ಮಾಸ್ತರುಗಳಿಗೆ ಸಕಾಲಕ್ಕೆ ತಲಬು ಪಾವತಿಯಾಗದೆ ತುಂಬಾ ಪೇಚಾಡುತಲ್ಲಾ " ಎಂಬುವ ವಿಷಯವನ್ನು ಗಮನಕ್ಕೆ ತಂದು ಸರ್ಕಾರದ ಖರ್ಚಿನಿಂದಲೇ ಮನಿಯಾರ್ಡರು ಮಾಡುವ ಏರ್ಪಾಡನ್ನು ಜಾರಿಗೆ ಕೊಟ್ಟರು. ಆದರೂ ಸರ್ಕಾರದವರ ಕೋರಿಕೆಯು ಸಫಲವಾಗದೆ ಹೋದದ್ದಕ್ಕಾಗಿ ತುಂಬಾ ವ್ಯಸನಪಡಬೇಕಾಗಿದೆ.

ಈ ಬಡಮಾಸ್ತರುಗಳ ಗೋಳಾಟವು ಶಮನವಾಗಬೇಕಾಗಿದ್ದಲ್ಲಿ ಪ್ರತಿಯೊಂದು ರೇಂಜ್ ಯಾ. ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರುಗಳು ಪ್ರತಿ ಮಾಹೆ ೨೮ ರಲ್ಲಿ ಸರಿಯಾಗಿ ಬಿಲ್ಲುಮಾಡಿ, ತಾಲ್ಲೂಕು ಟ್ರೆಜರಿಗೆ ಕಳುಹಿಸಿ ಆ ಬಿಲ್ಲು ಕ್ಯಾಷಾಗುವವರೆಗೂ ರೇಂಜ್ ಇನ್‌ಸ್ಪೆಕ್ಟರವರ ಯಾ. ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರವರ ಆಫೀಸುಗಳ ತಲಬು ಡ್ರಾ ಮಾಡಬಹುದಾದ ಬಿಲ್ಲುಗಳನ್ನು ಆಮಲ್ದಾರರ ರುಜು ಹೊಂದಿದ್ದ ವಿ. ಇ. ಸ್ಕೂಲ್ ಮಾಸ್ತರುಗಳ ತಲಬು ಕ್ಯಾಷಾಗಿದೆ ಎಂಬುವ ಸರ್ಟಿಫಿಕೇಟನ್ನು ಮೇಲ್ಕಂಡ ಇನ್‌ಸ್ಪೆಕ್ಟಿಂಗ್ ಆಫೀಸುಗಳ ಯಾ. ಆಫೀಸರುಗಳ ಬಿಲ್ಲಿಗೆ ಮಲಪೂಫಿಸಿದಲ್ಲದೆ ಅವರುಗಳ ತಲಬನ್ನು ಕ್ಯಾಷ್ ಮಾಡಲಾಗದೆಂದು ಘನವೆತ್ತ ಸರ್ಕಾರದವರು ಆರ್ಡರು ಪಾಸ್ ಮಾಡಿದರೆ ಖಂಡಿತವಾಗಿಯೂ ಬಡಮಾಸ್ತರುಗಳ ಗೋಳಾಟವು ನಿವಾರಣೆಯಾಗುವದರಲ್ಲಿ ಸಂಶಯವಿಲ್ಲ. ಇದಕ್ಕೆ ನಿದರ್ಶನವಾಗಿ ಬೆಂಗಳೂರು ತಾಲ್ಲೂಕಿನ ಮಾಸ್ತರುಗಳ ಗೋಳಾಟವೇ ಸಾಕ್ಷಿಯಾಗಿದೆ. ನಮ್ಮ ಸರ್ಕಾರದವರು ಇನ್ನುಮೇಲಾದರೂ ಈ ಯೇರ್ಪಾಡನ್ನು ಜಾರಿಗೆ ತಂದಾರೆಂಬದಾಗಿ ಹಾರೈಸುತ್ತೇನೆ.

ಬಡಮಾಸ್ತರುಗಳ ಹಿತೈಷಿ.

ಬೆಂಗಳೂರಿನ ವೀರಶೈವರು ಮತ್ತು ಅವರ ಮಠಗಳು.

ಈ ವಿಷಯವಾಗಿ ಕಳೆದ ತಿಂಗಳು ಮೈಸೂರು ಸ್ಟಾರಿನಲ್ಲಿ ಒಂದು ಲೇಖನವು ಬರೆಯಲ್ಪಟ್ಟಿತಷ್ಟೆ. ಈಚೆಗೆ ಎಂದರೆ ತಾ॥ ೧೯-೯-೧೯೨೦ ನೆ ಭಾನುವಾರ ಸಾಯಂಕಾಲ ೪ ಘಂಟೆಗೆ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಕೈ. ಗೌ॥ ವೀರಭದ್ರಪ್ಪನವರ ಧರ್ಮ ಪಾಠಶಾಲೆಯ ಹಾಲಿನಲ್ಲಿ ಬೆಂಗಳೂರು ವೀರಶೈವ ವರ್ತಕಮಂಡಲಿಯವರು ಪ್ರಸಿದ್ಧಪತ್ರಿಕೆಯ ಮೂಲಕ ಇತರ ವೀರಶೈವರನ್ನೂ ಬರಮಾಡಿಕೊಂಡು ಮ॥ ರಾ॥ ಪಿ. ಎಂ. ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡಿಸಿದರು. ಹಾಲಿ ಹೀನಸ್ಥಿತಿಯಲ್ಲಿರುವ ಚಿಕ್ಕಪೇಟೆ ಶ್ರೀ ಮಹಂತಿನ ಮಠವನ್ನೂ ಇದಕ್ಕೆ ಸೇರಿದ ಪರಾಧೀನವಾಗಿರತಕ್ಕ ಸ್ವತ್ತುಗಳನ್ನೂ ಜೀರ್ಣೋದ್ಧಾರ ಮಾಡುವುದಕ್ಕೂ, ಮತ್ತು ಒಬ್ಬ ವಿದ್ವಾಂಸರಾದ ಮೂರ್ತಿಯನ್ನು ನೇಮಿಸುವುದಕ್ಕೂ ಸೂಕ್ತವಾದ ಏರ್ಪಾಟನ್ನು ಮಾಡಲು ಈ ಸಭೆಯು ಸೇರಿಸಲ್ಪಟ್ಟಿತ್ತು. ಅಧ್ಯಕ್ಷರಾದ ಮ॥ ರಾ॥ ಪಿ. ಎಂ. ಬಸಪ್ಪನವರು ಆ ದಿನದ ಸಭೆಯ ಉದ್ದೇಶವನ್ನೂ ಮುಂದೆ ಬೆಂಗಳೂರಿನ ವೀರಶೈವರು ಮಾಡಬೇಕಾದ ಕಾರ್ಯಕ್ರಮವನ್ನೂ ತಿಳುಹಿಸಿ ಮಠಗಳು ಇಷ್ಟು ಹೀನಸ್ಥಿತಿಗೆ ಬರಲು ಸಮಾಜದ ಪ್ರತಿಯೊಬ್ಬನೂ ಜವಾಬ್ದಾರನಾಗಿರುತ್ತಾನೆಂತಲೂ, ಇನ್ನು ಮುಂದೆಯೂ ಇದೇ ರೀತಿ ಅಲಕ್ಷ್ಯದಿಂದಿದ್ದರೆ ನಮ್ಮ ಕಾಲಿನ ಮೇಲೆ ನಾವೇ ಕಲ್ಲನ್ನು ಹಾಕಿಕೊಂಡಂತಾಗುತ್ತದೆಂತಲೂ, ಆದುಕಾರಣ ಕಾಲಾನುಗುಣವಾದ ನೂತನ ಏರ್ಪಾಟುಗಳನ್ನು ಮಾಡಿಕೊಂಡು ಇತರ ಜನಾಂಗದವರಂತೆ ನಾವುಗಳೂ ಮುಂದುವರಿಯಲು ಪ್ರಯತ್ನಪಡಬೇಕೆಂತಲೂ, ಈಗ ಸ್ಥಾಪಿಸಲ್ಪಟ್ಟಿರುವ ವೀರಶೈವ ವರ್ತಕಮಂಡಲಿಯಿಂದ ಆಗತಕ್ಕ ಪ್ರಯೋಜನವು ವಿಶೇಷವಾಗಿರುವುದರಿಂದ ಅದಕ್ಕೆ ಮತಾಭಿಮಾನಿಯಾದ ಪ್ರತಿಯೊಬ್ಬನೂ ಉತ್ತೇಜನವನ್ನು ಕೊಡಬೇಕೆಂತಲೂ ಮೊದಲಾಗಿ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅನಂತರ ಬೆಂಗಳೂರಿನ ದೇಶದ ಶೆಟ್ಟರೂ, ಯಜಮಾನರೂ ತಾವುಗಳು ಆ ದಿನದ ಮೀಟಿಂಗಿಗೆ ಬರಲು ಅವಕಾಶವಾಗಲಿಲ್ಲವಾಗಿ ತಮ್ಮ ಕಡೆಯ ಪ್ರತಿನಿಧಿಗಳೊಬ್ಬರನ್ನು ಕಳುಹಿಸಿಕೊಟ್ಟಿರುತ್ತೇವೆಂತಲೂ, ಮಠದ ಸ್ವತ್ತುಗಳನ್ನು ಹಾಲಿ ಸ್ವಾಧೀನದಲ್ಲಿಟ್ಟುಕೊಂಡಿರುವ ವಿರಾಯಿ ಲಕ್ಕ್ಮಯ್ಯನವರ ವಾರಸುದಾರರಿಗೆ ಸ್ವತ್ತುಗಳನ್ನು ಬಿಟ್ಟುಕೊಡುವಂತೆ ನೋಟೀಸನ್ನು ಕೊಟ್ಟಿರುತ್ತೇವೆಂತಲೂ, ಈ ತಿಂಗಳ ಆಖೈರಿನೊಳಗಾಗಿ ಆ ದಿವಸ ಸಭೆಗೆ ಬಂದಿದ್ದವರನ್ನೆಲ್ಲಾ ಪುನಃ ಬರಮಾಡಿಕೊಂಡು ಮುಂದಿನ ಕಾರ್ಯಕ್ರಮವನ್ನು ಗೊತ್ತು ಪಡಿಸುವುದಾಗಿಯೂ ಹೇಳಿಕಳುಹಿಸಲು, ಆ ದಿವಸದ ಮೀಟಿಂಗು ಅಡ್ಜರ್ನ್ ಮಾಡಲ್ಪಟ್ಟಿತು.

ಓರ್ವಮತಾಭಿಮಾನಿ.

ಗಾಂಧಿಯವರು ಮಹಾತ್ಮರಲ್ಲ.

ಸ್ವಾಮಿ!

ಮ॥ ಗಾಂಧಿಯವರು ಕಳೆದ ತಿಂಗಳು ಮದರಾಸು ಪ್ರಾಂತದಲ್ಲಿ ಸಂಚರಿಸುತ್ತಿದ್ದಾಗ ಮದರಾಸು ಪಟ್ಟಣದಲ್ಲೂ ಬೆಜವಾಡದಲ್ಲೂ ಕೆಲಕೆಲವರು ಗಾಂಧಿಯವರನ್ನು ಕುರಿತು ಈಗಿನ ಬ್ರಾಹ್ಮಣಬ್ರಾಹ್ಮಣೇತರ ಪಕ್ಷಗಳ ಬಡಿದಾಟದ ಸಂಬಂಧವಾಗಿ ನಿಮ್ಮ ಅಭಿಪ್ರಾಯವೇನೆಂದು ಕೇಳಿದಾಗ್ಯೆ—"ನನ್ನಂಥವನಾಗಿದ್ದರೆ ಬ್ರಾಹ್ಮಣೇತರರಿಗೆ ಅವರು ಕೇಳುವುದಕ್ಕಿಂತಲೂ ಹೆಚ್ಚಾದ ಸ್ಥಾನಗಳನ್ನು ಕೌನ್ಸಿಲ್ಲುಗಳಲ್ಲಿ ಕೊಡುತ್ತಿದ್ದೆ. ಬ್ರಾಹ್ಮಣರು ಇತರರ ನಂಬಿಕೆಯನ್ನು ಕಳೆದುಕೊಂಡಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಬ್ರಾಹ್ಮಣರು ತಾವಾಗಿ ತಮ್ಮ ಅಹಂಕಾರದಿಂದ ಇತರರಿಗೂ ತಮಗೂ ಮಧ್ಯದಲ್ಲಿ ಭೇದವನ್ನು ಕಲ್ಪಿಸಿಕೊಂಡಿದ್ದಾರೆ. ಈ ಕಲ್ಪನೆಯು ಯೂರೋಪಿಯನ್ ಜನರು ಭಾರತೀಯರೊಡನೆ ಕಲ್ಪಿಸಿಕೊಂಡಿರತಕ್ಕ ಭೇದಕ್ಕೆ ಸಮನಾಗಿದೆ. ಯಾವುದೊಂದು ಜಾತಿಯ ಹೆಚ್ಚುಗೆಯನ್ನೂ ನಾನು ಒಪ್ಪುವುದಿಲ್ಲ. ಮಹಮ್ಮದೀಯರೂ ಹಿಂದೂಗಳೂ ಒಂದಾಗುತ್ತಿರುವ ಈಗಿನ ಕಾಲದಲ್ಲಿ ಹಿಂದುಗಳೇ ಒಬ್ಬರಿಗೊಬ್ಬರು ನಾಹೆಚ್ಚು ತಾಹೆಚ್ಚೆಂದು ಬಡಿದಾಡಿ ಭೇದಗಳನ್ನು ಕಲ್ಪಿಸಿಕೊಳ್ಳುವುದು ತಪ್ಪು" ಎಂದು ಉತ್ತರ ಕೊಟ್ಟಿರುವರು. ಇಷ್ಟು ಮಾತ್ರ ಮ॥ ಗಾಂಧಿಯವರು ಹೇಳಿದುದು ಕೂಡ ಮೈಸೂರು ಸಂಪದಭ್ಯುದಯದ ಲೇಖಕರ ಸೈರಣೆಗೆ ಬರಲಿಲ್ಲ. ಇಂಥ ಮಾತನ್ನು ಗಾಂಧಿಯವರು ಆಡಿದುದರಿಂದ ಅವರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ದುರಭಿಪ್ರಾಯ ಹುಟ್ಟುವಂತೆ ಮಾಡಿದರೆಂದೂ, ಅವರಲ್ಲಿ ಮಹತ್ವವು ಇನ್ನೂ ಉಂಟಾಗಿಲ್ಲವೆಂದೂ ಈ ಲೇಖಕರು ಬರೆದು ಆತ್ಮಶಾಂತಿ ಮಾಡಿಕೊಂಡಿರುವರು. ಪಾಪ! ಗಾಂಧಿಯವರಿಗೆ ಇದ್ದುದನ್ನು ಮುಚ್ಚಿ ಆಡುವ ಸ್ವಭಾವವಿಲ್ಲದೆ ಹೋದುದರಿಂದ ಇಂಥ ಶಾಪಕ್ಕೆ ಗುರಿಯಾಗಬೇಕಾಯಿತು! ಈಗಣ ಬ್ರಾಹ್ಮಣಬ್ರುವರಲ್ಲಿ ಹುಟ್ಟಿ ಹಬ್ಬುತ್ತಿರುವ ಪರೋತ್ಕರ್ಷಾಸಹನೆ ದುರಾಚಾರ ದುರ್ಗುಣಗಳನ್ನು ಕೂಡ ಅವರು ವರ್ಣನೆಮಾಡಿಬಿಟ್ಟಿದ್ದರೆ ಮಹಾತ್ಮರೆಂಬ ಟೈಟಲಿಗೆ ಪ್ರತಿಯಾಗಿ ಸಂಪದಭ್ಯುದಯ ಲೇಖಕರಿಂದ ದುರಾತ್ಮರೆಂಬ ಟೈಟಲನ್ನು ಪಡೆದುಕೊಳ್ಳದೆ ಹೋಗುತ್ತಿರಲಿಲ್ಲ. ಅವರ ಅದೃಷ್ಟವು ಚೆನ್ನಾಗಿತ್ತು. ಈ ಜನರು ಪರರನ್ನು ಏರಿಸುವ ಇಳಿಸುವ ತನಗಳು ಎಷ್ಟು ಸೂಕ್ಷ್ಮವಾಗಿ ಯಾವ ತತ್ತ್ವದ ಮೇಲೆ ಅವಲಂಬಿಸಿಕೊಂಡಿವೆಯೆನ್ನುವುದಕ್ಕೆ ಇದೊಂದು ದೃಷ್ಟಾಂತವಾಗಿರುವುದು. ಸಜ್ಜನರೂ ಘನತೆವಂತರೂ ಇಂಥವರ ಹೊಗಳುವಿಕೆಗೂ ಬೊಗಳುವಿಕೆಗೂ ಸಮಾನವಾದ ಬೆಲೆಯನ್ನೇ ಇಟ್ಟಿರುವರು.

ಗಾಂಧಿಭಕ್ತ.

ಶ್ರೀಮತ್ಪ್ರಣವಸ್ವರೂಪರಾದ ತರೀಕೆರೆ ಎಣ್ಣೆಹೊಳೆ ಬೃಹನ್ಮಠಾಧ್ಯಕ್ಷ ನಂದೀ ಉತ್ಸವದ ಶ್ರೀಗುರು ವೃಷಭೇಂದ್ರ ಸ್ವಾಮಿಯವರ ಸನ್ನಿಧಾನದಿಂದ. —

ಕಡೂರು ಡಿಸ್ಟ್ರಿಕ್ಟು ತಾಲ್ಲೂಕಾಮಳೆ ಗ್ರಾಮಾಂತರಗಳ ಸಮಸ್ತ ವೀರಶೈವ ಸಮಾಜದವರಿಗೆ ಕೃತಪಡಿಸುವುದೇನೆಂದರೆ—ತರೀಕೆರೆ ತಾ॥ ಲಿಂಗದಹಳ್ಳಿ ಸಮ್ಮತು ನಂದೀ ಕ್ಷೇತ್ರದಲ್ಲಿ ದರವರ್ಷವೂ ಶ್ರೀ ಶರಣ ನುಲೇಚಂದಪ್ಪನವರ ಜಾತ್ರೆಯು ನಡೆಯುವುದೂ, ಸಾವಿರಾರು ಜನರು ಸೇರಿ 1 ವಾರದವರಿವಿಗೂ ಮಹಾಗಣಾರಾಧನೆ, ದಾಸೋಹ ನಡೆಯುವುದೂ ಸರ್ವರಿಗೂ ಗೊತ್ತಾಗಿರತಕ್ಕದ್ದಷ್ಟೆ. ಈ ರೌದ್ರಿ ಸಂ॥ ಆಶ್ವಯುಜ ಶುದ್ಧ ೭ ಸೋಮವಾರ ಅಂದರೆ ತಾ॥ 18-10-20 ರ ದಿವಸ ಜಾತ್ರೆಯ ಮಹೋತ್ಸವವು ಪ್ರಾರಂಭವಾಗುವುದರಿಂದ ಈ ಜಾತ್ರೆಯ ಸಂದರ್ಭದಲ್ಲಿ ಇತಃಪರಃ ಈ ನವನಾಗರಿಕ ಕಾಲದ ಸುಧಾರಣೆಯಂತೆ ಪ್ರತಿ ವರ್ಷವೂ ಜಾತ್ರೆಕಾಲದಲ್ಲಿ (ಮತಸುಧಾರಣೆ) ಧಾರ್ಮಿಕಸಭೆ ನಡೆಯುವಂತೆ ಏರ್ಪಡಿಸಿ, ನಮ್ಮ ಮತದ ವಿದ್ವಾಂಸರಿಂದ ಗುರುದೇವತಾಮಹತ್ವ ಭಕ್ತಿವಿಶ್ವಾಸಾದಿಗಳ ಮೇಲೂ ವಿದ್ಯಾಭಿವೃದ್ಧಿ ವಗ್ಯೆರೆ ಸಾಂಪತ್ತಿಕ ವಿಚಾರಗಳ ಮೇಲೂ ಉಪನ್ಯಾಸಗಳನ್ನು ಕೊಡಿಸುವ ಏರ್ಪಾಡು ಮಾಡತಕ್ಕದ್ದು ಸೂಕ್ತವೆಂದು ಕೆಲವರ ಅಭಿಪ್ರಾಯ ಬಂದಿರುವ ಕಾರಣ, ಸದರಿ ಧಾರ್ಮಿಕಸಭೆಯೇರ್ಪಾಡನ್ನು ಮಾಡಲು ವ್ಯವಸ್ಥಾಪಕ ಸಂಘವನ್ನು ಗೊತ್ತುಮಾಡುವ ವಿಚಾರದಲ್ಲಿ ಬಹುಜನರಭಿಪ್ರಾಯವನ್ನು ತಿಳಿಯುವದಕ್ಕೆ ತಾ॥ 20-9-20 ನೆ ಸೋಮವಾರ ಮಧ್ಯಾಹ್ನಾತ್ಪರ ಶ್ರೀ ನಂದೀಕ್ಷೇತ್ರದಲ್ಲಿ ಜನರಲ್ ಮೀಟಿಂಗನ್ನು ನಡಿಸಲು ನಿಶ್ಚಯಿಸಿ ಅಜುಬಾಜು ಗ್ರಾಮಾಂತರಗಳಿಗೆ ಹಸ್ತಪತ್ರಿಕೆಗಳ ಮೂಲಕ ತಿಳಿಸಿರುವದರಿಂದ ಈ ಜಾತ್ರೆ ಕಾಲದಲ್ಲಿ ಧಾರ್ಮಿಕಸಭೆಯನ್ನು ನಡೆಸುವದು ಯುಕ್ತವಾದದ್ದೆಂಬುದನ್ನು ಸರ್ವರೂ ಮನ್ನೈಸಿಕೊಳ್ಳಬೇಕಾಗಿ ಅಪೇಕ್ಷಿಸಿದೆ. ಇಲ್ಲಿಗೆ ಪ್ರಸಿದ್ಧವಾದ ಚಂದ್ರದ್ರೋಣಪರ್ವತ, ಕಲ್ಹತ್ತಿಗಿರಿ ಕೇವಲ ಸಮೀಪ. ಯಾತ್ರಾಸ್ಥಲವಾಗಿ ತರೀಕೆರೆ ರೈಲ್ವೆ ಮತ್ತು ಮಾರ್ಗಕ್ಕೆ ಸೇರಿದೆ.

ಎಣ್ಣೆಹೊಳೆಮಠ, ತರೀಕೆರೆ ಮುಕ್ಕಾಂ

ವಿಜ್ಞಾಪನೆ.

ಶ್ರೀಮನ್ ಮಹಾರಾಜನಿರಂಜನ ಜಗದ್ಗುರು ಶ್ರೀಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಮೌಲ್ಯವಾದ ಕೃಪಾಶೀರ್ವಾದದಿಂದ ತುಮಕೂರಲ್ಲಿ ಸ್ಥಾಪಿಸಲ್ಪಡುವ "ಶ್ರೀ ಜಗದ್ಗುರು ಜಯದೇವ ವಿದ್ಯಾಸದನ" ದ (ಸ್ಟೂಡೆಂಟ್ಸ್ ಹೋಂ) ಧನರಾಶಿಗೆ ಮೊಬಲಗನ್ನು ಸಂಗ್ರಹಿಸಲು ಭಕ್ತವತ್ಸಲರೆಂಬ ಬಿರುದಾಂಕಿತರಾಗಿ ಶ್ರೀ ಪರಶಿವ ಸ್ವರೂಪರಾದ ಶ್ರೀ ಜಗದ್ಗುರುಗಳವರು ಭಕ್ತರ ಪ್ರಾರ್ಥನೆಯಂತೆ ಸದ್ಯಃ ತುಮಕೂರು ಗುಬ್ಬಿ ತಾಲ್ಲೂಕುಗಳಲ್ಲಿ ಬಿಜಯಂಗೈದು, ವಿದ್ಯಾರ್ಥಿನಿಲಯದ ಧನರಾಶಿಯಂ ವೃದ್ಧಿಗೊಳಿಸಲು ಮಹಾಶೀರ್ವಾದವನ್ನು ದಯಪಾಲಿಸಿ, ಇದಕ್ಕಾಗಿ ಆಗಲೇ ಹೊನ್ನುಡಿಕೆ, ಗೂಳೂರು ಗ್ರಾಮಗಳಿಗೆ ಚಿತ್ತೈಸಿರುವವರು. ಕೊರ್ಟಗೆರೆ ಮದ್ದಗಿರಿ ಮೊದಲಾದ ಇತರ ತಾಲ್ಲೂಕುಗಳಲ್ಲೂ ಇದಕ್ಕಾಗಿ ಶ್ರೀಯವರ ಪರ್ಯಟನವು ನಡೆಯುವ ಸಂಭವವಿರುವದಲ್ಲದೆ ಕ್ಷಿಪ್ರದಲ್ಲೇ ತುಮಕೂರು ಗುಬ್ಬಿ ಪಟ್ಟಣಗಳಿಗೆ ಶ್ರೀ ಸ್ವಾಮಿಯ ಬಿಜಯಂಗೈಯಲು ಏರ್ಪಾಟಾಗಿರುವುದು. ಇಂಥ ಸುಯೋಗವು ಈ ಡಿಸ್ಟ್ರಿಕ್ಟಿನ ಭಕ್ತರ ಪುಣ್ಯಪರಿಪಾಕದಿಂದಲೇ ಲಭಿಸಿರುವದು. ಈ ಸುಸಂಧಿಯನ್ನು ಸಮಸ್ತ ವೀರಶೈವ ಬಾಂಧವರೂ ಸದುಪಯೋಗಮಾಡಿಕೊಂಡು ತಮ್ಮ ಶಕ್ತಿಮೀರಿ ಗುರುಕಾಣಿಕೆಯನ್ನು ಸಮರ್ಪಿಸುವುದರ ಮೂಲಕ ಮೇಲೆ ಕಂಡ ಧನರಾಶಿ (ಫಂಡ್) ಯನ್ನು ವೃದ್ಧಿಗೊಳಿಸಿ ಶ್ರೀ ಗುರುಪ್ರೀತಿಗೆ ಪಾತ್ರರಾಗಿ, ಇಹಪರದಲ್ಲಿ ಆಚಂದ್ರತಾರಕವಾದ ಕೀರ್ತಿಯನ್ನು ಪಡೆಯಬೇಕಾಗಿ ಬಾಂಧವರಾದ ತುಮಕೂರು ಡಿಸ್ಟ್ರಿಕ್ಟಿನ ಸಕಲ ವೀರಶೈವ ಮಹನೀಯರನ್ನೂ ಅತ್ಯಂತ ದೈನ್ಯದಿಂದ ಬೇಡುತ್ತೇನೆ. ಮತ್ತು ಶ್ರೀಯವರ ಈ ಸಂಚಾರವು ಅಮೌಲ್ಯವಾಗಿ ಲಭಿಸಿರುವುದರಲ್ಲೂ ಕಾಲ ವಿಳಂಬಕ್ಕೆ ಅವಕಾಶವಿಲ್ಲದಿರುವದರಿಂದಲೂ ತಿಪಟೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿರುವ ಸಮಾಜಬಾಂಧವರೂ ಸಹ ತುಮಕೂರು, ಗುಬ್ಬಿ, ಬೆಳ್ಳಾವಿ ಮೊಕ್ಕಾಮುಗಳಿಗೆ ದಯವಿಟ್ಟು ಬಂದು, ಗುರುಕಾಣಿಕೆಯ ರೂಪವಾಗಿ ಸಮರ್ಪಿಸುವರಾದರೆ ಸಮಾಜ ಹಿತಕ್ಕೇ ಎಂದರೆ ವಿದ್ಯಾರ್ಥಿನಿಲಯಕ್ಕೆ ವಿಶೇಷವಾಗಿ ಧನಸಹಾಯ ಮಾಡಿದಂತಾಗುವುದು; ಶ್ರೀ ಗುರುಕಾರುಣ್ಯಕ್ಕೂ ಪಾತ್ರರಾಗಬಹುದು. ಹೀಗೆ ದ್ವಿವಿಧಫಲವೂ ದೊರೆಯುವ ಸಕಾಲವನ್ನು ಯಾರೊಬ್ಬರೂ ವ್ಯರ್ಥಗೊಳಿಸಬಾರದೆಂದು ಪ್ರಾರ್ಥಿಸುತ್ತೇನೆ. ಅಲ್ಲದೆ ಶ್ರೀ ಜಗದ್ಗುರುಮಹಾಪಾದ ಸನ್ನಿಧಿಯಿಂದ ಇಂಥ ಅಮೋಘವಾದ ಆಶೀರ್ವಾದವು ದಯಪಾಲಿಸಲ್ಪಟ್ಟಿರುವುದಕ್ಕಾಗಿ ತುಮಕೂರಿನ ವಿಶೇಷ ವೀರಶೈವ ಮಂಡಲಿಯ ಅನಂತದಂಡಪ್ರಣಾಮಗಳನ್ನು ಶ್ರೀ ಸನ್ನಿಧಿಗೆ ಈ ಮೂಲಕ ಅತ್ಯಂತ ಭಯಭಕ್ತಿಯಿಂದ ಸಮರ್ಪಿಸುತ್ತೇನೆ.

ಶ್ರೀ ಗುರುಪಾದಸೇವಕ, ಪ್ಲೀಡರ್ ಜಿ. ಕೆ. ಗುರುಸಂಗಾರ್ಯ
ಜನರಲ್ ಸೆಕ್ರೆಟರಿ; ವೀರಶೈವ ಸೇವಾಸಮಾಜ
ತುಮಕೂರು.

ಧಾರವಾಡ ಜಿಲ್ಲೆಯ ಕೌನ್ಸಿಲ್ ಚುನಾವಣೆಯು.

ವಾಚಕಮಹಾಶಯರೇ,—ಸದ್ಯಕ್ಕೆ ನಡೆದಿರುವ ಹೊಸ ಕಾಯದೆ ಕೌನ್ಸಿಲ್ಲಿನ ಚುನಾವಣೆಯ ಕೋಲಾಹಲವು ಎಲ್ಲ ಕಡೆಗೂ ಗಡಬಡಿಯಿಂದ ನಡೆದಿರುವದಷ್ಟೆ. ಆದರೆ ಧಾರವಾಡ ಜಿಲ್ಲೆಯ ಚುನಾವಣೆಯು ವಿಶೇಷವಾಗಿ ಲಕ್ಷ್ಯ ಕೊಡತಕ್ಕಂಥಾದ್ದಾಗಿರುತ್ತದೆ. ಈ ಜಿಲ್ಲೆಯಿಂದ ಆರಿಸಲ್ಪಡತಕ್ಕವರು ಇಬ್ಬರೇ ಇದ್ದರೂ, ಆರೇಳು ಜನ ಉಮೇದುವಾರರಿರುತ್ತಾರೆ. ಇವರಲ್ಲಿ ನಾಲ್ಕುಜನ ಉಮೇದುವಾರರು ಲಿಂಗಾಯತರೇ ಇರುತ್ತಾರೆ. ಈ ನಾಲ್ವರಲ್ಲಿ ಯಾರಿಗೆ ಮತಗಳನ್ನು ಕೊಡಬೇಕೆಂಬುವದು ವೀರಶೈವರಿಗೆ ದೊಡ್ಡ ತೊಂದರೆಯನ್ನುಂಟುಮಾಡಿರುತ್ತದೆ. ಆದರೆ, ತಾ॥ ೭ ನೇ ಸೆಪ್ಟಂಬರ್ ತಿಂಗಳ ವಿಜಯದಲ್ಲಿ ಪ್ರಸಿದ್ಧವಾಗಿರುವ ಲೇಖನಗಳನ್ನು ನೋಡಿದ್ದರಿಂದಂತೂ ಎದೆಯು ಢುಗಿಲ್ ಎಂದು ಹಾರಲಿಕ್ಕೆ ಹತ್ತಿರುತ್ತದೆ. ಮಿ॥ ಕಂಬಳಿ ವಕೀಲರಿಗೂ ಮಿ॥ ಹುಲಕೋಟಿ ವಕೀಲರಿಗೂ ಇದ್ದ ಸಹಕಾರಿತನವು ತಪ್ಪಿದಂತೆ ಕಾಣುತ್ತದೆ. ಶ್ರೀ॥ ಚಂದ್ರೋದಯಕಾರರಿಗೂ ಮಿ॥ ಕುಲಕರ್ಣಿವಕೀಲರಿಗೂ ಪರಸ್ಪರ ವಿರೋಧಾಭಿಪ್ರಾಯಗಳು ಪ್ರಕಟವಾಗಿರುವವು. ಮಿ॥ ಹುಲಕೋಟಿಯವರು ನವಲಗುಂದದಲ್ಲಿ ಒಬ್ಬ ಗೃಹಸ್ಥರಿಗೆ ಕೊಟ್ಟ ಉತ್ತರವನ್ನು ನೋಡಲಾಗಿ ಚಂದ್ರೋದಯಕಾರರಲ್ಲಿಯೂಕೂಡ ಸಹಕಾರಿತನವಿಲ್ಲವೆಂದು ಕಂಡುಬರುತ್ತದೆ. ಹೀಗೆ ಪರಸ್ಪರ ನಾಲ್ಕು ಜನರಲ್ಲಿಯೂ ಆದಂಭಾವವು ತಪ್ಪುವ ಸ್ಥಿತಿಯು ಕಂಡುಬರುತ್ತದೆ. ಲಿಂಗಲಿಂಗಾಯತರಲ್ಲಿ ಈ ತರಹದ ಸಂಗಡಗಳ ವೈಷಮ್ಯವನ್ನು ಹೆಚ್ಚಿಸಲಿಕ್ಕೆ ಕೆಲವುಪತ್ರಗಳು ಸಿದ್ಧವಾಗಿರುತ್ತವೆ. ನಾಲ್ಕು ಜನರು ಹಟಹಿಡಿದು ಕೂತರೆ ಲಿಂಗಾಯತರಲ್ಲಿ ಒಬ್ಬರೂ ಆರಿಸಬರುವ ಲಕ್ಷಣ ತೋರುವದಿಲ್ಲ. ಆದರೆ ಲಿಂಗಾಯತರ ಮತಗಳಾದರೂ ಎಷ್ಟು ಇರುವವು? ಅನ್ಯಮತಸ್ಥರೆಲ್ಲರೂ ಇವರಿಗೆ ಕೊಡುತ್ತಾರೆಂಬುವದಾದರೂ ಅಸಂಭವವು. ಕೆಲವು ವರ್ತಮಾನ ಪತ್ರಕರ್ತರು ರಾಷ್ಟ್ರೀಯ ಪಕ್ಷದ ಲಿಂಗಾಯತ ಉಮೇದವಾರರ ಬೆನ್ನು ಚಪ್ಪರಿಸಿರುವರು. ಇದೇನೋ ನಿಜ. ಅವರ ಮಬ್ಬಿಗೆ ಬಿದ್ದು ಉಬ್ಬಿ ಕುಳಿತಿರುವ ಲಿಂಗಾಯತ ಉಮೇದುವಾರರು ತಮಗೆ ಎಷ್ಟು ಮಂದಿ ಬ್ರಾಹ್ಮಣರ ಮತಗಳು ಸಿಗುತ್ತವೆಂಬುವದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಇಲ್ಲವಾದರೆ ಚುನಾವಣೆಯು ಸಮಾಪಿಸಿದ ಮೇಲೆ ತ್ರಿಶಂಕು ಮಹರಾಜನ ಅವಸ್ಥೆಯಾದೀತು. ಲಿಂಗಲಿಂಗಾಯತರಲ್ಲಿ ಅವರು ಹೆಚ್ಚು ಇವರು ಹೆಚ್ಚು ಎಂದು ಚುಚಂದ್ರಿಯನ್ನು ಬಿಟ್ಟು ನಿಮ್ಮನ್ನು ನಾಶಮಾಡಲಿಕ್ಕೆ ಕೆಲವರು ಸಿದ್ಧರಾಗಿರುವರು. ಅದ್ದರಿಂದ ಲಿಂಗಾಯತ ಧುರೀಣರು ಇಬ್ಬರೇ ಉಮೇದುವಾರರಾಗುವಂತೆ ಪ್ರಯತ್ನ ಮಾಡಬೇಕು. ಸಹಕಾರಿತನದಿಂದ ಎಷ್ಟುಮಂದಿ ಕುಳಿತರೂ ಅಡ್ಡಿ ಇಲ್ಲ. ಪ್ರಸಂಗದಲ್ಲಿ ತಮ್ಮ ಮತಗಳನ್ನು ಅನ್ಯರಿಗೆ ಕೊಡಲಿಕ್ಕೆ ಬರುತ್ತದೆ. ಮೊನ್ನೆಮೊನ್ನೆ ಕೈಲಾಸವಾಸಿಗಳಾದ ಎಂ. ಬಸವಯ್ಯನವರ ತೆರವಾದ ಸ್ಥಳದಲ್ಲಿ ಆರುಜನ ಬ್ರಾಹ್ಮಣರು ಉಮೇದುವಾರರು ಇದ್ದರು. ಕಡೆಗೆ ಒಬ್ಬರನ್ನೇ ಪ್ರತಿಸ್ಪರ್ಧಿಗಳನ್ನಾಗಿ ನಿಲ್ಲಿಸಿದರು. ಹಾಗೆ ಮಾಡಿದರೆ ಅದು ಒಂದು ರೀತಿ ಯೋಗ್ಯವೇ ಆಗುವುದು. ಇಬ್ಬರನ್ನು ನಿಲ್ಲಿಸದೆ ಹೋದರೆ ಮಾತ್ರ ಉಳಿದ ಜಾತಿಯ ಉಮೇದುವಾರರಿಗೆ ಹೆಚ್ಚು ಮತಗಳು ಸಿಕ್ಕಿ ಆರಿಸಲ್ಪಡತಕ್ಕ ಇಬ್ಬರಲ್ಲಿ ಅವರೇ ಬರುವರು. ಹಿಂದಿನಿಂದ ಮಾತ್ರ ಪಶ್ಚಾತ್ತಾಪ ಪಡಬೇಕಾದೀತು. ಲಿಂಗಾಯತರು ಹೇಡಿಗಳೆಂಬ ಹೆಸರನ್ನು ತೆಗೆದುಕೊಳ್ಳಬೇಕಾದೀತು. ಲಿಂಗಾಯತರು ಸ್ವತಂತ್ರ ಪ್ರಾತಿನಿಧ್ಯ

ವನ್ನು ಬೇಡಿದಾಗ ಪ್ರಾಂಚಾಯತ ಕಮಿಟಿಯವರು ಲಿಂಗಾಯತ ಮತವು ಸುಸಂಘಟಿತ ಸಮಾಜವಾಗಿರುವಕಾರಣ ಪ್ರಾತಿನಿಧ್ಯವು ಬೇಡವೆಂದು ನಿರ್ಧರಿಸಿರುತ್ತಾರೆ. ಸದ್ಯಕ್ಕೆ ಸುಸಂಘಟಿತವೋ ಅಸಂಘಟಿತವೋ ಎನ್ನುವದನ್ನು ಹೇಳಲಿಕ್ಕೆ ಬರುವಂತೆ ಇಲ್ಲ. ನಮ್ಮ ಸಮಾಜಕ್ಕೆ ನಾಲ್ವರೂ ಅಷ್ಟೇ ಅಭಿಮಾನಿಗಳು ಇರುವರಲ್ಲದೆ ಸಮಾಜಕ್ಕೆ ತಮ್ಮ ಶಕ್ತ್ಯನುಸಾರ ಸೇವೆಯನ್ನು ಮಾಡಿದವರಿರುತ್ತಾರೆ. ಅನ್ಯ ಸಮಾಜದ ಕೆಲವು ಪತ್ರಗಳು ಕುಚೋದ್ಯವನ್ನು ಮಾಡಲಿಕ್ಕೆ ಹತ್ತಿರುತ್ತವೆ. ಅವರ ಪ್ರಶಂಸಾ ಮತ್ತು ನಿಂದಾ ಇವೆರಡನ್ನೂ ಲಕ್ಷಿಸತಕ್ಕದ್ದಾಗಿರುವದಿಲ್ಲ. ಈ ನಾಲ್ವರ ಯೋಗ್ಯತಾಯೋಗ್ಯತೆಯನ್ನು ವಿಚಾರಿಸುವ ಕೆಲಸವು ನಮಗೆ ಬೇಡ. ಯಾಕೆಂದರೆ ಒಂದಿಲ್ಲೊಂದುಕಾರಣದಿಂದ ಎಲ್ಲರೂ ಯೋಗ್ಯತೆಯುಳ್ಳವರೇ ಆಗಿರುತ್ತಾರೆ. ಶ್ರೀ|| ಜಂಗ್ಲೋಡಯವರು ಬ್ರಾಹ್ಮಣ ಸಂಗಡದಲ್ಲಿಯೇ ಇರತ್ತಾರೆಂತಲೂ ಪ್ರಸಂಗದಲ್ಲಿ ನಮ್ಮ ಸಮಾಜದ ಅಭಿಮಾನ ಹಿಡಿಯುವದಿಲ್ಲೆಂತಲೂ ಕೆಲವರು ದೋಷಾರೋಪಣೆ ಮಾಡುತ್ತಾರೆ. ಇದು ಸರ್ವಥಾ ಯೋಗ್ಯವಲ್ಲವು. ಯಾಕೆಂದರೆ-ಅವರು ತಮ್ಮ ಪತ್ರದಲ್ಲಿ ತಾವು ಜನಿಸಿದ ಮತದ ವಿಷಯದಲ್ಲಿ ಎಷ್ಟೋ ಉಜ್ವಲಗಳಾದ ಲೇಖಗಳನ್ನು ಬರೆದವರೂ ಮತ್ತು ಇದೇ ವಿಷಯದಲ್ಲಿ ಅನ್ಯಸಮಾಜಗಳ ಕೂಡ ವಾಗ್ಯುದ್ಧವನ್ನು ಮಾಡಿದವರೂ ಇರುತ್ತಾರೆ. ಮಿ|| ಹುಲಕೋಟಿ ವಕೀಲರ ಧೈರ್ಯಸಾಹಸ ಬುದ್ಧಿವಾಕ್ಪಟುತ್ವಗಳು ಪ್ರಶಂಸಾರ್ಹವಿರುತ್ತವೆ. ಮಿ|| ಕುಲಕರ್ಣಿ ವಕೀಲರ ಮತ್ತು ಮಿ|| ಕಂಬಳಿ ವಕೀಲರ ವಿಷಯವಂತೂ ಸರ್ವರಿಗೂ ಗೊತ್ತೇ ಇದ್ದು ಈರ್ವರೂ ಲೋಕಪ್ರಿಯರಿರುತ್ತಾರೆ. ಸಾರಾಂಶ-ಮುಂದಾಳುಗಳು ತೀವ್ರಯೋಗ್ಯ ಉಪಾಯವನ್ನು ಕಂಡುಕೊಳ್ಳಬೇಕು. ಸಹಕಾರಿತನದಿಂದ ಇಬ್ಬರೇ ಕೂಡ್ರುವಂತೆ ಮಾಡಿ ಹೊಸ ಮನ್ವಂತರದಲ್ಲಿ ಜಯವನ್ನು ಸಂಪಾದಿಸಬೇಕು. ಇಲ್ಲವಾದರೆ ಆರಿಸಲ್ಪಡತಕ್ಕ ಇಬ್ಬರಲ್ಲಿ ಒಬ್ಬರೂ ಬರದೆ ಹೋಗಬೇಕಾಗುವದಲ್ಲದೆ ಬೆಣ್ಣೆಯ ಸಲುವಾಗಿ ವ್ಯಾಜ್ಯವನ್ನು ಮಾಡಿದ ಎರಡು ಬೆಕ್ಕುಗಳ ಕಥೆಯಂತೆ ಆದೀತು ! ಈಗ ಇಬ್ಬರು ಬಿಟ್ಟರೆ ಮುಂದಿನ ಚುನಾವಣೆಯಲ್ಲಿ ಕೂಡ್ರಲಿಕ್ಕೆ ಬರುವದು. ಹೋದಸಾರೆ ಕಾಯದೆ ಕೌನ್ಸಿಲ್ಲಿನ ಚುನಾವಣೆಯಲ್ಲಿ ಮಿ|| ಕಂಬಳಿ ವಕೀಲರು ಅನ್ಯ ಸಮಾಜದವರಿಂದ ಅಪಜಯವನ್ನು ಹೊಂದಿದ್ದನ್ನು ಯಾರೂ ಮರೆತಿರಲಿಕ್ಕಿಲ್ಲ. ಈ ಸಾರೆ ನಿಮ್ಮ ನಿಮ್ಮೊಳಗೆ ಗುದ್ದಾಡಿ ಅದರಂತೆ ಮಾಡಿಕೊಳ್ಳದೆ ಇಬ್ಬರೂ ಲಿಂಗಾಯತರೇ ಆರಿಸಲ್ಪಡುವಂತೆ ಪ್ರಯತ್ನ ಮಾಡಬೇಕೆಂಬುದೇ ಈ ಚಿಕ್ಕ ಲೇಖನದ ಮುಖ್ಯಾಭಿಪ್ರಾಯವು.

ನಿಷ್ಪಕ್ಷಪಾತಿ.

ಕೀರ್ತನ ಸಮ್ಮೇಲನ.

ಪ್ರಪಂಚದ ಪ್ರಗತಿಯು ಸಿನೀಮಾ ಯಂತ್ರದಲ್ಲಿಯ ಚಿತ್ರದಂತೆ ಪ್ರತಿ ಕ್ಷಣದಲ್ಲಿಯೂ ಭಿನ್ನಭಿನ್ನವಾಗಿ ತೋರಹತ್ತಿರುವದು. ಸ್ವಾತಂತ್ರ್ಯದ ವಾಯುವು ಎಲ್ಲ ಕಡೆಯಲ್ಲಿಯೂ ಒಳ್ಳೇ ಜೋರಿನಿಂದ ಬೀಸಹತ್ತಿರುವುದು. ಇಂಥ ಸಮಯದಲ್ಲಿಯೂ ಸಹ ಯಾವ [illegible]ನು ತನ್ನ ಸ್ವಾತಂತ್ರ್ಯಕ್ಕೆ ಬೇಕಾಗಿರುವ ಉಪಕರಣಗಳನ್ನು ಸಾಧಿಸಿಕೊಳ್ಳುವುದಿಲ್ಲವೋ ಅವನಂಥ ದುರ್ದೈವಿಯು ಆತನೇ ಅಲ್ಲದೆ ಮತ್ತಾರೂ ಇರುವುದಿಲ್ಲನೆಂದು ನಿಶ್ಚಯವಾಗಿ ಹೇಳಬೇಕಾಗುತ್ತದೆ. ದೇಶಕ್ಕಾಗಲೀ ಸಮಾಜಕ್ಕಾಗಲೀ ಅಥವಾ ವ್ಯಕ್ತಿಗಾಗಲೀ ಸ್ವಾತಂತ್ರ್ಯವು ದೊರೆಯಬೇಕಾದರೆ ಆಯಾ ಶಬ್ದವನ್ನು ಹೊಂದಿದ ವಸ್ತುವು ವಿದ್ಯಾ, ಬುದ್ಧಿ, ಜ್ಞಾನ, ಕಲಾ, ಕೃಷಿ, ವ್ಯಾಪಾರ, ಕೈಗಾರಿಕೆ ಇತ್ಯಾದಿಗಳಲ್ಲಿ ಬಹು ನಿಸ್ಪೃಹತೆಯುಳ್ಳದ್ದಾಗಿರಬೇಕಾಗುತ್ತದೆ. ಇದಕ್ಕೆಲ್ಲ ಮೂಲಮಂತ್ರವಾದ ವಿದ್ಯೆಯಲ್ಲಂತೂ ದಿನದಿನಕ್ಕೆ ನೂರಾರು ಯಾಕೆ ಸಾವಿರಾರು ಹೆಜ್ಜೆಗಳನ್ನು ಮುಂದಿಡಬೇಕಾಗುತ್ತದೆ. ಅಂತೇ ಬ್ರಾಹ್ಮಣ, ಫಾರ್ಸಿ, ಕ್ರಿಶ್ಚಿಯನ್ ಮುಂತಾದ ಸಮಾಜದವರು ವಿದ್ಯೆಯಲ್ಲಿ ಒಳ್ಳೇ ನಿಷ್ಣಾತರಾಗಿ ತಮ್ಮ ತಮ್ಮ ಸಮಾಜದವರನ್ನು ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಮುಂತಾದ ಮಹತ್ತರ ವಿಷಯಗಳಲ್ಲಿ ಸಭೆಗಳಿಂದಲೂ, ವ್ಯಾಖ್ಯಾನಗಳಿಂದಲೂ, ಲೇಖಗಳಿಂದಲೂ, ಇಷ್ಟೇಯಾಕೆ ? ಪುರಾಣ ಕೀರ್ತನೆಗಳಿಂದಲೂ ಸಹ ಒಳ್ಳೇ ಆತುರತೆಯಿಂದ ಜಾಗರೂಕಗೊಳಿಸಹತ್ತಿರುವರು.

ಇನ್ನು ಸುಧಾರಿಸಿದವರ ಪ್ರಯತ್ನಗಳೇ ಈಪರಿಯಿಂದ ನಡೆದಿರುವಲ್ಲಿ ಸುಧಾರಣೆಗೆ ಸಾವಿರ ಗಾವುದ ಅಂತರದ ಮೇಲಿರುವ ನಾವು ಪ್ರಯತ್ನಶೂನ್ಯರಾಗಿ ಸಮಯ ಕಳೆಯುವದೆಂದರೆ ನಾವು ಪತಿತರಾಗಿರುವದಂತೂ ಸರಿಯೆ; ನಮ್ಮ ಭಾವೀಸಂತತಿಯನ್ನೂ ಸಹ ಪತಿತರನ್ನಾಗಿ ಮಾಡಿದ ಪಾತಕಕ್ಕೆ ನಿಶ್ಚಯವಾಗಿ ನಾವೇ ಪಾತ್ರರಾಗಬೇಕಾಗುವದರಿಂದ, ನಾವೂ ನಮ್ಮ ಕೈಲಾದಮಟ್ಟಿಗೆ ಹೆಣಗಾಡಿರುವುದೂ, ಹೆಣಗಾಡುತ್ತಿರುವುದೂ ನಮ್ಮ ಮುಖ್ಯಕರ್ತವ್ಯವಾಗಿರುತ್ತದೆ. ಈ ಸಮಯದಲ್ಲಿ ನಾವು ನಮ್ಮ ಸಮಾಜವನ್ನು ಜಾಗರೂಕಗೊಳಿಸಬೇಕಾದರೆ ಗ್ರಂಥಪ್ರಸಾರಣೆ, ಸಭಾ, ಲೇಖ, ಭಾಷಣ ಮುಂತಾದ ಅನೇಕ ಮಾರ್ಗಗಳಿರುತ್ತವೆ. ಆದರೆ ಮೊದಲೇ ಬಹುಶಃ ವಿದ್ಯಾವಿಹೀನರಾದ ನಮ್ಮ ಜನರು ಗ್ರಂಥಗಳನ್ನು ಕೊಂಡು ಓದಿ ಸುಧಾರಿಸುವುದು ಅಸಂಭವವೇ ಸರಿ ! ಇನ್ನು ಎರಡನೆ ಸಾಧನವಾದ ಸಭೆಯು ವರ್ಷಕ್ಕೊಂದು ಸಲ ನೆರವೇರುವ ಪಟ್ಟಣಕ್ಕೆ ತಮ್ಮ ಪ್ರಾಪಂಚಿಕ ಕಾರ್ಯಗಳನ್ನು ಬಿಟ್ಟು ಧನವ್ಯಯವನ್ನನುಭವಿಸಿಬರತಕ್ಕವರು ನಮ್ಮ ಅಶಿಕ್ಷಿತ ಸಮಾಜದಲ್ಲಿ ನೂರಕ್ಕೆ ಐದು ಜನರು ಸಹ ದೊರೆಯುವುದು ದುರ್ಲಭವೆಂದ ಮೇಲೆ ಆ ಸಭೆಗಳು ಸುಧಾರಿಸಿದ ಕೆಲವು ಜನರಿಗೆ ಮಾತ್ರವಲ್ಲದೆ ಇತರ ನಮ್ಮ ಬಹುಜನ ಸಮಾಜಕ್ಕೆ ಅಷ್ಟು ಉಪಯೋಗವಾಗುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಇನ್ನು ಮೂರು ನಾಲ್ಕನೆಯ ಸಾಧನೆಗಳು ಮೇಲೆ ವಿವರಿಸಿದವುಗಳೆರಡಕ್ಕಿಂತಲೂ ಕೆಲಮಟ್ಟಿಗೆ ಸಾಧ್ಯಗಳಾದರೂ "ವರ್ಷವೊಂದಕ್ಕೆ ಮೂರು ನಾಲ್ಕು ರೂಪಾಯಿಗಳನ್ನು ಕೊಟ್ಟು ವಾರಕ್ಕೊಂದು ಸಲ ಕೇವಲ 'ಸ್ಟಾರ್' ಎಂಬುವ ಒಂದೇ ತರದ ಅಕ್ಷರಗಳಿಂದ ಕೂಡಿದ ಕಾಗದಗಳನ್ನು ತರಿಸಿ ಪುನಃ ಪುನಃ ಮುಚ್ಚರಂತೆ ಓದುವಿರಲ್ಲಾ ?" ಎಂದು ವಾಚನಬಂಧುಗಳನ್ನು ಹೀಯಾಳಿಸುವ ಬಹುಜನ ವಾಙ್ಮಯ ವೈರಿಗಳಿಂದ ಕೂಡಿದ ನಮ್ಮ ಸಮಾಜವನ್ನು ಜಾಗರೂಕಗೊಳಿಸಬೇಕಾಗಿದ್ದರೆ ನಾವು ಪ್ರಥಮದಲ್ಲಿ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಕೈಕೊಳ್ಳದಿದ್ದರೆ ಗತ್ಯಂತರವಿಲ್ಲ.

ಈ ಸಮಯದಲ್ಲಿ ನಾವು ಒಂದು ಸಾಧಾರಣ ಸಭೆಯನ್ನು ಕೂಡಿಸಬೇಕಾದರೆ ಮೂರಾರು ತಿಂಗಳುಗಳೊಳಗೆ ವೃತ್ತಪತ್ರಿಕೆಗಳಲ್ಲಿ ಲೇಖ ಬರೆಯುವದರಿಂದಲೂ, ಸ್ವತಂತ್ರಗಳಾದ ನೋಟೀಸಿನಿಂದಲೂ ಪ್ರಚುರಪಡಿಸಿ, ಸ್ವಾಗತಸಂಘ, ಸಭಾಧ್ಯಕ್ಷತೆ ಮುಂತಾದವುಗಳನ್ನು ನಿಯಮಿಸಿ, ಮಂಟಪರಚನೆ, ಸಭೆಗೆ ಬರುವವರ ಭೋಜನಾದ್ಯುಪಚಾರ, ಇತ್ಯಾದಿ ಪ್ರಯಾಸವನ್ನು ಸಹಿಸಿ ಸಭೆಯನ್ನು ನೆರವೇರಿಸಿದರೆ ಸಭೆಗೆ ನೂರಾರು ಜನರು ಕೂಡಿದರೂ ಮಂಟಪದಲ್ಲಿ ಪ್ರವೇಶಿಸಿ ಅಧ್ಯಕ್ಷರ ಸಮ್ಮುಖದಲ್ಲಿ ಧೀರತನದಿಂದ ಕುಳಿತು ಭಾಷಣಗಳನ್ನು ಕೇಳತಕ್ಕವರ ಸಂಖ್ಯೆಯು ಅದಕ್ಕಿಂತಲೂ ಒಳಗೆ ಬರುತ್ತದೆ. ಇದರ ಮೇಲಿಂದ ನಾವು ಸಭಾದ್ವೇಷಿಗಳೆಂದು ಯಾರೂ ತಿಳಿಯಬಾರದು. ಮಹಾಸಭೆಗಳಂಥ ಮಹತ್ವದ ಸಭೆಗಳು ಅಲ್ಲಲ್ಲಿ ಒಳ್ಳೇ ಆವೇಶದಿಂದ ಎಷ್ಟೆಷ್ಟು ಜರಗುವವೋ ನಮ್ಮ ಸಮಾಜವು ಅಷ್ಟು ಸುಧಾರಣಾಪ್ರಗತಿಯುಳ್ಳದ್ದಾಗುತ್ತದೆಂದು ನಮ್ಮ ಖಂಡಿತವಾದ ಅಭಿಪ್ರಾಯವಿರುತ್ತದೆ. ಆದರೆ ವಿದ್ಯಾವಿಹೀನತೆಯಿಂದುಂಟಾದ ಅಜ್ಞಾನಾಂಧಕಾರದಲ್ಲಿ ಮುಳುಗಿದ ನಮ್ಮ ಸಮಾಜದ ಹಳ್ಳಿಪಳ್ಳಿಯ ಬಹುಜನತೆಯನ್ನು ಸುಧಾರಿಸುವುದಕ್ಕೆ ನೂರಾರು ಸಾಧಾರಣ ಸಭೆಗಳನ್ನು ನೆರೆಯಿಸುವದಕ್ಕಿಂತಲೂ ನಮ್ಮ ಪ್ರಕೃತ ವಿಷಯಕವಾದ ಕೀರ್ತನರೂಪವಾದ ಮಾರ್ಗವೇ ಅತ್ಯಧಿಕಶ್ರೇಯಸ್ಕರವೆಂದು ಹೇಳುವುದಕ್ಕೆ ನಾವು ಅನುಮಾನಿಸುವುದಿಲ್ಲ.

ಯಾಕೆಂದರೆ—ಸಭೆಗೆ ಎಡತಾಕಿ ಕರೆದರೂ ಸಾಕಷ್ಟು ಜನರು ಸೇರುವುದಿಲ್ಲ; ಸೇರಿದರೂ ಮಂಟಪದಲ್ಲಿ ಕುಳಿತು ತೂಕಡಿಸುವವರೇ ಬಹಳ. ಆದರೆ ಸಮಯಕ್ಕನುಸರಿಸಿ ಸಹೃದಯಾಹ್ಲಾದಕರವಾಗುವಂತೆ ವಿಷಯಗಳನ್ನು ಅಚ್ಚುಕಟ್ಟಾಗಿ ವಿವೇಚನೆ ಮಾಡತಕ್ಕ ಓರ್ವನು ಕೀರ್ತನಕಾರನು ತನ್ನವಕ್ತೃತ್ವಕಲೆಯೆಂಬ ಮೋಹಪಾಶದಿಂದ ತಾವಾಗಿ ತಂಡತಂಡರೂಪವಾಗಿ ಬರತಕ್ಕ ಜನರ ಮನಸ್ಸನ್ನು ಬಿಗಿದುಕಟ್ಟಿ ಜೇನುಗಾರನ ಕೈಯೊಳಗಿನ ಮೇಣದಂತೆ ತನ್ನ ಮನಬಂದತ್ತ ಸೆಳೆದುಕೊಂಡುಹೋಗುವುದಕ್ಕೆ ಸಮರ್ಥನಾಗುತ್ತಾನೆ. ಕೀರ್ತನೆಯನ್ನು ಮಾಡಿಸುವುದಕ್ಕೆ ವೃತ್ತಪತ್ರಗಳಲ್ಲಿ ಕೊಡುವ ನೋಟೀಸು ಬೇಕಾಗಿಲ್ಲ. ಸ್ವಾಗತ ಸಂಘ ಮತ್ತು ಅಧ್ಯಕ್ಷತೆ ಮುಂತಾದ ಯಾವ ತೊಂದರೆಯೂ ಇಲ್ಲದೆ ಸಭೆಗಿಂತಲೂ ಹೆಚ್ಚಾಗಿ ಭಕ್ತಿಯಿಂದ ಜನರು ಸೇರುತ್ತಾರೆ. ಇದಲ್ಲದೆ ಕೀರ್ತನೆಯನ್ನು ಒಂದು ದಿವಸಕ್ಕೆ ಎರಡು ಮೂರು ಗ್ರಾಮಗಳಲ್ಲಿ ಅನಾಯಾಸವಾಗಿ ಓರ್ವನೇ ಮಾಡಬಹುದು. ಸಾರಾಂಶವೇನಂದರೆ—ವಕ್ತೃತ್ವಕಲೆಯುಳ್ಳ ಒಬ್ಬ ಕೀರ್ತನಕಾರನ ಕಾರ್ಯವನ್ನು ಹತ್ತು ಸಾಧಾರಣ ಸಭೆಗಳಾದರೂ ಮಾಡಲಾರವಾದ್ದರಿಂದ ಅಂಥ ಕೀರ್ತನಕಾರರ ಸಮೂಹವನ್ನು ಇದಕ್ಕಿಂತ ಹೆಚ್ಚಾಗಿ ಬೆಳಿಸುವುದಕ್ಕೂ ಆ ಸಂಘವನ್ನು ಈ ನವನಾಗರಿಕತೆಯ ಸಮಯಕ್ಕನುಸರಿಸಿ ಸುಧಾರಿಸುವುದಕ್ಕಾಗಿಯೂ, "ಕೀರ್ತನ ಸಮ್ಮೇಲನ" ವನ್ನು ಕೂಡಿಸುವ ಅವಶ್ಯಕತೆಯನ್ನು ನಾವು ಈ ಮೂಲಕ ಹೊರಗೆಡಹುತ್ತೇವೆ. ಬೇಡವಾದವರು ಖಂಡಿಸಲಿ, ಬೇಕಾದವರು ಮಂಡಿಸಲಿ.

ಇನ್ನು ಮೇಲೆ ಕೀರ್ತನಕಾರರು ಕೇವಲ ಪಂಚತಂತ್ರ, ಇಲ್ಲವೆ ಕಥಾಸರಿತ್ಸಾಗರ ಇತ್ಯಾದಿ ಯಾವದಾದರೊಂದು ಗ್ರಂಥದಲ್ಲಿರುವ ನಾಯಿ ನರಿಗಳ ಕಥೆಗಳನ್ನು ಹೇಳುತ್ತಹೋಗದೆ, ನಮ್ಮ ನಮ್ಮ ಧರ್ಮಕ್ಕನುಸರಿಸಿ ಪುರಾಣ, ಭಾರತ, ರಾಮಾಯಣ ಮುಂತಾದ ಗ್ರಂಥಗಳ ಉದಾಹರಣೆಗಳನ್ನೇ ಈ ನವೀನ ಸ್ಥಿತಿಗನುಸರಿಸಿ ಶೋಧಕ ಬುದ್ಧಿಯಿಂದ ಹೇಳುತ್ತಾ ಮಧ್ಯ ಮಧ್ಯದಲ್ಲಿ ಪ್ರಸಂಗಕ್ಕನುಸರಿಸಿರಿ, ವಿದ್ಯಾಭಿವೃದ್ಧಿ, ಕಲಾ ಕೌಶಲ್ಯ, ಕೃಷಿ, ವ್ಯಾಪಾರ ಕೈಗಾರಿಕೆ ಮುಂತಾದವುಗಳ ಪ್ರಯೋಜನ, ಅನೈಕ್ಯದಿಂದಾಗುವ ಹಾನಿ, ಪಾಶ್ಚಾತ್ಯ ಶಿಕ್ಷಣದ ಮಹತ್ವ, ಸ್ವರಾಜ್ಯವೆಂದರೇನು, ಹೋಮ್‌ರೂಲಿನ ವಿಚಾರವೇನು ? ಈವಾಗ್ಗೆ ನಮಗೆ ದೊರೆದಿರುವ ಸುಧಾರಣಾಕಾಯ್ದೆಯ ಸ್ವರೂಪ, ರಾಜಭಕ್ತಿ ಸ್ವತಂತ್ರಪ್ರಾತಿನಿಧ್ಯದ ಮಹತ್ವ, ತಮ್ಮ ಮತದ ಉಮೇದುವಾರರಿಗೆ ತಾವು ಓಟು ಕೊಡುವುದರಿಂದಾಗುವ ಲಾಭ, ಸಿರಸಂಗಿ ಫಂಡಿನ ಸಹಾಯ, ಅಲ್ಲಲ್ಲಿ ಸ್ವತಂತ್ರಗಳಾಗಿ ಸ್ಥಾಪಿಸುವ ಎ. ವಿ. ಸ್ಕೂಲುಗಳ ಮತ್ತು ಹೈಸ್ಕೂಲುಗಳ ಪ್ರಯೋಜನ, ಸಂಸ್ಕೃತವಿದ್ಯೆಯ ಮಹತ್ವ, ಸ್ವಭಾಷಾ ಮತ್ತು ವಾಙ್ಮಯಸುಧಾರಣೆ, ವೃತ್ತಪತ್ರಿಕೆಗಳ ಪ್ರಚಾರ, ಕಾಂಗ್ರೆಸ್ ಅಂದರೇನು ? ಅದರಲ್ಲಿಯ ಸೌಮ್ಯ ಮತ್ತು ಉಗ್ರಮತಗಳ ತಾರತಮ್ಯವೇನು ? ಕ್ಷತ್ರಿಯ ಶಿಕ್ಷಣದ ಮಹತ್ವ, ಮ್ಯುನಸಿಪಾಲಿಟಿ, ಲೋಕಲ್‌ಬೋರ್ಡುಗಳಲ್ಲಿರುವ ಹಕ್ಕು, ಮುಂದೆ ಬರಬೇಕಾಗಿರುವ ಗ್ರಾಮಪಂಚಾಯಿತಿ ಬಿಲ್ಲಿನ ವಿಚಾರ-ಇವೇ ಮೊದಲಾದ ಸದ್ಯಕ್ಕಿರುವ ಸಾವಿರಾರು ವಿಷಯಗಳನ್ನು ಪ್ರತಿಪಾದಿಸಬೇಕಲ್ಲದೆ ಪ್ರಾಂತಿಕ ಮತ್ತು ವರಿಷ್ಠ ಕೌನ್ಸಿಲ್‌ಗಳಲ್ಲಿ ಹೊಸ ಹೊಸದಾಗಿ ಉದಯಗಳಾಗತಕ್ಕ ಕಾಯಿದೆಗಳ ಸ್ವರೂಪಗಳನ್ನು ಅನಾಯಾಸವಾಗಿ ಆಸ್ಥೆಯಿಂದ ಬಂದು ಸೇರುವ ಪಂಡಿತ ಪಾಮರರಿಗೆಲ್ಲಾ ತಿಳಿಯುವಂತೆ ಸುಲಭಶೈಲಿಯಿಂದ ಹಳ್ಳಿಪಳ್ಳಿಗಳಲ್ಲಿ ಹೇಳತೊಡಗಿದರೆ ಹಿಂದುಳಿದ ನಮ್ಮ ಅಜ್ಞಸಮಾಜದಲ್ಲಿ ಎಷ್ಟು ಜಾಗ್ರತೆಯುಂಟಾಗುವುದೆಂಬುದನ್ನು ನಮ್ಮ ಸಹೃದಯ ವಾಚಕರು ಆಲೋಚಿಸದಿರಲಾರರೆಂದು ನಂಬಿರುತ್ತೇನೆ.

ಕೀರ್ತನೆಯಲ್ಲಿ ಹಾಸ್ಯ, ಶೃಂಗಾರ, ಕರುಣಾಭಕ್ತಿ ಮುಂತಾದ ರಸಗಳನ್ನನುಸರಿಸಿ ಸಂಗೀತವನ್ನು ಮುಂದಿಟ್ಟುಕೊಂಡು ಸುಲಭಶೈಲಿಯಿಂದ ವಿಷಯವಿವೇಚನೆಯನ್ನು ಮಾಡತಕ್ಕ ಪದ್ಧತಿ ಇರುವುದರಿಂದ ಅದನ್ನು ಹಳ್ಳಿಪಳ್ಳಿ ಪಟ್ಟಣಿಗರೂ, ಪಂಡಿತಪಾಮರರೂ ಕೂಡಿ ಅಲುಗದಂತೆ ಕೇಳುವುದು ಸ್ವಾಭಾವಿಕವಿರುತ್ತದೆ. ಇದಲ್ಲದೆ ನಮ್ಮ ಸಮಾಜದ ಕಲ್ಯಾಣಕ್ಕಾಗಿ ಉದಯವಾಗಿರುವ ಶ್ರೀ ಶಿವಯೋಗಮಂದಿರದ ಉದ್ದೇಶಗಳಲ್ಲೊಂದಾದ (ಕೀರ್ತನಕಾರರನ್ನು ಹೆಚ್ಚಿಸುವ) ಮುಖ್ಯವಾದ ಉದ್ದೇಶವು ಕೆಲಮಟ್ಟಿಗೆ ಸಾಧ್ಯವಾಗಿರುವುದೆಂದು ಹೇಳುವುದಕ್ಕೆ ಬಹು ಸಂತೋಷವಾಗುತ್ತದೆ. ಆದರೆ ಆ ಕೀರ್ತನ ಸಮಾಜವನ್ನು ವರ್ಷಕ್ಕೊಂದುಸಲ ಒತ್ತಟ್ಟಿಗೆ ಸೇರಿಸಿ ಅವರ ಕರ್ತವ್ಯದಲ್ಲಿ ಮಾಡಬೇಕಾದ ತಿದ್ದುಪಾಟಿಕೆಯನ್ನು ತಿಳಿಯಿಸುವುದು ಸಾಧ್ಯವಾದರೆ ಆ ಸಂಘದವತಿಯಿಂದ ಶಿವಯೋಗಮಂದಿರದಲ್ಲಾಗಲಿ, ಇತರ ಯೋಗ್ಯಸ್ಥಳದಲ್ಲಾಗಲಿ, ಭಾಷಣ ಮತ್ತು ಕೀರ್ತನೆ ಮಾಡತಕ್ಕವರಿಗೆ ವಕ್ತೃತ್ವಕಲೆಯನ್ನು ಕಲಿಸುವುದಕ್ಕಾಗಿ ಒಂದು ಪಾಠಶಾಲೆಯನ್ನೂ, ಅವರ ಧೋರಣವನ್ನು ನಿಶ್ಚಯಿಸುವುದಕ್ಕಾಗಿ ಒಂದು ಮಾಸಿಕ ಪತ್ರವನ್ನೂ ಸಹ ಹೊರಡಿಸಬಹುದು. ಈ ಸುಲಭವಾದ ಮಾರ್ಗದಿಂದ ಹಳ್ಳಿ ಪಟ್ಟಣಗಳಲ್ಲಿರುವ ನಮ್ಮ ಅಜ್ಞಸಮಾಜವನ್ನು ಹಾ ಹಾ ಎನ್ನುವದರೊಳಗೆ ಸುಧಾರಣೆಯ ಮಾರ್ಗಕ್ಕೆ ಸಹಜವಾಗಿ ತಂದು ನಿಲ್ಲಿಸಬಹುದು. ಕೇವಲ ಸಮಾಜೋದ್ಧಾರದ ಪ್ರಯತ್ನವೇ ತಮ್ಮ ತಪಸ್ಸನ್ನಾಗಿಟ್ಟುಕೊಂಡು ಹಗಲಿರುಳೂ ಪ್ರಯತ್ನಪಡುತ್ತಿರುವ ಉತ್ಸಾಹಿಶಿರೋಮಣಿ ಶ್ರೀಮನ್ನಿರಂಜನಪ್ರಣವಸ್ವರೂಪಿಗಳಾದ ದಾವಣಗೇರಿಯ ಶ್ರೀ ಮೃತ್ಯುಂಜಯಸ್ವಾಮಿಗಳೂ, ನಾನೂ ಈ ವಿಷಯದಲ್ಲಿ ಕೆಲ ಜನರೊಡನೆ ಆಲೋಚಿಸಿ, ಇದೇ ವರ್ಷದಲ್ಲಿ (ಎರಡು ಮೂರು ತಿಂಗಳಲ್ಲಿ) ಈ ಕೀರ್ತನ ಸಮ್ಮೇಲನದ ಪ್ರಥಮ ಶಂಕುಸ್ಥಾಪನೆಯನ್ನು ದಾವಣಗೇರಿ, ಹಾವೇರಿ ಅಥವಾ ಶಿವಯೋಗಮಂದಿರ ಮುಂತಾದ ಯಾವುದಾದರೊಂದು ಪ್ರಶಸ್ತವಾದ ಸ್ಥಳದಲ್ಲಿ ಮಾಡಬೇಕೆಂಬ ಆಲೋಚನೆಯನ್ನು ಇಟ್ಟುಕೊಂಡಿರುತ್ತೇವೆ. ಈ ಸಮ್ಮೇಲನವನ್ನು ಕೂಡಿಸಬೇಕಾದರೆ ಮಂಟಪಾದಿ ಹೆಚ್ಚಿನ ಆಡಂಬರದ ಖರ್ಚಿಗೆ ಹೋಗದೆ, ಮಠ, ದೇವಸ್ಥಾನ ನಾಟಕಗೃಹ ಮುಂತಾದ ಪ್ರಶಸ್ತಸ್ಥಳದಲ್ಲಿ ನೆರೆಯಿಸಿ ಸಭೆಗೆ ಬಂದ ಕೀರ್ತನಕಾರರೇ ಮುಂತಾದ ಕೆಲ ಜನರಿಗೆ ಭೋಜನಾದ್ಯುಪಚಾರವನ್ನಷ್ಟು ಮಾಡಿದರೆ ಸಾಕು. ಅಂದರೆ ಇತರ ಸಭೆಗಿಂತಲೂ ಖರ್ಚು ಕಡಿಮೆಯಾಗಿ ಅದರಿಂದ ಜರಗುವ ಲಾಭಾಂಶವು ಬಹು ದೊಡ್ಡದಾಗುತ್ತದೆ. ಕೀರ್ತನ ಸಂಘದಲ್ಲಿ ನಾವು ಕೇವಲ ವೈದಿಕ ಶಾಸ್ತ್ರಿ ವರ್ಗವನ್ನಷ್ಟೇ ಸೇರಿಸದೆ ನಮ್ಮ ಸಮಾಜದಲ್ಲಿ ಕೀರ್ತನೆ ಮಾಡತಕ್ಕ ಸಕಲ ವಿಧದ ಜನರನ್ನೂ, ಪ್ರಾಥಮಿಕ ಶಾಲೆಯ ಟ್ರೇನಿಂಗ್ ಮಾಸ್ತರ ಜನವರ್ಗವನ್ನೂ, ಸಮಾಜಸೇವೆಯಲ್ಲಿ ಕುತೂಹಲವುಳ್ಳ ಇಂಗ್ಲೀಷ್ ವಿದ್ಯಾರ್ಥಿಗಳನ್ನೂ, ಪದವೀಧರರನ್ನೂ ಸಾರಾಂಶ ಈ ಕಾರ್ಯದಲ್ಲಿ ಸಹಾನುಭೂತಿಯುಳ್ಳ ನಮ್ಮ ಸಮಾಜದ ಸಕಲ ಜನರನ್ನೂ ಸಮಾವೇಶ ಮಾಡಿರುತ್ತದಾದ್ದರಿಂದ ಸಕಲರೂ ಈ ವಿಷಯದಲ್ಲಿರುವ ತಮ್ಮ ತಮ್ಮ ಅಭಿಪ್ರಾಯಗಳನ್ನು ದಾವಣಗೆರೆಯ ಹಿತೋಪದೇಶಕ ಸಂಘದ ಸೆಕ್ರೆಟರಿಗಾಗಲೀ ಅಥವಾ ತಿಪಟೂರು ವಿ. ಆನಂದಾಶ್ರಮದ ನನ್ನ ಹೆಸರಿಗಾಗಲಿ ಶೀಘ್ರದಲ್ಲಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಗುರುಮೂರ್ತಿಶಾಸ್ತ್ರಿ, ಕಜ್ಜರಿ,
"ಕಾವ್ಯತೀರ್ಥ" ಆನಂದಾಶ್ರಮ, ತಿಪಟೂರು.

ಸಿನೇಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಲಮ್ಸು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲಿತಯುದ್ಧ, ಚೈನಾದರ ಸೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಲಮ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

ಲಂಡನ್ ಲೀವರ್‌ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೊಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸಿನ ಮುಚ್ಚಳವು, ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆಯೂ, ಗಂಟೆ ತೋರಿಸುವ ನಂಬರುಗಳ ಮೇಲೆಯೂ, ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿ ಸಹಿತ ಗಡಿಯಾರ 1 ಕ್ಕೆ 4—8—0

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್,

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃಪಾ | ಭುವನಭಕ್ತ್ಯಾವತಾರಾ ಪಕ್ಷ್ಮಜನಪ್ಯಕ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೩೦ ನೆಯ ಇಸವಿ ಅಕ್ಟೋಬರ್ ತಾರೀಖು ೫ ನೆಯ ಭಾನುವಾರ (ಸಂಚಿಕೆ ೪೦



ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಆಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5-3.0,

ನಮ್ಮ ವಿಳಾಸ:—ಶ್ರೀ ಸೀತಾರಾಘವ
38 ವೈದ್ಯಶಾಲಾ, ಮೈಸೂರು.

ಹೊಸಶೋಧ ! * ಓಂ * ಹೊಸ ಶೋಧ !!
ಗುಣ ಬಾರದಿದ್ದರೆ ಹಣ ಪರತು.
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)
ಅಮೃತ ಜೀವನ ಪಾಕ.

ಈ ಅಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
10 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.
ವಿ. ಪಿ. ಪೋಸ್ಟೇಜು ಸೇರಿ.

[illegible] ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
[illegible]	೦—೯—೦
ಪಂಚಾಂಗ	೦—೮—೦

ಕರ್ನಾಟಕ ರಾಮಾಯಣಸಂಗ್ರಹವು. 2

ಶ್ರೀ ರಾಮನಚರಿತ್ರೆಯು ಮೊದಲು ವಾಲ್ಮೀಕಿ ಋಷಿಯಿಂದ ಸಂಸ್ಕೃತದಲ್ಲಿ ಬರೆಯಲ್ಪಟ್ಟಿತು. ಆ ಮೇಲೆ ಅನೇಕ ಜನ ಕವಿಗಳು ಕನ್ನಡದಲ್ಲಿ ಬರೆದು ಇದ್ದಾಗ್ಯೂ ಆ ಗ್ರಂಥಗಳು ಸರ್ವರಿಗೂ ಸುಲಭಗಳಾಗಿ ಇಲ್ಲ. ಈ ಲೋಪವನ್ನು ಪರಿಹರಿಸಬೇಕೆಂಬ ಉದ್ದೇಶದಿಂದ ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ ಮ|| ರಾ|| ಮುಜರಾಯಿ ಭಕ್ಷಿಯವರಾದ ಎಚ್. ಲಿಂಗರಾಜೇ ಅರಸಿನವರು ಬಿಡಿಗನ್ನಡದಿಂದ ಭಾಮಿನೀ ಷಟ್ಪದಿ ಪದ್ಯರೂಪದಲ್ಲಿ ರಚಿಸಿರುವರು. ಈ ಗ್ರಂಥವು ಹೊರಗೆ ಬಂದ ಒಂದೆರಡು ತಿಂಗಳೊಳಗಾಗಿ ಕನ್ನಡ ನಾಡಿನೊಳಗೆಲ್ಲಾ ಪ್ರಚಾರಕ್ಕೆ ಬಂದು ಬಿಟ್ಟಿರುತ್ತದೆ. ಇದರಿಂದಲೇ ಇದರ ವಿಷಯದಲ್ಲಿ ಹೆಚ್ಚು ಹೊಗಳಬೇಕಾಗಿಲ್ಲ. ಅಪೇಕ್ಷೆಯುಳ್ಳವರು ತರಿಸಿ ಓದಿ ಶ್ರೀ ರಾಮಕಥಾಮೃತವನ್ನು ಸುಲಭವಾಗಿ ಪಾನಮಾಡಿ ಆನಂದಿಸತಕ್ಕದ್ದು. ಪುಸ್ತಕ ದೊರೆಯುವಸ್ಥಳ.—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಡೀಲರ್ಸ್ ಕೃಷ್ಣರಾಜ ಮೊಹಲ್ಲಾ ಮೈಸೂರು.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 46

ನಾವು ಎ. ಆಲ್ ಬ್ಯುಕ್ಯುಯರ್ ಕ್ಕ ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಖ್ಯರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೩—೦—೦
ವೀರಶೈವಸಭಾಶಂತಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
44 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಅದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣೆ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಅಮೇರಿಕನ್ ರೋಮಹರಿ ಪೌಡರ್.

ಕೇಶನಾಶನಿ ಪೌಡರ್.

ಇದು ವಿಲಾಯತಿಯಲ್ಲಿ ತಯಾರಾದದ್ದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಪುಡಿಯನ್ನು ಸವರಿದ ಮಾತ್ರಕ್ಕೆ ಕತ್ತಿಯಿಂದ ಕ್ಷೌರಮಾಡಿಕೊಂಡದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದನ್ನು ತೆಗೆಯುವದು. ಕ್ರಯ ಡಬ್ಬಿ 1ಕ್ಕೆ 0—12—0.

ವಿಳಾಸ:—ಮರಾಟ ಟ್ರೇಡಿಂಗ್ ಕಂಪನಿ,
2 ತಿರುಪಳ್ಳಿ ಬೀದಿ, ಮದರಾಸು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

2 ಪ್ಯಾರಿಷ್ ಶಾಲ್.

ಚಳಿಗಾಲದಲ್ಲಿಯೂ, ಮಳೆಗಾಲದಲ್ಲಿಯೂ ಹೊದಿಯಲಿಕ್ಕೆ ಬಹು ಲಾಯಖಾದದ್ದು. ಪ್ರಯಾಣಿಕರೂ, ಇತರರೂ, ಪ್ರತಿ ದಿನವೂ ಉಪಯೋಗಿಸಬಹುದು. ಬಣ್ಣ ಹೋಗದು. 5 ಮೊಳ ಉದ್ದವು, 2½ ಮೊಳ ಅಗಲವು ಇದೆ. ಕ್ರಯ ಶಾಲು 1ಕ್ಕೆ 5—0—0

ಕಂಬಳಿ ಟೋಪಿ.

ಈ ಟೋಪಿಗಳು ಸಾಚ ಉಲನ್ ದಾರದಿಂದ ತಯಾರಿಸಿದೆ ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರಿವಿಗೂ ಉಪಯೋಗಿಸಬಹುದು.

ಕ್ರಯ ಉಲನ್ ಟೋಪಿ 1 ಕ್ಕೆ 1—6—0

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಪಥ್ಯ ಮದನೋದ್ಭವಗುಳಿಗೆ. ಇಲ್ಲ.
(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 34

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಹಸ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಕ್ರಿಯಾಶಕ್ತಿಯನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯೇಕ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಸೆಪ್ಟಂಬರ್ ತಾ|| ೨೬ನೆಯ ಭಾನುವಾರ.

ವರಮಾನದ ತೆರುಗೆ.

ನಮ್ಮ ಸಂಸ್ಥಾನದಲ್ಲಿ ವ್ಯವಸಾಯದ ಹೊರತು ಇತರ ವಿಧದಿಂದ ವರಮಾನಗಳನ್ನು ಪಡೆಯುತ್ತಿರುವವರಿಂದೆಲ್ಲಾ ಒಂದು ತೆರುಗೆಯನ್ನು ಎತ್ತುವುದಾಗಿ ನೂತನ ಶಾಸನವೊಂದು ಏರ್ಪಟ್ಟಿದೆಯಷ್ಟೆ? ಅದು ಕಳೆದ ಜುಲೈ ತಿಂಗಳಾರಭ್ಯ ಸಂಸ್ಥಾನದಲ್ಲಿ ವ್ಯವಹಾರಕ್ಕೆ ಬರುವುದೆಂದು ಪ್ರಕಟಿಸಲ್ಪಟ್ಟಿರುವುದು. ಈ ತೆರುಗೆಯನ್ನು ಮುಂದಣ ಜೂನ್ ತಿಂಗಳ ಕೊನೆಯೊಳಗೆ ಮುಗಿಯತಕ್ಕ ವರ್ಷದಲ್ಲಿ ಮೊದಲನೆ ಸಲ ಕೊಡಲು ಈ ಶಾಸನದ ಪ್ರಕಾರ ಪ್ರಜೆಗಳು ಬದ್ಧರಾಗಬೇಕು. ಈ ತೆರುಗೆಯನ್ನು ಇಂಥಿಂಥವರ ಮೇಲೆ ಇಷ್ಟಿಷ್ಟೆಂದು ವಿಧಿಸಿ ಎತ್ತಿಸುವ ಅಧಿಕಾರಿಗಳು, ಸಂಸ್ಥಾನದಲ್ಲಿ ಈ ತೆರುಗೆಯನ್ನು ತೆರಲು ಅರ್ಹವಾದಷ್ಟು ವರಮಾನವುಳ್ಳವರೆಂದು ತೋರಿಬಂದ ಪ್ರಜೆಗಳಿಗೆಲ್ಲಾ ಈಗ ನೋಟೀಸುಗಳನ್ನು ಕಳುಹಿಸಿ, ಅದರಲ್ಲಿ-ಕಳೆದ ಜೂನ್ ತಿಂಗಳ ಕೊನೆಗೆ ಮುಗಿದ ವರ್ಷದಲ್ಲಿ ಅವರವರಿಗೆ ಆಗಿರುವ ವರಮಾನದ ವಿವರಣವನ್ನು ತಪ್ಪಿಲ್ಲದಂತೆ ಪಟ್ಟಿಯಲ್ಲಿ ಬರೆದು ೧ ತಿಂಗಳೊಳಗಾಗಿ ಕಳುಹಿಸಬೇಕೆಂದೂ, ತಪ್ಪಿದರೆ ಸಾವಕಾಶವಾದಷ್ಟು ದಿನಗಳಿಗೆ ದಿನ ೧ ಕ್ಕೆ ೧೦ ರೂ. ನಂತೆ ದಂಡಕ್ಕೆ ಗುರಿಯಾಗಬೇಕಾಗುವುದೆಂದೂ, ತಪ್ಪಾದ ಸುಳ್ಳು ಲೆಕ್ಕಗಳನ್ನು ಕಳುಹಿಸಿದವರು ಪ್ರಾಸಿಕ್ಯೂಷನ್ ಮೊದಲಾದುವುಗಳಿಗೆ ಗುರಿಯಾಗಬೇಕಾಗುವುದೆಂದೂ ಇತ್ಯಾದಿಯಾಗಿ ಕಾಣಿಸಲ್ಪಟ್ಟಿರುವುದು.

ಈ ನೋಟೀಸು ಪ್ರಜಾಸಾಮಾನ್ಯದಲ್ಲಿ ಆಕಸ್ಮಿಕವಾದ ಒಂದು ದಿಗಿಲನ್ನು ಉಂಟುಮಾಡಿರುವುದು. ಮೊಟ್ಟಮೊದಲನೆಯದಾಗಿ ಇದು ದೇಶಭಾಷೆಯಲ್ಲಿರದೆ ಆಂಗ್ಲಭಾಷೆಯಲ್ಲಿದ್ದುದು ಮೊದಲನೆಯ ದೋಷ. ೨ ನೆಯದಾಗಿ ಕಳೆದುಹೋದ ವರ್ಷದ ಲೆಕ್ಕಗಳನ್ನೆಲ್ಲಾ ೧ ತಿಂಗಳ ಕಾಲದಲ್ಲಿ ಬರೆದು ಕಳುಹಿಸದಿದ್ದರೆ "ಜುಲ್ಮಾನೆ" ಮೊದಲಾದುವುಗಳನ್ನು ವಿಧಿಸುತ್ತೇವೆಂದೂ, ಸುಳ್ಳುಪಳ್ಳುಗಳನ್ನು ಬರೆದರೆ ಪ್ರಾಸಿಕ್ಯೂಷನ್ ಆಗುವುದೆಂದೂ ಬೆದರಿಸಿಕೊಟ್ಟಿರುವ ಜಾಪಾಳದ ಘುಟಿಕೆಯು ೨ ನೆಯ ದೋಷವಾಗಿರುವುದು. ವಿದ್ಯಾವಂತರಾಗಿ ಸರಿಯಾದ ಕ್ರಮವನ್ನನುಸರಿಸಿ ಲೆಕ್ಕಗಳನ್ನಿಡಬಲ್ಲ ಕೆಲವರಿಗೆ ಮಾತ್ರ ಇದು ಭೀಕರವಾಗಿ ತೋರದೆ ಇರಬಹುದಾದರೂ, ಸರ್ವತ್ರ ಅನ್ವಯಿಸುವಂತೆ ಅದರಲ್ಲಿ ಉಪಯೋಗಿಸಲ್ಪಟ್ಟಿರುವ ಹಗುರವಾದ ಕೆಲ ಶಬ್ದಗಳು ಅಂಥವರಿಗೂ ಬೇಸರನ್ನು ಹುಟ್ಟಿಸದೆಹೋಗಿಲ್ಲ. ಹೊಸಕಂದಾಯವೆಂಬ ಸುದ್ದಿಯೇ ಸಾಮಾನ್ಯ ಪ್ರಜೆಗಳಿಗೆ ಬೆದರಿಕೆಯನ್ನುಂಟುಮಾಡುವುದು. ಬಹು ಪ್ರಜೆಗಳು ಲೆಕ್ಕವನ್ನಿಟ್ಟೇ ಇಲ್ಲ. ಇಟ್ಟಿರುವ ಕೆಲವರಲ್ಲಿ ಕ್ರಮವಾದ ವಿಧಾನಗಳಿಲ್ಲ. ಆ ಲೆಕ್ಕಗಳಲ್ಲಿ ಬಂಡವಾಳದ ಮತ್ತು ಲಾಭದ ವಿಭಾಗ ಕ್ರಮಗಳೇ ತಿಳಿಯುವಂತಿರುವುದಿಲ್ಲ. ಆದರೂ ಅಂಥವರ ವರಮಾನಗಳು ವಿಶೇಷವಾಗಿಯೇ ಇರುವುದರಲ್ಲಿ ಅಭ್ಯಂತರವಿಲ್ಲ. ಇಂಥವರುಗಳನ್ನೆಲ್ಲಾ ೧ ತಿಂಗಳಲ್ಲಿ ಕಳೆದ ವರ್ಷದ ಲೆಕ್ಕವನ್ನು ಏರುಪೇರಿಲ್ಲದೆ ಬರೆದು ಕಳುಹಿಸಿಕೊಡಿರೆಂದು ಸರ್ಕಾರಿ ಉದ್ಯೋಗಿಗಳು ದಂಡೋಪಾಯದ ಬೆದರಿಕೆಯನ್ನು ತೋರಿಸಿ ಕೇಳಿರುವುದನ್ನು ನೋಡಿದರೆ ಅವರುಗಳಿಗೆ ದೇಶದ ಸ್ಥಿತಿಗತಿಯ ಪರಿಜ್ಞಾನವುಂಟೆ? ಎಂದು ಸಂಶಯಪಡಬೇಕಾಗುವುದು. ಅಲ್ಲದೆ ಹಿಂದೆ ಕಳೆದುಹೋದ ವರ್ಷದ ಲೆಕ್ಕವನ್ನು ಸರ್ಕಾರದವರು ಕೇಳುವುದು ಅಷ್ಟೇನೂ ಯುಕ್ತಿಯುಕ್ತವಾಗಿತೋರುವುದಿಲ್ಲ. ಅಂದಾಜಿನ ಮೇಲೆ ಅವರವರ ವರಮಾನದ ತೆರುಗೆಯನ್ನು ವಿಧಿಸುವ ಆಧಾರಕ್ಕಾಗಿ ಆ ಹಿಂದಣ ಲೆಕ್ಕವನ್ನು ಇವರು ಕೇಳಿರಬಹುದಾದರೂ, ಒಂದು ವರ್ಷದ ವರಮಾನವೇ ವ್ಯತ್ಯಾಸ ಹೊಂದದೆ ಸ್ಥಿರವಾಗಿರುವುದೆಂದು ಹೇಳುವುದು ಹೇಗೆ? ಈ ವರ್ಷದಲ್ಲಿ ಒಬ್ಬನ ಆದಾಯವು ೧ ಸಾವಿರವಾಗಿದ್ದರೆ ಮುಂದಣ ವರ್ಷದಲ್ಲಿ ೧೦ ಸಾವಿರವಾಗಕೂಡದೆ? ಅಥವಾ ನಷ್ಟವೇ ಸಂಭವಿಸಲೂ ಬಹುದಲ್ಲವೆ? ಸಂದರ್ಭಗಳು ಹೀಗಿರುವಾಗ ಒಂದು ವರ್ಷದ ಅಂದಾಜನ್ನೇ ಉದ್ದಕ್ಕೂ ನಂಬಿದರೆ ಸರ್ಕಾರಕ್ಕಾದರೂ ನಷ್ಟವಾಗಬಹುದು, ಅಥವಾ ಪ್ರಜೆಗಳಿಗಾದರೂ ನಷ್ಟ ಅಥವಾ ಲಾಭವು ಸಂಘಟಿಸಬಹುದು. ಅಲ್ಲದೆ ಮುಂದಾಗಿ ಎಚ್ಚರಿಕೆಯನ್ನು ಕೊಡದೆ ಲೆಕ್ಕದ ವಿವರಣವನ್ನು ಕೊಡಿರೆಂದು ಈಗ ಕೇಳುವುದು ಎಲ್ಲಿಯ ನ್ಯಾಯ? ಲೆಕ್ಕವನ್ನೇ ಇಡದಿರುವವರು ತಂದು ತೋರಿಸುವುದೆಲ್ಲಿಂದ? ಇಟ್ಟಿದ್ದವರು ಕೂಡ ಒಂದು ತಿಂಗಳೊಳಗಾಗಿ ಅದನ್ನು ಎತ್ತಿಸಿ ಒಪ್ಪಿಸುವುದು ಸಾಧ್ಯವೆ? ಈ ಶಾಸನವು ಬಳಕೆಗೆ ತರಲ್ಪಟ್ಟು ೪ ತಿಂಗಳಾಗಿರುವಲ್ಲಿ, ಸರ್ಕಾರದವರು ಈ ಸಂಬಂಧದ ನೋಟೀಸನ್ನು ಹುಟ್ಟಿಸುವುದಕ್ಕೇ ಇಷ್ಟು ಕಾಲ ಬೇಕಾಯಿತು. ಲಕ್ಷಾಂತರ ವ್ಯವಹಾರವನ್ನು ನಡೆಯಿಸಿರುವ ವರ್ತಕಾದಿಗಳು ತಮ್ಮ ಲೆಕ್ಕವನ್ನೆಲ್ಲಾ ಎತ್ತಿಸಿ ಕಳುಹಿಸಿಕೊಡುವುದಕ್ಕೆ ತಕ್ಕಷ್ಟು ಕಾಲವು ಬೇಡವೆ? ಅದುಕಾರಣ, ಅಸಾಧ್ಯವೂ ನಿಷ್ಫಲವೂ ಆದ ಹಿಂದಣ ವರ್ಷದ ಲೆಕ್ಕವನ್ನು ಇಷ್ಟುಬೇಗನೆ ಸಂಪಾದಿಸುವ ಹವ್ಯಾಸವನ್ನು ಇನ್‌ಕಂಟ್ಯಾಕ್ಸ್ ಕಮಿಷನರು ಬಿಟ್ಟು, ೨೦೦೦ ರೂ. ಗಳಿಗೆ ಮೇಲ್ಪಟ್ಟ ದೊಡ್ಡ ದೊಡ್ಡ ವರಮಾನವಿರುವವರೆಲ್ಲಾ ೧೯೨೦ ನೆ ಜುಲೈ ತಿಂಗಳಿಂದ ಲೆಕ್ಕಗಳನ್ನು ಈ ಈ ರೀತಿಯಲ್ಲಿಡಬೇಕೆಂದು ಮೊದಲಾಗಿ ಸೂಚನೆ ಕೊಟ್ಟು ಅದರಂತೆ ನಡೆಯಿಸಿ ವರ್ಷಾಂತ್ಯದಲ್ಲಿ ಆ ಲೆಕ್ಕವನ್ನನುಸರಿಸಿ ತೆರುಗೆಯನ್ನು ವಿಧಿಸಿ ಎತ್ತಿದ್ದರೆ ನಿರಾಕ್ಷೇಪವಾಗಿರುತ್ತಿದ್ದಿತು. ತಮ್ಮ ವಸರಕ್ಕಾಗಿ ಪ್ರಜೆಗಳನ್ನು ಪೀಡಿಸುವುದು ಧರ್ಮವಾಗಿಲ್ಲ. ಮೊದಲ ಒಂದು ವರ್ಷ ಸ್ವಲ್ಪ ತಡವಾದರೂ ಮುಂದಕ್ಕೆ ಸುಲಭವಾಗುವುದು.

ಎಷ್ಟು ದುಡ್ಡಿದ್ದರೆ ತಾನೇ ಏನು? ಎಷ್ಟು ಗೆಳೆಸಾಳುಗಳಾಗಿದ್ದರೆ ತಾನೇ ಪ್ರಯೋಜನವೇನು? ವಿದ್ಯೆಯೊಂದಿಲ್ಲದಿದ್ದರೆ ಇಂಥ ಸಮಯಗಳಲ್ಲಿ ಮೂಕರಾಗಿಯೇ ಇರಬೇಕಾಗುವುದು. ಅವಿದ್ಯಾವಂತರೇ ಹೆಚ್ಚಾಗಿರುವ ನಮ್ಮ ಸಂಸ್ಥಾನದ ಪ್ರಜೆಗಳಲ್ಲಿ ಬಹುಜನರು ಈ ನೋಟೀಸುಗಳನ್ನು ಕೈಯಲ್ಲಿ ಹಿಡಿದುಕೊಂಡು ತಾ|| ಅಮಲ್ದಾರರೇ ಮೊದಲಾದ ಉದ್ಯೋಗಿಗಳ ಬಳಿಗೂ ವಿದ್ಯಾವಂತರಾದ ಜನರಬಳಿಗೂ ಹೋಗಿ ಕಣ್ಣುಬಾಯಿ ಬಿಡುತ್ತಿರುವುದನ್ನು ಪ್ರತ್ಯಕ್ಷವಾಗಿ ನಾವು ನೋಡಿರುವುದರಿಂದ ಈ ನೋಟೀಸು ಸಂಸ್ಥಾನದಲ್ಲಿ ಬಲು ದಿಗಿಲನ್ನುಂಟುಮಾಡಿದೆಯೆಂಬುದನ್ನು ಸ್ವಾನುಭವದಿಂದ ಹೇಳಬೇಕಾಯಿತು. ಆದರೆ ರಾಜಧಾನಿಯ ಧನಿಕರೂ ವರ್ತಕರೇ ಮೊದಲಾದವರೂ ಮೂಕರಾಗಿರದೆ, ಈ ವಿಷಯದಲ್ಲಿ ಸರ್ಕಾರದವರು ಕೈಕೊಂಡ ಪ್ರಯತ್ನದ ನ್ಯೂನಾತಿರೇಕಗಳನ್ನು ಸಂಪಡಿಸುವುದಕ್ಕೆ ಪ್ರಯತ್ನಿಸಿರುವುದು ಸಂಸ್ಥಾನಕ್ಕೇ ಉಪಕಾರಕವಾಯಿತೆಂದು ನೆನಸುತ್ತೇವೆ. ಕಳೆದ ತಾ|| ೨೭ ರಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ಇಲ್ಲಿಯ ಪ್ರಮುಖ ವ್ಯಾಪಾರಿಗಳೇ ಮೊದಲಾದವರು ಸೇರಿ ಆ ಸಭೆಗೆ ದಯಮಾಡಿಸಿದ್ದ ಇನ್‌ಕಂಟ್ಯಾಕ್ಸ್ ಕಮಿಷನರಾದ ಮಿ|| ಕುರಿಯನ್ ಮೆಥ್ಯೂ ಬಿ. ಎ. ಯವರ ಮುಂದೆ ತಮ್ಮ ವಿಚಾರಗಳನ್ನೆಲ್ಲಾ ವಿಜ್ಞಾಪಿಸಿಕೊಂಡರು. ಕೆಲಕೆಲವಕ್ಕೆ ಅವರು ಹೇಳಿದ ಸಮಾಧಾನಗಳು ತೃಪ್ತಿಕರವಾಗಿರಲಿಲ್ಲ. ಈ ೧೯೨೦ ನೆ ಜುಲೈಯಾರಭ್ಯ ಸರಿಯಾದ ಕ್ರಮದಲ್ಲಿ ಲೆಕ್ಕಗಳನ್ನಿಡುವಂತೆ ಅಪ್ಪಣೆ ಮಾಡಿ ವರ್ಷಾಂತ್ಯದಲ್ಲಿ ಅದರ ಆಧಾರದ ಮೇಲೆ ತೆರುಗೆಯನ್ನು ನಿಷ್ಕರ್ಷಿಸುವಂತೆ ಮಾಡಬೇಕೆಂದು ಸಭಿಕರು ಮಾಡಿದ ಸೂಚನೆಯ ವಿಷಯದಲ್ಲೂ, ಆದಾಯದಲ್ಲಿ ಕಳೆದು ಹಾಕಬೇಕಾದ ವೆಚ್ಚಗಳ ವಿಷಯದಲ್ಲೂ ಇತರ ಕೆಲ ಸಂಗತಿಗಳಲ್ಲೂ ತಾವು ಸರ್ಕಾರಕ್ಕೆ ತಿಳಿಯಿಸಿ, ಅವರಿಂದ ಅನುಕೂಲವಾದ ಏರ್ಪಾಟುಗಳನ್ನು ಮಾಡಿಸುವುದಾಗಿಯೂ, ತಮ್ಮ ಇಷ್ಟಗಳನ್ನೆಲ್ಲಾ ವರ್ತಕಾದಿಗಳು ಸರ್ಕಾರಕ್ಕೆ ಶ್ರುತಪಡಿಸಿಕೊಳ್ಳಬಹುದೆಂಬುದಾಗಿಯೂ ಕಮಿಷನರು ಅಪ್ಪಣೆಕೊಡಿಸಿದರು.

ಅದರ ಮೇಲೆ ಮರುದಿವಸ ಯಥಾಪ್ರಕಾರ ಟೌನ್‌ಹಾಲಿನಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ವರ್ತಕರೇ ಮೊದಲಾದವರು ಸಭೆಗೂಡಿ ಈ ಕೆಳಗೆ ಕಾಣುವ ನಿರ್ಧಾರಗಳನ್ನು ಮಾಡಿದರು:—(೧) ಹಿಂದಣ ಲೆಕ್ಕವನ್ನು ಕೊಡುವುದು ಅಸಾಧ್ಯವಾದುದರಿಂದ ಈ ಜುಲೈ ತಿಂಗಳಾರಭ್ಯದ ಲೆಕ್ಕವನ್ನು ಕೇಳುವಂತೆ ಮಾಡಬೇಕು. (೨) ವರ್ತಕರ ಸಂಪಾದನೆಯ ಮೇಲೆಲ್ಲಾ ತೆರುಗೆಯನ್ನು ಹಾಕದೆ, ಅವರ ಬಂಡವಾಳದ ಬಡ್ಡಿ, ಅವರ ಆಳುಕಾಳುಗಳು ಸ್ವಂತ ಶ್ರಮ ಇವುಗಳಿಗೆಲ್ಲಾ ಆದಾಯದಲ್ಲಿ ಸೇಕಡಾ ೨೫ ರಷ್ಟನ್ನು ತೆಗೆದುಬಿಟ್ಟು, ಉಳಿದುದರ ಮೇಲೆ ತೆರುಗೆಯನ್ನು ವಿಧಿಸುವಂತೆ ಮಾಡಬೇಕು. (೩) ಈ ತೆರುಗೆಯ ಸಂಬಂಧವಾಗಿ ಸರ್ಕಾರಕ್ಕೆ ಬರೆದುಕೊಳ್ಳಬೇಕಾಗುವ ಅರ್ಜಿ ಮೊದಲಾದುವುಗಳಿಗೆ ಸ್ಟಾಂಪನ್ನಂಟಿಸಬೇಕೆಂದಿರುವ ನಿರ್ಬಂಧವನ್ನು ತೆಗೆದುಹಾಕಬೇಕು. (೪) ಲೆಕ್ಕವನ್ನು ೧ ತಿಂಗಳಲ್ಲಿ ಕೊಡದಿದ್ದರೆ ಸಾವಕಾಶವಾದ ದಿನ ೧ಕ್ಕೆ ೧೦ ರೂ. ನಂತೆ ದಂಡ ವಿಧಿಸಲ್ಪಡುವುದೆಂಬ ವಿಧಿಯನ್ನು ೧೦ ವರ್ಷಗಳ ವರೆಗೆ ವ್ಯವಹಾರಕ್ಕೆ ತರದಂತೆ ಮಾಡಬೇಕು. (೫) ಪುರನಿವಾಸಿಗಳ ಲೆಕ್ಕಗಳ ವಿಮರ್ಶೆಯು ರಾಜಧಾನಿಯಲ್ಲಿಯೇ ಮಾಡುವಂತೆಯೂ ಬೇರೆ ಕಡೆಗೆ ಲೆಕ್ಕದ ಪುಸ್ತಕಗಳನ್ನು ಕಳುಹಿಸಿಕೊಡಬೇಕಾದ ನಿರ್ಬಂಧವಿಲ್ಲದಂತೆಯೂ ಆಗಬೇಕು. (೬) ಇ|| ಕಮಿಷನರ ತೀರ್ಮಾನದ ಮೇಲೆ ಅಪ್ಪೀಲನ್ನು ಹಿಡಿಯುವುದಕ್ಕೆ ರಾಜಧಾನಿಯಲ್ಲಿ ಒಂದು ಅಪ್ಪೀಲ್ ಬೋರ್ಡನ್ನೇರ್ಪಡಿಸಬೇಕು. (೭) ವರಮಾನದ ತೆರುಗೆ ಬಿದ್ದ ಮೇಲೆ ಆಕ್ಟ್ರಾಯಿ ಕಂದಾಯವನ್ನು ತೆಗೆದುಹಾಕಬೇಕು. (೮) ಮನೆಯಜಮಾನರೇ ಮನೆಯಲ್ಲಿ ವಾಸಮಾಡುತ್ತಿರುವಾಗ್ಗೆ ಆ ಮನೆ ಬಾಡಿಗೆಯ ಅಂದಾಜನ್ನು ವರಮಾನದ ಲೆಕ್ಕದೊಳಗೆ ಸೇರಿಸಿಕೊಳ್ಳಬೇಕೆಂದಿರುವ ನಿಯಮವನ್ನು ತೆಗೆದುಹಾಕಬೇಕು. (೯) ಈ ನಿರ್ಧಾರಗಳನ್ನು ಸರ್ಕಾರದವರು ಪರ್ಯಾಲೋಚಿಸಿ ತೀರ್ಮಾನಿಸುವವರೆಗೂ ನೋಟೀಸಿನಲ್ಲಿ ಕಂಡ ಯಾವ ಕ್ರಮವನ್ನೂ ಮುಂದಕ್ಕೆ ಸಾಗಿಸದಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕು. (೧೦) ಈ ವಿಷಯವನ್ನೆಲ್ಲಾ ಪ್ರತ್ಯಕ್ಷವಾಗಿ ಸರ್ಕಾರಕ್ಕೆ ಬಿನ್ನೈಸಿಕೊಳ್ಳಲಿಕ್ಕೆ ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಮಹಮ್ಮದ್‌ಸೇಟರು, ಎಂ. ಎಲ್. ವರ್ಧಮಾನಯ್ಯನವರು, ತಿಮ್ಮಯ್ಯನವರು, ಕಾ|| ಸುಬ್ಬರಾಯಶೆಟ್ಟರು, ಬನುಮಯ್ಯನವರು, ರೋಚಲ್‌ದಾಸ್‌ಶೇಟರು, ಧನಕೋಟಿಶೆಟ್ಟರು, ತಿರುವೆಂಗಡಮೊದಲಿಯಾರರು ಈ ೯ ಜನರ ಒಂದು ಡೆಪ್ಯುಟೇಷನ್ನು ಸರ್ಕಾರಕ್ಕೆ ಹೋಗತಕ್ಕುದು, ಮತ್ತು ಈ ನಿರ್ಧಾರಗಳ ಪ್ರತಿಯೊಂದನ್ನೂ ಸರ್ಕಾರಕ್ಕೆ ಕಳುಹಿಸಿಕೊಡತಕ್ಕುದು. ಹೀಗೆ ನಿರ್ಧಾರಗಳನ್ನು ಮಾಡಿರುತ್ತಾರೆ.

ಶಾಸನದ ಪ್ರಕಾರ ತೆರುಗೆಯನ್ನು ಕೊಡಲು ಈಗ ಪ್ರಜೆಗಳ ಪ್ರತಿಭಟನವೇನೂ ಇಲ್ಲ. ಹೊಸದಾದ ಈ ಕ್ರಮವನ್ನು ಸುವ್ಯವಸ್ಥೆಗೆ ತಂದು ಪ್ರಜೆಗಳಿಗೆ ಅನುಭವ ಮಾಡಿಕೊಟ್ಟು ಶಾಂತರೀತಿಯಿಂದ ಕಾರ್ಯಸಾಫಲ್ಯ ಮಾಡಿಕೊಳ್ಳುವುದು ಸರ್ಕಾರದ ಕೈಯಲ್ಲಿದೆ. ಭಯ ದರ್ಪ ದೂರ್ತತೆಗಳಿಂದ ಪ್ರಜೆಗಳನ್ನು ಕರಡುಮಾಡುವುದು ಸದುಪಾಯವಲ್ಲ. ಅದುಕಾರಣ ಪ್ರಭುತ್ವದವರು ಸಾವಧಾನವಾಗಿ ಈ ವಿಷಯವನ್ನು ಪರಾಮರ್ಶಿಸಿ ಉಚಿತವಾಗಿ ವ್ಯವಸ್ಥೆಗೊಳಿಸದಿರಲಾರರೆಂದು ನಂಬುತ್ತೇವೆ. ಮತ್ತು ರಾಜಧಾನಿಯ ನಿವಾಸಿಗಳು ತೋರಿಸಿಕೊಟ್ಟ ಮುಂಜಾಗರೂಕತೆಯ ದಕ್ಷತೆಯನ್ನು ಸಂಸ್ಥಾನದ ಇತರ ಸ್ಥಲಗಳ ಪ್ರಮುಖರೂ ಅವಲಂಬಿಸುವುದರಲ್ಲಿ ಪ್ರಯೋಜನವುಂಟೆಂದು ಹೇಳುತ್ತೇವೆ. ಕೂಡಲೇ ಇತ್ಯರ್ಥವಾಗದಿದ್ದರೆ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಸಮೀಪಸ್ಥವಾಗಿರುವುದರಿಂದ ಆದರಲ್ಲೂ ಈ ವಿಷಯ ವಿಚಾರಕ್ಕೆ ಅವಕಾಶ ಮಾಡಿಕೊಳ್ಳಬಹುದಾಗಿರುತ್ತದೆ.

ಒಳದೇಶದ ವೃತ್ತಾಂತಗಳು.

ತಿ|| ನರಸಿಹ್ಮಪುರದಲ್ಲೂ ಆ ತಾಲ್ಲೂಕಿಗೆ ಸೇರಿದ ಗ್ರಾಮಾಂತರಗಳಲ್ಲೂ ಪ್ಲೇಗು ವ್ಯಾಪಿಸಿದೆ.

ಶ್ರೀಮನ್ಮಹಾರಾಜರವರು ಬೆಂಗಳೂರಿಂದ ರಾಜಧಾನಿಗೆ ಕಳೆದ ಗುರುವಾರ ದಯಮಾಡಿಸಿದರು.

ಕಳೆದ ಸೆಪ್ಟಂಬರ್ ತಾ|| ೨೫ ರ ವರೆಗೆ ಮೈಸೂರು ಗೌರ್ನಮೆಂಟ್ ಸಾಲದ ಪತ್ರಗಳು ೯೬೨೭೪೮೧೨|| ರೂ. ಗಳಷ್ಟು ಕೊಳ್ಳಲ್ಪಟ್ಟಿದ್ದುವು.

ಸಂಸ್ಥಾನದ ಅನೇಕ ಪರಸ್ಪರ ಸಹಾಯಕ ಸಂಘಗಳಲ್ಲಿ ಹಣವು ಅಪಹೃತವಾಗಿಯೂ ದುರುಪಯೋಗವಾಗಿಯೂ ಇದೆಯೆಂದು ಗೊತ್ತಾಗಿದೆ.

ಕನ್ನಂಬಾಡಿ ಕಟ್ಟೆಯಲ್ಲಿ ಅ|| ಇಂಜನಿಯರಾಗಿದ್ದ ಮಿ|| ಎನ್. ನರಸಿಹ್ಮಯ್ಯಂಗಾರರು ರಾಜಧಾನಿಯ ಮ್ಯುನಿಸಿಪಲ್ ಇಂಜನಿಯರಾಗಿ ವರ್ಗಮಾಡಲ್ಪಟ್ಟಿದ್ದಾರೆ.

ಮೈಸೂರಿನ ಬಳಿಯಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ಕೃಷ್ಣರಾಜ ಕಾಟನ್ ಮಿಲ್ಲಿನ ಮೂಲಧನಕ್ಕಿಂತಲೂ ಹೆಚ್ಚಾಗಿ ಷೇರು ದರಖಾಸ್ತುಗಳು ಬಂದಿವೆಯೆಂದು ಕೇಳುತ್ತೇವೆ.

ಅಮಲ್ದಾರರುಗಳಾದ ಮ|| ಕೆ. ನಾರಾಯಣಯ್ಯರು ದಾವಣಗೆರೆಯಿಂದ ಮಂಡ್ಯಕ್ಕೂ, ಮ|| ಬಿ. ಭಗವಂತರಾಯರು ನಗರದಿಂದ ದಾವಣಗೆರೆಗೂ, ಮ|| ಪಿ. ಕೆ. ದೊರಸಾಮಯ್ಯಂಗಾರರು ಚಿತ್ರದುರ್ಗದಿಂದ ನಗರಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಉತ್ತರೆಯ ಮಳೆಯು ಹುಯ್ದು ಲೋಕೋತ್ತರವಾದ ಉಪಕಾರಮಾಡಿತು. ಹಸ್ತದ ಮಳೆಯು ಅಭಯ ಹಸ್ತವನ್ನು ಕೊಡುವುದೋ ಮೋಸಮಾಡುವುದೋ ತಿಳಿಯಲಿಲ್ಲ. ಇನ್ನೆರಡುಮೂರು ಮಳೆಗಳು ಚೆನ್ನಾಗಿ ನಡೆಯಿಸದಿದ್ದರೆ ಕೆರೆಕಟ್ಟೆಗಳಿಗೆ ನೀರಿಲ್ಲದೆ ಮುಂದಣ ಬೇಸಗೆಯನ್ನು ಕಳೆಯುವುದು ಬಹಳ ಕಷ್ಟವಾಗುವುದು.

ಮಿ|| ನವಾಬ್ ಗುಲಾಂ ಅಹಮದ್ ಕಲಾಮಿಯವರು ಮೈಸೂರು ಫೈನಾನ್ಸ್ ಕಮಿಟಿಗೆ ಮೆಂಬರಾಗಿದ್ದರು. ಈಗ ಅದಕ್ಕೆ ರಾಜೀನಾಮೆ ಕೊಟ್ಟರೆಂದು ಕೇಳುತ್ತೇವೆ. ಮೈಸೂರು ಸರ್ಕಾರದೊಡನೆ ಮಹಮ್ಮದೀಯರು ಸಹಾಯನಿರಾಕರಣ ಮಾಡುವುದಕ್ಕೆ ಕಾರಣವಿಲ್ಲವಾಗಿ ಇವರ ರಾಜೀನಾಮೆಗೆ ಕಾರಣವೇನೋ ತಿಳಿಯಲಿಲ್ಲ.

ರಾಜಧಾನಿಯ ಕೋಟೆಯ ಉತ್ತರದ್ವಾರದ ಇದಿರಿನ ಉದ್ಯಾನಮಧ್ಯದಲ್ಲಿ ಶ್ರೀ ಚಾಮರಾಜೊಡೆಯರವರ ಅಮೃತಶಿಲಾ ಪ್ರತಿಮೆಯನ್ನು ಸ್ಥಾಪಿಸುವ ಪ್ರಯತ್ನವು ನಡೆದು ಹತ್ತಾರು ವರ್ಷಗಳಾದುವು. ಲಕ್ಷಾಂತರ ಧನವೂ ವೆಚ್ಚವಾಗಿರಬೇಕು. ಪ್ರತಿಮಾದರ್ಶನಯೋಗವು ಪ್ರಜೆಗಳಿಗೆ ಇನ್ನೂ ಲಭಿಸಲಿಲ್ಲ. ಆದರೆ ಈಗ ಆ ಸ್ಥಲದಲ್ಲಿ ಪ್ರತಿಮೆಗೆ ಪ್ರತಿಯಾಗಿ ವಿದ್ಯುದ್ದೀಪಸ್ತಂಭಗಳ ಪ್ರತಿಷ್ಠೆಯು ನಡೆಯುತ್ತಿದೆ.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳವರ ಸ್ವಾರಿಯು ಸಕಲ ಬಿರುದಾವಳಿಗಳೊಡನೆ ಕಳೆದ ತಾ|| ೧೮ ರಲ್ಲಿ ತುಮಕೂರು ತಾ|| ಹೊನ್ನುಡಿಕೆಗೆ ದಯಮಾಡಿಸಿತೆಂತಲೂ ಆ ಪುರಿನ ಭಕ್ತಮಂಡಲಿಯವರು ಮಹಾವಿಭವದಿಂದ ಪುರವನ್ನಲಂಕರಿಸಿ ಶ್ರೀಗಳನ್ನು ಉತ್ಸವಗೊಳಿಸಿ, ಪಾದಸೇವೆಯಂ ಮಾಡಿದರೆಂತಲೂ ಮ|| ಯಜಮಾನ್ ಹೊನ್ನಸೆಟ್ಟಪ್ಪನವರು ಅತಿಭಕ್ತಿಯಿಂದ ಪಾದಪೂಜೆಯನ್ನು ನಡೆಯಿಸಿ ೨೫೦ ರೂ. ಪಾದಗಾಣಿಕೆಯನ್ನರ್ಪಿಸಿ ೮ ದಿನಗಳ ಕಾಲ ದಾಸೋಹದ ವೆಚ್ಚವನ್ನು ತಾವೇ ವಹಿಸಿದ್ದರೆಂತಲೂ ಪೇಟೆ ಮನೆಯವರೆಲ್ಲರೂ ಯಥಾಶಕ್ತಿ ಕಾಣಿಕೆಗಳನ್ನರ್ಪಿಸಿದರೆಂತಲೂ, ತಾ|| ೨೫ಕ್ಕೆ ಸ್ವಾರಿಯು ಗೂಳೂರಿಗೆ ದಯಮಾಡಿಸಿತೆಂತಲೂ ಕೇಳಿದೆವು.

ಭರತಖಂಡದಲ್ಲೆಲ್ಲಾ ಸುಪ್ರಸಿದ್ಧರಾಗಿದ್ದ ಆಯುರ್ವೇದ ಮಾರ್ತಾಂಡ ಭಿಷಜ್ಮಣಿ ವೈದ್ಯರತ್ನಾದಿ ಬಿರುದಾಂಕಿತ ಡಿ. ಗೋಪಾಲಾಚಾರ್ಲುಯವರು ೧ ವಾರದಿಂದ ರಾಜವ್ರಣ ಪೀಡಿತರಾಗಿದ್ದು ಕಳೆದ ಬುಧವಾರ ಮದರಾಸಿನಲ್ಲಿರುವ ತಮ್ಮ ಮನೆಯಲ್ಲಿ ತಮ್ಮ ೯೯ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ನಮ್ಮ ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವೈದ್ಯವಿದ್ಯಾಭ್ಯಾಸವನ್ನು ಮಾಡಿ ಹೋದವರು. ಇವರ ಔಷಧಗಳು ಬಹಳ ಪ್ರಜೋಪಕರವಾಗಿದ್ದುದರಿಂದ ತನ್ಮೂಲಕ ಇವರು ಲಕ್ಷಾಂತರವನ್ನಾರ್ಜಿಸಿದರು. ಆ ದ್ರವ್ಯವನ್ನೆಲ್ಲಾ ಇವರು ಆಯುರ್ವೇದಾಭಿವೃದ್ಧಿಗೆ ಉಪಯೋಗಿಸುತ್ತಿದ್ದರು. ಮದ್ರಾಸಿನಲ್ಲಿ ಇವರು ಆಯುರ್ವೇದ ಕಲಾಶಾಲೆಯನ್ನು ಸ್ಥಾಪಿಸಿರುವರು. ಕೆಲವು ಸಂಸ್ಕೃತ ವೈದ್ಯಗ್ರಂಥಗಳನ್ನು ತೆಲ್ಗುಗಿಗೆ ಭಾಷಾಂತರಿಸಿ ಮುದ್ರಿಸಿರುವರು. ಧನ್ವಂತರಿ ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅನೇಕಾಯುರ್ವೇದ ಮಹಾಸಭೆಗಳಿಗೆ ಇವರು ಅಧ್ಯಕ್ಷರಾಗಿದ್ದರು. ಇವರಿಂದ ನಿಜವಾಗಿಯೂ ಆಯುರ್ವೇದ ಪ್ರಸಾರಕ್ಕೆ ಬಹಳ ಉತ್ತೇಜನವು ಸಿಕ್ಕಿತು. ಇಂಥವರ ನಷ್ಟದಿಂದ ಆಯುರ್ವೇದಾಭ್ಯುದಯಕ್ಕೆ ದೊಡ್ಡ ಧಕ್ಕೆಯು ತಗುಲಿತೆಂದು ವ್ಯಸದಿಂದ ಹೇಳಬೇಕಾಗಿದೆ. ಇವರು ಕೆಲಕಾಲದಿಂದ ಭೋಜನವನ್ನೇ ಬಿಟ್ಟು ಫಲಾಹಾರವನ್ನು ಮಾಡಿಕೊಂಡಿದ್ದರು. ಇಂಥ ಘನವೈದ್ಯರನ್ನೂ ಅಕಾಲಮೃತಿಗೆ ಗುರಿಮಾಡಿದ ಮೂತ್ರವ್ಯಾಧಿಯ ಶೌರ್ಯವು ಎಷ್ಟು ಅಪ್ರತಿಹತವು!

ಭರತಖಂಡದ ವೃತ್ತಾಂತಗಳು.

ಬಿದಿರಿನಲ್ಲಿ ೩೦ ಜಾತಿಗಳಿರುವುವಂತೆ. ಅವುಗಳಲ್ಲಿ ಒಂದು ಜಾತಿಯದು ಅರ್ಧ ಅಡಿಗಿಂತ ಹೆಚ್ಚಾಗಿ ಬೆಳೆಯುವುದಿಲ್ಲವಂತೆ ಕೆಲವು ೧೫೦ ಅಡಿಗಳಷ್ಟು ಉದ್ದವಾಗಿ ಬೆಳೆಯುವುವು.

ತಿರುಚನಾಪಳ್ಳಿಯ ವೈದ್ಯನಾಥಯ್ಯರ್ ಎಂಬ ಬ್ರಾಹ್ಮಣನು ಮಹಮ್ಮದೀಯ ಮತವನ್ನು ಸ್ವೀಕರಿಸಿ ಗುಲಾಂ ಮಹಮ್ಮದ್ ಎಂಬ ಹೆಸರನ್ನು ಧರಿಸಿದನು. ಈ ಪರಮತ ಸ್ವೀಕಾರಕ್ಕೆ ಆಕರ್ಷಕಶಕ್ತಿಯಾವುದೋ ತಿಳಿಯಲಿಲ್ಲ.

ಬಂಗಾಳಾದ ರಾಜಪುರೀ ಗ್ರಾಮದ ಹತ್ತಿರ ನದಿಗೆ ಹಾಕಲ್ಪಟ್ಟಿದ್ದ ಚಂದನಘಟ್ಟವೆಂಬ ಅಣಕಟ್ಟೆಯಲ್ಲಿ ಕಂಡಿ ಬಿದ್ದು ಕಟ್ಟೆ ಒಡೆದುದರಿಂದ ೬ ಗ್ರಾಮಗಳು ಪ್ರವಾಹದಿಂದ ಕೊಚ್ಚಿಹೋದುವು; ಬಹು ಜನರು ನಿರಾಶ್ರಿತರಾದರು.

ಬೊಂಬಾಯಿ ಅಂಚೆಯಾಳುಗಳ ಮುಷ್ಕರವು ಇನ್ನೂ ಮುಗಿಯಲಿಲ್ಲ. ತೊಂದರೆಯಿಲ್ಲದಂತೆ ಅಂಚೆಯನ್ನು ಹಂಚಿಸುವ ಕೆಲಸವನ್ನು ಸರ್ಕಾರದವರು ನಡೆಯಿಸುತ್ತಿದ್ದಾರೆ. ಮದ್ರಾಸು ಪಟ್ಟಣದ ಅಂಚೆಯಾಳುಗಳೂ ಮುಷ್ಕರ ಹಿಡಿಯುವ ಸೂಚನೆಗಳುಂಟಾಗಿವೆ.

ಜಮೀನ್‌ದಾರ್ ಎಂಬ ಉರ್ದು ಪತ್ರಿಕೆಯ ಸಂಪಾದಕರಾದ ಮೌಲ್ವಿ ಜಾಫರ್ ಅಲಿ ಎಂಬುವವರ ಮೇಲೆ ದೇಶರಕ್ಷಕ ಶಾಸನದ ಪ್ರಕಾರ ತಪ್ಪು ಹೊರಿಸಲ್ಪಟ್ಟು ಅವರು ಪೊಲೀಸರಿಂದ ಹಿಡಿದು ಲಾಹೋರ್ ಫಸ್ಟ್‌ಕ್ಲಾಸ್ ಮೇಜಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ವಿಚಾರಣೆ ನಡೆಯುತ್ತಿದೆ.

ಕರ್ನಾಟಿಕ್ ಪೇಪರ್‌ಮಿಲ್ಸ್ ಎಂಬ ಹೆಸರಿನಿಂದ ಕಾಗದವನ್ನು ನಿರ್ಮಿಸುವ ಯಂತ್ರಾಗಾರವೊಂದನ್ನು ಮದ್ರಾಸಿನಲ್ಲಿ ಅಥವಾ ಅದರ ಬಳಿಯಲ್ಲಿ ೧೦ ಲಕ್ಷ ರೂ. ಗಳ ಮೂಲಧನದಿಂದ ಪ್ರತಿಷ್ಠಾಪಿಸಲು ಮದ್ರಾಸಿನ ಹಿಂದೂ ಪತ್ರಿಕಾ ಪ್ರೊಪ್ರೈಟರಾದ ಮ|| ಎಸ್. ಕಸ್ತೂರಿ ರಂಗಯ್ಯಂಗಾರ್ಯರೇ ಮೊದಲಾದ ಕೆಲವು ದೊಡ್ಡಮನುಷ್ಯರು ಪ್ರಯತ್ನಿಸಿದ್ದಾರೆ. ಮೂಲಧನವನ್ನು ಷೇರು ೧ ಕ್ಕೆ ೧೦೦ ರೂ.ಗಳ ಪ್ರಕಾರ ಕೂಡುವ ಷೇರುಗಳ ಮೂಲಕ ಶೇಖರಿಸುವುದಾಗಿ ಪ್ರಕಟಿಸಿದ್ದಾರೆ.

ಕಳೆದ ಏಪ್ರಿಲ್ ತಿಂಗಳ ಮೊದಲು ಜುಲೈ ತಿಂಗಳ ಕಡೆಯವರೆಗೆ ಭರತಖಂಡಕ್ಕೆ ವಿದೇಶಗಳಿಂದ ೧ ಕೋಟಿಯೂ ೫ ಲಕ್ಷ ರೂ. ಗಳ ಬೆಲೆಯ ೫೨೯೨ ಮೋಟಾರುಗಳು ಬಂದಿವೆ. ಕಳೆದ ವರ್ಷದ ಇದೇ ನಾಲ್ಕು ತಿಂಗಳ ಕಾಲದಲ್ಲಿ ೪೧ ಲಕ್ಷ ಬೆಲೆ ಬಾಳುವ ೧೪೬೪ ಮೋಟಾರುಗಳು ಮಾತ್ರ ಬಂದಿದ್ದುವು. ಈ ವರ್ಷದ ನಾಲ್ಕು ತಿಂಗಳಲ್ಲಿ ಬಂದ ಒಟ್ಟು ಬಂಡಿಗಳಲ್ಲಿ ೪೦೧೫ ಅಮೇರಿಕಾದಿಂದಲೇ ಬಂದಿವೆ. ಉಳಿದವುಗಳಲ್ಲಿ ಗ್ರೇಟ್ ಬ್ರಿಟನ್ನಿನಿಂದ ೬೧೭, ಕೆನಡಾದಿಂದ ೫೧೨, ಇಟಲಿಯಿಂದ ೩೫, ಫ್ರಾನ್ಸಿನಿಂದ ೧೯ ಬಂದಿವೆ.

ದಕ್ಷಿಣಾಫ್ರಿಕಾದಿಂದ ೯೫ ಮಂದಿ ಭಾರತೀಯರು ತಾವಾಗಿ ಆ ದೇಶವನ್ನು ಬಿಟ್ಟು ಬೊಂಬಾಯಿಗೆ ಕಳೆದ ತಾ|| ೨೩ ರಲ್ಲಿ ಬಂದು ಇಳಿದರು. ಹೊಸದಾಗಿ ಹುಟ್ಟಿದ ಅಲ್ಲಿಯ ಕಮಿಷನರ ಅಪ್ಪಣೆಯನ್ನು ನೋಡಿ ಇವರು ಹೊರಟರು. ಮತ್ತೆ ಆ ದೇಶಕ್ಕೆ ಬರುವುದಿಲ್ಲವೆಂಬುದಾಗಿ ಇವರಿಂದೆಲ್ಲಾ 'ಬರೆಯಿಸಿಕೊಂಡು ಇವರ ದಾರಿಯ ವೆಚ್ಚವನ್ನೆಲ್ಲಾ ಅಲ್ಲಿಯ ಕಮಿಷನರೇ ಕೊಟ್ಟು ಕಳುಹಿಸಿದರು. ೨೫ ಪೌನುಗಳಿಗೆ ಮೀರಿದ ಹಣವನ್ನು ಇವರ ಜತೆಯಲ್ಲಿ ತೆಗೆದುಕೊಂಡುಹೋಗಗೊಡಿಸಲಿಲ್ಲ. ಅದಕ್ಕಿಂತ ಹೆಚ್ಚಾಗಿದ್ದವರ ಸೊತ್ತುಗಳನ್ನೆಲ್ಲಾ ಅಲ್ಲಿಯ ಕಮಿಷನರೇ ವಶಪಡಿಸಿಕೊಂಡು, ಅದಕ್ಕೆ ಆಗುವ ಬೆಲೆಯನ್ನು ಅವರವರ ಗ್ರಾಮಗಳಿಗೇ ಅಂಚೆಯ ಮೂಲಕ ಕಳುಹಿಸಿಕೊಡುವುದಾಗಿ ಹೇಳಿಕಳುಹಿಸಿದರಂತೆ.

ಲಾರ್ಡ್ ಸಿಹ್ಮರವರು ಕಳೆದ ತಿಂಗಳು ತಾ|| ೨೫ ರಲ್ಲಿ ಬೊಂಬಾಯಿಗೆ ಬಂದಿಳಿದರು. ಗೌರವಾರ್ಥವಾದ ಗುಂಡುಗಳು ಹಾರಿಸಲ್ಪಟ್ಟುವು. ಆ ಕೂಡಲೇ ವೈಸ್ರಾಯರು ತಂತ್ರೀವಾರ್ತೆಯ ಮೂಲಕ "ನೀವು ವಹಿಸಲಿಕ್ಕಿರುವ ನೂತನಾಧಿಕಾರವನ್ನು ಚೆನ್ನಾಗಿ ನಿರ್ವಹಿಸಬಲ್ಲಿರಿ ಎಂದು ನಾನು ಮನಃಪೂರ್ವಕವಾಗಿ ಕೋರುತ್ತೇನೆ'' ಎಂದು ತಿಳಿಯಿಸಲು, ಅದಕ್ಕೆ ತಂತಿಯ ಮೂಲಕವೇ ವಂದನೆಯನ್ನು ಸಿಹ್ಮರವರು ತಿಳಿಯಿಸಿ, ಆ ಸಾಯಂಕಾಲವೇ ಪಂಜಾಬ್ ಪೋಸ್ಟಲ್ ಎಕ್ಸ್‌ಪ್ರಸ್ ಟ್ರೇನಿನಲ್ಲಿ ಸಿಂಮ್ಲಾಕ್ಕೆ ಪ್ರಯಾಣ ಮಾಡಿದರು. ತಾ|| ೨೭ ರಲ್ಲಿ ಅಲ್ಲಿಗೆ ಸೇರಿದಾಗ ಕೌನ್ಸಿಲ್ ಮೆಂಬರುಗಳೂ ಇತರ ಮಿತ್ರಮಂಡಲಿಯವರೂ ನಿಲ್ದಾಣದಲ್ಲಿ ಇದಿರ್ಗೊಂಡು ಮರ್ಯಾದಿಸಿದರು.

ಇಂಗ್ಲೀಷ್‌ಮನ್ ಪತ್ರಿಕೆಗೆ ಅಫ್ಘಾನಸ್ಥಾನದ ಎಲ್ಲೆಕಟ್ಟೆನ ದೇಶದಲ್ಲಿರುವ ಉಪವಿಲೇಖಿನ ಈ ಕೆಳಗಣ ಸುದ್ದಿಯನ್ನು ಬರೆದಿರುತ್ತಾನೆ:—ಕಾಬೂಲ್ ಅಮೀರರು ತಮ್ಮರಮನೆಗೆ ಮಂತ್ರಿಗಳನ್ನೆಲ್ಲಾ ಕರೆಯಿಸಿಕೊಂಡು ಮಂತ್ರಾಲೋಚನೆ ಮಾಡಿದರು. ಅಫ್ಘನ್ ಪ್ರಭುತ್ವದವರು ಬೋಲ್ಷೆವಿಕ್ ಪಕ್ಷವನ್ನವಲಂಬಿಸಬೇಕೆಂದು ಜನರಲ್ ನಾದರ್ಖಾನರು ಉಪನ್ಯಾಸ ಮಾಡಿದರು. ವಿದೇಶ ಮಂತ್ರಿಯೂ ಮುಖ್ಯ ಮಂತ್ರಿಯೂ ಅದನ್ನು ಅನುಮೋದಿಸದೆ ನಾದರ್ಖಾನರಿಗೆ ಸಮಾಧಾನ ಹೇಳಿದರು. ಬೋಲ್ಷೆವಿಕ್ಕರಿಂದ ಸ್ವಲ್ಪ ಧನಸಹಾಯ ಪಡೆದು ಅವರ ತತ್ವವನ್ನು ಹರಡಲು ಅಲ್ಲಲ್ಲಿ ಉಪನ್ಯಸಿಸುತ್ತಲೂ, ಭರತಖಂಡದಿಂದ ವಲಸೆ ಹೋದ ಕೆಲವರನ್ನು ಕರೆದುಕೊಂಡುಹೋಗಿ ಪಾಗನ್‌ನಿಂದ ತಲೆತಪ್ಪಿಸಿಕೊಂಡು ಓಡಿಹೋಗುತ್ತಿದ್ದ ಕೇಪ್ಟನ್ ವಾಲಿಕಾಜಿಯೆಂಬುವನನ್ನೂ ಅವನಿಗೆ ಸಹಾಯಕನಾಗಿದ್ದ ಅಬ್ಬಾಸ್ ಬೇಕಾಜಿಯನ್ನೂ ಕೂಡ ಅಮೀರರು ಹಿಡಿಯಿಸಿ ಕಾಬೂಲಿನ ಕಾರಾಗೃಹದಲ್ಲಿ ಸೆರೆಯಿಡಿಸಿರುವರು.

ಕಟಕ್ ನಿವಾಸಿಯಾದ ಜಗನ್ನಾಥ್ ಎಂಬ ಒಬ್ಬನು ತನ್ನ ಹೆಂಡತಿ ಮಕ್ಕಳು ಅನ್ನವಿಲ್ಲದೆ ಸಂಕಟಪಡುವುದನ್ನು ನೋಡಿ ಸೈರಿಸಲಾರದೆ ಏನಾದರೂ ಕೆಲಸವನ್ನು ಸಂಪಾದಿಸಬೇಕೆಂದು ಕಲ್ಕತ್ತಾಕ್ಕೆ ಹೋಗಿ ಅಲೆದು ಅಲ್ಲಿಯೂ ಯಾವ ಕೆಲಸವೂ ದೊರೆಯದೆಹೋಗಲು ೬ ದಿನಗಳವರೆಗೆ ಉಪವಾಸವಿದ್ದು ಜೀವಿತದಲ್ಲಿ ಜುಗುಪ್ಸೆಗೊಂಡು ಆತ್ಮಹತ್ಯ ಮಾಡಿಕೊಳ್ಳಲಿಕ್ಕಾಗಿ ಹೌರಾಸೇತುವಿನ ಮೇಲೆ ನಿಂತು ಹೂಗ್ಲಿನದಿಯೊಳಕ್ಕೆ ದುಮಿಕಿದನು. ಒಬ್ಬ ಪೊಲೀಸಾಳು ಇದನ್ನು ಕಂಡು ತಾನೂ ದುಮಿಕಿ ಆತನನ್ನು ಹಿಡಿದು ಬದುಕಿಸಿ, ಆತ್ಮಹತ್ಯ ಪ್ರಯತ್ನದ ಅಪರಾಧಕ್ಕಾಗಿ ದಂಡಾಧಿಕಾರಿ ಯಿದಿರಿಗೆ ಆತನನ್ನು ವಿಚಾರಣೆಗೆ ಗುರಿಪಡಿಸಿದನು. ದಂಡಾಧಿಕಾರಿಯು ವಿಚಾರಣೆಯ ಕಾಲದಲ್ಲಿ ಅವನ ಮುಖದಿಂದಲೇ ಸಕಲ ವಿಷಯವನ್ನೂ ಕೇಳಿ ಕನಿಕರಪಟ್ಟು, ಕೋರ್ಟು ಮುಚ್ಚುವವರೆಗೆ ಅವನಿಗೆ ಬಂಧನಶಿಕ್ಷೆಯನ್ನು ವಿಧಿಸಿ, ೨೦ ರೂ. ಗಳನ್ನು ಕೊಟ್ಟು ಅವನ ಊರಿಗೆ ಹೋಗಿ ಸೇರಿಕೊಳ್ಳುವಂತೆ ಅಪ್ಪಣೆ ಮಾಡಿದರು.

ಮೆಸಪೊಟೇಮಿಯಾದಲ್ಲಿ ಇನ್ನೂ ಶಾಂತಿಯುಂಟಾಗಿಲ್ಲ. ಅಲ್ಲಿಯ ವಿಪ್ಲವಕಾರಕ ಜನರು ಆಂಗ್ಲ ಸೈನಿಕರ ಮೇಲೆ ಬಿದ್ದು ಕಾದಾಡುತ್ತಲೇ ಇದ್ದಾರೆ. ಅದುಕಾರಣ ಅಲ್ಲಿಯ ಸೇನಾಬಲವನ್ನು ಆಂಗ್ಲರು ಮತ್ತಷ್ಟು ವೃದ್ಧಿಪಡಿಸುವುದರಲ್ಲಿದ್ದಾರೆ. ಇದಕ್ಕೆ ಹಿಂದೆ ಅಲ್ಲಿಯ ಸೇನೆಯಲ್ಲಿ ಕೆಲವು ಭಾಗವನ್ನು ತೆಗೆದುಬಿಟ್ಟು ಭರತಖಂಡಕ್ಕೆ ಅನೇಕರನ್ನು ಕಳುಹಿಸಿಬಿಟ್ಟಿದ್ದರಷ್ಟೆ? ಈಗ ಅಂಥ ಸೈನಿಕೋದ್ಯೋಗಿಗಳನ್ನು ಮರಳಿ ಸೇನೆಗೆ ಸೇರಿಸಿಕೊಳ್ಳಲು ಒಂದು ಪ್ರಕಟನೆಯನ್ನು ಸರ್ಕಾರದವರು ಮಾಡಿದ್ದಾರೆ. ಅದರಲ್ಲಿ ಈಗ ಕೆಲಸಕ್ಕೆ ಸೇರಿಕೊಳ್ಳಲಿಷ್ಟಪಡುವವರು ೧ ವರ್ಷದ ವರೆಗೆ ಮೆಸಪೊಟೇಮಿಯಾದಲ್ಲಿ ಕೆಲಸ ಮಾಡಲು ಒಪ್ಪಿಕೊಳ್ಳಬೇಕು. ಹಿಂದೆ ಅವರವರಿದ್ದ ಕೆಲಸದಲ್ಲೇ ಅದೇ ಸಂಬಳಕ್ಕೇ ಸೇರಿಸಿಕೊಳ್ಳಲ್ಪಡುವರು. ಮತ್ತು ಅವರಿಗೆ ಬೇಕಾದ ಸಾಮಾನುಗಳಿಗಾಗಿ ೨೫ ಪೌನುಗಳು ಕೊಡಲ್ಪಡುವುವು. ಗೊತ್ತಾದ ೧ ವರ್ಷ ಕಾಲ ತೃಪ್ತಿಕರವಾಗಿ ಕೆಲಸಮಾಡಿದವರಿಗೆ ೧ ತಿಂಗಳ ಸಂಬಳವು ಬಹುಮಾನವಾಗಿ ಹೆಚ್ಚಿಗೆ ಕೊಡಲ್ಪಡುವುದು ಎಂದು ತಿಳಿಯಿಸಿದ್ದಾರೆ.

ವಿದೇಶದ ವೃತ್ತಾಂತಗಳು.

ಜರ್ಮನರ ವ್ಯಾಪಾರಾದಿಗಳು ಮರಳಿ ಯುದ್ಧಾತ್ಪೂರ್ವದ ಸ್ಥಿತಿಗೇ ಬರುವ ಲಕ್ಷಣಗಳು ಕಾಣುತ್ತಿವೆ.

ಲಾರ್ಡ್‌ಸಿಹ್ಮರವರ ತೆರವಾದ ಅಸಿಸ್ಟೆಂಟ್ ಸ್ಟೇಟ್ ಸೆಕ್ರಟೆರಿ ಸ್ಥಾನಕ್ಕೆ ಲಾರ್ಡ್‌ಲಿಟನ್‌ರವರು ನಿಯಮಿಸಲ್ಪಟ್ಟರು.

ಜರ್ಮನಿಗೆ ಈಗ ೨೪೦೬೦೦೦೦೦೦೦ ಮಾರ್ಕುಗಳ ಸಾಲವಿದೆಯೆಂದು ಆ ದೇಶದ ಆರ್ಥಿಕ ಮಂತ್ರಿಯವರು ತಿಳಿಯಿಸಿದ್ದಾರೆ.

ಲಂಡನ್ ಪಟ್ಟಣದ ವೈಮಾನಿಕ ಕಾರ್ಯಾಲಯಗಳಲ್ಲಿ ದೊಡ್ಡ ಅಗ್ನಿಪ್ರಳಯವು ಸಂಭವಿಸಿ ೧೨೬ ವೈಮಾನಿಕ ಶಾಲೆಗಳು ಸುಟ್ಟು ಭಸ್ಮವಾದುವು.

ಪಶ್ಚಿಮ ದೇಶದ ಕೆಲ ಮೋಟಾರ್ ಕಂಪನಿಗಳು ತಮ್ಮ ಮೋಟಾರುಗಳನ್ನು ಯುದ್ಧಕ್ಕೆ ಮೊದಲಿದ್ದ ಬೆಲೆಗೇ ಈಗ ಮಾರುತ್ತೇವೆಂದು ಪ್ರಕಟಿಸಿದ್ದಾರೆ.

ಪೋಲರು ಗ್ರೋಡ್ನೋ ನಗರದ ಕೋಟೆಯನ್ನು ವಶಪಡಿಸಿಕೊಂಡರು. ಅಲ್ಲಿ ಬೋಲ್ಷೆವಿಕ್ಕರ ಬಹಳ ಯುದ್ಧಸಾಮಗ್ರಿಗಳೂ, ಬಹುಮಂದಿ ಸೈನಿಕರೂ ಸಿಕ್ಕಿಹೋದರು.

ಮಾಂಚಸ್ಟರಿನಲ್ಲಿ ಬಟ್ಟೆ ನೆಯ್ಯುವ ಕೆಲ ಯಂತ್ರಾಗಾರಗಳವರು, ದರಗಳು ಸ್ತಿಮಿತವಾಗಿಲ್ಲದ ಕಾರಣ ಎಷ್ಟೋ ಆರ್ಡರುಗಳು ತಪ್ಪಿಹೋಗುತ್ತಿರಲು ನೂರಕ್ಕೆ ೩೩ ರಷ್ಟು ದರವನ್ನು ಇಳಿಯಿಸಿಬಿಟ್ಟಿದ್ದಾರೆ.

ಅಮೇರಿಕಾದಲ್ಲಿ ೧ ನಿಮಿಷಕ್ಕೆ ೫೦೦ ಅಥವಾ ೬೦೦ ಏಟುಗಳನ್ನು ಹೊಡೆಯುವ ಮಿಷನ್ ಫಿರಂಗಿಗಳಿದ್ದುವು. ಈಗ ೧೧೦೦ ಏಟುಗಳನ್ನು ಹೊಡೆಯುವ ಫಿರಂಗಿಗಳನ್ನು ನಿರ್ಮಿಸಿ ಪರೀಕ್ಷಿಸುತ್ತಿದ್ದಾರಂತೆ.

ಫ್ರಾನ್ಸಿಗೆ ಇದುವರೆಗೆ ಮುಖ್ಯಮಂತ್ರಿಯಾಗಿದ್ದ ಮಿ|| ಮಿಲ್ಲರಾಂಡರವರೇ ಈಗ ಅಲ್ಲಿಯ ಪ್ರಭುತ್ವದ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಹಿಂದೆ ನೌಕಾದಳ ಮಂತ್ರಿಯಾಗಿದ್ದ ಲೀಗ್ ಎಂಬುವವನು ಮುಖ್ಯಮಂತ್ರಿಯಾಗಿಯೂ ವಿದೇಶಾಂಗ ಮಂತ್ರಿಯಾಗಿಯೂ ಏರ್ಪಟ್ಟಿದ್ದಾರೆ.

ಲಂಡನ್ ಪಟ್ಟಣದಲ್ಲಿದ್ದ ರವೀಂದ್ರನಾಥಠಾಕೂರ್‌ರವರನ್ನು ಹಾಲೆಂಡಿನ ಲೆಯಿಡನ್, ಉಟ್ರೆಕ್, ಆಂಸ್ಟರ್ಡಾಂ ವಿಶ್ವವಿದ್ಯಾಲಯಗಳವರು ತಮ್ಮಲ್ಲಿ ಉಪನ್ಯಾಸ ಕೊಡಿಸುವುದಕ್ಕಾಗಿ ಆಹ್ವಾನಮಾಡಿದುದರಿಂದ ಠಾಕೂರ್‌ರವರು ಅಲ್ಲಿಗೆ ಪ್ರಯಾಣ ಮಾಡಿ ಉಪನ್ಯಾಸಗಳನ್ನು ಕೊಡುತ್ತಿದ್ದಾರೆ.

ದಕ್ಷಿಣ ರಷ್ಯಾದಲ್ಲಿ ಯುಕ್ರೇನಿಯಾದ ಸುತ್ತಲೂ ರೇಂಗಲ್ ಸೇನಾಪತಿಯು ರಷ್ಯನ್ ಬೋಲ್ಷೆವಿಕ್ಕರನ್ನು ವಿಪರೀತವಾಗಿ ಸೋಲಿಸಿ, ೩೦ ಫಿರಂಗಿಗಳೊಡನೆ ಅಲಗ್ಸಾಂಡ್ರೋವಿಸ್ಕ್ ಎಂಬ ಪಟ್ಟಣವನ್ನು ಹಿಡಿದುಕೊಂಡನು. ಗೆಲೀಷಿಯಾರಂಗದಲ್ಲಿ ಪೋಲಂಡಿನವರು ಬೋಲ್ಷೆವಿಕ್ಕರನ್ನು ಸೋಲಿಸಿ ಬಹಳ ನಷ್ಟಪಡಿಸಿರುವರು.

ಜರ್ಮನರು ತಮ್ಮ ದೇಶದ ಕೈಗಾರಿಕೆಯ ವಸ್ತುಗಳ ನಿರ್ಮಾಣವನ್ನು ಬಹಳ ಮಟ್ಟಿಗೆ ಹೆಚ್ಚಿಸುತ್ತಿದ್ದಾರೆ. ೧೮ ವರ್ಷಕ್ಕೆ ಮೀರಿ ೨೫ ವರ್ಷದೊಳಗಣ ವಯಸ್ಸಿನ ಗಂಡುಸರೆಲ್ಲಾ ಕೆಲಕಾಲ ಗಣಿಗಳ ಕೆಲಸವನ್ನೂ ಇತರ ಪರಿಶ್ರಮಗಳನ್ನೂ ತಪ್ಪದೆ ಮಾಡಿಯೇ ತೀರಬೇಕೆಂಬ ಶಾಸನವೊಂದನ್ನು ಮಾಡಲು ಪ್ರಯತ್ನಿಸಿದ್ದಾರೆ.

ಕಳೆದ ಮಹಾಯುದ್ಧದಿಂದ ಇಂಗ್ಲೀಷರಿಗೆ ಅವರ ಸೈನ್ಯದಲ್ಲಿ ೪೮೪೧೪೩ ಪ್ರಾಣಿಗಳು (ಕುದುರೆ ಒಂಟೆ ಮೊದಲಾದವುಗಳು) ಮೃತವಾದುವು. ಅವುಗಳಲ್ಲಿ ೫೫೮೪ ಪ್ರಾಣಿಗಳು ಹಡಗಿನಲ್ಲಿದ್ದಾಗ ಮುಳುಗಿ ಸಮುದ್ರಾರ್ಪಿತವಾದುವುಗಳು. ಮೆಸಪೊಟೇಮಿಯಾದಲ್ಲಿದ್ದ ಒಟ್ಟು ೧೨೦೦೦೩ ಒಂಟೆಗಳಿದ್ದುವು. ಇವುಗಳಲ್ಲಿ ೨೨೪೧೨ ಮೃತವಾದುವು.

ಯೂರೋಪಿನ ಫ್ರಾನ್ಸು, ಸ್ವಿಟ್ಜರ್ಲೆಂಡು, ಇಟಲಿ ದೇಶಗಳಲ್ಲಿ ನದೀ ಪ್ರವಾಹಗಳು ವಿಪರೀತವಾಗಿ ಬಂದು ಯಂತ್ರಾಲಯಗಳೂ ಮನೆಮಠಗಳೂ ಕೊಚ್ಚಿಹೋಗಿ ಲೆಕ್ಕವಿಲ್ಲದಷ್ಟು ಅಗಾಧ ನಷ್ಟವೂ ಪ್ರಾಣನಷ್ಟವೂ ಆಗಿದೆ. ಸೇತುಗಳೂ, ತಂತಿಯ ಕಂಬಗಳೂ, ಲೋಹಮಾರ್ಗಗಳೂ ಹಾಳಾಗಿವೆ. ಅದರ ಮೇಲೆ ಬಿರುಗಾಳಿ ಬೀಸಿ ಮತ್ತಷ್ಟು ನಷ್ಟವನ್ನು ಮಾಡಿದೆ. ಅದರ ವಿವರಣವೆಲ್ಲಾ ಅತ್ಯಂತ ಹೃದಯವಿದ್ರಾವಕವಾಗಿದೆ.

ಅಮೇರಿಕಾದಲ್ಲಿ ಮೋಟಾರ್ ಕಂಪನಿಗಳವರು ಬೆಲೆಗಳನ್ನು ಇಳಿಯಿಸುತ್ತಿರುವುದರಿಂದ ಉಲ್ಲನ್‌ಬಟ್ಟೆಗಳ ಹತ್ತಿಬಟ್ಟೆಗಳ ವರ್ತಕರೂ ಜೋಡುಗಳ ವ್ಯಾಪಾರಗಾರರೂ ಆಹಾರ್ಯಪದಾರ್ಥಗಳ ವರ್ತಕರೂ ಸಹ ಬೆಲೆಗಳನ್ನು ತಗ್ಗಿಸುತ್ತಿದ್ದಾರೆ. ಬಟ್ಟೆಗಳ ವ್ಯಾಪಾರಿಗಳು ೧೦೦ ಕ್ಕೆ ೨೫ ರಷ್ಟು ಬೆಲೆಯನ್ನು ತಗ್ಗಿಸಿದರು. ಕಳೆದ ತಾ|| ೨೪ ರಲ್ಲಿ ಚಿಕಾಗೋಪಟ್ಟಣದ ಸಂತೆಯಲ್ಲಿ ಗೋದುವೆಯ ಬೆಲೆಯು ೧೩ ಸೆಂಟಿನಷ್ಟು ಇಳಿದಿತು. ಹೀಗೆಯೇ ಧಾನ್ಯಗಳ ಬೆಲೆಯೆಲ್ಲಾ ಬಹಳವಾಗಿ ಇಳಿದುಹೋಗಿದೆ.

ಐರ್ಲಂಡಿನಲ್ಲಿ ಸಿನ್‌ಫೀನರಿಗೂ ಪೋಲೀಸ್ ಉದ್ಯೋಗಿಗಳಿಗೂ ಪ್ರಾಣಾಂತಿಕವಾಗಿ ಯುದ್ಧಗಳು ನಡೆಯುತ್ತಿವೆ. ಅನೇಕ ಮನೆಗಳು ಪರಸ್ಪರ ದ್ವೇಷಗಳಿಂದ ಸುಡಲ್ಪಡುತ್ತಿವೆ. ಕಾರ್ಕ್ ಪಟ್ಟಣದ ಶಾಂತಿಸ್ಥಾಪನಾಧಿಕಾರಿಯು ವಾಸಮಾಡಿಕೊಂಡಿದ್ದ ಮೇರಿ ಭವನಕ್ಕೆ ಯಾರೋ ಬೆಂಕಿಯಿಕ್ಕಿ ಧ್ವಂಸಮಾಡಿದರು. ಅದು ೧೩ ನೆ ಶತಮಾನದಲ್ಲಿ ಕಟ್ಟಲ್ಪಟ್ಟ ಪ್ರಸಿದ್ಧ ಭವನವಾಗಿದ್ದಿತು. ಪೋಲೀಸರಲ್ಲಿ ಕೆಲರನ್ನು ಸಿನ್‌ಫೀನಿಯನ್ನರು ಕೊಂದುದರಿಂದ ಆಗ್ರಹಗೊಂಡ ಪೋಲೀಸರು ಸಿನ್‌ಫೀನಿಯನ್ನರ ೨ ಗ್ರಾಮಗಳನ್ನೇ ಸುಟ್ಟುಬಿಟ್ಟರು.

ಪತ್ರವ್ಯವಹಾರ.

ಬೆಂಗಳೂರಿನಲ್ಲಿ ಶ್ರೀ ಜಗದ್ಗುರುಗಳವರ ಸ್ವಾಗತಕ್ಕಾಗಿ ಏರ್ಪಡಿಸಿದ್ದ ಫಂಡು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾಗತಕ್ಕಾಗಿ ಒಂದು ಧನರಾಶಿಯು ಕೂಡಿಸಲ್ಪಟ್ಟು, ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ಒಂದು ಸಂಘವು ಸಹ ಸ್ಥಾಪಿಸಲ್ಪಟ್ಟಿದ್ದಿತು. ಮೇಲ್ಕಂಡ ಫಂಡಿಗೆ ಸುಮಾರು ೧೦-೧೨ ಸಹಸ್ರ ರೂಪಾಯಿಗಳು ಕೂಡಿದ್ದಂತೆ ತಿಳಿದುಬರುತ್ತದೆ. ಆ ಕಾಲದಲ್ಲಿ ವಾಗ್ದಾನಮಾಡಿದ ಕೆಲವು ದೊಡ್ಡಮನುಷ್ಯರು ೧|| ವರ್ಷವಾದರೂ ಇನ್ನೂ ವೊಬಲಗನ್ನು ಪಾವತಿ ಮಾಡಿಲ್ಲವಂತೆ! ಕೂಡಿದ್ದ ಹಣದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಗಿದೆ ಎಂಬುದು ಹಣವನ್ನು ಕೊಟ್ಟಿರುವವರನೇಕರಿಗೆ ಇದುವರೆಗೂ ಗೊತ್ತಿರುವುದಿಲ್ಲ. ಅದಕ್ಕಿಂತಲೂ ಮುಂಚಿತವಾಗಿ ನಡೆದ ದಿವಾನ್ ಸಾಹೇಬರ ಎಂಟರ್‌ಟೈನ್ಮೆಂಟೇ ಮೊದಲಾದವುಗಳ ಆಯವ್ಯಯವನ್ನು ಆ ಕೆಲಸಗಳಲ್ಲಿ ಮುಂದಾಳುಗಳಾಗಿದ್ದ ದೊಡ್ಡಮನುಷ್ಯರು ಜನರ ತಿಳುವಳಿಕೆಗಾಗಿ ಪೇಪರುಗಳಲ್ಲೆಲ್ಲಾ ಪ್ರಚುರಪಡಿಸಿರುವರು. ಮೇಲ್ಕಂಡ ಸ್ವಾಗತ ಸಂಘದವರು ಪೇಪರಿನಲ್ಲಿ ಹಾಕದಿದ್ದರೂ, ಹಣವನ್ನು ಕೊಟ್ಟಿರತಕ್ಕವರಿಗಾದರೂ ಅದರ ಜಮಾ ಖರ್ಚು ತಪಸೀಲನ್ನು ತಿಳಿಸಕೂಡದೆ? ಒಂದುವರೆ ವರ್ಷವಾದರೂ ಅದರ ಆಲೋಚನವಷ್ಟೇ ಅವರ ಗೋಚರಕ್ಕೆ ಬಾರದಿರಲು ಕಾರಣವೇನೋ ತಿಳಿಯಲಿಲ್ಲ. ಈಗಲಾದರೂ ಅದಕ್ಕೆ ಸಂಬಂಧಪಟ್ಟ ಲೆಕ್ಕವನ್ನು ಚಂದಾದಾರರ ತಿಳುವಳಿಕೆಗಾಗಿ ಕೂಡಲೆ ಪ್ರಕಟಪಡಿಸುವರೆಂದು ನಂಬಿರುವ,

ಶ್ರೀ ಜಗದ್ಗುರು ಸೇವಕ.

ನೋಟೀಸ್.

ಬೆಂಗಳೂರು ಸಿಟಿ ರೈಲ್ವೆಸ್ಟೇಷನ್ ಬಳಿ ಇರುವ ರಾವ್ ಬಹದ್ದೂರ್ ಧರ್ಮಪ್ರವರ್ತಕ ಮ|| ಗುಬ್ಬಿ ತೋಟದಪ್ಪನವರ ಸತ್ರಕ್ಕೆ ಒಬ್ಬ ಮ್ಯಾನೇಜರು ಬೇಕಾಗಿರುವದರಿಂದ ೧೯೨೦ ನೆ ಇಸವಿ ಅಕ್ಟೋಬರ್ ೧೫ ನೆ ತಾರೀಖಿನೊಳಗಾಗಿ ಈ ಕೆಳಗೆ ಕಂಡ ಅಡ್ರೆಸ್ಸಿಗೆ ಅರ್ಜಿ ಹಾಕಿಕೊಂಡಾಗ ಆ ಅಥವಾ ರೂಬರೂಬು ಹಾಜರಾಗಿ ಎಲ್ಲಾ ವಿಷಯವನ್ನು ತಿಳಿದುಕೊಳ್ಳಬಹುದು.

ಬೆಂಗಳೂರು,
ತಾ|| ೨೨-೯-೧೯೨೦.

ಎಸ್. ಶಿವಪ್ಪ ಆನರರಿ ಸೆಕ್ರೆಟರಿ,
ರಾ|| ಬ|| ಧ|| ಪ್ರ|| ಗುಬ್ಬಿ ತೋಟದಪ್ಪನವರ ಸತ್ರ

ಸಿನೋಮೋಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮನ್ನು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕ್ರಿಕೆಟ್ಟಯುದ್ಧ, ಚೈನಾದವರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಮ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ದೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ 4—8—0.

ಲೂಸ್‌ಕಿಲ್ಲರ್.

2

(ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗುವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ಏಕಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೦—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಶಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ, ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 1—12—0.
12 ಕ್ಕೆ 18—0—0.

25



ಈ ನಕ್ಷೆಯಲ್ಲಿ ಕಾಣುವ ಪೌಂಟನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಪೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಥಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು.



ಕ್ರಯ 1 ಕ್ಕೆ ರೂ. 0—8—0.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹ ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2-3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮದುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ವೈರಂ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ.

25

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಆನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಆನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದುರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ ಅಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 44

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಆಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ಯತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗವಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆಪರೋಗ, ಪಾಂಡುರೋಗ, ಗುಲ್ಮರೋಗ, ಮಕರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟುದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟು ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ನೆಯ ಇಸವಿ ಅಕ್ಟೋಬರ್ ತಾ|| ೩ರ ರಿಂದ ೧೯೨೦ ನೆಯ ಅಕ್ಟೋಬರ್ ತಾ|| ೯ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಭಾದ್ರಪದ ಬಹುಳ ಷಷ್ಠಿಯಿಂದ ಭಾದ್ರಪದ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
3	ಭಾನು	ಷಷ್ಠಿ	41-8	ರೋಹಿ	16-25	18
4	ಸೋಮ	ಸಪ್ತ	35-11	ಮೃಗ	12-29	19
5	ಮಂಗಳ	ಅಷ್ಟ	29-3	ಆದ್ರಾ	8-19	20
6	ಬುಧ	ನವ	23-0	ಪುನ	4-7	21
7	ಗುರು	ದಶ	17-18	ಪುಷ್ಯ	0-10	22
8	[1] ಶುಕ್ರ	ಏಕಾ	12-0	ಮಘಾ	53-10	23
9	[2] ಶನಿ	ದ್ವಾ	7-24	ಪುಭ	50-50	24

(1) ಸರ್ವತ್ರೈಕಾದಶಿ. (2) ಪ್ರದೋಷ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃಪಾ | ಭುವಪಥಕೃತಾವತಾರಾ ಪಶ್ಯಜ್ಞನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೀಯಂಸವಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಅಕ್ಟೋಬರ್ ತಾರೀಖು ೧೦ ನೆಯ ಭಾನುವಾರ (ಸಂಚಿಕೆ ೪೧

REGISTERED NO. M. 124.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ, 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
39 ವೈದ್ಯಶಾಲಾ, ಮೈಸೂರು.

ಹೊಸಶೋಧ ! • ಓಂ • ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಅದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
11 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
ಚಾರುಶೀಲೆಚರಿತ್ರೆ	೦— ೯—೦
ಪಂಚಾಂಗ	೦— ೯—೦

ಕರ್ಣಾಟಕ ರಾಮಾಯಣಸಂಗ್ರಹವು.

3

ಶ್ರೀ ರಾಮನಚರಿತ್ರೆಯು ಮೊದಲು ವಾಲ್ಮೀಕಿ ಋಷಿಯಿಂದ ಸಂಸ್ಕೃತದಲ್ಲಿ ಬರೆಯಲ್ಪಟ್ಟಿತು. ಆ ಮೇಲೆ ಅನೇಕ ಜನ ಕವಿಗಳು ಕನ್ನಡದಲ್ಲಿ ಬರದು ಇದ್ದಾಗ್ಯೂ ಆ ಗ್ರಂಥಗಳು ಸರ್ವರಿಗೂ ಸುಲಭಗಳಾಗಿ ಇಲ್ಲಾ. ಈ ಲೋಪವನ್ನು ಪಂಹರಿಸಬೇಕೆಂಬ ಉದ್ದೇಶದಿಂದ ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ ಮ|| ರಾ|| ಮುಜರಾಯಿ ಭಕ್ತಿರವರಾದ ಎಚ್. ಲಿಂಗರಾಜೇ ಅರಸಿನವರು ಬಿಡಿಗನ್ನಡದಿಂದ ಭಾಮಿನೀ ಷಟ್ಪದಿ ಪದ್ಯರೂಪದಲ್ಲಿ ರಚಿಸಿರುವರು. ಈ ಗ್ರಂಥವು ಹೊರಗೆ ಬಂದ ಒಂದೆರಡು ತಿಂಗಳೊಳಗಾಗಿ ಕನ್ನಡ ನಾಡಿನೊಳಗೆಲ್ಲಾ ಪ್ರಚಾರಕ್ಕೆ ಬಂದು ಬಿಟ್ಟಿರುತ್ತದೆ. ಇದರಿಂದಲೇ ಇದರ ವಿಷಯದಲ್ಲಿ ಹೆಚ್ಚು ಹೊಗಳಬೇಕಾಗಿಲ್ಲ. ಅಪೇಕ್ಷೆವುಳ್ಳವರು ತರಿಸಿ ಓದಿ ಶ್ರೀ ರಾಮಕಥಾಮೃತವನ್ನು ಸುಲಭವಾಗಿ ಪಾನಮಾಡಿ ಆನಂದಿಸತಕ್ಕದ್ದು. ಪುಸ್ತಕ ದೊರೆಯುವಸ್ಥಳ.—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಡೀಲರ್ಸ್ ಕೃಷ್ಣರಾಜ ಮೊಹಲ್ಲಾ ಮೈಸರು.

ಜಾಗ್ರತ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.



ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಅವುಗಳ ಇತರ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು.

47

ನಾವು ಎ. ಆಲ್ ಬ್ಯುಕ್ಯಾಯರ್ ಕ್ಕು ಅಂಡ್‌ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ,

ವಿಳಾಸ :—ಎನ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಮಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಮಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ಧಪ್ಪಾ ಕಡಕಲ್ಲು,
45 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಅಮೇರಿಕನ್ ರೋಮ ಹರಿ ಪೌಡರ್.

ಕೇಶನಾಶನಿ ಪೌಡರ್.

ಇದು ವಿಲಾಯತಿಯಲ್ಲಿ ತಯಾರಾದದ್ದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಪುಡಿಯನ್ನು ಸವರಿದ ಮಾತ್ರಕ್ಕೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದನ್ನು ತೆಗೆಯುವದು. ಕ್ರಯ ಡಬ್ಬಿ 1ಕ್ಕೆ 0—12—0.

ವಿಳಾಸ:—ಮರಾಟ ಟ್ರೇಡಿಂಗ್ ಕಂಪನಿ,
3 ತಿರುಪಳ್ಳಿ ಬೀದಿ, ಮದರಾಸು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.



ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

3

ಪ್ಯಾರಿಷ್ ಶಾಲ್.

ಚಳಿಗಾಲದಲ್ಲಿಯೂ, ಮಳೆಗಾಲದಲ್ಲಿಯೂ ಹೊದಿಯಲಿಕ್ಕೆ ಬಹು ಲಾಯಖಾದದ್ದು. ಪ್ರಯಾಣಿಕರೂ, ಇತರರೂ, ಪ್ರತಿ ದಿನವೂ ಉಪಯೋಗಿಸಬಹುದು. ಬಣ್ಣ ಹೋಗದು. 5 ಮೊಳ ಉದ್ದವು, 2½ ಮೊಳ ಅಗಲವು ಇದೆ. ಕ್ರಯ ಶಾಲು 1ಕ್ಕೆ 5—0—0

ಕಂಬಳಿ ಟೋಪಿ.



ಈ ಟೋಪಿಗಳು ಸಾಚ ಉಲನ್ ದಾರದಿಂದ ತಯಾರಿಸಿದೆ ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರಿಗೂ ಉಪಯೋಗಿಸಬಹುದು.

ಕ್ರಯ ಉಲನ್ ಟೋಪಿ 1 ಕ್ಕೆ 1—6—0

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

35

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಥಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರತ್ಯಕ್ಷ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನ್ನಡಾ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಅಕ್ಟೋಬರ್ ತಾ||೧೦ನೆಯ ಭಾನುವಾರ.

ಸಹಾಯ ನಿರಾಕರಣ, ಮತ್ತು ಮದ್ರಾಸು ಗೌರ್ನರವರು.

ಮದ್ರಾಸು ಶಾಸನ ಸಭೆಯು ನಡೆದು ಕಳೆದ ಸೋಮವಾರಕ್ಕೆ ಮುಗಿದಿತು. ಗೌರ್ನರುಗಳ ಅಧ್ಯಕ್ಷತೆಯಿಂದ ಕೂಡುವ ಶಾಸನ ಸಭೆಗಳು ಇಲ್ಲಿಗೆ ಅಂತ್ಯವಾದುವಷ್ಟೆ. ಅದುಕಾರಣ ಇದನ್ನು ಮುಗಿಸುವಾಗ್ಗೆ ಆ ಸಭೆಯ ಅಧ್ಯಕ್ಷರಾದ ಲಾರ್ಡ್ ವೆಲ್ಲಿಂಗ್ಟನ್‌ರವರು ಸಮಯೋಚಿತವಾದ ಉಪಸಹ್ಮಾರ ಭಾಷಣವನ್ನು ಮಾಡಿ, ಅದರೊಳಗೆ ಪ್ರಕೃತದ ಸಹಾಯನಿರಾಕರಣಾಂದೋಳನವನ್ನು ಕುರಿತು ಕೆಲ ಮಾತುಗಳನ್ನಾಡಿದರು. ಅವು ಗಮನೀಯವಾಗಿರುವುವಾದ ಕಾರಣ ಮುಖ್ಯಾಭಿಪ್ರಾಯವನ್ನು ಇಲ್ಲಿ ತಿಳಿಯಿಸುತ್ತೇವೆ:—

"ಸಹಾಯನಿರಾಕರಣೋದ್ಯೋಗಕ್ಕೆ ನಾಯಕರಾದ ಗಾಂಧಿಯವರೂ ಶೌಕತಾಲಿಯವರೂ ಮದ್ರಾಸಿಗೆ ಬಂದಿದ್ದರಷ್ಟೆ. ಅವರು ಬೋಧಿಸುವ ಉದ್ಯಮವನ್ನು ದೇಶೀಯರು ಅನುಸರಿಸಿದರೆ ಗಡಿಯಾರದ ಮುಳ್ಳನ್ನು ಹಿಂದಕ್ಕೆ ತಿರುಗಿಸಿದರೆ ಹೇಗೋ ಹಾಗೆ ಬಾಧ್ಯತಾಯುತ ಪರಿಪಾಲನದ ಲಾಭವು ಹಿಂದೆ ಬಿದ್ದು ಹೋಗುವುದು. ಅವರಿಬ್ಬರೂ ಇಲ್ಲಿಗೆ ಬರದೆ ಇದ್ದರೇ ಚೆನ್ನಾಗಿರುತ್ತಿದ್ದಿತೆಂದು ನನ್ನ ಮತ. ಅವರು ಬಂದರು; ಹೋಗಿಬಿಟ್ಟರು. ಅವರ ಉದ್ಯಮವು ಈ ಪ್ರಾಂತದಲ್ಲಿ ವಿಶೇಷವಾಗಿ ಸಾಗಲಿಲ್ಲ. ಎಲ್ಲೋ ಕೆಲ ಮಂದಿಗಳು ಭ್ರಾಂತಿಯಲ್ಲಿ ಮುಳುಗಿದರು. ಭರತಖಂಡದ ರಾಜಕೀಯ ಸಭೆಗಳೊಳಗೆಲ್ಲಾ ಮುಖ್ಯವಾದ ದೇಶೀಯ ಮಹಾಸಭೆಯ ಪ್ರತಿನಿಧಿಗಳಲ್ಲನೇಕರು, ಗಾಂಧಿಯವರೂ ಅವರ ಸ್ನೇಹಿತರೂ ಸೂಚಿಸಿದ ಸಹಾಯನಿರಾಕರಣ ವಿಧಾನವನ್ನು ಅನುಮೋದಿಸಿ ತೀರ್ಮಾನ ಮಾಡಿದುದು ಪ್ರಕೃತ ಭರತಖಂಡದಲ್ಲಿ ಸ್ಥಾಪಿತವಾಗಿರುವ ಪ್ರಭುತ್ವವನ್ನು ಧಿಕ್ಕರಿಸಿದಂತಾಗುತ್ತದೆ. ಏಕೆಂದರೆ—ಗಾಂಧಿಯವರ ಸಹಾಯನಿರಾಕರಣ ವಿಧಾನವನ್ನೆಲ್ಲಾ ಒಂದಾಗುತಲೊಂದೊಂದರಂತೆ ಆಚರಣೆಗೆ ತಂದರೆ ಈ ಉದ್ಯಮವು ನ್ಯಾಯವಿರುದ್ಧವಾಗುವುದೆಂದು ನನ್ನ ಅಭಿಪ್ರಾಯವು. ಪೂರ್ವದಲ್ಲಿ ನಮ್ಮ ಅಡ್ವೋಕೇಟ್ ಜನರಲ್ಲಾಗಿದ್ದವರೂ (ಮ|| ಎಸ್. ಶ್ರೀನಿವಾಸಯ್ಯಂಗಾರರು) ಇನ್ನೂ ವಿಖ್ಯಾತರಾದ ರಾಜಕೀಯಾಭಿಜ್ಞರು ಕೆಲವರೂ ಹೀಗೆಯೇ ಅಭಿಪ್ರಾಯವುಳ್ಳವರಾಗಿದ್ದಾರೆ. ಪ್ರಭುತ್ವ ಸಾಮರ್ಥ್ಯವನ್ನು ಅಳಿಸಿ, ರಾಜ್ಯಾಂಗರಥವನ್ನು ನಡೆಯದಂತೆ ಮಾಡಬೇಕೆಂದು ಗಾಂಧಿಯವರೂ ಅವರ ಸ್ನೇಹಿತರೂ ಸ್ಪಷ್ಟವಾಗಿ ಆಡಿ ತೋರಿಸಿದ್ದಾರೆ. ಇಂಥ ಉದ್ಯಮವನ್ನು ಹರಡುವುದರಿಂದ ಆಂಗ್ಲಸಾಮ್ರಾಜ್ಯದಲ್ಲಿ ಭಯೋದ್ರೇಕವನ್ನೂ ಅಶಾಂತಿಯನ್ನೂ ಉಂಟುಮಾಡಿ ರಾಜ್ಯಪರಿಪಾಲನವನ್ನು ದುಸ್ಸಾಧ್ಯವನ್ನಾಗಿ ಮಾಡುವಂತಾಗುವುದು. ಹೀಗೆ ಮಾಡತಕ್ಕವರು ರಾಜಭಕ್ತಿ ತತ್ಪರರೆನಿಸಿಕೊಳ್ಳುವುದಿಲ್ಲ. ಅದುಕಾರಣವೇ ಈ ಉದ್ಯಮವನ್ನು ರಾಜಭಕ್ತಿ ದೂರವಾದುದೆಂದು ನಾನು ತಿಳಿಯುತ್ತೇನೆ. ಬೊಂಬಾಯಿಯಲ್ಲಿ ನಾನಿದ್ದಾಗ ಗಾಂಧಿಯವರನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಅವರ ಕಾರ್ಯಗಳೂ ನನಗೆ ಸ್ವಲ್ಪಮಟ್ಟಿಗೆ ಗೊತ್ತುಂಟು. ಅವರ ಉದ್ದೇಶಗಳು ಎಷ್ಟು ಸ್ಪಷ್ಟವೂ ಉತ್ಕೃಷ್ಟಗಳೂ ಆಗಿದ್ದರೂ, ಪ್ರಕೃತ ಸಮಯದಲ್ಲಿ ಭರತಖಂಡವು ಅಂಥವರನ್ನು ನಾಯಕರನ್ನಾಗಿ ಹೊಂದಿರುವುದು ದೇಶದ ದುರದೃಷ್ಟವು. ಗಾಂಧಿಯವರ ಕಾರ್ಯಕ್ರಮಗಳು ತಪ್ಪು ದಾರಿಯಲ್ಲಿ ಸಾಗುತ್ತಿವೆ. ಅವರ ಉದ್ಯಮವು ಜಯಶೀಲವಾಗಿ ಸಾಗಿದರೆ ದೇಶಕ್ಕೂ ದೇಶೀಯರಿಗೂ ಮಿತಿಮೀರಿದ ನಷ್ಟವುಂಟಾಗುವುದು. ಹಿಂದೆ ಸತ್ಯಾಗ್ರಹೋದ್ಯಮವು ಹೊಮ್ಮಿದ ಬಳಿಕ ಉಂಟಾದ ಅನರ್ಥಗಳು ತಮ್ಮ ಮನಸ್ಸಿಗೆ ತಟ್ಟಿದಮೇಲಾದರೂ ಅವರು ಅಪಕ್ವಾಂತಃಕರಣರಾದ ಜನರನ್ನು ಮರಳಿ ಹುರಿದುಂಬಿಸುವುದಕ್ಕೆ ಮುಂಚೆ ಸ್ವಲ್ಪ ದೂರಾಲೋಚನೆಯನ್ನು ಮಾಡುವರೆಂದು ಪ್ರತಿಯೊಬ್ಬರೂ ಯೋಚಿಸುತ್ತಿದ್ದರು. ಅದು ಹಾಗಾಗಲಿಲ್ಲ. ಈ ಸಹಾಯನಿರಾಕಾರಣೋದ್ಯಮದ ಮೊದಲನೆ ಫಲಿತವೇನಾಗಿದೆಯೋ ನೋಡಿರಿ. ಉತ್ತರ ದೇಶದಲ್ಲಿ ಅನೇಕರು ಭಾವೋದ್ರೇಕದಿಂದ ಮೈಮರೆತು ಪಡಬಾರದ ಕಷ್ಟಗಳನ್ನು ಪಡುತ್ತಿದ್ದಾರೆ. ಪ್ರಜೆಗಳನ್ನು ಪ್ರೀತಿಸುತ್ತಿದ್ದ ಒಬ್ಬ ಆಂಗ್ಲೋ ಇಂಡ್ಯನು (ಪೈರಾದ ಕಮಿಷನರ್ ವಿಲೋಬಿಯವರು) ಅನ್ಯಾಯವಾಗಿ ಕೊಲ್ಲಲ್ಪಟ್ಟರು. ಮಾರ್ಗವು ಕವಲೊಡೆಯುವಂಥ ಸ್ಥಲದಲ್ಲಿ ಈಗ ನಾವಿದ್ದೇವೆ. ಸರ್ಕಾರಕ್ಕೆ ನಾವು ಸಹಾಯಿಕರಿಸಬೇಕೇ ? ಅಥವಾ ಆ ಸಹಾಯವನ್ನು ನಿರಾಕರಿಸಬೇಕೇ ? ಎಂಬುದು ವಿಮರ್ಶನೀಯವು. ಭಾರತೀಯರು ಈಗ ಶಾಸ್ತ್ರಸಂಮತವಾದ ದಾರಿಯಲ್ಲಿ ಮುಂದಕ್ಕೆ ನಡೆಯುವರೆ ? ಅಥವಾ ನ್ಯಾಯವಿರುದ್ಧವೂ ರಾಜಭಕ್ತಿ ರಹಿತವೂ ಆದ ಈ ಉದ್ಯಮಕ್ಕೆ ಅವಲಂಬನವನ್ನಿತ್ತು ತಮ್ಮ ದೇಶದ ಮುಂದಣ ಭಾಗ್ಯೋದಯವನ್ನು ಹಿಂದಕ್ಕೆ ಸೆಳೆದುಕೊಳ್ಳುವರೆ ? ಇವೆರಡರಲ್ಲಿ ಯಾವುದನ್ನು ಕೋರಿಕೊಳ್ಳಬೇಕಾದರೂ ಸಹನೆಯೂ ಶಾಂತಿಯೂ ಅವಶ್ಯಕವು." ಹೀಗೆ ಸಹಾಯನಿರಾಕರಣದ ದೋಷವನ್ನು ಗೌರ್ನರವರು ಆಡಿ ತೋರಿಸಿದ ಬಳಿಕ ಆ ಉದ್ಯಮದ ಉದಯಕ್ಕೆ ಕಾರಣಗಳೆಂದು ಹೇಳಲ್ಪಡುವ ಪಂಜಾಬು ಪ್ರಕರಣ ಮತ್ತು ತುರ್ಕೀ ಸಂಧಿ ವಿಷಯಗಳನ್ನು ಕುರಿತು ಹೀಗೆ ಹೇಳಿರುವರು.—

ಪಂಜಾಬಿನಲ್ಲಿ ನಡೆದುಹೋದ ಘೋರಕೃತ್ಯಗಳ ಸಂಬಂಧದಿಂದ ಭಾರತೀಯರ ಮನಸ್ಸು ಎಷ್ಟು ಕಟ್ಟಿರುವುದೆಂಬುದನ್ನು ನಾನು ಬಲ್ಲೆ. ನನ್ನ ಸಹೋದರರಾದ ಆಂಗ್ಲ ಪ್ರಜೆಗಳೂ ಕೂಡ ಆ ವಿಷಯವಾಗಿ ಎಷ್ಟೋ ವಿಚಾರಪಟ್ಟಿರುವರೆಂಬುದನ್ನು ಪ್ರತಿಯೊಬ್ಬ ಭಾರತೀಯನೂ ಗ್ರಹಿಸಬೇಕು. ಅಕ್ರಮಗಳನ್ನು ಸರಿಪಡಿಸಬೇಕಾದರೂ ಶಾಸ್ತ್ರೀಯ ಪದ್ಧತಿಗಳನ್ನನುಸರಿಸಿಯೇ ಮಾಡಬೇಕಾಗುತ್ತದೆ. ಇನ್ನು ತುರ್ಕಿ ಸಂಧಿ ವಿಷಯವನ್ನು ಕುರಿತು ಯೋಚಿಸುವ.—ಆಂಗ್ಲಸಾಮ್ರಾಜ್ಯದೊಡನೆಯೂ ಮಿತ್ರಮಂಡಲಿಯೊಡನೆಯೂ ತುರ್ಕಿ ದೇಶವು ಯುದ್ಧವನ್ನು ಮಾಡಲು ಸಾಹಸಪಟ್ಟಾಗ ಭರತಖಂಡದ ಮಹಮ್ಮದೀಯರಲ್ಲಿದ್ದ ಮನೋಭಾವದೊಡನೆ ನನಗಿದ್ದ ಸಾನುಭೂತಿಯನ್ನು ಹಲವು ಸಲ ನಾನು ವ್ಯಕ್ತಪಡಿಸಿಯೇ ಇದ್ದೇನೆ. ಆಪತ್ಕಾಲದಲ್ಲಿ ತಮ್ಮ ಸಾರ್ವಭೌಮನ ಮೇಲೆ ತಮಗಿರುವ ಭಕ್ತಿವಿಶ್ವಾಸವನ್ನು ಅವರು ವ್ಯಕ್ತಪಡಿಸಿದುದಕ್ಕಾಗಿ ಆ ಮಹಮ್ಮದೀಯ ಪ್ರಜೆಗಳ ವಿಷಯವಾಗಿ ನನಗೆ ಎಷ್ಟು ಸದ್ಭಾವಗಳಿದ್ದರೂ, ತುರ್ಕಿ ಪ್ರಭುತ್ವವೇ ಸಂಧಿನಿಯಮಕ್ಕೆ ಒಪ್ಪಿದುದನ್ನೂ ಯುದ್ಧದಲ್ಲಿ ಸೋತುದರಿಂದ ನ್ಯಾಯವಾಗಿ ಅನುಭವಿಸಬೇಕಾದ ದಂಡವನ್ನು ವಹಿಸುವುದಕ್ಕೆ ಅದು ಅಂಗೀಕರಿಸಿದುದನ್ನೂ ಪ್ರತಿಯೊಬ್ಬ ಮಹಮ್ಮದೀಯನೂ ಗಮನಿಸಬೇಕೆಂದು ನಾನು ಕೋರುತ್ತೇನೆ. ತುರ್ಕಿ ಸಂಧಿ ನಿಯಮಗಳು ಕಠಿನವಾಗಿವೆಯೆಂಬುದು ನನಗೆ ಗೊತ್ತುಂಟು. ಸೋತ ಇತರ ದೇಶಗಳಿಗೆ ವಿಧಿಸಿದ ನಿಬಂಧನೆಗಳಿಗಿಂತ ಇವು ಕಠಿನಗಳೆ ? ಅವರ ಕಾಲೀಫರಾದ ಸುಲ್ತಾನರು ಇನ್ನು ಮುಂದೆಯೂ ಕಾನ್‌ಸ್ಟಾಂಟಿನೋಪಲ್ಲಿನಲ್ಲೇ ಇರುವರು. ಮಹಮ್ಮದೀಯರ ಪವಿತ್ರ ಸ್ಥಲಗಳು ಜೋಪಾನವಾಗಿ ರಕ್ಷಿಸಲ್ಪಡುವುವು. ಇದಲ್ಲದೆ ಇನ್ನೊಂದು ಮುಖ್ಯ ಸಂಗತಿಯೇನೆಂದರೆ.—ಮಿತ್ರಮಂಡಲಿಯವರೆಲ್ಲಾ ಸೇರಿ ವಿಧಿಸಿದ ಸಂಧಿನಿಯಮಗಳಿಗೆ ಭರತಖಂಡ ಸರ್ಕಾರದವರು ಬಾಧ್ಯರೆ ? ಹೀಗಿರುವಾಗ, ಈ ಸಂಧಿ ನಿಯಮಗಳನ್ನು ತಪ್ಪಿಸಿ ಕಾಲೀಫರಿಗೆ ಪೂರ್ವದಲ್ಲಿದ್ದಷ್ಟು ರಾಜ್ಯವನ್ನೂ ಸ್ಥಿತಿಯನ್ನೂ ಮರಳಿ ಕೊಡಿಸಿಕೊಡಬೇಕೆಂದು ಹಿಂದೂಸ್ಥಾನ ಸರ್ಕಾರದವರನ್ನು ಕೋರುವುದು ಎಲ್ಲಿಯ ನ್ಯಾಯವೋ ನನಗೆ ತಿಳಿಯದು.

ನಾನು ಮೇಲೆ ವಿವರಿಸಿದಂತೆ ದೂರಾಲೋಚನೆಯಿಂದ ನೀವು ಈಗ ನಿರ್ಧಾರಮಾಡಬೇಕಾದುದು ಮುಖ್ಯವು. ಆದರೆ ಈ ಮದ್ರಾಸು ಪ್ರಾಂತವು ಅಶಾಸ್ತ್ರೀಯವಾದ ಈ ಸಹಾಯನಿರಾಕರಣೋದ್ಯಮಕ್ಕೆ ಅವಲಂಬನೆಯನ್ನೀಯುವುದಿಲ್ಲವೆಂದು ನನಗೆ ತುಂಬಾ ಭರವಸೆಯುಂಟು. ಒಂದುವೇಳೆ ಆ ಉದ್ಯಮವೇ ವ್ಯಾಪಕವಾಗುವುದಾದರೆ ದೇಶದಲ್ಲೆಲ್ಲಾ ಅಶಾಂತಿಯೂ ವಿಪ್ಲವವೂ ಮೂಡುವುವು. ಅದುಕಾರಣ, ಬಾಧ್ಯತಾಯುತ ಪರಿಪಾಲನವನ್ನು ಹೊಂದುವುದಕ್ಕೆ ಮೊದಲನೆ ಮೆಟ್ಟಲಾಗಿರುವ ಈಗಣ ನೂತನ ರಾಜಕೀಯ ಸಂಸ್ಕರಣಗಳನ್ನು ಜಯಶೀಲವನ್ನಾಗಿ ಮಾಡಿಸುವುದಕ್ಕಾಗಿ ಈ ಪ್ರಾಂತದ ಪ್ರಜೆಗಳು ಪ್ರಭುತ್ವಕ್ಕೆ ಸಹಾಯ ಮಾಡುವರೆಂದು ನಾನು ನಂಬುತ್ತೇನೆ."

ಎಂದು ಹೇಳಿದ ಬಳಿಕ ಭರತಖಂಡದ ಸಂಬಂಧದಲ್ಲಿ ಆಂಗ್ಲ ಪ್ರಭುತ್ವದವರಿಗಿರುವ ಆದರ್ಶವನ್ನು ಕುರಿತು ಕೆಲವು ಮಾತುಗಳನ್ನು ಹೀಗೆ ಆಡಿದರು:—"ಭಾರತೀಯರನ್ನು ರಾಜ್ಯಕಾರ್ಯನಿರ್ವಾಹದಲ್ಲಿ ಸರಿಯಾದಮಾರ್ಗದೊಳಗೆ ನಡೆಯಿಸುವುದಕ್ಕಾಗಿ ಆಂಗ್ಲ ಜನರು ಈ ದೇಶದಲ್ಲಿರುವರೆಂಬುದನ್ನು ಪ್ರತಿಯೊಬ್ಬ ಭಾರತೀಯನೂ ಗ್ರಹಿಸಬೇಕು. ಈ ವಿಷಯವನ್ನು ಆಗಾಗ್ಗೆ ಭಾರತೀಯರು ಮರೆತುಬಿಡುವರು. ನನ್ನ ಮಿತ್ರರಾಗಿದ್ದ ಜಿ. ಕೆ. ಗೋಖಲೆಯವರು ಹಿಂದೆಯೊಂದಾವೃತ್ತಿ "ಶಾಂತಿ ಧರ್ಮ ನ್ಯಾಯ ಪಾಶ್ಚಾತ್ಯವಿದ್ಯೆ ವಾಕ್ಸ್ವಾತಂತ್ರ್ಯ ಪಾಶ್ಚಾತ್ಯ ಧರ್ಮಸಂಸ್ಥೆಗಳು ಇವೆಲ್ಲಾ ಆಂಗ್ಲಪರಿಪಾಲನೆಯಿಂದ ನಮ್ಮ ದೇಶಕ್ಕುಂಟಾದ ಲಾಭಗಳು" ಎಂದು ಹೇಳಿರುವರು. ನಾನು ಭರತಖಂಡಕ್ಕೆ ಕಾಲನ್ನಿಟ್ಟಾರಭ್ಯ ಆಂಗ್ಲಭಾರತೀಯ ರೀರ್ವ್ವರಲ್ಲೂ ಪರಸ್ಪರ ಸಹಕಾರ ಭಾವಗಳು ದೃಢವಾಗಿರುವಂತೆ ಮಾಡಬೇಕೆಂದೇ ಪ್ರಯತ್ನಿಸುತ್ತಿರುವೆನು. ನನ್ನ ಪ್ರಯತ್ನವು ಸಫಲವಾದರೆ ಸಂದೇಹಕ್ಕೆ ಅವಕಾಶವೇ ಇಲ್ಲ; ದ್ವೇಷಭಾವಗಳು ನಿರ್ಮೂಲವಾಗುವುವು. ಸಾರ್ವಭೌಮರಲ್ಲಿ ಶಾಶ್ವತ ಭಕ್ತಿಯುಳ್ಳ ಭಾರತ ಪ್ರಜೆಗಳಿಗೆ ರಾಜ್ಯನಿರ್ವಾಹ ಭಾರವನ್ನು ನಾವು ಯಾವಾಗ ವಹಿಸಿಬಿಟ್ಟೇವೋ ಎಂಬುದಾಗಿ ಆ ಕಾಲವನ್ನೇ ನಾವು ಇದಿರು ನೋಡುತ್ತಿದ್ದೇವೆ. ಈಗಣ ನೂತನ ಸಂಸ್ಕರಣಗಳನ್ನನುಸರಿಸಿ ತಮಗೆ ಉಂಟಾಗಿರುವ ಬಾಧ್ಯತೆಯನ್ನು ಈಗ ಭಾರತೀಯರು ಯಾವ ವಿಧವಾಗಿ ಉಪಯೋಗಿಸಿಕೊಳ್ಳುವರೋ ಆ ವಿಧಾನದ ಮೇಲೆ ಅವರ ರಾಜಕೀಯೋನ್ನತಿಯು ಆಧರಿಸಿಕೊಂಡಿರುವುದು." ಹೀಗೆ ಅಪ್ಪಣೆ ಕೊಡಿಸಿರುವ ಲಾರ್ಡ್‌ವೆಲ್ಲಿಂಗ್ಟನ್‌ರವರು ಮೊದಲು ಬೊಂಬಾಯಿ ಗೌರ್ನರಾಗಿದ್ದು ಈಗ ಮದ್ರಾಸು ಗೌರ್ನರು ಪದವಿಯಲ್ಲಿ ೧|| ವರ್ಷಗಳಿಂದಿದ್ದಾರೆ. ಇವರು ಪ್ರಜಾ ಮತವನ್ನು ಗೌರವಿಸತಕ್ಕ ಉದಾರಹೃದಯರೆಂದು ಎಣಿಸಲ್ಪಟ್ಟಿದ್ದಾರೆ. ಈಗ ಭರತಖಂಡದಲ್ಲಿರುವ ಗೌರ್ನರುಗಳಲ್ಲೆಲ್ಲಾ ಇವರು ವಿಶೇಷ ಪ್ರಜಾರಂಜಕರೆಂದು ಹೆಸರ್ಪಡೆದಿದ್ದಾರೆ. ಇಂಥವರು ಆಡತಕ್ಕ ಮಾತುಗಳು ಪಕ್ಷಾಂಧತೆಯ ಮಾತಲ್ಲವೆಂದು ತಿಳಿಯತಕ್ಕುದು ವಿವೇಕಿಗಳ ಧರ್ಮವು. ಗಾಂಧಿಯವರ ಯೋಗ್ಯತೆಯನ್ನು ಅಲ್ಲಗಳೆಯದಿರುವುದೇ ಅವರ ಉದಾತ್ತ ಭಾವಕ್ಕೆ ದೃಷ್ಟಾಂತವಾಗಿದೆ. ಸಹಾಯನಿರಾಕಾರಣ ವಿಧಾನವು ದೇಶಕ್ಕೆ ಕ್ರಮೇಣ ವಿಘಾತಕಾರಿಯೆಂಬುದನ್ನು ಅವರು ದೀರ್ಘವಾಗಿ ಪರ್ಯಾಲೋಚಿಸಿಯೇ ಹೇಳಿದ್ದಾರೆ. ಅಂಥ ಪತನಮಾರ್ಗದಿಂದ ದೇಶವನ್ನುದ್ಧರಿಸಬೇಕೆಂಬ ಸದುದ್ದೇಶದಿಂದಲೇ ಈಗ ದೇಶೀಯರಿಗೆ ಅವರು ಎಚ್ಚರಿಕೆಯನ್ನು ಹೇಳಿರುತ್ತಾರೆ. ಸಹಾಯನಿರಾಕರಣಾಭಿಮಾನಿಗಳು ತಮ್ಮ ಆ ತತ್ತ್ವವನ್ನು ಸ್ವರ್ಗೀಯ ಪ್ರಸಾದವೆಂದು ಹೊಗಳಿಕೊಂಡರೆ ಹೊಗಳಿಕೊಳ್ಳಲಿ. ರಾಜಭಕ್ತಿ ಭರಿತರೂ ದೇಶಹಿತಕಾಂಕ್ಷಿಗಳೂ ಶಾಂತಿಕಾಮುಕರೂ ಇದನ್ನು ಅಶುಭಕಾರಿಯಾದ ಮೊಂಡತನದ ಬೀಜವೆಂದೇ ಭಾವಿಸುವರು. ಪತಿಯನ್ನು ನಿರೋಧಿಸುವುದಕ್ಕಾಗಿ ಆಹಾರವನ್ನು ಸ್ವೀಕರಿಸದೆ ಬೋರ್ಲಾಗಿ ಮಲಗಿಕೊಂಡು ಅವನ ಕೆಲಸಕ್ಕೆ ಅಡ್ಡಿ ಮಾಡುವ ಹೆಂಡತಿಯು, ತಾನು ಪರಮಸಾತ್ವಿಕೆ, ಪರಮಸಾಧ್ವಿಯೆಂದು ಹೇಳಿಕೊಳ್ಳುತ್ತಿದ್ದರೂ, ಅವಳು ಚಂಡಿಯೆನಿಸಿಕೊಳ್ಳುವಳಲ್ಲದೆ ಚಂಡೆಯೆನಿಸಿಕೊಳ್ಳುವುದಿಲ್ಲ. ಮತ್ತು ಅಂಥವಳು ಪತಿಯ ದುರಾಗ್ರಹಕ್ಕೂ ನಿಷ್ಪ್ರೀತಿಗೂ ಪಾತ್ರಳಾಗದೆ ಉಳಿಯುವುದಿಲ್ಲವಷ್ಟೆ. ಈ ಸಹಾಯನಿರಾಕರಣೋದ್ಯಮಿಗಳ ಚರ್ಯೆಯೂ ಹಾಗೆಯೇ ಇರುವುದೆಂದು ಅನೇಕರು ಹೇಳುತ್ತಿರುವರು. ಇಂಗ್ಲೆಂಡಿನಿಂದ ಇಷ್ಟು ದೂರದೇಶಕ್ಕೆ ಪ್ರಯಾಣ ಮಾಡಿ ಬರುವವರಾಗಿದ್ದ ಯುವಸಾರ್ವಭೌಮರನ್ನು ನಾವು ಗೌರವದಿಂದ ಸತ್ಕರಿಸುವುದಿಲ್ಲವೆಂದು ಯಾವ ರಾಜಭಕ್ತನು ತಾನೇ ಹೇಳಬಲ್ಲನು ? ರಾಜಪ್ರತಿನಿಧಿಸ್ಥಾನಾಪನ್ನರಾದ ಅಧಿಕಾರಿಗಳನ್ನು ತ್ರಿಕರಣದಲ್ಲೂ ದ್ವೇಷಿಸುವುದು ರಾಜದ್ವೇಷವಲ್ಲವೆಂದು ಹೇಳುವುದಾದರೆ ನಾವು ಮನೆಗೆ ಬೆಂಕಿಯಿಕ್ಕಿದೆವೇ ಹೊರತು ಅದರ ಯಜಮಾನನಿಗೆ ಯಾವ ಅಪಕಾರವನ್ನೂ ಮಾಡಲಿಲ್ಲವೆಂದು ಹೇಳುವವರವಾದವೂ ಸಮಂಜಸವೇ ಆದೀತು. ವಿವೇಕಿಗಳೂ ಧೀಮಂತರೂ ತಮ್ಮ ವಿವೇಕಸಂಪತ್ತಿಯಿಂದಲೂ ಸಾತ್ವಿಕನಿಗ್ರಹ ಬಲದಿಂದಲೂ ಅಸಿಪತ್ರವ್ರತದಂಥ ಈ ಉದ್ಯಮವನ್ನು ನೇರ್ಪಿನಿಂದ ಸಾಗಿಸಬಹುದೆಂದಿಟ್ಟುಕೊಂಡರೂ, ಸಾಮಾನ್ಯ ಜನರಲ್ಲಿ ಈ ತತ್ವಗಳು ಆಂಗ್ಲ ಜನಾಂಗದ್ವೇಷವನ್ನು ಹೆಚ್ಚಿಸಿ ರಾಜಾಗ್ರಹವನ್ನು ಕೆರಳಿಸಿ ದೇಶಕ್ಕೆ ವಿಪತ್ತಿಯನ್ನು ತಂದಿಕ್ಕದೆ ಶಾಂತವಾಗಿರುವುದೆಂದು ಊಹಿಸಲು ಸಾಧ್ಯವಲ್ಲ. ಸೈನಿಕರೆಲ್ಲಾ ಸೈನ್ಯವನ್ನು ಬಿಡುವಂತೆಯೂ, ರೈತರೆಲ್ಲಾ ಕಂದಾಯವನ್ನು ಕೊಡದಂತೆಯೂ ಮಾಡಿಸುವುದೂ ಮಾಡುವುದೂ ಕೂಡ ಎಷ್ಟುಮಟ್ಟಿಗೆ ರಾಜ್ಯಕಾರ್ಯಕ್ಕೆ ಹಿತಕರವಾಗಬಹುದೆಂಬುದನ್ನು ಹೇಳಬೇಕಾಗಿಲ್ಲ. ಭರತಖಂಡದ ಮೇಲೆ ಸಾರ್ವಭೌಮ ಪ್ರಭುತ್ವವೂ ಆಂಗ್ಲ ಮಹಾಜನತೆಯೂ ವಿಶೇಷ ಲಕ್ಷ್ಯವನ್ನು ಕೊಟ್ಟು ಇದರ ಪುರೋವೃದ್ಧಿಗೆ ವಿಸ್ತಾರ ಮಾರ್ಗವನ್ನು ಕಲ್ಪಿಸಿಕೊಡಬೇಕೆಂಬ ಉತ್ಸಾಹಗೊಳ್ಳುವಂತೆ ಮಾಡಿದುದು, ಯುದ್ಧಕಾಲದಲ್ಲಿ ಭರತಖಂಡವು ತೋರಿಸಿದ ಅನುಪಮ ರಾಜಭಕ್ತಿ ವಿಶ್ವಾಸಗಳೇ ಹೊರತು, ಸಹಾಯನಿರಾಕರಣ ಸಾತ್ವಿಕ ನಿರೋಧರೂಪವಾದ ಮೊಂಡತನಗಳೇನೂ ಅಲ್ಲ. ಪ್ರತಿಭಟನಕ್ಕೆ ಪ್ರಭುಶಕ್ತಿಯು ಕುಗ್ಗುವುದೆಂದು ಭಾವಿಸುವುದು ಬರೀ ಭ್ರಮೆ. ಇದನ್ನು ಪರಿಭಾವಿಸಿ ಶಾಂತಿಕಾಮುಕರಾದ ಸಾಮಾನ್ಯ ಪ್ರಜೆಗಳೆಲ್ಲರೂ ನಿಜವಾದ ರಾಜಭಕ್ತಿಯಲ್ಲಿ ತತ್ಪರರಾಗಿ ಪ್ರಭುತ್ವಕ್ಕೆ ತಾವು ಸಹಾಯಿಕರಿಸಿ ಅವರಿಂದ ತಾವು ಪಡೆಯಬೇಕಾದ ಸಹಾಯಗಳನ್ನು ಪಡೆದುಕೊಂಡು ಅವರ ವಿಶ್ವಾಸಗಳಿಂದ ಕ್ರಮಾನುಗತ ಸ್ವರಾಜ್ಯಸುಖವನ್ನು ಪಡೆಯುವುದರಲ್ಲಿ ಮಗ್ನರಾಗಿರುವುದೇ ಶ್ರೇಯಸ್ಕರವು.

ಒಳದೇಶದ ವೃತ್ತಾಂತಗಳು.

ಹಸ್ತೆಯ ಮಳೆಯು ತೆರವು ಕೊಡದೆ ಎಲ್ಲ ಕಡೆಯೂ ನಡೆಯಿಸುತ್ತಿದೆ. ಪೈರುಗಳು ಚೆನ್ನಾಗಿವೆ.

ಕಳೆದ ತಾ|| ೬ ರಲ್ಲಿ ಹೊಸ ಕಲೇಜಿಯೇಟ್ ಹೈಸ್ಕೂಲ್ ಭವನದ ಪ್ರವೇಶಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಶ್ರೀಮದ್ಯುವರಾಜರವರು ಈಗ ಫ್ರಾನ್ಸ್ ರಾಜಧಾನಿಯಲ್ಲಿದ್ದಾರೆ. ಬರುವ ನವಂಬರ್ ತಾ|| ೮ರಲ್ಲಿ ಬೊಂಬಾಯಿಗೆ ಬಂದಿಳಿಯುತ್ತಾರೆಂದು ತಿಳಿಯುತ್ತೇವೆ.

ಮೈಸೂರು ಗೌರ್ನಮೆಂಟಿನವರು ತೆಗೆಯಲು ಏರ್ಪಡಿಸಿದ್ದ ೧ ಕೋಟಿ ರೂ. ಗಳ ಸಾಲವು ಕಳೆದ ತಿಂಗಳ ಕೊನೆಯೊಳಗಾಗಿ ಪೂರ್ತಿಯಾಗಿ ಕೂಡಿತೆಂದು ಕೇಳುತ್ತೇವೆ.

ಒಕ್ಕಲಿಗರ ಹುಣಸೂರು ತಾ|| ಕಾನ್‌ಫರೆನ್ಸು ನಿನ್ನೆ ದಿನ ಲೆ|| ಕೌನ್ಸಿಲ್‌ಮೆಂಬರ್ ಮ|| ವಿಜಯದೇವ ಬ್ಯಾರಿಸ್ಟರ್ ಅಟ್‌ಲಾಯವರ ಅಧ್ಯಕ್ಷತೆಯಿಂದ ಬಿಳಿಕೆರೆ ಹೋಬಳಿ ಕೊಮ್ಮೆಗೌಡನಕೊಪ್ಪಲಲ್ಲಿ ನಡೆದಿತು.

ಹೊಂಗೆಯ ಹಸಿಯ ಮತ್ತು ಒಣಗಿದ ಎಲೆಗಳು ಉತ್ತಮವಾದ ಗೊಬ್ಬರವಾಗುವುದರಿಂದ ಅವನ್ನು ಸರ್ಕಾರಿ ಫಾರೆಸ್ಟುಗಳಿಂದ ರೈತರಿಗೆ ಮಾತ್ರವೇ ಹರಾಜಿನ ಮೂಲಕ ವಿಕ್ರಯಿಸುವಂತೆ ಸರ್ಕಾರದಅಪ್ಪಣೆಯಾಗಿದೆ.

ಚಿತ್ರದುರ್ಗದ ಮ|| ಭೀಮರಾಜುರವರು ಕಳೆದ ಗುರುವಾರ ಸಾಯಂಕಾಲ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲ್‌ಹಾಲಿನಲ್ಲಿ ಕಬೀರದಾಸರ ಚರಿತ್ರೆಯೆಂಬ ಕೀರ್ತನೆಯನ್ನು ರಸವತ್ತಾಗಿ ನಡೆಯಿಸಿ ಸಭಿಕರನ್ನು ಆನಂದಪಡಿಸಿದರು.

ಮೈಸೂರು ವಿಶ್ವವಿದ್ಯಾಲಯದ ವಾರ್ಷಿಕ ಪಟ್ಟಪ್ರದಾನ ಮಹೋತ್ಸವ ಸಭೆಯನ್ನು ನಡೆಯಿಸುವುದಕ್ಕಾಗಿ ಜಗನ್ಮೋಹನ ಪ್ರಾಸಾದವು ಸರಿಪಡಿಸಲ್ಪಡುತ್ತಿದೆ. ಕಾನ್ವೊಕೇಷನ್ ಅಡ್ರೆಸ್ಸನ್ನು ವೈಸ್‌ಚಾನ್ಸಲರಾದ ಸರ್ ಲೇಸ್ಲಿಮಿಲ್ಲರ್‌ರವರು ಓದುವವರಾಗಿದ್ದಾರೆ.

ನವರಾತ್ರಿಯ ಉತ್ಸವಸಮಾರಂಭಗಳಿಗಾಗಿ ದಿವಾನರವರು ರಾಜಧಾನಿಗೆ ದಯಮಾಡಿಸಿದ್ದಾರೆ. ಬರುವ ಮಂಗಳವಾರ ಬೆಳಗಿನ ೮ ಗಟಿಗೆ ಶ್ರೀಮನ್ ಮಹಾರಾಜರವರು ಸಿಹ್ಮಾಸನಾರೋಹಣವನ್ನು ಮಾಡುತ್ತಾರೆ. ದರ್ಬಾರು ದಶರಾತ್ರಿಗಳು ನಡೆಯುವುದು. ತಾ|| ೨೨ ನೆ ಶುಕ್ರವಾರ ವಿಜಯದಶಮಿ ಮಹೋತ್ಸವವು ಜರುಗುವುದು. ತಾ|| ೨೫ ರಿಂದ ಪ್ರಜಾಪ್ರತಿನಿಧಿ ಸಭೆಯು ನಡೆಯುವುದು.

ಸಂಪದಭ್ಯುದಯ ಸಮಾಜದ ನೂತನಸಭಿಕರ ಆರಿಸುವಿಕೆಯು ಈ ಮುಂದಣ ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆಯಬೇಕಾಗಿದೆ. ಪ್ರತಿ ವರ್ಷವೂ ಈ ಸಭಿಕರ ಚುನಾವಣೆಯಾಗಬೇಕಾಗಿದ್ದುದನ್ನು ತಪ್ಪಿಸಿ, ಇನ್ನು ಮುಂದೆ ೨ ವರ್ಷಕ್ಕೊಂದುಸಲ ನಡೆಯುವಂತೆ ಏರ್ಪಡಿಸಿದ್ದಾರೆ. ಆದುದರಿಂದ ಈಸಲ ಆರಿಸಲ್ಪಡತಕ್ಕವರು ಬರುವ ಜನವರಿಯಿಂದ ಮುಂದೆ ೨ ವರ್ಷಗಳವರೆಗೆ ಸಭಿಕರಾಗಿರುವರು.

ಸಂಸ್ಥಾನದಲ್ಲಿ ಐತಿಹಾಸಿಕವಾದ ಹಳೆಯ ಕಟ್ಟಡ ಮೊದಲಾದುವುಗಳನ್ನು ಯಾವ ರೀತಿಯಿಂದ ಎಷ್ಟು ವೆಚ್ಚದಿಂದ ಜೀರ್ಣೋದ್ಧಾರ ಮಾಡಬಹುದೆಂಬ ವಿಷಯದಲ್ಲಿ ಅಭಿಪ್ರಾಯ ಕೊಡಲಿಕ್ಕೆ ಸರ್ಕಾರದವರು ಪ್ರಾಕ್ತನವಿಮರ್ಶನ ವಿಚಕ್ಷಣ ಆರ್ ನರಸಿಹ್ಮಾಚಾರ್ಯರು, ಡೆ|| ಚೀಫ್ ಇಂಜನಿಯರ್ ಮ|| ಆರ್ ವಿ. ಸುಂದರಂ ಅಯ್ಯರು, ಮ|| ಅರುವಾಮುದಯ್ಯಂಗಾರರು—ಈ ಮೂವರನ್ನು ಒಂದು ಸಂಘವನ್ನಾಗಿ ಏರ್ಪಡಿಸಿದ್ದಾರೆ.

ರಾಜಧಾನಿಯ ದೊಡ್ಡವರ್ತಕರೂ ಬೆಂಚ್ ಮೇಜಿಸ್ಟ್ರೇಟರೂ ಆದ ಮಿ|| ಸತ್ತಾರ್‌ಸೇಟರ ಮನೆಯಲ್ಲಿ ೪-೫ ಸಹಸ್ರ ರೂ. ಗಳ ನಗಗಳ ಕಳುವಾಗಿ ಅದನ್ನು ಎ|| ಡಿವಿಜನ್ ಇನ್‌ಸ್ಪೆಕ್ಟರ್ ಮ|| ಚೆನ್ನವೀರಪ್ಪನವರೂ ಸಬ್‌ಇನ್‌ಸ್ಪೆಕ್ಟರ್ ಮ|| ಕೃಷ್ಣಪ್ರಸಾದರೂ ಪತ್ತೆಮಾಡಿದ ಸಂಗತಿಯನ್ನೂ ಅಪರಾಧಿಗೆ ಶಿಕ್ಷೆಯಾದುದನ್ನೂ ಹಿಂದೆ ನಾವು ತಿಳಿಯಿಸಿದ್ದೆವಷ್ಟೆ. ಪತ್ತೆ ಮಾಡಿದ ಮೇಲ್ಕಂಡ ಉದ್ಯೋಗಿಗಳಿಬ್ಬರಿಗೂ ಮಿ|| ಸೇಟರು ೨ ಭಂಗಾರದ ಮೆಡಲುಗಳನ್ನು ಸರ್ಕಾರದವರನುಮತಿಯ ಮೇರೆಗೆ ಕೊಡಲು ಏರ್ಪಡಿಸಿದ್ದರು. ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಮಿ|| ಪಿ. ಎಫ್. ಬೌರಿಂಗ್‌ಸಾಹೇಬರವರು ಪೋಲೀಸ್ ಪರೇಡ್ ಗ್ರೌಂಡಿನಲ್ಲಿ ಸ್ವಹಸ್ತದಿಂದ ಅವುಗಳನ್ನು ಕೊಟ್ಟು ಇವರುಗಳ ಚಟುವಟಿಕೆಯನ್ನೂ ಸಾಹಸವನ್ನೂ ಶ್ಲಾಘಿಸಿದರು.

ಬೆಂಗಳೂರಿನಲ್ಲಿರುವ ಬಿನ್ನಿ ಕಂಪನಿಯವರ ಉಣ್ಣೆ ಯಂತ್ರಾಲಯದ ಕೆಲಸಗಾರರಲ್ಲಿ ೫೦೦ ಮಂದಿಗಳು ತಮಗೆ ಸಂಬಳವನ್ನು ಹೆಚ್ಚಿಸಿ ಕೊಡಬೇಕೆಂಬುದೇ ಮೊದಲಾದ ಕಾರಣಗಳನ್ನು ಹೇಳಿಕೊಂಡು ಕಳೆದ ತಾ|| ೪ ರಿಂದ ಕೆಲಸಕ್ಕೆ ಹೋಗದೆ ಮುಷ್ಕರಹಿಡಿದು ನಿಂತುಬಿಟ್ಟಿದ್ದಾರೆ. ಕಳೆದ ೨೦ ವರ್ಷಗಳಿಂದಲೂ ಈ ಯಂತ್ರಾಲಯದಲ್ಲಿ ಇಂಥ ಕೆಲಸವು ನಡೆದಿರಲಿಲ್ಲ. ಅಲ್ಲಿಯ ಅಧಿಕಾರಿಗಳು ಕೂಲಿಗಾರರ ಮೇಲೆ ಕನಿಕರವುಳ್ಳವರಾಗಿರುವುದಲ್ಲದೆ ಸಂಬಳವನ್ನು ಉದಾರವಾಗಿ ಕೊಡುತ್ತಿದ್ದಾರೆ. ೬ ತಿಂಗಳಿಗೊಂದುಸಲ ೧೦೦ ಕ್ಕೆ ಹತ್ತರಂತೆ ಬೋನಸ್ಸನ್ನೂ, ಗ್ರಾಟ್ಯೂಟಿ ಫಂಡಿಗೆ ೧೦೦ ಕ್ಕೆ ೧೦ ರಂತೆಯೂ ಕೊಡುತ್ತಾರೆ. ಹೀಗಿದ್ದರೂ ಈಗ ಕೂಲಿಕಾರರು ಮುಷ್ಕರ ಹಿಡಿಯುವುದಕ್ಕೆ ಮದ್ರಾಸಿನ ಯಂತ್ರಾಲಯಗಳಲ್ಲಿ ಹಠಮಾಡಿ ದೊಬ್ಬಿಸಿಕೊಂಡು ಬಂದ ಕೆಲಕೂಲಿಕಾರರನ್ನು ಕಂಪೆನಿಯವರು ವಿಚಾರವಿಲ್ಲದೆ ಇಲ್ಲಿ ಸೇರಿಸಿಕೊಳ್ಳಲಾಗಿ ಅವರ ದುರ್ಬೋಧನೆಗಳಿಂದ ಇಲ್ಲಿಯವರ ಮನಸ್ಸು ಕೆಟ್ಟುದೇ ಕಾರಣವಾಗಿದೆಯಂತೆ.

ಲೋಕಕಂಟಕನಾಗಿದ್ದ ಹಿರಣ್ಯಕಶಿಪುವನ್ನು ಸಂಹರಿಸಿ ಪ್ರಹ್ಲಾದನನ್ನು ರಕ್ಷಿಸಿದ ನರಸಿಹ್ಮಾವತಾರದ ಕಥೆಯನ್ನು ಪ್ರಹ್ಲಾದ ಚರಿತ್ರೆಯೆಂಬುದಾಗಿ ನಾಟಕಕಾರರೂ ಕೀರ್ತನಕಾರರೂ ಅಭಿನಯಿಸುವುದೂ ಕಥೆ ಮಾಡುವುದೂ ಉಂಟಷ್ಟೆ. ಆ ಚರಿತ್ರೆಯು ಅಲ್ಲಿಗೇ ಮುಗಿಯುವುದಿಲ್ಲ. ಆ ಹಿರಣ್ಯಕಶಿಪುವಿನ ತಾಮಸರಕ್ತಪಾನದಿಂದ ಮತ್ತನಾದ ನೃಸಿಹ್ಮನು ಆ ರಾಕ್ಷಸನಿಗಿಂತಲೂ ಮಿಗಿಲಾಗಿ ಲೋಕಹಿಂಸಕನಾಗಿ ಪರಿಣಮಿಸಿದುದರಿಂದ, ದೇವತೆಗಳ ಪ್ರಾರ್ಥನೆಯ ಮೇರೆಗೆ ಪರಶಿವನು ವೀರಭದ್ರೇಶನನ್ನು ಕಳುಹಿಸಲು, ಆತನು ಶರಭಾವತಾರ ಮಾಡಿ ನೃಸಿಹ್ಮನನ್ನು ವಧಿಸಿ ಅವನ ಚರ್ಮವನ್ನೂ ಶಿರವನ್ನೂ ಈಶ್ವರನಿಗೆ ಅರ್ಪಿಸಿ ಲೋಕರಕ್ಷಣೆಮಾಡಿದನೆಂಬಲ್ಲಿಗೆ ಆ ಕಥೆಯು ಮುಗಿಯುವುದು. ಈ ಚರಿತ್ರವು ಶ್ರೀ ವೇದವ್ಯಾಸರ ಲೈಂಗ್ಯಾದಿ ಪುರಾಣಗಳಲ್ಲಿ ಮಾತ್ರವೇ ಅಲ್ಲದೆ ಶರಭೋಪನಿಷತ್ತಿನಲ್ಲೂ "ಯೋಘೋರಂವೇಷಮಾಸ್ಥಾಯ ಶರಭಾಖ್ಯಂಮಹೇಶ್ವರಃ| ನೃಸಿಹ್ಮಂ ಲೋಕಹಂತಾರಂ ಸಂಜಘಾನಮಹಾಬಲಃ" ಇತ್ಯಾದಿಯಾಗಿ ವರ್ಣಿತವಾಗಿರುವುದು. ಈ ಭಾಗವನ್ನು ಕಥಿಕರು ಯಾರೂ ಸಮಗ್ರವಾಗಿ ಮುಗಿಸುತ್ತಿರಲಿಲ್ಲ. ವೇ|| ಶಿವಕಥಾ ಶಿವಪ್ಪಶಾಸ್ತ್ರಿಗಳು ಶರಭಲೀಲೆ ಎಂಬ ಕಥೆಯನ್ನು ರಚಿಸಿ ಅದನ್ನು ಮೊನ್ನೆ ಸೋಮವಾರ ರಾಜಧಾನಿಯ ಸೊಪ್ಪಿನ ಬೀದಿಯಲ್ಲಿ ಮ|| ವೀರಣ್ಣನವರು ಹೊಸದಾಗಿ ಕಟ್ಟಿಸಿರುವ ಅಂಗಡಿಯ ಮುಂದೆ ವಿಘ್ನೇಶ್ವರನ ಮಂಗಳಾರತಿಯ ಸಂಬಂಧದಲ್ಲಿ ರಾಜವೀಧಿಯಲ್ಲಿ ಏರ್ಪಡಿಸಿದ್ದ ಚಪ್ಪರದೊಳಗೆ ಸಾವಿರಾರು ಮಂದಿ ಶ್ರೋತೃಗಳು ಕೇಳಿ ಆನಂದಿಸುವಂತೆ ಶಾಸ್ತ್ರಿಗಳು ರಸವತ್ತಾಗಿ ಸಮಯೋಚಿತ ಸಂಭಾರಗಳಿಂದ ಕೀರ್ತನೆ ಮಾಡಿದರು.

ಭರತಖಂಡದ ವೃತ್ತಾಂತಗಳು.

ಯೂರೋಪ್ ಖಂಡಕ್ಕೆ ಹೋಗಿದ್ದ ಖಿಲಾಫತ್ ಪ್ರತಿನಿಧಿಗಳಾದ ಮಿ|| ಮಹಮ್ಮದಾಲಿ ಮೊದಲಾದವರು ಕಳೆದ ತಾ|| ೪ ರಲ್ಲಿ ಬೊಂಬಾಯಿಗೆ ಬಂದು ಸೇರಿದರು.

ಬರುವ ಮಾರ್ಚಿ ತಾ|| ೩೧ ರೊಳಗಾಗಿ ೪ ಲಕ್ಷ ಟನ್ ಗೋದುವೆಯನ್ನು ಅನ್ಯ ದೇಶಗಳಿಗೆ ಇಲ್ಲಿಂದ ಕಳುಹಿಸಲು ಇಂಡಿಯಾ ಸರ್ಕಾರದವರು ಯೋಚಿಸಿರುವರು. ಕಲ್ಕತ್ತಾ ಮಾರ್ವಾಡಿ ವರ್ತಕ ಸಂಘದವರು ಇದನ್ನು ಹೊರಕ್ಕೆ ಕಳುಹಿಸಿಕೊಡಲಾಗದೆಂದು ಶ್ರುತಪಡಿಸಿಕೊಂಡಿದ್ದಾರೆ.

ಕಲ್ಕತ್ತೆಯಲ್ಲಿ ಟ್ರಾಂವೆ ಕೆಲಸಗಾರರು ಮುಷ್ಕರ ಹಿಡಿದು ನಿಂತಿದ್ದು ಈಗ ಕೆಲಸಕ್ಕೆ ಸೇರಿಕೊಂಡರು. ಬೊಂಬಾಯಿಯಲ್ಲಿ ಅಂಚೆಯ ತಂತಿಯ ಆಫೀಸುಗಳ ಕೆಲಸಗಾರರ ಮುಷ್ಕರವು ಹಾಗೆಯೇ ಇದೆ. ಇದರ ಮೇಲೆ ಗ್ಯಾಸ್ ಕಂಪೆನಿಯ ಕೆಲಸಗಾರರು ಮುಷ್ಕರ ಹಿಡಿದು ನಿಂತುಬಿಟ್ಟಿರುವುದರಿಂದ ರಾತ್ರಿ ಹೊತ್ತು ಊರಲ್ಲೆಲ್ಲಾ ದೀಪಗಳೇ ಇಲ್ಲದೆ ಅಂಧಕಾರಮಯವಾಗಿರುತ್ತಿದೆ.

ಬೊಂಬಾಯಿಯಲ್ಲಿ ಯಾವದ್ಭಾರತ ಹೋಂರೂಲ್ ಲೀಗಿನವರ ಸಂಘದ ಅಧಿವೇಶನವು ಮ|| ಗಾಂಧಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಈ ಲೀಗಿನ ಹೆಸರನ್ನು ಸ್ವರಾಜ್ಯ ಸಂಘವೆಂದು ಬದಲಾಯಿಸಿದರು. ಸಂಪೂರ್ಣ ಸ್ವರಾಜ್ಯವನ್ನು ಸಂಪಾದಿಸುವುದಕ್ಕಾಗಿ ಶಾಂತಿಯುತವಾದ ಸಹಾಯನಿರಾಕರಣದ ಆಂದೋಳನವನ್ನು ನಡೆಯಿಸಬೇಕೆಂದು ತೀರ್ಮಾನಿಸಿದರು. ಕಾಂಗ್ರೆಸ್ ಕ್ರೀಡವನ್ನು ಬದಲಾಯಿಸಲಾಗದೆಂದು ಮಿ|| ಜಿನ್ನಾರವರೂ, ಜಮುನಾದಾಸ್ ದ್ವಾರಕದಾಸ್‌ರವರೂ ಸೂಚಿಸಿದರು. ಅದು ಅಂಗೀಕೃತವಾಗಲಿಲ್ಲ. ಅವರಿಬ್ಬರೂ ಸಭೆಯನ್ನು ಬಿಟ್ಟು ಹೊರಟುಹೋದರು.

ದಿಲ್ಲಿಯ ಖಿಲಾಫತ್ ಸಂಘದವರು ಸರ್ಕಾರದ ಸಂಬಂಧವಿಲ್ಲದ ಪಂಚಾಯತಿ ಕೋರ್ಟುಗಳನ್ನು ಸ್ಥಾಪಿಸಲು ಏರ್ಪಡಿಸಿಕೊಂಡಿದ್ದಾರೆ. ಸಣ್ಣ ಸಣ್ಣ ಮೊಬಲಗಿನಿಂದ ಹಿಡಿದು ೫೦೦೦ ರೂ. ಗಳಿಗೆ ಮೇಲ್ಪಟ್ಟ ವ್ಯಾಜ್ಯಗಳನ್ನೆಲ್ಲಾ ಹಿಡಿಯಲು ೫ ತರಗತಿಯ ಕೋರ್ಟುಗಳನ್ನು ಏರ್ಪಡಿಸಿ ಅವುಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಮತಾನುಸಾರವಾದ ಪ್ರಮಾಣಗಳನ್ನೂ ಅನುಸರಿಸಿ ತೀರ್ಮಾನಿಸುವುದಕ್ಕೂ ಸಿವಿಲ್ ಲಾಗಳನ್ನು ಉಪಯೋಗಿಸುವುದಕ್ಕೂ ಏರ್ಪಡಿಸುವವರಾಗಿದ್ದಾರೆ. ಈ ಕೋರ್ಟುಗಳಲ್ಲಿ ವಾದಿಸುವುದಕ್ಕೆ ಬರುವ ವಕೀಲರಿಗೆ ಡಿಸ್ಟ್ರಿಕ್ಟ್ ಕೋರ್ಟ್ ಸದರ್ ಅದಾಲತ್‌ನವರು ಸನ್ನದುಗಳನ್ನು ಕೊಡುವರಂತೆ.

ವಿಕ್ಟೋರಿಯಾ ಮಹಾರಾಜ್ಞಿಯವರ ಹೆಸರಿನ ಮೇಲೆ ಭರತಖಂಡದಲ್ಲಿ ಏರ್ಪಟ್ಟಿರುವ ರಾಜಪುತ್ರ ಸೈನ್ಯವು ಯೂರೋಪಿನ ಯುದ್ಧಾಂಗಣಕ್ಕೆ ೧೯೧೪ ನೆ ವರ್ಷದಲ್ಲಿ ಇಲ್ಲಿಂದ ಹೋಗಿದ್ದು, ಅಲ್ಲಿ ಮಹಾ ಶೌರ್ಯ ಧೈರ್ಯಪರಾಕ್ರಮಗಳನ್ನು ತೋರಿಸಿ ಕಾಳೆಗ ಮಾಡಿ ಪ್ರಶಸ್ತಿ ಪಡೆದಿತು. ಆದರ ಸೈನಿಕರಲ್ಲಿ ಅನೇಕರು ರಣದೇವತೆಗೆ ಬಲಿಯಾದರು. ತಾತ್ಕಾಲಿಕ ಸಂಧಿ ಜರುಗಿದ ಬಳಿಕ ಈ ಸೈನ್ಯವು ತುರ್ಕಿ ದೇಶದ ಸಂರಕ್ಷಣೆಗೆ ನಿಂತಿದ್ದಿತು. ಈಗ ಅಲ್ಲಿಂದಲೂ ಹೊರಟು ಕಳೆದ ತಾ|| ೨ ರಲ್ಲಿ ಬೊಂಬಾಯಿಗೆ ಬಂದಿಳಿದಿತು. ಆ ಸೈನ್ಯಕ್ಕೆ ಅಟ್ಟಹಾಸದಿಂದ ಸ್ವಾಗತವು ಮಾಡಲ್ಪಟ್ಟಿತು. ಅವರೆಲ್ಲರೂ ಲಕ್ನೋ ಪಟ್ಟಣಕ್ಕೆ ತೆರಳಿದರು.

ಹತ್ತು ವರ್ಷಕ್ಕೊಂದು ಸಲದಂತೆ ಜನ ಪರಿಗಣೆತಿಯನ್ನು ಮಾಡುವ ಪದ್ಧತಿಯು ಈ ಭರತಖಂಡದಲ್ಲಿ ವ್ಯವಹಾರಕ್ಕೆ ಬಂದು ೬೦ ವರ್ಷಗಳಾದುವು. ೬ ನೆ ಸಲ ನಡೆಯಬೇಕಾದ ಈ ಪರಿಗಣೆತಿಯು ಬರುವ ೧೯೨೧ ನೆ ವರ್ಷದ ಮಾರ್ಚಿ ತಾ|| ೧೮ ನೆ ದಿವಸ ಭರತಖಂಡದಲ್ಲೆಲ್ಲಾ ನಡೆಯತಕ್ಕುದೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಹಿಂದೆ ನಡೆಯಿಸಿದ ಪರಿಗಣೆತಿಯ ಕಾಲಗಳಲ್ಲಿ ಜನಗಳ ಸಂಖ್ಯೆ ಮಾತ್ರವೇ ಅಲ್ಲದೆ ಅವರವರ ಮತಾಚಾರ ವಿಚಾರಗಳನ್ನೂ, ಪದ್ಧತಿ ಸಂಪ್ರದಾಯಗಳನ್ನೂ ತಿಳಿಯಲು ಏರ್ಪಡಿಸಿದ್ದರು. ಈ ಸಲ ಜನರ ಸಂಖ್ಯೆ, ಅವರ ಜೀವನೋಪಾಯಕ್ರಮ, ಕೈಗಾರಿಕೆಗಳು ಇತ್ಯಾದಿಗಳ ವಿವರವನ್ನು ತಿಳಿಯಲು ಏರ್ಪಡಿಸಿದ್ದಾರೆ.

ಪೂನಾ ಪಟ್ಟಣದಲ್ಲಿ ಫರ್ಗುಸನ್ ಕಲಾಶಾಲೆಯ ಅಧ್ಯಾಪಕರಾದ ಮಿ|| ವಿ. ಎಸ್. ಕೇಲ್‌ರವರು, ಮಿ|| ಕಾಮತ್‌ರವರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯಲ್ಲಿ ಸಹಾಯನಿರಾಕರಣವು ಕೂಡದೆಂಬ ವಿಷಯದಲ್ಲಿ ಒಂದು ಉಪನ್ಯಾಸ ಮಾಡಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ:—ಸರ್ಕಾರಿ ಪಾಠಶಾಲೆಗಳನ್ನೂ, ಕೋರ್ಟುಗಳನ್ನೂ, ಶಾಸನ ಸಭೆಗಳನ್ನೂ ಬಹಿಷ್ಕರಿಲಕ್ಷಿಸುವುದು ನಿಷ್ಫಲವೂ ಮತ್ತು ಅವಿವೇಕವೂ ಆಗಿದೆ. ಈಗ ೨೦ ಪ್ರಜೆಗಳಿಗೆ ಓಟನ್ನು ಕೊಡುವ ಅಧಿಕಾರವು ದೊರೆತಿದೆ. ಇಂಥಸ್ವಾತಂತ್ರ್ಯವು ಇದುವರೆಗೂ ದೊರೆದಿರಲಿಲ್ಲ. ರಾಜ್ಯಾಂಗ ವಿಷಯದಲ್ಲಿ ಪ್ರಜೆಗಳಿಗೆ ಇದುವರೆಗೂ ತಕ್ಕಷ್ಟು ತಿಳುವಳಿಕೆಯುಂಟಾಗಿಲ್ಲ. ಹೀಗಿರುವಾಗ ಈಗ ದೊರೆದಿರುವ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳದೆ ಬಿಡುವುದು ಅವಿವೇಕವಲ್ಲವೆ ? ರಾಜಕೀಯ ಸಭೆಗಳು ಫಲಪ್ರದಗಳಲ್ಲವೆಂದು ಹೇಳುವುದಾದರೆ ಸಹಾಯನಿರಾಕರಣವನ್ನು ಪ್ರೋತ್ಸಾಹಿಸುವುದು ಮೋಸಕರವಾಗಿರುತ್ತದೆ. ಏಕೆಂದರೆ—ರಾಜಕೀಯ ಸಭೆಗಳ ಉಪಯೋಗವು ದೇಶಹಾನಿಕರವಾದ ವಿಷಪಾನತುಲ್ಯವಾಗಿದ್ದರೆ ಸಹಕಾರನಿರಾಕರಣವು ಅದಕ್ಕಿಂತಲೂ ಮಹಾ ಹಾನಿಕರವಾದ ಕಾಳಕೂಟವಾಗುವುದು. ಈ ಸಹಾಯನಿರಾಕರಣೋದ್ಯಮದಿಂದ ದೇಶಕ್ಕೆ ಮಹಾನರ್ಥವುಂಟಾಗುವುದರಿಂದ ಪ್ರಜೆಗಳು ಇದನ್ನವಲಂಬಿಸಕೂಡದು ಎಂದು ಹೇಳಿದರು.

ಪಂಡಿತ ಮದನಮೋಹನ ಮಾಳವ್ಯರವರು ಅಲಹಾಬಾದಿನಲ್ಲಿ ಕಳೆದವಾರ ಪ್ರಸ್ತುತಸ್ಥಿತಿಯನ್ನು ಕುರಿತು ಒಂದು ಉಪನ್ಯಾಸ ಮಾಡುವಾಗ್ಗೆ ಸಹಾಯನಿರಾಕರಣವನ್ನು ಕುರಿತು ಕೆಲ ಮಾತುಗಳನ್ನಾಡಿದರು. ಅದೇನೆಂದರೆ:—"ಗಾಂಧಿಯವರ ಸಹಾಯನಿರಾಕರಣೆಯಿಂದ ಫಲವಾಗುವುದೇ ಎಂಬ ಸಂಶಯವಾಗುತ್ತದೆ. ಆ ವಿಧಾನದಲ್ಲಿ ಎಷ್ಟೋ ಲೋಪಗಳಿವೆ. ಪಾಠಶಾಲೆಗಳನ್ನೂ, ಶಾಸನ ಸಭೆಗಳನ್ನೂ ನಿರಾಕರಿಸುವುದು ನನ್ನ ಮತವಲ್ಲ. ಕಾಂಗ್ರೆಸ್ಸಿನಲ್ಲಿ ಈ ತೀರ್ಮಾನವು ಬಹು ಸಂಖ್ಯಾಕರಿಂದ ಅಂಗೀಕೃತವಾಯಿತೆಂದು ಹೇಳುತ್ತಾರೆ. ಆದರೆ ಅದಕ್ಕೆ ವಿರುದ್ಧವಾದ ಅಭಿಪ್ರಾಯವುಳ್ಳವರು ಸಭೆಯಲ್ಲಿ ಬಹುಜನರಿದ್ದರು. ಮೊದಲಿನ ದಿನ ಬಹು ಜನರು ಅದಕ್ಕೊಪ್ಪಿದರು. ಓಟು ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಮರುದಿವಸ ಬಹುಮಂದಿ ಪ್ರತಿನಿಧಿಗಳು ಹೋಗಿಬಿಟ್ಟಿದ್ದರು. ಬಹುಜನರು ಬರಲಿಲ್ಲ. ಅದೊಂದು ಲೋಪ. ಮತ್ತು ಪ್ರತಿನಿಧಿಗಳ ಓಟುಗಳ ಸಂಖ್ಯೆಯನ್ನು ಸರಿಯಾಗಿ ತೆಗೆದುಕೊಳ್ಳಲಿಲ್ಲ. ಒಬ್ಬ ಪಂಜಾಬಿ ದೊಡ್ಡಮನುಷ್ಯರು ಹಣದ ಚೀಲವನ್ನು ಕೈಯ್ಯಲ್ಲಿ ಹಿಡಿದುಕೊಂಡು ಬಹುಜನರ ಹೆಸರನ್ನು ಪ್ರತಿನಿಧಿಗಳ ಪಟ್ಟಿಯಲ್ಲಿ ಸೇರಸಿಬಿಟ್ಟರು. ಮತ್ತೊಂದು ಲೋಪವೇನೆಂದರೆ:—ಗಾಂಧಿ, ಪಾಲ್ [illegible]ವರುಗಳ ವಿಧಾನಗಳನ್ನನುಸರಿಸಿ ಓಟುಗಳನ್ನು ತೆಗೆದುಕೊಳ್ಳಲಿಲ್ಲ. ಬಹುಮಂದಿ ಸಭಾನಾಯಕರು ಗಾಂಧಿಯವರ ವಿಧಾನಕ್ಕೆ ಪ್ರತಿಕೂಲರಾಗಿದ್ದರು."

ಪತ್ರವ್ಯವಹಾರ.

ಬೆಂಗಳೂರು ವೀರಶೈವ ವರ್ತಕ ಮಂಡಲಿ.

೧೯೨೦ನೆ ಅಕ್ಟೋಬರು ತಾ|| ೩ ರಲ್ಲು ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ರಾ|| ಗೌಡರ ವೀರಭದ್ರಪ್ಪನವರ ಸಂಸ್ಕೃತ ಧರ್ಮ ಪಾಠಶಾಲೆಯಲ್ಲಿ ಬೆಂಗಳೂರು ವೀರಶೈವ ವರ್ತಕಮಂಡಲಿಯವರು ಬೆಂಗಳೂರು ವೀರಶೈವ ಮಹಾಜನರನ್ನು ಬರಮಾಡಿಕೊಂಡು ಮ|| ರಾ|| ದಂಡುಕೆಂಚಪ್ಪನವರ ಅಧ್ಯಕ್ಷತೆಯಲ್ಲಿ ನಡಿಸಿದ ಮಿಟಿಂಗಿನಲ್ಲಾದ ನಿರ್ಧಾರಗಳು:—

(೧) ಈ ದಿವಸದ ಸಭೆಗೆ ಹೋಗಕೂಡದೆಂದು ದೇಶದ ಸೆಟ್ರು ಯಜಮಾನರು ಕೆಲವು ವೀರಶೈವ ದೊಡ್ಡ ಮನುಷ್ಯರಿಗೆ ಪ್ರೇರಪಣೆ ಮಾಡಿದರೆಂದು ಸಭೆಗೆ ದಯಮಾಡಿಸಿದ್ದ ಕೆಲವು ಜನ ದೊಡ್ಡ ಮನುಷ್ಯರು ಸಭೆಯವರಿಗೆ ತಿಳಿಯಪಡಿಸಿದ್ದರಿಂದ ಇದರ ವಿಚಾರದಲ್ಲಿ ಈ ಸಭೆಯವರು ತಮ್ಮ ಪೂರ್ಣ ಅಸಮಾಧಾನವನ್ನೂ ವಿಷಾದವನ್ನೂ ವ್ಯಕ್ತಪಡಿಸುತ್ತಾರೆ. ಈ ನಿರ್ಧಾರವನ್ನು ಮ|| ರಾ|| ಟಿ. ರಾಚಪ್ಪನವರು ಸೂಚಿಸಲು ಮ|| ರಾ|| ರೇವಣಸಿದ್ದಪ್ಪನವರು ಅನುಮೋದಿಸಲು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. (೨) ೧೯೨೦ನೆ ಸೆಪ್ಟಂಬರು ತಾ|| ೧೯ ರಲ್ಲಿ ನಡೆದ ಸಭೆಯಲ್ಲಿ ಮೊದಲನೆ ನಿರ್ಧಾರದ ಪ್ರಕಾರ ದೇಶದ ಸೆಟ್ರು ಯಜಮಾನರು ಕಳೆದ ತಿಂಗಳು ೩ನೆ ತಾರೀಖಿನೊಳಗಾಗಿ ಈ ಸಭೆಯವರನ್ನು ಬರಮಾಡಿಕೊಂಡು ಶ್ರೀ ಮಹಂತಿನಮಠದ ವಿಚಾರದಲ್ಲಿ ತಾವು ನಡೆಸತಕ್ಕ ನಡವಳಿಕೆಗಳಿಗೆ ಸಭೆಯವರ ಸಲಹೆಗಳನ್ನು ಮತ್ತು ಒಪ್ಪಿಗೆಯನ್ನು ತೆಗೆದುಕೊಂಡು ಮುಂದಿನ ಕ್ರಮವನ್ನು ನಡಿಸುವೆವೆಂದು ತಿಳಿಸಿ ಇದುವರೆಗೆ ಆ ಪ್ರಕಾರ ನಡಿಸದೆಯಿರುವುದರಿಂದ ಈ ಸಭೆಯವರ ಅಭಿಪ್ರಾಯವನ್ನು ತೆಗದುಕೊಳ್ಳದೆ ಶ್ರೀ ಮಠದ ವಿಚಾರದಲ್ಲಿ ಯಾವ ಕೆಲಸವನ್ನಾಗಲಿ ತಮ್ಮ ಸ್ವತಂತ್ರತೆಯಿಂದ ನಡಿಸಿದರೆ ಅದರಿಂದ ಸಮಾಜಕ್ಕೆ ಯಾವ ವಿಧವಾದ ನಷ್ಟವಾದಾಗ್ಯೂ ಅದಕ್ಕೆ ಅವರುಗಳೇ ಪೂರ್ಣ ಜವಾಬುದಾರರು ಆಗಿರುತ್ತಾರೆಂದು ಈ ಸಭೆಯವರು ನಿರ್ಧರಿಸಿ ಸೆಟ್ರು ಯಜಮಾನರುಗಳಿಗೆ ತಿಳಿಯಪಡಿಸಬೇಕು. ಇದು ಅಧ್ಯಕ್ಷರಿಂದ ಸೂಚಿಸಲ್ಪಟ್ಟು ಮ|| ರಾ|| ಪಿ. ಎಂ. ಬಸಪ್ಪನವರಿಂದ ಅನುಮೋದಿತವಾಗಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. (೩) ಈ ಸಂಘದ ಉದ್ದೇಶಗಳ ವಿಚಾರದಲ್ಲಿ ಕೆಲವು ಜನ ವೀರಶೈವರು ಪಡುವ ದುರಭಿಪ್ರಾಯವನ್ನು ಹೋಗಲಾಡಿಸಲು ಈ ಸಭೆಯ ಉದ್ದೇಶಗಳನ್ನು ಮೈಸೂರು ಸ್ಟಾರಿನಲ್ಲಿ ಪ್ರಚುರಪಡಿಸಬೇಕೆಂದು ನಿರ್ಧಾರಮಾಡಲ್ಪಟ್ಟಿತು. ಇದು ಬಾಣಾವರದ ಮ|| ರಾ|| ಹುಚ್ಚಪ್ಪನವರಿಂದ ಸೂಚಿಸಲ್ಪಟ್ಟು ಮ||ರಾ|| ಕಂಬಿ ಶಿವಪ್ಪನವರಿಂದ ಅನುಮೋದಿತವಾಗಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. (೪) ಕಾರ್ಯನಿರ್ವಾಹಕ ಸಂಘದ ಮೆಂಬರುಗಳನ್ನೂ ಆಫೀಸು ಬೇರರುಗಳನ್ನೂ ಮುಂದಿನ ಮಿಟಿಂಗಿನಲ್ಲಿ ಚುನಾವಣೆ ಮಾಡಬೇಕೆಂದು ನಿರ್ಧರಿಸಲ್ಪಟ್ಟಿತು. (೫) ಈ ಸಂಘದ ರೂಲುಸುಗಳು ಓದಲ್ಪಟ್ಟು ಅಂಗೀಕರಿಸಲ್ಪಟ್ಟಿತು. (೬) ಈ ಸಂಘದ ಪರವಾಗಿ ವಾಚಕಶಾಲೆಯನ್ನು ಸ್ಥಾಪಿಸತಕ್ಕದ್ದು, ಮತ್ತು ಇದಕ್ಕೆ ಮ|| ರಾ|| ಗೌಡರವೀರಭದ್ರಪ್ಪನವರ ಪಾಠಶಾಲೆಯಲ್ಲಿ ಸ್ಥಳವನ್ನು ಕೊಡುವಂತೆ ಪ್ರಾರ್ಥಿಸತಕ್ಕದ್ದು. ಇದು ಮ|| ರಾ|| ಸೊಲುಕುಂಟೆ ವೀರಭದ್ರಪ್ಪನವರಿಂದ ಸೂಚಿಸಲ್ಪಟ್ಟು ಮ|| ಗುರುಸಿದ್ಧಪ್ಪನವರಿಂದ ಅನುಮೋದಿತವಾಗಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ವೀರಶೈವ ಮತಾಭಿಮಾನಿ.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನು ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಶಂಕರಸ್ತೋತ್ರ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶಿಕಳ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ಶಕ್ತಿಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಆದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ರಕ್ತಶೋಧಕ ! ಧಾತುಪೌಷ್ಟಿಕ !!

ಮನೋಲ್ಲಾಸಕವೆಂಬ

ಮಹದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ಕೃಷ್ಟವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳೆಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕೆಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜವೆಂಬ ಶಿವಲಿಖಿತದಲ್ಲಿ ಅಮಲತಮಹಿಂದ್ರಿಯವಾಕ್ಯಗಳನ್ನು ಕೊಡಿ. ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮ್ಸ್ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್‌ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲೆತಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವೆವು.

12 ಫಿಲ್ಮ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೊವೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ 4—8—0.

ಲೂಸ್‌ಕಿಲ್ಲರ್.

3

(ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗುವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

26

ಈ ನಕ್ಷೆಯಲ್ಲಿ ಕಾಣುವ ಪೌಂಟನ್ ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ವೈರಂ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

SINEMATOGRAPH.
ಸಿನಿಮೊಟೊಗ್ರಾಫ್.

26

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 45

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂದಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆದರೋಗ, ಪಾಂಡುರೋಗ, ಗುಲ್ಮರೋಗ, ಮಹರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮೆಜಡ್ಡು, ಗುದ್ದವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೃದ್ಧರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೂಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಅಕ್ಟೋಬರ್ ತಾ|| ೧೦ ರಿಂದ ೧೯೨೦ ನೆಯ ಅಕ್ಟೋಬರ್ ತಾ|| ೧೬ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೨ನೆಯ ರೌದ್ರಿನಾಮ ಸಂವತ್ಸರದ ಭಾದ್ರಪದ ಬಹುಳ ತ್ರಯೋದಶಿಯಿಂದ ಆಶ್ವೀಜ ಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
10	ಭಾನು	ತ್ರಯೋ	3-37	ಉಫ	49-29	25
11	[1]ಸೋಮ	ಚ-ಉ	0-50 57-39	ಹಸ್ತ	49-16	26
12	[2]ಮಂಗಳ	ಪಾಡ್ಯ	57-55	ಚಿತ್ತ	50-11	27
13	ಬುಧ	ಬಿದಿ	58-42	ಸ್ವಾತಿ	52-23	28
14	ಗುರು	ತದಿ	60	ವಿಶಾ	55-45	29
15	ಶುಕ್ರ	ತದಿ	1-30	ಅನೂ	60	30
16	ಶನಿ	ಚೌತಿ	4-43	ಅನೂ	0-45	1

(1) ಸರ್ವತ್ರಮಹಾಲಯ ಅಮಾವಾಸ್ಯೆ, ಅಮಾಸೋಮವ್ರತ. (2) ನವರಾತ್ರಾರಂಭ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃಪಾ | ಘನಪಥಕೃತಾವತಾರಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದುಗ್ಗ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಭಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸುಪುಟ ೩೩, ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಅಕ್ಟೋಬರ್ ತಾರೀಖು ೧೭ ನೆಯ ಭಾನುವಾರ (ಸಂಚಿಕೆ ೪೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
39 ವೈದ್ಯಶಾಲಾ, ಮೈಸೂರು.

ಹೊಸಶೋಧ ! • ಓಂ • ಹೊಸ ಶೋಧ !!

ಗುಣ ಬಾರದಿದ್ದರೆ ಹಣ ಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವುದಿಲ್ಲ. ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣಸಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವುದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೆ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರೂ. ೧-೧೨-೦. ೩ ಡಬ್ಬಿಗಳಿಗೆ ರೂ. ೪-೮-೦. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವುದು.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ್ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪೆನಿ,
12 ಪೋಸ್ಟ್ ನಿಪ್ಪಾಣಿ, ಜಿ. ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸುಲಭ ವೀರಶೈವ ವಿವಾಹವಿಧಿ.	೦—೧೨—೦
ಶಿವಪೂಜಾವಿಧಿ.	೦—೧೪—೦
[illegible]	೦—೯—೦
[illegible]	೦—೮—೦

ಕರ್ನಾಟಕ ರಾಮಾಯಣಸಂಗ್ರಹವು. 4

ಶ್ರೀ ರಾಮನಚರಿತ್ರೆಯು ಮೊದಲು ವಾಲ್ಮೀಕಿ ಋಷಿಯಿಂದ ಸಂಸ್ಕೃತದಲ್ಲಿ ಬರೆಯಲ್ಪಟ್ಟಿತು. ಆ ಮೇಲೆ ಅನೇಕ ಜನ ಕವಿಗಳು ಕನ್ನಡದಲ್ಲಿ ಬರೆದು ಇದ್ದಾಗ್ಯೂ ಆ ಗ್ರಂಥಗಳು ಸರ್ವರಿಗೂ ಸುಲಭಗಳಾಗಿ ಇಲ್ಲಾ. ಈ ಲೋಪವನ್ನು ಪರಿಹರಿಸಬೇಕೆಂಬ ಉದ್ದೇಶದಿಂದ ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ ಮ|| ರಾ|| ಮುಜರಾಯಿ ಭಕ್ಷಿಯವರಾದ ಎಚ್. ಲಿಂಗರಾಜೇ ಅರಸಿನವರು ಬಿಡಿಗನ್ನಡದಿಂದ ಭಾಮಿನೀ ಷಟ್ಪದಿ ಪದ್ಯರೂಪದಲ್ಲಿ ರಚಿಸಿರುವರು. ಈ ಗ್ರಂಥವು ಹೊರಗೆ ಬಂದ ಒಂದೆರಡು ತಿಂಗಳೊಳಗಾಗಿ ಕನ್ನಡ ನಾಡಿನೊಳಗೆಲ್ಲಾ ಪ್ರಚಾರಕ್ಕೆ ಬಂದು ಬಿಟ್ಟಿರುತ್ತದೆ. ಇದರಿಂದಲೇ ಇದರ ವಿಷಯದಲ್ಲಿ ಹೆಚ್ಚು ಹೊಗಳಬೇಕಾಗಿಲ್ಲ. ಅಪೇಕ್ಷೆಯುಳ್ಳವರು ತರಿಸಿ ಓದಿ ಶ್ರೀ ರಾಮಕಥಾಮೃತವನ್ನು ಸುಲಭವಾಗಿ ಪಾನಮಾಡಿ ಆನಂದಿಸತಕ್ಕದ್ದು. ಪುಸ್ತಕ ದೊರೆಯುವಸ್ಥಳ.—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಡೀಲರ್ಸ್ ಕೃಷ್ಣರಾಜ ಮೊಹಲ್ಲಾ ಮೈಸೂರು.

ಜಾಗ್ರತೆ. **ಕಬ್ಬಿಣದ ನೇಗಲು.** ತರಿಸಿಕೊಳ್ಳಿರಿ.



ನಮ್ಮಲ್ಲಿ ಕಿರ್ಲೋಸ್ಕರ್‌ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 48

ನಾವು ಎ. ಅಲ್ ಬ್ಯುಕ್ಯುಯರ್ ಅಂಡ್ ಸನ್ಸ್ ಎಂಬ ಹಂಚಿನಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಸ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ತರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಳಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೩—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಪಡಶೆಲ್ಲು,
46 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಅಮೇರಿಕನ್ ರೋಮಹರಿ ಪೌಡರ್.

ಕೇಶನಾಶಿನಿ ಪೌಡರ್.

ಇದು ವಿಲಾಯತಿಯಲ್ಲಿ ತಯಾರಾದದ್ದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಪುಡಿಯನ್ನು ಸವರಿದ ಮಾತ್ರಕ್ಕೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದನ್ನು ತೆಗೆಯುವದು. ಕ್ರಯ ಡಬ್ಬಿ 1ಕ್ಕೆ 0—12—0.

ವಿಳಾಸ:—ಮರಾಟ ಟ್ರೇಡಿಂಗ್ ಕಂಪನಿ,
4 ತಿರುಪಳ್ಳಿ ಬೀದಿ, ಮದರಾಸು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.



ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1	6—8—0
ನಂ. 2	7—8—0

4

ಪ್ಯಾರಿಷ್ ಶಾಲ್.

ಚಳಿಗಾಲದಲ್ಲಿಯೂ, ಮಳೆಗಾಲದಲ್ಲಿಯೂ ಹೊದಿಯಲಿಕ್ಕೆ ಬಹು ಲಾಯಖಾದದ್ದು. ಪ್ರಯಾಣಿಕರೂ, ಇತರರೂ, ಪ್ರತಿ ದಿನವೂ ಉಪಯೋಗಿಸಬಹುದು. ಬಣ್ಣ ಹೋಗದು. 5 ಮೊಳ ಉದ್ದವು, 2½ ಮೊಳ ಅಗಲವು ಇದೆ. ಕ್ರಯ ಶಾಲು 1ಕ್ಕೆ 5—0—0

ಕಂಬಳಿ ಟೋಪಿ.



ಈ ಟೋಪಿಗಳು ಸಾಚ ಉಲನ್ ದಾರದಿಂದ ತಯಾರಿಸಿದೆ. ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರಿವಿಗೂ ಉಪಯೋಗಿಸಬಹುದು.

ಕ್ರಯ ಉಲನ್‌ಟೋಪಿ 1 ಕ್ಕೆ 1—6—0

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ. ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಿಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 34

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಹಸ್ತ ಚಾಪಲ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಧೈರ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯುತ್ತರ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಅಕ್ಟೋಬರ್ ತಾ||೧೭ನೆಯ ಭಾನುವಾರ.

ನವರಾತ್ರಿಯುತ್ಸವಗಳು.

ನಮ್ಮ ಭಾರತಭೂಮಿಯಲ್ಲಿ ನವರಾತ್ರಿಯುತ್ಸವವೂ ವಿಜಯದಶಮಿಯೂ ದೇಶಕಾಲಪಾತ್ರ ಸ್ಥಿತಿಗತಿಗನುಸಾರವಾಗಿ ನಾನಾವಿಧದಿಂದ ಸರ್ವತ್ರ ಆಚರಿಸುವ ಪದ್ಧತಿಯು ಬಹು ಪ್ರಾಚೀನಕಾಲದಿಂದ ನಡೆದು ಬಂದಿದೆ. ದೇಶಕಲ್ಯಾಣಾರ್ಥವಾಗಿ ಏರ್ಪಟ್ಟ ಈ ಮಹೋತ್ಸವಗಳ ಉದ್ದೇಶವು ಘನತರವಾದುದೆಂದು ವಿಚಾರಿಗಳಿಗೆಲ್ಲಾ ಗೋಚರವಾಗುವುದು. ಜಗತ್ತು ಪ್ರಕೃತಿಪುರುಷಯೋಗೋದ್ಭೂತವಾಗಿರುವುದರಿಂದ ಇದರ ವಿಕಾಸಕ್ಕೆ ಕರ್ಮವೇ ಮೂಲಭೂತವಾಗಿದೆ. ಜಗದೀಶನು ಕೂಡ ಲೋಕಾನುಗ್ರಹಾರ್ಥವಾಗಿ ಕರ್ಮಪರತಂತ್ರನಾಗಿದ್ದಾನೆ. ಹೀಗಿರುವಾಗ ವಿಶೇಷತಃ ಕಾಮ್ಯಾರ್ಥಿಗಳಾಗಿರತಕ್ಕ ಜಗಜ್ಜನರು ಕರ್ಮೋಪಾಸಕರಾಗಿರದೆ ಇರುವುದು ಸಾಧ್ಯವಲ್ಲ. ಕರ್ಮವು ಸತ್ವಾದಿಗುಣತ್ರಯಾಧಿಷ್ಠಿತವಾಗಿ ಸಾತ್ವಿಕಕರ್ಮ, ರಾಜಸಕರ್ಮ, ತಾಮಸಕರ್ಮಗಳೆಂದು ಹೇಳಿಸಿಕೊಳ್ಳುತ್ತದೆ. ತಾಮಸಕರ್ಮವು ಯಾವಾಗಲೂ ಅನಿಷ್ಟಫಲಪ್ರದವಾಗಿ ಹೇಯವೆನಿಸಿರುವುದು. ಸಾತ್ವಿಕರಾಜಸ ಕರ್ಮಗಳೆರಡೂ ಆಚರಣೀಯಗಳು. ಜಗತ್ ಕಲ್ಯಾಣಕ್ಕೆ ಸತ್ವಗುಣಾಧಿಷ್ಠಿತಗಳಾದ ಕರ್ಮಗಳು ಸಾಧನಗಳಾಗಿರುವಂತೆಯೇ ರಾಜಸಗುಣಾಧಿಷ್ಠಿತಗಳಾದ ಕರ್ಮಗಳೂ ಕೂಡ ಸಾಧನಗಳಾಗಿರುತ್ತವೆ. ಸತ್ವಗುಣ ಕರ್ಮಗಳು ಜ್ಞಾನೇಂದ್ರಿಯಗಳಂತಿದ್ದರೆ ರಾಜಸಗುಣ ಕರ್ಮಗಳು ಕರ್ಮೇಂದ್ರಿಯಗಳಂತಿರುತ್ತ ಈ ಉಭಯಗಳೂ ಇಷ್ಟಾರ್ಥಸಿದ್ಧಿಗೆ ಸಾಧನಗಳಾಗುತ್ತಿವೆ. ಈ ನವರಾತ್ರಿಯುತ್ಸವಗಳಿಗೆ ವಿಶೇಷತಃ ರಾಜಸಕರ್ಮಾರಾಧನೆಯೇ ಮುಖ್ಯೋದ್ದೇಶವಾಗಿದೆ. ಈ ಉತ್ಸವಾಚರಣೆಗೆ ಆರಿಸಿಕೊಂಡಿರುವ ಈ ಕಾಲವಾದರೂ ಅತ್ಯಂತ ಪ್ರಶಸ್ತವೂ ಸಮುಚಿತವೂ ಆದ ಶರದೃತುವಾಗಿದೆ. ಮಳೆಗಾಲವು ಕಳೆದು ಪೈರುಪಚ್ಚೆಗಳಿಂದ ಭೂಪ್ರದೇಶವೆಲ್ಲಾ ಕಣ್ಗೆಂಪಾಗಿ ನಳನಳಿಸುತ್ತಿರುವುದು. ಕೆರೆ ಕಟ್ಟೆಗಳು ತುಂಬಿರುವುವು; ನದೀ ಜಲಗಳು ತಿಳಿಯಾಗಿರುವುವು ಆಕಾಶವು ನಿರ್ಮಲವಾಗಿರುವುದು; ರಾತ್ರಿ ಕಾಲದ ಶರಚ್ಚಂದ್ರಿಕೆಯು ಜಗದಾಹ್ಲಾದಕವಾಗಿರುವುದು; ಯುಗಯುಗಾಂತರಗಳಿಂದಲೂ ಕ್ಷತ್ರಿಯರು ತಮ್ಮ ದಂಡಯಾತ್ರೆಗಳನ್ನು ಈ ಋತುವಿನಲ್ಲೇ ಆರಂಭಿಸುತ್ತ ಬಂದಿರುವರು. ರಾಮಾಯಣ ಯುದ್ಧವು ಈ ಶರತ್ಕಾಲದಲ್ಲೇ ಆರಂಭಗೊಂಡಿತು. ಭಾರತ ಯುದ್ಧವೂ ಕೂಡ ಶರದೃತುವಿಗೆ ಸೇರಿದ ಕಾರ್ತಿಕ ಮಾಸದಲ್ಲೇ ಆರಂಭಿಸಿದುದು. ಅರ್ಜುನನು ಬನ್ನಿಯ ಮರದ ಮೇಲಿಟ್ಟಿದ್ದ ತನ್ನ ಶಸ್ತ್ರಾಸ್ತ್ರಗಳನ್ನು ಪರಿಗ್ರಹಿಸಿ ಯುದ್ಧಾರಂಭ ಮಾಡಿದುದೂ ಈ ಋತುವಿನಲ್ಲೇ. ರಘುಮಹಾರಾಜನ ದಂಡಯಾತ್ರೆಯು ಈ ಋತುವಿನಲ್ಲೇ ಆರಂಭಗೊಂಡಿತೆಂದು ಕಾಳಿದಾಸನು ವರ್ಣಿಸಿರುತ್ತಾನೆ. ಧರ್ಮರಾಜನ ರಾಜಸೂಯಯಾಗವೂ, ಶ್ರೀ ಹರ್ಷನಸತ್ರಯಾಗವೂ ಈ ಋತುವಿನಲ್ಲೇ ಆರಂಭಿಸಲ್ಪಟ್ಟುವುಗಳು. ಶ್ರೀ ಕೃಷ್ಣನ ರಾಸಕ್ರೀಡೆಯು ಕೂಡ ಶರದೃತುವಿನಲ್ಲೇ ನಡೆಯಿಸಲ್ಪಟ್ಟಂತೆ ಭಾಗವತದಿಂದ ಗೊತ್ತಾಗುತ್ತದೆ. ಬೌದ್ಧರ ತ್ರಿವೇಣೀ ಪರಿಷತ್ತು ಕೂಡ ಕಾರ್ತಿಕಮಾಸದಲ್ಲೇ ಜರುಗತಕ್ಕದು. ಈ ದೃಷ್ಟಾಂತಗಳಿಂದೆಲ್ಲಾ ಕರ್ಮಾರಾಧನೆಗೆ ಈ ಋತುವು ಅತ್ಯಂತ ಪ್ರಾಮುಖ್ಯವನ್ನು ಪಡೆದು ಕೊಂಡಿರುವುದೆಂಬರ್ಥವು ಸಿದ್ಧವಾಗುವುದು.

ಕ್ಷತ್ರಿಯರು ಮಾತ್ರವೇ ಅಲ್ಲದೆ ಸಕಲ ವರ್ಣಾಶ್ರಮಗಳವರೂ ಕರ್ಮಾರಾಧನೆಯಿಂದಲ್ಲದೆ ಕಲ್ಯಾಣವಿಲ್ಲವೆಂಬುದನ್ನು ನಿರ್ಧರಿಸಿದ್ದರಾದ ಪ್ರಯುಕ್ತ, ಆ ಕರ್ಮಾರಾಧನೆಯ ಮಹತ್ತ್ವವನ್ನು ಆಚಂದ್ರಾರ್ಕವಾಗಿ ಸ್ಮರಿಸಿ ಸಾಗಿಸುತ್ತಿರಬೇಕೆಂಬ ಸಂಕಲ್ಪದಿಂದ ಈ ನವರಾತ್ರಿಯಲ್ಲಿ ಪರಿಪರಿಯ ಕರ್ಮಾರಾಧನೆಯ ಆಚಾರವನ್ನು ಸ್ಥಾಪಿಸಿರುವರು. ವಿದ್ಯಾಸಾಧಕರು ಪುಸ್ತಕ ಮಂಡಲದಲ್ಲಿ ಸರಸ್ವತಿಯನ್ನೂ, ಶೌರ್ಯೋಪಾಸಕರು ಶಸ್ತ್ರಾಸ್ತ್ರ ಮಂಡಲದಲ್ಲಿ ಭಗವತಿಯನ್ನೂ, ನಾನಾವಿಧ ಕರ್ಮಕಾರರುಗಳು ತಂತಮ್ಮ ಮುಟ್ಟುಗಳಲ್ಲಿ ಕರ್ಮಾಧಿ ದೇವತೆಯನ್ನೂ ಆವಾಹಿಸಿ ಪೂಜಿಸುವರು. ತಂತಮ್ಮ ಇಷ್ಟಾರ್ಥಸಿದ್ಧಿಗೆ ಮುಖ್ಯಸಾಧನಗಳಾದ ವಸ್ತುಗಳಲ್ಲಿ ಪ್ರೀತಿ ವಿಶ್ವಾಸಭಾವನೆಗಳನ್ನಿಟ್ಟವರು ಅವನ್ನೇ ದೇವತಾಸಮಾನವಾಗಿ ಆರಾಧಿಸುವುದು ಅಸಹಜವೇನೂ ಅಲ್ಲ. ರಾಜಸಗುಣಕರ್ಮಾರಾಧನೆಗೆ ಸದಾಚಾರ ಸದ್ಧರ್ಮರೂಪವನ್ನು ಕೊಟ್ಟು ಹೀಗೆ ನಮ್ಮ ಪ್ರಾಚೀನರು ಪ್ರೋತ್ಸಾಹಿಸಿದುದರಿಂದಲೇ ಭರತಖಂಡವು ಶಿಲ್ಪಪರಿಶ್ರಮಾದಿಗಳಲ್ಲಿ ಲೋಕೋತ್ತರವಾದ ಯಶಸ್ಸಂಪತ್ತಿಯನ್ನು ಹಿಂದೆ ಸಂಪಾದಿಸಿತು. ಆದರೆ ದೂರದೃಷ್ಟಿಯಿಲ್ಲದ ಮಂದಮತಿಗಳು ಕೆಲರು "ಮುಟ್ಟುಗಳ ಶಬ್ದವನ್ನು ಕೇಳಿದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದೂ, ಆ ಪರಿಶ್ರಮಗಾರರು ಜಾತಿಯಲ್ಲಿ ಕೀಳಾದವರೆಂದೂ, ಶಾಸ್ತ್ರಗಳಲ್ಲಿ ಕಲ್ಪಿತ ವಚನಗಳನ್ನು ಸೇರಿಸಿ ಮಾತ್ಸರ್ಯಾಭಿವೃದ್ಧಿಗೆ ದಾರಿಮಾಡಿ ದೇಶಕಂಟಕರೆನಿಸಿಕೊಂಡರು. ಪ್ರಕೃತ ನಮ್ಮ ದೇಶದಲ್ಲಿ ಪಾರಿಶ್ರಾಮಿಕ ಕರ್ಮೋಪಾಸನೆಗೆ ಶೈಥಿಲ್ಯ ಬಂದಿರುವುದೇ ದೇಶದ ಹೀನಸ್ಥಿತಿಗೆ ಕಾರಣವೆಂದೂ, ಈ ಕರ್ಮಾಭಿವೃದ್ಧಿಯೇ ದೇಶೋದ್ಧಾರಕ್ಕೆ ಹೇತುವೆಂದೂ ಸಿದ್ಧವಾಗಿರುವುದರಿಂದ ದೇಶದ ಸಂಪದಭ್ಯುದಯಕ್ಕೆ ಶಸ್ತ್ರಗಳಂತಿರುವ ಆ ಪ್ರಕ್ಷಿಪ್ತ ಶಾಸ್ತ್ರವಚನಗಳನ್ನು ಯಾರೂ ಪುರಸ್ಕರಿಸರು. ಪಾಶ್ಚಾತ್ಯದೇಶಗಳಲ್ಲಿ ರಾಜಸಕರ್ಮಾರಾಧನೆಯು ಸರ್ವೋತ್ಕೃಷ್ಟತ್ವವನ್ನು ಪಡೆದುಕೊಂಡಿರುವುದರಿಂದಲೇ ಅವುಗಳು ಐಹಿಕಸಂಪತ್ತಿನಲ್ಲಿ ಅಗ್ರಸ್ಥಾನವನ್ನು ಪಡೆದಿರುವುವು. ಅಲ್ಲಿ ಕಾರೇಗಾರರಿಗೂ, ಕೂಲಿಗಾರರಿಗೂ ಇರುವಷ್ಟು ಪ್ರಾಮುಖ್ಯವು ಮತ್ತಾರಿಗೂ ಇರುವುದಿಲ್ಲ. ಸ್ವಲ್ಪ ಕಾಲದಲ್ಲಿ ಆಂಗ್ಲ ಪ್ರಭುತ್ವವೆಲ್ಲಾ ಈ ಕೆಲಸಗಾರರಿಗೇ ಹಸ್ತಗತವಾಗಬಹುದೆಂಬ ಸೂಚನೆಯೂ ಕೂಡ ಕಾಣುತ್ತಿದೆ. ನಮ್ಮ ದೇಶಸ್ಥಿತಿಯಾದರೋ ಅದಕ್ಕೆ ವಿರುದ್ಧವೇ. ಇಲ್ಲಿ ಸರ್ವಾಂಗಪುಷ್ಟಿಯುಳ್ಳವನಾಗಿದ್ದರೂ ತಿರುಪಗಾರನಾಗಿ ಭೂಭಾರಕನಾಗಿರುವ ಒಬ್ಬ ಯಃಕಶ್ಚಿತ್ತನನ್ನು ಕಂಡರೆ ಬುದ್ಧಿಸ್ವಾಮಿಯೆಂದು ಗೌರವಿಸುವುದೂ, ದೇಶಸಂಪತ್ತಿಗೆ ಸಾಧಕನಾಗಿರುವ ಒಬ್ಬ ಕಾರೇಗಾರನನ್ನೋ ಕರ್ಷಕನನ್ನೋ ಕಂಡರೆ ಎಲಾ ತಲಾ ಎಂದು ಕರೆಯುವುದೂ ವಾಡಿಕೆಯಾಗಿದೆ. ಈ ತಲೆಕೆಳಗುತನವೇ ನಮ್ಮ ದೇಶದ ವೈಷಮ್ಯಕ್ಕೆ ವಿಶೇಷತಃ ಕಾರಣವು. ಕರ್ಮಸೇವನೆಯೂ, ಕರ್ಮೋಪಾಸಕರ ಗೌರವವೂ, ಕರ್ಮಾದರವೂ ನಮ್ಮ ದೇಶದಲ್ಲಿ ಅತ್ಯುಚ್ಚಸ್ಥಿತಿಗೆ ಬಂದಾಗಲೇ ದೇಶದ ಉದ್ಧಾರವಾದೀತು. ಅದುಕಾರಣ ಪೂರ್ವಾಚಾರವೆಂದು ಪೂಜಾಮಾತ್ರದಲ್ಲಿ ನಿಂತಿರುವ ರಾಜಸಕರ್ಮಾರಾಧನವು ನಮ್ಮ ದೇಶದಲ್ಲಿ ಸಕಲ ವರ್ಣಾಶ್ರಮಗಳವರಿಂದಲೂ ನಿತ್ಯಾಚರಣೆಗೆ ಬರುವಂತಾಗಬೇಕು.

ಮೈಸೂರು ರಾಜ್ಯದ ಅರಸು ಮನೆತನದಲ್ಲಿ ನವರಾತ್ರಿಯ ಮಹೋತ್ಸವವು ಪೂರ್ವದಲ್ಲಿ ಸಾಧಾರಣತರವಾಗಿ ನಡೆಯುತ್ತಿದ್ದರೂ ರಾಜೊಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಈಗಣ ಸಿಂಹಾಸನವು ವಿಜಯನಗರದ ರಾಜರ ಪ್ರತಿನಿಧಿಯಾದ ರಂಗರಾಯನಿಂದ ಈಗ್ಗೆ ೩೧೦ ವರ್ಷಗಳಲ್ಲಿ ಮೈಸೂರರಸರಿಗೆ ದೊರೆದಾರಭ್ಯ ರಾಜಒಡೆಯರವರು ಮೊಟ್ಟಮೊದಲು ಶ್ರೀರಂಗಪಟ್ಟಣದಲ್ಲಿ ಸಿಂಹಾಸನದ ಮೇಲೆ ಕುಳಿತು ಪಟ್ಟಾಭಿಷೇಕಗೊಂಡು ಅಲ್ಲಿಂದ ಮೊದಲು ಪ್ರತಿ ವರ್ಷವೂ ನವರಾತ್ರ್ಯುತ್ಸವಗಳನ್ನು ಆಶ್ವಯುಜಮಾಸಾರಂಭದಿಂದ ಈಗ ನಡೆಯುತ್ತಿರುವ ರೀತಿಯಲ್ಲೇ ನಡೆಯುವಂತೆ ಏರ್ಪಡಿಸಿದರು. ಮಧ್ಯೇ ಮಧ್ಯೆ ಕೆಲಕಾಲ ರಾಜವಂಶದಲ್ಲಿ ಕಾಲಗತಿಯಿಂದ ನಡೆದ ಉಪದ್ರವಗಳಿಂದಲೂ, ಸುಲ್ತಾನರ ಪ್ರಾಬಲ್ಯದಲ್ಲೂ ಈ ಉತ್ಸವವು ಸಂಕ್ಷಿಪ್ತವಾಗಿ ನಡೆಯುತ್ತಬಂದು, ಮೈಸೂರು ರಾಜ್ಯವು ಸುಲ್ತಾನನ ಕೈತಪ್ಪಿ ಆಂಗ್ಲಪ್ರಭುಗಳ ಹಸ್ತಕ್ಕೆ ಸೇರಿ, ಆ ಬಳಿಕ ಮೈಸೂರು ರಾಜವಂಶಕ್ಕೇ ರಾಜ್ಯವು ಅವರಿಂದ ಕೊಡಲ್ಪಟ್ಟು, ಶ್ರೀರಂಗಪಟ್ಟಣವನ್ನು ಬಿಟ್ಟು ಮೈಸೂರು ಪಟ್ಟಣವನ್ನು ಈ ದೇಶದ ರಾಜಧಾನಿಯಾಗಿ ಮಾಡಿ ಹೊಸ ಅರಮನೆ ಕೋಟೆ ಕಂದಕ ಮೊದಲಾದುವುಗಳನ್ನು ಕಟ್ಟಿಸಿ, ಸಿಂಹಾಸನವು ಶ್ರೀರಂಗಪಟ್ಟಣದಿಂದ ಇಲ್ಲಿಗೆ ಸಾಗಿಸಲ್ಪಟ್ಟ ಬಳಿಕ ಶಾಲಿವಾಹನಶಕ ೧೭೩೩ ನೆ ವರ್ಷದಲ್ಲಿ ಎಂದರೆ ಈಗ್ಗೆ ೧೦೯ ವರ್ಷಗಳಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ಹೊಸ ಅರಮನೆಯಲ್ಲಿ ಸಿಂಹಾಸನಾರೋಹಣವನ್ನು ಮಾಡಿ ನವರಾತ್ರಿಯುತ್ಸವಗಳನ್ನು ಜರುಗಿಸಿದರು. ಆಗಣಿಂದ ಅವಿಚ್ಛಿನ್ನವಾಗಿ ರಾಜಧಾನಿಯಲ್ಲಿ ಈ ಉತ್ಸವಗಳು 'ಪೂರ್ವಪದ್ಧತಿಯನ್ನನುಸರಿಸಿಯೇ ಜರುಗುತ್ತಿವೆ. ಬರಿಯ ನೋಟದಲ್ಲೇ ಪರಿಸಮಾಪ್ತವಾಗುತ್ತಿದ್ದ ಈ ಉತ್ಸವ ಸಮಯದಲ್ಲಿ ದೇಶಹಿತಸಾಧಕವಾದ ರಾಜಕೀಯ ಸಭೆಯು ನಡೆಯುವಂಥ ಏರ್ಪಾಟು ಶ್ರೀ ಚಾಮರಾಜ ಒಡೆಯರವರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭಾ ಸ್ಥಾಪನೆಯ ಮೂಲಕ ನಡೆದಿತು, ಮತ್ತು ವಸ್ತುಪ್ರದರ್ಶನ ಶಾಲೆಯೂ ಆರಂಭಿಸಲ್ಪಟ್ಟಿತು. ಈಗಣ ನಮ್ಮ ಶ್ರೀಮನ್ಮಹಾರಾಜರವರ ಕಾಲದಲ್ಲಿ ಈ ಉತ್ಸವವೈಖರಿಯು ಮತ್ತಷ್ಟು ಹೆಚ್ಚಿತು. ಹೊಸ ಅರಮನೆಯೂ ವಿದ್ಯುದ್ದೀಪಾವಳಿಗಳ ರಚನೆಯೂ ಪುರಾಲಂಕಾರವೂ ಈ ಉತ್ಸವದ ಸೊಗಸನ್ನು ಹೆಚ್ಚಿಸಿ ವಿಶೇಷವಾಗಿ ಪ್ರಜಾಕರ್ಷಕವನ್ನಾಗಿ ಮಾಡಿರುವುವು. ರಾಜ್ಯಾಭಿವೃದ್ಧಿಗೆ ಸಾಧಕಗಳಾದ ಸಭಾಕೂಟಗಳು ಇನ್ನಷ್ಟು ಹೆಚ್ಚಿಸಲ್ಪಟ್ಟಿರುವುವು. ವಿದ್ವನ್ಮಂಡಲಿಗೆ ತೋರಿಸಲ್ಪಡುತ್ತಿರುವ ಗೌರವಾದರಗಳಿಂದ ನಾನಾದೇಶಗಳ ನಾನಾ ವಿದ್ಯಾಕುಶಲರುಗಳು ಈ ಕಾಲಕ್ಕೆ ಬರುತ್ತಿರುವರು. ಬಹು ಪ್ರಾಚೀನವಾಗಿದ್ದುದರಿಂದ ಶಿಥಿಲೀಭೂತವಾಗಿದ್ದ ಶರಭಸಾಳ್ವ ಗಂಡಭೇರುಂಡಾದಿ ಬಿರುದಾಂಕನಗಳನ್ನೆಲ್ಲಾ ಭಂಗಾರದಲ್ಲಿ ಹೊಸದಾಗಿ ಮಾಡಿಸಿದರು. ಮತ್ತು ಸಿಂಹಾಸನವನ್ನು ಕೂಡ ಆದ್ಯಂತವಾಗಿ ಭಂಗಾರದ ತಗಡಿನಿಂದಲ್ಲೇ ನವೀನವಾದ ಚಿತ್ರಗೆಲಸದಿಂದ ರತ್ನಗಳನ್ನು ಕೆತ್ತಿಸಿ ಬಹು ಮನೋಹರವಾಗಿ ನಿರ್ಮಿಸಿರುವರು. ಸಜ್ಜೆಯ ಅಲಂಕಾರವು ಪುರಾಣಪ್ರಸಿದ್ಧವಾದ ದೇವೇಂದ್ರ ಸಭಾಲಂಕಾರವನ್ನು ಪ್ರತ್ಯಕ್ಷಗೊಳಿಸುತ್ತಿರುವುದು. ಶ್ರೀಮದ್ಯುವರಾಜರವರು ಅಗ್ರಜರ ಛಾಯಾನುವರ್ತಿಗಳಾಗಿದ್ದು ರಾಜ್ಯಕಾರ್ಯದಲ್ಲಿ ಬಲಭುಜದಂತೆ ಸಹಾಯಕಾರಿಗಳಾಗಿರುವುದೂ, ಶ್ರೀಮದ್ಯುವರಾಜರಿಗೆ ಕುಲದೀಪಕವಾದ ಪುತ್ರ ರತ್ನೋದಯವಾಗಿರುವುದೂ ಸಹ ಅರಮನೆಯ ಪ್ರತಿಯೊಂದುತ್ಸವಗಳಿಗೂ ನೂತನ ತೇಜಸ್ಸನ್ನುಂಟು ಮಾಡಿರುವುವು. ಕಾಲ ವೈಷಮ್ಯದಿಂದ ದಾರಣೆಯ ಹೆಚ್ಚುಗೆಯು ಪ್ರಪಂಚದಲ್ಲೆಲ್ಲಾ ವ್ಯಾಪಿಸಿದ್ದರೂ, ಮೈಸೂರು ದೇಶವು ಈ ವಿಷಯದಲ್ಲಿ ಇತರ ಭಾಗಗಳಿಗಿಂತಲೂ ಎಷ್ಟೋ ಉತ್ತಮವಾಗಿಯೇ ಇರುವುದರಿಂದ ಪ್ರಜಾಸ್ತೋಮವು ತಕ್ಕಷ್ಟು ಮಟ್ಟಿಗೆ ಸುಸ್ಥಿತಿಯಲ್ಲೇ ಇರುತ್ತಿರುವುದಾದಕಾರಣ ಇಂಥ ಉತ್ಸವಗಳಲ್ಲಿ ಅವರು ವಿಶೇಷತಃಭಾಗಿಗಳಾಗುತ್ತಿರುವರು. ಈ ವರ್ಷವೂ ಕೂಡ ಪುರಾಲಂಕಾರ ಮೊದಲಾದವುಗಳು ವಿದ್ಯುದ್ದೀಪಾವಳಿಗಳ ಆಧಿಕ್ಯದಿಂದ ಮತ್ತಷ್ಟು ರಮಣೀಯವಾಗಿರುವುವು. ರಣರಂಗಕ್ಕೆ ಹೋಗಿದ್ದ ಇಂ|| ಲ್ಯಾನ್ಸರ್ಸ್ ಸೈನ್ಯ ಮೊದಲಾದುವುಗಳೆಲ್ಲಾ ರಾಜಧಾನಿಗೆ ಬಂದಿರುವುವು. ದೇಶದಲ್ಲೆಲ್ಲಾ ಮಳೆಬೆಳೆಗಳು ಸದ್ಯಃ ಸುಖಮುಖವಾಗಿರುವುದರಿಂದ ಪ್ರೇಕ್ಷಕರ ಸಂಖ್ಯೆಯು ವಿಶೇಷವಾಗಿ ಸೇರಬಹುದೆಂದೇ ಕಾಣುತ್ತಿದೆ. ದೇಶೀಯ ಪ್ರಜಾ ಸ್ತೋಮವನ್ನೆಲ್ಲಾ ಆನಂದಾಬ್ಧಿಯಲ್ಲಿ ಮುಳುಗಿಸುತ್ತಿರುವ ಈ ನವರಾತ್ರಿಯುತ್ಸವಗಳು ಹೀಗೆಯೇ ಚಿರಕಾಲ ಅಖಂಡವಾಗಿ ಉತ್ತರೋತ್ತರಾಭಿವೃದ್ಧಿಯಿಂದ ನಡೆಯುವಂತೆ ಅನುಗ್ರಹಿಸಲೆಂದು ಶ್ರೀ ಜಗದಂಬೆಯನ್ನು ನಾವು ಪ್ರಾರ್ಥಿಸುವೆವು.

ಹೊಗೆಬಂಡಿಯ ಘೋರಾನಾಹುತ.

ಕಳೆದ ೭ನೆ ತಾ|| ಗುರುವಾರ ರಾತ್ರಿ ೧೦|| ಗಂಟೆಯಲ್ಲಿ ಬೆಂಗಳೂರು ಮದ್ರಾಸುಗಳ ಮಧ್ಯದ ಲೋಹಮಾರ್ಗದಲ್ಲಿ ಅರಕೋಣಂ ಮಿನ್ನಾಲ್ ಸಿಲ್ದಾಣಗಳ ಮಧ್ಯದಲ್ಲಿ ಅತ್ಯಂತ ಭಯಂಕರವಾದ ಅನಾಹುತವಾಯಿತು. ಆ ರಾತ್ರಿ ಮದರಾಸಿನಿಂದ ಬೆಂಗಳೂರಿಗೆ ಹೊರಟ ಮೆಯಿಲ್ ಬಂಡಿಯು ಗಂಟೆಗೆ ೪೦ ಮೈಲಿಗಳ ವೇಗದಲ್ಲಿ ಓಡಿಬರುತ್ತಿರಲು ಮೇಲೆ ಕಂಡ ಸ್ಥಲದಲ್ಲಿ ಯಾರೋ ದುರಾತ್ಮರಿಂದ ಒಂದು ಪಕ್ಕದ ಕಂಬಿಯು ೫೦೦ ಅಡಿಗಳಷ್ಟು ದೂರ ತಿರುಪು ತೆಗೆದು ಕಳೆದುಹಾಕಲ್ಪಟ್ಟಿದ್ದುದರಿಂದ ಅಲ್ಲಿಗೆ ಇಂಜನ್ನು ಬಂದ ಕೂಡಲೇ ರಭಸದಿಂದ ಹಾರಿ ವರ್ಣಿಸಲಳವಲ್ಲದ ರೀತಿಯಲ್ಲಿ ೪ ಅಡಿ ಕೆಳಗಣ ಹಳ್ಳಕ್ಕೆ ಬಿದ್ದುಬಿಟ್ಟಿತು. ಅದರ ಹಿಂದಿನ ೪-೫ ಬಂಡಿಗಳೂ ಹಾಗೆಯೇ ಬಿದ್ದು ಜಜ್ಜಿ ನುಚ್ಚುನೂರಾದುವು. ಒಳಗಿದ್ದ ಪ್ರಯಾಣಿಕರಲ್ಲಿ ೧-೨ನೆ ತರಗತಿಯ ಬಂಡಿಗಳು ಹಿಂಗಡೆಯಲ್ಲಿದ್ದುದರಿಂದ ಅವುಗಳಲ್ಲಿದ್ದವರಿಗೆ ಅಪಾಯವೇನೂ ಆಗಲಿಲ್ಲ. ಒಬ್ಬ ಹುಡುಗನು ಮೈಸೂರು ನವರಾತ್ರಿಯುತ್ಸವವನ್ನು ನೋಡಲಿಕ್ಕಾಗಿ ೨ ನೇ ತರಗತಿ ಬಂಡಿಯಲ್ಲಿ ಬರುತ್ತಿದ್ದನು. ಅವನಿಗೆ ಬಲವಾದ ಗಾಯವಾಯಿತು. ೩ನೆ ತರಗತಿ ಪ್ರಯಾಣಿಕರಲ್ಲಿ ನೂರಾರು ಮಂದಿಗೆ ಏಟುಗಳೂ ಗಾಯಗಳೂ ಆಗಿ ಅನೇಕರು ಸತ್ತಿರಬಹುದೆಂದು ಊಹಿಸಲ್ಪಟ್ಟಿದ್ದಿತು. ಆದರೆ ೧೫ ಮಂದಿಗಳು ಮಾತ್ರ ಸತ್ತು ೧೬ ಮಂದಿಗಳಿಗೆ ಗಾಯವಾಗಿರುವುದೆಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ಡ್ರೈವರು ಗಾರ್ಡುಗಳಲ್ಲಿ ಯಾರೂ ಮೃತಪಡಲಿಲ್ಲ. ಹೇಗೋ ತಪ್ಪಿಸಿಕೊಂಡರು. ಅಂಡರ್ ಗಾರ್ಡುಗಳಿಗಿಬ್ಬರಿಗೆ ಸ್ವಲ್ಪ ಗಾಯವಾಯಿತು. ಎಲ್ಲಕ್ಕಿಂತಲೂ ಹಿಂದೆ ಇದ್ದ ಸೆಲೂನಿನಲ್ಲಿ ಆ|| ಪಿ. ರಾಜಗೋಪಾಲಾಚಾರ್ಲುಯವರಿದ್ದರು. ಅವರ ಬಂಡಿಗೂ ಏನೂ ಅಪಾಯವಾಗಲಿಲ್ಲ. ಈ ಸುದ್ದಿಯು ತಿಳಿದ ಕೂಡಲೇ ಅರಕೋಣಂಸ್ಟೇಷನ್ ಮಾಸ್ಟರು ಡಾಕ್ಟರುಗಳೊಡನೆ ಅನಾಹುತದ ಸ್ಥಳಕ್ಕೆ ಹೋದರು. ಅಷ್ಟರಲ್ಲಿ ಇತರ ಪ್ರಯಾಣಿಕರು ಅಪಾಯಗೊಂಡಿದ್ದವರನ್ನು ಹೊರಕ್ಕೆ ತೆಗೆದು ಉಪಚಾರ ಮಾಡುತ್ತಿದ್ದರು. ಡಿಪ್ಟಿ ಟ್ರಾಫಿಕ್ ಮ್ಯಾನೇಜರೂ, ರೈಲ್ವೆ ಏಜಂಟರೂ, ಸೆಕ್ರೆಟರಿಯವರೂ, ಇನ್ನೂ ಕೆಲ ಉದ್ಯೋಗಿಗಳೂ ಮದ್ರಾಸಿನಿಂದ ಸ್ಪೆಷಲ್ ಟ್ರೇನಿನಲ್ಲಿ ಹೊರಟು ರಾತ್ರಿ ೪ ಗಂಟೆಗೆ ಅಲ್ಲಿಗೆ ಬಂದರು. ಬಂಡಿಯಲ್ಲಿ ಸತ್ತಿದ್ದವರ ಶವಗಳನ್ನೂ ಜೀವಸಹಿತರಾಗಿದ್ದ ಮತ್ತೆ ಕೆಲವರನ್ನೂ ಬಂಡಿಗಳ ಹಲಗೆಗಳನ್ನು ಕುಯ್ದು ಹೊರಕ್ಕೆ ತೆಗೆಯಬೇಕಾಯಿತು. ಗಾಯಗೊಂಡಿದ್ದವರಿಗೆ ಸದ್ಯಃ ಚಿಕಿತ್ಸೆಯನ್ನು ಮಾಡಿ ಸ್ಪೆಷಲ್ ಬಂಡಿಯಲ್ಲಿಟ್ಟು ಮದ್ರಾಸು ವೈದ್ಯಶಾಲೆಗೆ ಸಾಗಿಸಿದರು. ಬಿದ್ದಿರುವ ಇಂಜನ್ನನ್ನು ಒಡೆದಲ್ಲದೆ ತೆಗೆಯಲಿಕ್ಕೆ ಯತ್ನವಿಲ್ಲವಾಯಿತು. ಇದರಿಂದ ೭ ನೆ ತಾ|| ಬಿನ ಮದ್ರಾಸು ಅಂಚೆಯು ೮ನೆ ತಾ|| ನಲ್ಲಿ ಬೆಂಗಳೂರಿಗೆ ಬರಲೇ ಇಲ್ಲ. ೮ ನೆ ತಾ|| ನಲ್ಲೂ ಬೆಂಗಳೂರು ಮಾರ್ಗದ ಅಂಚೆಯು ಬರಲಿಲ್ಲ. ೮ನೆ ತಾ|| ನಲ್ಲಿ ಮದ್ರಾಸಿನಿಂದ ಬೆಂಗಳೂರು, ಮೆಟ್ಟುಪಾಳಯಂಗಳ ಕಡೆಗೆ ಹೊರಡಬೇಕಾದ ಮೆಯಿಲು ಬಂಡಿಗಳು ಹೊರಡಲೇ ಇಲ್ಲ. ಬೊಂಬಾಯಿ ಮೆಯಿಲು ಮಾತ್ರ ಸಾಯಂಕಾಲ ಹೊರಡಬೇಕಾಗಿದ್ದುದು ಮಧ್ಯಾಹ್ನ ೩ ಗಂಟೆಗೇ ಹೊರಟಿತು. ಹೊರಗಣಿಂದ ಮದ್ರಾಸಿಗೆ ಬರಬೇಕಾಗಿದ್ದ ಬಂಡಿಗಳೆಲ್ಲಾ ಅಪಾಯ ನಡೆದ ಸ್ಥಲದ ಈಚೆಯೇ ನಿಂತುಬಿಟ್ಟು, ಅವುಗಳಲ್ಲಿದ್ದ ಜನರೂ ಅಂಚೆಯೂ ಆಚೆ ಕಡೆಯಲ್ಲಿ ನಿಂತಿದ್ದ ಬಂಡಿಗಳಿಗೆ ಹತ್ತಿಸಲ್ಪಟ್ಟು ಸಾಗಿಸಲ್ಪಟ್ಟರು. ೯ನೆ ತಾ|| ನಿಂದ ಬಂಡಿಗಳು ಹೊರಡುವ ಕಾಲವನ್ನು ಸ್ವಲ್ಪ ಮುಂದಾಗಿಯೇ ಏರ್ಪಡಿಸಿಬಿಡುತ್ತ ಬಂದಿರುವರು. ಕಳೆದ ತಾ|| ೧೦ ರಿಂದ ಮದ್ರಾಸಿನಿಂದ ರಾತ್ರಿ ಹೊತ್ತು ಹೊರಡುತ್ತಿದ್ದ ಮೆಯಿಲುಬಂಡಿಗಳನ್ನೆಲ್ಲಾ ಹಗಲುಹೊತ್ತೇ ಬಿಡುವಂತೆ ಏರ್ಪಡಿಸಿದ್ದಾರೆ. ಎಂದರೆ ಬೆಂಗಳೂರು ಮೆಯಿಲುಬಂಡಿಯು ಬೆಳಗಿನ ೬|| ಗಂಟೆಗೂ ಮೆಟ್ಟುಪಾಳಯಂ ಮೆಯಿಲು ಮಧ್ಯಾಹ್ನ ೧ ಗಂಟೆಗೂ, ಮಂಗಳೂರು ಮೆಯಿಲು ೧||| ಗಂಟೆಗೂ, ಬೊಂಬಾಯಿ ಮೆಯಿಲು ೩ ಗಂಟೆಗೂ ಹೊರಡುತ್ತಲಿವೆ. ಬೆಂಗಳೂರಿನಿಂದ ಹೊರಡುವ ಮೆಯಿಲೂ ಹಗಲುಹೊತ್ತೇ ಹೊರಡುತ್ತಿದೆ. ಇಂಥ ದೊಡ್ಡ ಅನಾಹುತವು ದಕ್ಷಿಣ ದೇಶದ ಲೋಹಮಾರ್ಗಗಳಲ್ಲಿ ಇದುವರೆಗೂ ಎಲ್ಲೂ ಆಗಿರಲಿಲ್ಲವಂತೆ. ಲೋಹಮಾರ್ಗದ ಕೆಲಸಕ್ಕೆ ಅಲ್ಲಲ್ಲಿಗೆ ನಿಯಮಿಸಲ್ಪಟ್ಟಿರುವ ಗ್ಯಾಂಗ್ ಕೂಲಿಕಾರರು ಅತೃಪ್ತರಾಗಿದ್ದು ಕಂಪನಿಯವರ ಮೇಲೆ ಹಗೆ ತೀರಿಸಿಕೊಳ್ಳಲಿಕ್ಕಾಗಿ ಇಂಥ ದುಷ್ಟಾಚರಣೆಯನ್ನು ಮಾಡಿರಬೇಕೆಂದು ಊಹಿಸಲ್ಪಟ್ಟಿದೆ. ಅಪರಾಧಿಗಳನ್ನು ಪತ್ತೆ ಮಾಡಿ ಅತಿ ಕಠಿನವಾದ ಶಿಕ್ಷೆಯಿಂದ ಈ ತೆರದ ದುಷ್ಕಾರ್ಯಪ್ರವರ್ತಕರಿಗೆ ಪೂರ್ಣ ಭಯವುಂಟಾಗುವಂತೆ ಮಾಡದಿದ್ದರೆ ಈಗಣ ಮುಷ್ಕರದ ಯುಗದಲ್ಲಿ ರೈಲ್ವೆ ಹೊಗೆಬಂಡಿಯ ಪ್ರಯಾಣವೇ ಭಯಂಕರವಾಗಿ ಪರಿಣಮಿಸೀತು.

ಒಳದೇಶದ ವೃತ್ತಾಂತಗಳು.

ಮುಂದಣವಾರ ರಾಜಧಾನಿಯೊಳಗೆ ಪಂಚಮರಸಭೆಯು ಚೀಫ್ ಕೋರ್ಟು ಜಡ್ಜಿ. ಮ|| ಕೆ. ಎಸ್. ಚಂದ್ರಶೇಖರಯ್ಯರವರ ಅಧ್ಯಕ್ಷತೆಯಿಂದ ನಡೆಯುವುದಾಗಿದೆಯೆಂದು ತಿಳಿಯುತ್ತೇವೆ.

ಬೆಂಗಳೂರು ಬಿನ್ನಿ ಕಂಪೆನಿಯಲ್ಲಿ ಮುಷ್ಕರ ಹಿಡಿದ ಜನರು ಉಳಿದ ಕೂಲಿಕಾರರಿಗೂ ಕೆಲಸಕ್ಕೆ ಹೋಗದಂತೆ ಬಾಧೆ ಕೊಡುತ್ತಿದ್ದುದರಿಂದ ಕಂಪನಿಯವರು ಮುಷ್ಕರ ಹಿಡಿಯದಿರುವ ೨೦೦೦ ಮಂದಿಗಳಿಗೆ ಸಂಬಳದ ಸಮೇತ ರಜಾಕೊಟ್ಟು ಯಂತ್ರಾಲಯವನ್ನು ಮುಚ್ಚಿದ್ದರು. ಈಚೆಗೆ ಮುಷ್ಕರ ಹಿಡಿದಿದ್ದವರು ತಾವಾಗಿ ಕೆಲಸಕ್ಕೆ ಬಂದರು. ತಾ|| ೧೧ ರಿಂದ ಕೆಲಸವು ನಡೆಯುತ್ತಿದೆ.

ಮೈಸೂರು ಶ್ರೀ ಜೈನವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ನು ಕಂಪನೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಮಾಡಿಸಲ್ಪಟ್ಟಿರುವುದು. ಈ ಅಸೋಸಿಯೇಷನ್ನಿನ ದ್ವಿತೀಯ ವಾರ್ಷಿಕಾಧಿವೇಶನವು ಈ ತಾ|| ೨೩ ರಲ್ಲಿ ಸೊಲ್ಲಾಪುರದ ಶ್ರೀಮಾನ್ ಹೀರಾಚಂದ್ ನೇಮಿಚಂದ್ ಸೇಟ್ಜಿಯವರ ಅಧ್ಯಕ್ಷತೆಯಲ್ಲಿ ರಾಜಧಾನಿಯಲ್ಲಿರುವ ಮೋತೀಖಾನೆ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿ ನಿಲಯದಲ್ಲಿ ನಡೆಯುವುದು.

ಸಂಸ್ಥಾನದಲ್ಲಿರುವ ಗ್ರಾಂಟಿನೇಡ್ ಶಾಲೆಗಳ ಉಪಾಧ್ಯಾಯರುಗಳಿಗೆ ಪೆನ್ಷನ್ ಸಲ್ಲುವುದಿಲ್ಲವಷ್ಟೆ. ಇವರಿಗೆ ಪ್ರಾವಿಡೆಂಟ್ ಫಂಡನ್ನೇರ್ಪಡಿಸಿ ಉದ್ಯೋಗ ವಿಶ್ರಾಂತಿ ಕಾಲದಲ್ಲಿ ಸಹಾಯವಾಗುವಂತೆ ಗೌರ್ನಮೆಂಟಿನವರು ಕನಿಕರದಿಂದ ಒಂದು ಏರ್ಪಾಟನ್ನು ಮಾಡಿದ್ದಾರೆ. ಈ ಯೇರ್ಪಾಟಿನ ಪ್ರಕಾರ ಉಪಾಧ್ಯಾಯರುಗಳು ಪ್ರತಿ ತಿಂಗಳಲ್ಲೂ ತಮ್ಮ ಸಂಬಳಗಳಲ್ಲಿ ಸ್ವಲ್ಪ ಭಾಗವನ್ನು ಕೊಡುವುದಾದರೆ ಸರ್ಕಾರದವರೂ ಸ್ವಲ್ಪ ಸಹಾಯ ಮಾಡಿ, ಕಡೆಗೆ ಅವರಿಗೆ ಬೋನಸ್ ರೂಪದಲ್ಲಿ ಒಟ್ಟು ಹಣವನ್ನು ಕೊಡುತ್ತಾರೆ.

ರಾಜಧಾನಿಯ ವರ್ತಕರ ಪರವಾಗಿ ಮ|| ಗಳಾದ ವರ್ಧಮಾನಯ್ಯನವರು, ಧ. ಪ್ರ. ಬಸುಮಯ್ಯನವರು, ಧನಕೋಟಿ ಶೆಟ್ಟರು, ತಿಮ್ಮಯ್ಯನವರು ಮೊದಲಾದ ದೊಡ್ಡಮನುಷ್ಯರುಗಳು ಕಳೆದ ಸೋಮವಾರದ ದಿವಸ ದಿವಾನರನ್ನು ಕಂಡು ವರಮಾನದ ತೆರುಗೆಯ ಸಂಬಂಧವಾದ ರೂಲ್ಸುಗಳಿಂದ ತಮಗುಂಟಾಗಬಹುದಾದ ತೊಂದರೆಯ ಭಾಗಗಳನ್ನು ಕುರಿತು ಅರಿಕೆಮಾಡಿಕೊಳ್ಳಲು, ದಿವಾನರು ಸಾವಧಾನದಿಂದ ಲಾಲಿಸಿ, ಕಠಿಣವಾಗಿ ತೋರುವ ಭಾಗಗಳು ಉತ್ತರೋತ್ತರ ಸರಿಪಡಿಸಲ್ಪಡಲಾಗುವುದೆಂದೂ, ಲೆಕ್ಕಗಳನ್ನು ಕೊಡದಿದ್ದಲ್ಲಿ ಯಾರಿಗೂ ಶಿಕ್ಷೆ ಗುರಿಮಾಡುವುದಿಲ್ಲವೆಂದೂ ನೀವು ಕೊಡುವ ಲೆಕ್ಕದಮೇಲೆ ತೆರುಗೆಯು ವಿಧಿಸಲ್ಪಡುವುದೆಂದೂ ಸಂಪೂರ್ಣ ಭರವಸೆಯನ್ನು ಕೊಟ್ಟರೆಂದು ತಿಳಿಯುತ್ತೇವೆ.

ಸತಾರಾ ಡಿಸ್ಟ್ರಿಕ್ಟಿಗೆ ಸೇರಿದ ಟಾಸ್ಗಾನಿನ ಪ್ರೋ ಸರ್ಕಸ್ಸಿನವರು ಬರ್ಮಾ, ಜಾವಾ, ಚೈನಾ, ಜಪಾನ್ ಮೊದಲಾದ ದೇಶಗಳಲ್ಲೂ ಭರತಖಂಡದ ನಾನಾ ಭಾಗಗಳಲ್ಲೂ ಸಂಚರಿಸಿ ತಮ್ಮ ಅದ್ಭುತವೂ ಅತ್ಯಾಶ್ಚರ್ಯಕರವೂ ಆದ ಅಂಗಸಾಧನೆಗಳನ್ನು ಪ್ರದರ್ಶಿಸಿ ಅನೇಕ ಬಹುಮಾನ ಪದಕಗಳನ್ನು ಸಂಪಾದಿಸಿ ಖ್ಯಾತಿಗೊಂಡು ಈಗ ರಾಜಧಾನಿಗೆ ಬಂದು ತಮ್ಮ ಚಮತ್ಕಾರಗಳನ್ನು ಪ್ರದರ್ಶಿಸುತ್ತಿರುವರು. ಯುವತಿಯರೂ, ಬಾಲಬಾಲಿಕೆಯರೂ ಮಾಡುವ ಅಂಗಸಾಧನಗಳೂ ತಂತಿಯ ಮೇಲೆ ಬೈಸಿಕಲ್ಲನ್ನು ನಡಿಸುವುದೂ ಮೊದಲಾದ ಅದ್ಭುತ ಚಮತ್ಕಾರಗಳು ಪರಮಾಶ್ಚರ್ಯಕರವೂ ಚಿತ್ತಾಕರ್ಷಕವೂ ಆಗಿವೆ. ರಾಜಧಾನಿಗೆ ಈವರೆಗೆ ಬಂದಿದ್ದ ಪ್ರಖ್ಯಾತವಾದ ಫಿಲಿಪ್ ಮೊದಲಾದ ಸರ್ಕಸ್ಸುಗಳಲ್ಲೂ ಸಹ ಪುರುಷರು ಈ ಹೆಂಗುಸರಂತೆ ಅಸಾಧ್ಯವಾದ ಅಂಗಸಾಧನೆಗಳನ್ನು ಮಾಡುತ್ತಿರಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ಇಂತಹವರಿಗೆ ಈ ದಸರಾ ಮಹೋತ್ಸವದಲ್ಲಿ ಉಚಿತವಾದ ಪ್ರೋತ್ಸಾಹವೂ ರಾಜರ ಸನ್ಮಾನವೂ ಆಗದೆ ಇರಲಾರದೆಂದು ನಿರೀಕ್ಷಿಸುತ್ತೇವೆ.

ಕಳೆದ ಮಂಗಳವಾರ ಬೆಳಗ್ಗೆ ನವರಾತ್ರಿಯ ದರ್ಬಾರಗುಳಿಗೆ ಆರಂಭವಾಯಿತು. ಶ್ರೀಮನ್ಮಹಾರಾಜರವರು ಆ ದಿನ ಬೆಳಗ್ಗೆ ಮಂಗಳಸ್ನಾನವನ್ನು ಮಾಡಿ ನಿತ್ಯಕರ್ಮವನ್ನಾಚರಿಸಿ ಕುಲದೇವತೆಯ ಮುಂದೆ ಕಂಕಣಧಾರಣೆಯನ್ನು ಮಾಡಿ ಸಭಾಮಂಟಪಕ್ಕೆ ಚಿತ್ತಯಿಸಿದರು. ವೈದಿಕಮಂಡಲಿಯವರು ರಾಜಬಂಧುವರ್ಗದವರು, ದಿವಾನರೇ ಮೊದಲಾದ ಅಧಿಕಾರಿ ವರ್ಗದವರು, ಪುರಪ್ರಮುಖರೇ ಮೊದಲಾದ ಜನರುಗಳಿಂದ ಸಭಾ ಮಂಟಪವು ರಮ್ಯವಾಗಿದ್ದಿತು. ಮುಂದಣ ಅಂಗಳದಲ್ಲಿ ಚತುರಂಗ ಸೈನ್ಯವೂ ಮನೋಹರವಾಗಿ ನಿಂತಿದ್ದಿತು. ಶ್ರೀಮನ್ಮಹಾರಾಜರು ನವಗ್ರಹ ಪೂಜೆಯನ್ನೂ ಸಿಂಹಾಸನ ಪೂಜೆಯನ್ನೂ ಮಾಡಿ ಸಿಂಹಾಸನಾರೋಹಣ ಮಾಡಿದ ಕೂಡಲೇ ವಾದ್ಯಗಳು ಭೋರ್ಗರೆದುವು; ೨೧ ಗುಂಡುಗಳು ಹಾರಿಸಲ್ಪಟ್ಟುವು; ಸೈನಿಕರೆಲ್ಲರೂ ಮರ್ಯಾದೆ ಮಾಡಿದರು; ಧರ್ಮಾಧಿಕಾರಿಗಳೇ ಮೊದಲಾದ ವೈದಿಕವರ್ಗದವರ ಆಶೀರ್ವಾದಗಳೂ ಲೌಕಿಕ ಜನರ ನಜರುಗಳೂ ನಡೆದುವು. ಸೈನಿಕರಸು ರೂಟೂ ವಾದ್ಯವೈಭವವೂ ಮನೋಹರವಾಗಿ ನಡೆಯುತ್ತಿರುವಾಗ ಆಸ್ಥಾನದಲ್ಲಿ ಸಭಿಕರಿಗೆಲ್ಲಾ ಯಥೋಚಿತವಾಗಿ ಹಾರ ತಾಂಬೂಲಾದಿಗಳ ವಿನಿಯೋಗವಾಯಿತು. ಸಭಿಕರೆಲ್ಲರೂ ತೆರಳಿದ ಬಳಿಕ ಸಭಾಮಂಟಪವು ತೆರೆಯಿಂದ ಆಚ್ಛಾದಿಸಲ್ಪಟ್ಟು ರಾಣೀವಾಸದವರೆಲ್ಲರೂ ದಯಮಾಡಿಸಿ, ಸಿಂಹಾಸನಮಂಡಿತರಾದ ಶ್ರೀಮನ್ಮಹಾರಾಜರನ್ನು ಅಭಿವಂದಿಸಿ ತೆರಳಿದ ಬಳಿಕ ಆ ದಿನದ ಬೆಳಗಿನ ದರ್ಬಾರು ಮುಗಿದಿತು. ಆ ದಿನ ಸಾಯಂಕಾಲದಿಂದ ಪ್ರತಿ ದಿನವೂ ೭ ಗಂಟೆಯ ಮೇಲೆ ಶ್ರೀಮನ್ಮಹಾರಾಜರವರು ಸಿಂಹಾಸನರೋಹಣವನ್ನು ಮಾಡಿ ದರ್ಬಾರುಗಳನ್ನು ಪದ್ಧತಿಯಂತೆ ನಡೆಯಿಸುತ್ತಿದ್ದಾರೆ. ಇಷ್ಟು ಸಲಕ್ಕಿಂತಲೂ ಈ ಸಲ ವಿದ್ಯುದ್ದೀಪಾಲಂಕಾರವು ಅತಿ ವಿಶೇಷವಾಗಿದೆ. ಪರಸ್ಥಲದ ಜನರು ಈಗಾಗಲೇ ಬಂದು ಸೇರುತ್ತಿದ್ದಾರೆ.

೮ ವಿದ್ಯಾಶಾಖೋದ್ಯೋಗಿಗಳೂ ಮತ್ತು ಹೈಸ್ಕೂಲುಗಳ ಮುಖ್ಯೋಪಾಧ್ಯಾಯರುಗಳೂ ಸಹ ಬೆಂಗಳೂರಿನಲ್ಲಿ ಕೂಡಿ ವಿದ್ಯಾಭ್ಯಾಸದ ಮೆಮೋರಾಂಡಮ್ಮಿನ ವಿಷಯದಲ್ಲಿ ಚರ್ಚಿಸಿದರು. ಮ|| ರಾಮಲಿಂಗರಡ್ಡಿಯವರು ಅಸ್ವಸ್ಥರಾಗಿದ್ದುದರಿಂದ ಮೊದಲ ದಿನ ವಿದ್ಯಾಶಾಖಾ ಸೆಕ್ರೆಟರಿಯವರಾದ ಮಿ|| ಡಿಸೌಜಾರವರು ಸಭಾಧ್ಯಕ್ಷರಾಗಿದ್ದರು. ಅವರು ಮಾಡಿದ ಉಪನ್ಯಾಸದಲ್ಲಿ ಸದ್ಯಃ ನಮಗೆ ಪಾಶ್ಚಾತ್ಯಸಂಸರ್ಗದಿಂದು ಭೋಗಲಾಲಸೆಗಳು ಹೆಚ್ಚುತ್ತಿರುವುವೆಂದೂ ಜೀವನದ ಕಷ್ಟವು ದುರ್ಭರವಾಗುತ್ತಿರುವುದೆಂದೂ, ಅದುಕಾರಣ ಸಾಮಾನ್ಯ ವಿದ್ಯೆಗಿಂತ ನಾನಾಪರಿಶ್ರಮ ವಿದ್ಯೆಗಳು ಪ್ರಬಲವಾಗಬೇಕಾಗಿದೆಯೆಂದೂ, ರಾಜಕೀಯ ಆರ್ಥಿಕಸಾಂಘಿಕ ಸಮಸ್ಯೆಗಳಿಂದ ಹೊಯ್ದಾಡುತ್ತಿರುವ ಈಗಣ ಪರಿಸ್ಥಿತಿಗೆ ಅನುಗುಣವಾಗಿ ವಿದ್ಯಾವಿಧಾನವನ್ನು ಮಾರ್ಪುಗೊಳಿಸಬೇಕಾಗಿದೆಯೆಂದೂ, ಅದುಕಾರಣ ಜನಸಾಮಾನ್ಯದಲ್ಲೂ ಬಾಲವಿದ್ಯಾಭ್ಯಾಸವು ಸರ್ವತ್ರ ಪ್ರಸಾರವಾಗುವಂತೆ ಮಾಡಬೇಕೆಂದೂ, ವಿದ್ಯಾಭ್ಯಾಸ ವಿಷಯದಲ್ಲಿ ಜನರಿಗಿರುವ ವಿಮುಖತೆಯನ್ನು ತೊಲಗಿಸಿ ನಿರ್ಬಂಧವಾಗಿಯೂ ಉಚಿತವಾಗಿಯೂ ವಿದ್ಯೆಯನ್ನು ಕಲಿಸಬೇಕಾಗಿದೆಯೆಂದೂ, ಬಾಲವಿದ್ಯೆ, ಮಾಧ್ಯಮಿಕವಿದ್ಯೆ, ಪಾರಿಶ್ರಾಮಿಕ ವಿದ್ಯೆ, ಸ್ತ್ರೀವಿದ್ಯೆ, ನಿಮ್ನಜಾತಿವಿದ್ಯೆ ಇವುಗಳ ಅಭ್ಯಾಸ ವಿಧಾನವನ್ನೆಲ್ಲಾ ಚೆನ್ನಾಗಿ ಸಂಸ್ಕರಿಸಬೇಕಾಗಿದೆಯೆಂದೂ, ವಿಶ್ವವಿದ್ಯಾಲಯಕ್ಕೂ ಉಳಿದ ವಿದ್ಯಾಶಾಖೆಗಳಿಗೂ ಸಾಮರಸ್ಯವುಂಟಾಗಬೇಕೆಂದೂ, ಉನ್ನತವಿದ್ಯೆಯ ಜತೆಗೆ ಶಾರೀರಕ ನೈತಿಕ ರಸಾಯನಿಕಾದಿ ವಿದ್ಯೆಗಳೆಲ್ಲಾ ಅಭಿವೃದ್ಧಿಗೊಳ್ಳಬೇಕೆಂದೂ, ಆರ್ಥಿಕ ವಿಷಯವನ್ನು ಕೂಡ ಉಪೇಕ್ಷಿಸಲಾಗದೆಂದೂ ಮೊದಲಾಗಿ ಹೇಳಿದರು. ೨-೩ ನೆ ದಿನಗಳ ಸಭೆಯಲ್ಲಿ ಮ|| ರಡ್ಡಿಯವರು ಅಧ್ಯಕ್ಷರಾಗಿದ್ದರು. ಲೋ|| ಸೆ|| ಪರೀಕ್ಷೆಯನ್ನು ತೆಗೆದುಬಿಡಬೇಕೇ ಬೇಡವೇ ಎಂಬುದೇ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನವಾದುವು.

ಭರತಖಂಡದ ವೃತ್ತಾಂತಗಳು.

ಮದರಾಸ್ ಕ್ರಿಶ್ಚಿಯನ್ ಕಾಲೇಜು ಇಂಟರ್ಮೀಡಿಯಟ್ ತರಗತಿ ವಿದ್ಯಾರ್ಥಿಯಾದ ಕೃಷ್ಣಮಾಚಾರ್ ಎಂಬ ವೈಷ್ಣವನು ಮಹಮ್ಮದೀಯ ಮತವನ್ನು ಸ್ವೀಕರಿಸಿ ಸೈಫುದೀನ್ ಎಂಬ ನೂತನ ನಾಮವನ್ನು ಧರಿಸಿದನು.

ಯಾವದ್ಭಾರತ ಹೋಮ್‌ರೂಲ್ ಲೀಗನ್ನು ಸ್ವರಾಜ್ಯ ಸಭೆಯನ್ನಾಗಿ ಬದಲಿಸಿದ ಸಂದರ್ಭದಲ್ಲಿ ಬಹು ಲೋಪಗಳಿವೆಯೆಂದು ಹೇಳಿ ಮಿ|| ಮಹಮ್ಮದಾಲಿ, ಜಿನ್ನಾ, ಜಮುನಾದಾಸ್ ದ್ವಾರಕದಾಸ್ ಮೊದಲಾದ ೩೦ ಮಂದಿಗಳು ಆ ಸಭೆಯಲ್ಲಿನ ತಮ್ಮ ಸಭಿಕತ್ವಕ್ಕೆ ರಾಜೀನಾಮೆ ಕೊಟ್ಟರು.

ಬರುಬರುತ್ತ ಚಿನ್ನಬೆಳ್ಳಿಗಳ ಬೆಲೆಯು ಏರುತ್ತಲೇ ಇದೆ; ಕಡಿಮೆಯಾಗುವುದೆಂಬ ನಿರೀಕ್ಷಣೆಯು ವ್ಯರ್ಥವಾಗುತ್ತಿದೆ. ಮೊನ್ನೆ ವಾರ ಬೊಂಬಾಯಿಯಲ್ಲಿ ಅಪರಂಜಿ ಬೆಲೆಯು ತೊಲೆಗೆ ೨೭-೭-೦ ಯಂತೆಯೂ ಬೆಳ್ಳಿಯ ಬೆಲೆಯು ೧೦೦ ತೊಲೆಗೆ ೧೧೩-೦-೦ ವರೆಗೂ ಇದ್ದಿತು. ಕಳೆದ ವಾರ ಚಿನ್ನದ ಬೆಲೆ ೨೬||| ಇದ್ದಿತು.

ಮೊನ್ನೆ ಶನಿವಾರ ಕಲ್ಕತ್ತಾ ಪಟ್ಟಣದಲ್ಲಿ ಅಂತರಿಕ್ಷದಲ್ಲಿ ವಾಯು ವಿಮಾನದ ಮೇಲೆ ಒಂದು ವಿವಾಹವು ಜರುಗಿತು. ಮಿಸ್. ಗಾರ್ನರ್ ಎಂಬಾಕೆಯೂ ಮಿ|| ಸಿ. ಎಚ್. ಮಾರ್ಕ್ ಎಂಬಾತನೂ ವಧೂವರರು. ಆ ದಿನ ಹಗಲು ೩|| ಗಂಟೆಗೆ ಅವರಿಬ್ಬರೂ ವಿಮಾನದಲ್ಲಿ ಕುಳಿತು ಅಂತರಿಕ್ಷಕ್ಕೆ ೬ ಸಾವಿರ ಅಡಿಗಳೆತ್ತರಕ್ಕೆ ಏರಿದರು. ಪಾದರಿಯು ಮಂತ್ರೋಚ್ಚಾರಣೆ ಮಾಡುತ್ತಿರುವಾಗ ವಿಮಾನವು ಮೆಲ್ಲನೆ ಕೆಳಕ್ಕಿಳಿದಿತು.

ಬೊಂಬಾಯಿ ಕಡೆ ಮಳೆ ಬಿದ್ದಿರುವುದು ಕಡಿಮೆ. ಅಲ್ಲಿಗೆ ಸಿಹಿ ನೀರನ್ನೊದಗಿಸುವ ಜಲಾಧಾರಕ್ಕೆ ತಕ್ಕಷ್ಟು ನೀರು ಸೇರಿಲ್ಲ. ಅದುಕಾರಣ ದಿನ ೧ ಕ್ಕೆ ಆ ಪಟ್ಟಣಕ್ಕೆ ಒದಗಿಸಬೇಕಾದ ೪೪೦೦೦೦೦ ಗ್ಯಾಲನ್ ನೀರಿಗೆ ಪ್ರತಿಯಾಗಿ ಈಗ ೩೮೦೦೦೦೦ ಗ್ಯಾಲನ್ ನೀರನ್ನು ಮಾತ್ರವೇ ಒದಗಿಸುತ್ತಿದ್ದಾರೆ. ಪ್ರಜೆಗಳು ನೀರನ್ನು ಮಿತವಾಗಿ ಉಪಯೋಗಿಸಬೇಕೆಂದು ಅಲ್ಲಿಯ ಮ್ಯುನಿಸಿಪಾಲಿಟಿಯವರು ಪ್ರಕಟಿಸಿದ್ದಾರೆ.

ವಿದೇಶದ ವೃತ್ತಾಂತಗಳು.

ಚೀನಾ ದೇಶದಲ್ಲಿ ಕ್ಷಾಮಬಾಧೆಯಿಂದ ಪೀಡಿತರಾಗಿರುವ ಜನರಿಗೆ ಸರ್ಕಾರದವರು ಅನ್ನ ಹಾಕಿ ರಿಲೀಫ್ ಕೆಲಸಗಳನ್ನು ಮಾಡಿಸಲುಪಕ್ರಮಿಸಿದ್ದಾರೆ. ೨ ಲಕ್ಷ ಸವರನ್ನುಗಳನ್ನು ವೆಚ್ಚ ಮಾಡಿ ಚಿಹ್ಲಿ ಪ್ರಾಂತದಲ್ಲಿ ನೂತನ ಮಾರ್ಗಗಳನ್ನು ಹಾಕಿಸುವುದಕ್ಕಾಗಿ ೧೦ ಲಕ್ಷ ಮಂದಿ ಕ್ಷಾಮಪೀಡಿತರನ್ನು ಉಪಯೋಗಿಸುವುದರಲ್ಲಿದ್ದಾರೆ.

ಐರ್ಲಂಡಿನ ಕಾರ್ಕ್ ಮೇಯರು ನಿರಾಹಾರವ್ರತವನ್ನಾಚರಿಸುವುದಕ್ಕೆ ಹಿಡಿದು ೨ ತಿಂಗಳ ಮೇಲಾಯಿತು. ಆದರೂ ದೇಹಪಟುತ್ವವು ತಗ್ಗಿಲ್ಲವಂತೆ. ಪ್ರತಿ ದಿನವೂ ಕ್ಷೌರವನ್ನು ಮಾಡಿಸಿಕೊಳ್ಳುವರು; ವಾರ್ತಾ ಪತ್ರಿಕೆಗಳನ್ನು ಓದುತ್ತಿರುವರು. ಯಾರೂ ಅವರಿಗೆ ಆಹಾರವನ್ನು ತಂದುಕೊಡುತ್ತಲಿಲ್ಲವೆಂಬುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸ್ವಲ್ಪ ಬಿಸಿ ನೀರನ್ನೂ ಔಷಧವನ್ನೂ ಸೇವಿಸುತ್ತಾರಂತೆ. ಇದರಿಂದ ದೇಹದೊಳಗಣ ಭಾಗಗಳು ಕೆಟ್ಟುಹೋಗದಂತೆ ಕಾಪಾಡಲು ಸಾಧ್ಯವಂತೆ. ಇವರಿಗಿಂತಲೂ ೨ ದಿನಗಳ ಕಾಲ ಹೆಚ್ಚಾಗಿ ಉಪವಾಸ ಮಾಡಿಕೊಂಡಿರುವವರು ಅವರ ಜತೆಯಲ್ಲೇ ಕಾರಾಗೃಹದಲ್ಲಿದ್ದಾರೆ. ಪ್ರಾಣೋಪದ್ರವ ಲಕ್ಷಣವೇನೂ ಉಂಟಾಗಿಲ್ಲ. ನಿರಾಹಾರವಾಗಿ ಇಷ್ಟು ದಿವಸ ಬದುಕುವುದು ಹೇಗೆಂದು ಪಾಶ್ಚಾತ್ಯ ಪ್ರಜೆಗಳು ಆಶ್ಚರ್ಯಪಡುತ್ತಿದ್ದಾರೆ. ಭಾರತಮುನಿಗಳ ಅನಂತಕಾಲ ನಿರಶನ ಪ್ರಭಾವವನ್ನರಿಯದ ಆಂಗ್ಲ ಜನರಿಗೆ ಇದು ನೂತನ ವಿಷಯವೇ ಸರಿ.

ಅಮೇರಿಕಾಕ್ಕೆ ಸೇರಿದ ವಾಷಿಂಗ್ಟನ್ನಿನಲ್ಲಿ ಇದುವರೆಗೂ ಹಿಡಿಯಲ್ಪಡದಿದ್ದಂಥ ದೊಡ್ಡ ತಿಮಿಂಗಿಲವು ಹಿಡಿಯಲ್ಪಟ್ಟಿತು. ೨೦ ಜನರು ಅದನ್ನು ಸಮುದ್ರದಿಂದ ದಡಕ್ಕೆ ಸೇರಿಸಲು ೨|| ದಿನಗಳ ಕಾಲ ಸೆಳೆಯಬೇಕಾಯಿತು. ಅದರ ತೂಕವು ೩೦೦೦೦ ಪೌನುಗಳು. ಉದ್ದವು ೪೫ ಅಡಿಗಳು. ಅದರ ಮೈಯ ಸುತ್ತಳತೆ ೨೩||| ಅಡಿಗಳು. ಅದರ ಬಾಲವು ೧೦ ಅಡಿಗಳ ಉದ್ದ. ಇಂಥ ತಿಮಿಂಗಲವು ಯಾವಾಗಲೂ ಸಮುದ್ರದಲ್ಲಿ ೧೫೦೦ ಅಡಿಗಳ ಕೆಳಗೇ ಇರತಕ್ಕುದು. ಯಾವುದೋ ಒಂದು ಸಬ್‌ಮೆರೀನು ನೀರಿನೊಳಗೆ ಅಲ್ಲಕಲ್ಲೋಲ ಮಾಡಿದುದರಿಂದ ಇದು ಮೇಲಕ್ಕೆ ಬಂದುಬಿಟ್ಟಿರಬೇಕೆಂದು ಊಹಿಸಿದ್ದಾರೆ. ಅಗಾಧ ಸ್ಥಲದಿಂದ ಮೇಲಕ್ಕೆ ಬಂದುಬಿಟ್ಟ ಕಾರಣ ಅದರ ಸಹಜ ಶಕ್ತಿಯು ಕುಗ್ಗಿಹೋಗಿ ಮರಳಿ ಸ್ವಸ್ಥಲಕ್ಕೆ ಹೋಗಲಾರದೆ ಹೋಯಿತು. ಇದಕ್ಕೆ ಸಣ್ಣ ಗುಂಡಾದ ಕಣ್ಣುಗಳಿರುವುವು. ಆದರೆ ದೃಷ್ಟಿಪಾಟವಿರಲಿಲ್ಲ. ಅದರ ಬಾಯಿ ೫೦ ಅಂಗುಲಗಳಗಲವಾಗಿಯೂ, ೪೮ ಅಂಗುಲಗಳ ಆಳವಾಗಿಯೂ, ನಾಲಗೆಯು ೪೦ ಅಂಗುಲಗಳುದ್ದವಾಗಿಯೂ ಇದ್ದಿತು. ಇದು ನೀರಿನೊಳಗೆ ಗಂಟೆಗೆ ೪೬ ಮೈಲಿಗಳಂತೆ ಓಡಬಲ್ಲ ಪ್ರಾಣಿಯಂತೆ. ಇದನ್ನು ಸಾಧಿಸಿ ಹಿಡಿಯುವುದಕ್ಕೆ ೨|| ದಿನಗಳು ಹಿಡಿದುವು.

ರಷ್ಯಾ ಬೋಲ್ಷೆವಿಕ್ಕರು ಕೃತ ದುಷ್ಕರ್ಮ ಫಲಾನುಭವವನ್ನು ಅನುಭವಿಸುವ ಸ್ಥಿತಿಗೆ ಬಂದಿದ್ದಾರೆ. ಉತ್ತರದಲ್ಲಿ ಪೋಲರಿಂದಲೂ, ದಕ್ಷಿಣದಲ್ಲಿ ರೆಂಗಲ್ ಸೇನಾನಿಯಿಂದಲೂ ಅವರಿಗೆ ಅಪರಿಮಿತವಾದ ಅಪಜಯವೂ, ನಷ್ಟಗಳೂ ಸಂಭವಿಸಿರುವುದು. ಅವರ ಸೈನ್ಯವೆಲ್ಲಾ ವಿಚ್ಛಿನ್ನವಾಗಿ ಹೋಯಿತು. ಅವರ ಪ್ರಭುತ್ವವೇ ಅಳಿದುಹೋಗುವ ಸ್ಥಿತಿಗೆ ಬಂದಿದೆ. ಪ್ರಜೆಗಳೆಲ್ಲಾ ತಿರಿಗಿಬೀಳುವ ಸ್ಥಿತಿಗೆ ಬಂದಿದ್ದಾರೆ. ರಷ್ಯಾದ ಬೇಸಾಯಗಾರರ ನಾಯಕನಾದ ಜನರಲ್ ಮೆಕಾನೋ ಎಂಬಾತನು ಸೋವಿಯಟ್ಟರಿಗೆ ವಿರುದ್ಧವಾಗಿ ನಿಂತು ಕಾದಾಡಿ ಒಂದೆರಡು ಪಟ್ಟಣಗಳನ್ನು ಹಿಡಿದುಕೊಂಡು ಬೋಲ್ಷೆವಿಕ್ ಸೈನ್ಯವೊಂದನ್ನು ಹಾಳ್ಮಾಡಿರುವುದಲ್ಲದೆ ರೇಂಗಲ್ ಸೇನಾಪತಿಯೊಡನೆ ಕೂಡಿ ಬೋಲ್ಷೆವಿಕ್ಕರ ಮೇಲೆ ಕಾದಾಡುತ್ತಿದ್ದಾನೆ. ಬೋಲ್ಷೆವಿಕ್ ಸೈನ್ಯಕ್ಕೆ ತಕ್ಕಷ್ಟು ಆಹಾರವಿಲ್ಲದೆ ಅವರುಗಳು ಸೈನ್ಯವನ್ನು ಬಿಟ್ಟು ಪಲಾಯನವಾಗುವುದನ್ನೋ ಪೋಲರಿಗೆ ಶರಣಾಗತರಾಗುವುದನ್ನೋ ಮಾಡಲು ನಿರೀಕ್ಷಿಸಿಕೊಂಡಿದ್ದಾರೆ. ಟ್ರಾಟ್ಸ್ಕಿಯು ನೂತನ ಸೈನ್ಯವನ್ನು ಕೂಡಿಸಬೇಕೆಂದು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಇದುವರೆಗೆ ಬೋಲ್ಷೆವಿಕ್ಕರ ೨೬ ಪಟಾಲಮುಗಳು ಪೂರ್ಣವಾಗಿ ಹಾಳಾದುವು. ಸತ್ತು ಕೆಟ್ಟವರು ಹೋಗುತ ಉಳಿದವರು ಪಟಾಲಮುಗಳನ್ನು ಬಿಟ್ಟು ಓಡಿಹೋಗುತ್ತಿದ್ದಾರೆ. ಪೋಲರಿಗೂ ಲಿಥೂನಿಯಾದವರಿಗೂ ತಾತ್ಕಾಲಿಕ ಸಂಧಿಯಾಯಿತು. ಬೋಲ್ಷೆವಿಕ್ಕರೂ ಪೋಲರು ಹೇಳಿದ ನಿಬಂಧನೆಗಳಿಗೆಲ್ಲಾ ಒಪ್ಪಿ ತಾತ್ಕಾಲಿಕ ಸಂಧಿಮಾಡಿಕೊಂಡರು. ಇದರಿಂದ ಪೋಲಂಡಿನವರಿಗೆ ಮೊದಲಿಗಿಂತ ೧೫ ಸಾವಿರ ಚದರ ಕಿಲೋಮೀಟರುಗಳಷ್ಟು ವಿಶಾಲವೂ ೪೫ ಲಕ್ಷ ಪ್ರಜೆಗಳೂ ಉಳ್ಳ ರಷ್ಯಾದೇಶ ಭಾಗವು ಹೊಸದಾಗಿ ಸೇರುವಂತಾಯಿತು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸ್ತೋತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಶತಕಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚುದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ರಕ್ತಶೋಧಕ ! ಧಾತುಪೌಷ್ಟಿಕ !!

2 ಮನೋಲ್ಲಾಸಿಕವೆಂಬ

ಮಹದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಡಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ. ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಕಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತವೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು, ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮಲತಮಹೇಂದ್ರಿಯವಾಕ್ಯಗಳನ್ನು ಕೊಡಿ. ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮನ್ನು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ ಕೈಕಲೆಸಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈಕನ್ನಡಿಯಂತೆ ಇರುವವು.

12 ಫಿಲ್ಮನ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

ಲಂಡನ್ ಲೀವರವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವೆಂಟ್ಸ್ ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ 4—8—0.

ಲೂಸ್‌ಕಿಲ್ಲರ್.

4 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ

89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆಮರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 1—12—0.

12 ಕ್ಕೆ 18—0—0.

27

ಈ ನಕ್ಷೆಯಲ್ಲಿ ಕಾಣುವ ಪೌಂಟೆನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸ್ಕ್ರೂ ಹಾಕಿದರೆ ತಲೆದಿಂಬಾಗುವುದು ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು.



ಕ್ರಯ 1 ಕ್ಕೆ ರೂ. 0—8—0.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ ಗಡಿಯಾರ 1 ಕ್ಕೆ ರೂ 4.8.0.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಯವಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ವೈರಂ ಅಂಡ್ ಕೊ,

3 ಇರುಳಪ್ಪನಬೀದಿ, ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

29

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,

3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 46

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ನುಭವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಳರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮೆಜಡ್ಡು, ಗುದದ್ವಾರಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ವೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೋಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು, ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,

ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಅಕ್ಟೋಬರ್ ತಾ|| ೧೭ ರಿಂದ ೧೯೨೦ ನೆಯ ಅಕ್ಟೋಬರ್ ತಾ|| ೨೩ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ನೆಯ ರೌದ್ರಿನಾಮ ಸಂವತ್ಸರದ ಆಶ್ವೀಜ ಶುದ್ಧ ಪಂಚಮಿಯಿಂದ ಆಶ್ವೀಜ ಶುದ್ಧ ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
17	¹ ಭಾನು	ಪಂಚ	9-2	ಜ್ಯೇಷ್ಠ	6-19	2
18	ಸೋಮ	ಷಷ್ಠಿ	13-57	ಮೂಲ	12-30	3
19	² ಮಂಗಳ	ಸಪ್ತ	19-19	ಪೂಷಾ	19-6	4
20	³ ಬುಧ	ಅಷ್ಟ	24-31	ಉಷಾ	25-28	5
21	⁴ ಗುರು	ನವ	29-11	ಶ್ರವ	30-29	6
22	⁵ ಶುಕ್ರ	ದಶ	33-5	ಧನಿ	36-36	7
23	ಶನಿ	ಏಕಾ	35-49	ಶತ	40-38	8

(1) ಸರಸ್ವತೀಪೂಜಾ. (2) ಕಾಳರಾತ್ರಿ, ಮಹಿಷಾಸುರಸಂಹಾರಃ. (3) ದುರ್ಗಾಷ್ಟಮಿ. (4) ಮಹಾನವಮಿ, ಆಯುಧಗಳಪೂಜಾ, ಹಯಗ್ರೀವಪೂಜಾ. (5) ವಿಜಯದಶಮಿ, ಶಮೀಪೂಜಾ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾಲಾ ಶರವಧಿಗತರಾಜಮಂಡಲಹಿತೈಷಾ | ಭಾನುಪಥಶ್ಚಕಾವಹಾ ಪತ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿತಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಅಕ್ಟೋಬರ್ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೪೩

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾವಧಿ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು,ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುವವು. ಕಾಲು. ಟಿನ್ನು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ

ವೈದ್ಯಶಾಲಾ, ಮೈಸೂರು.

40

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ ಷಡ್ವಿಧಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟಣಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಸಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿಃ	೦—೧೨—೦
ಶಿವಪೂಜಾವಿಧಿಃ	೦—೧೪—೦
ಚಾರುಶೀಲಚರಿತ್ರೆ	೦—೯—೦
ಪಂಚಾಕ್ಷರಿ	೦—೮—೦

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ,

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮನ್ನು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ ಕೈಕಲೆಸಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈಕನ್ನಡಿಯಂತೆ ಇರುವವು.

12 ಫಿಲ್ಮನ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

ಲಂಡನ್ ಲೀವರವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವೆಂಟ್ಸ್ ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ 4—8—0.

ಲೂಸ್‌ಕಿಲ್ಲರ್.

5 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ

89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ಥರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾನುಭಾವರ ಜೀವನ ಚರಿತ್ರೆಯು ಪೂರ್ಣವಾಗಿರದೆ [illegible]

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ಕ್ಕೆ	೧—೦—೦
[illegible]	,,	೦—[illegible]—೦
ಬಾಲಶಿಕ್ಷಾ	,,	೦—[illegible]—೦
[illegible]	,,	೦—[illegible]—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—[illegible]—೦

ಇತ್ಯಾದಿಗಳು. ಅಂಚೆವೆಚ್ಚ ಬೇರೆ.

ವಿಳಾಸ:—ಗುರುಲಿಂಗಸ್ವಾಮಿ, ಸಿದ್ಧಮಠ, ತಡಕಲ್ಲು, ಸ್ಟಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

47

ಐದುವರ್ಷದ ಭವಿಷ್ಯತ್ಫಲ ಸಟೀಕಸಂಗ್ರಹ.

[illegible] ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

---

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬಾಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0

ನಂ. 2 7—8—0

ಪ್ಯಾರಿಷ್ ಶಾಲ್.

5

ಚಳಿಗಾಲದಲ್ಲಿಯೂ, ಮಳೆಗಾಲದಲ್ಲಿಯೂ ಹೊದಿಯಲಿಕ್ಕೆ ಬಹು ಲಾಯಖಾದದ್ದು ಪ್ರಯಾಣಿಕರೂ, ಇತರರೂ, ಪ್ರತಿ ದಿನವೂ ಉಪಯೋಗಿಸಬಹುದು. ಬಣ್ಣ ಹೋಗದು. 5 ಮೊಳ ಉದ್ದವು, 2½ ಮೊಳ ಅಗಲವು ಇದೆ. ಕ್ರಯ ಶಾಲು 1ಕ್ಕೆ 5—0—0

ಕಂಬಳಿ ಟೋಪಿ.

ಈ ಟೋಪಿಗಳು ಸಾಚ ಉಲನ್ ದಾರದಿಂದ ತಯಾರಿಸಿದೆ ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರವಿಗೂ ಉಪಯೋಗಿಸಬಹುದು.

ಕ್ರಯ ಉಲನ್ ಟೋಪಿ 1 ಕ್ಕೆ 1—6—0

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ

89. ನಾರಾಯಣಮೊದಲಿ ಬೀದಿ ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಕ್ಕ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತು).

ಜನನೇಂದ್ರಿಯದ ಶಿಥಿಲತೆ, ನಿಬಲತೆ, ನಪುಂಸಕತ್ವ, ಕ್ಷೀಣತೆ, [illegible] ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವವು. [illegible]

ನಪುಂಸಕತ್ವಾರಿ ತೈಲವು.

35

[illegible]

ವಿಳಾಸ:—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,

ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಅಕ್ಟೋಬರ್ ತಾ|| ೨೪ನೆಯ ಭಾನುವಾರ.

ಶ್ರೀ ಜಗದ್ಗುರು ಏಕೋರಾಮ ಶಿವಾಚಾರ್ಯ ಪೀಠದ ನೂತನಪಟ್ಟಾಧಿಕಾರ.

ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಏಕೋರಾಮ ಶಿವಾಚಾರ್ಯರ ಮೂಲಪೀಠವು ಹಿಮಾಲಯಕ್ಕೆ ಸೇರಿದ ಘರ್ವಾಲ್ ಜಿಲ್ಲೆಗೆ ಸೇರಿದ ಕೇದಾರಕ್ಷೇತ್ರದಲ್ಲಿ ರುವುದು. ಶ್ರೀ ಶಂಕರಾಚಾರ್ಯರ ಕಾಲಕ್ಕಿಂತಲೂ ಇದು ಬಹು ಪುರಾತನವಾದ ಪೀಠವೆಂಬುದಕ್ಕೆ ಪ್ರಾಚೀನತಾಮ್ರ ಶಾಸನಗಳೇ ಮೊದಲಾದ ಆಧಾರಗಳು ಅನೇಕವಾಗಿರುವುವು. ಆ ಪ್ರಾಂತದ ಸಕಲ ವರ್ಣಾಶ್ರಮಗಳ ಮೇಲೂ ಶಿಕ್ಷಾರಕ್ಷೆಯನ್ನು ಮಾಡುವ ಅಧಿಕಾರವು ಈ ಪೀಠಕ್ಕೆ ಅನೂಚಾನವಾಗಿ ಬಂದಿರುವುದು. ಮತ್ತು ಸುಪ್ರಸಿದ್ಧ ಶ್ರೀ ಕೇದಾರನಾಥ ದೇವಾಲಯವೇ ಮೊದಲಾದ ಅನೇಕ ಶಿವಾಲಯಗಳ ಮೇಲಣ ಅಧಿಕಾರವೂ ಈ ಪೀಠಕ್ಕೇ ಸೇರಿರುವುದು. ನೂರಾರು ಗ್ರಾಮಗಳು ಅನೇಕ ರಾಜಾಧಿರಾಜರ ದಾನಶಾಸನಗಳ ಮೂಲಕ ಈ ಪೀಠಾಧಿಪತಿಗಳಿಗೆ ಅರ್ಪಿಸಲ್ಪಟ್ಟು ಈಗ್ಗೂ ನಡೆದುಬರುತ್ತಿರುವುವು. ಘರ್ವಾಲಿಗೆ ಸೇರಿದ ತೆಹರಿ ಸಂಸ್ಥಾನದ ಪ್ರಭುಗಳು ಈ ಪೀಠದ ಮುಖ್ಯ ಶಿಷ್ಯರು. ಈಗಣ ಆಂಗ್ಲಪ್ರಭುತ್ವದವರೂ ಯಥಾಪೂರ್ವವಾಗಿ ಈ ಮಠಾಧಿಪತಿಗಳನ್ನು ಗೌರವಿಸಿಕೊಂಡು ಬರುತ್ತಿರುವರು. ಅನಾದಿಯಾಗಿ ವೀರಶೈವ ಜಂಗಮರ ಅಧಿಕಾರಕ್ಕೆ ಸೇರಿದ ಈ ಪೀಠವು ವೀರಶೈವ ಜನವಸತಿಯು ಹೆಚ್ಚಾಗಿಲ್ಲದಿರುವ ಬಹು ದೂರಪ್ರಾಂತದಲ್ಲಿ ಅತ್ಯಂತ ಶೀತಪ್ರದೇಶದಲ್ಲಿ ರುವುದರಿಂದ, ಈ ದಕ್ಷಿಣ ದೇಶದಿಂದ ಅಲ್ಲಿಗೆ ಹೋಗಿ ಅಧಿಕಾರನಿರ್ವಾಹವನ್ನು ಮಾಡಿಕೊಂಡು ಹೋಗತಕ್ಕವರು ವಿರಳರಾದಕಾರಣ, ಒಬ್ಬೊಬ್ಬರು ಹೋಗಿ ಅಲ್ಲಿ ವಾಸಮಾಡುವರು. ಆ ಸುತ್ತಿನಲ್ಲಿ ಪ್ರಬಲರಾಗಿರುವ ಕೆಲ ಪರಮತಸ್ಥರು ಈ ಪೀಠವನ್ನಾಕ್ರಮಿಸಲು ಅನಂತ ಸಾಹಸವನ್ನು ಮಾಡುತ್ತಲಿರುವರು. ಆದರೆ ಹಿಂದೆ ಇದ್ದ ಶ್ರೀ ವಿಶ್ವಲಿಂಗ ಶಿವಾಚಾರ್ಯರೂ ಅವರ ಗುರುಗಳೂ ಸಹ ಪರರ ಸಾಹಸಗಳನ್ನು ನಡೆಯಗೊಡದೆ, ನ್ಯಾಯಸ್ಥಾನಗಳಲ್ಲೂ ಬಹು ದೂರದವರೆಗೆ ವ್ಯವಹರಿಸಿ, ಇದರ ಮೇಲಣ ವೀರಶೈವಾಧಿಪತ್ಯವನ್ನು ಸುಪ್ರತಿಷ್ಠೆಗೊಳಿಸಿದರು. ಬೀರೂರಿನ ಮಹಾಸಭೆಗೆ ದಯಮಾಡಿಸಿದ್ದ ಈ ಪೀಠಾಧಿಪತಿಗಳಾದ ಶ್ರೀ ವಿಶ್ವಲಿಂಗಶಿವಾಚಾರ್ಯ ಸ್ವಾಮಿಗಳು ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದು ಕಳೆದ ಆಷಾಢ ಶುದ್ಧ ೩೦ ಯಲ್ಲಿ ಶಿವಸಾಯುಜ್ಯವನ್ನೈದಿದರೆಂಬ ವಿಷಯವನ್ನು ಹಿಂದೆಯೇ ತಿಳಿಸಿದ್ದೆವಷ್ಟೆ. ಅದರಿಂದೀಚೆಗೆ ಇದೇ ಸಂಧಿಯನ್ನು ಸಾಧಿಸಿ ಈ ಮಠದಮೇಲೆ ಕಣ್ಣಿಟ್ಟಿದ್ದ ಪರರು ಇದರ ಆಧಿಪತ್ಯವನ್ನು ಅಪಹರಿಸಿಕೊಳ್ಳಲು ವಿಶ್ವಪ್ರಯತ್ನಗಳನ್ನು ಮಾಡಿ, ಅಲ್ಲಿಯ ಆಂಗ್ಲ ಪ್ರಭುತ್ವಾಧಿಕಾರಿಗಳನ್ನು ಕೂಡ ಅನುಮತಿಗೊಳಿಸಿಕೊಳ್ಳುವ ಸ್ಥಿತಿಗೆ ತಂದುಕೊಂಡಿದ್ದರೂ ಈ ಸಂಗತಿಯು ವೀರಶೈವ ಮಂಡಲಕ್ಕೆ ತಿಳಿದಿತು. ಉದಾಸೀನವಾಗಿದ್ದರೆ ತುಂಬಾ ಅನರ್ಥವಾಗುತ್ತಿದ್ದಿತು. ಬಹು ಪ್ರಾಚೀನವಾದ ಈ ಪೀಠದ ಆಧಿಪತ್ಯವು ವೀರಶೈವರ ಕೈಯಿಂದಲೇ ಕಳೆದು ಹೋಗುತ್ತಿದ್ದಿತು. ಅಷ್ಟರಲ್ಲಿ ದೇಶಮಧ್ಯದ ಅನೇಕ ಮುಖ್ಯಸ್ಥಲಗಳಿಂದ ಅಲ್ಲಿಯ ಕಮಿಷನರೇ ಮೊದಲಾದವರ ಕಡೆಗೆ ವಿಜ್ಞಾಪನೆಗಳು ಕಳುಹಿಸಲ್ಪಟ್ಟವು. ಮುಖ್ಯವಾಗಿ ನಮ್ಮ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಆ ಪೀಠದ ಪೂರ್ವಚರಿತ್ರೆಯನ್ನೂ ವೀರಶೈವ ಸಮಾಜಕ್ಕೆಲ್ಲಾ ಅದು ಸಂಬಂಧಪಟ್ಟಿರುವುದನ್ನೂ, ಅದರ ಆಧಿಪತ್ಯವು ಈ ಸಮಾಜದ ಒಪ್ಪಿಗೆಯಿಲ್ಲದವರಿಗೆ ಎಂದಿಗೂ ಆಗಕೂಡದಾಗಿರತಕ್ಕುದನ್ನೂ ಮೊನ್ನೆ ತಾನೇ ಶಿವೈಕ್ಯರಾದ ಶ್ರೀ ವಿಶ್ವಲಿಂಗಶಿವಾಚಾರ್ಯರು ನಿರ್ದೇಶಮಾಡಿ ತಮ್ಮ ಬಳಿಯಲ್ಲಿಟ್ಟುಕೊಂಡಿದ್ದ ಶ್ರೀ ನೀಲಕಂಠಲಿಂಗಸ್ವಾಮಿಯೆಂಬುವರಿಗೇ ಉತ್ತರಾಧಿಕಾರವಾಗಬೇಕಾದುದು ವಿಧಿ ಸಂಮತವೂ ಸಮಾಜಕ್ಕೆ ಅನುಮತವೂ ಆಗಿರುವುದೆಂಬುದನ್ನೂ ಕುರಿತು ತಕ್ಕ ಆಧಾರಗಳನ್ನು ಕಾಣಿಸಿ ಬಲವಾದ ಲೇಖನವನ್ನು ಅಲ್ಲಿಯ ಚೀಫ್ ಕಮಿಷನರೇ ಮೊದಲಾದ ಅಧಿಕಾರಿಗಳಿಗೂ ಸಂಯುಕ್ತಾಧಿಪತ್ಯದ ಧರ್ಮರಕ್ಷಣ ಸಭೆಯವರಿಗೂ ಬರೆದುದರ ಮೇಲೆ ಅವರುಗಳು ಇದಕ್ಕೆ ಸಂಪೂರ್ಣವಾಗಿ ಗಮನಕೊಟ್ಟರು. ಅದರ ಮೇಲೆ ಪರಮತದವರ ಕಪಟಯತ್ನಗಳೆಲ್ಲಾ ಹಾಳಾದುವೆಂದೂ, ಸರ್ಕಾರದವರೂ ತೆಹರಿ ರಾಜರೂ ಮತ್ತು ಆಪ್ರಾಂತದ ಮುಖ್ಯಸ್ಥಲಗಳವರು ಸಹ ಈ ನೀಲಕಂಠಲಿಂಗಸ್ವಾಮಿಗಳಿಗೆ ಅಧಿಕಾರವಾಗುವುದಕ್ಕೇ ಸಂಮತಿಸಿದುದರಿಂದ ಇವರಿಗೇ ಯಥಾವಿಧಿಯಾಗಿ ಪೀಠಾಧಿಪತ್ಯ ಪಟ್ಟವು ಕಟ್ಟಲ್ಪಟ್ಟಿತೆಂದೂ ಈಗತಾನೇ ನಮಗೆ ತಿಳಿದುಬಂದ ಸಂತೋಷವಾರ್ತೆಯನ್ನು ಈ ಮೂಲಕ ತಿಳಿಯಿಸುತ್ತೇವೆ.

ತಕ್ಕ ಎಚ್ಚರಿಕೆಯೂ ಪ್ರಾಬಲ್ಯವೂ ನಮ್ಮ ಮತದಲ್ಲಿ ಈಚೆಗೆ ಕಡಿಮೆಯಾಯಿತು. ಪರಮತಾಸಹನೆಯುಳ್ಳ ಇತರ ಮತಸ್ಥರು ತಮ್ಮ ಈಗಣ ಪ್ರಾಬಲ್ಯದಿಂದ ವೀರಶೈವರ ಗೌರವಪ್ರತಿಷ್ಠಾಪನೆಗಳನ್ನು ಕಸುಗೊಳ್ಳಲಿಕ್ಕೂ ನಿರ್ನಾಮ ಮಾಡುವುದಕ್ಕೂ ಹವಣಿಸಿಕೊಂಡು ಅವಕಾಶ ಸಿಕ್ಕದಾಗಲೆಲ್ಲಾ ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುತ್ತಿರುವರು. ಶ್ರೀಶೈಲದಲ್ಲಿದ್ದ ವೀರಶೈವರ ಶ್ರೀ ಜಗದ್ಗುರು ಪೀಠಕ್ಕೆ ಪ್ರಾಚೀನಕಾಲದಿಂದ ನಡೆದುಬಂದಿದ್ದ ಎಷ್ಟೋ ಅಧಿಕಾರಗಳು ಈಗ ಅದ್ವೈತ ಮತಾಚಾರ್ಯಪೀಠಾಧಿಪತಿಗಳ ಹಸ್ತಗತವಾಗಿ ಹೋಗಿವೆ. ಶಿವಗಂಗೆ ಮೊದಲಾದ ಅನೇಕಸ್ಥಲಗಳಲ್ಲಿದ್ದ ನಮ್ಮ ಪ್ರಾಚೀನಾಧಿಕಾರಗಳನೇಕವನ್ನು ಮೂಲೆಗೊತ್ತರಿಸುವ ಪ್ರಯತ್ನಗಳಿಗೆ ಪರಮತದ ಸರ್ಕಾರಿ ಅಧಿಕಾರಿಗಳೇ ಸಹಾಯಮಾಡುತ್ತಿದ್ದಾರೆ. ಮಂಗಳೂರು ಪ್ರಾಂತ ಮೊದಲಾದ ಹಲವು ಕಡೆಗಳಲ್ಲಿ ಪ್ರಬಲವಾಗಿದ್ದ ಅನೇಕ ದೊಡ್ಡ ದೊಡ್ಡ ಮಠಗಳೂ ಲಕ್ಷಾಂತರ ರೂ. ಬಾಳುವ ಅವುಗಳ ಇನಾಮತಿಗಳೂ ಸಹ ಸಿಕ್ಕಿಸಿಕ್ಕಿದವರ ಪಾಲಾಗಿವೆಯೆಂದು ಕೇಳುತ್ತೇವೆ. ಹೀಗೆ ಅನಾಯಕವಾಗಿ ಅನ್ಯಾಕ್ರಾಂತವಾಗಿ ಹೋಗುತ್ತಿರುವ ಆಸ್ತಿಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡರೆ ಅದರಿಂದ ಮಠದ ವಿದ್ಯಾಭಿವೃದ್ಧಿ ಧರ್ಮಾಭಿವೃದ್ಧಿಯ ಕಾರ್ಯಗಳಿಗೆ ಶಾಶ್ವತಸಹಾಯಕನಿಧಿಯನ್ನು ಸಂಪಾದಿಸಿಟ್ಟಂತಾಗುವುದು. ಮಹಾಸಭೆಯವರು ಇದಕ್ಕಾಗಿ ಯೋಗ್ಯಜನರ ಕಮಿಟಿಯೊಂದನ್ನೇರ್ಪಡಿಸಿ, ಆದಕ್ಕೆ ಸಮಾಜದ ಪ್ರಾತಿನಿಧ್ಯಾಧಿಕಾರವನ್ನು ಸರ್ವಮೂಲಪೀಠಾಧಿಪತಿಗಳ ಒಪ್ಪಿಗೆಯ ಮೇಲೆ ಕೊಟ್ಟು ಎಲ್ಲ ಪ್ರಾಂತಗಳ ಮೇಲೂ ಕಳುಹಿಸಿ ವಿಚಾರ ಮಾಡಿಸಿ, ಅನ್ಯಾಕ್ರಾಂತವಾಗಿರುವುವುಗಳನ್ನು ಪರರಿಂದ ಬಿಡಿಸಿ ವಶಪಡಿಸಿಕೊಳ್ಳುವ ಕಾರ್ಯವನ್ನು ಮಾಡಿಸುವುದು ಅವಶ್ಯಕವಾಗಿರುತ್ತದೆ. ಸಮಾಜದ ಸುಜ್ಞ ಜನರು ಇತ್ತಕಡೆಗೆ ಅವಶ್ಯಕವಾಗಿ ಗಮನಿಸುವರೆಂದು ನಂಬುತ್ತೇವೆ. ಸದ್ಯದಲ್ಲಿ ನಮ್ಮ ದಿ|| ಬ|| ಪುಟ್ಟಣ್ಣಶೆಟ್ಟರು ಈ ಏಕೋರಾಮ ಪೀಠದ ವಿಷಯದಲ್ಲಿ ನಡೆಯಿಸಿದ ಪ್ರಯತ್ನವು ಕೀರ್ತಿಪ್ರದವಾದುದಕ್ಕಾಗಿ ನಾವು ಸಂತೋಷಿಸಿ ಸಮಾಜದ ಪಕ್ಷದಿಂದ ಅವರನ್ನು ಈ ಮೂಲಕ ಅಭಿನಂದಿಸುತ್ತೇವೆ. ಸಮಾಜದ ಮುಖಂಡರು ತಕ್ಕ ಸಮಯದಲ್ಲಿ ಇಂಥ ಕರ್ತೃತ್ವಶಕ್ತಿಯನ್ನು ವ್ಯಕ್ತಪಡಿಸುವುದೇ ಅವರ ಪ್ರಮುಖತ್ವದ ಸಾರ್ಥಕತೆಯೆನಿಸಿಕೊಳ್ಳುತ್ತದೆ. ಇದೇ ಪೀಠಕ್ಕೆ ೭೫ ಸಹಸ್ರ ರೂ. ಗಳವರೆಗೆ ಸಾಲವಿರುವುದೆಂಬುದು ಸಮಾಜಬಾಂಧವರಿಗೆ ಗೊತ್ತಾದ ಸಂಗತಿಯೇ ಆಗಿರುತ್ತದೆ. ಹಿಂದಣ ಶಿವೈಕ್ಯಸ್ವಾಮಿಗಳು ಬಳ್ಳಾರಿ ಪ್ರಾಂತದಲ್ಲಿ ಅದಕ್ಕಾಗಿ ಕೆಲಹಣವನ್ನು ಶೇಖರಿಸಿದ್ದರೆಂದು ಕೇಳಿದ್ದೆವು. ಈಗಣ ನೂತನ ಸ್ವಾಮಿಗಳು ಕುಶಲರೂ ಅಭಿಮಾನಶಾಲಿಗಳೂ, ಮತ್ತು ಕನ್ನಡನಾಡಿನಲ್ಲಿ ಹುಟ್ಟಿ ಬೆಳೆದವರಾದುದರಿಂದ ಈ ಸುತ್ತಿನ ಜನರಲ್ಲಿ ಪಳಗಿದವರೂ ಆಗಿರುವ ಕಾರಣ, ತಕ್ಕ ಪ್ರಯತ್ನವನ್ನು ಮಾಡಿ ದೇಶದಲ್ಲಿ ಸಂಚರಿಸಿ, ಉಳಿದ ಹಣವನ್ನು ಶಿಷ್ಯಾರ್ಜನೆಯ ಮೂಲಕ ಕೂಡಿಸಿ, ಋಣಬಾಧೆಯನ್ನು ಪರಿಹರಿಸಿ ಮಠೋದ್ಧಾರ ಮಾಡಿದ ಕೀರ್ತಿಯನ್ನೂ ಸಮಾಜದಲ್ಲಿ ಸುಪ್ರತಿಷ್ಠೆಯನ್ನೂ ಸಂಪಾದಿಸಿಕೊಳ್ಳುವವರಾಗಲೆಂದೂ, ಅವರ ಅಧಿಕಾರವು ಸ್ವತಃ ಪೀಠಕ್ಕೂ ಮಠಕ್ಕೂ ಹಿತಕರವಾಗಿ ಪರಿಣಮಿಸಲೆಂದೂ ಕೋರುವೆವು.

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು, ತುಮಕೂರು.

ಈ ಮಹಾಸ್ವಾಮಿಗಳ ಸ್ವಾರಿಯು ಈಗ ತುಮಕೂರಿನಲ್ಲಿದೆ. ಆ ಪುರನಿವಾಸಿಗಳಾದ ವೀರಶೈವರು ಶ್ರೀ ಜಗದ್ಗುರುಗಳವರನ್ನು ತಮ್ಮ ಸ್ಥಲಕ್ಕೆ ಬಿಜಮಾಡಿಸಿಕೊಳ್ಳಲಿಕ್ಕಾಗಿ ಮಾಡಿದ್ದ ಪುರಾಲಂಕಾರಾದಿ ವೈಭವಗಳೂ ಸತ್ಕರಣದ ಏರ್ಪಾಡುಗಳೂ ಬಹು ಶ್ಲಾಘನೀಯವಾಗಿದ್ದುವೆಂದು ಕೇಳುತ್ತೇವೆ. ಕೋಟೆಯಲ್ಲಿ ಒಂದು ದಿನವೂ ಪೇಟೆ ಮೊದಲಾದ ಕಡೆಗಳಲ್ಲಿ ಒಂದು ದಿನವೂ ಮಹಾ ವೈಭವದಿಂದ ಶ್ರೀಗಳವರ ಪಲ್ಲಕ್ಕಿಯುತ್ಸವವು ಸಕಲ ಬಿರುದಾವಳಿಗಳ ಸಮೇತ ನಡೆಯಿತೆಂದೂ ಸುತ್ತುಮುತ್ತಣ ಪ್ರಾಂತಗಳಿಂದ ಅನೇಕ ಸಹಸ್ರ ಜನರು ನೆರೆದಿದ್ದರೆಂದೂ ಬಂದವರೆಲ್ಲರಿಗೂ ಮೃಷ್ಟಾನ್ನಭೋಜನಗಳಿಗೆ ಸ್ಥಲಿಕ ವೀರಶೈವರು ಏರ್ಪಾಟು ಮಾಡಿದ್ದರೆಂದೂ, ಸ್ಥಲಾಧಿಕಾರಿಗಳು ಪೋಲೀಸು ಏರ್ಪಾಡು ಮೊದಲಾದುವುಗಳನ್ನು ಸಮರ್ಪಕವಾಗಿಟ್ಟು ಯಾವುದೊಂದು ಗದ್ದಲಕ್ಕೂ ಅವಕಾಶವಿಲ್ಲದಂತೆ ಮಾಡಿದ್ದರೆಂದೂ ಕೇಳಿದೆವು. ಶ್ರೀಗಳವರು ಒಂದು ದಿನ ಈಶ್ವರಸಿದ್ಧಿ ಎಂಬ ವಿಷಯವಾಗಿಯೂ ಮತ್ತೊಂದು ದಿನ ಭಕ್ತಿಯೋಗ ವಿಷಯವಾಗಿಯೂ, ಪ್ರೌಢವಾಗಿಯೂ ಚಿತ್ತಾಕರ್ಷಕವಾಗಿಯೂ ಇದ್ದ ಉಪನ್ಯಾಸಗಳನ್ನು ಮಾಡಿ, ಸಭಿಕರಲ್ಲಿ ಆಸ್ತಿಕ್ಯ ಭಕ್ತಿ ಮೊದಲಾದುವುಗಳ ಅಭಿವೃದ್ಧಿಯುಂಟಾಗುವಂತೆ ಮಾಡಿದರೆಂದೂ, ಸಭೆಗೆ ಡಿಸ್ಟ್ರಿಕ್ಟ್ ಡಿ|| ಕಮಿಷನರೇ ಮೊದಲಾದ ಸಕಲಾಧಿಕಾರಿಗಳೂ ಎಲ್ಲ ಮತಗಳ ಪ್ರಮುಖರೂ ಬಂದಿದ್ದರೆಂದೂ, ಉಪನ್ಯಾಸಶ್ರವಣ ಮಾಡಿ ಸರ್ವರೂ ಪರಮಾನಂದಗೊಂಡರೆಂದೂ, ಆದರೆ ಶ್ರವಣಕ್ಕಾಗಿ ಸಭಾಮಂಟಪಕ್ಕೆ ಬಂದಿದ್ದ ಒಬ್ಬ ಪ್ರಾಣಿಗೆ ಮಾತ್ರ, ಮಹಾ ತೇಜಸ್ಸು ದೊಡ್ಡ ಪ್ರವಾಹ ಉಚ್ಚಧ್ವನಿ ಇವುಗಳ ದರ್ಶನ ಶ್ರವಣಗಳು ಅಕಸ್ಮಾತ್ ಉಂಟಾದರೆ ಕರಳಿಸಿ ಬೀಳಿಸುವ ಅಪಸ್ಮಾರ ರೋಗದಂಥ ಒಂದು ಪ್ರಬಲ ರೋಗದಿಂದಲೋ ಏನೋ ಕೈಕಾಲು ಸೆಳೆದುಕೊ[illegible] ಪ್ರತ್ಯುತ್ಥಾನಕ್ಕೂ ಅವಕಾಶವಿಲ್ಲದಂತೆ ಮಾಡಿದುದರಿಂದ [illegible] ಸ್ಥಿತಿಯು ಪರಿತಾಪಕರವಾಗಿದ್ದಿತೆಂದೂ ಸ್ಥಲದ ಲೇಖ[illegible] ವರದಿಯಿಂದ ಗೊತ್ತಾಗುತ್ತದೆ.

ಆ ಪಟ್ಟಣದಲ್ಲಿ ಶ್ರೀ ಜಯದೇವ ವೀರಶೈವ ವಿದ್ಯಾಸದನವನ್ನು ಕಟ್ಟಲಿಕ್ಕೆ ಸ್ಥಲಿಕರು ಪ್ರಯತ್ನಪಟ್ಟಿರುವ ವಿಷಯವನ್ನು ನಾವು ಹಿಂದೆಯೇ ತಿಳಿಯಿಸಿದ್ದೆವಷ್ಟೆ. ತತ್ಸಂಬಂಧವಾದ ಲಕ್ಷ್ಯವನ್ನಿಟ್ಟುಕೊಂಡು ಅಲ್ಲಿಯ ವೀರಶೈವರಲ್ಲಿ ಕೋಟೆಯವರು ಶ್ರೀಗಳವರಿಗೆ ೧೦ ಸಾವಿರದ ವರೆಗೂ, ಪೇಟೆಯವರು ೧೦ ಸಾವಿರದ ವರೆಗೂ ಒಟ್ಟು ೨೦ ಸಹಸ್ರ ರೂಪಾಯಿಗಳ ಭಿಕ್ಷೆಯನ್ನು ಸಮರ್ಪಿಸಿರುವರೆಂಬುದನ್ನು ಕೇಳಿ ನಾವು ಪರಮ ಹರ್ಷಗೊಂಡೆವು. ಈ ಸಂದರ್ಭದಲ್ಲಿ ಆ ಸ್ಥಲದ ವೀರಶೈವರು ತೋರಿಸಿದ ಔದಾರ್ಯವು ಅಭೂತಪೂರ್ವವಾದುದೂ, ಶಕ್ತಿವಂಚನೆಯಿಲ್ಲದುದೂ ಆಗಿದೆಯೆಂದು ನಾವು ಹೇಳದೆ ಇರಲಾರೆವು. ಮತಾಭಿಮಾನ, ವಿದ್ಯಾಭಿಮಾನ, ಧಾರ್ಮಿಕ ಕೃತ್ಯ-ಇವುಗಳಲ್ಲಿ ತುಮಕೂರಿನ ಮಹಾಜನರು ಇತ್ತೀಚೆಗೆ ಪ್ರದರ್ಶಿಸುತ್ತಿರುವ ಶ್ರದ್ಧೆಯು ಸಮಾಜಬಾಂಧವರೆಲ್ಲರಿಗೂ ಮಾರ್ಗದರ್ಶಕವೆಂಬಂತೆ ಪರಿಣಮಿಸುತ್ತಿದೆ. ಅವರ ಈ ಸಾದ್ಗುಣ್ಯವೇ ಅವರ ಉತ್ತರೋತ್ತರ ವೃದ್ಧಿಗೆ ಬೀಜವಾಗಿರುವುದು. ಅಶಾಶ್ವತವಾದ ದ್ರವ್ಯವನ್ನು ಸತ್ಪಾತ್ರಕ್ಷೇತ್ರದಲ್ಲಿ ಸಮಯವರಿತು ಬಿತ್ತಿ ಶಾಶ್ವತ ಕೀರ್ತಿಪುಣ್ಯಗಳೆಂಬ ಅಮೋಘ ಫಲಗಳನ್ನು ಪಡೆದುಕೊಳ್ಳುವ ಉಪಾಯವು ಸುಕೃತಾತ್ಮರಿಗೆ ಮಾತ್ರ ಗೋಚರಿಸುವುದು. ತುಮಕೂರು ಪುರನಿವಾಸಿಗಳ ಮೇಲುಪಂಕ್ತಿಯನ್ನು ಆ ಡಿಸ್ಟ್ರಿಕ್ಟಿನ ತಾಲ್ಲೂಕು ನಿವಾಸಿಗಳೂ ಅನುಸರಿಸಿ, ಈ ಸಮಯದಲ್ಲಿ ಉದಾರವಾದ ಭಿಕ್ಷೆಯನ್ನು ಶ್ರೀಗಳಿಗೆ ನಡೆಯಿಸಿಕೊಟ್ಟು ತಮಗೆಲ್ಲಾ ಶಾಶ್ವತ ಪ್ರಯೋಜನಕಾರಿಯಾದ ವಿದ್ಯಾರ್ಥಿಸದನದ ಪ್ರತಿಷ್ಠಾಪನ ಕಾರ್ಯವು ಬೇಗನೆ ಫಲೋನ್ಮುಖವಾಗುವಂತೆ ಮಾಡಿಕೊಳ್ಳದಿರಲಾರರೆಂದು ನಂಬುತ್ತೇವೆ.

ನವರಾತ್ರಿ ಮಹೋತ್ಸವಗಳು.

ಕಳೆದ ವಾರವೆಲ್ಲಾ ಪ್ರತಿದಿನವೂ ನಿತ್ಯಗಟ್ಟಲೆ ಬಂಡಿಗಳಲ್ಲದೆ ೩-೪ ವೇಳೆಗಳಲ್ಲಿ ಸ್ಪೆಷಲ್ ಟ್ರೇನುಗಳೂ ನಾನಾ ದಿಕ್ಕಿನ ಜನರನ್ನು ರಾಜಧಾನಿಗೆ ತಂದು ಸೇರಿಸಿದುವು. ಲೋಹಮಾರ್ಗಗಳ ಮೂಲಕವೇ ಅಲ್ಲದೆ ಬಂಡಿಗಳ ಮೂಲಕವಾಗಿಯೂ ಅನೇಕ ಸಹಸ್ರ ಜನರು ಬಂದುಸೇರಿರುವರು. ಮೈಸೂರು ದೇಶದ ಎಲ್ಲ ಡಿಸ್ಟ್ರಿಕ್ಟುಗಳಿಂದಲೇ ಅಲ್ಲದೆ ಮದ್ರಾಸು ಪ್ರಾಂತ ಹೈದರಾಬಾದು ಬೆಳಗಾಂ ಧಾರವಾಡ ನೀಲಗಿರಿ ಮೊದಲಾದ ದೂರ ಪ್ರಾಂತಗಳಿಂದಲೂ ಅನೇಕ ಜನರು ಬಂದು ಸೇರಿರುವರು. ಪಟ್ಟಣದಲ್ಲಿ ಹಳೆಯ ಮನೆಗಳನೇಕವು ಒಡೆಯಲ್ಪಟ್ಟು ಎಲ್ಲೆಲ್ಲೂ ಬಯಲೇ ಹೆಚ್ಚಾಗಿರುವುದರಿಂದ ಅಪರಿಮಿತವಾಗಿ ಬಂದಿರುವ ಈ ಪರಿಸೆಗೆ ಹಾದಿಬೀದಿಗಳೂ ಉದ್ಯಾನಗಳೂ ಮರಗಳೂ ಕೆರೆಯೇರಿಗಳೂ ಬಿಡಾರಗಳಾಗಿ ಪರಿಣಮಿಸಿರುವುವು. ಸದ್ಯಃ ಕಳೆದ ವಾರವೆಲ್ಲಾ ಮಳೆಯಿಲ್ಲದಿದ್ದುದು ಈ ಜನರ ಸುದೈವವು. ರಾತ್ರಿಯ ಹೊತ್ತು ನಲ್ಲಿಗಳಲ್ಲಿ ನೀರಿಲ್ಲದಂತೆ ಇಂಥ ಸಮಯದಲ್ಲೇ ಮಾಡಿಟ್ಟಿರುವ ವಾಟರ್‌ಸಪ್ಲೈ ಶಾಖೆಯವರ ಕೌಶಲವನ್ನೂ ಎಚ್ಚರಿಕೆಯನ್ನೂ ಎಷ್ಟು ಹೊಗಳಿದರೂ ಸ್ವಲ್ಪವೇ. ಇದೇ ಸಮಯದಲ್ಲಿ ಸುತ್ತುಮುತ್ತಣ ತಾಲ್ಲೂಕುಗಳಲ್ಲಿ ಪ್ಲೇಗು ವ್ಯಾಪಿಸಿರುವುದರಿಂದ ಅವುಗಳಲ್ಲಿಯ ಅನೇಕಾನೇಕ ರೋಗಗ್ರಸ್ತರೂ ಇತರರೂ ಸಹ ರಾಜಧಾನಿಗೆ ಬಂದು ತುಂಬಿರುವರು. ಆದರೂ ಇಲ್ಲಿ ರೋಗದ ಉಲ್ಬಣವೇನೂ ಕಾಣಿಸಿಕೊಳ್ಳದಿದ್ದುದು ಈಶ್ವರ ಕೃಪೆ. ಹೊಟೇಲು ಮೊದಲಾದ ತಿಂಡಿಯಂಗಡಿಗಳಿಗೆ ಒಳ್ಳೆಯ ಸುಗ್ಗಿಯಾಗಿರುವುದು. ೩-೪ ನಾಟಕ ಸಂಘಗಳೂ ಲೇಡಿ ಸರ್ಕಸ್ಸಿನವರೂ ಪ್ರೇಕ್ಷಕರನ್ನು ಆನಂದಪಡಿಸಿ ಬೊಕ್ಕಸಗಳನ್ನು ತುಂಬುತ್ತಿರುವರು. ದಸರಾಫೇರ್ ಎಂಬ ಸಂತೆಯೂ ಅಲ್ಲಿನ ವಿನೋದಗಳೂ ಸಂಗೀತ ಶ್ರವಣಾದಿಗಳೂ ನಡೆಯುತ್ತಿರುವುವು. ಎಲ್ಲಕ್ಕೂ ಮಿಗಿಲಾಗಿ ನೂತನವಾದ ವಿಮಾನೋಡ್ಡಾಣದ ನೋಟವು ಪ್ರೇಕ್ಷಕರನ್ನು ಆನಂದಪಡಿಸುತ್ತಿರುವುದು. ಅರಮನೆಯ ಮೇಲೂ ಕೋಟೆಯ ಬಾಗಿಲುಗಳ ಒಳಗೂ ಹೊರಗೂ ಕಲ್ಯಾಣಿ ಮೈದಾನಮೊದಲಾದ ಕಡೆಗಳಲ್ಲೂ ಪ್ರತಿದಿನವೂ ಲಕ್ಷದೀಪೋತ್ಸವವೆಂಬುದನ್ನು ಇಲ್ಲಿ ಮಾತ್ರ ಪ್ರತ್ಯಕ್ಷಗೊಳಿಸುವಂತಿರುವ ವಿದ್ಯುದ್ದೀಪಾಲಂಕಾರವು ಪರಸ್ಥಲಿಕರಿಗೆಲ್ಲಾ ಅಭೂತಪೂರ್ವವಾದ ನೋಟವಾಗಿರುವುದು. ಅರಮನೆಯ ಮುಂದೆ ದರ್ಬಾರಿನ ನೋಟವು ಸರ್ವರಿಗೂ ಸುಕರವಾಗಿರುವಂತೆ ಏರ್ಪಾಟು ಮಾಡಲ್ಪಟ್ಟಿದ್ದಿತು. ಅಲ್ಲಿ ನಡೆಯುವ ಮಲ್ಲಗಾಳಗಗಳು ಅಂಗಸಾಧನಗಳು ಸೇನಾ ಚಮತ್ಕಾರಗಳು ಇತ್ಯಾದಿಗಳೆಲ್ಲಾ ಸಕಲ ಜನರಿಗೂ ಕಾಣುವಂತಿರಬೇಕೆಂಬ ಉದ್ದೇಶದಿಂದ ಆನೆ ಕುದುರೆಗಳೊಂದೂ ಅರಮನೆಯ ಮುಂಗಡೆಯಲ್ಲಿ ಜನರಿಗೆ ಅಡ್ಡಲಾಗಿ ನಿಲ್ಲದಂತೆ ಮಾಡಲ್ಪಟ್ಟಿದ್ದಿತು. ಸೈನಿಕರೆಲ್ಲಾ ತಂತಮ್ಮ ವಾಹನಗಳನ್ನು ಬಿಟ್ಟು ಪಾದಚಾರಿಗಳಾಗಿಯೇ ಬಂದು ನಿಲ್ಲುವಂತೆ ಏರ್ಪಡಿಸಲ್ಪಟ್ಟಿದ್ದಿತು. ವಿವಿಧವಾದ ವಾದ್ಯವೈಭವಗಳ ಸೊಂಪನ್ನೂ, ಪರಿಪರಿಯ ಚಿತ್ರವಸ್ತ್ರಾಕಾರಗಳಿಂದ ವಿಭೂಷಿತವಾದ ಸೇನಾನಿವಹಗಳನ್ನು ನೋಡಿ ಗ್ರಾಮಾಂತರದ ಜನರು ಪಡುತ್ತಿದ್ದ ಆನಂದಕ್ಕೂ ಆಡಿಕೊಳ್ಳುತ್ತಿದ್ದ ಸಂತೋಷೋದ್ಗಾರಗಳಿಗೂ ಕುಳಿತಾಗ ಮಲಗಿದಾಗಲೆಲ್ಲಾ ಮಾಡಿಕೊಳ್ಳುತ್ತಿದ್ದ ವರ್ಣನೆಗೂ ಮಿತಿಯಿರಲಿಲ್ಲ. ಪರಸ್ಥಲದಿಂದ ಬಂದ ಜನರಲ್ಲಿ ಬಹು ಭಾಗದವರು ನಂಜನಗೂಡು, ಕೃಷ್ಣರಾಜಸಾಗರ ಚಾಮುಂಡೀಬೆಟ್ಟ ಮೊದಲಾದ ಸ್ಥಲಗಳಿಗೆ ಹೋಗಿ ನೋಡಿಕೊಂಡು ಬಂದರು.

ವಿಜಯದಶಮಿಯುತ್ಸವವು.

ಕಳೆದ ಶುಕ್ರವಾರದ ದಿನ ಈ ಮಹೋತ್ಸವವು ಬಹಳ ವೈಭವದಿಂದ ನಡೆದಿತು. ಅರಮನೆಯಿಂದ ಬನ್ನಿಮಂಟಪದವರೆಗೂ ಬೀದಿಯು ಬಹು ಚೆನ್ನಾಗಿ ಶೃಂಗರಿಸಲ್ಪಟ್ಟಿದ್ದಿತು. ಮಧ್ಯಾಹ್ನ ೧೨ ಗಂಟೆಯಿಂದಲೂ ಊರಿನ ಎಲ್ಲ ಪೇಟೆಯ ಜನರೂ ಪರಸ್ಥಲಗಳ ಬಹುಶಃ ೩೫ ಸಹಸ್ರ ಜನರೂ ದೊಡ್ಡಪೇಟೆಯ ಮಾರ್ಗದ ಇಕ್ಕೆಲದ ಅಂಗಡಿಗಳು ಮಾಡಗಳು ಮೊದಲಾದುವುಗಳಲ್ಲೆಲ್ಲಾ ಸ್ಥಲವನ್ನಾಕ್ರಮಿಸಿಕೊಳ್ಳುತಿದ್ದರು. ಸಕಲ ವಸ್ತ್ರಾಭರಣಾಲಂಕೃತರಾದ ಶ್ರೀಮನ್ಮಹಾರಾಜರು ಭಂಗಾರದ ಅಂಬಾರಿಯ ಮೇಲೆ ಕುಳಿತು ೪ ಗಂಟೆಗೇ ಹೊರಟರು. ಹಿಂದೆಯೂ ಮುಂದೆಯೂ ನಡೆಗೊಂಡ ಚತುರಂಗ ಸೈನ್ಯದ ಸಂಮಿತಿಯು ಈಸಲ ಬಹಳ ಹೆಚ್ಚಾಗಿದ್ದಿತು. ಅಶ್ವಸೈನ್ಯವೇ ಸಾವಿರದ ಮೇಲಿದ್ದಿತು. ಕಾಲ್ಬಲವೂ ೬೦೦ ರ ಮೇಲ್ಪಟ್ಟಿರಬಹುದು. ೭-೮ ತೆರದ ವಾದ್ಯಗಳು ಆನೆಯ ಒಂಟೆಯ ಬಂಡಿಗಳು, ಸೈನಿಕರ ಚಿತ್ರವಿಚಿತ್ರವಾದ ಉಡುಪುಗಳು ಸ್ವಾರಿಯ ಮುಂಗಡೆಯಲ್ಲಿ ಪಾದಚಾರಿಗಳಾಗಿ ಹೋಗುತ್ತಿದ್ದ ದರ್ಬಾರಿಗಳು ಇವರಿಂದೆಲ್ಲಾ ಉತ್ಸವವು ಅತಿ ಶೋಭಾಯಮಾನವಾಗಿದ್ದಿತು. ಅಂಬಾರಿಯಲ್ಲಿ ಪ್ರಭುಗಳ ಜತೆಗೆ ಶ್ರೀಮದ್ಯುವರಾಜರು ಈಸಲ ಇಲ್ಲದಿದ್ದುದು ಒಂದು ಕಳೆ ಕಡಿಮೆಯಾಯಿತು. ದಾರಿಯುದ್ದಕ್ಕೂ ಪ್ರಜೆಗಳು ಆನಂದದಿಂದ ಕರತಾಡನ ಮಾಡಿ ಜಯಘೋಷ ಮಾಡುತ್ತಿರಲು ಪ್ರಭುಗಳು ಪ್ರತಿ ಕ್ಷಣವೂ ಪ್ರತಿವಂದನೆ ಮಾಡುತ್ತ ಅಲ್ಲಗಲ್ಲಿಗೆ ದೊಡ್ಡಮನುಷ್ಯರುಗಳ ಮನೆ ಮುಂಗಡೆಯೂ ಸೆಂಟರಲ್ ಪೊಲೀಸ್ ಸ್ಟೇಷನ್ನಿನ ಮುಂದಣ ಚಪ್ಪರದಲ್ಲಿ ಮ್ಯು|| ಕೌನ್ಸಿಲರುಗಳಿಂದಲೂ ಅರ್ಪಿಸಲ್ಪಟ್ಟ ಪುಷ್ಪಹಾರಗುಚ್ಛಾದಿಗಳನ್ನು ಸ್ವೀಕರಿಸುತ್ತ ಸಾಯಂಕಾಲ ೬ ಗಂಟೆ ಹೊತ್ತಿಗೆ ಬನ್ನಿಮಂಟಪವನ್ನು ಸೇರಿದರು. ಅಲ್ಲಿ ಸೇನೆಯ ಮರ್ಯಾದೆ ಬನ್ನಿಯ ಪೂಜೆ ಇತ್ಯಾದಿಗಳೆಲ್ಲಾ ಮುಗಿದ ಬಳಿಕ ಪಟ್ಟದಾನೆ ಪಟ್ಟದಕುದುರೆ ಮೊದಲಾದುವುಗಳೊಡನೆ ಹಿಂದೆರಳಿ ಉತ್ಸವವು ಅರಮನೆಗೆ ಸೇರುವ ಹೊತ್ತಿಗೆ ರಾತ್ರಿ ೧೦|| ಗಂಟೆಯಾಯಿತು. ರಾತ್ರಿಯುತ್ಸವವು ವಿದ್ಯುದ್ದೀಪಾವಳಿಯೂ ಶೋಭೆಯಿಂದ ಮತ್ತೂ ಮನೋಹರವಾಗಿದ್ದಿತು. ಬಳಿಕ ಸಂಕ್ಷೇಪವಾದ ದರ್ಬಾರು ನಡೆದು ಆದಿನದ ಕಾರ್ಯಗಳು ಮುಕ್ತಾಯವಾದುವು. ಸ್ವಾರಿಯು ಕೋಟೆಯಿಂದ ಹೊರಟಾಗಲೂ ತಿರಿಗಿ ಬಂದಾಗಲೂ ೨೧ ಗುಂಡುಗಳು ಹಾರಿಸಲ್ಪಟ್ಟುವು.

ಒಳದೇಶದ ವೃತ್ತಾಂತಗಳು.

ನಾಳೆಯಿಂದ ಪ್ರಜಾಪ್ರತಿನಿಧಿ ಸಭಾ ಕಾರ್ಯಗಳಿಗೆ ಆರಂಭವಾಗುವುದು.

ಶ್ರೀ ಚಾಮುಂಡೇಶ್ವರೀ ರಥೋತ್ಸವವು ಬರುವ ತಾ|| [illegible]ರುವಾರ ನಡೆಯುವುದು.

ಈಗ ಬೆಂಗಳೂರು ಮದ್ರಾಸುಗಳ ಮಧ್ಯದಲ್ಲಿ ಮೆಯಿಲ್ ಬಂಡಿಗಳು ಪೂರ್ವದಂತೆ ರಾತ್ರಿಯಹೊತ್ತೇ ತಿರುಗಾಡುತ್ತಿವೆ.

೨-೩ ದಿನಗಳಿಂದ ಮಳೆಯ ಚಿಹ್ನೆಯು ತೋರುತ್ತಿದೆ. ಡಿಸ್ಟ್ರಿಕ್ಟಿನ ಕೆಲ ಕಡೆಗಳಲ್ಲಿ ಮಳೆಬಿದ್ದ ವರ್ತಮಾನ ಬಂದಿದೆ.

ಈ ದಿವಸ ಮ|| ನ್ಯಾಯಮೂರ್ತಿ ಚಂದ್ರಶೇಖರಯ್ಯರವರ ಅಧ್ಯಕ್ಷತೆಯಿಂದ ಟವರ್ ಹಾಲಿನಲ್ಲಿ ಪಂಚಮರ ಸಭೆಯು ನಡೆಯುವುದು.

ನಿನ್ನೆ ಮಧ್ಯಾಹ್ನ ಪೌರಸಮಾಜಿಕ ಸಭೆಯ ವಾರ್ಷಿಕಾಧಿವೇಶನವು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನಡೆದಿತು.

ಈಸಲದ ನವರಾತ್ರಿಯ ದರ್ಬಾರಿನಲ್ಲಿ ಕೌನ್ಸಿಲರುಗಳಾದ ಮ|| ಪಿ. ರಾಘವೇಂದ್ರರಾಯರೂ, ಮಿ|| ಹಂಜಾಹುಸೇನ್ ಸಾಹೇಬರೂ ನಡುಕಟ್ಟಬೇಕಾದ ನಿರ್ಬಂಧದಿಂದ ತಪ್ಪಿಸಲ್ಪಟು ಗೌರವಿಸಲ್ಪಟ್ಟರು.

ಬಳಂಗ್ ಆಟಗಳಿಗೆ ಕೋಟೆಯ ಬಯಲಿನಲ್ಲಿ ಅವಕಾಶವನ್ನು ತಪ್ಪಿಸಿದರೂ ಅವಕ್ಕೆ ದಸರಾ ಫೇರಿನಲ್ಲಿ ಬಿಸಿಲು ಗಾಳಿ ಬಡಿತವಿಲ್ಲದ ಉತ್ತಮಮಂದಿರಗಳಲ್ಲಿ ಸುಖಸ್ಥಾನಗಳನ್ನು ಕೊಟ್ಟಿರುವುದೇತಕ್ಕೋ ತಿಳಿಯದು.

ವಿಜಯದಶಮಿ ಯುತ್ಸವಕಾಲದಲ್ಲಿ ಶ್ರೀಮನ್ಮಹಾರಾಜರ ಸ್ವಾರಿಯ ಹಿಂದೆ ದಿವಾನರೇ ಮೊದಲಾದ ಸಂಸ್ಥಾನದ ಮುಖ್ಯಮುಖ್ಯಾಧಿಕಾರಿಗಳು ರಥಾರೂಢರಾಗಿ ಹೋಗುತ್ತಿದ್ದ ಪದ್ಧತಿಯು ಏತಕ್ಕೋ ಈಸಲ ತಪ್ಪಿಸಲ್ಪಟ್ಟಿತು.

ಮಹಾರಾಣೀ ಕಲಾಶಾಲಾಭವನದಲ್ಲಿ ದಿ|| ಬ|| ಕೆ. ಪಿ. [illegible]ಟ್ಟಣ್ಣಶೆಟ್ಟರ ಧರ್ಮಪತ್ನಿಯವರ ಅಧ್ಯಕ್ಷತೆಯಲ್ಲಿ ನಿನ್ನೆದಿನ [illegible]ಂಭಗೊಂಡ ಮಹಿಳಾ ಪರಿಷತ್ತಿನ ೩ನೆ ಅಧಿವೇಶನದ ಕಾರ್ಯ[illegible] ಇಂದೂ ನಾಳೆಯೂ ಸಹ ನಡೆಯುವುವು.

ಈ ನವರಾತ್ರಿಯ ಕಾಲದಲ್ಲಿ ರಾಜಧಾನಿಗೆ ಬಂದು ತಮ್ಮ[illegible]ಲ್ಲಿಳಿದುಕೊಂಡಿದ್ದ ವೈಶ್ಯಮಂಡಲಿಯವರಿಗೆಲ್ಲಾ ಮ|| [illegible]ಗುಪ್ಪೆ ಸೂರ್ಯನಾರಾಯಣಶೆಟ್ಟರು ತಮ್ಮ ಮನೆಯಲ್ಲಿ ಮೃ[illegible]ನ್ನಭೋಜನವನ್ನು ಪ್ರತಿದಿನವೂ ಮಾಡಿಸಿದರು.

ರಣರಂಗಕ್ಕೆ ಹೋಗಿ ಬಂದಿರುವ ಇಂಪೀರಿಯಲ್ ಲ್ಯಾ[illegible]ರ್ಸ್ ಸೈನಿಕರೇ ಮೊದಲಾದವರ ಸತ್ಕಾರಾರ್ಥವಾಗಿ ಅಲ್ಪಾ[illegible]ರಾದಿಗಳಿಂದ ಕೂಡಿದ ಒಂದು ಮೈತ್ರೀಸಮಾರಂಭವನ್ನು [illegible]ಡೆಯಿಸಲು ೧|| ಸಾವಿರ ರೂ. ಗಳನ್ನು ವೆಚ್ಚಮಾಡಲು ರಾಜ[illegible]ನಿಯ ಮ್ಯುನಿಸಿಪಾಲಿಟಿಯವರು ಏರ್ಪಡಿಸಿದ್ದಾರೆ.

ದಸರಾ ಫೇರು ಕಳೆದ ತಾ|| ೨೦ ರಿಂದ ಆರಂಭಗೊಂಡು [illegible]ಡೆಯುತ್ತಿದೆ. ಇದು ಅಷ್ಟೇನೂ ಜನಾಕರ್ಷಕವಾಗಿಲ್ಲ. ಶ್ರೀ [illegible] ಮಹಾರಾಜರವರು ದಯಮಾಡಿಸಿ ಪರಾಮರಿಸಿದರೆ ನಿಷ್ಫ[illegible]ವಾಗಿ ೪-೫ ಸಹಸ್ರ ರೂ. ಗಳನ್ನು ನುಂಗುವ ಈ ಏರ್ಪಾಟ[illegible] ಮುಂದಣ ವರ್ಷದಿಂದ ಎಂದಿಗೂ ಸಾಗಗೊಡಿಸಲಾರರೆಂದು [illegible]ೋಚಿಸುತ್ತೇವೆ.

ಬೆಂಗಳೂರು ಮೊದಲಾದ ಕಡೆಗಳಿಂದ ನವರಾತ್ರಿಯುತ್ಸ[illegible]ಗಳಿಗಾಗಿ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಾತಿಥಿಗಳು ೬೦ ಮಂದಿಗಳವರೆಗೆ ಬಂದು ದೊಡ್ಡ ಬಂಗಲೆಯಲ್ಲಿಳಿದುಕೊಂಡಿದ್ದಾರೆ. ಯೂರೋಪಿಯನ್ ದರ್ಬಾರು ಕಳೆದ ಗುರುವಾರ ಸಾಯಂಕಾಲ ನಡೆದಿತು. ಬ್ರಿಟಿಷ್ ರೆಸಿಡೆಂಟರು ಪತ್ನೀ ಸಮೇತರಾಗಿ ಅರಮನೆಯ ಮರ್ಯಾದೆಗಳೊಡನೆ ಆ ದಿವಸ ರಾಜಸಭೆಗೆ ದಯಮಾಡಿಸಿ ಪದ್ಧತಿಯಂತೆ ಮರ್ಯಾದೆಗೊಂಡು ತೆರಳಿದರು. ಇತರ ಯುರೋಪ್ಯರೆಲ್ಲರೂ ಬಂದಿದ್ದರು. ರೆಸಿಡೆಂಟರು ಕೋಟೆ ಬಾಗಿಲನ್ನು ಪ್ರವೇಶಿಸಿದಾಗಲೂ ತೆರಳಿದಾಗಲೂ ೧೩-೧೩ ಗುಂಡುಗಳು ಹಾರಿಸಲ್ಪಟ್ಟವು.

ರಾಜಧಾನಿಯ ನಿವಾಸಿಗಳಿಗೂ ಹೊರಗಣಿಂದ ಪ್ರೇಕ್ಷಕರಾಗಿ ಬಂದಿರುವ ಜನರಿಗೂ ಈ ಸಲ ನಡೆದ ವಿಮಾನೋಡ್ಡಾಣವು ಅಪೂರ್ವವಾದ ನೋಟವಾಗಿದ್ದಿತೆಂದು ಹೇಳಲು ಸಂಶಯವಿಲ್ಲ. ಕಳೆದ ಬುಧವಾರ ಸಾಯಂಕಾಲ ೬ ಗಂಟೆ ಹೊತ್ತಿಗೆ ೩ ವಿಮಾನಗಳು ಬೆಂಗಳೂರಿಂದ ರಾಜಧಾನಿಗೆ ಬಂದುವು. ಪಟ್ಟಣದ ಸಮೀಪಕ್ಕೆ ಬಂದ ಕೂಡಲೇ ಅವುಗಳ ಗತಿಯನ್ನು ಮಂದಗೊಳಿಸಿದುದರಿಂದ ಜನರೆಲ್ಲರೂ ರೊಯ್ ಎಂಬ ಅವುಗಳ ಶಬ್ದವನ್ನು ಕೇಳಿದ ಕೂಡಲೇ ಆಕಾಶಾಭಿಮುಖರಾಗಿ ಅವುಗಳ ಗತಿಯನ್ನೇ ಅನುಸರಿಸಿ ಅವುಗಳನ್ನು ಇಳಿಯಿಸುವ ಸ್ಥಾನವಾದ ಜೂಜಿನಬೋರೆಯ ಕಡೆಗೆ ಪ್ರವಾಹದಂತೆ ಓಡಿದರು. ಮರುದಿವಸ ಬೆಳಗ್ಗೆ ಬೇರೊಂದು ವಿಮಾನವು ಬಂದಿತು. ಅದರಿಂದೀಚೆಗೆ ವೈಮಾನಿಕರು ಆಗಾಗ್ಗೆ ತಮ್ಮ ವಿಮಾನಗಳನ್ನು ಆಕಾಶಕ್ಕೆ ಬಿಟ್ಟು ಪಾರಿವಾಳಗಳಂತೆ ೧-೨-೩ ಪೈಟಿಗಳನ್ನು ಹೊಡೆಯಿಸುತ್ತಲೂ ತರತರಗತಿಯಿಂದಲೂ ನಡೆಯಿಸುತ್ತಿದ್ದುದನ್ನೂ, ನೆಲದ ಮೇಲೆ ನಿಂತಿದ್ದಾಗ ಅದರ ರಚನೆಯನ್ನೂ ನೋಡಿ ಜನರೆಲ್ಲರೂ ಪರಮಾಶ್ಚರ್ಯಪಟ್ಟರು. ಈ ವಿಮಾನಗಳು ಬೆಂಗಳೂರಿಂದ ಅರ್ಧ ಗಂಟೆಯ ಕಾಲದಲ್ಲಿ ರಾಜಧಾನಿಗೆ (೮೭ ಮೈಲಿಗಳು) ಪ್ರಯಾಣ ಮಾಡಿಬಂದುವಂತೆ. ಒಂದೊಂದುವಿಮಾನದಲ್ಲಿ ಇಬ್ಬರೂ ಇನ್ನೆರಡರಲ್ಲಿ ಒಬ್ಬೊಬ್ಬರೂ ಕುಳಿತು ಬಂದರು. ಈ ದಿವಸ ವಸ್ತುಪ್ರದರ್ಶನ ಭವನದ ಬಯಲಿನಲ್ಲಿ ಇವುಗಳ ಸಂಚಾರಕ್ರಿಯೆಯು ತೋರಿಸಲ್ಪಡುವುದಾಗಿದೆ. ದಸರಾಫೇರಿನಲ್ಲಿ ಈ ಹೊಸ ನೋಟದ ಏರ್ಪಾಟನ್ನು ಮಾಡಿದುದು ಮಾತ್ರ ಆಕರ್ಷಕವಾದುದೆಂದು ಹೇಳಬಹುದು.

ಪತ್ರವ್ಯವಹಾರ.

ಸಾಧ್ವಿ ಸಂಪದಭ್ಯುದಯಗಳ ದುರ್ವರ್ತನ.

ನಮ್ಮ ಧರ್ಮ ಸಂಸ್ಥಾನದಲ್ಲಿ ಮೇಲ್ಕಂಡ ಎರಡು ಪತ್ರಿಕೆಗಳು ಮ|| ರೆಡ್ಡಿಯವರನ್ನೂ ಮ|| ನಾಗಪ್ಪನವರನ್ನೂ ಕುರಿತು ಸಹಸ್ರಮುಖವಾಗಿ ದೋಷಾರೋಪಣೆ ಮಾಡಲುಪಕ್ರಮಿಸಿ ಸಂಸ್ಥಾನದ ಪ್ರಜಾಕೋಟಿಗೆಲ್ಲಾ ಮನಃಭೇದವನ್ನುಂಟುಮಾಡುತ್ತಲಿರುವುದು ಸರಿಯಷ್ಟೆ ? ಈ ಪತ್ರಿಕೆಗಳಲ್ಲಿ ಬರೆಯುವ ಬರವಣಿಗೆಗಳ ನಿರಂಕುಶತ್ವಕ್ಕೆ ಮಿತಿಯೇ ಇಲ್ಲ. ಒಂದು ಸಮಯದಲ್ಲಿ ಒಬ್ಬರನ್ನು ಇಂದ್ರ, ಚಂದ್ರರೆಂದು ಹೊಗಳುವುದೂ, ಉತ್ತರಕ್ಷಣದಲ್ಲಿ ಅವರನ್ನೇ ಅಂಥವರು ಇಂಥವರೆಂದು ಬಗುಳುವುದೂ ವಾಚಕರಿಗೆ ತಿಳಿಯದ ವಿಷಯವಲ್ಲ. ಒಕ್ಕಲಿಗರ ಪತ್ರಿಕೆಯಲ್ಲಿಯೂ, ಸ್ಟಾರ್ ಪತ್ರಿಕೆಯಲ್ಲಿಯೂ ಮೇಲ್ಕಂಡ ದೊಡ್ಡಮನುಷ್ಯರವಿಷಯದಲ್ಲಿ ಅನ್ಯಾಯವಾದ ದೋಷಾರೋಪಣೆಗಳನ್ನು ಮಾಡುವುದು ಸರಿಯಲ್ಲವೆಂದು ಬರೆದರೆ ಆ ಪತ್ರಿಕೆಗಳನ್ನೂ ವಾಚಾಮಗೋಚರವಾಗಿ ಬೈಯುವುದು ಇದೆಂಥಾ ಸಾಧ್ವೀತ್ವವೋ, ಇದೆಂಥಾ ಸಂಪದಭ್ಯುದಯ ಹೇತುವೋ ಅರಿಯಲಾಗದು. 16–10–20 ನೆ ಸಂಪದಭ್ಯುದಯದಲ್ಲಿ "ಉತ್ತಮರನ್ನು ಪಂಚಮ ಸ್ಥಿತಿಗೆ ತರುವುದರಲ್ಲಿ ಮ|| ರೆಡ್ಡಿಯವರು ಬದ್ಧದೀಕ್ಷೆಯುಳ್ಳವರಾಗಿರುತ್ತಾರೆ. ಒಕ್ಕಲಿಗರ ಪತ್ರಿಕಾ ಕರ್ತರಿಗೆ ಮ|| ರಡ್ಡಿಯವರ ಸ್ನೇಹವು ಬೇಕು. ರಡ್ಡಿಯವರ ಸಂಕರ ಪ್ರಯತ್ನವು ಬೇಡ. ಈ ರೀತಿಯಲ್ಲಿ ಪತ್ರಿಕೆಯನ್ನು ನಡೆಸುವುದಕ್ಕಿಂತ ಹಾಳುಭಾವಿಯಲ್ಲಿ ಬಿದ್ದು ಪ್ರಾಣವನ್ನು ಬಿಡುವುದು ಮೇಲಲ್ಲವೇ ?" ಹೀಗೆ ನಿರ್ಭಯವಾಗಿ ಕೂಗುತ್ತಿದ್ದರೂ ಸುಮ್ಮನಿರುವುದರಿಂದಲೇ ಈ ಸಾಧ್ವಿಯು ಅಸಾಧ್ವಿಯೂ, ಸಂಪದಭ್ಯುದಯವು ಆಪದಭ್ಯುದಯವೂ ಆಗಿರುವುದು. ಬಜಾರಿಯಾದ ಗಯ್ಯಾಳಿ ಸಾಧ್ವಿಯು ತನ್ನ ಹೊಲೆ ಕೂಗುಗಳನ್ನು ನಮ್ಮ ಮಹಾಪ್ರಭುಗಳು ಕೇಳಿಯಾರೆಂದಾದರೂ ನಾಚುವಳೇ? ಇಂತಹ ಸ್ವೈರಿಣಿಯಾದ ದುಸ್ಸಾಧ್ವಿಯನ್ನು ಕಟ್ಟಿಕೊಂಡು ಸಂಸಾರ ಮಾಡುವ ಗಂಡನು ಹಾಳುಭಾವಿಗೆ ಬೀಳಬೇಕೇ? ಅಥವಾ ರಾವಣ ಸನ್ಯಾಸಿಯಾಗಬೇಕೇ? ಇದನ್ನು ಯೋಚಿಸಬೇಡವೇ ? ಬೀದಿಗೆ ಬಂದು ತನಗಾಗದವರನ್ನು ಮನಸ್ವಿ ಬೈಯುವ ನೀಚಳು "ಇವಳೆಂಥಾ ಸಾಧ್ವಿ?" ಆರುಳು ಮರುಳಾದ ಅರವತ್ತು ವರ್ಷ ತುಂಬಿದ ಗಂಡನನ್ನು ಕಟ್ಟಿಕೊಂಡು ಹದ್ದುಮೀರಿ ಒದರುತ್ತಿರುವ ಸಾಧ್ವಿಯೋ? ರಾಜನರೇಂದ್ರನನ್ನು ಮರುಳುಮಾಡಿ ಸಾರಂಗಧರನ ಕೈಕಾಲುಗಳನ್ನು ಕೊಯ್ಸಿದ ಚಿತ್ರಾಂಗಿ ಎಂಬ ಸಾಧ್ವಿಯೊ? ಉತ್ತಾನಪಾದರಾಯನನ್ನು ಸ್ವಾಧೀನಪಡಿಸಿಕೊಂಡು ಧ್ರುವನನ್ನು ಕಾಡಿಗಟ್ಟಿಸಿದ ಸಾಧ್ವಿಯೋ ? ಇವಳೆಂಥಾ ಸಾಧ್ವಿ? ಎಂದು ಅನೇಕರು ಕೇಳುವರು. ಈ ಸಾಧ್ವಿಗೆ ಮ|| ರಾಮಲಿಂಗರೆಡ್ಡಿಯವರೂ ಮ|| ನಾಗಪ್ಪನವರೂ ಮಾತ್ರ ಕೆಟ್ಟವರಾಗಿ, ಇನ್ನುಳಿದ ಅನೇಕ ಬ್ರಾಹ್ಮಣ ಆಫೀಸರುಗಳೆಲ್ಲಾ ಸಾತ್ವಿಕ ಶಿರೋಮಣಿಗಳೆಂದು ತಿಳಿದುದಕ್ಕಾಗಿ ನಾನು ತುಂಬಾ ಸಂತೋಷಿಸುತ್ತೇನೆ. "ಬೆಕ್ಕು ತಾನು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಯಾರೂ ಅರಿಯರೆಂದು ತಿಳಿದುಕೊಂಡಂತಾಯಿತು." ಈ ಸಾಧ್ವಿಗೆ ಪಂಚವಟಿಯಲ್ಲಿ ಶ್ರೀ ರಾಮಲಕ್ಷ್ಮಣರು ಶೂರ್ಪನಖಾಸಾಧ್ವಿಗೆ ಮಾಡಿದ ಗತಿಯನ್ನು ಮಾಡದಿದ್ದರೆ ಪ್ರಯೋಜನವಾಗುವಂತಿಲ್ಲ. ಮ|| ರೆಡ್ಡಿಯವರೂ ಮ|| ನಾಗಪ್ಪನವರೂ ತನ್ನ ಬಲೆಗೆ ಸಿಕ್ಕಲಿಲ್ಲವಲ್ಲಾ ಎಂಬ ಕ್ರೋಧವೇ ಈ ಸಾಧ್ವಿಯಲ್ಲಿ ತಾಂಡವವಾಡುವುದು. ಮ|| ರೆಡ್ಡಿಯವರೂ ಮತ್ತು ಮ|| ನಾಗಪ್ಪನವರೂ ಮನುಷ್ಯಸಾಮಾನ್ಯದವರನ್ನೆಲ್ಲಾ ಒಂದೇ ರೀತಿಯಾಗಿ ನೋಡುವ ಸರ್ವ ಸಮದೃಷ್ಟಿಯುಳ್ಳವರು, ನಿರ್ದಾಕ್ಷಿಣ್ಯಮೂರ್ತಿಗಳು, ರಾಜಸೇವಾಧುರಂಧರರು, ಪಾಪಭೀರುಗಳು, ಮತ್ತು ಸ್ವಾಮಿಭಕ್ತರು. ಈ ಆಫೀಸರುಗಳು ಬ್ರಾಹ್ಮಣರಾಗಿದ್ದರೆ ಔತನಾದ್ಯುಪಚಾರಗಳ ನೆಪದಿಂದಲೂ ಸ್ತುತಿಯಿಂದಲೂ ತಮ್ಮ ವಶವರ್ತಿಗಳನ್ನಾಗಿ ಮಾಡಿಕೊಂಡು ಹೌದಾದುದನ್ನು ಅಲ್ಲವಾಗಿಯೂ, ಅಲ್ಲವಾದುದನ್ನು ಹೌದಾಗಿಯೂ ಮಾಡಿಸುತ್ತಿದ್ದರು. ಅದಕ್ಕೆ ಅವಕಾಶವಿಲ್ಲವಾಗಿ ಇವರ ಮುಂದೆ ತಮ್ಮ ಬೇಳೆ ಬೆಯ್ಯುವಂತಿಲ್ಲ. ಲಾಯರುಗಳ ಬಾಯಿಗೆ ಬೀಗ ಹಾಕಿದಂತಾಯಿತು. ತಾವೇ ವಿದ್ಯಾವಿಷಯವಾದ ಸರ್ವಸುಖವನ್ನೂ ಅನುಭವಿಸುತ್ತಿದ್ದುದು ಇತರರ ಪಾಲಾಗಿ, ತಮ್ಮ ಪ್ರಾಶಸ್ತ್ಯಕ್ಕೂ ಮೋಸಕ್ಕೂ ಅವಕಾಶವಿಲ್ಲವಾಯಿತೆಂದು ತಮ್ಮ ವಿದ್ಯಾನೈಪುಣ್ಯವನ್ನು "ಕೈಲಾಗದ ಮುಂಡೆ ಮೈಯೆಲ್ಲಾ ಪರಚಿಕೊಂಡಳು" ಎಂಬ ಗಾದೆಯಂತೆ ಬಾಯಿಗೆ ಬಂದಂತೆಲ್ಲಾ ಕೂಗುವುದಕ್ಕೆ ಉಪಕ್ರಮವಾಯಿತು ಒಕ್ಕಲಿಗರ ಪತ್ರಿಕೆಯಲ್ಲಾಗಲೀ ಸ್ಟಾರ್ ಪತ್ರಿಕೆಯಲ್ಲಾಗಲೀ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಂತೆ ತಾವಾಗಿ ಬ್ರಾಹ್ಮಣ ಆಫೀಸರುಗಳನ್ನೂ ಬ್ರಾಹ್ಮಣ ಮಾರ್ಜಾಲ ಸನ್ಯಾಸಿಗಳನ್ನೂ ದೂರುತ್ತಿರುವುದುಂಟೇ? ಕಲಹಕಾರಿ ಪತ್ರಿಕೆಗಳು ವೃಥಾ ಮನಸ್ವಿ ಬೈಯುತ್ತಿರುವ ಬೈಗಳಗಳನ್ನು ಕೇಳಿ ಅವುಗಳಿಗೆ ಪ್ರತ್ಯುತ್ತರ ಕೊಡುವುದೇ ಮಹಾ ತಪ್ಪಾದರೆ ಗತಿಯೇನು ? ಸಾಧ್ವಿಯು ಒಂದು ಕಡೆ ಧರ್ಮೋಪದೇಶ ಮಾಡುವುದೇನು ? ಮತ್ತೊಂದು ಕಡೆ ಪಕ್ಷಪಾತ ತೋರಿಸುವುದೇನು ? ಬ್ರಾಹ್ಮಣೇತರರಲ್ಲಿ ವಾಗ್ಮಿಗಳೂ ವಿದ್ಯಾವಂತರೂ ಅಧಿಕಾರಿಗಳೂ ಇವರ ಕಣ್ಣಿಗೆ ಬೀಳುವುದೇ ತಪ್ಪೇ ? ಇವರು ಕೂತರೆ ತಪ್ಪು, ನಿಂತರೆ ತಪ್ಪು, ಓಡಾಡಿದರೆ ತಪ್ಪು, ಮಾತಾಡಿದರೆ ತಪ್ಪು! ಪಾಪ! ಅಧಿಕಾರ, ಗೌರವ, ದೊಡ್ಡಸ್ತಿಕೆ ಇವೆಲ್ಲಾ ಇವರ ಹಕ್ಕುಬಾಧ್ಯತೆಗಳು!! ಮತ್ತೊಬ್ಬರು ಈ ಕೆಲಸಗಳಿಗೆ ಬಂದರೆ ಹೇಗೆ ಸಹನವಾದೀತು ? ಬ್ರಾಹ್ಮಣರು ಧಾರವಾಡದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತನ್ನು ಕೂಡಿಸಿದರು; ಬ್ರಾಹ್ಮಣರು ಬೆಂಗಳೂರಲ್ಲಿ ಕೀರ್ತನಸಮ್ಮೇಳನವೆಂದು ಹೆಸರಿಟ್ಟು ಕೊಂಡು ಹೋಮ್ ರೂಲ್‌ಲೀಗ್ ಗಲಾಟೆಮಾಡತೊಡಗಿ, ಇಂಗ್ಲೀಷರನ್ನೂ ಬ್ರಾಹ್ಮಣೇತರ ಆಫೀಸರನ್ನೂ ಮನಸ್ವಿ ದೂರಿದರು. ಇನ್ನು ಮುಂದೆ ಇತರ ಕೀರ್ತನಕಾರರ ಸಮ್ಮೇಳನ ನಡೆಯತಕ್ಕದ್ದಿರುವುದು. ಮೊದಲು ಭಿನ್ನಭಾವಗಳನ್ನು ತಾವೇ ತೋರಿಸಿ, ಆನಂತರ ಬ್ರಾಹ್ಮಣೇತರರು ಹಾಗೆ ಮಾಡಿದರು ಹೀಗೆ ಮಾಡಿದರೆಂದು ಕೋಲಾಹಲವೆಬ್ಬಿಸುವುದನ್ನು ನೋಡಿದರೆ ಮಗುವನ್ನು ಎತ್ತಿಕೊಂಡು ಕುಂಡಿಜಿವುಟಿ, ಆಯ್ಯೋ ಮಗು ! ಅಳಬೇಡಮ್ಮಾ ಅಳಬೇಡಮ್ಮ ಎಂದು ಹೇಳುವುದಕ್ಕೆ ಸಮನಾಗಿರುವುದು. ಬಾಹ್ಯ ಪ್ರಪಂಚದ ಜನಗಳನ್ನು ವಂಚಿಸಬಹುದು, ಆದರೆ ಮನವನ್ನೂ, ಪರಮಾತ್ಮನನ್ನೂ ವಂಚಿಸುವುದು ಸಾಧ್ಯವೆ? ಒಬ್ಬರನ್ನು ಒಂದುಸಲ ಶ್ಲಾಘಿಸಿ ಅಂತರಿಕ್ಷಕ್ಕಡರಿಸುವುದೂ, ಮತ್ತೊಂದು ಸಲ ಅವರನ್ನು ಕೆಳಕ್ಕೆ ತಳ್ಳುವುದೂ ಈ ದುರ್ವರ್ತನವನ್ನು ಯಾರೂ ಕಾಣರೂ? ಇದೆಂತಹ ಪತ್ರಿಕಾಪ್ರಚಲನೋದ್ಯಮನ ? ಅಷ್ಟೇಕೆ ? ಮ|| ಗಾಂಧಿಯವರು ಮದರಾಸ್ ಲಾ ಕಾಲೇಜಿನಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಉತ್ತರ ದಯಪಾಲಿಸುವಾಗ "ಹಿಂದುಳಿದ ಬ್ರಾಹ್ಮಣೇತರರಿಗೆ ಮುಂದುವರಿದ ಬ್ರಾಹ್ಮಣರು ಸಹೋದರ ವಾತ್ಸಲ್ಯದಿಂದ ಅವರು ಕೇಳುವ ಎಲ್ಲಾ ಸ್ಥಾನಗಳನ್ನೂ ಬಿಟ್ಟುಕೊಡಬೇಕಾದುದು ನ್ಯಾಯವಾಗಿರುವುದು. ಬ್ರಾಹ್ಮಣರು ಬ್ರಾಹ್ಮಣೇತರರಲ್ಲಿ ಸಹಾನುಭೂತಿಯನ್ನು ತೋರಿಸುವುದು ಯೋಗ್ಯವು. ನಾನು ಅಧಿಕಾರಿಯಾಗಿದ್ದರೆ ಖಂಡಿತವಾಗಿ ಬ್ರಾಹ್ಮಣೇತರರ ಕೋರಿಕೆಗಳನ್ನು ನೆರವೇರಿಸುತ್ತಿದ್ದೆನು. ಬ್ರಾಹ್ಮಣರು ಇತರರಲ್ಲಿ ನಂಬುಗೆಯನ್ನು ಕಳೆದುಕೊಂಡಿರುವರು" ಎಂದು ಅಪ್ಪಣೆ ಕೊಡಿಸಿದಾಗ ಅವರ ಮೇಲೆ ರೇಗಿ ಮಹಾತ್ಮರೆಂಬ ಹೆಸರು ಇವರಿಗೆ ಸಲ್ಲದೆಂದು ಇದೇ ಪತ್ರಿಕಾಕರ್ತರೇ ಹೇಳಿದರು. ನಾನ್ ಕೋ ಆಪರೇಷನ್ ವಿಷಯದಲ್ಲಿ ಒತ್ತಿಹೇಳಿ ಇನ್ನು ಒಂದು ವರ್ಷ ಆರುತಿಂಗಳು ಅಥವಾ ಈಗಲೇ ಸಹಾಯನಿರಾಕರಣದಿಂದ ಸ್ವರಾಜ್ಯ ದೊರೆಯುವಂತೆ ಮಾಡುತ್ತೇವೆಂದು ಹೇಳಿದಾಗ ಮ|| ಗಾಂಧಿಯವರನ್ನು ಮಹಾತ್ಮರು ಮಹಾತ್ಮರು ಎಂದು ಹೊಗಳಿದರು ! ಸಾಧ್ವೀ ಸಂಪದಭ್ಯುದಯಗಳ ಹೊಗಳಿಕೆಗಳೂ ಬೊಗಳಿಕೆಗಳೂ ಸ್ವಲ್ಪವೂ ಗಮನೀಯಗಳಾಗಿಲ್ಲವು. ಇದು ಹುಚ್ಚೋ! ಬೆಪ್ಪೋ! ಶಿವಲೀಲೆಯೋ ತಿಳಿಯದು. ಜಾತಿಸಂಕರದಿಂದ ಪ್ರಳಯಕರ್ಮಗಳು ನಡೆಯುವುವು, ಮತ್ತು ರಾಜ್ಯಕ್ರಾಂತಿಯಾಗುವುದೆಂದು ಮಹಾಪ್ರಭುಗಳನ್ನು ಕೂಡ ಬೆದರಿಸುವರು. ಜಾತಿಸಂಕರವನ್ನು ಹಗಲಿರುಳೂ ಮಾಡುತ್ತಲಿರುವವರು ಬ್ರಾಹ್ಮಣರೋ ಅಥವಾ ಬ್ರಾಹ್ಮಣೇತರರೋ? ಮ|| ರೆಡ್ಡಿಯವರೋ? ಅಥವಾ ಸರಕಾರದವರೋ? ಬ್ರಾಹ್ಮಣರೇ ಉತ್ತರಕೊಡಲಿ. ಪಂಚಮರನ್ನು ಸ್ಕೂಲುಗಳಿಗೆ ಸೇರಿಸಿದರೆ ಜಾತಿಸಂಕರವಾಗಿ ಉತ್ತಮರು ಚಂಡಾಲರಾಗುವರೇ? ಉತ್ತಮಶಬ್ದದಲ್ಲಿ ಅಡಕವಾಗಿರುವುದೇನೆಂಬುದನ್ನಾದರೂ ತಿಳಿಯದೆ ಉತ್ತಮರು ಚಂಡಾಲರಾಗುವರೆಂದರೆ ಇದಕ್ಕಿಂತಲೂ ತಿಳಿಗೇಡಿತನವು ಮತ್ತೊಂದುಂಟೇ? ಬ್ರಾಹ್ಮಣರು ಯಾವ ಯಾವ ತೆರದಲ್ಲಿ ಜಾತಿಸಂಕರ ಮಾಡುತ್ತಿರುವರೆಂಬುದನ್ನು ಬಿಚ್ಚಿ ಹೇಳಬೇಕೆ? ಇಂತಹ ಒಣಬೆದರಿಕೆಗಳಿಗೆ ನಮ್ಮ ಖಾವಂದರೂ ಅವರ ಇತರ ಪ್ರಜೆಗಳೂ ಹೆದರುವರೆಂದು ತಿಳಿದಿದ್ದರೆ ಅದು ಶುದ್ಧ ಹುಚ್ಚು. ವೈರಾಗ್ಯ ಚಕ್ರವರ್ತಿಗಳೆಂದು ಸುಮ್ಮನೆ ಬಾ

ಯಿಂದ ಹೇಳಿಕೊಂಡರೆ ಸಾಲದು. ಅಂತಹ ವೈರಾಗ್ಯವನ್ನು ಕಾರ್ಯತಃ ತೋರ್ಪಡಿಸಬೇಕು. ಮ|| ರೆಡ್ಡಿಯವರೂ ಮ|| ನಾಗಪ್ಪನವರೂ ಸಾಧ್ವೀ ಸಂಪದಭ್ಯುದಯಗಳ ಅಸಂಬದ್ಧ ಪ್ರಲಾಪಗಳಿಗೆ ಕಿವಿಗೊಡದೆ ಸ್ವಾಮಿಭಕ್ತಿ ನಿರತರಾಗಿ ನಮ್ಮ ಶ್ರೀಮಂದರವರ "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುಗನುಸಾರವಾಗಿ ನಡೆಯುತ್ತಲಿರುವುದರಿಂದ ನಿಜವಾಗಿ ಅವರೇ ವೈರಾಗ್ಯ ಚಕ್ರವರ್ತಿಗಳೆಂದರೆ ಅತಿಶಯೋಕ್ತಿ ಯಲ್ಲವು. ಆದರೆ ಹುಚ್ಚು ಹರಟೆಗೆ ಪ್ರಾಯಶ್ಚಿತ್ತವನ್ನು ಇತರ ಮಹಾಜನಗಳು ಮಾಡುವುದು ಯೋಗ್ಯವೆಂದು ಖಂಡಿತವಾಗಿ ಸೂಚಿಸುತ್ತೇನೆ.

ನಿಷ್ಪಕ್ಷಪಾತಿ.

ರಕ್ತಶೋಧಕ ! ಧಾತುಪೌಷ್ಟಿಕ !!

3 ಮನೋಲ್ಲಾಸಕರವೆಂಬ

ಮಹದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಧೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟು ದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕ್ಕರೆಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೩ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜಾಗ್ರತೆ. ಕಬ್ಬಿಣದ ನೇಗಲು. ತರಿಸಿಕೊಳ್ಳಿರಿ.

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 49

ನಾವು ಎ. ಆಲ್ ಬ್ಯುಕ್ಯುಯರ್ ಕ್ಕೊ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ:—ಎಲ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಅಮೇರಿಕನ್ ರೋಮಹರಿ ಪೌಡರ್.

ಕೇಶನಾಶನಿ ಪೌಡರ್.

ಇದು ವಿಲಾಯತಿಯಲ್ಲಿ ತಯಾರಾದದ್ದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಪುಡಿಯನ್ನು ಸವರಿದ ಮಾತ್ರಕ್ಕೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದನ್ನು ತೆಗೆಯುವದು. ಕ್ರಯ ಡಬ್ಬಿ 1ಕ್ಕೆ 0—12—0.

ವಿಳಾಸ:—ಮರಾಟ ಟ್ರೇಡಿಂಗ್ ಕಂಪನಿ,
5 ತಿರುಪಳ್ಳಿ ಬೀದಿ, ಮದರಾಸು.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆಮರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

30

ಈ ನಕ್ಷೆಯಲ್ಲಿ ಕಾಣುವ ಪೌಂಟೇನ್ ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತಿನ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣಿ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೊ ಉಂಗುರ.

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು. ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4.8.0.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ನೈರಂ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

30

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಸೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 47

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ನುತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆರೋಗ, ಪಾಂಡುರೋಗ, ಗುಲ್ಮರೋಗ, ಮಹರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣನೊಳಗೆ ಹೂ ಬಿಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅ[illegible]ಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, [illegible] ಶೂಲಿ, ವಾರಶೂಲಿ, ರೇಚ್ಚಿ ಜಿಡ್ಡು, ಗುದವ್ರಣಬೇನೆ, ಹುರುಕುತಜ್ಜಿ, ಗಜಕರ್ಣ, ಅಗಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿಯ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಅಕ್ಟೋಬರ್ ತಾ|| ೨೪ ರಿಂದ ೧೯೨೦ ನೆಯ ಅಕ್ಟೋಬರ್ ತಾ|| ೩೦ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ನೆಯ ರೌದ್ರಿನಾಮ ಸಂವತ್ಸರದ ಆಶ್ವೀಜ ಶುದ್ಧ ದ್ವಾದಶಿಯಿಂದ ಆಶ್ವೀಜ ಬಹುಳ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	
24	ಭಾನು	ದ್ವಾದ	37-14	ಪೂಭಾ	43-30	
25	[1] ಸೋಮ	ತ್ರಯೋ	37-27	ಉಭಾ	45-0	
26	ಮಂಗಳ	ಚತು	36-15	ರೇವ	45-23	11
27	ಬುಧ	ಪೌರ್ಣ	33-37	ಅಶ್ವಿ	44-32	12
28	[2] ಗುರು	ಪಾಡ್ಯ	30-35	ಭರ	42-40	13
29	ಶುಕ್ರ	ಬಿದಿ	26-16	ಕೃತ್ತಿ	39-52	14
30	ಶನಿ	ತದಿ	21-21	ರೋಹಿ	36-28	15

(1) ಪ್ರದೋಷ, ಚಿಟ್ಟದಲ್ಲಿ ಚಾಮರಾಜಮುಡಿ ಉತ್ಸವ. ಶ್ರೀ ಚಾಮುಂಡೇಶ್ವರೀ ರಥ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲಿ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪ್ರಶಸ್ತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭುಲಂ ಸದ್ಭಕ್ತಮಾಲಾಕುಲಂ | ಶ್ರೀಚಾಮುಂಡೇಶ್ವರಿಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಅಕ್ಟೋಬರ್ ತಾರೀಖು ೩೧ ನೆಯ ಭಾನುವಾರ. (ಸಂಚಿಕೆ ೪೪

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾವಧಿ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು. ಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
41 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಶರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಷಟ್‌ಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಡುಗುಂದ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ —ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಟೀಕೆ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸಿದ್ಧಶಿಖಾಮುಕ್ತಾವಳಿ ೮ಆಣೆ; ರಸ್ತಾ ಸತಕ ೨ಆಣೆ; ಶಂಕರಲಿಂಗಕಂದಂ ೧೮.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ:	೦—೧೨—೦
ಪುಣ್ಯಾಹವಿಧಿ:	೦—೧೪—೦
ರುತೀಲಿಪರೀಕ್ಷೆ	೦—೯—೦
[illegible]	೦—೯—೦

---

18 ಮೊಳ ಪೂರ ಇರುವವು. ದೊಡ್ಡ ಪನ್ನ.

ಬಂಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವವಳಿಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ	ನಂ. 1	6—8—0
	ನಂ. 2	7—8—0

6

ಪ್ಯಾರಿಸ್ ಶಾಲ್.

ಚಳಿಗಾಲದಲ್ಲಿಯೂ, ಮಳೆಗಾಲದಲ್ಲಿಯೂ ಹೊದಿಯಲಿಕ್ಕೆ ಬಹು ಲಾಯಖಾದದ್ದು ಪ್ರಯಾಣಿಕರೂ, ಇತರರೂ, ಪ್ರತಿ ದಿನವೂ ಉಪಯೋಗಿಸಬಹುದು. ಬಣ್ಣ ಹೋಗದು. 5 ಮೊಳ ಉದ್ದವು, 2½ ಮೊಳ ಅಗಲವು ಇದೆ. ಕ್ರಯ ಶಾಲು 1ಕ್ಕೆ 5—0—0

ಕಂಬಳಿ ಟೋಪಿ.

ಈ ಟೋಪಿಗಳು ಸಾಚ ಉಲನ್ ದಾರದಿಂದ ತಯಾರಿಸಿದೆ. ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತನವರಿಗೂ ಉಪಯೋಗಿಸಬಹುದು.

ಕ್ರಯ ಉಲನ್ ಟೋಪಿ 1 ಕ್ಕೆ 1—6—0

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮುಖ್ಯರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾರ್ಯಗಳನ್ನು ತೋರಿಸಿ ಕೀರ್ತಿಶಾಲಿಗಳಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರರನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾರ್ಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ತಡಕಲ್ಲು,
48 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತವೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಅದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಕ್ವ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಭ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 36

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪ್ರಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಪ್ರಶ್ನೆ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಬನವಾಸಿ ಉತ್ತರಕನಡಾ.

ರಕ್ತಶೋಧಕ ! ಧಾತುಪೌಷ್ಟಿಕ !!

4 ಮನೋಲ್ಲಾಸಕರವೆಂಬ

ಮಹದ್ರಾಕ್ಷಾದಿ ಚೂರ್ಣವು.

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಧೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟು ದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕ್ಕರೆಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೩ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್.

೧೯೨೦ನೆಯಇಸವಿ ಅಕ್ಟೋಬರ್ ತಾ|| ೩೧ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆ.

ಕಳೆದ ತಾ|| ೨೫ನೆ ಸೋಮವಾರ ಮಧ್ಯಾಹ್ನ ಈ ಸಭೆಯು ಮಂತ್ರಿವರ್ಯರಾದ ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್, ಬಿ. ಎ., ಸಿ. ಎಸ್. ಐ. ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಈ ಸಭೆಗೆ ಬ್ರಿಟಿಷ್ ರೆಸಿಡೆಂಟರೂ ಅವರ ಪತ್ನಿಯವರೂ ಇತರ ಕೆಲ ಮಂದಿ ಯೂರೋಪ್ಯಾತಿಥಿಗಳೂ ದಯಮಾಡಿಸಿದ್ದರು. ಕೌನ್ಸಿಲರು ಶಾಖಾಮುಖ್ಯಾಧಿಕಾರಿಗಳು ಡಿಸ್ಟ್ರಿಕ್ಟ್ ಡಿ|| ಕಮೀಷನರುಗಳೇ ಮೊದಲಾದ ಅಧಿಕಾರಿಗಳೂ, ಸರ್ಕಾರದ ಎಲ್ಲ ಸೆಕ್ರಟರಿಗಳೂ ದಯಮಾಡಿಸಿದ್ದರು. ಒಟ್ಟು ಬರಬೇಕಾಗಿದ್ದ ೨೭೦ ಪ್ರತಿನಿಧಿಗಳಲ್ಲಿ ೨೫೦ ಮಂದಿಗಳವರೆಗೆ ಬಂದಿದ್ದರು. ದಿವಾನರವರು ತಮ್ಮ ಆಂಗ್ಲಭಾಷೆಯ ಉಪನ್ಯಾಸವನ್ನು ಓದಿ ಮುಗಿಸಿದ ಬಳಿಕ, ಚಿನ್ನದಗಣಿಗಳ, ಆರ್ಯವೈಶ್ಯ ಮಹಾಸಭೆಯ, ಒಕ್ಕಲಿಗರ ಸಂಘದ, ಸೆಂಟರಲ್ ಮಹಮ್ಮದೀಯ ಸಂಘದ, ಚನ್ನಪಟ್ಟಣದ ಅಂಜುಮನ್ ಮುಹದೇವಿಯಾ ಸಂಘದ, ಮಲೆನಾಡು ಜಮೀನ್ದಾರರ ಸಂಘದ, ಆದಿದ್ರಾವಿಡಾಭಿವೃದ್ಧಿ ಸಂಘದ ಪಕ್ಷಗಳ ವಿಜ್ಞಾಪನ ಪತ್ರಗಳು ಆಯಾ ಪ್ರತಿನಿಧಿಗಳಿಂದ ಓದಿ ಅರ್ಪಿಸಲ್ಪಟ್ಟುವು. ಅವಕ್ಕೆಲ್ಲಾ ದಿವಾನರು ಸಂಕ್ಷೇಪವಾದ ಪ್ರತ್ಯುತ್ತರವನ್ನು ಕೊಟ್ಟರು. ಬಳಿಕ ಬ್ರಿಟಿಷ್ ರೆಸಿಡೆಂಟರಿಗೂ ಅವರಪತ್ನಿಯವರಿಗೂ ಸಭಾಧ್ಯಕ್ಷರು ಪುಷ್ಪಗುಚ್ಛವನ್ನರ್ಪಿಸಿದರು. ಇತರ ಯೂರೋಪ್ಯಾತಿಥಿಗಳಿಗೆಲ್ಲಾ ಜನರಲ್ ಸೆಕ್ರೆಟರಿಯವರು ಪುಷ್ಪಗುಚ್ಛವನ್ನು ಅರ್ಪಿಸಿದರು. ದಿವಾನರ ಕನ್ನಡದ ಉಪನ್ಯಾಸ ಪುಸ್ತಕಗಳು ಪ್ರತಿನಿಧಿಗಳಿಗೆಲ್ಲಾ ಹಂಚಲ್ಪಟ್ಟಿದ್ದುದರಿಂದ ಅವರುಗಳ ಇಷ್ಟಪ್ರಕಾರ ಅದನ್ನು ಓದಬೇಕಾದುದಿಲ್ಲವೆಂದು ಹೇಳಿ, ಅಂದಿನ ಸಭಾಕಾರ್ಯವು ಅಲ್ಲಿಗೆ ಉಪಸಂಹರಿಸಲ್ಪಟ್ಟಿತು.

ಮರುದಿನದಿಂದ ಪ್ರತಿದಿನವೂ ಸಭಾಕಾರ್ಯಗಳು ಜರುಗುತ್ತಿರುವುವು. ಈ ದಿನ ಮಧ್ಯಾಹ್ನಕ್ಕೆ ಮುಗಿಯುವುವು. ಚರ್ಚಿತಗಳಾದ ವಿಷಯಗಳಲ್ಲಿ ಮುಖ್ಯವಾದುವುಗಳನ್ನೂ ಫಲಿತಾಂಶವನ್ನೂ ಮುಂದೆ ತಿಳಿಯಿಸುತ್ತೇವೆ.

ಸಭೆಯ ಚರ್ಚೆಗೆ ಸಾಮಾನ್ಯ ವಿಷಯಗಳು ೨೪೩, ಸ್ಥಳೀಯ ವಿಷಯಗಳು ೧೯೯ ಸ್ಪೆಷಲ್ ಸಬ್‌ಜಕ್ಟುಗಳು ೧೧ ಗೊತ್ತಾಗಿದ್ದುವು. ಅವುಗಳೊಳಗೆ ಬಹುಶಃ ಈಸಲ ಎಲ್ಲ ವಿಷಯಗಳೂ ಚರ್ಚಿಸಲ್ಪಟ್ಟುವೆಂತಲೇ ಹೇಳಬಹುದು. ಈ ವಿಷಯಗಳಲ್ಲಿ ಆಯಾ ಶಾಖೆಗೆ ಸಂಬಂಧಪಟ್ಟವುಗಳನ್ನೆಲ್ಲಾ ಬೇರೆ ಬೇರೆ ಗುಂಪಾಗಿ ವಿಂಗಡಿಸಿದ್ದುದರಿಂದ ಚರ್ಚೆಗೆ ತುಂಬಾ ಅನುಕೂಲವಾಯಿತು.

ಸಭೆಯಲ್ಲಿ ನಡೆದ ನಡೆವಳಿಕೆಗಳನ್ನು ನೋಡುವಲ್ಲಿ ಪ್ರತಿನಿಧಿಗಳಲ್ಲಿ ಹಲವರು ತಂತಮ್ಮ ಸಬ್ಜೆಕ್ಟುಗಳ ಪೂರ್ವಾಪರವನ್ನು ಚೆನ್ನಾಗಿ ಮಥನ ಮಾಡಿಕೊಂಡಿದ್ದು ಒಳ್ಳೆ ಸಾಮರ್ಥ್ಯದಿಂದ ವಾದಿಸುವಲ್ಲಿ ಚತುರತೆಯನ್ನು ವ್ಯಕ್ತಪಡಿಸಿದರೆಂದು ಹೇಳಬಹುದು. ಇದು ಪ್ರತಿನಿಧಿ ಸಭೆಯ ಗೌರವಪ್ರತಿಷ್ಠೆಗಳ ಅಭಿವೃದ್ಧಿಗೆ ಸಾಧಕವೂ ಭೂಷಣವೂ ಆಗಿದೆ. ಆದರೆ ಗೌರ್ನಮೆಂಟಿನವರು ಈ ವಿಷಯಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಆಗ ತಾನೇ ಪ್ರಶ್ನೆಗಳು ತಮ್ಮ ಮುಂಗಡೆಗೆ ಬಂದಿದ್ದರೆ ಹೇಗೋ ಹಾಗೆ ತತ್ಸಂಬಂಧದ ರಿಕಾರ್ಡುಗಳನ್ನು ಪರಿಶೀಲಿಸುವುದಕ್ಕೂ ಕೌನ್ಸಿಲರುಗಳಲ್ಲಿ ಪರಸ್ಪರ ಆಲೋಚಿಸುವುದಕ್ಕೂ ಪ್ರಯತ್ನಪಡುತ್ತಿರುವುದು ಯಾಕೋ ತಿಳಿಯಲಿಲ್ಲ. ಇದರಿಂದ ಸಭಾಕಾಲದಲ್ಲಿ ಬಹು ಭಾಗವು ವ್ಯರ್ಥವಾಗಿ ಹೋಗುತ್ತದೆ. ಸಬ್ಜೆಕ್ಟುಗಳೆಲ್ಲಾ ೧ ತಿಂಗಳಿಗೆ ಮುಂಚೆಯೇ ಸರ್ಕಾರಕ್ಕೆ ಸಂದಿರುವಾಗ ಆಗಣಿಂದಲೂ ಗೌರ್ನಮೆಂಟಿನವರು ಅವುಗಳ ಸಂಬಂಧದ ಸಂಗತಿಯ ಪೂರ್ವೋತ್ತರಗಳನ್ನು ವಿಚಾರ ಮಾಡಿ ಉತ್ತರಗಳನ್ನು ಸಿದ್ಧಪಡಿಸಿಕೊಂಡಿದ್ದರೆ ಅದಕ್ಕಾಗಿ ಸಭಾಕಾಲವನ್ನು ಹೀಗೆ ವಿನಿಯೋಗಿಸಿಕೊಳ್ಳಬೇಕಾದ ಅವಶ್ಯಕತೆಯು ಬೀಳಲಾರದು. ಮತ್ತು ವಿಷಯಗಳು ಡಿಸ್ಟ್ರಿಕ್ಟು ಡಿ|| ಕಮೀಷನರುಗಳ ಸಭೆಯಲ್ಲಿ ಒಂದು ಸಲ ಚಾಲಿಸಲ್ಪಟ್ಟು ಬರುವ ಪದ್ಧತಿಯಿದ್ದರೂ ಹಿಂದೆ ಇತ್ಯರ್ಥವಾಗಿ ಹೋಗಿರುವ ವಿಷಯಗಳು ಕೆಲವು ಮತ್ತೆ ಮತ್ತೆಯೂ ಸಭೆಯಮುಂದಕ್ಕೆ ಬರುವಂತಾಗಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ.

ದಿವಾನರು ಮುಖಮುರಿದು ಮಾತನಾಡುವ ಅಥವಾ ಗದ್ದರಿಸುವ ಸ್ವಭಾವದವರಲ್ಲವಾದ ಕಾರಣ, ಪ್ರತಿನಿಧಿಗಳಲ್ಲಿ ಕೆಲರು ಉಚ್ಛೃಂಖಲವಾಗಿ ಮಾತನಾಡಲು ಅವಕಾಶವಾಗಿದೆ. ಒಂದೊಂದು ವಿಷಯದಲ್ಲಿ ಮಾತನಾಡಲು ೧೦-೨೦ ಜನರು ಒಂದೇಸಲ ನುಗ್ಗಿ ಅಧ್ಯಕ್ಷರ ಪೀಠದ ಬಳಿಯಲ್ಲಿ ನಿಂತು ಮಾತನಾಡುವುದರಿಂದ ಪ್ರಶ್ನೆಗಳ ಮತ್ತು ಉತ್ತರಗಳ ವಿವರವೆಲ್ಲಾ ಸಭಿಕರಿಗೆ ಸ್ವಲ್ಪವೂ ತಿಳಿಯಲವಕಾಶವಿಲ್ಲದೆ ಬೇಚಾರೂ ಗದ್ದಲವೂ ಉಂಟಾಗುತ್ತಿದೆ. ವಿಷಯ ನಿರೂಪಣ ಮಾಡುವುದಕ್ಕೆ ಒಬ್ಬರಿಬ್ಬರೇ ಬಂದು ನಿಲ್ಲುವುದಕ್ಕೆ ಸ್ಥಲವಿರುವಂತೆ ಮಧ್ಯಭಾಗದಲ್ಲಿ ಒಂದು ಕಟಕಟ್ಟೆಯನ್ನೇರ್ಪಡಿಸಿದರೆ ಈ ದೋಷವು ಪರಿಹಾರವಾಗಬಹುದು.

ದಿವಾನರೂ ಕೌನ್ಸಿಲರುಗಳೂ ಪ್ರೀತಿಯಿಂದಲೂ ಶಾಂತವಾಗಿಯೂ ವಿಷಯ ವಿಚಾರಗಳನ್ನೆಲ್ಲಾ ಕೇಳಿ ಸಾಧ್ಯವಾದಷ್ಟು ಅನುಕೂಲವಾಗಿಯೇ ಪ್ರತ್ಯುತ್ತರಗಳನ್ನು ಕೊಡುವಲ್ಲಿ ವ್ಯಗ್ರರಾಗಿರುತ್ತಾರೆ. ಆದರೆ ಹಲವು ಪ್ರಶ್ನೆಗಳು ಸರ್ಕಾರಕ್ಕಿರುವ ಧನಾಭಾವದ ಕಾರಣದಿಂದ ನೆರವೇರಲವಕಾಶವಿಲ್ಲವೆಂಬ ಪ್ರತ್ಯುತ್ತರವನ್ನು ಪಡೆಯುತ್ತಿವೆ.

ದಿವಾನರ ಭಾಷಣದಲ್ಲಿ ಕಂಡ ಮತ್ತು ಸಭೆಯಲ್ಲಿ ಚರ್ಚಿತಗಳಾದ ಮುಖ್ಯ ವಿಷಯಗಳ ವಿಮರ್ಶೆಯನ್ನು ಮುಂದಣ ಸಂಚಿಕೆಗಳಲ್ಲಿ ಮಾಡುವವರಾಗಿದ್ದೇವೆ.

ಒಳದೇಶದ ವೃತ್ತಾಂತಗಳು.

ಕಳೆದ ಗುರುವಾರ ರಾತ್ರಿಯಿಂದ ಮಳೆಗೆ ಆರಂಭವಾಗಿ ಶುಕ್ರವಾರ ಸಾಯಂಕಾಲ ದೊಡ್ಡಮಳೆಯಾಯಿತು.

ಕಾವೇರೀ ನದಿಗೆ ಸೋಸಲೆ ಬಳಿಯಲ್ಲೇ ಸೇತುವನ್ನು ಕಟ್ಟಲಿಕ್ಕೆ ನಿರ್ಧರವಾಗಿದೆಯೆಂದು ದಿವಾನರವರು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆ ಕೊಡಿಸಿದರು.

ಶ್ರೀಮನ್ಮಹಾರಾಜರವರು ವೇ|| ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರಿಗೆ ಪಂಡಿತರತ್ನಂ ಎಂಬ ಬಿರುದನ್ನು ಭಂಗಾರದ ಕಟಕ ಮರ್ಯಾದೆಯೊಡನೆ ದಯಪಾಲಿಸಿರುತ್ತಾರೆ.

ಕಳೆದ ವಾರವೆಲ್ಲಾ ಆಕಾಶವೈಮಾನಿಕರು ಪ್ರತಿದಿನವೂ ಬೆಳಗಿನ ಹೊತ್ತು ಇಷ್ಟಪಟ್ಟ ದೊಡ್ಡಮನುಷ್ಯರುಗಳನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಪಟ್ಟಣದ ಮೇಲೆಲ್ಲಾ ಸಂಚರಿಸಿ ಆನಂದಗೊಳಿಸಿದರು.

ರಾಜಧಾನಿಯ ಪಂಚಮ ಬೋರ್ಡಿಂಗ್ ಶಾಲೆಯ ವಿದ್ಯಾರ್ಥಿಗಳು ಕಳೆದ ಮಂಗಳವಾರ ರಾತ್ರಿ ಟರ್ನ ಹಾಲಿನಲ್ಲಿ ಧರ್ಮಪಾಲ ಎಂಬ ನಾಟಕವನ್ನು ಅಭಿನಯಿಸಿ ಪ್ರೇಕ್ಷಕರನ್ನು ಸಂತೋಷಪಡಿಸಿದರು.

ಶ್ರೀಮದ್ಯುವರಾಜರವರು ಸೀಮೆಯಿಂದ ಹೊರಟು ಸಮುದ್ರ ಮಾರ್ಗದಲ್ಲಿರುವರು. ಬರುವ ತಾ|| ೫ ರಲ್ಲಿ ಬೊಂಬಾಯನ್ನು ಸೇರಿ ಮುಂದಣವಾರ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆಂದು ತಿಳಿದೆವು.

ಪೌರಸಾಮಾಜಿಕ ಸಭೆಯು ಕಳೆದ ತಾ|| ೨೩ ರಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದಿತು. ಅಧ್ಯಕ್ಷರ ಮತ್ತು ಇನ್ನು ಕೆಲರ ಉಪನ್ಯಾಸಗಳು ಜರುಗಿ ಪದ್ಧತಿಯಂತೆ ನಿರ್ಧಾರಗಳು ಮಾಡಲ್ಪಟ್ಟುವು.

ಪ್ರಜಾಪ್ರತಿನಿಧಿಗಳೇ ಮೊದಲಾದ ದೊಡ್ಡಮನುಷ್ಯರಿಗೂ ಸರ್ಕಾರದುದ್ಯೋಗಿಗಳಿಗೂ ಸಹ ದಿವಾನರು ಪದ್ಧತಿಯಂತೆ ಕಳೆದ ಶನಿವಾರ ಲೇಕ್‌ವ್ಯೂ ಭವನದಲ್ಲಿ ಒಂದು ಅಲ್ಪಾಹಾರ ಸಮಾರಂಭವನ್ನೇರ್ಪಡಿಸಿ, ಸಂತೋಷಪಡಿಸಿದರು.

ಯುದ್ಧಕ್ಕೆ ಹೋಗಿಬಂದ ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರೊಳಗೆ ರಾಜಧಾನಿಯ ಮ್ಯುನಿಸಿಪಾಲಿಟಿಯಿಂದ ನಡೆಯಲು ನಿರ್ಧರಿಸಿದ್ದ ಸತ್ಕಾರಸಮಾರಂಭವು ಕಳೆದ ತಾ|| ೨೯ ನೆ ಶುಕ್ರವಾರ ವಸ್ತುಪ್ರದರ್ಶನಶಾಲಾವರಣದಲ್ಲಿ ನಡೆದಿತು.

ವಿವಾಹ ಮಂಟಪದಲ್ಲಿ ನಡೆದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರಲ್ಲಿ ೨೫ ಮಂದಿ ಉದ್ಯೋಗಿಗಳಿಗೆ ಗಂಡಭೇರುಂಡಾಂಕಿತವಾದ ೨-೩-೪ ತರಗತಿಯ ಸೇನಾ ಪದಕಗಳನ್ನು ದಯಪಾಲಿಸಿದರು.

ಸಂಪದಭ್ಯುದಯ ಸಮಾಜದ ಸೆಂಟರಲ್ ಬೋರ್ಡುಗಳಿಗೆ ಪ್ರಜಾಪ್ರತಿನಿಧಿ ಸಭೆಯಿಂದ ೬ ಮಂದಿಗಳನ್ನು ಆರಿಸಿ ಕಳುಹಿಸಬೇಕಾದ ಕೆಲಸವು ಕಳೆದ ಗುರುವಾರ ನಡೆದಿತು. ಒಟ್ಟು ೪೦ ಮಂದಿಗಳು ಉಮೇದುವಾರರಾಗಿದ್ದರು. ಅವರಲ್ಲಿ ೧೦-೧೨ ಮಂದಿಗಳು ಹಿಂದೆಗೆದುಕೊಂಡು ಉಳಿದವರು ನಿಂತಿದ್ದುದರಲ್ಲಿ ಮ|| ಗಳಾದ ಎಚ್. ಕೃಷ್ಣಶಾಸ್ತ್ರಿಗಳು, ಅಬ್ಬಾಸ್‌ಖಾನರು, ಎಸ್. ಆರ್. ಬಾಲಕೃಷ್ಣರಾಯರು, ಎಂ. ಸುಬ್ಬಯ್ಯನವರು, ಇ. ಪುರುಷೋತ್ತಮಾನಂದಗಿರಿಯವರು, ಜಿ. ಪರಮಶಿವಯ್ಯನವರು, ಈ ದೊಡ್ಡಮನುಷ್ಯರುಗಳು ಹೆಚ್ಚು ಓಟುಗಳನ್ನು ಪಡೆದುದರಿಂದ ಸಭಿಕರಾಗಿ ಆರಿಸಲ್ಪಟ್ಟರು.

ಶ್ರೀಮನ್ಮಹಾರಾಜರವರು ತಮ್ಮ ಹುಜೂರು ಸೆಕ್ರಟರಿಯವರಾದ ಮಿ|| ಮಿರ್ಜಾ ಇಸ್ಮಾಯಿಲ್ ಬಿ. ಎ. ಯವರಿಗೆ "ಅಮೀನ್ ಉಲ್‌ಮುಲ್ಕ್" ಎಂಬ ಬಿರುದನ್ನು ತಕ್ಕ ವಸ್ತ್ರಾಭರಣ ಮರ್ಯಾದೆಯೊಡನೆ ಈ ಸಲದ ದಸರಾ ದರ್ಬಾರಿನಲ್ಲಿ ದಯಪಾಲಿಸಿದರೆಂದು ತಿಳಿಯಿಸಲು ಸಂತೋಷಿಸುತ್ತೇವೆ. ನಿಸ್ಪೃಹತೆ ನಿಷ್ಪಕ್ಷಪಾತತೆ ಲೋಕಾನುಭವ ದೇಶಾಭಿಮಾನ ಪ್ರಭುಭಾಯಾನುವರ್ತಿತ್ವಗಳಲ್ಲಿ ಅಸಾಧಾರಣ ಯೋಗ್ಯತಾಸಂಪನ್ನರಾಗಿರುವ ಇವರು "ವಿಶ್ವಾಸಪಾತ್ರನಾದ ಸಂಸ್ಥಾನ ಸೇವಕ"ನೆಂಬರ್ಥವುಳ್ಳ ಈ ಬಿರುದಿಗೆ ಸಂಪೂರ್ಣವಾಗಿ ಅರ್ಹರಾಗಿರುವರು. ತಮ್ಮ ಗುಣಾತಿಶಯದಿಂದ ಇಂಥ ಮರ್ಯಾದೆಗೆ ಪಾತ್ರರಾದುದಕ್ಕಾಗಿ ಮಿ|| ಮಿರ್ಜಾ ಇಸ್ಮಾಯಿಲ್‌ರವರನ್ನು ನಾವು ಅಭಿನಂದಿಸುವುದಲ್ಲದೆ ಇತೋಪ್ಯತಿಶಯವಾದ ಅಧಿಕಾರ ಪದವಿಯೂ ಗೌರವಗಳೂ ಲಭಿಸುವಂಥ ಯೋಗವು ಇವರಿಗುಂಟಾಗಲೆಂದು ಕೋರುವೆವು.

ಕಳೆದ ತಾ|| ೨೩ ರ ಬೆಳಗ್ಗೆ ಮ|| ಜಡ್ಜ್ ಚಂದ್ರಶೇಖರಯ್ಯರವರ ಅಧ್ಯಕ್ಷತೆಯಲ್ಲಿ ಪಂಚಮರ ಸಭೆಯು ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಕೂಡಿದ್ದಿತು. ಸಭಾಧ್ಯಕ್ಷರೂ ಇನ್ನೂ ಅನೇಕ ಸಭಿಕರೂ ಪಂಚಮರ ಪುರೋವೃದ್ಧಿಗೆ ಅವಶ್ಯಕವಾದ ಸಲಹೆಗಳುಳ್ಳ ಉಪನ್ಯಾಸಗಳನ್ನು ಮಾಡಿದರು. ಮಧ್ಯಾಹ್ನದಲ್ಲಿ ಪಂಚಮ ಪ್ರತಿನಿಧಿಯಾಗಿ ಪ್ರಜಾಪ್ರತಿನಿಧಿ ಸಭೆಗೆ ಬಂದಿರುವ ಮಿ|| ಮುರುಗೇಶಂಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಮತ್ತೆ ಸಭೆಗೂಡಿ, ಪಂಚಮರಿಗೆ ಏಡೆಡ್ ಸ್ಕೂಲು ಮೊದಲಾದುವುಗಳಲ್ಲಿ ಇತರ ಬಾಲಕರ ಜತೆಗೆ ಸೇರಿಸುವುದಕ್ಕೆ ಏರ್ಪಡಿಸಿರುವುದು, ಪ್ರಜಾಪ್ರತಿನಿಧಿ ಸಭೆಗೆ ಪಂಚಮ ಪ್ರತಿನಿಧಿಯನ್ನು ಸೇರಿಸಿದುದೇ ಮೊದಲಾದ ಕಾರ್ಯಗಳಿಂದ ಪಂಚಮರ ಮೇಲೆ ಗೌರ್ನಮೆಂಟಿನವರು ತೋರಿಸಿರುವ ಅಭಿಮಾನದಯೆಗಳಿಗಾಗಿ ಕೃತಜ್ಞತೆ, ಹೈಸ್ಕೂಲು ತರಗತಿಗಳಲ್ಲಿ ಓದುವ ಪಂಚಮ ವಿದ್ಯಾರ್ಥಿಗಳಿಗೆ ವೇತನಗಳನ್ನು ಹೆಚ್ಚಿಸುವುದು ಇತ್ಯಾದಿ ಅವರ ಪುರೋವೃದ್ಧಿಗೆ ಸಾಧಕಗಳಾದ ಕೆಲವು ವಿಷಯಗಳಲ್ಲಿ ನಿರ್ಧಾರಗಳು ಮಾಡಲ್ಪಟ್ಟುವು.

ಪ್ರಜಾಮಿತ್ರಮಂಡಲಿಯ ಸಭಿಕರು ರಾಜಧಾನಿಯ ಧರ್ಮಪ್ರಕಾಶ ಡಿ. ಬನುಮಯ್ಯನವರ ಪಾಠಶಾಲಾ ಭವನದಲ್ಲಿ ರಾ|| ಸಾ|| ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಹುಜೂರು ಸೆಕ್ರೆಟರಿ ಮಿ|| ಮಿರ್ಜಾಇಸ್ಮಾಯಿಲ್‌ರವರಿಗೆ "ಅಮೀನ್ ಉಲ್‌ಮುಲ್ಕ್" ಎಂಬ ಬಿರುದು ಪಾತ್ರವಾದುದಕ್ಕಾಗಿ ಅವರನ್ನು ಅಭಿನಂದಿಸುವುದು, ಮಿ|| ಮಹಮ್ಮದ್‌ಸೇಟರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಮಹಮ್ಮದೀಯರು ಸಭೆಗೂಡಿ ಗೋವಧೆಯನ್ನೂ ಗೋಮಾಂಸ ಭಕ್ಷಣೆಯನ್ನೂ ಪರಿತ್ಯಜಿಸುವ ಶಪಥ ಮಾಡಿದುದಕ್ಕಾಗಿ ಆ ಜನವರ್ಗವನ್ನು ಅಭಿನಂದಿಸುವುದು, ಗ್ರಾಮಾಂತರದ ಮತ್ತು ನಿಮ್ನಜಾತಿಯ ಜನರಿಗೆಲ್ಲಾ ವಿದ್ಯಾವ್ಯಾಪನೆಯಾಗುವಂತೆ ಸ್ಕೀಮನ್ನು ನಿರ್ಮಿಸಿದ ಇನ್|| ಜ|| ಮಿ|| ರಾಮಲಿಂಗರೆಡ್ಡಿಯವರನ್ನು ಅಭಿನಂದಿಸುವುದು, ಮತ್ತು ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನು ಬೇಗನೆ ವ್ಯವಹಾರಕ್ಕೆ ತರಬೇಕೆಂದೂ, ಮಿಲ್ಲರ್ ಕಮಿಟಿ ರಿಪೋರ್ಟಿನಲ್ಲಿ ಕಂಡ ಸೂಚನೆಗಳನ್ನು ವ್ಯವಹಾರಕ್ಕೆ ತರಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸುವುದು, ಪಂಚಮರನ್ನೂ ಇತರ ಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣುತ್ತ ಅವರ ಪ್ರತಿನಿಧಿಯನ್ನು ಪ್ರಜಾಪ್ರತಿನಿಧಿ ಸಭೆಗೆ ಸೇರಿಸಿಕೊಂಡುದಕ್ಕಾಗಿ ಪ್ರಭುತ್ವದವರನ್ನು ಅಭಿನಂದಿಸುವುದು, ಎಕ್ಸಿಕ್ಯೂಟೀವ್ ಕೌನ್ಸಿಲಿನಲ್ಲಿ ಈಗ ಮೂವರೇ ಮೆಂಬರುಗಳಿರುವುದನ್ನು ತಪ್ಪಿಸಿ ೪ ಅಥವಾ ೫ ಮಂದಿಗಳಿರುವಂತೆ ಮಾಡಬೇಕೆನ್ನುವುದು–ಈ ನಿರ್ಧಾರಗಳನ್ನು ಮಾಡಿ ಶ್ರೀಮನ್ಮಹಾರಾಜರ ಮತ್ತು ಯುವರಾಜರ ಶ್ರೇಯಸ್ಸನ್ನು ಕೋರಿ ಸಭೆಯನ್ನು ಮುಗಿಸಿದರು.

ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನ್‌ಸಾಹೇಬರವರು ಮಾಡಿದ ಭಾಷಣದಲ್ಲಿನ ಮುಖ್ಯಭಾಗಗಳು.

ಮಹಾಶಯರೇ,

ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರರವರ ಆಜ್ಞಾನುಸಾರವಾಗಿ ಪ್ರಜಾಪ್ರತಿನಿಧಿ ಸಭೆಯ 37 ನೆಯ ದಸರಾ ಅಧಿವೇಶನಕ್ಕೆ ಆದರಪೂರ್ವಕವಾಗಿ ತಮ್ಮನ್ನು ಬರಮಾಡಿಕೊಂಡು, ಕಳೆದ ವರ್ಷದಲ್ಲಿ ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ಅತಿಮುಖ್ಯವಾದ ವಿಷಯಗಳನ್ನು ತಮ್ಮಗಳಿಗೆ ಸಂಕ್ಷೇಪವಾಗಿ ತಿಳಿಸುವೆವು.

ಯೂರೋಪ್ ಖಂಡದಲ್ಲಿ ಶ್ರೀಮದ್ಯುವರಾಜರವರ ಸಂಚಾರ.

ಈ ದಿನದ ನಡೆವಳಿಕೆಗಳನ್ನು ಪ್ರಾರಂಭಿಸುವುದಕ್ಕೆ ಮೊದಲು ಬರುವ ತಿಂಗಳ ಎರಡನೆ ವಾರದಲ್ಲಿ ನಮ್ಮ ಶ್ರೀಮದ್ಯುವರಾಜರವರು ಯೂರೋಪ್ ಖಂಡದಲ್ಲಿ ತಮ್ಮ ಸಂಚಾರವನ್ನು ಪೂರೈಸಿಕೊಂಡು ಮೈಸೂರಿಗೆ ದಯಮಾಡಿಸುವವರಾಗಿರುವರೆಂಬ ಶುಭಸಮಾಚಾರವನ್ನು ತಮ್ಮಗಳಿಗೆ ಶ್ರುತಪಡಿಸಲು ನಾವು ತುಂಬಾ ಸಂತೋಷಿಸುತ್ತೇವೆ. ಅತ್ಯಂತ ಪ್ರವರ್ಧಮಾನ ಸ್ಥಿತಿಯಲ್ಲಿರುವ ಪಾಶ್ಚಾತ್ಯ ದೇಶಗಳಲ್ಲಿ ರಾಜ್ಯಾಡಳಿತವೇ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಸಂಸ್ಥೆಗಳನ್ನೂ, ಅಲ್ಲಿ ನಡೆಯುತ್ತಿರುವ ನಾನಾವಿಧವಾದ ಕೆಲಸಕಾರ್ಯಗಳನ್ನೂ ತಾವೇ ಕಣ್ಣಾರನೋಡಿ ಅವುಗಳ ನಿಜಸ್ವರೂಪವನ್ನು ತಿಳಿದುಕೊಳ್ಳುವ ಉದ್ದೇಶದೊಡನೆ ಯೂರೋಪ್ ಖಂಡಕ್ಕೆ ಅವರು ದಯದಯಮಾಡಿಸಿದ್ದು ಇದು ಎರಡನೆಯ ಸಾರಿಯಾಗಿರುವುದು. ಮೊದಲನೆಯ ಸಾರಿ 1913 ನೆಯ ವರುಷದಲ್ಲಿ ಯುದ್ಧವು ಪ್ರಾರಂಭವಾಗುವುದಕ್ಕೆ ಪೂರ್ವ ಅವರ ಸವಾರಿಯು ಚಿತ್ತೈಸಿತ್ತು. ಯುದ್ಧವು ನಿಂತತರುವಾಯ ಯೂರೋಪ್ ಖಂಡದ ರಾಜ್ಯತಂತ್ರವಿಶಾರದರ ಗಮನಕ್ಕೆ ಮುಂದೊದಗಿರುವ ನವೀನ ರಾಜ್ಯಭಾರ ರಚನಾಕ್ರಮಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಮ್ಮ ಶ್ರೀಮದ್ಯುವರಾಜರವರು ಸ್ವತಃ ತಿಳಿದುಕೊಳ್ಳಬೇಕೆಂಬ ಕುತೂಹಲಯುಕ್ತರಾಗಿರುವುದು ಸ್ವಾಭಾವಿಕವೇ ಸರಿ. ನಮಗೆ ಬಂದಿರುವ ವರ್ತಮಾನದಿಂದ ಪಾಶ್ಚಾತ್ಯದೇಶದ ಪ್ರಜೆಗಳ ಸಾಮಾಜಿಕ ಪುರೋವೃದ್ಧಿಗಾಗಿಯೂ, ಸಂಪದಭಿವೃದ್ಧಿಗಾಗಿಯೂ ಪ್ರಸಕ್ತ ಸಮಯದಲ್ಲಿ ಪ್ರಾರಂಭಿಸಲ್ಪಡುತ್ತಿರುವ ಎಲ್ಲಾ ಏರ್ಪಾಡುಗಳನ್ನೂ ಮನನಮಾಡಿಕೊಳ್ಳುವ ವಿಷಯದಲ್ಲಿ ಮಹಾಸ್ವಾಮಿಯವರಿಗೆ ಅನ್ಯಾದೃಶವಾದ ಅವಕಾಶವು ದೊರೆತಿದ್ದಿತೆಂದು ತಿಳಿಯಬರುವುದಲ್ಲದೆ, ಮಹಾಸ್ವಾಮಿಯವರು ತಮಗೆ ದೊರೆತ ಅವಕಾಶವನ್ನು ಸಂಪೂರ್ಣವಾಗಿ ಸಾರ್ಥಕಗೊಳಿಸಿರುವರೆಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಅವರು ದಯಮಾಡಿಸಿದ ಕಡೆಯಲ್ಲೆಲ್ಲ ತಮ್ಮ ಮಹೋನ್ನತ ಪದವಿಗೂ ಸನ್ನಿಧಾನಕ್ಕೂ ಅನುರೂಪವಾದ ಗೌರವದೊಡನೆ ಸನ್ಮಾನಿಸಲ್ಪಟ್ಟಿರುವರು. ನಮ್ಮ ವಿಶ್ವಾಸಕ್ಕೆ ನೆಲೆಯಾಗಿರುವ ಶ್ರೀಮದ್ಯುವರಾಜರವರಿಗೆ ಯೂರೋಪ್ ಖಂಡದ ಸಂಚಾರವನ್ನು ಮುಗಿಸಿಕೊಂಡು ಸ್ವದೇಶಕ್ಕೆ ದಯಮಾಡಿಸುವ ಸಮಯದಲ್ಲಿ ಭಕ್ತಿಪುರಸ್ಸರವಾದ ಮತ್ತು ಉತ್ಸಾಹಭರಿತವಾದ ಸ್ವಾಗತವನ್ನು ನಾವು ಒಪ್ಪಿಸಬೇಕೆಂಬುದು ತಮ್ಮೆಲ್ಲರ ಅಪೇಕ್ಷೆಯಾಗಿರುವುದೆಂದು ನಂಬಿರುತ್ತೇವೆ.

ಕಾಲಸ್ಥಿತಿ.

ಸನ್ 1919 ನೆಯ ವರ್ಷದಲ್ಲಿ ಮಳೆಯು ಸಾಮಾನ್ಯ ಸರಾಸರಿಗಿಂತಲೂ ಹೆಚ್ಚಾಗಿ ಬಿದ್ದುದಲ್ಲದೆ ಕಾಲಕ್ಕೆ ಸರಿಯಾಗಿ ಎಲ್ಲಾ ಕಡೆಗಳಲ್ಲಿಯೂ ಆಯಿತು. ಇದರಿಂದ ತರೀ ಮತ್ತು ಖುಷ್ಕೀ ಬೆಳೆಗಳ ವಿಸ್ತೀರ್ಣವು ಹಿಂದಿನ ವರ್ಷಕ್ಕಿಂತಲೂ ವಿಶೇಷವಾಗಿ ಹೆಚ್ಚಿದುದಲ್ಲದೆ ಸಾಮಾನ್ಯವಾಗಿ ಸರಾಸರಿ ಬೆಳೆಯು 8 ಆಣೆಯಿಂದ 12 ಆಣೆಯವರೆಗೆ ಆಯಿತು. 1919–20 ನೆಯ ವರ್ಷದಲ್ಲಿ ಒಟ್ಟು 7,69,253 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಭತ್ತವೂ, 22,38,228 ಎಕರೆ ಜಮೀನಿನಲ್ಲಿ ರಾಗಿಯೂ ಸಾಗುವಳಿಯಾಯಿತು. 1918–19 ನೆಯ ವರ್ಷದಲ್ಲಿ 6,34,456 ಎಕರೆ ಜಮೀನಿನಲ್ಲಿ ಭತ್ತವೂ, 19,66,411 ಎಕರೆ ಜಮೀನಿನಲ್ಲಿ ರಾಗಿಯೂ ಸಾಗುವಳಿಯಾಯಿತು.

ಆದರೆ ಚಾಲ್ತಿ ವರ್ಷದಲ್ಲಿ ಮುಂಗಾರು ಮಳೆಯು ಬಹಳ ಕಮ್ಮಿಯಾಗಿ ಬಿದ್ದಪ್ರಯುಕ್ತ ಬೇಸಾಯದ ಕೆಲಸವು ಬಹುಮಟ್ಟಿಗೆ ವಿಳಂಬವಾಯಿತು. ಅನೇಕ ಮೈದಾನ ತಾಲ್ಲೂಕುಗಳಲ್ಲಿ ಮುಂಗಾರು ಬೆಳೆಯ ಸಾಗುವಳಿಯ ವಿಸ್ತೀರ್ಣವು ಸ್ವಲ್ಪಮಟ್ಟಿಗೆ ಕಮ್ಮಿ ಬಿದ್ದಿರುವುದೆಂತಲೂ, ಅನೇಕ ಸ್ಥಳಗಳಲ್ಲಿ ಆಯಾಮ ಕಾಲವು ಮೀರುವವರೆಗೆ ರಾಗಿಯ ಬಿತ್ತನೆ ಪೂರೈಸಿರಲಿಲ್ಲವೆಂತಲೂ, ರಿಪೋರ್ಟಾಗಿರುತ್ತದೆ. ಆದರೂ ಈಚೆಗೆ ಸಾಮಾನ್ಯವಾಗಿ ಸಂಸ್ಥಾನಾದ್ಯಂತ ಮಳೆ ಬಿದ್ದಿರುವ ಪ್ರಯುಕ್ತ ಬೆಳೆ ಚೆನ್ನಾಗಿ ಆಗಬಹುದೆಂಬ ನಂಬುಗೆಯುಂಟಾಗಿ ಸುಭಿಕ್ಷಲಕ್ಷಣಗಳು ಕಾಣಿಸಿಕೊಂಡಿವೆ.

ಆಹಾರಧಾನ್ಯಗಳ ಸ್ಥಿತಿ.

ಆಹಾರಧಾನ್ಯಗಳ ಧಾರಣೆಯು ಬಹು ಮಟ್ಟಿಗೆ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ನಾವು ಹಿಂದೆ ನೆರೆದಿದ್ದ ಕಾಲದಲ್ಲಿದ್ದಂತೆಯೇ ಇರುವುದು. ನಮ್ಮ ಧಾನ್ಯಗಳ ದಾಸ್ತಾನು ಮುಗಿದು ಹೋಗಿದ್ದುದರಿಂದ 1919 ನೆಯ ವರುಷದ ಫಸಲಿನಿಂದ ಧಾರಣೆವಾಸಿಗಳು ಅಷ್ಟೇನೂ ತಗ್ಗಲಿಲ್ಲ; ಆದಕಾರಣ ನಮ್ಮ ಜನಗಳ ಕ್ಷೇಮಕ್ಕೋಸ್ಕರ ಧಾರಣೆಗಳು ಮತ್ತಷ್ಟು ಏರದಂತೆ ಮಾಡುವ ಉದ್ದೇಶದೊಡನೆ ಸರ್ಕಾರದ ಹತೋಟಿಯನ್ನು ಜಾರಿಯಲ್ಲಿಯೇ ಇಟ್ಟಿರಲು ಏರ್ಪಾಡು ಮಾಡಬೇಕಾಯಿತು. ಇನ್ನೂ ಆ ಹತೋಟಿಯನ್ನು ತಪ್ಪಿಸದೆ ಉಳಿಸಿಕೊಂಡಿದೆ. ಆದರೂ ದ್ವಿದಳ ಧಾನ್ಯಗಳ ಮತ್ತು ಇತರ ಪದಾರ್ಥಗಳ ವಿಷಯದಲ್ಲಿ ಕಾಲಸ್ಥಿತಿಯು ಅನುಕೂಲವಾಗಿದ್ದುದರಿಂದ ಸರ್ಕಾರದ ಹತೋಟಿಯನ್ನು ತೆಗೆದು ಹಾಕಲು ಅವಕಾಶವಾಯಿತು. 1919 ನೆಯ ನವಂಬರು ತಿಂಗಳ ಲಾಗಾಯಿತು ಉದ್ದು, ಹೆಸರು, ತೊಗರಿಬೇಳೆ, ಮೆಣಸಿನಕಾಯಿ, ಹುಲ್ಲು ಮತ್ತು ಮೇವು, ಇವುಗಳನ್ನು ಹತೋಟಿಗೊಳಪಡಿಸಲ್ಪಟ್ಟ ಪದಾರ್ಥಗಳ ಪಟ್ಟಿಯಿಂದ ವಜಾಮಾಡಿರುತ್ತದೆ. ಕೆರೋಸೀನ್ ಎಣ್ಣೆಯ ಕಂಪನಿಗಳವರು ಬೇಕಾಗುವಷ್ಟು ಎಣ್ಣೆಯನ್ನು ಸರಬರಾಯಿ ಮಾಡುವುದಾಗಿ ಭರವಸೆ ಕೊಟ್ಟದ್ದರಿಂದ ಅದರ ಮೇಲಿನ ಹತೋಟಿಯನ್ನೂ ತಪ್ಪಿಸಲಾಯಿತು.

ಹತೋಟಿಗೊಳಪಡಿಸಿರುವ ಸರಕುಗಳನ್ನು, ಅಪ್ಪಣೆ ಪಡೆದ ವಿನಾ, ರೈಲ್ ಮೂಲಕ ಅಥವಾ ರಸ್ತೆಯ ಮೂಲಕ ರಫ್ತು ಮಾಡಕೂಡದೆಂಬ ನಿರೋಧವು ಇನ್ನೂ ಜಾರಿಯಲ್ಲಿದೆ. ಆದರೆ ಸಂಸ್ಥಾನದ ಸರಹದ್ದಿಗೆ ಹತ್ತು ಮೈಲಿ ಫಾಸಲೆಯಲ್ಲಿರುವ ಪ್ರದೇಶದಲ್ಲಿ ಆಹಾರಧಾನ್ಯಗಳನ್ನು ಸಾಗಿಸುವ ವಿಷಯದಲ್ಲಿದ್ದ ನಿರ್ಬಂಧವನ್ನು ಮಾತ್ರ ಈಚೆಗೆ ಬದಲಾಯಿಸಿರುತ್ತದೆ. ಸರ್ಕಾರದವರು ಬೊಂಬಾಯಾಧಿಪತ್ಯದ ಎಲ್ಲೆಯ ವಿನಾ ಇತರಕಡೆಗಳಲ್ಲಿ ಈ ನಿರ್ಬಂಧವನ್ನು ತೆಗೆದುಹಾಕುವುದನ್ನು ಮಂಜೂರ್ಮಾಡಿರುತ್ತಾರೆ; ಆದರೆ ಆ ಸರಹದ್ದಿನ ಹೊರಪಾರ್ಶ್ವದಲ್ಲಿ ಮಾತ್ರ ಒಂದೊಂದು ರೀತಿಯ ಧಾರಣೆ ಇರುವ ಪ್ರಯುಕ್ತ ಧಾನ್ಯವನ್ನು ಕಳ್ಳತನದಿಂದ ರಫ್ತು ಮಾಡುವುದಕ್ಕೆ ಅವಕಾಶವಿಲ್ಲದಂತೆ ಈ ನಿರ್ಬಂಧವನ್ನು ಇಟ್ಟಿರಬೇಕಾಗಿದೆ. ಅಲ್ಲಿಯೂ ಸಹ ಹತೋಟಿಯ ಪ್ರದೇಶವನ್ನು 5 ಮೈಲಿಯ ಫಾಸಲೆಗೆ ತಗ್ಗಿಸಿದೆ.

ಆಹಾರಧಾನ್ಯಗಳು ಕಮ್ಮಿಯಾಗಿದ್ದ ಸ್ಥಳಗಳಲ್ಲಿ ದಾಸ್ತಾನ್ ಭರ್ತಿಮಾಡುವ ಮತ್ತು ವಿಪರೀತಲಾಭಕ್ಕೆ ಮಾರುವುದನ್ನು ತಪ್ಪಿಸುವ ಉದ್ದೇಶದೊಡನೆ ಈ ವರ್ಷದಲ್ಲಿಯೂ ಸಹ ಅಕ್ಕಿಯನ್ನು ಹೊರಗಿನಿಂದ ವಿಶೇಷವಾಗಿ ತರಿಸಲಾಯಿತು. ಬರ್ಮಾ ದೇಶದಿಂದ ಸುಮಾರು 35 ಲಕ್ಷ ರೂಪಾಯಿ ಬೆಲೆಯ 31,800 ಟನ್ ಅಕ್ಕಿಯನ್ನು ಆಮದು ಮಾಡಲಾಯಿತು. ಅಕ್ಕಿಗೆ ಬದಲಾಗಿ ಬೇರೆ ಧಾನ್ಯವನ್ನು ಕಳುಹಿಸಿ ಮದರಾಸಿನಿಂದ ಕೆಲವುಮಟ್ಟಿಗೆ ಅಕ್ಕಿಯನ್ನು ತರಿಸಲಾಯಿತು. ಆದರೆ ಇಂಡಿಯಾ ಸರ್ಕಾರದವರು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಆಹಾರ ಧಾನ್ಯಗಳನ್ನು ಕಳುಹಿಸುವ ವಿಚಾರದಲ್ಲಿದ್ದ ಹತೋಟಿಯನ್ನು ರದ್ದು ಮಾಡಿದ್ದರಿಂದ ಈ ಏರ್ಪಾಡು ಸ್ವಾಭಾವಿಕವಾಗಿ ನಿಂತುಹೋಯಿತು. ಅದರಿಂದೀಚೆಗೆ ಸಿವಿಲ್ ಸಪ್ಲೈಸ್ ಡೈರೆಕ್ಟರವರು ಅಷ್ಟೈರು ಪ್ರಮಾಣದ ಸರಕುಗಳನ್ನು ರಫ್ತುಮಾಡಲು ಅಪ್ಪಣೆ ಕೊಟ್ಟಿರುತ್ತಾರೆ. ಮದರಾಸು ಆಧಿಪತ್ಯದಿಂದ ರೈಲು ಮೂಲಕವೂ ರಸ್ತೆಯ ಮೂಲಕವೂ ಒಟ್ಟು 5,146 ಟನ್ ತೂಕದ ಆಹಾರಧಾನ್ಯಗಳು ನಮ್ಮಲ್ಲಿಗೆ ಬಂದುದಕ್ಕೆ ಪ್ರತಿಯಾಗಿ ಸಂಸ್ಥಾನದಿಂದ ಅಲ್ಲಿಗೆ 7,883 ಟನ್ನಿನಷ್ಟು ರಫ್ತಾಗಿರುವುವು. ಈ ವಿಷಯದ ಪ್ರಸ್ತಾಪವನ್ನು ಪೂರೈಸುವುದಕ್ಕೆ ಮೊದಲು ಕಾಲಸ್ಥಿತಿಯು ಎಂದಿನಂತೆ ಆಗುವವರೆಗೂ ಸರ್ಕಾರದವರು ಆಹಾರಧಾನ್ಯಗಳ ಮೇಲಿನ ಹತೋಟಿಯನ್ನು ತೆಗೆದುಹಾಕುವವರಾಗಿಲ್ಲವೆಂಬ ಸಂಗತಿಯನ್ನು ಸ್ಪಷ್ಟಪಡಿಸಲಿಚ್ಛೈಸುವೆವು.

1920–21ನೆಯ ವರ್ಷದ ಅವಧಿಯ ಸರ್ಕಾರದ ಸಾಲ.

ಈಗ ನಡೆಯುತ್ತಿರುವ ಆದಾಯಕರವಾದ ಸರ್ಕಾರಿ ಕಾಮಗಾರಿಗಳಿಗೆ ಹಣವನ್ನೊದಗಿಸುವುದಕ್ಕಾಗಿ ಪ್ರಸಕ್ತ ವರ್ಷದಲ್ಲಿ ಸಾಲ ತೆಗೆಯಬೇಕೆಂದು ನಿಶ್ಚಯಿಸಿರುತ್ತೆಂಬ ಅಂಶವನ್ನು ಈ ಸಭೆಯ ಕಳೆದ ವರ್ಧಂತ್ಯುತ್ಸವದ ಅಧಿವೇಶನದ ನಮ್ಮ ಭಾಷಣದಲ್ಲಿ ಸೂಚಿಸಿದ್ದೆವು. ಇಂಡಿಯಾ ದೇಶದ ಎಲ್ಲಾ ಭಾಗಗಳಲ್ಲಿರುವ ಜನರೂ ಈ ಸಾಲಕ್ಕೆ ಹಣ ಕೊಡುವಂತೆ ಇಂಡಿಯಾ ಸರ್ಕಾರದವರ ಅಪ್ಪಣೆಯನ್ನು ಪಡೆದು ಏರ್ಪಾಡು ನಡಿಸಲ್ಪಡುವುದಾದರೂ, ನಮ್ಮ ಸಂಸ್ಥಾನದ ಪ್ರಜೆಗಳೇ ಈ ಸಾಲಕ್ಕೆ ಪೂರಾ ಅಥವಾ ಬಹುಮಟ್ಟಿಗೆ ಕೊಡಬೇಕೆಂಬುದೇ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರ ಕುತೂಹಲವಾಗಿರುವುದೆಂದು ತಮ್ಮಗಳಿಗೆ ಶ್ರುತಪಡಿಸಿದ್ದೆವು. ಅಲ್ಲದೆ ಈ ಸಾಲವು ನಂಬುಗೆಯಾದ ವರಮಾನವನ್ನು ತರುವುದಾಗಿರುವ ಪ್ರಯುಕ್ತ ಇದಕ್ಕೆ ನಮ್ಮ ಪ್ರಜೆಗಳು ತಾವು ಉಳಿಸಿಟ್ಟಿರುವ ಹಣವನ್ನು ಧಾರಾಳವಾಗಿ ಕೊಡುವವರಾದಾರೆಂದು ನಾವು ನಿರೀಕ್ಷಿಸುವುದಾಗಿ ಸೂಚಿಸಿದ್ದೆವು. ನಮ್ಮ ನಿರೀಕ್ಷಣೆಗಿಂತ ಹೆಚ್ಚಾಗಿಯೇ ಸಾಲಕ್ಕೆ ಹಣವು ಕೂಡಿರುವುದನ್ನು ಕೇಳಿ ನಮಗೆ ತುಂಬಾ ಸಂತೋಷವಾಗಿದೆ. ಒಂದು ಕೋಟಿ ರೂಪಾಯಿ ಮಾತ್ರ ಸಾಲ ತೆಗೆಯುವಂತೆ ಗೊತ್ತುಮಾಡಿತ್ತು. ಸಾಲದ ಷರತ್ತುಗಳನ್ನು ಕಳೆದ ಜೂನ್ ತಿಂಗಳ ಅಖೈರಿನಲ್ಲಿ ಪ್ರಕಟಿಸಿ ಸಾಲಕ್ಕೆ ಚಂದಾ ಕೊಡುವುದಕ್ಕೆ ಜೂಲೈ 1 ರಿಂದ ಸೆಪ್ಟಂಬರು 30 ರವರೆಗೆ ಮೂರು ತಿಂಗಳು ಮಾತ್ರ ಅವಕಾಶ ಕೊಟ್ಟಿತ್ತು. ಆದರೂ ಗೊತ್ತುಮಾಡಿದ ಅವಧಿಯೊಳಗಾಗಿಯೇ ನಾವು ಕೇಳಿದ್ದಷ್ಟಕ್ಕಿಂತಲೂ ಜಾಸ್ತಿಯಾಗಿ ಚಂದಾ ಆಗಿ 1,36,00,000 ರೂಪಾಯಿಗೆ ಮೇಲ್ಪಟ್ಟು ದರಖಾಸ್ತುಗಳು ತಲಪಿದುವು. ನಮ್ಮ ಸಂಸ್ಥಾನದಲ್ಲಿಯೇ 1,20,00,000 ಕ್ಕಿಂತಲೂ ಹೆಚ್ಚಾಗಿ ಜಮೆಯಾಗಿರುತ್ತದೆ; ಈ ಸಾಲಕ್ಕೆ ಮೈಸೂರು ದೇಶದ ಪ್ರಜೆಗಳು ಧಾರಾಳವಾಗಿ ಹಣ ಹಾಕಿರುವುದನ್ನು ಕೇಳಿ ಶ್ರೀಮನ್ಮಹಾರಾಜರವರಿಗೆ ವಿಶೇಷ ಸಂತೋಷವಾಗಿರುತ್ತದೆ. ಈ ಸಂದರ್ಭದಲ್ಲಿ ಮೈಸೂರು ಬ್ಯಾಂಕಿನವರು ಈ ಸಾಲವನ್ನು ಪ್ರಚುರಪಡಿಸಿ ಹಣವನ್ನು ಜಮಾಯಿಸುವುದರಲ್ಲಿ ಸರ್ಕಾರದವರಿಗೆ ವಿಶೇಷ ಸಹಾಯ ಮಾಡಿರುವ ಅಂಶವು ನಮ್ಮ ಅವಗಾಹನೆಗೆ ಬಂದಿರುತ್ತೆಂದು ಇಲ್ಲಿ ಸೂಚಿಸಲು ಅಪೇಕ್ಷಿಸುತ್ತೇವೆ. ಈ ಬ್ಯಾಂಕಿನಿಂದಲೂ ಬ್ಯಾಂಕಿನ ಮೂಲಕವೂ 53 ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿಯೇ ಚಂದಾ ಆಯಿತು.

ಕಳೆದ ವರ್ಷದ ಆಡಳಿತ.

ಪ್ರಜಾಪಕ್ಷದ ಸಭೆಗಳು.

ನ್ಯಾಯವಿಧಾಯಕ ಸಭೆ.

ಕಳೆದ ವರ್ಷ ಸೂಚಿಸಿದ ಮೇರೆಗೆ ನ್ಯಾಯವಿಧಾಯಕ ಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯನ್ನು 21 ರಿಂದ 30 ಕ್ಕೆ ಹೆಚ್ಚಿಸಲಾಯಿತು. ಈ ಪೈಕಿ 4 ಮಂದಿ ಪ್ರಜಾಪ್ರತಿನಿಧಿ ಸಭೆಯಿಂದಲೂ, 8 ಮಂದಿ ನೇರವಾಗಿ ಈ ಸಭೆಗೆ ಡಿಸ್ಟ್ರಿಕ್ಟುಗಳಲ್ಲಿ ಸಮ್ಮತಿಯನ್ನು ಕೊಡುವವರಿಂದಲೂ, ಒಬ್ಬರು ಮೈಸೂರು ವಿಶ್ವವಿದ್ಯಾಲಯದಿಂದಲೂ ಚುನಾಯಿಸಲ್ಪಟ್ಟರು. ಪ್ರಕೃತ ಸಭೆಯಲ್ಲಿರುವ ಮೆಂಬರುಗಳ ಒಟ್ಟು ಸಂಖ್ಯೆಯಲ್ಲಿ 18 ಮಂದಿ ಸರ್ಕಾರಿ ಉದ್ಯೋಗಸ್ಥರಲ್ಲದವರೂ, 12 ಮಂದಿ ಸರ್ಕಾರಿ ಉದ್ಯೋಗಸ್ಥರೂ ಆಗಿರುತ್ತಾರೆ. ಫೈನಾನ್ಸ್ ಕಮಿಟಿಗೆ ಒಬ್ಬರನ್ನು ಚುನಾವಣೆಯ ಮೂಲಕ ಮತ್ತೊಬ್ಬರನ್ನು ನಿಯಮನದ ಮೂಲಕ— ಈ ರೀತಿ ಇಬ್ಬರು ಮೆಂಬರುಗಳನ್ನು ಕಳುಹಿಸುವ ಹಕ್ಕನ್ನು ನ್ಯಾಯವಿಧಾಯಕ ಸಭೆಗೆ ಕೊಡಲಾಗಿದೆ.

ಪ್ರಸಕ್ತ ವರ್ಷದಲ್ಲಿ ಈ ಸಭೆಯ ನಾಲ್ಕು ಮೀಟಿಂಗುಗಳು ನಡೆದುವು ಮತ್ತು ಮತ್ತು 13 ಮಸೂದೆಗಳು ಕಾನೂನಾಗಿ ಮಂಜೂರ್ಮಾಡಲ್ಪಟ್ಟವು.

ಪ್ರಜಾಪ್ರತಿನಿಧಿ ಸಭೆ.

ಮ್ಯುನಿಸಿಪಲ್ ಕೌನ್ಸಿಲರುಗಳಿಂದಲೂ, ಲೋಕಲ್ ಬೋರ್ಡುಗಳಿಂದಲೂ, ಅಂಗೀಕೃತವಾದ ಸಂಘಗಳಿಂದಲೂ, ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸಲ್ಪಡುವ ಮೆಂಬರುಗಳ ಅಧಿಕಾರದ ಅವಧಿಯು ಇದುವರೆಗೆ ಒಂದು ವರುಷ ಮಾತ್ರವೇ ಆಗಿತ್ತು. ಇಷ್ಟು ಅಲ್ಪಕಾಲದಲ್ಲಿ ಮೆಂಬರುಗಳು ಉಪಯುಕ್ತವಾದ ಕಾರ್ಯಗಳನ್ನು ನಡಿಸುವುದು ಅಸಾಧ್ಯ. ಇದಲ್ಲದೆ ಈ ಪ್ರತಿನಿಧಿ ಸಭೆಗೆ ಕಳುಹಿಸಲ್ಪಡುವ ಇಂತಹ ಮೆಂಬರುಗಳನ್ನು ನ್ಯಾಯವಿಧಾಯಕ ಸಭೆಗೆ ಚುನಾಯಿಸಿದುದೇ ಆದರೆ, ಅವರ ಅವಧಿಯು ಒಂದು ವರ್ಷಕ್ಕೇ ಪೂರೈಸಿಹೋಗುವುದರಿಂದ ಅನಂತರ ಅವರ ಸ್ಥಾನಕ್ಕೆ ಈ ಸಭೆಯಿಂದ ಬೇರೊಬ್ಬರನ್ನು ಚುನಾಯಿಸಿಕೊಳ್ಳಬೇಕಾಗುತ್ತದೆ. ಈ ಅನನುಕೂಲಗಳನ್ನು ತಪ್ಪಿಸುವ ಉದ್ದೇಶದಿಂದ ಮೇಲ್ಕಂಡ ಸಂಸ್ಥೆಗಳಿಂದ ಬರುವ ಮೆಂಬರುಗಳ ಅವಧಿಯನ್ನು ತಾಲ್ಲೂಕುಗಳಿಂದ ಬರುವ ಮೆಂಬರುಗಳ ಅಧಿಕಾರದ ಅವಧಿಗೆ ಸಮನಾಗಿರುವಂತೆ ಮಾಡಲಾಯಿತು. ಅಲ್ಲದೆ ಖಾಲಿಯಾದ ಸ್ಥಾನಗಳ ವಿಷಯದಲ್ಲಿ ಉಪಚುನಾವಣೆಗಳಿಗೆ ಅವಕಾಶ ಮಾಡಲಾಗಿದೆ. ಸಮ್ಮತಿ ಕೊಡುವವರ ಯೋಗ್ಯತಾವಿಶೇಷಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ; ಮತ್ತು ಮೈಸೂರು ಸಂಸ್ಥಾನದ ಸೈನ್ಯಗಳಲ್ಲಿ ಕೆಲಸದಿಂದ ನಿವೃತ್ತರಾದ ಅಥವಾ ಪೆನ್ಷನ್ ಪಡೆದ ಅಧಿಕಾರಿಗಳಿಗೆ ಸಮ್ಮತಿಯನ್ನು ಕೊಡುವುದಕ್ಕೂ ಚುನಾವಣೆಗೆ ತಾವೇ ನಿಲ್ಲುವುದಕ್ಕೂ ಅಧಿಕಾರ ಕೊಡಲಾಗಿದೆ.

ಸಂಪದಭಿವೃದ್ಧಿ ಸಮಾಜ.

1920 ನೆಯ ಜನವರಿ ಗುರ್‍ರೇ ಲಾಗಾಯ್ತು ಸಂಪದಭಿವೃದ್ಧಿ ಸಮಾಜ ರಚನಾಕ್ರಮವನ್ನು ಸಮಗ್ರವಾಗಿ ಪುನರ್ವ್ಯವಸ್ಥೆ ಮಾಡಲಾಯಿತು. ಸಮಾಜಕ್ಕೊಳಪಟ್ಟ ಮೂರು ಬೋರ್ಡುಗಳ ಸಿಬ್ಬಂದಿಯೂ ನವೀನ ವಿಧ್ಯಮಾನಗಳಿಗೆ ಅನುಕೂಲವಾಗಿರುವಂತೆ ಕಮ್ಮಿಮಾಡಲ್ಪಟ್ಟಿತು; ಮತ್ತು ಡಿಸ್ಟ್ರಿಕ್ಟುಗಳಲ್ಲಿ ಕೆಲಸವನ್ನು ನಡಿಸುವ ವಿಚಾರದಲ್ಲಿ ವಿವರವಾದ ತಿಳಿವಳಿಕೆಗಳನ್ನು ಕೊಡಲಾಯಿತು. ಸಂಪದಭಿವೃದ್ಧಿಯ ಕಾರ್ಯವನ್ನು ನಡಿಸುವುದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರುಗಳ ಸ್ಥಾನದಲ್ಲಿ ಸೆಕ್ರಿಟರಿಗಳನ್ನು ಮಂಜೂರ್ಮಾಡಲಾಗಿದೆ. ಮೈಸೂರು ಎಕನಾಮಿಕ್ ಜರ್ನಲ್ ಪತ್ರಿಕೆಯ ಇಂಗ್ಲೀಷ್ ಮತ್ತು ಕನ್ನಡ ಸಂಚಿಕೆಗಳನ್ನು ಕ್ರಮವಾಗಿ ಪ್ರಕಟಿಸಲಾಯಿತು. ಈಚೆಗೆ ಕನ್ನಡ ಅರ್ಥಸಾಧಕ ಪತ್ರಿಕೆಯನ್ನು ಸ್ವತಂತ್ರವಾಗಿ ನಡಿಸುವ ಬಗ್ಗೆ ಖಾಸಗೀಜನರ ವಶಕ್ಕೆ ಒಪ್ಪಿಸಲಾಗಿದೆ. ಬರುವ ಜನವರಿ ತಿಂಗಳ ಲಾಗಾಯಿತು ಇಂಗ್ಲೀಷ್ ಎಕನಾಮಿಕ್ ಜರ್ನಲನ್ನೂ ಸಹ ಸ್ವತಂತ್ರವಾಗಿ ನಡಿಸುವ ಖಾಸಗೀಜನರ ವಶಕ್ಕೆ ಒಪ್ಪಿಸಬೇಕೆಂದು ನಿಶ್ಚಯಿಸಿದೆ.

ಮೈಸೂರು ಸಂಪದಭಿವೃದ್ಧಿ ಸಮಾಜದ ಹನ್ನೊಂದನೆಯ ಅಧಿವೇಶನವನ್ನು ಮೈಸೂರಲ್ಲಿ ಕಳೆದ ಜೂನ್ ತಿಂಗಳಲ್ಲಿ ನಡಿಸಲಾಯ್ತು. ಆಗ 45 ವಿಷಯಗಳು ಪರ್ಯಾಲೋಚಿಸಲ್ಪಟ್ಟುವು.

ಫೈನಾನ್ಸ್.

ಕಳೆದ ವರ್ಧಂತಿ ಅಧಿವೇಶನದ ನಮ್ಮ ಭಾಷಣದಲ್ಲಿ ಸಂಸ್ಥಾನದ ಆದಾಯ ವೆಚ್ಚದ ವಿಷಯದಲ್ಲಿ ವಿಸ್ತಾರವಾಗಿ ಪ್ರಸ್ತಾಪ ಮಾಡಿರುತ್ತೇವೆಯಾದ ಪ್ರಯುಕ್ತ, ಈಗ ಆ ವಿಷಯವನ್ನು ಕುರಿತು ಸಂಗ್ರಹವಾಗಿ ಪ್ರಸ್ತಾಪಿಸುವೆವು.

1920ನೆಯ ಜೂನ್ ತಿಂಗಳಿಗೆ ಆಖೈರಾದ ವರ್ಷಕ್ಕೆ ಮಾಡಿದ ತಿದ್ದುಪಾಟಾದ ಅಂದಾಜಾಗಳೂ, 1920–21ನೆಯ ವರ್ಷದ ಬಡ್ಜೆಟ್ ಅಂದಾಜಾಗಳೂ ಕಳೆದ ಮೇ ತಿಂಗಳ 27 ಮತ್ತು 29 ನೆಯ ತಾರೀಖುಗಳಲ್ಲಿ ಪ್ರಜಾಪ್ರತಿನಿಧಿ ಸಭೆಯ ಕಳೆದ ಅಧಿವೇಶನದಲ್ಲೂ, ಕಳೆದ ಜೂನ್ ತಿಂಗಳ 15 ಮತ್ತು 16ನೆಯ ತಾರೀಖುಗಳಲ್ಲಿ ನ್ಯಾಯವಿಧಾಯಕ ಸಭೆಯಲ್ಲೂ ಪರ್ಯಾಲೋಚಿಸಲ್ಪಟ್ಟವು. ತಿದ್ದುಪಾಟಾದ ಅಂದಾಜುಗಳಲ್ಲಿ ಒಟ್ಟು 3,29,02,000 ರೂ.ಗಳ ವರಮಾನವೂ, 3,33,73,000 ರೂಪಾಯಿಗಳ ಖರ್ಚೂ ಕಾಣಿಸಿದೆ. ಎಂದರೆ 4,71,000 ರೂಪಾಯಿನಷ್ಟು ಮೊಬಲಗು ಖರ್ಚಿಗೆ ಸಾಲದೆ ಕಮ್ಮಿ ಬಿದ್ದಹಾಗಾಯಿತು.

ಪ್ರಸಕ್ತ ವರ್ಷದ ಬಡ್ಜೆಟ್ಟಿನಲ್ಲಿ ಒಟ್ಟು 3,15,15,000 ರೂಪಾಯಿಯಷ್ಟು ಹುಟ್ಟುವಳಿಯೂ ಹುಟ್ಟುವಳಿಯಿಂದ ಒಟ್ಟು 3,24,66,000 ರೂಪಾಯಿನಷ್ಟು ಖರ್ಚೂ ಆಗಬಹುದೆಂದು ನಿರೀಕ್ಷಿಸಲಾಗಿದೆ.

ಕಳೆದ ಅಧಿವೇಶನದಲ್ಲಿ ಬಡ್ಜೆಟ್ಟಿನ ಪರ್ಯಾಲೋಚನೆಯ ಕಾಲದಲ್ಲಿ ಸೂಚಿಸಿದ ಪ್ರಕಾರ ಆಹಾರಪದಾರ್ಥಗಳ ಬೆಲೆಯು ಹೆಚ್ಚಿರುವುದರಿಂದ ತಮ್ಮ ಕಮ್ಮಿದರ್ಜೆ ನೌಕರರಿಗೆ 1920 ನೆಯ ಜೂಲೈ ಗುರ್‍ರೇ ಲಾಗಾಯ್ತು ಹೆಚ್ಚಾದ ಅಲೋಯನ್ಸುಗಳನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರೆ. ಸಂಬಳವನ್ನನುಸರಿಸಿ ತಿಂಗಳಿಗೆ 4 ರೂಪಾಯಿ ಲಾಗಾಯ್ತು 7 ರೂಪಾಯಿವರೆಗೆ ಹೆಚ್ಚು ವೇತನವನ್ನು ಇನ್‌ಫೀರಿಯರ್ ಸರ್ವಿಸ್‌ನಲ್ಲಿರುವ ನೌಕರರಿಗೆ ಮಂಜೂರ್ಮಾಡಿದೆ. ಇದರ ಪ್ರಕಾರ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿರುವ ಈ ನೌಕರರಿಗೆ 12 ರೂಪಾಯಿನಂತೆಯೂ, ಇತರ ಸ್ಥಳಗಳಲ್ಲಿ 10 ರೂಪಾಯಿನಂತೆಯೂ ಕನಿಷ್ಠ ವೇತನಗಳನ್ನು ಕೊಡಲಾಗಿದೆ. ಸುಪೀರಿಯರ್ ಸರ್ವಿಸ್‌ನಲ್ಲಿರುವ ನೌಕರರಿಗೆ 19 ರೂಪಾಯಿ ಸಂಬಳದವರೆಗೆ ತಿಂಗಳಿಗೆ 8 ರೂಪಾಯಿನಂತೆಯೂ, 20 ರೂಪಾಯಿನಿಂದ 100 ರೂಪಾಯಿ ವರೆಗಿನ ಸಂಬಳ ಸಲ್ಲುವವರಿಗೆ 10 ರೂಪಾಯಿನಂತೆಯೂ ಹೆಚ್ಚು ವೇತನವು ದೊರೆಯುವುದು. ಬಡ್ಜೆಟ್ಟಿನಲ್ಲಿ ಈ ಅಲೋಯನ್ಸುಗಳಿಗಾಗಿ 20 ಲಕ್ಷ ರೂಪಾಯಿ ಒದಗಿಸಲ್ಪಟ್ಟಿರುವಲ್ಲಿ 24 ಲಕ್ಷ ರೂಪಾಯಿ ಹೆಚ್ಚು ಖರ್ಚು ಆಗುವುದಾಗಿ ಅಂದಾಜು ಮಾಡಲಾಗಿದೆ.

ರೆವಿನ್ಯೂ ಇಲಾಖೆಗಳು.

ಜಮೀನು ಕಂದಾಯ.

1918–19 ನೆಯ ವರ್ಷದಲ್ಲಿ ಕಾಲಸ್ಥಿತಿಯು ಅನುಕೂಲವಾಗಿಲ್ಲದೆ ಇದ್ದ ಪ್ರಯುಕ್ತ ಜಮೀನು ಕಂದಾಯದ ಬಾಕಿ ಜಾಸ್ತಿಯಾಗಿ ನಿಂತುಹೋಯಿತು, ಎಂದರೆ ವರ್ಷದ ಕೊನೆಯಲ್ಲಿ 20,79,849 ರೂಪಾಯಿ ವಸೂಲಾಗದೆ ನಿಂತಿತು. ಆದಕಾರಣ 1919–20 ನೆಯ ವರ್ಷದ ಕಂದಾಯವೂ ಸೇರಿ ಚಾಲ್ತಿ ಸಾಲಿನಲ್ಲಿ ಈ ಬಾಬಿನಲ್ಲಿ ವಸೂಲಾಗಬೇಕಾದ ಮೊತ್ತವು 1,30,43,967 ರೂಪಾಯಿಯಾಯಿತು. ಕಾಲಸ್ಥಿತಿಯು ಅನುಕೂಲವಾದುದರ ದೆಸೆಯಿಂದಲೂ, ರೆವಿನ್ಯೂ ಆಫೀಸರುಗಳು ವಸೂಲಾತಿಯ ಕೆಲಸದಲ್ಲಿ ಹೆಚ್ಚು ಶ್ರದ್ಧೆಯನ್ನು ತೋರಿಸಿದುದರಿಂದಲೂ ಚಾಲ್ತಿ ಸಾಲಿನಲ್ಲಿ 1,18,73,104 ರೂಪಾಯಿಗಳಷ್ಟು ಜಾಸ್ತಿ ಮೊಬಲಗು ವಸೂಲಾಯಿತು. ಇಷ್ಟು ಜಾಸ್ತಿ ಮೊಬಲಗು ಹಿಂದೆ ಯಾವಾಗಲೂ ವಸೂಲಾಗಿರುವುದಿಲ್ಲ. ಇದಕ್ಕೆ ಹಿಂದಣ ವರ್ಷ 1,09,50,000 ರೂಪಾಯಿ ವಸೂಲು ಆಗಿದ್ದಿತು, ಎಂದರೆ ಒಟ್ಟು ಕಂದಾಯದ ಬಾಕಿಯಲ್ಲಿ ಶೇಕಡ 91·1 ರಷ್ಟು ವಸೂಲಾತಿಯಾಯಿತು. 1918–19 ನೆಯ ವರ್ಷದಲ್ಲಿ ಶೇಕಡಾ 83 ರಷ್ಟು ವಸೂಲಾಗಿತ್ತು.

ಪ್ರಸಕ್ತ ವರ್ಷದಲ್ಲಿ ವಾಣೀವಿಲಾಸ ಸಾಗರ ಜಲಾಶಯದಲ್ಲಿ ಮೊದಲನೆಯಸಾರಿ ನೀರು ತುಂಬಿ ಕೋಡಿಯ ಮೇಲೆ

4½ ಅಡಿಗಳಷ್ಟು ನೀರು ಹರಿಯಿತು. ಮೊದಲು 6 ವರ್ಷಗಳ ವರೆಗೆ ಆಚರಣೆಗೆ ತರಲ್ಪಟ್ಟ ತಾಕುವಾರು ನೀರು ಹಾಯಿಸುವ ಕ್ರಮವನ್ನು ಇನ್ನೂ ಸಲೀಸು ಮಾಡಿ ನಾಲೆಗಳ ಕೆಳಗಣ ಜಮೀನುಗಳಲ್ಲಿ ಫಸಲು ಬೆಳೆಯುವುದಕ್ಕಾಗಿ ಹೆಚ್ಚು ಸೌಕರ್ಯಗಳೊಡನೆ ಇನ್ನೂ ಆರು ವರ್ಷಗಳ ವರೆಗೆ ಜಾರಿಯಲ್ಲಿಡತಕ್ಕುದೆಂದು ಹುಕುಂ ಕೊಡಲಾಯಿತು. ತಾಕುಗಳ ಕ್ರಮಕ್ಕೊಳಪಟ್ಟ ಒಟ್ಟು ಪ್ರದೇಶವು 11,435 ಎಕರೆ; ಇದರಲ್ಲಿ 9,268 ಎಕರೆ ಜಮೀನು ಈಗ ಹಿಡುವಳಿಯಲ್ಲಿದೆ. ಪ್ರಸಕ್ತ ವರ್ಷದಲ್ಲಿ ಸಾಗುವಳಿಯಾದ ಪ್ರದೇಶವು 7,319 ಎಕರೆ, ಇಷ್ಟು ಜಾಸ್ತಿ ವಿಸ್ತೀರ್ಣವು ಹಿಂದೆ ಯಾವಾಗಲೂ ಸಾಗುವಳಿಗೆ ಬಂದಿರಲಿಲ್ಲ. ಹಿಂದಿನ ಬಾಕಿಗಳೂ ಸೇರಿ ರೂ. 78,743-7-2 ಒಟ್ಟು ಬಾಕಿಯಲ್ಲಿ ರೂ. 74,629-6-7 ವಸೂಲಾಯಿತು. ವರ್ಷದ ಕೊನೆಯಲ್ಲಿ ರೂ. 4,114-0-7 ಬಾಕಿ ನಿಂತಿತು. ಒತ್ತದ ಸಾಗುವಳಿಯ ಪ್ರದೇಶವು 3,236 ಎಕರೆಯಿಂದ 4,707 ಎಕರೆಗೆ ಹೆಚ್ಚಿತು. ಮತ್ತು ಉತ್ಪನ್ನವು ಎಕರೆಯೊಂದಕ್ಕೆ ಹತ್ತು ಪಲ್ಲಾ ಸರಾಸರಿಯಂತೆ ಆಯಿತು.

ಹೋದ ವರ್ಷ ನಮ್ಮ ಭಾಷಣದಲ್ಲಿ ನಮೂದಿಸಿದಂತೆ ಹಾಲಿ ಇರುವ ಸಬ್ ತಾಲ್ಲೂಕುಗಳನ್ನು ತಾಲ್ಲೂಕುಗಳಾಗಿ ಬದಲಾಯಿಸುವುದಕ್ಕೆ ಸಂಬಂಧಪಟ್ಟ ಏರ್ಪಾಡನ್ನು ಜಾರಿಯಲ್ಲಿ ತರುವುದನ್ನು ಹಣಕ್ಕೆ ಮುಗ್ಗಟ್ಟಾಗಿರುವುದರಿಂದ ಸಧ್ಯಕ್ಕೆ ಮಾನಸಿಕ ಮಾಡಬೇಕೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ.

ಕೃಷ್ಣರಾಜ ಸಾಗರದ ನಾಲೆಗಳಿಂದ ನೀರು ಸರಬರಾಯಿ ಮಾಡಲ್ಪಟ್ಟ ಗ್ರಾಮಗಳಲ್ಲಿ ರೀ ಸೆಟಲ್‌ಮೆಂಟನ್ನು ಯಾವ ರೀತಿ ನಡಿಸಬೇಕೆಂಬುದರ ವಿಚಾರದಲ್ಲಿ ಹುಕುಮು ಸಾದರಾಗಿದೆ. ಅಂತಹ ಸಂದರ್ಭಗಳಲ್ಲಿ ನಡೆದುಬಂದಿರುವ ರೀತಿಯಲ್ಲಿ ಯಾವ ವಿಧವಾದ ಬದಲಾವಣೆಯೂ ಆವಶ್ಯಕವಿಲ್ಲವೆಂತಲೂ, ಮುಂಗಾರು ಹಿಂಗಾರು ಮಳೆಗಳ ಕಾಲದಲ್ಲಿ ಮಾತ್ರ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಹಕ್ಕು ಈಗ ಇದ್ದು ಮುಂದೆ ಬೇಸಿಗೆಯ ಕಾಲದಲ್ಲೂ ಸಹ ನೀರು ಪಡೆಯುವ ಜಮೀನುಗಳ ವಿಚಾರದಲ್ಲಿ, ನಾಲೆಗಳಿಂದ ಇನ್ನು ಮುಂದೆ ಸರಬರಾಯಿ ಮಾಡುವ ಹೆಚ್ಚು ನೀರಿಗೋಸ್ಕರ ಕಂದಾಯಕ್ಕೆ ಸೇರಿದಂತೆ ಹೆಚ್ಚು ಶೇಕಡಾಂಶವನ್ನು ಕೊಡಬೇಕೆಂತಲೂ, ಬೇಸಿಗೆಯ ನೀರಿನ ಸರಬರಾಯಿಗೆ ಹಕ್ಕನ್ನು ಹೊಂದಿದ ಜಮೀನುಗಳ ವಿಚಾರದಲ್ಲಿ ನೀರು ಸರಬರಾಯಿ ಹಿಂದೆ ಖಾತರಿಯಾಗಿ ಆಗದೆ ಇದ್ದುದಕ್ಕೆ ಪ್ರತಿಯಾಗಿ ಈಗ ಖಾತರಿ ಮಾಡಿಕೊಟ್ಟಿರುವುದಕ್ಕಾಗಿ ನ್ಯಾಯವಾಗಿ ಎಷ್ಟು ಜಾಸ್ತಿ ಕಂದಾಯ ಹಾಕಬಹುದೋ ಅಷ್ಟು ಮಾತ್ರಕ್ಕೇ ಕಂದಾಯವನ್ನು ಕ್ಲಿಪ್ತಪಡಿಸಬೇಕೆಂತಲೂ ತೀರ್ಮಾನಿಸಿದೆ. ಆ ರೀತಿ ಹೆಚ್ಚು ನೀರಿನ ಸರಬರಾಯಿ ಯಾವಾಗಲಾದರೂ ಕಾರಣಾಂತರದಿಂದ ಆಗದೆ ಇದ್ದರೆ ಅದಕ್ಕೆ ತಕ್ಕ ಪ್ರಮಾಣವನ್ನನುಸರಿಸಿ ಸೋಡಿ ಕೊಡತಕ್ಕುದೆಂತಲೂ ತೀರ್ಮಾನಿಸಿರುತ್ತೇವೆ.

ಶ್ಯಾನುಭೋಗರ ವೇತನವನ್ನು ಹೆಚ್ಚಿಸಬೇಕೆಂಬ ವಿಷಯವನ್ನು ಪರ್ಯಾಲೋಚಿಸಿ [illegible]ರ್ಕಾವಿಗೆ ಬದಲಾಗಿ ಗ್ರಾಮದ ಹುಟ್ಟುವಳಿಯ ಮೇಲೆ ಪೋಟಗಿಯನ್ನು ಕರಾಯಿಸಬೇಕೆಂತಲೂ ಸಾದಿಲ್ವಾರು ಅಲೋಯನ್ಸನ್ನು ಶೇಕಡ 50 ರಂತೆ ಹೆಚ್ಚಿಸಬೇಕೆಂತಲೂ ಉದ್ದೇಶಿಸಿರುತ್ತದೆ. ಈ ವಿಷಯದಲ್ಲಿ ಕ್ಷಿಪ್ರದಲ್ಲಿಯೇ ಹುಕುಂ ಸಾದರಾಗುವುದೆಂದು ನಿರೀಕ್ಷಿಸಬಹುದು.

ಅಬ್ಕಾರಿ.

ಅಬ್ಕಾರಿ ಇಲಾಖೆಯಲ್ಲಿ ಕೆಲಸವು ವಿಶೇಷವಾಗಿ ಹೆಚ್ಚಿ ಹುಟ್ಟುವಳಿಯು ಎರಡರಷ್ಟಕ್ಕಿಂತಲೂ ಹೆಚ್ಚಾಗಿದ್ದರೂ ಸಹ ಶಿಬ್ಬಂದಿಯ ದರ್ಜೆಯು 1903 ನೆಯ ಇಸವಿಯ ಲಾಗಾಯಿತು ಒಂದೇ ರೀತಿಯಲ್ಲಿದ್ದುದರಿಂದ ಈ ಇಲಾಖೆಯ ಪುನರ್ವ್ಯವಸ್ಥೆಯನ್ನು ಬಹಳ ದಿನದ ಹಿಂದೆಯೇ ಮಾಡಬೇಕಾಗಿತ್ತು. ಆದರೆ ಹಣಕ್ಕೆ ಮುಗ್ಗಟ್ಟಾಗಿರುವುದರಿಂದ ಈ ಇಲಾಖೆಯ ಆಡಳಿತವು ಚನ್ನಾಗಿ ನಡೆಯುವ ಉದ್ದಿಶ್ಯವಾಗಿ ಅತ್ಯವಶ್ಯಕವಾದ ಪುನರ್ವ್ಯವಸ್ಥೆ ಏರ್ಪಾಡಿನ ಒಂದು ಭಾಗವು ಮಾತ್ರ ತೆಗೆದುಕೊಳ್ಳಲ್ಪಟ್ಟಿತು. ಸುಮಾರು ವರ್ಷಕ್ಕೆ 50,000 ರೂಪಾಯಿ ಖರ್ಚಿನ ಮೇಲೆ ಮಂಜೂರ್ಮಾಡಿದ ಪುನರ್ವ್ಯವಸ್ಥೆಯು ಮುಖ್ಯವಾಗಿ ಡಿಸ್ಟ್ರಿಕ್ಟು ಅಬ್ಕಾರಿ ಆಫೀಸುಗಳ ಶಿಬ್ಬಂದಿಗಳ ದರ್ಜೆಗೂ ಮತ್ತು ಈ ಇಲಾಖೆಯ ಕೆಳದರ್ಜೆಯ ಎಗ್ಜಿಕ್ಯುಟಿವ್, ಮಿನಿಸ್ಟೀರಿಯಲ್ ಮತ್ತು ಸೇವಕ ನೌಕರುಮಾನೇರುಗಳ ಸಂಬಳ ಮತ್ತು ಮುಂದಿನ ಇಜಾಫೆಗಳನ್ನು ಮೇಲ್ಪಡಿಸುವುದಕ್ಕೂ ಅನ್ವಯಿಸುತ್ತದೆ.

ಅಬ್ಕಾರಿ ಅಂಗಡಿಗಳ ಸಂಖ್ಯೆಯಲ್ಲಿ 92 ನ್ನು ಕಡಮೆಮಾಡಿತು. ಸಾರಾಯಿಯ ಜೋರು ಅಂಡರ್‌ಪ್ರೂಫ್ 30 ಡಿಗ್ರಿಯಿಂದ 35 ಡಿಗ್ರಿಗೆ ಇಳಿಸಲ್ಪಟ್ಟಿತು. ಆದರೆ ಅದರ ಮೇಲಿನ ಡ್ಯೂಟಿಯು ಬೆಂಗಳೂರು ಸಿಟಿಯಲ್ಲಿ ಗ್ಯಾಲನ್ ಒಂದಕ್ಕೆ 6 ರೂಪಾಯಿನಂತೆಯೂ, ಸಂಸ್ಥಾನದ ಇತರ ಭಾಗಗಳಲ್ಲಿ 5½ ರೂಪಾಯಿನಂತೆಯೂ ಹೆಚ್ಚಿಸಲ್ಪಟ್ಟಿದೆ. ಈ ಏರ್ಪಾಡುಗಳನ್ನು ಮಾಡಿದ್ದರೂ ಅಬ್ಕಾರಿ ಹುಟ್ಟುವಳಿಯು ಹೆಚ್ಚಿರುತ್ತದೆ. ಇದರಿಂದ ಹೋದ ವರುಷ ಉತ್ಪತ್ತಿಯಾದ 70,65,000 ರೂಪಾಯಿಗೆ ಬದಲಾಗಿ ಈ ವರುಷ 77,81,000 ರೂಪಾಯಿ ಹಿಂದೆ ಎಂದೂ ಇಲ್ಲದಷ್ಟು ಹೆಚ್ಚಾಗಿ ಉತ್ಪನ್ನವಾಯಿತು.

ಫಾರೆಸ್ಟುಗಳು.

ಬೆಂಕೀಪುರದ ಕಬ್ಬಿಣದ ಕಾರಖಾನೆಯಲ್ಲಿ ಕೆಲಸಗಳನ್ನು ಉಪಕ್ರಮಿಸುವುದಕ್ಕೆ ಸಿದ್ಧವಾದಾಗ ಬೇಕಾದ ಸೌದೆಯು ತಪ್ಪದೆ ಕೂಡಲೆ ಸರಬರಾಯಿಯಾಗುವಂತೆ ಮಾಡುವುದಕ್ಕಾಗಿ ಈ ವರ್ಷದಲ್ಲಿ ತರೀಕೆರೆ ಮತ್ತು ಬೆಂಕೀಪುರ ಈ ಎರಡು ಸ್ಥಳಗಳಲ್ಲಿ ಎರಡು ಫಾರೆಸ್ಟ್ ಡಿವಿಜನ್‌ಗಳನ್ನು ಏರ್ಪಡಿಸಿತು. ಹೋದ ಏಪ್ರಿಲ್ ತಿಂಗಳಿನಲ್ಲಿ ಸೌದೆ ಜಮಾಯಿಸುವುದಕ್ಕೆ ಉಪಕ್ರಮಿಸಲಾಯಿತು. ಸುಮಾರು 26,000 ಟನ್ ಸೌದೆಯು ಕಡಿಯಲ್ಪಟ್ಟು 3,000 ಟನ್ ಸೌದೆಯು ಟ್ರಾಂಲೈನಿಗೆ ತರಲ್ಪಟ್ಟಿತು. ರೂಪಾಯಿಯ ಎಕ್ಸ್‌ಛೇಂಜ್ ದರವು ಹೆಚ್ಚಿದ್ದರಿಂದಲೂ, ಹರ್ಷ ಮಾಡಿದ ತೊಗಲಿನ ಧಾರಣೆಯು ವ್ಯತ್ಯಸ್ತವಾದದ್ದರಿಂದಲೂ ತಂಗಡಿಚಕ್ಕೆಯ ಗಿರಾಕಿಯು ಬಹುಮಟ್ಟಿಗೆ ಕಮ್ಮಿಯಾಯಿತು. ಸರ್ಕಾರದ ಹತೋಟಿಯನ್ನು ವಾಪಸ್ ತೆಗೆದುಕೊಂಡಿದ್ದರ ಮೇಲೆ ಈ ವ್ಯಾಪಾರವು ಪೂರ್ವಕ್ಕಿಂತಲೂ ಹೆಚ್ಚಾಗಿ ನಡಿಯಬಹುದೆಂಬ ಆಶೆಯಮೇಲೆ ತಂಗಡಿಚೆಕ್ಕೆಯ ಗೇಣಿಗೆಗಾಗಿ ತಂಗಡಿಚೆಕ್ಕೆಯ ವ್ಯಾಪಾರಿಗಳು ಅತಿಶಯವಾಗಿ ಸವಾಲುಮಾಡಿದ್ದದ್ದರಿಂದ ಅವರಿಗೆ ತುಂಬಾ ನಷ್ಟವಾಯಿತು. ಈ ಕಂಟ್ರಾಕ್ಟರುಗಳಿಗೆ ವಿಶೇಷ ನಷ್ಟವನ್ನು ತಪ್ಪಿಸುವ ಉದ್ದಿಶ್ಯವಾಗಿ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ ಗುತ್ತಿಗೆಯ ಹಣದ ವಸೂಲಾತಿಯನ್ನು ಈ ವರ್ಷಕ್ಕೆ ನಿಲ್ಲಿಸಿದ್ದಲ್ಲದೆ ಒಟ್ಟು ಗುತ್ತಿಗೆಯಲ್ಲಿ ಶೇಕಡ 15 ರಂತೆ ಸೋಡಿ ಸಹ ಕೊಟ್ಟರು. ಇದರಿಂದ 2½ ಲಕ್ಷ ರೂಪಾಯಿಗಿಂತ ಹೆಚ್ಚಾಗಿ ರಿಮಿಷನ್ ಮಾಡಬೇಕಾಯಿತು. ಪ್ರಸಕ್ತವರ್ಷದಲ್ಲಿ ಫಾರೆಸ್ಟ್ ಬಾಬಿನ ಎಲ್ಲಾ ಹೆಡ್ಡುಗಳಲ್ಲಿಯೂ ಸೇರಿ ಒಟ್ಟು 43,39,004 ರೂಪಾಯಿ ವಸೂಲಾಗಿರುತ್ತದೆ.

ವರಮಾನದ ತೆರಿಗೆ.

ವರಮಾನದ ತೆರಿಗೆಯ ರೆಗ್ಯುಲೇಷನು ನ್ಯಾಯವಿಧಾಯಕ ಸಭೆಯಲ್ಲಿ ಪ್ಯಾಸಾಗಿ ಕಳೆದ ಜೂನ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರ ಮಂಜೂರಾತಿಯನ್ನು ಪಡೆಯಿತು. ರೆಗ್ಯುಲೇಷನ್ ಅನುಸರಿಸಿ ಸಾದರಾದ ನಿಬಂಧನೆಗಳು ಪ್ರಕಟಿಸಲ್ಪಟ್ಟಿವೆ. ತೆರಿಗೆಯಿಂದ ವಿನಾಯಿಸಲ್ಪಟ್ಟ ಬಾಬುಗಳ ವಿಷಯದಲ್ಲೂ ರೆಗ್ಯುಲೇಷನ್ನನುಸರಿಸಿ ಆಫೀಸರುಗಳಿಗೆ ಅಧಿಕಾರವನ್ನು ಕೊಡುವ ವಿಷಯದಲ್ಲೂ ಇಸ್ತಿಹಾರ್ನಾಮೆಗಳೂ ಸಹ ಸಾದರಾಗಿವೆ. ಮದ್ರಾಸು ಮತ್ತು ಬೊಂಬಾಯಿ ಆಧಿಪತ್ಯಗಳಲ್ಲಿ ಲೆಕ್ಕದ ಪಟ್ಟಿಗಳನ್ನು ಬರಮಾಡಿಕೊಂಡು ತೆರಿಗೆಯನ್ನು ವಿಧಿಸುವುದಕ್ಕೆ ತಹಶೀಲುದಾರರಿಗೂ ಮಾಮಲೇದಾರರಿಗೂ ಅಧಿಕಾರವನ್ನು ಕೊಟ್ಟಿರುತ್ತಾರಾದರೂ ಮೈಸೂರು ಸಂಸ್ಥಾನದಲ್ಲಿ ಅಸಿಸ್ಟೆಂಟು ಕಮಿಷನರ ದರ್ಜೆಗಿಂತ ಕಮ್ಮಿ ದರ್ಜೆಯುಳ್ಳ ಆಫೀಸರುಗಳಿಗೆ ಯಾರಿಗೂ ಅಂತಹ ಅಧಿಕಾರಗಳು ಕೊಡಲ್ಪಟ್ಟಿಲ್ಲ. ಬೆಂಗಳೂರು, ಮೈಸೂರು ಪಟ್ಟಣಗಳಿಗೆ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ದರ್ಜೆಯ ಸ್ಪೆಷಲ್ ಕಲೆಕ್ಟರನ್ನು ನೇಮಿಸಿದೆ. ಈ ರೆಗ್ಯುಲೇಶನ್ನಿಗೆ ಸಂಬಂಧಪಟ್ಟ ಪ್ರಾಥಮಿಕ ಕಾರ್ಯಗಳಿಗೆ ಗಮನ ಕೊಡುವುದಕ್ಕಾಗಿ ಆರು ತಿಂಗಳ ಕಾಲ ಒಬ್ಬ ಆಫೀಸರನ್ನು ಸ್ಪೆಷಲ್ ಡ್ಯೂಟಿಗಾಗಿ ನೇಮಿಸಲಾಯಿತು. ಅವರಿಗೆ ರೆಗ್ಯುಲೇಷನ್ನನುಸರಿಸಿ ಕಮಿಷನರ ಅಧಿಕಾರಗಳನ್ನೂ ವಹಿಸಿದೆ. ಈ ಸ್ಪೆಷಲ್ ನೌಕರಿಯು ಮುಗಿದ ಒಡನೆ ಇನ್‌ಕಂ ಟ್ಯಾಕ್ಸ್ ಕಮಿಷನರ ಕೆಲಸವನ್ನು ಎಕ್ಸೈಜು ಕಮಿಷನರಿಗೆ ಸೇರಿಸಿ ಒಟ್ಟುಗೂಡಿಸಲಾಗುವುದು. ಸರ್ಕಾರದಿಂದ ಪಾವತಿಯಾಗುವ ಸಂಬಳದ ಮೇಲಿನ ತೆರಿಗೆಯನ್ನು ಸಂಬಳದ ಪಾವತಿ ಕಾಲದಲ್ಲಿ ವಸೂಲ್ಮಾಡುತ್ತದೆ. ಸ್ಥಳೀಯ ಆಡಳಿತದವರೊಂದಿಗೂ, ಕಂಪನಿಗಳೊಂದಿಗೂ, ಪಬ್ಲಿಕ್ ಸಂಘಗಳೊಂದಿಗೂ, ಇತರ ಕೆಲವು ಖಾಸಗಿ ಯಜಮಾನರೊಂದಿಗೂ ಅವರ ನೌಕರಿಯಲ್ಲಿರುವವರ ಸಂಬಳದ ಮೇಲೆ ತೆರಿಗೆಯನ್ನು ವಸೂಲ್ ಮಾಡುವುದಕ್ಕೆ ಏರ್ಪಾಡುಗಳು ಮಾಡಲ್ಪಟ್ಟಿವೆ. ಈ ಸಂಸ್ಥಾನದಲ್ಲಿ ವಿದೇಶದ ಕಂಪನಿಯವರು ಮಾಡುತ್ತಿರುವ ವ್ಯಾಪಾರಗಳ ತಪ್ಸೀಲುಗಳನ್ನು ತಿಳಿದುಕೊಂಡು ಅವರ ವರಮಾನದಮೇಲೆ ತೆರಿಗೆಯನ್ನು ವಸೂಲ್ಮಾಡಲು ಕ್ರಮಗಳು ಜರುಗುತ್ತಿವೆ. ಮೈಸೂರಲ್ಲಿ ಈ ತೆರಿಗೆಯು ಹೊಸದಾದ ಕಾರಣ ಜನರಿಗೆ ಇದು ಜಾರಿಗೆ ಬಂದ ಮೊದಲು ವರುಷದಲ್ಲಿ ತಮ್ಮ ವರಮಾನದ ಲೆಕ್ಕದ ಪಟ್ಟಿಗಳನ್ನು ತಯಾರು ಮಾಡುವುದರಲ್ಲಿ ಕಷ್ಟ ತೋರುವುದು ಸಹಜವೇ. ವರಮಾನದ ಲೆಕ್ಕದ ಪಟ್ಟಿಗಳನ್ನು ತಯಾರು ಮಾಡುವುದರಲ್ಲಿ ಸಹಾಯ ಮಾಡುವ ವಿಷಯದಲ್ಲಿಯೂ, ರೆಗುಲೇಷನ್ನಿನ ನಿಬಂಧನೆಗಳನ್ನೂ ನಿಯಮಗಳನ್ನೂ ವಿವರಿಸಿ ಜನರಿಗೆ ಇರುವ ತಪ್ಪು ಭಾವನೆಗಳನ್ನು ಹೋಗಲಾಡಿಸುವ ವಿಷಯದಲ್ಲಿಯೂ, ಸಕಲ ಪ್ರಯತ್ನಗಳನ್ನೂ ಮಾಡುವಂತೆ ಈ ಇಲಾಖೆಯವರಿಗೆ ತಿಳುವಳಿಕೆಗಳನ್ನು ಕೊಟ್ಟಿದೆ.

ರಕ್ಷಣೆ.

ಜುಡಿಷಲ್.

ಜುಡಿಷಲ್ ಮತ್ತು ಎಗ್ಜಿಕ್ಯೂಟಿವ್ ಅಧಿಕಾರಗಳನ್ನು ಪ್ರತ್ಯೇಕಪಡಿಸುವ ಏರ್ಪಾಡಿನ ಪ್ರಕಾರ ಬೆಂಗಳೂರು, ಶಿವಮೊಗ್ಗ, ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ನೇಮಕ ಮಾಡಿರುವ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ ಕೆಲಸವು ತೃಪ್ತಿಕರವಾಗಿ ನಡೆಯುತ್ತಿರುವಂತೆ ತಿಳಿದುಬಂದಿರುತ್ತದೆ. ಕೆಲವು ಸ್ಥಳಗಳಲ್ಲಿನ ಕಕ್ಷಿಗಾರರು ಈ ಕೋರ್ಟುಗಳಿಗೆ ಹೋಗಬೇಕಾದರೆ ವಿಶೇಷ ಫಾಸಲೆ ಪ್ರಯಾಣಮಾಡಬೇಕಾದ ಅನಾನುಕೂಲವನ್ನು ಕಮ್ಮಿಮಾಡುವುದಕ್ಕಾಗಿ ತಾಲ್ಲೂಕ್ ಕಸಬೆಗಳಲ್ಲಿರುವ ಬೆಂಚ್‌ಕೋರ್ಟುಗಳಿಗೆ ಫಿರ್ಯಾದಿನ ಮೇಲೆ ಮೊಕದ್ದಮೆಗಳನ್ನು ಹಿಡಿಯಲು ಅಧಿಕಾರ ಕೊಡುವ ಬಗ್ಗೆ ತಕ್ಕ ಏರ್ಪಾಡು ನಡೆಯುತ್ತಾ ಇದೆ. ಈಗ ಹಣಕ್ಕೆ ಮುಗ್ಗಟ್ಟಾಗಿರುವುದರಿಂದ ಮೇಲೆ ಹೇಳಿದ ಏರ್ಪಾಡನ್ನು ಇತರ ಡಿಸ್ಟ್ರಿಕ್ಟುಗಳಿಗೂ ಜಾರಿಗೆ ತರುವ ವಿಷಯವನ್ನು ಪರ್ಯಾಲೋಚಿಸಲು ಸಾಧ್ಯವಾಗಲಿಲ್ಲ.

ಮೆಡಿಕಲ್.

ವೈದ್ಯಸಹಾಯವನ್ನು ಬಡಾಯಿಸುವ ವಿಚಾರವನ್ನು ಪರ್ಯಾಲೋಚಿಸಲು ನಿಯಮಿಸಲ್ಪಟ್ಟ ಸ್ಪೆಷಲ್ ಕಮಿಟಿಯವರು ಮಾಡಿದ ಸಿಫಾರಸುಗಳನ್ನು ಸರ್ಕಾರದವರು ಸಾಮಾನ್ಯವಾಗಿ ಮಂಜೂರ್ ಮಾಡಿರುತ್ತಾರೆ. ಹಣಕ್ಕೆ ಮುಗ್ಗಟ್ಟಾಗಿರುವುದು ಸರಿಹೋಗುತ್ತಲೇ ಜಾರಿಯಲ್ಲಿ ತರುವುದಾಗುತ್ತದೆ. ಕಮಿಟಿಯವರು ಗೊತ್ತುಮಾಡಿರುವ 5 ವರ್ಷದ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಕೆಲಸ ನಡಿಸುವುದರಲ್ಲಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಆಸ್ಪತ್ರೆಯನ್ನು ಈಗಿನಕಾಲಕ್ಕೆ ತಕ್ಕಹಾಗೆ ಸಮಸ್ತ ಸಲಕರಣೆಗಳಿಂದ ಕೂಡಿದ ವೈದ್ಯಶಾಲೆಯಾಗಿ ಮಲೆನಾಡು ಪ್ರಾಂತ್ಯಕ್ಕೆಲ್ಲಾ ಉಪಯೋಗವಾಗುವಂತೆ ಮಾಡುವ ಕೆಲಸಕ್ಕೆ ಮೊದಲು ಗಮನವನ್ನು ಕೊಡಲಾಗುತ್ತದೆ. ಈ ವರ್ಷದಲ್ಲಿ ದಾವಣಗೆರೆಯಲ್ಲಿ ಒಂದು, ಕಲ್ಲೂರ್ ಕಟ್ಟೆಯಲ್ಲಿ ಒಂದು ಈ ರೀತಿ ಎರಡು ಹೆಂಗಸರ ಆಸ್ಪತ್ರೆಗಳನ್ನು ಮಂಜೂರ್ಮಾಡಲಾಯಿತು. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗಳ ಮೇಲಿನ ಅಧಿಕಾರವನ್ನು ಮೆಡಿಕಲ್ ಇಲಾಖೆಗೆ ವರ್ಗಾಯಿಸುವ ಹಾಗೆ ಹುಕುಂ ಆಗಿರುತ್ತದೆ. ಸ್ತ್ರೀ ಮೆಡಿಕಲ್ ಮತ್ತು ಸಬಾರ್ಡಿನೇಟ್ ಆಫೀಸರುಗಳಿಗೆ ಪ್ರತ್ಯೇಕವಾದ ದರ್ಜೆ ಒಂದನ್ನು ಏರ್ಪಾಟು ಮಾಡಿದೆ. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ, ಬೆಂಗಳೂರು ಮಿಂಟೋ ಕಣ್ಣಾಸ್ಪತ್ರೆ, ಮೈಸೂರು, ಬೆಂಗಳೂರು ಮತ್ತು ರಾಬರ್ಟ್‌ಸನ್ ಪೇಟೆಗಳಲ್ಲಿರುವ ಹೆರಿಗೆ ಆಸ್ಪತ್ರೆಗಳು, ಸೀನಿಯರ್ ಸರ್ಜನ್‌ರವರ ಆಫೀಸು ಇವುಗಳಿಗೆ ಸಂಬಂಧಪಟ್ಟ ಸಿಬ್ಬಂದಿಗಳ ಸಂಬಳಗಳನ್ನು ಪುನರ್ವಿಮರ್ಶೆ ಮಾಡಲಾಯಿತು.

ಮಲೆನಾಡು ಅಭಿವೃದ್ಧಿ.

ಮೆಂಬರುಗಳ ಕೋರಿಕೆಯ ಪ್ರಕಾರ ಮಲೆನಾಡು ಅಭಿವೃದ್ಧಿಯ ಸೆಂಟ್ರಲ್ ಕಮಿಟಿಯನ್ನು ಕ್ರಮಪಡಿಸಿ ಅದರ ರಚನೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲಾಯಿತೆಂಬುದನ್ನು ಕೇಳಿ ತಾವುಗಳು ಸಂತೋಷಪಡಬಹುದು. ಮಲೆನಾಡು ಅಭಿವೃದ್ಧಿಗಾಗಿ ಏರ್ಪಾಡುಗಳನ್ನು ಮಾಡುವುದಕ್ಕೆ ಆವಶ್ಯಕವಾದ ಸಹಾಯವನ್ನು ಒದಗಿಸುವುದಕ್ಕಾಗಿ ಇಲಾಖಾ ಮೊಖ್ತೇಸರರನ್ನು ಸೆಂಟ್ರಲ್ ಕಮಿಟಿಯ ಮೆಂಬರುಗಳನ್ನಾಗಿ ಮಾಡಿ ಸದರಿ ಕಮಿಟಿಗೆ ಸರ್ಕಾರದ ಕೌನ್ಸಿಲ್ ಮೆಂಬರು ಒಬ್ಬರನ್ನು ಪ್ರೆಸಿಡೆಂಟರನ್ನಾಗಿ ಮಾಡಲಾಗಿದೆ. ಪ್ರತಿ ಮಲೆನಾಡು ಡಿಸ್ಟ್ರಿಕ್ಟಿಗೂ ಇಬ್ಬರಂತೆ ಆರುಮಂದಿ ಸರ್ಕಾರಿ ನೌಕರರಲ್ಲದ ಪ್ರತಿನಿಧಿಗಳನ್ನು ಸಹ ಕಮಿಟಿಗೆ ಮೆಂಬರುಗಳಾಗಿ ಚುನಾಯಿಸಿರುತ್ತದೆ. ಸದರಿ ಕಮಿಟಿಯವರು ಇನ್ನುಮೇಲೆ ಮೂರು ತಿಂಗಳಿಗೆ ಒಂದಾವರ್ತಿ ಅವಶ್ಯವಿರುವಂತೆ ಮಲೆನಾಡು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಟೌನುಗಳ ಪೈಕಿ ಯಾವುದಾದರೂ ಒಂದರಲ್ಲಿ ಅಥವಾ ಬೆಂಗಳೂರಲ್ಲಿ ಸಭೆ ಸೇರುವಂತೆ ಏರ್ಪಾಡುಮಾಡಿದೆ. ಇಲಾಖೆಗಳ ಮೊಖ್ತೇಸರರಿಂದಲೇ ಸೀದಾ ಸಹಾಯವನ್ನು ಪಡೆದು ಮಲೆನಾಡು ಅಭಿವೃದ್ಧಿಗಾಗಿ ಸರ್ಕಾರದ ಕೌನ್ಸಿಲರವರು ಸ್ವತಃ ಗಮನ ಕೊಡುವುದರಿಂದ ಕಮಿಟಿಯ ಹಿಂದಿನ ರಚನೆಗೆ ಸಂಬಂಧಪಟ್ಟ ಅನಿವಾರ್ಯವಾದ ಸುಸ್ತಿಗಳನ್ನು ಪರಿಹರಿಸಬಹುದೆಂತಲೂ, ಶೀಘ್ರವಾದ ಅಭಿವೃದ್ಧಿಯನ್ನು ಖಂಡಿತವಾಗಿ ಪಡೆಯಬಹುದೆಂತಲೂ ನಂಬಿರುತ್ತೇವೆ. ಸೆಂಟ್ರಲ್ ಕಮಿಟಿಯ ಸೂಚನೆಯ ಪ್ರಕಾರ ಕೆಲಸವನ್ನು ನಿರ್ವಹಿಸುವುದಕ್ಕಾಗಿ ಡಿಸ್ಟ್ರಿಕ್ಟ್‌ಕಮಿಟಿಗಳನ್ನು ಸಹ ಪುನರ್ವಿಮರ್ಶೆ ಮಾಡಲಾಯಿತು.

ವಿದ್ಯಾಭಿವೃದ್ಧಿ ಮತ್ತು ಸಂಪದಭಿವೃದ್ಧಿ.

ವಿದ್ಯಾಭ್ಯಾಸ—ಸೆಕೆಂಡರಿ ವಿದ್ಯಾಭ್ಯಾಸ.

ಕಳೆದ ವರುಷದ ನಮ್ಮ ಭಾಷಣದಲ್ಲಿ ತಿಳಿಸಿದ ಮೇರೆಗೆ ಸರ್ಕಾರೀ ಮಿಡಲ್ ಸ್ಕೂಲು ತರಗತಿಗಳಲ್ಲಿ ಫೀಜನ್ನು ವಜಾ ಮಾಡಲಾಯಿತು. ಇದೇ ರೀತಿಯಲ್ಲಿ ಫೀಜನ್ನು ವಜಾಮಾಡಿದ ಏಡೆಡ್ ಸ್ಕೂಲುಗಳಿಗೆ ಫೀಜು ಮೂಲಕವಾದ ವರಮಾನವು ತಪ್ಪಿದಷ್ಟರ ಮಟ್ಟಿಗೆ ಹಣಸಹಾಯವನ್ನು ಮಂಜೂರುಮಾಡಿದೆ ಮಧ್ಯಮ ತರಗತಿಯ ಸ್ಕೂಲುಗಳಿಗೆ ಅನುಕೂಲವಾದ ಕಟ್ಟಡಗಳನ್ನು ಒದಗಿಸುವ ನಿಮಿತ್ತ ಮುಂದೆ ಐದು ವರ್ಷಗಳ ಕಾಲದ ವರೆಗೆ ವರ್ಷಂಪ್ರತಿ 2 ಲಕ್ಷ ರೂಪಾಯಿಗಗನ್ನು ತೆಗೆದಿಡುತ್ತಾ ಹೋಗುವಂತೆ ಹುಕುಂ ಮಾಡಿದೆ. ಕಾಯಂ ಬರಾವರ್ದು ಉಪಾಧ್ಯಾಯರು ರಜದಮೇಲೆ ಹೋದಾಗ ಕೆಲಸವು ಕ್ರಮವಾಗಿ ನಡೆಯುವುದಕ್ಕೆ ಉಂಟಾಗಬಹುದಾದ ಅಡಚಣೆಯನ್ನು ತಪ್ಪಿಸುವ ಬಗ್ಗೆ ಕೋತಲು ಉಪಾಧ್ಯಾಯರನ್ನು ನೇಮಿಸುವ ಏರ್ಪಾಡು ಒಂದನ್ನು ಮಂಜೂರು ಮಾಡೋಣಾಗಿದೆ. ಎಸ್. ಎಸ್. ಎಲ್. ಸಿ. ಪರೀಕ್ಷೆಯ ವಿದ್ಯಾರ್ಥಿಗಳು ಮೊದಲು ಒಂದುಸಲ ಒಂದು ಸ್ಕೂಲಿನಲ್ಲಿ ಓದಿ ಪರೀಕ್ಷೆಗೆ ಹೋಗಿದ್ದ ತರುವಾಯ ಸ್ವಂತ ವ್ಯಾಸಂಗದ ಮೇಲೆ ಆ ಪರೀಕ್ಷೆಗೆ ಹೋಗಲು ಅವಕಾಶ ಕೊಡುವ ರೀತಿಯಲ್ಲಿ ಆ ಪರೀಕ್ಷೆಯ ನಿಬಂಧನೆಗಳನ್ನು ಬದಲಾಯಿಸಲಾಗಿದೆ. ಸಹಾಯ ಪಡೆಯುವ ಮಧ್ಯಮತರಗತಿಯ ಸ್ಕೂಲುಗಳಿಗೆ ಅರ್ಹತೆಯನ್ನು ಕೊಡುವ ವಿಚಾರದಲ್ಲಿ ನಿಬಂಧನೆಗಳನ್ನು ಸಾದರು ಮಾಡಿದೆ.

ಪ್ರಾಥಮಿಕ ವಿದ್ಯಾಭಾಸ.

ಈಗಿರುವ ಪ್ರಾಥಮಿಕ ವಿದ್ಯಾಶಾಲೆಗಳ ಪೈಕಿ ಅನೇಕ ಸ್ಕೂಲುಗಳ ಸಿಬ್ಬಂದಿಯನ್ನೂ, ಸ್ಥಳವಸತಿಯನ್ನೂ ಉತ್ತಮ ಪಡಿಸಲಾಯಿತು. ಮತ್ತು ಪ್ರಾಥಮಿಕ ವಿದ್ಯಾಶಾಲೆಗಳ ಉಪಾಧ್ಯಾಯರ ಸಂಬಳಗಳ ದರಗಳನ್ನು ಕ್ರಮಪಡಿಸಲಾಯಿತು. ಬಲಾತ್ಕಾರ ವಿದ್ಯಾಭ್ಯಾಸದ ಕ್ರಮವನ್ನು ಪ್ರಸಿದ್ಧಪಡಿಸಿರುವ 340 ಸ್ಥಳಗಳಲ್ಲಿಯೂ ಜಾರಿಯಲ್ಲಿ ತರೋಣಾಗಿದೆ. ಸ್ಕೂಲು ಕಟ್ಟಡಗಳಿಗೆ ತರಹೇವಾರಿ ನಮೂನೆಗಳ ನಕ್ಷೆಗಳನ್ನು ಸೂಚಿಸುವ ಉದ್ದೇಶದಿಂದ ಒಂದು ಸ್ಪೆಷಲ್ ಕಮಿಟಿಯು ನೇಮಕವಾಯಿತು. ಅವರ ರಿಪೋರ್ಟು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಸ್ತ್ರೀ ವಿದ್ಯಾಭ್ಯಾಸ.

ಬಾಲಿಕೆಯರ ವಿದ್ಯಾಶಾಲೆಗಳ ಮೇಲ್ವಿಚಾರಣೆಗಾಗಿ ಒಬ್ಬ ಇನ್‌ಸ್ಪೆಕ್ಟ್ರೆಸ್ಸನ್ನೂ, ಐದು ಮಂದಿ ಅಸಿಸ್ಟೆಂಟು ಇನ್‌ಸ್ಪೆಕ್ಟ್ರೆಸ್ಸುಗಳನ್ನೂ ನೊಕರರು ಮಾಡಲಾಯಿತು. ಮತ್ತು ಸ್ತ್ರೀಯರ ಕಸಬುದಾರಿ ವಿದ್ಯಾಭ್ಯಾಸವನ್ನು ನೋಡಿಕೊಳ್ಳುವ ಬಗ್ಗೆ ಇನ್‌ಸ್ಪೆಕ್ಟ್ರೆಸ್ಸಿನ ಕೈಕೆಳಗೆ ಒಬ್ಬ ಕುಶಲರಾದ ಲೇಡಿ ಟೆಕ್ನಿಕಲ್ ಅಸಿಸ್ಟೆಂಟರನ್ನು ನೊಕರರು ಮಾಡುವ ಬಗ್ಗೆ ಹುಕುಂ ಸಾದರಾಗಿರುತ್ತದೆ. ಹೆಚ್ಚು ಮಂದಿ ಉಪಾಧ್ಯಾಯಿನಿಯರು ಒದಗುವಂತೆ ಮಾಡುವದಕ್ಕಾಗಿ ಸ್ವಂತವಾಗಿ ಓದುವ ವಿದ್ಯಾರ್ಥಿನಿಯರಿಗೆ ಹೆಚ್ಚಿನ ವೇತನ ಸಹಾಯವನ್ನೂ, ಶಿಕ್ಷಣವನ್ನು ಪಡೆಯುತ್ತಿರುವ ಉಪಾಧ್ಯಾಯಿನಿಯರಿಗೆ ಬದಲಿಯಾಗಿ ಬರುವವರಿಗೆ ಹೆಚ್ಚಿನ ದರದ ಆಕ್ಟಿಂಗ್ ಅಲೋವೆನ್ಸುಗಳನ್ನೂ ಮಂಜೂರು ಮಾಡೋಣಾಯಿತು. ತುಮಕೂರಿನಲ್ಲಿರುವ ಎಂಪ್ರೆಸ್ ಗರಲ್ಸು ಹೈಸ್ಕೂಲಿಗೂ ಮತ್ತು ಬೆಂಗಳೂರು ವಾಣೀವಿಲಾಸ ಇನ್‌ಸ್ಟಿಟ್ಯೂಟಿಗೂ ಲಗತ್ತು ಮಾಡಿರುವ ಅಪ್ಪರ್ ಸೆಕೆಂಡರಿ ತರಗತಿಗಳಿಗೆ ಸಾಕಾದಷ್ಟು ಮಂದಿ ಓದುವುದಕ್ಕೆ ಬಾರದ ಕಾರಣ ಸದರಿ ತರಗತಿಗಳನ್ನು ವಜಾ ಮಾಡಲಾಯಿತು.

ವಿಶೇಷ ಪಂಗಡಗಳ ವಿದ್ಯಾಭ್ಯಾಸ.

ಮಲೆನಾಡು ಪ್ರಾಂತ್ಯದ ಹಿಂದೂಸ್ಥಾನಿ ಸ್ಕೂಲುಗಳ ಮೇಲ್ವಿಚಾರಣೆಯ ಸೌಕರ್ಯಾರ್ಥವಾಗಿ ಆ ಪ್ರಾಂತ್ಯಕ್ಕೆ ಮೂರನೆಯ ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರನ್ನು ಮಂಜೂರು ಮಾಡಿದೆ ಮತ್ತು ಹಿಂದೂಸ್ತಾನಿ ಸ್ಕೂಲುಗಳ ಇನ್‌ಸ್ಪೆಕ್ಟರ ಅಧಿಕಾರ ಪ್ರದೇಶದ ಹಂಚಿಗೆಯೆಲ್ಲವನ್ನೂ ಪುನರ್ವ್ಯವಸ್ಥೆ ಮಾಡಿದ್ದಾಯಿತು. ಹಿಂದುಸ್ತಾನಿ ಸ್ಕೂಲುಗಳಿಗೆ ಇಬ್ಬರು ಅಸಿಸ್ಟೆಂಟು ಇನ್‌ಸ್ಪೆಕ್ಟ್ರೆಸ್ಸುಗಳನ್ನು ನೇಮಕ ಮಾಡುವುದರ ಮೂಲಕ ಹೆಣ್ಣು ಹುಡುಗಿಯರ ಸ್ಕೂಲುಗಳ ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸಿದ್ದಾಯಿತು. ಈ ಸ್ಕೂಲುಗಳ ದಕ್ಷತೆಯನ್ನು ಉತ್ತಮಪಡಿಸುವುದಕ್ಕಾಗಿ ಬೋರ್ಡು-ಆಫ್-ವಿಜಿಟರುಗಳನ್ನು ಏರ್ಪಡಿಸದೆ. ಕೀಳ್ತರಗತಿಯ ಪಂಗಡದವರ ವಿದ್ಯಾಭ್ಯಾಸ ಪ್ರಚಾರಕ್ರಮವನ್ನು ಪರಿಶೀಲನ ಮಾಡಿ ಮುಂದೆ ಸರ್ಕಾರದವರು ಈ ವಿಷಯದಲ್ಲಿ ಅನುಸರಿಸಬೇಕೆಂದಿರುವ ಕ್ರಮವನ್ನು ನಿರ್ಧರಿಸಿದ್ದಾಯಿತು. ಪಂಚಮರ ವಿದ್ಯಾಭ್ಯಾಸಕ್ಕಾಗಿ ಕೆಲವು ಬೋರ್ಡಿಂಗು ಸ್ಕೂಲುಗಳನ್ನು ಏರ್ಪಡಿಸಿ ಎಲ್ಲಾ ಊರುಗಳವರೂ ಅಲ್ಲಿಗೆ ಬಂದು ವಿದ್ಯೆ ಕಲಿಯುವಂತೆ ಮಾಡುವುದರಿಂದ ಕೇವಲ ಸ್ವಲ್ಪ ಮಂದಿಗೆ ಅವಕಾಶವನ್ನುಂಟುಮಾಡಿದಂತಾಗುವುದಾದ ಪ್ರಯು [illegible] ದರಿಂದ ಹೆಚ್ಚು ಪ್ರಯೋಜನವುಂಟೆಂದು ಭಾವಿಸಿ ಆ ರೀತಿ ತೀರ್ಮಾನಮಾಡಲಾಗಿದೆ. ಇಪ್ಪತ್ತು ಮಂದಿ ವಿದ್ಯಾರ್ಥಿಗಳನ್ನು ಜಮಾಯಿಸುವುದಕ್ಕೆ ಸಾಧ್ಯವಾದ ಕಡೆಯಲ್ಲೆಲ್ಲಾ ಪಂಚಮರಿಗಾಗಿ ಸ್ಕೂಲುಗಳನ್ನು ಸ್ಥಾಪಿಸಬೇಕೆಂದು ಹುಕುಂ ಕೊಡೋಣಾಗಿದೆ. ಮೈಸೂರು, ತುಮಕೂರು, ಚಿಕ್ಕಮಗಳೂರು, ಈ ಸ್ಥಳಗಳಲ್ಲಿರುವ ಬೋರ್ಡಿಂಗ್ ಸ್ಕೂಲುಗಳಿಗೆ ಸಾಧ್ಯವಾದಷ್ಟು ಮಂದಿಯನ್ನು ಸೇರಿಸಿ ಗ್ರಾಮಾಂತರ ಪ್ರದೇಶಗಳಲ್ಲಿನ ಪಂಚಮರ ಸ್ಕೂಲುಗಳಿಗೆ ಉಪಾಧ್ಯಾಯರನ್ನು ತಯಾರು ಮಾಡುವ ಬಗ್ಗೆ ಏರ್ಪಾಡು ಮಾಡಲಾಗಿದೆ. ಸರ್ಕಾರಿ ಮತ್ತು ಏಡೆಡ್ ಸ್ಕೂಲುಗಳಿಗೆ ಕೀಳ್ಪಟ್ಟ ಪಂಗಡದವರನ್ನು ಸೇರಿಸುವಂತೆ ಮಾಡಿದ ಏರ್ಪಾಡು ಬಹುಮಟ್ಟಿಗೆ ಜಾರಿಯಲ್ಲಿ ಬಂದಿರುವುದೆಂಬ ಅಂಶವನ್ನು ತಿಳಿಸಲು ಸಂತೋಷಿಸುತ್ತೇವೆ. ಈ ನಿರ್ಭಾಗ್ಯರಾದ ಪಂಗಡದವರು ಇತರ ಪಂಗಡದವರೊಡನೆ ಕಲೆಯುವುದರಿಂದ ಮುಂದೆ ಪಡೆಯಬಹುದಾದ ಪ್ರಯೋಜನದಿಂದ ಅವರ ಸಾಮಾಜಿಕ ಸ್ಥಿತಿಯು ಮೇಲಾಗುವುದೆಂದು ನಿರೀಕ್ಷಿಸಬಹುದಾಗಿ ತೋರುತ್ತದೆ. ಇಂಗ್ಲೀಷ್ ಸ್ಕೂಲುಗಳಲ್ಲಿ ಓದುವ ಪಂಚಮರಿಗೆ ವಿಶೇಷವಾಗಿ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿರುತ್ತದೆ.

ಮಿಲಿಟರಿ ಪಂಗಡದವರಿಗೆ ಸ್ಕೂಲುಗಳನ್ನು ಸ್ಥಾಪಿಸಿ, ಸಲಕರಣೆಗಳನ್ನು ಒದಗಿಸಿ ನಡಿಸುವ ಬಗ್ಗೆ ವಿಶೇಷ ಗಮನ ಕೊಡೋಣಾಗಿದೆ.

ವಿಶೇಷ ವಿದ್ಯಾಭ್ಯಾಸ.

ವಾಣಿಜ್ಯ ವಿದ್ಯಾಶಾಲೆಗಳ ಪಾಠಕ್ರಮಗಳನ್ನೂ, ಪರೀಕ್ಷೆಗಳನ್ನೂ ಮರಳಿ ಪರಿಶೀಲನ ಮಾಡಿ ವಾಣಿಜ್ಯ ವಿದ್ಯಾಭ್ಯಾಸದ ಆಡಳಿತಕ್ಕಾಗಿ ಒಂದು ಬೋರ್ಡನ್ನು ಸ್ಥಾಪಿಸಿದ್ದಾಯಿತು.

ಮಂಜೂರಾಗಿರುವ ಇತರ ಏರ್ಪಾಡುಗಳಲ್ಲಿ ಗಣ್ಯವಾದುವುಗಳು ಯಾವುವೆಂದರೆ:—ಹಾಸ್ಟಲುಗಳನ್ನು ಕುರಿತ ನಿಬಂಧನೆಗಳನ್ನು ಕ್ರಮಪಡಿಸಿದ್ದು; ಕೆಲವು ಹೈಸ್ಕೂಲುಗಳಲ್ಲಿ ನ್ಯಾಚುರಲ್ ಸೈನ್ಸು ಯಾನೇ ಪ್ರಾಣಿತತ್ವ ಶಾಸ್ತ್ರದ ಶಾಖೆಗಳನ್ನು ಏರ್ಪಡಿಸಿದ್ದು; ಉಪಾಧ್ಯಾಯರುಗಳಾಗಿ ತರಬಿಯತ್ತನ್ನು ಪಡೆಯುತ್ತಿರುವ ಖಾಸಗಿ ವಿದ್ಯಾರ್ಥಿಗಳಿಗೆ ವೇತನವನ್ನು ಕಲ್ಪಿಸಿದ್ದು; ಫಾರಿನ್ ಸ್ಕಾಲರ್‌ಷಿಪ್ ಯಾನೆ ದೇಶಾಂತರದಲ್ಲಿ ವಿದ್ಯಾರ್ಜನೆಗೆ ಹೋಗುವವರಿಗೆ ಧನಸಹಾಯದ ನಿಬಂಧನೆಗಳನ್ನು ತಿದ್ದುಪಡಿ ಮಾಡಿದ್ದು; ಸೆಂಟ್ರಲ್ ಬುಕ್‌ಡಿಪೋವನ್ನು ಪುನರ್ವ್ಯವಸ್ಥೆ ಮಾಡಿದ್ದು; ಖಾಸಗೀ ಹಾಸ್ಟಲುಗಳನ್ನು ಸ್ಥಾಪಿಸುವವರಿಗೆ ಪ್ರೋತ್ಸಾಹ ಕೊಟ್ಟದ್ದು; ಕೆಲವು ವಿದ್ಯಾರ್ಥಿವೇತನಗಳ ದರಗಳನ್ನು ಹೆಚ್ಚಿಸಿದ್ದು; ಇವೇ ಮೊದಲಾದವಾಗಿರುವವು.

ಕಳೆದ ವರುಷ ಪ್ರಕಟಿಸಿದ್ದ ವಿದ್ಯಾಭ್ಯಾಸ ಕ್ರಮವನ್ನು ಕುರಿತ ಮೆಮೋರಾಂಡಂ ವಿಷಯದಲ್ಲಿ ಜನರಿಂದ ಬಂದಿರುವ ಅಭಿಪ್ರಾಯಗಳನ್ನು ಸರಕಾರದವರು ವಿಶೇಷ ಅವಧಾನದೊಡನೆ ಪರ್ಯಾಲೋಚಿಸುತ್ತಿರುವರು. ಆ ಮೆಮೋರಾಂಡಂ ಮತ್ತು ಅದರ ಮೇಲಿನ ಅಭಿಪ್ರಾಯಗಳ ವಿಷಯದಲ್ಲಿ ಈ ಸಂಸ್ಥಾನದಲ್ಲಿ ಮುಂದೆ ನಡಿಸತಕ್ಕ ವಿದ್ಯಾಭ್ಯಾಸದ ಉದ್ದೇಶಕ್ಕೆ ಆಧಾರವಾದ ನಿಯಮಗಳನ್ನು ಸೂಚಿಸುವಂಥಾ ಒಂದು ಹುಕುಂನಾಮೆಯು ಸಾದರಾಗುವುದರಲ್ಲಿದೆ.

ಯೂನಿವರ್ಸಿಟಿ.

ಪ್ರಥಮ ವೈಸ್ ಚಾನ್ಸಿಲರಾದ ರಾಜ ಮಂತ್ರ ಪ್ರವೀಣ ಮಿ॥ ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್., ಸಿ.ಐ.ಈ. ಯವರ ಮರಣದಿಂದ ಮೈಸೂರು ಯೂನಿವರ್ಸಿಟಿಗೆ ಅತ್ಯಂತ ಶೋಚನೀಯವಾದ ನಷ್ಟವುಂಟಾಯಿತು. ಇವರ ಸ್ಥಾನಕ್ಕೆ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಫಿಲಾಸಫಿ ಪ್ರೊಫೆಸರಾಗಿರುವ ಡಾಕ್ಟರ್ ಬ್ರಜೇಂದ್ರನಾಥಶೀಲ್, ಎಂ. ಎ., ಪಿಎಚ್. ಡಿ. ಯವರು ವೈಸ್‌ಚೆನ್ಸಲರಾಗಿ ನೇಮಿಸಲ್ಪಟ್ಟಿರುತ್ತಾರೆ; ಇವರು ಬರುವ ಜನವರಿ ತಿಂಗಳ ಆದಿಯಲ್ಲಿ ತಮ್ಮ ಕೆಲಸದ ಚಾರ್ಜನ್ನು ವಹಿಸುವವರಾಗಿದ್ದಾರೆ. ಈ ಪ್ರಖ್ಯಾತರಾದ ವಿದ್ಯಾಚಾರ್ಯರ ದಕ್ಷತೆಯಲ್ಲಿ ನಮ್ಮ ಯೂನಿವರ್ಸಿಟಿಯ ಪುರೋಭಿವೃದ್ಧಿಯು ಸರ್ವೋತ್ಕೃಷ್ಟವಾದ ರೀತಿಯಲ್ಲಿ ನಡೆಯುವ ವಿಚಾರದಲ್ಲಿ ಸಂಶಯವಿರಲಾರದೆಂದು ಸರ್ಕಾರದವರು ನಂಬುತ್ತಾರೆ.

ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆ.

ಪ್ರಸಕ್ತ ವರ್ಷದಲ್ಲಿ ಕೈಗಾರಿಕೆಯ ಕೆಲಸಗಳಿಗಾಗಿ ಒಟ್ಟಿನಲ್ಲಿ 2,16,200 ರೂಪಾಯಿ ಮಂಜೂರು ಮಾಡಲಾಯಿತು. ಸೆಂಟ್ರಲ್ ಕೈಗಾರಿಕೆಯ ಕಾರಖಾನೆಯಲ್ಲಿ 1,66,000 ರೂಪಾಯಿ ಬಾಳುವ ಪದಾರ್ಥಗಳು ತಯಾರು ಮಾಡಲ್ಪಟ್ಟವು. ಈ ಕಾರ್ಖಾನೆಯವರು ಹೊಸದಾದ ಯಂತ್ರಗಳನ್ನು ತಯಾರು ಮಾಡುವುದರಲ್ಲಿ ಸಾಧ್ಯತೆಯನ್ನು ಪರೀಕ್ಷಿಸಿದರು. ಸರ್ಕಾರದ ಸಾಬೂನ್ ಕಾರ್ಖಾನೆಯಲ್ಲಿ ಸಾಬೂನನ್ನು ತಯಾರು ಮಾಡಿ ಹೊರಗೆ ಮಾರುವುದು ಲಾಭಕರವಾದ ಕೆಲಸವೆಂದು ಕಂಡುಬಂದ ಪ್ರಯುಕ್ತ ಅದನ್ನು ಖಾಸಗೀ ಜನರ ವಶಪಡಿಸುವ ವಿಷಯದಲ್ಲಿ ಅರ್ಜಿಗಳು ಸರ್ಕಾರದವರಲ್ಲಿಗೆ ಬಂದಿರುತ್ತವೆ. ಆದರೆ ಸಾಬೂನು ಕೈಗಾರಿಕೆಯ ಅಭಿವೃದ್ಧಿಗೆ ಸಂಬಂಧಪಟ್ಟ ಅನೇಕ ಅಂಶಗಳು ಇನ್ನೂ ವಿಮರ್ಶೆಯಾಗದೇ ಇರುವುದನ್ನು ಪರಿಭಾವಿಸಿ ಇನ್ನೂ ಕೆಲವು ಕಾಲದವರೆಗೆ ಈ ಕಾರ್ಖಾನೆಯನ್ನು ತಮ್ಮ ವಶದಲ್ಲೇ ಇಟ್ಟುಕೊಳ್ಳತಕ್ಕದ್ದೆಂದು ಸರ್ಕಾರದವರು ನಿಶ್ಚಯಿಸಿರುವರು. ಈ ವರುಷದಲ್ಲಿ ಈ ಕಾರ್ಖಾನೆಯಲ್ಲಿ ತಯಾರಾದ ಪದಾರ್ಥದ ಬೆಲೆಯು 1,09,353 ರೂಪಾಯಿಗಳೆಂದು ಅಂದಾಜಾಗಿರುತ್ತದೆ. ಮೆಟಲ್ ಫ್ಯಾಕ್ಟರಿ ಎಂಬ ಹಿತ್ತಾಳೇ ತಗಡಿನ ಕಾರ್ಖಾನೆಯಲಿ ಸ್ವಾಸ್ಥ್ಯವಾಗಿ ಕೆಲಸ ನಡೆಯಿತು. ಅದರಲ್ಲಿ ತಯಾರಾದ ಪದಾರ್ಥಗಳು 1,05,000 ರೂಪಾಯಿ ಬೆಲೆ ಬಾಳುವವಾಗಿದ್ದವು. ಈಚೆಗೆ ಸರ್ಕಾರದವರು ಆ ಕಾರಖಾನೆಯನ್ನು ವಿಸ್ತರಿಸುವ ಬಗ್ಗೆ ಹುಕುಂ ಮಾಡಿರುವರು. ಆರ್ಟು ವರ್ಕ್‌ಷಾಪ್ ಎಂಬ ಕುಶಲ ಕಲೆಗಳ ಕಾರ್ಖಾನೆಯು ಬಹು ಮಂದಿ ಕೈಕೆಲಸದವರಿಗೆ ಜೀವನವನ್ನು ಕಲ್ಪಿಸುವ ಸೂಚನೆಯನ್ನು ತೋರಿಸುತ್ತಲಿದೆ. ಸರ್ಕಾರೀ ನೇಯಿಗೆ ಕಾರ್ಖಾನೆಯು ಕ್ರಮಕ್ರಮವಾಗಿ ಉತ್ಪತ್ತಿಯಲ್ಲಿ ಅಭಿವೃದ್ಧಿಯನ್ನು ತೋರಿಸುತ್ತ ಅಲ್ಲಿನ ಫಲಿತಾಂಶದಿಂದ ನಮ್ಮ ಸೀಮೆಯ ನೇಯಿಗೆಯವರ ಮನೆಗಳಲ್ಲಿ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡುವ ಮಗ್ಗಗಳನ್ನು ರೂಢಿಗೆ ತರುವುದಕ್ಕೆ ಉಪಕ್ರಮಿಸುವುದು ಸಾಧ್ಯವೆಂಬದಾಗಿ ಕಾಣುತ್ತದೆ. ಬೆಂಗಳೂರು ಮೈಸೂರು ನಗರಗಳಲ್ಲಿನ ಹೋಮ್ ಇಂಡಸ್ಟ್ರೀಸ್ ಇನ್‌ಸ್ಟಿಟ್ಯೂಟ್ ಎಂಬ ಮನೆಯ ಕೈಗಾರಿಕೆಯ ಶಾಲೆಯನ್ನು ಸರ್ಕಾರದವರು ಪುನರ್ವ್ಯವಸ್ಥೆ ಮಾಡಿ ಹುಕುಂ ಸಾದರು ಮಾಡಿರುತ್ತಾರೆ.

ಒಳದೇಶದ ಮತ್ತು ಹೊರದೇಶದ ವ್ಯಾಪಾರವನ್ನು ಕುರಿತ ಲೆಕ್ಕಾಚಾರಗಳನ್ನು ತಯಾರು ಮಾಡುವುದರಲ್ಲಿ ಈ ಇಲಾಖೆಯ ವಾಣಿಜ್ಯಶಾಖೆಯು ನಿರತವಾಗಿತ್ತು.

ಮೈಸೂರು ಕಬ್ಬಿಣದ ಕಾರ್ಖಾನೆ.

ಬೆಂಕೀಪುರದಲ್ಲಿರುವ ಕಬ್ಬಿಣದ ಕಾರ್ಖಾನೆಗೆ ಅದುರನ್ನೂ, ಕಬ್ಬಿಣವನ್ನು ಕರಗಿಸುವ ಪದಾರ್ಥವನ್ನೂ ಒದಗಿಸುವ ಕೆಲಸಗಳ ಸಂಬಂಧದಲ್ಲಿ ಡಾಕ್ಟರ್ ಸ್ಮೀತ್‌ರವರನ್ನು ಸ್ಪೆಷಲ್ ಡ್ಯೂಟಿಯ ಮೇಲೆ ನೇಮಿಸಲಾಗಿದೆ. ಈಚೆಗೆ ಬೆಂಕೀಪುರದ ಹೆಸರನ್ನು ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಭದ್ರಾಪುರಿ ಎಂದು ಬದಲಾಯಿಸಲಾಗಿದೆ. ಗಣಿಯ ಕೆಲಸಗಳ ಸೂಪರಿನ್‌ಟೆಂಡೆಂಟರೊಬ್ಬರನ್ನು ಕೆಲಸಕ್ಕೆ ನೇಮಿಸಿ ಕೆಮ್ಮಣ್ಣುಗುಂಡಿಯಲ್ಲಿರುವ ಅದುರಿನ ಗಣಿಯಲ್ಲಿ ಪ್ರಾರಂಭದ ಕೆಲಸವನ್ನು ನಡಿಸಲಾಯಿತು. ಸುಮಾರು 2,20,000 ಘನ ಅಡಿಯಷ್ಟು ಅಗತೆಗಳು ನಡಿಸಲ್ಪಟ್ಟು 1,00,000 ಘನ ಅಡಿಯಷ್ಟು ಅದುರುಗಳು ಶೇಖರಿಸಲ್ಪಟ್ಟವು. ಅದುರನ್ನು ಗಣಿಗಳಿಂದ ಕೆಳಗಣ ಕಣಿವೆಗೆ ಸಾಗಿಸಲುದ್ದೇಶಿಸಿರುವ ಕೆಮ್ಮಣ್ಣುಗುಂಡಿಯ ಪಕ್ಕದಲ್ಲಿ ಕೆಳಕ್ಕೆ ಇಳಿಯುವ ತಂತಿ ಲೈನಿನ ವಿವರವಾದ ಸರ್ವೆಯು ಮುಗಿದಿದೆ ಮತ್ತು ನಕ್ಷೆಯೇ ಮುಂತಾದುವುಗಳು ಈ ಸಮಗ್ರ ಲೈನಿಗಾಗಿ ಸಿದ್ಧಪಡಿಸಲ್ಪಟ್ಟಿವೆ. ಯಂತ್ರಗಳ ಖರೀದಿ ಪಟ್ಟಿಯು ಬಂದಿದೆ. ಅದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಈ ಕೈಗಾರಿಕೆಯ ಸಂಬಂಧದಲ್ಲಿ ಒಟ್ಟಾಗಿ 47 ಮೈಲಿಗೆ ಸ್ವಲ್ಪ ಹೆಚ್ಚಾದ ಉದ್ದದವರೆಗೆ ಎರಡು ಅಡಿ ಅಗಲವುಳ್ಳ ಟ್ರಾಂವೆ ಲೈನುಗಳನ್ನು ಮಂಜೂರ್ಮಾಡಲಾಗಿದೆ. ಆರಂಭದ ಕೆಲಸವು ನಡೆಯುತ್ತಲಿದೆ. ಪ್ರಸಕ್ತ ವರ್ಷದಲ್ಲಿ [illegible] ಮಾರು 4½ ಲಕ್ಷ ರೂಪಾಯಿ ಖರ್ಚಾಗಿದೆ.

ಎಕ್ಸ್‌ಚೇಂಜಿನ ಸ್ಥಿತಿಯು ಅನುಕೂಲವಾಗಿರುವುದರಿಂ [illegible] ಎಲ್ಲಾ ಯಂತ್ರಗಳಿಗೂ, ತಗಡಿನ ಸಾಮಾನುಗಳಿಗೂ, ಎರಕ [illegible] ಳಿಗೂ ಕಟ್ಟಡದ ಸಾಮಾನುಗಳಿಗೂ ಆರ್ಡರು ಕೊಡಲಾ [illegible] ಯಂತ್ರಗಳಲ್ಲಿ ಬಹುಭಾಗವು ಬಂದಿದೆ. ಗಾಳಿ [illegible] ನ್ನೂ, ಬೆಂಕಿಯ ಅಗ್ಗಿಷ್ಟಿಕೆಗಳನ್ನೂ, ಭಟ್ಟಿ ಇಳಿಸುವ [illegible] ಗಳನ್ನೂ, ತಂಪುಮಾಡುವ ಸಾಧನಗಳನ್ನೂ ಹೂಡುವುದಕ್ಕಾ [illegible] ಮಾಡಿದ ಅಸ್ತಿವಾರಗಳು ಮುಗಿದಿವೆ. ಇವುಗಳಿಗೆ ಅವಶ್ಯಕವಾದ ಪ್ಲೇಟ್‌ವರ್ಕ್ ಎಂಬ ತಗಡಿನ ಕೆಲಸವು ಸ್ಥಾಪಿಸಲ್ಪಟ್ಟು ಮೊಳೆಗಳಿಂದ ಭದ್ರಪಡಿಸಲ್ಪಟ್ಟಿದೆ. ಉಳಿದ ಕೆಲಸಗಳು ನಡೆಯುತ್ತಲಿವೆ. ಕಟ್ಟಡದ ಕೆಲಸವೆಲ್ಲವೂ ಸುಮಾರು 1921 ನೆಯ ವರ್ಷಾಂತ್ಯದೊಳಗಾಗಿ ಮುಗಿಸಲ್ಪಡುವುದೆಂದು ನಿರೀಕ್ಷಿಸಲಾಗಿದೆ.

ಗಂಧದೆಣ್ಣೆಯ ಕಾರ್ಖಾನೆಗಳು.

ಈ ಕಾರ್ಖಾನೆಗಳು ಸುಮಾರು 1,488 ಟನ್ ಗಂಧದ ಮರವನ್ನು ತೆಗೆದುಕೊಂಡುವು. ಗಂಧದ ಎಣ್ಣೆಗೆ ಗಿರಾಕಿಯೇನೋ ಹೆಚ್ಚಾಗಿದ್ದಿತು. ಆದರೆ ಎಕ್ಸ್‌ಚೇಂಜ್ ದರವು ಹೆಚ್ಚಿದ್ದರಿಂದ ಲಾಭವು ಬಹುಮಟ್ಟಿಗೆ ಕಮ್ಮಿಯಾಯಿತು. ಗಂಧದೆಣ್ಣೆಯ ಕೈಗಾರಿಕೆಯು ಈಗ ಯಾವ ಸ್ಥಿತಿಯಲ್ಲಿರುವುದೆಂಬುದನ್ನು ವಿವರಿಸಿ ಮುಂದೆ ಅದರ ಅಭಿವೃದ್ಧಿಗಾಗಿ ಅನುಸರಿಸಬೇಕಾದ ಕ್ರಮವನ್ನು ಈಚೆಗೆ ವಿಧಿಸಿರುತ್ತದೆ.

ಜಾಯಿಂಟ್ ಸ್ಟಾಕ್ ಕಂಪೆನಿಗಳು.

ಪ್ರಸಕ್ತ ವರ್ಷದಲ್ಲಿ ಆರು ಹೊಸ ಜಾಯಿಂಟ್ ಸ್ಟಾಕ್ ಕಂಪೆನಿಗಳು ರಿಜಿಸ್ಟರ್ ಮಾಡಲ್ಪಟ್ಟವು. ವರ್ಷದ ಅಂತ್ಯದಲ್ಲಿ ಒಟ್ಟು 95 ಕಂಪೆನಿಗಳು ಕೆಲಸ ನಡಿಸುತ್ತಿದ್ದವು. ಅವುಗಳ ಗೊತ್ತಾದ ಮೂಲಧನ 1,33,30,100 ರೂಪಾಯಿಯಿಂದ 1,68,00,100 ರೂಪಾಯಿಗೂ, ಸಂದಾಯವಾದ ಮೂಲಧನ 52,69,605 ರೂಪಾಯಿಯಿಂದ 66,43,002 ರೂಪಾಯಿಗೂ ಹೆಚ್ಚಿರುತ್ತವೆ. ಈಚೆಗೆ ಸ್ಥಾಪಿಸಲ್ಪಟ್ಟಿರುವ ಮುಖ್ಯವಾದ ಹೊಸ ಕಂಪೆನಿಗಳ ಪೈಕಿ, ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರ ಅನುಗ್ರಹಪೂರ್ವಕವಾದ ಪೋಷಣೆಯಿಂದ ಉಪಕ್ರಮವಾದ ಮೈಸೂರು ಶ್ರೀ ಕೃಷ್ಣರಾಜಾ ನೂಲಿನ ಕಾರ್ಖಾನೆಯನ್ನು ಸೂಚಿಸಬಹುದು.

ವ್ಯವಸಾಯ.

ಈ ಇಲಾಖೆಯವರು ಈ ವರ್ಷದಲ್ಲಿ ಜನಗಳಿಗೆ ತಿಳಿವಳಿಕೆಯನ್ನು ಕೊಡುವ ಭಾಗದಲ್ಲಿ ವಿಶೇಷ ಕೆಲಸವನ್ನು ಮಾಡಿದರು. 1,498 ನಿದರ್ಶನಗಳು ನಡೆದವು ಮತ್ತು 1,000 ನೇಗಿಲುಗಳೂ, 1,700 ಇತರ ಮುಟ್ಟುಗಳೂ ಜನಗಳಿಗೆ ಮಾರಲ್ಪಟ್ಟವು. ಸರ್ಕಾರಿ ಕ್ಷೇತ್ರಗಳಲ್ಲಿ ಬಿಡದೆ ನಡೆದ ಪರೀಕ್ಷೆಗಳ ಫಲಿತಾಂಶವಾಗಿ ಮೇಲಾದ ತರಹೆಯ ಬೀಜದ ರಾಗಿ ದೊರೆತು ರೈತರಿಗೆ ಹಂಚಲ್ಪಟ್ಟಿತು. ಪ್ರಸಕ್ತ ವರ್ಷದಲ್ಲಿ ಸುಮಾರು 4,000 ಎಕರೆ ಜಮೀನಿಗೆ ಈ ಬೀಜವನ್ನು ಹಾಕಿರುವುದಾಗಿಯೂ, ಮುಂದೆ ಈ ವಿಸ್ತೀರ್ಣವು ವಿಶೇಷವಾಗಿ ಹೆಚ್ಚುವುದಕ್ಕೆ ಅವಕಾಶವಿರುವುದಾಗಿಯೂ ರಿಪೋರ್ಟು ಬಂದಿದೆ. ಇಲಾಖೆಯವರ ಪ್ರಯತ್ನಗಳಿಂದ ಹೆಚ್ಚು ಉತ್ಪತ್ತಿಯನ್ನು ಕೊಡತಕ್ಕ ರೆಡ್ ಮಾರೀಷಿಯಸ್ ಮತ್ತು ಇತರ ಜಾತಿಗಳ ಕಬ್ಬು 1,500 ರಿಂದ 2,000 ಎಕರೆಗಳಲ್ಲಿ ಸಾಗುವಳಿಯಾಗಿರುವುದು. ಲಾಭಕರವಾದ ಮತ್ತು ಫಲವತ್ತಾದ ಗೊಬ್ಬರಗಳ ಉಪಯೋಗವು ಜನಗಳಲ್ಲಿ ಹೆಚ್ಚು ರೂಢಿಗೆ ಬರುತ್ತಿದೆ. ನಮ್ಮ ವ್ಯವಸಾಯಗಾರರು ಹಿಂದೆ ಎಂದೂ ಇಲ್ಲದಿದ್ದಂತೆ ತಿಳುವಳಿಕೆಗಾಗಿಯೂ ಸಹಾಯಕ್ಕಾಗಿಯೂ ಈ ಇಲಾಖೆಯವರಲ್ಲಿಗೆ ಹೋಗುತ್ತಿರುವರೆಂಬುದಕ್ಕೆ ನಿಸ್ಸಂದೇಹವಾದ ರುಜುವಾತು ತೋರುತ್ತಿದೆ. ಸರ್ಕಾರಿ ಕ್ಷೇತ್ರಗಳಲ್ಲಿ ಪರೀಕ್ಷೆಗಳನ್ನು ನಡಿಸುತ್ತಿದ್ದರು ಮತ್ತು ರಾಗಿಯ ಸಾಗುವಳಿಯ ವಿಷಯದಲ್ಲಿ ಇಲಾಖೆಯವರಿಗೆ ಕಳೆದ ಒಂಭತ್ತು ವರ್ಷಗಳ ಪರಿಶೋಧನೆ ಮತ್ತು ಪರೀಕ್ಷೆಯ ಫಲಿತಾಂಶಗಳಿಂದ ವ್ಯಕ್ತವಾದ ಸಂಗತಿಗಳನ್ನು ಸೇರಿಸಿ ಒಂದು ಪುಸ್ತಕವನ್ನು ಪ್ರಕಟಿಸಲಾಯಿತು. ಅಡಿಕೆಯ ಕೊಳೆರೋಗವನ್ನು ತಡೆಯುವುದಕ್ಕಾಗಿ ಸಂಸ್ಥಾನದ ಎರಡು ಪ್ರದೇಶಗಳಲ್ಲಿ ಸಸ್ಯರೋಗಗಳ ಆಕ್ಟನ್ನು ಜಾರಿಗೆ ತರಲಾಯಿತು. ಈ ಸಂದರ್ಭದಲ್ಲಿ ಬಲಾತ್ಕಾರವಾದ ಏರ್ಪಾಡುಗಳು ಯಾವುವೂ ಅವಶ್ಯಕವಾಗಿರಲಿಲ್ಲ. ಇದರ ಫಲಿತಾಂಶಗಳು ಕೇವಲ ತೃಪ್ತಿಕರವಾಗಿದ್ದವು ಆಕ್ಟು ಜಾರಿಗೆ ಬಂದ ಪ್ರದೇಶಗಳಲ್ಲಿ ರೋಗವು ಸಂಪೂರ್ಣವಾಗಿ ನಿಂತುಹೋಯಿತು.

ರೇಷ್ಮೆಯ ವ್ಯವಸಾಯ.

ಈ ವರ್ಷದಲ್ಲಿ ರೇಷ್ಮೆಯ ವ್ಯವಸಾಯವು ಒಳ್ಳೆಯ ಅಭಿವೃದ್ಧಿಗೆ ಬಂದಿರುವುದು; ಹಿಪ್ಪುನೇರಳೆಯ ಸಾಗುವಳಿಯ ವಿಸ್ತೀರ್ಣವು ಮೊದಲಿಗಿಂತಲೂ 10,000 ಎಕರೆಗೆ ಮೇಲ್ಪಟ್ಟು ಹೆಚ್ಚಿರುತ್ತದೆ. ಈ ಆಧಿಕ್ಯವು ಮೈಸೂರು, ಕೋಲಾರ ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ವಿಶೇಷವಾಗಿದ್ದಿತು; ಆ ಡಿಸ್ಟ್ರಿಕ್ಟುಗಳಲ್ಲಿ ಅನೇಕ ಕಡೆಗಳಲ್ಲಿ ಈ ಇಲಾಖೆಯ ಮೂಲಕ ಕತ್ತರಿಸಲ್ಪಟ್ಟ ಕಡ್ಡಿಗಳನ್ನು ತರಿಸಿಕೊಂಡು ನಾಟಿರುತ್ತಾರೆ. ಜಪಾನ್ ದೇಶದ ನಿಪುಣರೊಬ್ಬರನ್ನು ನೇಮಕಮಾಡಿ ಈ ಇಲಾಖೆಯ ಸಿಬ್ಬಂದಿಯನ್ನು ಬಲಪಡಿಸಿದೆ; ಇವರು ಪರಿಕ್ಷಾ ಕಾರ್ಯಕ್ಕೆ ವಿಶೇಷ ಗಮನವನ್ನು ಕೊಟ್ಟರು. ಈ ನಿಪುಣರನ್ನು ಮತ್ತೆರಡು ವರ್ಷಗಳ ವರೆಗೆ ಕೆಲಸದಲ್ಲಿಟ್ಟುಕೊಳ್ಳುವುದನ್ನು ಸರ್ಕಾರದವರು ಈಚೆಗೆ ಮಂಜೂರ್ಮಾಡಿರುತ್ತಾರೆ. ಕಾಲಿನತುಳಿತದ ಸಹಾಯದಿಂದ ರೇಷ್ಮೆ ಹುರಿಮಾಡುವುದನ್ನು ಸಂಸ್ಥಾನದಲ್ಲಿ ಮನೆಯ

...ನಾಗಿ ರೂಢಿಗೆ ತರಲು ಸಹಾಯ ಮಾಡುವುದಕ್ಕಾಗಿ ಕಸಬಿನಲ್ಲಿ ಪ್ರವೀಣೆಳಾದ ಜಪಾನ್ ದೇಶದ ಒಬ್ಬ ಸ್ತ್ರೀಯನ್ನು ನೇಮಿಸುವ ವಿಷಯವನ್ನು ಸರ್ಕಾರದವರು ಯೋಚಿಸುತ್ತಿರುವರು. ಯೂರೋಪು ಖಂಡದಲ್ಲಿ ಮೈಸೂರು ರೇಷ್ಮೆಗೆ ಗಿರಾಕಿಯು ದೊರೆಯಬೇಕಾದರೆ ಹುರಿ ಮಾಡುವ ವಿದ್ಯುಚ್ಛಕ್ತಿ ಸಾಧನ ಯಂತ್ರಗಳನ್ನು ಸ್ಥಾಪಿಸುವುದು ಆವಶ್ಯಕವೆಂಬ ಸಂಗತಿಯು [illegible] ರೇಷ್ಮೆಯನ್ನು ಫ್ರಾನ್ಸ್ ದೇಶದಲ್ಲಿ ಮಾರುವ [illegible] ಈಚೆಗೆ ಮಾಡಿದ ಪ್ರಯತ್ನಗಳಿಂದ ಹೊರಪಟ್ಟಿರುತ್ತದೆ. ಒಂದು ರೇಷ್ಮೆ ರಾಟೇ ಕಾರ್ಖಾನೆಯ ಸ್ಥಾಪನೆಯನ್ನು ಸರ್ಕಾರದವರು ಮಂಜೂರ್ಮಾಡಿರುವರು; ಇಟಲಿ ದೇಶದಿಂದ ಅವಶ್ಯಕವಾದ ಯಂತ್ರವನ್ನು ಪಡೆದೊಡನೆಯೇ ಅದನ್ನು ಸ್ಥಾಪಿಸಲಾಗುವುದು. ರೇಷ್ಮೆಯ ವ್ಯವಸಾಯದ ಸೂಪರಿಂಟೆಂಡೆಂಟರವರ ಆಫೀಸನ್ನು ಮೈಸೂರಿಗೆ ವರ್ಗಾಯಿಸಿದ್ದಲ್ಲದೆ ಆ ಇಲಾಖೆಯನ್ನು ಪುನರ್ವ್ಯವಸ್ಥೆಮಾಡಿ ವ್ಯವಸಾಯದ ಇಲಾಖಾ ಡೈರೆಕ್ಟರವರ ಅಧೀನದಲ್ಲಿರಿಸಲಾಯಿತು.

ಜಾಗ್ರತೆ. ## ಕಬ್ಬಿಣದ ನೇಗಲು. **ತರಿಸಿಕೊಳ್ಳಿರಿ.**

ನಮ್ಮಲ್ಲಿ ಕಿರ್ಲೋಸ್ಕರ್ ಬಂಧುಕಂಪನಿಯ ಎಲ್ಲಾ ತರದ ನೇಗಿಲುಗಳೂ ಇವುಗಳ ಇತರೆ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತವೆ.

ಮಂಗಳೂರು ಹೆಂಚುಗಳು. 50

ನಾವು ಎ. ಅಲ್ ಬ್ಯುಕ್ಯುಯರ್ ಕ್ಯಾ ಅಂಡ್ ಸನ್ಸ್ ಎಂಬ ಹಂಚಿನ ಕಂಪನಿಗೆ ಅರಸೀಕೆರೆಯಿಂದ ಹುಬ್ಬಳ್ಳಿವರೆಗೆ ಸೋಲ್ ಏಜಂಟರಾಗಿರುವೆವಲ್ಲದೆ ಬಾಸಲ್‌ಮಿಷನ್ ವಗೈರೆಗಳ ನಾನಾತರದ ಹೆಂಚುಗಳು ನಮ್ಮಲ್ಲಿ ದೊರೆಯುತ್ತವೆ.

ಕಡಪಾ ಕಲ್ಲುಗಳು.

ಉತ್ತಮವಾದ ಕಡಪಾ ಕಲ್ಲುಗಳು ಅಗ್ಗ ಬೆಲೆಗೆ ದೊರೆಯುತ್ತವೆ ಆದ್ದರಿಂದ ನೇಗಿಲು, ಹಂಚು, ಮತ್ತು ಕಲ್ಲುಗಳು ಬೇಕಾದವರು ಧಾರಣೆ ವಗೈರೆ ಸಂಗತಿ ಪತ್ರ ಮುಖಾಂತರ ತಿಳಿದುತರಿಸಿಕೊಳ್ಳಿರಿ.

ಟೆಲಿಗ್ರಾಫ್ ವಿಳಾಸ
ಗೌಡರು ದಾವಣಗೆರೆ.

ವಿಳಾಸ :—ಎಚ್. ಪಿ. ಕರೇಗೌಡರ
ಹಾಲಪ್ಪ ಶಿವಲಿಂಗಪ್ಪ,
ಕಮಿಷನ್ ಏಜಂಟ್ಸ್, ದಾವಣಗೆರೆ.

ಅಮೇರಿಕನ್ ರೋಮಹರಿ ಪೌಡರ್.

ಕೇಶನಾಶನಿ ಪೌಡರ್.

ಇದು ವಿಲಾಯಿತಿಯಲ್ಲಿ ತಯಾರಾದದ್ದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಪುಡಿಯನ್ನು ಸವರಿದ ಮಾತ್ರಕ್ಕೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆಯುವದು. ಕ್ರಯ ಡಬಿ 1ಕ್ಕೆ 0—12—0.

ವಿಳಾಸ:—ಮರಾಟ ಟ್ರೇಡಿಂಗ್ ಕಂಪನಿ,
6 ತಿರುಪಳ್ಳಿ ಬೀದಿ, ಮದರಾಸು.

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮನ್ನು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲೆಕಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಮ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ದೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ .ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿ ಸಹಿತ ಗಡಿಯಾರ 1ಕ್ಕೆ 4—8—0.

ಲೂಸ್‌ಕಿಲ್ಲರ್.

6 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

31

ಈ ನಕ್ಷೆಯಲ್ಲಿ ಕಾಣುವ ಫೌಂಟನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತಿನ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೆನ್ನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗುರ.

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು.



ಕ್ರಯ 1 ಕ್ಕೆ ರೂ. 0—8—0.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿರುತ್ತದೆ. ಉತ್ತಮವಾದ [illegible] ಟ್ಸಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ಕುರು, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ನ್ಯೆರಂ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

31

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ 48

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬ್ಯಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶತ್ತೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಕ್ಕಳರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ. ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಕಿ. ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೇಶೂಲಿ, ನಡುಶೂಲಿ, ವಾರಶೂಲಿ, ರೇಷ್ಮಿಜಿದ್ದು, ಗುದವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟುದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತವೆ. [illegible] ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೂಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೇಟೆ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿಗೆ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ಅಕ್ಟೋಬರ್ ತಾ॥ ೩೧ ರಿಂದ ೧೯೨೦ ನೆಯ ನವಂಬರ್ ತಾ॥ ೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಆಶ್ವೀಜ ಬಹುಳ ಚೌತಿಯಿಂದ ಆಶ್ವೀಜ ಬಹುಳ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
31	ಭಾನು	ಚೌತಿ	15-46	ಮೃಗ	32-32	16
1	ಸೋಮ	ಪಂಚ	9-55	ಆದ್ರಾ	28-23	17
2	ಮಂಗಳ	ಷ-ಸ	3-54 54-2	ಪುನ	24-8	18
3	ಬುಧ	ಅಷ್ಟ	52-9	ಪುಷ್ಯ	20-4	19
4	ಗುರು	ನವ	46-56	ಆಶ್ಲೇ	16-20	20
5	[1]ಶುಕ್ರ	ದಶ	42-20	ಮಖಾ	13-12	21
6	[2]ಶನಿ	ಏಕಾ	38-30	ಪುಭ	10-47	22

(1) ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ. (2) ಸರ್ವತ್ರೈಕಾದಶಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಸೂರಪುರೀಶಾರಾ ಪರಮಾಧಿಗತರಾಜಮಂಡಲಹಿತ್ವಾ | ಘನಪಥಳ್ಳಿತಾವತಾರಾ ಪಶ್ಯಜ್ಞನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕಿಯಂಶದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ನವಂಬರ್ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೪೫

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು,ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

42

ಉತ್ತಮ ವೀರಶೈವ ಗ್ರಂಥಗಳು

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಆರಣಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೦—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರ ೨ಆಣೆ; ಶಂಕರಲಿಂಗಕಂದಂ ೧೪.

ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಚಾರುಶೀಲಚರಿತ್ರೆ	೦—೯—೦
ಪಂಚಾಂಗ	೦—೮—೦

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು ! ಯಾವುದೊಂದು ಖರ್ಚಿಲ್ಲದೆ 112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

7

ವೈದ್ಯವಿದ್ಯ

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೋಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಳೆಯಬಹುದು. ಗಂಡಸರದು ಚೀಲ 1ಕ್ಕೆ 1-4-0. ಹೆಂಗಸರದು ಚೀಲ 1ಕ್ಕೆ 3-4-0.

7 ವಿಳಾಸ:—ಎಸ್. ಪಾಲ್ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ## ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಳ್ಳೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 37

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ನಾಶಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ದೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿಸಹಿತ ಗಡಿಯಾರ 1ಕ್ಕೆ 4-8-0

ಲೂಸ್‌ಕಿಲ್ಲರ್.

7 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ರಕ್ತಶೋಧಕ ! ಮನೋಲ್ಲಾಸಿಕವೆಂಟ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 5

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆ ಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿವೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್‌ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತತ್‌ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್

೧೯೨೦ ನೆಯ ಇಸವಿ ನವಂಬರ್ ತಾ|| ೭ ನೆಯ ಭಾನುವಾರ.

ದಿವಾನರವರ ಭಾಷಣ.

ಕಳೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ದಿವಾನರವರು ಮಾಡಿದ ಭಾಷಣದೊಳಗೆ ಸರ್ಕಾರವು ಮಾಡಬೇಕೆಂದಿದ್ದ ೧ ಕೋಟಿ ರೂ. ಗಳ ಸಾಲಕ್ಕೆ ೩ ತಿಂಗಳೊಳಗಾಗಿ ೧ ಕೋಟಿ ೩೭ ಲಕ್ಷ ರೂ.ಗಳ ಚಂದಾ ಕೂಡಿತೆಂಬ ವಾರ್ತೆಯು ತಿಳಿಯಿಸಲ್ಪಟ್ಟಿರುವುದು. ಸಾಲವನ್ನು ಮಾಡಿ ಅವಶ್ಯಕ ಕಾರ್ಯನಿರ್ವಾಹ ಮಾಡುವುದು ಪಾಶ್ಚಾತ್ಯದೇಶದ ಸರ್ಕಾರಿ ಪದ್ಧತಿಯಾಗಿದ್ದರೂ, ಅದು ನಾಗರಿಕತಾ ಸೂಚಕವಾದುದೆಂದು ಭಾವಿಸಲ್ಪಟ್ಟಿದ್ದರೂ ನಮ್ಮ ದೇಶೀಯರಿಗೆ ಸಾಲವೆಂದರೆ ಸೇರದು. ಸರ್ ಎಂ. ವಿಶ್ವೇಶ್ವರಯ್ಯನವರು ಸಂಸ್ಥಾನದಲ್ಲಿ ದೊಡ್ಡದೊಡ್ಡ ಪ್ರತಿಷ್ಠಾಪನೆಗಳನ್ನು ಆರಂಭಿಸಿದಾಗಲೇ ೪-೫ ವರ್ಷಗಳ ಕಾಲದಲ್ಲಿ ೩ ಕೋಟಿ ರೂ. ಗಳಷ್ಟನ್ನು ಅವಕ್ಕೆ ವಿನಿಯೋಗಿಸಿಬಿಟ್ಟು ಮುಂದೆ ಆ ಕಾರ್ಯಗಳನ್ನೆಲ್ಲಾ ಪೂರ್ತಿಮಾಡುವುದಕ್ಕೆ ಸಾಲವನ್ನು ಮಾಡಬೇಕೆಂಬ ನಿರೀಕ್ಷಣೆಯನ್ನೇ ಇಟ್ಟುಕೊಂಡಿದ್ದರು. ಲೋಹಮಾರ್ಗಸ್ಥಾಪನೆ, ವಿದ್ಯುಚ್ಛಕ್ತಿನಿರ್ಮಾಣ, ಕಾವೇರೀ ಜಲಾಶಯ ಕಲ್ಪನೆ, ನೀರಾವರಿ, ಮತ್ತು ಪರಿಶ್ರಾಮಿಕ ಕಾರ್ಯಗಳು-ಇವುಗಳೆಲ್ಲಾ ಶಾಶ್ವತ ಲಾಭಪ್ರದಗಳೆಂದೂ, ಇವುಗಳಿಗಾಗಿ ಸಾಲವನ್ನು ಮಾಡುವುದೂ ಕೂಡ ಅನುಚಿತವಲ್ಲವೆಂದೂ ಅವರು ಪದೇಪದೇ ಹೇಳುತ್ತಿದ್ದರು. ಮತ್ತು ಇವಕ್ಕಾಗಿ ಎಷ್ಟು ಸಾಲ ಹುಟ್ಟಿದರೆ ಅಷ್ಟನ್ನೂ ತೆಗೆದು ಕಾರ್ಯನಿರ್ವಾಹ ಮಾಡಬೇಕೆಂದು ಒಂದುಸಲ ನ್ಯಾಯವಿಧಾಯಕ ಸಭೆಯಲ್ಲಿ ೧೯೧೭-ನೆ ವರ್ಷದಲ್ಲಿ ಸ್ಪಷ್ಟವಾಗಿ ಆಡಿ ತೋರಿಸಿದ್ದರು. ಇವರು ಹೀಗೆ ಆಡುವಾಗ್ಗೆ ಬೊಕ್ಕಸದಲ್ಲಿದ್ದ ಹಣವೆಲ್ಲಾ ಮುಗಿದಿದ್ದಿತು. ಹಿಡಿದ ಕಾರ್ಯವನ್ನು ಕೊನೆಮುಟ್ಟಿಸಲಿಕ್ಕೆ ಋಣವನ್ನು ಮಾಡದಿದ್ದರೆ ಸಾಗದೆಂಬ ವಿಷಯವು ಆಗಲೇ ಗೊತ್ತಾಗಿದ್ದಿತು. ಅದು ಕಾರಣವೇ ಸಾಲಮಾಡಲಿಕ್ಕೆ ದಿಗ್ದರ್ಶನವನ್ನು ಅವರೇ ಮಾಡಿಟ್ಟಿದ್ದರು. ಅವರು ಆರಂಭಿಸಿದ ಕಾರ್ಯಗಳನ್ನೆಲ್ಲಾ ಕೊನೆಮುಟ್ಟಿಸಲೇಬೇಕಾದ ಭಾರವು ಈಗ ಅಪರಿಹಾರ್ಯವಾಗಿರುವುದರಿಂದ ಈಗಣ ಸರ್ಕಾರದವರು ಅದನ್ನು ಮಾಡುತ್ತಿರುವರು. ಬಡ್ಡಿಯ ದರವು ಪ್ರಪಂಚದಲ್ಲೇ ಹೆಚ್ಚಾಗಿರುವುದರಿಂದ ನಮ್ಮ ಸರ್ಕಾರದವರೂ ಕೂಡ ಉದಾರವಾಗಿಯೇ ಬಡ್ಡಿಯನ್ನು ಕೊಡಲು ಸಿದ್ಧರಾಗಬೇಕಾಯಿತು. ಇದೇ ಸಮಯದಲ್ಲಿ ಹಿಂದೂಸ್ಥಾನ ಸರ್ಕಾರದವರು ೧೫೦ ಕೋಟಿ ರೂ. ಗಳ ಸಾಲವನ್ನು ತೆಗೆಯಲು ಪ್ರಕಟಿಸಿದ್ದರೂ, ನಮ್ಮ ದೇಶದವರೇ ೩ ತಿಂಗಳ ಕಾಲದೊಳಗಾಗಿ ಈ ಸಾಲಕ್ಕೆ ೧,೩೦,೦೦,೦೦೦ ರೂ. ಗಳನ್ನು ಕೊಡಲು ಉತ್ಸುಕರಾದುದನ್ನು ನೋಡಿ ಸಂತೋಷಿಸಬೇಕಾಗುತ್ತದೆ. ಈ ಹಣದಲ್ಲಿ ೫೩ ಲಕ್ಷದವರೆಗೆ ಮೈಸೂರು ಬ್ಯಾಂಕಿನ ದ್ವಾರಾ ಕೂಡಿತೆಂಬ ಸಂಗತಿಯು ಸಂಸ್ಥಾನದಲ್ಲಿ ಆರ್ಥಿಕ ವಿಷಯದೊಳಗೆ ಅದು ಪಡೆದುಕೊಂಡಿರುವ ಪ್ರಾಮುಖ್ಯವನ್ನು ವ್ಯಕ್ತಪಡಿಸಿರುವುದು. ಉದ್ದೇಶಕ್ಕಿಂತ ಹೆಚ್ಚಾಗಿ ದೊರೆದ ಸಾಲವನ್ನು ಕೂಡ ನಮ್ಮ ಸರ್ಕಾರದವರು ಉಪಯೋಗಿಸಿಕೊಂಡರೋ ಅಥವಾ ಕೋಟಿಗಿಂತ ಮಿಗಿಲಾದ ಹಣಕ್ಕೆ ಬಂದ "ದರಖಾಸ್ತು" ಗಳನ್ನೆಲ್ಲಾ ತಿರಸ್ಕರಿಸಿದರೋ ಅದು ದಿವಾನರ ಭಾಷಣದಿಂದ ವ್ಯಕ್ತವಾಗಲಿಲ್ಲ. ಹಿಡಿದಿರುವ ಲಾಭಕರಗಳಾದ ಪ್ರತಿಷ್ಠಾಪನೆಗಳಿಗೆ ವಿಶೇಷವಾಗಿ ಹಣವನ್ನು ಒದಗಿಸಬೇಕಾದ ಇದೇ ಸಮಯದಲ್ಲೇ ಧಾರಣೆವಾಸಿಗಳ ಹೆಚ್ಚುಗೆಯಿಂದ ಕಷ್ಟಪಡುತ್ತಿರುವ ಸಣ್ಣ ಸಣ್ಣ ಸರ್ಕಾರಿ ಉದ್ಯೋಗಿಗಳಿಗೆಲ್ಲಾ ಕನಿಕರದಿಂದ ಹೆಚ್ಚಾದ ಅಲೋಯನ್ಸುಗಳನ್ನು ಸರ್ಕಾರದವರು ಕೊಡಬೇಕಾಗಿ ಬಂದಿದೆ ಇದರಿಂದ ವರ್ಷ ೧ ಕ್ಕೆ ೨೪ ಲಕ್ಷ ರೂ. ಗಳಷ್ಟು ವೆಚ್ಚದ ಭಾರವು ಹೆಚ್ಚಿರುವುದು. ರಾಜ್ಯದ ಆಡಳಿತದ ದಕ್ಷತೆಗೆ ನ್ಯೂನತೆಯುಂಟಾಗದಂತೆ ಸರ್ಕಾರದ ಕಾರ್ಯಗಳನ್ನು ನೇರ್ಪಿನಿಂದಲೂ ಹಿಡಿತದಿಂದಲೂ ನಿರ್ವಾಹ ಮಾಡಲು ಪ್ರಯತ್ನಗಳನ್ನಿಟ್ಟಿದ್ದರೂ ಪ್ರಸಕ್ತ ವರ್ಷದಲ್ಲಿ ಆಯಕ್ಕಿಂತಲೂ ವ್ಯಯವು ೯ ಲಕ್ಷದಷ್ಟು ಹೆಚ್ಚಬಹುದೆಂದು ಸರ್ಕಾರದವರು ನಿರೀಕ್ಷಿಸಿದ್ದಾರೆ. ಆದರೆ ಶ್ರೀಮದ್ಯುವಸಾರ್ವಭೌಮರ ಆಗಮನವು ಅನಿರೀಕ್ಷಿತವಾಗಿ ನಿಂತುಹೋಗಿರುವುದರಿಂದ ಅದಕ್ಕಾಗಿ ಬಜೆಟ್ಟಿನಲ್ಲಿ ಏರ್ಪಡಿಸಿರುವ ೮ ಲಕ್ಷ ರೂ. ಗಳ ವೆಚ್ಚವು ಉಳಿಯುವುದರಿಂದಲೂ, ವರಮಾನದ ತೆರುಗೆಯು ನಿರೀಕ್ಷಣೆಗಿಂತಲೂ ಹೆಚ್ಚುವ ಸಂಭವವಿರುವುದರಿಂದಲೂ, ಮದದ್ರವ್ಯಶಾಖೆಯಲ್ಲಿ ಈ ವರ್ಷದಲ್ಲಿ ತೋರಿರುವಷ್ಟು ಅಧಿಕಾದಾಯವು ಮುಂದಣ ವರ್ಷವೂ ಸಂಭವಿಸುವುದರಲ್ಲಿ ಸಂಶಯಕ್ಕೇನೂ ಅವಕಾಶವಿಲ್ಲದಿರುವುದರಿಂದಲೂ ಸಹ ವೆಚ್ಚವು ಆದಾಯಕ್ಕಿಂತ ಮಿಗಿಲಾಗಲಾರದೆಂದು ಊಹಿಸಬಹುದಾಗಿದೆ. ವೆಚ್ಚವನ್ನು ಮಿತಗೊಳಿಸುವುದಕ್ಕೆ ಏರ್ಪಡಿಸಿರುವ "ರಿಟ್ರೆಂಚ್‌ಮೆಂಟ್" ಪದ್ಧತಿಯು ಫಲಪ್ರದವಾಗಬೇಕಾದರೆ ಸಭೆಯಲ್ಲಿ ಒಬ್ಬ ಪ್ರತಿನಿಧಿಯು ವಿಜ್ಞಾಪಿಸಿಕೊಂಡಂತೆ ಮೇಲಿನಿಂದ ಕೆಳಕ್ಕೆ ಎಂದರೆ ಮೊದಮೊದಲು ದೊಡ್ಡ ಅಧಿಕಾರಸ್ಥಾನಗಳ ರಿಟ್ರೆಂಚ್‌ಮೆಂಟು ನಡೆದರೆ ತಕ್ಕಷ್ಟು ಫಲವಾದೀತು. ಆದರೆ ದೊಡ್ಡದೊಡ್ಡ ಕೆಲ ಅಧಿಕಾರಸ್ಥಾನಗಳನ್ನೇ ತೆಗೆದುಹಾಕುವುದು ಒಂದುವೇಳೆ ಸಾಧ್ಯವಲ್ಲದೆಹೋದರೂ, ಈಗಣ ದುಷ್ಕಾಲ ಕಳೆಯುವವರೆಗೂ ೧೦ ರೂಪಾಯಿನೊಳಗಣ ಸಂಬಳದವರಿಗೆಲ್ಲಾ ನಿರ್ವಾಹವಿಲ್ಲದೆ ಅಲೋಯನ್ಸನ್ನು ಕೊಡುವುದಕ್ಕೆ ಏರ್ಪಡಿಸಿದ ಭಾರವನ್ನು ಸರ್ಕಾರಕ್ಕೆ ಬೀಳಗೊಡದಂತೆ ಮಾಡಬೇಕಾದರೆ, ೫೦೦ ಕ್ಕೆ ಮೇಲ್ಪಟ್ಟು ಸಂಬಳ ಪಡೆಯುವ ಉಪಪನ್ನಾಧಿಕಾರಿಗಳೆಲ್ಲಾ ತಮ್ಮ ಸಂಬಳವನ್ನು ಕಡಿಮೆಹಾಕಿಕೊಳ್ಳಬಹುದು. ಒಂದುವೇಳೆ ಅದಕ್ಕೆ ಇಷ್ಟಪಡದೆಹೋದರೆ ಕೆಲಕಾಲದವರೆಗೂ ಯಾವ ವಿಧದ ಅಲೋಯನ್ಸುಗಳನ್ನೂ ತೆಗೆದುಕೊಳ್ಳದಿರುವುದಕ್ಕಾದರೂ ಅವರುಗಳು ಸಿದ್ಧರಾದರೆ ಸಂಸ್ಥಾನಕ್ಕೆ ಎಷ್ಟೋ ಸಹಾಯವಾದೀತು. ಮುಖ್ಯವಾಗಿ ದಿವಾನರೂ ಕೌನ್ಸಿಲರುಗಳೂ ಸಮುಚಿತೋದಾರ ಹೃದಯದಿಂದ ತಾವೇ ಈ ಮೇಲುಪಂಗ್ತಿಯನ್ನು ಹಾಕಿದರೆ ಇತರಾಧಿಕಾರಿಗಳೆಲ್ಲರೂ ಅವರನ್ನು ಅನುವರ್ತಿಸದೆ ಇರಲಾರರು.

ರಭಸದಿಂದ ಸಂಸ್ಥಾನಕ್ಕೆ ದ್ರವ್ಯೋಪಪತ್ತಿಯನ್ನು ಹೆಚ್ಚಿಸುವುದರಲ್ಲಿ ಇತರ ಶಾಖೆಗಳೆಲ್ಲಕ್ಕಿಂತಲೂ ಮುಂದಾಗಿ ಪ್ರಸಿದ್ಧವಾಗಿರುವುದಾವುದೆಂದರೆ-ನಮ್ಮ ಮದದ್ರವ್ಯಶಾಖೆಯೊಂದೇ ಆಗಿರುತ್ತದೆ. ಈ ಶಾಖೆಯ ವರಮಾನವು ಮೊನ್ನೆ ವರ್ಷಕ್ಕಿಂತ ನಿನ್ನೆ ವರ್ಷದಲ್ಲಿ ೭ ಲಕ್ಷದಷ್ಟು ಹೆಚ್ಚಿರುತ್ತದೆ ಇದೇ ಪ್ರಮಾಣದಿಂದ ಇನ್ನು ೨-೩ ವರ್ಷಕಾಲ ಈ ಶಾಖೆಯ ಆದಾಯವು ಕೂಡಿಬಂದರೆ ಈ ಶಾಖೆಯ ವರಮಾನವೇ ೧ ವರ್ಷಕ್ಕೆ ಕೋಟಿಯಷ್ಟಾಗುವುದು. ಈಗ್ಗೆ ೧೦ ವರ್ಷಗಳ ಕೆಳಗೆ ನಮ್ಮ ಸಂಸ್ಥಾನದ ಭೂಮಿಯ ಕಂದಾಯದ ಉತ್ಪತ್ತಿಯು ೧ ಕೋಟಿಯ ಮೇಲೆ ೩ ಅಥವಾ ೪ ಲಕ್ಷದಷ್ಟು ಆಗುತ್ತಿದ್ದಿತು. ಕಳೆದ ಹತ್ತು ವರ್ಷಕಾಲದಲ್ಲಿ ಆ ಶಾಖೆಯ ವರಮಾನವು ಆಗಿಗಿಂತ ಈಗ ೬-೭ ಲಕ್ಷದಷ್ಟು ಮಾತ್ರ ಹೆಚ್ಚಿದೆ. ಈ ಮದದ್ರವ್ಯಶಾಖೆಯಲ್ಲಾದರೂ ೧೦ ವರ್ಷಗಳ ಕೆಳಗೆ ೪೩ ಲಕ್ಷದಷ್ಟು ವರಮಾನವಾಗುತ್ತಿದ್ದುದು ಈಗ ೭೭ ಲಕ್ಷಕ್ಕಿಂತಲೂ ಹೆಚ್ಚಾಗಿದೆ. ದೇಶದ ಜನಸಂಖ್ಯೆಯನ್ನೂ ಈ ಶಾಖೆಯ ವರಮಾನವನ್ನೂ ಹೋಲಿಸಿ ನೋಡಿದರೆ ಪ್ರತಿಯೊಂದು ತಲೆಗೂ ಈ ಮದದ್ರವ್ಯಶಾಖೆಯ ತೆರುಗೆಯು ೧-೬-೧ ಬಿದ್ದಂತೆ ಆಗುತ್ತದೆ. ದುರ್ನಯವ್ಯಾಪನೆಯು ಎಷ್ಟು ವಿದ್ಯುದ್ವೇಗದಿಂದ ದೇಶದಲ್ಲಿ ಸಾಗುತ್ತಿದೆಯೆಂಬುದನ್ನು ನಿರ್ಣಯಿಸುವುದಕ್ಕೆ ಇದಕ್ಕಿಂತ ಹೆಚ್ಚಿನ ದೃಷ್ಟಾಂತವೇನೂ ಬೇಕಿಲ್ಲ.

ವಿದ್ಯಾಭ್ಯಾಸ ಶಾಖಾ ವಿಷಯವಾಗಿ ದಿವಾನರವರು ಹೇಳಿರುವ ವಿಷಯಗಳೊಳಗೆ ಮುಂದೆ ೫ ವರ್ಷಗಳವರೆಗೆ ಪ್ರತಿಸಂವತ್ಸರವೂ ಎರಡೆರಡು ಲಕ್ಷ ರೂ. ಗಳಂತೆ ಮಧ್ಯಮ ತರಗತಿಯ ಪಾಠಶಾಲೆಯ ಕಟ್ಟಡಗಳನ್ನು ಕಟ್ಟಿಸಲು ತೆಗೆದಿಡುವೆವೆಂದು ಹೇಳಿರುತ್ತಾರೆ. ಇದು ಸುತರಾಂ ಸಾಲದು ಪಾಠಶಾಲೆಗಳಿಗೆ ತಕ್ಕ ಕಟ್ಟಡಗಳಿಲ್ಲದ ದೂರು ಹಲವು ಕಡೆಗಳಿಂದ ಬರುತ್ತಿದೆ. ಅನೇಕ ಧರ್ಮಾತ್ಮರು ಶಾಲೆಗಳನ್ನು ಸ್ವಕೀಯ ಧನದಿಂದ ಕಟ್ಟಿಸಿಕೊಡುತ್ತಿದ್ದರೂ ಈ ದೂರು ವಿಶೇಷವಾಗಿಯೇ ಇದೆ. ಕೆಲವುಕಡೆ ಕಟ್ಟಡಗಳಿಗಾಗಿ ಪ್ರಜೆಗಳು ಅರ್ಧ ದ್ರವ್ಯವನ್ನು ಕೂಡಿಸಿಟ್ಟು ಸರ್ಕಾರದ ಸಾಹಾಯ್ಯವನ್ನು ಇದಿರು ನೋಡುತ್ತಿದ್ದಾರೆ. ಹಲವುಕಡೆ ಅನಾರೋಗ್ಯಕರಗಳಾದ ಕಿಷ್ಕಿಂಧಗಳಾದ ಬಾಡಿಗೆ ಮನೆಗಳಲ್ಲಿ ತರಗತಿಗಳನ್ನಿಟ್ಟಿದ್ದಾರೆ. ಅಲ್ಲದೆ ಇಷ್ಟರಲ್ಲೇ ವ್ಯವಹಾರಕ್ಕೆ ಬರುವಂತಿರುವ ವಿ. ಮೆಮೋರಾಂಡಮ್ಮಿನ ನಿರ್ಧಾರದಂತೆ ಪಾಠಶಾಲೆಗಳು ಹೆಚ್ಚು ಹೆಚ್ಚಾಗಿ ಪ್ರತಿವರ್ಷವೂ ಸ್ಥಾಪಿಸಲ್ಪಡಬೇಕಾಗುತ್ತವೆ. ಹೀಗಿರುವಾಗ ಹೊಸ ಕಟ್ಟಡಗಳಿಗೆ ೨ ಲಕ್ಷ ರೂ. ಗಳನ್ನು ಮಾತ್ರ ವರ್ಷಕ್ಕೆ ವೆಚ್ಚ ಮಾಡುವುದು ಎಂದಿಗೂ ಸಾಕಾಗಲಾರದು. ಅವನ್ನು ದ್ವಿಗಣವನ್ನಾಗಿಯಾದರೂ ಮಾಡುವುದು ಆವಶ್ಯಕವಾಗಿದೆ. ಅಲ್ಲದೆ ಬಾಲಪಾಠಶಾಲೆಗಳ ಕಟ್ಟಡಗಳ ಗತಿಯೇನೋ ತಿಳಿಯಲಿಲ್ಲ.

ಪಂಚಮರ ವಿದ್ಯಾಭಿವೃದ್ಧಿ ವಿಷಯದಲ್ಲಿ ೨೦ ಮಂದಿಗಳಿಗಿಂತ ಕಡಿಮೆಯಿಲ್ಲದಷ್ಟು ಪಂಚಮ ವಿದ್ಯಾರ್ಥಿಗಳು ಸೇರುವ ಗ್ರಾಮಗಳಲ್ಲಿ ಅವರಿಗಾಗಿ ಪ್ರತ್ಯೇಕ ಪಾಠಶಾಲೆಗಳನ್ನು ಏರ್ಪಡಿಸಿಕೊಡುತ್ತೇವೆಂದು ಸರ್ಕಾರದವರು ಹೇಳಿರುವ ಮಾತುಗಳನ್ನು ನೋಡುವಲ್ಲಿ, ಬಲಾತ್ಕಾರವಾಗಿ ಪ್ರತಿಯೊಂದು ಕಡೆಯೂ ಇತರ ಜನವರ್ಗಗಳ ವಿದ್ಯಾರ್ಥಿಗಳ ಜತೆಗೇ ಈ ಪಂಚಮರ ವಿದ್ಯಾರ್ಥಿಗಳನ್ನೂ ಸೇರಿಸಬೇಕೆಂಬುದೇ ಸರ್ಕಾರದ ಉದ್ದೇಶವಲ್ಲವೆಂದೂ, ಇಬ್ಬರು ಮೂವರು ಅಥವಾ ಹತ್ತಾರುಮಂದಿ ಪಂಚಮ ವಿದ್ಯಾರ್ಥಿಗಳಿದ್ದ ಕಡೆಯಲ್ಲಿ ಅವರಿಗಾಗಿಯೇ ಪ್ರತ್ಯೇಕ ಪಾಠಶಾಲೆಗಳನ್ನು ಸ್ಥಾಪಿಸುವುದು ಅಧಿಕಧನವ್ಯಯಕ್ಕೆ ಆಕರವಾಗುವುದೆಂಬಕಾರಣದಿಂದ ಅಂಥ ಕಡೆಯಲ್ಲಿ ಇತರರ ಜತೆಗೇ ಈ ವಿದ್ಯಾರ್ಥಿಗಳನ್ನೂ ಸೇರಿಸಲಿಕ್ಕೆ ಏರ್ಪಡಿಸಲು ಉದ್ದೇಶಿಸಿರುವರೆಂದೂ ವ್ಯಕ್ತವಾಗುತ್ತದೆ. "ಸರ್ಕಾರಿ ಮತ್ತು ಏಡೆಡ್ ಸ್ಕೂಲುಗಳಿಗೆ ಕೀಳ್ಪಟ್ಟ ಪಂಗಡದವರನ್ನು ಸೇರಿಸುವಂತೆ ಮಾಡಿದ ಏರ್ಪಾಡು ಬಹುಮಟ್ಟಿಗೆ ಜಾರಿಯಲ್ಲಿ ಬಂದಿರುವುದೆಂಬ ಅಂಶವನ್ನು ತಿಳಿಸಲು ಸಂತೋಷಿಸುತ್ತೇವೆ, ಈ ನಿರ್ಭಾಗ್ಯರಾದ ಪಂಗಡದವರು ಇತರ ಪಂಗಡದವರೊಡನೆ ಕಲೆಯುವುದರಿಂದ ಮುಂದೆ ಪಡೆಯಬಹುದಾದ ಪ್ರಯೋಜನದಿಂದ ಅವರ ಸಾಮಾಜಿಕ ಸ್ಥಿತಿಯು ಮೇಲಾಗುವುದೆಂದು ನಿರೀಕ್ಷಿಸಬಹುದಾಗಿ ತೋರುತ್ತದೆ" ಎಂದು ದಿವಾನರು ಅಪ್ಪಣೆಕೊಡಿಸಿದ್ದಾರೆ. ಆದರೆ ಹೀಗಾಗಿರುವ ಸ್ಥಿತಿಯನ್ನೂ ಇದಕ್ಕಾಗಿ ಮಂತ್ರಿವರ್ಯರು ಪಟ್ಟಿರುವ ಸಂತೋಷವನ್ನೂ ಕೇಳಿ ಸಂತೋಷಿಸುವುದಕ್ಕೆ ಪ್ರತಿಯಾಗಿ ಸಂಕಟಪಡತಕ್ಕವರು ನಮ್ಮ ಮಧ್ಯದಲ್ಲಿ ಇಲ್ಲದೆ ಇಲ್ಲ. ಆದರೆ ಅಂಥವರ ಅಲ್ಪಸಂಖ್ಯೆಗಿಂತಲೂ ದಿವಾನರಭಿಪ್ರಾಯದಲ್ಲಿ ಭಾಗಿಗಳಾಗಿ ಸಂತೋಷಿಸತಕ್ಕ ಸಾನುಭೂತಿಪರರ ಸಂಖ್ಯೆಯೇ ಸಂಸ್ಥಾನದಲ್ಲಿ ವಿಶೇಷವಾಗಿರುವುದೆಂಬುದಕ್ಕೆ ರಾಜ್ಯದಲ್ಲಿ ಈ ವಿಷಯಕವಾಗಿ ಕೆಲವರಿಂದ ಎದ್ದಿದ್ದ ಶುಷ್ಕ ಕೋಲಾಹಲಗಳು ಅಣಗಿಹೋಗಿರುವುದೇ ನಿದರ್ಶನವಾಗಿದೆ. ವಿದ್ಯಾಭ್ಯಾಸದ ಮೆಮೋರಾಂಡಂ ಸಂಬಂಧದಲ್ಲಿ ಮುಂದೆ ನಡೆಯಿಸಬೇಕಾದ ಅಭ್ಯಾಸಕ್ರಮಗಳ ನಿಯಮಗಳನ್ನು ಕುರಿತು ಇಷ್ಟರಲ್ಲೇ ಸರ್ಕಾರದವರು ಒಂದು ಪ್ರಕಟನೆಯನ್ನು ಮಾಡುವವರಾಗಿದ್ದಾರೆಂದು ಮಂತ್ರಿವರ್ಯರು ವಾಗ್ದಾನಮಾಡಿರುವುದನ್ನು ಕೇಳಿ ಸಂತೋಷಿಸುತ್ತೇವೆ. ಮೆಮೊರಾಂಡಮ್ಮಿನಲ್ಲಿ ಅನನ್ಯಸಾಧಾರಣವಾದ ಬುದ್ಧಿಮತ್ತಾವಿಚಾರಗಳಿಂದ ಸೂಚಿಸಲ್ಪಟ್ಟಿರುವ ಸಾಮಾನ್ಯ ವಿದ್ಯಾಪ್ರಸಾರಕ್ರಮಕ್ಕೆ ಪೂರ್ಣವಾದ ಗಮನವನ್ನು ಕೊಟ್ಟೇ ಆ ನಿಯಮಗಳು ಕಲ್ಪಿಸಲ್ಪಡುವುವೆಂದು ನಿರೀಕ್ಷಿಸುತ್ತೇವೆ.

ಕೈಗಾರಿಕೆಯ ಕೆಲಸಗಳಿಗಾಗಿ ಕಳೆದವರ್ಷ ೨,೧೬,೦೦೦ ರೂ. ಗಳನ್ನು ಕೊಡಿಸಿತೆಂದೂ, ಸೆಂಟರಲ್ ಕೈಗಾರಿಕೆಯ ಕರ್ಮಾಗಾರದಲ್ಲಿ ೧,೬೬,೦೦೦ ರೂ. ಬೆಲೆಬಾಳುವ ಪದಾರ್ಥಗಳು ನಿರ್ಮಿತವಾದುವೆಂದೂ ದಿವಾನರವರು ಅಪ್ಪಣೆ ಕೊಡಿಸಿದ್ದಾರೆ. ಮತ್ತು ಉಪನ್ಯಾಸದ ೨ ನೆಯ ಭಾಗದಲ್ಲಿ ಸರ್ಕಾರಿ ಸೋಪು ಮಾಡುವ ಯಂತ್ರಾಲಯದಲ್ಲೂ ಮೆಟಲ್ ಫ್ಯಾಕ್ಟರಿಯಲ್ಲೂ ಇಷ್ಟಿಷ್ಟು ಬೆಲೆಯ ಪದಾರ್ಥಗಳು ನಿರ್ಮಿತವಾದುವೆಂದು ಹೇಳಲ್ಪಟ್ಟಿದೆಯೇ ಹೊರತು ಅವುಗಳಿಗೆಲ್ಲಾ ಆದ ವೆಚ್ಚವೂ ಬಂಡವಾಳವೂ ನಿವ್ವಳ ಆದಾಯವೂ ಇಷ್ಟಿಷ್ಟೆಂದು ತಿಳಿಯಿಸಲ್ಪಟ್ಟಿಲ್ಲ. ಅವೆಲ್ಲಾ ವಿವರಿಸಲ್ಪಟ್ಟಿದ್ದರೆ ಈ ಪ್ರತಿಷ್ಠಾಪನೆಗಳಿಂದ ಲಾಭವಾಗುತ್ತಿದೆಯೇ ನಷ್ಟವಾಗುತ್ತಿದೆಯೇ ಎಂಬುದನ್ನು ಪ್ರಜೆಗಳು ತಿಳಿದುಕೊಳ್ಳುತ್ತಿದ್ದರು. ಮರಗಳನ್ನು ಕೊಯ್ಯುವ ಕಾರ್ಖಾನೆಯ ಸಂಬಂಧದ ವಿವರವು ಮಾತ್ರ ಉಪನ್ಯಾಸದ ೨ನೆ ಭಾಗದಲ್ಲಿ ಹೇಳಲ್ಪಟ್ಟಿದೆ. ತರಿಸಿಕೊಂಡ ಚೌಬೀನೆಯ ವೆಚ್ಚವೂ ಉಳಿದ ವೆಚ್ಚಗಳೂ ಸೇರಿ ಒಟ್ಟು ೩೭೫೮೮ ರೂ. ಗಳ ವೆಚ್ಚವಾಗಿರುವುದೆಂದೂ, ಉತ್ಪತ್ತಿಯಾದ ಹಣವು ೪೧೮೫೪ ರೂ. ಗಳೆಂದೂ ಹೇಳಿರುತ್ತಾರೆ. ಇದರಿಂದ ಆ ಕರ್ಮಾಗಾರದಲ್ಲಿ ವೆಚ್ಚ ಕಳೆದು ೪೨೬೬ ರೂ. ಗಳ ಲಾಭವು ಬಂದಿತೆಂದು ಊಹಿಸಿಕೊಳ್ಳಬಹುದಾಗಿದೆ. ಅಂಥ ವಿವರಣವನ್ನು ಇತರ ಯಂತ್ರಾಲಯಗಳ ವಿಷಯದಲ್ಲೂ ಏತಕ್ಕೆ ಕೊಡಲಿಲ್ಲವೋ ತಿಳಿಯಲಿಲ್ಲ. ವಿವರವನ್ನು ತಿಳಿಯಿಸುವುದಕ್ಕೆ ತಕ್ಕ ಸ್ಥಿತಿಯಲ್ಲ ಅವುಗಳಿಲ್ಲದಿರುವುದೇ ಹೀಗೆ ಮಾಡುವುದಕ್ಕೆ ಕಾರಣವೋ ಏನೋ ಎಂದು ಯೋಚಿಸಲವಕಾಶವಾಗಿರುತ್ತದೆ.

ಒಳದೇಶದ ವೃತ್ತಾಂತಗಳು.

ನ್ಯಾಯವಿಧಾಯಕ ಸಭೆಯು ಬೆಂಗಳೂರಿನಲ್ಲಿ ಬರುವ ತಾ|| ೨೨ ರಲ್ಲಿ ಕೂಡುತ್ತದೆ.

ಯುದ್ಧಕ್ಕೆ ಹೋಗಿಬಂದ ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರನ್ನು ಶ್ರೀಮನ್ ಮಹಾರಾಜರವರು ಕಳೆದ ಗುರುವಾರ ರಾಜಧಾನಿಯ ಆಲನಹಳ್ಳಿ ಬಂಗಲೆಯಲ್ಲಿ ಅಲ್ಪಾಹಾರಾದಿ ಸತ್ಕಾರಗಳಿಂದ ಸಂತೋಷಪಡಿಸಿದರು.

ಮಹಾನವಮಿಯ ಸಮಯದಲ್ಲಿ ಕೂಡಿದ್ದ ವಿಶೇಷ ಜನಸ್ತೋಮದಿಂದ ಕೊಳಕಾಗಿದ್ದ ರಾಜಧಾನಿಯು ಕಳೆದ ವಾರ ಬಿದ್ದ ದೊಡ್ಡ ಮಳೆಗಳಿಂದ ಶುಚಿರ್ಭೂತವಾಗಿ ಈಗ ಮನೋಹರವಾಗಿದೆ. ರೋಗಾದ್ಯುಪದ್ರವಗಳೊಂದೂ ಹಬ್ಬದಿದ್ದುದು ದೈವಕೃಪೆ.

ಮಿ|| ಸಿ. ಡಿ. ಡೋವ್ ವಿಲ್ಸನ್ ಎಂಬ ಯೂರೋಪ್ಯರು ನಮ್ಮ ಸರ್ಕಾರದ ಇಂಜನಿಯರಿಂಗ್, ಲೋಹಮಾರ್ಗ, ಮತ್ತು ವಿದ್ಯುಚ್ಛಕ್ತಿ ಶಾಖೆಗಳ ಸೆಕ್ರೆಟರಿಯವರಾಗಿ ಕಳೆದ ತಾ|| ೨೦ ರಿಂದ ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ. ಇವರಿಗೆ ಲೋಹಮಾರ್ಗ ಶಾಖೆಯಲ್ಲಿ ೨೦-೩೦ ವರ್ಷಗಳ ಅನುಭವವಿದೆಯಂತೆ.

ಅಸ್ವಸ್ಥತೆಯ ನಿಮಿತ್ತ ೩ ತಿಂಗಳ ರಜಾದಮೇಲಿರುವ ಮ|| ಟಿ. ಧರ್ಮರಾಜಶೆಟ್ಟರಿಗೆ ಪ್ರತಿಯಾಗಿ ಕೃಷ್ಣರಾಜಸಾಗರದ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿ ಆಕ್ಟಿಂಗ್ ನಿಯಮಿಸಲ್ಪಟ್ಟಿರುವ ಮ|| ಗೋವಿಂದರಾಯರವರು ಆ ಕೆಲಸದ ಛಾರ್ಜನ್ನು ಕಳೆದ ಬುಧವಾರ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಆಫೀಸರವರಿಂದ ವಹಿಸಿಕೊಂಡರು.

ಯುದ್ಧಕ್ಕೆ ಹೋಗಿಬಂದಿರುವ ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರಿಗೆ ಮೈಸೂರಿನ ಮರಾಟಾ ಜನವರ್ಗದವರು ನಿನ್ನೆಯದಿನ ಮಧ್ಯಾಹ್ನ ಆನಲಹಳ್ಳಿ ಬಂಗಲೆಯಲ್ಲಿ ದಿವ್ಯವಾದ ಔತಣವನ್ನು ಮಾಡಿಸಿದುದಲ್ಲದೆ ಅದೇ ಸಾಯಂಕಾಲ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಒಂದು ಸತ್ಕಾರ ಸಮಾರಂಭವನ್ನು ವಿಜೃಂಭಣೆಯಿಂದ ನಡೆಯಿಸಿ, ಅಭಿನಂದನಪರವಾದ ವಿಜ್ಞಾಪನಪತ್ರವನ್ನೊಪ್ಪಿಸಿ ಸನ್ಮಾನಿಸಿದರು. ಶಾಕುಂತಲ ನಾಟಕದವರ ಒಂದು ಪ್ರಯೋಗವು ನಡೆದಿತು.

ರಾಜಧಾನಿಯಲ್ಲಿರುವ ಮೈಸೂರು ಬ್ಯಾಂಕಿಗೆ ಸೇರಿದಂತೆ ಕಟ್ಟಿರುವ ಹೊಸ ಕಟ್ಟಡದ ಪ್ರವೇಶ ಮಹೋತ್ಸವವು ದಿವಾನ್ ಸರ್ದಾರ್ ಕಾಂತರಾಜ ಅರಸಿನವರಿಂದ ಕಳೆದ ಶುಕ್ರವಾರ ನಡೆಯಿಸಲ್ಪಟ್ಟಿತು. ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಇದಕ್ಕಾಗಿ ಬೆಂಗಳೂರಿಂದ ಬಂದಿದ್ದು ಬ್ಯಾಂಕಿನ ಸಂಬಂಧವಾದ ವಿವರಣವುಳ್ಳ ಒಂದು ಉಪನ್ಯಾಸವನ್ನು ಮಾಡಿ, ಪ್ರವೇಶಮಹೋತ್ಸವವನ್ನು ನಡೆಯಿಸಲಿಕ್ಕೆ ದಿವಾನರನ್ನು ಪ್ರಾರ್ಥಿಸಿದರು.

ಮಿ|| ಮಿರ್ಜಾ ಇಸ್ಮಾಯಿಲ್‌ರವರಿಗೆ ಶ್ರೀಮನ್ ಮಹಾರಾಜರವರಿಂದ ಅಮೀನ್-ಉಲ್-ಮುಲ್ಕ್ ಎಂಬ ಬಿರುದು ಕೊಡಲ್ಪಟ್ಟುದರಿಂದ ತಮಗುಂಟಾದ ಆನಂದವನ್ನು ತೋರ್ಪಡಿಸಿ ಅಭಿನಂದಿಸುವುದಕ್ಕಾಗಿ ಅರಮನೆಯಾಫೀಸಿನ ಉದ್ಯೋಗಿಗಳೆಲ್ಲಾ ಸೇರಿ ಕಳೆದ ಮಂಗಳವಾರ ಸಾಯಂಕಾಲ ಖಾಸಬಂಗಲೆಯಲ್ಲಿ ಅತ್ಯುತ್ಕೃಷ್ಟವಾದ ಸಮಾರಂಭವನ್ನೇರ್ಪಡಿಸಿದ್ದರು. ಅರಸುಮಂಡಲಿಯವರು ಮುಖ್ಯಾಧಿಕಾರಿಗಳು ಪುರಪ್ರಮುಖರು ಮೊದಲಾದವರೆಲ್ಲಾ ಕರೆಯಿಸಲ್ಪಟ್ಟಿದ್ದರು. ಅಲ್ಪಾಹಾರಗಳೂ, ಸಂಗೀತ ವ್ಯಾಯಾಮಾದಿ ವಿನೋದಗಳೂ ರಚಿಸಲ್ಪಟ್ಟಿದ್ದುವು. ಸರ್ದಾರ್ ಗೋಪಾಲಕೃಷ್ಣೇ ಅರಸಿನವರಿಂದ ಅಭಿನಂದನಪರವಾದ ಭಾಷಣವು ಓದಲ್ಪಟ್ಟಿತು. ಸಮುಚಿತವಾದ ಉತ್ತರವು ಮಿ|| ಮಿರ್ಜಾರವರಿಂದ ಕೊಡಲ್ಪಟ್ಟಿತು.

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬೊಬ್ಬ ಪ್ರತಿನಿಧಿಗಳು ಈ ಸಭಿಕರಿಗೆಲ್ಲಾ ದಾರಿಯ ವೆಚ್ಚ ಮೊದಲಾದುವುಗಳಿಗೆ ಅಲೋಯನ್ಸನ್ನು ಕೊಡುವಂತೆ ಮಾಡಬೇಕೆಂದು ಕೇಳಿಕೊಂಡರು. ಗೌರವಾರ್ಥವಾದ ಈ ಕಾರ್ಯಕ್ಕೆ ಅಲೋಯನ್ಸನ್ನು ಕೇಳಿಕೊಳ್ಳುವುದು ಸರಿಯಲ್ಲವೆಂದು ತಿ|| ನರಸಿಂಹಪುರದ ಮ|| ಶ್ಯಾಮಯ್ಯಂಗಾರರು ನಿರೋಧಿಸಿದರು. ಸಂಸ್ಥಾನದ ಪ್ರಜೆಗಳಿಗೆಲ್ಲಾ ಪ್ರತಿನಿಧಿಗಳೆನ್ನಿಸಿಕೊಳ್ಳುವ ದೊಡ್ಡ ಗೌರವವನ್ನು ಪಡೆದು ದೇಶಸೇವಾರೂಪ ಘನ ಕಾರ್ಯವನ್ನು ನಿರ್ವಹಿಸಲು ಸಭೆಗೆ ಬರುವ ಈ ದೊಡ್ಡಮನುಷ್ಯರುಗಳು ತಾವೇ ರಿಟ್ರೆಂಚ್‌ಮೆಂಟನ್ನು ಕೋರುತ್ತಿರುವಾಗ ತಮಗೆ ದಾರಿಯವೆಚ್ಚ ಮೊದಲಾದುವುಗಳನ್ನು ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುವುದು ಹೇಗೆ ಗೌರವವೂ ನ್ಯಾಯವೂ ಆಗಿರುವುದೋ ತಿಳಿಯಲಿಲ್ಲ. ಸಭಿಕರಲ್ಲಿ ಬಹುಜನಕ್ಕೆ ಇದನ್ನು ಕೇಳಲು ಬಾಯಿಲ್ಲವೆಂದು ನೆನಸುತ್ತೇವೆ.

ಜಗನ್ಮೋಹನ ಬಂಗಲೆಯ ದೊಡ್ಡ ವಿವಾಹಮಂಟಪದಲ್ಲಿ ವಿಶ್ವವಿದ್ಯಾಲಯ ಪಟ್ಟಪ್ರದಾನ ಸಮಾರಂಭವು ಕಳೆದ ಸೋಮವಾರ ಬೆಳಗಿನ ೯ ಗಂಟೆಗೆ ಶ್ರೀಮನ್ ಮಹಾರಾಜರವರ ಅಧ್ಯಕ್ಷತೆಯಿಂದ ನಡೆಯಿತು. ಸಭೆಗೆ ದಿವಾನರೇ ಮೊದಲಾದ ಸಕಲಾಧಿಕಾರಿಗಳೂ, ಪ್ರಜಾಪ್ರತಿನಿಧಿಸಭಿಕರೂ, ವಿದ್ಯಾರ್ಥಿವಿದ್ಯಾರ್ಥಿನಿಯರೂ, ಸ್ಥಳಿಕ ಮಹಾಜನರೂ ಸಾವಿರಾರು ಮಂದಿಗಳು ನೆರೆದಿದ್ದರು. ಮೇಲಂತಸ್ತಿನ ಪರದೆಗಳ ಒಳಗಡೆ ಶ್ರೀಮನ್ ಮಹಾಮಾತೃಶ್ರೀಯವರೇ ಮೊದಲಾದ ರಾಣಿವಾಸದವರುಗಳು ನೆರೆದಿದ್ದರು. ಕಳೆದ ವರ್ಷ ಬಿ. ಎ., ಎಂ. ಎ. ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದ ೧೨೭ ಮಂದಿಗಳಲ್ಲಿ ಬರಲನುಕೂಲವಿಲ್ಲದ ಕೆಲವರು ಹೋಗುತ್ತ ಉಳಿದವರೆಲ್ಲಾ ಗೌನುಗಳನ್ನು ಧರಿಸಿ ಸರ್ಟಿಫಿಕೇಟುಗಳನ್ನು ಹಿಡಿದು ರಿಜಿಸ್ಟ್ರಾರರಿಂದ ಹೆಸರು ಹಿಡಿದು ಕೂಗಲ್ಪಟ್ಟಾಗ ಒಬ್ಬೊಬ್ಬರಾಗಿ ಎದ್ದು ಮಹಾರಾಜರನ್ನು ವಂದಿಸಿದರು. ಇವರುಗಳಲ್ಲಿ ಇಬ್ಬರು ಬ್ರಾಹ್ಮಣ ವಿದ್ಯಾವತಿಯರಾಗಿದ್ದರು. ಒಬ್ಬರು ಬಿ. ಎ. ಮತ್ತೊಬ್ಬರು ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು, ಗೊತ್ತಾದ ಬೇರೆ ಬೇರೆ ಭಾಗಗಳಲ್ಲಿ ಉತ್ತಮತರವಾಗಿ ಉತ್ತೀರ್ಣರಾಗಿದ್ದ ೧೨ ಮಂದಿಗಳಿಗೆ ಬೇರೆಬೇರೆ ಧರ್ಮಾತ್ಮರಿಂದ ಏರ್ಪಡಿಸಿರುವ ಭಂಗಾರದ ಮೆಡಲುಗಳು ಶ್ರೀಮನ್ ಮಹಾರಾಜರವರ ಹಸ್ತದಿಂದ ಕೊಡಲ್ಪಟ್ಟುವು. ಕಡೆಯಲ್ಲಿ ಆ|| ವೈಸ್‌ಛಾನ್ಸಲರಾದ ಸರ್ ಲೇಸ್ಲಿ ಮಿಲ್ಲರ್‌ರವರು ನಮ್ಮ ವಿಶ್ವವಿದ್ಯಾಲಯವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಲಿಕ್ಕೆ ಪ್ರಭುತ್ವದವರೂ ಪ್ರಜೆಗಳೂ ಸಹ ಮಾಡಬೇಕಾದ ಕರ್ತವ್ಯವನ್ನೂ ವಿದ್ಯಾರ್ಥಿಗಳ ಕರ್ತವ್ಯವನ್ನೂ ಕುರಿತು ಶ್ಲಾಘ್ಯವಾದ ಭಾಷಣವನ್ನು ಮಾಡಿದರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸ್ಥಳೀಯ ವಿಷಯಗಳು.

(ಶಿವಮೊಗ್ಗಾ ಡಿಸ್ಟ್ರಿಕ್ಟು).

ಪ್ರಾ.—ತೀರ್ಥಹಳ್ಳಿಯಲ್ಲಿ ಒಂದು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪಿಸಿಕೊಡಬೇಕು.

ಉ.—ಸ್ಪೆ|| ಮ್ಯಾಜಿಸ್ಟ್ರೇಟ್ ಕೋರ್ಟನ್ನು ಇಟ್ಟರೆ ತಕ್ಕಷ್ಟು ಕೆಲಸವು ಇರುವುದಿಲ್ಲ. ಈಗಿರುವ ಬೆಂಚ್ ಮ್ಯಾಜಿಸ್ಟ್ರೇಟರಿಗೇ ೨ನೆ ಕ್ಲಾಸ್ ಪವರನ್ನು ಕೊಟ್ಟರೆ ಸಾಕಾಗುತ್ತದೆ. ಹಾಗೆ ಕೆಲ ಕಾಲ ನಡೆಯಲಿ.

ಪ್ರಾ.—ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಮತ್ತೊಂದು ಹೈಸ್ಕೂಲನ್ನು ಕೊಡಬೇಕು. (ತೀರ್ಥಹಳ್ಳಿಯಲ್ಲಿ ಮಾಡಿದರೆ ೭ ಸಾವಿರ ರೂ. ಗಳನ್ನು ಕೊಡುತ್ತೇವೆಂದು ಒಬ್ಬ ಮೆಂಬರು ಹೇಳಿದರು).

ಉ.—ಸಾಗರದಲ್ಲಿ ಆಗಬೇಕೆಂದು ಕೆಲರೂ, ತೀರ್ಥಹಳ್ಳಿಯಲ್ಲಿ ಆಗಬೇಕೆಂದು ಕೆಲರೂ ಕೋರುತ್ತಾರೆ. ಎರಡು ಕಡೆಯೂ ಆಗಬೇಕಾದುದೇ. ಎಲ್ಲಿ ಮೊದಲು ಮಾಡಬೇಕೆಂಬುದನ್ನು ಯೋಚಿಸುತ್ತೇವೆ.

ಪ್ರಾ.—ಅಂಜನಾಪುರದ ಹತ್ತಿರ ಕುಮುದ್ವತೀ ನದಿಗೆ ಒಂದು ಅಣೆಕಟ್ಟೆಯನ್ನು ಕಟ್ಟಿಸಿ ನಾಲೆಯಿಂದ ತರೀ ಸಾಗುವಳಿಗೆ ಅನುಕೂಲಪಡಿಸಬೇಕು.

ಉ.—ಮಳೆಗಾಲ ಕಳೆದ ಕೂಡಲೇ ಪ್ರಯತ್ನಿಸುತ್ತೇವೆ.

ಪ್ರಾ.—ಚೆನ್ನಗಿರಿ ತಾ|| ನ ಸೂಳೆಕೆರೆ ಕೆಳಗಣ ನಾಲೆ ರಿಪೇರಿಗಾಗಿ ಎಕರೆಗೆ ೮ ಆಣೆಯಂತೆ ಕಂಟ್ರಿಬ್ಯೂಷನ್ ಎತ್ತಿರುತ್ತಾರೆ. ರಿಪೇರಿಯಾಗಿಲ್ಲ.

ಉ.—ರಿಪೇರಿಗಾಗಿ ಪ್ರಾಜಕ್ಟು ಮಾಡುತ್ತಿದ್ದಾರೆ.

ಪ್ರಾ.—ಹಾರನಹಳ್ಳಿಯಿಂದ ನ್ಯಾಮತಿ ಹೊನ್ನಾಳಿ ಮಾರ್ಗವಾಗಿ ಹರಿಹರದ ವರೆಗೆ ರೇಲು ಹಾಕಬೇಕು.

ಉ.—ಸದ್ಯಕ್ಕೆ ಮಾಡಲಾಗುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಬಹುದು.

ಪ್ರಾ.—ಚೆನ್ನಗಿರಿಯಿಂದ ಜೋಳದಹಾಳಿನವರೆಗೆ ಟ್ರಾಂವೆ ಹಾಕಲೇರ್ಪಾಟಾಗಿದೆ. ಅದನ್ನು ಮುಂದಕ್ಕೆ ಹೆಚ್ಚಿಸಿ ಚಿಕ್ಕಜಾಜೂರಿಗೆ ಸೇರಿಸಬೇಕು.

ಉ.—ಜೋಳದಹಾಳಿನವರೆಗಣ ಕೆಲಸವು ಮುಗಿಯಲಿ. ಆಮೇಲೆ ಯೋಚಿಸೋಣ. ಅದರ ಮುಂದಕ್ಕೆ ಮಾರ್ಗ ಹಾಕಿದರೆ ಬಹಳ ವೆಚ್ಚವು ತಗಲುತ್ತದೆ.

ಪ್ರಾ.—ಶಿವಮೊಗ್ಗಾ ಪಟ್ಟಣಕ್ಕೆ ಕುಡಿಯುವ ನೀರನ್ನೊದಗಿಸಲಿಕ್ಕೂ, ಚರಂಡಿಗಳನ್ನುತ್ತಮಪಡಿಸಲಿಕ್ಕೂ ಮಾಡಬೇಕಾದ ವೆಚ್ಚಕ್ಕಾಗಿ ಸರ್ಕಾರದವರು ೩ ಲಕ್ಷ ರೂ. ಗಳನ್ನು ೫ ರೂ. ಬಡ್ಡಿಯ ಮೇರೆಗೆ ಸಾಲವನ್ನು ಕೊಡಿಸಬೇಕು.

ಉ.—ಈ ವಿಷಯವಾಗಿ ವಿವರವನ್ನು ಸರ್ಕಾರಕ್ಕೆ ಬರೆದು ತಿಳಿಸುವುದಾಗಿ ಡಿ|| ಕಮಿಷನರು ಹೇಳುತ್ತಾರೆ.

ಪ್ರಾ.—ಹೊನ್ನಾಳಿ, ನ್ಯಾಮತಿ, ಸೊರಬ, ಶಿಕಾರಿಪುರಗಳಿಗೆ ತಂತಿಯಾಫೀಸುಗಳನ್ನಿಡಿಸಿಕೊಡಬೇಕು.

ಉ.—ಈ ವರ್ಷ ಕೆಲ ಕಡೆ ಸ್ಥಾಪಿಸುತ್ತಾರೆ. ನೀವು ಕೇಳುವ ಸ್ಥಳಗಳಲ್ಲೂ ೨ ಕಡೆ ಸ್ಥಾಪಿಸುತ್ತಾರೆ.

ಪ್ರಾ.—ಸಾಗರದ ಲೋಕಲ್ ಫಂಡ್ ಡಿಸ್ಪೆನ್ಸರಿಯಲ್ಲಿ ಇನ್‌ಪೇಷಂಟುಗಳಿಗೆ ಸ್ಥಳವನ್ನೂ ಅಡಿಗೆಯವರನ್ನೂ ಏರ್ಪಡಿಸಬೇಕು.

ಉ.—ಮಲ್ನಾಡ್ ಇಂಪ್ರೂವ್‌ಮೆಂಟ್ ಕಮಿಟಿಯ ವಿಚಾರಕ್ಕೆ ತೆಗೆದುಕೊಂಡುಬನ್ನಿ.

ಪ್ರಾ.—ಶಿವಮೊಗ್ಗಾ ಕಲಿಜಿಯೇಟ್ ಹೈಸ್ಕೂಲಿನಲ್ಲಿ ಸೈನ್ಸ್ ಶಾಖೆಯನ್ನೇರ್ಪಡಿಸಬೇಕು.

ಉ.—ಸ್ಯಾಂಕ್ಷನ್ ಆಗಿದೆ.

ಪ್ರಾ.—ನ್ಯಾಮತಿ ಎ. ವಿ. ಸ್ಕೂಲಿಗೆ ಹೊಸ ಕಟ್ಟಡವನ್ನು ಕಟ್ಟಿಸಬೇಕು.

ಉ.—ಆಲೋಚಿಸುತ್ತೇವೆ. ಅವಶ್ಯಕವಾದುದು.

ಪ್ರಾ.—ಸೊರಬದ ಎ. ವಿ. ಸ್ಕೂಲನ್ನು ದೊಡ್ಡದು ಮಾಡಬೇಕು.

ಉ.—ಸಾಧ್ಯವಾದಮಟ್ಟಿಗೆ ಬೇಗನೆ ಮಾಡುತ್ತೇವೆ.

ಪ್ರಾ.—ಚಂದ್ರಗುತ್ತಿ ಕರೆಹಳ್ಳಿ ಹಸವಿ ಈ ಗ್ರಾಮಗಳ ಹತ್ತಿರ ವರದಾ ನದಿಗೆ ಸೇತುವೆಯನ್ನು ಕಟ್ಟಿಸಬೇಕು.

ಉ.—ಸದ್ಯಕ್ಕೆ ಆಗುವುದಿಲ್ಲ.

ಪ್ರಾ.—ತೀರ್ಥಹಳ್ಳಿ ತಾಲ್ಲೂಕಿನ ೩ ದೊಡ್ಡ ಕೆರೆಗಳನ್ನು ರಿಪೇರಿ ಮಾಡಿಸಬೇಕು. ರೈತರು ಕಂಟ್ರಿಬ್ಯೂಷನ್ ಕೊಡಲು ಸಿದ್ಧರಾಗಿದ್ದಾರೆ.

ಉ.—ಮುಂದಣ ವರ್ಷದ ಪ್ರೋಗ್ರಾಮಿನಲ್ಲಿ ಸೇರುತ್ತದೆ.

ಪ್ರಾ.—ಶಿವಮೊಗ್ಗಾ, ಮಂಗಳೂರು ಬಂಡಿದಾರಿಯು ಬಹಳ ಶಿಥಿಲವಾಗಿದೆ. ಸರಿಮಾಡಿಸಬೇಕು.

ಉ.—ಸ್ಪೆಷಲ್ಲಾಗಿ ಗಮನ ಕೊಡುತ್ತೇವೆಂದು ಡಿ||ಕಮಿಷನರವರು ಹೇಳುತ್ತಾರೆ.

ಪ್ರಾ.—ಶಿಕಾರಿಪುರ ತಾ|| ಶೀಲವಂತನಕೊಪ್ಪದ ದೊಡ್ಡ ಕೆರೆಗೆ ಭದ್ರಾಪುರದ ಒಡ್ಡಿನ ಹೆಚ್ಚುವರಿ ನೀರನ್ನು ನಾಗೇಹಳ್ಳಿ ಮಾರ್ಗವಾಗಿ ನಾಲೆ ಕಟ್ಟಿಸಿ ಸಾಗಿಸಿ ತಂದುಬಿಡಬೇಕು.

ಉ.—ಚೀಫ್ ಇಂಜನಿಯರು ಪ್ರತ್ಯಕ್ಷವಾಗಿ ಬಂದು ನೋಡುತ್ತಾರೆ.

ಪ್ರಾ.—ನ್ಯಾಮತಿಯಲ್ಲಿ ಪ್ರಯಾಣಿಕರಿಗಾಗಿ ಒಂದು ಬಂಗಲೆಯನ್ನು ಕಟ್ಟಿಸಬೇಕು.

ಉ.—ಮುಸಾಫರ್‌ಖಾನೆ ಕಟ್ಟಲು ಏರ್ಪಾಟಾಗಿದೆ.

ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನ್‌ಸಾಹೇಬರವರು ಮಾಡಿದ ಭಾಷಣದಲ್ಲಿನ ಮುಖ್ಯಭಾಗಗಳು.

(ಕಳೆದ ವಾರದ ಶೇಷ).

ಟೆಕ್ನಿಕಲ್ ಇಲಾಖೆಗಳು.

ಪಬ್ಲಿಕ್ ವರ್ಕ್ಸ್ ಇಲಾಖೆ.

ಮರಹಮ್ಮತ್ ಇಲಾಖೆಯ ಎಲ್ಲಾ ಬಾಬುಗಳ ಒಟ್ಟು ಖರ್ಚು 1919-20 ರಲ್ಲಿ ಸುಮಾರು 62 ಲಕ್ಷ ರೂಪಾಯಿಯಾಯಿತು. ಕೃಷ್ಣರಾಜ ಸಾಗರದ ಅಣೆಕಟ್ಟಿನ ಕಟ್ಟಡ ಕಾಮಗಾರಿಯು ನಡೆಯುತ್ತಿತ್ತು ಮತ್ತು ಹಂಗಾಮಿಯಾದ ಕೋಡಿಯನ್ನು ಈ ವರ್ಷದಲ್ಲಿ 63 ಅಡಿಯಿಂದ 75 ಅಡಿಗಳ ವರೆಗೆ ಎತ್ತರಿಸಿದ್ದಾಯಿತು. ಟರ್ಬೈನ್ ಚಕ್ರಯಂತ್ರವೂ, ಮೇಲುಮಟ್ಟದ ಕಾಲುವೆಗಳೂ, ಮತ್ತು ಉತ್ತರ ದಡದಲ್ಲಿ ನೀರು ಹರಿಯುವ ತೂಬುಗಳೂ ಸಹಾ ಕಟ್ಟಲ್ಪಟ್ಟವು. 12 ಅಡಿ ಹೆಚ್ಚಾಗಿ ನೀರನ್ನು ಶೇಖರಿಸುವುದರಿಂದ ಕೆಳಗಿನ ಕಾಲುವೆಗಳಲ್ಲಿ 1921 ನೆಯ ಜನವರಿ ಲಾಗಾಯ್ತು ಬೇಸಿಗೆ ಕಾಲದಲ್ಲಿಯೂ ನೀರು ಸರಬರಾಯಿ ಮಾಡಬಹುದೆಂದು ಮೆಂಬರುಗಳು ಕೇಳಿ ಸಂತೋಷಪಡಬಹುದು. ದಕ್ಷಿಣ ದಡದ ಅಣೆಕಟ್ಟಿನ ಎತ್ತರವು 107 ಅಡಿಗಳ ವರೆಗೂ, ಉತ್ತರ ದಡದ ಅಣೆಕಟ್ಟಿನ ಎತ್ತರವು 100 ಅಡಿಗಳ ವರೆಗೂ ಬಂದಿರುತ್ತೆ. ಕೃಷ್ಣರಾಜಸಾಗರಕ್ಕೆ ಸಂಬಂಧಪಟ್ಟ ಕೀಳುಮಟ್ಟದ ನಾಲಾಗಳ ಮತ್ತು ಅವುಗಳಿಗೆ ಸಂಬಂಧವಾದ ಕಾಂಗಾರಿಗಳ ಕೆಲಸದ ಲೆಕ್ಕಗಳನ್ನು ಈ ಭಾಷಣದ 2 ನೆಯ ಭಾಗದಲ್ಲಿ ನಮೂದಿಸಿರುತ್ತೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಲಕ್ಕವಳ್ಳಿಯ ಹತ್ತಿರ ಭದ್ರಾನದಿಗೆ ಅಡ್ಡವಾಗಿಯೂ, ಅಂಜನಾಪುರದ ಹತ್ತಿರ ಕುಮುದ್ವತಿಗೆ ಅಡ್ಡವಾಗಿಯೂ ಜಲಾಶಯಗಳನ್ನು ಕಟ್ಟುವ ವಿಚಾರವನ್ನು ಪರಿಶೀಲಿಸಬೇಕೆಂದು ಉದ್ದೇಶವಿದೆ. ಸುಮಾರು 15 ಲಕ್ಷ ರೂಪಾಯಿಗಳ ಖರ್ಚು ಮುಟ್ಟಿಸಿ ಮೈಸೂರು ಸಿಟಿಯ ನೀರು ಸರಬರಾಯಿಯನ್ನು ಅಭಿವೃದ್ಧಿಪಡಿಸಲು ಒಂದು ಏರ್ಪಾಡನ್ನು ಮಂಜೂರ್ಮಾಡಿರುತ್ತೆ. ಆದರೆ ಈ ಏರ್ಪಾಡನ್ನು ಹಣ ಒದಗಿದಾಗ ಕೈಗೊಳ್ಳಬೇಕಾಗಿದೆ.

ರೈಲ್ವೆಗಳು.

ನಂಜನಗೂಡು-ಬೆಂಗಳೂರು ಮತ್ತು ಬೀರೂರು-ಶಿವಮೊಗ್ಗ ಸೆಕ್ಷನ್ನುಗಳನ್ನು ವಾಪಸು ತೆಗೆದುಕೊಂಡದ್ದರಿಂದ ರೈಲ್ವೆ ಇಲಾಖೆಯ ಕೆಲಸವು ಜಾಸ್ತಿಯಾಗಿದೆ. ಈಗ ಸರ್ಕಾರದವರ ಆಡಳಿತದಲ್ಲಿ ಒಟ್ಟು 372 ಮೈಲಿಗಳ ಓಪನ್ ಲೈನುಗಳು ಇವೆ. 74·99 ಮೈಲಿ ಫಾಸಲೆಯುಳ್ಳ ಮೀಟರ್ ಗೇಜ್ ಲೈನುಗಳು ಮತ್ತು ಎರಡು ಅಡಿ ಅಗಲದ 57·10 ಮೈಲು ಟ್ರಾಂವೇ ಲೈನು ಇವುಗಳನ್ನು ಹಾಕುತ್ತಿದೆ. ಹೆಚ್ಚಾದ ಗಾಡಿಗಳನ್ನು ಒದಗಿಸುವುದು ಬಹಳ ಜರೂರಾದ ಒಂದು ಮುಖ್ಯ ವಿಷಯವಾಗಿದೆ ಆದರೆ ಸಂಸ್ಥಾನದ ಹೊರಗಡೆ ಇರುವ ಕೈಗಾರಿಕೆಗಳ ಸ್ಥಿತಿಯನ್ನು ನೋಡಿದರೆ ನಮಗೆ ಬೇಕಾದಷ್ಟು ರೈಲುಗಾಡಿ ವಗೈರೆ ಸಾಮಾನುಗಳನ್ನು ಪಡೆಯುವುದು ಈಗ ಬಹಳ ಕಷ್ಟ ಸಾಧ್ಯವಾಗಿದೆ. ಮೈಸೂರು ಮತ್ತು ಹೊಳೆನರಸೀಪುರಕ್ಕೆ ಮಧ್ಯೆ ಜಾಸ್ತಿಯಾಗಿ ಒಂದು ರೈಲುಗಾಡಿಯನ್ನು ಬಿಟ್ಟದ್ದರಿಂದ ಈ ವರ್ಷದಲ್ಲಿ ಹೋದ ವರ್ಷಕ್ಕಿಂತಲೂ ಮೈಸೂರು-ಅರಸೀಕೆರೆ ರೈಲಿನಲ್ಲಿ ಕೊಂಚ ಜಾಸ್ತಿ ಲಾಭ ಬಂದಿರುತ್ತೆ. ಈ ಇಲಾಖೆಯ ಆಡಳಿತದ ಮತ್ತು ಎಕ್ಸಿಕ್ಯೂಟಿವ್ ಕೆಲಸಗಳನ್ನು ಒಬ್ಬ ಟ್ರಾಫಿಕ್ ಮ್ಯಾನೇಜರವರಲ್ಲಿಯೇ ಇಟ್ಟಿರುವುದು ತೃಪ್ತಿಕರವಾಗಿಲ್ಲದ್ದರಿಂದ ಟ್ರಾಫಿಕ್ ಇಲಾಖೆಯನ್ನು ಕ್ರಮಪಡಿಸಿ ಎರಡು ಡಿಸ್ಟ್ರಿಕ್ಟ್ ಟ್ರಾಫಿಕ್ ಆಫೀಸುಗಳನ್ನು ಮಂಜೂರ್ಮಾಡಿದೆ ರೈಲ್ವೆ ಆಡಿಟ್ ಇಲಾಖೆಯೂ ಸಹಾ ಕ್ರಮಪಡಿಸಲ್ಪಟ್ಟಿತು ಮತ್ತು ರೈಲ್ವೆ ಕೆಲಸಗಳ ಖರ್ಚು ಜಾಸ್ತಿಯಾದ್ದರಿಂದ ಇತರ ರೈಲ್ವೆಗಳಲ್ಲಿರುವ ದರವನ್ನನುಸರಿಸಿ ಮೂರನೆಯ ತರಗತಿಯ ಪ್ರಯಾಣಿಕರ ದರವನ್ನು ಇಲ್ಲಿಯೂ ಜಾಸ್ತಿಮಾಡಿರುತ್ತೆ.

ಪ್ರಸಕ್ತ ವರ್ಷದಲ್ಲಿ ಸುಮಾರು 2,65,87,970 ರೂಪಾಯಿ ಬೆಲೆ ಬಾಳುವ 4,88,056 ಔನ್ಸು ತೂಕದಷ್ಟು ಗಟ್ಟಿ ಚಿನ್ನವು ಗಣಿಯಿಂದ ತೆಗೆಯಲ್ಪಟ್ಟಿತು. 1918-19 ರಲ್ಲಿ 2,51,11,749 ರೂಪಾಯಿ ಬೆಲೆಯುಳ್ಳ 4,87,484 ಔನ್ಸು ಚಿನ್ನವು ತೆಗೆಯಲ್ಪಟ್ಟಿತು. ಸರ್ಕಾರಕ್ಕೆ ಸಲ್ಲತಕ್ಕ ರಾಜಾಯವು 1918-19 ನೆಯ ವರ್ಷದಲ್ಲಿ 14,30,480 ರೂಪಾಯಿ ಇದ್ದದ್ದು 1919-20 ನೆಯ ವರ್ಷದಲ್ಲಿ ಸುಮಾರು 14,10,661 ರೂಪಾಯಿಗಳಾಗಿತ್ತು.

ಲೋಕಲ್ ಸೆಲ್ಫ್ ಗೌರ್ನಮೆಂಟ್ (ಸ್ಥಳೀಯ ಸ್ವಂತ ಆಡಳಿತ).

ಲೋಕಲ್ ಬೋರ್ಡುಗಳು.

ಡಿಸ್ಟ್ರಿಕ್ಟುಗಳಲ್ಲಿನ ಸಂಪದಭ್ಯುದಯದ ಕೆಲಸವನ್ನು ಇದುವರೆಗೂ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಪ್ರೋಗ್ರೆಸ್ ಕಮಿಟಿಯವರು ನೋಡಿಕೊಳ್ಳುತ್ತಿದ್ದದ್ದನ್ನು ಪ್ರಸಕ್ತ ವರ್ಷದಲ್ಲಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡುಗಳಿಗೆ ವರ್ಗಮಾಡಿತು. ಇದಕ್ಕೆ ಸಲುವಾಗಿ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯತರ ರೆಗ್ಯುಲೇಷನನ್ನು ತಿದ್ದುಪಾಟು ಮಾಡಲು ಒಂದು ಮಸೂದೆಯು ಪರ್ಯಾಲೋಚನೆಯಲ್ಲಿದೆ. ಲೋಕಲ್ ಬೋರ್ಡುಗಳು ಸುಂಕಗಳನ್ನು ವಸೂಲ್ ಮಾಡುವ ಬಗ್ಗೆ ನಿಬಂಧನೆಗಳನ್ನು ಪ್ರಕಟಿಸಿರುತ್ತದೆ. ಅನೇಕ ಸ್ಥಳೀಯ ಸಂಘಗಳು ಸರ್ಕಾರಿ ನೌಕರರಲ್ಲದ ವೈಸ್‌ಪ್ರೆಸಿಡೆಂಟರನ್ನು ಚುನಾಯಿಸಿರುತ್ತವೆ. ಇಂತಹ ವೈಸ್‌ಪ್ರೆಸಿಡೆಂಟ್ಸರ ಕಾರ್ಯಗಳನ್ನು ವಿವರಿಸುವ ನಿಬಂಧನೆಗಳು ರಚಿಸಲ್ಪಟ್ಟಿವೆ. ಸಂಸ್ಥಾನಾಮಳೆ ಜರೂರಾಗಿ ಬೇಕಾಗಿರುವ ಸೀನೀರಿನ ಬಾವಿಗಳನ್ನು ತೆಗಿಸುವ ವಿಚಾರದಲ್ಲಿ ಹೆಚ್ಚಾದ ಅಭಿವೃದ್ಧಿಯನ್ನು ಪಡೆಯುವುದಕ್ಕಾಗಿ, ರೈತರಿಂದ ವಸೂಲ್ಮಾಡತಕ್ಕ ಚಂದಾ ಮೊಬಲಗನ್ನು ಅರ್ಧದಿಂದ ಮೂರರಲ್ಲಿ ಒಂದು ಭಾಗಕ್ಕೆ ಕಮ್ಮಿಮಾಡಿರುತ್ತೆ. ಮತ್ತು ಹೀನಸ್ಥಿತಿಯಲ್ಲಿರುವ ಜನಗಳ ವಿಚಾರದಲ್ಲಿಯೂ, ಬಹಳ ಜರೂರಾದ ಸಂದರ್ಭಗಳಲ್ಲಿಯೂ ಸಹ ಸರ್ಕಾರದ ಖರ್ಚಿನಿಂದ ಕೆಲಸ ನಡಿಸಬೇಕೆಂದು ಹುಕುಂ ಮಾಡಿರುತ್ತೆ.

ಮ್ಯುನಿಸಿಪಲ್.

ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ. ಯವರು ಸಂಸ್ಥಾನದಲ್ಲಿ ಪ್ರಧಾನವಾದ ಮ್ಯುನಿಸಿಪಾಲಿಟಿಯ ಆನರೆರಿ ಪ್ರೆಸಿಡೆಂಟರಾಗಿ ಏಳು ವರುಷ ಕೆಲಸ ನೋಡಿ ಆ ಕೆಲಸದಿಂದ ನಿವೃತ್ತರಾದರು. ಇವರು ಕೆಲಸದಲ್ಲಿದ್ದಾಗ ಮ್ಯುನಿಸಿಪಾಲಿಟಿಗೆ ಸರಿಯಾದ ತಿಳಿವಳಿಕೆಯನ್ನು ಕೊಟ್ಟು ಸರಿಯಾದ ಹತೋಟಿಯಲ್ಲಿ ಅದನ್ನು ಇಟ್ಟುಕೊಂಡಿದ್ದ ಪ್ರಯುಕ್ತ ಆ ಕಾಲದಲ್ಲಿ ಅಮೋಘವಾದ ಕಾರ್ಯಗಳು ನಡೆದಿರುವುದು ತಮ್ಮಗಳಿಗೆಲ್ಲಾ ಚೆನ್ನಾಗಿ ವೇದ್ಯವೇ ಇದೆ. ತಮ್ಮ ಪ್ರೆಸಿಡೆಂಟರನ್ನು ತಾವೇ ಚುನಾಯಿಸುವ ಹಕ್ಕನ್ನು ತುಮಕೂರು ಮತ್ತು ಕೋಲಾರದ ಟೌನ್ ಮ್ಯುನಿಸಿಪಲ್ ಕೌನ್ಸಿಲ್‌ಗಳಿಗೆ ಕೊಟ್ಟಿರುತ್ತದೆ. ಟೌನ್ ಮ್ಯುನಿಸಿಪಲ್ ಕೌನ್ಸಿಲ್‌ಗಳ ಚುನಾವಣೆಯ ನಿಬಂಧನೆಗಳು ತಿದ್ದುಪಾಟು ಮಾಡಲ್ಪಟ್ಟುವು. ಸ್ಥಳೀಯ ಸಂಘಗಳ ಸಾಧನ ಸಂಪತ್ತನ್ನು ಕ್ರಮಪಡಿಸಿ ಅಭಿವೃದ್ಧಿಗೊಳಿಸಲು ಸರ್ಕಾರದವರು ಮಾಡಿರುವ ನಡವಳಿಕೆಯ ವಿಚಾರದಲ್ಲಿ ನಾವು ಮುಂದೆ ಪ್ರಸ್ತಾಪಿಸುತ್ತೇವೆ.

ಇತರ ಇಲಾಖೆಗಳು.

ಮುಜರಾಯಿ.

ನಾನಾ ಮುಜರಾಯಿ ಆಲಯಗಳ ಲೆಕ್ಕದಲ್ಲಿ ಖರ್ಚುಜಾತಾ ಉಳಿದಿದ್ದ ಸರ್‌ಪ್ಲಸ್ ಹಣವನ್ನು ಒಟ್ಟುಗೂಡಿಸಿ ಜನರಲ್ ಮುಜರಾಯಿ ಫಂಡ್ ಎಂಬ ಹೆಸರಿನಿಂದ ಒಂದು ಫಂಡನ್ನು ಏರ್ಪಡಿಸಿ ಈ ಫಂಡನ್ನು ಬಡ್ಡಿಗೆ ಹಾಕಿ, ಆ ಬಡ್ಡಿಯನ್ನು ಮುಜರಾಯಿ ಆಲಯಗಳ ಪ್ರಯೋಜನಕ್ಕಾಗಿಯೂ ಧರ್ಮಕರ್ತರ ಉದ್ದೇಶಗಳಿಗೆ ವಿರುದ್ಧವಲ್ಲದ ಇತರ ಕೆಲಸಗಳಿಗಾಗಿಯೂ ವಿನಿಯೋಗಿಸುವಂತೆ ಏರ್ಪಾಡು ಮಾಡಿರುವ ಅಂಶವು ಮೆಂಬರುಗಳಿಗೆ ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ಸೆಕ್ಯೂರಿಟಿಗಳೂ ಮತ್ತು ನಗದುಹಣವೂ ಸೇರಿ ಈ ಸರ್‌ಪ್ಲಸ್ ನೊಬಲಗು 5,00,920 ರೂಪಾಯಿಯ ವರೆಗೆ ಆಗುವುದೆಂತಲೂ, ಅದರಿಂದ ವರ್ಷವೊಂದಕ್ಕೆ 20,313 ರೂಪಾಯಿ ಬಡ್ಡಿ ಬರುವುದೆಂತಲೂ, ಗಣನೆ ಮಾಡಲಾಗಿದೆ. ಈ ಫಂಡಿನ ಪೈಕಿ 10,000 ರೂಪಾಯಿಯನ್ನು ಇನ್ನು ಮುಂದಕ್ಕೆ ಪ್ರತಿ ವರುಷವೂ ಸರ್ಕಾರದಿಂದ ಕೊಡುತ್ತಿರುವ 10,000 ರೂಪಾಯಿ ಗ್ರಾಂಟಿಗೆ ಸೇರಿಸಿ ಮುಜರಾಯಿ ಆಲಯಗಳ ಸ್ಪೆಷಲ್ ಅಭಿವೃದ್ಧಿ ಕಾರ್ಯಗಳಿಗೆ ಕೊಡುವುದಾಗಿ ಏರ್ಪಡಿಸಿರುತ್ತದೆ. 7,820 ರೂಪಾಯಿ ಸ್ಪೆಷಲ್ ಇಂಜನೀರಿಂಗ್ ಶಿಬ್ಬಂದಿಯ ಖರ್ಚಿಗಾಗಿ ಉಪಯೋಗಿಸಲ್ಪಡುವುದು ಮತ್ತು ಉಳಿದ ಶಿಲ್ಕು ಮೊಬಲಗನ್ನು ದೇವಸ್ಥಾನದಲ್ಲಿ ನಡೆಯಬೇಕಾದ ಪೂಜೆಯ ಅರ್ಥ ಮತ್ತು ಕ್ರಮವನ್ನು ಬೋಧಿಸುವ ಪ್ರಧಾನ ಪಾಠಶಾಲೆಗಳನ್ನು ಸ್ಥಾಪಿಸುವದಕ್ಕಾಗಿ ಏರ್ಪಡಿಸಿದೆ. ಸಂಸ್ಥಾನದ ನಾನಾ ಆಫೀಸುಗಳಲ್ಲಿ ಮುಜರಾಯಿ ಕೆಲಸವನ್ನು ಮಾಡತಕ್ಕ ಶಿಬ್ಬಂದಿ ಖರ್ಚಿಗಾಗಿ ಮುಜರಾಯಿ ಎಸ್ಟಾಬ್ಲಿಷ್‌ಮೆಂಟ್ ಫಂಡೆಂಬ ಮತ್ತೊಂದು ಫಂಡನ್ನು ಏರ್ಪಡಿಸುವುದಕ್ಕಾಗಿಯೂ, ಸಹ ಹುಕುಮು ಸಾದರಾಗಿದೆ. ಇದರ ತಪಶೀಲುಗಳನ್ನು ಈ ಭಾಷಣದ 11 ನೆಯ ಭಾಗದಲ್ಲಿ ಕೊಟ್ಟಿದೆ.

ಶಾಸನದ ಇಲಾಖೆ.

ಸಂಸ್ಥಾನದಲ್ಲಿ ಪುರಾತನವೂ ಚರಿತ್ರಾರ್ಹವೂ ಆದ ಕಟ್ಟಡ ಮುಂತಾದವುಗಳನ್ನು ಉತ್ತಮವಾದ ರೀತಿಯಲ್ಲಿ ರಕ್ಷಿಸುವುದಕ್ಕೆ ಆವಶ್ಯಕವಾದ ಏರ್ಪಾಡು ಮಾಡುವ ವಿಷಯದಲ್ಲಿ ರಿಪೋರ್ಟು ಮಾಡುವುದಕ್ಕಾಗಿ ನೇಮಕ ಮಾಡಲ್ಪಟ್ಟ ಕಮಿಟಿಯ ಶಿಫಾರ್ಸುಗಳನ್ನು ಅನುಸರಿಸಿ ಹುಕುಮು ಸಾದರಾಗಿದೆ. ಚರಿತ್ರಾರ್ಹವಾದ ಕಟ್ಟಡ, ಆಲಯ ಮುಂತಾದುವುಗಳು ಸಂಸ್ಥಾನದಲ್ಲಿ ಹೇರಳವಾಗಿವೆ ಎಂಬ ವಿಷಯವೂ, ಇವುಗಳನ್ನು ತಲೆತಲಾಂತರದವರೆಗೂ ಎಚ್ಚರವಾಗಿ ಕಾಪಾಡುವುದು ಆವಶ್ಯಕವೆಂಬ ವಿಷಯವೂ ಮೆಂಬರುಗಳಿಗೆ ಗೊತ್ತೇ ಇದೆ; ಹೊಯ್ಸಳರಾಜರ ಕೆಲವು ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡುವುದಕ್ಕಾಗಿ ಹಿಂದೆ ಸ್ವಲ್ಪ ಗಮನ ಕೊಡಲ್ಪಟ್ಟಿದೆ. ಆದರೆ ಅವುಗಳು ನೆಲಸಮನಾಗಿ ಬಿದ್ದುಹೋಗುವುದನ್ನು ನಿಲ್ಲಿಸುವುದಕ್ಕಾಗಿ ಇಂಥಾ ಕಟ್ಟಡಗಳನ್ನು ವಿಶೇಷತಃ ಕ್ರಮವಾಗಿ ಪರೀಕ್ಷೆ ಮಾಡಬೇಕಾದ ವಿಷಯದಲ್ಲಿ ಕೆಲಸಗಳು ಇನ್ನೂ ಬಹಳವಾಗಿರುವುವು. ಜಾಗರೂಕತೆಯೊಡನೆ ರಕ್ಷಿಸಬೇಕಾದ 163 ಸ್ಮಾರಕ ಶಾಸನಗಳ ಪಟ್ಟಿಯೊಂದನ್ನು ಕಮಿಟಿಯವರು ಜಾಹಿರ್ ಮಾಡಿರುತ್ತಾರೆ. ಅವೆಲ್ಲವೂ ಇನ್ನು ಮುಂದೆ ರೆವಿನ್ಯೂ ಸಬ್‌ಡಿವಿಜನ್ ಆಫೀಸರುಗಳಿಂದ ಪ್ರತಿವರ್ಷವೂ ಪರೀಕ್ಷಿಸಲ್ಪಡತಕ್ಕವುಗಳಾಗಿವೆ. ಅವುಗಳಲ್ಲಿ ಮುಖ್ಯವಾದುವುಗಳನ್ನು ಶಾಸನದ ಇಲಾಖೆಯ ಡೈರೆಕ್ಟರು ಪ್ರತಿಯೊಂದು ವರ್ಷವೂ ಹೋಗಿ ನೋಡುವರು. ಅವುಗಳ ಸಾಲೀಯಾನ ವೆಚ್ಚಕ್ಕೂ ಅವುಗಳನ್ನು ನಾಶಪಡಿಸದೆ ಕಾಪಾಡುವುದಕ್ಕಾಗಿ ಬೇಕಾದ ಸ್ಪೆಷಲ್ ರಿಪೇರಿಗಳಾಗಿಯೂ ಏರ್ಪಾಡು ಮಾಡಲ್ಪಟ್ಟಿರುತ್ತದೆ. 1904 ನೆಯ ಇಸವಿಯ VII ನೆಯ ನಂಬರ್ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನು ಅನುಸರಿಸಿ ಪ್ರಾಚೀನವಾದ ಸ್ಮಾರಕ ಶಾಸನಗಳನ್ನು ರಕ್ಷಿಸುವುದಕ್ಕೆ ಒಂದು ಸ್ಪೆಷಲ್ ಕಾನೂನನ್ನು ವಿಧಿಸಬೇಕೆಂದು ಸಹ ಸರ್ಕಾರದವರು ಪರ್ಯಾಲೋಚಿಸುತ್ತಲಿದ್ದಾರೆ.

1. ರಾಜ್ಯಾಡಳಿತದ ದಕ್ಷತೆಯನ್ನು ಹೆಚ್ಚಿಸುವುದು.

(i) ಸರ್ಕಾರೀ ಕಛೇರಿಗಳಲ್ಲಿ ನೌಕರಿಗೆ ಜನರನ್ನು ಸೇರಿಸುವ ವಿಷಯದಲ್ಲಿ ವಿಚಾರಮಾಡುವ ಬಗ್ಗೆ ಒಂದು ಸೆಂಟ್ರಲ್ ಬೋರ್ಡನ್ನು ಸ್ಥಾಪಿಸುವುದು.

ರಾಜ್ಯಾಡಳಿತವು ವಿಚಕ್ಷಣೆಯಿಂದ ನಡೆಯಬೇಕಾದರೆ ಸರ್ಕಾರಿ ಕಛೇರಿಗಳಲ್ಲಿ ಕೆಲಸಕಾರ್ಯಗಳನ್ನು ನಡಿಸುವ ಕ್ರಮವನ್ನು ಚೆನ್ನಾಗಿ ಪರ್ಯಾಲೋಚಿಸಿ ನಿರ್ಧರಿಸುವುದು ಎಷ್ಟು ಮುಖ್ಯವೆಂಬುದನ್ನು ಸರ್ಕಾರದವರು ಸರ್ವಕಾಲದಲ್ಲೂ ಅಂಗೀಕರಿಸಿರುವರು. ಕಳೆದ ಕೆಲವು ವರ್ಷಗಳಿಂದಲೂ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ಎಫಿಷಿಯನ್ಸಿ ಆಡಿಟ್ ಸಿಬ್ಬಂದಿಯವರು ಕಛೇರಿಗಳಲ್ಲಿ ಕೆಲಸಗಳನ್ನು ಕ್ರಮಪಡಿಸಿ ಹೊಂದಿಕೆಯಾಗುವಂತೆ ಮಾಡುವ ಬಗ್ಗೆ ಕಾರ್ಯಕ್ರಮವಿವರಣ ಪುಸ್ತಕಗಳನ್ನು ತಯಾರು ಮಾಡುವುದರಲ್ಲಿಯೂ ಆವಶ್ಯಕಬಿದ್ದಾಗ ಸರ್ಕಾರೀ ಆಫೀಸುಗಳನ್ನು ತನಿಖೆಮಾಡಿ ಕಾರ್ಯಕ್ರಮದ ಲೋಪಗಳನ್ನು ತಿದ್ದಿ ಸರಿಪಡಿಸುವುದರಲ್ಲಿಯೂ ನಿರತರಾಗಿದ್ದರು. ಇಲ್ಲಿ ನಾವು ಎಫಿಷಿಯನ್ಸಿ ಆಡಿಟ್ ಆಫೀಸರನ್ನು ಮೊಕರೂರು ಮಾಡಿದ್ದು ಕುಂಬಾ ವಿವೇಚನೆಯ ಏರ್ಪಾಡಾಗಿರುವುದೆಂಬ ಅಂಶವನ್ನು ಇಂಡಿಯಾ ಸರ್ಕಾರದ ಸೆಕ್ರೆಟೆರಿಯೇಟ್ ಪ್ರೊಸೀಜರ್ ಕಮಿಟಿಯವರು ಈಚೆಗೆ ಪ್ರಕಟಿಸಿರುವ ರಿಪೋರ್ಟು ಚೆನ್ನಾಗಿ ದೃಢೀಕರಿಸುತ್ತದೆ. ಆ ರಿಪೋರ್ಟಿನ ಮೇಲೆ ಇಂಡಿಯಾ ಸರ್ಕಾರದವರ ಹುಕುಂ ಈಚೆಗೆ ಸಾದರಾಗಿದೆ. ಕಛೇರಿಗಳ ಕಾರ್ಯಕ್ರಮಗಳನ್ನು ಪರೀಕ್ಷಿಸುವ ''ಇನ್ಸ್‌ಪೆಕ್ಟರ್ ಆಫ್ ಆಫೀಸ್ ಪ್ರೊಸೀಜರ್'' ಎಂಬ ಹೆಸರಿನಿಂದ ಒಬ್ಬ ಅಧಿಕಾರಿಯನ್ನು ಮೊಕರೂರುಮಾಡಿ ಈಗ ನಮ್ಮಲ್ಲಿ ಎಫಿಷಿಯನ್ಸಿ ಆಡಿಟ್ ಆಫೀಸರಿಗೆ ಒಪ್ಪಿಸಲಾಗಿರುವ ಕೆಲಸಗಳಿಗೆ ಸಮಾನವಾದ ಕೆಲಸಗಳನ್ನು ಅವರಿಗೆ ವಹಿಸಬೇಕೆಂದು ಆ ಕಮಿಟಿಯವರು ಬಲವಾಗಿ ಸಿಫಾರಸು ಮಾಡಿರುವರು. ನೌಕರರು ತಮ್ಮ ಕೆಲಸಗಳನ್ನು ಹೆಚ್ಚು ವಿಚಕ್ಷಣೆಯಿಂದ ಮಾಡುತ್ತಾ ಬರುವಂತೆ ಮಾಡಬೇಕಾದರೆ ಎಲ್ಲಾ ಕಛೇರಿಗಳಲ್ಲಿಯೂ ನೌಕರಿಗೆ ಜನರನ್ನು ಸೇರಿಸುವ ವಿಷಯದಲ್ಲಿ ಏಕರೀತಿಯಾದ ಕ್ರಮವನ್ನು ಏರ್ಪಡಿಸಬೇಕಾದದ್ದು ಪ್ರಥಮ ಕರ್ತವ್ಯವಾಗಿರುವುದೆಂಬ ಅಂಶವು ನಮ್ಮ ಎಫಿಷಿಯನ್ಸಿ ಆಡಿಟ್ ಆಫೀಸರು ಆಗಿಂದಾಗ್ಯೆ ಕಳುಹಿಸಿರುವ ರಿಪೋರ್ಟುಗಳಿಂದ ವ್ಯಕ್ತವಾಗಿರುತ್ತೆ. ಇಂಡಿಯಾ ಸರ್ಕಾರದ ಸೆಕ್ರೆಟೇರಿಯೆಟ್ ಕಾರ್ಯಕ್ರಮಗಳ ಕಮಿಟಿಯವರೂ ಸಹ ಕಚೇರಿಗಳಿಗೆ ನೌಕರರನ್ನು ಚುನಾಯಿಸುವುದಕ್ಕಾಗಿ ಸ್ಟಾಫ್ ಸೆಲೆಕ್ಷನ್ ಬೋರ್ಡ್ ಎಂಬ ಒಂದು ಸೆಂಟ್ರಲ್ ಬೋರ್ಡನ್ನು ಪ್ರತ್ಯೇಕವಾಗಿ ಏರ್ಪಡಿಸತಕ್ಕದ್ದು ಆವಶ್ಯಕವೆಂತಲೂ, ಸದರಿ ಬೋರ್ಡಿನ ಮುಖಾಂತರವೇ ನೌಕರರನ್ನು ಚುನಾಯಿಸತಕ್ಕದ್ದು ಯುಕ್ತವೆಂತಲೂ ಅಭಿಪ್ರಾಯವನ್ನು ಸೂಚಿಸಿರುತ್ತಾರೆ. ಈ ರೀತಿ ಒಂದು ಬೋರ್ಡನ್ನು ಏರ್ಪಡಿಸುವುದರಿಂದ ಸದರಿ ಬೋರ್ಡಿನವರು ಎಲ್ಲೆಲ್ಲಿ ಸರಿಯಾದ ನೌಕರರು ಸಿಕ್ಕಬಹುದೆಂಬುದನ್ನು ಇಲಾಖಾ ಮೊಖ್ತೇಸರರಿಗಿಂತ ಸುಲಭವಾಗಿ ಕಂಡು ಹಿಡಿದುಕೊಳ್ಳಬಹುದು. ಇಲಾಖಾ ಮೊಖ್ತೇಸರರಿಗಾದರೋ ಈ ರೀತಿ ಕಂಡು ಹಿಡಿದುಕೊಳ್ಳುವುದಕ್ಕೆ ತಕ್ಕ ಅನುಕೂಲ್ಯಗಳಿಲ್ಲದ ಪ್ರಯುಕ್ತ ಅವರುಗಳು ನೌಕರರನ್ನು ಚುನಾಯಿಸುವುದು ಬಹಳ ಕಷ್ಟಸಾಧ್ಯವಾಗುವುದು. ಇಲಾಖಾ ಮೊಖ್ತೇಸರರುಗಳು ಒಬ್ಬೊಬ್ಬರು ಪ್ರತ್ಯೇಕವಾಗಿ ತಮಗೆ ಬೇಕಾದ ನೌಕರರನ್ನು ಚುನಾಯಿಸಿಕೊಳ್ಳುತ್ತಾ ಬರುವುದಕ್ಕಿಂತ ಒಂದು ಸೆಂಟ್ರಲ್ ಬೋರ್ಡಿನ ಮೂಲಕ ಚುನಾವಣೆ ಮಾಡಿದ್ದೇ ಆದರೆ ಸರ್ಕಾರೀ ನೌಕರಿಗಳಿಗೆ ಎಲ್ಲಾ ಪಂಗಡದವರನ್ನೂ ತಕ್ಕ ರೀತಿಯಲ್ಲಿ ಸೇರಿಸಿಕೊಳ್ಳುವುದು ಸಾಧ್ಯವಾಗಬಹುದು. ಈ ಏರ್ಪಾಡಿನಿಂದ ಉಂಟಾಗಬಹುದಾದ ಮತ್ತೊಂದು ಪ್ರಯೋಜನವೇನೆಂದರೆ, ಎಲ್ಲಾ ಇಲಾಖೆಗಳಲ್ಲೂ ಒಂದೇ ರೀತಿಯಾದ ಲಿಖಾವಟ್ಟು ಕೆಲಸಗಳಿಗೆ ಸರಿಸುಮಾರಾಗಿ ಒಂದೇ ದರದ ಸಂಬಳವನ್ನು ಗೊತ್ತುಮಾಡಲು ಸಾಧ್ಯವಾಗಬಹುದು. ಹಾಲಿ ಆರೀತಿ ಜಾರಿಯಲ್ಲಿಲ್ಲ. ಇಂಡಿಯಾ ಸರ್ಕಾರದವರು ಮುಂದೆ ತಮ್ಮ ಕಛೇರಿಗಳಲ್ಲಿ ನೌಕರಿಗೆ ಜನರನ್ನು ಚುನಾಯಿಸಿಕೊಳ್ಳುವ ವಿಷಯದಲ್ಲಿ ಅನುಸರಿಸುವ ಕ್ರಮವನ್ನೇ ಇಲ್ಲಿ ನಮ್ಮ ಸರ್ಕಾರದ ಕಛೇರಿಗಳಲ್ಲಿಯೂ ಅನುಸರಿಸುವುದರಿಂದ ಪ್ರಯೋಜನವುಂಟೇ ಇಲ್ಲವೇ ಎಂಬ ವಿಚಾರವನ್ನು ಪರಿಶೀಲನೆಮಾಡಬೇಕೆಂದು ನಮ್ಮ ಸರ್ಕಾರದವರು ಉದ್ದೇಶಿಸಿರುತ್ತಾರೆ. ಆದರೆ ಈ ವಿಷಯದಲ್ಲಿ ಫಲಾನೆ ರೀತಿಯಲ್ಲಿಯೇ ಹುಕುಂ ಮಾಡಲಾಗುವುದೆಂದು ಈಗ ತಿಳಿಸುವುದಿಲ್ಲ.

(ii) ಚೀಫ್ ಇಂಜನೀಯರಿಗೆ ಸರ್ಕಾರದ ಮರಹಮತ್ ಇಲಾಖೆಯ ಸೆಕ್ರೆಟರಿ ಕೆಲಸವನ್ನು ತಪ್ಪಿಸುವುದು.

ಬ್ರಿಟಿಷ್ ಇಂಡಿಯಾದಲ್ಲಿರುವಂತೆ ಮೈಸೂರು ಸಂಸ್ಥಾನದಲ್ಲಿಯೂ ಸಹ ಸರ್ಕಾರದ ಮರಹಮತ್ ಇಲಾಖೆಯ ಸೆಕ್ರೆಟೆರಿಯ ಕೆಲಸವನ್ನು ಚೀಫ್ ಇಂಜನಿಯರ ಕೆಲಸವನ್ನೂ ಸೇರಿಸಿ ಮೊದಲಿನಿಂದಲೂ ಒಬ್ಬ ಆಫೀಸರಿಗೆ ಕೊಟ್ಟಿರುತ್ತದೆ. ಮರಹಮತ್ ಇಲಾಖೆಯು ವಿಶೇಷ ಹಣ ಖರ್ಚುಮಾಡುವ ಇಲಾಖೆಗಳಲ್ಲಿ ಒಂದಾಗಿರುವುದು. ಇಂಥಾ ಇಲಾಖೆಯ ಮೊಖ್ತೇಸರರನ್ನು ಸೆಕ್ರೆಟೆರಿಯಾಗಿ ಮಾಡುವುದರಿಂದ ಕಛೇರಿಯ ಕೆಲಸವು ಇವರ ತಲೆಯಮೇಲೆ ಬಿದ್ದು ಇನ್ಸ್‌ಪೆಕ್‌ಷನ್ ಕೆಲಸಕ್ಕೆ ವಿರಾಮವೇ ಇಲ್ಲದಂತಾಗಿ ಎಷ್ಟುಮಟ್ಟಿಗೆ ಕುಂದಕ ಉಂಟಾಗುತ್ತದೆ. ಎಂಬುವುದು ಎಂಥಾವರಿಗೂ ಕಣ್ಣಿಗೆ ಬೀಳದೇ ಹೋಗಲಾರದು. ಇಂಡಿಯಾ ಸರ್ಕಾರದವರು ಕೆಲವು ವರುಷಗಳ ಹಿಂದೆ ಮೊಕರೂರು ಮಾಡಿದ ಮರಹಮ್ಮತ್ತು ಇಲಾಖಾ ಪುನರ್ವ್ಯವಸ್ಥೆಯ ಕಮಿಟಿಯವರು ಈಗಿರುವ ಪದ್ಧತಿಯನ್ನು ದೂಷಿಸಿ ಈಗ ಒಬ್ಬರೇ ಆಫೀಸರರಲ್ಲಿ ಸೇರಿಸಲ್ಪಟ್ಟಿರುವ ಈ ಎರಡು ಅಧಿಕಾರಿಗಳನ್ನೂ ಪ್ರತ್ಯೇಕ ಪಡಿಸಬೇಕೆಂದು ಶಿಫಾರಸು ಮಾಡಿರುವರು. ಈ ಇಲಾಖೆಯಲ್ಲಿ ಸರ್ಕಾರೀ ಹಣ ಖರ್ಚಾಗುತ್ತಿರುವ ವಿಷಯದಲ್ಲಿ ಈಗ್ಗಿಂತ ಹೆಚ್ಚಾಗಿ ತನಖೀ ನಡೆಸಬೇಕಾದರೆ ಮತ್ತು ಖರ್ಚಾಗುತ್ತಿರುವ ಹಣಕ್ಕೆ ತಕ್ಕಷ್ಟು ಪ್ರತಿಫಲನ್ನು ನಿರೀಕ್ಷಿಸಬೇಕಾದರೆ ಈ ಇಲಾಖೆಯ ಮೊಖ್ತೇಸರರಿಗೆ ಸೆಕ್ರೆಟೆರಿಯ ಕೆಲಸವನ್ನು ತಪ್ಪಿಸಿದ್ದಲ್ಲದೆ ಸಾಧ್ಯವಾಗಲಾರದೆಂಬ ಅಂಶವು ಕಳೆದ ಒಂದೆರಡು ವರುಷಗಳಲ್ಲಿ ಅನೇಕವೇಳೆ ಸರ್ಕಾರದವರ ತಿಳಿವಳಿಕೆಗೆ ಬಂದ ನಿದರ್ಶನಗಳಿಂದ ವ್ಯಕ್ತವಾಗುವುದು. ಮೈಸೂರು ರೈಲುಗಳ ಏಜಂಟರಿಗೆಕೂಡ ಸರ್ಕಾರದ ಸೆಕ್ರೆಟೆರಿಯ ಕೆಲಸವನ್ನು ತಪ್ಪಿಸುವ ವಿಷಯವನ್ನು ಹಿಂದೆಯೇ ತಿಳಿಸಿರುತ್ತೇವೆ. ಮರಹಮತ್ತು ಮತ್ತು ರೈಲ್ವೇ ಈ ಎರಡು ಇಲಾಖೆಗಳಿಗೂ ಸೇರಿ ಒಬ್ಬ ಸೆಕ್ರೆಟೆರಿಯನ್ನು ನೇಮಕಮಾಡಬೇಕೆಂದು ಉದ್ದೇಶಿಸಿರುವುದಲ್ಲದೆ ಈ ಕೆಲಸಕ್ಕೆ ರೈಲ್ವೆ ಮತ್ತು ಮರಹಮ್ಮತ್ತು ಈ ಎರಡು ಬಾಬುಗಳಲ್ಲಿಯೂ ವಿಶೇಷ ಅನುಭವಶಾಲಿಗಳಾದ ಮಿ|| ಡೋವ್ ವಿಲ್‌ಸನ್‌ರನ್ನು ಸರ್ಕಾರದವರು ಚುನಾಯಿಸಿರುತ್ತಾರೆ. ಇವರು ಮೈಸೂರು ದೇಶಕ್ಕೆ ಹೊಸಬರಲ್ಲ. ಸಂಸ್ಥಾನದಲ್ಲಿರುವ ರೈಲ್ವೆ ಆಡಳಿತವನ್ನು ಕೂಡಲೆ ಸಮಗ್ರವಾಗಿ ಪರಿಶೀಲನೆ ಮಾಡಿ ಆವಶ್ಯಕವಾದ ಬದಲಾವಣೆಗಳನ್ನು ಸೂಚಿಸುವುದು ಮಿ|| ಡೋವ್ ವಿಲ್‌ಸನ್‌ರವರ ಕರ್ತವ್ಯಗಳಲ್ಲಿ ಒಂದಾಗಿರುವುದೆಂಬುದನ್ನು ಇಲ್ಲಿ ನಾವು ಸೂಚಿಸಬಹುದಾಗಿದೆ.

(iii) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪುನರ್ವ್ಯವಸ್ಥೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡಬೇಕಾದದ್ದು ಜರೂರಾಗಿ ಆವಶ್ಯಕವಾಗಿದೆ. ಈ ಇಲಾಖೆಗೆ ಸಂಬಂಧಪಟ್ಟ ಕೆಲಸಕಾರ್ಯಗಳು ಬ್ರಿಟಿಷ್ ಇಂಡಿಯಾದಲ್ಲಿ ''ಟ್ರಾನ್ಸ್‌ಫರ್ಡ್ ಸಬ್ಜೆಕ್ಟ್'' ಎಂದರೆ ಪ್ರಜಾಪಕ್ಷದವರಿಂದ ಇತ್ಯರ್ಥಮಾಡಲ್ಪಡತಕ್ಕ ವಿಷಯವಾಗಿದೆ. ಪ್ರಮುಖರಾದ ಅಧಿಕಾರಿಗಳೊಬ್ಬರು ''ಕೈಗಾರಿಕೆಯ ಇಲಾಖೆಯು ಈ ಹೊಸ ರಾಜ್ಯಭಾರಕ್ರಮ ಬದಲಾವಣೆಯ ಯೋಗ್ಯತೆಯನ್ನು ತೀವ್ರವಾಗಿ ಪರೀಕ್ಷಿಸುವಂಥಾದ್ದಾಗಿದೆ'' ಎಂದು ಅಭಿಪ್ರಾಯಪಟ್ಟಿರುತ್ತಾರೆ. ನಮ್ಮ ಕೈಗಾರಿಕೆಯ ಸ್ಥಿತಿಗಳಿಗೆ ತಕ್ಕಂಥಾ ಮತ್ತು ವ್ಯಾಪಾರದ ರೀತಿಯಲ್ಲಿ ಕೆಲಸ ನಡಿಸುವುದಕ್ಕೆ ಅಭ್ಯಾಸವಿಲ್ಲದ ಸರ್ಕಾರೀ ಉದ್ಯೋಗಸ್ಥರಿಂದ ನಡಿಸಲ್ಪಡುವುದಕ್ಕೆ ಅರ್ಹವಾದಂಥ ಏರ್ಪಾಡನ್ನು ಕಂಡುಹಿಡಿಯುವುದೇ ಕಷ್ಟವಾಗಿದೆ, ಭಾರೀ ಕಾರ್ಖಾನೆಗಳನ್ನು ಸ್ಥಾಪಿಸಿ ನಡೆಸುವುದಕ್ಕೆ ಸಾಮರ್ಥ್ಯವು ಸುಲಭವಾಗಿ ಬರತಕ್ಕದ್ದಲ್ಲ. ತತ್ರಾಪಿ ಈಗಿನ ಸ್ಥಿತಿಯಲ್ಲಿ ಕೆಲಸಮಾಡುವವರ ಕೋರಿಕೆಗಳು ಮಿತಿಮೀರಿ ಹೆಚ್ಚುತ್ತಿರುವಾಗ ಅಂತಹ ಸಾಮರ್ಥ್ಯವನ್ನು ಸಂಪಾದಿಸುವುದು ಮತ್ತಷ್ಟು ಕಷ್ಟವಾದ ವಿಷಯ. ಕೆಲಸಗಾರರ ಕೋರಿಕೆಗಳಾದರೋ ಕೈಗಾರಿಕೆಯ ಪ್ರಯತ್ನಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ತೊಡಕನ್ನಾಗಿ ಮಾಡುತ್ತಿರುವುವು. ಈಗ ಕೆಲವು ವರುಷಗಳಕಾಲ ಈ ಇಲಾಖೆಯನ್ನು ನಡೆಸಿದ್ದರ ಮೂಲಕ ಸಂಪಾದಿಸಿದ ಅನುಭವದಿಂದ ನಮ್ಮ ಏರ್ಪಾಡುಗಳಲ್ಲಿ ಕೆಲವು ದೋಷಗಳಿರುವಂತೆ ತಿಳಿಯಬಂದಿರುವುದು. ಕ್ಷಿಪ್ರದಲ್ಲಿಯೇ ಅವುಗಳನ್ನು ಕ್ರಮಪಡಿಸಲಾಗುವುದು.

(iv) ಸ್ಥಳೀಯ ಆಡಳಿತದ ದಕ್ಷತೆಯನ್ನು ಅಭಿವೃದ್ಧಿ ಪಡಿಸುವುದು.

ನಮ್ಮ ಸ್ಥಳೀಯ ಸಭೆಗಳ ದ್ರವ್ಯೋತ್ಪತ್ತಿಯನ್ನು ಹೆಚ್ಚಿಸಬೇಕಾದುದು ಅತ್ಯಂತ ಆವಶ್ಯಕವಾದ ಅಂಶವಾಗಿರುತ್ತೆ. ಏತಕ್ಕೆಂದರೇ ಹಣವಿಲ್ಲದ ದೋಷದಿಂದ ಅವುಗಳ ದಕ್ಷತೆಗೆ ತಡೆಯುಂಟಾಗುತ್ತೆಂಬುದು ವ್ಯಕ್ತವಾದ ವಿಷಯವು. ನಮ್ಮ ಮ್ಯುನಿಸಿಪಾಲಿಟಿಗಳೂ ಡಿಸ್ಟ್ರಿಕ್ಟು ಬೋರ್ಡುಗಳೂ ಸಹ ಪರಿಹಾರವಿಲ್ಲದಷ್ಟು ಅನುಪಪನ್ನಸ್ಥಿತಿಯಲ್ಲಿರುವುವು. ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಈ ಸಭೆಗಳಿಗೆ ಹೊಸಮಾರ್ಗಗಳನ್ನು ತೋರಿಸಿಕೊಟ್ಟಲ್ಲದೇ ಸ್ಥಳೀಯ ಆಡಳಿತದಲ್ಲಿ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಸಾಧ್ಯವಲ್ಲ.

ಈಗ ಪ್ರಚಾರದಲ್ಲಿರುವ ಮ್ಯುನಿಸಿಪಾಲಿಟಿಗಳಲ್ಲಿ ಕಂದಾಯ ಹಾಕುವ ಈಗಿನ ರೀತಿಯನ್ನು ವಿಚಾರಿಸಿ ನೋಡಿದ್ದರಲ್ಲಿ ತಿಳಿಯಬರುವದೇನೆಂದರೇ, ಈ ಕ್ರಮವು ವಸ್ತುತಃ ಚೀಫ್ ಕಮಿಷನರುಗಳ ಕಾಲದಲ್ಲಿ ಸಾದರಾದ ಹುಕುಮುಗಳ ಆಧಾರದ ಮೇಲೆ ಹುಟ್ಟಿದವೆಂದೂ, ಈ ಆಡಳಿತವು ನ್ಯಾಯವಾಗಿ ಯಾವ ರೆಗ್ಯುಲೇಷನನ್ನು ಅನುಸರಿಸಿ ನಡೆಯಬೇಕೋ ಅಂಥಾ ಮ್ಯುನಿಸಿಪಲ್ ರೆಗ್ಯುಲೇಷನ್‌ಗೂ ಈಗಿನ ತೆರಿಗೆಯ ಕ್ರಮಕ್ಕೂ ಯಾವ ಸಂಬಂಧವೂ ಇರುವುದಿಲ್ಲವೆಂದೂ ಗೊತ್ತಾಗುತ್ತದೆ. ಇದು ಅಲ್ಲದೇ ಸಂಸ್ಥಾನದ ಪ್ರಧಾನ ನಗರಗಳ ಮ್ಯುನಿಸಿಪಾಲಿಟಿಗಳಲ್ಲಿಯೂ ಕೂಡ ತಮ್ಮ ಮುಖ್ಯವಾದ ಕಾರ್ಯಗಳನ್ನು ನೆರವೇರಿಸಿಕೊಳ್ಳುವುದಕ್ಕೂ ಸರ್ಕಾರದವರಿಂದ ಹಣ ಸಹಾಯವನ್ನು ನಿರೀಕ್ಷಿಸುವ ವಾಡಿಕೆಯು ವಿಶೇಷವಾಗಿ ಕಂಡುಬರುತ್ತದೆ. ಬೆಂಗಳೂರು ಮೈಸೂರು ನಗರಗಳಲ್ಲಿ ನೀರು ಮತ್ತು ದೀಪದ ತೆರಿಗೆಗಳಿಂದ ಬರುವ ಹುಟ್ಟುವಳಿಯು ಅವುಗಳ ಬಗ್ಗೆ ಯಥಾರ್ಥವಾಗಿಯೂ ಮುಟ್ಟುವ ಖರ್ಚಿಗೆ ಶುದ್ಧಾಂಗವಾಗಿ ಸಾಲದೇ ಇರುತ್ತದೆ. ಸರ್ ಎಂ. ವಿಶ್ವೇಶ್ವರಯ್ಯನವರು ಈ ಸಭೆಯಲ್ಲಿ ಮಾಡಿದ ಒಂದಾನೊಂದು ಭಾಷಣದಲ್ಲಿ ''ಜನರು ತಮಗೆ ಬೇಕಾದ ಪ್ರತಿ ಒಂದು ಅಲ್ಪ ವಿಷಯಕ್ಕೂ ಕೊರತೆಗೂ ಸರ್ಕಾರದವರಿಗೆ ಅರ್ಜಿಯನ್ನು ಗುಜರಾಯಿಸಿಕೊಳ್ಳುವ ಪದ್ಧತಿಯನ್ನು ತಪ್ಪಿಸುವದು ಬಹು ಮುಖ್ಯವಾದ ಕೆಲಸವಾಗಿದೆ'' ಎಂಬದಾಗಿ ಹೇಳಿರುತ್ತಾರೆ. ಇದೇ ರೀತಿಯಲ್ಲಿಯೇ ನಮ್ಮ ಮ್ಯುನಿಸಿಪಲ್ ಮೊದಲಾದ ಸ್ಥಳೀಯ ಸಂಘಗಳವರೂ ಕೂಡ ತಮ್ಮ ಸ್ವಂತ ಹುಟ್ಟುವಳಿಯಿಂದ ನಡಿಸಬೇಕಾದ ಕಾರ್ಯಗಳಿಗೂ ಸುದಾ ಸರ್ಕಾರದವರ ಸಹಾಯಕ್ಕೇ ಎದುರು ನೋಡುವ ದುರಭ್ಯಾಸವನ್ನು ತಪ್ಪಿಸುವುದು ಬಹಳ ಮುಖ್ಯವಾಗಿರುವಂತೆ ತೋರುತ್ತದೆ.

ಮೇಲೆ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ನಾವು ಹೇಳಿದ್ದೆಲ್ಲವೂ ಡಿಸ್ಟ್ರಿಕ್ಟು ಬೋರ್ಡುಗಳಿಗೂ ಅನ್ವಯಿಸುತ್ತದೆ. ಈ ಎರಡು ವಿಧವಾದ ಸ್ಥಳೀಯ ಸಭೆಗಳ ಸ್ಥಿತಿಗಳೆಲ್ಲವನ್ನೂ ಕಳೆದ ವರುಷದಲ್ಲಿ ಪರಿಶೀಲನೆ ಮಾಡಿ ಯಾವ ಮಾರ್ಗದಿಂದ ಹೊಸದಾಗಿ ವರಮಾನವನ್ನು ಕಲ್ಪಿಸಿಕೊಳ್ಳಬಹುದೆಂಬುದನ್ನು ಸೂಚಿಸಲಾಗಿದೆ. ಈ ಸಭೆಗಳಿಗೆ ಒಪ್ಪಿಸಿಕೊಟ್ಟಿರುವ ಮೊಹತರಫಾ ತೆರಿಗೆಯ ಮೂಲಕವಾದ ಹುಟ್ಟುವಳಿಯನ್ನು ಹೆಚ್ಚಿಸುವುದು ಸಾಧ್ಯವಾಗಿದೆ. ಇದಲ್ಲದೆ ಸಾಕ್ಷಾತ್ತಾಗಿ ಕೊಡುವ ತೆರಿಗೆಯನ್ನು ಕೂಡ ಹೆಚ್ಚಿಸಬಹುದು. ಆಕ್ಟ್ರಾಯಿ ಮತ್ತು ಸುಂಕದಕಟ್ಟೆ ವಸೂಲಿ ಇವುಗಳಂಥಾ ಪರ್ಯಾಯದ ತೆರಿಗೆ ವಸೂಲಿಯು ಬಹಳವಾಗಿ ಎಂದರೆ ಒಟ್ಟು ಮ್ಯುನಿಸಿಪಲ್ ಹುಟ್ಟುವಳಿಯಲ್ಲಿ ಶೇಕಡಾ 56 ರಷ್ಟು ಹೆಚ್ಚಿರುವಾಗ ಕಟ್ಟಡ ಮೊದಲಾದವುಗಳ ಮೇಲಿನ ಸಾಕ್ಷಾತ್ತು ತೆರಿಗೆಯು ಈಗ ಅನೇಕ ವರುಷಗಳ ಕಾಲದಿಂದ ಇದ್ದ ಸ್ಥಿತಿಯಲ್ಲಿಯೇ ಇರುವುದು. ಇನ್ನು ಮುಂದೆ ಮ್ಯುನಿಸಿಪಾಲಿಟಿಗಳೂ ಡಿಸ್ಟ್ರಿಕ್ಟು ಬೋರ್ಡುಗಳೂ ತಮ್ಮ ಆವಶ್ಯಕವಾದ ಖರ್ಚುಬಾಬುಗಳನ್ನು ಬಹಳಮಟ್ಟಿಗೆ ತಮ್ಮ ಸ್ವಂತ ಹುಟ್ಟುವಳಿಯಿಂದಲೇ ನಿರ್ವಹಿಸಿಕೊಳ್ಳುವವೆಂದು ಸರ್ಕಾರದವರು ನಂಬುತ್ತಾರೆ.

II. ಸಂಸ್ಥಾನದ ಉತ್ಪತ್ತಿಗಳನ್ನು ಹೆಚ್ಚಿಸುವುದು.

(i) ನೀರಾವರಿಯ ಕೆಲಸಗಳನ್ನು ಕಾಪಾಡುವುದು ಮತ್ತು ಜಾಗರೂಕತೆಯಿಂದ ನೋಡಿಕೊಳ್ಳುವುದು.

ಕೆರೆಗಳ ಮೂಲಕ ನೀರು ಹಾಯಿಸುವ ಅತ್ಯಂತ ಎಚ್ಚರಿಕೆಯಿಂದ ಪರಿಷ್ಕೃತವಾದ ಪದ್ಧತಿಯನ್ನು ಪಡೆದಿರುವುದು ನಮ್ಮ ಸಂಸ್ಥಾನದ ಪುಣ್ಯವಾಗಿದೆ. ಇದಕ್ಕಾಗಿ ಹಾಕಿರುವ ಬಂಡವಾಳದ ಮೊತ್ತವು ಸುಮಾರು 7 ಕೋಟಿ ರೂಪಾಯಿಗಳ ಮೇಲಾಗುವುದೆಂದು ಅಂದಾಜಾ ಮಾಡಲ್ಪಟ್ಟಿದೆ. ಆದರೆ ಈ ಅಮೂಲ್ಯವಾದ ಆಸ್ತಿಯನ್ನು ಒಳ್ಳೇ ಸ್ಥಿತಿಯಲ್ಲಿ ಕಾಪಾಡಿಕೊಂಡುಬರುವುದಕ್ಕೆ ತೃಪ್ತಿಕರವಾದ ಏರ್ಪಾಡುಗಳು ಇನ್ನೂ ಕಂಡುಹಿಡಿದಿರುವುದಿಲ್ಲ. ಈ ದೇಶದ ಪ್ರಾಚೀನಪದ್ಧತಿಯಂತೆ, ನೀರಹಾಯಿಸುವ ಕೆರೆಗಳನ್ನು ಉತ್ತಮಸ್ಥಿತಿಯಲ್ಲಿ ಕಾಪಾಡಿಕೊಂಡುಬರುವುದು ಆ ಕೆರೆಯ ಕೆಳಗೆ ಜಮೀನುಗಳನ್ನು ಪಡೆದಿರುವ ರೈತರ ಕರ್ತವ್ಯವಾಗಿದೆ. ಹಾಗೆ ರೈತರ ಕರ್ತವ್ಯವಾಗಿರುವ ವಿಷಯದಲ್ಲಿ ಯಾರೂ ಆಕ್ಷೇಪಣೆ ಮಾಡದಿದ್ದಾಗ್ಯೂ ಸದರಿ ಕರ್ತವ್ಯವನ್ನು ಮಾತ್ರ ತೃಪ್ತಿಕರವಾಗಿ ನೆಡೆಸುತ್ತಿರುವುದಿಲ್ಲ. ''ಕೆಲವು ವರ್ಷಗಳಿಂದೀಚೆಗೆ ರೈತರು ತಮ್ಮ ಕರ್ತವ್ಯಗಳನ್ನು ದೂರೀಕರಿಸುವುದರಿಂದ ಕೆರೆಗಳ ದುರಸ್ತಿನ ಕೆಲಸವೂ ಖರ್ಚೂ, ಎಂದರೆ ಆವಶ್ಯಕವಾದ ಕೂಲಿಯವರನ್ನೂ, ಮಟ್ಟಿ, ಕಲ್ಲು ವಗೈರೆ ಸಾಮಾನು ಒದಗಿಸುವ ಕೆಲಸವೂ, ಸರ್ಕಾರದವರ ಮೇಲೆ ಬಿದ್ದಿದೆ'' ಎಂದು 1866 ನೆಯ ಇಸವಿಯಲ್ಲಿ ಚೀಫ್ ಕಮಿಷನರಾಗಿದ್ದ ಗತಿಸಿದ ಮಿ|| ಬೌರಿಂಗ್‌ರವರು ಹೇಳಿದ್ದಾರೆ. ಆದರೆ ಸಂಸ್ಥಾನಾಮಳೆ ಹರಡಿಕೊಂಡಿರುವ 26,000 ಕ್ಕೆ ಮೇಲ್ಪಟ್ಟ ಕೆರೆಗಳ ಸಾಲೀಯಾನಾ ಚಿಲ್ಲರೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವುದು ಸರ್ಕಾರದವರಿಗೆ ಅಸಾಧ್ಯವಾಗಿ ಕಂಡುಬಂದದ್ದರಿಂದ 1873 ನೆಯ ಇಸವಿಯಲ್ಲಿ ನಿಬಂಧನೆಗಳನ್ನು ಪ್ರಕಟಿಸುವದರ ಮೂಲಕ ರೈತರ ಮೇಲೆಯೇ ಈ ಜವಾಬ್ದಾರಿಯು ಪುನಃ ಹೊರಿಸಲ್ಪಟ್ಟಿತು. ಆ ನಿಬಂಧನೆಗಳೇ ಈಗಲೂ ಆಚರಣೆಯಲ್ಲಿವೆ. ಆದರೂ ರೈತರಲ್ಲಿ ಒಗ್ಗಟ್ಟು ಕಡಮೆಯಾದುದರಿಂದಲೂ, ಜಮೀನ್‌ದಾರರು ಸ್ಥಳದಲ್ಲಿ ವಾಸಮಾಡದೆ ಇರುವುದರಿಂದಲೂ, ಕೆಲಸಮಾಡದೆ ತಪ್ಪುವವರಿಗೆ ಯಾವ ದಂಡನೆಯೂ ಇಲ್ಲದಿರುವುದರಿಂದಲೂ ಆ ನಿಬಂಧನೆಗಳನ್ನು ಜಾರಿಗೆ ತರುವುದು ಅತ್ಯಂತ ಕಷ್ಟವಾಗಿದೆ. ಕೆಲವು ವರ್ಷಗಳಿಂದೀಚೆಗೆ ಕಾಮಗಾರಿಗೆ ಪ್ರತಿಯಾಗಿ ಏಕರೆವಾರ್ ಸೆಸ್ಸನ್ನು ಹಾಕುವ ಪ್ರಯತ್ನವನ್ನು ಕೆರೆಯ ಪಂಚಾಯಿತ ರೆಗ್ಯುಲೇಷನ್ ಅನುಸಾರವಾಗಿ ಗ್ರಾಮ ಕೆರೆಗಳ ಪಂಚಾಯತಿಗಳನ್ನು ಏರ್ಪಡಿಸುವುದರಿಂದ ಹತ್ತು ಜನರಿಗೆ ಉಪಯೋಗವಾದ ಕಾರ್ಯವನ್ನು ಎಲ್ಲರೂ ಮಾಡುತ್ತಾ ಬರಬೇಕೆಂಬ ಬುದ್ಧಿಯನ್ನು ಪುನಃ ಹುಟ್ಟಿಸುವ ನಾನಾ ಪ್ರಯತ್ನಗಳನ್ನು ಮಾಡಿ ಪರೀಕ್ಷಿಸಲಾಯಿತು. ಇದುವರೆಗೆ ಈ ಪ್ರಯತ್ನಗಳಲ್ಲಿ ಒಂದಾದರೂ ಫಲಕಾರಿಯಾಗಲಿಲ್ಲ. ಈ ರೀತಿಯ ಕಷ್ಟವನ್ನು ಪರಿಹರಿಸುವುದಕ್ಕಾಗಿ ಸರ್ಕಾರದವರು ಈ ವರ್ಷ ಮತ್ತೊಂದು ಏರ್ಪಾಡನ್ನು ಮಾಡಿರುವರು. ಈ ಏರ್ಪಾಡಿನ ಮುಖ್ಯಾಂಶಗಳಾವುವೆಂದರೆ,—ಈ ಕರ್ತವ್ಯವನ್ನು ತೃಪ್ತಿಕರವಾಗಿ ನಡಿಸುವ ಗ್ರಾಮಸ್ಥರಿಗೆ ನೀರಾವರಿ ಸೆಸ್ಸನ್ನು ಮಾಫಿ ಮಾಡುವುದರ ಮೂಲಕ ದುರಸ್ತಿನ ಕೆಲಸದ ಅರ್ಧ ಖರ್ಚನ್ನು ಸರ್ಕಾರದವರು ವಹಿಸುವುದು; ಕೆಲಸಮಾಡಲು ತಪ್ಪಿದ ರೈತರ ವಿಷಯದಲ್ಲಿ ಅದನ್ನು ನಡೆಸುವ ಖರ್ಚಿಗೆ ಎರಡರಷ್ಟು ಜುಲ್ಮಾನೆಯನ್ನು ಹಾಕುವುದು; ಮತ್ತು ಕೆರೆಪಂಚಾಯಿತಿಯು ಏರ್ಪಡದಿರುವ ಕಡೆಗಳಲ್ಲಿ ಗ್ರಾಮಾಭಿವೃದ್ಧಿಯ ಕಮಿಟಿಗಳಿಗೆ ಈ ಕರ್ತವ್ಯವನ್ನು ವಹಿಸಿಬಿಡುವುದು. ಪ್ರಕೃತ ರಚಿಸಲ್ಪಟ್ಟಿರುವ ನಿಬಂಧನೆಗಳನ್ನು ಜಾರಿಗೆ ತಂದು ಎಷ್ಟರಮಟ್ಟಿಗೆ ನಡೆಯುವುವೆಂದು ಅಜಮಾಯಿಷಿ ಮಾಡುವ ವಿಷಯದಲ್ಲಿ ಈ ಸಭೆಯ ಮೆಂಬರುಗಳು ಸಂಪೂರ್ಣವಾಗಿಯೂ, ಮನಃಪೂರ್ವಕವಾಗಿಯೂ ಸಹಾಯ ಮಾಡುವವರಾಗಬೇಕೆಂದು ಆಸಕ್ತಿಯಿಂದ ಕೇಳಿಕೊಳ್ಳುತ್ತೇವೆ. ಏಕೆಂದರೆ ನಮ್ಮ ಸಂಸ್ಥಾನದ ವ್ಯವಸಾಯವು ಅಭಿವೃದ್ಧಿಯಾಗಬೇಕಾದರೆ ನಮ್ಮ ಸಂಸ್ಥಾನದಲ್ಲಿರುವ ಅಮೂಲ್ಯವಾದ ನೀರಾವರಿಯ ಕಾಂಗಾರಿಗಳನ್ನು ಎಚ್ಚರಿಕೆಯಿಂದ ಕಾಪಾಡುವದು ಅತ್ಯವಶ್ಯಕವಾಗಿರುತ್ತೆಂಬುದನ್ನು ತಾವೆಲ್ಲರು ಅಂಗೀಕರಿಸುವಿರೆಂದು ದೃಢವಾಗಿ ನಂಬಿರುತ್ತೇವೆ.

III. ಪ್ರಜೆಗಳ ಕಾರ್ಯದಕ್ಷತೆಯನ್ನು ಹೆಚ್ಚಿಸಿ ಅವರು ಉತ್ತಮಸ್ಥಿತಿಗೆ ಬರುವಂತೆ ಮಾಡುವುದು.

ಪ್ರಜೆಗಳ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರದವರು ಅಂಗೀಕಾರ ಮಾಡುವುದಾಗಿ ಸೂಚಿಸಿರುವ ವಿದ್ಯಾಭ್ಯಾಸ ವಿಷಯವಾದ ಏರ್ಪಾಡುಗಳು ಕ್ಷಿಪ್ರವಾಗಿ ಪ್ರಕಟವಾಗುವ ಎಜುಕೇಷನಲ್ ಮೆಮೊರಾಂಡಮ್ಮಿನ ಪರವಾದ ಹುಕುಮಿನಲ್ಲಿ ವಿವರಿಸಲ್ಪಡುವವೆಂತಲೂ ಸಂಸ್ಥಾನದ ಮಲೆನಾಡು ಪ್ರಾಂತ್ಯಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಸಾಕಾದಷ್ಟು ಗಮನವನ್ನು ಕೊಡುವುದಕ್ಕೆ ಅನುಕೂಲವಾಗುವಂತೆ ಮಲೆನಾಡು ಇಂಪ್ರೂವ್‌ಮೆಂಟ್ ಕಮಿಟಿಯ ರಚನೆಯಲ್ಲಿ ಪುನರ್ವಿಮರ್ಶೆ ಮಾಡಲಾಗಿದೆ ಎಂತಲೂ ನಾವು ಹಿಂದೆಯೇ ತಿಳಿಯಪಡಿಸಿದ್ದೇವೆ. ಇನ್ನು ಸಂಕ್ಷೇಪವಾಗಿ ವಿವರಿಸಬೇಕಾದ ಒಂದೆರಡು ವಿಷಯಗಳು ಮಾತ್ರ ಉಳಿದಿರುವುವು. ಅವು ಯಾವುವೆಂದರೆ—ಮೊದಲನೆಯದು ಕೀಳ್ಪಟ್ಟ ಪಂಗಡಗಳ ಸ್ಥಿತಿಗತಿಗಳನ್ನು ಮೇಲ್ಪಡಿಸುವುದು; ಎರಡನೆಯದು: ಪ್ರಧಾನ ನಗರಗಳನ್ನು ಅಭಿವೃದ್ಧಿಪಡಿಸುವುದು.

(1) ಕೀಳ್ಪಟ್ಟ ಪಂಗಡಗಳ ಸ್ಥಿತಿಗತಿಗಳನ್ನು ಮೇಲ್ಪಡಿಸುವುದು.

ಕೀಳ್ಪಟ್ಟ ಪಂಗಡಗಳ ಸ್ಥಿತಿಗತಿಗಳನ್ನು ಮೇಲ್ಪಡಿಸುವ ವಿಷಯವು ಪ್ರಜಾಪ್ರತಿನಿಧಿಸಭೆಯ ವರ್ಧಂತೀ ಅಧಿವೇಶನದಲ್ಲಿಯೂ ಎಕನಾಮಿಕ್ ಡೆವೆಲಪ್‌ಮೆಂಟ್ ಬೋರ್ಡಿನ ಒಂದು ಮೀಟಿಂಗಿನಲ್ಲಿಯೂ ಸಹ ಬಹಳ ಚೆನ್ನಾಗಿ ಚರ್ಚಿಸಲ್ಪಟ್ಟಿತು. ಈ ವಿಷಯದಲ್ಲಿ ಕಷ್ಟನಿಷ್ಠುರಗಳು ಎಷ್ಟೋ ಇರುವುವೆಂಬುದು ತಮಗೆ ವೇದ್ಯವೇ ಇದೆ. ಕೀಳ್ಪಟ್ಟ ಪಂಗಡದವರು ಸ್ವಪ್ರಯಾಸದಿಂದ ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಲು ಸದ್ಯಃ ಅಸಮರ್ಥರಾಗಿರುವುದರಿಂದ ಯಾವುದಾದರೂ ಒಂದುತರಹ ಸರ್ಕಾರದ ಏರ್ಪಾಡು ಆಗಬೇಕೆನ್ನುವ ವಿಷಯದಲ್ಲಿ ಸಂದೇಹವೇನೂ ಇಲ್ಲ. ಅವರ ಸ್ಥಿತಿಗತಿಗಳನ್ನು ಮೇಲ್ಪಡಿಸಬೇಕಾದರೆ ಸರ್ಕಾರಿ ಇಲಾಖೆಗಳ ನೈಜವಾದ ವಿಶ್ವಾಸವೂ ಸಹಾಯವೂ ಆವಶ್ಯಕವಾಗಿವೆ. ಈ ಭಾಗದಲ್ಲಿ ಅನೇಕ ಸರ್ಕಾರಿ ಇಲಾಖೆಗಳು ಮಾಡಬಹುದಾದ ಸಹಾಯವನ್ನು ಖಾಸಗೀ ಜನಗಳು ಮಾಡಲು ಸಾಧ್ಯವಾದೀತೆಂದು ನಿರೀಕ್ಷಿಸಲು ಆಗಲಾರದು. ಆದರೆ ಭಾರೀ ಪಂಗಡಕ್ಕೆ ಸೇರಿದ ಈ ಜನರ ಮನಸ್ಸನ್ನು ಬದಲಾಯಿಸಿ ಈಗ ಅವರು ಮಾಡುತ್ತಿರುವ ಕೆಲಸಗಳಿಂದ, ಅವರನ್ನು ತಪ್ಪಿಸಿ ಅದಕ್ಕೆ ಪ್ರತಿಯಾಗಿ ಅವರ ಮುಂದಿರಿದ ಆಶೆಗಳಿಗೆ ತಕ್ಕ ಉದ್ಯೋಗಗಳನ್ನು ಕಲ್ಪಿಸದೇ ಇರುವುದರಿಂದ ಅಪಾಯವೇನೂ ಇರಲಾರದೆಂದು ಹೇಳುವುದು ಸರಿಯಲ್ಲ. ಅದು ಹೇಗಾದರೂ ಇರಲಿ, ನಮ್ಮ ಪ್ರಜೆಗಳ ಪೈಕಿ ಈಗ ದಾರಿದ್ರ್ಯದಲ್ಲೂ ಅಜ್ಞಾನದಲ್ಲೂ ಮುಳುಗಿರುವ ಆರರಲ್ಲೊಂದು ಭಾಗದಷ್ಟು ಜನರ ಸ್ಥಿತಿಗತಿಗಳನ್ನು ಮೇಲ್ಪಡಿಸುವ ವಿಷಯವನ್ನು ಸರ್ಕಾರದವರೂ ಸಹ ಎಷ್ಟೇ ಸಹಾಯವನ್ನು ಹೊಂದಿದ್ದರೂ ಸುಧಾರಿಸುವುದು ಅತ್ಯಂತ ಪ್ರಯಾಸಕರವಾಗಿರುವುದು. ಈ ವಿಷಯದಲ್ಲಿ ಉಪಕ್ರಮ ಮಾಡುವುದಕ್ಕಾಗಿ ಅತ್ಯುತ್ತಮವಾದ ಮಾರ್ಗವನ್ನು ಕಂಡುಹಿಡಿಯುವ ಕೆಲಸವು ಈಚೆಗೆ ಒಂದು ಕಮಿಟಿಯವರಿಗೆ ವಹಿಸಲ್ಪಟ್ಟಿದೆ. ಅವರ ರಿಪೋರ್ಟನ್ನು ಸರ್ಕಾರದವರು ಆದರದಿಂದ ನಿರೀಕ್ಷಿಸುತ್ತಿದ್ದಾರೆ.

(೨) ಪ್ರಧಾನನಗರಗಳನ್ನು ಅಭಿವೃದ್ಧಿಪಡಿಸುವ ವಿಷಯಗಳು.

(*a*) ಬೆಂಗಳೂರು 1889 ನೆಯ ಇಸವಿಯಲ್ಲಿ ನಗರಾಭಿವೃದ್ಧಿ ಕಮಿಟಿಯ ಏರ್ಪಾಡನ್ನು ಪ್ರಥಮತಃ ಜಾರಿಗೆ ತಂದಲಾಗಾಯಿತು ಇದುವರೆಗೆ ಅದರ ಸಂಬಂಧವಾಗಿ ನಡೆದ ಕೆಲಸವನ್ನು ತಪ್ಸೀಲುವಾರಾಗಿ ಸರ್ಕಾರದವರು ವಿಮರ್ಶೆ ಮಾಡಿರುತ್ತಾರೆ. ಬೆಂಗಳೂರು ಸಿಟಿಯಲ್ಲಿ ಕುಡಿಯುವ ನೀರು, ಎಲೆಕ್ಟ್ರಿಕ್‌ದೀಪ, ಡ್ರೈನೇಜ್ ಸಂಬಂಧವಾದ ಏರ್ಪಾಡು ಇವುಗಳಿಗಾಗಿಯೂ ಮತ್ತು ಎಕ್ಸ್‌ಟೆನ್‌ಷನುಗಳಿಗಾಗಿಯೂ ಸಹ 53 ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಖರ್ಚಾಗಿದೆ, ಈ ನಗರವು ಪ್ರಮಾಣದಲ್ಲಿಯೂ, ಜನಸಂಖ್ಯೆಯಲ್ಲಿಯೂ, ಪ್ರಾಧಾನ್ಯತೆಯಲ್ಲೂ ಅಭಿವೃದ್ಧಿ ಹೊಂದಿರುವುದರಿಂದ ಉಂಟಾದ ಹೊಸಸ್ಥಿತಿಗಳಿಗೆ ತಕ್ಕಂತೆ ಹೊಸ ವಿಷಯಗಳು ಉತ್ಪನ್ನವಾಗಿವೆ. ಜರೂರಾಗಿ ಆವಶ್ಯಕವಾದ ಹೊಸಮೇಲ್ಪಾಡುಗಳನ್ನು ಸರ್ಕಾರದವರು ಸೂಚಿಸಿದ್ದಾರೆ. ಅವುಗಳಿಗೆ ತಗಲುವ ಅಂದಾಜಾ ಖರ್ಚು ಸುಮಾರು 13 ಲಕ್ಷ ರೂಪಾಯಿ, ಇದಕ್ಕಾಗಿ ವರುಷ ಒಂದಕ್ಕೆ 3 ಲಕ್ಷ ರೂಪಾಯಿಯ ಗ್ರಾಂಟನ್ನು ಕೊಡುವುದಾಗಿ ಮಂಜೂರಾಗಿದೆ. ಈ ಕಾರ್ಯಕ್ರಮವನ್ನು ನಡೆಸುವುದಕ್ಕಾಗಿ ಇಂಪ್ರೂವ್‌ಮೆಂಟ್ ಕಮಿಟಿಯನ್ನು ಹೊಸದಾಗಿ ರಚಿಸಿರುತ್ತದೆ. ಈ ನಗರಕ್ಕೆ ಸರಿಯಾದ ಡ್ರೈನೇಜ್ ಏರ್ಪಾಡನ್ನು ಇದುವರೆಗೆ ಯಾವಾಗಲೂ ಮಾಡಲಿಲ್ಲ. ಭಾಗಭಾಗಗಳಾಗಿ ನಡಿಸಬಹುದಾದ ಮತ್ತು ಮೊತ್ತದಲ್ಲಿ ಸುಮಾರು 18¼ ಲಕ್ಷರೂಪಾಯಿ ಖರ್ಚು ತಗಲಬಹುದೆಂದು ಅಂದಾಜಾ ಆಗಿರುವ ಸಮಗ್ರವಾದ ಒಂದು ಡ್ರೈನೇಜ್ ಏರ್ಪಾಡು ಈಗ ತಯಾರಾಗಿದೆ. ಈ ಏರ್ಪಾಡಿಗೆ ಮುನಿಸಿಪಲ್ ಕೌನ್ಸಿಲರು ಅರ್ಧ ಖರ್ಚನ್ನು ಕೊಡುವುದಾದರೆ ಸರ್ಕಾರದವರು ಉಳಿದದ್ದನ್ನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ. 25 ವರುಷಗಳ ಹಿಂದೆ ಏರ್ಪಟ್ಟ ನೀರು ಸರಬರಾಯಿಯ ಕ್ರಮವೆಲ್ಲವನ್ನೂ ಹೊಸದಾಗಿ ಏರ್ಪಡಿಸಿ ಬಡಾಯಿಸಬೇಕಾಗಿದೆ. ಈ ವಿಷಯವೆಲ್ಲವನ್ನೂ ಪರ್ಯಾಲೋಚಿಸಿ ಒಂದು ರಿಪೋರ್ಟನ್ನು ಹಾಜರ್ ಮಾಡುವುದಕ್ಕೆ ಶಕ್ತರಿಂದ ಕೂಡಿದ ಒಂದು ಕಮಿಟಿಯನ್ನು ನೇಮಕಮಾಡಿದೆ

(*b*) 1892 ನೆಯ ಇಸವಿಯಲ್ಲಿ ಗತಿಸಿದ ಮಿ|| ಸ್ಟಾಂಡಿಷ್‌ಲೀರವರ ಕೈಕೆಳಗೆ ಒಂದು ಸ್ಪೆಷಲ್ ಸ್ಯಾನಿಟರಿ ಡಿವಿಜನನ್ನು ಸ್ಥಾಪಿಸಿದಾಗಲೇ ಮೈಸೂರು ನಗರಾಭಿವೃದ್ಧಿಯ ಕೆಲಸಕ್ಕೆ ಉಪಕ್ರಮವಾಯಿತು. ತಹಲ್‌ವರಿಗೆ, ಜನಬಾಹುಳ್ಯವಾದ ಕಡೆಗಳಲ್ಲಿ ಮನೆಗಳನ್ನು ಅಕ್ವೈರು ಮಾಡುವುದರಲ್ಲಿಯೂ, ಬಚ್ಚಲು ಮತ್ತು ಡ್ರೈನೇಜ್ ಕಾಮಗಾರಿಗಳಿಗಾಗಿಯೂ, ಬಡಾವಣೆಗಳನ್ನು ಏರ್ಪಡಿಸುವುದರಲ್ಲಿಯೂ, ನೀರು ಸರಬರಾಯಿಗಾಗಿಯೂ, ಮಾದರಿಯ ಮನೆಗಳನ್ನು ಕಟ್ಟುವುದಕ್ಕಾಗಿಯೂ ಸಹ ಇದುವರಿಗೆ 53 ಲಕ್ಷ ರೂಪಾಯಿ ಖರ್ಚಾಗಿದೆ. ಆದರೂ, ರಾಜಧಾನಿಯ ಆರೋಗ್ಯಸ್ಥಿತಿಯು ನಾವು ಅಪೇಕ್ಷಿಸುವಂತೆ ಇದೆಯೆಂದು ಹೇಳಲಾಗುವುದಿಲ್ಲ. ಬಚ್ಚಲು ಮತ್ತು ಡ್ರೈನೇಜ್ ಕಾಮಗಾರಿಗಳು ಇನ್ನೂ ಪೂರ್ತಿಯಾಗಿಲ್ಲ. ಮನೆಗಳಲ್ಲಿನ ಬಚ್ಚಲು ನೀರು ಸರ್ಕಾರಿ ಚರಂಡಿಗಳಿಗೆ ಸರಿಯಾಗಿ ಬಂದು ಸೇರುವ ವಿಷಯಕ್ಕೆ ಸರಿಯಾದ ಗಮನ ಕೊಟ್ಟಿಲ್ಲ. ಮನೆಗಳನ್ನು ಅಕ್ವೈರ್ ಮಾಡಿದ್ದರಿಂದ ಮನೆಯಿಲ್ಲದ ಜನರಿಗೆಲ್ಲಾ ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಮಿತಿಮೀರಿ ಜನಗಳು ಸೇರುವುದನ್ನು ತಪ್ಪಿಸುವುದಕ್ಕಾಗಿ ಹೊಸಮನೆಗಳನ್ನು ಕಟ್ಟುವುದು ಜರೂರಾತಿಯಾಗಿದೆ. ಇನ್ನೂ ನಡೆಯಬೇಕಾಗಿರುವ ಅಭಿವೃದ್ಧಿಯ ಏರ್ಪಾಡುಗಳು ಎರಡು ವಿಧವಾಗಿ:— ಹುಟ್ಟುವಳಿಯನ್ನು ತರುವುದು ಮತ್ತು ಹುಟ್ಟುವಳಿಯನ್ನು ತಾರದ್ದು. ಮೊದಲನೆಯದಕ್ಕೆ ಸಾಲವಾಗಿ ಹಣ ತೆಗೆದು ಮಾಡಿಸಬೇಕು. ಎರಡನೆಯದಕ್ಕೆ ಸಾಲೀಯಾನಾ 4¼ ಲಕ್ಷ ರೂಪಾಯಿ ಸ್ಟೇಟ್ ಗ್ರಾಂಟನ್ನು ಕೊಟ್ಟು ಮಾಡಿಸಬೇಕಾಗಿದೆ.

ಈ ಎರಡು ಪಟ್ಟಣಗಳೂ ತಮಗೆ ಹುಟ್ಟುವಳಿಯನ್ನು ತರುವ ಕೆಲಸಗಳನ್ನು ಮಾಡುವುದಕ್ಕೂ, ಮನೆ ಕಟ್ಟಿಕೊಡಬೇಕಾದ ವಿಷಯವನ್ನು ನಿರ್ಧರಿಸುವುದಕ್ಕೂ ಅನುಕೂಲವಾಗಲು, ಈ ಎರಡು ಪ್ರಧಾನವಾದ ಮ್ಯುನಿಸಿಪಾಲಿಟಿಗಳೂ ಜನರಿಂದ ಸಾಲತೆಗೆಯುವುದಕ್ಕೆ ಯಾವುದಾದರೂ ಉಪಾಯವನ್ನು ಕಂಡು ಹಿಡಿಯಬೇಕಾದ್ದು ಆವಶ್ಯಕವಾಗಿದೆ. ಅವರು ಸಾಲ ತೆಗೆಯುವ ಬಡ್ಡಿಯ ದರಕ್ಕೂ ಅವರು ಸಾಲಾಕೊಡಬಹುದಾದ ದರಕ್ಕೂ ಇರುವ ವ್ಯತ್ಯಾಸವನ್ನು ಸರಿಮಾಡಲು ಸ್ಟೇಟ್ ಫಂಡಿನಿಂದ ಯುಕ್ತವಾದ ಕಂಟ್ರಿಬ್ಯೂಷನ್ [illegible]ಗಳನ್ನು ಅಪೇಕ್ಷಿಸುವ ಯಾವುದಾದರೊಂದು ಕಾರ್ಯಕ್ರಮವನ್ನು [illegible]ದವರು ಪರ್ಯಾಲೋಚಿಸಲು ಸಿದ್ಧರಾಗಿದ್ದೇವೆಂದು ತಿಳಿಸಿದಾರೆ. ಬೊಂಬಾಯಿಯಲ್ಲಿ ಈಗತಾನೆ ತೋರಿಸಿರುವ ಶ್ಲಾಘ್ಯವಾದ ಉದಾಹರಣೆಯನ್ನು ಇಂಡಿಯಾದಲ್ಲಿನ ಇತರ ಮುಖ್ಯ ಪಟ್ಟಣಗಳೂ ಅನುಸರಿಸಬಹುದಾಗಿದೆ. ಮತ್ತು ನಮ್ಮ ಪ್ರಧಾನವಾದ ಎರಡು ಮ್ಯುನಿಸಿಪಾಲಿಟಿಗಳ ಆಡಳಿತವನ್ನು ನಡೆಸುವುದಕ್ಕೆ ಜವಾಬ್ದಾರರಾದ ಸ್ಥಳೀಯ ಅಧಿಕಾರಿಗಳು ಸ್ಥಳದ ಪ್ರಾಮುಖ್ಯತೆಯ ಏರ್ಪಾಡುಗಳಿಗೆ ಹಣ ಒದಗಿಸುವುದಕ್ಕೆ ತಮಗೆ ಸೇರಿದ ಹಣವಂತರು ಪೌರಾಭಿಮಾನದಿಂದ ಸಹಾಯಮಾಡುವಂತೆ ಪ್ರಾರ್ಥಿಸುವ ವಿಚಾರದಲ್ಲಿ ಸಾವಕಾಶಮಾಡುವುದಿಲ್ಲವೆಂದು ಸರ್ಕಾರದವರು ಆದರದಿಂದ ನಂಬುತ್ತಾರೆ.

ಪರಿಸಮಾಪ್ತಿ.

ಕಳೆದ ವರ್ಷದ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಪ್ರಮುಖ ವಿಷಯಗಳನ್ನೂ, ಈಗ ತಾವುಗಳು ಗಮನಕ್ಕೆ ತೆಗೆದುಕೊಳ್ಳಬೇಕಾದ ಕೆಲವು ಮುಖ್ಯಾಂಶಗಳನ್ನೂ ಸಹ ಇದುವರೆಗೆ ತಮ್ಮಗಳ ಅವಗಾಹನೆಗೆ ತಂದದ್ದಾಯಿತು. ಇತರ ದೇಶಗಳಲ್ಲಿ ಕಾಲಪರಿವರ್ತನೆಯ ಆವೇಗದಿಂದ ಸಂಭವಿಸುತ್ತಿರುವ ವಿದ್ಯಮಾನಗಳಂತೆಯೇ ಇಲ್ಲಿಯೂ ಸಂಘಟನೆಯಾಗಲು ಪ್ರಾರಂಭವಾಗುತ್ತಾ ಬಂದಿರುತ್ತದೆ. ಯುದ್ಧಕ್ಕೆ ಮುಂಚಿತವಾಗಿ ಈ ರೀತಿಯ ಸಂಭವವು ನಡೆಯುತ್ತಿರಲಿಲ್ಲ. ಆದುದರಿಂದ ನಮ್ಮಲ್ಲಿಯೇ ಇರುವ ಸಾಧನ ಸಂಪತ್ತಿಗಳನ್ನೇ ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಾವು ಶಕ್ತರಾಗುವಂತೆಯೂ, ನಮಗೆ ಹಿಂದಿನಿಂದಲೂ ಅಭ್ಯಾಸವಿಲ್ಲದ ಈ ಅಂಶಗಳಿಗೆ ವಿಶೇಷವಾಗಿ ವಶವಾಗದಂತೆಯೂ ನಮ್ಮ ಸಾಮಾಜಿಕ ಮತ್ತು ಅರ್ಥಸಾಧಕ ವ್ಯವಸ್ಥೆಗಳನ್ನು ಕ್ರಮಪಡಿಸಿ ಬಲಪಡಿಸಿಕೊಳ್ಳುವುದು ಅತ್ಯಂತ ಆವಶ್ಯಕವಾಗಿರುತ್ತದೆ. ಈ ಭೂಮಂಡಲದ ಅನೇಕ ಪ್ರಾಂತ್ಯಗಳಲ್ಲಿ ಜನರ ಸಾಮಾಜಿಕ ಕಟ್ಟುಪಾಡುಗಳಿಗೆ ಉಂಟಾಗಿರುವ ಪ್ರಬಲವಾದ ಬದಲಾವಣೆಗಳು ಅದೃಷ್ಟವಶಾತ್ ಸಾಕ್ಷಾತ್ತಾಗಿ ನಮ್ಮಲ್ಲಿ ವ್ಯಾಪಿಸಿರುವುದಿಲ್ಲವಾದರೂ, ಜಾತಿ ಪ್ರಯುಕ್ತವಾದ ತಾರತಮ್ಯಗಳೂ ಪ್ರಶಸ್ತಿಗಳೂ ತಪ್ಪಿಹೋಗಿ, ಎಲ್ಲಾ ಪಂಗಡದ ಜನರೂ ತಮ್ಮ ಹಕ್ಕುಬಾಧ್ಯತೆಗಳು ಇಂತಹವುಗಳೆಂಬುದನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳುತ್ತಾ ಬಂದಿರುವ ಪ್ರಯುಕ್ತ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಎಲ್ಲಾ ಜನರಿಗೂ ಒಂದೇ ಸಮನಾಗಿ ಅವಕಾಶವಿರಬೇಕೆಂದು ಜನರು ಹೋರಾಡುವ ಕಾಲವು ಬಂದಿರುತ್ತದೆ. ಈ ಸಂಭವದಲ್ಲಿ ಬೇರೆ ಯಾವ ಪಂಗಡದವರ ಅಭಿವೃದ್ಧಿಗೂ ಅಡ್ಡಿಯಾಗದಂತೆ ಹಿಂದುಳಿದ ಪಂಗಡದವರನ್ನು ಮುಂದಕ್ಕೆ ತರುವವಿಚಾರವು ಎಲ್ಲಾ ಕಡೆಯೂ ಇತ್ಯರ್ಥಕ್ಕೆ ಮುಂದರಿದು ಬರುತ್ತಿರುವಂತೆಯೇ ಇಲ್ಲಿಯೂ ನಮ್ಮ ಚಿಂತನೆಗೆ ಆಕರವಾಗಿರುತ್ತದೆ. ಅತಿ ಪ್ರಮುಖವಾದ ಫಲ ಪರಿಣಾಮವನ್ನುಳ್ಳ ರಾಜ್ಯಭಾರಕ್ರಮ ಪರಿಷ್ಕರಣವನ್ನು ಬ್ರಿಟಿಷ್ ಇಂಡಿಯಾ ದೇಶದಲ್ಲಿ ಈಗತಾನೇ ಜಾರಿಯಲ್ಲಿ ತರುವ ಪ್ರಯತ್ನಗಳು ನಡೆಯುತ್ತಿವೆ. ಕಾರಣಾಂತರಗಳಿಂದ ರಾಜಕೀಯ ವಿಚಾರದಲ್ಲಿ ಅಲ್ಲಿಯ ಜನರ ಮನೋಭಾವವು ಪ್ರಬಲವಾಗಿ ಉದ್ರೇಕಗೊಂಡಿರುವುದು. ನಮ್ಮಲ್ಲಿಯ ರಾಜ್ಯಭಾರಕ್ರಮವೇ ಬೇರೆವಿಧವಾದದ್ದಾಗಿರುವ ಪ್ರಯುಕ್ತ ಮೇಲ್ಕಂಡ ಪರಿಷ್ಕರಣದ ಏರ್ಪಾಡುಗಳು ನಮಗೆ ಸಾಕ್ಷಾತ್ತಾಗಿ ಅನ್ವಯಿಸುವುದಿಲ್ಲ. ಸಾರ್ವಭೌಮ ಸರ್ಕಾರದವರ ಅನುಕೂಲ್ಯಕ್ಕಾಗಿ ನಮ್ಮ ಸಂಸ್ಥಾನದಲ್ಲಿ ಯಾವುದಾದರೂ ಏರ್ಪಾಡುಗಳನ್ನು ಮಾಡಬೇಕಾಗಿ ಬಂದರೆ ಅಂಥಾ ಸಂದರ್ಭಗಳಲ್ಲಿ ನಮ್ಮ ಸಂಸ್ಥಾನಕ್ಕೆ ಯಾವುದೊಂದು ಕಷ್ಟನಷ್ಟವೂ ಸಂಭವಿಸದಂತೆ ನೋಡಿಕೊಳ್ಳುವ ಅಧಿಕಾರವು ನಮ್ಮ ಶ್ರೀಮನ್ ಮಹಾರಾಜರವರಿಗೆ ಇದ್ದೇ ಇರುವುದು. ನಮ್ಮಲ್ಲಿ ರಾಜ್ಯಭಾರ ಮಾಡುವ ಅಧಿಕಾರಿಗಳೇ ಬೇರೆ ಪ್ರಜೆಗಳೇ ಬೇರೆ ಎಂಬ ಭಾವನೆಯಿಲ್ಲ. ಈಗಾಗಲೇ ಸಾಧಾರಣ ರಾಜ್ಯಾಡಳಿತದಲ್ಲಿ ಸರ್ಕಾರಿ ಅಧಿಕಾರಿಗಳೊಡನೆ ಬಹುಮಟ್ಟಿಗೆ ಪ್ರಜೆಗಳನ್ನೂ ಸೇರಿಸಿಕೊಂಡು ನಡಿಸುತ್ತಿರುವುದಾಗಿದೆ. ನಮ್ಮ ರಾಜ್ಯಾಡಳಿತದ ರಚನಾಕ್ರಮದಿಂದುಂಟಾದ ಕೆಲವು ನಿರ್ಬಂಧಗಳಿಗೊಳಪಟ್ಟು ನಮ್ಮ ಶ್ರೀಮನ್‌ಮಹಾರಾಜರವರು ಮುಖ್ಯವಾದ ಕಾನೂನುಗಳನ್ನು ವಿಧಿಸುವ, ಆದಾಯವ್ಯಯಕ್ಕೆ ಸಂಬಂಧಪಟ್ಟ ವ್ಯವಸ್ಥೆಗಳನ್ನು ಮಾಡುವ, ಮತ್ತು ಇತರ ರಾಜ್ಯಾಡಳಿತದ ಏರ್ಪಾಡುಗಳನ್ನು ಮಾಡುವ ಸಂದರ್ಭಗಳಲ್ಲೆಲ್ಲಾ ತಮ್ಮ ಪ್ರಜೆಗಳು ಅವರ ಅಭಿಪ್ರಾಯಗಳನ್ನು ಸರ್ಕಾರದಲ್ಲಿ ತಿಳಿಸಿ ರಾಜ್ಯಾಡಳಿತದಲ್ಲಿ ಭಾಗಿಗಳಾಗುವಂತೆ ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತಾರೆ. ಈ ಅವಕಾಶವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ತಮ್ಮತಮ್ಮ ಸ್ಥಳಕ್ಕೆ ಸಂಬಂಧಪಟ್ಟ ಆಡಳಿತಗಳನ್ನು ನಡಿಸಿಕೊಂಡು ಬರುವ ವಿಷಯದಲ್ಲಿ ಹೆಚ್ಚುಹೆಚ್ಚಾದ ಜವಾಬ್ದಾರಿಯನ್ನು ವಹಿಸುವುದರ ಮೂಲಕವೂ ಈಗ ಪ್ರಚಾರದಲ್ಲಿರುವ ಕೌನ್ಸಿಲುಗಳ ಮತ್ತು ಸಭೆಗಳ ಅಸ್ತಿಭಾರವನ್ನು ಭದ್ರಪಡಿಸುವುದರ ಮೂಲಕವೂ ರಾಜ್ಯಾಡಳಿತದಲ್ಲಿ ಹೆಚ್ಚಾಗಿ ಭಾಗಿಗಳಾಗುವಬಗ್ಗೆ ತಕ್ಕ ಯೋಗ್ಯತಾ ವಿಶೇಷಗಳನ್ನು ಪಡೆಯುವ ಭಾರವು ತಮಗೆ ಸೇರಿದ್ದಾಗಿರುವುದು. ಸಂಸ್ಥಾನದ ದ್ರವ್ಯೋಪಪತ್ತಿಯ ಪ್ರಕೃತಸ್ಥಿತಿಯೂ ಕೂಡ ತಮ್ಮಗಳ ಮನಃಪೂರ್ವಕವಾದ ಸಹಾಯವನ್ನು ಅಪೇಕ್ಷಿಸತಕ್ಕದ್ದಾಗಿರುತ್ತದೆ. ದಿನೇದಿನೇ

ಅಭಿವೃದ್ಧಿಗೊಳ್ಳುತ್ತಿರುವ ರಾಜ್ಯಾಡಳಿತಕ್ಕೆ ಆವಶ್ಯಕಗಳಾದ ಅಪೇಕ್ಷಿತಾಂಶಗಳಿಗೂ, ವಿದ್ಯಾಪ್ರಚಾರಕ್ಕೂ, ವ್ಯವಸಾಯ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವ ಬಗ್ಗೆ ಜನರಿಗೆ ಸಹಾಯ ಮಾಡುವುದಕ್ಕೂ ಸಹ ವಿಶೇಷವಾಗಿ ಹಣವು ಬೇಕಾಗಿರುತ್ತದೆ. ಈಗ ನಮ್ಮ ದ್ರವ್ಯೋತ್ಪತ್ತಿಯು ನಮ್ಮ ಹತೋಟಿಗೆ ಮೀರಿದ ಕಾರಣಗಳಿಂದ ಕಡಮೆ ಬಿದ್ದಿರುವ ಪ್ರಯುಕ್ತ ಮೇಲ್ಕಂಡ ಸುಧಾರಣೆಗಳನ್ನು ನೆರವೇರಿಸುವುದು ಕಷ್ಟಸಾಧ್ಯವಾಗಿ ಪರಿಣಮಿಸಿರುತ್ತದೆ. ಸರ್ಕಾರದವರ ವಿಮರ್ಶೆಗೆ ಬಂದೊದಗಿರುವ ಅನೇಕ ಪ್ರಕಾರಗಳಾದ ಸಂಪದ್ವಿಷಯಕ, ಸಾಮಾಜಿಕ ಮತ್ತು ಇತರ ವಿಚಾರಗಳು ಎಷ್ಟು ತೊಡಕಾಗಿಯೂ, ಮುಖ್ಯವಾಗಿಯೂ, ಪ್ರಬಲಗಳಾಗಿಯೂ ಇರುವವೆಂಬುವುದು ತಮಗೆ ವೇದ್ಯವೇ ಇದೆ. ಪ್ರಜೆಗಳ ಪುರೋವೃದ್ಧಿಗಾಗಿಯೂ, ರಾಜ್ಯಭಾರದ ವಿಚಕ್ಷಣೆಗಾಗಿಯೂ ಘನವನ್ನು ಹೊಂದಿದ ನಮ್ಮ ಶ್ರೀಮನ್ ಮಹಾರಾಜರವರು ದಯಪಾಲಿಸುವ ಆಜ್ಞೆಯನ್ನು ನೆರವೇರಿಸುವ ವಿಷಯದಲ್ಲಿ ತಾವುಗಳು ನಮಗೆ ಸಹಾಯಕರಾಗಿದ್ದುಕೊಂಡು ತಮ್ಮ ದೇಶಾಭಿಮಾನವನ್ನೂ ಪರೋಪಕಾರ ಬುದ್ಧಿಯನ್ನೂ ಪ್ರಕಟಗೊಳಿಸುವವರಾದೀರೆಂದು ನಾವು ದೃಢವಾಗಿ ನಂಬಿರುತ್ತೇವೆ.

ಎಂ. ಕಾಂತರಾಜ ಅರಸ್,
ಮೈಸೂರು ಸಂಸ್ಥಾನದ ದಿವಾನ್‌ರವರು.

ನೋಟೀಸ್.

ಕನ್ನಂಬಾಡಿ ಸಿದ್ಧಲಿಂಗಶೆಟ್ಟಿಯು ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ನನ್ನ ಕಿರಿಮಗ ಎಡೂರಶೆಟ್ಟಿ ಎಂಬುವನು ಈಗ್ಗೆ ಸುಮಾರು ಒಂದು ವರ್ಷದಿಂದಲೂ ಕೆಟ್ಟ ಜೂಜುಗಾರರ ಸಹವಾಸದಿಂದ ನನ್ನ ಮನೆಗೆ ಸೇರದೆ ಪೋಕರಿಯಾಗಿ ತಿರುಗುತ್ತಾನೆ. ಇವನಿಗೆ ಯಾರಾದರೂ ಸಾಲಸೋಲ ಕೊಟ್ಟಲ್ಲಿ ನಾನು ಜವಾಬ್ದಾರನಲ್ಲ. ಆದ್ದರಿಂದದಯವಿಟ್ಟು ಯಾರೂ ಸಾಲಕೊಡಲಾಗದು. ಇದ್ದಸಂಗತಿ ತಿಳಿಯಪಡಿಸಿರುತ್ತೇನೆ.

ಸಿದ್ಧಲಿಂಗಶೆಟ್ಟಿ ರುಜು.

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದವು. ಫಿಲಮ್ಸ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲೆತಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲಮ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

7 ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮಸ್ತರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಮಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಮಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೦—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ಧಪ್ಪಾ ತಡಕಲ್ಲು,
49 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ, ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

32

ಈ ನಕ್ಷೆಯಲ್ಲಿ ಕಾಣುವ ಪೌಂಟೆನ್ ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೇನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1-0-0.

ಪೋಟೊ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ ರೂ. 0—8—0.

ಬೆಸ್ಟ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4-8-0.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ವೈರಂ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

SINEMATOGRAPH.
ಸಿನಿಮೊಟೊಗ್ರಾಫ್.

32

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ಕೊಂಡುಕೊಳ್ಳಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್ ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ 49

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಂದ ಯಾಗಿ ತಾ|| ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧-೯-೧೯೦೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು. ಮತ್ತು ಸನ್ ೧೯೦೮ ನೇ ಇಸವಿಯ ಆಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದಾಗಿದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನ್ನಾರು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡೆವರೋಗ, ಪಾಂಡುರೋಗ, ಗುಲ್ಮರೋಗ, ಮಕರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡುಶೂಲಿ, ವಾರಶೂಲಿ, ರೇಶ್ಮಿಜಿಡ್ಡು, ಗುದವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕುಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಟಪ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್‌ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೦೯ ನೆಯ ಇಸವಿ ನವಂಬರ್ ತಾ|| ೭ ರಿಂದ ೧೯೦೯ ನೆಯ ನವಂಬರ್ ತಾ|| ೧೩ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೧ ನೆಯ ರೌದ್ರಿನಾಮ ಸಂವತ್ಸರದ ಆಶ್ವೀಜ ಬಹುಳ ದ್ವಾದಶಿಯಿಂದ ಕಾರ್ತೀಕ ಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
7	ಭಾನು	ದ್ವಾದ	35-58	ಉಫ	9-9	23
8	ಸೋಮ	ತ್ರಯೋ	34-21	ಹಸ್ತ	8-42	24
9	[1] ಮಂಗಳ	ಚತು	34-0	ಚಿತ್ತ	1-19	25
10	[2] ಬುಧ	ಅಮಾ	34-52	ಸ್ವಾತಿ	11-11	26
11	[3] ಗುರು	ಪಾಡ್ಯ	37-10	ವಿಶಾ	14-20	27
12	ಶುಕ್ರ	ಬಿದಿ	40-34	ಅನೂ	18-38	28
13	ಶನಿ	ತದಿ	44-58	ಜ್ಯೇಷ್ಠ	23-56	29

(1) ನರಕಚತುರ್ದಶಿ. (2) ಸರ್ವತ್ರ ಅಮಾವಾಸ್ಯ, ಕೇದಾರೇಶ್ವರ ವ್ರತಂ, 3. ದೀಪಾವಳಿ, ಕಾಮಧೇನು ಪೂಜಾ, ಬಲೀಂದ್ರ ಪೂಜಾ.

ಮೈಸೂರ್: ಪ್ಯ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷ್ಯಜ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೨೨) ಮೈಸೂರ್ ಸ್ಟಾರ್ ಸರ್ ೧೯೦೯ ನೆಯ ಇಸವಿ ನವಂಬರ್ ತಾರೀಖು ೧೪ ನೆಯ ಭಾನುವಾರ. (ಸಂಚಿಕೆ ೪೬

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ೩ ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಬಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
43 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೦—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೪ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಕಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿಃ	೦—೧೨—೦
ಶಿವಪೂಜಾವಿಧಿಃ	೦—೧೪—೦
ಚಾರುಶೀಲೆಚರಿತ್ರೆ	೦—೯—೦
ಪಂಚಾಶಿ	೦—೯—೦

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು ! ಯಾವುದೊಂದು ಖರ್ಚಿಲ್ಲದೆ 112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

8 **ವೈದ್ಯವಿದ್ಯ**

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೇಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಾಣಬಹುದು. ಗಂಡಸರದು ಚೀಲ 1ಕ್ಕೆ 1-4-0 ಹೆಂಗಸರದು ಚೀಲ 1ಕ್ಕೆ 3-4-0.

8 ವಿಳಾಸ:—ಎಸ್. ಪಾಲ್ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 38

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ತಿರ್ಥ ಉತ್ತರಕನಡಾ.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದವು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ದೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿಸಹಿತ ಗಡಿಯಾರ 1ಕ್ಕೆ 4.8.0

ಲೂಸ್‌ಕಿಲ್ಲರ್.

8 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗುವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ರಕ್ತಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 6

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರಿರ್ವ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್‌ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕನೋವು, ಕೊತಿಕೆಮ್ಮು ಇವುಗಳನ್ನು ತತ್‌ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ನವಂಬರ್ ತಾ|| ೧೪ನೆಯ ಭಾನುವಾರ.

ಶ್ರೀಮದ್ಯುವರಾಜರವರ ಸುಖಾಗಮನ

ನಮ್ಮ ಶ್ರೀಮದ್ಯುವರಾಜರವರು ತಮ್ಮ ಭಾವಂದಿರಾದ ಸರ್ದಾರ್ ಶ್ರೀ ಲಕ್ಷ್ಮೀಕಾಂತರಾಜ ಅರಸರವರೊಡನೆ ಕೂಡಿ ಸೀಮೆಗೆ ದಯಮಾಡಿಸಿ ೮ ತಿಂಗಳುಗಳ ಮೇಲಾಯಿತು. ಇವರುಗಳು ಕಳೆದ ದೀಪಾವಳಿ ಹಬ್ಬದ ದಿನವಾದ ಗುರುವಾರದ ದಿವಸ ಬೆಳಗಿನ ೮|| ಗಂಟೆಗೆ ಸಪರಿವಾರರಾಗಿ ರಾಜಧಾನಿಗೆ ದಯಮಾಡಿಸಿದರು. ಸಿಲ್ದಾಣದಲ್ಲಿ ಮಂತ್ರಿವರ್ಯರೂ ರಾಜಬಂಧುವರ್ಗದವರೂ ಶ್ರೀಮನ್ಮಹಾರಾಜರ ಸೆಕ್ರಟರಿಗಳೂ, ಅಸಿಸ್ಟೆಂಟ್ ಕಮೀಷನರ್ ಗ್ರೇಡಿಗೆ ಮೇಲ್ಪಟ್ಟ ಸ್ಥಳೀಯೋದ್ಯೋಗಿಗಳೂ ಮ್ಯು|| ಪ್ರೆಸಿಡೆಂಟರೇ ಮೊದಲಾದ ಕೌನ್ಸಿಲರುಗಳೂ ಪುರದ ಪ್ರಮುಖವರ್ತಕರೇ ಮೊದಲಾದ ದೊಡ್ಡಮನುಷ್ಯರುಗಳೂ ಧರ್ಮಾಧಿಕಾರಿಗಳೇ ಮೊದಲಾದ ವೈದಿಕಮಂಡಲಿಯವರೂ ಬಾಲಭಟಸ್ತೋಮವೂ ನೆರೆದಿದ್ದರು. ಅರಸೀಕೆರೆ ಲೋಹಮಾರ್ಗದ ದ್ವಾರಾ ಸ್ಪೆಷಲ್ ಟ್ರೇನಿನಲ್ಲಿ ಕ್ಲ್ಪಪ್ತಕಾಲಕ್ಕೆ ಸರಿಯಾಗಿ ಶ್ರೀಗಳ ಸ್ವಾರಿಯು ದಯಮಾಡಿದ ಕೂಡಲೇ ದಿವಾನರವರು ಪುಷ್ಪಹಾರಗುಚ್ಛಗಳನ್ನರ್ಪಿಸಿ ಮರ್ಯಾದಿಸಿ ಕುಶಲಪ್ರಶ್ನವನ್ನು ಮಾಡಿದರು. ಬಳಿಕ ಮ್ಯು|| ಪ್ರೆಸಿಡೆಂಟರು ಪುರನಿವಾಸಿಗಳ ಪರವಾಗಿ ಪುಷ್ಪಹಾರವನ್ನೊಪ್ಪಿಸಿ ಗೌರವಿಸಿದರು. ಸೇರಿದ್ದ ಸರ್ವರೂ ವಂದನೆಗಳನ್ನು ಮಾಡಲು, ಮಂದಹಾಸ ಸಂಭಾಷಣ ಪ್ರತಿವಂದನಾದಿಗಳಿಂದ ಶ್ರೀಯವರು ಸರ್ವರನ್ನೂ ಸಂತೋಷಪಡಿಸಿ, ಅಶ್ವರಥಾರೂಢರಾಗಿ ತೆರಳಿದರು. ಅವರ ಎಡಗಡೆಗೆ ಸರ್ದಾರ್ ಕಾಂತರಾಜ ಅರಸರೂ, ಮುಂಗಡೆಯಲ್ಲಿ ಸರ್ದಾರ್ ಲಕ್ಷ್ಮೀಕಾಂತರಾಜ ಅರಸರೂ ಮ|| ಚಾಮಪ್ಪಾಜಿ ಅರಸಿನವರೂ ಕುಳಿತಿದ್ದರು. ಮಹಾರಾಜರ ಬಾಡಿಗಾರ್ಡ್ ಸ್ವಾರರು ಇಬ್ಬರು ಮುಂಗಡೆಯೂ, ಮೂವರು ಹಿಂಗಡೆಯೂ ಹೋಗುತ್ತಿದ್ದುದು ಈಸಲ ನಡೆದ ವಿಶೇಷ ಮರ್ಯಾದೆಯಾಗಿದ್ದಿತು. ಸಿಲ್ದಾಣದಿಂದ ದಾರಿಯುದ್ದಕ್ಕೂ ಎರಡು ಪಕ್ಕಗಳಲ್ಲೂ ಅಪರಿಮಿತವಾಗಿ ಪ್ರಜೆಗಳು ಸಾಲುಕಟ್ಟಿನಿಂತು ಶ್ರೀಯವರ ಸಂದರ್ಶನವನ್ನು ಮಾಡಿದ ಕೂಡಲೇ ಚಪ್ಪಾಳೆಗಳನ್ನು ಬಡಿದು ತಮ್ಮ ಆನಂದಾತಿಶಯವನ್ನು ಪ್ರದರ್ಶಿಸಿದರು. ಎಲ್ಲರಿಗೂ ಮಂದಹಾಸದಿಂದ ಪ್ರತಿವಂದನೆಮಾಡುತ್ತ ಶ್ರೀಗಳು ತಮ್ಮ ಭವನಕ್ಕೆ ದಯಮಾಡಿಸಿದರು.

ಪಾಶ್ಚಾತ್ಯದೇಶಸಂಚಾರವು ಶ್ರೀಮದ್ಯುವರಾಜರವರಿಗೆ ವಿಶೇಷವಾಗಿ ಆರೋಗ್ಯಕರವೂ ಸುಖಪ್ರದವೂ ಆಗಿದ್ದಿತೆಂಬುದು ಅವರ ಮುಖಮಂಡಲತೇಜೋವೈಭವವನ್ನು ನೋಡಿದಾಗಲೇ ಪ್ರಜೆಗಳಿಗೆಲ್ಲಾ ತೋರಿ ಅತ್ಯಾನಂದವಾಯಿತು. ಅದರ ಜತೆಗೆ ಆ ದೇಶದ ಅನೇಕ ವಿದ್ವಜ್ಜನರ ಸಹವಾಸ ಸಂಭಾಷಣಾದಿಗಳಿಂದಲೂ ದೇಶದ ಆರ್ಥಿಕ ಸಾಂಘಿಕ ರಾಜಕೀಯಾಭಿವೃದ್ಧಿ ಸಾಧನಗಳ ವಿಮರ್ಶೆಯಿಂದಲೂ ಶ್ರೀಯವರ ಅನುಭವವು ಪರಿಪಾಕಾವಸ್ಥೆಗೆ ಬಂದಿದೆಯೆಂಬುದರಲ್ಲಿ ಸಂಶಯವಿಲ್ಲ. ಸ್ವದೇಶ ಪ್ರಜಾಭ್ಯುದಯದಲ್ಲಿ ಶ್ರೀಯವರಿಗೆ ಇರುವ ಅಸಾಧಾರಣವಾದ ಕುತೂಹಲವು ನಮಗೆಲ್ಲಾ ತಿಳಿದೇ ಇದೆ. ಆ ಕುತೂಹಲಕ್ಕೆ ಈಗಣ ಅವರ ವಿದೇಶಪರ್ಯಟನಾನುಭವವು ವಿಶೇಷ ಸಹಾಯಕವಾಗಿ ಪರಿಣಮಿಸಿತೆಂಬುದನ್ನು ಕಂಡು ಅಗ್ರಜರಾದ ಶ್ರೀಮನ್ಮಹಾರಾಜರವರು ಅತಿಶಯವಾಗಿ ಸಂತೋಷಿಸುತ್ತಾರೆಂಬುದಕ್ಕೆ ಸಂಶಯವಿಲ್ಲ. ಅವರ ಆ ಸಂತೋಷದೊಡನೆ ಸಕಲ ಪ್ರಜೆಗಳೂ ಏಕೀಭವಿಸಿ, ಶ್ರೀಯವರ ಚಿರಾಯುರಾರೋಗ್ಯಭಾಗ್ಯಗಳನ್ನು ಕೋರುತ್ತಿರುವರು.

ಸಹಾಯನಿರಾಕರಣ.

ಗಾಂಧಿಯವರೂ ಅವರ ಅನುಚರರೂ ನಿಂತಲ್ಲಿ ನಿಲ್ಲದೆ ಊರೂರುಗಳಿಗೆ ಸುತ್ತುತ್ತ ಪ್ರಜೆಗಳಲ್ಲಿ ಸಹಾಯನಿರಾಕರಣ ಬೀಜವನ್ನು ಬಿತ್ತುತ್ತಿದ್ದಾರೆ. ಮೊದಮೊದಲು ಅವರು ವಕೀಲರೇ ಮೊದಲಾದ ವಿದ್ಯಾಧಿಕ ಧನಾಧಿಕ ಜನರಿಗೆ ಸಹಾಯನಿರಾಕರಣೋಪದೇಶವನ್ನು ಮಾಡಿದರು. ಅದರಿಂದ ಅಷ್ಟೇನೂ ಲಾಭವಾಗಲಿಲ್ಲ. ಈಗ ಶಾಲಾವಿದ್ಯಾರ್ಥಿಗಳನ್ನೂ ಕರ್ಮಕಾರ ಕೃಷಿಕಾರಾದಿ ಸಾಧಾರಣ ಜನರನ್ನೂ ಹುರಿದುಂಬಿಸಿ ಆಕರ್ಷಿಸಿಕೊಳ್ಳಲಿಕ್ಕೆ ಪ್ರಯತ್ನಿಸಿದ್ದಾರೆ. "ಭರತಖಂಡದಿಂದ ಆಂಗ್ಲಪ್ರಭುತ್ವವನ್ನು ಸಂಪೂರ್ಣವಾಗಿ ತೊಲಗಿಸಿಬಿಡುವುದೇ ನಮ್ಮುದ್ದೇಶ; ಅದಕ್ಕಾಗಿ ನಾವು ಗೊತ್ತುಮಾಡಿರುವ ಸಹಾಯನಿರಾಕರಣ ವಿಧಾನವನ್ನು ಸಾಂಗವಾಗಿ ದೇಶೀಯರೆಲ್ಲರೂ ನೆರವೇರಿಸಿದರೆ ಒಂದು ವರ್ಷದೊಳಗಾಗಿ ನಮಗೆ ಸಂಪೂರ್ಣ ಸ್ವರಾಜ್ಯವು ಸಿದ್ಧಿಸುವುದು" ಎಂದು ಗಾಂಧಿಯವರು ಉಪದೇಶಿಸುತ್ತಿದ್ದಾರೆ. ಇವರ ಉಪದೇಶಗಳು ಪಾಶ್ಚಾತ್ಯರ ಮೇಲೆ ಭಾರತೀಯರಿಗೆ ದ್ವೇಷವನ್ನು ಹೆಚ್ಚಿಸುತ್ತಿವೆ. ಗಾಂಧಿಯವರೂ ಅವರ ಅನುಚರರಲ್ಲಿ ಎಲ್ಲೋ ಕೆಲವರೂ ಪರಮ ಸಾತ್ವಿಕಭಾವದಿಂದ ಈ ಅಸಹಕಾರ ತತ್ತ್ವವನ್ನು ಆಚರಿಸಬಹುದಾದರೂ ಅಪಕ್ವಮತಿಗಳಾದ ಸಾಧಾರಣ ಜನರೆಲ್ಲರೂ ಈ ತತ್ತ್ವವನ್ನು ಉದ್ರೇಕಕ್ಕಧೀನರಾಗದೆ ಉಪಯೋಗಿಸಿಕೊಳ್ಳುವರೆಂದು ನೆನಸುವುದು ಅಸಂಭವ. ಅದುಕಾರಣ ಕಡೆಕಡೆಗೆ ಇದು ಪ್ರಭುಜಾತಿದ್ವೇಷವಾಗಿ ಪರಿಣಮಿಸಿ ದೇಶಕ್ಕೆ ಯಾವ ತೆರದ ಅನರ್ಥವನ್ನು ತಂದಿಕ್ಕುವುದೋ ಹೇಳಲಿಕ್ಕಿಲ್ಲ.

ಅಪವಿತ್ರವಾಗಿರುವ ಆಂಗ್ಲಪ್ರಭುತ್ವದವರಿಂದ ನಡೆಯಿಸಲ್ಪಡುತ್ತಿರುವ ಪಾಠಶಾಲೆಗಳನ್ನೆಲ್ಲಾ ವಿದ್ಯಾರ್ಥಿಗಳು ಪರಿತ್ಯಜಿಸಬೇಕೆಂದು ಎಲ್ಲೆಲ್ಲೂ ಇವರು ಬೋಧಿಸುತ್ತಿದ್ದಾರೆ. ಈ ವಿಷಯದಲ್ಲಿ ತಾಯ್ತಂದೆಗಳ ಹಿತೋಪದೇಶವನ್ನೂ ಕೂಡ ಲಕ್ಷಿಸದೆ ಕೆಲಸಮಾಡಬೇಕೆಂದು ಇವರ ಉಪದೇಶ. ಇದನ್ನು ಕೇಳಿ "ಕಪಿರಪಿಚಕಾಪಿಶಾಯನಮದಮತ್ತಃ" ಎಂಬಂತೆ ಆಲಿಘರ್ ಮೊದಲಾದ ಕೆಲವುಕಡೆಯ ವಿದ್ಯಾರ್ಥಿಗಳು ಶಾಲೆಗಳನ್ನು ಬಿಟ್ಟು ತಾಯ್ತಂದೆಗಳಲ್ಲಿ ಅವಿಧೇಯರಾಗಿ ಕುಣಿಯುತ್ತಿದ್ದಾರೆ. ಸರ್ಕಾರದ ಸಂಬಂಧವನ್ನು ದೂರೀಕರಿಸಬೇಕೆಂದು ಉಪದೇಶಿಸುವ ನೀವು ಆ ಸರ್ಕಾರದ ತಂತಿಯ ಅಂಚೆಯ ಶಾಖೆಗಳ ಕೆಲಸವನ್ನು ಹೇಗೆ ಉಪಯೋಗಿಸಿಕೊಳ್ಳುವಿರಿ? ಎಂದು ಒಂದುಕಡೆ ಗಾಂಧಿಯವರನ್ನು ಕುರಿತು ಕೆಲರು ಪ್ರಶ್ನೆಮಾಡಲಾಗಿ, "ಅವು ಪ್ರಜೆಗಳಾದ ನಮ್ಮ ದುಡ್ಡಿನಿಂದ ನಡೆಯತಕ್ಕವು" ಎಂದು ಗಾಂಧಿಯವರು ಉತ್ತರ ಕೊಟ್ಟಿರುವರು. ಆದರೆ ಈ ಸರ್ಕಾರಿ ಪಾಠಶಾಲೆಗಳೂ ಸಹ ನಮ್ಮ ದುಡ್ಡಿನಿಂದಲೇ ಸ್ಥಾಪಿಸಲ್ಪಟ್ಟಿರತಕ್ಕುವೆಂಬುದನ್ನು ಇವರೇಕೆ ಯೋಚಿಸುವುದಿಲ್ಲವೋ ತಿಳಿಯುವುದಿಲ್ಲ. ಅಂತು ದೇಶದಲ್ಲಿ ಗದ್ದಲವನ್ನೆಬ್ಬಿಸಲಿಕ್ಕೆ ಇವರುಗಳು ಸಾಹಸಪಡುವಂತಾಗಿದೆ. ದೇಶದ ಲಕ್ಷಾನುಲಕ್ಷ ಬಾಲಕರನ್ನೆಲ್ಲಾ ಸರ್ಕಾರಿ ಶಾಲೆಗಳಿಂದ ಬಿಡಿಸಿ, ಪ್ರತ್ಯೇಕ ಸ್ವಕೀಯ ಶಾಲೆಗಳನ್ನು ಗಾಂಧಿಯವರೂ ಅವರ ಅನುಚರರೂ ಕೋಟಿಗಟ್ಟಲೆಯ ಧನವ್ಯಯದಿಂದ ಸ್ಥಾಪಿಸಲಿಕ್ಕೆ ಯಾವ ರಸಸಿದ್ಧಿಯನ್ನು ಪಡೆದುಕೊಂಡಿರುವರೋ ತಿಳಿಯಲಿಲ್ಲ.

ಈಗ ಕೊಡಲ್ಪಡಲಿಕ್ಕಿರುವ ನೂತನ ರಾಜಕೀಯ ಸಂಸ್ಕರಣದ ಮೂಲಕ ಪ್ರಜೆಗಳಿಗೆ ಲಭ್ಯವಾಗುವ ಅಧಿಕಾರದಿಂದ ವಿದ್ಯಾಭ್ಯಾಸಶಾಖೆ ಮೊದಲಾದುವುಗಳಲ್ಲಿ ತಮಗೆ ಬೇಕಾದ ಸುಧಾರಣೆಗಳನ್ನು ಮಾಡಿಕೊಂಡು ದೇಶಹಿತವನ್ನು ಮಾಡಿಕೊಳ್ಳಬಹುದಾಗಿರುವಲ್ಲಿ, ಅದರಲ್ಲಿ ತಮ್ಮ ಸ್ವರಾಜ್ಯನಿರ್ವಾಹಯೋಗ್ಯತೆಯ ತೋರಿಸುವುದನ್ನು ಬಿಟ್ಟು "ರಾಜಾ ಪ್ರತ್ಯಕ್ಷದೇವತಾ" ಎಂಬ ಪವಿತ್ರಭಾವನೆಯುಳ್ಳದಾಗಿರುವ ಭರತಖಂಡದ ಸಂಪ್ರದಾಯಕ್ಕೆ ವಿರುದ್ಧವಾಗಿ, ರಾಜದ್ವೇಷವನ್ನು ಬಳೆಯಿಸುವ ಅಪಸವ್ಯ ಮಾರ್ಗಕ್ಕೆ ಇವರುಗಳು ನುಗ್ಗಿರುವುದು ದೇಶದ ದುರದೃಷ್ಟವೇ ಸರಿ. ಯುದ್ಧವಾಗುತ್ತಿದ್ದ ಕಾಲದಲ್ಲೂ ಶತ್ರುಗಳ ಜಯವಾರ್ತೆಯನ್ನು ಕೇಳಿ ಹಿಗ್ಗುತ್ತಲೂ ಆಂಗ್ಲರ ಜಯವನ್ನು ಕೇಳಿ ಕುಗ್ಗುತ್ತಲೂ ಇದ್ದವರು ನಮ್ಮ ದೇಶದಲ್ಲಿ ಕೆಲವರಿದ್ದರು. ಅವರುಗಳಿಗೆಲ್ಲಾ ಜರ್ಮನ್ ಜಯನಿರೀಕ್ಷಣೆಯೇ ತಪಸ್ಸಾಗಿದ್ದಿತು. ಯುದ್ಧಪರ್ಯವಸಾನವು ಅವರ ದುರೂಹೆಗಳನ್ನೆಲ್ಲಾ ದಗ್ಧಮಾಡಿಬಿಟ್ಟಿತು. ಆದರಿಂದ ಒಳಗೊಳಗೇ ಕುದಿಕುಳಿಗೊಳ್ಳುತ್ತಿದ್ದ ಆ ಪ್ರಭುದ್ವೇಷಿಗಳಿಗೆಲ್ಲಾ ಈಗಣ ಗಾಂಧಿಯವರ ಸಹಾಯನಿರಾಕರಣ ಸಂಧಿಯು ಒಂದು ಅನುಕೂಲ ಸಮಯವಾಗಿ ದೊರೆದ ಕಾರಣ, ಹೇಗೂ ದೇಶದಲ್ಲಿ ಗದ್ದಲವೆಬ್ಬಿಸಲು ನಡುಕಟ್ಟಿ ಪ್ರತ್ಯಕ್ಷವಾಗಿಯೇ ಪ್ರಭುದ್ವೇಷವನ್ನು ತೋರಿಸಲು ನಿಂತಿರುವರು. ಪ್ರಪಂಚದಲ್ಲೆಲ್ಲಾ ಬೋಲ್ಷೆವಿಕ್ಕರ ತತ್ತ್ವವು ಹರಡುತ್ತಿರುವ ಈಗಣ ಕಾಲದಲ್ಲಿ ಭರತಖಂಡದಲ್ಲೂ ಆ ಮಾಯಾಮಾರೀಚರ ಚಂಚು ಪ್ರವೇಶವಾಗಿದೆಯೋ ಏನೋ ಎಂದು ಈಗಣ ಸ್ಥಿತಿಗತಿಯಿಂದ ಭಾವಿಸಬೇಕಾಗಿ ಬಂದಿರುವುದು. ಆಂಗ್ಲಸಾಮ್ರಾಜ್ಯದ ಸೇನಾಂಗಮಂತ್ರಿಗಳಾದ ವಿನ್ಸ್ಟನ್ ಚರ್ಚಿಲ್‌ರವರು ಲಂಡನ್ ಪಟ್ಟಣದಲ್ಲೊಂದುಕಡೆ ನಿನ್ನೆ ತಾನೇ ಉಪನ್ಯಾಸ ಮಾಡುವಾಗ್ಗೆ—ಬೋಲ್ಷೆವಿಕ್ಕರಿಂದ ಆಂಗ್ಲಸಾಮ್ರಾಜ್ಯಕ್ಕೆ ಉಂಟಾಗಬಹುದಾದ ಅಪಾಯಗಳನ್ನು ನಾವು ಗ್ರಹಿಸಬೇಕೆಂದೂ, ಇಂಡ್ಯಾ, ಈಜಿಪ್ಟ್, ಐರ್ಲೆಂಡು ಮೊದಲಾದ ದೇಶಗಳಲ್ಲೆಲ್ಲಾ ವಿಪ್ಲವಕಾರರ ಪ್ರಯತ್ನಗಳು ವಿಶೇಷವಾಗಿ ನಡೆಯುತ್ತಿವೆಯೆಂದೂ, ಕೆಲಸಗಾರರಿಗೆ ಕೆಲಸವಿಲ್ಲದಂತೆ ಮಾಡಿ ಅವರಿಗೆ ಅಸಂತೃಪ್ತಿಯನ್ನು ಹುಟ್ಟಿಸುತ್ತಿರುವರೆಂದೂ, ಆಂಗ್ಲದೇಶದ ಮೇಲೆ ಪ್ರಪಂಚದಲ್ಲೆಲ್ಲಾ ವಿದ್ರೋಹಾಲೋಚನೆಯು ನಡೆಯುವಂತೆ ಕಾಣುತ್ತಿದೆಯೆಂದೂ ಹೇಳಿರುವರು. ತಕ್ಕ ಆಧಾರವಿಲ್ಲದೆ ಇವರು ಇಂಥ ಪ್ರಸಂಗವನ್ನು ಮಾಡಿಲ್ಲ.

ದೇಶರಕ್ಷಣ ಭಾರವನ್ನು ಹೊತ್ತಿರುವ ಭರತಖಂಡ ಪ್ರಭುತ್ವದವರು ಈಗಣ ವಿಷಮಸ್ಥಿತಿಯಿಂದ ದೇಶವನ್ನುದ್ಧರಿಸಲು ತಕ್ಕ ಪ್ರಯತ್ನವನ್ನು ಮಾಡದೆ ಇರತಕ್ಕವರಲ್ಲ. ಈಗಣ ಸ್ಥಿತಿಗತಿಯನ್ನು ಕುರಿತು ಅವರು ೬ನೆ ತಾರೀಖಿನಲ್ಲಿ ಒಂದು ದೊಡ್ಡ ಪ್ರಕಟನೆಯನ್ನು ಮಾಡಿರುತ್ತಾರೆ. ಅದರಲ್ಲಿ ಈ ಸಹಾಯನಿರಾಕರಣದ ಅನರ್ಥಗಳನ್ನೆಲ್ಲಾ ನಿರೂಪಿಸಿರುವುದಲ್ಲದೆ, ಇದನ್ನು ಉಪದೇಶಿಸುವವರು ಅತ್ಯಾಚಾರ ಹಿಂಸೆಗಳನ್ನು ಉಪಯೋಗಿಸಕೂಡದೆಂದು ಪ್ರಕಟಿಸುತ್ತಿರುವುದರಿಂದ ಅವರುಗಳ ಮೇಲೆ ಸರ್ಕಾರದವರು ಕ್ರಿಮಿನಲ್ ವ್ಯವಹಾರವನ್ನು ಜರುಗಿಸಲು ಪ್ರಯತ್ನಿಸಲಿಲ್ಲವೆಂದೂ, ದಾರುಣಕ್ರಿಯೆಗಳನ್ನು ನಡೆಯಿಸಬೇಕೆಂಬ ಉದ್ದೇಶದಿಂದ ದುರಾಗ್ರಹಜನಕವಾದ ಲೇಖನವನ್ನು ಬರೆಯುವ ಅಥವಾ ಉಪನ್ಯಾಸಗಳನ್ನು ಮಾಡುವ ಮತ್ತು ಸೈನಿಕರಿಗೂ ಪೋಲೀಸಿಗೂ ರಾಜದ್ವೇಷವನ್ನು ಬೋಧಿಸತಕ್ಕ ಜನರುಗಳನ್ನು ಶಿಕ್ಷಿಸಲು ಏರ್ಪಡಿಸಿರುತ್ತೇವೆಂದೂ ಹೇಳಿರುತ್ತಾರೆ ಮತ್ತು ಈ ಸಹಾಯನಿರಾಕರಣದ ಅವಲಂಬನೆಯಿಂದ ದೇಶಕ್ಕೆ ಉಂಟಾಗುವ ಅನರ್ಥವನ್ನು ವಿದ್ಯಾಧಿಕರೂ ಸಾತ್ವಿಕರೂ ದೇಶವತ್ಸಲರೂ ಆದ ಜನರು ಪ್ರಜಾಸಾಮಾನ್ಯಕ್ಕೆ ಬೋಧಿಸಬೇಕೆಂದೂ, ಇದುವರೆಗೆ ಅನೇಕ ದೀರ್ಘಾಲೋಚನಪರರು ಈ ಸಹಾಯನಿರಾಕರಣ ತತ್ತ್ವವನ್ನು ಅಂಗೀಕರಿಸದೆ ಅದನ್ನು ತಿರಸ್ಕರಿಸಿ ದೇಶಕ್ಕೆ ಅದರಿಂದುಂಟಾಗುವ ಹಾನಿಯನ್ನು ಬೋಧಿಸುತ್ತ ಬಂದುದರಿಂದ ಪ್ರಭುತ್ವದವರು ಈ ಸಹಾಯನಿರಾಕರಣ ಪ್ರಸಾರನಿರೋಧ ವಿಷಯದಲ್ಲಿ ಕಠಿನಚರ್ಯೆಯನ್ನೇನೂ ತೆಗೆದುಕೊಳ್ಳಲಿಲ್ಲವೆಂದೂ, ಇತರ ಸಾಮೋಪಾಯಗಳೆಲ್ಲಾ ವ್ಯರ್ಥವಾಗಿ ತೋರುವ ಸಂದರ್ಭದಲ್ಲಿ ಕಠಿನಚರ್ಯೆಯನ್ನಾದರೂ ಅಂಗೀಕರಿಸಿ ಪ್ರಜಾಸೌಖ್ಯವನ್ನು ಕಾಪಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿರುವರೆಂದೂ ತಿಳಿಯಿಸಿರುತ್ತಾರೆ.

ದೂರದೃಷ್ಟಿಯುಳ್ಳ ದೇಶಭಕ್ತರೆಲ್ಲರೂ ಇಂಡ್ಯಾ ಸರ್ಕಾರದ ಈ ಶಾಂತ ಹಿತೋಪದೇಶವನ್ನು ಅತ್ಯಂತ ಸಮುಚಿತವಾದುದೆಂದು ಅಂಗೀಕರಿಸದೆ ಇರಲಾರರು. ಆದರೆ ಸಹಾಯನಿರಾಕರಣ ಪ್ರಸಾರಕರಲ್ಲಿ ಹಲವರಿಗೆ ಈ ದೇಶವನ್ನು ಆಂಗ್ಲದೇಶೀಯರು ಸಂಪೂರ್ಣವಾಗಿ ಪರಿತ್ಯಾಗಮಾಡಿ ಹೋದಲ್ಲದೆ ಸಮಾಧಾನವಾಗುವಂತೆ ಕಾಣುವುದಿಲ್ಲ. ಆಂಗ್ಲಜನರು ದೇಶವನ್ನು ಬಿಟ್ಟು ಹೋಗುವುದು ಸಂಭವವೆ? ಮತ್ತು ದೇಶೀಯರಿಗೆಲ್ಲಾ ಅದು ಇಷ್ಟವೆ? ಎಂದಿಗೂ ಇಲ್ಲ. ಹೀಗಿರುವಾಗ ಅಸಾಧ್ಯವಾದ ಮನೋರಥವನ್ನಿಟ್ಟುಕೊಂಡು ದೇಶದಲ್ಲಿ ಅಶಾಂತಿಯನ್ನು ಹಬ್ಬಿಸಲಿಕ್ಕೂ ಪ್ರಭುತ್ವದವರಿಗೆ ದೇಶದ ಮೇಲೆ ಅಭಿವೃದ್ಧಿಗೊಳ್ಳುತ್ತಿದ್ದ ವಿಶ್ವಾಸಪ್ರೀತಿಗಳು ಹ್ರಾಸಗೊಳ್ಳುವುದಕ್ಕೂ ಅವಕಾಶಮಾಡುವುದಕ್ಕಿಂತಲೂ ಕ್ರಮಸಾಧ್ಯವಾದ ಆಂಗ್ಲಛತ್ರಾಶ್ರಯಸ್ವರಾಜ್ಯಧ್ಯೇಯವನ್ನು ಇಟ್ಟುಕೊಂಡು, ಸದ್ಯಃ ಲಭ್ಯವಾಗಲಿಕ್ಕೆ ಸಮೀಪಿಸಿರುವ ರಾಜಕೀಯ ಸ್ವಾತಂತ್ರ್ಯಗಳನ್ನುಪಯೋಗಿಸಿ, ನಿರ್ವಾಹಸಾಮರ್ಥ್ಯವನ್ನು ತೋರಿಸಿ, ಪ್ರಭುತ್ವದಲ್ಲಿರುವ ನ್ಯೂನಾತಿರೇಕಗಳನ್ನು ಸರಿಪಡಿಸುವುದಕ್ಕಾಗಿ ಅವರೊಡನೆ ಸೇರಿ ಹೋರಾಡುವುದೇ ಶ್ರೇಯಸ್ಕರವು.

ಒಳದೇಶದ ವೃತ್ತಾಂತಗಳು.

ದಿವಾನರವರು ಈ ದಿವಸ ಬೆಂಗಳೂರಿಗೆ ದಯಮಾಡಿಸುವರಾಗಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯನವರು ಕಳೆದ ತಾ|| ೧೨ ರಲ್ಲಿ ಬೊಂಬಾಯಿಗೆ ಬಂದಿಳಿದರು.

ಅಮಲ್ದಾರರುಗಳಾದ ಮ|| ಬಿ. ಶಂಕರಪ್ಪನವರು ಚನ್ನಪಟ್ಟಣದಿಂದ ನಾಗಮಂಗಲಕ್ಕೂ ಅಲ್ಲಿದ್ದ ಮ|| ಬಿ. ಕೃಷ್ಣರಾಯರು ಚನ್ನಪಟ್ಟಣಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಗೌರ್ನಮೆಂಟ್ ರೆವಿನ್ಯೂ ಸೆಕ್ರೆಟರಿಯವರಾದ ಮ|| ಬಿ. ರಾಮಸ್ವಾಮಯ್ಯನವರು ರಜಾದಮೇಲಿರುವುದರಿಂದ ಮ|| ಆರುವಾಮುದಯ್ಯಂಗಾರರು ಆಕ್ಟಿಂಗಾಗಿ ಆ ಸ್ಥಾನದಲ್ಲಿ ನಿಯಮಿಸಲ್ಪಟ್ಟಿದ್ದಾರೆ.

ಸ್ಟೇಟ್ ಸೆಕ್ರಟರಿಗಳ ಕೌನ್ಸಿಲ್ ಮೆಂಬರಾಗಿದ್ದ ಸರ್ ಕೃಷ್ಣಕುಮಾರ ಗುಪ್ತರವರು ತಾ|| ೭ ರಲ್ಲಿ ಇಂಗ್ಲಂಡಿನಿಂದ ಈ ದೇಶಕ್ಕೆ ಬಂದರು. ಅವರು ತಮ್ಮ ಕುಮಾರಿಯವರನ್ನು (ನಮ್ಮ ಸರ್ಕಾರದ ಎ|| ಕೌನ್ಸಿಲ್ ೧ನೆ ಮೆಂಬರಾದ ಮ|| ಎ. ಆರ್. ಬಾನರ್ಜಿಯವರ ಪತ್ನಿಯವರು) ನೋಡುವುದಕ್ಕಾಗಿ ಬೆಂಗಳೂರಿಗೆ ದಯಮಾಡಿಸುವವರಾಗಿದ್ದಾರೆ.

ರಾಜಧಾನಿಯ ದೊಡ್ಡಪೇಟೆಯಲ್ಲಿ ಕಳೆದ ತಾ|| ೨೧ ನೆ ಗುರುವಾರ ರಾತ್ರಿ ಒಂದು ಜವಳಿ ಅಂಗಡಿಗೆ ಕಳ್ಳರು ಬಿದ್ದು ಪೆಟ್ಟಿಗೆಯಲ್ಲಿದ್ದ ೭-೮ ಸಾವಿರ ರೂ. ಗಳ ನಗನಾಣ್ಯಗಳನ್ನು ಅಪಹರಿಸಿರುತ್ತಾರೆಂದೂ ಪೋಲೀಸಿನವರು ಪತ್ತೆ ಮಾಡುವುದರಲ್ಲಿದ್ದಾರೆಂದೂ ತಿಳಿದುಬಂದಿದೆ. ಸೆಂಟ್ರಲ್ ಪೋಲೀಸ್ ಸ್ಟೇಷನ್ನಿಗೆ ಕೇವಲ ಸಮೀಪದಲ್ಲೇ ಈ ಕಳುವು ನಡೆದಿರುವುದು ಆಶ್ಚರ್ಯ.

ವಿದ್ಯಾಭ್ಯಾಸ ಮತ್ತು ವ್ಯವಸಾಯ ಶಾಖೆಗಳ ಸೆಕ್ರಟರಿಯವರಾದ ಮಿ|| ಡಿಸೌಜಾ ಬಿ. ಎ. ಬಿ. ಎಲ್. ರವರನ್ನು ಕೈಗಾರಿಕೆಯ ವಿದ್ಯಾಪರಿಶ್ರಮವನ್ನು ಪಡೆದು ಬರುವುದಕ್ಕಾಗಿ ೬ತಿಂಗಳ ರಜಾ ಕೊಟ್ಟು ಜಪಾನ್, ಅಮೇರಿಕಾ, ಇಂಗ್ಲೆಂಡ್‌ಗಳಿಗೆ ನಮ್ಮ ಸರ್ಕಾರದವರು ಕಳುಹಿಸಿಕೊಡಲು ಏರ್ಪಡಿಸಿರುವರೆಂದೂ, ಆ ಕಾಲದಲ್ಲಿ ಮಿ|| ಕೆ. ಮ್ಯಾಥ್ಯೂರವರು ಆಕ್ಟಿಂಗಾಗಿ ಮಿ|| ಡಿಸೌಜಾರವರ ಸ್ಥಾನಕ್ಕೆ ನಿಯಮಿಸಲ್ಪಡುವರೆಂದೂ ಕೇಳುತ್ತೇವೆ.

ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲರೂ ದೊಡ್ಡ ವರ್ತಕರೂ ಆದ ಕೈ|| ಗಂ|| ಪಾಪಣ್ಣನವರ ಕುಮಾರರಾದ ಮ|| ರಾ|| ಪಿ. ಎಂ. ಬಸಪ್ಪನವರ ಪತ್ನಿಯವರು ಸ್ವಲ್ಪ ಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ತಾ|| ೭ ನೆಯ ಭಾನುವಾರದ ದಿವಸ ಅಕಾಲಮೃತ್ಯುವನ್ನು ಹೊಂದಿದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಮ|| ರಾ|| ಪಿ. ಎಂ. ಬಸಪ್ಪನವರಿಗೆ ಚಿಕ್ಕ ವಯಸ್ಸಿನಲ್ಲಿ ಪತ್ನೀವಿಯೋಗದುಃಖಪ್ರಾಪ್ತವಾದುದಕ್ಕಾಗಿ ನಮ್ಮ ಸಾನುಭೂತಿಯನ್ನು ತಿಳಿಸುತ್ತೇವಲ್ಲದೆ ಮೃತರ ಆತ್ಮಕ್ಕೆ ಶಾಂತಿಯೂ, ಅವರ ಕುಟುಂಬವರಿಗೆಲ್ಲಾ ದುಃಖಶಮನವೂ ಉಂಟಾಗಲೆಂದು ಕೋರುತ್ತೇವೆ.

ಕೃಷ್ಣರಾಜಸಾಗರದ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸೂ, ಅದರ ಕೈಕೆಳಗಣ ಮೂರು ಡೆ|| ಅಮಲ್ದಾರರ ಆಫೀಸುಗಳೂ ಸಹ ರಿಟ್ರೆಂಚ್‌ಮೆಂಟಿಗಾಗಿ ತೆಗೆದುಹಾಕಲ್ಪಡಬೇಕೆಂದು ಗೌರ್ನಮೆಂಟಿನವರು ಅಭಿಪ್ರಾಯಪಟ್ಟಿದ್ದರಂತೆ. ಆದರೆ ರೆವಿನ್ಯೂ ಕಮೀಷನರು ಸ್ಪೆಷಲ್‌ಲ್ಯಾಂಡ್ ಅಕ್ವಿಜಿಷನ್ ಆಫೀಸರನ್ನು ಇನ್ನೂ ೨ ವರ್ಷಗಳವರೆಗೂ ಇಟ್ಟಿರತಕ್ಕುದು ಅವಶ್ಯಕವೆಂದು ಬಲವಾಗಿ ಗೌರ್ನಮೆಂಟಿಗೆ ಬರೆದಿರುವರೆಂದು ಕೇಳುತ್ತೇವೆ. ಕಟ್ಟೆಯನ್ನು ೧೨೦ ಅಡಿಯ ವರೆಗೆ ಕಟ್ಟುವುದು ನಿರ್ಧರವಾದರೆ ಅಕ್ವಿಜಿಷನ್ ಕೆಲಸವು ಇನ್ನೂ ಬಹಳವಾಗಿ ನಡೆಯಬೇಕಾಗುವುದು. ಅದುವರೆಗೆ ಲ್ಯಾ|| ಅಕ್ವಿಜಿಷನ್ ಆಫೀಸೂ ಸ್ಪೆ|| ಅಮಲ್ದಾರರ ಆಫೀಸುಗಳೂ ಇದ್ದೇತೀರಬೇಕಾಗಿ ತೋರುತ್ತವೆ.

ಕಳೆದವಾರ ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರಿಗಾಗಿ ಮೈಸೂರು ಮರಾಟಾ ಜನವರ್ಗದ ಬಾಡೀಗಾರ್ಡ್ ಕಮ್ಯಾಂಡೆಂಟ್ ಮ|| ಎಸ್. ಗೋಪಾಲರಾವ್‌ರವರು ಸಾ|| ದೇವೋಜಿರಾಯರು ಮ|| ಎಂ. ಕೆ. ಮಾಧವರಾಯರು ಮ|| ಸಿದ್ದೋಜಿರಾಯರು ಮೊದಲಾದವರು ನಡೆಯಿಸಿದ ಸತ್ಕಾರ ಸಮಾರಂಭಕೂಟವು ಬಹಳ ವಿಜೃಂಭಣೆಯಿಂದ ನಡೆದಿತು. ದಿವಾನರೂ ಕೂಡ ದಯಮಾಡಿಸಿದ್ದರು. ಆಗ್ಗೆ ಶಾಕುಂತಲ ಕರ್ನಾಟಕ ನಾಟಕಸಂಘದವರು ಅಭಿನಯಿಸಿದ ಶಶಿರೇಖಾಪರಿಣಯ ನಾಟಕವು ಆದ್ಯಂತ ರಮಣೀಯವಾಗಿ ಸಭಿಕರನ್ನು ಆನಂದಪಡಿಸಿತು. ಆದರೆ ಅದರಲ್ಲಿನ ಶ್ರೀ ಕೃಷ್ಣಪಾತ್ರವು ಮಾತ್ರ ದ್ವಾರಕೆಯ ನೀಲಮೇಘ ಶ್ಯಾಮಕೃಷ್ಣನಾಗಿರದೆ ಮೈಸೂರಿನ ಗೌರಾಂಗಕೃಷ್ಣನಾಗಿದ್ದುದು ಮಾತ್ರ ವಿಲಕ್ಷಣ.

ನಮ್ಮ ದೇಶದ ಇಂಜನಿಯರ್ ಇಲಾಖೆಯ ಕೆಲಸವು ಬಹಳ ಮಂದಗತಿಗೆ ಬಿದ್ದಿರುವುದು. ಅದರ ಮೇಲಣ ದೂರು ಬಹಳವಾಗಿರುವುದು. ಇದನ್ನು ಸರಿಪಡಿಸಲಿಕ್ಕಾಗಿ ಸರ್ಕಾರದವರು, ಒಬ್ಬರಲ್ಲೇ ಇದ್ದ ಚೀಫ್ ಇಂಜನಿಯರ್ ಕೆಲಸವನ್ನೂ ಸೆಕ್ರಟರಿ ತನವನ್ನೂ ಪ್ರತ್ಯೇಕಪಡಿಸಿ, ಸೆಕ್ರಟರಿ ಕೆಲಸವನ್ನು ಮಿ|| ಡೋವ್ ವಿಲ್ಸನ್‌ರವರಿಗೆ ಕೊಟ್ಟಿರುವರಷ್ಟೆ. ಇದಕ್ಕೊಪ್ಪದೆ ಮ|| ಕಡಾಂಬಿ ಶ್ರೀನಿವಾಸಯ್ಯಂಗಾರರು ತಮ್ಮ ಚೀಫ್ ಇಂಜನಿಯರ್ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವರೆಂತಲೂ, ಅದರ ಮೇಲೆ ಸರ್ಕಾರದವರು ಮಿ|| ರೈಸ್‌ರವರನ್ನು ಚೀಫ್ ಇಂಜನಿಯರನ್ನಾಗಿ ಮಾಡಿದರೆಂತಲೂ, ಮ|| ಗಳಾದ ಅಯ್ಯಾಸ್ವಾಮಯ್ಯರೂ ಸುಂದರಂ ಅಯ್ಯರೂ ಪೆನ್ಷನ್ನಿನ ಮೇಲೆ ನಿವೃತ್ತಿಗೊಳಿಸಲ್ಪಡುವರೆಂತಲೂ ಪ್ರಕಟವಾಗಿದೆ.

"ಯಾವನೋ ಒಬ್ಬ ದ್ರೋಹಿಯು ಭಗವಾನ್‌ದಾಸ್ ಎಂಬ ಹೆಸರಿಟ್ಟುಕೊಂಡು ನಮ್ಮ ಮೈಸೂರು ರಾಜ್ಯಭಾರದ ವಿಷಯವಾಗಿಯೂ ಶ್ರೀಮನ್ ಮಹಾರಾಜರವರು ಮತ್ತು ಬ್ರಿಟಿಷ್ ರೆಸಿಡೆಂಟರು ಸರ್ದಾರ್ ಕಾಂತರಾಜ ಅರಸಿನವರು ಇವರುಗಳ ವಿಷಯವಾಗಿಯೂ ಅವಿವೇಕವೂ ದೋಷಾರೋಪಕವೂ ಆದ ದೊಡ್ಡ ಬರವಣಿಗೆಯೊಂದನ್ನು ಮದ್ರಾಸ್ ಹಿಂದೂ ಪತ್ರಿಕೆಗೆ ಬರೆದುಕೊಂಡಿದ್ದಾನೆ. ಮ|| ರಡ್ಡಿಯವರ ವಿಷಯದಲ್ಲಿ ಅಲ್ಲಲ್ಲಿ ತೋರಿಸಿರುವ ಅಭಿಮಾನವು ರಡ್ಡಿಯವರ ಪಕ್ಷದವರು ಯಾರೋ ಇದನ್ನು ಬರೆದಿರಬೇಕೆಂದು ನಮ್ಮ ಪ್ರಭುಗಳೇ ಮೊದಲಾದವರು ಯೋಚಿಸಿಕೊಳ್ಳುವಂತೆ ಆಗಬೇಕೆಂದು ಮಾಡಿದ ಕಪಟೋಪಾಯವಾಗಿರುತ್ತದೆ. ಮೈಸೂರು ಸಂಪದಭ್ಯುದಯ ಪತ್ರಿಕೆಗೆ ಮತ್ತೊಬ್ಬನು ದೇಶಾಭಿಮಾನಿ ಎಂದು ಹೆಸರಿಟ್ಟುಕೊಂಡು ಈ ಭಗವಾನ್‌ದಾಸನ ಲೇಖನವನ್ನು ಕುರಿತು ಒಂದು ಲೇಖನವನ್ನು ಬರೆದಿರುವದರಲ್ಲಿ "ದತ್ತಪುತ್ರನಿಗೆ ಪಿತೃಭಕ್ತಿಯುಂಟೆ?" ಎಂದು ಶಿರ್ನಾಮೆ ಹಾಕಿಕೊಂಡು ಇದು ಮೈಸೂರು ದೇಶದ ನೌಕರಿಯಲ್ಲಿ ಸೇರಿಕೊಂಡಿರುವ ಹೊರಗಣ ದೇಶದವರು ಯಾರೋ ಬರೆದಿರಬೇಕೆಂಬ ಧ್ವನಿ ತೋರಿಸಿರುತ್ತಾನೆ. ಆದರೆ ಕೋತಿ ಮೊಸರನ್ನವನ್ನು ತಿಂದು ಮೇಕೆಯ ಬಾಯಿಗೆ ಒರಸಿದ್ದಕ್ಕೆ ಸಮನಾಗಿರುವ ಈ ತಂತ್ರಗಳನ್ನೆಲ್ಲಾ ನಮ್ಮ ಶ್ರೀಮನ್ ಮಹಾರಾಜರೂ ಅವರ ದಿವಾನರೂ ತಿಳಿಯದಿರುವಷ್ಟು ಅಪ್ರಬುದ್ಧರಲ್ಲ" ಎಂದು ಒಬ್ಬ ಬಾತ್ಮೀದಾರರು ನಮಗೆ ಬರೆದಿದ್ದಾರೆ.

ಮೈಸೂರು ಕೃಷ್ಣಮೂರ್ತಿಪುರದಲ್ಲಿ ವಾಸವಾಗಿರುವ ಮ|| ಸಂಗೀತ ವಿದ್ಯಾಕಂಠೀರವ ಟಿ. ಶೇಷಗಿರಿರಾಯರ ಮನೆಗೆ ಕಳೆದ ಅಕ್ಟೋಬರ್ ತಾ|| ೧೫ ರ ರಾತ್ರಿ ಕಳ್ಳರು ನುಗ್ಗಿ ೧೪೦೦ ರೂ. ಬೆಲೆ ಬಾಳುವ ವಸ್ತ್ರಾಭರಣಾದಿಗಳನ್ನು ಅಪಹರಿಸಿಕೊಂಡುಹೋದರು. ರಾಯರು ಪೋಲೀಸಿಗೆ ವರದಿ ಮಾಡಿದ ಮೇಲೆ ಪತ್ತೆತರದೂದು ನಡೆದಿತು. ಮರುದಿನ ಬೇಡ್ರಸ್ಸಿನಲ್ಲಿದ್ದ ಒಬ್ಬ ಪೋಲೀಸ್ ಕಾನ್ಸ್ಟೆಬಲು ೪ ಮಂದಿ ಕಳ್ಳರನ್ನು ಹಿಡಿದನು. ಅವರಲ್ಲಿದ್ದ ವಸ್ತುಗಳಲ್ಲಿ ಮ|| ರಾಯರಿಗೆ ಸಂಬಂಧಪಟ್ಟ ಭಂಗಾರದ ಕಂಠಿ ಮೆಡಲುಗಳು ಗಡಿಯಾರ ಮೊದಲಾದ ಕೆಲವು ಪದಾರ್ಥಗಳಾಗಿದ್ದುವು. ಇನ್ನೂ ½ ಭಾಗದಷ್ಟು ವಸ್ತುಗಳು ಸಿಕ್ಕಬೇಕಾಗಿರುವುವು. ಪೋಲೀಸರು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಅಪರಾಧಿಗಳನ್ನು ಗುರಿಪಡಿಸಿದರು. ಅವರು ನಾಲ್ಕು ಮಂದಿಯೂ ಕಾರಾಗೃಹದಲ್ಲಿ ಇಡಲ್ಪಟ್ಟಿದ್ದರು. ವಿಚಾರಣೆ ನಡೆಯಬೇಕಾಗಿದ್ದಿತು. ನಡೆದಿದ್ದರೆ ಉಳಿದ ಪದಾರ್ಥಗಳೂ ಅವರ ಜತೆಯ ಕಳ್ಳರೂ ಗೊತ್ತಾಗುತ್ತಿದ್ದರೋ ಏನೋ. ಆದರೆ ಕಳೆದ ಭಾನುವಾರ ರಾತ್ರಿ ಈ ನಾಲ್ಕು ಜನರೂ ಕಾರಾಗೃಹದಿಂದ ತಪ್ಪಿಸಿಕೊಂಡುಹೋಗಿರುವರು! ಇಂಥ ಅಪಾಯಗಳು ಇದೇ ಕಾರಾಗೃಹದಲ್ಲಿ ಎಷ್ಟೋ ಸಲ ಹಿಂದೆ ನಡೆದಿದ್ದರೂ ಅದರ ಮೇಲ್ವಿಚಾರಣೆಯ ಉದ್ಯೋಗಿಗಳು ತಕ್ಕ ಎಚ್ಚರಿಕೆಯಿಲ್ಲದೆ ನಾಲ್ಕು ಮಂದಿಯನ್ನು ಒಂದೇ ವಾರ್ಡಿನಲ್ಲೇ ಕೂಡಿದ್ದುದೂ, ಓಡಿಹೋಗುವುದಕ್ಕೆ ಅವಕಾಶವನ್ನು ಕೊಟ್ಟುದೂ ಅವಿವೇಕವಾಗಿರುತ್ತದೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸ್ಥಳೀಯ ವಿಷಯಗಳು.

(ಕಳೆದ ವಾರದ ಶೇಷ.)

ಪ್ರಾ.—ಹೊನ್ನಾಳಿಯಲ್ಲಿ ಟರ್ನ್‌ಹಾಲು ಕಟ್ಟಲು ಪ್ರಜೆಗಳು ೨೦೦೦ ರೂ. ಗಳನ್ನು ಸೇರಿಸಿಟ್ಟಿರುವರು. ಸರ್ಕಾರದವರು ೫೦೦೦ ರೂ. ನ್ನು ದಯಪಾಲಿಸಬೇಕು.

ಉ.—ಅಪ್ಪಣೆಯಾಗಿದೆ.

ಪ್ರಾ.—ಸೊರಬದಲ್ಲೂ ಚಂದ್ರಗುತ್ತಿಯಲ್ಲೂ ಇರುವ ೩ ಪ್ರಸಿದ್ಧ ದೇವಸ್ಥಾನಗಳ ಚಂದ್ರಶಾಲೆಗಳನ್ನೂ, ರಥಗಳನ್ನೂ ಜೀರ್ಣೋದ್ಧಾರ ಮಾಡಿಸಬೇಕು.

ಉ.—ಡಿ|| ಕಮೀಷನರವರು ನೋಡಿ ಸರ್ಕಾರಕ್ಕೆ ಬರೆಯುತ್ತೇವೆಂದು ಹೇಳುತ್ತಾರೆ.

ಕಡೂರು ಡಿಸ್ಟ್ರಿಕ್ಟು.

ಪ್ರಾ.—ಕೊಪ್ಪದಲ್ಲೂ ನರಸಿಂಹರಾಜಪುರದಲ್ಲೂ ಸ್ಪೆ|| ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪಿಸಬೇಕು.

ಉ.—ಮಲ್ನಾಡ್ ಇಂ|| ಕಮಿಟಿ ವಿಚಾರಕ್ಕೆ ಬಂದಿದೆ.

ಪ್ರಾ.—ಕಡೂರಿಂದ ಚಿಕ್ಕಮಗಳೂರಿಗೆ ಲೋಹಮಾರ್ಗವನ್ನು ಹಾಕಿಸಲು ೪ ವರ್ಷಗಳಿಂದಲೂ ಸೆಸ್ಸು ವಸೂಲಾಗುತ್ತಿದೆ. ಸರ್ವೆ ಆಗಿದೆ. ನಾವೆ ೩ ಲಕ್ಷ ರೂ. ಗಳನ್ನು ಕೊಡಿಸಿಕೊಡುತ್ತೇವೆ. ಉಳಿದ ಹಣವನ್ನು ಸರ್ಕಾರದಿಂದ ಕೊಡಿಸಿ ಕೂಡಲೇ ಕೆಲಸಕ್ಕೆ ಆರಂಭಿಸಬೇಕು.

ಉ.—ಪ್ರಾಜೆಕ್ಟ್ ಎಸ್ಟಿಮೇಟಾಗಿದೆ. ಸರ್ಕಾರಕ್ಕೆ ಬರಲಿ. ಜಾಗ್ರತೆ ಮಾಡಿಸುತ್ತೇವೆ.

ಪ್ರಾ.—ತರೀಕೆರೆಯ ಬಾಲಿಕಾ ಪಾಠಶಾಲೆಗೆ ಪ್ರತ್ಯೇಕವಾಗಿ ಕಟ್ಟಡವನ್ನು ಮಾಡಿಸಬೇಕು.

ಉ.—ಪ್ರೋಗ್ರಾಮಿನಲ್ಲಿ ಸೇರಿಸುತ್ತೇವೆ.

ಪ್ರಾ.—ತರೀಕೆರೆಯ ಹಿಂದೂಸ್ಥಾನಿ ಸ್ಕೂಲನ್ನು ಆಂಗ್ಲೋ ಹಿಂದೂಸ್ಥಾನಿ ಸ್ಕೂಲನ್ನಾಗಿ ಮಾಡಬೇಕು.

ಉ.—ಶಿರಾ, ಮದ್ದಗಿರಿ ಈ ಕಡೆಗಳಲ್ಲಿ ಮಾಡಬೇಕೆಂದಿದೆ. ಆಗ್ಗೆ ಇಲ್ಲೂ ಮಾಡಲು ಯೋಚಿಸುತ್ತೇವೆ.

ಚಿತ್ರದುರ್ಗದ ಡಿಸ್ಟ್ರಿಕ್ಟು.

ಪ್ರಾ.—ದಾವಣಗೆರೆಯಲ್ಲಿ ಫಾರೆಸ್ಟ್ ಇಲಾಖೆಯಿಂದ ಒಂದು ಸಬಿದೆ ಕೋಠಿಯನ್ನು ಸ್ಥಾಪಿಸಬೇಕು.

ಉ.—ಬೆಂಗಳೂರಿನಲ್ಲಿ ಈ ಪ್ರಯತ್ನವನ್ನು ೨ ವರ್ಷಕಾಲ ಮಾಡಿಸಿ ನೋಡಿದುದರಲ್ಲಿ ಖರ್ಚು ಹೆಚ್ಚಾಯಿತು. ಅಗ್ಗವಾಗಿ ಮಾರಿಸಲಾಗುವುದಿಲ್ಲ. ಖಾಸಗಿ ಜನರೇ ಕೋಠಿಯಿಟ್ಟರೆ ತಕ್ಕ ಸಹಾಯವನ್ನು ಇಲಾಖೆಯವರು ಮಾಡಿಸಿಕೊಡುತ್ತಾರೆ.

ಪ್ರಾ.—ಹೊಳಲ್ಕೆರೆಯಲ್ಲಿ ಒಬ್ಬ ಸ್ಪೆಷಲ್ ರಿಜಿಸ್ಟ್ರಾರನ್ನು ನಿಯಮಿಸಬೇಕು.

ಉ.—೩ ವರ್ಷ ಕಾಲದಲ್ಲಿ ರಿಜಿಸ್ಟರಿಗೆ ಬರತಕ್ಕ ಪತ್ರಗಳೂ ಮತ್ತು ಫಂಡೂ ಸಹ ಕ್ಲ್ಪಪ್ತವಾಗಿರುವಷ್ಟು ಸಂಖ್ಯೆಗೆ ಸರಿಯಾಗಿ ಬರುತ್ತದೆಂದು ತೋರಿದರೆ ಇಡಿಸುತ್ತೇವೆ. ಈಗ ೨ ವರ್ಷಗಳಾಗಿವೆ. ಈ ವರ್ಷ ಸರಿಯಾದ ಸಂಖ್ಯೆ ಬಂದರೆ ಇಡಿಸಿಕೊಡುತ್ತೇವೆ.

ಪ್ರಾ.—ದಾವಣಗೆರೆಯಲ್ಲಿ ೧೬ ಸಾವಿರ ಜನಸಂಖ್ಯೆಯಿದೆ. ಪೋಲೀಸ್ ಜವಾನರು ೩೩ ಮಂದಿ, ಒಬ್ಬ ದಫೇದಾರರು, ಒಬ್ಬ ಸಬ್ ಇನ್ಸ್‌ಪೆಕ್ಟರು ಇದ್ದಾರೆ. ಇನ್ನೂ ೧೨ ಮಂದಿ ಕಾನ್ಸ್ಟೆಬಲುಗಳನ್ನೂ ಒಬ್ಬ ದಫೇದಾರರನ್ನೂ ಹೆಚ್ಚಿಸಿಕೊಡಬೇಕು.

ಉ.—ಬೆಂಗಳೂರು ಮೈಸೂರು ಪಟ್ಟಣಗಳಿಗೆ ೧೦೦೦ ಜನಸಂಖ್ಯೆಗೆ ೩ ಮಂದಿ ಪೋಲೀಸರಂತೆ ಸ್ಕೇಲನ್ನೇರ್ಪಡಿಸಿದೆ. ಕಳೆದ ಸೆನ್ಸಸ್ ಪ್ರಕಾರ ದಾವಣಗೆರೆಯಲ್ಲಿ ೧೦ ಸಾವಿರ ಜನಸಂಖ್ಯೆಯಿತ್ತು. ಈಗಣ ಸೆನ್ಸಸ್ಸಿನಲ್ಲಿ ಸಂಖ್ಯೆ ಹೆಚ್ಚಾಗಿರುವುದಾಗಿ ಕಂಡರೆ ಸ್ಕೇಲ್ ಪ್ರಕಾರ ಹೆಚ್ಚಿಸಿಕೊಡುತ್ತೇವೆ.

ಪ್ರಾ.—ದಾವಣಗೆರೆಯಲ್ಲಿ ಹೈಸ್ಕೂಲು ಕಟ್ಟಡವನ್ನು ಬೇಗನೆ ಕಟ್ಟಿಸಲು ಅಪ್ಪಣೆಮಾಡಬೇಕು.

ಉ.—ಸ್ಯಾಂಕ್ಷನ್ ಆಗಿದೆ. ಬೇಗನೆ ಮಾಡಿಕೊಡುತ್ತಾರೆ.

ಪ್ರಾ.—ದಾವಣಗೆರೆ ಹೈಸ್ಕೂಲಿಗೆ ಸೇರಿದಂತೆ ಒಂದು ಹಾಸ್ಟಲನ್ನು ಕಟ್ಟಿಸಿಕೊಡಬೇಕು.

ಉ.—ಸ್ಯಾಂಕ್ಷನ್ ಆಗಿದೆ. ತರದೂದು ಮಾಡುತ್ತೇವೆ.

ಪ್ರಾ.—ಹರಿಹರದಲ್ಲಿ ಒಂದು ಕೈಗಾರಿಕೆಯ ತರಗತಿಯನ್ನೇರ್ಪಡಿಸಬೇಕು.

ಉ.—ಸಂಸ್ಥಾನದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಹೆಚ್ಚಿಸಬೇಕೆಂಬುದು ಎಜ್ಯುಕೇಷನಲ್ ಮೆಮೋರಾಂಡಮ್ಮಿನಲ್ಲಿ ಪರ್ಯಾಲೋಚಿಸಲ್ಪಡುತ್ತಿದೆ.

ಪ್ರಾ.—ದಾವಣಗೆರೆಯಲ್ಲಿ ಗೋಣೀಚೀಲಗಳನ್ನೂ, ಹಗ್ಗದ ತಡಿ ಮೊದಲಾದವುಗಳನ್ನೂ ನಿರ್ಮಿಸುವ ಕರ್ಮಾಗಾರವನ್ನು ಸರ್ಕಾರದವರು ಸ್ಥಾಪಿಸಬೇಕು.

ಉ.—ಪ್ರಜೆಗಳೇ ಒಂದು ಕಂಪೆನಿಯನ್ನು ಏರ್ಪಡಿಸಿ ಮಾಡಬಹುದು.

ಪ್ರಾ.—ಮಾರೀಕಣಿವೆಯ ವಾಣೀವಿಲಾಸ ಸಾಗರದಿಂದ ಎತ್ತರವಾದ ಮಟ್ಟದಲ್ಲಿ ನಾಲೆಯನ್ನೇರ್ಪಡಿಸಿ, ಡಿಸ್ಟ್ರಿಕ್ಟಿನ ಇತರ ತಾಲ್ಲೂಕುಗಳಿಗೆ ತರೀಸಾಗುವಳಿಗೆ ನೀರನ್ನು ಒದಗಿಸಬೇಕು. ಮತ್ತು ಅಲ್ಲಿ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ಡಿಸ್ಟ್ರಿಕ್ಟಿನ ಯಂತ್ರಾಲಯಗಳಿಗೆಲ್ಲಾ ಒದಗಿಸಿಕೊಡಬೇಕು. ದಾವಣಗೆರೆಯೊಂದಕ್ಕೇ ೨೫ ಸಾವಿರ ಲೈಟುಗಳನ್ನು ತೆಗೆದುಕೊಳ್ಳುತ್ತೇವೆ.

ಉ.—ಅಲ್ಲಿಂದ ವಿದ್ಯುಚ್ಛಕ್ತಿ ಹುಟ್ಟಿಸಿ ದೂರಪ್ರದೇಶಗಳಿಗೆ ಸಾಗಿಸಿದರೆ ವೆಚ್ಚವು ಸ್ಟೀಮ್ ಪವರನ್ನು ಹುಟ್ಟಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಬೀಳುತ್ತದೆ. ವೆಚ್ಚವು ಬಹಳ ಹೆಚ್ಚಾಗುವುದೆಂದು ತಿಳಿದುದರ ಮೇಲೆಯೇ ಆಲೋಚನೆಯನ್ನು ಬಿಟ್ಟುಬಿಟ್ಟೆವು.

ಪ್ರಾ.—ಹರಿಹರದ ಎಲ್ಲಾ ಭಾಗಗಳಿಗೂ ನಲ್ಲಿಯಿಂದ ನೀರನ್ನು ಒದಗಿಸಲಿಕ್ಕಾಗಿ ಎತ್ತರದಲ್ಲಿ ಒಂದು ಕೆರೆಯನ್ನು ಕಟ್ಟಿಸಬೇಕು.

ಉ.—ಹಣ ಒದಗುವುದು ಕಷ್ಟ. ಮ್ಯುನಿಸಿಪಾಲಿಟಿಯವರೂ ಸ್ವಲ್ಪ ಭಾಗ ಹಣವೊದಗಿಸಿದರೆ ಆಗಬಹುದು. ಸರ್ಕಾರದಿಂದಲೇ ಮಾಡಿಸಲು ಸಾಧ್ಯವಲ್ಲ.

ಪ್ರಾ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಎಲ್ಲೆಲ್ಲಿ ಹೊಸಕೆರೆಗಳನ್ನು ಕಟ್ಟಿಸಬಹುದೆಂಬುದನ್ನು ಸರ್ವೆಮಾಡಿಸಿ ಒಂದು ರಿಜಿಸ್ಟರನ್ನು ಏರ್ಪಡಿಸಬೇಕು.

ಉ.—ಕರ್ಪಿ ಸಾಹೇಬರ ಕಾಲದಲ್ಲೇ ಇಂಥ ಸರ್ವೆಯು ಸರ್ವತ್ರ ನಡೆಯಿಸಲ್ಪಟ್ಟಿದೆ. ಹಣದ ಕೊರತೆಯಿಂದ ಕಾರ್ಯಾರಂಭಕ್ಕೆ ಯತ್ನವಿಲ್ಲ. ನಿಮಗೆ ಪಟ್ಟಿ ಬೇಕಾಗಿದ್ದರೆ ಚೀಫ್ ಇಂಜನಿಯರಿಗೆ ಬರೆದುಕೊಳ್ಳಿ.

ಪ್ರಾ.—ಚಿತ್ರದುರ್ಗದ ಊರಿನ ಸುತ್ತಲೂ ಇರುವ ಕಂದಕವನ್ನು ಮುಚ್ಚಿದರೆ ಅನಾರೋಗ್ಯ ತಪ್ಪುತ್ತದೆ. ಆ ಕೆಲಸವನ್ನು ಮಾಡಿಸಲು ಮ್ಯುನಿಸಿಪಾಲಿಟಿಗೆ ಧನಚೈತನ್ಯವಿಲ್ಲ.

ಉ.—ಮ್ಯುನಿಸಿಪಾಲಿಟಿಯವರು ಡಿಸ್ಟ್ರಿಕ್ಟ್ ಎ|| ಇಂಜನಿಯರಿಂದ ಒಂದು ಪ್ರಾಜೆಕ್ಟ್ ಮಾಡಿಸಿ ಕಳಿಸಿದರೆ ಯೋಚಿಸುತ್ತೇವೆ.

ಪ್ರಾ.—ಹರಿಹರದ ಸಬ್ ತಾಲ್ಲೂಕಿನ ದೇವರ ಬೆಳಕೆರೆಯನ್ನು ಬೇಗನೆ ಕಟ್ಟಿಸಬೇಕು.

ಉ.—೩ ಲಕ್ಷ ರೂ. ಅಂದಾಜುಮಾಡಿ ಕಳಿಸಿದ್ದಾರೆ. ಸ್ಯಾಂಕ್ಷನ್ ಆಗಿದೆ. ಅದಕ್ಕಾಗಿ ಬ್ರಿಟಿಷ್ ಇಲಾಖೆಯವರೊಡನೆ ಕರಸ್ಪಾಂಡೆನ್ಸು ನಡೆಯಿಸಬೇಕಾಗಿ ಅದು ನಡೆಯುತ್ತಿದೆ. ರೆವಿನ್ಯೂ ಇಲಾಖೆಯವರನ್ನು ವಿಚಾರಿಸಬೇಕಾಗಿದೆ. ಜಾಗ್ರತೆಪಡಿಸಲು ಚೀಫ್ ಇಂಜನಿಯರು ಡಿ|| ಕಮೀಷನರಿಗೆ ಬರೆದಿದ್ದಾರೆ.

ಪ್ರಾ.—ದಾವಣಗೆರೆ ತಾ|| ಸಾಗಲಿಹಳ್ಳಕ್ಕೆ ಸೇತುವನ್ನು ಕಟ್ಟಿಸಬೇಕು.

ಉ.—ಡಿಸ್ಟ್ರಿಕ್ಟ್ ಬೋರ್ಡಿನವರು ನಡೆಯಿಸತಕ್ಕುದು.

ಪ್ರಾ.—ಹರಿಹರದ ಶ್ರೀಹರಿಹರೇಶ್ವರ ದೇವಾಲಯದ ವರಮಾನವು ಅಲ್ಲಿಯ ವೆಚ್ಚಕ್ಕೆ ಸಾಲದು. ಸರ್ಕಾರಕ್ಕೆ ಸೇರಿಸಿಕೊಂಡಿರುವ ಇನಾಂ ಗ್ರಾಮವನ್ನು ಮರಳಿ ಕೊಟ್ಟು ವರಮಾನ ಹೆಚ್ಚಿಸಿಕೊಡಬೇಕು.

ಉ.—ಆ ಸೊತ್ತನ್ನು ಸರ್ಕಾರಿ ಸಾಲಕ್ಕೆ ಸೇರಿಸಿಕೊಂಡಿದೆ. ಇನ್ನು ಮೇಲೆ ಹೆಚ್ಚು ಬಡ್ಡಿ ಸಿಕ್ಕುತ್ತದೆ.

ಹಾಸನ ಡಿಸ್ಟ್ರಿಕ್ಟು.

ಪ್ರಾ.—ಹೊಳೇನರಸೀಪುರದಲ್ಲಿರುವ ಬಾಲಿಕಾ ಶಾಲೆಯನ್ನು ಸರ್ಕಾರದ ವಶಗೊಳಿಸಿಕೊಳ್ಳಬೇಕು.

ಉ.—ಯೋಚನೆಯಲ್ಲಿದೆ.

ಪ್ರಾ.—ಹಾಸನದ ಊರಿನ ಆರೋಗ್ಯವನ್ನು [illegible] ಕೆಲಸಗಳಿಗಾಗಿ ಸರ್ಕಾರದವರು ವರ್ಷಕ್ಕೆ ೨೦ ಸಾವಿರ ರೂ. ಗಳಂತೆ [illegible]ವನ್ನು ಕೊಡಬೇಕು.

ಉ.—ಮೊದಲು ಪ್ರಾಜೆಕ್ಟ್‌ಮಾಡಿಸಿ, ನೋಡೋಣ.

ಪ್ರಾ.—ಹೇಮಾವತೀ ಮತ್ತು ಕಾವೇರೀ ನದಿಗಳ ಹೊಸಸೇತುಗಳ ಮೇಲೆ ಎತ್ತುತ್ತಿರುವ ಸುಂಕವನ್ನು ತಪ್ಪಿಸಬೇಕು.

ಉ.—ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿಕೊಳ್ಳಬಹುದು.

ಪ್ರಾ.—ಅರಕಲಗೂಡಿಗೆ ಸಿಹಿನೀರನ್ನು ಒದಗಿಸುವ ಏರ್ಪಾಟನ್ನು ಮಾಡಬೇಕು.

ಉ.—ಸಣ್ಣ ಮ್ಯುನಿಸಿಪಾಲಿಟಿಗಳು ಬಾವಿಗಳನ್ನು ತೋಡಿಸಿಕೊಳ್ಳುವುದೇ ಉತ್ತಮ. ಡಿ|| ಕಮೀಷನರು ಎ. ಇಂಜನಿಯರನ್ನು ಕರೆದುಕೊಂಡು ಬಂದು ವಿಚಾರಮಾಡುತ್ತಾರೆ.

ಪ್ರಾ.—ಚೆನ್ನರಾಯಪಟ್ಟಣದಲ್ಲಿ ಒಂದು ಹೊಸ ಛತ್ರವನ್ನು ಕಟ್ಟಿಸಬೇಕು. ಅದಕ್ಕಾಗಿ ೩೦೦೦ ರೂ. ಗಳು ಕೂಡಿವೆ.

ಉ.—ಪ್ಲಾನಿಗೂ ಎಸ್ಟಿಮೇಟಿಗೂ ಹೇಳಿದೆ. ಬಂದಕೂಡಲೇ ಕಟ್ಟಿಸಲು ಪ್ರಯತ್ನಿಸುತ್ತೇವೆ.

ಪ್ರಾ.—ಆಲೂರಿನಲ್ಲಿ ಒಂದು ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಆಫೀಸನ್ನು ಇಡಿಸಬೇಕು.

ಉ.—ಪತ್ರಗಳ ಮತ್ತು ಫಂಡಿನ ನಂಬರು ಸರಿಯಾಗಿಬಂದರೆ ಇಡಿಸಿಕೊಡುತ್ತೇವೆ.

ಪ್ರಾ.—ಗೊರೂರಿನ ಶ್ರೀಯೋಗಾನರಸಿಂಹಸ್ವಾಮಿ ದೇವಾಲಯದ ಗೋಡೆಗಳು ಬಿದ್ದುಕೊಳ್ಳದಂತೆ ಮಾಡಲು ನದಿ ಮಗ್ಗುಲಿಗೆ ಕಟ್ಟೆಯನ್ನು ಕಟ್ಟಿಸಬೇಕು.

ಉ.—ಸೇತುವಿಗೆ ಸಂಬಂಧಪಟ್ಟ ಕೆಲಸದ ಜತೆಯಲ್ಲೇ ಇದನ್ನು ಮಾಡುತ್ತಾರೆ.

ಪ್ರಾ.—ಬೇಲೂರು ಕೋಟೆಯ ಸುತ್ತಣಕಂದಕವನ್ನು ಮುಚ್ಚಿಸಬೇಕು.

ಉ.—ಮಲ್ನಾಡ್ ಇ|| ಕಮಿಟಿಗೆ ಬರಲಿ.

ಪ್ರಾ.—ನೊಣವಿನಕೆರೆ, ದಿಡಗ, ಹಿರೀಸಾವೆಗಳ ಮೇಲಿಂದ ತಿಪಟೂರಿಗೆ ಒಂದು ಮಾರ್ಗವನ್ನು ಹಾಕಿಸಬೇಕು.

ಉ.—ಡಿ|| ಬೋರ್ಡಿನಲ್ಲಿ ಮತ್ತೆ ಚರ್ಚಿತವಾಗಿ ಬರಲಿ. ಇರುವರೆಗೂ ಆಗಿರುವ ತೀರ್ಮಾನವೇನೂ ಸರ್ಕಾರಕ್ಕೆ ಬಂದಿಲ್ಲ.

ಪ್ರಾ.—ಸಕಲೇಶಪುರದ ಸಕಲೇಶ್ವರ ದೇವಾಲಯದ ಜೀರ್ಣೋದ್ಧಾರವನ್ನು ಬೇಗನೆ ಮಾಡದಿದ್ದರೆ ಅದು ಬಿದ್ದುಹೋಗುತ್ತದೆ.

ಉ.—ಪೂರ್ವದಲ್ಲಿ ಬಂದ ಎಸ್ಟಿಮೇಟು ಹೆಚ್ಚು ಕಡಿಮೆಯಾಗಿತ್ತು. ಈಗ ರಿವೈಜ್ ಎಸ್ಟಿಮೇಟಿಗಾಗಿ ಕಳುಹಿಸಿದೆ.

ಪ್ರಾ.—ಪ್ರಸಿದ್ಧವಾದ ಬೇಲೂರು ಚೆನ್ನಕೇಶವ ದೇವಾಲಯವನ್ನು ಜೀರ್ಣೋದ್ಧಾರ ಮಾಡಲು ಸಾಲಿಯಾನಾ ೩೦೦೦ ರೂ. ಗಳನ್ನು ಒದಗಿಸಿಕೊಡಬೇಕು.

ಉ.—ಜೀರ್ಣೋದ್ಧಾರವಾಡಬೇಕೆಂಬ ಉದ್ದೇಶವು ಸರ್ಕಾರಕ್ಕೂ ಇದೆ. ಸೂ|| ಇಂಜನಿಯರು ಹೋಗಿ ನೋಡಿ ರಿವೈಜ್ ಎಸ್ಟಿಮೇಟನ್ನು ಕಳುಹಿಸಿದ್ದಾರೆ, ಜಾಗ್ರತೆ ಮಾಡುತ್ತೇವೆ.

ಪ್ರಾ.—ಹೊಳೆನರಸೀಪುರದಲ್ಲಿರುವ ಉತ್ತರಾದಿಮಠದ ಕಟ್ಟಡದ ಮೇಲ್ವಿಚಾರಣೆಗೆ ಪ್ರತಿ ವರ್ಷವೂ ೬೩೧೨ ರೂ. ನಗದಿ ಆದಾಯವೂ ಒಂದು ಮೈನರ್ ಇನಾಂ ಗ್ರಾಮವೂ ಇವೆ. ಮಠದ ಅಧಿಕಾರಿಗಳ ಅಜಾಗರೂಕತೆಯಿಂದ ಮಠವು ಬಹಳ ಶಿಥಿಲವಾಗಿದೆ. ಪ್ರತಿ ವರ್ಷದ ಆದಾಯದಲ್ಲೂ ಇದರ ರಿಪೇರಿಗೆ ಸ್ವಲ್ಪ ಭಾಗವನ್ನುಪಯೋಗಿಸುವಂತೆ ಮಾಡಬೇಕು.

ಉ.—ಈ ವಿಷಯದಲ್ಲಿ ಡಿ|| ಕಮೀಷನರು ಮಠದ ಅಧಿಕಾರಿಗಳಿಗೆ ಬರೆದು ತಿಳಿಸುತ್ತಾರೆ.

ತುಮಕೂರು ಡಿಸ್ಟ್ರಿಕ್ಟು.

ಪ್ರಾ.—ಮದ್ದಗಿರಿಯಲ್ಲಿ ಒಂದು ಟವುನ್ ಪೋಲೀಸ್‌ಸ್ಟೇಷನ್ ಆಗಬೇಕು.

ಉ.—ಪ್ರಜಾಸಂಖ್ಯೆ ಹೆಚ್ಚಲಿ.

ಪ್ರಾ.—ತಿಪಟೂರಿಗೆ ಒಂದು ಹೆರಿಗೆ ಆಸ್ಪತ್ರೆ ಆಗಬೇಕು.

ಉ.—ಮ್ಯುನಿಸಿಪಾಲಿಟಿಯಿಂದ ಪ್ರಪೋಜ್ ಮಾಡಿ ಕಳುಹಿಸಿ.

ಪ್ರಾ.—ತಿಪಟೂರಿಗೆ ಉತ್ತಮವಾದ ಚರಂಡಿಯೇರ್ಪಾಟಾಗಬೇಕು.

ಉ.—ವಾಟರ್‌ಸಪ್ಲೈ ಆಗುವುದಕ್ಕೆ ಮುಂಚೆ ಚರಂಡಿಯೇರ್ಪಾಟು ಮಾಡುವುದು ಪ್ರಯೋಜನಕರವಲ್ಲ. ವಾಟರ್‌ಸಪ್ಲೈ ಪ್ರಾಜೆಕ್ಟು ಇನ್ನೂ ಪೂರ್ತಿಯಾಗಿಲ್ಲವೆಂದು ಚೀಫ್ ಇಂಜನಿಯರು ಹೇಳುತ್ತಾರೆ.

ಪ್ರಾ.—ಶಿರಾಕೆರೆಗಳಿಗೆ ನೀರುಬರುವ ಕಾಲ್ವೆಯನ್ನು ಸರಿಪಡಿಸಿ ನೀರು ತುಂಬುವಂತೆ ಮಾಡಬೇಕು.

ಉ.—ಚೀಫ್ ಇಂಜನಿಯರು ಎ|| ಇಂಜನಿಯರಿಗೆ ಅಪ್ಪಣೆಮಾಡಿದ್ದಾರೆ.

ಪ್ರಾ.—ಗುಬ್ಬಿ ನಿಟ್ಟೂರು ಕಡಬ ಚಟ್ನಹಳ್ಳಿಗಳ ಅಮಾನಿಕೆರೆಗಳನ್ನು ಸೇರಿಸಿ ಒಂದು ಪಿ. ಡಬ್ಲ್ಯು. ಸಬ್ ಡಿವಿಜನ್ನಾಗಿ ಮಾಡಿ ಅವುಗಳ ಹತೋಟಿಯನ್ನು ರೆ|| ಇಲಾಖೆಯಿಂದ ಇರಿಗೇಷನ್ ಇಲಾಖೆಗೆ ವಹಿಸಬೇಕು.

ಉ.—ಇರಿಗೇಷನ್ ರೀ ಆರ್ಗನೇಷನ್ನಿನಲ್ಲಿ ವಿಚಾರಮಾಡಲಾಗುತ್ತದೆ.

ಪ್ರಾ.—ಕುಣಿಗಲ್ ತಾ|| ಮಾರನಹಳ್ಳಿ ಬಳಿಯ ಹಳ್ಳಕ್ಕೆ ಅಣೆಕಟ್ಟು ಹಾಕಿಸಬೇಕು.

ಉ.—ಇಂಜನಿಯರ್ ಇಲಾಖೆಯವರು ವಿಚಾರಮಾಡುತ್ತಾರೆ.

ಪ್ರಾ.—ಕುಣಿಗಲು ಕೆರೆ ಹತೋಟಿಯನ್ನು ಇರಿಗೇಷನ್ ಶಾಖೆಗೆ ವಹಿಸಬೇಕು.

ಉ.—ಗುಬ್ಬಿ ಕೆರೆಗಳ ಉತ್ತರವೇ ಇದಕ್ಕೂ.

ಪ್ರಾ.—ಗುಬ್ಬಿ ದನಗಳ ಉಪಯೋಗಕ್ಕಾಗಿ ಗುಬ್ಬಿ ಅಮಾನಿಕೆರೆಯ ಅಂಗಳವನ್ನು ವರ್ಷಕಾಲವೂ ಅಥವಾ ಅಮೃತಮಹಲ್ ದನಗಳಿಗೆ ಮೆಯ್ಯುವುದಕ್ಕೆ ಕೊಟ್ಟಿರುವ ಕಾಲವನ್ನು ಗುಬ್ಬಿ ದನಗಳು ಮೆಯ್ಯುವುದಕ್ಕೆ ಕೊಡಿಸಬೇಕು.

ಉ.—ವಿಚಾರಮಾಡುತ್ತೇವೆ.

ಪ್ರಾ.—ಮದ್ದಗಿರಿಗೂ ತಿಪಟೂರಿಗೂ ಒಬ್ಬೊಬ್ಬ ಅ|| ಸರ್ಜನರನ್ನು ಏರ್ಪಡಿಸಿಕೊಡಬೇಕು.

ಉ.—ಸದ್ಯಕ್ಕೆ ಅವಶ್ಯಕವಲ್ಲ. ಜನಸಂಖ್ಯೆ ಹೆಚ್ಚಾಗಿಲ್ಲ.

ಪ್ರಾ.—ಕರಡಿಕೆರೆಯ ಕಟ್ಟೆ ಕಾಲ್ವೆಯ ಕೆಲಸವು ೨೦ ವರ್ಷಗಳಿಂದ ನಡೆಯದೆ ನಿಂತಿದೆ. ಕೂಡಲೇ ಮಾಡಿಸಿಕೊಡಬೇಕು.

ಉ.—ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ. ರೇಟಿನ ವಿಷಯದಲ್ಲಿ ಚರ್ಚೆ ಆಗುತ್ತಿದೆ. ಜಾಗ್ರತೆ ಮಾಡುತ್ತಾರೆ.

ಪ್ರಾ.—ಚಿಕ್ಕನಾಯಕನಹಳ್ಳಿ ತಾ|| ಸಿಂಗನಹಳ್ಳಿ ಗ್ರಾಮದಬಳಿಯ ಹಳ್ಳಕ್ಕೆ ಹರಿಯುವ ನೀರನ್ನು ತಡೆದು ಕೆರೆ ಕಟ್ಟಿಸಬೇಕು.

ಉ.—ಡಿ|| ಕಮೀಷನರು ಚೀಫ್ ಇಂಜನಿಯರಿಗೆ ಬರೆದು ಸಾಧ್ಯವೆ ಎಂಬ ವಿಷಯವನ್ನು ತಿಳಿಯುತ್ತಾರೆ.

ಸಶೇಷ.

ಹರಾಜು ನೋಟೀಸು.

ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆಯಲ್ಲಿರುವ ಜಗ್ಗುಲಾಲಾ ಧರ್ಮಶಾಲಾಕ್ಕೆ ಸೇರಿದ ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡ ಮೂರು [illegible]ಸ್ತಿನ ತಜ್ವುಪೇಪ್ ಮಹಡಿಮನೆಯು 1920ನೇ [illegible] ನವಂಬರ್ ತಾರೀಖು 20ನೇ ಶನಿವಾರ ಪ್ರಾತಃ 8 ಘಂಟೆಗೆ ಸ್ವತ್ತಿನ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ. ಇಷ್ಟವುಳ್ಳವರು ಹಡದರಖಾಸ್ತು ಮೂಲಕ ಸ್ವತ್ತನ್ನು ಪಡೆಯಬಹುದು. ಹರಾಜು ಕೈದಾದಕೂಡಲೆ ಆಖೈರು ಬೀಟುದಾರನು ಹರಾಜು ಮೊಬಲಗು ಪೈಕಿ ನಾಲ್ಕನೇ ಒಂದು ಭಾಗದ ಮೊಬಲಗನ್ನು ಹಾಜರು ಪಡಿಸತಕ್ಕದ್ದು. ಬಾಕಿ ಉಳಿಯುವ ಮೊಬಲಗನ್ನು 15 ದಿವಸಗಳ ಒಳಗಾಗಿ ಹರಾಜು ಮಾಡಬೇಕು. ಹಾಗೆ ಮೇಲ್ಕಂಡ ಹರಾಜು ಮೊಬಲಗು ಪೈಕಿ ನಾಲ್ಕನೇ ಒಂದುಭಾಗದ ಮೊಬಲಗನ್ನಾಗಲಿ ಅಥವಾ ಬಾಕಿ ಉಳಿಯುವ ಮೊಬಲಗನ್ನು 15 ದಿವಸದಲ್ಲಿ ಪಾವತಿ ಮಾಡಲು ತಪ್ಪಿದಲ್ಲಿ ಡಿಪಾಜಟ್ಟು ಮೊಬಲಗು ಕಳೆದುಕೊಳ್ಳುತ್ತಾನಲ್ಲದೆ ದುಸರಾ ಹರಾಜು ಮಾಡಿಸಿದ ಕಾಲದಲ್ಲಿ ಸಂಭವಿಸುವ ನಷ್ಟಕ್ಕೂ ಸಹ ಮೊದಲಿನ ಬೀಟ್‌ದಾರನನ್ನು ಗುರಿಪಡಿಸಲಾಗುತ್ತೆ.

ಹರಾಜು ಮಂಜೂರಾತಿಯು ಗವರ್ನಮೆಂಟಿನವರ ಅಧಿಕಾರಕ್ಕೆ ಒಳಪಟ್ಟಿರುತ್ತೆ. ಹರಾಜು ಖಾಯಂ ಆದನಂತರ ಇದಕ್ಕೆ ತಗಲಬಹುದಾದ ರಿಜಿಸ್ಟ್ರೇಷನ್ ವಗೈರೆ ಖರ್ಚುಗಳನ್ನೆಲ್ಲಾ ಬೀಟ್‌ದಾರನೆ ವಹಿಸತಕ್ಕದ್ದಾಗಿರುತ್ತೆ.

ಷೆಡ್ಯೂಲ್.—ಪೂರ್ವಕ್ಕೆ-ಬೂದುಗುಂಟೆ ಲಕ್ಷ್ಮಣಶೆಟ್ಟರವರ ಛತ್ರ. ಪಶ್ಚಿಮಕ್ಕೆ-ಹೈರೋಡು. ದಕ್ಷಿಣಕ್ಕೆ-ಬೂದುಗುಂಟೆ ಲಕ್ಷ್ಮಣಶೆಟ್ಟರವರ ಮನೆ. ಉತ್ತರಕ್ಕೆ-ಕನ್ಸರ್ವೆನ್ಸಿ ಗಲ್ಲಿ. (ಡೋರ್ ನಂ. 661-671.)

B. Basavaradhya,
City Magistrate & President,
Jaggulala Dharmashala Committe,
MYSORE

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಲಮ್ಸು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ ಕ್ರಿಕಲೆಟಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಲಮ್ಸು (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

8 ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಪದ್ಯಾತ್ಮಕ ಶ್ರೀ ಶರಣ ಬಸವೇಶ್ವರ ಪುರಾಣ. ಪದ್ಯಾತ್ಮಕ

ಮಹಾಶಯರೆ ! ಈ ಶರಣ ಬಸವೇಶ್ವರನೆಂಬ ಭಕ್ತಶಿರೋಮಣಿಯು ಶ್ರೀಮದ್ವೀರಶೈವಮತ್ಕರಾದ ಸಾಲೋಕ್ಯ ವಂಶದಲ್ಲಿ ಜನಿಸಿ ಚಿಕ್ಕತನದಲ್ಲಿಯೇ ಭಕ್ತಿಯಲ್ಲಿ ಧುರೀಣರಾಗಿ ಅನೇಕ ಮಹತ್ಕಾತಿಶಯಗಳನ್ನು ತೋರಿಸಿ ಶಿವೈಕ್ಯರಾಗಿರುವರು. ಈ ಮಹಾಮಹಿಮರ ಜೀವಿತ ಚರಿತ್ರೆಯು ಪೂರ್ಣವಾಗಿರದಕಾರಣ, ಎಷ್ಟೋ ಜನ ವೀರಶೈವರು ಪೂರ್ಣವಾಗಿ ರಚಿಸಿ ಪ್ರಸಿದ್ಧ ಪಡಿಸಬೇಕೆಂದು ಸೂಚಿಸಿದ ಸೂಚನೆಯಂತೆ ಕಲ್ಬುರ್ಗಿ ಮೊದಲಾದ ಸ್ಥಲಗಳಲ್ಲಿ ಶರಣ ಬಸವೇಶ್ವರನನ್ನು ನೋಡಿದ ೮೦-೯೦ ವರ್ಷದ ವಯಸ್ಸಿನ ವೃದ್ಧರಿಂದ ಅವರ ಜನನದಾರಭ್ಯವಾಗಿಯೂ ಮಾಡಿದ ಮಹತ್ಕಾತಿಶಯಗಳನ್ನೆಲ್ಲಾ ತಿಳಿದು ರಚಿಸಿರುತ್ತದೆ. ಈ ಶರಣರು ಮಾಡಿದ ಅತ್ಯದ್ಭುತ ಲೀಲೆಗಳನ್ನು ಪೂರ್ಣ ಓದಿದ ಹೊರತು ತಿಳಿಯಲಾರದು ಅತಿ ತ್ವರೆಮಾಡಿರಿ.

ಶ್ರೀ ಶರಣಬಸವೇಶ್ವರಪುರಾಣ	ಕ್ರಯ ೧ ಕ್ಕೆ	೫—೬—೦
ವೀರಶೈವಸಭಾಕಂಠಮಾಲಾ	,,	೦—೨—೦
ಬಾಲಿಕಾಗೀತ	,,	೦—೨—೦
ನವಮುಗ್ಧರಕೀರ್ತನ ತರಂಗಿಣಿ	,,	೦—೧೨—೦
ಶ್ರೀ ಶರಣಬಸವೇಶ್ವರ ಮಹಿಮಾದರ್ಶ	,,	೦—೦—೬

ಇವುಗಳಿಗೆಲ್ಲಾ ಅಂಚೆವೆಚ್ಚ ಬೇರೆ.

ವಿಳಾಸ—ಗುರುಲಿಂಗಪ್ಪಾ ಸಿದ್ದಪ್ಪಾ ಶಡಕಲ್ಲು,
50 ಸಾ|| ಮಹಾಗಾಂವ್ ಜಿಲ್ಲಾ ಗುಲ್ಬರ್ಗಾ.

ಐದುವರ್ಷದ ಭವಿಷ್ಯತ್ಫಲ ಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದ ವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತ ನಿರ್ಣಯ, ವಿವಾಹಾದಿ ಮುಹೂರ್ತ ಮೇಘೋತ್ಪತ್ತಿ ವಿಚಾರ, ರೋಹಿಣಿ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರ ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	1—12—0.
12 ಕ್ಕೆ	18—0—0.

33

ಈ ನಕ್ಷೆಯಲ್ಲಿ ಕಾಣುವ ಫೌಂಟೆನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಬಹು ಅನುಕೂಲ. ಬಹುಮಾನ ಸಹಿತ ಕ್ರಯ ಪೆನಾ 1 ಕ್ಕೆ ರೂ. 1—8—0.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂಹಾಕಿದರೆ ತಲೆದಿಂಬಾಗುವುದು ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ.

ಕ್ರಯ 1 ಕ್ಕೆ ರೂ. 1-0-0.

ಫೋಟೋ ಉಂಗರ.

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದಂಥ ಗಿಲೀಟು ಮಾಡಿರುವದು. ಇದರ ಮಧ್ಯದಲ್ಲಿ ಒಂದು ಕನ್ನಡಿ ಇರುವುದು. ಅದರಲ್ಲಿ ನೋಡಿದರೆ, ಶಿವ, ಕೃಷ್ಣ ಮೊದಲಾದವರು ಕಾಣುವರು ನೋಡಲು ಬಹು ರಮ್ಯವಾಗಿರುವುದು. ಬಣ್ಣ ಕೆಡದು, ಕೈಯಲ್ಲಿ ಹಾಕಿಕೊಳ್ಳಲು ಬಹು ಚೆನ್ನಾಗಿರುವದು.

ಕ್ರಯ 1 ಕ್ಕೆ ರೂ. 0—8—0.

ಬೆಸ್ಟ್ ಪೇಟೆಂಟ್ ಲೀವರ್ ವಾಚ್

4 ವರುಷಗಳ ಗ್ಯಾರಂಟಿ

ಈ ಗಡಿಯಾರವು ಸೀಮೆಯಲ್ಲಿ ಬಹು ದೃಢವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ನೋಟಕ್ಕೆ ಗಂಭೀರವಾಗಿಯೂ, ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿದೆ. ಗಂಟೆ ಸರಿಯಾಗಿ ತೋರಿಸುವದು. 2.3 ರೂಪಾಯಿನ ಬೊಂಬೆ ಆಟದ ಗಡಿಯಾರಗಳು ತರಿಸಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿರಿ. ಗಡಿಯಾರ 1 ಕ್ಕೆ ರೂ 4.8.0.

ದರ್ಬಾರ್ ಸೋಪು.

DURBAR
DURBAR

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮಡುವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.
ವಿಲಾಯಿತಿ ಕೇಶನಾಶಿನಿ ಬುಕ್ಕಿ ಡಬ್ಬಿ 1 ಕ್ಕೆ	0—8—0.

ವಿಳಾಸ—ನೈರಂ ಅಂಡ್ ಕೊ,
3 ಇರುಳಪ್ಪನಬೀದಿ, ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

33

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಅಕ್ಟಿನಂತೆ ರಿಜಸ್ಟರ ಮಾಡಲ್ಪಟ್ಟ 50

ಅರ್ಕಶಫಾ ಅಥವಾ ಆರೋಗ್ಯಬಿಂದು



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧-೫-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದುವು ಮತ್ತು ಸನ್ ೧೯೧೮ ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲ್ಯೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದುವು. ಅಂತು ಈವರೆವಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ. ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಅದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ, ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷದವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡಕರೋಗ, ಪಾಂಡುರೋಗ, ಗುಲ್ಮರೋಗ, ಮಳರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲ್ಯೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲೆ, ಮೈಶೂಲೆ, ಅರದಲೆಶೂಲೆ, ನಡುಶೂಲೆ, ವಾರಶೂಲೆ, ರೇಶ್ಮೆಜಿಡ್ಡು, ಗುದವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲೆ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರದಿ, ಮುಟ್ಟಿನದೋಷ, ಹೊಟ್ಟೆದೊಡ್ಡದಾಗೋಣ, ಮೈಕೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡುಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಶಾಲುಶೊಲ ಬಾಟಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ಕೂಕದ ಬಾಟಲಿ ಒಂದಕ್ಕೆ ಎಂಟುಆಣೆ. ವಿ ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಷನ್ ಕೊಡುತ್ತೇವೆ, ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದುಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸ್ ಶಹಪೂರ, ಬೆಳಗಾಂವ.

೧೯೨೦ ನೆಯ ಇಸವಿ ನವಂಬರ್ ತಾ|| ೧೪ ರಿಂದ ೧೯೨೦ ನೆಯ ನವಂಬರ್ ತಾ|| ೨೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಕಾರ್ತೀಕ ಶುದ್ಧ ಚೌತಿಯಿಂದ ಕಾರ್ತೀಕ ಶುದ್ಧ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕು-ವ್ಯ ಮಾಸ
14	ಭಾನು	ಚೌತಿ	50-4	ಮೂಲ	30-0	30
15	[1]ಸೋಮ	ಪಂಚ	55-33	ಪೂಷಾ	36-30	1
16	ಮಂಗಳ	ಷಷ್ಠಿ	60	ಉಷಾ	43-7	2
17	ಬುಧ	ಷಷ್ಠಿ	0-55	ಶ್ರವ	49-14	3
18	[2]ಗುರು	ಸಪ್ತ	5-37	ಧನಿ	54-48	4
19	ಶುಕ್ರ	ಅಷ್ಟ	9-27	ಶತ	59-10	5
20	ಶನಿ	ನವ	12-6	ಪೂಭಾ	60	6

(1) ಕಾರ್ತೀಕ ಸೋಮವಾರ. (2) ಮೇಲುಕೋಟೆಯಲ್ಲಿ ರಾಜಮುಡೀ ಉತ್ಸವ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಶೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತ್ರಿಕೆಯಂಸದಾಪುರಿಗೆ ಗೋಕಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩. ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ನವಂಬರ್ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೪೭

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

44

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇವರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶತಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಶತಕಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
ಚಾರುಶೀಲೆಚರಿತ್ರೆ	೦—೯—೦
ಪಂಚಾಂಗ	೦—೮—೦

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು ! ಯಾವುದೊಂದು ಖರ್ಚಿಲ್ಲದೆ
112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

9 ವೈದ್ಯವಿದ್ಯ

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೇಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಳೆಯಬಹುದು. ಗಂಡಸರದು ಚೀಲ 1ಕ್ಕೆ 1-4-0 ಹೆಂಗಸರದು ಚೀಲ 1ಕ್ಕೆ 3-4-0.

9 ವಿಳಾಸ:—ಎಸ್. ಪಾಲ್ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ತುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 39

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯೇಕ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೊಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿಸಹಿತ ಗಡಿಯಾರ 1ಕ್ಕೆ 4.8.0

ಲೂಸ್‌ಕಿಲ್ಲರ್.

9 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ರಕ್ತಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 7

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಂಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ನವಂಬರ್ ತಾ|| ೨೧ನೆಯ ಭಾನುವಾರ.

ಮುಷ್ಕರ ರೋಗ.

ಯುದ್ಧವು ಶಾಂತವಾದರೂ ಪ್ರಪಂಚದಲ್ಲಿ ಶಾಂತಿಯುಂಟಾಗಿಲ್ಲ. ಯೂರೋಪು ಖಂಡದ ಪ್ರತಿಯೊಂದು ದೇಶದಲ್ಲೂ ಕೆಲಸಗಾರರು ಯಾವುದಾದರೊಂದು ಕಾರಣವನ್ನು ಹೇಳಿಕೊಂಡು ಗುಂಪುಕಟ್ಟಿ ಕೆಲಸವನ್ನು ಬಿಟ್ಟು ಮುಷ್ಕರ ಹಿಡಿದು ಕುಳಿತುಕೊಳ್ಳುವುದು ಸಾಂಕ್ರಾಮಿಕ ರೋಗದಂತೆ ಸರ್ವ ವ್ಯಾಪಕವಾಗಿದೆ. ಸದ್ಯಃ ಇಂಗ್ಲಂಡು ದೇಶವು ಈ ಮುಷ್ಕರ ಸಾಮ್ರಾಜ್ಯದಿಂದ ಅನುಭವಿಸುತ್ತಿರುವ ದುಸ್ಥಿತಿಯು ಪರಿತಾಪಕರವಾಗಿದೆ. ಕಳೆದ ತಿಂಗಳು ೧೬ನೆ ತಾರೀಖಿನಿಂದ ಕಲ್ಲಿದ್ದಲ ಗಣಿಯ ಕೆಲಸಗಾರರು ಬಹುಶಃ ೧೬ ಲಕ್ಷ ಮಂದಿಗಳು ಕೆಲಸವನ್ನು ಬಿಟ್ಟುಬಿಟ್ಟರು. ಹಿಂದೆ ಒಂದೆರಡು ಸಲ ಈ ಕೆಲಸಗಾರರು ತಮ್ಮ ಸಂಬಳವನ್ನು ಹೆಚ್ಚಿಸಿಕೊಡಬೇಕೆಂದು ಹಟ ಹಿಡಿದಾಗ ಗಣಿಗಳ ಯಜಮಾನರು ತಕ್ಕಮಟ್ಟಿಗೆ ಅವರಿಷ್ಟವನ್ನು ಪೂರ್ತಿ ಮಾಡಿದರು. ಸ್ವಲ್ಪಕಾಲ ಕಳೆದ ಬಳಿಕ ಮರಳಿ ಕೆಲಸ ಮಾಡುವ ಕಾಲವನ್ನು ಕಡಮೆ ಮಾಡಬೇಕೆಂತಲೂ, ಕೂಲಿಯನ್ನು ಹೆಚ್ಚಿಸಬೇಕೆಂತಲೂ ಇಲ್ಲದಿದ್ದರೆ ಕೆಲಸವನ್ನು ಬಿಟ್ಟುಬಿಡುವೆವೆಂತಲೂ ಹೇಳಿ ಬೆದರಿಸುವುದಕ್ಕುಪಕ್ರಮಿಸಿದರು. ಆಗ ಸರ್ಕಾರದವರು ಮಧ್ಯೆ ಪ್ರವರ್ತಿಸಿ, ಕೂಲಿಕಾರರ ಮತ್ತು ಗಣಿಗಳ ಯಜಮಾನರ ಹೇಳಿಕೆಗಳೆರಡನ್ನೂ ಕೇಳಿ ಅಭಿಪ್ರಾಯವನ್ನು ಕೊಡಲಿಕ್ಕೆ ಒಂದು ಪಂಚಾಯತಿಗೆಯ ಸಂಘವನ್ನೇರ್ಪಡಿಸಿದರು. ಅವರು ಕೊಟ್ಟ ಅಭಿಪ್ರಾಯದಲ್ಲಿ ಕೆಲವಕ್ಕೆ ಯಜಮಾನರೂ ಕೆಲವಕ್ಕೆ ಕೂಲಿಕಾರರೂ ಸಮ್ಮತಿಸದೆ ಹೋದರು. ಅಂದಿನಿಂದ ಕೂಲಿಕಾರರ ಅಸಮಾಧಾನವು ಹೆಚ್ಚುತ್ತಲೇ ಬಂದಿತು. ಸರ್ಕಾರದವರು ಪುನಃ ಮಧ್ಯೆ ಪ್ರವೇಶಿಸಿ ಕೂಲಿಕಾರರು ವಾರ ೧ ಕ್ಕೆ ಮಾಡತಕ್ಕ ಕೆಲಸಕ್ಕೆ ಇಷ್ಟೆಂದು ಕ್ಲಪ್ತವಿರಬೇಕೆಂತಲೂ, ಹೆಚ್ಚು ಕೆಲಸ ಮಾಡಿದವರಿಗೆ ತಕ್ಕಷ್ಟು ಹೆಚ್ಚಿನ ಕೂಲಿಯು ಕೊಡಲ್ಪಡುವುದೆಂತಲೂ ಇದನ್ನೆಲ್ಲಾ ಪರಿಷ್ಕರಿಸಲಿಕ್ಕೆ ಒಂದು ಮಧ್ಯಸ್ಥ ಸಂಘವನ್ನು ನಿರ್ಮಿಸುವೆವೆಂತಲೂ ಹೇಳಿದರು. ಆದರೆ ಕೂಲಿಕಾರರು ೨ ಷಿಲಿಂಗ್ ಕೂಲಿ ಹೆಚ್ಚಿಸುವ ವಿಷಯವನ್ನು ಮೊದಲು ನಿರ್ಧರಮಾಡಿಕೊಟ್ಟುಬಿಟ್ಟರೆ ಉಳಿದ ವಿಷಯಗಳ ಮಧ್ಯಸ್ತಿಕೆಗೆ ಒಪ್ಪುವೆವೆಂದೂ ಆ ಹೆಚ್ಚು ಕೂಲಿಯ ಪರಿಷ್ಕಾರವನ್ನು ಮಧ್ಯಸ್ಥ ಸಂಘಕ್ಕೆ ವಹಿಸಬಾರದೆಂತಲೂ ಹೇಳಿಕೊಂಡು ಸರ್ಕಾರದವರ ಮಾತನ್ನು ಕೇಳದೆ ಹಟ ತೊಟ್ಟು ಒಟ್ಟಿಗೆ ಕೆಲಸವನ್ನು ತ್ಯಜಿಸಿಬಿಟ್ಟರು. ಅಲ್ಲಿ ಅಡುಗೆ ಮೊದಲುಗೊಂಡು ಸಕಲ ಯಂತ್ರಗಳ ಕೆಲಸಗಳಿಗೂ ಹೊಗೆಬಂಡಿಗಳಿಗೂ ದೀಪಗಳಿಗೂ ಸಹ ಕಲ್ಲಿದ್ದಲೇ ಆಧಾರ. ಅದು ದೊರೆಯದಂತಾದರೆ ಎಲ್ಲ ವ್ಯವಹಾರಗಳೂ ಕಟ್ಟಾಗುವುವು. ಹೊರಗಣಿಂದಲೇ ಹಡಗುಗಳೂ ಹೊಗೆಬಂಡಿಗಳೂ ಆಹಾರ್ಯವಸ್ತುಗಳನ್ನು ತಂದು ಅಲ್ಲಿಗೆ ಒದಗಿಸಬೇಕಾಗಿರುವಾಗ್ಗೆ ಆ ಹೊಗೆಬಂಡಿ ಮೊದಲಾದುವುಗಳ ತಿರುಗಾಟವೇ ನಿಂತರೆ ಪ್ರಜೆಗಳು ಆಹಾರವಿಲ್ಲದೆ ಬಳಲಬೇಕಾಗುವುದು. ಈ ಕೆಲಸಗಾರ ಜನರಲ್ಲಿ ಬರಿಯ ಸಂಬಳದ ಸಂಬಂಧವಾದ ಆಸೆ ಮಾತ್ರವೇ ಇಲ್ಲ. ಸರ್ವತ್ರ ತಮ್ಮ ಪ್ರಾಬಲ್ಯವುಂಟಾಗಿ ಮಂತ್ರಿಮಂಡಲಾಧಿಕಾರವೆಲ್ಲಾ ತಮ್ಮ ಹಸ್ತಗತವಾಗುವಂತೆ ಮಾಡಿಕೊಳ್ಳಬೇಕೆಂಬ ಮಹದಾಕಾಂಕ್ಷೆಯು ತುಂಬಿಕೊಂಡಿದೆ. ಅದರಿಂದ ಈಗಣ ಪ್ರಭುತ್ವಾಧಿಕಾರಿಗಳಿಗೆ ಇಲ್ಲದ ತೊಂದರೆಗಳನ್ನು ತಂದೊಡ್ಡಿ ಅವರು ಹಿಂದೆಗೆದುಹೋಗುವಂತೆ ಮಾಡಬೇಕೆಂಬ ಅಂತರುದ್ದೇಶವಿದೆ. ಇದನ್ನು ಮಂತ್ರಿಮಂಡಲದವರು ಬಲ್ಲರು. ಅದುಕಾರಣವೇ ಅವರು ಇವರುಗಳ ಮುಷ್ಕರಕ್ಕೂ ಬೆದರಿಕೆಗೂ ಸೋಲದೆ, ಸ್ಥೈರ್ಯದರ್ಪಗಳಿಂದ ಇದಿರಿಸಲು ಯತ್ನಿಸಿದರು. ಬಹುಜನರ ಕ್ಷೇಮವನ್ನು ನಾವು ನೋಡಬೇಕಲ್ಲದೆ ಸ್ವಲ್ಪ ಜನರಿಗಾಗಿ ಅನೇಕ ಜನರಿಗೆ ಕಷ್ಟವನ್ನುಂಟುಮಾಡಲು ನಾನು ಒಪ್ಪುವುದಿಲ್ಲವೆಂದು ಮಿ|| ಲಾಯಿಡ್ ಜಾರ್ಜ್‌ರವರು ಹೇಳಿದರು. ಏಕೆಂದರೆ—ಈ ಕೂಲಿಗಾರರು ಕೇಳುವಷ್ಟು ಸಂಬಳಗಳನ್ನು ಹೆಚ್ಚಿಸಿಕೊಡುತ್ತಾ ಬಂದರೆ ಗಣಿ ಯಜಮಾನರಿಗೆ ನಷ್ಟ ಹೆಚ್ಚುವುದು. ಆಗ ಅವರು ಕಲ್ಲಿದ್ದಲ ಬೆಲೆಯನ್ನು ಹೆಚ್ಚಿಸುವರು. ಅದನ್ನು ಕೊಳ್ಳಬೇಕಾದ ಭಾರವು ಪ್ರಜಾಸಾಮಾನ್ಯದ ಮೇಲೆ ಬೀಳುವುದು. ಈಚೆಗೆ ಬಂದಿರುವ ವರ್ತಮಾನಗಳನ್ನು ನೋಡಿದರೆ ಗಣಿಯ ಕೂಲಿಗಾರರ ಸಂಘದ ಮುಖಂಡರಿಗೂ ಮಂತ್ರಿಗಳಿಗೂ ಮಾತುಕತೆ ನಡೆದು ಸದ್ಯಃ ಸಮಾಧಾನವುಂಟಾದಂತೆ ಕಾಣುತ್ತದೆ. ಈ ಶಾಂತಿಯು ಎಷ್ಟುದಿನ ಸ್ಥಿರವೆಂಬುದನ್ನು ಹೇಳಲಾಗುವುದಿಲ್ಲ.

ಪಶ್ಚಿಮ ದೇಶಗಳಲ್ಲಿ ಹುಟ್ಟಿದ ಈ ಮುಷ್ಕರ ರೋಗವು ನಮ್ಮ ಭರತಖಂಡಕ್ಕೂ ಸೋಂಕಿರುತ್ತದೆ. ೧-೨ ವರ್ಷಗಳಿಂದ ಅನೇಕ ಪಟ್ಟಣಗಳಲ್ಲಿ ಯಂತ್ರಗಳ ಲೋಹಮಾರ್ಗಗಳ ಟ್ರಾಂವೆಗಳ ಅಂಚೆಯ ಮನೆಗಳ ಕೆಲಸಗಾರರುಗಳು ಸಂಬಳ ಸಾಲದೆಂದು ಮೊದಲಾಗಿ ಹೇಳಿಕೊಂಡು ಕೆಲಸಬಿಟ್ಟು ನಿಲ್ಲುತ್ತಿರುವ ಉಪದ್ರವವು ನಾನಾತರದ ಅನರ್ಥಗಳನ್ನು ದೇಶಕ್ಕೆ ತಂದಿಟ್ಟಿರುತ್ತದೆ. ಕೆಲ ರಾಜಕೀಯ ಪಕ್ಷದವರು ಈ ಕೂಲಿಕಾರ ಜನರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವ ಅಂತರುದ್ದೇಶವನ್ನು ಇಟ್ಟುಕೊಂಡು, ಮೇಲೆ ಆ ಜನರಿಗೆ ಸಹಾಯಕರಂತೆ ನಟಿಸುತ್ತ, ಅವರ ಪ್ರಯತ್ನಗಳಿಗೆ ಉತ್ತೇಜನವನ್ನು ಕೊಡುತ್ತಿದ್ದಾರೆ. ಕೆಲಸಗಾರರಿಗೆ ಈಗಣ ದುಷ್ಕಾಲದಲ್ಲಿ ಸಂಬಳಸಾರಿಕೆಗಳನ್ನು ಸ್ವಲ್ಪ ಹೆಚ್ಚಿಸಿಕೊಡಬೇಕಾದುದು ಧರ್ಮವೇ ಆಗಿರುತ್ತದೆ. ಆದರೆ ಯಜಮಾನರುಗಳು ತಮಗೆ ನಷ್ಟವಾದರೂ ಸರಿ ಕೇಳಿದಷ್ಟು ಸಂಬಳವನ್ನು ಕೆಲಸಗಾರರಿಗೆ ಕೊಡಲಿಕ್ಕೆ ಬದ್ಧರಾಗುತ್ತಾರೆಂದು ನಿರೀಕ್ಷಿಸುವುದು ಸರಿಯಲ್ಲ. ಮತ್ತು ಸಂಬಳಗಳನ್ನು ಹೆಚ್ಚಿಸುವುದರಿಂದ ತಮ್ಮ ವೆಚ್ಚಗಳು ಹೆಚ್ಚಾದರೆ ಅದನ್ನು ತುಂಬಿಕೊಳ್ಳುವುದಕ್ಕಾಗಿ ಅವರುಗಳು ಒಂದಕ್ಕೆರಡಾಗಿ ಸಂಪಾದಿಸಿಕೊಳ್ಳಲು ಮಾರ್ಗವನ್ನು ಮಾಡಿಕೊಳ್ಳುವರು. ತಮ್ಮಲ್ಲಿ ನಿರ್ಮಿತವಾಗುವ ಪದಾರ್ಥಗಳ ಬೆಲೆಯನ್ನು ಹೆಚ್ಚಿಸುವರು. ರೈಲ್ವೆ ಕಂಪೆನಿಗಳವರು ಬಾಡಿಗೆಗಳನ್ನು ಹೆಚ್ಚಿಸುವರು. ಅಂಚೆಯ ಶಾಖೆಯವರು ದರಗಳನ್ನು ಹೆಚ್ಚಿಸುವರು. ಈ ಭಾರವನ್ನು ಪ್ರಜಾಸಾಮಾನ್ಯವೂ ಹೊರಬೇಕಾಗುವುದು. ಸಾವಿರಾರು ರೂ. ಸಂಬಳಗಳನ್ನು ಪಡೆಯುವ ವಿದ್ಯಾವಂತರಿಗೂ ಆಸೆಯು ಬಿಡದಿರುವಾಗ ವಿದ್ಯೆಯಿಲ್ಲದ ಸಣ್ಣ ಕೆಲಸಗಾರರಿಗೆ ತೃಪ್ತಿಯುಂಟಾಗುವುದುಂಟೆ? ಅವರ ಬಯಕೆಗಳು ಈಡೇರುತ್ತ ಬಂದಂತೆಲ್ಲಾ ಮದ್ಯಪಾಯಿಗೆ ಕುಡಿಕುಡಿದಷ್ಟೂ ದಾಹವು ಹೆಚ್ಚಾಗುವಂತೆ ಅವರ ಆಸೆಗಳು ಕುಡಿಯೊಡೆಯುತ್ತಾ ಹೋಗುವುವು. ಅವನ್ನು ತೃಪ್ತಿಪಡಿಸುವುದು ಯಾರಿಗೂ ಸಾಧ್ಯವಲ್ಲ. ಅವರುಗಳು ಮುಷ್ಕರದ ರೋಗಕ್ಕೆ ಬಲಿಯಾಗಿ ಪ್ರತಿಭಟಿಸಲಿಕ್ಕೂ ಕೆಲಸ ಬಿಟ್ಟು ನಿಂತುಕೊಳ್ಳಲಿಕ್ಕೂ ಉಜ್ಜುಗಿಸಿದರೆ ಬೊಂಬಾಯಿ ಮೊದಲಾದ ಕಡೆಗಳಲ್ಲಿ ಈಗ ಅಂಚೆಯ ಸಂಬಂಧದಲ್ಲಿ ಉಂಟಾಗಿರುವಂಥ ತೊಂದರೆಗಳೂ, ಪೊಲೀಸರ ಮೇಲೆಯೇ ಕೈಮಾಡುತ್ತಿರುವ ಅತ್ಯಾಚಾರಗಳೂ, ಮದರಾಸ್ ಲೋಹಮಾರ್ಗದಲ್ಲಿ ಮೊನ್ನೆ ತಾನೇ ಸಂಭವಿಸಿದಂಥ ಅನಾಹುತಗಳೂ ನಡೆಯಲುಪಕ್ರಮಿಸುವುವು. ಅಲ್ಲದೆ ಭರತಖಂಡದಲ್ಲಿ ಯಂತ್ರಗಾರಿಕೆಗಳು ವೃದ್ಧಿಯಾಗಬೇಕಾಗಿರುವ ಈ ತರುಣದಲ್ಲಿ ಕೂಲಿಕಾರ ಜನರೊಳಗೆ ಈ ಮುಷ್ಕರರೋಗದ ಬೀಜವು ನೆಲೆಯಾಗಿ ನಿಂತುಬಿಡುವುದಾದರೆ ಅಭ್ಯುದಯಕ್ಕೆ ಬಹಳ ವಿಘ್ನವು ಹಟ್ಟಿ ದೇಶಕ್ಕೆ ತುಂಬಾ ಹಾನಿಯನ್ನುಂಟುಮಾಡುವುದರಲ್ಲಿ ಸಂಶಯವಿಲ್ಲ. ಸಹಾಯನಿರಾಕರಣ ಚಳವಳಿಯು ಕೂಡ ಮುಷ್ಕರರೋಗದ ಪಂಗ್ತಿಗೇ ಸೇರಿದುದು. ಅದರ ಉಪಾಸಕರಿಗೆ ರಾಜ್ಯರಥದ ಸಾಗುವಿಕೆಗೆ ವಿಘ್ನ ತರುವುದೇ ಉದ್ದೇಶವಾಗಿದೆ. ಅಂಥವರ ಬೆಂಬಲವೂ ಸಹ ಈ ಕೆಲಸಗಾರರ ಮುಷ್ಕರಕ್ಕೆ ಉಂಟಾದರೆ ಕೇಳುವುದೇನು ? ದೂರದೃಷ್ಟಿಯುಳ್ಳ ದೇಶಹಿತಚಿಂತಕರು ಈ ರೋಗವನ್ನು ಪ್ಲೇಗುರೋಗಕ್ಕಿಂತಲೂ ಮಹಾನರ್ಥಕಾರಿಯೆಂದು ತಿಳಿಯಬೇಕು. ಪ್ಲೇಗುರೋಗವು ಅಂತಃ ಪ್ರಾಣವನ್ನು ಅಪಹರಿಸಿದರೆ ಈ ಮುಷ್ಕರ ರೋಗವು ಬಹಿಃಪ್ರಾಣವಾದ ಧನವನ್ನು ವಿನಾಶಮಾಡುತ್ತದೆ. ಆದಕಾರಣ ದೇಶಭಕ್ತರುಗಳು ಈ ಮುಷ್ಕರರೋಗಪೀಡಿತರನ್ನು ಆದರಿಂದ ಮುಕ್ತರಾಗುವಂತೆ ಮಾಡಲು ಚತುರುಪಾಯಗಳನ್ನೂ ಉಪಯೋಗಿಸಬೇಕೇ ಹೊರತು ಉಪನ್ಯಾಸಗಳಿಂದಲೂ ವೃತ್ತಪತ್ರಿಕಾಲೇಖನಗಳಿಂದಲೂ ಇತರ ರೂಪದಿಂದಲೂ ಅವರ ಯತ್ನಗಳಿಗೆ ಸಾನುಭೂತಿಯನ್ನು ತೋರಿಸುವುದು ಸರ್ವಥಾ ಅನುಚಿತವು.

ಒಳದೇಶದ ವೃತ್ತಾಂತಗಳು.

ಡಾಕ್ಟರ್ ವಿ. ಮುತ್ತುಸಾಮಿದಾಸ್‌ರವರು ಮಂಜಮ್ಮ ಎಂಬುವರನ್ನು ಬ್ರಹ್ಮಸಮಾಜನಿಯಮಪ್ರಕಾರ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಕಳೆದ ತಾ|| ೧೦ ರಲ್ಲಿ ವಿವಾಹ ಮಾಡಿಕೊಂಡರು.

ಚಿಕ್ಕಜಾಜೂರು ಮತ್ತು ಚಿತ್ರದುರ್ಗಗಳ ಮಧ್ಯದ ಲೋಹಮಾರ್ಗದ ಮೇಲೆ ಪ್ರಯಾಣಿಕರ ಬಂಡಿಗಳು ಬರುವ ವರ್ಷಾರಂಭದಿಂದ ಬಿಡಲ್ಪಡಲು ಏರ್ಪಾಡಾಗುತ್ತಿದೆಯೆಂದು ಕೇಳಿದೆವು.

ವಿಶಾಖ ಮಳೆಯ ಕೊನೆಪಾದದಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲೂ ಮೈಸೂರು ಡಿಸ್ಟ್ರಿಕ್ಟಿನ ಹಲವುಕಡೆಯೂ ಮಳೆಯಾದ ವರ್ತಮಾನ ಬಂದಿದೆ. ನಿಂತಿರುವ ಪೈರುಗಳಿಗೆ ತುಂಬಾ ಅನುಕೂಲವಾಯಿತು.

ಸರ್ಕಾರಿ ಲೆಕ್ಕಗಳನ್ನು ಅಚ್ಚುಕಟ್ಟಾಗಿ ಬರೆದಿಡುವ ಶ್ಯಾನುಭೋಗರುಗಳಿಗೆ ವರ್ಷಕ್ಕೆ ೧೦ ರೂ. ನಂತೆ ಬಹುಮಾನ ಕೊಡಬೇಕೆಂಬ ರೆ|| ಕಮಿಷನರ ಸೂಚನೆಯನ್ನು ಗೌರ್ನಮೆಂಟಿನವರು ಒಪ್ಪಿ ಅಪ್ಪಣೆ ಮಾಡಿದ್ದಾರೆ.

ಕಳೆದ ವಾರದ ಸಂಚಿಕೆಯ ಒಳದೇಶವೃತ್ತಾಂತಗಳಲ್ಲಿ ಸಂಗೀತವಿದ್ಯಾಕಂಠೀರವ ಮ|| ಟಿ. ಶೇಷಗಿರಿರಾಯರ ಮನೆಯಲ್ಲಿ ಕಳವಾಯಿತೆಂದು ತಪ್ಪು ಬಿದ್ದಿದೆ. ಸಂಗೀತವಿದ್ಯಾಕಂಠೀರವ ಮ|| ಕರಿಗಿರಿರಾಯರ ಮನೆಯಲ್ಲಿ ಎಂದು ಓದಿಕೊಳ್ಳಬೇಕು.

ಸಯ್ಯಾಂ ದೇಶದ ರಾಜಕುಮಾರರಾದ ಕರ್ನಲ್ ಅಮರದತ್ತಸಿಂಗ್‌ರವರು ಕಳೆದವಾರ ಬೆಂಗಳೂರಿನಲ್ಲಿ ರೆಸಿಡೆಂಟರ ಆತಿಥ್ಯದಲ್ಲಿದ್ದು ಬುಧವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿ, ಇಲ್ಲಿ ನೋಡತಕ್ಕ ಪ್ರದೇಶಗಳನ್ನೆಲ್ಲಾ ನೋಡಿಕೊಂಡು ಆ ರಾತ್ರಿಯೇ ಬೆಂಗಳೂರಿಗೆ ದಯಮಾಡಿಸಿದರು.

ಮಿ|| ಓ. ಜೆ. ಡಿಸೌಜಾರವರು ಬರುವ ವಾರದಲ್ಲಿ ಸೀಮೆಗೆ ಪ್ರಯಾಣಮಾಡುವರು. ಅವರು ವಹಿಸಿದ್ದ ವಿದ್ಯಾಭ್ಯಾಸ ಮತ್ತು ವ್ಯವಸಾಯಶಾಖಾ ಸೆಕ್ರಟರಿ ಕೆಲಸವು ಸದ್ಯಕ್ಕೆ ಚೀಫ್ ಸೆಕ್ರಟರಿ ಮತ್ತು ರೆವಿನ್ಯೂ ಸೆಕ್ರಟರಿಗಳಿಗೆ ಹಂಚಿ ವಹಿಸಲ್ಪಡುವಂತೆ ಏರ್ಪಾಟಾಗಿದೆಯೆಂದು ಕೇಳುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ್ ಸಿವಿಲ್ ಆಫೀಸರ್ ಸ್ಥಾನವೂ ಶಿವಮೊಗ್ಗಾ ಕಡೂರು ಡಿಸ್ಟ್ರಿಕ್ಟ್ ಡಿ|| ಕಮಿಷನರುಗಳ ಪರ್ಸನಲ್ ಅಸಿಸ್ಟೆಂಟರುಗಳ ಸ್ಥಾನಗಳೂ, ಹೊಳೆನರಸೀಪುರ ಮತ್ತು ಚಿಂತಾಮಣಿಗಳಲ್ಲಿರುವ ಸಬ್‌ಡಿವಿಜನ್ ಆಫೀಸುಗಳೂ ತೆಗೆದುಹಾಕಲ್ಪಡುವುದರಲ್ಲಿವೆಯೆಂದು ಕೇಳುತ್ತೇವೆ.

ಪೊಲೀಸ್ ಇ|| ಜನರಲ್‌ರವರಾದ ಮ|| ಎ. ಸುಬ್ರಹ್ಮಣ್ಯಯ್ಯರವರು ದೀರ್ಘಕಾಲ ರಜಾಪಡೆದುಕೊಳ್ಳುವರಾಗಿದ್ದಾರೆಂದೂ, ಅವರ ಸ್ಥಾನಕ್ಕೆ ಮಿ|| ಎಫ್. ಬೌರಿಂಗ್‌ರವರೂ, ಅವರಿದ್ದ ಮೈಸೂರ್ ಡಿಸ್ಟ್ರಿಕ್ಟ್ ಡಿ|| ಕಮಿಷನರ ಸ್ಥಾನಕ್ಕೆ ಮಿ|| ಜಹಿರುದೀನ್ ಮೆಕ್ಕೆಯವರೂ ಬರುವರೆಂಬ ಸುದ್ದಿಯಿದೆ.

ಬೆಂಗಳೂರು ಸಬ್ ಜಡ್ಜರಾಗಿರುವ ಮ|| ಕೆ. ಲಕ್ಷ್ಮೀನಾರಣಪ್ಪನವರು ಬರುವ ತಾ|| ೨೨ ರಿಂದ ಉದ್ಯೋಗ ನಿವೃತ್ತಿಗೊಳಿಸಲ್ಪಡುವರು. ಚೀಫ್ ಕೋರ್ಟು ರಿಜಿಸ್ಟ್ರಾರರಾಗಿರುವ ಮ|| ಜಿ. ಶ್ರೀನಿವಾಸಯ್ಯರು ಬೆಂಗಳೂರು ಸಬ್ ಜಡ್ಜರಾಗಿಯೂ, ಸೀನಿಯರ್ ಮುನ್ಸೀಫರಾದ ಮ|| ಎಂ. ಎಸ್. ವೆಂಕಟಕೃಷ್ಣಯ್ಯನವರು ಚೀಫ್ ಕೋರ್ಟು ರಿಜಿಸ್ಟ್ರಾರರಾಗಿಯೂ ನಿಯಮಿಸಲ್ಪಡುವರೆಂಬ ವಾರ್ತೆಯಿದೆ.

ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರಟರಿ ಮಿ|| ಮಿರ್ಜಾ ಎಂ ಇಸ್ಮಾಯಿಲ್‌ರವರಿಗೆ ನೂತನವಾದ ಬಿರುದು ಪ್ರಾಪ್ತವಾದುದರಿಂದ ರಾಜಧಾನಿಯ ನಿವಾಸಿಗಳು ತಮಗುಂಟಾದ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ನಿನ್ನೆ ದಿನ ನಿಷಿತ್‌ಬಾಗಿಗೆ ಅವರನ್ನು ಬರಮಾಡಿಕೊಂಡು ಉಪಾಹಾರ ಸಂಗೀತವಾದ್ಯವಿನೋದಾದಿಗಳಿಂದ ಕೂಡಿದ ಒಂದು ವನವಿಹಾರೋತ್ಸವವನ್ನು ಬಹಳ ಮನೋಹರವಾಗಿ ಮಾಡಿದರು.

ನಮ್ಮ ೧ ನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿಯವರ ಮಾವಂದಿರಾದ ಸರ್ ಕೃಷ್ಣಕುಮಾರಗುಪ್ತರವರು ಬೆಂಗಳೂರಿಗೆ ದಯಮಾಡಿಸಿರುವರು. ಅಲ್ಲಿಯ ಸೆಂಚುರಿ ಕ್ಲಬ್ಬಿನವರು ಅವರನ್ನು ಬರಮಾಡಿಕೊಂಡು ಅಲ್ಪಾಹಾರ ವಿನೋದಾದಿಗಳಿಂದ ಸತ್ಕರಿಸಿದರು. ನಮ್ಮ ದಿವಾನರು ಕೌನ್ಸಿಲರೇ ಮೊದಲಾದ ಅಧಿಕಾರಿಗಳೂ ಅನೇಕ ಮಂದಿ ಯೂರೋಪ್ಯರೂ ಹಿಂದೂ ದೊಡ್ಡಮನುಷ್ಯರೂ ಆ ಸಮಾರಂಭದಲ್ಲಿ ಕೂಡಿದ್ದರು.

ರಾಜಧಾನಿಯ ವರ್ತಕರಾದ ಮ|| ಸಿದ್ದಪ್ಪ ಆಂಡ್ ಬ್ರದರ್ಸ್‌ರವರು ಕಳುಹಿಸಿಕೊಟ್ಟ "To Animate move-o-graph Slide Card" ಪ್ರತಿಯೊಂದನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಇದು ಒಂದು ವಿಚಿತ್ರವಾದ ಭಾವಚಿತ್ರಪಟವಾಗಿದೆ. ಇದನ್ನು ಹಿಡಿದುಕೊಂಡು ಸ್ವಲ್ಪ ಅದಿಮಿದರೆ ಕ್ಷಣಕಾಲದೊಳಗೆ ಒಂದೇ ಚಿತ್ರವು ೪-೫ ತೆರದ ಮುಖಭಾವವುಳ್ಳದಾಗಿ ಮಾರ್ಪಡುತ್ತದೆ. ಇದು ಪಶ್ಚಿಮ ದೇಶೀಯರ ಕೌಶಲ ಪ್ರದರ್ಶಕವಾಗಿದೆ. ಇದರ ಬೆಲೆ ೧ ಕ್ಕೆ ೧ ರೂ. ಪಾಯಿ ಎಂದು ತಿಳಿಸಲ್ಪಟ್ಟಿದೆ.

ಮಹಮ್ಮದೀಯರಿಗೆ ಮುಖ್ಯವಾದ ಹಬ್ಬಗಳಾದ ರಮ್ಜಾನ್, ಕುದ್ಬಾ, ಬಕ್ರೀದ್‌ಗಳ ದಿನಗಳನ್ನು ಜನರಲ್ ರಜಾದಿನಗಳನ್ನಾಗಿ ಏರ್ಪಡಿಸಿಕೊಡಬೇಕೆಂದು ಕೋಲಾರದ ಮಹಮ್ಮದೀಯರು ತಮ್ಮ ಮತದ ವಿದ್ಯಾರ್ಥಿಗಳ ದೇವತಾಪ್ರಾರ್ಥನಾದಿಗಳ ಅನುಕೂಲ್ಯಕ್ಕಾಗಿ ಸರ್ಕಾರಕ್ಕೆ ಬರೆದುಕೊಂಡಿರಲಾಗಿ, ಬಕ್ರೀದಿನಲ್ಲಿ ೨ ದಿನಗಳೂ ರಂಜಾನ್ ಕುದ್ಬಾದಲ್ಲಿ ಒಂದು ದಿವಸವೂ ಸಂಸ್ಥಾನದ ಎಲ್ಲ ಪಾಠಶಾಲೆಗಳಲ್ಲೂ ಮಹಮ್ಮದೀಯರ ಸಂಪೂರ್ಣ ರಜಾ ದಿನಗಳಾಗಿ ಭಾವಿಸಲ್ಪಡಬೇಕೆಂತಲೂ ಆ ದಿನಗಳಲ್ಲಿ ಬೆಳಗಿನ ಕ್ಲಾಸುಗಳಿಗೂ ಮಹಮ್ಮದೀಯರು ಬರಬೇಕಾದುದಿಲ್ಲವೆಂತಲೂ ಅಪ್ಪಣೆಯಾಗಿರುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ನಡೆಯುತ್ತಿರುವ ಚರ್ಚೆಗಳನ್ನೂ ಮ|| ಇ. ಪಿ. ಬಾವಾಜಿಯವರು ಪರಂಪರೆಯಾಗಿ ಅಲ್ಲಿಯ ಲೆಕ್ಕಗಳು ಮೊದಲಾದುವುಗಳ ಮೇಲೆ ಮಾಡುತ್ತಿರುವ ದೋಷೋದ್ಘಾಟನೆಗಳನ್ನೂ ನೋಡಲಾಗಿ ಅಲ್ಲಿಯ ವ್ಯವಸ್ಥೆಯು ವಿಪರೀತವಾಗಿರುವಂತೆ ಕಾಣುತ್ತದೆ. ಪ್ರಸಿಡೆಂಟರು, ವೈಸ್‌ಪ್ರೆಸಿಡೆಂಟರು, ಚೀಫ್ ಆಫೀಸರು, ಮ್ಯಾನೇಜರು, ಕಲೆಕ್ಟರು–ಇತ್ಯಾದಿ ಅಧಿಕಾರಿ ಪರಂಪರೆಗಳು ಇರುತ್ತಿದ್ದರೂ, ಇವರುಗಳ ಅಲೋಯನ್ಸುಗಳಿಗೂ ಸಂಬಳಗಳಿಗೂ ಸಾವಿರಾರು ರೂ. ಗಳು ಪ್ರತಿ ತಿಂಗಳಲ್ಲೂ ವೆಚ್ಚವಾಗುತ್ತಿದ್ದರೂ ಇಂಥ ನಮ್ಮ ಮ್ಯುನಿಸಿಪಾಲಿಟಿಯಲ್ಲಿ ಇಷ್ಟೊಂದು ಅವ್ಯವಸ್ಥೆಯೇಕೆ ?

ವರ್ತಮಾನಸಂಗ್ರಹ.

ಮದರಾಸು ಕಾರ್ಪೊರೇಷನ್ನಿಗೆ ಈ ವರ್ಷವೂ ಸರ್ ಪಿ. ತ್ಯಾಗರಾಯಶೆಟ್ಟರೇ ಅಧ್ಯಕ್ಷರಾಗಿ ಕೌನ್ಸಿಲಿನ ಸರ್ವಾನುಮತದಿಂದ ಆರಿಸಲ್ಪಟ್ಟರು.

ಬೊಂಬಾಯಿಯಲ್ಲಿ ಮಿ|| ಬಾಪ್ಟಿಸ್ಟಾರವರು ಸರ್ಕಾರದ ಸಂಬಂಧವಿಲ್ಲದ ಪೋಸ್ಟ್ ಶಾಖೆಯನ್ನು ಸ್ವತಂತ್ರವಾಗಿ ಏರ್ಪಡಿಸಲು ಪ್ರಯತ್ನಿಸಿದ್ದಾರೆ.

ಐರ್ಲಂಡಿನ ಕಾರ್ಕ್‌ಪಟ್ಟಣದ ಮೇಯರ್ ಮಾಸ್ಕ್ವಿನಿಯವರು ೭೪ ದಿನಗಳ ಕಾಲ ಕಾರಾಗೃಹದಲ್ಲಿ ಉಪವಾಸವಿದ್ದು ೭೫ನೇ ದಿನ ದೇಹಬಿಟ್ಟರು.

ಧಾರವಾಡದ ಮತ್ತು ಹುಬ್ಬಳ್ಳಿಯ ಮ್ಯುನಿಸಿಪಾಲಿಟಿಯವರು ತಮ್ಮ ಊರ ಎಲ್ಲೆಗಳಲ್ಲಿ ಗೋವಧೆಯನ್ನು ಯಾರೂ ಮಾಡಕೂಡದೆಂದು ನಿರ್ಧರಮಾಡಿರುವರು.

ಜರ್ಮನಿಯ ಕೈಜರರ ಸಹೋದರಿಯ ಮಗನಾದ ಗ್ರೀಸ್ ಚಕ್ರವರ್ತಿಯು ಹುಚ್ಚುಹಿಡಿದ ಕಪಿ ಕಡಿದ ನಂಜಿನಿಂದ ಮೃತನಾದನು. ಮಂತ್ರಿಮಂಡಲವು ರೀಜೆನ್ಸಿಯಾಗಿ ಸದ್ಯಃ ಏರ್ಪಟ್ಟಿದೆ.

ಚೀನಾದಲ್ಲಿ ೫ ಕೋಟಿ ಜನರು ಕ್ಷಾಮಪೀಡಿತರಾಗಿದ್ದಾರೆ. ಅವರಲ್ಲಿ ೧ ಕೋಟಿ ೪೦ ಲಕ್ಷ ಜನಕ್ಕೆ ಸುತರಾಂ ಏನೂ ಗತಿಯಿಲ್ಲ. ಮುಂದಣ ಧಾನ್ಯಗಳು ಕೈಸೇರುವವರೆಗೆ ಇವರನ್ನು ಕಾಪಾಡಲು ೫ ಕೋಟಿ ಪೌನುಗಳು ಬೇಕಾಗುವುವೆಂದು ಸರ್ಕಾರದವರು ಲೆಕ್ಕ ಹಾಕಿ ಧನಿಕರ ಸಹಾಯವನ್ನು ಕೇಳಿದ್ದಾರೆ.

ಇಂದೂರು ಸಂಸ್ಥಾನದ ಪ್ರಭುಗಳಾದ ಹೋಳ್ಕರ್ ಮಹಾರಾಜರು ತಮ್ಮ ಸಂಸ್ಥಾನದ ಲೋಕಲ್ ಬೋರ್ಡುಗಳಲ್ಲೆಲ್ಲಾ ಗಂಡಸರಂತೆ ಹೆಂಗುಸರೂ ಮೆಂಬರಾಗಲೂ ಓಟನ್ನು ಕೊಡಲೂ ಅರ್ಹರೆಂಬ ಶಾಸನವನ್ನು ಕಳೆದ ವಿಜಯದಶಮಿಯ ದಿವಸ ಮಾಡಿದರು. ಅಲ್ಲಿಯ ರಾಜಧಾನಿಯ ಮ್ಯುನಿಸಿಪಾಲಿಟಿಗೆ ಅಹಲ್ಯಾಬಾಯಿ ಭಂಡಾರ್ಕರ್ ಎಂ. ಎ. ಯವರು ಮೆಂಬರಾಗಿ ಸೇರಿಸಲ್ಪಟ್ಟಿದ್ದಾರೆ.

ಟೆಲಿಫೋನು ಟೆಲಿಗ್ರಾಂ ಗ್ರಾಮೋಫೋನ್ ಸಿನಿಮಾ ಮೊದಲಾದ ಅನೇಕಾನೇಕ ಯಂತ್ರರಚನೆಗಳನ್ನು ಮಾಡಿ ಜಗದ್ವಿಖ್ಯಾತರಾಗಿರುವ ಅಮೇರಿಕಾದ ಎಡಿಸನ್‌ರವರು ಈಗ ಮೃತರಾದ ಪರಲೋಕವಾಸಿಗಳೊಡನೆ ಮಾತನಾಡಬಹುದಾದ ಯಂತ್ರವೊಂದನ್ನು ನಿರ್ಮಿಸಲು ಪ್ರಯತ್ನಿಸಿರುವರಂತೆ. ಇಷ್ಟರಲ್ಲೇ ಅವರ ಪ್ರಯತ್ನವು ಸಫಲವಾಗುವ ಚಿಹ್ನೆಗಳಿವೆಯಂತೆ. ಇದು ಸಿದ್ಧವಾದರೆ ಇದರಿಂದ ಜಗತ್ತಿನಲ್ಲಿ ದೊಡ್ಡ ಪರಿವರ್ತನವುಂಟಾಗುವುದರಲ್ಲಿ ಸಂಶಯವಿಲ್ಲ.

ಬಂಗಾಳಾಕ್ಕೆ ಸೇರಿದ ಜೋರಾಬಾಗನ್ ಎಂಬ ಪಟ್ಟಣದಲ್ಲಿ ವಸಂತಕುಮಾರಿ ಎಂಬ ೧೪೫ ವರ್ಷ ವಯಸ್ಸಿನ ಮುದುಕಿಯೊಬ್ಬಳಿರುವಳು. ಇವಳಿಗೆ ಹಲ್ಲುಗಳೆಲ್ಲಾ ೨ ಸಲ ಬಿದ್ದು ಹುಟ್ಟಿರುತ್ತವಂತೆ. ನೇತ್ರಪಾಟವವು ಚೆನ್ನಾಗಿರುವುದು. ಪರರ ಸಹಾಯಾಪೇಕ್ಷೆಯಿಲ್ಲದೆ ತಿರುಗಾಡುತ್ತಿರುವಳು. ಕಳ್ಳರು ಮೊನ್ನೆ ತಾನೇ ಅವಳ ಮನೆಯನ್ನು ದೋಚಿಕೊಂಡುದರಿಂದ ಈಗ ನಿರಾಧಾರಗಳಾಗಿರುವಳೆಂದು ಒಬ್ಬರು ಜೋರಾಬಾಗನ್ ಡೆಪ್ಯುಟಿ ಕಮಿಷನರಿಗೆ ಬರೆದಿದ್ದಾರೆ.

ಮಾನುಷ ಸಂತಾನವು ಕೋತಿಗಳ ಮೂಲಕ ಪರಿಣಾಮಗೊಂಡಿರುವುದೆಂದು ಡಾರ್ವಿನ್ ಶಾಸ್ತ್ರಜ್ಞರು ಹೇಳಿರುವರು. ಇದರ ನಿಜಸ್ಥಿತಿಯನ್ನು ಸಿದ್ಧಾಂತಪಡಿಸಲಿಕ್ಕೆ ಅನೇಕ ಪಾಶ್ಚಾತ್ಯ ಶಾಸ್ತ್ರಜ್ಞರು ಪ್ರಯತ್ನಿಸಿದರೂ ಫಲವಾಗಿಲ್ಲ. ಇದರ ಶೋಧನೆಗಾಗಿ ಅಮೆರಿಕಾದಿಂದ ಕೆಲ ಶಾಸ್ತ್ರಜ್ಞರು ಬರುವ ಫೆಬ್ರವರಿ ತಿಂಗಳಲ್ಲಿ ಹಿಮವತ್ಪರ್ವತದ ಉತ್ತರ ಪ್ರಾಂತಕ್ಕೆ ಬರುವವರಾಗಿದ್ದಾರೆ. ಇವರ ವೆಚ್ಚಗಳಿಗೆ ಅಮೇರಿಕನ್ ಮ್ಯೂಜಿಯಮ್ಮಿನವರು ೮೦ ಸಾವಿರ ಪೌನ್ನುಗಳನ್ನು ಕೂಡಿಸಿರುವರು.

ಡ್ಯೂಕ್ ಆಫ್ ಕೆನ್ನಾಟ್‌ರವರು ಕಳೆದ ತಾ|| ೧೫ ರಲ್ಲಿ ಸೀಮೆಯಿಂದ ಭರತಖಂಡವನ್ನು ಕುರಿತು ಪ್ರಯಾಣ ಮಾಡಿದರು. ಶ್ರೀಮನ್ ಚಕ್ರವರ್ತಿ ದಂಪತಿಗಳೂ ಪ್ರಿನ್ಸ್ ಆಫ್ ವೇಲ್ಸರೇ ಮೊದಲಾದ ರಾಜಬಂಧುವರ್ಗದವರೂ ಸಾಗಗಳುಹಿದರು. ಇವರು ಈ ದೇಶಕ್ಕೆ ಬಂದ ಬಳಿಕ ಜನವರಿ ತಾ|| ೧೦ ರಿಂದ ೧೫ರ ವರೆಗೆ ಮದ್ರಾಸು, ೧೬ ರಿಂದ ೧೮ರ ವರೆಗೆ ನಾಗಪುರ, ೨೭ರ ವರೆಗೆ ಮಧ್ಯಪ್ರಾಂತ, ೨೮ ರಿಂದ ಫೆಬ್ರುವರಿ ೩ರ ವರೆಗೆ ಕಲ್ಕತ್ತಾ, ೫ ರಿಂದ ೭ರ ವರೆಗೆ ಆಗ್ರಾ, ೭ರಿಂದ ೧೫ರ ವರೆಗೆ ದಿಲ್ಲಿ, ೨೧ ರಿಂದ ೨೬ರ ವರೆಗೆ ಬೊಂಬಾಯಿಯಲ್ಲಿರುವರು. ಅಲ್ಲಿರುವಾಗ ಒಂದುದಿನ ಪೂನಾ ಪಟ್ಟಣಕ್ಕೂ ಹೋಗಿಬರುವರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸ್ಥಳೀಯ ವಿಷಯಗಳು.

(ಕಳೆದವಾರದ ಶೇಷ.)

ಪ್ರಾ. ಕೊರಟಗೆರೆ ಸಬ್ ತಾ|| ಮಾವತ್ತೂರು ಕೆರೆ ನಾಲಾದಲ್ಲಿ ಹೂಳು ತೆಗೆಸಲು ಸೆಸ್ಸನ್ನು ವಸೂಲುಮಾಡಿ ವರ್ಷವಾಯಿತು. ಕೂಡಲೇ ಮಾಡಿಸಬೇಕು. ಅಥವಾ ಸೆಸ್ಸನ್ನು ಡಿ|| ಕಮಿಷನರವಶಕ್ಕೆ ಕೊಟ್ಟರೆ ಬೇಗನೆ ಕೆಲಸವಾದೀತು.

ಉ.—ಖಾತೆದಾರರು ಕೆಲಸಮಾಡಲು ಒಪ್ಪಿದರೆ ಸೆಸ್ಸನ್ನು ಡಿ|| ಕಮಿಷನರಿಗೆ ವಹಿಸಿಕೊಡಬಹುದು.

ಪ್ರಾ.—ಮೈಸೂರಿಂದ ನಾಗಮಂಗಲ ತುರುವೆಕೆರೆಗಳ ಮಾರ್ಗವಾಗಿ ಚಿಕ್ಕನಾಯಕನಹಳ್ಳಿಗೆ ರೈಲ್ವೆಯನ್ನು ಹಾಕಿಸಬೇಕು.

ಉ.—ಸದ್ಯಕ್ಕೆ ಸಾಧ್ಯವಲ್ಲ.

ಕೋಲಾರ ಡಿಸ್ಟ್ರಿಕ್ಟು.

ಪ್ರಾ.—ಚಿಂತಾಮಣಿಯಲ್ಲಿ ಒಂದು ಪೋಸ್ಟಲ್ ತಂತೀ ಆಫೀಸು ಆಗಬೇಕು.

ಉ.—ಕ್ರಮೇಣ ಪ್ರತಿ ತಾಲ್ಲೂಕಿಗೂ ಆಗುವುದು.

ಪ್ರಾ.—ರಾಬರ್ಟ್‌ಸನ್‌ಪೇಟೆಗೆ ಪ್ರತ್ಯೇಕಮ್ಯುನಿಸಿಪಾಲಿಟಿ ಆಗಬೇಕು.

ಉ.—ಅದರಿಂದ ನಿಮಗೆ ಅನುಕೂಲಕಡಮೆ. ನಿಮ್ಮ ಊರಿಗೆ ಒಬ್ಬ ಮ್ಯು|| ಕೌನ್ಸಿಲರು ಬೇಕಾಗಿದ್ದರೆ ಕೇಳಿಕೊಳ್ಳಿರಿ.

ಪ್ರಾ.—ಸಿದ್ಲಘಟ್ಟಕ್ಕೂ ಮತ್ತು ಸಮೀಪದ ೩೦ ಗ್ರಾಮಗಳಿಗೂ ಜಲಾಧಾರವಾಗಿರುವ ಅಮಾನಿ ಕೆರೆಗೆ ಹೊಸ ಹೂಡ್ಯದ ಕೆರೆ ನೀರನ್ನು ಸೇರಿಸಬೇಕು.

ಉ.—ಜಾಗ್ರತೆಪಡಿಸುತ್ತಾರೆ.

ಪ್ರಾ.—ಕಾಮಸಂದ್ರ ಮತ್ತು ಬೂದಿಕೋಟೆಗಳಲ್ಲಿ ಹೊಳೆಗಳಿಗೆ ಅಣೆಕಟ್ಟನ್ನು ಹಾಕಿಸಬೇಕು.

ಉ.—ಕಾಮಸಂದ್ರದ್ದು ಎಸ್ಟಿಮೇಟಾಗಿದೆ. ಹೆಚ್ಚು ಹಣವಾಗಬೇಕು. ಬೂದಿಕೋಟೆಯದನ್ನು ಎಸ್ಟಿಮೇಟ್ ಮಾಡಿಸಬೇಕಾಗಿದೆ. ಡಿ|| ಕಮಿಷನರು ವಿಚಾರಿಸುತ್ತಾರೆ.

ಪ್ರಾ.—ರೋಣೂರು ಕೆರೆಗೆ ಅಟ್ಟುಕಾಲ್ವೆ ರಿಪೇರಿಮಾಡಿಸಿ, ಶ್ರೀನಿವಾಸಪುರದ ಅಮಾನಿ ಕೆರೆಗೆ ನೀರು ತುಂಬುವಂತೆ ಮಾಡಬೇಕು.

ಉ.—ಲಾಗೋಡು ಬಹಳ ಹೆಚ್ಚಾಗುತ್ತದಂತೆ. ಆದರೆ ಚೀಫ್ ಇಂಜನಿಯರು ವಿಚಾರಮಾಡುತ್ತಾರೆ.

ಪ್ರಾ.—ಸಿದ್ಲಘಟ್ಟದಿಂದ ಒಡಿಗೇನಹಳ್ಳಿಗೆ ಮಾಲೂರು ಮಾರ್ಗವಾಗಿ ಒಂದು ರಸ್ತೆ ಮಾಡಿಸಬೇಕು.

ಉ.—ಡಿ|| ಬೋರ್ಡಿನವರು ಅವಶ್ಯಕವಿಲ್ಲವೆನ್ನುತ್ತಾರೆ. ಮರಳಿ ಅಲ್ಲಿ ಚರ್ಚೆಗೆ ತನ್ನಿ.

ಪ್ರಾ.—ಮುಳಬಾಗಿಲಿಗೂ ಘಂಗನೂರಿಗೂ ಮಧ್ಯದಲ್ಲಿರುವ ಲೋ|| ಫಂಡ್ ರಸ್ತೆಯನ್ನು ಸ್ಟೇಟ್ ಫಂಡಿನಿಂದ ರಿಪೇರಿ ಮಾಡಿಸಬೇಕು.

ಉ.—ಡಿಸ್ಟ್ರಿಕ್ಟ್ ಬೋರ್ಡಿನವರು ರೆಜಲ್ಯೂಷನ್ ಮಾಡಿ ಕಳುಹಿಸಲಿ.

ಪ್ರಾ.—ವಿದುರಾಶ್ವತ್ಥದಲ್ಲಿ ಒಂದು ಸತ್ರವನ್ನು ಕಟ್ಟಿಸಬೇಕು.

ಉ.—ಭಕ್ತಾದಿಗಳು ಸಹಾಯಮಾಡಲಾರರೋ ? ನಿಮ್ಮ ಡಿ|| ಬೋರ್ಡಿನಲ್ಲಿ ಚರ್ಚಿಸಿ.

ಪ್ರಾ.—ಬಾಗೆಪಲ್ಲಿಯಲ್ಲಿ ತಂತಿಯಾಫೀಸಾಗಬೇಕು.

ಉ.—ಕ್ರಮೇಣ ಆಗುವುದು.

ಪ್ರಾ.—ಸಿದ್ಲಘಟ್ಟದಲ್ಲಿ ಟೌನ್ ಪೊಲೀಸ್ ಸ್ಟೇಷನ್ ಆಗಬೇಕು

ಉ.—ವಿಚಾರಣೆಯಲ್ಲಿದೆ.

ಪ್ರಾ.—ಚಿಕ್ಕಬಳ್ಳಾಪುರದಲ್ಲಿ ೧೮ ಮಂದಿ ಪೊಲೀಸ್ ಆಳುಗಳಿದ್ದಾರೆ. ಇನ್ನೆಂಟು ಮಂದಿಯನ್ನು ಹೆಚ್ಚಿಸಬೇಕು.

ಉ.—ವಿಚಾರಮಾಡುತ್ತೇವೆ.

ಪ್ರಾ—ಚಿಕ್ಕಬಳ್ಳಾಪುರಕ್ಕೆ ಸಿಹಿನೀರನ್ನೊದಗಿಸುವ ಏರ್ಪಾಟನ್ನು ಬೇಗನೆ ಮಾಡಬೇಕು. ಮ್ಯುನಿಸಿಪಾಲಿಟಿಯಿಂದ ೪೦ ಸಾವಿರ ರೂ. ಗಳನ್ನು ವೆಚ್ಚಕ್ಕೆ ಕೊಡಲು ಒಪ್ಪಿಕೊಂಡಿದ್ದೇವೆ.

ಉ.—ಈಗಣ ಪ್ರಾಜೆಕ್ಟ್ ಪ್ರಕಾರ ಕೆಲಸಮಾಡಿಸಿದರೆ ಮುಂದೆ ನೀವು ಪ್ರತಿ ವರ್ಷವೂ ಬೀಳುವ ವೆಚ್ಚವನ್ನು ಹೊರಲಾರಿರಿ. ಮನೆ ಮುಂದೆ ಆನೆ ಕಟ್ಟಿದಂತೆ ಆಗುತ್ತದೆ. ಅದುಕಾರಣ ಸುಲಭವಾದ ಪ್ರಾಜೆಕ್ಟನ್ನು ಕಳುಹಿಸಲು ಇಂಜನಿಯರ್ ಇಲಾಖೆಗೆ ತಿಳಿಯಿಸಿದ್ದೇವೆ.

ಪ್ರಾ.—ಸಿದ್ಲಘಟ್ಟದ ತಾ|| ಏನಿಗದಲೆ ಗ್ರಾಮದ ಹತ್ತಿರ ಪಾಪಘ್ನೀ ನದಿಗೆ ಸೇತುವನ್ನು ಕಟ್ಟಿಸಬೇಕು.

ಉ.—ಎಸ್ಟಿಮೇಟಾಗಿದೆ. ಹಣವೊದಗಿದ ಕೂಡಲೇ ಮಾಡಿಸುತ್ತೇವೆ.

ಪ್ರಾ.—ಬೌರಿಂಗ್‌ಪೇಟೆಯಿಂದ ಬರುವ ರೈಲ್ ಗಾಡಿಯು ಚಿಂತಾಮಣಿಗೆ ೧೦ ಗಂಟೆಗೆ ಸೇರುವಂತೆ ಕಾಲವನ್ನು ಬದಲಾಯಿಸಬೇಕು.

ಉ.—ಇದರ ಅನನುಕೂಲತೆ ಗೊತ್ತಾಗಿದೆ. ಗಾಡಿಗಳೂ ಎಂಜನ್ನುಗಳೂ ತಕ್ಕಷ್ಟು ಒದಗಿದ ಕೂಡಲೇ ಮಾಡುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಾ—ಬೆಂಗಳೂರಿನಲ್ಲಿ ೫೦೦ ರೂ. ಗಳ ವರೆಗಣ ಕೇಸುಗಳನ್ನು ಹಿಡಿಯುವ ಮತ್ತೊಂದು ಸ್ಮಾಲ್‌ಕಾಸ್ ಕೋರ್ಟನ್ನು ಸ್ಥಾಪಿಸಬೇಕು. ಹಂಗಾಮಿಯಾಗಿ ಮತ್ತೊಂದು ಮುನ್‌ಸೀಫ್ ಕೋರ್ಟನ್ನು ಸ್ಥಾಪಿಸಬೇಕು.

ಉ—ಅವಶ್ಯಕವಿಲ್ಲ.

ಪ್ರಾ.—ಹುಚ್ಚರ ಆಸ್ಪತ್ರೆಯನ್ನು ಬೇರೆ ಸ್ಥಳಕ್ಕೆ ಬದಲಾಯಿಸಬೇಕು.

ಉ.—ಸರಿಯಾದ ಸ್ಥಳವನ್ನು ಆರಿಸುವುದರಲ್ಲಿದ್ದೇವೆ. ಹಣದ ಕೊರತೆ.

ಪ್ರಾ.—೩೦೦ ವಿದ್ಯಾರ್ಥಿಗಳಿಗೆ ಅನುಕೂಲಿಸುವಂತೆ ಒಂದು ಹಾಸ್ಟಲನ್ನು ಕಟ್ಟಿಸಬೇಕು.

ಉ.—ಆಲೋಚಿಸುತ್ತೇವೆ.

ಪ್ರಾ.—ಬೆಂಗಳೂರು ಹೊಸೂರು ಮಧ್ಯದಲ್ಲಿ ರೈಲ್ವೆಯನ್ನು ಹಾಕಿಸಬೇಕು.

ಉ.—ಉದ್ದೇಶವಿದೆ. ಧನಸಹಾಯಕ್ಕೆ ಲೋ|| ಬೋರ್ಡನ್ನು ಕೇಳಿದ್ದೇವೆ. ೧೫ ಲಕ್ಷ ರೂ. ಗಳ ಅಂದಾಜಾಗಿದೆ. ಅಲ್ಲದೆ M. S. M. ಮತ್ತು S. I. R. ರೈಲ್ವೆ ಕಂಪೆನಿಗಳವರಿಗೂ ನಮಗೂ ಚರ್ಚೆಯಾಗುತ್ತಿದೆ.

ಪ್ರಾ.—ಬೆಂಗಳೂರಲ್ಲಿ ಬಡವರಿಗೆ ಮನೆ ಕಟ್ಟಿಸಿಕೊಡಲು ಮ್ಯುನಿಸಿಪಾಲಿಟಿಗೆ ೧ ಲಕ್ಷ ರೂ. ಗ್ರಾಂಟನ್ನು ಕೊಡಬೇಕು.

ಉ.—ನೀವು ಉದ್ದೇಶಿಸಿರುವುದನ್ನು ಮೊದಲು ಕಟ್ಟಿರಿ. ಆಮೇಲೆ ನೋಡೋಣ.

ಪ್ರಾ.—ಚನ್ನಪಟ್ಟಣಕ್ಕೆ ಸಿಹಿನೀರನ್ನೊದಗಿಸುವ ವೆಚ್ಚಕ್ಕಾಗಿ ಹೆಚ್ಚಾದ ಸ್ಟೇಟ್ ಗ್ರಾಂಟನ್ನು ಕೊಡಬೇಕು.

ಉ.—ಒಂದು ಸ್ಕೀಮು ಆಗಿರುವುದರಲ್ಲಿ ೧ ಲಕ್ಷ ರೂ. ವೆಚ್ಚವೂ, ಬಳಿಕ ಪ್ರತಿ ವರ್ಷದ ಖರ್ಚು ೫ ಸಾವಿರ ರೂ. ಗಳೂ ಹಿಡಿಯುತ್ತದೆ. ಇದನ್ನು ನೀವು ತಡೆಯಲಾರಿರಿ. ಬೇರೆ ಸ್ಕೀಮು ಮಾಡಿಸಬೇಕಾಗಿದೆ. ಅದಕ್ಕಿಂತಲೂ ಈಗಿರುವ ಕುನ್ನೀರುಕಟ್ಟೆಯನ್ನೇ ರಿಪೇರಿಮಾಡಿಸುವ ಕೆಲಸವನ್ನು ಸುಲಭವಾಗಿ ಬೇಗನೆ ಮಾಡುತ್ತಾರೆ.

ಪ್ರಾ.—ದೊಡ್ಡಬಳ್ಳಾಪುರಕ್ಕೆ ಶಿವಪುರದ ಕೆರೆಯಿಂದ ಸಿಹಿನೀರನ್ನು ಬೇಗನೆ ಒದಗಿಸಬೇಕು. ೩೦ ಸಾವಿರ ರೂ. ಗಳ ಕಂಟ್ರಾಕ್ಟು ಕೊಟ್ಟು ೮ ವರ್ಷವಾಯಿತು.

ಉ.—ಹಿಂದೆ ಆದ ಪ್ರಾಜೆಕ್ಟು ಅನುಕೂಲವಲ್ಲವೆಂದು ಗೊತ್ತಾಗಿದೆ. ಬೇರೆ ಪ್ರಾಜೆಕ್ಟನ್ನು ಮಾಡಿಸಬೇಕಾಗಿದೆ.

ಪ್ರಾ.—ಬೆಂಗಳೂರಲ್ಲಿ ೧ ನೆ ತರಗತಿಯ ಮ್ಯಾಜಿಸ್ಟ್ರೇಟ್ ಕೋರ್ಟು ಮತ್ತೊಂದನ್ನು ಸ್ಥಾಪಿಸಬೇಕು.

ಉ.—ವಿಚಾರಮಾಡುತ್ತೇವೆ.

ಪ್ರಾ.—ಬೆಂಗಳೂರಲ್ಲಿ ಕ್ರಿಮಿನಲ್ ಕೋರ್ಟೂ ಸ್ಕೂಲೂ ಒಂದೇ ಕಟ್ಟಡದಲ್ಲಿ ಇವೆ. ಅವನ್ನು ಬೇರ್ಪಡಿಸಬೇಕು.

ಉ.—ಮಾಡುತ್ತೇವೆ.

ಪ್ರಾ.—ಮಾಗಡಿಯ ಶ್ರೀ ಸೋಮೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಬೇಕು. ಮತ್ತು ಕಾರ್ಯನಿರ್ವಾಹಕ್ಕಾಗಿ ಅದರ ಇನಾಮತಿಗಳಾದ ಶ್ರೀಪತಿಹಳ್ಳಿ ಮತ್ತು ಜುಟ್ಟನಹಳ್ಳಿಗಳನ್ನು ಸರ್ಕಾರದವಶದಿಂದ ಬಿಟ್ಟುಕೊಡಬೇಕು.

ಉ.—ಜೀರ್ಣೋದ್ಧಾರಕ್ಕೆ ೭೫೮೨ ರೂ. ಗಳಾಗಬೇಕಾಗಿದೆ. ದೇವಾಲಯದ ಲೆಕ್ಕದಲ್ಲಿ ಹಣವು ಬಾಕಿಯಿಲ್ಲ. ಆ ಗ್ರಾಮಗಳು ಇನಾಂ ಗ್ರಾಮಗಳಾಗಿದ್ದುವೆಂಬುದಕ್ಕೆ ಏನೂ ರಿಕಾರ್ಡಿಲ್ಲವೆಂದು ಡಿ|| ಕಮಿಷನರೂ ಇನಾಂ ಸೂಪರಿಂಟೆಂಡೆಂಟರೂ ಬರೆದಿದ್ದಾರೆ. ಮುಜರಾಯಿಯಲ್ಲೂ ಇಂಜನಿಯರ್ ಇಲಾಖೆಯಲ್ಲೂ ಹಣವಿಲ್ಲ. ಭಕ್ತಾದಿಗಳು ಏನಾದರೂ ಕೊಡುತ್ತಾರೋ ?

(ಕರಣಿಕ ಕೃಷ್ಣಮೂರ್ತಿಯವರು—ಸರ್ಕಾರದವರು ಗರ್ಭ ಗುಡಿಯನ್ನಾದರೂ ಸರಿಮಾಡಿಸಿದರೆ ಭಕ್ತಾದಿಗಳು ಉಳಿದ ಭಾಗವನ್ನು ರಿಪೇರಿ ಮಾಡಿಸಲು ಸಿದ್ಧರಾಗಿದ್ದಾರೆ)

ಮೈಸೂರು ಡಿಸ್ಟ್ರಿಕ್ಟು.

ಪ್ರಾ.—ನಂಜನಗೂಡು ಸಬ್‌ಡಿವಿಜನ್ ಆಫೀಸನ್ನು ಚಾಮರಾಜನಗರಕ್ಕೆ ವರ್ಗಾಯಿಸಬೇಕು.

ಉ.—ಸಾಧ್ಯವಲ್ಲ.

ಪ್ರಾ.—ಮೈಸೂರು ಪಟ್ಟಣದ ದನಕರುಗಳಿಗೆ ಸಾಕಾಗುವಷ್ಟು ಗೋಮಾಳವನ್ನು ೪ ದಿಕ್ಕಿನಲ್ಲೂ ಒದಗಿಸಿಕೊಡಬೇಕು.

ಉ.—ಸ್ಥಳವನ್ನು ತೋರಿಸಿರಿ. ಬಿಡಿಸಿಕೊಡುತ್ತೇವೆ.

ಪ್ರ.—ಮೈಸೂರು ಟವನ್ನಿನಲ್ಲಿ ಸರ್ಕಾರಿ ಸೌದೆಕೊಠಿಯನ್ನಿಡಿಸಬೇಕು.

ಉ.—ಯೋಚಿಸುತ್ತೇವೆ.

ಪ್ರಾ.—ಹುಣಸೂರು ತಾಲ್ಲೂಕನ್ನು ಪೂರ್ಣವಾದ ಮಲೆನಾಡು ತಾಲ್ಲೂಕನ್ನಾಗಿ ಭಾವಿಸಿ ಮಲೆನಾಡು ಅಭಿವೃದ್ಧಿಯೇರ್ಪಾಟನ್ನು ಅಲ್ಲಿಗೂ ಮಾಡಿಸಬೇಕು.

ಉ.—ಯೋಚಿಸುತ್ತೇವೆ.

ಪ್ರಾ.—ನಂಜನಗೂಡಿನ ಲೆವ್ಸ್ಸ್ ಹೈಸ್ಕೂಲನ್ನು ಇಂಗ್ಲೀಷು ಹೈಸ್ಕೂಲನ್ನಾಗಿ ಮಾಡಬೇಕು.

ಉ.—ಸಾಗರ ತೀರ್ಥಹಳ್ಳಿ ಮೊದಲಾದ ಕಡೆಗಳಲ್ಲಿ ಹೈಸ್ಕೂಲುಗಳನ್ನು ಸ್ಥಾಪಿಸುವುದನ್ನು ಮೊದಲು ಮಾಡಿ, ಬಳಿಕ ಇತ್ತ ಕಡೆಗೆ ಮಾಡಬೇಕಾಗುತ್ತದೆ.

ಪ್ರಾ.—ಮೈಸೂರು ಪಟ್ಟಣದಲ್ಲಿ [illegible] ಯನ್ನು ಹಾಕಿಸಬೇಕು.

ಉ.—ಬೆಂಗಳೂರಿನಲ್ಲಿ ಆಗಲಿ. ಮೈಸೂರಿನಲ್ಲಿ [illegible] ದರೆ ಲಾಭವು ಗಿಟ್ಟುವುದಿಲ್ಲ.

ಪ್ರಾ.—ಹುಲ್ಲಹಳ್ಳಿ ನಾಲೆಯನ್ನು ಬಿಡಾಯಿಸಿದರೆ ಅದರ ಕೆಳಗೆ ಆಗುವ ಭೂಮಿಗಳವರೆಲ್ಲಾ ಎಕರೆಗೆ ೫೦ ರೂ. ಕಂಟ್ರಿಬ್ಯೂಷನ್ ಕೊಡಲು ಸಿದ್ಧರಾಗಿದ್ದಾರೆ.

ಉ.—ಸರ್ಕಾರಕ್ಕೂ ಉದ್ದೇಶವಿದೆ. ಆದರೆ ಕೃಷ್ಣರಾಜಸಾಗರದ ಕೆಲಸವು ಹೆಚ್ಚಾಗಿದೆ. ಅದು ಮುಗಿಯುವ ವರೆಗೆ ಉಳಿದುವುಗಳಿಗೆ ಸದ್ಯಃ ಗಮನ ಕೊಡಲಾಗುವುದಿಲ್ಲ.

ಪ್ರಾ.—ಚಾಮರಾಜ ನಾಲೆಯಲ್ಲಿದ್ದ ದೊಡ್ಡ ಪೈಪುಗಳನ್ನು ಕಿತ್ತು ಚಿಕ್ಕ ಪೈಪುಗಳನ್ನಿಡಿಸಿದ್ದಾರೆ. ಅದರಿಂದ ನೀರು ತಕ್ಕಷ್ಟು ಒದಗುವುದಿಲ್ಲ. ಮೊದಲಿನಂತೆ ದೊಡ್ಡ ಪೈಪುಗಳನ್ನೇ ಇಡಿಸಬೇಕು.

ಉ.—ಅನುಕೂಲ ಅನನುಕೂಲಗಳನ್ನು ಈಗ ನೋಡಿಕೊಂಡು ಮುಂದಣ ಬೇಸಗೆಯಲ್ಲಿ ಭೂಮಿಯುಳತೆಗೆ ತಕ್ಕಷ್ಟು ನೀರು ಒದಗಿಸುವುದಕ್ಕೆ ಅನುಕೂಲವಾದ ಪೈಪುಗಳನ್ನು ಇಡಿಸಿಕೊಡುತ್ತಾರೆ.

ಪ್ರಾ.—ಮೈಸೂರು ರೈಲ್ವೆಸ್ಟೇಷನ್ ಪ್ಲಾಟ್‌ಫಾರಮ್ಮಿಗೆ ರೈಲು ಬಿಡುವುದಕ್ಕೆ ಅರ್ಧ ಗಂಟೆಗೆ ಮುಂಚೆಯೇ ಪ್ರಯಾಣಿಕರನ್ನೆಲ್ಲಾ ಬಿಡುವಂತೆ ಮಾಡಬೇಕು ಮತ್ತು ಹೆಂಗುಸರಿಗೆ ಹೋಗಲೂ ಬರಲೂ ಪ್ರತ್ಯೇಕವಾದ ದಾರಿಯನ್ನೇರ್ಪಡಿಸಬೇಕು.

ಉ.—ಅನನುಕೂಲಗಳನ್ನು ಸರಿಪಡಿಸಿಕೊಡುತ್ತೇವೆ. ನೀವು ಹೇಳಿಕೊಳ್ಳಬೇಕಾಗಿರುವುದನ್ನೆಲ್ಲಾ ಈಗ ಹೊಸದಾಗಿ ಬಂದಿರುವ ರೈಲ್ವೆ ಸೆಕ್ರೆಟರಿಯವರಲ್ಲಿಗೆ ಹೋಗಿ ತಿಳಿಸಿಕೊಳ್ಳಿರಿ.

ಪ್ರಾ.—ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡನ್ನು ಸಿಟಿ ಮ್ಯುನಿಸಿಪಲ್ ಬೋರ್ಡಿನೊಡನೆಯೇ ಸೇರಿಸಬೇಕು. ಅಥವಾ ಟ್ರಸ್ಟ್‌ಬೋರ್ಡನ್ನೇ ವಜಾ ಮಾಡಿ ಮ್ಯುನಿಸಿಪಾಲಿಟಿಯ ಮೂಲಕವೇ ಎಲ್ಲ ಕೆಲಸವನ್ನೂ ನಡೆಯಿಸಬೇಕು.

ಉ.—ವಿಚಾರ ಮಾಡೋಣ.

ಪ್ರಾ.—ಕರ್ಜನ್‌ಪಾರ್ಕಿನಲ್ಲಿ ವೆ|| ಮಿಷನ್ ಸ್ಕೂಲ್ ಪಕ್ಕದ ಜಾಗವನ್ನು ವರ್ತಕರ ಕ್ಲಬ್ಬನ್ನು ಕಟ್ಟಲು ಕೊಡಿಸಬೇಕು.

ಉ.—ಅದು ಸಿಕ್ಕುವುದಿಲ್ಲವೆಂದು ಮೊದಲೇ ತಿಳಿಯಿಸಿದೆ. ಇನ್ನಾವುದನ್ನಾದರೂ ಚುನಾಯಿಸಿ.

ಪ್ರಾ.—ಮೈಸೂರು ಸಿಟಿ ಮ್ಯುನಿಸಿಪಾಲಿಟಿಗೆ ಪ್ರಜೆಗಳಿಂದ ಚುನಾಯಿಸಲ್ಪಡುವ ಮೆಂಬರುಗಳ ಸಂಖ್ಯೆಯನ್ನು ೨೦ರಿಂದ ೨೪ಕ್ಕೆ ಹೆಚ್ಚಿಸಬೇಕು.

ಉ.—ನೋಡೋಣ.

ಪ್ರಾ.—ಶ್ರೀರಂಗಪಟ್ಟಣವನ್ನು ಜೀರ್ಣೋದ್ಧಾರ ಮಾಡಿ ಅನಾರೋಗ್ಯವನ್ನು ತಪ್ಪಿಸಬೇಕು.

ಉ.—ಚೀಫ್ ಇಂಜನಿಯರು ೨ ತಿಂಗಳೊಳಗೆ ಎಸ್ಟಿಮೇಟನ್ನು ಕಳುಹಿಸುತ್ತಾರೆ.

ಪ್ರಾ.—ನಂಜನಗೂಡಿನಲ್ಲಿ ಸರ್ಕಾರಿ ಆಫೀಸುಗಳಿಗೂ ಆಫೀಸರುಗಳ ವಾಸಕ್ಕೂ ತಕ್ಕ ಕಟ್ಟಡಗಳನ್ನು ಕಟ್ಟಿಸಬೇಕು.

ಉ.—ಯೋಚಿಸುತ್ತೇವೆ.

ಪ್ರಾ.—ಮಳವಳ್ಳಿ ತಾಲ್ಲೂಕು ಹಲಗೂರು ಹೋಬಳಿಯಲ್ಲಿ ಶಿಂಷಾನದಿಗೆ ಕಟ್ಟೆಯನ್ನು ಕಟ್ಟಿಸಬೇಕು.

ಉ.—ವಿಚಾರಣೆಯಲ್ಲಿದೆ. ಕೆಲ ವರ್ಷಗಳ ವರೆಗೆ ಹಣವೊದಗುವುದಿಲ್ಲ.

ಪ್ರಾ.—ಮೈಸೂರು ಪಟ್ಟಣದಲ್ಲಿ ಚಾಮರಾಜಪುರದ ಸ್ಟೇಷನ್ನಿನ ವರೆಗೆ ಮೇಲ್ ಗಾಡಿಯನ್ನು ಬಿಡಬೇಕು.

ಉ.—ಹಿಂದಣ ಅನುಭವದ ಲೆಕ್ಕವನ್ನು ನೋಡುವಲ್ಲಿ ಆ ೧ ಮೈಲಿ ದೂರ ಹೋಗಿಬರುವುದಕ್ಕೆ ಹಿಡಿಯುವಷ್ಟು ಖರ್ಚು ಅಲ್ಲಿಯ ಟ್ರಾಫಿಕ್ಕಿನಿಂದ ಬರುವುದಿಲ್ಲ. ಬೆಂಗಳೂರಿನಿಂದ ಬರುವ ಮೇಲು ಸೀದಾ ನಂಜನಗೂಡಿಗೆ ಹೋಗುವಂತೆ ಮಾಡುವುದನ್ನು ಯೋಚಿಸುತ್ತೇವೆ.

ಪ್ರಾ.—ನಂಜನಗೂಡಿಗೆ ಸುಲ್ಲಳ್ಳಿ ನಾಲೆಯಿಂದ ಕುಡಿಯುವ ನೀರನ್ನೊದಗಿಸುವ ಕೆಲಸಕ್ಕೆ ಇದುವರೆಗೆ ೭೦ ಸಾವಿರ ರೂ. ಖರ್ಚಾಯಿತು. ಎಲ್ಲಾ ವ್ಯರ್ಥವಾಯಿತು. ಇಲ್ಲಿ ಸಾಲೀಯಾನಾ ಆಗುವ ನೀರಿನ ಖರ್ಚಿನಲ್ಲಿ ಅರ್ಧವನ್ನು ಸರ್ಕಾರದವರು ವಹಿಸಿಕೊಂಡು ಸಲೀಸಾಗಿ ನೀರು ಒದಗುವಂತೆ ಮಾಡಿಸಬೇಕು.

ಉ.—ನೀವು ವಿದ್ಯುಚ್ಛಕ್ತಿಯನ್ನು ತರಿಸಿಕೊಂಡರೆ ಖರ್ಚು ಸುಲಭವಾಗುತ್ತದೆ. ೨೦೦ ಹಾರ್ಸ್ ಪವರನ್ನು ನೀವು ತೆಗೆದುಕೊಳ್ಳುವುದಾದರೆ ಅಲ್ಲಿಗೆ ಸರ್ಕಾರಿ ಖರ್ಚಿನಿಂದ ಪವರನ್ನು ಒದಗಿಸಿಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಹಾಗೆ ಮಾಡಬಹುದು. ನೀವು ಮ್ಯುನಿಸಿಪಾಲಿಟಿಯಿಂದ ಡಿ|| ಕಮಿಷನರಿಗೆ ಬರೆಯಿರಿ. ನಾನು (೨ನೆ ಕೌನ್ಸಿಲರು) ಖುದ್ದಾಗಿ ಬಂದು ನೋಡುತ್ತೇನೆ.

ಪ್ರಾ—ನಂಜನಗೂಡಿನಲ್ಲಿ ಚರಂಡಿಗಳನ್ನು ಕ್ರಮಪಡಿಸಿಕೊಡಬೇಕು.

ಉ.—ಅದಕ್ಕೆ ೨೧ ಸಾವಿರ ರೂ. ಅಂದಾಜಾಗಿದೆ. ಕೂಡಲೇ ಪ್ರಾಜೆಕ್ಟ್ ಕಳುಹಿಸಿಕೊಡುತ್ತಾರೆ.

ಪತ್ರವ್ಯವಹಾರ.

ಅಯ್ಯೋ ಹೊಟ್ಟೆಕಿಚ್ಚೆ !

ಸ್ವಾಮಿ !

ಸೀಮೆಯೆಣ್ಣೆಗೆ ಹತ್ತಿದ ಬೆಂಕಿಯ ಮೇಲೆ ಸೀಪಾಯಿಗಟ್ಲೆ ನೀರನ್ನು ಹೊಯ್ದರೂ ಅದು ನುತ್ತಷ್ಟು ಹೆಚ್ಚುವದೇ ಹೊರತು ಆರುವುದಿಲ್ಲ. ಅದರ ಬಾಯಿತುಂಬಾ ಮಣ್ಣು ಬಿದ್ದರೇ ಅದು ತಣ್ಣಗಾಗುವುದು. ಅಸೂಯಾಗ್ನಿಯ ಮೇಲೆ ಲೋಕದ ಜನರೆಲ್ಲಾ ಎಷ್ಟು ಛೀತ್ಕಾರ ಥೂತ್ಕಾರಗಳನ್ನು ಮಾಡಿದರೂ ಇದೂ ಆರುವುದಿಲ್ಲ. ಸೌದೆಯೆಲ್ಲಾ ಉರಿದು ಮುಗಿದರೆ ಬೆಂಕಿಯು ತಾನೇ ತಣ್ಣಗಾಗುವಂತೆ ಅಸೂಯಾಳುಗಳ ದೇಹವು ಕಣ್ಮರೆಯಾದ ಮೇಲೆಯೇ ಅವರನ್ನಾಶ್ರಯಿಸಿದ ಅಸೂಯಾಗ್ನಿಯೂ ನಿರ್ಮೂಲವಾದೀತು.

ಮೈಸೂರು ದೇಶದಲ್ಲಿ ಒಕ್ಕಲಿಗರ ಸಂಖ್ಯೆಯು ಬಹಳ ದೊಡ್ಡದು. ಆದರೂ ಅವರಲ್ಲಿ ವಿದ್ಯೆಯು ಬಹಳ ಕಡಿಮೆ. ಒಕ್ಕಲಿಗರ ಸಂಘವು ಏರ್ಪಟ್ಟ ಬಳಿಕ ಆ ಜನರಲ್ಲಿ ವಿದ್ಯಾಭಿರುಚಿಯೂ ನಾಲ್ಕರಂತೆ ನಾವು ಗೌರವದಿಂದ ಬಾಳಬೇಕೆಂಬ ಕುತೂಹಲವೂ ವೃದ್ಧಿಯಾಗುತ್ತಲಿವೆ. ಅವರ ಜನರನ್ನು ವಿದ್ಯಾಬುದ್ಧಿವಂತರನ್ನಾಗಿ ಮಾಡುವುದಕ್ಕಾಗಿ ಒಕ್ಕಲಿಗರ ಪತ್ರಿಕೆಯೂ

ಅವರಲ್ಲಿನ ಮುಂದಾಳುಗಳೂ ಮನಮುಟ್ಟಿ ಕೆಲಸ ಮಾಡುತ್ತಿದ್ದಾರೆ. ದೇಶದ ಮುಖ್ಯ ಪ್ರಜೆಗಳ ಉದ್ಧಾರಕ್ಕೆ ಈ ಪ್ರಯತ್ನವು ವಿಶೇಷ ಸಹಾಯವಾಗಿರುವುದನ್ನು ಕಂಡು ಶ್ರೀಮನ್ಮಹಾರಾಜರವರೂ ಯುವರಾಜರೂ ಅವರ ಸರ್ಕಾರದವರೂ ಸಂತೋಷಪಟ್ಟು ಆ ಸಂಘದ ಪೋಷಣೆಯಲ್ಲಿ ತಮ್ಮ ಅಭಿಮಾನವನ್ನು ನಾನಾರೀತಿಯಿಂದ ವ್ಯಕ್ತಪಡಿಸಿದ್ದಾರೆ. ದೇಶದಲ್ಲಿ ಯಾವೊಂದು ಭಾಗವು ವೃದ್ಧಿಗೊಂಡರೂ ಅದು ದೇಶಭಕ್ತರಿಗೆ ಸಂತೋಷಪ್ರದವಾಗುವುದು ಸಹಜವಾಗಿರುತ್ತದೆ.

ಆದರೆ ಸಂಪದಭ್ಯುದಯದ ಕೂಟದವರಿಗೆ ಮಾತ್ರ ಇದು ಸೈರಣೆಯನ್ನುಂಟುಮಾಡಿಲ್ಲ. ಬ್ಯಾರಿಸ್ಟರುಗಳಾದ ಮ|| ನಾಗಪ್ಪನವರು ಮ|| ರಾಮಯ್ಯನವರು ಮ|| ಪುಟ್ಟಯ್ಯನವರುಗಳು ತಮ್ಮ ಜನರ ಕಾನ್ಫರೆನ್ಸುಗಳಿಗೆ ಹೋಗಿ ಉಪನ್ಯಾಸ ಮಾಡಿ ಚಂದಾ ವಸೂಲ್ಮಾಡಿಸುತ್ತಾರೆಂದೂ, ಟ್ರಾವಲಿಂಗ್ ಅಲೋಯನ್ಸುಗಳನ್ನು ತೆಗೆದುಕೊಂಡು ಇವರುಗಳು ಇಂಥ ಕೆಲಸ ಮಾಡುತ್ತಿರುವರೆಂದೂ, ಸಂಘಕ್ಕೆ ಇದುವರೆಗೆ ೧ ಲಕ್ಷ ರೂ.ಗಳವರೆಗೆ ವಸೂಲಾಗಿರುವುದು ಸರಿಯಾಗಿ ವಿನಿಯೋಗವಾಗಿದೆಯೇ ಇಲ್ಲವೇ ಎಂಬುದನ್ನು ಯಾವೊಬ್ಬ ಒಕ್ಕಲಿಗನಾದರೂ ವಿಚಾರ ಮಾಡಲು ಹಕ್ಕುಳ್ಳವನಾಗಿರುವುದರಿಂದ ಹಾಗೆ ಮಾಡಬೇಕೆಂದೂ, ಸರ್ಕಾರದ ಅಧಿಕಾರಿಗಳು ಚಂದಾ ವಸೂಲ್ಮಾಡಕೂಡದೆಂದು ಮದ್ರಾಸ್ ಸರ್ಕಾರದವರೂ ಇಂಡಿಯಾ ಸರ್ಕಾರದವರೂ ರೂಲನ್ನು ಮಾಡಿದ್ದಾರೆಂದೂ, ಅದನ್ನು ಎಲ್ಲಾ ಗೌರ್ನಮೆಂಟಿನವರೂ ಆಚರಣೆಗೆ ತರಬೇಕೆಂದೂ ಮುಂತಾಗಿ ಸಂಪದಭ್ಯುದಯದ ಕೂಟದ ಲೇಖಕರೊಬ್ಬನು ಒಂದು ಲೇಖನವನ್ನು ಆ ಪತ್ರಿಕೆಗೆ ಬಾತ್ಮಿಯೆಂದು ಬರೆದುಕೊಂಡಿದ್ದಾರೆ.

ಈ ಹೊಟ್ಟೆಕಿಚ್ಚಿನ ಪ್ರಮಾಣವೆಷ್ಟಿದೆ ನೋಡಿ. ವಿದ್ಯಾಭ್ಯಾಸ ಪ್ರಸಾರಕ್ಕಾಗಿ ಪ್ರಜೆಗಳಿಂದ ಒದಗುವಷ್ಟು ದುಡ್ಡನ್ನು ವಸೂಲ್ಮಾಡಿಕೊಳ್ಳುವದಕ್ಕೆ ಸರ್ಕಾರದವರೇ ಬದ್ಧಕಂಕಣರಾಗಿ ನಿಂತಿದ್ದಾರೆ. ಆ ಧರ್ಮಕಾರ್ಯಕ್ಕೆ ದ್ರವ್ಯಸಹಾಯ ಮಾಡಿದವರಿಗೆ ರಾಜ ಸಭೆಯಲ್ಲಿ ಮರ್ಯಾದೆ ಮೊದಲಾದದ್ದನ್ನು ಕೊಡಲಿಕ್ಕೂ ಏರ್ಪಡಿಸಿದ್ದಾರೆ. ಸ್ಕೂಲುಕಟ್ಟಡಕ್ಕೆ ಲೈಬ್ರರಿಗೆ ಹಾಸ್ಟಲ್ಲಿಗೆ ಪ್ರಜೆಗಳು ಎಷ್ಟು ಹಣವನ್ನು ಕೊಟ್ಟರೆ ಅದಕ್ಕೆ ಸಮನಾದಷ್ಟು ಹಣವನ್ನು ಸರ್ಕಾರದವರೂ ಕೊಡುತ್ತೇವೆಂದು ಹೇಳಿ, ಪ್ರಜೆಗಳ ಹಣವನ್ನು ಒದಗಿದಷ್ಟು ಮಟ್ಟಿಗೆ ವಸೂಲ್ಮಾಡಿಕೊಳ್ಳಲಿಕ್ಕೆ ಸಿದ್ಧರಾಗಿದ್ದಾರೆ. ಎಕನಾಮಿಕ್ ಸೂಪರಿಂಟೆಂಡೆಂಟರನ್ನೂ ಲೆಕ್ಚರರುಗಳನ್ನೂ ಇದಕ್ಕೆ ಏಜಂಟರಂತೆ ನೇಮಿಸಿ, ಡಿಸ್ಟ್ರಿಕ್ಟ್ ತಾಲ್ಲೂಕುಗಳಲ್ಲೆಲ್ಲಾ ಉಪನ್ಯಾಸಕೊಡಿಸಿ, ಪ್ರೋತ್ಸಾಹಪಡಿಸುತ್ತಿದ್ದಾರೆ. ಒಕ್ಕಲಿಗರ ಕಾನ್ಫರೆನ್ಸುಗಳಿಗೆ ಡಿ|| ಕಮಿಷನರು ತಾಲ್ಲೂಕು ಅಧಿಕಾರಿಗಳು ಮೊದಲಾದ ಸರ್ಕಾರಿ ಉದ್ಯೋಗಿಗಳೇ ಹೋಗಿ ಅವರ ಉದ್ಧಾರಕ್ಕೆ ಅವಶ್ಯವಾದ ಸೂಚನೆಗಳನ್ನು ಉಪದೇಶಮಾಡಿ ಸಹಾಯ ಮಾಡುತ್ತಿದ್ದಾರೆ. ಹೀಗಿರುವಾಗ ರಾಮಯ್ಯನವರೇ ಮೊದಲಾದ ಒಕ್ಕಲಿಗ ದೊಡ್ಡಮನುಷ್ಯರುಗಳು ಅಂಥ ಕಾನ್ಫರೆನ್ಸುಗಳಿಗೆ ಹೋದಮಾತ್ರಕ್ಕೇ ಮಾಡಬಾರದ್ದನ್ನು ಏನುಮಾಡಿರುವರು? ಸರ್ಕಾರದ ಉದ್ಯೋಗಿಗಳಾಗಿದ್ದ ಮಾತ್ರಕ್ಕೇ ಅವರ ಜನರ ಉದ್ಧಾರಕ್ಕೆ ತಕ್ಕ ಪ್ರಯತ್ನವನ್ನು ಸೂಚಿಸಿ ಅವರುಗಳು ಉಪನ್ಯಾಸ ಮಾಡಿದ್ದರಲ್ಲಿ ದೋಷವೇನು? ಸರ್ಕಾರಕ್ಕಾಗಲೀ ದೇಶಕ್ಕಾಗಲೀ ಆದದ್ರೋಹವೇನು? ಇದರಿಂದ ದೇಶದಮತ್ತಾವ ಪ್ರಜೆಗಳಿಗೂ ಉಂಟಾಗದಿದ್ದ ಸಂಕಟವು ಸಂಪದಭ್ಯುದಯದ ಲೇಖಕರಿಗೆ ಮಾತ್ರ ಉಂಟಾಗುವದಕ್ಕೆ ಕಾರಣವೇನು? ಅವರಲ್ಲಿ ಪರರ ಅಭಿವೃದ್ಧಿಯನ್ನು ನೋಡಿ ಸೈರಿಸಲಾರದ ಹೊಟ್ಟೆಕಿಚ್ಚು ಮಿತಿಮೀರಿ ತುಂಬಿತುಳುಕುತ್ತಿರುವುದೇ ಕಾರಣವಲ್ಲವೆ? ಸರ್ಕಾರದವರು ಮಾಡುತ್ತಿರುವ ಕಾರ್ಯದಲ್ಲಿ ಒಂದು ಭಾಗವನ್ನು ಮ|| ನಾಗಪ್ಪನವರೇ ಮೊದಲಾದವರು ಮಾಡಿರುವರೆಂದು ಹೇಳುವಲ್ಲಿ ಅಡ್ಡಿಯಿಲ್ಲ. ಈ ದೊಡ್ಡಮನುಷ್ಯರು ನ್ಯಾಯಕ್ಕೆ ವಿರುದ್ಧವಾಗಿ ಸರ್ಕಾರಿ ಅಲೋಯನ್ಸುಗಳನ್ನು ತೆಗೆದುಕೊಂಡರೆಂತಾಗಲಿ ಅಥವಾ ಸಂಘಕ್ಕೆ ವಸೂಲಾದ ಹಣದಲ್ಲಿ ೧ ಪೈಯನ್ನಾದರೂ ದುರ್ವಿನಿಯೋಗಪಡಿಸುತ್ತಾರೆಂತಾಗಲೀ ಭಾವಿಸಲು ಲೇಶವಾದರೂ ಅವಕಾಶವಿರುವುದಿಲ್ಲ. ಹಾಗಿದ್ದರೆ ಸರ್ಕಾರದವರೇ ಮತ್ತು ಒಕ್ಕಲಿಗ ಕಮ್ಯೂನಿಟಿಯವರೇ ನೋಡಿಕೊಳ್ಳುತ್ತಾರೆ. ತಾನು ಬೊಗಳಿಬಿಟ್ಟರೆ ಈ ದೊಡ್ಡಮನುಷ್ಯರ ಪ್ರಯತ್ನದ ಮೇಲೆ ಸರ್ಕಾರದ ಸಾನುಭೂತಿಯು ತಪ್ಪಿಹೋಗುವುದೆಂತಲೂ, ಒಕ್ಕಲಿಗರ ಸಂಘಕ್ಕೆ ದ್ರವ್ಯದಾನ ಮಾಡುವ ಆ ಕಮ್ಯೂನಿಟಿಯವರಿಗೆ ಸಂಶಯ ಹುಟ್ಟಿ ಹಣ ಕೊಡುವದು ನಿಂತುಹೋಗುವುದೆಂತಲೂ ವಿಷತುಲ್ಯವಾದ ದುಸ್ಸಂಕಲ್ಪವನ್ನು ಯಾವ ಕಪಟಿಯೋ ಮನಸ್ಸಿನಲ್ಲಿಟ್ಟುಕೊಂಡು ಈ ಲೇಖನವನ್ನು ಬೆಳಸಿದಂತೆ ಕಾಣುತ್ತದೆ. ಇಂಥ ದುರುಳರೂ ಅಸೂಯಾಳುಗಳೂ ಹೆಚ್ಚಿದ ದೇಶವು ವೃದ್ಧಿಗೆ ಬರುವುದುಂಟೇ? ಇಂಥ ಪಾಪಾತ್ಮರು ತಮ್ಮ ಮಾಯಾಜಾಲಗಳಿಂದ ಇಹಲೋಕ ಶಿಕ್ಷೆಯನ್ನು ತಪ್ಪಿಸಿಕೊಂಡರೂ ಜಗದೀಶನು ತಕ್ಕ ಶಿಕ್ಷೆ ಮಾಡದಿರುವನೇ?

ಸರ್ಕಾರಿ ಆಫೀಸರು ಚಂದಾ ವಸೂಲಿ ಮಾಡಬಾರದೆಂಬ ರೂಲ್ಸನ್ನು ಮಾಡಬೇಕೆಂದು ಈ ಲೇಖಕರು ಹೇಳುತ್ತಾರಷ್ಟೆ. ಪುಣ್ಯಾತ್ಮರು ಟಿ. ಆನಂದರಾಯರು ತಮ್ಮ ದಿವಾನಗಿರಿಯಲ್ಲೇ ಇಂಥ ರೂಲ್ಸನ್ನು ಮಾಡಿ ಈ ಲೇಖಕರಂಥವರಿಗೆ ಹೊಟ್ಟೆಯನ್ನು ತಣ್ಣಗೆ ಮಾಡಿದ್ದಾರೆ. ಆದರೆ ಅದು ಇದ್ದರೂ ಸತ್ತಂತಿದೆ. ಎಷ್ಟೋ ಜನ ಆಫೀಸರುಗಳು ಹರಿಕಥಾ ದಾಸರಿಗೂ ಸಂಗೀತಗಾರರಿಗೂ ದಾಸಕೂಟದವರಿಗೂ ದೇವಾಲಯ ಪ್ರತಿಷ್ಠೆ ಮಾಡಬೇಕೆಂದು ಬರುವ ಯಾಚಕರಿಗೂ ಸಹ ಚಂದಾ ಮಾಡಿಸಿಯೇ ಕೊಡುತ್ತಿದ್ದಾರೆ. ಮ|| ರಾಮಯ್ಯನವರೇ ಮೊದಲಾದವರು ಮಾಡುವ ಕೆಲಸವು ಈ ಕಾರ್ಯಗಳಿಗಿಂತ ಕೋಟಿಪಾಲು ಉತ್ಕೃಷ್ಟವಾದದ್ದು. ಮತ್ತು ಸರ್ಕಾರಕ್ಕೆ ಪ್ರಿಯವಾದದ್ದು. ಆದರೆ ಇವರುಗಳು ಅನಾಥಾಲಯವೇ ಮೊದಲಾದವುಗಳಿಗೆ ಚಂದಾ ಕೊಡಿಸಿಕೊಟ್ಟಿದ್ದರೆ ಈ ಫುಕಾರೇ ಬರುತ್ತಿರಲಿಲ್ಲ. ರಿಜಿಸ್ಟ್ರೇಷನ್, ಪೊಲೀಸು, ರೆವಿನ್ಯೂ, ಜುಡಿಷಿಯಲ್, ಇಂಜನಿಯರಿಂಗ್ ಮೊದಲಾದ ಎಷ್ಟೋ ಇಲಾಖೆಗಳಲ್ಲಿ ಹಾವು ಚೇಳುಗಳಂತೆ ಸೇರಿಕೊಂಡು ಪ್ರಜೆಗಳನ್ನು ಲಂಚದ ಕೊಂಡಿಗಳಿಂದ ಹಿಂಸಿಸುತ್ತಿರುವ ಅಪರಿಮಿತ ದೇಶಕಂಟಕರ ಚರಿತ್ರೆಗಳೆಲ್ಲಾ ಸಂಪದಭ್ಯುದಯ ಪತ್ರಿಕೆಗೂ ಅದರ ಲೇಖಕರಿಗೂ ಕಣ್ಣಿಗೆ ಬೀಳುವುದೇ ಇಲ್ಲವೇನೊ! ಬಿದ್ದರೆತಾನೇ ಏನು? “ತನ್ನದು ಹೊನ್ನು”. ದೇಶದ ಪ್ರಜೆಗಳನ್ನೆಲ್ಲಾ ಹೀರೆ ಹಿಪ್ಪೆ ಮಾಡುತ್ತಿರುವ ಲಂಚಪಿಶಾಚಿಯ ಉಚ್ಚಾಟನಕ್ಕೆ ಸಂಪದಭ್ಯುದಯ ಪತ್ರಿಕೆಯಲ್ಲಿ ಒಂದಾದರೂ ಆರ್ಟಿಕಲ್ಲು ಬಂದದ್ದನ್ನು ಯಾರೂಕಾಣರು. ಒಬ್ಬರಮೇಲೊಬ್ಬರನ್ನು ಎತ್ತಿಕಟ್ಟುತ್ತ ಪರರ ಉತ್ಕರ್ಷವನ್ನು ನೋಡಿ ಕರುಬುತ್ತ ದೇಶವೆಲ್ಲಾ ಅಜ್ಞಾನಾಂಧಕಾರದಲ್ಲಿದ್ದರೆ ತಮ್ಮ ಹೊಟ್ಟೆಯನ್ನು ಹೊರಕೊಳ್ಳಬಹುದೆಂಬ ದುರ್ಯೋಚನೆಯಲ್ಲಿ ಮಗ್ನರಾಗಿರುವ ಈ ಲೇಖಕರಂಥವರಿಗೆ ಅದಕ್ಕೆ ಸಂಬಂಧಪಟ್ಟ ಕಿತ್ತಾಟದ ಲೇಖನಗಳು ಬೇಕೇ ಹೊರತು ಸರ್ವಸೋದರತ್ವ, ಪರಸ್ಪರ ಪ್ರೀತಿ, ಸತ್ಕಾರ್ಯಪ್ರೋತ್ಸಾಹ, ವಿವೇಕವರ್ಧನಗಳಿಗೆ ಸಾಧಕವಾದ ಲೇಖನಗಳನ್ನು ಬರೆಯುವುದಕ್ಕೆ ಪ್ರವೃತ್ತಿಯೂ ಅವಕಾಶವೂ ಎಲ್ಲಿದ್ದೀತು?

ದೇಶಸೇವಕ.

ನವೀನ ಪದವೀಧರರ ಸನ್ಮಾನ.

ದಾವಣಗೆರೆ ಹಿರೇಮಠದ ವೇ|| ರುದ್ರಶಾಸ್ತ್ರಿಗಳವರ ಮಕ್ಕಳಾದ ಮ|| ರಾ|| ಚಂದ್ರಶೇಖರಯ್ಯನವರು ಈಸಾರೆ ಮೈಸೂರು ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದುದರಿಂದ ಇವರಿಗೆ ಇಲ್ಲಿಯ “ಜ್ಞಾನಪ್ರಸಾರಕ” ಸಂಘದವರು ಹೈಸ್ಕೂಲ್ ಹೆಡ್‌ಮಾಸ್ತರರಾದ ಮಿ|| ಮಹಮ್ಮದ್ ದಾವುದ್‌ಸಾಹೇಬರ ಹಸ್ತದಿಂದ ಸುವರ್ಣ ಪದಕವನ್ನು ಕೊಡಿಸುವ ಸಮಾರಂಭವನ್ನು ಕಳೆದ ೧೪ ನೆಯ ತಾರೀಖಿನ ದಿವಸ ಕಾಟನ್‌ಮಾರ್ಕಟ್ಟಿನಲ್ಲಿ ನೆರವೇರಿಸಿದರು. ಇಲ್ಲಿ ಎ.ವಿ. ಸ್ಕೂಲು ಸ್ಥಾಪನೆಯಾಗಿ ೨೨ ವರ್ಷಗಳಾಗುತ್ತಾ ಬಂದರೂ ಇವರೇ ಈ ಊರಲ್ಲಿ ಮೊದಲನೆಯ ಪದವೀಧರರು. ಇನ್ನುಮೇಲಾದರೂ ಈ ಸ್ಥಳದವರು ವಿದ್ಯಾಭ್ಯಾಸದ ಕಡೆಗೆ ಹೆಚ್ಚಾದ ಲಕ್ಷ್ಯವನ್ನು ಕೊಟ್ಟು ಇಂತಹ ಸಮಾರಂಭಗಳು ಪ್ರತಿ ವರ್ಷದಲ್ಲಿಯೂ ನಡೆಯುವಂತೆ ಮಾಡುವರೆಂದು ಹಾರೈಸುತ್ತೇನೆ.

ವಿದ್ಯಾಭಿಮಾನಿ.

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬೀ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗುವಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧಿಯಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100ರೂ. ಬಹುಮಾನ ಕೊಡುತ್ತೇವೆ. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ 5 ರೂ.

ವಿಳಾಸ—ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

34

ಜರ್ಮನ್ ಬೆಳ್ಳಿ ರಿಸ್ಟ್‌ವಾಚ್.



ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1 ಕ್ಕೆ ರೂ. 5—8—0.

ಸ್ವಿಸ್. ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರವು ಮಜಬೂತಾಗಿರುವದು. ಗಾಳಿ ಧೂಳು ಸೇರದಂತೆ ಎರಡು ಕಡೆಯೂ ಡೂಮು ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವುದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ.

ಬಹುಮಾನಗಳ ವಿವರ:— ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟನ ರೋಜಾ ಹೂವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

34 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 365 ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

34

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾ

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿ

ಈ ಯಂತ್ರಗಳು ಸೀಮೆಯಲ್ಲಿ ತಯಾರಾ ಫಿಲ್ಲಮ್ಸ (ಚಿತ್ರಪಟ) ಗಳನ್ನು ಹಾಕುವಾಗಲೂ ಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್‌ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲೆತಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಲಮ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

9 ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಬೀದಿ ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ.

34

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

೧೯೨೦ ನೆಯ ಇಸವಿ ನವಂಬರ್ ತಾ|| ೨೧ ರಿಂದ ೧೯೨೦ ನೆಯ ನವಂಬರ್ ತಾ|| ೨೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಕಾರ್ತೀಕ ಶುದ್ಧ ದಶಮಿಯಿಂದ ಕಾರ್ತೀಕ ಬಹುಳ ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕಮಾ
21	ಭಾನು	ದಶ	13-35	ಪೂಭಾ	1-40	7
22	[1]ಸೋಮ	ಏಕಾ	13-44	ಉಭಾ	3-29	8
23	[2]ಮಂಗಳ	ದ್ವಾ	12-37	ರೇವ	4-4	9
24	ಬುಧ	ತ್ರಯೋ	10-30	ಅಶ್ವಿ	3-33	10
25	[3]ಗುರು	ಚತು	6-58	ಭರ	2-8	11
26	[4]ಶುಕ್ರ	ಪೌ-ಉ	2-44 59-29	ರೋಹಿ	56-52	12
27	ಶನಿ	ಬಿದಿ	52-41	ಮೃಗ	52-43	13

(1) ಕಾರ್ತೀಕ ಸೋಮವಾರಂ, ಸರ್ವತ್ರೈಕಾದಶೀ. (2) ಉತ್ಥಾನದ್ವಾದಶೀ, ಪುಷ್ಪಬೃಂದಾವನೋತ್ಸವಃ. (3) ಶಿವದೀಪಃ. (4) ಧರ್ಮಸ್ಥಳದಲ್ಲಿ ದೀಪೋತ್ಸವಃ, ವಿಷ್ಣುದೀಪಃ, ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGIST'ED NO. M

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ನವಂಬರ್ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೪೮

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

45

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಕಸ್ತೋತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ.ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿಃ	೦—೧೨—೦
ಶಿವಪೂಜಾವಿಧಿಃ	೦—೧೪—೦
ಚಾರುಶೀಲೆಚರಿತ್ರೆ	೦—೬—೦
ಪಂಚಾಂಗ	೦—೬—೦

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು! ಯಾವುದೊಂದು ಖರ್ಚಿಲ್ಲದೆ
112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

ವೈದ್ಯವಿದ್ಯ

10

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೇಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಳೆಯಬಹುದು. ಗಂಡಸರದು ಚೀಲ 1ಕ್ಕೆ 1-4-0 ಹೆಂಗಸರದು ಚೀಲ 1ಕ್ಕೆ 3-4-0.

10 ವಿಳಾಸ:—ಎಸ್. ಪಾಲ್ ಅಂಡ್ ಕೋ,
ಪೋಸ್ಟ್‌ಬಾಕ್ಸ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ### ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

40

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೊಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ದೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿಸಹಿತ ಗಡಿಯಾರ 1ಕ್ಕೆ 4-8-0

ಲೂಸ್‌ಕಿಲ್ಲರ್.

10

(ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗುವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ರಕ್ತಶೋಧಕ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ!!

ಮಹದ್ರಾಕ್ಷಾದಿ ಚೂರ್ಣವು.

8

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ದಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಿಸಿಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ನವಂ[illegible] ತಾ|| ೨೮ನೆಯ ಭಾನುವಾರ.

ಅಮೀನ್ ಉಲ್ ಮುಲ್ಕ್ ಮಿ|| ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರ ಸತ್ಕಾರ ಸಮಾರಂಭ.

ಶ್ರೀಮನ್ ಮಹಾರಾಜರವರು ತಮ್ಮ ಹುಜೂರು ಸೆಕ್ರೆಟರಿಯವರಾದ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರಿಗೆ ನೂತನವಾಗಿ ಅಮೀನ್ ಉಲ್ ಮುಲ್ಕ್ ಎಂಬ ಬಿರುದನ್ನು ಅನುಗ್ರಹಿಸಿದುದರಿಂದ ರಾಜಧಾನಿಯ ಸಕಲ ವರ್ಗದ ಪ್ರಜೆಗಳೂ ಆ ಬಿರುದು ತಮಗೇ ಪ್ರಾಪ್ತವಾಗಿದ್ದರೆ ಹೇಗೋ ಹಾಗೆ ಆನಂದಪಟ್ಟಿರುವರು. ಮಿ|| ಮಿರ್ಜಾರವರು ಪ್ರಜೆಗಳ ಮನಸ್ಸನ್ನೆಲ್ಲಾ ತಮ್ಮ ವಿವೇಕ ಸೌಜನ್ಯಾದಿ ಸದ್ಗುಣಗಳಿಂದ ಎಷ್ಟುಮಟ್ಟಿಗೆಸೂರೆಗೊಂಡಿರುವರೆಂಬುದಕ್ಕೆ ಇದು ಮುಖ್ಯ ನಿದರ್ಶನವಾಗಿರುವುದು. ಮೊಟ್ಟಮೊದಲು ರಾಜಬಂಧುವರ್ಗದವರೂ ಅರಮನೆಯ ಉದ್ಯೋಗಿಗಳೇ ಮೊದಲಾದವರೂ ಖಾಸಬಂಗಲೆಯಲ್ಲಿ ಸತ್ಕಾರ ಸಮಾರಂಭವನ್ನೇರ್ಪಡಿಸಿ ತಮ್ಮ ಆನಂದವನ್ನು ವಿಜ್ಞಾಪನ ಪತ್ರಸಮರ್ಪಣದ ಮೂಲಕ ನಿವೇದಿಸಿದರು. ಬಳಿಕ ಸಂಸ್ಕೃತ ಕಲಾಶಾಲೆಯಲ್ಲಿ ವೈದಿಕ ಪಂಡಿತೋತ್ತಮರೆಲ್ಲಾ ಸಮುಚಿತವಾಗಿ ಸತ್ಕರಿಸಿ, ನಾನಾ ಕವಿತಾರಚನೆಗಳಿಂದ ತಮ್ಮ ಅಭಿನಂದನವನ್ನು ವ್ಯಕ್ತಪಡಿಸಿದರು. ಕಟ್ಟಕಡೆಗೆ ಕಳೆದ ತಾ|| ೨೦ ರಲ್ಲಿ ಪುರನಿವಾಸಿಗಳೆಲ್ಲರೂ ನಡೆಯಿಸಿದ ಸತ್ಕಾರ ಸಮಾರಂಭವು ಸರ್ವೋತ್ಕೃಷ್ಟವಾಗಿ ಜರುಗಿತು. ಮ|| ಗಳಾದ ವರ್ಧಮಾನಯ್ಯನವರು, ಮಹಮ್ಮದ್‌ಸೇಟರು, ಡಿ. ಬನುಮಯ್ಯನವರು, ತಿಮ್ಮಯ್ಯನವರೇ ಮೊದಲಾದ ದೊಡ್ಡಮನುಷ್ಯರುಗಳು ಮುಂದಾಗಿ ನಿಂತು ಈ ಕಾರ್ಯವನ್ನು ಅತ್ಯಂತ ಸಲಕ್ಷಣವಾಗಿ ನೆರವೇರಿಸಿದರು. ಶ್ರೀಮನ್ ಮಹಾರಾಜರವರ ಅಮೋಘಾಭಿಮಾನದ ಪ್ರಥಮಾಂಕುರರೂಪವಾಗಿ ಯಾವ ನವೀನ ಮಾರ್ಗಕ್ಕೆ "ಮಿರ್ಜಾರೋಡ್" ಎಂದು ನಾಮಕರಣವು ಮಾಡಲ್ಪಟ್ಟಿರುವುದೋ, ಅದರ ಬತ್ತಿನಲ್ಲೇ ದೇವೋದ್ಯಾನದಂತೆ ನೂತನವಾಗಿ ರಚಿಸಲ್ಪಟ್ಟು ನಿಷತ್‌ಬಾಗ್ ಎಂಬ ಹೆಸರನ್ನು ತಾಳಿರುವ ಉಪವನವನ್ನೇ ಈ ಸಮಾರಂಭಕ್ಕೆ ಆರಿಸಿಕೊಂಡುದು ಈ ಸಮಾರಂಭ ಪ್ರಾಶಸ್ತ್ಯವನ್ನು ಮತ್ತಷ್ಟು ಹೆಚ್ಚಿಸಲು ಸಾಧಕವಾಯಿತು. ಸ್ವಭಾವತಃ ಈ ಪ್ರದೇಶವು ರಾಜಧಾನೀ ಲಕ್ಷ್ಮಿಯ ಮುಖಸರೋಜಕ್ಕೆ ಸಮನಾಗಿರುತ್ತ ಪುರಸೌಂದರ್ಯದ ಸೊಬಗನ್ನು ಅತ್ಯಂತ ಚಿತ್ತಾಕರ್ಷಕವಾಗುವಂತೆ ಮಾಡಿರುತ್ತದೆ. ಇದರ ಮೇಲೆ ಈಗಣ ಋತುವಿನಲ್ಲಿ ಆ ಉಪವನದ ತರುಲತಾದಿಗಳೆಲ್ಲಾ ನವನವ ಪುಷ್ಪಪಲ್ಲವಭರಿತಗಳಾಗಿ ಜಕಜಕಿಸುತ್ತಿರುವುದರಿಂದ ವನದೇವತೆಯೇ ಹಸನ್ಮುಖಿಯಾಗಿ ತನ್ನಲ್ಲಿಗೆ ಬಂದ ಅತಿಥಿಗಳನ್ನೆಲ್ಲಾ ಆದರದಿಂದ ಬರಮಾಡಿಕೊಳ್ಳಲು ಸಾಲಂಕೃತಳಾಗಿ ಸಿದ್ಧಳಾಗಿರುವಂತೆ ತೋರುತ್ತಿರುವುದು. ಇಂಥ ಪ್ರದೇಶವನ್ನು ನಾನಾ ಚಿತ್ರಧ್ವಜಪತಾಕಾದಿಗಳಿಂದಲೂ ಬಗೆಬಗೆಯ ಗೂಡಾರಗಳಿಂದಲೂ ಅಪರಿಮಿತಗಳಾದ ವಿದ್ಯುದ್ದೀಪಾವಳಿಗಳಿಂದಲೂ ಅಲಂಕರಿಸಿಬಿಟ್ಟ ಮೇಲೆ ಅದರ ಸೌಂದರ್ಯವು ಸಾಮಾನ್ಯವಾಗಿದ್ದೀತೇ? ಯಾವ ಸತ್ಪುರುಷರನ್ನುದ್ದೇಶಿಸಿ ಈ ಸಮಾರಂಭವು ಏರ್ಪಡಿಸಲ್ಪಟ್ಟಿತೋ ಆ ಮಹಾಶಯರ ನಿರ್ಮಲಹೃದಯ, ಗಂಭೀರವರ್ತನ, ನಿಸ್ಪೃಹತೆ, ನಿರಹಂಕೃತಿ, ಸೌಜನ್ಯ ಮೊದಲಾದ ಸದ್ಗುಣಗಳ ಮಹತ್ವಕ್ಕೆ ಅನುಗುಣವಾಗಿಯೇ ಸತ್ಕರಣ ಸಮಾರಂಭದ ಏರ್ಪಾಡಲ್ಲವೂ ಮಹತ್ತರವಾಗಿದ್ದುವು. ಈ ಉಪವನ ರಚನೆಯಾದ ಮೇಲೆ ಯಾವಾಗಲೂ ಇಂಥ ವೈಭವವು ಇಲ್ಲಿ ನಡೆಯಲಿಲ್ಲ. ರಾಜಧಾನಿಯು ಹುಟ್ಟಿದ ಮೇಲೆ ಯಾವೊಬ್ಬ ಅಧಿಕಾರಿಗೂ ಇಂಥ ಸತ್ಕಾರ ಸಮಾರಂಭವು ನಡೆದುದಿಲ್ಲವೆಂದು ಸರ್ವರೂ ಹೊಗಳುವಂತೆ ಸತ್ಕರಣದೇರ್ಪಾಟುಗಳೆಲ್ಲವೂ ಜರುಗಿದುವು. ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರೇ ಮೊದಲಾದ ರಾಜಬಂಧು ವರ್ಗದವರೂ, ಶ್ರೀಮನ್ ಮಹಾರಾಜರ ಪ್ರೈವೆಟ್ ಸೆಕ್ರಟರಿ ಮಿ|| ಆರ್. ಎಚ್. ಕೇಂಬಲ್‌ರವರೇ ಮೊದಲಾದ ಯೂರೋಪ್ಯ ಜನರೂ, ಲೌಕಿಕ ವೈದಿಕ ಪಂಡಿತೋತ್ತಮರೂ, ಪ್ರಮುಖ ವರ್ತಕರೂ, ಸ್ಥಲ ಪರಸ್ಥಲಗಳ ಅನೇಕ ಸರ್ಕಾರಿ ಉದ್ಯೋಗಿಗಳೂ, ವಕೀಲರುಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ ಸಹ ಸಾವಿರಾರು ಮಂದಿಗಳು ನೆರೆದಿದ್ದರು. ಮಿ|| ಮಿರ್ಜಾರವರು ೫ ಗಂಟೆಗೆಸರಿಯಾಗಿ ದಯಮಾಡಿಸಲು, ಸತ್ಕರಣ ಸಂಘದ ಪ್ರಮುಖರುಗಳು ದ್ವಾರದಲ್ಲಿ ಇದಿರ್ಗೊಂಡು ಬರಮಾಡಿಕೊಂಡರು. ಮಂಜರಾಬಾದಿನ ಕಡೆಯವರ ಸುಗ್ಗಿಗುಣಿತವೂ, ಸಣ್ಣ ವೇಶ್ಯಾ ಬಾಲಿಕೆಯ ನರ್ತನವೂ, ಅರಮನೆಯ ಕಾನ್ಸರ್ಟೂ, ಹಿಂದೂ ಬ್ಯಾಂಡೂ ಸಹ ಅತಿಥಿಗಳನ್ನು ಅತ್ಯಂತವಾಗಿ ಆನಂದಪಡಿಸಿದುವು. ಗೂಡಾರಗಳಲ್ಲೂ ತರುಗಳ ಕೆಳಗೂ ಏರ್ಪಡಿಸಲ್ಪಟ್ಟಿದ್ದ ಪೀಠಗಳಲ್ಲಿ ಕುಳಿತು ವಿವಿಧ ಫಲಭಕ್ಷ್ಯಾದಿಗಳನ್ನು ಸರ್ವರೂ ಸ್ವೀಕರಿಸಿದರು. ಹೀಗೆ ನೇತ್ರಾನಂದ ಕರ್ಣಾನಂದ ರಸನಾನಂದಗಳನ್ನು ಪಡೆದ ಬಳಿಕ ಉದ್ಯಾನದ ಪಶ್ಚಿಮ ಭಾಗದಲ್ಲಿ ಏರ್ಪಡಿಸಿದ್ದ ಚಪ್ಪರದಾಕಾರದ ಗೂಡಾರದಲ್ಲಿ ಸಭೆಯು ನೆರೆದಿತು. ಸಭಿಕರು ಪ್ರತ್ಯುತ್ಥಾನ ಗೌರವದಿಂದ ಉನ್ನತಾಸನದಲ್ಲಿ ಮಿ|| ಮಿರ್ಜಾರವರನ್ನು ಕುಳ್ಳಿರಿಸಿದರು. ಅವರ ಪಕ್ಕದಲ್ಲಿ ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರೂ ಮಿ|| ಕೇಂಬಲ್‌ರವರೂ ಕುಳಿತರು. ತರುಲತಾದಿಗಳ ಮೇಲೂ ಅಂಗಳದಲ್ಲೂ ಚಿತ್ರ ವಿಚಿತ್ರವಾಗಿ ನೇತುಗಟ್ಟಿದ್ದ ವಿದ್ಯುದ್ದೀಪಾವಳಿಗಳೆಲ್ಲಾ ಹೊತ್ತಿಸಲ್ಪಟ್ಟುವು. ಆ ಪ್ರಕಾಶದಿಂದ ಉಪವನದ ಸೊಬಗು ವರ್ಣನಾತೀತವಾಯಿತು. ಮರಗಳೆಲ್ಲಾ ಜ್ಯೋತಿರ್ಲತೆಗಳಂತೆ ಹೊಳೆಯುತ್ತಿದ್ದುವು. ಸಮಾರಂಭ ವೈಭವವನ್ನು ವನದೇವತೆಯು ಸಹಸ್ರಾಕ್ಷಿಗಳಿಂದ ನೋಡುತ್ತ ನಿಂತಿರುವಂತೆ ದೀಪಾವಳಿಗಳಿಂದ ಕೂಡಿದ ಉಪವನವು ರಾಜಿಸಿತು.

ಮೊಟ್ಟಮೊದಲು ಮಿ|| ಈಸಾಸೇಟರು ಉರ್ದು ಭಾಷೆಯಲ್ಲಿ ರಚಿಸಲ್ಪಟ್ಟಿದ್ದ ಅಭಿನಂದನ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ಸಭಿಕರನ್ನು ಆನಂದಪಡಿಸಿದರು. ಬಳಿಕ ಪುರನಿವಾಸಿಗಳ ವಿಜ್ಞಾಪನ ಪತ್ರವು ಇಂಗ್ಲೀಷಿನಲ್ಲಿ ಮ|| ಎ. ಕೃಷ್ಣರಾವ್ ಬಿ. ಎ. ಬಿ. ಎಲ್ ರವರಿಂದಲೂ, ಕನ್ನಡದ ಪತ್ರಿಕೆಯು, ಮ|| ಎ. ಸಿ. ಲಿಂಗರಾಜ ಅರಸರವರಿಂದಲೂ, ಉರ್ದು ಪತ್ರಿಕೆಯು ಮಿ|| ಮಹಮ್ಮದ್‌ಸೇಟರಿಂದಲೂ ಓದಿ ಒಪ್ಪಿಸಲ್ಪಟ್ಟುವು. ಅದರ ಮುಖ್ಯಾಶಯವು—"ನಿಮ್ಮ ಕುಟುಂಬದವರು ಮೂರು ತಲೆಗಳಿಂದಲೂ ಮೈಸೂರು ಸಂಸ್ಥಾನದ ಅಭ್ಯುದಯವನ್ನು ಕೋರಿ ಕೆಲಸಮಾಡಿದವರಾಗಿರುತ್ತೀರಿ. ನೀವು ಯಾವ ಪಕ್ಷಪಾತಾದಿಗಳಿಗೂ ಎಡೆಗುಡದೆ ಎಲ್ಲ ಪ್ರಜೆಗಳಲ್ಲೂ ಸಮದೃಷ್ಟಿಯಿಂದ ಪ್ರವರ್ತಿಸಿ ಸರ್ವರ ಕೃತಜ್ಞತೆಗೂ ಮನ್ನಣೆಗೂ ಪಾತ್ರರಾಗಿದ್ದೀರಿ. ಈಗ ಭರತಖಂಡದಲ್ಲೆಲ್ಲಾ ಪ್ರಜೆಗಳು ಸಾಂಘಿಕ ರಾಜಕೀಯಾದ್ಯಭಿವೃದ್ಧಿಗಳಿಗಾಗಿ ಪಾಟುಪಡುತ್ತಿದ್ದಾರೆ. ಅದರ ಸೋಂಕು ನಮ್ಮ ದೇಶಕ್ಕೂ ವ್ಯಾಪಿಸುತ್ತಿದೆ. ಇಂಥ ಸಮಯದಲ್ಲಿ ನಮ್ಮ ಪ್ರಭುತ್ವದವರು ಸಾನುಭೂತಿಯಿಂದ ಪ್ರವರ್ತಿಸುವುದು ವಿಹಿತವಾಗಿರುತ್ತದೆ. ಈ ಸಂದಿಗ್ಧ ಸಮಯದಲ್ಲಿ ಪ್ರಜಾವಿಶ್ವಾಸಪಾತ್ರರಾದ ತಾವು ಶ್ರೀಮನ್ಮಹಾರಾಜರವರ ಬಳಿಯಲ್ಲಿ ಮಂತ್ರಾಲೋಚಕರಾಗಿರುತ್ತಿರುವುದು ನಮ್ಮಗಳ ಅದೃಷ್ಟ ವಿಶೇಷವಾಗಿದೆ. ನಿಮ್ಮ ಯೋಗ್ಯತಾವಿಶೇಷವನ್ನೂ ಗುಣಾತಿಶಯವನ್ನೂ ನೋಡಿ ಶ್ರೀಮನ್ಮಹಾರಾಜರು ತಮಗೆ "ನಂಬುಗೆಗೆ ಪಾತ್ರ" ನೆಂಬ ಅನ್ವರ್ಥವುಳ್ಳ ಬಿರುದನ್ನು ಅನುಗ್ರಹಿಸಿದುದು ನಮಗೆಲ್ಲಾ ಪರಮಾನಂದವನ್ನುಂಟುಮಾಡಿರುತ್ತದೆ. ಭಗವಂತನು ತಮಗೆ ಇತೋಪ್ಯತಿಶಯವಾದ ಪದವಿಗಳನ್ನೂ ದೀರ್ಘಾಯುರಾರೋಗ್ಯಗಳನ್ನೂ ಅನುಗ್ರಹಿಸಲಿ" ಎಂಬುದಾಗಿದ್ದಿತು. ಇದಕ್ಕೆ ಮಿ|| ಮಿರ್ಜಾರವರು ಆಂಗ್ಲ ಭಾಷೆಯಲ್ಲಿ ಕೊಟ್ಟ ಉತ್ತರವು ಅವರ ಸೌಗುಣ್ಯದ ಪ್ರತಿಬಿಂಬವಾಗಿದ್ದಿತು. ಅದರ ಮುಖ್ಯಾಭಿಪ್ರಾಯವೇನೆಂದರೆ—ನೀವು ವಿಜ್ಞಾಪನ ಪತ್ರದಲ್ಲಿ ನನ್ನನ್ನು ವಿಶೇಷವಾಗಿ ಹೊಗಳಿದ್ದೀರಿ. ಅಷ್ಟು ಸ್ತುತಿಗೆ ನಾನು ಪಾತ್ರನಲ್ಲ. ನಾನು ಸಂಬಳವನ್ನು ತೆಗೆದುಕೊಳ್ಳುತ್ತ ನನ್ನ ಕರ್ತವ್ಯವನ್ನು ನಾನು ಮಾಡಿದೆನೇ ಹೊರತು ವಿಶೇಷವೇನೂ ಇಲ್ಲ. ನನ್ನ ಮೇಲೆ ನೀವು ಇಷ್ಟು ವಿಶ್ವಾಸವನ್ನೂ ಪ್ರೀತಿಯನ್ನೂ ವಹಿಸರುವುದು ನನ್ನ ಅದೃಷ್ಟವು. ಶ್ರೀಮನ್ಮಹಾರಾಜರವರ ವಿಶ್ವಾಸಕ್ಕೂ ಪ್ರಜೆಗಳಾದ ತಮ್ಮಗಳ ಪ್ರೀತಿಗೂ ಪಾತ್ರನಾಗುವಂತೆ ನಡೆಯುವುದೇ ನನ್ನ ಮುಖ್ಯ ಕರ್ತವ್ಯವಾಗಿರುವುದು. ಈ ದೇಶದಲ್ಲಿ ಪ್ರಜೆಗಳಿಗೂ ಪ್ರಭುಗಳಿಗೂ ಯಾವ ಭೇದವು ಇಲ್ಲ. ಇಬ್ಬರ ಉದ್ದೇಶವೂ ಒಂದೇ ಆಗಿರುವುದು. ಅದುಕಾರಣ ಪ್ರಭುಸೇವೆಯೆಂದರೆ ಪ್ರಜಾಸೇವೆಯೇ ಆಗಿರುವುದು. ಈ ರಾಜಧಾನಿಯು ಉನ್ನತ ಪ್ರಾಸಾದಗಳಿಂದಲೂ ರಮಣೀಯೋದ್ಯಾನಗಳಿಂದಲೂ ಅತ್ಯಂತ ಮನೋಹರವಾಗಿ ಈ ದೇಶದ ಉತ್ಕೃಷ್ಟತೆಯನ್ನು ವ್ಯಕ್ತಪಡಿಸುತ್ತಿದೆ. ಇದು ನೋಟಕ್ಕೆ ಅಂದವಾಗಿರುವುದು ಮಾತ್ರವೇ ಅಲ್ಲದೆ ಇಲ್ಲಿ ಅನೇಕ ಕೈಗಾರಿಕೆಗಳು ವೃದ್ಧಿಗೊಳ್ಳುತ್ತಿವೆ. ಭರತಖಂಡದೊಳಗೆ ಈ ನಮ್ಮ ಸಂಸ್ಥಾನವು ವಿದ್ಯೆಯಲ್ಲೂ ಧನಕನಕಾದಿ ಸಂಪತ್ತಿನಲ್ಲೂ ಮಹೋನ್ನತ ದಶೆಯನ್ನು ಪಡೆದುಕೊಳ್ಳುವಂತೆ ಮಾಡಬೇಕೆನ್ನುವುದೇ ಶ್ರೀಮನ್ಮಹಾರಾಜರ ಮುಖ್ಯ ಸಂಕಲ್ಪವಾಗಿದೆ. ಅದಕ್ಕಾಗಿ ಪ್ರಜೆಗಳಾದ ನಾವೆಲ್ಲರೂ ಉತ್ಸಾಹದಿಂದ ಪ್ರಯತ್ನಪಡಬೇಕು. ಈ ರಾಜಧಾನಿಯನ್ನು ಆರೋಗ್ಯ ಸೌಂದರ್ಯ ಮೊದಲಾದುವುಗಳಲ್ಲಿ ಉತ್ತಮಸ್ಥಿತಿಗೆ ತರುವುದಕ್ಕಾಗಿ ಮಹಾರಾಜರವರು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೇನು? ಮ್ಯುನ್ಸಿಪಾಲಿಟಿಯವರ ಪ್ರಯತ್ನಗಳು ಇನ್ನೂ ಸಂಪೂರ್ಣ ಫಲಪ್ರದವಾಗಿಲ್ಲ. ಬಡಜನರಿಗೆ ತಕ್ಕ ವಸತಿಗಳು ಕಲ್ಪಿಸಲ್ಪಟ್ಟಿಲ್ಲ. ಮ್ಯುನ್ಸಿಪಾಲಿಟಿಯವರು ತಕ್ಕಂತೆ ಕಾರ್ಯದಕ್ಷತೆಯನ್ನು ವಹಿಸಿ ಕೃತಾರ್ಥರಾಗಬೇಕು. ಮತ್ತು ಪ್ರಜೆಗಳೂ ಅದಕ್ಕೆ ವಿಶೇಷವಾಗಿ ಸಹಾಯಕರಾಗಬೇಕು. ನನ್ನ ಮೇಲೆ ಅತ್ಯಂತಾಭಿಮಾನ ವಿಶ್ವಾಸಗಳನ್ನಿಟ್ಟು ನೀವುಗಳು ಮಾಡಿದ ಈ ಸತ್ಕಾರಕ್ಕಾಗಿ ಅತ್ಯಂತ ಕೃತಜ್ಞತೆಯಿಂದ ಅನೇಕ ವಂದನೆಗಳನ್ನರ್ಪಿಸುತ್ತೇನೆ.

ಬಳಿಕ ಮ|| ವರ್ಧಮಾನಯ್ಯನವರೇ ಮೊದಲಾದವರು ಮಿ|| ಮಿರ್ಜಾರವರಿಗೂ ಸಭಿಕರಾದ ಇತರರಿಗೂ, ಪುಷ್ಪಹಾರ ಗುಚ್ಛಗಳನ್ನು ಸಮರ್ಪಿಸಲು, ಭಾವಚಿತ್ರವು ತೆಗೆದುಕೊಳ್ಳಲ್ಪಟ್ಟಿತು. ಶ್ರೀಮನ್ಮಹಾರಾಜರ ಮತ್ತು ಯುವರಾಜರ ಮಿ|| ಮಿರ್ಜಾರವರ ಶ್ರೇಯಸ್ಸನ್ನು ಕೋರಿ ಜಯಘೋಷವು ಮಾಡಲ್ಪಟ್ಟಿತು. ಇಷ್ಟು ಸರ್ವೋತ್ಕೃಷ್ಟವಾದ ಸಮಾರಂಭವನ್ನೇರ್ಪಡಿಸಿದ ಪುರನಿವಾಸಿಗಳ ಶ್ರೇಯಸ್ಸನ್ನು ಕೋರಿ ಜಯಘೋಷವನ್ನು ಮಾಡಬೇಕೆಂದು ಮಿ|| ಕೇಂಬಲ್‌ರವರು ಕೋರಿದರು. ಸಂತೋಷದಿಂದ ಸರ್ವರೂ ಮಿ|| ಮಿರ್ಜಾರವರಿಗೆ ಧನ್ಯವಾದವನ್ನು ಮಾಡುತ್ತ ತೆರಳಿದರು.

ಕಂ|| ಜನಹಿತನಪ್ಪಧಿಕಾರಿಯು |
ಜನಪಾಲಪ್ರೀತಿಪಾತ್ರನಪ್ಪುದುವಿರಳಂ ||
ಜನಹಿತನುಂ ನೃಪಸಂಪ್ರೀ |
ತನು ಮೆಂದಿನಿಸಿರ್ಪ್ಪ ನೀನೆ ಧನ್ಯಂ ಮಿರ್ಜಾ ||

ಗ್ರೀಸಿನ ಸದ್ಯಸ್ಥಿತಿ.

ಯುದ್ಧಾರಂಭ ಕಾಲದಲ್ಲಿ ಗ್ರೀಸ್ ದೇಶವನ್ನು ಕಾನ್‌ಸ್ಟಂಟೈನ್‌ರವರು ಆಳುತ್ತಿದ್ದರು. ಅವರಿಗೆ ಕೈಜರರ ಸಹೋದರಿಯವರು ಪತ್ನಿಯು. ಈ ಕಾರಣದಿಂದ ಅವರು ಜರ್ಮನ್ ಪಕ್ಷಪಾತಿಗಳೆಂದು ಭಾವಿಸಲ್ಪಟ್ಟಿದ್ದರು. ಅವರ ಮಂತ್ರಿಯಾಗಿದ್ದ ವೆನಿಜುಲಾಸ್‌ರವರಿಗೆ ಮಿತ್ರಮಂಡಲಿಯೊಡನೆ ಗ್ರೀಸ್ ದೇಶವು ಸೇರಿದರೆ ದೇಶ ಲಾಭವಾಗುವುದೆಂಬ ದೃಷ್ಟಿಯಿದ್ದಿತು. ಅವರಭಿಪ್ರಾಯಕ್ಕೆ ಅನುಮೋದಿಸುವವರೇ ದೇಶದಲ್ಲಿ ಹೆಚ್ಚು ಮಂದಿಯಿದ್ದರು. ತಮ್ಮಿಷ್ಟಕ್ಕೆ ಒಪ್ಪದಿರುವ ಕಾನ್‌ಸ್ಟಂಟೈನ್ ಪ್ರಭುವಿನ ಮೇಲೆ ಅವರು ತಿರುಗಿ ಬೀಳುವುದಕ್ಕೆ ಉಜ್ಜುಗಿಸಿದರು. ದೇಶಕ್ಕೆ ಹಿತವಾಗುವುದೇ ಮುಖ್ಯವೆಂದು ತಿಳಿದು ಕಾನ್‌ಸ್ಟಂಟೈನ್‌ರವರು ಪ್ರಭು ಪದವಿಯನ್ನೂ ದೇಶವನ್ನೂ ಬಿಟ್ಟು ಹೊರಟುಹೋದರು. ಮಂತ್ರಿ ವೆನಿಜುಲಾಸ್‌ರವರೇ ಕಾರ್ಯತಃ ಪ್ರಭುಗಳಾದರು. ಕಾನ್‌ಸ್ಟಂಟೈನ್‌ರವರ ಕುಮಾರರು ಹೆಸರಿಗೆ ಪ್ರಭುವಾಗಿ ಮಾಡಲ್ಪಟ್ಟರು. ಗ್ರೀಸು ಮಿತ್ರಮಂಡಲಿಯೊಡನೆ ಸೇರಿಕೊಂಡು ಯುದ್ಧಮಾಡಿದುದರಿಂದ ಕಡೆಗೆ ಮಿತ್ರಮಂಡಲಿಗೇ ಜಯವಾಗಿ ಅವರವರ ಒಪ್ಪಂದದ ಪ್ರಕಾರ ಗ್ರೀಸಿಗೆ ತುರ್ಕಿಯಲ್ಲಿರುವ ಸ್ಮರ್ನಾ ಥ್ರೇಸ್ ಭಾಗಗಳು ಸೇರುವಂತಾಯಿತು. ಆದರೆ ತಮ್ಮ ಭಾಗಕ್ಕೆ ಬಂದ ದೇಶವನ್ನು ಇವರು ಆಕ್ರಮಿಸಿಕೊಳ್ಳುವಲ್ಲಿ ತುರ್ಕಿಯ ಜಾತೀಯವಾದಿಗಳಿಗೂ ಗ್ರೀಕ್ ಸೈನ್ಯಕ್ಕೂ ಯುದ್ಧವು ಹತ್ತಿತು. ಅದು ಇನ್ನೂ ಶಾಂತವಾಗಿಲ್ಲ. ಗ್ರೀಕ್‌ಸೈನ್ಯಕ್ಕೆ ಅಪಜಯವು ತಟ್ಟಿತು. ಇದನ್ನೆಲ್ಲಾ ನೋಡಿ ಬರುಬರುತ್ತ ಗ್ರೀಕ್ ಪ್ರಜೆಗಳಿಗೆ ವೆನಿಜುಲಾಸ್‌ರವರ ಕಾರ್ಯಾಚರಣದಲ್ಲಿ ವಿಮುಖತೆ ಹುಟ್ಟಲಾರಂಭವಾಯಿತು. ಹೆಸರಿಗೆ ಮಾತ್ರವಾಗಿದ್ದ ಗ್ರೀಸ್‌ರಾಜನು ಈ ಮಧ್ಯೆ ಮೊನ್ನೆ ತಾನೇ ಕೋತಿ ಕಡಿದು ಸತ್ತನು. ಆತನ ಮಗನು ಅಪ್ರಾಪ್ತವಯಸ್ಕನು. ಅಡ್ಮಿರಲ್ ಕಾನ್‌ಡ್ಯೂರಿಯೋಟಿಸ್ಸನು ರೀಜಂಟಾಗಿ ಏರ್ಪಟ್ಟನು. ಈತನು ವೆನಿಜುಲಾಸನ ಪಕ್ಷದವನು. ಈಗ ಅಲ್ಲಿಯ ಪಾರ್ಲಿಮೆಂಟ್ ಸಭಿಕರನ್ನಾರಿಸುವಿಕೆಯು ಹೊಸದಾಗಿ ನಡೆದುದರಲ್ಲಿ ವೆನಿಜುಲಾಸ್ ಪಕ್ಷದವರಿಗೆ ಓಟುಗಳು ಸ್ವಲ್ಪವಾಗಿ ಬಂದು ಪ್ರತಿಪಕ್ಷದವರೇ ಹೆಚ್ಚು ಜನರು ಬಂದರು. ಹೀಗೆ ಉಂಟಾದ ಪರಿಣಾಮವು ಮಿತ್ರಮಂಡಲಿಯವರಿಗೆಲ್ಲಾ ಆಶ್ಚರ್ಯಕರವಾಗಿರುವುದು. ಈ ಸ್ಥಿತಿಯನ್ನು ನೋಡಿ ವೆನಿಜುಲಾಸು ತನ್ನ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟನು. ಈತನಿಗೆ ವಿರೋಧಿಯಾದ ರಾಲಿಯೆಂಬುವನು ಮುಖ್ಯಮಂತ್ರಿಯಾದುದರಿಂದ ರೀಜಂಟಾಗಿದ್ದ ಡ್ಯೂರಿಯೋಟಸ್ಸು ರಾಜೀನಾಮೆ ಕೊಟ್ಟನು. ಸದ್ಯಃ ಮೃತನಾದ ಪ್ರಭುವಿನ ಪತ್ನಿಯೇ ರೀಜಂಟಾಗಿರುವರು. ಕಾನ್‌ಸ್ಟಂಟೈನ್ ಪ್ರಭುವಿನಲ್ಲಿ ಪಕ್ಷಪಾತವುಳ್ಳ ಪ್ರಜೆಗಳು ಸಿಂಹಾಸನಕ್ಕೆ ಮರಳಿ ಆತನನ್ನೇ ತರಬೇಕೆಂದು ಯೋಚಿಸುತ್ತಿರುವರು. ಪ್ರಜೆಗಳು ತಾವಾಗಿ ಕರೆಯದಿದ್ದರೆ ನಾನು ಬರುವುದಿಲ್ಲವೆಂದು ಅವರು ಹೇಳುತ್ತಿರುವರು. ತಾನು ಯಾವಾಗಲೂ ಇಂಗ್ಲೀಷರಿಗೆ ಮಿತ್ರನೇ ಆಗಿರುವೆನೆಂದೂ ತನ್ನ ವಿಷಯದಲ್ಲಿ ಯಾರೋ ದುರುಳರು ಅವರೊಡನೆ ಚಾಡಿ ಹೇಳಿ ಮನಸ್ಸು ಕೆಡಿಸಿದರೆಂದೂ ಅವರು ಹೇಳುತ್ತಿರುವರು. ಮಿತ್ರಮಂಡಲಿಯವರಿಗೆ ಸಂತೋಷಪಡಿಸಿಯೇ ತಾನು ಪ್ರಭುವಾಗಬೇಕೆಂಬ ಸಂಕಲ್ಪವನ್ನಿಟ್ಟುಕೊಂಡಿರುವಂತೆ ತೋರುತ್ತದೆ ಫ್ರೆಂಚರು ಕಾನ್‌ಸ್ಟಂಟೈನ್ ಪ್ರಭುತ್ವಕ್ಕೆ ಒಪ್ಪುವುದಿಲ್ಲ. ಮಂತ್ರಿಗಳು ಉತ್ತರವಾದಿಗಳಾಗಿ ನಿಂತು ಅಪ್ರಾಪ್ತವಯಸ್ಕನಾದ ಜಾರ್ಜ್ ರಾಜಕುಮಾರನಿಗೆ ಪಟ್ಟಕಟ್ಟಿದರೆ ಅವರು ಗ್ರೀಸ್ ಮೈತ್ರಿಯನ್ನಿಟ್ಟುಕೊಳ್ಳುತ್ತಾರೆ. ಇಲ್ಲದಿದ್ದರೆ ಅದರ ಸಂಬಂಧವನ್ನೇ ಬಿಟ್ಟುಬಿಡುವಂತೆ ತೋರುತ್ತದೆ. ಇಟಲಿಗೆ ಗ್ರೀಸ್ ದೇಶವಿಸ್ತರಣವು ಇಷ್ಟವಾಗಿಲ್ಲ. ಅದು ಕಾರಣ ಕಾನ್‌ಸ್ಟಂಟೈನಿನ ಅಧಿಕಾರವನ್ನು ತೊಲಗಿಸುವ ಯಾವ ಪ್ರಯತ್ನಕ್ಕೂ ತಾನು ಸೇರುವುದಿಲ್ಲವೆಂದು ಅದು ತಿಳಿಯಪಡಿಸಿದೆ. ಗ್ರೀಕ್ ರಾಜರಲ್ಲಿ ಯಾರನ್ನಾದರೂ ತೊಲಗಿಸಬೇಕೆಂದು ಕೋರುವುದಕ್ಕೆ ಇಂಗ್ಲೆಂಡಿಗೂ ಫ್ರಾನ್ಸಿಗೂ ಸಂಪೂರ್ಣ ಸ್ವಾತಂತ್ರ್ಯವಿರುವುದೆಂದು ಆಂಗ್ಲಮಂತ್ರಿ ಮಂಡಲದವರು ಹೇಳುತ್ತಿರುವರು. ಗ್ರೀಸ್ ಪ್ರಜೆಗಳಾದರೊ ಹೊರಗಣವರ ಯಾವ ಅಭಿಪ್ರಾಯವನ್ನೂ ಲೆಕ್ಕಿಸದೆಯೇ ಕಾನ್‌ಸ್ಟಂಟೈನರನ್ನು ದೇಶಕ್ಕೆ ವಿಜೃಂಭಣೆಯಿಂದ ಬರಮಾಡಿಕೊಳ್ಳಲು ಸನ್ನಾಹಗಳನ್ನು ಮಾಡುತ್ತಿರುವರು. ಮುಂದೆ ಹೇಗಾಗುವುದೋ ನೋಡಬೇಕು. ಗ್ರೀಸ್‌ದೇಶವು ಇರುವ ಸ್ಥಳವು ಅತ್ಯಂತ ಪ್ರಮುಖವಾದುದು. ಗ್ರೀಸ್ ಯಾವಕಡೆಗಾದರೆ ಅತ್ತ ಬಲವು ಹೆಚ್ಚಾಗುವುದು. ಅದು ಕಾರಣ ಇದೊಂದು ವಿಷಮಸಂಧಿಯು ಯೂರೋಪ್ ಖಂಡದ ಅಶಾಂತಸ್ಥಿತಿಯನ್ನು ಮತ್ತಷ್ಟು ಹೆಚ್ಚುಗೊಳಿಸುವಂತಿರುವುದು. ಒಂದುವೇಳೆ ಗ್ರೀಸು ಮಿತ್ರಮಂಡಲಿಯಿಷ್ಟಕ್ಕೆ ವಿರುದ್ಧವಾಗಿ ಕಾನ್‌ಸ್ಟಂಟೈನರನ್ನು ಪ್ರಭುವನ್ನಾಗಿ ಮಾಡಿಕೊಂಡರೆ, ಮಿತ್ರಮಂಡಲಿಯವರು ಸ್ಮರ್ನಾಪ್ರಾಂತವನ್ನು ತುರ್ಕಿಗೇ ಉಳಿಯಿಸಿಕೊಟ್ಟರೆ ತುರ್ಕಿಯ ಮನಸ್ಸು ಸಮಾಧಾನವಾಗಿ ಒಂದು ಭಾಗದ ಅಶಾಂತಿಯು ತಪ್ಪಿಹೋಗಬಹುದು. ಆದರೆ ಬೋಲ್ಷೆವಿಕ್ಕರು ಗ್ರೀಸಿನವರೊಡನೆ ಕೂಡಿಕೊಳ್ಳಬಹುದು. ಆಗ್ಲೂ ಒಂದು ತೆರದ ವಿಷಮದಶೆಯು ಇದ್ದೇಇರುವುದು. ದೈವೇಚ್ಛೆಯು ಹೇಗಿರುವುದೋ ತಿಳಿಯಲಿಲ್ಲ.

ಒಳದೇಶದ ವೃತ್ತಾಂತಗಳು.

ನಿಯಮನಿರ್ಮಾಣ ಸಭೆಯು ಕಳೆದ ತಾ|| ೨೨ ರಲ್ಲಿ ಬೆಂಗಳೂರಿನಲ್ಲಿ ಜರುಗಿತು.

ದಿವಾನ್ ಸಾಹೇಬರವರು ಕಳೆದ ಬುಧವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು.

ಮಿ|| ಡಿಸೌಜಾರವರು ಸೀಮೆಗೆ ತೆರಳುವುದಕ್ಕಾಗಿ ಕಳೆದ ತಾ|| ೨೪ ರ ರಾತ್ರಿ ಬೆಂಗಳೂರಿಂದ ಬೊಂಬಾಯಿಗೆ ಪ್ರಯಾಣಮಾಡಿದರು.

ಇನ್‌ಕಂಟ್ಯಾಕ್ಸ್ ಕಲೆಕ್ಟರಿಗೂ ಕಮಿಷನರಿಗೂ ಬರೆದುಕೊಳ್ಳಬೇಕಾದ ಅರ್ಜಿಗಳಿಗೆ ೧ ಆಣೆ ಸ್ಟಾಂಪನ್ನಂಟಿಸಬೇಕೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ನಂಜನಗೂಡಿನಲ್ಲಿ ಕಳೆದ ಗುರುವಾರ ರಾತ್ರಿ ಕೃತ್ತಿಕೋತ್ಸವ ಪ್ರಯುಕ್ತವಾದ ಲಕ್ಷ ದೀಪಾರಾಧನೆಯೂ ಮರುದಿವಸ ರಥೋತ್ಸವವೂ ಸಾಂಗವಾಗಿ ಜರುಗಿದವು.

ಕಾರಾಪುರಕ್ಕೆ ಬೇಂಟೆಗಾಗಿ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ೨ ಹುಲಿಗಳನ್ನು ಬೇಂಟೆಮಾಡಿ ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು.

ಅರ್ಥಸಾಧಕ ಪತ್ರಿಕೆಯು ಮ|| ಎಂ. ಗೋಪಾಲಯ್ಯಂಗಾರರ ಸಂಪಾದಕತ್ವದಲ್ಲಿ ವಿಷಯವಿಚಾರ ಸಮೃದ್ಧಿಯಿಂದ ತನ್ನ ಹೆಸರನ್ನು ಚೆನ್ನಾಗಿ ಸಾರ್ಥಕಪಡಿಸಿಕೊಳ್ಳುತ್ತಿದೆ.

ಬೇರೆ ಕೆಲಸದ ಮೇಲಿದ್ದ ಮಿ|| ಎಂ. ಜಿ. ಮೇಕ್ರಿ ಬಿ. ಎ ಎಲ್. ಎಲ್. ಬಿ. ಯವರು ಪೂರ್ವದಲ್ಲಿದ್ದ ಶ್ರೀಮದ್ಯುವರಾಜರವರ ಪರ್ಸನಲ್ ಅಸಿಸ್ಟೆಂಟ್ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ.

ಶ್ರೀಮದ್ಯುವರಾಜರವರು ಯಥಾಪ್ರಕಾರ ಎಗ್ಜಿಕ್ಯುಟಿವ್ ಕೌನ್ಸಲಿನಲ್ಲಿ ಎಕ್ಸ್ಟ್ರಾರ್ಡಿನೆರಿ ಮೆಂಬರುತನವನ್ನು ವಹಿಸಿ, ಸೈನ್ಯ ಮತ್ತು ವೈದ್ಯ ಶಾಖೆಗಳ ಆಡಳಿತವನ್ನು ವಹಿಸಿಕೊಂಡಿದ್ದಾರೆಂದು ಕೇಳುತ್ತೇವೆ.

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಮೋಡಮುಚ್ಚಿ ಸೂರ್ಯದರ್ಶನವೇ ಇಲ್ಲದೆ ತುಂತುರು ಮಳೆಯು ಬೀಳುತ್ತಲೇ ಇದ್ದಿತು. ಇದರಿಂದಲೇ ಶೀತವೂ ಚಳಿಯೂ ಹೆಚ್ಚಾಗಿದೆ. ಈಗ ಮಳೆ ಹಿಂದೆಗೆದರೇ ಅನುಕೂಲವೆಂದು ರೈತರು ಹೇಳುತ್ತಿದ್ದಾರೆ.

ಈ ಕೆಳಗೆ ಕಂಡಂತೆ ಪೋಲೀಸ್ ಸೂಪರಿಂಟೆಂಡೆಂಟರುಗಳ ವರ್ಗಾವರ್ಗಿಯು ಮಾಡಲ್ಪಟ್ಟಿದೆ. ಮ|| ಗಳಾದ ಅಬ್ದುಲ್ ಹಕ್‌ರವರು ಹಾಸನಕ್ಕೆ. ಜಿ. ಶಾಂತವೀರಪ್ಪನವರು ಫ್ರೆಂಚ್‌ರಾಕ್ಸಿಗೆ. ಆರ್. ಶ್ಯಾಮರಾಯರು ಚಿತ್ರದುರ್ಗಕ್ಕೆ. ಶ್ರೀ ನರಸಿಂಹ ಶಾಸ್ತ್ರಿಗಳು ತುಮಕೂರಿಗೆ.

ಮ|| ಎ. ಆರ್. ಬಾನರ್ಜಿಯವರು ತಮ್ಮ ಮಾವಂದಿರಾದ ಸರ್ ಕೃಷ್ಣಗೋವಿಂದ ಗುಪ್ತರೊಡನೆ ಶಿವಮೊಗ್ಗಾ ಗೆರುಸೊಪ್ಪಾ ಜಲಪಾತದರ್ಶನಕ್ಕಾಗಿ ದಯಮಾಡಿಸಿರುವರು. ಅಲ್ಲಿಂದ ಹಾಸನ ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿಕೊಂಡು ಮುಂದಣ ತಾ|| ೧ ರಲ್ಲಿ ಬೆಂಗಳೂರಿಗೆ ಬಂದು ಸೇರುವರು.

ನಮ್ಮ ಬ್ರಿಟಿಷ್ ರೆಸಿಡೆಂಟರವರ ಪತ್ನಿಯವರು ಸೀಮೆಗೆ ಪ್ರಯಣಮಾಡಿದರು. ರೆಸಿಡೆಂಟರು ಕೂಡ ಬರುವ ತಿಂಗಳಲ್ಲಿ ೬ ತಿಂಗಳ ರಜಾ ಪಡೆದು ಸೀಮೆಗೆ ಪ್ರಯಾಣ ಮಾಡುವರೆಂದೂ, ಆ ಸ್ಥಾನಕ್ಕೆ ಕರ್ನಲ್ ಎ. ಸಿ. ನಾಕ್ಸ್‌ರವರು ಆಕ್ಟಿಂಗಾಗಿ ನಿಯಮಿಸಲ್ಪಡುವರೆಂದೂ ಕೇಳುತ್ತೇವೆ.

ಕಾಶೀ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ಪಂಡಿತರಾದ ಪ್ರೊ|| ಗೋಡ್ಬೋಲೆ ಎಂಬುವರು ನಮ್ಮ ವಿಶ್ವವಿದ್ಯಾಲಯದವರ ಕೋರಿಕೆಯ ಮೇರೆಗೆ ಕಾಲೇಜು ಭವನದಲ್ಲಿ ಕಳೆದ ವಾರವೆಲ್ಲಾ ಜಪಾನ್ ಕೈಗಾರಿಕೆ ವಿದ್ಯಾಭ್ಯಾಸ ಮೊದಲಾದ ವಿಷಯಗಳಲ್ಲಿ ಶ್ಲಾಘನೀಯವಾಗಿ ಉಪನ್ಯಾಸಗಳನ್ನು ಮಾಡಿದರು.

ನವರಾತ್ರಿಯ ಕಾಲದಲ್ಲಿ ರಾಜಧಾನಿಗೆ ಬಂದ ಉಡುಪಿಯ ಅನಂತಪದ್ಮನಾಭ ದಶಾವತಾರ ನಾಟಕ ಮಂಡಲಿಯವರನ್ನು ಶ್ರೀಮನ್ಮಹಾರಾಜರವರು ಅರಮನೆಗೆ ಬರಮಾಡಿಕೊಂಡು ಕಳೆದಬುಧವಾರ ರಾತ್ರಿ ಮೀನಾಕ್ಷೀಕಲ್ಯಾಣವೆಂಬ ಆಟವನ್ನಾಡಿಸಿ ನೋಡಿ ಸಂತೋಷಪಟ್ಟು ಯಥೋಚಿತ ಸನ್ಮಾನ ಮಾಡಿದರೆಂದು ಕೇಳಿದೆವು.

ಹಜರತ್ ಮಹಮ್ಮದರ ಜನ್ಮದಿನೋತ್ಸವವನ್ನು ರಾಜಧಾನಿಯ ಮಹಮ್ಮದೀಯರು ಕಳೆದ ಮಂಗಳ ಬುಧವಾರಗಳ ದಿವಸ ಬಹು ವಿಜೃಂಭಣೆಯಿಂದ ನಡೆಯಿಸಿದರು. ಆ ರಾತ್ರಿಗಳಲ್ಲಿ ಲಷ್ಕರ್‌ಮೊಹಲ್ಲಾ ಮಹಮ್ಮದೀಯ ವಿದ್ಯಾರ್ಥಿನಿಲಯದಲ್ಲೂ ಮಹಮ್ಮದೀಯರ ಕ್ಲಬ್ಬಿನಲ್ಲಿಯೂ ಸಭೆಗೂಡಿ ಉಪನ್ಯಾಸಗಳನ್ನು ನಡೆಯಿಸಿದರು. ಬೀದಿಗಳು ತೋರಣಗಳಿಂದಲೂ ದೀಪಾವಳಿಯಿಂದಲೂ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದುವು.

ನಿಯಮನಿರ್ಮಾಣ ಸಭೆಯಲ್ಲಿ ನಡೆದಿರುವ ಚರ್ಚೆಯನ್ನು ನೋಡುವಲ್ಲಿ ಸರ್ ಆಲ್ಫ್ರೆಡ್‌ಚಾಟರ್ಟನ್‌ರವರ ಉದ್ಯೋಗದವಧಿಯ ಒಪ್ಪಂದವು ೧೯೨೦ ನೆ ಜನವರಿಗೆ ಮುಗಿದಿತೆಂತಲೂ ಈಗ ಅವರು ಟಾಟಾಕಂಪನಿಯಲ್ಲಿ ಪರಿಶ್ರಾಮಿಕ ವಿಷಯದಲ್ಲಿ ಮಂತ್ರಾಲೋಚಕರಾಗಿರುವರೆಂತಲೂ ಮೈಸೂರು ಗಂಧದೆಣ್ಣೆ ಯಂತ್ರಾಲಯದ ವರಮಾನದಲ್ಲಿ ಸ್ವಲ್ಪ ಭಾಗ ಕಮಿಷನನ್ನು ಹೊಂದುತ್ತ ಅದರ ಡೈರೆಕ್ಟರ್ ಕೆಲಸವನ್ನು ನೋಡಿಕೊಂಡಿರುವರೆಂತಲೂ ಗೊತ್ತಾಗುತ್ತದೆ.

ರಾಜಧಾನಿಯ ಮ|| ಅತ್ತಿಗುಪ್ಪಾ ಸೂರ್ಯನಾರಾಯಣಸೆಟ್ಟರ ಸತ್ರವು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಮಗ್ಗುಲಲ್ಲಿರುವುದರಿಂದ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಚಿಕಿತ್ಸಾರ್ಥವಾಗಿ ಬರುವ ಪರಸ್ಥಲದ ರೋಗಿಗಳ ಅನುಬಂದಿಗಳು ಬಂದಿಳಿದುಕೊಳ್ಳುವುದಕ್ಕೆ ಸತ್ರದಲ್ಲಿ ಸ್ಥಳವನ್ನು ಉಚಿತವಾಗಿ ಒದಗಿಸಿಕೊಡುವುದಾಗಿಯೂ, ವೈಶ್ಯಜನರಿಗೆ ೩ ದಿನಗಳ ಕಾಲ ಭೋಜನಕ್ಕೆ ಅನುಕೂಲ ಮಾಡಿಕೊಡುವುದಾಗಿಯೂ ತಿಳಿಸಿರುತ್ತಾರೆ. ಪರಸ್ಥಲಿಕರು ಆವಶ್ಯಕ ಬಿದ್ದಾಗ ಇದರ ಉಪಯೋಗವನ್ನು ಮಾಡಿಕೊಳ್ಳಬಹುದು.

ನಿನ್ನೆ ಕೂಡಿದ್ದ ಮೈಸೂರು ನಿಯಮನಿರ್ಮಾಣ ಸಭೆಯಲ್ಲಿ ಹಿಂದುಳಿದ ಜನವರ್ಗಗಳಲ್ಲಿ ತಕ್ಕ ಅರ್ಹತೆಯುಳ್ಳವರಿಗೆ ಸರ್ಕಾರದುದ್ಯೋಗಗಳನ್ನು ಕೊಡುವ ವಿಷಯದಲ್ಲಿ ಸಭಿಕರು ಮಾಡಿದ ಪ್ರಶ್ನೆಗೆ ಚೀಫ್ ಸೆಕ್ರಟರಿಯವರು ಹೀಗೆ ಉತ್ತರ ಕೊಟ್ಟಿರುವರು—ಅಮಲ್ದಾರಿ ಮೊದಲಾದ ಉದ್ಯೋಗಸ್ಥಾನಗಳನ್ನು ಹಿಂದುಳಿದ ಜನವರ್ಗಗಳ ಸಂಖ್ಯಾನುಗುಣವಾಗಿ ಕೊಡುವ ವಿಷಯದಲ್ಲಿ ಸರ್ಕಾರದವರು ಪರ್ಯಾಲೋಚಿಸುತ್ತಿರುವರು. ಸಂಸ್ಥಾನದ ಒಟ್ಟು ಗೆಜೆಟೆಡ್ ಆಫೀಸರುಗಳ ೩೩೦ ಸ್ಥಾನಗಳಲ್ಲಿ ೧೯೧೨ ನೆ ವರ್ಷದಲ್ಲಿ ೯೬ ಸ್ಥಾನಗಳಲ್ಲಿ ಮಾತ್ರವೇ ಹಿಂದುಳಿದ ಜನವರ್ಗಗಳವರು ಇದ್ದರು. ೧೯೧೯ನೆ ವರ್ಷದಲ್ಲಿದ್ದ ೪೪೪ ಸ್ಥಾನಗಳಲ್ಲಿ ೧೩೬ ಮಂದಿ ಹಿಂದುಳಿದ ಜನವರ್ಗದವರಿದ್ದರು. ಹಿಂದುಳಿದ ಜನವರ್ಗಗಳ ಪ್ರಜಾಸಂಖ್ಯಾನುಗುಣವಾಗಿ ಸಿವಿಲ್ ಉದ್ಯೋಗಗಳನ್ನು ಕೊಡುವ ವಿಷಯವಾಗಿ ಸರ್ ಲೇಸ್ಲಿ ಮಿಲ್ಲರವರ ಅಧ್ಯಕ್ಷತೆಯಿಂದ ಕೂಡಿದ್ದ ಸಂಘದವರು ಕೊಟ್ಟ ವರದಿಯೂ ಸರ್ಕಾರದ ಅಭಿಪ್ರಾಯವೂ ಇಷ್ಟರಲ್ಲೇ ಪ್ರಕಟಿಸಲ್ಪಡುವವು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾಮಾನ್ಯ ವಿಷಯಗಳು.

(ಕಳೆದವಾರದ ಶೇಷ)

ಪ್ರಾ.—ಸರ್ಕಾರದ ಎಲ್ಲ ಶಾಖೆಗಳಲ್ಲೂ ವೆಚ್ಚವನ್ನು ಕಡಿಮೆ ಮಾಡಬೇಕು.

ಈ ವಿಷಯವಾಗಿ ಮ|| ಗಳಾದ ಬ್ಯಾ|| ಬಿ. ಎನ್. ವಿಜಯದೇವ, ಎಚ್. ಕೃಷ್ಣಶಾಸ್ತ್ರಿ ಕೆ. ಟಿ. ಶೇಷಯ್ಯ, ಅಬ್ಬಾಸ್ ಖಾನ್‌ರವರು ಮುಖ್ಯವಾಗಿ ಹೀಗೆ ಉಪಪಾದನೆ ಮಾಡಿದರು—ಸರ್ಕಾರಿ ಕಾರ್ಯನಿರ್ವಾಹಕ್ಕೆ ತಕ್ಕ ಅರ್ಹತೆ ಇದ್ದರೆ ಸಾಕೆಂಬುದನ್ನು ನೋಡಿ ಉದ್ಯೋಗಗಳಿಗೆ ಜನರನ್ನು ಸೇರಿಸಿಕೊಳ್ಳಬೇಕು. ಬಾರಿ ಡಿಗ್ರಿಗಳನ್ನು ನೋಡಬೇಕಾದುದಿಲ್ಲ. ಪ್ರಜೆಗಳಿಗೆ ಹೆಚ್ಚು ಉಪಯೋಗಕರಗಳಾಗಿರುವ ವಿದ್ಯಾಭ್ಯಾಸ ವೈದ್ಯ ಇಂಥ ಇಲಾಖೆಗಳ ಖರ್ಚನ್ನು ಹೆಚ್ಚು ಮಾಡಿ ಉಳಿದ ಸಾಧಾರಣ ಇಲಾಖೆಗಳ ಖರ್ಚನ್ನು ಕಡಿಮೆ ಮಾಡಬೇಕು. ಎ|| ಕೌನ್ಸಿಲರ ಸಂಖ್ಯೆಯನ್ನು ಕಡಿಮೆ ಮಾಡಬೇಕಾದುದಿಲ್ಲ. ೨-೩ ಇಲಾಖೆಗಳನ್ನು ಒಟ್ಟಿಗೆಕೂಡಿಸಿ ಒಬ್ಬೊಬ್ಬ ಅಧಿಕಾರಿಗಳ ಮೇಲ್ವಿಚಾರಣೆಗೊಳಪಡಿಸಬೇಕು. ಉದಾಹರಣೆ—ಎಕ್ಸೈಜು ಇಲಾಖೆಗೆ ಇನ್‌ಕಂಟ್ಯಾಕ್ಸು ಕಾಮರ್ಸ್ ಈ ಶಾಖೆಗಳನ್ನು ಸೇರಿಸಬಹುದು. ರಿಟ್ರೆಂಚ್‌ಮೆಂಟನ್ನು ಮೇಲಿನಿಂದ ಕೆಳಕ್ಕೆ ಎಂದರೆ ದೊಡ್ಡ ದೊಡ್ಡ ಸಂಬಳಗಾರರಿಂದ ಮೊದಲು ಆರಂಭಿಸಬೇಕು. ಈಗ ನಡೆಯುತ್ತಿರುವ ಜಮಾಬಂದಿ ಕ್ರಮವು ನಿಷ್ಫಲವಾದುದು. ಸಂಬಳ ತೆಗೆದುಕೊಳ್ಳತಕ್ಕವರು ತಮ್ಮ ಸಂಬಳಕ್ಕೆ ತಕ್ಕಷ್ಟು ಕೆಲಸವನ್ನು ಮಾಡುತ್ತಾರೆಯೆ ಎಂಬುದರ ಮೇಲೆ ರಿಟ್ರೆಂಚ್‌ಮೆಂಟ್ ನಡೆಯಿಸಬೇಕು.

ಉ.—ನಿಮ್ಮ ಪ್ರತಿನಿಧಿಗಳು ಫೈನಾನ್ಸ್ ಕಮಿಟಿಯಲ್ಲೂ ಶಾಸನ ಸಭೆಯಲ್ಲೂ ಇದ್ದಾರೆ. ಅವರು ಈ ಚರ್ಚೆಗಳನ್ನು ಅಲ್ಲಿ ಮಾಡಬಹುದಾಗಿದೆ. ಇಲ್ಲೂ ಚರ್ಚಿಸಬೇಕಾದುದೇಕೆ?

ಪ್ರಾ.—ಡಿಸ್ಟ್ರಿಕ್ಟ್ ಕಸಬೆಗಳಲ್ಲಿ ತಾಲ್ಲೂಕು ಟ್ರಜರಿಗಳನ್ನು ಪೂರ್ವದಂತೆಯೇ ಇಡಿಸಬೇಕು.

ಉ.—ತೊಂದರೆ ಇರಬಹುದು. ಆಲೋಚನೆ ಮಾಡುತ್ತೇವೆ.

ಪ್ರಾ.—ಗ್ರಾಮಗಳಿಗೆ ವಾರಕ್ಕೆರಡುಸಲ ಅಂಚೆಯನ್ನು ಕೊಡುವಂತೆ ಮಾಡಿಸಬೇಕು.

ಉ.—ಮೊದಲು ಪೋಸ್ಟ್ ಆಫೀಸುಗಳ ಸಂಖ್ಯೆ ಹೆಚ್ಚಲಿ. ಅನನುಕೂಲವಿದ್ದ ಗ್ರಾಮದವರು ಪೋಸ್ಟಲ್ ಸೂಪರಿಂಟೆಂಡೆಂಟರಿಗೆ ಬರೆದುಕೊಂಡು ಆ ಸಂಗತಿಯನ್ನು ಚೀಫ್ ಸೆಕ್ರಟರಿಯವರಿಗೂ ಬರೆದರೆ ತಕ್ಕ ಏರ್ಪಾಟು ಮಾಡಿಸುತ್ತಾರೆ.

ಪ್ರಾ.—ಸರ್ಕಾರಿ ಆಫೀಸರುಗಳಿಗೆ ಪ್ರಯಾಣದ ಬತ್ಯಕ್ಕೆ ಪ್ರತಿಯಾಗಿ ಒಂದು ಗೊತ್ತಾದ ಬತ್ಯವನ್ನು ಏರ್ಪಡಿಸಬೇಕು.

ಉ.—ನಿಮಗೆ ಇನ್ನಾವ ಸಬ್ಜೆಕ್ಟೂ ಸಿಕ್ಕಲಿಲ್ಲವೊ? ಸರ್ಕಾರಿ ಉದ್ಯೋಗಿಗಳ ವಿಷಯ ನಿಮಗೇಕೆ?

ಪ್ರಾ.—ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೆ ಪ್ರಯಾಣದ ಬತ್ಯವನ್ನು ಕೊಡಿಸಬೇಕು.

ಉ.—ಯೋಚಿಸುತ್ತೇವೆ.

ಪ್ರಾ.—ಬಡ್ಜೆಟ್ಟು ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ಯಾಸಾಗಬೇಕು. ಅದುಕಾರಣ ವರ್ಧಂತಿ ಕಾಲದ ಸಭೆಗೆ ೨ ತಿಂಗಳ ಮುಂಚಿತವಾಗಿ ಬಡ್ಜೆಟ್ಟಿನ ಸಂಪೂರ್ಣವಾದ ಕನ್ನಡದ ಕಾಪಿಯನ್ನು ಮೆಂಬರುಗಳಿಗೆ ಕಳುಹಿಸಿಕೊಡಬೇಕು.

ಉ.—ಆಲೋಚಿಸುತ್ತೇವೆ.

ಪ್ರಾ.—ಧರ್ಮಕಾರ್ಯಕ್ಕಾಗಿ ಕೊಟ್ಟಿರುವ ಪುದುವಟ್ಟು ಹಣದ ಬಡ್ಡಿಯನ್ನು ಈಗಣ ಬಡ್ಡಿ ದರಕ್ಕೆ ಹೆಚ್ಚಿಸಿಕೊಡಬೇಕು.

ಉ.—ಸರ್ಕಾರದವರು ಕೆಲವು ಎಂಡೋನ್ಮೆಂಟುಗಳಿಗೆ ಇಷ್ಟು ಬಡ್ಡಿಯನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದಕ್ಕೊಪ್ಪಿ ಪುದುವಟ್ಟು ಹಾಕಿದ್ದಾರೆ. ಒಪ್ಪಿಗೆಯಾಗಿ ಮುಗಿದುಹೋಗಿರುವಾಗ ಈಗ ಬದಲಾವಣೆ ಮಾಡಲಾಗುವುದಿಲ್ಲ. ಫಿಕ್ಸ್ ಮಾಡದೆ ಇರುವ [illegible] ಎಂಡೋನ್ಮೆಂಟುಗಳಿಗೆ ಕಾಲಾನುಗುಣವಾಗಿ ಬಡ್ಡಿಯನ್ನು ಬದಲಾ[illegible] ಈ ಹಿಂದೆ ನಿರ್ಣಯವಾಗಿಹೋಗಿರುವ ಪುದುವ[illegible] ಅದುಕಾರನ್ನು ಬದಲಾಯಿಸಲಾಗುವುದಿಲ್ಲ. ಮುಂದೆ ಹಾಕತಕ್ಕವುಗಳಿಗೆ ಈಗಣ ಬಡ್ಡಿಯ ದರವನ್ನು ಕೊಡಬಹುದು.

ಪ್ರಾ.—ಪಟೇಲ್ ಶ್ಯಾನುಬೋಗರ ಪೋಟಗಿಯನ್ನು ಹೆಚ್ಚಿಸಬೇಕು. ಸೇಕಡಾ ಇಷ್ಟೆಂದು ಸ್ಕೇಲನ್ನು ಒಂದೇತೆರನಾಗಿ ಮಾಡಬೇಕು.

ಉ.—ಈಗ ಗ್ರಾಮವಾರು ಸಾದಿಲ್ವಾರನ್ನು ಹೆಚ್ಚಿಸಲಾಗಿದೆ. ಇದಕ್ಕೇ ೧ ಲಕ್ಷ ರೂ. ವೆಚ್ಚವು ಹೆಚ್ಚಿತು. ಸದ್ಯಕ್ಕೆ ಇನ್ನು ಹೆಚ್ಚಿಸಲಾಗುವುದಿಲ್ಲ. ಮುಂದೆ ನಮ್ಮ ಆದಾಯವ್ಯಯವನ್ನು ನೋಡಿಕೊಂಡು ಸಾವಕಾಶವಾಗಿ ಪೋಟಗಿಯ ಹೆಚ್ಚುಗೆಯ ವಿಷಯವನ್ನು ಕುರಿತು ಉತ್ತರ ಕೊಡುತ್ತೇವೆ.

ಪ್ರಾ.—ತೋಟಿ ತಳಾರಿಗಳ ಮಿರಾಸನ್ನು ತಪ್ಪಿಸುವ ವಿಷಯದಲ್ಲಿ ಬೇಗನೆ ಅಪ್ಪಣೆಯಾಗಬೇಕು.

ಉ.—ಈಗಣ ಕ್ರಮವನ್ನು ಬದಲಾಯಿಸಲಾಗುವುದಿಲ್ಲ.

ಪ್ರಾ.—ಮಲೆನಾಡಿನಲ್ಲಿ ನೀರಾವರಿಯ ಮತ್ತು ಅಡಕೆಯ ತೆರುಗೆಯನ್ನು ತಪ್ಪಿಸಬೇಕು.

ಉ.—ಈಗಿರುವುದನ್ನು ತೆಗೆಯಲಾಗುವುದಿಲ್ಲ.

ಪ್ರಾ.—ಸಾಗುವಳಿಯಿಲ್ಲದ ಭೂಮಿಯ ಕಂದಾಯವನ್ನು ತಪ್ಪಿಸಬೇಕು.

ಉ.—ಆಲೋಚನೆಯಲ್ಲಿದೆ.

ಪ್ರಾ.—ದೊಡ್ಡ ಕೆರೆ ಕೆಳಗಣ ಭೂಮಿಗಳಿಗೆ ಎಕರೆಗೆ ೬ ರೂ. ನಂತೆಯೂ ಚಿಕ್ಕ ಕೆರೆ ಕೆಳಗಣ ಭೂಮಿಗಳಿಗೆ ೩ ರೂ. ನಂತೆಯೂ ಕಂದಾಯ ಹಾಕಬೇಕು. ಒಂದೇ ವಿಧವಾಗಿರುವುದನ್ನು ತಪ್ಪಿಸಬೇಕು. ೧೦ ಸಾವಿರ ರೂ. ಸೊಳಗಣ ರಿಪೇರಿ ಖರ್ಚು ಹಿಡಿಯುವ ಕೆರೆಗಳ ಜೀರ್ಣೋದ್ಧಾರದ ಕೆಲಸವನ್ನು ರೆವಿನ್ಯೂ ಇಲಾಖೆಗೆ ವಹಿಸಿದರೆ ಬೇಗನೆ ಆಗುತ್ತದೆ. ಮತ್ತು ಇಂಜನಿಯರ್ ಇಲಾಖೆಯ ಮೂಲಕ ಹಿಡಿಯುವ ಭಾರಿ ಖರ್ಚೂ ತಪ್ಪುತ್ತದೆ. ಆದಕಾರಣ ಸರ್ಕಾರದವರು ಪಾಲಿಸಿಯನ್ನು ಬದಲಾಯಿಸಬೇಕು.

ಉ.—ಕಂದಾಯವು ಭೂಮಿಯ ಯೋಗ್ಯತೆಯ ಮೇಲೆ ನಿರ್ಣಯಿಸಲ್ಪಡುತ್ತದೆ. ಡಿಸ್ಟ್ರಿಕ್ಟ್‌ವಾರ್ ಅಲಾಟ್‌ಮೆಂಟ್ ಮಾಡಿ ಒಂದೊಂದು ಡಿಸ್ಟ್ರಿಕ್ಟಿಗೆ ಇಷ್ಟಿಷ್ಟೆಂದು ಕೆರೆಗಳ ರಿಪೇರಿಗಾಗಿ ಹಣವನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಆದರೆ ಕಾರಣಾಂತರಗಳಿಂದ ಕೆಲಸವು ಸಾವಕಾಶವಾಗುತ್ತದೆ. ಬೇಗನೆ ನಡೆಯುವುದಕ್ಕೆ ಬೇರೆ ಉಪಾಯಗಳನ್ನೇನಾದರೂ ಹೇಳಿದರೆ ಅದರಂತೆ ಮಾಡಲು ಸರ್ಕಾರದವರು ಸಿದ್ಧರಾಗಿದ್ದೇವೆ.

ಪ್ರಾ.—ಗ್ರಾಮ ನೌಕರಿಗಳ ವಿಷಯದಲ್ಲಿ ದಾವಾ ತರುವ ಕಾಲಾವಧಿಯನ್ನು ೩ ವರ್ಷ ತಪ್ಪಿಸಿ ೧೨ ವರ್ಷಗಳಿಗೆ ಹೆಚ್ಚಿಸಬೇಕು.

ಉ.—ಈಗಿರುವ ರೀತಿಯಿಂದ ಅನನುಕೂಲವೇನೂ ಇಲ್ಲ.

ಪ್ರಾ.—ಕಂದಾಯದ ಬಾಕಿಗಾಗಿ ಒಟ್ಟು ಖಾತೆಯ ನಂಬರ್ ಜಮೀನನ್ನೆಲ್ಲಾ ಹರಾಜು ಮಾಡುವುದನ್ನು ತಪ್ಪಿಸಿ, ಯಾವ ನಂಬರಿನ ಕಂದಾಯವು ಬಂದಿಲ್ಲವೋ ಅದನ್ನು ಮಾತ್ರ ಹರಾಜು ಮಾಡುವಂತೆ ರೂಲಿದ್ದರೂ ನಡವಳಿಕೆಯಲ್ಲಿಲ್ಲ. ನಡವಳಿಕೆಗೆ ಬರುವಂತೆ ಮಾಡಿಸಬೇಕು.

ಉ.—ಕಳೆದ ಆಕ್ಟೋಬರ್ ತಿಂಗಳಲ್ಲಿ ಮಾಡಿರುವ ಅಪ್ಪಣೆಯಲ್ಲಿ ಬಾಕಿ ಬಿದ್ದ ನಂಬರ್ ಜಮೀನನ್ನೇ ಹರಾಜು ಮಾಡಬೇಕೆಂದು ಖಂಡಿತವಾದ ಅಪ್ಪಣೆ ಮಾಡಿದೆ. ಮತ್ತು ಹಿಡುವಳಿದಾರರು ಯಾವ ನಂಬರಿಗೆಂದು ಕೊಟ್ಟರೂ ಆ ನಂಬರಿಗೆಂದು ಜಮಾ ಕಟ್ಟಿ ರಸೀದಿ ಕೊಡಲು ಅಪ್ಪಣೆ ಮಾಡಿದ್ದೇವೆ. ಶ್ಯಾನುಬೋಗರುಗಳುಹಾಗೆ ಮಾಡದೆಹೋದರೆ ಮೇಲಕ್ಕೆ ಬರೆದರೆ ಬಂದೋಬಸ್ತುಮಾಡುತ್ತಾರೆ.

ಪ್ರಾ.—ಕೆರೆ ಕೆಳಗಣ ಜಮೀನುಗಳನ್ನು ಹಂಗಾಮಿ ಸಾಗುವಳಿಗೆ ಕೊಡುವುದನ್ನು ತಪ್ಪಿಸಬೇಕು.

ಉ.—ಹಂಗಾಮಿ ಸಾಗುವಳಿಗೆ ಕೊಡುವಾಗ ಖಾಯಂ ಹಿಡುವಳಿದಾರರ ಒಪ್ಪಿಗೆಯನ್ನು ತಿಳಿದೇ ಕೊಡುವಂತೆ ಮಾಡುತ್ತೇವೆ. ಅಷ್ಟೇ ಹೊರತು ಹಂಗಾಮಿ ಸಾಗುವಳಿ ಕ್ರಮವನ್ನು ತೆಗೆದುಹಾಕಲಾಗುವುದಿಲ್ಲ.

ಪ್ರಾ.—ಕೆರೆಯಿಂದಲಾಗಲಿ ನದೀ ನಾಲೆಯಿಂದಲಾಗಲಿ ನೀರನ್ನು ಉಪಯೋಗಿಸಿಕೊಳ್ಳದೆ ಸ್ವಂತದ ಬಾವಿಗಳ ನೀರಿನಿಂದ ಸಾಗುವಳಿ ಮಾಡಿಕೊಳ್ಳುವ ಕುಷ್ಕಿ ಬಾಗಾಯಿತು ಜಮೀನುಗಳಿಗೆ ನೀರುತೆರುಗೆಯೆತ್ತುವುದನ್ನು ತಪ್ಪಿಸಬೇಕು.

ಉ.—ಯೋಚನೆಮಾಡುತ್ತೇವೆ.

ಪ್ರಾ.—ಇನಾಂ ಗ್ರಾಮಗಳ ಕೆರೆ ರಿಪೇರಿಗೆ ಕಂಟ್ರಿಬ್ಯೂಷನ್ ಕೊಡಲು ಜೋಡಿದಾರರ ವೃತ್ತಿದಾರರುಗಳ ಜತೆಗೆ ಆ ಕೆರೆ ಕೆಳಗಣ ಜಮೀನ್ದಾರರನ್ನೂ ಜವಾಬ್ದಾರರನ್ನಾಗಿ ಮಾಡಬೇಕು.

ಉ.—ಇನಾಮತಿ ಕಮಿಟಿಯವರ ರಿಪೋರ್ಟನ್ನು ವ್ಯವಸ್ಥೆಮಾಡುವಾಗ ಪರ್ಯಾಲೋಚಿಸುತ್ತೇವೆ.

ಪ್ರಾ.—ಅಮರಾಯಿಯನ್ನು ಆಯಾ ಗ್ರಾಮಾಭಿವೃದ್ಧಿ ಫಂಡಿಗೆ ಸೇರಿಸಿಕೊಡಬೇಕು.

ಉ.—ಆಗುವುದಿಲ್ಲ.

ಪ್ರಾ.—ಬಾರಾಬಲೂತಿಯವರಿಗಾಗಿ ಕೊಟ್ಟಿರುವ ಇನಾಮತಿಗಳನ್ನು ಅವರುಗಳು ಪರಭಾರೆ ಮಾಡದಂತೆ ತಪ್ಪಿಸಬೇಕು.

ಈಗ ಪರಭಾರೆ ಮಾಡಿರುವವುಗಳನ್ನು ಸರ್ಕಾರದ ವಶಪಡಿಸಿಕೊಳ್ಳಬೇಕು. ಗ್ರಾಮವನ್ನು ಬಿಟ್ಟುಹೋಗುವ ಬಾರಾಬಲೂತಿಯವರ ಇನಾಮತಿ ಜಮೀನನ್ನು ಅವರಿಂದ ಕಿತ್ತುಕೊಂಡು [illegible]ರುವ ಬಾರಾಬಲೂತಿಯವರಿಗೆ ವಹಿಸಿ ಹೊಸದಾಗಿ [illegible] ಮಾಡಿಸಬೇಕು.

ಉ.—ಪರಾಧೀನವಾಗಿರುವವುಗಳನ್ನು ಪುನಃ ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗುವುದಿಲ್ಲ. ಬೇರೆ ಮನುಷ್ಯರು ಸಿಕ್ಕದಿದ್ದ ಸಂದರ್ಭದಲ್ಲಿ ಸರ್ಕಾರದವರು ಅಂಥ ಇನಾಮತಿಯನ್ನು ವಹಿಸಿಕೊಳ್ಳುತ್ತೇವೆಯೇ ಹೊರತು ಸರಿಯಾದ ಮನುಷ್ಯನು ಸಿಕ್ಕಿದಾಗಲೂ ವಹಿಸಿಕೊಳ್ಳುವುದಿಲ್ಲ.

ಪ್ರಾ—ಭಾರಿ ಭೂಸ್ಥಿತಿಗಳನ್ನು ಏಲೆಮಾಡುವ ಅಧಿಕಾರವನ್ನು ಡಿ|| ಕಮೀಷನರಿಗೆ ವಹಿಸಿದರೆ ಬೇಗಬೇಗನೆ ಇತ್ಯರ್ಥವಾಗುತ್ತದೆ.

ಉ.—ಜಾಗ್ರತೆಮಾಡಬೇಕೆಂದು ಅಪ್ಪಣೆ ಕೊಡಬಹುದೇ ಹೊರತು ಆ ಅಧಿಕಾರವನ್ನು ಡಿ|| ಕಮೀಷನರಿಗೆ ವಹಿಸಲಾಗುವುದಿಲ್ಲ.

ಪ್ರಾ.—ಬೇರೆ ಪಾಠಶಾಲೆಗಳನ್ನೇರ್ಪಡಿಸಿ ಅದರಲ್ಲಿ ಪಟೇಲರುಗಳನ್ನು ಸರ್ವೆ ರೆವಿನ್ಯೂ ಪೊಲೀಸು ಕೆಲಸಗಳಲ್ಲಿ ತರಬೇತು ಮಾಡಿಸಬೇಕು. ನಿರ್ಬಂದವನ್ನಾದರೂ ಮಾಡಿ ಹಾಗೆ ಮಾಡಿಸಬೇಕು.

ಉ.—ಪಟೇಲ್ ಶ್ಯಾನುಬೋಗರು ಶಕ್ತರಾಗಿರುವಂತೆ ಮಾಡಬೇಕೆನ್ನುವುದು ಸರ್ಕಾರದವರಿಗೂ ಉದ್ದೇಶವಿದೆ. ಆದರೆ ಪಟೇಲರಲ್ಲಿ ಈಗ ವಿದ್ಯಾಭ್ಯಾಸವೇ ಕಡಮೆ. ಅಂಥವರನ್ನು ಈಗಾಗಲೇ ಬಲಾತ್ಕರಿಸಲಾಗುವುದಿಲ್ಲ. ಕ್ರಮೇಣ ಮಾಡಬೇಕಾಗುತ್ತದೆ. ಹೆಚ್ಚು ಜನರು ಸೇರಿಬರುವ ಸಂದರ್ಭದಲ್ಲಿ ಪ್ರತ್ಯೇಕ ಪಾಠಶಾಲೆಯನ್ನೇರ್ಪಡಿಸಬಹುದು.

ಪ್ರಾ.—ಮಲೆನಾಡಿನಲ್ಲಿ ಜಮಾ ಕಂದಾಯದ ವಸೂಲಿಯನ್ನು ಜನವರಿ ತಿಂಗಳಲ್ಲೇ ಆರಂಭಿಸುವುದನ್ನು ತಪ್ಪಿಸಿ ಮೈದಾನ ಸೀಮೆಯಲ್ಲಿನಂತೆ ಫೆಬ್ರವರಿಯಲ್ಲಿ ಆರಂಭಿಸಬೇಕು.

ಉ.—ಆಗಲಿ.

ಪ್ರಾ.—ಇನಾಂದಾರರು ಇನಾಮತಿ ಗ್ರಾಮಗಳಲ್ಲಿ ಕಂದಾಯ ವಸೂಲಾತಿಯಾಗುವ ೨-೩ ತಿಂಗಳು ಮಾತ್ರ ಇದ್ದು ಹೋಗಿಬಿಡುತ್ತಾರೆ; ಪುನಃ ಮುಖವನ್ನೇ ತೋರಿಸುವುದಿಲ್ಲ. ಸರ್ಕಾರಿ ಗ್ರಾಮಗಳಲ್ಲಿ ವಿಧಿಸಲ್ಪಡುವ ಸೆಸ್ಸುಗಳನ್ನೆಲ್ಲಾ ಇವರೂ ವಸೂಲ್ಮಾಡಿಕೊಳ್ಳುತ್ತಾರೆ. ಗ್ರಾಮ ಪಾಕೀಜು ವಿದ್ಯಾಭ್ಯಾಸ ಮೊದಲಾದ ಅನುಕೂಲ ಯಾವುದನ್ನೂ ಮಾಡಿಸುವುದಿಲ್ಲ. ಜಮಾಬಂದಿ ಹೆಸರೇ ಇಲ್ಲ. ಪ್ರಜೆಗಳಿಗೆ ಯಾವ ಸೌಕರ್ಯವನ್ನೂ ಮಾಡುವುದಿಲ್ಲ. ಇವನ್ನೆಲ್ಲಾ ಮಾಡಿಕೊಡುವಂತೆಯೂ, ಇನಾಂದಾರರು ಸ್ವಂತ ಜಮಾಬಂದಿ ನಡೆಯಿಸಿ ಬಳಿಕ ಹುಜೂರು ಜಮಾಬಂದಿಗೆ ಒಳಪಡಿಸುವಂತೆಯೂ ಮಾಡಿಸಬೇಕು.

ಇದಕ್ಕೆ ಇನಾಂದಾರರ ಪಕ್ಷವಾಗಿ ಮ|| ಕರಣಿಕ ಕೃಷ್ಣಮೂರ್ತಿಯವರು ಹೇಳಿದುದು-ಸೆಸ್ಸುಗಳನ್ನೆಲ್ಲಾ ಗೌರ್ನಮೆಂಟಿನವರಿಗೆ ಏಜೆಂಟರಾಗಿ ಇನಾಂದಾರರು ವಸೂಲ್ಮಾಡುತ್ತಾರೆಯೇ ಹೊರತು ಸ್ವಂತಕ್ಕಾಗಿ ವಸೂಲ್ಮಾಡುತ್ತಾ ಇಲ್ಲ. ಡಿಸ್ಟ್ರಿಕ್ಟು ಬೋರ್ಡುಗಳ ಮೂಲಕ ಅವರು ಗ್ರಾಮ ಸೌಕರ್ಯಗಳನ್ನೆಲ್ಲಾ ಏರ್ಪಡಿಸಿಕೊಳ್ಳಬಹುದು. ಇನಾಂ ಗ್ರಾಮಗಳ ಕೆರೆ ಕಾಮಗಾರಿ ಮೊದಲಾದುವುಗಳಿಗೆ ರೈತರೇ ವಿಘ್ನಕಾರಿಗಳಾಗಿದ್ದಾರೆ. ಜಮಾಬಂದಿ ನಡೆಯಿಸಲು ನಮಗೆ ಯಾವ ಸ್ವಾತಂತ್ರ್ಯವಿದೆ? ತಕ್ಕ ಅಧಿಕಾರ ಕೊಟ್ಟರೆ ನಾವೇ ಜಮಾಬಂದಿ ನಡೆಯಿಸುತ್ತೇವೆ. ಇನಾಂ ಗ್ರಾಮಗಳ ವಿಷಯಕವಾದ ಕಮಿಟಿಯ ರಿಪೋರ್ಟು ಸರ್ಕಾರಕ್ಕೆ ಬಂದಿದೆ. ಅದರ ಮೇಲೆ ಅವರು ಸೂಕ್ತವಾದ ಇತ್ಯರ್ಥವನ್ನು ಮಾಡಬಹುದು.

ಉ.—ಕಮಿಟಿ ರಿಪೋರ್ಟು ಬಂದಿದೆ. ವಿಚಾರಮಾಡುತ್ತೇವೆ.

ಪ್ರಾ.—ಶ್ಯಾನುಬೋಗರ ಸಹಾಯವಿಲ್ಲದಂತೆ ಪಟೇಲರೇ ಕಂದಾಯವನ್ನು ವಸೂಲ್ಮಾಡಲು ಅನುಕೂಲಿಸುವಂತೆ ಒಂದು ನಮೂನೆಯನ್ನು ಮ್ಯುನಿಸಿಪಾಲಿಟಿಗಳ ಬಿಲ್ಲಿನ ಮಾದರಿಯಂತೆ ಏರ್ಪಡಿಸಬೇಕು.

ಉ.—ಪಟೇಲರು ಅಕ್ಷರಸ್ಥರಾಗಿದ್ದರೆ ಅವರಿಗೆ ಶ್ಯಾನುಬೋಗರು ಬಾಕಿಪಟ್ಟಿ ಕೊಡುತ್ತಾರೆ. ಅದರ ಮೇಲೆ ಪಟೇಲರು ವಸೂಲಿ ಕೆಲಸ ನಡೆಯಿಸಲು ತೊಂದರೆಯೇನು? ಅಕ್ಷರಸ್ಥರಲ್ಲದ ಪಟೇಲರು ಇದ್ದಕಡೆ ಶ್ಯಾನುಬೋಗರೇ ರಸೀದಿ ಕೊಡಬೇಕಾಗುತ್ತದೆ.

ಪ್ರಾ.—ಮೇಕೆಗಳಿಂದ ಸಾಲುಮರಗಳೂ ತೋಪುಗಳೂ ಹಾಳಾಗುತ್ತಿವೆ. ಅವನ್ನು ಸಾಕುವವರು ಲೈಸೆನ್ಸ್ ಪಡೆಯುವಂತೆ ಮಾಡಬೇಕು.

ಉ.—ಡಿಸ್ಟ್ರಿಕ್ಟು ಬೋರ್ಡುಗಳಲ್ಲಿ ಏರ್ಪಡಿಸಿಕೊಳ್ಳಬಹುದು. ಈ ವಿಷಯವಾಗಿ ಕಮಿಟಿ ರಿಪೋರ್ಟು ಬಂದಿದೆ. ವಿಚಾರಮಾಡುತ್ತೇವೆ.

ಪ್ರಾ.—ನರಸಿಂಹರಾಜಪುರದಲ್ಲಿ ಸಬ್ ಡಿವಿಜನ್ ಆಫೀಸನ್ನಿಟ್ಟರೆ ಮಲೆನಾಡಿಗೆ ಅನುಕೂಲ.

ಉ.—ಯೋಚಿಸುತ್ತೇವೆ.

ಪ್ರಾ.—ವೈಶಾಖ ಕಾರ್ತಿಕ ತರೀ ಫಸಲನ್ನಿಡುವ ಕಾಲಗಳನ್ನೂ, ಜಮಾ ವಿಸ್ತೀರ್ಣವನ್ನೂ ನಿರ್ಧರಿಸಿ, ಆಯಾ ಕೆರೆ ಕೆಳಗಣ ರೈತರೆಲ್ಲಾ ಒಂಬೇಸಲ ಫಸಲಿಡುವಂತೆ ನಿರ್ಬಂಧಿಸಬೇಕು.

ಉ.—ಆಯಾ ಕೆರೆ ಕೆಳಗಣ ರೈತರೇ ಅದನ್ನು ಮಾಡಿಕೊಳ್ಳಬೇಕು. ಸರ್ಕಾರದವರು ನಿರ್ಬಂಧಪಡಿಸಲಾಗುವುದಿಲ್ಲ.

ಪ್ರಾ,—ತರಿ ಬಾಗಾಯತಿನಿಂದ ವರ್ಷಕ್ಕೆ ೪೪ ಲಕ್ಷ ರೂ. ವರಮಾನವಿದೆ. ಬಡ್ಜೆಟ್ಟಿನಲ್ಲಿ ನಾಲಾ ರಿಪೇರಿ ಮೊದಲಾದುದಕ್ಕೆ ಪರ್ಸಂಟೇಜು ಇಷ್ಟೆಂದು ತೆಗೆದಿಟ್ಟು ಸಾಲಾಬಾದ್ ಕಾಮಗಾರಿಮಾಡಿಸಬೇಕು. ಅಲಾಟ್ಮೆಂಟು ಸಾಲದು.

ಉ.—ವಿಚಾರಮಾಡುತ್ತೇವೆ.

ಪ್ರಾ.—ಗ್ರಾಮಾಂತರದ ಜನರ ವಿದ್ಯಾಭ್ಯಾಸ, ಕುಡಿಯುವ ನೀರಿನ ಬಾವಿ ಇತ್ಯಾದಿಗಳನ್ನು ಏರ್ಪಡಿಸುವುದಕ್ಕೆಲ್ಲಾ ಸರ್ಕಾರದವರು ರೈತರಿಂದ ಕಂಟ್ರಿಬ್ಯೂಷನ್ ಕೇಳಕೂಡದು. ಗ್ರಾಮಸ್ಥರು ತಾವಾಗಿ ಕೊಟ್ಟರೆ ತೆಗೆದುಕೊಳ್ಳುವಲ್ಲಿ ಅಡ್ಡಿಯಿಲ್ಲ. ನೀವು ಇಷ್ಟು ಹಣವನ್ನು ಕೊಟ್ಟರೆ ನಾವು ಮಾಡಿಸಿಕೊಡುತ್ತೇವೆಂದು ಸರ್ಕಾರದವರು ಹೇಳುವುದನ್ನು ತಪ್ಪಿಸಬೇಕು. ಪಟ್ಟಣವಾಸಿಗಳಿಗೆ ಎಲ್ಲಾ ಸೌಕರ್ಯಗಳನ್ನೂ ಸರ್ಕಾರದವರೇ ಮಾಡಿಕೊಡುವಂತೆ ಗ್ರಾಮಸ್ಥರಿಗೂ ಮಾಡಿಕೊಡಬೇಕು. ಗ್ರಾಮಸ್ಥರಿಗೆ ಆದಾಯ ಕಡಮೆ. ಅದುಕಾರಣ ಕೆಲಕಾಲದವರೆಗೆ ಅವರಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಸರ್ಕಾರದವರೇ ಮಾಡಿಸಿಕೊಡಬೇಕು.

ಉ.—ಸಾಧ್ಯವಲ್ಲ. (ಸಶೇಷ.)

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬೀ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗುವಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧಿಯಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100ರೂ. ಬಹುಮಾನ ಕೊಡುತ್ತೇವೆ. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ 5 ರೂ.

ವಿಳಾಸ—ಎ. ಎ. ಎಸ್. ಪಾಣಿ ಅಂಡ್ ಕಂಪನಿ,
35 ಸಾಹುಕಾರಪೇಟೆ, ಮದರಾಸು.

ಜರ್ಮನ್ ಬೆಳ್ಳಿ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1 ಕ್ಕೆ ರೂ. 5—8—0.



ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರವು ನಿಜಭೂತಾಗಿರುವದು. ಘಾಳಿ ಧೂಳು ಸೇರದಂತೆ ಎರಡು ಕಡೆಯೂ ಡೂಮು ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವುದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ.



ಬಹುಮಾನಗಳ ವಿವರ:— ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವ 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

35 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

35 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುಳು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಲಮ್ಸು (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿವರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ ಕೈಕಲೆತಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಲಮ್ಸ್ (ಚಿತ್ರಪಠ) ಗಳ ಸಹಿತ ಯಂತ್ರ 1ಕ್ಕೆ 2—0—0.

10 ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಬೀದಿ ಮದರಾಸು.

SINEMATOGRAPH.
ಸಿನಿಮೊಟೊಗ್ರಾಫ.

35

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

೧೯೨೦ ನೆಯ ಇಸವಿ ನವಂಬರ್ ತಾ|| ೨೮ ರಿಂದ ೧೯೨೦ ನೆಯ ಡಿಸೆಂಬರ್ ತಾ|| ೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಕಾರ್ತೀಕ ಬಹುಳ ತದಿಗೆಯಿಂದ ಕಾರ್ತೀಕ ಬಹುಳ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕಮಾ
28	ಭಾನು	ತದಿ	46-43	ಆರ್ದ್ರಾ	48-35	14
29	(1) ಸೋಮ	ಚೌತಿ	40-38	ಪುನ	44-15	15
30	ಮಂಗಳ	ಪಂಚ	34-47	ಪುಷ್ಯ	40-8	16
1	ಬುಧ	ಷಷ್ಠಿ	29-7	ಆಶ್ಲೆ	36-14	17
2	ಗುರು	ಸಪ್ತಮಿ	24-1	ಮಘಾ	32-53	18
3	ಶುಕ್ರ	ಅಷ್ಟ	19-36	ಪುಬ್ಬ	30-24	19
4	ಶನಿ	ನವ	15-58	ಉಘ	28-25	20

(1) ಕಾರ್ತೀಕ ಸೋಮವಾರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ ಮೋಹರಾಜೀಯಾಶ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತ್ರೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾಶೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿಕೆಯಂಸದಾಪೂರಿಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಡಿಸೆಂಬರ್ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೪೯

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
46 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶತಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಆರುಶೀಳೆಪಂಚ್ರ	೦— ೯—೦
ಪಂಚಾಂಗ	೦— ೮—೦



ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು! ಯಾವುದೊಂದು ಖರ್ಚಿಲ್ಲದೆ 112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

11

ವೈದ್ಯವಿದ್ಯ

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಕುಳು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೇಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಳೆಯಬಹುದು. ಗಂಡಸರದು ಚೀಲ 1ಕ್ಕೆ 1-4-0 ಹೆಂಗಸರದು ಚೀಲ 1ಕ್ಕೆ 3-4-0.

11 ವಿಳಾಸ:—ಎಸ್. ಪಾಲ್ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 41

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ, ಪ್ರತ್ಯೇಕ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಸಿ ಉತ್ತರಕನಡಾ.

ಲಂಡನ್ ಲೀವರ್‌ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿಸಹಿತ ಗಡಿಯಾರ 1ಕ್ಕೆ 4-8-0

ಲೂಸ್‌ಕಿಲ್ಲರ್.

11 (ಎಂಬ ತಲೆಹೇನುಗಳ ಸಂಹಾರಿ.)

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗುವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂದಲಿ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ರಕ್ತಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 9

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಳೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುತ್ತು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಪೆಡಕಕ್ಕೆ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತದಾಕ್ಷಿಣೆಂಟು ಶಿವಲಿಂಗದಲ್ಲಿ ಅಮೃತಮಹಿಂದ್ರಿಯವಾಕ್ಕಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಪಟ್ಟಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿ ಡಿ[illegible] ತಾ|| ೫ ನೆಯ ಭಾನುವಾರ.

ಮಿರ್ಜಾ ಎಂ. ಇಸ್ಮಾಯಿಲ್‌ರವರು ಮತ್ತು ಮೈಸೂರು ಪುರಾಭಿವೃದ್ಧಿ.

ಅಮೀರ್ ಉಲ್ ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್ ರವರಿಗೆ ನಡೆದ ಅಸಾಧಾರಣ ಸನ್ಮಾನ ಸಮಾರಂಭಾದಿಗಳನ್ನು ನೋಡಿ ಕೆಲವರು ಇದಕ್ಕೆಲ್ಲಾ ಸ್ಥಾನಬಲವೇ ಕಾರಣವೆಂದು ವ್ಯಾಖ್ಯಾನ ಮಾಡುತ್ತಿರುವರು. ನಾವು ಇದನ್ನೆಂದಿಗೂ ಅನುಮೋದಿಸುವುದಿಲ್ಲ. ಸ್ಥಾನಬಲಕ್ಕಿಂತಲೂ ಅವರ ಸಾದ್ಗುಣ್ಯಾದಿ ಯೋಗ್ಯತಾಬಲವೇ ಇದಕ್ಕೆ ಮುಖ್ಯ ಕಾರಣವೆಂಬುದು ನಮ್ಮ ಅಭಿಪ್ರಾಯ. ಏಕೆಂದರೆ—ಇವರು ಈಗ ಅಲಂಕರಿಸಿರುವ ಹುಜೂರು ಸೆಕ್ರಟರಿ ಸ್ಥಾನವನ್ನು ಹಿಂದೆ ಯಾರೂ ಅಲಂಕರಿಸಿರಲಿಲ್ಲವೆ? ಅವರಲ್ಲಾರಿಗೂ ಇಂಥ ಸನ್ಮಾನಗಳು ನಡೆದುದಿಲ್ಲ. ಮತ್ತು ಪುರನಿವಾಸಿಗಳ ವಿಜ್ಞಾಪನ ಪತ್ರಿಕೆಗೆ ಇವರು ಕೊಟ್ಟ ಉತ್ತರದಲ್ಲಿ ಮ್ಯುನಿಸಿಪಾಲಿಟಿಯ ವಿಷಯವನ್ನೆತ್ತಿಕೊಂಡು ಆಡಿರುವ ಮಾತುಗಳು ಅಪ್ರಾಸಂಗಿಕವೂ ಅಂತಸ್ತಿಗೆ ಮೀರಿದುದೂ ಆಗಿದ್ದಿತೆಂದು ಕೆಲವರು ಆಡಿಕೊಳ್ಳುತ್ತಿರುವರು. ಇದು ಕೂಡ ಅಸಮಂಜಸವು. ಈ ಸಮಾರಂಭವು ಪುರನಿವಾಸಿಗಳಿಂದ ಏರ್ಪಡಿಸಲ್ಪಟ್ಟುದು. ಮತ್ತು ಆ ದಿನದ ಉದ್ಯಾನದ ಅಲಂಕಾರವು ಯಾವೊಬ್ಬ ಪ್ರೇಕ್ಷಕನನ್ನೂ ಈ ಪಟ್ಟಣದ ಸೌಂದರ್ಯ ವಿಷಯಕವಾಗಿ ಹೆಮ್ಮೆಗೊಳಿಸಿ ನಾಲ್ಕು ಮಾತುಗಳನ್ನಾಡಗೊಡಿಸದೆ ಬಿಡುವಂತಿರಲಿಲ್ಲ. ಮತ್ತು ನಗರದ ಅಲಂಕಾರ ಆರೋಗ್ಯಾಭಿವೃದ್ಧಿಗಳ ಏರ್ಪಾಟಿನ ವಿಷಯದಲ್ಲಿ ಅತ್ಯಂತ ಕುತೂಹಲವುಳ್ಳ ಶ್ರೀಮನ್ ಮಹಾರಾಜರವರ ಬಳಿಯಲ್ಲಿ ಅವರ ಸಂಕಲ್ಪಾನುಗುಣವಾಗಿ ಇವರು ಕಾರ್ಯನಿರ್ವಾಹ ಮಾಡುತ್ತಲಿರುವವರು. ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಒಬ್ಬ ಮೆಂಬರಾಗಿಯೂ ಇದ್ದವರು. ಇಂಥ ಇವರಿಗೆ ತತ್ಸಂಬಂಧವಾದ ಸ್ವಾನುಭವಗಳೇನುಂಟೋ ಅವನ್ನು ಕುರಿತು ತಮ್ಮ ಸಹಚರರಾದ ಪುರನಿವಾಸಿಗಳಿಗೆ ನಾಲ್ಕು ಮಾತುಗಳನ್ನಾಡಿ ಅವರಲ್ಲಿ ಕರ್ತವ್ಯ ಜಾಗರೂಕತೆಯೂ ಸಾನುಭೂತಿಯೂ ಉಂಟಾಗುವಂತೆ ಮಾಡಲಿಕ್ಕೆ ಇದಕ್ಕಿಂತಲೂ ಅನುಕೂಲ ಸಮಯವು ಬೇರೊಂದಿಲ್ಲವೆಂದು ಇವರು ತಿಳಿದುದರಲ್ಲಿ ಅಸಾಮಂಜಸ್ಯವೇನೂ ಇಲ್ಲ. ಮ್ಯುನಿಸಿಪಾಲಿಟಿಯವರ ಮತ್ತು ಆರೋಗ್ಯದ ಶಾಖೆಯವರ ಕೆಲಸಗಳ ಯಥಾಸ್ಥಿತಿಯನ್ನು ಮುಚ್ಚುಮರೆಯಿಲ್ಲದೆ ಈ ಸಂದರ್ಭದಲ್ಲಿ ಅವರಾಡಿದುದು ಅವರ ಮನಸ್ಸಾರಲ್ಯವನ್ನು ವ್ಯಕ್ತಪಡಿಸಿರುತ್ತದೆ. ಮತ್ತು ಅದು ಶ್ರೀಮನ್ ಮಹಾರಾಜರವರ ಪ್ರತಿಧ್ವನಿಯೇ ಆಗಿರುತ್ತದೆಂದೂ ಹೇಳಬಹುದಾಗಿದೆ. ಅಲ್ಲದೆ ಅದು ರಾಜಧಾನಿಯ ಸ್ಥಿತಿಗತಿಗಳನ್ನೆಲ್ಲಾ ಸೂಕ್ಷ್ಮವಾಗಿ ವಿಮರ್ಶನ ಮಾಡಿದವರ ಬಾಯಿಂದೆಲ್ಲಾ ಬರುವ ಮಾತಿಗಿಂತಲೂ ವಿಲಕ್ಷಣವಾಗೇನೂ ಇಲ್ಲ. ದಿವಾನ್ ಸಾಹೇಬರು ಕಳೆದ ಪ್ರಜಾಪ್ರತಿನಿಧಿ ಸಭೆಯ ಉಪನ್ಯಾಸದಲ್ಲಿ ನಮ್ಮ ರಾಜಧಾನಿಯ ಟ್ರಸ್ಟ್‌ಬೋರ್ಡು ಮತ್ತು ಮ್ಯುನಿಸಿಪಾಲಿಟಿಯ ವಿಷಯವಾಗಿ ಮಾತನಾಡಿದುದರಲ್ಲಿ "ಇದುವರೆಗೆ ೫೨ ಲಕ್ಷ ರೂಪಾಯಿಗಳು ವೆಚ್ಚವಾಗಿದ್ದರೂ ರಾಜಧಾನಿಯ ಆರೋಗ್ಯಸ್ಥಿತಿಯು ನಾವು ಅಪೇಕ್ಷಿಸುವಂತೆ ಇದೆಯೆಂದು ಹೇಳಲಾಗುವುದಿಲ್ಲ. ಒಚ್ಚಲು ಮತ್ತು ಡ್ರೈನೇಜು ಕಾಮಗಾರಿಗಳು ಇನ್ನೂ ಪೂರ್ತಿಯಾಗಿಲ್ಲ. ಮನೆಗಳಲ್ಲಿನ ಬಚ್ಚಲು ನೀರು ಸರ್ಕಾರಿ ಚರಂಡಿಗಳಿಗೆ ಸರಿಯಾಗಿ ಬಂದು ಸೇರುವ ವಿಷಯಕ್ಕೆ ಸರಿಯಾದ ಗಮನ ಕೊಟ್ಟಿಲ್ಲ. ಮನೆಗಳನ್ನು ಅಕ್ವೈರ್ ಮಾಡಿದ್ದರಿಂದ ಮನೆಯಿಲ್ಲದ ಜನಗಳಿಗೆಲ್ಲಾ ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಮಿತಿಮೀರಿ ಜನಗಳು ಸೇರುವುದನ್ನು ತಪ್ಪಿಸುವುದಕ್ಕಾಗಿ ಹೊಸ ಮನೆಗಳನ್ನು ಕಟ್ಟುವುದು ಜರೂರಾತಿಯಾಗಿದೆ." ಇತ್ಯಾದಿಯಾಗಿ ಹೇಳಿದ್ದಾರೆ. ಇದೇ ಅಭಿಪ್ರಾಯವೇ ಮಿ|| ಮಿರ್ಜಾರವರ ಬಾಯಿಂದಲೂ ಬಂದಿದೆ. ಇದೆಲ್ಲಾ ನಮ್ಮ ಪಟ್ಟಣದ ವಸ್ತುಸ್ಥಿತಿಯೇ ಹೊರತು ವಿಪರ್ಯಾಸವೇನೂ ಆಗಿಲ್ಲ. ಒಂದು ಕಡೆ ದೇಶದ ಪ್ರಜೆಗಳು ಮುಖ್ಯಪಟ್ಟಣಗಳ ಅಭಿವೃದ್ಧಿ ಕಾರ್ಯಗಳಿಗೇ ಹೆಚ್ಚು ಹಣವನ್ನು ವಿನಿಯೋಗಿಸುತ್ತಾರೆಂದು ಬೊಬ್ಬೆಯಿಡುತ್ತಿದ್ದಾರೆ. ಇದುವರೆಗೆ ಇಲ್ಲಿಯ ಟ್ರಸ್ಟ್‌ಬೋರ್ಡಿಗಾಗಿ ೫೨ ಲಕ್ಷ ರೂ. ಗಳವೆಚ್ಚವಾಗಿದೆ; ಮುಂದೆಯೂ ವರ್ಷಕ್ಕೆ ೩-೪ ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಕೊಡಲ್ಪಡುತ್ತದೆ. ಶ್ರೀಮನ್ಮಹಾರಾಜರವರು ಸ್ವಂತದ ಹಣದಿಂದ ಈ ಪಟ್ಟಣದ ಅಲಂಕರಣಕ್ಕಾಗಿ ಎಷ್ಟೋ ದ್ರವ್ಯವನ್ನು ವ್ಯಯಮಾಡಿಯೂ ಮಾಡುತ್ತಲೂ ಇದ್ದಾರೆ. ಆದರೂ ನಡೆದಿರುವ ವೆಚ್ಚಕ್ಕೆ ತಕ್ಕಂಥ ಪ್ರತಿಫಲವಾಗಿಲ್ಲ. ಈಗಣ ಆನರರಿ ಪ್ರೆಸಿಡೆಂಟ್ ಗಿರಿಯಲ್ಲಿ ನಿರಂಕುಶತ್ವವು ತಾಂಡವಮಾಡುತ್ತಿದೆಯೆಂಬ ದೂರು ವಿಪರೀತವಾಗಿದೆ. ಮ್ಯುನಿಸಿಪಾಲಿಟಿಯ ಲೆಕ್ಕಪಕ್ಕಗಳು ಅವ್ಯವಸ್ಥೆಯಲ್ಲಿವೆಯೆಂಬುದು ಹೊರಬಿದ್ದಿದೆ. ಅದರ ಆರ್ಥಿಕ ದ್ರವವು ಬತ್ತಿಹೋಗಿದೆ. ಪುರದಲ್ಲಿ ಅಭಿಮಾನವಿಟ್ಟು ಕೆಲಸ ಮಾಡುವ ಕೌನ್ಸಿಲರುಗಳಿಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಸಂಬಳದ ನೌಕರರ ಪಾರುಪತ್ಯವೇ ವಿಶೇಷವಾಗಿದೆ. ಹೆಲ್ತ್ ಆಫೀಸರ ದರ್ಶನವು ಲಕ್ಷ್ಮೀವಿಲಾಸ ರಮಾವಿಲಾಸ ಸೀತಾವಿಲಾಸ ವಾಣೀವಿಲಾಸ ಚಾಮರಾಜ ಭಾಗಗಳಲ್ಲಿಯೇ ಹೊರತು ಬಡಬಗ್ಗರು ವಿಶೇಷವಾಗಿ ವಾಸಿಸುವ ಉತ್ತರಭಾಗಗಳಲ್ಲ ಆಗುವುದೇ ದುರ್ಲಭವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಮಿ|| ವಾಣಿಯವರು ಹೆಲ್ತಾಫೀಸರಾಗಿದ್ದಾಗ ಪ್ರತಿದಿನವೂ ಮಧ್ಯಾಹ್ನದವರೆಗೂ ಸಂದಿಗೊಂದಿಗಳನ್ನೂ ಬಡಬಗ್ಗರ ಮನೆಗಳನ್ನೂ ಕಕ್ಕಸುಗಳನ್ನೂ ಸುತ್ತಾಡದೆ ಇರುತ್ತಿರಲಿಲ್ಲ. ಯಾವಾಗ ನಮ್ಮ ಅಧಿಕಾರಿಯು ಬರುವನೋ ಎಂದು ಆ ಶಾಖೆಯ ಎಲ್ಲ ಮೊಹಲ್ಲೆಯ ಉದ್ಯೋಗಿಗಳೂ ಎಚ್ಚರದಿಂದಿರುತ್ತಿದ್ದರು. ಕತ್ತಲೆ ಮನೆಗಳಿಗೆ ಕಿಟಕಿಗಳನ್ನಿಡಿಸುವುದು, ಹೋಟೇಲು ಮೊದಲಾದವುಗಳನ್ನು ಶುಚಿಪಡಿಸುವುದು, ಮಿಠಾಯಿ ಮೊದಲಾದ ಅಂಗಡಿಗಳನ್ನು ಕನ್ನಡಿ ಮುಸುಕುಗಳಿಂದ ಮುಚ್ಚಿಸುವುದು ಇತ್ಯಾದಿ ಆರೋಗ್ಯಸಾಧನದೇರ್ಪಾಟುಗಳೆಲ್ಲಾ ಅವರ ಕಾಲದಲ್ಲೇ ಆದುವು. ಅವರು ಮಾಡುತ್ತಿದ್ದ ಕೆಲಸದಲ್ಲಿ ೧೦ನೆ ೧ ಭಾಗವೂ ಈಗಿನವರಿಂದ ಸಾಗುತ್ತಲಿಲ್ಲ. ಸಂದಿಗೊಂದಿಗಳಲ್ಲಿ ದುರ್ವಾಸನೆಯು ತಪ್ಪಿಲ್ಲ. ಶುಚೀಕರಣವು ಸರಿಯಾಗಿ ನಡೆಯುತ್ತಲಿಲ್ಲ. ಪ್ರತಿ ಮನೆಯ ಹೊಲಸೂ ಹೊರಕ್ಕೆ ಆಯಾ ದಿನವೇ ಸಾಗಿಸಲ್ಪಡಲು ಏರ್ಪಾಟು ಮಾಡಿಲ್ಲ. ಹೊರಗಿನಿಂದ ಬಂದವರಿಗೆ ಮುಂಭಾಗದ ವೀಧಿಗಳ ಅಲಂಕಾರವೂ ದೀಪಪ್ರಕಾಶವೂ ಬೆರಗುಗೊಳಿಸುವಂತಿರುವವೇ ಹೊರತು ಒಳಹೊರಗೆಲ್ಲಾ ಒಂದೇ ರೀತಿಯಾಗಿಲ್ಲ. ಊರಿನೊಳಗಣ ಮುಖ್ಯವೀಧಿಗಳು ಕೆಲವು ಹೊರತು ಹಲವು ವೀಧಿಗಳಲ್ಲಿ ಕಾಲು ಅರ್ಧ ಅನೇಕಗಳಷ್ಟು ಹರಿಕುಣಿಗಳು ಬಿದ್ದಿದ್ದರೂ ಕಾಲಕಾಲಕ್ಕೆ "ರಿಪೇರಿ"ಯಾಗುವುದಿಲ್ಲ. ಇಷ್ಟೆಲ್ಲಾ ದುರವಸ್ಥೆಗೀಡಿದ್ದರೂ ಮ್ಯುನಿಸಿಪಾಲಿಟಿಯ ಆರ್ಥಿಕದಾಹವು ಮಾತ್ರ ತಪ್ಪಿಲ್ಲ. ರೂಲ್ಸಿನಲ್ಲಿಲ್ಲದಿದ್ದರೂ ಮೊಹತರ್ಫಾ ಕಂದಾಯವನ್ನೆಲ್ಲಾ ಒಂದೇ ಕಂತಿನಲ್ಲಿ ವಸೂಲ್ಮಾಡಿಕೊಳ್ಳಲು "ಸಖ್ತ್‌ಹುಕುಂ" ಆಗುತ್ತಿದೆ. ನಮ್ಮ ಮ್ಯುನಿಸಿಪಾಲಿಟಿಯ ಸ್ಥಿತಿಯನ್ನೆಲ್ಲಾ ವಿವರಿಸುವುದಕ್ಕೆ ಬೇಸರಾಗುತ್ತದೆ. ಹೇರಳವಾಗಿ ವೆಚ್ಚವಾಗುತ್ತಿರುವ ಸರ್ಕಾರದ ಮತ್ತು ಮ್ಯುನಿಸಿಪಾಲಿಟಿಯ ಹಣವು ಮುಂದಾದರೂ ಸಾರ್ಥಕವಾಗಬೇಕಾದರೆ ಅಲಂಕರಣ ಭಾಗವನ್ನು ಗೌಣವಾಗಿಯೂ ಆರೋಗ್ಯಸಾಧನದೇರ್ಪಾಟನ್ನು ಮುಖ್ಯವಾಗಿಯೂ ಅಂಗೀಕರಿಸಬೇಕು. ಬಡಬಗ್ಗರ ವಸತಿಯ ಕಲ್ಪನೆಗೂ, ಪ್ರತಿಯೊಂದು ಮನೆಯ ಬಚ್ಚಲನ್ನೂ ಕಕ್ಕಸುಗಳನ್ನೂ ಕ್ರಮಪಡಿಸುವಿಕೆಗೆ ಹೆಚ್ಚಾದ ಲಕ್ಷ್ಯ ಕೊಡಬೇಕು. ಈಸಲದ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಿನ್ನೈಸಿಕೊಳ್ಳಲ್ಪಟ್ಟಂತೆ ಟ್ರಸ್ಟ್‌ಬೋರ್ಡು ಮ್ಯುನಿಸಿಪಾಲಿಟಿ ಇವೆರಡನ್ನೂ ಒಟ್ಟುಗೂಡಿಸಿ ಮ್ಯು|| ಕೌನ್ಸಿಲರುಗಳೆಲ್ಲರೂ ಟ್ರಸ್ಟ್‌ಬೋರ್ಡು ಸಭಿಕರಾಗಿರುವಂತೆ ಏರ್ಪಡಿಸಿದರೆ "ಸಿಬ್ಬಂದಿಯ" ವೆಚ್ಚವು ಕಡಿಮೆಯಾಗಿಯೂ ಕಾರ್ಯಗಳು ಸಾಂಕುಶವಾಗಿಯೂ ನಡೆಯಲು ಬಹುಶಃ ಅವಕಾಶವಾಗಬಹುದು. ಮತ್ತು ಈಗಣ ಪ್ರೆಸಿಡೆಂಟರ ಅವಧಿಯು ಮುಗಿದ ಕೂಡಲೇ ಸಾಂಕುಶವಾಗಿ ಕೆಲಸ ಮಾಡತಕ್ಕ ಮತ್ತೊಬ್ಬರನ್ನು ಆರಿಸುವುದು ಅತ್ಯವಶ್ಯವಾಗಿದೆ. ಈ ಸಂದರ್ಭದಲ್ಲಿ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರು ಅಪ್ಪಣೆ ಕೊಡಿಸಿದ ಮಾತುಗಳು ಇದುವರೆಗಣ ಮ್ಯುನಿಸಿಪಾಲಿಟಿಯ ಮತ್ತು ಟ್ರಸ್ಟ್‌ಬೋರ್ಡಿನ ಕಾರ್ಯಕಲಾಪದ ಯೋಗ್ಯತಾಪತ್ರಸ್ವರೂಪವಾದುದೆಂದೂ ಲೋಪಗಳನ್ನು ತಿದ್ದುಪಡಿ ಮಾಡಿಕೊಳ್ಳಲಿಕ್ಕಾಗಿ ಕೊಟ್ಟ ಎಚ್ಚರಿಕೆಯೆಂದೂ ಭಾವಿಸಬೇಕಾಗಿದೆ. ಪುರದ ಆರೋಗ್ಯವೂ ಅಲಂಕರಣವೂ ಪ್ರಭುಗಳಿಗೆ ಹೇಗೋ ಹಾಗೆ ಪ್ರಜೆಗಳಿಗೂ ಹೆಚ್ಚು ಸಂಬಂಧಪಟ್ಟಿರುವುದರಿಂದ ಅವುಗಳ ಅಭಿವೃದ್ಧಿಯ ಏರ್ಪಾಟಿಗೆ ಪ್ರಜೆಗಳೂ ಅವರ ಪ್ರತಿನಿಧಿಗಳಾದ ಕೌನ್ಸಿಲರುಗಳೂ ಹೆಚ್ಚು ಗಮನವನ್ನು ಕೊಟ್ಟು, ಸರ್ಕಾರದವರು ಈ ಪಟ್ಟಣದ ಅಭಿವೃದ್ಧಿಗಾಗಿ ಅನುಗ್ರಹಿಸುತ್ತಿರುವ ಅಪಾರವಾದ ಧನವನ್ನೂ ಕಂದಾಯದ ರೂಪವಾಗಿ ತಾವುಗಳು ತೆರುವ ಹಣವನ್ನೂ ಸಾರ್ಥಕವಾಗುವಂತೆ ಮಾಡಿಕೊಳ್ಳುವಲ್ಲಿ ವ್ಯಗ್ರರಾಗಬೇಕು.

ನೂತನ ನ್ಯಾಯನಿರ್ಮಾಣಸಭಾ ಸಭಿಕರ ಆರಿಸುವಿಕೆ.

ಕಳೆದ ತಾ|| ೩೦ ರ ವರೆಗೆ ಭರತಖಂಡದ ಎಲ್ಲ ಪ್ರಾಂತಗಳ ನಿಯಮ ನಿರ್ಮಾಣ ಸಭೆಯ ಮತ್ತು ಸ್ಟೇಟ್ ಕೌನ್ಸಿಲ್ಲಿನ ಸಭಿಕರುಗಳನ್ನು ಆರಿಸುವ ಕೆಲಸವು ನಡೆದು ಮುಗಿದಿರುತ್ತದೆ. ಸರ್ಕಾರಕ್ಕೆ ಅಸಹಕಾರವನ್ನು ಮಾಡುವುದರಿಂದಲೇ ನಾವು ಕೃತಾರ್ಥರಾಗುತ್ತೇವೆಂದು ತಿಳಿದಿರುವವರ ಬೋಧೆಯಿಂದಲೂ ಪ್ರೇರಣೆಯಿಂದಲೂ ಅನೇಕರು ಕೌನ್ಸಿಲುಗಳ ಉಮೇದುವಾರಿಗೆ ಪರಿತ್ಯಾಗ ಪತ್ರವನ್ನು ಕೊಟ್ಟಿದ್ದರೂ, ಮತಗಳನ್ನು ಕೊಡತಕ್ಕವರಿಗೆ ತಡೆಯನ್ನು ಪರಿಪರಿಯಿಂದ ಮಾಡಿದ್ದರೂ ಸಹ ನಡೆಯಬೇಕಾಗಿದ್ದ ಕೆಲಸವು ಜರುಗದೆ ನಿಲ್ಲಲಿಲ್ಲ. ಬೊಂಬಾಯಿ ಕರ್ನಾಟಕಕ್ಕೆ ಸೇರಿದ ಧಾರವಾಡ ಬಿಜಾಪುರಜಿಲ್ಲೆಗಳಲ್ಲಿ ಅಲ್ಲಿಯ ಪ್ರಾಂತಿಕ ಶಾಸನ ಸಭೆಯ ಸಭಿಕತ್ವಕ್ಕೆ ಉಮೇದುವಾರರಾಗಿ ನಿಂತಿದ್ದವರೊಳಗೆ ಮೂವರು ಬಿ. ಎ.; ಎಲ್. ಎಲ್. ಬಿ. ಪದವೀಧರರಾದ ವೀರಶೈವ ಅಡ್ವೋಕೇಟರುಗಳು ಆರಿಸಿ ಬಂದಿರುತ್ತಾರೆಂಬುದನ್ನು ತಿಳಿಯಿಸುವುದಕ್ಕೆ ನಾವು ಸಂತೋಷಿಸುತ್ತೇವೆ. ಧಾರವಾಡ ಜಿಲ್ಲೆಯ ಪಕ್ಷದಿಂದ ಮ|| ಸಿದ್ದಪ್ಪ ಕಂಬಳಿಯವರೂ, ಮ|| ಚನ್ನಪ್ಪ ಹುಲಿಕೋಟಿಯವರೂ, ಬಿಜಾಪುರ ಜಿಲ್ಲೆಯ ಪಕ್ಷದಿಂದ ರಾ|| ಸಾ|| ಫಕೀರಪ್ಪ ಗುರುಬಸವಪ್ಪ ಹಳಕಟ್ಟಿಯವರೂ ಆರಿಸಲ್ಪಟ್ಟು ಬಂದಿರುತ್ತಾರೆ. ಧಾರವಾಡ ಜಿಲ್ಲೆಯಲ್ಲಿ ಬಹುಶಃ ೩೩೦೦೦ ಮತಗಾರರಿದ್ದು, ಮೊದಲನೆ ಮ|| ಕಂಬಳಿಯವರಿಗೆ ೧೩೮೮೮ ಮತಗಳೂ, ೨ ನೆ ಹುಲಿಕೋಟಿಯವರಿಗೆ ೧೧೦೦೪ ಮತಗಳೂ ದೊರೆದುವೆಂದು ಅಲ್ಲಿಯ ಸ್ಥಳಿಕ ಪತ್ರಿಕೆಯಿಂದ ಗೊತ್ತಾಗುತ್ತದೆ. ಮ|| ಹಳಕಟ್ಟಿಯವರಿಗೆ ಬಿಜಾಪುರ ಜಿಲ್ಲೆಯ ೧೬೪೮೧ ಮಂದಿ ಮತದಾರರಲ್ಲಿ ೪೫೯೩ ಮತಗಳು ದೊರೆದಿರುತ್ತವೆ. ಪ್ರಾಂತಿಕ ಶಾಸನ ಸಭೆಗಳಿಗೆ ವೀರಶೈವ ಸಮಾಜದಿಂದ ಲೋಕನಿಯುಕ್ತ ಸಭಾಸದರಾಗಿ ಇದುವರೆಗೆ ಯಾರೂ ಸೇರಿರಲಿಲ್ಲ. ನಾಮನೇಷನ್ನಿನ ಮೂಲಕ ಸರ್ಕಾರದವರೇ ಶ್ರೀಮಂತ ಒಂಟಮುರಿ ದೇಶಾಯರೇ ಮೊದಲಾದ ಇಬ್ಬರು ಮೂವರನ್ನು ಸೇರಿಸಿದ್ದುದು ಮಾತ್ರ ಉಂಟು. ಲೋಕನಿಯುಕ್ತ ಸಭಿಕತ್ವಗೌರವವನ್ನು ಪ್ರಥಮತಃ ನಮ್ಮ ಸಮಾಜದಲ್ಲಿ ಈ ಮೇಲೆ ಕಂಡ ಮೂವರು ಮಹಾಶಯರು ದೊರಕಿಸಿದಂತಾಯಿತು. ಅಸಹನೆಯುಳ್ಳ ಅನ್ಯಮತದ ಪ್ರತಿಪಕ್ಷದವರು ಭೇದೋಪಾಯ ದುರಪವಾದ ನಿರುತ್ಸಾಹ ಮೊದಲಾದ ಎಷ್ಟೋ ಕಲ್ಪನೆಗಳಿಂದ ನಾನಾ ವಿಘ್ನಗಳನ್ನು ಒಡ್ಡಿದ್ದರೂ ಈ ನಮ್ಮ ಸಮಾಜಬಾಂಧವರು ಹಿಡಿದ ಕಾರ್ಯದಲ್ಲಿ ಮನಮುಟ್ಟಿ ಪ್ರಯತ್ನಮಾಡಿ ಜಯಶಾಲಿಗಳಾದುದಕ್ಕಾಗಿ ಇವರುಗಳನ್ನೂ ಇವರ ಉತ್ಸಾಹಕ್ಕೆ ಸಾನುಭೂತಿ ತೋರಿಸಿ ಮತಗಳನ್ನು ಕೊಟ್ಟ ಮಹಾಜನರನ್ನೂ ನಾವು ಸಂಪೂರ್ಣವಾಗಿ ಅಭಿನಂದಿಸುತ್ತೇವೆ. ದೇಶಹಿತಕಾರ್ಯದಲ್ಲಿ ಈ ಸಮಾಜವು ಹಿಂದೆ ಬಿದ್ದಿರುವುದೆಂಬ ದೂರನ್ನು ಅಳಿಸುವುದಕ್ಕೆ ನಡುಕಟ್ಟಿ ನಿಂತಿರುವ ಈ ನಮ್ಮ ಮಿತ್ರರುಗಳು ತಮ್ಮ ಭಾವಿಕರ್ತವ್ಯ ಕ್ಷೇತ್ರದಲ್ಲಿ ದಕ್ಷತೆಯನ್ನು ವ್ಯಕ್ತಪಡಿಸಿ ಸಮಾಜದವರಿಗೆ ಸಂತೋಷವನ್ನೂ ತಮ್ಮ ಹಿಂಬಾಲಕರಿಗೆ ಪ್ರೋತ್ಸಾಹವನ್ನೂ ಉಂಟುಮಾಡಿ ಉತ್ತರತ್ರ ಸಾಮ್ರಾಜ್ಯಶಾಸನ-ಸಭೆಯನ್ನು ಅಲಂಕರಿಸುವ ಯೋಗವನ್ನು ತಂದುಕೊಳ್ಳುವವರಾಗಲೆಂದು ಆಶಿಸುತ್ತೇವೆ.

ಕರ್ನಲ್ ಫೋಕ್ಸ್‌ರವರ ವ್ಯಸನಕರ ಮೃತ್ಯು.

ನಮ್ಮ ಸಂಸ್ಥಾನದಲ್ಲಿ ದರ್ಬಾರ್ ಸರ್ಜನರಾಗಿದ್ದ ಸ್ವಲ್ಪ ಕಾಲದಲ್ಲಿಯೇ ವಿಶೇಷವಾದ ತಮ್ಮ ವೈದ್ಯಸಾಮರ್ಥ್ಯ, ದೀನಕಾರುಣ್ಯ, ಸಹನೆ ಮೊದಲಾದ ಸದ್ಗುಣಗಳಿಂದ ಪ್ರಜಾಪ್ರೀತಿಯನ್ನೂ ಪ್ರಭುವಿಶ್ವಾಸವನ್ನೂ ಸಂಪಾದಿಸಿಕೊಂಡು, ಈಗಣ ಕೃಷ್ಣರಾಜೇಂದ್ರ ವೈದ್ಯಾಲಯದ ನಿರ್ಮಾಣಕ್ಕೆ ಮುಖ್ಯ ಸೂಚಕರಾಗಿದ್ದ ಮೇಜರ್ ಫೋಕ್ಸ್‌ರವರು ಯುದ್ಧ ಪ್ರಾಪ್ತವಾದ ಬಳಿಕ ತಮ್ಮ ಸೈನ್ಯಶಾಖಾ ವೈದ್ಯಪದವಿಗೆ ಭರತಖಂಡದ ಸರ್ಕಾರದವರಿಂದ ಕರೆಯಿಸಿಕೊಳ್ಳಲ್ಪಟ್ಟು ಇಲ್ಲಿಂದ ತೆರಳಿದರಷ್ಟೆ. ಅವರು ಯುದ್ಧ ಮುಗಿದಬಳಿಕ ಒಂದಲ್ಲ ಒಂದು ಕಾಲದಲ್ಲಿ ನಮ್ಮ ಸಂಸ್ಥಾನದ ವೈದ್ಯ ಶಾಖೆಯ ಕೆಲಸಕ್ಕೆ ಮರಳಿ ಬರದೆ ಇರಲಾರರೆಂದೂ, ಅವರ ಚಿಕಿತ್ಸಾಪ್ರಯೋಜನವು ನಮ್ಮ ಸಂಸ್ಥಾನಕ್ಕೆ ದೊರೆಯದೆ ಹೋಗುವುದಿಲ್ಲವೆಂದೂ ಅನೇಕಾನೇಕ ಪ್ರಜೆಗಳು ನಿರೀಕ್ಷಿಸಿಕೊಂಡಿದ್ದರು. ಆದರೆ ಕಳೆದ ವಾರದಲ್ಲಿ ಬಂದಿರುವ ತಂತೀವಾರ್ತೆಗಳಿಂದ ಆ ನಮ್ಮ ನಿರೀಕ್ಷಣೆಯೆಲ್ಲಾ ವ್ಯರ್ಥವಾದುದು ಮಾತ್ರವಲ್ಲದೆ ಅವರು ಈ ಪ್ರಪಂಚವನ್ನೇ ತೊರೆದು ತಮ್ಮ ಹೆಂಡತಿ ಮಕ್ಕಳನ್ನೂ ಆಪ್ತಬಾಂಧವ ಪರಿಚಿತರನ್ನೂ ದುಃಖಕ್ಕೀಡುಮಾಡಿ ಹೋದರೆಂಬ ಸಂಗತಿಯು ತಿಳಿದು ಬಹಳ ಪರಿತಾಪವನ್ನುಂಟುಮಾಡಿದೆ. ಅವರು ತುರ್ಕಿ ಯುದ್ಧವು ಮುಗಿದಬಳಿಕ ಭರತಖಂಡದ ವಾಯವ್ಯಪ್ರಾಂತದ ಎಲ್ಲೆಯಲ್ಲಿರುವ ಸೈನ್ಯದಲ್ಲಿ ವೈದ್ಯರಾಗಿ ಕೋಹಟ್ ಎಂಬ ಶಿಬಿರದಲ್ಲಿದ್ದರು. ಅವರನ್ನು ಆ ಪ್ರಾಂತದ ಕೊಲೆಸುಲಿಗೆಗಾರರು ಕಳೆದ ತಾ|| ೧೫ ರ ರಾತ್ರಿ ವಧೆಮಾಡಿದರು. ಅದರ ವಿವರವನ್ನು ಅಲಹಾಬಾದ್ ಪಯೋನಿಯರ್ ಪತ್ರವು ಹೀಗೆ ಪ್ರಕಟಿಸಿರುತ್ತದೆ:—"ಕರ್ನಲ್ ಫೋಕ್ಸ್ ದಂಪತಿಗಳು ತಮ್ಮ ಮಗಳು ಮಲಗಿದ್ದ ಕೊಟ್ಟಡಿಯ ಹಿಂದಣಮನೆಯಲ್ಲಿ ಮಲಗಿದ್ದರು ದಾದಿಯು ಅದರ ಮಗ್ಗುಲ ಮನೆಯಲ್ಲಿ ಮಲಗಿದ್ದಳು. ಅರ್ಧರಾತ್ರಿ ಹೊತ್ತಿನಲ್ಲಿ ಕೆಲರು ಮನೆಯೊಳಕ್ಕೆ ನುಗ್ಗಿದರು. ಸದ್ದನ್ನು ಕೇಳಿ ಕರ್ನಲ್ ಫೋಕ್ಸ್‌ರವರು ಎಚ್ಚತ್ತು ಪಿಸ್ತೋಲನ್ನು ತೆಗೆದುಕೊಳ್ಳಲಿಕ್ಕಾಗಿ ಮಗ್ಗುಲ ಕೊಟ್ಟಡಿಗೆ ಹೋದರು. ಆಗ ಕಳ್ಳರಲ್ಲಿ ಒಬ್ಬನು ಫೋಕ್ಸ್‌ರವರ ಪತ್ನಿಯನ್ನು ಗುಂಡಿನಿಂದ ಹೊಡೆಯಲಿಕ್ಕೆ ಗುರಿಕಟ್ಟಿದನು. ಅದನ್ನು ಕಂಡು ಫೋಕ್ಸ್‌ರವರು ಅವನನ್ನು ಹಿಡಿದುಕೊಳ್ಳಲಿಕ್ಕೆ ಹೋಗಲು, ಅವನ ಪಿಸ್ತೋಲಿನೇಟು ಇವರ ಕೈಗೆ ಬಿದ್ದಿತು ಅಷ್ಟರಲ್ಲಿ ಇನ್ನೊಬ್ಬ ಕಳ್ಳನು ಫೋಕ್ಸ್‌ರವರನ್ನು ಪಿಸ್ತೋಲು ಗುಂಡಿನಿಂದ ಹೊಡೆಯಲು, ಅದು ಅವರ ತಲೆಯಲ್ಲಿ ದೂರಿಹೋಯಿತು. ಕೂಡಲೇ ಅವರು ಸತ್ತರು. ಅವರ ಮಗಳೂ ದಾದಿಯೂ ಒಂದುಕಡೆ ಅವಿತುಕೊಂಡಿದ್ದರು. ಬಳಿಕ ಕಳ್ಳರು ಮನೆಯನ್ನೆಲ್ಲಾ ಶೋಧಿಸಿ ದೋಚಿಕೊಂಡು ಗಾಯ ತಗುಲಿದ್ದ ಮಿಸೆಸ್ ಫೋಕ್ಸ್‌ರವರನ್ನು ತಮ್ಮ ಜತೆಯಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಅವರು ಏಟಿನ ನೋವಿನಿಂದ ನಡೆಯಲಾರದೆ ಬಿದ್ದುಹೋದರು. ಕಳ್ಳರು ಆಕೆಯವರನ್ನು ಬಿಟ್ಟುಬಿಟ್ಟು ಓಡಿಹೋದರು. ಇವರು ಬಹಳ ಕಷ್ಟದಿಂದ ಮನೆಗೆ ಸೇರಿಕೊಂಡರು." ಇಂಥ ದುರ್ಮರಣವು ಕರ್ನಲ್ ಫೋಕ್ಸ್‌ರವರಿಗೂ ಅವರ ವಿಯೋಗದುಃಖವು ಪತ್ನೀಪುತ್ರಿಯರಿಗೂ ಉಂಟಾದುದಕ್ಕಾಗಿ ಅವರ ಪರಿಚಿತರಾದ ಮೈಸೂರು ದೇಶೀಯರೆಲ್ಲರೊಡನೆ ನಾವೂ ಪರಿತಾಪಪಡುತ್ತೇವೆ.

ಒಳದೇಶದ ವೃತ್ತಾಂತಗಳು

ಸಿರಹಟ್ಟಿ ನಾಟಕಸಂಘದವರ ೨ ಪ್ರಯೋಗಗಳು ಅರಮನೆಯಲ್ಲಿ ನಡೆದುವು.

ಪ್ರೊ|| ಮೆಕಂಜಿಯವರು ರಾಜಧಾನಿಗೆ ದಯಮಾಡಿಸಿದ್ದರು. ವಿಶ್ವವಿದ್ಯಾಲಯ ಸಂಬಂಧವಾಗಿ ಕೆಲವುಪನ್ಯಾಸಗಳನ್ನು ಮಾಡಿದರು.

ಗುಬ್ಬಿಯಲ್ಲಿ ಬರುವ ತಾ|| ೧೦ ನೆ ಶುಕ್ರವಾರದ ದಿವಸ ಪದ್ಧತಿಯಂತೆ ಶ್ರೀಚೆನ್ನಬಸವೇಶ್ವರ ಸ್ವಾಮಿಯ ಪುಷ್ಪರಥೋತ್ಸವವು ನಡೆಯುವುದಾಗಿದೆ.

ಮದ್ರಾಸು ಸರ್ಜನ್ ಜನರಲ್‌ರವರು ಇಷ್ಟರಲ್ಲೇ ಅಲ್ಲಿಯ ಉದ್ಯೋಗದಿಂದ ನಿವೃತ್ತರಾಗಿ ನಮ್ಮ ಸಂಸ್ಥಾನದ ಸರ್ವೀಸಿಗೆ ಬರುವವರಾಗಿದ್ದಾರೆಂದು ಕೇಳುತ್ತೇವೆ.

ಈ ತಿಂಗಳ ಆರಂಭದಿಂದ ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ನಡೆವಳಿಕೆಗಳನ್ನೆಲ್ಲಾ ಮೈಸೂರು ಬ್ಯಾಂಕ್ ಬ್ರಾಂಚ್ ಶಾಖೆಯೇ ನಡೆಯಿಸಲು ಅದಕ್ಕೆ ಅಧಿಕಾರ ಕೊಡಲ್ಪಟ್ಟಿದೆ.

ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಜಪಾನ್, ಅಮೇರಿಕಾ, ಯೂರೋಪು ದೇಶಗಳ ಸಂಚಾರವನ್ನು ಮುಗಿಸಿಕೊಂಡು ಕಳೆದ ತಾ|| ೨೮ ರಲ್ಲಿ ಬೆಂಗಳೂರಿಗೆ ದಯಮಾಡಿಸಿದರು.

ಚಿತ್ರದುರ್ಗ ಡಿಸ್ಟ್ರಿಕ್ಟಿನ ರಡ್ಡಿ ಮಹಾಜನ ಸಭೆಯು ಬರುವ ಜನವರಿ ತಾ|| ೧೯-೨೦ ರಲ್ಲಿ ಚಿತ್ರದುರ್ಗ ಪಟ್ಟಣದಲ್ಲಿ ಮ|| ರಾ|| ಸಿ. ರಾಮಲಿಂಗರಡ್ಡಿ ಎಂ. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿದೆ.

ರಾಜಧಾನಿಯಲ್ಲಿ ಮಳೆಯ ಲಕ್ಷಣವೆಲ್ಲಾ ತೀರಿತು. ಋತುಧರ್ಮಕ್ಕನುಸರಿಸಿ ಚಳಿಯು ಹೆಚ್ಚುತ್ತಿದೆ. ಹೊಸಬತ್ತವು ೧೫ ದಿವಸಗಳಿಂದಲೂ ಪೇಟೆಗೆ ಬರುತ್ತಲಿದೆ. ಭೆಲೆಯು ಕಂಡಗಕ್ಕೆ ೧೮ ರೂ. ನಂತೆ ಇದೆ.

ನಮ್ಮ ದಿವಾನರವರು ಇಷ್ಟರಲ್ಲೇ ೬ ತಿಂಗಳ ರಜಾಪಡೆದು ಯೂರೋಪ್ ದೇಶಕ್ಕೆ ಪ್ರಯಾಣಮಾಡುವರೆಂಬ ಸುದ್ದಿಯು ಕೆಲ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಾವು ವಿಚಾರಮಾಡಿದುದರಲ್ಲಿ ಇದು ನಿಜವಲ್ಲವೆಂದು ಗೊತ್ತಾಗಿದೆ.

ವಿದ್ಯಾಶಾಖಾ ಇನ್ಸ್ಪೆಕ್ಟರ್ ಜನರಲ್‌ರವರು ಕಳೆದವಾರ ರಾಜಧಾನಿಗೆ ದಯಮಾಡಿಸಿದ್ದಾಗ್ಗೆ ಇಲ್ಲಿಯ ಕುರುಡ ಮೂಗರ ಪಾಠಶಾಲೆಗೆ ಹೋಗಿ ಅಲ್ಲಿಯ ಪಾಠಕ್ರಮ ಮೊದಲಾದುವುಗಳನ್ನೆಲ್ಲಾ ಸಾವಧಾನವಾಗಿ ವಿಚಾರಮಾಡಿ ಸಂತೋಷಪಟ್ಟರೆಂದು ಕೇಳುತ್ತೇವೆ.

ಹಾಲು ಮೊಸರು ತುಪ್ಪ ಬೆಣ್ಣೆ ಎಣ್ಣೆ ಮೊದಲಾದ ಆಹಾರವಸ್ತುಗಳೊಡನೆ ಇತರ ಪದಾರ್ಥಗಳನ್ನು ಮಿಶ್ರಮಾಡಿ ಮಾರತಕ್ಕವರನ್ನು ಶಿಕ್ಷಿಸುವುದಕ್ಕೆ ಅವಶ್ಯಕವಾದ ಶಾಸನವಾಗಬೇಕೆಂಬ ವಿಷಯವು ಕಳೆದ ನಿಯಮನಿರ್ಮಾಣ ಸಭೆಯಲ್ಲಿ ಚರ್ಚೆಯಾಯಿತು. ಆಗಬೇಕೆಂದು ಸಭಿಕರೆಲ್ಲರೂ ಒಪ್ಪಿದರು. ಇದರ ಮಸೂದೆಯು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುತ್ತದೆ.

ಸುಪ್ರಸಿದ್ಧ ಗಾಯಕಿಯೂ ನರ್ತಕಿಯೂ ಆದ ಗೊಹಜಾನ್ ಎಂಬುವರು ರಾಜಧಾನಿಗೆ ಬಂದು ಪದ್ಮಾಲಯದಲ್ಲಿ ಇಳಿದುಕೊಂಡು ತಮ್ಮ ಅದ್ಭುತ ಗಾನವಿದ್ಯಾಪ್ರೌಢಿಮೆಯನ್ನು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಪ್ರದರ್ಶನಮಾಡಿದರು. ಸಂಗೀತವಿದ್ಯೆಯಲ್ಲಿ ಶ್ರೀಮನ್ಮಹಾರಾಜರವರಿಗೆ ಇರುವ ಪರಿಶ್ರಮವೂ ಅಭಿಮಾನವೂ ಸಹ ಆ ವಿದ್ಯಾಪಾಂಡಿತ್ಯವುಳ್ಳ ನಾನಾ ದೇಶೀಯರಿಗೆ ವಿಶೇಷ ಪ್ರೋತ್ಸಾಹಕರವಾಗಿರುತ್ತದೆ. ಮಿ|| ಬರಖತ್ತುಲ್ಲಾ ಖಾನರೆಂಬ ಔತ್ತರೇಯ ಗವಾಯಿಗಳೊಬ್ಬರು ಸ್ವಲ್ಪ ದಿನಗಳ ಕೆಳಗೆ ೨೦೦ ರೂ. ಸಂಬಳದ ಮೇಲೆ ರಾಜಾಸ್ಥಾನದಲ್ಲಿ ನಿಯಮಿಸಿಕೊಳ್ಳಲ್ಪಟ್ಟಿರುವರೆಂದು ಕೇಳುತ್ತೇವೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾಮಾನ್ಯ ವಿಷಯಗಳು.

(ಕಳೆದವಾರದ ಶೇಷ).

ಪ್ರ.—ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಡಲ್ಪಟ್ಟ ಸಾಲದ ಮೇಲೆ ವರಮಾನದ ತೆರುಗೆಯಿಲ್ಲದಂತೆ ಮಾಡಬೇಕು.

ಉ.—೫ ವರ್ಷಗಳವರೆಗೆ ಇಲ್ಲದಂತೆ ಮಾಡಿದೆ. ಅಷ್ಟುಕಾಲ ನಡೆಯಲಿ, ಮುಂದೆ ನೋಡೋಣ.

ಪ್ರ.—ರೈತರ ಪಟ್ಟೆಗಳ ಪುಸ್ತಕವನ್ನು ೧೨ ಪುಟಗಳುಳ್ಳ ಪುಸ್ತಕದಂತೆ ಮಾಡಿಸಬೇಕು.

ಉ.—ಈಗಿರುವಅಚ್ಚಾದ ಕಾಗದಗಳೆಲ್ಲಾ ಮುಗಿದ ಕೂಡಲೇ ಹಾಗೆಯೇ ಮಾಡಿಸುತ್ತೇವೆ.

ಪ್ರ.—ಮ್ಯುನಿಸಿಪಲ್ ಎಲ್ಲೆಯೊಳಗಣ ಮದದ್ರವ್ಯದಂಗಡಿಗಳ ಹುಟ್ಟುವಳಿಯಲ್ಲಿ ಸ್ವಲ್ಪ ಭಾಗವನ್ನು ಆಯಾ ಮ್ಯುನಿಸಿಪಾಲಿಟಿಗೆ ಕೊಡಬೇಕು.

ಉ.—ಯಾವ ಸರ್ಕಾರದಲ್ಲೂ ಈ ಪದ್ಧತಿಯಿಲ್ಲ. ಬೆಂಗಳೂರು ಮೈಸೂರು ಟವುನ್ ಮ್ಯುನಿಸಿಪಾಲಿಟಿಗಳಿಗೆ ಅರಕ್‌ಸಾಪ್ ಹುಟ್ಟುವಳಿಯನ್ನು ಸೇರಿಸಿಕೊಟ್ಟಿದೆ.

ಪ್ರ.—ಚೌಬೀನಿ ಮರಗಳನ್ನು ಸಾಗಿಸುವಾಗ್ಗೆ ಫಾರೆಸ್ಟ್, ರೆವಿನ್ಯೂ ಇವೆರಡನ್ನು ಇಲಾಖೆಯವರಿಗೆ ಪ್ರತಿಯಾಗಿ ಫಾರೆಸ್ಟ್ ಇಲಾಖೆಯವರು ಮಾತ್ರವೇ ಲೈಸೆನ್ಸ್ ಕೊಡುವಂತೆ ಮಾಡಬೇಕು.

ಉ.—ಅವೆರಡು ಇಲಾಖೆಯವರನ್ನೂ ವಿಚಾರಿಸಿ ಅಪ್ಪಣೆ ಕೊಡುತ್ತೇವೆ.

ಪ್ರ.—ಗ್ರಾಮಸಮೀಪದ ಪ್ಲಾಂಟೇಷನ್ನುಗಳನ್ನು ಪಂಚಮರಿಗೆ ಕೊಡಿಸಬೇಕು.

ಉ.—ಪಂಚಮರಿಗೆ ಯಾವ ಯಾವ ಸಹಾಯ ಮಾಡಬೇಕೆಂಬುದನ್ನು ವಿಚಾರದಿಂದ ವರದಿ ಮಾಡಲಿಕ್ಕೆ ಕಮಿಟಿಯೇರ್ಪಾಡಾಗಿದೆ.

ಪ್ರ.—ರಿಜಿಸ್ಟರಾಗುವ ಪತ್ರಗಳ ರುಸುಮನ್ನು ಹಣಕ್ಕೆ ಪ್ರತಿಯಾಗಿ ಸ್ಟಾಂಪುಗಳ ಮೂಲಕ ತೆಗೆದುಕೊಳ್ಳುವಂತೆ ಮಾಡಿಸಬೇಕು.

ಉ.—ಯಾವ ತೆರದ ಸ್ಟಾಂಪನ್ನು ಮಾಡಬೇಕೆಂಬ ವಿಷಯದಲ್ಲಿ ನಡವಳಿಕೆ ನಡೆಯುತ್ತಿದೆ.

ಪ್ರ.—ರಿಜಿಸ್ಟರಾಗುವ ಪತ್ರಗಳಲ್ಲಿ ೩೦೦ ಮಾತುಗಳಿಗಿಂತ ಹೆಚ್ಚಾಗಿದ್ದರೆ ಪ್ರತಿ ನೂರು ಮಾತಿಗೂ ೪ ಆಣೆಯಂತೆ ಹೆಚ್ಚು ಛಾರ್ಜು ತೆಗೆದುಕೊಳ್ಳುವುದನ್ನು ೨ ಆಣೆಗೆ ಇಳಿಯಿಸಬೇಕು.

ಉ.—ವಿಚಾರಿಸಿ ನೋಡುತ್ತೇವೆ.

ಪ್ರ.—ಕಾಥೆವಾಡ ಜಯಪುರ ಮೊದಲಾದ ಸಂಸ್ಥಾನಗಳಲ್ಲಿ ಪಶುವಧೆಯನ್ನು ತಪ್ಪಿಸಿಬಿಟ್ಟಿದ್ದಾರೆ. ನಮ್ಮ ಸಂಸ್ಥಾನದಲ್ಲೂ ದನಗಳ ಕೊಲ್ಲುವುದನ್ನು ಶಾಸನದ ಮೂಲಕ ನಿಲ್ಲಿಸಿಬಿಡಬೇಕು.

(ಮಿ|| ಅಬ್ಬಾಸ್ ಖಾನರು-ನಮ್ಮ ದೇಶದ ಮುಸಲ್ಮಾನರಲ್ಲಿ ಗೋಮಾಂಸಭಕ್ಷಣೆಯ ಪದ್ಧತಿಯೇ ಇಲ್ಲ. ಮಿಲಿಟರಿಯವರಿಗಾಗಿ ಪಶುಹನನವಾಗುತ್ತಿದೆ. ಅದನ್ನು ನಿಲ್ಲಿಸಬೇಕು. ಸಭಿಕರೆಲ್ಲಾ ಸಂತೋಷಧ್ವನಿ ಮಾಡಿದರು.)

ಉ.—ದೊಡ್ಡ ದೊಡ್ಡ ಮ್ಯುನಿಸಿಪಾಲಿಟಿಗಳವರು ಹಾಗೆ ನಿರ್ಧಾರ ಮಾಡಿ ನಿಲ್ಲಿಸಬಹುದು. ಈಗ ವ್ಯವಸಾಯಾದಿಗಳಿಗೆ ಉಪಯೋಗಕ್ಕೆ ಬರುವಂಥ ರಾಸುಗಳನ್ನು ಕೊಲ್ಲುತ್ತಿದ್ದಾರೆಯೇ ನಿರುಪಯೋಗವಾದುವುಗಳನ್ನು ಕೊಲ್ಲುತ್ತಿದ್ದಾರೆಯೇ ಎಂಬುದನ್ನು ಸ್ಟಾಟಿಸ್ಟಿಕ್ ತರಿಸಿಕೊಂಡು ನೋಡೋಣ.

ಪ್ರ.—ಸಿಟಿ ಮ್ಯುನಿಸಿಪಾಲಿಟಿಯಿಂದಲೂ, ಲಾ ಅಸೋಸಿಯೇಷನ್ನಿನಿಂದಲೂ ನಿಯಮನಿರ್ಮಾಣ ಸಭೆಗೆ ಒಬ್ಬೊಬ್ಬ ಮೆಂಬರನ್ನು ಸೇರಿಸಿಕೊಳ್ಳಬೇಕು.

ಉ.—ಯೋಚನೆ ಮಾಡುತ್ತೇವೆ.

ಪ್ರ.—ಹಾಲು ಮೊಸರುಗಳಿಗೆ ಇತರ ಪದಾರ್ಥಗಳನ್ನು ಸೇರಿಸಿ ಮಾರುವುದನ್ನು ಕಾನೂನು ಮೂಲಕ ನಿರೋಧಿಸಬೇಕು.

(ಕೆಲ ಮೆಂಬರುಗಳು ಇಂಥ ಕಾನೂನು ಆಗಕೂಡದು. ಆದರೆ ಹಾಲು ಮೊಸರೇ ಸಿಕ್ಕದೆಹೋದೀತು ಎಂದರು.)

ಉ.—ಇಷ್ಟರಲ್ಲೇ ಇದರ ಬಿಲ್ಲು ನಿಯಮನಿರ್ಮಾಣ ಸಭೆಗೆ ಬರುತ್ತದೆ.

ಪ್ರ.—ಜುಡಿಷಿಯಲ್ ಎಗ್ಜಿಕ್ಯುಟೀವ್ ಅಧಿಕಾರಗಳ ಪ್ರತ್ಯೇಕಿಸುವಿಕೆಯನ್ನು ಉಳಿದ ೪ ಡಿಸ್ಟ್ರಿಕ್ಟುಗಳಲ್ಲೂ ಏರ್ಪಡಿಸಬೇಕು.

ಉ.—ಈಗ ಮಾಡಿರುವ ಕಡೆಯೇ ಪರೀಕ್ಷಾರ್ಥವಾಗಿದೆ. ಅಲ್ಲೇ ಎಷ್ಟೋ ದೂರು ಬರುತ್ತಿದೆ. ಸಾಧ್ಯವಾದಂತೆ ಮಾಡುತ್ತೇವೆ.

ಪತ್ರವ್ಯವಹಾರಕರಿಗೆ ಸೂಚನೆ.

[illegible] ಕಾಗದದ ಬೆಲೆಯು ಇನ್ನೂ ಇಳಿಯದಿರುವ ಕಾರಣದಿಂದ ಪತ್ರದ ಆಕೃತಿಯು ಚಿಕ್ಕದಾಗಿದೆ. ಪತ್ರವ್ಯವಹಾರಕರು ಲೇಖನಗಳನ್ನು ಸಂಕ್ಷೇಪವಾಗಿ ಬರೆದು ಕಳುಹಿಸದಿದ್ದರೆ ಅಂಥ ಲೇಖನಗಳನ್ನು ಪ್ರಕಟಿಸುವುದಕ್ಕೇ ಆಗುವುದಿಲ್ಲ. ಈ ಕಾರಣದಿಂದ ಅನೇಕ ಲೇಖನಗಳು ಪ್ರಕಟನೆಗೆ ಅವಕಾಶ ಹೊಂದದೆಹೋಗಿವೆ. ಬೇಸರುಗೊಳ್ಳದೆ ಪತ್ರವ್ಯವಹಾರಕರೆಲ್ಲರೂ ಈ ಸಂಗತಿಯನ್ನು ಗಮನಿಸಬೇಕೆಂದು ಕೋರುತ್ತೇವೆ. ಪ. ಪ್ರ.

ಪತ್ರವ್ಯವಹಾರ.

ಸಿರಸಂಗಿ.

ತಾ|| ೧೫-೧೧-೧೯೨೦ನೆ ದಿವಸ ಇಲ್ಲಿಯ ಫ್ರೀ ರೀಡಿಂಗ್ ಲೈಬ್ರರಿಯ ವತಿಯಿಂದ ಶ್ರೀ ಶಂಕರದೇವರ ಗುಡಿಯಲ್ಲಿ ಮ|| ರಾ|| ರಾಚಯ್ಯ ಗುರುಲಿಂಗಯ್ಯ ಹಿರೇಮಠ ಇವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ ಸದ್ಯದ ಪರಿಸ್ಥಿತಿಯ ಮೇಲೆ ಮತ್ತು ಶರೀರಾರೋಗ್ಯ ಸಂಪತ್ತಿನ ಬಗ್ಗೆ ವಿದ್ಯಾರ್ಥಿಗಳು ಜನರಿಗೆ ತಿಳಿಯುವಂತೆ ಭಾಷಣ ಮಾಡಿದರು. ಪ್ರೇಕ್ಷಕ.

ಒಂದು ತಿಂಗಳ ಶಿಶುವಿನ ನುಡಿ.

ಧಾರವಾಡ ಜಿಲ್ಲಾ ಹಿರೇಕೆರೂರ ತಾಲ್ಲೂಕು ಪೈಕಿ ಹಾದ್ರಿಹಳ್ಳಿಯೆಂಬ ಗ್ರಾಮದಲ್ಲಿ ಶ್ರೀ|| ಮಠದ ಗುರುಬಸಯ್ಯನವರ ಪತ್ನಿಯ ಗರ್ಭದಿಂದ ಜನಿಸಿದ ಗಂಡು ಶಿಶುವು ಹುಟ್ಟಿದ ಒಂದು ತಿಂಗಳಲ್ಲಿ ಮಾತುಗಳನ್ನಾಡುತ್ತಿರುವದು. ಆ ಮಾತುಗಳನ್ನು ಕೇಳುವದಕ್ಕೋಸ್ಕರ ಎಷ್ಟೋ ಜನರು ಹೋಗಿ ನೋಡಿಕೊಂಡುಬರುತ್ತಿರುವರಲ್ಲದೆ ಇಂಥ ಅದ್ಭುತವುಳ್ಳ ಶಿಶುವು ಮುಂದೆ ಮಠಕ್ಕೆ ಮಹಾಭ್ಯುದಯ ಕಾರಣವಾಗಬಹುದೆಂದು ಹಲವು ಜನರು ನುಡಿಯುತ್ತಿರುವರು. ಶಿಶುವು ಆರೋಗ್ಯದಿಂದಿರುತ್ತದೆ.

ಓರ್ವ ವೀರಶೈವ.

ಶ್ರೀಮದ್ವೀರಶೈವ ತರುಣ ಸಂಘವು.

(ಹೊಸಪೇಟೆ).

ಕಾಲವೈಚಿತ್ರ್ಯದಿಂದ ಹಿಂದುಳಿದ ನಮ್ಮ ವೀರಶೈವ ಸಮಾಜೋನ್ನತಿಗಾಗಿ ಅಲ್ಲಲ್ಲಿ ಧನಸಂಚಯವನ್ನು ಮಾಡಿ ಕೆಲವು ಪ್ರಮುಖರು ವಿದ್ಯಾಭಿವೃದ್ಧಿಯನ್ನೂ ಧರ್ಮಸುಧಾರಣೆಯನ್ನೂ ಮಾಡುತ್ತಿರುವರಷ್ಟೆ. ಅದರಂತೆ ಬಳ್ಳಾರಿ ಜಿಲ್ಲೆಗೆ ಸೇರಿದ-ಹೊಸಪೇಟೆಯ ವೀರಶೈವ ಮಂಡಳಿಯು "ಶ್ರೀಮದ್ವೀರಶೈವ ತರುಣ ಸಂಘವು" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಇದು ನಿರ್ವಿಘ್ನತೆಯಿಂದ ಏಳಿಗೆಯೊಳಗೆ ಬರಲೆಂಬ ಸದುದ್ದೇಶದಿಂದ ಈ ರೌದ್ರಿಸಂವತ್ಸರ ಆಶ್ವೀಜ ಶುದ್ಧ ೧ ದಿಂದ ವಿಜಯದಶಮಿಯವರೆಗೆ ೧೧ ದಿವಸ ಶ್ರೀಮನ್ನಿರಂಜನ ಕೊಟ್ಟೂರ ಮಹಾಸ್ವಾಮಿಗಳವರ ಮಠದಲ್ಲಿ ವೇ|| ದ್ಯಾಂಪುರ ಚನ್ನಪ್ಪಯ್ಯಶಾಸ್ತ್ರಿಗಳಿಂದ ಶಿವಕೀರ್ತನವನ್ನು ಜರುಗಿಸಿ ಧರ್ಮ ನೀತಿ ರಾಜಭಕ್ತಿ, ಐಕಮತ್ಯ, ಸಮಾಜಸೇವೆ ಮುಂತಾದವುಗಳು ಸರ್ವ ಜನರ ಮನಸ್ಸಿನಲ್ಲಿ ಚೆನ್ನಾಗಿ ಹೊಳೆಯುವಂತೆ ನೆರವೇರಿಸಿದರು. ಈ ಸಂಘದವರು ತುಂಬಾ ಕಳಕಳಿಯಿಂದ ವರ್ಗಣಿಯನ್ನು ಕೂಡಿಸಿ ವಿದ್ಯಾರ್ಥಿಗಳಿಗೆ ತಕ್ಕ ಅನುಕೂಲ್ಯವನ್ನುಂಟುಮಾಡುತ್ತಿರುವುದರಿಂದ ಇವರಿಗೆ ಆಯುರಾರೋಗ್ಯ ಸಂಪದಭಿವೃದ್ಧಿಯೂ ಈ ಸಂಸ್ಥೆಗೆ ಜಯವೂ ಸದಾ ಜಗದೀಶನ ಅನುಗ್ರಹದಿಂದ ದೊರೆಯಲೆಂದು ಅಪೇಕ್ಷಿಸುತ್ತೇನೆ. ಚನ್ನವೀರಯ್ಯ ನಿಂಬಗಲ್ಲ.

ಯೋಗಿಕೊಪ್ಪ.

ಕೋಡ ತಾಲ್ಲೂಕ ಪೈಕಿ ಯೋಗಿಕೊಪ್ಪ ಗ್ರಾಮದಲ್ಲಿ ಬಹುಶಃ ಮೂರು ತಿಂಗಳ ಹಿಂದೆ ಮುಷ್ಟಿ ಫಂಡಿನಿಂದ ಒಂದು ಪ್ರಾಥಮಿಕ ಶಾಲೆಯು ಸ್ಥಾಪಿಸಲ್ಪಟ್ಟಿರುವದಲ್ಲದೆ, ೨೦ ವರ್ಷಗಳ ಮೇಲ್ಪಟ್ಟ ವಯಸ್ಸುಳ್ಳ ವಿದ್ಯಾರ್ಥಿಗಳ ಒಂದು ನೈಟ್ ಸ್ಕೂಲು (ರಾತ್ರಿ ಶಾಲೆ) ಯೂ ಸ್ಥಾಪಿಸಲ್ಪಟ್ಟಿರುವದು. ಈ ಸ್ಕೂಲಿನಲ್ಲಿ ಸದ್ಯಃ ೨೫ ಜನ ವಿದ್ಯಾರ್ಥಿಗಳಿರುವರು. ಈ ಊರ ಜನಸಂಖ್ಯೆ ಬಹುಶಃ ೩೫೦ ಇದ್ದು, ಇಂಥ ಸಣ್ಣ ಹಳ್ಳಿಯಲ್ಲಿಯೂ ಕೋಡ ನೈಟ್ ಸ್ಕೂಲು ಆದದ್ದನ್ನು ನೋಡಿ ನಮ್ಮ ಮನಸ್ಸಿಗೆ ಬಹಳ ಆನಂದವಾಯಿತು. ಇದು ಈ ಊರ ಪೋಲೀಸ ಪಾಟೀಲರಾದ ಮ|| ರಾ|| ಹಾಲಪ್ಪಗೌಡರಿಗೂ ಊರೊಳಗಿನ ಪ್ರಮುಖರಿಗೂ ಭೂಷಣವೇ ಸರಿ; ಈಗಿನ ನವನಾಗರಿಕ ಕಾಲದಲ್ಲಿ ಪ್ರತಿಯೊಂದು ಹಳ್ಳಿಯು ಸುಧಾರಣೆಯೂ ಆಗದ ಹೊರತು, ಯಾವದೊಂದು ದೇಶವಾಗಲೀ ರಾಷ್ಟ್ರವಾಗಲೀ ಎಂದೂ ಮುಂದರಿಯಲಾರದು. ಅಷ್ಟೇ [illegible] ಮುಂದೆಗೆದು ಮಾರುಗೆಲ್ಲಬೇಕು. ಈ ತತ್ವಕ್ಕನುಸರಿಸಿ ಪ್ರತಿಯೊಂದು ಹಳ್ಳಿ[illegible] ಕೂಡ ವಿದ್ಯಾ ಬುದ್ಧಿ ಕಲಾಕೌಶಲ್ಯಗಳ ಸುಧಾರಣೆಯಾಗಿ ದೇಶದಲ್ಲಿ [illegible] ಅವಶ್ಯಕವಾಗಿ ಪ್ರತಿಯೊಂದು ಹಳ್ಳಿಯಲ್ಲಿ ಸ್ಕೂಲುಗಳು ನೆಲಗೊಳ್ಳಬೇಕಾದರೆ ಅತ್ಯವಶ್ಯಕವು; ನಮ್ಮ ಕೋಡ ತಾಲ್ಲೂಕಿನಲ್ಲಿ ಮೊಟಲುಗಳು ಇರುವುದು ಇಂದರೆ ಯೋಗಿಕೊಪ್ಪದಲ್ಲಿಂದು ಖಂಡಿತವಾಗಿ ಹೇಳಬಹುದು. ಸ್ಕೂಲು

ಓರ್ವ ದೇಶಾಭಿಮಾನಿ.

ಸಿಂದಗಿ.

"ಉದಾರಚರಿತಾನಾಂತು ವಸುಧೈವ ಕುಟುಂಬಕಂ" ತಾಲ್ಲೂಕಿನ ಮುಖ್ಯ ಸ್ಥಳವಾದರೂ ಹಿಂದೆ ಬಿದ್ದ ಸಿಂದಗಿಯ ಜನರ ಜ್ಞಾನಾಭಿವೃದ್ಧಿಯ ಆಸೆಯಿಂದ ಅಲ್ಲಿಯ ಹಿರೇಮಠದ ಪಟ್ಟದದೇವರಾದ ಗುರುವರ್ಯರ್ ರೇವಣಸಿದ್ಧ ಸ್ವಾಮಿಗಳು ಒಂದು ಲೈಬ್ರರಿಯನ್ನು ತಮ್ಮ ಸ್ವಂತ ಖರ್ಚಿನಿಂದಲೇ ಸ್ಥಾಪಿಸಿದರು. ಇದು ಪರಮಸ್ತುತ್ಯವು ಮಹಾನಂದಕರವು. ಗುರುವರ್ಯರು ಲೈಬ್ರರಿಯ ಭಾಂಡವಲಕ್ಕಾಗಿ ೨-೩ ಸಾವಿರ ರೂಪಾಯಿಗಳ ಒಜ್ಜೆಯನ್ನು ಸ್ವತಃ ಹೊತ್ತು ಜ್ಞಾನನಿಧಿಯನ್ನು ಯಾವತ್ತರಲ್ಲಿ ಹಂಚುವ ಪರಮ ಪವಿತ್ರ ಕಾರ್ಯವನ್ನು ಕೈಕೊಂಡರು. ಇದಲ್ಲದೆ ವಾಚನಾಲಯಕ್ಕಾಗಿ ತಮ್ಮ ಮಠದ ಕೆಲ ಭಾಗವನ್ನು ಸಹ ದಯಪಾಲಿಸಿರುವರು. ಇದೇ ನಿಜವಾದ ಉದಾರ ಬುದ್ಧಿ. ಪಟ್ಟಾಧಿಕಾರಿಗಳಾದ ಗುರುವರ್ಯರಲ್ಲಿ ಐಹಿಕ ಸುಖಕ್ಕೆ ಬಹಿಷ್ಕಾರವನ್ನು ಹಾಕಿ ಪಾರಮಾರ್ಥಿಕ ಉಚ್ಚತಮಧ್ಯೇಯವನ್ನು ಮುಂದೆ ಮಾಡಿ ತಮ್ಮ ತನುಮನಧನಗಳನ್ನು ಪರೋಪಕಾರಕ್ಕಾಗಿಯೇ ಸವೆಯಿಸುವವರು ತೀರ ವಿರಳ. ಸಮಾಜೋನ್ನತಿಗಾಗಿ ಟೊಂಕಕಟ್ಟುವ ಇಂಥ ಮಹನೀಯರ ಕಾರ್ಯಕ್ಕೆ ಜಗದೀಶನು ಸ್ಥಿರವಾದ ಜಯವನ್ನೀಯಲಿ. ಹೀಗೆಯೇ ಶಿಕ್ಷಣವೃತ್ತಿಯುಳ್ಳ ಮಹನೀಯರು ಇಂಥ ದೇಶೋದ್ಧಾರಕ ಕಾರ್ಯಗಳನ್ನು ಭೇದಭಾವವಿಲ್ಲದೆ ಮಾಡಲಿಕ್ಕೆ ಟೊಂಕಕಟ್ಟಿದರೆ ದೇಶವು ತೀವ್ರವಾಗಿಯೇ ಊರ್ಜಿತಾವಸ್ಥೆಯನ್ನು ಹೊಂದುವದೆಂದು ನಿಸ್ಸಂದೇಹವಾಗಿ ಹೇಳಬಹುದು. ಪ್ರೇಕ್ಷಕ.

ವನಸಿಗ್ಗಲಿ ಶ್ರೀಮಂತ ಶಿರಸಂಗಿ ಲಿಂಗರಾಜ ಎ. ವಿ. ಸ್ಕೂಲು.

ವೀರಶೈವ ಸಿದ್ಧಾಂತದ ಪ್ರಕಾರ ಸ್ವಕೀಯ ಸರ್ವಾಸ್ತಿಯನ್ನೂ ವೀರಶೈವ ವಿದ್ಯಾಭಿವೃದ್ಧಿಗೆ ಅರ್ಪಣ ಮಾಡಿದ ಕೈ|| ವಾ|| ಶ್ರೀಮಂತ ಶಿರಸಂಗಿ ಲಿಂಗರಾಜರ ಜನ್ಮಭೂಮಿಯು ಇದೇ ವನಸಿಗ್ಗಲಿ ಗ್ರಾಮವಾದ ಪ್ರಯುಕ್ತ ಈ ಗ್ರಾಮದ ಪ್ರಮುಖರಾದ ಶಿವಮೂರ್ತಿ ರಾ|| ರಾ|| ಸಿದ್ಧಯ್ಯ ವ ಸಂಗಯ್ಯ, ಕೊಡ್ಲಮಠ, ಗುರಪ್ಪಶೆಟ್ಟಿ, ಭೀಮಪ್ಪಗೌಡ, ಮರಿಬಸಪ್ಪ ಅಣ್ಣಿಗೇರಿ, ಮಲ್ಲಪ್ಪ ಮಡ್ಡಿ, ದೊಡ್ಡಬಸಪ್ಪ ಹತ್ತಿಕಾಳ ಮುಂತಾದವರು ಈ ಉದಾರ ದೊರೆಗಳವರ ಸ್ಮಾರಕವಾಗಿ ಒಂದು ಇಂಗ್ಲೀಷು ಸ್ಕೂಲು, ಒಂದು ವಾಚನಾಲಯ ಹೀಗೆ ಎರಡು ಸಂಸ್ಥೆಗಳನ್ನು ಏರ್ಪಾಡು ಮಾಡಿದ ಸಂಗತಿಯು ಸ್ಟಾರ್ ಪತ್ರಿಕಾದ್ವಾರಾ ಪ್ರಸಿದ್ಧಿಯಾಗಿರುವುದಷ್ಟೆ. ಈ ವಾಚನಾಲಯದಲ್ಲಿ ಕನ್ನಡ ವರ್ತಮಾನ ಪತ್ರಗಳೂ, ಮಾಸಿಕ ಪತ್ರಗಳೂ ತಕ್ಕಮಟ್ಟಿಗೆ ಬರಹತ್ತಿವೆ. ಸದರಿ ವಾಚನಾಲಯದ ಸಮಸ್ತ ವ್ಯವಸ್ಥೆಯನ್ನೂ ರಾ|| ರಾ|| ಸಿದ್ಧಪ್ಪ ಎಲಿಗಾರ ಇವರು ಅಭಿಮಾನಪೂರ್ವಕ ನಡಿಸುತ್ತಿರುವರು. ಸದರಿ ಲಿಂಗರಾಜ ಎ. ವಿ. ಸ್ಕೂಲಿನ ಮೇಲೆ ವೀರಶೈವ ಧರ್ಮಾಭಿಮಾನಿಗಳೂ ಸುಶೀಲರೂ ಆದ ರಾ|| ರಾ|| ಮಲ್ಲಪ್ಪ ಲಿಂಗಪ್ಪ ಅದಾರಿ ಕುಂದಗೋಳ ಇವರ ನೇಮಣೂಕ ಆಗಿರುತ್ತದೆ. ಅವರಿಗೆ ಈಗ ಪ್ರತಿ ತಿಂಗಳಿಗೆ ಮೂವತ್ತು ರೂ. ಸಂಬಳ ಸಿಗುತ್ತಿರುವದು. ಈ ಶಾಲೆಯಲ್ಲಿ ಹತ್ತೊಂಬತ್ತು ವಿದ್ಯಾರ್ಥಿಗಳು ಇದ್ದು ಅವರಲ್ಲಿ ಮೂರು ವರ್ಗಗಳನ್ನು ಮಾಡಿರುವರು. ಸ್ಕೂಲಿನ ವಿಚಾರಣೆಯ ಕಾರ್ಯವನ್ನು ಲಿಂಗರಾಜ ಕಮಿಟಿಯವರ ವಿನಂತಿ ಪ್ರಕಾರ ಮ|| ರಾ|| ಬಸೆಟ್ಟೆಪ್ಪಾ ದೊಡ್ಡಬಸಪ್ಪಾ ಶೆಟ್ಟಿ ಸಾಹುಕಾರ ಲಕ್ಷ್ಮೇಶ್ವರ ಈ ಉದಾರ ತರುಣರು ಭಕ್ತಿಪೂರ್ವಕ ವಹಿಸಿರುವರು. ಅದಲ್ಲದೆ ಈ ಸಂಸ್ಥೆಗಳು ಚಿರಕಾಲ ನಡೆಯುವ ಬಗ್ಗೆ ಇಲ್ಲಿಯ ಪ್ರಮುಖ ವೀರಶೈವರು ಶಿರಸಂಗಿ ಲಿಂಗರಾಜ ವಿದ್ಯಾಭಿವೃದ್ಧಿ ಫಂಡನ್ನು ಸ್ಥಾಪಿಸಿರುತ್ತಾರೆ. ಈ ಫಂಡಿಗೆ ಸ್ಥಳ, ಪರಸ್ಥಳದ ಮಹಾಜನರು ವ್ಯಾಪಾರಾದಿ ಬಾಬುಗಳಿಂದ ಸಹಾಯಮಾಡುತ್ತಿರುವರು. ಈ ಸ್ಕೂಲಿನ ಸ್ಥಿರತ್ವದ ಬಗ್ಗೆ ಪ್ರತಿ ತಿಂಗಳಿಗೆ ತಪ್ಪದೆ ಶಿವಮೂರ್ತಿ ರಾ|| ರಾ|| ಸಿದ್ಧಪ್ಪಯ್ಯ ವ ಸಂಗಪ್ಪಯ್ಯ ಕೊಡ್ಲಮಠ ಈ ಪ್ರಸಿದ್ಧ ವ್ಯಾಪಾರಿಗಳು ಎಂಟೆಂಟರಂತೆ ಹದಿನಾರು ರೂ. ಗಳನ್ನು ಚಿರಕಾಲ ಕೊಡುತ್ತೇವೆಂದು ವಾಗ್ದಾನ ಮಾಡಿದಂತೆ ಕೊಡುತ್ತಿರುವರು. ಶ್ರೀಮಂತರ ಸೋದರಳಿಯರಾದ ಬಸಪ್ಪ ವನಸಿಗ್ಗಲಿ ಶಿರಸಂಗಿ ಸಂಸ್ಥಾನದ ಕಾರಭಾರಿಗಳು ಈ ಶಾಲೆಯನ್ನು ನೋಡಿ ಸಂತೋಷಪಟ್ಟು ಪ್ರತಿ ತಿಂಗಳಿಗೆ ತಪ್ಪದೆ ಐದು ರೂ. ಯಂತೆ ನಾವು ನೌಕರಿ ಮಾಡುವವರೆಗೂ ಸಹಾಯ ಮಾಡುತ್ತೇವೆಂದು ವಾಗ್ದಾನ ಮಾಡಿದಂತೆ ೧೯೨೦ನೆ ಅಕ್ಟೋಬರು ತಿಂಗಳ ಲಾಗಾಯತು ಡಿಶಂಬರು ಅಖೈರ ವರೆಗೆ ಆದ ೨೫ ರೂ. ಗಳನ್ನು ಸದರಿ ಕಮಿಟಿಯವರ ಕಡೆಗೆ ಕಳಿಸಿರುವರು. ಇದರಂತೆ ಸ್ಥಳದ ಪರಸ್ಥಳದ ವಿದ್ಯಾಪಕ್ಷಪಾತಿಗಳೂ ವೀರಶೈವ ಮತಾಭಿಮಾನಿಗಳೂ ಈ ವನಸಿಗ್ಗಲಿಯ ಶಿರಸಂಗಿ ಲಿಂಗರಾಜ ವಿದ್ಯಾಭಿವೃದ್ಧಿಯ ಫಂಡಿಗೆ ಸ್ವಹಸ್ತ ಪರಹಸ್ತಗಳಿಂದ ಧನಸಹಾಯವನ್ನು ಮಾಡಿ ಸ್ವಪರ ವಿದ್ಯಾರ್ಥಿಗಳ ವೃಂದವನ್ನು ಅಮೋಘವಾದ ಆಂಗ್ಲ ವಿದ್ಯಾಲಂಕೃತರನ್ನಾಗಿ ಮಾಡಿ ಅಮಿತ ಲಾಭವನ್ನು ಹೊಂದಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ರಾಜಪ್ಪಶೆಟ್ಟಿ ಗುರಪ್ಪಶೆಟ್ಟಿ,

ಹೆಡ್ ಮಾಸ್ತರ.

ವಿಜಾಪುರ.

ವಿಜಾಪುರವು ದಕ್ಷಿಣ ಹಿಂದೂಸ್ಥಾನದಲ್ಲಿ ಆದಿಲಶಾಹಿಬಾದಶಹರ ಕಾಲಕೀರ್ದಿಯಲ್ಲಿ ವೈಭವದಿಂದಲೂ ಜನಸಂಖ್ಯೆಯ ಮಾನದಿಂದಲೂ ವಿಸ್ತಾರದಿಂದಲೂ ಬಹು ಘನತೆಯನ್ನು ಹೊಂದಿ ೧೬ ನೇ ಶತಮಾನದಲ್ಲಿ ಹಾಳಾಗಿ ನೋಡತಕ್ಕ ಇಮಾರತಿಗಳು ಮಾತ್ರ ಉಳಿದು, ಸಣ್ಣ ಗ್ರಾಮವಾಗಿತ್ತು. ಅತ್ತ ಇಂಗ್ಲೀಷ್ ಸರಕಾರದವರ ಆಳಿಕೆಯಲ್ಲಿ ಜಿಲ್ಲೆಯ ಸ್ಥಳವಾದಂದಿನಿಂದ ಈ ಮೊದಲು ಹಾಳುಬಿದ್ದ ಭಾಗಗಳಲ್ಲಿ ಜನವಸತಿಯಾಗುತ್ತ ನಡೆದಿದೆ. ಈಗ ಸದ್ಯಕ್ಕೆ ಹಿಂದುಜನರ ಸಂಖ್ಯೆಯೇ ವಿಶೇಷವಾಗಿದ್ದು, ಅದರಲ್ಲಿ ಲಿಂಗವಂತರ ಸಂಖ್ಯೆಯಾದರೂ ತಕ್ಕಮಟ್ಟಿಗೆ ಹೆಚ್ಚಾಗಿರುವದು. ಈ ಲಿಂಗವಂತರ ಸಂಖ್ಯೆಯಲ್ಲಿ ಧರ್ಮಶ್ರದ್ಧೆಯು ವಿಶೇಷವಾಗಿ ಕಡಮೆಯಿರುವ ಜನರೇ ಬಹಳವಾಗಿರುವರು. ಅದೇ ಪ್ರಮಾಣದಿಂದ ಮಠಗಳಾದರೂ ಕಡಮೆ. ಅವು ಒಂದೆರಡು ಇದ್ದರೂ ಧರ್ಮಜಾಗ್ರತೆಯನ್ನುಂಟುಮಾಡುವ ಯೋಗ್ಯಮೂರ್ತಿಗಳು ಇಲ್ಲದರ ಮೂಲಕವಾಗಿ ಧರ್ಮಜಿಜ್ಞಾಸೆಗೆ ಅವಕಾಶವಿಲ್ಲದಂತಾಗಿತ್ತು. ಇತ್ತೀಚೆಗೆ ದೇಶಿಕಮೂರ್ತಿಗಳಾದ "ಶ್ರೀ ಶಂಭುಲಿಂಗಸ್ವಾಮಿ ಹಾವೇರಿ" ಇವರು ಈ ಪಟ್ಟಣಕ್ಕೆ ಹೋದ ಸಿದ್ಧಾರ್ಥಿನಾಮಸಂವತ್ಸರದಲ್ಲಿ ಸಂಚಾರ ಮಾಡುತ್ತ ಆಗಮಿಸಿದಾಗ, ಅವರ ವೈರಾಗ್ಯ ಮತ್ತು ಧಾರ್ಮಿಕ ವಿದ್ವತ್ತೆಯನ್ನರಿತು, ವೀರಶೈವ ಧರ್ಮತತ್ವಗಳ ವಿಷಯವಾಗಿ ಪ್ರವಚನಗಳನ್ನು ಕೇಳುವವರಾಗಿದ್ದೇವೆಂದು ಅಲ್ಲಿಯ ಶಿವಭಕ್ತರು ವಿನಂತಿ ಮಾಡಿಕೊಳ್ಳಲು

ಅಗ್ಗಿ ಅವರು ಇಲ್ಲೇ ವಾಸಮಾಡಿ 'ವೀರಶೈವ ಸಿದ್ಧಾಂತ ಶಿಖಾಮಣಿ' ಎಂಬ ತತ್ವಶಾಸ್ತ್ರವನ್ನು ವಿಶದವಾಗಿ ಹೇಳಿದರು. ಇದನ್ನು ಕಂಡು ಅಲ್ಲಿಯ ಶಿವಭಕ್ತ ಶಿರೋಮಣಿಗಳು ಈ ಪೂಜ್ಯ[illegible]ಗ ತಮ್ಮ ಊರಲ್ಲಿಯೇ ಇರ[illegible] ಶಹಪೂರ ಪೇಟೆಯಲ್ಲಿ ನೂತನವಾಗಿ ಬೇಕಾಗಿ ಪ್ರಾರ್ಥನೆ ಮಾಡಿಕೊಟ್ಟಿರುವರು. ಈ ಸ್ವಾಮಿಗಳು ನ್ಯಾಯ, ಒಂದು ಮಠವನ್ನು[illegible] ಪ್ರಾವೀಣ್ಯವನ್ನು ಪಡೆದು ವಿದ್ಯಾಪ್ರಭಾವವನ್ನು ವೇದಾಂತರು. ಕಾಶಿ, ಕಂಚಿ ಮೊದಲಾದ ಪವಿತ್ರಸ್ಥಾನಗಳಲ್ಲೆಲ್ಲಾ ಸಂಚರಿಸುತ್ತ, ಸುಮಾರು ತಮ್ಮ ೩೦ನೇ ವರ್ಷದ ವಯಸ್ಸಿನಲ್ಲಿ ಭಕ್ತರ ಪ್ರಾರ್ಥನೆಯ ಮೇರೆಗೆ ಅವರಿಗೋಸುಗ ಕಟ್ಟಿಸಲ್ಪಟ್ಟಿರುವ ಈ ಮಠದಲ್ಲಿ ನೆಲಸಿದರು. ಇವರು ಸಂಸ್ಕೃತ ಕನ್ನಡ ಭಾಷೆಯ ಕವಿತಾರಚನಾ ಕಲೆಯನ್ನು ಬಲ್ಲವರಾಗಿದ್ದು, ಬೋಧರತ್ನಾಕರ ಮೊದಲಾದ ಪದ್ಯಗ್ರಂಥಗಳನ್ನು ರಚಿಸಿರುವರು. ಇವರಿಗೆ ಮರಾಠಿ, ಹಿಂದೂಸ್ಥಾನಿ, ತೆನುಗು ಈ ಭಾಷೆಗಳ ಪರಿಚಯವಿರುವುದು. ಇವರ ಮಠದಲ್ಲಿ ಸದ್ಯಕ್ಕೆ ಕೆಲವು ವಿದ್ಯಾರ್ಥಿಗಳು ಸಂಸ್ಕೃತ ಪಾಠ ಹೇಳಿಸಿಕೊಳ್ಳುವರು. ಮಠದಲ್ಲಿ ದಿನಾಲೂ ದಾಸೋಹವು ನಡೆಯುತ್ತದೆ. ಇದೇ ವರ್ಷ ಸದರಿ ಸ್ವಾಮಿಗಳು ತಮ್ಮ ಮಠದಲ್ಲಿ ಶ್ರಾವಣಮಾಸದ ಸುಮಾರಿಗೆ ೧|| ತಿಂಗಳುಗಳ ವರೆಗೆ 'ಶ್ರೀ ಪ್ರಭುಲಿಂಗಲೀಲಾ' ಎಂಬ ಮೂಲ ಸಂಸ್ಕೃತ ಗ್ರಂಥದ ವಿಷಯವನ್ನು ಇಲ್ಲಿಯ ಶಿವಭಕ್ತರ ವಿನಂತಿಯ ಮೇರೆಗೆ ಪ್ರವಚನರೂಪವಾಗಿ ಶಿವತತ್ವಗಳನ್ನು ವ್ಯಕ್ತಪಡಿಸಿ, ಶ್ರುತಿ, ಸ್ಮೃತಿ, ಮುಂತಾದ ಗ್ರಂಥಗಳಲ್ಲಿರುವ ಉಜ್ವಲ ತತ್ವಗಳಿಂದ ಪುಷ್ಟೀಕರಿಸಿ, ಈಗಿನ ಕಾಲಕ್ಕೆ ಶಿವಭಕ್ತರ ಭಕ್ತಿಯಲ್ಲಿ ಮಾಲಿನ್ಯವನ್ನುಂಟುಮಾಡುತ್ತಿರುವ ಲೌಕಿಕದ ಮರ್ಯಾದೆಯಲ್ಲಿ ಮಗ್ನರಾದ ಕೆಲವು ಧರ್ಮಸುಧಾರಕರೆನಿಸಿಕೊಳ್ಳುವವರ ಅಭಿಪ್ರಾಯವನ್ನು ಖಂಡಿಸಿ, ನಿಜವಾದ ವೀರಶೈವ ಧರ್ಮತತ್ವಗಳನ್ನು ಶ್ರೋತೃ ಪುರುಷರ ಮನಸ್ಸಿನಲ್ಲಿ ನಡುವಂತೆ ಹೇಳಿದರು. ಇವರ ಪ್ರವಚನದ ಲಾಭವನ್ನು ಊರ ಸಮೀಪದ ಗ್ರಾಮಗಳ ಜನರೂ ಅಕಸ್ಮಾತ್ತಾಗಿ ಬಂದ ಬಾಗಲಕೋಟೆ ಅಥಣಿ ಮೊದಲಾದ ಸ್ಥಳದ ಶಿವಭಕ್ತರೂ ಸಹ ಪಡೆದುಕೊಂಡವರಾದರು. ನಮ್ಮ ಮಠದ ಸಕಲ ಮಠಗಳೂ ಇಂಥ ವಿದ್ಯಾವಂತ ಸ್ವಾಮಿಗಳಿಂದ ರಂಜಿಸಿದರೆ ಮಠಧರ್ಮಕ್ಕೆ ಎಷ್ಟು ಉತ್ತೇಜಕವು !

ಒಬ್ಬ ಶಿವಭಕ್ತ.

ಜೈನ ವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ನಿನ ದ್ವಿತೀಯ ವಾರ್ಷಿಕಾಧಿವೇಶನವು (೨೫-೧೦-೨೦).

ಇದೇ ಸಂವತ್ಸರದ ಆಶ್ವಯುಜ ಶುದ್ಧ ಏಕಾದಶಿ ಶನಿವಾರದ ದಿವಸ ಮೈಸೂರು ಜೈನ ವಿದ್ಯಾವರ್ಧಕ ಫಂಡಿನ ದ್ವಿತೀಯ ವಾರ್ಷಿಕಾಧಿವೇಶನವು ಶ್ರೀಯುತ ಹೀರಾಚಂದ್ ನೇಮಿಚಂದ್‌ಸೇಟ್‌ಜಿಯವರ ಅಧ್ಯಕ್ಷತೆಯಲ್ಲಿ ಶ್ರೀಯುತ ಮೈಸೂರು ಮೋತೀಖಾನೆ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿನಿಲಯದಲ್ಲಿ ನಡೆಯಿತು. ಈ ಸಭೆಗೆ ಮೈಸೂರು ದೇಶದ ಮತ್ತು ಹೊರಗಿನ ಅನೇಕ ಜನ ದೊಡ್ಡ ಮನುಷ್ಯರುಗಳು ಸೇರಿದ್ದರು. ಈ ಸಭೆಯಲ್ಲಿ ನಡೆದ ಚರ್ಚೆಗಳನ್ನು ಬರೆಯುವುದಕ್ಕೆ ಮೊದಲು ಈ ಫಂಡಿನ ಜನ್ಮಧಾರಣೆಯ ಅತಿಶಯವನ್ನು ಹೇಳುವುದು ತುಂಬಾ ಅವಶ್ಯಕವಾಗಿರುವುದು. ಈ ಫಂಡು ಮೊದಲು 'ಸೈಫಂಡು' ಎಂದು ಕರೆಯಲ್ಪಟ್ಟು ಈ ನಿಲಯದ ವಿದ್ಯಾರ್ಥಿಗಳಿಂದ ಮಾತ್ರ ಸಹಾಯನಾಡಲ್ಪಡುತ್ತಿದ್ದಿತು. ಆದರೆ ಇದನ್ನು ಪ್ರಾರಂಭಮಾಡಿದುದರ ಪುಣ್ಯಾತಿಶಯೋಗವೋ ನಮ್ಮ ಸಮಾಜದ ಸುಕೃತವೋ ಈ ಫಂಡಿನ ಪ್ರೋತ್ಸಾಹಕರ ಸುಹೃದಯವೋ ಅಥವಾ ಮೇಲ್ಕಂಡ ಸುವಿಷಯಗಳೆಲ್ಲವೂ ಒಂದೇ ಅವ್ಯಕ್ತ ಒಟ್ಟಿಗೆ ಕೂಡಿದುದರ ಪ್ರಭಾವವೋ ಎಂಬಂತೆ ಈ ವಿದ್ಯಾವರ್ಧಕ ಫಂಡೆಂಬ ಜೈನ ಸಮಾಜ ಬಾಲಕನು ಉದಾರ ಮನಸ್ಕರಾದ ಸಮಾಜ ರಕ್ಷಕರಾದ ಧರ್ಮಬಂಧುಗಳಾದ ವಿದ್ಯಾಪ್ರಭಾವಶೀಲರಾದ ಅನೇಕ ಮಹನೀಯರುಗಳಿಂದ ಪೋಷಿಸಲ್ಪಟ್ಟು ಎರಡು ವರ್ಷಗಳೊಳಗಾಗಿಯೇ ಎಲ್ಲರ ಊಹೆಗೆ ಮೀರಿದ ಅಭಿವೃದ್ಧಿಸ್ಥಿತಿಗೆ ಬಂದಿರುವನು. ಈ ಸಭೆಯಲ್ಲಿ ಪ್ರಥಮತಃ ದೇವತಾಪ್ರಾರ್ಥನೆಯಾದನಂತರ ಮ|| ರಾ|| ಎ. ಶಾಂತಿರಾಜಶಾಸ್ತ್ರಿ ನ್ಯಾಯತೀರ್ಥ ಇವರು ಸಭಾಧ್ಯಕ್ಷರ ಜೀವನಚರಿತ್ರೆಯನ್ನು ಸಂಕ್ಷೇಪವಾಗಿ ಬಹಳ ಸ್ವಾರಸ್ಯವಾದ ಭಾಷಣದಿಂದ ಅಪ್ಪಣೆ ಕೊಡಿಸಿದರು. ನಂತರ ಈ ಫಂಡಿನ ಪ್ರೆಸಿಡೆಂಟರಾಗಿಯೂ ನಮ್ಮ ಸಮಾಜಸೇವೆಯಲ್ಲಿ ತತ್ಪರರಾಗಿಯೂ ಮತ್ತು ಸಮಾಜಕ್ಕೆ ರತ್ನಪ್ರಾಯರಾಗಿಯೂ ಇರುವ ಶ್ರೀಯುತ ಎಂ. ಎಲ್. ವರ್ಧಮಾನಯ್ಯನವರು ಜೈನಸಮಾಜದ ನ್ಯೂನತೆಗಳನ್ನೂ, ಈ ಸಮಾಜದಲ್ಲಿರತಕ್ಕ ಅನೇಕ ಐಶ್ವರ್ಯವಂತರುಗಳು ಕೇವಲ ಸ್ವಪ್ರಯೋಜನಯುಕ್ತರಾಗಿ ತಮ್ಮ ಕರ್ತವ್ಯಕರ್ಮವನ್ನು ಸಂಪೂರ್ಣವಾಗಿ ಮರೆತು ತಮ್ಮ ಧನವನ್ನು ಯಾವಾಗಲೂ ಕೂಡಿ ಹಾಕುವ ಪ್ರಯತ್ನಮಾಡುವರೇ ಹೊರತು ಅದನ್ನು ಸರಿಯಾದ ರೀತಿ ಧರ್ಮಪ್ರಭಾವಕ್ಕಾಗಿ ಗಳಿಸಲಾರದವರಾಗಿರುವರೆಂಬ ವಿಷಯವನ್ನೂ ಸಭಾಸದರ ಮನಸ್ಸಿಗೆ ಸರಿಯಾದ ರೀತಿ ವ್ಯಾಪಿಸುವಂತೆ ಅಪ್ಪಣೆ ಕೊಡಿಸಿದರು. ಈ ಮಹಾಶಯರು ಭಟ್ಟಾರಕ ಸ್ವಾಮಿಗಳ ವಿಷಯದಲ್ಲಿಯೂ ಮತ್ತು ಅವರುಗಳು ನಮ್ಮ ಸಮಾಜೋನ್ನತಿಗೆ ಮಾಡಬೇಕಾದ ಕರ್ತವ್ಯಗಳ ವಿಷಯದಲ್ಲಿಯೂ ಬಹಳ ವಿಷಯಗಳಿಂದ ಗರ್ಭಿತವಾದ ಒಂದು ಉಪನ್ಯಾಸವನ್ನು ಮಾಡಿದರು. ನಂತರ ಮೇಲ್ಕಂಡ ಫಂಡಿನ ಸೆಕ್ರೆಟರಿಯವರಾದ ಮ|| ರಾ|| ವೈ. ಚನ್ನಪ್ಪನವರು ಈ ವರ್ಷದ ರಿಪೋರ್ಟನ್ನು ಓದಿದರು. ತರುವಾಯ ಸಭಾಧ್ಯಕ್ಷರು ಪ್ರತಿಯೊಬ್ಬ ಮನುಷ್ಯನೂ ಜ್ಞಾನವೆಂಬ ವಸ್ತುವನ್ನು ಸಂಪಾದಿಸಬೇಕೆಂತಲೂ, ಆ ಜ್ಞಾನಕ್ಕೆ ಮಾತೃವು ವಿದ್ಯೆಯಾಗಿರುವುದರಿಂದ ನಮ್ಮ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಅಭಿಪ್ರಾಯವನ್ನು ಬಹಳ ಉಪಮಾನಯುಕ್ತವಾದ ಭಾಷಣದಿಂದ ವ್ಯಕ್ತಪಡಿಸಿ ಸಭಿಕರ ಮನಸ್ಸನ್ನು ಸಂತೋಷಪಡಿಸಿದರು. ಈ ಮಹಾಶಯರು ಹಿಂದೀಭಾಷೆಯಲ್ಲೇ ಉಪನ್ಯಾಸಕೊಟ್ಟರಾದರೂ ಜ್ಞಾನನಿಧಿಗಳಾದ ಸ್ವಸ್ತಿಶ್ರೀ ನೇಮಿಸಾಗರ ಸ್ವಾಮಿಗಳವರು ಕನ್ನಡದಲ್ಲಿ ಅವರು ಹೇಳಿದ ಭಾಷಣವನ್ನು ಹೇಳಿದ್ದಲ್ಲದೆ ಅದೇ ದಿವಸ ತಾವು ಬಹಳ ರಸಿಕವಾದ ಮತ್ತು ಲೌಕಿಕ ಪಾರಮಾರ್ಥಿಕ ವಿಷಯಗಳಿಂದ ಗರ್ಭಿತವಾದ ಒಂದು ಉಪನ್ಯಾಸವನ್ನು ಅಪ್ಪಣೆಕೊಡಿಸಿದರು. ಮ|| ರಾ|| ಹಿರಾಚಂದ್ ನೇಮಿಚಂದ್‌ಸೇಟ್‌ಜಿಯವರ ಮತ್ತು ಸ್ವಸ್ತಿಶ್ರೀ ನೇಮಿಸಾಗರ ಸ್ವಾಮಿಗಳವರ ಅಸಾಧಾರಣವಾದ ಭಾಷಣವು ಜೈನ ಸಮಾಜಕ್ಕಲ್ಲದೆ ಇಹಲೋಕಕ್ಕೇ ಪ್ರಯೋಜನಕರವಾಗಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಜ್ಞಾನ ಐಶ್ವರ್ಯ ನಿಧಿಗಳಾದ ಮ|| ರಾ|| ಸೇಟ್‌ಜೀಯವರು ನಮ್ಮ ಸಮಾಜ ಹಿತಚಿಂತಕರಾಗಿ ನಮ್ಮ ಇಂಡಿಯಾ ದೇಶದಲ್ಲೆಲ್ಲಾ ಮತಪ್ರಭಾಕರರಾಗಿ ಕೆಲಸಮಾಡುತ್ತಿರುವುದು ನಮ್ಮ ಸಮಾಜ ಸುಕೃತಾರ್ಥವೇ ಸರಿ. ಈ ಸಭೆಯಲ್ಲಿ ಇನ್ನೊಂದು ದೊಡ್ಡ ವಿಚಾರ—ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರರಾದ ಮ|| ರಾ|| ಕೆ. ಎಚ್. ರಾಮಯ್ಯನವರು ತಮ್ಮ ಗಂಭೀರವಾದ ಭಾಷಣದಿಂದ ಸಭಿಕರನ್ನು ಬಹಳ ಸಂತೋಷಪಡಿಸಿದರು. ಅವರಿಗಿರುವ ಸಮಾಜಾಭಿಮಾನವೂ ಮತ್ತು ಸ್ವದೇಶಾಭಿಮಾನವೂ ಸ್ತೋತ್ರಾರ್ಹವಾದ ವಿಷಯಗಳಾಗಿರುವುವು. ಈ ಸಭೆಗೆ ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನ ಪ್ರೊಫೆಸರರಾದ ಮ|| ರಾ|| ಎ. ಚಕ್ರವರ್ತಿ ಎಂ. ಎ. ಎಲ್. ಟಿ. ಯವರು ನಮ್ಮ ಸಮಾಜದ ಐಕಮತ್ಯದ ವಿಷಯವಾಗಿ ಸ್ವಲ್ಪ ಮಾತನಾಡಿದ ತರುವಾಯ ಅಧ್ಯಕ್ಷರಿಗೆ ನಮ್ಮ ಮೈಸೂರು ದೇಶದ ಜೈನಸಮಾಜದವರಿಂದ ಧನ್ಯವಾದಗಳು ಮಾಡಲ್ಪಟ್ಟು ಮಧ್ಯಾಹ್ನ ಒಂದು ಗಂಟೆಗೆ ಸಭೆಯು ಮುಕ್ತಾಯವಾಯಿತು. ನಂತರ ಸಾಯಂಕಾಲ ೪ ಗಂಟೆಯಿಂದ ಸಭೆಯು ಪ್ರಾರಂಭವಾಗಿ ರಾತ್ರಿ ೯ ಗಂಟೆಯವರೆಗೂ ಫಂಡಿನ ರೆಜಲ್ಯೂಷನ್ ವಿಚಾರವಾಗಿ ಅನೇಕ ಚರ್ಚೆಗಳು ನಡೆದು, ಮುಂದಿನ ವರ್ಷದ ಕಾರ್ಯನಿರ್ವಾಹಕರು ಚುನಾಯಿಸಲ್ಪಟ್ಟರು. ಜೈನ ಸಮಾಜದವರ ಪ್ರಾರ್ಥನೆಯಂತೆ ಕೆಲವು ಶುಭದಿವಸಗಳಲ್ಲಿ ಪ್ರಾಣಿವಧೆಯನ್ನು ತಮ್ಮ ಸಂಸ್ಥಾನಗಳಲ್ಲಿ ನಿಲ್ಲಿಸಿರುವುದಕ್ಕೋಸ್ಕರ ಸಭೆಯಲ್ಲಿ ತೀರ್ಮಾನವಾದಂತೆ, ಕೃತಜ್ಞತಾಪೂರ್ವಕವಾದ ಟೇಲಿಗ್ರಾಮುಗಳು ಕೊಲ್ಹಾಪುರದ ಮಹಾರಾಜರವರಿಗೂ ಮತ್ತು ಫಲ್ಟಾಣ್ ರಾಜರವರಿಗೂ ಕಳುಹಿಸಲ್ಪಟ್ಟವು. ಆಗ ಮ|| ರಾ|| ಪದ್ಮಪ್ಪ ಗುಂಜಾಲ ಬಿ. ಎ. ಎಲ್. ಎಲ್. ಬಿ. ಯವರೇ ಮೊದಲಾದವರು ಉಪನ್ಯಾಸಮಾಡಿದರು. ನಂತರ ಜೈನವಿದ್ಯಾರ್ಥಿಗಳಿಗೆ ಸಂಸ್ಕೃತ ಪರೀಕ್ಷೆಯ ಸರ್ಟಿಫಿಕೇಟುಗಳೂ ಮತ್ತು ಪಾರಿತೋಷಕಗಳೂ ಅಧ್ಯಕ್ಷರಿಂದ ಕೊಡಲ್ಪಟ್ಟು ಜಯಘೋಷಗಳಿಂದ ಸಭೆಯು ಮುಕ್ತಾಯವಾಯಿತು. ಸುಮಾರು ೮೦೦೦ ರುಪಾಯಿಗಳು ಸಭೆಯಲ್ಲಿ ವಾಗ್ದಾನಮಾಡಲ್ಪಟ್ಟವು.

ವೀರಶೈವರಿಗೆ ಪೂಜಾರ್ಹವಾದದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರ ಫೋಟೋ ಬೆಳೆಗೆ ಸಿದ್ಧವಾಗಿವೆ. ಫುಲ್‌ಪ್ಲೇಟ್ ಕಾಪಿ 1 ಕ್ಕೆ 1—4—0. 12 ಕ್ಕೆ 14—0—0. ಈ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿ.

ವಿಳಾಸ:—ಹೆಚ್. ಜಿ. ಮಹದೇವಪ್ಪ,
ಫೋಟೋಗ್ರಾಫರ್ ನಂಜನಗೂಡು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

36

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

2

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಪ್ಪತ್ತೈವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

SINEMATOGRAPH.

ಸಿನಿಮೊಟೊಗ್ರಾಫ.

36

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮನ್ಸ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್ ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲೆತಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಮನ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

11 ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬೀ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ಕೊಲಲಗುವಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚೇಳೂ ಮಾಯವಾಗುವವು.

ಈ ಔಷಧಿಯಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100ರೂ. ಬಹುಮಾನ ಕೊಡುತ್ತೇವೆ. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ 5 ರೂ.

ವಿಳಾಸ—ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
36 ಸಾಹುಕಾರಪೇಟೆ, ಮದರಾಸು.

ಜರ್ಮನ್ ಬೆಳ್ಳಿ ರಿಸ್ಟ್‌ವಾಚ್.



ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1 ಕ್ಕೆ ರೂ. 5—8—0.

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರವು ಮಜಭೂತಾಗಿರುವದು. ಧಾಳಿ ಧೂಳು ಸೇರದಂತೆ ಎರಡು ಕಡೆಯೂ ಡೂಮು ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವುದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ.

ಬಹುಮಾನಗಳ ವಿವರ:— ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

36 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ.,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

೧೯೨೦ ನೆಯ ಇಸವಿ ಡಿಸೆಂಬರ್ ತಾ|| ೫ ರಿಂದ ೧೯೨೦ ನೆಯ ಡಿಸೆಂಬರ್ ತಾ|| ೧೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಕಾರ್ತಿಕ ಬಹುಳ ದಶಮಿಯಿಂದ ಮಾರ್ಗಶಿರ ಶುದ್ಧ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕಮಾ
5	ಭಾನು	ದಶ	13-25	ಹಸ್ತ	27-43	21
6	[1]ಸೋಮ	ಏಕಾ	11-57	ಚಿತ್ತ	28-2	22
7	[2]ಮಂಗಳ	ದ್ವಾದ	11-44	ಸ್ವಾತಿ	29-35	23
8	ಬುಧ	ತ್ರಯೋ	12-50	ವಿಶಾ	32-25	24
9	ಗುರು	ಚತು	15-12	ಅನೂ	36-26	25
10	ಶುಕ್ರ	ಅಮಾ	18-45	ಜ್ಯೇಷ್ಠ	41-37	26
11	ಶನಿ	ಪಾಡ್ಯ	23-15	ಮೂಲ	47-33	27

(1) ಸರ್ವತ್ರೈಕಾದಶಿ, ಕಾರ್ತಿಕಸೋಮವಾರಂ. (2) ಪ್ರದೋಷ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 12

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಜನತ್ಯಕ್ತ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತ್ರಕೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಡಿಸೆಂಬರ್ ತಾರೀಖು ೧೨ ನೆಯ ಭಾನುವಾರ (ಸಂಚಿಕೆ ೫೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
47 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. —ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಸಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ತಾಕ್ಷತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
[illegible]ಚರಿತ್ರೆ	೦—೯—೦
[illegible]	೦—೮—೦

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು ! ಯಾವುದೊಂದು ಖರ್ಚಿಲ್ಲದೆ 112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

12 ವೈದ್ಯವಿದ್ಯ

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಜಿಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೇಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಳೆಯಬಹುದು. ಗಂಡಸರದು ಚೀಲ 1ಕ್ಕೆ 1-4-0 ಹೆಂಗಸರದು ಚೀಲ 1ಕ್ಕೆ 3-4-0.

12 ವಿಳಾಸ:—ಎಸ್. ಪಾಲ್ ಅಂಡ್ ಕೋ.,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

42

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಲಂಡನ್ ಲೀವರ್‌ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೊಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ದೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಹೇರ್ ಸ್ಪ್ರಿಂಗ್, ಒಂದು ಗ್ಲಾಸು, ಸರಪಣಿ, ಒಂದು ಪೆಟ್ಟಿಗೆ ಮತ್ತು ನಾಲ್ಕು ವರ್ಷ ಗ್ಯಾರಂಟಿಸಹಿತ ಗಡಿಯಾರ 1ಕ್ಕೆ 4-8-0

ಲೂಸ್‌ಕಿಲ್ಲರ್.

(ಎಂಬ ತಲೆಹೇನುಗಳ ಸಂಹಾರಿ.)

12

ಈ ಔಷಧವನ್ನು ತಲೆಗೆ ಹಾಕುವದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅದರ ಸುಳಿಯೇ ಇಲ್ಲದಂತೆ ಆಗುವದು. ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವದು. ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕೂ ಆಗದು. ಕಜ್ಜಿ, ತುರಿ, ನವೆ, ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಇದನ್ನು ಉಪಯೋಗಿಸಿದರೆ ಕೂಡಲೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ರಕ್ತಶೋಧಕ ! ಮನೋಲ್ಲಾಸಿತವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು.

10

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ದಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆ ಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಧೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕ್ಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಡಿ[illegible] ತಾ|| ೧೨ನೆಯ ಭಾನುವಾರ.

[illegible]ದುಳಿದವರಿಗೆ ಸಹಾಯ.

ಸರ್ವಶ್ರೇಯಸ್ಸಿಗೂ ಮೂಲಾಧಾರವಾದುದು ವಿದ್ಯೆ. ಅದರಲ್ಲಿ ಕೊರತೆಯನ್ನು ಹೊಂದಿರತಕ್ಕವರು ಹಿಂದುಳಿದವರೆಂದು ಈಗ ವ್ಯವಹರಿಸಲ್ಪಡುತ್ತಿದ್ದಾರೆ. ದೇಶದ ಪ್ರಜೆಗಳಲ್ಲಿ ಬಹುಭಾಗದವರು ಹೀಗೆ ಹಿಂದುಳಿದವರಾಗಿರುವುದು ದೇಶಕ್ಕೆ ನಷ್ಟಕರವಾಗಿರುವುದು. ಅದುಕಾರಣ ಇವರನ್ನು ವಿದ್ಯೆಯಲ್ಲಿ ಮುಂಬರಿಯಿಸುವುದು ಮುಖ್ಯ ಕರ್ತವ್ಯವೆಂದು ಪ್ರಭುತ್ವದವರು ನಿರ್ಧರಿಸಿ ಅದಕ್ಕೆ ನಾನಾ ವಿಧದ ಪ್ರೋತ್ಸಾಹ ಸಾಹಾಯ್ಯಗಳನ್ನು ಮಾಡುತ್ತಿರುವುದು ದೇಶದ ಅಭ್ಯುದಯಕ್ಕೆ ಸೂಚಕವಾಗಿದೆ. ಇಂಥ ಪ್ರಯತ್ನಗಳು ಎಷ್ಟೋ ಕಾಲಕ್ಕೆ ಹಿಂದೆಯೇ ನಡೆಯಬೇಕಾಗಿದ್ದಿತು. ಯಾವುದಕ್ಕೂ ಕಾಲವೊದಗಬೇಕಷ್ಟೆ. ಹಿಂದುಳಿದವರಲ್ಲಿ ಕೈ|| ಎಂ. ಬಸವಯ್ಯನವರೇ ಮೊದಲಾದಂಥವರು ತಲೆಯೆತ್ತಿದುದರಿಂದ ಪ್ರಭುತ್ವದವರಿಗೂ ಇತ್ತಕಡೆಗೆ ಗಮನವುಂಟಾಗುವಂತಾಯಿತು. ಹಿಂದುಳಿದವರಿಗೆ ವಿದ್ಯಾರ್ಥಿವೇತನಗಳನ್ನು ಕೊಡುವ ಏರ್ಪಾಟಾಯಿತು. ವಿದ್ಯಾವಂತರಾಗಿ ಬಂದ ಆ ಜನರಿಗೆ ಉಚಿತವಾದ ಸರ್ಕಾರದುದ್ಯೋಗಗಳನ್ನು ಕೊಟ್ಟು ಅವರ ವಿದ್ಯಾಭಿರುಚಿಗೆ ಪ್ರೋತ್ಸಾಹವನ್ನು ಮಾಡಬೇಕೆಂಬ ಅವಶ್ಯಕತೆಯು ತೋರಿತು. ರಾಜಕೀಯಾಂಗದಲ್ಲೂ ಅವರನ್ನು ಸುರುಗಿಸಬೇಕಾದುದು ಯುಕ್ತವೆಂದು ತೋರಿತು. ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಒಂದೇ ತೆರದ ಜನವರ್ಗದವರು ತುಂಬಿಕೊಳ್ಳುವುದರಿಂದ ಒಂದು ತೆರದ ಅನರ್ಥವುಂಟು. ಅದನ್ನು ತಪ್ಪಿಸಬೇಕಾದರೆ ಅರ್ಹತೆಯುಳ್ಳ ನಾನಾ ವರ್ಗದ ಜನರನ್ನು ಅಲ್ಲಿಗೆ ಸೇರಿಸಬೇಕಾಗುವುದು. ಈಗಣ ಲೌಕಿಕ ವಿದ್ಯೆಗೆ ರಾಜಕೀಯೋದ್ಯೋಗಪ್ರಾಪ್ತಿಯೇ ಮುಖ್ಯ ಲಕ್ಷ್ಯವಾಗಿ ಕುಳಿತುಕೊಂಡಿರುವುದರಿಂದ, ಓದಿ ವಿದ್ಯಾವಂತರಾದ ಜನರ ಬಾಯೆಲ್ಲಾ ಆ ಕಡೆಗೇ ತೆರೆದುಕೊಂಡಿರುವುದು. ಅದರ ಮೇಲೆ ಸರ್ಕಾರದುದ್ಯೋಗವನ್ನು ಪಡೆದುಕೊಂಡವರು ಒಲ್ಲೈಸಿಕೊಳ್ಳುತ್ತಿರುವುದೂ, ಅವರ ವೈಭವವೂ, ಅವರ ಮೋಟಾರ್ ಸಂಚಾರಗಳೂ ಇತರರ ಬಾಯಲ್ಲೆಲ್ಲಾ ನೀರನ್ನು ಕರೆಯಿಸುತ್ತಿರುವುವು. ಈ ಕಾರಣದಿಂದ ಜಾಗ್ರತ್ಸ್ವಪ್ನಾವಸ್ಥೆಗಳಲ್ಲೆಲ್ಲಾ ಸರ್ಕಾರದಧಿಕಾರಪ್ರಾಪ್ತಿಯ ಕನವರಿಕೆಯೇ ಅನೇಕರಿಗೆ ಹತ್ತಿರುವುದು. ವಿದ್ಯೆಯಲ್ಲಿ ಎಷ್ಟೋ ಕಾಲದಿಂದ ಮುಂದಾಗಿರುವವರೇ ಅದೇ ಭ್ರಾಂತಿಯಲ್ಲಿ ಮುಳುಗಿರುವಾಗ ಈಗತಾನೇ ಆ ದಾರಿಯಲ್ಲಿ ಕಣ್ಣುಬಿಟ್ಟು ನುಗ್ಗಿರುವವರಿಗೆ ಅದರ ಭ್ರಾಂತಿಯು ಇನ್ನೂ ಮಿಗಿಲಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈ ಹಿಂದುಳಿದ ಜನವರ್ಗಗಳವರು ತಂತಮ್ಮವರ ಉದ್ಧಾರದ ಅವಶ್ಯಕತೆಯನ್ನು ತಾವು ಅರಿತುಕೊಂಡು ಪ್ರಯತ್ನಪಡುತ್ತಿರುವುದಲ್ಲದೆ ತಮಗೆ ಸರ್ಕಾರದಿಂದ ಆಗಬೇಕಾದ ಸಾಹಾಯ್ಯಗಳನ್ನು ತಮ್ಮ ಪ್ರತಿನಿಧಿಗಳ ಮೂಲಕ ಕೇಳಿಕೊಳ್ಳುತ್ತಲಿರುವರು. ಉಚಿತವಾದ ಪ್ರಜಾಪ್ರಾರ್ಥನೆಯನ್ನು ಈಡೇರಿಸುವುದು ಸರ್ಕಾರಕ್ಕೆ ಧರ್ಮವೇ ಆಗಿರುವುದು. ಆದರೆ ಹಿಂದುಳಿದವರಿಗಾಗಿಯೇ ಪ್ರತ್ಯೇಕ ವಿದ್ಯಾರ್ಥಿವೇತನಗಳನ್ನು ಸರ್ಕಾರದವರು ಕಲ್ಪಿಸಿದುದೂ, ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕಲ್ಪಿಸಿರುವುದೂ, ಅವರಲ್ಲಿ ಕಂಡುಬಂದ ಅರ್ಹತೆಗೆ ತಕ್ಕ ಪ್ರೋತ್ಸಾಹವನ್ನು ಕಲ್ಪಿಸುತ್ತಿರುವುದೂ, ನಿಮ್ನಜಾತಿಗಳವರ ಅಭಿವೃದ್ಧಿಗೆ ದೃಢತರ ಮಾರ್ಗವನ್ನು ಸ್ಥಾಪಿಸಿದುದೂ ಸಹ ಕೆಲಕೆಲವರಿಗೆ ಸೈರಣೆಯನ್ನುಂಟುಮಾಡಿಲ್ಲ. "ಅವರು ವಿದ್ಯೆಯಲ್ಲಿ ಹಿಂದುಳಿದಿದ್ದರೆ ನಾವು ಕೃಷಿ ವಾಣಿಜ್ಯಾದಿಗಳಲ್ಲಿ ಹಿಂದುಳಿದಿದ್ದೇವೆ, ನಮಗೂ ವೇತನಗಳನ್ನು ಕೊಡಿರಿ" ಎಂದು ಕೇಳುವವರು ಕೆಲರು. ಸರ್ಕಾರದ ಉದ್ಯೋಗಗಳನ್ನು ಜಾತಿಮತಭೇದ ನೋಡದೆ ಕೇವಲ ವಿದ್ಯಾಯೋಗ್ಯತೆಯನ್ನೇ ನೋಡಿ ಕೊಡಬೇಕೆಂದು ಹೇಳುವವರು ಕೆಲವರು. ಜಾತಿವಾರು ಪ್ರಾತಿನಿಧ್ಯಾದಿಗಳಿಗೆ ಪ್ರೋತ್ಸಾಹ ಕಲ್ಪಿಸುವುದರಿಂದ ಭಿನ್ನಭೇದಗಳು ಹೆಚ್ಚಿ ಏಕಮತ್ಯವಾಗುವುದಕ್ಕೆ ಬಾಧಕವಾಗುವುದೆಂದು ಹೀಯಾಳಿಸುವವರು ಕೆಲರು. ನಿಯಮನಿರ್ಮಾಣಸಭೆಯಲ್ಲೂ ಪ್ರತಿನಿಧಿ ಸಭೆಗಳಲ್ಲೂ ಪಂಗಡಗಳ ಮಾತುಗಳು ಬರುತ್ತಿರುವುದು ಈ ಮಾದರಿ ಸಂಸ್ಥಾನದ ಸಭೆಗಳ ಗೌರವಕ್ಕೇ ಭಂಗಕರವೆನ್ನುವವರು ಕೆಲರು. ಹೀಗೆ ನಾನಾ ವಿಧವಾದ ವಿರುದ್ಧಾಭಿಪ್ರಾಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದಾರೆ.

ಈ ಸಂಬಂಧವಾಗಿ ನಾವು ಹೇಳುವುದಿಷ್ಟೇ. ಏನೆಂದರೆ—ಮನುಷ್ಯನಿಗೆ ತಾನು ಸಿರಿವಂತನೆಂದುಕೊಂಡು ಬಾಳುವುದರಲ್ಲಿರುವಷ್ಟು ಅಭಿಮಾನವು ತಾನು ಅಕಿಂಚನನೆಂದು ಹೇಳಿಕೊಳ್ಳುವುದರಲ್ಲಿರುವುದಿಲ್ಲ. ಈಗ ಹಿಂದಾಳುಗಳೆನಿಸಿಕೊಳ್ಳುವವರಿಗೆ ಅದರಲ್ಲಿ ಜುಗುಪ್ಸೆಯೇ ಹೊರತು, ಅದು ಶಾಶ್ವತವಾಗಿ ತಮ್ಮ ಬೆನ್ನಂಟಿರಬೇಕೆಂದೂ, ಅದರ ಹೊದ್ದಿಕೆ ಮರೆಯಲ್ಲಿ ಕಲ್ಪಾಂತವಾಗಿ ತಾವು ಬಾಳಬೇಕೆಂದೂ ಇಷ್ಟವಿಲ್ಲ. ತರಗತಿಯಲ್ಲಿ ಹಿಂದೆಬಿದ್ದ ಬಾಲಕರೇ ನಾಚುಗೆಗೊಳ್ಳುತ್ತಿರುವಾಗ ಸಂಘದಲ್ಲಿ ಹಿಂದೆ ಬಿದ್ದಿರಲು ಯಾರಿಗೆ ಇಷ್ಟವಿದ್ದೀತು? ಆದರೆ ಸದ್ಯಃ ಕಾಲದಲ್ಲಿ ಅವರಿಗೆ ಶೈಶವದಂಥ ಅವಸ್ಥೆಯಿರುವುದು. ಎಳೆಯ ಸಸಿಗಳಿಗೆ ಒತ್ತುಮರವೂ, ಬೇಲಿಯೂ, ಪಾತಿಯೂ, ಹುಯ್ನೀರು ಮೊದಲಾದ ಪ್ರತ್ಯೇಕಾದರಣೆಯೂ ಅವಶ್ಯಕವಾಗಿರುವಂತೆ ಮರಗಳಾಗಿ ಬಲಿತಮೇಲೆ ಇವಾವುವೂ ಅವಶ್ಯಕವಿಲ್ಲವೆಂಬುದು ಅನುಭವಸಿದ್ಧವಾದ ವಿಷಯವಲ್ಲವೆ? ಅದರಂತೆಯೇ ಹಿಂದುಳಿದ ವರ್ಗಗಳಿಗಾದರೂ ಕೆಲ ಕಾಲದ ಮಟ್ಟಿಗೆ ಪ್ರತ್ಯೇಕ ಪ್ರಾತಿನಿಧ್ಯಾದಿರೂಪ ಪ್ರೋತ್ಸಾಹಾದರಣೆಗಳು ಅವಶ್ಯಕವಾಗಿರುತ್ತವೆ. ಅದನ್ನು ತಪ್ಪಿಸುವುದೆಂದರೆ ಪರ್ಯಾಯದಿಂದ ಆ ಜನವರ್ಗಗಳನ್ನು ಅನಾದರಣೆಯಿಂದ ಪಾತಾಳಗಾಣಿಸುವುದೆಂದೇ ಅರ್ಥವು. ನೂತನ ರಾಜಕೀಯ ಸಂಸ್ಕರಣದಲ್ಲಿ ಕೌನ್ಸಿಲ್ಲುಗಳೊಳಗೆ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಸಾಮ್ರಾಜ್ಯ ಸರ್ಕಾರದವರು ಕೊಟ್ಟಿರುವುದು ಈ ವಿವೇಕದಿಂದಲೇ ಆಗಿರುತ್ತದೆ. "ಹಿಂದೂಸ್ಥಾನದಲ್ಲಿ ಪಂಗಡಗಳೂ ಭಿನ್ನಭೇದಗಳೂ ತೊಡೆದುಹೋಗಿ ಸಕಲ ಜಾತಿ ಪಂಗಡಗಳೂ ಏಕೀಭವಿಸಬೇಕು" ಎಂದು ಕೋರುವ ಕ್ರೈಸ್ತಪತ್ರಿಕೆಯೂ ಜಗತ್ತೆಲ್ಲಾ ಕ್ರೈಸ್ತ ಪ್ರಪಂಚವಾಗಬೇಕೆಂದು ತಪಸ್ಸು ಮಾಡುವ ಪಾದರಿಗಳೂ ಸಹ ವರ್ಣಭೇದಗಳ ಅಭಿವೃದ್ಧಿಗೆ ಆತಂಕವನ್ನು ಹೇಳುವುದು ಸಹಜವಾಗಿರುತ್ತದೆ. ಆದರೆ ಭರತಖಂಡದ ಸ್ಥಿತಿಯು ಅವರಿಷ್ಟದಂತೆ ಎಂದಿಗೂ ಆಗುವಹಾಗಿಲ್ಲ. ಇಲ್ಲಿಯ ಸಕಲ ಮತಜಾತಿಗಳೂ ಒಂದಾಗಿಹೋಗುವುವೆಂದು ಎಣಿಸುವುದು ಬರೀ ಭ್ರಮೆಯೇ ಸರಿ. ಅಲ್ಲದೆ ಮತ ಜಾತಿಗಳು ಪ್ರತ್ಯೇಕವಾಗಿದ್ದ ಮಾತ್ರಕ್ಕೇ ಪರಸ್ಪರ ಮತ್ಸರಿಸಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ. ಒಬ್ಬರ ಅಭಿವೃದ್ಧಿಗೆ ಮತ್ತೊಬ್ಬರು ಅಡ್ಡಿಯಾಗುವುದರಿಂದ ಮಾತ್ಸರ್ಯ ಬೆಳೆಯುವುದೇ ಹೊರತು, ಇತರರ ಏಳ್ಗೆಯಲ್ಲಿ ಸಹಾಯಿಯಾಕರಿಸಲು ಮನವಿಲ್ಲದಿದ್ದರೆ ಹೋಗಲಿ ಉದಾಸೀನರಾಗಿದ್ದರೂ ಕೂಡ ಮಾತ್ಸರ್ಯವೃದ್ಧಿಗೆ ದಾರಿಯೇ ಇರುವುದಿಲ್ಲ. ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ರಾಷ್ಟ್ರೀಯ ಮಹಾಸಭೆಯವರು ಒಪ್ಪಿದ ಕೂಡಲೇ ಅದಕ್ಕೆ ಮುಂಚೆ ಹೊರಚ್ಚಾಗಿ ಮಚ್ಚರಿಸುತ್ತಿದ್ದ ಮಹಮ್ಮದೀಯರೆಲ್ಲಾ ಹಿಂದೂ ಸಹೋದರರೊಡನೆ ಕೈಕೈ ಹಿಡಿದು ಕೆಲಸಮಾಡಲು ಸಿದ್ಧರಾದುದು ಲೋಕಪ್ರಸಿದ್ಧವಾಗಿಲ್ಲವೆ?

ಸರ್ಕಾರದ ಉದ್ಯೋಗಗಳಿಗೆ ಜಾತಿ ಮತ ಸಂಬಂಧಗಳ ದೃಷ್ಟಿಯಿಂದ ಜನರನ್ನು ಸೇರಿಸಬಾರದೆಂದು ಕೆಲವರು ಧರ್ಮಬೋಧೆಯನ್ನು ಮಾಡುತ್ತಾರಷ್ಟೆ. ಇದರಲ್ಲೂ ಉದಾರಭಾವವಿರುವುದಿಲ್ಲ. ಅರ್ಹತೆಯುಳ್ಳ ಹಿಂದುಳಿದ ಜನವರ್ಗಗಳಿಗೆ ಆಶಾಭಂಗವಾಗದಂತೆ ಕೆಲಸಗಳನ್ನು ಕೊಡಲು ಸರ್ಕಾರದವರು ಅಭಿಮಾನವನ್ನು ತೋರಿಸುವರೇ ಹೊರತು ಹುಂತರಾಗಿರುವವರಿಗೆಲ್ಲಾ ಜಾತ್ಯಭಿಮಾನದಿಂದ ಕೊಡುತ್ತಲಿಲ್ಲ. ಹೀಗೆ ಕೊಡುವುದರಲ್ಲಿ ಹೊಟ್ಟೆ ತುಂಬಿರುವವರಿಗೆ ಮಿಷ್ಟಾನ್ನಭೋಜನ ಮಾಡಿಸುವುದಕ್ಕಿಂತಲೂ ಬರಿಹೊಟ್ಟೆಯಾಗಿರುವವರಿಗೆ ಮೊದಲು ಕದನ್ನವನ್ನಾದರೂ ನೀಡಿರೆಂದು ಈ ಹಿಂದುಳಿದವರು ಕೇಳಿಕೊಳ್ಳುತ್ತಾರೆ. ಬಹುಕಾಲದ ಸಂಸ್ಕಾರದಿಂದ ವಿದ್ಯಾಧಿಕ್ಯವನ್ನು ಪಡೆದುಕೊಂಡವರು ಈಗತಾನೇ ಅದಕ್ಕೆ ಪ್ರವೇಶಿಸುತ್ತಿರುವ ಜನರನ್ನು ಪೈಪೋಟಿಗೆ ಕರೆಯುವುದು ವಂಚನೆಯೇ ಹೊರತು ಧರ್ಮವಲ್ಲ. ವಿದ್ಯಾಧಿಕ್ಯವೇ ಸರ್ಕಾರದ ಕಾರ್ಯನಿರ್ವಾಹಕ್ಕೆ ಮುಖ್ಯವಾದ ಅರ್ಹತೆಯೆಂದು ಸರ್ಕಾರವು ಭಾವಿಸುವುದಾದರೆ ಮೈಸೂರು ದೇಶೀಯರನ್ನೇ ಬಿಟ್ಟು, ಕಣಿವೆ ಕೆಳಗಣವರನ್ನೋ ಬಂಗಾಳದವರನ್ನೋ ಉದ್ಯೋಗಗಳಿಗೆ ತಂದು ತುಂಬಕೊಳ್ಳಬಾರದೇಕೆ? ಆ ಅನ್ಯದೇಶದ ಮೇಧಾವಿಗಳೊಡನೆಲ್ಲಾ ಪೈಪೋಟಿ ಮಾಡಲಾರದ ಕಾರಣದಿಂದ ಮೈಸೂರಿನವರಿಗೋಸ್ಕರಲೇ ಮೈಸೂರು ಇರಬೇಕೆಂದು ಹೇಳಿಕೊಂಡು ಈ ದೇಶದ ಸಿವಿಲ್ ಸರ್ವಿಸ್ ಪರೀಕ್ಷೆಗೆ ಅನ್ಯದೇಶೀಯರನ್ನು ಸೇರಲೀಸದಂತೆ ಮಾಡಿಸಿಕೊಂಡಿರುವ ತತ್ವವನ್ನೇ ಈ ಹಿಂದುಳಿದವರ ವಿಷಯದಲ್ಲೂ ನಮ್ಮ ದೇಶದ ವಿದ್ಯಾಧಿಕ ಜನರು ಏತಕ್ಕೆ ಅನ್ವಯಿಸಬಾರದು? ದೇಶದಲ್ಲಿ ಜಾತಿ ಮತ ಮಾತ್ಸರ್ಯಗಳು ಬೆಳೆಯದೆ ಸರ್ವರಲ್ಲೂ ಸಹೋದರ ಪ್ರೀತಿಗಳು ಅಭಿವೃದ್ಧಿಗೊಳ್ಳಬೇಕೆಂಬ ಇಷ್ಟವು ನಿಜವಾಗಿದ್ದರೆ ಪರರ ಅಭ್ಯುನ್ನತಿಯಲ್ಲಿ ಸಾನುಭೂತಿಯನ್ನೋ ಸಹನೆಯನ್ನೋ ಅಥವಾ ಔದಾಸೀನ್ಯವನ್ನೋ ತಳೆದಿರಬೇಕು.

ಒಳದೇಶದ ವೃತ್ತಾಂತಗಳು.

ಬೆಂಕಿಪುರವೆಂಬುದಕ್ಕೆ ಪ್ರತಿಯಾಗಿ ಭದ್ರಾಪುರಿಯೆಂದು ಬದಲಾಯಿಸಿದ್ದ ಹೆಸರನ್ನು ಇತಃಪರಃ ಭದ್ರಾವತಿ ಎಂದು ಕರೆಯಬೇಕೆಂದು ನಮ್ಮ ಸರ್ಕಾರದವರು ಪ್ರಕಟಿಸಿದ್ದಾರೆ.

ಸರ್ಕಾರಿ ಕೆಲಸಕ್ಕೆ ಬಿಟ್ಟಿ ಹಿಡಿದ ಗಾಡಿಗಳಿಗೆ ಮೈಲಿ ೧ಕ್ಕೆ ಬಯಲುಸೀಮೆಯಲ್ಲಿ ೨ ಆಣೆ, ಮಲೆಸೀಮೆಯಲ್ಲಿ ೩ ಆಣೆಯಂತೆ ಬಾಡಿಗೆ ಕೊಡುತ್ತಿದ್ದರು. ಈಗಣ ದಾರಣೆವಾಸಿಯ ಹೆಚ್ಚುಗೆಯಿಂದ ಆ ದರವನ್ನು ೩-೪ ಆಣೆಗೆ ಹೆಚ್ಚಿಸಿದ್ದಾರೆ.

ಸೀಮೆಗೆ ಹೋಗಿರುವ ಅಸಿಸ್ಟೆಂಟ್ ಕಮಿಷನರ್ ಮ|| ಎಂ. ಎಫ್. ಬಾಳರಾಜ ಅರಸಿನವರು ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುವ ಕಾರಣ, ಆ ಸ್ಥಲದಲ್ಲಿದ್ದ ಮ|| ಸಿ. ಲಕ್ಷ್ಮಣರಾಯರು ಆಕ್ಟಿಂಗಾಗಿ ಕೃಷ್ಣರಾಜಸಾಗರದ ಸ್ಪೆಷಲ್‌ಲ್ಯಾಂಡ್ ಅಕ್ವಿಜಷನ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಳೆದ ಸೋಮವಾರ ನಂಜನಗೂಡಿನಲ್ಲಿ ಕಡೆ ಕಾರ್ತಿಕಾಸೋಮವಾರವಾದ ಕಾರಣ ಶ್ರೀಕಂಠೇಶ್ವರನ ಪುಷ್ಪಾಂದೋಳಿಕಾಮಹೋತ್ಸವವು ಪದ್ಧತಿಯಂತೆ ಬಹು ವಿಜೃಂಭಣೆಯಿಂದ ನಡೆದಿತು. ಅನೇಕ ಭಕ್ತಾದಿಗಳು ನೆರೆದಿದ್ದರು. ಆ ದಿವಸ ಶ್ರೀಮನ್ಮಹಾರಾಜರೂ ಮಾತೃಶ್ರೀಯವರೇ ಮೊದಲಾದವರೂ ದಯಮಾಡಿಸಿ ದೇವತಾಸೇವೆಯನ್ನು ಮಾಡಿಕೊಂಡು ಬಂದರು.

ಬೆಂಗಳೂರು ಪ್ರೆಸ್ಸಿನವರು ೧೯೨೧ ನೆಯ ಇಸವಿಯ ಡೈರಿಯ ಪುಸ್ತಕವನ್ನು ಪ್ರಿಂಟ್ಮಾಡಿ ನಮ್ಮಲ್ಲಿಗೆ ಕಳುಹಿಸಿರುವರು. ಅದರ ಪ್ರತಿಯೊಂದನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುವೆವು. ಇದರಲ್ಲಿ ಜನರಿಗುಪಯುಕ್ತವಾದ ಅನೇಕ ವಿಷಯಗಳು ಉತ್ತಮವಾದ ಕಾಗದದ ಮೇಲೆ ಅಂದವಾಗಿ ಮುದ್ರಣ ಮಾಡಲ್ಪಟ್ಟು ಭದ್ರವಾಗಿ ರಟ್ಟು ಕಟ್ಟಲ್ಪಟ್ಟಿರುವುದು. ಇದರ ಬೆಲೆ ೧ ರೂಪಾಯಿ.

ಕಳೆದ ಬುಧವಾರ ಸಾಯಂಕಾಲ ಟೌನ್‌ಹಾಲಿನಲ್ಲಿ ಮಿಸೆಸ್. ಮೆಕಂಜಿ ಎಂ. ಎ ಯವರು ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಶ್ಲಾಘನೀಯವಾದ ಉಪನ್ಯಾಸವನ್ನು ಮಾಡಿದರು. ಅನೇಕ ಮಂದಿ ಮಹಿಳೆಯರು ಕೌನ್ಸಿಲರ್ ಹಂಜಾಹುಸೇನ್ ಸಾಹೇಬರು ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರು ಕಾಲೇಜು ಪ್ರೊಫೇಸರುಗಳು ವಿದ್ಯಾರ್ಥಿಗಳು ಮೊದಲಾದ ಸಾವಿರಾರು ಮಂದಿಗಳು ನೆರೆದು ಕೇಳಿ ಆನಂದಪಟ್ಟರು.

೨-೩ ವರ್ಷಗಳಾರಭ್ಯ ಪಾರ್ಶ್ವವಾಯು ಚಿಹ್ನೆಯಿಂದ ಪೀಡಿತರಾಗಿದ್ದ ಮ|| ತಿರುವೆಂಗಡಂಮೊದಲಿಯಾರರು ಇದುವರೆಗೆ ಪಡೆದುಕೊಂಡ ಚಿಕಿತ್ಸೆಗಳೊಂದರಿಂದಲೂ ಗುಣಕಾಣದೆ ಕಡೆಗೆ ಕಳೆದ ವಾರ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು ದಿವಾನರಾದ ಸರದಾರ್ ಕಾಂತರಾಜ ಅರಸರವರಲ್ಲಿ ಪರ್ಸನಲ್ ಅಸಿಸ್ಟೆಂಟರಾಗಿದ್ದರು. ಡಾ|| ಟಿ. ಆರ್ಮೊಗಂಮೊದಲಿಯಾರರ ಸಹೋದರರಾದ ಇವರು ಗುಣಾಢ್ಯರಾಗಿಯೂ ನಿಗರ್ವಿಗಳಾಗಿಯೂ ಪ್ರಮಾಣಿಕರಾಗಿಯೂ ಇದ್ದರು.

ವರ್ತಮಾನಸಂಗ್ರಹ.

ಕಳೆದ ತಾ|| ೩೦ ರಲ್ಲಿ ಸಾರ್ವಭೌಮ ದಂಪತಿಗಳು ಬದೋಡಾ ಮಹಾರಾಜ ದಂಪತಿಗಳಿಗೆ ಲಂಡನ್ ಪಟ್ಟಣದ ಅರಮನೆಯಲ್ಲಿ ಸಂದರ್ಶನ ಸಂಭಾಷಣಗಳನ್ನಿತ್ತರು.

ಬೊಂಬಾಯಿ ಶಾಸನ ಸಭೆಗೆ ಬೆಳಗಾಂ ಜಿಲ್ಲೆಯಿಂದ ಮ|| ಪಂಡಿತಪ್ಪ ರಾಯಪ್ಪ ಚಿಕ್ಕೋಡಿ ಬಿ. ಎ. ಯವರೂ ಮ|| ಅಣ್ಣಾಪ್ಪ ಫಡಪ್ಪ ಚೌಗುಲೆ ಬಿ. ಎ ಎಲ್. ಎಲ್. ಬಿ. ಯವರೂ ಮೆಂಬರಾಗಿ ಆರಿಸಲ್ಪಟ್ಟಿರುವರು.

ಈಗ ಭರತಖಂಡಕ್ಕೆ ದಯಮಾಡಿಸುತ್ತಿರುವ ಡ್ಯೂಕ್ ಆಫ್ ಕೆನ್ನಾಟ್‌ರವರ ಪ್ರಯಾಣದ ವೆಚ್ಚವು ೮ ಸಾವಿರ ಪೌನುಗಳಾಗುತ್ತವೆಂದು ನಿಶ್ಚಯಿಸಲ್ಪಟ್ಟಿದೆ. ಈ ದೇಶದಲ್ಲಿರುವಾಗ ಅವರು ಯಾವ ಹಿಂದೂಸಂಸ್ಥಾನಗಳಿಗೂ ಹೋಗುವವರಾಗಿಲ್ಲ.

ಈ ತಿಂಗಳು ತಾ|| ೧೦ ರಿಂದ ಕಲ್ಕತ್ತಾ ಪಟ್ಟಣದಲ್ಲಿ ರೈಲ್ವೆ ಬೋರ್ಡಿನವರ ಸಮಾವೇಶವಾಗುವುದು. ತಾ|| ೧೫ ರಿಂದ ಸಾಕ್ಷಿಗಳ ವಿಚಾರಣೆಯನ್ನು ನಡೆಯಿಸುವರು. ಈ ದೇಶದ ರೈಲ್ವೆಯ ನ್ಯೂನಾತಿರೇಕಗಳನ್ನು ಕುರಿತು ವಿಚಾರಿಸಿ ವರದಿ ಮಾಡುವುದಕ್ಕಾಗಿ ಈ ಸಂಘವು ಏರ್ಪಟ್ಟಿದೆ.

ಮೊರ್ವಿ ಸಂಸ್ಥಾನದ ಠಾಕೂರ್ ಸಾಹೇಬರವರು ಒಂದು ಹಾಂಡ್ಲಿ ಪೇಜಿ ವಿಮಾನವನ್ನು ಕೊಂಡಿರುವರು. ಅದು ಕರಾಚಿಗೆ ಬಂದಿಳಿದಿತು. ಅದರ ಸಾಮಾನುಗಳು ೧೨ ಪೆಟ್ಟಿಗೆಗಳಲ್ಲಿ ತುಂಬಿ ಬಂದಿರುವುವು. ಇದರಲ್ಲಿ ೧೨ ಮಂದಿಗಳು ಕುಳಿತು ಪ್ರಯಾಣಮಾಡಬಹುದು. ಕಿಟಿಕಿ ಮೊದಲಾದ ಸೌಕರ್ಯಗಳುಳ್ಳ ಈ ವಿಮಾನವು ಬಲು ಅಂದವಾಗಿದೆ.

ಬೊಂಬಾಯಿಯಲ್ಲಿ ಕೆಲ ಮಹಮ್ಮದೀಯರು ಹೆಂಡದಂಗಡಿಗಳ ಮುಂದೆ ನಿಂತು ಕುಡಿದು ಮತ್ತೇರಿಬರುವ ಜನರ ಮುಖಕ್ಕೆ ಮಸಿಯನ್ನು ಬಳಿದು ಊರಿನಲ್ಲಿ ಮೆರೆಯಿಸಿದರು. ಅವರನ್ನು ಕೆಲ ಪೊಲೀಸರು ಹಿಡಿದು ಬಂಧಿಸಿದರೆಂದೂ ಶಿಕ್ಷೆ ವಿಧಿಸಲ್ಪಟ್ಟಿತೆಂದೂ ಗೊತ್ತಾಗುತ್ತದೆ. ಗುಜರಾತಿನಲ್ಲಿ ಕೆಲಕಡೆ ಮದ್ಯಪಾಯಿಗಳನ್ನು ಪ್ರಜೆಗಳು ಸಂಘದಿಂದಲೇ ಬಹಿಷ್ಕರಿಸುತ್ತಿರುವರು.

ಕೊಚ್ಚಿ ಸಂಸ್ಥಾನದ ಪ್ರಭುಗಳಿಗೆ ಮೊನ್ನೆತಾನೇ ಷಷ್ಟಿಪೂರ್ತಿ ಶಾಂತಿಮಹೋತ್ಸವವು ಜರುಗಿತು. ಆಗ ಅವರು ತಮ್ಮ ಸಂಸ್ಥಾನದಲ್ಲಿ ಒಂದು ನಿಯಮನಿರ್ಮಾಣ ಸಭೆಯನ್ನೇರ್ಪಡಿಸಲಿಕ್ಕೂ ಅದರಲ್ಲಿ ಎಲ್ಲಾ ಜಾತಿಯ ಪ್ರತಿನಿಧಿಗಳೂ ಇರುವುದಕ್ಕೂ ಏರ್ಪಡಿಸಿದರು. ಪ್ರಜಾನಿಯುಕ್ತ ಸಭಿಕರು ೪೦ ಮಂದಿಗಳೂ ಸರ್ಕಾರದಿಂದ ನಿಯುಕ್ತರಾದವರು ೧೦ ಮಂದಿಗಳೂ ಇರುವರು.

ನೂತನ ಶಾಸನಸಭೆಗೆ ಮದ್ರಾಸ್ ಪಟ್ಟಣದಲ್ಲಿ ನಡೆದ ಸಭಿಕರ ಆರಿಸುವಿಕೆಯಲ್ಲಿ ಉಮೇದುವಾರರಾಗಿ ೯ ಮಂದಿಗಳು ನಿಂತಿದ್ದರು. ಹೆಚ್ಚು ಓಟುಗಳನ್ನು ಪಡೆದು ಈ ನಾಲ್ಕುಮಂದಿಗಳು ಮಾತ್ರ ಜಯಶಾಲಿಗಳಾದರು. ೧. ಸರ್. ಪಿ. ತ್ಯಾಗರಾಯಶೆಟ್ಟರು, ಇವರಿಗೆ ದೊರೆತ ಓಟುಗಳು ೪೯೯೬. ೨. ಸಿ. ಪಿ. ರಾಮಸ್ವಾಮಯ್ಯರು ೪೯೨೯. ೩. ಡಾಕ್ಟರ್ ಯು. ರಾಮರಾವ್‌ರವರು ೪೪೦೬. ೪. ತಣಿಕಾಚಲಂಶೆಟ್ಟರು ೪೧೨೮.

ಸಂಧಿನಿಬಂಧನೆಗಳ ಪ್ರಕಾರ ಜರ್ಮನರು ಸಲ್ಲಿಸಬೇಕಾದ ಬಣ್ಣಗಳಲ್ಲಿ ೬೦ ಟನ್ನಿನಷ್ಟು ಈಗ ಜರ್ಮನಿಯಿಂದ ಬೊಂಬಾಯಿಗೆ ಕಳುಹಿಸಲ್ಪಟ್ಟಿದೆ. ಈ ರಂಗುಗಳನ್ನಪೇಕ್ಷಿಸುವವರು ಸರ್ಕಾರದ ಕೈಗಾರಿಕೆಗಳ ಡೈರೆಕ್ಟರಿಗೆ ಬರೆದುಕೊಳ್ಳಬಹುದಾಗಿದೆ. ಸ್ವಲ್ಪಸ್ವಲ್ಪವೇ ಈ ರಂಗುಗಳು ಬರುತ್ತಿರುವುದರಿಂದ ಕೇಳಿದಷ್ಟು ದೊರೆಯುವುದಿಲ್ಲ. ಹೀಗೆಯೇ ಜರ್ಮನಿಯಿಂದ ಆಗಾಗ್ಗೆ ಈ ದೇಶಕ್ಕೆ ರಂಗುಗಳು ಇನ್ನುಮೇಲೆ ಬರುತ್ತವೆ. ಬಂದಾಗಲೆಲ್ಲಾ ಸರ್ಕಾರದವರು ಪ್ರಕಟಿಸುವರು.

ವಿವಾಹದಿಂದ ಉಂಟಾಗುವ ಫಲಾಫಲಗಳನ್ನು ತಿಳಿದುಕೊಳ್ಳಲಿಕ್ಕಾಗಿ ಬಂಗಾಳಾ ಸರ್ಕಾರದವರು ಬರುವ ಸೆನ್ಸಸ್ಸಿನಲ್ಲಿ ಇನ್ನು ಕೆಲ ವಿವರಣಗಳನ್ನು ಕೇಳಿ ಬರೆದುಕೊಳ್ಳಲಿಕ್ಕೆ ಪ್ರತ್ಯೇಕವಾದ ಏರ್ಪಾಟುಮಾಡಿದ್ದಾರೆ. ಆ ವಿವರಣವೇನೆಂದರೆ—ಹೆಂಡತಿಯು ಗಂಡನೊಡನೆ ಸಂಸಾರ ಮಾಡುವುದಕ್ಕೆ ಯಾವಾಗ ಬಂದುದು? ಗರ್ಭೋತ್ಪತ್ತಿಯು ಯಾವಾಗಾಯಿತು? ಸಜೀವವಾಗಿ ನಿರ್ಜೀವವಾಗಿ ಹುಟ್ಟಿದ ಮಕ್ಕಳೆಷ್ಟೆಷ್ಟು? ೫ ವರ್ಷ ವಯಸ್ಸಿನೊಳಗಾಗಿ ಸತ್ತ ಮಕ್ಕಳೆಷ್ಟು? ಇತ್ಯಾದಿ ವಿಷಯಗಳು ಕೇಳಿ ತಿಳಿದುಕೊಳ್ಳಲ್ಪಡುವುವು.

ಕಳೆದ ತಾ|| ೩೦ ರಲ್ಲಿ ಕಾಶೀಪಟ್ಟಣದೊಳಗೆ ಹಿಂದೂವಿಶ್ವವಿದ್ಯಾಲಯದ ಪಾಲಕ ಸಂಘದವರ ಸಮಾವೇಶವಾಯಿತು. ವೈಸ್ ಚಾನ್ಸಲರ್ ಪಂಡಿತ ಮದನಮೋಹನ ಮಾಳವ್ಯರವರು ಅಧ್ಯಕ್ಷರಾಗಿದ್ದರು. ಅವರ ಉಪನ್ಯಾಸದಲ್ಲಿ ಕಂಡ ಮುಖ್ಯ ವಿಷಯಗಳೇನಂದರೆ—ಹಿಂದೂ ವಿಶ್ವವಿದ್ಯಾಲಯವು ದಿನದಿನಾಭಿವೃದ್ಧಿಗೊಳ್ಳುತ್ತಿದೆ. ಕಳೆದವರ್ಷ ಬೊಂಬಾಯಿ ಆಧಿಪತ್ಯದ ಪ್ರಜೆಗಳು ಈ ವಿದ್ಯಾಪೀಠಕ್ಕೆ ೩೨ ಲಕ್ಷ ರೂ. ಗಳ ವಾಗ್ದಾನಮಾಡಿದುದರಲ್ಲಿ ೧೦ ಲಕ್ಷ ರೂ. ಕೈಸೇರಿದೆ. ಗಾಂಧಿಯವರು ವಿದ್ಯಾರ್ಥಿಗಳಿಗೆ ಸಹಾಯನಿರಾಕರಣತತ್ವ ಪ್ರಕಾರ ಕಲಾಶಾಲೆಯನ್ನು ಬಿಡಬೇಕೆಂದು ಮಾಡಿದ ಬೋಧೆಯಿಂದ ವಿಶ್ವವಿದ್ಯಾಲಯಕ್ಕೆ ಯಾವ ಪ್ರಮಾದವೂ ಸಂಘಟಿಸಲಿಲ್ಲ. ಒಟ್ಟಿಗೆ ಇರುವ ೧೬೦೦ ಮಂದಿ ವಿದ್ಯಾರ್ಥಿಗಳಲ್ಲಿ ಶಾಲೆಯನ್ನು ಬಿಡಲು ಯೋಚಿಸುವವರು ೧೦೦ ಮಂದಿ ಮಾತ್ರವೇ. ಕಲಾಶಾಲೆಯಲ್ಲಿ ಕೆಲಸವೆಲ್ಲಾ ಯಥಾಪೂರ್ವವಾಗಿ ನಡೆಯುತ್ತಿದೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾಮಾನ್ಯ ವಿಷಯಗಳು.

(ಕಳೆದವಾರದ ಶೇಷ).

ಪ್ರಾ.—ಮುನ್ಸೀಫರ ಮತ್ತು ಸಬ್ ಜಡ್ಜರ ಸಂಖ್ಯೆಯನ್ನು ಹೆಚ್ಚಿಸಬೇಕು. ಅವರಿಗೆಲ್ಲಾ ಮೇಜಿಸ್ಟ್ರೇಟ್ ಅಧಿಕಾರವನ್ನು ಕೊಡಬೇಕು. ಈಗಿರುವ ಮೇಜಿಸ್ಟ್ರೇಟ್ ಅಧಿಕಾರಗಳನ್ನು ಕ್ರಮೇಣ ಜುಡಿಷಿಯಲ್ ಅಥವಾ ರೆವಿನ್ಯೂ ಇಲಾಖೆಗಳಿಗೆ ಸೇರಿಸಿಬಿಡಬೇಕು.

ಉ.—ಈಗ ಮಾಡಿರುವ ಸ್ಪೆ|| ಮ್ಯಾಜಿಸ್ಟ್ರೇಟ್ ಏರ್ಪಾಟಿನ ಫಲಿತಾಂಶವು ಚೆನ್ನಾಗಿ ತಿಳಿಯುವುದಕ್ಕೆ ಮುಂಚೆಯೇ ಅದನ್ನು ಬದಲಾಯಿಸುವುದು ಸರಿಯಲ್ಲ.

ಪ್ರಾ.—ಪ್ರತಿ ತಾಲ್ಲೂಕಿಗೂ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ಏರ್ಪಡಿಸಬೇಕು.

ಉ.—ತಕ್ಕಷ್ಟು ಕೆಲಸವಿರುವುದಿಲ್ಲ. ಅನವಶ್ಯಕ.

ಪ್ರಾ.—ಸ್ಪೆಷಲ್ ಮ್ಯಾಜಿಸ್ಟ್ರೇಟರು ತಮ್ಮ ಸರಹದ್ದಿನ ತಾಲ್ಲೂಕುಗಳಲ್ಲಿ ಸಂಚರಿಸಿ ಆಯಾ ತಾಲ್ಲೂಕಿನ ವ್ಯಾಜ್ಯಗಳನ್ನು ಅಲ್ಲಿಯೇ ವಿಚಾರಿಸುವಂತೆ ಮಾಡಬೇಕು.

ಉ.—ಸಾಧ್ಯವಲ್ಲ.

ಪ್ರಾ.—ವಿಲೇಜು ಮುನ್ಸೀಫರ ಸಹಾಯಕ್ಕೆ ೧೦ ರೂ. ಸಂಬಳದ ಒಬ್ಬೊಬ್ಬ ಗುಮಾಸ್ತೆ ಕೊಡಬೇಕು.

ಉ.—ಅರ್ಧಭಾಗ ಖರ್ಚನ್ನು ವಹಿಸುವುದಾದರೆ ಮಾಡಬಹುದು.

ಪ್ರಾ.—ವಿಲೇಜು ಮ್ಯುನ್ಸೀಫರಿಗೆ ಪ್ರತಿಫಲವನ್ನು ಕೊಡಬೇಕು.

ಉ.—ಆಗುವುದಿಲ್ಲ.

ಪ್ರಾ.—ಕೋರ್ಟಿಗೆ ಬಾರದಿರುವ ಮೈನರುಗಳಿಗೆ ಕೋರ್ಟು ಗುಮಾಸ್ತರನ್ನು ಗಾರ್ಡಿಯನ್ನಾಗಿ ಮಾಡುವುದನ್ನು ತಪ್ಪಿಸಿ ಗೊತ್ತಾದ ಫೀಜನ್ನು ಕೊಟ್ಟು ಒಬ್ಬ ಲಾಯರನ್ನು ಗಾರ್ಡಿಯನ್ನಾಗಿ ಮಾಡಿಸಬೇಕು.

ಉ.—ಅವಶ್ಯಕವಿಲ್ಲ.

ಪ್ರಾ.—ಕ್ರಿಮಿನಲ್ ಕೋರ್ಟುಗಳಿಗೆ ಬರುವ ಸಾಕ್ಷಿಗಳಿಗೆ ಬತ್ಯ ಕೊಡಿಸಬೇಕು.

ಉ.—ಸರ್ಕಾರದಿಂದ ಕೊಡಲಾಗುವುದಿಲ್ಲ. ಒಂದು ಸಾಕ್ಷಿಗೆ ೩ ರೂ. ನಂತೆ ಕೊಟ್ಟರೂ ವರ್ಷಕ್ಕೆ ೩||| ಲಕ್ಷ ರೂ. ಖರ್ಚು ಹೆಚ್ಚುತ್ತದೆ. ಇದಕ್ಕೆ ಬೇರೆ ಸೆಸ್ಸನ್ನು ಹಾಕಬೇಕಾದೀತು. ಕಕ್ಷಿಗಾರರ ಕಡೆಯಿಂದ ಬತ್ಯ ಕೊಡಿಸಬೇಕೆಂದು ಕೇಳುವುದಾದರೆ ಅದಕ್ಕೆ ಬೇರೆ ಪ್ರಾಪೋಜಿಷನ್ ತಂದರೆ ವಿಚಾರ ಮಾಡುತ್ತೇವೆ.

ಪ್ರಾ.—ನೇರವಾಗಿ ಅರ್ಜಿ ಹಿಡಿಯುವ ಅಧಿಕಾರವನ್ನು ಬೆಂಚು ಮ್ಯಾಜಿಸ್ಟ್ರೇಟರಿಗೆ ಕೊಡಬೇಕು.

ಉ.—ಅಪ್ಪಣೆ ಮಾಡಲಾಗಿದೆ.

ಪ್ರಾ.—ಪ್ರತಿ ತಾಲ್ಲೂಕು ಕಸಬೆಯಲ್ಲೂ ಹೆರಿಗೆ ಆಸ್ಪತ್ರೆಯನ್ನಿಡಿಸಬೇಕು.

ಉ.—ಮೆಡಿಕಲ್ ಕಮಿಟಿಯವರೂ ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ. ಡಾಕ್ಟರುಗಳು ಸಿಕ್ಕುವುದಿಲ್ಲ; ಹಣವೂ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಪ್ರಾಪೋಜಿಷನ್ ತೆಗೆದುಕೊಂಡು ಹೋಗಿ.

ಪ್ರಾ.—ಮಲೆನಾಡಿಗೆ ಕೂಲಿಯವರನ್ನೊದಗಿಸಲಿಕ್ಕಾಗಿ ಕಂಟ್ರಿಬ್ಯೂಷನ್ ವಸೂಲಾಗುತ್ತಿದೆ. ಬೇಗನೆ ಏಜೆನ್ಸಿಯನ್ನೇರ್ಪಡಿಸಬೇಕು.

ಉ.—ಕಂಟ್ರಿಬ್ಯೂಷನ್ ಕೊಡಲು ಕೆಲರು ಒಪ್ಪುತ್ತಾರೆ; ಕೆಲರು ಒಪ್ಪುವುದಿಲ್ಲ; ಎಲ್ಲರೂ ಒಪ್ಪಿದರೆ ಆಗಬಹುದು.

ಪ್ರಾ.—ಮಲೆನಾಡು ಜನರಿಗೆ ಸುಲಭವಾದ ಬಡ್ಡಿಯಿಂದ ಸಾಲಕೊಡುವ ಏರ್ಪಾಟನ್ನು ಮಾಡಿಸಬೇಕು.

ಉ.—ಸಾಧ್ಯವಲ್ಲ. ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಿಕೊಳ್ಳಿ.

ಪ್ರಾ.—ತಾಲ್ಲೂಕು ಕಾನ್ಫರೆನ್ಸುಗಳಲ್ಲಿ ಆಯಾ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ, ಅವುಗಳು ಪ್ರಜಾಪ್ರತಿನಿಧಿ ಸಭೆಗೆ ಅಂಗವಾಗಿರುವಂತೆ ಮಾಡಬೇಕು.

ಉ.—ಸ್ಕೀಮನ್ನು ರಚಿಸಿ ಕಳುಹಿಸಿ.

ಪ್ರಾ.—ಗ್ರಾಮಾಂತರದವರಿಗೆ ವೈದ್ಯ ಸಹಾಯವಿಲ್ಲ. ಮೈಸೂರು ವಿಶ್ವವಿದ್ಯಾಲಯದಲ್ಲಿ ಯೂನಾನಿ, ಆಯುರ್ವೇದ, ಇಂಗ್ಲೀಸು ಈ ಮೂರು ತರದ ವೈದ್ಯ ವಿದ್ಯಾಭ್ಯಾಸಕ್ಕೂ ಅವಕಾಶ ಮಾಡಿ, ಹಿಂದೂ ಯೂನಾನಿ ವೈದ್ಯರುಗಳನ್ನು ಹೆಚ್ಚಿಸಿ ತಯಾರ್ಮಾಡಿಸಿ, ಅವರಿಂದ ಸುಲಭವಾಗಿ ಗ್ರಾಮಾಂತರಗಳವರಿಗೆಲ್ಲಾ ಚಿಕಿತ್ಸೆ ದೊರೆಯುವಂತೆ ಮಾಡಬೇಕು.

ಉ.—ಸಿನೇಟಿನವರು ಹಿಂದೂ ಯೂನಾನಿ ವೈದ್ಯರೇರ್ಪಾಟಿಗೆ ಒಪ್ಪುತ್ತಾರೆಯೋ? ನೀವು ಯೂನಿವರ್ಸಿಟಿ ಪ್ರತಿನಿಧಿಗಳಾಗಿದ್ದೀರಿ.

ಕೆಲ ಮೆಂಬರುಗಳು-ಫ್ಯಾಕಲ್ಟಿಗಳನ್ನು ಹೆಚ್ಚಿಸುತ್ತ ಹೋದರೆ ವಿದ್ಯಾಭ್ಯಾಸದ ಮೆಮೋರಾಂಡಂ ಜಾರಿಗೆ ಬರಲು ಅವಕಾಶವೇ ಆಗುವುದಿಲ್ಲ. ಬಾಲ ವಿದ್ಯಾಭ್ಯಾಸದ ವ್ಯಾಪನೆಯು ಸರ್ವತ್ರ ಆಗುವ ಕಡೆಗೆ ಮೊದಲು ಗಮನ ಕೊಡಬೇಕು. ಅದಕ್ಕೆ ಹೆಚ್ಚು ಹಣವನ್ನುಪಯೋಗಿಸಿ ಬಳಿಕ ಉಳಿದ ಕಡೆಗೆ ಗಮನಕೊಡಬೇಕು.

ಉ.—ಸದ್ಯಕ್ಕೆ ಜಾರಿಮಾಡಲಾಗುವುದಿಲ್ಲ.

ಪ್ರಾ.—ಶಾಸ್ತ್ರೀಯ ಪರಿಶೋಧನ ಸಂಸ್ಥೆಗೆ ಶ್ರೇಷ್ಠರಾದ ಪಂಡಿತರು ಸೇರುವಂತೆ ಮಾಡಬೇಕು. ಅದರ ಕಾರ್ಯನಿರ್ವಾಹಕ ಸಂಸ್ಥೆಯಲ್ಲಿ ಯೂನಿವರ್ಸಿಟಿಯ ಪ್ರತಿನಿಧಿಯೊಬ್ಬರಿರುವಂತೆ ಮಾಡಬೇಕು.

ಉ.—ಸರ್ಕಾರದವರು ಆಕ್ಷನ್ ತೆಗೆದುಕೊಳ್ಳುತ್ತಿದ್ದಾರೆ. ಸ್ಟಾಂಡಿಂಗ್ ಕಮಿಟಿಯಲ್ಲಿ ಯೂನಿವರ್ಸಿಟಿ ವೈಸ್ ಚಾನ್ಸಿಲರು ಮೆಂಬರಾಗಿದ್ದಾರೆ.

(ಮ|| ವೆಂಕಟೇಶಯ್ಯನವರು. ಎಗ್ಜಿಕ್ಯುಟೀವ್ ಕಮಿಟಿಯಲ್ಲಿ ನಮ್ಮ ಮೆಂಬರಿರಬೇಕು. ಸರಸ್ವತಿಗೆ ಎಲ್ಲರೂ ಒಂದೇ. ಈಗಿನ ಸೈನ್ಸ್ ಇನ್ಸ್ಟಿಟ್ಯೂಷನ್ನಿನಲ್ಲಿ ಜಾತಿಭೇದವನ್ನು ನೋಡುತ್ತಾರೆ. ನಮ್ಮ ವಿದ್ಯಾರ್ಥಿಗಳಿಗೆ ಪಕ್ಷಪಾತಮಾಡುತ್ತಾರೆ.

ಪ್ರಾ.—ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ. ಎಲ್. ಕೋರ್ಸನ್ನು ಏರ್ಪಡಿಸಿದರೆ ೩೦ ಸಾವಿರ ರೂ. ಖರ್ಚಿನಲ್ಲಿ ಆಗುತ್ತದೆ. ಮಿ|| ಅಬ್ಬಾಸ್ ಖಾನರು ಇದಕ್ಕೆ ಪ್ರತಿರೋಧಿಸಿ,-ಸಾರ್ವತ್ರಿಕ ವಿದ್ಯಾಭ್ಯಾಸಕ್ಕೆ ಮೊದಲು ಗಮನಕೊಡಬೇಕು.)

ಉ.—ಮೊದಲು ಬಾಲ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಕೊಡಬೇಕಾಗಿದೆ.

ಪ್ರಾ.—ಡಿಸ್ಟ್ರಿಕ್ಟು ಕಸಬೆಗಳಲ್ಲೆಲ್ಲಾ ಕಲೆಜಿಯೇಟ್ ಹೈಸ್ಕೂಲುಗಳನ್ನೇರ್ಪಡಿಸಬೇಕು.

ಉ.—ತಕ್ಕಷ್ಟು ವಿದ್ಯಾರ್ಥಿಗಳು ಬಂದರೆ ಮಾಡಿಯೇ ಕೊಡುತ್ತೇವೆ.

ಪ್ರಾ.—ಹಾಸ್ಟಲ್ ಗ್ರಾಂಟಾಗಿ ಕೊಡುವ ೩೦ ರೂ. ಗಳಲ್ಲಿ ೨೦ ರೂ. ನ್ನು ಸೂಪರ್ವೈಜರಿಗೇ ಹಿಡಿದುಕೊಂಡು ೧೦ ರೂ. ನ್ನು ಮಾತ್ರ ಕೊಡುತ್ತಾರೆ. ಲೋಕಲ್ ಸೂಪ್ರವಿಜನ್ನಿಗೆ ಅವಕಾಶ ಕೊಟ್ಟು ಪೂರ್ತಾ ಗ್ರಾಂಟನ್ನು ಕೊಡಬೇಕು.

ಉ.—ಈಗಣ ಏರ್ಪಾಟು ಉತ್ತಮವಾಗಿದೆ. ರೂಲ್ಸನ್ನೆಲ್ಲಾ ನೋಡಿಕೊಂಡು. ಲೋ|| ಸೂಪರ್ವೇಷನ್ನಿಗೆ ಇಟ್ಟುಕೊಳ್ಳುವುದುತ್ತಮವೇ ಸರ್ಕಾರಿ ಸೂಪರ್ವೇಷನ್ನಿಗೆ ಇಡುವುದುತ್ತಮವೇ ಎಂಬುದನ್ನು ಚರ್ಚಿಸಿ ಬಳಿಕ ಬರೆದುಕೊಳ್ಳಿರಿ; ಆಮೇಲೆ ಪರ್ಯಾಲೋಚಿಸುತ್ತೇವೆ.

ಪ್ರಾ.—ಗ್ರಾಂಟಿನೇಡ್ ಸ್ಕೂಲುಗಳಿಗೆ ಗ್ರಾಂಟನ್ನು ಹೆಚ್ಚಿಸಬೇಕು.

ಉ.—ಹೊಸರೂಲ್ಸು ಜಾರಿಗೆ ಬಂದರೆ ಕೂಡಲೆ ಹೆಚ್ಚುತ್ತದೆ.

ಸಶೇಷ.

ಪ್ರಸಿದ್ಧಪತ್ರಿಕೆ.

3-1

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಹಾಸನ್ ಟವನ್ನಿನಲ್ಲಿರುವ ಡಿಸ್ಟ್ರಿಕ್ಟು ಪೋಲೀಸ್ ಆಫೀಸ್ ಕಾಂಪೌಂಡು ಮುಂಭಾಗದಲ್ಲಿ ಮಾಮೂಲ್ ಮೇರೆ ಸರ್ 1921 ನೇ ಇಸ್ವಿ ಜನವರಿ 3-4 ನೆ ಮತ್ತು 5 ನೆ ತಾರೀಖುಗಳಲ್ಲಿ ದನಗಳ ಪ್ರದರ್ಶನವು ನಡೆಸಲ್ಪಡುತ್ತೆ. ಪ್ರದರ್ಶನಾಲಯಕ್ಕೆ ಬರತಕ್ಕ ರಾಸುಗಳ ವಿಚಾರದಲ್ಲು ಮತ್ತು ಇನಾಮುಗಳ ವಿಚಾರದಲ್ಲು ಸಹಾ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

ತಾ|| 5-12-20.

Mohamed Razak,
ವೈಸ್‌ಪ್ರೆಸಿಡೆಂಟ್,
ಹಾಸನ್ ಟವನ್ ಮ್ಯುನಿಸಿಪಾಲಿಟಿ.

ಪತ್ರವ್ಯವಹಾರ.

ಮೈಸೂರು ಸಂಸ್ಥಾನದ ೧ನೆ ಕೌನ್ಸಿಲರ್‌ರವರ ಸರ್ಕೀಟು.

ಮೈಸೂರು ಸಂಸ್ಥಾನದ ಘನವನ್ನೈದಿದ ಸೀನಿಯರ್ ಕೌನ್ಸಿಲರ್ ಸಾಹೇಬರವರಾದ ಮೆಹರ್ಬಾನ್ ಎ. ಆರ್. ಬಾನರ್ಜಿ ಎಂ. ಎ. ಐ. ಸಿ. ಎಸ್. ಸಿ. ಐ. ಇ. ಯವರ ಸ್ವಾರಿಯೂ ಮತ್ತು ಇವರ ಮಾನಂದಿರಾದ ಸರ್. ಕೃಷ್ಣಗೋವಿಂದ ಗುಪ್ತರವರೂ ಇವರ ಕುಟುಂಬ ಮತ್ತು ಇವರ ಪ್ರಿಯ ಕುಮಾರಿಯವರು ಸಹಾ ಹಾಸನ ಡಿ|| ಡೆ|| ಕಮಿಷನರ್ ಸಾಹೇಬರಾದ ಮೆ|| ಬಿ. ವೆಂಕೋಬರಾವ್ ಬಿ. ಎ. ಯವರು, ರೆ|| ಆಫೀಸರ್ ಡಬ್ಲ್ಯು. ಎಲ್. ಕ್ರಾಫರ್ಡ್, ಡಿ. ಎಸ್. ಓ. ಯವರೇ ಮುಂತಾದ ಯೂರೋಪಿಯನ್ ಪ್ಲಾಂಟರುಗಳೂ ಮತ್ತು ಡಿಸ್ಟ್ರಿಕ್ಟ್ ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳೂ, ಸಕಲೇಶಪುರದ ಸ|| ಡಿ|| ಆಫೀಸರವರೂ, ತಾಲ್ಲೋಕು ಅಮಲ್ದಾರರೇ ಮುಂತಾದ ಅಧಿಕಾರಿಗಳೊಡನೆ ಸವಾರಿಯು ತಾ|| ೨೭-೧೧-೧೯೨೦ [illegible]ವಾರ ಬೆಳಿಗ್ಗೆ ೧೦ ಗಂಟೆಗೆ ಸಕಲೇಶಪುರದಿಂದ ಹೊರಟು ಮಂಜರಾಬಾದು [illegible] ಅಲಂಕರಿಸಿಟ್ಟಿದ್ದ ಮಂಟಪದ ಬಳಿಗೆ ಹೋಗಿ ಬಹು ನೇತ್ರಾನಂದಕರವಾಗಿ ಅಲ್ಲೇ ನೇಟಿವ್ ಪ್ಲಾಂಟರುಗಳು, ಪುರಜನರು ಸೇರಿ ದಯಮಾಡಿಸುತ್ತ ದೋಣೀಗಾಲು ಕಾಫಿಪ್ಲಾಂಟರು ಮತ್ತು ತಾಲ್ಲೋಕು[illegible] ಮೆ|| ಬೋ|| ರೆ|| ಅಸೆಂಬ್ಲಿ ಮುಂತಾದವುಗಳ ಮೆಂಬರಾಗಿರುವ ಡಿ. [illegible] ಗೌಡರೂ ಮತ್ತು ಇವರ ಸಹೋದರರೂ ಸಹ ವಾದ್ಯ ಬಿರುದಾವಳಿಗಳೊಡನೆ ಇದಿರುಗೊಂಡು ಸುಖಾಗಮನವನ್ನು ಬಯಸಿ ಹಾರಾ ತುರಾಯಿಗಳನ್ನು ಒಪ್ಪಿಸಿ ಕುಶಲಪ್ರಶ್ನೆಯಂ ಬೆಳೆಸುತ್ತ, ಸುಗ್ಗಿಕುಣಿತ, ಕೋಲಾಟ, ಮುಂತಾದ ವಿನೋದಗಳಿಂದ ಸಂತೋಷಪಟ್ಟು, ಮಲ್ನಾಡು ತಾಲ್ಲೋಕಾದ ಅಲ್ಲಿಯ ಪ್ರಜೆಗಳ ಕಷ್ಟಸುಖಗಳನ್ನು ಪ್ರಸ್ತಾಪಿಸುತ್ತ ಸರ್ವರೊಡನೆ ಮಂಜರಾಬಾದು ಕೋಟೆಗೆ ದಯಮಾಡಿಸಿದರು. ಅಲ್ಲಿ ನೋಡತಕ್ಕ ಸ್ಥಳಗಳನ್ನು ಮೇಲ್ಕಂಡ ಪ್ಲಾಂಟರುಗಳಿಂದ ವಿಶದವಾಗಿ ತಿಳಿದು, ಪರಾಂಬರಿಸಿದನಂತರ ವಿಶ್ರಾಂತಿಗಾಗಿ ನಿರ್ಮಿಸಿದ್ದ ಚಪ್ಪರದಲ್ಲಿ ಸ್ವಲ್ಪ ವಿರಾಮಹೊಂದಿ ಅಲ್ಪಾಹಾರ ಸ್ವೀಕಾರದಿಂದ ಸವಾರಿಯು ಸರ್ವರೊಡನೆ ವಾಪಸು ಚಿತ್ತೈಸಿತು. ಬಹುಜನರು ತಂಡೋಪತಂಡವಾಗಿ ಸೇರಿ ಬಹು ನೇತ್ರಾನಂದಹೊಂದಿ ಮೆ|| ಡಿ. ನಂಜೇಗೌಡರ ಉದಾರವಾದ ಏರ್ಪಾಡನ್ನು ಮೆಚ್ಚಿಕೊಂಡುಹೋದರು. ಅಲ್ಲದೆ ೨೮ ನೆ ಭಾನುವಾರದ ಬೆಳಿಗ್ಗೆ ಮೆಹರ್ಬಾನ್ ಬಾನರ್ಜಿ ಸಾಹೇಬರವರು ಮತ್ತು ಇವರ ಕುಟುಂಬದವರು ಸಹಾ ಹಾಸನ ಡಿ|| ಡೆ|| ಕ|| ಮೆ|| ಬಿ. ವೆಂಕೋಬರಾವ್, ಬಿ. ಎ. ಯವರೊಡನೆ ಮೋಟಾರುಗಳಲ್ಲಿ ದೋಣೀಗಾಲು ಕಾಫಿಪ್ಲಾಂಟರೂ, ವೈಸ್‌ಪ್ರೆಸಿಡೆಂಟರೂ ಆದ ಮಿ|| ಡಿ|| ನಂಜೇಗೌಡರ ಮನೆಗೆ ದಯಮಾಡಿಸುತ್ತಲೇ ಬಹು ಸಂತೋಷದಿಂದ ಸುಸ್ವಾಗತವನ್ನು ಬಯಸಿ ವಾದ್ಯ ಬಿರುದಾವಳಿಗಳೊಡನೆ ಎದುರುಗೊಂಡು ಕುಶಲಪ್ರಶ್ನೆಯಂ ಬೆಳೆಸುತ್ತ, ಸರ್ವರನ್ನೂ ಉಚಿತಾಸನಗಳಲ್ಲಿ ಕೂಡಿಸಿ, ಗ್ರಾಮಾಫೋನ್, ಸಂಗೀತವಾದ್ಯಗಳೂ, ಸುಗ್ಗಿಕುಣಿತ, ಕೋಲಾಟವೇ ಮುಂತಾದ ವಿನೋದಗಳಿಂದ ಸಂತೋಷಪಡಿಸಿ ಅಲ್ಪಾಹಾರವನ್ನಿತ್ತು, ಹೂ, ಗಂಧ, ಹಾರ ತುರಾಯಿಗಳನ್ನಿತ್ತು ಯಾಲಕ್ಕಿ, ಮೆಣಸು ಬೆಳೆಯತಕ್ಕ ವಿಚಾರವೇ ಮೊದಲಾದುವನ್ನು ಬಹು ಸಂತೋಷದಿಂದ ವಿಚಾರಮಾಡುತ್ತಲೂ, ಕುಟುಂಬದವರ ಕ್ಷೇಮಚಿಂತನೆಯನ್ನುಮಾಡಿ, ನೋಡತಕ್ಕದ್ದನ್ನೆಲ್ಲಾ ಪರಾಂಬರಿಸಿ ಸ್ವಾರಿಯು ಮೋಟಾರುಗಳಲ್ಲಿ ವಾಪಸು ಚಿತ್ತೈಸಿತು.

ಪ್ರತ್ಯಕ್ಷದರ್ಶಿ.

ಧರ್ಮಾಭಿಮಾನ.

ಶ್ರೀಮಂತ ರಾಜಾ ಚನ್ನಬಸಪ್ಪ ದೇಸಾಯಿ ಜೀನೂರು ಇವರು ಶ್ರೀ ರೇವಣಸಿದ್ಧೇಶ್ವರ ಪುರಾಣವನ್ನು ಶ್ರವಣಮಾಡಿಸುತ್ತ ಮತ್ತು ಸ್ವಹಸ್ತದಿಂದ ಶ್ರೀ ರೇವಣಸಿದ್ಧೇಶ್ವರಾಯನಮಃ ಎಂಬ ಲಕ್ಷನಾಮಾವಳಿಯನ್ನು ಲಿಖಿಸಿ ವಿತವ್ಯಯಸಮಾಪ್ತಿಕಾಮಂಗಲಕ್ಕೆ ಮುಂಚಿತವಾಗಿ ಬಳಗಾನೂರು ಚರಮೂರ್ತಿಗಳನ್ನೂ ಇನ್ನುಳಿದ ಗುರುವರ್ಗದವರನ್ನೂ ಶಾಸ್ತ್ರಿಗಳನ್ನೂ ಪುರೋಹಿತರನ್ನೂ ಬರಮಾಡಿಕೊಂಡು ದಿನಂಪ್ರತಿ ವಿಧ್ಯುಕ್ತಪ್ರಕಾರ ಜಂಗಮಾರ್ಚನೆಯನ್ನೂ ಗಣಾರಾಧನೆಯನ್ನೂ ನೆರವೇರಿಸಿ, ಧರ್ಮಪತ್ನಿಯೊಂದಿಗೆ ಪ್ರಾತಃಕಾಲದೊಳ್ ಹಳ್ಳಕ್ಕೆ ಹೋಗಿ ಮಂಗಲಸ್ನಾನವಂ ಮಾಡಿ ಸುಮುಹೂರ್ತದಲ್ಲಿ ಸಹಸ್ರದೆಂಟು ಮಳಲ ಲಿಂಗಗಳಂ ರಚಿಸಿ, ವೇದಮಂತ್ರಗಳನ್ನು ಹೇಳಿಸುತ್ತ ಭಕ್ತಿಪುರಸ್ಸರವಾಗಿ ಪೂಜಾ ಮಾಡಿದರು. ಕೆಲವು ಮಾಹೇಶ್ವರರಿಂದ ಶಿವಸಹಸ್ರವನ್ನೂ ಗಣಸಹಸ್ರವನ್ನೂ ಹೇಳಿಸುತ್ತ ಸಹಸ್ರ ಬಿಲ್ವಾರ್ಚನೆಯನ್ನು ಮಾಡಿದರು. ಶ್ರೀಮಂತರು ಆಶೀರ್ವಾದವಂ ಪಡೆದು ಜನಸ್ತೋಮದೊಡನೆ ಗೃಹಕ್ಕೆ ತೆರಳಿ ಮಹಾಪಾದಪೂಜೆಯನ್ನು ಗೈದು ಮಧುರಾಹಾರದಿಂದ ಗಣತಿಂಥಿಣಿಯನ್ನು ತೃಪ್ತಿಬಡಿಸಿ ಭೂರಿದಕ್ಷಿಣೆಯನ್ನಿತ್ತು ಸಂತೋಷಸಾಗರದಲ್ಲಿ ಮಗ್ನರಾದರು. ಮಾರನೆ ದಿನ ಪ್ರಾತಃಕಾಲದೊಳ್ ಪುರಾಣಮಂಟಪದಲ್ಲಿ ಸಭೆ ಕೂಡಿದ ಬಳಿಕ ಪಿಟೀಲು, ಪಿಯಾನು, ಮೃದಂಗ ವಾದ್ಯಗಳೊಡನೆ ಬನ್ನೂರು ಬಸವಲಿಂಗಶಾಸ್ತ್ರಿಗಳಿಂದ ಕೀರ್ತನ್ ಶ್ರವಣ ಮಾಡಿಸಿದ ನಂತರ ಶ್ರೀ ಬಸವೇಶ್ವರಮೂರ್ತಿಯನ್ನೂ ಪುರಾಣವನ್ನೂ ರೇವಣಸಿದ್ಧೇಶ್ವರ ಲಕ್ಷನಾಮಾವಳಿಯ ಪುಸ್ತಕವನ್ನೂ ಪಲ್ಲಕ್ಕಿಯಲ್ಲಿರಿಸಿ ಬಳಗಾನೂರು ಚರಮೂರ್ತಿಗಳನ್ನು ಮೇಣೆಯಲ್ಲಿ ಕೂಡಿಸಿ ಉಳಿದ ಗುರುವರ್ಗದವರನ್ನು ಅಶ್ವರಾರೋಹಣವನ್ನು ಮಾಡಿಸಿ ಸಕಲ ವಾದ್ಯಗಳನ್ನು ಭೋರ್ಗರಿಸುತ್ತ ಪುರವೀಧಿಯಲ್ಲಿ ಮೆರವಣಿಗೆಯನ್ನು ಸಾಗಿಸಿದರು. ಗೃಹಕ್ಕೆ ಬಂದ ನಂತರ ಮತ್ತೆ ಸಭೆಯು ನೆರವೇರಿತು. ಆ ಬಳಿಕ ವಿದ್ಯಾರ್ಥಿಗಳು ಪರಮಾತ್ಮನ ಪರವಾಗಿ ವೇದಘೋಷವನ್ನು ಮಾಡಿದರು. ವೇ|| ಶ್ರೀಕಂಠಶಾಸ್ತ್ರಿಗಳು ಪುರಾಣಶ್ರವಣ ಮಹತ್ವವನ್ನೂ ಬಳಗಾನೂರು ಅಧ್ಯಾಪಕರು ಲಿಂಗಪೂಜಾಮಹತ್ವವನ್ನೂ ಶ್ರೋತೃಜನರ ಕರ್ಣಾನಂದವಾಗುವಂತೆ ಭಾಷಣ ಮಾಡಿದ ಬಳಿಕ ದೇಸಾಯರವರು ಮಾಹೇಶ್ವರರಿಗೆ ಭೂರಿದಕ್ಷಿಣೆಯನ್ನೂ ಗುರುವರ್ಗದವರಿಗೂ ಶಾಸ್ತ್ರಿಗಳಿಗೂ ಯೋಗ್ಯತಾನುಸಾರವಾಗಿ ಸಂಭಾವನೆಯನ್ನೂ ಕೊಟ್ಟುದಲ್ಲದೆ, ಪುರಾಣವನ್ನು ಹೇಳಿದ ವೇ|| ಬನ್ನಿಗನೂರ ಬಸವಲಿಂಗಶಾಸ್ತ್ರಿಗಳಿಗೆ ಭೂದಾನವನ್ನು ಮಾಡಿದರು.

ಧರ್ಮಾಭಿಮಾನಿ.

ಗುರುವರ್ಗದವರಿಗೊಂದು ಸಮಯ.

(ಲೇಖಕ—ಚಂದ್ರಕಾಂತ, ಬಿ. ಎ.).

"We are all the time from our child wood trying to lay the blame upon some thing outside ourselves"

(ನಾವು ಹಿಂದೀಜನರು—ಹುಟ್ಟಿದಾಗಿನಿಂದ ಯಾವಾಗಲೂ ಸ್ವತಃ ಧೀರರಾಗಿ ಪ್ರತ್ಯಕ್ಷತಃ ಕೆಲಸಮಾಡುವದನ್ನು ಬಿಟ್ಟು ಮಂದಿಯ ಮೇಲೆ ತಪ್ಪು ಹೊರಿಸಲಿಕ್ಕೆ ಪ್ರಯತ್ನಿಸುತ್ತಿರುವೆವು). ವಿವೇಕಾನಂದ.

ಮನುಷ್ಯನು ಸ್ವಾರ್ಥಸಾಧನೆ, ಸ್ವಪ್ರತಿಷ್ಠೆಗೆ ಯಾವಾಗಲೂ ಮುಖದುಡುತ್ತಿರುವುದರಿಂದ ಪರಸ್ಪರ ಹಿತವಿನಾಶವಾಗುವ ಸಂಭವವು ಆಗಾಗ್ಗೆ ಬರುತ್ತಿರುವದು ಕೆಲವಂಶದಿಂದ ನಿಜವೇ. ಆದರೂ ನಾವು ನಮ್ಮ ಕೆಲಸಗಳನ್ನು ಸರಿಯಾಗಿ ಮಾಡುತ್ತಬಂದರೆ, ನಮ್ಮ ಕರ್ತವ್ಯದ ಕಡೆಗೆ ಅಲಕ್ಷಿಸದೆ ದಕ್ಷತೆಯಿಂದ ಸಾಗಿಸುತ್ತಬಂದರೆ; ಯಾರ ಸ್ವಾರ್ಥಬುದ್ಧಿಯು ಏನು ಮಾಡೀತು? ಯಾರ ಆತ್ಮಪ್ರತಿಷ್ಠಾಸಾಧನೆಯು ಏನು ಮಾಡೀತು? ತಮ್ಮ ಮೆಟ್ಟನ್ನು ತಾವು ಮೊದಲು ಗಟ್ಟಿಮುಟ್ಟಾಗಿ ಮಾಡಿಕೊಳ್ಳದೆ ಬರೀ ಮಂದಿಯ ಮೇಲೆ ಹರಿಬೀಳುವ ಪ್ರಯತ್ನ ನಡೆಯಿಸಿದರೆ, ಹುದುಲಲ್ಲಿ ನಿಂತು ಈಜಲು ಹೆಣಗುವವನ ಗತಿಯಾಗುವದೆಂಬುದು ಸಾಹಜಿಕವೇ. ಅದಕ್ಕಾಗಿ ನಾವು ವಿವೇಕಾನಂದರವರು ನಮ್ಮ ಆಕರದ ವೃತ್ತಿಯಿಂದ ನಾವು ಮತ್ತಷ್ಟು ಅವನತಿಯನ್ನು ಹೊಂದುತ್ತಿರುವೆವೆಂದು ಅಂದಿರುವರು. ಪಂಚಪೀಠಾಸನದವರೂ ಮತ್ತು ಅವರ ಪ್ರಮುಖರಾದ ಗುರುವರ್ಗದವರೂ ನಮ್ಮ ಸಮಾಜಕ್ಕೆ ಪೂಜ್ಯರೆಂಬುದು ನಿಜ. ಅವರು ಕಾಲಾಂತರದಿಂದ ಮೂಲಗೇಡಾಗಿರುವರೆಂಬುದೂ ನಿಜ. ಅವರ ಯೋಗ್ಯತೆಗೆ ಕುಂದು ಬಂದಿರುವದೆಂಬುದೂ ನಿಜ. ಆದರೆ ಅವರ ಈ ಯೋಗ್ಯತಾಚ್ಯುತಿಗೆ ಕಾರಣವ್ಯಾವುದು? ಅದಕ್ಕೆ ಬಧ್ಧರು ಯಾರು? ಎಂಬ ಪ್ರಶ್ನೆಗಳು ಮುಂದೆ ಬಿದ್ದುವವು. ಅವುಗಳ ಪರಾಮರ್ಶೆ ಮಾಡಿ ಮುಂದೆ ಸಿಂಹಾಸನದವರು ತಮ್ಮ ಕಾರ್ಯಕ್ರಮದ

[illegible] ಸವಾಗ ವಿಚಾರವನ್ನು ಮಾಡಬೇಕೇ ಹೊರತು ಇಲ್ಲವಾದರೆ ಸದ್ಭಕ್ತಿ [illegible] ಅಲ್ಲಿಯವರೆಗೆ ಷು. ಎಲ್ಲಿಯವರೆಗೆ ಒಬ್ಬನಲ್ಲಿ ಕಾರ್ಯಪ್ರಭಾವವಿರು [illegible] ಕಾರ್ಯ ಜನರಲ್ಲಿ ಅತನ ಬಗ್ಗೆ ಪೂಜ್ಯಭಾವನೆ (Hero worship) ಅತನ ಕ್ಷಾತ್ರತೇಜದ ಬಗ್ಗೆ ಅದ ಕ್ಷೇತ್ರದಿಂದ ಹಿಂದಕ್ಕೆ ಸರಿಸಲ್ಪಡೆ ಮೇಲೆ ಬರೇ ಅನ್ಯರು ನಮ್ಮ ಯೋ ರವೂ ಅಡಿಮೆಯಾಗುತ್ತಿರುವ ಮಾಡಿರುವರೆಂಬುದೊಂದನ್ನು ಗುಡ್ಡವನ್ನಾಗಿ ಗ್ಯಕಾಂಗ [illegible] ಮುಂದೆ ಮಾಡಿದರೆ ಅದರಿಂದೇನೂ ಅಷ್ಟು ಸಾರ್ಥಕವಾಗ [illegible] ಜಗತ್ತಿನಲ್ಲಿ ಸದ್ಯಕ್ಕೆ ಜನರ ದೃಷ್ಟಿಯು ಹೇಗಿರುವದೆಂಬುದನ್ನು ನಾವು ಲಕ್ಷಿಸಲಿಕ್ಕೇಬೇಕು. ಧಾರ್ಮಿಕ ಲೌಕಿಕ ವ್ಯವಹಾರಗಳೆರಡರಲ್ಲಿ ಯೂ ಸಾರ್ವಭೌಮನಾದ ಪೋಪನ ಗತಿಯೇನಾಯಿತು ? ಕೈಲಾಸವು ಮೂರೇ ಗೇಣಾಯಿತೆಂದು ಭಾವಿಸಿ ಆತ್ಮಪ್ರತಿಷ್ಠಾಪನೆಗೆ ಮುಂದುವರಿದ್ದ ಕೈಸರನ ಅವಸ್ಥೆಯೇನಾಯಿತು ? ಎಲ್ಲೆಲ್ಲಿಯೂ ನಮ್ಮ ಮಾತೇ ಮೇಲೆಂದು ಮೆರೆಯುತ್ತಿದ್ದ ಇಂಗ್ಲಂಡದ ಲಾರ್ಡರ ಸ್ಥಿತಿ ಈಗ ಎಲ್ಲಿಗೆ ಇಳಿದಿದೆ ? ಪ್ರೆಸಿಡೆಂಟ್ ವಿಲ್ಸನ್ನನು ಆಡಿದ್ದೆಲ್ಲ ಅಮೃತವಲ್ಲವೆಂದು ಅವನ ಮೇಲೆ ತಿರುಗಿಬೀಳಲಿಲ್ಲವೇ ? ಹೇಳಿದ ಮಾತಿಗೆ ಮುಂದಿಗಾಲ ಮೇಲೆ ನಿಂತು ಮನ್ನಿಸುತ್ತಿದ್ದ ಸೇನಾಧಿಪತಿಗಳೇ ಕೈಸರನ ಮೇಲೆ ಕೈತೋರಿಸಲಿಲ್ಲವೇ ? ಅಂದರೆ ಜನರು ಬರೇ ಮನೆತನ, ಹೆಸರು, ಜಾತಿ, ದೊಡ್ಡಸ್ತಿಕೆಗಳಿಗೇ ಲಕ್ಷ್ಯಗೊಡದೆ, ಅವರ ವೃತ್ತಿ, ಅವರ ವಿಚಾರ, ಅವರ ದೃಷ್ಟಿಗಳನ್ನು ಸಂಲಕ್ಷಿಸಿ (Analytical survey) ಯೋಗ್ಯತೆಯನ್ನು ಕೊಡುತ್ತಾರೆ. ಅಂದಮೇಲೆ ಇದೇ ನಿಯಮವು ಈ ಜಗತ್ತಿನವರಾದ ನಮಗೂ ಸಾಮಾನ್ಯವದೆ. ನಾವು ವೀರಶೈವಮತಸ್ಥಾಪನಾಚಾರ್ಯರು; ನಾವು ಬುನಾದಿಯವರು; ನಮ್ಮ ಮತವು ಪುರಾತನದ್ದು; ನಾವು ದೊಡ್ಡ ಸ್ವಾಮಿಗಳು; ನಮಗೇ ಜಗದ್ಗುರುತ್ವವು; ಎಂಬಿವೇ ಮೊದಲಾದವುಗಳನ್ನು ಮುಂದಿಡುವ ಧೋರಣವನ್ನು ಕೈಕೊಂಡರೆ ನಮ್ಮ ಪೂಜ್ಯತ್ವ, ಗೌರವ, ಯೋಗ್ಯತೆ, ಜಗದ್ಗುರುತ್ವಗಳು ಬಹಳ ದಿವಸ ನಡೆಯಲಾರವು. ಕಲಂದಗೋಳದಲ್ಲಿ ಸಭೆಗೂಡಿ ಅವರನ್ನು ಪೂಜಿಸಬಾರದು; ನವಲಗುಂದದಲ್ಲಿ ನಾಲ್ಕು ಮಂದಿ ಕೂಡಿ ಬಸವೇಶ್ವರನ ಹೆಸರು ತೆಗೆಯಬೇಡಿರಿ; ಕಲಾದಗಿಯಲ್ಲಿ ನೆರೆದು ಮೂರು ಬೊಟ್ಟು ವಿಭೂತಿ ಧರಿಸಬೇಕು, ಇತ್ಯಾದಿಯಾಗಿ ಗುರುವರ್ಗದವರು ಇಷ್ಟೇ ತಮ್ಮ ಆತಿಕರ್ತವ್ಯತೆ, ಕಾರ್ಯದಕ್ಷತೆಗಳನ್ನು ತೋರಿಸಿದರೆ ಹೇಗೆ ನಡೆಯಬೇಕು ? ಜವಾಬುದಾರಿಯ ಮಾತೇನು ಉಳಿಯಿತು ? ದಿವಸಗಳು ಬಹು ಸೂಕ್ಷ್ಮವಾಗಿವೆ. ನಿಮ್ಮನ್ನು ತಕ್ಕಡಿಯಲ್ಲಿಡುವದಿಲ್ಲ. ನಿಮ್ಮ ಕೆಲಸಗಳನ್ನು ನೋಡುತ್ತಾರೆ. ನಿಮ್ಮ ದರ್ಜೆಯನ್ನಷ್ಟೇ ನೋಡುವುದಿಲ್ಲ. ನಿಮ್ಮ ಧೋರಣವನ್ನು ನೋಡುತ್ತಾರೆ. ಜಗತ್ತಿನಲ್ಲಿ ಹೇಗೆ ನಡೆದದೆಯೆಂಬುದನ್ನು ನೋಡಬೇಕು. ದಿವಸಗಳು ಹೇಗೆ ಹೆಚ್ಚು ಕಡಿಮೆಯಾಗುತ್ತಿರುವವೆಂಬುದನ್ನು ಪರೀಕ್ಷಿಸಬೇಕು. ಬೋಲ್ಷೆವಿಕ್ಕರ ಮತಪ್ರಸಾರದ ವೇಗವನ್ನು ನೋಡಿರಿ. ಸತ್ಯಶೋಧಕ ಸಮಾಜದ ಬೆಳವಣಿಗೆಯ ಕಾರಣವನ್ನು ಕಂಡುಹಿಡಿಯಿರಿ. ಕಾರ್ಯಗಳಿಗೆ ಮುಂಬರಿಯಿರಿ. ಕರ್ತವ್ಯತೆಯನ್ನು ಪ್ರಸ್ತಾಪಿಸಿರಿ. ಅಂದರೆಯೇ ನಿಮ್ಮ ಪದವಿಯ ಉಳಿವು; ನಿಮ್ಮ ದರ್ಜೆಯ ಇರುವಿಕೆಯು; ಪೂಜ್ಯತ್ವದ ಮೇಲಾದು; ಜಗದ್ಗುರುತ್ವದ ಅಸ್ತಿತ್ವವು. ಸಮಾಜಕ್ಕೆ ಮೊದಲು ವಿದ್ಯೆಯು ಬೇಕಾಗಿದೆ. ಅದಕ್ಕಾಗಿ ಎಷ್ಟೋ ಅನುಕೂಲತೆಗಳನ್ನುಂಟುಮಾಡಿಕೊಡಬೇಕಾಗಿದೆ. ಮೊದಲು ಮುಂಬಯಿ ಮದ್ರಾಸುಗಳಲ್ಲಿ ವಿದ್ಯಾರ್ಥಿನಿಲಯಗಳು ಬೇಕಾಗಿವೆ. ಅದರಿಂದ ವಿದ್ಯೆಗೆ ಇಷ್ಟೇ ಕೊರತೆಯಿರುವದೆಂಬುದಲ್ಲದೆ ಧರ್ಮಕ್ಕೂ ಹಾನಿ ತಟ್ಟುವ ಸಂಭವವದೆ. ಗುರುವರ್ಗದವರು ಇತ್ತ ಲಕ್ಷ್ಯಗೊಡಲಿ. ತಮ್ಮ ಕರ್ತವ್ಯದಕ್ಷತೆ ಸಮಾಜಪ್ರೀತಿಗಳನ್ನು ಸಿದ್ಧಮಾಡಿ ತೋರಿಸಲಿ. ತಮ್ಮ ಗುರುತ್ವವನ್ನು ಸರಿಯಾಗಿ ಸಂಸ್ಥಾಪಿಸಿಕೊಳ್ಳಲಿ. ಇದಿಲ್ಲದಿದ್ದರೆ ಹೊತ್ತಿಗೆ ಸರಿಬಾರದ ಚಲನವಲನೆಯನ್ನಬಿಟ್ಟು ಸಲಿ. ತಮ್ಮದನ್ನು ಕಳಕೊಳ್ಳಲಿ. ಸಮಾಜವನ್ನು ಹಾಳುಮಾಡಲಿ, ಮತ್ತೇನದೆ ?

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ೧೯೨೦-೨೧ನೇ ಸಾಲಿನಲ್ಲಿ ಈ ಕೆಳಗೆ ನಮೂದಿಸಿರುವ ವೀರಶೈವ ವಿದ್ಯಾರ್ಥಿಗಳಿಗೆ ೮ತಿಂಗಳ ವರೆಗೆ ವೇತನವನ್ನು ಕೊಡುವಂತೆ ಕಮಿಟಿಯಲ್ಲಿ ತೀರ್ಮಾನ ಮಾಡಲ್ಪಟ್ಟಿದೆ.

ಬೊಂಬಾಯಿ—(1) ವಿ. ಎಚ್. ಚಂದ್ರಶೇಖರಯ್ಯ ಎಲ್.ಎಲ್.ಬಿ. ಕ್ಲಾಸ್ 8 ತಿಂಗಳಿಗೆ 80 ರೂ. ಸೆಂಟ್ರಲ್ ಕಾಲೇಜುಬೆಂಗಳೂರು (2) ಬಿ. ಬಸವಪ್ಪ III ಬಿ. ಎಸ್. ಇ. 8 ತಿಂಗಳಿಗೆ 80 ರೂ., ಸೆಂಟ್ರಲ್ ಕಾಲೇಜು ಬೆಂಗಳೂರು—(3) ಟಿ. ವಿ. ರುದ್ರಪ್ಪ III ಬಿ. ಎ., 8 ತಿಂಗಳಿಗೆ 80 ರೂ. ಸೆಂಟ್ರಲ್ ಕಾಲೇಜು ಬೆಂಗಳೂರು—(4) ಕೆ. ಜಿ. ಮಹದೇವಪ್ಪ III ಬಿ. ಎ. 8 ತಿಂಗಳಿಗೆ 80 ರೂ. ಸೆಂಟ್ರಲ್ ಕಾಲೇಜು ಬೆಂಗಳೂರು—(5) ಎಂ. ಸಿದ್ದಲಿಂಗಯ್ಯ III ಬಿ. ಎ. 8 ತಿಂಗಳಿಗೆ 80 ರೂ. ಸೆಂಟ್ರಲ್ ಕಾಲೇಜು ಬೆಂಗಳೂರು—(6) ಬಿ. ಸಿ. ಸಿದ್ದರಾಮಣ್ಣ I ಬಿ. ಎ. 8 ತಿಂಗಳಿಗೆ 40 ರೂ. ಸೆಂಟ್ರಲ್ ಕಾಲೇಜು ಬೆಂಗಳೂರು—(7) ಟಿ. ಗುರುನಂಜಯ್ಯ I ಬಿ. ಎ. 8 ತಿಂಗಳಿಗೆ 80 ರೂ. ಮಹಾರಾಜ ಕಾಲೇಜು ಮೈಸೂರು—(8) ಎಚ್. ಬಿ. ಸಿದ್ದಪ್ಪ I ಬಿ. ಎ. 8 ತಿಂಗಳಿಗೆ 40 ರೂ. ಸೆಂಟ್ರಲ್ ಕಾಲೇಜು ಬೆಂಗಳೂರು—(9) ಎಂ. ಸಿ. ಚಂದ್ರಶೇಖರಯ್ಯ I ಬಿ. ಎ 8 ತಿಂಗಳಿಗೆ 40 ರೂ. ಮಹಾರಾಜ ಕಾಲೇಜು ಮೈಸೂರು—(10) ಕೆ. ಪ್ರಸಾದ್ I ಬಿ. ಎ. 8 ತಿಂಗಳಿಗೆ 40 ರೂ. ಗ॥ ಕ॥ ಹೈಸ್ಕೂಲು ತುಮಕೂರು—(11) ಟಿ. ವಿ. ರಾಜಪ್ಪ ಎಂಟ್ರೆನ್ಸ್ 8 ತಿಂಗಳಿಗೆ 24 ರೂ. ಮಹಾರಾಜ ಹೈಸ್ಕೂಲು—(12) ಎಸ್ ಸಿ. ರುದ್ರಯ್ಯ ಎಂಟ್ರೆನ್ಸ್ 8 ತಿಂಗಳಿಗೆ 24 ರೂ. ಗ॥ ಹೈಸ್ಕೂಲು ಹಾಸನ—(13) ವೈ. ಧರ್ಮಪ್ಪ VI ಫಾರಂ 8 ತಿಂಗಳಿಗೆ 24 ರೂ. ಮರಿಮಲ್ಲಪ್ಪ ಹೈಸ್ಕೂಲು ಮೈಸೂರು—(14) ಬಿ. ಶಂಭುಲಿಂಗಪ್ಪ VI ಫಾರಂ 8 ತಿಂಗಳಿಗೆ 24 ರೂ. ವೆ॥ ಮಿಷನ್ ಹೈಸ್ಕೂಲು ಬೆಂಗಳೂರು—(15) ಜಿ. ಪುಟ್ಟಪ್ಪ VI ಫಾರಂ 8 ತಿಂಗಳಿಗೆ 24 ರೂ. ಮರಿಮಲ್ಲಪ್ಪನವರ ಹೈಸ್ಕೂಲು ಮೈಸೂರು—(16) ಎಂ.ಎಸ್. ಸಿದ್ದಲಿಂಗಯ್ಯ VI ಫಾರಂ 8 ತಿಂಗಳಿಗೆ 24 ರೂ. ವೆ॥ ಮಿಷನ್ ಹೈಸ್ಕೂಲು ಮೈಸೂರು—(17) ಪಿ. ಎಸ್. ಸುಬ್ಬರಾಯಪ್ಪ VI ಫಾರಂ 8 ತಿಂಗಳಿಗೆ 24 ರೂ. ಗ॥ ಹೈಸ್ಕೂಲು ತುಮಕೂರು—(18) ಬಿ. ಸಿ. ವೀರಣ್ಣಪ್ಪ VI ಫಾರಂ 8 ತಿಂಗಳಿಗೆ 24 ರೂ. ಗ॥ ಕ॥ ಹೈಸ್ಕೂಲು ಶಿವಮೊಗ್ಗ—(19) ಟಿ. ಎಂ. ಮಹದೇವಪ್ಪ VI ಫಾರಂ 8 ತಿಂಗಳಿಗೆ 24 ರೂ. ಗ॥ ಕ॥ ಹೈಸ್ಕೂಲು ಶಿವಮೊಗ್ಗ—(20) ಎಲ್. ಸಿದ್ದಪ್ಪ VI ಫಾರಂ 8 ತಿಂಗಳಿಗೆ 24 ರೂ. ವೆ॥ ಮಿಷನ್ ಹೈಸ್ಕೂಲು ಬೆಂಗಳೂರು—(21) ಎನ್. ಮಲ್ಲಯ್ಯ VI ಫಾರಂ 8 ತಿಂಗಳಿಗೆ 24 ರೂ. ಬೆಂಗಳೂರು—(22) ವೀರಶೈವಾಶ್ರಮ 8 ತಿಂಗಳಿಗೆ 160 ರೂ. ಸರ್ ಜೆ. ಜೆ. ಸ್ಕೂಲು ಆಫ್ ಆರ್ಟ್ಸ್ ಬೊಂಬಾಯಿ—(23) ಎಂ. ವೀರಪ್ಪ 8 ತಿಂಗಳಿಗೆ 80 ರೂ. ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಬೊಂಬಾಯಿ—(24) ಬಿ. ಶಿವಪ್ಪ III ಕೆಮಿಸ್ಟ್ರಿ 8 ತಿಂಗಳಿಗೆ 80 ರೂ. ಫಾರೆಸ್ಟ್ ಸ್ಕೂಲು ಮೈಸೂರು—(25) ಎ. ಆರ್. ಸಿದ್ದಬಸವಪ್ಪ ರೇಂಜರ್ ಕ್ಲಾಸು 8 ತಿಂಗಳಿಗೆ 64 ರೂ. ಸಬ್ ಅಸಿಸ್ಟೆಂಟ್ ಟ್ರೈನಿಂಗ್ ಸ್ಕೂಲು ಬೆಂಗಳೂರು—(26) ಬಿ. ಆರ್. ಮುನಿರಾಜಪ್ಪ II ಮೆಡಿಕಲ್ 8 ತಿಂಗಳಿಗೆ 40 ರೂ. ಸಬ್ ಅಸಿಸ್ಟೆಂಟ್ ಟ್ರೈನಿಂಗ್ ಸ್ಕೂಲು ಬೆಂಗಳೂರು—(27) ಎಂ. ಸಿ. ನಂಜಪ್ಪ II ಮೆಡಿಕಲ್ 8 ತಿಂಗಳಿಗೆ 40 ರೂ. ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲು ಬೆಂಗಳೂರು—(28) ಜಿ. ನಂಜುಂಡಯ್ಯ ಎಲಕ್ಟ್ರಿಕ್ ಟ್ರೈನಿಂಗ್ 8 ತಿಂಗಳಿಗೆ 40 ರೂ. ಸೇವಾಸದನ ಪೂನಾ—(29-ಜಿ. ಶಿವಮ್ಮ 8 ತಿಂಗಳಿಗೆ 80 ರೂ. ಮಹಾರಾಣಿ ಹೈಸ್ಕೂಲು ಮೈಸೂರು) (30) ಎಂ. ಶಿವರುದ್ರಮ್ಮ ಅಪ್ಪರ್ ಸೆಕೆಂಡರಿ (ಸೀನಿಯರ್) 8 ತಿಂಗಳಿಗೆ 40 ರೂ. ವಾಣೀವಿಲಾಸ ಇನ್ಸ್ಟಿಟ್ಯೂಟ್ ಬೆಂಗಳೂರು—(31) ಗೌರಮ್ಮ V ನೇ ತರಗತಿ 8 ತಿಂಗಳಿಗೆ 32 ರೂ. ಗ॥ ಗರ್ಲ್ಸ್ ಸ್ಕೂಲು ಮಾಗಡಿ—(32) ಆರ್. ಭದ್ರಮ್ಮ V ನೆ ತರಗತಿ 8 ತಿಂಗಳಿಗೆ 24 ರೂ. ಶ್ರೀ ಚಂಕರವಿಲಾಸ ಸಂಸ್ಕೃತ ಪಾಠಶಾಲಾ ಮೈಸೂರು—(33) ಬಸವರಾಜಪ್ಪ ಸಂಸ್ಕೃತ 8 ತಿಂಗಳಿಗೆ 24 ರೂ. ಗ॥ ಕ॥ ಹೈಸ್ಕೂಲು ಬೆಂಗಳೂರು—(34) ಕೆ. ಆರ್. ಮಲ್ಲಪ್ಪ VI ಫಾರಂ 8 ತಿಂಗಳಿಗೆ 24 ರೂ.

G. PARAMASIVIAH,
Hon. Secretary,
M. L. E. Fund Association.

Bangalore,
25-11-1920.

ವೀರಶೈವರಿಗೆ ಪೂಜಾರ್ಹವಾದದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರ ಫೋಟೋ ಬಿಕರಿಗೆ ಸಿದ್ಧವಾಗಿವೆ. ಫುಲ್‌ಪ್ಲೇಟ್ ಕಾಪಿ 1 ಕ್ಕೆ 1—4—0. 12 ಕ್ಕೆ 14—0—0. ಈ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿ.

ವಿಳಾಸ:—ಹೆಚ್. ಜಿ. ಮಹದೇವಪ್ಪ,
ಫೋಟೋಗ್ರಾಫರ್ ನಂಜನಗೂಡು.

2

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

37

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1-4-0 ರೂಪಾಯಿ.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

3

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೀತಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

SINEMATOGRAPH.
ಸಿನಿಮೊಟೊಗ್ರಾಫ.

37

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರು ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪೆನಿ,
3. ಇರುಳಪ್ಪನಬೀದಿ, ಮದರಾಸು.

ಸಿನೋಮೊಟಗ್ರಾಫ್ ಎಂಬ ಯಂತ್ರದ ಪೆಟ್ಟಿಗೆ.

ಈ ಯಂತ್ರಗಳು ಸೀಮೆಯಲ್ಲಿ ತಯಾರಾದದ್ದು. ಫಿಲ್ಮನ್ಸು (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ, ರೈಲು, ಮೋಟಾರು ಓಡುವದು ಕಂಬಿಯ ಮೇಲೆ ಕಸರತ್‌ಮಾಡುವದು, ನಡೆಯುವದು. ಆಕಾಶವಿಮಾನದ ಯುದ್ಧ, ಫಿರಂಗಿಯ ಯುದ್ಧ, ಕೈಕಲೆತಯುದ್ಧ, ಚೈನಾದರ ಕೈಗಾರಿಕೆ, ನಾಟಕ ಮುಂತಾದವುಗಳನ್ನು ಬೈಯಸ್ಕೋಪಿನಲ್ಲಿ ಕಂಡಂತೆ ಕಾಣುವವು. ಇದು ಒಂದು ಇದ್ದರೆ, ಜಾತ್ರೆ, ಪರಿಷೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು. ಯಂತ್ರವು ನೋಡಲಿಕ್ಕೆ ಚಿಕ್ಕದಾಗಿ ಕೈ ಕನ್ನಡಿಯಂತೆ ಇರುವವು.

12 ಫಿಲ್ಮನ್ಸ್ (ಚಿತ್ರಪಟ) ಗಳ ಸಹಿತ ಯಂತ್ರ 1ಕ್ಕೆ 2—0—0.

12

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಬೀದಿ ಮದರಾಸು.

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬೀ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗುವಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧಿಯಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100ರೂ. ಬಹುಮಾನ ಕೊಡುತ್ತೇವೆ. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ 5 ರೂ.

ವಿಳಾಸ—ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

37

ಜರ್ಮನ್ ಬೆಳ್ಳಿ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1 ಕ್ಕೆ ರೂ. 5—8—0.



ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರವು ಮಜಭೂತಾಗಿರುವದು. ಧೂಳಿ ಧೂಳು ಸೇರದಂತೆ ಎರಡು ಕಡೆಯೂ ಮೂಮು ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವುದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ.



ಬಹುಮಾನಗಳ ವಿವರ:—ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವ 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುದ್ದಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

37

ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

೧೯೨೦ ನೆಯ ಇಸವಿ ಡಿಸೆಂಬರ್ ತಾ॥ ೧೨ ರಿಂದ ೧೯೨೦ ನೆಯ ಡಿಸೆಂಬರ್ ತಾ॥ ೧೮ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ಬಿದಿಗೆಯಿಂದ ಮಾರ್ಗಶಿರ ಶುದ್ಧ ಅಷ್ಟಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃ-ಧ ಮಾಸ
12	ಭಾನು	ಬಿದಿ	28-26	ಪೂಷಾ	54-2	28
13	ಸೋಮ	ತದಿ	33-55	ಉಷಾ	60	29
14	ಮಂಗಳ	ಚೌತಿ	39-18	ಉಷಾ	0-42	30
15	¹ ಬುಧ	ಪಂಚ	44-3	ಶ್ರವ	6-52	1
16	² ಗುರು	ಷಷ್ಠಿ	48-1	ಧನಿ	12-24	2
17	ಶುಕ್ರ	ಸಪ್ತ	50-41	ಶತ	16-56	3
18	ಶನಿ	ಅಷ್ಟ	52-10	ಪೂಭಾ	20-19	4

(1) ನಾಗರಪಂಚಮಿ, ಧನುರ್ಮಾಸಪೂಜಾ. (2) ಚಂಪಾಷಷ್ಠಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ... ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯೈಷಾ । ಭುವನಪಥಕೃತಾವತಾರಾ ಪಕ್ಷ್ಮಜ ನಕ್ಷತ್ರ ಮೋನರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚೆತ್ತಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಡಿಸೆಂಬರ್ ತಾರೀಖು ೧೯ ನೆಯ ಭಾನುವಾರ (ಸಂಚಿಕೆ ೫೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

48

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಸ್ತೋತ್ರೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕನಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರಕ್ಷಾಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಬಾರುಕೋಲುಪಂಕ್ತಿ	೦— ೯—೦
ಚಂಡಾಸಿ	೦— ೮—೦

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

ಯಾರಿಗೆತಾನೆ ಸಂತೋಷವಾಗಲಾರದು ! ಯಾವುದೊಂದು ಖರ್ಚಿಲ್ಲದೆ 112 ಪೇಜುಗಳುಳ್ಳ ವೈದ್ಯದ ಸಲಹೆಯನ್ನು ಕೊಡುವ

13

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಕೊಟ್ಟರೆ ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣಿಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವವು. ಹೆಂಗಸರು ಈ ಚೀಲವನ್ನು ಉಪಯೋಗಿಸುವದರಿಂದ ಮೇಹ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಕಾಪಾಡುವದಲ್ಲದೆ, ಪ್ರಪಂಚದ ಸುಖವನ್ನು ಸಹ ಬಹು ಸಂತೋಷದಿಂದ ಕಳೆಯಬಹುದು. ಗಂಡಸರದು ಚೀಲ 1ಕ್ಕೆ 1-4-0 ಹೆಂಗಸರದು ಚೀಲ 1ಕ್ಕೆ 3-4-0.

13

ವಿಳಾಸ:—ಎಸ್. ಪಾಲ್ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

43

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಶ್ನೆ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ತಿರ್ಥ ಉತ್ತರಕನಡಾ.

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಮೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವ 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುದ್ದಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.
ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.
ರೌಂಡು ರೇಡಿಯಂ ರಿಸ್ಟು ವಾಚು.



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

38

ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.
ಸಿನಿಮೊಟೊಗ್ರಾಫ.

38

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪೆನಿ,
3. ಇರುಳಪ್ಪನಬೀದಿ, ಮದರಾಸು.

ತಮ್ಮಗಳ ಪ್ರೋತ್ಸಾಹಕ್ಕೆ ಅರ್ಹ ದ
ವ.ನೋ
ಗೀತ.
19-12-20ನೆ ಸಂಧ್ಯಾಕಾಲ 6ಘಂಟೆಗೆ ಪ್ರಾರಂಭ.
ಹಾಡುವವರು
ಸೇಲಂ ವಿದ್ವಾನ್ ದೊರೆಸಾಮಯ್ಯಂಗಾರರು.
ಪಿಟೀಲ್-ವಿದ್ವಾನ್ ಚೌಡಯ್ಯನವರು.
ಮೃದಂಗ-ವಿದ್ವಾನ್ ಮುತ್ತುಸಾಮಿಯವರು.
ಸ್ಥಳ-ರತ್ನಾವಳಿ ಥಿಯೇಟರ್.
ತಮ್ಮಗಳ ದಯಾಪೂರಿತ ಪ್ರೋತ್ಸಾಹಕ್ಕಾಗಿ ಪ್ರಾರ್ಥಿಸುವೆವು.
ಪಾಲ್ಯದ ವೆಂಕಟಾಚಲಪಂಡಿತ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಡಿಸೆಂಬರ್ ತಾ|| ೧೯ನೆಯ ಭಾನುವಾರ.

ನೆಯ್ಗೆಯವರ ಮಹಾಸಭೆ

ಪ್ರತಿ ವರ್ಷವೂ ರಾಷ್ಟ್ರೀಯ ಮಹಾಸಭೆಯು ನಡೆಯುವ ವಾರದಲ್ಲೇ ಪಾರಿಶ್ರಾಮಿಕ ಸಭೆ, ಸಂಘ ಸಂಸ್ಕರಣ ಸಭೆ, ಸ್ತ್ರೀ ಸಭೆ, ಮದ್ಯಪಾನನಿಷೇಧಕ ಸಭೆ, ಮಹಮ್ಮದೀಯ ಸಭೆ, ದಿವ್ಯಜ್ಞಾನಸಾಮಾಜಿಕ ಸಭೆ ಮೊದಲಾದುವುಗಳು ನಡೆಯುವುದುಂಟಷ್ಟೆ. ಈ ವರ್ಷ ಇವುಗಳೆಲ್ಲಾ ನಾಗಪುರಪಟ್ಟಣದಲ್ಲಿ ಪದ್ಧತಿಯಂತೆ ನಡೆಯುತ್ತವೆ. ಇವುಗಳ ಜತೆಗೆ ನೆಯ್ಗೆಯವರ ಮಹಾಸಭೆಯೆಂಬುದನ್ನು ಅದೇ ಪಟ್ಟಣದಲ್ಲೇ ನಡೆಯಿಸುವುದಕ್ಕೆ ಏರ್ಪಾಟಾಗಿದೆ. ಈ ಸಭೆಗೆ ಮ|| ಗಾಂಧಿಯವರೇ ಅಧ್ಯಕ್ಷರಾಗುತ್ತಾರೆ. ಅದು ಡಿಸೆಂಬರ್ ತಾ|| ೨೫ ರಲ್ಲಿ ನಡೆಯುತ್ತದೆ. ಈ ಸಭೆಯ ಜತೆಗೆ ಕೈಮಗ್ಗಗಳಿಂದ ನೆಯ್ಯಲ್ಪಟ್ಟ ನೂಲಿನ ರೇಶ್ಮೆಯ ಜರತಾರಿಯ ವಸ್ತ್ರಾದಿಗಳ ಪ್ರದರ್ಶನವು ಕೂಡ ನಡೆಯಿಸಲ್ಪಡುತ್ತದೆ. ಭರತಖಂಡದ ಸಕಲ ಪ್ರದೇಶಗಳಲ್ಲಿರುವ ನೆಯ್ಗೆಯ ಜನರೂ ಬರಬಹುದೆಂದೂ, ಅವರಿಂದ ನಿರ್ಮಿತಗಳಾದ ಸ್ವದೇಶೀಯ ವಸ್ತ್ರ ಸಾಮಗ್ರಿಗಳನ್ನು ಪ್ರದರ್ಶನಕ್ಕೆ ತರಬಹುದೆಂದೂ ಏರ್ಪಡಿಸಿದ್ದಾರೆ.

ಮ|| ಗಾಂಧಿಯವರು ಕೈಕೊಂಡ ಪ್ರಯತ್ನಗಳೊಳಗೆಲ್ಲಾ ಸ್ವದೇಶೀಯ ವಸ್ತ್ರ ನಿರ್ಮಾಣ ಪ್ರೋತ್ಸಾಹಕ್ಕಾಗಿ ನಡೆಯಿಸುತ್ತಿರುವ ಪ್ರಯತ್ನಗಳು ಅತ್ಯಂತ ಪ್ರಶಸ್ತವಾಗಿರುತ್ತವೆ. ಬೊಂಬಾಯಿ ಗುಜರಾತ್ ಪ್ರಾಂತದಲ್ಲಿ ಪ್ರತಿ ಮನೆಯಲ್ಲೂ ಬಡವರು ಮೊದಲುಗೊಂಡು ಶ್ರೀಮಂತರ ಮನೆಯವರೆಗಣ ಹೆಂಗುಸರು ಮಕ್ಕಳೆಲ್ಲಾ ನೂಲನ್ನು ರಾಟೆಯಾಡುವ ಕೈಗಾರಿಕೆಯನ್ನು ಕಲಿತು ಅದನ್ನು ಸಾಗಿಸುವಂತೆ ಮಾಡಿದ್ದಾರೆಂದು ಕೇಳುತ್ತೇವೆ. ಈಗ ನೆರವೇರಲಿಕ್ಕಿರುವ ನೆಯ್ಗೆಯವರ ಮಹಾಸಭೆಯೂ ಅದರ ಸಂಬಂಧದಲ್ಲಿ ನಡೆಯಲಿಕ್ಕಿರುವ ಪ್ರದರ್ಶನವೂ ಸಹ ನೆಯ್ಗೆಯ ಪರಿಶ್ರಮದ ಅಭ್ಯುದಯ ಪ್ರೋತ್ಸಾಹಕ್ಕಾಗಿಯೇ ಎಂಬುದು ಸ್ಪಷ್ಟವಾಗಿರುತ್ತದೆ.

ಜಗತ್ತಿಗೆಲ್ಲಾ ಹೆಸರಾಗಿದ್ದ ನಮ್ಮ ದೇಶದ ನೆಯ್ಗೆ ಕೈಗಾರಿಕೆಗೆ ಈಗ ನಾಮಾವಶೇಷವಾಗುವ ಹೊತ್ತು ಬಂದಿದೆ. ಮೊಗಲರ ಜಹಾಂಗೀರ್ ಚಕ್ರವರ್ತಿಯ ಅಪ್ಪಣೆಯ ಮೇರೆಗೆ ಡಕ್ಕಾದ ಒಬ್ಬ ಜೇಡರವನು ೩ ಅಡಿಗಳ ಅಗಲವೂ ೧೫ ಅಡಿಗಳ ಉದ್ದವೂ ಉಳ್ಳ ಒಂದು ಸೆಲ್ಲವನ್ನು ನೂಲಿನಿಂದ ನೆಯ್ದು ಒಪ್ಪಿಸಿದ್ದನು. ಅದು ಒಟ್ಟು ೮ ತೊಲ ತೂಕವುಳ್ಳುದಾಗಿದ್ದಿತು! ಅದರ ಬೆಲೆ ೭೦೦ ರೂ. ಯಾಗಿದ್ದಿತಂತೆ. ಆ ಬಟ್ಟೆಗೆ ಉಪಯೋಗಿಸಿದ್ದ ನೂಲು ಎಷ್ಟು ಸಣ್ಣಗಿರಬಹುದು! ಅದರ ಮೃದುತ್ವವೆಷ್ಟಿರಬಹುದು! ಅದುಕ್ಕೆ ಉಪಯೋಗಿಸಿದ ಹತ್ತಿಯು ಎಷ್ಟು ಶ್ರೇಷ್ಠತರವಾಗಿರಬಹುದು! ಅದರಿಂದ ನೂಲನ್ನು ನಿರ್ಮಿಸಿದವರ ಕೈ ಬೆರಲುಗಳ ಕೌಶಲ್ಯವು ಎಷ್ಟು ಶ್ಲಾಘ್ಯವಾಗಿರಬಹುದು! ಅಂಥ ಅದ್ಭುತವಾದ ನೆಯ್ಗೆಯ ಕೆಲಸವು ನಡೆಯುತ್ತಿದ್ದ ನಮ್ಮ ದೇಶದಲ್ಲಿ ಈಗ ೩೦-೪೦ ನೆ ನಂಬರುಗಳ ನೂಲಿಗೂ ಕೂಡ ಯಂತ್ರಗಳ ಕಡೆಗೆ ಕೈಯೊಡ್ಡಿ ಕುಳಿತುಕೊಳ್ಳುವ ಅವಸ್ಥೆ ಬಂದಿದೆ. ಹೆಚ್ಚು ನಂಬರಿನ ನೂಲುಗಳಂತು ಸೀಮೆಯಿಂದಲೇ ಬರಬೇಕಾಗಿವೆ. ಇಷ್ಟೇ ಅಲ್ಲದೆ ನಮ್ಮ ದೇಶದ ಗಿಡಮೂಲಿಕೆಗಳಿಂದಲೂ ರಂಗಿನ ಬೀಜಗಳಿಂದಲೂ ನಿರ್ಮಿತವಾಗುತ್ತಿದ್ದ ಮೇಲ್ತರದ ಗಟ್ಟಿ ರಂಗುಗಳು ಈಗ ಸ್ವಪ್ನಪ್ರಾಯವಾಗಿವೆ. ಅವುಗಳ ನಿರ್ಮಾಣಕರೂ ಕೂಡ ಅದೃಶ್ಯರಾಗಿದ್ದಾರೆ. ನೆಯ್ಕಾರ ಜನರು ಹುಟ್ಟು ಬಡವರಾಗಿ ನಿಂತಿದ್ದಾರೆ. ಪ್ರಭುತ್ವದವರು ಕಳೆದ ವರ್ಷ ಮಾಡಿದ ಮಾಟದಿಂದ ಹತ್ತಿಯನ್ನು ಬೆಳೆದವರೂ ಅದನ್ನು ಮಾರುವವರೂ ಸಹ ಪಾತಾಳಗತರಾಗಿ ಹೋಗಿದ್ದಾರೆ. ನೆಯ್ಗೆಯ ಯಂತ್ರಗಳು ನಮ್ಮ ದೇಶದ ನೆಯ್ಗೆವರ ಹೊಟ್ಟೆಗೆ ತಣ್ಣೀರು ಬಟ್ಟೆಯನ್ನು ಹಾಕಿಸಿರುವುವು. ಪರದೇಶದ ಬಟ್ಟೆ ವ್ಯಾಪಾರಿಗಳೂ ಯಂತ್ರಾಲಯಾಧಿಪತಿಗಳೂ ಕುಬೇರರಾಗುತ್ತಿರುವರು. ನಮ್ಮ ದೇಶದಲ್ಲೂ ಕೆಲ ಕಾಲದಿಂದ ಬಟ್ಟೆಯ ಮಿಲ್ಲುಗಳು ವೃದ್ಧಿಹೊಂದುತ್ತಿದ್ದರೂ ಅವುಗಳ ಮೂಲಕ ಧನಿಕರಾದ ಯಜಮಾನರುಗಳು ಕೆಲರು ಉಪಪನ್ನರಾಗುತ್ತಿರುವರೇ ಹೊರತು ಜನಸಾಮಾನ್ಯದ ಅರ್ಥಸಂಪಾದನೆಗೆ ಅದರಿಂದ ಭಂಗವೇ ವಿನಾ ಪ್ರಯೋಜನವಿಲ್ಲ. ಬರುಬರುತ್ತ ಜನರಲ್ಲಿ ಬಟ್ಟೆಯ ಉಪಯೋಗವು ವೃದ್ಧಿಯಾಗುತ್ತಿರುವುದರಿಂದ ಈ ಕಾಲದಲ್ಲಿ ಮಿಲ್ಲುಗಳಿಲ್ಲದೆ ಇದ್ದರೆ ಗೃಹಪರಿಶ್ರಮದಿಂದ ತಕ್ಕಷ್ಟು ಬಟ್ಟೆಗಳನ್ನೊದಗಿಸುವುದು ಸಾಧ್ಯವಲ್ಲವೆಂದು ಕೆಲರು ವಾದಿಸುವುದುಂಟು. ಆದರೆ ಸ್ವದೇಶದ ೩೩ ಕೋಟಿ ಪ್ರಜೆಗಳ ಹೊಟ್ಟೆಗಳಿಗೆಲ್ಲಾ ಸಾಕಾಗಿ ಮಿಗುವಷ್ಟು ಧಾನ್ಯಗಳನ್ನು ಸ್ವದೇಶೀಯ ವ್ಯವಸಾಯೋಪಕರಣಗಳಿಂದಲೇ ನಮ್ಮ ದೇಶವು ಹುಟ್ಟಿಸಿಕೊಳ್ಳಬಲ್ಲುದಾಗಿರುವಲ್ಲಿ, ಸ್ವದೇಶೀಯರಿಗೆ ಸಾಕಾಗುವಷ್ಟು ಬಟ್ಟೆಯನ್ನು ಹುಟ್ಟಿಸಿಕೊಳ್ಳಲಾರದೆ? ಯಂತ್ರಗಳು ಬರುವುದಕ್ಕೆ ಮುಂಚೆ ದೇಶೀಯರೆಲ್ಲಾ ದಿಗಂಬರರಾಗಿದ್ದರೆ? ಕುಶಲಗಾರಿಕೆಯಲ್ಲಿ ಸಹ ಇಲ್ಲಿಯ ನೆಯ್ಗೆಗಾರತನವು ಪ್ರಪಂಚದ ಇನ್ನಾವ ಭಾಗದವರಿಗಾದರೂ ಕಡಿಮೆಯಾಗಿದ್ದಿತೆ? ಯಾವುದೂ ಇಲ್ಲ. ಅದುಕಾರಣ ಈಗಣ ಗಾಂಧಿಯವರ ಪ್ರಯತ್ನದಿಂದ ದೇಶದಲ್ಲಿ ಕೈಗಾರಿಕೆಯ ನೆಯ್ಗೆಯು ಪುನರುದ್ಧಾರಗೊಂಡರೆ ನಮ್ಮ ದೇಶದ ನೆಯ್ಕಾರರು ತಲೆಯತ್ತಿಕೊಳ್ಳುವರು. ಈ ದೇಶದಲ್ಲಿ ಉತ್ತಮ ತರದ ಹತ್ತಿಯ ಬೆಳಸು ಪ್ರಬಲವಾಗುವುದಕ್ಕೂ ನೆಯ್ಗೆಯ ಕಸಬು ಮತ್ತೆ ಪೂರ್ವದಂತೆ ವಿಕಾಸಗೊಳ್ಳುವುದಕ್ಕೂ ಅವಕಾಶವಾದೀತು. ಆದುದರಿಂದ ನಾಗಪುರದಲ್ಲಿ ಜರುಗುವುದಕ್ಕಿರುವ ನೆಯ್ಕಾರರ ಮಹಾಸಭೆಯು ನಮ್ಮ ದೇಶದ ಭವಿಷ್ಯತ್ಸೌಭಾಗ್ಯಕ್ಕೆ ಸಾಧಕವಾಗುವಂತೆ ಜಯಶೀಲವಾಗಿ ನೆರವೇರಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಮ|| ವ್ರಜೇಂದ್ರನಾಥ ಸೀಲ್‌ರವರು ರಾಜಧಾನಿಗೆ ದಯಮಾಡಿಸಿ ಕಳೆದ ತಾ|| ೧೫ ರಲ್ಲಿ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಪದವಿಯನ್ನಂಗೀಕರಿಸಿದರು.

ಶ್ರೀಮದ್ಯುವರಾಜರವರು ಕಳೆದ ತಾ|| ೧೩ ರಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿದರು. ದಿಲ್ಲಿಯಲ್ಲಿ ಡ್ಯೂಕ್ ಆಫ್ ಕನ್ನಾಟ್‌ರವರಿಂದ ಆರಂಭಿಸಲ್ಪಡುವ ಸಂಸ್ಥಾನಿಕರ ಸಭೆಯಕಾಲಕ್ಕೆ ಇವರು ದಯಮಾಡಿಸುವವರಾಗಿದ್ದಾರೆ.

ಡಾಕ್ಟರ್ ಎಫ್. ಡಬ್ಲ್ಯು ಥಾಮಸ್ ಎಂಬ ಪಾಶ್ಚಾತ್ಯ ಸಂಸ್ಕೃತ ವಿದ್ಯಾವಂತರು ರಾಜಧಾನಿಗೆ ದಯಮಾಡಿಸಿ ಅರಮನೆಯ ಆತಿಥ್ಯದಲ್ಲಿದ್ದು ವಿಶ್ವವಿದ್ಯಾಲಯಭವನದಲ್ಲಿ ತಾತ್ವಿಕ ಉಪನ್ಯಾಸಗಳನ್ನು ಶ್ಲಾಘನೀಯವಾಗಿ ಮಾಡಿ, ಸಂಸ್ಕೃತಕಲಾಶಾಲೆ ಓರಿಯಂಟಲ್ ಲೈಬ್ರರಿ ಮೊದಲಾದುವುಗಳಿಗೆಲ್ಲಾ ಹೋಗಿ ವಿದ್ವಾಂಸರೊಡನೆ ಸಂಭಾಷಣಾದಿಗಳನ್ನು ನಡೆಯಿಸಿ ಬಹಳ ಸಂತೋಷಪಟ್ಟು ಹೋದರು.

ಬತ್ತದ ಸುಗ್ಗಿಯು ಆರಂಭವಾಗಿ ೧ ತಿಂಗಳಾಯಿತು. ಆದರೂ ಪರಸ್ಥಳದ ಗಿರಾಕಿಗಳು ಬಂದು ಅಕ್ಕಿಯನ್ನು ಕೊಳ್ಳುತ್ತಿರುವುದರಿಂದ ಬತ್ತದ ಬೆಲೆಯು ಕಂಡುಗಕ್ಕೆ ೧೬-೧೭ ರೂ. ಗಳಿಗೆ ಇಳಿದಿದ್ದುದು ಈಗಾಗಲೇ ಮತ್ತೆ ೧೯-೨೦ ರೂ. ಗಳ ವರೆಗೆ ಏರಿದೆ. ಸಂಸ್ಥಾನದ ಬಹುಭಾಗದಲ್ಲಿ ಈ ಸಲ ನಡೆದ ಮಳೆಯು ಸಾಲದು. ಬೆಳಸು ೮ ಆಣೆಯಷ್ಟಾಗಿದೆಯೆಂದೂ ಹಲವುಕಡೆ ಈಗಾಗಲೇ ಕುಡಿಯುವ ನೀರಿಗೆ ಅಭಾವವಾಗಿದೆಯೆಂದೂ ವಿಷಾದಕರವಾದ ಸುದ್ದಿಗಳು ಬರುತ್ತಿವೆ.

ರಾಜಧಾನಿಯಲ್ಲಿ ಪ್ರತಿಯೊಂದು ಮನೆಯ ಕಕ್ಕಸನ್ನೂ ಮ್ಯುನಿಸಿಪಾಲಿಟಿಯಿಂದಲೇ ಚೊಕ್ಕಟ ಮಾಡಿಸುವುದಕ್ಕೆ ಈ ತಿಂಗಳಾರಂಭದಿಂದ ಏರ್ಪಡಿಸಿದ್ದಾರೆ. ಆದರೆ ಕೆಲಕಡೆ ಪ್ರತಿದಿನವೂ ಚೊಕ್ಕಟಮಾಡಲ್ಪಡದೆ ಇರುವುದರಿಂದ ದುರ್ವಾಸನೆ ಹೆಚ್ಚಿ ಅನಾರೋಗ್ಯಕ್ಕೆ ಆಕರವಾಗಿದೆ. ಆಯಾ ಮನೆಯವರು ಸ್ವತಂತ್ರವಾಗಿ ಕೂಲಿಕೊಟ್ಟು ಚೊಕ್ಕಟಮಾಡಿಸಿಕೊಳ್ಳುತ್ತಿದ್ದಾಗ ಇದ್ದ ಸೌಕರ್ಯವು ಈಗ ತಪ್ಪಿಹೋಗಿರುವುದರಿಂದ ಕಷ್ಟವು ದುಸ್ಸಹವಾಗಿದೆ. ಹೆಲ್ತ್ ಶಾಖೆಯವರು ತಕ್ಕ ಮೇಲ್ವಿಚಾರಣೆಯಿಂದ ಈ ಲೋಪವನ್ನು ನಿವಾರಣೆ ಮಾಡಬೇಕಾಗಿದೆ.

ಕಳೆದ ತಾ|| ೧೩ ನೆ ರಾತ್ರಿ ಮದರಾಸಿನಿಂದ ಮೆಟ್ಟುಪಾಳ್ಯದ ಕಡೆಗೆ ಹೊರಟ ಮೇಲ್‌ಟ್ರೇನು ಇದಿರಾಗಿ ಬರುತ್ತಿದ್ದ ಒಂದು ಗೂಡ್ಸ್ ಟ್ರೇನಿಗೆ ಬೊಮ್ಮಿಡಿ ಸ್ಟೇಷನ್ನಿನ ಸತ್ತಿರ ೧||| ಗಂಟೆ ಸಮಯದಲ್ಲಿ ಡಿಕ್ಕಿಹೊಡೆದು ಮೇಲ್ ಬಂಡಿಯು ಕಂಬಿತಪ್ಪಿ ಉರುಳಿಕೊಂಡು ಪ್ರಯಾಣಿಕರು ಕುಳಿತಿದ್ದ ೩-೪ ಬಂಡಿಗಳು ನುಚ್ಚುನೂರಾದಂತೆಯೂ ೩೦ ಮಂದಿ ಸತ್ತು ೩೫ ಮಂದಿಗೆ ಗಾಯಗಳಾಗಿರುವಂತೆಯೂ ವರ್ತಮಾನ ಬಂದಿದೆ. ಈ ಅನಾಹುತಕ್ಕೆ ಸಿಕ್ಕಿ ಮೈಸೂರು ಸಂತೇಪೇಟೆ ಮಂಡಿವರ್ತಕರಾದ ಜೈನಮತದ ಮ|| ನಾಗರಾಜಯ್ಯನವರೂ ಅವರ ಗುಮಾಸ್ತರು ಸಹ ಮೃತರಾದರೆಂದೂ ಇನ್ನೊಬ್ಬ ಮೈಸೂರಿನವರಿಗೆ ಗಾಯಗಳಾಗಿರುವುವೆಂದೂ ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ.

ಮುಜರಾಯಿಭಕ್ಷಿ ಮ|| ಲಿಂಗರಾಜ ಅರಸಿನವರಿಂದ ರಚಿತವಾದ ರಾಮಾಯಣಸಂಗ್ರಹ ಪುರಾಣಶ್ರವಣವನ್ನು ಚರ್ಮಮಠದ ಬೀದಿಯಲ್ಲಿರುವ ವಿಠ್ಠಲಮಂದಿರದಲ್ಲಿ ಮ್ಯು|| ಕೌನ್ಸಿಲರ್ ಮ|| ಎ. ಸೆಟ್ಟೋಜಿರಾಯರು ಮ|| ಯಶವಂತರಾಯರೇ ಮೊದಲಾದ ನಾಮದೇವ ಸಮಾಜದವರು ಆರಂಭಿಸಿ ನಡೆಯಿಸುತ್ತಿದ್ದಾರೆ. ಜವಳಿಅಂಗಡಿ ಮ|| ತಮ್ಮಯ್ಯನವರ ಓದುಗಾರಿಕೆಯೂ ವೇ|| ರಾಹೋಟಿಶಾಸ್ತ್ರಿಗಳ ಅರ್ಥವಿವರಣೆಯೂ ಶ್ರಾವ್ಯವಾಗಿ ನಡೆಯುತ್ತಿವೆ. ಕಳೆದ ಸೋಮವಾರ ಸೀತಾಕಲ್ಯಾಣವು ನಡೆದಾಗ್ಗೆ ಆಹೂತರಾಗಿ ಅಮೀನುಲ್‌ಮುಲ್ಕ್ ಮಿರ್ಜಾ ಇಸ್ಮಾಯಿಲ್‌ರವರೂ ಮ|| ಗಳಾದ ಹೆಚ್. ಲಿಂಗರಾಜ ಅರಸಿನವರು, ಕವಿರತ್ನಂ ಮಂಡಿಕಲ್ ರಾಮಶಾಸ್ತ್ರಿಗಳು, ಶತಾವಧಾನಿ ಚಿದಂಬರ ಶಾಸ್ತ್ರಿಗಳು ಗೋಪಾಲರಾಯರು, ಧ|| ಪ್ರ. ಬನುಮಯ್ಯನವರು ಹೆಲ್ತ್ ಆಫೀಸರ್ ಕರ್ವಿಯವರು, ಚೀಫ್ ಆಫೀಸರ್ ಮಹಮದ್‌ಪೀರ್‌ರವರು, ಸಿ. ನರಸಿಂಹಯ್ಯನವರು, ಎ. ಕೃಷ್ಣರಾಯರು ಮೊದಲಾದ ಅನೇಕಮಂದಿ ದೊಡ್ಡಮನುಷ್ಯರು ದಯಮಾಡಿಸಿ, ಸತ್ಕೃತರಾಗಿ ವಿಠ್ಠಲ ದೇವಾಲಯವನ್ನು ಪರಾಮರಿಸಿ, ನಾಮದೇವ ಜನವರ್ಗದವರ ಆಸ್ತಿಕ್ಯವನ್ನು ಶ್ಲಾಘಿಸಿ ದಯಮಾಡಿಸಿದರು.

ವರ್ತಮಾನಸಂಗ್ರಹ.

ಕೈಜರ್‌ರವರ ಪತ್ನಿಯು ಮರಣಾವಸ್ಥೆಯಲ್ಲಿದ್ದಾರೆಂದು ವಾರ್ತೆ ಬಂದಿದೆ.

ಹಾಲಂಡಿನಲ್ಲಿರುವ ಕೈಜರವರಿಗೆ ಈಗಣ ಜರ್ಮನ್ ಸರ್ಕಾರದವರು ಕಳೆದ ಜನವರಿ ತಿಂಗಳಿಂದ ಇದುವರೆಗೆ ೫ ಕೋಟಿ ಮಾರ್ಕುಗಳನ್ನು ಮರ್ಯಾದೆಯ ಭತ್ಯವಾಗಿ ಸಲ್ಲಿಸಿದ್ದಾರಂತೆ.

ಬೊಂಬಾಯಿ ವಿದ್ಯಾಪೀಠದವರು ಲಾರ್ಡ್ ಸಿನ್ಹರವರಿಗೂ ಸರ್ ನಾರಾಯಣ ಚಂದ್ರಾವಾರ್ಕರ್‌ರವರಿಗೂ, ಸರ್ ಚಿಮನಲಾಲ್ ಸೆಟಲ್ವಾಡರವರಿಗೂ ಎಲ್. ಎಲ್. ಡಿ. ಪ್ರಶಸ್ತಿಯನ್ನು ಕಳೆದ ತಾ|| ೭ ರಲ್ಲಿ ಕೊಟ್ಟರು.

ಐರ್ಲಂಡಿನಲ್ಲಿ ಶಾಂತಿಸ್ಥಾಪನೆಗೆ ಮಾರ್ಗವೇನಿದೆಯೆಂಬುದನ್ನು ತಿಳಿದುಕೊಂಡು ಬರಲಿಕ್ಕೆ ಮುಖ್ಯ ಮಂತ್ರಿಯವರು ಕಾರ್ಮಿಕ ಪ್ರತಿನಿಧಿಯಾದ ಹಂಡರ್ಸನ್‌ರವರನ್ನೂ ಆಡಮ್ಸನ್‌ರವರನ್ನೂ ಐರ್ಲಂಡಿಗೆ ಕಳುಹಿಸಿಕೊಟ್ಟಿದ್ದರು. ಅವರುಗಳು ಕಾರಾಗೃಹದಲ್ಲಿರುವ ಗ್ರಿಫಿತ್‌ರವರೊಡನೆ ಮಾತನಾಡಿಕೊಂಡು ಬಂದಿರುವರು.

ಐರ್ಲಂಡಿನಲ್ಲಿ ಸಿನ್‌ಫೀನಿಯನರ ಹಾವಳಿಯು ದಿನದಿನಕ್ಕೆ ಪ್ರಬಲವಾಗುತ್ತಿದೆ. ಸರ್ಕಾರದವರು ತಮ್ಮ ನಿರ್ಬಂಧ ಶಿಕ್ಷಾವಿಧಾನಗಳನ್ನು ಬಲಪಡಿಸುತ್ತಲೇ ಇದ್ದಾರೆ. ಅಲ್ಲಿಯ ಜಾತೀಯ ಪ್ರಭುತ್ವಕ್ಕೆ ಅಧ್ಯಕ್ಷರೆನಿಸಿಕೊಂಡಿದ್ದ ಗ್ರಿಫಿತ್‌ರವರನ್ನು ಪ್ರಭುತ್ವದವರು ಸೆರೆಹಿಡಿದು ಸಾಗಿಸಿಬಿಟ್ಟರು. ಪ್ರತಿದಿನವೂ ಪ್ರಾಣಹತ್ಯೆಗಳೂ ಮನೆಮಾರುಗಳನ್ನು ಸುಡುವುದೂ ಅನೇಕ ಪಟ್ಟಣಗಳಲ್ಲಿ ನಡೆಯುತ್ತಲಿವೆ.

ಲಾಹೋರಿನ ಅಕಾಲಿ ಎಂಬ ಪತ್ರಿಕೆಯ ಸಂಪಾದಕರಾದ ಸರ್ದಾರ್ ಮಂಗಳಸಿಂಗ್ ಎಂಬುವರು ಸಹಾಯನಿರಾಕರಣವನ್ನು ಕುರಿತು ಬರೆದ ೩ ಲೇಖನಗಳು ರಾಜದ್ರೋಹಾತ್ಮಕವೆಂದು ನಿರ್ಧರಿಸಿ ಲಾಹೋರ್ ಜಿಲ್ಲಾ ಮೇಜಿಸ್ಟ್ರೇಟರು ಅವರಿಗೆ ೩ ವರ್ಷಗಳ ಕಠಿನ ಕಾರಾಗೃಹವಾಸ ಶಿಕ್ಷೆಯನ್ನೂ ೧ ಸಾವಿರ ರೂ. ಅರ್ಥದಂಡವನ್ನೂ ಅದನ್ನು ಕೊಡದಿದ್ದರೆ ಮತ್ತೊಂದು ವರ್ಷ ಕಾರಾಗೃಹವಾಸ ಶಿಕ್ಷೆಯನ್ನೂ ವಿಧಿಸಿದರು.

ಇದುವರೆಗೆ ಲಾರ್ಡ್ ಕ್ಯಾರ್ಮೈಕೇಲ್; ಲಾರ್ಡ್ ವೆಲ್ಲಿಂಗ್ಡನ್, ವಿನ್‌ಸ್ಟನ್ ಚರ್ಚಿಲ್ ಮೊದಲಾದನೇಕರ ಹೆಸರುಗಳು ಮುಂದಣ ವೈಸ್‌ರಾಯ್‌ಗಿರಿಗೆ ಸೂಚಿಸಲ್ಪಡುತ್ತಿದ್ದುವು. ಆದರೆ ಆಂಗ್ಲ ಸಾಮ್ರಾಜ್ಯದ ಕೋಶಾಧ್ಯಕ್ಷರಾಗಿರುವ ಮಿ|| ಚೇಂಬರ್ಲೇನ್‌ರವರು ಬರಬಹುದೆಂದು ಈಗ ಸುದ್ದಿ ಹುಟ್ಟಿದೆ. ಮಿ|| ಮಾಂಟೆಗ್ಯೂರವರಿಗೆ ಮುಂಚೆ ಇವರೇ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾಗಿದ್ದರು. ಇವರು ಒಲ್ಲೆನೆಂದು ಮೊದಲು ತಿರಸ್ಕರಿಸಿದ್ದರು.

ಅಲಿಘರ್ ಇನ್‌ಸ್ಟಿಟ್ಯೂಟ್ ಗೆಜೆಟ್ಟಿನಲ್ಲಿ ನವಾಬ್ ಇಮದೂಲ್ ಮುಲ್ಕ್ ಬಹದೂರ್‌ರವರೂ, ನ್ಯಾಯಮೂರ್ತಿ ಸರ್ ಅಬ್ದುಲ್‌ರಹೀಂರವರೂ ಕೂಡ ಸಹಾಯನಿರಾಕರಣ ವಿಷಯದಲ್ಲಿ ಕೊಟ್ಟಿರುವ ಅಭಿಪ್ರಾಯವು ಪ್ರಕಟವಾಗಿದೆ. ಮಹಮ್ಮದಾಲಿ ಷೌಕತಾಲಿಯವರುಗಳು ಈಗ ನಡೆಯಿಸುತ್ತಿರುವ ಚಳವಳವು ಆತ್ಮ ವಿನಾಶಕರವಾದುದೆಂದೂ ಮಹಮ್ಮದೀಯರು ಅದನ್ನನುಸರಿಸಿ ನಡೆದರೆ ಅಧೋಗತಿಗೀಡಾಗುವರೆಂದೂ ಅವರುಗಳು ತಿಳಿಯಿಸಿರುತ್ತಾರೆ.

ಈ ಕೆಳಗೆ ಕಾಣುವ ರಾಜ್ಯಗಳಿಗೆ ಯುದ್ಧಕ್ಕೆ ಮುಂಚೆ ಆಗುತ್ತಿದ್ದ ವೆಚ್ಚಕ್ಕಿಂತಲೂ ಈಗಣ ವೆಚ್ಚವು ಈ ಪ್ರಕಾರ ಹೆಚ್ಚಿಕೊಂಡಿದೆಯಂತೆ. ಇಂಗ್ಲೆಂಡಿನಲ್ಲಿ ಮೊದಲಿಗಿಂತ ೭ ಪಾಲು ಹೆಚ್ಚು. ಇಟಲಿಯಲ್ಲಿ ೯ಪಾಲು, ಅಮೇರಿಕಾ ಸಂಯುಕ್ತಾಧಿಪತ್ಯದಲ್ಲಿ ೯ ಪಾಲು. ಫ್ರಾನ್ಸಿನಲ್ಲಿ ೧೦ ಪಾಲು, ಯೂರೋಪ್ ಖಂಡದ ಸಕಲ ರಾಜ್ಯಗಳಲ್ಲೂ ಈಗ ಆಯಕ್ಕಿಂತ ವ್ಯಯವೇ ಹೆಚ್ಚಾಗಿರುತ್ತದೆ. ಡೆನ್ಮಾರ್ಕ್ ದೇಶದಲ್ಲಿ ಮಾತ್ರ ವೆಚ್ಚಕ್ಕಿಂತ ಆದಾಯವು ಹೆಚ್ಚಾಗಿದೆ.

ತುರ್ಕಿ ಸಂಧಿನಿಬಂಧನೆಗಳಲ್ಲಿ ಸ್ವಲ್ಪ ಬದಲಾವಣೆಯಾಗುವಂತೆಯೂ, ಸ್ಮರ್ನಾವನ್ನು ಮರಳಿ ತುರ್ಕಿಗೇ ಕೊಟ್ಟುಬಿಟ್ಟು ಅಲ್ಲಿಯ ಪ್ರಜೆಗಳಿಗೆಲ್ಲಾ ಸಮನಾದ ನ್ಯಾಯವು ದೊರೆಯುವಂತೆ ಮಾಡುವಲ್ಲಿ ತುರ್ಕಿಯವರಿಂದ ಹೊಣೆಯು ತೆಗೆಯಲ್ಪಡುವುದಾಗಿಯೂ, ಹೀಗೆ ಸಂಧಿಯನ್ನು ಬದಲಾವಣೆ ಮಾಡುವ ವಿಷಯದಲ್ಲಿ ಇಂಗ್ಲೀಷ್ ಫ್ರಾನ್ಸ್ ಪ್ರಭುತ್ವದವರೀರ್ವರಿಗೂ ಇಷ್ಟರಲ್ಲೇ ಸಂಪೂರ್ಣಾಂಗೀಕಾರವು ನಡೆಯಬಹುದಾಗಿಯೂ ಲಂಡನ್ ತಂತೀವಾರ್ತೆಯಿಂದ ಗೊತ್ತಾಗುತ್ತದೆ.

ಭರತಖಂಡದಲ್ಲಿ ಭಂಗಾರದ ಬೆಲೆಯು ಏರುತ್ತಲೇ ಇದೆ. ಸರ್ಕಾರದವರು ಚಿನ್ನವನ್ನು ಹರಾಜಿನ ಮೂಲಕ ಮಾರುವುದನ್ನು ನಿಲ್ಲಿಸಿಬಿಟ್ಟರು. ಕಳೆದವಾರ ಬೊಂಬಾಯಿಯಲ್ಲಿ ಅಪರಂಜಿಯ ಬೆಲೆಯು ತೊಲೆ ೧ಕ್ಕೆ ೨೯ ರೂ.ನ ಮೇಲೆಯೇ ಇದ್ದಿತು. ಬೆಳ್ಳಿಯ ಬೆಲೆಯು ಮಾತ್ರ ಇಳಿಯುತ್ತಿದೆ. ಇಂಗ್ಲಂಡಿನಲ್ಲೂ ಅಮೇರಿಕಾದಲ್ಲೂ ಚೀನಾದಲ್ಲೂ ಬೆಳ್ಳಿಯನ್ನು ಮಾರುವುದಕ್ಕುಪಕ್ರಮಿಸಿರುವುದರಿಂದ ಅದರ ಬೆಲೆಯು ಥಟ್ಟನೆ ಇಳಿದುಹೋಗಲು ಕಾರಣವಾಗಿದೆ. ೧೦೦ ತೊಲೆಗೆ ೧೦೩ ರಿಂದ ೧೦೪ ರೂ. ಗಳವರೆಗೆ ಕಳೆದವಾರದ ಬೆಲೆ ಯಿದ್ದಿತು.

ವೈಸ್ರಾಯರು ಬಿಕನೀರ್ ಸಂಸ್ಥಾನಕ್ಕೆ ದಯಮಾಡಿಸಿ ೮-೧೦ ದಿನಗಳಿದ್ದರು. ಕೊನೆಯ ದಿವಸ ವೈಸ್ರಾಯರೇ ಮೊದಲಾದವರು ಮೋಟಾರು ಬಂಡಿಗಳಲ್ಲಿ ಕುಳಿತು ಬೇಟೆಯಾಡಲು ಹೋಗುತ್ತಿದ್ದಾಗ ಒಂದು ಮೋಟಾರಿನಲ್ಲಿ ಬಾರ್‌ಮಾಡಿ ಇಡಲ್ಪಟ್ಟಿದ್ದ ತುಪಾಕಿಯು ಹಾರಿ ಅದರಲ್ಲಿದ್ದ ಬಿಕನೀರ್ ಯುವರಾಜರ ಎಡಭುಜದಲ್ಲಿ ಗುಂಡು ತೂರಿಹೋಯಿತು. ವೈಸ್ರಾಯರ ಸರ್ಜನರು ಒಡನೆಯೇ ಇದ್ದುದರಿಂದ ಕೂಡಲೇ ಅವರು ಚಿಕಿತ್ಸೆಮಾಡಿದರು. ಇದಕ್ಕಾಗಿ ಸರ್ಜನ್ ಕರ್ನಲ್ ಹರ್ಪರವರು ಒಂದು ದಿನ ಹೆಚ್ಚಾಗಿ ಅಲ್ಲಿ ನಿಂತು ತಕ್ಕ ಚಿಕಿತ್ಸೆಮಾಡಿದರು. ಈಗ ಗಾಯವು ಮಾಯುತ್ತಿದೆ.

ಕಳೆದ ತಾ|| ೨ ರಲ್ಲಿ ಕಲ್ಕತ್ತಾದೊಳಗೆ ಆಶ್ಚರ್ಯಕರವಾದ ಒಂದು ಕಳವು ನಡೆದಿತು. ಒಂದು ಕಡೆ ಬಯಲಿನಲ್ಲಿ ಡಿ|| ಸರ್ಕಾರ್ ಎಂಬುವವನು ಕೈಕಾಲುಕಟ್ಟಲ್ಪಟ್ಟು ಸ್ಮೃತಿ ತಪ್ಪಿ ಬಿದ್ದಿದ್ದನು. ಅವನನ್ನು ವೈದ್ಯಶಾಲೆಗೆ ಸಾಗಿಸಿದರು. ಅವನು ಆ ದಿವಸ ೭,೦೦೦ ರೂ. ಗಳ ನೋಟುಗಳನ್ನು ತೆಗೆದುಕೊಂಡು ಹೋಗುತ್ತಿರುವಲ್ಲಿ ನಾಲ್ಕು ಮಂದಿಗಳು ದಾರಿಯಲ್ಲಿ ನಿಂತಿದ್ದರೆಂದೂ, ಅವರ ಪಕ್ಕದಲ್ಲಿ ಒಂದು ಮೋಟಾರುಬಂಡಿ ನಿಂತಿದ್ದಿತೆಂದೂ, ಆ ನಾಲ್ವರೂ ಬಂದು ನನ್ನನ್ನು ಹಿಡಿದುಕೊಂಡು ಏನನ್ನೋ ಮೂಸಿಸಿದರೆಂದೂ, ಬಳಿಕ ಏನು ಜರುಗಿತೋ ನನಗೆ ತಿಳಿಯದೆಂದೂ, ಆತನು ಸ್ಮೃತಿಬಂದ ಮೇಲೆ ಹೇಳಿದನು. ಅವನ ನೋಟುಗಳನ್ನೆಲ್ಲಾ ಅವರು ಅಪಹರಿಸಿಕೊಂಡು ಹೋಗಿರುವರು.

ಲೇಬರ್ ಪಕ್ಷದವರು ಮುಂದೆ ಆಂಗ್ಲದೇಶದ ಮಂತ್ರಿತ್ವಕ್ಕೆ ಬರುವರೆಂದೂ ಅವರಿಂದ ಭರತಖಂಡಕ್ಕೆ ಸಹಾಯವಾಗುವುದೆಂದೂ ಅವರ ಪಕ್ಷವು ಪಾರ್ಲಿಮೆಂಟಿನಲ್ಲಿ ಹೆಚ್ಚಿ ಬರುವಂತೆ ಮಾಡುವ ಪ್ರಯತ್ನಕ್ಕೆ ಭರತಖಂಡದವರು ಹತ್ತಾರುಲಕ್ಷ ಧನವನ್ನು ಸಹಾಯಮಾಡಬೇಕೆಂದೂ ಬಾಲಗಂಗಾಧರ ತಿಲಕರು ಹೇಳುತ್ತಿದ್ದರು. ಈಗ ಭರತಖಂಡಕ್ಕೆ ಆ ಲೇಬರ್ ಪಕ್ಷದ ಮೆಂಬರಾದ ಕರ್ನಲ್ ವೆಡ್ಜ್‌ವುಡ್‌ರವರೂ, ಬೆನ್‌ಸ್ಪೂರ್‌ರವರೂ ಬಂದಿದ್ದಾರೆ. ವೆಡ್ಜ್‌ವುಡ್ಡರು ಸಹಾಯನಿರಾಕರಣ ವಿಷಯದಲ್ಲಿ ನ್ಯೂ ಎಂಪಯರ್ ಸ್ಟೇಟ್ಸ್‌ಮನ್ ಪತ್ರಿಕಾ ಪ್ರತಿನಿಧಿಯೊಡನೆ ಹೀಗೆ ಹೇಳಿರುತ್ತಾರೆ.—'' ಈ ಸಹಾಯನಿರಾಕರಣೋದ್ಯಮವು ದ್ವೇಷದಿಂದ ಹುಟ್ಟಿರುತ್ತದೆ. ಈ ಉದ್ಯಮವು ನಿರ್ಮೂಲವಾದರೆ ಮೇಲು. ಗಾಂಧಿಯವರ ಅಭಿಪ್ರಾಯದೊಡನೆ ನಾನು ಏಕೀಭವಿಸುವುದಿಲ್ಲ. ಶಾಸನ ಸಭಾಬಹಿಷ್ಕಾರವು ಆತ್ಮವಿನಾಶಕರವು.'' ಇದಲ್ಲದೆ ಅವರು ಕೂಲಿಗಾರರ ಸಂಘದವರ ಸನ್ಮಾನಪತ್ರಕ್ಕೆ ಉತ್ತರಕೊಡುವಾಗ್ಗೆ-ಕೂಲಿಗಾರರು ಮುಷ್ಕರ ಹಿಡಿದು ಕೆಲಸಬಿಡುವುದನ್ನೂ ನಾನು ಒಪ್ಪುವುದಿಲ್ಲವೆಂದು ಹೇಳಿರುತ್ತಾರೆ. ಅವರೇ ವಿದ್ಯಾರ್ಥಿಗಳ ಸಭೆಯಲ್ಲಿ ಮಾತನಾಡುವಾಗ್ಗೆ ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸುವುದು ಲಾಭಕರವಲ್ಲವೆಂದು ಹೇಳಿದ್ದಾರೆ.

ಸಾತ್ವಿಕಸಹಾಯನಿರಾಕರಣಕ್ಕೆ ದುರಾಗ್ರಹಸಂಬಂಧವು ಸಮೀಪಿಸಲುಪಕ್ರಮಿಸಿದೆ. ದಿಲ್ಲಿಯಲ್ಲಿ ಕಳೆದ ತಾ|| ೨ ರಲ್ಲಿ ಮೌಲ್ವಿ ಅಬ್ದುಲ್ ಅಹ್ಮದ್‌ರವರು ಮೃತರಾದರು. ಇವರು ಆನರರಿ ಮೇಜಿಸ್ಟ್ರೇಟರೂ ಆಂಗ್ಲೋ ಅರಬಿಕ್ ಹೈಸ್ಕೂಲಿಗೆ ಗೌರವ ಕಾರ್ಯದರ್ಶಿಯೂ ಆಗಿದ್ದರು. ಇವರ ಶವವನ್ನು ಹೂಳಲಿಕ್ಕಾಗಿ ಮಹಮ್ಮದೀಯರ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ್ಗೆ ಸಹಾಯನಿರಾಕರಣವಾದಿಗಳಲ್ಲಿ ಕೆಲವರು ದೊಣ್ಣೆಗಳನ್ನು ಹಿಡಿದುಕೊಂಡುಬಂದು ಸ್ವಲ್ಪದೂರದೊಳಗೆ ತಡೆದು, ಮಾರಾಮಾರಿ ನಡೆದರೂ ನಾವು ಬಿಡುವುದಿಲ್ಲ. ಈ ಖಾನ್ ಬಹದ್ದೂರರು ಇಂಗ್ಲೀಷರಿಗೆ ಸಹಾಯಕರಾಗಿದ್ದುದರಿಂದ ಸ್ವಮತದ್ರೋಹಿಯೆಂದು ದುರ್ಭಾಷೆಗಳನ್ನಾಡಿದರಂತೆ. ಅದರಮೇಲೆ ಶವವನ್ನು ಹಿಂದಕ್ಕೆ ತೆಗೆದುಕೊಂಡುಹೋಗಿ ಮನೆಯಲ್ಲಿಟ್ಟುಕೊಂಡರು. ಮೃತರ ಮಗ ಬ್ಯಾರಿಸ್ಟರ್ ಎಂ. ಎ. ಮಜೆದ್‌ರವರು ಜಿಲ್ಲಾಮೇಜಿಸ್ಟ್ರೇಟರಿಗೆ ಈ ವಿಷಯವನ್ನೆಲ್ಲಾ ಕಾಣಿಸಿ ಅರ್ಜಿ ಬರೆದುಕೊಂಡು ತಕ್ಕ ಸಹಾಯಕ್ಕೆ ಪೋಲೀಸರನ್ನು ಕೊಟ್ಟು ಭೂಸ್ಥಾಪನೆಗೊಳಿಸಿ ಕೊಡಬೇಕೆಂದು ವಿಜ್ಞಾಪಿಸಿಕೊಂಡರು. ಮರುದಿನ ಜಿಲ್ಲಾ ಮೇಜಿಸ್ಟ್ರೇಟರು ಸ್ವತಃ ಪೋಲೀಸು ಸೈನ್ಯದೊಡನೆ ಕೂಡಿ ಅವರ ಮನೆಗೆ ಹೋಗುವಷ್ಟರಲ್ಲಿ ಮೃತರ ಸಂಬಂಧಿಗಳಿಗೂ ಸಹಾಯನಿರಾಕರಣ ವಾದಿಗಳಿಗೂ ಸಮಾಧಾನವಾಗಿದ್ದಿತು. ಅಂತ್ಯಕ್ರಿಯೆ ನಡೆದಿತು. ಈಚೆಗೆ ಕ್ರಿಮಿನಲ್ ಕೇಸು ಹೂಡಲ್ಪಟ್ಟಿದೆ. ೩ ಮಂದಿಗಳು ಅಪರಾಧಿಗಳಾಗಿದ್ದಾರೆ. ಅವರಲ್ಲಿ ೧ನೆ ಅಪರಾಧಿಯು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಬಂದಾಗ ನನ್ನನ್ನು ದೇವರೇ ವಿಚಾರಮಾಡತಕ್ಕವನೆಂತಲೂ ಕೋರ್ಟಿನವರಿಗೆ ಅಧಿಕಾರವಿಲ್ಲವೆಂತಲೂ ಹೇಳಿ ವಾಜ್ಮೂಲ ಕೊಡಲಿಲ್ಲ. ಫಿರ್ಯಾದಿಯ ವಿಚಾರಣೆಯಾಯಿತು. ಅಪರಾಧಿಗೆ ಶಿಕ್ಷೆಯಾಗತಕ್ಕುದು ತನಗಿಷ್ಟವಿಲ್ಲವೆಂದು ನುಡಿದನು. ಮುಂದಣ ವಿಚಾರಣೆ ನಡೆಯುತ್ತಿದೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾಮಾನ್ಯ ವಿಷಯಗಳು.

ಪ್ರಾ.—ಮ|| ಸಿ. ವಾಸುದೇವರಾಯರು-ಎಲ್ಲ ಜಾತಿಯವರಿಗೂ ಫ್ರೀ ವಿದ್ಯಾಭ್ಯಾಸ ಮಾಡಿಸಿ. ಬ್ಯಾಕ್ವರ್ಡ್ ಸ್ಕಾಲರ್ಷಿಪ್ಪನ್ನು ತೆಗೆದುಬಿಡಿ. ಬಡವರಿಗೆಲ್ಲಾ ಜಾತಿಭೇದ ನೋಡದೆ ಅನ್ನ ಹಾಕಿಸಿ ಫ್ರೀ ವಿದ್ಯಾಭ್ಯಾಸ ಮಾಡಿಸಿ. ಬ್ಯಾಕ್ವಾರ್ಡ್ ಸ್ಕಾಲರ್ಷಿಪ್ ಸ್ಕೀಮಿನಲ್ಲಿ ಈಗ ಮಾಡಿರುವ ಏರ್ಪಾಟಿನಿಂದ ಜಾತಿ ಮಾತ್ಸರ್ಯವುಂಟಾಗಿದೆ. (ಮ|| ಎಂ. ವೆಂಕಟಕೃಷ್ಣಯ್ಯನವರು. ಈ ವೇತನಗಳನ್ನು ಅರ್ಹರಾದ ಎಲ್ಲ ಜಾತಿಯ ಬಡವಿದ್ಯಾರ್ಥಿಗಳಿಗೂ ಕೊಡುವಂತೆ ಮಾಡಬೇಕು.) ಇನ್ನು ಕೆಲ ಮೆಂಬರುಗಳು—ಈ ಸ್ಕಾಲರ್ಷಿಪ್ ಮೊತ್ತವೂ ಸಾಲದು. ಇನ್ನಷ್ಟು ಹೆಚ್ಚಿಸಬೇಕು. (ಮಿ|| ಅಬ್ಬಾಸ್‌ಖಾನರು—ವಾಸುದೇವರಾಯರ ಉದ್ದೇಶದಂತೆ ನಡೆದರೆ ಬ್ಯಾಕ್ವರ್ಡ್ ತರಗತಿಯ ಉದ್ಧಾರದ ಸರ್ಕಾರಿ ಉದ್ದೇಶವೇ ಹಾಳಾಗಿ ಹೋಗುತ್ತದೆ. ಈ ಏರ್ಪಾಟಿನಿಂದ ವ್ಯಾಕುಲವಾಗಿದೆಯೆಂಬ ಮಾತು ಆಯಾ ಪಂಗಡಗಳ ಪ್ರತಿನಿಧಿಗಳಿಂದ ಬಂದಿರಬೇಕಾಗಿತ್ತು. ಅದು ಹಾಗಿಲ್ಲ. ಇತರ ಪ್ರತಿನಿಧಿಗಳ ಮೂಲಕ ಬಂದಿರುವುದು ಯಥಾರ್ಥ ಸಂಗತಿಯಲ್ಲ).

(ಮ|| ಸಿ ಶ್ರೀನಿವಾಸರಾಯರು—ಆಯಾ ಡಿಸ್ಟ್ರಿಕ್ಟಿನಲ್ಲಿ ಆಯಾ ಹಿಂದುಳಿದ ಜಾತಿಯವರಲ್ಲಿ ಒಂದು ಜಾತಿಯ ವಿದ್ಯಾರ್ಥಿ ಸಿಕ್ಕದಿದ್ದರೆ ಮತ್ತೊಂದು ಜಾತಿಯವರಿಗೆ ಅಲ್ಲೇ ಕೊಡುವಂತೆ ಮಾಡಬೇಕು)

ಉ.—ಒಂದು ಡಿಸ್ಟ್ರಿಕ್ಟಿನಲ್ಲಿ ಒಂದು ಜಾತಿಯವರಿಗಾಗಿ ಖರ್ಚಾಗದಿದ್ದ ಸ್ಕಾಲರ್ಷಿಪ್ಪನ್ನು ಅದೇ ಜಾತಿಯವರಿಗೆ ಬೇರೆ ಡಿಸ್ಟ್ರಿಕ್ಟಿನಲ್ಲಿ ಕೊಡಬೇಕೆಂದು ರೂಲ್ಸು ಆಗಿದೆ. ಹೀಗೆ ಟ್ರಾನ್ಸ್‌ಫರ್ ಮಾಡುವುದರಿಂದ ಆಯಾ ಜಾತಿಗೆ ತೆಗೆದಿಟ್ಟ ಹಣವು ಆಯಾ ಜನಕ್ಕೇ ಸೇರಿದಂತೆ ಆಗುತ್ತದೆ.

(ಮ|| ಎಂ. ಸುಬ್ಬಯ್ಯನವರು—ಈಗ ಇರುವ ಏರ್ಪಾಟೇ ಸರಿಯಾಗಿದೆ).

(ಮ|| ರಾಮಚಂದ್ರರಾವ್ ಸಿಂಧೆಯವರು—ಮೇಜರ್ ಪಾಪುಲೇಷನ್ ಕಮ್ಯುನಿಟಿಗೇ ಹೆಚ್ಚು ಸ್ಕಾಲರ್ಷಿಪ್ಪುಗಳು ಹೋಗಿಬಿಡುತ್ತವೆ. ನಮ್ಮ ಮರಾಠಿ ಜನಸಂಖ್ಯೆ ೧೦೦೦೦ ಇದೆ. ನಮ್ಮವರ ಹಾಸ್ಟಲಿನಲ್ಲಿ ೨೦ ಹುಡುಗರಿದ್ದಾರೆ. ಅವರಿಗೆ ಒಂದು ಸ್ಕಾಲರ್ಷಿಪ್ಪೂ ಇಲ್ಲ. ಆದಕಾರಣ ಪಾಪ್ಯುಲೇಷನ್ನಿನ ಮೇಲೆ ಹಂಚದೆ ವಿದ್ಯಾರ್ಥಿಗಳ ಸಂಖ್ಯೆಯ ಮೇಲೆ ಹಂಚಬೇಕು.

ಉ.—ಅಂಥ ಸ್ಪೆಷಲ್ ಕೇಸನ್ನು ಸರ್ಕಾರದ ಗಮನಕ್ಕೆ ತಂದರೆ ಆಲೋಚಿಸುತ್ತೇವೆ.

(ಮ|| ಎಂ. ಸುಬ್ಬಯ್ಯನವರು—ಮರಾಟಿಗರೂ ವೈಶ್ಯರೂ ಬ್ಯಾಕ್ವರ್ಡ್ ತರಗತಿಗೆ ಸೇರತಕ್ಕವರೇ ಅಲ್ಲ. ಅವರಲ್ಲಿರುವ ವಿದ್ಯಾವಂತರ ಸಂಖ್ಯೆಯು ಅವರ ಪಾಪ್ಯುಲೇಷನ್ನಿಗೆ ಹೆಚ್ಚೇ ಆಗಿದೆ).

ಉ.—ಎಲ್ಲ ವಿಚಾರವೂ ತಿಳಿಯಿತು, ಪರ್ಯಾಲೋಚಿಸುತ್ತೇವೆ.

ಪ್ರಾ.—ಹಳೆ ಕರ್ನಾಟಕ ಬ್ರಾಹ್ಮಣರಿಗೆ ಬ್ಯಾಕ್ವರ್ಡ್ ಸ್ಕಾಲರ್‌ಷಿಪ್ಪನ್ನು ಕೊಡಬೇಕು.

ಉ.—ಮೆಮೋರಾಂಡಂ ಸ್ಕಾಲರ್‌ಷಿಪ್ ಸ್ಕೀಮಿನಲ್ಲಿ ಬರುತ್ತದೆ.

ಪ್ರಾ.—ಬ್ರಾಹ್ಮಣರು ವ್ಯಾಪಾರ ವ್ಯವಸಾಯಾದಿ ಉದ್ಯೋಗಗಳಲ್ಲಿ ಹಿಂದುಳಿದಿದ್ದಾರೆ. ಅವರಿಗೆ ಆ ವಿದ್ಯಾಭ್ಯಾಸಕ್ಕಾಗಿ ವೇತನಗಳನ್ನು ಕೊಡಬೇಕು.

ಉ.—ಕೊಡುತ್ತಲೇ ಇದ್ದೇವೆ.

(ಮ|| ಇ. ಪುರುಷೋತ್ತಮಾನಂದಗಿರಿಯವರು—ಅಗ್ರಿಕಲ್ಚರಿನಲ್ಲಿ ೩೧ ಜನ ಪ್ಯಾಸಾಗಿದ್ದಾರೆ. ಅವರಲ್ಲಿ ೨೯ ಜನ ಬ್ರಾಹ್ಮಣರೇ).

ಪ್ರಾ.—ಹಿಂದೆ ಜಪಾನಿಗೆ ಡೆಪ್ಯುಟೇಷನ್ ಕಳುಹಿಸಿದ್ದಂತೆ ಕೈಗಾರಿಕೆಯವರನ್ನೂ ವ್ಯಾಪಾರಿಗಳನ್ನೂ ಮತ್ತೆ ಕಳುಹಿಸಿಕೊಡಬೇಕು.

ಉ.—ಬರೆದುಕೊಂಡರೆ ನೋಡಬಹುದು. ಹಿಂದೆ ಕಳುಹಿಸಿದ್ದುದಕ್ಕೆ ಅಷ್ಟೇನೂ ಫಲವಾಗಲಿಲ್ಲ.

(ಮಿ|| ಅಬ್ಬಾಸ್‌ಖಾನ್—ಗ್ರಾಜುಯೇಟರಿಗೆ ಮಾತ್ರವೇ ಸಹಾಯ ಕೊಡುತ್ತಾರೆ. ಆಯಾ ಕಸಬುದಾರರಿಗೆ ಕೊಟ್ಟರೆ ಸಫಲವಾಗುತ್ತದೆ)

ಉ—ಜನರಲ್ ಎಜ್ಯುಕೇಷನ್ನಿಗೆ ಗ್ರಾಜುಯೇಟರಲ್ಲದವರಿಗೂ ಕೊಡಬಹುದು ಎಂದು ರೂಲ್ಸಿದೆ; ಯೋಗ್ಯತೆ ನೋಡಿಕೊಂಡು ಕಮಿಟಿಯವರು ಆರಿಸುತ್ತಾರೆ.

ಪ್ರಾ.—ಎಲ್ಲಾ ಪಂಗಡದ ವಿದ್ಯಾರ್ಥಿಗಳನ್ನೂ ಸಂಸ್ಕೃತದ ಸ್ಕೂಲುಗಳಿಗೂ ಕಾಲೇಜುಗಳಿಗೂ ಧಾರಾಳವಾಗಿ ಸೇರಿಸಿಕೊಳ್ಳುವಂತೆ ಮಾಡಬೇಕು.

(ಮ|| ಜೆ. ಪರಮಶಿವಯ್ಯನವರು—ಈ ವಿಷಯವಾಗಿ ನಿಯಮನಿರ್ಮಾಣ ಸಭೆಯಲ್ಲಿ ಚರ್ಚೆ ಬಂದಾಗ್ಗೆ-ಹೀಗೆ ಮಾಡಿದರೆ ಕಾಲೇಜಿನಲ್ಲಿ ಸಂಸ್ಕೃತಪಾಠ ಹೇಳುವವರು ಬಿಟ್ಟುಬಿಡುತ್ತಾರೆಂಬ ಭೀತಿಯನ್ನು ಒಬ್ಬ ಪೆನ್‌ಷನ್ ಬ್ರಾಹ್ಮಣ ಆಫೀಸರು ಸೂಚಿಸಿದರು. ಸರ್ಕಾರದವರೂ ಅದಕ್ಕೆ ಅನುವಾದಿಸಿದರು. ಸರ್ಕಾರಿ ಸಂಬಳ ತೆಗೆದುಕೊಳ್ಳುವವರು ನಾವು ಪಾಠ ಹೇಳುವುದಿಲ್ಲವೆಂದು ಬೆದರಿಸುವುದೂ, ಅದಕ್ಕೆ ಹೆದರಿ ಸರ್ಕಾರದವರೂ ಒಪ್ಪುವುದೂ ಸರ್ಕಾರದ ದರ್ಪಕ್ಕೆ ಉಚಿತವಲ್ಲ. ವಿದ್ಯೆಗೆ ಜಾತಿಮತವು ಮುಖ್ಯವಲ್ಲವೆಂದು ಇದೇ ಸಭೆಯಲ್ಲೇ ಮ|| ವೆಂಕಟೇಶಯ್ಯನವರು ಹೇಳಿರುವರು. ಅದುಕಾರಣ ಬಹು ದಿನದಿಂದ ತಳ್ಳಿಕೊಂಡುಬರುತ್ತಿರುವ ಈ ಪ್ರಾರ್ಥನೆಯನ್ನು ಬೇಗನೆ ಈಡೇರಿಸಿಕೊಡಬೇಕು.

ಉ.—ಇದರ ವಿಚಾರಕ್ಕಾಗಿ ಒಂದು ಕಮಿಟಿಯನ್ನೇರ್ಪಾಟು ಮಾಡಿದೆ. ಅವರ ರಿಪೋರ್ಟು ಬಂದ ಮೇಲೆ ಸರ್ಕಾರದವರಿಗೆ ಅಷ್ಟೇ ಸಾಲದೆಂದೂ, ಅದು ನ್ಯಾಯವಲ್ಲವೆಂದೂ ತೋರಿದರೆ, ಇತರ ಕಕ್ಷಿಯವರ ಮಾತನ್ನೂ ಕೇಳಬೇಕಾಗಿ ತೋರಿದರೆ ಯಾರಿಗೆ ಬರೆಯಬೇಕೋ ಹಾಗೆ ಮಾಡಲಿಕ್ಕೂ, ಅದನ್ನು ನಿಮಗೆ ತಿಳಿಯಿಸಿ ನಿಮ್ಮ ಅಭಿಪ್ರಾಯವನ್ನು ತಿಳಿದುಕೊಳ್ಳಲಿಕ್ಕೂ ಸಿದ್ಧರಾಗಿದ್ದೇವೆ. ಬೇಗನೆ ನಡೆಯುವಂತೆ ಏರ್ಪಾಟು ಮಾಡುತ್ತೇವೆ.

ಪ್ರಾ.—ಭೌತಿಕಶಾಸ್ತ್ರಾದಿಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡಿಸಬೇಕು.

ಉ.—ಪಬ್ಲಿಕೇಷನ್ ಬ್ರಾಂಚಿಗೆ ಇದಕ್ಕಾಗಿ ವರ್ಷಕ್ಕೆ ೨೫ ಸಾವಿರ ರೂ. ಕೊಡುತ್ತಿದ್ದೇವೆ.

ಪ್ರಾ.—ಪ್ರತಿ ತಾಲ್ಲೂಕಿಗೂ ಒಬ್ಬೊಬ್ಬ ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರನ್ನಿಡಬೇಕು.

ಉ.—ತಕ್ಕ ಜನರೂ ಹಣವೂ ಒದಗಲಿ.

ಪ್ರಾ.—ಡಿಸ್ಟ್ರಿಕ್ಟಿಗೊಂದೊಂದರಂತೆ ಮೋಟಾರ್ ನೇಗಿಲನ್ನಿಡಿಸಿ ಅದರ ಪ್ರಯೋಗವನ್ನು ತೋರಿಸಿಕೊಡಬೇಕು.

ಉ.—ಈಗ ತರಿಸಿರುವ ೨ ನೇಗಿಲುಗಳ ಪ್ರಯೋಗದಿಂದ ಆದಾಯಕ್ಕಿಂತಲೂ ಖರ್ಚೇ ಹೆಚ್ಚೆಂದು ಸಂಶಯವುಂಟಾಗಿದೆ.

ಪ್ರಾ.—ಪರಸ್ಪರ ಸಹಾಯ ಸಂಘಗಳ ಬಾಕಿ ಹಣವನ್ನು ವಸೂಲ್ಮಾಡುವ ಅಧಿಕಾರವನ್ನು ಅವುಗಳ ರಿಜಿಸ್ಟ್ರಾರರಿಗೆ ವಹಿಸಿಕೊಡಬೇಕು.

ಉ.—ಅದರಿಂದ ಅನುಕೂಲವಾಗುವುದಿಲ್ಲ. ಡಿಕ್ರಿ ಜಾರಿ ಕ್ರಮ ಬೇಗ ನಡೆಯುವಂತೆ ಮಾಡಿಸುತ್ತೇವೆ

ಪ್ರಾ.—ಭಾರಿ ಕೆರೆಗಳ ಕೋಡಿಗಳನ್ನು ಎತ್ತರಿಸಬೇಕು.

ಉ.—ಇಲಾಖೆಯವರು ಯೋಚನೆ ಮಾಡಿದ್ದಾರೆ. ಮೇಜರ್ ಟ್ಯಾಂಕುಗಳನ್ನೆಲ್ಲಾ ವಿಂಗಡಿಸಿಕೊಂಡು ಒಂದೊಂದಾಗಿ ಮಾಡುತ್ತಬರುತ್ತಾರೆ.

ಪ್ರಾ.—ನಾಲೆಗಳಲ್ಲಿ ಬೇಸಗೆ ಕಾಲದ ನೀರನ್ನು ಒದಗಿಸಬೇಕು.

ಉ.—ಮಾಮೂಲುಗುನ್ನಾ ಫಸಲಾಗುತ್ತಿದ್ದ ಭೂಮಿಗೆಲ್ಲಾ ನೀರನ್ನು ಒದಗಿಸಲಿಕ್ಕೆ ಡೆ|| ಕಮಿಷನರು, ಚೀಫ್ ಇಂಜನಿಯರು, ಸರ್ವೆ ಸೂಪರಿಂಟೆಂಡೆಂಟರೂ ಸೇರಿ ಕಮಿಟಿಯಾಗಿ ಆಲೋಚನೆ ಮಾಡುತ್ತಿದ್ದಾರೆ. ಕೃಷ್ಣರಾಜಸಾಗರದ ೪೦ ಅಡಿ ಬ್ರಾಂಚ್ ನಾಲೆಯ ಕೆಲಸ ಮುಗಿಯುತ್ತಬಂದಿದೆ. ಅದರಲ್ಲಿ ಸಪ್ಲೈ ಮಾಡುತ್ತಾರೆ. ಆಳಲಗಟ್ಟೆ ನಾಲೆಯಲ್ಲಿ ಈ ಸಲ ಫೆಬ್ರವರಿ ತಾ|| ೧೦ರ ವರೆಗೆ ನೀರು ಬಿಡುತ್ತಾರೆ.

ಪ್ರಾ.—ಬೆಂಗಳೂರು ಮೈಸೂರುಗಳಲ್ಲಿ ಟ್ರಾಂವೆ ಮತ್ತು ಟೆಲಿಫೋನುಗಳನ್ನು ಏರ್ಪಡಿಸಬೇಕು.

ಉ.—ಯುದ್ಧದ ನಿಮಿತ್ತ ಸಾಮಾನುಗಳು ತಗ್ಗಾಗಿದ್ದುವು. ಬೆಂಗಳೂರಿಗೆ ಹಾಕುವ ವಿಷಯ ವಿಚಾರದಲ್ಲಿದೆ. ಮೈಸೂರಿನಲ್ಲಿ ಟ್ರಾಂವೆ ಹಾಕಿದರೆ ಗಿಟ್ಟುವಹಾಗಿಲ್ಲ.

ಪ್ರಾ.—ಹಾಸನದಿಂದ ಮಂಗಳೂರಿಗೆ ರೈಲ್ ರಸ್ತೆ ಹಾಕಿಸಬೇಕು.

ಉ.—ಹಾಸನದಿಂದ ಮಂಜರಾಬಾದಿಗೆ ೨೪ ಮೈಲಿ ಆಗುತ್ತದೆ. ಸಕಲೇಶಪುರಕ್ಕೇ ಈ ಲೈನನ್ನು ನಿಲ್ಲಿಸುವುದರಿಂದ ಪ್ರಯೋಜನವಿಲ್ಲ. ಅಲ್ಲಿಂದಾಚೆಗೆ ಘಾಟಿಗೆ ೧೬ ಮೈಲಿ ರಸ್ತೆ ಹಾಕಿಸಬೇಕಾಗುತ್ತದೆ. ಅದಕ್ಕೆ ೪೦ ಲಕ್ಷ ರೂ. ಖರ್ಚು ಹಿಡಿಯುತ್ತದೆ. ಅಲ್ಲದೆ ಮಂಗಳೂರಿಗೆ ಎಸ್. ಇ. ಆರ್. ರೈಲ್ವೆ ಬಂದಿದೆ. ಅವರು ಈ ಲೈನನ್ನು ಸೇರಿಸಲಿಕ್ಕೆ ಒಪ್ಪಬೇಕು. ರೈಲ್ವೆ ಬೋರ್ಡಿನವರೂ ಒಪ್ಪಬೇಕು. ಅಲ್ಲದೆ ಈ ಲೈನಿಗೆ ಖರ್ಚು ಹೆಚ್ಚಾಗುವುದೆಂದು ಅವರೂ ಕೈಬಿಟ್ಟಿದ್ದಾರೆ. ಹಣವಿಲ್ಲ. ಈ ಕಾರಣದಿಂದೆಲ್ಲಾ ಇದು ಬೇಗನೆ ಆಗದೆ ಬಿದ್ದುಕೊಂಡಿದೆ.

ಪತ್ರವ್ಯವಹಾರ.

ಅಭಿನಂದನ.

ಧಾರವಾಡ ಜಿಲ್ಲಾ ಕೋಡ ತಾಲ್ಲೂಕು ಯೋಗಿಕೊಪ್ಪದಲ್ಲಿ ಅಲ್ಲಿಯ ಹಳ್ಳಿಗಾಡಿನ ಸ್ಥಿತಿಯನ್ನು ನೋಡಿ ವಿ|| ಚನ್ನಬಸಪ್ಪ ಅಣ್ಣಾ ಕೋಳ್ಳಿ, ಸಾ|| ಹಾಂಗಭಾವಿ ಇವರು ಮುಷ್ಟಿ ಫಂಡಿನಿಂದ ೧ ಪ್ರಾಥಮಿಕ ಶಿವಯೋಗಿ ಸ್ಕೂಲನ್ನು, ನಿರಕ್ಷರಿಗಳಾದ ಹೊಲಮಾಡುವ ಒಕ್ಕಲತನದ ಹುಡುಗರ ವಿದ್ಯಾಭ್ಯಾಸಕ್ಕಾಗಿ ವರ್ಗಣಿಯ ಹಣದಿಂದ ಒಂದು ನೈಟ್ ಸ್ಕೂಲನ್ನು ಸ್ಥಾಪನ ಮಾಡಿಸಿದರೆಂದು ಆ ಊರಿನವರು ಅವರ ಚಿ|| ಉಳಿವೆಪ್ಪನವರಿಗೆ ಒಂದು ಬಂಗಾರದ ಪದಕವನ್ನು ಭಕ್ತೀಸಾಗಿ ಕೊಟ್ಟರೆಂದೂ ಅಲ್ಲಿಯ ಪಾಟೀಲ ಹಾಲಪ್ಪಗೌಡರು ವಿದ್ಯೆಯಲ್ಲಿ ಕಳಕಳಿ ಉಳ್ಳವರೆಂದೂ ತಿಳಿಸಲಿಕ್ಕೆ ಸಂತೋಷವಾಗುತ್ತದೆ. ಓರ್ವ ವಿದ್ಯಾಭಿಮಾನಿ.

ಮಧ್ವಸಿದ್ಧಾಂತೋತ್ತೇಜಕ ಸಭೆ.

ಧಾರವಾಡ ಶ್ರೀ ಮಧ್ವಸಿದ್ಧಾಂತೋತ್ತೇಜಕ ಸಭೆಯ ವಾರ್ಷಿಕ ಪರೀಕ್ಷೆಯು ಇದೇ ತಿಂಗಳ ತಾರೀಖು ೨೪, ೨೫, ೨೬ ನೇ ದಿವಸ ಮಂಗಳವಾರಪೇಟೆಯ ಶ್ರೀ ವಿಠಲದೇವರ ಮಂದಿರದಲ್ಲಿ ನಡೆಯುವದು. ತಾರೀಖು ೨೬ ನೇ ಸಾಯಂಕಾಲಕ್ಕೆ ದಕ್ಷಿಣಾಕಮಾರಂಭವಾಗುವದು. ಮಧ್ವಶಾಸ್ತ್ರಸಂಪನ್ನ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರಿಗೆ ಸಭಾಕ್ಕೆ ದಯಮಾಡಿಸಲಿಕ್ಕೆ ಆಮಂತ್ರಣವನ್ನು ಕಳಿಸಿರುತ್ತೇವೆ. ಯಾವತ್ತು ಮತಬಾಂಧವರು ತಮ್ಮ ಸ್ನೇಹಿತರೊಡನೆ ಸಭಾಕ್ಕೆ ಬರಬೇಕೆಂದು ನಮ್ರತಾಪೂರ್ವಕ ವಿನಂತಿಯದೆ.

ಶ್ರೀ ಮ. ಸಿ. ಉ. ಧಾರವಾಡ.
ಶ್ರೀನಿವಾಸಾಚಾರ್ಯ, ದೂಪಾಳಿ,
ಹನುಮಂತರಾವ್, ಲಕ್ಷ್ಮೇಶ್ವರ.

ಪ್ರಸಿದ್ಧಪತ್ರಿಕೆ.

ಶ್ಲೋ|| ಶ್ರೀಶೈಲಶೃಂಗೇಬಿಬುಧಾತಿಸಂಗೇ ತುಲಾದ್ರಿತುಂಗೇಪಿಮುದಾವಸಂತಂ | ತಮರ್ಜುನಂ ಮಲ್ಲಿಕಪೂರ್ವಮೇಕಂ ನಮಾಮಿ ಸಂಸಾರಸಮುದ್ರಸೇತುಮ್ || ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ವರ್ಷಗಳು ೧೮೪೨ ಕ್ಕೆ ಸರಿಯಾದ ಶ್ರೀಮದ್ರೌದ್ರಿನಾಮಸಂವತ್ಸರದ ಮಾರ್ಗಶಿರ ಶುದ್ಧ ೧೧ ಏಕಾದಶಿ ತಾ|| ೨೧-೧೨-೨೦ ರಾಗಾಯಿತು ಇದೇ ಬಹುಳ ೩ ವರೆಗೆ ತಾ|| ೨೯-೧೨-೨೦ ವರೆಗೂ ಫ್ರೆಂಚ್‌ರಾಕ್ಸ್, ಹೆಚ್ ತಾಲ್ಲೂಕು

ಹಿರೋಡೆ ಬೆಟ್ಟದಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿಯವರ ಜಾತ್ರೆ ನಡೆಯುತ್ತದೆ. ಈ ಸಮಯದಲ್ಲಿ ಕೆಳಗೆ ವಿವರಿಸಿರುವ ಉತ್ಸವಾದಿಗಳೂ, ದನಗಳ ಪರಿಷೆಯೂ ಸಹ ನಡೆಯುವುದರಿಂದ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನಂದರೆ.—ಸದರೀ ಉತ್ಸವಾದಿಗಳಲ್ಲಿ ಸಮಸ್ತರೂ ಭಾಗಿಗಳಾಗಿ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರಲ್ಪಟ್ಟಿದೆ. ಉತ್ಸವಾದಿಗಳ ವಿವರ.—ತಾ॥ 21-12-20 ಧ್ವಜಾರೋಹಣ ಉತ್ಸವ ವಗೈರೆ. ತಾ॥ 22-12-20 ಕಲಾ ಗೋತ್ಸವ. ತಾ॥ 23-12-20 ಗಿರಿಪ್ರದಕ್ಷಿಣೋತ್ಸವ. ತಾ॥ 24-12-20 ಪುಷ್ಪಪಾಲಕಿ ಉತ್ಸವ. ತಾ॥ 25-12-20 ಅಂಧಕಾಸುರಸಂಹಾರ. ತಾ॥ 26-12-20 ಬ್ರಹ್ಮರಥೋತ್ಸವ. ತಾ॥ 27-12-20 ತೆಪ್ಪೋತ್ಸವ. ತಾ॥ 28-12-20 ತೀರ್ಥಸ್ನಾನ. ಸೂಚನೆ:—ದನಗಳ ಪರಿಷೆಗೆ ಸ್ಥಳವಸತಿಯೂ, ನೀರಿನ ವಸತಿಯೂ ಸಹ ಕಲ್ಪಿಸಲ್ಪಟ್ಟಿರುವುದಲ್ಲದೆ ಉತ್ತಮವಾದ ರಾಸುಗಳಿಗೆ ತಕ್ಕ ಬಹುಮಾನವೂ ಸಹ ಏರ್ಪಡಿಸಲ್ಪಟ್ಟಿದೆ.

ಕಾರ್ಯದರ್ಶಿ, ಶ್ರೀ ಶಂಕರಾನಂದಭಾರತಿ,
ಹಿರೋಡೆಬೆಟ್ಟ, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕ್.

ಶ್ರೀ ಬಾಹುಬಲಿಸ್ವಾಮಿ ಮಸ್ತಕಾಭಿಷೇಕ ಮಹೋತ್ಸವವು.

ದಕ್ಷಿಣ ಕನ್ನಡಾ ಜಿಲ್ಲೆಗೆ ಸೇರಿದ ಕಾರ್ಕಳದ ತಾಲ್ಲೂಕು ಕಾರ್ಕಳ ಕಸಬೆಯಲ್ಲಿ ಶ್ರೀ ಬಾಹುಬಲೀ ಗೋಮಟೇಶ್ವರಸ್ವಾಮಿಯ ಪ್ರತಿಮೆಯು ವಿರಾಜಮಾನವಾಗಿರುವುದು ಅನೇಕರಿಗೆ ತಿಳಿದಿರುವ ವಿಷಯವಾಗಿದೆ. ಶ್ರವಣಬೆಳಗೊಳದಲ್ಲಿ ವಿರಾಜಮಾನವಾಗಿರುವ ಶ್ರೀ ಬಾಹುಬಲೀಸ್ವಾಮಿಯ ಪ್ರತಿಮೆಗೆ ಈ ಕಾರ್ಕಳದಲ್ಲಿರುವ ಪ್ರತಿಮೆಯು ಎರಡನೆಯದಾಗಿರುತ್ತದೆ. ಇಲ್ಲಿ (ಕಾರ್ಕಳದಲ್ಲಿ) ಬರುವ ಮಾಘ ಶುದ್ಧ ೫ ಮೊದಲುಗೊಂಡು ಅದೇ ಬಹುಳ ೧ ವರೆಗೆ (ಫೆಬ್ರವರಿ ೧೩ನೆ ತಾ॥ ನಿಂದ ೨೩ರ ವರೆಗೆ) ಮಸ್ತಕಾಭಿಷೇಕ ಮಹಾಮಹೋತ್ಸವವು ನಡೆಯುವುದು. ಈ ಮಹೋತ್ಸವವು ಬಹಳ ಅಪರೂಪವಾದದ್ದು. ಎಲ್ಲಾ ಮತಸ್ಥರೂ ಈ ವೈಭವವನ್ನು ನೋಡುವುದಕ್ಕೋಸ್ಕರ ದೂರದೂರದಿಂದ ಬರುವರು. ಜೈನಮತಾವಲಂಬಿಗಳಾದರೋ ಎಲ್ಲಾ ದೇಶಗಳಿಂದಲೂ ಬರುವರು. ಈ ಮಹೋತ್ಸವ ಕಾಲದಲ್ಲಿ ಪ್ರತಿನಿತ್ಯವೂ ಜೈನತತ್ವಜ್ಞಾನಿಗಳಾದ ವಿದ್ವಾಂಸರ ಉಪನ್ಯಾಸಗಳು ನಡೆಯುವುವು. ಪರದೇಶಗಳಿಂದ ಬರುವ ಮಹಾಶಯರುಗಳಿಗೆ ಇರುವುದಕ್ಕೆ ಬಿಡಾರದ ಏರ್ಪಾಡುಗಳು ಮಾಡಲ್ಪಡುವುವು. ಹಾಗೆ ಬಿಡಾರಗಳನ್ನು ಅಪೇಕ್ಷಿಸುವವರು ಡಿಸೆಂಬರ್ ತಾ॥ ೩೧ರ ಒಳಗೆ ಕೆಳಗೆ ಹೆಸರು ಕಾಣಿಸಿರುವ ಮಹಾಶಯರಿಗೆ ಬರೆಯಬೇಕು. ಮತ್ತು ಎಷ್ಟು ಜನರ ವಾಸಕ್ಕೆ ಯೋಗ್ಯವಾದ ಬಿಡಾರವು ಬೇಕಾಗಿದೆ ಎಂಬುದನ್ನು ಸ್ಪಷ್ಟವಾಗಿ ಬರೆಯಬೇಕು. ಕಾಗದಪತ್ರ ವ್ಯವಹಾರಗಳನ್ನು ಕನ್ನಡದಲ್ಲಿಯಾಗಲೀ, ಇಂಗ್ಲೀಷಿನಲ್ಲಿಯಾಗಲೀ ಬರೆಯಬೇಕು.

ವಿಳಾಸ.—ಪೋನಿಮುದ್ದ್ಯರು ಅವರ್ಗಳ್
C/o ಶಾಂತಯ್ಯ ಕಾಮತ್ ವಕೀಲ್,
ಪೋಸ್ಟ್ ಕಾರ್ಕಳ ಸೌತ್ ಕನ್ನಡಾ ಜಿಲ್ಲಾ.

ಹೇಳುವವರೂ ಇಲ್ಲ. ಕೇಳುವವರೂ ಇಲ್ಲ.

ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರ ಮನ್ನಾನೆ ಕಾರ್‌ಬಾರುಗಳು ವರ್ಣನಾತೀತವು. ಚಿತ್ರದುರ್ಗದ ಟೌನ್ ಪಾರ್ಕಿನಲ್ಲಿದ್ದ ಒಂದು ಕಲ್ಲುಮಂಟಪಕ್ಕೆ ಲಗಾಯ್ತಿ ೧೫೦೦ ರೂ. ಖರ್ಚು ಮಾಡಿ ಸ್ವಲ್ಪ ದಿವಸದ ಕೆಳಗೆ ಜಯಚಾಮರಾಜ ಪೆವಿಲಿಯನ್ ಪಾರ್ಕನ್ ಎಂಬ ಒಂದು ಹೊಸ ಕಟ್ಟಡವನ್ನು ಕಟ್ಟಿ ರೀಡಿಂಗ್‌ರೂಮ್ ಎಂಬ ನೆಪದ ಮೇಲೆ ಅದನ್ನು ಟೆನ್ನಿಸ್‌ಕೋರ್ಟ್ ಕ್ಲಬ್ಬಿನವರಿಗೆ ವಿಹಾರಗಳಿಗುಪಯೋಗವಾಗುವಂತೆ ಮಾಡಿದರು. ಪಬ್ಲಿಕ್ ಲೈಬ್ರರಿಗೋಸ್ಕರ ಹಣ ಕೇವಲವಾಗಿ ತಳಹದಿ ಕೂಡ ಹಾಕಿ ಆ ಕಟ್ಟಡಕ್ಕೆ ನಮ್ಮ ಮಹಾಪ್ರಭುಗಳವರು ತಮ್ಮ ಶುಭನಾಮಧೇಯವನ್ನಿಡಲು ಅಪ್ಪಣೆ ಕೊಟ್ಟಿದ್ದರೂ, ಆ ಕಟ್ಟಡ ಕಟ್ಟುವ ಪ್ರಯತ್ನವೇ ಇಲ್ಲದಿರುವುದು ನೋಡಿದರೆ ಪಬ್ಲಿಕ್ಕಿಗುಪಯೋಗವಾದ ಕಾರ್ಯವೆಂಬ ಆಸಕ್ತಿಯೋ ಏನೋ ತಿಳಿಯದು. ಇದಂತಿರಲಿ. ನಮ್ಮ ನೇಲ್ ದುರ್ಗದಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ದೇವಸ್ಥಾನಗಳೂ ಕಲ್ಲುಮಂಟಪಗಳೂ ಬೇಕಾದಷ್ಟು ಇವೆ. ಸಹಸ್ರಾರು ಪ್ರಜೆಗಳು ಹೋಗಿ ಅವುಗಳಲ್ಲಿ ತಂಗಿದ್ದು ವನವಿಹಾರಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಆ ಕಟ್ಟಡಗಳು ರಾಜಾಧಿರಾಜರು ಉಪಯೋಗಿಸಲು ತಕ್ಕವುಗಳಾಗಿವೆ. ಹೀಗಿದ್ದರೂ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಪ್ರಸಿಡೆಂಟರು ಆ ಮೇಲೆ ವನವಿಹಾರಕ್ಕಾಗಿ ಒಂದು ಹೊಸ ಬಿಲ್ಡಿಂಗ್ ಹಾಕಲು ಪ್ರಯತ್ನಪಟ್ಟಿರುವಂತೆಯೂ ಅದಕ್ಕೆ ಆಗಲೇ ಮೊನ್ನೆ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಪ್ರಕೃತ ೧೫೦೦ ರೂ. ಖರ್ಚಿನಿಂದ ಒಂದು ಕಟ್ಟಡ ಕಟ್ಟಲು ರೆಜಲ್ಯೂಷನ್ನು ಮಾಡಿದಂತೆ ತಿಳಿಯಬರುತ್ತೆ. ವಾಚಕರೇ ಪ್ರಜೆಗಳ ಹಣ ಯಾವ ರೀತಿ ಮುಂದು ನೆಟ್ಟಕ್ಕೆ ವಿನಿಯೋಗವಾಗುತ್ತಿದೆ. ಇಂತಹದನ್ನು ಸರ್ಕಾರದವರೂ ಮಂಜೂರ್ ಮಾಡುತ್ತಾರೆ. ಹೇಳುವವರೂ ಇಲ್ಲ ಕೇಳುವವರೂ ಇಲ್ಲ. ಶ್ರೀನಿವಾಸನೇ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಕಾರ್‌ಬಾರ್‌ಗಳನ್ನು ವಿಚಾರಿಸಬಾರದೆ ? ಲಕ್ಷ್ಮೀನಾರಾಯಣ.

ಅಣ್ಣಿಗೇರಿ.

ತಾ॥ ೬-೧೨-೧೯೨೦ನೆ ಸೋಮವಾರ ಸಾಯಂಕಾಲಕ್ಕೆ ಅಣ್ಣಿಗೇರಿ ಶ್ರೀ ಪರ್ವತೇಶ್ವರ ದೇವಾಲಯದಲ್ಲಿ ಗಾರವಾಡ ಹಡಗಲಿ ಮತ್ತು ಕಡದಿ ಹಿರೇಮಠಾಧ್ಯಕ್ಷರಾದ ಶ್ರೀ ಪೂಜ್ಯವಾದ ಸಂಗಮೇಶ್ವರ ಪಟ್ಟದ ಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆಯು ಸೇರಿತು. ಸಭೆಯಲ್ಲಿ ವಿದ್ವಾಂಸರೂ ಸಾಹುಕಾರರೂ ಎಲ್ಲ ಸುಖವಸ್ತುಗಳೂ ನೆರೆದಿದ್ದರು. ಮ॥ ವೀರಪ್ಪ ಶಿವರುದ್ರಪ್ಪ ಹುಬ್ಬಳ್ಳಿ ಇವರು ವಿಷಯೋಪಕ್ರಮವನ್ನು ಮಾಡಿದ ಬಳಿಕ ಮಿ॥ ಎಫ್. ಪಿ. ಶ್ರೀಸಿಯವರು ಈಗಿನ ವ್ಯವಹಾರ ಧರ್ಮದಸ್ವರೂಪ ಮತ್ತು ವ್ಯವಹಾರ ಶಿಕ್ಷಣಕ್ಕೆ ಧಾರ್ಮಿಕ ಔದ್ಯೋಗಿಕ ಸಹಾಯ ದೊರೆಯದಿದ್ದರೆ ಪ್ರಯೋಜನವಾಗಲಾರದೆಂಬ ವಿಷಯವನ್ನು ಬಹು ಹೃದಯಂಗಮವಾಗಿ ವಿವೇಚನ ಮಾಡಿದರು. ಸಭೆಯ ಅಧ್ಯಕ್ಷರಾದ ಶ್ರೀ ಪಟ್ಟದ ಸ್ವಾಮಿಗಳು ಸ್ವಧರ್ಮ ಜಾಗ್ರತಿ ಅನೈಕ್ಯದಿಂದ ಸಮಾಜಕ್ಕಾಗುವ ಹಾನಿ ಏಕೀಕರಣದ ಮಹತ್ವ ಎಂಬ ವಿಷಯಗಳ ಮೇಲೆ ಗಂಭೀರವಾದ ತಮ್ಮ ವಾಕ್ಚಾತುರ್ಯದಿಂದ ಸುಶ್ರಾವ್ಯವಾಗಿ ಭಾಷಣ ಮಾಡಿದರು. ಸಭೆಯ ಪರಿಣಾಮವು ಸಭಿಕರ ಮೇಲೆ ಉತ್ತಮರೀತಿಯಿಂದಾದದ್ದನ್ನು ಕಂಡು ಒಳ್ಳೇ ಸಂತೋಷದಿಂದ ಮ॥ ರುದ್ರಪ್ಪ ಸೊಟಕನ್ನಾಳ ಇವರು ಕೀರ್ತಿಕಾಯದಿಂದ ಬೆಳಗುತ್ತಿರುವ ಸಿರಸಂಗಿ ಶ್ರೀ ಲಿಂಗರಾಜರ ಸ್ಮರಣಾರ್ಥವಾಗಿ ಒಂದು ವಾಚನಾಲಯವನ್ನು ಸ್ಥಾಪಿಸಲಿಕ್ಕೆ ಸಭೆಯವರ ಅಭಿಪ್ರಾಯವನ್ನು ಕೇಳಲು ವೀರಶೈವ ಅಭಿಮಾನಿಗಳೆಲ್ಲರೂ ಕೃತಜ್ಞತಾಪೂರ್ವಕವಾಗಿ ಶ್ರೀ ಲಿಂಗರಾಜ ಪ್ರಭುಗಳ ಧನ್ಯವಾದವನ್ನು ಮಾಡಿ ಅನುಮೋದನ ಕೊಡಲು, ಶ್ರೀ ಶ್ರೀ ಸಂಗಮೇಶ್ವರ ಪಟ್ಟದ ಸ್ವಾಮಿಗಳ ಹಸ್ತದಿಂದಲೇ ಶ್ರೀ ಲಿಂಗರಾಜ ವಾಚನಾಲಯವನ್ನು ಸ್ಥಾಪಿಸುವ ಸಮಾರಂಭವಾಯಿತು. ಆ ಮೇಲೆ ನಮ್ಮನ್ನಾಳುವ ಆಂಗ್ಲ ಸಾರ್ವಭೌಮ ಪಂಚಮ ಜಾರ್ಜ ಬಾದಶಹರವರಿಗೆ ಜಯಜಯಕಾರವಿರಲೆಂದು ಘೋಷಿಸಿ ದೀಪೋತ್ಸವವು ಜರಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ವೀರಶೈವಸಮಾಜಸೇವಕ.

ರಕ್ತಶೋಧಕ ! ಮನೋಲ್ಲಾಸಕರವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 11

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಪೀಡಿತರಾದ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಕಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್‌ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತತ್ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



13

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವುವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—0—0.

ರೈಲ್ವೇ ಲೀವರ್ ವಾಚ್.

5 ವರ್ಷ ಗ್ಯಾರಂಟಿ 15 ಬಹುಮಾನಗಳು ಸಹಿತ 5—0—0

ಇದು ಒಳ್ಳೇ ಮಜಬೂತಾಗಿ ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ಇವು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋಟ್ಸ್‌ಗಳಿಂದ ಮಾಡಿ ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿದೆ. ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಂದನ್ನು ತರಿಸಿ ನೋಡಿರಿ. ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.—ತುರಾಯಿ 1, ಶಾವಂತಿಗೆ ಹುವ್ವು 1, ಸೆಂಟ್‌ಬಾಟಲ್ 1, ದಂತದ ಬಾಚಣಿಗೆ 1 ಸರಪಣಿ 1, ಉತ್ತರಮುಖಿ 1, ದಂತದ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗ ಜುಮ್ಲಾ 15 ಬಹುಳು ೪, ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಉಂಗುರ 1, ರಾಗಮಾಲಿಕೆ 1.ಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 5-0-0.



ವಿಳಾಸ:—ಎಲ್ಗಿನ್ ವಾಚ್ ಕಂಪನಿ,
89. ನಾರಾಯಣಮೊದಲಿ ಬೀದಿ, ಮದರಾಸು.

ಪ್ರಸಿದ್ಧಪತ್ರಿಕೆ. 3-2

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಹಾಸನ್ ಟವುನ್ನಿನಲ್ಲಿರುವ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸ್ ಕಾಂಪೌಂಡು ಮುಂಭಾಗದಲ್ಲಿ ಮಾಮೂಲ್ ಮೇರೆ ಸನ್ 1921 ನೇ ಇಸ್ವಿ ಜನವರಿ 3-4 ನೆ ಮತ್ತು 5 ನೆ ತಾರೀಖುಗಳಲ್ಲಿ ದನಗಳ ಪ್ರದರ್ಶನವು ನಡೆಸಲ್ಪಡುತ್ತೆ. ಪ್ರದರ್ಶನಾಲಯಕ್ಕೆ ಬರತಕ್ಕ ರಾಸುಗಳ ವಿಚಾರದಲ್ಲು ಮತ್ತು ಇನಾಮುಗಳ ವಿಚಾರದಲ್ಲು ಸಹಾ ಮೈಸೂರು ಗೆಜೆಟ್ಟಿನಲ್ಲಿ ಫಾಯಿಸ್ ಮಾಡಲ್ಪಟ್ಟಿರುತ್ತೆ.

ತಾ॥ 5-12-20.
Mohamed Razak,
ವೈಸ್‌ಪ್ರೆಸಿಡೆಂಟ್,
ಹಾಸನ್ ಟವುನ್ ಮ್ಯುನಿಸಿಪಾಲಿಟಿ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

38 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಗಂಡಸರದು 1 ಕ್ಕೆ 1-4-0 ರೂಪಾಯಿ. ಹೆಂಗಸರದು 3-0-0.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 4

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೨೦ ನೆಯ ಇಸವಿ ಡಿಸೆಂಬರ್ ತಾ॥ ೧೯ ರಿಂದ ೧೯೨೦ ನೆಯ ಡಿಸೆಂಬರ್ ತಾ॥ ೨೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ನವಮಿಯಿಂದ ಮಾರ್ಗಶಿರ ಶುದ್ಧ ಪೌರ್ಣಿಮೆವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
19	ಭಾನು	ನವ	52-20	ಉಭಾ	22-24	5
20	ಸೋಮ	ದಶ	51-7	ರೇವ	23-19	6
21	[1]ಮಂಗಳ	ಏಕಾ	48-40	ಅಶ್ವಿ	23-2	7
22	[2]ಬುಧ	ದ್ವಾದ	45-16	ಭರ	21-38	8
23	[3]ಗುರು	ತ್ರಯೋ	40-49	ಕೃತ್ತಿ	19-21	9
24	ಶುಕ್ರ	ಚತು	35-50	ರೋಹಿ	16-50	10
25	[4]ಶನಿ	ಪೌರ್ಣ	30-15	ಮೃಗ	12-38	11

(1) ಸರ್ವತ್ರೈಕಾದಶಿ, ಶ್ರೀರಂಗದಲ್ಲಿ ಕೋಠಾರೋತ್ಸವಾರಂಭಃ. (2) ಮುಕ್ಕೋಟಿದ್ವಾದಶಿ. (3) ಪ್ರದೋಷಃ, ಮಾರ್ಗಶಿರಲಕ್ಷ್ಮೀವ್ರತಂ. (4) ಅಂಧಕಾಸುರ ಸಂಹಾರಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾಂ ಶರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಲಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕಿಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸಹ ೨-೪-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸನ್ ೧೯೨೦ ನೆಯ ಇಸವಿ ಡಿಸೆಂಬರ್ ತಾರೀಖು ೧೯ ನೆಯ ಭಾನುವಾರ (ಸಂಚಿಕೆ

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರಿರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
49 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಶಂಕರಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶತಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರಶತಕ ೨ಆಣೆ; ಶಂಕರಲಿಂಗಕಂದಂ ೧೮.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
ಚಾರುಶೀಲಚರಿತ್ರೆ	೦—೯—೦
ಶಂಖಾಸಿ	೦—೮—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೇರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೇರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

39 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

39

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಕ್ಷ ಮದನೋದ್ಭವಗುಳಿಗೆ ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, [illegible] ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತ ಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಗಟೋರಿ, ವಾತರೋಗವು ಮುಂತಾದವು ಆಶ್ಚರ್ಯಕರ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬನಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 44

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಭಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯಕ್ಷ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

39 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಗಂಡಸರದು 1 ಕ್ಕೆ 1-4-0 ರೂಪಾಯಿ. ಹೆಂಗಸರದು 3-0-0.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನು ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

14

ವೈದ್ಯವಿದ್ಯ

ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ಬಾಗಿಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
37. ಜೈನಾಬಜಾರು ರೋಡ್ ಮದರಾಸ್

ಮೈಸೂರು ಸ್ಟಾ
೧೯೨೦ನೆಯ ಡಿಸೆಂಬರ್ ತಾ|| ೨೬ನೆಯ ಭಾನುವಾರ.

ಜಿಸ್ಟ್ರೇಷನ್ ಶಾಖೆಯ ಸುಲಿಗೆ.

ಸಂಸ್ಥಾನದ ಎಲ್ಲ ಶಾಖೆಗಳಲ್ಲೂ ಸಣ್ಣ ಉದ್ಯೋಗಿಗಳಲ್ಲಿ ಲಂಚದ ರೋಗವು ಮಿತಿಮೀರಿ ಹೋಗುತ್ತಿದೆ. ಅವುಗಳೊಳಗೆಲ್ಲಾ ರಿಜಿಸ್ಟ್ರಾರ್ ಆಫೀಸುಗಳಲ್ಲಿ ನಡೆಯುವ ಹಾವಳಿಯು "ನೈಲಾ ನಂಬರು" ಆಗಿರುತ್ತದೆ. ಮುಚ್ಚುಮರೆಯಿಲ್ಲದೆ ನಾಚುಗೆ ಹೇಸುಗೆಗಳಿಲ್ಲದೆ ಕೆಲಮಂದಿ ರಿಜಿಸ್ಟ್ರಾರರುಗಳೂ ಅವರ ಜೇಬುಗಳಂತಿರುವ ಗುಮಾಸ್ತರುಗಳೂ ಪತ್ರಗಳ ರಿಜಿಸ್ಟರಿಗಾಗಿ ಬರುವವರಿಂದ ಘಂಟಾಘೋಷವಾಗಿ "ಮಿರಾಸು" ಕೊಡಿರೆಂದು ಕೇಳಿ ಈಸಿಕೊಳ್ಳುತ್ತಿರುವರೆಂಬ ಸಂಗತಿಯು ಹಲವು ಸಲ ನಮ್ಮ ಕಿವಿಗಳಿಗೆ ಬಂದು ಬೀಳುತ್ತಲೇ ಇದೆ. ಪರಲೋಕದ ಶಿಕ್ಷಾಭೀತಿಯಿಲ್ಲದ ಇಂಥ ಜನರಿಗೆ ಇಹಲೋಕದ ಮೇಲ್ಪಟ್ಟಧಿಕಾರಿಗಳ ಭೀತಿಯೂ ಇಲ್ಲದಬಳಿಕ ಇಂಥವರು ಪ್ರಜೆಗಳ ಪಾಲಿಗೆ ನರರಾಕ್ಷಸರೇ ಆಗಿರುತ್ತಾರೆಂದು ಹೇಳಿದರೆ ಅತ್ಯುಕ್ತಿಯಾಗುವುದಿಲ್ಲ. ಹಗಲುಸುಲಿಗೆಯಂತೆ ಇಷ್ಟು ನಿರ್ಭಯವಾಗಿ ಲಂಚದ ಹಾವಳಿಯು ನಡೆಯುವಂತೆ ಬಿಟ್ಟಿರುವುದು ಪ್ರಭುತ್ವದ ದರ್ಪಕ್ಕೆ ಕಳಂಕವೇ ಸರಿ. ಈ ಹಾವಳಿಯನ್ನು ಕಂಡು ಕೇಳದೆ ಇರುವವರೇ ಅಪೂರ್ವ. ಪ್ರಭುತ್ವದವರ ಕಿವಿಗೂ ಇದು ಬೀಳದೆ ಇಲ್ಲ. ಸಿ. ಐ. ಡಿ. ಪೋಲೀಸೇರ್ಪಾಟನ್ನು ಇಟ್ಟಿರುವಂತೆ ಇಂಥ ಲಂಚಗುಳಿಗಳಾಗಿರುವ ಸಬ್ ರಿಜಿಸ್ಟ್ರಾರರನ್ನು ಗೂಢವೇಷದಿಂದ ಹಿಡಿಯುವವರನ್ನು ನಿಯಮಿಸಿ ಕೆಲವರಿಗೆ ಜನ್ಮಾಂತ ಮಾಯದಿರುವ ಬರೆಗಳನ್ನು ಹಾಕದಿದ್ದರೆ ರಿಜಿಸ್ಟ್ರೇಷನ್ ಆಫೀಸುಗಳು ಶುದ್ಧವಾಗುವುದಿಲ್ಲ. "ಸಣ್ಣ ಸಂಬಳದ ನೌಕರರಿಗೆ ಹೊಟ್ಟೆ ಬಟ್ಟೆಗೆ ಸಾಲುವಷ್ಟು ಸಂಬಳವನ್ನು ಕೊಡದಿದ್ದರೆ ಅವರು ಲಂಚವನ್ನು ತೆಗೆದುಕೊಳ್ಳದೆ ಬದುಕುವುದು ಹೇಗೆ? ಆದುಕಾರಣ ಅವರಿಗೆ ಕೈತುಂಬಾ ಸಂಬಳವನ್ನು ಕೊಡಬೇಕು. ಹಾಗಾದರೆ ಈ ಲಂಚದ ಹಾವಳಿಯು ತಪ್ಪುವುದು" ಎಂದು ಕೆಲರು ಲಂಚಗುಳಿಗಳ ಪಕ್ಷದ ವಕೀಲರಂತೆ ವಾದಿಸುವುದುಂಟು. ಈ ವಾದವು ಅಸಮಂಜಸವಾದುದು. ಸಾವಿರಾರು ಸಂಬಳಪಡೆಯುವವರಿಗೂ ಅರ್ಥ ದಾಹವು ತಪ್ಪುವುದಿಲ್ಲ. ಸಂಬಳ ಹೆಚ್ಚಿದಷ್ಟೂ ನಿತ್ಯೋತ್ಸವ ಮಾಸೋತ್ಸವ ಪಕ್ಷೋತ್ಸವಗಳು ಹೆಚ್ಚುತ್ತಬರುತ್ತವೆ. ಹೆಂಡರಿಗೆ ೧೦ ರೂ. ಸೀರೆಯನ್ನುಡಿಸುತ್ತಿದ್ದವನು ೩೦-೪೦ ರೂ. ಗಳ ಸೀರೆಯನ್ನುಡಿಸುವುದಕ್ಕೆ ಪ್ರಯತ್ನಿಸುತ್ತಾನೆ. ಆಗ್ಗೂ ಅವನ ವೆಚ್ಚಕ್ಕೆ ಸಂಬಳವು ಸಾಲದಂತೆಯೇ ಆಗುವುದು. ಪ್ರಭುತ್ವದವರು ತಾವು ಉದ್ಯೋಗಿಗಳಿಂದ ತೆಗೆದುಕೊಳ್ಳುವ ಕೆಲಸಕ್ಕೆ ಸರಿಯಾಗಿ ಸಂಬಳವನ್ನು ಕೊಡುವುದು ಉಚಿತವೇ ಹೊರತು ಉದ್ಯೋಗಕ್ಕೆ ಸೇರಿದವರ ಮನೆವೆಚ್ಚವನ್ನೆಲ್ಲಾ ನೀಗಿಸುವುದಕ್ಕಾಗಿ ಸಂಬಳವನ್ನು ಕೊಡುವುದಿಲ್ಲ. ತನ್ನ ಗೃಹಕೃತ್ಯಕ್ಕೆ ಸಾಕಾಗುವಷ್ಟು ಸಂಬಳವು ದೊರೆಯದಿದ್ದ ಪಕ್ಷದಲ್ಲಿ ಅಂಥ ಕೆಲಸವನ್ನು ಬಿಟ್ಟು ಸ್ವತಂತ್ರನಾಗಿ ಬೇರೆ ಯಾವ ತರದ ವೃತ್ತಿಗಳನ್ನಾದರೂ ಧರ್ಮಮಾರ್ಗದಿಂದ ನಡೆಯಿಸಿ ಸಂಪಾದಿಸುವುದೇ ಧರ್ಮವು. ಸರ್ಕಾರದಿಂದ ದೊರೆಯುವ ಸಂಬಳವು ಸಾಲದೆಂದು ಪ್ರಜೆಗಳಿಂದ ಅನ್ಯಾಯವಾಗಿ ಲಂಚವನ್ನು ಸುಲಿಯುವವನಿಗೂ ಹೊಟ್ಟೆಪಾಡಿಗಾಗಿ ಪರದ್ರವ್ಯಾಪಹರಣ ಮಾಡುವ ಕಳ್ಳನಿಗೂ ಹೆಚ್ಚಾದ ಭೇದವೇನೂ ಇರಲಾರದು. ಧರ್ಮಬೋಧೆ ಮಾಡಿ ಲಂಚಗುಳಿಗಳನ್ನು ಸನ್ಮಾರ್ಗಕ್ಕೆ ತರುವುದು ಯಾರಿಗೂ ಸಾಧ್ಯವಲ್ಲ. ಕಠಿನವಾದ ದಂಡೋಪಾಯದಿಂದಲೇ ಪ್ರಭುತ್ವದವರು ಇದನ್ನು ನಿರ್ಮೂಲ ಮಾಡಬೇಕು.

ಪ್ರಜಾಪ್ರತಿನಿಧಿ ಸಭೆಯ ಮೊನ್ನೆಯ ಅಧಿವೇಶನದಲ್ಲಿ ಪ್ರತಿನಿಧಿಗಳು ಈ ಸಂಬಂಧವಾದ ವಿದ್ಯಮಾನಗಳನ್ನೂ ಪ್ರಜೆಗಳಿಗೆ ಆಗುತ್ತಿರುವ ಹಿಂಸೆಯನ್ನೂ ಕೂಲಂಕಷವಾಗಿ ಸರ್ಕಾರಕ್ಕೆ ನಿವೇದಿಸಿದರು. ಹಿನ್ನೆಯ ಅಧಿವೇಶನದಲ್ಲೂ ಈ ವಿಷಯವು ತಪ್ಪದೆ ಬಂದಿದ್ದಿತು. ಪತ್ರಗಳ ರಿಜಿಸ್ಟ್ರೇಷನ್ನಿಗಾಗಿ ಕೊಡಬೇಕಾದ ಛಾರ್ಜನ್ನು ದ್ರವ್ಯರೂಪವಾಗಿ ತೆಗೆದುಕೊಳ್ಳುವುದನ್ನು ಬಿಟ್ಟು ಆಯಾ ಮೊತ್ತಕ್ಕೆ ತಕ್ಕಷ್ಟು ಸ್ಟಾಂಪನ್ನು ಅಂಟಿಸುವ ಏರ್ಪಾಟನ್ನು ಮಾಡಬೇಕೆಂದು ಪ್ರಜಾಪ್ರತಿನಿಧಿಗಳಿಂದ ಮಾಡಲ್ಪಟ್ಟ ಸೂಚನೆಗೇ ಪ್ರಭುತ್ವದವರೂ ಒಪ್ಪಿದಂತೆ ಕಾಣುತ್ತದೆ. ಯಾವ ತೆರದ ಸ್ಟಾಂಪನ್ನು ಏರ್ಪಡಿಸಬೇಕೆಂಬುದನ್ನು ಯೋಚಿಸುತ್ತಿದ್ದೇವೆಂದು ಸರ್ಕಾರದವರು ಕೊಟ್ಟಿರುವ ಉತ್ತರವನ್ನು ನೋಡಿದರೆ, ಸ್ವಲ್ಪ ಕಾಲದೊಳಗೆ ಈ ನೂತನ ಪದ್ಧತಿಯೇ ವ್ಯವಹಾರಕ್ಕೆ ಬರುವುದೆಂದು ಹೇಳಬಹುದಾಗಿದೆ.

ಆದರೆ ಛಾರ್ಜಿನ ಹಣಕ್ಕೆ ಪ್ರತಿಯಾಗಿ ಸ್ಟಾಂಪು ನಿರ್ಮಿಸಲ್ಪಟ್ಟ ಮಾತ್ರಕ್ಕೇ ಲಂಚದ ಬಳಕೆಯು ತಪ್ಪಿಹೋಗುವುದೆಂದು ತೋರುವುದಿಲ್ಲ. ರಿಜಿಸ್ಟ್ರಾರರ ಮುಂದಣ ಮೇಜಿನ ಮೇಲೆ ಪತ್ರವನ್ನಿಟ್ಟ ಕೂಡಲೇ ಕೆಲ ರಿಜಿಸ್ಟ್ರಾರರು ಅದನ್ನು "ಗುಮಾಸ್ತರಿಗೆ ಮೊದಲು ತೋರಿಸು" ಎಂದು ಹೇಳಿ ಕಳುಹಿಸುತ್ತಾರೆ. ಅಲ್ಲಿ ರಜತಸ್ಪರ್ಶವಾದರೆ "ಪೆನ್ಸಿಲ್ ಮಾರ್ಕ್" ಹೊಂದಿ ಮರಳಿ ಅದು ಮೇಜಿನ ಮೇಲಕ್ಕೆ ಬಂದು ಸದ್ದಿಲ್ಲದೆ ರಿಜಿಸ್ಟರ್ ಮಾಡಿಸಿಕೊಳ್ಳುತ್ತದೆ. ಈ ತೆರದ ಅನೇಕ ಸಂಕೇತಗಳೆಲ್ಲಾ ನಿಶ್ಶೇಷವಾಗುವುದಕ್ಕೆ ಸ್ಟಾಂಪಿನೇರ್ಪಾಟೊಂದೇ ಸಾಲದು. ಒಬ್ಬ ಮಹನೀಯ ಸಬ್ ರಿಜಿಸ್ಟ್ರಾರರು ಒಂದು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲೇ ಒಂದು ಮರಣಶಾಸನ ಪತ್ರಕ್ಕೆ ಮೃತನಾದವನ ಶವದ ಬೆರಳಿನ ಗುರುತನ್ನು ಒತ್ತಿಸಿ ರಿಜಿಸ್ಟರ್ ಮಾಡಿಕೊಟ್ಟಿರುವುದೂ ಕೂಡ ಉಂಟಂತೆ! ಇಂಥ ದುಷ್ಟಚರ್ಯೆಗಳೆಲ್ಲಾ ದಂಡೋಪಾಯದ ಭೀತಿಯಿಂದಲ್ಲದೆ ಕಡಿಮೆಯಾಗಲಾರವು. ಮತ್ತು ಪ್ರಜೆಗಳೂ ಸಹ ಲಂಚವನ್ನು ಕೊಡುವುದಕ್ಕೆ ಸರ್ವಾತ್ಮನಾ ಒಪ್ಪಬಾರದು. ಲಂಚಗುಳಿಗಳ ದುಷ್ಪ್ರಯತ್ನವನ್ನು ಬೈಲಿಗೆ ಹಾಕುವುದಕ್ಕೆ ಪ್ರಜೆಗಳು ಸಾಹಸಪಡುತ್ತಬರಬೇಕು. ನ್ಯಾಯಶಾಸ್ತ್ರಪ್ರಕಾರ ಲಂಚವನ್ನು ತೆಗೆದುಕೊಳ್ಳುವವನು ಹೇಗೆ ಅಪರಾಧಿಯೋ ಹಾಗೇ ಅದನ್ನು ಕೊಡುವವನೂ ಅಪರಾಧಿಯೆಂದು ತಿಳಿಯಲ್ಪಡುವನು. ಕೆಲಸಕ್ಕೆ ಹೋಗುವವರು ಕೂಡ ತಮ್ಮ ಆತುರಗಳಿಗಾಗಿ ಲಂಚವನ್ನು ಕೊಟ್ಟು ರುಚಿಹತ್ತಿಸುತ್ತಾರೆ. ಮನುಷ್ಯನ ರಕ್ತದ ಸವಿಯನ್ನು ಒಂದು ಸಲ ಸವಿದ ಹುಲಿಯು ಕಂಡಕಂಡ ಮನುಷ್ಯರನ್ನೆಲ್ಲಾ ಕೊಲ್ಲಲು ಉಜ್ಜುಗಿಸುವಂತೆ ಬಳಿಕ ಈ ಲಂಚಗುಳಿಗಳು ಸರ್ವತ್ರ ಲಂಚದ ಪ್ರಯೋಗವನ್ನು ಮಾಡಲು ಪ್ರವರ್ತಿಸುತ್ತಾರೆ. ಆದುಕಾರಣ ಪ್ರಜೆಗಳೂ ಮತ್ತು ಪ್ರಭುತ್ವದವರೂ ಸಹ ಈ ದುರ್ನೀತಿಯ ನಿರ್ಮೂಲನಕ್ಕೆ ಬಲವಾದ ಪ್ರಯತ್ನಗಳನ್ನು ಮಾಡುವುದು ಅತ್ಯವಶ್ಯಕವು.

ಒಳದೇಶದ ವೃತ್ತಾಂತಗಳು.

ಸಂಸ್ಥಾನದ ಆರ್ಕಿಟೆಕ್ಟ್ ಕಮಿಷನರ ಕೆಲಸವು ಇನ್ನು ಮುಂದೆ ಎಕ್ಸೈಜ್ ಕಮಿಷನರಿಗೇ ವಹಿಸಲ್ಪಡುವುದು.

ಬ್ರಿಟಿಷ್ ರೆಸಿಡೆಂಟರವರು ಕಳೆದ ತಾರೀಖು ೨೩ ರಲ್ಲಿ ಬೆಂಗಳೂರಿಂದ ಪಶ್ಚಿಮವಾಹಿನೀ ಮಾರ್ಗವಾಗಿ ಕೊಡಗಿಗೆ ದಯಮಾಡಿಸಿದರು.

ಮುಂದಿನ ತಿಂಗಳು ತಾ|| ೧೫ ರಲ್ಲಿ ಚುಂಚನಕಟ್ಟೆಯಲ್ಲಿ ಶ್ರೀ ರಾಮದೇವರ ರಥೋತ್ಸವವಾಗುವುದು. ಅಂದಿನಿಂದ ಪದ್ಧತಿಯಂತೆ ದನದ ಪರಿಷೆಯೂ ದೊಡ್ಡದಾಗಿ ನಡೆಯುವುದು.

ಕಳೆದ ಮಂಗಳವಾರ ರಾತ್ರಿ ರಾಜಧಾನಿಯ ರತ್ನಾವಳೀ ನಾಟಕಮಂಟಪದಲ್ಲಿ ಪ್ರಸಿದ್ಧ ಗಾಯಕಿಯಾದ ಮಿಸ್. ಗೋಹರ್‌ಜಾನ್‌ರವರ ಸಂಗೀತಾಭಿನಯಗಳು ಜರುಗಿದುವು. ಸಾವಿರಾರು ಜನರು ಸೇರಿ ಕೇಳಿ ಆನಂದಪಟ್ಟರು.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ತುಮಕೂರು ಡಿಸ್ಟ್ರಿಕ್ಟು ಕಟ್ಟೆಕೆರೆಯಿಂದ ತಾ|| ೨೧ ರಲ್ಲಿ ನಟ್ಟಿ ಅಗ್ರಹಾರದಲ್ಲಿದ್ದು ತಾ|| ೨೩ ಕ್ಕೆ ಕೋಟೆಗೆರೆಗೆ ದಯಮಾಡಿಸಿದೆ.

ಈ ಕೆಳಗೆ ಕಂಡಂತೆ ಹೆಲ್ತ್ ಆಫೀಸರುಗಳ ವರ್ಗಾವರ್ಗಿಯಾಗಿರುವುದು. ಮ|| ಗಳಾದ ಜೆ. ಎ. ಕರ್ವಿಯವರು ಮೈಸೂರಿನಿಂದ ಕೋಲಾರದ ಚಿನ್ನದಗಣಿಗಳಿಗೆ. ಅಲ್ಲಿರುವ ವಾಸ್ಟರ್‌ಹಾಸ್‌ರವರು ಮೈಸೂರಿಗೆ. ಬೆಂಗಳೂರಿನಲ್ಲಿರುವ ಫರ್ನಾಂಡಿಸ್‌ರವರು ಕೋಲಾರಪಟ್ಟಣಕ್ಕೆ. ಶ್ರೀನಿವಾಸಭಟ್ಟಯವರು ಕಡೂರಿನಿಂದ ಬೆಂಗಳೂರಿಗೆ.

ಮೈಸೂರು ಡಿಸ್ಟ್ರಿಕ್ಟ್ ಡೆ|| ಕಮಿಷನರಾದ ಮಿ|| ಸಿ. ಎಫ್. ಬೌರಿಂಗ್‌ರವರು ಕ್ರಿಸ್ತಮಸ್ ರಜಾದ ಜತೆಗೆ ೧೫ ದಿನಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿದ್ದಾರೆ. ಆ ಕಾಲದಲ್ಲಿ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಆಫೀಸರಾದ ಮ|| ಆರ್. ನಾನಾಸಾಹಿಬರಾಯರು ತಮ್ಮ ಕೆಲಸದ ಜತೆಗೆ ಡಿಸ್ಟ್ರಿಕ್ಟ್ ಡೆ|| ಕಮಿಷನರ ಛಾರ್ಜನ್ನೂ ವಹಿಸಿರುವರು.

ಧಾರವಾಡದಲ್ಲಿ ಕರ್ನಾಟಕ ಟೈಂಸ್ ಎಂಬ ವಾರಪತ್ರಿಕೆಯು ಹೊರಡಲುಪಕ್ರಮಿಸಿದೆ. ಹಿಂದುಳಿದ ಜನವರ್ಗಗಳ ಕ್ಷೇಮಚಿಂತನೆಯೇ ಇದರ ಉದ್ದೇಶ. ಉದ್ದೇಶಕ್ಕೆ ತಕ್ಕ ಲೇಖನಗಳು ತುಂಬಿವೆ. ವರ್ಗಣಿ ಅಂಚೆವೆಚ್ಚ ಸೇರಿ ೩-೪-೦ ಇದಕ್ಕೆ ನಾವು ಸುಸ್ವಾಗತವನ್ನು ಮಾಡುವುದಲ್ಲದೆ ಪ್ರವರ್ಧಮಾನವೂ, ಚಿರಾಯುವೂ ಆಗಲೆಂದು ಕೋರುವೆವು.

ಬೆಂಗಳೂರು ಹಳೆತರಗು ಪೇಟೆಯಲ್ಲಿರುವ ಮೆಸರ್ಸ್ ಎಂ. ಸಿದ್ಧಲಿಂಗಪ್ಪ ಅಂಡ್ ಕೋ ಎಂಬ ಮಳಿಗೆಗೆ ಒಬ್ಬ ಆಂಗ್ಲೇಯನು ಒಂದು ಅಕ್ಕಿಯನ್ನುಕೊಂಡು ೩೦೦ ರೂ. ಚೆಕ್ಕನ್ನು ಕೊಟ್ಟನು. ಅದು ಸ್ವಪ್ನಸೆಯ ಚೆಕ್ಕೆಂದು ಅಂಗಡಿಯವರಿಗೆ ಸಂಶಯ ತೋರಿ ಪೋಲೀಸಿಗೆ ಕರೆದುಕೊಂಡುಹೋಗುತ್ತಿರುವಾಗ್ಗೆ ಆಸಾಮಿಯು ತಲೆತಪ್ಪಿಸಿಕೊಳ್ಳಲು ಯತ್ನಿಸಿ ಕೊನೆಗೆ ಸಿಕ್ಕಿಬಿದ್ದನು.

ಮಾವಿನ ಮರಗಳಿಗೆ ಹುಳು ಬೀಳದಂತೆ ಕಾಪಾಡುವುದಕ್ಕೆ ಮೀನಿನ ಎಣ್ಣೆಯಿಂದ ನಿರ್ಮಿಸಿದ ಒಂದುತೆರದ ಸಾಬೂನು ಸಿದ್ಧವಾಗಿದೆ. ಅದರ ಬೆಲೆ ಪೋಸ್ಟೇಜಿಲ್ಲದೆ ಬಳ್ಳಿ ೧ ಕ್ಕೆ ೨ ಆಣೆ ೬ ಪೈ. ಕೊಯಮುತ್ತೂರು ಲಾಲಿ ರೋಡಿನಲ್ಲಿರುವ ಸರ್ಕಾರಿ ಅಗ್ರಿಕಲ್ಚರಲ್ ಇನ್‌ಸ್ಟಿಟ್ಯೂಟಿಗೆ ಬರೆದುಕೊಂಡರೆ ಅವನ್ನೂ ಅದರ ಉಪಯೋಗಕ್ರಮ ವಿವರಣೆಯ ಪತ್ರವನ್ನೂ ಕಳುಹಿಸಿಕೊಡುವರು.

ಚನ್ನಪಟ್ಟಣದ ತಾಲ್ಲೂಕು ಬರುಬರುತ್ತಾ ಕೊಲೆಪಾತಕಗಳೇ ಮೊದಲಾದ ದುಷ್ಕೃತ್ಯಗಳಿಗೆ ತವರುಮನೆಯಾಗುತ್ತಿದೆ. ಆ ತಾಲ್ಲೂಕಿನ ಬೇವೂರು ಗ್ರಾಮದ ತಿಮ್ಮಯ್ಯ ಎಂಬಾತನ ಕೊಲೆಯು ಮೊನ್ನೆತಾನೇ ನಡೆದಿದೆ. ಈಗ ಸರ್ಕಾರದವರು ಆ ತಾಲ್ಲೂಕಿಗೆ ಇನ್ನು ೧೨ ಮಂದಿ ಪೋಲೀಸಿನವರನ್ನೂ ಒಬ್ಬ ಸಬ್ ಇನ್ಸ್‌ಪೆಕ್ಟರನ್ನೂ ಸ್ಪೆಷಲ್ ಡ್ಯೂಟಿಯ ಮೇಲೆ ನಿಯಮಿಸಿದ್ದಾರೆ.

ಶ್ರೀರಂಗಪಟ್ಟಣದ ತಾಲ್ಲೂಕು ಹರವು ಹೋಬಳಿ ಸೇಕದಾರನಾಗಿದ್ದ ಎಸ್. ವರದಾಚಾರ್ ಎಂಬುವವನು ಕೆಲಸ ಬಿಟ್ಟು ತಲೆತಪ್ಪಿಸಿಕೊಂಡುಹೋಗಿದ್ದು ಈಗ ಮರಳಿ ಆ ಹೋಬಳಿಗೆ ಬಂದು ಜಮೀನ್ದಾರರಿಂದ ಕಂದಾಯವನ್ನು ವಸೂಲ್ಮಾಡುತ್ತಲಿರುವಂತೆ ವರ್ತಮಾನ ಕೇಳಿ ಅವನು ಸದರಿ ಕೆಲಸದಲ್ಲಿಲ್ಲವೆಂದೂ ಯಾರೂ ಅತನಿಗೆ ಸರ್ಕಾರಿ ಕಂದಾಯ ಮೊದಲಾದುದನ್ನು ಕೊಡಕೂಡದೆಂದೂ ಸರ್ಕಾರದವರು ಪ್ರಕಟಿಸಿದ್ದಾರೆ.

ಕಳೆದವಾರ ಬ್ರಿಟಿಷ್ ರೆಸಿಡೆಂಟರು ಬೆಂಗಳೂರಿನಲ್ಲಿ ಒಂದು ದರ್ಬಾರನ್ನು ನಡೆಯಿಸಿದರು. ನಮ್ಮ ಶ್ರೀಮದ್ಯುವರಾಜರೂ ಮದ್ರಾಸ್ ಲಾರ್ಡ್ ಬಿಷಪ್‌ರವರೂ ಜಸ್ಟಿಸ್ ಮಿಲ್ಲರ್ ದಂಪತಿಗಳೂ ಮಿ|| ಕೇಂಬಲ್ ದಂಪತಿಗಳೂ ಇನ್ನೂ ಅನೇಕ ಯೂರೋಪ್ಯ ಹಿಂದೂ ದೊಡ್ಡಮನುಷ್ಯರುಗಳೂ ನೆರೆದಿದ್ದರು. ಮಿ|| ಟಿ. ಜೆ. ಟಾಸ್ಕತ್ ಮಿಸೆಸ್ ಎಲ್. ಡಿಕ್ಸನ್‌ರವರೇ ಮೊದಲಾದವರಿಗೆ ಸಾರ್ವಭೌಮರಿಂದ ಅನುಗ್ರಹಿಸಲ್ಪಟ್ಟಿದ್ದ ಬಿರುದುಗಳು ರೆಸಿಡೆಂಟರಿಂದ ಕೊಡಲ್ಪಟ್ಟುವು.

ಮೈಸೂರು ಸರಕಾರದಲ್ಲಿ ೧೦೦ ರೂ. ವರೆಗಿನ ಸಂಬಳದವರಿಗೆ ೧೦ ರೂ. ವರೆಗೆ ಅಲೋಯನ್ಸು ಕೊಡಲ್ಪಟ್ಟಿರುವುದಷ್ಟೆ? ಈಗ ೧೦೦ ರೂಗೆ ಮೇಲ್ಪಟ್ಟು ೧೫೦ ರೂ. ಸೊಳಗಿರುವ ಅಧಿಕಾರಿಗಳಿಗೆ ತಿಂಗಳೊಂದಕ್ಕೆ ೧೨-೮-೦ ಯಂತೆಯೂ ೧೫೦ ರೂ. ಮೇಲೆ ೨೫೦ ರೂಸೊಳಗಿರುವವರಿಗೆ ತಿಂಗಳೊಂದಕ್ಕೆ ೧೫ ರೂನಂತೆಯೂ ಅಲೋಯನ್ಸು ತಾ|| ೧-೧೨-೧೯೨೦ ರಿಂದ ಕೊಡಲ್ಪಟ್ಟಿರುವುದಾಗಿ ಸರಕಾರದಪ್ಪಣೆಯಾಗಿದೆ. ಸಂಬಳವೂ ಅಲೋಯನ್ಸೂ ಸೇರಿ ೨೬೫ ರೂ. ಗೆ ಮಿತಗೊಳಿಸಿದಾಗಿದೆ.

ಕೃಷ್ಣರಾಜಸಾಗರದ ಕಟ್ಟೆಯ ಕೆಳಗೆ ನದಿಯಲ್ಲಿ ೭|| ಅಡಿ ನೀರು ಹರಿದುಹೋಗುವಂತೆಮಾಡಿ ಕಟ್ಟೆಯನ್ನು ೧೨೦ ಅಡಿಗಳವರೆಗೂ ಎತ್ತರಿಸಿ ಕಟ್ಟಿಕೊಳ್ಳಬಹುದೆಂಬ ವಿಷಯಕ್ಕೆ ಮದ್ರಾಸ್ ಸರ್ಕಾರದ ಮತ್ತು ನಮ್ಮ ಸರ್ಕಾರದ ಪಕ್ಷದವರೀರ್ವರಲ್ಲೂ ಸಮಾಧಾನವು ಉಂಟಾಯಿತೆಂದು ಕೇಳುತ್ತಿವೆ. ಅದರ ಪರೀಕ್ಷಾ ಕಾರ್ಯವು ೧೯೨೬ ನೆ ವರ್ಷದವರೆಗೂ ನಡೆಯಬಹುದೆಂದು ಗಡುವು ಗೊತ್ತುಮಾಡಲ್ಪಡುವುದಂತೆ. ಬೇಸಗೆ ಕಾಲದಲ್ಲೂ ನದಿಯಲ್ಲಿ ಅಷ್ಟು ನೀರು ಹರಿದುಹೋಗುವಂತಾದರೆ ನಮ್ಮ ಅಣೆಕಟ್ಟೆಯಿಂದ ಮದ್ರಾಸು ಪ್ರಾಂತದವರಿಗೆ ವಿಶೇಷವಾದ ಉಪಕಾರವೇ ಆದಂತಾಯಿತು.

ಕುಣಿಗಲಿನಲ್ಲಿರುವ ಅಶ್ವರಕ್ಷಣ ಶಾಲೆಯಲ್ಲಿ ಕಳೆದ ೧೯೧೯-೨೦ ನೆ ವರ್ಷದಲ್ಲಿ ೧೩ ಬೀಜದ (ಉಡಾವ್) ಕುದುರೆಗಳೂ, ೧೩೨ ಹೆಣ್ಣು ಕುದುರೆಗಳೂ ೧೨೫ ಮರಿಗಳೂ ಇದ್ದುವು. ಗಂಡು ಕುದುರೆಗಳಲ್ಲಿ ಒಂದು ಮುದಿಯಾಗಿ ಸತ್ತಿತು. ಹೊಸದಾಗಿ ೬ ಬೀಜದ ಕುದುರೆಗಳು ಸೇರಿಸಲ್ಪಟ್ಟುವು. ಈ ಹೊಸ ಕುದುರೆಗಳಲ್ಲದೆ ಉಳಿದವುಗಳ ಬೆಲೆ ೧೩೬೯೬೯ ರೂ. ಕಳೆದ ವರ್ಷ ಇಲ್ಲಿಂದ ಕಲ್ಕತ್ತೆಗೆ ಕಳುಹಿಸಿದ ಎಳೆಕುದುರೆಗಳ ಮಾರಾಟದಿಂದ ೧೯೩೦೦ ರೂ. ಗಳು ಬಂದುವು. ತಲೆ ೧ಕ್ಕೆ ೨೬೧೬ ರೂ. ನಂತೆ ಮಾರಲ್ಪಟ್ಟಿರುವುವು. ಒಟ್ಟು ಆ ವರ್ಷದಲ್ಲಿ ಈ ಶಾಲೆಗಾದ ವ್ಯಯವು ೧೦೩೪೪ ರೂ. ಗಳು. ಧಾನ್ಯಗಳಿಗೂ ಹುಲ್ಲಿಗೂ ಆ ವರ್ಷದಲ್ಲಿ ಬೆಲೆ ಹೆಚ್ಚಾಗಿದ್ದುದರಿಂದ ವ್ಯಯವು ಇಷ್ಟು ಹೆಚ್ಚಿತಂತೆ! ಲಾಭಹೀನವಾದ ಈ ಪ್ರತಿಷ್ಠಾಪನೆಯನ್ನು ಏತಕ್ಕೆ ತೆಗೆದುಬಿಡಕೂಡದೋ ತಿಳಿಯಲಿಲ್ಲ,

ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಪಶುಗಳ ಪರಿಗಣನೆಯು ನಾಲ್ಕುವರ್ಷಕ್ಕೊಂದುಸಲ ನಡೆಯುವಂತೆ ಮುಂದಣ ಜನವರಿ ತಿಂಗಳಲ್ಲಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ನಡೆಯುವುದು—ಬೆಂಗಳೂರು ಡಿಸ್ಟ್ರಿಕ್ಟಿನಲ್ಲೆಲ್ಲಾ ತಾ|| ೫. ಕೋಲಾರ ಡಿಸ್ಟ್ರಿಕ್ಟ್ ತಾ|| ೧೬. ತುಮಕೂರು ತಾಲ್ಲೂಕಿನಲ್ಲಿ ತಾ|| ೬. ತುಮಕೂರು ಟೌನ್, ಮಧುಗಿರಿ ತಾಲ್ಲೂಕು, ಗುಬ್ಬಿ ತಾಲ್ಲೂಕುಗಳಲ್ಲಿ ತಾ|| ೮. ಚಿಕ್ಕನಾಯಕನಹಳ್ಳಿ ತಾಲ್ಲೂಕು ತಾ|| ೧೬. ತಿಪಟೂರು ತಾಲ್ಲೂಕು ತಾ|| ೧೬. ಕುಣಿಗಲ್ ತಾಲ್ಲೂಕು ತಾ|| ೧೪ ಸಿರಾ ತಾಲ್ಲೂಕು ತಾ|| ೩. ಪಾವಗಡ ತಾಲ್ಲೂಕು ತಾ|| ೫. ಕೊರಟಗೆರೆ ಸಬ್ ತಾಲ್ಲೂಕು ತಾ|| ೨೦. ತುರುವೆಕೆರೆ ಸಬ್ ತಾಲ್ಲೂಕು ತಾ|| ೨೨. ಮೈಸೂರು ಡಿಸ್ಟ್ರಿಕ್ಟಿನಲ್ಲೆಲ್ಲಾ ತಾ|| ೧೬. ಕಡೂರು ಡಿಸ್ಟ್ರಿಕ್ಟಿನಲ್ಲೆಲ್ಲಾ ತಾ|| ೧೬. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲೆಲ್ಲಾ ತಾ|| ೬.

ನಮ್ಮ ಸಂಸ್ಥಾನದ ಪರಸ್ಪರಸಹಾಯಕ ಸಂಘಗಳ ಏರ್ಪಾಟಿನ ನ್ಯೂನಾತಿರೇಕ ಪರಿಶೋಧನೆಗೆ ಏರ್ಪಟ್ಟಿರುವ ಸಂಘಕ್ಕೆ ಅಧ್ಯಕ್ಷರಾಗಿ ಮಾಡಲ್ಪಟ್ಟಿರುವ ಮಿ|| ಲಲ್ಲೂಭಾಯಿ ಶ್ಯಾಮಲ್‌ದಾಸ್‌ರವರು ಬೊಂಬಾಯಿಂದ ಬೆಂಗಳೂರಿಗೆ ಬರುವಾಗ್ಗೆ ಧಾರವಾಡ ಸ್ಟೇಷನ್ನಿನಲ್ಲಿ ಒಬ್ಬ ಸೈನಿಕೋದ್ಯೋಗಿಯ ವೇಷವನ್ನು ಹಾಕಿಕೊಂಡಿದ್ದ ಮಹಮ್ಮದೀಯನು ತಾನು ಸೈನ್ಯಕ್ಕೆ ಹೊಸದಾಗಿ ಜನರನ್ನು ಸೇರಿಸುವ ಅಧಿಕಾರಿಯೆಂದು ಹೇಳಿಕೊಂಡು ಇವರು ಕುಳಿತಿದ್ದ ೧ ನೆ ತರಗತಿ ಬಂಡಿಯ ಕಂಪಾರ್ಟ್‌ಮೆಂಟಿಗೆ ಬಂದು ಕುಳಿತು ಸ್ನೇಹವನ್ನು ಬೆಳೆಯಿಸಿ, ಬೆಳಗಾಗುವುದರೊಳಗಾಗಿ ಅವರ ಹಣದ ಚೀಲವನ್ನು ಅಪಹರಿಸಿಬಿಟ್ಟು ಬೆಂಗಳೂರು ಸ್ಟೇಷನ್ನಿನಲ್ಲಿಳಿದನು. ಮಿ|| ಲಲ್ಲೂಭಾಯಿಯವರು ಇಳಿಯುವಾಗ್ಗೆ ತಮ್ಮ ಹಣದ ಚೀಲವಿಲ್ಲದುದನ್ನು ತಿಳಿದು ಪೋಲೀಸಿಗೆ ತಿಳಿಸಿದರು. ಕೂಡಲೆ ಆ ನಿಲ್ದಾಣದಲ್ಲಿದ್ದ ಪೋಲೀಸುದ್ಯೋಗಿಗಳು ಮೈಸೂರು ಬಂಡಿಯನ್ನೇರುತ್ತಿದ್ದ ಈ ಕಪಟ ಸೈನಿಕನ ಮೇಲೆ ಸಂಶಯಪಟ್ಟು ಶೋಧನೆ ಮಾಡುವಲ್ಲಿ ಹಣದ ಚೀಲವು ಸಿಕ್ಕಿತು. ಈಗ ಆತನ ವಿಚಾರಣೆಯು ಮೇಜಿಸ್ಟ್ರೇಟರ ಮುಂದೆ ನಡೆಯುತ್ತಿದೆ.

ಪ್ರಸಿದ್ಧ ಕನ್ನಡ ಪಂಡಿತರಾಗಿದ್ದ ಕೈ|| ಬಿ. ಮಲ್ಲಪ್ಪನವರ ಜ್ಯೇಷ್ಠ ಕುಮಾರರಾದ ಬಿ. ಮಲ್ಲಿಕಾರ್ಜುನಪ್ಪನವರು ಕೆಲಕಾಲದಿಂದ ಶಿವಮೊಗ್ಗೆಯಲ್ಲಿ ಅಸ್ವಸ್ಥರಾಗಿದ್ದು ಅಲ್ಲಿಂದ ಕಳೆದ ತಾ|| ೧೦ ರಲ್ಲಿ ರಾಜಧಾನಿಗೆ ಕರೆತರಲ್ಪಟ್ಟು ಅದೇ ದಿವಸ ವಿಧಿವಶರಾದರೆಂದು ತಿಳಿಯಲು ಬಹಳ ವಿಷಾದವಾಗುತ್ತದೆ. ಇವರಿಗೆ ೫೨ ವರ್ಷ ವಯಸ್ಸಾಗಿದ್ದಿತು. ಮತ್ತು ೬ ಮಕ್ಕಳಿರುವರು. ಇವರ ದೊಡ್ಡ ಮಕ್ಕಳಿಬ್ಬರು ಬಿ. ಎ. ಪರೀಕ್ಷೆಗೆ ಓದುತ್ತಿರುವರು. ಕೈ|| ಮಲ್ಲಿಕಾರ್ಜುನಪ್ಪನವರು ಬಿ. ಎ. ತರಗತಿಯವರೆಗೆ ಓದಿ ಲಾಯರು ಪರೀಕ್ಷೆಯನ್ನು ಕೊಟ್ಟು ಕೆಲಕಾಲದವರೆಗೆ ವಕೀಲರಾಗಿದ್ದು ಅನಂತರ ಸರ್ಕಾರಿಯುದ್ಯೋಗಕ್ಕೆ ಸೇರಿ ಕೆಲಕಾಲ ತಾ|| ಅಮಲ್ದಾರರಾಗಿಯೂ ಡಿ|| ಶಿರಸ್ತೆದಾರರಾಗಿಯೂ ಇದ್ದರು. ಇವರುಪಾಪಭೀರುಗಳೂ ಶಾಂತಸ್ವಭಾವದರೂ, ನಿಗರ್ವಶಿರೋಮಣಿಗಳೂ, ದಯಾಪರರೂ ಆಗಿದ್ದು ವಿಶೇಷವಾದ ಜನಾನುರಾಗಕ್ಕೆ ಪಾತ್ರರಾಗಿದ್ದರು. ಇಂತಹ ಗುಣಾಢ್ಯರ ಅಕಾಲಮರಣದಿಂದ ಅವರ ಕುಟುಂಬಕ್ಕೂ ಸ್ವಜನಪರಜನ ಮಿತ್ರಮಂಡಲಿಗೂ ಬಹಳ ಖೇದವುಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯೂ, ವಿಯೋಗ ದುಃಖಕ್ಕೀಡಾದ ಅವರ ಕುಟುಂಬಕ್ಕೆ ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ಭರತಖಂಡದ ವೃತ್ತಾಂತಗಳು.

ಕ್ಷತ್ರಿಯೋಪಕಾರಿಣೀ ಮಹಾಸಭೆಯ ೨೪ನೆ ವಾರ್ಷಿಕಾಧಿವೇಶನವು ಬರುವ ತಾ|| ೨೮-೨೯-೩೦ರಲ್ಲಿ ಜಗನ್ನಾಥಕ್ಷೇತ್ರದಲ್ಲಿ ಕಾಶ್ಮೀರ ಮಹಾರಾಜರ ಅಧ್ಯಕ್ಷತೆಯಲ್ಲಿ ನಡೆಯುವುದು.

ಕಳೆದ ತಾ|| ೧೬ ರಲ್ಲಿ ಬಂಗಾಳದ ಮೈಮನ್‌ಸಿಂಗ್ ಮಾಣಿಕ್‌ಗಂಜ್ ಮೊದಲಾದ ಕಡೆಗಳಲ್ಲಿರುವ ಕೆಲವು ಕೆರೆಗಳಲ್ಲಿ ನೀರು ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಗಡಿಯಾರದ ಪೆಂಡಲಮ್ಮು ತೂಗಾಡುವಂತೆ ಸ್ವಲ್ಪಕಾಲ ತೂಗಾಡುತ್ತಿದ್ದಿತಂತೆ.

ಬರ್ಮಾದಲ್ಲಿ ಈ ವರ್ಷ ಬತ್ತದ ಬೆಳಸು ಬಹಳ ಹುಲುಸಾಗಿದೆಯಂತೆ. ಬಹುಶಃ ೬೬೮೨೦೦೦ ಟನ್ ಧಾನ್ಯವು ಬೆಳೆಯಬಹುದೆಂದೂ, ಅದರಲ್ಲಿ ಆ ದೇಶಕ್ಕೆ ಬೇಕಾದಷ್ಟನ್ನು ಉಳಿಸಿಕೊಂಡು ಮಿಕ್ಕ ೧೯೫೮೦೦೦ ಟನ್ ಧಾನ್ಯವನ್ನು ಹೊರಕ್ಕೆ ಕಳುಹಿಸಲಾಗುವುದೆಂದೂ ಗೊತ್ತಾಗುತ್ತದೆ.

ಸಂಯುಕ್ತಪ್ರಾಂತ, ಪಂಜಾಬು ಮೊದಲಾದ ಕೆಲ ಪ್ರಾಂತಗಳಲ್ಲಿ ಲೆಫ್ಟಿನೆಂಟ್ ಗೌರ್ನರುಗಳಾಗಿದ್ದವರೆಲ್ಲಾ ಇನ್ನು ಮುಂದೆ ನೂತನ ಸಂಸ್ಕರಣದ ಪ್ರಕಾರ ಗೌರ್ನರುಗಳೆಂದೇ ಕರೆಯಲ್ಪಡುವರೆಂದೂ, ಅವರುಗಳು ಎಚ್. ಎಚ್. ಬಿರುದುಗಳಿಗೂ ಕೂಡ ಅರ್ಹರಾಗಿರುವರೆಂದೂ ಸಾರ್ವಭೌಮರು ಪ್ರಕಟಿಸಿದ್ದಾರೆ.

ಬಂಗಾಳದಲ್ಲಿ ಜಾತೀಯ ವಿದ್ಯಾಪೀಠವನ್ನು ಸ್ಥಾಪಿಸಲಿಕ್ಕೆ ಭವಾನೀಪುರದ ಬಾಬು ಗೋಪಾಲಚಂದ್ರಸಿನ್ಹರವರು ೧ ಲಕ್ಷ ರೂ. ಗಳನ್ನು ಕೊಟ್ಟರು. ಈ ವಿದ್ಯಾಸಂಘಕ್ಕೆ ಸರ್ ರಸಬಿಹಾರಿಘೋಷ್‌ರವರು ಅಧ್ಯಕ್ಷರಾಗಿಯೂ, ಸರ್ ಅಶುತೋಷಚೌಧುರಿಯವರೇ ಮೊದಲಾದ ಕೆಲ ವಿದ್ಯಾಧಿಕ ಜನರು ಸಭಿಕರಾಗಿಯೂ ಇದ್ದಾರೆ.

ನೂತನ ರಾಜಕೀಯ ಸಂಸ್ಕರಣ ಶಾಸನವು ಮಧ್ಯಪ್ರಾಂತ ಮದ್ರಾಸು ಆಧಿಪತ್ಯಗಳಲ್ಲಿ ಈ ತಿಂಗಳು ತಾ|| ೧೭ ರಿಂದಲೂ, ಬೀಹಾರ್ ಒರಿಸ್ಸಾ ಪ್ರಾಂತದಲ್ಲಿ ತಾ|| ೨೯ ರಿಂದಲೂ, ಉಳಿದ ಆಧಿಪತ್ಯಗಳಲ್ಲೆಲ್ಲಾ ಬರುವ ಜನವರಿ ತಾ|| ೩ ರಿಂದಲೂ ವ್ಯವಹಾರಕ್ಕೆ ಬರುವುವು. ಆಯಾ ಆಧಿಪತ್ಯಗಳಲ್ಲಿದ್ದ ಗೌರ್ನರುಗಳ ಕಾರ್ಯನಿರ್ವಾಹಕ ಸಂಘದ ಈಗಣ ಸಭಿಕರ ಅಧಿಕಾರದವಧಿಯೆಲ್ಲಾ ಅಲ್ಲಿಂದ ಆಚೆಗೆ ಮುಗಿದುಹೋಗುವುದು.

ಭರತಖಂಡದಲ್ಲಿ ದಿನದಿನಕ್ಕೆ ಪರದೇಶದ ಸಕ್ಕರೆಯ ಬೆಲೆಯು ಇಳಿಯುತ್ತಿದೆ. ಬೊಂಬಾಯಿ ಕಲ್ಕತ್ತಾ ಮೊದಲಾದ ಕಡೆಗಳಲ್ಲಿಯೂ ಬೆಲೆಯು ಬಿದ್ದುಹೋಗಿದೆ. ಕೊಳ್ಳುವವರೇ ಇಲ್ಲ. ಸಕ್ಕರೆಯ ಉತ್ಪತ್ತಿಸ್ಥಾನವಾದ ಜಾವಾದಲ್ಲೂ ಇಂಗ್ಲೆಂಡ್ ಅಮೇರಿಕಾಗಳಲ್ಲೂ ಬೆಲೆ ಬಿದ್ದುಹೋಗಿದೆ. ಇದರಿಂದ ಬಹುಮಂದಿ ಸಕ್ಕರೆಯ ವ್ಯಾಪಾರಿಗಳು ದಿವಾಳಿಗಳಾಗುವ ಹೊತ್ತು ಬಂದಿದೆ. ಬೊಂಬಾಯಿ ಬಂದರುಗಳಲ್ಲಿ ಜಾವಾ ಮಾರಿಷಸ್ಸುಗಳ ಮೂಟೆಗಳು ೧೮೫೦೦೦ ಬಿದ್ದಿರುತ್ತವೆ.

ನೂತನ ಸಂಸ್ಕರಣದ ಪ್ರಕಾರ ಮದರಾಸು ಆಧಿಪತ್ಯದಲ್ಲಿ ಏರ್ಪಡುವ ಶಾಸನ ಸಭೆಯ ಮಂತ್ರಿಪದವಿಗೆ ದಿ|| ಬ|| ಎ. ಸುಬ್ಬರಾಯಲು ರೆಡ್ಡಿಯವರೂ, ದಿ|| ಬ|| ಪಿ. ರಾಮರಾಯಣಿಯವರೂ, ರಾ|| ಬ|| ಕೂರ್ಮಾ ವೆಂಕಟರೆಡ್ಡಿನಾಯುಡುರವರೂ ನಿಯುಕ್ತರಾಗಿದ್ದಾರೆ. ಮ|| ಸಿ. ಪಿ. ರಾಮಸ್ವಾಮಯ್ಯರು ಅಡ್ವೋಕೇಟ್ ಜನರಲ್ಲಾಗಿಯೂ, ದಿ|| ಬ|| ಸರ್ ಪಿ. ರಾಜಗೋಪಾಲಾಚಾರಿಯವರು ಶಾಸನ ಸಭಾಧ್ಯಕ್ಷರಾಗಿಯೂ, ದಿ|| ಬ|| ಲಿಲಿಸ್ ಡಾಮಿನಿಕ್ ಸ್ವಾಮಿಕನ್ನುಪಿಳ್ಳೆ ಐ. ಎಸ್. ಒ ರವರು ಶಾಸನಸಭೆಯ ಕಾರ್ಯದರ್ಶಿಯಾಗಿಯೂ ನಿಯಮಿಸಲ್ಪಟ್ಟಿದ್ದಾರೆ.

ಫ್ರಾನ್ಸಿನ ಹಿಂದಣ ಮಂತ್ರಿಗಳಾಗಿದ್ದ ಮಿ|| ಕ್ಲೆಮೆಂಕೋರವರು ಈಗ ಭರತಖಂಡದ ಉತ್ತರ ಭಾಗದಲ್ಲಿ ಸಂಚರಿಸುತ್ತಿದ್ದಾರೆ. ತಾ|| ೧೫ ರಲ್ಲಿ ಇವರು ಅಲಹಾಬಾದನ್ನು ಸೇರಿ ಅಲ್ಲಿಯ ಲೆ|| ಗೌರ್ನರ್ ಸರ್ ಹಾರ್ಕೋಟ್ ಬಟ್ಲರ್‌ರವರ ಆತಿಥ್ಯದಲ್ಲಿದ್ದರು. ಇವರು ಅಲ್ಲಿಯ ಪಯೋನಿಯರ್ ಪತ್ರಿಕಾ ಪ್ರತಿನಿಧಿಯೊಡನೆ ಮಾತನಾಡುವಾಗ್ಗೆ ಭರತಖಂಡದಲ್ಲಿ ನಡೆಯುವ ಅತಿಥಿ ಸತ್ಕಾರವು ಅನ್ಯಾದೃಶವೆಂದು ಹೇಳಿದರಂತೆ. ಇವರು ಕಾಶಿಗೆ ಹೋಗಿ ಅಲ್ಲಿಯ ಮಹಾರಾಜರ ಔತಣವನ್ನು ಪರಿಗ್ರಹಿಸಿದರು. ಅಲ್ಲಿಯ ಹಿಂದೂ ವಿಶ್ವವಿದ್ಯಾಲಯವನ್ನು ಅವಲೋಕಿಸಿ ಬಹಳ ಸಂತೋಷಪಟ್ಟರು.

ಕಳೆದ ತಾ|| ೧೮ ರಲ್ಲಿ ಮದ್ರಾಸಿನಲ್ಲಿ ೫೦೦ ಮಂದಿ ವಿದ್ಯಾರ್ಥಿಗಳು ಸ್ವರಾಜ್ಯ ಜಯಯಾತ್ರೆಯೆಂಬುದನ್ನು ಮಾಡಿದರು. ಆ ಉತ್ಸವದಲ್ಲಿ ಹಿಡಿದುಕೊಂಡಿದ್ದ ಬಾವುಟದ ಮೇಲೆ ಬರೆದಿದ್ದ ವಾಕ್ಯಗಳಲ್ಲಿ "ಕನ್ನಾಟ್ ಪ್ರಭುವನ್ನು ಬಹಿಷ್ಕರಿಸಿ" ಎಂಬುದಾಗಿದ್ದಿತು. ಸಾರ್ವಭೌಮರಿಗೆ ಪ್ರತಿನಿಧಿಯಾಗಿ ಇಲ್ಲಿಗೆ ಇಷ್ಟರಲ್ಲೇ ಬರುವುದಕ್ಕಿರುವ ಡ್ಯೂಕ್ ಆಫ್ ಕನ್ನಾಟ್‌ರವರನ್ನು ಕುರಿತು ಈ ಮಾತನ್ನಾಡುವುದೂ ಒಂದೇ, ಸಾರ್ವಭೌಮರನ್ನು ಕುರಿತು ಆಡುವುದೂ ಒಂದೇ. ವಿದ್ಯಾರ್ಥಿಗಳನ್ನು ಚಿಕ್ಕಂದಿನಿಂದಲೂ ರಾಜಭಕ್ತಿಗೆ ಎರವಾಗಿ ಮಾಡುವ ಪ್ರೇರಣೆಯು ಈಗಣ ಚಳವಳಿಯಲ್ಲಿ ಹೀಗೆ ತುಂಬಿದೆಯೆಂಬುದಕ್ಕೆ ಇದೊಂದು ದೃಷ್ಟಾಂತ.

ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ವ್ಯವಸಾಯ ಕಲಾಶಾಲೆಯನ್ನು ಸ್ಥಾಪಿಸುವುದಕ್ಕೆ ತೀರ್ಮಾನವಾಗಿರುವುದು. ಗಂಗಾನದಿಯಿಂದ ೧೦೦ ಅಡಿ ಅಗಲದ ಒಂದು ಕಾಲ್ವೆಯನ್ನು ೧ ಮೈಲಿ ದೂರ ತೋಡಿ ಅದರಿಂದ ಕಲಾಶಾಲೆಯ ಆವರಣಕ್ಕೆ ನದೀ ಜಲವನ್ನು ಸಾಗಿಸಿ ವ್ಯವಸಾಯ ಕ್ಷೇತ್ರವನ್ನೇರ್ಪಡಿಸಬೇಕೆಂದು ಗೊತ್ತಾಗಿದೆ. ಈ ಕಾಲ್ವೆಯನ್ನು ತೋಡುವ ಆರಂಭ ಮಹೋತ್ಸವವನ್ನು ಕಾಶೀ ಮಹಾರಾಜರು ನೆರವೇರಿಸಿದರು. ಕಾಲ್ವೆಗೆ ಬೇಕಾದ ಭೂಮಿಯನ್ನು ಆ ಮಹಾರಾಜರೇ ಧರ್ಮಾರ್ಥವಾಗಿ ಕೊಟ್ಟರು. ಆನರೆರಿ ಚೀಫ್ ಇಂಜಿನಿಯರ್ ರಾಯಿ ಗಂಗಾರಾಮ್ ಬಹದ್ದೂರ್‌ರವರು ಕಲಾಶಾಲೆಯ ವೆಚ್ಚಕ್ಕಾಗಿ ೨ ಲಕ್ಷ ರೂ. ಗಳನ್ನು ಕೊಟ್ಟರು.

ಕಳೆದ ೧೯೧೯-೨೦ ನೆ ವರ್ಷದ ಬೊಂಬಾಯಿ ಆಧಿಪತ್ಯದ ಯಂತ್ರಾಲಯಗಳಿಗೆ ಸಂಬಂಧಿಸಿದ ಸರ್ಕಾರಿ ವರದಿಯಿಂದ ಈ ವಿಷಯಗಳು ಗೊತ್ತಾಗುತ್ತವೆ-ಹತ್ತಿಯ ಯಂತ್ರಾಲಯಗಳು ಅಭಿವೃದ್ಧಿ ದಶೆಯಲ್ಲಿವೆ. ಇದರಿಂದ ಮಾಂಚಸ್ಟರಿನ ಹತ್ತಿ ಯಂತ್ರಗಾರಿಕೆಗೆ ಸ್ವಲ್ಪ ನಷ್ಟವು ಸಂಭವಿಸಿತು. ಈ ವರ್ಷ ಯಂತ್ರಾಲಯಗಳ ಮತ್ತು ಅವುಗಳಲ್ಲಿ ಕೆಲಸ ಮಾಡುವ ಜನರ ಸಂಖ್ಯೆಯು ಹೆಚ್ಚಿತು. ಒಟ್ಟು ಇದ್ದ ೭೪೧ ಹತ್ತಿ ಮಿಲ್ಲುಗಳಲ್ಲಿ ೨೪೫೬೪೨ ಮಂದಿ ಕೆಲಸ ಮಾಡುತ್ತಿದ್ದರು. ಕೆಲಸಗಾರರಿಗೆ ವಸತಿಗೃಹಗಳನ್ನು ಕಟ್ಟಿಸಿಕೊಡುವುದಕ್ಕೆ ಮಿಲ್ ಯಜಮಾನರು ಶ್ರದ್ಧೆವಹಿಸುತ್ತಿದ್ದಾರೆ. ಕಳೆದ ವರ್ಷ ಅಹಮ್ಮದಾಬಾದಿನಲ್ಲೇ ೪೦೦ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಈ ವರ್ಷ ಇನ್ನೂ ೮೦೦ ಮನೆಗಳನ್ನು ಕಟ್ಟಿಸಬಹುದು.

ನೀವು ಶಾಸನ ಸಭೆಯ ಚುನಾವಣೆಯಲ್ಲಿ ಎಲ್ಲರಿಗಿಂತಲೂ ಹೆಚ್ಚು ಓಟುಗಳನ್ನು ಪಡೆದ ಪಕ್ಷದ ನಾಯಕರಾದ ಕಾರಣ ನೀವು ಒಂದು ಶಾಖೆಯ ಮಂತ್ರಿತ್ವವನ್ನು ವಹಿಸಿಕೊಳ್ಳಬೇಕೆಂದು ಮದ್ರಾಸ್ ಗೌರ್ನರವರು ಸರ್ ಪಿ. ತ್ಯಾಗರಾಜಶೆಟ್ಟರಿಗೆ ಪತ್ರವನ್ನು ಬರೆದು ಕೇಳಿದರು. ನನಗೆ ವೃದ್ಧಾಪ್ಯವಶೆಯಿರುವುದಲ್ಲದೆ ಮದ್ರಾಸ್ ಕಾರ್ಪೊರೇಷನ್ ಪ್ರಸಿಡೆಂಟ್‌ಗಿರಿಯ ಕಾರ್ಯಭಾರವೂ ಅಧಿಕವಾಗಿರುವುದು. ಅಲ್ಲದೆ ಮಂತ್ರಿಯಾಗಿ ಕುಳಿತುಕೊಳ್ಳುವುದಕ್ಕಿಂತಲೂ ಪ್ರಜಾಪಕ್ಷದಲ್ಲಿ ನೂತನ ಸಂಸ್ಕರಣಶಾಸನವು ಈ ಆಧಿಪತ್ಯದಲ್ಲಿ ಜಯಪ್ರದವಾಗಿ ಸಾಗುವಂತೆ ಮಾಡುವುದಕ್ಕೆ ಸ್ವತಂತ್ರವಾಗಿ ನಿಂತು ಕೆಲಸ ಮಾಡುವೂ ನಾನು ಸಿದ್ಧನಾಗಿರುವುದೇ ಉತ್ತಮವೆಂದು ನಿರ್ಧರಿಸಿರುವೆನು ಎಂದು ಉತ್ತರ ಕೊಟ್ಟರು. ಅದರ ಮೇಲೆ ಇವರ ಸೂಚನೆಯ ಪ್ರಕಾರ ದಿ|| ಬ|| ಎ. ಸುಬ್ರಾಯಲುರೆಡ್ಡಿಯವರೇ ಮೊದಲಾದ ಮೂವರು ಮಂತ್ರಿಗಳಾಗಿ ಏರ್ಪಟ್ಟರು.

ಈಗಣ ಎಕ್ಸ್‌ಛೇಂಜ್ ದರವು ಬಹಳ ತಗ್ಗಿರುವುದರಿಂದ ವರ್ತಕರಿಗೆ ಬಹಳ ನಷ್ಟ ಸಂಭವಿಸುತ್ತಿರುವ ಕಾರಣ ಬೊಂಬಾಯಿ ಪೀಸ್‌ಗೂಡ್ಸ್ ವರ್ತಕ ಸಂಘದವರು ಒಂದು ಸಭೆಗೂಡಿ, ಈ ವಿಷಯವಾಗಿ ಸರ್ಕಾರದವರು ತಕ್ಕಷ್ಟು ಗಮನಕೊಡುವುದಿಲ್ಲವಾದಕಾರಣ ತಾವು ಆತ್ಮೋದ್ಧಾರಾರ್ಥವಾಗಿ ಪ್ರಯತ್ನಪಟ್ಟುಕೊಳ್ಳಬೇಕಾಗಿದೆಯೆಂದೂ, ಈಗಣ ತೊಂದರೆಯು ತಪ್ಪುವವರೆಗೂ ತಮ್ಮ ಸಂಘದ ಸಭಿಕರಾರೂ ವಿದೇಶಗಳಿಂದ ಬಟ್ಟೆಗಳ ಥಾನುಗಳನ್ನು ತರಿಸಕೂಡದೆಂದೂ, ಅವನ್ನು ಮಾರಲೂ ಕೂಡದೆಂದೂ, ಇದಕ್ಕೆ ವ್ಯತಿರೇಕವಾಗಿ ನಡೆದವರಿಂದ ಅವರು ತರಿಸಿಕೊಂಡ ಮೂಟೆ ೧ ಕ್ಕೆ ೧೦೦ ರೂ. ನಂತೆ ಅರ್ಥದಂಡವನ್ನು ವಿಧಿಸಿ, ಅದರಲ್ಲಿ ||| ಭಾಗವನ್ನು ಅದನ್ನು ಪತ್ತೆಮಾಡಿಕೊಟ್ಟವರಿಗೆ ಸಲ್ಲಿಸಬೇಕೆಂದೂ ಅಂಥ ದಂಡವನ್ನು ಕೊಡದೆ ಹೋದವರೊಡನೆ ಇತರ ವರ್ತಕರಾರೂ ಲೇವಾದೇವಿಯನ್ನು ನಡೆಯಿಸಕೂಡದೆಂದೂ ನಿರ್ಧಾರ ಮಾಡಿದರು.

ಢಕ್ಕಾದಲ್ಲಿ ಕೂಡಿದ್ದ ಬಂಗಾಳಾ ಮಹಮ್ಮದೀಯ ಮಹಾಸಭೆಗೆ ಅಧ್ಯಕ್ಷರಾಗಿದ್ದ ಮಿ|| ಫಜರುಲ್ ಹಕ್‌ರವರು ತಮ್ಮ ಭಾಷಣದಲ್ಲಿ "ವಿದ್ಯಾರ್ಥಿಗಳು ಪಾಠಶಾಲೆಗಳನ್ನು ಬಹಿಷ್ಕರಿಸುವುದು ಯುಕ್ತವಲ್ಲ. ಸಹಾಯನಿರಾಕರಣೋದ್ಯಮವು ನ್ಯಾಯವಿರುದ್ಧವೂ ಧರ್ಮವಿರುದ್ಧವೂ ಆಗಿರುವುದು. ಇಂಥ ವಿಷಮ ಸಮಯದಲ್ಲಿ ಮಹಮ್ಮದೀಯ ಪ್ರಮುಖರು ಉದಾಸೀನರಾಗಿರುವುದು ತಪ್ಪು. ಈ ಉದ್ಯಮವು ಅಧಿಕವಾಗಿ ವ್ಯಾಪಿಸಿದರೆ ದೇಶವು ಹಾಳಾಗುವುದು. ಕೆಲ ಸಾವಿರ ಮಂದಿ ವಿದ್ಯಾರ್ಥಿಗಳು ಪಾಠಶಾಲೆಗಳನ್ನು ಬಿಟ್ಟು, ಬಾಧ್ಯತೆಯಿಲ್ಲದ ಕೆಲ ಜನರು ಪ್ರಜೆಗಳ ಹಣವನ್ನು ಮನಸ್ಸು ಬಂದಂತೆ ಎರಚಿಬಿಟ್ಟರೆ ತುರ್ಕಿಯ ಸಂಧಿನಿಬಂಧನೆಯು ಬದಲಾಯಿಸಿಹೋಗುವುದೆಂದು ಯಾರೂ ನಂಬರು. ದೇಶದಲ್ಲಿ ಅರಾಜಕತೆಯನ್ನು ಹೆಚ್ಚಿಸಬೇಕೆಂಬುದೇ ಕೆಲವರ ಉದ್ದೇಶವಾಗಿದೆ. ದೇಶಕ್ಷೇಮವನ್ನು ಕೋರತಕ್ಕ ನಾವು ಅಂಥ ಅರಾಜಕ ಭಾವವು ವ್ಯಾಪಿಸದಿರುವಂತೆ ಪ್ರತಿಕ್ರಿಯೆಯನ್ನು ಮಾಡದೆ ಸುಮ್ಮನಿರುವುದು ಧರ್ಮವಲ್ಲ" ಎಂದು ಹೇಳಿದರು.

ಪ್ರಸಿದ್ಧಪತ್ರಿಕೆ.

3-3

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಹಾಸನ್ ಟನನ್ನಿನಲ್ಲಿರುವ ಡಿಸ್ಟ್ರಿಕ್ಟು ಪೋಲೀಸ್ ಆಫೀಸ್ ಕಾಂಪೌಂಡು ಮುಂಭಾಗದಲ್ಲಿ ಮಾಮೂಲ್ ಮೇರೆ ಸನ್ 1921 ನೇ ಇಸ್ವಿ ಜನವರಿ 3-4 ನೆ ಮತ್ತು 5 ನೆ ತಾರೀಖುಗಳಲ್ಲಿ ದನಗಳ ಪ್ರದರ್ಶನವು ನಡೆಸಲ್ಪಡುತ್ತೆ. ಪ್ರದರ್ಶನಾಲಯಕ್ಕೆ ಬರತಕ್ಕ ರಾಸುಗಳ ವಿಚಾರದಲ್ಲು ಮತ್ತು ಇನಾಮುಗಳ ವಿಚಾರದಲ್ಲು ಸಹಾ ಮೈಸೂರು ಗೆಜೆಟ್ಟಿನಲ್ಲಿ [illegible] ಮಾಡಲ್ಪಟ್ಟಿರುತ್ತೆ.

ತಾ|| 5-12-20.

Mohamed Razak,
ವೈಸ್‌ಪ್ರೆಸಿಡೆಂಟ್,
ಹಾಸನ್ ಟವುನ್ ಮ್ಯುನಿಸಿಪಾಲಿಟಿ.

ಪತ್ರವ್ಯವಹಾರ.

ಹೇಮಾರೆಡ್ಡಿ ಮಲ್ಲವ್ವನ ಪುರಾಣ.

ಈ ಮೇಲೆ ಬರೆದ ಪುರಾಣ ಯಾವ ಠಿಕಾಣೆಯಲ್ಲಿ ದೊರೆಯುವುದೋ ಅದರ ವಿಳಾಸವನ್ನು ನಮಗೆ ತಿಳಿಸಿರಿ. ಒಂದು ಪಕ್ಷದಲ್ಲಿ ಪುರಾಣವು ದೊರೆಯದಿದ್ದರೆ ನಿಮ್ಮ ಪತ್ರಿಕೆಯೊಳಗೆ ಪ್ರಸಿದ್ಧ ಮಾಡಿ ಎಲ್ಲ ಜನರಿಗೂ ತಿಳಿಸಿರಿ. ಯಾವ ಮನೆಯಲ್ಲಿಯೇ ಆಗಲಿ ಅಥವಾ ಛಾಪೆಯಲ್ಲಿಯೇ ಆಗಲಿ ದೊರೆತರೆ ಆ ಪುರಾಣದ ಯೋಗ್ಯ ಕಿಮ್ಮತ್ತು ಕೊಟ್ಟುಬಿಟ್ಟು ತೆಗೆದುಕೊಳ್ಳುತ್ತೇನೆ.

ಶ್ರೀಮನ್ನಿರಂಜನ ಉದ್ದೇಶಸ್ವಾಮಿಗಳು ವಿರಕ್ತಮಠ, ಜಮಖಂಡಿ.

ಬಾಗಲಕೋಟೆ.

ಸಾಮಾಜಿಕ, ಧಾರ್ಮಿಕ, ನೈತಿಕ ವಿದ್ಯಾವಿಷಯಕ ಸುಧಾರಣೆಗಳನ್ನು ಮಾಡುವದಕ್ಕೋಸುಗ ಇಲ್ಲಿ ಕಾರ್ತಿಕ ಶು|| ೧ ದಿವಸ ನಾವೆಲ್ಲರೂ ಕೂಡಿ ವೀರಶೈವ ತರುಣ ಸಂಘವನ್ನು ಸ್ಥಾಪಿಸಿದ್ದೇವೆ. ಮೇಲಿನ ಉದ್ದೇಶಗಳು ಸಫಲವಾಗಲಿಕ್ಕೆ ವಾಚನಾಲಯ, ಚರ್ಚಾ ಸಭೆ, ಸ್ವಯಂ ಸೇವಕರ ಸಂಘ, ಸಾಪ್ತಾಹಿಕ ವ್ಯಾಖ್ಯಾನಮಾಲೆ ಈ ಉಪಸಂಸ್ಥೆಗಳು ಸದ್ಯಕ್ಕೆ ಏರ್ಪಡಿಸಲ್ಪಟ್ಟಿವೆ. ಈ ಸಂಘಕ್ಕೆ ೪೦-೫೦ ಮಂದಿ ಮೆಂಬರರಿದ್ದಾರೆ. ಈ ಸಂಘಕ್ಕೆ ಮ|| ರಾ|| ಲೋಕನಪ್ಪ ಅಣ್ಣಿಗೇರಿಯವರು ಅಧ್ಯಕ್ಷರಾಗಿದ್ದಾರೆ. ಈಗ ಈ ಸಂಘವು ಊರ್ಜಿತಾವಸ್ಥೆಯಲ್ಲಿದೆ.

ಶ್ರೀ ವೀರಶೈವಮತಸಂವರ್ಧಿನೀ ಸಭಾ, ಮುದುಕುದೊರೆ.

ಈ ಸಭೆಯು ೧೯೨೧ನೆ ಇಸವಿ ಫೆಬ್ರವರಿ ೧೪-೧೫-೧೬ ಈ ಮೂರು ದಿವಸಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ತಿ. ನರಸೀಪುರದ ತಾಲ್ಲೂಕು ಮುದುಕುದೊರೆ ಕ್ಷೇತ್ರದಲ್ಲಿ ನಡೆಯುವುದು. ಈ ವರ್ಷ "ಶಿವಾದ್ವೈತಸಿದ್ಧಾಂತ" ವಿಷಯವಾಗಿ ಭಾಷಣವಾಗುತ್ತದೆ. ಯಾರ ಉಪನ್ಯಾಸವು ಉತ್ತಮವಾಗಿದೆಯೋ ಅವರಿಗೆ "ಶಿವಾದ್ವೈತ ವಿದ್ಯಾವಿಭೂಷಣ" ಎಂಬ ಪ್ರಶಸ್ತಿಯು ತಕ್ಕ ಮರ್ಯಾದೆಯೊಡನೆ ಕೊಡಲ್ಪಡುತ್ತದೆ. ಇವರು ತಮ್ಮ ಭಾಷಣಗಳನ್ನು ಮುಂದಾಗಿ ಎಂದರೆ ೮-೨-೧೯೨೧ ರೊಳಗೆ ಈ ಸಭಾಕಾರ್ಯನಿರ್ವಾಹಕಮಂಡಲಿ ಅಧ್ಯಕ್ಷರಾದ ಶ್ರೀಯುತ ಟಿ. ಪಿ. ಮಲ್ಲಪ್ಪನವರು ಕೊಳ್ಳೆಗಾಲ, ಕೊಯಮತ್ತೂರು ಡಿಸ್ಟ್ರಿಕ್ಟು ಇವರ ಬಳಿಗೆ ಕಳುಹಿಸಬೇಕೆಂದು ಕೋರುತ್ತೇನೆ.

ಆಸ್ಥಾನ ಮಹಾವಿದ್ವಾನ್ ಕರ್ನಾಟಕ
ಭಾಷಾರತ್ನ ಕರಿಬಸವಶಾಸ್ತ್ರಿ, ಆಜೀವಸಭಾಧ್ಯಕ್ಷ.

ಕುಣಿಗಲ್ ತಾಲ್ಲೂಕು ಎಡೆಯೂರು.

ಈ ಊ[illegible] ಮುಜರಾಯಿ ಮ್ಯಾನೇಜ್[illegible]ರುವ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ದೇವಸ್ಥಾನವು ಶ್ರೀ ಕ್ಷೇತ್ರ [illegible] ರಥೋತ್ಸವ [illegible] ನಡೆಯುವದಾಗಿದೆ. ಪ್ರತಿ ವರ್ಷವೂ ದನ ಮತ್ತು ಕುದುರೆಗಳ ಪ್ರದರ್ಶನದೊಡನೊಡನೆ ಜಾತ್ರೆಯಂತೆ [illegible] ಜನ ಯಾತ್ರಾರ್ಥಿಗಳ ಸಮುದಾಯದೊಡನೆ ಸೇರಿ [illegible] ಒಂದು ಲಕ್ಷ[illegible]ರಿಂದ ಪ್ರತಿ ವರ್ಷದಲ್ಲೂ ಸಾವಿರಾರು ರೂ. ಗಳ ಉತ್ಪತ್ತಿಯು [illegible]ಲ್ಪಡುತ್ತದೆ. ಈ ರಥವು ಮರದ ಬೊಂಬೆಗಳಿಂದಲೂ ಘನತರವಾದ ಶಿಲ್ಪ ಚಾತುರ್ಯದಿಂದಲೂ, ದೊಡ್ಡ ಅಚ್ಚುಗಳು ಗಾಲಿಗಳಿಂದಲೂ ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸುವಂತಹ ಸುಮಾರು ಹನ್ನೆರಡ ಸಾವಿರ ರೂ. ಗಳ ಬೆಲೆಬಾಳತಕ್ಕದ್ದಾಗಿದೆ. ಇದಕ್ಕೆ ಮಳೆ ಬಿಸಿಲು ತಾಕದಂತೆ ಇಲ್ಲದಂತೆ ಮಾಡುವದಕ್ಕಾಗಿ ಹುಲ್ಲುಚಾವಣಿ ಹಾಕುತ್ತಾ ರಥೋತ್ಸವ ಕಾಲದಲ್ಲಿ ಬಿಚ್ಚುತ್ತಲೂ, ತಿರಿಗಿ ಕಟ್ಟುತ್ತಲೂ, ದುಬಾರಿ ಖರ್ಚು [illegible] ವರ್ಷಗಳ ಹಿಂದೆ ಈ ರಥಕ್ಕೆ ಬೆಂಕಿಯಿಂದ ಅಪಾಯ ಸಂಭವಿಸಿದ್ದುದು ದೇವಸ್ಥಾನದ ಮ್ಯಾನೇಜ್ಮೆಂಟಿನವರ ಅವಗಾಹನೆಗೆ ಬಂದಿದ್ದರೂ ಕೂಡ ಇನ್ನೂ ಗಾಢನಿದ್ರೆಯಲ್ಲಿದ್ದಾರೆ. ಈ ದೇವಸ್ಥಾನದ ಫಂಡಿನಲ್ಲಿ ಸುಮಾರು ೩೦-೪೦ ಸಾವಿರ ರೂ. ಗಳವರೆಗೂ ನಿಂತುಹೋಗಿದೆ. ಈಗಲಾದರೂ ಮ್ಯಾನೇಜ್ಮೆಂಟಿನವರು ಅಕಸ್ಮಾತ್ ಉಂಟಾಗತಕ್ಕದ್ದಾದ ಅಪಾಯದಿಂದ ಹತ್ತಾರು ಸಾವಿರ ರೂ. ಗಳ ನಷ್ಟ ಪಡಿಸಿಕೊಂಡು ವ್ಯಸನಪಡುವದಕ್ಕಿಂತಲೂ ಈಗಲೇ ಮುಂದಾಗಿ ಎಚ್ಚತ್ತು ಸ್ವಲ್ಪ ಖರ್ಚಿನಿಂದಲೇ ಈ ರಥದ ಮೇಲ್ಛಾವಣೆಯನ್ನು ಜಿಂಕ್ ಶೀಟಿನಿಂದ (ತಗಡಿನಿಂದ) ತಯಾರ್ ಮಾಡಿಸುವದು ಸರ್ವೋತ್ತಮವಲ್ಲವೇ? ಆದ್ದರಿಂದ ಸರ್ಕಾರದವರು ದಯವಿಟ್ಟು ಈ ಕೆಲಸವನ್ನು ಶೀಘ್ರದಲ್ಲಿಯೇ ಮಾಡಿಸುತ್ತಾರೆಂದು ನಂಬಿ ಈ ಮೂಲಕ ಪ್ರಕಟಪಡಿಸಿ[illegible]ದು ಬರುತ್ತೇನೆ. (ಎಂ. ಬಿ. ಗೌಡ.)

ಅಥಣಿ ಸಂಸ್ಕೃತ ಪಾಠಶಾಲಾ.

ಶ್ರೀಮದ್ರತ್ನಗರ್ಭಾಂಕಿತವೆಂದೆನ್ನಿಸುವ ಈ ಭರತಖಂಡದ ಪುಣ್ಯಭೂಮಿಯಲ್ಲಿ ಜಗತ್ಪ್ರಸಿದ್ಧರಾದ ಅನೇಕ ಮಹಾತ್ಮರು ಆಗಾಗ್ಗೆ ಅವತರಿಸಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಪ್ರಕಾಶಪಡಿಸುತ್ತಾ ಬಂದಂತೆ ಈಗಲೂ ಅಥಣಿ ಗಚ್ಚಿನಮಠದ ಶ್ರೀ ಶಿವಯೋಗೀಶ್ವರ ಮುರುಘೇಂದ್ರಸ್ವಾಮಿಗಳೆಂಬ ಮಹಾ ತಪಸ್ವಿಗಳು ಸಮಸ್ತ ಭಕ್ತಸಮೂಹಕ್ಕೆ ದರ್ಶನವಿತ್ತು ಪ್ರಜ್ವಲಿಸುತ್ತಿರುವುದು ಸರ್ವಪ್ರಸಿದ್ಧವಾಗಿದೆ. ಈ ಮಹಾಮಹಿಮರ ಸ್ಥಾನದಲ್ಲಿ ನಿತ್ಯದಾಸೋಹವು ಎಡೆಬಿಡದೆ ನಡೆಯುತ್ತಿರುವುದು. ಈ ಗಚ್ಚಿನಮಠಕ್ಕೆ ಅಧಿಕಾರಿಗಳಾದ ಶ್ರೀ ಸಿದ್ಧಲಿಂಗಚಂದ್ರಶೇಖರರವರು ಪರಮಪೂಜ್ಯರೂ, ಶಾಂತ ಸ್ವಭಾವರೂ ಇರುತ್ತಾರೆ. ಅನೇಕ ಷಟ್‌ಸ್ಥಲ ವರ್ತಿಗಳೂ, ಬ್ರಹ್ಮಚಾರಿಗಳೂ ಇಲ್ಲಿ ಇದ್ದು ಶ್ರೀಗಳ ದರ್ಶನಾಶೀರ್ವಾದ ಹೊಂದುತ್ತಿರುವರು. ಈ ಪುಣ್ಯಕ್ಷೇತ್ರದಲ್ಲಿ ಸಂಸ್ಕೃತ ಪಾಠಶಾಲೆಯು ಸ್ಥಾಪಿತವಾಗಿದೆ. ಇದಕ್ಕೆ ಪ್ರಸಿದ್ಧ ಲಿಂಗಸ್ವಾಮಿಗಳವರು ಪ್ರಸಿಡೆಂಟರಾಗಿಯೂ, ಅಥಣಿ ಶ್ರೀ ಮೋಟಗಿ ಮಠದ ಚನ್ನಬಸವಸ್ವಾಮಿಗಳವರು ವೈಸ್‌ಪ್ರೆಸಿಡೆಂಟರಾಗಿಯೂ ಇರುತ್ತಾರೆ. ಗಚ್ಚಿನಮಠದ ಶ್ರೀ ಚನ್ನಬಸವಸ್ವಾಮಿಗಳವರು ಪಾಠಶಾಲೆಯ ಯಾವತ್ತೂ ವ್ಯವಸ್ಥೆಯನ್ನು ನೋಡುತ್ತಿರುವರು. ವೇ|| ಸಂಪಗೆ ಸಿದ್ಧಲಿಂಗಶಾಸ್ತ್ರಿಗಳನ್ನು ಅಧ್ಯಾಪಕರನ್ನಾಗಿ ನೇಮಿಸಿದ್ದಾರೆ. ೧೨ ಜನ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿರುವರು. ಅಥಣಿಯಲ್ಲಿ ಶ್ರೀ ಬಸವೇಶ್ವರಫಂಡು ಸ್ಥಾಪನವಾಗಿದೆ. ಈ ಫಂಡಿನಿಂದ ಇಂಗ್ಲೀಷು ವಿದ್ಯಾರ್ಥಿಗಳಿಗೆ ಬಹಳ ಸಹಾಯವಾಗಿದೆ. ಈ ಫಂಡಿಗೆ ಬೀಳೂರ ಶ್ರೀ ಗುರುಬಸವಸ್ವಾಮಿಗಳವರು ಪ್ರಸಿಡೆಂಟರಾಗಿಯೂ ಶ್ರೀ ಮೃತ್ಯುಂಜಯಸ್ವಾಮಿಗಳು ವೈಸ್‌ಪ್ರೆಸಿಡೆಂಟರಾಗಿಯೂ ಇರುತ್ತಾರೆ. ತಾ|| ೧೩-೧೨-೨೦ನೆ ದಿವಸ ವಾರ್ಷಿಕ ಸಭೆಯು ನಡೆಯಿತು. ಫಂಡಿನ ಪ್ರಸಿಡೆಂಟರ ಅಪ್ಪಣೆ ಮೇರೆಗೆ ವೈ. ಪ್ರೆ. ಶ್ರೀ ಮೃತ್ಯುಂಜಯಸ್ವಾಮಿಗಳು ಯಾವತ್ತೂ ಕೆಲಸವನ್ನು ನಡೆಸಿದರು. ಪಾಠಶಾಲಾ ಪರೀಕ್ಷೆಯು ಎಂ. ಎ. ಹಾರ್ದೇಕರ ಮತ್ತು ವೀರಯ್ಯನವರು ಬಿ. ಎ. ಇವರಿಂದ ಲಿಖಿತರೂಪವಾಗಿಯೂ ಶಿರಹಟ್ಟಿ ಸಂಸ್ಥಾನ ಮಠದ ಶ್ರೀ ಫಕೀರೇಶ್ವರ ಪಾಠಶಾಲಾಧ್ಯಾಪಕರಾದ ವೇ|| ವಿರೂಪಾಕ್ಷ ಶಾಸ್ತ್ರಿಗಳಿಂದ ಮುಖತಃ ತೆಗೆದುಕೊಳ್ಳಲ್ಪಟ್ಟಿತು. ೧೨ ಮಂದಿಯಲ್ಲಿ ೯ ಜನ ವಿದ್ಯಾರ್ಥಿಗಳು ಪಾಸಾದರು. ಪಾಸಾದವರಿಗೆ ಶ್ರೀ ಮೃತ್ಯುಂಜಯಸ್ವಾಮಿಗಳು "ಶಿವಾನಂದಲಹರಿ" ಯೆಂಬ ಬುಕ್ಕನ್ನು ದಯಪಾಲಿಸಿದರು. ನಂತರ ಲೈಬ್ರರಿಯ ಮತ್ತು ಫಂಡಿನ ರಿಪೋರ್ಟುಗಳು ಸೆಕ್ರೆಟರಿಯವರಿಂದ ಓದಲ್ಪಟ್ಟುವು. ವೇ|| ವಿರೂಪಾಕ್ಷಶಾಸ್ತ್ರಿಗಳ ಕೀರ್ತನೆ ನಡೆದು ಮಂಗಲವಾಗಿ ಸಭಾ ವಿಸರ್ಜನವಾಯಿತು.

ಪ್ರತ್ಯಕ್ಷದರ್ಶಿ.

ಮಂಜರಾಬಾದ್ ತಾಲ್ಲೂಕು ಎಸಳೂರುಪೇಟೆ.

ಈ ಗ್ರಾಮವು ಮೈಸೂರು ಸೀಮೆಯ ಕೊಡಗಿನ ಕಡೆ ಕೊನೆಯಲ್ಲಿಯಾಗಿಯೂ, ಮಂಜರಾಬಾದ್ ತಾಲ್ಲೂಕಿನಲ್ಲೆಲ್ಲಾ ಎರಡನೆ ಗ್ರಾಮವಾಗಿಯೂ, ಇಲ್ಲಿನ ಸ್ಕೂಲು ಎರಡನೆ ಸ್ಕೂಲಾಗಿಯೂ ಇರುವುದು. ಈ ರೂರಲ್ ಎ. ವಿ. ಸ್ಕೂಲಿನಲ್ಲಿ ಕಳೆದ ವರ್ಷ ೫ ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾದರು. (ಎಲ್. ಎಸ್. ಪರೀಕ್ಷೆಯಲ್ಲಿ) ಇಂದಿನವರೆಗೆ ಅಂದರೆ ೨೮ ವರ್ಷಗಳ ಲಾಗಾಯತು ಈ ಸ್ಕೂಲಿನಲ್ಲಿ ೩ ಮಂದಿ ಪಾಸಾಗಿದ್ದು ಕಳೆದ ವರ್ಷ ಒಂದರಲ್ಲೇ ೫ ಮಂದಿ ತೇರ್ಗಡೆಯಾದುದು ತುಂಬಾ ಸ್ತೋತ್ರಾರ್ಹವಾಗಿದೆ. ಈ ವರ್ಷವೂ ಈ ಸ್ಕೂಲಿನಿಂದ ೬ ಮಂದಿ ವಿದ್ಯಾರ್ಥಿಗಳು ಅಪ್ಲಿಕೇಷನ್ ಮಾಡಿರುವರು. ಸ್ಕೂಲ್ ಕಟ್ಟಡವು ಚಿಕ್ಕದಾಗಿಯೂ ಉಪಾಧ್ಯಾಯರ ಸಂಖ್ಯೆ ಕಡಿಮೆಯಾಗಿಯೂ ಇರುವುದರಿಂದ ಹೆಡ್ಮಾಸ್ಟರ್ ಮ|| ಎಚ್. ಚನ್ನಕೇಶವಯ್ಯನವರು ಸ್ಕೂಲ್ ಜಗಲಿಯ ಮೇಲೆ ೫-೬ ನೆ ತರಗತಿಗಳನ್ನು ನಡಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಾದ ನಮಗೆ ಉಂಟಾಗಿರುವ ತೊಂದರೆಯನ್ನು ಇಲ್ಲಿ ಬರೆಯಲು ಭೀತಿಗೊಳ್ಳುವೆನು. ಸರ್ಕಾರದವರು ದಯವಿಟ್ಟು ನಮ್ಮಗಳ ಕಷ್ಟವನ್ನು ನಿವಾರಿಸಬೇಕಾಗಿ ಕೋರುತ್ತೇನೆ. ಮೊನ್ನೆ ೧೫-೧೨-೨೦ ರಲ್ಲಿ ಸರ್ಕಾರದವರ ಅಪ್ಪಣೆ ಮೇರೆ ಲೆಕ್ಚರರಾದ ಮ|| ರಾ|| ಎಚ್. ಕೆ. ಮಲ್ಲಪ್ಪನವರು ಈ ಗ್ರಾಮಕ್ಕೆ ದಯಮಾಡಿ ಮೂರು ದಿವಸಗಳು ಇದ್ದು ಶಾರೀರಶಾಸ್ತ್ರ, ನಿಜಾರೋಗ್ಯರಕ್ಷಣೆ, ಕ್ಷಯರೋಗದ ವಿಷಯಗಳನ್ನು ಕುರಿತು ಅನ್ಯದೇಶಸ್ಥರ ಆರೋಗ್ಯದೃಢಕಾಯತೆಗೂ, ಮಲೆನಾಡು ಪ್ರಜೆಗಳ ಅನಾರೋಗ್ಯಸ್ಥಿತಿಗೂ ಇರುವ ಕಾರಣವನ್ನು ಚಿತ್ರಪಟಗಳ ತೋರಿಸಿ ಪ್ರಜೆಗಳಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಮನವಟ್ಟಾಗುವಂತೆ ಬುದ್ಧಿವಾದಪೂರ್ವಕವಾದ ಅನೇಕಾನೇಕ ಉದಾಹರಣೆಗಳೊಡನೆ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಇಂದಿನವರೆಗೆ ಇಂತಹ ಉಪನ್ಯಾಸವನ್ನು ಜನಸಂದಣಿಯನ್ನು ಜನ್ಮಾರಭ್ಯ ಕಂಡಿರಲಿಲ್ಲ. ಅನಂತರ ಇಲ್ಲಿನ ಡಾಕ್ಟರ್ ಮ|| ರಾ|| ಎಸ್. ವಿ. ಭೀಮರಾಯರವರು, ಹೆಡ್ಮಾಸ್ಟರ್ ಮ|| ರಾ|| ಎಚ್. ಚನ್ನಕೇಶವಯ್ಯನವರೂ ಉಪನ್ಯಾಸಕರ ಗುಣಕಥನವನ್ನು ಮಾಡಿ ಸಭಿಕರಿಗೆಲ್ಲಾ ಸಂತೋಷವಾಗುವಂತೆ ಮ|| ರಾ|| ಎಚ್. ಕೆ. ಮಲ್ಲಪ್ಪನವರಿಗೆ ವಂದನೆಗಳನ್ನು ಸಮರ್ಪಿಸಿದರು. ಸರ್ಕಾರದವರು ಈ ರೀತಿಯಲ್ಲಿ ಉಪನ್ಯಾಸ ನಡಿಯಲು ಏರ್ಪಡಿಸಿದ್ದಕ್ಕೂ, ಉಪನ್ಯಾಸಕರಾದ ಮ|| ರಾ|| ಎಚ್. ಕೆ. ಮಲ್ಲಪ್ಪನವರು ಮಲೆನಾಡು ಪ್ರಜೆಗಳೂ, ನಾಗರಿಕತೆಯನ್ನರಿಯದವರೂ ಆದ ನಮ್ಮ ಗ್ರಾಮದ ಗಲಭೆಯಿಂದೊಡಗೂಡಿದ ಸಭೆಯಲ್ಲಿ ಸಮಾಧಾನದಿಂದಲೂ ತಮ್ಮ ಕಂಠಶಕ್ತಿಯಿಂದಲೂ ಸಭಿಕರಿಗೆಲ್ಲಾ ಆನಂದವಾಗುವಂತೆ

ಉಪನ್ಯಾಸ ಮಾಡಿದುದಕ್ಕಾಗಿ ಅವರಿಗೂ ವಿದ್ಯಾರ್ಥಿಗಳ ಪರವಾಗಿ ನಾನು ಈ ಮೂಲಕ ವಂದನೆಯನ್ನರ್ಪಿಸುತ್ತೇನೆ. ಸರ್ಕಾರದವರು ನಮ್ಮಗಳ ಮೇಲೆ ಕೃಪೆಯಿಟ್ಟು ಪದೇಪದೇ ಇಂತಹ ಶಿಕ್ಷಕರನ್ನು ಕಳುಹಿಸಬೇಕಾಗಿ ಬೇಡುತ್ತೇನೆ. ಇವರು ನಮ್ಮಲ್ಲಿರುವ ಮೌಢ್ಯವನ್ನು ಹೋಗಲಾಡಿಸಲು ಗ್ರಾಮದಲ್ಲಿ ಇರಲು ಅವಕಾಶವಾಗಿರು ಇನ್ನೂ ಕೆಲವು ದಿವಸಗಳು. ಅವಕಾಶವಿಲ್ಲವಾದ ಪ್ರಯುಕ್ತ ಹೊಸಕೋರು ಉಪಕಾರವಾದರು. ಈ ಗ್ರಾಮದ ಡಾಕ್ಟರ್ ಸಾಹೇಬರವರು ತುಂಬರೆ ಉಪಕಾರಿಗಳಾಗಿ ಅಕ್ಕರೆಯಿಂದ ನಮಗೆಲ್ಲಾ ಔಷಧವನ್ನು ಕೊಡುತ್ತಿರುವರು. ಇವರಿಗೆ ವರ್ಗವೆಂಬ ವದಂತಿಯಿರುವುದು. ಈ ವರ್ಗವು ನಮಗೂ, ನಮ್ಮ ಗ್ರಾಮದವರಿಗೂ, ನಮ್ಮ ಹೋಬಳಿಯವರಿಗೂ ತುಂಬಾ ವ್ಯಥಾಜನಕವಾಗಿರುವುದು. ಸರ್ಕಾರದವರು ದಯಮಾಡಿ ಇವರನ್ನು ಇಲ್ಲಿಯೇ ಇಟ್ಟುಕೊಡಬೇಕಾಗಿ ಕೋರುತ್ತೇನೆ. ಪ್ರಜಾಹಿತೈಷಿ.

ಮುಂಬಯಿ ಕರ್ನಾಟಕದಲ್ಲಿ ಎಲಕ್ಷನ್.

ಹಿಂದುಳಿದವರ ಮುಂದಿನ ಕೆಲಸವು.

ಲೇಖಕ-ಚಂದ್ರಕಾಂತ.

ಕೌನ್ಸಿಲಿನ ಎಲಕ್ಷನ್ನಿನ ಬಗ್ಗೆ ಕೋಲಾಹಲವೇ ಎದ್ದಿತು. ಯಾರು ೨೦-೨೫ ವರ್ಷದ ವಕೀಲಿಯ ಕೆಲಸದಿಂದ ಜಿಲ್ಲೆಯ ತುಂಬಾ ನನ್ನ ಪಕ್ಷಕಾರರೇ ಇದ್ದಾರೆಂದು ಮುಂದಕ್ಕೆ ಬಂದರು! ಯಾರು ಕಾಂಗ್ರೆಸ್ಸಿನ ಪಟ್ಟಿಯನ್ನು ಪಣೆಗೆ ಬರೆದುಕೊಂಡು ಸದ್ದು ಹೊಡೆದರು! ಯಾರು ನನ್ನ ಪರ್ಚಸ್ಸೇ ಸಾಕೆಂದು - ಪರ್ಸ - ಯನ್ನು ಹಿಡಿದರು. ಯಾರು ನನ್ನ ಮಹಿಮೆ ಮುಂದೆ ಮುಖ್ಯವಾಗಿರಬಹುದೆಂದು ಕಡದಲ್ಲಿ ಸಾರಿದರು. ಯಾರು ನೀಚ ಪಿಶಾಚಪ್ರೇತರಾಗಿ ನಡುಗುತ್ತ ಅಂಗಣಕ್ಕೆ ಬಂದರು! ಯಾರು ದೇಶದ ತುಂಬಾ ನನ್ನವರೇ ಇದ್ದಾರೆಂದು ಮುಂದಕ್ಕೆ ಹರಿಬಿದ್ದರು! ಪಾಪ!! ಬಡಪ್ರಾಣಿಗಳು ಕುರ್ತಕವುಟ್ಟಿಗಾದರೂ ಕಾಂಗ್ರೆಸ್ಸಿನ ಹೆಸರನ್ನು ಹೇಳಿ ಗೆಜ್ಜೆಯನ್ನು ಕಟ್ಟಿದ್ದರು. ನೀನಲ್ಲಿ ಮೂಲವಾಗಿ ಕಟ್ಟಿದ್ದಿಯೋ ಹುಚ್ಚು ಮಹಾತ್ಮಗಾಂಧಿಯೇ! ಲೋಕದ ವ್ಯವಹಾರವು ನಿನಗೆಲ್ಲಿ ಗೊತ್ತು! ಸ್ವೈ ನೋಡು!! ರಾಜಕಾರ್ಯಪ್ರವೀಣನೆನಬೇಕು ನಮ್ಮ ಮಹಾರಾಯ ತಿಲಕ!!

ಪಟ್ಟರೇ ನಿಮಗೆಲ್ಲಿಂದ ಹುರುಪು ಬಂದಿತು? ಆ ಕಾರ್ಯಕ್ಕೆ ಒಪ್ಪುವ ನಮ್ಮ ಜನರಿಗೆ ಈ ವಿಷಯ ತಮ್ಮದೇನೆಂದರೂ ಅನುಭವವಿದ್ದರೆ ಅದನ್ನು ತಿಳಿಸಿಕೊಟ್ಟು ತಮ್ಮಗೆ ಯಜಮಾನರಾಗಿ ಕೂಡ್ರಬಾರದಿತ್ತೇ? ಆಕರಣದ ಈ ತರಹದ ಮಾತುಗಳಿಗೆ ಮಹಸೋದರ ಮಿ|| ಚಿಕ್ಕೋಡಿಯವರ ಕೂಡ ಕಾದಾಡಲು ನಿಂತದ್ದು ಮನಸಿಗೆ ಬರಲಿಲ್ಲ. ಏನು ಮಾಡಿದರೂ ಯಜಮಾನರು ಕಾಪ ಕೂಡಿದಾಗ ಕೇಸರಿಯನ್ನೋದುತ್ತ ಹೊತ್ತು ಬಂದಾಗ ಮಹಾಸಭೆಯ ವ್ಯವಸ್ಥೆಯನ್ನಷ್ಟು ಮಾಡುತ್ತ ಹೋದರಾಯಿತು. ಸುಮ್ಮನೇ ಒಣ ಗೊಂದಲ! ಅತ್ತ ನಮ್ಮ ದೇಸಾಯಿ ಸಾಹೇಬರಿಗೂ ಅದೇ ಮಾತನ್ನು ಹೇಳಬೇಕಾಗಿ ಬಂದಿರುವದಕ್ಕೆ ವಿಷಾದವಾಗುತ್ತದೆ. ಉಪಾಯವಿಲ್ಲ.

ಗದ್ದುಗೆ ಸ್ವಾಮಿಗಳೇ! ತಾವು ಅತ್ಯಂತ ಅನುಭವಸ್ಥರು. ಕಾರ್ಯಧುರಂಧರರು. ಮಹಾಸಭೆಯ ಮೂಲಕ ನಿರಂತರ ಸೇವೆಯನ್ನು ಮಾಡುತ್ತ ಬಂದಿರುವಿರಿ. ತಮ್ಮಷ್ಟು ರಾಜಕಾರಣ ಪ್ರಸಕ್ತರು ನಮ್ಮಲ್ಲಿ ವಿರಳರೇ ಎಂದರೂ ಸಲ್ಲುವದು. ಪರಂತು ಏನುಮಾಡಬೇಕು? ತಮಗೂ ಸಮಾಜದವರಿಗೂ (ಧೋರಣದಲ್ಲಿ) ಅಜಗಜಾಂತರ ಹೆಚ್ಚು ಕಡಿಮೆಯಾಗಿದೆ. ಅದಕ್ಕೆ ತಮ್ಮ ತಪ್ಪು ಕಾರಣವಾಗಿದೆ. ಇದರಿಂದ ತಮ್ಮ ರಾಷ್ಟ್ರಭಕ್ತಿಯನ್ನು ಬಿಡಿರೆಂತಲ್ಲ. ತಿಲಕರ ಅರ್ಚನೆಯಿಂದ ಅರುಗಾಗಬೇಕೆಂತಲೂ ಅಲ್ಲ. ಪರಂತು ಸಮಾಜದವರಿಗೆ ಸರಿಯಾದ ಶಿಕ್ಷಣವನ್ನು ನೀವು ಕೊಡುವದಿಲ್ಲ. ಅವರು ಅನ್ನುವದನ್ನೂ ಆಲೋಚಿಸುವದಿಲ್ಲ. ಹೀಗೆ ಆದರೆ ಕೆಲಸವು ಹೇಗಾಗಬೇಕು? ಕಡೆಗೆ - ಇಷ್ಟು ಮಾಡಿದರೆ ನನ್ನವರು ನನಗಿಲ್ಲವೆಂ - ದು ಉಸ್ಸೆಂದು ಕೂಡ್ರುವದೇ ಸರಿ. ಒಂದು ವಸ್ತುವನ್ನು ತಳದಿಂದ ಉಚ್ಚಸ್ಥಾನಕ್ಕೆ ಒಯ್ಯಬೇಕಾದರೆ ಹೇಗೆ ಸಾವಕಾಶವಾಗಿ ಏರುವ ಮೆಟ್ಟುಗಳಿಂದ (the principle of slope) ಹಗುರಾಗುವದೋ ಹಾಗೆಯೇ ಪ್ರತಿಯೊಂದರಲ್ಲಿ ಇದೇ ಮಿತವಾದಿ (moderates) ಗಳ ಮಾರ್ಗವು!

ಸುಮ್ಮನೇ ಕಾಂಗ್ರೆಸಿನ ಹೆಸರನ್ನು ಕರವೀರಪ್ಪನವರು ಹೇಳಿದರು. ಹುಲಿಯ ಚರ್ಮವನ್ನು ಹೊತ್ತು ಕಡೆಗೆ ಕೂಗಿನಿಂದ ಹುರುಡನ್ನೆಲ್ಲ ಹೊರಗೆ ಹಾಕಿಕೊಂಡ ನರಿಯ ಕತೆಯನ್ನು ಮರೆತವರಿಗೆ ನೆನಪು ಮಾಡಿಕೊಟ್ಟರು. ಪಾಪ! ಅವರಾದರೂ ಏನುಮಾಡ್ಯಾರು? ಮನುಷ್ಯಧರ್ಮ! ಈ ಸಾರೆ ಬಿಡರೆಪ್ಪಾ; ನಮ್ಮ ನಮ್ಮೊಳಗೇ ಒಡಕು ಬೇಡವೆಂದು ದೊಡ್ಡ ದೊಡ್ಡವರೂ ಕಾಲು ಬಿದ್ದಾಗ ಬಿಟ್ಟಿದ್ದರೆ ಎಷ್ಟು ಕಂಪು ಉಳಿಯುತ್ತಿತ್ತು. ಆಗಲಿ ತಮ್ಮ ಕಸುವಿನ ನೆಲೆಯಾದರೂ ಹತ್ತಿತು.

ನಲವಡಿ ವಕೀಲ ಸಾಹೇಬರು - ತತ್ವ ತತ್ವ - ವೆಂದು ಹೇವಕ್ಕೆ ಬಿದ್ದರು. ಬ್ರಾಹ್ಮಣೇತರ ಪರವಾಗಿಯೆಂದು ಮಿ|| ಹುಲಕೋಟಿ ಮತ್ತು ಮಿ|| ಕಂಬಳಿಯವರು ಇಬ್ಬರೂ ಲಿಂಗಾಯತರೂ ನಿಲ್ಲಬೇಕೇ? ಎಂಬದೊಂದೇ ಇವರ ಕೇಳಿಕೆ; ಇಬ್ಬರೂ ಪದವೀಧರರೆಂದಾದರೂ ಬಿಡಲಿಲ್ಲ. ಇಬ್ಬರೂ ಒಂದು ದೊಡ್ಡ ಸಮಾಜದವರೆಂದು ಸುಮ್ಮನಾಗಲಿಲ್ಲ. ಇದೊಂದು ಸಾರೆ ಇಬ್ಬರೂ ಲಿಂಗಾಯತರು ಬಂದರೆ ಅವರೇನು ಬ್ರಾಹ್ಮಣೇತರರ ಸೌಕರ್ಯಗಳನ್ನು ನೋಡರಾರರೇ? ಹೇಗಾದರೂ ಗಟ್ಟಿ ಜೀವ ಮಾಡಿಕೊಂಡು ಈ ಸಾರೆ ಲಿಂಗಾಯತರ ಮೇಲೆ ಈ ಮಾತನ್ನು ಹೊರಿಸಿ ಮುಂದಿನ ಎಲಕ್ಷನ್ನಿಗೆ ಹೊಳವನ್ನು ಹಾಕಿಕೊಂಡು ಕೂತಿದ್ದರೆ ನೆಟ್ಟಗಾಗುತ್ತಿದ್ದಿಲ್ಲವೇ? ಆಗಲಿ. ಇದರಿಂದ ಲಿಂಗಾಯತರ ಮೇಲೆ ವರ್ಮವನ್ನು ಕಟ್ಟಿಕೊಂಡು ಅವರಿಂದ ಸಿಡಿದು ನಿಲ್ಲುವ ಹವಣಿಕೆಯಲ್ಲಿದ್ದಾರೆಂದು ಕೇಳುತ್ತೇವೆ. ಇದು ಇಬ್ಬರಿಗೂ ವಿಘಾತಕವಾದದ್ದು. ಹೇಳಿಕೆಯ ಮಾತುಗಳಿಗೆ ಕಿವಿಗೊಡದೇ ಮುಂಧೋರಣವನ್ನಿಟ್ಟುಕೊಳ್ಳಲೆಂಬುದಾಗಿ ರಡ್ಡೀ ಸಮಾಜದವರಿಗೆ ಸೂಚನೆಯಿದೆ.

ಕಾರವಾರ ಜಿಲ್ಲೆಯೊಂದನ್ನು ಬಿಟ್ಟು ಮಿಕ್ಕ ಜಿಲ್ಲೆಗಳಿಂದ ರಾ|| ಸಾ|| ಹಳಕಟ್ಟಿ, ರಾ|| ಕಂಬಳಿ, ರಾ|| ಹುಲಕೋಟಿ, ರಾ|| ಚಿಕ್ಕೋಡಿ, ಎಂಬ ನಾಲ್ವರು ಲಿಂಗಾಯತರೂ ರಾ|| ಚೌಗುಲೆ ಎಂಬ ಒಬ್ಬ ಜೈನರೂ ಅಂತೂ ಐದುಮಂದಿ ಹಿಂದುಳಿದವರೇ ಬಂದಂತಾಯಿತು. ಎಲ್ಲಾ ಆಯಿತು. ಮುಂದಿನ ಕೆಲಸವೇನು? ಎಂಬದೊಂದೇ ಪ್ರಶ್ನೆಯಿದೆ. ಇಲ್ಲಿಯತನಕ ನಮಗೆ ಸ್ಥಳಗಳು ಸಿಗಲಿಲ್ಲ, ಅದು ಆಗಲಿಲ್ಲವೆಂಬುದಾಗಿ ಒರೇ ನರಳುವದಾಯಿತು. ಈಗ ಇಡೀ ಉತ್ತರ ಕರ್ನಾಟಕದ ಪ್ರಾತಿನಿಧ್ಯವಂತೂ ಸಿಕ್ಕಂತಾಯಿತು. ಇಷ್ಟರಿಂದ ಆತ್ಮಪ್ರತಿಷ್ಠೆಯ ಸ್ವೋನ್ನತಿಯ ಕಡೆಗೆ ಲಕ್ಷ್ಯವಿಡದೇ ಇನ್ನು ನಮ್ಮನ್ನಾರು ಕೇಳುವರೆಂದು ದಿನಗಳೆಯುವದಲ್ಲವೆಂದು ಈ ನಿಯುಕ್ತ ಸಭಾಸದರಿಗೆ ಸೂಚಿಸುವ ಅವಶ್ಯಕತೆಯಿಲ್ಲವಷ್ಟೆ? ಪರಂತು ಹಿಂದುಳಿದವರು ಸಾಮರ್ಥ್ಯವಾನರೆಂದು ಸರ್ಕಾರಕ್ಕೂ, ಇವರೂ ಬಲಿತವರೆಂದು ನಮ್ಮ ಬ್ರಾಹ್ಮಣ ಬಂಧುಗಳಿಗೂ ಇವರೇ ನಮ್ಮ ಮುಖಂಡರೆಂದು ನಮ್ಮ ಮಂದಿಗೂ ತೋರಿಸಿಕೊಡುವ ಸಮಯವು ಬಂದಿದೆ. ಕೆಲಸವು ಅಳತೆಯಿಲ್ಲದಷ್ಟು ಒಟ್ಟಿದೆ. ಪ್ರಾಥಮಿಕ ಶಿಕ್ಷಣವು ಪುಕ್ಕಟ್ಟೆಯಾಗಿ ಸಿಗುವಂತೆ ಮಾಡುವದು ಸಾಧ್ಯವಾಗದಿದ್ದರೂ ಮೊದಲು ಎಲ್ಲಕ್ಕೂ ಹಿಂದೆ ಬಿದ್ದಿರುವ ಕುರುಬರು, ಒಡ್ಡರು, ತಳವಾರರು, ಹೊಲೆಯರು, ಮಾದಿಗರು ಮುಂತಾದವರಿಗೆ ಶಿಕ್ಷಣವು ಪುಕಟ್ಟೆಯಾಗಿ ಸಿಗುವಂತೆ ಬಡಿದಾಡಿರಿ. ಲಿಂಗಾಯತ, ಜೈನ, ಮರಾಠ ರಡ್ಡಿ ಮುಂತಾದವರಿಗೆ ಫೀಯನ್ನು ಕಡಿಮೆ ಮಾಡಿರಿ. ಇವರಿಗೆಲ್ಲ ಸ್ಕಾಲರ್‌ಶಿಪ್ಪುಗಳು ಸಿಕ್ಕುವಂತೆ ಬಡಿದಾಡಿರಿ. ಫಾರೆಸ್ಟಿನ ವಿಷಯಕ್ಕೆ ನೋಡಿರಿ. ಒಕ್ಕಲಿಗರ ಕಷ್ಟಗಳ ಸಮಾಚಾರ ತಕ್ಕೊಳ್ಳಿರಿ. ನೀವು ಕೆಳಗಿಳಿಯುವುದಕ್ಕಿಂತ ಕೆಳಗಿನವರು ಆದಷ್ಟು ತೀವ್ರ ಮೇಲೆ ಬರುವಂತೆ ಪ್ರಯತ್ನ ಮಾಡಿರಿ. ಆ ಬಿಲ್ಲಿಗೆ ಸಮರ್ಥನ ಮಾಡಿಬಂದೆ. ಈ ಬಿಲ್ಲಿಗೆ ಪುಷ್ಟಿಕೊಟ್ಟನೆಂದರೆ ಇಷ್ಟರಿಂದಲೇ ಕೆಲಸವಾಗುವುದಿಲ್ಲ. ನಗುವವರ ಬಾಯಿಯ ಮೇಲೆ ಬಡಿಯುವಂತೆ ಕೆಲಸ ಮಾಡಿ ತೋರಿಸಿರಿ. ಸಿಕ್ಕಸಿಕ್ಕಹಾಗೆಯೇ ಮುಂದಾಗಿಯೇ ತರ್ಕ ಕಟ್ಟ ಅನ್ನುವವರ ಬಾಯಿಯು ಮೇಲಕ್ಕೆತ್ತದಂತೆ ಮಾಡುವದಕ್ಕೆ ಇದೇ ಸಮಯವಲ್ಲವೇ?



ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ, ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0. 14

ವಿಳಾಸ:— S. R. Krishna & Co.,
89, Narayana Mudaly Street, Madras.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 5

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಕ್ಷೌರಾದಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

14

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವುವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—0—0.

ರೈಲ್ವೆ ಲೀವರ್ ವಾಚ್.

5 ವರ್ಷ ಗ್ಯಾರಂಟಿ; 15 ಬಹುಮಾನಗಳು ಸಹಿತ 5—0—0

ಇದು ಒಳ್ಳೇ ಮಜಬೂತಾಗಿ ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ಇವು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೆನೋಟ್ಲಗಳಿಂದ ಮಾಡಿ ಆಗದ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿದೆ. ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಂದನ್ನು ತರಿಸಿ ನೋಡಿರಿ. ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.—ತುರಾಯಿ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1 ಸರಪಣಿ 1, ಉತ್ತರಮುಖಿ 1, ದಂತದ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು ೪, ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ರಾಗಮಾಲಿಕೆ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 5-0-0.



Elgin Watch Co.,
89 Narayana Mudaly Street, Madras.

ಕ್ಷುದ್ಬೋಧಕ! ಮನೋಲ್ಲಾಸಕವೆಂಬ ಧಾತುಪುಷ್ಟಿಕ!!

ಮಹದ್ರಾಕ್ಷಾದಿ ಚೂರ್ಣವು 12

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆ ಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ, ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಆಗಂತುಕಜ್ವರ, ಎಂಥಾ ಉಗ್ರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವನಿ ೧ ಡಜನ್ ಮಾತ್ರೆಗಳು ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಹೊತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾರ್ಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.



ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾಂಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಗಂಡಸರದು ಚೀಲ 1ಕ್ಕೆ 1-0-0. ಹೆಂಗಸರದು ಚೀಲ 1ಕ್ಕೆ 2-8-0.

14

S. Paul & Co.,
Post Box No. 542,
Park Town, Madras.

೧೯೨೦ ನೆಯ ಇಸವಿ ಡಿಸೆಂಬರ್ ತಾ|| ೨೬ ರಿಂದ ೧೯೨೧ ನೆಯ ಜನವರಿ ತಾ|| ೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಮಾರ್ಗಶಿರ ಬಹುಳ ಪಾಡ್ಯಮಿಯಿಂದ ಮಾರ್ಗಶಿರ ಬಹುಳ ಅಷ್ಟಮಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
26	ಭಾನು	ಪಾಡ್ಯ	24-23	ಆರ್ದ್ರಾ	8-38	12
27	ಸೋಮ	ಬಿದಿ	18-27	ಪುನ	4-26	13
28	ಮಂಗಳ	ತದಿ	12-39	ಪುಷ್ಯ	0-19	14
29	ಬುಧ	ಚೌತಿ	7-8	ಮಖಾ	52-44	15
30	ಗುರು	ಪಂ-ಷ	2-6 55-14	ಪುಬ	49-52	16
31	ಶುಕ್ರ	ಸಪ್ತ	53-52	ಉಬ	47-54	17
1	ಶನಿ	ಅಷ್ಟ	51-16	ಹಸ್ತ	46-49	18

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.



RELIANCE





REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚಿಹ್ನಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಶೋಲಂಸುಧೀಪುಂಗವ | ಸ್ತ್ರೀಮಾಥೀಕೃದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ರಕೀಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಜನವರಿ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೨

ಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ೀಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರ ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರ ೀಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂ ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗು ೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರು ದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾ ರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಂದ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

1

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿ ವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀ ಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಸು , ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿ ಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗ ಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾ ರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಟೀಕೆ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕಣಸೂತ್ರರತ್ನ ೮ ಆಣೆ; ದೇವೀ ಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ತಿಮುಕ್ತಾವಳಿ ೮ಆಣೆ; ರತ್ನಾಕರಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀ ಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಟೀಕ ವೀರಶೈವ ವಿವಾಹವಿಧಿ	೦—೧೨—೦
ವಪೂಜಾವಿಧಿ	೦—೧೪—೦
ಾರುಶೀಲೆಚರಿತ್ರೆ	೦— ೯—೦
ಂಜಾಸಿ	೦— ೯—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೋವೆಂಟ್ಸ್ ಗಳಿಂದ ಮಾಡಿದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುವ್ವಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

41 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

41

ಸಿನಿಮೊಟೊಗ್ರಾಫ.

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾ ದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು

46

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪ್ರಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

41 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಗಂಡಸರದು 1 ಕ್ಕೆ 1-4-0 ರೂಪಾಯಿ. ಹೆಂಗಸರದು 3-0-0.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

16

ವೈದ್ಯವಿದ್ಯ

ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಿಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
37. ಚೈನಾಬಜಾರು ರೋಡ್ ಮದರಾಸು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕೃಪಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ರೀಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯—೨೧ ನೆಯ ಇಸವಿ ಜನವರಿ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೨

ಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ೀಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರು ್ತಿರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರ ೀಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂ ು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗು ೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ, 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರು ದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾ ರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಂದ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

1

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭ ಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿ ುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀ ಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸು , ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತ ಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗ ಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾ ರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗ ನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕಸಸೂತ್ರರತ್ನ ೮ ಆಣೆ; ದೇವೀ ಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಶಿವಮುಕ್ತಾವಳಿ ೮ಆಣೆ; ರತ್ನಾಕರಶತಕ ೨ಆಣೆ; ಶಂಕರಲಿಂಗಕಂದಂ ೧ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ದೇಶ್ವರ ಪುರಾಣ, ಸಟೀಕ ದೀ ಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇ . ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಟೀಕ ವೀರಶೈವ ವಿವಾಹಪದ್ಧತಿ	೦—೧೨—೦
ವಪೂಜಾವಿಧಿ	೦—೧೪—೦
ರುಶೀಲಸೂತ್ರ	೦— ೯—೦
ಂಹಾಸಿ	೦— ೯—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋಮೆಂಟ್ಸ್ ಗಳಿಂದ ಮಾಡಿದೆ. ಧಾಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:— ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚರ್ಮದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.



ಕ್ರಯ ಸರಪಣಿಸಹಿತ 7-0-0, ಸೀಮೆಚರ್ಮದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

41 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್ ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

41 ಸಿನಿಮೊಟೊಗ್ರಾಫ.

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್ ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು

46

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪ್ರಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರತ್ಯಕ್ಷ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

41 ಎಂಬ ಮರ್ಮದ ಚೀಲವು.

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ್ದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಗಂಡಸರದು 1 ಕ್ಕೆ 1-4-0 ರೂಪಾಯಿ. ಹೆಂಗಸರದು 3-0-0.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

16

ವೈದ್ಯವಿದ್ಯ

ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ಬಾಗಿಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
37. ಚೈನಾಬಜಾರು ರೋಡ್ ಮದರಾಸು.

ಮೈಸೂರು ಸ್ಟಾರ್

೧೯೨೧ನೆಯ ಇಸವಿ ಜನವರಿ ತಾ|| ೯ನೆಯ ಭಾನುವಾರ.

ರಾಷ್ಟ್ರೀಯ ಮಹಾಸಭೆ.

ನಂ. ೨.

ಸಭಾಧ್ಯಕ್ಷರು ತಮ್ಮ ಭಾಷಣದೊಳಗೆ "ನನ್ನಮಟ್ಟಿಗೆ ಆಲೋಚಿಸಿಕೊಂಡುದರಲ್ಲಿ ನಮ್ಮ ಸಹಾಯನಿರಾಕರಣೋದ್ಯಮವು ಕೊನೆಗಾಣುವುದಿಲ್ಲವೆಂದು ನನಗೆ ತೋರುತ್ತದೆ. ನಾವು ತಿಳಿದೋ ತಿಳಿಯದೆಯೋ ಈ ಉದ್ಯಮವನ್ನು ಸಾಗಿಸಿದರೆ ದೇಶವನ್ನು ಮರಳಿ ಅಧೋಗತಿಗೆ ಇಳಿಯಿಸುವಂತೆಯೇ ಆಗುವುದು. ಅದುಕಾರಣ ಈ ಮಾರ್ಗವು ಶುಭಪ್ರದವಲ್ಲ"ವೆಂದು ಹೇಳಿಬಿಟ್ಟು, ನಮಗೆ ಬಾಧ್ಯತಾಯುತ ಪ್ರಭುತ್ವವು ಸಿದ್ಧಿಸಬೇಕಾದರೆ ಆಚರಣಯೋಗ್ಯವಾದ ಕಾರ್ಯಕ್ರಮವಾವುದೆಂದರೆ—ಮೊದಲು ಜಾತೀಯನಿರ್ಮಾಣಮಾಡಬೇಕು. ಎಂದರೆ ದೇಶದ ವಿವಿಧವರ್ಗಪ್ರಜೆಗಳಲ್ಲೆಲ್ಲಾ ಏಕಮತ್ಯವನ್ನು ಹುಟ್ಟಿಸಬೇಕು. ಪ್ರಜಾಶಕ್ತಿಯನ್ನೆಲ್ಲಾ ಏಕಮುಖಿಗೊಳಿಸಬೇಕು. ಹಾಗಾಗಬೇಕಾದರೆ ಸಕಲ ಜನರಲ್ಲೂ ವಿದ್ಯೆಯನ್ನು ಹೆಚ್ಚಾಗಿ ವ್ಯಾಪಿಸುವಂತೆ ಮಾಡಬೇಕು. ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸಬೇಕು. ಅದಕ್ಕಾಗಿ ಕೃಷಿ ವಾಣಿಜ್ಯ ಪರಿಶ್ರಮಾದಿಗಳನ್ನು ಬಲಪಡಿಸಬೇಕು. ಇಂಗ್ಲೀಷರಿಗೆ ಹಣವೇ ಮುಖ್ಯವು. ಅವರು ತಮ್ಮ ಧನನಷ್ಟವನ್ನು ಸೈರಿಸತಕ್ಕವರಲ್ಲ. ನಮ್ಮ ದೇಶದ ಹಸಿಯ ಪದಾರ್ಥಗಳನ್ನು ಅವರು ತರಿಸಿಕೊಂಡು ವಿಶೇಷ ಲಾಭವನ್ನು ಸಂಪಾದಿಸುತ್ತಿದ್ದಾರೆ. ಆ ಹಸಿಯ ಪದಾರ್ಥಗಳನ್ನೆಲ್ಲಾ ನಾವು ಇಲ್ಲೀ ಉಳಿಯಿಸಿಕೊಂಡು, ನಮ್ಮ ಕೆಲಸಗಾರರಿಗೆ ಕೈತುಂಬಾ ಕೆಲಸ ಸಿಕ್ಕುವಂತೆ ಮಾಡಿ, ಅನ್ಯದೇಶೀಯರು ಇವುಗಳ ಪುನರ್ನಿರ್ಮಾಣದ ಮೂಲಕ ಪಡೆದುಕೊಳ್ಳುತ್ತಿರುವ ಲಾಭವನ್ನೆಲ್ಲಾ ನಾವೇ ಪಡೆದುಕೊಳ್ಳುವಂತೆ ಮಾಡಿದರೆ ನಮ್ಮ ದೇಶದ ಸಂಪತ್ತಿಯೂ ವೃದ್ಧಿಯಾಗುತ್ತದೆ; ಆಂಗ್ಲಜನರೂ ಕಣ್ಣು ತೆರೆಯುತ್ತಾರೆ. ಹೀಗೆ ಮಾಡುವ ಕಾರ್ಯದ ಪರ್ಯಾಲೋಚನೆಗಾಗಿ ಮಹಾಸಭೆಯವರು ಒಂದು ಪ್ರತ್ಯೇಕ ಸಂಘವನ್ನೇರ್ಪಡಿಸಬೇಕು. ಇಂಗ್ಲೀಷರನ್ನು ವಶಪಡಿಸಿಕೊಳ್ಳಬೇಕಾದರೆ ಅವರ ಧನಾದಾಯಕ್ಕೆ ಬಿಕ್ಕಟ್ಟು ಮಾಡುವುದೊಂದೇ ಉಪಾಯ. ಅದನ್ನು ಬಿಟ್ಟು ಜಾತಿವೈರವನ್ನು ಬೆಳೆಯಿಸುವಂಥ ಪ್ರಯತ್ನಗಳನ್ನು ಮಾಡಬಾರದು. ನಾವು ಪಾರ್ಲಿಮೆಂಟಿನ ಲೇಬರ್ ಪಕ್ಷದವರೊಡನೆ ಸೇರಿ ಕೆಲಸ ಮಾಡಬೇಕು. ನಮಗೆ ಏನಾಗಬೇಕಾಗಿದೆಯೋ ಅದರ ಸ್ವರೂಪವನ್ನು ಮೊದಲು ನಾವು ನಿರ್ಣಯಿಸಿಕೊಂಡು, ಅದನ್ನು ನಮಗೆ ನೆರವೇರಿಸಿಕೊಡಿರೆಂದು ಸರ್ವರೂ ಏಕಮುಖವಾಗಿ ಆಂಗ್ಲೇಯರನ್ನು ಪ್ರಪಂಚದ ಇದಿರಿಗೆ ಗಟ್ಟಿಯಾಗಿ ಕೇಳಬೇಕು. ಕೇವಲ ಸಾರ್ವಭೌಮಿಕ ಪ್ರಭುತ್ವವೇ ಆಗಲೀ, ಕೇವಲ ಪ್ರಜಾಸತ್ತಾಕ ಪ್ರಭುತ್ವವೇ ಆಗಲೀ ಸಿದ್ಧಿಸಿದ ಮಾತ್ರಕ್ಕೇ ಅದು ನಿರ್ದುಷ್ಟವಾಗಿರುವುದೆಂದು ನೆನಸಕೂಡದು. ಪ್ರಜೆಗಳೆಲ್ಲರೂ ಏಕಮತ್ಯ ಹೊಂದಿ ತಮ್ಮ ಪ್ರಭುತ್ವದ ಲೋಪಗಳನ್ನು ತಿದ್ದಿಕೊಂಡು ನಡೆಯಿಸುತ್ತ ಬಂದಾಗಲೇ ಅದು ಎಂಥ ಪ್ರಭುತ್ವವಾಗಿದ್ದರೂ ದೇಶಕ್ಷೇಮಕ್ಕೆ ಸಾಧಕವಾದೀತು. ಸ್ಪಾರ್ಟಾ, ಏಥೆನ್ಸ್, ಜರ್ಮನಿ ಮೊದಲಾದ ಸಾಮ್ರಾಜ್ಯಗಳು ಉಚ್ಚದಶೆಯಲ್ಲಿದ್ದರೂ ಅವುಗಳ ಪ್ರಜೆಗಳು ಏಕಛತ್ರಾಧಿಪತ್ಯವನ್ನೇ ನಂಬಿ ಕುಳಿತುಕೊಂಡು ತಮ್ಮ ಸಹಜಸ್ವಾತಂತ್ರ್ಯಗಳನ್ನು ಉಪಯೋಗಿಸಿಕೊಳ್ಳದೆ ಹೋದುದರಿಂದ ಆ ಸಾಮ್ರಾಜ್ಯಗಳು ಅಧೋಗತಿಮುಖವಾದುವು. ಜಮೈಕಾ ದೇಶವು ತನಗೆ ಸ್ವಪರಿಪಾಲನವು ಸಿದ್ಧಿಸಿದರೂ ಅದನ್ನು ಅನುಭವಿಸಲಾರದೆ ಕಳೆದುಕೊಂಡಿತು. ಅದುಕಾರಣ, ನಾವು ಬಾಧ್ಯತಾಯುತ ಪ್ರಭುತ್ವವನ್ನು ನೆಲೆಗೊಳಿಸಿಕೊಳ್ಳುವುದರಲ್ಲೇ ಸಂತೋಷಿಸಕೂಡದು. ಆ ಸ್ವಪರಿಪಾಲನವನ್ನು ಮಹೋನ್ನತಸ್ಥಿತಿಯಲ್ಲಿಟ್ಟು ಉಳಿಯಿಸಿಕೊಳ್ಳುವುದಕ್ಕೆ ಪಾಟುಪಡಬೇಕು. ಈಗ ದೇಶದಲ್ಲಿರುವ ನಿರಂಕುಶಾಧಿಕಾರಕ್ಕೆ ಪ್ರತಿಯಾಗಿ ಮತ್ತೊಂದು ತೆರೆದ ನಿರಂಕುಶಾಧಿಕಾರವನ್ನು ತಂದಿಟ್ಟುಕೊಂಡರೆ ಫಲವೇನು? ಕಲ್ಕತ್ತಾದಲ್ಲಿ ಕೂಡಿದ್ದ ಅವಸರದೇಶೀಯ ಮಹಾಸಭೆಯಲ್ಲಿ ಮಾಡಿದ ಸಹಾಯನಿರಾಕರಣದ ನಿರ್ಧಾರವನ್ನು ಆಚರಣೆಗೆ ತರುವುದರಲ್ಲಿ ಪ್ರಜೆಗಳೊಳಗೆ ಭಯವೂ ತಳಮಳವೂ ರಾಗದ್ವೇಷವೂ ಅಸೂಯೆಯೂ ವೃದ್ಧಿಗೊಳ್ಳುವುದಕ್ಕವಕಾಶವಾಯಿತೋ ಇಲ್ಲವೋ ಯೋಚಿಸಿನೋಡಿ. ಈ ನಿರಾಕರಣೋದ್ಯಮದಿಂದ ದೇಶದಲ್ಲಿ-೨ ಕಕ್ಷಿಗಳು ಮಹತ್ತಾಗಿ ಪ್ರಬಲಿಸುತ್ತಿವೆ. ಗಾಂಧಿಮಹಾತ್ಮರಿಗೆ ಅನರ್ಥವನ್ನು ದೇಶಕ್ಕುಂಟುಮಾಡಬೇಕೆಂಬ ಸಂಕಲ್ಪವಿಲ್ಲದಿದ್ದರೂ, ಪ್ರಜಾಸಾಮಾನ್ಯದಲ್ಲಿ ಈ ಪ್ರಯತ್ನವ್ಯಾಪನೆಯಿಂದ ಪರಸ್ಪರ ವಿರೋಧಗಳು ಬೆಳೆಯದೆ ತಪ್ಪುವುದಿಲ್ಲ. ಈ ಭೇದದಿಂದಲೇ ಐರ್ಲಂಡಿನಲ್ಲಿ ಮಹಾನರ್ಥಗಳಾಗುತ್ತಿರುವುವು. ಅಂಥ ಅನರ್ಥವನ್ನು ನಾವೂ ತಂದಿಟ್ಟುಕೊಳ್ಳಬಾರದು. ನಾವು ಸಿನ್‌ಫೆನಿಯನರಾಗಬಾರದು. ಭರತಖಂಡವು ಆಂಗ್ಲಸಾಮ್ರಾಜ್ಯದಿಂದ ಅಗಲಕೂಡದು. ಅದು ಆಂಗ್ಲಸಾಮ್ರಾಜ್ಯದಿಂದ ವಿಮುಕ್ತಿಹೊಂದಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕಿಂತ ಆ ಸಾಮ್ರಾಜ್ಯದ ಅಧೀನದಲ್ಲಿದ್ದು ಬಾಧ್ಯತಾಯುತ ಪರಿಪಾಲನವನ್ನು ಪಡೆದುಕೊಳ್ಳುವುದರಲ್ಲೇ ಹೆಚ್ಚು ಲಾಭವುಂಟು. ತನಗೆ ಅತ್ಯಂತ ವಿಷಮಾವಸ್ಥೆ ಬಂದರೂ ಆಂಗ್ಲಸಾಮ್ರಾಜ್ಯದ ಸಂಬಂಧವನ್ನು ತಾನು ಇಟ್ಟುಕೊಂಡಿದ್ದುದರಿಂದಲೇ ಜಪಾನ್ ದೇಶವು ತನ್ನ ಸ್ವಾತಂತ್ರ್ಯವನ್ನುಳುಹಿಕೊಂಡು ಪ್ರಪಂಚದಲ್ಲಿ ತನ್ನ ಪ್ರತಿಷ್ಠಾಗೌರವಗಳನ್ನು ಕಾಪಾಡಿಕೊಂಡಿತು. ಐರ್ಲಂಡಿನವರು ಇದುವರೆಗೆ ಆಂಗ್ಲಸಾಮ್ರಾಜ್ಯಸಂಬಂಧವುಳ್ಳ ಅಧಿನಿವೇಶ ರಾಜ್ಯಪಾಲನಕ್ರಮವನ್ನು ಕೇಳಿಕೊಳ್ಳುತ್ತಿದ್ದು, ಅದನ್ನು ಬಿಟ್ಟು ಈಗ ಆಂಗ್ಲಸಾಮ್ರಾಜ್ಯಸಂಬಂಧವಿಲ್ಲದ ಸಂಪೂರ್ಣ ಸ್ವಾತಂತ್ರ್ಯದ ಇಚ್ಛೆಯನ್ನು ತೋರಿಸಿದುದರಿಂದಲೇ ಅವರಿಗೆ ಅಪರಿಮಿತವಾದ ಅನರ್ಥಗಳು ಈಗ ದೊರಕೊಂಡಿವೆ. ಮತ್ತು ಅಧಿನಿವೇಶರಾಜ್ಯಗಳಲ್ಲಿರುವಂಥ ಸ್ವತಂತ್ರಾಧಿಕಾರವೂ ಅವರಿಗೆ ಲಭಿಸುವುದು ದುಸ್ತರವಾಗಿದೆ. ನಾವೂ ಕೂಡ ಐರ್ಲಂಡಿನವರಂತೆ ನಡೆದು ಅವರ ಅವಸ್ಥೆಯನ್ನು ನಮಗೂ ಉಂಟುಮಾಡಿಕೊಳ್ಳಬಾರದು. ಅಲ್ಲದೆ ಅವರಿಗೂ ನಮಗೂ ಎಷ್ಟೋ ವ್ಯತ್ಯಾಸಗಳೂ ಉಂಟು. ಅದುಕಾರಣ, ಈಗಣ ವಿಷಮ ಸಮಯದಲ್ಲಿ ಪರಿಗ್ರಹಿಸಬೇಕಾದ ತಾರಣೋಪಾಯವೇನೆಂದರೆ—ಹೀಗೆ ನಡೆಯಬೇಡಿರೆಂದು ಗಾಂಧಿಯವರಿಗೂ, ಹೀಗೆ ನಮಗೆ ನಡೆಯಿಸಿ ಕೊಡಿರೆಂದು ಸ್ಟೇಟ್ ಸೆಕ್ರೆಟರಿಯವರಿಗೂ ಮತ್ತೊಂದುಸಲ ಬಿನ್ನಯಿಸಿಕೊಂಡು, ಈಗ ನಮಗೆ ಲಭಿಸಿರುವ ಸಂಸ್ಕರಣಗಳನ್ನು ನಾವು ಆಚರಣೆಗೆ ತಂದು, ಅದರಲ್ಲಿರುವ ಲೋಪಗಳನ್ನು ತೋರಿಸಿ ಸರಿಪಡಿಸಿಕೊಂಡು, ಕ್ರಮೇಣ ನಮಗೆ ಬಾಧ್ಯತಾಯುತ ಪ್ರಭುತ್ವ ಸಿದ್ಧಿಯಾಗುವಂತೆ ಮಾಡಿಕೊಳ್ಳಬೇಕು. "ಇಷ್ಟು ಸೌಕರ್ಯಗಳನ್ನು ನಮಗೆ ನೀವು ನಡೆಯಿಸಿಕೊಡಿ. ಇಲ್ಲದಿದ್ದರೆ ರಕ್ತಪಾತಕ್ಕೆ ಅವಕಾಶವಿಲ್ಲದಂತೆ ನಮ್ಮ ದೇಶವನ್ನು ಬಿಟ್ಟು ನೀವು ಹೊರಟುಹೋಗಿ" ಎಂದು ನಾವು ನಿಕ್ಷುಣ್ಣವಾಗಿ ಆಂಗ್ಲ ಜನರನ್ನು ಕೇಳಬಹುದು. ಪಂಜಾಬಿನಲ್ಲಿ ನಡೆದ ಅತ್ಯಾಚಾರಕ್ಕೆ ಮೂಲಭೂತರನ್ನು ಶಿಕ್ಷಿಸಬೇಕೆಂದು ಇನ್ನೂ ನಾವು ಹಠಹಿಡಿದು ಕೇಳುತ್ತಿರುವುದರಲ್ಲೇ ಲಾಭವಿಲ್ಲ. ಅದನ್ನು ಕ್ಷಮಿಸಿಬಿಡುವುದೇ ಉತ್ತಮ. ನಮಗೆ ಅಪಕಾರ ಮಾಡಿದವರನ್ನು ಕ್ಷಮಿಸುವುದು ನಮ್ಮ ಸಹಜಗುಣವಾಗಿರುತ್ತದೆ. ಆಂಗ್ಲೇಯರೆಲ್ಲರೂ ಅಧರ್ಮರೂಪರೆಂದು ನಾವು ತಿಳಿಯಕೂಡದು. ಅದುಕಾರಣ ಆ ಜಾತಿಯನ್ನೇ ನಾವು ನಿಂದಿಸಲಾಗದು. ಈಗಣ ಸಂಸ್ಕರಣದಲ್ಲಿ ನಮಗೆ ಆರ್ಥಿಕ ಸ್ವಾತಂತ್ರ್ಯ ಕೊಡುವುದನ್ನು ಅವರು ಮರೆತಿರಬಹುದು. ಅದನ್ನು ನಾವು ಕ್ರಮೇಣ ಪಡೆದುಕೊಳ್ಳಬಹುದು. ಮುಖ್ಯವಾಗಿ ದ್ವೇಷದಿಂದ ನಾಶವೇ ಹೊರತು ಲಾಭವಿಲ್ಲವೆಂಬುದನ್ನು ನೀವು ಸ್ಟೇಟ್‌ಸೆಕ್ರೆಟರಿಯವರಿಗೂ, ನಾನು ಗಾಂಧಿಮಹಾತ್ಮರಿಗೂ ಒತ್ತಿಹೇಳಬೇಕು" ಎಂಬುದಾಗಿ ಸಭಾಧ್ಯಕ್ಷರು ಉಪದೇಶ ಮಾಡಿದರು. ಸ್ವರಾಜ್ಯಸಂಪಾದನೆಗಾಗಿ ಐರ್ಲಂಡಿನವರಂತೆ ನೀವು ಆಂಗ್ಲಜಾತಿದ್ವೇಷವರ್ಧಕಪ್ರಯತ್ನವನ್ನು ಮಾಡಿ, ಲಾಭಕ್ಕೆ ಪ್ರತಿಯಾಗಿ ದೇಶಕ್ಕೆ ಕ್ಷೋಭೆಯನ್ನು ತಂದುಕೊಳ್ಳಬೇಡಿರೆಂಬುದೇ ಅಧ್ಯಕ್ಷರ ಉಪದೇಶದ ಮುಖ್ಯ ಸಾರವಾಗಿದ್ದಿತು.

ಆದರೆ ಸಭೆಯಲ್ಲಿ ಈಚೆಗೆ ನಡೆದಿರುವ ಕಥಾಂತರಗಳನ್ನೆಲ್ಲಾ ಕೇಳುವಲ್ಲಿ ಅಧ್ಯಕ್ಷರ ಉಪದೇಶವೆಲ್ಲಾ ಗಾಳಿಗೆ ತೂರಿಹೋದ ಜಳ್ಳಿನಂತೆ ಪರಿಣಾಮಗೊಂಡುಹೋಯಿತು. ಕಲ್ಕತ್ತಾ ಸಭೆಯಲ್ಲಿ ಆಗಿದ್ದ ಸಹಾಯನಿರಾಕರಣ ನಿರ್ಧಾರಕ್ಕಿಂತಲೂ ಒಂದು ಹಜ್ಜೆ ಮುಂದಾಗಿಯೇ ನಿರಾಕರಣದ ತೀರ್ಮಾನವಾಯಿತು. ಈ ವಿಷಯದಲ್ಲಿ ವಿಷಯ ನಿರ್ಧಾರಕ ಸಭೆಯಲ್ಲಿ ತೀವ್ರ ಮತಭೇದಗಳು ವ್ಯಕ್ತವಾದುವು. ಬಂಗಾಳಾ ಪ್ರತಿನಿಧಿಗಳಲ್ಲಿ ಮುಷ್ಟಾಮುಷ್ಟಿಗಳು ಕೂಡ ನಡೆದುಹೋದುವು. ಸಹಾಯನಿರಾಕರಣ ದೀಕ್ಷಿತರು ಪ್ರಯತ್ನಪೂರ್ವಕವಾಗಿಯೇ ತಮ್ಮ ಕಡೆಯ ಜನರನ್ನು ಹೆಚ್ಚುಹೆಚ್ಚಾಗಿ ಸಭೆಗೆ ಪ್ರತಿನಿಧಿಗಳೆಂದು ಕರೆದುಕೊಂಡುಹೋಗಿ, ತಮ್ಮ ಕೂಗನ್ನೇ ದೊಡ್ಡದಾಗಿ ತೋರಿಸಿ, ಈ ನಿರಾಕರಣದ ತೀರ್ಮಾನವನ್ನು ಸಾಗಿಸಿದರು. ಆ ತೀರ್ಮಾನದ ಸ್ವರೂಪವು ಹೇಗೆಂದರೆ—

"ರಾಷ್ಟ್ರೀಯ ಮಹಾಸಭೆಯವರ ಅಭಿಪ್ರಾಯವನ್ನನುಸರಿಸಿ, ಸದ್ಯಃ ಭರತಖಂಡ ಪ್ರಭುತ್ವವು ದೇಶದ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದಲೂ, ಭರತಖಂಡ ಪ್ರಜೆಗಳು ಸ್ವರಾಜ್ಯವನ್ನು ಸ್ಥಾಪಿಸುವುದಕ್ಕೆ ಈಗ ಕೃತನಿಶ್ಚಯರಾಗಿರುವುದರಿಂದಲೂ, ಪ್ರತ್ಯೇಕ ದೇಶೀಯ ಮಹಾಸಭೆಯು ಕಲ್ಕತ್ತೆಯಲ್ಲಿ ಜರುಗುವುದಕ್ಕೆ ಪೂರ್ವ ತಮ್ಮ ಸ್ವಾಮ್ಯ ಸ್ವಾತಂತ್ರ್ಯಗಳನ್ನು ಉಳಿಯಿಸಿಕೊಳ್ಳಲಿಕ್ಕೂ ತಮಗೆ ಸಂಭವಿಸಿದ ಅನೇಕ ಕಷ್ಟಗಳನ್ನು ಮುಖ್ಯವಾಗಿ ಖಿಲಾಫತ್ತಿಗೂ ಪಂಜಾಬಿಗೂ ಸಂಬಂಧಿಸಿದ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳಲಿಕ್ಕೂ ಅವಲಂಬಿಸಿದ ಪದ್ಧತಿಗಳೆಲ್ಲಾ ವ್ಯರ್ಥವಾದುದರಿಂದಲೂ, ಈ ಮಹಾಸಭೆಯು ಕಲ್ಕತ್ತಾ ಮಹಾಸಭೆಯಲ್ಲಿ ಮಾಡಿದ್ದ ನಿರಾಕರಣದ ತೀರ್ಮಾನವನ್ನು ಮತ್ತೆ ಅಂಗೀಕರಿಸುವುದಲ್ಲದೆ, ಪ್ರಭುತ್ವ ಸಹಾಯವನ್ನು ನಿರಾಕರಿಸುವುದು ಮೊದಲ್ಗೊಂಡು ಅದಕ್ಕೆ ಕಂದಾಯವನ್ನು ಸಲ್ಲಿಸದೆಹೋಗುವುದೇ ಕೊನೆಯಾಗುಳ್ಳ ನಿರಾಕರಣ ವಿಧಾನಗಳನ್ನೆಲ್ಲವನ್ನೇ ಆಗಲಿ ಅಥವಾ ಅದರಲ್ಲಿನ ಕೆಲ ಭಾಗವನ್ನೇ ಆಗಲಿ ರಾಷ್ಟ್ರೀಯ ಮಹಾಸಭೆಯವರೋ ಅಥವಾ ಅವರಿಂದ ನಿಯುಕ್ತರಾದ ಸಂಘದವರೋ ನಿರ್ಣಯಿಸಿ ಹೇಳುವ ಸಮಯದಲ್ಲಿ ವ್ಯವಹಾರಕ್ಕೆ ತರಲು ದೇಶವು ಸಿದ್ಧವಾಗಿರಬೇಕು. ಅದಕ್ಕಾಗಿ ಫಲಪ್ರದವೆಂದು ತೋರುವ ಈ ಚರ್ಯೆಗಳನ್ನು ಅವಲಂಬಿಸಬೇಕು. ಯಾವುವೆಂದರೆ—೧೬ ವರ್ಷ ವಯಸ್ಸಿನೊಳಗಣ ವಿದ್ಯಾರ್ಥಿಗಳ ತಾಯ್ತಂದೆಗಳೂ ಪೋಷಕರೂ ಆ ಹುಡುಗರನ್ನು ಸರ್ಕಾರಿ ಯಾಜಮಾನ್ಯದ ಅಥವಾ ಅವರ ಸಹಾಯ ಪಡೆಯುವ ಪಾಠಶಾಲೆಗಳಿಗೆ ಕಳುಹಿಸಿಕೊಡಬಾರದು. ಬೇರೆ ಜಾತೀಯ ಪಾಠಶಾಲೆಗಳನ್ನು ಸ್ಥಾಪಿಸಲು ಪ್ರಯತ್ನಿಸಿ, ಅಲ್ಲಿಗೆ ಸೇರಿಸಿ ಓದಿಸಬೇಕು.

೧೬ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ವಿದ್ಯಾರ್ಥಿಗಳು ತಮ್ಮ ಮನಸ್ಸಿಗೆ ಸರಿಯೆಂದು ತೋರಿದರೆ ಮೇಲೆಕಂಡಂಥ ಸರ್ಕಾರಿ ಶಾಲೆಗಳನ್ನು ಕೂಡಲೇ ಬಿಟ್ಟುಬಂದು ಸಹಾಯನಿರಾಕರಣೋದ್ಯಮ ಕಾರ್ಯದಲ್ಲಿ ತತ್ಪರರಾಗಬೇಕು; ಇಲ್ಲವೆ ಜಾತೀಯ ವಿದ್ಯಾಶಾಲೆಗಳಲ್ಲಿ ಸೇರಿ ಓದಬೇಕು.

ಮೇಲೆ ಕಂಡಂಥ ಸರ್ಕಾರಿಶಾಲೆಗಳ ಟ್ರಸ್ಟಿಗಳೂ ಮೇನೇಜರರೂ ಉಪಾಧ್ಯಾಯರೂ ಮ್ಯುನಿಸಿಪಲ್ ಬೋರ್ಡುಗಳೂ ಲೋಕಲ್ ಬೋರ್ಡುಗಳೂ ಸಹ ಆ ಶಾಲೆಗಳನ್ನು ಜಾತೀಯ ಪಾಠಶಾಲೆಗಳನ್ನಾಗಿ ಮಾಡಲು ಯತ್ನಿಸಬೇಕು.

ವಕೀಲರು ತಮ್ಮ ವೃತ್ತಿಗಳನ್ನು ಬಿಟ್ಟುಬಿಡಲು ಹೆಚ್ಚು ಪ್ರಯತ್ನಮಾಡಬೇಕು. ಅವರು ಲಾ ಕೋರ್ಟುಗಳನ್ನೂ ಕಕ್ಷಿದಾರರನ್ನೂ ತಮ್ಮ ಸಹೋದ್ಯೋಗಿಗಳಾದ ವಕೀಲರ ಸಂಬಂಧವನ್ನೂ ಬಹಿಷ್ಕರಿಸಬೇಕು. ಕಕ್ಷಿದಾರರು ತಮ್ಮ ವಿವಾದಗಳನ್ನು ಪಂಚಾಯತರಲ್ಲಿ ತೀರ್ಮಾನಿಸಿಕೊಳ್ಳುವಂತೆ ಅವರನ್ನು ವಕೀಲರುಗಳು ಪ್ರೇರೇಪಿಸಬೇಕು.

ಭರತಖಂಡದ ಆರ್ಥಿಕ ಸಂಪತ್ತನ್ನು ಅಭಿವೃದ್ಧಿಪಡಿಸಲಿಕ್ಕಾಗಿ ಇಲ್ಲಿಯ ವರ್ತಕರು ವಿದೇಶ ವ್ಯಾಪಾರ ಸಂಬಂಧವನ್ನು ಕ್ರಮಕ್ರಮವಾಗಿ ಬಿಟ್ಟುಬಿಡಬೇಕು. ಪ್ರತಿಯೊಬ್ಬನೂ ನೂಲನ್ನು ರಾಟೆಯಾಡುವುದನ್ನೂ ನೆಯ್ಯುವುದನ್ನೂ ಪ್ರೋತ್ಸಾಹಿಸಬೇಕು (ಈ ಆರ್ಥಿಕಸಂಬಂಧವಾದ ಬಹಿಷ್ಕಾರ ವಿಧಾನವನ್ನು ಗೊತ್ತುಮಾಡಲು ಅದರಲ್ಲಿ ನಿಪುಣರಾದ ಕೆಲವರನ್ನು ಸೇರಿಸಿ ಒಂದು ಉಪಸಂಘವನ್ನೇರ್ಪಡಿಸಬೇಕು).

ಸಹಾಯನಿರಾಕರಣಕ್ಕೆ ತ್ಯಾಗವೇ ಅತಿ ಮುಖ್ಯವಾದುದರಿಂದ ಪ್ರತಿಯೊಬ್ಬ ಹೆಂಗುಸೂ ಗಂಡುಸೂ ಜಾತೀಯೋದ್ಯಮಕ್ಕಾಗಿ ಸಾಧ್ಯವಾದಷ್ಟು ತ್ಯಾಗವನ್ನು ಮಾಡಲು ಸಿದ್ಧರಾಗಬೇಕು.

ಈ ನಿರಾಕರಣೋದ್ಯಮವನ್ನು ಬೇಗನೆ ದೇಶದಲ್ಲೆಲ್ಲಾ ಹಬ್ಬಿಸಲಿಕ್ಕಾಗಿ ಪ್ರತಿಗ್ರಾಮದಲ್ಲೂ ಸಂಘಗಳನ್ನೇರ್ಪಡಿಸಬೇಕು.

ಜಾತೀಯಸೇವೆ ಮಾಡಲಿಕ್ಕಾಗಿ ಅನೇಕ ಸೇವಕರನ್ನು ಸಿದ್ಧಪಡಿಸಬೇಕು. ಇದಕ್ಕೆಲ್ಲಾ ಸಹಾಯಕವಾಗುವಂತೆ ಒಂದು ಸ್ವರಾಜ್ಯಧನನಿಧಿಯನ್ನು ತಿಲಕರ ಹೆಸರ ಮೇಲೆ ಸ್ಥಾಪಿಸಬೇಕು.

ಸಹಾಯನಿರಾಕರಣಕ್ಕೆ ವ್ಯತಿರಿಕ್ತವಾಗಿ ಶಾಸನ ಸಭೆಗಳಿಗೆ ಉಮೇದುವಾರರಾಗಿ ನಿಂತು ಮೆಂಬರುಗಳಾಗಿರುವವರು ದೇಶದ ಪ್ರತಿನಿಧಿಗಳಲ್ಲವೆಂದು ಓಟರುಗಳೆಲ್ಲರೂ ಪ್ರಕಟಿಸಬೇಕು. ತಮ್ಮ ದೇಶಕ್ಷೇಮಕ್ಕೂ ವಿಶ್ವಾಸಕ್ಕೂ ವಿಘಾತಕವೆಂದು ತೋರುವ ಅಧಿಕಾರಿಗಳಾಜ್ಞೆಯನ್ನು ನಿರಾಕರಿಸಲು ಪೋಲೀಸರು ಯತ್ನಿಸಬೇಕು. ಸರ್ಕಾರದ ಉದ್ಯೋಗದಲ್ಲಿರುವವರೆಲ್ಲರೂ ತಂತಮ್ಮ ಉದ್ಯೋಗವನ್ನು ಬಿಟ್ಟುಬಿಡಬೇಕೆಂದು ಪ್ರಜೆಗಳೆಲ್ಲರೂ ಕೋರುವುದರೊಳಗೆ ಆ ಅಧಿಕಾರಿಗಳು ಪ್ರಜೆಗಳ ಮೇಲೆ ದಯೆಯಿಂದಲೂ ನಿಷ್ಪಕ್ಷಪಾತತೆಯಿಂದಲೂ ಪ್ರವರ್ತಿಸಬೇಕು. ಮತ್ತು ಜಾತೀಯೋದ್ಯಮಗಳಿಗೆ ಮುಚ್ಚುಮರೆಯಿಲ್ಲದೆ ಧನಸಹಾಯವನ್ನು ಮಾಡುತ್ತಬರಬೇಕು

ಸಹಾಯನಿರಾಕರಣದಲ್ಲಿ ಅಹಿಂಸೆಯು ಮುಖ್ಯಭಾಗವಾಗಿರಬೇಕು.

ಖಿಲಾಫತ್ತು ಮತ್ತು ಪಂಜಾಬಿನ ಅನ್ಯಾಯಗಳು ತೊಲಗುವುದಕ್ಕೂ ಸ್ವರಾಜ್ಯವು ೧ ವರ್ಷದೊಳಗಾಗಿ ಸುಪ್ರತಿಷ್ಠಿತವಾಗುವುದಕ್ಕೂ ಸಹ ರಾಷ್ಟ್ರೀಯ ಮಹಾಸಭೆಗೆ ಸೇರಿದ ಅಥವಾ ಸೇರದೆ ಇರುವ ಸಂಘಗಳೆಲ್ಲವೂ ದೌರ್ಜನ್ಯರಹಿತವಾಗಿರುವ ಸಹಾಯನಿರಾಕರಣೋದ್ಯಮದ ಅಭಿವೃದ್ಧಿಗಾಗಿ ತಮ್ಮ ಯಾವಚ್ಛಕ್ತಿಯನ್ನೂ ವಿನಿಯೋಗಿಸಬೇಕು. ಸಹಾಯನಿರಾಕರಣೋದ್ಯಮವು ವಿಜಯಗೊಳ್ಳಬೇಕಾದರೆ ಪ್ರಜೆಗಳಲ್ಲಿ ಅನ್ಯೋನ್ಯಸಹಾಯವು ಅತ್ಯಾವಶ್ಯಕವಾಗಿರುವ ಕಾರಣ ಹಿಂದೂ ಮಹಮ್ಮದೀಯ ಸಂಯೋಗವನ್ನು ವೃದ್ಧಿಪಡಿಸಬೇಕು. ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಹೋರಾಟವಿರುವ ಕಡೆ ಅದನ್ನು ಪರಿಷ್ಕರಿಸುವುದಕ್ಕೂ, ನಿಮ್ನಜಾತಿಯವರ ಅಸ್ಪೃಶ್ಯತ್ವವನ್ನು ಹಿಂದೂ ಮತದಿಂದಲೇ ತೊಲಗಿಸಿಬಿಡುವುದಕ್ಕೂ, ಪ್ರತ್ಯೇಕ ಪ್ರಯತ್ನಗಳನ್ನು ಆಯಾಭಾಗದ ಪ್ರಮುಖರು ಮಾಡಬೇಕು. ನಿಮ್ನಜಾತಿಯವರ ಸಮುದ್ಧಾರ ವಿಷಯವಾಗಿಯೂ ಹಿಂದೂ ಸಂಸ್ಕರಣ ವಿಷಯವಾಗಿಯೂ ಜರುಗುತ್ತಿರುವ ಪ್ರಯತ್ನಗಳಿಗೆ ಮಠಾಧಿಪತಿಗಳು ಸಹಾಯಮಾಡಬೇಕು. ಎಂಬುದು ಈ ಮಹಾಸಭೆಯ ವಿನಯಪೂರ್ವಕ ವಿಜ್ಞಾಪನೆ" ಎಂದು ತೀರ್ಮಾನಿಸಿದ್ದಾರೆ.

ಮತ್ತು ಇವರು ಕೇಳುವ ಇಷ್ಟಾರ್ಥಗಳನ್ನೆಲ್ಲಾ ನೆರವೇರಿಸಿಕೊಟ್ಟರೇನೆಯೇ ಮತ್ತು ನೆರವೇರಿಸಿಕೊಡುವವರೆಗೇ ಇವರು ಆಂಗ್ಲ ಸಾಮ್ರಾಜ್ಯದಧೀನದಲ್ಲಿರುವರಂತೆ! ಇಲ್ಲದಿದ್ದರೆ ಇವರಿಗೆ ಸಂಪೂರ್ಣ ಸ್ವರಾಜ್ಯವೇ ಬೇಕಂತೆ! ಮ|| ಗಾಂಧಿಯವರೂ ಲಜಪತಿರಾಯಿಯವರೂ ಹೀಗೆಂದು ತಿಳಿಯಿಸಿರುವರು.

ಈ ಸಹಾಯನಿರಾಕರಣದ ತೀರ್ಮಾನವು ಸಭೆಯಲ್ಲಿ ಆಗುವಾಗ್ಗೆ ಅಧ್ಯಕ್ಷರು ಕಾರ್ಯಾಂತರದ ನೆಪವನ್ನು ಹೇಳಿ ಹೊರಟು ಹೋಗಿದ್ದರು. ಪಂಡಿತ ಮದನಮೋಹನಮಾಳವ್ಯರವರು ದೇಹಾರೋಗ್ಯವಿಲ್ಲವೆಂಬ ಕಾರಣದಿಂದ ಅವರೂ ಆ ದಿನದ ಸಭೆಗೆ ಬರಲಿಲ್ಲ. ಅವರ ಕುಮಾರರು ಪಂಡಿತ ರಾಧಾಕೃಷ್ಣಮಾಳವ್ಯರವರು ಇದನ್ನು ಖಂಡಿಸಿ ಭಾಷಣ ಮಾಡಿದರು. ಪಂಡಿತಮೋತಿಲಾಲ್ ನೆಹ್ರೂರವರ ಅಧ್ಯಕ್ಷತೆಯಲ್ಲಿ ಈ ನಿರ್ಧಾರವು ಮಹಾಕೋಲಾಹಲದಿಂದ ಪೂರೈಸಲ್ಪಟ್ಟಿತು.

ಕೆಲವು ವಿಶಿಷ್ಟ ಕಾರಣಗಳಿಂದ ಆಂಗ್ಲಪ್ರಭುತ್ವದ ವಿಷಯದಲ್ಲಿ ಕೆಲ ವಿದ್ಯಾಧಿಕ ಜನರು ಮಹಾ ವಿಮುಖತೆಯನ್ನು ವ್ಯಕ್ತಪಡಿಸಿ ಈಗಿಂದೀಗಲೇ ತಾವು ಆಂಗ್ಲ ಪ್ರಭುತ್ವವಿಮುಕ್ತಸಂಪೂರ್ಣಸ್ವರಾಜ್ಯವನ್ನು ಅನುಭವಿಸುತ್ತೇವೆಂದೂ, ಆಂಗ್ಲರೊಡನೆ ತಾವು ಸಹಕರಣದಿಂದ ನಡೆಯುವುದಿಲ್ಲವೆಂದೂ ಹೇಳಿಕೊಂಡು, ಅವರನ್ನು ಧಿಕ್ಕರಿಸುವ ತೀರ್ಮಾನವನ್ನು ಮಾಡಿಕೊಳ್ಳುವುದು ಭರತಖಂಡದ ಸಕಲ ಪ್ರಜೆಗಳ ಕೋರಿಕೆಯೆಂದು ಎಂದಿಗೂ ಹೇಳಿಸಿಕೊಳ್ಳುವುದಿಲ್ಲ. ೧೦-೨೦ ಸಾವಿರ ಜನರು ಹೀಗೆ ಅಭಿಪ್ರಾಯಪಡುವುದಾದರೆ ೧೦-೨೦ ಕೋಟಿ ಜನರು ತಮಗೆ ಆಂಗ್ಲ ಛತ್ರಾಶ್ರಯವೇ ಇರಬೇಕೆಂದೂ, ಆಂಗ್ಲ ಛತ್ರಾಶ್ರಯದ ಕೆಳಗೆ ಕಳೆದ ನೂರಾರು ವರ್ಷಗಳಿಂದ ಇದ್ದು ಆ ಆಂಗ್ಲಮಹಾಜನರನ್ನೇ ಭೂದೇವತೆಗಳೆಂದು ನೆರೆನಂಬಿ ಹೊಗಳಿ, ಅವರಿಂದಲೇ ವಿದ್ಯೆ, ನಾಗರಿಕತೆ ಪ್ರಪಂಚಾನುಭವ ಸಂಪತ್ತಿ ಮೊದಲಾದುವುಗಳನ್ನೆಲ್ಲಾ ಪಡೆದು ವಿದ್ಯಾಧಿಕರೆನಿಸಿಕೊಂಡು, ಸ್ವರಾಜ್ಯವನ್ನು ಕೇಳಿಕೊಳ್ಳುವಂಥ ಸ್ಥಿತಿಗೆ ಬಂದಿರುವಾಗ, ನಾವುಗಳೂ ಅದೇ ಸ್ಥಿತಿಗೆ ಬರುವವರೆಗೂ ನಮಗೂ ಆ ಆಂಗ್ಲ ಛತ್ರಾಶ್ರಯವೇ ಇನ್ನೂ ನೂರಾರು ವರ್ಷಗಳವರೆಗೆ ಇರಲೆಂದೂ, ನಿರ್ದುಷ್ಟವಾದ ಪ್ರಭುತ್ವವು ಜಗತ್ತಿನಲ್ಲಿ ಯಾವುದೂ ಇಲ್ಲದಿರುವಾಗ ಆ ಕಾರಣಕ್ಕಾಗಿಯೇ ಆಂಗ್ಲ ಜನರನ್ನು ದೂರೀಕರಿಸುವುದು ಈಗಣ ಭರತಖಂಡದ ಸ್ಥಿತಿಗೆ ತಕ್ಕುದಲ್ಲವೆಂದೂ, ಅವರ ಕಾರ್ಯಭಾರಗಳಲ್ಲಿರುವ ಲೋಪವನ್ನು ತಿದ್ದಿಸಿಕೊಂಡು ಸಕ್ರಮ ಸ್ವರಾಜ್ಯವನ್ನು ಪಡೆದುಕೊಳ್ಳುವುದೇ ತಮಗೆ ಇಷ್ಟವೆಂದೂ ಹೇಳಲು ಸಿದ್ಧರಾಗಿರುವರು. ಅದುಕಾರಣ ಈಗಣ ಸಹಾಯನಿರಾಕರಣ ನಿರ್ಧಾರವೂ ಅದಕ್ಕೆ ಸಂಬಂಧಪಟ್ಟ ಆಚರಣೆಯ ವಿಧಾನಗಳೂ ಸಹ ದೇಶದ ಪ್ರಜೆಗಳಲ್ಲಿ ಭೇದೋಪಭೇದಗಳನ್ನು ಮತ್ತಷ್ಟು ವೃದ್ಧಿಪಡಿಸಲು ಸಾಧಕವೇ ಹೊರತು ದೇಶಕ್ಕೆ ಸುಖಪರಿಣಾಮಿಯಾಗಲಾರದು.

ಒಳದೇಶದ ವೃತ್ತಾಂತಗಳು.

ಬರುವ ಫಿಬ್ರವರಿ ತಾ|| ೫-೬ ರಲ್ಲಿ ಬೆಂಗಳೂರು ಲಾಲ್‌ಬಾಗಿನಲ್ಲಿ ಫಲಪುಷ್ಪಾದಿಗಳ ಪ್ರದರ್ಶನವು ನಡೆಯುವುದು.

ಚಾಮುಂಡಿಬೆಟ್ಟದ ಮೇಲಕ್ಕೆ ೨ ಕಿರುಬಗಳು ಬಂದು ಸೇರಿವೆಯೆಂದು ಕೇಳುತ್ತೇವೆ. ಇವುಗಳ ಭೀತಿಯನ್ನು ಕೂಡಲೇ ನಿವಾರಿಸುವ ಏರ್ಪಾಟು ನಡೆಯಬೇಕಾಗಿದೆ.

ರಾಜಧಾನಿಯ ಟ್ರಸ್ಟ್‌ಬೋರ್ಡು ಮೆಂಬರು ಕೆಲಸಕ್ಕೆ ರಾವ್ ಬ|| ಎಂ. ಸಿ. ರಂಗಯ್ಯಂಗಾರರು ರಾಜೀನಾಮೆ ಕೊಟ್ಟಕಾರಣ ಖಾ|| ಮಹಮ್ಮದ್ ಜಾಫರ್‌ಸಾಹೇಬರು ಆ ಸ್ಥಾನಕ್ಕೆ ನಿಯಮಿಸಲ್ಪಟ್ಟಿದ್ದಾರೆ.

ಸರ್ಕಾರಿ ಅಥವಾ ಲೋಕಲ್ ಆಸ್ಪತ್ರೆಗಳ ಸಹಾಯವು ದೊರೆಯದಿರುವ ಸ್ಥಳಗಳಲ್ಲಿರುವ ಹಿಂದೂ ಯುನಾನಿ ವೈದ್ಯಾಲಯಗಳಿಗೆ ತಕ್ಕ ಸಹಾಯದ್ರವ್ಯವನ್ನು ಕೊಡುವ ನಿಯಮವೊಂದನ್ನು ನಮ್ಮ ಸರ್ಕಾರದವರು ಪ್ರಕಟಿಸಿದ್ದಾರೆ.

ಮೈಸೂರು ಮ್ಯುನಿಸಿಪಲ್ ಪ್ರೆಸಿಡೆಂಟರೂ, ಟ್ರಸ್ಟ್‌ಬೋರ್ಡ್ ಚೇರ್ಮನ್ನರೂ ಆಗಿದ್ದು ಭದ್ರಾವತಿಯ ಕಬ್ಬಿಣದ ಯಂತ್ರಾಲಯದ ಕೆಲಸಗಳ ಚಾರ್ಜಿಗೆ ವರ್ಗಾಯಿಸಲ್ಪಟ್ಟಿದ್ದ ಮ|| ಟಿ. ಜಿ. ಲಕ್ಷ್ಮಣರಾಯರು ಉದ್ಯೋಗದಿಂದ ನಿವೃತ್ತರಾದರು.

ಶ್ಯಾನುಭೋಗ ಕೃಷ್ಣಪ್ಪ ಎಂಬುವವರು ಸುಳ್ಳು ವ್ಯಾಜವನ್ನು ತಂದಿದ್ದರೆಂಬ ಅಪರಾಧಕ್ಕಾಗಿ ೧ ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟು, ಚೀಫ್‌ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿರಲು ಅಲ್ಲೂ ಅದೇ ಸ್ಥಿರವಾಯಿತು. ಇದೇ ವೃತ್ತಿಯಲ್ಲಿರುವ ಕೆಲವು ಶ್ಯಾನುಭೋಗರುಗಳಿಗೆ ಇದು ಗುಣಪಾಠವಾಗಲಿ.

ಸರ್ ಎಂ. ವಿಶ್ವೇಶ್ವರಯ್ಯನವರು ಮೋಟಾರುಬಂಡಿಯಲ್ಲಿ ನೆನ್ನೆಯದಿನ ಬೆಳಗ್ಗೆ ೧೦ ಗಂಟೆಯಲ್ಲಿ ರಾಜಧಾನಿಗೆ ದಯಮಾಡಿ ಮಧ್ಯಾಹ್ನ ೧ ಗಂಟೆಯಲ್ಲಿ ಶ್ರೀಮನ್ ಮಹಾರಾಜರವರ ದರ್ಶನ ಭಾಷಣಗಳನ್ನು ಮಾಡಿಕೊಂಡು ಅದಲ್ಲದೆ ರೈಲ್ವೆ ಏಜಂಟ್ ಮಿ|| ಥಾಣೆಯವರ ಕೂಡ ಕನ್ನಂಬಾಡಿಗೆ ಹೋಗಿ ನೋಡಿಕೊಂಡು ಬಂದು ಈ ದಿನ ಬೆಂಗಳೂರಿಗೆ ಹಿಂದಿರುಗುವವರಾಗಿರುವರು.

ಮೈಸೂರು ದೇಶೀಯರಾಗಿದ್ದು ಮದ್ರಾಸಿನ ವೈದ್ಯಶಾಲೆಯ ಕೆಲಸದಲ್ಲಿದ್ದು ಸ್ವತಂತ್ರ ವೈದ್ಯೋದ್ಯೋಗದ ಅಧಿಕದಿಂದ ಸರ್ಕಾರಿ ಕೆಲಸವನ್ನು ಬಿಟ್ಟು ಆಂಗ್ಲ ಹಿಂದೂ ವೈದ್ಯಗಳೆರಡರ ಪ್ರಯೋಗದಲ್ಲೂ ತುಂಬಾ ಖ್ಯಾತಿಯನ್ನೂ ಧನವನ್ನೂ ಸಂಪಾದಿಸಿದ್ದ ಡಾಕ್ಟರ್ ನಂಜುಂಡರಾಯರು ಮದ್ರಾಸು ತಿರುವಲಕ್ಕೇಣಿಯಲ್ಲಿರುವ ತಮ್ಮ ಮನೆಯಲ್ಲಿ ಕಳೆದ ಮಂಗಳವಾರ ಬೆಳಗ್ಗೆ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಮೈಸೂರು ಸೀಮೆಯ ಎಲ್ಲೆಕಟ್ಟಿನ ಒಳಗಡೆ ೫ ಮೈಲಿಯ ಪ್ರದೇಶಕ್ಕೆ ಈ ದೇಶದ ಇತರ ಭಾಗಗಳಿಂದ ಸರ್ಕಾರದ ನಿರ್ಬಂಧಕ್ಕೆ ಒಳಗಾದ ಯಾವ ಆಹಾರಧಾನ್ಯಗಳನ್ನೂ ರೈಲ್ವೆ ಅಥವಾ ಬಂಡಿಗಳ ಮಾರ್ಗವಾಗಿ ಯಾರೂ ಸಾಗಿಸಕೂಡದೆಂದೂ, ಸಾಗಿಸಬೇಕಾದ ಆವಶ್ಯಕತೆಯುಳ್ಳವರು ಬಂಡಿ ಮಾರ್ಗಗಳಿಗೆ ಅಮಲ್ದಾರರ, ರೈಲ್ವೆಗೆ ಸಿವಿಲ್‌ಸಪ್ಲೈ ಡೈರೆಕ್ಟರ ಅಪ್ಪಣೆ ಚೀಟಿಯನ್ನು ಪಡೆಯಬೇಕೆಂದೂ ಸರ್ಕಾರದವರು ವಿಧಿಸಿದ್ದಾರೆ.

ಇದೇ ತಿಂಗಳು ತಾ|| ೧೯-೨೦ ಚಿತ್ರದುರ್ಗದ ಶ್ರೀ ಚಾಮರಾಜೇಂದ್ರ ಸ್ಮಾರಕ ಭವನದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ರಡ್ಡಿ ಜನರ ಮಹಾಸಭೆಯು ಮ|| ಸಿ. ರಾಮಲಿಂಗರಡ್ಡಿ ಎಂ. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಇದಕ್ಕೆ ಮದರಾಸು ಅಧಿಪತ್ಯದ ಮುನಗಾಲ್ ಜಮೀನ್ದಾರರು, ರಾ|| ಸಾ|| ಮ|| ಚೆನ್ನಯ್ಯನವರು ಮ|| ಗಳಾದ ಸೆಷನ್ ಜಡ್ಜ್ ನಾಗಪ್ಪನವರು, ಕೆ. ಎಚ್. ರಾಮಯ್ಯ ಬ್ಯಾ|| ಅಟ್ಲಾಯವರು, ಎಂ. ಸುಬ್ಬಯ್ಯ ಬಿ. ಎ. ಯವರು, ಬಿ. ಎನ್. ವಿಜಯದೇವ ಬ್ಯಾ|| ಅಟ್ಲಾಯವರೇ ಮೊದಲಾದ ಪ್ರಮುಖರನೇಕರು ದಯಮಾಡಿಸುವರು. ರಡ್ಡಿ ಮಹಾಜನರ ವಿದ್ಯಾಪ್ರೋತ್ಸಾಹ, ಸಂಘಸಂಸ್ಕರಣ, ಪರಿಶ್ರಮಾಭಿವೃದ್ಧಿಗಳೇ ಈ ಸಮ್ಮೇಳನದ ಉದ್ದೇಶವು. ಈ ಸಭೆಯ ಜತೆಗೆ ಒಂದು ರಡ್ಡಿ ಮಹಿಳಾ ಸಭೆಯು ಮ|| ಕೆ. ಎಚ್. ರಾಮಯ್ಯನವರ ಪತ್ನಿ ಸೌ|| ರೇವಮ್ಮನವರ ಅಧ್ಯಕ್ಷತೆಯಲ್ಲಿ ನಡೆಯುವುದು. ರಡ್ಡಿ ಮಹಾಜನರೆಲ್ಲರೂ ಆಗಮಿಸಬೇಕೆಂದು ಪ್ರಾರ್ಥಿಸಲ್ಪಟ್ಟಿದ್ದಾರೆ. ಭೋಜನ ವಸತಿಗಳಿಗೆ ಉಚಿತವಾಗಿ ಏರ್ಪಾಟು ಮಾಡಿದ್ದಾರೆ. ಹೋಗತಕ್ಕವರು ಮುಂದಾಗಿ ಅಲ್ಲಿರುವ ಸತ್ಕಾರಕ ಸಂಘದ ಸೆಕ್ರೆಟರಿಯವರಿಗೆ ಬರೆದು ತಿಳಿಯಿಸಬೇಕು.

ವರ್ತಮಾನಸಂಗ್ರಹ.

ಯಾವದ್ಭಾರತ ಕ್ರೈಸ್ತ ಮಹಾಸಭೆಯು ನಾಗಪುರದಲ್ಲಿ ಕೂಡಿದ್ದು ಸಹಾಯನಿರಾಕರಣವು ಆಚರಣೀಯವಲ್ಲವೆಂದೂ ಅದು ಆತ್ಮಹತ್ಯೆಗೆ ಸಮಾನವಾದ ಕ್ರಿಯೆಯೆಂದೂ ತೀರ್ಮಾನಿಸಿದರು.

ನೂತನ ವರ್ಷದ ಬಿರುದಾವಳಿಗಳಲ್ಲಿ ಮೈಸೂರಿನವರ ಭಾಗಕ್ಕೆ ಯಾವುದೂ ಬಂದಿಲ್ಲ. ಕಲ್ಕತ್ತಾದ ಬಂಗಾಳೀ ಪತ್ರಿಕಾಕರ್ತರಾದ ಸುರೇಂದ್ರನಾಥ ಬ್ಯಾನರ್ಜಿಯವರಿಗೆ ಸರ್ ಬಿರುದು ಪ್ರಾಪ್ತವಾಗಿದೆ. ದೇಶೀಯ ಪತ್ರಿಕಾಕರ್ತರಲ್ಲಿ ಇಂಥ ದೊಡ್ಡ ಬಿರುದನ್ನು ಪಡೆದವರಲ್ಲಿ ಇವರೇ ಮೊದಲನೆಯವರು.

ತಿಲಕ್ ಸ್ಮಾರಕ ಸ್ವರಾಜ್ಯಫಂಡಿಗೆ ಕಾಂಗ್ರೆಸ್ ಸ್ವಾಗತಸಂಘಾಧ್ಯಕ್ಷರಾದ ಸೇಟ್ ಯಮುನಾಲಾಲ್‌ರವರು ೧ ಲಕ್ಷ ರೂ. ಗಳನ್ನು ಕೊಟ್ಟರು. ಸ್ವರಾಜ್ಯಸಿದ್ಧಿಯಾಗುವವರೆಗೂ ಆ ಫಂಡಿಗೆ ನಾನು ತಿಂಗಳಿಗೆ ೧೦ ಸಾವಿರ ರೂ. ಗಳಂತೆ ಕೊಡುತ್ತೇನೆಂದು ಮಿ|| ಬೊಮ್ಮಂಜಿಯವರು ವಾಗ್ದಾನಮಾಡಿರುವರು.

ಕಾಂಗ್ರೆಸ್ಸಿನವರು ಕನ್ನಡಿಗರಿಗಾಗಿಯೇ ಪ್ರತ್ಯೇಕವಾದ ಮಂಡಲವೊಂದನ್ನು ಏರ್ಪಡಿಸಿಕೊಟ್ಟಿದ್ದಾರೆ. ಇನ್ನು ಮೇಲೆ ಕಾಂಗ್ರೆಸ್ಸಿಗೆ ಭರತಖಂಡಾದ್ಯಂತದಿಂದಲೂ ೬೦೦೦ ಮಂದಿಗಿಂತ ಹೆಚ್ಚಾಗಿ ಪ್ರತಿನಿಧಿಗಳು ಬರದಂತೆ ಏರ್ಪಡಿಸಿಕೊಂಡಿದ್ದಾರೆ. ಮುಂದಣ ಕಾಂಗ್ರೆಸ್ಸು ಅಹಮ್ಮದಾಬಾದ್ ನಗರದಲ್ಲಿ ಜರುಗುವುದು.

ನಾಗಪುರದಲ್ಲಿ ಸಂಘಸಂಸ್ಕರಣ ಮಹಾಸಭೆಯು ಮ|| ವಿ. ಜೆ. ಪಟೇಲ್‌ರವರ ಅಧ್ಯಕ್ಷತೆಯಿಂದ ಕೂಡಿತ್ತು. ರಾಜಕೀಯ ವಿಷಯಗಳ ಜತೆಗೇ ಸಂಘ ಸಂಸ್ಕರಣಗಳೂ ನಡೆಯಬೇಕೆಂದು ಅವರು ಭಾಷಣಮಾಡಿದರು. ಅಸ್ಪೃಶ್ಯ ಜಾತಿ ವಿಭೇದಗಳು ಇರಕೂಡದು, ವಿತಂತು ವಿವಾಹಗಳು ಸಾಗಬೇಕು, ಇತ್ಯಾದಿ ನಿರ್ಧಾರಗಳು ಮಾಡಲ್ಪಟ್ಟುವು.

ಮಹಮ್ಮದೀಯ ವಿದ್ಯಾಭಿವೃದ್ಧಿ ಸಭೆಯು ಉಮರಾವತಿಯಲ್ಲಿ ಕೂಡಿ ೩ ದಿನಗಳ ಕಾಲ ನಡೆಯಿತು. ಜಾತೀಯ ಪಾಠಶಾಲೆಗಳನ್ನು ಸ್ಥಾಪಿಸಿಕೊಂಡರೂ ಸರ್ಕಾರಿ ಧನಸಹಾಯವನ್ನು ತಿರಸ್ಕರಿಸುವುದು ಕೂಡದೆಂದು ಮಹಮ್ಮದೀಯ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ಇನ್ನೂ ಹೆಚ್ಚಾಗಿ ಧನಸಹಾಯ ಮಾಡಿಕೊಡಬೇಕೆಂದು ಪ್ರಾರ್ಥಿಸಬೇಕೆಂದೂ ತೀರ್ಮಾನಿಸಿದರು.

ಡ್ಯೂಕ್ ಆಫ್ ಕನ್ನಾಟ್‌ರವರು ಈ ದೇಶಕ್ಕೆ ಬಂದಾಗ ಈ ದೇಶೀಯರಾರೂ ಅವರ ಸನ್ಮಾನಸಮಾರಂಭಗಳಿಗೂ ಉತ್ಸವಗಳಿಗೂ ಹೋಗಬಾರದೆಂದು ಕಾಂಗ್ರೆಸ್ಸಿನಲ್ಲಿ ತೀರ್ಮಾನಮಾಡಿಕೊಂಡಿದ್ದಾರೆ. ಏಕೆಂದರೆ ಇವರು ಸಹಾಯನಿರಾಕರಣವನ್ನವಲಂಬಿಸಿದ್ದಾರಂತೆ. ಚಕ್ರವರ್ತಿಯವರ ತಲೆಮುದ್ರೆಯುಳ್ಳ ರೂ. ಗಳನ್ನೂ ಕೂಡ ಇವರುಗಳು ಉಪಯೋಗಿಸದೆ ಇರಬಹುದು!

ನಾಗಪುರದಲ್ಲಿ ಯಾವದ್ಭಾರತ ವೈದ್ಯರ ಮಹಾಸಭೆಯೊಂದು ಕೂಡಿದ್ದಿತು. ತಮ್ಮ ವೈದ್ಯವೃತ್ತಿಯವರ ಯೋಗಕ್ಷೇಮವನ್ನೆಲ್ಲಾ ವಿಚಾರಿಸಿಕೊಳ್ಳಲಿಕ್ಕೆ ಒಂದು ಸಂಘವನ್ನು ಸ್ಥಾಪಿಸಬೇಕೆಂದೂ ಇನ್ನುಮುಂದೆ ವೈದ್ಯರುಗಳಾರೂ ಸರ್ಕಾರದವರನ್ನು ಯಾವ ವಿಷಯಕ್ಕಾಗಿಯೂ ಪ್ರಾರ್ಥನೆಮಾಡಿಕೊಳ್ಳಕೂಡದೆಂದೂ, ಒಂದು ವೈದ್ಯಪತ್ರಿಕೆಯನ್ನು ಪ್ರಕಟಿಸಬೇಕೆಂದೂ ತೀರ್ಮಾನಿಸಿದರು. ಉದ್ದೇಶ ಸಾಧನೆಗೆ ಏರ್ಪಟ್ಟ ಫಂಡಿಗಾಗಿ ಸಭೆಯಲ್ಲೇ ೩೦೦೦ ರೂ. ಗಳ ಸಂಸ್ಕೃತಿಪ್ರಸನ್ನವಾಯಿತು

ಯಾವದ್ಭಾರತ ಮಹಮ್ಮದೀಯ ಮಹಾ ಸಭೆಯ ೧೩ ನೆ ಅಧಿವೇಶನವು ನಾಗಪುರದಲ್ಲಿ ರಾಷ್ಟ್ರೀಯ ಮಹಾಸಭೆಯ ಮಂಟಪದಲ್ಲೇ ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವಾಗತಸಂಘಾಧ್ಯಕ್ಷರಾದ ಸಯ್ಯದ್ ವಕೀಲ್ ಅಹಮ್ಮದ್‌ಸಾಹೇಬ್ ಬಿಯಾನಿಯವರು ಆಂಗ್ಲಪ್ರಭುತ್ವದವರ ಅನ್ಯಾಯನಿರಂಕುಶತ್ವ ನಿರ್ಮೂಲನಗಳಿಗೆ ಸಹಾಯನಿರಾಕರಣವೇ ಪ್ರತಿಕ್ರಿಯೆಯೆಂದೂ ಹಿಂದೂಮಹಮ್ಮದೀಯರಿರ್ವರೂ ಏಕಮತ್ಯದಿಂದ ಇದನ್ನು ಸಾಗಿಸಬೇಕೆಂದೂ ಹೇಳಿದರು. ಸಭಾಧ್ಯಕ್ಷರಾದರೋ ಈ ಸಹಾಯನಿರಾಕರಣದಿಂದ ಮಹಮ್ಮದೀಯರ ವಿದ್ಯಾಭಿವೃದ್ಧಿಗೆ ಭಂಗವುಂಟಾಗುವುದೆಂದು ಹೇಳಿದರು.

ಯಾವದ್ಭಾರತ ಕಾಂಗ್ರೆಸ್ ಸಂಘಕ್ಕೆ ಇನ್ನು ಮುಂದೆ ೩೫೦ ಮಂದಿ ಸಭಿಕರಿರುವಂತೆಯೂ, ಅದರಲ್ಲಿ ಭಾಷಾಭೇದದ ಮೂಲಕ ವಿಂಗಡಿಸಲ್ಪಟ್ಟ ಬೇರೆಬೇರೆ ಪ್ರಾಂತಗಳಿಗೆ ಈ ಕೆಳಗೆ ಕಂಡಷ್ಟು ಪ್ರತಿನಿಧಿಗಳಿರಬೇಕೆಂತಲೂ ರಾಷ್ಟ್ರೀಯ ಮಹಾಸಭೆಯಲ್ಲಿ ನಿರ್ಧರಿಸಿದ್ದಾರೆ. ಬೊಂಬಾಯಿ ನಗರಕ್ಕೆ ೭, ಮಹಾರಾಷ್ಟ್ರಕ್ಕೆ ೧೬, ಗುಜರಾತಿಗೆ ೧೩, ಸಿಂಧುಗೆ ೯, ಮದ್ರಾಸು ರಾಷ್ಟ್ರಕ್ಕೆ ೨೫, ಆಂಧ್ರರಾಷ್ಟ್ರಕ್ಕೆ ೨೦, ಕನ್ನಡನಾಡಿಗೆ ೧೬, ಕೇರಳಕ್ಕೆ ೫, ಸಂಯುಕ್ತ ರಾಷ್ಟ್ರಗಳಿಗೆ ೫೩, ಪಂಜಾಬಿಗೆ ೩೩, ಎಲ್ಲೆಕಟ್ಟಿನ ಪ್ರಾಂತಗಳಿಗೆ ೧೩, ದಿಲ್ಲಿಗೆ ೫, ಅಜ್ಮೀರಿಗೆ ಮತ್ತು ರಾಜಪುತ್ರಸ್ಥಾನಕ್ಕೆ ಸಹ ೭, ಮಧ್ಯಪ್ರಾಂತದ ಹಿಂದಿಭಾಗಕ್ಕೆ ೧೦, ಅಲ್ಲಿಯ ಮಹಾರಾಷ್ಟ್ರ ಭಾಗಕ್ಕೆ ೧೦, ಬೀರಾರಿಗೆ ೬, ಬಿಹಾರಕ್ಕೆ ೩೬, ಉತ್ಕಲ, ಬಂಗಾಳ, ಸುರ್ಮಾ ಇವೆಲ್ಲಕ್ಕೂ ಸೇರಿ ೫೩, ಅಸ್ಸಾಮಿಗೆ ೬, ಬರ್ಮಕ್ಕೆ ೧೩ ಮಂದಿಗಳು.

'ಮಾಂಟೆಗ್ ಸಂಸ್ಕರಣವು ನಮಗೆ ತೃಪ್ತಿಕರವಾಗಿಲ್ಲ. ಈಗ ಏರ್ಪಟ್ಟಿರುವ ಶಾಸನ ಸಭಾ ಸಭಿಕರು ಪ್ರಜೆಗಳ ಪ್ರತಿನಿಧಿಗಳಲ್ಲ. ಭರತಖಂಡಕ್ಕೆ ಕೂಡಲೇ ಸ್ವರಾಜ್ಯವು ಲಭಿಸಬೇಕು. ಡ್ಯೂಕ್ ಆಫ್ ಕನ್ನಾಟರ ಸನ್ಮಾನ ಸಮಾರಂಭಗಳಿಗೆ ಯಾರೂ ಸೇರಬಾರದು, ಎಂದು ಪ್ರತಿ ಗ್ರಾಮಗಳಲ್ಲೂ ಸಭೆಗಳ ಮೂಲಕ ನಿರ್ಧಾರಮಾಡಿ ಪತ್ರಿಕೆಗಳಿಗೆ ಕಳುಹಿಸಬೇಕೆಂದು ಮದ್ರಾಸು ಅಧಿಪತ್ಯದಲ್ಲಿ ಪ್ರಯತ್ನವು ನಡೆಯಿಸಲ್ಪಡುತ್ತಿದೆ. ಆಂಗ್ಲಪ್ರಭುತ್ವದಿಂದ ಶಾಂತಿ ಸುಖಗಳನ್ನು ಪಡೆದು ವಿದ್ಯಾದಿಸಂಪತ್ತುಗಳಲ್ಲಿ ಈಗೀಗ ತಲೆಯೆತ್ತುತ್ತಿರುವ ಸಾಮಾನ್ಯ ಪ್ರಜೆಗಳಿಗೆಲ್ಲಾ ಈ ಮೇಲ್ಕಂಡ ಭಾವವು ವ್ಯತಿರಿಕ್ತವಾಗಿದೆ. ಅದಕಾರಣ, 'ಈಗಣ ಸಂಸ್ಕರಣವು ಕ್ರಮಾಂತರ ಸ್ವರಾಜ್ಯಕ್ಕೆ ಸಾಧಕವಾಗಿದೆ. ನಾವು ಸರ್ಕಾರಕ್ಕೆ ಸಹಾಯಕಾರಿಗಳು, ರಾಜಭಕ್ತಿ ತತ್ಪರರು" ಎಂಬುದಾಗಿ ಪ್ರತಿ ಗ್ರಾಮದಲ್ಲೂ ಹಿಂದುಳಿದ ಜನವರ್ಗಗಳ ರೈತರೇ ಮೊದಲಾದವರು ಸಭೆಗಳ ಮೂಲಕ ರೆಜಲ್ಯೂಷನ್ ಮಾಡಿ ಪ್ರಕಟಿಸುತ್ತ ಬರುವುದು ಆವಶ್ಯಕವಾಗಿದೆಯೆಂದು ಬಳ್ಳಾರಿಯ ನಮ್ಮ ಚಂದಾದಾರರೊಬ್ಬರು ಬರೆದು ತಿಳಿಯಿಸಿರುತ್ತಾರೆ. ಇದು ಯುಕ್ತವಾಗಿದೆ.

ವೀರಶೈವ ವಿದ್ಯಾಭಿವೃದ್ಧಿಫಂಡು ಸಂಘ.

ಲಗ್ನದ ಫಂಡು.

(1) ಬೆಂಗಳೂರು ಸಿಟಿ ಮೋಟಗಾನಹಳ್ಳಿ ಮ|| ರಾ|| ಚನ್ನವೀರಪ್ಪನವರ ಕುಮಾರಿ ಗಂಗಮ್ಮನವರನ್ನು ಮೋಟಗಾನಹಳ್ಳಿ ಮ|| ರಾ|| ರುದ್ರಪ್ಪನವರ ಕುಮಾರರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಮ|| ರಾ|| ದೇಶದ ಯಜಮಾನ ಬಸಪ್ಪನವರಿಂದ ಜಮಾ ೧೦ ರೂ. (2) ಹಾಸನದ ಮ|| ರಾ|| ಕಾಡಪ್ಪನವರ ಮಕ್ಕಳು ಮ|| ರಾ|| ಶಾಂತಪ್ಪನವರ ಲಗ್ನದಲ್ಲಿ ಮ|| ರಾ|| ಎಚ್. ಕೆ. ಮಲ್ಲಪ್ಪನವರಿಂದ ಜಮಾ ೨ ರೂ. (3) ಬಿಜಗಲುಪ್ಪೆ ಮ|| ರಾ|| ಮಲ್ಲಪ್ಪನವರ ಮಕ್ಕಳ ಲಗ್ನದಲ್ಲಿ ಬೆಂಗಳೂರು ಸಿಟಿ ಮ|| ರಾ|| ಅರಳೇಪೇಟೆ ಶೆಟ್ಟರವರ ಟಿ. ಆರ್. ಶೆಟ್ಟರವರಿಂದ ಜಮಾ ೨ ರೂ. (4) ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ರಾ|| ದಿಬ್ಬೂರು ಅಪ್ಪಾಜಿಯಪ್ಪನವರ ಕುಮಾರರ ಲಗ್ನದಲ್ಲಿ ಮ|| ರಾ|| ದೇಶದ ಯಜಮಾನ್ ಬಸಪ್ಪನವರಿಂದ ಜಮಾ ೨ ರೂ. (5) ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ರಾ|| ಅಪ್ಪಣ್ಣನವರ ಸಾಹುಕಾರ್ ಮಲ್ಲಪ್ಪನವರ ಕುಮಾರಿಯವರ ಲಗ್ನದಲ್ಲಿ ಮ|| ರಾ|| ದೇಶದ ಯಜಮಾನ್ ಬಸಪ್ಪನವರಿಂದ ಜಮಾ ೫ ರೂ. ಜುಮ್ಲಾ ಜಮಾ ರೂ. ಗಳು ೨೧.

ಜಿ. ಪರಮಶಿವಯ್ಯ ಬಿ. ಎ. ಎಲ್. ಎಲ್. ಬಿ.,
ಆನರರಿ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಪತ್ರವ್ಯವಹಾರ.

ಸಂಪದಭ್ಯುದಯವು, ಮ|| ರಾಮಲಿಂಗರಡ್ಡಿಯವರು.

ಸ್ವಾಮಿ,—

ವಿದ್ಯಾಭ್ಯಾಸ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮ|| ರಾಮಲಿಂಗರಡ್ಡಿಯವರನ್ನು ಮೈಸೂರು ಸಂಪದಭ್ಯುದಯ ಪತ್ರಿಕೆಯು ನಿಂದಿಸುತ್ತಿರುವುದಕ್ಕೆ ಅದರ ಮರಣಾವಧಿ ಮರೆಯದಿದ್ದಂಥ ಪ್ರಬಲವಾದ ಕಾರಣವು ಯಾವುದೋ ಇರಬೇಕೆಂದು ತೋರುತ್ತದೆ. ಮ|| ರಡ್ಡಿಯವರು ಪೂರ್ಣವಿದ್ಯಾವಂತರು ವಿಶೇಷ ಲೋಕಾನುಭವಶಾಲಿಗಳು; ಅಸದೃಶನೀತಿಭಾವಿಗಳು; ಅತುಲವಾಗ್ಮಿಗಳು. ಈ ವಿಶಿಷ್ಟ ಗುಣಪಾತ್ರತೆಯಿಂದ ಅವರು ಸರ್ವತ್ರವಿಬುಧ ಲೋಕಪ್ರಿಯತೆಯನ್ನು ಸಂಪಾದಿಸಿಕೊಂಡಿದ್ದಾರೆ. ವಿದ್ವಾನ್ ಸರ್ವತ್ರಪೂಜ್ಯತೆ ಎಂಬುದು ಸಹಜವೇತಾನೇ. ಈ ಕಾರಣದಿಂದ ಸಾಹಿತಿಕ, ಸಾಂಘಿಕ, ಸಾಮಾಜಿಕ ಮೊದಲಾದ ಅನೇಕ ಸಭೆಗಳಿಗೆ ಅವರನ್ನು ಅಧ್ಯಕ್ಷರನ್ನಾಗಿ ಕೋರಿಕೊಂಡು ಅನೇಕಕಡೆಯ ಮಹಾಜನರು ಅವರ ಬೋಧಾಮೃತವನ್ನು ಪಾನಮಾಡುತ್ತಿದ್ದಾರೆ. ಅಲ್ಲೆಲ್ಲಾ ಅವರ ವಿದ್ವತ್ಕೀರ್ತಿಯೂ ವಿಜೃಂಭಿಸುತ್ತಾ ಇರುವದನ್ನು ಕೇಳಿ ಅವರ ಹಗೆಯಾದ ಸಂಪದಭ್ಯುದಯಕ್ಕೆ ಮಾತ್ರ ಸೈರಣೆಯಿಲ್ಲ. ತನ್ನ ಶಕ್ತಿಯಿಂದ ಅವರ ತೇಜಸ್ಸನ್ನು ಮಸುಳಿಸುವದಕ್ಕೆ ಇದಕ್ಕೆ ಬೇರೆ ಶಕ್ತಿಯಿಲ್ಲ. ಆದರೂ ತನ್ನ ಹೊಟ್ಟೆಯನ್ನು ತಣ್ಣಗೆ ಮಾಡಿಕೊಳ್ಳಲಿಕ್ಕಾಗಿ ಅವರ ಉಪನ್ಯಾಸದ ಮೇಲೆ ಒಂದು ಕುಂಟು ಆಕ್ಷೇಪವನ್ನಾದರೂ ಹೊರಿಸಿ ತೃಪ್ತಿಪಡುವದೇ ಇದರ ಪುರುಷಾರ್ಥವಾಗಿದೆ.

ಇಲ್ಲದ ದೋಷಮುಮನಲ್ಲಿಯೆ | ಸೊಲ್ಲಿಪನದನೆಲ್ಲಿ ಕರ್ಣನೋಳಿಮದನೆ ||
ನ್ನಲ್ಲಿನರೆಕಳದನಬ್ಧಿಯೊ | ಳಿಲ್ಲದವಿಷಮಂ ಮಹಾಹಿಯೇಂತೋರವೇಳ್ ||

ಎಂಬ ಮಹಾಕವಿವಾಕ್ಯದಂತೆ ಸಮುದ್ರವು ಕ್ಷೀರಮಯವಾಗಿದ್ದರೂ ಅದರಲ್ಲಿ ಆದಿಶೇಷನು ವಿಷವನ್ನು ತಾನು ಕಕ್ಕಿ, ವಿಷವು ಸಮುದ್ರದಿಂದ ಹುಟ್ಟಿತೆನ್ನಿಸಿದಂತೆ ನಿರ್ದುಷ್ಟರಲ್ಲಿ ದೋಷವನ್ನಾರೋಪಿಸುವುದು ಅಸಜ್ಜನರ ಸ್ವಭಾವವೇ ತಾನೇ.

ಕಳೆದ ೫ನೆ ತಾರೀಖಿನ ಸಂಪದಭ್ಯುದಯ ಪತ್ರಿಕೆಯ ಲೀಡರ್ ಕಾಲಮ್ಮಿನಲ್ಲಿ ಆಲ್ ಇಂಡಿಯಾ ಮೆಡಿಕಲ್ ಕಾನ್ಫರೆನ್ಸ್ ಎಂದು ಹೆಡ್ಡಿಂಗ್ ಹಾಕಿಕೊಂಡು ಅದರ ಸಂಗತಿಯನ್ನು ಬರೆಯುವುದಕ್ಕೆ ಹೋಟು, ಮುಗಿಸುವುದರೊಳಗಾಗಿ ಹಾವಿಗೆ ಗರುಡನ ಸ್ವಪ್ನ ಬಿದ್ದಂತೆ ರಾಮಲಿಂಗನ ಸ್ವಪ್ನವು ಇದಕ್ಕೆ ಬಿದ್ದಕಾರಣ, ಅಲ್ಲಿಯ ಸಂದರ್ಭಕ್ಕೆ ರಡ್ಡಿಯವರ ಪ್ರಸ್ತಾಪವು ಅನವಶ್ಯಕವಾಗಿದ್ದರೂ 'ಅಂತರ್ಗಂಗೆಯೂ ಆಲದ ಮರವೂ ಒಂದೇ ವಿಧವಾಗಿ ಇರುವಂತೆ ಮಾಡುತ್ತೇನೆಂದು ವಿಜೃಂಭಿಸುವ ಮ|| ರಡ್ಡಿಯವರು ಬಿಳೀ ಜನಗಳಿಗೂ ಭಾರತೀಯರಿಗೂ ಉಂಟಾಗಿರತಕ್ಕ ಮನಸ್ತಾಪವು ಹೋಗುವಂತೆ ಮಾಡಲಿ. ಈ ಎರಡು ಪಂಗಡದವರೂ ಪರಸ್ಪರ ಮೈತ್ರಿಯಿಂದ ಬದುಕುವಂತೆ ಮಾಡಿದರೆ ಇತರರಲ್ಲಿ ವರ್ಣಸಂಕರವನ್ನು ಮಾಡುವುದಕ್ಕೆ ಇವರಿಗೆ ಶಕ್ತಿ ಇದೆಯೋ ಇಲ್ಲವೋ ಅದನ್ನು ಗೊತ್ತುಮಾಡಬಹುದು' ಎಂದು ಬರೆದು ಮುಗಿಸಲ್ಪಟ್ಟಿದೆ.

ಪಂಚಮರನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ ವಿದ್ಯಾಭ್ಯಾಸ ಮಾಡಿಸಬೇಕೆಂದು ಮೈಸೂರು ಪ್ರಭುತ್ವದವರು ಅಪ್ಪಣೆ ನೀಡಿದ ಕೂಡಲೇ ಇದು ಮ|| ರಡ್ಡಿಯವರ ವರ್ಣಸಂಕರ ಪ್ರಯತ್ನವೆಂದೂ, ಇದು ಅವರ ಬ್ರಾಹ್ಮಣದ್ವೇಷಪ್ರಭಾವವೆಂದೂ, ಇದು ಅವರಾಜ್ಞೆಯೇ ಎಂದು ವಾಚಾಮಗೋಚರವಾಗಿ ದೂಷಿಸಿ, ಪ್ರಜೆಗಳಿಗೆಲ್ಲಾ ಅವರ ಮೇಲೆ ದುರ್ಭಾವ ಹುಟ್ಟುವಂತೆ ಮಾಡಲು ಪ್ರಯತ್ನಿಸಿ, ಈ ರೂಪವಾಗಿ ತನ್ನ ಹಗೆತನವನ್ನು ತೀರಿಸಿಕೊಳ್ಳಲು ಈ ಪತ್ರಿಕೆಯು ಯತ್ನಿಸಿತು. ಆದರೆ ದಿವಾನ್ ಸಾಹೇಬರು ಪ್ರಜಾಪ್ರತಿನಿಧಿಸಭೆಯಲ್ಲಿ ಈ ವಿಷಯ ಸಂಬಂಧವಾಗಿ ಉತ್ತರ ಕೊಡುವಾಗ್ಗೆ 'ಸರ್ಕಾರದ ಸೂಚನೆಯ ಪ್ರಕಾರ ವಿದ್ಯಾಭ್ಯಾಸ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರವರು ಈ ಹುಕುಂ ಕೊಟ್ಟಿದ್ದಾರೆ' ಎಂದು ಹೇಳಿ ಮುಗಿಸಿದ್ದರಿಂದ ಇದು ರಡ್ಡಿಯವರ ಸಂಕಲ್ಪವೋ ಪ್ರಭುತ್ವದವರದೇ ಉದ್ದೇಶವೋ ಎನ್ನುವದು ಸ್ಪಷ್ಟವಾಯಿತು. ಆದರೂ ಕತ್ತರಿಸಿಬಿದ್ದ ಹಲ್ಲಿಯ ಬಾಲದಂತೆ ಸಂಪದಭ್ಯುದಯದ ಒದರಾಟವು ಈ ಸಂಬಂಧದಲ್ಲಿ ಇನ್ನೂ ತಪ್ಪಲಿಲ್ಲ.

ಸಂಪದಭ್ಯುದಯ ಪತ್ರಿಕೆಗೆ ಸಾಷ್ಟಾಂಗ ನಮಸ್ಕರಣೀಯರಾಗಿರುವ ದ್ವಾರಕೆಯ ಶಾರದಾಪೀಠದ ಶ್ರೀ ಶಂಕರಾಚಾರ್ಯರೂ, ಮಹಾತ್ಮರೆಂದು ವಂದಿಸಲ್ಪಡುತ್ತಲಿರುವ ಗಾಂಧಿಯವರೂ ನೆನ್ನೆತಾನೇ ನಾಗಪುರದ ಕಾಂಗ್ರೆಸ್ಸಿನಲ್ಲಿ ಪಂಚಮರ ಅಸ್ಪೃಶ್ಯತೆಯನ್ನು ನಿವಾರಿಸುವ ವಿಷಯವಾಗಿ ಹೇಗೆ ಅಭಿಪ್ರಾಯಪಟ್ಟಿದ್ದಾರೆಂಬುವದನ್ನು ಇಲ್ಲಿ ಕೊಡುತ್ತೇನೆ. ಅದನ್ನು ನೋಡಿದ ಮೇಲಾದರೂ ಸಂಪದಭ್ಯುದಯದ ಸೊಲ್ಲಡಗುವದೋ ಇಲ್ಲವೋ; ಅಥವಾ ಅವರುಗಳನ್ನೂ ರಡ್ಡಿಯವರಂತೆಯೇ ವರ್ಣಸಂಕರ ಮಾಡುವ ಅಭಿನವ ವೇದವ್ಯಾಸರೆಂದು ಈ ಪತ್ರಿಕೆಯು ಹೆಸರಿಡುವುದೋ ನೋಡೋಣ.

ಶಾರದಾಪೀಠದ ಶಂಕರಾಚಾರ್ಯರು ಈ ಕಾಂಗ್ರೆಸ್ಸಿನಲ್ಲಿ ಹೇಳಿರುವದು—'ನಿಮ್ನ ಜಾತಿಯವರನ್ನು ಕುರಿತು ಯಾರಾದರೂ ತನಗಿಂತ ಕಡಿಮೆಯಸ್ಥಿತಿಯಲ್ಲಿರುವವನ ಸಹವಾಸವು ತನ್ನ ಪವಿತ್ರತೆಗೆ ಭಂಗಕಾರವೆಂದು ನುಡಿಯಲು ಸಾಹಸಪಟ್ಟರೆ, ಅಂಥವನ ಪವಿತ್ರ ಚರಿತ್ರ ವಿಷಯದಲ್ಲಿ ನನಗೆ ಗೌರವ ಬುದ್ಧಿ ಹುಟ್ಟುವದಿಲ್ಲ. ತನಗಿಂತಲೂ ಹೀನಸ್ಥಿತಿಯಲ್ಲಿರುವವನ ಸಹವಾಸದಿಂದ ತನ್ನ ಪಾವಿತ್ರ್ಯಕ್ಕೆ ಎಂದಿಗೂ ಭಂಗಬರುವುದಿಲ್ಲವೆಂದು ತಿಳಿದು, ನೀಚಸ್ಥಿತಿಯಲ್ಲಿರುವವನನ್ನೂ ಕೂಡ ಪವಿತ್ರಾಚಾರಿಯಾದ ತಾನು ತನ್ನ ಸಹವಾಸಕ್ಕೆ ತೆಗೆದುಕೊಂಡು ,ಅವರುಗಳನ್ನು ಉನ್ನತಸ್ಥಿತಿಗೆ ತರುವುದೇ ಅವರ ಪವಿತ್ರತೆಗೆ ಸಾರ್ಥಕತ್ವವೆಂದು ನಾನು ತಿಳಿಯುತ್ತೇನೆ.'

ಮ|| ಗಾಂಧಿಯವರು ನಾಗಪುರದಲ್ಲಿ ನಡೆದ ನಿಮ್ನಜಾತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ತಾ|| ೨೫ರಲ್ಲಿ ಮಾಡಿದ ಭಾಷಣದೊಳಗೆ 'ಹಿಂದೂಮತದ ಹೆಸರಿನಿಂದ ನಡೆಯಿಸಲ್ಪಟ್ಟಿರುವ ದೋಷಗಳೊಳಗೆಲ್ಲಾ ಅಸ್ಪೃಶ್ಯತ್ವ ಕಲ್ಪನೆಯು ಬಹಳ ಘೋರವಾದುದು. ನಾನು ವರ್ಣಾಶ್ರಮಧರ್ಮಗಳ ಹಿಂದೂಧರ್ಮಗಳ ಅಭಿಮಾನಿಯಾಗಿದ್ದು ಹಿಂದೂಮತಗ್ರಂಥಗಳನ್ನು ಪಠಿಸಿದವನಾಗಿಯೂ ಇರುತ್ತೇನೆ. ಹಿಂದೂಮತದಲ್ಲಿ ಅಸ್ಪೃಶ್ಯತ್ವವು ಒಂದು ಭಾಗವಾದುದಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಅಂತರ್ವಿವಾಹ ಅಂತರ್ಭೋಜನಾದಿಗಳನ್ನು ನಿಷೇಧಿಸಿದರೂ ನಿಷೇಧಿಸಬಹುದು. ಈ ಅಸ್ಪೃಶ್ಯತ್ವವನ್ನು ಕೊನೆಸಾಗಿಸುವುದು ಮಾತ್ರ ಘೋರ ಪಾಪ. ಈ ಕ್ರೂರ ಸಮಸ್ಯೆಯನ್ನು ತೃಪ್ತಿಕರವಾಗಿ ಪರಿಷ್ಕರಿಸುವವರೆಗೂ ಭರತಖಂಡವು ಸ್ವಪರಿಪಾಲನೆಗೆ ಅರ್ಹವಾಗುವುದಿಲ್ಲ. ಹಿಂದೂ ಮತದಲ್ಲಿ ಅತ್ಯಂತ ಕನಿಷ್ಠರೆನಿಸಿಕೊಂಡಿರುವವರೊಡನೆಯೂ ನಾನು ಭುಂಜಿಸುವುದಕ್ಕೆ ಸಿದ್ಧನಾಗಿದ್ದೇನೆ. ನಿಮ್ನ ಜಾತಿ ಬಾಲಿಕೆಯೊಂದನ್ನು ನಾನು ಮಗಳಂತೆ ಸಾಕುತ್ತ ಅತ್ಯಂತ ಪ್ರೇಮದಿಂದ ನೋಡಿಕೊಳ್ಳುತ್ತಿದ್ದೇನೆ.'

ಗಾಂಧಿ ಭಕ್ತ.

ಗುಂಡ್ಲುಪೇಟೆ ವೀರಶೈವ ತಾಲ್ಲೂಕು ಮಹಾಸಭೆ.

ಸ್ವಾಮಿ,—ಹಿಂದೆ ತಮ್ಮ ಪತ್ರಿಕೆಯಲ್ಲಿ ಗುಂಡ್ಲುಪೇಟೆಯ ವೀರಶೈವ ಪ್ರಮುಖರು ವೀರನಪುರದಲ್ಲಿ ಒಟ್ಟುಗೂಡಿ ಗುಂಡ್ಲು ಕಸಬಾದಲ್ಲಿ ಒಂದು ವೀರಶೈವ ಸಭೆಯನ್ನು ನಡೆಯಿಸಲು ನಿಶ್ಚಯಿಸಿದ್ದಾರೆಂತಲೂ, ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ. ರವರನ್ನು ಅಧ್ಯಕ್ಷತೆವಹಿಸಲು ಕೋರಿರುತ್ತಾರೆಂತಲೂ ಪ್ರಕಟಿಸಿದ್ದಿರಿ. ಕೆಲವು ದಿವಸಗಳನಂತರ ಅನಿವಾರ್ಯ ನಿಮಿತ್ತ ಈಗ ಸಭೆಯನ್ನು ನಡೆಯಿಸುವುದಿಲ್ಲವೆಂದು ಮುದ್ರಿಸಿರುವುದನ್ನು ನೋಡಿದೆನು. ಕೆಲವು ಜನಗಳನ್ನು ವಿಚಾರಿಸುವಲ್ಲಿ ಈಗ ಕಟಾವಿನ ಕಾಲವಾದ್ದರಿಂದ ಸಭೆಯನ್ನು ನವಂಬರಿನಲ್ಲೋ ಅಥವಾ ಡಿಸಂಬರಿನಲ್ಲೋ ನಡೆಯಿಸುತ್ತಾರೆಂದು ತಿಳಿಯಬಂದಿತು. ನವಂಬರ್ ತಿಂಗಳು ಮುಗಿಯಿತು ಡಿಸೆಂಬರ್ ತಿಂಗಳು ಕಳೆಯಿತು. ಆದಾಗ್ಯೂ ಸಭೆಯ ವಿಚಾರವೇ ಇಲ್ಲ; ಕಾರಣವೇನೋ ತಿಳಿಯದು. ಈಗಲಾದರೂ ಗುಂಡ್ಲು ಪ್ರಾಂತ್ಯದಲ್ಲಿ ಪ್ರಮುಖರಾಗಿರುವ ಮ|| ರಾ|| ಸಾಹುಕಾರ್ ಚನ್ನಬಸವಪ್ಪನವರೂ ಮತ್ತು ಮ|| ರಾ|| ಗುರುಕಾರ್ ನಂಜಪ್ಪನವರೂ ಮೊದಲಾದವರು ಕೈಕೊಂಡ ಕೆಲಸವನ್ನು ಬಿಡದೆ ನೆರವೇರಿಸಿ ಕೀರ್ತಿಪಾತ್ರರಾಗಬೇಕೆಂದು ಕೋರುತ್ತೇನೆ. ಅವರು ಈ ವಿಷಯದಲ್ಲಿ ಉದಾಸೀನರಾಗಿದ್ದರೆ ತಾವಾದರೂ ಅವರಿಗೆ ಎಚ್ಚರಿಕೆಯನ್ನು ಕೊಡಬೇಕೆಂದು ಬೇಡುತ್ತೇನೆ. ಉದಾಸೀನತೆಯೇ ನಮ್ಮ ಸಮಾಜಬಾಂಧವರ ಹೀನಸ್ಥಿತಿಗೆ ಮುಖ್ಯಕಾರಣವು. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಹುಜನ ವೀರಶೈವರಿರುವರು. ಇವರಲ್ಲಿ ಕೆಲವರು ಧನಿಕರು, ಆದರೇನು? ಸರಸ್ವತಿಯು ಮಾತ್ರ ಅವರನ್ನು ಬಿಟ್ಟು ದೂರವಾಗಿರುವಳು. ಸಮಾಜವೆಂದರೇನು, ನಾವು ಅಭಿವೃದ್ಧಿಸ್ಥಿತಿಗೆ ಬರುವ ಮಾರ್ಗವಾವುದು ಎಂಬ ವಿಷಯಗಳು ಅವರಿಗೆ ತಿಳಿಯದು. ತಾವು ಸಾಕುವ ಪಶುಗಳ ಜತೆಗೆ ತಮ್ಮ ಮಕ್ಕಳನ್ನೂ ಒಂದು ಜಾತಿಯ ಪಶುಗಳನ್ನಾಗಿ ಮಾಡಿಬಿಡುವರು. ಸಮಾಜ ಪ್ರಮುಖರು ಆಗಾಗ್ಯೆ ಸಭೆ ಸೇರಿ ಅವರಿಗೆ ಜ್ಞಾನೋಪದೇಶವನ್ನು ಮಾಡಿದ ಹೊರತು ಅವರು ಮುಂದರಿಯುವ ಸಂಭವವಿಲ್ಲ. ನಾನು ಸದರಿ ಗುಂಡ್ಲುಪೇಟೆಯ ಒಬ್ಬ ನಿವಾಸಿಯು. ಈಗ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವೆನು. ನಮ್ಮ ಪ್ರಾಂತ್ಯದವರು ಸಭೆಯನ್ನು ನಡೆಯಿಸಲು ನಿಶ್ಚಯಿಸಿದ್ದಾರೆಂಬುದನ್ನು ಕೇಳಿ ನನಗೆ ಬಹಳ ಸಂತೋಷವುಂಟಾಯಿತು. ಆದರೆ ಈಗ ಆ ಸಂತೋಷವೆಲ್ಲವೂ ಬರಿಯ ಭ್ರಮೆಯೆಂದು ಸೂಚಿಸುವ ಚಿಹ್ನೆಗಳು ಕಾಣುತ್ತಿರುವುವು. ಗುಂಡ್ಲುಪೇಟೆಯ ವೀರಶೈವರು ನನ್ನ ಬಿನ್ನಹವನ್ನು ಅವಲೋಕಿಸಿ ತಮ್ಮ ಕಾರ್ಯವನ್ನು ನೆರವೇರಿಸುವರೆಂದು ನಂಬುತ್ತೇನೆ.

ಜಿ. ಸಿ. ಶಂಕರಪ್ಪ, ವೆಸ್ಲಿಯನ್ ಕಲಿಜಿಯೇಟ್,
ಹೈಸ್ಕೂಲ್, ಮೈಸೂರು.

ಮಾಗಡಿ ಶ್ರೀ ಸೋಮೇಶ್ವರ ರಥೋತ್ಸವ ಪತ್ರಿಕಾ.

ಮಾಗಡಿ ತಾಲ್ಲೂಕು ಕಸಬಾ ಮಾಗಡಿಯಲ್ಲಿರುವ ಶ್ರೀ ಸೋಮೇಶ್ವರ ದೇವಸ್ಥಾನವು ಮಾಗಡಿಗೆ ಪಶ್ಚಿಮದಿಕ್ಕಿನಲ್ಲಿ ಹುಲಿಯೂರು ದುರ್ಗ ಮತ್ತು ಕುಣಿಗಲ್ ರಸ್ತೆಗಳು ಕೂಡುವ ಸ್ಥಳದ ಸಮೀಪದಲ್ಲಿರುತ್ತೆ. ಈ ದೇವಸ್ಥಾನವನ್ನು ಹಿಂದೆ ಅತ್ಯುತ್ಕೃಷ್ಟ ಪ್ರಸಿದ್ಧ ಪಾಳೇಗಾರರಾದ ಮಾಗಡಿ ಕೆಂಪೇಗೌಡರವರು ಕಟ್ಟಿಸಿದ್ದು. ಈ ದೇವಸ್ಥಾನವು ಆಗಿನ ದವಲತ್ತಿನಂದೀಚೆಗೆ ಸರಿಯಾದ ನಿಗಾವಣೆಯಿಲ್ಲದೆ ಬಹಳ ಶಿಥಿಲವಾಗಿರುತ್ತೆ. ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ಈಚೆಗೆ ಇದರ ಮೇಲೆ ಗಮನಕೊಟ್ಟು ಕೂಡಲೆ ರಿಪೇರಿ ಏರ್ಪಾಟು ಮಾಡುವುದರಲ್ಲಿರುತ್ತಾರೆ. ಈ ರೌದ್ರಿ ಸಂವತ್ಸರದ ಮಾಘ ಶು|| ಚೌತಿ ಶನಿವಾರ ೧೨-೨-೨೧ ಲಾಗಾಯಿತು ಉತ್ಸವಗಳು ಆರಂಭವಾಗಿ ಈ ಶು|| ೧೨ ದ್ವಾದಶಿ ಶನಿವಾರ (ತಾ|| ೧೯-೨-೨೧) ದಿವಸ ಪುನರ್ವಸು ನಕ್ಷತ್ರದಲ್ಲಿ ರಥೋತ್ಸವವು ನಡೆಸಲ್ಪಡುತ್ತದೆ. ನಂತರ ೩-೪ ದಿವಸಗಳು ಬಹಳ ವಿಜೃಂಭಣೆಯಾಗಿ ಉತ್ಸವಗಳು ನಡೆಯುತ್ತದೆ. ಈ ರಥೋತ್ಸವಕ್ಕೆ ಹೋದ ಸಾಲುಗಳಂತೆ ಸಮಸ್ತ ಪ್ರಜೆಗಳೂ ದಯೆಮಾಡಿ ದೇವರ ಸೇವೆ ನಡೆಸಬೇಕಾಗಿ ಕೋರಿರುತ್ತೆ. ಈ ರಥೋತ್ಸವ ಕಾಲದಲ್ಲಿ ಎತ್ತಿನ ಪರಿಷೆಯು ಮಾಮೂಲಿನಂತೆ ನಡೆಯುತ್ತೆ. ಹೋದ ಸಾಲುಗಳಲ್ಲಿ ಸಾವಿರಾರು ಜನಗಳೂ, ದನಗಳೂ ಸೇರಿ ವಿಶೇಷವಾಗಿ ವ್ಯಾಪಾರ ನಡೆದಿರುತ್ತೆ. ದೇವಸ್ಥಾನದ ಬಳಿ ಎತ್ತುಗಳು ನಿಲ್ಲಲು ತೋಪಿನ ನೆರಳೂ ಮತ್ತು ನೀರಿನ ವಸತಿಯೂ ಸಹ ಇರುತ್ತೆ. ಬರತಕ್ಕ ಜನಗಳಿಗೆ ಕೋಮುವಾರು ಆಯಾಯ ಮತಸ್ಥರುಗಳೇ ಸಂತರ್ಪಣೆಗಳೂ ಅರವಟ್ಟಿಗೆಗಳೂ ಸಹ ಹೋದ ವರುಷಗಳಂತೆ ನಡೆಸುತ್ತಾರೆ. ಆದ್ದರಿಂದ ಎತ್ತುಗಳು, ಕರೆಯುವ ಹಸುಗಳು ಮುಂತಾದ ಜಾನುವಾರುಗಳ ವ್ಯಾಪಾರಿಗಳು ವಿಶೇಷವಾಗಿ ಬಂದು ವ್ಯಾಪಾರ ಮಾಡಲು ಬಹಳ ಸೌಕರ್ಯಗಳಿರುತ್ತವೆ. ಈ ದೇವಸ್ಥಾನವು ಶಿವದೇವಸ್ಥಾನವಾದದ್ದರಿಂದಲೂ ಪ್ರಸಿದ್ಧ ಪಾಳೇಗಾರರಾದ ಗೌಡರು ಕಟ್ಟಿಸಿದ್ದೆಂದು ಸಹ ತಿಳಿದು ಶಿಥಿಲವಾದ ದೇವಸ್ಥಾನವು ಜೀರ್ಣೋದ್ಧಾರ ಮಾಡತಕ್ಕದ್ದು ಅತ್ಯವಶ್ಯಕವಾದ್ದರಿಂದ ಸರ್ವರೂ ತಮ್ಮ ಭಕ್ತಿಯನ್ನು ಪ್ರಕಾಶಪಡಿಸಬೇಕಾಗಿ ಸೂಚಿಸಿದೆ. ಈ ದೇವಸ್ಥಾನಕ್ಕೆ ಸೇವಾಕಾರರು ವಗೈರೆ ಇನ್ನೂ ಯಾರೂ ಖಾಯಂ ಆಗಿ ಕೆಲಸಕ್ಕೆ ಒದಗಿಲ್ಲ. ಇತರ ಮತಸ್ಥರ ಸಂತರ್ಪಣೆ ನಡಸಲು ಖಾಯಂ ಆಗಿ ಧರ್ಮ ಮಾಡತಕ್ಕವರು ಒದಗಿರುವದಿಲ್ಲ. ಇನ್ನು ಮೇಲೆ ಹೊಂದಿಸಿಕೊಳ್ಳಬೇಕಾಗಿದೆ. ಆದ್ದರಿಂದ ಆ ಹೆಸರುಗಳು ನಮೂದಿಸಿಲ್ಲ. ಖಾಯಂ ಆಗಿ ನಡಸತಕ್ಕವರು ದಯೆಮಾಡಿ ತಿಳಸಬೇಕಾಗಿ ಕೋರಿಕೆ. ಮತ್ತು ಉತ್ಸವದ ವಾಹನಗಳು ವಗೈರೆ ಯಾವುದೂ ಇರುವದಿಲ್ಲ. ದೈವಭಕ್ತರು ದೇವರ ಸೇವೆಗಾಗಿ ಬೇಕಾದ ಸಹಾಯಮಾಡಬಹುದು, ಅಂಥಾ ಸಹಾಯವನ್ನು ಮಾಗಡಿಯಲ್ಲಿರುವ ಕಸಬಾ ಪಟೇಲರು ಮತ್ತು ಆನರರಿ ಮ್ಯಾಜಿಸ್ಟ್ರೇಟ್ ಮ|| ರಾ|| ಶ್ರೀ|| ಸುಬ್ಬಯ್ಯನವರ ಹೆಸರಿಗಾಗಲಿ ಅಥವಾ ಈ ಕೆಳಗಿನ ವಿಳಾಸಕ್ಕಾಗಲಿ ಕಳುಹಿಸಬಹುದು.

ಕರಣೀಕ ಕೃಷ್ಣಮೂರ್ತಿರಾವ್, ಧರ್ಮಕಾರ್ಯದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

(೩ನೆಯ ಪಟ್ಟಚರಾಧಿಕಾರಿಗಳ ಸಮ್ಮೇಳನವು).

ಈ ಸಮ್ಮೇಳನವು ವಿಜಾಪೂರ ಜಿಲ್ಲಾ ಬಾಗೇವಾಡಿ ತಾಲ್ಲೂಕು ಪೈಕಿ ಮನಗೂಳಿಯೆಂಬ ಗ್ರಾಮದಲ್ಲಿ ತಾ|| ೨೦.೧-೧೯೨೧ರಲ್ಲಿ ನೆರೆಯುವುದು. ಹಿಂದುಸ್ಥಾನದ ಯಾವತ್ತು ಭಾಗಗಳಿಂದ ಪಟ್ಟಚರಾಧಿಕಾರಿಗಳೂ ಮಹಾ ಮಹಾ ವಿದ್ವಾಂಸರೂ ದಯಮಾಡಿಸುವರು. ಸರ್ವ ಗುರುವರ್ಗದವರೂ ಹಾಗೂ ಗುರುಭಕ್ತರೂ ಬಂದು ಕೃತಾರ್ಥರಾಗಬೇಕೆಂದು ಕೋರಿಕೆಯುಂಟು. ಲೇಖಗಳನ್ನು ಕಳಿಸುವವರು ಜಾನೇವಾರಿ ೧೫ನೆಯ ತಾ|| ಸೊಳಗಾಗಿ ಕಳುಹಿಸಬೇಕು.

ವಿಷಯಗಳು.

- ೧ ಗುರುವರ್ಗದವರ ಐಕ್ಯ
- ೨ ಮಠಸ್ಥಾಪಕರ ಮಹತ್ವ
- ೩ ಧರ್ಮಸಂಗ್ರಹ
- ೪ ಪಟ್ಟಚರಾಧಿಕಾರಿಗಳ ಶಾಸ್ತ್ರೋಕ್ತ ಆಚಾರ
- ೫ ಏಕಾಂತವಾಸ

ಟೀಪು—ಮನಗೂಳಿಗೆ ಬರತಕ್ಕವರು ವಿಜಾಪೂರದ ಹತ್ತಿರವಿರುವ ಮುಳವಾಡ ಸ್ಟೇಶನಕ್ಕೆ ಇಳಿಯಬೇಕು. ಗಾಡಿಗಳ ವ್ಯವಸ್ಥೆಯನ್ನು ಇಡುವದು ಮನಗೂಳಿಯು ಸ್ಟೇಶನದಿಂದ ೪ ಮೈಲು ಇರುವದು.

ಪೋ|| ಮನಗೂಳಿ,
ತಾ|| ೨೭-೧೨-೧೯೨೦.

ಸೆಕ್ರೆಟರಿ
ರಾ|| ಲಿಂಗನಗೌಡ ಪಾಟೀಲ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಗಂಡಸರದು ಚೀಲ 1ಕ್ಕೆ 1-0-0. ಹೆಂಗಸರದು ಚೀಲ 1ಕ್ಕೆ 2-8-0.

16

S. Paul & Co.,
Post Box No. 542,
Park Town, Madras.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

6

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



16

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವುವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇದನ್ನು ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—0—0.

ರೈಲ್ವೆಲೀವರ್ ವಾಚ್.

5 ವರ್ಷ ಗ್ಯಾರಂಟಿ; 15 ಬಹುಮಾನಗಳು ಸಹಿತ 5—0—0

ಇದು ಒಳ್ಳೇ ಮಜಬೂತಾಗಿ ಘಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ಇವು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸುಗಳಿಂದ ಮಾಡಿ ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿದೆ. ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಂದನ್ನು ತರಿಸಿ ನೋಡಿರಿ. ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.—ತುರಾಯಿ 1, ಶಾವಂತಿಗೆ ಹುವ್ವು 1, ಸೆಂಟ್‌ಬಾಟಲ್ 1, ದಂತದ ಬಾಚಣಿಗೆ 1 ಸರಪಣಿ 1, ಉತ್ತರಮುಖಿ 1, ದಂತದ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು ೪, ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಉಂಗುರ 1, ರಾಗಮಾಲಿಕೆ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 5-0-0.



Elgin Watch Co.,
89 Narayana Mudaly Street, Madras.

ಫಲತ್ತೋದಕ ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು

14

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಥ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸತತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಉಗ್ರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0.

16

S. R. Krishna & Co.,
89, Narayana Mudaly Street, Madras.

೧೯೨೧ ನೆಯ ಇಸವಿ ಜನವರಿ ತಾ|| ೯ ರಿಂದ ೧೯೨೧ ನೆಯ ಜನವರಿ ತಾ|| ೧೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ರೌದ್ರಿನಾಮ ಸಂವತ್ಸರದ ಮಾರ್ಗಶಿರ ಬಹುಳ ಅಮಾವಾಸ್ಯೆಯಿಂದ ಪುಷ್ಯಶುದ್ಧ ಷಷ್ಠಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧ-ಮ ಮಾಸ
9	ಭಾನು	ಅಮಾ	6-54	ಪೂಷಾ	12-0	26
10	ಸೋಮ	ಪಾಡ್ಯ	13-4	ಉಷಾ	18-35	27
11	ಮಂಗಳ	ಬಿದಿ	18-22	ಶ್ರವ	24-55	28
12	ಬುಧ	ತದಿ	23-1	ಧನಿ	30-43	29
13	¹ ಗುರು	ಚೌತಿ	26-46	ಶತ	35-34	1
14	² ಶುಕ್ರ	ಪಂಚ	29-21	ಪೂಭಾ	39-15	2
15	³ ಶನಿ	ಷಷ್ಠಿ	30-37	ಉಭಾ	41-43	3

(1) ಉತ್ತರಾಯಣ ಪುಣ್ಯಕಾಲಃ, ಶಿವಗಂಗಾ ಗಂಗೋತ್ಪತ್ತಿಃ. (2) ಚುಂಚನಕಟ್ಟೆ ರಾಮಸ್ವಾಮಿ ರಥಃ, ಶ್ರೀರಂಗಪಟ್ಟಣದ ರಂಗಸ್ವಾಮಿರಥಃ, ಉಡಪಿಯಲ್ಲಿ ಚೂರ್ಣೋತ್ಸವಃ. (3) ಕುಲುಷಷ್ಠಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೈತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಮ್ರಾಜ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪, ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಜನವರಿ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೩

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರಿರ ನಾಲ್ಕರ ಜ್ವರಗಳು, ಸನ್ನಿಪಾತಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗುನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

2

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. —ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕನಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಚಾರುಶೀಲೆಚರಿತ್ರೆ	೦— ೯—೦
ಚಂದಾಸಿ	೦— ೯—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋವೆಂಟ್ಸುಗಳಿಂದ ಮಾಡಿದೆ. ಘಾಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:— ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.

ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

42

ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

42

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರಿಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಥ್ಯ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಲಟಿಸೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

47

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

42

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಗಂಡಸರದು 1 ಕ್ಕೆ 1-4-0 ರೂಪಾಯಿ. ಹೆಂಗಸರದು 3-0-0.

ವಿಳಾಸ:-ಡಾಕ್ಟರ್ ಪೀಟರ್, ಅಂಡ್ ಕೋ
3. ಇರುಳಪ್ಪನಬೀದಿ, ಮದರಾಸು.

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

17

ವೈದ್ಯವಿದ್ಯ

ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವೆದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಿಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
37. ಚೈನಾಬಜಾರು ರೋಡ್ ಮದರಾಸು.

ಮೈಸೂರು ಸ್ಟಾರ್.

೧೯೨೧ನೆಯ ಇಸವಿ ಜನವರಿ ತಾ|| ೧೬ ನೆಯ ಭಾನುವಾರ

ಶ್ರೀಮನ್ ಕನ್ನಾಟ್ ಪ್ರಭುಗಳ ಆಗಮನ.

ನೂತನವಾಗಿ ಏರ್ಪಟ್ಟಿರುವ ರಾಜಕೀಯ ಸಂಸ್ಕರಣಗಳ ಪ್ರಕಾರ ಸಮಾವೇಶವಾಗುವ ಶಾಸನಸಭೆ ಮೊದಲಾದುವುಗಳ ಪ್ರಾರಂಭ ಮಹೋತ್ಸವವನ್ನು ಈ ದೇಶದಲ್ಲಿ ನಡೆಯಿಸುವುದಕ್ಕೋಸ್ಕರ ಶ್ರೀಮನ್ ಜಾರ್ಜ್ ಸಾರ್ವಭೌಮರ ಪ್ರತಿನಿಧಿಗಳಾಗಿ ಅವರಪ್ಪಣೆಯ ಮೇರೆಗೆ ಅವರ ಚಿಕ್ಕಪ್ಪಂದಿರಾದ ಡ್ಯೂಕ್ ಆಫ್ ಕನ್ನಾಟ್‌ರವರು ಈ ದೇಶಕ್ಕೆ ದಯಮಾಡಿಸುವರೆಂಬ ವಿಷಯವು ಸರ್ವರಿಗೂ ವಿದಿತವಾಗಿದ್ದಿತಷ್ಟೆ. ಆ ಮಹಾಶಯರು ಮಲಯ ಎಂಬ ಹಡಗನ್ನೇರಿ ಕಳೆದ ತಾ|| ೧೦ರಲ್ಲಿ ಮದ್ರಾಸು ರೇವೆಯಲ್ಲಿ ಬಂದಿಳಿದರು. ಸ್ವಾಗತ ಸತ್ಕಾರಾದಿಗಳಿಗೆ ತಕ್ಕ ಏರ್ಪಾಟುಗಳೆಲ್ಲಾ ನಡೆದಿದ್ದುವು. ಪ್ರಕೃತದ ಭರತಖಂಡದ ರಾಜಕೀಯವಾತಾವರಣಸ್ಥಿತಿಯು ಹೇಗೆ ಪ್ರಕ್ಷುಬ್ಧವಾಗಿರುವುದೋ ಅದನ್ನು ಪ್ರತ್ಯಕ್ಷವಾಗಿ ಸೂಚಿಸುವಂತೆ ಆ ದಿನ ಮದ್ರಾಸು ತೀರದ ಸಮುದ್ರಭಾಗವೆಲ್ಲಾ ಉಲ್ಲೋಲಕಲ್ಲೋಲಮಯವಾಗಿದ್ದಿತು. ಮೋಡ ಮುಚ್ಚಿ ಮಳೆಯು ಸುರಿಯುತ್ತಿದ್ದಿತು. ಗಾಳಿಯು ವಿಪರೀತವಾಗಿ ಬೀಸುತ್ತಿದ್ದಿತು. ಮಲಯ ಹಡಗಿನ ದರ್ಶನವಾದ ಕೂಡಲೇ ದಡದಲ್ಲಿದ್ದ ಹೈಪ್ಲವರ್ ಎಂಬ ಹಡಗಿನಿಂದ ೩೧ ಗುಂಡುಗಳು ಮರ್ಯಾದಾರ್ಥವಾಗಿ ಹಾರಿಸಲ್ಪಟ್ಟುವು. ದಡದಲ್ಲಿ ಏರ್ಪಡಿಸಲ್ಪಟ್ಟಿದ್ದ ಚಪ್ಪರದಲ್ಲಿ ಹೈಕೋರ್ಟು ನ್ಯಾಯಮೂರ್ತಿಗಳು, ಜಮೀನ್‌ದಾರರು, ಶಾಸನ ಸಭಾಸಭಿಕರು, ಸರ್ಕಾರದಧಿಕಾರಿಗಳು, ಮ್ಯು|| ಕೌನ್ಸಿಲರು, ಪುರಪ್ರಮುಖರೇ ಮೊದಲಾದ ಸಾವಿರಾರು ಮಂದಿ ಯೂರೋಪ್ಯರೂ ದೇಶೀಯರೂ ಸಹ ನಿರೀಕ್ಷಿಸಿಕೊಂಡಿದ್ದರು. ಪ್ರಭುಗಳ ಉತ್ಸವವು ಹೋಗತಕ್ಕ ಬೀದಿಯೆಲ್ಲಾ ಶೃಂಗರಿಸಲ್ಪಟ್ಟು ಪೋಲೀಸು ಸೈನಿಕರೇ ಮೊದಲಾದವರ ಸಾಲಿನಿಂದ ಅಲಂಕೃತವಾಗಿದ್ದಿತು. ಪ್ರಭುಗಳು ಮಲಯ ಹಡಗಿನಿಂದ ಬೇರೊಂದು ಸಣ್ಣ ಹಡಗಿಗೆ ಇಳಿದರು. ಆಗಲೂ ಮರ್ಯಾದೆಯ ಗುಂಡುಗಳು ಹಾರಿಸಲ್ಪಟ್ಟುವು. ಮದ್ರಾಸ್ ಗೌರ್ನರ್ ದಂಪತಿಗಳು ಅಲ್ಲಿಗೆ ದಯಮಾಡಿಸಿ ಪ್ರಭುಗಳ ಸಂದರ್ಶನ ಕುಶಲಪ್ರಶ್ನೆಗಳನ್ನು ಮಾಡಿಕೊಂಡು ಬಂದರು. ಸಾಯಂಕಾಲ ೪ ಗಂಟೆ ಹೊತ್ತಿಗೆ ಕನ್ನಾಟ್ ಪ್ರಭುಗಳು ಹಡಗನ್ನು ಬಿಟ್ಟು ದಡಕ್ಕೆ ಬಂದಿಳಿದರು. ಆಗಲೂ ಮರ್ಯಾದೆಯ ಗುಂಡುಗಳಾದುವು; ಸೈನಿಕರ ಮರ್ಯಾದೆಗಳಾದುವು. ನೂತನ ಮಂತ್ರಿವರ್ಗದವರು ಹೈಕೋರ್ಟು ನ್ಯಾಯಮೂರ್ತಿಗಳು ಜಮೀನ್ದಾರರು ದೊಡ್ಡ ಅಧಿಕಾರಿಗಳು ಮೊದಲಾದವರ ಪರಿಚಯವೆಲ್ಲಾ ಮಾಡಿಸಲ್ಪಟ್ಟಿತು. ತದನಂತರ ಪ್ರಭುಗಳು ಅವರಿಗಾಗಿ ನಿರ್ಮಿತವಾಗಿದ್ದ ಮಂಟಪದಲ್ಲಿ ಭದ್ರಾಸನವನ್ನಲಂಕರಿಸಿದ ಕೂಡಲೇ ಮದ್ರಾಸ್ ಕಾರ್ಪೊರೇಷನ್ ಅಧ್ಯಕ್ಷರಾದ ಸರ್ ಪಿ. ತ್ಯಾಗರಾಯಶೆಟ್ಟರು ಪುರಜನಪಕ್ಷವಾದ ಸ್ವಾಗತಪತ್ರವನ್ನು ಓದಿ ಸಮರ್ಪಿಸಿದರು. ಅದರಲ್ಲಿ ಮದ್ರಾಸಿನವರ ಸ್ವಾಮಿಭಕ್ತಿಯೂ, ಈಗ ಅನುಗ್ರಹಿಸಲ್ಪಟ್ಟಿರುವ ರಾಜಕೀಯ ಸಂಸ್ಕರಣಗಳು ಸ್ವರಾಜ್ಯಪ್ರಾಪ್ತಿಗೆ ಕಾಲಕ್ರಮೇಣ ಸಾಧಕವಾಗಿರುವುದರಿಂದ ಅದಕ್ಕಾಗಿ ಕೃತಜ್ಞತಾಭಿನಂದನವೂ ತಿಳಿಯಿಸಲ್ಪಟ್ಟಿದ್ದಿತಲ್ಲದೆ ಸಾರ್ವಭೌಮರ ವಿಷಯದಲ್ಲಿ ನಮಗಿರುವ ಅಚಂಚಲ ಭಕ್ತಿಯನ್ನು ತಾವು ಅರಿಕೆ ಮಾಡಬೇಕೆಂದೂ ಶ್ರುತಪಡಿಸಲ್ಪಟ್ಟಿದ್ದಿತು. ಇದನ್ನು ಉತ್ತಮವಾದ ರಜತಪೇಟಿಕೆಯಲ್ಲಿಟ್ಟು ಸಮರ್ಪಿಸಿದರು.

ಇದಕ್ಕೆ ಪ್ರತ್ಯುತ್ತರವನ್ನು ಕನ್ನಾಟ್ ಪ್ರಭುಗಳು ಕೊಡುವಲ್ಲಿ-ಕಳೆದ ಮಹಾಯುದ್ಧದೊಳಗೆ ಭರತಖಂಡದ ಸೈನಿಕರು ಅದ್ಭುತವಾಗಿ ಶತ್ರುಗಳಮೇಲೆ ಹೋರಾಡಿ ಸಾಮ್ರಾಜ್ಯಕ್ಕೆ ವಿಜಯವನ್ನು ಸಂಪಾದಿಸಿಕೊಡುವುದರಲ್ಲಿ ಮದ್ರಾಸು ಕೂಡ ತುಂಬಾ ಸಹಾಯ ಮಾಡಿದುದನ್ನು ಅಭಿನಂದಿಸಿ, ಭರತಖಂಡದಲ್ಲಿ ನೂತನಾಭಿಪ್ರಾಯಗಳೂ ನೂತನ ಯುಗವೂ ಪ್ರಾರಂಭವಾಗಿರುವುವೆಂದೂ, ಭಾರತೀಯರ ಈ ಆಶಯಗಳಮೇಲೆ ನಮಗೂ ಆಂಗ್ಲ ಪ್ರಜೆಗಳಿಗೂ ಸಂಪೂರ್ಣ ಸಾನುಭೂತಿಯಿರುವುದೆಂದೂ, ತ್ರಿಕರಣಶುದ್ಧಿಯಿಂದ ನಾನು ಹೇಳುವುದನ್ನು ನೀವು ನಂಬಬೇಕೆಂದೂ, ಸಕಲ ವಿಧದಿಂದಲೂ ನಿಮ್ಮ ಅಭೀಷ್ಟವನ್ನು ನೆರವೇರಿಸಲು ನಾವು ಸಿದ್ಧರಾಗಿರುವೆವೆಂದೂ, ಆಶ್ವಾಸನ ಕೊಟ್ಟುದಲ್ಲದೆ ಕಳೆದುಹೋದ ವಿಷಯವನ್ನು ಮರೆತುಬಿಡಬೇಕೆಂದು ಪಂಜಾಬಿನ ವಿಷಯವನ್ನು ಕುರಿತು ಉತ್ತರ ಹೇಳಿದರು. ಮತ್ತು ಮರಳಿ ಇನ್ನೊಂದುಸಲ ನಾನು ಭರತಖಂಡಕ್ಕೆ ಬರುವ ಭಾಗ್ಯವು ಉಂಟಾದರೆ ನೀವು ಈಗ ಹೊಂದಿರುವ ನ್ಯೂನತೆಯೂ ಪರಿಭವವೂ ಮರೆತುಹೋಗುವಂತೆ ಮಾಡಿಸಲಿಕ್ಕೆ ಪ್ರಯೋಜನನ್ನು ಉಂಟುಮಾಡಿಸಿಕೊಡಲು ಯತ್ನಿಸುವೆನೆಂದೂ, ಸದ್ಯಃ ನೂತನ ಸಂಸ್ಕರಣ ಸಭೆಗಳನ್ನು ಆರಂಭಿಸಲಿಕ್ಕಾಗಿ ನಾನು ಸಾರ್ವಭೌಮರ ಅಪ್ಪಣೆ ಪ್ರಕಾರ ಇಲ್ಲಿಗೆ ಬಂದಿದ್ದೇನೆಂದೂ ನಾನು ಸ್ವದೇಶಕ್ಕೆ ತೆರಳಿದ ಬಳಿಕ ನಿಮ್ಮ ರಾಜಭಕ್ತಿಯನ್ನು ಚಕ್ರವರ್ತಿಯವರಿಗೆ ಶ್ರುತಪಡಿಸುತ್ತೇನೆಂದೂ ಅಪ್ಪಣೆಕೊಡಿಸಿ, ಭಾರತೀಯರ ನೂತನಾಶಯ ಪ್ರಾಬಲ್ಯವನ್ನು ಕುರಿತು ಆಂಗ್ಲ ಪ್ರಭುತ್ವದವರಿಗೆ ಸಾನುಭೂತಿಯಿರುವುದೆಂದೂ ಸಮುಚಿತವಾದ ರೀತಿಯಲ್ಲಿ ಅದನ್ನೀಡೇರಿಸಿಕೊಡುವಲ್ಲಿ ಅವರು ಹಿಂದೆಗೆಯುವವರಾಗಿಲ್ಲವೆಂದೂ ಸಂಕ್ಷೇಪವಾಗಿ ಅಪ್ಪಣೆ ಕೊಡಿಸಿದರು.

ಬಳಿಕ ಸಿದ್ಧವಾಗಿದ್ದ ರಾಜ ರಥದಲ್ಲಿ ಕುಳಿತು ಅಶ್ವಸೈನಿಕರಿಂದ ಪರಿವೃತರಾಗಿ ಗೊತ್ತಾಗಿದ್ದ ರಾಜಮಾರ್ಗದಲ್ಲಿ ಉತ್ಸವವಾಗಿ ಹೊರಟು ಬಿಡಾರವನ್ನು ಸೇರಿದರು. ಅನಂತಾನಂತವಾಗಿ ಜನರು ದಾರಿಯುದ್ದಕ್ಕೂ ಸೇರಿ ಉತ್ಸವವನ್ನು ಪರಾಮರಿಸಿದುದಲ್ಲದೆ ಈ ಉತ್ಸವನಿಮಿತ್ತವಾಗಿ ಕರೆಯಿಸಲ್ಪಟ್ಟಿದ್ದ ೨ ಆಕಾಶ ವಿಮಾನಗಳ ಉಡ್ಡಾಣವನ್ನು ಪುರಜನರು ಅಚ್ಚರಿಗೊಂಡು ನೋಡುತ್ತಿದ್ದರು.

ತಾ|| ೧೨ ನೆ ಬುಧವಾರ ಬೆಳಗ್ಗೆ ನೂತನ ಶಾಸನಸಭೆಯ ಪ್ರಾರಂಭ ಮಹೋತ್ಸವವನ್ನು ಶ್ರೀ ಕನ್ನಾಟ್ ಪ್ರಭುಗಳು ನೆರವೇರಿಸಿದರು. ಸಭಾಂಗಣದಲ್ಲಿ ಇವರಿಗೂ ಗೌರ್ನರಿಗೂ ಮಂತ್ರಿಗಳೇ ಮೊದಲಾದ ಸಭಿಕರಿಗೂ ಉಚಿತಸ್ಥಾನಗಳೇರ್ಪಡಿಸಲ್ಪಟ್ಟಿದ್ದುವು. ಪ್ರಭುಗಳು ಸಭಾಂಗಣಕ್ಕೆ ದಯಮಾಡಿಸಿದ ಕೂಡಲೇ ಸರ್ವರೂ ಎದ್ದು ಮರ್ಯಾದಿಸಿದರು. ಬಳಿಕ ಮದ್ರಾಸ್ ಗೌರ್ನರಾದ ವಿಲ್ಲಿಂಗ್ಡನ್ ಪ್ರಭುಗಳು-ಮದ್ರಾಸು ಅಧಿಪತ್ಯದ ಪ್ರಜೆಗಳ ಮತ್ತು ಅವರ ಪ್ರತಿನಿಧಿಗಳಾಗಿರುವ ಶಾಸನಸಭಾ ಸಭಿಕರ ಪಕ್ಷದಿಂದ ಸ್ವಾಗತವನ್ನು ಕೋರಿ, ಭರತಖಂಡದಲ್ಲಿ ಮೊಟ್ಟ ಮೊದಲು ಆಂಗ್ಲ ಸಾಮ್ರಾಜ್ಯವು ಇಲ್ಲಿಯ ಸೆಂಟ್‌ಜಾರ್ಜ್ ಕೋಟೆಯಲ್ಲೇ ಪ್ರಾರಂಭವಾದುದಾಗಿರುತ್ತ ನೀವು ನೂತನ ಸಂಸ್ಕರಣಗಳನ್ನಾರಂಭಿಸಲು ಇತರ ಅಧಿಪತ್ಯಗಳಿಗೆಲ್ಲಕ್ಕಿಂತಲೂ ಮೊದಲು ಇಲ್ಲಿಗೆ ದಯಮಾಡಿಸಿದುದು ಈ ಅಧಿಪತ್ಯದ ಗೌರವವನ್ನು ದ್ವಿಗುಣೀಕೃತವನ್ನಾಗಿ ಮಾಡಿದಂತಾಯಿತೆಂದೂ, ಇದು ನಮ್ಮ ಅದೃಷ್ಟವೆಂದೂ, ಪ್ರಿನ್ಸ್ ಆಫ್ ವೇಲ್ಸರು ಈ ದೇಶಕ್ಕೆ ಸದ್ಯಃ ಬರದಂತಾದುದು ವಿಷಾದಕರವಾಗಿರುವುದೆಂದೂ, ಆದರೂ ಮುಂದೆ ಸ್ವಲ್ಪಕಾಲದಲ್ಲೇ ಅವರಿಗೂ ಕೂಡ ಸ್ವಾಗತವನ್ನು ಕೋರುವ ಭಾಗ್ಯವು ನಮಗೆ ಲಭಿಸುವುದೆಂದು ನಿರೀಕ್ಷಿಸುತ್ತಿರುವೆವೆಂದೂ, ನೀವು ಈ ಕಾರ್ಯಾರಂಭಕ್ಕೆ ಒಪ್ಪಿಕೊಂಡು ಬಂದುದು ನಿಮಗೆ ಈ ದೇಶದ ಮೇಲೆ ಇರುವ ಅಭಿಮಾನವನ್ನೂ ಪ್ರೇಮವನ್ನೂ ವ್ಯಕ್ತಪಡಿಸುತ್ತಿದೆಯೆಂದೂ, ತಮ್ಮ ಸಮೀಪ ದೇಹಾನುಬಂಧಿಗಳೇ ಆದ ತಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟುದರಲ್ಲಿ ಸಾರ್ವಭೌಮರಿಗೆ ಭಾರತೀಯರ ಮೇಲಿರುವ ಕೃಪೆಗೆ ಪ್ರತ್ಯಕ್ಷ ನಿದರ್ಶನವಾಗಿರುವುದರಿಂದ ನಾವು ಈ ಅಧಿಪತ್ಯದ ಸಕಲ ಜನವರ್ಗಗಳ ಪಕ್ಷದಿಂದ ನಮ್ಮಲ್ಲಿರುವ ಅಚಂಚಲವಾದ ರಾಜಭಕ್ತಿಯನ್ನು ನಿಮ್ಮ ದ್ವಾರಾ ಚಕ್ರವರ್ತಿಯವರಿಗೆ ನಿವೇದಿಸುತ್ತೇವೆಂದೂ, ಈಗ ನೀವು ಆರಂಭಿಸಲಿಕ್ಕಿರುವ ಸಭೆಗಳು ಕ್ರಮಾಂತರವಾಗಿ ಈ ದೇಶದ ಪ್ರಜೆಗಳಿಗೆ ಪ್ರಜಾಪರಿಪಾಲನ ಸ್ವಾತಂತ್ರ್ಯವನ್ನು ಒದಗಿಸಿಕೊಡಲು ಪ್ರಥಮ ಸೋಪಾನದಂತಿರುವುವೆಂದೂ, ದೇಶಪರಿಪಾಲನೆಯನ್ನು ಪ್ರಜಾಸಮರ್ಜಿತ ಸಭಿಕರು ಸ್ವತಃ ನೆರವೇರಿಸತಕ್ಕ ಸ್ವಾತಂತ್ರ್ಯವನ್ನು ಪಡೆಯಲು ಇದೇ ಪ್ರಥಮವೆಂದೂ, ಆಂಗ್ಲ ಸಾಮ್ರಾಜ್ಯೈಶ್ವರ್ಯದಲ್ಲಿ ಭಾರತೀಯರೂ ಪೂರ್ಣ ಭಾಗಸ್ಥರಾಗಿರುವುದಕ್ಕೆ ಇಂದಿನಿಂದ ಆರಂಭವಾಗುವುದೆಂಬುದಕ್ಕೆ ಸಂಶಯವಿಲ್ಲವೆಂದೂ ಹೇಳಿ, ದಯಾಘನನಾದ ಪರಮೇಶ್ವರನ ಕೃಪೆಯಿಂದ ಈ ಶಾಸನಸಭೆಯು ವಿಜಯಶಾಲಿಯಾಗಿ ಪ್ರಜೆಗಳೊಳಗೆ ಸಂತೃಪ್ತಿಯೂ ಐಕಮತ್ಯವೂ ದೇಶದಲ್ಲಿ ಶಾಂತಿಯೂ ನೆಲೆಗೊಳ್ಳಲೆಂದೂ, ಆಂಗ್ಲ ಸಾಮ್ರಾಜ್ಯಕ್ಕೂ ಭರತಖಂಡಕ್ಕೂ ಇರುವ ಸ್ನೇಹಪಾಶವು ಮತ್ತಷ್ಟು ಬಲಗೊಳ್ಳಲೆಂದೂ ಕೋರಿದರು.

ಇದಕ್ಕೆ ಕನ್ನಾಟ್ ಪ್ರಭುಗಳು ಉತ್ತರವನ್ನು ಹೇಳಿದುದರಲ್ಲಿ-ನಿಮ್ಮ ಮೇಲೆ ಸಾರ್ವಭೌಮರಿಗೆ ಸಂಪೂರ್ಣವಾದ ಪ್ರೇಮದಯೆಗಳಿರುವುದರಿಂದಲೇ ಈ ಶಾಸನಸಭೆಯನ್ನಾರಂಭಿಸಲಿಕ್ಕೆ ನನ್ನನ್ನು ಕಳುಹಿಸಿಕೊಟ್ಟಿರುವರೆಂದೂ, ಪ್ರಜೆಗಳು ಸ್ವಾತಂತ್ರ್ಯಪ್ರಿಯರಾಗಿ ವರ್ಧಿಸಬೇಕೆಂಬುದೇ ಅವರ ಮನೋಭಿಲಾಷೆಯಾಗಿರುವುದೆಂದೂ, ಮನುಷ್ಯಜಾತಿಗೆ ಸ್ವಾತಂತ್ರ್ಯವು ಸಹಜವಾಗಿದ್ದೇ ತೀರಬೇಕಾದುದೆಂದೂ, ಆದರೆ ಅದರ ಜತೆಗೆ ವಿಶ್ವಮಾನವಸೋದರ ವಾತ್ಸಲ್ಯವು ಸಹ ಇರಬೇಕಾದುದು ಅತ್ಯವಶ್ಯಕವೆಂದೂ, ಅದಿಲ್ಲದೆ ಹೊಂದುವ ಸ್ವಾತಂತ್ರ್ಯವು ನಿರಂಕುಶಾಧಿಕಾರವೆನಿಸಿಕೊಳ್ಳುವುದೆಂದೂ, ಮೊಟ್ಟಮೊದಲು ಕ್ಲೈವ್‌ರವರು ಆಂಗ್ಲ ಸಾಮ್ರಾಜ್ಯವನ್ನು ಈ ಕೋಟೆಯಲ್ಲೇ ಈ ಪಟ್ಟಣದಲ್ಲೇ ಪ್ರತಿಷ್ಠಾಪಿಸಿದರೆಂದೂ, ಬಳಿಕ ಸರ್ ಥಾಮಸ್ ಮನ್ರೋರವರು ಇಲ್ಲಿಯ ಮೂಲಕ ಅತ್ತಿತ್ತ ವಿಜೃಂಭಿಸುವಂತೆ ಮಾಡಿದರೆಂದೂ, ಆಗ ಅವರು ಇಲ್ಲಿಂದ ಇಂಗ್ಲಂಡಿಗೆ ಬರೆದುಕೊಂಡ ಒಂದು ವಿಜ್ಞಾಪನ ಪತ್ರದಲ್ಲಿ-“ ಭಾರತೀಯರಿಗೆ ನಾವು ಪ್ರಬೋಧನನ್ನುಂಟುಮಾಡಿ ಹೇಗೆ ರಾಜಕೀಯ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳಬೇಕೋ ಆ ಮಾರ್ಗವನ್ನು ಅವರಿಗೆ ತೋರಿಸಿಕೊಟ್ಟು ಅವರು ಸ್ವತಃ ಅದನ್ನು ನಿರ್ವಹಿಸಿಕೊಳ್ಳಲು ಅರ್ಹರಾಗುವಂತೆ ನಾವು ಮಾಡಬೇಕಾಗಿದೆ ’’ ಎಂದು ತಿಳಿಯಿಸಿದ್ದರೆಂದೂ, ಆಗ ಅವರು ಮಾಡಿದ್ದ ಸಂದೇಶವನ್ನು ಸಲ್ಲಿಸುವುದಕ್ಕೆ ಈಗ ನಮಗೆ ಅವಕಾಶವು ದೊರೆದಿರುವುದೆಂದೂ, ದೇಶದಲ್ಲಿ ನೂತನಭಾವಗಳು ಅಂಕುರಿಸುವುದು ಸಹಜವೇ ಎಂದೂ, ಅದರಲ್ಲೂ ಮುಖ್ಯವಾಗಿ ರಾಜಕೀಯ ವಿಷಯದಲ್ಲಿ ಅಭಿರುಚಿಯು ವಿಶೇಷವಾಗಿರುವುದೆಂದೂ, ಪ್ರಪಂಚದಲ್ಲಿ ಯಾವ ವಿಧವಾದ ಉದ್ಯಮವೇ ಆದರೂ ಮಾನವಾಭಿವೃದ್ಧಿಗೋಸ್ಕರಲೇ ಆಗಿರುವುದೆಂಬುದನ್ನು ನಾವು ಗ್ರಹಿಸಿಕೊಳ್ಳಬೇಕೆಂದೂ, ಆದರೆ ನಾವು ಸ್ವಾತಂತ್ರ್ಯವನ್ನಪೇಕ್ಷಿಸುವಾಗ್ಗೆ ನಮ್ಮ ಅಭಿಪ್ರಾಯದೊಡನೆ ಏಕೀಭವಿಸದೆ ಇರುವವರನ್ನು ನಾವು ತೃಣೀಕರಿಸದೆಯೂ ನಿರಸನ ಭಾವದಿಂದ ಕಾಣದೆಯೂ ಸಹನೆಯಿಂದ ಕೂಡಿ ನಡೆಯಬೇಕೆಂದೂ, ಹೀಗೆ ಮಾಡುವುದೇ ಧರ್ಮವೆಂದೂ, ಸ್ವಾತಂತ್ರ್ಯ ಪ್ರಿಯತೆಯಿಂದ ವಿಕಾಸಗೊಂಡಿರುವ ನೀವು ಇಷ್ಟಾರ್ಥಸಿದ್ಧಿಗೆ ಹದಿಯಾಗಿರುವ ಈ ಶಾಸನ ಸಭೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಕೃತಾರ್ಥರಾಗಬೇಕೆಂದು ನಾನು ಕೋರುವೆನೆಂದೂ, ನೀವು ಸಾರ್ವಭೌಮರ ವಿಷಯದಲ್ಲಿ ತೋರಿಸಿದ ಕೃತಜ್ಞತೆಯನ್ನೂ ಭಕ್ತಿಯನ್ನೂ ನಾನು ಅವರಿಗೆ ಶ್ರುತಪಡಿಸುವೆನೆಂದೂ ಅಪ್ಪಣೆ ಕೊಡಿಸಿದರು.

ಭರತಖಂಡಕ್ಕೆ ಕ್ರಮೇಣ ಸ್ವಪರಿಪಾಲನ ಸ್ವಾತಂತ್ರ್ಯವನ್ನು ಕೊಡುವುದಕ್ಕೆ ಆಂಗ್ಲ ಪ್ರಭುತ್ವದವರು ಎಂದಿಗೂ ತಪ್ಪುವರಲ್ಲವೆಂಬ ಸಂಗತಿಯು ಮೇಲೆ ಕಂಡ ಪ್ರಭುಗಳ ವಾಕ್ಯದಿಂದ ಚೆನ್ನಾಗಿ ದೃಢಪಟ್ಟಿದೆ. ಆದರೆ ಆಂಗ್ಲ ಸಂಬಂಧವನ್ನೇ ಕಳೆದುಕೊಂಡು ಇಂದಿಗೇ ಸ್ವರಾಜ್ಯೋಪಭೋಗವನ್ನು ಮಾಡಿಕೊಳ್ಳುತ್ತೇವೆಂದು ವಾದಿಸುತ್ತ ಸಹಾಯನಿರಾಕರಣ ಬಹಿಷ್ಕರಣಾದಿ ಆಡಂಬರಗಳನ್ನು ಮಾಡುತ್ತಿರುವವರಿಗೆ ಮಾತ್ರ ಕನ್ನಾಟ್ ಪ್ರಭುಗಳ ಈ ವಚನಗಳು ತೃಪ್ತಿಪಡಿಸತಕ್ಕವುಗಳಾಗಿಲ್ಲವೆಂಬುದು ಸಹಜವೇ ಆಗಿದೆ. ತಮ್ಮ ಚಳವಳಿಗೆ ಅಂಜಿ ಸಾರ್ವಭೌಮಪ್ರಭುತ್ವದವರು ಕನ್ನಾಟ್ ಪ್ರಭುಗಳ ದ್ವಾರಾ ಹೆಚ್ಚಿನ ಸಂದೇಶಗಳನ್ನೇನಾದರೂ ಕಳುಹಿಸಿ ಕೊಡಬಹುದೆಂದು ಅವರು ಮಾಡಿಕೊಂಡಿದ್ದ ನಿರೀಕ್ಷಣೆಯು ವ್ಯರ್ಥವೆಂಬುವನ್ನು ಅವರುಗಳು ತಿಳಿಯಬೇಕು. ದೇಶಕ್ಕೆ ಕ್ರಮಾನುಗತ ಸ್ವರಾಜ್ಯ ಸಿದ್ಧಿಯಾದೀತಲ್ಲದೆ, ವಿಲಕ್ಷಣಕುತೂಹಲವು ಎಂದಿಗೂ ಸಿದ್ಧಿಸಲಾರದೆಂಬುದನ್ನು ಇನ್ನಾದರೂ ತಿಳಿದು ಚಳವಳಿಕಾರರು ಸಾನುಭೂತಿಯಿಂದ ನಡೆಯುವುದೇ ಒಳ್ಳೆಯದು.

ಮದರಾಸಿನಲ್ಲಿ ಒಂದು ಕಡೆ ಕನ್ನಾಟ್ ಪ್ರಭುಗಳ ಸ್ವಾಗತ ಸಮಾರಂಭಗಳೂ ನೂತನ ಶಾಸನ ಸಭಾ ಪ್ರಾರಂಭೋತ್ಸವವೂ ನಡೆಯುತ್ತಿರುವಾಗ, ಸಹಾಯನಿರಾಕರಣವಾದಿಗಳು ಮತ್ತೊಂದುಕಡೆ ಮದುವೆ ಮನೆಯ ಮುಂದೆ ಬಾಯ್ಬಿಡುಕೊಂಡು ಅಪಶಕುನ ತೋರಿಸುವವರಂತೆ ಅಂಗಡಿಗಳ ಬಾಗಿಲುಗಳನ್ನು ಹಾಕಿಸಬೇಕೆಂದು ಯತ್ನಿಸುತ್ತಲೂ, ಡ್ಯೂಕ್ ಆಫ್ ಕನ್ನಾಟರ ಬಹಿಷ್ಕರಣ ಸಭೆಗಳನ್ನು ನಡೆಯಿಸುತ್ತಲೂ, ತಮ್ಮ ಬಹಾದ್ದೂರ್‌ಗಿರಿಗಳನ್ನು ತೋರಿಸುವುದನ್ನೇನೂ ಬಿಡಲಿಲ್ಲ. ಆದರೆ ಇವರ ಹಾರಾಟದಿಂದ ನಡೆಯಬೇಕಾಗಿದ್ದ ಕಾರ್ಯಗಳೇನೂ ನಿಲ್ಲಲಿಲ್ಲ. ಪ್ರತ್ಯಕ್ಷ ಸಾರ್ವಭೌಮರ ಚಿಕ್ಕಪ್ಪಂದಿರು ನಮ್ಮ ದೇಶಕ್ಕೆ ಸಾರ್ವಭೌಮ ಪ್ರತಿನಿಧಿಯಾಗಿ ಬಂದಿರುವಾಗ, ಅವರನ್ನು ಬಹಿಷ್ಕರಿಸಬೇಕೆಂದು ಪ್ರಜೆಗಳ ಮುಂದೆ ಒದರಾಡುವುದು ಭರತಖಂಡದ ಸುಪ್ರತಿಷ್ಠಿತ ಕೀರ್ತಿಗೌರವಗಳಿಗೆ ಕಳಂಕ ತರುವ ಹುಡುಗಾಟಿಕೆಯೇ ಹೊರತು ಎಂದಿಗೂ ಘನತೆಯಲ್ಲ. ಪ್ರಭುತ್ವದವರ ಸಾನುಭೂತಿಯನ್ನು ಮತ್ತಷ್ಟು ಹ್ರಾಸಗೊಳಿಸಿ ರೇಗಿಸಲು ಇಂಥ ವರ್ತನಗಳು ಸಾಧಕವಾಗುವುವೇ ಹೊರತು ಹಿತಕಾರಿಗಳಾಗುವುದಿಲ್ಲ. ಇಂಥ ಯತ್ನಗಳಿಗೆ ಕಾಂಗ್ರೆಸ್ಸು ಪ್ರೋತ್ಸಾಹ ಕೊಟ್ಟಿರುವುದು ಅದರ ದುರದೃಷ್ಟವೇ ಸರಿ.

ಹೊಸವೈಸ್ರಾಯರು.

ಈಗಣ ನಮ್ಮ ವೈಸ್‌ರಾಯರಾಗಿರುವ ಫ್ರೆಡರಿಕ್ ಜಾನ್ ನೆಪಿಯರ್ ಥೆಸಿಗರ್ ಬಾರ್ನ್ ಚಲಮ್ಸ್‌ಫರ್ಡ್ ಪಿ. ಸಿ., ಜಿ. ಎಂ ಎಸ್. ಐ., ಜಿ. ಸಿ. ಎಂ. ಜಿ, ಜಿ ಎಂ. ಐ. ಇ., ಜಿ ಬಿ ಇ., ಯವರ ಅಧಿಕಾರದವಧಿಯು ಬರುವ ಮಾರ್ಚಿ ತಿಂಗಳಿಗೆ ಮುಗಿಯುತ್ತದೆ. ಆ ಸ್ಥಾನಕ್ಕೆ ನಿಯುಕ್ತರಾಗುವರೆಂದು ಯಾರಯಾರ ಹೆಸರುಗಳೋ ಇದುವರೆಗೆ ಪ್ರಸಂಗಿಸಲ್ಪಡುತ್ತಿದ್ದುವು. ಕಡೆಗೆ ರೂಫಸ್ ಡಾನಿಯಲ್ ಇಜಾಕ್ಸ್ ಅರ್ಲ್ ರೀಡಿಂಗ್ ಪಿ. ಸಿ.; ಜಿ ಸಿ. ಬಿ., ಕೆ. ಸಿ. ವಿ. ಓ., ಯವರನ್ನು ವೈಸ್ರಾಯರನ್ನಾಗಿ ಸಾರ್ವಭೌಮರು ನಿಯಮಿಸಿದ್ದಾರೆಂಬ ನಿಜವಾದ ವಾರ್ತೆಯನ್ನು ಭರತಖಂಡದ ಸರ್ಕಾರದವರು ಈಗತಾನೇ ಪ್ರಕಟಿಸಿದ್ದಾರೆ. ಈ ಅರ್ಲ್ ರೀಡಿಂಗ್ ಪ್ರಭುಗಳು ಮೊದಲು ವಕೀಲತನದಲ್ಲಿದ್ದು ವಿಶೇಷ ಪ್ರಖ್ಯಾತಿಯನ್ನೂ ಧನವನ್ನೂ ಆರ್ಜಿಸಿ, ಬಳಿಕ ಅಟರ್ನಿ ಜನರಲ್‌ರಾಗಿಯೂ ಅಮೇರಿಕಾದಲ್ಲಿ ಆಂಗ್ಲರಾಯಭಾರಿಗಳಾಗಿಯೂ ಇದ್ದು ಕಡೆಗೆ ಈಗ ಸೀಮೆಯಲ್ಲಿ ಮುಖ್ಯನ್ಯಾಯಮೂರ್ತಿಗಳಾಗಿದ್ದಾರೆ. ಧರ್ಮನಿರ್ಣಯದಲ್ಲಿ ಇವರು ಪ್ರತ್ಯಕ್ಷ ಧರ್ಮಸ್ವರೂಪರೇ ಆಗಿರುವರೆಂದು ಪ್ರಸಿದ್ಧರಾಗಿದ್ದಾರೆ. ಇವರು ಮತದಲ್ಲಿ ಜ್ಯೂಪ್ರಭೇದಕ್ಕೆ ಸೇರಿದವರು. ಸ್ಟೇಟ್ ಸೆಕ್ರಟರಿ ಮಿ|| ಮಾಂಟೊಗ್‌ರವರೂ ಇವರೂ ಒಂದೇ ಮತದವರು. ರಾಜಕೀಯ ಪಕ್ಷದಲ್ಲಿ ಲಿಬರಲ್ ಪಂಗಡಕ್ಕೆ ಸೇರಿದವರು. ಸೈನಿಕ ಶಾಖೆಯ ಒರಟು ದಾರಿಯ ಸಂಪರ್ಕವಿಲ್ಲದೆ ಕೇವಲ ಸಿವಿಲಿಯನ್ನರಾಗಿಯೂ ಅದರಲ್ಲೂ ನ್ಯಾಯಶಾಸ್ತ್ರಪಾರಂಗತರಾಗಿ ನ್ಯಾಯವಿಮರ್ಶನಧೌರೇಯರಾಗಿಯೂ ಇರುವ ಇಂಥವರನ್ನು ಈಗಣ ವಿಷಮಸ್ಥಿತಿಯ ಕಾಲದಲ್ಲಿ ಭರತಖಂಡದ ಸರ್ವಾಧಿಕಾರಿ ಪದವಿಗೆ ನಿಯಮಿಸಿರುದು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಇವರ ಕಾಲದಲ್ಲಾದರೂ ಭರತಖಂಡದ ಪ್ರಕ್ಷುಬ್ಧವಾತಾವರಣವು ನಿರ್ಮಲವಾಗುವಂತಾದೀತೋ ಏನೋ ನೋಡಬೇಕು. ಆದರೆ ಇವರ ಜತೆಗೆ ಸ್ಟೇಟ್ ಸೆಕ್ರಟರಿ ಸ್ಥಾನಕ್ಕೂ ಮತ್ತೊಬ್ಬ ಹೊಸಬರು ಬರತಕ್ಕುದು ಅವಶ್ಯಕವೆಂದು ತೋರುತ್ತದೆ ಏಕೆಂದರೆ ಮಿ|| ಮಾಂಟೊಗ್‌ರವರು ಒಂದು ಭಾಗದಲ್ಲಿ ಭರತಖಂಡಕ್ಕೆ ಕೇವಲಾಭಿಮಾನದಿಂದ ಹಿತಚಿಂತನೆ ಮಾಡಿದವರಾಗಿದ್ದರೂ, ಒಂದೆರಡು ಸಂದರ್ಭದಲ್ಲಿ ಅವರು ತೋರಿಸಿದ ರಾಜತಂತ್ರವೇ ಭರತಖಂಡದ ಈಗಣ ಕ್ಷೋಭೆಗೆ ಹೇತುಭೂತವಾಗಿದ್ದಿತೆಂದು ಹೇಳದೆ ಇರುವುದಕ್ಕಾಗುವುದಿಲ್ಲ.

ತುಪ್ಪ.

ಊಟಮಾಡುವ ಪದಾರ್ಥಗಳಲ್ಲಿ ಕೆಲಕೆಲವಿಧದ ವಸ್ತುಗಳನ್ನು ಕಲಸಿ ಸೇರಿಸಬೇಕೆಂಬುದನ್ನು ಎಲ್ಲಾ ವೈದ್ಯರೂ ಒಪ್ಪಿಕೊಳ್ಳುತ್ತಾರೆ. ಭೋಜನದಲ್ಲಿ ಕೊಬ್ಬನ್ನುಂಟುಮಾಡುವ ಪದಾರ್ಥಗಳ ಅವಶ್ಯಕತೆಯನ್ನು ಆಂಗ್ಲವೈದ್ಯರಿಗೆ ಚೆನ್ನಾಗಿ ಹೇಳುತ್ತ ಅದರ ಪರಿಮಿತಿಯನ್ನು ಗೊತ್ತುಮಾಡಿದ್ದಾರೆ. ನಮ್ಮ ದೇಶದಲ್ಲಿ ಪೂರ್ವಕಾಲದಿಂದಲೂ ಆಹಾರ್ಯವಸ್ತುವಿನೊಡನೆ ತುಪ್ಪವನ್ನು ಸೇರಿಸಿ ಭುಂಜಿಸುವ ಏರ್ಪಾಟನ್ನು ಮಾಡಿದ್ದಾರೆ. “ಧಿಗನ್ನಂಘೃತವರ್ಜಿತಂ” (ತುಪ್ಪವಿಲ್ಲದ ಅನ್ನವನ್ನು ಸುಡು) “ಘೃತೇನವರ್ಧತೇಬುದ್ಧಿಃ” (ತುಪ್ಪದ ಸೇವನೆಯಿಂದ ಬುದ್ಧಿಯು ಹೆಚ್ಚುತ್ತದೆ). ಇತ್ಯಾದಿ ವಚನಗಳು ಹುಟ್ಟಿರುವುದನ್ನು ನೋಡುವಲ್ಲಿ ನಮ್ಮವರು ತುಪ್ಪಕ್ಕೆ ಎಷ್ಟು ಪ್ರಾಶಸ್ತ್ಯವನ್ನು ಕೊಟ್ಟಿರುವರೆಂಬುದು ಗೊತ್ತಾಗುತ್ತದೆ. ತುಪ್ಪವು ಕೊಬ್ಬಿನ ಪದಾರ್ಥಗಳಲ್ಲಿ ಗಣಿಸಲ್ಪಟ್ಟಿದ್ದರೂ ಅದು ಜೀವಹಿಂಸೆಯ ಅವಶ್ಯಕತೆಯೇ ಇಲ್ಲದೆ ಮಾನವರಿಗೆ ದೊರಕುವಂತೆ ಈಶ್ವರನಿಂದ ರಚಿಸಲ್ಪಟ್ಟಿದೆ. ಪ್ರತಿಯೊಬ್ಬನೂ ೨ ಅಥವಾ ೩ ತೊಲೆಯಷ್ಟು ತುಪ್ಪವನ್ನು ಉಪಯೋಗಿಸುವುದು ಪಾಶ್ಚಾತ್ಯರ ದೃಷ್ಟಿಗೂ ಕೂಡ ಸರಿಹೋಗುವುದು. ಸ್ನಿಗ್ಧಪದಾರ್ಥಗಳಲ್ಲಿ ತುಪ್ಪವೇ ಅಗ್ರಸ್ಥಾನವನ್ನು ವಹಿಸಿ ದೇಹಪೋಷಣೆಗೆ ಸಾಧಕವಾಗಿರುವುದು. ತುಪ್ಪವು ಶೀತವೀರ್ಯವುಳ್ಳುದಾಗಿಯೂ ಮಧುರರಸಯುಕ್ತವಾಗಿಯೂ ರುಚಿಕರವಾಗಿಯೂ ಇರುವುದು. ಪ್ರತಿದಿನವೂ ಇದನ್ನು ಸೇವಿಸುವುದರಿಂದ ಮೇದುಳನ್ನು ಹೆಚ್ಚಿಸಿ ಗ್ರಹಣಶಕ್ತಿಯನ್ನು ನರಗಳ ಪಟುತ್ವವನ್ನು ಅಭಿವೃದ್ಧಿಗೊಳಿಸುವುದು. ಹುಚ್ಚನ್ನೂ ಅಪಸ್ಮಾರವನ್ನೂ ಹೋಗಲಾಡಿಸುವುದು. ಅಗ್ನಿದೀಪನವನ್ನು ಮಾಡಿ ಬಲವನ್ನೂ ದೇಹದ ಬಣ್ಣವನ್ನೂ ವೀರ್ಯವನ್ನೂ ವೃದ್ಧಿಪಡಿಸುವುದು. ಇದು ಬಾಲರು ಮೊದಲುಗೊಂಡು ವೃದ್ಧರವರೆಗೂ ಉಪಯೋಗ್ಯವಾಗಿರುವುದು. ಒಳ್ಳೆ ಕಂಠಸ್ವರವನ್ನಪೇಕ್ಷಿಸುವವರಿಗೂ ಧಾತುಕ್ಷಯವುಳ್ಳವರಿಗೂ ವಾತಪಿತ್ತರೋಗಗ್ರಸ್ತರಿಗೂ ಇದು ಹಿತಕರವು. ವ್ರಣಹಾರಿಯೂ ರಕ್ತಶುದ್ಧಿಕಾರಕವೂ ಆಗಿರುವುದರಿಂದ ತುಪ್ಪವು ದೇಹದ ಒಳಕ್ಕೂ ಹೊರಕ್ಕೂ ಉಪಯೋಗಕ್ಕೆ ಬರುವುದು. ತುಪ್ಪವು ಇನ್ನೂ ಅನೇಕ ಸಂಸ್ಕಾರಗಳಿಗೆ ಒದಗುವುದು. ವಿಷವನ್ನು ಪರಿಹರಿಸುವಲ್ಲಿಯೂ ತುಪ್ಪಕ್ಕೆ ಮಿಗಿಲಾದ ಆಹಾರ್ಯವಸ್ತುವು ಮತ್ತೊಂದಿಲ್ಲ. ತುಪ್ಪವು ಹಳೆಯದಾಗುತ್ತ ಬಂದಂತೆ ಅದರ ಗುಣವು ಹೆಚ್ಚುವುದು. ಹಳೆಯ ತುಪ್ಪವನ್ನು ಸವರಿದ ಮಾತ್ರದಿಂದಲೇ ವ್ರಣಗಳು ಮಾಯುವುವು. ೧೧ ವರ್ಷಗಳ ಹಳೆಯ ತುಪ್ಪವು ಸಕಲ ರೋಗಗಳನ್ನೂ ಹರಿಸುವುದೆಂದು ಅಷ್ಟಾಂಗಸಂಗ್ರಹಗ್ರಂಥದಲ್ಲಿ ಹೇಳಲ್ಪಟ್ಟಿದೆ. ಈ ಹಳೆಯ ತುಪ್ಪವು ಶಿರೋರೋಗ ಕರ್ಣರೋಗಗಳನ್ನು ಹೋಗಲಾಡಿಸುವುದು. ದೇಹವು ಸುಟ್ಟು ಗಾಯವಾದವರಿಗೆ ನೀರಿನಲ್ಲಿ ಹಾಕಿ ಕಿವುಚಿ ಬೆಣ್ಣೆಯಂತೆ ಮಾಡಿದ ತುಪ್ಪವು ಅಮೃತಪ್ರಾಯವಾಗಿರುವುದು. ನೀರಿನಲ್ಲಿ ನೂರುಸಾವಿರ ವೇಳೆ ಕಿವುಚಿ ತೆಗೆದ ಶತಧೌತಘೃತ ಸಹಸ್ರಧೌತಘೃತಗಳು ಸನ್ನಿಪಾತ ಜ್ವರಾದಿಗಳಿಂದ ಉಂಟಾಗಿರುವ ತಾಪವನ್ನೂ ಚೇಳು ಹಾವುಗಳ ವಿಷವನ್ನೂ ಸಹ ಲೇಪನಮಾತ್ರದಿಂದಲೇ ಪರಿಹರಿಸುವುದು. ಹಳೆಜ್ವರದವರಿಗೂ ಕುಷ್ಠರೋಗಗ್ರಸ್ತರಿಗೂ ತಿಕ್ತ (ಕಹಿ) ರಸ ಪ್ರಧಾನವಸ್ತುನಿರ್ಮಿತವಾದ ಘೃತಗಳನ್ನು ಕೊಟ್ಟರೆ ತಪ್ಪದೆ ಗುಣವಾಗುವುದು. ಹುಚ್ಚನ್ನೂ ಅಪಸ್ಮಾರವನ್ನೂ ಕಳೆದುಕೊಳ್ಳಬೇಕಾದವರು ಕೆಂಗೊಂಗೆಗಿಡದ ರಸದಿಂದ ಮಿಶ್ರವಾದ ತುಪ್ಪವನ್ನೂ, ಸಂತಾನಾಪೇಕ್ಷೆಯುಳ್ಳವರು ಅಶ್ವಗಂಧಿ ಅಥವಾ ಶತಾವರೀಘೃತಗಳನ್ನೂ ನೇತ್ರಪಟುತ್ವವನ್ನಪೇಕ್ಷಿಸುವವರು ತ್ರಿಫಲಾಕೂಷ್ಮಾಂಡಾದಿಘೃತಗಳನ್ನೂ ತಪ್ಪದೆ ಸೇವಿಸಬೇಕು. ಕ್ಷಯರೋಗಿಗಳಿಗೆ ತುಪ್ಪವು ಪ್ರಾಣವು.

ನಾನಾ ಪ್ರಾಣಿಗಳ ತುಪ್ಪದಲ್ಲಿ ಗುಣಭೇದವಿರುವುದು. ಎಲ್ಲಾ ತುಪ್ಪಗಳಲ್ಲೂ ಗೋಘೃತವೇ ಶ್ರೇಷ್ಠ. ಯಾವ ಯಾವ ಪ್ರಾಣಿಗಳ ಹಾಲಿನಲ್ಲಿ ಯಾವ ಯಾವ ಗುಣವು ಹೇಳಲ್ಪಟ್ಟಿರುವುದೋ ಅವುಗಳ ತುಪ್ಪದಲ್ಲೂ ಅದೇ ಗುಣವಿರುವುದು. ಗುಣಪಾಠವು ಹೇಗೆಂದರೆ—ಹಸುವಿನ ತುಪ್ಪ ಮಧುರ, ಶೀತವೀರ್ಯ, ವಾತಪಿತ್ತವಿಷಹರ, ಬಲಕರ, ದೃಷ್ಟಿಪಾಟವಕರ. ಮೇಕೆಯ ತುಪ್ಪವು-ಬೇಗನೆ ಅರಗುವುದು. ಶ್ವಾಸಕಾಸ ಕ್ಷಯಗಳನ್ನು ಪರಿಹರಿಸುವುದು. ದೀಪನಶಕ್ತಿಯುಳ್ಳದು. ನೇತ್ರಶಕ್ತಿಯನ್ನು ಹೆಚ್ಚಿಸುವುದು. ಒಂಟೆ ತುಪ್ಪ-ಇದು ಕಾರವಾಗಿರುವುದರಿಂದ ಶೋಫೆ ಗುಲ್ಮ ಕ್ರಿಮಿ ಕಫ ವಾತ ಕುಷ್ಠ ರೋಗ ಇವುಗಳನ್ನು ಪರಿಹಸತಕ್ಕುದಾಗಿಯೂ ಉಷ್ಣ ಗುಣವುಳ್ಳುದಾದುದರಿಂದ ಹಸಿವನ್ನು ಹುಟ್ಟಿಸತಕ್ಕುದಾಗಿಯೂ ಇರುವುದು. ಕುದುರೆಯ ತುಪ್ಪ—ಬೇಗನೆ ಜೀರ್ಣಿಸುವುದಾಗಿಯೂ, ಉಷ್ಣ ಗುಣವುಳ್ಳುದಾಗಿಯೂ ಇರುವ ಕಾರಣ ಕಫವನ್ನು ಹರಿಸುವುದು. ಹಸಿವನ್ನು ದ್ವಿಗುಣಪಡಿಸುವುದು. ಒಗರಾದುದರಿಂದ ಮಲಮೂತ್ರಗಳನ್ನು ಬಾಧಿಸುವುದು. ನಾರೀಸ್ತನ್ಯಘೃತ—ಇದು ಅಮೃತಸಮಾನವು. ಸುಲಭವಾಗಿ ಜೀರ್ಣಿಸತಕ್ಕುದು. ವಿಷಹಾರಕವು. ಎಮ್ಮೆ ತುಪ್ಪ—ಮಂದಕಾರಿ, ಬಲಕರ. ರಕ್ತಪಿತ್ತ ವಾತಪಿತ್ತಗಳನ್ನು ಹೆಚ್ಚಿಸುವುದು. ಆನೆತುಪ್ಪ—ಒಗರಾಗಿರುವುದರಿಂದ ಮಲಮೂತ್ರಗಳನ್ನು ಕಟ್ಟುವುದು. ಕಹಿಯಾಗಿಯೂ ಇರುವುದರಿಂದ ಕಫ ಕುಷ್ಠ ಕ್ರಿಮಿಗಳನ್ನು ನಾಶಮಾಡುವಲ್ಲಿ ಉಪಯೋಗಕರವು. ಹಾಲು ಬೆಣ್ಣೆ— ಹಾಲಿಗೆ ಹೆಪ್ಪು ಹಾಕಿ ಮೊಸರನ್ನು ಮಾಡಿ, ಅದನ್ನು ಕಡೆದು ತೆಗೆದ ಬೆಣ್ಣೆಯನ್ನು ಕಾಸಿ ತುಪ್ಪವನ್ನು ಮಾಡುವುದೇ ಎಲ್ಲೆಲ್ಲೂ ಪದ್ಧತಿ. ಆದರೆ ಕೆಲವರು ಹಾಲನ್ನೇ ಕಡೆದು ಬೆಣ್ಣೆಯನ್ನು ತೆಗೆದು ಕಾಯಿಸಿ ತುಪ್ಪ ಮಾಡುತ್ತಾರೆ. ಇದು ಮಲಬಂಧನಕರವು. ಇದನ್ನು ಅತಿಸಾರಾದಿ ರೋಗಗಳಲ್ಲಿ ಉಪಯೋಗಿಸಬಹುದು. ಇದು ರಕ್ತಪಿತ್ತವನ್ನೂ ಮೂರ್ಛಾರೋಗವನ್ನೂ ಶಮನಗೊಳಿಸುವುದು. ರಕ್ತವಮನ ರಕ್ತವಿರೇಚನವಾಗುತ್ತಿರುವವರಿಗೆ ಇದು ಗುಣಕಾರಿ. ನೇತ್ರರೋಗವನ್ನು ಪರಿಹರಿಸುವುದು.

ತುಪ್ಪವು ನಿರ್ದುಷ್ಟವಾಗಿ ಶ್ರೇಷ್ಠವಾಗಿದ್ದರೆ ಎಷ್ಟು ಗುಣಕಾರಿಯೋ ದುಷ್ಟವಾದ ಇತರ ವಸ್ತುಗಳಿಂದ ಮಿಶ್ರವಾಗಿದ್ದರೆ ಅಷ್ಟು ಕಟ್ಟದು. ಕೊಬ್ಬು ಮೊದಲಾದ ವಸ್ತುಗಳನ್ನು ಬೆರಸಿ ಮಾರಲ್ಪಡುವ ತುಪ್ಪವನ್ನು ವಿಸರ್ಜಿಸುವುದೇ ಆರೋಗ್ಯಕ್ಕೆ ಸಾಧಕ. ಧನ್ವಂತರಿ.

ಒಳದೇಶದ ವೃತ್ತಾಂತಗಳು.

ಬರುವ ತಾ|| ೧೯-೨೦-೨೧ ರಲ್ಲಿ ಚಿತ್ರದುರ್ಗದಲ್ಲಿ ದನಗಳ ಪ್ರದರ್ಶನವು ನಡೆಯುವುದು. ಅಗ್ಗ ಸರ್ಕಾರಿ ಅಮೃತಮಹಲ್ ದನಗಳು ಮಾರಲ್ಪಡುವುವು.

ರಾಜಧಾನಿಯಲ್ಲಿ ಪ್ಲೇಗಿನ ಮರಣಗಳು ಅಲ್ಲಲ್ಲಿ ಆಗುತ್ತಲೇ ಇವೆ. ಲಷ್ಕರ್ ಮೊಹಲ್ಲಾ ಚರ್ಚ್ ಮಠದ ಬೀದಿಯ ಒಂದೇ ಮನೆಯಲ್ಲಿ ೨ ಮರಣಗಳಾದುವು.

ಆಹಾರ ಪದಾರ್ಥಗಳಲ್ಲಿ ಇತರ ವಸ್ತುಗಳನ್ನು ಕಲಬೆರಕೆ ಮಾಡಿ ಮಾರುವುದನ್ನು ತಪ್ಪಿಸುವ ಶಾಸನಕ್ಕೆ ಸಂಬಂಧಪಟ್ಟ ಮಸೂದೆಯು ಕಳೆದ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿದೆ.

ಈಸಲ ಹಾಸನದಲ್ಲಿ ಕೂಡಿದ್ದ ದನಗಳ ಪರಿಸೆಯು ಬಹಳ ದೊಡ್ಡದಾಗಿದ್ದಿತೆಂದೂ, ಅತ್ಯುತ್ತಮವಾದ ರಾಸುಗಳು ಕೂಡ ಬಂದಿದ್ದುವೆಂದೂ ೨೦ ಸಾವಿರದವರೆಗೆ ಪಶುಸಂಖ್ಯೆ ಕೂಡಿದ್ದಿತೆಂದೂ ಕೇಳಿದೆವು.

ದಿವಾನ್ ಸರ್ದಾರ್ ಕಾಂತರಾಜ ಅರಸಿನವರು ಸಂಸ್ಥಾನದಲ್ಲಿ ಸಂಚರಿಸಿಕೊಂಡು ಬರುವುದಕ್ಕಾಗಿ ಬರುವ ತಾ|| ೧೬ ರಲ್ಲಿ ಬೆಂಗಳೂರಿಂದ ಚಿತ್ರದುರ್ಗ ಡಿ|| ಗೆ ಪ್ರಯಾಣ ಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ರಾಜಧಾನಿಗೆ ದಯಮಾಡಿಸಿದ್ದ ಶ್ರೀಮದ್ಯುವರಾಜರವರು ಮರಳಿ ಬೆಂಗಳೂರಿಗೆ ಕಳೆದ ತಾ|| ೧೨ ರಲ್ಲಿ ದಯಮಾಡಿಸಿದರು, ಅವರೂ ಮಹಾರಾಣಿಯವರೂ ಸಹ ಮದ್ರಾಸಿಗೆ ದಯಮಾಡಿಸಿ ಸ್ವಲ್ಪಕಾಲವಿದ್ದು ಬರುವವರಾಗಿದ್ದಾರೆ.

ರಾಜಧಾನಿಯಲ್ಲಿ ಕಳೆದ ವಾರ ಮೋಡ ಮುಚ್ಚಿ ಸ್ವಲ್ಪ ತುಂತುರು ಹನಿಗಳು ಬೀಳುತ್ತಿದ್ದು ಶುಕ್ರವಾರ ರಾತ್ರಿ ½ ಅಂಗುಲ ಮಳೆಯಾಯಿತು. ಈಗ ಮದರಾಸಿನಲ್ಲಿ ಹೆಚ್ಚು ಮಳೆ ಬಿದ್ದುದರಿಂದ ಅದರ ಸೆಲೆಯು ಇತ್ತಕಡೆಗೂ ವ್ಯಾಪಿಸಿತು.

ಸರ್ಕಾರದವರು ಇದುವರೆಗೆ ಉಚಿತವಾಗಿ ಡಿಸ್ಟ್ರಿಕ್ಟ್ ಬೋರ್ಡುಗಳು ಮುನಿಸಿಪಾಲಿಟಿಗಳು ಮೊದಲಾದುವುಗಳಿಗೆಲ್ಲಾ ಉಚಿತವಾಗಿ ಒದಗಿಸುತ್ತಿದ್ದ ಸಿಡುಬಿನ ಹಾಲಿಗೆ ಇನ್ನುಮೇಲೆ ಆಯಾ ಬೋರ್ಡುಗಳವರು ಬೆಲೆಯನ್ನು ಕೊಟ್ಟು ಕೊಳ್ಳಬೇಕೆಂದು ವಿಧಿಸಿದ್ದಾರೆ.

ನಮ್ಮ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾದ ಮ|| ಬ್ರಜೇಂದ್ರನಾಥಸೀಲ್ ಎಂ. ಎ. ಯವರು ಬೆಂಗಳೂರಿಗೆ ತೆರಳುವರು. ಅಲ್ಲಿಯ ಸೆಂಟ್ರಲ್‌ಕಾಲೇಜು ಮೊದಲಾದ ವಿದ್ಯಾಲಯಗಳನ್ನು ಪರಾಮರಿಸಿಕೊಂಡು ೧ ವಾರದೊಳಗೆ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆ.

ಶ್ರೀಮದ್ಯುವರಾಜರವರು ಸಂಸ್ಥಾನಿಕರ ಸಭೆಗೋಸ್ಕರವಾಗಿ ದಿಲ್ಲಿಪಟ್ಟಣಕ್ಕೆ ಈ ತಿಂಗಳ ಕಡೆಯಲ್ಲಿ ಪ್ರಯಾಣಮಾಡುವವರಾಗಿದ್ದಾರೆ. ಅವರ ಜತೆಯಲ್ಲಿ ಶ್ರೀಮನ್ಮಹಾರಾಜರ ಹುಜೂರು ಸೆಕ್ರಟರಿ ಅಮೀನುಲ್‌ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರೂ ಪ್ರಯಾಣಮಾಡುವವರಾಗಿದ್ದಾರೆ.

ಸಂಸ್ಥಾನದ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಅವಶ್ಯಕಬಿದ್ದಾಗ ಕಾಪಿಗಳ ತಯಾರಿಗೆ ೧೦೦ ಮಾತುಗಳನ್ನು ಬರೆಯಲು ೨ ಆಣೆಯ ಪ್ರಕಾರ ಚಾರ್ಜನ್ನು ಕೊಟ್ಟು ಬರೆಯಿಸಲು ಕಾಪೀಸ್ಟುಗಳನ್ನು ನಿಯಮಿಸಿಕೊಡುವುದಕ್ಕೆ ಆ ಶಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಅಧಿಕಾರವು ಕೊಡಲ್ಪಟ್ಟಿದೆ.

ಮ|| ಎನ್. ಮಾಧವರಾವ್‌ರವರು ಶಾತಾ ಕಬ್ಬಿಣದ ಕಾರ್ಖಾನೆಯ ಮ್ಯಾನೇಜಿಂಗ್‌ಬೋರ್ಡ್ ಸೆಕ್ರಟರಿಗಳಾಗಿ ಮಾಡಲ್ಪಟ್ಟು ಮೈಸೂರು ಸರ್ಕಾರದವರಿಂದ ತತ್ಸಂಬಂಧವಾದ ಕೆಲಸದ ಮೇಲೆ ಬೊಂಬಾಯಿಗೆ ಕಳುಹಿಸಲ್ಪಟ್ಟಿದ್ದಾರೆ. ಅವರಿಗೆ ೬೦೦ ರೂ. ಸಂಬಳದ ಮೇಲೆ ೪೦೦ ರೂ. ಅಲೋಯನ್ಸು ಕೊಡಲ್ಪಡುವುದೆಂದು ಪ್ರಕಟವಾಗಿದೆ.

ಮೈಸೂರು ಶಾಕುಂತಲ ಕರ್ನಾಟಕ ನಾಟಕ ಸಭೆಯವರು ಈಗ ೨ನೆ ಸಲ ಮದ್ರಾಸಿಗೆ ಹೋಗಿ ತಮ್ಮ ಪ್ರಯೋಗಗಳನ್ನು ಮಾಡುತ್ತಲಿದ್ದಾರೆ. ಮುಖ್ಯವಾದ ೨ ಪಾತ್ರಗಳು ಇಲ್ಲದಿದ್ದುದನ್ನು ಕಂಡು ಪ್ರೇಕ್ಷಕರು ನಿರಾಶರಾದರೆಂದೂ ಅದುಕಾರಣ ನೋಡಲಿಕ್ಕೆ ಬರುವ ಜನರ ಸಂಖ್ಯೆಯೂ ಕಡಿಮೆಯಾಗಿದೆಯೆಂದೂ ಅಲ್ಲಿಯ ಸ್ಥಳಿಕಪತ್ರಿಕೆಯಲ್ಲಿ ಪ್ರಕಟವಾಗಿದೆ.

ಫ್ರಾನ್ಸಿನ ಹಿಂದಣ ಮಂತ್ರಿ ಮಿ|| ಕ್ಲೆಮೆನ್ಸೋರವರು ಉತ್ತರದೇಶ ಸಂಚಾರವನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದಿದ್ದು ಕಳೆದ ಶುಕ್ರವಾರ ರಾಜಧಾನಿಗೆ ದಯಮಾಡಿಸಿ ನಮ್ಮ ಮಹಾರಾಜರ ಆತಿಥ್ಯದಲ್ಲಿ ರಸಿಡೆನ್ಸಿಯೊಳಗೆ ಇಳಿದಿದ್ದಾರೆ. ಶಿವನಸಮುದ್ರ, ಕೃಷ್ಣರಾಜಸಾಗರ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನವಲೋಕಿಸಿಕೊಂಡು ಕಾರಾಪುರದ ಕಾಡಿನಲ್ಲಿ ಬೇಟೆಯಾಡಿಕೊಂಡು ತೆರಳುವವರಾಗಿದ್ದಾರೆಂದು ಕೇಳುತ್ತೇವೆ.

ಪುನಾದಿಂದ ಬೆಂಗಳೂರಿಗೆ ಹೊಗೆಬಂಡಿಯಲ್ಲಿ ಬರುತ್ತಿದ್ದ ಮ|| ಲಲ್ಲೂಭಾಯಿ ಶ್ಯಾಮಲ್‌ದಾಸ್‌ರವರ ಜತೆಯಲ್ಲೇ ಸೈನಿಕ ವೇಷದಿಂದ ಬಂದು ಅವರ ಹಣದ ಚೀಲವನ್ನು ಅಪಹರಿಸಿದ್ದ ಫಜುಲ್‌ಮಹಮ್ಮದ್ ಎಂಬಾತನ ವಿಚಾರಣೆಯು ನಡೆದು ಅಪರಾಧಿಗೆ ೧|| ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಇವನು ಹಿಂದೆ ಪಂಜಾಬಿನಲ್ಲಿ ಪೊಲೀಸ್ ಉದ್ಯೋಗದಲ್ಲಿದ್ದು ತಿರಸ್ಕರಿಸಲ್ಪಟ್ಟವನು ಮತ್ತು ಒಂದುಸಲ ಕಾರಾಗೃಹವಾಸ ಶಿಕ್ಷೆಯನ್ನು ಅನುಭವಿಸಿದ್ದನು.

ಈ ಕೆಳಗೆ ಕಂಡಂತೆ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಯಾಗಿರುತ್ತದೆ. ಮ|| ಗಳಾದ ಎಂ. ಎನ್. ಬಾಲರಾಜ ಅರಸಿನವರು ಗುಬ್ಬಿ ಸಬ್ ಡಿವಿಜನ್ನಿಗೆ. ಅಲ್ಲಿರುವ ಸಿ. ಗೋಪಾಲಾಚಾರ್ಯರು ಮದ್ದಗಿರಿ ಸಬ್ ಡಿವಿಜನ್ನಿಗೆ. ಅಲ್ಲಿರುವ ಎಂ. ಚೆನ್ನರಾಜೆ ಅರಸಿನವರು ಚಿಂತಾಮಣಿ ಸಬ್ ಡಿವಿಜನ್ನಿಗೆ. ಅಲ್ಲಿರುವ ಜಿ. ಸುಂದರರಾವ್‌ರವರು ಕೋಲಾರದ ಡಿಸ್ಟ್ರಿಕ್ಟ್ ಟ್ರಜರಿಗೆ. ಪ್ರೊ|| ಕಮಿಷನರಾದ ಎಂ. ಚಿನ್ನಪ್ಪನವರು ಕೋಲಾರದ ಡಿಸ್ಟ್ರಿಕ್ಟ್ ಖಜಾನೆಯಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಗೆ. ಅಲ್ಲಿರುವ ಎಸ್. ನಾರಾಯಣರಾವ್‌ರವರು ಸಾಗರ ಸಬ್ ಡಿವಿಜನ್ನಿಗೆ.

ವಿನೋದಗುಚ್ಛ.

ಶಿಷ್ಯ.—ಸಾರ್, ಜನಗಳು ಸಂಕರಾಂತಿ ಎಂದು ಹೇಳುತ್ತಾರಲ್ಲ, ಸಂಕರಾಂತಿಯೆನ್ನುವದು ಸರಿಯೊ ? ಸಂಕರಾತ್ರಿಯೆನ್ನುವದು ಸರಿಯೊ ?

ಗುರು.—ಎರಡೂ ತಪ್ಪು, ಶಂಖರಾತ್ರಿಯೆನ್ನಬೇಕು.

ಶಿ.—ಹಾಗಂದರೇನು ಸಾರ್.

ಗು—ಅಯ್ಯೋ ದಡ್ಡಾ ಅಷ್ಟು ತಿಳಿಯದೆ? ಹಬ್ಬದ ಎಳ್ಳು ಸಕ್ಕರೆಯನ್ನು ಹೊಟ್ಟೆಬಿರಿಯುವಷ್ಟು ತಿಂದು ರಾತ್ರಿ ನಿದ್ರೆ ಹತ್ತದೆ ಶಂಖಬಾರಿಸುವದರಿಂದ ಈ ಹಬ್ಬಕ್ಕೆ ಶಂಖರಾತ್ರಿಯೆಂದು ಹೆಸರಾಗಿದೆ.

Copy of letter No. 632-43 dated 25th Dec. 1920 from the Honorary Secretary the U. P. Dharma Rakshana Sabha, Lucknow, to Dewan Bahadur Rajasabha Bhushana K. P. Puttanna Chetty C.I.E.

I am glad to inform you that the objections filed by Sunderling against the election of Shri Nilkanthlingji as the Rawal of Shri Kedarnath temple were dismissed by the Commissioner of Kumaun Division on 21st instant at Kashipur in my presence. This decision is now final.

ಸ್ಟಾರ್

ನೋಹರಾಜೀಯಾಕ್ |
ರಾದ್ದು ಕ್ಷಾಲವಾಲಂವಲಂ |
ೀತಾನುಕಂಪೋಜ್ವಲಂ |

[ಅಂಚೆವೆಚ್ಚ ಸೇರಿ ೨-೪-೦]

REGISTERED NO. M.

ನೆಯ ಭಾನುವಾರ.

I also trust that this Sabha shall continue to receive your sympathy and active support so that it may be instrumental in improving the management of Hindu religious and charitable endowments.

ಪತ್ರವ್ಯವಹಾರ.

ಹಾಸನದ ತಾಲ್ಲೋಕು ಗೊರೂರಿನಲ್ಲಿ ನಡೆಯುವ ಶ್ರೀ ಯೋಗಾನೃಸಿಂಹಸ್ವಾಮಿಯವರ ರಥೋತ್ಸವ ಕಾಲದಲ್ಲಿ ಒಂದು ದನಗಳ ಪರಿಸೆಯೂ ಸೇರುವುದು. ನಾನಾ ಪ್ರಾಂತದ ದನಗಳು ಬರುವುವು. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲಾಗುವುದು. ನೀರಿಗೆ ನದಿಯ ಅನುಕೂಲವಿದೆ. ರೋಗಾದಿ ಉಪದ್ರವವೇನೂ ಇಲ್ಲ. ಯಾವ ವಿಧವಾದ ಸುಂಕವೂ ವಸೂಲ್ಮಾಡಲ್ಪಡುವುದಿಲ್ಲ. ಈ ಪರಿಸೆಯು ಫೆಬ್ರವರಿ 14 ರ ಲಾಗಾಯತು ಮೂರು ದಿನಗಳವರೆಗೆ ನಡೆಯುತ್ತದೆ.

ಎಚ್. ಬಿ. ನಂಜಪ್ಪ, ಸೆಕ್ರೆಟರಿ.

ಪಬ್ಲಿಕ್ ಸರ್ವೆಂಟ್ಸ್.

ಸರಕಾರದ ಉದ್ಯೋಗಸ್ಥರೆಲ್ಲರೂ ಪಬ್ಲಿಕ್ ಸರ್ವೆಂಟ್ಸ್ ಎಂದು ಹೇಳಲ್ಪಡುವರು. ಪಬ್ಲಿಕ್ ಸರ್ವೆಂಟ್ಸ್ ಅಂದರೆ ಪ್ರಜೆಗಳ ಸೇವಕರೆಂದರ್ಥವು. ಆದುದರಿಂದ ಸರಕಾರದ ಉದ್ಯೋಗಸ್ಥರಿಗೆ ಪ್ರಜೆಗಳೇ ದಣಿಗಳಾಗಿರುತ್ತಾರೆ. ಈ ಭಾವವು ಉದ್ಯೋಗಸ್ಥರ ಮತ್ತು ಪ್ರಜೆಗಳ ಮಧ್ಯದಲ್ಲಿ ನೆಲೆಗೊಂಡಿಲ್ಲ; ವಿಪರ್ಯಯವಾಗಿರುವುದು. ಪ್ರಜೆಗಳು ವಿದ್ಯಾಹೀನರೂ, ರಾಜಕೀಯ ವಿಷಯಜ್ಞಾನವಿಲ್ಲದವರೂ ಆಗಿ ತಾವು ಸರಕಾರದ ಉದ್ಯೋಗಸ್ಥರ ಸೇವಕರೆಂದು ತಿಳಿದುಕೊಂಡಿರುವರು. ಉದ್ಯೋಗಸ್ಥರಾದರೋ ತಾವು ವಿದ್ಯಾವಂತರಾದಾಗ್ಯೂ ತಮ್ಮ ಅಧಿಕಾರಮದದಿಂದ ವಿವೇಚನೆಯಿಲ್ಲದೆ ಪ್ರಜೆಗಳಿಗೆ ತಾವೇ ಪ್ರಭುಗಳೆಂಬ ಭಾವನೆಯಿಂದ ನಿರಂಕುಶ ಪ್ರಭುತ್ವವನ್ನು ಮಾಡ ತೊಡಗಿರುವರು. ಈ ಕಾಲದಲ್ಲಿ ಹೀಗೆ ಆಚರಣೆಯಲ್ಲಿರುವುದು. ಇದರಿಂದ ನ್ಯಾಯಾನ್ಯಾಯಗಳು ವ್ಯಪರೀತ್ಯವಾಗಿ ಪರಿಣಮಿಸಲು ಅವಕಾಶವಾಗುವುದು. ಉದ್ಯೋಗಸ್ಥರು ಪ್ರಜೆಗಳೇ ತಮ್ಮ ಪ್ರಭುಗಳೆಂಬ ಭಾವನೆಯನ್ನು ಅಂತರ್ಯದಲ್ಲಿ ತಳೆದು ಮನಸಾಕ್ಷಿಯಾಗಿ ವರ್ತಿಸಿದರೆ ಇಹಪರಗಳಲ್ಲಿ ಶ್ರೇಯಸ್ಸನ್ನು ಪಡೆಯುವರು. ಕೆಲವರು ಪ್ರಜೆಗಳನ್ನು ತುಚ್ಛವಾಗಿ ಕಂಡು ಅವಾಚ್ಯಗಳನ್ನಾಡಿ ಅವಮಾನಪಡಿಸುತ್ತಿರುವರೆಂಬ ಸಂಗತಿಯು ಜನಜನಿತವಾಗಿರುವುದು ಅವಿದ್ಯಾವಂತರಾದಾಗ್ಯೂ, ಉದಾಸೀನ ಮಾಡದೆ ಪ್ರಜೆಗಳಿಗೆ ಸರಿಯಾದ ತಿಳಿವಳಿಕೆಗಳನ್ನು ಶಾಂತಮನಸ್ಸಿನಿಂದುಂಟುಮಾಡಿ ಜನಾನುರಾಗವನ್ನು ಸಂಪಾದಿಸುವುದು ಉದ್ಯೋಗಸ್ಥರ ಧರ್ಮವು ಇದನ್ನು ತಿಳಿದಾಚರಿಸುವರೆಂದೂ, ಪ್ರಜೆಗಳು ತಮ್ಮ ಯೋಗ್ಯತೆ, ಗೌರವ, ಹಕ್ಕುಬಾಧ್ಯತೆಗಳೇನು ಎಷ್ಟರಮಟ್ಟಿಗಿರುವುವು ಎಂಬುದನ್ನು ತಿಳಿದು ವಿವೇಕಜ್ಞರಾಗಿ ಕ್ಷುಲ್ಲಕಾಧಿಕಾರಿಗಳ ನಿರಂಕುಶಪ್ರವರ್ತನೆಗೊಳಗಾಗದೆ ರಾಜಕೀಯ ಕಾರ್ಯಗಳಲ್ಲಿ ಸಹಾಯಕರಾಗಿ ನಿಲ್ಲುವರೆಂದು ನಂಬಿದ್ದೇನೆ.

ಯಥಾರ್ಥವಾದಿ.

ಎಟೊ...ನ್ನು ಮತ್ತು
ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 8

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು
ಪಾಠಶಾಲಾ ಮಹಾಗಾಂವ್, ಜಿಲ್ಲಾ

ಮೈಸೂರು ಸ್ಟಾರ್.

೧೯೨೧ನೆಯ ಇಸವಿ ಜನವರಿ ತಾ|| ೧೬ ನೆಯ ಭಾನುವಾರ.

ಶ್ರೀಮತ್ ಕನ್ನಾಟ್ ಪ್ರಭುಗಳ ಆಗಮನ.

ನೂತನವಾಗಿ ಏರ್ಪಟ್ಟಿರುವ ರಾಜಕೀಯ ಸಂಸ್ಕರಣಗಳ ಪ್ರಕಾರ ಸಮಾವೇಶವಾಗುವ ಶಾಸನಸಭೆ ಮೊದಲಾದುವುಗಳ ಪ್ರಾರಂಭ ಮಹೋತ್ಸವವನ್ನು ಈ ದೇಶದಲ್ಲಿ ನಡೆಯಿಸುವುದಕ್ಕೋಸ್ಕರ ಶ್ರೀಮತ್ ಜಾರ್ಜ್ ಸಾರ್ವಭೌಮರ ಪ್ರತಿನಿಧಿಗಳಾಗಿ ಅವರಪ್ಪಣೆಯ ಮೇರೆಗೆ ಅವರ ಚಿಕ್ಕಪ್ಪಂದಿರಾದ ಡ್ಯೂಕ್ ಆಫ್ ಕನ್ನಾಟ್‌ರವರು ಈ ದೇಶಕ್ಕೆ ದಯಮಾಡಿಸುವರೆಂಬ ವಿಷಯವು ಸರ್ವರಿಗೂ ವಿದಿತವಾಗಿದ್ದಿತಷ್ಟೆ. ಆ ಮಹಾಶಯರು

ಮ್ಯುನಿಸಿಪಲ್ ಪ್ರೆಸಿಡೆಂಟ್, ಮತ್ತು ವೈಸ್‌ಪ್ರೆಸಿಡೆಂಟ್, ಚಿತ್ರದುರ್ಗ.

ಅಯ್ಯಾ, 2-1-9121 ನೆಯ ಸ್ಟಾರ್ ಪತ್ರಿಕೆಯಲ್ಲಿ ಚಿತ್ರದುರ್ಗದ ಟೌನ್ ವೈಸ್‌ಪ್ರೆಸಿಡೆಂಟ್ ಮತ್ತು ಪ್ರೆಸಿಡೆಂಟರೆಂಬ ಹೆಡ್ಡಿಂಗ್ ಉಳ್ಳ ಬಾತ್ಮಿಯನ್ನು ಒಬ್ಬ ಕೌನ್ಸಿಲರ್ ಪ್ರಕಟಮಾಡಿದ್ದನ್ನು ಓದಿ ಇದರ ವಿಷಯ ಏನು ಎಂಬುದನ್ನು ತಿಳಿಯಲು ಈ ತಿಂಗಳು 4-1-21 ರಲ್ಲು ನಡೆದ ಆರ್ಡಿನರ್ ಮ್ಯು|| ಮೀಟಿಂಗಿಗೆ ನಾನು ಹಾಜರಾಗಿದ್ದೆ. ಅಲ್ಲಿ ವೈಸ್‌ಪ್ರೆಸಿಡೆಂಟರವರು ಕೌನ್ಸಿಲ್ ಮೆಂಬರುಗಳ ಅನುಮತಿಯಿಲ್ಲದೆ ಇಂಜನಿಯರ ಸಜೆಷನ್ ತೆಗೆದುಕೊಳ್ಳದೆ ಮ್ಯುನಿಸಿಪಾಲಿಟಿಯ ಕೆಲಸವನ್ನು ಮನಸ್ವಿ ಮಾಡುತ್ತಾರೆಂಬ ಸಬ್ಜೆಕ್ಟು ಒಂದು (ಅಂದರೆ ಸಂತೆಬಾಗಿಲ ಬಳಿಯ ಹೊಡೆದುಹಾಕಿರುವ ಉಭಯಪಾರ್ಶ್ವದ ಕೋಟೆಗೋಡೆಯನ್ನು ರಿಪೇರಿ ಮಾಡುವುದಕ್ಕಾಗಿ ಕಲ್ಲು ಕಟ್ಟಿದ ಪದೇಪದೇ ಬೀಳುವಂತೆ ೨-೩ ಸಾರಿ ಕಟ್ಟಿಸಿದ್ದು) ತರಲ್ಪಟ್ಟಿತು. ಜುಡಿಷಿಯಲ್ ಕೋರ್ಟಿನಲ್ಲಿ ಸವಾಲ್‌ಹಾಕಿ ಜವಾಬು ತೆಗೆದುಕೊಳ್ಳುವ ಹಾಗೆ ಒಬ್ಬ ಕೌನ್ಸಿಲರಿಗೂ ವೈಸ್‌ಪ್ರೆಸಿಡೆಂಟರವರಿಗೂ ಸವಾಲ್ ಜವಾಬು ನಡೆಯಲು ನಮ್ಮ ಪ್ರೆಸಿಡೆಂಟರು ಅವಕಾಶ ಕೊಟ್ಟಿದ್ದರು. ಸರ್ಕಾರದಿಂದ ಚುನಾವಣೆಯಾದ ವೈಸ್‌ಪ್ರೆಸಿಡೆಂಟರು ನಡೆಸಿದ ಕಾರುಬಾರುಗಳೆಲ್ಲ ಮನಸ್ವಿಯೇ ಅಲ್ಲವೇ ಎಂಬುದಕ್ಕಾಗಿ ಎಲ್ಲಾ ಮೆಂಬರುಗಳ ಓಟು ತೆಗೆಯಲು ಮನಸ್ವಿ ಎಂದು ೬ ಜನ ಮೆಂಬರುಗಳು, ಮನಸ್ವಿ ಅಲ್ಲವೆಂದು ೩ ಜನ ಮೆಂಬರುಗಳು ಅಭಿಪ್ರಾಯಪಟ್ಟರು. ಆಗ ಪ್ರೆಸಿಡೆಂಟರು ಸಹ ಮನಸ್ವಿ ಅಲ್ಲವೆಂಬ ಕಡೆ ತಮ್ಮ ಓಟು ಇರುವುದಾಗಿ ಹೇಳಿದರು. ಇದೆಲ್ಲಾ ರಿಕಾರ್ಡು ಮಾಡಲ್ಪಟ್ಟಿತು. ಈ ಮಧ್ಯೆ ಒಬ್ಬ ಕೌನ್ಸಿಲ್‌ಮೆಂಬರು ಪ್ರೆಸಿಡೆಂಟರವರಿಂದ ಅಪ್ಪಣೆ ತೆಗೆದುಕೊಂಡು ಹೋಗಿದ್ದವರು ಮೇಲ್ಕಂಡ ವಿಷಯ ರಿಕಾರ್ಡು ಪೂರ್ತಿ ಆಗತಕ್ಕ ಕಾಲಕ್ಕೆ ಬಂದದ್ದರಿಂದ ಇವರ ಅಭಿಪ್ರಾಯವನ್ನು ಕೇಳಬೇಕಾಗಿ ಒಬ್ಬ ಕೌನ್ಸಿಲರು ಪ್ರಾರ್ಥಿಸಿಕೊಂಡದ್ದಕ್ಕೆ ರಿಕಾರ್ಡು ಮಾಡಿದ್ದಾಗಿದೆ. ಆಗುವುದಿಲ್ಲವಾಗಿ ಜವಾಬು ಹೇಳಿದ್ದರಿಂದ ಸದರಿ ಮೆಂಬರು ಪ್ರೆಸಿಡೆಂಟರಿಂದ ಅಪ್ಪಣೆ ಪಡೆದು ಹೋಗಿದ್ದುದೂ ರಿಕಾರ್ಡು ಮಾಡಬೇಕಾಗಿ ಕೇಳಿಕೊಂಡದ್ದರಿಂದ ಹಾಗೆಯೇ ಮಾಡಲ್ಪಟ್ಟಿತು. ಇಷ್ಟರಲ್ಲಿಯೇ ಪ್ರೆಸಿಡೆಂಟರವರು ಬೆಲ್ ಬಾರಿಸಿದರು. ಜವಾನರು ಓಡಿಬಂದರು. ನಿಮ್ಮನ್ನು ಅಲ್ಲವೆಂದು ಹೇಳಿದರು. ಇನ್ನೂ ಈ ವೈಸ್‌ಪ್ರೆಸಿಡೆಂಟರು ಮಾಡಿರತಕ್ಕ ಮನಸ್ವಿ ಕೆಲಸಗಳ ಸಬ್ಜೆಕ್ಟು ವಿಷಯವನ್ನು ಒಬ್ಬ ಕೌನ್ಸಿಲರ್ ಎದ್ದುನಿಂತು ಹೇಳುತ್ತಿರುವಾಗ್ಗೆ ಬರಹ ಮೂಲಕ ತಪ್ಸೀಲ್ ಬರೆದುಕೊಡಬೇಕೆಂದೂ, ಇನ್ನೊಂದು ಮೀಟಿಂಗಿಗೆ ವಿಚಾರಿಸುತ್ತೇವೆಂದೂ ಹೇಳಿ ಪ್ರೆಸಿಡೆಂಟರು ಅದನ್ನು ರಿಕಾರ್ಡು ಮಾಡಿದರು. ವೈಸ್‌ಪ್ರೆಸಿಡೆಂಟರನ್ನು ಪ್ರಜೆಗಳೇ ಚುನಾಯಿಸಿಕೊಳ್ಳಬಹುದೆಂಬ ಸರ್ಕಾರದ ಅಪ್ಪಣೆಯನ್ನು ಜಾರೀಲಿ ತಂದುಕೊಳ್ಳಲು ಹುಕುಂ ಆಗಬೇಕೆಂದು ಸರ್ಕಾರದವರನ್ನು ರೆಜಲ್ಯೂಷನ್ ಮೂಲಕ ಪ್ರಾರ್ಥಿಸಿ, 3-4 ತಿಂಗಳಾದರೂ ಯಾವ ಹುಕುಂ ಬಾರದೆ ಇರುವುದರಿಂದ ಪುನಃ ಆ ವಿಷಯವನ್ನು ಕುರಿತು ಡೆ|| ಕ|| ಸಾ|| ರವರ ಮೂಲಕವೂ ಮತ್ತು ಸೀದಾವೂ ಗೌರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂದೂ ಕೌನ್ಸಿಲರುಗಳೆಲ್ಲಾ ಏಕಾಭಿಪ್ರಾಯ ಪಟ್ಟದ್ದರಿಂದ ಅದರಂತೆ ರೆಜಲ್ಯೂಷನ್ ಮಾಡಲ್ಪಟ್ಟಿತು. ಈ ಸಬ್ಜೆಕ್ಟುಗಳು ಮೇಲ್ಕಂಡಂತೆ ಫೈಸಲ್ ಆಗಬೇಕಾದರೆ 2 ಘಂಟೆ ಹಿಡಿಯಿತು. ಕಳೆದ ಮೀಟಿಂಗಿನಲ್ಲಿ ಬಾಕಿಯಿದ್ದ ಬೇರೆ ಕೆಲವು ಸಬ್ಜೆಕ್ಟುಗಳಿಗಾಗಿ 2 ಘಂಟೆ ಹಿಡಿಯಿತು. ಅಂತು 4 ಘಂಟೆ ಮೀಟಿಂಗು ಆದದ್ದರಲ್ಲಿ ಸರ್ಕಾರದಿಂದ ನೇಮಣೂಕ ಮಾಡಲ್ಪಟ್ಟ ಪ್ರೆಸಿಡೆಂಟ್ ವೈಸ್‌ಪ್ರೆಸಿಡೆಂಟರುಗಳ ಅಧಿಕಾರದ ಆಟೋಪದಲ್ಲಿ ಪ್ರಜೋಪಯೋಗವಾದ ಮತು, [illegible] ಪ್ರಭುಗಳು ಕೊಡುವಲ್ಲಿ-ಕಳೆದ ಮಹಾಯುದ್ಧದೊಳಗೆ ಭರತಖಂಡದ ಸೈನಿಕರು ಅದ್ಭುತವಾಗಿ ಶತ್ರುಗಳಮೇಲೆ ಹೋರಾಡಿ ಸಾಮ್ರಾಜ್ಯಕ್ಕೆ ವಿಜಯವನ್ನು ಸಂಪಾದಿಸಿಕೊಡುವುದರಲ್ಲಿ ಮದ್ರಾಸು ಕೂಡ ತುಂಬಾ ಸಹಾಯ ಮಾಡಿದುದನ್ನು ಅಭಿನಂದಿಸಿ, ಭರತಖಂಡದಲ್ಲಿ ನೂತನಾಭಿಪ್ರಾಯಗಳೂ ನೂತನ ಯುಗವೂ ಪ್ರಾರಂಭವಾಗಿರುವುವೆಂದೂ, ಭಾರತೀಯರ ಈ ಆಶಯಗಳಮೇಲೆ ನಮಗೂ ಆಂಗ್ಲಪ್ರಜೆಗಳಿಗೂ ಸಂಪೂರ್ಣ ಸಾನುಭೂತಿಯಿರುವುದೆಂದೂ, ತ್ರಿಕರಣಶುದ್ಧಿಯಿಂದ ನಾನು ಹೇಳುವುದನ್ನು ನೀವು ನಂಬಬೇಕೆಂದೂ, ಸಕಲ ವಿಧದಿಂದಲೂ ನಿಮ್ಮ ಅಭೀಷ್ಟವನ್ನು ನೆರವೇರಿಸಲು ನಾವು ಸಿದ್ಧರಾಗಿರುವೆವೆಂದೂ, ಆಶ್ವಾಸನ ಕೊಟ್ಟುದಲ್ಲದೆ ಕಳೆದುಹೋದ ವಿಷಯವನ್ನು ಮರೆತುಬಿಡಬೇಕೆಂದು ಪಂಜಾಬಿನ ವಿಷಯವನ್ನು ಕುರಿತು ಉತ್ತರ ಹೇಳಿದರು. ಮತ್ತು ಮರಳಿ ಇನ್ನೊಂದುಸಲ ನಾನು ಭರತಖಂಡಕ್ಕೆ ಬರುವ ಭಾಗ್ಯವು ಉಂಟಾದರೆ ನೀವು ಈಗ ಹೊಂದಿರುವ ನ್ಯೂನತೆಯೂ ಪರಿಭವವೂ ಮರೆತುಹೋಗುವಂತೆ ಮಾಡಿಸಲಿಕ್ಕೆ ಪ್ರಯೋಜನನ್ನು ಉಂಟುಮಾಡಿಸಿಕೊಡಲು ಯತ್ನಿಸುವೆನೆಂದೂ, ಸದ್ಯಃ ನೂತನ ಸಂಸ್ಕರಣ ಸಭೆಗಳನ್ನು ಆರಂಭಿಸಲಿಕ್ಕಾಗಿ ನಾನು ಸಾರ್ವಭೌಮರ ಅಪ್ಪಣೆ ಪ್ರಕಾರ ಇಲ್ಲಿಗೆ ಬಂದಿದ್ದೇನೆಂದೂ ನಾನು ಸ್ವದೇಶಕ್ಕೆ ತೆರಳಿದ ಬಳಿಕ ನಿಮ್ಮ ರಾಜಭಕ್ತಿಯನ್ನು ಚಕ್ರವರ್ತಿಯವರಿಗೆ ಶ್ರುತಪಡಿಸುತ್ತೇನೆಂದೂ ಅಪ್ಪಣೆಕೊಡಿಸಿ, ಭಾರತೀಯರ ನೂತನಾಶಯ ಪ್ರಾಬಲ್ಯವನ್ನು ಕುರಿತು ಆಂಗ್ಲ ಪ್ರಭುತ್ವದವರಿಗೆ ಸಾನುಭೂತಿಯಿರುವುದೆಂದೂ ಸಮುಚಿತವಾದ ರೀತಿಯಲ್ಲಿ ಅದನ್ನೀಡೇರಿಸಿಕೊಡುವಲ್ಲಿ ಅವರು ಹಿಂದೆಗೆಯುವವರಾಗಿಲ್ಲವೆಂದೂ ಸಂಕ್ಷೇಪವಾಗಿ ಅಪ್ಪಣೆ ಕೊಡಿಸಿದರು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ ಎಂಬ ಮರ್ಮದ ಚೀಲವು.

ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು, ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು, ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವವು. ಗಂಡಸಂದು ಚೀಲ 1ಕ್ಕೆ 1-0-0. ಹೆಂಗಸರದು ಚೀಲ 1ಕ್ಕೆ 2-8-0.

17

S. Paul & Co.,
Post Box No. 542,
Park Town, Madras.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 7

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಷ್ಟಕ್ಕಿಂತ ಕಡಿಮೆ ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗ್.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



17

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—0—0.

ರೈಲ್ವೆಲೀವರ್ ವಾಚ್.

5 ವರ್ಷ ಗ್ಯಾರಂಟಿ; 15 ಬಹುಮಾನಗಳು ಸಹಿತ 5—0—0

ಇದು ಒಳ್ಳೇ ಮಜಬೂತಾಗಿ ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ಇವು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೊವೋಟ್ಸ್‌ಗಳಿಂದ ಮಾಡಿ ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಂದನ್ನು ತರಿಸಿ ನೋಡಿರಿ. ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.—ತುರಾಯಿ 1, ಶಾವಂತಿಗೆ ರುಹುಮ್ವು 1, ಸೆಂಟ್‌ಬಾಟಲ್ 1, ದಂತದ ಬಾಚಣಿಗೆ 1, ಸರಪಣಿ 1, ಉತ್ತಮ ಕಮುಖ 1, ದಂತದ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು ೪, ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಉಂಗುರ 1, ರಾಗಮಾಲಿಕೆ 1. ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 5-0-0.



Elgin Watch Co.,
89 Narayana Mudaly Street, Madras.

ಫಲಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 15

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆ ಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಕೈಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸಕೀಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ, ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0. 17

S. R. Krishna & Co.,
89, Narayana Mudaly Street, Madras.

೧೯೨೧ನೆಯ ಇಸವಿ ಜನವರಿ ತಾ|| ೧೬ರಿಂದ ೧೯೨೧ ನೆಯ ಜನವರಿ ತಾ|| ೨೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಪುಷ್ಯಶುದ್ಧ ಸಪ್ತಮಿಯಿಂದ ಪುಷ್ಯಶುದ್ಧ ತ್ರಯೋದಶಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ಮಾಸ
16	ಭಾನು	ಸಪ್ತ	30-36	ರೇವ	42-53	4
17	ಸೋಮ	ಅಷ್ಟ	29-16	ಅಶ್ವಿ	42-51	5
18	ಮಂಗಳ	ನವ	26-46	ಭರ	41-43	6
19	ಬುಧ	ದಶ	23-18	ಕೃತ್ತಿ	39-35	7
20	¹ಗುರು	ಏಕಾ	18-54	ರೋಹಿ	36-40	8
21	²ಶುಕ್ರ	ದ್ವಾ	13-49	ಮೃಗ	33-2	9
22	ಶನಿ	ತ್ರಯೋ	8-21	ಆರ್ದ್ರಾ	29-4	10

(1) ಸರ್ವತ್ರೈಕಾದಶಿ. (2) ಪ್ರದೋಷ, ಮೂಗೊರು ಹೊಡೆ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಷೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪತ್ರಜ್ಞನಕ್ಷತ್ರ ನೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಪಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿತಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M.

ಸಂಪುಟ ೩೮) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಜನವರಿ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೪

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೆಡಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ಮರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0,

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

3

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾನ್ವಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಶ್ರುತಿಮುಕ್ತಾವಳಿ ೮ಆಣೆ; ರಕ್ಷಾಕವಚ ೨ಆಣೆ; ಶಂಕರಲಿಂಗಕಂದ ೦೧ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಚಾರುಶೀಲಚಂದ್ರ	೦—೯—೦
[illegible]	೦—೪—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋವೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೋಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟ್ ವಾಚು.

ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

43 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

43

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾ ದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
೩. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 48

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ, ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದ್ದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

18

ವೈದ್ಯವಿದ್ಯ

ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ವಿಳಾಸ:—ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 8

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಷ್ಟಕ್ಕಿಂತ ಕಡಿಮೆ ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು
ಪಾಠಶಾಲಾ ಮಹಾಗಾಂವ್, ಜಿಲ್ಲಾ

ಮೈಸೂರು ಸ್ಟಾರ್

೨೧ನೆ ಇಸವಿಯ ಜನವರಿ ತಾ|| ೨೩ ನೆಯ ಭಾನುವಾರ.

ಜನಪರಿಗಣತಿ ಮತ್ತು ವೀರಶೈವರು.,

೧೦ ವರ್ಷಕ್ಕೊಂದುಸಲ ನಡೆಯುವ ಜನಪರಿಗಣತಿಯ ಕೆಲಸವು ಈಗ ನಡೆಯಲಿಕ್ಕಿದೆ. ಅದಕ್ಕೆ ಸಂಬಂಧಪಟ್ಟ ತಿಳಿವಿಕೆಗಳನ್ನು ಕೊಡುವ ಪ್ರಕಟನಪತ್ರಗಳು ಸರ್ಕಾರದಿಂದ ಹಂಚಲ್ಪಟ್ಟಿವೆ. ಲೆಕ್ಕಗಳನ್ನು ಬರೆದುಕೊಳ್ಳುವ ಇನ್ಯೂಮರೇಟರುಗಳೂ, ಅವರ ಮೇಲಿನ ವಿಚಾರಣಕರ್ತರಾದ ಸೂಪರ್ವೈಜರುಗಳೂ, ಅವರ ಮೇಲಣ ಅಧಿಕಾರಿಗಳೂ, ಅನುಸರಿಸಬೇಕಾದ ನಿಯಮಗಳೆಲ್ಲಾ ಇವುಗಳಲ್ಲಿ ವಿವರಿಸಲ್ಪಟ್ಟಿವೆ. ಪ್ರಜಾಸಂಖ್ಯೆಯಲ್ಲಿ ಗಂಡೆಷ್ಟು, ಹೆಣ್ಣೆಷ್ಟು, ಮಕ್ಕಳೆಷ್ಟು, ಮದುವೆಯಾದವರೆಷ್ಟು, ಓದುಬರಹ ಬಲ್ಲವರೆಷ್ಟು, ಬರದಿದ್ದವರೆಷ್ಟು ಇತ್ಯಾದಿ ವಿವರಣಗಳನ್ನು ತಿಳಿಯಬೇಕೆಂಬುದು ಜನಪರಿಗಣತಿಯ ಉದ್ದೇಶವೇ ಹೊರತು, ಬೇರೆಬೇರೆ ಮತಜಾತಿಗಳ ಅಥವಾ ಕುಟುಂಬಗಳ ಪರಸ್ಪರ ಶ್ರೇಷ್ಠತ್ವ ಕನಿಷ್ಠತ್ವಗಳನ್ನು ತಿಳಿಯಬೇಕೆಂಬುದು ಇದರ ಉದ್ದೇಶವಲ್ಲ. ಅದುಕಾರಣ ಸಕಲ ಪ್ರಜೆಗಳೂ ತಮ್ಮತಮ್ಮ ವಿಷಯಗಳನ್ನು ಕರಾರ್ವಾಕಾ ಹೇಳಿ ಬರೆಯಿಸುವುದರಲ್ಲಿ ಸಂಕೋಚಪಡಬೇಕಾದುದಿಲ್ಲವೆಂದು ಸರ್ಕಾರದವರು ಇದರಲ್ಲಿ ತಿಳಿಯಪಡಿಸಿದ್ದಾರೆ. ಇದು ಒಪ್ಪತಕ್ಕದ್ದೇ ಸರಿ. ಈ ಲೆಕ್ಕಗಳಿಂದ ಸರ್ಕಾರದವರಿಗೆ ಮಾತ್ರವೇ ಪ್ರಯೋಜನವೆಂದು ತಿಳಿಯಬಾರದು. ಪ್ರತಿಯೊಬ್ಬ ಪ್ರಜೆಗೂ ಇದರಿಂದ ಲಾಭವುಂಟು. ಪ್ರತಿಯೊಂದು ಜನವರ್ಗವೂ ೧೦-೧೦ ವರ್ಷಕ್ಕೆ ತಾವು ಸಂಖ್ಯೆಯಲ್ಲೂ ವಿದ್ಯೆ ಮೊದಲಾದುವುಗಳಲ್ಲೂ ಹೀನಸ್ಥಿತಿಗೆ ಬಂದಿದ್ದೇವೆಯೆ? ಅಭಿವೃದ್ಧಿಮುಖವಾಗಿದ್ದೇವೆಯೆ? ಎಂಬ ಸಂಗತಿಗಳನ್ನೆಲ್ಲಾ ಇದರಿಂದ ತಿಳಿದುಕೊಂಡು ಮುಂದೆ ಅನುಸರಿಸಬೇಕಾದ ಪ್ರಯತ್ನಗಳಲ್ಲಿ ತವಕಗೊಳ್ಳಬಹುದು. ಸರ್ಕಾರದವರೇ ಇಂಥ ಕೆಲಸವನ್ನು ಮಾಡಿಸಬಲ್ಲರಲ್ಲದೆ ಪ್ರಜೆಗಳೇ ಸ್ವತಂತ್ರವಾಗಿ ನಡೆಯಿಸಿಕೊಳ್ಳುವುದು ಸುಲಭವಲ್ಲ. ಅದುಕಾರಣ ಈ ಜನಪರಿಗಣತಿಯ ಕಾರ್ಯದಲ್ಲಿ ಸರ್ಕಾರಿ ಪಕ್ಷದ ಇನ್ಯೂಮರೇಟರುಗಳು ಮನೆಮನೆಗೆ ಬಂದು ಅವಶ್ಯಕಗಳಾದ ಯಾವ ಪ್ರಶ್ನೆಗಳನ್ನು ಮಾಡುವರೋ ಅದಕ್ಕೆ ತಕ್ಕ ನಿಜವಾದ ಸ್ಥಿತಿಗಳನ್ನು ಉತ್ತರರೂಪವಾಗಿ ತಿಳಿಯಿಸಿ ಪ್ರತಿಯೊಬ್ಬ ಪ್ರಜೆಯೂ ಬರೆಯಿಸುವುದರಲ್ಲಿ ಹಿಂದೆಗೆಯಬಾರದು.

ನಮ್ಮ ದೇಶದಲ್ಲಿ ಈ ಜನಪರಿಗಣತಿಯ ಏರ್ಪಾಟು ಹುಟ್ಟಿ ಇಲ್ಲಿಗೆ ೪೦ ವರ್ಷಗಳು ತುಂಬಿಹೋದುವು. ನಾಲ್ಕುಸಲ ಇಂಥ ಪರಿಗಣತಿಯು ನಡೆದುಹೋಗಿ, ಈಗ ೫ನೆಯ ಸಲದ ಗಣತಿಯು ನಡೆಯುವುದರಲ್ಲಿರುವುದು. ಅದುಕಾರಣ ನಮ್ಮ ದೇಶೀಯರಿಗೆ ಇದು ಹೊಸದಾದ ವಿಷಯವೇನೂ ಅಲ್ಲ.

ಈ ಸಲದ ಲೆಕ್ಕದ ಫಾರಮುಗಳಲ್ಲಿ ಇನ್ಯೂಮರೇಟರುಗಳು ಕೇಳಿ ಭರ್ತಿಮಾಡಬೇಕಾದ ಕಲಮುಗಳು ೧೬ ಇರುತ್ತವೆ. ಇವುಗಳಲ್ಲಿ ೪ನೆ ನಿಬಂಧನೆ ೪ನೆ ಕಲಮ್ಮಿನಲ್ಲಿ ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್, ಜೈನ್, ಪಾರ್ಸಿ ಮೊದಲಾದ ಮತಗಳ ಹೆಸರನ್ನು ಬರೆಯಿಸಬೇಕೆಂದೂ, ೮ನೆ ನಿಬಂಧನೆ ೮ನೆ ಕಲಮ್ಮಿನಲ್ಲಿ ಜಾತಿ ಮತ್ತು ಒಳಭೇದಗಳನ್ನು ಎಂದರೆ ಇದರ (a) ಸಬ್‌ಕಲಮ್ಮಿನಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ನಗರ್ತ, ಲಿಂಗಾಯತ, ಒಕ್ಕಲಿಗ, ಪಾಂಚಾಲ, ಇತ್ಯಾದಿಯಾಗಿಯೂ, (b) ಸಬ್‌ಕಲಮ್ಮಿನಲ್ಲಿ ಅವರವರ ಒಳಭೇದಗಳು ಏನನ್ನು ಹೇಳುತ್ತಾರೋ ಅವನ್ನು ಬರೆಯಬೇಕೆಂದು ತಿಳಿಯಿಸಲ್ಪಟ್ಟಿದೆ.

ಇದರ ಮೇಲೆ ಆಕ್ಷೇಪಕ ಕೆಲಪತ್ರಗಳು ನಮ್ಮಲ್ಲಿಗೆ ಬಂದಿವೆ. ಅವಕ್ಕೆಲ್ಲಾ ಉತ್ತರವಾಗಿ ನಾವು ಈ ಲೇಖನವನ್ನು ಬರೆಯಬೇಕಾಯಿತು.

ವೀರಶೈವರಿಗೆ ಲಿಂಗಧಾರಿಗಳು, ಶಿವಭಕ್ತರು, ಶಿವಾಚಾರದವರು, ವೀರಶೈವರು ಎಂಬ ಹೆಸರುಗಳು ಸಂಪ್ರದಾಯ ಸಿದ್ಧಗಳಾದ ಮತದ ಹೆಸರುಗಳು. ಲಿಂಗಾಯತ ಎಂಬುದು ಮಹಮ್ಮದೀಯರ ಪ್ರಭುತ್ವದಲ್ಲಿ ರೂಢಿಗೆ ಬಂದಿರಬೇಕು. ವೀರಶೈವರ ಯಾವ ಪ್ರಾಚೀನ ಗ್ರಂಥದಲ್ಲೂ ಈ ಹೆಸರು ಅವರಿಗೆ ಉಪಯೋಗಿಸಲ್ಪಟ್ಟಿಲ್ಲ. ಅದರ ಮಾತು ಹಾಗಿರಲಿ. ವೀರಶೈವ ಅಥವಾ ಲಿಂಗಧಾರಿಯೆಂದು ಹೇಳಿಸಿಕೊಳ್ಳುವವರೆಲ್ಲಾ ಒಂದು ಮತದವರೇ ಹೊರತು ಒಂದು ಜಾತಿಯವರಲ್ಲ. ವೀರಶೈವವು ಹಿಂದುಗಳಲ್ಲಿ ವೇದಾಗಮ ಸಂಮತವಾದ ಒಂದು ಸ್ವತಂತ್ರಮತವಾಗಿರುತ್ತ, ಇದರಲ್ಲಿ ಬ್ರಾಹ್ಮಣಾದಿ ಚತುರ್ವರ್ಣಗಳೂ ಇರುತ್ತವೆ. ಇದೆಲ್ಲಾ ಒಂದು ಜಾತಿಯಲ್ಲವೆಂಬುದು ಪ್ರತ್ಯಕ್ಷವಾಗಿ ನೋಡುವವರಿಗೆಲ್ಲಾ ಗೊತ್ತಾಗದೆ ಹೋಗುವುದಿಲ್ಲ. ಹೀಗಿರುವಾಗ ಜಾತಿಯ ಕಲಮ್ಮಿನಲ್ಲಿ ಲಿಂಗಾಯತ ಎಂಬ ಒಂದು ಹೆಸರನ್ನೇ ಬರೆಯಿಸಬೇಕೆಂದು ಸರ್ಕಾರದವರು ತಿಳಿವಿಕೆ ಕೊಟ್ಟಿರುವುದು ತಪ್ಪಾಗಿರುತ್ತದೆ. ಇದೇ ತೆರದ ಏರ್ಪಾಟು ಕಳೆದ ೧೯೧೧ ನೆ ವರ್ಷದ ಜನಪರಿಗಣತಿಯ ಕಾಲದಲ್ಲೂ ಮಾಡಲ್ಪಟ್ಟಿದ್ದುದರ ಮೇಲೆ ಮತದಜನರು ಸರ್ಕಾರಕ್ಕೆ ಬಿನ್ನೈಸಿಕೊಳ್ಳಲು, ಅದನ್ನು ಗೌರ್ನಮೆಂಟಿನವರು ವಿಚಾರಮಾಡಿ, ಯುಕ್ತವೆಂದು ಅಂಗೀಕರಿಸಿ, ಈ ಕೆಳಗೆ ಕಾಣಿಸಿರುವ ಅಪ್ಪಣೆಯನ್ನು ಕೊಟ್ಟರು :—

PROCEEDINGS OF THE GOVERNMENT OF H. H. THE MAHARAJA OF MYSORE.

No. Fb. 3961 Census 31-10 Dated 25th January 1911.

[illegible]rnment consider that there is no [illegible] allowing the Lingayets to return themselves as Hindus by religion in col. 3 of the schedule and Lingadhari or Veerasaiva Brahmin, Lingadhari or Veerasaiva Kshatria etc. as the case may be by caste in col. 7 *(a)* provided they give the names of the sub-castes as ordinarily known such as Aradhya, Gurusthala, Punchachara Gowda etc. for entry in col. 7 (*b*), provided for the purpose and provided also that such answers are "to the best of the knowledge or belief" (Sec. 7 of the Census Regulation) of the person giving the answers.

ಇದರ ಅಭಿಪ್ರಾಯವೇನೆಂದರೆ-ಲಿಂಗಾಯತರು ಷೆಡ್ಯೂಲಿನ ೩ನೆ ಕಲಮ್ಮಿನಲ್ಲಿ ಹಿಂದೂಮತದವರೆಂದೂ, (a) ಕಲಮ್ಮಿನಲ್ಲಿ ಲಿಂಗಧಾರಿ ಅಥವಾ ವೀರಶೈವಬ್ರಾಹ್ಮಣ, ಲಿಂಗಧಾರಿ, ಅಥವಾ ವೀರಶೈವಕ್ಷತ್ರಿಯ ಇತ್ಯಾದಿ ಜಾತಿಯವರೆಂದೂ, (b) ಕಲಮ್ಮಿನಲ್ಲಿ ಸಾಧಾರಣವಾಗಿ ಪ್ರಚಾರದಲ್ಲಿರುವ ಆರಾಧ್ಯ, ಗುರುಸ್ಥಲ, ಪಂಚಾಚಾರಗೌಡ, ಎಂಬುದು ಮೊದಲಾದ ಒಳಭೇದದವರೆಂದೂ ಬರೆಯಿಸುವುದರಲ್ಲಿ ಸರ್ಕಾರದವರ ಆಕ್ಷೇಪವೇನೂ ಇಲ್ಲ'' ಎಂಬುದಾಗಿದೆ. ಈ ಪ್ರೊಸೀಡಿಂಗ್ಸಿನಂತೆ ಈ ಸಲವೂ ಸೆನ್ಸಸ್ ಸೂಪರಿಂಟೆಂಡೆಂಟರು ಪ್ರಕಟಿಸಿ, ಕಲಂ ೪ ರಲ್ಲಿ ಹಿಂದೂಮತದವರೆಂದೂ, ಕಲಂ ೮ ನೆ (a) ಸಬ್‌ಕಲಮ್ಮಿನಲ್ಲಿ ಲಿಂಗಧಾರಿ ಬ್ರಾಹ್ಮಣ, ಲಿಂಗಧಾರಿ ಕ್ಷತ್ರಿಯಾದಿ ನಾಮಗಳನ್ನೂ, (b) ಸಬ್‌ಕಲಮ್ಮಿನಲ್ಲಿ ಅವರವರ ಒಳಬೆಡಗುಗಳ ಹೆಸರನ್ನೂ ಕೇಳಿ ಬರೆದುಕೊಳ್ಳಬಹುದೆಂದು ಇನ್ಯೂಮರೇಟರಿಗೆ ತಿಳಿವಿಕೆ ಕೊಡಬಹುದಾಗಿದೆ. ಮತ್ತು ವೀರಶೈವ ಪ್ರಜೆಗಳೂ ಸಹ ಈ ಪ್ರೊಸೀಡಿಂಗ್ಸಿನ ಆಧಾರವನ್ನು ತೋರಿಸಿ, ಸೂಪರಿಂಟೆಂಡೆಂಟರಿಗೆ ವಿಜ್ಞಾಪಿಸಿಕೊಂಡು ತಮ್ಮ ಮತ ಜಾತಿಗಳ ಮತ್ತು ಒಳಭೇದಗಳ ಹೆಸರುಗಳನ್ನು ಬರೆಯಿಸಿಕೊಳ್ಳುವಲ್ಲಿ ಸಂಶಯಪಡಬೇಕಾದುದಿಲ್ಲ.

ಒಳದೇಶದ ವೃತ್ತಾಂತಗಳು.

ತಾ|| ೧೯ ರಲ್ಲಿ ಶ್ರೀಮನ್ಮಹಾರಾಜರವರು ಗೋಪಾಲಸ್ವಾಮಿ ಬೆಟ್ಟಕ್ಕೆ ಹೋಗಿದ್ದು ಬಂದರು.

ದಿವಾನರು ಕಳೆದ ತಾ|| ೧೭ ರಲ್ಲಿ ತುಮಕೂರು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಸಂಚಾರಕ್ಕಾಗಿ ಬೆಂಗಳೂರಿಂದ ದಯಮಾಡಿಸಿರುವರು.

ಮೂರನೆ ಕೌನ್ಸಿಲರಾದ ಮಿ|| ಮಿರ್ ಹಂಜಾಹುಸೇನ್ ಸಾಹೇಬರವರು ಶಿವಮೊಗ್ಗಾ, ಕಡೂರು, ಹಾಸನ ಡಿಸ್ಟ್ರಿಕ್ಟುಗಳಿಗೆ ಸಂಚಾರಕ್ಕೆ ತೆರಳುವರು.

ವಿದ್ಯಾಭ್ಯಾಸ ಶಾಖಾಧ್ಯಕ್ಷರಾಗಿರುವ ಮ|| ರಾಮಲಿಂಗರೆಡ್ಡಿ ಎಂ. ಎ. ಯವರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೇಜ್ ರಜವು ಈ ತಿಂಗಳ ಕಡೆಯ ವರೆಗೂ ಹೆಚ್ಚಿಸಲ್ಪಟ್ಟಿದೆ.

ಸರ್ ಎಂ. ವಿಶ್ವೇಶ್ವರಯ್ಯನವರು ಬೆಂಗಳೂರಿಂದ ಬೊಂಬಾಯಿಗೆ ದಯಮಾಡಿಸಿದರು. ಇನ್ನು ಕೆಲವು ತಿಂಗಳುಗಳವರೆಗೆ ಅವರು ಅಲ್ಲೇ ಇರುವರೆಂದು ಕೇಳುತ್ತೇವೆ.

ರಜಾದಮೇಲೆ ಹೋಗಿದ್ದ ಮಿ|| ಸಿ. ಎಫ್. ಬೌರಿಂಗ್ ಸಾಹೇಬರು ತಾ|| ೨೧ ರಲ್ಲಿ ಮೈಸೂರು ಡೆ|| ಕಮಿಷನರುದ್ಯೋಗವನ್ನು ಮಿ|| ಆರ್. ನಾನಾಸಾಮಿರಾಯರಿಂದ ವಹಿಸಿಕೊಂಡರು.

ನಂಜನಗೂಡಿನಲ್ಲಿ ನದೀತೀರದಲ್ಲಿರುವ ಲಿಂಗಾಭಟ್ಟರ ಗುಡಿಯ ಬಳಿಯಿರು ತೋಪಿನಲ್ಲಿ ಇಂದಿನಿಂದ ಪ್ರತಿಭಾನುವಾರವೂ ಸಂತೆ ಕೂಡುವಂತೆ ಅಲ್ಲಿಯ ಮ್ಯುನಿಸಿಪಾಲಿಟಿಯವರು ಏರ್ಪಡಿಸಿರುತ್ತಾರೆ.

ಕರ್ನಲ್ ದೇಶರಾಜ ಅರಸರವರ ಕುಮಾರರಾದ ರಾಜಕುಮಾರ ಸಿ. ದೇಶರಾಜೇ ಅರಸಿನವರು ನಮ್ಮ ದೇಶದ ಇಂಪೀರಿಯಲ್ ಲ್ಯಾನ್ಸರ್ಸ್ ಸೈನ್ಯದ ಆನರರಿ ಲೆಫ್ಟಿನೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಮಲ್ಲೇಶ್ವರದಲ್ಲಿರುವ ಮಹಾರಾಜಾ ಬಟ್ಟೆಯ ಕಾರ್ಖಾಲಯದ ೧೫೦ ಕೂಲಿಕಾರರು ಕೂಲಿಯನ್ನು ಹೆಚ್ಚಿಸಿದ ಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಹಿಡಿದು ನಿಂತುಬಿಟ್ಟಿದ್ದಾರೆ.

ಬಳಗೊಳದ ಮಾರ್ಗದ ಪಕ್ಕದಲ್ಲಿ ದ್ವಿತೀಯ ರಾಜಕುಮಾರಿಯವರ ಹೆಸರಿನ ಮೇಲೆ ಕಟ್ಟಲ್ಪಟ್ಟಿರುವ ಕ್ಷಯರೋಗದ ವೈದ್ಯಾಲಯದಲ್ಲಿ ಬರುವ ಮಾರ್ಚಿ ತಿಂಗಳಿಂದ ಚಿಕಿತ್ಸಾರಂಭವಾಗುವುದೆಂದು ತಿಳಿಯುತ್ತೇವೆ.

ಈ ಸಲದ ಚುಂಚನಕಟ್ಟೆ ಜಾತ್ರೆಗೆ ಪದ್ಧತಿಯಂತೆ ದನಗಳು ವಿಶೇಷವಾಗಿಯೇ ಬಂದಿದ್ದುವು. ಆದರೆ ಉತ್ತರದೇಶದ ಗಿರಾಕಿಗಳು ಹೆಚ್ಚಾಗಿ ಬರಲಿಲ್ಲವೆಂದೂ, ದನದ ಬೆಲೆಯು ಹೆಚ್ಚಿರಲಿಲ್ಲವೆಂದೂ ಕೇಳಿದೆವು.

ಚೀಫ್ ಸೆಕ್ರೆಟರಿ ಮಿ|| ಬಾಲಸುಂದರಂ ಅಯ್ಯರ್‌ರವರು ಈ ತಾ|| ೨೪ ರಿಂದ ೩ ತಿಂಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿರುವುದರಿಂದ ಮಿ|| ಕೆ. ಮೆಥಾರ್‌ರವರು ಮಿ|| ಅಯ್ಯರ್‌ರವರು ಬರುವವರೆಗೆ ಚೀಫ್ ಸೆಕ್ರೆಟರಿಯವರಾಗಿರುವರೆಂದು ವದಂತಿಯಿದೆ.

ಬ್ರಿಟಿಷ್ ರೆಸಿಡೆಂಟರು ನಿನ್ನೆಸಲ ಕೊಡಗಿಗೆ ದಯಮಾಡಿಸಿದ್ದಾಗ್ಗೆ ತಮ್ಮನ್ನು ಕಾಣುವುದಕ್ಕೆ ಬಂದಿದ್ದ ಅಲ್ಲಿಯ ಪ್ರಮುಖರೊಡನೆ ನಿಮ್ಮ ಸೀಮೆಗೆ ಒಂದು ಪ್ರತ್ಯೇಕ ಶಾಸನ ನಿರ್ಮಾಣ ಸಭೆಯನ್ನು ಕೊಡಲು ಅಪ್ಪಣೆಯಾಗಿದೆಯೆಂದೂ ಅದರಲ್ಲಿ ಪ್ರಜಾನಿಯುಕ್ತ ಸಭಿಕರ ಸಂಖ್ಯೆಯೇ ಹೆಚ್ಚಾಗಿರುವುದೆಂದೂ ತಿಳಿಯಿಸಿರುವರೆಂದು ಅರಿಯುತ್ತೇವೆ.

ಧಾರವಾಡದಿಂದ ಹೊರಡುತ್ತಿದ್ದ ಶುಭೋದಯವೆಂಬ ವಾರಪತ್ರಿಕೆಯ ಸಂಪಾದಕರಾಗಿದ್ದ ಮ|| ವಾಸುದೇವಾಚಾರ್ಯ ಕೆರೂರು ಎಂಬುವರು ಮಧುಮೇಹರೋಗದಿಂದ ರಾಜವ್ರಣವನ್ನು ಹೊಂದಿದ್ದು ಕಳೆದ ತಾ|| ೧೧ ರಲ್ಲಿ ಬಾಗಲಕೋಟೆಯಲ್ಲಿ ವೈಕುಂಠವಾಸಿಗಳಾದರೆಂದು ಕೇಳುತ್ತೇವೆ. ಇವರ ವಿಷಯವು ನಮ್ಮ ಪತ್ರಿಕಾ ವಾಚಕರಿಗೆಲ್ಲಾ ಗೊತ್ತೇ ಇದೆ.

ರಾಜಧಾನಿಯ ವಿದ್ಯಾರ್ಥಿಗಳಲ್ಲಿ ೧೫೦ ಜನರಿಗೆ ಮೇಲ್ಪಟ್ಟು ಕಳೆದ ತಾ|| ೧೮ ರ ಸಾಯಂಕಾಲ ಚಾಮುಂಡಿ ರೇಸ್‌ಕೋರ್ಸಿನಲ್ಲಿ ಶ್ರೀಮನ್ಮಹಾರಾಜರವರ ದರ್ಶನವನ್ನು ತೆಗೆದುಕೊಂಡು ತಮ್ಮ ವಿದ್ಯಾಭ್ಯಾಸಂಗ ಮೊದಲಾದುದರಲ್ಲಿರುವ ಕೊರತೆಯ ಭಾಗಗಳನ್ನು ಬಿನ್ನೈಸಿಕೊಂಡುದರ ಮೇಲೆ ವಿಚಾರಿಸುವುದಾಗಿ ಮಹಾರಾಜರವರು ಅಪ್ಪಣೆ ಕೊಡಿಸಿದರೆಂದು ತಿಳಿಯಬರುತ್ತದೆ.

ನಾಗಪುರದಲ್ಲಿ ಕೂಡಿದ್ದ ನ್ಯಾಷನಲ್ ಕಾಂಗ್ರೆಸ್ಸಿಗೆ ದ್ವಾರಕೆಯ ಶಾರದಾಪೀಠದ ಸ್ವಾಮಿಗಳು ಹೋಗಿದ್ದರು. ಅವರು ಮೈಸೂರಿನ ಶೃಂಗೇರಿ ಶಾರದಾ ಪೀಠಕ್ಕೆ ಸ್ವಾಮಿಗಳನ್ನು ಏರ್ಪಡಿಸಲಿಕ್ಕೆ ಮೈಸೂರು ಪ್ರಭುತ್ವದವರಿಗಿದ್ದ ಸ್ವಾತಂತ್ರ್ಯಕ್ಕೆ ಇಂಡ್ಯಾ ಗೌರ್ನಮೆಂಟಿನವರು ತಡೆಯನ್ನು ಮಾಡಿದ್ದರೆಂದು ಉಪನ್ಯಾಸಮಾಡಿದ್ದರು. ಅದು ಸುಳ್ಳೆಂದು ನಮ್ಮ ಸರ್ಕಾರದವರು ಪ್ರಕಟಿಸಿದ್ದಾರೆ

ಈ ಕೆಳಗೆ ಕಂಡಂತೆ ಪೊಲೀಸ್ ಸೂಪರಿಂಟೆಂಡೆಂಟರುಗಳ ವರ್ಗಾವರ್ಗಿಯಾಗಿದೆ. ಮ|| ಗಳಾದ ಸಿ. ಮಾಚಯ್ಯನವರು ಮೈಸೂರು ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ. ಶ್ರೀನರಸಿಂಹಶಾಸ್ತ್ರಿಗಳು ತುಮಕೂರು ಡಿಸ್ಟ್ರಿಕ್ಟಿನಿಂದ ಮೈಸೂರು ಡಿಸ್ಟ್ರಿಕ್ಟಿಗೆ. ಟಿ. ಅಬ್ದುಲ್‌ಖಾದರ್‌ರವರು ಬೆಂಗಳೂರು ಡಿಸ್ಟ್ರಿಕ್ಟಿನಿಂದ ತುಮಕೂರು ಡಿಸ್ಟ್ರಿಕ್ಟಿಗೆ.

ಚಳ್ಳಕೆರೆಯಲ್ಲಿರುವ ವೀರಶೈವ ಶ್ರೀಮಂತರಾದ ಮ|| ನನ್ನಿವಾಳದ ಶಿವಪ್ಪನವರು ವೀರಶೈವ ವಿದ್ಯಾರ್ಥಿಗಳಿಗೆ ಭವನವನ್ನೂ ಅಶನಾನುಕೂಲವನ್ನೂ ಪ್ರತಿಷ್ಠಿಸುವುದಕ್ಕಾಗಿ ೨೫ ಸಾವಿರ ರೂಪಾಯಿಗಳನ್ನು ವಾಗ್ದಾನ ಮಾಡಿರುವರೆಂಬುದನ್ನು ಕೇಳಿ ಅವರ ಔದಾರ್ಯಕ್ಕೂ ಮತಾಭಿಮಾನಕ್ಕೂ ಧನ್ಯವಾದವನ್ನು ಮಾಡುವುದಲ್ಲದೆ ಜಗದೀಶ್ವರನು ಅವರಿಗೆ ಇನ್ನೂ ಉತ್ತರೋತ್ತರ ಶ್ರೇಯಸ್ಸನ್ನುಂಟುಮಾಡಲೆಂದು ಕೋರುತ್ತೇವೆ.

ರಾ|| ಬ|| ಅಣ್ಣಾಮಲೆ ಚೆಟ್ಟಿಯಾರ್ ಎಂಬುವರು ದಿಲ್ಲಿಯಲ್ಲಿ ಮುಂದಣ ತಿಂಗಳೊಳಗೆ ಕೂಡಲಿಕ್ಕಿರುವ ಸ್ಟೇಟ್‌ಕೌನ್ಸಿಲಿನಲ್ಲಿ ಕೆಲವು ತೀರ್ಮಾನಗಳನ್ನು ಚರ್ಚೆಗೆ ತರುವುದರಲ್ಲಿದ್ದಾರೆ. ಅದರೊಳಗೆ ಮೈಸೂರು ಕೃಷ್ಣರಾಜಸಾಗರದ ವಿಷಯದಲ್ಲಿ ತಂಜಾವೂರು ತಿರುಚನಾಪಲ್ಲಿಗಳಲ್ಲಿರುವ ಭೂಸ್ವಾಮಿಗಳ ಪ್ರತಿನಿಧಿಗಳಿಗೆ ಸಂಗತಿಸಂದರ್ಭಗಳೊಂದನ್ನೂ ತಿಳಿಯಪಡಿಸದೆ ಯಾವ ನಿರ್ಧಾರವನ್ನೂ ಕೊನೆ ಮುಟ್ಟಿಸಕೂಡದು ಎಂದು ವೈಸ್ರಾಯರಿಗೆ ಶ್ರುತಪಡಿಸುವ ವಿಷಯವೂ ಒಂದಾಗಿರುತ್ತದೆ.

ಚೀನಿ ಪಾತ್ರೆಗಳನ್ನೂ ಪೈಪುಗಳನ್ನೂ ಮಾಡುವುದಕ್ಕೆ ಅನುಕೂಲಿಸುವುದೆಂದು ಶಾಸ್ತ್ರಜ್ಞರಿಂದ ಗೊತ್ತುಮಾಡಲ್ಪಟ್ಟಿರುವ ಜೇಡಿಮಣ್ಣುಳ್ಳ ಪ್ರದೇಶವು ಬೆಂಗಳೂರಿಗೆ ಸಮೀಪದಲ್ಲಿದೆಯಂತೆ. ಖಾಸಗಿ ಜನರೇ ಆಗಲಿ ಅಥವಾ ಮೈಸೂರು ದೇಶೀಯರಿಂದ ಷೇರುಗಳಿಂದಲೇ ನಿರ್ಮಿಸಲ್ಪಡುವ ಜಾಯಿಂಟ್ ಸ್ಟಾಕ್ ಕಂಪೆನಿಯವರೇ ಆಗಲಿ ಇದರ ಕೈಗಾರಿಕೆಯನ್ನು ಈ ಸಂಸ್ಥಾನದಲ್ಲಿ ನಡೆಯಿಸಲು ಪ್ರಯತ್ನಿಸಿದರೆ ಅಂಥವರಿಗೆ ೫ ವರ್ಷಗಳ ವರೆಗೆ ರಾಜಾದಾಯವನ್ನು ಕೋರದೆ ಉಚಿತವಾಗಿ ಜೇಡಿಮಣ್ಣನ್ನು ತೆಗೆದುಕೊಳ್ಳಲು ಸಂಪೂರ್ಣಾಧಿಕಾರವನ್ನು ಕೊಡುವವರಾಗಿದ್ದಾರೆ. ಇಷ್ಟಪಟ್ಟವರು ಸಂಸ್ಥಾನದ ಕೈಗಾರಿಕೆ ಮತ್ತು ವ್ಯಾಪಾರ ಶಾಖೆಯ ಡೈರೆಕ್ಟರಿಗೆ ಫೆಬ್ರವರಿ ತಿಂಗಳ ಕಡೆಯೊಳಗಾಗಿ ಬರೆದುಕೊಳ್ಳಬಹುದು.

ಮೈಸೂರು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುಗಳಾದ ಮುದ್ದೂರಿನ ಮ|| ಎಂ. ಸಿ. ಲಿಂಗೇಗೌಡರು ಮಳವಳ್ಳಿಯ ಎಂ. ಚನ್ನಪ್ಪನವರು ಮತ್ತು ಕೆಲ ದೊಡ್ಡಮನುಷ್ಯರುಗಳು ಕೊಳ್ಳೇಗಾಲದ ಕೆಲ ದೊಡ್ಡಮನುಷ್ಯರುಗಳ ಸಹಕಾರದಿಂದ ದೊಡ್ಡಬಂಡವಾಳವನ್ನು ಹಾಕಿ ಮುದ್ದೂರಿನಿಂದ ಕೊಳ್ಳೇಗಾಲಕ್ಕೂ ಅಲ್ಲಿಂದಿಲ್ಲಿಗೂ ಪ್ರಯಾಣಿಕರು ಹೋಗಿಬರಲನುಕೂಲಿಸುವಂತೆ ಈಗ ೬-೭ ತಿಂಗಳಿಂದಲೂ ೩-೪ ಬಂಡಿಗಳನ್ನಿಟ್ಟು ನಡೆಸುತ್ತಿರುವರು. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಗಿರುತ್ತದೆಂದು ನಾವು ಕೇಳಿರುತ್ತೇವೆ. ಆದರೆ ಯಾರಾದರೂ ನೂತನವಾಗಿ ಯಾವುದಾದರೂ ಒಂದು ಕಾರ್ಯವನ್ನು ಮಾಡಿದರೆ ನೋಡಿ ಸಹಿಸದಂತಹ ಕೆಲ ಜನರು ಈಗ ಮೋಟಾರನ್ನು ನಡೆಯಿಸುತ್ತಿರುವವರ ಮೇಲಣ ಸ್ಪರ್ಧೆಯಿಂದ ಮತ್ತೊಂದು ಕಂಪೆನಿಯನ್ನೇ ಏರ್ಪಡಿಸಿ ಆಗಲೇ ಬಂಡಿಯನ್ನು ತರಿಸಿ ಮೈಸೂರು ಮತ್ತು ಕೊಯಮತ್ತೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳ ಲೇಸೆನ್ಸನ್ನು ಕೇಳುವಲ್ಲಿ ಒಂದೇಕಡೆ ಎರಡು ಮೂರು ಕಂಪೆನಿಗಳಿಗೆ ಅವಕಾಶ ಕೊಡಲು ಮಾರ್ಗದ ಅನುಕೂಲತೆಯು ಕಡಿಮೆಯೆಂದು ಉಭಯ ಡಿ|| ಮ್ಯಾಜಿಸ್ಟ್ರೇಟರುಗಳೂ ಲೈಸೆನ್ಸ್ ಕೊಡಲು ತಿರಸ್ಕರಿಸಿದ್ದಾಗಿಯೂ ಈಗ ಪುನಃ ಲೈಸೆನ್ಸನ್ನು ಪಡೆಯಲು ಪ್ರಯತ್ನಪಡುತ್ತಲಿರುವುದಾಗಿಯೂ ತಿಳಿಯುತ್ತೇವೆ. ಹಿಂದೆ ಹೀಗೆಯೇ ರಾಜಧಾನಿಯಿಂದ ಹುಣಸೂರಿಗೆ ಒಬ್ಬರಮೇಲೊಬ್ಬರ ಸ್ಪರ್ಧೆಯಿಂದ ೨-೩ ಮೋಟಾರು ಕಂಪೆನಿಗಳೇರ್ಪಟ್ಟು ಕಂಪೆನಿಯವರುಗಳಿಗೆ ದ್ರವ್ಯನಷ್ಟವೂ ಪ್ರಯಾಣಿಕರಿಗೆ ನಾನಾವಿಧವಾದ ತೊಂದರೆಗಳೂ ಸಂಭವಿಸಿ ಮೋಟಾರು ಕಂಪೆನಿಗಳು ನಾಮಾವಶೇಷವಾದುದು ನಮ್ಮ ಜ್ಞಾಪಕದಲ್ಲಿರುತ್ತದೆ. ಅದುಕಾರಣ ನಮ್ಮ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಈಗ ನಡೆಯುತ್ತಿರುವ ಮೋಟಾರು ಕಂಪೆನಿಯವರಿಂದ ಪ್ರಯಾಣಿಕರಿಗೆ ಯಾವತೊಂದರೆಯೂ ಇಲ್ಲದಿರುವಾಗ್ಗೆ ಇವರ ಮೇಲೆ ಅಸೂಯೆಯಿಂದ ಸ್ಪರ್ಧಿಸಬೇಕೆಂದಿರುವ ಹೊಸ ಕಂಪೆನಿಗೆ ಲೈಸೆನ್ಸನ್ನು ಕೊಡಲಾರರೆಂದು ನಿರೀಕ್ಷಿಸುತ್ತೇವೆ.

ಹೈರ್‌ಪರ್ಚೇಜ್ ರೀತಿಯಾಗಿ ಯಂತ್ರಸಾಮಗ್ರಿಗಳನ್ನು ಸರ್ಕಾರದಿಂದ ತೆಗೆದುಕೊಂಡಿರುವಂತವರು ಸರ್ಕಾರಕ್ಕೆ ಸಲ್ಲಿಸಬೇಕಾದ ಪೂರ್ತಿ ಹಣವನ್ನು ಕೊಟ್ಟು ಸ್ವತ್ತನ್ನು ತಮ್ಮ ಸ್ವಂತವಾಗಿ ಮಾಡಿಕೊಳ್ಳುವುದಕ್ಕೆ ಮೊದಲೆಯೇ ಅಂತಹ ಯಂತ್ರಸಾಮಗ್ರಿಗಳನ್ನು ಇತರರಿಗೆ ಆಧಾರಭೋಗ್ಯ ಮಾಡಬಹುದೇ ಅಥವಾ ವಿಕ್ರಯಿಸಿ ಒಂದೂರಿಂದ ಬೇರೊಂದೂರಿಗೆ ಸಾಗಿಸಬಹುದೇ ? ಹೈರ್‌ಪರ್ಚೇಜ್ ಅಗ್ರಿಮೆಂಟಿನ (4) ನೆಯ ನಿಬಂಧನೆಯಲ್ಲಿ That until the payment of the last instalment as aforesaid or in the matter hereinafter following, the said implement or implements shall remain the absolute property of Government but on and after the payment of the said last instalment, the same shall become the absolute property of the Hirer. ಕ್ರಯದ ಮೊಬಲಗಾಗಿ ಕಡೆಯ ಕಿಸ್ತುಹಣವು ಕೊಡಲ್ಪಡುವವರೆಗೂ ಯಂತ್ರಸಾಮಗ್ರಿಯು ಸರ್ಕಾರದ ಸಂಪೂರ್ಣ ಸ್ವತ್ತಾಗಿರುತ್ತದೆ. ಆದರೆ ಕಡೆಯ ಕಿಸ್ತುಹಣವು ಸಲ್ಲಿಸಲ್ಪಟ್ಟನಂತರ ಅದು ಬಾಡಿಗೆಗೆ ತೆಗೆದುಕೊಂಡಿದ್ದವನ ಸ್ವಂತವಾದುದಾಗಿ ಆಗುವುದು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ.

ಹೀಗಿರುವಾಗ್ಗೆ ಕ್ರಯದ ಮೊಬಲಗಿನಲ್ಲಿ ಇನ್ನೂ ೨ ಸಾವಿರ ರೂ. ಗಳು ಕೊಡಲ್ಪಡಬೇಕಾಗಿದ್ದರೂ ಯಂತ್ರಸಾಮಗ್ರಿಯು ಬಾಡಿಗೆಗೆ ಪಡೆದುಕೊಂಡಿರುವವರಿಂದ ಪರಊರಿನವರಿಗೆ ವಿಕ್ರಯಿಸಲ್ಪಟ್ಟು ಸಾಗಿಸಲ್ಪಟ್ಟು ೨೦-೨೫ ದಿನಗಳಾಗಿದ್ದಾಗ್ಯೂ ಕೈಗಾರಿಕೆಯ ಸೂಪರಿಂಟೆಂಡೆಂಟರಿಂದಾಗಲಿ ಅಥವಾ ಡೈರೆಕ್ಟರವರಿಂದಾಗಲಿ ತಕ್ಕ ಕಾರ್ಯಕ್ರಮವು ಇನ್ನೂ ಜರುಗಿಸಲ್ಪಟ್ಟಿಲ್ಲವೆಂದು ತಿಳಿಯಬರುತ್ತದೆ. ಇದಕ್ಕೆ ಕಾರಣವೇನು? ಎಂದು ಒಬ್ಬರು ಬರೆದಿರುತ್ತಾರೆ.

[ಇದು ನಿಜವಾಗಿದ್ದು ಮೇಲ್ಕಂಡ ಅಧಿಕಾರಿಗಳ ಗಮನಕ್ಕೆ ಬಂದಿದ್ದಲ್ಲಿ ಅವರು ತಟಸ್ಥರಾಗಿರುತ್ತಿರಲಿಲ್ಲವೆಂದು ನಮಗೆ ತೋರುತ್ತದೆ.—ಪ. ಪ್ರ.]

ರತಖಂಡದ ವೃತ್ತಾಂತಗಳು.

ಂಗಾಧರ ತಿಲಕರ ಶಿಲಾ ವಿಗ್ರಹವನ್ನು ತಮ್ಮ ಪಟ್ಟಣದ ಂದು ಅಹಮ್ಮದಾಬಾದ್ ಮ್ಯುನಿಸಿಪಾಲಿಟಿಯವರು ನಿರ್ಧ

ಯ ಪೇಟೆಯಲ್ಲಿ ಈಗ ಹತ್ತಿಯ ಬೆಲೆಯು ಸ್ವಲ್ಪ ಏರುತ್ತಲಿ ತ್ರಿ ಏಪ್ರಿಲ್ ಮೇ ತಿಂಗಳ ವಾಯಿದೆಗೆ ೩೪೩ ರೂ. ನಂತೆ ತು.

ಬರುವ ಫೆಬ್ರವರಿ ತಾ|| ೯ ರಲ್ಲಿ ಕನ್ನಾಟ್ ಪ್ರಭುಗಳು ಲನ್ನೂ ಸಾಮ್ರಾಜ್ಯ ಶಾಸನ ಸಭೆಯನ್ನೂ ಪ್ರಾರಂಭಿಸುತ್ತಾ ರಿನವರೆಲ್ಲಾ ಪೂರ್ಣವಾಗಿ ಹರಿತಾಳವನ್ನಾಚರಿಸಿ ಅಂಗಡಿಗ ಟ್ಟಿ ಬಿಡಬೇಕೆಂದು ಅಲ್ಲಿಯ ರಾಷ್ಟ್ರೀಯ ಕಾಂಗ್ರೆಸ್ ಸಂಘ ನಿಸಿರುವರು.

ಯ ಪಟ್ಟಣದಲ್ಲಿ ಒಂದು ಹೈನದ ಮನೆಯನ್ನು ಸ್ಥಾಪಿಸಿ ಲನ್ನು ಪ್ರಜೆಗಳಿಗೆ ಮಾರಾಟಮಾಡಬೇಕೆಂಬ ಉದ್ದೇಶದಿಂದ ಪ್ರಯತ್ನವು ನಡೆದಿದೆ. ೧ ಕೋಟಿ ರೂ. ಗಳ ಮೂಲಧನ ನ್ನು ಸ್ಥಾಪಿಸಿ, ೫೦ ಸಾವಿರ ಹಸುಗಳನ್ನು ಸಾಕುವರು. ವಿ ದೊಡ್ಡ ವರ್ತಕರು ಇದರಲ್ಲಿ ಸೇರಿದ್ದಾರೆ.

ಮದ್ರಾಸು ಶಾಸನ ಸಭೆಗೆ ಸಭಿಕರಾಗಿ ಆರಿಸಿಬಂದ ಇಬ್ಬರು ರುರನ್ನು ಧಿಕ್ಕರಿಸಿದ ಕರಪತ್ರಗಳನ್ನು ತಲಚೇರಿಯ ಇಬ್ಬರು ಘ ಸಭಿಕರು ಪ್ರಕಟಿಸಿದುದಕ್ಕಾಗಿ ತಲಾ ೫೦ ರೂ. ಗಳ ೂ, ಅಚ್ಚುಕೂಟದ ಹೆಸರನ್ನು ಹಾಕದೆ ಅದನ್ನು ಮುದ್ರಿಸಿ ಮುದ್ರಣಾಲಯದ ಯಜಮಾನರ ಮಗನಿಗೆ ೧೦ ರೂ. ದಂಡವೂ

ಮಿನ ಟೀತೋಟಗಳಿಗೆ ಸೇರಿದ ಸಿ. ಎಂ. ವರ್ಗಸ್ ಎಂಬ ಆಂ ಮದ್ರಾಸಿನ ಪಿ. ಆರ್. ಅಂಡ್ ಸನ್ಸ್‌ರವರಿಂದ ವಜ್ರಗಳ ಮೂ ಗಳನ್ನು ಅಂಚೆಯ ಮೂಲಕ ತರಿಸಿಕೊಂಡು, ಪೋಸ್ಟ್‌ಮ್ಯಾ ದರಿಸಿ. ಆ ಪಾರ್ಸಲನ್ನು ವಶಪಡಿಸಿಕೊಂಡು ಬಳಿಕ ಆ ಬಾಂಗಿ ವು ತನಗೆ ತಿಳಿಯದೆಂದು ಹೇಳಿದನು. ಪೊಲೀಸರು ಅವನ ಮ ಶೋಧಿಸಿ ಉಂಗುರಗಳನ್ನು ಪತ್ತೆಮಾಡಿದರು. ದಂಡಾಧಿಕಾರಿ ಗೆ ೧ ವರ್ಷ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಬರೇಲಿ ಜಿಲ್ಲೆಯ ಕೆಲಗ್ರಾಮಗಳಲ್ಲಿ ಭೂಸ್ವಾಮಿಗಳಿಗೂ ರೈತ ಸ್ತಾಪವಿದ್ದಿತು. ಕಳೆದ ತಾ|| ೪ ರಲ್ಲಿ ಪರ್ಸಟ್ ಗಂಜ್ ಎಂಬಲ್ಲಿ ಂದಿ ರೈತರು ಸರ್ದಾರ್ ನಿಹಲ್‌ಸಿಂಗ್‌ರವರ ಮನೆಯ ಸುತ್ತಲೂ . ಸಾಯುಧರಾದ ಪೊಲೀಸರು ಅಲ್ಲಿಗೆ ಬಂದರು. ಆ ಗುಂಪಿನವರು ಕಲ್ಲುಗಳನ್ನು ಬೀರಿದರು. ಮತ್ತು ಗುಂಪಿನವ ಲ್ಲಿನ ಅಂಗಡಿಗಳನ್ನು ಸೂರೆಮಾಡಲುಪಕ್ರಮಿಸಿದರು. ಕೆಲವು ಮನೆಗಳೂ ದೋಚಲ್ಪಟ್ಟುವು. ಪೊಲೀಸರು ತುಪಾಕಿಗಳನ್ನು ಂದ ಇಬ್ಬರು ಸತ್ತರು, ನಾಲ್ವರಿಗೆ ಗಾಯಗಳಾದುವು. ತಾ|| ಟ್ಟಿಗಂಜ್ ಕಾರಾಗೃಹದ ಇದಿರಿಗೆ ೨೦೦೦ ಮಂದಿಗಳು ತರು. ಪೊಲೀಸರು ಕುದುರೆಗಳನ್ನೇರಿ ಬಂದರು. ಅವರ ಮೇ ಲ್ಲು ಬೀರಿದರು. ಪೊಲೀಸರು ತುಪಾಕಿಗಳನ್ನು ಹಾರಿಸಿದರು. ರು, ೫ ಮಂದಿಗೆ ಗಾಯಗಳಾದುವು. ಒಟ್ಟು ಈ ಗದ್ದಲದ ೯ ಮಂದಿ ಸತ್ತರೆಂದೂ ೧೨ ಮಂದಿಗಳಿಗೆ ಗಾಯಗಳಾದುವೆಂದೂ ರದವರು ಪ್ರಕಟಿಸಿದ್ದಾರೆ.

ಮುಂದಣ ನಮ್ಮ ವೈಸ್ರಾಯಿ ಮತ್ತು ಗೌರ್ನರ್ ಜನರಲ್ಲಾಗಿ ಬರು ಡಿಂಗ್ ಪ್ರಭುಗಳಿಗೆ ಸೀಮೆಯಲ್ಲಿನ ಹೈಕೋರ್ಟಿನ ನ್ಯಾಯವಾದಿಗಳೆ ಕಳೆದ ತಾ|| ೧೧ ರಲ್ಲಿ ಒಂದು ಔತಣವನ್ನು ಮಾಡಿದಾಗ ಅವರುಗ ಮಾಡಿದ ಅಭಿನಂದನ ಭಾಷಣೆಗೆ ಲಾರ್ಡ್ ರೀಡಿಂಗ್‌ರವರು ಹೀಗೆ ಉ ಕೊಟ್ಟಿರುವರು—"ನನ್ನನ್ನು ಇಂಡ್ಯಾ ವೈಸ್ರಾಯಿಯನ್ನಾಗಿ ಆರಿಸಿದು ನು ಕಾರಣವೆಂಬುದನ್ನು ಊಹಿಸಲು ನಾನು ಪ್ರಯತ್ನಿಸುವುದಿಲ್ಲ. ದ ವಿಷಯವಾಗಿ ನನಗೆ ಹೆಚ್ಚಾಗಿ ಏನೂ ತಿಳಿಯದು. ನಾನು ಈಗ ಮೂರ್ತಿ ಪದವಿಯನ್ನು ಬಿಟ್ಟು ತೆರಳುತ್ತೇನೆ. ಆದರೆ ಇದರಿಂದ ವಿಚಾರಣ ಕಾರ್ಯವನ್ನು ನಾನು ಬಿಟ್ಟುಬಿಡುತ್ತೇನೆಂದು ಹೇಳಲಾರೆ ಲ್ಲಿಗಿಂತಲೂ ವಿಸ್ತಾರವಾದ ಪ್ರದೇಶದಲ್ಲಿ ನ್ಯಾಯಸಂಸ್ಥಾಪನ ಮಾಡು ರ್ಯವನ್ನು ಕೈಕೊಳ್ಳಬೇಕಾಗಿದೆ. ಕೋರ್ಟುಗಳಲ್ಲಿ ನ್ಯಾಯಮೂರ್ತಿ ತಮ್ಮ ಇದಿರಿಗೆ ರುಜುವಾತಾದ ಸಂಗತಿಗಳನ್ನು ಅನುಸರಿಸಿ ಕೆಲಸ ಬೇಕಾಗುವುದು. ರಾಜಕೀಯ ವಿಷಯದಲ್ಲಿ ಹಾಗಲ್ಲ. ನ್ಯಾಯಕರ್ತ ್ಯಯಪರಿಷ್ಕರಣಕ್ಕೆ ಬೇಕಾದ ಸಂಗತಿಗಳನ್ನೆಲ್ಲಾ ತಾನೇ ಸಂಗ್ರಹಿಸು ಕಷ್ಟತರವಾಗಿರುವುದು. ರಾಜಕೀಯ ವಿಷಯದಲ್ಲಿ ಯಾವುದೋ ು ಪರಿಷ್ಕಾರವನ್ನು ಮಾಡಿದ ಬಳಿಕ ಬಹುಕಾಲದ ಮೇಲೆ ಒಳಅಂಶ ಹೊರಬೀಳುವುವು. ಭರತಖಂಡದಲ್ಲಿ ನ್ಯಾಯಸಂಸ್ಥಾಪನೆಯನ್ನು ಬೇಕೆಂಬ ಮುಖ್ಯೋದ್ದೇಶದಿಂದಲೇ ನಾನು ಈ ಉದ್ಯೋಗವನ್ನು ಲು ಒಪ್ಪಿದೆನು. ಆ ನ್ಯಾಯಸಂಸ್ಥಾಪನೆಯಲ್ಲಿ ಎಂದಿಗೂ ಪರಾಜಿತ ವುದಿಲ್ಲವೆಂದು ನನಗೆ ನಂಬುಗೆಯಿದೆ" ಎಂದು ಹೇಳಿದ್ದಾರೆ. ಇವರ ಶವು ಭರತಖಂಡದಲ್ಲಿ ಸಫಲವಾಗಲೆಂಬುದೇ ಭಾರತೀಯರ ಕೋರಿಕೆ.

ವಿದೇಶದ ವೃತ್ತಾಂತಗಳು.

ಕಳೆದ ಅಕ್ಟೋಬರ್, ನವಂಬರ್, ಡಿಸಂಬರ್ ಈ ಮೂರು ತಿಂಗಳಲ್ಲಿ ಷರು ಒಟ್ಟು ೩೭೦೯೧೬ ಟನ್ನುಗಳ ಭಾರದ ಹಡಗುಗಳನ್ನು ದ್ದಾರೆ.

ಐರ್ಲಂಡಿನ ಸಿನ್‌ಫಿನಿಯನ್ನರಿಗೂ ಜರ್ಮನ್ ಪ್ರಭುತ್ವದವರಿಗೂ ಸಂಬಂ ವುದೆಂಬುದನ್ನು ದೃಢಪಡಿಸತಕ್ಕ ಕೆಲ ಕಾಗದ ಪತ್ರಗಳನ್ನು ಆಂಗ್ಲ ದವರು ಈಗ ಪ್ರಕಟಿಸಿದ್ದಾರೆ.

ಬೋಲ್ಷೆವಿಕ್ಕರಿಗೂ ಪರ್ಷಿಯಾದವರಿಗೂ ಸಂಧಿ ನಡೆಯುವುದರಲ್ಲಿದೆ. ು ಷಾರವರು ಸಿಂಹಾಸನವನ್ನು ಬಿಡುವರೆಂದೂ, ಮಂತ್ರಿಗಳು ರಾಜೀ ಕೊಟ್ಟಿರುವರೆಂದೂ ಸುದ್ದಿ ಬಂದಿದೆ.

ಫ್ರಾನ್ಸಿನಲ್ಲಿ ಇದುವರೆಗೆ ಇದ್ದ ಲೇಗ್ವೆ ಪ್ರಭುತ್ವದವರೆಲ್ಲಾ ಅಧಿಕಾ ರಾಜೀನಾಮೆಕೊಟ್ಟರು ನೂತನ ಪ್ರಭುತ್ವವು ಏರ್ಪಟ್ಟಿದೆ. ಅದರಲ್ಲಿ ಬ್ರಿಯಾಂಡ್‌ರವರು ಮುಖ್ಯ ಮಂತ್ರಿಗಳಾಗಿದ್ದಾರೆ.

ಹಿಮಾಲಯಪರ್ವತದಮೇಲಣ ಎವರೆಸ್ಟ್ ಶಿಖರಕ್ಕೆ ವಿಮಾನಗಳ ಮೇ ಗಿ ಸರ್ವೆಮಾಡುವ ಪ್ರಯತ್ನವು ಈಗ ನಡೆದಿದೆ, ಅದಕ್ಕೆ ತಕ್ಕ ಸ ವನ್ನು ಇಂಡ್ಯಾ ಸರ್ಕಾರದವರು ನಡೆಯಿಸಿಕೊಡುವವರಾಗಿದ್ದಾರೆ.

ಕಪ್ಪುಕಡಲಿನಲ್ಲಿ ಬೋಲ್ಷೆವಿಕ್ಕರ ಹಡಗುಗಳಿಗೂ ಆಂಗ್ಲರ ಹಡಗುಗಳಿ ಯುದ್ಧವಾಯಿತು. ಬೋಲ್ಷೆವಿಕ್ಕರ ಒಂದು ಯುದ್ಧದ ಹಡಗು ಮು ಳುಗಿಯಿತೆಂದೂ ಇನ್ನೊಂದಕ್ಕೆ ಏಟುಬಿದ್ದು ಕಟ್ಟುಹೋಗಿರುವುದೆಂದೂ ಬಂದಿದೆ.

ಗ್ರೀಸ್ ದೇಶದ ಸಿಂಹಾಸನವನ್ನು ಕಾನ್ಸ್ಟಾಂಟೈನ್ ಪ್ರಭುಗಳು ಹತ್ತಿರುವರು. ಸ್ಮಿರ್ನಾದ ಕಡೆಯಲ್ಲಿ ತುರ್ಕಿ ನ್ಯಾಷನಲ್ ಸೈನ್ಯದ ಮೇಲೆ ಕಾನ್ಸ್ಟಾಂಟೈನ್ ಪ್ರಭುತ್ವದವರು ಯುದ್ಧಮಾಡಲು ಕೈಕಣಿಷ್ಠಯರಾಗಿ ಸೈನ್ಯವನ್ನು ಕಳುಹಿಸಿ ಯುದ್ಧಮಾಡುತ್ತಿದ್ದಾರೆ.

ಜರ್ಮನರು ಟರ್ಪಿಟ್ಜ್ ಎಂಬ ಹಡಗನ್ನು ಈಗತಾನೇ ಕಟ್ಟಿ ಮುಗಿಸಿದರು. ಅದರಲ್ಲಿ ಜರ್ಮನ್ ನಾವಿಕ ಕೌಶಲ್ಯವೆಲ್ಲವೂ ಮೂರ್ತೀಭವಿಸಿದೆಯಂತೆ. ಈಗ ಪ್ರಪಂಚದಲ್ಲಿರುವ ಹಡಗುಗಳಲ್ಲೆಲ್ಲಾ ಇದೇ ದೊಡ್ಡದು. ಇದರಲ್ಲಿ ೩೦೦೦ ಮಂದಿಗಳು ಕುಳಿತು ಪ್ರಯಾಣ ಮಾಡಬಹುದಂತೆ.

ಕ್ಷಯ ರೋಗ ನಿವಾರಣೆಗಾಗಿ ಡಾಕ್ಟರ್ ಡಿಯೋನ್ ಕಾರ್ಟೆಟ್ಟಿ ಎಂಬ ಫ್ರೆಂಚ್ ವೈದ್ಯರು ಒಂದು ಹೊಸ ಔಷಧವನ್ನು ಕಂಡುಹಿಡಿದಿದ್ದಾರೆಂದೂ, ಅದನ್ನು ಸಿಡುಬನ್ನು ಹಾಕುವಂತೆ ಮನುಷ್ಯರ ಶರೀರದ ರಕ್ತನಾಳಕ್ಕೆ ಪ್ರವೇಶಗೊಳಿಸತಕ್ಕದಾಗಿದೆಯೆಂದೂ ಪ್ಯಾರಿಸ್ಸಿನಿಂದ ಸುದ್ದಿ ಬಂದಿದೆ.

ಕಲ್ಕತ್ತಾದಲ್ಲಿ ಆಯಾ ವಿದ್ಯಾರ್ಥಿಗಳಲ್ಲಿ ೩೦೦೦ ಮಂದಿಗಳು ಕಳೆದ ಸಂಕ್ರಾಂತಿಯ ದಿವಸ ಪಾಠಶಾಲೆಗಳನ್ನು ಬಿಟ್ಟರು. ಈಗ ಜಾತೀಯ ಪಾಠಶಾಲೆಯು ಅಲ್ಲಿ ಏರ್ಪಟ್ಟಿದೆ ೬೦೦ ಮಂದಿಗಳು ಅದಕ್ಕೆ ಸೇರಿದ್ದಾರೆ. ಇನ್ನು ೧೫ ದಿನಗಳಲ್ಲಿ ಜಾತೀಯ ವಿದ್ಯಾಪೀಠವು ಅಲ್ಲಿ ಸ್ಥಾಪಿಸಲ್ಪಡುತ್ತದಂತೆ.

ಭಾರತೀಯರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಇವರಿಗೆ ಬೇಕಾದ ಸಹಾಯವನ್ನು ಮಾಡುವುದಕ್ಕಾಗಿ ಪ್ಯಾರಿಸ್ ಪಟ್ಟಣದಲ್ಲಿ ಹಿಂದು ಸಭೆಯೆಂಬುದೊಂದು ಸ್ಥಾಪಿಸಲ್ಪಟ್ಟಿದೆ. ಪೂರ್ವದೇಶಗಳ ಪ್ರತಿನಿಧಿಗಳ ಮುಖ್ಯಕಾರ್ಯಾಲಯದಲ್ಲಿ ಈ ಸಭೆಯವರು ಒಂದು ನಾಟಕವನ್ನು ಪ್ರದರ್ಶನ ಮಾಡಿದರು.

ಮಧ್ಯಪ್ರಾಂತದಲ್ಲಿ ಅಡಿಷನಲ್ ಜುಡಿಷಿಯಲ್ ಕಮಿಷನರಾಗಿದ್ದ ರಾ|| ಬ|| ಆರ್. ಎನ್. ಮುಧೋಳ್ಕರ್‌ರವರು ಕೀರ್ತಿಶೇಷರಾದರು. ಇವರ ಮರ್ಯಾದಾರ್ಥವಾಗಿ ಸರ್ಕಾರಿ ಕಚೇರಿಗಳೆಲ್ಲಾ ಒಂದು ದಿನ ಮುಚ್ಚಲ್ಪಟ್ಟಿದ್ದುವು. ಇವರು ಮಧ್ಯರಾಷ್ಟ್ರದ ಶಾಸನ ಸಭೆಯಲ್ಲೂ ಸಾಮ್ರಾಜ್ಯ ಶಾಸನ ಸಭೆಯಲ್ಲೂ ಸಭಿಕರಾಗಿ ದೇಶಸೇವೆಯನ್ನು ನಡೆಯಿಸಿದವರು.

ತುರ್ಕಿಯ ಸಂಧಿ ನಿಬಂಧನೆಗಳನ್ನು ಸ್ವಲ್ಪ ಸಡಿಲಮಾಡಿಕೊಟ್ಟರೆ ಬೋಲ್ಷೆವಿಕ್ಕರ ಪೂರ್ವ ದೇಶಾಭಿಯೋಗಕ್ಕೆ ತುರ್ಕಿಯು ಪ್ರತಿಬಂಧಕವಾಗಿ ನಿಲ್ಲಬಹುದೆಂದೂ, ಹಾಗಲ್ಲದೆ ಹೋದರೆ ತುರ್ಕಿಯು ಬೋಲ್ಷೆವಿಕ್ಕರ ವಶವಾಗಿ ಅವರ ಪೂರ್ವ ದೇಶಯಾತ್ರೆಗೆ ನಿರುಪಾಧಿಕವಾದೀತೆಂದೂ, ತುರ್ಕಿ ಪ್ರಭುತ್ವದವರು ಆಂಗ್ಲ ಪ್ರಭುತ್ವದಲ್ಲಿ ವಿಶ್ವಾಸವುಳ್ಳವರೇ ಆಗಿರುವರೆಂದೂ ಯುವಸುಲ್ತಾನರು ತಿಳಿಯಿಸಿದ್ದಾರೆ.

ಮದ್ರಾಸಿನಲ್ಲಿ ಡಾಕ್ಟರ್ ಆಚಂಟ ಲಕ್ಷ್ಮೀಪತಿಯವರು ಜಾಯಿಂಟ್ ಸ್ಟಾಕ್ ಕಂಪೆನಿಯ ಮೂಲಕ ಹಿಂದೂ ಔಷಧ ನಿರ್ಮಾಣಾಲಯವೊಂದನ್ನು ಏರ್ಪಡಿಸಿದ್ದಾರೆ. ಇದರ ಪ್ರಾರಂಭೋತ್ಸವವು ಕಳೆದ ಸೋಮವಾರ ಸರ್ ಪಿ. ತ್ಯಾಗರಾಜಶೆಟ್ಟರಿಂದ ನಡೆಯಿಸಲ್ಪಟ್ಟಿತು. ಈ ಆಲಯದಲ್ಲಿ ಮಾತ್ರೆಗಳು ರಸಾಯನಗಳು ಭಸ್ಮಗಳು ಮೊದಲಾದುವುಗಳೆಲ್ಲಾ ಯಂತ್ರಗಳ ಮೂಲಕವೇ ನಿರ್ಮಿಸಲ್ಪಡುತ್ತವೆ. ಯಂತ್ರಗಳನ್ನೆಲ್ಲಾ ಜೋಡಿಸಿದ್ದಾರೆ.

ಶ್ರೀ ಕನ್ನಾಟ್ ಪ್ರಭುಗಳು ಮದ್ರಾಸಿಗೆ ಬಂದಿದ್ದು ಕಾರ್ಯವನ್ನೆಲ್ಲಾ ಮುಗಿಸಿಕೊಂಡು ಮುಂದಕ್ಕೆ ಪ್ರಯಾಣ ಮಾಡಿದರು. ಆಗ್ಗೆ ಮದ್ರಾಸು ಗೌರ್ನರಿಗೆ ಒಂದು ಸಂದೇಶವನ್ನು ಕಳುಹಿಸಿ ತಮ್ಮ ಸತ್ಕಾರಕ್ಕಾಗಿ ಮಾಡಿದ್ದ ಏರ್ಪಾಟುಗಳಿಗೆಲ್ಲಾ ಸಂತೋಷವನ್ನೂ, ತಮ್ಮ ವಿಷಯದಲ್ಲಿ ಗೌರವವನ್ನು ತೋರಿಸಿದವರಿಗೆಲ್ಲಾ ತಮ್ಮ ವಂದನೆಯನ್ನೂ ತಿಳಿಯಿಸಬೇಕೆಂದೂ ತಮಗೆ ಮದ್ರಾಸಿನ ನಿವಾಸವು ಸಂತೋಷಪ್ರದವಾಗಿದ್ದಿತೆಂದೂ ತಿಳಿಯಿಸಿದ್ದಾರೆ.

ದಕ್ಷಿಣಾಫ್ರಿಕಾದಲ್ಲಿದ್ದ ಭಾರತೀಯರಲ್ಲಿ ೧೫೦ ಮಂದಿಗಳು (ಇವರೆಲ್ಲಾ ಮದ್ರಾಸಿನವರು) ಕಳೆದವಾರ ಬೊಂಬಾಯಿಗೆ ಬಂದಿಳಿದರು. ಇವರಿಗೆಲ್ಲಾ ದಾರಿಯ ವೆಚ್ಚವನ್ನೂ ಬಾಡಿಗೆಯನ್ನೂ ದಕ್ಷಿಣಾಫ್ರಿಕಾ ಸರ್ಕಾರದವರೇ ಕೊಟ್ಟು ಕಳುಹಿಸಿರುವರು. ಇವರುಗಳಲ್ಲಿ ಪ್ರತಿಯೊಬ್ಬರೂ ತಮ್ಮ ಬಳಿಯಲ್ಲಿ ೪೦ ಪೌನುಗಳ ಆಸ್ತಿಯನ್ನು ಮಾತ್ರ ಉಳಿಯಿಸಿಕೊಂಡು ಹೆಚ್ಚಿನ ಸೊತ್ತನ್ನು ಮರಳಿ ದಕ್ಷಿಣಾಫ್ರಿಕಾ ಪ್ರಭುತ್ವದವರಿಗೆ ಒಪ್ಪಿಸಿಬಿಡಬೇಕಾದವರಾಗಿದ್ದಾರೆ. ಅಲ್ಲಿಯ ನಿಯಮವೇ ಹಾಗಿದೆ.

ಆಸ್ಟ್ರಿಯಾ ಪ್ರಭುತ್ವದವರು ತಮಗೆ ವರಮಾನವು ಕಡಿಮೆಯಾಗಿ ಹೋಗಿರುವುದರಿಂದ ರಾಜ್ಯಪರಿಪಾಲನ ಭಾರವನ್ನು ನಿರ್ವಹಿಸುವುದು ಕಷ್ಟವಾಗಿರುವುದೆಂದೂ, ಇದರ ಪರಿಪಾಲನಭಾರವನ್ನೂ, ಯುದ್ಧ ನಷ್ಟ ಪರಿಹಾರಭಾರವನ್ನೂ ಕಮಿಷನ್ನಿನವರಿಗೆ ವಹಿಸಿಬಿಡುವೆವೆಂದೂ ಮಿತ್ರಮಂಡಲಿಯವರಿಗೆ ತಿಳಿಯಿಸಿಬಿಟ್ಟಿದ್ದಾರೆ. ಪ್ರಪಂಚದಲ್ಲಿ ಅಗಾಧವಾದ ಸಾಮ್ರಾಜ್ಯವೆನಿಸಿಕೊಂಡಿದ್ದ ಆಸ್ಟ್ರಿಯಾವಿಗೆ ಯುದ್ಧಾನಂತರದಲ್ಲಿ ಇಂಥ ದಿವಾಳಿಯ ಸ್ಥಿತಿಯು ಪ್ರಾಪ್ತವಾಗಿರುವುದನ್ನು ನೋಡಿದರೆ ದೈವವಿಲಾಸದ ಬಲವತ್ತರತೆಯು ಎಂತಹದೋ ಗೊತ್ತಾಗುವುದು.

ಐರ್ಲಂಡಿನಲ್ಲಿ ಯಾರೂ ಹೊಗೆಸುತ್ತುಗಳನ್ನೂ ಮದ್ಯದ್ರವ್ಯಗಳನ್ನೂ ಉಪಯೋಗಿಸದೆ ಪರಿತ್ಯಜಿಸಿಬಿಟ್ಟರೆ ಆಂಗ್ಲ ಸಾಮ್ರಾಜ್ಯ ಪ್ರಭುತ್ವದವರಿಗೆ ವರ್ಷಕ್ಕೆ ೨೫೦೦೦೦೦೦ ಪೌನುಗಳವರೆಗೆ ನಷ್ಟವು ಸಂಭವಿಸುವುದೆಂದೂ ಅದುಕಾರಣ ಪ್ರಜೆಗಳೆಲ್ಲರೂ ಅವುಗಳನ್ನು ಪರಿತ್ಯಜಿಸಬೇಕೆಂದೂ ಅಲ್ಲಿಯ ವೆಕ್ಸ್‌ಫರ್ಡ್ ಪ್ರಾಂತದ ಪ್ರಜಾಮಂಡಲಿಯವರು ಸಭೆಯಲ್ಲಿ ನಿಶ್ಚಯಿಸಿರುವರು. ನಮ್ಮ ದೇಶದ ಸಹಾಯನಿರಾಕರಣವಾದಿಗಳು ಕೂಡ ವಿದೇಶ ಮದ್ಯದ್ರವ್ಯಗಳಿಗೂ ಹೊಗೆಸುತ್ತುಗಳಿಗೂ ಹೀಗೆಯೇ ಬಹಿಷ್ಕಾರಹಾಕಿದರೆ ದೇಶಕ್ಕೆ ಎಷ್ಟೋ ಹಿತವಾದೀತು. ಅದನ್ನೇಕೆ ಬಿಟ್ಟರೋ ತಿಳಿಯದು.

ಕಳೆದ ೧೯೨೦ ನೆ ವರ್ಷದಲ್ಲಿ ಐರ್ಲಂಡಿನೊಳಗೆ ನಡೆದಿರುವ ಅತ್ಯಾಚಾರಗಳನ್ನು ಕುರಿತು ಸರ್ಕಾರದವರು ಪ್ರಕಟಿಸಿರುವ ವರದಿಯ ಪ್ರಕಾರ ಸರ್ಕಾರಿ ಕೋರ್ಟು ಕಚೇರಿಗಳ ಕಟ್ಟಡಗಳು ೬೮ ಹಾಳ್ಮಾಡಲ್ಪಟ್ಟುವು. ಅಂಚೆಯನ್ನು ಅಪಹರಿಸಲಿಕ್ಕೆ ೯೮೫ ಸಲ ಪ್ರಯತ್ನಗಳು ಮಾಡಲ್ಪಟ್ಟುವು. ಆಯುಧ ಸಾಮಗ್ರಿಗಳನ್ನು ಅಪಹರಿಸಲಿಕ್ಕೆ ೨೮೦೧ ಸಲ ಪ್ರಯತ್ನಗಳು ಮಾಡಲ್ಪಟ್ಟುವು. ೧೬೫ ಮಂದಿ ಪೊಲೀಸರು ಕೊಲ್ಲಲ್ಪಟ್ಟರು. ೨೨೫ ಮಂದಿ ಪೊಲೀಸರಿಗೆ ಏಟುಬಿದ್ದುವು. ೫೩ ಮಂದಿ ಸೈನಿಕರು ಕೊಲ್ಲಲ್ಪಟ್ಟರು. ೧೧೮ ಮಂದಿ ಸೈನಿಕರಿಗೆ ಏಟುತಗಲಿವೆ. ೫೩ ಮಂದಿ ಪುರವಾಸಿಗಳು ಸತ್ತರು. ೧೦೮ ಮಂದಿ ಪುರ ಜನರಿಗೆ ಏಟುಬಿದ್ದುವು.

ಬೇಸಾಯಗಾರರಿಗೆ ಬೇಸಗೆ ನೀರನ್ನೊದಗಿಸುವುದು.

ನಮ್ಮ ಸರ್ಕಾರದವರು ೮ನೆ ತಾರೀಖಿನ ಮೈಸೂರು ಗೆಜೆಟ್ ವಿಶೇಷ ಪತ್ರಿಕೆಯಲ್ಲಿ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಪ್ರಕಟಿಸಿರುತ್ತಾರೆ.—ಕೃಷ್ಣರಾಜಸಾಗರದ ಜಲಾಶಯದ ನಾಲಾಗಳಿಗೆ ಸಂಬಂಧಪಟ್ಟ ಕೆಳಗೆ ನಮೂದಾದ ಫಾಸಲೆಗಳಲ್ಲಿರುವ ಜಮೀನುಗಳಲ್ಲಿ ೧೯೨೧ ನೆ ವರ್ಷದ ಬೇಸಗೆಯ ತಿಂಗಳುಗಳಲ್ಲಿ ಕಬ್ಬನ್ನೂ ಬತ್ತದವಿನಾ ಇತರ ಬೇಸಗೆಯ ಬೆಳೆಗಳನ್ನೂ ಇಡುವುದಕ್ಕಾಗಿ ಫೆಬ್ರವರಿ ೧೫ ನೆಯ ತಾರೀಖಿನ ಲಾಗಾಯಿತು ಬೇಸಗೆಯ ಕಾಲದಲ್ಲಿ ನೀರನ್ನು ಸರಬರಾಯಿ ಮಾಡಲಾಗುವುದೆಂದು ಈ ಮೂಲಕ ಎಲ್ಲರಿಗೂ ತಿಳಿಯಪಡಿಸಿದೆ:—

೧. ಬಲದಡದ ಕೆಳಮಟ್ಟದನಾಲೆ. ಬೆಳಗೊಳ ಕೆರೆಯ ಕಟ್ಟೆಯ ಎಡತುದಿಯವರೆಗೆ. ಫಾಸಲೆ ೭½ ಮೈಲಿಗಳು.

೨. ಎಡದಡದ ಕೆಳಮಟ್ಟದ ನಾಲೆ. ಒಟ್ಟು ೧೨½ ಮೈಲಿಗಳ ಉದ್ದಕ್ಕೂ.

೩. ರಾಮಸ್ವಾಮಿ ನಾಲೆ. ಮೊದಲಿನ ಅರ್ಧಫಾಸಲೆ. ೨೦½ ಮೈಲಿಗಳು.

೪. ರಾಜಪರಮೇಶ್ವರಿ ನಾಲೆ. ಮೊದಲ ೧೯½ ಮೈಲಿಗಳ ಫಾಸಲೆ.

೫. ಮಾಧವಮಂತ್ರಿ ನಾಲೆ. ಮೊದಲ ಅರ್ಧಫಾಸಲೆ ೧½ ಮೈಲಿಗಳು.

ನೀರನ್ನು ಅವಿಚ್ಛಿನ್ನವಾಗಿ ಸರಬರಾಯಿ ಮಾಡುವುದಿಲ್ಲ; ಆಗಾಗ್ಗೆ ನೀರನ್ನು ಬಿಡಲಾಗುವುದು. ಪ್ರತಿ ಪಕ್ಷದಲ್ಲಿಯೂ ಐದು ದಿನಗಳು ಮಾತ್ರ ನಾಲಾಗಳು ತೆರೆಯಲ್ಪಡುವುವು. ಮತ್ತು ಅವಶ್ಯಕವಾದ ರಿಪೇರಿಗಳಿಗಾಗಿ ಮಿಕ್ಕ ಹತ್ತು ದಿನಗಳು ಮುಚ್ಚಲ್ಪಡುವುವು. ನೀರು ಅನವಶ್ಯಕವಾಗಿ ಹಲಾಕಾಗುವುದನ್ನು ತಪ್ಪಿಸುವುದಕ್ಕಾಗಿ ಸರದಿಮೇರೆಗೆ ನಾಲಾಗಳ ಕೆಳಗೆ ವಿಂಗಡಿಸಿರುವ ಅನುಕೂಲವಾದ ಜಮೀನುಗಳಿಗೆ ಈ ರೀತಿಯಾಗಿ ಆಗಾಗ್ಗೆ ನೀರನ್ನು ಒದಗಿಸಲಾಗುವುದು, ಈ ನಾಲೆಗಳ ಚಾರ್ಜಿನಲ್ಲಿರುವ ಆಫೀಸರು ತಮಗೆ ಯುಕ್ತತೋರಿದಂತೆ ಬೇಸಗೆಯಲ್ಲಿ ಈ ನಾಲಾಗಳನ್ನು ತೆರೆಯಬಹುದು. ಅಥವಾ ಮುಚ್ಚಬಹುದು. ಸದರಿ ಆಫೀಸರು ಪ್ರತಿ ತಿಂಗಳಿನಲ್ಲಿಯೂ ನಾಲಾಗಳನ್ನು ಅಥವಾ ಅವುಗಳ ಭಾಗಗಳನ್ನು ಯಾವ ತಾರೀಖುಗಳಲ್ಲಿ ಮುಚ್ಚಲಾಗುವುದು ಮತ್ತು ತೆರೆಯಲಾಗುವುದು, ಎಂಬುದನ್ನು ಸಕಾಲದಲ್ಲಿ ಕ್ರಮವಾಗಿ ತಿಳಿಯಪಡಿಸುವರು ಮತ್ತು ಸಾಗುವಳಿಗೆ ತಕ್ಕಂತೆ ನೀರು ಹಾಯಿಸುವುದನ್ನು ಕ್ರಮಪಡಿಸಲು ಅವಶ್ಯಕವಾದ ತಿಳಿವಳಿಕೆಗಳನ್ನೂ ಕೊಡುವರು.

೨. ಒಂದನೆಯ ಪ್ಯಾರಾದಲ್ಲಿ ಕಾಣಿಸಿರುವ ನಾಲಾಗಳ ಕೆಳಗೆ ನಮೂದಾದ ಫಾಸಲೆಗಳಲ್ಲಿರುವ ಜಮೀನುಗಳಿಗೆ ಬೇಸಗೆಯ ಕಾಲದ ನೀರು ಸರಬರಾಯಿಯನ್ನು ಅಪೇಕ್ಷಿಸುವ ಜನರು ಫ್ರೆಂಚ್‌ರಾಕ್ಸ್ ಚಾನಲ್ಸ್ ಡಿವಿಜನ್ನಿನ ಎಗ್ಸಿಕ್ಯೂಟಿವ್ ಇಂಜನಿಯರವರಿಗೆ ದರಖಾಸ್ತು ಮಾಡಿಕೊಳ್ಳತಕ್ಕದ್ದು. ಸದರಿ ದರಖಾಸ್ತು ಈ ಇಸ್ತಿಹಾರ್ನಾಮೆಗೆ ಲಗತ್ತಾಗಿರುವ ನಮೂನೆಯಲ್ಲಿರತಕ್ಕದ್ದು. ಮತ್ತು ಅದರ ನಾನಾ ಕಲಮುಗಳನ್ನು ಪೂರ್ತಿಯಾದ ವಿವರಗಳೊಂದಿಗೆ ಭರ್ತಿಮಾಡಿ ೧೯೨೧ ನೆ ಜನವರಿ ೨೫ ನೆ ತಾರೀಖಿನೊಳಗಾಗಿ ಎಗ್ಸಿಕ್ಯೂಟಿವ್ ಇಂಜನಿಯರವರ ಕೈಸೇರುವಂತೆ ಅದನ್ನು ಕಳುಹಿಸಬೇಕು.

(ಕಡಿಮೆ ಸಂಗತಿಗಳನ್ನು ಗೆಜೆಟ್ಟನ್ನು ನೋಡಿ ತಿಳಿಯತಕ್ಕದ್ದು.)

ವೀರಶೈವಮತಬಾಂಧವರಲ್ಲಿ ವಿಜ್ಞಾಪನೆ.

ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಬೆಂಗಳೂರಿಗೆ ಪರಸ್ಥಳದಿಂದ ಬರತಕ್ಕ ಸ್ವಮತ ಪರಮತೀಯರು ಇಳಿದುಕೊಳ್ಳಲು ಸರಿಯಾದ ಸ್ಥಳವಿಲ್ಲದಿರುವ ತೊಂದರೆಯನ್ನು ತಿಳಿದು ತಮ್ಮ ಆಸ್ವಾರ್ಜಿತ ದ್ರವ್ಯದಲ್ಲಿ ಲಕ್ಷಾಂತರ ರೂ. ಗಳನ್ನು ವೆಚ್ಚಮಾಡಿ ತಮ್ಮ ಸ್ವಂತ ಮೇಲ್ವಿಚಾರಣೆಯಲ್ಲಿ ರೈಲ್ವೆಸ್ಟೇಷನ್ನಿನ ಸಮೀಪದಲ್ಲಿ ಶಾಶ್ವತವಾದ ಮತ್ತು ದಿವ್ಯವಾದ ಸತ್ರವನ್ನು ಕಟ್ಟಿಸಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಂದ ಧರ್ಮಪ್ರವರ್ತಕರೆಂಬ ಪ್ರಶಸ್ತಿಯನ್ನೂ ಭರತಖಂಡದ ಸಾರ್ವಭೌಮರಿಂದ ರಾವ್‌ಬಹದ್ದೂರ್ ಎಂಬ ಪ್ರಶಸ್ತಿಯನ್ನೂ ಪಡೆದು ನಿರಂತರವೂ ಯಶಃಕಾಯರಾಗಿ ಮೆರೆಯುತ್ತಿರುವುದು ಲೋಕವಿದಿತವಾಗಿದೆ. ಹೀಗೆ ಪ್ರಯಾಣಿಕರ ವಸತಿಗೆ ಅನುಕೂಲ ಮಾಡಿ ಕೊಟ್ಟಿರುವುದಲ್ಲದೆ ೧ ಲಕ್ಷ ರೂಪಾಯಿಗಳನ್ನು ಸರ್ಕಾರಿ ಸೇವಿಂಗ್ಸ್‌ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ವೃದ್ಧ್ಯಂಶದಿಂದ ನಿರ್ಗತಿಕರಾದ ವೀರಶೈವ ವಿದ್ಯಾರ್ಥಿಗಳ ಅಶನವು ನಿರಾತಂಕವಾಗಿಯೂ ಸಾರೋದ್ಧಾರವಾಗಿಯೂ ನಡೆದುಕೊಂಡು ಹೋಗುವಂತೆ ತಕ್ಕೇರ್ಪಾಟನ್ನು ಮಾಡಿರುತ್ತಾರೆ. ಇವರ ಈ ಧರ್ಮವಿದ್ಯಾರ್ಥಿನಿಲಯದಲ್ಲಿ ವಿದ್ಯಾಭ್ಯಾಸಂಗ ಮಾಡಿದಂಥವರನೇಕರು ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಸರ್ಕಾರಿಯ ಕೆಲಸಗಳಲ್ಲಿ ಸೇರಿರುತ್ತಾರೆ. ಈಗಲೂ ಈ ನಿಲಯದಲ್ಲಿ ೬೫ ವಿದ್ಯಾರ್ಥಿಗಳವರೆಗೆ ಓದಿಕೊಂಡಿದ್ದಾರೆ.

ಇಂತಹ ಲೋಕೋಪಕಾರ ಮಾಡಿರುವ ತತ್ರಾಪಿ ವೀರಶೈವರಿಗೆ ಮಹೋಪಕಾರವನ್ನು ಮಾಡಿರುವ ಮಹಾಪುರುಷರ ಸ್ಮಾರಕವನ್ನೇರ್ಪಡಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಕರ್ತವ್ಯವೆಂಬುದನ್ನು 1913 ನೆಯ ವರ್ಷದಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಗಾಗಿ ರಾಜಧಾನಿಗೆ ದಯಮಾಡಿಸಿದ್ದ ವೀರಶೈವ ದೊಡ್ಡಮನುಷ್ಯರುಗಳು ಸಭೆಸೇರಿ ಪರ್ಯಾಲೋಚಿಸಿ, ಆಗ್ಗೆ ಕ್ರಯಕ್ಕೆ ಸಿದ್ಧವಾಗಿದ್ದ ಧರ್ಮಪ್ರವರ್ತಕರ ಭಾವಚಿತ್ರಪಟವನ್ನು ಕೊಂಡು ಧರ್ಮಸತ್ರದಲ್ಲಿ ಪ್ರತಿಷ್ಠಿಸಬೇಕೆಂದು ನಿರ್ಧರಿಸಿ ಈ ಕೆಳಗೆ ಕಂಡ ಪ್ರಕಾರ ಚಂದಾಹಣವು ಆ ಕೂಡಲೇ ಕೊಡಲ್ಪಟ್ಟಿತು.

ಮ|| ರಾ|| ಗಳಾದ

1. ಎಡೆಹಳ್ಳಿ ಶಾಂತಪ್ಪಸೆಟ್ಟರು	20—0—0
2. ಎಚ್. ಕೆ. ವೀರಬಸವಯ್ಯನವರು ಬಿ.ಎ. ಬಿ.ಎಲ್.	10—0—0
3. ಬೆಳ್ಳೂರು ನಂಜೇಗೌಡರು	10—0—0
4. ಎಚ್. ಬಸವೇಗೌಡರು	10—0—0
ಒಟ್ಟು	50—0—0

ಈ ಪ್ರಕಾರ 50 ರೂ. ಗಳ ಚಂದಾಹಣವು ಬಂದಿರುತ್ತದೆ. ಆದರೆ ಮುಂದೆ ತಕ್ಕ ಪ್ರಯತ್ನವು ನಡೆಯದೆ ಹೋದುದರಿಂದ ಆ ಕಾರ್ಯವು ಈ ವರೆಗೂ ನಿಲ್ಲಬೇಕಾಗಿ ಬಂದಿತು. ಇನ್ನುಮುಂದೆ ಈ ಸ್ಮಾರಕ ಕಾರ್ಯವನ್ನು ಆದಷ್ಟು ಜಾಗ್ರತೆಯಲ್ಲಿ ನೆರವೇರಿಸದೆ ಬಿಡುವುದು ಸರಿಯಲ್ಲವಾದುದರಿಂದ ಪ್ರತಿಯೊಬ್ಬ ವೀರಶೈವರೂ ನಿರ್ವಂಚನೆಯಿಂದ ಯಥಾಶಕ್ತಿ ಚಂದಾಹಣವನ್ನು ಈ ಕೆಳಗೆ ಕಂಡ ಹೆಸರಿಗೆ ಜಾಗ್ರತೆಯಲ್ಲಿ ಕಳುಹಿಸಿಕೊಟ್ಟು ಅಭಿಮಾನಪ್ರದರ್ಶನ ಮಾಡುವವರಾಗಬೇಕೆಂದು ಕೋರುವ,

ತಮ್ಮ ವಿಧೇಯ,
ಜಿ. ಪರಮಶಿವಯ್ಯ, ಬಿ.ಎ., ಎಲ್.ಎಲ್.ಬಿ.,
ಅ|| ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು.

ಪತ್ರವ್ಯವಹಾರ.

ರಥೋತ್ಸವ ಸಮಾರಂಭವು.

ವಿರಕ್ತಮಠ ಜಡೆ ತಾ|| ಸೊರಬ.

ಈವೇ ರೌದ್ರಿ ಸಂವತ್ಸರದ ಮಾಘ ಶುದ್ಧ ೧೫ (ತಾ|| ೨೨-೨-೨೧) ನೆ ಮಂಗಳವಾರದಿಂದ ಶ್ರೀ ಗುರುಗಳ ರಥೋತ್ಸವ ಕಾರ್ಯಗಳು ಪದ್ಧತಿ ಪ್ರಕಾರ ಈ ನಮ್ಮ ಜಡೆ ವಿರಕ್ತಮಠದಲ್ಲಿ ನೆರವೇರಿಸಲ್ಪಡತಕ್ಕವಿರುತ್ತವೆ. ಅಲ್ಲದೆ ಈ ರಥೋತ್ಸವ ಕಾಲದಲ್ಲಿಯೆ ವೀರಶೈವ ಧರ್ಮೋತ್ತೇಜಕ ಸಭೆಯು ಸಹ ಈ ಜಡೆ ವಿರಕ್ತ ಮಠದಲ್ಲಿ ಕೂಡಿಸಲ್ಪಡತಕ್ಕದ್ದೆಂದು ನಿಶ್ಚಯಿಸಲ್ಪಟ್ಟಿರುತ್ತದೆ. ಪ್ರಿಯಯುಕ್ತ ವೀರಶೈವ ಮತಾಭಿಮಾನಿಗಳಾದ ಸರ್ವರೂ ಈ ಕಾರ್ಯಗಳ ಸಲುವಾಗಿ ಒಂದು ದಿವಸ ಮುಂಚಿತವಾಗಿಯೇ ಇಲ್ಲಿಗೆ ಆಗಮಿಸಿ ಗುರು ಗದ್ದಿಗೆಯ ದರ್ಶನಾದಿಗಳಿಂದುಂಟಾಗತಕ್ಕ ವಿಶೇಷ ಫಲಗಳಿಗೆ ಭಾಗಿಗಳಾಗತಕ್ಕದ್ದಲ್ಲದೆ ಸಭಾಕಾರ್ಯಗಳನ್ನು ಸಾಂಗಗೊಳಿಸಿ ಮತಶ್ರೇಯೋವೃದ್ಧಿ ಕಾರ್ಯಗಳಿಗೆ ಉತ್ತೇಜನವನ್ನುಂಟುಮಾಡಬೇಕೆಂದು ಅಪೇಕ್ಷಿಸುತ್ತೇವೆ.

I. ರಥೋತ್ಸವ ಕಾರ್ಯಗಳ ವಿವರ:—1. ಮಾಘಶುದ್ಧ ೧೫ (ತಾ|| ೨೨-೨-೨೧) ನೆ ಮಂಗಳವಾರ ಸಾಯಂಕಾಲ ಪುಷ್ಪ ರಥಾರೋಹಣ. 2. ಮಾಘ ಬಹುಳ ೧ (ತಾ|| ೨೩-೨-೨೧) ನೆ ಬುಧವಾರ ಸಾಯಂಕಾಲಕ್ಕೆ ಮಹಾರಥಾರೋಹಣ. 3. ಮಾಘ ಬಹುಳ ೨ (ತಾ|| ೨೪-೨-೨೧) ನೆ ಗುರುವಾರ ಪರಸ್ಥಳದಿಂದ ಬರತಕ್ಕ ಅನಾಥ ವೀರಶೈವ ವಟುಗಳ ಮಾಹೇಶ್ವರ ದೀಕ್ಷಾ ಸಂಸ್ಕಾರ. 4. ಬಹುಳ ೩ (ತಾ|| ೨೫-೨-೨೧) ನೆ ಶುಕ್ರವಾರ ಮಂಗಳಸ್ನಾನ.

II ವೀರಶೈವ ಧರ್ಮೋತ್ತೇಜಕ ಸಭೆಯ ನಿಬಂಧನೆಗಳು:—1. ಸಭೆಯು (ತಾ|| ೨೪-೨-೨೧) ನೆ ಗುರುವಾರ ಮತ್ತು (ತಾ|| ೨೫-೨-೨೧) ನೆ ಶುಕ್ರವಾರ ಈ ಎರಡು ದಿವಸಗಳಲ್ಲಿಯೂ ಹಗಲು ೧೨ ಗಂಟೆಗೆ ಪ್ರಾರಂಭವಾಗಿ ಮತ ಶ್ರೇಯೋವೃದ್ಧಿಗೆ ಸಾಧನ ಭೂತಗಳಾದ ಧಾರ್ಮಿಕ ಸಾಮಾಜಿಕಾದಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟು ಸಂಜೆ ೫ ಗಂಟೆಗೆ ಮುಕ್ತಾಯವಾಗಲ್ಪಡತಕ್ಕದ್ದು.

ಸೂಚನೆ:—ಪರಸ್ಥಳದಿಂದ ಬರತಕ್ಕ ಮಹನೀಯರುಗಳ ಭೋಜನ ಮತ್ತು ವಾಸ ಇವುಗಳ ಬಗ್ಗೆ ಯೋಗ್ಯ ವ್ಯವಸ್ಥೆಯು ಮಾಡಲ್ಪಡುವುದು.

ಚನ್ನವೀರಯ್ಯನವರು, ಸಭಾ ಕಾರ್ಯದರ್ಶಿ,
ಮತ್ತು ಸರ್ವಾಧಿಕಾರಿ, ವಿರಕ್ತಮಠ.

ಸಿಡ್ಲಘಟ್ಟದ ವರ್ತಮಾನಗಳು.

ಇಲ್ಲಿನ ಮ್ಯುನಿಸಿಪಾಲಿಟಿಯ ರಸ್ತೆ ಮತ್ತು ಚರಂಡಿ ಮೊದಲಾದವುಗಳ ಕಾಮಗಾರಿಗಳು ರಿಪೇರಿ ಕೆಲಸಗಳು ಈಗ್ಗೆ 3 ವರ್ಷಗಳಿಂದಲೂ ನಡೆಯದೆ ಇರುವದರಿಂದ ಜನರಿಗೆ ಅನಾನುಕೂಲವಾಗಿದೆ. ಹೋದ ವರ್ಷಕ್ಕೆ ಮಂಜೂರಾಗಿರುವ ಕಾಂಗಾರಿಯನ್ನು ಈವರೆಗೂ ಮಾಡಿಸದಿರುವದರಿಂದ, ಈಸಾಲಿಗೆ ಖರ್ಚು ಆಗುವದನ್ನು ಉಳಿಸಿದಂತಾಯಿತಲ್ಲದೆ, ಜನರಿಗೇನೂ ಅನುಕೂಲವಾಗಲಿಲ್ಲ. ಲಾಂದ್ರಗಳು ಕಂಟ್ರಾಕ್ಟು ಕೊಡುವದಾಗಿ ಟೆಂಡರು ಕೇಳಿದ್ದ ಮೇರೆಗೆ ಕೆಲವರು ಕೊಟ್ಟ ಟೆಂಡರಿಗೆ ಜವಾಬಿಲ್ಲದೆ, ಅಮಾನಿಯಲ್ಲಿ ಹಚ್ಚಲ್ಪಡುತ್ತಿವೆ. ಈಗ ರಾತ್ರಿ 10 ಗಂಟೆಗೆ ದೀಪ ಆರಿಹೋದರೂ ಯಾರವೇಲೂ ಆಕ್ಷೇಪಣೆಬಾರದೆ, ಕಂಟ್ರಾಕ್ಟುದಾರನು ಸರಿಯಾಗಿ ದೀಪ ಉರಿಸುವದಿಲ್ಲವೆಂಬ ಒಂದು ನೆಪ ಹೇಳುವದು ಆಶ್ಚರ್ಯವಾಗಿದೆ. ಟೌನ್ ಪೋಲೀಸ್ ಸ್ಟೇಷನ್ ಈಗ್ಗೆ 6 ವರುಷಗಳಿಂದಲೂ ಆಗುವದರಲ್ಲಿಯೇ ಇದೆ. ಜಾಗ್ರತ ಏರ್ಪಡಿಸಿದರೆ ಊರಿಗೆ ಕ್ಷೇಮವಾದೀತು. ಬಾಯ್ಸ್‌ಸ್ಕೌಟ್ ಅಸಿಸ್ಟೆಂಟ್ ಡೈರೆಕ್ಟರವರಾದ ಮ|| ಬಿ. ತಿರುಮಲಾಚಾರ್, ಬಿ. ಎ. ಯವರು ಇದೇ 12 ನೆಯ ತಾರೀಖಿನ ದಿನ ಈ ಊರಿಗೆ ದಯಮಾಡಿಸಿದ್ದು, ಸ್ಕೌಟ್ ವಿದ್ಯಾರ್ಥಿಗಳ ಆಟಪಾಟಗಳನ್ನು ಪರಾಂಬರಿಸಿ, ಹೆಚ್ಚಿನ ಮಾಹಿತಿಯನ್ನು ಸ್ಕೌಟ್ ಮಾಸ್ತರುಗಳಿಗೆ ತಿಳಿಸಿದರು. ಈ ದಿನ ಸಾಯಂಕಾಲ ಈ ಊರಿನ ಪ್ರಜಾಪ್ರಮುಖರೂ, ಅಧಿಕಾರಿಗಳೂ, ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳ ಪೋಷಕರೂ, ನೂರಾರು ಮಂದಿ ಸೇರಿ ಇಲ್ಲಿನ ಪ್ರಜಾಮಿತ್ರಮಂಡಲಿಯ ಪ್ರಸಿಡೆಂಟರಾದ ಮ|| ಎಸ್. ಹಂಪಯ್ಯನವರ ಅಧ್ಯಕ್ಷತೆಯಲ್ಲಿ ಎ. ವಿ. ಸ್ಕೂಲಿನಲ್ಲಿ ಒಂದು ಸಭೆಯನ್ನು ನಡಿಸಿದರು. ಆಗ್ಗೆ ಸ್ಕೌಟ್ ಅಸಿಸ್ಟೆಂಟ್ ಡೈರೆಕ್ಟರವರು ದಯಮಾಡಿ ಉಪನ್ಯಾಸಮಾಡಿದ್ದರಿಂದ ಜನರಿಗೆ ದೇಶಸೇವೆಯ ಮಾರ್ಗವು ಪ್ರಕಾಶವಾಯಿತು. ಅಧ್ಯಕ್ಷರವರು ಸ್ಕೌಟರುಗಳಿಂದ ನಮ್ಮ ಸೀಮೆಯ ಕೆಲವು ಕಡೆ ಆಗಿರುವ ಅಸಾಧಾರಣವಾದ ಉಪಕಾರವನ್ನೂ ಇದರ ನಿರ್ಮಾಣಕರ್ತರುಗಳಾದ ನಮ್ಮ ಖಾವಂದರವರ ಉದ್ದೇಶವನ್ನೂ ವಿಶದಪಡಿಸಿದ್ದಲ್ಲದೆ, ಈ ಊರಿನಲ್ಲಿ "ಸ್ಕೌಟ್ ಅಸೋಸಿಯೇಷನ್" ಏರ್ಪಡುವದು ಉತ್ತಮವೆಂದು ಸೂಚಿಸಿದರು. ಅದರಂತೆ ಸಿಡ್ಲಘಟ್ಟದ ತಾಲ್ಲೂಕು ಲೋಕಲ್ ಸ್ಕೌಟ್ ಅಸೋಸಿಯೇಷನ್ ಎಂಬ ಹೆಸರಿನ ಸಂಘವು ಏರ್ಪಟ್ಟು ಅದರ ಪ್ರಸಿಡೆಂಟರಾಗಿ ತಾಲ್ಲೂಕು ಅಮಲ್ದಾರರವರು ಇರುವಂತೆಯೂ, ಮ|| ಎಸ್. ಹಂಪಯ್ಯನವರೂ, ಎ. ವಿ. ಸ್ಕೂಲು ಹೆಡ್ಮಾಸ್ತರವರೂ ಸೇರಿ ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಇರುವಂತೆ ಸರ್ವಾನುಮತಿಯಿಂದ ತೀರ್ಮಾನವಾಯಿತು. ವಿದ್ಯಾರ್ಥಿಗಳಲ್ಲದೆ ವಯಸ್ಕರಾದ ಕೆಲವರು ಸೇರಿದ ಸೀನಿಯರ್ಸ್ ಸ್ಕೌಟ್ ಕೋರ್, ಎಂಬ ಒಂದು ಗ್ರೂಪು ಏರ್ಪಡುವದೆಂದು ತಿಳಿಯಬರುತ್ತದೆ. ದೇಶ ಸೇವೆಯಲ್ಲಿ ಮುಂದುವರಿಯಲು ಪ್ರಯತ್ನಿಸುವ ಇವರಿಗೆ ದೇವರು ಶುಭವನ್ನುಂಟುಮಾಡಲೆಂದು ಪ್ರಾರ್ಥನೆ.

ಒಬ್ಬ ಸಭಿಕ.

ಬಟ್ಟೂರು.

ಸಾಂಗಲೀ ಸಂಸ್ಥಾನ-ಶಿರಹಟ್ಟಿ ತಾಲ್ಲೂಕು ಪೈಕಿ ಬಟ್ಟೂರೆಂಬ ಸಣ್ಣ ಗ್ರಾಮವಿರುವುದು. ಈ ಗ್ರಾಮದಲ್ಲಿ ವೀರಶೈವರು ಸ್ವಲ್ಪ ಜನರಿದ್ದಾಗ್ಯೂ ಇಲ್ಲಿರುವ ಬ್ರಾಹ್ಮಣ ಮಂಡಳಿಯವರೂ ಇತರ ಸಮಾಜದವರೂ ಕೇವಲ ಭಕ್ತಿವಂತರೂ ಪರಸ್ಪರ ಸಹಾನುಭೂತಿಯುಳ್ಳವರೂ ಇರುವದರಿಂದ, ಈ ಗ್ರಾಮಕ್ಕೆ ಅನೇಕ ಶ್ರೀ ಸ್ವಾಮಿಗಳವರು ಆಗಮಿಸಿ ಈ ಗ್ರಾಮದ ಸರ್ವಭಕ್ತ ಮಂಡಳಿಯವರಿಗೂ ದರ್ಶನಾಶೀರ್ವಾದಗಳನ್ನು ಕೊಡುತ್ತಾ ಇರುತ್ತಾರೆ. ಇಲ್ಲಿಯ ವೀರಶೈವರಲ್ಲಿ ಪ್ರಮುಖರಾಗಿದ್ದ ಹಿರೇಮಠದ ಚನ್ನವೀರಯ್ಯನವರೆಂಬುವರು ಶಿವಾಧೀನವಾದೀಚೆಗೆ ವೀರಶೈವರಲ್ಲಿ ಪರಸ್ಪರ ಮನಸ್ತಾಪಗಳುಂಟಾಗಿ ಎರಡು ಪಂಗಡಗಳುಂಟಾಗಿದ್ದವು. ತಾರೀಖು ೯-೧-೧೯೨೧ ನೆ ದಿವಸ ದಾವಣಗೆರೆ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಹಿರೇಮಠದ ರಾಚಯ್ಯನವರು ವ ಸೂರಣಗಿ ಮಲ್ಲಪ್ಪ ಇವರ ಪ್ರಾರ್ಥನೆಯ ಮೇರೆಗೆ ದಯಮಾಡಿಸಿದರು. ಈ ದಿವಸವೇ ಸಂಗೀತ ಸ್ವಾರಸ್ಯಪರರಾದ ಸೆಂಗಳಿಯಂಬುವರಿಂದ ಸುಶ್ರಾವ್ಯ ಶಿವಕೀರ್ತನೆಯಾಯಿತು. ಬಟ್ಟೂರ ಗ್ರಾಮದಲ್ಲಿ ಪೈರು ಚನ್ನಾಗಿ ಬಾರದೆ ಜನರಿಗೆ ಬಹಳ ತೊಂದರೆ ಇದ್ದರೂ ಭಕ್ತಿಪರರಾದ ಇಲ್ಲಿಯ ಜನರು ಶ್ರೀ " " ಗಳವರ ಸೇವೆಯಲ್ಲಿ ನಿರತರಾಗಿದ್ದರು. ಕೀರ್ತನಾಂತದಲ್ಲಿ ಶ್ರೀಯುತ ಬಸೆಟ್ಟೆಪ್ಪ ಶೆಟ್ಟಿ ಇವರಿಂದ ವಿದ್ಯಾ ಮತ್ತು ವ್ಯವಸಾಯ ಸುಧಾರಣೆ ವಿಷಯವೂ ವೇ|| ಚನ್ನಬಸವಯ್ಯ ಹೇಮಗಿರಿಮಠ ಇವರಿಂದ ಸಮಾಜ ಸುಧಾರಣೆಯ ಐಕಮತ್ಯದ ವಿಷಯವೂ ಆ ಮೇಲೆ ಶ್ರೀ " " ಸನ್ನಿಧಾನದಿಂದ ಸತ್ಯ, ಸದಾಚಾರ, ಭಕ್ತಿ ಮಹತ್ವ ಈ ವಿಷಯಗಳೂ ತಿಳಿಸಲ್ಪಟ್ಟವು. ಮಾರನೇ ದಿವಸ ವೀರಶೈವರಲ್ಲಿಯ ಮನಸ್ತಾಪಗಳನ್ನು ನಿವಾರಿಸಿ, "ಹಿತೋಪದೇಶಕ" ಸಂಘವು ಅವಶ್ಯ ಇರಬೇಕೆಂದು ಅಪ್ಪಣೆಯಾದ ಮೇರೆಗೆ ಸಂಘಸ್ಥಾಪನೆಯಾಗಿ ಸಂಘದ ವತಿಯಿಂದ ಲೈಬ್ರರಿ (ವಾಚನಾಲಯ) ಯೂ ಸ್ಥಾಪಿತವಾಗಿ, ಬಸೆಟ್ಟೆಪ್ಪ ಶೆಟ್ಟಿ ಇವರು ಪ್ರಸಿಡೆಂಟರಾಗಿಯೂ, ಮುರಿಗೆಯ್ಯನವರು ವೈಸ್ ಪ್ರಸಿಡೆಂಟರಾಗಿಯೂ, ಚಿದಂಬರರಾವ ಕುಲಕರ್ಣಿಯವರು ಚೇರಮನ್ನರಾಗಿಯೂ, ಹೆಡ್‌ಮಾಸ್ತರರು ಸೆಕ್ರೆಟರಿಯಾಗಿಯೂ, ೧. ರಾಚಯ್ಯ ಹಿರೇಮಠ ೨. ಸಿದ್ರಾಮಯ್ಯ ಬಾಳೆಹಳ್ಳಿ ಮಠ ೩. ಕೆಂಚನಗೌಡ ಪಾಟೀಲ ೪. ಪರಪ್ಪ ದಂಡಣ್ಣವರ ೫. ಬಸಪ್ಪ ಅಂಗಡಿ ೬. ಮಲ್ಲೇಶಪ್ಪ ಗಾಣಗೇರ ೭. ಫಕ್ಕೀರಪ್ಪ ಮೇಟಿ ೮. ಬಾಳಪ್ಪ ಕುಲಕರ್ಣಿ ೯. ಗೋವಿಂದರಾವ ಕುಲಕರ್ಣಿ ೧೦. ಬಸೆಟ್ಟೆಪ್ಪ ಅಂಗಡಿ ಇವರು ಮ್ಯಾನೇಜಿಂಗ್ ಕಮಿಟಿ ಮೆಂಬರರಾಗಿಯೂ ನೇಮಿಸಲ್ಪಟ್ಟರು. ಈ ಕೆಳಗೆ ಕಂಡಂತೆ ಆಶ್ರಯವು ದೊರೆಯಿತು. ೧. ಮೈಸೂರು ಸ್ಟಾರ್ ಶ್ರೀಗಳವರಿಂದ ಆಶೀರ್ವಾದ ೨. ಚಂದ್ರೋದಯ ರಾಚಯ್ಯ ಹಿರೇಮಠ ಇವರಿಂದ ೩. ಕರ್ನಾಟಕ ಟೈಮ್ಸ್, ೪. ವಾಸಿಕ ಪತ್ರ ೧ ಬಸೆಟ್ಟೆಪ್ಪ ಶೆಟ್ಟಿಯವರಿಂದ ೫. ಸದ್ಗುರು ಮಾಸಪತ್ರ ತಿಪ್ಪಣ್ಣ ಗಾಂಜಿ ಇವರಿಂದ ೬. ಕರ್ನಾಟಕ ಮಿತ್ರ ಪರಪ್ಪ ದಂಡಣ್ಣವರ ಇವರಿಂದ. ಈ ಪ್ರಕಾರ ೬ ಪತ್ರಿಕೆಗಳನ್ನು ತರಿಸಿಕೊಡಲು ವಾಗ್ದಾನವಾಗಿ ತತ್‌ಕ್ಷಣವೇ ಪತ್ರಿಕೆಗಳಿಗೆ ಬರೆಯಬೇಕೆಂದು ನಿರ್ಧರಿಸಲಾಯಿತು. ಐಕಮತ್ಯವಾದರೆ ಯಾವ ಕೆಲಸವಾನೇ ಅಸಾಧ್ಯ? ಶ್ರೀ ಗುರುಗಳವರ ಅಪ್ಪಣೆಯಿಂದ ಸ್ಥಾಪನೆಯಾಗಿರುವ ಈ ಹಿತೋಪದೇಶಕ ಸಂಘದ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವದು ಬಟ್ಟೂರು ಪ್ರಮುಖ ಜನರ ಮುಖ್ಯ ಕರ್ತವ್ಯವಾಗಿದೆ. ಧಾರವಾಡ ಹಾವೇರಿ ಪೇಟೆ ಮುರುಘಾಮಠದ ಶ್ರೀ ಬೋರ್ಡಿಂಗಿಗೆ ಬಟ್ಟೂರ ಭಕ್ತ ಜನಗಳು ಶಕ್ತ್ಯನುಸಾರ ಸೇವೆಯನ್ನು ಒಪ್ಪಿಸಿದರು. ಅದರ ವಿವರ—ರಾಚಯ್ಯನವರು ಹಿರೇಮಠ ವರ್ಷಕ್ಕೆ ೧೨ ರೂ. ಕೆಂಚನಗೌಡ ಪಾಟೀಲ ವರ್ಷಕ್ಕೆ ೪ ರೂ. ಮಲ್ಲಪ್ಪ ವ ಹೂವಣ್ಣ ಸೂರಣಗಿ ವರ್ಷಕ್ಕೆ ೧೨ ರೂ. ಮಲ್ಲನಗೌಡ ಪಾಟೀಲ ಕುಂದ್ರಳ್ಳಿ ವರ್ಷಕ್ಕೆ ೨ ರೂ. ಈ ಪ್ರಕಾರ ವರ್ಷಾಶನ ಒಪ್ಪಿಸುವುದಾಗಿ ಪ್ರಾರ್ಥಿಸಿಕೊಂಡರು. ಅಕ್ಕಿಗುಂದ ಮಠದ ಉದ್ದಾನಯ್ಯನವರು ಬೋರ್ಡಿಂಗ್ ವಿದ್ಯಾರ್ಥಿಗಳಿಗಾಗಿ (೧೦೦೫) ಒಂದು ಸಾವಿರ ಐದು ಉತ್ತಮ ಮಾವಿನ ಹಣ್ಣುಗಳನ್ನು ಕಳಿಸಲು ಒಪ್ಪಿದರು.

ಪ್ರತ್ಯಕ್ಷದರ್ಶಿ.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೆರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

2 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



18

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವುವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇದನ್ನು ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—0—0.

ರೈಲ್ವೆಲೀವರ್ ವಾಚ್.

5 ವರ್ಷ ಗ್ಯಾರಂಟಿ; 15 ಬಹುಮಾನಗಳು ಸಹಿತ 5—0—0

ಇದು ಒಳ್ಳೇ ಮಜಬೂತಾಗಿ ಘಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ಇವು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್ಮೆಂಟ್ಸ್‌ಗಳಿಂದ ಮಾಡಿ ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿದೆ. ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಂದನ್ನು ತರಿಸಿ ನೋಡಿರಿ. ಈ ನಮ್ಮ ಗಡಿಯಾರವು ಲೋಕ ಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.—ತುರಾಯಿ 1, ಶಾವಂತಿಗೆ ಹುವ್ವು 1, ಸೆಂಟ್‌ಬಾಟಲ್ 1, ದಂತದ ಬಾಚಣಿಗೆ 1 ಸರಪಣಿ 1, ಉತ್ತರಮುಖಿ 1, ದಂತದ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು ೪, ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಉಂಗುರ 1, ರಾಗಮಾಲಿಕೆ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 5-0-0.



Elgin Watch Co.,
89 Narayana Mudaly Street, Madras.

ರಕ್ತಶೋಧಕ ! ಮನೋಲ್ಲಾಸಿಕವೆಂಬ ಧಾತುಪ

ಮಹಾದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ ಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆ ದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇ ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬ ರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂ ಯುವುದು, ತಲ್ದಿಶಳೆ, ಚುರುಕು, ಉಷ್ಣ, ಬಿಳುವು, ಹಸರು ಹ ದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗ ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋ ನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸಿ ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾ ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯು ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಫೆ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರ ವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರ ಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳ ಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತ ದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯರು ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರು ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾ ಕಜ್ವರ, ಸರ್ಪಜ್ವರ, ದಿನಬಿಟ್ಟು ದಿನ ಬರುವ ಜ್ವರ, ವಾತಜ್ವರ, ಪಿ ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿ ಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉ ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪಾ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ ನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬ

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾ

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲ ತೋ, ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂ ನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಯಾರ 1ಕ್ಕೆ 6—8—0. 18

S. R. Krishna & Co.,
89, Narayana Mudaly Street, Madr

೧೯೨೧ ನೆಯ ಇಸವಿ ಜನವರಿ ತಾ|| ೨೩ರಿಂದ ೧೯೨೧ ನೆಯ ಜನವರಿ ತಾ|| ೨೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ರೌದ್ರಿನಾಮ ಸಂವತ್ಸರದ ಪುಷ್ಯಶುದ್ಧ ಪೌರ್ಣಿಮೆಯಿಂದ ಪುಷ್ಯಬ ಷಷ್ಠಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
23	ಭಾನು	ಪೌ.ಉ	2-28 54-9	ಪುನ	24-55
24	ಸೋಮ	ಪಾಡ್ಯ	50-38	ಪುಷ್ಯ	20-40
25	ಮಂಗಳ	ಬಿದಿ	45-7	ಆಶ್ಲೆ	16-43
26	ಬುಧ	ತದಿ	40-3	ಮಖಾ	13-12
27	ಗುರು	ಚೌತಿ	35-46	ಪೂಫ	10-12
28	ಶುಕ್ರ	ಪಂಚ	32-22	ಉಫ	8-3
29	ಶನಿ	ಷಷ್ಠಿ	30-1	ಹಸ್ತ	6-51

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕೃಷಾ | ಘನಪಥಕೃತಾವತಾರಾ ಪಕ್ಷ್ಯಜ್ಞನಪ್ರಕ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಿನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೇಯ ಇಸವಿ ಜನವರಿ ತಾರೀಖು ೩೦ ನೇಯ ಭಾನುವಾರ. (ಸಂಚಿಕೆ ೫

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗೆಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮು, ಉಬ್ಬಸ, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರುವಂತಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
4 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ. ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಶಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ವಾತಿಮುಕ್ತಾವಳಿ ೮ಆಣೆ; ರತ್ನಾಕರ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಪೂಜಾವಿಧಿ	೦—೧೪—೦
ಲೀಲಚರಿತ್ರೆ	೦— ೯—೦
ಸಿ	೦— ೬—೨

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋವೆಂಟ್ಸ್‌ಗಳಿಂದ ಮಾಡಿದೆ. ಘಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್‌ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.

ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

44 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮಾಟೊಗ್ರಾಫ್.

44

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾ ದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರದಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ವಾಪಸ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಪೊಕ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಲಟಿಸೂರೆ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗಿತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 49

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯಕ್ಷ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0.
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕೆಡುವುದು. ಬಹಳಕ್ಕೆ ಗ್ಯಾರಂಟಿ ಕೊಡುವೆವು. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 1—4—0

19

ವಜ್ರದ ಗುಂಡಿಗಳು.

ಈ ಗುಂಡಿಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಲಾಗಿದೆ. ನೋಡುವವರು ಸಾಚಾವಜ್ರದ ಗುಂಡಿಗಳೆಂದೆ ಹೇಳುವರು. ಈ ಗುಂಡಿಗಳು ಆಸ್ಟ್ರೇಲಿಯಾ ದೇಶದಲ್ಲಿ ತಯಾರಿಸಿದ್ದು. ಷರಟು, ಕುಪ್ಪಸ, ಜಾಕೀಟು ಮುಂತಾದವುಗಳಿಗೆ ಪ್ರತಿಯೊಬ್ಬರೂ ಹಾಕಿಕೊಳ್ಳಬಹುದು.

ಕ್ರಯ 4 ಗುಂಡಿಗಳ ಸೆಟ್ 1ಕ್ಕೆ 1—4—0.

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದು ಹಚ್ಚುವುದಕ್ಕೆ ಬೆಂಕಿಕಡ್ಡಿ ಅಗತ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆಗೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕತವೇ ಇರುವುದಿಲ್ಲ. ಬೀಡಿ ಸಿಗರೇಟು ಸೇದುವವರಿಗೂ ಪ್ರಯಾಣಿಕರಿಗೂ ಬೇಕಾದ್ದು.

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಜನವರಿ ತಾ|| ೩೦ ನೆಯ ಭಾನುವಾರ.

ಎಚ್. ಎಚ್. ಆಗಾಖಾನರ ಸದಭಿಪ್ರಾಯಗಳು.

ಪ್ರಕೃತದಲ್ಲಿ ಚರ್ಚಾಸ್ಪದಗಳಾಗಿರುವ ಮುಖ್ಯವಾದ ವಿಷಯಗಳನ್ನು ಕುರಿತು ಎಚ್. ಎಚ್. ಆಗಾಖಾನರು ಮೊನ್ನೆ ತಾನೇ ಬೊಂಬಾಯಿಯಲ್ಲಿ ಇಳಿದಾಗ್ಗೆ ಅಲ್ಲಿಯ ಒಬ್ಬ ಪತ್ರಿಕಾ ಪ್ರತಿನಿಧಿಯು ಮಾಡಿದ ಪ್ರಶ್ನೆಗೆ ತಮ್ಮ ಅಭಿಪ್ರಾಯಗಳನ್ನು ಉತ್ತರರೂಪವಾಗಿ ತಿಳಿಯಿಸಿದ್ದಾರೆ. ಈ ಆಗಾಖಾನರು ಆಂಗ್ಲಪ್ರಭುತ್ವದವರ ಪ್ರೀತಿವಿಶ್ವಾಸ ಗೌರವಗಳಿಗೆ ಪಾತ್ರರಾದ ದೊಡ್ಡ ಮನುಷ್ಯರಾಗಿರುತ್ತಾರೆ. ಭಾರತೀಯ ಪ್ರಜೆಗಳಾದರೂ ಇವರನ್ನು ಹಾಗೆಯೇ ಪ್ರೀತಿಸುತ್ತಾರೆ. ಇದರ ಮೇಲೆ ಇವರು ಸ್ವತಂತ್ರಪುರುಷರೂ ರಾಜತಂತ್ರಜ್ಞರೂ ಖೋಜಾಮಹಮ್ಮದೀಯರ ಗುರುಗಳೂ ಆಗಿರುತ್ತಾರೆ. ಆದುಕಾರಣ ಇವರ ಅಭಿಪ್ರಾಯಗಳು ಪ್ರಭುಗಳಿಗೂ ಪ್ರಜೆಗಳಿಗೂ ಸಹ ಸಮಾದರಣೀಯವಾಗತಕ್ಕವುಗಳೇ ಸರಿ. ಪ್ರಕೃತದಲ್ಲಿ ವೈಸರಾಯಿ ಪದವಿಗೆ ರೀಡಿಂಗ್ ಪ್ರಭುಗಳನ್ನು ನಿಯಮಿಸಿದುದನ್ನು ಇವರು ಅಭಿನಂದಿಸುತ್ತಾರೆ. ಭರತಖಂಡದ ಅವಶ್ಯಕತೆಯೇನೆಂಬುದನ್ನು ರೀಡಿಂಗ್ ಪ್ರಭುಗಳು ತಿಳಿದುಕೊಂಡು ಸೂಚನೆಕೊಟ್ಟರೆ ಇವರ ಮಾತನ್ನು ಆಂಗ್ಲಪ್ರಭುತ್ವದವರು ಅಸಡ್ಡೆಮಾಡದೆ ಗೌರವಿಸುವರೆಂದು ಇವರ ಭಾವ. ಮುಖ್ಯವಾಗಿ ತುರ್ಕಿ ಸಂಧಿನಿಬಂಧನೆಗಳನ್ನು ಸಡಿಲಮಾಡಬೇಕಾದುದು ಅತ್ಯವಶ್ಯಕವೆಂದು ಇವರು ಹೇಳುತ್ತಾರೆ. ತುರ್ಕಿಸಂಧಿಯು ಅಸಂತೃಪ್ತಿಕರವಾಗಿರುವುದರಿಂದಲೇ ಈಗ ಪಾರಸೀಕ ದೇಶದಲ್ಲಿ ಅಕ್ರಮಗಳು ಪ್ರಾರಂಭವಾಗಿರುವುವೆಂದೂ, ತುರ್ಕಿಸಂಧಿಯನ್ನು ಸುಧಾರಣೆಗೊಳಿಸುವವರೆಗೂ ಪರ್ಷಿಯಾದವರ ಅನುಮಾನವು ತೊಲಗುವುದಿಲ್ಲವೆಂದೂ, ಆದುಕಾರಣ ಅದನ್ನು ಸುಧಾರಿಸಲಿಕ್ಕೆ ಇಂಗ್ಲೀಷರೇ ಮುಂದಾಗಿ ಪ್ರವರ್ತಿಸಿದರೆ ಅವರ ಪ್ರತಿಷ್ಠೆ ಹೆಚ್ಚುವುದಲ್ಲದೆ ಫ್ರಾನ್ಸ್ ಇಟಲಿ ಪ್ರಭುತ್ವಗಳವರೂ ಅವರನ್ನೇ ಅನುಸರಿಸುವರೆಂದೂ, ಮಿತ್ರಮಂಡಲಿಯವರ ಸಹಾಯವಿಲ್ಲದಿದ್ದರೆ ಗ್ರೀಕರು ತುರ್ಕಿಭಾಗವನ್ನು ಜಯಿಸಲಾರರೆಂದೂ, ಅವರು ಜಯಶೀಲರಾಗದೆಹೋದರೆ ಗ್ರೀಕಿಗೆ ಸಂಬಂಧಪಟ್ಟ ನಿಬಂಧನೆಗಳೆಲ್ಲಾ ನಿಷ್ಪ್ರಯೋಜನಗಳಾಗುವುವೆಂದೂ, ಹಾಗೆ ಮಾಡಿಕೊಳ್ಳುವುದಕ್ಕಿಂತಲೂ ಈಗ ಗ್ರೀಸಿನಲ್ಲಿ ರಾಜಪ್ರಭುತ್ವವು ಏರ್ಪಟ್ಟಿರುವುದರಿಂದ ಈ ಕಾರಣದ ಮೂಲಕ ಮಿತ್ರಮಂಡಲಿಯವರು ಉದಾರಚಿತ್ತದಿಂದ ತುರ್ಕಿ ಸಂಧಿಯನ್ನು ಸುಧಾರಿಸಬಹುದಾಗಿದೆಯೆಂದೂ ಹೇಳುತ್ತಾರೆ. ಇದನ್ನು ತುರ್ಕಿಯ ಮೇಲಣ ಅಭಿಮಾನದಿಂದ ಆಗಾಖಾನರು ಹೇಳುತ್ತಾರೆಂದು ನೆನಸಬಾರದು. ಈ ಮಾತೇ ಭಾರತೀಯರೆಲ್ಲರ ಮಾತಾಗಿದೆಯೆಂಬುದಕ್ಕೆ ಸಂಶಯವಿಲ್ಲ. ಗ್ರೀಕಿನಲ್ಲಿ ವೆನಿಜುಲಾಸ್ ಪ್ರಭುತ್ವವು ಅಳಿದು ಅದಕ್ಕೆ ವಿರುದ್ಧವಾಗಿ ಅಲ್ಲಿಯ ಪ್ರಜೆಗಳು ಕಾನ್‌ಸ್ಟಾಂಟೈನ್ ಪ್ರಭುತ್ವವನ್ನು ತಾವೇ ಏರ್ಪಡಿಸಿಕೊಂಡಿರುವುದರಿಂದ ಮಿತ್ರಮಂಡಲಿಯವರ ಹಂಗನ್ನು ಅವರೇ ಹರಿದುಕೊಂಡಂತಾಗಿದೆ. ಆ ಕಾರಣವನ್ನು ಪುರಸ್ಕರಿಸಿಕೊಂಡು ಸದ್ಯದ ಪೂರ್ವದೇಶದ ವಿಷಮಸ್ಥಿತಿಯನ್ನು ಗಮನಿಸಿ, ತುರ್ಕಿ ಯುವಸುಲ್ತಾನರು ಹೇಳುವ ಬೋಲ್ಷೆವಿಕ್ ಪ್ರಸಾರದ ಅನಾಹುತವನ್ನು ಅನುಲಕ್ಷಿಸಿ, ತುರ್ಕಿಯನ್ನೂ ಅದರ ಅಭಿಮಾನಿಗಳಾಗಿರುವ ಸಾಮ್ರಾಜ್ಯ ಪ್ರಜೆಗಳನ್ನೂ ಸಮಾಧಾನ ಪಡಿಸುವ ದೊಡ್ಡಲಾಭವನ್ನು ಗಮನಿಸಿ, ಸ್ಮರ್ನಾ ಥ್ರೇಸ್ ಭಾಗಗಳನ್ನು ತುರ್ಕಿಗೆ ಒಪ್ಪಿಸಿಬಿಡುವಂತೆ ಸಂಧಿನಿಬಂಧನೆಯನ್ನು ಸಂಸ್ಕರಿಸಿಬಿಟ್ಟರೆ ಸಾಮ್ರಾಜ್ಯಕ್ಕೆ ಎಷ್ಟೋ ವ್ಯಥೆಯು ತಪ್ಪಿಹೋದೀತು. ಈ ಸಮಯವನ್ನು ಆಂಗ್ಲ ಮಂತ್ರಿಮಂಡಲದವರು ಕಳೆದುಕೊಂಡರೆ ಅವರು ಯುದ್ಧಾರಂಭ ಇದುವರೆಗೆ ತೋರಿಸಿದ ರಾಜತಂತ್ರವಿಶಾರದತ್ವ ಗೌರವಕ್ಕೆಲ್ಲಾ ಮಸಿಹಚ್ಚಿದಂತಾಗುವುದು.

ಭರತಖಂಡದ ಸ್ವರಾಜ್ಯ ವಿಷಯವಾಗಿಯೂ ಆಗಾಖಾನರು ಕೆಲಮಾತುಗಳನ್ನಾಡಿದ್ದಾರೆ. ಭರತಖಂಡಕ್ಕೆ ಆಂಗ್ಲಸಾಮ್ರಾಜ್ಯಾಧೀನವಾದ ಸ್ವಪರಿಪಾಲನವು ದೊರೆದರೇ ಹಿತವಾಗುವುದೆಂದು ಇವರು ಅಭಿಪ್ರಾಯಪಡುತ್ತಾರೆ. ಅಂಥ ಸ್ವಪರಿಪಾಲನವು ದೊರೆದರೆ ಸಾಕು ಸ್ವತಂತ್ರಸಾಮ್ರಾಜ್ಯಗೌರವಗಳೆಲ್ಲಾ ಭರತಖಂಡಕ್ಕೆ ದೊರೆಯುವುವು. ಆಗ್ಗೆ ಭಾರತೀಯರು ಅಧಿನಿವೇಶನ ರಾಜ್ಯಗಳಲ್ಲಿ ತಮ್ಮ ಗೌರವಕ್ಕೆ ತಕ್ಕ ಸ್ಥಾನವನ್ನು ಪಡೆದುಕೊಳ್ಳಲು ತಕ್ಕ ಪ್ರಯತ್ನವನ್ನು ಮಾಡಿಕೊಳ್ಳುವರು ಎಂದು ಇವರು ಹೇಳಿರುತ್ತಾರೆ. ೯ ತಿಂಗಳಲ್ಲೇ ಸಂಪೂರ್ಣ ಸ್ವರಾಜ್ಯವನ್ನು ಪಡೆದುಕೊಳ್ಳುತ್ತೇವೆಂದು ಹಾರಾಡುವ ಸಹಾಯನಿರಾಕರಣವಾದಿಗಳ ಚೇಷ್ಟೆಯನ್ನು ಇವರು ಒಪ್ಪುವುದಿಲ್ಲ. ಮ|| ಗಾಂಧಿಯವರು ಉಪದೇಶಿಸುತ್ತಿರುವ ಸಹಾಯನಿರಾಕರಣೆಯು ಭಾರತೀಯರ ಕೋರಿಕೆಯನ್ನು ನೆರವೇರಿಸಿಕೊಡಲು ಸಾಧಕವಲ್ಲವೆಂದೂ, ಇಂಡ್ಯಾ, ಇಂಗ್ಲೆಂಡ್ ದೇಶಗಳ ಸಂಬಂಧ ವಿಷಯ ಮಾತ್ರವೇ ಅಲ್ಲ; ನಮ್ಮನ್ನು ಪೀಡಿಸುತ್ತಿರುವ ಸಕಲ ದುರವಸ್ಥೆಗಳನ್ನು ದೂರೀಕರಿಸಿಕೊಳ್ಳಲಿಕ್ಕೂ ಸಹಕಾರವೇ ಮುಖ್ಯೋಪಾಯವೆಂಬುದನ್ನು ಪ್ರಪಂಚಜನಸಾಮಾನ್ಯಕ್ಕೂ ತೋರ್ಪಡಿಬೇಕೆಂದೂ ಹೇಳಿರುತ್ತಾರೆ. ಇದು ಭರತಖಂಡದ ಪ್ರಾಚೀನ ಸಂಪ್ರದಾಯಕ್ಕೂ ಕೀರ್ತಿಪ್ರತಿಷ್ಠೆಗಳಿಗೂ ಸಾತ್ವಿಕತನಕ್ಕೂ ಅನುಗುಣವಾದ ಮಾತೇ ಸರಿ. ಆದರೆ ಅಗ್ರಹಾವೇಶದಲ್ಲಿರುವ ಉಗ್ರವಾದಿಗಳಿಗೆ ಈ ಹಿತವಾದವು ಈಗ ರುಚಿಸುವುದುಂಟೆ?

ಪಂಜಾಬಿನಲ್ಲಿ ನಡೆದುಹೋದ ಘೋರಾಚರಣೆಯ ವಿಷಯದಲ್ಲೂ ಆಗಾಖಾನರು ದೇಶೀಯ ಹೃದಯವನ್ನೇ ಬಿಚ್ಚಿ ಮುಂದಿಟ್ಟಿದ್ದಾರೆ. ಪ್ರಜೆಗಳ ಮೇಲೆ ಅಪರಾಧವನ್ನೆಸಗಿದ ಅಧಿಕಾರಿಗಳನ್ನು ಶಿಕ್ಷಿಸಬೇಕು. ಅವರ ತಪ್ಪಿನಿಂದ ಮೃತರಾದವರ ಸಂಬಂಧಿಗಳಿಗೆ ತಕ್ಕ ಪರಿಹಾರವನ್ನು ಕೊಡಿಸಬೇಕು. ಮುಂದೆ ಈ ತೆರದ ಸೈನಿಕದಾರುಣಕೃತ್ಯವು ನಡೆಯದಂತೆ ಕಟ್ಟುನಿಟ್ಟಾಗಬೇಕು. ಹಾಗೆ ಮಾಡಿದರೆ ಪಂಜಾಬಿನ ಬೇಗೆಯು ಶಾಂತವಾಗುವುದು ಎಂದು ಹೇಳಿರುತ್ತಾರೆ. ನಮ್ಮ ಈಗಣ ಲಾರ್ಡ್ ಚೆಲಮ್ಸ್‌ಫರ್ಡ್‌ರವರು ಭರತಖಂಡವನ್ನು ಬಿಟ್ಟು ತೆರಳುವುದರೊಳಗಾದರೂ ಇಷ್ಟಕ್ಕೆ ಅವಕಾಶವಾಗುವಂತೆ ಮಾಡಿದರೆ ಕಡೆಯ ವಂದನೆಗಾದರೂ ಅವರು ಪಾತ್ರರಾಗಿ ಹೋಗಬಹುದು. ಆದರೆ ಅವರಾಟವು ತಾನೇ ಹೇಗೆ ಸಾಗೀತು? ಸೀಮೆಯಲ್ಲಿರುವ ಪಾರ್ಲಿಮೆಂಟು ಕಣ್ತೆರೆಯಬೇಕಷ್ಟೆ. ಅದು ಸಾಧ್ಯವಲ್ಲದೆಹೋದರೆ ರಾಷ್ಟ್ರೀಯ ಮಹಾಸಭೆಯವರು ಹೇಳುತ್ತಿರುವಂತೆ ನಡೆದುಹೋದ ಘೋರಾಚರಣೆಗೆ ಪ್ರಭುತ್ವದವರು ಪಶ್ಚಾತ್ತಾಪವನ್ನಾದರೂ ಪ್ರದರ್ಶಿಸಿದರೆ ಸಾಕು. ಅಷ್ಟನ್ನಾದರೂ ಮಾಡದೆ ಹಠವನ್ನು ತೊಡುವುದರಲ್ಲಿ ಫಲವಿಲ್ಲ.

ಕಡೆಗೆ ಆಗಾಖಾನರು ದೇಶೀಯರಿಗೆಲ್ಲಾ ಮುಖ್ಯವಾದ ಒಂದು ಎಚ್ಚರಿಕೆಯನ್ನು ಹೇಳಿರುತ್ತಾರೆ. ಮ|| ಗಾಂಧಿಯವರು ಹತ್ಯೆಗಳನ್ನೂ ದೌರ್ಜನ್ಯವನ್ನೂ ನಿರಸನಮಾಡಿ ಕೊಡುತ್ತಿರುವ ಉಪದೇಶವನ್ನು ಅಭಿನಂದಿಸಿ, ದೇಶೀಯರೆಲ್ಲಾ ಆತ್ಮಗೌರವವನ್ನೂ ಜಾತೀಯಗೌರವವನ್ನೂ ಉಳಿಯಿಸಿಕೊಳ್ಳಬೇಕೆಂದೂ, ದೇಶದಲ್ಲಿ ಎಷ್ಟು ಕಕ್ಷಿಗಳಿದ್ದರೂ ಹೊರಗಣವರಿಗೆ ನಾವೆಲ್ಲಾ ಒಂದೇ ಎಂದು ತೋರಿಸಿಕೊಳ್ಳಬೇಕೆಂದೂ, ಸರ್ವರೂ ಏಕಮತ್ಯದಿಂದ ದೇಶದ ಅವಶ್ಯಕತೆಗಳನ್ನೆಲ್ಲಾ ಕುರಿತು ಏಕಕಂಠದಿಂದ ಹೇಳುತ್ತಿರಬೇಕೆಂದೂ ಉಪದೇಶಿಸಿದ್ದಾರೆ. ಇದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಹ್ರಸ್ವದೃಷ್ಟಿ, ಪರಸ್ಪರವಂಚನೆ, ಸ್ವಾರ್ಥೈಕಚಿಂತನೆಗಳು ಜನವರ್ಗಗಳಲ್ಲಿ ಮೂಲೋತ್ಪಾಟನಗೊಂಡರೆ ಏಕಮತ್ಯವೂ ವಿಶ್ವಸೋದರತ್ವವೂ ನೆಲೆಗೊಳ್ಳುವುವು. ತನ್ಮೂಲಕ ಸಕಲಾಭೀಷ್ಟಗಳೂ ಸಿದ್ಧಿಸುವುವು. ಮಾನ್ಯರಾದ ಎಚ್. ಎಚ್. ಆಗಾಖಾನರ ಮೇಲೆಕಂಡ ಸದಭಿಪ್ರಾಯಗಳನ್ನು ಪ್ರಭುತ್ವದವರೂ ಪ್ರಜಾಮುಖಂಡರೂ ಸಹ ಗಮನಿಸಿ ನಡೆದುಕೊಂಡರೆ ಪ್ರಭುತ್ವಕ್ಕೂ ಪ್ರಜಾಮಂಡಲಕ್ಕೂ ಸಹ ಹಿತವುಂಟು.

ದೇಹಾರೋಗ್ಯ.

ಮದರಾಸಿಗೆ ಬಂದಿರುವ ಸ್ವಾಮಿ ರಘುನಾಥರಾಯ ಎಂಬುವರು ಆರೋಗ್ಯಸಾಧನಗಳ ವಿಷಯವಾಗಿ ಕೆಲವು ಉಪನ್ಯಾಸಗಳನ್ನು ಕಳೆದವಾರ ಮಾಡಿರುವರು. ಅದು ದೇಹಧಾರಿಗಳೆಲ್ಲರಿಗೂ ಗಮನಿಸಲರ್ಹವಾಗಿರುವುದರಿಂದ ಅವುಗಳ ಮುಖ್ಯಾಭಿಪ್ರಾಯವನ್ನು ಇಲ್ಲಿ ಪ್ರಕಟಿಸಿರುತ್ತೇವೆ—ಮನುಷ್ಯರಿಗೆ ಆರೋಗ್ಯವು ಮುಖ್ಯವಾದ ವಾಂಛಿತವು. ಆದರೂ ಬಹು ಜನರು ಆರೋಗ್ಯವನ್ನು ಹೇಗೆ ಸಂಪಾದಿಸಿಕೊಳ್ಳಬೇಕೋ ಅದನ್ನೂ, ಹೇಗೆ ಕಾಪಾಡಿಕೊಳ್ಳಬೇಕೋ ಅದನ್ನೂ ತಿಳಿಯರು. ಭರತಖಂಡದಲ್ಲಿ ಆರೋಗ್ಯಶಾಲಿಗಳಾಗಿರತಕ್ಕವರ ಸಂಖ್ಯೆಯು ಬಹಳ ಸ್ವಲ್ಪ. ಆರೋಗ್ಯವು ಧನವಂತನಿಗೆ ೨ನೆಯ ಸ್ಥಾನಾಪನ್ನವಾದುದು. ಆದುಕಾರಣ ಅನ್ಯಾಪೇಕ್ಷೆಗಾಗಿಯಲ್ಲದೆ ಆರೋಗ್ಯಸಂಪಾದನೆಯನ್ನೇ ಲಕ್ಷ್ಯವಾಗಿಟ್ಟುಕೊಂಡು ಅದನ್ನು ಸಂಪಾದಿಸಬೇಕು. ಬಹುಕಾಲ ಬದುಕಬೇಕು ಐಶ್ವರ್ಯವನ್ನು ಸಂಪಾದಿಸಬೇಕು ಎಂಬಿತ್ಯಾದಿಯಾದ ಬಯಕೆಗಳನ್ನಿಟ್ಟುಕೊಂಡು ಆರೋಗ್ಯವನ್ನು ಸಾಧಿಸಲಾಗುವುದಿಲ್ಲ. ಕಾಲವನ್ನತಿಕ್ರಮಿಸದೆ ಭೋಜನ ಮಾಡುವುದು, ಅನುಮಾನ ತೋರಿದ ಕೂಡಲೇ ಜಲಮಲಗಳನ್ನು ತಡೆಯದೆ ವಿಸರ್ಜಿಸುವುದು, ಆಹಾರವನ್ನು ಮಿತವಾಗಿ ಸ್ವೀಕರಿಸುವುದು, ವೃದ್ಧಿಯುಂಟಾದಾಗ ವಿಪರೀತ ಸಂತೋಷದಿಂದುಬ್ಬದೆ, ಹಾನಿಯುಂಟಾದಾಗ ಕಡುದುಗುಡದಿಂದ ತಗ್ಗದೆ, ಸುಖ ದುಃಖಗಳನ್ನು ಸಮಾನವಾಗಿ ತಿಳಿದಿರುವುದು-ಇವೇ ಆರೋಗ್ಯವೆಂಬುದಕ್ಕೆ ಪರ್ಯಾಯಗಳು. ಆರೋಗ್ಯವನ್ನು ಸಂಪಾದಿಸುವುದಕ್ಕೆ ಇವೇ ಮಾರ್ಗಗಳು. ದೇಹಕ್ಕೆ ಆಹಾರ, ನೀರು, ವಾಯು, ಪ್ರಾಣ ಇವೇ ಮುಖ್ಯವಾಗಿ ಬೇಕಾದುವುಗಳು. ಹಸಿವಾದಾಗ ಆಹಾರವನ್ನು ಸೇವಿಸದಿದ್ದರೆ ಹೊಟ್ಟೆಯಲ್ಲಿ ಜೀರ್ಣಶಕ್ತಿಯನ್ನು ಹುಟ್ಟಿಸುವ ರಸವು ವಿಷಮಿಸಿ ಅಜೀರ್ಣ ರೋಗಾದಿಗಳನ್ನು ಹುಟ್ಟಿಸುವುದು. ಆದುಕಾರಣ ಎಂಥ ಪರಿಸ್ಥಿತಿಯಲ್ಲೂ ಹಸಿವಾದ ಕೂಡಲೇ ಆಹಾರವನ್ನು ತೆಗೆದುಕೊಳ್ಳಬೇಕು. ಅನುಮಾನ ತೋರಿದ ಕೂಡಲೇ ಜಲಮಲಗಳನ್ನು ವಿಸರ್ಜಿಸದೆ ತಡೆದರೆ, ಮೂಲವ್ಯಾಧಿ ಅತಿಮೂತ್ರ ಮೊದಲಾದ ರೋಗಗಳು ಅಂಕುರಿಸುವುವು. ಪ್ರಾತಃಕಾಲಕ್ಕೇ ಶೌಚಕೃತ್ಯಗಳನ್ನು ತೀರಿಸಿದ ಕೂಡಲೇ ತಣ್ಣೀರಿನ ಸ್ನಾನವನ್ನು ಮಾಡಬೇಕು. ಬಿಸಿನೀರಿನ ಸ್ನಾನಾಭ್ಯಾಸದಿಂದ ದೃಷ್ಟಿಮಾಂದ್ಯ ಮೆದುಳು ಮಂಕು ಇತ್ಯಾದಿಗಳುಂಟಾಗುವುವು. ತಣ್ಣೀರಿನ ಸ್ನಾನದಿಂದ ಬುದ್ಧಿ ಚುರುಕಾಗುವುದು. ಬೆನ್ನಮೂಳೆ ಬಲವಾಗುವುದು. ಜೀರ್ಣಶಕ್ತಿ ಹೆಚ್ಚುವುದು. ಮಡಿವೆ, ಕಜ್ಜಿ, ಗಾಯ, ಕುಹ್ಲ ಮೊದಲಾಗುವುಗಳು ನಿವಾರಣೆಗೊಳ್ಳುವುವು. ದೇಹತೇಜಸ್ಸು ಹೆಚ್ಚುವುದು. ಮದ್ರಾಸು ಪ್ರಾಂತದಲ್ಲಿ ಬಿಸಿನೀರಿನ ಸ್ನಾನದ ಪದ್ಧತಿಯು ಬಹಳ ಪ್ರಬಲವಾಗಿದೆ. ಇದು ಬಹಳ ಹಾನಿಕರವು. ತಣ್ಣೀರಿನ ಸ್ನಾನವು ಬಡತನದ ಲಕ್ಷಣವೆಂದೂ ಬಿಸಿನೀರು ಭಾಗ್ಯವಂತರ ಸೊತ್ತೆಂದೂ ಭ್ರಮೆಪಟ್ಟುಕೊಂಡಿದ್ದಾರೆ. ಅದು ತಪ್ಪು. ನೀರನ್ನು ಕಾಯಿಸಿ ಅದರಲ್ಲಿರುವ ಜೀವಶಕ್ತಿಯನ್ನು ಹಾಳ್ಮಾಡಿ ಬಳಿಕ ಆ ನೀರಿನಿಂದ ಸ್ನಾನಮಾಡಿದರೆ ಪ್ರಯೋಜನವೇನು? ಸ್ನಾನಮಾಡುವಾಗ್ಗೆ ಮೊದಲು ತಲೆಯಮೇಲೆ ನೀರು ಬೀಳಬೇಕು. ಬಳಿಕ ಕೈಕಾಲು ಶರೀರ ಮೊದಲಾದುವುಗಳನ್ನು ತೊಳೆಯಬೇಕು. ಅದನ್ನು ಬಿಟ್ಟು ಕಾಲನ್ನು ಮೊದಲು ನೀರಿನಿಂದ ತೊಳೆಯಬಾರದು. (ಈ ಪದ್ಧತಿಯು ನಮ್ಮ ಪುರಾತನ ಶಾಸ್ತ್ರವಿಧಿಗೆ ವಿರುದ್ಧವಾಗಿದೆ, ಪ. ಪ್ರ.) ಹಾಗೆ ಮಾಡಿದರೆ ಕಾಲಿನ ಕಡೆಯಿಂದ ರಕ್ತವು ತಲೆಗೇರಿ ಅಲ್ಲಿ ಘನೀಭವಿಸುವುದು. ಹಾಗೆ ಹೆಪ್ಪುಗಟ್ಟುವುದರಿಂದ ಜಡತ್ವ, ಮುಖದ ಮೇಲೆ ಮಡಿವೆಗಳು ಉಂಟಾಗುವುವು. ಸ್ನಾನಮಾಡಿದ ಬಳಿಕ ಮಡಿಬಟ್ಟೆಯಿಂದ ಒರಸಿಕೊಂಡು ಕೊಬ್ಬರಿಯೆಣ್ಣೆಯನ್ನು ತಲೆಗೂ ಮುಖಕ್ಕೂ ಕಣ್ಣುಗಳಿಗೂ ಉಜ್ಜಿಕೊಂಡು ಮತ್ತೆ ಸ್ನಾನಮಾಡಬಹುದು. ಸ್ನಾನಮಾಡಿದ ಬಳಿಕ ಹೊರಗೆ ಶುಭ್ರವಾದ ಗಾಳಿ ಇರುವ ಸ್ಥಲಗಳಿಗೆ ಹೋಗಿ ಪ್ರತಿದಿನವೂ ಶರೀರಸಾಧನವನ್ನು ಮಾಡಬೇಕು. ಒಂದು ದಿನವೂ ತಪ್ಪಕೂಡದು. ಬಾಯನ್ನು ಮುಚ್ಚಿಕೊಂಡು ದೀರ್ಘಶ್ವಾಸಗಳನ್ನು ಬಿಡುತ್ತಿರಬೇಕು. ಯಾವಾಗಲೂ ಸ್ವಲ್ಪ ಕಡಿಮೆಯಾಗಿಯೇ ಊಟಮಾಡಬೇಕು. ಹಾಗಿಲ್ಲದೆ ಅವಕಾಶವಿದ್ದಷ್ಟೂ ಭರ್ತಿ ಮಾಡಿದರೆ ಹೊಟ್ಟೆಯಲ್ಲಿರುವ ಜೀರ್ಣಕ ರಸವು ಒಳಗೆಲ್ಲಾ ಸುತ್ತಾಡಿ ತಾನು ಮಾಡಬೇಕಾದ ಕೆಲಸವನ್ನು ಮಾಡುವುದಕ್ಕೆ ಅದಕ್ಕೆ ಅವಕಾಶವಿಲ್ಲದೆ ಹೋಗುವುದು.

ಪ್ರಾಣಾಯಾಮ ಸಾಧನೆಯಿಂದ ಬುದ್ಧಿಯು ದ್ವಿಗುಣವಾಗಿ ವಿಕಾಸಗೊಳ್ಳುವುದು. ನಾಸಿಕಾರಂಧ್ರಗಳ ಉಪಯೋಗವನ್ನು ಅನೇಕರು ತಿಳಿಯರು. ರೇಚಕ ಪೂರಕ ಕುಂಭಕಗಳು ಮನುಷ್ಯನ ಆರೋಗ್ಯವರ್ಧನಕ್ಕೆ ತುಂಬಾ ಸಹಾಯಕಗಳು. ಪಕ್ಷಕ್ಕೊಂದುದಿನವಾದರೂ ನಾವು ಉಪವಾಸವಿರಬೇಕು. ಇದರಿಂದ ವಿಶ್ರಾಂತಿ ಕೊಟ್ಟಂತಾಗುವುದು; ಮನೋನಿಗ್ರಹ ಸಿದ್ಧಿಯುಂಟಾಗುವುದು. ಉಪವಾಸ ಮಾಡುವುದರಿಂದ ಅನ್ನಕೋಶದಲ್ಲಿ ಜೀರ್ಣವಾಗದೆ ಉಳಿದಿರುವ ಪದಾರ್ಥಗಳೆಲ್ಲಾ ಕಳೆದುಹೋಗುವುವು. ಅವನ್ನು ಪರಿಹರಿಸದೆ ಹೋದರೇನೆಯೇ ರೋಗಗಳುಂಟಾಗುವುವು. ವಾಯುಮಂಡಲದಲ್ಲೂ ಸೂರ್ಯನ ಕಿರಣಗಳಲ್ಲೂ ಪ್ರಾಣಶಕ್ತಿಯು ಪ್ರಾಣವಾಯುವಿನೊಡನೆ ಕೂಡಿರುವುದು. ಪಾಶ್ಚಾತ್ಯರು ಈ ಪ್ರಾಣಶಕ್ತಿಯನ್ನೇ ಅರಿಯರು. ಭರತಖಂಡದ ಯೋಗಿಶ್ರೇಷ್ಠರೇ ಇದನ್ನು ಗುರ್ತಿಸಿರತಕ್ಕವರು. ಆ ಪ್ರಾಣಶಕ್ತಿಯನ್ನು ದೇಹದೊಳಕ್ಕೆ ಆಕರ್ಷಿಸಿಕೊಳ್ಳುವುದರಿಂದ ದಿನದಿನಕ್ಕೆ ನಮ್ಮ ಪ್ರಾಣಶಕ್ತಿಯು ಅಭಿವರ್ಧಿಸುವುದು. ಈ ಆಕರ್ಷಣವು ಬಹಳ ಸುಲಭ. ಪ್ರಾತಃಕಾಲ ಸ್ನಾನಮಾಡಿದ ಕೂಡಲೇ ಪರಿಶುದ್ಧವಾಯು ಬೀಸುವ ಬಹಿರಂಗಸ್ಥಲಗಳಿಗೆ ಹೋಗಿನಿಂತು, ಪ್ರಾಣಾಯಾಮದಿಂದ ಕೂಡಿದ ವ್ಯಾಯಾಮವನ್ನು ಮಾಡಿದರೆ ಆಗ ತಾನು ಉಚ್ಛ್ವಸಿಸುವ ವಾಯುವಿನಿಂದ ಪ್ರಾಣಶಕ್ತಿಯು ಒಳಕ್ಕೆ ಹೋಗಿ ಆಯಾ ಸ್ಥಾನಗಳಲ್ಲಿ ತುಂಬಿ ಅಕ್ಕಪಕ್ಕಗಳ ಪರಮಾಣುಗಳೊಡನೆಲ್ಲಾ ವ್ಯಾಪಿಸಿ ಬಲಪಡಿಸುವುದೆಂದು ದೃಢಸಂಕಲ್ಪಮಾಡಿಕೊಂಡಿದ್ದರೆ ಸಾಕು. ಈ ಪ್ರಾಣಶಕ್ತಿಯು ಮಾಡುವ ಕ್ರಿಯೆಗಳು ಅದ್ಭುತವಾಗಿರುವುವು.

ಊಟವನ್ನು ನಾವು ಹಗಲು ೧೦ ಗಂಟೆಗೂ ರಾತ್ರಿ ೮ ಗಂಟೆಗೂ ಮಾಡಬೇಕು. ಜಲಮಲಗಳ ವಿಸರ್ಜನೆಯನ್ನು ನಾವು ಯಾವುದೋ ಒಂದು ಕಾಲದಲ್ಲಿ ಮಾಡಬೇಕೆಂದು ಪದ್ಧತಿಯಿಟ್ಟುಕೊಂಡರೆ ಪ್ರಕೃತಿಯು ಆ ಕಾಲಕ್ಕೆ ಸರಿಯಾಗಿ ನಮ್ಮನ್ನು ಎಚ್ಚರಿಸುವುದು. ಅದನ್ನು ನಾವು ಅಸಡ್ಡೆ ಮಾಡಿದರೆ ಅದು ವಿಕೃತಿಸುವುದು. ಅದರಿಂದ ರೋಗಗಳಿಗೆ ದಾರಿಯಾಗುವುದು. ಈರ್ಷ್ಯೆ, ಕ್ರೋಧ, ದ್ವೇಷ, ಅಹಂಕಾರ ಇವುಗಳನ್ನು ಮನಸ್ಸಿಗೆ ಅಂಟಿಸಿಕೊಳ್ಳಬಾರದು. ಹತ್ತಿಸಿಕೊಂಡರೆ ಮನಸ್ಸೆಂಬ ರಾಜನು ವಾಯುವೆಂಬ ಭಟನಮೂಲಕ ದೇಹದ ಪ್ರತಿಪರಮಾಣುವಿಗೂ ಅದನ್ನು ಅಂಟಿಸಿಬಿಡುವನು. ಅದರಿಂದ ಅವೆಲ್ಲಾ ಸಹಾಯನಿರಾಕರಣವನ್ನಂಗೀಕರಿಸುವುವು. ದೇಹದುರ್ಗವು ಅರಕ್ಷಿತವಾಗುವುದು. ಇವೆಲ್ಲಾ ದೇಹಕ್ಕೆ ಸಂಬಂಧಪಟ್ಟ ವಿಷಯಗಳು. ಆತ್ಮನಿಗೆ ಸಂಬಂಧಪಟ್ಟ ವಿಷಯಗಳು ಬೇರೆ ಇರುವುವು.

ಒಳದೇಶದ ವೃತ್ತಾಂತಗಳು.

ಮೂರನೆಯ ಕೌನ್ಸಿಲರು ಹಾಸನ ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿಕೊಂಡು ಬರಲು ಇಂದು ನಾಳೆ ಹೊರಡುವುದಾಗಿ ತಿಳಿಯಬರುತ್ತದೆ.

ದಾವಣಗೆರೆಯಲ್ಲಿ ವೈದ್ಯುತ ದೀಪಗಳನ್ನು ಹೊತ್ತಿಸಲು ತಗಲುವ ವೆಚ್ಚವನ್ನೆಲ್ಲಾ ಆ ಊರಿನ ನಿವಾಸಿಗಳೇ ವಹಿಸಿಕೊಳ್ಳುವವರಾಗಿರುವರಂತೆ.

ದಿವಾನರವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಸಂಚರಣೆಯನ್ನು ಪೂರೈಸಿಕೊಂಡು ಈ ದಿವಸ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸುವವರಾಗಿರುವರು.

ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳ ಕಾನ್ಫರೆನ್ಸುಗಳು ಆಯಾ ಡಿ|| ಡೆ|| ಕಮಿಷನರುಗಳ ಅಧ್ಯಕ್ಷತೆಯಲ್ಲಿ ನಾಳೆಯದಿನ ನಡೆಯತಕ್ಕವಾಗಿರುವುವು.

ಸರ್ ವಾಲಂಟೈನ್ ಚಿರೋಲ್‌ರವರು ಬೆಂಗಳೂರಿಗೆ ಬಂದು ಬ್ರಿಟಿಷ್ ರೆಸಿಡೆಂಟರ ಅತಿಥಿಗಳಾಗಿರುವರು. ಇವರು ಅಲ್ಲಿಂದ ಇಂದು-ನಾಳೆ ಹೊರಡುವವರಾಗಿರುತ್ತಾರೆ.

ಚೀಫ್ ಸೆಕ್ರಟರಿ ಮಿ|| ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು ರಜಾ ಪಡೆದುಕೊಂಡಿರುವುದರಿಂದ ಆ ಕೆಲಸವು ಆಕ್ಟಿಂಗಾಗಿ ಮಿ|| ಕುರಿಯನ್ ಮೆಥ್ಯೂರವರಿಗೆ ವಹಿಸಲ್ಪಟ್ಟಿರುವುದು.

ರಾಜಧಾನಿಯಲ್ಲಿ ಹೊಸದಾಗಿ ಕಟ್ಟಲ್ಪಡಲಿಕ್ಕಿರುವ ಮ್ಯುನಿಸಿಪಲ್ ಆಫೀಸು ಭವನದ ಶಂಕುಸ್ಥಾಪನ ಮಹೋತ್ಸವವನ್ನು ಶ್ರೀಮನ್ ಮಹಾರಾಜರವರು ಕಳೆದ ಸೋಮವಾರ ಬೆಳಗ್ಗೆ ನೆರವೇರಿಸಿದರು.

ಕೃಷ್ಣರಾಜಸಾಗರ ಕೆಲಸದಲ್ಲಿ ಸ್ಪೆಷಲ್‌ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿರುವ ಮ|| ಟಿ. ಧರ್ಮರಾಜಸೆಟ್ಟರು ರಜವನ್ನು ಪೂರೈಸಿಕೊಂಡುಬಂದ ಮೇಲೆ ಸರ್ವೆ ಶಾಖೆಗೆ ವರ್ಗವಾಗಬೇಕಾಗಿ ಅಪ್ಪಣೆಯಾಗಿದೆ.

ನಂಜನಗೂಡಿನಲ್ಲಿ ಪ್ರತಿ ಭಾನುವಾರ ಕೂಡಿಸಬೇಕೆಂದು ಗೊತ್ತಾಗಿರುವ ಸಂತೆಯು ಪ್ರಾರಂಭೋತ್ಸವವು ಬರುವ ಮಾಘಮಾಸದ ಶುಭದಿವಸದಲ್ಲಿ ನಡೆಯಿಸಲ್ಪಡುವುದಾಗಿದೆಯೆಂದು ಅಮಲ್ದಾರರು ತಿಳಿಸಿರುವರು.

ಬೆಂಗಳೂರು ಕಂಟೋನ್ಮೆಂಟ್ ಮ್ಯುನಿಸಿಪಲ್ ಗುಮಾಸ್ತೆ ಸರ್ವಾರ್ಥರಾಯ ಎಂಬಾತನು ಮ್ಯುನಿಸಿಪಾಲಿಟಿಯ ೬೪ ರೂ ಗಳನ್ನು ಅಪಹರಿಸಿದ್ದ ತಪ್ಪಿತಕ್ಕಾಗಿ ೬ ತಿಂಗಳ ಕಾರಾಗೃಹವಾಸ ಶಿಕ್ಷೆಗೆ ಗುರಿಯಾದನು.

ಚಿತ್ರದುರ್ಗದಲ್ಲಿ ರಡ್ಡಿ ಮಹಾಜನರ ಸಭೆಯು ಮ|| ಸಿ. ರಾಮಲಿಂಗರಡ್ಡಿ ಎಂ. ಎ. ಯವರ ಅಧ್ಯಕ್ಷತೆಯಲ್ಲೂ ಅವರ ಮಹಿಳಾ ಪರಿಷತ್ತು ಶ್ರೀಮತಿ ರೇವಮ್ಮನವರ ಅಧ್ಯಕ್ಷತೆಯಲ್ಲೂ ಸಲಕ್ಷಣವಾಗಿ ನಡೆದುವು.

ಬೆಂಗಳೂರಿನಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಇಂಡಸ್ಟ್ರಿಯಲ್ ಬ್ಯಾಂಕಿನವರು ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಅಹಮದ್ ಕಟ್ಟಡದಲ್ಲಿ ಈ ತಾ|| ೨೭ ರಿಂದ ಹಣವನ್ನು ಕೊಡುವುದು ತೆಗೆದುಕೊಳ್ಳುವುದು ಮೊದಲಾದ ಕೆಲಸಗಳನ್ನು ನಡಿಸುತ್ತಿರುವರು.

ಶ್ರೀಮದ್ಯುವರಾಜರು ಕಳೆದ ಬುಧವಾರ ಹುಜೂರು ಸೆಕ್ರಟರಿ ಮಿ|| ಅಮೀನ್ ಉಲ್‌ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್‌ರವರೊಡನೆಯೂ, ತಮ್ಮ ಪ್ರೈವೆಟ್ ಸೆಕ್ರಟರಿ ಮಿ|| ಎಂ. ಎ. ಸಿಂಗ್ರಾಚಾರ್ಯರೊಡನೆಯೂ ಬೆಂಗಳೂರಿನಿಂದ ದಿಲ್ಲಿಗೆ ಪ್ರಯಾಣ ಮಾಡಿದರು.

ಬೆಂಗಳೂರು ಮಲ್ಲೇಶ್ವರದಲ್ಲಿರುವ ಮಹಾರಾಜಾ ಮಿಲ್ ಯಜಮಾನರು ತಮ್ಮ ವಾಗ್ದಾನದಂತೆ ಕೂಲಿ ಕೆಲಸದವರಿಗೆ ಬಹುಮಾನದ್ರವ್ಯವನ್ನು ಕೊಡಲು ಒಪ್ಪಿಕೊಂಡುದರಿಂದ, ಮುಷ್ಕರ ಹಿಡಿದು ೪ ದಿನಗಳಕಾಲ [illegible] ಬಿಟ್ಟಿದ್ದ ಸಾವಿರಾರು ಮಂದಿ ಕೆಲಸಗಾರರೆಲ್ಲಾ ಮರಳಿ ಕೆಲಸಕ್ಕೆ ಬಂದು ಸೇರಿದರು.

ಕಳೆದ ವರ್ಷ ಮೈಸೂರು ಬ್ಯಾಂಕಿಗೆ ೩೭೬೦೦೦ ರೂ. ಗಳ ಲಾಭವು ಬಂದಿದೆ. ಅದರಲ್ಲಿ ರಿಜರ್ವ್ ಫಂಡಿಗೆ ೧ ಲಕ್ಷ ರೂ. ಗಳನ್ನು ತೆಗೆದಿಟ್ಟು, ಬ್ಯಾಂಕುಗಳ ಕಟ್ಟಡಗಳ ಫಂಡಿಗೆ ೫೦ ಸಾವಿರ ರೂ. ಗಳನ್ನು ತೆಗೆದು, ಉಳಿದುದರಲ್ಲಿ ಭಾಗಸ್ಥರಿಗೆಲ್ಲಾ ೧೦೦ಕ್ಕೆ ೧೦ರಂತೆ ಲಾಭವನ್ನು ಹಂಚಲು ಡೈರೆಕ್ಟರುಗಳು ತೀರ್ಮಾನಿಸಿರುವರು.

ಸಂಸ್ಥಾನದ ಹಿಂದುಳಿದ ವರ್ಗಗಳ ಮತ್ತು ನಿಮ್ನಜಾತಿಯ ವೇತನಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳನ್ನೆಲ್ಲಾ ಪಾಠಶಾಲೆಗಳಲ್ಲಿ ಉಚಿತ ವಿದ್ಯಾರ್ಥಿಗಳನ್ನಾಗಿ ಸೇರಿಸಿಕೊಳ್ಳಬೇಕೆಂದೂ ಅವರಿಂದ ಫೀಜನ್ನು ತೆಗೆದುಕೊಳ್ಳಕೂಡದೆಂದೂ, ತೆಗೆದುಕೊಂಡಿದ್ದರೆ ಅವರವರಿಗೆ ಹಿಂದಿರುಗಿಕೊಟ್ಟುಬಿಡಬೇಕೆಂದೂ ಸರ್ಕಾರದವರು ಅಪ್ಪಣೆ ಮಾಡಿರುವರು.

ಕ್ಲೋಸ್‌ಪೇಟೆಯಲ್ಲಿ ೨ ನೇ ಕ|| ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿದ್ದ ಮ|| ಟಿ. ಸಿಂಗಾರವೇಲುಮೊದಲಿಯಾರರು ಮುನಸೀಫರಾಗಿ ನಿಯಮಿಸಲ್ಪಟ್ಟಿರುವುದರಿಂದ, ಅಸಿಸ್ಟೆಂಟ್‌ಕಮಿಷನರೂ ಎಕ್ಸೈಸ್ ಕಮಿಷನರ ಅಸಿಸ್ಟೆಂಟರೂ ಆದ ಮಿ|| ಇ. ಎಚ್. ಥಾಂಸನ್‌ರವರು ೨ ನೇ ಕ|| ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟು ಕ್ಲೋಸ್‌ಪೇಟೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುವ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಸಿ. ಮಾಚಯ್ಯನವರು ಪೊಲೀಸ್ ಇ|| ಜನರಲ್‌ರವರ ಹೆಡ್‌ಕ್ವಾರ್ಟರ್ ಅಸಿಸ್ಟೆಂಟರಾಗಿರತಕ್ಕದ್ದೆಂದೂ, ಆಸ್ಥಾನದಲ್ಲಿದ್ದ ಮ|| ಎಸ್. ನಾರಾಯಣರಾಯರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಉದ್ಯೋಗದಿಂದ ಬಿಡುಗಡೆಯಾದ ಕೂಡಲೆ ಬೆಂಗಳೂರು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾಗಿರತಕ್ಕದ್ದೆಂದೂ ಅಪ್ಪಣೆಯಾಗಿದೆ.

ಮೈಸೂರು ಸೇನೆಯ ಚೀಫ್ ಕಮಾಂಡೆಂಟರ ಪರ್ಸನಲ್ ಅಸಿಸ್ಟೆಂಟರಾದ ಮ|| ಆರ್. ಪುಟ್ಟಣ್ಣ, ಬಿ. ಎ., ಬಿ. ಎಲ್., ರವರಿಗೆ ಈ ಜನವರಿ ತಾ|| ೧ ರಿಂದ ೩ ತಿಂಗಳು ಮತ್ತು ೮ ದಿನಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ ಅವರ ಕೆಲಸವನ್ನು ನೋಡಲು ಮ|| ಟಿ. ವಿ. ಈಶ್ವರಂ, ಬಿ. ಎ., ಯವರು ನಿಯಮಿಸಲ್ಪಟ್ಟಿರುವುದಾಗಿಯೂ ಮ|| ಪುಟ್ಟಣ್ಣನವರು ರಜವು ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗುವರೆಂದೂ ತಿಳಿಯುತ್ತೇವೆ.

ಮ|| ಗಳಾದ ಎಂ. ಜಿ. ರಜಾಮಿಯವರು, ಪಿ. ಶಂಕರಶೆಟ್ಟರು, ಬಿ. ವಿ. ಕೃಷ್ಣಯ್ಯಂಗಾರರು, ಬಿ. ಪಿ. ನರಸಿಂಹಯ್ಯನವರು, ಟಿ. ವೆಂಕಟಸುಬ್ಬಶೆಟ್ಟರು, ಟಿ. ಕೃಷ್ಣಯ್ಯಂಗಾರರು, ಎಂ. ಎಸ್. ಶರೀಫ್‌ರವರು, ಬಿ. ನರಸಿಂಹಯ್ಯನವರು, ರಸೂಲ್‌ಖಾನ್‌ರವರು, ಪದ್ಮನಾಭಯ್ಯನವರು, ಟಿ. ನಂಜಪ್ಪನವರು, ಟಿ. ರಾಚಪ್ಪನವರು ಮತ್ತು ನರಸಿಂಹಯ್ಯನವರು ಬೆಂಗಳೂರು ಸಿಟಿ ೨ನೆಯ ತರಗತಿ ಬೆಂಚ್‌ಮ್ಯಾಜಿಸ್ಟ್ರೇಟರುಗಳಾಗಿ ನಿಯಮಿಸಲ್ಪಟ್ಟಿರುವರು.

ಬೆಂಗಳೂರು ಎಲೆಕ್ಟ್ರಿಕ್ ಆಫೀಸಿನಲ್ಲಿ ೪೦೦೦ ರೂ. ಯನ್ನು ದುರುಪಯೋಗಪಡಿಸಿದನೆಂಬ ಅಪರಾಧದ ಮೇಲೆ ಮಾಣಿಕ್ಯಂಪಿಳ್ಳೆ ಎಂಬುವನ ವಿಚಾರಣೆಯು ಬೆಂಗಳೂರು ಅ|| ಸೆಷನ್ಸ್‌ಜಡ್ಜರಲ್ಲಿ ನಡೆಯುತ್ತಿದ್ದುದು ಕಳೆದ ತಾ|| ೨೭ ರಲ್ಲಿ ಮುಗಿಯಿತು. ಇದರ ಕುಳಿತಿದ್ದ ೩ ಜನ ಅಸೆಸರುಗಳಲ್ಲಿ ಇಬ್ಬರು ಅಪರಾಧಿಯು ತಪ್ಪಿತಸ್ಥನೆಂದೂ ಮತ್ತೊಬ್ಬರು ತಪ್ಪಿತಸ್ಥನಲ್ಲವೆಂದೂ ಅಭಿಪ್ರಾಯ ಪಟ್ಟಿರುವರು. ಜಡ್ಜಿಯವರು ತಮ್ಮ ತೀರ್ಮಾನವನ್ನು ನಾಳೆಯದಿನ ತಿಳಿಸುವವರಾಗಿರುವರು.

ರೆವಿನ್ಯೂ ಸೆಕ್ರೆಟರಿಯವರಾದ ಮ|| ಬಿ. ರಾಮಸ್ವಾಮಯ್ಯ, ಬಿ. ಎ., ಬಿ. ಎಲ್., ರವರು ರಜವನ್ನು ಪೂರೈಸಿಕೊಂಡು ತಮ್ಮ ಕೆಲಸದ ಮೇಲೆ ಬಂದನಂತರ ಈಗ ಬದಲಿ ನೋಡುತ್ತಿರುವ ಮ|| ಜಿ. ಅರವಮುದಂ ಅಯ್ಯಂಗಾರರು ಶಿವಮೊಗ್ಗ ಡಿ|| ಡೆಪ್ಯುಟಿ ಕಮಿಷನರಾಗಿ ಹೋಗಲಪ್ಪಣೆಯಾಗಿರುವುದರಿಂದ ಈಗ ಶಿವಮೊಗ್ಗೆಯಲ್ಲಿ ಡೆ|| ಕಮಿಷನರಾಗಿರುವ ಮ|| ಎಸ್. ಹಿರಿಯಣ್ಣಯ್ಯ, ಬಿ. ಎ., ಬಿ. ಎಲ್., ರವರು ೨ ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಳ್ಳುವವರಾಗಿರುವರು.

ಮೈಸೂರು ವ್ಯವಸಾಯಿಕ ಮತ್ತು ಪರೀಕ್ಷಕ ಸಂಘದವರಿಂದ ಪ್ರಕಟಿಸಲ್ಪಡುತ್ತಿರುವ ತ್ರೈಮಾಸಿಕ ಪತ್ರಿಕೆಯ ೩ನೆಯ ಸಂಚಿಕೆಯು ನಮ್ಮ ಹಸ್ತಗತವಾಗಿರುವುದು. ಇದರಲ್ಲಿ (೧) ಮೈಸೂರು ಸೀಮೆಯಲ್ಲಿ ಪಶುಸಂವರ್ಧನೆಯ ಕೆಲಸ, (೨) ಹರಳುಗಿಡಗಳಿಗೆ ಬೀಳುವ ಕೊಂಡಲಿಹುಳ, (೩) ಬಜೆಯ ಸಾಗುವಳಿ, (೪) ಮೈಸೂರಿನಲ್ಲಿ ರಾಗಿಯನ್ನು ಬೆಳೆಯುವ ಮಣ್ಣಿನಲ್ಲಿ ಎಣೆಯ ಹಿಂಡಿಗಳು ಕರಗಿ ಬೆಳೆಗಳಿಗೆ ಉಪಯೋಗವಾಗುವಿಕೆ—ಈ ನಾಲ್ಕು ಉಪಯುಕ್ತ ವಿಷಯಗಳು ಬೇಸಾಯಶಾಸ್ತ್ರಜ್ಞರಿಂದ ಬರೆಯಲ್ಪಟ್ಟಿವೆ. ಬೇಸಾಯಗಾರರು ಬಹಳ ಉಪಯುಕ್ತವಾದ ಈ ಮಾಸಪತ್ರಿಕೆಯನ್ನು ಅಗತ್ಯವಾಗಿ ತರಿಸಿಕೊಂಡು ಪ್ರಯೋಜನವನ್ನು ಹೊಂದುವವರಾಗಬೇಕೆಂದು ಇಚ್ಛಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಪಂಜಾಬಿಗೆ ಸೇರಿದ ಜಲಂಧರ ಜಿಲ್ಲೆಯಲ್ಲಿ ರಾಜದ್ರೋಹ ಸಭಾ ನಿರೋಧಮಾಡುವ ಶಾಸನವನ್ನು ವ್ಯವಹಾರಕ್ಕೆ ತಂದರು.

ಕಲ್ಕತ್ತೆಯಲ್ಲಿರುವ ಕಟುಗರು ಮಾಂಸಕ್ಕೋಸುಗ ಗೋವುಗಳನ್ನು ಕೊಳ್ಳುವುದನ್ನೂ ಅವುಗಳ ವಧೆಯನ್ನೂ ತ್ಯಜಿಸಿಬಿಟ್ಟಿದ್ದಾರೆ.

ಬೊಂಬಾಯಿನಲ್ಲಿ ಬೆಳ್ಳಿಯ ಧಾರಣೆಯು ೧೦೦ ತೊಲಕ್ಕೆ ೯೫ ರೂ ಬೆಲೆಗಿಳಿದಿರುವುದರಿಂದ ಅನೇಕರು ಬೆಳ್ಳಿಯನ್ನು ಕೊಳ್ಳುತ್ತಿರುವರು

ಬಂಗಾಳದಲ್ಲಿ ಕೆಲ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳನ್ನು ಬಿಟ್ಟು ಇತರ ವಿದ್ಯಾರ್ಥಿಗಳನ್ನೂ ಶಾಲೆಗಳಿಗೆ ಹೋಗದಂತೆ ಬಲಾತ್ಕಾರದಿಂದ ತಡೆಯುತ್ತಿದ್ದಾರೆ.

ಭರತಖಂಡದ ಲೋಹಮಾರ್ಗಗಳ ಸಂಘಗಳಿಗೆಲ್ಲಾ ಕಳೆದ ವರ್ಷದಲ್ಲಿ ಆದ ವರಮಾನವು ಮೊನ್ನೆ ವರ್ಷದ ವರಮಾನಕ್ಕಿಂತ ೩ ಕೋಟಿ ರೂ. ಗರಷ್ಟು ಹೆಚ್ಚಾಯಿತು.

ಫಿಬ್ರವರಿ ತಾ|| ೧೩ ರಲ್ಲಿ ದಿಲ್ಲಿ ಪಟ್ಟಣದೊಳಗೆ ನೂತನ ಸಂಸ್ಕರಣ ಪ್ರಾರಂಭ ಸೂಚಕವಾಗಿ ದೇವಾಲಯದೊಳಗೆ ದೇವತಾಪ್ರಾರ್ಥನೆ ನಡೆಯುವುದು. ಕನ್ನಾಟ್ ಪ್ರಭುಗಳೂ, ವೈಸ್ರಾಯರೂ ಪ್ರಾರ್ಥನೆಗೆ ದಯಮಾಡಿಸುವರು

ಡ್ಯೂಕ್ ಆಫ್ ಕನ್ನಾಟ್‌ರವರು ಫಿಬ್ರವರಿ ತಾ|| ೨೧ ಕ್ಕೆ ಬೊಂಬಾಯಿಗೆ ಹೋಗಿ ತಾ|| ೨೩ ರಲ್ಲಿ ಅಲ್ಲಿಯ ಶಾಸನಸಭೆಯನ್ನು ಆರಂಭಿಸಿ, ತಾ|| ೨೮ ರಲ್ಲಿ ಮಲಯ ಎಂಬ ಹಡಗನ್ನೇರಿ ಸೀಮೆಗೆ ಪ್ರಯಾಣಮಾಡುವರು.

ನೂತನ ವೈಸ್ರಾಯರಾದ ರೀಡಿಂಗ್ ಪ್ರಭುಗಳು ತಮ್ಮ ಪತ್ನೀಸಮೇತರಾಗಿ ಮಾರಿ ತಾ|| ೧೭ ರಲ್ಲಿ ಲಂಡನ್ ಪಟ್ಟಣವನ್ನು ಬಿಟ್ಟು, ತಾ|| ೧೯ ರಲ್ಲಿ ಮಾರ್ಸೇಲ್ಸ್ ಪಟ್ಟಣ ತೀರದಲ್ಲಿ ಹಡಗನ್ನು ಹತ್ತಿ ಭರತಖಂಡಕ್ಕೆ ಪ್ರಯಾಣಮಾಡುವರು.

ಸಿಯಾಲ್ಕೋಟೆಯ ಶ್ರೀಸಿಂಗ್ ಎಂಬಾತನು ೧೯೧೫ ನೆ ವರ್ಷದಿಂದಲೂ ಜರ್ಮನಿಯಲ್ಲಿದ್ದು ರಾಜಕೀಯ ವಿಷಯಗಳನ್ನು ಅರಿತುಕೊಳ್ಳುತ್ತಿದ್ದನಂತೆ. ಅವನು ಮಲಗಿರುವಾಗ ಯಾರೋ ಅವನ ಕತ್ತನ್ನು ಹಿಸುಕಿ ಕೊಂದುಬಿಟ್ಟರೆಂದು ವರ್ತಮಾನ ಬಂದಿದೆ.

ಬರೋಡಾ ಮಹಾರಾಜರು ೧೫ ಲಕ್ಷ ರೂ. ಬೆಲೆಯನ್ನು ಕೊಟ್ಟು ಲಂಡನ್ ಪಟ್ಟಣದ ಬಳಿಯಲ್ಲಿ ಎರಡು ಭವನಗಳನ್ನು ಕೊಂಡಿದ್ದಾರೆ. ಇವರು ಈ ತಿಂಗಳು ೨೮ ನೆ ತಾರೀಖಿನಲ್ಲಿ ಪತ್ನೀಸಮೇತರಾಗಿ ಫ್ರಾನ್ಸಿನ ಮಾರ್ಸೇಲ್ಸ್ ತೀರ ಪಟ್ಟಣದಲ್ಲಿ ಹಡಗನೇರಿ ಭರತಖಂಡಕ್ಕೆ ಪ್ರಯಾಣಮಾಡಿದರು.

ಕೇಸರಿಹಿಂದ್ ಎಂಬ ಅಂಚೆ ಹಡಗು ೫೦೦ ಮಂದಿ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಕಳೆದ ತಾ|| ೨೧ ರಲ್ಲಿ ಬೊಂಬಾಯಿಗೆ ಬಂದು ನಿಂತಿತು. ಅದರಲ್ಲಿ ಬಂದ ಪ್ರಯಾಣಿಕರಲ್ಲಿ ಎಚ್. ಎಚ್. ಆಗಾಖಾನರು, ಭೂಪೇಂದ್ರನಾಥಬಾಸುರವರು, ನವಾಬ್ ಸಾಲಾರ್‌ಜಂಗ್‌ರವರು, ಲಿಬ್ಬ ಕಾಲರ್‌ಸಾಹೇಬರು, ಗೊಂಡಾಲ್ ಮಹಾರಾಣಿಯವರು, ಸರ್ ಎಸ್. ಭವನಗಿರಿಯವರು. ಸಾಮ್ರಾಜ್ಯಶಾಸನ ಸಭಾಧ್ಯಕ್ಷರಾದ ಎ. ಎಸ್. ವೈಟ್ ರವರೂ ಅವರ ಪತ್ನಿಯವರೂ ಮುಖ್ಯರುಗಳು.

ಉತ್ತರ ಹಿಂದೂಸ್ಥಾನದಲ್ಲಿ ಸಹಾಯನಿರಾಕರಣ ಪ್ರಯತ್ನ ಬಲದಿಂದ ಪ್ರಜೆಗಳಲ್ಲಿ ಹಲವರು ಸ್ವದೇಶದ ಬಟ್ಟೆಗಳನ್ನೇ ಉಪಯೋಗಿಸುತ್ತಿದ್ದಾರೆ. ಇದನ್ನರಿತು ದೇಶೀಯ ಯಂತ್ರಶಾಲೆಗಳವರು ತಮ್ಮ ಬಟ್ಟೆಗಳ ಬೆಲೆಯನ್ನು ಏರಿಸಿ ಇದೇ ಸಂದಿನಲ್ಲಿ ವಿಶೇಷ ಲಾಭಾರ್ಜನೆ ಮಾಡಿಕೊಳ್ಳುತ್ತಿದ್ದಾರಂತೆ. ಇದು ಅನ್ಯಾಯವೆಂದೂ ಇದರಿಂದ ಬಡಬಗ್ಗರಿಗೆ ಬಹಳ ನಷ್ಟವಾಗುವುದೆಂದೂ ಅಲ್ಪ ಲಾಭವನ್ನು ಯಂತ್ರಾಲಯಾಧಿಕಾರಿಗಳು ಇಟ್ಟು ದೇಶಾಭಿಮಾನವನ್ನು ವ್ಯಕ್ತಪಡಿಸಬೇಕೆಂದೂ ಕಲ್ಕತ್ತಾ ಮಾರ್ವಾಡಿ ವರ್ತಕ ಸಂಘದವರು ಸಭೆಯ ಮೂಲಕ ನಿರ್ಧರಿಸಿ ಪ್ರಕಟಿಸಿದ್ದಾರೆ.

ಕಳೆದ ವರ್ಷ ಮದ್ರಾಸು ಲಾ ಕಾಲೇಜಿನಲ್ಲಿ ೬೬೮ ಮಂದಿ ಅಭ್ಯಾಸ ಮಾಡಿದರು. ಅವರಲ್ಲಿ ೫೧೬ ಮಂದಿ ಬ್ರಾಹ್ಮಣರು. ೧೧೫ ಮಂದಿ ಬ್ರಾಹ್ಮಣೇತರರು. ೧೩ ಮಂದಿ ಮಹಮ್ಮದೀಯರು ೨೨ ಮಂದಿ ಕ್ರೈಸ್ತರು. ಇತರರು ಈಸ್ಟಿಂಡಿಯನ್ನರು. ಬಿ. ಎಲ್. ಪರೀಕ್ಷೆಗೆ ಹೋಗಿದ್ದವರಲ್ಲಿ ೧೦೦ ಕ್ಕೆ ೬೫ ಮಂದಿ ಉತ್ತೀರ್ಣರಾದರು. ಲಾ ಕಾಲೇಜಿಗೆ ಆ ವರ್ಷದಲ್ಲಿ ೧೦೮೯೩೪ ರೂ. ಗಳ ವರಮಾನವಾಯಿತು. ಪ್ರೊಫೆಸರುಗಳಿಗೆ ಕೊಟ್ಟ ವೇತನ ಮೊದಲಾದುವುಗಳ ವೆಚ್ಚವೆಲ್ಲಾ ಸೇರಿ ೫೮೯೦೬ ರೂ. ಗಳಾದುವು ೫೧೦೨೬ ರೂ. ಗಳು ಸರ್ಕಾರಕ್ಕೆ ಲಾಭವಾಯಿತು. ದೇಶದಲ್ಲಿ ವಕೀಲರ ಸಂಖ್ಯೆ ಹೆಚ್ಚುತ್ತಿರುವುದರಿಂದಲೇ ಸರ್ಕಾರಕ್ಕೆ ಈ ಕಾಲೇಜಿನಿಂದ ಇಷ್ಟು ಆದಾಯ ಹೆಚ್ಚುವುದಕ್ಕೆ ಕಾರಣವೆಂಬುದು ಸ್ಪಷ್ಟವಾಗಿದೆ.

ಸರ್ ಅಶುತೋಷಮುಕರ್ಜಿಯವರು ಕಳೆದ ತಾ|| ೧೯ ರಲ್ಲಿ ವಿದ್ಯಾರ್ಥಿಗಳಿಗೆ ಬುದ್ಧಿವಾದರೂಪವಾಗಿ ಒಂದು ಉಪನ್ಯಾಸಮಾಡುತ್ತಿರುವಾಗ್ಗೆ ಸಹಾಯನಿರಾಕರಣವಾದಿಗಳ ಪ್ರಮುಖರು ೧ ಕೋಟಿ ರೂ. ಗಳನ್ನು ಕೊಟ್ಟರೆ ನಾನು ಸರ್ಕಾರ ಸಂಬಂಧವನ್ನು ಬಿಟ್ಟು ಈ ವಿದ್ಯಾಪೀಠವನ್ನು ಜಾತೀಯ ವಿದ್ಯಾಪೀಠವನ್ನಾಗಿ ಮಾಡುತ್ತೇನೆ ಎಂದು ಹೇಳಿದರು ಆ ಸಂಗತಿಯನ್ನು ಸಿ. ಆರ್. ದಾಸ್‌ರವರು ಕೇಳಿ ಸರ್ ಮುಕರ್ಜಿಯವರ ಬಳಿಗೆ ಹೋಗಿ, ನಾವು ಕೋಟಿ ರೂ. ಗಳನ್ನು ನಿಮಗೆ ಕೊಟ್ಟ ಕೂಡಲೇ ನೀವು ಹೈಕೋರ್ಟು ನ್ಯಾಯಮೂರ್ತಿ ಪದವಿಯನ್ನು ಬಿಟ್ಟು ಜಾತೀಯೋದ್ಯಮ ನಿರ್ವಹಣೆಗೆ ನಿಂತುಕೊಳ್ಳುತ್ತೇನೆಂದು ನೀವು ಒಪ್ಪಂದವನ್ನು ಬರೆದುಕೊಟ್ಟರೆ ನಾವು ಆ ಹಣವನ್ನು ಸಂಪಾದಿಸಿಕೊಡುತ್ತೇವೆಂದು ವಿಜ್ಞಾಪಿಸಿದರಂತೆ.

ಪರದೇಶದ ವೃತ್ತಾಂತಗಳು.

ಜರ್ಮನರು ಕಳೆದ ಡಿಶಂಬರ್ ಕಡೆಯವರೆಗೆ ನಷ್ಟಪರಿಹಾರ ಸಭೆಯವರ ವಶಕ್ಕೆ ತಮ್ಮ ೨೪೫೬೭೫ ಟನ್ನುಗಳ ಹಡಗುಗಳನ್ನು ಒಪ್ಪಿಸಿದರು. ಇನ್ನೂ ೫ ಲಕ್ಷ ಟನ್ನುಗಳ ಹಡಗುಗಳನ್ನು ಮಾತ್ರ ಒಪ್ಪಿಸಬೇಕಾಗಿದೆ

ಜರ್ಮನಿಯಿಂದ ಎಷ್ಟು ನಷ್ಟಪರಿಹಾರವನ್ನು ತೆಗೆದುಕೊಳ್ಳಬೇಕೆಂಬುದನ್ನು ಗೊತ್ತುಮಾಡುವುದಕ್ಕೆ ನಿಯಮಿತರಾಗಿದ್ದ ಸಂಘದವರು ವರ್ಷ ೧ಕ್ಕೆ ೪೮ ಕೋಟಿ ಪೌನುಗಳಂತೆ ೫ ವರ್ಷಗಳವರೆಗೆ ಜರ್ಮನರು ನಷ್ಟಪರಿಹಾರವನ್ನು ಸಲ್ಲಿಸಬೇಕೆಂದು ವರದಿ ಮಾಡಿದ್ದಾರೆ. ಇದಕ್ಕೆ ಜರ್ಮನ್ ಪ್ರತಿನಿಧಿಗಳು ಒಪ್ಪಿಲ್ಲ.

ಲಂಡನ್ ಪಟ್ಟಣದ ಒಂದು ಕೋರ್ಟಿನಲ್ಲಿ ಹೆಂಡತಿಯನ್ನು ಕೊಂದ ಗಂಡನ ಮೇಲೆ ಅಪರಾಧವು ಆಪಾದಿತವಾಗಿ ವಿಚಾರಣೆ ನಡೆಯಿತು. ಅವನಿಗೆ ಮರಣದಂಡನೆಯಾಯಿತು. ಈ ವ್ಯಾಜ್ಯದಲ್ಲಿ ಜೂರಿಗಳಾಗಿ ಗಂಡಸರೂ ಹೆಂಗಸರೂ ಸಹ ನಿಯಮಿಸಿಕೊಳ್ಳಲ್ಪಟ್ಟಿದ್ದರು. ಹೆಂಗುಸರನ್ನು ಜೂರಿಗಳಾಗಿ ತೆಗೆದುಕೊಂಡುದಕ್ಕೆ ಇದೇ ಮೊದಲು.

ಸ್ಮರ್ನಾದ ಕಡೆಯಲ್ಲಿ ತುರ್ಕಿ ಜಾತೀಯ ಸೈನಿಕರಿಗೂ ಗ್ರೀಕ್‌ಸೈನ್ಯಕ್ಕೂ ಯುದ್ಧವಾಗುತ್ತಿರುವುದರಲ್ಲಿ ತುರ್ಕಿ ಸೈನ್ಯಕ್ಕೆ ಜಯವಾಗಿ ಅವರು ಜಯೋತ್ಸವಗಳನ್ನು ಮಾಡುತ್ತಿರುವರೆಂದು ಕೆಲ ವಾರ್ತೆಗಳು ಪ್ರಕಟವಾಗಿವೆ. ಗ್ರೀಕರ ಸರ್ಕಾರ ಪ್ರಕಟನೆಯಲ್ಲಿ ಸ್ಮರ್ನಾದ ಮೇಲೆ ನುಗ್ಗಲು ಯತ್ನಿಸಿದ ಆ ಶತ್ರುಸೈನ್ಯವನ್ನೆಲ್ಲಾ ಓಡಿಸಿಬಿಟ್ಟೆವೆಂದು ತಿಳಿಯಿಸಿರುತ್ತಾರೆ.

ಐರ್ಲೆಂಡಿನಲ್ಲಿ ಸರ್ಕಾರಿ ಸೈನಿಕರು ಕುಳಿತುಹೋಗುವ ಮೋಟಾರುಗಳ ಮೇಲೆ ಗುಂಡು ಹೊಡೆದು ಒಳಗಿದ್ದವರನ್ನು ಕೊಲ್ಲುವ ಹಾವಳಿಯು ಹೆಚ್ಚಾಗಿರುವುದಷ್ಟೆ. ಇಂಥ ದುರಾಗತವನ್ನು ಇಷ್ಟಕ್ಕೇ ಬಿಡದೆಹೋದರೆ, ಯಾರ್ಯಾರು ಪ್ರಭುತ್ವಾಧಿಕಾರ ಧಿಕ್ಕಾರ ಮಾಡುವರೆಂದು ತೋರಿಬರುವರೋ ಅಂಥವರನ್ನೆಲ್ಲಾ ಹಿಡಿದು ಮೋಟಾರಿನಲ್ಲಿ ಕುಳ್ಳಿರಿಸಿ ಸಾಗಿಸಿಕೊಂಡುಹೋಗುವೆವು ಎಂದು ಡಬ್ಲಿನ್ ಜಿಲ್ಲಾಧಿಕಾರಿಯು ಪ್ರಕಟಿಸಿದ್ದಾರೆ.

ಬೋಲ್ಷೆವಿಕ್ಕರು ಪ್ರಪಂಚದಲ್ಲೆಲ್ಲಾ ತಮ್ಮ ಉದ್ಯಮ ವ್ಯಾಪನೆಗೆ ಅಸಮಸಾಹಸಗಳನ್ನು ಮಾಡುತ್ತಿದ್ದಾರೆ. ಫ್ರೆಂಚ್ ದೇಶದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲೂ ಬೋಲ್ಷೆವಿಕ್ ತತ್ತ್ವಪ್ರಸರಣಕ್ಕೆ ಮಾಡಲ್ಪಟ್ಟಿರುವ ಉದ್ಯೋಗವನ್ನು ಕಂಡು ಅಲ್ಲಿಯ ಪ್ರಭುತ್ವದವರು ಅದರ ನಿರ್ಮೂಲನಕ್ಕೆ ತೀವ್ರ ಸನ್ನಾಹಗಳನ್ನು ಮಾಡಿದ್ದಾರೆ. ಇದುವರೆಗೆ ಸಂಶಯದ ಮೇಲೆ ಅಲ್ಲಿಯ ಪೊಲೀಸರು ೭೦೦ ಮಂದಿಗಳನ್ನು ಹಿಡಿದಿದ್ದಾರೆ. ಸಂಶಯ ತೋರಿದ ಮನೆಗಳಿಗೆ ನುಗ್ಗಿ ಕಾಗದಪತ್ರಗಳನ್ನು ಶೋಧಿಸುತ್ತಿದ್ದಾರೆ.

ಪ್ರಸಿದ್ಧ ಪತ್ರಿಕೆ.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿದ್ದು ಮೃತರಾದ ಸರಾಫ್ ಸೂಲು ಬೆಲೆ ಶಾಮಣ್ಣ ಉರುಫ್ ನಂಜಪ್ಪನವರ ವಿಲ್ಲಿನ ಎಗ್ಜಿಕ್ಯೂಟರಾದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ ಯವರ ಇನ್‌ಸ್ಟ್ರಕ್ಷನ್ ಮೇರೆ ಸದರಿ ಶಾಮಣ್ಣನವರಲ್ಲಿ ಗಿರವಿ ಇಟ್ಟಿದ್ದ ಮಾಲುಗಳನ್ನು ಮಾಲಿಕರು ಮೊಬಲಗನ್ನು ಪಾವತಿ ಮಾಡಿ ತೆಗೆದುಕೊಂಡು ಹೋಗದ್ದರಿಂದ ಅಡ್ಡಿಕೆ ಜಡೆಬಿಲ್ಲೆ ಸರಿಗೆ ಮುಂತಾದ ಚಿನ್ನದ ನಗಗಳೂ, ತಂಬಿಗೆ, ಪಂಚಪಾತ್ರೆ, ಡಾಬು ಮೊದಲಾದ ಬೆಳ್ಳಿಸಾಮಾನುಗಳೂ, ಕೆಂಪು ವಜ್ರದ ಜವಾಹಿರಿ ನಗಗಳೂ, ತಾ|| 26–2–1921 ನೇ ಶನಿವಾರ ಮತ್ತು ತಾ|| 27–2–1921 ನೇ, ಭಾನುವಾರ ಬೆಳಿಗ್ಗೆ 8 ಘಂಟೆಯಿಂದ 12 ಘಂಟೆವರೆಗೆ ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಊದುಬತ್ತಿ ಷಾಪ್, ಮ|| ರಾ|| ಕಳ್ಳಪ್ಪನವರ ಅಂಗಡಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ಹರಾಜಿನಲ್ಲಿ ಹೆಚ್ಚು ದರಕಾಸ್ತನ್ನು ಮಾಡಿದವರು ಮೊಬಲಗನ್ನು ಕೂಡಲೇ ಪಾವತಿಮಾಡಿ, ಮಾಲನ್ನು ಹೊಂದತಕ್ಕದ್ದು. ದರಕಾಸ್ತುದಾರರು ಹಾಗೆ ಮೊಬಲಗನ್ನು ಪಾವತಿ ಮಾಡದೆ ತಪ್ಪಿದಲ್ಲಿ ಪುನಃ ಹರಾಜು ಮಾಡಲ್ಪಡುತ್ತದೆ. ಬಳಿಕ ಆಗತಕ್ಕ ಖರ್ಚು ಮತ್ತು ನಷ್ಟಕ್ಕೆ ಮೊದಲ ಬೀಟ್‌ದಾರರೇ ಬಾಧ್ಯರಾಗುತ್ತಾರೆ.

ಬೆಂಗಳೂರು ಸಿಟಿ, } ಜಿ. ಪರಮಶಿವಯ್ಯ,
ತಾ|| 24-1-1921, } ಅಡ್ವೊಕೇಟ್ ಅರಳೆಪೇಟೆ ಚೌಕ.

ವೀರಶೈವಮತಬಾಂಧವರಲ್ಲಿ ವಿಜ್ಞಾಪನೆ.

ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಬೆಂಗಳೂರಿಗೆ ಪರಸ್ಥಳದಿಂದ ಬರತಕ್ಕ ಸ್ವಮತ ಪರಮತೀಯರು ಇಳಿದುಕೊಳ್ಳಲು ಸರಿಯಾದ ಸ್ಥಳವಿಲ್ಲದಿರುವ ತೊಂದರೆಯನ್ನು ತಿಳಿದು ತಮ್ಮ ಸ್ವಾರ್ಜಿತ ದ್ರವ್ಯದಲ್ಲಿ ಲಕ್ಷಾಂತರ ರೂ. ಗಳನ್ನು ವೆಚ್ಚಮಾಡಿ ತಮ್ಮ ಸ್ವಂತ ಮೇಲ್ವಿಚಾರಣೆಯಲ್ಲಿ ರೈಲ್ವೆಸ್ಟೇಷನ್ನಿನ ಸಮೀಪದಲ್ಲಿ ಶಾಶ್ವತವಾದ ಮತ್ತು ವಿವಿಧವಾದ ಸತ್ರವನ್ನು ಕಟ್ಟಿಸಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಂದ ಧರ್ಮಪ್ರವರ್ತಕರೆಂಬ ಪ್ರಶಸ್ತಿಯನ್ನೂ ಭರತಖಂಡದ ಸಾರ್ವಭೌಮರಿಂದ ರಾವ್‌ಬಹದ್ದೂರ್ ಎಂಬ ಪ್ರಶಸ್ತಿಯನ್ನೂ ಪಡೆದು ನಿರಂತರವೂ ಯಶಃಕಾಯರಾಗಿ ಮೆರೆಯುತ್ತಿರುವುದು ಲೋಕವಿದಿತವಾಗಿದೆ. ಹೀಗೆ ಪ್ರಯಾಣಿಕರ ವಸತಿಗೆ ಅನುಕೂಲ ಮಾಡಿ ಕೊಟ್ಟಿರುವುದಲ್ಲದೆ ೧ ಲಕ್ಷ ರೂಪಾಯಿಗಳನ್ನು ಸರ್ಕಾರಿ ಸೇವಿಂಗ್ಸ್‌ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ವೃದ್ಧ್ಯಂಶದಿಂದ ನಿರ್ಗತಿಕರಾದ ವೀರಶೈವ ವಿದ್ಯಾರ್ಥಿಗಳ ಅಶನವು ನಿರಾತಂಕವಾಗಿಯೂ ಸಾರೋದ್ಧಾರವಾಗಿಯೂ ನಡೆದುಕೊಂಡು ಹೋಗುವಂತೆ ತಕ್ಕೇರ್ಪಾಟನ್ನು ಮಾಡಿರುತ್ತಾರೆ. ಇವರ ಈ ಧರ್ಮವಿದ್ಯಾರ್ಥಿನಿಲಯದಲ್ಲಿ ವಿದ್ಯಾವ್ಯಾಸಂಗ ಮಾಡಿದಂಥವರನೇಕರು ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಸರ್ಕಾರಿಯ ಕೆಲಸಗಳಲ್ಲಿ ಸೇರಿರುತ್ತಾರೆ. ಈಗಲೂ ಈ ನಿಲಯದಲ್ಲಿ ೬೫ ವಿದ್ಯಾರ್ಥಿಗಳವರೆಗೆ ಓದಿಕೊಂಡಿದ್ದಾರೆ.

ಇಂತಹ ಲೋಕೋಪಕಾರ ಮಾಡಿರುವ ತತ್ಸ್ವಾಮಿ ವೀರಶೈವರಿಗೆ ಮಹೋಪಕಾರವನ್ನು ಮಾಡಿರುವ ಮಹಾಪುರುಷರ ಸ್ಮಾರಕವನ್ನೇರ್ಪಡಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಕರ್ತವ್ಯವೆಂಬುದನ್ನು 1913 ನೆಯ ವರ್ಷದಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಗಾಗಿ ರಾಜಧಾನಿಗೆ ದಯಮಾಡಿಸಿದ್ದ ವೀರಶೈವ ದೊಡ್ಡಮನುಷ್ಯರುಗಳು ಸಭೆಸೇರಿ ಪರ್ಯಾಲೋಚಿಸಿ, ಆಗ್ಗೆ ಕ್ರಿಯೆಗೆ ಸಿದ್ಧವಾಗಿದ್ದ ಧರ್ಮಪ್ರವರ್ತಕರ ಭಾವಚಿತ್ರಪಟವನ್ನು ಕೊಂಡು ಧರ್ಮಸತ್ರದಲ್ಲಿ ಪ್ರತಿಷ್ಠಿಸಬೇಕೆಂದು ನಿರ್ಧರಿಸಿ ಈ ಕೆಳಗೆ ಕಂಡ ಪ್ರಕಾರ ಚಂದಾಹಣವು ಆ ಕೂಡಲೇ ಕೊಡಲ್ಪಟ್ಟಿತು.

ಮ|| ರಾ|| ಗಳಾದ

1. ಎಡೆಹಳ್ಳಿ ಶಾಂತಪ್ಪಸೆಟ್ಟರು	20—0—0
2. ಎಚ್. ಕೆ. ವೀರಬಸವಯ್ಯನವರು ಬಿ.ಎ. ಬಿ.ಎಲ್.	10—0—0
3. ಬೆಳ್ಳೂರು ನಂಜೇಗೌಡರು	10—0—0
4. ಎಚ್. ಬಸವೇಗೌಡರು	10—0—0
ಒಟ್ಟು	50—0—0

ಈ ಪ್ರಕಾರ 50 ರೂ. ಗಳ ಚಂದಾಹಣವು ಬಂದಿರುತ್ತದೆ. ಆದರೆ ಮುಂದೆ ತಕ್ಕ ಪ್ರಯತ್ನವು ನಡಿಯದೆ ಹೋದುದರಿಂದ ಆ ಕಾರ್ಯವು ಈವರೆಗೂ ನಿಲ್ಲಬೇಕಾಗಿ ಬಂದಿತು. ಇನ್ನುಮುಂದೆ ಈ ಸ್ಮಾರಕ ಕಾರ್ಯವನ್ನು ಅದಷ್ಟು ಜಾಗ್ರತೆಯಲ್ಲಿ ನೆರವೇರಿಸದೆ ಬಿಡುವುದು ಸರಿಯಲ್ಲವಾದುದರಿಂದ ಪ್ರತಿಯೊಬ್ಬ ವೀರಶೈವರೂ ನಿರ್ವಂಚನೆಯಿಂದ ಯಥಾಶಕ್ತಿ ಚಂದಾಹಣವನ್ನು ಈ ಕೆಳಗೆ ಕಂಡ ಹೆಸರಿಗೆ ಜಾಗ್ರತೆಯಲ್ಲಿ ಕಳುಹಿಸಿಕೊಟ್ಟು ಅಭಿಮಾನಪ್ರದರ್ಶನ ಮಾಡುವವರಾಗಬೇಕೆಂದು ಕೋರುವ,

ತಮ್ಮ ವಿಧೇಯ,
ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಆ|| ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು.

ಪತ್ರವ್ಯವಹಾರ.

ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೆ ಸಹಾಯ.

ಮ|| ರಾ|| ಹುಲ್ಲೂರು ತಾ|| ಸಂಜೀವರಾಯರವರು ಈ ವರ್ಷ ಲೋವರ್‌ಸೆಕೆಂಡರಿ ಪರೀಕ್ಷೆಗೆ ಚಿತ್ರದುರ್ಗ ಸೆಂಟರಿಗೆ ಬರತಕ್ಕ ಬ್ರಾಹ್ಮಣ ವಿದ್ಯಾರ್ಥಿಗಳಿಗೂ, ಬ್ರಾಹ್ಮಣ ಉಪಾಧ್ಯಾಯರಿಗೂ ಸಹ ಶ್ರೀ ಸೀತಾರಾಮ ಹಿಂದೂ ಧರ್ಮಶಾಲಾ (ಮ|| ರಾ|| ಅಡ್ವೋಕೇಟ್ ಚನ್ನಕೇಶವಯ್ಯನವರ ಸತ್ರ) ದಲ್ಲಿ ಮಾಮೂಲು ಮೇರೆಗೆ ಭೋಜನದ ಏರ್ಪಾಟು ಮಾಡುವರು. ಬರತಕ್ಕವರು ಕೆಳಗಿನ ವಿಳಾಸಕ್ಕೆ ತಮ್ಮ ಹೆಸರು ವಿಳಾಸಗಳನ್ನು ಫಿಬ್ರವರಿ ಮಾಹೆ ಆಖೈರೊಳಗಾಗಿ ತಿಳಿಸಬೇಕೆಂದು ಕೋರುತ್ತೇನೆ.

ಬಿ. ರಾಮರಾವ್ ಹೆಡ್‌ಮಾಸ್ಟರ್,
ರೂ. ಎ. ವಿ ಸ್ಕೂಲ್, ಬೊಮ್ಮಗೊಂಡನಕೆರೆ.

ಸಿದ್ದಾಪುರ.

ಈ ದಿವಸ ಇಲ್ಲಿಯ ಕಾಯ್ದೆ ಕೌನ್ಸಿಲ್ ಲೋಕನಿಯುಕ್ತ ಮೆಂಬರರಾದ ನಾಮದಾರ ಪ್ರೊಫೆಸರ ಲಠ್ಠೆಯವರೂ, ಮುಂಬಯಿ ಪ್ರಾಂತಿಕ ಕಾಯ್ದೆ ಕೌನ್ಸಿಲದ ಬೆಳಗಾಂವ ಜಿಲ್ಲೆಯ ಲೋಕನಿಯುಕ್ತ ಮೆಂಬರರಾದ ನಾಮದಾರ ಚಿಕ್ಕೋಡಿಯವರೂ ಕಾರವಾರ ಜಿಲ್ಲೆಯ ಸ್ಥಿತಿಗತಿಯನ್ನು ತಿಳಿದುಕೊಳ್ಳುವದರ ಸಲುವಾಗಿ ಮೋಟರಗಾಡಿಯಮೇಲೆ ಕುಮಟಾ, ಶಿರಸಿಗಳ ಮೇಲಿಂದ ಜೋಗ ನೋಡಿಕೊಂಡು ಸಿದ್ದಾಪುರಕ್ಕೆ ದಯಮಾಡಿಸಿದ್ದರು. ಆಗ ಈ ಊರವರು ಯಾವತ್ತೂ ನಾಗರಿಕರ ವತಿಯಿಂದ ಪಾನಸುಪಾರಿಯನ್ನು ಸಮರ್ಪಿಸಿದ್ದಲ್ಲದೆ ಅವರು ಸದರಿ ಕೌನ್ಸಿಲುಗಳಲ್ಲಿ ಬಹುಮತದಿಂದ ಮೆಂಬರರಾಗಿ ಆರಿಸಲ್ಪಟ್ಟದ್ದಕ್ಕಾಗಿ ಅಲ್ಲಿಯ ಲೋಕಲ್ ಬೋರ್ಡ ಮೆಂಬರರಾದ ರಾಮಚಂದ್ರ ನಾರಾಯಣಭಟ್ಕಳ ಇವರು ಅಭಿನಂದನ ಪಂಭಾಷಣ ಮಾಡಿದ ನಂತರ ಅದಕ್ಕೆ ಉತ್ತರವಾಗಿ ನಾಮದಾರ ಚಿಕ್ಕೋಡಿಯವರು ಭಾಷಣಮಾಡುವಾಗ ನಾಮದಾರ ಲಠ್ಠೆಯವರೂ ತಾವೂ ನಾವು ಮಾಡಿದ ಆದರ ಸತ್ಕಾರಗಳ ಅಭಾರಮನ್ನಿಸಿದರಲ್ಲದೆ ಮುಂದಿನ ಕೌನ್ಸಿಲುಗಳಲ್ಲಿ ನಿಮ್ಮೆಲ್ಲರ ಕೊರತೆಗಳನ್ನು ತನು, ಮನ, ಧನಗಳಿಂದ ದೂರಮಾಡಲಿಕ್ಕೆ ಪ್ರಯತ್ನಮಾಡುತ್ತೇವಾಗಿ ಅಶ್ವಾಸನ ಕೊಟ್ಟು ವೇಳೆಯು ಬಹಳವಾಗಿದೆಯೆಂದು ಶಿರಸಿಗೆ ಪ್ರಯಾಣ ಬೆಳಸಿದರು.

ಹೇಮಾರಡ್ಡಿ ಮಲ್ಲಮ್ಮನ ಪುರಾಣ.

ಸನ್ ೧೯೨೦ ನೆ ಇಸವಿ ಡಿಶಂಬರ್ ತಾರೀಖು ೨೬ ನೆಯ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಶ್ರೀಮನ್ನಿರಂಜನ ಉದ್ದೇಶಸ್ವಾಮಿಗಳು ವಿರಕ್ತಮಠ ಜಮಖಂಡಿ ಇವರು ಮೇಲ್ಕಂಡ ಪುರಾಣವಿಚಾರವಾಗಿ ಯಾವ ಸ್ಥಳದಲ್ಲಿ ದೊರೆಯುತ್ತದೆ ಅದರ ವಿಳಾಸವನ್ನು ತಿಳಿಸಬೇಕೆಂತಲೂ ಪ್ರಾಯಶಃ ದೊರೆಯದೆ ಇದ್ದರೆ ಪುನಃ ಎಲ್ಲಾ ಜನರಿಗೂ ತಿಳಿಯುವಂತೆ ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಿರೆಂತಲೂ ನಂತರ ದೊರೆಕಿದ ಪುರಾಣದ ಯೋಗ್ಯತೆಯನ್ನು ಮತ್ತು

ಕೊಟ್ಟು ತೆಗೆದುಕೊಳ್ಳುತ್ತೇವೆಂತಲೂ ತಿಳಿಸಿರುತ್ತಾರೆ. ಸದರಿ ಸ್ವಾಮಿಗಳವರು ಸ್ಟಾರ್ ಪತ್ರಿಕೆಯಲ್ಲಿ ತಿಳಿಸಿದ ಪ್ರಕಾರ ವಿಚಾರಿಸುವಲ್ಲಿ ಕಡೂರ ತಾ॥ ಪೈಕಿ ಅಜ್ಜಂಪುರ ಪೋಸ್ಟಿಗೆ ಸೇರಿದ ಗಿರಿಯಾಪುರದಲ್ಲಿ ವೀರಶೈವ ಹೇಮಾರೆಡ್ಡಿ ವಂಶಸ್ಥರಲ್ಲಿ ಮುಖಂಡರಾದ ಮ॥ ರಾ॥ ನಂಜಪ್ಪಗೌಡರಲ್ಲಿ ದೊರೆಯುತ್ತದೆಂದು ತಿಳಿಯಿತು. ಈ ಮಹಾಶಯರು ತಮ್ಮ ಗ್ರಾಮದಲ್ಲಿ ಇತರ ಗ್ರಾಮಗಳಲ್ಲಿರುವ ಸ್ವಜನಗಳ ಸಹಾಯದಿಂದ ನೂತನವಾಗಿ ಮಲ್ಲಿಕಾಂಬಾ ಎಂಬ ಹೆಸರಿನ ಮೇಲೆ ಒಂದು ದೇವಾಲಯವನ್ನು ಕಟ್ಟಿಸಿ ಪೂಜ್ಯರಿಂದ ಅಮ್ಮನವರನ್ನು ಸ್ಥಾಪನೆಮಾಡಿಸಿ, ವೀರಶೈವ ಹೇಮಾರೆಡ್ಡಿ ಮಲ್ಲಿಕಾಂಬಾ ಸಂಘವು ಎಂಬ ಸಂಸ್ಥೆಯನ್ನು ಸ್ಥಾಪಿಸಿ, ತಮ್ಮ ಉಚ್ಚತಮಧ್ಯೇಯವನ್ನು ಮುಂದೆ ಮಾಡಿ, ತನು ಮನ ಧನಗಳನ್ನು ಪರೋಪಕಾರಕ್ಕಾಗಿಯೇ ಸವೆಯಿಸುತ್ತಿರುವರು. ಮತ್ತು ಅವರಲ್ಲಿರುವ ಹೇಮಾರೆಡ್ಡಿ ಮಲ್ಲಮ್ಮನ ಪುರಾಣವನ್ನು ಪಂಡಿತರಿಂದ ಪುನಃ ಸರಿಯಾಗಿ ಬರೆಯಿಸಿ ಪ್ರೆಂಟ್ ಮಾಡಿಸಬೇಕೆಂದು ಆಲೋಚಿಸಿದ್ದಾರೆ. ಅವರಲ್ಲಿಗೆ ಪತ್ರವ್ಯವಹಾರ ಮಾಡಿದರೆ ಉಳಿದ ವಿಷಯಗಳು ವಿವರವಾಗಿ ತಿಳಿಯುತ್ತವೆ.

ಶಿವಕಥಾಭೂಷಣ ನಂಜುಂಡಾರಾಧ್ಯ,
ವೀರಮಾಹೇಶ್ವರಾರಾಧ್ಯ ಮಠ, ಹುಣಸಿಘಟ್ಟ.

ಚಾಮರಾಜನಗರದ ತಾಲ್ಲೂಕು ಕುದೇರು.

ಈ ಗ್ರಾಮದಲ್ಲಿರುವ ಹೊಸಮಠದ ಬ್ರ॥ ಶ್ರೀ॥ ನಿತ್ಯಾನಂದಸ್ವಾಮಿಗಳವರು ತಮ್ಮ ಮಠದಲ್ಲಿ ಸ್ವಮತ ಇತರ ಮತ ಪುಸ್ತಕಭಂಡಾರವನ್ನು ಇಡುವುದೂ ಮಾಸ ಮತ್ತು ವಾರಪತ್ರಿಕೆಗಳನ್ನು ತರಿಸುವುದೂ ಮತ ಮತ್ತು ಇತರ ಸಂಬಂಧವಾದ ಉಪನ್ಯಾಸಗಳನ್ನು ಮಾಡುವುದು ಈ ಉದ್ದೇಶಗಳಿಂದ ಕೂಡಿದ ವಾಚಕಮಂದಿರವನ್ನು ಸ್ಥಾಪಿಸಬೇಕೆಂಬದಾಗಿ ಮ॥ ರಾ॥ ಗಳಾದ ಜಿ. ಸದಾಶಿವಯ್ಯನವರು, ಎಂ. ಎಂ.ಟಿ. ಚನ್ನಬಸಪ್ಪನವರು ಪಿ. ಪುಟ್ಟಪ್ಪನವರು, ಪಿ. ಶಾಂತಪ್ಪನವರು, ಎಸ್. ಶಾಂತವೀರಪ್ಪನವರು, ಪಿ. ಮಾದಪ್ಪನವರು, ಬಿ. ಪುಟ್ಟಸೋಮಪ್ಪನವರು, ಜಿ ಸಂಗನಬಸಪ್ಪನವರು, ಎಸ್. ಬಸವಣ್ಣನವರು ಇವರುಗಳೊಡನೆ ಯೋಚಿಸಿ, ತಾ॥ ೫-೧-೨೧ನೆ ಬುಧವಾರ ಪ್ರಾತಃಕಾಲ ೯ ಗಂಟೆಗೆ ಸರಿಯಾಗಿ ವಿ. ಇ. ಗರ್ಲ್ಸ್ ಸ್ಕೂಲ್ ಹೆಡ್ ಮಾಸ್ಟರ್ ಆರ್. ಶ್ರೀಕಂಠಾರಾಧ್ಯರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಚನ್ನಬಸವೇಶ್ವರವಿಲಾಸ ವಾಚಕಮಂದಿರ ಎಂಬ ಹೆಸರಿನಿಂದ ಮಂದಿರವನ್ನು ಸ್ಥಾಪಿಸುವಂತೆಯೂ, ಈ ಮಂದಿರಕ್ಕೆ ಮೇಲ್ಕಂಡ ಬ್ರ॥ಶ್ರೀ॥ ನಿತ್ಯಾನಂದಸ್ವಾಮಿಗಳವರು ಅಧ್ಯಕ್ಷರಾಗಿಯೂ ಜಿ. ಸದಾಶಿವಯ್ಯನವರು ಕಾರ್ಯದರ್ಶಿಗಳಾಗಿಯೂ, ಎಂ. ಚನ್ನಬಸಪ್ಪನವರು ಕೋಶಾಧ್ಯಕ್ಷರಾಗಿಯೂ ಉಳಿದವರು ಮೆಂಬರುಗಳಾಗಿಯೂ ಅಧ್ಯಕ್ಷರೇ ಮೊದಲುಗೊಂಡು ಪ್ರತಿಯೊಬ್ಬರೂ ಪ್ರೊಸಿಡಿಂಗ್ಸ್ ಪ್ರಕಾರ ನಡೆದುಕೊಳ್ಳುವಂತೆಯೂ ತೀರ್ಮಾನವಾದದ್ದಲ್ಲದೆ ಸಭಾಧ್ಯಕ್ಷರವರಿಂದ ಕಾಲೋಚಿತವಾದ ಭಾಷಣವೂ ನಿತ್ಯಾನಂದಸ್ವಾಮಿಗಳಿಂದ ಐಕಮತ್ಯ ವಿಷಯವಾದ ಉಪನ್ಯಾಸವೂ, ಜಿ. ಸದಾಶಿವಯ್ಯನವರಿಂದ ವಿದ್ಯಾವಿಷಯವಾದ ಉಪನ್ಯಾಸಗಳೂ ನಡೆದು ಅನಂತರ ಗಂಧಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟು ಕೊನೆಯಲ್ಲಿ ಶ್ರೀಮನ್ ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಶ್ರೀಮದ್ವೀರಶೈವ ಶಿವಯೋಗಮಂದಿರದ ಮಹಾಶಿವರಾತ್ರಿಯ ಸಮಾರಂಭವು.

ವಾಡಿಕೆಯಂತೆ ಇದೇ ಮಾಘ ಬ॥ ೧೪-೩೦ ಫಾಲ್ಗುಣ ಶು॥ ೧ ಮಾರ್ಚಿ ತಾರೀಖು ೭, ೮, ೯ ಸನ್ ೧೯೨೧ ನೇ ಇಸವಿಯ ದಿವಸ ಇಲ್ಲಿ ಯಾತ್ರಾ ಸಮಾರಂಭವೂ ಮಹಿಳಾಪರಿಷತ್ತೂ ಜರಗುವವು. ವಕ್ತೃತ್ವಶಾಲಿಯುಳ್ಳ ಪಂಡಿತರ ವ್ಯಾಖ್ಯಾನ ಪುರಾಣ ಹಾಗೂ ಶಿವಕೀರ್ತನ ಸಂಗೀತ ಭಜನೆಗಳೂ ಧರ್ಮಗ್ರಂಥಗಳಲ್ಲಿ ಪರೀಕ್ಷೆಯೂ ಮಂಗಲ ರಥೋತ್ಸವ ಮುಂತಾದ ಕಾರ್ಯಗಳೂ ಜರಗುವವು.

ಕಾರ್ಯಕ್ರಮ:—ಮಹಾಶಿವರಾತ್ರಿಸೋಮವಾರ ದಿವಸ ವಾಡಿಕೆಯಂತೆ ಸಾಯಂಕಾಲಕ್ಕೆ ಪಾದಪೂಜಾ ರಾತ್ರಿ ಪುರಾಣ ಕೀರ್ತನಗಳು, ಮಾಘ ಬ॥ ೩೦ ಮಂಗಳವಾರ ದಿವಸ ಮುಂಜಾನೆ ಆಲೋಚನಾ ಸಭೆಯು ಮಧ್ಯಾಹ್ನದ ೨ ಗಂಟೆಯಿಂದ ೫ ಗಂಟೆಯವರೆಗೆ ಬೇರೆ ಬೇರೆ ಸ್ಥಳಗಳಲ್ಲಿ ಸ್ತ್ರೀಯರ ಹಾಗೂ ಪುರುಷರ ಧರ್ಮಗ್ರಂಥಗಳ ಪರೀಕ್ಷೆಯು ಮತ್ತು ಭಾಷಣಗಳು. ೫ ಗಂಟೆಯಿಂದ ೬ ಗಂಟೆಯವರೆಗೆ ರಥೋತ್ಸವವು, ೭ ಘಂಟೆಯಿಂದ ೯ ಗಂಟೆಯವರೆಗೆ ಶಿವಕೀರ್ತನ ಫಾಲ್ಗುಣ ಶು॥ ೧ ಬುಧವಾರ ಬೆಳಿಗ್ಗೆ ೭ ಗಂಟೆಯಿಂದ ೧೧ ಗಂಟೆಯವರೆಗೆ ಶ್ರೀ ಸಾಧಕರ ಹಾಗು ವಟುಗಳ ಪರೀಕ್ಷೆಯೂ ಉತ್ತಮ ಹೋರಿ ಮುಂತಾದವುಗಳ ಮಾರಾಟವೂ ಆಲೋಚನಾ ಸಭೆಯೂ ಪರೀಕ್ಷೆಯೂ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಿಗೆ ಇನಾಮುಗಳ ಹಂಚುವಿಕೆಯೂ ನಡೆಯುವವು. ಮಧ್ಯಾಹ್ನದಲ್ಲಿ ಭಾಷಣವೂ ಹೋರಿಗಳ ಮಾರಾಟವೂ ೬ ರಿಂದ ೯ ರ ವರೆಗೆ ಕೀರ್ತನ ಮತ್ತು ವಾಹನೋತ್ಸವಗಳೂ ನಡೆಯುವವು. ಆದುದರಿಂದ ಧರ್ಮಾಭಿಮಾನಿಗಳು ತಮ್ಮ ಪ್ರಾಂತದ ಜನರೊಡನೆ ಇತರ ಕ್ಷೇತ್ರಯಾತ್ರೆಗಳಿಗೆ ಹೋಗುವಂತೆ ಇಲ್ಲಿಗೆ ಕುಟುಂಬ ಸಹಿತರಾಗಿ ಬಂದು ಇಲ್ಲಿ ಜರಗುವ ಪುಣ್ಯಕಾರ್ಯಗಳ ಫಲಕ್ಕೆ ಭಾಗಿಗಳಾಗಿ ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕಾಗಿ ಕೋರುತ್ತೇವೆ.

ಮಂದಿರವು ವಿಜಾಪೂರ ಜಿಲ್ಲಾ ಬಾದಾಮಿಸ್ಟೇಷನ್ನಿನಿಂದ ೯ ಮೈಲು ಅಂತರದಲ್ಲಿದೆ-ಬಾಡಿಗೆಯ ಟಾಂಗಾ ಹಾಗು ಬಂಡಿಗಳು ಸ್ಟೇಷನ್ನಿನಲ್ಲಿ ದೊರೆಯುವವು.

ಶಿವಯೋಗಮಂದಿರದ ವ್ಯವಸ್ಥಾಪಕ.

ವೀರಶೈವ ಪರಮಪೂಜ್ಯರಿಗೆ ನನ್ನದೊಂದು ವಿಜ್ಞಾಪನೆಯು.

ಈ ಕಲಿಕಾಲದಲ್ಲಿ ಪರಮೇಶ್ವರನು ತನ್ನ ಲೀಲೆಯನ್ನು ವಿಚಿತ್ರವಾಗಿ ತೋರಿಸುತ್ತಿರುವನು. ನೋಡಿರಿ, ಪೂರ್ವದಲ್ಲಿ ಅಭಿವೃದ್ಧಿಯಲ್ಲಿದ್ದ ನಮ್ಮ ಮತವು ಈವಾಗ ಯಾವ ಮೂಲೆಯಲ್ಲಿರುವುದೆಂಬುದನ್ನು ತಿಳಿಯುವುದಕ್ಕೂ ಸಹ ನಮ್ಮ ಕಡೆಯಿಂದಾಗದು. ದಿನೇ ದಿನೇ ಕ್ಷೀಣವಾಗುತ್ತಿರುವುದೇ ಹೊರತು ಅಭಿವೃದ್ಧಿಯೆಂಬುವುದು ಕನಸಿನಲ್ಲಿಯೂ ಕಾಣುವುದಿಲ್ಲ. ಹೀಗಿರುತ್ತಿರುವಾಗ ನಮ್ಮ ಗುರುವರ್ಗದವರ ಚಳವಳಿಯೊಂದು ವಿಶೇಷವಾಗಿ ನಡೆಯುತ್ತಿರುವುದನ್ನು ನೋಡಿದರೆ ಮತ್ತಷ್ಟು ಮತಕ್ಕೆ ಹಾನಿಕಾರಕವಲ್ಲವೆಂದು ಯಾರುತಾನೇ ಹೇಳಬಲ್ಲರು ? ಈ ಚಳವಳಿಯೆಂಬ ಬೀಜವು ಈವಾಗ ದೊಡ್ಡದೊಂದು ಮರವಾಗಿರೋಣದರಿಂದ ಇದನ್ನು ನಾಶಮಾಡಬೇಕೆಂದು ಹದನಾದ ಕೊಡಲಿಯನ್ನು ತೆಗೆದುಕೊಂಡು ಎಲ್ಲ ಕಡೆಯೂ ಪಸರಿಸುವ ಕೊಂಬೆಗಳನ್ನು ಕತ್ತರಿಸಬೇಕೆಂದು ಪ್ರಯತ್ನಪಟ್ಟರೆ ಪ್ರಯೋಜನವಿಲ್ಲ. ಏಕೆಂದರೆ—ಆಗಿನ ಕಾಲಕ್ಕೆ ನಾಶವಾದಂತೆ ಕಂಡರೂ ಕೆಲವು ದಿವಸಗಳ ಮೇಲೆ ಮತ್ತೂ ಬೆಳೆಯುವುದು ತಪ್ಪುವುದಿಲ್ಲ. ಆದುದರಿಂದ ಬೇರು ಸಹಿತ ನಾಶಮಾಡುವುದೇ ಮುಖ್ಯಕಾರಣವೆಂದು ತಿಳಿದು ಅದನ್ನೇತಕ್ಕೆ ನಾಶಮಾಡುವುದಿಲ್ಲ ? ಅದಕ್ಕೇನೂ ಶ್ರಮವೆನಿಸುವುದಿಲ್ಲ; ದ್ರವ್ಯವಾದರೂ ಖರ್ಚಾಗುವುದಿಲ್ಲ; ಕ್ಷಮಾ ಗುಣವೊಂದನ್ನು ಎಲ್ಲರೂ ತಾಳಿದರೆ ಸಾಕು. ಇದರಿಂದಲೇ ಈ ಮರವು ತನ್ನಷ್ಟಕ್ಕೆತಾನೇ ನಾಶವಾಗುವುದೆಂದು ನನ್ನ ಪೂರ್ಣ ನಂಬಿಕೆಯುಂಟು. ಹೀಗಿರುವಾಗ ಇದಕ್ಕಾಗಿ ನಮ್ಮ ವೀರಶೈವಬಾಂಧವರು ೨೦-೩೦ ಸಾವಿರ ರೂ. ಗಳನ್ನು ಕೂಡಿಸಿ ದೊಡ್ಡದೊಂದು ನಿರಂಜನ ಸಭೆಯನ್ನು ನಡೆಯಿಸತಕ್ಕವರಾದ್ದರಿಂದಲೂ ಮತ್ತು ಅದಕ್ಕಾಗಿ ಅನೇಕ ಶ್ರಮಪಡುತ್ತಿದ್ದಾರೆಂದೂ ಕೇಳಿದ್ದೇನೆ. ಒಂದು ಚಳವಳಿಯಿಂದಲೇ ಮತವು ಇಷ್ಟು ಹೀನಸ್ಥಿತಿಯಲ್ಲಿರುವಾಗ ಮತ್ತೊಂದು ಚಳವಳಿಯು ಮುಂದಕ್ಕೆ ಒಂದರೆ ಎಷ್ಟು ಅಧೋಗತಿಯನ್ನು ಹೊಂದುತ್ತದೆಂದು ಹೇಳಬೇಕಾಗಿಲ್ಲ. ಅಲ್ಲದೆ ಈ ಚಳವಳಿಯನ್ನು ಪ್ರಾರಂಭ ಮಾಡಿದರೆ ಅವರಿಗಾದರೂ ಲಾಭವು ಸಂಭವಿಸುತ್ತದೆಂದು ಹೇಳುವಹಾಗಿಲ್ಲ. ತಾವಾಗಿಯೇ ಕೆಸರಿನಮೇಲೆ ಕಲ್ಲನ್ನೊಗೆದು ನಿರ್ಮಲವಾದ ಮುಖವನ್ನು ಕೆಡಿಸಿಕೊಳ್ಳುವುದಕ್ಕಿಂತಲೂ ಕ್ಷಮಾಗುಣವನ್ನು ಧಾರಣೆ ಮಾಡಿಕೊಂಡು ಅದೇ ೨೦-೩೦ ಸಾವಿರ ರೂ. ಗಳನ್ನು ಕ್ಷಯರೋಗದಿಂದ ಪೀಡಿತವಾಗಿರುವ ಮಠದ ಗ್ರಂಥಗಳನ್ನಾಗಲಿ ಅಥವಾ ವಿದ್ಯಾರ್ಥಿ ಮಂದಿರಗಳನ್ನಾಗಲಿ ವಿದ್ಯಾರ್ಥಿ ವೇತನಗಳನ್ನಾಗಲಿ ನಮ್ಮ ಮತದಲ್ಲಿ ಭೂಷಣವಾಗಿರುವ ಮೈಸೂರು ಸ್ಟಾರ್ ಮೊದಲಾದ ಧರ್ಮಪತ್ರಗಳನ್ನಾಗಲಿ ಹೆಚ್ಚಿಗೆ ಉದ್ಧಾರಮಾಡಿದರೆ ಅವುಗಳಿಂದಲೇ ಮತೋದ್ಧಾರವಾಗುವುದಲ್ಲದೆ, ಅವರ ಕೀರ್ತಿಯಾದರೂ ಅಭಿವೃದ್ಧಿಯನ್ನು ಹೊಂದುವುದು. ಹಾಗಲ್ಲದೆ ನಮ್ಮವರ ದೂಷಣೆಯನ್ನು ಮಾಡುತ್ತಾರೆಂದು ನಿರ್ಮಲವಾದ ಮನಸ್ಸಿನಲ್ಲಿ ಸ್ವಲ್ಪವಾದರೂ ತರಬಾರದು. ಆನೆಯು ಹೋಗುತ್ತಿರುವಾಗ ನಾಯಿಯು ಬೊಗಳಿದರೆ ಅದಕ್ಕೇನಾಗುವುದು ? ನಾಯಿಯಂತೆ ಆನೆಯಾದರೂ ಬೊಗಳಿದರೆ ಅದರ ಮರ್ಯಾದೆಯಾದರೂ ಏನುಳಿಯುವುದು ? ಆದುದರಿಂದ ತಾವೆಲ್ಲರೂ ದಯವಿಟ್ಟು ಕ್ಷಮೆತಾಳಿ ಬೇರೆ ಮತೋದ್ಧಾರಕಾರ್ಯಗಳಿಗೆ ಕೈಹಾಕಿ ಕೀರ್ತಿಭಾಜನರಾಗುವಿರೆಂದು ಪೂರ್ಣ ನಂಬಿರುತ್ತೇನೆ.

ಓರ್ವ ಹಿತಚಿಂತಕ.

ಫ್ರೆಂಚ್ ರೋಮನಾಶಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
19 ಪಾರ್ಕ್‌ಟೌನ್ ಮದರಾಸ್.

5-0-0 ಕ್ರಯದ ರೈಲ್ವೆ ಲೀವರ್ ವಾಚ್ ಇನಾಂ.



ಈ ಪೇನಾಗಳು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಒಂದೇ ಸಮವಾಗಿ ಬರೆಯುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ರೈಲ್ವೆಲೀವರ್ ವಾಚ್ ಇನಾಮಾಗಿ ಕೊಡುವೆವು. ಗಡಿಯಾರವು ಅಮೆರಿಕಾ ದೇಶದಲ್ಲಿ ತಯಾರಾದದ್ದು. 19

ಕ್ರಯ ಗಡಿಯಾರ ಸಹಿತ ಪೇನಾ 1ಕ್ಕೆ ರೂ. 4-12-0

ವಿಳಾಸ—ಎಲ್ಜಿನ್ ವಾಚ್ ಕಂಪನಿ,
89 ನಾರಾಯಣಮೊದಲಿಬೀದಿ, ಮದರಾಸು.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೆರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

3 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 9

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೀತಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಷ್ಟವಿಲ್ಲವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಫಲಶ್ರೇಷ್ಠ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 17

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಳಲು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆ ಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0. 19

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
ಪಾರ್ಕ್‌ಟೌನ್ ಮದರಾಸು.

೧೯೨೧ ನೆಯ ಇಸವಿ ಜನವರಿ ತಾ॥ ೩೦ರಿಂದ ೧೯೨೧ನೆಯ ಫೆಬ್ರವರಿ ತಾ॥ ೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಪುಷ್ಯಬಹುಳ ಸಪ್ತಮಿಯಿಂದ ಪುಷ್ಯಬಹುಳ ತ್ರಯೋದಶಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ಮಾಸ
30	ಭಾನು	ಸಪ್ತ	28-45	ಚಿತ್ತ	6-41	18
31	ಸೋಮ	ಅಷ್ಟ	28-47	ಸ್ವಾತಿ	7-43	19
1	ಮಂಗಳ	ನವ	30-1	ವಿಶಾ	9-59	20
2	ಬುಧ	ದಶ	32-37	ಅನೂ	13-31	21
3	ಗುರು	ಏಕಾ	36-18	ಜ್ಯೇಷ್ಠ	18-9	22
4	ಶುಕ್ರ	ದ್ವಾ	40-55	ಮೂಲ	23-45	23
5	ಶನಿ	ತ್ರಯೋ	46-16	ಪೂಷಾ	29-59	24

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲಿಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ವಜನಪ್ರತ್ಯಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ಭಕ್ತಮಾಲಾಕುಲಂ | ಶ್ರೀಮಂಪತ್ರಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಫೆಬ್ರವರಿ ತಾರೀಖು ೬ ನೆಯ ಭಾನುವಾರ (ಸಂಚಿಕೆ ೬

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಬುಗು ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ,
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
5 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಶ್ರುತಿಮುಕ್ತಾವಳಿ ೮ಆಣೆ; ರಕ್ತಾಕ್ಷಕಲ್ಪ ೨ಆಣೆ; ಶಂಕರಲಿಂಗಕಂದಂ ೧ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಟೀಕ ವೀರಶೈವ ವಿವಾಹವಿಧಿಃ	೦—೧೨—೦
ವಪೂಜಾವಿಧಿಃ	೦—೧೪—೦
ರುತೀಚಂದ್ರಿ	೦—೯—೦
[illegible]	೦—೮—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋವೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹೂವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟ್ ವಾಚು.



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

45 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ.

45

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
೩. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಪಥ್ಯ **ಮದನೋದ್ಭವಗುಳಿಗೆ.** ಇಲ್ಲ.
(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 50

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ವಜ್ರದ ಬೆಂಡೋಲೆ.



ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೆಕಲ್ಲಿನ ಬೆಂಡೋಲೆ 3—0—0.
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 1—4—0

20

ವಜ್ರದ ಗುಂಡಿಗಳು.



ಈ ಗುಂಡಿಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿಡಕಟ್ಟಿದೆ. ನೋಡುವವರು ಸಾಚಾವಜ್ರದ ಗುಂಡಿಗಳೆಂದೆ ಹೇಳುವರು. ಈ ಗುಂಡಿಗಳು ಆಸ್ಟ್ರೇಲಿಯಾ ದೇಶದಲ್ಲಿ ತಯಾರಿಸಿದ್ದು. ಷರಟು, ಕುಪ್ಪಸ, ಜಾಕೀಟು ಮುಂತಾದವುಗಳಿಗೆ ಪ್ರತಿಯೊಬ್ಬರೂ ಹಾಕಿಕೊಳ್ಳಬಹುದು.

ಕ್ರಯ 4 ಗುಂಡಿಗಳ ಸೆಟ್ 1ಕ್ಕೆ 1—4—0.

ಎಲೆಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದು ಹಚ್ಚುವುದಕ್ಕೆ ಬೆಂಕಿಕಡ್ಡಿ ಅಗತ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆಗೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಗೂ ದೀಪದಕಡ್ಡಿ ಅವಶ್ಯಕವೇ ಇರುವುದಿಲ್ಲ. ಬೀಡಿ ಸಿಗರೇಟು ಸೇದುವವರಿಗೂ ಪ್ರಯಾಣಿಕರಿಗೂ ಬೇಕಾದ್ದು.

ಕ್ರಯ 1—12—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಫಿಬ್ರವರಿ ತಾ|| ೬ ನೆಯ ಭಾನುವಾರ.

ತುರ್ಕಿಯ ಸಂಧಿ ಸುಧಾರಣೆ.

ಈಗ ನಿರ್ಣಯಿಸಿರುವ ತುರ್ಕಿಯ ಸಂಧಿಯನ್ನು ತುರ್ಕಿ ಪ್ರಭುತ್ವದವರು ನಿರ್ವಾಹವಿಲ್ಲದೆ ಒಪ್ಪಿಕೊಂಡಿದ್ದರೂ ತುರುಷ್ಕ ಪ್ರಜೆಗಳಿಗೆಲ್ಲಾ ಅದು ಅಸಮಾಧಾನಕರವಾಗಿದೆ. ಆ ಸಂಧಿ ನಿರ್ಣಯವಾದೀಚೆಗೆ ತುರುಷ್ಕ ಪ್ರಪಂಚದಲ್ಲಿ ಮೂಡಿರುವ ಅಸಮಾಧಾನ ಚಿಹ್ನಗಳು ನಾನಾವಿಧವಾಗಿ ಗೋಚರಿಸಿವೆ. ಈ ಅಸಮಾಧಾನವು ಪ್ರಪಂಚದ ಶಾಂತಿಗೆ ಸಾಧಕವಾಗುವುದಿಲ್ಲ. ಇದರ ಮೂಲವೇನೋ ಅದನ್ನು ಕಂಡುಹಿಡಿದು ಛೇದಿಸಿದಲ್ಲದೆ ಇದು ಶಾಂತವಾಗುವ ಹಾಗಿಲ್ಲ. ಭರತಖಂಡದಲ್ಲಿ ಅಭೂತಪೂರ್ವವಾದ ಹಿಂದೂ ಮಹಮ್ಮದೀಯೈಕ್ಯವೂ ಸಹಾಯನಿರಾಕರಣೋದ್ಯಮವೂ ಪ್ರಬಲಿಸುತ್ತಿರುವುದಕ್ಕೆ ತುರುಷ್ಕರ ಮನೋವೇದನೆಯೇ ದೊಡ್ಡ ಕಾರಣವು. ಸ್ಥಿತಿಗತಿಗಳನ್ನೆಲ್ಲಾ ಪರ್ಯಾಲೋಚಿಸಿ ನೋಡಿದವರು ಹೇಗಾದರೂ ಮಾಡಿ ತುರ್ಕಿ ಸಂಧಿಯನ್ನು ಇನ್ನಷ್ಟು ಉದಾರವಾಗಿ ಸರಿಪಡಿಸುವುದು ಅವಶ್ಯಕವೆಂದು ಹೇಳದೆ ಬಿಡುವಹಾಗಿಲ್ಲ. ಲಂಡನ್ನಿನ ಕೆಲ ಪತ್ರಿಕೆಗಳೂ ಹೀಗೆಯೇ ಹೇಳುತ್ತಿವೆ. ಯುದ್ಧ ಮುಗಿದಬಳಿಕ ತುರ್ಕಿ ದೇಶವನ್ನು ಮಿತ್ರರಾಷ್ಟ್ರಗಳವರು ಹಂಚಿಕೊಂಡುದರಲ್ಲಿ ಸ್ಮರ್ನಾ ಥ್ರೇಸ್ ಭಾಗಗಳು ಗ್ರೀಕಿನವರ ವಶಕ್ಕೆ ಸೇರತಕ್ಕುವುಗಳಾಗಿವೆ. ಇವನ್ನು ವಶಪಡಿಸಿಕೊಂಡು ಆಳುವ ಭಾರವು ಗ್ರೀಸಿಗೆ ಸೇರಿದೆ. ಆದರೆ ಇನ್ನೂ ಆಭಾಗಗಳೆ ಪೂರ್ಣವಾಗಿ ಗ್ರೀಕಿನ ಹಸ್ತಗತವಾಗಿಲ್ಲ. ತುರ್ಕಿಯ ಸುಲ್ತಾನ್ ಪ್ರಭುತ್ವವನ್ನು ಮೀರಿ ಅಲ್ಲಿಯ ಜಾತೀಯ ವಾದಿಗಳು ಕೇಮಲ್‌ಪಾಷಾರವರ ಪ್ರಮುಖತೆಯಿಂದ ಒಂದು ಪ್ರಜಾಪ್ರಭುತ್ವವನ್ನು ಅಂಗೋರಾದಲ್ಲಿ ಏರ್ಪಡಿಸಿಕೊಂಡಿದ್ದಾರೆ. ಅವರು ಸ್ಮರ್ನಾಭಾಗಗಳನ್ನು ಗ್ರೀಕಿನ ವಶಕ್ಕೆ ಬಿಟ್ಟುಕೊಡದೆ ಯುದ್ಧಮಾಡುತ್ತಿದ್ದಾರೆ.

ಹಿಂದೆ ಯುದ್ಧಕಾಲದಲ್ಲಿ ಜರ್ಮನ್ ಕೈಜರನ ಭಾವಮೈದುನನಾದ ಕಾನ್‌ಸ್ಟಾಂಟೈನಿನ ಆಳಿಕೆಯಲ್ಲಿ ಗ್ರೀಕ್ ದೇಶವು ಇದ್ದಿತು. ಆತನು ಕೈಜರ್ ಪಕ್ಷಪಾತಿಯಾಗಿದ್ದುದರಿಂದ ಮಿತ್ರಮಂಡಲಿಯೊಡನೆ ಸೇರಲು ಒಡಂಬಡಲಿಲ್ಲ. ಆದರೆ ದೇಶದ ಪ್ರಜೆಗಳಲ್ಲಿ ಬಹು ಭಾಗದವರಿಗೆ ಮಿತ್ರಮಂಡಲಿಯೊಡನೆ ಸೇರಿಕೊಂಡು ಯುದ್ಧಮಾಡಿ ಜಯಲಾಭದಿಂದ ಉಂಟಾಗುವ ಕೊಳ್ಳೆಯಲ್ಲಿ ಸ್ವಲ್ಪ ಭಾಗವನ್ನು ತಾವೂ ಹಂಚಿಕೊಳ್ಳಬೇಕೆಂಬ ಇಷ್ಟವಿದ್ದಿತು. ವೆನಿಜುಲಾಸ್ ಮಂತ್ರಿಯು ಈ ಪ್ರಜಾಪ್ರೀತಿಗೆ ಪಾತ್ರನಾಗಿದ್ದುದರಿಂದ, ಪ್ರಜಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ರಾಜ್ಯವನ್ನಾಳಲಿಕ್ಕೆ ಸಾಧ್ಯವಿಲ್ಲವೆಂದು ತಿಳಿದು ಕಾನ್‌ಸ್ಟಾಂಟೈನ್ ಪ್ರಭುವು ಸಿಂಹಾಸನವನ್ನು ಬಿಟ್ಟುಹೋದನು. ಗ್ರೀಕ್ ದೇಶವು ಮಿತ್ರಮಂಡಲಿಗೆ ಸಹಾಯಕವಾಗಿ ನಿಂತಿತು. ಅದರಿಂದವರ ಜಯಕ್ಕೆ ಎಷ್ಟೋ ಸಹಾಯವಾಯಿತು. ಅದರ ಮೇಲೆ ಮಿತ್ರರಾಷ್ಟ್ರಗಳವರು ತುರ್ಕಿ ದೇಶದ ಕೆಲಭಾಗವನ್ನು ಗ್ರೀಸಿಗೆ ಹಂಚಿಕೊಡಬೇಕಾಯಿತು. ಇವರೇನೋ ನಿಬಂಧನೆಯ ಪ್ರಕಾರ ಲಿಖಿತ ಮೂಲಕ ಅವನ್ನು ವಹಿಸಿಕೊಟ್ಟರು. ಕಾರ್ಯದಲ್ಲಿ ಇನ್ನೂ ಅದು ನೆರವೇರಿಲ್ಲ. ಆದರೆ ಈ ಮಧ್ಯೆ ಗ್ರೀಸಿನಲ್ಲಿ ದೊಡ್ಡ ಬದಲಾವಣೆಯಾಯಿತು. ತಮ್ಮ ಪೂರ್ವದ ಕಾನ್‌ಸ್ಟಾಂಟೈನ್ ಪ್ರಭುವನ್ನೇ ಸಿಂಹಾಸನಕ್ಕೆ ತಂದು ಕುಳ್ಳಿರಿಸಿಕೊಳ್ಳಬೇಕೆಂಬ ಭಾವವು ಪ್ರಜೆಗಳಲ್ಲಿ ಹುಟ್ಟಿತು. ಅದಕ್ಕೆ ವಿರೋಧಿಸಲು ವೆನಿಜುಲಾಸು ಮಾಡಿದ ಪ್ರಯತ್ನಗಳೊಂದೂ ಸಾರ್ಥಕವಾಗಲಿಲ್ಲ. ಆತನು ದೇಶವನ್ನೇ ಬಿಟ್ಟು ಹೊರಟುಹೋದನು. ಕಾನ್‌ಸ್ಟಾಂಟೈನ್ ಪ್ರಭುವು ಸ್ವದೇಶಕ್ಕೆ ಬಂದು ಪ್ರಭುತ್ವಪದವಿಯನ್ನು ಅನುಭವಿಸುತ್ತಿರುವನು. ಈತನ ಪ್ರಭುತ್ವವು ವೆನಿಜುಲಾಸಿಗೂ ಸಮ್ಮತವಾಗಿಲ್ಲ. ಹೀಗಿರುವಾಗ ಸ್ಮರ್ನಾ ಥ್ರೇಸ್ ಭಾಗಗಳನ್ನು ಈಗಲೂ ಗ್ರೀಸಿಗೆ ವಹಿಸಿಕೊಡುವುದಕ್ಕೇ ಮಿತ್ರಮಂಡಲಿಯವರು ಅನುಕೂಲರಾಗಿರುವುದಕ್ಕಿಂತಲೂ ತಮ್ಮ ಇಷ್ಟಕ್ಕೆ ವಿರುದ್ಧವಾಗಿರುವ ಆ ದೇಶಕ್ಕೆ ಸಹಾಯಮಾಡುವುದನ್ನು ಮಾನಸಿಕ ಮಾಡಿ, ಸ್ಮರ್ನಾಥ್ರೇಸ್‌ಭಾಗಗಳನ್ನು ತುರ್ಕಿಗೇ ನಿಲ್ಲಿಸಿಕೊಡುವುದರಲ್ಲಿ ತುರ್ಕಿಯ ಮನಸ್ಸಮಾಧಾನಪಡಿಸುವ ಮಹಾಲಾಭವನ್ನು ಪಡೆಯುವುದೇ ವಿಹಿತವೆಂದು ಕಾಣುತ್ತಿದೆ. ಆದರೆ ಹೀಗೆ ಮೊದಲ ಒಪ್ಪಂದವನ್ನು ಬದಲಾಯಿಸುವುದರಲ್ಲಿ ಗ್ರೀಸು ದೇಶವು ಸಮಾಧಾನಪಡುವಂತೆ ತೋರುವುದಿಲ್ಲ. ಆ ದೇಶಕ್ಕೆ ಮಿತ್ರಮಂಡಲಿಯವರು ಪೂರ್ವದಲ್ಲಿ ಮಾಡಿರುವ ವಾಗ್ದಾನವನ್ನು ಈಗ ಭಂಗಪಡಿಸಿಕೊಳ್ಳುವುದೂ ಸುಲಭವಲ್ಲ. ಆದರೂ ಹೇಗಾದರೂ ಮಾಡಿ ಈಗಣ ಸಂಧಿಯನ್ನು ತುರುಷ್ಕರನ್ನು ಸಮಾಧಾನಪಡಿಸುವ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕೆಂದು ಆಂಗ್ಲರೇ ಮೊದಲಾದ ಮಿತ್ರಮಂಡಲಿಯವರು ನಿರ್ಧರಿಸಿದಂತೆ ಕಾಣುತ್ತದೆ.

ಬಹುಶಃ ಬರುವ ತಾ|| ೧೮ರಲ್ಲಿ ಲಂಡನ್ ಪಟ್ಟಣದಲ್ಲಿ ಇದಕ್ಕಾಗಿ ಮಿತ್ರಮಂಡಲಿಯವರ ಸಭೆಯು ಕೂಡುವುದಕ್ಕಿದೆ. ಅದಕ್ಕೆ ಗ್ರೀಕ್ ಪ್ರಭುತ್ವದವರಿಗೂ ತುರ್ಕಿ ಸುಲ್ತಾನರಿಗೂ ಆಹ್ವಾನವನ್ನು ಕೊಟ್ಟಿದ್ದಾರೆ. ಇದಕ್ಕೆ ತುರ್ಕಿ ಸುಲ್ತಾನರು ಪ್ರತ್ಯುತ್ತರವನ್ನು ಕಳುಹಿಸಿರುವುದರಲ್ಲಿ-ನಾವೂ ಮತ್ತು ತುರ್ಕಿಯ ಜಾತೀಯವಾದಿ ಪ್ರಭುತ್ವದವರು ಸಹ ಕೂಡಿ ಪ್ರತಿನಿಧಿಗಳನ್ನು ಸಭೆಗೆ ಕಳುಹಿಸಿಕೊಡುತ್ತೇವೆ ಎಂದು ತಿಳಿಯಿಸಿದ್ದಾರೆ. ಮಿತ್ರಮಂಡಲಿಯವರು ತುರ್ಕಿ ಸುಲ್ತಾನರಿಗೆ ಆಹ್ವಾನವನ್ನು ಕೊಟ್ಟಿದ್ದರೇ ಹೊರತು ಜಾತೀಯವಾದಿಗಳ ಪ್ರಭುತ್ವದವರಿಗೆ ಆಹ್ವಾನವನ್ನೇನೂ ಕಳುಹಿಸಿರಲಿಲ್ಲ. ಪ್ರಜಾಪ್ರಭುತ್ವದ ಅಧ್ಯಕ್ಷರಾದ ಕೇಮಲ್‌ಪಾಷಾರವರಿಗೆ ಮಿತ್ರಮಂಡಲಿಯವರು ತಮಗೆ ಆಹ್ವಾನವನ್ನು ಕಳುಹಿಸದಿದ್ದುದು ಸೈರಣೆಯನ್ನುಂಟುಮಾಡಿಲ್ಲ. ಮತ್ತು ಸುಲ್ತಾನರು ತಮ್ಮ ಪ್ರತಿನಿಧಿಯೊಡನೆ ಜಾತೀಯ ಪ್ರಭುತ್ವ ಪ್ರತಿನಿಧಿಯನ್ನೂ ಕಳುಹಿಸಿಕೊಡುತ್ತೇವೆಂದು ಸ್ವತಂತ್ರಿಸಿ ಉತ್ತರಕೊಟ್ಟಿರುವುದೂ ಸಮಾಧಾನಕರವಾಗಿಲ್ಲ. ಇದರ ಮೇಲೆ ಇವರು ಜಾತೀಯವಾದಿ ಪ್ರಭುತ್ವವೇ ನಿಜವಾದ ತುರ್ಕಿ ಪ್ರಭುತ್ವವೆಂತಲೂ, ಮಿತ್ರಮಂಡಲಿಯವರು ಆ ಪ್ರಭುತ್ವಕ್ಕೆ ನೇರವಾಗಿ ಕ್ರಮಪದ್ಧತಿಯಿಂದ ಆಹ್ವಾನವನ್ನು ಕಳುಹಿಸುವರೇನೋ ಎಂದು ತಾವು ಇದುವರೆಗೆ ನಿರೀಕ್ಷಿಸಿದೆವೆಂತಲೂ, ಈಗಲೂ ಅವರು ಹಾಗೆ ಆಹ್ವಾನವನ್ನು ಕಳುಹಿಸುವುದಾದರೆ ಈ ತುರ್ಕಿ ಭಾಗಗಳನ್ನು ವಿದೇಶ ಸೈನ್ಯಗಳು ಕೂಡಲೇ ಬಿಟ್ಟುಹೋಗಬೇಕೆಂತಲೂ, ತುರ್ಕಿಯವರು ನಷ್ಟ ಪರಿಹಾರರೂಪವಾಗಿ ಯಾವ ಮಾತ್ರದ ದ್ರವ್ಯವನ್ನೂ ಕೊಡುವುದಿಲ್ಲವೆಂತಲೂ, ತಿಳಿಯಪಡಿಸಿರುವರೆಂದು ಗೊತ್ತಾಗುತ್ತದೆ. ಹೀಗಿರುವಾಗ ಇವರು ತಮ್ಮ ಪ್ರತಿನಿಧಿಯನ್ನು ಮುಂದಣ ಮಿತ್ರಮಂಡಲೀ ಸಭೆಗೆ ಕಳುಹಿಸಿಕೊಡುವಂತೆ ತೋರುವುದಿಲ್ಲ. ಇದೇ ಸಮಯದಲ್ಲಿ ತುರ್ಕಿಯ ಸುಲ್ತಾನ್ ಪ್ರಭುತ್ವದವರನ್ನು ಮೂಲೆಗೊತ್ತರಿಸಿ, ತಮ್ಮ ಪ್ರಜಾಪ್ರಭುತ್ವವನ್ನೇ ರೂಢಮೂಲವಾಗಿ ಮಾಡಿಕೊಳ್ಳಬೇಕೆಂಬ ಕುತೂಹಲವು ಈ ಜಾತೀಯ ವಾದಿಗಳಿಗೆ ಹುಟ್ಟಿರುವಂತೆ ಕಾಣುತ್ತದೆ. ಆದರೆ ಮಿತ್ರಮಂಡಲಿಯವರು ಸ್ಮರ್ನಾಥ್ರೇಸ್ ಭಾಗಗಳನ್ನು ಸುಲ್ತಾನರಿಗೇ ಬಿಟ್ಟುಕೊಡಲು ನಿಶ್ಚಯಿಸಿದರೆ ಆ ಸಂಕಲ್ಪಕ್ಕೆ ವಿರೋಧಿಸಿ ತುರ್ಕಿಯ ಜಾತೀಯವಾದಿಗಳು ಏನನ್ನು ತಾನೇ ಮಾಡಬಲ್ಲರು? ಅಲ್ಲದೆ ಈ ಜಾತೀಯ ಪ್ರಭುತ್ವವನ್ನು ಸಕ್ರಮಸ್ಥಾಪಿತವಾದುದೆಂದು ಮಿತ್ರರಾಷ್ಟ್ರದವರು ಒಪ್ಪಿದ್ದಾರೆಯೆ? ಸದ್ಯಃ ಮುಂದಣ ಸಮಾವೇಶದಲ್ಲಿ ತುರ್ಕಿ ಸಂಧಿನಿಯಮಗಳನ್ನು ಉದಾರವಾಗಿ ಸಂಸ್ಕರಿಸುವ ಕಾರ್ಯವೊಂದು ನಿರ್ವಿಘ್ನವಾಗಿ ನಡೆಯಲಿ. ಅತ್ತ ಗ್ರೀಸಿನ ನೂತನಮಂತ್ರಿಗಳಾದ ರಾಲಿಸ್‌ರವರು ನಡೆದುಹೋಗಿರುವ ತುರ್ಕಿ ಸಂಧಿನಿಯಮಗಳನ್ನು ಈಗ ಬದಲಾಯಿಸಬೇಕಾದ ಅವಶ್ಯಕತೆಯೇನೂ ಉಂಟಾಗಿಲ್ಲವೆಂದು ಮಿತ್ರಮಂಡಲೀ ಸಭೆಯಲ್ಲಿ ವಾದಿಸುವವರಾಗಿದ್ದಾರಂತೆ. ಹೀಗೆಲ್ಲಾ ಇರುವಾಗ ಪರ್ಯವಸಾನವು ಹೇಗಾಗುವುದೋ ನೋಡಬೇಕು. ರಾಜಧರ್ಮಕ್ಕೆ ವಿರುದ್ಧವಿಲ್ಲದಂತೆಯೂ ತುರ್ಕಿಯ ಮೇಲಣ ವಿಶ್ವಾಸಪುಷ್ಟಿಯಿಂದಲೂ ಕೆಲಸಮಾಡಬೇಕೆಂದು ಆಂಗ್ಲ ಮಂತ್ರಿಮಂಡಲದವರು ಪ್ರತಿಜ್ಞಾರೂಢರಾದರೆ ಕಾರ್ಯವೇನೂ ಹದಗೆಡಲಾರದು. ಅಂತೂ ಸ್ವಲ್ಪಕಾಲದೊಳಗೇ ಇದರ ಪರಿಣಾಮವು ಗೊತ್ತಾಗುವುದು.

ಆಹಾರ.

ಸ್ವಾಮಿ ರಘುನಾಥರಾಯಯವರು ಮದ್ರಾಸಿನಲ್ಲಿ ಆಹಾರ ವಿಷಯವಾಗಿ ಮಾಡಿದ ಉಪನ್ಯಾಸದ ಸಾರಾಂಶ:—

ನಾವು ತೆಗೆದುಕೊಳ್ಳುವ ಆಹಾರಕ್ಕನುಸಾರವಾಗಿ ನಮ್ಮ ಆರೋಗ್ಯವಿರುತ್ತದೆ. ಆದುಕಾರಣ ಆಹಾರವೇ ನಮ್ಮ ಆರೋಗ್ಯಕ್ಕೆ ಮೂಲಾಧಾರವು. ನಮ್ಮ ಆಹಾರವೇ ನಮ್ಮ ಭಾಗದ ದೈವವೆಂದರೆ ತಪ್ಪಲ್ಲ. ಅದೇ ನಮಗೆ ವೈದ್ಯನು. ಅದೇ ನಮಗೆ ಐಶ್ವರ್ಯವು. ಆದುದರಿಂದ ನಾವು ಆಹಾರವನ್ನು ತೆಗೆದುಕೊಳ್ಳುವಾಗ ಭಕ್ತಿಯಿಂದಲೂ ಗೌರವದಿಂದಲೂ ಇರಬೇಕು. ಇಲ್ಲದಿದ್ದರೆ ಆರೋಗ್ಯವು ಕೆಡುವುದು. ನಾವು ತಿನ್ನುವ ಆಹಾರವು ಸುಲಭವಾಗಿ ಜೀರ್ಣಿಸುವುದಾಗಿಯೂ ಯಾವ ಬಾಧೆಯನ್ನೂ ಉಂಟುಮಾಡದೆ ಇರತಕ್ಕುದಾಗಿಯೂ, ಶಕ್ತಿವರ್ಧಕವಾಗಿಯೂ, ರುಚಿಕರವಾಗಿಯೂ ಇರಬೇಕು. ಮನುಷ್ಯನಿಗೆ ಶಾಕಾಹಾರವೇ ಮುಖ್ಯವು. ಮಾಂಸಭಕ್ಷಣವು ಎಷ್ಟು ಮಾತ್ರಕ್ಕೂ ಕೂಡದು. ಮಾಂಸಭಕ್ಷಣೆಯಿಂದ ಬುದ್ಧಿಯು ಮಂದವಾಗುವುದು. ವಿಷಯಲೋಲುಪ್ತಿಯು ಹೆಚ್ಚುವುದು. ಮನಶ್ಚಾಪಲವುಂಟಾಗುವುದು. ಕೋಪಾವೇಶವು ಅಧಿಕವಾಗುವುದು. ಕ್ರೂರತ್ವವು ಜನಿಸುವುದು. ಆತ್ಮನಿಗ್ರಹವು ಶೂನ್ಯವಾಗುವುದು, ಅಸೂಯೆ, ನೀಚತ್ವ, ಜಡತ್ವ, ನಿರ್ಲಕ್ಷ್ಯ ಇವೆಲ್ಲಾ ಹುಟ್ಟುವುವು. ಶಾಕಾಹಾರದಿಂದಲಾದರೋ ತೇಜಸ್ಸು, ಬುದ್ಧಿವಿಕಾಸ, ದಯೆ ಮೊದಲಾದ ಸದ್ಗುಣಗಳುಂಟಾಗುವುವು. ಆದುಕಾರಣ ಮಾಂಸಭಕ್ಷಣವನ್ನು ಮಾಡಕೂಡದು. ಆಹಾರವನ್ನು ನಿದಾನವಾಗಿ ಚೆನ್ನಾಗಿ ಅಗಿದು ತಿನ್ನಬೇಕು. ಇಲ್ಲದಿದ್ದರೆ ಅಜೀರ್ಣರೋಗಗಳುಂಟಾಗುವುವು. ಬಿಸಿನೀರು ಕುಡಿಯಲೇಬಾರದು. ಯಾವಾಗಲೂ ತಣ್ಣೀರನ್ನೇ ಕುಡಿಯಬೇಕು. ಆ ನೀರಿನಲ್ಲಿ ಪ್ರಾಣಶಕ್ತಿಯಿರುವುದು. ಭೋಜನವನ್ನು ಯಾವಾಗಲೂ ಆತುರದಿಂದ ಮಾಡಬಾರದು. ಕಾಲಿಗೆ ಮೇಜೋಡು ಅಥವಾ ಪಾದರಕ್ಷೆಗಳನ್ನು ಮೆಟ್ಟಿ (ಇದು ಪ್ರಾಚೀನ ಹಿಂದೂ ಸಂಪ್ರದಾಯಕ್ಕೆ ವಿರುದ್ಧವಾಗಿದೆ. ಪ್ರ) ಪ್ರತಿದಿನ ಮಡಿಬಟ್ಟೆಯನ್ನುಟ್ಟು ಊಟಮಾಡಬೇಕು. ಪರಿಶುಭ್ರವಾಗಿಯೂ ಗಾಳಿ ಬೆಳಕಿಗೆ ಅವಕಾಶವುಳ್ಳದಾಗಿಯೂ ಇರುವ ಸ್ಥಳದಲ್ಲಿ ಕುಳಿತು ಭೋಜನ ಮಾಡಬೇಕು. ನಾವು ಊಟಮಾಡುವುದಕ್ಕೆ ಮುಂಚೆ ನಾಯಿಗಳಿಗೂ, ಕಾಗೆಗಳಿಗೂ, ಇರುವೆ ಮೊದಲಾದ ಪ್ರಾಣಿಗಳಿಗೂ ಸ್ವಲ್ಪ ಆಹಾರವನ್ನು ಹಾಕಿದ ಬಳಿಕ ಊಟಮಾಡಬೇಕು. ಭೂತದಯೆಯು ಮುಖ್ಯವಾಗಿರಬೇಕು. ಅದೇ ಹೀಗೆ ಮಾಡಬೇಕಾದುದಕ್ಕೆ ಕಾರಣ. ಭಗವಂತನು ನಮ್ಮನ್ನು ಪರೀಕ್ಷಿಸುವುದಕ್ಕಾಗಿ ಈ ಮೇಲೆ ಕಂಡ ಪ್ರಾಣಿಗಳನ್ನು ನಮ್ಮ ಊಟದ ಹೊತ್ತಿಗೆ ಕಳುಹಿಸುತ್ತಾನೆ. ಧರ್ಮಚಿಂತಾಪರತೆಯೂ, ಔದಾರ್ಯವೂ ನಮ್ಮ ಜೀರ್ಣಶಕ್ತಿಯನ್ನು ಅಭಿವೃದ್ಧಿಗೊಳಿಸುವುದು, ಭಕ್ತಿವಿಶ್ವಾಸಗಳಿಂದಲೂ ಸಂತೋಷದಿಂದಲೂ ನಾವು ಊಟಮಾಡಬೇಕು. ಹಾಗಿಲ್ಲದೆ ಚಿಂತಾಕ್ರೋಧಾದಿಗಳಿಂದ ಊಟಮಾಡಿದರೆ ಆ ಅನ್ನವೇ ವಿಷವಾಗಿ ಪರಿಣಮಿಸುವುದು. ಎಲ್ಲಕ್ಕೂ ನಮ್ಮ ಮನಸ್ಥಿತಿಯೇ ಕಾರಣವು. ಅನುಮಾನ ಪಿಶಾಚವನ್ನು ಮನಸ್ಸಿನಿಂದ ದೂರೀಕರಿಸಬೇಕು. ಹೆಚ್ಚಾಗಿ ಹುಳಿ ಕಾರಗಳನ್ನು ಹಾಕಿದ ಪದಾರ್ಥಗಳನ್ನು ತಿನ್ನಕೂಡದು. ಮದರಾಸಿನ ಜನರು ಹುಣಿಸೆಹಣ್ಣು ಮೆಣಸಿನಕಾಯಿ ಬೇರೆಯಾದ ಪದಾರ್ಥಗಳನ್ನು ತಿನ್ನಲಾರರು. ಆದುಕಾರಣವೇ ಇವರು ಸೊಪ್ಪು ಸೊಗದವರಾಗಿಯೂ, ನಿರ್ಬಲರಾಗಿಯೂ, ಒಂದು ನಿಮಿಷವಾದರೂ ಒರಗಿಲ್ಲದೆ ಕುಳಿತುಕೊಳ್ಳಲಾರದವರಾಗಿಯೂ ಇದ್ದಾರೆ. ಉತ್ತರ ದೇಶದವರು ವಿಶೇಷವಾದ ಹುಳಿಕಾರಗಳನ್ನು ತ್ಯಜಿಸಿಬಿಟ್ಟಿರುವುದರಿಂದಲೇ ಈ ಮದ್ರಾಸಿಗಳಿಗಿಂತಲೂ ಹೆಚ್ಚು ಬುದ್ಧಿವಂತರಾಗಿಯೂ ಬಲಶಾಲಿಗಳಾಗಿಯೂ ಇದ್ದಾರೆ. ಸ್ವಲ್ಪ ಹುಳಿ ಪದಾರ್ಥವನ್ನಾಗಲಿ ಮೆಣಸಿನಕಾಯಿಯ ಕಾರದ ಪದಾರ್ಥವನ್ನಾಗಲಿ ಚಿಕ್ಕಮಕ್ಕಳಿಗೆ ತಿನ್ನಿಸಿದರೆ ಅಜೀರ್ಣ ರಕ್ತಾತಿಸಾರ ಭೇದಿ ಮೊದಲಾದುವುಗಳು ಉಂಟಾಗುವುವೆಂಬುದು ನಿಮಗೆಲ್ಲಾ ತಿಳಿದೇ ಇದೆ. ಹಾಗೆಯೇ ಅವು ದೊಡ್ಡವರಿಗೂ ಕೆಡಕನ್ನು ಮಾಡುವುವು. ನಲ್ಲಿಯ ನೀರಿನಲ್ಲಿ ಪ್ರಾಣಶಕ್ತಿಯಿಲ್ಲ. ಆದುಕಾರಣ ಅದನ್ನು ಒಂದು ಪಾತ್ರೆಯಲ್ಲಿ ತುಂಬಿಟ್ಟು ಅದರಿಂದ ಮತ್ತೊಂದು ಪಾತ್ರೆಗೆ ಕೆಲವುಸಲ ಸುರಿದು ಬಳಿಕ ಕುಡಿಯಬೇಕು. ಆಗ ಅದರಲ್ಲಿ ಪ್ರಾಣಶಕ್ತಿಯು ಬೆರೆದಿರುವುದು.

ಒಳದೇಶದ ವೃತ್ತಾಂತಗಳು.

ಶಿವಮೊಗ್ಗ ಡಿಸ್ಟ್ರಿಕ್ಟ್ ಕಾನ್‌ಫರೆನ್ಸು ಈ ಫೆಬ್ರವರಿ ತಾ|| ೧೨ ಮತ್ತು ೧೩ ರಲ್ಲಿ ಶಿವಮೊಗ್ಗ ಟೌನ್ ಹಾಲಿನಲ್ಲಿ ನಡಿಯುವುದು.

ರಾಜಧಾನಿಯ ಲಾಯರುಗಳಲ್ಲಿ ಕೆಲವರು ರಾಮದಾಸರ ಚರಿತ್ರೆಯನ್ನು ನಾಟಕರೂಪವಾಗಿ ಈ ದಿನ ರಾತ್ರಿ ರತ್ನಾವಳಿ ನಾಟಕಶಾಲೆಯಲ್ಲಿ ಅಭಿನಯಿಸುವುದಾಗಿ ಪ್ರಕಟವಾಗಿದೆ.

ಗುಬ್ಬಿ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರಾದ ಮ|| ಎಂ. ಎನ್. ಬಾಳರಾಜ ಅರಸ್. ಬಿ. ಎ., ಯವರಿಗೆ ೩ ನೆ ತರಗಯ ಮೇಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ತಾಲ್ಲೂಕು ಅಮಲ್ದಾರ್ ಕೆಲಸಕ್ಕೆ ರೆವಿನ್ಯೂ ಶಾಖೆಯಲ್ಲಿ ಕೆಲಸಮಾಡುವವರ ವಿನಾ ಇತರ ಶಾಖೆಯವರು ತರಲ್ಪಡಕೂಡದೆಂಬ ನಿರ್ಬಂಧವು ತಪ್ಪಿಸಲ್ಪಟ್ಟಿರುವುದಾಗಿ ಅರಿಯುತ್ತೇವೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆ|| ಕಮಿಷನರಾಗಿ ವರ್ಗಪಟ್ಟಿರುವ ಮ|| ಜಿ. ಆರ್ಮುಮುದಂ ಅಯ್ಯಂಗಾರರಿಗೆ ಕಳೆದ ಜನವರಿ ತಾ|| ೨೯ ರಿಂದ ೬ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಸೆನ್ಸಸ್ ಸೂಪರಿಂಟೆಂಡೆಂಟರೊಡನೆ ಕೆಲಸಮಾಡುವ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ಸುಬ್ಬರಾಯರಿಗೆ ಕಳೆದ ಜನವರಿ ತಾ|| ೧ ರಿಂದ ೩ ತಿಂಗಳು ಮತ್ತು ೮ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ದಿವಾನರಾದ ಸರದಾರ್ ಎಂ. ಕಾಂತರಾಜ ಅರಸಿನವರು ತಮ್ಮ ವಾಸಸ್ಥಳವನ್ನು ಸರ್ ಎಂ. ವಿಶ್ವೇಶ್ವರಯ್ಯನವರು ವಾಸವಾಗಿದ್ದ ಬಾಲುಬ್ರೂಯಿ ಎಂಬ ಬಂಗಲೆಗೆ ಕೆಲ ಕಾಲದ ಮಟ್ಟಿಗೆ ಬದಲಾಯಿಸಿರುತ್ತಾರೆ.

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರಿನಲ್ಲಿ ರೈಲ್ವೆ ಟಿಕೆಟನ್ನು ಕೊಡುವ ಆಫೀಸಿನ ಬೀಗವನ್ನು ಯಾರೋ ಕಳ್ಳರು ಶುಕ್ರವಾರ ರಾತ್ರಿ ಮುರಿದುಬಿಟ್ಟಿದ್ದುದರಿಂದ ಮಾರನೆಯ ಬೆಳಿಗ್ಗೆ ಪೊಲೀಸರು ಸ್ಥಳಪರೀಕ್ಷೆಯಿಂದ ಸಂಗತಿಯನ್ನು ವಿಚಾರಿಸುತ್ತಿದ್ದುದಾಗಿ ಕೇಳುತ್ತೇವೆ.

ಬೆಂಗಳೂರಲ್ಲಿರುವ ಪೊಲೀಸು ಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ|| ಎಂ. ರಾಮರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸು ಸೂಪರಿಂಟೆಂಡೆಂಟರಾಗಿಯೂ, ಮ|| ಸಿ. ಮಾಚಯ್ಯನವರು ಪೊಲೀಸು ಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೂ ತಾತ್ಕಾಲಿಕವಾಗಿ ನಿಯಮಿಸಲ್ಪಟ್ಟಿರುತ್ತಾರೆ.

ವಿದ್ಯುಚ್ಛಕ್ತಿಶಾಖೆಯಲ್ಲಿ ಗುಮಾಸ್ತೆಯಾಗಿದ್ದ ಮಾಣಿಕ್ಯಂಪಿಳ್ಳೆಯೆಂಬಾತನು ತಪ್ಪು ಲೆಕ್ಕವನ್ನು ಬರೆದು ೪೦೦೦ ರೂ.ಗಳನ್ನು ಅಪಹರಿಸಿದ್ದ ತಪ್ಪಿತಕ್ಕಾಗಿ ವಿಚಾರಣೆ ನಡೆದು ಸೆಷನ್ ಜಡ್ಜರು ಅವನಿಗೆ ೩ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯನ್ನೂ ೫೦೦ ರೂ. ಅರ್ಥದಂಡವನ್ನೂ ವಿಧಿಸಿದರು.

ಚಿತ್ರದುರ್ಗದಲ್ಲಿ ನಡೆದ ರಡ್ಡಿಗಳ ಮಹಾಸಭೆಯ ಕಾಲದಲ್ಲಿ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ರಡ್ಡಿಜನರ ಪುರೋವೃದ್ಧಿಯನ್ನು ಬಯಸಿ, ಅವರ ವಿದ್ಯಾರ್ಥಿ ನಿಲಯದ ಸಹಾಯಕ್ಕಾಗಿ ೧ ಸಾವಿರ ರೂ.ಗಳನ್ನು ಅನುಗ್ರಹಿಸಿ ಕಳುಹಿಸಿಕೊಟ್ಟರು. ‘‘ಉದಾರಚರಿತಾನಾಂತು ವಸುಧೈವಕುಟುಂಬಕಂ.’’

ಕೈಲಾಸವಾಸಿಗಳಾದ ರಾವ್ ಬಹದ್ದೂರ್ ಮಲ್ಲಪ್ಪಣ್ಣವಾರದ ಇವರ ೧೦ ನೆಯ ವರ್ಷದ ಪುಣ್ಯತಿಥಿಯು ಕಳೆದ ಜನವರಿ ತಾ|| ೩೦ ರಲ್ಲಿ ಅತಿ ವಿಜೃಂಭಣೆಯಿಂದ ನಡಿಸಲ್ಪಟ್ಟು ಸಾವಿರಾರು ಜನ ಬಡಬಗ್ಗರೂ ಇತರರೂ ಮೃಷ್ಟಾನ್ನ ಸಂತರ್ಪಣೆಯಿಂದ ತೃಪ್ತಿಗೊಳಿಸಲ್ಪಟ್ಟರಲ್ಲದೆ ಸಾವಿರಾರು ಜನರ ಸಭೆಕೂಡಿ ಮಹಾಪುರುಷರ ಗುಣಕಥನವು ಮಾಡಲ್ಪಟ್ಟುದಾಗಿ ತಿಳಿದುಬಂದಿದೆ.

ರಾಜಧಾನಿಯ ೧ ನೆ ಮುನಿಸೀಫರಾದ ಮ|| ಎ. ಕೆ. ಶ್ರೀನಿವಾಸರಾಯರಿಗೆ ಕಳೆದ ಜನವರಿ ತಾ|| ೧೭ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ರಾಜಧಾನಿಯ ೨ ನೆ ಮುನಸೀಫರು ೧ ನೆಯ ಮುನಸೀಫರಾಗಿಯೂ, ಮ|| ಟಿ. ಶಿಂಗಾರವೇಲುಮೊದಲಿಯಾರರು ೨ ನೆಯ ಮುನಸೀಫರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ೬ ತಿಂಗಳಿಗೊಂದಾವೃತ್ತಿ ನಡಿಯುವ ಫಲಪುಷ್ಪ ಪ್ರದರ್ಶನವು ಈ ತಾ|| ೧೨ನೆಯ ಶನಿವಾರ ಮತ್ತು ೧೩ನೆಯ ಭಾನುವಾರ ಟವನ್‌ಹಾಲಿನಲ್ಲಿ ನಡಿಸಲ್ಪಟ್ಟು ಉತ್ತಮ ಪ್ರದರ್ಶಕರಿಗೆ ಬಹುಮಾನಗಳು ಕೊಡಲ್ಪಡುವುವು. ಮೊದಲನೆಯ ದಿನ ದೊಡ್ಡವರಿಗೆ ೮ ಆಣೆ ವಿದ್ಯಾರ್ಥಿಗಳಿಗೆ ೪ ಆಣೆ ೧೨ ವರ್ಷದೊಳಗಣ ಮಕ್ಕಳಿಗೆ ೨ ಆಣೆಯಂತೆಯೂ, ಭಾನುವಾರ ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ ಹೆಂಗುಸರಿಗೂ ಮಧ್ಯಾನ್ಹ ಇತರರಿಗೂ ದೊಡ್ಡವರಿಗೆ ೪ ಆಣೆಯಂತೆಯೂ ಮಕ್ಕಳಿಗೆ ೧ ಆಣೆಯಂತೆಯೂ ಪ್ರವೇಶಧನವು ಗೊತ್ತುಮಾಡಲ್ಪಟ್ಟಿರುವುದು.

ಹುಣಸೂರು ತಾ|| ಹಳೇಬೀಡು ಮಾದರಿಗ್ರಾಮದಲ್ಲಿ ಪದ್ಧತಿಯಂತೆ ಮಾದೇಶ್ವರನ ಜಾತ್ರೆಯು ಬರುವ ಮಾರ್ಚಿ ತಾ|| ೮ ರಿಂದ ೧೨ ರ ವರೆಗೆ ನಡೆಯುವುದು. ಎಂದಿನಂತೆ ದನಗಳ ಪರಿಸೆಯೂ ಕೂಡುವುದು. ಬಹು ಜನಸ್ತೋಮವು ಸೇರುವುದು. ಉತ್ತಮವಾದ ರಾಸುಗಳಿಗೆ ಬಹುಮಾನವು ಕೊಡಲ್ಪಡುವುದು. ಆಸ್ತಿಕ ಮಹಾಜನರು ವಿಶೇಷವಾಗಿ ದಯಮಾಡಿಸಿ ಈ ಉತ್ಸವವನ್ನು ಸಾಂಗಗೊಳಿಸಬೇಕೆಂದೂ, ಸರ್ಕಸ್, ನಾಟಕ ಸಂಘಗಳವರೂ ವ್ಯಾಪಾರಸ್ಥರೂ ೪ ದಿನಗಳ ಮುಂಚಿತವಾಗಿ ಈ ಉತ್ಸವದ ಕಾರ್ಯದರ್ಶಿ ಪಟೇಲ್ ಅಪ್ಪಾಜಪ್ಪನವರಿಗೆ ಬರೆದು ಸ್ಥಳ ಮೊದಲಾದುವುಗಳನ್ನು ಏರ್ಪಡಿಸಿಕೊಳ್ಳಬೇಕೆಂದೂ ಕೋರಿರುತ್ತಾರೆ.

ಡಾಕ್ಟರ್ ಕರ್ವಿಯವರು ರಾಜಧಾನಿಯ ಹೆಲ್ತಾಫೀಸರಾಗಿದ್ದಾಗ್ಗೆ ತಮ್ಮಾಫೀಸಿನಲ್ಲಿ ಕುಳಿತು ಸ್ಯಾನಿಟರಿ ಇನ್‌ಸ್ಪೆಕ್ಟರುಗಳ ವರದಿಯನ್ನು ಕೇಳಿಕೊಂಡು ಎಲ್ಲಾ ಹುಕುಂಗಳನ್ನು ಮಾಡುತ್ತ ರಿಪೋರ್ಟುಗಳನ್ನು ಬರೆದು ಕಳುಹಿಸುತ್ತಿದ್ದರಲ್ಲದೆ ಡಾ|| ಪಾಣೆಯವರಂತೆ ಪ್ರತಿದಿನ ಪ್ರಾತಃಕಾಲ ಒಂದೊಂದು ಮೊಹಲ್ಲಾದಲ್ಲಿ ಬಹಳ ಹೇಸಿಗೆಯಾಗಿರುವ ಸ್ಥಳಗಳಿಗೆ ಸ್ವತಃ ಹೋಗಿ ಆರೋಗ್ಯಕ್ಕೆ ಅವಶ್ಯಕವಾದ ಸೂಚನೆಗಳನ್ನು ಕೊಟ್ಟು ಅನಂತರ ತಮ್ಮಾಫೀಸಿಗೆ ಬಂದು ಕೆಲಸಮಾಡುತ್ತಿದ್ದಂತೆ ಡಾ|| ಕರ್ವಿಯವರು ಹೊರಗಡೆ ಸಂಚರಿಸುತ್ತಿದ್ದುದು ಬಹಳ ಅಪೂರ್ವವು; ಒಂದುವೇಳೆ ಎಂದಾದರೂ ದಯಮಾಡಿದಲ್ಲಿ ಮೋಟಾರು ಬಂಡಿಯಲ್ಲಿ ಕುಳಿತು ಪ್ರಾಮುಖ್ಯವಾದ ಬೀದಿಗಳಲ್ಲಿ ಬಿರ್ರನೆ ಬಂಡಿಯನ್ನು ಓಡಿಸಿಕೊಂಡು ಹೋಗುತ್ತಿದ್ದರು. ಇದರಿಂದ ಪಟ್ಟಣದ ಆರೋಗ್ಯಸ್ಥಿತಿಯೂ ಜನರಿಗಿರತಕ್ಕ ತೊಂದರೆಗಳೂ ಎಷ್ಟರಮಟ್ಟಿಗೆ ಅವರಿಗೆ ಗೊತ್ತಾಗುತ್ತಿದ್ದುವೋ ದೇವರ ಬಲ್ಲ. ಅವರು ಹೀಗೆ ದಿನವಹಿ ಹೊರಗಡೆ ಸಂಚರಿಸದೆ ಇದ್ದುದರಿಂದ ಅವರ ಕೈಕೆಳಗಿನ ಕೆಲಸಗಾರರು ಸರ್ವಸ್ವತಂತ್ರರಾಗಿದ್ದರೆಂಬುದನ್ನು ಹೇಳಬೇಕಾದುದಿಲ್ಲ. ಈವಾಗ ಡಾ|| ಕರ್ವಿಯವರ ಬದಲು ಹೆಲ್ತಾಫೀಸರಾಗಿ ಬಂದಿರುವವರು ಬಹಳ ಶ್ರದ್ಧೆಯಿಂದಲೂ ಚಟುವಟಿಕೆಯಿಂದಲೂ ಕೆಲಸಮಾಡುತ್ತಾರೆಂದು ತಿಳಿದುಬಂದಿದೆ. ಆದುದರಿಂದ ಇವರಾದರೂ ಬೀದಿಯ ಬಚ್ಚಲುಗಳಲ್ಲೂ ಕಸದ ಗುಂಡಿಗಳಲ್ಲೂ ರೊಚ್ಚು ಹೆಚ್ಚಾಗಿ ಜನರ ಆರೋಗ್ಯಕ್ಕೆ ಬಹಳ ಕುಂದಕವಾಗಿರುವ ಭಾಗಗಳನ್ನು ಸ್ವತಃ ಪರೀಕ್ಷಿಸಿ ಹೇಸಿಕೆಯು ತಪ್ಪಲು ತಕ್ಕೇರ್ಪಾಟನ್ನು ಮಾಡುವವರಾಗಬೇಕೆಂದು ಸಯ್ಯಾಜಿರಾವ್ ರೋಡಿನ ಕೆಲ ವಾಸಸ್ಥರು ಈ ಪತ್ರಿಕಾದ್ವಾರ ಅಪೇಕ್ಷಿಸುತ್ತಾರೆ. ಹೆಲ್ತಾಫೀಸರು ಇತ್ತಕಡೆ ಗಮನಿಸಿ ಜನರಿಗುಂಟಾಗಿರುವ ತೊಂದರೆಯನ್ನು ಹೋಗಲಾಡಿಸುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ಬಿನವರು ಬೊಂಬಾಯಿ ಅಧಿಪತ್ಯದ ಶಿಶುಸಂರಕ್ಷಣ ಸಂಘದವರಿಗೆ ೧ ಲಕ್ಷ ರೂ ಗಳನ್ನು ಧರ್ಮಾರ್ಥವಾಗಿ ಕೊಟ್ಟರು.

ಜಾನ್ಸಿಯಲ್ಲಿರುವ ಖಿಲಾಫತ್ ಸಂಘದ ಕಾರ್ಯದರ್ಶಿಯಾದ ಮಹಮ್ಮದ್‌ನಾದಿಯೆಂಬಾತನನ್ನು ಪ್ರಭುತ್ವದವರು ಕಳೆದ ತಾ|| ೨೮ ರಲ್ಲಿ ಹಿಡಿದು ಬಂಧನದಲ್ಲಿಟ್ಟಿದ್ದಾರೆ.

ಮದರಾಸು ಅಧಿಪತ್ಯದ ಅನೇಕ ಪಟ್ಟಣಗಳಲ್ಲಿ ವೈದ್ಯರು ಸಭೆ ಕೂಡಿ ಈಗಣ ಸೆನ್ಸಸ್ಸಿನಲ್ಲಿ ತಮ್ಮನ್ನು ಕೋಮಟಿಗರೆಂದು ಬರೆಯಕೂಡದೆಂದೂ ವೈಶ್ಯರೆಂದು ಪ್ರಯೋಗಿಸಬೇಕೆಂದೂ ನಿರ್ಧಾರ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದಾರೆ.

ಬರೋಡಾ ಬ್ಯಾಂಕಿನವರಿಗೆ ಕಳೆದ ೧೯೨೦ನೆ ವರ್ಷದಲ್ಲಿ ೬ ಲಕ್ಷ ರೂ. ಗಳ ಲಾಭವು ಬಂದಿತು. ಅದರಲ್ಲಿ ೧ ಲಕ್ಷ ರೂ. ಗಳನ್ನು ರಿಜರ್ವ್ ಫಂಡಿಗೆ ತೆಗೆದಿಟ್ಟು ಭಾಗಸ್ಥರಿಗೆಲ್ಲಾ ೧೦೦ಕ್ಕೆ ೧೬ ರೂ. ನಂತೆ ಲಾಭವನ್ನು ಹಂಚಿದರು.

ಮ|| ಗಾಂಧಿಯವರು ಬರ್ಮಾಕ್ಕೆ ಪ್ರಯಾಣ ಮಾಡುವರೆಂಬ ಸುದ್ದಿ ಕೇಳಿ ಅವರನ್ನು ಅಲ್ಲಿಗೆ ಬರಗೊಡಿಸದಂತೆ ಮಾಡಬೇಕೆಂಬ ಪ್ರಯತ್ನವು ನಡೆಯುತ್ತಿದ್ದಿತು. ಆದರೆ ಗಾಂಧಿಯವರೇ ತಮಗೆ ಅಲ್ಲಿಗೆ ಹೋಗಲು ಅವಕಾಶವಿಲ್ಲವೆಂದು ಪ್ರಯಾಣವನ್ನು ನಿಲ್ಲಿಸಿದರು.

ಹೊಸ ವೈಸ್ರಾಯಿ ಲಾರ್ಡ್ ರೀಡಿಂಗ್‌ರವರು ಪತ್ನೀಸಮೇತರಾಗಿ ಕಳೆದ ತಾ|| ೪ನೆ ಶುಕ್ರವಾರ ಬೊಂಬಾಯಿಗೆ ಬಂದು ಇಳಿಯುವರೆಂಬು ಪ್ರಕಟವಾಗಿದ್ದಿತು. ಈಗಣ ವೈಸ್ರಾಯರು ಪತ್ನೀಸಮೇತರಾಗಿ ಏಪ್ರಿಲ್ ತಾ|| ೨ರಲ್ಲಿ ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆ.

ಬೋಲ್ಷಿವಿಕ್ಕರಿಂದ ಮಾನ ಧನಗಳನ್ನು ಕಳೆದುಕೊಂಡ ಬಹುಶಃ ೬೫ ಮಂದಿ ಜೂಯಿಶ್ ಸ್ತ್ರೀಯರು ಈಗ ಬೊಂಬಾಯಿಗೆ ಬಂದಿರುವರು. ಇವರು ಹಿಂದೆ ಬಹಳ ಧನಿಕರಾಗಿದ್ದವರು ಈಗ ನಿರ್ಗತಿಕರಾಗಿದ್ದಾರೆ. ಈ ಗತಿಗೆ ಬಂದಿರುವ ಅನೇಕ ಜೂ ಜನಗಳು ಈಗ ಬಸಾರದಲ್ಲಿ ಬಂದು ನೆಲಸಿದ್ದಾರೆ.

ಪಾರ್ಲಿಮೆಂಟಿನಲ್ಲಿ ಭರತಖಂಡಕ್ಕೆ ಹೊರಗಣಿಂದ ರಂಗುಗಳನ್ನು ಕಳುಹಿಸಿಕೊಡುವ ವಿಷಯದಲ್ಲಿ ಹುಟ್ಟಿರುವ ಶಾಸನದ ವಿಷಯವಾಗಿ ಒಂದು ನೂತನ ಸಂಸ್ಕರಣವನ್ನು ಮಾಡಿದರು. ಅದರ ಪ್ರಕಾರ ಇನ್ನು ಮುಂದೆ ಭರತಖಂಡಕ್ಕೆ ಆಂಗ್ಲದೇಶವೇ ಅಲ್ಲದೆ ಇತರ ದೇಶಗಳ ರಂಗುಗಳು ಕೂಡ ಬರಬಹುದಾಯಿತು.

ಬೊಂಬಾಯಿಯಲ್ಲಿರುವ ಇಂಡಿಯನ್ ಬ್ಯಾಂಕಿಗೆ ಕಳೆದ ವರ್ಷದಲ್ಲಿ ೨೯ ಲಕ್ಷ ರೂ. ಗಳ ಲಾಭವು ಬಂದಿದೆ. ಬ್ಯಾಂಕ್ ಡೈರೆಕ್ಟರುಗಳು ಅದರಲ್ಲಿ ೩ ಲಕ್ಷವನ್ನು ರಿಜರ್ವ್ ಫಂಡಿಗಿಟ್ಟು, ಭಾಗಸ್ಥರಿಗೆಲ್ಲಾ ೧೦೦ಕ್ಕೆ ೧೪ ರೂ. ನಂತೆ ಡಿವಿಡೆಂಡನ್ನು ಹಂಚಿದರು. ನಮ್ಮ ಮೈಸೂರು ಬ್ಯಾಂಕಿನವರಿಗೆ ಅಲ್ಲಿಗಿಂತ ಹೆಚ್ಚು ಲಾಭ ಬಂದಿದ್ದರೂ ೧೦ ರಂತೆ ಡಿವಿಡೆಂಡನ್ನು ಹಂಚಿರುವರು.

ಬಂಗಾಳಾ ಶಾಸನ ಸಭೆಯಲ್ಲಿ ಪ್ರತಿಪಾದಿಸುವುದಕ್ಕಾಗಿ ಒಬ್ಬ ಮಹಮ್ಮದೀಯ ಸಭಿಕರು ಒಂದು ತೀರ್ಮಾನವನ್ನು ದೇಶೀಯ ಭಾಷೆಯಲ್ಲಿ ಬರೆದು ಕಳುಹಿಸಿದ್ದರು. ಆದರೆ ಆಂಗ್ಲಭಾಷೆಯೇ ರಾಜಭಾಷೆಯೆಂದೂ, ಅದು ಕಾರಣ ಅವರು ದೇಶಭಾಷೆಯಲ್ಲಿ ಬರೆದು ಕಳುಹಿಸಿಕೊಟ್ಟ ತೀರ್ಮಾನಗಳೊಂದೂ ಅಂಗೀಕರಿಸಲ್ಪಡುವುವಿಲ್ಲವೆಂದೂ ಸರ್ಕಾರದವರು ಉತ್ತರ ಕೊಟ್ಟಿರುವರು.

ಕಳೆದವಾರ ಮ|| ಗಾಂಧಿಯವರು ಕಲ್ಕತ್ತೆಗೆ ಹೋಗಿದ್ದಾಗ ಸಿ. ಆರ್. ದಾಸರ ಮನೆಯಲ್ಲಿ ಸ್ತ್ರೀಯರನ್ನು ಕುರಿತು ಒಂದು ಉಪನ್ಯಾಸ ಮಾಡಿದರು. ಅದರಲ್ಲಿ ಈ ರಾಜ್ಯವು ಪಾಪಭರಿತವಾಗಿದೆಯೆಂದೂ, ರಾವಣಾಸುರನ ಪಾಪಭೂಯಿಷ್ಠವಾದ ರಾಜ್ಯವನ್ನು ಧ್ವಂಸಮಾಡುವುದಕ್ಕಾಗಿ ಶ್ರೀ ರಾಮನು ಅವತರಿಸಿದಂತೆ ಸಹಾಯನಿರಾಕರಣೋದ್ಯಮವು ಈಗ ಅವತರಿಸಿರುವುದೆಂದೂ ಹೇಳಿದರು.

ಮನೆಗಳಿಗೆ ನುಗ್ಗಿ ದೋಚಿಕೊಂಡು ಅಪರಾಧಕ್ಕೆ ಗುರಿಯಾಗಿ ಶಿಕ್ಷಿತರಾದ ಕೆಲವರು ಅಲಹಾಬಾದ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಲು ಅದು ತಿರಸ್ಕೃತವಾಯಿತು. ತಾವು ಗಾಂಧಿಯವರ ಪಕ್ಷದವರೆಂತಲೂ, ಅಲ್ಲಿ ಸೇರಿ ಘಾತುಕ ಕೃತ್ಯವನ್ನು ನಡೆಯಿಸಿ ದೇಶಸೇವೆಯನ್ನು ಮಾಡಬೇಕೆಂದು ನಿರ್ಣಯಿಸಿದ್ದು ಕಡೆಗೆ ಅದು ಸಾಗದೆಹೋದ ಕಾರಣ ಈ ದೋಚಿಕೊಳ್ಳುವ ಕೃತ್ಯಕ್ಕೆ ಬಿದ್ದೆವೆಂದು ಅವರುಗಳು ವಾಜ್ಮೂಲವನ್ನು ಕೊಟ್ಟರುವರು.

ಬಂಗಾಳಾ ಶಾಸನ ನಿರ್ಮಾಣ ಸಭೆಯು ಕಳೆದ ತಾ|| ೩ರಲ್ಲಿ ಕನ್ನಾಟ್ ಪ್ರಭುಗಳಿಂದ ಆರಂಭಿಸಲ್ಪಟ್ಟಿತು. ಕಲ್ಕತ್ತೆಯ ಸೆಂಟ್‌ಪಾಲ್ ದೇವಾಲಯದಲ್ಲಿ ದೈವಪ್ರಾರ್ಥನೆಯು ಆ ದಿವಸ ನಡೆಯಿಸಲ್ಪಟ್ಟಿತು. ಕನ್ನಾಟ್ ಪ್ರಭುಗಳೂ ಅಲ್ಲಿಗೆ ಹೋಗಿದ್ದರು. ಸಾರ್ವಭೌಮರ ಕುಟುಂಬಕ್ಕೆ ಆಯುರಾರೋಗ್ಯವನ್ನೂ, ಭಾರತೀಯರಲ್ಲಿ ಜಾತಿದ್ವೇಷವು ಶಾಂತವಾಗಿ ಆಂಗ್ಲೇಯರಲ್ಲಿ ಏಕಮತ್ಯಗೊಂಡು ಪ್ರವಹಿಸುವುದನ್ನೂ ಕೋರಿ ಕ್ರೈಸ್ತ ಗುರುಗಳು ಪ್ರಾರ್ಥನೆ ಮಾಡಿದರು.

ಕೊಲೆಗಡುಕತನದಿಂದ ಸುಪ್ರಸಿದ್ಧರಾಗಿರುವ ಜನರಲ್ ಡಯರ್‌ರವರು ಲಂಡನ್ ಪಟ್ಟಣದಲ್ಲಿ ಪರ್ಷಿಯಾ ದಂಡಯಾತ್ರೆಯನ್ನು ಕುರಿತು ಕಳೆದ ತಾ|| ೨ರಿಂದ ಉಪನ್ಯಾಸಗಳನ್ನು ಕೊಡುತ್ತಿರುವರು. ಮೊದಲನೆಯ ಉಪನ್ಯಾಸದಲ್ಲಿ ಟಿಕೆಟ್ಟಿನ ಮಾರಿಕೆಯಿಂದ ಬಂದ ಹಣವನ್ನು ಅಮೃತಸರದಲ್ಲಿ ತಮ್ಮ ಗುಂಡಿನೇಟಿನಿಂದ ಹತರಾದವರ ಬಂಧುಗಳಿಗೆ ಹಂಚಲು ಕಳುಹಿಸಿಕೊಡಲು ಸಂಕಲ್ಪಿಸಿದ್ದಾರೆ. ಅಪರಾಧದ್ರವ್ಯವೆಂದು ಇದನ್ನು ಅವರು ಕಳುಹಿಸುವುದಾಗಿದ್ದರೆ ಭಾರತೀಯರು ಸ್ವೀಕರಿಸಬಹುದು.

ಡ್ಯೂಕ್ ಆಫ್ ಕನ್ನಾಟ್‌ರವರು ಕಲ್ಕತ್ತಾದಲ್ಲಿ ಸ್ಥಾಪಿತವಾಗಿರುವ ಎಡ್ವರ್ಡ್ ಸಾರ್ವಭೌಮರ ಲೋಹಪ್ರತಿಮೆಯನ್ನು ಕಳೆದ ತಾ|| ೨೯ ರಲ್ಲಿ ಬಹಿರಂಗಪಡಿಸಿದರು. ಈ ಪ್ರತಿಮೆಯು ಕುದುರೆಯನ್ನೇರಿದ ಆಕೃತಿಯಲ್ಲಿ ರಚಿತವಾಗಿದೆ. ಇದರ ಮುಂದೆ ವಿಕ್ಟೋರಿಯಾ ಮಹಾರಾಣಿಯವರ ಪ್ರತಿಮೆಯ ಸ್ಥಾಪನೆಯನ್ನು ಮುಂದೆ ಮಾಡುವವರಾಗಿದ್ದಾರೆ. ಮೇಲೆ ಕಂಡ ಸ್ಮಾರಕ ಪ್ರತಿಮಾಸ್ಥಾಪನೆಗಾಗಿ ಪ್ರಜೆಗಳಿಂದ ಧನನಿಧಿಯು ಕೂಡಿಸಲ್ಪಟ್ಟಿದ್ದಿತು. ಅದಕ್ಕೆಲ್ಲಾ ವೆಚ್ಚವಾಗಿ ಇನ್ನು ೩ ಲಕ್ಷ ರೂ. ಗಳು ಉಳಿದಿವೆ. ಅದನ್ನು ವೈದ್ಯಶಾಲೆಯ ಪ್ರತಿಷ್ಠಾಪನೆಗೆ ಉಪಯೋಗಿಸುವವರಾಗಿದ್ದಾರೆ.

ಹಿಂದಣ ಫ್ರಾನ್ಸ್ ಮಂತ್ರಿ ಕ್ಲೆಮೆಂಕೋರವರು ಕಳೆದ ವಾರ ಬೊಂಬಾಯಿಯಲ್ಲಿದ್ದರು. ಆಗ್ಗೆ ಸರ್ ದಿನ್ಷಾಪೆಟಿಟ್‌ರವರು ಅವರಿಗೆ ಒಂದು ಔತಣವನ್ನು ಕೊಟ್ಟರು. ಅನೇಕ ಮಂದಿ ಆಂಗ್ಲೇಯ ದೇಶೀಯ ಪ್ರಮುಖರುಗಳು ನೆರೆದಿದ್ದರು. ಜಡ್ಜ್ ಪ್ರಾಟ್‌ರವರು ಸ್ವಾಗತ ಭಾಷಣವನ್ನು ಮಾಡಿ ಕ್ಲೆಮೆಂಕೋರವರ ದೇಶಸೇವಾ ಮಹತ್ವವನ್ನು ಪ್ರಶಂಸಿಸಿದರು. ಅದಕ್ಕೆ ಕ್ಲೆಮೆಂಕೋರವರು ಪ್ರತ್ಯುತ್ತರವನ್ನು ಹೇಳಿದುದರಲ್ಲಿ—“ಯುದ್ಧಸಮಯದೊಳಗೆ ಸ್ವಾರ್ಥವನ್ನು ಲಕ್ಷ್ಯಮಾಡದೆ ಉತ್ಸಾಹದಿಂದ ತಮ್ಮ ಪ್ರಾಣಧನಗಳನ್ನು ಫ್ರಾನ್ಸಿಗಾಗಿ ಸಮರ್ಪಿಸಿದ ವೀರಪುರುಷರ ಜನ್ಮಭೂಮಿಯಾದ ಈ ದೇಶವನ್ನು ನೋಡುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಧೃಢತೆಯೆ, ಪ್ರೇಮ ಮೊದಲಾದ ಸದ್ಗುಣ ಸಮುದಾಯವೆಲ್ಲಾ ಪೂರ್ವದೇಶದಿಂದಲೇ ಪ್ರಪಂಚಕ್ಕೆಲ್ಲಾ ವ್ಯಾಪಿಸುತ್ತಿವೆ. ಇವನ್ನೇ ಪಾಶ್ಚಾತ್ಯರು ಅವಲಂಬಿಸಿ ಅವನ್ನು ತಮ್ಮವನ್ನಾಗಿ ಭಾವಿಸುತ್ತಾರೆ. ಆದರೆ ಪ್ರಪಂಚದಲ್ಲಿರುವ ಇತರ ಎಲ್ಲಾ ದೇಶಗಳಂತೆಯೇ ಇಲ್ಲೂ ಕೂಡ ಅಶಾಂತಿಯು ಈಗ ವ್ಯಾಪಿಸುತ್ತಿದೆ. ಪರಸ್ಪರ ಪ್ರೇಮವೂ ಅನ್ಯೋನ್ಯ ಸಹಾಯವೂ ಅವಶ್ಯಕವೆಂದು ಸಕಲ ಮತಗಳೂ ಉದ್ಘೋಷಿಸುತ್ತಿದ್ದರೂ ಯುದ್ಧಗಳಿಗೂ ಹತ್ಯೆಗಳಿಗೂ ಮಾತ್ರ ಕೊನೆಯು ಕಾಣಬರುವುದಿಲ್ಲ” ವೆಂದು ಹೇಳಿದರು. ಜಗದ್ವಿಖ್ಯಾತ ಮಂತ್ರಿಯ ಯೋಗ್ಯತೆಗೆ ತಕ್ಕ ವಾಕ್ಯರತ್ನಗಳೇ ಇವು.

ವಿದೇಶ ವೃತ್ತಾಂತಗಳು.

ನ್ಯೂಯಾರ್ಕ್ ಪಟ್ಟಣದಲ್ಲಿ ಬೆಂಕಿಯಿಂದ ೩ ಸಾಲು ಮನೆಗಳು ಸುಟ್ಟುಹೋದುವು. ೪೦ ಲಕ್ಷ ಡಾಲರುಗಳ ನಷ್ಟವಾಯಿತು.

ಅಮೇರಿಕಾದಲ್ಲಿ ಅನೇಕ ಕಾರ್ಖಾನೆಗಳೊಳಗೆ ವೇತನಗಳನ್ನು ತಗ್ಗಿಸಿದರು. ಇದರಿಂದ ಪದಾರ್ಥಗಳು ಅಗ್ಗವಾದುವು. ಬಡಬಗ್ಗರು ಬಹಳ ಸಂತೋಷಪಡುತ್ತಿರುವರು.

ಸ್ಟೇಟ್ ಸೆಕ್ರೆಟರಿಯಾಗಿರುವ ಮಿ|| ಮಾಂಟೊಗ್‌ರವರು ಯುದ್ಧಮಂತ್ರಿಯಾಗಿ ನಿಯಮಿಸಲ್ಪಡುವುದರಲ್ಲಿದ್ದಾರೆಂದೂ, ಸ್ಟೇಟ್ ಸೆಕ್ರೆಟರಿ ಸ್ಥಾನಕ್ಕೆ ಮಿ|| ಚೇಂಬರ್ಲೇನ್‌ರವರು ನಿಯಮಿಸಲ್ಪಡಬಹುದೆಂದೂ ವಾರ್ತೆ ಬಂದಿದೆ.

ಇಟಲಿಯಲ್ಲಿ ರಾಜಕೀಯ ಪಕ್ಷಗಾರರ ಆಂದೋಲನಗಳು ಹೆಚ್ಚಿ ಪರಸ್ಪರ ವೈರವನ್ನು ತೀರಿಸಿಕೊಳ್ಳಲಿಕ್ಕಾಗಿ ಪ್ರಾಣಹತ್ಯೆಯನ್ನೂ ಮಾಡುತ್ತಿದ್ದಾರೆ. ಹಲವು ಪಟ್ಟಣಗಳಲ್ಲಿ ಈ ಆಂದೋಲನದಿಂದ ರೈಲ್ವೆ, ತಂತಿ, ಅಂಚೆ, ಪಾಠಶಾಲೆಗಳ ಕೆಲಸವೆಲ್ಲಾ ನಿಂತುಹೋಗಿದೆ.

ಜರ್ಮನ್ ದೇಶದ ಆಯವ್ಯಯ ಪತ್ರಿಕೆಯನ್ನು ಅಲ್ಲಿಯ ಡೈಟ್ ಸಭೆಯಲ್ಲಿ ಕೋಶಾಧಿಕಾರಿಗಳು ಓದಿದುದರಲ್ಲಿ ೧೫೬ ಕೋಟಿಯೂ ೨೦ ಲಕ್ಷದ ಎನ್ನುಗಳ ಆದಾಯವೂ ವೆಚ್ಚ ಕಳೆದು ೬೩ ಕೋಟಿಯೂ ೬೦ ಲಕ್ಷದ ಎನ್ನುಗಳ ಉಳಿತವೂ, ಆಯಿತೆಂದು ಗೊತ್ತಾಗುತ್ತದೆ.

ತುರ್ಕಿ ಸಂಧಿಯನ್ನು ಮರಳಿ ಪರಿಷ್ಕರಿಸುವ ಚಿಹ್ನೆಗಳು ಚೆನ್ನಾಗಿ ಕಾಣುತ್ತಿವೆ, ಇದು ಭಾರತೀಯರಿಗೆಲ್ಲಾ ಸಂತೋಷಪ್ರದವೇ. ಲಂಡನ್ ಪಟ್ಟಣದಲ್ಲಿ ಇದಕ್ಕಾಗಿ ಮಿತ್ರಮಂಡಲಿಯವರ ಒಂದು ಸಭೆಯು ಇಷ್ಟರಲ್ಲೇ ಕೂಡುವುದಾಗಿದೆ. ನಿಮ್ಮ ಪ್ರತಿನಿಧಿಯನ್ನು ಕಳುಹಿಸಿ ಕೊಡಬೇಕೆಂದು ತುರ್ಕಿಗೂ ಆಹ್ವಾನವನ್ನು ಕಳುಹಿಸಿಕೊಟ್ಟಿದ್ದಾರೆ.

ಜರ್ಮನರು ಇದುವರೆಗೆ ನಷ್ಟಪರಿಹಾರಕ್ಕಾಗಿ ಮಿತ್ರಮಂಡಲಿಯವರಿಗೆ ೯೦೦ ಕೋಟಿ ಮಾರ್ಕ್ಸ (ಭಂಗಾರದ ನಾಣ್ಯ) ಗಳನ್ನು ಒಪ್ಪಿಸಿದ್ದಾರೆ. ಆದರೆ ಮಿತ್ರಮಂಡಲಿಯವರು ಜರ್ಮನರ ಆರ್ಥಿಕಸಂಕಷ್ಟನಿವಾರಣೆಗಾಗಿ ಸಾಲದಂತೆ ಕೊಟ್ಟಿರುವ ೬೪೦ ಲಕ್ಷ ಮಾರ್ಕ್ಸುಗಳನ್ನು ಇದರಲ್ಲಿ ವಜಾಹಾಕಿಕೊಂಡು ಉಳಿದುದನ್ನು ನಷ್ಟ ಪರಿಹಾರಕ್ಕೆ ಕಟ್ಟಿಕೊಳ್ಳುತ್ತಾರೆ.

ಜರ್ಮನರು ಒಪ್ಪಿಸಿದ ಹಡಗುಗಳಲ್ಲಿ ೩೦೦ ನ್ನು ಇಂಗ್ಲೀಷರು ಮಾರಿಬಿಟ್ಟರು. ಅವರಿಗೆ ಹೊಸ ಹಡಗುಗಳನ್ನು ಕಟ್ಟಬೇಕಾದ ಅವಶ್ಯಕತೆಯೇ ಇಲ್ಲದಷ್ಟು ಹಡಗುಗಳು ಈಗ ಸಮೃದ್ಧವಾಗಿವೆ. ಜರ್ಮನರು ಇನ್ನೂ ೩೦ ಲಕ್ಷ ಟನ್ನುಗಳ ಹಡಗುಗಳನ್ನು ಮಿತ್ರಮಂಡಲಿಗೆ ವಹಿಸಬೇಕಾಗಿದೆ. ಇಂಗ್ಲೆಂಡಿಗೆ ಅವು ಬೇಕಿಲ್ಲವೆಂದು ಅಲ್ಲಿಯ ನೌಕಾ ನಿರ್ಮಾಪಕರು ತಿಳಿಯಿಸಿದ್ದಾರೆ.

ಮಿತ್ರಮಂಡಲಿಯ ಮಂತ್ರಿಗಳು ಕಳೆದವಾರ ಪ್ಯಾರಿಸ್ಸಿನಲ್ಲಿ ಕೂಡಿ ಜರ್ಮನಿ ನಷ್ಟಪರಿಹಾರದ ವಿಷಯವನ್ನು ಕುರಿತು ಚರ್ಚಿಸಿದರು. ೪೨ ವರ್ಷಗಳಲ್ಲಿ ಜರ್ಮನರು ನಷ್ಟದ್ರವ್ಯವನ್ನೆಲ್ಲಾ ಭಂಗಾರದ ನಾಣ್ಯರೂಪವಾಗಿ ೪೨ ಕಂತುಗಳಲ್ಲಿ ತೀರಿಸುವಂತೆ ನಿರ್ಣಯಿಸಿದ್ದಾರೆ. ಈ ಪತ್ರಿಕೆಯನ್ನು ಪಡೆದುಕೊಳ್ಳಲಿಕ್ಕಾಗಿ ಫಿಬ್ರವರಿ ತಾ|| ೨೮ ಕ್ಕೆ ಲಂಡನ್ನಿಗೆ ನಿಮ್ಮ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆಂದು ಜರ್ಮನರಿಗೆ ತಿಳಿಯಪಡಿಸಿದ್ದಾರೆ.

ಜರ್ಮನರು ಕೆಲವಿಷಯಗಳಲ್ಲಿ ಸಂಧಿನಿಬಂಧನೆಯ ಪ್ರಕಾರ ಇನ್ನೂ ನಡೆದುಕೊಳ್ಳದೆಹೋಗಿರುವುದರಿಂದ ಎಷ್ಟೋ ಶಿಕ್ಷೆಗಳು ಅವರಿಗೆ ವಿಧಿಸಲ್ಪಟ್ಟಿವೆ. ಸುಂಕದ ಮೂಲಕ ಬರುವ ದ್ರವ್ಯವನ್ನೆಲ್ಲಾ ನಷ್ಟಪರಿಹಾರ ನಿರ್ಧಾರಕ ಸಭೆಯವರು ವಶಪಡಿಸಿಕೊಂಡು, ಹೊಸ ಸುಂಕಗಳನ್ನು ತಾವೇ ವಿಧಿಸುವಂತೆ ಮಾಡಲ್ಪಟ್ಟಿದ್ದಾರೆ. ಹೊಸ ಸಾಲವನ್ನು ಜರ್ಮನರು ಮಿತ್ರಮಂಡಲಿಗೆ ತಿಳಿಯಿಸದೆ ಇತರ ಯಾವ ದೇಶದವರಲ್ಲೂ ಮಾಡದಂತೆ ನಿರೋಧಿಸಲ್ಪಟ್ಟಿದ್ದಾರೆ.

ಮೆಸಪೊಟೇಮಿಯಾದ ಸ್ಥಿತಿಗತಿಗಳು ಈಗ ಬಹಳ ಉತ್ತಮವಾಗಿವೆ. ತಿರುಗಿ ಬೀಳುತ್ತಿದ್ದವರೆಲ್ಲಾ ಈಗ ವಿನಮ್ರರಾಗಿ ತಮ್ಮಲ್ಲಿದ್ದ ಎಷ್ಟೋ ತುಪಾಕಿಗಳನ್ನು ಒಪ್ಪಿಸಿಬಿಟ್ಟರು. ಸ್ವಲ್ಪ ಹೆಚ್ಚುಕಡಿಮೆ ದೇಶವೆಲ್ಲಾ ಶಾಂತಸ್ಥಿತಿಗೆ ಬಂದಿದೆ. ಈ ಕಾರಣದಿಂದ ಅಲ್ಲಿರುವ ಭಾರತೀಯ ಸೈನ್ಯವನ್ನು ಶೀಘ್ರಕಾಲದಲ್ಲಿ ಕಳುಹಿಸಿಕೊಡಬಹುದು. ಉಳಿದ ಸೈನ್ಯಗಳು ಕೂಡ ಮಾರ್ಚಿಯ ಕೊನೆಯೊಳಗಾಗಿ ತಗ್ಗಿಸಲ್ಪಡುವುವು. ಎಂಬುದಾಗಿ ಅಧಿಕಾರಿಗಳು ಪ್ರಕಟಿಸಿದ್ದಾರೆ.

ನಿನ್ನೆತಾನೇ ಪ್ಯಾರಿಸ್ಸಿನಲ್ಲಿ ಕೂಡಿದ್ದ ಮಿತ್ರ ರಾಷ್ಟ್ರ ಸಂಘದವರು ಜರ್ಮನರು ತೆರಬೇಕಾದ ನಷ್ಟದ್ರವ್ಯದ ಪರಿಮಿತಿಯನ್ನು ಗೊತ್ತುಮಾಡಿದರು. ಅದು ಎಷ್ಟೆಂದರೆ—೧೧೩೦೦೦೦೦೦೦೦ ಪೌನುಗಳು. ಇದರಲ್ಲಿ ಇಂಗ್ಲೀಷರಿಗೆ ೨೪೮೬೦೦೦೦೦೦ ಪೌನುಗಳು. ಫ್ರೆಂಚರಿಗೆ ೫೮೭೬೦೦೦೦೦೦ ಪೌನುಗಳು ಉಳಿದವರಿಗೆಲ್ಲಾ ೨೯೩೮೦೦೦೦೦೦ ಪೌನುಗಳು ಸೇರುವುವು. ಇದಲ್ಲದೆ ಜರ್ಮನಿಯಿಂದ ಹೊರಕ್ಕೆ ಸಾಗಿಹೋಗುವ ಸರಕುಗಳ ಮೇಲೆ ಕೆಲ ವರ್ಷಗಳವರೆಗೆ ಬರುವ ಸುಂಕವೂ ನಷ್ಟಪರಿಹಾರಕ್ಕೆ ಸೇರುವುದು. ಅದೂ ಕೂಡ ವರ್ಷಕ್ಕೆ ೧೦೦೦೦೦೦೦೦ ಪವನುಗಳಾಗಬಹುದಂತೆ. ಇಷ್ಟನ್ನು ಕೊಡಲು ಜರ್ಮನಿಯು ಒಪ್ಪಿಕೊಳ್ಳುವುದೇ?

ಪ್ರಸಿದ್ಧ ಪತ್ರಿಕೆ.

2

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿದ್ದು ಮೃತರಾದ ಸರಾಫ಼್ ಸೂಲು ಬೆಲೆ ಶಾಮಣ್ಣ ಉರಫ್ ನಂಜಪ್ಪನವರ ವಿಲ್ಲಿನ ಎಗ್ಸಿಕ್ಯೂಟರಾದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ ಯವರ ಇನ್‌ಸ್ಟ್ರಕ್ಷನ್ ಮೇರೆ ಸದರಿ ಶಾಮಣ್ಣನವರಲ್ಲಿ ಗಿರವಿ ಇಟ್ಟಿದ್ದ ಮಾಲುಗಳನ್ನು ಮಾಲಿಕರು ಮೊಬಲಗನ್ನು ಪಾವತಿ ಮಾಡಿ ತೆಗೆದುಕೊಂಡು ಹೋಗದಿದ್ದುದರಿಂದ ಅಡ್ಡಿಕೆ ಜಡೆಬಿಲ್ಲೆ ಸರಿಗೆ ಮುಂತಾದ ಚಿನ್ನದ ನಗಗಳೂ, ತಂಬಿಗೆ, ಪಂಚಪಾತ್ರೆ, ಡಾಬು ಮೊದಲಾದ ಬೆಳ್ಳಿಸಾಮಾನುಗಳೂ, ಕೆಂಪು ವಜ್ರದ ಜವಾಹಿರಿ ನಗಗಳೂ, ತಾ|| 26-2-1921 ನೇ ಶನಿವಾರ ಮತ್ತು ತಾ|| 27-2-1921 ನೇ, ಭಾನುವಾರ ಬೆಳಿಗ್ಗೆ 8 ಘಂಟೆಯಿಂದ 12 ಘಂಟೆವರೆಗೆ ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಊದುಬತ್ತಿ ಸಾಫ಼್, ಮ|| ರಾ|| ಕಳ್ಳೆಪ್ಪನವರ ಅಂಗಡಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ಹರಾಜಿನಲ್ಲಿ ಹೆಚ್ಚು ದರಕಾಸ್ತನ್ನು ಮಾಡಿದವರು ಮೊಬಲಗನ್ನು ಕೂಡಲೇ ಪಾವತಿಮಾಡಿ, ಮಾಲನ್ನು ಹೊಂದತಕ್ಕದ್ದು. ದರಕಾಸ್ತುದಾರರು ಹಾಗೆ ಮೊಬಲಗನ್ನು ಪಾವತಿ ಮಾಡದೆ ತಪ್ಪಿದಲ್ಲಿ ಪುನಃ ಹರಾಜು ಮಾಡಲ್ಪಡುತ್ತದೆ. ಬಳಿಕ ಆಗತಕ್ಕ ಖರ್ಚು ಮತ್ತು ನಷ್ಟಕ್ಕೆ ಮೊದಲ ಬೀಟ್‌ದಾರರೇ ಬಾಧ್ಯರಾಗುತ್ತಾರೆ.

ಬೆಂಗಳೂರು ಸಿಟಿ, } ಜಿ. ಪರಮಶಿವಯ್ಯ,
ತಾ|| 24-1-1921, } ಅಡ್ವೊಕೇಟ್ ಅರಳೇಪೇಟೆ ಚೌಕ.

ವೀರಶೈವಮತಬಾಂಧವರಲ್ಲಿ ವಿಜ್ಞಾಪನೆ.

ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಬೆಂಗಳೂರಿಗೆ ಪರಸ್ಥಳದಿಂದ ಬರತಕ್ಕ ಸ್ವಮತ ಪರಮತೀಯರು ಇಳಿದುಕೊಳ್ಳಲು ಸರಿಯಾದ ಸ್ಥಳವಿಲ್ಲದಿರುವ ತೊಂದರೆಯನ್ನು ತಿಳಿದು ತಮ್ಮ ಸಂಪಾದಿತ ದ್ರವ್ಯದಲ್ಲಿ ಲಕ್ಷಾಂತರ ರೂ. ಗಳನ್ನು ವೆಚ್ಚಮಾಡಿ ತಮ್ಮ ಸ್ವಂತ ಮೇಲ್ವಿಚಾರಣೆಯಲ್ಲಿ ರೈಲ್ವೆಸ್ಟೇಷನ್ನಿನ ಸಮೀಪದಲ್ಲಿ ಶಾಶ್ವತವಾದ ಮತ್ತು ದಿವ್ಯವಾದ ಸತ್ರವನ್ನು ಕಟ್ಟಿಸಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಂದ ಧರ್ಮಪ್ರವರ್ತಕರೆಂಬ ಪ್ರಶಸ್ತಿಯನ್ನೂ ಭರತಖಂಡದ ಸಾರ್ವಭೌಮರಿಂದ ರಾವ್‌ಬಹದ್ದೂರ್ ಎಂಬ ಪ್ರಶಸ್ತಿಯನ್ನೂ ಪಡೆದು ನಿರಂತರವೂ ಯಶಃಕಾಯರಾಗಿ ಮೆರೆಯುತ್ತಿರುವುದು ಲೋಕವಿದಿತವಾಗಿದೆ. ಹೀಗೆ ಪ್ರಯಾಣಿಕರ ವಸತಿಗೆ ಅನುಕೂಲ ಮಾಡಿ ಕೊಟ್ಟಿರುವುದಲ್ಲದೆ ೧ ಲಕ್ಷ ರೂಪಾಯಿಗಳನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ವೃದ್ಧ್ಯಂಶದಿಂದ ನಿರ್ಗತಿಕರಾದ ವೀರಶೈವ ವಿದ್ಯಾರ್ಥಿಗಳ ಅಶನವು ನಿರಾತಂಕವಾಗಿಯೂ ಸಾರೋದ್ಧಾರವಾಗಿಯೂ ನಡೆದುಕೊಂಡು ಹೋಗುವಂತೆ ತಕ್ಕೇರ್ಪಾಟನ್ನು ಮಾಡಿರುತ್ತಾರೆ. ಇವರ ಈ ಧರ್ಮವಿದ್ಯಾರ್ಥಿನಿಲಯದಲ್ಲಿ ವಿದ್ಯಾಭ್ಯಾಸಂಗ ಮಾಡಿದಂಥವರನೇಕರು ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಸರ್ಕಾರಿಯ ಕೆಲಸಗಳಲ್ಲಿ ಸೇರಿರುತ್ತಾರೆ. ಈಗಲೂ ಈ ನಿಲಯದಲ್ಲಿ ೬೫ ವಿದ್ಯಾರ್ಥಿಗಳವರೆಗೆ ಓದಿಕೊಂಡಿದ್ದಾರೆ.

ಇಂತಹ ಲೋಕೋಪಕಾರ ಮಾಡಿರುವ ತನ್ಮೂಲಕ ವೀರಶೈವರಿಗೆ ಮಹೋಪಕಾರವನ್ನು ಮಾಡಿರುವ ಮಹಾಪುರುಷರ ಸ್ಮಾರಕವನ್ನೇರ್ಪಡಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಕರ್ತವ್ಯವೆಂಬುದನ್ನು 1913 ನೆಯ ವರ್ಷದಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಗಾಗಿ ರಾಜಧಾನಿಗೆ ದಯಮಾಡಿಸಿದ್ದ ವೀರಶೈವ ದೊಡ್ಡಮನುಷ್ಯರುಗಳು ಸಭೆಸೇರಿ ಪರ್ಯಾಲೋಚಿಸಿ, ಆಗ್ಗೆ ಕ್ರಿಯೆಗೆ ಸಿದ್ಧವಾಗಿದ್ದ ಧರ್ಮಪ್ರವರ್ತಕರ ಭಾವಚಿತ್ರಪಟವನ್ನು ಕೊಂಡು ಧರ್ಮಸತ್ರದಲ್ಲಿ ಪ್ರತಿಷ್ಠಿಸಬೇಕೆಂದು ನಿರ್ಧರಿಸಿ ಈ ಕೆಳಗೆ ಕಂಡ ಪ್ರಕಾರ ಚಂದಾಹಣವು ಆ ಕೂಡಲೇ ಕೊಡಲ್ಪಟ್ಟಿತು.

ಮ|| ರಾ|| ಗಳಾದ

1. ಎಡೆಹಳ್ಳಿ ಶಾಂತಪ್ಪಸೆಟ್ಟರು	20—0—0
2. ಎಚ್. ಕೆ. ವೀರಬಸವಯ್ಯನವರು ಬಿ.ಎ. ಬಿ.ಎಲ್.	10—0—0
3. ಬೆಳ್ಳೂರು ನಂಜೇಗೌಡರು	10—0—0
4. ಎಚ್. ಬಸವೇಗೌಡರು	10—0—0
ಒಟ್ಟು	50—0—0

ಈ ಪ್ರಕಾರ 50 ರೂ. ಗಳ ಚಂದಾಹಣವು ಬಂದಿರುತ್ತದೆ. ಆದರೆ ಮುಂದೆ ತಕ್ಕ ಪ್ರಯತ್ನವು ನಡೆಯದೆ ಹೋದುದರಿಂದ ಆ ಕಾರ್ಯವು ಈ ವರೆಗೂ ನಿಲ್ಲಬೇಕಾಗಿ ಬಂತು. ಇನ್ನುಮುಂದೆ ಈ ಸ್ಮಾರಕ ಕಾರ್ಯವನ್ನು ಅದಷ್ಟು ಜಾಗ್ರತೆಯಲ್ಲಿ ನೆರವೇರಿಸದೆ ಬಿಡುವುದು ಸರಿಯಲ್ಲವಾದುದರಿಂದ ಪ್ರತಿಯೊಬ್ಬ ವೀರಶೈವರೂ ನಿರ್ವಂಚನೆಯಿಂದ ಯಥಾಶಕ್ತಿ ಚಂದಾಹಣವನ್ನು ಈ ಕೆಳಗೆ ಕಂಡ ಹೆಸರಿಗೆ ಜಾಗ್ರತೆಯಲ್ಲಿ ಕಳುಹಿಸಿಕೊಟ್ಟು ಅಭಿಮಾನಪ್ರದರ್ಶನ ಮಾಡುವವರಾಗಬೇಕೆಂದು ಕೋರುವ.

ತಮ್ಮ ವಿಧೇಯ,
ಜಿ. ಪರಮಶಿವಯ್ಯ, ಬಿ.ಎ., ಎಲ್.ಎಲ್.ಬಿ.,
ಆ|| ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು.

"ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ."

ಲಗ್ನದ ಫಂಡು.

(೧) ಜಗಲೂರು ತಾಲ್ಲೂಕು ಮುದಕೇರಹಳ್ಳಿಯಲ್ಲಿರುವ ಸಿಟ್ರಿಹಳ್ಳಿಮಠದ ವೇ|| ಗುರುನಂಜುಂಡಾರಾಧ್ಯರಿಂದ, ಚಿತ್ರದುರ್ಗದ ಜವಳಿ ಅಂಗಡಿ ಮ|| ರಾ|| ಎಸ್. ಹಾಲಪ್ಪ ಮತ್ತು ಡಿ. ರುದ್ರಪ್ಪನವರ ಮೂಲಕ ೧೦-೦-೦

(೨) ಬೆಂಗಳೂರು ಸಿಟಿ ಅರಳೇಪೇಟೆ ಯಜಮಾನ್ ಮ|| ರಾ|| ಬಸಪ್ಪನವರ ಮೂಲಕ, ಕಾರ್ಕಾರ್ಹಳ್ಳಿ ಗಂಗಪ್ಪನವರ ಗಂಗಶೆಟ್ಟಪ್ಪನವರ ಲಗ್ನದಲ್ಲಿ ೫-೦-೦.

(೩) ಕಾರ್ಕಾರ್ಹಳ್ಳಿ ಮುದ್ದಸಂಗಪ್ಪನವರ ಮಗಳನ್ನು ಸೊಂಡೆಕೊಪ್ಪದ ಮ|| ರಾ|| ಯಜಮಾನ್ ಗಂಗಪ್ಪನವರ ಮಗ ಹೊನ್ನಪ್ಪನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಬೆಂಗಳೂರು ಅರಳೇಪೇಟೆ ಯಜಮಾನ್ ಮ|| ರಾ|| ಬಸಪ್ಪನವರ ಮೂಲಕ ೫-೦-೦.

(೪) ಕಾರ್ಕಾರ್ಹಳ್ಳಿಯಲ್ಲಿರುವ ಗುರುಕಾರ್ ಮ|| ರಾ|| ಚನ್ನಬಸಪ್ಪನವರು ಅವರ ಪುತ್ರಿಯವರ ಗರ್ಭಾದಾನಮಹೋತ್ಸವದಲ್ಲಿ ತೆಗೆದು ಕಳುಹಿಸಿದ್ದು ೩-೦-೦ ಜುಮ್ಲಾ ರೂ. ೨೩-೦-೦.

ಜಿ. ಪರಮಶಿವಯ್ಯ. ಬಿ. ಎ. ಎಲ್ ಎಲ್. ಬಿ.,
ಆನರರಿ ಸೆಕ್ರೆಟರಿ, ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡು ಸಂಘ, ಬೆಂಗಳೂರು ಸಿಟಿ.

ಪತ್ರವ್ಯವಹಾರ.

ಹೊಂಗೆಮರಗಳಿಗೆ ರೋಗ.

ಗುಬ್ಬಿ ತಾಲ್ಲೂಕು ಹಾಗಲವಾಡೀ ಹೋಬಳಿ ಮತ್ತು ಹೊಸಕೆರೆ ವಗೈರೆ ಕೆಲವು ಗ್ರಾಮಗಳ ಸರಹದ್ದಿನಲ್ಲಿ ಸರ್ಕಾರಿ ಮತ್ತು ಹಿಡುವಳಿ ಜಮೀನುಗಳಲ್ಲಿರುವ ಹೊಂಗೇ ಮರಗಳಿಗೆ ಒಂದು ವಿಧವಾದ ರೋಗವು ಪ್ರಾಪ್ತವಾಗಿ ಮರಗಳ ತುಂಬಾ ಜೇನುಹುಳಗಳೋಪಾದಿಯಲ್ಲಿ ಗೂಡುಗಳು ಕಟ್ಟಿಕೊಂಡು ಹುಳಗಳು ತುಂಬಿವೆ. ಮರದ ಎಲೆಗಳು ಕಪ್ಪಾಗಿವೆ. ಕೆಲವು ಮರಗಳು ಈ ಕಾರಣದಿಂದ ಒಣಗಿವೆ. ಫಸಲು ಇಲ್ಲದಂತೆ ಮಾಡಿವೆ. ಇದಕ್ಕೆ ಏನು ಚಿಕಿತ್ಸೆ ಮಾಡಬೇಕೆಂಬುವದು ರೈತರಿಗೆ ಗೊತ್ತಿಲ್ಲವಾದ್ದರಿಂದ ದಯಾಳುವಾದ ಸರ್ಕಾರದವರು ವ್ಯವಸಾಯದ ಇಲಾಖಾ ಮೋಕ್ತೇಸರವರ ಮೂಲಕ ಹೊಂಗೇ ಗಿಡಗಳಿಗೆ ಉಂಟಾಗಿರುವ ರೋಗವನ್ನು ನಿವಾರಣೆ ಮಾಡಿ ರೈತರಿಗೆ ಅನುಕೂಲಪಡಿಸಿಕೊಡಬೇಕೆಂದು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥನೆ. ಮತ್ತು ಈ ವಿಷಯದಲ್ಲಿ ಬುದ್ಧಿಶಾಲಿಗಳ ತಿಳುವಿಕೆಯೂ ಅನುಭವವನ್ನು ತಿಳಿಸಬೇಕಾಗಿ ಕೋರಿಕೆ

ಹೊಸಮಠದ ಉಜ್ಜನಯ್ಯ, ಹೊಸ್ಕೆರೆ.

ಹಳ್ಳಿಕೆರೆ ತಾ|| ದೊಡ್ಡೇರಿ.

ಶ್ರೀಮಾನ್ ದಿವಾನ್ ಸಾಹೇಬರವರು ಮುಖ್ಯಾಧಿಕಾರಿಗಳೊಡನೆ ತಾ|| ೨೨-೧-೨೧ ನೇ ಶನಿವಾರ ಮಧ್ಯಾಹ್ನ ೪ ಘಂಟೆಗೆ ಈ ಗ್ರಾಮದ ಸ್ಕೂಲುಗಳ ಕ|| ಮೆಂಬರುಗಳಿಂದ ಚಿತ್ರತರವಾಗಿ ನಿರ್ಮಿಸಲ್ಪಟ್ಟಿದ್ದ ಚಪ್ಪರದಬಳಿಗೆ ದಯಮಾಡಿಸುತ್ತಲೇ ಹಾಜರಿದ್ದ ಸರ್ವಪ್ರಜೆಗಳೂ ಭಕ್ತಿಪೂರ್ವಕವಾಗಿ ಫಲಾದಿಗಳನ್ನೂ, ಹಾರಗುಚ್ಛಗಳನ್ನೂ ಅರ್ಪಿಸಿ ಸುಖಾಗಮವನ್ನು ಬಯಸಿದರು. ಎಲ್ಲಾ ಸ್ಕೂಲು ಬಾಲಕಬಾಲಕಿಯರೂ ಇಕ್ಕೆಲದಲ್ಲಿಯೂ ಸಾಲುಗಟ್ಟಿ ನಿಂತಿದ್ದರು. ಮೊದಲು ಗರ್ಲ್ಸ್ ಸ್ಕೂಲು ಬಾಲಕಿಯರು ದೇವತಾಪ್ರಾರ್ಥನೆಯನ್ನು ಹಾಡಿದರು. ನಂತರ ಹಿಂದೂಸ್ಥಾನಿ ಸ್ಕೂಲು ಬಾಲಕಿಯರು ಸಹ ದೇವತಾಪ್ರಾರ್ಥನೆಯನ್ನೂ, ಶ್ರೇಯಃಪ್ರಾರ್ಥನೆಯನ್ನೂ ಮಾಡಿದರು. ಕನ್ನಡ ಬಾಯ್ಸ್ ಸ್ಕೂಲಿನ ಸಣ್ಣ ಬಾಲಕರಿಬ್ಬರು ಭಗವತ್ಪ್ರಾರ್ಥನೆಯನ್ನು ಮುದ್ದಾಗಿ ಹಾಡಿದರು. ಮತ್ತು ಇದೇ ಸ್ಕೂಲಿನ ಮಹಮ್ಮದೀಯ ಬಾಲಕರಿಬ್ಬರು ಶ್ರೀಮಾನ್ ಮಹಾರಾಜರವರ ಶ್ರೀಯುತ ದಿವಾನ್ ಸಾ|| ರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿದರು. ಪಂಚಮಸ್ಕೂಲು ಬಾಲಕರನ್ನು ಶ್ರೀ|| ದಿವಾನ್ ಸಾ|| ರವರು ಸಮಿಾಪಕ್ಕೆ ಬರಮಾಡಿಕೊಂಡು ಆದರಾತಿಶಯದಿಂದ ವಿಚಾರಿಸಿದರು. ಮ|| ಡಿ|| ಸ್ಕೂ|| ಇನ್|| ಸಾ|| ರವರು ಕಳೆದ ಡಿಸೆಂಬರು "ದರ್ಬಾರಿನ" ಉತ್ಸವಕಾಲದಲ್ಲಿ "ಮೃತ್ಯುಪರೀಕ್ಷೆ" ಎಂಬ ಫಾರ್ಸನ್ನು ಈ ಕನ್ನಡ ಬಾಯ್ಸ್ ಸ್ಕೂಲಿನ ಮಹಮ್ಮದೀಯ ಬಾಲಕರು ಮತ್ತು ಹಿಂದೂ ಬಾಲಕರು ಸೇರಿ ಚನ್ನಾಗಿ ಹಾಡಿ ತೋರಿಸಿದರು. ಆದರೆ ಮಹಮ್ಮದೀಯ ಬಾಲಕರು ಕನ್ನಡಭಾಷೆಯನ್ನು ಸ್ಪಷ್ಟವಾಗಿ ಉಚ್ಚರಿಸುತ್ತಿದ್ದದ್ದು ಶ್ಲಾಘ್ಯವಾಗಿತ್ತೆಂತಲೂ, ಈ ಸ್ಕೂಲು ಪುರೋವೃದ್ಧಿಸ್ಥಿತಿಯಲ್ಲಿದೆಯೆಂತಲೂ, ಶ್ರೀ|| ದಿವಾನ್ ಸಾ|| ರವರ ಸ|| ದಲ್ಲಿ ಅರಿಕೆಮಾಡಿದರು. ನಂತರ ಶ್ರೇಯಃಪ್ರಾರ್ಥನೆಯ ಪದ್ಯಗಳೋದಲ್ಪಟ್ಟು ಜಯಘೋಷವಾಗುತ್ತಿರುವಾಗ್ಯೆ ಪರಿವಾರದೊಡನೆ ಶ್ರೀ|| ದಿವಾನ್ ಸಾ|| ಸ್ವಾರಿಯು ಚಳ್ಳಕೆರೆಗೆ ದಯಮಾಡಿಸಿತು.

ಒಬ್ಬ ಸ್ಥಳಿಕ.

ಸಿಡ್ಲಘಟ್ಟದ ತಾಲ್ಲೂಕಿನ ಕಾನ್ಫರೆನ್ಸ್.

ಈ ಮಹಾಸಭೆಯು ಕಳೆದ ಜನವರಿ ೩೦ ನೆಯ ತಾರೀಖಿನ ದಿನ ಈ ಊರು ಹಳೇತಾಲ್ಲೂಕು ಕಚೇರಿಯಲ್ಲಿ ನಡೆಯಿತು. ಚಿಂತಾಮಣಿ ಸಬ್‌ಡಿವಿಜನ್ ಸಾಹೇಬರವರಾದ ಮ|| ಸುಂದರರಾಯರವರು ಅಧ್ಯಕ್ಷರಾಗಿದ್ದರು. ಸಾಧಾರಣರೀತ್ಯಾ ವಸ್ತುಪ್ರದರ್ಶನವೂ, ಪಂಚಮರ ಸಮ್ಮೇಳನವೂ ನಡೆಸಲ್ಪಟ್ಟವು. ಈ ಊರು ಪ್ರಾಂತ್ಯ ಸರ್ಕೀಟು ದಯಮಾಡಿದ್ದ ಪೋಲೀಸು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರೂ ಸ್ವಲ್ಪಹೊತ್ತು ಸಭೆಯನ್ನು ಅಲಂಕರಿಸಿದ್ದರು. ಕೋಲಾರದಿಂದ ಎಕನಾಮಿಕ್ ಡೆವಲಪ್‌ಮೆಂಟ್ ಸೆಕ್ರೆಟರಿಯವರೂ, ಡಿಸ್ಟ್ರಿಕ್ಟ್‌ಬೋರ್ಡು ಆನರರಿ ವೈಸ್‌ಪ್ರೆಸಿಡೆಂಟರವರೂ ದಯಮಾಡಿಸಿದ್ದರು. ಅಮಲ್ದಾರರು ಮುಂತಾಗಿ ಸ್ಥಳಾಧಿಕಾರಿಗಳೂ ಎಕನಾಮಿಕ್ ಇಲಾಖಾ ಇನ್ಸ್ಪೆಕ್ಟರುಗಳೂ ಹಾಜರಿದ್ದು ಜನೋಪಯುಕ್ತವಾದ ಸಲಹೆಗಳನ್ನು ಕೊಟ್ಟರು. ತಾಲ್ಲೂಕಿನಲ್ಲಿ ಕಳೆದವರುಷ ನಡೆದಿರುವ ಅಭಿವೃದ್ಧಿಕಾರ್ಯಗಳ ರಿಪೋರ್ಟು ಡಿಸ್ಟ್ರಿಕ್ಟ್‌ಬೋರ್ಡು ಮೆಂಬರು ಎಸ್. ಹಂಪಯ್ಯನವರಿಂದ ಓದಲ್ಪಟ್ಟಮೇಲೆ ಜನಗಳ ಅಹವಾಲುಗಳು ವಿಚಾರಿತವಾಗಿ ತೀರ್ಮಾನಗಳಾದವು. ಧಾನ್ಯದ ಬ್ಯಾಂಕುಗಳನ್ನು ಪ್ರತಿ ಗ್ರಾಮದಲ್ಲೂ ಜನಗಳು ಏರ್ಪಡಿಸಿಕೊಂಡು ಕ್ಷಾಮಗಾಲ ಬಂದಾಗ್ಯೆ ಉಪಯೋಗಕ್ಕೆ ಬರುವಂತೆ ಮಾಡಿಕೊಳ್ಳುವ ಏರ್ಪಾಡು ಹಜರತ್ ಡೆಪ್ಯುಟೀಕಮಿಷನರ್ ಸಾಹೇಬರವರಾದ ಮಹಮ್ಮದ್ ಜಹಿರುದ್ದೀನ್ ಮೆಕ್ಕೆಯವರ ಸಲಹೆಯಾಗಿ ಕೆಲವು ಕಡೆ ಬ್ಯಾಂಕುಗಳು ಏರ್ಪಾಡಾಗಿರುವುದಲ್ಲದೆ ಪ್ರತಿ ಗ್ರಾಮದಲ್ಲೂ ಜಾರೀಗೆ ಬರಲು ಸುಲಭ ಉಪಾಯವನ್ನು ಸೂಚಿಸಲು ಡೆವಲಪ್‌ಮೆಂಟ್ ಸೆಕ್ರೆಟರಿಯವರು ವಿಚಾರಕ್ಕೆ ತಂದರು. ಸಾವಕಾಶವಾಗಿ ಸರ್ವರೂ ಯೋಚಿಸಿ ಪ್ರತಿ ರೈತನೂ ಕಣಗಾಲದಲ್ಲಿ ನೇಗಿಲಿಗೆ ೮ ಸೇರಿನಂತೆ ಗ್ರಾಮನಿಧಿಯಾಗಿ ಕೊಡಲು ಒಪ್ಪಿ ತೀರ್ಮಾನವಾಯಿತು. ಪಶುವೈದ್ಯರು ಸಭಿಕರಿಂದಿಗೆ ಸುಲಭರೀತಿಯಲ್ಲಿ ಒಂದು ಗೂಳಿಗೆ ಹಿಡಾಮಾಡಿದ್ದು ನೋಡಿ ಅನೇಕ ರೈತರು ತಮ್ಮ ಕಡೆಗಳಲ್ಲಿ ಈ ಡಾಕ್ಟರ ಮೂಲಕ ಪಶುಗಳಿಗೆ ಚಿಕಿತ್ಸೆ ಮಾಡಿಸುವದಾಗಿ ಒಪ್ಪಿಕೊಂಡರು. ರೇಷ್ಮೆ ಹುರಿಮಾಡುವ ರಾಟೆಯಕೆಲಸವೂ ಕಬ್ಬಿಣದ ನೇಗಿಲು ಉಳುಮೆ ಪ್ರದರ್ಶನವೂ ನಡೆಯಿತು. ವಿದ್ಯಾಭ್ಯಾಸ, ರೇಷ್ಮೆವ್ಯವಸಾಯ, ಪರಸ್ಪರಸಹಾಯ ಸಂಘಗಳು, ರೇಷ್ಮೆಕೈಗಾರಿಕೆ, ಆರೋಗ್ಯ ವಿಚಾರಗಳಲ್ಲಿ ಉಪನ್ಯಾಸಗಳಾಗಿ ಈ ಊರಿಗೆ ಟವನ್ ಪೋಲೀಸ್‌ಸ್ಟೇಷನ್ ಆಗಬೇಕೆಂಬ ವಿಚಾರ ಸರ್ವಾನುಮತಿಯಿಂದ ತೀರ್ಮಾನವಾದನಂತರ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೀಮನ್ ಯುವರಾಜರವರ ಶ್ರೇಯಃಪ್ರಾರ್ಥನೆ ಮೂಲಕ ಸಭಾ ಭರಖಾಸ್ತಾಯಿತು.

ಒಬ್ಬ ಜಮೀನ್ದಾರ.

ಫ್ರೆಂಚ್ ರೋಮನಾಶಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
20 ಪಾರ್ಕ್‌ಟೌನ್ ಮದರಾಸ್.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೇರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

4 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0 20

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
ಪಾರ್ಕ್‌ಟೌನ್ ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 10

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಆದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಷ್ಟವಳ್ಳವರು ಅರ್ಧರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಫಲಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 18

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯೊದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶೂಲೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆ ಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್‌ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತತ್‌ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹಿಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

5-0-0 ಕ್ರಯದ ರೈಲ್ವೆ ಲೀವರ್ ವಾಚ್ ಇನಾಂ.

ಈ ಪೇನಾಗಳು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಒಂದೇ ಸಮವಾಗಿ ಬರೆಯುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ರೈಲ್ವೆಲೀವರ್‌ವಾಚ್ ಇನಾಮಾಗಿ ಕೊಡುವೆವು. ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. 20

ಕ್ರಯ ಗಡಿಯಾರ ಸಹಿತ ಪೇನಾ 1ಕ್ಕೆ ರೂ. 4-12-0

ವಿಳಾಸ—ಎಲ್ಜಿನ್ ವಾಚ್ ಕಂಪನಿ,
89 ನಾರಾಯಣಮೊದಲಿವೀದಿ, ಮದರಾಸು.

೧೯೨೧ ನೆಯ ಇಸವಿ ಪೆಬ್ರವರಿ ತಾ|| ೬ರಿಂದ ೧೯೨೧ನೆಯ ಪೆಬ್ರವರಿ ತಾ|| ೧೨ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಪುಷ್ಯಬಹುಳ ಚತುರ್ದಶಿಯಿಂದ ಮಾಘಶುದ್ಧ ಚೌತಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ಮಾಸ
6	ಭಾನು	ಚತು	51-51	ಉಷಾ	36-40	25
7	[1] ಸೋಮ	ಅಮಾ	57-11	ಶ್ರವ	43-10	26
8	ಮಂಗಳ	ಪಾಡ್ಯ	60	ಧನಿ	49-8	27
9	ಬುಧ	ಪಾಡ್ಯ	1-31	ಶತ	54-18	28
10	ಗುರು	ಬಿದಿ	5-3	ಪೂಭಾ	58-26	29
11	ಶುಕ್ರ	ತದಿ	7-0	ಉಭಾ	60	30
12	[2] ಶನಿ	ಚೌತಿ	8-34	ಉಭಾ	0-32	1

(1) ಸರ್ವತ್ರ ಶೈ ಅಮಾವಾಸ್ಯ, ಅಮಾಸೋಮವ್ರತಂ. (2) ತಿಲಕಪಂಚಮಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವಿನಸ್ಯ ಕಸ್ಯ ಮನೋಹರಾ ಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಪೆಬ್ರವರಿ ತಾರೀಖು ೧೩ ನೆಯ ಭಾನುವಾರ (ಸಂಚಿಕೆ ೭

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳು ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಬ್ಬಿ ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
6 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಶರಣಹಸುಲೆ, ಪಂಚಾಕ್ಷರಿ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ ೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ಮೃತಿಮುಕ್ತಾವಳಿ ೮ಆಣೆ; ರತ್ನಾಕರ ೨ಆಣೆ; ಶಂಕರಲಿಂಗಕಂದ ೧ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
ಚಾರುಶೀಲೆಚರಿತ್ರೆ	೦—೯—೦
ಪಂಚಾಸಿ	೦—೬—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋವೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕಾರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೇರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನಸಹಿತ ಗಂಟೆಯನ್ನು ತೋರಿಸುವದು. ಇವು ಅಮೇರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.

ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

46 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ. 46

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವ ಗುಳಿಗೆ.** ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಪೂಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶೀಘ್ರ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 1

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕಟ್ಟ ವಿಕಾರಗಳು ನಾಶಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ವಜ್ರದ ಬೆಂಡೋಲೆ.



ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0,
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 1—4—0

21

ವಜ್ರದ ಗುಂಡಿಗಳು.

ಈ ಗುಂಡಿಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದಕಟ್ಟಿದೆ. ನೋಡುವವರು ಸಾಚಾವಜ್ರದ ಗುಂಡಿಗಳೆಂದೆ ಹೇಳುವರು. ಈ ಗುಂಡಿಗಳು ಆಸ್ಟ್ರೇಲಿಯಾ ದೇಶದಲ್ಲಿ ತಯಾರಿಸಿದ್ದು. ಷರಟು, ಕುಪ್ಪಸ, ಜಾಕೀಟು ಮುಂತಾದವುಗಳಿಗೆ ಪ್ರತಿಯೊಬ್ಬರೂ ಹಾಕಿಕೊಳ್ಳಬಹುದು.

ಕ್ರಯ 4 ಗುಂಡಿಗಳ ಸೆಟ್ 1ಕ್ಕೆ 1—4—0.

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದು ಹಚ್ಚುವುದಕ್ಕೆ ಬೆಂಕಿಕಡ್ಡಿ ಅಗತ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆಗೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವುದಿಲ್ಲ. ಬೀಡಿ ಸಿಗರೇಟು ಸೇದುವವರಿಗೂ ಪ್ರಯಾಣಿಕರಿಗೂ ಬೇಕಾದ್ದು.

ಕ್ರಯ 1—12—0.

ವಿಳಾಸ:—ಎಸ್. ಆರ್. ಕ್ರಿಷ್ಣ ಅಂಡ್ ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಮೈಸೂರು ಸ್ಟಾರ್

೧೯೨೧ನೇ ಇಸವಿಯ ಫಿಬ್ರವರಿ ತಾ|| ೧೩ನೇಯ ಭಾನುವಾರ.

ಸಂಸ್ಥಾನಪತಿಗಳ ಮಹಾಸಭೆ.

ದಿಲ್ಲಿ ಪಟ್ಟಣದಲ್ಲಿ ಈ ಮಹಾಸಭೆಯ ಪ್ರಾರಂಭೋತ್ಸವವು ಕಳೆದ ತಾ|| ೮ನೇ ಮಂಗಳವಾರ ಮಧ್ಯಾಹ್ನ ೩|| ಗಂಟೆಗೆ ಕನ್ನಾಟ್ ಪ್ರಭುಗಳಿಂದ ನೆರವೇರಿಸಲ್ಪಟ್ಟಿತು. ಸಭಾಭವನವು ನಾನಾ ಪಟ್ಟಪೀತಾಂಬರ ಜರತಾರಿಗಳೇ ಮೊದಲಾದುವುಗಳ ಅತಿ ವಿಚಿತ್ರವಾದ ಅಲಂಕಾರಗಳಿಂದ ಶೋಭಿಸಿ ಮೊಗಲಾಯಿ ಪ್ರಭುಗಳ ಕಾಲದ ಮಹಾಸಭೆಯ ಅಲಂಕಾರವನ್ನು ಸ್ಮರಣೆಗೆ ತರುವಂತೆ ಇದ್ದಿತು. ಆಂಗ್ಲಸಾಮ್ರಾಜ್ಯಭಾರವನ್ನು ನಿರ್ವಹಿಸಿರುವ ದಿಗ್ಗಜಗಳಂತೆ ಒಪ್ಪುತ್ತಿರುವ ನೂರಾರು ಮಂದಿ ಹಿಂದೂಮಹಮ್ಮದೀಯಾದಿ ಸಂಸ್ಥಾನಾಧಿಪತಿಗಳು ಅಮೌಲ್ಯ ನಾನಾ ರತ್ನಾಭರಣಗಳಿಂದಲೂ ವಸ್ತ್ರಾಲಂಕರಣಗಳಿಂದಲೂ ವಿಭೂಷಿತರಾಗಿ ಸಭೆಯನ್ನಲಂಕರಿಸಿದ್ದರು. ವೈಸ್ರಾಯರ ಭವನದಿಂದ ಡ್ಯೂಕ್ ಆಫ್ ಕನ್ನಾಟ್‌ರವರು ಮರ್ಯಾದೆಯ ೩೧ ಗುಂಡುಗಳು ಹಾರುತ್ತಿರುವಾಗ ಹೊರಟು, ಹಿಂದುಮುಂದೆ ಅಶ್ವಸೈನ್ಯವನ್ನು ಬಿಟ್ಟುಕೊಂಡು ಸಭಾಭವನಕ್ಕೆ ದಯಮಾಡಿಸಿದರು. ೮ ಮೈಲಿಗಳುದ್ದದ ಆ ಮಾರ್ಗದ ಇಕ್ಕೆಲಗಳಲ್ಲೂ ಲಕ್ಷೋಪಲಕ್ಷ ಜನರು ನಿಂತು ಪ್ರಭು ದರ್ಶನವನ್ನು ಮಾಡಿ ಜಯಧ್ವನಿಯನ್ನು ಮಾಡಿದರು. ಆ ಮಾರ್ಗದ ಇಕ್ಕೆಲದಲ್ಲೂ ಆಂಗ್ಲ ಹಿಂದೂ ಸೈನಿಕರು ನಿಲ್ಲಿಸಲ್ಪಟ್ಟಿದ್ದರು. ಅವರ ಬೆನ್ನ ಕಡೆಗೆ ಬೆನ್ನು ಮಾಡಿ ಪೋಲೀಸ್ ಸೈನ್ಯವು ನಿಲ್ಲಿಸಲ್ಪಟ್ಟಿದ್ದಿತು. ಪ್ರಭುಗಳು ರಥದಿಂದಿಳಿದು ರಾಜವಸ್ತ್ರಾಲಂಕಾರವಿಭೂಷಿತರಾಗಿ ಸಭೆಯನ್ನು ಪ್ರವೇಶಿಸಿ ಸಕಲ ದೇಶೀಯ ಪ್ರಭುಗಳಿಂದಲೂ ಪ್ರತ್ಯುತ್ಥಾನಾದಿಗಳಿಂದ ಸನ್ಮಾನಿತರಾಗಿ ಮಧ್ಯೆ ವಿರಾಜಿತವಾಗಿದ್ದ ತಮ್ಮ ಪೀಠವನ್ನಲಂಕರಿಸಿದರು. ಬಳಿಕ ವೈಸ್ರಾಯರೂ ಅದೇ ಮಾರ್ಗದಲ್ಲಿ ಹಾಗೆಯೇ ಉತ್ಸವಪೂರ್ವಕವಾಗಿ ಬಂದು ಅಧಿಕಾರ ಮರ್ಯಾದಾಸೂಚಕ ವಸ್ತ್ರಾಭರಣಾದಿಗಳಿಂದಲಂಕೃತರಾಗಿ ಸಭಾ ಪ್ರವೇಶವನ್ನು ಮಾಡಿ ಮರ್ಯಾದಿತರಾಗಿ, ಉಭಯಪ್ರಭುಗಳೂ ರಾಜಮರ್ಯಾದೆಯಿಂದ ಸಭಾಮಧ್ಯದ ಸಿಂಹಾಸನಗಳನ್ನು ಅಲಂಕರಿಸಿದ್ದರು.

ಬಳಿಕ ನೌ|| ಸೆಕ್ರೆಟರಿಯವರು ಸಾರ್ವಭೌಮರ ಸಂದೇಶವನ್ನು ಓದಿದರು. ಅದರಲ್ಲಿ—''ಭಗವಂತನ ಕೃಪೆಯಿಂದ ಗ್ರೇಟ್‌ಬ್ರಿಟನ್ನಿಗೂ ಐರ್ಲಂಡಿಗೂ ಅಧಿನಿವೇಶಗಳಿಗೂ ಅರಸೂ, ಭರತಖಂಡಕ್ಕೆ ಸಾರ್ವಭೌಮನೂ, ಕ್ರೈಸ್ತಮತಸಂರಕ್ಷಕನೂ, ಆದ ನಾನು ಹಿಂದೂಸ್ಥಾನದ ವೈಸ್ರಾಯರನ್ನೂ ಅಲ್ಲಿಯ ಸಂಸ್ಥಾನಾಧಿಪತಿಗಳನ್ನೂ ಅಭಿನಂದಿಸುತ್ತೇನೆ. ಭರತಖಂಡದ ಸಂಸ್ಥಾನಾಧಿಪತಿಗಳ ಮೇಲೆ ನನಗಿರುವ ಪ್ರೇಮಾತಿಶಯಕ್ಕೆ ನಿದರ್ಶನವಾಗಿ ಅವರುಗಳ ಸಂಘದ ಸಂಸ್ಥಾಪನೆಗೆ ನನ್ನ ಅನುಮತಿಯನ್ನು ೧೯೧೯ನೆ ವರ್ಷದಲ್ಲಿ ಕೊಟ್ಟಿದ್ದೆನು. ಅದನ್ನನುಸರಿಸಿ ವೈಸ್ರಾಯರೂ ಸಂಸ್ಥಾನಾಧಿಪತಿಗಳೂ ಒಂದು ವಿಧಾನವನ್ನೇರ್ಪಡಿಸಿದರು. ಈಗ ಅದು ಪೂರ್ಣವಾಗಿರುವುದು. ಇಂಥ ಸಂಘಗಳಿಂದ ವಿಶೇಷ ಪ್ರಯೋಜನವುಂಟಾಗುವುದೆಂದು ತಿಳಿದು ಇದನ್ನಾರಂಭಿಸುವುದಕ್ಕಾಗಿ ನನಗೆ ಪ್ರತಿಯಾಗಿ ನನ್ನ ಪೂಜ್ಯ ಚಿಕ್ಕಪ್ಪಂದಿರಾದ ಕನ್ನಾಟ್ ಪ್ರಭುಗಳನ್ನು ಕೋರಿಕೊಂಡು ನಿಯಮಿಸಿದೆನು. ರಾಜ್ಯ ಪರಿಪಾಲನೆಯಲ್ಲಿ ದೀರ್ಘಕಾಲಾನುಭವವುಳ್ಳ ಸಂಸ್ಥಾನಾಧಿಪತಿಗಳಿಗೆ ಇಂಥ ಸಂಘ ಸಮಾವೇಶಗಳಿಂದ ಮತ್ತಷ್ಟು ಲಾಭವಾಗುವುದೆಂದು ನಾನು ನೆನಸುತ್ತೇನೆ. ಇನ್ನು ಮುಂದೆ ಪರಸ್ಪರ ವಿಶ್ವಾಸ ಸಹಕಾರಗಳಿಂದ ಕಾರ್ಯನಿರ್ವಾಹವು ಜರುಗಬೇಕು. ಸಂಸ್ಥಾನಾಧೀಶ್ವರರುಗಳ ರಾಜಭಕ್ತಿ ವಿಶ್ವಾಸಗಳು ಲೋಕಪ್ರಖ್ಯಾತಗಳಾಗಿವೆ. ಸಂಸ್ಥಾನಾಧಿಪತಿಗಳ ಸ್ವಾತಂತ್ರ್ಯವು ಯಾವಾಗಲೂ ಪರಮ ಪವಿತ್ರವಾಗಿ ಭಾವಿಸಲ್ಪಡುವುವೆಂದು ನನ್ನ ಪೂರ್ವಿಕರು ಹಲವುಸಲ ವ್ಯಕ್ತಪಡಿಸಿರುವರು. ನಾನೂ ಕೂಡ ಅದನ್ನೇ ಹಲವುಸಲ ತಿಳಿಯಪಡಿಸಿರುವೆನು. ಈಗ ಮತ್ತೊಂದು ಸಲ ಅದನ್ನೇ ಆಡುತ್ತೇನೆ. ಆಯಾ ಸಂಸ್ಥಾನಗಳ ಒಳ ಆಡಳಿತಗಳ ವಿಷಯದಲ್ಲಿ ಈ ಸಂಘಕ್ಕೆ ಯಾವ ಸಂಬಂಧವೂ ಇಲ್ಲ. ಎಲ್ಲೆಕಟ್ಟುಗಳ ವಿಷಯವನ್ನು ಕುರಿತು ಇವರು ಆಲೋಚಿಸಬಹುದು. ಅವಶ್ಯಕವಾದಾಗ ಓಟುಗಳನ್ನು ಕೊಡುವುದೂ ತಂತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸುವುದೂ ಕೂಡ ಅವಶ್ಯಕವಿಲ್ಲ. ಸಭೆಗೆ ಬರಲವಕಾಶವಾಗದ ಸಂಸ್ಥಾನಾಧಿಪತಿಗಳು ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಲಿಕ್ಕೆ ಅವರಿಗೆ ವೈಸ್ರಾಯರು ಅವಕಾಶ ಕೊಟ್ಟರೆ ಕೊಡಬಹುದು. ಭಗವದನುಗ್ರಹದಿಂದ ಈ ಸಂಘವು ವಿಶೇಷ ಪ್ರಯೋಜಕವಾಗಲಿ.''

ಇದನ್ನೋದಿ ಮುಗಿಸಿದ ಬಳಿಕ ವೈಸ್ರಾಯರು ಒಂದು ಭಾಷಣವನ್ನು ಮಾಡಿದರು. ಅದರಲ್ಲಿ—ಈ ಸಭಾಪ್ರಾರಂಭೋತ್ಸವ ಮಾಡಲು ಯುವರಾಜರನ್ನು ಕಳುಹಿಸಿಕೊಡಲು ಸಾರ್ವಭೌಮರು ನಿಶ್ಚಯಿಸಿದ್ದುದನ್ನೂ, ಅವರು ಇತರದೇಶಸಂಚಾರಗಳಿಂದ ಆಲಸ್ಯಗೊಂಡ ಕಾರಣ ಕನ್ನಾಟ್ ಪ್ರಭುಗಳು ದಯಮಾಡಿಸಿದುದನ್ನು ಹೇಳಿ, ಇವರ ಆಗಮನಕ್ಕಾಗಿ ಮನಃಪೂರ್ವಕವಾದ ಆನಂದಪ್ರದರ್ಶನಗಳನ್ನು ಮಾಡಿ, ಸಭೆಯ ಆರಂಭಮಹೋತ್ಸವವನ್ನು ಮಾಡಬೇಕೆಂದು ಅವರನ್ನು ಕೋರಿದುದಲ್ಲದೆ, ರಾಜಕೀಯ ಸಂಸ್ಕರಣ ವಿಷಯಕವಾಗಿ ಕೆಲಮಾತುಗಳನ್ನಾಡಿದರು:—ಇಂಥ ಸಂಸ್ಥಾನಾಧಿಪತಿ ಸಂಘವನ್ನು ಸ್ಥಾಪಿಸಬೇಕೆಂಬ ಸಂಕಲ್ಪವನ್ನು ೧೮೭೭ನೆ ವರ್ಷದಲ್ಲಿ ಲಾರ್ಡ್ ಲಿಟ್ಟನವರೇ ಮಾಡಿದರೆಂದೂ, ಬಳಿಕ ಅದನ್ನು ಡಫರಿನ್, ಕರ್ಜನ್, ಮಿಂಟೋ ಪ್ರಭುಗಳು ಬಲಪಡಿಸುತ್ತ ಬಂದರೆಂದೂ, ಹಾರ್ಡಿಂಜ್‌ರವರು ಸಂಸ್ಥಾನಾಧಿಪತಿಗಳೊಡನೆ ಈ ಸಂಬಂಧವಾಗಿ ವಿಶೇಷ ಚರ್ಚಿಸುತ್ತಿದ್ದರೆಂದೂ, ನಾನು ಈ ಪದವಿಗೆ ಬಂದ ಬಳಿಕ ಈ ಸಂಘವನ್ನು ಏರ್ಪಡಿಸುವ ಭಾಗ್ಯವು ನನ್ನ ಭಾಗಕ್ಕೆ ಬಂದಿತೆಂದೂ, ನರೇಂದ್ರಮಂಡಲಿ ಎಂಬ ದೇಶೀಯ ನಾಮವನ್ನೇ ಇದಕ್ಕೆ ಇಡಬೇಕೆಂಬ ಸಂಕಲ್ಪವಿದ್ದರೂ, ಕೆಲ ಮಹಮ್ಮದೀಯ ಪ್ರಭುಗಳು ಅದಕ್ಕೆ ಒಪ್ಪದೆಹೋದುದರಿಂದ ''ಪ್ರಿನ್ಸೆಸ್‌ಛೇಂಬರ್'' ಎಂಬ ಆಂಗ್ಲನಾಮವನ್ನೇ ಇಡಬೇಕಾಯಿತೆಂದೂ, ನೀವೆಲ್ಲರೂ ಆಲೋಚಿಸಿ ಬೇಕಾಗಿದ್ದರೆ ಆ ಹೆಸರನ್ನು ಬದಲಾಯಿಸಿಕೊಳ್ಳಬಹುದೆಂದೂ ಹೇಳಿದರು. ಮತ್ತು ಆ ಸಂಘದ ಕರ್ತವ್ಯ ಅಧಿಕಾರ ಮೊದಲಾದುವುಗಳನ್ನು ಕುರಿತು ಕೆಲ ವಿವರಣೆಗಳನ್ನು ಹೇಳಿದುದರಲ್ಲಿ—''ಯಾವುದಾದರೊಂದು ಸಂಸ್ಥಾನದ ವಿಷಯವನ್ನೆತ್ತಿಕೊಂಡು ಇಲ್ಲಿ ಚರ್ಚಿಸಕೂಡದು. ಇದು ಕೇವಲ ಆಲೋಚನಸಂಘವು; ಕಾರ್ಯನಿರ್ವಾಹಾಧಿಕಾರವೇನೂ ಇಲ್ಲ. ಈ ಸಭೆಯವರು ಮಾಡಿದ ತೀರ್ಮಾನಗಳನ್ನು ವೈಸ್ರಾಯರು ಅಂಗೀಕರಿಸಿಯೇ ತೀರಬೇಕೆಂಬ ನಿರ್ಬಂಧವೇನೂ ಇಲ್ಲ. ಇದು ಉತ್ತರೋತ್ತರ ವೃದ್ಧಿಯನ್ನು ಹೊಂದಲೆಂದು ನಾನು ಕೋರುತ್ತೇನೆ.'' ಎಂದು ತಿಳಿಯಿಸಿದರು.

ಬಳಿಕ ಕನ್ನಾಟ್ ಪ್ರಭುಗಳು ಭಾಷಣ ಮಾಡಲುಪಕ್ರಮಿಸಿ,—ಮಹೌನ್ನತ್ಯದಲ್ಲೂ ವಿಶಾಲದೃಷ್ಟಿಯಲ್ಲೂ ಮೊಗಲಾಯಿ ಚಕ್ರವರ್ತಿಗಳಿಗಿಂತಲೂ ಮಿಂಚಿದ—ಮತ್ತೂ ನಿಮ್ಮಗಳ ಮೇಲೆ ವಿಶೇಷ ಸಾನುಭೂತಿ ವಿಶ್ವಾಸಗಳುಳ್ಳ—ಜಾರ್ಜ್ ಪ್ರಭುಗಳ ಈ ಸಂದೇಶಪ್ರಕಾರ ಸಂಘವನ್ನು ಪ್ರಾರಂಭಿಸಲಿಕ್ಕಾಗಿ ನಾನು ಬಂದಿದ್ದೇನೆ. ಈ ಕಾರ್ಯವು ನನಗೆ ಸಂತೋಷಪ್ರದವು. ಯುದ್ಧಸಮಯದಲ್ಲಿಯೂ ಇತರ ವಿಷಯಗಳಲ್ಲಿಯೂ ನೀವು ಸಾಮ್ರಾಜ್ಯಕ್ಕೆ ಮಾಡಿರುವ ಘನಸಹಾಯಕ್ಕಾಗಿ ಪ್ರತ್ಯೇಕವಾಗಿ ಕೃತಜ್ಞತೆಯನ್ನು ತಿಳಿಯಪಡಿಸುವುದಕ್ಕೇ ಸಾರ್ವಭೌಮರು ನನ್ನನ್ನು ಕಳುಹಿಸಿಕೊಟ್ಟಿದ್ದಾರೆ. ದೇಶದ ಪರಿಸ್ಥಿತಿಗಳು ಅನುಕೂಲವಾಗಿರಲಿ, ಪ್ರತಿಕೂಲವಾಗಿರಲಿ, ನೀವು ವಿಶ್ವಸನೀಯರಾಗಿರುವಿರೆಂದೇ ಅವರು ನಂಬಿರುತ್ತಾರೆ. ನಿಮ್ಮ ಸಂಸ್ಥಾನಗಳೊಡನೆ ನಡೆದಿರುವ ಸಂಧಿಪತ್ರಗಳು ಪರಮ ಪವಿತ್ರಗಳಾದುವೆಂದು ನನ್ನ ಪ್ರಿಯ ಮಾತೆ ವಿಕ್ಟೋರಿಯಾ ಮಹಾರಾಜ್ಞಿಯವರು ೧೮೫೮ನೆ ವರ್ಷದ ಪ್ರಕಟನಪತ್ರದಲ್ಲಿ ವ್ಯಕ್ತಪಡಿಸಿರುವರು. ಅದನ್ನೇ ಎಡ್ವರ್ಡ್ ಸಾರ್ವಭೌಮರೂ ಮತ್ತೆ ದೃಢಪಡಿಸಿದರು. ಔದಾರ್ಯದಿಂದಲೇ ಪ್ರತಿಪಕ್ಷದವರೂ ಔದಾರ್ಯವನ್ನು ತೋರಿಸುವರು. ಸಾಮ್ರಾಜ್ಯ ಯುದ್ಧಸಂಘದಲ್ಲೂ ಸಾಮ್ರಾಜ್ಯ ಮಹಾಸಭೆಯಲ್ಲೂ ನಿಮ್ಮ ಪ್ರತಿನಿಧಿಗಳು ಕೆಲಸಮಾಡಿರುವರು; ವರ್ಸೇಲ್ಸ್ ಸಂಧಿಪತ್ರಕ್ಕೆ ರುಜುಮಾಡಿರುವರು. ಜಿನಿವಾದಲ್ಲಿ ನೆರೆದ ನಾನಾದೇಶ ಸಂಘದಲ್ಲೂ ನಿಮ್ಮ ಪ್ರತಿನಿಧಿಗಳಿದ್ದರು. ಕಳೆದ ೫೦ ವರ್ಷಗಳಿಂದ ಎಷ್ಟೋ ಬದಲಾವಣೆಗಳಾಗಿವೆ. ಅವಕ್ಕೆಲ್ಲಾ ನೀವೂ ಬದ್ಧರೇ. ಈ ಸಭೆಯು ಈಗ ಆರಂಭವಾಯಿತೆಂದು ನಾನು ನುಡಿಯುತ್ತೇನೆ. ಭಗವದನುಗ್ರಹದಿಂದ ಪ್ರವರ್ಧಮಾನವಾಗಲಿ.''

ಬಳಿಕ ಗ್ವಾಲಿಯರ್ ಮಹಾರಾಜರು ಸಾರ್ವಭೌಮರಿಗೆ ಸಂಸ್ಥಾನಾಧಿಪತಿಗಳ ಮೇಲಿರುವ ಪ್ರೀತಿ ವಿಶ್ವಾಸಗಳಿಗಾಗಿ ತಮ್ಮ ಕೃತಜ್ಞತಾವಂದನೆಗಳನ್ನು ತಿಳಿಯಿಸುವ ಮತ್ತು ಈ ಸಂಘದ ಆರಂಭೋತ್ಸವವನ್ನು ನೆರವೇರಿಸಲಿಕ್ಕೆ ಬಹು ದೂರದಿಂದ ದಯಮಾಡಿಸಿರುವ ಕನ್ನಾಟ್ ಪ್ರಭುಗಳಿಗೆ ವಂದನೆಯನ್ನು ತಿಳಿಯಿಸುವ ತೀರ್ಮಾನವನ್ನು ಸೂಚಿಸಿದರು. ಆ ಸಮಯದಲ್ಲೇ ವೈಸ್‌ರಾಯ್ ಚೆಲ್ಮ್ಸ್‌ಫರ್ಡ್‌ರವರ ಆಳಿಕೆಯ ಕಾಲದ ವಿಷಮ ಪರಿಸ್ಥಿತಿಯನ್ನೂ ಅಂಥ ಕಾಲದಲ್ಲೂ ಅವರು ಶಾಂತಿ ಧೈರ್ಯಸ್ಥೈರ್ಯಗಳಿಂದ ಕಾರ್ಯನಿರ್ವಾಹ ಮಾಡಿದುದನ್ನೂ ಕೊಂಡಾಡಿದರು. ಇದನ್ನು ಬಿಕನೀರ್, ಪಾಟಿಯಾಲಾ, ಆಲ್ವಾರ್ ಮಹಾರಾಜರುಗಳು ಪುಷ್ಟೀಕರಿಸಿ ಭಾಷಣಗಳನ್ನು ಮಾಡಿ ಅನುಮೋದಿಸಿದರು. ವಾದ್ಯಗಳು ಮೊರೆದುವು. ಸಭೆಯು ಪರಿಸಮಾಪ್ತವಾಯಿತು.

ಈ ಸಂಘದ ಅಧಿಕಾರ ಚರಿತ್ರಾದಿಗಳನ್ನವಲೋಕಿಸಿದರೆ ಮುಖ್ಯವಾಗಿ ಸಾಮ್ರಾಜ್ಯದ ಆಧಾರಸ್ತಂಭಗಳಂತಿರುವ ದೇಶೀಯ ಸಂಸ್ಥಾನಗಳ ವಿಶ್ವಾಸಬಂಧರಕ್ಷಣವೇ ಇದರ ಮುಖ್ಯ ಲಕ್ಷ್ಯವೆಂದು ಹೇಳಬೇಕಾಗುತ್ತಿದೆ.

ಬ್ರಹ್ಮಚರ್ಯೆ.

ಸ್ವಾಮಿ ರಘುನಾಥಾಯಿಯವರು ಮದ್ರಾಸು ಪ್ರಾಂತಿಕ ಕಲಾಶಾಲಾ ವಿದ್ಯಾರ್ಥಿಗಳನ್ನು ಕುರಿತು ಬ್ರಹ್ಮಚರ್ಯೆಯ ವಿಷಯವಾಗಿ ಮಾಡಿದ ಉಪನ್ಯಾಸದ ಸಾರ:—

ಶಾರೀರಕ ಮಾನಸಿಕ ನೈತಿಕ ಆಧ್ಯಾತ್ಮಿಕವೆಂಬ ನಾಲ್ಕು ತೆರದ ವಿಜ್ಞಾನಗಳನ್ನೂ ಪಡೆದುಕೊಳ್ಳಲಿಕ್ಕೆ ಬ್ರಹ್ಮಚರ್ಯೆಯೇ ಮೂಲಾಧಾರವು. ಬ್ರಹ್ಮಚರ್ಯಾಶ್ರಮದ ಧರ್ಮಗಳನ್ನು ಬಿಟ್ಟುದರಿಂದಲೇ ಈ ಕಾಲದ ಯುವಕರು ಸಣ್ಣತಲೆ ದುರ್ಬಲದೇಹ ವಿಳಸನವಿಲ್ಲದ ನರಗಳು ಬಲಹೀನತೆ ಮೊದಲಾದ ದೋಷಗಳಿಗೆ ಆಶ್ರಯಭೂತರಾಗಿದ್ದಾರೆ. ಅವರು ಸ್ವಶಕ್ತಿ ಸ್ವಲ್ಪವೂ ಇಲ್ಲದೆ ಸ್ವತಂತ್ರಾಲೋಚನೆಗಳಿಲ್ಲದೆ ಇತರರ ಗ್ರಂಥಗಳನ್ನು ವರ್ಣಿಸುವುದರಿಂದಲೇ ತಮ್ಮ ವಾಕ್ಚಾತುರ್ಯವನ್ನೆಲ್ಲಾ ಮುಗಿಸಿಕೊಳ್ಳುತ್ತಾರೆ. ಮನಸ್ಸನ್ನೂ ಇಂದ್ರಿಯಗಳನ್ನೂ ಸ್ವಾಧೀನದಲ್ಲಿಟ್ಟುಕೊಳ್ಳಲಾಗದಿದ್ದರೆ ನಿಜವಾದ ವಿದ್ಯಾಭಿವೃದ್ಧಿಗವಕಾಶವೇ ಇಲ್ಲ. ನಮ್ಮ ತರುಣರು ದುರ್ಭಾವನೆಗೆ ದಾಸರಾಗಿದ್ದಾರೆ. ವಿಷಯನಿಮಗ್ನತೆಯೇ ಶಕ್ತಿ, ಉತ್ಸಾಹ ತೇಜಸ್ಸು, ಬಲ ಇವುಗಳನ್ನೆಲ್ಲಾ ಕ್ಷೀಣಗೊಳಿಸುವುದು. ಅಂಥ ವಿಷಯಗಳನ್ನು ನಿಗ್ರಹಿಸುವ ವಿಧಾನವನ್ನು ಪಾಠಶಾಲೆಗಳಲ್ಲಿ ಉಪಾಧ್ಯಾಯರುಗಳು ವಿದ್ಯಾರ್ಥಿಗಳಿಗೆ ಬೋಧಿಸುವುದಿಲ್ಲ. ಈಗಿನ ಪಾಠಶಾಲೆಗಳು ದುರಾಚಾರಗಳಿಗೆ ಆವಾಸಗಳಾಗಿವೆ. ಅವುಗಳ ಪ್ರವರ್ತನವು ಅವರವರ ಆಧೀನದಲ್ಲೇ ಇದೆ. ಬ್ರಹ್ಮಚರ್ಯೆಯೆಂಬುದು ಆತ್ಯುತ್ತಮ ಸಾಧನವು. ಅದರಿಂದ ಇಂದ್ರಿಯಗಳನ್ನೂ ಮನಸ್ಸನ್ನೂ ಸ್ವಾಧೀನಪಡಿಸಿಕೊಂಡು ದೀರ್ಘಜೀವಿತೆಯನ್ನೂ ಮೇಧಾಸಂಪತ್ತಿಯನ್ನೂ ಆಕರ್ಷಣಶಕ್ತಿಯನ್ನೂ ಹೊಂದಿ ಎಲ್ಲರಿಂದಲೂ ಪ್ರೇಮಿಸಲ್ಪಡುವರು. ಅದುಕಾರಣ ಇಂದ್ರಿಯಮನೋನಿಗ್ರಹವೇ ದೈವವು.

ದೇವಾರಾಧನೆ ಎಂದರೆ ಏಕಾಂತಗೃಹದಲ್ಲಿ ಕಣ್ಣುಮುಚ್ಚಿಕೊಂಡು ಕುಳಿತಿರುವುದಲ್ಲ. ಮನಸ್ಸಿನಲ್ಲಿ ಇಚ್ಛೆ ಹುಟ್ಟಿದಾಗ ಅದನ್ನಡಗಿಸಿರಿ. ಇದೇ ದೇವಾರಾಧನೆ. ಈ ಸಾಧನೆಯಿಂದ ನಿಮ್ಮ ಶಕ್ತಿ ದಿನದಿನಕ್ಕೆ ಹೆಚ್ಚುವುದು. ನಾಟಕ ಮೊದಲಾದವುಗಳನ್ನು ಪದೇಪದೇ ನೋಡುವುದಕ್ಕೆ ಹೋಗುವುದೂ, ಗದ್ದಲದಲ್ಲೂ ಜಗಳದಲ್ಲೂ ಸೇರುವುದೂ ಸಹ ಬ್ರಹ್ಮಚಾರಿಗಳಿಗೆ ಉಚಿತವಲ್ಲ. ಅವರಿಗೆ ರಾಜಕೀಯ ಪ್ರಸಕ್ತಿ ಕೂಡದು. ಅವರು ಬಲವನ್ನೂ ಉತ್ಸಾಹವನ್ನೂ ಸಂಪಾದಿಸಿ ಕೂಡಿಹಾಕಬೇಕು. ಅಂಥಾ ಶಕ್ತಿ ಇಲ್ಲದೆ ಯಾವ ಕಾರ್ಯವನ್ನು ಕೈಕೊಂಡರೂ ದೌರ್ಬಲ್ಯಕಾರಣದಿಂದ ಅವರು ಪರಿಹಾಸಪಾತ್ರರಾಗುವರೇ ಹೊರತು ಕಾರ್ಯಸಾಫಲ್ಯವನ್ನು ಹೊಂದುವುದಿಲ್ಲ. ನಿಮ್ಮ ಶಕ್ತಿಯನ್ನು ದುರ್ವಿನಿಯೋಗ ಮಾಡಬೇಡಿರಿ. ನೀವು ಚಿಕ್ಕಮಕ್ಕಳಲ್ಲ. ವಯಸ್ಸಿಗೆ ಬಂದವರು. ಅದುಕಾರಣ ನೀವು ಹೆಂಗುಸರ ಕಡೆಗೆ ನೋಡಕೂಡದು. ಅವರ ಬಳಿಯಲ್ಲಿ ನಿಲ್ಲಕೂಡದು. ಗುಟ್ಟಾದ ದುರಭ್ಯಾಸಗಳ ಪಾಲಾಗಕೂಡದು. ನಿಮಗಿಂತ ವಯಸ್ಸಿನಲ್ಲಿ ಚಿಕ್ಕವರಾದ ಬಾಲಕರನ್ನು ದುರ್ವ್ಯಸನಗಳಿಗೆ ಬೀಳಿಸಬಾರದು. ನಿಮ್ಮ ಜೀವನಕ್ಕೆಲ್ಲಾ ಜೀವನವಾಗಿರುವ ರೇತಸ್ಸನ್ನು ಧೂಳೀಭೂತವಾಗಗೊಳಿಸದೆ ದುರಭ್ಯಾಸದಿಂದ ಅದನ್ನು ವ್ಯಯಮಾಡಿಕೊಂಡರೆ ನೀವು ಜೀವಚ್ಛವಗಳಾಗುತ್ತೀರಿ. ನಿಮ್ಮ ಮುಖಗಳು ಕಾಂತಿಹೀನಗಳಾಗುವುವು. [illegible] ಮೊದಲಾದವುಗಳು ವಿದ್ಯಾರ್ಥಿಗಳ ಭಾಗಕ್ಕೆ ಗೆದ್ದಲ ಹುಳುಗಳಾಗಿರುತ್ತವೆ. ಅದುಕಾರಣ ಅವರುಗಳು ಪ್ರಮಾಣ ಮಾಡಿ ಅಂಥಾ ದುರಭ್ಯಾಸಗಳನ್ನು ಸೋಲಿಸದಂತೆ ಇರಬೇಕು. ೧೦೦ಕ್ಕೆ ೭೦ ಮಂದಿ ವಿದ್ಯಾರ್ಥಿಗಳು ದುರಭ್ಯಾಸದಿಂದ ಕೆಟ್ಟುಹೋಗುತ್ತಿದ್ದಾರೆ. ನೀವು ಈಗ ಚಿಕ್ಕ ಹುಡುಗರೂ ಅಲ್ಲ; ಗೃಹಸ್ಥರೂ ಅಲ್ಲ. ಈ ವಯಸ್ಸಿನಲ್ಲಿ ಬ್ರಹ್ಮಚರ್ಯಾಚರಣೆಯು ಅತಿ ಮುಖ್ಯವಾಗಿರುವ ಕಾರಣ ನಾನು ಇಷ್ಟು ಒತ್ತಿ ಹೇಳುತ್ತೇನೆ. ಈ ದುರ್ವ್ಯಸನವು ಮಹಾಮಾರಿಯಂತಹದು. ಇದಕ್ಕೆ ವಶನಾದರೆ ಕುರುಡತನವು ಕೂಡ ಪ್ರಾಪ್ತವಾಗುವುದು. ಸ್ತ್ರೀಪುರುಷಸಂಬಂಧವಂತರಕೋ ಅಂಥದ ನಿರ್ಮಲಭಾವವು ನಿಮ್ಮ ಮುಖಮಂಡಲದಲ್ಲಿ ಗೋಚರಿಸಬೇಕು. ನೀವು ನಿಮ್ಮ ವಿದ್ಯಾಭ್ಯಾಸದಲ್ಲೇ ಮಗ್ನರಾದರೆ ಈ ವಿಷಯಾಭಿಲಾಷೆಯನ್ನು ಅಡಗಿಸಬಲ್ಲಿರಿ. ಆ ವಿಷಯಭ್ರಾಂತಿಯು ನಿಮ್ಮಲ್ಲಿ ಪ್ರಕೋಪಗೊಂಡಾಗ ನೀವು ಮರಣವನ್ನು ಕುರಿತು ಯೋಚಿಸಿದರೂ ಮೃತರಾದ ನಿಮ್ಮ ಬಂಧುಮಿತ್ರರನ್ನು ಸ್ಮರಿಸಿಕೊಂಡರೂ ಆ ವಿಷಯಾವೇಶವು ಅಡಗಿಹೋಗುವುದು. ಗಣಿತಶಾಸ್ತ್ರದಲ್ಲಿ ನೀವು ಮಗ್ನರಾದರೆ ಈ ವಿಷಯ ಪಿಪಾಸೆಯನ್ನು ಗೆಲ್ಲುವಿರಿ. ಇದೊಂದು ರೋಗವೆಂದು ಭಾವಿಸಿಕೊಂಡರೆ ಅದನ್ನು ನೀವು ಗುಣಪಡಿಸಿಕೊಳ್ಳುವಿರಿ. ಅದನ್ನು ಒಂದು ಆನಂದವೆಂದು ಭಾವಿಸಿಕೊಳ್ಳುವುದಾದರೆ ಅದರಿಂದ ನೀವು ಬಿಡುಗಡೆ ಹೊಂದಲಾರಿರಿ. ನಿಮ್ಮನ್ನು ಯಾರೂ ಉದ್ಧರಿಸಲಾರರು. ಆಧ್ಯಾತ್ಮಿಕಜ್ಞಾನವು ಲಭಿಸಿದರೆ ಉಳಿದುವೆಲ್ಲಾ ಸುಲಭವಾಗಿ ದೊರೆಯುವುವು. ನೀವು ಹೀಗೆ ವಿಷಯ ವಿಷಕ್ಕೆ ಸೋಲದೆ ಪ್ರವರ್ತಿಸಿದರೆ ನಿಮ್ಮ ಆತ್ಮವಿಶ್ವಾಸವೂ, ಆತ್ಮಶಕ್ತಿಯೂ, ಪ್ರಬಲಿಸುವುವು. ಎಲ್ಲರೂ ನಿಮ್ಮನ್ನು ಪೂಜಿಸುವರು. ನಿಮಗೆ ಈಗ ಆತ್ಮಶಕ್ತಿ ಇಲ್ಲ. ಮನಶ್ಶಕ್ತಿ ಇಲ್ಲ. ಮಹಾಪುರುಷರೆಲ್ಲರೂ ಬ್ರಹ್ಮಚರ್ಯವನ್ನು ಅವಲಂಬಿಸಿದವರೇ. ಕಣ್ಣು, ಕಿವಿ, ನಾಲಗೆ ಮೊದಲಾದ ಇಂದ್ರಿಯಗಳ ಚಾಪಲ್ಯವನ್ನಡಗಿಸುವುದು ಬಹಳ ಕಷ್ಟ. ಅದಕ್ಕಾಗಿ ದೃಢವಾದ ವ್ರತವನ್ನು ಕೈಕೊಳ್ಳಬೇಕು. ಆಹಾರನಿಯಮವಿಲ್ಲದಿದ್ದರೆ ಅನೇಕ ರೋಗಗಳು ಉಂಟಾಗುವುವು. ರುಚಿಗೋಸ್ಕರವಲ್ಲದೆ ಹಸಿವಿಗೆ ಮಾತ್ರವೇ ಆಹಾರವನ್ನು ತಿನ್ನಬೇಕು. ದುರಿಚ್ಛೆಗಳನ್ನು ಅಡಗಿಸುವ ಶಕ್ತಿಯನ್ನು ಭಗವಂತನು ನಮಗೆ ಅನುಗ್ರಹಿಸಿದ್ದಾನೆ. ಅದನ್ನು ನೀವೇಕೆ ಉಪಯೋಗಿಸಬಾರದು? ಒಂದೊಂದು ನಿಯಮವನ್ನು ಹಿಡಿದು ಒಂದೊಂದು ವರ್ಷ ಸಾಗಿಸಿರಿ. ಯಾವ ದಿವಸವಾದರೂ ಚಾಪಲ್ಯ ಹೆಚ್ಚಿದರೆ ಕೂಡಲೇ ಅದನ್ನು ಸಂಪಡಿಸಿಕೊಳ್ಳಿರಿ. ವಿಷಯಕ್ಕೆ ನೀವು ಅಧೀನರಾಗಬೇಕಾಗಿ ಬಂದಾಗ ಚಿಂತೆಪಟ್ಟುಕೊಳ್ಳಿರಿ. ಎಲ್ಲಕ್ಕೂ ಪ್ರೇರಕನು ಚಿತ್ತವು. ಅದನ್ನು ನೀವು ವಶಪಡಿಸಿಕೊಂಡರೆ ಎಲ್ಲವೂ ಸಾಧ್ಯವಾಗುವುದು. ಅದಕ್ಕಾಗಿ ಈ ದಿವಸವೇ ಪ್ರತಿಜ್ಞೆಯನ್ನು ಮಾಡಿರಿ. ನಾಳೆ ಮಾಡುತ್ತೇನೆ ಎಂದರೆ ಅದೇ ಮನೋದೌರ್ಬಲ್ಯವು.

ಒಳದೇಶದ ವೃತ್ತಾಂತಗಳು

ದಿವಾನರು ತಾ|| ೧೧ರ ಸಾಯಂಕಾಲ ಮೋಟಾರು ಬಂಡಿಯಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು.

ಬರುವ ವಾರದಲ್ಲಿ ದಿವಾನ್ ಸಾಹೇಬರು ಕಡೂರು ಡಿಸ್ಟ್ರಿಕ್ಟಿನ ಸಂಚಾರಕ್ಕೆ ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ಬರುವ ಮಾರ್ಚಿ ತಿಂಗಳಿಂದ ಮೈಸೂರು ಬೆಂಗಳೂರುಗಳ ಮಧ್ಯೆ ೧ ಎಕ್ಸ್‌ಪ್ರೆಸ್ ಬಂಡಿಯು ಬಿಡಲ್ಪಡುವುದರಲ್ಲಿದೆಯೆಂದು ಕೇಳುತ್ತೇವೆ.

ಚಿಕ್ಕಮಗಳೂರಿನಲ್ಲಿ ಮುನಸೀಫರಾಗಿರುವ ಮ|| ಎಂ. ಎನ್. ಸುಬ್ಬಣ್ಣ, ಬಿ. ಎ., ಎಲ್‌ಎಲ್. ಬಿ., ಯವರು ೫ನೆ ತರಗತಿಯ ಮುನಸೀಫರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಪಂಚಮವರ್ಗದ ವಿದ್ಯಾರ್ಥಿಗಳು ಇನ್ನು ೩ ವರ್ಷ ಕಾಲದವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹೋದರೆ ಫೀಜನ್ನು ಕೊಡಬೇಕಾದುದಿಲ್ಲವೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಶ್ರೀ ಚಿತ್ರದುರ್ಗದ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ತಾ|| ೧೨ರಲ್ಲಿ ಮದ್ದಗಿರಿಗೆ ದಯಮಾಡಿಸಿತು. ಮತ್ತೊಂದಪ್ಪಣೆಯಾಗುವವರೆಗೆ ಸನ್ನಿಧಿಗೆ ಬಿನ್ನೈಸಿಕೊಳ್ಳಬೇಕಾದ ಪತ್ರಗಳನ್ನೆಲ್ಲಾ ಆ ಮೊಕ್ಕಾಮಿಗೇ ರವಾನಿಸತಕ್ಕದೆಂದು ಸರ್ವಾಧಿಕಾರಿಗಳು ತಿಳಿಯಿಸಿದ್ದಾರೆ.

ಚಿತ್ರದುರ್ಗದ ಮ|| ಭೀಮರಾಜುಯವರು ಅಲ್ಲಿಯ ರಡ್ಡಿ ಮಹಾಸಭೆಯನ್ನು ಸಲಕ್ಷಣವಾಗಿ ನಡೆಯುವಂತೆ ಮಾಡುವಲ್ಲಿ ದೆಗೆದುಕೊಂಡ ಅಭಿಮಾನ ಶ್ರಮಾದಿಗಳಿಗಾಗಿ ಮೆಚ್ಚಿ ಆ ಸಭೆಯ ಸತ್ಕಾರಕ ಸಂಘದವರು ಒಂದು ಸುವರ್ಣರತ್ನಖಚಿತ ಕಂಕಣವನ್ನು ಮ|| ಸಿದ್ಧಲಿಂಗದೇವರುಯವರ ಹಸ್ತದಿಂದ ಕೊಡಿಸಿದರು,

ರಾಜಧಾನಿಯ ಫಲಪುಷ್ಪಪ್ರದರ್ಶನವು ನೆನ್ನೆಯದಿನ ಟವರ್ ಹಾಲಿನಲ್ಲಿ ಆರಂಭಗೊಂಡು ಈ ದಿವಸದ ಸಾಯಂಕಾಲದವರೆಗೂ ನಡಿಯುವುದು. ಸ್ಥಳದಲ್ಲಿ ಬೆಳೆದ ಮತ್ತು ಬೆಂಗಳೂರಿನಿಂದಲೂ ಬಂದಿರುವ ವಿಧವಿಧವಾದ ಫಲಪುಷ್ಪಗಳು ಪ್ರದರ್ಶಿಸಲ್ಪಟ್ಟಿರುವುವು. ಇವುಗಳಲ್ಲಿ ಉತ್ತಮವಾದುವುಗಳಿಗೆ ಬಹುಮಾನಗಳು ಕೊಡಲ್ಪಟ್ಟಿರುತ್ತವೆ.

ರೆವ್. ಸಾಡೆ ಸಾಹೇಬರು ಸೀಮೆಗೆ ಬರೆದು ತಾವೇ ಪೋಸ್ಟ್‌ಮಾಡಿದ ಪತ್ರಗಳಲ್ಲಿದ್ದ ಹಕ್ಕುಗಳು ಮರುದಿನ ಪೋಸ್ಟ್ ಆಫೀಸಿನಲ್ಲೇ ಇದ್ದುದು ಗೊತ್ತಾಗಿ ಪೋಸ್ಟ್ ಸೂಪರಿಂಟೆಂಡೆಂಟರ ತಿಳುವಳಿಕೆಗೆ ತರಲು, ಕೂಡಲೇ ವಿಚಾರಣೆ ನಡೆಯಿಸಿದುದರಲ್ಲಿ ಮೂವರು ಪೋಲೀಸರ ವಶಕ್ಕೆ ವಹಿಸಲ್ಪಟ್ಟರು. ಅವರಲ್ಲಿ ಒಬ್ಬನ ಪೆಟ್ಟಿಗೆಯೊಳಗೆ ಇದೇ ಸಾಡೇಸಾಹೇಬರೇ ಕಳೆದ ಅಕ್ಟೋಬರ್ ತಿಂಗಳಲ್ಲಿ ಸೀಮೆಗೆ ಬರೆದಿದ್ದ ಪತ್ರವು ಇದ್ದಿತಂತೆ. ರಾಜಧಾನಿಯಂಥ ಮುಖ್ಯ ಸ್ಥಳದ ದೊಡ್ಡ ಅಂಚೆಮನೆಯಲ್ಲಿ ಇಂಥ ಲೋಪಗಳುಂಟಾಗಲವಕಾಶವಿರುವುದು ಅನ್ಯಾಯ.

ಫ್ರಾನ್ಸಿನ ಹಿಂದಣ ಮಂತ್ರಿಗಳಾದ ಮ|| ಕ್ಲೆಮೆನ್ಸೋಯವರು ಹೈದರಾಬಾದಿನಿಂದ ಕಳೆದ ಬುಧವಾರ ಬೆಳಗ್ಗೆ ಬೆಂಗಳೂರಿಗೆ ದಯಮಾಡಿಸಿದರು. ಸಂಸ್ಥಾನದ ದಿವಾನರು, ಬ್ರಿ|| ಅ|| ರೆಸಿಡೆಂಟರು ಮೊದಲಾದವರು ನಿಲ್ದಾಣದಲ್ಲಿ ಇದಿರ್ಗೊಂಡು ಮರ್ಯಾದಿಸಿದರು. ಶ್ರೀಮನ್ ಮಹಾರಾಜರ ಪ್ರೈವೇಟ್ ಸೆಕ್ರೆಟರಿಯವರೊಡನೆ ಅದೇ ದಿನ ಅವರು ಮೋಟಾರಿನಲ್ಲಿ ಹೊರಟು ಶ್ರೀರಂಗಪಟ್ಟಣವನ್ನೂ ಕೃಷ್ಣರಾಜಸಾಗರವನ್ನೂ ಪರಾಮರಿಸಿ ರಾಜಧಾನಿಗೆ ಸಾಯಂಕಾಲ ಬಂದು, ಈಗ ಬೇಟೆಗಾಗಿ ಕಾರಾಪುರದ ಕಾಡಿಗೆ ದಯಮಾಡಿಸಿದ್ದಾರೆ. ಇವರ ಆತಿಥ್ಯಗಳಿಗೆಲ್ಲಾ ತಕ್ಕ ಏರ್ಪಾಟನ್ನು ಶ್ರೀಮನ್ ಮಹಾರಾಜರವರು ಮಾಡಿಸಿದ್ದಾರಲ್ಲದೆ ಕಾರಾಪುರಕ್ಕೂ ದಯಮಾಡಿಸುವವರಾಗಿದ್ದಾರೆ.

ಭರತಖಂಡದ ವೃತ್ತಾಂತಗಳು.

ಟಿಬೆಟ್ಟಿನ ಉತ್ತರಭಾಗದಲ್ಲಿ ರಷ್ಯನ್ ಸೈನಿಕರಿಗೂ ಚೀನಾ ಸೈನಿಕರಿಗೂ ಯುದ್ಧವು ನಡೆಯುತ್ತಿದೆ.

ಜನವರಿ ತಾ|| ೨೨ಕ್ಕೆ ಮುಗಿದ ೧ ವಾರದ ಕಾಲದಲ್ಲಿ ಈ ದೇಶಕ್ಕೆ ವಿದೇಶಗಳಿಂದ ೨೪೦೦೦೦೦೦ ಗಜಗಳ ಬಟ್ಟೆಯು ಬಂದಿತು. ಕಳೆದ ವರ್ಷ ಇದೇ ಒಂದು ವಾರಕಾಲದಲ್ಲಿ ೪೦೦೦೦೦೦೦ ಗಜಗಳ ಬಟ್ಟೆ ಬಂದಿದ್ದಿತು.

೩೦ ರೂ. ನೊಳಗಣ ಪಿಂಚನ್ ಹಣವನ್ನು ಆಯಾ ಪೆನ್ಷನ್‌ದಾರರಿಗೆ ಇದ್ದ ಸ್ಥಳಕ್ಕೇ ಮನಿಯಾರ್ಡರ್ ದ್ವಾರಾ ಕಳುಹಿಸಿಕೊಡಲಿಕ್ಕೆ ಮದ್ರಾಸ್ ಸರ್ಕಾರದವರು ಏರ್ಪಡಿಸಿದ್ದಾರೆ. ಈ ಬಡಪಾಯಿಗಳು ಖಜಾನೆಗಳ ಬಾಗಿಲಿಗೆ ಅಲೆಯುವುದೇ ತಪ್ಪಿತು.

ಮದ್ರಾಸು ಅಧಿಕಾರದಲ್ಲಿ ಕಳೆದ ವರ್ಷದ ಮದ್ಯವ್ಯಾಪಾರದ ಒಟ್ಟು ಆದಾಯವು ೫೩೧೦೦೦೦೦ ರೂ. ಕಳೆದ ಹತ್ತು ವರ್ಷಗಳಲ್ಲಿ ಯಾವ ಸಲವೂ ಇಷ್ಟು ಹೆಚ್ಚು ಉತ್ಪತ್ತಿಯಾದುದಿಲ್ಲ. ಅಲ್ಲಿಯ ಪ್ರಜಾಸಂಖ್ಯೆಗೆ ಇದನ್ನು ಹಂಚಿಹಾಕಿದರೆ ತಲೆ ೧ಕ್ಕೆ ೧-೪-೬ ಬಿದ್ದಂತಾಗುವುದು.

ವಿದೇಶಗಳ ಬಟ್ಟೆಗಳ ಯಂತ್ರಾಗಾರದವರು ೧೦೦ಕ್ಕೆ ೫೦-೬೦ರಷ್ಟು ಬೆಲೆಯನ್ನು ಇಳಿಯಿಸಲು ನಿರ್ಧರಿಸಿರುವ ಸಂಗತಿಯು ವ್ಯಕ್ತವಾಗಿದೆಯಷ್ಟೆ. ಈಗ ಶೋಲಾಪುರ ಮೊದಲಾದ ಕಡೆಯ ಯಂತ್ರಾಲಯಗಳವರೂ ಬಟ್ಟೆಗಳ ಬೆಲೆಯನ್ನು ಇಳಿಯಿಸುವುದಕ್ಕುಪಕ್ರಮಿಸಿದ್ದಾರೆ. ಬಹುಜನ ಬಟ್ಟೆ ವ್ಯಾಪಾರಿಗಳು ದಿವಾಳಿಗಳಾಗುವ ಹೊತ್ತು ಬಂದಿದೆ.

ಅಫ್ಘಾನಿಸ್ಥಾನದಲ್ಲಿ ನಡೆಯುವ ಸಂಧಿ ರಾಯಭಾರಕ್ಕಾಗಿ ಇಂಡ್ಯಾ ಸರ್ಕಾರದ ಪ್ರತಿನಿಧಿಯು ಈಗ ಕಾಬೂಲಿಗೆ ಹೋಗಿದ್ದಾರಷ್ಟೆ. ಇವರು ವಾರಕ್ಕೆ ೨-೩ ದಿವಸಗಳು ಕಾಬೂಲ್ ವಿದೇಶಾಂಗ ಮಂತ್ರಿಯನ್ನು ಕಂಡು ಮಾತನಾಡಿಕೊಂಡು ಬರುತ್ತಿರುವರಂತೆ. ಆದರೆ ಬೋಲ್ಷೆವಿಕ್ ಏಜಂಟ್ ಸೂರಿಟ್ಜ್ ಎಂಬಾತನೂ ಕೂಡ ಅಲ್ಲಿಗೆ ಬಂದು ಬಹಳ ತೀವ್ರವಾಗಿ ಕೆಲಸ ಮಾಡುತ್ತಿರುವನಂತೆ. ಅದರಿಂದ ಯಾವಾಗ ಸಮಾಧಾನವು ಒದಗುವುದೋ ಪರಿಣಾಮವು ಹೇಗಾಗುವುದೋ ಇನ್ನೂ ಗೊತ್ತಾಗುವುದಿಲ್ಲ.

ಇಂಡಿಯಾ ಸಿವಿಲ್ ಸರ್ವಿಸ್ ಪರೀಕ್ಷೆಗೆ ಸಂಬಂಧಪಟ್ಟ ನೂತನ ನಿಬಂಧನೆಗಳು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿವೆ. ಬ್ರಿಟಿಷ್ ಇಂಡಿಯಾ ಭಾಗಗಳಿಂದ ಈ ಪರೀಕ್ಷೆಗೆ ಹೋಗತಕ್ಕವರು ತಮ್ಮ ಸ್ಥಾನಿಕ ಪ್ರಭುತ್ವಗಳಿಗೆ ಆ ಸಂಗತಿಯನ್ನು ತಿಳಿಯಪಡಿಸಬೇಕು. ದೇಶೀಯ ಸಂಸ್ಥಾನಗಳಿಂದ ಹೋಗಬೇಕೆನ್ನುವವರು ತಂತಮ್ಮ ಪ್ರಭುತ್ವಗಳ ಮೂಲಕ ಇಂಡಿಯಾ ಸರ್ಕಾರಕ್ಕೆ ಶೃತಪಡಿಸಿಕೊಳ್ಳಬೇಕು. ಅವರಿಂದ ಆರಿಸಿಕೊಳ್ಳಲ್ಪಟ್ಟ ಉಮೇದುವಾರರು ಗ್ರೇಟ್‌ಬ್ರಿಟನ್ನಿನಲ್ಲಿರುವ ಕಲಾಶಾಲೆಗಳಲ್ಲಿ ೨ ವರ್ಷಕಾಲ ವಿದ್ಯಾಭ್ಯಾಸ ಮಾಡಬೇಕು. ೧೯೨೨ನೆ ವರ್ಷದಲ್ಲಿ ಆರಿಸಿಕೊಳ್ಳಲ್ಪಡುವವರ ಪರೀಕ್ಷೆಯು ೧ ವರ್ಷದೊಳಗಾಗಿ ನಡೆಯುವುದು.

ಸತ್ಯಮೂರ್ತಿ ಬಿ. ಎ. ಬಿ. ಎಲ್. ರವರು ಪುದುಕೋಟೆ ಸಂಸ್ಥಾನದಲ್ಲಿ ಹುಟ್ಟಿ ಬೆಳೆದವರು. ಇತ್ತೀಚೆಗೆ ಅವರು ಉಗ್ರಸ್ವರಾಜ್ಯವಾದಿಗಳಲ್ಲಿ ಸೇರಿರುವ ಸಂಗತಿಯು ಗೊತ್ತೇ ಇದೆಯಷ್ಟೆ. ಅವರು ತಮ್ಮ ಸಂಸ್ಥಾನಕ್ಕೆ ಹೋಗಿ ಉಪನ್ಯಾಸ ಮಾಡುವಾಗ್ಗೆ ರಾಜಭಕ್ತಿಗೆ ಭಂಗ ತರತಕ್ಕ ಉಪನ್ಯಾಸ ಮಾಡುವರೆಂಬ ಸುದ್ದಿಯನ್ನು ತಿಳಿದು ಅಲ್ಲಿಯ ಪ್ರಭುಗಳು ಅವರಿಗೆ ಎಚ್ಚರಿಕೆ ಹೇಳಿದ್ದರು. ಅದನ್ನೂ ವಿಚಾರಿಸದೆ ಕಳೆದ ನವಂಬರ್ ತಿಂಗಳಲ್ಲಿ ಒಂದು ಸಭೆಯನ್ನು ಪುದುಕೋಟೆಯಲ್ಲಿ ನೆರೆಯಿಸಿ ಉಪನ್ಯಾಸ ಮಾಡಿದರು. ಅವರಲ್ಲಿ ಆಂಗ್ಲದ್ವೇಷಜನಕ ವಾಕ್ಯಗಳಿದ್ದುವು ಎಂಬ ಕಾರಣದಿಂದ ಸಂಸ್ಥಾನಕ್ಕೆ ಸತ್ಯಮೂರ್ತಿಯವರು ಕಾಲಿಡಕೂಡದೆಂದೂ ಪುದುಕೋಟೆ ಸರ್ಕಾರದವರು ಅಪ್ಪಣೆ ಮಾಡಿದುದಲ್ಲದೆ ಆ ಸಭೆಯ ಸತ್ಕಾರಕ ಸಂಘಾಧ್ಯಕ್ಷರಾಗಿದ್ದ ಸುಂದರಶಾಸ್ತ್ರಿಯವರ ಪ್ಲೀಡರ್ ಸನ್ನದನ್ನು ರದ್ದುಪಡಿಸಿದ್ದಾರೆ.

ಕಲ್ಕತ್ತಾದಲ್ಲಿ ಕಳೆದ ತಾ|| ೨೭ರಿಂದ ಹಿಂದೂಮಹಮ್ಮದೀಯ ಸ್ವಯಂಸೇವಕರುಗಳು ಪ್ರಜೆಗಳಲ್ಲಿ ಮದ್ಯಪಾನ ದುರಭ್ಯಾಸವನ್ನು ಬಿಡಿಸುವುದಕ್ಕಾಗಿ ಬಹಳ ಸಾಹಸಪಡುತ್ತಿದ್ದಾರೆ. ಮ|| ಗಾಂಧಿಯವರ ಅಸಹಕಾರಿ ಪ್ರಯತ್ನದಲ್ಲಿ ಇದೊಂದನ್ನೂ ಸೇರಿಸಿಕೊಂಡಿದ್ದಾರೆ. ಹೆಂಡ ಸಾರಾಯಿಗಳ ಅಂಗಡಿಗಳ ಇದಿರಿಗೆ ಇವರುಗಳು ನಿಂತು ಅಲ್ಲಿಗೆ ಹೋಗಿಬರುವವರನ್ನು ಕುರಿತು ಮದ್ಯಪಾನದ ಅನರ್ಥಗಳನ್ನು ವಿವರಿಸಿ ಉಪನ್ಯಾಸ ಮಾಡುತ್ತಿರುವರು. ಇದರಿಂದ ಹಲವು ಅಂಗಡಿಗಳಲ್ಲಿ ಆಗಲೇ ವ್ಯಾಪಾರವು ಬಹಳ ಕುಗ್ಗಿಹೋಗಿದೆ. ಬಾರಾ ಬಜಾರಿನಲ್ಲಿ ಇವರು ಒಬ್ಬ ಮಹಮ್ಮದೀಯನಿಗೆ ಮೊದಲು ಬೋಧಿಸಿದರು. ೨ನೆ ಸಲ ಅವನು ಹೆಂಡದಂಗಡಿಯಿಂದ ಈಚೆಗೆ ಬಂದಾಗ ಹಿಡಿದುಕೊಂಡು ಮುಖಕ್ಕೂ ಕೈಗಳಿಗೂ ತಾರನ್ನೂ ಸುಣ್ಣವನ್ನೂ ಬಳಿದು ಅವನ ಕಿವಿಗಳಿಗೆ ಹಳೆ ಕೆರವನ್ನೂ ಕಸಪೊರಕೆಯನ್ನೂ ಕಟ್ಟಿ ಕತ್ತೆಯ ಮೇಲೆ ಹಿಮ್ಮುಖವಾಗಿ ಅವನನ್ನು ಕುಳ್ಳಿರಿಸಿ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿದರು.

ವಿದೇಶ ವೃತ್ತಾಂತಗಳು.

ಕಳೆದ ಜನವರಿ ತಾ|| ೨೨ಕ್ಕೆ ಕಡೆಯಾದ ಒಂದು ವಾರ ಕಾಲದಲ್ಲಿ ಲಂಡನ್ನಿನೊಳಗೆ ನಿದ್ರಾರೋಗದಿಂದಲೇ ೨೧ ಮಂದಿ ಮೃತರಾಗಿದ್ದಾರೆ.

ಮೆಸಪೊಟೇಮಿಯಾದಲ್ಲಿದ್ದ ಆಂಗ್ಲ ಸೈನಿಕರನ್ನು ಬಸರಾಕ್ಕೆ ಕರೆದುಕೊಂಡು ಹೋಗುತ್ತಾರೆ. ಇನ್ನು ಮುಂದೆ ಅವರು ಪರ್ಷಿಯಾ ಸಮುದ್ರ ಶಾಖೆಯಲ್ಲಿ ಯುದ್ಧ ಸನ್ನಾಹವನ್ನು ಮಾಡುತ್ತಿರುವರು.

ಮಿತ್ರಮಂಡಲಿಯವರು ನಷ್ಟಪರಿಹಾರ ದ್ರವ್ಯವನ್ನು ವಿಧಿಸಿರುವಷ್ಟನ್ನು ನಾವು ಕೊಡಲಾರೆವೆಂದು ಜರ್ಮನ್ ಪ್ರಭುತ್ವದವರು ನಿರಾಕರಿಸಿಬಿಟ್ಟಿದ್ದಾರೆ. ಅಷ್ಟೊಂದು ನಷ್ಟಪರಿಹಾರಭಾರವನ್ನು ಹೇರಿದುದು ಅನುಚಿತವೆಂದು ಅಮೇರಿಕಾ ಪತ್ರಿಕೆಗಳು ಹೇಳುತ್ತವೆ.

ಕಳೆದ ಜನವರಿ ತಾ|| ೩೦ರಲ್ಲಿ ಕೆಲ ಬೋಲ್ಷೆವಿಕ್ ಸೈನಿಕರು ಪರ್ಷಿಯಾ ದೇಶದ ವಾಯುವ್ಯಭಾಗದಲ್ಲಿರುವ ಆಂಗ್ಲ ಸೈನ್ಯದ ಶಿಬಿರದ ಮೇಲೆ ಬಿದ್ದರು. ಎರಡು ಕಡೆಯವರಿಗೂ ತೀಕ್ಷ್ಣ ಯುದ್ಧವಾಯಿತು. ೧೨ ಮಂದಿ ಬೋಲ್ಷೆವಿಕ್ ಸೈನಿಕರು ಸತ್ತು ೨೭ ಮಂದಿಗಳು ಇಂಗ್ಲೀಷರ ಅಧೀನರಾದರು. ಆಂಗ್ಲ ಸೈನ್ಯದಲ್ಲಿ ಯಾರೂ ನಷ್ಟವಾಗಲಿಲ್ಲ.

ಜನರಲ್ ಡಯರು ತನ್ನ ಸಂಕಲ್ಪದ ಪ್ರಕಾರ ಲಂಡನಿನಲ್ಲಿ ಕಳೆದ ವಾರ ಪರ್ಷಿಯಾ ದಂಡಯಾತ್ರೆಯ ವಿಷಯವಾಗಿ ಉಪನ್ಯಾಸ ಮಾಡಿದನು. ಮೊದಲ ಉಪನ್ಯಾಸದಲ್ಲಿ ಬಂದ ದುಡ್ಡನ್ನು ಇವರು ಅಮೃತಸರದಲ್ಲಿ ಮೃತಪಟ್ಟ ಪ್ರಜೆಗಳ ಅನುಬಂಧಿಗಳಿಗೆಲ್ಲ ಹಂಚಿ ಕಳುಹಿಸುವುದಿಲ್ಲ. ಮತ್ತೇನೆಂದರೆ—ಭರತಖಂಡದ ಸೈನಿಕೋದ್ಯೋಗಿಗಳ ಹೆಂಡತಿಯರ ಚಿಕಿತ್ಸೆಗೋಸ್ಕರವಂತೆ.

ದೈವದುರ್ವಿಲಾಸವು ಎಷ್ಟು ವಿಚಿತ್ರ. ೧೦ ವರ್ಷಗಳ ಕೆಳಗೆ ಪ್ರಪಂಚದ ದೊಡ್ಡ ಚಕ್ರಾಧಿಪತ್ಯಗಳಲ್ಲಿ ಒಂದಾಗಿ ಮೆರೆಯುತ್ತಿದ್ದ ಆಸ್ಟ್ರಿಯಾ ಸಾಮ್ರಾಜ್ಯದ ದುರವಸ್ಥೆ ಈಗ ಏನಾಗಿದೆ? ನಾಮಾವಶೇಷವಾಗಿದೆ. ಅದರ ಹಿಂದಣ ಕಾರಲ್ ಪ್ರಭುವು ಈಗ ತನ್ನ ಹೊಟ್ಟೆಪಾಡಿಗಾಗಿ ತನ್ನ ವಂಶೀಯರ ಪ್ರಾಚೀನ ಕಿರೀಟದಲ್ಲಿ ಕೆಲವು ರತ್ನಗಳನ್ನು ತೆಗೆದು ಮಾರಿಕೊಂಡನಂತೆ! ಹೀಗೆ ಮಾಡಿದುದು ತಪ್ಪೆಂದು ಅಲ್ಲಿಯ ಈಗಿನ ಪ್ರಜಾಪ್ರಭುತ್ವದವರು ಕಾರಲ್‌ರವರ ಮೇಲೆ ವ್ಯಾಜ್ಯಹೂಡುವವರಾಗಿದ್ದಾರಂತೆ!

ಜರ್ಮನಿಯಲ್ಲಿ ಕೊಲ್ಲಲ್ಪಟ್ಟ ಶಿವಸಿಂಗ್ ಎಂಬ ಭಾರತೀಯನು ಪೂರ್ವದ ಸ್ಯಾನ್‌ಫ್ರಾನ್‌ಸಿಸ್ಕೊ ರಾಜದ್ರೋಹಿಗಳ ಗುಂಪಿಗೆ ಸೇರಿದವನು. ಈತನು ೧೯೧೫ನೆ ವರ್ಷದಲ್ಲಿ ಬರ್ಲಿನ್ನಿಗೆ ಹೋಗಿ, ಭರತಖಂಡವು ಇತರ ದೇಶಗಳೊಡನೆ ಪಿತೂರಿ ನಡೆಯಿಸುವಂತೆ ಮಾಡುವುದಕ್ಕೆ ಸಾಹಸಪಟ್ಟನು: ಈತನು ಒಬ್ಬ ಜರ್ಮನ್ ಯುವತಿಯನ್ನು ಮದುವೆಯಾದನು. ಅದಕ್ಕೆ ಮುಂಚೆ ಆಕೆಯನ್ನು ಪ್ರೇಮಿಸಿದ್ದ ಅರ್ನಾಲ್ಡ್ ಎಂಬಾತನು ಈಗ ಸಿಂಗನನ್ನು ಕೊಂದನೆಂಬ ಸಂಶಯದ ಮೇಲೆ ಸರ್ಕಾರದವರು ಆತನನ್ನು ಹಿಡಿದಿರುವರು. ರಾಜದ್ರೋಹದ ಪಿತೂರಿಗಳನ್ನು ನಡೆಯಿಸಲಿಕ್ಕೆ ಈ ಸಿಂಗನಿಗೆ ಭರತಖಂಡದಿಂದ ಬಹಳ ಹಣವು ಕಳೆದ ೨ ವರ್ಷಗಳಿಂದ ಕಳುಹಿಸಲ್ಪಟ್ಟಿದ್ದಿತಂತೆ.

ಹಾಲೆಂಡ್ ದೇಶದ ಮಂತ್ರಿಯನ್ನು ನ್ಯೂಯಾರ್ಕ್ ಹೆರಲ್ಡ್ ಪತ್ರಿಕೆಯ ವಿಲೇಖಕನು ಕಂಡು ಮಾತನಾಡಿದಾಗ ಕೈಸರನ ವಿಷಯವನ್ನು ಕುರಿತು ಆತನು ಹೀಗೆ ಉತ್ತರ ಹೇಳಿದನು:—ತಾನು ಮರಳಿ ಜರ್ಮನಿಗೆ ಚಕ್ರವರ್ತಿಯಾಗಿ ಹೋಗುವುದು ಅಸಾಧ್ಯವೆಂದು ಕೈಸರು ತಿಳಿದುಕೊಂಡನು. ಅದುಕಾರಣ ಆತನು ಮರಳಿ ಜರ್ಮನಿಗೆ ಹೋಗಬೇಕೆಂದಿರುವುದಿಲ್ಲ. ಅವನ ಕುಮಾರನು ಮಾತ್ರ ಬಹಳ ಆಸೆಗೊಂಡಿದ್ದಾನೆ. ಆದರೆ ಅದಕ್ಕೆ ಕೆಲಕಾಲ ನಿರೀಕ್ಷಿಸಿಕೊಂಡಿರಬೇಕೆಂದು ತಿಳಿದಿದ್ದಾನೆ. ಪ್ರತಿ ದಿನವೂ ಹೋಹೆನ್‌ಜಾಲರ್ (ಕೈಸರ್‌ವಂಶ)ರಿಗೆ ಅನುಕೂಲವಾದ ಪಿತೂರಿಯು ನಡೆಯುತ್ತಿರುವುದೆಂದು ತಿಳಿದು ಹಾಲಂಡ್ ಪ್ರಭುತ್ವದವರು ತಮ್ಮ ಬಾಧ್ಯತೆಯನ್ನರಿತುಕೊಂಡು ಜಾಗರೂಕರಾಗಿದ್ದಾರೆ;

ಮುಂದೆ ನಡೆಯುವ ಲಂಡನ್ ಸಭೆಗೆ ತುರ್ಕಿ ಪ್ರತಿನಿಧಿಗಳೂ ಹೋಗಬೇಕಾದ ವಿಷಯದಲ್ಲಿ ಸುಲ್ತಾನ್ ಸರ್ಕಾರಕ್ಕೂ ಅಂಗೋರಾದಲ್ಲಿರುವ ಪ್ರಜಾಸರ್ಕಾರಕ್ಕೂ ಭಿನ್ನಭಾವಗಳು ಹೆಚ್ಚುತ್ತಿವೆ. ಸುಲ್ತಾನರು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನೇ ಬಿಟ್ಟು ಇಸ್ತಂಬೂಲಿಗೆ ಹೊರಟುಹೋಗಬೇಕೆಂದೂ ಅಲ್ಲಿಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದೂ ಅಂಗೋರಾದ ಪ್ರಭುತ್ವವೇ ನಿಜವಾದ ತುರ್ಕಿ ಪ್ರಭುತ್ವವಾಗಿರಬೇಕೆಂದೂ ಮುಸ್ತಾಫಾ ಕಮಾಲ್ ಪಾಷಾರವರು ಹೇಳುತ್ತಿದ್ದಾರೆ. ತುರ್ಕಿ ಸುಲ್ತಾನ್ ಪ್ರಭುತ್ವಪಕ್ಷದ ಇಜ್ಜತ್‌ಪಾಷಾರವರು ಸಭೆಗೆ ಹೋಗುವವರಾಗಿದ್ದಾರೆಂದು ಗೊತ್ತಾಗಿದೆ. ಈ ಸಮಯದಲ್ಲಿ ತುರ್ಕಿಯವರು ಇಬ್ಬಗೆಗಳನ್ನು ಮಾಡಿಕೊಂಡು ಕಾರ್ಯವಿಘಾತಮಾಡಿಕೊಳ್ಳುವುದು ಅನುಚಿತವೇ ಸರಿ.

ಪ್ರಸಿದ್ಧ ಪತ್ರಿಕೆ.

3

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿದ್ದು ಮೃತರಾದ ಸರಾಫ್ ಸೂಲು ಬೆಲೆ ಶಾಮಣ್ಣ ಉರಫ್ ನಂಜಪ್ಪನವರ ವಿಲ್ಲಿನ ಎಗ್ಜಿಕ್ಯೂಟರಾದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ ಯವರ ಇನ್‌ಸ್ಟ್ರಕ್ಷನ್ ಮೇರೆ ಸದರಿ ಶಾಮಣ್ಣನವರಲ್ಲಿ ಗಿರವಿ ಇಟ್ಟಿದ್ದ ಮಾಲುಗಳನ್ನು ಮಾಲಿಕರು ಮೊಬಲಗನ್ನು ಪಾವತಿ ಮಾಡಿ ತೆಗೆದುಕೊಂಡು ಹೋಗದಿದ್ದುದರಿಂದ ಅಡ್ಡಿಕೆ ಜಡೆಬಿಲ್ಲೆ ಸರಿಗೆ ಮುಂತಾದ ಚಿನ್ನದ ನಗಗಳೂ, ತಂಬಿಗೆ, ಪಂಚಪಾತ್ರೆ, ಡಾಬು ಮೊದಲಾದ ಬೆಳ್ಳಿಸಾಮಾನುಗಳೂ, ಕೆಂಪು ವಜ್ರದ ಜವಾಹಿರಿ ನಗಗಳೂ, ತಾ|| 26-2-1921 ನೇ ಶನಿವಾರ ಮತ್ತು ತಾ|| 27-2-1921 ನೇ, ಭಾನುವಾರ ಬೆಳಗ್ಗೆ 8 ಘಂಟೆಯಿಂದ 12 ಘಂಟೆವರೆಗೆ ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಊದುಬತ್ತಿ ಸಾಫ್, ಮ|| ರಾ|| ಕಳ್ಳಪ್ಪನವರ ಅಂಗಡಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ಹರಾಜಿನಲ್ಲಿ ಹೆಚ್ಚು ದರಕಾಸ್ತನ್ನು ಮಾಡಿದವರು ಮೊಬಲಗನ್ನು ಕೂಡಲೇ ಪಾವತಿಮಾಡಿ, ಮಾಲನ್ನು ಹೊಂದತಕ್ಕದ್ದು. ದರಕಾಸ್ತುದಾರರು ಹಾಗೆ ಮೊಬಲಗನ್ನು ಪಾವತಿ ಮಾಡದೆ ತಪ್ಪಿದಲ್ಲಿ ಪುನಃ ಹರಾಜು ಮಾಡಲ್ಪಡುತ್ತದೆ. ಬಳಿಕ ಆಗತಕ್ಕ ಖರ್ಚು ಮತ್ತು ನಷ್ಟಕ್ಕೆ ಮೊದಲ ಬೀಟ್‌ದಾರರೇ ಬಾಧ್ಯರಾಗುತ್ತಾರೆ.

ಬೆಂಗಳೂರು ಸಿಟಿ,
ತಾ|| 24-1-1921, }
ಜಿ. ಪರಮಶಿವಯ್ಯ,
ಅಡ್ವೊಕೇಟ್ ಅರಳೇಪೇಟೆ ಚೌಕ.

ಪತ್ರವ್ಯವಹಾರ.

ಸಾಧ್ವೀ ಸಂಪದಭ್ಯುದಯಗಳು.

ಈ ಪತ್ರಿಕೆಗಳ ಚರಿತ್ರವು ಅತಿ ವಿಚಿತ್ರ. ಅವುಗಳು ತಾಳಿದ ನಾಮಗಳೂ ವೇಷಗಳೂ ಭಾಷೆಗೂ ಕೊನೆಯೆಂದಿಲ್ಲ. ಅಕಾರಾದಿ ಸ್ವರಾಕ್ಷರ ಕೋಟಿ (ಅಚ್) ಯಲ್ಲಿ ಸೇರಿದ ಉಕಾರವೇ ಮೊದಲಾಗುಳ್ಳ ಉದಂತಚಿಂತಾಮಣಿ ಎಂದು ಮೊದಲು ಹೆಸರಾಂತು, ಬಳಿಕ ವಕಾರಾದಿ ನಾಮವಾದ ವೃತ್ತಾಂತಚಿಂತಾಮಣಿಯಾಗಿ, ಈಗ ಸಕಾರಾದಿ ನಾಮಗಳಿಗೆ ಬಂದುನಿಂತಿವೆ. ಅಂತೂ 'ಅ ವ ಸ' ಎಂಬ ಅಕ್ಷರತ್ರಯಗಳಾದುವು. ಇನ್ನು ನ ಎಂಬ ಒಂದು ಅಕ್ಷರಮಾತ್ರ ಬಾಕಿ. ಆ ಅಕ್ಷರಾದಿಯ ಹೆಸರು ಬಂದಾಗ್ಗೆ ಇದರ ಚರಿತ್ರೆಯು ಮುಗಿಯಬಹುದು. ಇದು ಈಗ ಸಂಪದಭ್ಯುದಯವೆಂಬ ಹೆಸರಿನ ವಾರ ಪತ್ರಿಕೆಯಾಗಿದ್ದರೂ ಇದರ ಸ್ಥಿತಿಯು ಮೈಸೂರು ದೇಶದ ಗೌರವಕ್ಕೇ ಕಳಂಕಕರವಾಗಿದ್ದಾಗಿದೆ. ದೇಶದಲ್ಲಿರುವ ಬೇರೆ ಪತ್ರಿಕೆಗಳನ್ನೂ ಇದನ್ನೂ ಹೋಲಿಸಿ ನೋಡಿದರೆ ಅರಗಜದ ಮಗ್ಗುಲಿಗೆ ಆಡಿನ ಹಿಕ್ಕೆಯನ್ನು ಇಟ್ಟಂತಾಗುತ್ತದೆ. ವೀಕ್ಲಿ ಪೇಪರುಗಳಲ್ಲೆಲ್ಲಾ ಬಂದು ಹಳಸಿಹೋದ ತಂಗಳುವಾರ್ತೆಗಳೇ ಇದರಲ್ಲಿ ತುಂಬಿರುತ್ತವೆ. ನಮ್ಮ ಸ್ವದೇಶಕ್ಕೆ ಉಪಯೋಗವಾದ ರಾಜಕೀಯ ಸಾಮಾಜಕ ನೈತಿಕ ಆರ್ಥಿಕ ಶೈಲ್ಪಿಕ ವಿಷಯಗಳು ಇದರಲ್ಲಿ ಮೃಗ್ಯವಾಗುತ್ತಲಿವೆ. ಯಾವ ಪೇಪರಿನಲ್ಲೂ ಪರದೂಷಣೆ, ಬ್ರಾಹ್ಮಣೋದ್ಧರಣೆ, ಬೋಲ್ಷೆವಿಕ್ ತತ್ವದ ಪುರಸ್ಕರಣೆ, ದೇಶವಿಪ್ಲವದ ಸಮರ್ಥನೆ, [illegible] ವಿಜೃಂಭಣೆ ಕಪಟವೈರಾಗ್ಯದ ವಿಸ್ತರಣೆಗಳಿಗೇನೂ ಕಡಿಮೆಯಿರುವದಿಲ್ಲ. ಎಂಥ ನಿಷ್ಪಾಪ ನಿರ್ವಿಕಲ್ಪರಮತಿಯುಳ್ಳ ಮನುಷ್ಯನೂ ಈ ಪತ್ರಿಕೆಯನ್ನು ಬಿಡದೆ ೪-೬ ತಿಂಗಳುಗಳವರೆಗೆ ಓದಿದರೆ ಜಾತಿ ಮತವರ್ಗದ ಮತ್ಸರಗ್ರಸ್ತನಾಗದೆ ಹೋಗುವುದಿಲ್ಲ. ಸಂಪದಭ್ಯುದಯಕ್ಕೆ ೭ ವರ್ಷ ವಯಸ್ಸಾಗಿದ್ದರೂ ಇದರ ವಿಚಾರಗಳೆಲ್ಲಾ ೭೦ ವರ್ಷಗಳಿಂದಲೂ ಅಂಟಿಬಂದಿರುವ ಅರುಳುಮರುಳು ವಿಚಾರಗಳೇ. ಎಷ್ಟೋ ಸಮಯದಲ್ಲಿ ಆತ್ಮವಚನ ವ್ಯಾಘಾತದೋಷವೇ ಇದಕ್ಕೆ ಗೊತ್ತಿರುವುದಿಲ್ಲ. ಎಡಿಟೋರಿಯಲ್ ಕಾಲಂ ಬರವಣಿಗೆಗಳಿಗೂ ಕರಸ್ಪಾಂಡೆನ್ಸ್ ಕಾಲಮ್ ಬರವಣಿಗೆಗಳಿಗೂ ವ್ಯತ್ಯಾಸವೇ ಇರುವುದಿಲ್ಲ. ಯಾತಕ್ಕೆಂದರೆ ಅನೇಕ ಸಮಯಗಳಲ್ಲಿ ಎರಡೂ ಒಂದೇ ಮೌಲ್ಡಿನಲ್ಲಿ ತಯಾರಾಗತಕ್ಕವು; ದೇಶದಲ್ಲಿ ಏನಾದರೊಂದು ಬೇಗೆಯನ್ನಿಕ್ಕಿ ಕಾಯಿಸುತ್ತಿದ್ದರೇ ಇದಕ್ಕೆ ಆಹಾರ ದ್ರವ್ಯಗಳು ಸೇರುವುವು. ಇದರ ಜನ್ಮನಕ್ಷತ್ರಗುಣವೇ ಹಾಗಿರಬಹುದು. ವ್ಯಕ್ತಿಜಾತಿಯಲ್ಲಿ ಜಗಳಗಂಟಿಗ ಮರವು ಹೇಗೋ ಪತ್ರಿಕಾಜಾತಿಯಲ್ಲಿ ಇದು ಹಾಗೆ. ಇದರ ಜನ್ಮಾದಿ ಕಾಲದಲ್ಲಿ ಇದು ದೇಶದೊಳಗೆ ಮೈಸೂರು ಪಾರ್ಟಿ ಮದ್ರಾಸು ಪಾರ್ಟಿ ಎಂದು ಕಲ್ಪಿಸಿ ಬೇರಾದರೆ ಅದೇ ಜಗಳದಲ್ಲೇ ದೇಶವು ಹತ್ತಿ ಬೇಯುವಂತೆ ಮಾಡಿ ಆನಂದಿಸುತ್ತಿತ್ತು. ಇಂಥ ಮದ್ರಾಸು ಮೈಸೂರು ಪಾರ್ಟಿ ದ್ವೇಷಕಲ್ಪನೆಯಿಂದ ದೇಶಕ್ಕೆ ಎಷ್ಟೋ ಹಾನಿಯಾಯಿತು. ಅವುಗಳಲ್ಲಿ ಒಂದನ್ನು ಇಲ್ಲಿ ಉದಾಹರಿಸಿದರೆ ಸಾಕು. ಕನ್ನಂಬಾಡಿ ಪ್ರಾಜೆಕ್ಟು ಮ|| ವಿ. ಪಿ. ಮಾಧವರಾಯರ ದಿವಾನಗಿರಿಯಲ್ಲೇ ತಲೆಯೆತ್ತಿತು. ಅವರಿಗೆ ಇದರ ನಿರ್ಮಾಣದಲ್ಲಿ ವಿಶೇಷ ಕುತೂಹಲವಿದ್ದಿತು. ಆದರೆ ಅವರು ಮದ್ರಾಸು ಪಾರ್ಟಿಯವರಾಗಿದ್ದುದರಿಂದ ಅಂಥವರ ಕಾಲದಲ್ಲಿ ಈ ಕಟ್ಟೆ ತಯಾರಾದರೆ ಅವರಿಗೆ ದೊಡ್ಡ ಹೆಸರು ಬರುವದೆಂಬ ಅಸೂಯೆಯಿಂದ ಈ ಪತ್ರಿಕೆಯ ಪಾರ್ಟಿಯವರು ಬೇಕಾದಷ್ಟು ಗದ್ದಲವನ್ನೆಬ್ಬಿಸಿದರು. ಆ ಸಾಗರದ ನಿರ್ಮಾಣದಿಂದ ಮೈಸೂರಿನ ಆರೋಗ್ಯವು ಕೆಡುವದು ಎಂದು ಬೊಬ್ಬೆಯಿಟ್ಟರು. ಅದನ್ನು ಕಟ್ಟಲು ಹಾಕಿದ ದುಡ್ಡಿಗೆ ತಕ್ಕಷ್ಟು ಲಾಭವಾಗುವದಿಲ್ಲವೆಂದು ಕೂಗಾಟವೆಬ್ಬಿಸಿದರು. ಅದಕ್ಕಿಂತ ಅವಶ್ಯಕವಾದ ನೀರಾವರಿ ಕೆಲಸಗಳು ಸಂಸ್ಥಾನದಲ್ಲಿ ಅನಂತವಾಗಿರುವಾಗ ಇದಕ್ಕೆ ಕೋಟ್ಯಂತರ ದ್ರವ್ಯವನ್ನು ಖರ್ಚುಮಾಡುವದು ಅನುಚಿತವೆಂದು ನಿಂದಿಸಲುಪಕ್ರಮಿಸಿದರು. ಕಡೆಗೆ ಅದು ನಿಂತು ಹೋಯಿತು. ಅದೇ ಕೆಲಸವನ್ನೇ ಸರ್ ವಿಶ್ವೇಶ್ವರಯ್ಯನವರು ಆರಂಭಿಸಲಿಕ್ಕೆ ಯತ್ನಿಸಿದಾಗ ಅದಕ್ಕೆ ಈ ಪತ್ರಿಕೆಗಳು ವಂದಿಮಾಗಧರಂತೆ ಸ್ತುತಿಪಾಠಗಳಿಗಾರಂಭಿಸಿದವು. ಕಡೆಗೇನಾಯಿತು? ಈ ದ್ವೇಷದಿಂದ ಅಪಾತ್ರರಾಗಿ ಕ್ರುದ್ಧರಾಗಿ ಕುಳಿತಿದ್ದ ಜನರು ಕನ್ನಂಬಾಡಿ ಕಟ್ಟೆಯ ವಿಷಯದಲ್ಲಿ ಮದ್ರಾಸಿನವರಿಂದ ವಿರುದ್ಧವಾಗಿ ಕಾರ್ಯಭಾಗ ನಡೆಯಿಸಿ, ಈಗ ಒದಗಿರುವ ಅಡ್ಡಿಯನ್ನು ತಂದೊಡ್ಡಲು ಅವಕಾಶವಾಯಿತು.

ಹಾಗೂ ಹೀಗೂ ಮದ್ರಾಸು ಮೈಸೂರು ಪಾರ್ಟಿಗಳು ಶಾಂತವಾಗುತ್ತ ಬಂದವು. ಗೌರ್ನಮೆಂಟಿನವರು ದೇಶದ ಸಕಲ ಜನಾಂಗವನ್ನೂ ಸಮಾನದೃಷ್ಟಿಗೆ ತರುವುದು ರಾಜಧರ್ಮವೆಂಬ ಭಾವದಿಂದ ಪತಿತ ಜನರನ್ನೂ ವಿದ್ಯೆಯಲ್ಲಿ ಹಿಂದೆ ಬಿದ್ದಿದ್ದವರನ್ನೂ ಮುಂಬರಿಸುವುದಕ್ಕೆ ತೊಡಗಿದರು. ಎಲ್ಲರೂ ತಮ್ಮಂತೆ ವಿದ್ಯಾವಂತರಾಗಿ ಸರ್ಕಾರದ ಅಧಿಕಾರವೆಂಬ ಹುಲ್ಲುಗಾವಲಿಗೆ ಪಾಲುಗಾರರಾಗುವ ಗತಿ ಬಂದಿತಲ್ಲಾ ಎಂಬ ಆಗ್ರಹವು ಸಂಪದಭ್ಯುದಯದ ಪಾರ್ಟಿಯವರಿಗೆ ಹುಟ್ಟಿತು. ಹಿಂದುಳಿದವರ ಉನ್ನತಿಗೆ ಯಾರು ಯಾರು ಮುಂದಾಳುಗಳಾಗಿ ನಿಂತರೋ ಅವರ ಮೇಲೆ ಇಲ್ಲದ ದೋಷಾರೋಪಣೆಗಳನ್ನು ಮಾಡಿ ಮುಖಮುರಿದು [illegible]ರಿಸಬೇಕೆಂದು ಅವರ ಮೇಲೆ ದೋಷಾರೋಪಣೆಗಳಿಗೆ ಆರಂಭಿಸಿದರು. ಹಿಂದುಳಿದವರಿಗೆ ವೇತನ ಕೊಟ್ಟದ್ದರ ಮೇಲೆ ವಿಷಕಾರಿದರು. ಈ ಮಧ್ಯೆ ಮ|| ಎಂ. ವೆಂಕಟಕೃಷ್ಣಯ್ಯನವರಿಗೆ ಮರಿಮಲ್ಲಪ್ಪನವರ ಹೈಸ್ಕೂಲು ಮುಖ್ಯೋಪಾಧ್ಯಾಯ ಪದವಿಯು ತಪ್ಪಿತು. ಮ|| ಹೆಚ್. ಜಿ. ಭಾಭಾರವರೇ ಮೊದಲಾದವರಿಂದ ಅಲ್ಲಾಡಿಸಲಾಗದಿದ್ದ ಆ ದೃಢಪಟ್ಟವು ಮ|| ರಡ್ಡಿಯವರ ಕಾಲದಲ್ಲಿ ಬುಡಮೇಲಾಗುವಂತಾಯಿತಲ್ಲಾ ಎಂಬ ಆಗ್ರಹವು ಜೊತೆಗೂಡಿ ಈ ಪತ್ರಿಕೆಗಳಿಗೆ ಹುಚ್ಚಿನ ಮೇಲೆ ಕಳ್ಳನ್ನು ಕುಡಿಸಿದಂತಾಯಿತು. ತಾವೇನೋ ಮತಜಾತಿ ಧರ್ಮೋದ್ಧಾರವನ್ನು ಮಾಡಲವತರಿಸಿರುವ ಮಹಾಸ್ತಿಕಪರಮಾಚಾರ್ಯರಂತೆ ಇವರ ಕಂಪೆನಿಯವರು ಹಿಂದುಳಿದವರ ಮುಖಂಡರ ಮೇಲೆ ಜಾತಿಸಂಕರ ಪ್ರಯತ್ನಮಾಡತಕ್ಕವರೆಂಬ ದೂರನ್ನು ಹೊರಿಸಿ, ಪ್ರಜೆಗಳಿಗೆಲ್ಲಾ ಇವರ ಮೇಲೆ ಜುಗುಪ್ಸೆ ಹುಟ್ಟುವಂತೆ ಮಾಡಬೇಕೆಂಬ ತಂತ್ರಮಾಡಿದರು. ಪಂಚಮರನ್ನು ಸ್ಕೂಲುಗಳಿಗೆ ಸೇರಿಸುವ ಏರ್ಪಾಡನ್ನು ರಡ್ಡಿಯವರೇ ಮಾಡಿದರೆಂದು ಬೊಬ್ಬೆಹೊಡೆದರು. ನ್ಯಾಷನಲ್ ಸ್ಕೂಲುಸ್ಥಾಪನೆ, ವೈಸ್ರಾಯಿಗೆ ದೂರು, ಸರ್ಕಾರಿ ಶಾಲೆಗಳಿಗೆ ಬಹಿಷ್ಕಾರ, ಇವನ್ನೆಲ್ಲಾ ಮಾಡಿಸಲಿಕ್ಕೂ, ಪಂಚಮರೊಡನೆ ಅರಸುಮಂಡಲಿಯವರು ಮೊದಲು ಬಂಧುತ್ವ ಮಾಡಲಿ ಎಂದು ಛಾಲೆಂಜು ಮಾಡುವದಕ್ಕೂ ಈ ಪತ್ರಿಕೆಯ ಕೂಟದವರು ಹಿಂಜರಿಯಲಿಲ್ಲ. ಸಾಧ್ಯವಾಗುವುದಾಗಿದ್ದರೆ ಬೋಲ್ಷೆವಿಕ್ ವಿಪ್ಲವವನ್ನು ಹರಡಲಿಕ್ಕೂ ಹವಣಿಸಿಕೊಂಡೇ ಇದ್ದಿರಬಹುದು. ಕಡೆಗೆ ಸರ್ಕಾರದವರು ದೃಢಚಿತ್ತವನ್ನು ತಾಳಿದರು. ಪಂಚಮರ ಉದ್ಧಾರದ ವಿಷಯದಲ್ಲಿ ಮಾಡಿರುವ ಅಪ್ಪಣೆಯು ಸರ್ಕಾರದವರ ಸಂಕಲ್ಪದಿಂದಲೇ ನಡೆದದ್ದೆಂದೂ, ಅದನ್ನು ಬದಲಾಯಿಸಲಾಗುವದಿಲ್ಲವೆಂದೂ ನಿಶ್ಚಲವಾಗಿ ಹೇಳಿಬಿಟ್ಟರು. ಅಲ್ಲಿಗೆ ಅದು ತೆಪ್ಪಗಾಯಿತು. ರಡ್ಡಿಯವರ ಮೇಲಣ ದ್ವೇಷವನ್ನು ಮಾತ್ರ ತೀರಿಸಿಕೊಳ್ಳಲಾಗಲಿಲ್ಲ. ಈಗ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದದ ಜಗಳವನ್ನು ಅಹರ್ನಿಶಿಯೂ ಈ ಪತ್ರಿಕೆಗಳು ಹತ್ತಿಸುತ್ತಿವೆ. ಮೈಸೂರು ದೇಶದ ಹೊರಗೆ ನಡೆಯುವ ಬ್ರಾಹ್ಮಣ ಬ್ರಾಹ್ಮಣೇತರ ವಿವಾದವನ್ನು ಎತ್ತಿಹಿಡಿದು ಈ ಪತ್ರಿಕೆಗಳು ಪ್ರಕಟಿಸಿ ಈ ದೇಶದಲ್ಲೂ ಅಬ್ಬರವಾಗುವಂತೆ ಮಾಡುತ್ತಿವೆ. ಈ ದೇಶದಲ್ಲಿ ಈವರೆಗೆ ಜಗಳವು ಪ್ರಜೆಗಳಲ್ಲಿ ಯಾರಿಗೂ ಬೇಕಿರಲಿಲ್ಲ. ಈ ಪತ್ರಿಕೆಗಳ ಬೊಬ್ಬೆಯಿಂದಲೇ ಅಂಥ ಭೇದಭಾವಗಳು ಬೆಳೆಯಲು ಆಕರವಾಗಿದ

ಲೋಕದಲ್ಲಿ ಉತ್ತಮಗುಣಾಢ್ಯರೆಲ್ಲಾ ಸದ್ಬ್ರಾಹ್ಮಣರು, ದುರ್ಗುಣದವರೆಲ್ಲಾ ಚಂಡಾಲರು ಎಂದೂ, ವರ್ಣಗಳಲ್ಲಿ ಒಂದು ದೊಡ್ಡದು ಒಂದು ಕೆಟ್ಟದು ಎಂಬ ಭಾವನೆ ಸರಿ ಕಲ್ಪಿಸಲ್ಪಟ್ಟಿಲ್ಲವೆಂದೂ ಒಂದೊಂದು ಸಮಯದಲ್ಲಿ ಬರೆಯುವ ಈ ಪತ್ರಿಕೆಗಳೇ ಮತ್ತೊಂದು ಸಮಯದಲ್ಲಿ ದ್ವೇಷದ ಭರಕ್ಕೆ ಬಿದ್ದು, ದೇವರೂ ಸೈತಾನನೂ ಒಂದೆ? ಚಿನ್ನವೂ ಮಣ್ಣೂ ಒಂದೆ? ಎಂದೂ ಆಕ್ಷೇಪಿಸಿ, ವರ್ಣಾಂತರ ವೈಷಮ್ಯಕಲ್ಪನೆಗೆ ಉಪಕ್ರಮಿಸುತ್ತವೆ. ಗುಣಕ್ಕೆ ಪ್ರಾಶಸ್ತ್ಯ ಕೊಟ್ಟು ಅದನ್ನು ಗೌರವಿಸುವುದೇ ಈ ಪತ್ರಿಕೆಯ ಕೂಟದವರ ನಿಜಸ್ಥಿತಿಯಾಗಿದ್ದರೆ, ನಾಮಮಾತ್ರದ ಬ್ರಾಹ್ಮಣರನ್ನು ಬಿಟ್ಟು ಸದ್ಗುಣಾಢ್ಯನಾಗಿರುವ ಯಾವನೊಬ್ಬ ಪಂಚಮನನ್ನಾದರೂ ತಮ್ಮ ಮಾತೃಪಿತೃ ಶ್ರಾದ್ಧಕಾಲದಲ್ಲಿ ಶ್ರಾದ್ಧಾರ್ಥವಾಗಿ ಕುಳ್ಳಿರಿಸಿ ಪೂಜಿಸಿರುವುದುಂಟೆ? ಬರಿಯ ವೇದಾಂತವನ್ನು ಕೊಚ್ಚುವುದರಿಂದ ಫಲವೇನು? ಮುಪ್ಪಿನಲ್ಲಿ ವಿಷಯ ವೈರಾಗ್ಯದ ಪುರಾಣ ಹೇಳಿದರೆ ಭಾಗ್ಯವೇನು? ದೇಶದಲ್ಲಿ ಬ್ರಹ್ಮದ್ವೇಷವು ಹೆಚ್ಚಿತೆಂದು ಈ ಪತ್ರಿಕೆಗಳು ಬೊಬ್ಬೆಯಿಟ್ಟುಕೊಳ್ಳುತ್ತಿವೆಯಷ್ಟೆ. ನಿಜವಾದ ಬ್ರಾಹ್ಮಣನನ್ನು ದ್ವೇಷಿಸುವುದೂ ಒಂದೇ, ದೈವವನ್ನು ದ್ವೇಷಿಸುವುದೂ ಒಂದೇ. ಅಂಥ ಬ್ರಾಹ್ಮಣನನ್ನು ಸೈತಾನನು ದ್ವೇಷಿಸಬೇಕೇ ಹೊರತು ವಿಚಾರಶಕ್ತಿಯುಳ್ಳ ಮನುಷ್ಯನಾವನೂ ದ್ವೇಷಿಸಲಾರನು.

ಅಬ್ರಾಹ್ಮಣರಾದವರು ತಾವೇ ಬ್ರಾಹ್ಮಣರೆಂದು ತಿಳಿದುಕೊಂಡು, ತಮ್ಮನ್ನು ಇತರರು ದ್ವೇಷಿಸುವರೆಂದು ದೂರುತ್ತ, ಅವರನ್ನು ಬ್ರಹ್ಮದ್ವೇಷಿಗಳೆಂದು ಕರೆಯುವುದು ಹೆಚ್ಚಾಗಿದೆ. ಇಂತವರಿಗೆಲ್ಲಾ ಉತ್ತರರೂಪವಾಗಿ ಮೊನ್ನೆ ನಡೆದ ಗೋದಾವರೀ ಮಂಡಲಸಭೆಯಲ್ಲಿ ಸ್ವಾಗತಸಂಘಾಧ್ಯಕ್ಷರಾಗಿದ್ದ ಮ|| ಆಚಂಟ ಸುಬ್ಬರಾಯನಾಯುಡು ಎಂ. ಎ. ಎಲ್. ಸಿ. ಯವರು ಆಡಿರುವ ಮಾತುಗಳನ್ನು ಇಲ್ಲಿ ಉದಹರಿಸಿ ಸದ್ಯಕ್ಕೆ ಈ ಲೇಖನವನ್ನು ನಿಲ್ಲಿಸಿರುತ್ತೇನೆ—"ಬ್ರಾಹ್ಮಣರನ್ನು ದ್ವೇಷಿಸುವುದೇ ನಿಂದಿಸುವುದೇ ಈ ಬ್ರಾಹ್ಮಣೇತರೋದ್ಯಮದ ಉದ್ದೇಶವಲ್ಲ. ಬ್ರಾಹ್ಮಣರಿಂದ ಮಾಡಲ್ಪಡುವ ಅನ್ಯಾಯಗಳನ್ನು ಹೊರಕ್ಕೆಹಾಕುವುದು ಈ ಉದ್ಯಮದ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ಒಬ್ಬರು ದೇಶಕ್ಕೇ ಆಗಲಿ ಪ್ರಜೆಗಳಿಗೇ ಆಗಲಿ ಮಾಡುವ ಅನ್ಯಾಯಗಳನ್ನು ಹೊರಹಾಕುವುದು ಎಂದಿಗೂ ಅವರನ್ನು ಬಯ್ಯುವುದಾಗುವುದಿಲ್ಲ. ಸುಮ್ಮನೆ ಬಯ್ಯುವುದಕ್ಕೆ ಬ್ರಾಹ್ಮಣೇತರರು ಬುದ್ಧಿಹೀನರೆ? ಆ ಬ್ರಾಹ್ಮಣೇತರರು ತಮ್ಮ ಕಷ್ಟಸುಖಗಳನ್ನು ಪತ್ರಿಕಾಮುಖದಲ್ಲೂ ಸಭಾಮುಖದಲ್ಲೂ ಪ್ರಕಟಿಸಿಕೊಳ್ಳುವುದೇ ದೂಷಣೆಯೆಂದು ಭಾವಿಸುವುದಾದರೆ ಅವರು ಮಾಡುವುದೇನು? ಬ್ರಾಹ್ಮಣೇತರರು ಓದಿದರೆ ಅವರ ಕಿವಿಗಳಲ್ಲಿ ಸೀಸವನ್ನು ಕಾಯಿಸಿ ಹುಯ್ಯಬೇಕೆಂದು ವಿಧಿಸುವ ಶಾಸ್ತ್ರವನ್ನು ನಿಂದಿಸಿದರೆ ಅದೊಂದು ಬೈಗಳೆ? ಬ್ರಾಹ್ಮಣರಿಗೆ ಇರುವಷ್ಟು ಬುದ್ಧಿ ವಿವೇಕಗಳು ಇತರರಿಗಿಲ್ಲವೆನ್ನುವುದನ್ನು ಖಂಡಿಸಿದರೆ ಅದೊಂದು ಬೈಗಳೆ? ಬ್ರಾಹ್ಮಣರನ್ನು ಕುಯ್ದರೆ ಹಾಲೂ, ಬ್ರಾಹ್ಮಣೇತರರನ್ನು ಕುಯ್ದರೆ ರಕ್ತವೂ ಬರುವುದೆಂದು ಹೇಳುವ ಪಕ್ಷಪಾತದ ಮಾತುಗಳನ್ನು ಖಂಡಿಸಿದರೆ ಬೈಗಳೆ? ಬ್ರಾಹ್ಮಣೇತರರನ್ನು ಸೋಂಕಕೂಡದೆಂಬ ಸಿದ್ಧಾಂತವು ನಿರ್ಮೂಲವಾಗಬೇಕೆಂದು ಹೇಳುವುದು ಬೈಗಳೆ? ಬ್ರಾಹ್ಮಣೇತರರು ತುಪ್ಪವನ್ನೂ ಮೊಸರನ್ನೂ ತಿನ್ನಲು ಅರ್ಹರಲ್ಲವೆಂದು ವಾದಿಸುವ ಮಾತುಗಳನ್ನು ನಿರಸನಮಾಡುವುದು ದೂಷಣೆಯೆ? .... ಸರ್ಕಾರಿ ಅಧಿಕಾರಗಳಲ್ಲೆಲ್ಲಾ ಬ್ರಾಹ್ಮಣರೇ ತುಂಬಿಕೊಂಡಿರುವುದು ನ್ಯಾಯವಲ್ಲವೆಂದು ಬರೆಯುವುದು ಬ್ರಹ್ಮದ್ವೇಷವೆ? ಇವೆಲ್ಲಾ ತಮ್ಮ ದೂಷಣೆಯೆಂದು ಬ್ರಾಹ್ಮಣಸೋದರರು ಭಾವಿಸಿಕೊಳ್ಳುವರಾದರೆ ಅಂಥ ಬೈಗುಳನ್ನು ನಾವು ಬೈಯುವುದು ನಿಜವೇ. ಇವುಗಳ ಅರ್ಥವನ್ನು ಅವರು ಸರಿಯಾಗಿ ಗ್ರಹಿಸಿಕೊಂಡು, ಈ ಬೈಗುಳಗಳಿಗೆ ಕಾರಣವೇನೋ ಅದನ್ನು ತಮ್ಮಿಂದ ತೊಲಗಿಸಿಕೊಂಡರೆ ಪರಸ್ಪರ ಸೋದರಭಾವವು ತನ್ನಷ್ಟಿಗೆ ತಾನೇ ವೃದ್ಧಿಯಾಗುವುದು." ಪ್ರಜಾಕಿಂಕರ.

ವೀರಶೈವ ಸಮಾಜ ಕಲ್ಪವೃಕ್ಷ ! ಕಣ್ದೆರೆ.

ಯಾವುದೊಂದು ರಾಷ್ಟ್ರವಾಗಲಿ, ದೇಶವಾಗಲಿ, ಸಮಾಜವಾಗಲಿ, ಮನೆತನವಾಗಲಿ, ಊರ್ಜಿತಸ್ಥಿತಿಯನ್ನು ಹೊಂದಿ, ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಮುಕ್ತಿಯನ್ನೂ ಹೊಂದಿ ಸುಖ ಪಡಬೇಕಾದರೆ ಶಿಕ್ಷಣವೇ ಮುಖ್ಯವಿದೆ. ಇಂಥ ವಿದ್ಯೆಯು ಸಂಗ್ರಹವಾಗಬೇಕಾದರೆ ಅನೇಕ ವಿದ್ಯಾಲಯಗಳು ಬೇಕಾಗುತ್ತವೆ. ಇಂಥ ವಿದ್ಯಾಲಯಗಳು ನಮ್ಮ ಹಿಂದುಸ್ಥಾನದಲ್ಲಿ ಅನೇಕ ಸ್ಥಾಪಿಸಿದ್ದು ಮುಂದೆ ಸ್ಥಾಪಿಸುತ್ತಾ ನಡೆದದ್ದು ನೋಡಿದರೆ ಇದೊಂದು ಉನ್ನತಿಯ ಚಿನ್ಹವೇ ಯೆಂದು ಹೇಳಬೇಕಾಗಿದೆ. ಹೀಗಿದ್ದೂ ನಮ್ಮ ವೀರಶೈವ ಸಮಾಜದವರ ಪುಣ್ಯೋದಯದಿಂದ ಬೆಳಗಾವಿಯಲ್ಲಿ ಅರಟಾಳ, ಗಿಲಗಂಜ ಇವರ ಹೆಸರಿನ ಒಂದೇ ಒಂದಾದ ಹೈಸ್ಕೂಲವು ಸ್ಥಾಪಿಸಿದ್ದು ಯಾವತ್ತರಿಗೂ ಗೊತ್ತಿದ್ದದ್ದು ಸರಿ. ಈ ಹಾಯಸ್ಕೂಲ ಚಾಲಕರಿಂದ ಪ್ರೊಫೆಸರ ಜನರು ಎಷ್ಟು ಸ್ವಾರ್ಥತ್ಯಾಗಗಳಾಗಿ ಕೆಲಸ ಮಾಡುತ್ತಿರುವರೆಂಬುವದು ಬೇರೆ ಹೇಳಬೇಕಾಗಿಲ್ಲ. ಇಂಥ ಒಂದೇ ಒಂದಾದ ಹಾಯಸ್ಕೂಲ ಊರ್ಜಿತಸ್ಥಿತಿಗೆ ಹೊಂದಿಸುವ ಭಾಗವು ಈ ವೀರಶೈವ ಸಮಾಜ ಕಲ್ಪವೃಕ್ಷದ ಮುಖ್ಯಕಾರ್ಯವಿದೆ. ಹೀಗಿದ್ದು ಈ ಕಲ್ಪವೃಕ್ಷವು ಇತ್ತ ಕಣ್ಣುತೆರೆದು ನೋಡದೆ ಈ ಹಾಯಸ್ಕೂಲಿಗೆ ಬೇಕಾದ ಸೌಕರ್ಯಕ್ಕೆ ಸಹಾಯವಾದ ದ್ರವ್ಯವನ್ನು ಒದಗಿಸಿ ಕೊಡುವದನ್ನು ಬಿಟ್ಟು ಸುಮ್ಮನೆ ಇರುವದು ಎಂಥ ಶುಭ ಸೂಚನೆಯೋ ನೋಡಿರಿ. ಹೀಗಿದ್ದು ಇಂಥ ಕುಂದು ಕೊರತೆ ತಪ್ಪಿಸಬೇಕೆಂದು ಅನೇಕ ಸಾರೆ ವಾರಪತ್ರಿಕೆಗಳಲ್ಲಿಯೂ ಮತ್ತು ಮಾಸಪತ್ರಿಕೆಗಲ್ಲಿಯೂ ತಿಳಿಸಿದರೆ ಅದು ಹಾಗೆಯೇ ಉಳಿಯಿತು. ಈ ಪ್ರಕಾರ ಈ ಸಮಾಜವು ಕಣ್ಣುದೆರೆಯದಿದ್ದದ್ದು ಬಹು ಸೋಜಿಗವೆನಿಸುತ್ತದೆ. ಯಾಕೆಂದರೆ, ಈ ಕಲ್ಪವೃಕ್ಷವು ಯಾವತ್ತು ವರ್ಷದಿಂದೀಚೆಗೆ ತನ್ನ ದೃಷ್ಟಿಯನ್ನು ಇತ್ತಕಡೆಗೆ ಯಥಾಕಾರ್ಯವಾಗಿರುವದೆಂಬುವದು ಅಲ್ಲಲ್ಲಿ ಸ್ಥಾಪಿಸಿದ ಧನರಾಶಿಯೇ ಮುಖ್ಯವಾಗಿದೆ. ಹೀಗಿದ್ದು ಒಂದೇ ಒಂದಾದ ಅರಟಾಳಗಿಲಗಂಜ ಹ್ಯಾಸ್ಕೂಲ ಕಡೆಗೆ ಈ ಕಲ್ಪವೃಕ್ಷವು ಕಣ್ಣುದೆರೆದು ನೋಡದಿದ್ದದ್ದು ಎಂಥಾ ಸೋಜಿಗವೊ! ಧನ್ಯ!! ಧನ್ಯ!!! ಸಮಾಜ ಕಲ್ಪವೃಕ್ಷವೇ ತೀವ್ರ ಕಣ್ದೆರೆ. ಈ ಪ್ರಥಮಾರಂಭವಾದ ಹಾಯಸ್ಕೂಲಿಗೆ ಈ ಪ್ರಕಾರ ಕೊರತೆ ಬಂದ ಮೇಲೆ ಮುಂದೆ ಸ್ಥಾಪಿಸಬೇಕಾಗುವ ಕಾಲೇಜು ವಗೈರೆ ವಿದ್ಯಾಲಯಗಳ ಗತಿಯೇನು? ಮೊದಲನೇ ತುತ್ತಿಗೆ ನಂಜು ಬಂದ ಮೇಲೆ ಮುಂದಿನ ಭೋಜನದ ಕರ್ತವ್ಯವೇನು? ಈ ಪ್ರಕಾರ ಸುಮ್ಮನೇ ಬಿಡದೆ ಇದಕ್ಕೆ ಬೇಕಾಗುವ ದ್ರವ್ಯದ ಸಹಾಯವನ್ನು ತೀವ್ರವಾಗಿ ಮಾಡುವುದು ನನಗೆ ಮುಖ್ಯವಾದದ್ದು. ಇದಕ್ಕೆ ದ್ರವ್ಯಸಂಗ್ರಹಿಸುವ ಉಪಾಯಗಳು ಅನೇಕವುಂಟು. ೧ ನಮ್ಮ ಬೆಳಗಾವ ಧಾರವಾಡ ವಿಜಾಪೂರ ಜಿಲ್ಲೆಗಳಲ್ಲಿ ಇರುವ ವೀರಶೈವ ಸಮಾಜದವರು ತಮ್ಮ ಮನೆಯಲ್ಲಿ ಜರುಗುವ ವಿವಾಹಾದಿ ಕಾರ್ಯಗಳಲ್ಲಿ ಪ್ರತಿಯೊಬ್ಬರೂ ಐದು ರೂಪಾಯಿಗಳಂತೆ ತೆಗೆದಿಟ್ಟು ಒಂದೇ ಒಂದು ವರ್ಷ ಕಳಿಸಿದರೆ ಮೇಲೆ ಕಂಡ ಹೈಸ್ಕೂಲಿಗೆ ಯಾವ ತೊಂದರೆ ಒದಗದೆ ನಿರಾಯಾಸವಾಗಿ ಸಾಗುವದು. ೨. ಮೂವತ್ತೈದು ಲಕ್ಷ ಜನಸಂಖ್ಯೆಯುಳ್ಳ ಈ ವೀರಶೈವ ಸಮಾಜದಲ್ಲಿ ಹದಿನೈದುಲಕ್ಷ ಹೆಂಗಸರಾಗಿ ಇಪ್ಪತ್ತುಲಕ್ಷ ಜನರು ಕೈಕೊಂಡಿರುವ ಸಿಗರೇಟು ಚುಟ್ಟಾ ಮೊದಲಾದ ದುರ್ವ್ಯಸನಕ್ಕಾಗಿ ವ್ಯಯಮಾಡುತ್ತಿರುವ ಒಂದೇ ಒಂದು ದಿವಸದ ಪ್ರತಿಯೊಬ್ಬನ ಎರಡಾಣೆ ವ್ಯಯವನ್ನು ತೆಗೆದಿಟ್ಟು ಈ ದುರ್ವ್ಯಸನವನ್ನು ಶಿವಪಾದಕ್ಕೆ ಅರ್ಪಿಸಿ ಆ ಹಣವನ್ನು ಸಂಘದ ಮೂಲಕ ವ್ಯವಸ್ಥೆ ಮಾಡಿದರೆ ಇದೊಂದು ನೂತನ ಮಹಾಶಿವರಾತ್ರಿಯ ವ್ರತಮಾಡಿದಂತಾಗುವದಲ್ಲದೆ ಇದರಂತೆ ಪ್ರತಿವರ್ಷ ಈ ವ್ರತವನ್ನು ಕೈಕೊಂಡರೆ ಇಂಥ ಅನೇಕ ಹೈಸ್ಕೂಲುಗಳೂ ಕಾಲೇಜುಗಳೂ ಗುರುಕುಲವಾಸಗಳೂ ಸ್ಥಾಪಿಸಲ್ಪಟ್ಟು ವಿದ್ಯೆಯಿಂದ ಮೇಲು ತರಗತಿಯನ್ನು ಹೊಂದಿ ಸಮಾಜವು ಸುಶಿಕ್ಷಿತೆಯ ಸಾಗರದಲ್ಲಿ ಲೋಲಾಡಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಮುಕ್ತಿಯನ್ನೂ ಹೊಂದುವದೆಂದು ಹೇಳಿ ನನ್ನ ಲೇಖನವನ್ನು ಸಮಾಪ್ತಿಸುತ್ತೇನೆ.

ಎಸ್. ಎಂ. ಸಿದ್ಧಾಂತಿಗಳು, ಹಿರೇಮಠ.

ಹುಬ್ಬಳ್ಳಿ.

ತಾ|| ೧೪-೧-೧೯೨೧ ನೇ ಇಸವಿ ದಿವಸ ಮುಂಜಾನೆ ೧೦ ಗಂಟೆಗೆ ಶ್ರೀಮನ್ನಿರಂಜನ ಬೀಳೂರ ಮಹಾಸ್ವಾಮಿಗಳು ಹುಬ್ಬಳ್ಳಿಯಲ್ಲಿರುವ ಓಲೀಮಠಕ್ಕೆ ದಯಮಾಡಿಸಿದ್ದರು. ಅಲ್ಲಿರುವ ಹುಬ್ಬಳ್ಳಿ ಲಿಂಗಾಯತ ವಿದ್ಯಾವರ್ಧಕಸಂಘದ ಯಾವತ್ತೂ ಕೆಲಸವನ್ನು ನೋಡಿ ಸಂತೋಷಭರಿತರಾಗಿ ಸದರಿ ಸಂಘದಿಂದ ಹೊರಡತಕ್ಕ ಬೋರ್ಡಿಂಗಿಗೆ ಹತ್ತುವಷ್ಟು ಭಾಂಡೆ ಸಾಮಾನಗಳನ್ನು ಕೊಡುತ್ತೇವೆಂದು ವಾಗ್ದಾನಮಾಡಿದರು.

ಸಿ. ಮ. ಹಿರೇಮಠ.

5-0-0 ಕ್ರಯದ ರೈಲ್ವೆ ಲೀವರ್ ವಾಚ್ ಇನಾಂ.



ಈ ಪೇನಾಗಳು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಒಂದೇ ಸಮವಾಗಿ ಬರೆಯುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತೋರಿಸಿರುವ ರೈಲ್ವೆಲೀವರ್‌ವಾಚ್ ಇನಾಮಾಗಿ ಕೊಡುವೆವು. ಗಡಿಯಾರವು ಅಮೆರಿಕಾ ದೇಶದಲ್ಲಿ ತಯಾರಾದದ್ದು. 21

ಕ್ರಯ ಗಡಿಯಾರ ಸಹಿತ ಪೇನಾ 1ಕ್ಕೆ ರೂ. 4-12-0

ವಿಳಾಸ—ಎಲ್ಜಿನ್ ವಾಚ್ ಕಂಪನಿ,
89 ನಾರಾಯಣಮೊದಲಿಬೀದಿ, ಮದರಾಸು.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೆರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

5 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0. 21

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
ಪಾರ್ಕ್‌ಟೌನ್ ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 11

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಷ್ಟುಳ್ಳವರು ಅರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಫಲಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 19

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಉಷ್ಣರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಕಳೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೈಧೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತವಹಿಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಫ್ರೆಂಚ್ ರೋಮನಾಶಿಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗಿಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
21 ಪಾರ್ಕ್‌ಟೌನ್ ಮದರಾಸ್.

೧೯೨೧ನೆಯ ಇಸವಿ ಫೆಬ್ರವರಿ ತಾ|| ೧೩ರಿಂದ ೧೯೨೧ನೆಯ ಫೆಬ್ರವರಿ ತಾ|| ೧೯ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಮಾಘಶುದ್ಧ ಪಂಚಮಿಯಿಂದ ಮಾಘಶುದ್ಧ ದ್ವಾದಶಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ಮಾಸ
13	ಭಾನು	ಪಂಚ	8-25	ರೇವ	2-1	2
14	ಸೋಮ	ಷಷ್ಠಿ	6-55	ಅಶ್ವಿ	2-16	3
15	[1] ಮಂಗಳ	ಸಪ್ತ	4-22	ಭರ	1-23	4
16	[2] ಬುಧ	ಅ-ನ	0-47 56-3	ರೋಹಿ	57-11	5
17	ಗುರು	ದಶ	51-32	ಮೃಗ	53-42	6
18	[3] ಶುಕ್ರ	ಏಕಾ	45-50	ಆರ್ದ್ರಾ	49-43	7
19	ಶನಿ	ದ್ವಾ	39-52	ಪುನ	45-34	8

(1) ರಥಸಪ್ತಮಿ, ಭೀಷ್ಮಾಷ್ಟಮಿ, ಸೂರ್ಯಚಂದ್ರವ್ರತಂ, ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿರಥಃ, ಹೇಮಗಿರಿ ರಂಗಸ್ವಾಮಿರಥಃ. (2) ಮಧ್ವನವಮಿ, ಮುಡುಕುದೊರೆ ಮಲ್ಲಿಕಾರ್ಜುನಸ್ವಾಮಿರಥಃ. (3) ಸರ್ವೇಷಾಂ ಭೈಷ್ಮ್ಯೈಕಾದಶಿ, ತಿಲಪದ್ಮವ್ರತಂ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರಮಧಿಗತರಾಜಮಂಡಲಹಿತ್ಯಾ । ಘನಪಥಕೃತಾವತಾರಾ ಪಕ್ಷ್ಮಜ ನತ್ಯತ್ಕವೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಫುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ।

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಫೆಬ್ರವರಿ ತಾರೀಖು ೨೦ ನೆಯ ಭಾನುವಾರ (ಸಂಚಿಕೆ ೮

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಂ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗು. ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
7 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕ್ಲೋಶೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕನಕೂಶ್ವರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಗಸಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಅಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಜಾರುಟೀಕೆಜಂತ್ರಿ	೦—೯—೦
ಪಂಚಾಂಗ	೦—೯—೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.

ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೋಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೂಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಮಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚರ್ಮದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು.

ಕ್ರಯ ಸರಪಣಿಸಹಿತ 7-0-0, ಸೀಮೆಚರ್ಮದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟು ವಾಚು 5-0-0, ಸರಪಣಿ ಸಹಿತ 6-0-0

47 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

47

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾ ದೇಶೀಯರ ಶೃಂಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
೩. ತಿರುಕಳ್ಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಕ್ಕಾ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 2

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ, ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0,
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

22 ಕ್ರಯ 1ಕ್ಕೆ 1—4—0

ವಜ್ರದ ಗುಂಡಿಗಳು.

ಈ ಗುಂಡಿಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಲ್ಪಟ್ಟಿದೆ. ನೋಡುವವರು ಸಾಚಾವಜ್ರದ ಗುಂಡಿಗಳೆಂದೆ ಹೇಳುವರು. ಈ ಗುಂಡಿಗಳು ಅಸ್ಟ್ರೇಲಿಯಾ ದೇಶದಲ್ಲಿ ತಯಾರಿಸಿದ್ದು. ಪಂಟು, ಕುಪ್ಪಸ, ಜಾಕೀಟು ಮುಂತಾದವುಗಳಿಗೆ ಪ್ರತಿಯೊಬ್ಬರೂ ಹಾಕಿಕೊಳ್ಳಬಹುದು.

ಕ್ರಯ 4 ಗುಂಡಿಗಳ ಸೆಟ್ 1ಕ್ಕೆ 1—4—0.

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದು ಹಚ್ಚುವುದಕ್ಕೆ ಬೆಂಕಿಕಡ್ಡಿ ಅಗತ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆಗೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವುದಿಲ್ಲ. ಬೀಡಿ ಸಿಗರೇಟು ಸೇದುವವರಿಗೂ ಪ್ರಯಾಣಿಕರಿಗೂ ಬೇಕಾದ್ದು.

ಕ್ರಯ 1—12—0.

ವಿಳಾಸ: —ಎಸ್. ಆರ್. ಕೃಷ್ಣ ಅಂಡ್‌ಕೋ
89, ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಫೆಬ್ರುವರಿ ತಾ|| ೨೦ನೆಯ ಭಾನುವಾರ.

ಭರತಖಂಡವು ಸ್ವರಾಜ್ಯವನ್ನು ಸಮೀಪಿಸುತ್ತಿರುವುದು ನಿಜವೆ?

ಮ|| ಗಾಂಧಿಯವರು ವರ್ಷದೊಳಗಾಗಿ ಭರತಖಂಡಕ್ಕೆ ಸ್ವರಾಜ್ಯಸಿದ್ಧಿಯಾಗುವುದೆಂದು ಹೇಳುತ್ತಾರೆ. ಆದರೆ ಅವರು ಹೇಳುವಂತೆ ಭರತಖಂಡವು ನಡೆಯಬೇಕಾಗಿದೆ. ಹೀಗೆ ಹೇಳಿ ೪ ತಿಂಗಳುಗಳು ಕಳೆಯುತ್ತ ಬಂದುವು. ಅವರನ್ನು ಮುಂಚೂಣಿಗೆ ನಿಲ್ಲಿಸಿದ ಮಹಾತ್ಮರೇ ಅವರ ಉಪದೇಶದಂತೆ ನಡೆದು ಸಹಾಯನಿರಾಕರಣ ಮಾಡಲು ಸಿದ್ಧರಾಗಿಲ್ಲ. ಆಂಗ್ಲೆಯಲ್ಲಿ ಸ್ವರಾಜ್ಯವನ್ನು ತೋರಿಸುವ ವಕೀಲರಲ್ಲಿ ಇದುವರೆಗೆ ೫೦-೧೦೦ ಮಂದಿಗಳು ಕೂಡ ತಮ್ಮ ವಕೀಲಿಯನ್ನು ಬಿಟ್ಟಿದ್ದಾರೋ ಇಲ್ಲವೊ!

ಸರ್ಕಾರದ ಉದ್ಯೋಗಗಳನ್ನು ಬಿಟ್ಟವರು ಸಾವಿರಕ್ಕೆ ಲಕ್ಷಕ್ಕೆ ಒಬ್ಬರು ಸಿಕ್ಕಲಾರರು. ಗೌರವ ಬಿರುದುಗಳನ್ನು ನೂರಾರು ಮಂದಿಗಳು ತ್ಯಜಿಸಿರಬಹುದು. ಸಾವಿರಾರು ಜನರು ಬಿರುದುಗಳನ್ನು ಧರಿಸಿಯೇ ಇದ್ದಾರೆ. ಹೊಸ ಬಿರುದುಗಳಿಗೆ ಲಕ್ಷಾಂತರ ಜನರು ಬಾಯ್ದೆರೆದುಕೊಂಡು ಕುಳಿತಿದ್ದಾರೆ. ಸ್ವದೇಶೀಯ ಸ್ವೀಕಾರ ಪರದೇಶೀಯ ಬಹಿಷ್ಕಾರವನ್ನು ಅಹರ್ನಿಶಿಯೂ ಉಪದೇಶಿಸುವ ಜವಾಲರ ವೃತ್ತಪತ್ರಿಕೆಗಳೇ ಪರದೇಶೀಯ ವರ್ತಕ ಸಂಘಗಳ ಪ್ರಸಿದ್ಧಿ ಪತ್ರಿಕೆಗಳನ್ನು ತಮ್ಮ ಪತ್ರಗಳಲ್ಲಿ ಪ್ರಕಟಿಸುವುದನ್ನು ಇನ್ನೂ ಬಿಡಲಾರವು. ಎಲ್ಲರದೂ ಪರೋಪದೇಶಪಾಂಡಿತ್ಯ ಮಾತ್ರ ವಿಜೃಂಭಿತವಾಗಿದೆ. ವಿದ್ಯಾವಂತರೂ ನಾಗರಕರೂ ಆದ ಜನರಿಗೆ ಮಾಡಿದ ಹಿತವಾದವೂ ಅವರನ್ನು ನಂಬಿ ತಾವು ಕೈಕೊಂಡ ಕೆಲಸದ ಪ್ರಗತಿಯೂ ಹೀಗಾದುದನ್ನು ನೋಡಿ ಮ|| ಗಾಂಧಿಯವರು ಒಳಗೊಳಗೇ ಎಷ್ಟೋ ನೊಂದುಗೊಳ್ಳದೆ ಇರಲಿಕ್ಕಿಲ್ಲ. ಅವರು ಇನ್ನೇನು ಮಾಡುವರು? ಈ ವಿದ್ಯಾಧಿಕರಾದ ಬಾಯ್ಮುಂದಾಳರ ಬರವಸೆಯು ತಗ್ಗಿದುದರಿಂದ ಅವರು ಹಳ್ಳಿಗಾಡ ಅವಿದ್ಯಾವಂತರ ಮತ್ತು ಅಪರಿಪಕ್ವಾಂತಃಕರಣರಾದ ವಿದ್ಯಾರ್ಥಿಗಳ ಮೇಲೆ ಕೈಯೂರಿ ಕೆಲಸಮಾಡಿನೋಡೋಣವೆಂದು ಈಗ ಪೇಚಾಡುತ್ತಿದ್ದಾರೆ. ಅದರ ಹೊಸಬಿರುಸು ಎಷ್ಟು ದಿನ ಹೇಗೆ ನಡೆಯುವುದೋ ಸೇಕವು ಎಷ್ಟು ದಿನವಿರುವುದೋ? ಸ್ವಲ್ಪಕಾಲದಲ್ಲೇ ಗೊತ್ತಾಗುವುದು.

ಈ ವಿದ್ಯಮಾನಗಳು ಹೀಗಿರುವಲ್ಲಿ ಸ್ವರಾಜ್ಯಪ್ರಾಪ್ತಿಗೆ ಅವಶ್ಯಕವಾದ ಐಕಮತ್ಯವಾದರೋ ದೇಶೀಯರಲ್ಲಿ ಹಿಂದಿಗಿಂತ ಮತ್ತಷ್ಟು ಹ್ರಾಸವಾಗುತ್ತಿರುವುದು. ಪರಸ್ಪರ ಜಾತಿಮತ ಮತ್ಸರಗಳು ಪರಾಕಾಷ್ಠ ದಶೆಯನ್ನು ಹೊಂದುತ್ತಿರುವುವು. ಒಬ್ಬರನ್ನೊಬ್ಬರು ವಂಚಿಸಿ ತಾವು ಬದುಕಿ ಪರರನ್ನು ಕೆಡಿಸಬೇಕೆಂಬ ಭಾವಗಳು ಬಲಿಯುತ್ತಿರುವುವು. ದುರಭಿಮಾನಗಳೂ ದುರಭಿಸಂಧಿಗಳೂ ದುರ್ನೀತಿಗಳೂ ಪ್ರಬಲಿಸುತ್ತಿರುವುವು. ದೇಶಾಭಿಮಾನ ಸೋದರವಾತ್ಸಲ್ಯವೆಂಬಿವುಗಳು ವಾಕ್ಮಾತ್ರದಲ್ಲೂ ಲೇಖನ ಮಾತ್ರದಲ್ಲೂ ಸುಂದರವಾಗಿರುವುವು. ಹೀಗಿರುವಾಗ ಸ್ವರಾಜ್ಯವು ಭರತಖಂಡಕ್ಕೆ ಸಮೀಪಿಸುತ್ತಿರುವುದೆಂದು ಹೇಳಿದರೆ ಅದು ತಿರಿಕನ ಸ್ವಪ್ನದಂತೆ ಭಾವಿಸಲ್ಪಡಬೇಕಾಗಿದೆಯೇ ಹೊರತು ಅನ್ಯಥಾ ಇಲ್ಲ. ಸದ್ಯಃಸ್ಥಿತಿಯಲ್ಲಿ ಪರೀಕ್ಷಾರ್ಥವಾಗಿ ಇಂಗ್ಲೀಷರು ಮೂರೂಮುಕ್ಕಾಲುಗಳಿಗೆ ಈ ದೇಶವನ್ನು ಬಿಟ್ಟು ಹೊರಟುಹೋದರೂ ಈ ದೇಶದಲ್ಲಿ ಒಬ್ಬನ ತಲೆ ಒಬ್ಬನ ಕೈಗೆ ಬರುವುದರಲ್ಲಿ ಸಂಶಯವೇನೂ ಇಲ್ಲ. ಅಂಥ ಸಮಯವನ್ನು ಭಗವಂತನು ಎಂದಿಗೂ ಒದಗಿಸದಿರಲಿ.

ಶ್ರೀ ಸಾರ್ವಭೌಮರ ಸಂದೇಶ.

ಸ್ಟೇಟ್ ಕೌನ್ಸಿಲನ್ನೂ ಸಾಮ್ರಾಜ್ಯಶಾಸನ ಸಭೆಯನ್ನೂ ಸಹ ಶ್ರೀ ಕನ್ನಾಟ್ ಪ್ರಭುಗಳು ಕಳೆದ ತಾ|| ೯ನೆ ಬುಧವಾರ ದಿಲ್ಲಿಪಟ್ಟಣದಲ್ಲಿ ಆರಂಭಿಸಿದರು. ಆ ಸಮಯದಲ್ಲಿ ಅವರು ಸಾರ್ವಭೌಮರ ಸಂದೇಶವನ್ನು ಓದಿ ಸಭಿಕರಿಗೆ ಶ್ರುತಪಡಿಸಿದರು. ಅದರ ಮುಖ್ಯಾಭಿಪ್ರಾಯವು ಹೀಗಿದ್ದಿತು.—

"ಭರತಖಂಡದಲ್ಲಿ ನೂತನ ರಾಜಕೀಯ ಸಂವಿಧಾನಗಳನ್ನೇರ್ಪಡಿಸಲು ಅನುಮತಿಯನ್ನಿತ್ತು ೧ ವರ್ಷವಾಯಿತು. ಅದಕ್ಕೆ ಬೇಕಾದ ಸನ್ನಾಹಗಳೆಲ್ಲಾ ಈಗ ಪರಿಪೂರ್ಣವಾಗಿವೆ. ಈ ಶುಭಸಮಯದಲ್ಲಿ ಸಾಮ್ರಾಜ್ಯ ರಾಷ್ಟ್ರೀಯ ಶಾಸನ ಸಭಾ ಸಭಿಕರುಗಳನ್ನೆಲ್ಲಾ ನಾನು ಅಭಿನಂದಿಸುತ್ತೇನೆ. ನನ್ನ ಸಾಮ್ರಾಜ್ಯದಲ್ಲಿರುವ ಇತರ ದೇಶಗಳು ಅನುಭವಿಸುತ್ತಿರುವ ಸ್ವರಾಜ್ಯವು ಭರತಖಂಡಕ್ಕೂ ಕೂಡ ಲಭಿಸಬೇಕೆಂದು ಕೆಲ ವರ್ಷಗಳಿಂದಲೂ ಕೆಲ ಪುರುಷಾಂತರಗಳಿಂದಲೂ ಭಾರತೀಯರು ಶುಭಸ್ವಪ್ನವನ್ನು ಕಾಣುತ್ತಿದ್ದಾರೆ. ಪ್ರಾರಂಭದಲ್ಲಿ ಪ್ರಜಾಪ್ರತಿನಿಧಿಗಳಾಗಿ ನಿಯೋಜಿಸಲ್ಪಟ್ಟಿರುವ ನೀವುಗಳು, ಇಂಥ ಬದಲಾವಣೆಯನ್ನು ಮಾಡುವುದು ಅಸಮಂಜಸವೇನೂ ಅಲ್ಲವೆಂದು ನಿಮ್ಮ ಉಚಿತಜ್ಞತೆಯಿಂದಲೂ ಕಾರ್ಯನಿರ್ವಹಣ ಸಾಮರ್ಥ್ಯದಿಂದಲೂ ಪ್ರಸಂಗಕ್ಕೆ ವ್ಯಕ್ತಪಡಿಸಿಕೊಡಬೇಕಾದ ಬಾಧ್ಯತೆಯು ನಿಮ್ಮ ಮೇಲಿದೆ. ನಿಮ್ಮ ದೇಶದಲ್ಲಿ ಇನ್ನೂ ರಾಜಕೀಯ ವಿಷಯದಲ್ಲಿ ಪ್ರವೇಶಿಸಲು ಅರ್ಹತೆಯನ್ನು ಪಡೆಯದಿರುವವರು ಲಕ್ಷೋಪಲಕ್ಷ ಸಂಖ್ಯಾಕರಾಗಿದ್ದಾರೆ. ಅವರನ್ನು ಅಭಿವೃದ್ಧಿಗೊಳಿಸುವ ಭಾರವೂ ಅವರ ಮೇಲ್ಮೆಯನ್ನು ನೋಡಿಕೊಳ್ಳುವ ಭಾರವೂ ನಿಮ್ಮ ತಲೆಯಮೇಲೆಯೇ ಬಿದ್ದಿದೆ. ಮಾತೃಭೂಮಿಯ ವಿಷಯದಲ್ಲೂ ಸಾಮ್ರಾಜ್ಯದ ವಿಷಯದಲ್ಲೂ ನೀವು ಮಾಡಬೇಕಾದ ವಿಧಿಯನ್ನು ಅತಿಶಯವಾದ ಸಾನುಭೂತಿಯಿಂದ ನೆರವೇರಿಸಲು ದೃಢನಿಶ್ಚಯವಾಗಿರುವಿರೆಂದು ನಂಬಿ ನಾನು ನಿಮ್ಮ ಕಾರ್ಯನಿರ್ವಾಹ ಕ್ರಮವನ್ನು ಪರಿಕಿಸುತ್ತಿರುವೆನು."

ಈ ರಾಜಸಂದೇಶದಲ್ಲಿ ಅಧಿನಿವೇಶಗಳು ಹೊಂದಿರುವಂಥ ಸ್ವರಾಜ್ಯವನ್ನು ಭರತಖಂಡವು ಹೊಂದಬೇಕೆಂದು ಇಟ್ಟುಕೊಂಡಿರುವ ಅಭಿಲಾಷೆಯನ್ನು ಸಾರ್ವಭೌಮರು ಉಚಿತವಾದುದೆಂದು ಸಮ್ಮತಿಸಿರುತ್ತಾರಲ್ಲದೆ, ಅಂಥ ಸ್ವರಾಜ್ಯವನ್ನು ಪಡೆದುಕೊಳ್ಳುವುದಕ್ಕೆ ಭರತಖಂಡಕ್ಕೆ ಸಾಧ್ಯವಾಗುವುದೆಂದೂ, ಪ್ರಜಾಸಾಮಾನ್ಯದಲ್ಲೂ ವಿದ್ಯಾವಿವೇಕಾದಿಗಳ ವಿಕಾಸವುಂಟಾಗಿ ದೇಶವನ್ನೆಲ್ಲಾ ಸ್ವರಾಜ್ಯನಿರ್ವಾಹಕ್ಕೆ ಅರ್ಹವಾಗುವಂತೆ ಮಾಡಲು ವಿದ್ಯಾಧಿಕರೂ ಪ್ರಜಾಪ್ರಮುಖರೂ ಆದವರುಗಳು ಪಾಟುಪಡಬೇಕೆಂದೂ ಅಪ್ಪಣೆ ಕೊಟ್ಟಿದ್ದಾರೆ. ಇದುವರೆಗೆ ಕೊಡಲ್ಪಟ್ಟಿದ್ದ ಯಾವ ರಾಜಸಂದೇಶದಲ್ಲೂ ಭರತಖಂಡಕ್ಕೆ ಸ್ವರಾಜ್ಯದಾನವೆಂಬ ಶಬ್ದವೇ ಉಪಯೋಗಿಸಲ್ಪಟ್ಟಿರಲಿಲ್ಲ. ಈಗಣ ಸಾರ್ವಭೌಮರೇ ಅದನ್ನು ಸುಸ್ಪಷ್ಟವಾಗಿ ಅಪ್ಪಣೆ ಕೊಡಿಸಿರುವುದು ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡುವಲ್ಲಿ ಆಂಗ್ಲಪ್ರಭುತ್ವಕ್ಕೆ ಸಂಪೂರ್ಣವಾದ ಸಾನುಭೂತಿಯುಂಟೆಂಬುದನ್ನೂ ಸಿದ್ಧಪಡಿಸಿದೆ. ಹೀಗಿರುವಾಗ ತಮ್ಮ ಕಾರ್ಯದಕ್ಷತೆ, ರಾಜಭಕ್ತಿ, ಸತ್ಯವರ್ತನೆಗಳಿಂದ ನಮ್ಮ ಸ್ವರಾಜ್ಯಲಾಭಾರ್ಹತೆಯನ್ನು ನಾವು ವ್ಯಕ್ತಪಡಿಸಿಕೊಳ್ಳುವುದನ್ನು ಬಿಟ್ಟು, ನಮಗೆ ಸ್ವರಾಜ್ಯ ಕೊಡದಿದ್ದರೆ ನಿಮ್ಮ ಸಹವಾಸವೇ ನಮಗೆ ಬೇಡವೆಂದುಗಂಡಾಗುಂಡಿ ಮಾಡುವುದರಲ್ಲಿ ಘನತೆಯೇನುಂಟು? ಅದರಿಂದ ಹಿತವೇನು?

ಸಹಾಯನಿರಾಕರಣವಾದಿಗಳಿಗೆ ಒಂದು ಒಳ್ಳೆ ಸಮಯ.

ಸಹಾಯನಿರಾಕರಣವಾದಿಗಳು ಏನೋ ಸ್ವಪ್ನ ಕಂಡು ಏನೋ ಫಲವಾಗುವುದೆಂದು ನಂಬಿ ದೇಶವೆಲ್ಲಾ ಇದಕ್ಕೆ ಮನಸೂಲುವುದೆಂದು ಭಾವಿಸಿ ಸಹಾಯನಿರಾಕರಣಕ್ಕೆ ತೊಡಗಿದರು. ದಿನದಿನಕ್ಕೆ ಅವರ ಹೃದಯದಿಂದ ನಿಟ್ಟುಸುರನ್ನು ಹೊರಡಿಸುವಂಥ ಸ್ಥಿತಿಯು ಗೋಚರಿಸುತ್ತಿದೆ. ಬಾಯಲ್ಲಿ ಮಾತ್ರ ಬಲವಾಗಿ ಕೂಗುತ್ತ ಅಂತಸ್ತಾಪವನ್ನು ಕಾಣಗೊಳಿಸಿಕೊಳ್ಳದೆ ಮರೆಮಾಡಿಕೊಂಡಿದ್ದಾರೆ. ಇಂಥವರುಗಳಿಗೆಲ್ಲಾ ಸುಲಭವಾಗಿ ಪಾರಾಗುವ ಸಂಧಿಯು ಕನ್ನಾಟ್ ಪ್ರಭುಗಳಿಂದ ದೊರೆದಿದ್ದಿತು. ಹೇಗೆಂದರೆ—ದಿಲ್ಲಿಯಲ್ಲಿ ಸಾಮ್ರಾಜ್ಯಶಾಸನ ಸಭೆಯನ್ನೂ ಸ್ಟೇಟ್ ಕೌನ್ಸಿಲ್ಲನ್ನೂ ಅವರು ಆರಂಭಿಸುವಾಗ್ಗೆ ಸಮ್ರಾಟ್ ಸಂದೇಶವನ್ನು ಓದಿ ಮುಗಿಸಿದ ಬಳಿಕ ಮಾಡಿದ ತಮ್ಮ ಉಪನ್ಯಾಸದಲ್ಲಿ ದೇಶದ ಸದ್ಯಃಸ್ಥಿತಿಗಳನ್ನು ಕುರಿತು ಕೆಲ ಮಾತುಗಳನ್ನು ಆಡಿದರು. ಆಗ್ಗೆ ಪಂಜಾಬಿನ ದುರಂತಗಳ ವಿಷಯವನ್ನು ಎತ್ತಿಕೊಂಡು—"ನಾನು ಈಸಲ ಈ ದೇಶಕ್ಕೆ ಬಂದಾರಭ್ಯ ಎತ್ತನೋಡಿದರೂ ಪ್ರಿಯಮಿತ್ರರಾಗಿರತಕ್ಕವರು ಪ್ರಬಲ ಶತ್ರುಗಳಂತೆ ಇರುವುದನ್ನೇ ನೋಡುತ್ತಿದ್ದೇನೆ. ಅಮೃತಸರದಲ್ಲಿ ನಡೆದ ಕೃತ್ಯದ ಛಾಯೆಯು ಭಾರತಮಾತೆಯ ನಿರ್ಮಲ ಮುಖಮಂಡಲದ ಮೇಲೆ ಗಾಢವಾಗಿ ವ್ಯಾಪಿಸಿದಂತೆ ಕಾಣುತ್ತದೆ. ಪಂಜಾಬಿನಲ್ಲಿ ನಡೆದ ದಾರುಣಕೃತ್ಯಗಳ ವಿಷಯವಾಗಿ ಸಾರ್ವಭೌಮರು ಅತ್ಯಂತ ಚಿಂತೆಪಟ್ಟರು. ಆ ಕೃತ್ಯಗಳನ್ನು ಕುರಿತು ನನಗಿಂತಲೂ ವಿಚಾರಪಡತಕ್ಕವರು ಮತ್ತೊಬ್ಬರಿರಲಾರರು. ನನ್ನ ಪ್ರೀತ್ಯಾಸ್ಪದವಾದ ಈ ದೇಶಕ್ಕೆ ನನ್ನ ಆಗಮನವು ಇದೇ ಕಡೆಸಾರಿಯೆಂದು ತಿಳಿಯುತ್ತೇನೆ. ಈ ಮುಪ್ಪಿನ ದಸೆಯಲ್ಲಿ ದೇಶದ ವೈಷಮ್ಯವನ್ನೆಲ್ಲಾ ಅಣಗಿಸಿ ಮೈತ್ರಿಯನ್ನು ನೆಲೆಗೊಳಿಸುವುದಕ್ಕಿಂತಲೂ ಬೇರೆ ವಾಂಛಿತಾರ್ಥವೇನೂ ನನಗಿಲ್ಲ. ಈ ಪ್ರಸಿದ್ಧನಗರದ ಈ ಮಹಾಸಭಾ ಪ್ರಾರಂಭೋತ್ಸವ ಶುಭಸಮಯದಲ್ಲಿ ನಾನು ಮನಃಪೂರ್ವಕವಾಗಿ ನಿಮಗೆ ಒಂದು ವಿಷಯವನ್ನು ಬಿನ್ನಯಿಸಿಕೊಳ್ಳುತ್ತೇನೆ, ಅದಕ್ಕೆ ನಿರ್ದಯೆಯಿಂದಲೂ ವಿಮರ್ಶನಾದೃಷ್ಟಿಯಿಂದಲೂ ನೀವು ವ್ಯಾಖ್ಯಾನ ಮಾಡಬೇಡಿರಿ. ಅಭಿಪ್ರಾಯಭೇದಗಳು ಹುಟ್ಟುವುದಕ್ಕೆ ಎರಡು ಪಕ್ಷಗಳವರಲ್ಲೂ ಲೋಪಗಳಿರುವುದೇ ಕಾರಣವಾಗಿರುತ್ತದೆ. ಭರತಖಂಡಕ್ಕೆ ಚಿರಕಾಲಿಕ ಮಿತ್ರನಾಗಿರುವ ನನ್ನ ಪ್ರಾರ್ಥನೆಯನ್ನು ನೀವು ಕೇಳಿರಿ. ಭಾರತೀಯರೂ ಆಂಗ್ಲಜನರೂ ಸಹ ಸತ್ತುಹೋದ ವಿಷಯದೊಡನೆ ಹಿಂದೆ ಜರುಗಿಹೋದ ಲೋಪವನ್ನೂ ಅಭಿಪ್ರಾಯಭೇದಗಳನ್ನೂ ಸಹ ಒಟ್ಟುಗೂಡಿಸಿ ಹೂತುಬಿಡಿ. ಕ್ಷಮಿಸಬೇಕಾದ ಸ್ಥಲದಲ್ಲಿ ಕ್ಷಮಿಸಿ, ಇಂದಿನಿಂದ ಮುಂದೆ ಲಭ್ಯವಾಗಬೇಕಾದ ಇಷ್ಟಾರ್ಥಗಳನ್ನು ಸಾಧಿಸಿಕೊಳ್ಳುವಲ್ಲಿ ಪರಸ್ಪರ ಕಲೆತು ಕೈಜೋಡಿಸಿ ಕೆಲಸಮಾಡಲು ಉಜ್ಜುಗಿಸಿರಿ" ಎಂದು ಅಪ್ಪಣೆ ಕೊಡಿಸಿದರು.

ಈ ಅಮೃತಮಯವಾದ ಸಾತ್ವಿಕ ವಾಕ್ಯಗಳು ಆ ಜಗದ್ವಿಖ್ಯಾತ ವಿಕ್ಟೋರಿಯಾ ಮಹಾರಾಜ್ಞಿಯವರ ಗರ್ಭಮುಕ್ತಾಫಲದ ಘನತೆಗೂ, ಭರತಖಂಡದಲ್ಲಿ ಚಿರಕಾಲವಾಸ ಮಾಡಿ ಇಲ್ಲಿಯ ಜನರ ಗುಣಾಂಶಗಳ ಪೂರ್ಣ ಪರಿಚಿತಿಯೂ, ದೀರ್ಘಕಾಲಲೋಕಾನುಭವವೂ ಉಳ್ಳ ಮಹನೀಯನ ವಿಚಾರಶಕ್ತಿಗೂ ಸದಯಾಂತಃಕರಣಕ್ಕೂ ಅನುಗುಣವಾಗಿಯೇ ಇರುವುದು.

ಮೇಲೆ ಕಂಡ ಸಾರ್ವಭೌಮ ಸಂದೇಶದಲ್ಲಿ ಸುಸ್ಪಷ್ಟವಾಗಿರುವ ಸ್ವರಾಜ್ಯಪ್ರದಾನದ ಅಭಯ ವಚನವನ್ನೂ ಈ ಕನ್ನಾಟ್ ಪ್ರಭುಗಳ ಉಪನ್ಯಾಸದಲ್ಲಿ ಅಮೃತಸರದ ಪಥಯ ವಿಷಯವಾಗಿ ತೋರಿಸಿದ ಪಶ್ಚಾತ್ತಾಪ ವಚನವನ್ನೂ ಕ್ಷಮಾಪಣೆಯ ಬಿನ್ನಪವನ್ನೂ ಸಹ ಕೇಳಿದ ಬಳಿಕವಾದರೂ ಅಸಹಾಯನಿರಾಕರಣವಾದಿಗಳು ಇವುಗಳ ಮೇಲೆ ತೂಕವಿಟ್ಟು ತಮ್ಮ ಮೊಂಡತನವನ್ನು ನಿಲ್ಲಿಸಿಬಿಡುವುದಕ್ಕೆ ಅಂದಿನಿಂದ ತೊಡಗಿದ್ದರೆ ಅದೊಂದು ಗೌರವವೇ ಆಗುತ್ತಿದ್ದಿತು. ಮತ್ತು ಬ್ಯೂರಾಕ್ರಸಿಯ ವಿಷಯದಲ್ಲಿ ಭಾರತೀಯರಿಗೆ ಅಸಮಾಧಾನವಿದ್ದರೂ ರಾಜಕುಟುಂಬದವರ ವಿಷಯದಲ್ಲಿ ಗೌರವಭಕ್ತಿ ಪ್ರೀತಿವಿಶ್ವಾಸಗಳು ಎಂದಿನಂತೆಯೇ ಜಾಗೃತವಾಗಿರುವುವೆಂದು ನಿದರ್ಶನಪಡಿಸಿಕೊಟ್ಟು, ಈ ಮೂಲಕ ಸಾರ್ವಭೌಮರ ಮನಸ್ಸನ್ನೂ ಸ್ವತಃ ಕನ್ನಾಟ್ ಪ್ರಭುಗಳ ಹೃದಯವನ್ನೂ ಸೂರೆಗೊಳ್ಳಬಹುದಾಗಿದ್ದಿತು. ಅಲ್ಲದೆ ತಾವುಗಳು ಗಾಳಿಗೆ ಗುದ್ದಿ ಮೈನೋಯಿಸಿಕೊಳ್ಳುತ್ತಿರುವ ಕೆಲಸದ ಪಾಡಾದರೂ ಅವರಿಗೆ ತಪ್ಪಿ ನಿಶ್ಚಿಂತೆಯಾಗುತ್ತಿದ್ದಿತು. ಇಂಥ ಸುಸಂಧಿಯನ್ನೂ ಅವರುಗಳು ಕಳೆದುಕೊಂಡರು. ಮುಂದೇನು ಸಿದ್ಧವಾಗಿರುವುದೋ ಅವರ ಭಾಗದ ದೈವಕ್ಕೇ ವೇದ್ಯ.

ಒಳದೇಶದ ವೃತ್ತಾಂತಗಳು.

ಬೊಂಬಾಯಿಗೆ ಹೋಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಮೊನ್ನೆಯದಿನ ಬೆಂಗಳೂರಿಗೆ ಬಂದರು.

ದೇವನಹಳ್ಳಿ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿ ಮ|| ಯಲೆ ಕೃಷ್ಣಪ್ಪನವರು ನಿಯಮಿಸಲ್ಪಟ್ಟಿರುತ್ತಾರೆ.

ಮುನಸೀಫರಾದ ಮ|| ಬಿ. ರಂಗಯ್ಯಂಗಾರರು ೬ ನೆಯ ತರಗತಿಯಿಂದ ೨ ನೆಯ ತರಗತಿಗೆ ಹೆಚ್ಚಿಸಲ್ಪಟ್ಟಿರುವರು.

ಮೈಸೂರು ನಿಯಮನಿರ್ಮಾಣ ಸಭೆಯು ಬರುವ ಏಪ್ರಿಲ್ ತಾ|| ೨೯ ರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡಿಯುವುದು.

ಶ್ರೀಮನ್ ಮಹಾರಾಜರವರ ಸವಾರಿಯು ಕಳೆದ ಬುಧವಾರ ಕಾರಾಪುರಕ್ಕೆ ಚಿತ್ತೈಸಿತು ಮತ್ತು ಇಂದು ನಾಳೆ ಹಿಂದಿರುಗುವುದಾಗಿ ವರ್ತಮಾನವಿದೆ.

ಶ್ರೀಮದ್ಯುವರಾಜರವರ ಅ|| ಪ್ರೈವೆಟ್ ಸೆಕ್ರೆಟರಿಯವರಾದ ಮ|| ಎಂ. ಎ. ಆಳಸಿಂಗ್ರಾಚಾರರಿಗೆ ೬ ತಿಂಗಳ ಪ್ರಿವಿಲೆಜ್ ರಜವು ಅವರುಪಯೋಗಿಸಿಕೊಳ್ಳುವಂದಿನಿಂದ ಕೊಡಲ್ಪಟ್ಟಿದೆ.

ಸೀನಿಯರ್ ಸರ್ಜನರಾಗಿದ್ದ ಡಾ|| ಆರ್ಮುಗಂ ಮೊದಲಿಯಾರರು ಜ್ವರರೋಗಗ್ರಸ್ತರಾಗಿರುವರೆಂದು ತಿಳುಹಲು ವಿಷಾದವಾಗುತ್ತದೆ ಮತ್ತು ಕೂಡಲೆ ಆರೋಗ್ಯವಾಗಲೆಂದು ಹಾರೈಸುತ್ತೇವೆ.

ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ರಾ|| ಬಿ. ಬಸವಾರಾಧ್ಯರಿಗೆ ಕೊಂಚ ದೇಹಾಲಸ್ಯವಾಗಿದ್ದು ಈಗ ಗುಣವಾಗಿರುವುದಾಗಿಯೂ, ಇನ್ನೂ ಉದ್ಯೋಗದ ಮೇಲೆ ಬರುತ್ತಿಲ್ಲವೆಂದೂ ತಿಳಿಯಬರುತ್ತದೆ.

ದಿವಾನರು ಕಡೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸುವ ಕ್ರಮ—ತಾ|| ೧೫ ಮತ್ತು ೧೬ ರಲ್ಲಿ ಚಿಕ್ಕಮಗಳೂರಲ್ಲಿದ್ದು ತಾ|| ೧೭ ಚಿಕ್ಕಮಗಳೂರಿಂದ ಮೂಡಗೆರೆ, ತಾ|| ೧೮ ರಲ್ಲಿ ಮೂಡಗೆರೆಯಿಂದ ಕಳಸ, ತಾ|| ೧೯ ರಲ್ಲಿ ಕಳಸದಲ್ಲಿ ನಿಂತು ತಾ|| ೨೦ ರಲ್ಲಿ ಕಳಸದಿಂದ ಬಾಳೆಹೊನ್ನೂರು, ತಾ|| ೨೧ ರಲ್ಲಿ ಬಾಳೆಹೊನ್ನೂರಿಂದ ತಡಸದ ಮೇಲೆ ಹೆಬ್ಬೆಗೆ ಬಂದು ತಾ|| ೨೨ ರಲ್ಲಿ ಹೆಬ್ಬೆಯಲ್ಲಿದ್ದು ತಾ|| ೨೩ ರಲ್ಲಿ ಅಲ್ಲಿಂದ ಹೊರಟು ಚಿಕ್ಕಮಗಳೂರು ಮಾರ್ಗವಾಗಿ ಅತ್ತಿಗುಂಡಿ, ತಾ|| ೨೪ ರಲ್ಲಿ ಅತ್ತಿಗುಂಡಿಯಿಂದ ಕಲ್ಲಹತ್ತಿ ತಾ|| ೨೫ ರಲ್ಲಿ ಕಲ್ಲಹತ್ತಿಯಲ್ಲಿ ನಿಂತು ಅಲ್ಲಿಂದ ತಾ|| ೨೬ ರಲ್ಲಿ ಕೆಮ್ಮಣ್ಣುಗುಂಡಿಗೆ ಬಂದು ಅಲ್ಲಿಂದ ಕಲ್ಲಹತ್ತಿಗೆ ಹಿಂದಿರುಗಿ ಚಿತ್ತೈಸಿ ತಾ|| ೨೭ ರಲ್ಲಿ ಕಲ್ಲಹತ್ತಿಯಿಂದ ತರೀಕೆರೆ, ತಾ|| ೨೮ ರಲ್ಲಿ ತರೀಕೆರೆಯಿಂದ ಭದ್ರಾವತಿಗೆ ಬಂದು ಅಲ್ಲಿ ಕಬ್ಬಿನದ ಕಾರ್ಯಾಲಯದೇರ್ಪಾಟನ್ನು ಪರಾಂಬರಿಸಿಕೊಂಡು ಮರಳಿ ತರೀಕೆರೆಗೆ ಚಿತ್ತೈಸಿ ಮಾರ್ಚಿ ತಾ|| ೧ ರಲ್ಲಿ ತರೀಕೆರೆಯಿಂದ ಬೀರೂರಿಗೆ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡಿ ಬೀರೂರಿನಲ್ಲಿ ರೈಲು ಬಂಡಿಯನ್ನು ಹತ್ತಿ ಬೆಂಗಳೂರನ್ನು ತಲುಪುವವರಾಗಿರುವರು.

ಕೆಲ ತಿಂಗಳುಗಳಿಂದ ಅಸ್ವಸ್ಥರಾಗಿದ್ದ ಡಾಕ್ಟರ್ ಸಿ. ಎ. ನಂಜಪ್ಪನವರು ಎಷ್ಟು ಚಿಕಿತ್ಸೆಯನ್ನು ಮಾಡಿಸಿಕೊಂಡಾಗ್ಯೂ ಗುಣವನ್ನು ಹೊಂದದೆ ಮೊನ್ನೆಯ ದಿನ ಸಾಯಂಕಾಲ ವಿಧಿವಶರಾದರೆಂದು ತಿಳುಹಲು ಅತ್ಯಂತ ವ್ಯಸನವಾಗುತ್ತದೆ. ಇವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಮತ್ತು ಮೈಸೂರು ಕೃಷ್ಣರಾಜ ಆಸ್ಪತ್ರೆಗಳ ಮೆಡಿಕಲ್ ಆಫೀಸರಾಗಿದ್ದು ವಿಶೇಷ ಜನಾನುರಾಗವನ್ನೂ ಪ್ರಭುಗಳ ಮೆಚ್ಚಿಕೆಯನ್ನೂ ಸಂಪಾದಿಸಿಕೊಂಡು ಅಫಿಷಿಯೇಟಿಂಗ್ ಸೀನಿಯರ್ ಸರ್ಜನ್ನರಾಗಿ ನೇಮಿಸಲ್ಪಟ್ಟು ಕೆಲಕಾಲ ಮಾತ್ರ ಉದ್ಯೋಗದಲ್ಲಿದ್ದರು. ಅಷ್ಟರಲ್ಲಿ ಮೃತ್ಯುವು ರೋಗಗ್ರಸ್ತರನ್ನಾಗಿ ಮಾಡಿ ಕಡೆಗೂ ತನ್ನ ವಶಮಾಡಿಕೊಂಡಿತು. ಇವರು ಸೀಮೆಗೆ ಹೋಗಿದ್ದ ವೇಳೆಯಲ್ಲಿ ಇವರ ಕುಮಾರನು ಮಧ್ಯಮಾರ್ಗದಲ್ಲೇ ಮೃತ್ಯುಪಾಲಾಗಿ ನಿರಂತರವಾದ ಪುತ್ರಶೋಕಕ್ಕೆ ಗುರಿಯಾಗಿದ್ದರು. ಇವರಿಗೆ ಪ್ರಾಯಶಃ ೫೦ ವರ್ಷ ವಯಸ್ಸಾಗಿದ್ದಿತು. ಇವರ ಪತ್ನಿಯವರ ದುರದೃಷ್ಟಕ್ಕಾಗಿ ಎಷ್ಟು ಚಿಂತಿಸಿದರೂ ತೀರದುದಾಗಿದೆ. ವೈದ್ಯದಲ್ಲಿ ಸಮರ್ಥರೂ, ಉದಾರಮನಸ್ಕರೂ, ದಯಾಪರರೂ ಆದ ಇಂತಹ ಅಧಿಕಾರಿಗಳನ್ನು ಕಳೆದುಕೊಂಡುದಕ್ಕಾಗಿ ಮೈಸೂರು ದೇಶೀಯರೆಲ್ಲರೂ ಬಹಳವಾಗಿ ಚಿಂತಿಸುತ್ತಾರೆ. ಮೃತರ ಶವವು ಖನನಕ್ಕಾಗಿ ಮಡಕೆರೆಗೆ ಮೋಟಾರುಬಂಡಿಯಲ್ಲಿ ನೆನ್ನೆದಿನ ಬೆಂಗಳೂರಿಂದ ಸಾಗಿಸಲ್ಪಟ್ಟಿತು.

ಭರತಖಂಡದ ವೃತ್ತಾಂತಗಳು.

ಖೈರ್ಪೂರ್ ಸಂಸ್ಥಾನಪತಿಗಳಾದ ಸರ್ ಇಮಾಂಭಕ್ಷ್ ಖಾನ್ ತಾಲ್ಪೂರ್ ಜಿ. ಸಿ. ಐ. ಇ. ಯವರು ಸಿಂಧುದೇಶದಲ್ಲಿರುವ ತಮ್ಮ ಸಂಸ್ಥಾನದಲ್ಲಿ ತಮ್ಮ ೭೦ನೆ ವಯಸ್ಸಿನಲ್ಲಿ ವಿಧಿವಶರಾದರು.

೧೯೨೦ನೆ ವರ್ಷದ ಆಗಸ್ಟ್ ತಿಂಗಳವರೆಗೆ ಭರತಖಂಡದಲ್ಲಿ ಬಿರುದುಗಳನ್ನು ಹೊಂದಿದ್ದವರ ಸಂಖ್ಯೆ ೫೦೦೦, ಅವರಲ್ಲಿ ೨೧ ಮಂದಿಗಳು ಮಾತ್ರ ಬಿರುದನ್ನು ಪರಿತ್ಯಜಿಸಿದರೆಂದು ಸಾಮ್ರಾಜ್ಯಶಾಸನ ಸಭೆಯಲ್ಲಿ ಸರ್ಕಾರದ ಪಕ್ಷದಿಂದ ಉತ್ತರ ಕೊಡಲ್ಪಟ್ಟಿತು.

ಭರತಖಂಡದಲ್ಲಿ ಒಟ್ಟು ೭೦,೭೦೦ ಮಂದಿ ಆಂಗ್ಲ ಸೈನಿಕರೂ, ೨೮೦೦೦೦ ಮಂದಿ ಭಾರತೀಯ ಸೈನಿಕರೂ ಇರುವರು. ಪ್ರತಿ ಆಂಗ್ಲ ಸೈನಿಕನಿಗೂ ವರ್ಷಕ್ಕೆ ೨೧೧೦ ರೂ.ಗಳೂ, ಪ್ರತಿ ಭಾರತ ಸೈನಿಕನಿಗೂ ವರ್ಷಕ್ಕೆ ೫೦೦ ರೂ.ಗಳೂ ವೆಚ್ಚವಾಗುತ್ತಿರುವುವೆಂದು ಸಾಮ್ರಾಜ್ಯಶಾಸನ ಸಭೆಯಲ್ಲಿ ಉತ್ತರಕೊಡಲ್ಪಟ್ಟಿದೆ.

ಸಭಾಪ್ರಾರಂಭ ಮಹೋತ್ಸವ ಸಮಯದಲ್ಲಿ ಕನ್ನಾಟ್ ಪ್ರಭುಗಳೂ ವೈಸ್ರಾಯರೂ ಮಾಡಿದ ಭಾಷಣಗಳನ್ನು ಎಲ್ಲಾ ದೇಶಭಾಷೆಗಳಲ್ಲಿಯೂ ಅಚ್ಚುಮಾಡಿಸಿ ಉಚಿತವಾಗಿ ಪ್ರಕಟಿಸಬೇಕೆಂದು ಸಾಮ್ರಾಜ್ಯಶಾಸನ ಸಭೆಯವರು ತೀರ್ಮಾನಿಸಿದರು. ಇದನ್ನು ಕೇಳಿ ಕನ್ನಾಟ್‌ಪ್ರಭುಗಳು ಅಭಿನಂದನಪರವಾದ ತಂತ್ರೀವಾರ್ತೆಯನ್ನು ಆ ಸಭಾಧ್ಯಕ್ಷರಿಗೆ ಕಳುಹಿಸಿಕೊಟ್ಟರು.

ನೂತನ ಶಾಸನ ಸಭೆಗಳನ್ನು ಆರಂಭಿಸುವ ದಿನ ದಿಲ್ಲಿಯ ಪ್ರಜೆಗಳು ಹರಿತಾಳವನ್ನು ಮಾಡಿ ತಮ್ಮ ಅಸಂತೃಪ್ತಿಯನ್ನು ವ್ಯಕ್ತಪಡಿಸಿದರು. ಪ್ರಜೆಗಳ ಆ ಅಸಂತೃಪ್ತಿಯನ್ನು ತೊಲಗಿಸಲು ಪ್ರಯತ್ನಿಸಬೇಕೆಂದು ಪ್ರಭುತ್ವದವರಿಗೆ ಸೂಚಿಸುವುದಕ್ಕಾಗಿ ಈ ಸಭೆಯನ್ನು ಈ ದಿವಸ ನಿಲ್ಲಿಸಿಬಿಡಬೇಕೆಂದು ಸ್ಟೇಟ್ ಕೌನ್ಸಿಲಿನಲ್ಲಿ ಕಪರ್ದೆಯವರು ಸೂಚಿಸಿದರು. ಅದಕ್ಕೆ ಸಭೆಯಲ್ಲಿ ಯಾರೊಬ್ಬರೂ ಸಂಮತಿಸದಿದ್ದುದರಿಂದ ಅಧ್ಯಕ್ಷರು ಆ ಸೂಚನೆಯನ್ನು ನಿರಾಕರಿಸಿಬಿಟ್ಟರು.

ನೂತನ ಶಾಸನಸಭೆಗಳಲ್ಲಿ ವೈಲಕ್ಷಣ್ಯವು ಮೊದಲುಪಕ್ರಮವಾಗಿದೆ. ಪ್ರಜಾಮತಕ್ಕೆ ಜಯಸಿಕ್ಕಲು ಈಗಣ ಸಭೆಗಳಲ್ಲಿ ಅವಕಾಶವುಂಟೆಂಬುದಕ್ಕೆ ಈಗಾಗಲೇ ವ್ಯಕ್ತವಾಗಿದೆ. ಸಾಮ್ರಾಜ್ಯಶಾಸನ ಸಭೆಯಲ್ಲಿ ಯಮುನಾದಾಸ್ ದ್ವಾರಕದಾಸ್‌ರವರು ಕೆಲ ಮುಖ್ಯವಾದ ತೀರ್ಮಾನಗಳನ್ನಿಟ್ಟಿದ್ದರು. ಅವುಗಳಲ್ಲಿ ಪಂಜಾಬಿನಲ್ಲಿ ನಡೆದುಹೋದ ದುರಂತಗಳಿಗಾಗಿ ಹಿಂದೂಸ್ಥಾನ ಸರ್ಕಾರದವರು ಪಶ್ಚಾತ್ತಾಪ ಪ್ರಕಟನೆಯನ್ನು ಮಾಡಬೇಕು ಎಂಬ ವಿಷಯವು ಒಂದಾಗಿದ್ದಿತು. ಇದು ಸಭೆಯಲ್ಲಿ ಚರ್ಚಿತವಾಗಿ ಅನುಮೋದಿತವಾಯಿತು.

ವಕೀಲರು ನ್ಯಾಯವಾದಿವೃತ್ತಿಯನ್ನು ಬಿಟ್ಟು ಸ್ವರಾಜ್ಯಸಾಧನೆಗೆ ನಿಂತುಕೊಳ್ಳಬೇಕೆಂದು ಮ|| ಗಾಂಧಿಯವರು ಪ್ರಲಾಪಿಸುತ್ತಿದ್ದಾರೆ. ಆದರೆ ಬಂಗಾಳಾದ ವಕೀಲರು ತಮ್ಮ ವೃತ್ತಿಯ ಹದಿಯನ್ನು ಮತ್ತಷ್ಟು ಬಲಪಡಿಸಿಕೊಳುತ್ತಿದ್ದಾರೆ. ಕಳೆದ ತಾ|| ೧೩ ರಲ್ಲಿ ಬಂಗಾಳಾದ ಬಹುಶಃ ೮೦೦ ಮಂದಿ ನ್ಯಾಯವಾದಿಗಳು ಕಲ್ಕತ್ತಾಪಟ್ಟಣದಲ್ಲಿ ವಸಂತಕುಮಾರ ಬೋಸ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ತಮ್ಮ ಗೌರವವನ್ನೂ ಅಭಿವೃದ್ಧಿಪಡಿಸಿಕೊಳ್ಳುವ, ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವ, ತಂತಮ್ಮಲ್ಲಿ ಮೈತ್ರಿಯನ್ನು ಅಭಿವೃದ್ಧಿಪಡಿಸಿಕೊಳ್ಳುವ ತೀರ್ಮಾನಗಳನ್ನು ಮಾಡಿಕೊಂಡರು. ಆಗ ಒಬ್ಬಿಬ್ಬರು ಸಹಾಯನಿರಾಕರಣವನ್ನವಲಂಬಿಸಬೇಕೆಂಬ ಮಾತನ್ನು ತೆಗೆದರು. ಅದನ್ನು ಯಾರೂ ಅನುಮೋದಿಸಲಿಲ್ಲ.

ಕಳೆದ ವಾರ ಕೂಡಿದ್ದ ಮದರಾಸು ಶಾಸನ ಸಭೆಯಲ್ಲಿ ಒಂದು ಮುಖ್ಯ ವಿಷಯವು ಚರ್ಚೆಗೆ ಬಂದು ಅನುಮೋದಿತವಾಯಿತು. ಅದೇನೆಂದರೆ.—ಪ್ರತಿ ಜಿಲ್ಲೆಯಲ್ಲಿಯೂ ಮದದ್ರವ್ಯಶಾಖೆಯಿಂದ ಬರುವ ವರಮಾನದಲ್ಲಿ ¼ ಭಾಗವು ಆಯಾ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವಹಿಸಲ್ಪಡಬೇಕು ಎಂಬ ವಿಷಯವು. ಇದರ ಮೇಲೆ ವಾದಾನುವಾದಗಳು ನಡೆದು ಬಹುಮತದಿಂದ ಇದು ಪ್ಯಾಸಾಯಿತು. ಇನ್ನು ಬಜೆಟ್ ಚರ್ಚೆಯ ಕಾಲದ ವಿಚಾರಕ್ಕೆ ಇಟ್ಟುಕೊಳ್ಳಲ್ಪಟ್ಟಿರುವುದು. ಎಲ್ಲೆಲ್ಲೂ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಣದ ಕೊರತೆಯಿಂದ ಎಷ್ಟೋ ಪ್ರಜಾಹಿತಕಾರ್ಯಗಳು ಸಾಗದೆ ನಿಂತುಹೋಗುತ್ತಿರುವುದು ಸ್ಪಷ್ಟವಾಗಿದೆ. ನಮ್ಮ ಮೈಸೂರಿನಲ್ಲೂ ಇದೇ ಗತಿಯಾಗಿದೆ. ಇಲ್ಲಿಯ ಪ್ರಜಾಪ್ರತಿನಿಧಿಸಭೆಯಲ್ಲೂ ಮೇಲೆ ಕಂಡ ವಿಚಾರದಂಥ ಪ್ರಾರ್ಥನೆಯೇ ಒಂದು ನಿರಾಕೃತವಾಗಿದ್ದಿತು. ಮದರಾಸಿನಲ್ಲಿ ಇದು ದಾರಿಗೆ ಬಂದರೆ ಮೈಸೂರಿನಲ್ಲೂ ಬರುವುದು.

ಮಹಾಯುದ್ಧದಲ್ಲಿ ಭಾರತಭಟಪುಂಗವರು ಹೋಗಿಸೇರಿ ಪ್ರತಾಪವನ್ನು ತೋರಿಸಿ ಅವರಲ್ಲಿ ಹಲವರು ವೀರಶಯ್ಯೆಯಲ್ಲಿ ಒರಗಿದರಷ್ಟೆ. ಅಂಥವರ ಸ್ಮರಣಾರ್ಥವಾಗಿ ದಿಲ್ಲಿಪಟ್ಟಣದಲ್ಲಿ ಒಂದು ಸ್ಮಾರಕಪ್ರತಿಷ್ಠಾಪನೆಯು ಮಾಡಲ್ಪಡುತ್ತಿದೆ. ಅದರ ಶಂಕುಸ್ಥಾಪನೆಯು ಕನ್ನಾಟ್ ಪ್ರಭುಗಳಿಂದ ಕಳೆದ ತಾ|| ೧೦ ರಲ್ಲಿ ನೆರವೇರಿಸಲ್ಪಟ್ಟಿತು. ಆ ಕಾಲದ ಭಾರತವೀರರ ಪರಾಕ್ರಮವನ್ನು ಅಭಿನಂದಿಸಿ ಸಾರ್ವಭೌಮರು ತಿಳಿಯಿಸಿದ್ದ ಸಂದೇಶವನ್ನು ಪ್ರಭುಗಳು ಹೇಳಿದರು. ಮತ್ತು ತಾವು ವಿದೇಶದಲ್ಲಿ ಸೇನಾಪತಿಗಳಾಗಿದ್ದ ಕಾಲದಲ್ಲಿ ಭಾರತ ಯೋಧರ ಗುಣಾತಿಶಯಗಳನುಭವವನ್ನು ವರ್ಣಿಸಿದರು. ಕಳೆದ ಮಹಾಯುದ್ಧಕಾಲದಲ್ಲಿ ಭರತಖಂಡದಿಂದ ೧೦ ಲಕ್ಷ ಮಂದಿ ಸೈನಿಕರು ರಣರಂಗಕ್ಕೆ ಹೋಗಿದ್ದರೆಂದೂ, ಅವರಲ್ಲಿ ೮೦ ಸಾವಿರ ಮಂದಿಗಳು ವೀರಸ್ವರ್ಗವನ್ನಡರಿದರೆಂದೂ, ಅವರ ಕೀರ್ತಿಯು ಚರಿತ್ರಾತ್ಮಕವಾಗಿರುವುದೆಂದೂ ಹೇಳಿದರು. ಈ ಸ್ಮಾರಕವು ಧನುರಾಕಾರದಲ್ಲಿ ಬಿಳಿಯ ಶಿಲೆಗಳಿಂದ ೧೬-೨ ಅಡಿ ಯೆತ್ತರವಾಗಿರುವಂತೆ ಕಟ್ಟಲ್ಪಡುವುದು. ಅದರ ಪಾದಭಾಗವು ಮಾತ್ರ ಕೆಂಪುಕಲ್ಲುಗಳಲ್ಲಿ ಕಟ್ಟಲ್ಪಡುವುದು.

ವಿದೇಶ ವೃತ್ತಾಂತಗಳು.

ಇದುವರೆಗೆ ಯುದ್ಧಾಂಗ ಮಂತ್ರಿಯವರಾಗಿದ್ದ ವಿನ್‌ಸ್ಟನ್ ಚರ್ಚಿಲ್ ಪ್ರಭುಗಳಿಗೆ ಈಗ ಅಧಿನಿವೇಶ ಮಂತ್ರಿಪದವಿಯು ಕೊಡಲ್ಪಟ್ಟಿರುತ್ತದೆ.

ಸಾರ್ವಭೌಮ ದಂಪತಿಗಳು ಕಿರೀಟಾದಿ ರಾಜಲಕ್ಷಣ ವಿಭೂಷಿತರಾಗಿ ಯುದ್ಧಕ್ಕೆ ಪೂರ್ವದಲ್ಲಿ ಹೇಗೋ ಹಾಗೆ ಸಕಲ ಮರ್ಯಾದೆಗಳೊಡನೆ ಬಂದು ಕಳೆದ ತಾ|| ೧೫ ರಲ್ಲಿ ಪಾರ್ಲಿಮೆಂಟ್ ಸಭೆಯ ಆರಂಭಮಹೋತ್ಸವವನ್ನು ಜರುಗಿಸಿದರು.

ಅಂಗೋರಾದ ತುರ್ಕ ಜಾತೀಯ ಪ್ರಭುತ್ವದವರು ಬೋಲ್ಷೆವಿಕ್ಕರ ಒಳತಂತ್ರಕ್ಕೆ ಸಿಕ್ಕಿರುವಂತಿದೆ. ಲಂಡನ್ ಪಟ್ಟಣದಲ್ಲಿ ಕೂಡಲಿಕ್ಕಿರುವ ಸಭೆಯಲ್ಲಿ ಮಾಸ್ಕೊ (ಬೋಲ್ಷೆವಿಕ್) ಪ್ರಭುತ್ವದವರಿಗೆ ತಿಳಿಯಪಡಿಸದೆ ಯಾವ ವಿಷಯಕ್ಕೂ ನಾನು ಒಪ್ಪುವುದಿಲ್ಲವೆಂದು ಮುಸ್ತಾಫಾ ಕೇಮಲ್ ಪಾಷಾ ಪ್ರಕಟಿಸಿರುವನಂತೆ.

ಪತ್ರವ್ಯವಹಾರ.

ಬೇಶದ ಮೃತ್ಯು.

"ರಾಜಕೀಯ ಬ್ರಾಹ್ಮಣರನ್ನು ನಂಬಬೇಡಿ" ಎಂದು ಸರ್ ಪಿ. ತ್ಯಾಗರಾಯಶೆಟ್ಟಿಯವರು ತಮ್ಮ ಉಪನ್ಯಾಸಗಳಲ್ಲಿ ಹೇಳುತ್ತಿರುವುದುಂಟು ಹೀಗೆ ಹೇಳುವುದು ನಿರಾಧಾರವಾದ ಮಾತಲ್ಲ. ಮಹಾಭಾಗವತರು ಎನ್ನಿಸಿಕೊಂಡು ಡಾಕ್ಟರ್ ಟೈಟಲ್ ಪಡೆದು ಸನ್ಯಾಸಪೀಠವನ್ನೇರಿದವರನ್ನಿಸಿಕೊಂಡಿದ್ದರೂ ಕರವೀರ ಪೀಠದ ಗುರುಗಳು ಲೌಕಿಕ ವಾಸನೆ ಅಳಿಯದೆ ರಾಜಕೀಯ ಪಂಕದಲ್ಲಿ ಮುಳುಗಿ, ನ್ಯಾಷನಲ್ ಕಾಂಗ್ರೆಸ್ಸಿಗೆ ಹೋಗಿ, ಆಂಗ್ಲೇಯ ಪ್ರಭುತ್ವದವರ ಮೇಲೆ ದೋಷವನ್ನು ಹೊರಿಸಿ ಸಭಿಕರನ್ನು ಹುರಿದುಂಬಿಸಬೇಕೆಂಬುದ್ದೇಶದಲ್ಲಿ ಮೈಸೂರು ಸರ್ಕಾರದವರು ಶೃಂಗೇರಿ ಮಠದ ವಿಷಯದಲ್ಲಿ ಚಲಾಯಿಸಬಹುದಾಗಿದ್ದ ಸ್ವಾತಂತ್ರ್ಯಕ್ಕೆ ಇಂಗ್ಲಿಷ್ ಸರ್ಕಾರದವರು ಅಡ್ಡಿಮಾಡಿದರೆಂಬ ಸುಳ್ಳನ್ನು ಹೇಳಿದರು. ಆ ನಿರಾಧಾರವಾರ್ತೆಯನ್ನು ಜಗತ್ತಿಗೆ ತೋರಿಸುವುದಕ್ಕಾಗಿ ನಮ್ಮ ಸರ್ಕಾರದವರು ಪ್ರಕಟಿಸಿ, ಈ ರಾಜಕೀಯ ಸ್ವಾಮಿಯ ಮುಖಕ್ಕೆ ಮಂಗಳಾರತಿ ಮಾಡಿದರು. ಸ್ವಾಮಿತ್ವ ಪಡೆದವರೂ ಕೂಡ ರಾಜಕೀಯ ವಾತಾವರಣಕ್ಕೆ ನುಗ್ಗಿದಾಗ ಸುಳ್ಳುಜಳ್ಳು ಮಾಯಾಜಾಲಗಳಿಗೆ ಹಿಂದೆಗೆಯದಿರುವಾಗ ಇತರರ ಸ್ಥಿತಿಯನ್ನು ಹೇಳುವುದೇನು? ಕಪಟತಂತ್ರದಲ್ಲಿ ತೇಲಿಮುಳುಗುತ್ತಿರುವ ಸಂಪದಭ್ಯುದಯ ಪಾರ್ಟಿಯವರ ಕಲ್ಪನೆಗಳಿಗೆ ಮಿತಿಯುಂಟೆ? ಮೈಸೂರು ದೇಶದ ಪ್ರಜೆಗಳಲ್ಲಿ ಶಾಂತಿಸಂಪತ್ತಿಸೌಕರ್ಯಗಳು ಹೆಚ್ಚಬೇಕೆಂಬ ಅಪೇಕ್ಷೆಯು ನಮ್ಮ ಪ್ರಭುಗಳಲ್ಲಿ ಅತ್ಯಧಿಕವಾಗಿದೆ. ಸರ್ಕಾರದ ಮತ್ತು ಪ್ರಜೆಗಳ ಅಭ್ಯುದಯಚಿಂತೆಯು ಅನಿತರಸಾಧಾರಣವಾಗಿ ದಿವಾನ್ ಸರ್ದಾರ್ ಕಾಂತರಾಜ ಅರಸರವರಲ್ಲಿ ಮನೆಮಾಡಿಕೊಂಡಿದೆ. ಪ್ರತಿಯೊಬ್ಬ ಸರ್ಕಾರದುದ್ಯೋಗಿಯನ್ನೂ ಪ್ರಜಾಕೋಟಿಯನ್ನೂ ಒಡಹುಟ್ಟಿದಂತೆ ತಿಳಿದು ಕನಿಕರಪಡುವ ಗುಣವು ಈ ದಿವಾನರಿಗಿರುವಷ್ಟು ಇನ್ನಾರಲ್ಲೂ ಇಲ್ಲ. ದೇಶಕ್ಕೆ ನಾಲವಾದರೂ ಸರಿ ಬಡನೌಕರಮಾನೇರುಗಳು ಬದುಕಲಿ ಎಂಬ ದಯೆಯಿಂದ ೧೦೦ ರೂ. ನೊಳಗಣ ಸಂಬಳದವರಿಗೆಲ್ಲಾ ಅಲೋಯನ್ಸುಗಳನ್ನು ಹೆಚ್ಚಿಸಿ, ಅದಕ್ಕಾಗಿ ವರ್ಷಕ್ಕೆ ಕಾಲುಲಕ್ಷ ರೂ. ಗಳ ವರೆಗೆ ವೆಚ್ಚಮಾಡುತ್ತಿರುವರು. ಎರಡು ಕೈಗಳಲ್ಲೂ ಖಜಾನೆಯ ದುಡ್ಡನ್ನು ಎಂಟು ದಟಡ್ಡುಳಿಕೆ ಮಾಡಿ ಹೊಗಳಿಸಿಕೊಂಡುಬಿಟ್ಟರೆ ಕೃತಾರ್ಥತೆಯಾಯಿತೆಂದು ತಿಳಿದುಕೊಳ್ಳುವ ಆತ್ಮಪ್ರತಿಷ್ಠಾಕಾಂಕ್ಷೆಯು ಇವರಿಗಿಲ್ಲ. ಏನಿದ್ದರೂ ಹಣವನ್ನು ಉಳಿಯಿಸಿ ಕೆಲಸಮಾಡಬೇಕೆನ್ನುವುದೇ ಇವರ ತತ್ವ. ಪ್ರಭುಗಳಿಗೂ ಅವರ ಮಂತ್ರಿವರ್ಗರೇ ಮೊದಲಾದ ಮುಖ್ಯಾಧಿಕಾರಿಗಳಿಗೂ ಹೀಗೆ ದೇಶದ ಏಳಿಗೆಯೇ ಮುಖ್ಯಲಕ್ಷ್ಯವಾಗಿರುವಲ್ಲಿ ದೇಶಕಂಟಕರೂ, ಪರೋತ್ಕರ್ಷಾಸಹಿಷ್ಣುಗಳೂ, ಒಂದು ಕೈಯಲ್ಲಿ ಅನ್ನವನ್ನು ತಿಂದು ಒಂದು ಕೈಯಲ್ಲಿ ಮಣ್ಣನ್ನು ಹಿಡಿದಿರುವ ಪ್ರಭುದ್ರೋಹಿಗಳೂ ಆದ ಕೆಲ ಪಾಪಾತ್ಮರು ಸರ್ಕಾರದವರ ಉದಾತ್ತವಾದ ಸಂಕಲ್ಪಗಳನ್ನು ನೋಡಿ ಸೈರಿಸಲಾರದೆ, ಅವುಗಳ ಚಲಾವಣೆಗೆ ನಾನಾತರದ ಅಡ್ಡಿಗಳನ್ನು ಕಲ್ಪಿಸುವುದಕ್ಕೂ, ಅರಸರ ದಿವಾನಗಿರಿಯಲ್ಲಿ ಅಸಮರ್ಥತೆಯನ್ನು ಪ್ರದರ್ಶಿಸಲಿಕ್ಕೂ, ರಾಜ್ಯದ ನೆಮ್ಮದಿಗೆ ಭಂಗಮಾಡಿ ಗಲಾಟೆಹೆಚ್ಚಿ ಮಧೆಗೆ ಬೆಂಕಿಯಿಕ್ಕಿ ಅದನ್ನು ಆಯ್ದು ತಿನ್ನುವಂತೆ ಮಾಡುವುದಕ್ಕೂ ಹವಣಿಸಿಕೊಂಡಿದ್ದಾರೆ. ಶ್ರೀಮನ್ಮಹಾರಾಜರು ದೇಶದಲ್ಲಿ ಜಾತಿಮತದ್ವೇಷಗಳು ನಿರ್ಮೂಲವಾಗಬೇಕೆಂದೂ, ಪರಸ್ಪರ ಸಹಕಾರದಿಂದ ಪ್ರಜೆಗಳು ನಡೆಯಬೇಕೆಂದೂ, ಮುಂಬರಿದಿರುವ ಜನವರ್ಗದವರು ಹಿಂದುಳಿದವರಲ್ಲಿ ಉದಾರಭಾವವನ್ನು ತಳೆದಿರಬೇಕೆಂದೂ ಹೇಳಿ ಅಪ್ಪಣೆಕೊಡಿಸಿರುವುದಕ್ಕೆ ಮೈಸೂರು ದೇಶದ ಸಂಪದಭ್ಯುದಯ ಪತ್ರಿಕೆಯು ಅಗ್ನಿಪ್ರತಿಷ್ಠಾಪನೆಯನ್ನು ಮಾಡಿರುತ್ತಿದೆ. ಬ್ರಾಹ್ಮಣರಲ್ಲಿ ಬಹುಭಾಗವೆಲ್ಲಾ ತಪೋವನವಾಸ ನಾರಮಡಿಯುಡೆ ಜಪ ತಪೋನುಷ್ಠಾನ ಅಗ್ನಿಹೋತ್ರ ಅಧ್ಯಯನ ಸಂಧ್ಯಾಕರ್ಮ ಮೊದಲಾದ ಸ್ವಧರ್ಮಗಳಿಗೆ ತಿಲಾಂಜಲಿಬಿಟ್ಟದ್ದರಿಂದ ಬಾಧಕವಿಲ್ಲ; ಇತರ ಜನರು ಕಾಲೋಚಿತವಾದ ರಾಜಕೀಯಾದಿ ವಿದ್ಯಾಭ್ಯಾಸಕ್ಕೆ ತೊಡಗುವುದು ಮಾತ್ರ ಸ್ವಧರ್ಮಭ್ರಷ್ಟತೆಯೆಂದೂ ರಾಜ್ಯಕ್ಕೆ ಹಾನಿಕರವೆಂದೂ ಹರಟುತ್ತ, ಪರರ ಸ್ವಚ್ಛಂದಾಭ್ಯುದಯಗಳಿಗೆ ಅಂಟುತ್ತಿರುವ ಸಂಪದಭ್ಯುದಯ ಪತ್ರಿಕೆಗೆ, ಹಿಂದುಳಿದವರಿಗೆ ಸ್ಪೆಷಲ್ ಸ್ಕಾಲರ್‌ಶಿಪ್ ಕಲ್ಪನೆ ಮಾಡಿದುದೂ, ನಿಮ್ನ ಜಾತಿಯ ಸಮುದ್ಧಾರದ ಪ್ರೋತ್ಸಾಹಗಳೂ, ರಾಜಕೀಯಾಂಗದಲ್ಲಿ ಸಕಲ ಪ್ರಜಾವರ್ಗಕ್ಕೂ ಪ್ರವೇಶವನ್ನುಂಟುಮಾಡುವ ಪ್ರತ್ಯೇಕ ಪ್ರಾತಿನಿಧ್ಯ ಕಲ್ಪನೆಯೂ, ಸರ್ವ ಪ್ರಜೆಗಳಲ್ಲೂ ಸಮಾನ ವಿದ್ಯಾಪ್ರಚಾರಕ್ಕೆ ಅವಕಾಶವನ್ನು ಕಲ್ಪಿಸುವ ವಿದ್ಯಾಭ್ಯಾಸ ಮೆಮೋರಾಂಡಂ ಕಲ್ಪನೆಯೂ ಕೂಡ ಹೊಟ್ಟೆಯುರಿಯನ್ನಬ್ಬಿಸಿರುವುವು. ಇವಕ್ಕೆಲ್ಲಾ ವಿದ್ಯಾಭ್ಯಾಸ ಇಲಾಖೆಯ ಮೇಲೆ ಮ|| ರಾಮಲಿಂಗರೆಡ್ಡಿಯವರು ಅಧ್ಯಕ್ಷರಾಗಿ ಕುಳಿತಿರುವುದೇ ಕಾರಣವೆಂದು ತಿಳಿದು ಅವರನ್ನು ಅಸೂಯೆಯಿಂದ ಬಡಿಸಬೇಕೆಂದು ಪ್ರಚಂಡ ಸಾಹಸವನ್ನು ಮಾಡುತ್ತಿರುವುದು.

ರಾವಣನು ಸೀತಾಪಹರಣಕ್ಕಾಗಿ ವೇಷಾಂತರಧಾರಣ ಮಾಡಿದಂತೆ ಸಂಪದಭ್ಯುದಯವು ಸತ್ಯವಾದಿ, ಯಥಾರ್ಥವಾದಿ, ದೇಶಾಭಿಮಾನಿ, ಮೊದಲಾದ ಕಪಟನಾಮಗಳ ಕವಚವನ್ನು ಅಣಿಮಾಡಿಕೊಂಡಿರುವುದು. ಮೊದಲು ಇದು ಬ್ರಾಹ್ಮಣ್ ಸ್ವಾಮಿಗೆ ಪಕ್ಷಪಾತಮಯವಾದದ್ದೆಂದು ಬಹುದು ಕೊಂಡದ್ದಾಯಿತು. ನಿಮ್ನಜಾತ್ಯುದ್ಧಾರ ಪ್ರಯತ್ನವು ವರ್ಣಸಂಕರ ಸಾಹಸವೆಂದು ಬೊಬ್ಬೆಯಿಟ್ಟದ್ದಾಯಿತು. ಹಿಂದುಳಿದವರ ಮುಂದಾಳುಗಳ ಮೇಲೆ ವ್ಯಕ್ತಿ ವಿಷಯಕವಾದ ದೂರುಗಳನ್ನು ಹುಟ್ಟಿಸಿ ಹಲ್ಲಾಹರಟೆಗಳನ್ನಾಡಿ ಬಾಯಿ ನೋಯಿಸಿಕೊಂಡದ್ದಾಯಿತು. ಸ್ವಜನಪ್ರೋತ್ಸಾಹಕ್ಕೆ ಉದ್ಧಾರಕ್ಕೆ ಪ್ರಯತ್ನಪಡುತ್ತಿರುವ ಇತರ ಪ್ರಮುಖರನ್ನು ಬ್ರಹ್ಮದ್ವೇಷಿಗಳೆಂದು ಶಪಿಸಿದ್ದಾಯಿತು. ಮ|| ರಡ್ಡಿಯವರ ಪ್ರಯತ್ನವು ದೇಶಕ್ಕೆ ಅಹಿತಕಾರಿಯೆಂದು ಪ್ರಭುಗಳಿಗೆ ಮನವರಿಕೆ ಮಾಡಿ ಬೆದರಿಕೆ ಹುಟ್ಟಿಸುವ ಉದ್ದೇಶದಿಂದ ಮ|| ವೆಂಕಟಕೃಷ್ಣಯ್ಯನವರು ಮುಖವಟ್ಟವನ್ನು ಕಟ್ಟಿಸಿಕೊಂಡು ನ್ಯಾಷನಲ್ ಸ್ಕೂಲು ಮೊದಲಾದುವುಗಳ ಕಲ್ಪನೆಯ ಕನಸನ್ನು ಕಂಡದ್ದಾಯಿತು. ಕೈಲಾಗದ ಹೇಡಿಗಳು ರಾತ್ರಿಕಾಲದಲ್ಲಿ ತಲೆಮುಸಿಕೊಂಡು ಮನೆಗಳ ಮೇಲೆ ಕಲ್ಲೆಸೆಗೆಯುವಂತೆ ಪ್ರಚ್ಛನ್ನವೇಷದಿಂದ ಸುಳ್ಳು ಲೇಖನಗಳನ್ನೂ ಕಪಟಕಲ್ಪನೆಗಳನ್ನೂ ಸುರಿಸಿದ್ದಾಯಿತು. ಇಷ್ಟಾದರೂ ಮ|| ರಡ್ಡಿಯವರು ಜುಗುಪ್ಸೆಗೊಂಡಾದರೂ ತಮ್ಮ ಪದವಿಯನ್ನು ಬಿಟ್ಟು ಹೋದಾರೆಂದು ಸಂಪದಭ್ಯುದಯವು ಯೋಚಿಸಿಕೊಂಡು ನಡೆಯಿಸಿದ ಯತ್ನಗಳೊಂದೂ ಫಲಿಸಲಿಲ್ಲ. ಸಂಪದಭ್ಯುದಯಕ್ಕೆ ಆತ್ಮಗೌರವವೂ ಛಲವೂ ಇದ್ದರೆ ತನ್ನ ಪ್ರಯತ್ನ ಪರಾಜಯಕ್ಕಾಗಿ ಅದು ಭೃಗುಪತನವನ್ನು ಮಾಡಿ ಆತ್ಮಹತ್ಯೆಯನ್ನೇ ಮಾಡಿಕೊಳ್ಳಬೇಕಾಗಿತ್ತು. ಅದಕ್ಕೆ ಅಂಥ ಯೋಗ್ಯತೆಯಿಲ್ಲ. ನರಿಯನ್ನು ಕೊಂದರೆ ಬರಿ................ಎಂದು ಪ್ರಭುತ್ವದವರು ಇದರ ಜಳ್ಳು ಸುಳ್ಳು ಬಾರುದೆಗಳಿಗೆ ಪ್ರತಿಕ್ರಿಯೆ ಪ್ರಯತ್ನ ಮಾಡಲಿಲ್ಲ. ನನ್ನ ಕಾಗೆಗೆ ಇದಿರಿಲ್ಲವೆಂಬ ಭ್ರಮೆಯು ಇದರ ನೆತ್ತಿಗೇರಿದೆ. ಮ|| ರಡ್ಡಿಯವರಾದರೋ ನಾಯಿ ಬೊಗಳಿದರೆ ದೇವಲೋಕ ಹಾಳು ಎಂಬ ಗಾದೆಯನ್ನು ಸ್ಮರಿಸಿಕೊಂಡಿರಬೇಕು. ಈಗ ಸಂಪದಭ್ಯುದಯವು ಇನ್ನೊಂದು ಸಂದನ್ನು ಹುಡುಕಿ ತನ್ನ ಕಪಟಸಂಧಾನದ ಸಫಲತೆಯನ್ನು ನಿರೀಕ್ಷಿಸಿಕೊಂಡಿದೆ. ವಿದ್ಯಾಶಾಖೆಯ ಪೋರ್ಟ್‌ಫೋಲಿಯೋವು ೧ನೆ ಕೌನ್ಸಿಲರ್ ಮ|| ಬಾನರ್ಜಿಯವರಿಗೆ ಸೇರಿರುತ್ತದೆ. ಕೆಲವು ಸಂದರ್ಭಗಳಲ್ಲಿ ಮ|| ರಡ್ಡಿಯವರ ಅಭಿಪ್ರಾಯಗಳೂ ಮ|| ಬಾನರ್ಜಿಯವರ ಅಭಿಪ್ರಾಯವೂ ಹೊಂದುಗಡೆಗೆ ಬರುತ್ತಿಲ್ಲವೆಂದು ಸುದ್ದಿಯಿದೆ. ಈ ಸಂದರ್ಭವನ್ನುಪಯೋಗಿಸಿಕೊಂಡು ಅವರವರಲ್ಲಿ ಮನಃಕಾಲುಷ್ಯವನ್ನು ವೃದ್ಧಿಪಡಿಸಿ ಮ|| ರಡ್ಡಿಯವರೇ ಬೇಜಾರುಪಟ್ಟು ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಡಲಿ, ಇಲ್ಲವೆ ಇನ್ನೇನಾದರೂ ಗಲಿಬಿಲಿ ಹುಟ್ಟಿಹೋಗಲಿ, ಪ್ರಭುಗಳಾದರೂ ಬೇಸರಿಸಿಕೊಂಡು ಇನ್ನೇನಾದರೂ ಮಾಡಲಿ, ಅಂತೂ ವಿದ್ಯಾಭ್ಯಾಸದ ಮೆಮೋರಾಂಡಂ ಮೂಲೆಗೆ ಬಿದ್ದುಹೋಗಲಿ ಎಂದು ಸಂಪದಭ್ಯುದಯವು ಸಂಧಾನಮಾಡುತ್ತಿರುವ ಹಾಗಿದೆ. ಆದರ ಈ ದುರ್ಯೋಚನೆಯೂ ಅಪಾತ್ರವಾಗುವುದೇ ಖಂಡಿತ. ಇಷ್ಟು ದೊಡ್ಡ ರಾಜ್ಯವನ್ನಾಳುವ ಧೀರೋದಾತ್ತರಾದ ಮಹಾಪ್ರಭುಗಳಿಗೆ ಈ ಸಾಮಾನ್ಯವಾದ ತೊಡಕನ್ನು ಕಳೆಯುವುದೆಂದು ದೊಡ್ಡ ಕೆಲಸವೆ? ಮ|| ರಡ್ಡಿಯವರು ಇದೇ ವೈಕುಂಠವೆಂದೂ ಇದೇ ಗತಿಮತಿಯೆಂದೂ ತಿಳಿದು ಕುಳಿತಿರತಕ್ಕ ಸ್ವಭಾವದವರಲ್ಲ. ಪ್ರಪಂಚವೇ ಅವರ ದೇಶವಾಗಿದೆ. ಸಿಂಹಕ್ಕೆ ತನ್ನ ಕಾಡು ಹೊರಗಣ ಕಾಡು ಎಂಬ ಭೇದವೇನು? ಪ್ರಪಂಚದ ಯಾವ ಮೂಲೆಗೆ ಹೋದರೂ ಅವರ ಯೋಗ್ಯತೆಯು ಅವರಿಗೆ ಮಹೋನ್ನತಸ್ಥಾನವನ್ನು ಕಾಯ್ದಿಟ್ಟಿರುವುದು. ಬರೋಡಾ ಮಹಾರಾಜರಂಥ ಧೀರಾಗ್ರಣಿಗಳು ಕೂಡ ಸ್ವದೇಶೀಯ ವಿದೇಶೀಯೋದ್ಯೋಗಿಗಳಲ್ಲಿ ತಾರತಮ್ಯ ಪಕ್ಷಪಾತಗಳನ್ನು ನಿಷ್ಕಾರಣವಾಗಿ ತೋರಿಸಿದುದರಿಂದ ಮನಸ್ಸಾಕ್ಷಿಗೆ ಒಪ್ಪದ ಅಲ್ಲಿಯ ಹುದ್ದೆಯನ್ನು ರಡ್ಡಿಯವರು ತೃಣಕ್ಕೆ ಸಮಗಂಡು ಒತ್ತರಿಸಿಬಿಟ್ಟರು ಮೈಸೂರು ದೇಶದ ಪ್ರಜಾಸಾಮಾನ್ಯದ ಪುಣ್ಯ ಪರಿಪಾಕದಿಂದ ಈ ದೇಶದ ವಿದ್ಯಾಭ್ಯಾಸದ ಶಾಖೆಗೆ ಅವರು ಅಧ್ಯಕ್ಷರಾಗಿ ಬಂದಿರುವರು. ಅವರು ಬಿಟ್ಟುಹೋಗುವುದು ದೇಶೀಯರ ದುರದೃಷ್ಟವಲ್ಲದೆ ರಡ್ಡಿಯವರ ನಷ್ಟವೇನೂ ಅಲ್ಲ. ಈ ದೇಶದಲ್ಲಿ ಈಗ ಅವರಿಗೆ ದೊರೆಯುತ್ತಿರುವ ಸಂಬಳಕ್ಕಿಂತಲೂ ಹೆಚ್ಚಿನ ಸಂಬಳದ ದೊಡ್ಡ ಪದವಿಗಳು ಹೊರಗೆ ಅವರಿಗೆ ಕಾದಿರುವುವು. ಅದರೂ ಅವರ ದೃಷ್ಟಿಯಲ್ಲಿ ಸಂಬಳವು ದೊಡ್ಡದಲ್ಲ. ತನ್ನ ವಿಶಾಲ ಹೃದಯಸಂಕಲ್ಪಜಯ, ದೇಶಕಲ್ಯಾಣಸಾಧನ—ಇವುಗಳೇ ಅವರ ಪರಮ ಲಕ್ಷ್ಯಗಳು. ಇವುಗಳಿಗೆ ಕಡೆಬಂದಡೆಯಲ್ಲಿ ಲಕ್ಷದ ಹೊನ್ನು ಸುರಿದಿದ್ದರೂ ತಿರುಗಿ ನೋಡತಕ್ಕವರಲ್ಲ. ಮೈಸೂರು ದೇಶದಲ್ಲಿ ಪ್ರಜಾಸಾಮಾನ್ಯ ವಿದ್ಯಾವಿಕಾಸಕ್ಕೆ ಅವಕಾಶವಿರುವುದೆಂಬ ಕಾರಣದಿಂದಲೇ ಅವರು ನಿಂತರು. ಶ್ರೀ ಮಹಾಪ್ರಭುಗಳಿಗೂ ಅವರ ಸರ್ಕಾರಕ್ಕೂ ಸಹ ಅದೇ ಭಾವವಿರುವುದರಿಂದಲೇ ರಡ್ಡಿಯವರ ವಿಷಯದಲ್ಲಿ ಕ್ಷುದ್ರರು ಮಾಡುತ್ತಿರುವ ಮಾರಣಹೋಮಗಳೆಲ್ಲಾ ಬೂದಿಯಲ್ಲಿ ಮಾಡಿದ ಹೋಮಕ್ಕಾಗುತಿಯಾಗುತ್ತಿರುವುವು. ಎಷ್ಟೇ ಎಡರುಗಳು ಬಂದರೂ ತಾವು ಕಲ್ಪಿಸಿದ ವಿದ್ಯಾಭ್ಯಾಸದ ಮೆಮೋರಾಂಡಂ ಕಾರ್ಯಮುಖಕ್ಕೆ ಬರುವವರೆಗೂ ಮ|| ರಡ್ಡಿಯವರು ವಿದ್ಯಾಶಾಖಾ ಸಂಬಂಧವನ್ನು ಬಿಡಬಾರದೆಂಬುದೇ ಮೈಸೂರಿನ ಮಹಾಪ್ರಜೆಗಳ ಕೋರಿಕೆಯಾಗಿರುವುದು. "ಮೆಮೋರಾಂಡವನ್ನು ನಿಷ್ಫಲಗೊಳಿಸಿ, ಸಾರ್ವಪ್ರಜಾವಿದ್ಯಾವಿಕಾಸ ಪ್ರಯತ್ನವನ್ನು ಸಫಲಗೊಳಿಸುವಿರಾ? ಅಥವಾ ಗೋಮುಖವ್ಯಾಘ್ರಗಳ ಕಪಟಜಾಲಕ್ಕೆ ಮನಸೋತು ಎಲ್ಲ ಪ್ರಯತ್ನವನ್ನೂ ಕೈಬಿಟ್ಟು ದೇಶವನ್ನು ಹಿಂದಣ ಅಂಧಕೂಪಕ್ಕೆ ಮತ್ತೆ ನೂಕುವಿರಾ? ದೇಶದ ಮೃತ್ಯು ಸಂಕಟಕ್ಕೆ ಜಯವನ್ನುಂಟುಮಾಡುವಿರೋ? ಇಲ್ಲವೆ ಶ್ರೀಕೃಷ್ಣನು ಕಾಳಿಂಗನನ್ನು ಮೆಟ್ಟಿ ಹತಮಾಡಿದಂತೆಯೂ, ರಣಧೀರ ಕಂಠೀರವ ನರಸರಾಜ ಒಡೆಯರು ತಿರುಚನಾಪಲ್ಲಿಯ ದೊರೆಯಿಂದ ಗುಪ್ತವೇಷಧಾರಿಗಳಾಗಿ ಕಳುಹಿಸಲ್ಪಟ್ಟಿದ್ದ ೨೫ ಮಂದಿ ಕಳ್ಳರನ್ನು ಧ್ವಂಸಗೊಳಿಸಿದಂತೆಯೂ ನಾಮಾವಶೇಷ ಮಾಡುವಿರೋ?" ಎಂಬದಾಗಿ ಶ್ರೀಮನ್ ಮಹಾಪ್ರಭು ಸಹೋದರರನ್ನು ಪ್ರಜೆಗಳು ಪಿತೃಭಕ್ತಿಯಿಂದ ಸಾಧಿಕಾರವಾಗಿ ಕೇಳುವರು.

ಬಿ. ಎಸ್.

ಶ್ರೀಶೈಲ ಕ್ಷೇತ್ರಯಾತ್ರೆ.

ಕಾಶೀ ಮಹಾಪುಣ್ಯಕ್ಷೇತ್ರದಂತೆಯೇ ದಕ್ಷಿಣದೇಶದಲ್ಲಿ ಬಹಳ ಪ್ರಖ್ಯಾತವಾಗಿರುವ ಶ್ರೀಶೈಲ ಮಹಾಕ್ಷೇತ್ರದಲ್ಲಿ ಶ್ರೀ ಮಲ್ಲಿಕಾರ್ಜುನೇಶ್ವರ ಜಾತ್ರೆಯು ಮಹಾಶಿವರಾತ್ರಿ ಕಾಲದಲ್ಲಿ ಬಹಳ ವಿಜೃಂಭಣೆಯಿಂದ ೧೦-೧೫ ದಿನಗಳವರೆಗೆ ನಡೆಯುವುದಾಗಿಯೂ, ಎಲ್ಲಾ ದೇಶಗಳಿಂದ ಶೈವ ವೀರಶೈವ ಭಕ್ತರು ಸಾವಿರಾರುಗಟ್ಟಲೆ ಬಂದು ಸೇರುವದಾಗಿಯೂ ಜನರು ಹೇಳುತ್ತಾರೆ. ಆದರೆ ಸಾವಿರಾರು ಮೈಲಿ ದೂರದಲ್ಲಿರುವ ಕಾಶೀ ಮಹಾಕ್ಷೇತ್ರಕ್ಕೆ ಹೆಂಗುಸರು ಸಹ ಒಬ್ಬೊಬ್ಬರೇ ಹೋಗಿಬರಲು ರೈಲು ಮೊದಲಾದ ಸೌಕರ್ಯಗಳಿರುವಂತೆ ಈ ಶ್ರೀಶೈಲಪರ್ವತಕ್ಕೆ ಹೋಗಿಬರಲು ಅನುಕೂಲವಿಲ್ಲವೆಂದು ಜನರು ಆಡಿಕೊಳ್ಳುತ್ತಾರೆ. ಈಗ ನಾನೂ ಮತ್ತೆ ಕೆಲರೂ ಬರುವ ಮಹಾಶಿವರಾತ್ರಿ ಕಾಲದಲ್ಲಿ ನಡೆಯುವ ಜಾತ್ರೆಗಾಗಿ ಶ್ರೀಶೈಲಕ್ಕೆ ಹೊಗಬೇಕೆಂಬಿಷ್ಟವುಳ್ಳವರಾಗಿದ್ದೇವೆ. ಆದರೆ ಅಲ್ಲಿಯಂತ ನಾವೆಂದೂ ಪ್ರಯಾಣ ಮಾಡಿಲ್ಲವಾಗಿ ಅಲ್ಲಿಗೆ ಹೋಗಿಬಂದಿರುವಂತಹ ಪುಣ್ಯಾತ್ಮರುಗಳು ಬೆಂಗಳೂರಿಂದ ಯಾವ ಮಾರ್ಗವಾಗಿ ಹೊರಡಬೇಕು, ಎಷ್ಟು ಕಡೆ ರೈಲನ್ನು ಬದಲಾಯಿಸಬೇಕು, ಯಾವ ಸ್ಥಳಗಳಲ್ಲಿ ಸತ್ರಗಳಿರುವುವು, ಬೆಟ್ಟದ ಹತ್ತಿರಕ್ಕೆ ರೈಲುಮಾರ್ಗವಿಲ್ಲದಿದ್ದಲ್ಲಿ ಯಾವ ಸ್ಟೇಷನ್ನಿನಲ್ಲಿಳಿದು ಯಾವ ರೀತಿಯಾಗಿ ಹೋಗಬೇಕು, ಬಂಡಿಗಳು ಸಿಕ್ಕುವುವೆ? ರೈಲು ಛಾರ್ಜೆಷ್ಟಾಗುವುದು, ಇತ್ಯಾದಿ ವಿಷಯಗಳನ್ನು ವಿಶದವಾಗಿ ಈ ಪತ್ರಿಕಾಮೂಲಕ ಪ್ರಕಟಿಸಿ ನಮ್ಮಂತಹ ಯಾತ್ರಿಕರಿಗೆ ಸಹಾಯಮಾಡಿ ಪುಣ್ಯಭಾಗಿಗಳಾಗುವರೆಂದು ನಿರೀಕ್ಷಿಸುವ,

ಜವಳಿಯಂಗಡಿ ಹ ಸಿದ್ದಪ್ಪ, ತುಂಕೂರು.

ವೀರಶೈವತರುಣರ ಸಂಘ, ಬಳ್ಳಾರಿ.

ಬಳ್ಳಾರಿಯಲ್ಲಿರುವ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ ವಿದ್ಯಾರ್ಥಿಗಳು ಜನವರಿ ೩೧ ನೆ ತೇದಿಯಲ್ಲಿ ಬಳ್ಳಾರಿ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ವೇ|| ಸೋಮಶೇಖರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಕೂಡಿಸಿದ್ದರು. ಶ್ರೀಮದುಜ್ಜಯಿನೀ ಸಂಸ್ಥಾನ ಪಂಡಿತ ಧರ್ಮರತ್ನ ಪದವಿಭೂಷಿತರಾದ ಉಮಚಗಿ ಶಂಕರಶಾಸ್ತ್ರಿಗಳು ವೀರಶೈವ ಬಾಲಕರ ವೃದ್ಧಿಮಾರ್ಗಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸಮಾಡಿದರು. ಈ ಸಂಘದ ಬಾಲಕರಲ್ಲದೆ ಇನ್ನೂ ಅನೇಕ ಮಹಾಶಯರು ಈ ಸಭೆಗೆ ಆಗಮಿಸಿದ್ದರು. ಪ್ರೇಕ್ಷಕರು ಅವರ ಉಪನ್ಯಾಸಕ್ಕೆ ಅಭಿನಂದಿಸಿದರು. ಕೃತಜ್ಞತಾಪೂರ್ವಕವಾಗಿ ಈ ಸಂಘದ ಸೆಕ್ರಿಟರಿಯವರು ಇವರಿಗೆ ಪುಷ್ಪಮಾಲಿಕೆಗಳನ್ನು ಅರ್ಪಿಸಿದ ನಂತರ ಶ್ರೀ ಪಂಚಾಚಾರ್ಯರನ್ನು ಭಜಿಸುತ್ತ ಸಭೆಯು ಮುಕ್ತಾಯವಾಯಿತು.

ವೀರಶೈವ ತರುಣರ ಸಂಘ ಬಳ್ಳಾರಿ.

ದಾವಣಗೆರೆ ವೀರಶೈವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ.

೧೯೨೧ ನೇ ಇಸವಿಯಲ್ಲಿ ನಡೆಯುವ ಮೈಸೂರ್ ಲೋವರ್‌ಸೆಕೆಂಡರಿ ಮತ್ತು ಸ್ಕೂಲ್ ಫೈನಲ್ (ಮೆಟ್ರಿಕ್) ಪರೀಕ್ಷೆಗಳಲ್ಲಿ ಅಂದರೆ ಮೇಲೆ ಹೇಳಿರುವ ಮೈಸೂರ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಹೊಂದುವ ಮತ್ತು ಸ್ಕೂಲ್ ಫೈನಲ್‌ನಲ್ಲಿ ಕಂಪ್ಲೀಟ್ ತೇರ್ಗಡೆಹೊಂದುವ ಎಲ್ಲಾ ವೀರಶೈವ ವಿದ್ಯಾರ್ಥಿಗಳಿಗೂ ಕೆಳಗಿನ ವಿಳಾಸದವರು ಯೋಗ್ಯವಾದ ಬಹುಮಾನವನ್ನು ಕೊಡಲು ಅಪೇಕ್ಷಿಸಿದ್ದಾರೆ.

M. Shanmukappa,
Cotton Press Factory,
Davangere.

ಜಾಹೀರ ಪ್ರಕಟನೆ.

ಯಾವತ್ತು ನಮ್ಮ ಹಿಂದೂ ಮತಬಾಂಧವರಿಗೆ ಸೂಚಿಸುವದೇನಂದರೆ, ಮುಂದಿನ ೧೮೪೩ ದುರ್ಮತಿ ಸಂವತ್ಸರದಲ್ಲಿ ಆದಿಯಿಂದ ಅಂತ್ಯದವರೆಗೆ ವಿವಾಹಮುಹೂರ್ತಗಳೇ ಇಲ್ಲೆಂತಲೂ ಕೆಲವರು ವೈಶಾಖ ಜ್ಯೇಷ್ಠ ಮಾಸಗಳಲ್ಲಿ ವಿವಾಹಾದಿಮುಹೂರ್ತಗಳು ದೊರೆಯುವದಿಲ್ಲೆಂತಲೂ ಸಮಾಜದಿಂದ ಸುದ್ದಿ ಹರಡಿರುವರು. ಈ ಸುದ್ದಿಯು ಯಾವತ್ತರಲ್ಲಿ ವ್ಯಾಪಿಸಿ ಮುಂದೆ ಮಾಡತಕ್ಕವರೂ ಇದೇ ಫಾಲ್ಗುಣ ಅಂತ್ಯದ ಒಳಗಾಗಿ ಮಾಘ ಫಾಲ್ಗುಣದಲ್ಲಿಯೇ ವಿವಾಹಮಾಡಬೇಕೆಂದು ತೊಂದರೆಪಡುತ್ತಿರುವರು. ಆದರೆ ಈ ಪ್ರಕಾರ ತೊಂದರೆಪಡುವ ಕಾರಣವಿಲ್ಲ. ಮುಂದಿನ ದುರ್ಮತಿ ಸಂವತ್ಸರದ ವೈಶಾಖ ಶುದ್ಧದಲ್ಲಿಯೂ ಜ್ಯೇಷ್ಠ ಮಾಸದಲ್ಲಿಯೂ ಉಳಿದ ಕಾರ್ತಿಕ ಮಾರ್ಗಶೀರ್ಷಾದಿ ಮಾಸಗಳಲ್ಲಿಯೂ ಬಲವಾದ ವಿವಾಹಮುಹೂರ್ತಗಳು ಸಿಗುವವು, ಇದಕ್ಕೆ ಅನೇಕ ಸಿದ್ಧಾಂತ ಆಧಾರಗಳುಂಟು.

ಎಸ್ ಎಚ್. ಸಿದ್ಧಾಂತಿಗಳು ಹಿರೇಮಠ,
ಮು-ಹೂಲಿ, ಪೋ-ಮನೋಳಿ ಡಿ-ಬೆಳಗಾವ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ಪಷ್ಟವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹರದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೪—೦ ; ಹರದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

12

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇನೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್
ಮಾಡಲ್ಪಟ್ಟಿರುವ

47

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೆ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವುವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಲೇಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5-0-0.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕಂಪನಿ,
ಸಾಹುಕಾರ್‌ಪೇಟೆ, ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.
ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲು ಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
	ಬಿಡಿ ಮಣಿಗಳು 1ಕ್ಕೆ ಕ್ರಯ		
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5-6 ಮುಖ್ರ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
ಕಂಪನಿ, ಚೌಕಂಬಾ ಕಾಶೀ.

5-0-0 ಕ್ರಯದ ರೈಲ್ವೆ ಲೀವರ್ ವಾಚ ಇನಾಂ.



ಈ ಪೇನಾಗಳು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಒಂದೇ ಸಮವಾಗಿ ಬರೆಯುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ರೈಲ್ವೆಲೀವರ್‌ವಾಚ್ ಇನಾಮಾಗಿ ಕೊಡುವೆವು. ಗಡಿಯಾರವು ಅಮೆರಿಕಾ ದೇಶದಲ್ಲಿ ತಯಾರಾದದ್ದು. 22

ಕ್ರಯ ಗಡಿಯಾರ ಸಹಿತ ಪೇನಾ 1ಕ್ಕೆ ರೂ. 4-12-0

ವಿಳಾಸ—ಎಲ್ಜಿನ್ ವಾಚ್ ಕಂಪನಿ,
89 ನಾರಾಯಣಮೊದಲಿಬೀದಿ, ಮದರಾಸು.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೆರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

6 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಫ್ರೆಂಚ್ ರೋಮನಾಶಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
22 **ಪಾರ್ಕ್‌ಟೌನ್ ಮದರಾಸ್.**

ಫಲಶೋಧಕ ! ಮನೋಲ್ಲಾಸಿತವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು

20

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಳೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಪೀಡಿತರಾದ ಸ್ತ್ರೀಪುರುಷರಿರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊರಳಕೆಮ್ಮು ಇವುಗಳನ್ನು ತತ್ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0. 22

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
ಪಾರ್ಕ್‌ಟೌನ್ ಮದರಾಸು.

೧೯೨೧ನೆಯ ಇಸವಿ ಪೆಬ್ರವರಿ ತಾ|| ೨೦ರಿಂದ ೧೯೨೧ನೆಯ ಪೆಬ್ರವರಿ ತಾ|| ೨೬ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ರೌದ್ರಿನಾಮ ಸಂವತ್ಸರದ ಮಾಘಶುದ್ಧ ತ್ರಯೋದಶಿಯಿಂದ ಮಾಘಬಹುಳ ಚವತಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
20	[1] ಭಾನು	ತ್ರಯೋ	33-52	ಪುಷ್ಯ	41-17	9
21	ಸೋಮ	ಚತು	28-0	ಆಶ್ಲೆ	37-12	10
22	ಮಂಗಳ	ಪೌರ್ಣ	22-23	ಮಘಾ	33-29	11
23	ಬುಧ	ಪಾಡ್ಯ	17-1	ಪುಭ	30-25	12
24	[2] ಗುರು	ಬಿದಿಗೆ	13-10	ಉಭ	28-0	13
25	ಶುಕ್ರ	ತದಿಗೆ	9-47	ಹಸ್ತ	26-31	14
26	ಶನಿ	ಚೌತಿ	7-25	ಚಿತ್ತ	26-8	15

(1) ಪ್ರದೋಷ, ತ್ರಿನೇತ್ರರಸ್ವಾಮಿರಥ, (2) ಕಲೀಭಟ್ಟದ ಶ್ರೀಣನಾಸಸ್ವಾಮಿರಥ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಶರದಮಿಗಶರಾಜಮಂಡಲಚಿಹ್ನಿತಾ | ಧನಪಥಕ್ಕೆ ಶಾತತಾರಾ ಪಕ್ಷಿಜನಹೃತ್ಸ್ವಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲಸುತ್ರಮುಕಲಾಲೋಲಂಸುಧೀಭಂಗದ | ಸ್ತೋತ್ರನಾಥೀಶ್ವದಶೀಲ ನಾಕಲಿತ ಸಾಧ್ಯಕ್ಕಾಲವಾಲಂವಲಂ |
ಸೀಮಾತೀತಯಶಃಪ್ರಕಾಶವಿಭಲಂ ಸದ್ವೃತ್ತನಾರಾಕುಲಂ | ಪ್ರೇಮಂಚಿತ್ರೇಯಂಸದಾಪೂರಿಗೆ ಗೌರೀಕಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೮) ಮೈಸೂರ್ ಸ್ಟಾರ್ ಸ ೧೯೨೧ ನೆಯ ಇಸವಿ ಪೆಬ್ರವರಿ ತಾರೀಖು ೨೭ ನೆಯ ಭಾನುವಾರ (ಸಂಚಿಕೆ ೯

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷ್ಮೀವಿಲಾಸ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದಿಗೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮುಖದ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಾಡ್ಡೆ ಕರಗುತ್ತದೆ. ಸಂದುಗುನೋವು ಸೇದಲು ಹೋಗುತ್ತವೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗುವದು. ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಂದ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಶೀತಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು. ಡಿಮ್ಮು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
8 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾನುಷ್ಠಾನ, ಕರಣಹಸುಗೆ, ರಾಜಯೋಗ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ —ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶಿಖಾಮಣಿ —ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಕಸಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ಮೃತಿಮುಕ್ತಾವಳಿ ೮ಆಣೆ; ರತ್ನಾಕರಶತಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ವೀರಶೈವಾಚಾರವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೪—೦
ಬಾರುಶೀಲಚಾತ್ರ	೦— ೯—೦
ಪಂಚಾಂಗ	೦— ೪—೦

ಲಂಡನ್ ಲೀವರು ವಾಚು.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೋವ್‌ಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಬಂಗಾರದ ಚಕ್ರಗಳಿಂದ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವ 1, ಬೀಸಣಿಗೆ 1, ಬ್ರೂಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮಕಿ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚರ್ಮದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟ್ ವಾಚು



ಕ್ರಯ ಸರಪಣಿಸಹಿತ 7-0-0, ಸೀಮೆಚರ್ಮದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟ್ ವಾಚು 5-0-0, ಸರಪಣಿ ಸಹಿತ 6-0-0

48 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.
ಸಿನಿಮೊಟೊಗ್ರಾಫ.

48

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯಕರವಾಗಿ ರೈಲು ಹೋಗುವದು, ಚೀನಾ ದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳುವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರಿಕೆಯಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ತಿರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪತ್ಯ ಮದನೋದ್ಭವಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಬಾತಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಿಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶಯ್ಯರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕಕ್ಯಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

3

ಪುರುಷನ ಇಂದ್ರಿಯಕ್ಕೆ ದುಷ್ಟವರ್ತನದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು, ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕ ಔಷಧ ಸಂಗಡ. ಟಪಾಲುಖರ್ಚು ಬೇರೆ, ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

ವಜ್ರದ ಬೆಂಡೋಲೆ.



ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೆಕಲ್ಲಿನ ಬೆಂಡೋಲೆ 3—0—0.
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆವು. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

23 ಕ್ರಯ 1ಕ್ಕೆ 1—4—0

ವಜ್ರದ ಗುಂಡಿಗಳು.



ಈ ಗುಂಡಿಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿಸಲ್ಪಟ್ಟಿದೆ. ನೋಡುವವರು ಸಾಚಾವಜ್ರದ ಗುಂಡಿಗಳೆಂದು ಹೇಳುವರು. ಈ ಗುಂಡಿಗಳು ಆಸ್ಟ್ರೇಲಿಯಾ ದೇಶದಲ್ಲಿ ತಯಾರಿಸಿದ್ದು. ಷರಟು, ಕೋಟು, ಜಾಕೀಟು ಮುಂತಾದವುಗಳಿಗೆ ಪ್ರತಿಯೊಬ್ಬರೂ ಹಾಕಿಕೊಳ್ಳಬಹುದು.

ಕ್ರಯ 4 ಗುಂಡಿಗಳ ಸೆಟ್ 1ಕ್ಕೆ 1—4—0.

ಎಲೆಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದು ಹಚ್ಚುವದಕ್ಕೆ ಬೆಂಕಿಕಡ್ಡಿ ಅಗತ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆಗೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವುದಿಲ್ಲ. ಬೀಡಿ ಸಿಗರೇಟು ಸೇದುವವರಿಗೂ ಪ್ರಯಾಣಿಕರಿಗೂ ಬೇಕಾದದ್ದು.

ಕ್ರಯ 1—12—0.

ವಿಳಾಸ: —ಎಸ್. ಆರ್. ಕ್ರಿಷ್ಣ ಅಂಡ್‌ಕೋ
89. ನಾರಾಯಣಮೊದಲಿ ಸ್ಟ್ರೀಟ್ ಮದ್ರಾಸ್.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಫೆಬ್ರವರಿ ತಾ|| ೨೭ನೆಯ ಭಾನುವಾರ.

ಅಶಸ್ತ್ರವಧೆ.

ಸಹಾಯನಿರಾಕರಣವಾದಿಗಳಿಗೆ ಪ್ರಭುತ್ವದ ಕೈಕಾಲುಗಳನ್ನೆಲ್ಲಾ ಸ್ತಂಭನಗೊಳಿಸಬೇಕೆಂಬುದೇ ಮುಖ್ಯೋದ್ದೇಶ. ಜನಸಹಾಯ ಧನಸಹಾಯಗಳೊಂದೂ ದೊರೆಯದಂತೆ ಮಾಡಿದರೆ ಸರ್ಕಾರದ ಕೆಲಸಗಳೆಲ್ಲಾ ಕಟ್ಟಾಗಿ ಹೋಗುವುವೆಂದು ಅವರ ಯೋಚನೆ. ಈ ಉದ್ದೇಶದಿಂದಲೇ ಅವರು ನಿಯಮನಿರ್ಮಾಣ ಸಭಾ ಸಭಿಕತ್ವ ವಿಸರ್ಜನೆ ಮೊದಲಾದುವುಗಳಿಗೆ ತೊಡಗಿದರು. ಇವರುಗಳು ಸಭೆಗಳಿಂದ ಸಿಡಿದು ದೂರವಾಗಿ ನಿಂತುದು ಕೆರೆಯೊಡನೆ ಮುಳಿಸಿಕೊಂಡು ನಿಂತಂತಾಯಿತೇ ಹೊರತು ಸಭೆಗಳೇನೂ ನಿಲ್ಲಲಿಲ್ಲ. ಕೃತಕರ್ಮಕ್ಕೆ ಈಗಾಗಲೇ ಪಶ್ಚಾತ್ತಾಪಪಡುವ ಅವಸ್ಥೆಯು ಇವರಿಗೆ ಬಂದಿದೆ. ಡ್ಯೂಕ್ ಆಫ್ ಕನ್ನಾಟ್‌ರವರು ಸಭಾ ಪ್ರಾರಂಭೋತ್ಸವಗಳಿಗೆ ಬಂದಾಗ ಹರತಾಳ, ಬಹಿಷ್ಕಾರ ಪ್ರಕಟನೆ, ಖಂಡನ ಸಭೆ-ಇವುಗಳನ್ನು ಕೊನೆಮೊದಲಿಲ್ಲದಷ್ಟು ಆಯಾ ಪಟ್ಟಣಗಳಲ್ಲೆಲ್ಲಾ ನಡೆಯಿಸಿದರು. ಅವೆಲ್ಲಾ ತನ್ನ ಮೂಗನ್ನು ಕುಯ್ದುಕೊಂಡು ನೆರೆಗೆ ಅಪಶಕುನವನ್ನು ತೋರಿಸುವಷ್ಟೇ ಫಲಪ್ರದವಾದುವು. ಸ್ವತಃ ವಿಕ್ಟೋರಿಯಾ ಚಕ್ರವರ್ತಿನಿಯವರ ಗರ್ಭೋದ್ಭೂತರೂ, ಚಕ್ರವರ್ತಿಯವರ ಚಿಕ್ಕಪ್ಪಂದಿರೂ, ಈಗಣ ರಾಜವಂಶೀಯರಲ್ಲೆಲ್ಲಾ ಹಳಬರೂ, ಭರತಖಂಡದ ಪೂರ್ವಪರಿಚಿತರೂ, ಅಭಿಮಾನಿಗಳೂ ಆದ ಕನ್ನಾಟ್ ಪ್ರಭುಗಳು ಸಾರ್ವಭೌಮ ಪ್ರತಿನಿಧಿಗಳಾಗಿ ಈ ದೇಶಕ್ಕೆ ದಯಮಾಡಿಸಿದಾಗ್ಗೆ ಅವರ ಮುಂದೆಯೇ ಅವರ ಕೀರ್ತಿವಧೆಗಾಗಿಯೇ ಈ ಅಸಹಾಯವಾದಿಗಳು ತೋರಿಸಿದ ವರ್ತನವು ಭರತಖಂಡದ ಪವಿತ್ರ ಸಂಪ್ರದಾಯಕ್ಕೂ ಇದುವರೆಗೂ ಅದು ಗಳಿಸಿಕೊಂಡಿದ್ದ ಕೀರ್ತಿ ಪ್ರತಿಷ್ಠೆಗಳಿಗೂ ಕಳಂಕ ತರುವಂಥ ಕೃತ್ಯವಾಗಿ ಪರಿಣಮಿಸಿತು. ಇಂಥ ಯಶಸ್ಸನ್ನು ಸಹಾಯನಿರಾಕರಣ ಬಹಾದ್ದೂರರು ಆರ್ಜಿಸಿಕೊಂಡರು! ಕನ್ನಾಟ್ ಪ್ರಭುಗಳಿಗೆ ತೋರಿಸಿದ ಮಾನಾಪಮಾನಗಳು ಬೇರೆಯಲ್ಲ; ಸ್ವತಃ ಸಾರ್ವಭೌಮರಿಗೆ ತೋರಿಸಿದ ಮಾನಾಪಮಾನಗಳು ಬೇರೆಯಲ್ಲ. ಇದೇ ತರದ ಕೆಲಸವನ್ನು ಮೊಗಲರ ಕಾಲದಲ್ಲೂ ಪೇಷ್ವೆಯವರ ದರ್ಬಾರಿನಲ್ಲೂ ಪ್ರಜೆಗಳು ನಡೆಯಿಸಿದ್ದರೆ ಸಾಲುಗಲ್ಲಿಗೆ ಅಪ್ಪಣೆಯಾಗದೆ ಉಳಿಯುತ್ತಿರಲಿಲ್ಲ. ತಮ್ಮ ಮಹಾ ಸಾಮ್ರಾಜ್ಯಾಧಿಪತ್ಯಕ್ಕೆ ತಕ್ಕಂಥ ಮಹೋದಾರಗುಣಗಳು ಆಂಗ್ಲಪ್ರಭುತ್ವದಲ್ಲಿ ಮೂರ್ತೀಭವಿಸಿರುವುದರಿಂದಲೇ ಅವರು ಎಷ್ಟೋ ಶಾಂತಿಯಿಂದ ಇಂಥ ಕ್ಷುಲ್ಲಕ ಕೃತ್ಯಗಳನ್ನು ಸಹಿಸಿಕೊಳ್ಳುತ್ತ ಬಂದಿರುವರು. ಆದರೆ ಅವರ ಸಹನೆಯು ಅಸಾಮರ್ಥ್ಯ ಮೂಲಕವಾದುದೆಂದು ಸಹಾಯನಿರಾಕರಣವಾದಿಗಳು ಭಾವಿಸಿದರೆ ಮಾತ್ರ ಇವರ ಗೋರಿಗಳನ್ನು ಇವರೇ ತೋಡಿಕೊಂಡಂತಾಗುವುದು ನಿಜ.

ತಮ್ಮ ಪ್ರಯತ್ನವು ಪೂರ್ಣ ಯಶಸ್ಸಿಗೆ ಬರಲಿಲ್ಲವೆಂಬುದು ತೋರುತ್ತ ಬಂದಂತೆ ಸಹಾಯನಿರಾಕರಣವಾದಿಗಳು ತಮ್ಮ ಚಳವಳಕ್ಕೆ ತೀಕ್ಷ್ಣತೆಯನ್ನು ಹೆಚ್ಚಿಸುವುದು ಸಹಜವಾಗಿದೆ. ಅದರಿಂದ ಸರ್ಕಾರದವರ ಪ್ರತಿಯೊಂದು ಆಜ್ಞೆಯನ್ನೂ ಮಣ್ಣುಗೂಡಿಸಲು ಇವರು ಹಿಂದು ಮುಂದೆ ನೋಡುವುದಿಲ್ಲ. ಮತ್ತು ಹಾಗೆ ಮಾಡಲು ಇತರ ಜನರನ್ನೂ ಕೂಡ ಪ್ರೇರಿಸುತ್ತಾರೆ. ಇದರಿಂದ ಎಂಥ ಶಾಂತಮೂರ್ತಿಗೂ ಕೂಡ ಒಂದಲ್ಲದಿದ್ದರೆ ಮತ್ತೊಂದುಸಲ ರೇಗದೆಬಿಡುವುದಿಲ್ಲ. ಅಧಿಕಾರಧಿಕ್ಕಾರವು ಸಾಮಾನ್ಯವಾದುದಲ್ಲ. "ಆಜ್ಞಾಭಂಗೋನರೇಂದ್ರಾಣಾಮಶಸ್ತ್ರವಧಮುಚ್ಯತೇ" ರಾಜರ ಅಪ್ಪಣೆಗೆ ಭಂಗತರುವುದೆಂದರೆ ಆಯುಧವಿಲ್ಲದೆ ಕೊಲ್ಲುವಿಕೆಯೇ ಎಂದು ನೀತಿಶಾಸ್ತ್ರವಚನವಿದೆ. ಹೀಗಿರುವಾಗ ಪ್ರತ್ಯಕ್ಷವಾಗಿ ಪ್ರಭುತ್ವಾಜ್ಞೆಯನ್ನು ತಿರಸ್ಕರಿಸಲಿಕ್ಕೂ ದೇಶದಲ್ಲಿ ಪ್ರಭುತ್ವದ ಚಲನವನ್ನು ನಿರೋಧಿಸುವುದಕ್ಕೂ ಸಹಾಯನಿರಾಕರಣವಾದಿಗಳು ಹವಣಿಸಿಕೊಂಡು ನಿಂತರೆ ಅಧಿಕಾರಿಗಳು ಎಲ್ಲಿಯವರೆಗೆ ಸುಮ್ಮನಿರುವರು? ಅದಕ್ಕೂ ಒಂದು ಎಲ್ಲೆಯಿರಬೇಕಲ್ಲವೆ?

ಈಗಲಾದರೋ ಇದುವರೆಗಣಂತೆ ಇನ್ನೂ ಉದಾಸೀನ ಮಾಡಿಕೊಂಡಿರುವುದು ಪ್ರಮಾದಕರವೆಂದು ಅಧಿಕಾರಿಗಳು ಭಾವಿಸಿದಂತೆ ಕಾಣುತ್ತಿದೆ. ಭರತಖಂಡದ ಅನೇಕ ಭಾಗಗಳಲ್ಲಿ ನಿರ್ಬಂಧದ ಆಜ್ಞೆಗಳಿಗೆ ಆರಂಭವಾಗಿದೆ. ಸಭಾನಿರೋಧಕಶಾಸನಗಳೂ, ಸಂಚಾರನಿಷೇಧಕಾಜ್ಞೆಗಳೂ, ವಾಗ್ಬಂಧನನಿರೂಪಗಳೂ ಹೊರಬೀಳುತ್ತಿವೆ. ನಿರ್ಬಂಧಾಜ್ಞೆಗಳಿಗೆ ಇದುವರೆಗೆ ನೂತನ ಶಾಸನಗಳನ್ನೂ ಪೀನಲ್‌ಕೋಡಿನ ೧೦೮ ಎ. ೧೫೩ ಎ. ಸೆಕ್ಷನ್ನುಗಳನ್ನೂ ಉಪಯೋಗಿಸಿಕೊಳ್ಳುತ್ತಿದ್ದರು. ಈಗ ಕ್ರಿ. ಪ್ರೊ. ೧೪೪ ನೆ ಸೆಕ್ಷನನ್ನೂ ಉಪಯೋಗಿಸಿಕೊಳ್ಳಲುಪಕ್ರಮಿಸಿದ್ದಾರೆ. ಮಲಬಾರು ಜಿಲ್ಲೆಗೆ ಸೇರಿದ ಕಲ್ಲಿಕೋಟೆಯಲ್ಲಿ ವಕೀಲತನವನ್ನು ಬಿಟ್ಟು ಸಹಾಯನಿರಾಕರಣೋದ್ಯಮ ವ್ಯಾಪನೆಗಾಗಿ ಸಭೆಗಳನ್ನೂ ಉಪನ್ಯಾಸಗಳನ್ನೂ ನಡೆಯಿಸುತ್ತಿದ್ದ ಮಾಧವನ್‌ನಾಯರ್, ಗೋಪಾಲಮೆನನ್ ಎಂಬುವರೂ, ಮೊಯಿದೀನ್‌ಕೋಯಾ ಎಂಬ ಮಾಪಿಳ್ಳೆ ಪ್ರಮುಖರೂ ಸಹ ಖಿಲಾಫತ್ ಸಭೆಯನ್ನು ಕೂಡಿಸಲಿಕ್ಕೆ ಯತ್ನಿಸಿದ್ದರು. ಅದಕ್ಕೆ ಮದ್ರಾಸಿನಿಂದ ಮಿ|| ಯಾಕೂಬ್‌ಹುಸೇನರು ಕರೆಯಲ್ಪಟ್ಟು ಹೋದರು. ಇವರನ್ನು ಪ್ರಜೆಗಳು ಉತ್ಸವಪೂರ್ವಕವಾಗಿ ಕರೆದುಕೊಂಡು ಹೋದರು. ಬಡದಗಿ ಇಳಿಯುವುದರೊಳಗಾಗಿ ಅಲ್ಲಿಯ ಕಲೆಕ್ಟರಾದ ಮಿ|| ಥಾಮಸ್‌ರವರು-ಇಲ್ಲಿಯ ಖಿಲಾಫತ್ ಸಭೆಯಲ್ಲಿ ನೀವು ಸೇರಿ ಉಪನ್ಯಾಸ ಮೊದಲಾದುವುಗಳನ್ನು ಮಾಡಿದರೆ ಮಾಪಿಳ್ಳಾ ಮಹಮ್ಮದೀಯರಲ್ಲಿ ಉದ್ರೇಕವುಂಟಾಗುವುದೆಂದೂ, ಪ್ರಜಾಶಾಂತಿಗೆ ಭಂಗಬರುವುದೆಂದೂ ನೋಟೀಸನ್ನು ಕಳುಹಿಸಿದರು. ಇದೇ ತೆರದ ನೋಟೀಸು ಕಲ್ಲಿಕೋಟೆಯ ಮಾಧವಮೆನನ್ ಮೊದಲಾದ ಮೂವರಿಗೂ ಕೊಡಲ್ಪಟ್ಟಿತು. ಆದರೆ ಅವರುಗಳು ಮೇಜಿಸ್ಟ್ರೇಟರ ಆಜ್ಞೆಯನ್ನು ಪುರಸ್ಕರಿಸಲಿಲ್ಲ. ಸಭೆಯನ್ನು ನೆರವೇರಿಸಿದರು. ಅದರ ಮೇಲೆ ಮೇಜಿಸ್ಟ್ರೇಟರು ಮತ್ತೊಂದಪ್ಪಣೆಯನ್ನು ಮಾಡಿ ಆ ನಾಲ್ವರೂ ೬ ತಿಂಗಳವರೆಗೆ ಎಲ್ಲೂ ಉಪನ್ಯಾಸ ಮಾಡಕೂಡದೆಂದೂ, ಆ ವಿಷಯಕ್ಕೆ ಹೊಣೆಕೊಡಬೇಕೆಂದೂ ವಿಧಿಸಿದರು. ಅದಕ್ಕೆ ಅವರುಗಳು ಒಪ್ಪದೆ ನಿರಾಕರಿಸಿದರು. ಅದರ ಮೇಲೆ ೧೪೪ ನೇ ಸೆಕ್ಷನ್ ಪ್ರಕಾರ ಆ ನಾಲ್ಕು ಮಂದಿಗೂ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ ಕನ್ನಾನೂರ್ ಕಾರಾಗೃಹಕ್ಕೆ ಸೇರಿಸಿರುವರು.

ಅತ್ತ ಮಧ್ಯಪ್ರಾಂತದ ನಾಗಪುರದಲ್ಲಿ ಡಾಕ್ಟರ್ ಎಲ್. ಟಿ. ಪರಾಂಜಪೆ ಎಂಬುವರು ಪ್ರಜೆಗಳನ್ನು ಮದ್ಯಪಾನ ದುರ್ವ್ಯಸನದಿಂದ ಬಿಡಿಸುವುದಕ್ಕೆ ಪ್ರಯತ್ನಿಸುತ್ತಿರುವಲ್ಲಿ ಅಲ್ಲಿಯ ಸಬ್ ಡಿವಿಜನಲ್ ಮೇಜಿಸ್ಟ್ರೇಟರು ಇದೇ ೧೪೪ನೆ ಸೆಕ್ಷನ್ ಆಧಾರದ ಮೇಲೆ ನೋಟೀಸ್ಸು ಕೊಟ್ಟು-"ಕುಡಿತವನ್ನು ತಪ್ಪಿಸುವ ವ್ಯಾಜದಿಂದ ಮದ್ಯದ ವ್ಯಾಪಾರವನ್ನು ಕೆಡಿಸಿ ಆ ಅಂಗಡಿಯವರ ಆದಾಯಕ್ಕೆ ನಷ್ಟವನ್ನುಂಟುಮಾಡಿ, ಇನ್ನು ಮುಂದೆ ಗುತ್ತಿಗೆದಾರರು ಅಂಗಡಿಗಳನ್ನು ಗುತ್ತಿಗೆ ಹಿಡಿಯದಂತೆ ಮಾಡಿ, ಈಮೂಲಕ ಸರ್ಕಾರಕ್ಕೆ ತೊಂದರೆಯುಂಟುಮಾಡಬೇಕೆಂಬ ಉದ್ದೇಶದಿಂದ ಒಂದು ಉದ್ಯಮವು ಪ್ರಾರಂಭಿಸಲ್ಪಟ್ಟಿರುವಂತೆ ನನಗೆ ತೋರುತ್ತದೆ. ಈ ಉದ್ಯಮದಲ್ಲಿ ನೀವು ಅಧಾರಭೂತರಾಗಿದ್ದೀರಿ. ನೀವು ವಿದ್ಯಾರ್ಥಿಗಳಿಗೂ ಇತರರಿಗೂ ಪ್ರೇರೇಪಿಸಿ ಮದ್ಯದಂಗಡಿಗಳಿಗೆ ಹೋಗಿಬರುವವರನ್ನು ಅಪ್ರತಿಬಂಧಿಸಿ ಅವಮಾನಪಡಿಸಿ ಅವರುಗಳಿಗೆ ಮನೋವೇದನೆಯನ್ನುಂಟುಮಾಡಿಸುವಂತೆ ತಿಳಿಯಬಂದಿದೆ. ಇದರಿಂದ ಪ್ರಜಾ ಶಾಂತಿಗೆ ಭಂಗವಾಗುತ್ತದೆ. ಇಂಥ ಪ್ರಯತ್ನವನ್ನು ನೀವು ಮಾಡಕೂಡದು" ಎಂದು ಆಜ್ಞೆ ಮಾಡಿದರು. ಇದಕ್ಕೆ ಡಾಕ್ಟರು ಪ್ರತ್ಯುತ್ತರವನ್ನು ಕೊಟ್ಟಿದ್ದಾರೆ. ಇದರ ವಿಚಾರಣೆಯು ನಡೆಯುತ್ತಿದೆ. ಇದೇ ತೆರದ ನಿಷೇಧಾಜ್ಞೆಗಳು ಮಜರುಲ್‌ಹಕ್, ರಾಜೇಂದ್ರಪ್ರಸಾದ್, ಲಾಲಾ ಲಜಪತಿರಾಯ್, ಗಾಂಧಿ, ಸರ್ದಾರ್ ಸಿರ್ದಲ್‌ಸಿಂಗ್‌ಯವರುಗಳ ಮೇಲೂ ಕೆಲಕೆಲ ಕಡೆ ವಿಧಿಸಲ್ಪಟ್ಟಿವೆ. ನಿರಾಕರಣವಾದಿಗಳು ಚಳವಳಿಯನ್ನು ಹೆಚ್ಚಿಸಿ, ಅಧಿಕಾರಿಗಳನ್ನು ರೇಗಿಸಿ, ಇಂಥ ನಿರ್ಬಂಧವಿಧಿಗಳನ್ನು ಬೇಕೆಗೆ ಬರುವಂತೆ ಮಾಡಿಕೊಳ್ಳುತ್ತಿದ್ದಾರೆ. ಇದರ ಪರಿಣಾಮವು ಮುಂದೆ ಹೇಗಾಗುವುದೋ ತಿಳಿಯಲಿಲ್ಲ. ಅಧಿಕಾರಿಗಳ ಮೇಲೆ ಅಶಸ್ತ್ರವಧೆಯ ರೂಪವಾಗಿ ಉಪಯೋಗಿಸುತ್ತಿರುವ ಸಹಾಯನಿರಾಕರಣ ಚಳವಳವು ದೇಶಕ್ಕೆ ಎಂದಿಗೂ ಹಿತಕರವಾಗದು. ಪ್ರಜೆಗಳು ದೂರಾಲೋಚನೆಯಿಂದ ಎಚ್ಚತ್ತು ನಡೆದುಕೊಳ್ಳಬೇಕು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ತಾ|| ೨೪ರಲ್ಲಿ ಬೆಂಗಳೂರಿಗೆ ಚಿತ್ತೈಸಿತು.

ಮೈಸೂರು ನಿಯಮನಿರ್ಮಾಣ ಸಭೆಯು ಬರುವ ಮಾರ್ಚಿ ತಾ|| ೨೯ರಲ್ಲಿ ಬೆಂಗಳೂರಲ್ಲಿ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯುವುದು.

ಶ್ರೀಮದ್ಯುವರಾಜರವರ ಕೂಡ ದಿಲ್ಲಿಗೆ ಹೋಗಿದ್ದ ಮುಲ್ಕಿ ಮಿ|| ಮಿರ್ಜಾ, ಬಿ. ಎ., ಯವರು ಕಳೆದ ತಾ|| ೨೩ ರಲ್ಲಿ ರಾಜಧಾನಿಗೆ ಬಂದಿದ್ದು ಶ್ರೀ ಶ್ರೀಮನ್ ಮಹಾರಾಜರವರ ಕೂಡ ಬೆಂಗಳೂರಿಗೆ ಪ್ರಯಾಣಮಾಡಿದರು.

ರಾಜಧಾನಿಯಲ್ಲಿ ವೀರಶೈವವಿದ್ಯಾರ್ಥಿನಿಲಯವನ್ನು ಕಟ್ಟಲು ೩೦೦೦೦ ರೂಪಾಯಿಗಳನ್ನು ವಾಗ್ದಾನಮಾಡಿ ಆಗಲೇ ೧೫೦೦೦ ರೂ ಗಳನ್ನು ವಿದ್ಯಾಭ್ಯಾಸದ ಡೈ|| ಜನರಲ್‌ರವರ ವಶಕ್ಕೆ ಕೊಟ್ಟಿರುವ ಧನಾಢ್ಯರಾದ ಕಳ್ಳಿಯ ಸಾಹುಕಾರ್ ಮ|| ಚನ್ನಬಸಪ್ಪನವರು ಅಸ್ವಸ್ಥರಾಗಿದ್ದು ಈಗ ಆರೋಗ್ಯವಾಗಿರುವರೆಂದು ತಿಳಿಸಲು ಬಹಳ ಹರ್ಷವಾಗುತ್ತದೆ. ಪರಮೇಶ್ವರನು ಇವರಿಗೆ ದೀರ್ಘಾಯುಸ್ಸನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲಿನ ಮೇಲ್ವಿಚಾರಣೆಗೋಸ್ಕರ ಇರುವ ಟ್ರಸ್ಟ್ ಬೋರ್ಡಿಗೆ ಕಳೆದ ಎರಡು ವರ್ಷಗಳಿಂದಲೂ ಸೆಕ್ರೆಟರಿಯಾಗಿದ್ದ ರಾ|| ಬ|| ಬಿ. ಸುಬ್ಬರಾಯರ ಉದ್ಯೋಗದವಧಿಯು ಬರುವ ಮಾರ್ಚಿ ತಿಂಗಳಿಗೆ ಪೂರೈಸುವುದರಿಂದಲೂ ಅವರು ಪುನಃ ನೇಮಿಸಲ್ಪಡಲೊಪ್ಪದಿರುವುದರಿಂದಲೂ ಅವರ ಬದಲು ಡಾಕ್ಟರ್ ಟಿ. ಎಸ್. ತಿಮ್ಮಪ್ಪನವರು ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಸಲು ಸಂತೋಷವಾಗುತ್ತದೆ.

ರಾಜಧಾನಿಯಲ್ಲಿ ಕೆಲ ತಿಂಗಳಿಂದಲೂ ಪ್ಲೇಗು ರೋಗದಿಂದ ಆಗಾಗ್ಗೆ ೧-೨ ಮರಣಗಳಾಗುತ್ತಿವೆ. ಮತ್ತು ಈಗ ಕೆಲ ವಾರಗಳಿಂದಲೂ ಇನ್‌ಫ್ಲುಯೆಂಜಾ ಜ್ವರವು ವ್ಯಾಪ್ತವಾಗಿ ಪ್ರಬಲಿಸುತ್ತದೆ. ಪ್ರಾಯಶಃ ಪ್ರತಿಯೊಂದು ಮನೆಯಲ್ಲೂ ಒಬ್ಬೊಬ್ಬರು ಈ ರೋಗದಿಂದ ನರಳುತ್ತಿರುವರು. ಅಲ್ಲದೆ ಇದರಿಂದ ಕೆಲ ಮರಣಗಳೂ ಆಗಿವೆ. ಹಿಂದೆ ಬಹಳ ಹಾವಳಿಯನ್ನು ಮಾಡಿದ ಈ ರೋಗವು ಉಲ್ಬಣಿಸುವುದಕ್ಕೆ ಬಾರದಂತೆ ರಾಜಧಾನಿಯ ಆರೋಗ್ಯಶಾಖೆಯವರು ತಕ್ಕ ಏರ್ಪಾಟನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಕನ್ನಾಟ್ ಪ್ರಭುಗಳು ಭರತಖಂಡದಿಂದ ಸೀಮೆಗೆ ಪ್ರಯಾಣ ಮಾಡುವಾಗ್ಗೆ ಈಜಿಪ್ಟಿಗೂ ದಯಮಾಡಿಸಿ ತೆರಳುವವರಾಗಿದ್ದಾರೆ.

ಜರ್ಮನಿಯ ರಂಗು ಹೊಸದಾಗಿ ಮರಳಿ ಕಳೆದ ತಾ|| ೨೧ರಲ್ಲಿ ಬೊಂಬಾಯಿಗೆ ಬಂದಿದೆ. ಇದರ ಬೆಲೆ ಮೊದಲಾದುವುಗಳನ್ನು ಸರ್ಕಾರದವರು ಇಷ್ಟರಲ್ಲೇ ಪ್ರಕಟಿಸುವವರಾಗಿದ್ದಾರೆ.

ಕಳೆದ ತಾ|| ೨೩ ರಲ್ಲಿ ಕನ್ನಾಟ್ ಪ್ರಭುಗಳು ಬೊಂಬಾಯಿ ಶಾಸನಸಭೆಯನ್ನು ಪ್ರಾರಂಭಿಸಿದರು. ಈ ಸಭೆಯಲ್ಲಿ ರಾಜಕೀಯ ಭಾಷೆಯನ್ನೇ ಅರಿಯದ ಸಭಿಕರು ೧೦ ಮಂದಿ ಇದ್ದಾರಂತೆ.

ಭರತಖಂಡದ ಎಲ್ಲೆಕಟ್ಟಿನಲ್ಲಿ ರಾಜಕೀಯ ಸ್ಥಿತಿಯು ವಿಷಮವಾಗಿದೆಯೆಂದೂ ಅದನ್ನು ತಪ್ಪಿಸಲು ಪೂರ್ಣಪ್ರಯತ್ನವು ನಡೆಯುತ್ತಿದೆಯೆಂದೂ ಸಾಮ್ರಾಜ್ಯಶಾಸನಸಭೆಯಲ್ಲಿ ಸರ್ಕಾರದ ಪಕ್ಷದಿಂದ ಹೇಳಲ್ಪಟ್ಟಿದೆ.

ಬೀಹಾರ್ ರಾಷ್ಟ್ರದ ಭಾಘಲಾ ಪಟ್ಟಣದ ಎಲ್ಲೆಕಟ್ಟಿನಲ್ಲಿ ಪೊಲೀಸ್ ಸೂಪರಿಂಟೆಂಡೆಂಟರ ಅನುಮತಿಯಿಲ್ಲದೆ ಯಾವ ಸಭೆಯನ್ನೂ ಉತ್ಸವವನ್ನೂ ಜರುಗಿಸಕೂಡದೆಂದು ಸರ್ಕಾರದವರು ಕಟ್ಟುಮಾಡಿದ್ದಾರೆ.

ಲಾಹೋರ್ ಜಿಲ್ಲೆಯ ಸಿಕ್ ಸಭೆಗೂ ರಾಷ್ಟ್ರೀಯ ಕಾಂಗ್ರೆಸ್ ಸಂಘಕ್ಕೂ ಕಾರ್ಯದರ್ಶಿಯಾದ ಸರ್ದಾರ್ ಸಿರ್ದುಲ್‌ಸಿಂಗ್‌ರವರು ಲಾಹೋರ್ ಪಟ್ಟಣವನ್ನು ಬಿಟ್ಟು ಎಲ್ಲಿಗೂ ಹೋಗಕೂಡದೆಂದು ಜಿಲ್ಲಾ ಮೇಜಿಸ್ಟ್ರೇಟರ ಅಪ್ಪಣೆಯಾಗಿದೆ.

ಸಹಾಯನಿರಾಕರಣದ ಹುಚ್ಚಿನಿಂದ ಅಲ್ಲಲ್ಲಿ ಶಾಲೆಗಳನ್ನು ಬಿಟ್ಟು ಮೂರು ದಿನ ಕುಣಿದಾಡಿದ ವಿದ್ಯಾರ್ಥಿಗಳು ಬುದ್ಧಿಗೊಂಡು ಮರಳಿ ಶಾಲೆಗಳಿಗೆ ಸೇರಿಕೊಳ್ಳುತ್ತಿರುವರೆಂಬ ವಾರ್ತೆಗಳು ಈಗ ಬರುತ್ತಿವೆ. ಪುಣೆಯ ಅನೇಕ ವಿದ್ಯಾರ್ಥಿಗಳು ಮರಳಿ ಬಂದು ಪರೀಕ್ಷೆಗೆ ಕುಳಿತುಕೊಳ್ಳಲು ಬೇಡಿಕೊಂಡಿದ್ದಾರೆ.

ಒರಿಸ್ಸಾ, ಬೀಹಾರ್, ಬಂಗಾಳದ ಕಡೆಗಳಲ್ಲಿ ಹಿಂದುಗಳೂ ಯೂನಾದಿ ಬ್ರಾಹ್ಮಣರೂ ಸಹಾ ಈಗಲೂ ದೇವಿಗೆ ನರಬಲಿಯನ್ನು ಕೊಡುವುದುಂಟೆಂದೂ, ಮನುಷ್ಯರು ಸಿಕ್ಕದಿದ್ದಾಗ ಇತರ ಪ್ರಾಣಿಗಳನ್ನು ಬಲಿಕೊಡುವರೆಂದೂ ರಾಯಿ ಬಹದ್ದೂರ್ ಹರಿಲಾಲ್ ಎಸ್. ಸಿ. ಯವರು ಹೇಳಿರುತ್ತಾರೆ.

ಈಗಣ ಸಹಾಯನಿರಾಕರಣ ಚಳವಳದಿಂದ ಮದ್ಯಪಾನ ನಿಷೇಧವು ಅಲ್ಲಲ್ಲಿ ತಲೆಯೆತ್ತಿ ಅಂಗಡಿಗಳಲ್ಲಿ ಅದರ ವ್ಯಾಪಾರವನ್ನೇ ಕುಗ್ಗಿಸಿಬಿಟ್ಟಿದೆ. ಅನೇಕ ಪ್ರಾಂತಗಳಲ್ಲಿ ನೂತನ ವರ್ಷದ ಮದ್ಯದಂಗಡಿ ಗುತ್ತಿಗೆ ಹರಾಜು ಬಹಳ ಮಂದವಾಗಿ ಸರ್ಕಾರಕ್ಕೆ ನಷ್ಟಸಂಭವಿಸಲುಪಕ್ರಮವಾಗಿದೆ. ಇದನ್ನು ಕಂಡು ಅಲ್ಲಲ್ಲಿಯ ಸರ್ಕಾರದವರು ಕಣ್ಣಾಯಿ ಬಿಡುತ್ತಿದ್ದಾರೆ.

ಬೊಂಬಾಯಿಪಟ್ಟಣದ ಕಾರ್ಪೋರೇಷನ್ ಹಾಲಿನಲ್ಲಿ ನೂತನವಾಗಿ ಕಟ್ಟಲ್ಪಟ್ಟ ಸರ್ ಫೆರೋಜ್‌ಷಹಾಮೇಥಾ, ಸರ್ ದಿನ್ಷಾವಾಚಾ, ಸರ್ ಇಬ್ರಾಹಿಂರಹಿಮತ್ತುಲ್ಲಾ ಈ ಮಹನೀಯರುಗಳ ಭಾವಚಿತ್ರಗಳನ್ನು ಬೊಂಬಾಯಿ ಗೌರ್ನರಾದ ಸರ್ ಜಾರ್ಜ್‌ಲಾಯಿಡ್‌ರವರು ಕಳೆದ ತಾ|| ೧೫ರಲ್ಲಿ ಪ್ರಕಾಶಪಡಿಸಿ, ಆ ಮೂರ್ತಿತ್ರಯರ ಗುಣಾತಿಶಯಗಳನ್ನು ಕೊಂಡಾಡಿದರು.

ಮದರಾಸು ಆಧಿಪತ್ಯದಲ್ಲಿ ಮೊನ್ನೆ ೧೯೧೯-೨೦ ನೆ ವರ್ಷ ೧೧೯೫೩೦೦ ಎಕರೆ ಭೂಮಿಯಲ್ಲಿ ನೆಲಗಡಲೆ ವ್ಯವಸಾಯವನ್ನು ಮಾಡಿದ್ದರು. ಈ ೧೯೨೦-೨೧ ನೆ ವರ್ಷದಲ್ಲಿ ೧೫೦೦೦೦೦ ಎಕರೆ ಭೂಮಿಯಲ್ಲಿ ಆ ಬೆಳಸನ್ನಿಟ್ಟಿದ್ದರು. ಕಾಲದಲ್ಲಿ ಸ್ವಲ್ಪ ಮಳೆ ಕೈ ಕೊಟ್ಟಿತು, ಬೆಳಸು ಕಲಕಡೆ ಕೆಟ್ಟಿತು ಒಟ್ಟು ೬೯೫೩೦೦ ಟನ್ನುಗಳ ಕಾಯಿ ಆಗಿರಬೇಕೆಂದು ಊಹಿಸಲ್ಪಟ್ಟಿದೆ. ಇದರ ಮೇಲೆ ಈ ವರ್ಷ ಈ ಪದಾರ್ಥಕ್ಕೆ ಬೆಲೆಯಿಲ್ಲದೆ ಹೋಗಿದೆ.

ಚೀನಾದಿಂದ ೫೦ ಲಕ್ಷ ಔನ್ಸುಗಳ ಬೆಳ್ಳಿಯು ಕಳುಹಿಸಲ್ಪಟ್ಟಿದೆ. ಅಲ್ಲದೆ ಅಮೇರಿಕಾದಿಂದಲೂ ಬ್ರಿಟಿಷ್ ದ್ವೀಪಗಳಿಂದಲೂ ಭರತಖಂಡಕ್ಕೆ ಹೆಚ್ಚಾಗಿ ಬೆಳ್ಳಿಯು ಬಂದಿದೆ. ಅದು ಕಾರಣ ಈಗ ಈ ದೇಶದ ಮಾರುಕಟ್ಟೆಗಳಲ್ಲಿ ಬೆಳ್ಳಿಯ ಬೆಲೆಯು ಇಳಿದುಹೋಗಿದೆ. ಲಂಡನ್ನಿನಲ್ಲೂ ಅಮೇರಿಕಾದಲ್ಲೂ ಕೂಡ ಬೆಳ್ಳಿಯ ಬೆಲೆ ಇಳಿದುಹೋಗಿದೆ. ಬೆಳ್ಳಿಯ ವ್ಯಾಪಾರಿಗಳಿಗೆ ಲಾಭವು ತಗ್ಗಿಹೋಗಿದೆ. ಯಾರೂ ಹೆಚ್ಚಾಗಿ ಕೊಳ್ಳುತ್ತಿಲ್ಲವೆಂದು ಪ್ರಕಟವಾಗಿದೆ.

ತುರ್ಕಿ ಸಂಧಿಯನ್ನು ಕುರಿತು ಆಲೋಚಿಸುವುದಕ್ಕಾಗಿ ಇಷ್ಟರಲ್ಲೇ ಸೀಮೆಯಲ್ಲಿ ಕೂಡಲಿಕ್ಕಿರುವ ಸಭೆಗೆ ಈ ದೇಶದಿಂದ ಖಿಲಾಫತ್ ಸಂಘದ ಪ್ರತಿನಿಧಿಗಳಿಗೆ ಆಹ್ವಾನವು ಬಂದಿದ್ದಿತು. ಅದರ ಪ್ರಕಾರ ಯಾವದ್ಭಾರತ ಖಿಲಾಫತ್ ಸಂಘದ ಅಧ್ಯಕ್ಷರಾದ ಮಿ|| ಚೋಟಾನಿ, ಅನ್ಸಾರಿ, ಖಾಜಿಅಬ್ದುಲ್, ಗಾಫರ್, ಇವರುಗಳು ಕಳೆದ ತಾ|| ೧೯ ರಲ್ಲಿ ಬೊಂಬಾಯಿಯಿಂದ ಹಡಗನ್ನು ಹತ್ತಿ ಪ್ರಯಾಣಮಾಡಿದರು. ಇಂಡ್ಯಾ ಸರ್ಕಾರದವರು ಮಿ|| ಹುಸೇನ್‌ಇಮಾಂರವರನ್ನೂ ಎಚ್.ಎಚ್. ಆಗಾಖಾನರನ್ನೂ ಅದೇ ದಿನ ಕಳುಹಿಸಿಕೊಟ್ಟಿರುವರು. ಈ ಮಧ್ಯೆ ಖಿಲಾಫತ್ತನ್ನು ಕಟ್ಟಿಕೊಂಡು ಒದ್ದಾಡುವ ಮ|| ಗಾಂಧಿಯವರನ್ನು ಕೇಳುವವರೇ ಇಲ್ಲವೆ?

ಮ|| ಗಾಂಧಿಯವರು ಲಾಹೋರಿಗೆ ಹೋಗಿದ್ದರು. ಅಲ್ಲಿ ರಾಜದ್ರೋಹಶಾಸನದ ಪ್ರತಿಬಂಧವಿದ್ದುದರಿಂದ ಇವರು ಉಪನ್ಯಾಸ ಮಾಡಲಿಲ್ಲ. ಗುಜರನ್ವಾಲಾವಿಗೆ ಹೋಗಿ ೪-೫ ಸಾವಿರ ಮಂದಿಗಳು ಕೂಡಿದ್ದ ಸಭೆಯಲ್ಲಿ ಉಪನ್ಯಾಸಮಾಡುವಾಗ್ಗೆ-ವಿದ್ಯಾರ್ಥಿಗಳು ಸರ್ಕಾರಿ ಪಾಠಶಾಲೆಗಳನ್ನು ಬಿಟ್ಟು ಹತ್ತಿ ರಾಟೆಗಳನ್ನು ತಿರುವಬೇಕು. ಪಂಜಾಬು ದೇಶದಲ್ಲೆಲ್ಲಾ ಸ್ವರಾಜ್ಯನಿಧಿಗೆ ೧ ಲಕ್ಷ ರೂ. ಮಾತ್ರ ಕೂಡಿತು. ಇದು ಚಿಂತಾಸ್ಪದ. ಲಕ್ಷ ರೂ. ನಲ್ಲಿ ಸ್ವರಾಜ್ಯವು ಲಭಿಸುವುದಿಲ್ಲ. ಪಂಜಾಬಿನಲ್ಲಿ ಹಿಂದೂಮಹಮ್ಮದೀಯರ ಮೈತ್ರಿಯನ್ನು ಕಿಡಿಸಿ ಬೇರ್ಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನಿಸಿದ್ದಾರೆ. ಅಲ್ಲಿಯ ಹಿಂದೂಮಹಮ್ಮದೀಯರಲ್ಲಿ ಐಕ್ಯವಿಲ್ಲವೆಂದು ಕೇಳುವುದಕ್ಕೆ ವಿಷಾದಪಡುತ್ತೇನೆ. ಎಂದು ವಿಷಾದಪೂರಿತರಾಗಿ ಮಾತನಾಡಿದರು.

ಪಾಟ್ನಾದಲ್ಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಸರಸ್ವತೀಪೂಜಾ ಸಮಾರಂಭವು ನಡೆಯಿತು. ಆಗಣ ಸಭೆಗೆ ಖಾನ್ ಬಹದ್ದೂರ್ ಸಯ್ಯದ್ ಫಕೀರುದ್ದೀನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಅವರು ಮಾಡಿದ ಭಾಷಣದಲ್ಲಿ—"ಹಿಂದೂಮಹಮ್ಮದೀಯರ ಸಂಮೇಳನವು ಶ್ಲಾಘ್ಯವು. ಅದಕ್ಕೆ ಸೂಚನೆಯಾಗಿ ನನ್ನನ್ನು ಈ ಉತ್ಸವದ ಸಭೆಗೆ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಈಗಣ ವಿದ್ಯಾವಿಧಾನದಲ್ಲಿ ಲೋಪಗಳಿದ್ದರೆ ಅವನ್ನು ತೊಲಗಿಸಲಿಕ್ಕೆ ನಮ್ಮ ನಾಯಕರನ್ನು ನಾವು ಕೋರಿಕೊಳ್ಳಬೇಕೇ ಹೊರತು ವಿದ್ಯಾರ್ಥಿಗಳನ್ನು ಪಾಠಶಾಲೆಗಳಿಂದ ತೊಲಗಿಸಕೂಡದು. ಸರಸ್ವತೀದೇವಿಯನ್ನು ಆರಾಧಿಸುವ ಈ ಪವಿತ್ರ ಸಮಯದಲ್ಲಿ ವಿದ್ಯಾರ್ಥಿಗಳಾದ ನೀವುಗಳು ಸನ್ಮಾರ್ಗವನ್ನೂ ಪಾಠಶಾಲೆಗಳನ್ನೂ ಬಿಡುವುದಿಲ್ಲವೆಂಬ ವಿಷಯಕ್ಕೆ ಪ್ರಮಾಣವನ್ನು ಮಾಡಬೇಕು" ಎಂದು ಹೇಳಿದರು.

ದಿಲ್ಲಿ ಪಟ್ಟಣದಲ್ಲಿ ನಾನಾ ವರ್ತಕಸಂಘಗಳವರು ಕೋಟ್ಯಂತರ ರೂ. ಗಳ ಬೆಲೆಯ ಹಲವು ಮೋಟರುಗಳನ್ನು ಪ್ರದರ್ಶನಕ್ಕಿಟ್ಟಿದ್ದರು. ಕಳೆದ ತಾ|| ೧೭ರಲ್ಲಿ ಇವುಗಳಿದ್ದ ಪಶ್ಚಿಮ ಭಾಗಕ್ಕೆ ಅಗ್ನಿಪ್ರವೇಶವಾಗಿ ಹಲವು ಬಂಡಿಗಳು ಭಸ್ಮವಾದುವು. ಬಿದಿರುತಟ್ಟಿ ಗೋಣಿತಾಟು ಮೊಟ್ಟೆ ಇವುಗಳಿಂದ ಕಟ್ಟಿದ್ದ ಚಪ್ಪರಗಳಲ್ಲಿ ಮೋಟಾರುಗಳನ್ನು ನಿಲ್ಲಿಸಿದ್ದರು. ಆ ದಿನ ಸಾಯಂಕಾಲ ೫ ಗಂಟೆಗೆ ಹೇಗೋ ಅಗ್ನಿಪ್ರವೇಶವಾಯಿತು. ಗಾಳಿಯು ಬಲವಾಗಿ ಬೀಸುತ್ತಿದ್ದಿತು. ಆರಿಸುವುದಕ್ಕೆ ಮಹಾಪ್ರಯತ್ನ ಮಾಡಿದರೂ ೧೫ ನಿಮಿಷಗಳೊಳಗಾಗಿ ಕೆಲಭಾಗವು ಸುಟ್ಟುಹೋಯಿತು. ೭ ಲಕ್ಷ ರೂಪಾಯಿಗಳ ನಷ್ಟಸಂಭವಿಸಿರಬಹುದೆಂದು ಊಹಿಸಲ್ಪಟ್ಟಿದೆ. ಭರತಪುರ ಮಹಾರಾಜರ ೧|| ಲಕ್ಷ ರೂ. ಬೆಲೆಬಾಳುವ ಒಂದು ಮೋಟಾರು ಇವುಗಳಲ್ಲಿದ್ದು ಅದು ಕಳೆದ ೧೭ರಲ್ಲೇ ಹೊರಟುಹೋಗಿದ್ದಿತಂತೆ. ಅದರಿಂದ ಅದು ಉಳಿದಿತು.

ನಮ್ಮ ನೂತನ ವೈಸ್‌ರಾಯಿ ರೀಡಿಂಗ್ ಪ್ರಭುಗಳಿಗೆ ಕಳೆದ ತಾ|| ೧೭ ರಲ್ಲಿ ಸೀಮೆಯ ಹೈಡ್‌ಪಾರ್ಕ್ ಹೋಟೇಲಿನಲ್ಲಿ ಮಿ|| ವಿನ್‌ಸ್ಟನ್ ಚರ್ಚಿಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಔತಣವು ನಡೆದಿತು. ಆಗ ಚರ್ಚಿಲ್‌ರವರು ರೀಡಿಂಗ್‌ರವರ ಯೋಗ್ಯತಾವಿಶೇಷವನ್ನು ಕೊಂಡಾಡಿ, ಈಗ ಭರತಖಂಡಕ್ಕೆ ಎಂಥವರು ಬೇಕಾಗಿದ್ದಾರೋ ಅಂಥವರನ್ನೇ ವೈಸ್ರಾಯರನ್ನಾಗಿ ಕಳುಹಿಸುತ್ತಿದ್ದೇವೆಂದು ಹೇಳಿದರು. ಅದಕ್ಕೆ ಲಾರ್ಡ್ ರೀಡಿಂಗ್‌ರವರು ಉತ್ತರಕೊಡುವಾಗ್ಗೆ-"ನಾನು ಭರತಖಂಡಕ್ಕೆ ಹೋಗುವವನಾಗಿದ್ದೇನೆ. ಅಲ್ಲಿರುವ ಭಾರತೀಯರು ನಮ್ಮ ಇಂಗ್ಲೀಷರಂತೆಯೇ ದಯಾದ್ರ್ರಹೃದಯರೂ ಕೃತಜ್ಞರೂ ಆಗಿರುವರೆಂದು ನನ್ನ ನಂಬುಗೆ. ಭರತಖಂಡಕ್ಕೆ ನ್ಯಾಯವೇ ಬೇಕಾಗಿರುವುದು. ಆ ನಂಬುಗೆಯಿಂದಲೇ ನಾನು ಕೆಲಸ ಮಾಡುತ್ತೇನೆ. ನಾನು ಅವರ ವಿಷಯದಲ್ಲಿ ಹೇಗೆ ನ್ಯಾಯದಿಂದ ಪ್ರವರ್ತಿಸುವೆನೋ ಅವರೂ ಹಾಗೇ ಕೃತಜ್ಞರಾಗಿರುವರು" ಎಂದು ಹೇಳಿದರು.

ಕಲ್ಕತ್ತಾದಲ್ಲಿ ಟ್ರಾಂವೆ ಕೆಲಸಗಾರರು ಮುಷ್ಕರಹಿಡಿದು ನಿಂತಿದ್ದರು. ಕಂಪನಿಯವರು ಆಂಗ್ಲೋ ಇಂಡಿಯನ್ನರನ್ನು ನಿಯಮಿಸಿ, ಅವರಿಂದ ಬಂಡಿಗಳನ್ನು ನಡೆಯಿಸಲುಪಕ್ರಮಿಸಿದರು. ಮುಷ್ಕರಹಿಡಿದು ನಿಂತಿದ್ದ ಕೆಲಸಗಾರರು ಆಂಗ್ಲೋ ಇಂಡಿಯನ್ನರು ನಡೆಯಿಸುತ್ತಿದ್ದ ಬಂಡಿಗಳನ್ನು ತಡೆದರು. ಪರಸ್ಪರ ಕಲಹವಾಯಿತು. ಬೈಗುಳಗಳೂ ಗುದ್ದಾಟಗಳೂ ಜರುಗಿದುವು. ಗುಂಪಿನ ಜನರು ಹೆಚ್ಚಾಗಿದ್ದುದರಿಂದ ಆಂಗ್ಲೋ ಇಂಡಿಯನ್ನರು ದೇಹರಕ್ಷಣೆಗಾಗಿ ಓಡಿಹೋಗಿ ಒಂದು ಮನೆಯನ್ನು ಸೇರಿ ಟೆಲಿಫೋನಿನ ಮೂಲಕ ಪೊಲೀಸ್ ಕಮಿಷನರಿಗೆ ಸುದ್ದಿಕೊಟ್ಟರು. ಸಾಯುಧರಾದ ಪೊಲೀಸರು ಬಂದರು. ಮುಷ್ಕರಗಾರರು ಅವರ ಮೇಲೆ ಕಲ್ಲುಗಳನ್ನು ಬೀರಿದರು. ಅದನ್ನು ತಡೆಯುವುದಕ್ಕೆ ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಪೊಲೀಸರಿಗೆ ಕೆಲ ಕಲ್ಲೇಟಿನ ಗಾಯಗಳೂ ಆದುವು. ಅದರ ಮೇಲೆ ಅವರು ತುಪಾಕಿಗಳನ್ನು ಪ್ರಯೋಗಿಸಿದರು. ಗುಂಪಿನವರಲ್ಲಿ ಕೆಲರಿಗೆ ಗಾಯಗಳಾಗಲು ಉಳಿದವರೆಲ್ಲಾ ಓಡಿದರು. ಗಾಯಗೊಂಡಿದ್ದವನೊಬ್ಬನು ವೈದ್ಯಶಾಲೆಯಲ್ಲಿ ಸತ್ತನು.

ವಿದೇಶ ವೃತ್ತಾಂತಗಳು.

ಈಗ ನಡೆಯಲಿಕ್ಕಿರುವ ಸಭೆಗೆ ತುರ್ಕಿ ಪ್ರತಿನಿಧಿಗಳು ಬಂದು ನಿರ್ಣಯವಾಗುವವರೆಗೂ ತುರ್ಕಿ ಸಂಧಿಯು ಸ್ಥಿರವಾದುದಲ್ಲವೆಂದು ಆಂಗ್ಲ ಮುಖ್ಯಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಈಗ ಮೆಸಪೊಟೇಮಿಯಾದಲ್ಲಿರುವ ಸೈನ್ಯಗಳಿಗೆ ತಿಂಗಳೊಂದಕ್ಕೆ ೨೩ ಲಕ್ಷ ಪೌನುಗಳೂ, ಪಾಲಸ್ತೈನಿನಲ್ಲಿರುವ ಸೈನ್ಯಕ್ಕೆ ೫ ಲಕ್ಷ ಪೌನುಗಳೂ, ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಸೈನ್ಯಕ್ಕೆ ೨|. ಲಕ್ಷ ಪೌನುಗಳೂ ವೆಚ್ಚವಾಗುತ್ತಿರುವುವೆಂದು ಪಾರ್ಲಿಮೆಂಟಿನಲ್ಲಿ ತಿಳಿಯಿಸಲ್ಪಟ್ಟಿದೆ.

ಲಂಡನ್ನಿನಲ್ಲಿ ಕೂಡಲಿಕ್ಕಿರುವ ಪೂರ್ವದೇಶೀಯ ಸಂಧಿವಿಷಯಕ ಸಭೆಗೆ ತುರ್ಕಿಯ ಎರಡು ತೆರದ ಪ್ರಭುತ್ವದವರೂ ಒಟ್ಟಿಗೆ ಸೇರಿ ತಾವು ತಾವು ಮಾತನಾಡಿಕೊಂಡು ಸಾಮುದಾಯಕಪ್ರತಿನಿಧಿಗಳನ್ನು ಮಾತ್ರ ಕಳುಹಿಸತಕ್ಕುದೆಂದು ಏರ್ಪಾಟಾಗಿದೆ. ಆ ಪ್ರಕಾರಕ್ಕೇ ಸುಲ್ತಾನ್ ಪ್ರತಿನಿಧಿಗಳ ಜತೆಗೆ ಅಂಗೋರಾ ಪ್ರಭುತ್ವದ ಪ್ರತಿನಿಧಿಯಾಗಿ ಮುಸ್ತಾಫ್‌ಬೇಯವರು ಹೋಗಿದ್ದಾರಂತೆ.

ಸಾರ್ವಭೌಮರು ಮೊನ್ನೆ ವಾರ ಪಾರ್ಲಿಮೆಂಟನ್ನು ಆರಂಭಿಸುವಾಗ ಮಾಡಿದ ಭಾಷಣದಲ್ಲಿ ಐರ್ಲೆಂಡಿನವರು ದೌರ್ಜನ್ಯವನ್ನವಲಂಬಿಸುವುದರಿಂದ ಸ್ವರಾಜ್ಯವನ್ನೆಂದಿಗೂ ಸಂಪಾದಿಸಲಾರರು ಎಂದು ಹೇಳಿದರು. ಭರತಖಂಡದ ವಿಷಯವಾಗಿ ನಾಲ್ಕು ಮಾತುಗಳನ್ನಾಡಿದುದರಲ್ಲಿ ಕನ್ನಾಟ್ ಪ್ರಭುಗಳು ಆರಂಭಿಸಿದ ನೂತನ ಶಾಸನ ಸಭೆಗಳು ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವುವೆಂದು ಅಭಿಪ್ರಾಯಪಟ್ಟರು.

ಸ್ಪಾ ಪಟ್ಟಣದಲ್ಲಿರುವ ಕ್ರೈಸ್ತಮತ ಗುರುವು ವ್ಯಭಿಚಾರ ಮಾಡಿದರೆಂಬ ವಿಷಯವು ರುಜುವಾತಾದುದರಿಂದ ಅವರ ಮೇಲ್ಪಟ್ಟ ಲಿಂಕಾನ್ ಬಿಷಪ್‌ರವರು ಅವರ ಪೆನ್‌ಷನ್ನನ್ನು ನಿಲ್ಲಿಸಿಬಿಟ್ಟು ಅವರಿರುವ ಮನೆಯನ್ನು ಒಂದು ವಾರದೊಳಗಾಗಿ ಬಿಟ್ಟುಬಿಡಬೇಕೆಂದು ಆಜ್ಞಾಪಿಸಿದರಂತೆ. ಅಪ್ಪೀಲಿನಲ್ಲಿ ಅವರು ನಿರ್ದೋಷಿಗಳೆಂದು ಸಿದ್ಧವಾದರೆ ಈ ದಂಡನೆಯು ತಪ್ಪಿಸಲ್ಪಡುವುದು. ನಮ್ಮ ದೇಶದ ಗುರುಗಳಲ್ಲೂ ಸನ್ಯಾಸಿಗಳಲ್ಲೂ ಇಷ್ಟು ಕಟ್ಟುನಿಟ್ಟಿನ ಪರಿಶೋಧನೆಯನ್ನಿಟ್ಟರೆ ಎಷ್ಟು ಮಂದಿ ತೇಲಿ ನಿಲ್ಲಬಲ್ಲರು?

ಜರ್ಮನರಿಂದ ಸಂಪೂರ್ಣವಾಗಿ ನಷ್ಟಪರಿಹಾರವನ್ನು ಬರಮಾಡಿಕೊಳ್ಳಬೇಕೆಂಬ ದೀಕ್ಷೆಯು ಆಂಗ್ಲರಿಗೆ ವಿಶೇಷವಾಗಿದ್ದಂತೆ ಕಾಣುವುದಿಲ್ಲ. ಮುಖ್ಯ ಮಂತ್ರಿ ಲಾಯಿಡ್ ಜಾರ್ಜ್‌ರವರು ಪಾರ್ಲಿಮೆಂಟಿನಲ್ಲಿ ಈ ವಿಷಯವಾಗಿ ಮಾತನಾಡುವಾಗ್ಗೆ ಬರುವ ಕಾನ್‌ಫರೆನ್ಸ್ ಸಮಯದಲ್ಲಿ ಜರ್ಮನಿಯವರಿಂದ ಬರುವಷ್ಟನ್ನೆಲ್ಲಾ ಸೆಳೆದುಕೊಳ್ಳುವೆವೆಂದೂ, ಅದರ ಮೇಲೆ ಹೆಚ್ಚಿನ ತೀರ್ಮಾನಗಳೇನೂ ಆಗುವುದಿಲ್ಲವೆಂದೂ, ಜರ್ಮನರು ಇದುವರೆಗೆ ಕೊಟ್ಟುಬಿಟ್ಟಿರುವ ಹಡಗುಗಳು ಕಲ್ಲಿದ್ದಲು ಯುದ್ಧಸಾಮಗ್ರಿ ಇವುಗಳಿಗೆಲ್ಲಾ ಬೆಲೆ ಕಟ್ಟಿ ಪಜಾ ಹಾಕಿಕೊಳ್ಳುವೆವೆಂದೂ ಹೇಳಿದರು.

ಜಪಾನ್ ಯುವರಾಜರಿಗೆ ಜನರಲ್ ಪ್ರಿನ್ಸ್‌ಕೂನಿಯವರ ಕುಮಾರಿಯಾದ ನಾಗಾಕೋ ರಾಜಕುಮಾರಿಯನ್ನು ತಂದು ವಿವಾಹಮಾಡಿಕೊಳ್ಳಲು ವೀಳಯಪ್ರಸ್ತವು ನಡೆದಿತು. ಈ ಸಂಬಂಧದಿಂದ ಪೂರ್ವಾಚಾರಕ್ಕೆ ಭಂಗವಾಗುವುದೆಂದು ಅಲ್ಲಿಯ ಪ್ರಿವಿ ಕೌನ್ಸಿಲ್ ಪ್ರಸಿಡೆಂಟರಾದ ಯಮಗಾತಾ ಪ್ರಿನ್ಸ್‌ರವರೇ ಮೊದಲಾದ ಮುಖ್ಯಾಧಿಕಾರಿಗಳನೇಕರಲ್ಲಿ ಮನಸ್ತಾಪ ಹುಟ್ಟಿ ಕೆಲಸಗಳಿಗೆ ರಾಜೀನಾಮೆ ಕೊಟ್ಟರು. ಪ್ರಜೆಗಳಲ್ಲೂ ಗುಜುಗುಂಪಲು ಹುಟ್ಟಿತು. ಅದರ ಮೇಲೆ ಈ ನೂತನ ಸಂಬಂಧವು ಮಾನಸಿಕ ಮಾಡಲ್ಪಟ್ಟಿತೆಂದೂ, ಗದ್ದಲವೆಲ್ಲಾ ಶಾಂತವಾಗುತ್ತಿದೆಯೆಂದೂ ವರ್ತಮಾನ ಬಂದಿದೆ. ಜಪಾನರ ಪೂರ್ವಾಚಾರ ಶರಣ್ಯತೆಯು ಇನ್ನೂ ಎಷ್ಟು ದೃಢವಾಗಿದೆಯೆಂಬುದಕ್ಕೆ ಇದೊಂದು ನಿದರ್ಶನ. ನಮ್ಮ ಭರತಖಂಡದಲ್ಲಿ ರಾಜವಂಶೀಯರು ಕೂಡ ಸ್ವಚ್ಛಂದವಾಗಿ ಈಗ ವಿದೇಶಬಾಂಧವ್ಯವನ್ನೇ ಬಳೆಯಿಸುತ್ತಿದ್ದಾರೆ. ಇವರ ನಿರಭಿಮಾನಕ್ಕೆ ಇದೇ ದೃಷ್ಟಾಂತ.

ಪತ್ರವ್ಯವಹಾರ.

ಕಡೂರು ತಾಲ್ಲೂಕು ಮಲ್ಲೇನಹಳ್ಳಿ ಗ್ರಾಮದಲ್ಲಿ ನಡೆದ ಯುದ್ಧಶಾಂತ್ಯುತ್ಸವದ ಸಮಾರಂಭದಲ್ಲಿ ಗ್ರಾಮಸ್ಥರ ಮತ್ತು ಕಮಿಟಿ ಮೆಂಬರುಗಳ ಸಲಹೆಯಿಂದ ಸ್ಕೂಲು ಕಟ್ಟಡವು ತಳಿರುತೋರಣಗಳಿಂದ ಶೃಂಗರಿಸಿದ್ದಲ್ಲದೆ, ಗ್ರಾಮವು ಕೂಡಾ ಚಪ್ಪರತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಸ್ಕೂಲು ಮುಂಭಾಗದಲ್ಲಿ ಅಕ್ಕಪಕ್ಕಗಳಲ್ಲಿ ಬಾವುಟಗಳು ನೆಡಲ್ಪಟ್ಟಿದ್ದವು. ಶ್ರೀಮದಿಂಡ್ಯಾ ಚಕ್ರವರ್ತಿಗಳವರ ಶ್ರೀಮನ್ಮಹಾರಾಜರವರ ಭಾವಚಿತ್ರಗಳೂ, ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟಿದ್ದವು. ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ಅಕ್ಕಪಕ್ಕದ ಗ್ರಾಮದ ಮತ್ತು ಇದೇ ಗ್ರಾಮದ ಪ್ರಜೆಗಳಿಂದ ತುಂಬಲ್ಪಟ್ಟಿತ್ತು. ಈ ಸಮಯದಲ್ಲಿ ಸ್ಕೂಲ್ ಕಮಿಟಿ ಮೆಂಬರುಗಳು ಸದರಿ ಸ್ಕೂಲನ್ನು ಸ್ಥಾಪಿಸಿ ಮಕ್ಕಳುಗಳು ವಿದ್ಯಾವಂತರಾಗಲು ಅನುಕೂಲಿಸಿಕೊಟ್ಟ ಯಜಮಾನರ ಸೂಪರ್‌ವೈಜರವರ ಗುಣಕಥನವನ್ನು ಮಾಡಿ, ಗ್ರಾಮದೇಳಿಗೆ ವಿಷಯವಾದ ರಿಪೋರ್ಟನ್ನು ಸಹಾ ಓದಿದರು. ಬಳಿಕ ನಮ್ಮ ಗ್ರಾಮದ ಮ|| ಶಿದ್ದಪ್ಪನವರೂ, ಬುಕ್ಕ ಕೈಟ್ರಿಂ ಗ್ರಾಮಾಭಿವೃದ್ಧಿ ರೀಡಿಂಗ್‌ರೂಂ ಇವುಗಳ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು. ಮತ್ತು ನಮ್ಮ ಗ್ರಾಮಕ್ಕೆ ಸ್ಕೂಲ್‌ಮಾಸ್ಟರಾಗಿ ಬಂದಿರುವ ಎ|| ಚನ್ನಪ್ಪನವರು ಸ್ಕೂಲ್ ಅಭಿವೃದ್ಧಿ ವಿಷಯದಲ್ಲಿಯೂ ಬಾಲಕರ ವಿದ್ಯಾಭಿವೃದ್ಧಿಯಲ್ಲಿಯೂ ತುಂಬಾ ಮುತುವರ್ಜಿ ವಹಿಸುತ್ತಾರೆ. ಇವರು ನಮ್ಮ ಗ್ರಾಮಕ್ಕೆ ಬಂದು ಸುಮಾರು ೫-೬ ತಿಂಗಳುಮಾತ್ರವಾಗಿದ್ದರೂ ಬಾಲಕರ ಸಂಖ್ಯೆಯು ದಿನೇದಿನೇ ಹೆಚ್ಚುತ್ತಲಿದೆ. ಮುಂದುಕೂಡಾ ಇದೇ ರೀತಿ ಕೆಲಸಮಾಡುತ್ತಾರೆಂದು ನಂಬಿರುತ್ತೇನೆ. ಮಿ|| ಎ|| ಚನ್ನಪ್ಪನವರು ಮೈಸೂರು ಸರ್ಕಾರದವರಿಂದ ನಮ್ಮಗಳಿಗಿರುವ ಪ್ರಯೋಜನವನ್ನು ಕುರಿತು ಭಾಷಣಮಾಡಿದ್ದಲ್ಲದೆ ವಿದ್ಯಾಭಿವೃದ್ಧಿ ವಿಷಯವನ್ನು ಸಹಾ ತಿಳಿಸಿದರು. ಬಳಿಕ ಬಾಲಕರಿಂದ ಪದಪದ್ಯಗಳನ್ನು ಹಾಡಿಸಿ ಶ್ರೀಮದಿಂಡಿಯಾ ಚಕ್ರವರ್ತಿಗಳವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿ ಸಭಿಕರಿಗೆಲ್ಲ ಗಂಧಪುಷ್ಪ ತಾಂಬೂಲಗಳನ್ನು ಹಂಚಿ ಬಾಳೆಹಣ್ಣು ಮೊದಲಾದ ಸರ್ವಸಮಸ್ತರಿಗೂ ತಿಂಡಿಫಲಹಾರಗಳನ್ನು ಕೊಟ್ಟು ಜಯಜಯಮಹಾಪಾರ್ವತೀಪತೇ ಹರಹರಮಹಾದೇವ ಎಂಬ ಜಯಘೋಷದೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಕೈ|| ರಾವ್‌ಬಹದ್ದೂರ್ ಗುಬ್ಬಿ ತೋಟದಪ್ಪನವರ ಸ್ಮಾರಕ.

ಕೈಲಾಸವಾಸಿಗಳಾದ ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿರುವುದರಿಂದ ಆ ಮಹಾಪುರುಷರ ಸ್ಮಾರಕವನ್ನೇರ್ಪಡಿಸಿ ತಮ್ಮ ಕೃತಜ್ಞತೆಯನ್ನು ತೋರಿಸುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಕರ್ತವ್ಯವೆಂಬುದನ್ನು 1913 ನೆಯ ವರ್ಷದಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಗಾಗಿ ರಾಜಧಾನಿಗೆ ದಯಮಾಡಿಸಿದ್ದ ವೀರಶೈವ ದೊಡ್ಡಮನುಷ್ಯರುಗಳು ಸಭೆಸೇರಿ ಪರ್ಯಾಲೋಚಿಸಿ ಆಗ್ಗೆ ಕ್ರಿಯೆಕ್ಕೆ ಸಿದ್ಧವಾಗಿದ್ದ ಧರ್ಮಪ್ರವರ್ತಕರ ಭಾವಚಿತ್ರಪಟವನ್ನು ಕೊಡಿಸಿ ಧರ್ಮಸತ್ರದಲ್ಲಿ ಪ್ರತಿಷ್ಠಿಸಬೇಕೆಂದು ನಿರ್ಧರಿಸಿ 4 ಜನ ದೊಡ್ಡ ಮನುಷ್ಯರುಗಳಿಂದ 50 ರೂ. ಚಂದಾಹಣವು ಕೊಡಲ್ಪಟ್ಟಿದ್ದಾಗಿಯೂ, ಮುಂದೆ ತಕ್ಕ ಪ್ರಯತ್ನವು ನಡೆಯದೆಹೋದುದರಿಂದ ಆ ಕಾರ್ಯವು ಈವರೆಗೂ ನಿಲ್ಲುವೆ ಆಗಿ ಬಂದಿತೆಂದೂ ಇನ್ನುಮುಂದೆ ಈ ಸ್ಮಾರಕಕಾರ್ಯವನ್ನು ಅದಷ್ಟು ಜಾಗ್ರತೆಯಲ್ಲಿ ನೆರವೇರಿಸದೆ ಬಿಡುವುದು ಸರಿಯಲ್ಲವಾದುದರಿಂದ ಪ್ರತಿಯೊಬ್ಬ ವೀರಶೈವರೂ ನಿರ್ವಂಚನೆಯಿಂದ ಯಥಾಶಕ್ತಿ ಚಂದಾಹಣವನ್ನು ಜಾಗ್ರತೆಯಲ್ಲಿ ತಮ್ಮ ಹೆಸರಿಗೆ ಕಳುಹಿಸಿಕೊಟ್ಟು ಅಭಿಮಾನ ಪ್ರದರ್ಶನ ಮಾಡುವವರಾಗಬೇಕೆಂದೂ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಸೆಕ್ರೆಟರಿ ಮ|| ಜಿ. ಪರಮಶಿವಯ್ಯ ಬಿ.ಎ ಎಲ್.ಎಲ್.ಬಿ. ಯವರು ಈ ಸ್ಟಾರ್ ಪತ್ರಿಕೆಯ 2-3 ಸಂಚಿಕೆಗಳಲ್ಲಿ ಪ್ರಕಟಿಸಿರುವುದು ಸರಿಯಷ್ಟೆ. ಆದರೆ ಆ ಪ್ರಾರ್ಥನೆಯಂತೆ ಈವರೆಗೆಷ್ಟು ಚಂದಾಹಣವು ಬಂದಿರುವುದೆಂಬುದು ಈ ಸ್ಟಾರ್ ಪತ್ರಿಕೆಯಲ್ಲಿ ಸೆಕ್ರೆಟರಿಯವರು ಪ್ರಕಟಿಸದೆ ಇರುವುದರಿಂದ ತಿಳಿಯಲಾಶಕ್ಯವಾಗಿದೆ.

ಕೈ|| ತೋಟದಪ್ಪನವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಸ್ವಮತಸ್ಥರಾದ ವೀರಶೈವರುಗಳ ಪ್ರಯೋಜನಕ್ಕಾಗಿ ಧರ್ಮಕಾರ್ಯವನ್ನು ಮಾಡಿರುವುದನ್ನು ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಮೆಚ್ಚಿ "ಧರ್ಮಪ್ರವರ್ತಕ" ಎಂಬ ಬಿರುದನ್ನೂ, ಶ್ರೀಮದಿಂಡಿಯಾ ಚಕ್ರವರ್ತಿಯವರು "ರಾವ್‌ಬಹದ್ದೂರ್" ಎಂಬ ಬಿರುದನ್ನೂ ದಯಪಾಲಿಸಿರುವಾಗ್ಗೆ ಮಹಾಪುರುಷರ ಧರ್ಮಕಾರ್ಯಗಳಿಂದ ಅಪಾರವಾದ ಪ್ರಯೋಜನವನ್ನು ಪಡೆಯುತ್ತಿರುವ ವೀರಶೈವರು ದಾನಶೂರರ ಸ್ಮಾರಕಕಾರ್ಯವನ್ನು ಬಹುಕಾಲದ ಹಿಂದೆಯೇ ಮಾಡಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಬೇಕಾಗಿದ್ದುದು ಅವರ ಮುಖ್ಯ ಕರ್ತವ್ಯವಾಗಿತ್ತು. ಆದರೆ ಈವರೆಗೂ ಆ ರೀತಿ ಮಾಡದಿರುವುದು ಶೋಚನೀಯವಾಗಿದೆ. 1913ನೆ ಅಥವಾ 1914ನೆ ಇಸವಿಯಲ್ಲಿ ವೀರಶೈವ ವಿದ್ಯಾರ್ಥಿಗಳ ಫಂಡಿನ ಜನರಲ್‌ಮೀಟಿಂಗು ದಿ|| ಬ|| ಪುಟ್ಟಣ್ಣಶೆಟ್ಟರ ಬಂಗಲೆಯಲ್ಲಿ ನಡೆದಾಗ್ಗೆ ನಾನೂ ಹೋಗಿದ್ದೆನು. ಆ ಕಾಲದಲ್ಲಿ ಈ ಸ್ಮಾರಕಕಾರ್ಯವನ್ನು ನೆರವೇರಿಸುವ ವಿಚಾರವು ಚರ್ಚೆಗೆ ಬಂದು ಸಂಘದವರು ಜಾಗ್ರತೆಯಲ್ಲಿ ಚಂದಾಹಣವನ್ನೆತ್ತಿ ಕ್ರಿಯೆಕ್ಕೆ ಸಿದ್ಧವಾಗಿದ್ದ ಪಟ್ಟವನ್ನು ಕೊಂಡುಕೊಂಡು ಪ್ರತಿಷ್ಠಾಪನೆಮಾಡಬೇಕೆಂದು ರೆಸಲ್ಯೂಷನ್ ಪ್ಯಾಸಾದದ್ದೂ, ಆ ಮೀಟಿಂಗಿಗೆ ದಯಮಾಡಿಸಿದ್ದ ಕೈ|| ತೋಟದಪ್ಪನವರ ಆಪ್ತಸ್ನೇಹಿತರು ಮತ್ತು ಶ್ರೀಮಂತರು ಆದ ಬೇಲೂರಿನ ಮ|| ಚಿಕ್ಕವೀರಪ್ಪನವರು 300 ರೂಪಾಯಿ ಚಂದಾಹಣ ಕೊಡುವುದಾಗಿ ವಾಗ್ದಾನ ಮಾಡಿದ್ದೂ ನನ್ನ ಜ್ಞಾಪಕದಲ್ಲಿದೆ. ಈ ವಿಚಾರವು ತಮ್ಮ ಸ್ಟಾರ್ ಪತ್ರಿಕೆಯಲ್ಲೂ ಪ್ರಚುರವಾಗಿರಬಹುದು.

ಮುಂಬೈ ಇಲಾಖಾ ವೀರಶೈವರು ತಮ್ಮ ಆಸ್ತಿಯನ್ನೆಲ್ಲವನ್ನೂ ವೀರಶೈವರ ವಿದ್ಯಾಭಿವೃದ್ಧಿಗಾಗಿ ದಾನಮಾಡಿ ಲೋಕಪ್ರಸಿದ್ಧರೂ ಪುರಾತನರ ಪಂಕ್ತಿಯನ್ನು ಅನುಸರಿಸಿದವರೂ ಆದ ಆ ಶಿರಸಂಗಿ ದೇಸಾಯಿ ಮಹಾಪುರುಷರ ಸ್ಮಾರಕವನ್ನು, ಅವರ ಹೆಸರಿನಿಂದ ಶಾಲೆಗಳನ್ನೂ, ವಾಚನಾಲಯಗಳನ್ನೂ ಸ್ಥಾಪಿಸುವುದರಿಂದಲೂ, ಅವರ ತಸ್ವೀರನ್ನು ಮನೆಗಳಲ್ಲಿಟ್ಟುಕೊಂಡು ಪೂಜಿಸುವುದರಿಂದಲೂ, ಅವರ ಶಿಲಾಮೂರ್ತಿಯನ್ನು ಸ್ಥಾಪಿಸುವ ಪ್ರಯತ್ನದಿಂದಲೂ ತಮ್ಮಗಳಿಗೆ ಅವರ ವಿಚಾರದಲ್ಲಿರುವ ಪೂಜ್ಯಬುದ್ಧಿಯನ್ನೂ ಕೃತಜ್ಞತೆಯನ್ನೂ ತೋರ್ಪಡಿಸುತ್ತಿದ್ದಾರೆ. ಅದರಂತೆಯೇ ಮೈಸೂರು ಸೀಮೆಯಲ್ಲಿ ವೀರಶೈವರ ವಿದ್ಯಾಭಿವೃದ್ಧಿ ಮೊದಲಾದವುಗಳಿಗೆ ಮಹೋಪಕಾರವನ್ನು ಮಾಡಿರುವ ಕೈ|| ರಾವ್ ಬಹದ್ದೂರ್‌ರವರ ಸ್ಮರಣಾರ್ಥವಾಗಿ ನಮ್ಮ ಮೈಸೂರಿನ ವೀರಶೈವರು ಯಾವ ಕಾರ್ಯವನ್ನೂ ಮಾಡಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸದಿರುವುದು ಖಂಡಿತವಾಗಿಯೂ ಹೀನವು. ರಾವ್ ಬಹದ್ದೂರ್‌ರವರ ಧರ್ಮಕಾರ್ಯಗಳ ಮೇಲ್ವಿಚಾರಣೆಗಾಗಿ ಗೊತ್ತುಮಾಡಲ್ಪಟ್ಟಿರುವ ಟ್ರಸ್ಟಿಗಳು ಜನರನ್ನು ಪ್ರೋತ್ಸಾಹಿಸಿ ಈ ಸ್ಮಾರಕ ಕಾರ್ಯವನ್ನು ಮಾಡಿಸುವುದರಲ್ಲಿ ಮುಂದುವರಿಯಬೇಕಾದ್ದು ಅವಶ್ಯಕವಾಗಿದ್ದರೂ ಹಾಗೆ ಈ ಕಾರ್ಯದಲ್ಲಿ ಪ್ರೋತ್ಸಾಹಕರಾಗಿ ನಿಲ್ಲದಿರುವುದಕ್ಕಾಗಿ ವ್ಯಸನಪಡಬೇಕಾಗಿದೆ. ಇನ್ನು ಮೇಲಾದರೂ ಈ ಟ್ರಸ್ಟಿಗಳು ಈ ಸ್ಮಾರಕವು ನೆರವೇರುವಂತೆ ಮಾಡುವರೆಂದೂ ವೀರಶೈವರು ಶಕ್ತಿವಂಚನೆಯಿಲ್ಲದೆ ಧನಸಹಾಯವನ್ನು ಮಾಡಿ ರಾವ್ ಬಹದ್ದೂರರ ಸ್ಮಾರಕ ಕಾರ್ಯವು ಶೀಘ್ರದಲ್ಲಿ ನೆರವೇರುವಂತೆ ಮಾಡಿ ತಮ್ಮ ಕೃತಜ್ಞತಾಭಾವವನ್ನು ಪ್ರದರ್ಶಿಸುವರೆಂದೂ ನಂಬಿರುತ್ತೇನೆ. ಅತ್ಯಾವಶ್ಯಕವಾದ ಈ ಸ್ಮಾರಕಕ್ಕಾಗಿ ೫ ರೂ. ಚಂದಾಹಣವನ್ನು ನಾನು ಸೆಕ್ರೆಟರಿಯವರಲ್ಲಿಗೆ ಮಣಿಯಾರ್ಡರ್ ಮಾಡಿರುತ್ತೇನೆ.

ಓರ್ವ ಸಮಾಜಸೇವಕ.

ಹಿಂದುಳಿದ ಜನಾಂಗದವರ ಕಾನ್‌ಫರೆನ್ಸು.

ಈ ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಎಂಗ್‌ಮೆನ್ಸ್ ಅಸೋಸಿಯೇಷನ್ (Young Men's Association) ನವರು ಇದೇ ಮಾಹೆ ತಾ|| ೧೯ನೆ ಶನಿವಾರ ದಿವಸ ತಮ್ಮ ಸಂಘದ ವಾರ್ಷಿಕೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಸಿದರು. ಅದೇ ಸಮಯದಲ್ಲಿ ತಮ್ಮ ತಾಲ್ಲೂಕಿನ ಮತ್ತು ಚಿಕ್ಕಬಳ್ಳಾಪುರ, ಹೊಸಕೋಟೆ ಸಿದ್ಧಘಟ್ಟ ಈ ತಾಲ್ಲೂಕುಗಳಿಂದಲೂ ಮತ್ತು ಬೆಂಗಳೂರಿನಿಂದಲೂ ಹಿಂದುಳಿದ ಜನಾಂಗಕ್ಕೆ ಸೇರಿದ ಪ್ರಮುಖ ಜನರನ್ನು ಬರಮಾಡಿಕೊಂಡು ಹಿಂದುಳಿದವರ ಒಂದು ಸಭೆಯನ್ನು ಸಹ ನಡಿಸಿದರು. ಊರನ್ನೆಲ್ಲಾ ತಳಿರುತೋರಣ ಚಪ್ಪರಗಳಿಂದಲೂ, ಬಾವುಟಗಳಿಂದಲೂ ಅಲಂಕಾರ ಮಾಡಿ, ಮ್ಯುನಿಸಿಪಲ್ ಆಫೀಸಿನ ಮುಂಭಾಗದಲ್ಲಿರುವ ದೊಡ್ಡ ಬೈಲಿನಲ್ಲಿ ಸಭೆಯು ಸೇರಲು ಏರ್ಪಾಟು ಮಾಡಿದ್ದರು. ಪರಸ್ಥಳಗಳಿಂದ ಸುಮಾರು ೧೫೦೦ ಮಂದಿಗೆ ಕಡಿಮೆಯಿಲ್ಲದೆ ಸಭಿಕರು ಬಂದಿದ್ದರು. ಸಭೆಯು ಸಾಯಂಕಾಲ ೪ ಘಂಟೆಗೆ ಪ್ರಾರಂಭವಾಯಿತು.

ಚಿಕ್ಕಬಳ್ಳಾಪುರದಿಂದ ಬಂದಿದ್ದ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರಾದ ಅಡ್ವೋಕೇಟ್ ಮಿ|| ಎಚ್. ನಾರಾಯಣಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರಾದ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯನವರು ಸೂಚಿಸಲು, ಸರ್ವಾನುಮತದಿಂದ ಒಪ್ಪಲ್ಪಟ್ಟು, ಮಿ|| ನಾರಾಯಣಯ್ಯನವರು ಸಭಾಧ್ಯಕ್ಷತೆಯನ್ನು ವಹಿಸಿದರು. ಮಿ|| ರುದ್ರಯ್ಯನವರು ಸಭಿಕರಿಗೆಲ್ಲಾ ಸ್ವಾಗತವನ್ನು ಬಯಸಿ, ಸಂಘದವರು ಇದುವರೆಗೆ ನಡೆಸಿರತಕ್ಕ ಕೆಲಸಗಳನ್ನು ಎಂದರೆ ರೀಡಿಂಗ್‌ರೂಮನ್ನು ಸ್ಥಾಪಿಸಿದುದನ್ನೂ, ಅದಕ್ಕೋಸ್ಕರ ಪ್ರತ್ಯೇಕವಾದ ಕಟ್ಟಡವನ್ನು ಕಟ್ಟಿಸಲು ಪ್ರಯತ್ನಪಟ್ಟಿರತಕ್ಕದ್ದನ್ನೂ, ಪಂಚಮ ವಿದ್ಯಾರ್ಥಿಗಳನ್ನು ಸರ್ಕಾರಿ ಪಾಠಶಾಲೆಗೆಸೇರಿಸಲು ಮಾಡಿದ ಏರ್ಪಾಟುಗಳನ್ನೂ, ತಮ್ಮ ಊರಿನಲ್ಲಿರತಕ್ಕ ಎ.ವಿ. ಸ್ಕೂಲಿನ ಹೀನಸ್ಥಿತಿಯನ್ನೂ ಕುರಿತು ಭಾಷಣವನ್ನು ಮಾಡಿದರು. ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲಿನ ಮೆಂಬರಾದ ಮಿ|| ಬಿ. ಎನ್. ವಿಜಯದೇವ ಎಂ. ಎ. ಬ್ಯಾರಿಸ್ಟರ್‌ಯವರು ಅರ್ಧ ಘಂಟೆಗೆ ಮೇಲ್ಪಟ್ಟು ವಿದ್ಯಾಭ್ಯಾಸವೇ ಮೊದಲಾದ ಉಪಯುಕ್ತವಾದ ವಿಷಯಗಳ ಮೇಲೂ, ಹಿಂದುಳಿದ ಜನಾಂಗದವರು ಇನ್ನುಮೇಲಾದರೂ ಎಚ್ಚತ್ತುಕೊಂಡು ತಮ್ಮ ಪುರೋಭಿವೃದ್ಧಿಗಾಗಿ ತಕ್ಕ ಪ್ರಯತ್ನವನ್ನು ಮಾಡಬೇಕಾದ ಅವಶ್ಯಕತೆಯನ್ನೂ ಕುರಿತು ಬಹಳ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಸಿದ್ಧಘಟ್ಟದ ಪ್ರಜಾಮಿತ್ರಮಂಡಲಿಯ ಪ್ರೆಸಿಡೆಂಟರಾದ ಮಿ|| ಎಸ್. ಹಂಚ

ಮೈನವರು ಅಲ್ಲಿ ಮಂಡಲಿಯು ಸ್ಥಾಪಿಸಲ್ಪಡುವುದಕ್ಕೆ ಮುಂಚೆ ತಮ್ಮಗಳಿಗಿದ್ದ ತೊಂದರೆಗಳನ್ನೂ ಅದು ಸ್ಥಾಪಿತವಾದ ನಂತರ ತಮ್ಮಗಳಿಗುಂಟಾದ ಪ್ರಯೋಜನವನ್ನೂ, ಪ್ರಜಾಮಿತ್ರಮಂಡಲಿಗೆ ಉಪಸಂಘಗಳಾಗಿ ಇದರಂತೆ ದೇಶದ ಪ್ರತಿಯೊಂದು ಸ್ಥಳದಲ್ಲೂ ಒಂದೊಂದು ಸಂಘವನ್ನು ಏರ್ಪಡಿಸುವುದರಿಂದಾಗುವ ಪ್ರಯೋಜನವನ್ನೂ, ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡುಗಳು, ಮ್ಯುನಿಸಿಪಲ್ ಕೌನ್ಸಿಲುಗಳು ಮತ್ತು ಬೆಂಚ್ ಮ್ಯಾಜಿಸ್ಟ್ರೇಟುಗಳ ಕರ್ತವ್ಯಗಳನ್ನೂ ಕುರಿತು ಬಹಳ ಉತ್ತಮ ಮತ್ತು ಸಮಂಜಸವಾದ ಉಪನ್ಯಾಸವನ್ನು ಮಾಡಿದರು. ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ ಬಿ.ಎ., ಎಲ್. ಎಲ್. ಬಿ., ಯವರು ಹಿಂದುಳಿದಿರತಕ್ಕ ಪ್ರತಿಯೊಂದು ಜನಾಂಗದವರೂ ಒಗ್ಗಟ್ಟಿನಿಂದಿರಬೇಕಾದ ಅವಶ್ಯಕತೆಯನ್ನೂ, ತಮ್ಮ ಮಕ್ಕಳುಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸದೆಬಿಡುವುದರಿಂದಾಗತಕ್ಕ ಅನರ್ಥವನ್ನೂ, ರಾಜ್ಯಾಡಳಿತದಲ್ಲಿ ಪ್ರಜೆಗಳು ಸೇರಬೇಕಾದ ಶ್ರದ್ಧೆಯನ್ನು ವಹಿಸದಿರುವುದರಿಂದಾಗತಕ್ಕ ಕೆಡಕುಗಳನ್ನೂ, ದುಷ್ಕರ ಪ್ರೇರಣೆಗೊಳಗಾಗಿ ಪಾರ್ಟಿಗಳನ್ನು ಕಟ್ಟಿ ಐಕಮತ್ಯವನ್ನು ನಾಶಪಡಿಸುವುದರಿಂದಾಗತಕ್ಕ ನಷ್ಟವನ್ನೂ, ಲಂಚವನ್ನು ಕೊಡುವುದೇ ಮೊದಲಾದ ದುರ್ವಿಧತೆಗಳಿಂದಾಗತಕ್ಕ ಕಷ್ಟನಷ್ಟಗಳನ್ನೂ ಕುರಿತು ಉಪನ್ಯಾಸವನ್ನು ಮಾಡಿದರು. ವಡಿಗೇನಹಳ್ಳಿಯ ಮ|| ರಾಮಸಿದ್ದಪ್ಪನವರು ಕೇವಲ ಮೂಢಭಕ್ತಿಯಿಂದಾಗತಕ್ಕ ಕೆಡಕುಗಳನ್ನೂ ತಮ್ಮ ಜನಾಂಗಗಳ ಈಗಿನ ಶೋಚನೀಯವಾದ ಸ್ಥಿತಿಯನ್ನೂ ಕುರಿತು ಮಾತನಾಡಿದರು. ಎಂಗ್‌ಮೆನ್ಸ್ ಯೂನಿಯನ್ನಿನ ಸೆಕ್ರೆಟರಿಯವರಾದ ಎಸ್. ರುದ್ರಯ್ಯನವರೂ ಮತ್ತು ಸಭೆಗೆ ದಯಮಾಡಿಸಿದ್ದ ಮಹಮ್ಮದೀಯ ಸಹೋದರರೊಬ್ಬರೂ ಸಹ ಸಾಲೋಚಿತವಾದ ಉಪನ್ಯಾಸಗಳನ್ನು ಮಾಡಿದರು. ಸಭಾಧ್ಯಕ್ಷರು ಅಂತ್ಯದಲ್ಲಿ ನೀತಿಗಳಿಂದೊಡಗೂಡಿದ ಉತ್ತಮ ಭಾಷಣವನ್ನು ಮಾಡಿದರು.

ಸಭೆಯಲ್ಲಿ ಮಾಡಲ್ಪಟ್ಟ ನಿರ್ಧಾರಗಳು:—

(೧) ನಮ್ಮ ಸ್ವಾಮಿಯವ ಶ್ರೀಮನ್ ಮಹಾರಾಜರವರಲ್ಲಿ ನಮಗಿರತಕ್ಕ ರಾಜಭಕ್ತಿಯನ್ನು ಶ್ರೀ ಮಹಾಸ್ವಾಮಿಯವರಲ್ಲಿ ಬಿನ್ನಯಿಸಿಕೊಳ್ಳಬೇಕೆಂತಲೂ, ಶ್ರೀಮನ್ ಮಹಾರಾಜರವರಿಗೂ, ಯುವರಾಜರವರಿಗೂ, ರಾಜಕುಟುಂಬದವರಿಗೂ ಶ್ರೀ ಪರಮೇಶ್ವರನು ಆಯುರಾರೋಗ್ಯವನ್ನುಂಟುಮಾಡಲೆಂದೂ ಈ ಸಂಘದವರು ಪ್ರಾರ್ಥಿಸುತ್ತಾರೆ.

(೨) ವಿದ್ಯಾಭ್ಯಾಸದ ಮೆಮೋರಾಂಡಂ ವಿಚಾರದಲ್ಲಿ ಸರ್ಕಾರದವರು ಕೂಡಲೆ ಆರ್ಡರನ್ನು ಮಾಡಬೇಕೆಂದು ಈ ಸಭೆಯವರು ಪ್ರಾರ್ಥಿಸುತ್ತಾರೆ.

(೩) ಮಿಲ್ಲರ್ ಕಮಿಟಿ ರಿಪೋರ್ಟಿನ ವಿಚಾರದಲ್ಲೂ ಸಹ ಕೂಡಲೆ ಅನುಕೂಲವಾದ ಆರ್ಡರನ್ನು ಮಾಡಬೇಕಾಗಿ ಈ ಸಭೆಯವರು ಪ್ರಾರ್ಥಿಸುತ್ತಾರೆ.

(೪) ಈ ದೇಶದಲ್ಲಿ ಕೆಲವು ಪೇಪರಿನವರು ಈಗಿನ ಮೈಸೂರು ದೇಶದ ರಾಜ್ಯಾಡಳಿತವನ್ನು ಕುರಿತು ಬರೆಯುತ್ತಿರುವ ಅಪಹಾಸ್ಯಜನಕವಾದ ಲೇಖನಗಳನ್ನು ಈ ಸಭೆಯವರು ಸಂಪೂರ್ಣವಾಗಿ ನಿರೋಧಿಸುತ್ತಾರೆ.

(೫) ವಡಿಗೇನಹಳ್ಳಿಯ ಎ. ವಿ. ಸ್ಕೂಲಿನ ಅಸಮರ್ಪಕವಾದ ಸ್ಥಿತಿಯನ್ನು ನೋಡಿ ಸಭೆಯವರು ವಿಷಾದಿಸುತ್ತಾರೆ, ಮತ್ತು ಇದನ್ನು ಉತ್ತಮಸ್ಥಿತಿಗೆ ತರುವ ಕಾರ್ಯವನ್ನು ಮಾಡುವಂತೆ ವಿದ್ಯಾಶಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಸಭೆಯವರು ಪ್ರಾರ್ಥಿಸುತ್ತಾರೆ.

ಒಬ್ಬ ಪ್ರೇಕ್ಷಕ.

ಲಗ್ನಪತ್ರಿಕೆಗಳ ಮುದ್ರಣಕ್ರಮ

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೋಡ್ಯಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ಲ್ಯಾಕ್ ಬಣ್ಣ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇ ತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣವಾದರೆ ಮೊದಲನೇ ೧೦೦ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದಿ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಮುಂತಾಗಿ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೧—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ನಿದರ್ಶನವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಆಫೀಸ್, ಮೈಸೂರ್.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 13

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವನ್ನು ಪ್ರತ್ಯೇಕವಾಗಿ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದಿದ ಬಾಲಕರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದಿ ಅನೇಕ ಪ್ರಶ್ನೆಗಳನ್ನೂ ವರ್ಷದ ದರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಆಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಷ್ಟಕ್ಕಿಂತ ಕಡಮೆ ಆರ್ಡರು ಕೊಡುವ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

48

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಕೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವುವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಲೇಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.0.0.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕಂಪನಿ,
ಸಾಹುಕಾರ್‌ಪೇಟೆ, ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀಚಕ್ರಗಳು, ಸ್ಫಟಿಕಲಿಂಗ, ಮಣಿಗಳ, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲು ಮಾಲು ಕಳುಹಿಸಲಾಗುವುದು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0-8-0	,,	100-0-0
6	0-12-0	,,	100-0-0
7	6-0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರೆಯುವುದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉತ್ತಮ	,, 15-0-0	,, 40-0-0
ಮಧ್ಯಮ	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ಜೋಡು	,, 0-8-0	,, 1-0-0
ಅವಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರ ಬರೆದು ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
2 ಕಂಪನಿ, ಚೌಕಂಬಾ ಕಾಶೀ.

5-0-0 ಕ್ರಯದ ರೈಲ್ವೆ ಲೀವರ್ ವಾಚು ಇನಾಂ.



ಈ ಪೇನಾಗಳು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಒಂದೇ ಸಮನಾಗಿ ಬರೆಯುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ರೈಲ್ವೆಲೀವರ್ ವಾಚ್ ಇನಾಮಾಗಿ ಕೊಡುವೆವು. ಗಡಿಯಾರವು ಅಮೆರಿಕಾ ದೇಶದಲ್ಲಿ ತಯಾರಾದದ್ದು. 23

ಕ್ರಯ ಗಡಿಯಾರ ಸಹಿತ ಪೇನಾ 1ಕ್ಕೆ ರೂ. 4-12-0

ವಿಳಾಸ—ಎಲ್ಜಿನ್ ವಾಚ್ ಕಂಪನಿ,
89 ನಾರಾಯಣಮೊದಲಿಬೀದಿ, ಮದರಾಸು.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನು, ಒಂದುವೇಳೆ ರೋಗವುಂಟಾದರೆ ಈಗ ಅಮೆರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

7 ವಿಳಾಸ—ಎಂ. ಎಂ. ಪರ್ಡೇಕರ್, ದಾವಣಗೆರೆ.

ಫ್ರೆಂಚ್ ರೋಮನಾಶಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
33 ಪಾರ್ಕ್‌ಟೌನ್ ಮದರಾಸ್.

ಫಲಶೋಧಕ ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 21

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸನ್ನು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಕ್ಕೆ, ಬುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಸ್ವಪ್ರಕಾರವಾದ ಹೊರೆ ಕಟ್ಟು, ಹೊಟ್ಟೆ ಶೂಲೆ ಬಿಳಿಕೆಂಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಕೆಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದನಂಗು ಸೇವನೆ ಮಾಡಿದರೆ ಗರ್ಭಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸೀತಜ್ವರ, ಬಿಡಬಿಟ್ಟು ದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಸ್ವಪ್ರಕಾರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕ್ಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಘಂಟೆಗಳಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ಸೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚು.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವವು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಇಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0. 22

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
ಪಾರ್ಕ್‌ಟೌನ್ ಮದರಾಸು.

೧೯೨೧ನೆಯ ಇಸವಿ ಫೆಬ್ರವರಿ ತಾ|| ೨೭ರಿಂದ ೧೯೨೧ನೆಯ ಮಾರ್ಚಿ ತಾ|| ೫ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ನೆಯ ರೌದ್ರಿನಾಮ ಸಂವತ್ಸರದ ಮಾಘಬಹುಳ ಪಂಚಮಿಯಿಂದ ಮಾಘಬಹುಳ ಏಕಾದಶಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸೌರ ಮಾಸ
27	ಭಾನು	ಪಂಚ	6-14	ಸ್ವಾತಿ	26-54	16
28	ಸೋಮ	ಷಷ್ಠಿ	6-16	ವಿಶಾ	28-52	17
1	ಮಂಗಳ	ಸಪ್ತ	7-36	ಅನೂ	32 26	18
2	ಬುಧ	ಅಷ್ಟ	9-19	ಜ್ಯೇ	36-34	19
3	ಗುರು	ನವ	13-55	ಮೂಲ	41 57	20
4	ಶುಕ್ರ	ದಶ	18-30	ಪೂಷಾ	48 9	21
5	ಶನಿ	ಏಕಾ	23-41	ಉಷಾ	54-45	22

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸುಹಿತಕರವೃತೀತಾರಾ ಶರಮಧಿಗತರಾಜಮಂಡಲಹಿತ್ಕ್ರಷಾ | ಘನಪಕ್ಷಕ್ಕಾವತಾರಾ ಪಕ್ಷ್ವಪನಕ್ಷತ್ರಮೋತರಾಜೀಯೂಷ |
ಶ್ರೀಮತ್ಕೃಷ್ಣನೃಪಾಲಮಿತ್ರಮುಕಲಾಲೋಲಂಸುಧೀಭೃಂಗವ | ಸ್ತ್ರೀಮಾಭೀಷ್ಟದಶೀಲ ನಾಕಲಿಕ ಸಾಧುಸ್ತ್ವಾಲವಾಲಂವಲಂ |
ಸೀಮಾತೀತಯಶಸ್ತ್ರಾಶಾಪವಿಧಿಲಂ ಸದ್ವ್ಯಕ್ತನವಾರಾಕುಲಂ | ಶ್ರೀಮಂಚೆತ್ರಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕ ಚಂದಾ ೧-೭-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೮, ಮೈಸೂರ್ ಸ್ಟಾರ್ ಸನ್ ೧೯೨೧ ನೇಯ ಇಸವಿ ಮಾರ್ಚಿ ತಾರೀಖು ೬ ನೇಯ ಭಾನುವಾರ (ಸಂಚಿಕೆ ೧೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ಸಾರಿ ಹೇಳುವೆವು. ವಿಷಜ್ವರ, ಮುಂತಾದ ನಾಲ್ಕರ ಜ್ವರಗಳು, ಸನ್ನಿಪಾತವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗೆಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಕರಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮು, ಉಬ್ಬಸ, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
9 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಪದ್ಯದ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಗಣಸಹಸ್ರನಾಮ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ಮೃತಿಮುಕ್ತಾವಳಿ ೮ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ.	೦—೧೨—೦
ಶಿವಪೂಜಾವಿಧಿ.	೦—೧೪—೦
[illegible]	೦—೯—೦
[illegible]	೦—೮—೦

ಲಂಡನ್ ಲೀವರು ವಾಚು.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:—

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಉಂಗುರ 1, 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟು ವಾಚು



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟು ವಾಚು 5-0-0, ಸರಪಣಿ ಸಹಿತ 6-0-0

49 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 266 ಮದರಾಸು.

SINEMATOGRAPH.

49 ಸಿನಿಮೆಟೊಗ್ರಾಫ್.

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಸಂತೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು, ಈ ವಿಷಯದಲ್ಲಿ ಎಚ್ಚರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಅರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪುಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಕ್ವ ಮದನೋದ್ಭವ ಗುಳಿಗೆ.

(ಗುಣವಾಗದಿದ್ದರೆ ಹಣ ವಾಪಸು).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರಸ್ಖಲನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಕಾರಕವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಸರ್ಮೆ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗಸ್ಥರಿಗೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಹಸ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯೇಕ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಶಿರ್ಶಿ ಉತ್ತರಕನಡಾ.

49

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಕೊಡೆದಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವುವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಲೇಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.0.0.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕಂಪನಿ,
ಸಾಹುಕಾರ್‌ಪೇಟೆ, ಮದರಾಸು.

ಫ್ರೆಂಚ್ ರೋಮನಾಶಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

24 ಕ್ರಯ ಡಬ್ಬಿ 1ಕ್ಕೆ 1—0—0

ಬೇತಿಂಗ್ ಬ್ರಷ್.

ಅನೇಕರು ಸ್ನಾನಮಾಡುವಾಗ್ಗೆ ಮೈಮೇಲಿನ ಕೊಳೆ ತೆಗೆಯಲಿಕ್ಕೆ ಕಲ್ಲು, ನಾರು ಮುಂತಾದುವುಗಳಿಂದ ಉಜ್ಜಿಕೊಳ್ಳುವರು. ಇದರಿಂದ ಅನೇಕವೇಳೆ ಗಾಯಗಳಾಗುವವು. ಮತ್ತು ಚೆನ್ನಾಗಿ ಉಜ್ಜಿಕೊಳ್ಳಲು ಸಹ ಆಗದು. ಆದರೆ ಈ ಬ್ರಷ್‌ಗಳು ವಿಲಾಯತಿಯಲ್ಲಿ ಕೆಂಪು ರಬ್ಬರಿನಿಂದ ತಯಾರಾಗಿ ಬಂದಿವೆ. ಇವುಗಳಲ್ಲಿ ಮೈಯನ್ನು ಯಾವ ತೊಂದರೆಯೂ ಇಲ್ಲದೆ ಉಜ್ಜಿಕೊಳ್ಳಬಹುದು. ಬೆವರು ಕೊಳೆ ಮುಂತಾದವನ್ನು ಬಹು ಚೆನ್ನಾಗಿ ತೆಗೆಯುವದು. ಒಂದು ತಿಂಗಳ ಮಕ್ಕಳಿಗೂ ಸಹ ಇದರಿಂದ ಉಜ್ಜಬಹುದು. ಕ್ರಯ 1ಕ್ಕೆ 1-8-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಮಾರ್ಚಿ ತಾ|| ೬ನೆಯ ಭಾನುವಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯ.

ಮೈಸೂರು ದೇಶದ ಬಡ ವೀರಶೈವ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ವಿದ್ಯಾಭ್ಯಾಸ ಪ್ರೋತ್ಸಾಹ ಮಾಡಲಿಕ್ಕಾಗಿ ಏರ್ಪಟ್ಟಿರುವ ಈ ಫಂಡಿನ ಬಡ್ಡಿಯಿಂದ ಈಗ ವರ್ಷ ೧ಕ್ಕೆ ೧|| ಸಾವಿರ ರೂ. ಗಳಿಗೆ ಕಡಿಮೆಯಿಲ್ಲದಷ್ಟು ಹಣವು ವಿನಿಯೋಗಿಸಲ್ಪಡುತ್ತಿದೆ. ಫಂಡಿನ ಮೂಲಧನವು ವೃದ್ಧಿಯಾದಷ್ಟೂ ವಿದ್ಯಾರ್ಥಿವೇತನಗಳನ್ನು ಹೆಚ್ಚು ಮಂದಿಗೆ ಕೊಡಲು ಅನುಕೂಲಿಸುತ್ತದೆಂಬ ಸಂಗತಿಯು ಗೊತ್ತೇ ಇದೆ. ಹಣವು ಸಾಲದುದರಿಂದ ಬಹು ಮಂದಿ ಬಡ ವಿದ್ಯಾರ್ಥಿಗಳು ಅಪ್ಲಿಕೇಷನ್ನುಗಳನ್ನು ಹಾಕಿಕೊಂಡಿದ್ದರೂ ಅವರುಗಳಿಗೆ ಫಂಡಿನಿಂದ ಸಹಾಯಮಾಡಲು ಅವಕಾಶವಿಲ್ಲದೆ ಹೋಗುತ್ತಿದೆ. ಕೇವಲ ಇಂಗ್ಲಿಷ್ ವಿದ್ಯಾರ್ಥಿಗಳಿಗೇ ಅಲ್ಲದೆ ಸಂಸ್ಕೃತ ವಿದ್ಯಾರ್ಥಿಗಳಿಗೂ ಈ ಫಂಡಿನಿಂದ ಸಹಾಯವಾಗುತ್ತಿದೆ. ಉಪಪನ್ನರಾಗಿರುವ ಜನರ ಮಕ್ಕಳಿಗಿಂತಲೂ ಅನುಪಪನ್ನರಾಗಿರುವ ಜನರ ಮಕ್ಕಳೇ ವಿದ್ಯಾಭ್ಯಾಸದಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾರೆ. ಆದರೆ ಅಂಥವರಿಗೆ ಬಟ್ಟೆಬರೆಗಳಿಗೂ ಅನ್ನಕ್ಕೂ ಪುಸ್ತಕಗಳಿಗೂ ಪರೀಕ್ಷೆಗೆ ಕಟ್ಟುವುದಕ್ಕೂ ಧನಸಹಾಯವಿರುವುದಿಲ್ಲ. ಅಂಥವರುಗಳಿಗೆ ಉಚಿತ ಸಹಾಯ ಮಾಡಿ ಉದ್ಧರಿಸುವುದು ಸಮಾಜದವರೆಲ್ಲರಿಗೂ ಕರ್ತವ್ಯವಾಗಿರುತ್ತದೆ. ಆ ದೃಷ್ಟಿಯಿಂದ ಈ ಫಂಡನ್ನು ಎಷ್ಟು ಅಭಿವೃದ್ಧಿಗೊಳಿಸಿದರೂ ಬಡವಿದ್ಯಾರ್ಥಿಗಳಿಗೆ ಶಾಶ್ವತವಾದ ಸಹಾಯವು ಇದರಿಂದ ದೊರೆಯಲು ಮಾರ್ಗವಾಗುತ್ತದೆ. ಈ ಫಂಡಿನ ಮೇಲ್ವಿಚಾರಣೆಗೆ ಸಮರ್ಥವಾದ ಒಂದು ಸಂಘವೂ, ಅದಕ್ಕೆ ದಿವಾನ್ ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ., ಯವರು ಅಧ್ಯಕ್ಷರಾಗಿಯೂ, ಮ|| ಜಿ. ಪರಮಶಿವಯ್ಯ ಬಿ. ಎ., ಎಲ್. ಎಲ್. ಬಿ., ಯವರು ಗೌ|| ಕಾರ್ಯದರ್ಶಿಗಳಾಗಿಯೂ, ಈ ಫಂಡಿನ ಹಣವೆಲ್ಲಾ ಸರ್ಕಾರಿ ಬೊಕ್ಕಸದಲ್ಲಿ ದೃಢವಾಗಿ ಇಡಲ್ಪಟ್ಟು ಬಡ್ಡಿಯನ್ನು ಮಾತ್ರ ತೆಗೆದುಕೊಳ್ಳುವಂತೆಯೂ ಏರ್ಪಟ್ಟಿರುವುದು ಸರ್ವರಿಗೂ ಗೊತ್ತೇ ಇದೆ.

ಈಗ ಲಗ್ನಗಳ ಕಾಲವಾಗಿದೆ. ಎಲ್ಲೆಲ್ಲೂ ಸಾವಿರಾರು ಮದುವೆಗಳು ನಡೆಯುತ್ತಿವೆ. ಪ್ರತಿ ಮದುವೆಗೂ ನೂರು ಸಾವಿರಗಟ್ಟಲೆಯಾಗಿ ವೆಚ್ಚವಾಗಿಹೋಗುತ್ತದೆ. ಇಂಥ ಕಾಲದಲ್ಲಿ ಶಿವಾರ್ಪಿತ ಬುದ್ಧಿಯಿಂದಲೂ ಸ್ವಮತೋದ್ಧಾರದ ಪುಣ್ಯದೃಷ್ಟಿಯಿಂದಲೂ, ಪ್ರತಿಯೊಂದು ಲಗ್ನದ ಯಜಮಾನರುಗಳೂ ೫ ರೂ. ಗಳಿಗೆ ಕಡಿಮೆಯಿಲ್ಲದಂತೆ ತೆಗೆದು ಬೆಂಗಳೂರಿನಲ್ಲಿರುವ ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸೆಕ್ರೆಟರಿಯವರಲ್ಲಿಗೆ ಕಳುಹಿಸುತ್ತಬಂದರೆ ಫಂಡಿಗೆ ಎಷ್ಟೋ ಸಹಾಯವಾಗುವುದು. ಲಗ್ನಮಾಡತಕ್ಕವರಿಗೆ ಹೀಗೆ ತೆಗೆದಿಡುವುದು ಒಂದು ದೊಡ್ಡ ಭಾರವಲ್ಲ. ಇದುವರೆಗೆ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಅನೇಕ ಮಹನೀಯರು ಈ ಪದ್ಧತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಅವರುಗಳೆಲ್ಲರೂ ವಂದನೀಯರು. ಕಳೆದ ವರ್ಷ ಹೀಗೆ ಲಗ್ನದ ಕಾಣಿಕೆಯನ್ನು ಎತ್ತಿ ಕಳುಹಿಸಿದುದರಲ್ಲಿ ತುಮಕೂರು ಡಿಸ್ಟ್ರಿಕ್ಟೇ ಮೊದಲನೆಯದಾಗಿದ್ದಿತು. ಪ್ರತಿ ಡಿಸ್ಟ್ರಿಕ್ಟಿನ ಪ್ರತಿ ತಾಲ್ಲೂಕು ಹೋಬಳಿ ಗ್ರಾಮಗಳಲ್ಲೂ ಅಲ್ಲಲ್ಲಿಯ ಪ್ರಮುಖ ಮತಾಭಿಮಾನಿಗಳು ಇದನ್ನು ತಮ್ಮ ಕಾರ್ಯವೆಂದು ತಿಳಿದು ಲಗ್ನದ ಮನೆಯ ಸಭೆಗಳಲ್ಲಿ ತಪ್ಪದೆ ಈ ವಿಷಯವನ್ನು ಪ್ರಸ್ತಾವಿಸಿ, ಮೊದಲನೆ ತಾಂಬೂಲದಲ್ಲೇ ಮತಸಂಭಾವನೆಯ ಕಾಣಿಕೆಯಾಗಿ ವಧೂವರರ ಪಕ್ಷದಿಂದ ಈ ಫಂಡಿಗೆ ಯಥೋಚಿತ ದ್ರವ್ಯವನ್ನು ತೆಗೆಯಿಸಿ, ಕೂಡಕೂಡಲೇ ಫಂಡ್ ಸೆಕ್ರೆಟರಿಯವರಲ್ಲಿಗೆ ಮನಿಯಾರ್ಡರ ದ್ವಾರಾ ಕಳುಹಿಸುತ್ತಬಂದರೆ ಮತಕ್ಕೆ ಮಹೋಪಕಾರ ಮಾಡಿದಂತಾಗುವುದು. ಹಾಗೆ ಕಳುಹಿಸಿದ ಹಣವೆಲ್ಲವೂ ಫಂಡ್ ಸಂಘದವರಿಂದ ಪ್ರಕಟಿಸಲ್ಪಡುವುವು. ಎಲ್ಲ ಡಿಸ್ಟ್ರಿಕ್ಟುಗಳ ಮತಾಭಿಮಾನಿಗಳೂ ಈ ಕಾರ್ಯವನ್ನು ಅವಶ್ಯವಾಗಿ ಗಮನಿಸಿ ಈಡೇರಿಸುವವರಾಗಲೆಂದು ಕೋರುವೆವು.

ಭರತಖಂಡದ ಆಯವ್ಯಯ.

ಕಳೆದ ಬುಧವಾರ ಡಿಲ್ಲಿಪಟ್ಟಣದಲ್ಲಿ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಕೋಶಾಧಿಕಾರಿಗಳಾದ ಮಿ|| ಹೇಲಿಯವರು ಕಳೆದ ವರ್ಷದ ಮತ್ತು ಮುಂದಣವರ್ಷದ ಆಯವ್ಯಯಗಳ ಸಂಬಂಧವಾದ ಭಾಷಣವನ್ನು ಓದಿದರು. ಅದರ ವಿವರಣೆ ಭಾರತೀಯರಿಗೆ ಉತ್ಸಾಹಕರವಾಗಿರುವುದಿಲ್ಲ. ಕಳೆದ ವರ್ಷ ನಿರೀಕ್ಷಿಸಿದ್ದುದರಲ್ಲಿ ವೆಚ್ಚ ಕಳೆದು ೧೦|| ಕೋಟಿ ರೂ. ಗಳು ಮಿಗುವುವೆಂದು ಹೇಳಲ್ಪಟ್ಟಿದ್ದುದಕ್ಕೆ ಈಗ ವರ್ಷಾಂತ್ಯದಲ್ಲಿ ವೆಚ್ಚಕ್ಕೇ ೧೧||| ಕೋಟಿಯಷ್ಟು ಸಾಲದೆ ಹೋಯಿತೆಂಬುದಾಗಿ ತಿಳಿಸಲ್ಪಟ್ಟಿದೆ, ಎಂದರೆ ಮೊದಲು ಊಹಿಸಿದ್ದುದಕ್ಕಿಂತ ೨೨ ಕೋಟಿಯ ಮೇಲೆಯೇ ವೆಚ್ಚವು ಹೆಚ್ಚಾಯಿತೆಂದರ್ಥವಾಯಿತು. ಅಫ್ಘಾನಿಸ್ಥಾನದೊಡನೆ ಕಳೆದವರ್ಷ ಯುದ್ಧವು ಪ್ರಾಪ್ತವಾದುದರಿಂದ ಈ ಹಣ ನಷ್ಟವು ಬಿದ್ದಿತಂತೆ. ಕಳೆದವರ್ಷ ಸೇನೆಯ ವೆಚ್ಚಕ್ಕೇ ಒಟ್ಟು ೬೦ ಕೋಟಿ ರೂ. ಗಳಾಗಿರುವುವು. ಭರತಖಂಡವು ಇಂಗ್ಲಿಷ್ ಸಾಮ್ರಾಜ್ಯ ಛತ್ರಚ್ಛಾಯೆಯಲ್ಲಿ ಯುದ್ಧಭಯವಿಲ್ಲದೆ ಇರುತ್ತಿದ್ದರೂ ಈ ದೇಶದಮೇಲೆ ಸೇನಾವ್ಯಯಭಾರವು ಇಷ್ಟೊಂದು ಬಿದ್ದಿರುವುದು ಅತ್ಯಂತ ದುರದೃಷ್ಟವು. ಒಂದುಕಡೆ ಸರ್ಕಾರವು ವಿಪರೀತವಾಗಿ ಸಾಲವನ್ನು ಮಾಡುತ್ತಲೇ ಹೋಗುತ್ತಿದೆ. ಒಂದುಕಡೆ ಹೀಗೆ ಆದಾಯಕ್ಕಿಂತಲೂ ವ್ಯಯವು ಹೆಚ್ಚುತ್ತಲೇ ಇದ್ದರೆ ದೇಶದ ಗತಿಯೇನೋ ತಿಳಿಯಲಿಲ್ಲ. ಮುಂದಣ ೧೯೨೧-೨೨ ನೆ ವರ್ಷದ ನಿರೀಕ್ಷಿತಾದಾಯವ್ಯಯಗಳನ್ನು ನೋಡುವಲ್ಲಿ ೧೧೦|| ಕೋಟಿ ಆದಾಯವೂ ೧೨೯ ಕೋಟಿ ವ್ಯಯವೂ ಆಗುವುವೆಂದು ಯೋಚಿಸಲ್ಪಟ್ಟಿದೆ. ಎಂದರೆ ಆದಾಯಕ್ಕಿಂತ ೧೮|| ಕೋಟಿಯಷ್ಟು ವ್ಯಯವು ಹೆಚ್ಚಾಗುವುದು. ಆಯವ್ಯಯಗಳ ಸ್ಥಿತಿಗಳು ಇಷ್ಟು ನಿರುತ್ಸಾಹಕರವಾಗಿದ್ದರೂ ಸೇನಾವ್ಯಯವನ್ನು ಮಾತ್ರ ಕಡಿಮೆಮಾಡುವುದಿಲ್ಲ. ಮುಂದಣ ವರ್ಷದಲ್ಲಿ ಸೇನಾಶಾಖಾವ್ಯಯಕ್ಕೆ ೬೨ ಕೋಟಿ ರೂ. ಗಳನ್ನು ಏರ್ಪಡಿಸಿದ್ದಾರೆ. ಹೆಚ್ಚಿನ ವೆಚ್ಚದ ೧೮|| ಕೋಟಿ ರೂ. ಗಳನ್ನು ಬರಮಾಡಿಕೊಳ್ಳಲಿಕ್ಕೆ ಬೇರೆ ಮಾರ್ಗವಾವುದೂ ಇಲ್ಲದಿರುವ ಕಾರಣ ಕೆಲಹೊಸತೆರಿಗೆಗಳನ್ನು ವಿಧಿಸಿ ಆ ಮೂಲಕ ಈ ಹಣವನ್ನು ಎತ್ತಿಕೊಳ್ಳಬೇಕಾಗಿದೆಯೆಂದು ಕೋಶಾಧಿಕಾರಿಗಳು ಸೂಚಿಸಿರುತ್ತಾರೆ. ಯಾವಯಾವ ವಿಧದಲ್ಲಿ ಯಾವಯಾವ ವಸ್ತುಗಳಮೇಲೆ ಹೆಚ್ಚು ತೆರಿಗೆಯನ್ನು ಹೇರಬೇಕೆಂದಿರುವರೆಂಬುದನ್ನು ಮಿ|| ಹೇಲಿಯವರು ಹೀಗೆ ವಿವರಿಸಿರುತ್ತಾರೆ. ಅನ್ಯದೇಶಗಳಿಂದ ಬರುವ ಕೆಲಕೆಲ ಪದಾರ್ಥಗಳ ಮೇಲೆ ೧೦೦ಕ್ಕೆ ೭|| ಯಂತೆ ವಿಧಿಸುತ್ತಿದ್ದ ಸುಂಕವನ್ನು ೧೧ ಕ್ಕೆ ಹೆಚ್ಚಿಸುವರು. ಹೊರಗಣಿಂದ ಬರುವ ನೆಯ್ಗೆಯ ಯಂತ್ರಸಾಧನಗಳ ಮೇಲೆ ಇದುವರೆಗೆ ಸುಂಕವು ವಿಧಿಸಲ್ಪಡುತ್ತಿರಲಿಲ್ಲ. ಈಗ ಅವುಗಳಮೇಲೆ ಹೊಸದಾಗಿ ಸುಂಕವನ್ನು ವಿಧಿಸುವರು. ಇದು ಭರತಖಂಡದಲ್ಲಿ ಯಂತ್ರಗಾರಿಕೆಯನ್ನು ಪ್ರೋತ್ಸಾಹಗೊಳಿಸುವುದಕ್ಕೆ ಪ್ರತಿಯಾಗಿ ಆತಂಕಪಡಿಸಲು ಉದ್ದೇಶಿಸಿದಂತೆ ಆಗುವುದು. ಅನ್ಯದೇಶಗಳ ಬೆಂಕಿಕಡ್ಡಿಗಳು ಸಾರಾಯಿಗಳು ಇವುಗಳ ಮೇಲೆ ಹೊಸದಾಗಿ ಸುಂಕವು ವಿಧಿಸಲ್ಪಡುವುದು. ಮೋಟಾರುಗಳು ಸೈಕಲ್ಲುಗಳು, ಗಡಿಯಾರಗಳು, ವಾದ್ಯಸಾಮಗ್ರಿಗಳು, ಚಿತ್ರಗಳು ಮೊದಲಾದ ಭೋಗ್ಯವಸ್ತುಗಳ ಮೇಲೆ ೧೦೦ ಕ್ಕೆ ೭ ರಂತೆ ಇದ್ದ ಸುಂಕವು ೨೦ ಕ್ಕೆ ಹೆಚ್ಚಿಸಲ್ಪಡುವುದು. ಪರದೇಶದ ಸಕ್ಕರೆಯ ಮೇಲೆ ೧೦೦ ಕ್ಕೆ ೧೦ ರಂತೆ ಇದ್ದ ಸುಂಕವು ೧೬ ಕ್ಕೆ ಹೆಚ್ಚುವುದು. ಹೊಗೆಬಂಡಿಗಳಲ್ಲಿ ಸಾಮಾನು ಸಾಗಿಸುವ ಬಾಡಿಗೆಯದರವು ಹೆಚ್ಚಿಸಲ್ಪಡುವುದು. ಇದೊಂದು ಮಾರ್ಗದಿಂದಲೇ ೫|| ಕೋಟಿ ರೂ. ಗಳ ಆದಾಯವು ಹೆಚ್ಚುವುದಂತೆ. ಆದರೆ ಇದರಿಂದ ಹೊಗೆಬಂಡಿಯ ಮೂಲಕ ಸಾಗುವ ಸಾಮಾನುಗಳ ಬೆಲೆಯು ಹೆಚ್ಚಿ ಪ್ರಜೆಗಳ ಈಗಣ ತಾಪವು ಮತ್ತಷ್ಟು ಹೆಚ್ಚುವುದರಲ್ಲಿ ಸಂಶಯವಿಲ್ಲ. ಮತ್ತು ಬರುವ ಏಪ್ರಿಲ್ ತಿಂಗಳಿಂದಲೇ ಅಂಚೆಯ ದರಗಳನ್ನು ಹೆಚ್ಚಿಸುವರು. ಹೇಗೆಂದರೆ ಒಂದು ಕಾರ್ಡಿಗೆ ೬ ಪೈ. ೨|| ತೊಲೆಯ ತೂಕದೊಳಗಿರುವ ಪ್ರತಿಯೊಂದು ಕವರಿಗೂ ೧ ಆಣೆಯಾಗುವುದು. ಈಗ ಕಾರ್ಡಿಗೆ ೩ ಪೈ. ಕವರಿಗೆ ೬ ಪೈಯಂತೆ ಇರುವ ದರಗಳು ತಪ್ಪಿಹೋಗುವುವು. ಬುಕ್ ಪ್ಯಾಕೆಟ್ಟುಗಳಿಗೆ ಈಗ ೧೦ ತೊಲೆಯೊಳಗಣ ತೂಕಕ್ಕೆ ೬ ಪೈಯಂತೆ ಕೊಡಬೇಕಾಗುತ್ತಿದ್ದಿತು. ಇನ್ನು ಮುಂದೆ ೫ ರೂ. ನೊಳಗಣ ತೂಕದವುಗಳಿಗೆ ೬ ಪೈಯಂತೆಯೂ ೧೦ ತೊಲೆ ತೂಕಕ್ಕೆ ೧ ಆಣೆಯಂತೆಯೂ ಕೊಡಬೇಕಾಗುವುದು. ರಿಜಿಸ್ಟರ್ಡ್ ವೃತ್ತಪತ್ರಿಕೆಗಳು ೫ ತೊಲೆ ತೂಕದೊಳಗಿದ್ದರೆ ೩ ಪೈ. ಅದಕ್ಕೆಹೆಚ್ಚಿ ೨೦ ತೊಲೆ ತೂಕದೊಳಗಿದ್ದರೆ ೬ ಪೈಯಂತೆ ದರವು ವಿಧಿಸಲ್ಪಡುವುದು. ೨ ಸಾವಿರಕ್ಕೆ ಮೇಲ್ಪಟ್ಟ ಆದಾಯದ ಮೇಲಣ ತೆರಿಗೆಯ ದರವು ಇನ್ನಷ್ಟು ಹೆಚ್ಚಿಸಲ್ಪಡುವುದು. ಇವು ಪ್ರತಿಯೊಂದೂ ಪ್ರಜೆಗಳಮೇಲೆ ಹೇರಲ್ಪಟ್ಟ ನೂತನಭಾರವಾಗುವುವೆಂಬುದು ಸಿದ್ಧವೇ. ಸೈನಿಕಾದಿವ್ಯಯಗಳ ಭಾರವನ್ನು ಸಂಕೋಚಗೊಳಿಸಿದ್ದರೆ ಈ ನೂತನ ಭಾರವನ್ನು ಪ್ರಜೆಗಳಮೇಲೆ ಹೇರಬೇಕಾದ ಅವಶ್ಯಕತೆ ಬೀಳುತ್ತಿರಲಿಲ್ಲ. ಆದರೆ ಸೈನಿಕವ್ಯಯ ವಿಷಯವನ್ನು ಆಕ್ಷೇಪಿಸುವುದಕ್ಕೆ ಈಗಣ ನೂತನ ಸಂಸ್ಕರಣಮಂಡಿತ ಶಾಸನಸಭಾ ಸಭಿಕರಿಗೂ ಅಧಿಕಾರವಿರುವುದಿಲ್ಲ. ಮಾಡುವುದೇನು? ಈಗಣ ರಾಜಕೀಯವಿಷಮವಾತಾವರಣದಲ್ಲಿ ಭರತಖಂಡ ಪ್ರಭುತ್ವದ ಆರ್ಥಿಕಸ್ಥಿತಿಯು ಇಂಥ ವಿಷಮಗತಿಗೆ ಬಂದಿರಲು, ಪ್ರಜೆಗಳು ಹೊಸತೆರಿಗೆಗಳನ್ನು ಹೊರುವುದಕ್ಕೆ ಅಣಿಯಾಗಬೇಕಾಗುವಂತೆ ಮಾಡುವುದು, ದೇಶದ ಪ್ರಜೆಗಳಲ್ಲಿ ಪ್ರಭುತ್ವವಿಷಯಕವಾಗಿ ಮತ್ತಷ್ಟು ಜುಗುಪ್ಸೆಯನ್ನು ಹುಟ್ಟಿಸಲು ಸಹಾಯನಿರಾಕರಣವಾದಿಗಳಿಗೆ ಅನುಕೂಲಪಡಿಸಿಕೊಟ್ಟಂತಾಗುವುದೇ ಖಂಡಿತ.

೧೩೦ ಮಂದಿಗಳ ಕೊಲೆ.

ಪಂಜಾಬಿಗೆ ಸೇರಿದ ಷೇಖ್ಪುರಾ ಜಿಲ್ಲೆಯಲ್ಲಿ ನಾನ್ಕಾನಾಸಾಹಿಬ್ ಎಂಬ ಪಟ್ಟಣವಿದೆ. ಅದು ಬಹಳ ಪುರಾತನವಾದ ಪಟ್ಟಣ. ಇದು ಸಿಕ್ ಮತಸ್ಥಾಪಕನಾದ ಪ್ರಸಿದ್ಧ ನಾನಕ್ಕನ ಜನ್ಮಸ್ಥಲ. ನಾನಕ್ಕನು ಜನಿಸಿದ ಸ್ಥಲದಲ್ಲಿ ಗುರುದ್ವಾರವೆಂಬ ದೇವಾಲಯವು ಕಟ್ಟಲ್ಪಟ್ಟು ಅದರಲ್ಲಿ ಸಿಕ್ಕರ ವೇದಗ್ರಂಥವೂ ನಾನಕ್ಕನ ವಿಗ್ರಹವೂ ಇಡಲ್ಪಟ್ಟಿವೆ. ಈ ಮಂದಿರವು ನಾಲ್ಕು ದ್ವಾರಗಳುಳ್ಳುದಾಗಿ ಸುತ್ತಲೂ ಕೋಟೆಯಂತಹ ಪ್ರಾಕಾರವುಳ್ಳುದಾಗಿದೆ. ಈ ಸ್ಥಲವು ಸಿಕ್ ಜನರ ಪವಿತ್ರ ಯಾತ್ರಾಸ್ಥಲವಾಗಿದೆ. ಇದು ನಾರಾಯಣದಾಸ್ ಎಂಬ ಮಹಂತನ ಯಾಜಮಾನ್ಯದಲ್ಲಿದ್ದಿತು. ಕಳೆದ ಫಿಬ್ರವರಿ ತಾ|| ೨೦ರಲ್ಲಿ ಧರೋವಾಲ್ ನಿವಾಸಿಯಾದ ಲಕ್ಷ್ಮಣಸಿಂಗ್ ಎಂಬಾತನೂ ಅವನ ಅನುಚರರಾದ ನೂರಾರು ಮಂದಿ ಸಿಕ್ಕರೂ ಯಾತ್ರಾರ್ಥಿಗಳಾಗಿ ಈ ಸ್ಥಲಕ್ಕೆ ಬಂದರು. ಈ ಲಕ್ಷ್ಮಣಸಿಂಗ್ ಪಕ್ಷದವರಿಗೂ ಮಹಾಂತನ ಪಕ್ಷದವರಿಗೂ ವಿರೋಧವಿದ್ದಂತೆ ಕಾಣುತ್ತದೆ. ನಾರಾಯಣಸಿಂಗ್ ಪಕ್ಷದವರು ಗುರುದ್ವಾರವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಲಿಕ್ಕೇ ಬರುತ್ತಾರೆಂದು ಯೋಚಿಸಿಕೊಂಡು ಮಹಾಂತನೂ ಅವನ ಕಡೆಯ ಕೆಲವರೂ ಸಹ ಕೆಲ ಪಠಾಣರನ್ನು ಕೂಡಿಸಿಕೊಂಡಿದ್ದು, ಕತ್ತಿ ಕಠಾರಿ ತುಪಾಕಿ ಮೊದಲಾದುವುಗಳನ್ನು ಗುಪ್ತವಾಗಿ ಹವಣಿಸಿಟ್ಟುಕೊಂಡಿದ್ದರು. ೨೦ನೆ ತಾ|| ಬೆಳಗಿನ ೬ ಗಂಟೆಗೆ ಲಕ್ಷ್ಮಣಸಿಂಗು ತನ್ನ ಅನುಚರರೊಡನೆ ಗುರುದ್ವಾರಕ್ಕೆ ಹೋಗಿ ಅಲ್ಲಿಯ ಜನ್ಮಸ್ಥಲದಲ್ಲಿ ಕುಳಿತುಕೊಂಡು ವೇದಗ್ರಂಥವನ್ನು ಓದಲು ಆರಂಭಿಸಿದನು. ಅಷ್ಟರಲ್ಲಿ ಮಹಂತನ ಕಡೆಯವರು ಬಂದು ಮಂದಿರದ ದ್ವಾರಗಳನ್ನೆಲ್ಲಾ ಮುಚ್ಚಿ ತಮ್ಮಲ್ಲಿದ್ದ ಆಯುಧಗಳಿಂದ ಲಕ್ಷ್ಮಣಸಿಂಗನ ಕಡೆಯವರನ್ನು ಚಿತ್ರವಧೆ ಮಾಡಿ ಕೊಲ್ಲಲುಪಕ್ರಮಿಸಿದರು. ಮೇಲಿನಿಂದ ಗುರಿ ಮಾಡಿ ಇಟ್ಟಿಗೆಗಳನ್ನೂ ಕಲ್ಲುಗಳನ್ನೂ ಸುರಿಸಿದರು. ಲಕ್ಷ್ಮಣಸಿಂಗಿನ ಕಡೆಯವರು ನಿರಾಯುಧರಾಗಿದ್ದರು. ಅದುಕಾರಣ ಅವರು ಪ್ರತಿಕ್ರಿಯೆ ಮಾಡಲು ಸಮರ್ಥರಾಗಿರಲಿಲ್ಲ. ಸಿಕ್ಕಿದ ದೊಣ್ಣೆಗಳಿಂದ ಅಷ್ಟು ಇಷ್ಟು ಪ್ರಹರಿಸಿದರೂ ಮಹಂತನ ಸಹೋದರನೊಬ್ಬನ ಹೊರತು ಅವರ ಕಡೆಯವರಾರೂ ಸಾಯಲಿಲ್ಲ. ೧೩೦ ಮಂದಿಗೆ ಕಡಿಮೆಯಿಲ್ಲದೆ ಲಕ್ಷ್ಮಣಸಿಂಗನ ಕಡೆಯವರೇ ಕೊಲ್ಲಲ್ಪಟ್ಟರು. ಈ ವಿಪರೀತ ಭಯಂಕರ ವಧೆಯು ಬೆಳಗಿನ ೭|| ಗಂಟೆಯಿಂದ ಮಧ್ಯಾಹ್ನ ೧೧ ಗಂಟೆಯವರೆಗೂ ಜರುಗಿತು. ಶವಗಳನ್ನು ೪-೫ ಕಡೆ ಗುಡ್ಡೆ ಹಾಕಿ ಸೀಮೆಯೆಣ್ಣೆಯನ್ನು ಅವುಗಳ ಮೇಲೆ ಸುರಿದು ಸುಟ್ಟುಬಿಟ್ಟರು. ಅವೆಲ್ಲಾ ಸಾಯಂಕಾಲದವರೆಗೆ ಉರಿಯುತ್ತಿದ್ದುವು. ಲಕ್ಷ್ಮಣಸಿಂಗ್ ಮೊದಲಾದವರೆಲ್ಲಾ ಹೀಗೇ ದಗ್ಧರಾಗಿಹೋದರು. ಕೆಲವರನ್ನು ಜೀವ ಸಹಿತ ಸುಟ್ಟುಬಿಟ್ಟರು. ಆ ಪವಿತ್ರಮಂದಿರವು ಸ್ಥಾಪಿತವಾದಾರಭ್ಯ ಇಂಥ ಘೋರ ಪಾಪಾಚರಣೆಯು ಅಲ್ಲಿ ನಡೆದಿರಲಿಲ್ಲ. ಜನ್ಮಸ್ಥಲದಲ್ಲಿ ರಕ್ತದ ಕೋಡಿ ಹರಿದಾಡಿತು. ವೇದಗ್ರಂಥಕ್ಕೆಲ್ಲಾ ಗುಂಡಿನೇಟು ಬಿದ್ದು ರಂಧ್ರಗಳಾದುವು. ನಾನಕ್ ವಿಗ್ರಹದ ಮೇಲೆ ಇದ್ದ ಕನ್ನಡಿಯ ಮಂಟಪವೆಲ್ಲಾ ಚೂರುಚೂರಾಯಿತು. ಈ ಪ್ರಳಯದ ಸುದ್ದಿಯು ಷೇಖ್ಪುರಾ ಡಿಪ್ಟಿ ಕಮಿಷನರಿಗೆ ತಿಳಿದ ಕೂಡಲೇ ಅದೇ ಮಧ್ಯಾಹ್ನ ೧೨|| ಗಂಟೆಗೆ ಅಲ್ಲಿಗೆ ಹೋದರು. ಅಲ್ಲಿ ಶವಗಳು ಉರಿಯುತ್ತಿದ್ದುವು. ಇನ್ನೂ ಏನು ಪ್ರಮಾದವು ಜರುಗುವುದೋ ಎಂದು ಅವರು ಲಾಹೋರಿಗೆ ತಂತೀವಾರ್ತೆ ಕೊಟ್ಟು ೧೦೦ ಮಂದಿ ಸೋಲ್ಜರುಗಳನ್ನೂ ೧೦೦ ಮಂದಿ ಭಾರತೀಯ ಸೈನಿಕರನ್ನೂ ಬರಮಾಡಿಕೊಂಡರು. ಮಹಂತನಮೇಲೆ ಹಗೆ ತೀರಿಸಿಕೊಳ್ಳಲಿಕ್ಕೆ ಬಹುಮಂದಿ ಸಿಕ್ಕರು ಅಣಿಯಾಗುತ್ತಿರುವರೆಂಬ ವರ್ತಮಾನವಿದ್ದಿತು, ಅಷ್ಟರಲ್ಲಿ ಲಾಹೋರ್ ಕಮಿಷನರು ಮೊದಲಾದ ಅಧಿಕಾರಿಗಳು ಹೋಗಿ ಸೇರಿದರು, ಸೈನಿಕರನ್ನು ದೇವಾಲಯದ ಸುತ್ತ ಕಾವಲಿರಿಸಿದರು. ಆ ಊರಿಗೆ ಒಂದ ಯಾವ ಹೊಗೆಬಂಡಿಯೂ ಅಲ್ಲಿ ನಿಲ್ಲದಂತೆ ಏರ್ಪಡಿಸಿದರು. ಮಹಾಂತ ನಾರಾಯಣದಾಸನನ್ನೂ ಅವನ ಇಬ್ಬರು ಮುಖ್ಯಶಿಷ್ಯರನ್ನೂ ೨೬ ಮಂದಿ ಪಠಾಣರನ್ನೂ ಸರ್ಕಾರದವರು ಸೆರೆ ಹಿಡಿದು ಸ್ಪೆಷಲ್ ಟ್ರೇನಿನ ಮೇಲೆ ಲಾಹೋರಿಗೆ ಕಳುಹಿಸಿಬಿಟ್ಟರು. ದೇವಾಲಯವನ್ನು ಜಿಲ್ಲಾ ಮೇಜಿಸ್ಟ್ರೇಟು ವಶಪಡಿಸಿಕೊಂಡು ಸಿಕ್ ಪ್ರಮುಖರಾದ ಕೆಲಜನರ ಸಂಘದ ಯಾಜಮಾನ್ಯಕ್ಕೆ ಒಪ್ಪಿಸಿದ್ದಾರೆ. ಈ ಸಂಘಕ್ಕೆ ಸರ್ದಾರ್ ದರ್ಶನಸಿಂಗರು ಅಧ್ಯಕ್ಷರಾಗಿಯೂ, ಸರ್ದಾರ್ ಸುಂದರಸಿಂಗರು ಉಪಾಧ್ಯಕ್ಷರಾಗಿಯೂ ಇದ್ದಾರೆ. ಈ ಸಂಘದವರ ರಕ್ಷಣೆಗಾಗಿ ಕೆಲ ಪೋಲೀಸರು ಮಾತ್ರ ಇಡಲ್ಪಟ್ಟಿದ್ದಾರೆ. ಸೈನ್ಯವೆಲ್ಲಾ ಲಾಹೋರಿಗೆ ಹೋಯಿತು. ಈಗ ಊರು ಶಾಂತವಾಗಿದೆ. ಪ್ರಭುತ್ವದವರು ವಿಚಾರಣೆ ನಡೆಯಿಸುತ್ತಿದ್ದಾರೆ. ಮೃತರಾದವರ ಅನುಬಂಧಿಗಳು ಬಹುಶಃ ೧೨ ಸಾವಿರ ಮಂದಿಗಳು ತಾ|| ೨೪ರಲ್ಲಿ ಅಲ್ಲಿಗೆ ಬಂದು ಉತ್ತರ ಸಂಸ್ಕಾರವನ್ನು ಮಾಡಿದರು.

ಸ್ವರ್ಗವಾಸಿ ಡಾಕ್ಟರ್ ರಸವಿಹಾರಿಘೋಷ್‌ರವರು.

ಕಲ್ಕತ್ತಾದಲ್ಲಿ ಸುಪ್ರಸಿದ್ಧ ನ್ಯಾಯಶಾಸ್ತ್ರವೇತ್ತರೂ ಪ್ರಬಲನ್ಯಾಯವಾದಿಗಳೂ ಮಹಾ ವಿದ್ಯಾವಂತರೂ, ಅಸಾಧಾರಣ ದೇಶಭಕ್ತರೂ, ಬಂಗಾಳ ಶಾಸನಸಭಾಸಭಿಕರೂ ಆಗಿದ್ದ ಡಾಕ್ಟರ್ ರಸವಿಹಾರಿಘೋಷ್ ರವರು ಕಳೆದ ತಾ|| ೨೮ ನೆ ಭಾನುವಾರ ರಾತ್ರಿ ಕಲ್ಕತ್ತಾಪಟ್ಟಣದಲ್ಲಿರುವ ತಮ್ಮ ಮನೆಯಲ್ಲಿ ತಮ್ಮ ೭೩ ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಯಿಸುವುದಕ್ಕೆ ಅತಿಶಯವಾಗಿ ವಿಷಾದಿಸುತ್ತೇವೆ. ಇವರು [illegible] ಅಸಾಧಾರಣ ದೇಶಾಭಿಮಾನಿಗಳಾಗಿದ್ದರು. ಬಹುಕಾಲ ದೇಶೀಯ ಮಹಾಸಭೆಯನ್ನು ಸೇರಿ ದೇಶಸೇವೆಮಾಡಿದರು. ಉಗ್ರವಾದವು ಇವರಿಗೆ ಸೇರುತ್ತಿರಲಿಲ್ಲ. ಇವರು ವಾಕ್ಪ್ರತ್ಯಕ್ಕಿಂತಲೂ ಕಾರ್ಯತೂರ್ತ್ಯವೇ ದೇಶಕ್ಕೆ ಹಿತಕರವೆಂಬುದನ್ನು ತಮ್ಮ ಕೃತ್ಯ ವಿಶೇಷಗಳಿಂದ ದೇಶೀಯರಿಗೆ ಮಾರ್ಗದರ್ಶಿಯಾಗಿ ತೋರಿಸಿಕೊಟ್ಟವರು. ಎಷ್ಟೋ ಲಕ್ಷ ಗಟ್ಟಲೆಯ ದ್ರವ್ಯವನ್ನು ತಮ್ಮ ವಕೀಲವೃತ್ತಿಯಲ್ಲಿ ಸಂಪಾದಿಸಿದರು. ಆ ವೃತ್ತಿಯಲ್ಲಿ ಅಮಿತಕೀರ್ತಿವಂತರು. ಒಂದುಸಲ ಒಂದು ವ್ಯಾಜ್ಯದಲ್ಲಿ ವಾದಿಸುವುದಕ್ಕಾಗಿ ೨ ಬಂಡಿಗಳ ನ್ಯಾಯಶಾಸ್ತ್ರ ಗ್ರಂಥಗಳನ್ನು ಕೋರ್ಟಿಗೆ ಹೇರಿಸಿಕೊಂಡು ಹೋದರು. ಅಲ್ಲಿಯ ಯೂರೋಪ್ಯ ದಂಡಾಧಿಕಾರಿಯು ಅದನ್ನು ನೋಡಿ ಈ ಡಬ್ಬಿನ ಭಯವನ್ನು ಕೋರ್ಟಿಗೆ ತೋರಿಸಿ ವ್ಯಾಜ್ಯವನ್ನು ಗೆಲ್ಲುವುದಕ್ಕೆ ಬಂದಿರಾ? ಎಂದು ಪರಿಹಾಸಮಾಡಿ ನುಡಿಯಲು, ಇವರು—ಹೌದಲ್ಲ; ನಿಮ್ಮಂಥ ಯುವಕರಿಗೆ ನ್ಯಾಯಶಾಸ್ತ್ರಜ್ಞಾನವನ್ನು ಮಾಡಿಕೊಡುವುದಕ್ಕೆ ತಂದಿದ್ದೇನೆ ಎಂದು ನಿಶ್ಶಂಕನಾಗಿ ಹೇಳಿಬಿಟ್ಟು ಆ ಗ್ರಂಥಗಳನ್ನೆಲ್ಲಾ ಹಿಂದಕ್ಕೆ ಸಾಗಿಸಿಕೊಂಡುಹೋದರು. ಕಲ್ಕತ್ತಾದಲ್ಲಿ ಕೂಡಿದ್ದ ದೇಶೀಯ ಮಹಾಸಭೆಯಲ್ಲಿ ಒಂದುಸಲ ಸತ್ಕಾರಕ ಸಂಘಾಧ್ಯಕ್ಷರಾಗಿದ್ದರು. ಸೂರತ್ತಿನಲ್ಲಿ ಕೂಡಿದ್ದ ದೇಶೀಯ ಮಹಾಸಭೆಗೆ ಇವರು ಅಧ್ಯಕ್ಷರಾಗಿದ್ದಾಗ ಉಗ್ರಪಕ್ಷದವರು ಇವರನ್ನು [illegible] ಸಭೆಯನ್ನು ಮುರಿದರು. ಮರು ವರ್ಷ ಮದ್ರಾಸಿನಲ್ಲಿ ಕೂಡಿದ ದೇಶೀಯ ಮಹಾಸಭೆಯು ಇವರ ಅಧ್ಯಕ್ಷತೆಯಿಂದಲೇ ನಡೆಯಿತು. ದೇಶವು ಶಿಲ್ಪಕಲಾಭಿವೃದ್ಧಿಯಿಂದಲ್ಲದೆ ಏಳಿಯುತ್ತಿರುವುದಿಲ್ಲವೆಂಬುದನ್ನರಿತು ಇವರು ಅನೇಕ ಯಂತ್ರಾಲಯ ಪ್ರತಿಷ್ಠಾಪನೆಗಳನ್ನು ಮಾಡಿಸಿ ಅವಕ್ಕೆ ವಿಶೇಷ ಧನವನ್ನು ಹಾಕಿರುವರು. ಅಲ್ಲದೆ ಇವರ ವಿದ್ಯಾಭಿಮಾನವು ಅನ್ಯಾದೃಶವಾದುದು. ಕಲ್ಕತ್ತಾದಲ್ಲಿ ಪ್ರಕೃತಿಶಾಸ್ತ್ರ ಕಲಾಶಾಲೆಯನ್ನು ಪ್ರತಿಷ್ಠಾಪಿಸಲೂ ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೂ ಸಹ ೨೧ ಲಕ್ಷ ರೂ. ಗಳನ್ನು ಇವರು ದಾನಮಾಡಿರುವರು. ಮತ್ತು ಈಗ ತಾವು ಬರೆದಿಟ್ಟಿರುವ ಮರಣಶಾಸನದಲ್ಲಿ ತಮ್ಮ ಆಸ್ತಿಯಿಂದ ವ್ಯವಸಾಯವನ್ನು ಕುರಿತು ಉಪನ್ಯಾಸಮಾಡತಕ್ಕ ಸಂಚಾರಿಗಳನ್ನು ನಿಯಮಿಸಲಿಕ್ಕಾಗಿ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ೧ ವರ್ಷದೊಳಗಾಗಿ ೨|| ಲಕ್ಷ ರೂ. ಗಳನ್ನೂ, ತಮ್ಮ ಸ್ವಂತ ಗ್ರಾಮದಲ್ಲಿಯ ಪಾಠಶಾಲೆಗೆ ೧|| ಲಕ್ಷ ರೂ. ಗಳನ್ನೂ, ಮತ್ತು ತಮ್ಮ ಪುಸ್ತಕ ಭಂಡಾರದಲ್ಲಿರುವ ನ್ಯಾಯಶಾಸ್ತ್ರಗ್ರಂಥಗಳ ಹೊರತು ಉಳಿದ ಸಕಲಗ್ರಂಥಗಳನ್ನೂ, ತಮ್ಮ ಸ್ವಂತದ ಗ್ರಾಮದಲ್ಲಿರುವ ಶಿವಾಲಯಕ್ಕೆ ಕೆಲ ಭೂಮಿಗಳನ್ನೂ ೫೦ ಸಾವಿರ ರೂ. ಗಳ [illegible], ಬಂಧು ಬಳಕ್ಕೆ ಬೇರೆಬೇರೆ ಅಷ್ಟಷ್ಟು ದ್ರವ್ಯವನ್ನು ಕೊಡಬೇಕೆಂದು ಬರೆದಿರುವುದಲ್ಲದೆ, ಉಳಿಯುವ ೯-೧೦ ಲಕ್ಷ ರೂ. ಗಳ ಸೊತ್ತನ್ನೆಲ್ಲಾ ಜಾತೀಯ ವಿದ್ಯಾವ್ಯಾಸಂಗಕ್ಕಾಗಿ ವಿನಿಯೋಗಿಸತಕ್ಕುದೆಂದು ಕಾಣಿಸಿರುತ್ತಾರೆ. ಇಂಥ ದಾನಶೌಂಡರೂ ಮಹಾ ವಿದ್ಯಾವಂತರೂ ನಿರುಪಮದೇಶಾಭಿಮಾನಿಗಳೂ ಆದ ಈ ಮಹಾಪುರುಷರು ಮೃತರಾದುದು ಭರತಖಂಡಕ್ಕೇ ದೊಡ್ಡ ನಷ್ಟವೆಂದು ಹೇಳುವುದರಲ್ಲಿ ಸಂಶಯವಿಲ್ಲ. ಮೃತರ ಆತ್ಮಕ್ಕೆ ಜಗದೀಶ್ವರನು ಚಿರಶಾಂತಿಯನ್ನುಂಟುಮಾಡಲಿ.

ಒಳದೇಶದ ವೃತ್ತಾಂತಗಳು.

ಮ|| ಎಚ್. ವಿ. ವಿಶ್ವೇಶ್ವರಯ್ಯನವರು ಕೃಷ್ಣರಾಜಸಾಗರದ ಕೆಲಸಕ್ಕೆ ಟೆಂಪರರಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ಸಬ್‌ಡಿವಿಜನ್ ಆಫೀಸರಾಗಿರುವ ಮ|| ಅನಂತರಾಮಯ್ಯ ಬಿ. ಎ., ಯವರು ಸರ್ವೇಶಾಖೆಗೆ ವರ್ಗಾಯಿಸಲ್ಪಡುವುದಾಗಿ ಕೇಳುತ್ತೇವೆ.

ಮ|| ಪಿ. ಎ. ಸುಬ್ರಹ್ಮಣ್ಯಯ್ಯನವರು, ಮ|| ಎಂ. ಎಸ್. ನಾರಾಯಣರಾವ್ ರವರು ಸಹ [illegible] ಶಾಖೆಯ ಸರ್ಟಿಫಿಕೇಟ್ ಪಡೆದ ಅಕೌಂಟೆಂಟ್‌ರೆಂದು ಅಂಗೀಕರಿಸಲ್ಪಟ್ಟಿದ್ದಾರೆ.

ಬೆಂಗಳೂರು ಗೌರೀಸಾಲಯ ಮುದ್ರಾಕ್ಷರ ಶಾಲಾಧಿಪತಿಗಳಾಗಿಯೂ ವಿಕಟವಿನೋದಿನೀ ಎಂಬ ಹಾಸ್ಯರಸ ಮಾಸಪತ್ರಿಕೆಯ ಸಂಪಾದಕರಾಗಿಯೂ ಇದ್ದ ಮ|| ಬಿ. ಬಸವಪ್ಪಶೆಟ್ಟರು ಶಿವಾಧೀನರಾದರೆಂದು ಕೇಳಿ ವಿಷಾದಿಸುತ್ತೇವೆ.

ಮೈಸೂರು ಸಿಟಿ ಪೊಲೀಸು ಅ|| ಸೂಪರಿಂಟೆಂಡೆಂಟರಾಗಿರುವ ಮಿ|| ಗನಿಯವರು ಕೋಲಾರದ ಚಿನ್ನದ ಗಣಿಗೆ ವರ್ಗಾಯಿಸಲ್ಪಟ್ಟು ಮಿ|| ಸಿರಿಲ್‌ರವರು ಮೈಸೂರು ಸಿಟಿ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಡುವರೆಂಬ ವದಂತಿಯಿದೆ.

ಚೀಫ್‌ಜಡ್ಜರಾದ ಸರ್ ಲೇಸ್ಲಿ ಮಿಲ್ಲರ್‌ರವರು ಮಾರ್ಚಿ ೨ ನೆ ತಾರೀಖಿನಿಂದ ೧೩ ತಿಂಗಳ ರಜಾ ಪಡೆದುಕೊಂಡಿರುವುದರಿಂದ ಅವರು ಕೆಲಸದಮೇಲೆ ಬರುವವರೆಗೆ ಅಥವಾ ಮತ್ತೊಂದು ಅಪ್ಪಣೆಕೊಡುವವರೆಗೆ ಜಸ್ಟಿಸ್ ಕೆ. ಚಂದ್ರಶೇಖರಯ್ಯರ್ ಬಿ.ಎ., ಬಿ.ಎಲ್. ರವರು ಆಕ್ಟಿಂಗ್ ಚೀಫ್‌ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ದಿವಾನ್‌ರವರು ತಮ್ಮ ಸಂಚಾರಕಾಲದಲ್ಲಿ ಅಲ್ಲಲ್ಲಿಯ ಪ್ರಜೆಗಳನ್ನು ಅವರ ವಿಶ್ವಾಸಗಳಿಂದ ಬರಮಾಡಿಕೊಂಡು ಅವರ ಕಷ್ಟ ನಿಷ್ಠುರಗಳನ್ನು ಬಹಳ ಮಮತೆಯಿಂದ ವಿಚಾರಿಸಿ ಸಾಧ್ಯವಾದುವುಗಳಿಗೆ ಅಲ್ಲಲ್ಲೇ ಪರಿಹಾರವನ್ನು ಕಲ್ಪಿಸಿ ಬಲವಾಗಿ ಪ್ರಜೆಗಳ ಮನಸ್ಸನ್ನು ಸಂತೃಪ್ತಿಪಡಿಸಿ ತಮ್ಮ ದಯಾರ್ದ್ರ ಮನಸ್ಸಾರಸ್ಯವನ್ನೂ, ಪ್ರಜಾವಾತ್ಸಲ್ಯವನ್ನೂ ವ್ಯಕ್ತಪಡಿಸಿರುವರೆಂದು ಕೇಳಿ ಸಂತೋಷಿಸುತ್ತೇವೆ.

ನರಸಿಂಹರಾಜಪುರದ ಮ|| ಇಂ. ಶಾಂತಪ್ಪಶೆಟ್ಟರು ತಮ್ಮ ತಂದೆ ನಿರ್ವಾಣಪ್ಪಶೆಟ್ಟರ ಅಪ್ಪಣೆಮೇರೆಗೆ ಬೀರೂರಿನಲ್ಲಿ ಒಂದು ಸತ್ರವನ್ನು ಕಟ್ಟಿಸಿರುವರು. ಕಳೆದ ಮಂಗಳವಾರ ಅದರ ಪ್ರವೇಶಮಹೋತ್ಸವವನ್ನು ದಿವಾನ್ ಸರ್ದಾರ್ ಕಾಂತರಾಜಅರಸಿನವರು ಶೆಟ್ಟರ ಪ್ರಾರ್ಥನೆಪ್ರಕಾರ ನೆರವೇರಿಸಿದರು. ಆ ಸಮಯದಲ್ಲಿ ಮ|| ಶೆಟ್ಟರು ದಿವಾನ್‌ರನ್ನು ಕುರಿತು ಓದಿದ ವಿಜ್ಞಾಪನಪತ್ರವನ್ನು ಶ್ರೀ ಗಂಧದ ಕರಂಡಕದಲ್ಲಿಟ್ಟು ಸಮರ್ಪಿಸಿದರು.

ಮೈಸೂರು ದೇಶದ ಎಸ್. ಎಸ್. ಎಲ್. ಸಿ. ಪರೀಕ್ಷೆಯು ಮಾರ್ಚಿ ತಾ|| ೨೮ ರಿಂದ ಏಪ್ರಿಲ್ ತಾ|| ೧೨ ರ ಕೊನೆಯವರೆಗೆ ಉಪಾಧ್ಯಾಯ ಪರೀಕ್ಷೆ (ಉತ್ತಮ ತರಗತಿ) ಏಪ್ರಿಲ್ ತಾ|| ೧ ರಿಂದ ೪ ರ ಕೊನೆಯವರೆಗೆ ಅದೇ ಪರೀಕ್ಷೆಯ (ಚಿಕ್ಕ ತರಗತಿ) ಏಪ್ರಿಲ್ ತಾ|| ೧-೨ ರ ವರೆಗೆ, ಲೋವರ್‌ಸೆಕೆಂಡರಿ ಪರೀಕ್ಷೆ ಏಪ್ರಿಲ್ ತಾ|| ೫ ರಿಂದ ೧೨ ರ ಕೊನೆಯವರೆಗೆ. ಅಪ್ಪರ್ ಸೆಕೆಂಡರಿ ಪರೀಕ್ಷೆ ಏಪ್ರಿಲ್ ೫ ರಿಂದ ೧೧ ರ ಕೊನೆಯವರೆಗೆ ಉಪಾಧ್ಯಾಯರ ಹೊಲಿಗೆಯ ಪರೀಕ್ಷೆ ಏಪ್ರಿಲ್ ೫ ರಿಂದ ೬ ನೆ ಕೊನೆಯವರೆಗೆ, ಪಂಡಿತರ ಮೌಲ್ವಿಗಳ ಪರೀಕ್ಷೆ ಏಪ್ರಿಲ್ ೫ ರಿಂದ ೧೨ ರ ಕೊನೆಯವರೆಗೆ, ವ್ಯವಸಾಯ ಪರೀಕ್ಷೆ ಏಪ್ರಿಲ್ ತಾ|| ೪-೫ ರಲ್ಲಿ ನಡೆಯಿಸಲ್ಪಡುತ್ತವೆ.

ವ್ಯಾಪಾರ ಲೇವಾದೇವಿ ಮಾಡತಕ್ಕವರು ತಮ್ಮ ಆದಾಯದ ಲೆಕ್ಕಗಳನ್ನು ತೋರಿಸಬೇಕೆಂದು ಆದಾಯದ ತೆರಿಗೆಯ ಶಾಖೆಯವರು ಕೇಳಿದ್ದುದರ ಮೇಲೆ ಈವರೆಗೆ ಕ್ರಮವಾದ ಲೆಕ್ಕವನ್ನು ಇಟ್ಟಿಲ್ಲ; ಇನ್ನು ಮುಂದೆ ಇಡುತ್ತೇವೆಂದು ತಿಳುಹಿಸಿದ್ದವರಿಗೆಲ್ಲಾ ತೆರಿಗೆಯ ಶಾಖೆಯವರು ಪೂರ್ವಾಪರ ವಿಚಾರಮಾಡದೆ ತಮ್ಮ ಮನಸ್ಸಿಗೆ ತೋರಿದಂತೆ ಮಿತಿಮೀರಿ ತೆರಿಗೆಯನ್ನು ವಿಧಿಸಿರುವುದಾಗಿಯೂ, ಅಂತಹ ಜನಗಳು ಮಿತಿಮೀರಿದ ಭಾರವನ್ನು ಹೊರಲಾರದೆ ಪೇಚಾಡುತ್ತಿರುವುದಾಗಿಯೂ ಜನರು ಆಡುಕೊಳ್ಳುತ್ತಾರೆ. ಇದು ನಿಜವಾಗಿದ್ದ ಪಕ್ಷದಲ್ಲಿ ತೆರಿಗೆಯ ಕಮಿಷನರಾಗಲಿ ಕಲೆಕ್ಟರಾಗಲಿ ಗಮನಕ್ಕೆ ತಂದುಕೊಂಡು ಯುಕ್ತವಾದ ತೆರಿಗೆಯನ್ನು ವಿಧಿಸಿ ಹೆಚ್ಚು ಭಾರವನ್ನು ಕಡಿಮೆಮಾಡುವರೆಂದು ನಿರೀಕ್ಷಿಸುತ್ತೇವೆ.

1921 ನೆಯ ಇಸವಿ ಜೂನ್ ತಿಂಗಳಿನ ಪ್ರಜಾಪ್ರತಿನಿಧಿ ಸಭೆಯ ವರ್ಧಂತಿ ಅಧಿವೇಶನದ ಕ್ಯಾಲೆಂಡರ್.

1 1921 ನೇ ಇಸವಿ ಮಾರ್ಚಿ ತಿಂಗಳು 5 ನೇ ತಾರೀಖಿನೊಳಗಾಗಿ— (1) ತಾಲ್ಲೂಕು ಮೆಂಬರುಗಳೂ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಲ್ ಕೌನ್ಸಿಲುಗಳೂ ಮತ್ತು ಅಂಗೀಕೃತವಾದ ಸಂಘಗಳೂ ತಮ್ಮ ತಮ್ಮ ಡೆಪ್ಯುಟಿ ಕಮಿಷನರುಗಳಿಗೆ ಮೈಸೂರಿನಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಯ ವರ್ಧಂತಿ ಅಧಿವೇಶನದಲ್ಲಿ ಅವರು ಮಾಡಬೇಕಾದ ಅರಿಕೆಗಳ ಮತ್ತು ಚರ್ಚಿಸಲ್ಪಡಬೇಕಾದ ವಿಷಯಗಳನ್ನು ಕುರಿತ ಸೂಚನೆಗಳ ಮೆಮೊರಾಂಡಮನ್ನೂ ಉತ್ತರ ಕೊಡಬೇಕಾದ ಪ್ರಶ್ನಾಂಶಗಳನ್ನೂ ಕಳುಹಿಸತಕ್ಕದ್ದು. (2) ಸಭೆಯಲ್ಲಿ ಹಾಜರಾಗಬಹುದಾದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪಟ್ಟಿಗಳನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು.

2. 1921 ನೇ ಇಸವಿ ಏಪ್ರಿಲ್ 2 ನೇ ತಾರೀಖಿನೊಳಗಾಗಿ—ಡೆಪ್ಯುಟಿ ಕಮಿಷನರುಗಳು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಒಟ್ಟು ಪಟ್ಟಿಯಲ್ಲಿ ಸೇರಿಸುವುದಕ್ಕೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಕಳುಹಿಸಲು ವಿಷಯಗಳನ್ನೂ ಪ್ರಶ್ನಾಂಶಗಳನ್ನೂ [illegible] ಚುನಾಯಿಸುವುದಕ್ಕಾಗಿ ಮೆಂಬರುಗಳ ಮೀಟಿಂಗನ್ನು ನಡಿಸತಕ್ಕದ್ದು.

3. 1921 ನೇ ಇಸವಿ ಏಪ್ರಿಲ್ 14 ನೇ ತಾರೀಖಿನೊಳಗಾಗಿ—(1) ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಮೆಮೊರಾಂಡಂಗಳೂ ಡೆಪ್ಯುಟಿ ಕಮಿಷನರವರ ಷರಾ ಸಹಿತ, ಮತ್ತು ಪ್ರಶ್ನಾಂಶಗಳೂ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು. (2) ಮೈಸೂರು ಯೂನಿವರ್ಸಿಟಿಯಿಂದ ಚರ್ಚಿಸಲ್ಪಡಬೇಕಾದ ವಿಷಯಗಳೂ ಮೀಟಿಂಗಿನಲ್ಲಿ ಹಾಜರಾಗುವ ಮೆಂಬರುಗಳ ಹೆಸರುಗಳೂ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

4. 1921 ನೇ ಇಸವಿ ಜೂನ್ 17 ನೇ ತಾರೀಖು ಸಭೆಯ ಮೀಟಿಂಗು ಪ್ರಾರಂಭವಾಗುವುದು.

ಭರತಖಂಡದ ವೃತ್ತಾಂತಗಳು.

ಕಳೆದ ವರ್ಷ ಮದರಾಸು ಅಧಿಪತ್ಯದ ಪ್ರಜಾಸಂಖ್ಯೆಯಲ್ಲಿ ೧೦೦ ಕ್ಕೆ ೪ ಮಂದಿಯಂತೆ ಮಾತ್ರ ವಿದ್ಯಾಭ್ಯಾಸ ಮಾಡುತ್ತಿದ್ದರು.

ಮದರಾಸು ಪ್ರಭುತ್ವದವರು ಸ್ಕಾಟ್ಲೆಂಡಿನಿಂದ ಕೆಲ ಬೀಜದ ಹೋರಿಗಳನ್ನು ತರಿಸಿಟ್ಟಿದ್ದಾರೆ. ಒಂದು ಹಸುವಿಗೆ ಗೂಳಿಕಟ್ಟಿಸಲಿಕ್ಕೆ ೧೦ ರೂ. ಗಳಂತೆ ದರವನ್ನು ವಿಧಿಸಿರುವರು.

ನೀವು ಯಾವ ಸಭೆಗೂ ಹೋಗಕೂಡದು ಎಲ್ಲೂ ಉಪನ್ಯಾಸಮಾಡಕೂಡದು ಎಂಬುದಾಗಿ ಪಂಜಾಬು ಸರ್ಕಾರದವರು ಪಂಡಿತ ರಾಮಭುಜದತ್ತ ಚೌಧರಿಯವರಿಗೆ ಅಪ್ಪಣೆಮಾಡಿದ್ದಾರೆ.

ಡ್ಯೂಕ್ ಆಫ್ ಕನ್ನಾಟ್ ಪ್ರಭುಗಳು ತಾವು ಬಂದ ಕಾರ್ಯವನ್ನೆಲ್ಲಾ ಮುಗಿಸಿಕೊಂಡು ಕಳೆದ ತಾ|| ೨೮ರಲ್ಲಿ ಬೊಂಬಾಯಿಯಿಂದ ಮಲಯಾ ಎಂಬ ಹಡಗನ್ನೇರಿ ಸೀಮೆಗೆ ಪ್ರಯಾಣ ಮಾಡಿದರು.

ಬೊಂಬಾಯಿ ಅಧಿಪತ್ಯದಲ್ಲಿ ಪ್ರಾಥಮಿಕ ವಿದ್ಯಾಭ್ಯುದಯವನ್ನು ಯಾವರೀತಿಯಿಂದ ಮಾಡಬಹುದೆಂಬುದನ್ನು ಕುರಿತು ವಿಚಾರಮಾಡುವುದಕ್ಕೆ ಅಲ್ಲಿಯ ಸರ್ಕಾರದವರು ಒಂದು ಸಂಘವನ್ನು ಏರ್ಪಡಿಸಿ ಅದಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ.

ನಾಗಪುರದ ಮುನ್ಸಿಪಾಲಿಟಿಯ ಉಪಾಧ್ಯಕ್ಷರಾದ ಡಾಕ್ಟರ್ ಮೋರೇಶ್ವರ ರಾಮಚಂದ್ರಚೋಳ್ಕರ್‌ರವರು ಕಳೆದ ತಾ|| ೨೨ ರಲ್ಲಿ ಕೋರ್ಟಿನಲ್ಲಿ ವಕೀಲರ ಮಧ್ಯದಲ್ಲಿ ಕುಳಿತುಕೊಂಡಿರುವಾಗ ಪೊಲೀಸರು ಬಂದು ಅವರನ್ನು ೧೨೪ ನೆ ಎ ಸೆಕ್ಷನ್ ಪ್ರಕಾರ ಸೆರೆಹಿಡಿದು ಕಾರಾಗೃಹಕ್ಕೆ ಸಾಗಿಸಿಕೊಂಡು ಹೋದರು.

ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳು ಸಹಾಯನಿರಾಕರಣಕ್ಕೆ ಬಲಿಬಿದ್ದು ಕುಣಿಯುತ್ತಿದ್ದರು. ೩ ವಾರಗಳಿಂದ ಕಲಾಶಾಲೆಗಳ ಬಾಗಿಲು ಮುಚ್ಚಿಹೋಗಿದ್ದುವು. ಈಗ ಮರಳಿ ಅವೆಲ್ಲಾ ಶಾಲೆಗಳಿಗೆ ಸೇರಿ ತುಂಬಿದರು. ಅನೇಕ ಶಾಲೆಗಳಲ್ಲಿ ಈಗ ೧೦೦ ಕ್ಕೆ ೪೦ ಮಂದಿಯಷ್ಟು ಬಂದು ಸೇರಿದ್ದಾರೆ.

ಲಕ್ನೋ ನಗರದ ಬಳಿಯಲ್ಲಿ ಗೋಮತೀ ನದಿಯ ಹತ್ತಿರ ಮ|| ಗಾಂಧಿಯವರು ಕಳೆದ ತಾ|| ೨೬ರಲ್ಲಿ ಉಪನ್ಯಾಸ ಮಾಡುತ್ತಿರುವಾಗ ಆಕಾಶದಲ್ಲಿ ಸಂಚರಿಸುತ್ತಿದ್ದ ವಿಮಾನಗಳು ಕನ್ನಾಟ್ ಪ್ರಭುಗಳು ಮಾಡಿದ ಉಪನ್ಯಾಸಗಳ ಭಾಷಾಂತರದ ಮುದ್ರಿತ ಪ್ರತಿಗಳನ್ನು ಮಧ್ಯೇ ಮಧ್ಯೇ ಮೇಲಿನಿಂದ ಜನಸಮುದಾಯದ ಮೇಲೆ ಉದುರಿಸುತ್ತಿದ್ದುವು.

ಕಲ್ಲಿಕೋಟೆಯಲ್ಲಿ ಮತ್ತ ಕುನ್ನಮದ್, ಅಹಮ್ಮದ್, ಅಬುಬೇಕರ್, ಅಸ್ಸಾಕುಟ್ಟಿ ಎಂಬ ೪ ಮಂದಿ ಮಾಪಿಳ್ಳೆಗಳಿಗೆ ನೀವು ಯಾವ ಸಭೆಯನ್ನೂ ಕೂಡಿಸಕೂಡದೂ ಉಪನ್ಯಾಸಮಾಡಕೂಡದೆಂದೂ ಆ ಅರ್ಥಕ್ಕೆ ಹೊಣೆಯನ್ನು ಕೊಡಬೇಕೆಂದೂ ತಿರುರಂಗಾಡಿ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟಿನಿಂದ ನೋಟೀಸು ಕೊಡಲ್ಪಟ್ಟಿತು. ಅದಕ್ಕೆ ಅವರು ಅಂಗೀಕರಿಸಲಿಲ್ಲವಾಗಿ ೬ ತಿಂಗಳ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಕನ್ನಾನೂರು ಕಾರಾಗೃಹಕ್ಕೆ ಕಳೆದ ತಾ|| ೨೬ ರಲ್ಲಿ ಅವರುಗಳು ಕಳುಹಿಸಲ್ಪಟ್ಟರು.

ದಿಲ್ಲಿ ಪಟ್ಟಣದಲ್ಲಿ ಒಬ್ಬ ಮಹಮ್ಮದೀಯ ಪ್ರಮುಖನು ಖಿಲಾಫತ್ ಸಂಘಕ್ಕೆ ಅನುಕೂಲನಾಗಿರಲಿಲ್ಲವೆಂಬ ಕಾರಣದಿಂದ ಆತನನ್ನು ಗೋರಿ ಮಾಡಲಿಕ್ಕೆ ಖಬರಸ್ಥಾನಿಗೆ ಸಾಗಿಸಿಕೊಂಡುಹೋಗುವಾಗ್ಗೆ ಕೆಲರು ಅವಕಾಶ ಕೊಡದೆ ತಡೆದರೆಂಬ ತಪ್ಪಿತದ ಮೇಲೆ ಅಪರಾಧಿಗಳ ವಿಚಾರಣೆಯು ನಡೆದು ಮುಗಿದು ಅಬ್ದುಲ್ಲಾ, ಅಜೀಜ್ ಹುಸೇನ್ ಎಂಬುವವರಿಬ್ಬರಿಗೆ ಮೂರು ಮೂರು ತಿಂಗಳ ಕಾರಾಗೃಹವಾಸ ಶಿಕ್ಷೆಯೂ, ಅದನ್ನನುಭವಿಸಿದ ಬಳಿಕ ಸತ್ಪ್ರವರ್ತನೆಗಾಗಿ ೧ ವರ್ಷದವರೆಗೆ ಹೊಣೆಯನ್ನು ಕೊಡಬೇಕೆಂದೂ ವಿಧಿಸಲ್ಪಟ್ಟಿತು.

ಬಂಗಾಳ ಶಾಸನ ಸಭೆಯು ಕಳೆದ ತಾ|| ೨೮ ರಲ್ಲಿ ಕೂಡಿದ್ದಾಗ ಮೊಟ್ಟಮೊದಲು ಸಭಾಧ್ಯಕ್ಷರು ಡಾಕ್ಟರ್ ರಸವಿಹಾರಿಘೋಷರ ಮೃತಿಯನ್ನು ಕುರಿತು ದುಃಖಪೂರಿತ ಭಾಷಣಮಾಡಿದರು. ಅದೇ ದಿನ ಕಲ್ಕತ್ತಾ ಹೈಕೋರ್ಟಿನಲ್ಲಿ ಅಡ್ವೊಕೇಟ್ ಜನರಲ್‌ರವರು ಘೋಷರ ಅಸಾಮಾನ್ಯ ನ್ಯಾಯಶಾಸ್ತ್ರ ಪಾಂಡಿತ್ಯವನ್ನೂ ಅವರ ದಾತೃತ್ವವನ್ನೂ ರಾಜನೀತಿಜ್ಞತೆಯನ್ನೂ ಸಂಭಾವ್ಯತೆಯನ್ನೂ ಕುರಿತು ಉಪನ್ಯಾಸಮಾಡಿ, ಅವರ ಮೃತಿಗಾಗಿ ದುಃಖಪ್ರದರ್ಶನಮಾಡಿದರು. ನ್ಯಾಯಮೂರ್ತಿಗಳ ಪಕ್ಷದಿಂದ ಜಸ್ಟಿಸ್ ಉಡ್ರಾಫ್‌ರವರೂ ಭಾಷಣಮಾಡಿ, ಆದಿನ ಅವರ ಗೌರವಾರ್ಥವಾಗಿ ಕೋರ್ಟನ್ನು ಮುಚ್ಚಿಸಿಬಿಟ್ಟರು.

ಕಳೆದ ತಾ|| ೧೮ರಲ್ಲಿ ಹಗಲು ೧೧ ಗಂಟೆ ಹೊತ್ತಿನಲ್ಲೇ ಕಲ್ಕತ್ತಾಪಟ್ಟಣದಲ್ಲಿ ಅದ್ಭುತವಾದ ಕಳವು ನಡೆಯಿತು. ಅಲ್ಲಿಯ ಚಾರ್ಟರ್ಡ್ ಬ್ಯಾಂಕಿನವರು ಕರೆನ್ಸಿ ಆಫೀಸಿಗಾಗಿ ೯೫ ಸಾವಿರ ರೂ. ಗಳ ನೋಟುಗಳನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಕಳುಹಿಸಿಕೊಟ್ಟರು. ಅದರ ಜತೆಗೆ ೫ ಮಂದಿ ಆಳುಗಳನ್ನು ಅವರಲ್ಲಿ ಒಬ್ಬನು ಸಾಯುಧನಾದವ (ಗುಂಡು ತುಂಬಿದ ರಿವಾಲ್ವರನ್ನು ಧರಿಸಿದವ) ನಾಗಿದ್ದನು. ಇವರೆಲ್ಲಾ ಡಾಲ್‌ಹೌಸಿ ಚೌಕದ ಬಳಿಗೆ ಬರುವಲ್ಲಿ ಅಲ್ಲಿ ಜನಸಮ್ಮರ್ದವು ಬಹಳವಾಗಿದ್ದಿತು. ಆ ಸಮಯದಲ್ಲಿ ಪಕ್ಕದಲ್ಲಿ ನಿಂತಿದ್ದ ಒಂದು ಮೋಟಾರು ಬಂಡಿಯಿಂದ ಒಬ್ಬನು ದುಮುಕಿ ತನ್ನಲ್ಲಿದ್ದ ಪಿಸ್ತೋಲನ್ನು ಮೂರು ಬಾರಿ ಹಾರಿಸಿ ಗಾಬರಿಗೊಳಿಸಿ, ಆ ನೋಟಿನ ಪೆಟ್ಟಿಗೆಯನ್ನೆತ್ತಿ ತನ್ನ ಮೋಟಾರಿಗೆ ಎಸೆದುಕೊಂಡು ಅತಿರಭಸದಿಂದ ಬಂಡಿಯನ್ನು ಓಡಿಸಿಕೊಂಡು ಹೊರಟುಹೋದನು. ಪಿಸ್ತೋಲನ್ನಿಟ್ಟುಕೊಂಡಿದ್ದ ಕಾವಲುಗಾರನು ಗುಂಡನ್ನು ಆತನ ಮೇಲೆ ಹಾರಿಸಿದನು. ಫಲವಾಗಲಿಲ್ಲ. ಕಳ್ಳನು ಹಾರಿಸಿದ ಗುಂಡುಗಳಿಂದಲೂ ಯಾರಿಗೂ ಅಪಾಯವಾಗಲಿಲ್ಲ. ಆ ಮೋಟಾರು ಓಡಿಹೋಗುತ್ತಿದ್ದುದನ್ನು ಹಲವರು ಕಂಡರು. ಅದರ ಮೇಲೆ ಟಿ. ೬೫ ಎಂಬ ಗುರುತಿದ್ದಿತಂತೆ. ಕಳ್ಳನನ್ನು ತೋರಿಸಿಕೊಟ್ಟವರಿಗೆ ೫ ಸಾವಿರ ರೂ ಕೊಡುವವೆಂದು ಪೊಲೀಸರು ಪ್ರಕಟಿಸಿದ್ದಾರೆ.

ವಿದೇಶ ವೃತ್ತಾಂತಗಳು.

ಕಳೆದ ಜುಲೈ ತಾ|| ೩೧ ರ ವರೆಗೆ ಅಮೇರಿಕಾದವರು ಪ್ರಪಂಚದ ನಾನಾಭಾಗಗಳಿಗೆ ತಮ್ಮಿಂದ ೧೦೬೪೯ ಬೇಲುಗಳ ಹತ್ತಿಯನ್ನು ಕಳುಹಿಸಿಕೊಟ್ಟಿದ್ದಾರೆ.

ಅಮೇರಿಕಾದಲ್ಲಿ ಕಳೆದ ವರ್ಷ ಒಟ್ಟು ೨೬೦೫೦೦೦೦೦ ಪೌನುಗಳ ಸಕ್ಕರೆಯು ನಿರ್ಮಿತವಾಯಿತು. ಅದರಲ್ಲಿ ಬೀಟ್‌ರೂಟ್ ಗಡ್ಡೆಯಿಂದ ನಿರ್ಮಿತವಾದುದೇ ೨೨೧೯೦೦೦೦೦ ಪೌನುಗಳಷ್ಟಾಗಿರುತ್ತದೆ. ಉಳಿದುದು ಕಬ್ಬಿನದು.

ಆಸ್ಟ್ರೇಲಿಯಾಗೆ ಭಾರತೀಯರನ್ನು ಹೋಗಗೊಡಿಸುವುದಿಲ್ಲವೆಂಬ ನಿರ್ಬಂಧ ವಾರ್ತೆಯಿದ್ದಿತಷ್ಟೆ. ಈಗ ಅಲ್ಲಿಯ ಪ್ರಭುತ್ವದವರು ಪ್ರಕಟಿಸಿರುವುದರಲ್ಲಿ—ಭರತಖಂಡದ ವರ್ತಕರೇ ಆಗಲೀ ದೇಶಸಂಚಾರಾರ್ಥಿಗಳಾಗಲೀ ವಿದ್ಯಾರ್ಥಿಗಳಾಗಲೀ ಪ್ಯಾಸ್‌ಪೋರ್ಟುಗಳನ್ನು ಪಡೆದು ಆಸ್ಟ್ರೇಲಿಯಾಗೆ ಬರಬಹುದೆಂದೂ, ಹೆಂಡರು ಮಕ್ಕಳೊಡನೆ ಅಲ್ಲೇ ವಾಸಮಾಡಬಹುದೆಂದೂ ತಿಳಿಯಿಸಿದ್ದಾರೆ.

ಈಜಿಪ್ಟಿನ ವಿಷಯದಲ್ಲಿ ಬರೆದ ಮಿಲ್ನರ್‌ರವರ ವರದಿಯು ಪ್ರಕಟವಾಗಿದೆ. ಅದರಲ್ಲಿ ಈಜಿಪ್ಟಿಗೆ ಸ್ವರಾಜ್ಯವನ್ನು ಕೊಡಬೇಕೆಂದೂ. ಆದರೆ ಆಂಗ್ಲರ ಕ್ಷೇಮಕ್ಕಾಗಿ ಇಂಗ್ಲೀಷರಿಗೂ ಈಜಿಪ್ಷಿಯನರಿಗೂ ಸಂಧಿ ಜರುಗಬೇಕೆಂದೂ, ಈಜಿಪ್ಟ್ ಪರಿಪಾಲನ ಪದ್ಧತಿಯು ಆಂಗ್ಲ ಪರಿಪಾಲನ ಪದ್ಧತಿಯಂತೆಯೇ ಇರುವಂತೆ ನೋಡಿಕೊಳ್ಳಲು ಈಜಿಪ್ಟಿನಲ್ಲಿ ಒಬ್ಬ ಆಂಗ್ಲರಾಯಭಾರಿಯು ಇರಬೇಕೆಂದೂ ಅಭಿಪ್ರಾಯ ಪಟ್ಟಿರುವರು.

ಲಂಡನ್ನಿನಲ್ಲಿ ಮಿತ್ರಮಂಡಲೀ ಮಹಾಸಭಾಕಾರ್ಯಗಳು ನಡೆಯುತ್ತಿವೆ. ತುರ್ಕಿ ಗ್ರೀಕ್ ಪ್ರಭುತ್ವ ಪ್ರತಿನಿಧಿಗಳೂ ಬಂದಿದ್ದಾರೆ. ಚರ್ಚೆಗಳ ಸ್ವರೂಪವನ್ನು ನೋಡಿದರೆ ಶಾಂತಿಪ್ರದವಾದ ಪರಿಣಾಮವುಂಟಾಗುವುದು ಹೇಗೆಂದು ಯೋಚಿಸಬೇಕಾಗುತ್ತದೆ. ನಷ್ಟಪರಿಹಾರ ಪರ್ಯಾಲೋಚನ ಸಭೆಗಾಗಿ ಜರ್ಮನ್ ಪ್ರತಿನಿಧಿಗಳು ವಿದೇಶಾಂಗಮಂತ್ರಿ ಯುದ್ಧಮಂತ್ರಿ ಆರ್ಥಿಕಮಂತ್ರಿ, ಮೊದಲಾದವರೆಲ್ಲಾ ೮೦ ಮಂದಿಗಳವರೆಗೆ ಲಂಡನ್ನಿಗೆ ಬಂದಿದ್ದಾರೆ.

ಪತ್ರವ್ಯವಹಾರ.

ದಾವಣಗೆರೆ.

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗಳಿಗೆ ದಾವಣಗೆರೆ ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಶ್ರೀ ವಿರಕ್ತಮಠದಲ್ಲಿ ಊಟಕ್ಕೂ ಮತ್ತು ವಾಸಕ್ಕೂ ಏರ್ಪಡಿಸಲ್ಪಡುವುದು. ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ಈ ಮಾರ್ಚಿ ತಾರೀಖು ೨೫ ರೊಳಗಾಗಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸತಕ್ಕದ್ದು.

ದಾವಣಗೆರೆ } ಸೆಕ್ರೆಟರಿ ವೀರಶೈವ ವಿದ್ಯಾವರ್ಧಕಫಂಡ್,
೨-೩-೧೯೨೧ } ಸಂಘ ದಾವಣಗೆರೆ.

ಬೀಳಗಿ.

ಬಾಗಲಕೋಟೆ ತಾಲ್ಲೂಕು ಪೈಕಿ ಪೇಟಾ ಬೀಳಗಿ ಬೃಹನ್ಮಠದಲ್ಲಿ ಧಾರ್ಮಿಕ ವಿಷಯಗಳ ಬಗ್ಗೆ ಸಭೆಯು ನೆರೆಯಿತು. ಸಭೆಗೆ ಶ್ರೀಮನ್ನಿರಂಜನ ಪರಮಹಂಸ ಬೀಳೂರ ಮಹಾಸ್ವಾಮಿಗಳು ಬಂದಿದ್ದರು. ಬಾಗಲಕೋಟೆಯ ವೀರಶೈವ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಪಂಡಿತ ಕೇದಾರನಾಥ ಶಾಸ್ತ್ರಿಗಳು ತರ್ಕತೀರ್ಥ (ತರ್ಕವಾಗೀಶ) ರವರು ತಮ್ಮ ವಿದ್ಯಾರ್ಥಿಗಳ ಸಮೇತ ಆಗಮಿಸಿದ್ದರು. ಮುಖ್ಯಭಾಷಣಕರ್ತರಾದ ಪಂಡಿತಶಾಸ್ತ್ರಿಗಳು ತಮ್ಮ ಗಂಭೀರ ವಾಣಿಯಿಂದ ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಹೇಳಿದರೆಂದು ತಿಳಿಸಲು ಬಹಳ ಸಂತೋಷವಾಗುವುದು. ಮತ್ತು ಸಭೆಯ ಅಧ್ಯಕ್ಷಸ್ಥಾನವನ್ನು ಸದರಿ ಬೀಳೂರ ಸ್ವಾಮಿಗಳೇ ಅಲಂಕರಿಸಿದ್ದರು. ವಿದ್ಯಾರ್ಥಿಗಳ ಪೈಕಿ ಅದೇ ಮಠದ ಶ್ರೀ ಪಟ್ಟಾಧ್ಯಕ್ಷರು ಮತ್ತು ಗುರುಸಿದ್ದಯ್ಯನವರು ಮುರ್ತಿನಾಥಾರ್ಯ ಮೊದಲಾದವರ ಉಪನ್ಯಾಸಗಳಾದರೂ ಬಹು ರಮ್ಯವಾಗಿ ಸಾಗಿದವು. ಈ ಸಭೆಗೆ ಅತ್ಯಂತ ಉಲ್ಲಾಸತೆಯಿಂದ ಅಲ್ಲಿಯ ಸಭ್ಯರಾದ ಮ|| ರಾ|| ಸಿದ್ಧನಗೌಡರು ಪಾಟೀಲ, ಸೋಮನಗೌಡರು ಪಾಟೀಲ, ರುದ್ರಗೌಡರು ಪಾಟೀಲ, ಫಕೀರಗೌಡರು ಪಾಟೀಲ, ಚನ್ನಬಸಪ್ಪನವರು ಗಂಗಾವತಿ, ಮಹಲಿಂಗಪ್ಪನವರು ತುಪ್ಪದ ಇವರೇ ಮೊದಲಾದವರು ಸ್ವಸಮಾಜೋನ್ನತಿಗಾಗಿ ಬಹು ಅತ್ಯಂತ ಕಳಕಳಿಯಿಂದ ಈ ಕಾರ್ಯವನ್ನು ನೆರವೇರಿಸಿದ್ದಲ್ಲದೆ ಇನ್ನು ಸ್ವಲ್ಪ ದಿವಸಗಳಲ್ಲಿಯೇ ಸದರೀ ಪಟ್ಟದದೇವರ ಮಠದಲ್ಲಿಯೇ ಅವರ ಗುರುವರ್ಯರಾದ ಶ್ರೀ ರುದ್ರಶಿವಾಚಾರ್ಯರ ಹೆಸರಿನಿಂದ ವಾಚನಾಲಯವನ್ನು ಸ್ಥಾಪಿಸತಕ್ಕವರಿದ್ದಾರೆ. ಇದನ್ನು ನೋಡಲಾಗಿ ಬೀಳಗಿ ಗ್ರಾಮದ ಸುದೈವತನ್ನಲಿಕ್ಕೆ ಅಡ್ಡಿಯಿಲ್ಲ.

ಓರ್ವ ಪ್ರತ್ಯಕ್ಷದರ್ಶೀ.

ನಾ. ನಾರಾಯಣಶಾಸ್ತ್ರಿ.

ಸಂಪದಭ್ಯುದಯ ಪತ್ರಿಕೆಗೆ ಕ್ಯಾಸಂದ್ರದ ನಾ. ನಾರಾಯಣಶಾಸ್ತ್ರಿ ಎಂಬುವವರು ಒಂದು ಕರಸ್ಪಾಂಡೆನ್ಸನ್ನು "ಪ್ರಜಾಕಿಂಕರ" ನೆಂಬ ಅಂಕಿತದಿಂದ ನಾವು ಸ್ಟಾರಿಗೆ ಬರೆದುಕೊಂಡಿದ್ದ ಲೇಖನಕ್ಕೆ ಉತ್ತರವಾಗಿ ಬರೆದುಕೊಂಡಿದ್ದಾರೆ. "ಕಿಂಕರ ಮಾಡಿದ ಕೆಲಸ ದೇವರ" ಎಂಬ ಗಾದೆಯನ್ನು ಈ ಲೇಖಕರು ಕಲ್ಪಿಸಿದ್ದಾರೆ. ಯಾವ ಜಾತಿ ಭಾಷೆಗೂ ಸೇರದ ದೊಂಕರ ಶಬ್ದವನ್ನು ಜಗತ್ತಿನಲ್ಲಿ ಹೊಸದಾಗಿ ಹುಟ್ಟಿಸಿ ತೋರಿಸಿದ್ದರಿಂದಲೇ ಇವರು ಶಾಸ್ತ್ರಿನಾಮಕರಣ ಮಾಡಿಕೊಂಡಿರಬೇಕು. ಅದ್ಭುತ ಪ್ರಜ್ಞೆ! ಮಹಾರಾಜಾಧಿರಾಜರೂ ಸಹ ತಾವು ಮಾಡುವುದು ಪ್ರಜಾಸೇವೆಯೆಂದು ತಿಳಿದುಕೊಂಡಿರುವುದೂ, ಮಹಾತ್ಮಾ ಗಾಂಧಿಯವರು "ನನ್ನನ್ನು ಮಹಾತ್ಮನೆಂದು ಸಂಬೋಧಿಸಿದರೆ ನನಗೆ ನೋವಾಗುತ್ತದೆ. ನಾನು ಮಾಡುವುದು ದೇಶಸೇವೆ; ನಾನು ಸರ್ವರ ಕಿಂಕರ" ಎಂದು ಹೇಳಿಕೊಳ್ಳುತ್ತಿರುವುದೂ, ಕಿಂಕರತ್ವದಿಂದ ಶಂಕರತ್ವವೆಂಬ ಗಾದೆಯಿರುವುದೂ ಸಹ ಈ ನಾ. ನಾ. ಶಾಸ್ತ್ರಿಗಳಿಗೆ ತಿಳಿದಿದ್ದರೆ ಕಿಂಕರ ಶಬ್ದವನ್ನು ಹಾಸ್ಯಮಾಡುತ್ತಿರಲಿಲ್ಲ. ಕಿಂಕರಶಬ್ದವನ್ನು ಇವರು ತುಚ್ಛಮಾಡಿದ ಮಾತ್ರದಿಂದ ನಾಮಮಾತ್ರದ ಈ ನಾರಾಯಣರು ನವಕೋಟಿನಾರಾಯಣರಾಗಬಲ್ಲರೆ? ಲೋಕವಾದರೂ ಹಾಗೆ ಭಾವಿಸುವುದುಂಟೇ?

ವಾರಪತ್ರಿಕೆ ದಿನಪತ್ರಿಕೆಗಳ ತಾರತಮ್ಯವೇನೆನ್ನುವದು ಈ ಲೇಖಕರಿಗೆ ಗೊತ್ತಿದ್ದರೆ ವ್ಯರ್ಥವಾದ ಆ ಬರವಣಿಗೆಯನ್ನು ಬರೆಯುತ್ತಿರಲಿಲ್ಲ. ಅಂದಂದಿನ ಸುದ್ದಿಗಳನ್ನು ಆಯಾ ದಿನವೇ ವಾಚಕರಿಗೆ ತಿಳಿಯಿಸಬೇಕಾದ ದಿನಪತ್ರಿಕೆಯು ವಾರಪತ್ರಿಕೆಗಳಿಗಿಂತ ಹಿಂದಾಗುವದು ಅದರ ಯೋಗ್ಯತೆಗೆ ತಕ್ಕದ್ದಲ್ಲವೆಂಬುದನ್ನು ದಿನಪತ್ರಿಕೆಯನ್ನು ಓದಿರುವವರು ತಿಳಿಯಬಲ್ಲರೇ ಹೊರತು ಹಳ್ಳಿಯ ಗೊಡ್ಡಿಗೆ ಅದರ ತಾರತಮ್ಯವೇನುಗೊತ್ತು? ಸ್ಟಾರ್ ಪತ್ರಿಕೆಯು ಶಿವಭಕ್ತರ ಉನ್ನತಿಗಾಗಿಯೂ ಒಕ್ಕಲಿಗರ ಪತ್ರಿಕೆಯು ಒಕ್ಕಲಿಗರ ಅಭ್ಯುದಯಕ್ಕಾಗಿಯೂ ದುಡಿಯುತ್ತಿರುವುದು ನಿಜ. ಅದೇ ಅವುಗಳ ಪರಮಾರ್ಥ. ಆದರೆ ನಾವು ಸಾರ್ವಜನಿಕ ದೇಶಪ್ರತಿನಿಧಿಗಳೆಂದು ಬಾಯಲ್ಲಿ ಹೇಳಿಕೊಂಡು ಅಂತಃ ಸ್ವಾರ್ಥೈಕಸಾಧನ ತಪಸ್ಸನ್ನು ಮಾಡುತ್ತಿರುವ ಪರಪ್ರತಾರಣವೇನೂ ಇವುಗಳಿಗಿಲ್ಲವಷ್ಟೆ? ವೀರಶೈವವಿದ್ವದ್ಗುರುವರ್ಯರಲ್ಲಿ ಶಿಷ್ಯತ್ವವನ್ನು ವಹಿಸಿ ವೀರಶೈವಗ್ರಂಥಗಳನ್ನು ಇವರು ಕೆಲಕಾಲ ಅಧ್ಯಯನ ಮಾಡಿದರೆ, ಇವರ ಆದಿಗುರುಗಳಾದ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವು ಹೇಗೆ ಲಭ್ಯವಾಯಿತೆಂಬ ಮೂಲವನ್ನು ಇವರು ವಿಚಾರಿಸಿ ತಿಳಿದರೂ ವೀರಶೈವರ ಅನೂಚಾನವರ್ಣೋತ್ತಮತ್ವವೂ ಪೂಜ್ಯತೆಯೂ ಗೊತ್ತಾದೀತು. ಶಾಲೋಚಿತವಾಗಿ ಧರ್ಮಕರ್ಮಾಚರಣೆಗಳನ್ನೆಲ್ಲಾ ಹೊಟ್ಟೆಪಾಡಿಗಾಗಿ ಬದಲಾಯಿಸಿಕೊಂಡು ಪತಿತರಾಗಿರುವವರು ಯಾರೆಂಬುದನ್ನು ನಾನಾ ಶಾಸ್ತ್ರಿಗಳು ಸ್ವಲ್ಪ ಬೆನ್ನಿನ ಕಡೆಗೆ ತಿರುಗಿನೋಡಲಿ.

ಪ್ರಜಾಕಿಂಕರ.

ಕೈ. ಟಿ. ಕೆ. ಮರಿಯಪ್ಪನವರ ಧರ್ಮ.

ಪರಸ್ಥಳಗಳಿಂದ ಬಂದು ಪಟ್ಟಣಗಳಲ್ಲಿ ವಾಸಮಾಡಿಕೊಂಡು ವಿದ್ಯಾಭ್ಯಾಸ ಮಾಡಬೇಕಾದರೆ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಅದರಲ್ಲಿಯೂ ಬಡ ವಿದ್ಯಾರ್ಥಿಗಳ ಅನಾನುಕೂಲಗಳನ್ನು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಮಳೆಬೆಳೆಗಳಿಲ್ಲದೆ ದೇಶವು ಕನಿಷ್ಠದಶೆಗೆ ಬಂದಿರುವಾಗೆಲ್ಲಾ ಅವರಿಗೆ ಅಲ್ಪಸ್ವಲ್ಪ ಸಹಾಯ ಮಾಡುವವರೂ ಹಿಂಜರಿಯುವರು. ಹಾಗಾದರೆ ಅವರ ಗತಿ ಏನಾಗಬೇಕು? ವಿದ್ಯಾಭ್ಯಾಸಮಾಡಿ ದೇವರು ಸರ್ವರಿಗೂ ಒಂದೇ ಸಮನಾಗಿ ಕೊಟ್ಟಿರುವ ಬುದ್ಧಿ, ಜ್ಞಾನ, ತಿಳುವ

ಳಿಕೆಗಳನ್ನು ವಿಕಾಸಪಡಿಸಿಕೊಂಡು ದೇಶಾಭಿವೃದ್ಧಿಗಾಗಿ ತಮ್ಮ ಕೈಯಲ್ಲಾಗುವುದನ್ನು ಮಾಡಿ ಕೃತಾರ್ಥರಾಗುವ ಲಕ್ಷ್ಯವು ಅವರಿಗಿಲ್ಲದೆ ಹೋಗಿ, ಆ ಮುಖ್ಯವಾದ ವಿದ್ಯಾಭ್ಯಾಸವು ನಮಗೆ ದೊರೆಯಲಿಲ್ಲವೆಂದು ನಿರಾಶರಾಗಿ ಅವರ ಬುದ್ಧಿಶಕ್ತಿಗನುಗುಣವಾದ ವೃತ್ತಿಯನ್ನವಲಂಬಿಸಲು ಅವಕಾಶವಿಲ್ಲದೆ ಹಾಗೂ ಹೀಗೂ ಹೊಟ್ಟೆಹೊರೆದುಕೊಂಡು ಕಾಲಕ್ಷೇಪ ಮಾಡುವುದೇ ಅವರ ಪಾಲಾಗಬೇಕೆ? ನಮ್ಮ ಸಂಸ್ಥಾನದಲ್ಲಿಯಾದರೋ ಧರ್ಮಾಭಿಮಾನಿಗಳಾದ ಅನೇಕ ಮಹನೀಯರು ವಿದ್ಯಾಭಿವೃದ್ಧಿಗಾಗಿ ಅನೇಕ ವಿದ್ಯಾರ್ಥಿನಿಲಯಗಳನ್ನೇರ್ಪಡಿಸಿ ಶಾಶ್ವತವಾದ ಕೆಲಸಗಳನ್ನು ಮಾಡಿರುವರು. ಅಂತಹ ಮಹನೀಯರಲ್ಲೊಬ್ಬರಾದ ಬೆಂಗಳೂರು ಸಿಟಿ ಹಲಸೂರು ಪೇಟೆಯಲ್ಲಿದ್ದು ಕೈಲಾಸವಾಸಿಗಳಾದ ಮ॥ ರಾ॥ ಬಿ. ಕೆ. ಮರಿಯಪ್ಪನವರು ತಮ್ಮ ಅವಸಾನ ಕಾಲದಲ್ಲಿ ಅಂದರೆ ತಾ॥ 4-3-1914 ರಲ್ಲಿ ಸುಮಾರು 1½ ಲಕ್ಷ ರೂಪಾಯಿಗಳ ಬೆಲೆಬಾಳುವ ತಮ್ಮ ಖಾಸ ಆಸ್ತಿಯನ್ನೂ ಗವರ್ನಮೆಂಟು ಟ್ಯಾಂಕಿನಲ್ಲಿಟ್ಟು ಅದರಿಂದ ಬರುವ ಬಡ್ಡಿಯಿಂದ 15 ಜನ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಗೂ, 15 ಜನ ವೀರಶೈವ ವಿದ್ಯಾರ್ಥಿಗಳಿಗೂ, 15 ಜನ ಇತರ ಹಿಂದುಳಿದ ಜನಾಂಗದ ಬಡ ವಿದ್ಯಾರ್ಥಿಗಳಿಗೂ ಒಟ್ಟು 45 ಜನ ಅಥವಾ 50 ಜನ ವಿದ್ಯಾರ್ಥಿಗಳಿಗೆ ಅನ್ನವಸತಿಗಳಿಗೆ ಏರ್ಪಡಿಸಬೇಕೆಂದು ತಮ್ಮ ವಿಲ್ಲಿನಲ್ಲಿ ನಮೂದಿಸಿ ಆ ಕಾರ್ಯಭಾರವನ್ನು ಜರುಗಿಸಲು ಆರುಮಂದಿ ಟ್ರಸ್ಟಿಗಳನ್ನು ನಿಯಮಿಸಿರುತ್ತಾರೆ. ಟ್ರಸ್ಟಿಗಳು ಮೂಲಧನದ ಕೆಲಭಾಗವನ್ನು ವಿನಿಯೋಗಿಸಿ ಚಾಮರಾಜಪೇಟೆಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿರುತ್ತಾರೆ. ಆದರೆ ಸದರಿ ನಿಲಯದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮಾತ್ರ ಊಟ ಉಪಚಾರಾದಿಗಳಿಗೆ ಏರ್ಪಡುಮಾಡಿರುವುದಾಗಿ ತಿಳಿಯಬರುತ್ತದೆ. ಮೊದಲಿನಿಂದಲೂ ಅವರಿಗೇನೆ ವೇತನಗಳನ್ನು ಕೊಟ್ಟು ಸಹಾಯ ಮಾಡುತ್ತಿರುವುದಾಗಿ ಕೇಳಿರುತ್ತೇನೆ. ವಿಲ್ಲಿನಲ್ಲಿ ನಮೂದಿಸಿರುವಂತೆ ವೀರಶೈವ ಮತ್ತು ಇತರ ವಿದ್ಯಾರ್ಥಿಗಳಿಗೆ ಯಾವ ವಿಧವಾದ ಸಹಾಯವನ್ನೂ ಮಾಡಿಲ್ಲವೆಂದು ತಿಳಿಯಬರುತ್ತದೆ. ಇದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ. ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬೆಂಗಳೂರಿಗೆ ಬಂದು ಎಷ್ಟೋ ಕಷ್ಟಪಟ್ಟು ಯಾವ ಸಹಾಯವೂ ಸಿಕ್ಕಲೇ ಇಲ್ಲವೆಂದು ವ್ಯಥೆಪಟ್ಟು ಹಿಂತಿರುಗಿದ ಬಡವಾಯಿಗಳಾದ ಅನೇಕ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳು ಮ॥ ರಾ॥ ಬಿ. ಕೆ. ಮರಿಯಪ್ಪನವರ ವಿದ್ಯಾರ್ಥಿನಿಲಯದಲ್ಲಿರಲು ಅಥವಾ ವೇತನಗಳನ್ನು ಹೊಂದಲು ಅರ್ಹರಲ್ಲವೆ? ಧರ್ಮಾಭಿಮಾನಿಗಳಾದ ಟ್ರಸ್ಟಿಗಳು ವಿಲ್ಲಿಗೆ ಅನುಸಾರವಾಗಿ ನಡೆದುಕೊಂಡು ಆ ಮಹಾಶಯ ಸ್ವರ್ಗಸ್ಥರಾಗಿರುವ ಮರಿಯಪ್ಪನವರ ಧರ್ಮಕಾರ್ಯವು ಸಾರ್ಥಕವಾಗುವಂತೆ ಮಾಡುವರೆಂದು ನಂಬಿರುವೆನು. ಒಕ್ಕಲಿಗರ ಸಂಘದವರು ಮತ್ತು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರು ಮುಂದುವರಿದು ಈ ವಿಚಾರದಲ್ಲಿ ಯಾವ ಕಾರ್ಯಭಾಗವನ್ನೂ ನಡಸದಿರುವುದು ಶೋಚನೀಯವಾದದ್ದೇ ಸರಿ.

ಒಬ್ಬ ಬಡವಿದ್ಯಾರ್ಥಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪ್ರಯೋಗಿಸಿ ಅಲ್ಪಕಾಲದಲ್ಲಿ ಬಹಳ ಸುಲಭವಾದ ಭಾರ್ಜನದಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ಸೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೆ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರೌನ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೆ ೧—೨—೦; ಹಳದಿ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೆ ೧—೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಬೆಲೆಯಂ ಕೊಡಬೇಕು. ಅಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್‌ಆಫೀಸ್, ಮೈಸೂರ್.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.
ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಸ್ತ್ರಗಳು ಮೊದಲಾದ ಮಾಲುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲು ಮಾಲು ಕಳುಹಿಸಲಾಗುವುದು.

32 ಮಣಿಗಳ ಕಂಠಿ 1ಕ್ಕೆ ಮುಖಿ	ರೂ. ಇಂದ	ರೂ. ವರೆಗೆ.
4	0.12.0 ,,	60.0.0
5	0. 8.0 ,,	100.0.0
6	0.12.0 ,,	100.0.0
7	6. 0.0 ,,	100.0.0
ಬಿಡಿ ಮಣಿಗಳು 1ಕ್ಕೆ ಕ್ರಯ		
3	0. 6.0 ಇಂದ	10.0.0
8	0. 8.0 ,,	100.0.0
9	0.12.0 ,,	100.0.0
10	0.14.0 ,,	100.0.0
11	3. 8.0 ,,	100.0.0
12	4. 0.0 ,,	100.0.0
13	4. 8.0 ,,	100.0.0
14	6. 0.0 ,,	100.0.0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಬುದ್ದಿನ	,, 15.0.0	,, 40.0.0
ಮಣಿಸು	,, 7-8.0	,, 15.0.0
ಕಡಲೆ	,, 2-8.0	,, 7.0.0
ಸಣಿಕಡಲೆ	,, 1-8.0	,, 3.0.0
ಅವರೆಕಾಳ್ಕಿ	,, 1.0.0	,, 2.0.0
ದೊಡ್ಡ	,, ,, 0-8.0	,, 1.0.0
ಅವರೆಕ್ಕಿಂತ	,, 0-6.0	,, 0.8.0
ಸ್ಫಟಿಕ108ಕ್ಕೆ	4-8.0	,, 30.0.0
ತ್ರಿಚಕ್ರ1ಕ್ಕೆ	8.0.0	,,100.0.0
ಲಿಂಗ 1ಕ್ಕೆ	1.0.0	,, 100.0.0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80.0.0 ಬಿ. 50.0.0 ಸಿ. 40.0.0 ಡಿ. 35.0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
5 ಕಂಪನಿ, ಚೌಕಂಬಾ ಕಾಶೀ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

14

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ ವರ್ಧವರರ ನಾಲಾವಳ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ಪರಿಶೀಲಿಸಿ ನೋಡುವವರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ, ಜಿಲ್ಲಾ ಗುಲ್ಬರ್ಗಾ.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೇರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

8 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ 3—0—0.

24

ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0.
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.



ಈ ಕಾಯಿಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಲಿಡ್ಗೋಲ್ಡಿನ ಗಿಲೀಟು ಕೊಟ್ಟಿದೆ. ಎಂದಿಗೂ ಕೆಡುವುದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆವು. ಶ್ರೀಮಂತರು ಸಹಿತ ಇದನ್ನು ಉಪಯೋಗಿಸುವುದು ಉತ್ತಮವಾದವು.

ಕ್ರಯ 1ಕ್ಕೆ 1—4—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
24 ಪಾರ್ಕ್‌ಟೌನ್ ಮದರಾಸ್.

ಪಾಕೆಟ್ ಡೈರಿ ಇನಾಂ.

ಈ ಪಟ್ಟಿಯಲ್ಲಿ ಕಂಡ ಫೌಂಟೆನ್ ಪೇನಾವನ್ನು ತರಿಸಿಕೊಳ್ಳುವವರಿಗೆ ಸೊಗಸಾದ ಪಾಕೆಟ್ ಡೈರಿಯನ್ನು ಇನಾಮಾಗಿ ಕೊಡುವೆವು. ಈ ಪೇನಾವು ವಿಲಾಯಿತಿಯಲ್ಲಿ ತಯಾರಾದದ್ದು. ಒಂದಾವರ್ತಿ ಇಂಕಿಯನ್ನು ತುಂಬಿದರೆ ಸುಮಾರು 500 ಮಾತುಗಳನ್ನು ಬರೆಯುವುದು.

ಕ್ರಯ ಡೈರಿ ಸಹಿತ ಪೇನಾ 1ಕ್ಕೆ 1—8—0.

24

ಜರ್ಮನ್ ಬೆಳ್ಳಿಯ ಕ್ಯಾಲೆಂಡರ್.

ಈ ಕ್ಯಾಲಂಡರುಗಳು ಈಗಲೇ ಬಂದುವು. ಇವನ್ನು ಜರ್ಮನ್ ಬೆಳ್ಳಿಯಿಂದ ಮಾಡಿದೆ. ಇದೊಂದರಲ್ಲೇ 10 ವರುಷಗಳ ಕ್ಯಾಲೆಂಡರ್ ಇದೆ. ಇವನ್ನು ಗೋಡೆಗೆ ತಗುಲಿಸಲೂ, ಮೇಜಿನ ಮೇಲೆ ಇಡಲೂ ಬಹು ಚೆನ್ನಾಗಿವೆ. ಇಂಗ್ಲಿಷ್ ನಮೂನೆಯವು ಬಣ್ಣವು ಎಂದಿಗೂ ಹೋಗದು.

ಕ್ರಯ ಕ್ಯಾಲೆಂಡರ್ 1ಕ್ಕೆ 1—8—0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89, ನಾರಾಯಣಮೊದಲಿಬೀದಿ, ಮದ್ರಾಸು.

ಫಲಶ್ರೇಧಕ । ಮನೋಲ್ಲಾಸಕರಂಚ ಧಾತುಪುಷ್ಟಿಕ ॥

ಮಹದ್ರಾಕ್ಷಾದಿ ಚೂರ್ಣವು.

೨೨

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಕಳೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಕೂರೆ ಬಿಳಿಸೆರಗು ಹೋಗುವಿಕೆ, ರಕ್ತಸ್ರಾವವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವರೆ ಕೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕ್ಕರೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಯೋಗಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು, ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು. ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಹಿತ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ. 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
24 ಪಾರ್ಕ್‌ಟೌನ್ ಮದರಾಸು.

೧೯೨೧ನೆಯ ಇಸವಿ ಮಾರ್ಚಿ ತಾ॥ ೬ರಿಂದ ೧೯೨೧ನೆಯ ಮಾರ್ಚಿ ತಾ॥ ೧೨ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೩ ನೆಯ ರೌದ್ರಿನಾಮ ಸಂವತ್ಸರದ ಮಾಘಬಹುಳ ದ್ವಾದಶಿಯಿಂದ ಫಾಲ್ಗುಣಶುದ್ಧ ಚವಿಗೆ ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಂಗ ಮಾಸ
6	ಭಾನು	ದ್ವಾದ	29-5	ಶ್ರವ	60	23
7	¹ಸೋಮ	ತ್ರಯೋ	34-11	ಶ್ರವ	1-21	24
8	ಮಂಗಳ	ಚತು	38-46	ಧನಿ	7-26	25
9	²ಬುಧ	ಅಮಾ	42-15	ಶತ	12-38	26
10	ಗುರು	ಪಾಡ	44-36	ಪೂಭಾ	16-51	27
11	ಶುಕ್ರ	ಬಿದಿ	45-36	ಉಭಾ	19-54	28
12	ಶನಿ	ತದಿ	45-16	ರೇವ	21-39	29

(1) ಪ್ರದೋಷ, ಮಹಾಶಿವರಾತ್ರಿ, ಮಾಸಿವಡಿ. (2) ಸರ್ವತ್ರಾ ಮಾವಾಸ್ಯ, ದ್ವಾಪರಯುಗಾದಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜನುಂಡಲಹಿತ್ಕೃತಾ । ಭುವನಪಥಕ್ಕಾಂತಾವತಾರಾ ಪಶ್ಚಜ ನಹ್ಯತ್ಕವೋಹರಾಪೇಯತ್ ।
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ತ್ರೀನಾಭೀಷ್ಟದಶೀಲ ನಾತಲಿತ ಸಾದ್ಗುಣ್ಯಾಲವಾಲಂವಲಂ ।
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಜೀತ್ರೀಳೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ।

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೩; ಮೈಸೂರ್ ಸ್ಟಾರ್ ಸರ್ ೧೯೨೧ ನೇ ಇಸವಿ ಮಾರ್ಚಿ ತಾರೀಖು ೬ ನೇ ಭಾನುವಾರ ಸಂಚಿಕೆ ೧೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಗುಳಿಗೆಯು ತಪ್ಪಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲ ನಮ್ಮ ತಾವೇ ಹೇಳುವಿರಿ. ವಿಷಜ್ವರ, ಮೂರಂದ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳು ನೋವು ನೀಗಲು ಗುಣವಾಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಬೋಧಿಯ—ಮಕ್ಕಳಿಗೆ ಬಾಲಗ್ರಹ, ಹಲ್ಲುಹುಟ್ಟುವುದರಿಂದ ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಕಾಲು, ಹೊಟ್ಟೆ ದಪ್ಪವಾಗುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
10 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಚರಣ, ಶರಣಪಸುಲಿ, ಪಂಚಾಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಡುಗುಣದ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನು ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ.೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೪—೦
ಚಾರುಶೀಲಚರಿತ್ರ	೦— ೯—೦
ಪಂಚಾಂಗ	೦— ೮—೦

ಲಂಡನ್ ಲೀವರು ವಾಚು.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4—8—0.



ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:— ಕೆಂವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬುಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4—8—0.

AMERICAN 8 CORNER RADIUM WRIST WATCHT.
ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿ ನಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.

ROUND RADIUM WRIST WATCHT.
ರೌಂಡು ರೇಡಿಯಂ ರಿಸ್ಟು ವಾಚು



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಳದ ಪಟ್ಟಿ ಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟುವಾಚು 5-0-0, ಸರಪಣಿ ಸಹಿತ 6-0-0

50 ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.
ಸಿನಿಮೊಟೊಗ್ರಾಫ.

150

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಷೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಷೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಅವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರಪಟಗಳು ಸೇರಿ ಯಂತ್ರ 1ಕ್ಕೆ 1—0—0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:—ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪುಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವ ಗುಳಿಗೆ. **ಇಲ್ಲ.**

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಶಾಕ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಸಟಿಸೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

5

ಪುರುಷನ ಇಂದ್ರಿಯಕ್ಕೆ ಮಿಥ್ಯಾಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಹಸ್ತ ಬಾಲ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕಷ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ತಿರ್ಥ ಉತ್ತರಕಸಡಾ.

ಮದರಾಸ್ ಗೌರ್ನಮೆಂಟಿನವರಿಂದ ರಜಿಸ್ಟರ್ ಮಾಡಲ್ಪಟ್ಟಿರುವ

50

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಲೇಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.0.0.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರ್‌ಪೇಟೆ, ಮದರಾಸು.

ಫ್ರೆಂಚ್ ರೋಮನಾಶಿಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

25

ಬೇತಿಂಗ್ ಬ್ರಷ್.

ಅನೇಕರು ಸ್ನಾನಮಾಡುವಾಗ್ಗ ಬೆವರು, ಕೊಳೆ ತೆಗೆಯಲಿಕ್ಕೆ ಕಲ್ಲು, ನಾರು ಮುಂತಾದುವುಗಳಿಂದ ಉಜ್ಜಿಕೊಳ್ಳುವರು. ಇದರಿಂದ ಅನೇಕವೇಳೆ

ಗಾಯಗಳಾಗುವವು. ಮತ್ತು ಚನ್ನಾಗಿ ಉಜ್ಜಿಕೊಳ್ಳಲು ಸಹ ಆಗದು. ಆದರೆ ಈ ಬ್ರಷ್‌ಗಳು ವಿಲಾಯಿತಿಯಲ್ಲಿ ಕೆಂಪು ರಬ್ಬರಿನಿಂದ ತಯಾರಾಗಿ ಬಂದಿವೆ. ಇವುಗಳಲ್ಲಿ ಮೈಯನ್ನು ಯಾವ ತೊಂದರೆಯೂ ಇಲ್ಲದೆ ಉಜ್ಜಿಕೊಳ್ಳಬಹುದು. ಬೆವರು ಕೊಳೆ ಮುಂತಾದವನ್ನು ಬಹು ಚೆನ್ನಾಗಿ ತೆಗೆಯುವದು. ಒಂದು ತಿಂಗಳ ಮಕ್ಕಳಿಗೂ ಸಹ ಇದರಿಂದ ಉಜ್ಜಬಹುದು. ಕ್ರಯ 1ಕ್ಕೆ 1-8-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89 ನಾರಾಯಣಮೊದಲಿ ಬೀದಿ, ಮದರಾಸು.

BANGALORE DISTRICT.

Abstract Notification No. H.C. 195/19-20, dated the 21st February 1921.

It is hereby notified that in accordance with the instructions of Government laid down in their Order No. Fl. 1279-85 G. F. 180-12-28, dated the 18th August 1919, the right, title and interest in the landed properties, belonging to the late Mr. Dalvoy Devaraj Urs and situated in the Taluks of Bangalore, Magadi and Chennapatna and mortgaged to Government, will be sold by public auction commencing from the 4th April 1921, with the consent of the representatives of the mortgager by the Assistant Commissioners in charge of the Taluks on the dates and at the places mentioned in the detailed notification printed on pages 116, 117 and 118 of Part IV of the Mysore Gazette dated the 24th February 1921.

Further particulars may be ascertained from the Taluk Offices concerned.

M. A. NARAYANA IYENGAR,
1-3 *Deputy Commissioner*,
Bangalore District.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಮಾರ್ಚಿ ತಾ|| ೧೩ನೆಯ ಭಾನುವಾರ.

ಯುದ್ಧನಷ್ಟಪರಿಹಾರ ಮತ್ತು ಜರ್ಮನಿ.

ಯುದ್ಧ ನಡೆಯುವ ಕಾಲದಲ್ಲೂ ಜರ್ಮನ್ ಪಕ್ಷಪಾತಿಗಳಾಗಿ ಮಾತನಾಡುತ್ತಿದ್ದವರು ಕೆಲರು ಭರತಖಂಡದಲ್ಲಿದ್ದರು. ಅವರು ಪರಾಜಿತರಾಗಿ ಮಿತ್ರಮಂಡಲಿಗೆ ಜಯವಾದ ಮೇಲೂ ಜರ್ಮನರ ಅಭಿಮಾನವನ್ನು ಬಿಡದವರು ಈಗಲೂ ಇದ್ದಾರೆ. ಯುದ್ಧಕಾಲದಲ್ಲಿ ಜರ್ಮನರಿಂದ ಮಿತ್ರಮಂಡಲೀ ರಾಷ್ಟ್ರಗಳಿಗೆ ಅಪರಿಮಿತಗಳಾದ ನಷ್ಟಗಳುಂಟಾಗಿರುವುವು. ಅವನ್ನೆಲ್ಲಾ ಲೆಕ್ಕಹಾಕಿ ಸಂಪೂರ್ಣವಾಗಿ ಜರ್ಮನರಿಂದ ತೆಗೆದುಕೊಳ್ಳಬೇಕೆಂದರೆ ಎಷ್ಟು ಶತಮಾನಗಳ ವರೆಗಾದರೂ ಜರ್ಮನಿಯು ಅದನ್ನು ತೀರಲಾರದು. ಆದರೂ ಜರ್ಮನಿಯ ಸ್ಥಿತಿಗತಿಯನ್ನೂ ಮಿತ್ರಮಂಡಲಿಯವರಿಗೆ ಸಲ್ಲಬೇಕಾದ ಅಪರಿತ್ಯಾಜ್ಯಗಳಾದ ಮುಖ್ಯನಷ್ಟಭಾಗಗಳನ್ನೂ ನಿಷ್ಕರ್ಷಿಸಿ ತಿಳಿಯಿಸುವುದಕ್ಕಾಗಿ ಮಿತ್ರಮಂಡಲಿಯವರು ಧರ್ಮಮಾರ್ಗವನ್ನು ಬಿಡದೆ ಒಂದು ಸಂಘವನ್ನೇರ್ಪಡಿಸಿದ್ದರು. ಆ ಸಂಘದವರು ಕೊಟ್ಟ ವರದಿಯ ಮೇಲೆ ಮಿತ್ರಮಂಡಲಿಯವರು ಪ್ಯಾರಿಸ್ ಸಭೆಯಲ್ಲಿ ಸಭೆಗೂಡಿ ಜರ್ಮನಿ ೪೨ ವರ್ಷಗಳಲ್ಲಿ ೧೧೩೦ ಕೋಟಿ ಪೌನುಗಳನ್ನು ಜರ್ಮನರು ನಷ್ಟಪರಿಹಾರಕ್ಕಾಗಿ ಕೊಡಬೇಕೆಂದು ತೀರ್ಮಾನಿಸಿ ಅವರಿಗೆ ತಿಳಿಯಪಡಿಸಿದರು. ಅದಕ್ಕೆ ಜರ್ಮನರು ಕೊಟ್ಟ ಪ್ರತ್ಯುತ್ತರವೇನೆಂಬುದು ಕಳೆದವಾರ ಲಂಡನ್ ಪಟ್ಟಣದಲ್ಲಿ ಕೂಡಿದ್ದ ಮುಖ್ಯಸಭೆಗಳಲ್ಲಿ ವ್ಯಕ್ತವಾಯಿತು. ಈ ಸಭೆಗಳಲ್ಲಿ ತುರ್ಕಿ ಸಂಧಿಸಂಸ್ಕರಣ ವಿಷಯವೂ, ಜರ್ಮನಿ ನಷ್ಟಪರಿಹಾರ ಸಮಸ್ಯೆಯೂ ಅತಿ ಮುಖ್ಯಗಳಾಗಿದ್ದುದರಿಂದ ಪ್ರಪಂಚವೆಲ್ಲವೂ ಅವುಗಳ ಪರ್ಯವಸಾನವನ್ನು ನಿರೀಕ್ಷಿಸುತ್ತಿದ್ದಿತು. ನಷ್ಟಪರಿಹಾರದ ಮೊತ್ತವನ್ನು ಮಿತ್ರಮಂಡಲಿಯವರು ಪ್ರಕಟಿಸಿದ ಕೂಡಲೇ ಜರ್ಮನಿಯವರು ತಾವು ಅಷ್ಟು ತೀರಲಾರೆವೆಂತಲೂ, ಅಷ್ಟನ್ನು ತಮ್ಮ ದೇಶದಮೇಲೆ ಹೇರಿದರೆ ತಾವು ತಲೆಯೆತ್ತುವುದೇ ಇಲ್ಲವೆಂತಲೂ, ಆದುಕಾರಣ ಆ ತೀರ್ಮಾನವನ್ನು ಅಂಗೀಕರಿಸಲಾರೆವೆಂತಲೂ ೩೦ ವರ್ಷಗಳಲ್ಲಿ ೧೫೦ ಕೋಟಿ ಪೌನುಗಳನ್ನು ಕೊಡುತ್ತೇವೆಂತಲೂ ಪ್ರಕಟಿಸುತ್ತಬಂದರು. ಈಗಣ ಲಂಡನ್ ಸಭೆಗೆ ಬಂದಿದ್ದ ಜರ್ಮನ್ ಪ್ರತಿನಿಧಿಗಳೊಳಗೆ ವಾನ್ ಸೈಮನ್ಸ್ ಎಂಬ ವಿದೇಶಾಂಗಮಂತ್ರಿಯವರು ಜರ್ಮನಿಯ ಅದೇ ಅಭಿಪ್ರಾಯವನ್ನು ಸೂಚಿಸಿದರು. ಇದಕ್ಕೆ ಲಾಯಿಡ್‌ಜಾರ್ಜ್‌ರವರು ಉತ್ತರರೂಪವಾಗಿ ಒಂದು ಉಪನ್ಯಾಸವನ್ನು ಸಭೆಯಲ್ಲಿ ಮಾಡಿದರು. ಅದರಲ್ಲಿ ಮಿತ್ರಮಂಡಲಿಯವರು ಜರ್ಮನಿಯ ಮೇಲಣ ಹಗೆತನದಿಂದಲೇ ಆಗಲಿ ಅದನ್ನು ಮುರಿದೊತ್ತಿ ಪಾತಾಳಗಾಣಿಸಿಬಿಡಬೇಕೆಂಬ ದುರುದ್ದೇಶದಿಂದಲೇ ಆಗಲಿ ಅನ್ಯಾಯವಾಗಿ ಅಷ್ಟು ನಷ್ಟಪರಿಹಾರವನ್ನು ಕೇಳುತ್ತಲಿಲ್ಲವೆಂಬುದೂ ಅದು ಧರ್ಮದೃಷ್ಟಿಯಿಂದಲೇ ಕೇಳುತ್ತಿರುವ ಕನಿಷ್ಠಪರಿಹಾರವಾಗಿದೆಯೆಂಬುದೂ ಪ್ರಪಂಚಕ್ಕೇ ಗೊತ್ತಾಗುವಂತೆ ವಿವರಿಸಿ ಹೇಳಿರುತ್ತಾರೆ. ಜರ್ಮನ್ ಪಕ್ಷಪಾತಿಗಳ ಅಪಲಾಪಗಳಿಗೆಲ್ಲಾ ಅದು ತಕ್ಕ ಪ್ರತ್ಯುತ್ತರವಾಗಿರುತ್ತದೆಯಾದಕಾರಣ, ಅದರ ಮುಖ್ಯಾಭಿಪ್ರಾಯವನ್ನು ಇಲ್ಲಿ ತಿಳಿಯಿಸುತ್ತೇವೆ.— "ವಾನ್‌ಸೈಮನ್ಸ್‌ರವರು ಕೊಟ್ಟ ಉತ್ತರವನ್ನು ನೋಡಿದರೆ ವರ್ಸೇಲೀಸ್ ಸಂಧಿನಿಯಮವನ್ನು ಜರ್ಮನರು ರದ್ದುಪಡಿಸಬೇಕೆಂದು ಕೋರುತ್ತಿರುವುದಾಗಿ ಮಿತ್ರಮಂಡಲಿಯವರು ಭಾವಿಸಬೇಕಾಗುತ್ತದೆ. ಪ್ಯಾರಿಸ್ ಮತ್ತು ಬ್ರಸಲ್ಸ್ ಪಟ್ಟಣಗಳಲ್ಲಿ ಕೂಡಿದ್ದ ಸಭೆಗಳಲ್ಲಿ ಆದ ತೀರ್ಮಾನಗಳು ಉಭಯಪಕ್ಷದ ಮಧ್ಯದಲ್ಲೂ ಉತ್ತರೋತ್ತರ ಸ್ನೇಹಭಾವವು ಅಭಿವೃದ್ಧಿಗೊಳ್ಳಬೇಕೆಂಬ ಉದ್ದೇಶದಿಂದಲೇ ಮಾಡಲ್ಪಟ್ಟಿವೆ. ಆದರೆ ಜರ್ಮನರು ಹೀಗೆ ವಿರುದ್ಧವಾದ ತೀರ್ಮಾನವನ್ನು ಮಾಡಿರುವುದನ್ನು ನೋಡಿದರೆ ಸಂಧಿನಿಬಂಧನೆಗಳನ್ನು ಅವರು ಧಿಕ್ಕರಿಸುತ್ತಿರುವಂತೆ ಕಾಣುತ್ತಿದೆ. ಹೀಗೆ ಮಿತ್ರಮಂಡಲಿಯವರು ಯೋಚಿಸಲಿಕ್ಕೆ ವಾನ್‌ಸೈಮನ್ಸ್‌ರವರ ಉಪನ್ಯಾಸಗಳೇ ಕಾರಣವು. ಸ್ಟಟ್‌ಗಾರ್ಡ್ ಪಟ್ಟಣದಲ್ಲಿ ವಾನ್‌ಸೈಮನ್ಸ್‌ರವರು ಕೊಟ್ಟ ಉಪನ್ಯಾಸವನ್ನು ಪರ್ಯಾಲೋಚಿಸಿದರೆ ಯುದ್ಧಕ್ಕೆ ಜರ್ಮನರು ಕಾರಣರಲ್ಲವೆಂದು ಅವರು ಹೇಳಿದಂತೆ ಕಾಣುತ್ತದೆ. ಅದು ಹಾಗೆಂದಿಗೂ ಆಗಲಾರದು. ಜರ್ಮನರೇ ಯುದ್ಧಕ್ಕೆ ಕಾರಣಭೂತರು. ಹಾಗಲ್ಲವೆನ್ನುವಪಕ್ಷಕ್ಕೆ ಸಂಧಿಯೇ ಕೆಟ್ಟುಹೋಗುವುದು. ಇಷ್ಟಕ್ಕೂ ಜರ್ಮನರು ವರ್ಸೇಲೀಸ್ ಸಂಧಿಯನ್ನು ರದ್ದುಪಡಿಸಲಿಕ್ಕೆ ಯತ್ನಿಸುತ್ತಿದ್ದಾರೆ. ಜರ್ಮನರು ೧೮೭೧ನೆ ವರ್ಷದಲ್ಲಿ (ಫ್ರಾಂಕೋ ಜರ್ಮನ್ ಯುದ್ಧಮುಗಿದಾಗ್ಗೆ) ತಾವು ಫ್ರೆಂಚರನ್ನು ಕೋರಿದಂತೆ ಈಗ ತಮ್ಮದೇ ತಪ್ಪೆಂದು ತಾವು ಒಪ್ಪಿಕೊಂಡೇ ತೀರಬೇಕಾಗಿದೆ. ಹಾಗಲ್ಲದೆಹೋದರೆ ಈ ಸಭೆಗಳೆಲ್ಲವೂ ವ್ಯರ್ಥವೇ ಎಂದು ಹೇಳಬಹುದು. ಮಿತ್ರಮಂಡಲಿಯವರು ಜರ್ಮನರನ್ನು ಅಪರಿಮಿತವಾಗಿ ಕೋರಿ ಅವರನ್ನು ಅಣಗಿಸಿಬಿಡಬೇಕೆಂದಿರುವರೆಂದು ಅವರು ಯೋಚಿಸಿಕೊಳ್ಳುತ್ತಾರೋ ಏನೋ. ಹಾಗೆಂದಿಗೂ ಮಿತ್ರಮಂಡಲಿಯವರ ಉದ್ದೇಶವಿಲ್ಲ. ಜರ್ಮನರ ಪುರೋವೃದ್ಧಿಯೇ ಇವರಿಗೆ ಮುಖ್ಯವಾಗಿ ಬೇಕಾಗಿದೆ. ಎಲ್ಲ ದೇಶಗಳವರೂ ಅಭಿವೃದ್ಧಿಯಲ್ಲಿದ್ದು ಜರ್ಮನಿ ಮಾತ್ರವೇ ದೀನವಾಗಿರುವುದು ಯೂರೋಪ್ ಖಂಡದ ನಾಗರಿಕತೆಗೆ ಅನುಕೂಲವೆ? ಮಿತ್ರಮಂಡಲಿಯವರಿಗೆ ಬೇಕಾಗಿರುವುದು ಯುದ್ಧದಲ್ಲಿ ಅವರಿಗೆ ಸಂಭವಿಸಿದ ನಷ್ಟಪರಿಹಾರವೇ ಹೊರತು ಯುದ್ಧಕ್ಕೆ ಅವರಿಗಾದ ವೆಚ್ಚವನ್ನೆಲ್ಲಾ ಜರ್ಮನರು ಕೊಡಬೇಕೆಂದು ಅವರು ಕೇಳುವುದಿಲ್ಲವಲ್ಲಾ! ಮಿತ್ರಮಂಡಲಿಯವರ ಅಭಿಪ್ರಾಯವನ್ನು ಜರ್ಮನರು ಇದುವರೆಗೂ ಗ್ರಹಿಸಿಕೊಳ್ಳಲಿಲ್ಲ. ನಾವು ಲೇಶಮಾತ್ರವೂ ಹೆಚ್ಚಾಗಿ ಕೇಳುವುದಿಲ್ಲ; ಕಡಿಮೆಯಾಗಿಯೂ ಕೋರುವುದಿಲ್ಲ. ನಾವು ಕೇಳುವುದೆಲ್ಲಾ ಜರ್ಮನರು ಮಾಡಿದ ತಪ್ಪಿಗಾಗಿ ಕ್ಷಮಾಪಣೆಯೇ. ಈಗ ಜರ್ಮನರಿಂದ ತಮಗುಂಟಾಗಿರುವ ನಷ್ಟಕ್ಕಾಗಿ ಫ್ರೆಂಚರು ತಮ್ಮ ಆಯವ್ಯಯಪಟ್ಟಿಯಲ್ಲಿ ೧೨೦೦ ಕೋಟಿ ಫ್ರಾಂಕುಗಳನ್ನು ಅಂದಾಜುಮಾಡಿಟ್ಟಿದ್ದಾರೆ. ಅಂತಹದು ಜರ್ಮನರಿಗೇನಾದರೂ ಸಂಭವಿಸಿದೆಯೆ? ಜರ್ಮನರು ತಾವು ಯುದ್ಧಕಾಲದಲ್ಲಿ ಮಿತ್ರಮಂಡಲಿಯವರ ದೇಶಗಳಲ್ಲಿ ಎಷ್ಟು ನಷ್ಟವನ್ನುಂಟುಮಾಡಿರುವರೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಆಗಲೇ ಅವರ ತಪ್ಪುಅಭಿಪ್ರಾಯವು ಭೇದಿಸಿಹೋಗುವುದು. ಫ್ರಾನ್ಸಿನಲ್ಲಿ ಯುದ್ಧಕಾಲದೊಳಗೆ ೨೧ ಸಾವಿರ ಯಂತ್ರಾಲಯಗಳು ನಾಶವಾದುವು. ಎಷ್ಟೋ ಗಣಿಗಳು ಹಾಳಾದುವು. ೧೬೫೯ ಊರುಗಳು ಹೆಸರಿಲ್ಲದಂತೆ ಹೋದುವು. ೨೩೬೩ ಪಟ್ಟಣಗಳು ಕೆಲಕೆಲಮಟ್ಟಿಗೆ ನಾಶವಾದುವು. ಕಲ್ಲಿದ್ದಲ ಉತ್ಪತ್ತಿಯು ತಗ್ಗಿಹೋಯಿತು. ಫ್ರಾನ್ಸ್ ಬೆಲ್ಜಿಯಂ ದೇಶಗಳೆರಡರಲ್ಲೂ ಫಲವತ್ತಾದ ದೇಶಗಳೂ ಪೈರುಪಚ್ಚೆಗಳೂ ಧ್ವಂಸವಾಗಿ ಹೋದುವು. ಬೆಲ್ಜಿಯಮ್ಮಿನಲ್ಲಿ ಎಷ್ಟೋ ಯಂತ್ರಾಗಾರಗಳು ಹಾಳಾದುವು. ಜರ್ಮನಿಗೆ ಇಂತಹ ನಷ್ಟಗಳೇನಾದರೂ ಆಗಿವೆಯೆ? ಎಲ್ಲೋ ಕೆಲಮನೆಗಳು ಮಾತ್ರ ನಾಶವಾಗಿರುವುವು. ಅವರ ಯಂತ್ರಾಲಯಗಳೆಲ್ಲಾ ಉತ್ತಮಸ್ಥಿತಿಯಲ್ಲೇ ಇರುವುವು. ಜರ್ಮನರು ನಷ್ಟಪರಿಹಾರವನ್ನು ಕೊಡದೆ ಇದ್ದರೆ ಯುದ್ಧದಲ್ಲಿ ಜಯಶಾಲಿಗಳಾದವರು ಪರಾಜಿತರಾದವರ ಫಲವನ್ನೂ, ಸೋತವರು ಗೆದ್ದವರ ಫಲವನ್ನೂ ಅನುಭವಿಸುವಂತಾಗುವುದು. ನಾನು ಇನ್ನೂ ಇಟಲಿಗೂ ಆಂಗ್ಲದೇಶಕ್ಕೂ ಉಂಟಾಗಿರುವ ನಷ್ಟಗಳನ್ನು ವಿವರಿಸಲಿಲ್ಲ. ಮತ್ತು ಈಗ ನಾನು ವಿವರಿಸಿದ ನಷ್ಟಗಳು ಕೂಡ ಎಲ್ಲೋ ಕೆಲಕೆಲ ಚಿಕ್ಕ ಉದಾಹರಣೆಗಳು ಮಾತ್ರವೇ ಆಗಿರುತ್ತವೆ. ಆಂಗ್ಲದೇಶಕ್ಕೆ ೧೮೦ ಲಕ್ಷದ ನಿರ್ಗಮನ ವ್ಯಾಪಾರವು ಹಾಳಾಯಿತು. ಈಗ ಜರ್ಮನರು ಕೊಡಬೇಕಾದ ನಷ್ಟಪರಿಹಾರವು ಸಂಪೂರ್ಣ ನಷ್ಟದಲ್ಲಿ ¼ ಭಾಗವೂ ಆಗಲಾರದು. ಇಷ್ಟು ನಷ್ಟಕ್ಕೂ ಯುದ್ಧಕ್ಕೂ ಜರ್ಮನರೇ ಕಾರಣರಾಗಿರುವಾಗ ಏನೋ ಹೇಗೋ ಉತ್ತಮರೀತಿಯಲ್ಲಿ ಸರಿಪಡಿಸಿಕೊಳ್ಳದೆ ಬಿಗುಮಾನದಿಂದಿರಬೇಕಾದರೆ ಜರ್ಮನರ ಮನಸ್ಸಿನಲ್ಲೇನಿದೆಯೋ ತಿಳಿಯುವುದಿಲ್ಲ. ನಿಜವಾಗಿ ಜರ್ಮನರಾಗಲಿ ಮತ್ತಾರೇ ಆಗಲಿ ಯುದ್ಧದಿಂದ ನಷ್ಟವನ್ನು ಅನುಭವಿಸುತ್ತಿದ್ದರೆ ಅದರ ಪರಿಹಾರಕ್ಕೆ ತಕ್ಕ ಮಾರ್ಗವನ್ನು ಸೂಚಿಸಲು ನಾವು ಸಿದ್ಧರಾಗಿದ್ದೇವೆ. ಜರ್ಮನರು ತಮ್ಮಲ್ಲಿ ಮಿತ್ರಮಂಡಲೀ ದೇಶಗಳವರಿಗಿಂತಲೂ ಕಡಿಮೆಯ ತೆರುಗೆಗಳನ್ನು ವಿಧಿಸುತ್ತಿದ್ದಾರೆ. ನಮಗೆ ಸಮಾನವಾಗಿ ಅವರೂ ತೆರುಗೆಗಳನ್ನು ವಿಧಿಸುತ್ತಾಬಂದರೆ ಪ್ಯಾರಿಸ್ ತೀರ್ಮಾನಕ್ಕೆ ತಪ್ಪದೆ ಅವರು ಅಂಗೀಕರಿಸಲಾಪರು. ಮುಖ್ಯವಾಗಿ ನಾನು ಹೇಳುವುದೇನೆಂದರೆ— ಜರ್ಮನರ ಈ ಪ್ರತಿಕೂಲವಾದ ತೀರ್ಮಾನದಿಂದ ಮಿತ್ರಮಂಡಲಿಯವರ ಮನಸ್ಸು ತಿರುಗಿಹೋಗಿದೆ. ಇವರ ತೀರ್ಮಾನಗಳನ್ನು ಕುರಿತು ಆಲೋಚಿಸುತ್ತ ಕುಳಿತುಕೊಳ್ಳುವುದರಿಂದ ಕಾಲವ್ಯಯವೇ ಹೊರತು ಮತ್ತೇನೂ ಫಲವಿಲ್ಲ'' ಎಂಬುದಾಗಿ ಮುಖ್ಯಮಂತ್ರಿಯವರು ತಮ್ಮ ಧರ್ಮಮಾರ್ಗಪ್ರವರ್ತನೆಯನ್ನೂ ಕೋರಿಕೆಗಳ ನ್ಯಾಯಬದ್ಧತೆಯನ್ನೂ ಸಾತ್ವಿಕವಚನಗಳಿಂದ ತಿಳಿಯಪಡಿಸಿದುದಲ್ಲದೆ ಕಟ್ಟಕಡೆಗೆ ಜರ್ಮನರ ತಾಮಸ ಪ್ರವರ್ತನೆಗೆ ತಕ್ಕ ಮದ್ದಿನರೂಪವಾಗಿ ದಂಡಭಯವನ್ನೂ ತೋರಿಸಿ ಮಿತ್ರಮಂಡಲಿಯವರ ನಿರ್ಧಾರದ ಸಂದೇಶ ಪ್ರಕಟನಪತ್ರವನ್ನು ಹೀಗೆ ಓದಿಹೇಳಿದರು.—

"ಜರ್ಮನರು ವರ್ಸೇಲೀಸ್ ಸಂಧಿನಿಬಂಧನೆಗಳಲ್ಲಿ ಕೆಲವನ್ನು ಇದುವರೆಗೇ ನಿರಾಕರಿಸಿದ್ದಾರೆ. ಯುದ್ಧದಲ್ಲಿ ತಪ್ಪುಮಾಡಿದ ಅಪರಾಧಿಗಳನ್ನು ಅವರು ಸಂಧಿನಿಬಂಧನೆಯಂತೆ ನಮಗೆ ಒಪ್ಪಿಸಲಿಲ್ಲ. ಜರ್ಮನ್ ಪ್ರಜೆಗಳೆಲ್ಲಾ ನಿರಾಯುಧರಾಗಲಿಲ್ಲ. ಕೊಡುತ್ತೇವೆಂದಿದ್ದ ೨೦ ಸಾವಿರ ಭಂಗಾರದ ಮಾರ್ಕುಗಳನ್ನು ಇನ್ನೂ ಕೊಡಲಿಲ್ಲ. ಅದಕ್ಕಾಗಿ ಮಿತ್ರಮಂಡಲಿಯವರೂ ಬಲತ್ಕಾರಮಾಡಲಿಲ್ಲ. ಅವರು ಕೇಳಿದಷ್ಟು ಕಾಲವ್ಯವಧಿಯನ್ನೂ ಕೊಟ್ಟುದಾಯಿತು. ನಿಬಂಧನೆಗಳ ಕಾಠಿನ್ಯವನ್ನೂ ಅವರ ಇಷ್ಟದಂತೆ ಕಡಿಮೆಮಾಡಿದುದಾಯಿತು. ಈಗಲೂ ಜರ್ಮನರು ಮಿತ್ರಮಂಡಲಿಯವರಿಗೆ ನಷ್ಟಪರಿಹಾರದ ರೂಪದಲ್ಲಿ ಸಹಾಯಮಾಡುತ್ತೇವೆಂದು ಹೇಳಿದರೆ ಅಷ್ಟೂ ಇಷ್ಟೂ ಪರಿಹಾರ ದ್ರವ್ಯವನ್ನು ಕಡಿಮೆಮಾಡಿಕೊಡಬಹುದು. ಅದನ್ನು ಬಿಟ್ಟು ಹೀಗೆ ಪ್ರತಿಕೂಲವಾದ ತೀರ್ಮಾನವನ್ನು ಮಾಡುತ್ತಿರುವುದನ್ನು ನೋಡಿದರೆ ಜರ್ಮನರು ಸಂಧಿಯ ಬುಡಕ್ಕೇ ಮೋಸವನ್ನು ತರಲಿರುವಂತೆ ತೋರುತ್ತದೆ. ಇದೇ ನಿಜವಾಗಿರುವ ಪಕ್ಷಕ್ಕೆ ಮಿತ್ರಮಂಡಲಿಯವರು ಇದನ್ನು ಸೈರಿಸಲಾರರು. ಜರ್ಮನರು ನಿಜವಾಗಿ ತಪ್ಪುಮಾಡಿರುವರೆಂದೇ ಮಿತ್ರಮಂಡಲಿಯವರ ಗಟ್ಟಿನಂಬುಗೆಯು. ಸೋಮವಾರದೊಳಗಾಗಿ ಜರ್ಮನರು ಪ್ಯಾರಿಸ್ ತೀರ್ಮಾನಕ್ಕೆ ಒಪ್ಪಿಕೊಳ್ಳುವುದನ್ನೂ ಅಥವಾ ಅದಕ್ಕನುಕೂಲವಾಗಿ ಕೆಲವು ತಿದ್ದುಪಾಟುಗಳನ್ನು ಕೋರಿಕೊಳ್ಳುವುದನ್ನೂ ಮಾಡದೆ ಇದ್ದರೆ ಮಿತ್ರಮಂಡಲಿಯವರಾದ ನಾವುಗಳು ವರ್ಸೇಲೀಸ್ ಸಂಧಿಪ್ರಕಾರ ರೈನ್ ನದಿಯ ದಕ್ಷಿಣದೇಶದಮೇಲಿರುವ ಡ್ಯೂಸ್‌ಬರ್ಗ್, ರುಹರೆಟ್, ಡುಸೆಲ್ ಡಾರ್ಫ್ ಎಂಬ (ಜರ್ಮನ್) ಪಟ್ಟಣಗಳನ್ನು ಆಕ್ರಮಿಸಿಕೊಳ್ಳುತ್ತೇವೆ. ಜರ್ಮನಿಯ ವಸ್ತುಗಳ ಮೇಲೆ ಮಿತ್ರಮಂಡಲೀ ದೇಶಗಳಲ್ಲಿ ವಸೂಲಾಗುವ ಸುಂಕಗಳನ್ನೆಲ್ಲಾ ನಷ್ಟಪರಿಹಾರಕ್ಕಾಗಿ ಕಟ್ಟಿಕೊಳ್ಳುತ್ತೇವೆ. ಜರ್ಮನ್ ರೇವೆಗಳಲ್ಲಿ ಸುಂಕವನ್ನೆತ್ತುವುದಕ್ಕೆ ಮಿತ್ರಮಂಡಲಿಯ ಕಡೆಯ ಮನುಷ್ಯರನ್ನೇ ನಿಯಮಿಸುತ್ತೇವೆ.'' ಎಂದು ಖಂಡಿತವಾದ ಪ್ರಕಟನಪತ್ರವನ್ನು ಓದಿ ಮುಗಿಸಿಬಿಟ್ಟು ಇದರ ಪ್ರತ್ಯುತ್ತರವನ್ನು ನೀವು ಈಗಲೇ ಕೊಡುತ್ತೀರೊ? ಅಥವಾ ಮಧ್ಯಾಹ್ನದವರೆಗೆ ಅವಕಾಶ ಕೇಳುತ್ತೀರೊ? ಎಂಬುದಾಗಿ ಜರ್ಮನ್ ಪ್ರತಿನಿಧಿಗಳನ್ನು ಲಾಯಿಡ್‌ಜಾರ್ಜರು ಕೇಳಲಾಗಿ, ವಾನ್‌ಸೈಮನ್ಸ್‌ರವರು—ನಿಮ್ಮ ಉಪನ್ಯಾಸದ ಮತ್ತು ಪ್ರಕಟನ ಪತ್ರಿಕೆಯ ವಿಷಯವಾಗಿ ಜರ್ಮನ್ ಪ್ರತಿನಿಧಿಗಳಾಗಿ ಬಂದಿರುವ ನಾವುಗಳೆಲ್ಲಾ ಆಲೋಚಿಸುತ್ತೇವೆ. ಸೋಮವಾರದ ಹೊತ್ತಿಗೆ ಸರಿಯಾದ ಉತ್ತರವು ಬರುವುದು. ಆದರೆ ಲಾಯಿಡ್ ಜಾರ್ಜ್‌ರವರು ಜರ್ಮನ್ ಪ್ರಭುತ್ವವಿಷಯವಾಗಿ ತಪ್ಪು ಅಭಿಪ್ರಾಯಪಟ್ಟಿದ್ದಾರೆ. ಅದು ಹೇಗಾದರೂ ಇರಲಿ; ಮಿತ್ರಮಂಡಲಿಯವರು ಕೋರಿದಂತೆ ನಷ್ಟಪರಿಹಾರವು ಜರುಗಲಾರದು'' ಎಂದು ಉತ್ತರಕೊಟ್ಟರು. ಕಡೆಗೆ ಸೋಮವಾರದ ದಿನ ಜರ್ಮನ್ ಪ್ರತಿನಿಧಿಗಳು ಕೊಟ್ಟ ಉತ್ತರವೂ ಮಿತ್ರಮಂಡಲಿಗೆ ಸಮಾಧಾನಕರವಾಗಿರಲಿಲ್ಲ. ಅದರ ಮೇಲೆ ಮಿತ್ರಮಂಡಲಿಯವರು ತಮ್ಮ ಅಂತ್ಯಸಂದೇಶಪ್ರಕಟನಪತ್ರದಲ್ಲಿ ತಿಳಿಯಿಸಿದಂತೆ ಮುಂದಣ ಕಾರ್ಯಭಾಗವನ್ನು ಜರುಗಿಸುತ್ತೇವೆಂದು ಮಿ|| ಲಾಯಿಡ್‌ಜಾರ್ಜ್‌ರವರು ಜರ್ಮನರಿಗೆ ತಿಳಿಯಿಸಿಬಿಟ್ಟರು. ಮರುದಿನವೇ ಸೇನಾಧಿಕಾರಿಗಳು ದಂಡಯಾತ್ರೆಗೆ ಜರ್ಮನಿಯ ಮೇಲೆ ಹೊರಡಲಿಕ್ಕೆ ತಮ್ಮ ಸೈನ್ಯಗಳಿಗೆ ತಂತ್ರೀವಾರ್ತೆಯನ್ನು ಕಳುಹಿಸಿಬಿಟ್ಟರು. ಜರ್ಮನ್ ಪ್ರತಿನಿಧಿಗಳು ತಮ್ಮ ಊರುದಾರಿ ಹಿಡಿದರು. ಈಗಣ ಮುಖ್ಯ ಸಭಾಕಾರ್ಯಗಳಲ್ಲಿ ಜರ್ಮನರ ವಿಷಯಕವಾದ ಸಮಸ್ಯೆಯು ಹೀಗೆ ವಿರಸದಲ್ಲಿ ಪರ್ಯವಸಾನವಾಯಿತು. ಮಿತ್ರಮಂಡಲಿಯವರು ತಮ್ಮ ಸಂದೇಶದಂತೆ ಜರ್ಮನರ ಪಟ್ಟಣಗಳನ್ನು ಇಷ್ಟರಲ್ಲೇ ಆಕ್ರಮಿಸಿಕೊಳ್ಳುವರೆಂಬುದರಲ್ಲಿ ಸಂಶಯವಿಲ್ಲ. ಇದು ಮುಂದೆ ಮತ್ತೊಂದುಯುದ್ಧಕ್ಕೆ ಎಲ್ಲಿ ದಾರಿಮಾಡುವುದೋ ಅಥವಾ ನಿರುಪಾಯರಾಗಿ ಜರ್ಮನರು ನಷ್ಟಕ್ಕೆಲ್ಲಾ ಒಪ್ಪಿಕೊಳ್ಳುವರೋ ಗೊತ್ತಾಗಲಿಲ್ಲ, ಇದು ಹೀಗಾದ ಬಳಿಕ ಇದರ ವಾಸನೆಯಿಂದ ಇನ್ನು ತುರ್ಕಿಸಂಧಿಸುಧಾರಣ ಸಮಸ್ಯೆಯು ಕೂಡ ವಿರಸವಿಲ್ಲದೆ ಪರಿಸಮಾಪ್ತಿಗೊಳ್ಳುವುದೆಂದು ಯೋಚಿಸುವುದೂ ಕಷ್ಟವಾಗಿಯೇ ಇದೆ. ಸೆವರಸ್ ಸಂಧಿನಿಬಂಧನೆಗಳಲ್ಲಿ ಉಳಿದುವುಗಳಿಗೆ ತುರ್ಕಿಯವರೂ ಗ್ರೀಕರೂ ಒಪ್ಪಿಕೊಂಡರೆ ಥ್ರೇಸ್, ಸ್ಮರ್ನಾಗಳ ವಿಷಯವನ್ನು ನಿರ್ಣಯಿಸುವುದಕ್ಕೆ ಒಂದು ವಿಚಾರಣಸಂಘವನ್ನು ಏರ್ಪಡಿಸುವೆವೆಂದು ಆಂಗ್ಲ ಫ್ರೆಂಚ್ ಪ್ರತಿನಿಧಿಗಳು ತಿಳಿಯಿಸಲಾಗಿ, ಅದಕ್ಕೆ ತುರ್ಕಿಯ ಅಂಗೋರಾ ಪ್ರಭುತ್ವದವರು ಒಪ್ಪಿದರೆಂತಲೂ ಗ್ರೀಕರು ಒಪ್ಪಲಿಲ್ಲವೆಂತಲೂ ಸುದ್ದಿಬಂದಿದ್ದಿತು. ಆದರೆ ಈಚೆಗೆ ಬಂದಿರುವ ಸುದ್ದಿಯಿಂದ ಗ್ರೀಕರ ಅಸಮಾಧಾನದಿಂದ ಮಿತ್ರಮಂಡಲಿಯವರು ಥ್ರೇಸ್ ಸ್ಮರ್ನಾ ವಿಚಾರಣ ಸಂಘದೇರ್ಪಾಟನ್ನೇ ನಿಲ್ಲಿಸಿಬಿಟ್ಟರೆಂದು ಗೊತ್ತಾಗುತ್ತದೆ. ಭರತಖಂಡದಿಂದ ಹೋದ ಖಿಲಾಫತ್ ಪ್ರತಿನಿಧಿಗಳೂ ಆಗಾಖಾನರೂ ಮೊದಲಾದವರೆಲ್ಲಾ ಲಂಡನ್ನಿಗೆ ಸೇರಿದರು. ಮುಂದೆ ತುರ್ಕಿ ಸಮಸ್ಯೆಯು ಹೇಗಾಗುತ್ತದೋ ನೋಡಬೇಕು. ಅಂತೂ ಜಗತ್ತಿನಲ್ಲಿ ಶಾಂತಿಯೆಂಬುದು ಇನ್ನೂ ದೂರವಾಗಿಯೇ ಇದೆಯೆಂದು ಹೇಳಬೇಕಾಗುತ್ತದೆ.

ಒಳದೇಶದ ವೃತ್ತಾಂತಗಳು.

ಬರುವ ತಾ|| ೨೧ನೆ ಸೋಮವಾರ ನಂಜನಗೂಡಿನಲ್ಲಿ ದೊಡ್ಡ ಜಾತ್ರೆಯ ರಥೋತ್ಸವವು ನಡೆಯುವುದು.

ಬೆಂಗಳೂರಲ್ಲಿರುವ ಶ್ರೀಮನ್ ಮಹಾರಾಜರವರ ಸ್ವಾರಿಯು ೧೨ ದಿನಗಳ ಮಟ್ಟಿಗೆ ಮದ್ರಾಸಿಗೆ ಚಿತ್ತೈಸಿದ್ದು ಪುನಃ ಬೆಂಗಳೂರಿಗೆ ದಯಮಾಡಿತು.

ಜನಪರಿಗಣತಿಗಾಗಿ ಸಂಸ್ಥಾನದ ಎಲ್ಲ ಕೋರ್ಟುಗಳೂ, ಕಛೇರಿಗಳೂ ಮತ್ತು ಸ್ಕೂಲುಗಳೂ ಅವುಗಳಿಗೆ ಈ ಮಾರ್ಚಿ ತಾ|| ೧೭-೧೮ ಮತ್ತು ೧೯ನೆಯ ತಾರೀಖುಗಳಲ್ಲಿ ರಜವು ಕೊಡಲ್ಪಟ್ಟಿರುವುದು.

ಆಫಿಸಿಯೇಟಿಂಗ್ ಸೀನಿಯರ್ ಸರ್ಜನರಾದ ಡಾ|| ವೈಲ್ಯಾಂಗರ್‌ರವರು ಯಾರಿಗೋ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿರುವಾಗ್ಗೆ ತಮ್ಮ ಕೈಗೆ ಶಸ್ತ್ರ ತಗಲಿ ವಿಷ ವ್ಯಾಪಿಸಿ ಅಸ್ವಸ್ಥರಾಗಿ ಚಿಕಿತ್ಸೆಯನ್ನು ಹೊಂದುತ್ತಿರುವರು.

ಹೆಜ್ಜಾಜಿಗೆ ಯಾತ್ರೆ ಹೋಗತಕ್ಕ ಮಹಮ್ಮದೀಯರು ತಮ್ಮ ಸಂಗಡ ಬಹಳ ಕಡಿಮೆ ಭಂಗಾರವನ್ನು ತೆಗೆದುಕೊಂಡುಹೋಗಬೇಕೇ ವಿನಾ ಹೆಚ್ಚಾಗಿ ತೆಗೆದುಕೊಂಡುಹೋಗಬಾರದೆಂದು ಮೈಸೂರು ಸರ್ಕಾರದವರು ಪ್ರಕಟಿಸಿರುತ್ತಾರೆ.

ತಾ|| ೯-೩-೨೧ನೆ ಬುಧವಾರದ ರಾತ್ರಿ ಯಡತೊರೆಯಲ್ಲಿ ಶ್ರೀ ಬೆಟ್ಟದಪುರದ ಶ್ರೀಗುರು ಚಿಕ್ಕವೀರದೇಶಿಕೇಂದ್ರಸ್ವಾಮಿಯವರ ಉತ್ಸವವು ಹೂವಿನ ಪಾಲ್ಕಿಯಲ್ಲಿ ಬಹು ವಿಜೃಂಭಣೆಯಿಂದ ಸಾಂಗೋಪಾಂಗವಾಗಿ ಜರುಗಿತು. ಈ ಸ್ವಾಮಿಯವರ ಉತ್ಸವವನ್ನು ನೋಡುವುದಕ್ಕೋಸ್ಕರ ಬಹುಜನರು ಬಂದಿದ್ದರು. ತಾ|| ೭-೩-೨೧ನೆ ಸೋಮವಾರದ ರಾತ್ರಿ ಶ್ರೀ ಗುರು ಚಿಕ್ಕವೀರ ದೇಶಿಕೇಂದ್ರಸ್ವಾಮಿಯವರ ಪಾದಪೂಜೆಯು ನಡೆಯಿತು ಎಂದು ಒಬ್ಬ ಚಂದಾದಾರರು ತಿಳಿಸಿರುತ್ತಾರೆ.

ಕೋಲಾರ ಡಿಸ್ಟ್ರಿಕ್ಟು ಗೌರೀಬಿದನೂರು ತಾಲ್ಲೂಕು ಹಲಕೂರು ಗ್ರಾಮದ ಶ್ರೀ ಸೋಮೇಶ್ವರಸ್ವಾಮಿಯ ರಥೋತ್ಸವವೂ ಮತ್ತು ಎತ್ತಿನ ಪರಿಷೆ ಸಹ (ತಾ|| ೨೩-೩-೨೧ ರಿಂದ ೩೦-೩-೨೧) ರವರೆಗೆ ನಡೆಯುತ್ತದೆ. ಸ್ಥಳ ಮತ್ತು ನೀರಿನ ವಸತಿ ಅನುಕೂಲವಾಗಿದೆ. ಪರಸ್ಥಳದವರ ಅನುಕೂಲತೆಗಾಗಿ ಆಜು ಬಾಜು ಗ್ರಾಮಗಳ ಭಕ್ತಾದಿಗಳಿಂದ ಛತ್ರಗಳು ಏರ್ಪಾಟು ಮಾಡಲ್ಪಟ್ಟಿರುತ್ತವೆ. ದನಗಳಿಗೆ ತೊಂದರೆಯಿಲ್ಲ. ಈ ಹಲಕೂರು ಗ್ರಾಮವು ಗೌರೀಬಿದನೂರು, ತೊಂಡೇಭಾವಿ ರೈಲ್ವೆಸ್ಟೇಷನುಗಳಿಗೆ ಮೂರು ಮೈಲಿಗಳ ಸಮೀಪದಲ್ಲಿರುವ ರಸ್ತೆ ಜಾಗಾವಾಗಿರುತ್ತೆಂದು ಒಬ್ಬ ಚಂದಾದಾರರು ತಿಳಿಸುತ್ತಾರೆ.

ಆಸ್ಥಾನವಿದ್ವಾಂಸರಾದ ಗಾನವಿಶಾರದ ಬಿ. ಕೃಷ್ಣಪ್ಪನವರು ರಾಜಧಾನಿಯಲ್ಲಿ ರಾಮಮಂದಿರವನ್ನೇರ್ಪಡಿಸಿ ಪ್ರತಿವರ್ಷದ ಶ್ರೀರಾಮನವಮಿ ಕಾಲದಲ್ಲಿ ರಾಮೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡಸಿಕೊಂಡುಬರುತ್ತಿರುವರಷ್ಟೆ. ಈ ಉತ್ಸವವನ್ನು ಆರಂಭಿಸಿ ಬರುವ ಚೈತ್ರಮಾಸಕ್ಕೆ ೨೫ ವರ್ಷಗಳು ತುಂಬುವುದರಿಂದ ರಾಮೋತ್ಸವ ಮಹಾಪಟ್ಟಾಭಿಷೇಕವನ್ನು ಸಾವಿರಾರು ರೂ. ಗಳ ವೆಚ್ಚದಿಂದ ವಿಶೇಷ ವೈಭವದೊಡನೆ ನೆರವೇರಿಸಲು ಸಂಕಲ್ಪಿಸಿ ಮದ್ರಾಸು ಮೊದಲಾದ ದೊಡ್ಡ ಸ್ಥಳಗಳಲ್ಲಿ ತಮ್ಮ ಪಾಂಡಿತ್ಯ ಪ್ರದರ್ಶನದಿಂದ ಧನಸಂಚಯ ಮಾಡಲು ಹೊರಟಿರುತ್ತಾರೆ. ತತ್ಸಂಬಂಧವಾಗಿ ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರು ದೊಡ್ಡಹಾಲ್‌ನಲ್ಲಿ ದಿವಾನ್ ಸರದಾರ್ ಎಂ. ಕಾಂತರಾಜ ಅರಸಿನವರ ಅಧ್ಯಕ್ಷತೆಯಲ್ಲಿ ವಿದ್ವಾಂಸರ ಸಂಗೀತವು ನಡೆದು ದ್ರವ್ಯವುತ್ಪನ್ನವಾಯಿತು.

ಮದ್ರಾಸಿನಲ್ಲಿರುವ ಸರ್ಕಾರಿ ಪೆನ್‌ಷನ್ ದಾರರು ಮತ್ತು ವರ್ತಕರು ಆದ ಮ|| ಚೆಟ್ಟಿ ನಾಗಯ್ಯಚೆಟ್ಟಿರವರು ಬರುವ ಜನಪರಿಗಣತಿಯಲ್ಲಿ ವೀರಶೈವಬ್ರಾಹ್ಮಣರೆಂದು ಬರೆದುಕೊಳ್ಳಲೇರ್ಪಾಟಾಗಬೇಕೆಂದು ಮದ್ರಾಸ್ ಗೌರ್ನರಿಗೆ ಬರೆದುಕೊಂಡಿದ್ದುದರ ಮೇಲೆ ಆ ರೀತಿ ಬರೆದುಕೊಳ್ಳಬೇಕೆಂದು ಅಪ್ಪಣೆಯಾಗಿರುತ್ತದೆ.

GOVERNMENT OF MADRAS.

Home (Miscellaneous) Department.

G. O. No. 328,

dated 3rd March 1921.

Read the following papers :—

From Mr. Chetti Nagichettiar Madras No. Nil dated 1st February 1921.

ORDER.

The memorialist is informed that the instructions to the enumerators are to enter the name of the caste which each person gives of himself and that any member of the Lingayat community who returns his caste as Virasaivite or Virasaiva Brahmin will be so recorded at the ensuing Census.

(By order of the Governor in Council)

(Sd.) R. RAMACHANDRA RAO,
Secretary.

To, M. R. Ry., Chetti Nagichettiar Avl.,
Government Pensioner & Merchant
46, Anumantaroyan Street,
Park Town, Madras.

Copy to the Superintendent,
Census Operations, Madras.

ಭರತಖಂಡದ ವೃತ್ತಾಂತಗಳು.

ಕಳೆದ ವರ್ಷ ಮದ್ರಾಸಾಧಿಪತ್ಯದಲ್ಲಿ ಜನನವಾದ ಶಿಶುಗಳಲ್ಲಿ ೧೦೦೦ಕ್ಕೆ ೨೪೬ ರಂತೆ ಮೃತವಾಗಿಹೋಗಿವೆ.

ಆಲಿಘರ್ ಮಹಮ್ಮದೀಯ ವಿಶ್ವವಿದ್ಯಾಲಯಕ್ಕೆ ಭೂಪಾಲ್ ಬೇಗಂರವರು ಚಾನ್ಸಲರಾಗಿ ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಹಿಂದೂಸ್ಥಾನ ಸರ್ಕಾರದ ಬೊಕ್ಕಸದಲ್ಲಿ ೨೪ ಕೋಟಿಯ ಬೆಳ್ಳಿಯ ರೂ. ಗಳಿದ್ದುವು. ಈಗ ಭರತಖಂಡದಲ್ಲಿ ೧೬೪ ಕೋಟಿ ರೂ. ಗಳ ನೋಟುಗಳು ವ್ಯವಹಾರದಲ್ಲಿವೆ.

ಹೊಗೆಬಂಡಿಯಲ್ಲಿ ಇಂಗ್ಲೀಷ್ ಜನರಿಗಾಗಿ ಪ್ರತ್ಯೇಕ ಸ್ಥಳವನ್ನೇರ್ಪಡಿಸಬಹುದೆ? ಎಂಬ ವಿಷಯವು ಬೊಂಬಾಯಿ ಹೈಕೋರ್ಟಿನ ವಿಚಾರಣೆಗೆ ಬಂದಿದ್ದಿತು. ಹೀಗೆ ಮಾಡುವುದು ಪಕ್ಷಪಾತ ಅಕ್ರಮವೆಂಬುದೇ ವಾದಿಗಳ ಪಕ್ಷದ ವಾದವು. ಇದನ್ನು ಪರಿಶೀಲಿಸುವುದಕ್ಕೆ ಹೈಕೋರ್ಟಿಗೆ ಅಧಿಕಾರವಿಲ್ಲವೆಂತಲೂ, ರೈಲ್ವೆ ಕಮಿಷನ್ನಿನವರಿಗೆ ಬರೆದುಕೊಳ್ಳಬಹುದೆಂತಲೂ ಇಬ್ಬರು ನ್ಯಾಯಮೂರ್ತಿಗಳು ತೀರ್ಮಾನಿಸಿದರು.

ಕಲ್ಕತ್ತಾದ ಪ್ರಸಿದ್ಧ ಬ್ಯಾರಿಸ್ಟರಾಗಿದ್ದು ಸಹಾಯನಿರಾಕರಣಾವಲಂಬನೆಯಿಂದ ತಮ್ಮ ವಕೀಲತನವನ್ನು ಬಿಟ್ಟಿರುವ ಚಿತ್ತರಂಜನದಾಸ್‌ರವರು ತಮ್ಮ ಪತ್ನೀ ಸಮೇತ ಕಳೆದ ತಾ|| ೨ರಲ್ಲಿ ಮೈಮನ್‌ಸಿಂಗಿಗೆ ಹೋದರು. ಹೊಗೆಬಂಡಿಯನ್ನಿಳಿದ ಕೂಡಲೇ ಅವರು ಪಟ್ಟಣವನ್ನು ಪ್ರವೇಶಿಸಲಾಗದೆಂಬ ವಿಷಯಕ್ಕೆ ೧೪೪ನೆ ಸೆಕ್ಷನ್ ಅನುಸರಿಸಿ ಅವರಿಗೆ ಮ್ಯಾಜಿಸ್ಟ್ರೇಟರ ನೋಟೀಸು ಕೊಡಲ್ಪಟ್ಟಿತು. ಅವರು ಪುರಪ್ರವೇಶ ಮಾಡದೆ ಹಿಂದಕ್ಕೆ ಹೊರಟುಹೋದರು. ಈ ಸುದ್ದಿಯು ಊರಿಗೆ ತಿಳಿದ ಕೂಡಲೇ ಹಲವರು ಅಂಗಡಿಗಳನ್ನು ಮುಚ್ಚಿದರು. ಈಚೆಗೆ ಈ ನಿರ್ಬಂಧಾಜ್ಞೆಯು ಉಪಸಂಹರಿಸಿಕೊಳ್ಳಲ್ಪಟ್ಟಿತು.

ಪಾರ್ಲಿಮೆಂಟಿನ ಲಾಂಕಷೈರ್ ಪ್ರತಿನಿಧಿಗಳಾಗಿರುವ ಸಭಿಕರು ಒಂದು ಸಭೆ ಮಾಡಿ, ಇಂಗ್ಲೆಂಡಿನಿಂದ ಭರತಖಂಡವು ತರಿಸಿಕೊಳ್ಳುತ್ತಿರುವ ಬಟ್ಟೆಗಳ ಪರಿಮಾಣವು ದಿನದಿನಕ್ಕೆ ತಗ್ಗಿಹೋಗುತ್ತಿರುವುದೆಂದೂ, ೧೯೧೩ನೆಯ ವರ್ಷದಲ್ಲಿ ಭರತಖಂಡವು ೩೧೦ ಕೋಟಿ ಗಜಗಳ ಬಟ್ಟೆಯನ್ನು ತರಿಸಿಕೊಂಡಿರುವಲ್ಲಿ ೧೯೨೦ನೆ ವರ್ಷದಲ್ಲಿ ೧೫೦ ಕೋಟಿ ಗಜಗಳ ಬಟ್ಟೆಯನ್ನು ಮಾತ್ರವೇ ತರಿಸಿಕೊಂಡಿತೆಂತಲೂ ಇದಕ್ಕೆ ಕಾರಣವೇನೋ ಅದನ್ನು ವಿದೇಶವರ್ತಕಶಾಖೆಯವರು ವಿಚಾರ ಮಾಡಿ ಗೊತ್ತುಪಡಿಸಬೇಕೆಂದೂ ತೀರ್ಮಾನಿಸಿರುವರು. ಭರತಖಂಡದಲ್ಲಿ ಯಂತ್ರಗಾರಿಕೆಯೂ ಕೈಗಾರಿಕೆಯೂ ವೃದ್ಧಿಯಾಗುತ್ತ ಬಂದಂತೆಲ್ಲ ವಿದೇಶದ ಸರಕುಗಳನ್ನು ಇಲ್ಲಿಗೆ ತರಿಸಿಕೊಳ್ಳುವುದು ಕಡಿಮೆಯಾಗುವುದೇ ಸಹಜ.

ಈಗ ಇಂಡಿಯಾ ಸರ್ಕಾರದವರು ಹೆಚ್ಚಿಸಬೇಕೆಂದಿರುವ ತೆರುಗೆಗಳಲ್ಲಿ ವರಮಾನದ ತೆರುಗೆಯು ಈ ಪ್ರಕಾರ ಮಾಡಲ್ಪಡಬೇಕೆಂದು ಸೂಚಿತವಾಗಿದೆ. ೧ ವರ್ಷಕ್ಕೆ ೨೦೦೦ ರೂ. ನೊಳಗೆ ಉತ್ಪತ್ತಿಯುಳ್ಳವರ ಮೇಲೆ ತೆರುಗೆಯಿಲ್ಲ. ೨ ಸಾವಿರದ ಮೇಲೆ ೫ ಸಾವಿರದೊಳಗಣ ಆದಾಯದ ಮೇಲೆ ರೂ. ಗೆ ೫ ಕಾಸಿನಂತೆ ೧೦ ಸಾವಿರದ ಮೇಲೆ ೨೦ ಸಾವಿರದೊಳಗೆ ರೂ. ಗೆ ೯ ಪೈ.

೨೦ ,, ೩೦ ,, ರೂ ಗೆ ೧ ಆಣೆ.
೩೦ ,, ೪೦ ,, ,, ೧ ಆ. ೩ ಪೈ.
೪೦ ,, ೧ ಲಕ್ಷದೊಳಗೆ ೧ ಆ. ೬ ಪೈ.

೧ ಲಕ್ಷದ ಮೇಲೆ ೧|| ಲಕ್ಷದೊಳಗೆ ೧|| ಆಣೆ. ೧|| ಲಕ್ಷದ ಮೇಲೆ ೨ ಲಕ್ಷದ ವರೆಗೆ ೨ ಆ. ೨ ಲಕ್ಷದ ಮೇಲೆ ೨|| ಲಕ್ಷದ ವರೆಗೆ ೨|| ಆ. ೨|| ಲಕ್ಷದ ಮೇಲೆ ೩ ಲಕ್ಷದ ವರೆಗೆ ೩|| ಆ. ೩ ಲಕ್ಷದ ಮೇಲ್ಪಟ್ಟ ವರಮಾನಕ್ಕೆ ರೂ. ಗೆ ೪ ಆಣೆ.

ನಾನ್ಕಾನಾದಲ್ಲಿ ಸಿಕ್ಖರ ವಧೆಯಾದಾಚೆಗೆ ಆ ಸುತ್ತುಮುತ್ತಿನಲ್ಲಿ ಪ್ರಜೆಗಳೊಳಗೆ ನಾನಾತರದ ಭೀತಿಗಳು ಹಬ್ಬಿಕೊಂಡಿವೆ. ದುರಾಗ್ರಹಿಗಳು ಕೆಲರು ಇದೇ ಸಮಯವೆಂದು ಕಳವು ಸುಲಿಗೆಗಳಿಗೆ ತೊಡಗಿದ್ದಾರೆ. ಅಲ್ಲಿಯ ಹತ್ಯೆಗಳನ್ನು ಕೇಳಿ ಭಯಕಂಪಿತರಾಗಿ ಅನೇಕ ಸಿಕ್ಖರು ಗುಂಪುಗುಂಪಾಗಿ ಬರುತ್ತಿರುವುದರಿಂದ ಪ್ರಜೆಗಳು ಈ ಗುಂಪನ್ನು ನೋಡಿ ಹೆದರಿ ಕೊಡಲಿಗಳನ್ನು ಹಿಡಿದು ತಂತಮ್ಮ ಗ್ರಾಮಗಳನ್ನು ಕಾಯುತ್ತಿದ್ದಾರೆ. ಸಿಕ್ಖರ ದೌರ್ಜನ್ಯಕ್ಕೆ ಹೆದರಿ ಆ ಪ್ರಾಂತದ ಹಿಂದೂ ಮಹಮ್ಮದೀಯ ಪ್ರಜೆಗಳು ಊರುಗಳನ್ನು ಬಿಟ್ಟು ಓಡಿಹೋಗುತ್ತಿರುವರು. ಕೆಲ ಸಿಕ್ಖರು ಗ್ರಾಮಾಂತರದ ಪ್ರಜೆಗಳನ್ನು ಬೆದರಿಸಿ ಹಿಂಸಿಸಿ ಆಹಾರಪದಾರ್ಥ ಮೊದಲಾದವುಗಳನ್ನು ಸುಲಿದುಕೊಳ್ಳುತ್ತಿದ್ದಾರೆ. ಡಾರಿಯಾದ ಹತ್ತಿರ ಸಿಕ್ಖರು ಒಂದು ಶಿವಾಲಯಕ್ಕೆ ನುಗ್ಗಿ ವಿಗ್ರಹವನ್ನು ಒಡೆದುಹಾಕಿದರಂತೆ. ಮಹಮದೀಯರ ಒಂದು ಗೋರಿಯನ್ನು ತೋಡಿಹಾಕಿದರು.

ಈಗಣ ನೂತನ ರಾಜಕೀಯ ಸಂಸ್ಕರಣಗಳು ಏರ್ಪಡುವುದಕ್ಕೆ ಪೂರ್ವದಲ್ಲಿ ಸಾಮ್ರಾಜ್ಯ ಶಾಸನ ಸಭೆಯು ಹೊರತು ಸ್ಟೇಟ್ ಕೌನ್ಸಿಲ್ ಎಂಬುದು ಇರಲಿಲ್ಲ. ಈಗ ಸ್ಟೇಟ್ ಕೌನ್ಸಿಲ್ಲಿನ ಸಭಿಕರಿಗೂ ಸಾಮ್ರಾಜ್ಯಶಾಸನ ಸಭಾಸಭಿಕರಿಗೂ ಇರುವ ಬಿರುದುಗಳಲ್ಲೂ ಮರ್ಯಾದೆಗಳಲ್ಲೂ ತಾರತಮ್ಯವೇರ್ಪಟ್ಟಿದೆ. ಎಂದರೆ ಸ್ಟೇಟ್ ಕೌನ್ಸಿಲರುಗಳಿಗೆ ಮಾತ್ರ ಆನರಬಲ್ ಎಂಬ ವಿಶೇಷಣವು ಉಪಯೋಗಿಸಲ್ಪಡುವಂತೆಯಾಗಿದೆ. ಸಾಮ್ರಾಜ್ಯಶಾಸನ ಸಭಿಕರಿಗೆ ಈಗ ಆ ವಿಶೇಷಣವು ಉಪಯೋಗಿಸಲ್ಪಡುತ್ತಲಿಲ್ಲ. ಮತ್ತು ಸಭೆಗೆ ಬರುವಾಗ್ಗೆ ಸ್ಟೇಟ್ ಕೌನ್ಸಿಲ್ ಸಭಿಕರಿಗೆ ಫಸ್ಟ್‌ಕ್ಲಾಸ್ ಹೊಗೆಬಂಡಿಯ ಒಂದು ಕಂಪಾರ್ಟುಮೆಂಟು ರಿಜರ್ವ್ ಆಗಿ ಕೊಡಲ್ಪಡುತ್ತಿದೆ. ಸಾಮ್ರಾಜ್ಯಶಾಸನ ಸಭಿಕರಿಗಾದರೋ ೨ನೆ ತರಗತಿಯ ಒಂದು ಟಿಕೇಟು ಸಿಕ್ಕುತ್ತಿದೆ. ಮತ್ತು ಬತ್ಯವೂ ಕೂಡ ಸಾಮ್ರಾಜ್ಯಶಾಸನ ಸಭಿಕರಿಗಿಂತಲೂ ಸ್ಟೇಟ್ ಕೌನ್ಸಿಲರಿಗೆ ದಿನಕ್ಕೆ ೫ ರೂ. ನಷ್ಟು ಹೆಚ್ಚು. ಈ ವ್ಯತ್ಯಾಸಗಳನ್ನೆಲ್ಲಾ ತಪ್ಪಿಸಿ, ಉಭಯತ್ರ ಸಮಾನಭಾವವಿರುವಂತೆ ಮಾಡಬೇಕೆಂಬ ವಿಷಯದಲ್ಲಿ ಸಾಮ್ರಾಜ್ಯಶಾಸನ ಸಭೆಯೊಳಗೆ ಅನೇಕ ಸಭಿಕರು ಪಟ್ಟುಹಿಡಿದು ಚರ್ಚಿಸಿದುದರಿಂದ ಕಡೆಗೆ ಅದು ಅಧಿಕಾನುಮತದಿಂದ ಹಾಗೆಯೇ ಆಗಬೇಕೆಂದು ತೀರ್ಮಾನವಾಯಿತು. ಇಂಡಿಯಾ ಸರ್ಕಾರದವರೂ ಇದನ್ನು ಒಪ್ಪದೆ ತಿರಸ್ಕರಿಸಲಾರರೆಂದು ಕಾಣುತ್ತದೆ.

ಕಳೆದ ಸಾಮ್ರಾಜ್ಯಶಾಸನ ಸಭಾಧಿವೇಶನದಲ್ಲಿ ಡಾಕ್ಟರ್ ನಂದಲಾಲ್ ಎಂಬ ಸಭಿಕರು—ನಮ್ಮ ದೇಶದಲ್ಲಿ ಸಮೃದ್ಧವಾಗಿ ಹಾಲು ದೊರಕದೆ ಪ್ರಜೆಗಳು ರೋಗಪೀಡಿತರಾಗಿ ದುರ್ಬಲರಾಗುತ್ತಿದ್ದಾರೆ. ಆದುಕಾರಣ ನಮ್ಮ ದೇಶದಿಂದ ಪರದೇಶಗಳಿಗೆ ಪಶುಗಳನ್ನು ಸಾಗಿಸದಂತೆ ಶಾಸನದ ಮೂಲಕ ನಿರೋಧಿಸಬೇಕೆಂಬ ತೀರ್ಮಾನವನ್ನು ತಂದರು. ನಿರುಪಯೋಗವಾದ ಪಶುಗಳನ್ನು ಬೇಕಿದ್ದರೆ ಸಾಗಿಸಬಹುದು. ಉಪಯೋಗಕ್ಕೆ ಬರತಕ್ಕವುಗಳನ್ನು ಸಾಗಿಸಬಾರದು ಎಂಬುದಾಗಿ-ರಾ|| ಬ|| ಸಿ. ಎಸ್. ಸುಬ್ರಹ್ಮಣ್ಯಂರವರು ತಮ್ಮ ಸಂವರಣೆಯನ್ನು ಸೂಚಿಸಿದರು. ಇದಕ್ಕೆ ಸರ್ಕಾರಿ ಪಕ್ಷದಿಂದ ಆ|| ಶರ್ಮರವರು ಕೊಟ್ಟ ಉತ್ತರವೇನೆಂದರೆ— ಈ ವಿಷಯದಲ್ಲಿ ಸರ್ಕಾರದವರಿಗೆ ಶ್ರದ್ಧೆಯಿದೆ. ಕಳೆದ ೧೦ ವರ್ಷಗಳಲ್ಲಿ ದೇಶದೊಳಗೆ ಪಶು ಸಂಖ್ಯೆಯು ೧೦೦ಕ್ಕೆ ೧೦ ರಷ್ಟು ವೃದ್ಧಿಯಾಗಿದೆ. ಎಲ್ಲಿ ಪಶುಗಳು ಹೆಚ್ಚಾಗಿವೆಯೋ ಅಲ್ಲಿಂದ ಹೊರಕ್ಕೆ ಪಶುಗಳನ್ನು ಮಾರಿ ಸಾಗಿಸುತ್ತಾರೆ. ಹಾಲು ದೊರಕದೆ ಪ್ರಜೆಗಳು ಪರಿತಪಿಸುತ್ತಿರಬಹುದು. ಅದಕ್ಕೆ ನಿಜವಾದ ಕಾರಣವು ಪಶುಗಳ ಸಂಖ್ಯೆಯು ಕಡಿಮೆಯಾದುದಲ್ಲ. ಉತ್ತಮ ಜಾತಿಯ ಹಸುಗಳನ್ನು ಶಾಸ್ತ್ರೀಯ ವಿಧಾನದಿಂದ ಸಾಕಿದರೆ ಅವು ಹೆಚ್ಚಾಗಿ ಹಾಲನ್ನು ಕೊಡುವುವು. ಇಂಡಿಯಾ ಸರ್ಕಾರದವರು ಮದ್ರಾಸು ಸರ್ಕಾರದವರ ಸಲಹೆಯನ್ನು ಕೇಳಿ ನೆಲ್ಲೂರು ದನಗಳನ್ನು ಪರದೇಶಗಳಿಗೆ ಸಾಗಿಸದಂತೆ ಆಜ್ಞಾಪಿಸಲು ಉದ್ದೇಶಪಟ್ಟಿದ್ದಾರೆ. ಸಾಧ್ಯವಾದಮಟ್ಟಿಗೆ ಈ ದೇಶದಿಂದ ಹೊರಕ್ಕೆ ಉತ್ತಮ ಜಾತಿಯ ದನಗಳನ್ನು ಸಾಗಿಸದಂತೆ ಸರ್ಕಾರದವರು ಮಾಡುತ್ತಾರೆ ಎಂದರು. ಅದರಮೇಲೆ ಬೇರೆ ಬೇರೆ ಚರ್ಚೆ ನಡೆದು ಕಡೆಗೆ ಭರತಖಂಡದಲ್ಲಿ ಅವಶ್ಯಕವಾದುದಕ್ಕಿಂತಲೂ ಹೆಚ್ಚಾಗಿ ಉತ್ತಮ ಪಶುಗಳಿದ್ದರೇ ಹೊರತು ಇಲ್ಲದಿದ್ದರೆ ಇತರದೇಶಗಳಿಗೆ ಪಶುಗಳನ್ನು ಸಾಗಿಸಕೂಡದು ಎಂಬ ತೀರ್ಮಾನವು ಅಂಗೀಕೃತವಾಯಿತು.

ಪತ್ರವ್ಯವಹಾರ.

ಕಡೂರು.

ಈ ವರ್ಷದ ಏಪ್ರಿಲ್ ತಿಂಗಳಲ್ಲಿ ನಡೆಯುವ (ಕಡೂರು ಸೆಂಟರಿನಲ್ಲಿ) ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳಿಗೂ ಇವರ ಹಿಂಬಾಲಿಸಿ ಬರತಕ್ಕ ಮಾಸ್ತರುಗಳಿಗೂ ಸಹ ರೆಪ್ರಜೆಂಟೇಟಿವ್ ಅಸೆಂಬ್ಲಿ ಮೆಂಬರರೂ ಮತ್ತು ಆನರರಿ ಬೆಂಚ್ ಮ್ಯಾಜಿಸ್ಟ್ರೇಟರೂ ಆದ ಬೀರೂರು ಉಪ್ಪಾಣಿ ಮಠದ ಮಿ|| ಎನ್. ಎಂ. ಶಿವಲಿಂಗಪ್ಪಯ್ಯನವರು ವರ್ಷಂಪ್ರತಿಯಂತೆ ಕಡೂರಿನಲ್ಲಿರುವ ತಮ್ಮ ಬಂಗಲೆಯಲ್ಲಿ ಟೈಮ್ ಪ್ರಕಾರ ಭೋಜನೋಪಚಾರದ ಏರ್ಪಾಡು ಮಾಡಿರುವದರಿಂದ ಈ ಸೆಂಟರಿಗೆ ಪರೀಕ್ಷೆಗಾಗಿ ಬರತಕ್ಕ ವಿದ್ಯಾರ್ಥಿಗಳು ೧ ವಾರ ಮುಂಚೆಯೇ ಸದರಿ ಧರ್ಮಾತ್ಮರಿಗೆ ಪತ್ರಮೂಲಕ ತಿಳಿಸಬೇಕಾಗಿ ಅಪೇಕ್ಷಿಸಿರುತ್ತಾರೆ.

ಆರಾಧ್ಯಸ್ವಾಮಿ ಎ. ಹಿರೇಮಠ.

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದ್ದು.

ಬೆಂಗಳೂರು ಸೆಂಟರಿಗೆ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲ್ ಮಾಸ್ಟರ್‌ಗಳಿಗೂ ಮಾಮೂಲ್ ಪ್ರಕಾರ ಬೆಂಗಳೂರು ಊದುಬತ್ತಿ ಷಾಪ್ ಯಸ್. ಕಳ್ಳಿಪ್ಪನವರು ಊಟಕ್ಕೂ ಮತ್ತು ವಾಸಕ್ಕೂ ಏರ್ಪಡಿಸಿರುತ್ತಾರೆ. ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ಒಂದು ವಾರ ಮುಂದಾಗಿ ಮ|| ಎಸ್. ಕಳ್ಳಿಪ್ಪನವರಿಗೆ ಬರೆದು ತಿಳಿಸತಕ್ಕದ್ದು.

(೨) ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ವೇದಾಧ್ಯಯನ ಪಾಠಹೇಳಲು ಒಬ್ಬ ಶಾಸ್ತ್ರಿಗಳವರು ಬೇಕಾಗಿದ್ದಾರೆ. ಇವರಿಗೆ ವಾಸಕ್ಕೆ ಮನೆಯೂ ಮತ್ತು ವೇತನವೂ ಕೊಡಲ್ಪಡುತ್ತವೆ. ಬರತಕ್ಕಂಥಾ ಶಾಸ್ತ್ರಿಗಳವರು ಬೆಂಗಳೂರು ಸಿಟಿ ಬಳೆಪೇಟೆ ಬಳಿಯಿರುವ ಸಪ್ಪಣ್ಣಸ್ವಾಮಿಗಳ ಮಠದ ವೇ|| ಚೆನ್ನಬಸವಸ್ವಾಮಿಗಳವರಿಗೆ ಬಿನ್ನಯಿಸಿಕೊಳ್ಳತಕ್ಕದ್ದು.

K. THAMMAIH.

ಮುಡುಕುತೊರೆ ಶ್ರೀ ವೀರಶೈವಮತಸಂವರ್ಧಿನೀಸಭಾ.

ಈ ಸಭೆಯು ೧೯೨೧ ನೇ ಫೆಬ್ರವರಿ ತಾರೀಖು ೧೬, ೧೭, ೧೮ ಈ ಮೂರು ದಿನಗಳಲ್ಲಿ ಸಾಂಗವಾಗಿ ನೆರವೇರಿತು. ಆಸ್ಥಾನ ಮಹಾವಿದ್ವಾನ್ ಕರ್ಣಾಟಕಭಾಷಾರತ್ನ ವೇ|| ಕರಿಬಸವಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. "ಶಿವಾದ್ವೈತ" ವಿಷಯವಾಗಿ ಹತ್ತು ಭಾಷಣಗಳು ಕಾಶೀ ಮುಂತಾದ ಸ್ಥಳಗಳಿಂದ ಬಂದಿದ್ದುವಲ್ಲದೆ, ಮೈಸೂರಿನಲ್ಲಿರುವ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳೂ ದಯಮಾಡಿಸಿ ಅದೇ ವಿಷಯವಾಗಿ ತಾವು ಬರೆದು ತಂದಿದ್ದ ಭಾಷಣವನ್ನು ಸುಶ್ರಾವ್ಯವಾಗಿ ಓದಿದರು. ಅಧ್ಯಕ್ಷರು ಕಾರ್ಯಗೌರವ ವಶಾತ್ ತತ್‌ಕ್ಷಣವೇ ಮೈಸೂರಿಗೆ ಹೋಗಬೇಕಾಗಿ ಬಂದುದರಿಂದ ಈ ಭಾಷಣಗಳನ್ನೆಲ್ಲಾ ಇವರು ಚೆನ್ನಾಗಿ ಪರಿಶೀಲಿಸಲು ಆಗಲಿಲ್ಲ. ಆದುದರಿಂದ ಮುಂದಿನ ತಿಂಗಳಲ್ಲಿ ಕೂಡಲಿಕ್ಕೆ ಇರುವ ಒಂದು ಸ್ಪೆಷಲ್ ಕಮಿಟಿಯಲ್ಲಿ ಈ ಉಪನ್ಯಾಸಗಳ ವಿಮರ್ಶೆಯನ್ನು ಅಧ್ಯಕ್ಷರು ಮಾಡಿ, ಉತ್ತಮವಾಗಿ ಕಂಡುಬರುವ ಭಾಷಣವನ್ನು ಬರೆದಿರುವವರಿಗೆ ಮುಂದಿನ ವರ್ಷದ ಸಭೆಯಲ್ಲಿ "ಮೆಡಲ್" ಕೊಡಬೇಕೆಂದೂ, ಪ್ರಾಸಾದ ಭಾಷಣಗಳನ್ನು ಈ ವರ್ಷದ ಸಭಾ ರಿಪೋರ್ಟಿನಲ್ಲಿ ಮುದ್ರಿಸಬೇಕೆಂದೂ ತೀರ್ಮಾನಿಸಲ್ಪಟ್ಟಿದೆ.

G. M. MALLAPPA,
Chairman,
Working Committee.

ಶ್ರೀ ಫಲಾಹಾರಸ್ವಾಮಿ ಪ್ರಸೀದ.

ಚಿಕ್ಕಮಗಳೂರು ತಾಲ್ಲೂಕು ಜಾಗರದ ಹೋಬಳಿ ಶ್ರೀ ಫಲಾಹಾರಸ್ವಾಮಿಗಳ ಮಠದ ಪಟ್ಟಾಧಿಕಾರಕ್ಕೆ ವಟುವನ್ನು ಚುನಾವಣೆ ಮಾಡತಕ್ಕ ಬಗ್ಗೆ ಶ್ರೀಗುರು ನಿರ್ವಾಣಸ್ವಾಮಿಗಳವರ ಮಠದಲ್ಲಿ ತಾ|| ೧೫-೧-೧೯೨೧ನೆ ಶನಿವಾರ ಈ ಪ್ರಾಂತದ ಮಹನೀಯರು ಸಭೆ ಸೇರಿ ಪಟ್ಟಾಧಿಕಾರಕ್ಕೆ ಚಿಕ್ಕಮಗಳೂರು ತಾಲ್ಲೂಕು ಅಂಬಳೇ ಹೋಬಳಿ ಮುಗುಳುವಳ್ಳಿ ಮಠದ ವೇ|| ಮುಪ್ಪಿನಯ್ಯನವರ ಕುಮಾರ ಚಿ|| ಮರುಳುಸಿದ್ಧಯ್ಯನೆಂಬ ವಟುವನ್ನು ಚುನಾಯಿಸಿ ವಟುವು ಪ್ರಾಪ್ತವಯಸ್ಸಿಗೆ ಬರುವವರೆಗೆ ಶ್ರೀ ಮಠದ ಕಾರುಬಾರು ಮತ್ತು ವಟುವಿನ ವಿದ್ಯಾಭಿವೃದ್ಧಿ ವಗೈರೆ ನೋಡಿಕೊಳ್ಳತಕ್ಕ ಬಗ್ಗೆ ಮೆಂಬರುಗಳನ್ನು ಗೊತ್ತುಮಾಡಿ ತೀರ್ಮಾನಿಸಿದ್ದಂತೆ ತಾ|| ೨೮-೨-೨೧ನೆ ಸೋಮವಾರ ಗಾಳಿಪೂಜೆ ಶ್ರೀ ವೀರಭದ್ರದೇವರ ದೇವಾಲಯದಲ್ಲಿ ಪುನಃ ಸಭೆ ಸೇರಿ ಮೇಲ್ಕಂಡ ಮರುಳುಸಿದ್ಧಯ್ಯನೆಂಬ ವಟುವಿಗೆ ಬರುವ ಫಾಲ್ಗುಣ ಶುದ್ಧ ೭ ತಾ|| ೧೬-೩-೧೯೨೧ನೆ ಬುಧವಾರ ಬೆಳಗ್ಗೆ ೧೦ ಗಂಟೆಗೆ ಅಧಿಕಾರ ವಹಿಸಲು ಲಗ್ನ ನಿಶ್ಚಯಿಸಿದ ನಂತರ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಟು ಇಡುವುದು ಅತ್ಯಾವಶ್ಯಕವೆಂದೂ ಇದಕ್ಕಾಗಿ ಸುಮಾರು ಐದು ಸಾವಿರ ರೂಪಾಯಿಗಳು ಬೇಕಾಗಬಹುದೆಂದೂ ಸಭಾಧ್ಯಕ್ಷರು ಅಪ್ಪಣೆ ಕೊಡಿಸುತ್ತಾ ಇರುವಲ್ಲಿ ಈ ವಿದ್ಯಾಭ್ಯಾಸದ ಪೂರ್ಣ ಖರ್ಚನ್ನೂ ತಾವೊಬ್ಬರೇ ವಹಿಸಿಕೊಳ್ಳುತ್ತೇವೆಂದು ಮ|| ರಾ|| ಗೊಣಕಲ್ ಪಟೇಲ್ ಗೌರಮ್ಮನವರ ಪುತ್ರರು ಚನ್ನಬಸವೇಗೌಡರು ಉದಾರವಾಗಿ ವಾಗ್ದಾನ ಮಾಡಿದ್ದನ್ನು ಸರ್ವರೂ ಆನಂದದಿಂದ ಲಾಲಿಸಿ ಇವರನ್ನ ಅಭಿನಂದಿಸಿದರು. ಇಂಥ ಮಹನೀಯರನ್ನ ಎಷ್ಟು ಕೊಂಡಾಡಿದರೂ ಸ್ವಲ್ಪವೇ ಆಗಿರುತ್ತದೆ.

ಎಂ. ಎಚ್. ಸಿದ್ಧಲಿಂಗಯ್ಯ,

ಬಾಬಲೇಶ್ವರದ ವೀರಶೈವ ತರುಣಸಂಘ.

ತಾ|| ೨೭-೨-೨೧ನೆ ಇಸವಿ ದಿವಸ ರಾವ್ ಬಹದ್ದೂರ್ ಬಾಳಿಕುಂದರಿ ಸಾಹೇಬ ಡಿ|| ಡಿ. ಕಲೆಕ್ಟರ ವಿಜಾಪುರ ಇವರು ಸಂಘದವರ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಯವರೆಗೆ ಬಂದು ಸಂಘದ ಮತ್ತು ವಾಚನಾಲಯದ ಕಾಗದಪತ್ರಗಳನ್ನೂ ಮತ್ತು ವ್ಯವಸ್ಥೆಯನ್ನೂ ನೋಡಿ ಕೆಳಗೆ ಕಾಣಿಸಿದ ಪ್ರಕಾರ ತಮ್ಮ ಅಭಿಪ್ರಾಯವನ್ನು ಶೆರಾಬುಕ್ಕಿನಲ್ಲಿ ಬರೆದಿದ್ದಾರೆ.—

"ತಾ|| ೨೭-೨-೧೯೨೧ನೆ ಇಸವಿ ದಿವಸ ಶ್ರೀಗಳವರು ಹಾಗು ತರುಣ ಸಂಘದವರು ಅಪೇಕ್ಷೆ ಮಾಡಿದ ಪ್ರಕಾರ ನಾವು ಬಂದೆವು. ಆದರೆ ಶ್ರೀಗಳವರ ದರ್ಶನದಿಂದ ಬಹಳಸಂತೋಷವಾಯಿತು. ಈ ಸಂಘವು ಸ್ಥಾಪನವಾಗಿ ಸ್ವಲ್ಪದಿವಸಗಳಲ್ಲಿಯೇ ಈ ಸಂಘವು ಮಾಡಿದ ಕೆಲಸವು ಸಂತೋಷಕಾರಕವದೆ. ವ್ಯವಸ್ಥೆ ನೆಟ್ಟಗಿಟ್ಟಿರುತ್ತಾರೆ. ಸಂಘದ ಮೇಲೆ ಶ್ರೀಗಳವರ ಆಶೀರ್ವಾದ ನಜರಿನೊಳಗೆ ಪೂರಾ ಇರುವದರಿಂದ ಸಂಘದ ಊರ್ಜಿತದಶೆಯಾಗಿ ಅದರ ಹೇತು ಅವರಿಗೂ ಬೇರೆಯವರಿಗೂ ಸುಖಸಮಾಧಾನವುಂಟಾಗುವಂತೆ ಪೂರ್ಣ ಆಗಬೇಕೆಂತ ನಾವು ಪೂರಾ ಈಶ್ವರನಿಗೆ ಬೇಡಿಕೊಳ್ಳುವೆವು. ಈ ಸಂಘದ ಹೇತುವಿನಲ್ಲಿ ಕೆಳಗೆ ಬರೆದ ಹೇತು ಬರೆಯಬಹುದಾಗಿ ನನ್ನ ಅಭಿಪ್ರಾಯವಿದೆ ಅದು ಏನಂದರೆ:—ಈ ಸಂಘದ ಮೆಂಬರರು ಪೂರ್ಣ ರಾಜನಿಷ್ಠೆ ತಾಳಿ ಗುರುಹಿರಿಯರ ವಚನದಲ್ಲಿರುವದು. ಇದರಲ್ಲಿ ೫ನೆ ನಿಯಮವು ಸಂದಿಗ್ಧವಿರುವದು. ಅದು ತೆಗೆದುಹಾಕಬಹುದಾಗಿ ಕಂಡುಬರುತ್ತದೆ. ಈ ಸಂಘಕ್ಕೆ ಪೂರ್ಣ ಜಯವಿರಲಿ" ಸಾಹೇಬ್‌ಬಹದ್ದೂರರವರ ಅಭಿಪ್ರಾಯದ ಪ್ರಕಾರ ರಾಜನಿಷ್ಠೆ ತಾಳಿ ಗುರುಹಿರಿಯರ ವಚನದಲ್ಲಿರುವ ಬಗ್ಗೆ ನಿಯಮವನ್ನು ಸೇರಿಸಿಕೊಂಡಿರುತ್ತಾರೆ. ಮತ್ತು ೫ನೆ ನಿಯಮವನ್ನು ತೆಗೆದುಹಾಕಲು ಸಮ್ಮತಿಸಿರುತ್ತಾರೆ. ಸಾಹೇಬ್ ಬಹದ್ದೂರರವರು ಸಮಗ್ರವಾಗಿ ಒಂದು ತಾಸಿನವರೆಗೆ ಉಪದೇಶಿಸಿದರು. ಸಭೆಗೆ ಅಜಮಾಸ ೧೫೦ ಜನರು ಆಗಮಿಸಿದ್ದರು. ಈಶ್ವರನು ಸಾಹೇಬ್ ಬಹದ್ದೂರರವರಿಗೂ ಅವರ ಕುಟುಂಬದವರಿಗೂ ಆಯುರಾರೋಗ್ಯ ಸಂಪತ್ತನ್ನು ದಯಪಾಲಿಸಲೆಂದು ಈ ಸಂಘದವರು ಬೇಡಿಕೊಳ್ಳುತ್ತಾರೆ.

ತಮ್ಮ ವಿಧೇಯ
ವೀರಶೈವ ತರುಣ ಸಂಘ ವಾಚನಾಲಯದ ಪ್ರೆಸಿಡೆಂಟ್,
ವೀರಪ್ಪಾ ಸಿದ್ಧಲಿಂಗಪ್ಪಾ ಜಂಗಮಶೆಟ್ಟಿ.

ಸೊರಬದ ತಾಲ್ಲೂಕು ಜಡೆ.

ಇಲ್ಲಿನ ವಿರಕ್ತಮಠದಲ್ಲಿ ಪದ್ಧತಿ ಪ್ರಕಾರ ಗುರುಗಳ ರಥೋತ್ಸವ ಕಾರ್ಯಗಳು ಇದೇ ಮಾಘ ಶುದ್ಧ ೧೫ನೆ ಮಂಗಳವಾರದ ಲಾಗಾಯಿತು ಬಹುಳ ೪ ಶನಿವಾರದ ವರೆಗೂ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ಶ್ರೀಮನ್ನಿರಂಜನ ಆಲೂರು ವಿರಕ್ತಮಠದ ಸ್ವಾಮಿಗಳವರೂ ಮತ್ತು ಮಂತ್ರವಾಡಿ ಚರಮೂರ್ತಿಗಳವರೂ ರಥೋತ್ಸವಕ್ಕೆ ದಯಮಾಡಿಸಿದ್ದರು. ಅಲ್ಲದೆ ದೂರದೂರ ಪ್ರಾಂತಗಳಿಂದ ಅನೇಕ ಮಹನೀಯರು ಆಗಮಿಸಿದ್ದರು. ಶ್ರೀಮತ್ ಮಂತ್ರವಾಡಿ ಚರಮೂರ್ತಿಗಳವರಿಂದ ಅನಾಥ ವೀರಶೈವರುಗಳ ಮಾಹೇಶ್ವರ ದೀಕ್ಷಾಸಂಸ್ಕಾರವು ನೆರವೇರಿಸಲ್ಪಟ್ಟಿತು. ಮತ್ತು ಲಕ್ಷ್ಮಣಶಾಸ್ತ್ರಿಗಳು ಸಂಗಳಕರ ಅವರು ಜನಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳು ಉತ್ಪನ್ನವಾಗುವಂತೆ ೩ ದಿವಸಗಳು ರಮ್ಯವಾಗಿ ಶಿವಕೀರ್ತನ ಮಾಡಿದರು. ಗಾಯನವಿದ್ಯೆಯಲ್ಲಿ ಪಾಂಡಿತ್ಯವನ್ನು ಪಡೆದಿರುವ ಈ ಶಾಸ್ತ್ರಿಗಳವರು ಸರ್ವಮತದವರಿಗೂ ಇಷ್ಟವಾಗುವಂತೆ ಮತ್ತು ಬೋಧವಾಗುವಂತೆ ಧರ್ಮೋಪದೇಶ ಮಾಡಿ ಪುರಾಣಪ್ರಸಿದ್ಧವಾದ ಇತಿಹಾಸಗಳನ್ನು ಕೀರ್ತನರೂಪದಿಂದ ಜನಗಳಿಗೆ ತಿಳಿಸಿ ಹೇಳಿ ಜನಗಳಲ್ಲಿ ಶಿವಭಕ್ತಿಯು ನೆಲೆಗೊಳ್ಳುವಂತೆ ಮಾಡಿದ್ದರಿಂದ ನಮ್ಮ ಪ್ರಾಂತದ ಜನಗಳಿಗೆ ಅವರಿಂದ ಆದ ಮಹದುಪಕಾರವು ಚಿರಸ್ಮರಣೀಯವಾಗಿರುತ್ತದೆ. ಅಲ್ಲದೆ ಕಡೆಯ ದಿವಸ ಮಠದ ಮುಖ್ಯಾಧಿಕಾರಿಗಳಿಂದ ಕೃತಜ್ಞತಾಪೂರ್ವಕವಾಗಿ ಅರ್ಪಿಸಲ್ಪಟ್ಟ ೧೦೦ ರೂ. ಗಳ ಬಹುಮಾನವನ್ನು ಸಂತೋಷದಿಂದ ಸ್ವೀಕರಿಸಿ ಪ್ರತಿ ವರ್ಷವೂ ರಥೋತ್ಸವ ಕಾಲದಲ್ಲಿ ತಾವು ಇಲ್ಲಿಗೆ ಆಗಮಿಸಿ ಗುರುಸೇವಾರೂಪವಾಗಿ ಶಿವಕೀರ್ತನ ಮಾಡುತ್ತೇವೆಂದು ಶಾಸ್ತ್ರಿಗಳು ಸಂಕಲ್ಪ ಮಾಡಿದ್ದು ಇಲ್ಲಿನ ಸರ್ವ ಜನಗಳಿಗೂ ಅತ್ಯಾನಂದವನ್ನುಂಟುಮಾಡಿತು. ವೇ|| ಚಿಗಟೂರ ಸುರಗಿಮಠದ ಬಸವರಾಜಶಾಸ್ತ್ರಿಗಳು, ಮ|| ವೀರಪ್ಪಗೌಡರು ಪಟೇಲ ಜಡೆ, ಮ|| ಸಾಲಗಿ ಪಟೇಲ ವಿರೂಪಾಕ್ಷಪ್ಪಗೌಡರು, ಮ|| ಶಾನವಳ್ಳಿ ವೀರಪ್ಪಗೌಡರು ಮತ್ತು ಮ|| ಗೂಡಗಿ ಸೋಮಪ್ಪಗೌಡರು, ಪಟೇಲ ಚಿಕ್ಕಾಂತಿ ರುದ್ರಗೌಡರು, ಮ|| ಚಿಗಟೂರ ಮೇಲಿನಮನಿರುದ್ರಗೌಡರು ಮುಂತಾದ ಮಠದ ಮೆಂಬರುಗಳು ಶಿವಕೀರ್ತನದ ಸಂಬಂಧವಾಗಿಯೂ ರಥೋತ್ಸವದ ಸಂಬಂಧವಾಗಿಯೂ ಬಹಳ ಸಹಾಯ ಮಾಡಿ ರಥೋತ್ಸವ ಕೆಲಸಗಳಲ್ಲಿ ಬಹಳ ಮುತುವರ್ಜಿಯನ್ನು ವಹಿಸಿದ್ದರು. ವೇ|| ಪಾಠಶಾಲಾಧ್ಯಾಪಕ ಗಂಗಾಧರಶಾಸ್ತ್ರಿಗಳು ಕಡೆಯ ದಿವಸ ವೀರಶೈವ ಧರ್ಮಸಂಬಂಧವಾಗಿ ಶ್ರೇಷ್ಠವಾದ ಭಾಷಣ ಮಾಡಿದರು. ಮಠದ ಸರ್ವಾಧಿಕಾರಿಗಳಾದ ವೇ|| ಚನ್ನವೀರಯ್ಯನವರು ರಥೋತ್ಸವಕ್ಕೆ ಆಗಮಿಸಿದ್ದ ಜನಗಳ ಆತಿಥ್ಯ ವಿಷಯದಲ್ಲಿ ಯಾವ ನ್ಯೂನತೆಯೂ ಬಾರದಂತೆ ಯೋಗ್ಯವ್ಯವಸ್ಥೆ ಮಾಡಿ ಉತ್ಸವ ಕೆಲಸಗಳನ್ನು ಸಮರ್ಪಕವಾಗಿ ನೆರವೇರಿಸಿದರು. ರಥೋತ್ಸವ ಕೆಲಸಗಳಿಗೆ ಸಹಾಯಕರಾಗಿದ್ದ ಸರ್ವಜನರನ್ನು ಶ್ರೀ ಗುರುಸಿದ್ಧ ವೃಷಭೇಂದ್ರಸ್ವಾಮಿಗಳು ಸದಾ ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

ಪ್ರೇಕ್ಷಕ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ರಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದಿ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಆಫೀಸ್, ಮೈಸೂರ್.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0-12-0	,,	50-0-0
5	0-8-0	,,	100-0-0
6	0-12-0	,,	100-0-0
7	6-0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
4 ಕಂಪನಿ, ಚೌಕಂಬಾ ಕಾಶೀ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 15

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸಾಧನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿವೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೀತಾದಿ ಅನೇಕ ಪ್ರಶ್ನಗಳನ್ನೂ ವರ್ಧಾವರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೇರಿಕಾ ಖಂಡದಲ್ಲಿ ಬಹುಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

9 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ 3—0—0.

25

ವಜ್ರದ ಬೆಂಡೋಲೆ.



ಈ ಬೆಂಡೋಲೆಗಳನ್ನು ರೋಲ್ಡ್ ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೆಕಲ್ಲಿನ ಬೆಂಡೋಲೆ 3—0—0.
ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆ. ಶ್ರೀಮಂತರು ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 1—4—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
25 ಪಾರ್ಕ್‌ಟೌನ್ ಮದರಾಸ್.

ಪಾಕೆಟ ಡೈರಿ ಇನಾಂ.

ಈ ನಕ್ಷೆಯಲ್ಲಿ ಕಂಡ ಫೌಂಟೆನ್ ಪೇನಾವನ್ನು ತರಿಸಿಕೊಳ್ಳುವವರಿಗೆ ಸೊಗಸಾದ ಪಾಕೆಟ್ ಡೈರಿಯನ್ನು ಇನಾಮಾಗಿ ಕೊಡುವೆವು. ಈ ಪೇನಾವು ವಿಲಾಯತಿಯಲ್ಲಿ ತಯಾರಾದದ್ದು. ಒಂದಾವರ್ತಿ ಇಂಕಿಯನ್ನು ತುಂಬಿದರೆ ಸುಮಾರು 500 ಮಾತುಗಳನ್ನು ಬರೆಯುವುದು.

ಕ್ರಯ ಡೈರಿ ಸಹಿತ ಪೇನಾ 1ಕ್ಕೆ 1—8—0.

25

ಜರ್ಮನ್ ಬೆಳ್ಳಿಯ ಕ್ಯಾಲೆಂಡರ್.

ಈ ಕ್ಯಾಲಂಡರುಗಳು ಈಗಲೇ ಬಂದುವು. ಇವನ್ನು ಜರ್ಮನ್ ಬೆಳ್ಳಿಯಿಂದ ಮಾಡಿದೆ. ಇದೊಂದರಲ್ಲೇ 10 ವರುಷಗಳ ಕ್ಯಾಲಂಡರ್ ಇದೆ. ಇವನ್ನು ಗೋಡೆಗೆ ತಗಲಿಸಲೂ, ಮೇಜಿನ ಮೇಲೆ ಇಡಲೂ ಬಹು ಚೆನ್ನಾಗಿವೆ. ಇಂಗ್ಲಿಷ್ ನಮೂನೆಯವು ಬಣ್ಣವು ಎಂದಿಗೂ ಹೋಗದು.

ಕ್ರಯ ಕ್ಯಾಲಂಡರ್ 1ಕ್ಕೆ 1—8—0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
೮೯, ನಾರಾಯಣಮೊದಲಿಬೀದಿ, ಮದ್ರಾಸು.

ಫಲಶೋಧಕ ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 23

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶೂಲೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳೆಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಫ್ರೇಮ್, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ. 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
25 ಪಾರ್ಕ್‌ಟೌನ್ ಮದರಾಸು.

೧೯೨೧ನೆಯ ಇಸವಿ ಮಾರ್ಚಿ ತಾ|| ೧೩ರಿಂದ ೧೯೨೧ನೆಯ ಮಾರ್ಚಿ ತಾ|| ೧೯ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಫಾಲ್ಗುಣ ಶುದ್ಧ ಚೌತಿಯಿಂದ ಫಾಲ್ಗುಣ ಶುದ್ಧ ದಶಮಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನ ಮಾಸ
13	ಭಾನು	ಚೌತಿ	43-43	ಅಶ್ವಿ	22-21	1
14	ಸೋಮ	ಪಂಚ	41-1	ಭರ	21-33	2
15	[1] ಮಂಗಳ	ಷಷ್ಠಿ	37-12	ಕೃತ್ತಿ	20-18	3
16	ಬುಧ	ಸಪ್ತ	32-34	ರೋಹಿ	17-17	4
17	ಗುರು	ಅಷ್ಟ	27-15	ಮೃಗ	14-1	5
18	[2] ಶುಕ್ರ	ನವ	21-35	ಆರ್ದ್ರಾ	10-15	6
19	[3] ಶನಿ	ದಶ	15-37	ಪುನ	6-14	7

(1) ಮೇಲುಕೋಟೆಯಲ್ಲಿ ಕಲ್ಯಾಣೋತ್ಸವ. (೨) ನಂಜನಗೂಡಿನಲ್ಲಿ ಶ್ರೀಕಂಠಮುಡೀ ಉತ್ಸವ. (೩) ಮೇಲುಕೋಟೆ ವೈರಮುಡಿ ಉತ್ಸವ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಯೈಷಾ | ಭುವನಪ್ರಖ್ಯಾತವತಾರಾ ಪಕ್ಷ್ಯಜ್ಞ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಳಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀನಂಬಿತ್ರಿಕಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪ ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಮಾರ್ಚಿ ತಾರೀಖು ೨೦ ನೆಯ ಭಾನುವಾರ ಸಂಚಿಕೆ ೧೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾವ್ಯತ್ಯಾಸದಿಂದ ಬರತಕ್ಕುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
11 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರಂ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ.	೦—೧೨—೦
ಶಿವಪೂಜಾವಿಧಿ.	೦—೧೪—೦
ಚಾರುಶೀಲೆಚರಿತ್ರೆ	೦—೯—೦
ಚಂದ್ರಹಾಸ	೦—೮—೦

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೇರಿಕಾ ಖಂಡದಲ್ಲಿ ಬಹುಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

10 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಫ್ರೆಂಚ್ ರೋಮನಾಶಕ ಪೌಡರ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ ಈ ಪುಡಿಯನ್ನು ಒಂದೇ ಒಂದು ನಿಮಿಷ ಸವರಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚರ್ಮಕ್ಕೆ ಯಾವ ತೊಂದರೆ ಇಲ್ಲದೆ ಚೊಕ್ಕಟವಾಗಿ ಕೂದಲನ್ನು ತೆಗೆಯುವುದು. ಈ ಪುಡಿಯು ಫ್ರೆಂಚ್ ದೇಶದಲ್ಲಿ ತಯಾರು ಆಗಿರುವದರಿಂದ ಯೂರೋಪಿಯನ್ ಜನರು ಸಹ ಉಪಯೋಗಿಸುತ್ತಾರೆ. ಉಪಯೋಗಿಸುವ ಚೀಟಿಯನ್ನು ಚೂರ್ಣದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಡಬ್ಬಿ 1ಕ್ಕೆ 1—0—0

26

ಬೇತಿಂಗ್ ಬ್ರಷ್.

ಅನೇಕರು ಸ್ನಾನಮಾಡುವಾಗ್ಗೆ ಬೆವರು, ಕೊಳೆ ತೆಗೆಯಲಿಕ್ಕೆ ಕಲ್ಲು, ನಾರು ಮುಂತಾದುವುಗಳಿಂದ ಉಜ್ಜಿಕೊಳ್ಳುವರು. ಇದರಿಂದ ಅನೇಕವೇಳೆ ಘಾಯಗಳಾಗುವವು. ಮತ್ತು ಚೆನ್ನಾಗಿ ಉಜ್ಜಿಕೊಳ್ಳಲು ಸಹ ಆಗದು. ಆದರೆ ಈ ಬ್ರಷ್‌ಗಳು ವಿಲಾಯತಿಯಲ್ಲಿ ಕೆಂಪು ರಬ್ಬರಿನಿಂದ ತಯಾರಾಗಿ ಬಂದಿವೆ. ಇವುಗಳಲ್ಲಿ ಮೈಯನ್ನು ಯಾವ ತೊಂದರೆಯೂ ಇಲ್ಲದೆ ಉಜ್ಜಿಕೊಳ್ಳಬಹುದು. ಬೆವರು ಕೊಳೆ ಮುಂತಾದವನ್ನು ಬಹು ಚೆನ್ನಾಗಿ ತೆಗೆಯುವದು. ಒಂದು ತಿಂಗಳ ಮಕ್ಕಳಿಗೂ ಸಹ ಇದರಿಂದ ಉಜ್ಜಬಹುದು. ಕ್ರಯ 1ಕ್ಕೆ 1-8-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89 ನಾರಾಯಣಮೊದಲಿ ಬೀದಿ, ಮದರಾಸು.



ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ 3—0—0.

26

ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ಡ್ ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೆಕಲ್ಲಿನ ಬೆಂಡೋಲೆ 3—0—0.
ಕೆಂಪುಕಲ್ಲಿನವು ಜೊತೆ 4—0—0.



ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 1—4—0

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
26 ಪಾರ್ಕ್‌ಟೌನ್ ಮದರಾಸ್.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0-12-0	,	50-0-0
5	0-8-0	.	100-0-0
6	0-12-0	,,	100-0-0
7	6-0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
5 ಕಂಪನಿ, ಚೌಕಂಬಾ ಕಾಶೀ.

ಫಲಶೋಧಕ ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 24

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶೂಲೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳೆಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

BANGALORE DISTRICT.

Abstract Notification No. H.C. 195/19-20, dated the 21st February 1921.

It is hereby notified that in accordance with the instructions of Government laid down in their Order No. Fl. 1279-85 G. F. 180-12-28, dated the 18th August 1919, the right, title and interest in the landed properties, belonging to the late Mr. Dalvoy Devaraj Urs and situated in the Taluks of Bangalore, Magadi and Chennapatna and mortgaged to Government, will be sold by public auction commencing from the 4th April 1921, with the consent of the representatives of the mortgager by the Assistant Commissioners in charge of the Taluks on the dates and at the places mentioned in the detailed notification printed on pages 116, 117 and 118 of Part IV of the Mysore Gazette dated the 24th February 1921.

Further particulars may be ascertained from the Taluk Offices concerned.

M. A. NARAYANA IYENGAR,
Deputy Commissioner,
Bangalore District.

3-2

ಈಗತಾನೇ ಅಚ್ಚಾಗಿದೆ.

ಹಿಂದೆ ವೀರಶೈವಗ್ರಂಥಪ್ರಕಾಶಿಕಾ ಮಾಸಪತ್ರದಲ್ಲಿ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರದ ೩ ಪ್ರಕರಣಗಳು ಮಾತ್ರ ಅಚ್ಚಾಗಿ ಇನ್ನೆರಡು ಪ್ರಕರಣಗಳು ಉಳಿದಿದ್ದುವು. ಆ ೪-೫ ನೆ ಪ್ರಕರಣಗಳು ಈಗ ಟೀಕಾಸಮೇತ ಅಚ್ಚಾಗಿರುತ್ತವೆ. ಇವುಗಳಲ್ಲಿ ಈ ಚರಿತ್ರದ ಮುಖ್ಯಭಾಗಗಳು ವಿಶೇಷವಾಗಿವೆ. ೨ ಪ್ರಕರಣಗಳೂ ಸೇರಿ ಬೈಂಡಾಗಿರುವ ಪುಸ್ತಕದ ಬೆಲೆ ವಿ. ಪಿ. ಯಿಂದ ೨-೫-೦. ೫ ಪ್ರಕರಣಗಳೂಸೇರಿ ಬೈಂಡಾಗಿರುವ ೧ ಸಾವಿರ ಪುಟಗಳಿಗೆ ಮೇಲ್ಪಟ್ಟಿರುವ ಪೂರ್ಣ ಗ್ರಂಥದ ಬೆಲೆ ೫ ರೂ. ಅಂಚೆವೆಚ್ಚ ಬೇರೆ.

ಎ. ಆರ್. ಕರಿಬಸವಶಾಸ್ತ್ರಿಗಳು, ಅ|| ವಿದ್ವಾನ್,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಮಾರ್ಚಿ ತಾ|| ೨೦ನೆಯ ಭಾನುವಾರ.

ಮೈಸೂರು ನಗರಾರೋಗ್ಯ.

ಮೈಸೂರು ಪಟ್ಟಣವು ಮೈಸೂರು ಸಂಸ್ಥಾನಕ್ಕೇ ರಾಜಧಾನಿಯಾದುದರಿಂದ ಇದರ ಪ್ರಾಶಸ್ತ್ಯವು ಹೆಚ್ಚು. ಇಲ್ಲಿ ಶ್ರೀಮನ್ಮಹಾರಾಜರವರು ಸದಾ ವಾಸಮಾಡುವುದರಿಂದ ಇದರ ವೈಭವವೂ ಹೆಚ್ಚು. ಈ ಹೆಚ್ಚುಗೆಗೆ ತಕ್ಕಂತೆ ಇದನ್ನು ಸರ್ವವಿಧದಿಂದಲೂ ಸಂಸ್ಕರಿಸುವುದು ಅವಶ್ಯಕವೆಂಬುದನ್ನು ಸರ್ವರೂ ಒಪ್ಪಬೇಕಾದುದೇ. ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರು ಪಟ್ಟಣಗಳಂತೆ ಇದು ತಿಳಿಯಲ್ಪಡತಕ್ಕುದಲ್ಲ. ಅದುಕಾರಣವೇ ಇದರ ಆರೋಗ್ಯಾಭಿವೃದ್ಧಿಗಳಿಗಾಗಿ ಲಕ್ಷಾಂತರ ರೂ. ಗಳನ್ನು ಸಂಸ್ಥಾನದ ದ್ರವ್ಯದಿಂದ ಧಾರಾಳವಾಗಿ ಸುರಿಯುತ್ತಿದ್ದರೂ ಪ್ರಜೆಗಳು ಸುಮ್ಮನಿದ್ದಾರೆ. ಟ್ರಸ್ಟ್‌ಬೋರ್ಡು ಎಂಬುದು ಏರ್ಪಟ್ಟು ಅದರ ಆಡಳಿತದಿಂದ ಪುರಾಭಿವೃದ್ಧಿ ಕಾರ್ಯಗಳು ನಡೆಯುವುದಕ್ಕೆ ಏರ್ಪಾಟಾಗಿ ಅದರ ಮೂಲಕ ಇದುವರೆಗೆ ೫೫ ಲಕ್ಷ ರೂ. ಗಳಿಗೆ ಕಡಿಮೆಯಿಲ್ಲದಷ್ಟು ವ್ಯಯವಾಗಿ ಹೋಗಿದೆ. ಆದರೆ ತಾನೇ ಏನು? ಪಟ್ಟಣದ ಸ್ಥಿತಿಯು ಸಮರ್ಪಕವಾಗಿಲ್ಲ. ಮುಖ್ಯಗಳಾದ ಕೆಲಬೀದಿಗಳು ಅಲಂಕಾರಗೊಳಿಸಲ್ಪಟ್ಟು ಹೊರಗಣಿಂದ ಬಂದು ನೋಡುವವರಿಗೆ ರಮ್ಯವಾಗಿ ಕಾಣುವಂತೆ ಮಾಡಲ್ಪಟ್ಟಿವೆ. ವಟ್ಟೆಗಳಾಗಿದ್ದ ಮನೆಗಳನ್ನು ಅನೇಕವಾಗಿ ಒಡೆದುಬಿಟ್ಟರೇ ಹೊರತು ಮನೆ ಕಳೆದುಕೊಂಡವರಿಗೆಲ್ಲಾ ಪ್ರತಿಯಾದ ಮನೆಗಳು ಹುಟ್ಟುವುದಕ್ಕೆ ಅನುಕೂಲ್ಯವು ನಡೆದಿಲ್ಲ. ನೂತನಾಭಿವೃದ್ಧಿಯ ಭಾಗಗಳಲ್ಲಿ ಬಡಬಗ್ಗರಿಗೆ ತಕ್ಕಷ್ಟು ಮನೆಗಳು ಎದ್ದಿಲ್ಲ. ಸರಿಯಾದ ಪ್ರವೀಣತೆಯಿಂದ ದೀರ್ಘಾಲೋಚನೆ ಮಾಡದೆ ಬಚ್ಚಲುಕೆಲಸಗಳನ್ನು ನಡೆಯಿಸಿದುದರಿಂದ ಮೊದಲು ಕಟ್ಟಿದ್ದ ಬಚ್ಚಲುಗಳನ್ನೆಲ್ಲಾ ಹಾಳ್ಮಾಡಿ ಮತ್ತೊಂದು ಸಲ ಕಟ್ಟಿಸಿದುದರಿಂದ ವೃಥಾ ಧನವ್ಯಯಕ್ಕೆ ಆಸ್ಪದವಾಯಿತು. ಹೊಸದಾಗಿ ಕಟ್ಟಿದ ತರದ ಬಚ್ಚಲುಗಳು ಪಟ್ಟಣದ ಎಲ್ಲಾ ಭಾಗಗಳಲ್ಲೂ ಪೂರ್ಣವಾಗಿ ಹಾಕಲ್ಪಟ್ಟಿಲ್ಲ. ಹಾಕಲ್ಪಟ್ಟಿರುವ ಬಚ್ಚಲುಗಳೂ ಕೂಡ ಆಗಲೇ ಜೀರ್ಣೋದ್ಧಾರದ ಮಾರ್ಗವನ್ನು ನಿರೀಕ್ಷಿಸುತ್ತಿವೆ. ಗೊತ್ತುಗುರಿಯಿಲ್ಲದಷ್ಟು ಮಾರ್ಗಗಳು ಹೆಚ್ಚಿದುದರಿಂದ ಅವುಗಳಿಗೆ ಕಾಲಕಾಲಕ್ಕೆ ತಕ್ಕ ಸಂಸ್ಕಾರವಿಲ್ಲದೆ ಬಿಸಿಲಕಾಲದಲ್ಲೂ ಮಳೆಗಾಲದಲ್ಲೂ ಅವುಗಳ ಮೇಲೆ ತಿರುಗಾಡುವುದೇ ಕಷ್ಟವಾಗಿರುತ್ತದೆ. ಇದರಮೇಲೆ ಈಗಣ ಬಚ್ಚಲುಗಳ ರಚನೆಯ ಕ್ರಮದಿಂದ ಪ್ರತಿಯೊಂದು ಮನೆಯವರೂ ಆಗಾಗ್ಗೆ ಸ್ವತಃ ಬಚ್ಚಲು ಬಳಿಯುವ ಕೆಲಸವನ್ನು ಮಾಡಿಯೇ ತೀರಬೇಕಾಗುತ್ತದೆ. ಕಕ್ಕಸುಗಳನ್ನು ಪ್ರತಿದಿವಸವೂ ಚೊಕ್ಕಟ ಮಾಡಲ್ಪಡುವುದಕ್ಕೆ ತಕ್ಕ ಏರ್ಪಾಟು ಮ್ಯುನಿಸಿಪಾಲಿಟಿಯವರಿಂದ ಇದುವರೆಗೂ ಜರುಗಲಿಲ್ಲ. ಈ ಭಾಗಕ್ಕೆ ಎಲ್ಲಕ್ಕಿಂತಲೂ ಮೊದಲು ಗಮನ ಕೊಡಬೇಕಾಗಿದ್ದರೂ ವಿಶೇಷವಾದ ಔದಾಸೀನ್ಯವೇ ತೋರಿಸಲ್ಪಟ್ಟಿದೆ. ಅಲಂಕಾರರಚನೆಗೆ ಕೊಟ್ಟಷ್ಟು ಗಮನವೂ ಮಾಡಿದಷ್ಟು ವೆಚ್ಚವೂ ಆರೋಗ್ಯರಕ್ಷಣೆಗಾಗಿ ನಡೆದಿಲ್ಲ. ಆಕ್ವೈರ್ ಮಾಡಿಕೊಂಡ ಮನೆಗಳಲ್ಲಿ ಹಲವು ಅಡುಮಾನ ಮೊದಲಾದುವುಗಳಿಗೀಡಾಗಿದ್ದುದರಿಂದ ಅವುಗಳ ಯಜಮಾನರಾಗಿದ್ದ ಋಣಗ್ರಸ್ತರುಗಳು ಹಣವೂ ಮನೆಯೂ ಇಲ್ಲದೆ ಅತಂತ್ರಗತಿಯಾದರು. ಅವರಿಗೆ ಇದ್ದ ಮನೆಯೂ ಹೋಯಿತು; ಹೊಸಮನೆಯನ್ನು ಕಟ್ಟಿಸಲು ಚೈತನ್ಯವೂ ಇಲ್ಲ. ಇದರ ಮೇಲೆ ಅರಮನೆಯ ಸರ್ಕಾರಿಯ ಕಟ್ಟಡಗಳು ಬಿಡುವಿಲ್ಲದೆ ಒಂದರ ಹಿಂದೊಂದರಂತೆ ಹೊಸದಾಗಿ ಕಟ್ಟಲ್ಪಡುತ್ತಿರುವುದರಿಂದ ಮಣ್ಣು ಮಳಲು ಇಟ್ಟಿಗೆ ಮರಕೆಲಸಗಾರರ ಕೂಲಿ-ಇವುಗಳೆಲ್ಲಾ ಒಂದಕ್ಕೆ ನಾಲ್ಕಾಗಿ ಹೋಗಿರುವ ಕಾರಣ, ಬಡಬಗ್ಗರಿಗೆ ಹೊಸಮನೆ ಕಟ್ಟುವುದೇ ದುಸ್ತರವಾಗಿದೆ. ಹೀಗಾಗಿ ಉಳಿದಿರುವ ಮನೆಗಳಲ್ಲೇ ಬಡಬಗ್ಗರು ದಟ್ಟವಾಗಿ ಸೇರಿ ವಾಸಮಾಡುತ್ತ ಅನಾರೋಗ್ಯವನ್ನು ಹೆಚ್ಚಿಸಿಕೊಳುತ್ತಿದ್ದಾರೆ. ಮನೆಕಟ್ಟುವವರಿಗೆ ಟ್ರಸ್ಟ್‌ಬೋರ್ಡಿನಿಂದ ಕೊಡಲ್ಪಡುವ ಸಾಲವು ಕೂಡ ತಕ್ಕಷ್ಟು ಬಡ ಪ್ರಜೆಗಳಿಗೆ ದೊರೆಯುತ್ತಲಿಲ್ಲ. ಈ ಬೋರ್ಡಿನ ಸಿಬ್ಬಂದಿಯೇ ಬಹುಭಾಗದ ದ್ರವ್ಯವನ್ನು ನುಂಗಿಬಿಡುತ್ತಿದೆ. ವೆಚ್ಚವಾಗಿರುವ ೫೫ ಲಕ್ಷರೂ. ಗಳಲ್ಲಿ ಸಿಬ್ಬಂದಿಗಾಗಿ ಆಗಿರುವ ವೆಚ್ಚವೆಷ್ಟು? ಉಳಿದ ವ್ಯಯಗಳೆಷ್ಟು? ಎಂಬುದನ್ನು ಪ್ರತ್ಯೇಕಿಸಿದರೆ ಅದು ಗೊತ್ತಾದೀತು.

ಇದರ ಮೇಲೆ ಪುರಾಭಿವೃದ್ಧಿಯ ಮತ್ತು ಅಲಂಕಾರ ರಚನೆಯ ಕ್ರಮದಲ್ಲಿ ಬಡಬಗ್ಗರಿಗೆ ಶ್ರಮವು ಹೆಚ್ಚಾದುದೇ ಫಲವಾಗಿದೆ. ಏಕೆಂದರೆ ನಗರಮಧ್ಯದಲ್ಲಿ ಉದ್ಯಾನಾದ್ಯಲಂಕಾರಗಳಿಗೂ ದೊಡ್ಡದೊಡ್ಡ ನೂತನ ಮಾರ್ಗಗಳಿಗೂ ಅರಮನೆಯ ಕಟ್ಟಡಗಳಿಗೂ ಬಹು ಸ್ಥಲಗಳು ವಶಪಡಿಸಿಕೊಳ್ಳಲ್ಪಟ್ಟುವು. ಬಡಬಗ್ಗರು ಮನೆಗಳನ್ನು ಕಳೆದುಕೊಂಡು ಉಕ್ಕಡದಾಚೆಗೆ ಹೋಗಿ ವಾಸಮಾಡುವ ಅವಸ್ಥೆ ಪಡಬೇಕಾಯಿತು. ಮೋಟಾರುಗಳನ್ನೂ ಕುದುರೆಬಂಡಿಗಳನ್ನೂ ಇಟ್ಟುಕೊಂಡಿರುವವರಿಗೆ ಎಷ್ಟು ದೂರದಲ್ಲಿ ಮನೆಗಳಿದ್ದರೂ ಬಾಧಕವಿಲ್ಲ. ಅಂದಂದಿಗೆ ಕೂಲಿಮಾಡಿ ಜೀವಿಸಬೇಕಾದ ಬಡಬಗ್ಗರು ದೂರದಲ್ಲಿ ವಾಸಿಸುವುದು ಕಷ್ಟವಲ್ಲವೆ? ಮೈಸೂರುಪಟ್ಟಣಕ್ಕೆ ಟ್ರಾಂವೆಯೇರ್ಪಾಟೇ ಅಸಂಭವವೆಂದು ಗೊತ್ತಾಗುತ್ತಿರುವಾಗ ಊರಿನ ಮಧ್ಯದಲ್ಲಿ ಪಾಳುಗೆಡಹಿಕೊಂಡು, ದೂರದೂರವಾಗಿರುವ ಮೇಡುಗಳ ಮೇಲೆ ಬಡಬಗ್ಗರಿಗೆ ಮನೆಗಳನ್ನು ಕಟ್ಟಹೇಳುವುದು ಉಚಿತವೇ? ಇಷ್ಟೆಲ್ಲಾ ಆದರೂ ರಾಜಧಾನಿಯ ಆರೋಗ್ಯಭಾಗ್ಯವೇನಾದರೂ ಪೂರ್ವಕ್ಕಿಂತ ಸುಧಾರಿಸಿದೆಯೆ? ಇಂಥ ಟ್ರಸ್ಟ್‌ಬೋರ್ಡು ಏರ್ಪಾಟೂ ದ್ರವ್ಯಬಲಿಯೂ ನಡೆಯದಿರುವ ಪಟ್ಟಣಗಳಿಗಿಂತಲೂ ಇಲ್ಲಿಯ ಜನಾರೋಗ್ಯದಲ್ಲಿ ವೈಲಕ್ಷಣ್ಯವೇನಾದರೂ ಉಂಟಾಗಿದೆಯೆ? ಪ್ಲೇಗು, ಇನ್‌ಪ್ಲುಯಂಜಾ, ನ್ಯುಮೋನಿಯಾ ಮೊದಲಾದ ವ್ಯಾಧಿಗಳಿಗೆ ಸಂಸ್ಥಾನದ ಇತರ ಪಟ್ಟಣಗಳು ಬಾಗಿಲು ತೆರೆದುಕೊಂಡಿರುವಂತೆಯೇ ಈ ಪಟ್ಟಣದ ಅವಸ್ಥೆಯೂ ಆಗಿದೆ. ಈಗ ಪಟ್ಟಣದಲ್ಲಿ ಪ್ಲೇಗೂ ಇನ್‌ಪ್ಲುಯಂಜಾ ನ್ಯುಮೋನಿಯಾಗಳೂ ಬಹುಸಂಸಾರಗಳನ್ನು ಬಾಧೆಪಡಿಸಿಯೂ ಪಡಿಸುತ್ತಲೂ ಇವೆ. ಅನೇಕ ವಿದ್ಯಾರ್ಥಿಗಳು ಈಗಣ ಪರೀಕ್ಷಾಸಮಯದಲ್ಲಿ ಅಸ್ವಸ್ಥರಾಗಿ ಬಿದ್ದು ಚಿಂತನೆಗೆ ಅವಕಾಶವಿಲ್ಲದೆ ಕಣ್ಣೀರನ್ನು ಸುರಿಸುತ್ತಿದ್ದಾರೆ. ಮರಣಗಳ ಸಂಖ್ಯೆಯು ಕೆಲದಿನಗಳಲ್ಲಿ ೧೫-೨೦ ರ ವರೆಗೂ ಏರುತ್ತಲಿದೆ. ವಿದ್ಯುದ್ದೀಪದ ಕುಡಿಯುವ ನೀರನ್ನೊದಗಿಸುವಿಕೆಯ ಕೆಲಸಗಳೆರಡು ಮಾತ್ರ ಪಟ್ಟಣಿಗರಿಗೆ ಅನುಕೂಲಗಳಾಗಿರುತ್ತವೆಂದು ಹೇಳಬಹುದು. ಆದರೆ ಈ ಏರ್ಪಾಟುಗಳಿಗಾಗಿ ಟ್ರಸ್ಟ್‌ಬೋರ್ಡು ಗರ್ವಪಡಲು ಕಾರಣವೇನೂ ಇರುವುದಿಲ್ಲ.

ಇದುವರೆಗೆ ಟ್ರಸ್ಟ್‌ಬೋರ್ಡಿನ ಮೂಲಕವಾಗಿ ರಾಜಧಾನಿಗೆ ಮಾಡಿಸಿದ ವೆಚ್ಚಕ್ಕೆ ತಕ್ಕ ಪ್ರತಿಫಲವಾಗಿಲ್ಲವೆಂಬಂಶವು ಶ್ರೀಮನ್ಮಹಾರಾಜರಿಗೂ ಅವರ ಸರ್ಕಾರಕ್ಕೂ ಚೆನ್ನಾಗಿ ಮನವರಿಕೆಯಾಗಿದೆ. ಕಳೆದ ಪ್ರಜಾಪ್ರತಿನಿಧಿ ಸಭಾಧಿವೇಶನದಲ್ಲಿ ದಿವಾನರವರು ಮಾಡಿದ ಭಾಷಣದಲ್ಲಿ ಈ ಟ್ರಸ್ಟ್‌ಬೋರ್ಡು ಸಂಬಂಧವಾಗಿ ಅಪ್ಪಣೆಕೊಡಿಸಿರುವುದರಲ್ಲಿ—"ಇಷ್ಟು ಖರ್ಚಾದರೂ ರಾಜಧಾನಿಯ ಆರೋಗ್ಯಸ್ಥಿತಿಯು ನಾವು ಅಪೇಕ್ಷಿಸುವಂತೆ ಇದೆಯೆಂದು ಹೇಳಲಾಗುವುದಿಲ್ಲ. ಬಚ್ಚಲು ಮತ್ತು ಡ್ರೈನೇಜು ಕಾಮಗಾರಿಗಳು ಇನ್ನೂ ಪೂರ್ತಿಯಾಗಿಲ್ಲ. ಮನೆಗಳಲ್ಲಿನ ಬಚ್ಚಲುನೀರು ಸರ್ಕಾರಿ ಚರಂಡಿಗಳಿಗೆ ಬಂದು ಸೇರುವ ವಿಷಯಕ್ಕೆ ಸರಿಯಾದ ಗಮನ ಕೊಟ್ಟಿಲ್ಲ. ಮನೆಗಳನ್ನು ಆಕ್ವೈರ್ ಮಾಡಿದ್ದರಿಂದ ಮನೆಯಿಲ್ಲದ ಜನರಿಗೆಲ್ಲಾ ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಮಿತಿಮೀರಿ ಜನಗಳು ಸೇರುವುದನ್ನು ತಪ್ಪಿಸುವುದಕ್ಕಾಗಿ ಹೊಸಮನೆಗಳನ್ನು ಕಟ್ಟುವುದು ಜರೂರಾತಿಯಾಗಿದೆ" ಎಂದು ತಿಳಿಯಿಸಿರುತ್ತಾರೆ. ಆದರೆ ಪ್ರಭುತ್ವದವರು ಹೀಗೆ ನಡೆದುಹೋಗಿರುವುದಕ್ಕೆ ವಿಷಾದಪ್ರದರ್ಶನ ಮಾಡಿದುದು ಮಾತ್ರವೇ ಅಲ್ಲದೆ ಮುಂದೆ ನಡೆಯಿಸಬೇಕಾದ ಕ್ರಮವನ್ನು ಸೂಚಿಸಿದ್ದಾರೆ. ಹೇಗೆಂದರೆ—ಮುಂದೆ ನಡೆಯಬೇಕಾದ ಅಭಿವೃದ್ಧಿ ಕಾರ್ಯಗಳಲ್ಲಿ ಆದಾಯವನ್ನು ಕೊಡತಕ್ಕ ಭಾಗ ೧, ಆದಾಯವನ್ನು ಕೊಡದಿರತಕ್ಕ ಭಾಗ ೧. ಹೀಗೆ ಎರಡು ತೆರನನ್ನು ಮಾಡಿ, ಮೊದಲಭಾಗಕ್ಕೆ ಸಾಲವನ್ನು ಮಾಡಿ ಹಣವನ್ನು ಒದಗಿಸಬೇಕೆಂತಲೂ, ೨ನೆ ಭಾಗಕ್ಕೆ ಪ್ರತಿವರ್ಷದಲ್ಲೂ ಸರ್ಕಾರದಿಂದ ೪|| ಲಕ್ಷದಂತೆ ಸಹಾಯದ್ರವ್ಯವನ್ನು ಪಡೆದು ಮಾಡಿಸಬೇಕೆಂತಲೂ ದಿವಾನರು ಸೂಚನೆ ಕೊಟ್ಟಿದ್ದಾರೆ. ಇಲ್ಲಿ ಆದಾಯವನ್ನು ತೆರತಕ್ಕಭಾಗವೆಂದರೆ ನೂತನವಾಗಿ ಮನೆಗಳನ್ನುಕಟ್ಟಿಸಿ ಮಾರುವುದೋ ಅಥವಾ ಬಾಡಿಗೆಗೆ ಕೊಡುವುದೋ ಎಂದು ಅರ್ಥಮಾಡಬಹುದಾಗಿದೆ. ಈ ಪ್ರಯತ್ನವು ಎಷ್ಟುಮಟ್ಟಿಗೆ ಫಲಿಸುವುದೋ ನಾವು ಹೇಳಲಾರೆವು. ೪-೭ ವರ್ಷಗಳಿಂದ ಈ ಊರಲ್ಲಿ ಒಂದು ಬಿಲ್ಡಿಂಗ್ ಸೊಸೈಟಿ ಹುಟ್ಟಿ ಎಲ್ಲೋ ನರಳುತ್ತಬಿದ್ದಿದೆ. ಈ ವಿಷಯದಲ್ಲಿ ಮುಂದಾಗಿ ನಿಂತು ಕೆಲಸ ಮಾಡುವ ಉತ್ಸಾಹವು ಧನಿಕರಲ್ಲೂ ವಿದ್ಯಾವಂತರಲ್ಲೂ ಕಾಣಬಂದಿಲ್ಲ. ಟ್ರಸ್ಟ್‌ಬೋರ್ಡೇ ಸಾಲಮಾಡಿ ಕೆಲಸಮಾಡುವುದಾದರೆ ಆ ಹಣದಲ್ಲಿ ವಿಶೇಷ ಭಾಗವು ಸಿಬ್ಬಂದಿಗೂ, ಕಂಟ್ರಾಕ್ಟರುಗಳಿಗೂ ಸಂದುಹೋಗುವುದೇ ಖಂಡಿತ. ಟ್ರಸ್ಟ್‌ಬೋರ್ಡಿನವರು ಕಂಟ್ರಾಕ್ಟರುಗಳ ಮೂಲಕ ಕಟ್ಟಿಸುವ ಮನೆಗಳ ಬೆಲೆಯು ಹೆಚ್ಚು. ಕಟ್ಟಡಗಳು ದೃಢವಾಗಿರುವುದಿಲ್ಲವೆಂಬುದು ಪ್ರಜೆಗಳಿಗೆ ಅನುಭವಸಿದ್ಧವಾಗಿದೆ. ಅದುಕಾರಣ ಸಾಲಮಾಡಿ ಟ್ರಸ್ಟ್‌ಬೋರ್ಡಿನವರು ಆ ಕೆಲಸವನ್ನು ನಡೆಯಿಸಿದರೆ ಅಷ್ಟೇನೂ ಫಲವಾಗಲಾರದು. ಒಂದುವೇಳೆ ಅವರು ಗೌರ್ನಮೆಂಟಿನಿಂದಲೋ ಅಥವಾ ಪ್ರಜೆಗಳಿಂದಲೋ ಸಾಲಮಾಡಿ, ಆ ಹಣವನ್ನು ಮನೆಕಟ್ಟುವವರಿಗೇ ಆ ಕಟ್ಟಡಗಳ ಆಧಾರದ ಮೇಲೆ ಕಾಲಕಾಲಕ್ಕೆ ತಡೆಯಿಲ್ಲದೆ ಸಾಲವನ್ನು ಸುಲಭವಾದ ಬಡ್ಡಿಯಲ್ಲಿ ಕೊಡುವುದೂ, ಸರ್ಕಾರದವರೂ ಅರಮನೆಯವರೂ ತಮ್ಮ ಹೊಸಕಟ್ಟಡಗಳ ನಿರ್ಮಾಣವನ್ನು ಹತ್ತಾರು ವರ್ಷಗಳಕಾಲ ನಿಲ್ಲಿಸಿಬಿಟ್ಟು ಕಟ್ಟಡದ ಸಾಮಗ್ರಿಗಳು ಅಗ್ಗವಾಗುವುದಕ್ಕೆ ಅವಕಾಶ ಕೊಡುವುದೂ ಸಹ ನಡೆದರೆ, ಬಡಬಗ್ಗರಾದಿಯಾಗಿ ಅನೇಕ ಪ್ರಜೆಗಳು ಹೊಸಮನೆಗಳನ್ನು ಆರೋಗ್ಯವಿಧಾನಕ್ಕೆ ಅನುಗುಣವಾಗಿ ಕಟ್ಟಿಕೊಂಡು ಬಾಳ್ವೆಯನ್ನು ಮಾಡಬಹುದು. ಪುರಾಲಂಕಾರಗಳನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡಿರುವುದನ್ನು ಬಿಟ್ಟು ಆರೋಗ್ಯರಕ್ಷಣದೇರ್ಪಾಟುಗಳನ್ನು ಸಮಗ್ರಗೊಳಿಸುವುದನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಳ್ಳಬೇಕೆಂದು ಸರ್ಕಾರದವರು ನಿಶ್ಚೈಸಿ, ಅದರಂತೆ ಟ್ರಸ್ಟ್‌ಬೋರ್ಡಿಗೂ ಸೂಚನೆ ಕೊಟ್ಟು ಕೆಲಸಮಾಡಿದರೆ ಮುಂದಾಗುವ ವೆಚ್ಚವಾದರೂ ಸಾರ್ಥಕವಾದೀತೆಂದೂ ನಗರದ ಆರೋಗ್ಯವರ್ಧನಕ್ಕೆ ಸಾಧಕವಾದೀತೆಂದೂ ತೋರುತ್ತದೆ.

ಕಾರಂಜಿಕೆರೆ ಕೆಳಗಣ ಆಂಜನೇಯ ದೇವಾಲಯ.

ರಾಜಧಾನಿಯ ಕಾರಂಜಿಯಕೆರೆ ಕೆಳಗಣ ತೋಟಗಳು ನೂರಾರು ವರ್ಷಗಳಿಂದ ಪ್ರಜೆಗಳಿಗೆ ಸೇರಿದ್ದುವು. ಇವುಗಳಲ್ಲಿ ಒಂದರಲ್ಲಿ ಒಂದು ಚಿಕ್ಕ ಆಂಜನೇಯ ದೇವಾಲಯವಿದ್ದಿತು. ಆ ತೋಟಗಳೆಲ್ಲಾ ಅರೂಪಸ್ಥಿತಿಗೆ ಬಂದು ಆ ಪ್ರಾಣದೇವರೂ ಕೂಡ ಬಹುಕಾಲ ಪೂಜಾ ಪುನಸ್ಕಾರಗಳಿಲ್ಲದೆ ತಪಸ್ಸುಮಾಡುತ್ತಿದ್ದಿತು. ಆ ತಪಃಫಲವೋ ಎಂಬಂತೆ ಆ ತೋಟಗಳೆಲ್ಲಾ ಈಗ ಅರಮನೆಗೆ ಸೇರಿಹೋದುವು. ದುರ್ಗಮವಾಗಿದ್ದ ಆ ಭಾಗಗಳೆಲ್ಲಾ ಈಗ ವಿಹಾರಯೋಗ್ಯಗಳಾದ ಉಪವನವಾಗಿರುವುವು. ದೈವಭಕ್ತಿತತ್ಪರರಾದ ಶ್ರೀಮನ್ಮಹಾರಾಜರ ಕಟಾಕ್ಷವು ಈ ದೇವಾಲಯದ ಕಡೆಗೆ ಪ್ರಸರಿಸಿದುದರಿಂದಲೂ, ಬಾಡಿಗಾರ್ಡ್ ಕಮ್ಯಾಂಡೆಂಟ್ ಮ|| ಗೋಪಾಲರಾಯರ ಅಭಿಮಾನಾತಿಶಯದಿಂದಲೂ ಈ ದೇವಾಲಯವು ಈಗ ಅತಿ ಭವ್ಯವಾಗಿ ವಿಸ್ತರಿಸಿ ಕಟ್ಟಲ್ಪಟ್ಟು, ಏರಿಯಿಂದ ದೇವಾಲಯಕ್ಕೆ ಇಳಿದು ಹೋಗುವುದಕ್ಕೂ, ಮೋಟಾರು ಮೊದಲಾದುವುಗಳು ಸಂಚರಿಸುವುದಕ್ಕೂ ಅನುಕೂಲವಾದ ಹಂತಗಳೂ ಮಾರ್ಗಗಳೂ ರಚಿಸಲ್ಪಟ್ಟು ವಿದ್ಯುದ್ದೀಪಾವಳಿಯಿಂದ ದೇವಾಲಯವು ರಾಜಿಸುವಂತೆ ಮಾಡಲ್ಪಟ್ಟು, ನಿತ್ಯಾರಾಧನೆಯು ಸಮರ್ಪಕವಾಗಿ ನಡೆಯುವಂತಾಗಿರುವುದು. ಬಾಡಿಗಾರ್ಡ್ ಸ್ವಾರರ ಮನೆಗಳೆಲ್ಲಾ ಇದಕ್ಕೆ ಸಮೀಪದಲ್ಲೇ ಇರುವುವು. ಅವರೆಲ್ಲಾ ಸೇರಿ ಇಲ್ಲಿ ಸಪ್ತಾಹವನ್ನು ನಡೆಯಿಸಿದರು. ವಿಶೇಷ ದಿನಗಳಲ್ಲಿ ಇಲ್ಲಿ ಹರಿಕಥಾ ಭಜನಾದಿ ಸತ್ಕಾಲಕ್ಷೇಪವೂ ಅನ್ನ ಸಂತರ್ಪಣೆಯೂ ನಡೆಯುತ್ತಿರುವುವು. ದೇವಾಲಯಕ್ಕೆ ಇಂಥ ಮಹಾದಶೆಯು ಬಂದಿರುವಲ್ಲಿ ಅಕಸ್ಮಾತ್ತಾಗಿ ಕಳೆದ ತಾ|| ೨೭ರ ರಾತ್ರಿ ಒಂದು ಕಳವು ಅಲ್ಲಿ ನಡೆದಿತು. ದೇವರಿಗೆ ಧರಿಸುವ ಸಣ್ಣ ಪುಟ್ಟ ಸ್ವರ್ಣರಜತಾದಿ ಆಭರಣಗಳೂ, ಗೋಲಕವೂ, ಅಲ್ಯೂಮಿನಿಯಂ ಪೆಟ್ಟಿಗೆ ಮೊದಲಾದ ಅಲ್ಲಿದ್ದ ಸಾಮಗ್ರಿಗಳೆಲ್ಲಾ (ಬಹುಶಃ ೧೭೦ ರೂ. ಬಾಳತಕ್ಕುವು) ಕಳ್ಳರಿಂದ ಅಪಹರಿಸಲ್ಪಟ್ಟುವು. ಆ ಸಮಯದಲ್ಲಿ ಶ್ರೀಮನ್ ಮಹಾರಾಜರ ಸ್ವಾರಿಯು ರಾಜಧಾನಿಯಲ್ಲಿರಲಿಲ್ಲ. ಬೆಂಗಳೂರಿಗೆ ದಯಮಾಡಿಸಿದ್ದಿತು. ಮರುದಿನ ಅವರಿಗೂ ಸುದ್ದಿಯು ಹೋಯಿತು. ಬಾಡಿಗಾರ್ಡ್ ಲೈನಿಗೆ ಸಮೀಪದಲ್ಲಿ ರಾತ್ರಿಯೆಲ್ಲಾ ಅವಿಚ್ಛಿನ್ನವಾಗಿ ವಿದ್ಯುದ್ದೀಪವು ಉರಿಯುತ್ತಿರುವ ದೇವಾಲಯದಲ್ಲಿ ಇಂಥ ಕಳವು ನಡದುದು ಮ|| ಗೋಪಾಲರಾಯರೇ ಮೊದಲಾದ ಅಭಿಮಾನಿ ಭಕ್ತ ಜನರಿಗೂ ಶ್ರೀಮನ್ಮಹಾರಾಜರವರಿಗೂ ಕೂಡ ಆಶ್ಚರ್ಯವ್ಯಾಕುಲತೆಗಳನ್ನು ವಿಶೇಷವಾಗಿಯೇ ಉಂಟುಮಾಡಿತೆಂಬುದಕ್ಕೆ ಸಂಶಯವಿಲ್ಲ. ಆದರೆ ರಾಜಧಾನಿಯ ಎ. ಡಿವಿಜನ್ ಪೊಲೀಸುದ್ಯೋಗಿಗಳು ಇದರ ಸಂದರ್ಭದಲ್ಲಿ ಮಾಡಿದ ಸಾಹಸವು ಸಾರ್ಥಕವಾಗಿ ಕಳವಾಗಿದ್ದ ಅನೇಕ ಸಾಮಗ್ರಿಗಳೊಡನೆ ಚೋರರು ಸಿಕ್ಕಿಬಿದ್ದು ಇಷ್ಟರಲ್ಲೇ ವಿಚಾರಣೆಗೆ ಗುರಿಮಾಡಲ್ಪಡುವುದರಲ್ಲಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ. ೪ ಮಂದಿ ತುರುಕರ ಯುವಕರು (ಇವರಲ್ಲಿ ಒಬ್ಬಿಬ್ಬರು ಕಾರಾಗೃಹವಾಸ ಶಿಕ್ಷೆಯನ್ನು ಅನುಭವಿಸಿದವರು) ಸೇರಿ, ಈ ಕಳವನ್ನು ನಡೆಯಿಸಿದ್ದರು. ಇದೇ ಕಳ್ಳರು ಈ ಊರಿನಲ್ಲೂ ಹೊರಗೂ ಹೀಗೆಯೇ ನಡೆಯಿಸಿದ್ದ ಇನ್ನು ಕೆಲ ಕಳವುಗಳೂ ಈ ಸಂದರ್ಭದಲ್ಲೇ ಪತ್ತೆಯಾಗಲವಕಾಶವಾಯಿತು. ಹಿಂದೂ ದೇವಾಲಯಗಳಿಗೆ ಯಾವ ಹಿಂದೂ ಕಳ್ಳನೂ ನುಗ್ಗಿ ದೈವಸ್ವತ್ತನ್ನು ಅಪಹರಿಸಲು ಧೈರ್ಯಪಡಲಾರನು. ಪರಧರ್ಮೀಯರಾದುದರಿಂದಲೇ ಈ ಹುಡುಗರು ದೇವಾಲಯಗಳಿಗೆ ನುಗ್ಗಿ ಭ್ರಷ್ಟಗೊಳಿಸುವ ಮಹಾಪಾಪಾಚರಣೆಗೆ ಮನಸ್ಸುಮಾಡಿದರು. ವಿಚಾರಣೆಯಿಂದ ತಕ್ಕ ಶಿಕ್ಷೆಯಾಗಿ ಇತಃಪರಃ ಇಂಥ ಪ್ರವರ್ತನೆಯಲ್ಲಿ ದುಷ್ಟರಿಗೆ ಭೀತಿಯುಂಟಾಗುವಂತಾದೀತೆಂದು ನಿರೀಕ್ಷಿಸುತ್ತೇವೆ.

ಸುಧಾರಿಸಿದ ತುರ್ಕಿ ಸಂಧಿ.

ತುರ್ಕಿಯ ಸಂಧಿ ಸುಧಾರಣೆಯನ್ನು ಮಾಡಿ ಮಿತ್ರಮಂಡಲಿಯವರು ಈಗ ಕೊಟ್ಟಿರುವ ಪತ್ರವನ್ನು ಹಿಂದೂಸ್ಥಾನ ಸರ್ಕಾರದವರು ಪ್ರಕಟಿಸಿದ್ದಾರೆ. ಇದಕ್ಕೆ ತುರ್ಕಿ ಪ್ರಭುತ್ವದವರು ಒಪ್ಪಿಕೊಳ್ಳುವರೆಂಬ ನಂಬುಗೆಯನ್ನ ಮಿತ್ರಮಂಡಲಿಯವರಿಗೆ ತುರ್ಕಿಯವರು ಉಂಟುಮಾಡಿದರೆ ನಾನಾದೇಶ ಸಂಘದಲ್ಲಿ ತುರ್ಕಿಯವರನ್ನು ಸೇರಿಸಿಕೊಳ್ಳುವರು ಕೆಲ ಸಂದರ್ಭಗಳಲ್ಲಿ ಕಾನ್‌ಸ್ಟಾಂಟಿನೋಪಲನ್ನು ಬಿಟ್ಟುಹೋಗಬೇಕಾದರೂ ಹೋಗುವರು ಸ್ಟ್ರೈಯಿಟ್ಸ್ ಸೆಟಲ್ಮೆಂಟ್ ಸಂಘಕ್ಕೆ ತುರ್ಕಿಯವರಿಗೆ ಅಧ್ಯಕ್ಷತೆಯನ್ನೂ ೨ ಓಟುಗಳನ್ನೂ ಕೊಡುವರು. ಸಂಸ್ಕರಣ ಸಂಘದಲ್ಲೂ ತುರ್ಕಿಯವರನ್ನು ಸೇರಿಸಿಕೊಳ್ಳುವರು. ತುರ್ಕಿಯ ಪ್ರತ್ಯೇಕ ಸೈನ್ಯವನ್ನು ೩೦ ಸಾವಿರಕ್ಕೂ ಪೋಲೀಸ್ ಸೈನ್ಯವನ್ನು ೪೫ ಸಾವಿರಕ್ಕೂ ಹೆಚ್ಚಿಸಿಕೊಳ್ಳಲಿಕ್ಕೆ ಒಪ್ಪುವರು. ಸೇನಾವಿಭಜನೆ ಮತ್ತು ಉದ್ಯೋಗಿಗಳ ನಿಯಮನ ಮೊದಲಾದುವುಗಳನ್ನೆಲ್ಲಾ ತುರ್ಕಿಯವರೊಡನೆ ಆಲೋಚಿಸಿಯೇ ಮಾಡುವರು. ಮಿತ್ರಮಂಡಲೀ ಸೈನ್ಯಗಳು ಗಾಲಿಪೋಲಿ ಕಾಲ್ವೆಯಲ್ಲಿ ಮಾತ್ರವೇ ಇರುವುವು. ಕಾನ್‌ಸ್ಟಾಂಟಿನೋಪಲ್ ಇಸ್ಮಿಲ್ ಪೆನಿನ್ಸುಲಾದಲ್ಲಿರುವ ಮಿತ್ರಮಂಡಲೀ ಸೈನ್ಯಗಳೆಲ್ಲಾ ತೆಗೆದುಹಾಕಲ್ಪಡುವುವು. ಮರ್ಮರಾ ತೀರದಲ್ಲಿ ರೊಡೊಸ್ಟೋ ವರೆಗೂ ಬಾಸ್ಪರಸ್ಸಿನಲ್ಲಿ ಎರಡು ದಡಗಳಲ್ಲೂ ಡಾರ್ಡನೆಲ್ಸ್ ಜಲಸಂಧಿಗೆ ಆಸ್ಯಾಖಂಡದ ಕಡೆಯಿಂದ ಕೆಂಚಿಗಾವರೆಗೂ, ಈಜಿಯನ್ ಮರ್ಮರಾ ಸಮುದ್ರಗಳಲ್ಲಿ ಡಾರ್ಡನೆಲ್ಸಿನಲ್ಲಿರುವ ದ್ವೀಪಗಳಲ್ಲೂ ಮಾತ್ರವೇ ಮಿತ್ರಮಂಡಲೀ ಸೈನ್ಯಗಳು ಇಡಲ್ಪಡುವುವು. ತುರ್ಕಿಯವರು ಕಾನ್‌ಸ್ಟಾಂಟಿನೋಪಲಿನಲ್ಲಿ ತಮ್ಮ ಸೈನ್ಯಗಳನ್ನಿಟ್ಟುಕೊಳ್ಳಬಹುದು. ಆಸ್ಯಾ ಯೂರೋಪುಖಂಡಗಳ ಮಧ್ಯದಲ್ಲಿ ತುರ್ಕಿಯವರು ಸಂಚರಿಸಿಕೊಳ್ಳಬಹುದು. ನೌಕಾದಳಕ್ಕೂ ತಕ್ಕ ಸೌಕರ್ಯವು ಮಾಡಿಕೊಡಲ್ಪಡುವುದು. ತುರ್ಕಿಯವರು ತಮ್ಮ ಅಧಿಕಾರಿಗಳನ್ನು ಇತರ ದೇಶಗಳಿಗೆ ಕಳುಹಿಸಿಕೊಡಕೂಡದೆಂಬ ನಿರ್ಬಂಧವು ತೆಗೆದುಹಾಕಲ್ಪಡುವುದು. ಆರ್ಥಿಕ ವಿಷಯದಲ್ಲೂ ಸೌಕರ್ಯವು ಕಲ್ಪಿಸಿಕೊಡಲ್ಪಡುವುದು. ಆರ್ಥಿಕಸಂಘದಲ್ಲಿ ತುರ್ಕಿ ಪ್ರತಿನಿಧಿಗೆ ಓಟನ್ನು ಕೊಡುವ ಅಧಿಕಾರವು ಕೊಡಲ್ಪಡುವುದು. ವಿದೇಶೀಯರ ಅಂಚೆಯ ಕಾರ್ಯಾಲಯವು ಮುಚ್ಚಲ್ಪಡುವುದು. ಅರ್ಮೀನಿಯ ಸ್ಥಲಗಳು ತುರ್ಕಿಯವರ ಅಧಿಕಾರಕ್ಕೆ ಒಪ್ಪಿಸಲ್ಪಡುವುವು. ಆದರೆ ಸ್ಮರ್ನಾದಲ್ಲಿ ಗ್ರೀಕರ ಸೈನ್ಯವು ಇಡಲ್ಪಡುವುದು. ಉಳಿದ ಸ್ಥಳಗಳಲ್ಲಿ ಮಿತ್ರಮಂಡಲಿಯವರ ಪೊಲೀಸು ದಳವು ಇಡಲ್ಪಡುವುದು. ನಾನಾ ದೇಶಸಂಘದವರು ಒಬ್ಬ ಕ್ರೈಸ್ತನನ್ನು ಅವುಗಳ ಮೇಲೆ ಗೌರ್ನರನ್ನಾಗಿ ನಿಯಮಿಸುವರು. ಅವನ ಸಹಾಯಕ್ಕೆ ೧ ಶಾಸನಸಭೆಯೂ ೧ ಕಾರ್ಯನಿರ್ವಾಹಕ ಸಭೆಯೂ ಇರುವುವು. ೫ ವರ್ಷಗಳವರೆಗೆ ಆತನು ಅಲ್ಲಿಯ ಆದಾಯವನ್ನು ಅನುಸರಿಸಿ ಕೊಡಬೇಕಾದ ದ್ರವ್ಯವನ್ನು ತುರ್ಕಿಗೆ ಕೊಡುವನು. ಆ ಬಳಿಕ ಈ ಏರ್ಪಾಟು ಬದಲಾಯಿಸಲ್ಪಡಬಹುದು.

ಒಳದೇಶದ ವೃತ್ತಾಂತಗಳು.

೧ ರೂಪಾಯಿ ಇದ್ದ ಅರ್ಥಸಾಧಕ ಪತ್ರಿಕೆಯ ವರ್ಗಣಿಯನ್ನು ೧|| ರೂ. ಗೆ ಹೆಚ್ಚಿಸಲು ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾರೆ.

ಚೀಫ್ ಇಂಜನಿಯರಾದ ರಾಜಸಭಾಭೂಷಣ ರಾವ್‌ಬಹದ್ದೂರ್ ಕೆ. ಕೃಷ್ಣಯ್ಯಂಗಾರರವರು ೧೮ ದಿನಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟು ಅನಂತರ ಕೆಲಸದಿಂದ ನಿವೃತ್ತರಾಗಲು ಅಪ್ಪಣೆ ಕೊಡಲ್ಪಟ್ಟಿರುವರು.

ಬಾಣಾವಾರದ ಬಳಿಯಲ್ಲಿ ಒಂದು ಚಿರತೆ ಸ್ವೇಚ್ಛೆಯಾಗಿ ಸಂಚರಿಸುತ್ತಿರುವುದಂತೆ. ಇದರ ಕುತ್ತಿಗೆಯಲ್ಲಿ ಚರ್ಮದ ಪಟ್ಟಿಯಿರುವುದರಿಂದ ಯಾವುದೋ ಸರ್ಕಸ್ ಕಂಪೆನಿಯಿಂದ ಇದು ತಪ್ಪಿಸಿಕೊಂಡುಬಂದಿರಬೇಕೆಂದು ಊಹಿಸಲ್ಪಟ್ಟಿದೆ.

ತುಮಕೂರು ಡೆಪ್ಯುಟಿಕಮಿಷನರ ಅಸಿಸ್ಟೆಂಟರಾದ ಮ|| ಲಕ್ಷ್ಮಣ ಶಾಸ್ತ್ರಿಯವರು ಈ ತಾ|| ೧೯ ರಲ್ಲಿ ಉದ್ಯೋಗದಿಂದ ನಿವೃತ್ತರಾಗಲು ಅಪ್ಪಣೆಕೊಡಲ್ಪಟ್ಟು ಅವರ ಉದ್ಯೋಗಕ್ಕೆ ಗೌರ್ನಮೆಂಟ್ ಅ|| ಸೆಕ್ರೆಟರಿಯವರಾದ ಮ|| ಬಿ. ಟಿ. ಕೇಶವಯ್ಯಂಗಾರರು ನಿಯಮಿಸಲ್ಪಟ್ಟಿರುವರು.

ಸಂಸ್ಥಾನದ ಕೈಗಾರಿಕೆಯ ಶಾಖೆಯ ಡೈರೆಕ್ಟರಾಗಿರುವ ಮ|| ಎ. ರಂಗಸ್ವಾಮಿ ಅಯ್ಯಂಗಾರರು ಉದ್ಯೋಗದಿಂದ ನಿವೃತ್ತರಾಗುವುದರಲ್ಲಿರುತ್ತಾರೆಂತಲೂ, ಇಷ್ಟರಲ್ಲೇ ಮುಂದಾಗಿ ಕೆಲ ಕಾಲ ರಜಾ ಪಡೆದುಕೊಳ್ಳುವರೆಂತಲೂ ಸಮಾಚಾರವಿರುವುದಾಗಿ ಅರ್ಥಸಾಧಕ ಪತ್ರಿಕೆಯು ಹೇಳುತ್ತದೆ.

ಹಿರೇಕುರುಹಿನವರ (ಬಳೇ ಮಗ್ಗ) ಎರಡನೇ ಮಹಾಸಭೆಯು ಬರುವ ಏಪ್ರಿಲ್ ತಿಂಗಳು ೨೪-೨೫-೨೬ರಲ್ಲಿ ಬೆಂಗಳೂರಿನಲ್ಲಿ ನಡೆಯುತ್ತದೆಂದೂ, ಪರಸ್ಥಳದಿಂದ ಮಹಾಸಭೆಗೆ ಬರತಕ್ಕ ಸ್ವಮತಸ್ಥರಿಗೆ ಊಟ ಉಪಚಾರಗಳಿಗೆಲ್ಲಾ ಏರ್ಪಾಟು ಮಾಡಲ್ಪಟ್ಟಿರುವುದೆಂದೂ ಮ|| ಎಚ್. ಆರ್. ತಿರುಮಲಶೆಟ್ಟರು ತಿಳಿಸಿರುತ್ತಾರೆ.

ತಿಪಟೂರಿನ ಶ್ರೀಮಂತ ದೇಶಮುದ್ರ ಮಲ್ಲಪ್ಪನವರು ಇದೇ ತಿಂಗಳು ತಾ|| ೧೬ ರಲ್ಲಿ ತಮ್ಮ ನೂತನ ಗೃಹಪ್ರವೇಶ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡಿಸಿ ಸ್ಥಳದ ಮತ್ತು ಪರಸ್ಥಳದಿಂದ ಬಂದಿದ್ದ ಮಿತ್ರಮಂಡಲಿಯನ್ನೂ ಇತರರನ್ನೂ ಮೃಷ್ಟಾನ್ನಭೋಜನದಿಂದ ತೃಪ್ತಿಗೊಳಿಸಿದರೆಂದು ಈ ಉತ್ಸವಭಾಗಿಗಳೊಬ್ಬರು ಬರೆದಿರುತ್ತಾರೆ.

ರಾಜಧಾನಿಯಲ್ಲಿರುವ ಗಂಧದೆಣ್ಣೆಯ ಕಾರ್ಯಾಲಯದಲ್ಲಿ ಒಂದು ಯಂತ್ರವು ಬೆಂಕಿಯ ಕಾವು ಮಿತಿಮೀರಿದುದರಿಂದ ಒಡೆದುಹೋಗಿ ಕಟ್ಟಡದ ಮೇಲೆ ಹೊದ್ದಿಸಿದ್ದ ಮಂಗಳೂರು ಹೆಂಚು ಜಂತಿ ಮೊದಲಾದ ಸಾಮಾನುಗಳು ಸುಟ್ಟುಹೋದುವಲ್ಲದೆ ಹತ್ತಿರವಿದ್ದ ಕೆಲಸಗಾರರಲ್ಲಿ ೫ ಜನಗಳಿಗೆ ಕಾವು ತಗಲಿ ಮೈ ಸುಟ್ಟುಹೋಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು. ಇವರಲ್ಲಿ ಒಬ್ಬಿಬ್ಬರು ಬದುಕುವಂತಿಲ್ಲವೆಂದು ತಿಳಿಯಬರುತ್ತದೆ.

ಚಿತ್ರದುರ್ಗದ ಶ್ರೀಮನ್ಮಹಾ ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಮದ್ದಗಿರಿಯಿಂದ ಸಿರಾಕ್ಕೆ ದಯಮಾಡಿಸಿರುವುದೆಂತಲೂ, ಮತ್ತೊಂದು ಪ್ರಕಟನೆ ಮಾಡುವವರೆಗೆ ಸಂಸ್ಥಾನಕ್ಕೆ ಬಿನ್ನೈಸಿಕೊಳ್ಳಲ್ಪಡುವ ಪತ್ರಗಳನ್ನು ಸಿರಾ ಪೋಸ್ಟಿಗೆ ಬರೆದುಕೊಳ್ಳತಕ್ಕದೆಂದೂ, ಸ್ವತಃ ಬರತಕ್ಕವರು ತುಮಕೂರಿಂದ ಸಿರಾಕ್ಕೆ ಏರ್ಪಟ್ಟಿರುವ ಮೋಟಾರುಗಳ ಮೇಲೂ ಜಟಕಾಬಂಡಿಗಳ ಮೂಲಕವೂ ಬರಬಹುದೆಂದೂ, ಪ್ರಕಟಿಸಲು ಸಂಸ್ಥಾನದ ಏಜೆಂಟರು ನಮಗೆ ತಿಳಿಯಪಡಿಸಿದ್ದಾರೆ.

ಲೋವರ್‌ಸೆಕೆಂಡರಿ ಪರೀಕ್ಷೆಗಾಗಿ ರಾಜಧಾನಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮೈಸೂರು ಕೃಷ್ಣರಾಜಮೊಹಲ್ಲಾ ಗುರುಕಾರ್ ದೇವಣ್ಣನವರ ಮನೆ ಬೀದಿಯಲ್ಲಿರುವ ಲೇಟ್ ಭಕ್ತಿ ಚೆನ್ನಬಸಪ್ಪನವರ ಮಕ್ಕಳು ಮ|| ಸೋಮಶೇಖರಪ್ಪನವರು ಮುಡುಕುತೊರೆ ವೀರಶೈವಮತಸಂವರ್ಧಿನೀ ಸಭೆಯ ವಿದ್ಯಾಪ್ರೋತ್ಸಾಹೋದ್ದೇಶಾನುಗುಣವಾಗಿ ಪದ್ಧತಿಯಂತೆ ಊಟಕ್ಕೂ ವಾಸಕ್ಕೂ ಏರ್ಪಡಿಸಿದ್ದಾರೆ. ವಿದ್ಯಾರ್ಥಿಗಳು ೩ ದಿನ ಮುಂಚಿತವಾಗಿ ಅವರಿಗೆ ಬರೆದುಕೊಳ್ಳುವುದಲ್ಲದೆ ಸಂಗಡ ಹಾಸುಗೆಯನ್ನೂ ಮಡಿಯನ್ನೂ ತೆಗೆದುಕೊಂಡುಬರಬೇಕು.

ಮದ್ರಾಸು ತಿರುವಲಿಕ್ಕೇಣಿಯಲ್ಲಿ ಲಕ್ಷ್ಮೀವಿಲಾಸ ಸಭೆಯೆಂಬ ಹಿಂದು ನಾರೀಮಣಿಯರ ಸಂಸ್ಥೆಯಿದೆ. ಕಳೆದ ತಾ|| ೮ರಲ್ಲಿ ಇದರ ವಾರ್ಷಿಕೋತ್ಸವ ಸಮಾರಂಭವು ಆ ಊರ ವಿಕ್ಟೋರಿಯಾ ಟೌನ್‌ಹಾಲಿನಲ್ಲಿ ಜರುಗಿತು. ಸಭೆಗೆ ನಮ್ಮ ಮಹಾಮಾತೃಶ್ರೀಯವರನ್ನೂ ಯುವರಾಜ್ಞಿಯವರನ್ನೂ ದಯಮಾಡಿಸಿಕೊಂಡು ಅವರಿಗಾಗಿ ಪ್ರತ್ಯೇಕವಾಗಿ ಅಲಂಕರಿಸಿದ್ದ ಪೀಠಗಳಲ್ಲಿ ಕುಳ್ಳಿರಿಸಿದರು. ಮಹಾಮಾತೃಶ್ರೀಯವರು ಕನ್ನಡದಲ್ಲಿ ಮನೋಹರವಾದ ಭಾಷಣವನ್ನು ಮಾಡಿ ಸಭಾಸದೆಯರನ್ನು ಆನಂದಪಡಿಸಿ ಅವರ ಪ್ರಯತ್ನಗಳನ್ನು ಶ್ಲಾಘಿಸಿ ಪ್ರೋತ್ಸಾಹಿಸಿದರು. ಸಭಾಧ್ಯಕ್ಷೆಯರೇ ಮೊದಲಾದವರು ಪುಷ್ಪಹಾರಾದಿಗಳನ್ನು ಒಪ್ಪಿಸಿ ಮರ್ಯಾದಿಸಿ ಕಳುಹಿಸಿಕೊಟ್ಟರು.

ವಿದೇಶ ವೃತ್ತಾಂತಗಳು.

ಭಾರತ ಮಹಮ್ಮದೀಯ ಪ್ರತಿನಿಧಿಗಳಿಗೆ ಸ್ಟೇಟ್ ಸೆಕ್ರೆಟರಿಯವರು ಕಳೆದ ತಾ|| ೧೭ರಲ್ಲಿ ಸತ್ಕಾರ ಮಾಡಿದರು.

ರಷ್ಯಾ ಸೋವಿಯಟ್ ಪ್ರಭುತ್ವಕ್ಕೂ ಅಫ್ಘಾನಿಸ್ಥಾನ ಪ್ರಭುತ್ವದವರಿಗೂ ಕಳೆದ ತಾ|| ೨೮ ರಲ್ಲಿ ಸಂಧಿಯು ಜರುಗಿತೆಂದು ಮಾಸ್ಕೋವಿನಿಂದ ಸ್ಟಾಕ್‌ಹೋಮಿಗೆ ಬಂದ ತಂತಿಯಿಂದ ತಿಳಿಯಬರುತ್ತದೆ.

ಎಚ್. ಎಚ್. ಆಗಾಖಾನರು ಕಳೆದ ತಾ|| ೧೩ರಲ್ಲಿ ಸಾರ್ವಭೌಮ ದಂಪತಿಗಳು ಯುವರಾಜರು ಹೊಸ ವೈಸ್ರಾಯಿ ರೀಡಿಂಗ್ ಪ್ರಭುದಂಪತಿಗಳು ಇವರ ಸಹಪಂಕ್ತಿಯಲ್ಲಿ ಔತಣದೂಟವನ್ನು ಮಾಡಿದರು.

ಇಂಗ್ಲೆಂಡ್ ರಾಣಿಗಳಲ್ಲಿ ಇದುವರೆಗೆ ಯಾರಿಗೂ ದೊರೆಯದಿದ್ದಂಥ ಸಿವಿಲ್ ಲಾ ಡಾಕ್ಟರ್ ಎಂಬ ಬಿರುದನ್ನು ಚಕ್ರವರ್ತಿನಿಯವರಾದ ಮೇರಿ ರಾಣಿಯವರಿಗೆ ಆಕ್ಸ್‌ಫರ್ಡ್ ವಿದ್ಯಾಪೀಠದವರು ಕೊಟ್ಟು ಮರ್ಯಾದಿಸಿದರು.

ಉತ್ತರ ಅಮೇರಿಕಾದಲ್ಲಿ ವಿಪರೀತವಾಗಿ ಮಂಜು ಸುರಿಯುತ್ತಿರುವುದರಿಂದ ವೇಳೆಗೆ ಸರಿಯಾಗಿ ಹೊಗೆಬಂಡಿಗಳೂ ಹಡಗುಗಳೂ ತೆರಳುತ್ತಲಿಲ್ಲ. ೧೬ ಸಾವಿರ ಮಂದಿ ಕೂಲಿಗಾರರು ಮಂಜನ್ನು ಅಗೆದು ದಾರಿಯನ್ನು ಸರಿಪಡಿಸುತ್ತಿದ್ದಾರೆ.

ಭರತಖಂಡದಿಂದ ಹೋಗಿರುವ ಮಹಮ್ಮದೀಯ ಪ್ರತಿನಿಧಿಗಳನ್ನು ಆಂಗ್ಲ ಮುಖ್ಯ ಮಂತ್ರಿಯವರು ಸತ್ಕರಿಸಿದರು. ಸವಸೇನ ಸಂಧಿಯನ್ನು ಸಂಸ್ಕರಿಸುವಲ್ಲಿ ತುರ್ಕಿಯವರಿಗೆ ಅನುಕೂಲಮಾಡಿ ಕೊಡಬೇಕೆಂದು ಇವರು ಕೇಳಿಕೊಂಡರು.

ಮಿತ್ರಮಂಡಲಿಯವರು ವಿಧಿಸಿದ ಶಿಕ್ಷೆಗೆ ಜರ್ಮನಿಯ ವರ್ಟೆಂಬರ್ಗಿನ ವರ್ತಕ ಸಂಘದವರೂ ಇತರ ಪ್ರಜೆಗಳೂ ಸಹ ಕೋಪಿಸಿಕೊಂಡು ಮಿತ್ರಮಂಡಲೀ ದೇಶಗಳಿಂದ ಬರುವ ಸರಕುಗಳಿಗೆಲ್ಲಾ ಬಹಿಷ್ಕಾರ ಹಾಕಬೇಕೆಂದು ಚರ್ಚಿಸಿದರಂತೆ.

ನ್ಯೂಫೌಂಡ್‌ಲ್ಯಾಂಡಿನಲ್ಲಿಯೂ ಅಟ್ಲಾಂಟಿಕ್ ಮಹಾ ಸಮುದ್ರದಲ್ಲೂ ಈಗ ಸುರಿಯುತ್ತಿರುವಷ್ಟು ಮಂಜು ಯಾವಾಗಲೂ ಸುರಿದುದಿಲ್ಲವಂತೆ, ಹೊಗೆ ಬಂಡಿಗಳ ಹಡಗುಗಳ ಸಂಚಾರವೆಲ್ಲಾ ಕಟ್ಟಾಗಿದೆ. ಮಂಜಿನ ಗಡ್ಡೆಗಳು ಬಿದ್ದು ಕೆಥೋಲಿಕ್ ಗುರುವಿನ ಮನೆಯು ಹಾಳಾಯಿತು.

ನ್ಯೂಜೆರ್ಸಿಯಲ್ಲಿ ಒಂದು ಸೀಮೆಯೆಣ್ಣೆ ಕಂಪೆನಿಯವರು ಸ್ಟಾಂಡರ್ಡ್ ಎಣ್ಣೆ ಕಂಪೆನಿಯವರ ಮೇಲೆ ಅಕ್ಲಹೋಮದಲ್ಲಿ ೪೩೦೦೦ ಎಕರೆ ಭೂಮಿಯಲ್ಲಿ ಕಂಟ್ರಾಕ್ಟಿಲ್ಲದೇನೆಯೇ ಸೀಮೆಯೆಣ್ಣೆಯನ್ನು ತೋಡಿ ತೆಗೆದುಕೊಂಡರೆಂದು ೨೬ ಕೋಟಿ ಪೌನುಗಳ ನಷ್ಟಕ್ಕೆ ವ್ಯಾಜ್ಯವನ್ನು ಹೂಡಿದ್ದಾರೆ.

ಲಂಡನ್ನಿನಲ್ಲಿ ಕೂಡಿದ್ದ ಸಭೆಯಲ್ಲಿ ತುರ್ಕಿ ಸಮಸ್ಯೆಯ ವಿಷಯವಾಗಿ ಮಿತ್ರಮಂಡಲಿಯವರು ಸೂಚಿಸಿದ ಕೆಲ ಸುಧಾರಣೆಗಳು ಅತಿ ಮಹತ್ತರವಾದುವಲ್ಲ. ಅವುಗಳ ಮುಖ್ಯಭಾಗವನ್ನು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಇವಕ್ಕೆ ತುರುಕರು ಒಪ್ಪಿದರೆ ತಾವೂ ಒಪ್ಪುತ್ತೇವೆಂದು ಗ್ರೀಕರು ಹೇಳಿದ್ದಾರೆ.

ಲಂಡನ್ನಿನ ಸವಾಯಿ ಹೋಟಲಿನಲ್ಲಿ ಹೊಸ ವೈಸರಾಯರಿಗೆ ಒಂದು ಔತಣವನ್ನು ಅಲ್ಲಿಯ ಭಾರತೀಯರು ಮಾಡಿಸಿದರು. ಆಗ ಅಧ್ಯಕ್ಷರಾಗಿದ್ದ ಆಗಾಖಾನರು "ಈಗ ತುರ್ಕಿಗೆ ಎಂಥ ಪುರಸ್ಕಾರವು ನಡೆಯುವುದೋ ಅದನ್ನನುಸರಿಸಿ ಭರತಖಂಡವು ಆಂಗ್ಲ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿರುವುದೋ ಅಥವಾ ಇಲ್ಲವೋ ಎಂಬುದು ಗೊತ್ತಾಗುವುದು" ಎಂದು ಹೇಳಿದರು.

ಜರ್ಮನರು ತಮ್ಮ ರೀಚ್‌ಸ್ಟಾಗ್ ಸಭೆಯಲ್ಲಿ ಮಿತ್ರಮಂಡಲಿಯವರ ಕೋರಿಕೆಯನ್ನು ತಿರಸ್ಕರಿಸುವಲ್ಲಿ ತಾವು ಪಟ್ಟುಹಿಡಿದು ಕೆಲಸ ಮಾಡುವುದೇ ಸರಿಯೆಂದು ತೀರ್ಮಾನಿಸಿದರಂತೆ. ಆದರೆ ಲಂಡನ್ ಸಭೆಗೆ ಹೋಗಿಬಂದ ಚಾನ್ಸಲರ್ ಹೇರ್‌ಸೈಮನ್ಸ್‌ರವರು ಮಾತ್ರ ಹಾಗೆ ಮಾಡಬಾರದೆಂದೂ ಯಾವದೋ ಒಂದು ರೀತಿಯಲ್ಲಿ ಮಿತ್ರಮಂಡಲಿಯವರ ತೀರ್ಮಾನವನ್ನೇ ಅಂಗೀಕರಿಸುವದಕ್ಕೆ ತಕ್ಕ ದಾರಿಯನ್ನು ಹುಡುಕಬೇಕೆಂತಲೂ ವಾದಿಸಿದರಂತೆ.

ಮಿತ್ರಮಂಡಲಿಯವರು ಲಂಡನ್ ಸಭೆಯಲ್ಲಿ ಖಂಡಿತವಾಗಿ ಹೇಳಿಬಿಟ್ಟಂತೆ ಅವರ ಕಡೆಯ ಸೈನ್ಯಗಳು ರುಹರ್ ಮಂಡಲದ ರೈನ್‌ನದೀ ತೀರದ ಪಟ್ಟಣಗಳನ್ನು ವಶಪಡಿಸಿಕೊಂಡುಬಿಟ್ಟುವು. ಜರ್ಮನರ ಕಡೆಯ ತಡೆಯೇನೂ ಇರಲಿಲ್ಲ. ಹೀಗೆ ಈಗ ವಶಪಡಿಸಿಕೊಂಡ ಭಾಗಗಳಲ್ಲಿ ೧ ಕೋಟಿ ಜರ್ಮನ್ ಪ್ರಜೆಗಳಿದ್ದಾರೆ. ಈ ಪ್ರಜೆಗಳನ್ನು ಕುರಿತು ಮಿತ್ರಮಂಡಲಿ ಕಡೆಯ ಸೇನಾಪತಿಗಳು ಕೂಡಲೇ ಒಂದು ಪ್ರಕಟನೆಯನ್ನು ಮಾಡಿ, ಅದರಲ್ಲಿ "ಜರ್ಮನ್ ಪ್ರಭುತ್ವದವರು ಸಂಧಿನಿಬಂಧನೆಗಳಿಗೆ ಅಂಗೀಕರಿಸದೆಹೋದುದರಿಂದ ಮಿತ್ರಮಂಡಲಿಯವರು ಈ ಪಟ್ಟಣಗಳನ್ನು ಆಕ್ರಮಿಸಿಕೊಳ್ಳಬೇಕಾಗಿಬಂದಿತು. ಹೀಗೆ ನಾವು ಆಕ್ರಮಿಸುವುದರಲ್ಲಿ ಶತ್ರುಭಾವವೇನೂ ಇಲ್ಲ. ಇಲ್ಲಿರುವ ಪ್ರಜೆಗಳ ಅಭೀಷ್ಟಕ್ಕೆ ನಷ್ಟವೇನೂ ಸಂಭವಿಸಲಾರದು. ಮಿತ್ರಮಂಡಲಿಯವರು ಇಲ್ಲಿಯ ಪರಿಶ್ರಮಗಳನ್ನು ಅಭಿವೃದ್ಧಿಗೊಳಿಸಿ ಕೆಲಸಗಾರರಿಗೆ ಅಹಾರಪದಾರ್ಥಗಳನ್ನು ಒದಗಿಸಿಕೊಡುವರು. ಇಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂಬುದೇ ಮಿತ್ರಮಂಡಲಿಯವರ ಅಭಿಪ್ರಾಯವಾಗಿದೆ" ಎಂದು ತಿಳಿಯಪಡಿಸಿರುವರು. ಅತ್ತ ಜರ್ಮನ್ ಪ್ರಭುತ್ವದವರು ತಮ್ಮ ಪ್ರಜೆಗಳನ್ನು ಕುರಿತು ಒಂದು ಪ್ರಕಟನೆ ಮಾಡಿ ಅದರಲ್ಲಿ ತಿಳಿಯಿಸಿರುವುದೇನೆಂದರೆ—"ಮಿತ್ರಮಂಡಲಿಯವರು ಈಗ ಜರ್ಮನೀ ದೇಶಭಾಗವನ್ನು ಆಕ್ರಮಿಸಿಕೊಳ್ಳುವುದೆಂದರೆ ವರ್ಸೇಲ್ಸ್ ಸಂಧಿಯನ್ನು ಅವರು ನಿರಾಕರಿಸಿದರೆಂದೇ ಅರ್ಥವು. ಅವರ ಸೈನ್ಯವನ್ನು ಸೇನಾಬಲದಿಂದಲೇ ಓಡಿಸುವ ಶಕ್ತಿಯು ನಮಗಿರುವುದಿಲ್ಲ. ಧರ್ಮಾತ್ಮರು ಈ ಅನ್ಯಾಯವನ್ನು ಕೇಳಲಿ ಎಂಬುದಾಗಿ ಗೋಳಿಡುವುದೇ ನಮ್ಮ ಕೆಲಸವಾಗಿದೆ. ನಾವು ಈಗ ಶಾಂತರಾಗಿ ಎಲ್ಲವನ್ನೂ ತಾಳಿಕೊಳ್ಳಬೇಕು. ನಮ್ಮ ವಿರೋಧಿಗಳು ನ್ಯಾಯಮಾರ್ಗಕ್ಕೆ ಬರುವವರೆಗೂ ನಾವು ನಮ್ಮ ಶಾಂತಿಮಾರ್ಗವನ್ನು ಬಿಡಕೂಡದು".

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಂಘ.
ಲಗ್ನದ ಫಂಡು.

ಕಡೂರು ತಾ|| ಚಿಕ್ಕನಲ್ಲೂರಿನಲ್ಲಿರುವ ಅಜ್ಜಂಪುರದ ಮ|| ರಾ|| ಚಿಕಟ್ಟಪ್ಪನವರ ತಮ್ಮಂದಿರು ಮರುಳಸಿದ್ಧಪ್ಪನವರ ಮಗಳ ಲಗ್ನಕಾಲದಲ್ಲಿ ೩-೦-೦. ಮ|| ರಾ|| ಸಿ. ಬಿ. ಮರುಳಪ್ಪನವರ ಮೂಲಕ. ತುಮಕೂರಿನಲ್ಲಿರುವ ಮಂಡಿ ಬೇಲ್ದಾರ್ ಗಂಗಾಧರಪ್ಪನವರ ಮಗನಿಗೆ ಮಂಡಿ ಅತ್ತಿಮಲ್ಲಪ್ಪನವರ ಮಗಳನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ತೆಗೆದು ಕಳುಹಿಸಿದ್ದು ಮ|| ರಾ|| ಪ್ಲೀಡರ್ ಜಿ. ಕೆ. ಗುರುಸಂಗಾರ್ಯರ ಮೂಲಕ ೪-೦-೦ ಜುಮ್ಲಾ ಜಮಾ ೭-೦-೦.

ಬೆಂಗಳೂರು ಸಿಟಿ. } ಆನರರಿ ಸೆಕ್ರೆಟರಿ.
ತಾ|| ೧೨-೩-೨೧. } ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಂಘ

ಪತ್ರವ್ಯವಹಾರ.

ವೀರಶೈವ ತರುಣಸಮ್ಮೇಳನದ ಸ್ಪೆಷಲ್ ಅಧಿವೇಶನವು.

ಇದೇ ಬರುವ ಮೇ ತಿಂಗಳಲ್ಲಿ ಶ್ರೀ ಬಸವಜಯಂತ್ಯುತ್ಸವ ಕಾಲದಲ್ಲಿ ವೀರಶೈವ ತರುಣ ಸಮ್ಮೇಳನದ ಸ್ಪೆಷಲ್ ಅಧಿವೇಶನವನ್ನು ಕೂಡಿಸಬೇಕೆಂದು ಹುಬ್ಬಳ್ಳಿಯ ವೀರಶೈವ ತರುಣರು ಗೊತ್ತುಪಡಿಸಿರುತ್ತಾರೆ. ಈ ಸಂಬಂಧವಾದ ವಿಷಯಗಳು (programme etc.) ಆಗಾಗ್ಗೆ ಪ್ರಕಟಿಸಲ್ಪಡುವುವು.

ಜೀ. ಎಂ. ವಿರ್ಜಾ, ಬಿ ಪಿ. ತಂಬದ, ಬಿ. ಎಸ್. ಬೆಂಡಿಗೇರಿ,
ಸೆಕ್ರೆಟರಿಗಳು.

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕುದು.

ಬೆಂಗಳೂರು ಸೆಂಟರಿಗೆ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲ್ ಮಾಸ್ಟರುಗಳಿಗೂ ಮಾಮೂಲ್ ಪ್ರಕಾರ ಬೆಂಗಳೂರು ಊದುಬತ್ತಿ ಷಾಪ್ ಯಸ್. ಕಳ್ಳೆಪ್ಪನವರು ಊಟಕ್ಕೂ ಮತ್ತು ವಾಸಕ್ಕೂ ಏರ್ಪಡಿಸಿರುತ್ತಾರೆ. ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ಒಂದು ವಾರ ಮುಂದಾಗಿ ಮ|| ಎಸ್. ಕಳ್ಳೆಪ್ಪನವರಿಗೆ ಬರೆದು ತಿಳಿಸತಕ್ಕದ್ದು.

(೨) ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ವೇದಾಧ್ಯಯನ ಪಾಠಹೇಳಲು ಒಬ್ಬ ಶಾಸ್ತ್ರಿಗಳವರು ಬೇಕಾಗಿದ್ದಾರೆ. ಇವರಿಗೆ ವಾಸಕ್ಕೆ ಮನೆಯೂ ಮತ್ತು ವೇತನವೂ ಕೊಡಲ್ಪಡುತ್ತವೆ. ಇಂತಹಂಥಾ ಶಾಸ್ತ್ರಿಗಳವರು ಬೆಂಗಳೂರು ಸಿಟಿ ಬಳೆಪ್ಪಾಟೆ ಬಳಿಯಿರುವ ಸಪ್ಪಣ್ಣಸ್ವಾಮಿಗಳ ಮಠದ ವೇ|| ಚೆನ್ನಬಸವಸ್ವಾಮಿಗಳವರಿಗೆ ಬಿನ್ನಯಿಸಿಕೊಳ್ಳತಕ್ಕದ್ದು.

K. Thammaih.

ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯವರಿಗೂ ಉತ್ತೇಜನ.

ಅನೇಕ ಮಹನೀಯರು ಈ ವರುಷ ನಡೆಯುವ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತಮತರಗತಿಯಲ್ಲಿ ತೇರ್ಗಡೆ ಹೊಂದುವ ವೀರಶೈವ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವೆವೆಂದು ಪ್ರಕಟಿಸಿರುವರು. ಆದರೆ ನಮ್ಮ ಮಾತೃಭಾಷೆಯಾದ ಕನ್ನಡಕ್ಕೆ ಉತ್ತೇಜನ ದೊರೆಯದಿದ್ದಕ್ಕಾಗಿ ವಿಷಾದಿಸಿ ಈ ವರುಷ ನಡೆಯುವ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತಮತರಗತಿ (1st Class) ಯಲ್ಲಿ ತೇರ್ಗಡೆ ಹೊಂದುವ ದಾವಣಗೆರೆಯ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವೀರಶೈವ ವಿದ್ಯಾರ್ಥಿನಿಯರಿಗೂ ಯೋಗ್ಯವಾದ ಬಹುಮಾನವನ್ನು ಕೊಡುವೆವೆಂದು ಈ ಮೂಲಕ ಪ್ರಸಿದ್ಧಿಸಿರುತ್ತೇವೆ.

ಕಾರ್ಯದರ್ಶಿ,
ಶ್ರೀ ಬಕ್ಕೇಶ್ವರಸ್ವಾಮಿ ವಾಚನಾಲಯ, ದಾವಣಗೆರೆ.

ವಿವಾಹಮಹೋತ್ಸವ.

ಇದೇ ಮಾಘವದ್ಯ ೨ ಗುರುವಾರ ಮುಧೋಳ ಸಂಸ್ಥಾನದಲ್ಲಿ ಅಲ್ಲಿಯ ಮ|| ರಾ|| ರಾ|| ವಿರೂಪಾಕ್ಷಪ್ಪನವರು ನಾವಲಗಿಯವರ ಚಿ|| ರಾವ ಮಿ|| ಮಡಿವಾಳಪ್ಪನವರು ಕೊಲ್ಹಾಪುರ ವಕೀಲ ವ ವೀರಪ್ಪನವರು, ಬಿ. ಎ. ಎಲ್‌ಎಲ್.ಬಿ. ವ ಚೆನ್ನಬಸವಪ್ಪ ಹೀಗೆ ಮೂರುಮಂದಿಯ ವಿವಾಹಕಾರ್ಯವು ಹೂವಿಹಿರೇಮಠದ ಎಸ್. ಎಂ. ಸಿದ್ಧಾಂತಿಗಳ ಪುರೋಹಿತತ್ವದ ಕೆಳಗೆ ಅತಿ ವಿಜೃಂಭಣೆಯಿಂದ ಜರುಗಿತು. ಮುಂದೆ ೩ ಶುಕ್ರವಾರ ಇವರ ಮನೆಯಲ್ಲಿ ಒಂದು ಕಮಿಟಿ ಸೇರಿ ಇಲ್ಲಿ ಸದರಿ ಸಿದ್ಧಾಂತಿಗಳು ಅರಟಾಳ ಗಿಲಗಂಜಿ ಹೈಸ್ಕೂಲ ಮಹತ್ವ ಈ ವಿಷಯದ ಮೇಲೆ ಚರ್ಚೆಮಾಡಿದರು. ಮುಂದೆ ಸದರಿ ವಿರೂಪಾಕ್ಷಪ್ಪನವರ ಚಿ|| ಮಿ|| ಮಡಿವಾಳಪ್ಪನವರು ಈ ಮುಧೋಳ ಸಂಸ್ಥಾನದಲ್ಲಿ ಅದಷ್ಟು ಹಣವನ್ನು ಕೂಡಿಸಿ ಸದರಿ ಹೈಸ್ಕೂಲಿಗೆ ಸಹಾಯಮಾಡುವೆವೆಂದು ವಚನಕೊಡಲು ಕಮಿಟಿ ವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶೀ.

(ಜಗದ್ಗುರು ವಿಶ್ವಾರಾಧ್ಯ) ಪಂಡಿತಾರಾಧ್ಯರ ಜಯಂತ್ಯುತ್ಸವವು.

ಮೊದಲೇ ಡಂಗುರ ದ್ವಾರದಿಂದ ತಿಳಿಸಿದಂತೆ ನಿನ್ನೆ ಸಂಜೆ ೬ ಘಂಟೆ ಸಮಯಕ್ಕೆ ಇಲ್ಲಿಯ ವೀರಶೈವ ತರುಣಮಂಡಲಿಯವರೆಲ್ಲಾ ಸೇರಿ ಜಗದ್ಗುರುವರ್ಯರ ಜಯಂತ್ಯುತ್ಸವವನ್ನು ಮಾಡಿದರು. ಮೊದಲು ಶಾಂಬಯ್ಯನ ಮಠದಿಂದ ಹೊರಟು ಪೇಟೆಯಲ್ಲಿ ಹಾಯ್ದು ಮುಂದೆ ರಥ ಗಲ್ಲಿ, ದ್ಯಾಮವ್ವ ಗಲ್ಲಿ, ಇಲ್ಲಿಂದ ಹಾಯ್ದು [illegible] ೮ ಘಂಟೆ ಸಮಯಕ್ಕೆ, ಅಲ್ಲಿಂದ ಮರಳಿ ೧೧ ಘಂಟೆ ಸಮಯಕ್ಕೆ ಶ್ರೀ [illegible]

ಉತ್ಸವವು ಬಂದುಕಲ್ಪಿತು. ಈ ಉತ್ಸವಕ್ಕಾಗಿ ನೆರೆದಿದ್ದ ಭಜನೆಯ ಮೇಳದವರೂ ತಾಸೆ ಮೊದಲಾದ ವಾದ್ಯದವರೂ ಜಗದ್ಗುರುಗಳ ಮಹಿಮೆಯನ್ನು ಹೊಗಳುವ ಪಾಠಕರೂ, ಯುವಕರೂ ಸಂತೋಷವನ್ನು ಹುಟ್ಟಿಸಿದರು. ಮುಂದೆ ೧೨ ಘಂಟೆ ಸಮಯಕ್ಕೆ ಶ್ರೀ ವೀರಭದ್ರದೇವಾಲಯದಲ್ಲಿ ಒಂದು ಸಭೆಸೇರಿ ಅಲ್ಲಿ "ಶಿವರಾತ್ರಿ" ಈ ವಿಷಯದಮೇಲೆ ಇಲ್ಲಿಯ ಎಸ್. ಎಮ್. ಸಿದ್ಧಾಂತಿಗಳು ಹಿರೇಮಠ ಇವರ ಭಾಷಣವು ಯುವಕರಿಗೂ ತಿಳಿಯುವಂತೆ ೧ ಘಂಟೆವರೆಗೆ ಜರುಗಿತು. ಅಲ್ಲಿಂದ ಜಗದ್ಗುರು ಮಂಗಳಕಾರ್ಯದೊಡನೆ ೧ ಘಂಟೆಗೆ ಯುವಕರೂ ಆಶೀರ್ವಾದದಿಂದ ತಮ್ಮ ತಮ್ಮ ಮನೆಗೆ ತೆರಳಿದರು.

ಜ. ವಿ. ವಾ.

ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನಕ್ಕೆ ಮೈಸೂರು ಸೀಮೆಯ ಶ್ರೀಮಾನ್ ದಿವಾನ್ ಕಾಂತರಾಜ ಅರಸಿನವರ ಸ್ವಾರಿಯು ದಯಮಾಡಿಸಿದ್ದುದು.

ಕಳೆದ ತಿಂಗಳು ತಾ|| ೨೧ನೆಯ ಸೋಮವಾರ ಜಗದ್ಗುರು ಮಹಾಸಂಸ್ಥಾನದವರ ಪ್ರಾರ್ಥನೆಯಂತೆ ದಿವಾನ್ ಕಾಂತರಾಜ ಅರಸಿನವರು ದಯಾಪೂರ್ವಕವಾಗಿ ಅನುಮತಿಯನ್ನಿತ್ತು ದಯಮಾಡಿಸಿದ್ದರು. ಆ ಕಾಲಕ್ಕೆ ನರಸಿಂಹರಾಜಪುರ, ಚಿಕ್ಕಮಗಳೂರು, ಗದಗ ಮುಂತಾದ ಕಡೆಯಿಂದ ವೀರಶೈವ ಪ್ರಮುಖರುಗಳು ಸೇರಿದ್ದರು. ಪುರದ ಮಹಾದ್ವಾರ ಮುಂಭಾಗದಲ್ಲಿ ಮಹಾ ಸಂಸ್ಥಾನದ ಏಜೆಂಟರವರು ದೊಡ್ಡ ಚಪ್ಪರವನ್ನು ಹಾಕಿಸಿ ತೋರಣಗಳಿಂದಲೂ, ಧ್ವಜಪಟಗಳಿಂದಲೂ, ಬಾಳೆಕಂಬಗಳಿಂದಲೂ ಅಲಂಕರಿಸಿದ್ದರು. ಶ್ರೀಮಜ್ಜಗದ್ಗುರು ರೇಣುಕಾಚಾರ್ಯ ಕರ್ತೃಗದ್ದಿಗೆಯು ಪೂಜಾವೈಭವ ಮತ್ತು ಸುವರ್ಣಾಭರಣಗಳಿಂದ ವಿರಾಜಿತವಾಗಿದ್ದಿತು. ಅಸಳಿ ಮುಂತಾದ ಮಂಗಲವಾದ್ಯಗಳಾಗುತ್ತಿದ್ದುವು. ಅದಿನ ಬೆಳಗಿನ ೮ ಘಂಟೆಯಿಂದಲೇ ಸುತ್ತಮುತ್ತಣ ಜನಗಳು ಮಹಾಸಂಸ್ಥಾನಕ್ಕೆ ಬಂದು ಸೇರುವುದಕ್ಕೆ ಉಪಕ್ರಮಿಸಿದರು. ದೊಡ್ಡಮಠದ ಒಳಭಾಗದ ಮಧ್ಯಾಂಗಣದಲ್ಲಿ ಇದಿರ್ಗಡೆ ಉತ್ತರಾಭಿಮುಖವಾಗಿ ದಿವಾನರವರಿಗೂ ಡಿ||ಕ|| ಮುಂತಾದ ಕೆಲಅಧಿಕಾರಿಗಳಿಗೂ ಅವರ ಬಲಪಕ್ಕದಲ್ಲಿ ಪೂರ್ವಾಭಿಮುಖವಾಗಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಗೂ ಉಚಿತಾಸನಗಳು ಏರ್ಪಡಿಸಲ್ಪಟ್ಟಿದ್ದುವು. ಶ್ರೀ ಜಗದ್ಗುರುಗಳವರು ಪರಿವಾರದಿಂದಲೇ ಪರಿವೃತವಾದ ಸಿಂಹಾಸನದಮೇಲೆ ಆರೋಹಣಮಾಡಿದ್ದರು. ಅಷ್ಟರಲ್ಲಿಯೇ ದಿವಾನ್ ಕಾಂತರಾಜಅರಸಿನವರ ಸ್ವಾರಿಯು ಬಾಳೇಹೊನ್ನೂರಿಂದ ಪ್ರಾತಃಕಾಲ ೧೨ ಘಂಟೆಗೆ ಮೋಟಾರ್‌ಬಂಡಿಯಮೇಲೆ ಡಿ||ಕ|| ರೊಂದಿಗೆ ದಯಮಾಡಿಸಿತು. ಮ|| ರಾ|| ನರಸಿಂಹರಾಜಪುರದ ಶಾಂತಪ್ಪಶೆಟ್ಟರೇ ಮೊದಲಾದ ದೊಡ್ಡ ಮನುಷ್ಯರುಗಳು ಇದಿರ್ಗೊಂಡು ಜಗದ್ಗುರುಗಳವರ ಕರ್ತೃಗದ್ದಿಗೆಗೆ ಕರೆತಂದರು. ಅಲ್ಲಿ ಮಂಗಲಾರಾಧನವು ನಡೆದು ಸ್ವಸ್ತಿಪೂರ್ವಕವಾಗಿ ದಿವಾನರವರಿಗೆ ಫಲಪುಷ್ಪಹಾರಗಳು ಕೊಡಲ್ಪಟ್ಟು ತರುವಾಯ ಶ್ರೀ ಜಗದ್ಗುರುಗಳವರ ಸನ್ನಿಧಿಗೆ ಕರೆತಂದರು. ಜಗದ್ಗುರುಗಳವರು ಮಠದ ಮುಂಭಾಗದ ಪಡಸಾಲೆಗೆ ತಮ್ಮ ಆಸ್ಥಾನ ಪುರೋಹಿತರೊಂದಿಗೆ ದಯಮಾಡಿಸಿ ದಿವಾನರವರನ್ನು ಇದಿರ್ಗೊಂಡು ಶುಭಾಶಂಸನೆಯನ್ನು ಮಾಡಿ ದಿವಾನರವರು ಕುಶಲಪ್ರಶ್ನವನ್ನು ಮಾಡುತ್ತಿರುವಲ್ಲಿ ಪ್ರಮುಖಮಂಡಲಿಯವರು ಸಭಾಂಗಣಕ್ಕೆ ಕರೆತಂದರು. ಸರ್ವರೂ ಆನಂದಕರತಾಡನವನ್ನು ಮಾಡುತ್ತಿರುವಲ್ಲಿ ದಿವಾನರವರೂ ಶ್ರೀ ಜಗದ್ಗುರುಗಳವರೂ ಡಿ|| ಕಮಿಾಷನ್ನರವರೇ ಮುಂತಾದ ಅಧಿಕಾರಿಗಳೂ ತಮ್ಮ ತಮ್ಮ ಅಗ್ರಪೀಠಗಳನ್ನು ಅಲಂಕರಿಸಿದ್ದರು. ಪ್ರಥಮತಃ ಸಂಗೀತ ವಿದ್ವಾನ್ ಗುರಪ್ಪನವರಿಂದ ಸುಶ್ರಾವ್ಯವಾಗಿ ಕೋಲಾಹಲವು ನಡೆಯಿತು. ಬಳಿಕ ಶಿವಕಥಾಭೂಷಣ ನಂಜುಂಡಾರಾಧ್ಯರು ಈ ಕೆಳಗೆ ಕಂಡಮೇರೆಗೆ ಜಗದ್ಗುರು ಮಹಾಸನ್ನಿಧಿಯ ಅಪ್ಪಣೆಯನ್ನು ಪಡೆದು ಭಾಷಣಮಾಡಿದರು. ಮೈಸೂರು ಸೀಮೆಯ ಶ್ರೀಮಾನ್ ದಿವಾನ್ ಸಾಹೇಬರವರಾದ ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜಅರಸಿನವರು ಬಿ ಎ, ಸಿ.ಎಸ್.ಐ. ಯವರ ದಿವ್ಯಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವುದೇನೆಂದರೆ—ಸೃಷ್ಟಿಸ್ಥಿತ್ಯಾದಿ ಸರ್ವತಂತ್ರ ಸ್ವತಂತ್ರನಾದ ಪರಮೇಶ್ವರನ ಅವತಾರರೆನಿಸಿ ನಿತ್ಯಮುಕ್ತರೆನಿಸಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯರು ಸರ್ವಾತಿಶಯ ವಿಚಾರಶಕ್ತಿಯಿಂದ ಆತ್ಮಸ್ವರೂಪ ತತ್ವಾರ್ಥವನ್ನು ಸರ್ವಸಮರ್ಪಕವಾಗುವಂತೆ ಪ್ರಕಾಶಪಡಿಸುವುದಕ್ಕೋಸ್ಕರ ನಾಲ್ಕು ಯುಗಗಳಲ್ಲಿಯೂ ಅವತರಿಸಿ ವೀರಶೈವ ಮತವನ್ನು ಪ್ರಕಾಶಗೊಳಿಸಿ ದೇವರಾಕ್ಷಸಗಂಧರ್ವ ಮನುಷ್ಯವರ್ಗಕ್ಕೆ ಲಿಂಗಧಾರಣವನ್ನು ಮಾಡಿ ಅಗಸ್ತ್ಯರೇ ಮುಂತಾದ ಋಷಿಗಳಿಗೆ ಷಟ್‌ಸ್ಥಲಸಿದ್ಧಾಂತವನ್ನು ಉಪದೇಶಮಾಡಿ ಅಜ್ಞಾನವೆಂಬ ಕಣ್ಣುಕಟ್ಟನ್ನು ಬಿಚ್ಚಿ ಮರಣದಭಯವನ್ನು ತಪ್ಪಿಸುವಂಥ ಜ್ಞಾನಾಮೃತದ ಸಂತರ್ಪಣೆಯನ್ನು ಮಾಡಿದರು. ನಮ್ಮ ಆ ಪರಮಪಾವನಮೂರ್ತಿಗಳಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಭೂಲೋಕದಲ್ಲಿ ೧೪೦೦ ವರುಷಗಳವರೆಗೆ ಸಂಚರಿಸಿ ೭೦೦ ವರುಷಗಳು ಶಿವಯೋಗಮಹಿಮೆಯನ್ನು ತೋರಿಸಿ ತಮ್ಮ ಅನುಗ್ರಹದಿಂದ ಅವತರಿಸಿದ ಶ್ರೀ ರುದ್ರಮುನಿಸ್ವಾಮಿಗಳವರಿಗೆ ಇದೇ ರಂಭಾಪುರೀಪೀಠಕ್ಕೆ ಗುರುಪಟ್ಟಾಭಿಷೇಕವನ್ನು ಮಾಡಿಸಿ ಅನುಗ್ರಹವಿತ್ತು ವೀರಶೈವ ಷಟ್‌ಸ್ಥಲ ಸಿದ್ಧಾಂತೋಪದೇಶವನ್ನು ಭೂಲೋಕದಲ್ಲಿ ಪ್ರಚಾರಮಾಡಬೇಕೆಂದು ಆಜ್ಞಾಪಿಸಿ ಶಿವಾಜ್ಞೆಯಂತೆ ಕೊಲ್ಲಿಪಾಕಿ ಸೋಮೇಶ್ವರಲಿಂಗದಲ್ಲಿ ಐಕ್ಯರಾದರೆಂದು ಶಿವಾಗಮಾದಿಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಮಹಾಸ್ವಾಮಿ! ಇತ್ತೀಚೆಗೆ ರುದ್ರಮುನಿಸ್ವಾಮಿಗಳವರ ಕಾಲದಿಂದಲೂ ಇದೇರೀತಿಯಾಗಿ ಈ ಮಹಾಸಂಸ್ಥಾನದಲ್ಲಿ ಮಹದ್ವಿಷಯಗಳು ಜರುಗುತ್ತಾ ಬಂದಿವೆ. ಹಿಂದೆ ನಮ್ಮ ಜಗದ್ಗುರು ರೇಣುಕಾಚಾರ್ಯರಿಗೆ ಅನೇಕ ರಾಜರು ಭೂಮಿ ಧನ ಮೊದಲಾದವುಗಳನ್ನು ಕಾಣಿಕೆಯಾಗಿ ಅತ್ಯಂತ ಭಕ್ತಿಯಿಂದ ಸಮರ್ಪಿಸಿದ್ದಾರೆ. ಅವರಾದರೂ ಆಧುನಿಕರಂತೆ ಭಾವಿಸಿ ವರ್ತಿಸುತ್ತಿದ್ದಿಲ್ಲ. ಪಾರ್ವತೀಪರಶಿವರಿಂದ ಗಣಪತಿ, ವೀರಭದ್ರರ ಲೀಲಾದಿಗಳಂತೆ ಆಚಾರ್ಯರು ಲೀಲಾಪೂರ್ವಕವಾಗಿ ಇಂಥಾ ಅಗಾಧಮಹಿಮೆಯನ್ನು ಜಗತ್ತಿನಮುಂದೆ ತೋರಿಸುವುದಕ್ಕೋಸ್ಕರ ಶ್ರೀ ರುದ್ರಮುನಿಸ್ವಾಮಿಯವರ ಉತ್ಪತ್ತಿಯೇ ಹೊರತು ಬೇರೊಂದು ಕಾರಣವಿಲ್ಲ. ಮತ್ತು ಈ ಪೀಠದ ಮಹತ್ವವಿಷಯಗಳನ್ನು ತಿಳಿದು ಪೂರ್ವ ಮಹಾರಾಜರುಗಳಂತೆ ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಪೂರ್ವದಂತೆ ಗೌರವಪ್ರತಿಷ್ಠೆಗಳಿಂದ ಕಾಪಾಡಿಕೊಂಡು ಬಂದಿರುವುದಲ್ಲದೆ ಹಿಂದೆ ಶ್ರೀ. ಚಾಮರಾಜಒಡೆಯರವರು ಶ್ರೀ ಜಗದ್ಗುರು ಚಂದ್ರಶೇಖರಸ್ವಾಮಿಗಳವರ ಕಾಲದಲ್ಲಿ ಸಂಸ್ಥಾನಕ್ಕೆ ಎರಡುವೇಳೆ ದಯಮಾಡಿ ಮಠವನ್ನು ಪರಾಂಬರಿಸಿ ಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಪಡೆದು, ಪ್ರೀತಿವಿಶ್ವಾಸಗಳಿಂದ ಕಾಪಾಡಿಕೊಂಡು ಬಂದಿರುವರು. ಅಂದಿನಿಂದಲೂ ನಮ್ಮ ಶ್ರೀಮನ್ಮಹಾರಾಜರವರು ಜಗದ್ಗುರುಪೀಠವನ್ನು ಕೇವಲಾಭಿಮಾನದಿಂದ ಕಾಪಾಡಿಕೊಂಡು ಬಂದಿರುತ್ತಾರೆ. ಈ ವಿಷಯದಲ್ಲಿ ಜಗದ್ಗುರುಗಳವರು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಕುರಿತು ನಿತ್ಯವೂ ಅನುಷ್ಠಾನಮಾಡುತ್ತಿರುವರಲ್ಲದೆ, ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವಾದ ವಾರ್ತೆಯು ಇಡೀಸಂಸ್ಥಾನದಲ್ಲೆಲ್ಲಾ ಆನಂದವನ್ನುಂಟುಮಾಡಿರುವ ಸಂಗತಿಯು ದಿವ್ಯಚಿತ್ತಕ್ಕೆ ವೇದ್ಯವಾಗಿ ಅಪ್ಪಣೆ ದಯಪಾಲಿಸಿರುವುದೇನೆಂದರೆ—ಮೈಸೂರು ಸಂಸ್ಥಾನದಲ್ಲಿ ಸಂತಾನಾಭಾವದಿಂದುಂಟಾದ ಕೊರತೆಯು ಪ್ರಜೆಗಳೇ ಮುಂತಾದವರಲ್ಲಿ ಶೋಕವನ್ನುಂಟುಮಾಡಿತ್ತು. ಅದು ಜಗದೀಶ್ವರನ ಅನುಗ್ರಹದಿಂದ ಪರಿಹಾರವಾಗಿ ಸಂಸ್ಥಾನದಲ್ಲಿ ಪುತ್ರೋತ್ಸವ ಉಂಟಾದುದು ಪ್ರಜೆಗಳ ಭಾಗ್ಯೋದಯವೆಂದೇ ಹೇಳಬೇಕಾಗಿದೆ. ಮತ್ತು ಶ್ರೀಮದ್ಯುವರಾಜರವರು ಪ್ರತಿಯೊಂದು ರಾಜಕಾರ್ಯದಲ್ಲಿ ಅಗ್ರಜರಿಗೆ ನೆರವಾಗಿ ವರ್ತಿಸುತ್ತಿರುವುದು ದೇಶದ ಭಾಗ್ಯೋದಯವು. ಇಂಥಾಪ್ರಭುಸಹೋದರರ ಸಚ್ಚರಿತ್ರವು (ಯಥಾರಾಜಾ ತಥಾ ಪ್ರಜಾಃ) ಎಂಬ ನಾಣ್ಣುಡಿಯಂತೆ ಸಾರ್ಥಕವಾಗಿರುತ್ತದೆ. ಮತ್ತು ಈಗ ಉದಯಿಸಿರುವ ರಾಜಪುತ್ರರತ್ನಕ್ಕೂ ಯುವರಾಜ್ಞಿಯವರಿಗೂ ಜಗದೀಶ್ವರನು ದೀರ್ಘಾಯುರಾರೋಗ್ಯಗಳನ್ನಿತ್ತು ಇನ್ನುಮುಂದೆ ಇದೇರೀತಿಯಾಗಿ ಸಂತಾನರತ್ನಗಳು ಸಂಸ್ಥಾನದಲ್ಲಿ ಉದಯಿಸಿ ರಾಜವಂಶವನ್ನು ಬೆಳಗುತ್ತಾ ಬರುವುದಲ್ಲದೆ ನಮ್ಮ ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ತಮಗೂ ಆಯುರಾರೋಗ್ಯಭಾಗ್ಯಗಳನ್ನನುಗ್ರಹಿಸಲೆಂದು ಸದಾ ಈಶ್ವರನನ್ನು ಪ್ರಾರ್ಥಿಸುತ್ತೇವೆಂದು ಅಪ್ಪಣೆಯಾಗಿದೆ ಮಹಾಸ್ವಾಮಿ. ತಾವು ಕಡೂರು ಡಿ|| ಮಲೆನಾಡು ಇಂಪ್ರೂವ್‌ಮೆಂಟ್ ಸುಧಾರಣೆಯ ವಿಚಕ್ಷಣತೆಯ ನಿರ್ವಾಹ ಪ್ರಜಾಸೌಕರ್ಯಕ್ಕಾಗಿ ದಯಮಾಡಿಸಿರುವ ಈ ಶುಭಸಮಯದಲ್ಲಿ ಜಗದ್ಗುರು ಸಂಸ್ಥಾನಕ್ಕೆ ದಯಮಾಡಿಸಿದುದು ಮಹಾಪಾದಕ್ಕೆ ಆನಂದವುಂಟಾಗಿ ಅಪ್ಪಣೆಕೊಡಿಸಿರುವುದೇನೆಂದರೆ—ತಾವು ಮೈಸೂರು ಸಂಸ್ಥಾನದ ಅಮಾತ್ಯಪದವಿಯನ್ನು ವಹಿಸಿ ಮೈಸೂರುದೇಶದ ಮಹೋನ್ನತವೈಭವವನ್ನು ನಾನಾಮುಖದಿಂದಲೂ ಅಭಿವೃದ್ಧಿಗೊಳಿಸುತ್ತಿರುವಿರಿ. ನಿಮ್ಮ ದೇಶಾಭಿಮಾನವೂ ಬುದ್ಧಿವೈಭವವೂ ನಾಗರಿಕಯೋಚನಾಕ್ರಮವೂ ಕಾರ್ಯೋತ್ಸಾಹವೂ ಅತ್ಯಂತ ಶ್ಲಾಘನೀಯವಾದುದೆಂದೂ ಅದ್ವಿತೀಯ ಕೃಪಾಶಾಂತಿಪ್ರಜಾವಾತ್ಸಲ್ಯಪೂರ್ಣರಾದ ಮಂತ್ರೀಶ್ವರರೆಂದೂ ತಮ್ಮ ಧವಳಕೀರ್ತಿಯು ನಮ್ಮ ದೇಶದಲ್ಲೆಲ್ಲಾ ವ್ಯಾಪಿಸಿರುವುದು. ಮತ್ತು ಸಂಸ್ಥಾನದಲ್ಲಿ ನಡೆಯುವ ಸತ್ಕಾರ್ಯಗಳಿಗೆ ಪ್ರೀತಿಪೂರ್ವಕವಾಗಿ ಸಹಾಯಮಾಡುತ್ತಿರುವಿರಿ. ನಿಮ್ಮ ಮಂತ್ರಿತ್ವವು ಚಿರಕಾಲತೇಜೋಭೂಯಿಷ್ಠವಾಗಿ ಬಾಳಲಿ ಎಂದು ಅಪ್ಪಣೆಯಾಗಿದೆ ಮಹಾಸ್ವಾಮಿ; ಎಂದು ದಿವಾನರವರ ಸನ್ನಿಧಿಯಲ್ಲಿ ತಮ್ಮ ಭಾಷಣವನ್ನು ವಿರಮಿಸಿ, ಡಿ||ಕ|| ರವರು ಸಹ ಅಭಿಮಾನವಿಟ್ಟು ಬಂದದ್ದಕ್ಕೋಸ್ಕರ ಉತ್ತರೋತ್ತರಾಭಿವೃದ್ಧಿಯುಂಟಾಗಲೆಂದು ಹಾರೈಸಿದರು. ನಂತರ ಸ್ವಸ್ತಿಪೂರ್ವಕವಾಗಿ ಫಲಮಂತ್ರಾಕ್ಷತೆಗಳು ಕೊಡಲ್ಪಟ್ಟು ಶ್ರೀ ಜಗದ್ಗುರುಗಳವರ ಅಮೃತಹಸ್ತದಿಂದ ಸ್ಪರ್ಶಿಸಿ ಫಲಪುಷ್ಪಹಾರಗಳು ದಿವಾನರವರಿಗೆ ಸಮರ್ಪಿಸಿ ಡಿ|| ಕಮಿಾಷನ್ನರವರಿಗೂ ಕೆಲಅಧಿಕಾರಿಗಳಿಗೂ ಸಹ ಕೊಡಲ್ಪಟ್ಟುವು. ನಂತರ ದಿವಾನರವರು ಬಹುಳ ಸಂತೋಷಭರಿತರಾಗಿ ಜಗದ್ಗುರುಗಳವರ ಆರೋಗ್ಯ ಮತ್ತು ಸಂಸ್ಥಾನದ ಕೆಲವಿಷಯಗಳನ್ನು ಕುರಿತು ಸಂಭಾಷಣಮಾಡಿ ಪ್ರತ್ಯುತ್ತರಗಳಿಂದ ತೃಪ್ತರಾಗಲು, ಬಳಿಕ ಮ|| ರಾ|| ಶಾಂತಪ್ಪಶೆಟ್ಟರವರು ಮಹಾಸಂಸ್ಥಾನದಿಂದ ಮೊದಲೇ ಏರ್ಪಡಿಸಿದ್ದಮೇರೆಗೆ ಅಲ್ಪಾಹಾರಗಳಿಗೆ ಪ್ರಾರ್ಥಿಸಿಕೊಳ್ಳಲು ದಿವಾನರವರು ಡಿ||ಕ|| ಮುಂತಾದ ಕೆಲಅಧಿಕಾರಿಗಳೊಂದಿಗೆ ದಯಮಾಡಿಸಿ ಅಲ್ಪಾಹಾರಗಳನ್ನು ಪೂರೈಸಿಕೊಂಡು ಗಂಧಪುಷ್ಪ ತಾಂಬೂಲಗಳನ್ನು ಸ್ವೀಕರಿಸಿ, ಶ್ರೀ ಜಗದ್ಗುರುಗಳವರ ಅಪ್ಪಣೆಯನ್ನು ಪಡೆದು ಮಧ್ಯಾಹ್ನ ೨ ಘಂಟೆಯಿಂದ ನರಸಿಂಹರಾಜಪುರಕ್ಕೆ ದಯಮಾಡಿಸಿದರು. ಮಹಾಶಯರೆ, ನಮ್ಮ ಪ್ರಭುಗಳಲ್ಲಿ ರಾಜ್ಯಹಿತಾಹಿತಸಂಬಂಧವಾದ ಚಿಂತನೆಯೂ ಮತ್ತು ಜಗದ್ಗುರು ಪೀಠದಲ್ಲಿ ಅಭಿಮಾನವೂ ಎಷ್ಟು ಗಾಢವಾಗಿದೆಯೋ ಅವರ ಬಂಧುವರ್ಗದವರಲ್ಲಿಯೂ ಹಾಗೇ ಇದೆ ಎಂಬುದಕ್ಕೆ ಇದೊಂದು ದೃಷ್ಟಾಂತವು. ಈ ಕಾರಣಗಳಿಂದಲೇ ನಮ್ಮ ದೇಶೀಯರ್ಯಾವತ್ತರೂ ಅಭೂತಪೂರ್ವವಾದ ಆನಂದವನ್ನು ವ್ಯಕ್ತಪಡಿಸುತ್ತಿರುವುದು ಯುಕ್ತವಾಗಿರುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಹೆಚ್ಚಿಯನ್ನು ತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಆಫೀಸ್, ಮೈಸೂರ್.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

16

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವಿಲ್ಲವರು ಅರ್ಧರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಕೆಟ್ ಡೈರಿ ಇನಾಂ.

ಈ ಸಸ್ತಿಯಲ್ಲಿ ಕಂಡ ಪೌಂಟೆನ್ ಪೇನಾವನ್ನು ತಂಸಿಕೊಳ್ಳುವವರಿಗೆ ಸೊಗಸಾದ ಪಾಕೆಟ್ ಡೈರಿಯನ್ನು ಇನಾಮಾಗಿ ಕೊಡುವೆವು. ಈ ಪೇನಾವು ವಿಲಾಯತಿಯಲ್ಲಿ ತಯಾರಾದದ್ದು. ಒಂದಾವರ್ತಿ ಇಂಕಿಯನ್ನು ತುಂಬಿದರೆ ಸುಮಾರು 500 ಮಾತುಗಳನ್ನು ಬರೆಯುವುದು.

ಕ್ರಯ ಡೈರಿ ಸಹಿತ ಪೇನಾ 1ಕ್ಕೆ 1—8—0.

26

ಜರ್ಮನ್ ಬೆಳ್ಳಿಯ ಕ್ಯಾಲೆಂಡರ್.

ಈ ಕ್ಯಾಲೆಂಡರುಗಳು ಈಗಲೇ ಬಂದುವು. ಇವನ್ನು ಜರ್ಮನ್ ಬೆಳ್ಳಿಯಿಂದ ಮಾಡಿದೆ. ಇದೊಂದರಲ್ಲೇ 10 ವರುಷಗಳ ಕ್ಯಾಲೆಂಡರ್ ಇದೆ. ಇವನ್ನು ಗೋಡೆಗೆ ತಗುಲಿಸಲೂ, ಮೇಜಿನ ಮೇಲೆ ಇಡಲೂ ಬಹು ಚೆನ್ನಾಗಿವೆ. ಇಂಗ್ಲಿಷ್ ನಮೂನೆಯವು ಬಣ್ಣವು ಎಂದಿಗೂ ಹೋಗದು.

ಕ್ರಯ ಕ್ಯಾಲೆಂಡರ್ 1ಕ್ಕೆ 1—8—0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89, ನಾರಾಯಣಮೊದಲಿಬೀದಿ, ಮದ್ರಾಸು.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್‌ಗಳಿಂದ ಮಾಡಿದೆ. ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು. ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ. 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
26 ಪಾರ್ಕ್‌ಟೌನ್ ಮದರಾಸು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್
51 ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವುವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಲೇಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5-0-0.

ವಿಳಾಸ:—ಪಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರ್‌ಪೇಟೆ, ಮದರಾಸು.

೧೯೨೧ನೆಯ ಇಸವಿ ಮಾರ್ಚಿ ತಾ|| ೨೦ರಿಂದ ೧೯೨೧ನೆಯ ಮಾರ್ಚಿ ತಾ|| ೨೬ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿ ನಾಮ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿಯಿಂದ ಫಾಲ್ಗುಣ ಬಹುಳ ತದಿಗೆವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಾನ ಮಾಸ
20	[1]ಭಾನು	ಏಕಾ	9-34	ಪುಷ್ಯ	2-2	8
21	[2]ಸೋಮ	ದ್ವಾ-ಉ3-40	54-11	ಮಘಾ	53-57	9
22	[3]ಮಂಗಳ	ಚತು	52-45	ಪುಬ	50-43	10
23	[4]ಬುಧ	ಪೌರ್ಣ	48-24	ಉಫ	48-4	11
24	[5]ಗುರು	ಪಾಡ್ಯ	44-56	ಹಸ್ತ	46-20	12
25	[6]ಶುಕ್ರ	ಬಿದಿ	42-34	ಚಿತ್ತ	45-40	13
26	ಶನಿ	ತದಿಗೆ	41-20	ಸ್ವಾತಿ	46-6	14

(1) ಸರ್ವತ್ರೈಕಾದಶಿ. ಚಂಪ್ರಪುರದ ಚಂದ್ರಮೌಳೀಶ್ವರ ಸ್ವಾಮಿ ರಥಃ. (2) ಪ್ರದೋಷಃ, ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ರಥಃ, ತಿರುಮಕೂಡಲ್ಲು ಅಗಸ್ತ್ಯೇಶ್ವರಸ್ವಾಮಿರಥಃ, ತಲಕಾಡು ವೈದ್ಯೇಶ್ವರಸ್ವಾಮಿ ರಥಃ. (3) ತಿ. ನರಸೀಪುರದಲ್ಲಿ ಪ್ರಹ್ಲಾದೋತ್ಸವ, ಮೇಲುಕೋಟೆಯಲ್ಲಿ ಚೆಲುವರಾಯಸ್ವಾಮಿ ರಥಃ. (4) ಕಾಮದಹನ, ಹೋಳೀಹಬ್ಬ, ಪ್ರಸನ್ನ ನಂಜುಂಡೇಶ್ವರಸ್ವಾಮಿ ರಥಃ. (5) ತಿ. ನರಸೀಪುರದಲ್ಲಿ ಗುಂಜಾನೃಸಿಂಹ ಸ್ವಾಮಿ ರಥಃ. (6) ಮೇಲುಕೋಟೆಯಲ್ಲಿ ಮಹಾಭಿಷೇಕ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ವಸಾ | ಘನಪಥಕೃತಾವತಾರಾ ಪತ್ಯಜ್ಞ ಸಭ್ಯತಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತೀಶಯಂಶದಾಪೂರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೇ ಇಸವಿ ಮಾರ್ಚಿ ತಾರೀಖು ೨೭ ನೆಯ ಭಾನುವಾರ (ಸಂಚಿಕೆ ೧೩

ಸಾಳ್ವದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವೇ ಹೇಳುವೆವು. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಹಿಡಿಯುವರುಚಿ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು,ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು. ಡಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
12 ವೈದ್ಯಶಾಲಾ, ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೩೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶಿವಸ್ತೋತ್ರ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೪ ನೇ ಪಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ.೧-೫-೦; ಸಟೀಕ ಶಿವಸಹಸ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ. ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಟೀಕ ವೀರಶೈವ ವಿವಾಹವಿಧಿ.	೦—೧೨—೦
ವಪೂಜಾವಿಧಿ.	೦—೧೪—೦
ಾರುಶೀಲಚರಿತ್ರೆ	೦— ೯—೦
ಂಬಾಸಿ	೦— ೮—೦

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೇರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಸುಖ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

11 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಬಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ, ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತ, ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದುಸಲ ತರಿಸಿ ನೋಡಿರಿ. ಡಾಬು 1ಕ್ಕೆ 3—0—0.

ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0.

ಕೆಂಪುಕಲ್ಲಿನವು ಜೊತೆ 4—0—0.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವ. ಶ್ರೀಮಂತರು ಗೌಳಿಗರೂ ಸಹ ಉಪಯೋಗಿಸಲು ಲಾಯಕ್ಕಾದವು.

ಕ್ರಯ 1ಕ್ಕೆ 1—4—0

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ಇತ್ತ ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತುರಾಯಿ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1. ರಾಗಮಾಲಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ಪಂಕದಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಾರ್ಜ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಭಂಗಾರದ ಉಂಗುರ 1. ಇವನ್ನು 15 ಬಹುಮಾನಗಳ ಸಹಿತ ಗಡಿಯಾರ1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 543,
27 ಪಾರ್ಕ್‌ಟೌನ್ ಮದರಾಸ್.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
	ಬಿಡಿ ಮಣಿಗಳು 1ಕ್ಕೆ ಕ್ರಯ		
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ವಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ಸೆಸೆವಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
6 ಕಂಪನಿ, ಚೌಕಂಬಾ ಕಾಶೀ.

ಭಕ್ತಿಕೋಧಕ ! ಮನೋಲ್ಲಾಸಿಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು

35

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರ ರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಉರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡಕಳ್ಳ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ಬಿಡುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೪ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು [illegible] ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ [illegible] ನೆಂಬ ಶಿವಲಿಖಿತದಲ್ಲಿ ಅಮೃತಮಹೀಂದ್ರಿಯವಾಳ್ಗಳನ್ನು [illegible] ಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ [illegible] ಕೊಡುವುದಿಲ್ಲ. ೨೧ ದಿನ ಸೇವಿಸುವ [illegible] ೧ಕ್ಕೆ ವಿ. ಪಿ. ಸಹ ರೂ. ೩—೦—೦.

ನಮ್ಮ ವಿಳಾಸ:—ಎಸ್. [illegible]

BANGALORE DISTRICT.

Abstract Notification No. H.C. 195/19-20, dated the 21st February 1921.

It is hereby notified that in accordance with the instructions of Government laid down in their Order No. Fl. 1279-85 G. F. 180-12-28, dated the 18th August 1919, the right, title and interest in the landed properties, belonging to the late Mr. Dalvoy Devaraj Urs and situated in the Taluks of Bangalore, Magadi and Chennapatna and mortgaged to Government, will be sold by public auction commencing from the 4th April 1921, with the consent of the representatives of the mortgager by the Assistant Commissioners in charge of the Taluks on the dates and at the places mentioned in the detailed notification printed on pages 116, 117 and 118 of Part IV of the Mysore Gazette dated the 24th February 1921.

Further particulars may be ascertained from the Taluk Offices concerned.

M. A. NARAYANA IYENGAR,
Deputy Commissioner,
Bangalore District.

3-3

ಈಗತಾನೇ ಅಚ್ಚಾಗಿದೆ.

ಹಿಂದೆ ವೀರಶೈವಗ್ರಂಥಪ್ರಕಾಶಿಕಾ ಮಾಸಪತ್ರದಲ್ಲಿ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರದ ೩ ಪ್ರಕರಣಗಳು ಮಾತ್ರ ಅಚ್ಚಾಗಿ ಇನ್ನೆರಡು ಪ್ರಕರಣಗಳು ಉಳಿದಿದ್ದುವು. ಆ ೪-೫ ನೆ ಪ್ರಕರಣಗಳು ಈಗ ಟೀಕಾಸಮೇತ ಅಚ್ಚಾಗಿರುತ್ತವೆ. ಇವುಗಳಲ್ಲಿ ಈ ಚರಿತ್ರದ ಮುಖ್ಯಭಾಗಗಳು ವಿಶೇಷವಾಗಿವೆ. ೨ ಪ್ರಕರಣಗಳೂ ಸೇರಿ ಬೈಂಡಾಗಿರುವ ಪುಸ್ತಕದ ಬೆಲೆ ವಿ. ಪಿ. ಯಿಂದ ೨-೫-೦. ೫ ಪ್ರಕರಣಗಳೂಸೇರಿ ಬೈಂಡಾಗಿರುವ ೧ ಸಾವಿರ ಪುಟಗಳಿಗೆ ಮೇಲ್ಪಟ್ಟಿರುವ ಪೂರ್ಣ ಗ್ರಂಥದ ಬೆಲೆ ೫ ರೂ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿಗಳು, ಅ|| ವಿದ್ವಾನ್,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಮಾರ್ಚಿ ತಾ|| ೨೭ನೆಯ ಭಾನುವಾರ.

ಹೊಗೆಬಂಡಿಗಳ ಕೊರತೆ.

ಸಾಮ್ರಾಜ್ಯಶಾಸನ ಸಭೆಯಲ್ಲಿ ಈ ವರ್ಷದ ಲೋಹಮಾರ್ಗಗಳ ವೆಚ್ಚಕ್ಕಾಗಿ ೧೭ ಕೋಟಿಯೂ ೬೮ ಲಕ್ಷ ಚಿಲ್ಲರೆ ರೂ. ಗಳನ್ನು ವೆಚ್ಚಮಾಡಲು ತೀರ್ಮಾನವಾಯಿತು. ಆ ಸಂದರ್ಭದಲ್ಲಿ ಡಾ|| ನಂದಲಾಲ್‌ರವರೇ ಮೊದಲಾದ ಕೆಲ ಸಭಿಕರು ಹೊಗೆಬಂಡಿಗಳಲ್ಲಿ ೩ನೆ ತರಗತಿಯ ಪ್ರಯಾಣಿಕರಿಗೆ ಉಂಟಾಗುತ್ತಿರುವ ಹಿಂಸೆಯೇ ಮೊದಲಾದುವುಗಳನ್ನು ಕುರಿತು ಉಪನ್ಯಾಸ ಮಾಡುವಾಗ-''ನಾವು ಇಷ್ಟು ದೊಡ್ಡ ಮೊತ್ತವನ್ನು ಈ ಶಾಖೆಗಾಗಿ ವ್ಯಯಮಾಡಿದರೂ ಪ್ರಯಾಣಿಕರಿಗೆ ವಾಚಾಮಗೋಚರವಾದಷ್ಟು ಕಷ್ಟಗಳುಂಟಾಗುತ್ತಿರುವುದು ತಪ್ಪಲಿಲ್ಲ. ಜನರು ತಮ್ಮ ಸರಕುಗಳನ್ನು ಸಾಗಿಸಲಿಕ್ಕೆ ಒಂದು ವ್ಯಾಗಿನನ್ನು ಪಡೆದುಕೊಳ್ಳಬೇಕಾದರೆ ಸ್ಟೇಷನ್‌ಮಾಸ್ಟರ ದಯೆಯನ್ನು ಸಂಪಾದಿಸಿಕೊಳ್ಳದಿದ್ದರೆ ಸಾಧ್ಯವೇ ಆಗುವುದಿಲ್ಲ. ಪ್ರಯಾಣ ವಿಷಯದಲ್ಲೂ ಭಾರತೀಯರಿಗಿಂತಲೂ ಆಂಗ್ಲೇಯರಿಗೆ ವಿಶೇಷಾದರಣೆಯನ್ನೂ ಮರ್ಯಾದೆಯನ್ನೂ ತೋರಿಸಿ ಪಕ್ಷಪಾತ ಮಾಡುತ್ತಾರೆ. ಸಾಗಿಸತಕ್ಕ ಸಾಮಾನುಗಳಲ್ಲಿ ಎಷ್ಟನ್ನೋ ಮಧ್ಯೇ ಅಪಹರಿಸಿಬಿಡುತ್ತಾರೆ. ಹಲವರು ಪಾರ್ಸಲುಗಳಲ್ಲಿ ಕಳುಹಿಸಬೇಕಾದ ಸಾಮಾನುಗಳನ್ನು ತಮ್ಮ ಸ್ನೇಹಿತರಾರಾದರೂ ಹೋಗುತ್ತಿದ್ದರೆ ಅವರ ಕೈಯಲ್ಲಿ ಕಳುಹಿಸುತ್ತಾರೆ. ಏಕೆಂದರೆ—ರೈಲ್ವೆ ಉದ್ಯೋಗಿಗಳಲ್ಲಿ ನಂಬುಗೆ ತಪ್ಪಿಹೋಗಿದೆ. ಹೀಗೆ ಹೊಗೆಬಂಡಿಗಳಲ್ಲಿ ಕಳವು ನಡೆಯುವುದನ್ನು ತಪ್ಪಿಸದಿದ್ದರೆ ಅವುಗಳ ವರಮಾನವು ತಗ್ಗಿಹೋಗುವುದು. ಇದಲ್ಲದೆ ೩ನೆ ತರಗತಿಯ ಬಂಡಿಗಳಲ್ಲಿ ನಿಯಮಿತ ಸಂಖ್ಯೆಗಿಂತಲೂ ಬಹಳ ಹೆಚ್ಚಾದ ಜನರನ್ನು ಮೂಟೆಗಳನ್ನು ತುಂಬುವಂತೆ ತುಂಬಿ ಸಾಗಿಸುವರು. ಪ್ಲಾಟ್‌ಫಾರಮ್ಮುಗಳಲ್ಲಿ ನೀರನ್ನು ಕೊಡಲು ನಿಯಮಿತರಾಗಿರತಕ್ಕ ಜನರನ್ನು ಸ್ಟೇಷನ್‌ಮಾಸ್ಟರುಗಳು ತಮ್ಮ ಅಡುಗೆಮನೆಯ ಕೆಲಸಕ್ಕೆ ಉಪಯೋಗಿಸಿಕೊಳ್ಳುವರು. ಇದರಿಂದ ಪ್ರಯಾಣಿಕರಿಗೆ ಕಾಲಕಾಲಕ್ಕೆ ನೀರು ಒದಗುವುದಿಲ್ಲ. ಇತ್ಯಾದಿ ಕಷ್ಟಗಳೆಲ್ಲಾ ಇರುವಾಗ ಅವೊಂದನ್ನೂ ನಿವಾರಿಸದೆ ಇನ್ನಷ್ಟು ಬಾಡಿಗೆ ದರಗಳನ್ನು ಹೆಚ್ಚಿಸುವುದೂ, ಈ ಶಾಖೆಗಾಗಿ ವಿಪರೀತ ಧನವ್ಯಯ ಮಾಡುವುದೂ ಸರಿಯಲ್ಲ'' ಎಂದು ವಾದಿಸಿದರು.

ಇವಕ್ಕೆಲ್ಲಾ ಸರ್ಕಾರದ ಪಕ್ಷದಿಂದ ಸರ್ ಜಾರ್ಜ್ ಬಾರ್ನೆಸ್‌ರವರು ಉತ್ತರಕೊಟ್ಟುದರಲ್ಲಿ-ರೈಲ್ವೆ ಉದ್ಯೋಗಿಗಳೊಳಗೆ ಲಂಚಗೋರತನವು ಹೆಚ್ಚಿಕೊಂಡಿದೆಯೆಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆಂದೂ, ಇದನ್ನು ನಿಲ್ಲಿಸುವುದಕ್ಕಾಗಿ ನಾವು ಪ್ರಯತ್ನಮಾಡುತ್ತಿದ್ದೇವೆಂದೂ, ಆದರೆ ಅದಕ್ಕೆ ಪ್ರಜೆಗಳ ಸಾಹಾಯ್ಯವು ದೊರೆಯುವುದಿಲ್ಲವೆಂದೂ, ಮಧ್ಯಪ್ರಾಂತದಲ್ಲಿ ಒಬ್ಬಾತನು ತನ್ನ ಸಾಮಾನುಗಳನ್ನು ಸಾಗಿಸುವುದಕ್ಕಾಗಿ ಒಂದು ವ್ಯಾಗಿನ್ನನ್ನು ಪಡೆಯಲಿಕ್ಕೆ ಸ್ಟೇಷನ್‌ಮಾಸ್ಟರಿಗೆ ೫೦ ರೂ. ಲಂಚ ಕೊಟ್ಟೆನೆಂದು ನನ್ನೊಡನೆ ಹೇಳಿದನೆಂದೂ, ಇದಕ್ಕೆ ಸಾಕ್ಷ್ಯ ಕೊಟ್ಟರೆ ಕೇಸು ಮಾಡುತ್ತೇನೆಂದು ನಾನು ಆತನೊಡನೆ ಹೇಳಲಾಗಿ ಆತನು ಭಯಪಟ್ಟು ಹಿಂದೆಗೆದನೆಂದೂ, ಇಂಥ ದುಷ್ಕೃತ್ಯಗಳನ್ನು ಮೂಲೋತ್ಪಾಟನ ಮಾಡಲಿಕ್ಕೆ ಪ್ರಜೆಗಳು ನಿರ್ಭಯವಾಗಿ ಸರ್ಕಾರದವರಿಗೆ ಸಹಾಯಮಾಡಬೇಕೆಂದೂ, ಆಂಗ್ಲೇಯರಿಗೂ ಭಾರತೀಯರಿಗೂ ಮರ್ಯಾದಾಭೇದವನ್ನು ಭಾರತೀಯ ಸ್ಟೇಷನ್‌ಮಾಸ್ಟರುಗಳು ಮಾಡುತ್ತಾರೆಯೇ ಹೊರತು ಯೂರೋಪ್ಯ ಸ್ಟೇಷನ್‌ಮಾಸ್ಟರುಗಳು ಮಾಡುವುದಿಲ್ಲವೆಂದೂ, ಹಾಗೇನಾದರೂ ನಡೆದರೆ ಅಂಥ ಕಷ್ಟನಿಷ್ಠುರಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೆ ನಿಲಿಪಡಿಸುವರೆಂದೂ ಹೇಳಿ, ಆಕ್ಷೇಪರಂಧ್ರಗಳಿಗೆಲ್ಲಾ ಮಣ್ಣು ಮೆತ್ತಿ ತೊಪ್ಪೆ ಸಾರಿಸಿಬಿಟ್ಟರು. ೩ನೆ ತರಗತಿಯ ಪ್ರಯಾಣಿಕರ ಬಂಡಿಗಳ ವಿಷಯವಾಗಿ ಇವರು ಹೇಳಿದ ಉತ್ತರವೀಗ ಇದುವರೆಗೆ ಯಾರೂ ಹೇಳದ ಕೇಳದ ಅದ್ಭುತ ಸಂಗತಿಯಾಗಿದ್ದಿತು. ಅದೇನೆಂದರೆ—ಈ ತರಗತಿಯ ಪ್ರಯಾಣಿಕರು ತಮ್ಮ ಆಪ್ತಬಾಂಧವಾದಿಗಳೆಲ್ಲಾ ಸೇರಿ ಒಂದೇ ಕಡೆಯೇ ಕುಳಿತುಕೊಳ್ಳಬೇಕೆಂದು ಕೂಡುವುದರಿಂದ ಅಷ್ಟು ತಿಕ್ಕಾಟ ಮುಕ್ಕಾಟಗಳಾಗುತ್ತವಂತೆ! ಸರ್ ಬಾರ್ನೆಸ್‌ರವರಿಗೆ ಈ ಉತ್ತರದ ಹಂಚಿಕೆಯನ್ನು ಯಾರು ಹೇಳಿಕೊಟ್ಟರೋ ತಿಳಿಯದು. ಸಾಲಾಗಿ ನಿಂತಿರುವ ಬಂಡಿಗಳಲ್ಲೆಲ್ಲಾ ಜಾಗವನ್ನು ತಡಕುತ್ತ, ಒಳಗಿದ್ದವರ ಮುಂದೆ ಈಚೆ ನಿಂತಿರುವವರು ಸ್ಥಳಕ್ಕಾಗಿ ಹಲ್ಕಿರಿದು ಬೇಡುತ್ತಾ, ನಿಲ್ಲಲು ಸ್ಥಳ ದೊರೆದರೆ ಸಾಕೆಂದು ಕಿಟಕಿಗಳಲ್ಲಿ ದೂರಿ ಮೂತ್ರವಿಸರ್ಜನದ ಕೋಣೆಗಳಲ್ಲೂ ೨ ಬೆಂಚುಗಳ ಮಧ್ಯದ ಓಣಿಯಲ್ಲೂ ನಿಂತೇ ಪ್ರಯಾಣಮಾಡುವ, ಮತ್ತು ವ್ಯಾಗಿನ್ನುಗಳಲ್ಲಿ ಜಾಗವು ಸಿಕ್ಕಿದರೆ ಸಾಕೆಂದು ಅವುಗಳ ದುರ್ವಾಸನೆಯನ್ನೂ ಬಿಸಿಲ ಬೇಗೆಯನ್ನೂ ಸಹ ಲೆಕ್ಕಿಸದೆ ಪ್ರಯಾಣ ಮಾಡುತ್ತಿರುವ ೩ನೆ ತರಗತಿಯ ಪ್ರಯಾಣಿಕರಿಗೆ ಆಪ್ತಬಾಂಧವಾದಿಗಳ ಜತೆಯನ್ನು ಕೋರಿ ಅದನ್ನು ಹೊಂದಿ ಪ್ರಯಾಣ ಮಾಡುವಷ್ಟು ಸೌಖ್ಯವು ಸ್ವಪ್ನದಲ್ಲಾದರೂ ಲಭಿಸುವುದುಂಟೆ? ಇಂಥ ಉತ್ತರವನ್ನು ಹೇಳಿಬಿಟ್ಟು ಸಮಯವನ್ನು ದಾಟಿಸುವ ಅಧಿಕಾರಿಗಳು ಇವಕ್ಕೆಲ್ಲಾ ಸ್ವಾನುಭವವನ್ನು ದೃಷ್ಟಾಂತವಾಗಿ ಹೇಳಬಲ್ಲರೆ? ಸರ್ಕಾರದಧಿಕಾರಿಗಳಿಗೆಲ್ಲಾ ಪ್ರಯಾಣಕಾಲದಲ್ಲಿ ೧-೨ನೆ ತರಗತಿಯ ಟಿಕೆಟ್ ಬತ್ಯವನ್ನು ಕೊಡದೆ ೩ನೆ ತರಗತಿಯ ಬಂಡಿಗಳಲ್ಲೇ ಪ್ರಯಾಣಮಾಡಿಸುವಂತೆ ಏರ್ಪಾಟಾದರೆ ಅದರ ಕಷ್ಟಸುಖಗಳೆಲ್ಲಾ ಗೊತ್ತಾದೀತೇ ಹೊರತು ಅದುವರೆಗೂ ಈ ಸಂಬಂಧವಾಗಿ ಪ್ರಜೆಗಳೂ ಅವರ ಪ್ರತಿನಿಧಿಗಳೂ ಹೇಳಿಕೊಳ್ಳುವ ಮಾತೆಲ್ಲಾ ಅರಣ್ಯರೋದನವಾಗುವುದೇ ನಿಜವೆಂದು ಕಾಣುತ್ತದೆ.

ಆದರೆ ಕಟ್ಟ ಕಡೆಯಲ್ಲಿ ರೈಲ್ವೆ ಬೋರ್ಡ್ ಅಧ್ಯಕ್ಷರಾದ ಕರ್ನಲ್ ವಾಗ್ಹಾರ್ನ್‌ರವರು—೩ನೆ ತರಗತಿಯ ಬಂಡಿಗಳನ್ನು ಹೆಚ್ಚಿಸಿದರೆ ಈ ತೊಂದರೆಗಳು ನಿವೃತ್ತವಾಗುವುವೆಂದೂ, ಅದಕ್ಕೆ ತಕ್ಕಷ್ಟು ಧನಸಹಾಯವಾದರೆ ಮಾಡಬಹುದೆಂದೂ ಹೇಳಲಾಗಿ, ಸಭಿಕರು ಬಜೆಟ್ಟಿನಲ್ಲಿ ಈ ಶಾಖಾ ವ್ಯಯಕ್ಕಾಗಿ ಸೂಚಿಸಿದ್ದಷ್ಟು ಹಣವನ್ನೆಲ್ಲಾ ವಿನಿಯೋಗಿಸಲು ಒಪ್ಪಿಗೆ ಕೊಟ್ಟರು. ೧೮ ಕೋಟಿಯವರೆಗೂ ಈ ವರ್ಷದಲ್ಲಿ ಈ ಶಾಖೆಗೆ ವೆಚ್ಚವಾಗುತ್ತದೆ. ಇದರಿಂದ ೩ನೆ ತರಗತಿಯ ಬಂಡಿಗಳ ಕೊರತೆಯು ಎಷ್ಟುಮಟ್ಟಿಗೆ ತಪ್ಪುತ್ತದೋ ನೋಡಬೇಕು.

ಮದ್ರಾಸು ಗೌರ್ನರವರ ಹಿತಬೋಧೆ.

ಕಳೆದ ತಾ|| ೧೮ ರಲ್ಲಿ ಮದ್ರಾಸು ಪಚ್ಚಯಪ್ಪ ಕಲಾಶಾಲೆಯ ವಾರ್ಷಿಕ ವರ್ಧಂತ್ಯುತ್ಸವ ಸಭೆಯು ಅಲ್ಲಿಯ ಗೌರ್ನರವರಾದ ಲಾರ್ಡ್ ವೆಲ್ಲಿಂಗ್ಡನ್‌ರವರ ಅಧ್ಯಕ್ಷತೆಯಿಂದ ಜರುಗಿತು. ಆ ಸಮಯದಲ್ಲಿ ಅವರು ವಿದ್ಯಾರ್ಥಿಗಳಿಗೆ ಮಾಡಿದ ಹಿತೋಪದೇಶವು ಸರ್ವರಿಗೂ ಶ್ರಾವ್ಯವಾಗಿರುವುದು. ಏನೆಂದರೆ—''ಭರತಖಂಡದ ಪರಿಪಾಲನೆಯ ಭಾರವೆಲ್ಲವೂ ವಿದ್ಯಾರ್ಥಿಗಳಾಗಿರುವ ನಿಮ್ಮ ಮೇಲೆಯೇ ಉತ್ತರತ್ರ ಬೀಳುವುದು. ವಿದೇಶೀಯರಾಗಿರುವ ನಾವು ಈ ಭೂಮಿಯನ್ನು ಶಾಶ್ವತವಾಗಿ ಪರಿಪಾಲಿಸಿಕೊಂಡಿರಬೇಕೆಂದಿರುವುದಿಲ್ಲ. ನಿಮ್ಮನ್ನು ರಾಜ್ಯಪರಿಪಾಲನಾರ್ಹರನ್ನಾಗಿ ಮಾಡಿ ನಾವು ಹೊರಟು ಹೋಗುತ್ತೇವೆ. ಅಂಥ ಸಮಯವು ಸಮೀಪವಾಗುತ್ತಿದೆ. ಆದರೆ ನೀವು ಸಹಾಯನಿರಾಕರಣ ವಾದಿಗಳ ಮಾಯಾಜಾಲಕ್ಕೆ ಬೀಳದೆ ದೇಶವನ್ನುದ್ಧರಿಸಿರಿ. ನಾನು ನಿಮ್ಮಗಳಿಗೆ ಮೂರು ವಿಷಯಗಳನ್ನು ತಿಳಿಯಿಸಬೇಕೆಂದಿದ್ದೇನೆ. ಈ ದಿವಸ ನೀವು ಇಷ್ಟು ಮಂದಿಗಳು ಇಲ್ಲಿ ಕೂಡಿರುವುದರಿಂದಲೂ ಬಹುಮಾನಗಳನ್ನು ಪಡೆದುಕೊಂಡಿರುವುದರಿಂದಲೂ, ಸಹಾಯನಿರಾಕರಣವು ಉತ್ತಮವಾದುದಲ್ಲವೆಂದು ನೀವು ಗ್ರಹಿಸಿರುವಿರೆಂದು ವ್ಯಕ್ತವಾಗುತ್ತದೆ. ಈ ಆಧಿಪತ್ಯದಲ್ಲಿ ನೂರಕ್ಕೆ ೯೮ ಮಂದಿಗಳು ಸಹಾಯನಿರಾಕರಣವನ್ನು ಅನುಮತಿಸಿಲ್ಲ. ನೀವೂ ಅಂಥವರಲ್ಲಿ ಸೇರಿದವರೇ. ಆದರೆ ನೀವು ಆ ವಿಷಯವನ್ನು ನಿರ್ಭೀತಿಯಿಂದಲೂ ಮನೋಧೈರ್ಯದಿಂದಲೂ ನಿಮ್ಮ ಒಡನಾಡಿಗಳಾದ ಸಹಾಯನಿರಾಕರಣವಾದಿಗಳಿಗೆ ಸ್ಪಷ್ಟವಾಗಿ ಬೋಧಿಸಿರಿ. ಭಯಪಡಬೇಡಿರಿ. ಯಾವಾಗಲೂ ಉತ್ತಮ ವಿಷಯಗಳನ್ನೇ ಗ್ರಹಿಸಿರಿ. ಸದಾ ಧೈರ್ಯೋತ್ಸಾಹ ಸಂಪನ್ನರಾಗಿದ್ದರೆ ಶುಭಫಲವೇ ಉಂಟಾಗುವುದೆಂಬುದರಲ್ಲಿ ನಂಬುಗೆಯಿಡಿರಿ. ನೀವೆಲ್ಲರೂ ಬುದ್ಧಿಶಾಲಿಗಳು. ಆದುಕಾರಣ ಸಹಾಯ ನಿರಾಕರಣದಿಂದುಂಟಾಗುವ ನಷ್ಟಗಳನ್ನು ಕುರಿತು ನಾನು ನಿಮಗೆ ಹೇಳಬೇಕಾದ ಅವಶ್ಯಕತೆಯೇನೂ ಇಲ್ಲ. ಇತರಾಧಿಪತ್ಯಗಳ ಬಾಲಕರಂತಲ್ಲದೆ ನೀವು ವಿದ್ಯಾಶಾಲೆಗಳಲ್ಲಿದ್ದುಕೊಂಡು ವಿದ್ಯಾಸಂಗ್ರಹಮಾಡುತ್ತಿರುವುದರಿಂದ ಪ್ರಶಂಸಾಪಾತ್ರರಾಗಿರುತ್ತೀರಿ. ಇದೇ ನಿಮ್ಮಗಳ ವಿವೇಕಕ್ಕೆ ದೃಷ್ಟಾಂತವು. ನಿಮ್ಮ ದೃಷ್ಟಿಗಳನ್ನು ಪರಿಶ್ರಮ ವಿಷಯಗಳ ಕಡೆಗೆ ಮರಳಿಸಿರಿ. ಪಾರಿಶ್ರಾಮಿಕಾಭ್ಯುದಯಕ್ಕಾಗಿ ಪ್ರಯತ್ನಪಡಿ. ರೆಡ್ಡಿ ನಾಯಿಡುಯವರು (ಪಾರಿಶ್ರಮ ವಿಷಯಕಮಂತ್ರಿ) ನಿಮಗೆ ಸರ್ವ ವಿಧದಲ್ಲೂ ಸಹಾಯಮಾಡುವರು. ನೀವು ಸರ್ಕಾರಿಯುದ್ಯೋಗಗಳಿಗಾಗಿ ಆಶಿಸಿ ಪ್ರಯತ್ನಪಡಬೇಡಿರಿ. ನೀವು ಅಭ್ಯಸಿಸುತ್ತಿರುವಂಥ ವಿದ್ಯೆಯನ್ನು ಗಾಂಧಿ ಮೊದಲಾದವರು ಸ್ವತಃ ಬೇರೆ ಶಾಲೆಗಳಲ್ಲಿ ಅನುಗ್ರಹಿಸುವಂತೆ ಆಗುವವರೆಗೂ ನೀವು ಅವರುಗಳ ಮಾತುಗಳಿಗೆ ಕಿವಿಗೊಡಬೇಡಿರಿ. ಈ ದೇಶದಲ್ಲಿರುವ ಕಳಾಶಾಲೆಗಳೆಲ್ಲಾ ಬೇಗನೆ ಸಾಶ್ರಮ ಕಳಾಶಾಲೆ (ರೆಸಿಡೆನ್ಸಿಯಲ್ ಕಾಲೇಜು) ಗಳಾಗಿ ಮಾಡಲ್ಪಡುವುವು. ಇದನ್ನು ನೀವು ನಂಬಿರಿ.''

ನೂತನ ರಾಜಪ್ರತಿನಿಧಿಗಳು.

ಕಳೆದ ತಾ|| ೧೫ ರಲ್ಲಿ ಲಂಡನ್‌ಪಟ್ಟಣದ ವಕೀಲರೆಲ್ಲಾ ಸೇರಿ ನಮ್ಮ ಹೊಸ ವೈಸರಾಯಿ ಲಾರ್ಡ್ ರೀಡಿಂಗ್‌ರವರಿಗೆ ಒಂದು ಔತಣವನ್ನು ಮಾಡಿಸಿದರು. ಯಾವಾಗಲೂ ಸೇರದಿದ್ದಷ್ಟು ನ್ಯಾಯಾಧಿಪತಿಗಳೂ ವಕೀಲರೂ ಆ ಸಭೆಗೆ ಬಂದಿದ್ದರು. ಲಾರ್ಡ್ ಬರ್ಕನ್‌ಹೇಡ್‌ರವರು ಸಭಾಧ್ಯಕ್ಷರಾಗಿದ್ದರು. ಆಗ ಅವರು ಮಾಡಿದ ಭಾಷಣದಲ್ಲಿ ಲಾರ್ಡ್ ರೀಡಿಂಗ್‌ರವರ ಜೀವಿತದಂತೆ ಆಕರ್ಷಣೀಯವೂ ಭಯಾನಕವೂ ವಿಚಿತ್ರವೂ ಆದ ಜೀವಿತಗಳು ಬಹಳ ವಿರಳವೆಂತಲೂ, ೪೦ ವರ್ಷಗಳ ಹಿಂದೆ ಕಲ್ಕತ್ತಾ ಬಳಿಯಣ ಹೂಗ್ಲಿನದಿಯಲ್ಲಿ ಹೋಗುತ್ತಿದ್ದ ಹಡಗಿನಲ್ಲಿ ಒಬ್ಬಾನೊಬ್ಬ ರೂಫಸ್ ಎಂಬ ಬಾಲಕನು ಯಾವುದೋ ಒಂದು ಹಿತ್ತಾಳೆಯ ವಸ್ತುವಿಗೆ ಮೆರುಗುಹಾಕುತ್ತ ಇದ್ದನೆಂತಲೂ, ಆ ಬಾಲಕನಾರೆಂದರೆ ಈಗಣ ರೀಡಿಂಗ್ ಪ್ರಭುವೇ ಎಂತಲೂ, ಅಂದಿನಿಂದಲೂ ಈತನು ಎಷ್ಟೆಷ್ಟೋ ಕಷ್ಟಪಟ್ಟು ಅವುಗಳನ್ನೆಲ್ಲಾ ದಾಟಿ ದಡವನ್ನು ಸೇರಿರುವನೆಂತಲೂ, ಈ ರೀಡಿಂಗ್‌ಪ್ರಭುವಿನಲ್ಲಿ ಅನೇಕ ಸದ್ಗುಣಗಳಿರುವುವೆಂತಲೂ, ತನಗಿಂತ ಎಷ್ಟು ಕೀಳಾದವರಲ್ಲೂ ವಿನಯವೂ ಸಹನೆಯೂ ನ್ಯಾಯಪ್ರವರ್ತನೆಯೂ ಈತನಲ್ಲಿರುವ ಮುಖ್ಯ ಸದ್ಗುಣಗಳೆಂತಲೂ, ಪೂರ್ವದೇಶೀಯರು ಈತನ ಸಾನುಭೂತಿ ನ್ಯಾಯಕರಾಭಿಲಾಷೆಗಳನ್ನು ನಂಬಿಕೊಂಡಿರಬಹುದೆಂತಲೂ ವರ್ಣಿಸಿದರು. ಈ ವರ್ಣನೆಗಳನ್ನು ಕೇಳುವಲ್ಲಿ ಲಾರ್ಡ್ ರೀಡಿಂಗರು ಭರತಖಂಡದ ಪೂರ್ವ ಪರಿಚಿತರೆಂತಲೂ, ಆಗರ್ಭ ಶ್ರೀಮಂತರಾಗಿರದ ಕಾರಣ ದೀನಜನರ ಕಷ್ಟಸುಖಾದಿಗಳ ಅನುಭವವನ್ನೆಲ್ಲಾ ಹೊಂದಿದವರೆಂತಲೂ ತಿಳಿಯಬಹುದಾಗಿದೆ. ಮೇಲೆ ಕಂಡ ಭಾಷಣಕ್ಕೆ ರೀಡಿಂಗ್ ಪ್ರಭುಗಳು ಉತ್ತರ ಕೊಡುವಾಗ್ಗೆ—''ನನ್ನ ಪರಿಪಾಲನೆಯ ಕೊನೆಯಲ್ಲಿ, ಭರತಖಂಡವನ್ನು ಉತ್ತಮಗೊಳಿಸಲಿಕ್ಕೆ ಈತನು ಬಹಳ ಪಾಡುಪಟ್ಟನು ಎಂಬುದಾಗಿ ಸರ್ವರೂ ಹೇಳಿಯೇತೀರುವಂತೆ ಮಾಡಬೇಕೆಂಬ ಬಾಧ್ಯತೆಯನ್ನು ಹೊತ್ತೇ ನಾನು ಈ ನೂತನ ಪದವಿಯನ್ನು ವಹಿಸಲು ಅಂಗೀಕರಿಸಿದೆನು'' ಎಂದು ಹೇಳಿದರು. ಈ ಘನತರವಾದ ವಾಗ್ದಾನವು ಭಾರತೀಯರಿಗೆ ಆನಂದಪ್ರದವಾಗಿದೆ. ಆಚರಣೆಯಲ್ಲಿ ಸಾರ್ಥಕವಾದರೆ ರೀಡಿಂಗ್‌ರವರು ಇದುವರೆಗಣ ವೈಸ್ರಾಯರಲ್ಲೆಲ್ಲಾ ಅಗ್ರಗಣ್ಯರೆಂಬ ಕೀರ್ತಿಯನ್ನು ತಾಳುವರು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ಮಂಗಳವಾರ ರಾತ್ರಿ ರಾಜಧಾನಿಗೆ ಚಿತ್ತೈಸಿದ್ದು ಬುಧವಾರ ನಂಜನಗೂಡಿಗೆ ದಯಮಾಡಿ ತೆಪ್ಪೋತ್ಸವವನ್ನು ಪರಾಂಬರಿಸಿಕೊಂಡು ಬಂದು ಗುರುವಾರ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿತು.

ಬೆಂಗಳೂರು ಸಿಟಿ ಪ್ರಜಾಸಂಖ್ಯೆಯು: ೧೯೧೧ ರಲ್ಲಿ ೪೫೯೯೬ ಗಂಡುಸರು ಮತ್ತು ೪೨೬೫೪ ಹೆಂಗುಸರು ಒಟ್ಟು ೮೮,೬೫೧ ಇದ್ದುದಕ್ಕೆ, ೧೯೨೧ರಲ್ಲಿ ೬೨,೦೩೭ ಗಂಡುಸರು ಮತ್ತು ೫೩,೮೩೮ ಹೆಂಗುಸರು ಒಟ್ಟು ೧,೧೫,೮೭೫ ಇರುವುದಾಗಿಯೂ ಇದರಿಂದ ೧೦ ವರ್ಷಗಳಲ್ಲಿ ೨೭,೨೨೫ ಜನಸಂಖ್ಯೆಯು ಹೆಚ್ಚಿರುವುದಾಗಿಯೂ ಗೊತ್ತಾಗಿರುವುದು.

ಪ್ರಥಮ ರಾಜಕುಮಾರಿಯರಾದ ಸೌ|| ಜಯಲಕ್ಷಮ್ಮಣ್ಣಿಯವರ ವರ್ಷದ ವರ್ಧಂತ್ಯುತ್ಸವವು ಕಳೆದ ಮಂಗಳವಾರ ರಾಜಧಾನಿಯಲ್ಲಿ ನಡೆದು ರಾಜಬಂಧುಗಳಿಗೆ ಔತಣವು ಮಾಡಿಸಲ್ಪಟ್ಟಿತು. ಈ ಉತ್ಸವಕ್ಕಾಗಿ ಶ್ರೀ ವಾಣೀವಿಲಾಸ ಸನ್ನಿಧಿಯವರೂ, ದಿವಾನ್ ಕಾಂತರಾಜ ಅರಸಿನವರೂ ದಯಮಾಡಿಸಿದ್ದರು. ದಿವಾನರು ಬುಧವಾರ ಹಿಂತಿರುಗಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

ಕಳೆದ ಸೋಮವಾರ ನಂಜನಗೂಡಿನಲ್ಲಿ ನಡೆಯಬೇಕಾಗಿದ್ದ ನಂಜುಂಡೇಶ್ವರನ ರಥದ ಗಾಲಿಗಳಿಗೆ ಹಾಕಿದ್ದ ಕಬ್ಬಿಣದ ದೂರಿಗಳು ಭಾರಕ್ಕೆ ಮುರಿದುಹೋದುದರಿಂದ ರಥವು ಮುಂದಕ್ಕೆ ಹರಿಯಲಿಲ್ಲವೆಂದೂ ಮಾರನೆ ದಿನ ಬೆಳಗ್ಗೆ ರಥವು ಸರಿಪಡಿಸಲ್ಪಟ್ಟು ಎಳೆಯಲ್ಪಟ್ಟಿತೆಂದೂ ತಿಳಿಯಬಂದಿದೆ. ಯಾತ್ರಿಕರ ಸಂಖ್ಯೆಯು ಸಾಮಾನ್ಯವಾಗಿದ್ದಿತಂತೆ. ದೈವಾನುಗ್ರಹದಿಂದ ಯಾರಿಗೂ ಅಪಾಯವಾಗಲಿಲ್ಲ.

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ ಸಂಗಮದ ರಾಮೇಶ್ವರಸ್ವಾಮಿಯವರ ರಥೋತ್ಸವವು ಮತ್ತು ಜಾತ್ರೆಯು ಪದ್ಧತಿಮೇರೆ ೧೯೨೧ ನೆ ಇಸವಿ ಏಪ್ರೇಲ್ ತಿಂಗಳು ತಾ|| ೧೭ ರಿಂದ ೧೯ರ ವರೆಗೆ ಮೂರು ದಿವಸಗಳಲ್ಲಿ ನಡೆಯುವುದರಿಂದ ಭಕ್ತಾದಿಗಳು ಬಂದು ದೇವರ ಸೇವಾರ್ಥವನ್ನು ಮಾಡಿಕೊಂಡು ಕೃತಾರ್ಥರಾಗಬೇಕಾಗಿ ಈ ಮೂಲಕ ಸಂಗಮ ಮಠದ ಸರ್ವಾಧಿಕಾರಿ ರೇವಣಾರಾಧ್ಯರು ಅಪೇಕ್ಷಿಸುತ್ತಾರೆ.

ಮೈಸೂರು ಕೃಷ್ಣರಾಜ ಆಸ್ಪತ್ರೆಯಲ್ಲಿ ಗಂಡುರೋಗಿಗಳಿರುವ ವಾರ್ಡುಗಳಿಗೆ ಕೃಷ್ಣರಾಜವಾರ್ಡ್, ನರಸಿಂಹರಾಜವಾರ್ಡ್, ಚಾಮರಾಜೇಂದ್ರವಾರ್ಡ್ ಮತ್ತು ಶಸ್ತ್ರಚಿಕಿತ್ಸೆಯ ಸ್ಪೆಷಲ್‌ವಾರ್ಡಿಗೆ ಆರ್ಮುಗಂವಾರ್ಡ್ ಎಂದೂ, ಹೆಣ್ಣು ರೋಗಿಗಳಿರುವ ವಾರ್ಡುಗಳಿಗೆ ವಾಣೀವಿಲಾಸವಾರ್ಡ್, ಲಕ್ಷ್ಮೀವಿಲಾಸವಾರ್ಡ್. ಮಕ್ಕಳವಾರ್ಡಿಗೆ ಜಯಚಾಮರಾಜವಾರ್ಡ್ ಎಂದೂ, ಕೆಳಭಾಗದಲ್ಲಿರುವ ವಾರ್ಡುಗಳಿಗೆ ಕಾಂತರಾಜಅರಸ್ ವಾರ್ಡ್, ನಂಜಪ್ಪವಾರ್ಡ್ ಎಂದೂ ನಾಮಕರಣಮಾಡಲು ಸರ್ಕಾರದಪ್ಪಣೆಯಾಗಿದೆ.

೧೯೨೧ ನೆಯ ಮಾರ್ಚಿ ತಾ|| ೧೮ ರಲ್ಲಿ ಸಂಸ್ಥಾನದಲ್ಲೆಲ್ಲಾ ನಡೆದ ಜನಪರಿಗಣಿತಿಯಲ್ಲಿ ಬೆಂಗಳೂರು ದಂಡೂಸೇರಿ ಸಂಸ್ಥಾನದ ಒಟ್ಟು ಜನಸಂಖ್ಯೆಯು ೫೯,೭೬,೬೬೦ ಇದರಲ್ಲಿ ೩೦,೪೫,೯೯೯ ಗಂಡುಸರೆಂದೂ, ೨೯,೩೦,೬೬೧ ಹೆಂಗುಸರೆಂದೂ ಗೊತ್ತಾಗಿರುವುದು. ೧೯೧೧ನೆ ಇಸವಿಯ ಜನಸಂಖ್ಯೆಗೂ ಈಗಣದಕ್ಕೂ ತಾಳೆನೋಡಿದಲ್ಲಿ ೧,೭೦,೪೬೭ ಹೆಚ್ಚಿದೆ. ಶೇಕಡಾ ೨.೯೩ ರಂತೆ ಹೆಚ್ಚಿದಂತಾಯಿತು. ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳ ವಿನಾ ಇತರ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಪ್ರಜಾಸಂಖ್ಯೆಯು ಹೆಚ್ಚಿರುತ್ತದೆ. ಆದರೆ ಶಿವಮೊಗ್ಗ ಡಿ|| ನಲ್ಲಿ ೨೪,೨೮೭ ಮತ್ತು ಕಡೂರು ಡಿ|| ನಲ್ಲಿ ೪೪೩೨ ಜನಸಂಖ್ಯೆ ಕಡಮೆಯಾಗಿರುತ್ತದೆ. ಎಂದು ಸೆನ್ಸಸ್ ಸೂಪರಿಂಟೆಂಡೆಂಟರು ತಿಳಿಸಿರುತ್ತಾರೆ.

ಅರಸೀಕೆರೆ ತಾಲ್ಲೂಕು ಹೊಳಲಕೆರೆ ಶ್ರೀ ಪ್ರಸನ್ನ ರಾಮೇಶ್ವರಸ್ವಾಮಿಯವರ ರಥೋತ್ಸವಕಾಲದಲ್ಲಿ ಮಾಮೂಲ್ ಮೇರೆ ದನಗಳ ಪ್ರದರ್ಶನವು ೧೯೨೧ನೆ ಏಪ್ರಿಲ್ ೧೫ರ ಲಾಗಾಯ್ತು ೩ ದಿವಸಗಳವರೆಗೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಭಾರಿಯಾಗಿ ದನಗಳು ಸೇರುವುದರಿಂದ ವ್ಯಾಪಾರಿಗಳೂ ಬರಬಹುದು. ಎಲ್ಲಾ ಮತೀಯರಿಗೂ ಸಾಧ್ಯವಾದಮಟ್ಟಿಗೆ ಭೋಜನಕ್ಕೆ ಏರ್ಪಡಿಸಿರುತ್ತೇವೆ. ದನಗಳ ಮಾರಾಟವು ಬಹಳವಾಗಿ ನಡೆಯುವುದರಿಂದ ಈ ಪ್ರದರ್ಶನಕ್ಕೆ ತಮ್ಮ ತಮ್ಮ ರಾಸುಗಳನ್ನು ತೆಗೆದುಕೊಂಡು ಬಂದು ಶ್ರೀ ಪರಮೇಶ್ವರನ ಸೇವೆಮಾಡಿಕೊಂಡು ಹೋಗಬೇಕಾಗಿಯೂ ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುವುದಲ್ಲದೆ ಈ ಪ್ರದರ್ಶನಕ್ಕೆ ಪ್ರೋತ್ಸಾಹಮಾಡಿ ರಾಸುಗಳನ್ನು ತರತಕ್ಕವರಿಗೂ ಬಹುಮಾನ ಕೊಡಲಾಗುತ್ತದೆ ಎಂದು ಸೆಕ್ರೆಟರಿಗಳಾದ ಎಚ್. ಕೃಷ್ಣಮೂರ್ತಿರಾವ್, ಮತ್ತು ಯಂ. ಹರಿಯಣ್ಣನವರು ತಿಳಿಸುತ್ತಾರೆ.

ಮೈಸೂರು ಬೆಂಗಳೂರು ಲೋಹಮಾರ್ಗದಲ್ಲಿ ಬರುವ ತಿಂಗಳು ತಾ|| ೧೫ ರಿಂದ ಬಂಡಿಗಳು ಈ ಪ್ರಕಾರವಾಗಿ ಬಿಡಲ್ಪಡುವುವು.—ಮೈಸೂರಿನಿಂದ ಮಧ್ಯಾಹ್ನ ೨ ಗಂಟೆಗೆ ಹೊರಡುವ ಮೇಲ್ಬಂಡಿಯು ಸಾಯಂಕಾಲ ೬-೩೫ ಗಂಟೆಗೂ, ಬೆಳಗ್ಗೆ ೭-೨೦ ಕ್ಕೆ ಹೊರಡುವ ಮಿಕ್ಸೆಡ್ ಬಂಡಿಯು (೧-೨ ಮತ್ತು ೩ನೆ ತರಗತಿಗಳಿವೆ) ಮಧ್ಯಾಹ್ನ ೧೨-೩೫ ಗಂಟೆಗೂ, ರಾತ್ರಿ ೧೦ ಗಂಟೆಗೆ ಹೊರಡುವ ಮಿಕ್ಸೆಡ್ಡು ಬೆಳಗ್ಗೆ ೬-೫೫ ಕ್ಕೂ ಬೆಂಗಳೂರನ್ನು ತಲುಪುವುವು. ಬೆಂಗಳೂರಿನಿಂದ ಬೆಳಗ್ಗೆ ೭|| ಗಂಟೆಗೆ ಹೊರಡುವ ಮೇಲ್ ಬಂಡಿಯು ಮಧ್ಯಾಹ್ನ ೧೨-೨೦ ಗಂಟೆಗೂ, ಮಧ್ಯಾಹ್ನ ೨|| ಗಂಟೆಗೆ ಹೊರಡುವ ಮಿಕ್ಸೆಡ್‌ಬಂಡಿಯು ರಾತ್ರಿ ೭|| ಗಂಟೆಗೂ, ರಾತ್ರಿ ೧೦ ಗಂಟೆಗೆ ಹೊರಡುವ ಮಿಕ್ಸೆಡ್ಡು ಬೆಳಗ್ಗೆ ೬ ಗಂಟೆಗೂ ರಾಜಧಾನಿಯನ್ನು ತಲುಪುವುವು. ಇತ್ತಲಾಗಿ ಮೈಸೂರು ಅರಸೀಕೆರೆ ಮಾರ್ಗದಲ್ಲಿ ಮೈಸೂರಿನಿಂದ ಬೆಳಗ್ಗೆ ೧೧| ಗಂಟೆಗೆ ಹೊರಡುವ ಮಿಕ್ಸೆಡ್ ಬಂಡಿಯು ರಾತ್ರಿ ೮-೧೪ ಗಂಟೆಗೂ, ಸಾಯಂಕಾಲ ೭|| ಗಂಟೆಗೆ ಹೊರಡುವ ಮೇಲ್ ಬಂಡಿಯು ರಾತ್ರಿ ೧೨|| ಗಂಟೆಗೂ ಅರಸೀಕೆರೆಯನ್ನು ತಲುಪುವುವು. ಅರಸೀಕೆರೆಯಿಂದ ರಾತ್ರಿ ೨|| ಗಂಟೆಗೆ ಹೊರಡುವ ಮೇಲ್ ಬಂಡಿಯು ಬೆಳಗ್ಗೆ ೮-೫ ಗಂಟೆಗೂ, ಬೆಳಗ್ಗೆ ೭-೪೦ ಕ್ಕೆ ಹೊರಡುವ ಮಿಕ್ಸೆಡ್ ಬಂಡಿಯು ಸಾಯಂಕಾಲ ೪-೪೦ ಗಂಟೆಗೂ ಮೈಸೂರನ್ನು ತಲುಪುವುವು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಂಘ.

ಲಗ್ನದ ಫಂಡು.

1. ತುಮಕೂರು ತಾ|| ಹೊನ್ನುಡಿಕೆ ಹೊನ್ನಶೆಟ್ಟರವರು, ಹೊನ್ನುಡಿಕೆ ಮ|| ರಾ|| ವೀರಪ್ಪನವರ ಪುತ್ರಿಯನ್ನು ಕುಂದಮಠದ ಮಲ್ಲೇನಹಳ್ಳಿ ಸಿದ್ಧಲಿಂಗಾರಾಧ್ಯರವರ ದತ್ತಪುತ್ರ ಕಲ್ಲಪ್ಪದೇವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು 7 ರೂ.

2. ಹೆಗ್ಗಡದೇವನಕೋಟೆ ತಾ|| ನಿಸಬಿಳಕೂರು ಸ್ಕೂಲ್ ಮಾಸ್ತರು ಮ|| ರಾ|| ಸಂಗಪ್ಪನವರು, ಮ|| ರಾ|| ಗುರುಕಾರ್ ದೇವಣ್ಣನವರ ತಮ್ಮಂದಿರು ಮ|| ರಾ|| ಬಸಪ್ಪನವರ ಪುತ್ರಿಯವರ ಲಗ್ನದಲ್ಲಿ ತೆಗೆದು ಕಳುಹಿಸಿದ್ದು 2 ರೂ. ಜುಮ್ಲಾ 9 ರೂ.

ಬೆಂಗಳೂರು ಸಿಟಿ,
ತಾ|| 22-3-1921.

ಜಿ. ಪರಮಶಿವಯ್ಯ, ಬಿ.ಎ., ಎಲ್.ಎಲ್.ಬಿ.,
ಆನರರಿ ಸೆಕ್ರೆಟರಿ, ವಿ. ವಿ. ಸಂಘ.

ಪತ್ರವ್ಯವಹಾರ.

ವಿದ್ಯಾರ್ಥಿಗಳು ಗಮನಿಸತಕ್ಕುದು.

ಈ ವರ್ಷ ನಡೆಯುವ S.S.L.C. ಮೊದಲಾದ ಪರೀಕ್ಷೆಗಳಿಗೆ ಪರಸ್ಥಳದಿಂದ ಬರುವ ರೆಡ್ಡಿ ವಿದ್ಯಾರ್ಥಿಗಳಿಗೆ ಬೆಂಗಳೂರು ಬಸವನಗುಡಿಯಲ್ಲಿರುವ ರೆಡ್ಡಿ ಹಾಸ್ಟಲಿನಲ್ಲಿ ಉಚಿತವಾಗಿ ಊಟಕ್ಕೆ ಏರ್ಪಡಿಸಿದೆ. ಬರುವವರು ಒಂದುವಾರ ಮುಂಚಿತವಾಗಿ ಈ ಕೆಳಗಿನ ಅಡ್ರೆಸ್ಸಿಗೆ ತಿಳಿಸಬೇಕಾಗಿ ಕೋರಿದೆ.

S. ಲಕ್ಷ್ಮಯ್ಯರೆಡ್ಡಿ,
ಸೂಪರಿಂಟೆಂಡೆಂಟ್, ರೆಡ್ಡಿ ಹಾಸ್ಟಲ್.

ಬರುವ ಏಪ್ರೀಲ್ ತಿಂಗಳಲ್ಲಿ ನಡೆಯುವ ಇಂಗ್ಲೀಷು ಮತ್ತು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗಳಿಗೆ ಚಳ್ಳಕೆರೆ ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಅವರ ಹಸ್ತಪಾಕವನ್ನು ಊಟಮಾಡತಕ್ಕ ಇತರ ವಿದ್ಯಾರ್ಥಿಗಳಿಗೂ ಸಹ ಚಳ್ಳಕೆರೆ ಶ್ರೀ ಗಿರಿರಾಜ ವೀರಶೈವ ಬೋರ್ಡಿಂಗಿನಲ್ಲಿ ಅದರ ಪೋಷಕರಾದ ಶ್ರೀ ಗಿರಿರಾಜ ಸೂರ್ಯಸಿಂಹಾಸನ ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರೂ ಮತ್ತು ಈ ಸ್ಥಳದ ವೀರಶೈವ ಪ್ರಮುಖರೂ ಊಟಕ್ಕೆ ಏರ್ಪಾಟುಮಾಡುತ್ತಾರೆ. ಆದುದರಿಂದ ಇಲ್ಲಿಗೆ ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ಈ ಮಾಹೆ ಆಖೈರು ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸತಕ್ಕದ್ದು.

ಚಳ್ಳಕೆರೆ ಶ್ರೀ ಗಿರಿರಾಜ ವೀರಶೈವ ಬೋರ್ಡಿಂಗ್ ಹೋಂ.

ಶ್ರೀ ಕೇದಾರನಾಥ.

ಉತ್ತರಹಿಮಾಲಯದಲ್ಲಿ ಶ್ರೀ ಕೇದಾರ ಮತ್ತು ಬದರೀಕ್ಷೇತ್ರಗಳು ಪ್ರಸಿದ್ಧವಾಗಿವೆ. ಈ ಕ್ಷೇತ್ರಗಳ ದರ್ಶನವು ವರ್ಷದಲ್ಲಿ ೬ ತಿಂಗಳು ಆಗುವುದು. ೬ ತಿಂಗಳು ಹಿಮದಿಂದ ಮುಚ್ಚಿಕೊಳ್ಳುವುದು. ಉಕ್ತಕ್ಷೇತ್ರಗಳ ದೇವಾಲಯದ ಬಾಗಿಲು ತಾ. ೪-೫-೨೧ ಕ್ಕೆ ತೆಗೆಯುವಂತೆ ನಿಶ್ಚಯವಾಗಿರುವುದು. ಆದುದರಿಂದ ದರ್ಶನಕ್ಕೆ ಬರತಕ್ಕ ಭಕ್ತಜನರಿಗೆ ತಿಳುಹಿಸಲಾಗಿದೆ. ಅಲ್ಲದೆ ದರ್ಶನಕ್ಕೆ ಬರತಕ್ಕ ಜನರು ಹರದ್ವಾರದಿಂದ ಗುಪ್ತಕಾಶಿಗೆ ಬರಬೇಕು. ಇಲ್ಲಿ ಶ್ರೀ ಜಗದ್ಗುರು [illegible] ಮಹಾಸ್ವಾಮಿಗಳ ದರ್ಬಾರ ಇರುವುದು. ಇಲ್ಲಿಂದ ಎಲ್ಲಾ ವರ್ತಮಾನ ತಿಳಿದುಕೊಳ್ಳಬಹುದು.

ವಿಳಾಸ—ಮ್ಯಾನೇಜರ್, ಶ್ರೀ ಕೇದಾರನಾಥ ಆಫೀಸ್,
ಪೋ ಗುಪ್ತಕಾಶಿ, ಜಿ ಗರ್ವಾಲ

ಲಗ್ನಗಳು.

ಮುಂದಿನ ವರ್ಷವಾದ ಶಕೆ ೧೮೪೩ ನೇ ದುರ್ಮತಿನಾಮಸಂವತ್ಸರದಲ್ಲಿ ವೈಶಾಖ ಜ್ಯೇಷ್ಠ ಮಾಸಗಳಲ್ಲಿ ನಿರ್ದೋಷವಾದ ವಿವಾಹ ಮುಹೂರ್ತಗಳು ದೊರೆಯುವುದಿಲ್ಲವೆಂದು ಸಶಾಸ್ತ್ರಪ್ರಮಾಣ ಹೇತುಗಳನ್ನು ಉದಹರಿಸಿ ಬರೆದಿರುವವರ ವಾಲಿಕೆಯಲ್ಲಿ ನಾವೂ ಒಪ್ಪಿರುತ್ತೇವೆ, ಪ್ರತಿ ಒಪ್ಪಿರೂ ಶಾಸ್ತ್ರವತ್ ಆಚರಿಸುವವರೂ, ಅನಂತರ ಪ್ರಕಟಿಸಿ ಪ್ರಸಿದ್ಧಪಡಿಸುವವರೂ ಯೋಗ್ಯವಿರುತ್ತದೆ. ಇದನ್ನರಿತು ಬೆಳಗಾಂವ್ ಜಿಲ್ಲೆಯ ಹೊಲಿಗ್ರಾಮದ ಹಿರೇಮಠೀಯ ಎಸ್. ಎಂ. ಸಿದ್ಧಾಂತಿಗಳು-ವೈಶಾಖ ಶುದ್ಧದಲ್ಲಿಯೂ ಜ್ಯೇಷ್ಠಮಾಸದಲ್ಲಿಯೂ ಬಲವಾದ ವಿವಾಹ ಮುಹೂರ್ತಗಳು ಸಿಗುವುವು-ಎಂಬದಾಗಿ ಯಾವತ್ತು ಹಿಂದೂಮತಬಾಂಧವರಿಗೆ ಜಾಹೀರಪ್ರಕಟನೆಯಿಂದ ಸೂಚಿಸಿರುವರು ಯೋಗ್ಯವಿರುತ್ತದೆ. ಚಿಂತೆಯಿಲ್ಲ. ಶುಭಮುಹೂರ್ತಕ್ಕಿರುವ ಪ್ರತಿಕೂಲಪ್ರಮಾಣಗಳನ್ನೆಲ್ಲಾ ಪ್ರಸಿದ್ಧ ಮಹರ್ಷಿಪ್ರಣೀತವಾದ ಗ್ರಂಥಗಳಿಂದ ಖಂಡಿಸಿ, ಮಾಡಲೇಬೇಕೆಂಬುವ ಸಬಲಪ್ರಮಾಣಗಳನ್ನಷ್ಟು ಪ್ರಕಟಿಸಿದ್ದರೆ ಯಾವತ್ತು ಜನರು ಅದರಂತೆ ಆಚರಿಸಿ ಸಿದ್ಧಾಂತಿಗಳ ಉಪಕಾರಸ್ಮರಿಸಬಹುದಾಗಿತ್ತು. ಹಾಗಿಲ್ಲದೇನೇ ಪ್ರಕಟಿಸಿರುವ ಈ ನಿರಾಧಾರವಾದ ಜಾಹೀರಪ್ರಕಟನೆಯು ಜನರಪಾಲಿಗೆ ನಿಷ್ಪ್ರಯೋಜನವಾದ ಪ್ರಕಟನೆಯಾದಂತಾಗಿರುತ್ತದೆ. ಇದನ್ನರಿತು ಬೇಗನೆ ಸಾಧಾರಯುಕ್ತ ಪ್ರಕಟನೆಯನ್ನು ಪ್ರಸಿದ್ಧಪಡಿಸಿ ಲೋಕೋಪಕಾರಮಾಡಬೇಕಾಗಿ ಪ್ರಾರ್ಥನೆ.

ವೇ|| ಸಿದ್ಧಾಂತಿಗಳು,
ಮಹಾಗಾಂವ್, ಜಿಲ್ಲಾ ಗುಲ್ಬರ್ಗ

ಬಹುಮಾನ.

1. ಈಸಾರೆ ಈ ಊರಲ್ಲಿರುವ ಗವರ್ನಮೆಂಟ್ ಹೈಸ್ಕೂಲಿನಿಂದ S.S.L.C. ಪರೀಕ್ಷೆಗೆ ಹೋಗಿರುವ ವೀರಶೈವಬ್ರಾಹ್ಮಣ ವಿದ್ಯಾರ್ಥಿಗಳಲ್ಲಿ ಯಾರಾದರೂ ೧ ನೆಯ ತರಗತಿಯಲ್ಲಿ ತೇರ್ಗಡೆಯಾದರೆ ಅವನಿಗೆ "Complete works of Swami Vevekananda" ಎಂಬ ಗ್ರಂಥಗಳನ್ನು ಬಹುಮಾನವಾಗಿ ಕೊಡುತ್ತೇವೆ. ಒಂದುವೇಳೆ, ಒಬ್ಬನಿಗಿಂತ ಹೆಚ್ಚು ಜನರು ೧ ನೆಯ ತರಗತಿಯಲ್ಲಿ ತೇರ್ಗಡೆ ಹೊಂದಿದರೆ, ಅವರಪೈಕಿ ಯಾರೊಬ್ಬನಿಗೆ ಹೆಚ್ಚು ಸಂಖ್ಯೆಗಳು ಬಿದ್ದಿರುತ್ತವೆಯೋ, ಅವನಿಗೆ ಮಾತ್ರ ಈ ಮೇಲಿನ ಬಹುಮಾನವು ಕೊಡಲ್ಪಡುವುದು.

2. ಇಲ್ಲಿನ ಗರ್ಲ್ಸ್‌ಸ್ಕೂಲಿನಿಂದ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿರುವ ಬಾಲಿಕೆಯರಲ್ಲಿ ಯಾರು ಹೆಚ್ಚು ಸಂಖ್ಯೆಗಳನ್ನು ಪಡೆದು ತೇರ್ಗಡೆಯಾಗುವರೋ, ಅವಳಿಗೆ ಒಂದು ಬೆಳ್ಳಿಯ ಪದಕವನ್ನು ಬಹುಮಾನವಾಗಿ ಕೊಡುವೆವು.

ಈ ಮೇಲಿನ ಶರ್ತಿನಮೇರೆಗೆ ಬಹುಮಾನಗಳನ್ನು ಪಡೆಯುವಷ್ಟು ಯೋಗ್ಯತೆಯುಳ್ಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಹೆಸರು, ವಿಳಾಸಗಳನ್ನು ಸದರಿ ಆಯಾಸ್ಕೂಲಿನ ಹೆಡ್‌ಮಾಸ್ತರುಗಳು, ಪರೀಕ್ಷೆಯ ಫಲಿತಾಂಶವು ಬಂದಮೇಲೆ ದಯವಿಟ್ಟು ನಮಗೆ ತಿಳಿಸಬೇಕೆಂದು ಆಶಿಸುತ್ತೇವೆ.

ದಾವಣಗೆರೆ,
17-3-1921.

B. S. Kurwatti,
for Kurwatti Bros.,
Chamaraj St.

ಮೇಟಿಕುರಿಕೆ.

ಹಿರಿಯೂರು ತಾಲ್ಲೂಕು ಮೇಟಿಕುರಿಕೆ ಕಟ್ಟೆಮನೆ ಶ್ರೀ ಗಿರೀಶ ವೀರಶೈವಸಂಘದ ವಾರ್ಷಿಕ ೬ನೆ ಸಭೆಯು ಪದ್ಧತಿಯಮೇರೆಗೆ ತಾ|| ೧೨-೪-೨೧ ರಲ್ಲಿ ನಡೆಯಬೇಕಾಗಿ ನಿರ್ಧರಿಸಿದೆ. ಆ ಕಾಲಕ್ಕೆ ಆಗಮಿಸಿ ಮಹತ್ಕಾರ್ಯಕ್ಕೆ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು.

(೧) ಶ್ರೀ ಮಹಾಜಗದ್ಗುರು ಪಂಚಾಚಾರ್ಯರ ಸ್ಮಾರಕ ಫಂಡ್ ಅಭಿವೃದ್ಧಿ ವಿಷಯ. (೨) ಬಾಲಕ-ಬಾಲಕಿಯರ ವಿದ್ಯಾಭಿವೃದ್ಧಿ. (೩) ಆಗಮೋಕ್ತವಾಗಿ ಧರ್ಮಕಾರ್ಯಗಳು ಸತ್ಕಾರ್ಯಗಳಿಗೆ ಮುಂದು ವೆಚ್ಚಗಳು. (೪) ವೀರಶೈವ ಮತಗ್ರಂಥಗಳ ಪ್ರಿಂಟಿಂಗ್ ವಿಷಯ. (೫) ಜನಾಂಗಗಳ ಸಹೋದರಭಾವ. ಈ ವಿಷಯಗಳನ್ನು ಕುರಿತು ಉಪನ್ಯಾಸ ಮಾಡತಕ್ಕವರು ಸ್ಪಷ್ಟವಾಗಿ ಬರೆದು ಉಪನ್ಯಾಸದ ಒಂದೊಂದು ಪ್ರತಿಯನ್ನೂ ಮತ್ತು ಸಭೆಗೆ ಬರುವವರ ಪ್ರತಿಯನ್ನೂ ಸಭೆ ನಡೆಯುವ ತಾರೀಖಿಗೆ ಮೂರು ದಿವಸ ಮುಂಚಿತವಾಗಿ ತಲ್ಪುವಂತೆ ಶ್ರೀ ಗಿರೀಶ ವೀರಶೈವ ಹಿತೋಪದೇಶಕ ಸಂಘದ ಸೆಕ್ರೆಟರಿ ಮೇಟಿಕುರಿಕೆ ಹಿರಿಯೂರು ತಾಲ್ಲೂಕು ಈ ಅಡ್ರೆಸ್ಸಿಗೆ ಕಳುಹಿಸಬೇಕಾಗಿ ಕೋರಿದೆ. ವ್ಯವಸ್ಥಾಪಕ ಸಂಘ—ವೇ|| ಮ|| ಮಲ್ಲಪ್ಪದೇವರು (ಅಧ್ಯಕ್ಷರು) ಮಿ|| ಚಿ|| ಯದ್ರಪ್ಪ (ಉಪಾಧ್ಯಕ್ಷ) ಮಿ|| ದ್ಯಾ|| ಮಲ್ಲಪ್ಪ (ಕೋಶಾಧ್ಯಕ್ಷ) ಮಿ|| ಪಿ|| ಕುರುದ ಬಸಯ್ಯ, ಮಿ|| ಗು|| ದೊಡ್ಡಬಸಪ್ಪ, ಮಿ|| ಅಂಗಡಿ ಬಕಿಟಪ್ಪ, ಮಿ|| ಲಕುಮಪ್ಪ. ಸ್ವಾಗತಸಂಘ—ಮಿ|| ಪಾಟೀಲ್ ಹನುಮಯ್ಯ (ಅಧ್ಯಕ್ಷರು) ಮಿ|| ಕೆ. ಗೌರಯ್ಯ (ಉಪಾಧ್ಯಕ್ಷರು) ಮಿ|| ಕೊಂಡಜ್ಜಿ ಸಣ್ಣಬಸಪ್ಪ, ಮಿ|| ಬಳಿಶೆಟ್ಟಿ ದೊಡ್ಡನಂಜಪ್ಪ, ಮಿ|| ಕಂಪ್ಲಿ ಶಿದ್ದಪ್ಪ, ಮಿ|| ಆರ್. ಲಿಂಗಯ್ಯ, ಅ|| ಮಾಸ್ತರ್, ಮಿ|| ಎಂ. ಹನುಮಯ್ಯ. ಕಾರ್ಯದರ್ಶಿಗಳು ಮಿ|| ಜಿ ರಙ್ಗಯ್ಯ ಗಣ್ಣಾಯಕನಹಳ್ಳಿ, ಅ|| ಮಾಸ್ತರ್, ಮಿ|| ಎಲ್. ಮಲ್ಲಯ್ಯ ಮತ್ತು ಮಿ|| ಸಿ. ಚಿಕ್ಕತಮ್ಮಯ್ಯ.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಅಗ್ರಹಾರದ ಬಗೆಗೆ ಹೊನ್ನುಡಿಕೆಯ ಮ|| ವೀರಪ್ಪನವರ ಮಗಳನ್ನು ಕುಂದಮಠದ ಆರಾಧ್ಯ ಮಲ್ಲೇನಹಳ್ಳಿ ಸಿದ್ಧಲಿಂಗಯ್ಯನವರ ದತ್ತಪುತ್ರನಿಗೆ ಕೊಟ್ಟು ನಡಸಿದ ಲಗ್ನದಲ್ಲಿ ತೆಗೆಯಲ್ಪಟ್ಟ 1 ರೂ. ಮ|| ಹೊನ್ನುಡಿಕೆ ಹೊನ್ನಶೆಟ್ಟರವರ ಮೂಲಕ ಮತ್ತು ತುಮಕೂರು ಮಂಡಿ ಮ|| ಬೆಳ್ಳಾವೆ ಗಂಗಾಧರಪ್ಪನವರ ಮಗನ ಲಗ್ನದಲ್ಲಿ ತೆಗೆಯಲ್ಪಟ್ಟ 1 ರೂ. ತುಮಕೂರು ಫ್ರೀಚರ್ ಮ|| ಜಿ. ಕೆ. ಗುರುಸಂಗಾರ್ಯರ ಮೂಲಕ ಬಂದಿರುತ್ತದೆ.

ಪ. ಕೃ.

ಕ್ಯಾ|| ನಾರಾಯಣಶಾಸ್ತ್ರಿ.

ಇವರು ಮಾರ್ಚಿ ತಾ|| ೧೯ ನೆ ಸಂಪದಭ್ಯುದಯ ಪತ್ರಿಕೆಗೆ ಒಂದು ಕರಸ್ಪಾಂಡೆನ್ಸನ್ನು ಬರೆದಿದ್ದಾರೆ. ಈಗಣ ಉದ್ಯಾನಗಳಲ್ಲಿ ಒಂದು ಜಾತಿಯ ಮರಗಳನ್ನು ಬೆಳೆಯಿಸುತ್ತಿದ್ದಾರೆ. ಅವುಗಳಲ್ಲಿ ಮೊಳದುದ್ದದ ಕಡಗೋಲಿನ ಕಾಯಿಗಳು ಬಿಡುತ್ತವೆ. ಆ ಮರವನ್ನು ಮುಸಲ್ಮಾನ್ ಜನರು 'ಕಂದೀಲ್ಝಾಡ್' ಎಂದು ಕರೆಯುತ್ತಾರೆ ಆ ಮರವನ್ನೂ ಕಾಯನ್ನೂ ಅನೇಕರು ನೋಡಿದ್ದಾರೆ. ಈ ಶಾಸ್ತ್ರಿಗಳ ಕರಸ್ಪಾಂಡೆನ್ಸು ಆ ಕಾಯಿಯಂತೆಯೇ ಆಕಾರ ಮಾತ್ರ ಪ್ರಯೋಜನವಾಗಿ ಸಂಪದಭ್ಯುದಯ ಪತ್ರಿಕೆಯ ೧ ಕಾಲಂ ಸ್ಥಲವನ್ನು ಆಕ್ರಮಿಸಿಬಿಟ್ಟಿದೆ. ಇಷ್ಟುದ್ದವಾದ ಲೇಖನವನ್ನು ಬರೆದು ಅಷ್ಟು ಸ್ಥಲವನ್ನು ಹಾಳ್ಮಾಡಿದುದಕ್ಕಿಂತಲೂ 'ಡೊಂಕರ' ಶಬ್ದವನ್ನು ಯಾವ ಮಹಾಕವಿಗಳು ಯಾವ ಗ್ರಂಥದಲ್ಲಿ ಉಪಯೋಗಿಸಿದ್ದಾರೆ? ಅದು ಯಾವ ಭಾಷೆಗೆ ಸೇರಿದುದು? ಅದರ ರೂಪನಿಷ್ಪತ್ತಿ ಹೇಗೆ? ಅದು ತತ್ಸಮಶಬ್ದವೆ? ತದ್ಭವವೆ? ದೇಶ್ಯವೆ? ಎಂಬುದಿಷ್ಟನ್ನು ೪ ಪಙ್ಕ್ತಿಗಳಲ್ಲಿ ತಿಳಿಯಿಸಿಬಿಟ್ಟಿದ್ದರೆ ನನ್ನಂಥ ಅರಿಯದ ಕನ್ನಡಿಗರಿಗೆ ಎಷ್ಟೋ ಉಪಕಾರವಾದಂತಾಗುತ್ತಿದ್ದಿತು. ಮುಂದೆ ಕನ್ನಡದ ಶಬ್ದಕೋಶವನ್ನು ರಚಿಸುವವರಾಗಿರುವ ವಿದ್ವಜ್ಜನರಿಗೂ ಸಹಾಯವಾದಂತಾಗುತ್ತಿದ್ದಿತು ಮತ್ತು ವೇದಾರ್ಥವನ್ನು ವಿಸ್ತರಿಸಿದ ವ್ಯಾಸರಿಗೆ ವೇದವ್ಯಾಸರೆಂಬ ಹೆಸರು ಬಂದಿರುವಂತೆ ಈ ನಾರಾಯಣರು 'ಡೊಂಕರ ನಾರಾಯಣರೇ' ಆಗಬಹುದಾಗಿದ್ದಿತು. ಅದನ್ನು ಮಾಡಲಾರದೆ ಬಿಟ್ಟು ನನ್ನನ್ನು ಅಚ್ಚಿನ ೨-೩ ಪುಸ್ತಕಗಳನ್ನು ಓದಿದವನೆಂದು ಹಳಿದುಬಿಟ್ಟರೆ ಇವರು ಶಾಸ್ತ್ರಿಶಬ್ದವನ್ನು ಸಾರ್ಥಕ ಮಾಡಿಕೊಂಡಂತೆ ಆಯಿತೆ? ನಾನು ೨-೩ ಪುಸ್ತಕಗಳನ್ನು ಓದಿದವನೂ ಅಲ್ಲ, ಶಾಸ್ತ್ರಿಯೂ ಅಲ್ಲ; ತದ್ಭವ ತತ್ಸಮ ದೇಶ್ಯಗಳ ಸ್ವರೂಪವನ್ನೇ ತಿಳಿದವನಲ್ಲ. ನಾನೊಬ್ಬ ಕನ್ನಡಿಗ ಮತ್ತು ಪ್ರಜೆಗಳ ಸೇವಕ. ಈ ಶಾಸ್ತ್ರಿಗಳು ತಮ್ಮ ಮೊದಲನೆ ಕರಸ್ಪಾಂಡೆನ್ಸಿನಲ್ಲಿ ಕಿಂಕರನೆಂಬುದು ಡೊಂಕರ ಎಂದು ಹೇಳಿ, ನನ್ನ ವಚನಗಳೆಲ್ಲಾ ಸೊಟ್ಟೆಂದು ಪರಿಹಾಸಮಾಡುವಾಗ ನನ್ನ ಕಿಂಕರನಾಮವನ್ನು ಒಪ್ಪಿಕೊಂಡು, ಆ ತಮ್ಮ ಶಬ್ದಪಾರಾವಾರ ಪಾರೀಣತೆಯ ಚಮತ್ಕೃತಿಯನ್ನು ಹೊರಪಡಿಸುವ ಭರದಲ್ಲಿ ಲಾಗಹಾಕಿ ಬಿದ್ದು ಕುಂಟರಾಗಿ, ಕೆಳಕ್ಕೆ ಬಿದ್ದ ಜಟ್ಟಿಯು ಇದೊಂದು ವರಸೆಯೆಂದು ಹೇಳುವಂತೆ, ಪೇಚಾಡುತ್ತ, ಈಗ ಕಿಂಕರ ಶಬ್ದಕ್ಕೂ ನಾನು ಪಾತ್ರನಲ್ಲವೆಂದು ಸಾಧಿಸಿದ್ದಾರೆ ಇದೊಂದು ಶಾಸ್ತ್ರಜ್ಞಾನ ಚಮತ್ಕಾರವೇ ಇರಬಹುದು. ಪ್ರಹ್ಲಾದನಂಥ ಮಹಾಭಾಗವತನೂ ಇರಬಹುದು. ಆಳಲಿನ ಭಕ್ತಿ ಮಗಳಿನ ಸೇವೆಯೆಂಬಂತೆ ದಿನಕ್ಕೊಂದುಬಾರಿ ಸಮಯವಾದಾಗ ಭಗವದ್ಧ್ಯಾನ ಮಾಡತಕ್ಕ ಭಾಗವತನೂ ಇರಬಹುದು. ಪ್ರಹ್ಲಾದನು ಮಹಾಭಕ್ತನಾಗಿದ್ದರೆ, ಉಳಿದವರು ಸಾಮಾನ್ಯಭಕ್ತರಾಗಿರಕೂಡದೆ? ಗಾಂಧಿ-ಲಾಲ-ಪಾಲ-ಬಾಲರುಗಳು ಪ್ರಜಾಮಹಾಕಿಂಕರರಾಗಿದ್ದರೆ, ಅವರ ಶಕ್ತಿಯಲ್ಲಾದಷ್ಟು ಪ್ರಜಾಸೇವೆಯನ್ನು ಮಾಡಬಯಸುವವರು ಪ್ರಜಾಕಿಂಕರರಾಗಿರಕೂಡದೆ? ಮಹಾಮಹೋಪಾಧ್ಯಾಯ ಶಿವಕುಮಾರ ಶಾಸ್ತ್ರಿಗಳೇ ಮೊದಲಾದವರು ಶಾಸ್ತ್ರಿಗಳಾಗಿರುವಾಗ, 'ಡೊಂಕರ, ವಿನಹ' ಮೊದಲಾದ ಶಬ್ದಗಳ ನಿರ್ಮಾತೃಗಳಾದ ಈ ನಾ.ನಾ. ಶಾಸ್ತ್ರಿಗಳಂಥವರೂ ಶಾಸ್ತ್ರಿಗಳೆಂದುಕೊಂಡಿಲ್ಲವೆ?

ಪ್ರಜೆಗಳಲ್ಲಿ ಇಲ್ಲದದ್ವೇಷವನ್ನು ಸದಾ ಹುಟ್ಟಿಸುವನೆಂದು ಈ ಲೇಖಕರು ನನ್ನಮೇಲೆ ದೋಷಾರೋಪಣೆ ಮಾಡಿ ಬರೆದಿರುವುದನ್ನು ಸಂಪದಭ್ಯುದಯವನ್ನು ಕುರಿತು ಬರೆದಿದ್ದರೆ ಒಪ್ಪುತ್ತಿದ್ದಿತು. ಕ್ವಚಿತ್ ಬಹುಶಃ ಹೀಗೆ ಬರೆದಿರಬಹುದು. ಸದಾ ನಾನು ಬರೆಯುವವನಲ್ಲ. ಕೆಲವು ತಿಂಗಳುಗಳಿಂದ ಸಂಪದಭ್ಯುದಯ ಪತ್ರಿಕೆಗಳನ್ನೋದುತ್ತ ಜಾತಿಮತದ್ವೇಷೋದ್ಬೋಧಕ ಲೇಖನಗಳನ್ನು ಕಂಡು ಬೇಸರಪಟ್ಟು, ಸಂಪದಭ್ಯುದಯವು ತನ್ನ ರೀತಿಯನ್ನು ಬದಲಾಯಿಸಿಕೊಂಡು ದೇಶದಲ್ಲಿ ಪರಸ್ಪರ ಸಹಾಯವನ್ನು ವೃದ್ಧಿಪಡಿಸುವ ಲೇಖನಗಳನ್ನು ಬರೆದು ಕೀರ್ತಿವಂತವೂ ದೇಶಬಂಧುವೂ ಆಗಲೆಂಬ ಸದುದ್ದೇಶದಿಂದ ನನ್ನ ಮೊದಲಿನ ಲೇಖನವನ್ನು ಸಂಪದಭ್ಯುದಯವನ್ನು ಕುರಿತು ನಾನು ಬರೆದಿರುವಲ್ಲಿ ಈ ಶಾಸ್ತ್ರಿಗಳಿಗೇಕೆ ಹುಳು ಕೆರೆಯಿತು? ಹಾದಿಯ ಜಗಳಕ್ಕೆ ಬಂದು ದ್ವೇಷವನ್ನು ಸಾಧಿಸುವವರು ಇವರೋ ನಾನೋ? ಶೂದ್ರರು ಮುಂದಕ್ಕೆ ಬರುತ್ತಾರೆ! ಅಧಿಕಾರಕ್ಕೆ ಬರುತ್ತಾರೆ! ವಿದ್ಯಾವಂತರಾಗುತ್ತಾರೆ! ಬ್ಯಾಕ್ವರ್ಡ್ ಸ್ಕಾಲರ್ಷಿಪ್ ಪಡೆದುಕೊಳ್ಳುತ್ತಿದ್ದಾರೆ! ಸರ್ಕಾರದವರು ಅವರುಗಳಿಗೆ ವಿಶೇಷವಾಗಿ ಪ್ರೋತ್ಸಾಹಿಸುತ್ತಿದ್ದಾರೆ!! ಎಂಬುದಾಗಿ ಹೊಟ್ಟೆಕಿಚ್ಚಿನಿಂದ ಅಹರ್ನಿಶಿಯೂ ಯಾರು ತಳಮಳಗೊಳ್ಳುತ್ತ ಬಾಯ್ಬಿಡುಕೊಳ್ಳುತ್ತಿರುವರೋ ಅಂಥವರನ್ನು ಕುರಿತು ಯಾವಾಗಲೂ ಪ್ರಜೆಗಳನ್ನು ದ್ವೇಷಿಸುವವರು, ಜನರಲ್ಲಿ ವೈಷಮ್ಯವನ್ನು ಕಲ್ಪಿಸುವರು ಎಂದು ಆಡಿದರೆ ಒಪ್ಪುತ್ತಿತ್ತು. ನಾನು ಸಂಪದಭ್ಯುದಯವನ್ನು ಕುರಿತು ಆಡಿದವನೇ ಹೊರತು ಪ್ರಜೆಗಳ ತಂಟೆಗೆ ಹೋದವನೇ ಅಲ್ಲ. ದೇಶವನ್ನು ಕಲಹಮಯವನ್ನಾಗಿ ಮಾಡುವ ಉದ್ಯೋಗವನ್ನು ಸದಾ ಹೊತ್ತಿರುವ ಅಧಮಾಧಮರಿಗೆ ಇವರು ಬುದ್ಧಿ ಹೇಳಿ ತಿದ್ದಿದರೆ ಶಾಸ್ತ್ರಿಗಳಾದುದಕ್ಕೆ ಫಲವೆಂದೇ ಹೇಳಬಹುದು.

ತಾಯ್ತಂದೆಗಳಿಟ್ಟ ಹೆಸರನ್ನು ಬಿಟ್ಟು ಬೇರೆ ಅಂಕಿತಗಳನ್ನು ಧರಿಸಿಕೊಳ್ಳಬಾರದೆಂದು ನನಗೆ ಬೋಧಿಸಲಿಕ್ಕೆ ಬಂದಿರುವ ಈ ಶಾಸ್ತ್ರಿಗಳು ಸಂಪದಭ್ಯುದಯದ ದೇಶಾಭಿಮಾನಿ, ನಿಷ್ಪಕ್ಷಪಾತಿ, ಸತ್ಯವಾದಿ. ಮೊದಲಾದ ಅಂಕಿತನಾಮಧುರಂಧರರುಗಳ ಮೊತ್ತಕ್ಕೂ ಅಂಥವರಿಗೆ ಆಶ್ರಯಕೊಡುತ್ತಿರುವ ಸಂಪದಭ್ಯುದಯ ಕರ್ತರಿಗೂ ಬುದ್ಧಿಯನ್ನೇಕೆ ಹೇಳುವುದಿಲ್ಲ?

ಕಡೆಗೆ ಈ ಶಾಸ್ತ್ರಿಗಳು ತಮ್ಮ ಹೆಸರಿನ ಒಂದು 'ನಾ' ಕಾರವನ್ನು ಸಾಧ್ವೀ ಎಂಬಲ್ಲಿ ಅಮಾನತ್ತು ಇಟ್ಟಿರುವುದಾಗಿ ತಿಳಿಯಿಸಿಕೊಂಡಿದ್ದಾರೆ. ಅದೇತಕ್ಕೋ? ಇವರ ಬಹಿರಾಡಂಬರದ ಲೇಖನಗಳಿಗೆ [illegible] ಪ್ರತಿಫಲಕ್ಕಾಗಿ ಈಡಾಗಿಟ್ಟರೋ ಏನೋ ತಿಳಿಯಲಿಲ್ಲ. ಡೊಂಕರ ಶಬ್ದದ ಸಾಧುತ್ವವನ್ನು ಸಾಧಿಸಿತೋರಿಸುವವರೆಗೂ ಇವರ ಉಳಿದಿರುವ 'ನಾ' ಕಾರವನ್ನು ನಾನು ಅಮಾನತ್ತು ಮಾಡಿರುತ್ತೇನೆ. ಪ್ರಜಾಕಿಂಕರ.

ಅರ್ಪಣೆ.

ಮಹಾಮಹಿಮರಾದ ಶ್ರೀ [illegible] ಶಿವಯೋಗಿ [illegible]

ಗುರ್ದಶನೇನೇ ಕ್ಷೇತ್ರಂ ಪವಿತ್ರಂಪರಂ" ಎಂಬಭಿಹಿತೋಕ್ತಿಯಂತೆ ಇದೂ ಒಂದು ಪುಣ್ಯಕ್ಷೇತ್ರವೆಂಬುದಾಗಿಯೇ ಪರಿಭಾವಿಸಲ್ಪಟ್ಟು ಪ್ರಸಿದ್ಧಿಗೆ ಬಂದಿರುವುದರಿಂದ ಸೊಲ್ಲಾಪುರ, ವಿಜಾಪುರ, ಹಾವೇರಿ, ದಾವಣಗೆರೆ, ಬೆಂಗಳೂರು ಮೊದಲಾದ ಪ್ರದೇಶಗಳಿಂದ ಬಹುಜನ ದೊಡ್ಡ ಮನುಷ್ಯರು, ವಿದ್ವಾಂಸರು, ಶ್ರೀ ನಿರಾಭಾರಿಗಳು ಮುಂತಾದವರು ಪೂಜ್ಯಪಾದರಾದ ಶ್ರೀ ಶಿವಯೋಗೀಶ್ವರರ ದರ್ಶನಾಶೀರ್ವಾದಕಾಂಕ್ಷಿಗಳಾಗಿ ಬಂದು ತಮ್ಮ ತಮ್ಮ ಬಯಕೆಗಳಂ ಪಡೆದು ತೆರಳುತ್ತಿರುವುದು ವಿಶ್ರುತವಾಗಿಯೇ ಇದೆ. ಶ್ರೀ ಸನ್ನಿಧಾನದಲ್ಲಿ ಶಿವರಾತ್ರಿಯ ಪೂಜಾ ಸಮಾರಂಭವು ಪ್ರತಿ ವರ್ಷವೂ ಬಹು ವಿಜೃಂಭಣೆಯಿಂದ ನಡೆಯುತ್ತಾ ಬಂದಿರುವ ಪದ್ಧತಿಯಂತೆ ಈ ವರ್ಷವೂ ಶಿವರಾತ್ರಿ ಸೋಮವಾರ ಮಧ್ಯಾಹ್ನಕ್ಕೆ ಸರಿಯಾಗಿ ಗವಿಮಠದಲ್ಲಿ—ಬಹುಜನ ಭಕ್ತ ಮಾಹೇಶ್ವರರು ವಿರಕ್ತಮೂರ್ತಿಗಳು, ಪಟ್ಟಚರಮೂರ್ತಿಗಳೂ ಸಹ ಸೇರಿದರು. ಅಷ್ಟರಲ್ಲಿ ಶ್ರೀ ಶಿವಯೋಗೀಶ್ವರರ ಮಹಾಸ್ವಾಮಿಯು ಚಿತ್ತೈಸಿದ ನಂತರ ಸರ್ವರಿಗೂ ಸಾಂಗವಾಗಿ ಶಿವಪೂಜೆಯು ನಡೆಯಿಸಲ್ಪಟ್ಟು ಶ್ರೀ ನಿರಾಭಾರಿಗಳವರ ಮಹಾಪಾದಪೂಜಾದಿಗಳು ಆನಂದಕರವಾಗಿ ಜರುಗಿದುವು. ಅನೇಕರು ತಮ್ಮ ತಮ್ಮ ಭಕ್ತಿಗನುಗುಣವಾಗಿ ಧರ್ಮದಕ್ಷಿಣೆ ವಸ್ತ್ರದಾನ ಮೊದಲಾದವುಗಳನ್ನು ಮಾಡಿದರು. ಶ್ರೀ ಮಹಾಸ್ವಾಮಿಯು ಮಠಕ್ಕೆ ದಯಮಾಡಿಸಿದ ನಂತರ ರಾತ್ರಿ ೧೨ ಗಂಟೆಯವರೆಗೆ ಸರ್ವರೂ ಶಿವಪೂಜಾ ಸಮಾರಂಭವನ್ನು ಪೂರೈಸಿಕೊಂಡು ಶ್ರೀ ಸನ್ನಿಧಾನದಲ್ಲಿ ಸಭೆ ಸೇರಿತು. ಕೀರ್ತನಕಾರರು ಶಿವಕಥೆಯನ್ನು ಹೇಳಿದ ತರುವಾಯ ವಿಜಾಪುರದ ಚರಮೂರ್ತಿ ಮಠದ ಶ್ರೀ ಶಂಭುಲಿಂಗಸ್ವಾಮಿಗಳು ಶಿವಪೂಜೆ, ಶಿವಕಥಾಶ್ರವಣದಿಂದುಂಟಾಗುವ ಫಲವನ್ನು ಸರ್ವರಿಗೂ ಹೃದಯಂಗಮವಾಗುವಂತೆ ಬೋಧಮಾಡಿದರು. ಶ್ರೀ ಮೃತ್ಯುಂಜಯಸ್ವಾಮಿಗಳು ಲಿಂಗಾಂಗಸಾಮರಸ್ಯ ವಿಷಯವನ್ನು ಬೋಧಿಸಿ ಮಂಗಲವನ್ನು ಮಾಡಿದರು. ಆ ಬೆಳಗಿನ ಮಂಗಳವಾರದ ಆರಭ್ಯ ೫-೬ ದಿನಗಳವರೆಗೆ ಶ್ರೀ ಸನ್ನಿಧಿಯಲ್ಲಿ ಸಭೆ ನಡೆದು ಆಗ ಶ್ರೀ ಮೃತ್ಯುಂಜಯಸ್ವಾಮಿಗಳೂ ಇಲ್ಲಿಯ ಸಂಸ್ಕೃತಪಾಠಶಾಲಾಧ್ಯಾಪಕರಾದ ಸಂ|| ಹಿ|| ಮ|| ಸಿದ್ಧಲಿಂಗಶಾಸ್ತ್ರಿಗಳೂ ಬೆಂಗಳೂರು ಬಾಣಾವಾರದ ಹುಚ್ಚಪ್ಪನವರೂ ಕೀರ್ತನಕಾರ ಮಹಾಲಿಂಗಪ್ಪನವರೂ ವಿದ್ಯಾರ್ಥಿಗಳು ಸಹ ವೀರಶೈವಧರ್ಮ ವಿಚಾರವಾಗಿಯೂ, ಲಿಂಗಾಂಗಸಾಮರಸ್ಯ ವಿಷಯವಾಗಿಯೂ ಕಾಲೋಚಿತವಾಗಿ ಭಾಷಣಗಳನ್ನು ಮಾಡಿದ ತರುವಾಯ ವಿಜಾಪುರದ ಶ್ರೀ ಶಂಭುಲಿಂಗಸ್ವಾಮಿಗಳು ಅಸ್ಖಲಿತವಾದ ಸರಸತರಮಂಜುಲವಾಗ್ವಿಲಾಸದಿಂದ ವೇದಾಗಮ ಪ್ರಮಾಣಪುರಸ್ಸರವಾಗಿ ಶ್ರೋತೃಗಳ ಮನಸ್ಸಿಗೆ ಕರತಲಾಮಲಕದಂತೆ ಗ್ರಾಹ್ಯವಾಗುವ ಹಾಗೆ ಆತ್ಮಾನಾತ್ಮಸ್ವರೂಪವನ್ನು ಐಹಿಕಾನಂದವು ಕ್ಷಣಿಕವೆಂಬುದಾಗಿಯೂ, ಬ್ರಹ್ಮಾನಂದವೇ ಶಾಶ್ವತ ಸುಖಸ್ವರೂಪವೆಂಬುದಾಗಿಯೂ ಮತ್ತು ಶಕ್ತಿ ವಿಶಿಷ್ಟಾದ್ವೈತ ತತ್ವವನ್ನೂ ಅನ್ಯಮತದ ವಿಚಾರವನ್ನು ಸಹ ಚೆನ್ನಾಗಿ ಬೋಧಮಾಡಿದರು. ಈ ಮಹನೀಯರು ಕಾಶಿ ಮೊದಲಾದ ಸ್ಥಲಗಳಲ್ಲಿ ಶಾಸ್ತ್ರಾಭ್ಯಾಸ ಮಾಡಿ ವೇದಾಂತ ಪರಿಶೀಲನೆಯಲ್ಲಿ ನಿರತರಾಗಿರುವುದರಿಂದ ಸ್ವಾನುಭವ ವಿಷಯಗಳನ್ನು ಬೋಧಮಾಡುವುದರಲ್ಲಿ ಅಸಾಧಾರಣ ಪ್ರತಿಭೆಯುಳ್ಳವರಾಗಿರುತ್ತಾರೆ. ಈ ಸ್ವಾಮಿಗಳ ಇಂತಹ ಸದ್ಬೋಧನೆಯೂ, ಮತ್ತು ಮಠೋದ್ಧಾರ ಕಾರ್ಯವೇ ತಮ್ಮ ಸರ್ವಸ್ವವೆಂಬುದಾಗಿ ಭಾವಿಸಿ ಮನೋವಾಕ್ಕಾಯಗಳಿಂದಲೂ ದುಡಿದು ಧಾರ್ವಾಡದಲ್ಲಿ ವೀರಶೈವ ವಿದ್ಯಾರ್ಥಿ ಬೋರ್ಡಿಂಗನ್ನು ಸ್ಥಾಪಿಸಿರುವ ಶ್ರೀ ಮೃತ್ಯುಂಜಯಸ್ವಾಮಿಗಳ ಉಪದೇಶವೂ ಸಹ ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸಿ ನಮ್ಮ ಗುರುವರ್ಗದವರಲ್ಲಿ ವಿದ್ಯಾವಂತರೂ, ಧರ್ಮಬೋಧಕರೂ ಮೇಲು ಮೇಲಾಗಿ ಬೆಳೆಯುತ್ತಿರಬೇಕೆಂಬ ಲವಲವಿಕೆಯು ಉದಯಿಸಿದುದರಿಂದ ಸಭಾಸದರಲ್ಲಿ ವಿದ್ಯಾಭಿಮಾನಿಗಳಾದವರು ಸದ್ಯದಲ್ಲಿ ಇಲ್ಲಿ ನಡೆಯುತ್ತಿರುವ ಶ್ರೀ ಶಿವಯೋಗೀಶ್ವರ ಸಂಸ್ಕೃತಪಾಠಶಾಲೆಯು ಚಿರಸ್ಥಾಯಿಯಾಗಿ ಪುರೋವೃದ್ಧಿಯನ್ನು ಹೊಂದುವುದಕ್ಕೋಸ್ಕರ ಹಿಂದೆ ಶ್ರೀ ಪುರಾತನರ ಪೂಜಾ ಸಮಾರಂಭದಲ್ಲಿ ಶ್ರೀ ಸನ್ನಿಧಾನದಿಂದ ಆಶೀರ್ವಾದರೂಪವಾಗಿ ದಯಪಾಲಿಸಿದ್ದ ಪಾಲೀ ಇರತಕ್ಕ ೫|| ಸಾವಿರ ರೂ. ನ ಫಂಡನ್ನು ಹೆಚ್ಚಾಗಿ ಬೆಳೆಯಿಸಬೇಕೆಂಬ ತಾತ್ಪರ್ಯವುಳ್ಳವರಾಗಿ ಅವರವರ ಯಥಾಶಕ್ತಿ ಒಂದೇ ದಿವಸದಲ್ಲಿ ೧ ಸಾವಿರ ರೂ. ಗಳನ್ನು ನಗದಾಗಿ ಕೊಟ್ಟರು. ಮತ್ತೂ ಕೆಲವರು ೫೦೦ ರೂ. ವರ್ಗಣಿ ವಾಗ್ದಾನಮಾಡಿರುತ್ತಾರೆ. ಈ ರೀತಿ ೧|| ಸಾವಿರ ರೂ. ಗಳು ವಸೂಲಾಗಿದೆ. ಮುಂದೆಯೂ ಇಲ್ಲಿಗೆ ಶ್ರೀ ತಪಸ್ವಿಗಳ ದರ್ಶನಾರ್ಥವಾಗಿ ಬರತಕ್ಕ ವಿದ್ಯಾಭಿಮಾನಿಗಳು ಸಹಾಯಮಾಡುತ್ತಾ ಬಂದರೆ ಧನರಾಶಿಯು ಬೆಳೆಯುವುದರಲ್ಲಿ ಸಂದೇಹವಿಲ್ಲ. ಮುಂದೆ ಈ ಪಾಠಶಾಲಾ ಕಾರ್ಯಕ್ರಮಗಳು ಸಾಂಗವಾಗಿ ನಡೆಯುವುದಕ್ಕೋಸ್ಕರ ತಾ|| ೧೩ನೆ ಭಾನುವಾರ ಬೀಳೂರು ಶ್ರೀ ಗುರುಬಸವಸ್ವಾಮಿಗಳೂ ಅಥಣಿ ಗಚ್ಚಿನಮಠದ ಶ್ರೀ ಸಿದ್ಧಲಿಂಗಸ್ವಾಮಿಗಳೂ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಏರ್ಪಾಡು ಮಾಡಿದ ಕಾರ್ಯವಿವರವು:—ಬೀಳೂರು ಶ್ರೀಗಳವರು ಇದಕ್ಕೆ ಪ್ರಸಿಡೆಂಟರಾಗಿಯೂ, ಶ್ರೀ ಸಿದ್ಧಲಿಂಗಸ್ವಾಮಿಗಳು ವೈಸ್‌ಪ್ರಸಿಡೆಂಟರಾಗಿಯೂ, ಶ್ರೀ ಶಂಭುಲಿಂಗಸ್ವಾಮಿಗಳು ಚೇರ್‌ಮನ್ನರಾಗಿಯೂ, ೨೫ ಜನ ಮೆಂಬರಾಗಿಯೂ ಇರಬೇಕೆಂತ ಶ್ರೀ ಮೃತ್ಯುಂಜಯಸ್ವಾಮಿಗಳು ಸೂಚನೆ ಕೊಟ್ಟುದರ ಮೇಲೆ ಸರ್ವಾನುಮತಿಯಿಂದ ಪಾಸಾಗಿ ನಿರ್ಧರಿಸಲ್ಪಟ್ಟಿತು. ಹಿಂದೆ ಇದ್ದ ೫|| ಸಾವಿರ ರೂ. ಈಗಿನ ಬಾಬ್ತು ೧|| ಸಾವಿರ ರೂ. ಸಹ ಬಡ್ಡಿಗೆ ಇಡಲ್ಪಟ್ಟಿದೆ. ಮೊದಲಿದ್ದ ಸದರಿ ಫಂಡು ಸರಿಯಾದ ವಿನಿಯೋಗವಾಗದೆ ಇದ್ದುದರಿಂದ ಇದೇ ಪಾಠಶಾಲೆಗೆ ಅನುಕೂಲವಾಗುವಂತೆ ಕ್ರಮಕ್ಕೆ ತಂದು ಈಗಲೂ ೧|| ಸಾವಿರ ರೂ. ನ್ನು ಶೇಖರಮಾಡುವುದರಲ್ಲಿ ವಿಶೇಷ ಪ್ರಯತ್ನವನ್ನು ನಡೆಸಿ ಇದನ್ನು ಸ್ಥಿರಗೊಳಿಸಿದ ಶ್ರೀ ಶಂಭುಲಿಂಗಸ್ವಾಮಿಗಳ ಸಾಹಸವು ಚಿರಸ್ಮರಣೀಯವಾಗಿದೆ. ಪರಮ ಪೂಜ್ಯರಾದ ಶಿವಯೋಗೀಶ್ವರರ ಕೃಪಾಕಟಾಕ್ಷದಿಂದ ನಮ್ಮಗಳಿಗೆ ಇನ್ನೂ ಮೇಲುಮೇಲಾದ ಶುಭಪರಂಪರೆಗಳುಂಟಾಗಲೆಂದು ಹಾರೈಸುವ, ಪ್ರತ್ಯಕ್ಷದರ್ಶಿ.

ಫಂಡಿಗೆ ಧನಸಹಾಯ ಮಾಡಿದವರು.

ಅಥಣಿ ಗಚ್ಚಿನಮಠದ ಪತಿಯಿಂದ ಶ್ರೀ ಚನ್ನಬಸವದೇವರು ೨೦೨ ರೂ. ಶ್ರೀ ಮೃತ್ಯುಂಜಯಸ್ವಾಮಿಗಳು ೧೦೧ ರೂ. ಕಜೀಗೆ ವಿರಕ್ತಮಠದ ಶ್ರೀ ಮುರಿಗೇಂದ್ರಸ್ವಾಮಿ ೧೦೧ ರೂ. ಶ್ರೀ ಶಂಭುಲಿಂಗಸ್ವಾಮಿ ೨೫ ರೂ. ಕೊಳ್ಳಿನೂರು ವಿರಕ್ತಮಠದ ಶ್ರೀ ಸ್ವಾಮಿಗಳು ೧೦ ರೂ. ಬಂಕಾಪುರದ ದೇಸಾಯಿಮಠದ ಸಂಗನಬಸವದೇವರು ೫೧ ರೂ. ಹೊನವಾಡ ವಿರಕ್ತಮಠದ ಸಿದ್ಧಮಲ್ಲದೇವರು ೨೫ ರೂ. ಕಡಕೋಳ ವಿರಕ್ತಮಠದ ಸಂಗಯ್ಯದೇವರು ೧೫ ರೂ. ಶ್ರೀ ಶಿವಯೋಗೀಶ್ವರ ಪಾಠಶಾಲಾಧ್ಯಾಪಕ ಸಂಪಗೇ ಹಿ|| ಮ|| ಸಿದ್ಧಲಿಂಗಶಾಸ್ತ್ರಿಗಳು ೧೦ ರೂ. ಬೆಂಗಳೂರು ಮಾಮೂಲಪೇಟೆ ಬಾಣಾವಾರದ ಹುಚ್ಚಪ್ಪನವರು ೨೫ ರೂ. ಧಾರ್ವಾಡದ ಮುದಕಪ್ಪನವರು ೫ ರೂ. ಕೀರ್ತನಕಾರ ಮಹಾಲಿಂಗಪ್ಪನವರು ೧೦ ರೂ. ತುಮಕೂರು ಅವಳಿಅಂಗಡಿ ಗುಬ್ಬಣ್ಣನವರು ೨೫ ರೂ. ಧಾರ್ವಾಡದ ಹಾವೇರಿಪ್ಯಾಟಿ ಮಟ್ಟಿ ಶಿವಪ್ಪನವರು ೧೦೧ ರೂ. ಬಸವಪ್ಪ ಗುರುಪಾದಪ್ಪ ೧೦೧ ರೂ. ಮಲ್ಲಯ್ಯಸ್ವಾಮಿ ಕುದಳೋಟಿ ೧೦ ರೂ. ಕೆಂಗೇರಿ ಶಾಂತವೀರಪ್ಪನವರು ೨೦ ರೂ. ಭಕ್ತಿ ಮರಿತಾಮಪ್ಪನವರ ಪತ್ನಿಯವರು ಮಹಾದೇವಮ್ಮ ೧೦ ರೂ. ರಾಚಪ್ಪ ನೂರೊಂದಪ್ಪಾ ಕಮತ ಗದಗ ೨೫ ರೂ. ಚನ್ನಮಲ್ಲಪ್ಪಾ ಮಹಾಲಿಂಗಪ್ಪ ಗೋಟಖಿಂಡೀ ಅಥಣಿ ೧೦೧ ರೂ. ಅಂಬಣ್ಣಾ ಬಸವಪ್ಪ ಸಂಗಾಧರ ೨೫ ರೂ. ರೇವಣಸಿದ್ಧಪ್ಪ ಹಿಪ್ಪರಗಿ ಅಥಣಿ ೧೦೧ ರೂ. ವೀರಪ್ಪಾ ಮಲ್ಲಪ್ಪಾ ಶಿವಣಗಿ ೫೧ ರೂ. ಸೋಮಲಿಂಗಪ್ಪ ಮಲ್ಲಪ್ಪ ಕೊಳಗಿ ೨೫ ರೂ. ಚನವಪ್ಪ ಚನ್ನಬಸಪ್ಪ ಬಾಗಿ ೨೫ ರೂ. ಶಿವಲಿಂಗಪ್ಪ ವಿರೂಪಾಕ್ಷಪ್ಪ ಸೊಲ್ಲಾಪುರ ೧೫ ರೂ. ಮರುಳುಸಿದ್ಧಪ್ಪ ಸಿದ್ಧಪ್ಪ ಹಗಲಂಬಿ ೧೫ ರೂ. ಬಸೆಟ್ಟೆಪ್ಪ ಚನ್ನಪ್ಪ ೨೫ ರೂ. ಶಿವಲಿಂಗಪ್ಪ ದಾದಪ್ಪ ಪಾವಟೆ ೨೫ ರೂ. ಧೂಳಪ್ಪ ಗುರುಬಸಪ್ಪ ಕೆಂಗಲಬಾಗಿ ೧೦ ರೂ. ಸಿದ್ಧಮಲ್ಲಪ್ಪ ಬಸಪ್ಪ ನೂಲಿ ೨೫ ರೂ. ಮುರಿಗಯ್ಯ ಮಡಿವಾಳಯ್ಯ ಸತ್ತಿಮಠ ೫ ರೂ. ಕರಿವೀರಪ್ಪ ರುದ್ರಪ್ಪ ಮೆಣಸಿ ೫ ರೂ. ಮಲ್ಲಪ್ಪ ಸಂಗಪ್ಪ ಕರಾಳ ೫ ರೂ. ಸಂಗಯ್ಯ ಗಂಗಾಧರಯ್ಯ ಸಾಲಿ ೫ ರೂ. ಮರುಳಯ್ಯ ಗುರುಲಿಂಗಯ್ಯ ಧನ್ಯಾಳಮಠ ೨ ರೂ. ಮುಂಡಪ್ಪ ೧|| ರೂ. ಅಂದಾನಪ್ಪ ೫ ರೂ. ಬಸವಪ್ಪ ಯಾದವಾಡ ೫ ರೂ. ಗುರುಪಾದಪ್ಪ ೫ ರೂ. ಬಸವಲಿಂಗಯ್ಯಸ್ವಾಮಿ ೫ ರೂ. ಬಸವನಗೌಡ ೫ ರೂ. ಸಿದ್ಧಪ್ಪ ೫ ರೂ. ಅಣ್ಣಪ್ಪಾ ೫ ರೂ. ಲಿಂಗಪ್ಪ ೫ ರೂ. ಶಿವಪ್ಪ ೫ ರೂ ಮರಿತಮ್ಮಪ್ಪ ೧೦ ರೂ.

ಮಿರಜಸಂಸ್ಥಾನ ವನಸಿಗ್ಗಲಿ ಲಿಂಗರಾಜ ವಿದ್ಯಾಭಿವೃದ್ಧಿಫಂಡು.

ತಾರೀಖು ೧೨-೨-೨೧ ರಲ್ಲಿ ಶ್ರೀಮನ್ನಿ ಮಹಾರಾಜ ನಿರಂಜನ ಮೂಲಪ್ರಣವ ಸ್ವರೂಪಿಗಳಾದ ಶ್ರೀ ದಾವಣಗೆರೆ ಮೃತ್ಯುಂಜಯ ಶಿವಯೋಗಿಗಳ ಸನ್ನಿಧಾನದಲ್ಲಿ ವನಸಿಗ್ಗಲಿ ಭಕ್ತವೃಂದವೂ ವೀರಶೈವ ಸಾಧ್ವೀವಿತಾನವೂ ಸಾಷ್ಟಾಂಗದೊಡನೆ ವಾಗ್ದಾನಮಾಡಿದ ಮಹನೀಯರ ಹೆಸರುಗಳೂ ಅದರ ಫಂಡಿನ ರಕಮೂ ಕೆಳಗೆ ವಿವರಿಸಿದಂತೆ:—

ನಂ.	ಫಂಡುದಾರರ ಹೆಸರುಗಳು	ರಕಮು
೧	ಶ್ರೀ ಮೃತ್ಯುಂಜಯಶಿವಯೋಗಿಗಳು	೨೦೧
೨	ಶ್ರೀ ಫಕೀರಯ್ಯ ಸಂಗನಬಸಯ್ಯ ಕೊಡ್ಡಮಠ	೧೦೦೧
೩	ಶ್ರೀ ಸಿದ್ಧಯ್ಯ ಸಂಗನಬಸಯ್ಯ ಕೊಡ್ಡಮಠ	೧೦೦೧
೪	ಮ||ರಾ|| ಸಿದ್ಧಪ್ಪ ನೀಲಪ್ಪ ಯಲಿಗಾರ	೧೦೦೧
೫	,, ಗುರಪ್ಪ ಶೆಟ್ಟಿ ರಾಚಪ್ಪ ಶೆಟ್ಟಿ	೫೦೧
೬	,, ಭೀಮಪ್ಪ ಬಸಪ್ಪ ಗೋದಿ	೫೦೧
೭	,, ಶಿದ್ರಾಮಪ್ಪ ಬಸಪ್ಪ ಗೋದಿ	೫೦೧
೮	,, ಮಲ್ಲಪ್ಪ ಆರಬಸಪ್ಪ ಮಡ್ಡಿ	೫೦೧
೯	,, ಶ್ಯಾಂತಾರಾಮ ಭೀಮಾಜಿ ಪಾಟೀಲ್	೨೫೧
೧೦	,, ಶಿದ್ವೀರಪ್ಪ ಚನ್ನಬಸಪ್ಪ ಜಂಗಣ್ಣ	೧೩೧
೧೧	,, ಗುರುಶಾಂತಪ್ಪ ವೀರಬಸಪ್ಪ ಕುಬಸ್ತ	೧೨೫
೧೨	ಶ್ರೀ ಚನ್ನಬಸಯ್ಯ ಗುರುಶಾಂತಯ್ಯ ಧಾರವಾಡ	೧೨೫
೧೩	ಮ||ರಾ|| ಮಲ್ಲಪ್ಪ ವೀರಭದ್ರಪ್ಪ ಸಿದ್ದಾಪುರ	೧೨೫
೧೪	,, ಬಸಲಿಂಗಪ್ಪ ಶಿವಪ್ಪ ಮುದಗಲ್ಲ	೧೨೫
೧೫	,, ಈಶ್ವರಪ್ಪ ಬಸಲಿಂಗಪ್ಪ ಎಲಿಗಾರ	೧೨೫
೧೬	,, ಬಸಪ್ಪ ವಿರೂಪಾಕ್ಷಪ್ಪ ಬಳ್ಳಾರಿ	೧೨೫
೧೭	,, ಮಹಾದೇವಪ್ಪ ಮಲ್ಲಪ್ಪ ಅಣ್ಣೀಗೇರಿ	೧೨೫
೧೮	,, ಸೂಗೀರಪ್ಪ ಮಲ್ಲಪ್ಪ ಬೆಲವಗಿ	೧೨೫
೧೯	,, ಫಕೀರಪ್ಪ ಕೊಟ್ರಪ್ಪ ಶಿವಮಾಜಿ	೧೨೬
೨೦	,, ವೀರಪ್ಪ ಚನ್ನಪ್ಪ ನವಲಗುಂದ	೮೧
೨೧	ಶ್ರೀ ಅಡಿವಯ್ಯಾ ಪ್ರಭಯ್ಯ ನಿಂಬಯ್ಯಸ್ವಾಮಿ ಮಠ	೬೧
೨೨	ಮ||ರಾ|| ಗಂಗಪ್ಪ ಸೋಮಪ್ಪ ಅಕ್ಕಸಾಲಿ	೬೧
೨೩	ಮ||ರಾ|| ಬಸಪ್ಪ ವೀರಬಸಪ್ಪ ಕುಂಬಾರ	೬೧
೨೪	ಶ್ರೀ ಕಂಗಳಯ್ಯ ಬಸಯ್ಯ ಮಲ್ಲಾಪುರ ಮಠ	೫೫
೨೫	ಶ್ರೀ ಫಕೀರಯ್ಯ ಸಂಗನಬಸಯ್ಯನಬಸಯ್ಯ	೫೧
೨೬	ಮ||ರಾ|| ಬಸವಣ್ಣಪ್ಪ ಗುರಪ್ಪ ಶೆಟ್ಟಿ	೫೧
೨೭	ಶ್ರೀ ಸಿದ್ಧಲಿಂಗಯ್ಯ ನೀಲಕಂಠಯ್ಯ ಶಿರಹಟ್ಟಿ	೫೧
೨೮	ಮ||ರಾ|| ತೀರ್ಥಪ್ಪ ಪರಪ್ಪ ಮರಾಖಂಡಿ	೫೧
೨೯	ಮ||ರಾ ಶಿದ್ದಪ್ಪ ಶಿವಲಿಂಗಪ್ಪ ಹೂಲಿ	೫೧

ಸಶೇಷ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಭಾರ್ಜನಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೪—೦ ; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಕೆಯ್ಯಂಕೆಯೂ ಕಳುಹಬೇಕು, ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ
ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವೆಂಟ್ಸ್‌ಗಳಿಂದ ಮಾಡಿದೆ. ಫ್ರಾಂ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 543,
37 ಪಾರ್ಕ್‌ಟೌನ್ ಮದರಾಸು.

ಪಾಕೆಟ್ ಡೈರಿ ಇನಾಂ.

ಈ ನಕ್ಷೆಯಲ್ಲಿ ಕಂಡ ಪೌಂಟೆನ್ ಪೇನಾವನ್ನು ಕೊಂಡುಕೊಳ್ಳುವವರಿಗೆ ಸೊಗಸಾದ ಪಾಕೆಟ್ ಡೈರಿಯನ್ನು ಇನಾಮಾಗಿ ಕೊಡುವೆವು. ಈ ಪೇನಾವು ವಿಲಾಯತಿಯಲ್ಲಿ ತಯಾರಾದದ್ದು. ಒಂದಾವರ್ತಿ ಇಂಕಿಯನ್ನು ತುಂಬಿದರೆ ಸುಮಾರು 500 ಮಾತುಗಳನ್ನು ಬರೆಯುವುದು.

ಕ್ರಯ ಡೈರಿ ಸಹಿತ ಪೇನಾ 1ಕ್ಕೆ 1—8—0.

ಜರ್ಮನ್ ಬೆಳ್ಳಿಯ ಕ್ಯಾಲೆಂಡರ್.

ಈ ಕ್ಯಾಲೆಂಡರುಗಳು ಈಗಲೇ ಬಂದುವು. ಇವನ್ನು ಜರ್ಮನ್ ಬೆಳ್ಳಿಯಿಂದ ಮಾಡಿದೆ. ಇದೊಂದರಲ್ಲೇ 10 ವರುಷಗಳ ಕ್ಯಾಲೆಂಡರ್ ಇದೆ. ಇವನ್ನು ಗೋಡೆಗೆ ತಗುಲಿಸಲೂ, ಮೇಜಿನ ಮೇಲೆ ಇಡಲೂ ಬಹು ಚೆನ್ನಾಗಿವೆ. ಇಂಗ್ಲಿಷ್ ನಮೂನೆಯವು ಬಣ್ಣವು ಎಂದಿಗೂ ಹೋಗದು.

27 ಕ್ರಯ ಕ್ಯಾಲೆಂಡರ್ 1ಕ್ಕೆ 1—8—0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89, ನಾರಾಯಣಮೊದಲಿಬೀದಿ, ಮದ್ರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 17

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕ ೪೦ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಜಿಸ್ಟರ್
52 ಮಾಡಲ್ಪಟ್ಟಿರುವ
ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವುವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಬೀಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.0.0.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೆಂಪನಿ,
ಸಾಹುಕಾರ್‌ಪೇಟೆ, ಮದರಾಸು.

೧೯೨೧ ನೆಯ ಇಸವಿ ಮಾರ್ಚಿ ತಾ|| ೨೭ ರಿಂದ ೧೯೨೧ ನೆಯ ಏಪ್ರಿಲ್ ತಾ|| ೨ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ರೌದ್ರಿನಾಮ ಸಂವತ್ಸರದ ಫಾಲ್ಗುಣಬಹುಳ ಚತುರ್ಥಿಯಿಂದ ಫಾಲ್ಗುಣ ಬಹುಳ ದಶಮಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
27	ಭಾನು	ಚೌತಿ	41-19	ವಿಶಾ	47-49	15
28	ಸೋಮ	ಪಂಚ	42-37	ಅನೂ	50-46	16
29	[1] ಮಂಗಳ	ಷಷ್ಠಿ	45-7	ಜ್ಯೇಷ್ಠ	54-56	17
30	ಬುಧ	ಸಪ್ತ	48-47	ಮೂಲ	60	18
31	ಗುರು	ಅಷ್ಟ	53-26	ಮೂಲ	0-43	19
1	ಶುಕ್ರ	ನವ	58-38	ಪೂಷಾ	6-43	20
2	ಶನಿ	ದಶ	60	ಉಷಾ	13-12	21

(1) ಚಿತ್ರದಲ್ಲಿ ಮಹಾಬಲೇಶ್ವರಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ಕವೇತೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ರಿಕಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪, ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಏಪ್ರಿಲ್ ತಾರೀಖು ೩ ನೆಯ ಭಾನುವಾರ ಸಂಚಿಕೆ ೧೪

SREE SITHARAGHAVA
VAIDYASALA

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಟಿನ್ನು ಸೀಸೆಗೆ 4 ಆಣೆ ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
13 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕಂಥಹಸುಲಿ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ —ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೭೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ತಸಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ಮೃತಿಮುಕ್ತಿತಂ ೮ ಆಣೆ; ರಕ್ಷಾಕವಚ ೨ಆಣೆ; ಕಂಠರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.
ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ.	೦—೧೨—೦
ಶಿವಪೂಜಾವಿಧಿ.	೦—೧೫—೦
ಚಾರುಶೀಲಚರಿತ್ರೆ	೦—೯—೦
ಅಂಬಾಶಿ	೦—೮—೦

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೇರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇದ್ಯವಾಗದೆ ಇರಲಾರದು. ಕ್ರಯ ೮ ಆಣೆ.

12 ವಿಳಾಸ—ಎಂ. ಎಂ. ಪರ್ಣೇಕರ್, ದಾವಣಗೆರೆ.



ಗೆಜ್ಜೆ ಕಟ್ಟದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹುಸೊಗಸಾಗಿ ತಯಾರಾಗಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕೊನೆಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೆ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ 3—0—0.



ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0,
ಕೆಂಪುಕಲ್ಲಿನವು ಜೊತೆ 4—0—0,

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಬಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುವೆವು. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 1—4—0

12
1
2
3
4
5
6
7
9

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಿಗೆ ೪ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಕುರಾಯಿ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ರಾಣಿಮಾಲೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದಕನ್ನಡಿ 1, ಹೇರಾಯಿಲ್ ಸೀಸೆ 1, ಪರಟು ಗುಂಡಿಗಳು 4, ಜಪಾರ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಭಂಗಾರದ ಉಂಗುರ 1. ಜುಮ್ಲ 15 ಬಹುಮಾನಗಳ ಸಹಿತ ಗಡಿಯಾರ1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 543,
26 ಪಾರ್ಕ್‌ಟೌನ್ ಮದರಾಸ್.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.
ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಪಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖಿ	ರೂ. ಇಂದ.		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಪಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
7 ಕೆಂಪನಿ, ಚೌಕಂಬಾ ಕಾಶೀ.

ಭಕ್ತಿಬೋಧಕ ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!
ಮಹದ್ರಾಕ್ಷಾದಿ ಚೂರ್ಣವು. 36

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಳಿಗೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡುವ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಅದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ದೋಷವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಂತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೪ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು [illegible] ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತಾದಿ [illegible] ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು [illegible] ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಔಷಧ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಸ್. ಎ. ಹಿರೇಬಸವಣ್ಣ, ಬಳ್ಳಾರಿ.

ಸೂಚನೆ.

☞ ಬರುವ ಶನಿವಾರ ಯುಗಾದಿ ಹಬ್ಬವಾದ ಪ್ರಯುಕ್ತ ಪದ್ಧತಿಯ ಮೇರೆ ತಾ|| 10-4-1921 ರ "ಮೈಸೂರು ಸ್ಟಾರ್" ಸಂಚಿಕೆಯು ಹೊರಡುವುದಿಲ್ಲವು. ಪ. ಪ್ರ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಏಪ್ರಿಲ್ ತಾ|| ೩ ನೆಯ ಭಾನುವಾರ.

ನಿರ್ಬಂಧವಿಧಾನ.

ಸಾಮ್ರಾಜ್ಯಶಾಸನ ಸಭೆಯಲ್ಲಿ ಈ ವಿಷಯವನ್ನು ಕುರಿತು ಚರ್ಚೆಯು ನಡೆದಿತು. "ಹಿಂದೂಸ್ಥಾನ ಸರ್ಕಾರದವರು ಕಳೆದ ಅಕ್ಟೋಬರ್ ನವಂಬರ್ ತಿಂಗಳುಗಳಲ್ಲಿ ಮಾಡಿದ ಪ್ರಕಟನೆಯಲ್ಲಿ ಸಹಾಯನಿರಾಕರಣ ನಿರೋಧಕ್ಕೆ ನಿರ್ಬಂಧವಿಧಾನವನ್ನುಪಯೋಗಿಸಲು ಇಷ್ಟಪಡುವುದಿಲ್ಲವೆಂದು ಮಾಡಿದ್ದ ಅಪ್ಪಣೆಯು ಪ್ರಜಾರಂಜಕವಾಗಿದ್ದಿತು. ಈಗ ಪ್ರಾಂತಿಕ ಸರ್ಕಾರಗಳು ಅಲ್ಲಲ್ಲಿಗೆ ನಿರ್ಬಂಧಶಾಸನ ಪ್ರಯೋಗಮಾಡಲು ಆರಂಭಿಸಿದ್ದಾರೆ. ಮಧ್ಯಪ್ರಾಂತವೊಂದರಲ್ಲೇ ೧೨೫ ಮಂದಿಯಮೇಲೆ ನಿರ್ಬಂಧಶಾಸನವನ್ನು ಪ್ರಯೋಗಿಸಿದ್ದಾರೆ. ಈಗ ದೇಶದಲ್ಲಿ ಕ್ಷಾಮದ ಭಯದಮೇಲೆ ಸುಂಕಗಳನ್ನು ಹೆಚ್ಚಿಸಿರುವುದು ಬೇರೆ. ಇಂಥ ಸಂದಿಗ್ಧಸ್ಥಿತಿಯಲ್ಲಿ ಸರ್ಕಾರದವರು ಕಠಿನಚರ್ಯೆಗೆ ಉಪಕ್ರಮಿಸಿದರೆ ಗೂಢವಾದ "ಪಿತೂರಿ" ಗಳು ತಲೆಯೆತ್ತುವುವು. ಆದುಕಾರಣ ಅದನ್ನು ಬಿಟ್ಟು ಸರ್ಕಾರದವರು ಸೌಮ್ಯವಾಗಿ ಪ್ರವರ್ತಿಸಿದರೆ ಪ್ರಭುತ್ವದ ಮೇಲೆ ಪ್ರಜೆಗಳಿಗೆ ವಿಶ್ವಾಸವು ಹುಟ್ಟುವುದು. ಸರ್ಕಾರದವರು ಕಠಿನ ಶಾಸನ ಪ್ರಯೋಗವನ್ನು ನಿಲ್ಲಿಸಿ ತಮ್ಮ ಸಂಕಲ್ಪವನ್ನು ಮರಳಿ ಪ್ರಕಟಿಸಬೇಕು" ಎಂದು ಸಭಿಕರಲ್ಲಿ ಡಾ|| ನಂದಲಾಲರೇ ಮೊದಲಾದ ಕೆಲವರು ಸೂಚಿಸಿದರು.

ಇದಕ್ಕೆ ಪ್ರತ್ಯುತ್ತರವನ್ನು ಸರ್ಕಾರದ ಪಕ್ಷದಿಂದ ಅ|| ವಿನ್‌ಸೆಂಟ್‌ರವರು ಕೊಟ್ಟಿರುವುದರಲ್ಲಿ ಸರ್ಕಾರದ ಪ್ರಕೃತದ ಧೋರಣೆಯು ಸುವ್ಯಕ್ತವಾಗಿರುತ್ತದೆ. ಅವರ ಉತ್ತರದ ಮುಖ್ಯಾಭಿಪ್ರಾಯವೇನೆಂದರೆ—ಈ ದೇಶವು ವಿಸ್ತಾರವಾದುದು. ಇಂಥ ದೇಶದಲ್ಲಿ ಪರಿಪಾಲನ ಮಾಡುವುದು ಸುಲಭಕಾರ್ಯವಲ್ಲ. ಈಗಲಾದರೊ ಬಾಧ್ಯತಾಯುತ ಪ್ರಭುತ್ವಪದ್ಧತಿಯು ಸ್ಥಾಪಿತವಾಗುತ್ತಿದೆ. ಯಾವ ದೇಶದಲ್ಲೂ ಪ್ರಭುತ್ವಪದ್ಧತಿಯಲ್ಲಿ ಮಾರ್ಪು ಇಷ್ಟು ಶಾಂತವಾಗಿ ಉಂಟಾದುದಿಲ್ಲ. ದೇಶದಲ್ಲಿ ಶಾಂತಿಯು ದೃಢವಾಗಿರಬೇಕೆಂಬುದೇ ಪ್ರಭುತ್ವದವರ ಉದ್ದೇಶವಾಗಿದೆ. ಈಗಲಾದರೊ ಸಹಾಯನಿರಾಕರಣವಾದಿಗಳು ಕೆಲ ಕಷ್ಟಗಳನ್ನು ತಂದೊಡ್ಡಿದ್ದಾರೆ. ಪ್ರಭುತ್ವವನ್ನು ಸ್ತಂಭಿಸಿಬಿಡಬೇಕೆಂಬುದೇ ತಮ್ಮ ಉದ್ದೇಶವೆಂದು ಅವರೇ ಹೇಳಿಕೊಂಡಿದ್ದಾರೆ. ಅವಕಾಶ ಸಿಕ್ಕಿದಂತೆಲ್ಲಾ ಆ ತಮ್ಮುದ್ದೇಶವನ್ನು ನೆರವೇರಿಸಿಕೊಳ್ಳಲಿಕ್ಕೆ ಅವರು ಹವಣಿಸಿಕೊಂಡಿದ್ದಾರೆ. ಕೂಲಿಕಾರರಿಗೂ ಅವರ ಯಜಮಾನರಿಗೂ ಭೇದಾಭಿಪ್ರಾಯ ಹುಟ್ಟಿದಾಗಲೂ, ಭೂಸ್ವಾಮಿಗಳಿಗೂ ಅವರ ರೈತರಿಗೂ ಭೇದಾಭಿಪ್ರಾಯ ಹುಟ್ಟಿದಾಗಲೂ ಅವರುಗಳ ಮಧ್ಯದಲ್ಲಿ ಈ ಸಹಾಯನಿರಾಕರಣವಾದಿಗಳು ನುಗ್ಗಿ ಅತೃಪ್ತಿಯನ್ನೂ ಅಲ್ಲಕಲ್ಲೋಲವನ್ನೂ ಮತ್ತಷ್ಟು ಹೆಚ್ಚಿಸಿದ್ದಾರೆ. ಈ ಉದ್ಯಮವು ಅಪಾಯಕರವಾದುದು. ಕೆಡಿಸುವುದೊಂದೇ ಅವರಿಗೆ ತೋರುವುದೇ ಹೊರತು ಮತ್ತೇನೂ ತೋರದು. ಅವರ ಸಹಾಯನಿರಾಕರಣಕ್ಕೆ ಸ್ವರಾಜ್ಯಸಂಪಾದನೆಯು ಒಂದು ಮುಖ್ಯೋದ್ದೇಶವಾಗಿದೆ. ಒಂದು ದೇಶವು ಸ್ವರಾಜ್ಯವನ್ನು ಪಡೆಯಬೇಕಾದರೆ ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಶಕ್ತವಾಗಿರಬೇಕು. ಭರತಖಂಡಕ್ಕೆ ಅಂಥ ಶಕ್ತಿಯಿಲ್ಲ. ಈ ದೇಶವನ್ನು ಪಾಲಿಸುತ್ತಿರುವ ಆಂಗ್ಲರು ಥಟ್ಟನೆ ಬಿಟ್ಟು ಹೊರಟುಹೋದರೆ ದೇಶದಲ್ಲಿ ಅರಾಜಕತ್ವವುಂಟಾಗುವುದೇ ಅಲ್ಲದೆ ಈ ದೇಶದಲ್ಲಿ ಕಳೆದ ೬೦ ವರ್ಷಗಳಿಂದಲೂ ಇದರ ಮೇಲ್ಮೆಗಾಗಿ ಅವರು ಮಾಡಿದ ಕೆಲಸವೆಲ್ಲವೂ ಹಾಳಾಗಿಹೋಗುವುದು. ಈ ಘೋರ ಸಹಾಯನಿರಾಕರಣ ಪ್ರಯತ್ನಕ್ಕೆ ತಕ್ಕ ಪ್ರತಿಕೂಲೋದ್ಯಮವನ್ನು ಈ ದೇಶದ ಪ್ರಜೆಗಳೇ ಆರಂಭಿಸುವರೆಂದು ಸರ್ಕಾರದವರು ಮೊದಲಿಂದಲೂ ನಂಬಿದ್ದಾರೆ. ಅಂಥ ಪ್ರತಿರೋಧೋಪಾಯವನ್ನು ಆರಂಭಿಸಿರುವ ಅನಿಬೆಸೆಂಟಮ್ಮನೂ ಶ್ರೀನಿವಾಸಶಾಸ್ತ್ರಿಯವರೂ ಸಹ ಪ್ರಜೆಗಳ ಮತ್ತು ಪ್ರಭುತ್ವದವರ ಕೃತಜ್ಞತೆಗೆ ಪಾತ್ರರು. ಮ|| ಗಾಂಧಿಯವರ ಉದ್ಯಮವು ವಿದ್ಯಾವಂತರಲ್ಲಿ ಫಲಿಸಲಿಲ್ಲ. ಶಾಸನಸಭೆಯನ್ನು ಬಹಿಷ್ಕರಿಸಬೇಕು, ಬಿರುದುಗಳನ್ನು ಪರಿತ್ಯಜಿಸಬೇಕು, ವಕೀಲತನವನ್ನು ಬಿಡಬೇಕು, ಎಂದು ವಿದ್ಯಾವಂತರಿಗೆ ಅವರು ಮಾಡಿದ ಬೋಧೆಯೆಲ್ಲಾ ಅಪಜಯವನ್ನು ಹೊಂದಿತು. ವಿದ್ಯಾರ್ಥಿಗಳಲ್ಲಿ ಕೆಲಕಾಲ ಚಲನವಲನವು ನಡೆದಿತು. ಆದರೆ ಆ ಹುಚ್ಚುತನವನ್ನು ಕಳೆದುಕೊಂಡು ಅವರು ಮರಳಿ ಶಾಲೆಗಳಿಗೆ ಬರುತ್ತಿದ್ದಾರೆ. ಪ್ರಪಂಚದಲ್ಲೆಲ್ಲಾ ಆರ್ಥಿಕದುಸ್ಥಿತಿಯುಂಟಾಗಿರುವಂತೆ ಈ ದೇಶದಲ್ಲೂ ಉಂಟಾಗಿರುವ ದುಸ್ಥಿತಿಯ ಸಂಧಿಯನ್ನು ಉಪಯೋಗಿಸಿಕೊಂಡು ಸಹಾಯನಿರಾಕರಣವಾದಿಗಳು ಪ್ರಜೆಗಳ ಮನಸ್ಸಿನಲ್ಲಿ ಕ್ರೋಧಾಸೂಯೆಗಳನ್ನು ಹುಟ್ಟಿಸುತ್ತಿದ್ದಾರೆ. ಇದರೊಡನೆ ಸರ್ಕಾರದವರು ಸಂಬಂಧವನ್ನು ಕಲ್ಪಿಸಿಕೊಂಡರೆ ಈಗಣ ನೂತನ ಸಂಸ್ಕರಣಗಳಿಗೆ ಪ್ರತಿಕೂಲವಾಗುವುದು. ಇದಕ್ಕೆ ಮುಂಚೆಯೇ ಈ ಉದ್ಯಮವನ್ನು ಅಣಗಿಸುವುದು ಸರ್ಕಾರಕ್ಕೆ ಅಸಾಧ್ಯವಾಗಿರಲಿಲ್ಲ. ಅವಕೆ ಅವರು ಸಹನೆಯನ್ನು ತಾಳಿದರು. ಇದನ್ನು ಮುಂದಾದರೂ ಅಣಗಿಸುವುದಕ್ಕೆ ಪ್ರಬಲಪ್ರಯತ್ನವನ್ನು ಮಾಡಿಯೇ ಮಾಡುವರು. ಈ ಸಂಬಂಧದಲ್ಲಿ ನಿರ್ಬಂಧಶಾಸನವನ್ನು ರದ್ದುಪಡಿಸಲಿಕ್ಕೂ ಮುದ್ರಣಶಾಸನವನ್ನು ಸರಿಪಡಿಸಲಿಕ್ಕೂ ಬೇರೆ ಬೇರೆ ಸಂಘಗಳನ್ನು ಸರ್ಕಾರದವರು ಏರ್ಪಡಿಸಿದ್ದಾರೆ. ಈ ನಿರಾಕರಣೋದ್ಯಮದಿಂದ ಅಪಾಯವಿಲ್ಲವೆಂದು ಹೇಳುವುದು ಸರಿಯಲ್ಲ. ಇದರಿಂದಾಗುವ ಅಪಾಯವು ಎಲ್ಲರಿಗೂ ತಿಳಿದೇ ಇದೆ. ಎಲ್ಲಿ ಗದ್ದಲವುಂಟಾಗುತ್ತದೋ ಅಲ್ಲಿ ಅದನ್ನಣಗಿಸಿ ಅದಕ್ಕೆ ಕಾರಣಭೂತರಾದವರನ್ನು ಶಿಕ್ಷಿಸಿಯೇ ತೀರಬೇಕು. ಹೀಗೆ ಮಾಡುವುದರಲ್ಲಿ ಶಾಸನಸಭಾ ಸಭಿಕರೆಲ್ಲರೂ ಸರ್ಕಾರಕ್ಕೆ ಸಹಾಯ ಮಾಡಬೇಕು. ರಾಯಬರೇಲಿಯಲ್ಲಿ ರಾಜಕೀಯಾಂದೋಳನಕಾರಕರ ಪ್ರೋದ್ಬಲದಿಂದ ಪ್ರಜೆಗಳು "ಆಂಗ್ಲರಾಜ್ಯಕ್ಕೆ ಕೊನೆಗಾಲ ಬಂದಿದೆ. ಗಾಂಧಿಯು ದೊರೆಯಾಗುತ್ತಾನೆ" ಎಂದು ಅರಚಿದರು. ಇಂಥ ಪ್ರವರ್ತನಕ್ಕೆ ಉದ್ಬೋಧಕರಾದವರ ಮೇಲೆ ಸಾಮಾನ್ಯಶಾಸನವನ್ನಾದರೂ ಉಪಯೋಗಿಸಲು ಪ್ರಭುತ್ವದವರು ಪ್ರಯತ್ನಿಸದಿದ್ದರೆ ತೀರದು. ಅವಶ್ಯಕವಾದ ಕಡೆ ಪ್ರಾಸಿಕ್ಯೂಷನ್ ಮಾಡಿಸಿದ್ದೇವೆ. ಆದರೆ ಸಾಕ್ಷಿಗಳು ಬಂದು ಹೇಳಿಕೆ ಕೊಡಲಿಕ್ಕೆ ಹೆದರುತ್ತಾರೆ. ನಾವು ಪ್ರಾಂತಿಕ ಸರ್ಕಾರಗಳಿಗೆ ಕಳೆದ ಜನವರಿ ತಾ|| ೨೪ರಲ್ಲಿ ಒಂದು ಅಪ್ಪಣೆಯನ್ನಿತ್ತು ಅದರಲ್ಲಿ—"ಕೂಲಿಕೆಲಸಗಾರರಲ್ಲಿ ಆಂದೋಳನವನ್ನು ಹುಟ್ಟಿಸುವ ಸಹಾಯನಿರಾಕರಣವಾದಿಗಳನ್ನು ಎಚ್ಚರದಿಂದ ನೋಡಿಕೊಳ್ಳಿರಿ; ಅವಶ್ಯಕವಾದ ಕಡೆ ರೈತರ ಕಷ್ಟವನ್ನು ತೊಲಗಿಸಲು ಶಾಸನವನ್ನು ಮಾಡಿರಿ; ಸರ್ಕಾರದವರ ನಿಜೋದ್ದೇಶವನ್ನು ತಿಳಿಯಪಡಿಸುವುದಕ್ಕೆ ತಕ್ಕ ಪ್ರಕಟನೆಗಳನ್ನು ಮಾಡಿರಿ; ರಾಜದ್ರೋಹಾತ್ಮಕ ಉಪನ್ಯಾಸಗಳನ್ನು ಮಾಡುವವರನ್ನೂ ಪ್ರಜೆಗಳಿಗೆ ಪ್ರೇರಿಸಿ ದೌರ್ಜನ್ಯವನ್ನಾಚರಿಸತಕ್ಕವರನ್ನೂ ಸಾಮಾನ್ಯಶಾಸನಗಳ ಪ್ರಕಾರ ಹಿಡಿಯಿರಿ" ಎಂದು ತಿಳಿಯಪಡಿಸಿದ್ದೇವೆ. ಗಾಂಧಿಯವರ ಆದರ್ಶವು ಆಚರಣಯೋಗ್ಯವಾದುದೇ ಅಲ್ಲ. ಅವರೇನೋ ದೌರ್ಜನ್ಯಕ್ಕೆ ಪ್ರವರ್ತಿಸಬೇಡಿರೆಂದು ಬೋಧಿಸುವುದು ನಿಜ. ಆದರೆ ಅವರ ಪಕ್ಷದವರಿಗೆಲ್ಲಾ ಆ ಉದ್ದೇಶವಿದೆಯೆ? ಸಾಂಘಿಕ ಬಹಿಷ್ಕಾರಗಳು, ಸೈನಿಕರಿಗೆ ಬೋಧಿಸಿ ಅವರವರ ಕೆಲಸಗಳನ್ನು ನೆರವೇರಿಸದಂತೆ ಮಾಡುವುದು—ಇತ್ಯಾದಿ ದುಷ್ಕಾರ್ಯಗಳು ಜರುಗುತ್ತಿರುವಾಗ, ಪ್ರಜೆಗಳಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಪ್ರಭುತ್ವದವರು ತಕ್ಕ ಪ್ರಯತ್ನವನ್ನು ಕೈಕೊಳ್ಳುವುದು ತಪ್ಪೆ? ಅದರಲ್ಲಿ ಸಂಬಂಧವನ್ನೇ ಕಲ್ಪಿಸಿಕೊಳ್ಳದೆ ನಾವು ದೂರದಲ್ಲಿ ನಿಂತಿರಬಹುದೆ? ಪಂಜಾಬು, ಮದರಾಸು, ಬೀಹಾರು, ಸಂಯುಕ್ತರಾಷ್ಟ್ರ—ಇವುಗಳಲ್ಲಿ ಜರುಗಿದ ಗದ್ದಲಗಳ ಸಂಬಂಧದಲ್ಲಿ ಅಲ್ಲಲ್ಲಿಯ ಅಧಿಕಾರಿಗಳು ಅವಲಂಬಿಸಿದ ಚರ್ಯೆಯನ್ನು ಆಯಾ ಪ್ರಾಂತಗಳ ಶಾಸನಸಭೆಗಳು ಒಪ್ಪಿಕೊಂಡೇ ಇರುತ್ತವೆ. ಪ್ರಜೆಗಳ ನ್ಯಾಯವಾದ ಕೋರಿಕೆಗಳನ್ನು ಈಡೇರಿಸುವುದು, ಮಿತವಾದಿಗಳ ಅಭಿಪ್ರಾಯವನ್ನು ಬಲಪಡಿಸುವುದು, ರಾಜಕೀಯ ಸಂಸ್ಕರಣಗಳು ಯಥಾರ್ಥವಾದುವುಗಳೆಂದು ತಿಳಿಯಪಡಿಸುವುದು, ವ್ಯವಸಾಯ ಮೊದಲಾದುವುಗಳ ಪುರೋವೃದ್ಧಿಗೆ ಉಂಟಾಗುವ ಆತಂಕಗಳನ್ನು ತೊಲಗಿಸುವುದು—ಇವೇ ಸರ್ಕಾರದ ಮುಖ್ಯಲಕ್ಷ್ಯ."

ಹೀಗೆ ಹೇಳಿದ ಮೇಲೆ ಇನ್ನು ಕೆಲ ಸಭಿಕರು ದೇಶದಲ್ಲಿ ಈಗೀಗ ಆರಂಭವಾಗಿರುವ ದೌರ್ಜನ್ಯವನ್ನು ಅಣಗಿಸಬೇಕಾದುದು ಸರ್ಕಾರದ ಕರ್ತವ್ಯವೇ ಸರಿಯೆಂದೂ, ಆದರೆ ಕಠಿನಶಾಸನಪ್ರಯೋಗವು ಅನವಶ್ಯಕವೆಂದೂ ಮೊದಲಾಗಿ ವಾದಿಸಿದರು.

ಕಡೆಗೆ ಈಗ ಪ್ರತಿಪಾದಿಸಿದ ರೀತಿಯಲ್ಲಿಯೇ ಪ್ರವರ್ತಿಸಿ ಕಠಿನಶಾಸನಗಳನ್ನುಪಯೋಗಿಸದೆ ಸಾಮಾನ್ಯ ಶಾಸನಗಳನ್ನುಪಯೋಗಿಸಿ ಸಹಾಯನಿರಾಕರಣೋದ್ಯಮವನ್ನು ಸರ್ಕಾರದವರು ಅಣಗಿಸಿಬಿಡಬೇಕು ಎಂಬರ್ಥಕ್ಕೆ ಎಲ್ಲರೂ ಅಂಗೀಕರಿಸಿದರು.

ಈ ತೀರ್ಮಾನವನ್ನು ನೋಡಲಾಗಿ ಪ್ರಭುತ್ವದವರು ಸೌಮ್ಯೋಪಾಯಗಳ ಮೂಲಕವಾಗಿಯೇ ಸಹಾಯನಿರಾಕರಣಪ್ರಯತ್ನವನ್ನು ನಿರೋಧಮಾಡಲು ಬದ್ಧರಾಗಿರುವರೆಂದು ವ್ಯಕ್ತವಾಗಿರುತ್ತದೆ. ಆದರೆ ಮ|| ಗಾಂಧಿಯವರ ಉಪದೇಶಕ್ಕೆ ವ್ಯತಿರಿಕ್ತವಾಗಿ ಅವರ ಅನುಯಾಯಿಗಳು ದೌರ್ಜನ್ಯಕ್ಕೆ ತೊಡಗಿದರೆ ಕಠಿನಶಾಸನಗಳನ್ನು ಉಪಯೋಗಿಸಬೇಕಾದ ಅವಸ್ಥೆಯು ಬಂದೇ ಬಂದೀತು. ಈ ಮಧ್ಯೆ ಪಾರ್ಲಿಮೆಂಟಿನಲ್ಲಿ ಸಹಾಯನಿರಾಕರಣದ ವಿಷಯವನ್ನೆತ್ತಿಕೊಂಡು ಕರ್ನಲ್ ಏಟ್ ಎಂಬ ಸಭಿಕರು "ಗಾಂಧಿಯು ಆಂಗ್ಲಪ್ರಭುತ್ವಕ್ಕಿಂತಲೂ ಬೋಲ್ಷೆವಿಕ್ ಪ್ರಭುತ್ವವೇ ಉತ್ತಮವಾದುದೆಂದು ಉಪನ್ಯಾಸ ಮಾಡಿರುವ ಕಾರಣ ಆತನು ಸೋವಿಯಟ್ಟರ ಏಜಂಟಾಗಿ ಕೆಲಸಮಾಡುತ್ತಿರುವುದರಿಂದ ಹಿಡಿದು ಗಡೀಪಾರು ಮಾಡಬೇಕು, ಎಂದು ಹೇಳಿದರು. ಆ ವಿಷಯವನ್ನೆಲ್ಲಾ ಇಂಡ್ಯಾ ಸರ್ಕಾರದವರೇ ಆಲೋಚಿಸುವರೆಂದು ಸ್ಟೇಟ್‌ಸೆಕ್ರೆಟರಿಯವರು ಉತ್ತರಕೊಟ್ಟಿರುವರು. ಇದರ ಮೇಲೆ ಪ್ರಕೃತದ ಸಹಾಯನಿರಾಕರಣ ಚಳವಳಿಯ ಸಂಬಂಧದ ವಿಚಾರಣೆಗಾಗಿ ಒಂದು ಸಂಘವನ್ನೇರ್ಪಡಿಸಬೇಕೆಂಬ ಪ್ರಯತ್ನವು ಪಾರ್ಲಿಮೆಂಟ್ ಸಭಿಕರಿಂದ ಉಂಟಾಗಿರುತ್ತದೆ. ಪರಿಸ್ಥಿತಿಗಳು ಹೇಗೆಹೇಗಾಗುವುವೋ ನೋಡಬೇಕು. ಎಲ್ಲರ ಕಣ್ಣೂ ಸಹಾಯನಿರಾಕರಣ ಯತ್ನದ ಮೇಲೆ ಬಿದ್ದಿರುವುದೇನೋ ನಿಜ. ಹೊಸ ವೈಸ್ರಾಯರು ಈಗತಾನೇ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ದೇಶಪರಿಸ್ಥಿತಿಯನ್ನು ತಮ್ಮ ನ್ಯಾಯಬಲ ಪರಿಪಕ್ವಬುದ್ಧಿಯಿಂದವಲೋಕಿಸಿ, ಪ್ರಜಾಪ್ರಭುಗಳ ಮಧ್ಯದ ಈಗಣ ವಿಷಯವು ಕಳೆದುಹೋಗುವುದಕ್ಕೆ ತಕ್ಕ ಹದಿಯನ್ನು ಹಾಕಲು ಪ್ರಾರಂಭಿಸುವವರಾಗಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ನಂಜನಗೂಡಿನಲ್ಲಿ ಕಳೆದ ಶುಕ್ರವಾರ ಸಾಯಂಕಾಲ ಉತ್ತಮವಾದ ಮಳೆಯಾಗಿ ಆಲಿಕಲ್ಲುಗಳು ವಿಶೇಷವಾಗಿ ಸುರಿದುವು ಜೋಳದ ಬಿತ್ತನೆಗೆ ಆ ಸುತ್ತಿನವರು ಆರಂಭಿಸಿದ್ದಾರೆ.

ರಾಜಧಾನಿಯಲ್ಲಿ ಬಿಸಲಿನ ತಾಪವು ಮಿತಿಮೀರಿ ಹೆಚ್ಚುತ್ತಿರುವುದರಿಂದ ಇನ್‌ಫ್ಲುಯೆನ್ಜಾ ರೋಗವೂ ಪ್ರಬಲಿಸುತ್ತಿದೆ. ಮಕ್ಕಳುಗಳಿಗೇ ಅಲ್ಲದೆ ದೊಡ್ಡವರಿಗೂ ಸಿಡುಬಿನರೋಗವುಂಟಾಗಿ ಕೆಲಮರಣಗಳೂ ಆಗಿವೆಯೆಂದು ತಿಳಿದುಬರುತ್ತದೆ. ಕಳೆದ ಗುರುವಾರದಿಂದ ಸಾಯಂಕಾಲದ ವೇಳೆ ಮೋಡವು ಕಾಣಿಸಿಕೊಂಡು ನಾಲ್ಕಾರು ಮಳೆಹನಿಗಳು ಉದುರುತ್ತಿರುವುವು. ಚೈತ್ರಮಾಸದಲ್ಲಿ ಮಳೆಯು ಬಾರದಿದ್ದಲ್ಲಿ ಅನೇಕ ಗ್ರಾಮಗಳಲ್ಲಿ ಕುಡಿಯಲಿಕ್ಕೆ ನೀರು ದೊರೆಯದೆ ಬಹಳ ಕಷ್ಟವು ಪ್ರಾಪ್ತವಾಗುವ ಸಂಭವವಿದೆ.

ರಾಜಧಾನಿಯ ಪಶ್ಚಿಮದಿಕ್ಕಿನಲ್ಲಿ ೩ನೆ ರಾಜಕುಮಾರಿಯವರ ಪ್ರಾಸಾದದ ಬಳಿ ಬಂಗಲೆ ಮತ್ತು ಮನೆಗಳನ್ನು ಕಟ್ಟಲು ಹೊಸದಾಗಿ ದಳಗಳನ್ನು ವಿಂಗಡಿಸಿ ಆ ಪ್ರದೇಶಕ್ಕೆ ವಾಣೀವಿಲಾಸ ಮೊಹಲ್ಲಾ ಎಂದು ನಾಮಕರಣವಾಗಿದೆ. ಇಲ್ಲಿ ಜನರಿಗೆ ಮನೆಗಳ ದಳವನ್ನು ಕೊಟ್ಟಿರುವುದರಲ್ಲಿ ಸರ್ಕಾರಿಯಧಿಕಾರಿಗಳಿಗೂ, ಪ್ರಬಲರಾದವರಿಗೂ ವಿಶೇಷವಾಗಿ ದೊರೆದಿರುವುದರ ವಿನಾ ವಾಸಕ್ಕೆ ಮನೆಯಿಲ್ಲದೆ ಪೇಚಾಡುತ್ತಿರುವ ಜನರಿಗೆ ದೊರೆಯಲಿಲ್ಲವೆಂದು ಕೇಳುತ್ತೇವೆ. ಇದು ವಾಸ್ತವವಾಗಿರುವ ಪಕ್ಷದಲ್ಲಿ ಟ್ರಸ್ಟ್‌ಬೋರ್ಡಿನವರು ವಿಚಾರಿಸಿ ವಾಸಸ್ಥಳವಿಲ್ಲದೆ ಪೇಚಾಡುತ್ತಿರುವ ಮತ್ತು ಮನೆಗಳನ್ನು ಕಟ್ಟಲು ಆತುರಪಡುತ್ತಿರುವ ಜನರಿಗೆ ಮನೆಗಳ ದಳಗಳನ್ನು ಅಗತ್ಯವಾಗಿ ಕೊಡಿಸಬೇಕಾಗಿ ಸೂಚಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಈಗ ನಡೆದ ಜನ ಪರಿಗಣತಿಯ ವೆಚ್ಚಕ್ಕಾಗಿ ಹಿಂದೂಸ್ಥಾನ ಸರ್ಕಾರದವರು ೨೪೬೫೦೦೦ ರೂ. ಗಳನ್ನು ವಿನಿಯೋಗಿಸುವರು.

ಬಂಗಾಳಾ ಸರ್ಕಾರದವರು ತಮ್ಮ ಆಧಿಪತ್ಯದಲ್ಲಿ ಪ್ರಾಥಮಿಕ ವಿದ್ಯಾವ್ಯಾಪನೆಗಾಗಿಯೇ ಈ ವರ್ಷದಲ್ಲಿ ೩೧೫೨೦೦೦ ರೂ. ಗಳನ್ನು ವ್ಯಯಮಾಡಬೇಕೆಂದು ನಿರ್ಧರಿಸಿದ್ದಾರೆ.

ಗ್ವಾಲಿಯರ್ ಸಂಸ್ಥಾನವು ಇದುವರೆಗೂ ಮಧ್ಯಪ್ರಾಂತ ಸರ್ಕಾರಕ್ಕೆ ಅಂಕಿತವಾಗಿದ್ದಿತು. ಇನ್ನು ಮುಂದೆ ಅದು ನೇರವಾಗಿ ಇಂಡಿಯಾ ಸರ್ಕಾರಕ್ಕೆ ಅಂಕಿತವಾಗಿರುವಂತೆ ಮಾಡಲ್ಪಟ್ಟಿದೆ.

ಅಫ್ಘಾನಿಸ್ಥಾನದವರು ರಷ್ಯಾ ಸೋವಿಯಟ್ಟರೊಡನೆ ಮಾಡಿಕೊಂಡಿರುವ ಒಪ್ಪಂದದ ವಿವರವನ್ನು ತಿಳಿಯಬೇಕೆಂದು ಆಂಗ್ಲಸರ್ಕಾರದವರು ಅಫ್ಘನ್ ಪ್ರಭುತ್ವದವರನ್ನು ಕೇಳಿರುವರು.

ಕಾರ್ಡುಗಳಿಗೆ ಮೊದಲಿದ್ದಂತೆಯೇ ೩ ಪೈ. ಕವರುಗಳಿಗೆ ½ ತೊಲೆ ತೂಕದೊಳಗಿದ್ದರೆ ೬ ಪೈ. ಅದಕ್ಕೆ ಮೇಲ್ಪಟ್ಟ ಪ್ರತಿ ತೊಲೆ ತೂಕಕ್ಕೆ ಒಂದೊಂದಾಣೆಯಂತೆ ಛಾರ್ಜು ನಿರ್ಣಯಿಸಲ್ಪಟ್ಟಿದೆ.

ಇಂಡಿಯಾ ಸರ್ಕಾರದವರು ಕಳೆದ ಮಾರ್ಚಿ ತಾ|| 1 ರಿಂದಲೇ ಹೊಸ ಸುಂಕಗಳನ್ನು ಎತ್ತಲು ಪ್ರಾರಂಭಿಸಿಬಿಟ್ಟಿರುವರಂತೆ. ಈಗಾಗಲೇ ಅದರಿಂದ ೬೦-೭೦ ಲಕ್ಷ ರೂ. ಗಳ ಮೇಲೆಯೇ ಉತ್ಪತ್ತಿಯಾಗಿದೆ.

ಮದರಾಸಿನಲ್ಲಿ ಮನೆಮನೆಗಳಲ್ಲಿರುವ ಕುಡಿಯುವ ನೀರಿನ ಕೊಳಾಯಿಗಳಿಗೆ ಮೀಟರನ್ನು ಇಟ್ಟಿರಲಿಲ್ಲ. ಇತಃಪರ ಇಡಬೇಕೆಂದು ಅಲ್ಲಿಯ ಕಾರ್ಪೋರೇಷನ್ ಮೀಟಿಂಗಿನಲ್ಲಿ ತೀರ್ಮಾನವಾಯಿತು.

ಹೊಸ ವೈಸ್ರಾಯರು ಪತ್ನೀಸಮೇತ ಲಂಡನ್ ಪಟ್ಟಣವನ್ನು ಬಿಟ್ಟು ಕಳೆದ ತಾ|| ೧೬ರಲ್ಲಿ ಹೊರಟರು. ಸಮುದ್ರತೀರದ ಡೋವರ್ ಪಟ್ಟಣದವರೆಗೂ ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೆಗ್ಯೂರವರು ಒಡನೆ ಬಂದು ಸಾಗಕಳುಹಿದರು.

ಕಲ್ಕತ್ತಾ ಮ್ಯುನಿಸಿಪಾಲಿಟಿಗೆ ಬಡ್ಜೆಟ್ಟಿನಂತೆ ಈ ವರ್ಷದಲ್ಲಿ ೧೬೮೮೫೦೦೦ ರೂ. ಗಳ ಆದಾಯವೂ, ೧೬೮೩೨೦೦೦ ರೂ. ಗಳ ವೆಚ್ಚವೂ ಆಗುವುವೆಂದು ಗೊತ್ತಾಗಿದೆ. ೬೩೧೦೦೦ ರೂ. ಗಳನ್ನು ಹೆಚ್ಚು ಕೆಲಸಗಳಿಗಾಗಿ ಸಾಲಮಾಡುವವರಾಗಿದ್ದಾರೆ.

ಇಂಡಿಯಾ ಸರ್ಕಾರದವರು ಈ ವರ್ಷದ ಬಡ್ಜೆಟ್ಟಿನಲ್ಲಿ ಲೋಹಮಾರ್ಗಗಳ ವೆಚ್ಚಕ್ಕೆಂದು ೧೬೬೮೧೧೦೦೦ ರೂ. ಗಳನ್ನು ಗೊತ್ತುಮಾಡಿದ್ದಾರೆ. ದೇಶಹಿತಕ್ಕೆ ಮುಖ್ಯಸಾಧನವಾದ ನೀರಾವರಿ ಕೆಲಸಗಳಿಗೆ ೩೧೮೦೦೦೦ ರೂ. ಗಳನ್ನು ಮಾತ್ರ ನಿಗದಿ ಮಾಡಿದ್ದಾರೆ. ಇದು ಬಹಳ ಅನ್ಯಾಯ.

ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸಿ ಅಂಡಮಾನ್ ದ್ವೀಪಕ್ಕೆ ಕಳುಹಿಸುವ ಪದ್ಧತಿಯನ್ನೇ ಇನ್ನು ಮುಂದೆ ಇಂಡಿಯಾ ಸರ್ಕಾರದವರು ತಪ್ಪಿಸಿಬಿಡುವವರಾಗಿದ್ದಾರೆ. ಅಂಥ ತಪ್ಪಿತಸ್ಥರಿಗೆಲ್ಲಾ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ ಈ ದೇಶದ ಕಾರಾಗೃಹಗಳಲ್ಲೇ ಇಡುವರು.

ಹೊಸ ವೈಸ್ರಾಯ್ ರೀಡಿಂಗ್ ಪ್ರಭುಗಳು ಏಪ್ರಿಲ್ ತಾ|| ೧ ರಲ್ಲಿ ಬೊಂಬಾಯಿ ರೇವಿಗೆ ಬಂದು ರಾತ್ರಿ ಹಡಗಿನಲ್ಲೇ ಇದ್ದು ೨ನೆ ತಾ|| ಬೆಳಗ್ಗೆ ಬೊಂಬಾಯಿಯಲ್ಲಿಳಿಯುವರು. ಆ ದಿನ ಮಧ್ಯಾಹ್ನ ಅಧಿಕಾರಪತ್ರವನ್ನು ಹೊಂದಿ ತಾ|| ೩ರಲ್ಲಿ ಅಲ್ಲಿಂದ ಡಿಲ್ಲಿಗೆ ಹೊರಟು ತಾ|| ೫ಕ್ಕೆ ಸೇರುವರು.

ಸಾಮ್ರಾಜ್ಯಶಾಸನ ನಿರ್ಮಾಣ ಸಭೆಯಲ್ಲಿ ಸೈನಿಕ ವ್ಯಯವು ಹೆಚ್ಚೆಂದು ಬಹುಮಂದಿ ಸಭಿಕರು ವಾದಿಸಿದರೂ, ಬೋಲ್ಷೆವಿಕ್ಕರ ಭೀತಿಯೂ, ಅಫ್ಘಾನಿಸ್ಥಾನದ ಸಂಶಯಸ್ಥಿತಿಯೂ, ಸಹಾಯನಿರಾಕರಣ ಚಳವಳಿಯೂ ಇರುವುದರಿಂದ ಸೈನ್ಯವನ್ನೂ ಅದರ ವೆಚ್ಚವನ್ನೂ ತಗ್ಗಿಸಲಾಗುವುದಿಲ್ಲವೆಂದು ಸೇನಾಧಿಪತಿಗಳು ಹೇಳಿದರು.

ಈಗಣ ವೈಸ್ರಾಯರಾದ ಚೆಲ್ಮ್ಸ್‌ಫರ್ಡ್ ಪ್ರಭುಗಳು ಪತ್ನೀಸಮೇತರಾಗಿ ಸೈನ್ಯಾದಿಗೌರವಗಳೊಡನೆ ಕಳೆದ ತಾ|| ೨೯ನೆ ಮಂಗಳವಾರ ಡಿಲ್ಲಿ ಪಟ್ಟಣವನ್ನು ಬಿಟ್ಟು ಸೀಮೆಗೆ ತೆರಳುವುದಕ್ಕಾಗಿ ಪ್ರಯಾಣ ಮಾಡಿದರು. ನಿಲ್ದಾಣಕ್ಕೆ ಹೊರಡುವಾಗ್ಗೆ ೩೧ ಗುಂಡುಗಳು ಹಾರಿಸಲ್ಪಟ್ಟುವು. ತಾ|| ೩೧ರಲ್ಲಿ ಬೊಂಬಾಯಿಯನ್ನು ಸೇರಿದರು. ಏಪ್ರಿಲ್ ೨ನೆ ಮಧ್ಯಾಹ್ನ ಹಡಗನ್ನೇರಿ ಪ್ರಯಾಣಮಾಡಿದರು.

ಢಕ್ಕಾ ಸಮೀಪದ ಒಂದು ಗ್ರಾಮಕ್ಕೆ ೧೦-೧೫ ಮಂದಿ ಕಳ್ಳರು ಕತ್ತಿಕಠಾರಿಗಳನ್ನು ಹಿಡಿದು ರಾತ್ರಿವೇಳೆ ಹೋಗಿ ಗೋಪಾಲ್‌ಚಂದ್ರಷಾ ಎಂಬುವರ ಮನೆಗೆ ನುಗ್ಗಿ ಮನೆಯವರನ್ನೆಲ್ಲಾ ಹೊಡೆದು ಬಡಿದು ಕಟ್ಟಿಹಾಕಿ ಬಹು ದ್ರವ್ಯವನ್ನು ಅಪಹರಿಸಿಕೊಂಡು "ನಾವು ಬೋಲ್ಷೆವಿಕ್ಕರು. ದೇಶಕ್ಕೆ ಒಳ್ಳೆಯದನ್ನು ಮಾಡುವುದಕ್ಕೆ ಬಂದಿದ್ದೇವೆ. ಸ್ವರಾಜ್ಯವನ್ನು ಉಂಟುಮಾಡಿಕೊಡುತ್ತೇವೆ" ಎಂದು ಹೇಳಿಕೊಂಡು ಹೋದರಂತೆ.

ಈಗಿನ ನಿರ್ಣಯದ ಪ್ರಕಾರ ಇನ್ನು ಮುಂದೆ ಈ ದೇಶಕ್ಕೆ ಹೊರಗಿನಿಂದ ಬರುವ ದೀಪದಕಡ್ಡಿ ಪೆಟ್ಟಿಗೆಗಳಿಗೆ ಈ ಕೆಳಗೆ ಕಾಣುವಂತೆ ಸುಂಕವು ವಿಧಿಸಲ್ಪಡುವುದು. ಒಂದೊಂದರಲ್ಲಿ ೧೦೦ ಕಡ್ಡಿಗಳುಳ್ಳ ಪೆಟ್ಟಿಗಳು ೧೨ ಡಜನ್ ಇರುವಂಥ ಒಂದು ಪೆಟ್ಟಿಗೆಗೆ ೧೨ ಆಣೆ. (ಎಂದರೆ ಒಂದೊಂದು ಸಣ್ಣ ಪೆಟ್ಟಿಗೆಗೆ ಒಂದೊಂದು ಕಾಸು). ಪೆಟ್ಟಿಗೆಗಳಲ್ಲಿ ೧೦೦ ಕಡ್ಡಿಗಳೇ ಇರಲಿ ಅದಕ್ಕೆ ಹೆಚ್ಚು ಕಡಿಮೆಯೇ ಇರಲಿ ಪೆಟ್ಟಿಗೆಯೊಂದಕ್ಕೆ ಒಂದು ಕಾಸೇ ತೆಗೆದುಕೊಳ್ಳಲ್ಪಡುವುದು.

ರಷ್ಯನರು ಅಫ್ಘಾನಿಸ್ಥಾನದವರೊಡನೆ ಈಗ ಮಾಡಿಕೊಂಡಿರುವ ಸಂಧಿಯ ಪ್ರಕಾರ ವರ್ಷ ೧ಕ್ಕೆ ಅವರು ೧೦ ಲಕ್ಷ ಭಂಗಾರದ ರೂಬಲ್ಸ್ ನಾಣ್ಯಗಳನ್ನು ಅಫ್ಘನ್ನರಿಗೆ ಕೊಡುವಂತೆಯೂ ಕಾಬೂಲಿನಿಂದ ಕಾಂದಹಾರ್, ಹಿರಟ್, ಕುಷಕ್ ದೇಶಗಳಿಗೆ ತಂತ್ರೀ ಸಮಾಚಾರವನ್ನು ನಡೆಯಿಸಿಕೊಳ್ಳುವಂತೆಯೂ ಪರಸ್ಪರ ರಾಯಭಾರಿಗಳು ಇಬ್ಬರ ದೇಶಗಳಲ್ಲಿಯೂ ಇರುವಂತೆಯೂ ಆಂಗ್ಲರೊಡನೆ ಅಫ್ಘನರಿಗೆ ರಾಜಕೀಯ ಸೈನಿಕಾ ಸಂಬಂಧಗಳೇನೂ ಇರದಂತೆಯೂ ಆಗಿದೆಯೆಂದು ವರ್ತಮಾನವಿದೆ.

ಮದ್ರಾಸು ಅಧಿಪತ್ಯದಲ್ಲಿ ಇದುವರೆಗೆ ಸಹಾಯನಿರಾಕರಣಾವಲಂಬನೆಯಿಂದ ಗೌರವೋದ್ಯೋಗಗಳನ್ನು ತ್ಯಜಿಸಿದವರು ೫೧ ಮಂದಿಯೆಂದೂ, ಬಿರುದುಗಳನ್ನು ತ್ಯಜಿಸಿದವರು ೬ ಮಂದಿಯೆಂದೂ, ಮಾರ್ಚಿ ತಿಂಗಳ ಆರಂಭದಲ್ಲಿ ಪಾಠಶಾಲೆಗಳನ್ನೂ ಕಲಾಶಾಲೆಗಳನ್ನೂ ಬಿಟ್ಟ ವಿದ್ಯಾರ್ಥಿಗಳು ೮೨೦ ಮಂದಿಗಳೆಂದೂ, ವಕೀಲತನವನ್ನು ಬಿಟ್ಟವರ ಸಂಖ್ಯೆಯೂ, ಹೊಸದಾಗಿ ಸ್ಥಾಪಿತವಾಗಿರುವ ಜಾತೀಯ ವಿದ್ಯಾಲಯಗಳ ಮತ್ತು ಅವುಗಳಿಗೆ ಸೇರಿರುವ ವಿದ್ಯಾರ್ಥಿಗಳ ಸಮಾಚಾರವೂ ತಮಗೆ ತಿಳಿಯದೆಂದೂ ಮದ್ರಾಸು ಶಾಸನ ಸಭೆಯಲ್ಲಿ ಸರ್ಕಾರದವರಿಂದ ಹೇಳಲ್ಪಟ್ಟಿದೆ.

ಕಲ್ಲಿಕೋಟೆಯಲ್ಲಿ ಅಲ್ಲಿಯ ಕಲೆಕ್ಟರು ಯಾಕೂಬ್ ಹುಸೇನರೇ ಮೊದಲಾದವರನ್ನು ಹಿಡಿದು ಕಾರಾಗೃಹಕ್ಕೆ ಕಳುಹಿಸಿದುದರಿಂದಲೇ ಆ ಜಿಲ್ಲೆಯಲ್ಲಿ ಪ್ರಜಾ ಶಾಂತಿಯು ಕಾಪಾಡಲ್ಪಟ್ಟಿತೆಂದೂ, ಅಲ್ಲಿಯ ಜಿಲ್ಲಾ ಮೇಜಿಸ್ಟ್ರೇಟರೂ ಪೊಲೀಸರೂ ಸೈನಿಕರೂ ಅಲ್ಲುಂಟಾಗಿದ್ದ ವಿಷಮದಶೆಯನ್ನು ಬಲು ಜಾಣತನದಿಂದ ನಿವೃತ್ತಿಗೊಳಿಸಿದುದಕ್ಕಾಗಿ ಅವರನ್ನೆಲ್ಲಾ ಸರ್ಕಾರದವರು ಅಭಿನಂದಿಸುವರೆಂದೂ, ಕಾರಾಗೃಹದಲ್ಲಿಡಲ್ಪಟ್ಟಿರುವ ಅವರುಗಳಿಗೆಲ್ಲಾ ಸ್ವಂತದ ಭೋಜನ ಸ್ವಂತದ ಉಡುಗೆ ಮೊದಲಾದುವುಗಳನ್ನು ಉಪಯೋಗಿಸಲು ಅವಕಾಶ ಕೊಡಲ್ಪಟ್ಟಿರುವುದೆಂದೂ ಮದ್ರಾಸು ಸರ್ಕಾರದವರು ಪ್ರಕಟಿಸಿದ್ದಾರೆ.

ಯುದ್ಧಕಾಲದಿಂದೀಚೆಗೆ ದೇಶದಲ್ಲಿ ಪದಾರ್ಥಗಳ ಬೆಲೆಯು ಏರಿಹೋಗಿದೆ. ಇದರ ಮೇಲೆ ಈ ವರ್ಷ ಇಂಡಿಯಾ ಸರ್ಕಾರದವರು ಪ್ರತಿದಿನದ ಉಪಯೋಗ್ಯವಸ್ತುಗಳಾದ ದೀಪದಕಡ್ಡಿ, ಕೊಡೆ, ಮೊದಲಾದುವುಗಳ ಮೇಲೆ ಸುಂಕವನ್ನು ವಿಧಿಸಿ ಅಂಚೆಯ ದರಗಳನ್ನು ಹೆಚ್ಚಿಸುವುದರಿಂದ ಬಡವರಿಗೆ ವೆಚ್ಚವು ಮತ್ತಷ್ಟು ಹೆಚ್ಚಿ ಬಾಧೆಯುಂಟಾಗುವುದು. ರೈಲ್ವೆ ಛಾರ್ಜುಗಳನ್ನು ಹೆಚ್ಚಿಸುವುದರಿಂದ ವರ್ತಕರಿಗೂ ಇತರರಿಗೂ ಬಾಧೆಯುಂಟಾಗುವುದು. ಆದುಕಾರಣ ಇವುಗಳನ್ನು ವಿಧಿಸಕೂಡದೆಂಬರ್ಥಕ್ಕೆ ಬೊಂಬಾಯಿ ಮದ್ರಾಸು ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳ ವರ್ತಕರುಗಳು ಸಭೆಗೂಡಿ ತೀರ್ಮಾನಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಈಗತಾನೇ ಅಚ್ಚಾಗಿದೆ.

ಹಿಂದೆ ವೀರಶೈವಗ್ರಂಥಪ್ರಕಾಶಿಕಾ ಮಾಸಪತ್ರದಲ್ಲಿ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರದ ೩ ಪ್ರಕರಣಗಳು ಮಾತ್ರ ಅಚ್ಚಾಗಿ ಇನ್ನೆರಡು ಪ್ರಕರಣಗಳು ಉಳಿದಿದ್ದುವು. ಆ ೪-೫ ನೆ ಪ್ರಕರಣಗಳು ಈಗ ಟೀಕಾಸಮೇತ ಅಚ್ಚಾಗಿರುತ್ತವೆ. ಇವುಗಳಲ್ಲಿ ಈ ಚರಿತ್ರದ ಮುಖ್ಯಭಾಗಗಳು ವಿಶೇಷವಾಗಿವೆ. ೨ ಪ್ರಕರಣಗಳೂ ಸೇರಿ ಬೈಂಡಾಗಿರುವ ಪುಸ್ತಕದ ಬೆಲೆ ವಿ. ಪಿ. ಯಿಂದ ೨-೫-೦. ೫ ಪ್ರಕರಣಗಳೂಸೇರಿ ಬೈಂಡಾಗಿರುವ ೧ ಸಾವಿರ ಪುಟಗಳಿಗೆ ಮೇಲ್ಪಟ್ಟಿರುವ ಪೂರ್ಣಗ್ರಂಥದ ಬೆಲೆ ೫ ರೂ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿಗಳು, ಅ|| ವಿದ್ವಾನ್,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ವಿದೇಶ ವೃತ್ತಾಂತಗಳು.

ಹೊಸ ವೈಸ್ರಾಯಿಗೆ ಸಾರ್ವಭೌಮರು ಕಳೆದ ತಾ|| ೧೮ ರಲ್ಲಿ ಜಿ. ಸಿ. ಎಸ್. ಐ, ಜಿ. ಸಿ. ಐ. ಇ. ಎಂಬ ಬಿರುದುಗಳನ್ನೂ, ಅವರ ಪತ್ನಿಯವರಿಗೆ ಕ್ರೌನ್ ಆಫ್ ಇಂಡ್ಯಾ ಎಂಬ ಬಿರುದನ್ನೂ ದಯಪಾಲಿಸಿದರು.

ಲಂಡನ್ ಪಟ್ಟಣದಲ್ಲಿ ರಾಜಕೀಯ ವೈದ್ಯರ ಸಂಘದಲ್ಲಿ ಲೆ|| ಕರ್ನಲ್ ನಾಥಕರಾ ಎಂಬುವರು ಕ್ಷಯರೋಗಸಂಬಂಧವಾಗಿ ಉಪನ್ಯಾಸ ಮಾಡುತ್ತ ಈ ರೋಗದಲ್ಲಿ ೨ ವಿಧಗಳುಂಟೆಂದು ಸಿದ್ಧಪಡಿಸಿರುವರೆಂದೂ ಒಂದು ರೋಗದ ರಾಶಿಯಿಂದ ಮತ್ತೊಂದು ರೋಗವನ್ನು ಗುಣಪಡಿಸಬಹುದೆಂದೂ ಹೇಳಿದರು.

ಮಿತ್ರಮಂಡಲಿಯವರು ಈಗ ಜರ್ಮನಿ ದೇಶದಲ್ಲಿಯ ೩ ಪಟ್ಟಣಗಳನ್ನು ಆಕ್ರಮಿಸಿಕೊಂಡುದರಿಂದ ಆ ಕೋಪಕ್ಕಾಗಿ ಅಲ್ಲಿಯ ಕಸಬುಗಾರರು ತಂತಮ್ಮ ವೃತ್ತಿಗಳನ್ನು ಬಿಟ್ಟು ಮುಷ್ಕರ ಹಿಡಿಯಬೇಕೆಂದು ತೀರ್ಮಾನಿಸುವರೆಂದು ವಾರ್ತೆ ಬಂದಿದೆ.

ಗ್ರೀಕರ ಮೂರು ಸೈನ್ಯಗಳು ಕೇಮಾಲ್‌ಪಾಷಾನ ಸೈನ್ಯದ ಮೇಲೆ ಯುದ್ಧಮಾಡುತ್ತಿವೆ. ನಾವು ಗೆದ್ದೆವೆಂದು ೨ ಕಡೆಯವರೂ ಹೇಳಿಕೊಳ್ಳುತ್ತಿದ್ದಾರೆ. ಇಂಗ್ಲೀಷರು ಮಾತ್ರ ತಟಸ್ಥರಾಗಿರುತ್ತೇವೆಂದು ತಿಳಿಯಿಸಿಬಿಟ್ಟಿದ್ದಾರೆ. ಮತ್ತೂ ಗ್ರೀಕ್ ಸೈನ್ಯದಲ್ಲಿ ದಳವಾಯಿಯಾಗಿದ್ದ ತಮ್ಮ ಕಡೆಯ ಹಾರ್ಡಿಂಗ್‌ಟನ್‌ರವರನ್ನು ಹಿಂದಕ್ಕೆ ಕರೆಯಿಸಿಕೊಂಡಿದ್ದಾರೆ.

ಭರತಖಂಡದಿಂದ ಸೀಮೆಗೆ ಹೋಗಿದ್ದ ಖಿಲಾಫತ್ ರಾಯಭಾರಿಗಳ ಪ್ರಯತ್ನವು ಸಫಲವಾದ ಚಿಹ್ನೆಗಳು ತೋರುವುದಿಲ್ಲ. ಥ್ರೇಸು, ಸ್ಮರ್ನಾ, ಡಾರ್ಡನೆಲ್ಸ್ ಇವುಗಳೆಲ್ಲಾ ತುರ್ಕಿಗೇ ಸೇರಬೇಕು. ಪಾಲೆಸ್ಟೈನ್, ಅರೇಬಿಯಾ, ಸಿರಿಯಾ, ಮೆಸಪೊಟೋಮಿಯಾ ಇವುಗಳೆಲ್ಲಾ ತುರ್ಕಿಗೆ ಅಧೀನವಾಗಿ ಸ್ವತಂತ್ರವಾಗಿರಬೇಕು. ಎಂದರೆ ಯುದ್ಧಕ್ಕೆ ಮುಂಚೆ ಇದ್ದ ಸ್ಥಿತಿಯೇ ತುರ್ಕಿಗೆ ಬರಬೇಕೆಂದು ಅವರು ವಾಂಛೆಯನ್ನು ವ್ಯಕ್ತಪಡಿಸಿದರು. ಇದಕ್ಕೆಲ್ಲಾ ಮಿತ್ರಮಂಡಲಿಯವರು ಒಪ್ಪುವರುಂಟೆ? ಅವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನಾವು ಮೊನ್ನೆಯ ಸಂಚಿಕೆಯಲ್ಲೇ ತಿಳಿಯಪಡಿಸಿದ್ದೇವೆ. ತುರ್ಕಿ ಪ್ರಭುತ್ವದವರು ಒಂದುವೇಳೆ ಒಪ್ಪಿದರೂ ಭರತಖಂಡದ ಜನರಿಗಾದರ ಪೂರ್ಣಬಲದಿಂದ ಇಲ್ಲಿಯ ಖಿಲಾಫತ್ ಸಂಘದವರು ಒಪ್ಪುವಂತೆ ತೋರುವುದಿಲ್ಲ. ಮುಂದೆ ಇದು ಯಾವ ಘೋರ ಪರಿಣಾಮಕ್ಕೆ ದಾರಿಮಾಡಿಕೊಳ್ಳುವುದೋ ತಿಳಿಯಲಿಲ್ಲ.

ಆಂಗ್ಲ ಮಂತ್ರಿವರ್ಗದಲ್ಲಿ ವಿದೇಶಾಂಗ ಮಂತ್ರಿಗಳಾಗಿದ್ದು ಮುಖ್ಯಮಂತ್ರಿಯವರಿಗೆ ಬಲಭುಜದಂತಿದ್ದ ಮಿ|| ಬೋನರ್‌ಲಾರವರು ತಮ್ಮ ದೇಹಾಸ್ವಸ್ಥತೆಯಿಂದ ಉದ್ಯೋಗಪರಿತ್ಯಾಗ ಮಾಡಿದರು. ನಾನು ಉದ್ಯೋಗವನ್ನು ಬಿಟ್ಟು ವಿಶ್ರಾಂತಿಪಡೆದುಕೊಳ್ಳದಿದ್ದರೆ ಜೀವಿಸಲಾರೆ, ಎಂದು ವೈದ್ಯರು ಹೇಳಿರುವ ಕಾರಣ ನಾನು ಉದ್ಯೋಗಪರಿತ್ಯಾಗ ಮಾಡುತ್ತೇನೆಂದು ಅವರು ಬರೆದಿದ್ದ ರಾಜೀನಾಮೆಯನ್ನು ಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರು ಪಾರ್ಲಿಮೆಂಟಿನಲ್ಲಿ ಓದುವಾಗ ಗದ್ಗದಸ್ವರದಿಂದ ದುಃಖಿತರಾಗಿ ಮಾತನಾಡಲಾರದೆ ಅಷ್ಟಕ್ಕೇ ನಿಲ್ಲಿಸಿಬಿಟ್ಟರು. ಸಭೆಯವರೆಲ್ಲರೂ ಅವರು ರಾಜೀನಾಮೆ ಕೊಟ್ಟುದಕ್ಕೆ ವಿಷಾದವನ್ನೂ ಅವರ ದೇಹಾರೋಗ್ಯ ನೀರಸತೆಗಾಗಿ ಮರುಕವನ್ನೂ ಪ್ರದರ್ಶಿಸಿದರು. ಅವರ ಸ್ಥಾನಕ್ಕೆ ಈಗ ಮಿ|| ಚೇಂಬರ್ಲೇನ್‌ರವರು ನಿಯುಕ್ತರಾಗಿದ್ದಾರೆ.

ರಷ್ಯಾ ಬೋಲ್ಷೆವಿಕ್ ಪ್ರಭುತ್ವದವರಿಗೂ ಆಂಗ್ಲ ಪ್ರಭುತ್ವದವರಿಗೂ ಪರಸ್ಪರ ದೇಶ ವ್ಯಾಪಾರಕ್ಕೆ ಸಂಬಂಧಪಟ್ಟ ಸಂಧಿಯು ಕುದಿರಿತೆಂದು ತಂತೀವಾರ್ತೆ ಬಂದಿದೆ. ಅದರಲ್ಲಿರುವ ರಾಜಕೀಯ ವಿಷಯಕ್ಕೆ ಸಂಬಂಧಪಟ್ಟ ಒಂದು ವಿಷಯವು ಸಂತೋಷಪ್ರದವಾಗಿದೆ. ಹೇಗೆಂದರೆ—ಆ ಸಂಧಿಯಲ್ಲಿ ಬೋಲ್ಷೆವಿಕ್ ಪ್ರಭುತ್ವದವರು ಆಂಗ್ಲಪ್ರಭುತ್ವಕ್ಕೆ ವ್ಯತಿರಿಕ್ತವಾದ ಪ್ರಯತ್ನಗಳನ್ನು ಏಷ್ಯಾದಲ್ಲಿ ಮಾಡಲಿಕ್ಕೂ; ಅಫ್ಘಾನಿಸ್ಥಾನವನ್ನೂ ಭರತಖಂಡವನ್ನೂ ತಮ್ಮ ತತ್ವಗಳ ಪ್ರಸಾರಕ್ಕಾಗಿ ಪ್ರೋತ್ಸಾಹಿಸಲಿಕ್ಕೂ ತೊಡಗುವುದಿಲ್ಲವೆಂದು ವಾಗ್ದಾನಮಾಡಿ ಒಪ್ಪಿಕೊಂಡಿದ್ದಾರೆ. ಇದೇ ತರದ ವಾಗ್ದಾನವನ್ನು ಆಂಗ್ಲರೂ ರಷ್ಯಾ ಪ್ರಜೆಗಳ ವಿಷಯದಲ್ಲಿ ಮಾಡಿಕೊಟ್ಟಿದ್ದಾರೆ. ರಷ್ಯಾದಲ್ಲಿರುವ ಆಂಗ್ಲೇಯರೂ, ಆಂಗ್ಲ ದೇಶದಲ್ಲಿರುವ ರಷ್ಯನರೂ ಅವರವರ ದೇಶಕ್ಕೆ ನಿರಾತಂಕವಾಗಿ ಹೋಗಬಹುದಾಯಿತು. ಆಂಗ್ಲೇಯರು ರಷ್ಯಾದ ಹಡಗುಗಳನ್ನು ಸ್ವೇಚ್ಛೆಯಾಗಿ ತಿರುಗಿ ವ್ಯಾಪಾರ ನಡೆಯಿಸಿಕೊಳ್ಳಲಿಕ್ಕೆ ಒಪ್ಪಿದ್ದಾರೆ. ರಷ್ಯನರು ರಷ್ಯಾದೇಶದ ರೇವುಗಳ ದಾರಿಯಲ್ಲಿ ಹಾಕಿರುವ ಸುರಂಗದ ಮದ್ದುಗಳನ್ನೆಲ್ಲಾ ತೆಗೆದುಬಿಡಲು ಒಪ್ಪಿಕೊಂಡಿದ್ದಾರೆ. ಈ ಸಂಧಿನಿಬಂಧನೆಗಳೆಲ್ಲಾ ೧ ವರ್ಷದ ವರೆಗೂ ನಡೆಯುವುವು. ಆಗ್ಗೆ ಮರಳಿ ಕಾಲಾವಧಿಯನ್ನು ಹೆಚ್ಚಿಸಿಕೊಳ್ಳಬಹುದು. ಈ ನಿಬಂಧನೆಯು ರದ್ದಾಗಬೇಕಾದರೆ ೬ ತಿಂಗಳಿಗೆ ಮುಂಚೆ ನೋಟೀಸು ಕೊಡಬೇಕು. ಈ ಮೇಲೆ ಕಂಡ ರೀತಿಯ ವಾಣಿಜ್ಯ ಸಂಧಿಯು ಪರಸ್ಪರ ನಡೆದಿರುವುದರಿಂದ ಉಭಯ ಪಕ್ಷದವರೂ ಇನ್ನು ಮುಂದೆ ಪರಸ್ಪರ ವಿರುದ್ಧಕೃತ್ಯಗಳನ್ನು ನಿಲ್ಲಿಸಿಬಿಡುವರೆಂದು ಊಹಿಸಬಹುದಾಗಿದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಂಘ.

(ಲಗ್ನದ ಫಂಡು.)

1. ತುಮಕೂರು ಅರಳೇಪೇಟೆ ಮ|| ರಾ|| ಕಂಬಾರಿ ಗುಬ್ಬಯ್ಯನವರು, ಮ|| ರಾ|| ದಂ. ಅಡಿವೆಪ್ಪನವರ ಮಕ್ಕಳು ರೇವಣ್ಣನವರ ಲಗ್ನದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು ಜಮಾ 2 ರೂ.

2. ನೆಲಮಂಗಲ ತಾ|| ಶಿವಗಂಗೆ ಶೆಟ್ಟರು ಮ|| ರಾ|| ಗಂಗಾಧರ ಶೆಟ್ಟರವರು, ಮ|| ರಾ|| ಸಾಹುಕಾರ್ ರೇವಣ್ಣನವರ ಪುತ್ರಿಯನ್ನು, ಗುಬ್ಬಿ ಅ|| ರಾ|| ಗುಬ್ಬಿಶೆಟ್ಟಪ್ಪನವರ ಪುತ್ರ, ಗುಬ್ಬಿಹುಚ್ಚಪ್ಪನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು ಜಮಾ 10ರೂ. ಜುಮಲಾ 12 ರೂ.

ಬೆಂಗಳೂರು ಸಿಟಿ, } ಜಿ. ಪರಮಶಿವಯ್ಯ, ಬಿ.ಎ. ಎಲ್.ಎಲ್.ಬಿ.,
ತಾ|| 29.3.21. } ಆನರರಿ ಸೆಕ್ರೆಟರಿ, ವೀ. ವಿ. ಸಂಘ.

ಪತ್ರವ್ಯವಹಾರ.

ತುಮಕೂರು ವೀರಶೈವ ಸೇವಾಸಮಾಜದ ವಿಜ್ಞಾಪನೆ.

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗಾಗಿ ಈ ವರ್ಷ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮೇಲ್ಕಂಡ ಸಮಾಜದವರು ಪದ್ಧತಿಯಂತೆ ಈ ವರ್ಷವೂ ಭೋಜನಕ್ಕೆ ಅನುಕೂಲ ಮಾಡಿರುತ್ತಾರೆ. ಬರತಕ್ಕ ವಿದ್ಯಾರ್ಥಿಗಳು ೩ ದಿನ ಮುಂಚಿತವಾಗಿ ನಮಗೆ ತಿಳಿಸತಕ್ಕದ್ದು. ಮತ್ತು ಕಂಬಳಿ ಹಾಸಿಗೆ ವಗೈರೆ ಜತೆಯಲ್ಲಿಯೇ ಮರೆಯದೆ ತರತಕ್ಕದ್ದು.

ಟಿ. ಸಿ. ರೇವಣ್ಣ, ಪ್ರೆಸಿಡೆಂಟ್,
ಪ್ಲೀಡರ್ ಜಿ. ಕೆ. ಗುರುಸಂಗಾರ್ಯ, ಜನರಲ್ ಸೆಕ್ರೆಟರಿ.

ಶ್ರೀ ಏಕಾದಶ ಮಹಾರುದ್ರಪೂಜಾ ಸಂದರ್ಶನ.

ವರ್ತಮಾನಕಾಲಸ್ಥಿತಿಯಲ್ಲಿ ಜಲದಲ್ಲಿ ಬಿದ್ದ ತೈಲದಂತೆ ಎಲ್ಲಾ ಕಡೆಯಲ್ಲೂ ಹಬ್ಬುತ್ತಿರುವ ಅನಾವೃಷ್ಟಿ, ಕ್ಷಾಮ, ವಿವಿಧ ರೋಗೋಪದ್ರವ ಮುಂತಾದ ಈತಿಬಾಧೆಗಳ ಪರಿಹಾರಾರ್ಥವಾಗಿಯೂ, ಘನತೆವೊಂದಿದ ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪರಂಪರಾಭಿವೃದ್ಧಿಗಾಗಿಯೂ, ಸಾರ್ವಭೌಮ ಸಾಮ್ರಾಜ್ಯದ ಸ್ಥಿರೀಕರಣಕ್ಕಾಗಿಯೂ ಜನಪದದ ಯೋಗಕ್ಷೇಮಾಭಿವೃದ್ಧಿಗಾಗಿಯೂ ಶ್ರೀಮದೇಕಾದಶ ಮಹಾರುದ್ರಪೂಜಾ ಮಹೋತ್ಸವವನ್ನು ಬುಕ್ಕಾಂಬುಧಿಯಲ್ಲಿ ನಡಿಸಲು ಅಲ್ಲಿಯ ವೀರಶೈವಸಮಾಜದವರು ಸಂಕಲ್ಪಿಸಿರುತ್ತಾರೆ. ಈ ಮಹೋತ್ಸವ ಸಂಬಂಧವಾಗಿ ತಾ|| ೧೭-೪-೨೧ನೆ ಭಾನುವಾರ ಶ್ರೀ ರುದ್ರದೇವತಾವತರಣ, ತಾ|| ೧೮-೪-೨೧ನೆ ಸೋಮವಾರ ಶ್ರೀಮದೇಕಾದಶ ಮಹಾರುದ್ರಪೂಜೆ ಮತ್ತು ಗಣಾರಾಧನೆ ತಾ|| ೧೯-೪-೨೧ನೆ ಮಂಗಳವಾರ ಸಭಾವ್ಯಾಖ್ಯಾನಗಳು, ತಾ|| ೨೦-೪-೨೧ನೆ ಬುಧವಾರ ಕುಂಭಾಭಿಷೇಕ ಮತ್ತು ತಾ|| ೨೧-೪-೨೧ನೆ ಗುರುವಾರ ಮಹಾಗಣಾರಾಧನೆ ಮತ್ತು ತೆಪ್ಪೋತ್ಸವ ಈ ಪ್ರಕಾರವಾಗಿ ನಡೆಯುವುವು.

ಬುಕ್ಕಾಂಬುಧಿಯು ಶಿವನಿ ರೈಲ್ವೆಸ್ಟೇಷನ್ನಿನಿಂದ ೫ ಮೈಲಿ ದೂರದಲ್ಲಿದೆ. ಸ್ಟೇಷನ್ನಿನಿಂದ ಗ್ರಾಮಕ್ಕೆ ಯಾವಾಗಲೂ ಗಾಡಿಗಳು ದೊರೆಯುತ್ತವೆ. ಬೆಂಗಳೂರು ಧಾರವಾಡ ಪ್ಯಾಸೆಂಜರು ಬಂಡಿಗಳು ಹಗಲುಮಾತ್ರ ಬರುತ್ತವೆ.

ಬಿ. ಎಸ್. ಮರಿಯಪ್ಪಯ್ಯ,
ಅತ್ತಿಮೊಗೆ ಸ್ವಾಕರಪ್ಪಗೌಡ ಕಾರ್ಯದರ್ಶಿಗಳು.

ವಿದ್ಯಾಶಾಖಾಧಿಕಾರಿಗಳು ಗಮನಿಸತಕ್ಕದ್ದು.

ದೇವರು ವರ ಕೊಟ್ಟರೂ ಪೂಜಾರಿ ವರ ಕೊಡ.

ಮೈಸೂರು ಟ್ರೈನಿಂಗ್ ಕಾಲೇಜ್ ಅಗ್ರಿಕಲ್ಚರಲ್ ಕ್ಲಾಸ್ ಸ್ಟೂಡೆಂಟ್ಸ್‌ರಾದ ಎಸ್. ಸಿ. ಬಸವಯ್ಯ, ಗುರುಮೂರ್ತಿ ಅಯ್ಯ ಎಂಬಿ ಇಬ್ಬರು ೧೯೨೧ನೆ ಮಾರ್ಚಿ ೩೧ ರಲ್ಲಿ ನಡೆಯುವ ಪಂಡಿತ ಎಂಟ್ರೆನ್ಸ್ ಕ್ಲಾಸಿಗೆ ತಾ|| ೩-೩-೨೧ರಲ್ಲಿ ಅಪ್ಲಿಕೇಷನ್ ಕೊಟ್ಟರು. ಅವರ ಜತೆಗೆ ಅಪ್ಲಿಕೇಷನ್ ಕೊಟ್ಟ ಎಲ್ಲರಿಗೂ ಪರೀಕ್ಷೆಗೆ ಬರುವಂತೆ ಇಂಟಿಮೇಷನ್ ಕಳುಹಿಸಿದರು. ಇವರಿಬ್ಬರಿಗೆ ಮಾತ್ರ ಬರಲಿಲ್ಲ. ಸದರಿಯವರು ರೈಟರನ್ನ ಆ ಕೂಡಲೇ ಕೇಳುವಲ್ಲಿ ನಿಮ್ಮ ಹೆಸರುಗಳು ಐ. ಜಿ. ಯಿಂದ ಮಂಜೂರಾಗಿ ಬಂದಿರುವುದಿಲ್ಲವೆಂದು ಹೇಳಿದರು. ಕೂಡಲೆ ಪ್ರಿನ್ಸಿಪಾಲರನ್ನು ಮನೆಗೆ ಹೋಗಿ ಕಾಣುವಲ್ಲಿ ಅವರು ಸಿಟ್ಟುಮಾಡಿ ನಿಮ್ಮನ್ನು ಏತಕ್ಕೆ ಸೇರಿಸಲಿಲ್ಲವೆಂದು ಅವರನ್ನು ಕೇಳಿ ರೈಟರಿಗೆ ಏನನ್ನೋ ಬರೆದು ಸದರಿಯವರ ಕೈಯಲ್ಲಿಯೇ ಕೊಟ್ಟು ಕಳುಹಿಸಿದರು. ಇದನ್ನು ಹೆಡ್ ರೈಟರ ಕೈಯಲ್ಲಿ ಕೊಡಲು ಅವರು ಇವರಿಬ್ಬರ ಮೇಲೆ ರೇಗಿ ನೀವು ಹೊರಟುಹೋಗಿ ನಾನು ಅವರಿಗೆ ಜವಾಬು ಕೊಡುತ್ತೇನೆಂದು ಹೇಳಿದರು. ಸದರಿಯವರಿಗೆ ಇದುವರೆಗೂ ಇಂಟಿಮೇಷನ್ ಬಂದಿರುವುದಿಲ್ಲ. ಇತರ ಇಲಾಖಾ ಆಫೀಸುಗಳಲ್ಲಿ ಈ ಬ್ರಾಹ್ಮಣ ರೈಟರುಗಳು ಇನ್ನು ಎಷ್ಟು ಕಷ್ಟಗಳನ್ನು ಪ್ರಜೆಗಳಿಗೆ ಕೊಡುತ್ತಾರೆಂದು ತಿಳಿಯದು! ಇವರಿಬ್ಬರೂ ಭಗ್ನಮನೋರಥರಾಗಿ ಇಷ್ಟುದಿವಸ ಕಷ್ಟಪಟ್ಟದ್ದು ವ್ಯರ್ಥವಾಯಿತೆಂದು ಬಹಳ ವ್ಯಸನದಲ್ಲಿರುತ್ತಾರೆ. ಕಾಲೇಜಿನ ಕೆಲವರ ಬ್ರಾಹ್ಮಣರು ಇವರನ್ನ ಪಂಡಿತಕ್ಲಾಸಿಗೆ ತೆಗೆದುಕೊಳ್ಳಕೂಡದೆಂಬ ಇರಾದೆಯಿಂದ ಈರೀತಿ ಮಾಡಿರುವರೆಂದು ತಿಳಿಯಬರುತ್ತದೆ. ಸಂಸ್ಕೃತ ಕಾಲೇಜಿನಹಾಗೆ ಈ ಕಾಲೇಜೂ ಶ್ರೀಮತಸ್ಥ ಬ್ರಾಹ್ಮಣರಿಗೇ ರಿಜರ್ವ್ ಮಾಡಲ್ಪಟ್ಟಿದೆಯೆ? ದಯವಿಟ್ಟು ತಿಳಿಸಬೇಕಾಗಿಯೂ, ಕಾಲೇಜ್ ಪ್ರಿನ್ಸಿಪಾಲರು ನ್ಯಾಯವು ದೊರೆಯುವಂತೆ ಏರ್ಪಾಡುಮಾಡಬೇಕಾಗಿಯೂ ಬೇಡುತ್ತೇನೆ.

ಪ್ರಕೃತಿಪ್ರಿಯ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ.

ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಜಯಂತಿ ಮಹೋತ್ಸವದ ಸಮುದ್ದೇಶದಿಂದ ಹೂಲಿಗೇರಿ ಮತ್ತು ಹಡಗಲಿ ರದವ ಬೃಹನ್ಮಠಾಧ್ಯಕ್ಷರಾದ ಶ್ರೀ ಸಂಗಮೇಶ್ವರ ಪಟ್ಟದ ಸ್ವಾಮಿಗಳನ್ನು ಮೊದಲಿಗೆ ಬರಕೊಂಡು ತಾ|| ಲೋಕಲ್ ಬೋರ್ಡಿನ ಮೆಂಬರರೂ, ವೀರಶೈವ ಕೋ ಆಪರೇಟಿವ್ ಸೊಸೈಟಿ ಚೇರ್ಮನ್ನರೂ ಆದ ಶಿವಪ್ಪನವರು ಬಳ್ಳೊಳ್ಳಿ, ಮಿ|| ಫಕೀರಪ್ಪನವರು ಶೆಟ್ಟರ ಮಿ|| ಬಸವಣ್ಣೆಪ್ಪನವರು ನವಲಗುಂದ, ಮಿ|| ನಿಜಲಿಂಗಪ್ಪನವರ ಹುಬ್ಬಳ್ಳಿ ಮೊದಲಾದ ತರುಣ ಸಂಘದವರು ಶ್ರೀ ಸಂಗಮೇಶ್ವರಸ್ವಾಮಿಗಳ ಪ್ರೇರಣೆಯಿಂದ ಪ್ರಥಮತಃ ಡಂಗುರದಿಂದ ಸೂಚಿಸಿದ ಪ್ರಕಾರ ಇದೇ ರೌದ್ರಿನಾಮಸಂವತ್ಸರದ ಫಾಲ್ಗುಣ ಶುದ್ಧ ೧೩ ಸೋಮವಾರ ಶ್ರೀ ಜಗದ್ಗುರುಗಳ ಕಾರ್ಯ ಮಹೋತ್ಸವವನ್ನು ಅಭೂತಪೂರ್ವವಾದ ವೈಭವದಿಂದ ಮುಕ್ತಾಯಗೊಳಿಸಿ ಶ್ರೀ ಜಗದ್ಗುರುಗಳಲ್ಲಿರುವ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು. ಈ ಉತ್ಸವವು ಛತ್ರಚಾಮರಾಪ್ತಾಗಿರಿ ಸಮೇತ ಜಗದ್ಗುರುಗಳ ಭಾವಚಿತ್ರದಿಂದ ವಿರಾಜಿತವಾದ ಪಲ್ಲಕ್ಕಿಯ ಎಡಬಲ ಪಕ್ಕಗಳಲ್ಲಿ ತರುಣರು ಒಳ್ಳೇ ಹುರುಪಿನಿಂದ ಹೊಗಳುವ ಜಗದ್ಗುರುಗಳ ಪರಾಕುಗಳಿಂದಲೂ, ಬ್ಯಾಂಡ್ ಮೊದಲಾದ ವಾದ್ಯಗಳಿಂದಲೂ ಗ್ರಾಮದಂತರ್ಬಹಿರ್ಭಾಗಗಳೆಲ್ಲ ಕಡೆಗೆ ಪ್ರತಿಧ್ವನಿಗಳನ್ನಾಗಮಾಡುತ್ತಾ ಬೃಹನ್ಮಠದಿಂದ ಹೊರಟು ಎಲ್ಲಾ ಬೀದಿಗಳಲ್ಲಿ ಹಾಯ್ದು ಪೇಟೆಯ ಮಾರ್ಗದಿಂದ ಶ್ರೀ ಪರ್ವತೇಶ್ವರ ದೇವಾಲಯಕ್ಕೆ ಸಾಯಂಕಾಲ ೯ ಗಂಟೆಗೆ ಬಂದು ತಲಪಿತು. ಆಬಾಲವೃದ್ಧ ಜನಸಮೂಹದಿಂದ ವಿರಾಜಿತವಾದ ಸಭೆಯಲ್ಲಿ ಶ್ರೀ ಸಂಗಮೇಶ್ವರ ಪಟ್ಟದ ಸ್ವಾಮಿಗಳು "ವೀರಶೈವಸನಾತನತ್ವ" ಈ ವಿಷಯದ ಮೇಲೆ ಭಾಷಣ ಮಾಡಿದ ತರುವಾಯ ಶಿ|| ಮೂ|| ಸಂಗಮನಾಥ ವೀರಸಂಗಾರ್ಯ ಕಲ್ಮಠ ವಿದ್ಯಾಗುರು (ಕೋಟೂರು) ಇವರು ಜಗದ್ಗುರು ರೇಣುಕಾಚಾರ್ಯರ ಮಹತ್ವಪರವಾದ ಚರಿತ್ರೆಯನ್ನು ಕೂಡಿದ ಜನರ ಮನಸ್ಸಿನಲ್ಲಿ ಬೇರೂರುವಂತೆ ಒಂದು ಗಂಟೆಯವರೆಗೆ ಒಳ್ಳೆ ಸ್ಫೂರ್ತಿಯಿಂದ ಮಾತಾಡಿದರು. ಅಲ್ಲಿಯ ಕನ್ನಡ ಶಾಲಾ ಮಾಸ್ತರರಾದ ಶಿ|| ಮೂ|| ಸಂಗಿಮಠ, ಶಿ|| ಮೂ|| ಕೊಂಡಿಕರ ಇವರ ಭಾಷಣಗಳು ಸಮಯಬಾಹುಳ್ಯದ ದೆಸೆಯಿಂದ ಸತ್ಸಹವಾಸ, ವಿದ್ಯಾಮಹತ್ವ ಇವುಗಳ ಮೇಲೆ ಸಂಕ್ಷಿಪ್ತವಾದವು ಅಷ್ಟರಲ್ಲಿ ೧೧ ಗಂಟೆ ಸಮಯವಾಗಲು ಶ್ರೀ ಜಗದ್ಗುರುಗಳ ಮಂಗಲಕಾರ್ಯವು ಜರಗಿ ಸಮಾಪ್ತವಾಯಿತು.

ಸೆಕ್ರೆಟರಿ ಲಿಂಗರಾಜ ವಾಚನಾಲಯ ಅಣ್ಣಿಗೇರಿ.

ನಿಜಾಂ ಇಲಾಖಾ ಗುಲ್ಬರ್ಗಾ ಡಿ|| ಬೆಂಡೆಗೊಂಬಳಿ.

ಅಲ್ಲಿಯ ವೀರಶೈವರಲ್ಲಿ ಸುಪ್ರಸಿದ್ಧರಾದ ಪೂ|| ಪಾ|| ಶಿವಲಿಂಗಪ್ಪನವರು ತಮ್ಮ ಸುಪುತ್ರಿಯಾದ ಕುಂ|| ಸೌ|| ಚನ್ನಬಸವಮ್ಮನನ್ನು ರೊಟ್ಟಿಡಿಗಿ ಮ|| ಪಾ|| ಸಿದ್ಧಪ್ಪನವರ ಸುಪುತ್ರ ಸದಾಶಿವಪ್ಪಗೌಡರಿಗೆ ಕೊಡಲು ನಿಶ್ಚಯಿಸಿ ಮತ್ತು ತಮ್ಮ ಚಿಕ್ಕತಮ್ಮಂದಿರಾದ ಶಿವಣ್ಣಗೌಡರಿಗೆ ಸ್ವಗ್ರಾಮದ ಮ|| ಪಾ|| ಚನ್ನಮಲ್ಲಪ್ಪನ ಸುಪುತ್ರಿ ಕುಂ|| ಕೋ|| ವೆಂಕಮ್ಮನನ್ನು ಸ್ವೀಕರಿಸಿ ಸ್ವಗೃಹದಲ್ಲಿ, ಶಕ ೧೮೪೩ ರೌ|| ಸಂ|| ಮಾಘ ಕೃ|| ೯ ಗುರುವಾರ ವೃಷಭಲಗ್ನ ಮುಹೂರ್ತದೊಳ್ ಪಾಣಿಗ್ರಹಣಕಾರ್ಯವು ವಿಧ್ಯುಕ್ತಪ್ರಕಾರವಾಗಿ ಪುರೋಹಿತರಿಂದ ಆಚರಿಸಲ್ಪಟ್ಟಿತು. ಬಳಿಕ ತ್ರಿಸಹಸ್ರಮಾಹೇಶ್ವರರಿಗೆ ಮಧುರಾಹಾರಾದಿಗಳಿಂದ ತೃಪ್ತಿಗೊಳಿಸಿ, ಪ್ರತಿ ಒಬ್ಬರಿಗೆ ೧ ರೂಪಾಯಿಯಂತೆ ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಮಾರನೆದಿನ (ಅಂದರೆ) ಶುಕ್ರವಾರ ಹಗಲು ೯ ಘಂಟೆಯಲ್ಲಿ ಲಗ್ನಮಂಟಪದಲ್ಲಿ ಸಭೆಯನ್ನು ಏರ್ಪಡಿಸಿ ನೀರಡಗುಂಭ ಪಶ್ಚಿಮಾದ್ರಿ ವಿರಕ್ತಮಠಾಧ್ಯಕ್ಷ ಶಿ|| ಮೂ|| ಸಿದ್ಧಲಿಂಗಸ್ವಾಮಿಗಳನ್ನೂ ನಾವದಿಗಿ ಹಿರೇಮಠಾಧ್ಯಕ್ಷ ಚರಮೂರ್ತಿ ಗುರುಸಿದ್ಧ ಸ್ವಾಮಿಗಳನ್ನೂ ಬ್ಯಾಂಡು ತಮ್ಮಟೆ ಕಹಳೆ ಮುಂತಾದ ವಾದ್ಯಗಳನ್ನು ಬಾರಿಸುತ್ತ ಶಿವಘೋಷದೊಡನೆ ಬರಮಾಡಿದ ಬಳಿಕ, ಸಭಿಕರ ಕರತಾಡನ ಘೋಷದೊಡನೆ ಗುರುಮೂರ್ತಿಗಳು ಉಚಿತಾಸನದಲ್ಲಿ ಮಂಡಿಸಿದರು. ಆಬಳಿಕ ನೇಗರಹಳ್ಳು ಮ|| ಸಂಗೀತ ವಿದ್ವಾನ್ ರಾಚಯ್ಯನವರು ಪೇಟಿ ಪಿಟೀಲು ಮೃದಂಗಗಳೊಡನೆ ಶಿವಸ್ತೋತ್ರವನ್ನು ಗೈದು ತಮ್ಮ ಗಾನರಸದಿಂದ ಸಭಿಕರನ್ನು ತುಷ್ಟಿಪಡಿಸಿದನಂತರ ಅನಂಪಲ್ಲಿ ಮ|| ಶಾಂತಮೂರ್ತಯ್ಯನವರು ಗಿಂಜಾಳಕಲ್ಯಾಣ ಕೀರ್ತನವನ್ನು ಶ್ರೋತೃಗಳ ಕರ್ಣಾನಂದವಾಗುವಂತೆ ಹೇಳಿದರು. ಅಷ್ಟರಲ್ಲಿ ಶಿವಾರ್ಚನಸಮಯವಾದುದರಿಂದ ಮಂಗಲವಾದ್ಯದೊಡನೆ ಸಭೆಯನ್ನು ವಿಸರ್ಜಿಸಿ ಮತ್ತು 3 ಘಂಟೆಯಲ್ಲಿ ಸಭೆಯು ಕೂಡಿಸಲ್ಪಟ್ಟಿತು. ನಂತರ ನೀರಡಗುಂಭ ಸಂ|| ಪಾ|| ಸಿದ್ಧಲಿಂಗಶಾಸ್ತ್ರಿಗಳು ಅಷ್ಟಾವರಣ ವಿಷಯವಾಗಿಯೂ ನಾಯಿಕಲ್ಲು ಬಸವರಾಜ ಶಾಸ್ತ್ರಿಗಳು ಭಕ್ತಿವಿಷಯವಾಗಿಯೂ, ಗೊಬ್ಬೂರು ಬಸವಲಿಂಗ ಶಿವಯೋಗಿಗಳು ಹಾಗು ನಾವದಿಗಿ ಚರಮೂರ್ತಿಗಳು ಯೋಗವಿಷಯವಾಗಿಯೂ ಗೊಬ್ಬೂರು ವೆಂಕಣ್ಣನವರು ನೀತಿವಿಷಯವಾಗಿಯೂ, ಶ್ರಾವ್ಯವಾಗಿ ಭಾಷಣಮಾಡಿದ ನಂತರ ನೀರಡಗುಂಭ ಶ್ರೀಗಳವರು ಲಿಂಗ ಎಂದರೇನು ಲಿಂಗಧರಿಸುವ ಲಕ್ಷಣವು ಹ್ಯಾಗೆ ಅವುಗಳ ವಿಷಯವಾಗಿ ಪಂಡಿತಪಾಮರರಿಗೆ ಒಪ್ಪುವಂತೆ ಮಾತಾಡಿದರು. ಬಳಿಕ ನಾಯಿಕಲ್ಲು ಶಾಸ್ತ್ರಿಗಳು ನಮ್ಮ ದೇಶದಲ್ಲಿ ನೂತನವಾಗಿ ಏರ್ಪಡಿಸುವ ಶಾಂತವೀರಸ್ವಾಮಿ ವಿದ್ಯಾವರ್ಧಕ ಫಂಡಿನ ಮತ್ತು ಶ್ರೀ|| ವಾ|| ಮೈಸೂರು ಯಜಮಾನ ವೀರಸಂಗಪ್ಪನವರ ಜೋಳಿಗೆಮೇಲೆ 2 ರೂ. [illegible] ಬೇಕೆಂದು ಸೂಚಿಸಲು, ಒಪ್ಪಿಕೆಯಾಗಿ ಒಪ್ಪಿ [illegible]

ಲಕೋಟ 2 ರೂ. ಶಾಸ್ತ್ರಿಗಳಿಗೆ ಒಪ್ಪಿಸಿದರು. ನಂತರ ಸಭಿಕರಿಗೆ ಗಂಧಕೈಲವನ್ನು ಲೇಪಿಸಿ ವೀಳ್ಯವನ್ನು ಹಂಚಿಸಿ ಗುರುಮೂರ್ತಿಗಳಿಗೆ ನೀರಾಜನವಂಗೈದು ವಧೂವರರನ್ನು ಆಶೀರ್ವದಿಸಿ ವಾದ್ಯಗಳನ್ನು ಮೊಳಗಿಸುತ್ತ ವೇದಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವಪ್ರತ್ಯಕ್ಷದರ್ಶಿ

ಔದಾರ್ಯ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಮೋಘವಾದ ಕೃಪಾಶೀರ್ವಾದದಿಂದ ತುಮಕೂರಲ್ಲಿ ಕಟ್ಟಲ್ಪಡಲಿಕ್ಕಿರುವ ವೀರಶೈವ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ತುಮಕೂರು ತಾಲ್ಲೂಕು ಚಿಕ್ಕಬೆಳ್ಳಾವಿಯಲ್ಲಿರುವ ಶಂಕರಯ್ಯನವರ ಮಕ್ಕಳು ಚಿಕ್ಕಬಂದಯ್ಯನವರು ತಮ್ಮ ವಿಶಿಷ್ಟ ಆಸ್ತಿಯನ್ನು ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಗೆ ಅತ್ಯಂತ ಭಕ್ತಿಯಿಂದ ದಾನವಾಗಿ ಸಮರ್ಪಿಸಿ, ಶ್ರೀಯವರ ಕೃಪೆಗೆ ಪಾತ್ರರಾಗಿ ಈ ರೂಪವಾದ ಸಮಾಜಸೇವೆಯಿಂದ ಆಚಂದ್ರತಾರಕವಾದ ಕೀರ್ತಿಯನ್ನು ಪಡೆದರೆಂಬ ಶುಭವಾರ್ತೆಯನ್ನು ಈ ಮೂಲಕ ಸಮಾಜಬಾಂಧವರ ಗಮನಕ್ಕೆ ತರಲು ಬಹಳ ಸಂತೋಷವಾಗುತ್ತದೆ. ಇವರು ಇದಕ್ಕೆ ಮೊದಲು ಬೆಳ್ಳಾವಿಯಲ್ಲಿರುವ ಶ್ರೀ॥ ಕಾರದ ಶಿವಯೋಗೀಂದ್ರರ ದೇವಾಲಯಕ್ಕೆ ತಮಗೆ ಸೇರಿದ್ದ 4¾ ಎಕರೆಯ ಭೂಮಿಯನ್ನು ದಾನವಾಗಿ ಕೊಟ್ಟು ಧನ್ಯರಾಗಿದ್ದಾಗ್ಯೂ ಈಗಲೂ ನಿರ್ವಂಚನೆಯಿಂದ ಮಾಡಿರತಕ್ಕ ದಾನವು ಇವರಿಗೆ ಇಹಪರದಲ್ಲಿ ಶಾಶ್ವತವಾದ ಫಲವನ್ನು ಕೊಡುವುದರಲ್ಲಿ ಸಂದೇಹವಿಲ್ಲ. ಈಗ್ಯೆ ಆಸ್ಥಿರಸೊತ್ತುಗಳನ್ನು ಇವರೇ ಸಾಗುವಳಿ ಮಾಡುತ್ತ ತಮ್ಮ ಜನ್ಮಾವಧಿ ಆಕ್ಕಷ್ಟು ಫಸಲನ್ನು ಶ್ರೀಮಠಕ್ಕೆ ಒಪ್ಪಿಸುತ್ತಿರಬೇಕೆಂದೂ, ಇವರನಂತರ ಎಲ್ಲಾ ಚರಸ್ಥಿರ ಆಸ್ತಿಗಳೂ ಶ್ರೀಮಠಕ್ಕೆ ಸೇರಿ ಸಮಾಜದ ವಿದ್ಯಾಭಿವೃದ್ಧಿಗೆ ಉಪಯೋಗವಾಗಿ ಇವರ ದಾನವು ಸಾರ್ಥಕವಾಗಬೇಕೆಂಬುದೇ ಇವರ ಸತ್ಸಂಕಲ್ಪವಾಗಿದೆ. ಕೊಡುವವರು ಉಂಟಾದರೆ ಧ್ರುವಜಲವು ತಾನೇ ಸಿದ್ಧವಾಗುವಂತೆ ನಮ್ಮ ಸಮಾಜದಲ್ಲಿ ವಿದ್ಯಾವಂತರಾಗಿರುವ ಪ್ರಮುಖರುಗಳು ತಮ್ಮ ಸಮಾಜಬಾಂಧವರನ್ನು ಹೀಗೆ ಪ್ರೋತ್ಸಾಹಿಸುತ್ತ ಬಂದರೆ ನಮ್ಮಲ್ಲಿ ನಿಗೂಢರಾಗಿರುವ ವಿದ್ಯಾಭಿಮಾನಿಗಳಾದ ಧರ್ಮಾತ್ಮರು ಹೀಗೆಯೇ ಹೊರಬಿದ್ದು, ಅಂಥವರುಗಳಿಂದ ಸಮಾಜಸೇವೆಗೆ ಸಹಾಯಗಳು ವಿಶೇಷವಾಗಿ ದೊರೆತು ಸಮಾಜಕ್ಕೆ ಬಹಳ ಕಲ್ಯಾಣವಾಗುವುದು. ಧರ್ಮಕಾರ್ಯಗಳ ಸಹಾಯಕರಿಗೆ ಸಮಾಜದವರು ಕೂಡ ತಮ್ಮ ಕೃತಜ್ಞತೆಯನ್ನೂ ವಂದನೆಯನ್ನೂ ಸಹ ಪ್ರಕಾಶಪಡಿಸಬೇಕಾದುದು ನಿಜವಾದ ಕರ್ತವ್ಯವಾಗಿದೆ. ಮೈಸೂರು ಸಂಸ್ಥಾನದ ವೀರಶೈವ ಜನಾಂಗಕ್ಕೆ ಚಿರಸ್ಮರಣೀಯರಾಗಿರುವ ಕಲಿಕರ್ಣರಾದ ಶ್ರೀ॥ ರಾ॥ ಬ॥ ದ ಗಬ್ಬಿ ತೋಟದಪ್ಪನವರ ಸ್ಮಾರಕ ಕಾರ್ಯವನ್ನು ನೆರವೇರಿಸಿದ್ದಾದರೆ ಇತರ ಪುಣ್ಯಾತ್ಮರಿಗೆಲ್ಲಾ ಇನ್ನೂ ವಿಶೇಷವಾದ ಪ್ರೋತ್ಸಾಹವುಂಟಾಗುತ್ತದೆ. ಕಾರಣ ನಮ್ಮ ಸಮಾಜದವರು ಅದರಲ್ಲೂ ಮುಖ್ಯವಾಗಿ ರಾ॥ ಬ॥ ರವರ ಧರ್ಮಕಾರ್ಯದಿಂದ ಉಪಕೃತರಾಗುತ್ತಲಿರುವ ವಿದ್ಯಾರ್ಥಿಗಳ ಪೋಷಕರು ಸಹ ಮೊದಲು ಇದನ್ನು ಗಮನಿಸಿ ಕರ್ತವ್ಯಪರಾಙ್ಮುಖರಾಗದೆ ರಾ॥ ಬ॥ ರವರ ಸ್ಮಾರಕಕಾರ್ಯವನ್ನು ಬಹುಜಾಗ್ರತ ನೆರವೇರಿಸಿ ಯಶೋವಂತರಾಗುವರೆಂದು ಕೋರುತ್ತೇನೆ. ಇದಕ್ಕೆ ನಾನು ಸಹ ಯಥಾಶಕ್ತಿ ಸೇವೆಮಾಡಲು ಸಿದ್ಧನಿರುತ್ತೇನೆ.

ಪರಂತು ತುಮಕೂರಲ್ಲಿ ಶ್ರೀಜಗದ್ಗುರು ಮಹಾಸ್ವಾಮಿಗಳವರ ಕೃಪಾಬಲದಿಂದ ವಿದ್ಯಾರ್ಥಿನಿಲಯದ ಕಾರ್ಯವು ಜಾಗ್ರತೆಯಲ್ಲೇ ಆರಂಭವಾಗುವುದಕ್ಕೆ ತರದೂದು ನಡೆಯುತ್ತಿದೆ. ಧನರಾಶಿಯ ಸಮೃದ್ಧಿಗಾಗಿ ಶ್ರೀ ಮಹಾಸ್ವಾಮಿಯವರು ಕೊರಟಗೆರೆ ಮಧುಗಿರಿ ತಾಲ್ಲೂಕುಗಳಲ್ಲಿ ಪಾದವಿನ್ಯಾಸವಂ ಮಾಡಿ ಈಗ ಸಿರಾ ತಾಲ್ಲೂಕಿಗೆ ದಯಮಾಡಿಸಿದ್ದಾರೆ. ಈಗಲಾದರೂ ಗುಬ್ಬಿಪಟ್ಟಣದ ವೀರಶೈವಬಂಧುಗಳು ಎಚ್ಚತ್ತು ಸಮಾಜದ ಕಲ್ಯಾಣಕ್ಕಾಗಿಯೇ ಅವತರಿಸಿರುವ ಶ್ರೀ ಮಹಾಸ್ವಾಮಿಯವರನ್ನು ಗುಬ್ಬಿಗೂ ಆ ತಾಲ್ಲೂಕಿಗೂ ಬಿಜಯಂಗೈಸಿಕೊಂಡು ಶಕ್ತ್ಯನುಸಾರ ನಿರ್ವಂಚನೆಯಿಂದ ಈಗಲಾದರೂ ಸೇವೆ ಮಾಡಿ ಶ್ರೀ ಪರಶಿವಪ್ರೀತಿಗೂ ಸಮಾಜದವರ ಕೃತಜ್ಞತೆಗೂ ಭಾಜನರಾಗಿ ಇದುವರೆಗೆ ಉಂಟಾಗಿರುವ ಅಪಖ್ಯಾತಿಯನ್ನು ಪರಿಹರಿಸಿಕೊಳ್ಳುವರೆಂದು ನಂಬಿ ನಿರೀಕ್ಷಿಸುತ್ತಿದ್ದೇನೆ. ಕ್ಷಮೆಯಿರಲಿ. ಸಮಾಜಸೇವಕ,

ಜಿ. ಕೆ. ಗುರುಸಂಗಾರ್ಯ, ಪ್ಲೀಡರ್, ತುಮಕೂರು.

[ಮೈಸೂರು ಸೀಮೆಯಲ್ಲಿ ಅದ್ವಿತೀಯ ದಾನಶೂರರೆಂದು ಹೆಸರು ಪಡೆದ ರಾವ್ ಬಹದ್ದೂರ್‌ರವರ ಸ್ಮಾರಕವನ್ನು ನಮ್ಮ ಸೀಮೆಯ ವೀರಶೈವ ಬಾಂಧವರು ಬಹುಕಾಲದ ಹಿಂದೆಯೇ ಮಾಡಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸದೆಹೋದುದು ಬಹಳ ಶೋಚನೀಯವೇ ಸರಿ. ಆದರೆ ಈಗ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಸೆಕ್ರೆಟರಿಯವರು ಈ ಸ್ಮಾರಕ ಕಾರ್ಯನಿರ್ವಾಹಕ್ಕಾಗಿ ಒಂದು ಫಂಡನ್ನು ಕೂಡಿಸಲು ಏರ್ಪಡಿಸಿರುವುದು ಯೋಗ್ಯವಾಗಿದೆ. ವಿದ್ಯಾಭಿಮಾನಶೀಲರು ನಿರ್ವಂಚನೆಯಿಂದ ಶಕ್ತಿಮೀರಿ ದ್ರವ್ಯಸಹಾಯ ಮಾಡಿದ ವಿನಾ ಈ ಕಾರ್ಯವು ನೆರವೇರುವ ಸಂಭವವಿಲ್ಲವಾದುದರಿಂದ ಈ ಸ್ಮಾರಕವನ್ನು ನೆರವೇರಿಸುವುದರ ಆವಶ್ಯಕತೆಯನ್ನು ಬಲ್ಲವರಾದ ಮ॥ ಜಿ. ಕೆ. ಗುರುಸಂಗಾರ್ಯರು ಯಥಾಶಕ್ತಿ ಸಹಾಯ ಮಾಡುವುದಲ್ಲದೆ ಇತರರೂ ಮಾಡುವಂತೆ ಪ್ರೋತ್ಸಾಹಿಸುವರೆಂದು ನಿರೀಕ್ಷಿಸುತ್ತೇವೆ. ಪ. ಪ್ರ.]

ಮಿರಜಸಂಸ್ಥಾನದ ಮನಸಿಗ್ಗಲಿ ಲಿಂಗರಾಜ ವಿದ್ಯಾಭಿವೃದ್ಧಿ ಫಂಡು.

(ಕಳೆದವಾರದ ಶೇಷ.)

ನಂ.	ಫಂಡಿಗೆಸಹಾಯಮಾಡಿದವರ ಹೆಸರುಗಳು.	ಫಂಡ್ ರಕಮು.
೩೦	ಮ॥ ರಾ॥ ಗುರುಶಾಂತಪ್ಪ ಶಿವಪ್ಪ ಮುದಗಲ್ಲ	೫೧
೩೧	,, ,, ಶಿವಮೂರ್ತೆಪ್ಪ ಗುರುಸಿದ್ಧಪ್ಪ ಯಲಗಂಟಿ	೫೧
೩೨	,, ,, ಶಂಕರಪ್ಪ ಪ್ರಭಣ್ಣಾ ಚಿತ್ರಗಿ	೫೧
೩೩	,, ,, ಸೋಮರಾವ ನಾಗಪ್ಪ ಹಾವೇರಿ	೫೧
೩೪	,, ,, ಮಹದೇವಪ್ಪ ಗಂಗಪ್ಪ ನವಲಗುಂದ	೪೧
೩೫	ಶಿ॥ ಮಲ್ಲಿಕಾರ್ಜುನಯ್ಯ ಪರಯ್ಯ ಹಿರೇಮಠ	೩೧
೩೬	,, ,, ಫಕೀರಪ್ಪ ನೀಲಕಂಠಪ್ಪ ಕೋಲಿನ	೩೧
೩೭	,, ,, ಗಂಗಪ್ಪ ಫಕೀರಪ್ಪ ಅಂಬಲಿ	೩೧
೩೮	ಶಿ॥ ಶಿವಯ್ಯ ದಾನಯ್ಯ ರಿತ್ತಿಮಠ	೨೬
೩೯	ಶಿ॥ ಶಿದ್ರಾಮಯ್ಯ ಚನ್ನಬಸಯ್ಯ ಮುಳಗುಂದ	೨೫
೪೦	ಶಿ॥ ಮಲ್ಲಿಕಾರ್ಜುನಯ್ಯ ದೊಡ್ಡಯ್ಯ ಉಪ್ಪಿನ	೨೬
೪೧	ಮ॥ ರಾ॥ ಕೊಟ್ರಪ್ಪಶೆಟ್ಟಿ ವೀರಪ್ಪಶೆಟ್ಟಿ	೨೬
೪೨	,, ,, ವೀರಪ್ಪ ಶಿವಲಿಂಗಪ್ಪ ಚಿದಬಣ್ಣ	೨೬
೪೩	,, ,, ಬಸಲಿಂಗಪ್ಪ ಬಸಪ್ಪ ಶಾಲಿ	೨೬
೪೪	,, ,, ಕರಿಬಸಪ್ಪ ಮಡಿವಾಳಪ್ಪ ಹತ್ತೀಕಾಳ	೨೬
೪೫	,, ,, ಮರಿಯಪ್ಪ ಬಸಲಿಂಗಪ್ಪ ಅಬ್ಬಿಗೇರಿ	೨೬
೪೬	,, ,, ಬಸಪ್ಪ ಪರಪ್ಪ ಕಂಬಾರ	೨೬
೪೭	,, ,, ಶಂಕರಪ್ಪ ಪರಪ್ಪ ಉಂಕಿ	೨೬
೪೮	,, ,, ಪಾಮಾಡೆಪ್ಪ ವೀರಪ್ಪ ಗಡಮುಖಿ	೨೬
೪೯	,, ,, ಬಾಳಪ್ಪ ರಾಯಪ್ಪ ಹುಲಗೂರ	೨೬
೫೦	,, ,, ತುಳಜಪ್ಪ ಸೋಮಪ್ಪ ಕೊಂಕಣಗಿ	೨೬
೫೧	,, ,, ಬಸವಣ್ಣೆಪ್ಪ ಫಕೀರಪ್ಪ ಕೊಸನೂರ	೨೬
೫೨	ಶಿ॥ ಬಸಯ್ಯ ಸಂಗಯ್ಯ ಕೊಡ್ಲಮಠ	೨೫
೫೩	,, ,, ಶಿವಪ್ಪ ಗಂಗಪ್ಪ ನೂಲ್ವಿ	೨೫
೫೪	,, ,, ಶಿದ್ರಾಮಪ್ಪ ಫಕೀರಪ್ಪ ಯೋಳಮಗ್ಗ	೨೫
೫೫	,, ,, ಫಕೀರಪ್ಪ ಚನ್ನಬಸಪ್ಪ ಹಾನಗಲ್ಲ	೨೫
೫೬	,, ,, ಹಾಲಪ್ಪ ವೀರಪ್ಪ ಮೂಳಗಿ	೨೫
೫೭	,, ,, ವೀರಭದ್ರಪ್ಪ ಬಸಪ್ಪ ಕಾತರಕೀ	೨೫
೫೮	,, ,, ಶಿದ್ಧಪ್ಪ ಬಸಪ್ಪ ಗಡಾದ	೨೫
೫೯	,, ,, ರೇವಪ್ಪ ಅಣ್ಣಪ್ಪ ಸವತಿ	೨೫
೬೦	,, ,, ಬಾಬಣ್ಣ ಬಸಪ್ಪ ವಿಜಂತಕರ	೨೫
೬೧	,, ,, ಮಡಿವಾಳಪ್ಪ ಮುರಿಗೆಪ್ಪ ತಿಪ್ನಾಳ	೧೧
೬೨	,, ,, ಪರ್ವತಪ್ಪ ಶಂಕರಪ್ಪ ಮುಷ್ಟಿಗಂಡಿ	೧೧
೬೩	ಸೌಭಾಗ್ಯವತಿ ಮಲ್ಲವ್ವ ಕೋ ಫಕೀರಯ್ಯ ಕೊಡ್ಲಮಠ	೫೧
೬೪	ಸೌ॥ ಭಾ. ಪರಮವ್ವ ಕೋ ಶಿದ್ಧಯ್ಯ ಕೊಡ್ಲಮಠ	೫೧
೬೫	ಸೌ॥ ಭಾ. ಸಾವಿತ್ರವ್ವಾ ಕೋ ಬಸವಣ್ಣಗೋರಿ	೫೧
೬೬	ಗಂ. ಭಾ. ಯಮುನವ್ವಾ ಕೋ ಅಡಿವೆಪ್ಪ ದೊಡ್ಡಮನಿ	೫೧
೬೭	ಸೌ॥ ಭಾ. ಶಿದ್ಧವ್ವ ಕೋ ರಾಚಪ್ಪಶೆಟ್ಟಿ	೨೬
೬೮	ಸೌ॥ ಭಾ. ವೀರವ್ವ ಕೋ ಶಿದ್ಧಪ್ಪ ಯಲಿಗಾರ	೨೬
೬೯	ಸೌ॥ ಭಾ. ಸಾವಕ್ಕಾ ಕೋ ಸೋಮರಾವ ಹಾವೇರಿ	೨೬
೭೦	ಗಂ. ಭಾ. ಬಸವ್ವ ಕೋ ಮಲ್ಲಪ್ಪ ಅಗಡಿ	೨೬
೭೧	ಗಂ. ಭಾ. ಯಮುನವ್ವ ಕೋ ಗವಿಗೆಪ್ಪ ಮಡ್ಡಿ	೨೬
೭೨	ಸೌ॥ ಭಾ. ಚಿನ್ನವ್ವ ಕೋ ಬಸವಣ್ಣೆಪ್ಪಶೆಟ್ಟಿ	೧೧
೭೩	ಗಂ. ಭಾ. ನೀಲವ್ವ ಕೋ ವೀರಪ್ಪಶೆಟ್ಟಿ	೧೧
೭೪	ಗಂ. ಭಾ. ಶಾಂತವೀರವ್ವ ಕೋ ಕೊಟ್ರಯ್ಯ ಹವಿಗಿ	೧೧
೭೫	ಗಂ. ಭಾ. ಬಸವ್ವ ಕೋ ಲಿಂಗಪ್ಪ ಗವಳದ	೧೧
೭೬	ಸೌ॥ ಭಾ. ಚನಬಸವ್ವ ಕೋ ಗುರುಶಾಂತಪ್ಪ ಕಲಬಸದ	೧೧
೭೭	ಗಂ. ಭಾ. ಗಂಗವ್ವ ಕೋ ಸಂಗಯ್ಯ ಕೊಡ್ಲಮಠ	೧೧
೭೮	ಸೌ॥ ಭಾ. ಚನಬಸವ್ವ ಕೋ ಕಂಗಳಯ್ಯ ಮುಲ್ಲಾಪೂರಮಠ	೧೧
೭೯	ಗಂ. ಭಾ. ಚನಬಸವ್ವ ಕೋ ಚನಬಸಯ್ಯ ಮುಳಗುಂದ	೧೧
೮೦	ಗಂ. ಭಾ. ಪಾರ್ವತೆವ್ವ ಕೋ ವೀರಯ್ಯ ಹವಿಗಿ	೧೧
೮೧	ಸೌ॥ ಭಾ. ನೀಲವ್ವ ಕೋ ತೀರ್ಥಪ್ಪ ಮುಷ್ಟಿಗಂಡಿ	೧೧
೮೨	ಸೌ॥ ಭಾ. ಗುರುಪಾದವ್ವ ಕೋ ಬಸಲಿಂಗಪ್ಪ ಮುದಗಲ್ಲ	೧೧
೮೩	ಗಂ. ಭಾ. ವೀರವ್ವ ಕೋ ಫಕೀರಪ್ಪ ಅಂಬಲಿ	೧೧
೮೪	ಗಂ. ಭಾ. ಫಕೀರವ್ವ ಕೋ ಬಸಲಿಂಗಪ್ಪ ಮೆಣಸಿನಕಾಯಿ	೧೧
೮೫	ಗಂ. ಭಾ. ಶಿದ್ಧವ್ವ ಕೋ ಮಲ್ಲಿಕಾರ್ಜುನಯ್ಯ ಮಠದ	೧೧
೮೬	ಗಂ. ಭಾ. ಶರಣವ್ವ ಕೋ ದ್ಯಾಮಯ್ಯ ಗುಮ್ಮಗೋಳ	೧೧
೮೭	ಗಂ. ಭಾ. ಬಸವ್ವ ಕೋ ಮುರಬಸಪ್ಪ ವಾಲಿ	೧೧

ಈ ಪ್ರಕಾರ ಎಂಟು ಸಾವಿರಕ್ಕೆ ಮೇಲ್ಪಟ್ಟು ರೂ. ಗಳು ಸದರಿ ಫಂಡಿಗೆ ಪ್ರಾಪ್ತವಾದವು. ಶ್ರೀ॥ ರಾ॥ ಫಕೀರಯ್ಯ ವೇ॥ ಶಿದ್ಧಯ್ಯ ಕೊಡ್ಲಮಠ ಈ ಮಹನೀಯರು ತಮ್ಮ ಅಂಗಡಿಗೆ ಫಂಡಿನ ರೂಪವಾಗಿ ಬರುವ ಧರ್ಮಾದಾಯ ಹಣ ಅಜಮಾಸ ಎಂಟುನೂರು ರೂ. ಗಳನ್ನೂ ಈಗ ಸಾಲಿಗೆ ದರ ವರ್ಷ ಮುಟ್ಟುವ ಎರಡುನೂರು ರೂ. ಗಳನ್ನೂ ಫಂಡಿನ ವ್ಯವಸ್ಥೆ ಆಗುವವರೆಗೆ ಕೊಡುತ್ತೇವೆಂದು ವಾಗ್ದಾನಮಾಡಿ ಸಾಷ್ಟಾಂಗ ಹಾಕಿದರು. ರಾವ್ ಸಾಹೇಬ ಬಸಪ್ಪ ಚನಬಸಪ್ಪ ಮಡ್ಡಿ ಶಿರಸಂಗಿ ಸಂ॥ ಕಾರಭಾರಿ ದರ ತಿಂಗಳಿಗೆ ಐದು ರೂ. ಕೊಡುತ್ತೇವೆಂದು ವಾಗ್ದಾನ ಮಾಡಿರುವರು. ಇದರಂತೆ ಧರ್ಮಾಭಿಮಾನ ಉಳ್ಳ ಮಹನೀಯರು ಈ ತರದ ಸಂಸ್ಥೆಗಳನ್ನು ಸ್ಥಾಪನ ಮಾಡಿ ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕು.

ರಾಚಪ್ಪಶೆಟ್ಟಿ ಗುರಪ್ಪಶೆಟ್ಟಿ ಸ್ಟೇಷನ್ನಮಾಸ್ತರ,
ಸಮಾಜಸೇವಕ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದಿ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಗಳಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ನೀರು, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು. ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ. 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
28 ಪಾರ್ಕ್‌ಟೌನ್ ಮದರಾಸು.

ಪಾಕೆಟ್ ಡೈರಿ ಇನಾಂ.

ಈ ನಕ್ಷೆಯಲ್ಲಿ ಕಂಡ ಪೌಂಟನ್ ಪೇನಾವನ್ನು ಕೊಂಡುಕೊಳ್ಳುವವರಿಗೆ ಸೊಗಸಾದ ಪಾಕೆಟ್ ಡೈರಿಯನ್ನು ಇನಾಮಾಗಿ ಕೊಡುವೆವು. ಈ ಪೇನಾವು ವಿಲಾಯಿತಿಯಲ್ಲಿ ತಯಾರಾದದ್ದು. ಒಂದಾವರ್ತಿ ಇಂಕಿಯನ್ನು ತುಂಬಿದರೆ ಸುಮಾರು 500 ಮಾತುಗಳನ್ನು ಬರೆಯುವುದು.

ಕ್ರಯ ಡೈರಿ ಸಹಿತ ಪೇನಾ 1ಕ್ಕೆ 1—8—0.

ಜರ್ಮನ್ ಬೆಳ್ಳಿಯ ಕ್ಯಾಲೆಂಡರ್.

ಈ ಕ್ಯಾಲೆಂಡರುಗಳು ಈಗಲೇ ಬಂದುವು. ಇವನ್ನು ಜರ್ಮನ್ ಬೆಳ್ಳಿಯಿಂದ ಮಾಡಿದೆ. ಇದೊಂದರಲ್ಲೇ 10 ವರುಷಗಳ ಕ್ಯಾಲೆಂಡರ್ ಇದೆ. ಇವನ್ನು ಗೋಡೆಗೆ ತಗುಲಿಸಲೂ, ಮೇಜಿನ ಮೇಲೆ ಇಡಲೂ ಬಹು ಚೆನ್ನಾಗಿವೆ. ಇಂಗ್ಲಿಷ್ ನಮೂನೆಯವು. ಬಣ್ಣವು ಎಂದಿಗೂ ಹೋಗದು.

28 ಕ್ರಯ ಕ್ಯಾಲೆಂಡರ್ 1ಕ್ಕೆ 1—8—0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
89, ನಾರಾಯಣಮೊದಲಿಬೀದಿ, ಮದ್ರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

18

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್
53 ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವವು.

ಇದಿಗೋ

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು. ಒಂದು ಪಾಕೆಟ್ ತೆಗೆಯುವರಿಗೆ 1921ನೆ ಇಸವಿಯ ಲೇಡೀ ಕ್ಯಾಲೆಂಡರ್ ಒಂದು ಇನಾಂ ಕಳುಹಿಸಲ್ಪಡುವುದು. ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5-0-0.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರ್‌ಪೇಟೆ, ಮದರಾಸು.

೧೯೨೧ ನೆಯ ಇಸವಿ ಏಪ್ರಿಲ್ ತಾ॥ ೩ ರಿಂದ ೧೯೨೧ ನೆಯ ಏಪ್ರಿಲ್ ತಾ॥ ೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೨ ನೆಯ ರೌದ್ರಿನಾಮ ಸಂವತ್ಸರದ ಫಾಲ್ಗುಣ ಬಹುಳ ದಶಮಿಯಿಂದ ಶಾಲಿವಾಹನಶಕ ೧೮೪೩ನೆಯ ದುರ್ಮತಿನಾಮಸಂವತ್ಸರದ ಚೈತ್ರಶುದ್ಧ ಪಾಡ್ಯಮಿ ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
3	[1]ಭಾನು	ದಶ	4-5	ಶ್ರವ	19-46	22
4	[2]ಸೋಮ	ಏಕಾ	9-5	ಧನಿ	26-0	23
5	[3]ಮಂಗಳ	ದ್ವಾದ	13-23	ಶತ	31-33	24
6	ಬುಧ	ತ್ರಯೋ	16-43	ಪೂಭಾ	36-10	25
7	ಗುರು	ಚತು	18-53	ಉಭಾ	39-22	26
8	ಶುಕ್ರ	ಅಮಾ	19-43	ರೇವ	41-25	27
9	[4]ಶನಿ	ಪಾಡ್ಯ	19-20	ಅಶ್ವಿ	42-14	28

(1) ಹಿಮವದ್ಗೋಪಾಲಸ್ವಾಮಿ ರಥಃ. (2) ಸರ್ವೈಕಾದಶಿ. (3) ಪ್ರದೋಷಃ. (4) ಚಾಂದ್ರಸಂವತ್ಸರಾರಂಭಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಕ್ಷ್ಯಪನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೈತ್ರಿಯಮಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪ ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಏಪ್ರಿಲ್ ತಾರೀಖು ೧೭ ನೆಯ ಭಾನುವಾರ ಸಂಚಿಕೆ ೧೫

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHAVA
VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
14 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.—ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಚಾರ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧ ರೂ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೨—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧—೨—೦ ೪ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ಮೃತಿಮುಕ್ತಾವಳಿ ೮ಆಣೆ; ರತ್ನಶತಕ ೨ಆಣೆ; ಶಂಕರಲಿಂಗಕಂದಂ ೧ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ವಪೂಜಾವಿಧಿ	೦—೧೫—೦
[illegible]	೦— ೯—೦
[illegible]	೦— ೪—೦

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ,	ರೂ. ವರೆಗೆ.
4	0-12-0 ,,	50-0-0
5	0- 8-0 ,,	100-0-0
6	0-12-0 ,,	100-0-0
7	6- 0-0 ,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

3	0- 6-0 ಇಂದ	10-0-0
8	0- 8-0 ,,	100-0-0
9	0-12-0 ,,	100-0-0
10	0-14-0 ,,	100-0-0
11	3- 8-0 ,,	100-0-0
12	4- 0-0 ,,	100-0-0
13	4- 8-0 ,,	100-0-0
14	6- 0-0 ,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5-6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
8 ಕಂಪನಿ, ಚೌಕಂಬಾ ಕಾಶೀ.

ಫಲಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು

27

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತತ್ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

19

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0

29 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತುರಾಯಿ 1, ಸೇವಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ರಾಗಮಾಲಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಶೃಂಗಾರದ ಉಂಗುರ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
29 89, ನಾರಾಯಣಮೊದಲಿಬೀದಿ, ಮದ್ರಾಸು.

ಚಂದಾದಾರರು ಗಮನಿಸತಕ್ಕದ್ದು.

ಸ್ಟಾರ್ ಪತ್ರಿಕೆಯು ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು.

ಮೈಸೂರು ಸ್ಟಾರ್ ಪತ್ರಿಕೆಯ ಹೊಸ ಮತ್ತು ಹಳೆ ಚಂದಾಹಣವನ್ನು ವಸೂಲುಮಾಡಿಕೊಳ್ಳುವುದಕ್ಕಾಗಿ ಪತ್ರಿಕೆಯ ಒಂದು ಸಂಚಿಕೆಯನ್ನು ವಿ.ಪಿ. ಪೋಸ್ಟ್ ದ್ವಾರಾ ಕಳುಹುವ ಪದ್ಧತಿಯು ಬಹುಕಾಲದಿಂದಲೂ ನಡೆದುಬರುತ್ತಿರುವುದಷ್ಟೆ. ಇದರಿಂದ ಮನಿಯಾರ್ಡರ್ ಕಮಿಷನ್ 1 ಆಣೆ ಪೋಸ್ಟೇಜು ¾ ಆಣೆ ಒಟ್ಟು 1¾ ಆಣೆ ಬೀಳುತ್ತಿದ್ದಿತು. ಈಗ ಸ್ವಲ್ಪದಿನಗಳಿಂದ ಪ್ರತಿಯೊಂದು ವಿ. ಪಿ. ಪ್ಯಾಕೆಟ್ಟೂ ರಿಜಿಸ್ಟರ್ ಮಾಡಿಸಲ್ಪಡಬೇಕೆಂಬ ನಿರ್ಬಂಧವು ಕಲ್ಪಿಸಲ್ಪಟ್ಟುದರಿಂದಲೂ, ಪೋಸ್ಟೇಜು ಅರ್ಧಾಣೆ ಮಾಡಲ್ಪಟ್ಟುದರಿಂದಲೂ 3½ ಆಣೆ ವೆಚ್ಚ ಬೀಳುತ್ತಿದ್ದಿತು. ಈ ತಾ|| 18 ರಿಂದ ಮನಿಯಾರ್ಡರ್ ಕಮಿಷನನ್ನು 10 ರೂ. ವರೆಗೂ 2 ಆಣೆ ಮಾಡಲ್ಪಟ್ಟಿರುವುದರಿಂದ ಒಟ್ಟು 4½ ಆಣೆ ಛಾರ್ಜು ಬೀಳುವಂತಾಗಿದೆ. ಇದೂ ಅಲ್ಲದೆ ವಿ. ಪಿ. ಪ್ಯಾಕೆಟ್ಟುಗಳನ್ನು ರಿಜಿಸ್ಟರ್ ಮಾಡಿಸಲು ಒಬ್ಬ ಮನುಷ್ಯನು ಒಂದು ದಿವಸವೆಲ್ಲಾ ಪೋಸ್ಟಾಫೀಸ್ ಬಳಿ ಕಾದಿರಬೇಕಾಗಿರುವುದು. ಇಷ್ಟೆಲ್ಲಾ ತೊಂದರೆಗಳಿಗೊಳಗಾಗಿ ಕಳುಹಿಸಲ್ಪಟ್ಟ ವಿ. ಪಿ. ಗಳಲ್ಲಿ ಅನೇಕ ವಾಪಸ್ ಬರುವುದರಿಂದ ನಮಗೆ ಅತ್ಯಂತ ನಷ್ಟವಾಗುವುದಾದ ಪ್ರಯುಕ್ತ ಚಂದಾದಾರರುಗಳು ಇನ್ನುಮುಂದೆ ಹಣವನ್ನು ಮುಂಗಡವಾಗಿ ಮನಿಯಾರ್ಡರ್ ಮಾಡಿ ತಾವು ಹೆಚ್ಚಾಗಿ ಕೊಡಬೇಕಾದ ರಿಜಿಸ್ಟರ್ ಫೀ 2 ಆಣೆಯನ್ನುಳಿಸಿಕೊಳ್ಳುವುದಲ್ಲದೆ, ನಮಗಾಗುವ 2½ ಆಣೆ ನಷ್ಟವನ್ನು ತಪ್ಪಿಸುವವರಾಗಬೇಕೆಂದು ಅಪೇಕ್ಷಿಸುತ್ತೇವೆ. ಹಾಗೆ ಮುಂಗಡ ಮನಿಯಾರ್ಡರ್ ಮಾಡದಿದ್ದವರಿಗೆ ಸ್ಟಾರ್ ಪತ್ರಿಕೆಯು ಖಂಡಿತವಾಗಿಯೂ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಹಳೆ ಚಂದಾದಾರರು ತಮ್ಮ ವಿಳಾಸದ ಎಡಪಕ್ಕದಲ್ಲಿರುವ ರಿಜಿಸ್ಟರ್ ನಂಬರನ್ನು ಮನಿಯಾರ್ಡರ್ ಕೂಪಿನಲ್ಲಿ ಮರೆಯದೆ ಬರೆದು ತಿಳಿಸಬೇಕು. ಮ್ಯಾನೇಜರ್.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಏಪ್ರಿಲ್ ತಾ|| ೧೭ನೆಯ ಭಾನುವಾರ.

ನೂತನವರ್ಷವು.

ಪ್ರಪಂಚದಲ್ಲಿ ಪ್ರತಿಯೊಂದು ಜನಾಂಗಕ್ಕೂ ನೂತನ ವರ್ಷಾರಂಭದಿನವು ಒಂದಾನೊಂದು ಗೊತ್ತಾದ ದಿನದಲ್ಲಿ ಬರುತ್ತದೆ. ಕ್ರೈಸ್ತಜನಮಂಡಲಕ್ಕೆಲ್ಲಾ ಜನವರಿ ೧ ನೆ ತಾರೀಖು ವರ್ಷಾರಂಭದಿನವಾಗುತ್ತದೆ. ಮಹಮ್ಮದೀಯ ಪ್ರಪಂಚಕ್ಕೆಲ್ಲಾ ವರ್ಷಾರಂಭದಿನವು ಮೊಹರಂ ೧ನೆಯ ತೇದಿಯಾಗುತ್ತದೆ. ಆದರೆ ಹಿಂದೂ ಜನಾಂಗಕ್ಕೆ ಮಾತ್ರ ವರ್ಷಾರಂಭದಿನವು ಒಂದೇ ಒಂದಾಗಿರದೆ ಬಾರ್ಹಸ್ಪತ್ಯಮಾನ, ಸೌರಮಾನ, ಚಾಂದ್ರಮಾನಾದಿ ಸಂಪ್ರದಾಯಗಳನ್ನನುಸರಿಸಿದ ಬೇರೆಬೇರೆ ದೇಶೀಯರಿಗೆ ಬೇರೆಬೇರೆ ವರ್ಷಾರಂಭದಿನಗಳು ಆಚರಣೆಯಲ್ಲಿರುತ್ತವೆ. ಇದರಲ್ಲೂ ಕೂಡ ಭಾರತೀಯರಿಗೆ ಐಕ್ಯವಿಲ್ಲ! ಅದಂತಿರಲಿ. ಪ್ರಕೃತದಲ್ಲಿ ಚಾಂದ್ರಮಾನ ಸಂಪ್ರದಾಯದ ನಮ್ಮಗಳಿಗೆ ಲೋಕಯಾತ್ರೆಯಲ್ಲಿ ಒಂದು ವರ್ಷವು ಕಳೆದು ನೂತನ ವರ್ಷವು ಮೊನ್ನೆಯ ಶನಿವಾರದಿಂದ ಆರಂಭವಾಯಿತಷ್ಟೆ. ಈ ಸಮಯದಲ್ಲಿ ಕಳೆದ ವರ್ಷದ ನಮ್ಮ ಅನುಭವವನ್ನು ಸ್ಮರಿಸಿಕೊಂಡರೆ ಗತಿಸಿಹೋದ ಆ ರೌದ್ರಿಸಂವತ್ಸರವು ಭಾರತೀಯರಾದ ನಮಗೆ ಮಾತ್ರವೇ ಅಲ್ಲದೆ ಪ್ರಪಂಚಕ್ಕೆಲ್ಲಾ ರೌದ್ರವಾಗಿದ್ದಿತೆಂದೇ ಹೇಳಬಹುದು. ಜಗತ್ತಿನ ಯಾವ ಮೂಲೆಯಲ್ಲೂ ಶಾಂತಿಯೆಂಬುದು ಸ್ವಪ್ನಪ್ರಾಯವಾಗಿದ್ದಿತು. ಆರ್ಥಿಕಸಮಸ್ಯೆ, ಆಹಾರ್ಯಸಮಸ್ಯೆ, ರಾಜಕೀಯಸಮಸ್ಯೆ ಇವುಗಳೆಲ್ಲಾ ಪ್ರಜೆಗಳಿಗೆ ಕಾತರವನ್ನೇ ಉಂಟುಮಾಡಿದ್ದುವು. ನಮ್ಮ ಭರತಖಂಡದಲ್ಲೂ ಕೂಡ ರಾಜಕೀಯಾದಿ ವಿಷಯಗಳಲ್ಲಿ ಅಭೂತಪೂರ್ವಗಳಾದ ಅಸಂತೃಪ್ತಿಗಳೂ ಚಳವಳಗಳೂ ಕೂಡ ತಾಂಡವವಾಡುತ್ತಿದ್ದುವು. ಇಂಥ ರೌದ್ರಿಸಂವತ್ಸರದ ಜತೆಗೆ ಇದುವರೆಗಣ ವೈಸ್ರಾಯರಾಗಿದ್ದ ಲಾರ್ಡ್ ಚೆಲಮ್ಸ್‌ಫರ್ಡರ ಅಧಿಕಾರವೂ ಕೂಡ ಪರಿಸಮಾಪ್ತಿಗೊಂಡಿತು. ಆ ಸಂವತ್ಸರದ ದುರ್ಯೋಗವೋ ಎಂಬಂತೆ ಅಮೃತಸರದ ಜಲಿಯನ್‌ವಾಲಾ ತೋಟದಲ್ಲಿ ನಡೆದ ನರಹತ್ಯೆಯ ಮಹಾಘೋರ ಪಾತಕದ ಪರಂಪರಾಸಂಬಂಧದಿಂದ ಲಾರ್ಡ್ ಚೆಲಮ್ಸ್‌ಫರ್ಡರು ಭಾರತೀಯರ ಪ್ರೀತಿವಿಶ್ವಾಸಗಳನ್ನು ಕಳೆದುಕೊಳ್ಳಬೇಕಾಯಿತು. ನಿಸರ್ಗತಃ ಇವರು ಭರತಖಂಡಕ್ಕೆ ಹಿತಚಿಂತಕರು. ಇವರ ಪ್ರಯತ್ನವಿಶೇಷದಿಂದಲೇ ಸ್ಟೇಟ್‌ಸೆಕ್ರೆಟರಿಯವರು ಈ ದೇಶಕ್ಕೆ ಬಂದು ಸ್ಥಿತಿಗತಿಗಳನ್ನು ಅವಲೋಕಿಸಿದರು. ಇವರ ಸೂಚನೆಯಂತೆಯೇ ನೂತನ ರಾಜಕೀಯ ಸಂಸ್ಕರಣಗಳು ಏರ್ಪಟ್ಟು ಸ್ವರಾಜ್ಯೋಪಭೋಗದ ಮೊದಲನೆ ತಳಗಟ್ಟು ಸ್ಥಾಪಿಸಲ್ಪಟ್ಟಿರುತ್ತದೆ. ಖಿಲಾಫತ್ ವಿಷಯವಾಗಿಯೂ ಮಹಮ್ಮದೀಯ ಪ್ರಜೆಗಳ ಮನಸ್ತೃಪ್ತಿಯಾಗುವಂತೆ ಸಂಧಿನಿಬಂಧನೆಗಳೇರ್ಪಡಬೇಕೆಂಬ ವಿಷಯದಲ್ಲಿ ಸಾಮ್ರಾಜ್ಯಸರ್ಕಾರಕ್ಕೆ ಅನುಕೂಲವಾದ ಲೇಖನಗಳನ್ನು ತತ್ತತ್ಕಾಲದಲ್ಲಿ ಕಳುಹಿಸಿಕೊಟ್ಟರು. ದಕ್ಷಿಣಾಫ್ರಿಕಾದ ಭಾರತೀಯರ ದುಸ್ಥಿತಿಯ ನಿವಾರಣೆಗಾಗಿ ಸಾಧ್ಯವಾದಷ್ಟು ಪ್ರಯತ್ನಗಳನ್ನು ಮಾಡಿದರು. ಆದರೂ ಇವರಲ್ಲಿ ಚಿತ್ತದಾರ್ಢ್ಯವೂ ಆತ್ಮಸಾಮರ್ಥ್ಯವೂ ಪೂರ್ಣವಾಗಿಲ್ಲದ ಕಾರಣದಿಂದ ಕೈಕೆಳಗಣ ಅಧಿಕಾರಗಳ ಮಾತಿಗೆಲ್ಲಾ ತಲೆತೂಗುತ್ತ ಬಂದರೆಂಬ ಅಪಕೀರ್ತಿಯ ಮೊಟ್ಟೆಯನ್ನು ಹೆಗಲಮೇಲೆ ಹೊತ್ತುಕೊಂಡರು. ಜಲಿಯನ್ವಾಲಾಬಾಗ್ ವಧೆಗೆ ಅವಕಾಶವನ್ನು ಕೊಡಿಸಿದುದರಿಂದ ಉಂಟಾದ ಭಾರತೀಯಾಸಂತೃಪ್ತಿಯನ್ನು ಕಂಡು ಈಚೆಗೆ ಇವರು ಎಚ್ಚತ್ತುಕೊಂಡರೂ ತಮ್ಮ ತಪ್ಪನ್ನು ತಿದ್ದಿಕೊಂಡು ಮುಂದಣ ಕಾರ್ಯಭಾರವನ್ನು ಪ್ರಜಾರಂಜಕವಾಗುವಂತೆ ಸಾಗಿಸುವಷ್ಟು ಅವಕಾಶವು ಇವರಿಗೆ ಇಲ್ಲದೆಹೋಯಿತು. ೫ ವರ್ಷದ ಗಡುವು ಮುಗಿದುದರಿಂದ ಇವರು ಅಧಿಕಾರ ಪರಿತ್ಯಾಗವನ್ನು ಮಾಡಿ ಪ್ರಯಾಣಬೆಳೆಸಿದರು. ನೂತನವರ್ಷೋದಯದ ಜತೆಗೆ ಲಾರ್ಡ್ ರೀಡಿಂಗ್‌ರವರು ಭರತಖಂಡದ ಸಾರ್ವಭೌಮ ಪ್ರತಿನಿಧಿ ಪೀಠವನ್ನಾರೋಹಿಸಿದ್ದಾರೆ. ಗಾಢವಾದ ತಮಸ್ಸಿನಿಂದ ಆವರಿಸಿಕೊಂಡು ನಿರಂಕುಶಾಧಿಕಾರದ ಬೇಗೆಯಿಂದ ಪರಿತಪಿಸುತ್ತಿರುವ ಭಾರತದೇಶಕ್ಕೆ ಇವರ ಅಧಿಕಾರಚಂದ್ರಿಕೆಯು ಸುಪ್ರಕಾಶವನ್ನೂ ತಣ್ಪನ್ನೂ ಉಂಟುಮಾಡಲೆಂಬುದೇ ಸರ್ವರ ಪ್ರಾರ್ಥನೆಯಾಗಿದೆ.

ಆದರೆ ನಡೆಯುತ್ತಿರುವ ವರ್ಷದ ನಾಮವು ದುರ್ಮತಿ. ಇದಕ್ಕೆ ರಾಜನು ಶನಿ. ಅವನೇ ಸಸ್ಯಾಧಿಪತಿ. ಸೈನ್ಯ, ಮೇಘ, ಅರ್ಘ, ಇವುಗಳಿಗೆಲ್ಲಾ ಅಧಿಪತಿಯು ಅಂಗಾರಕ. ಮಂತ್ರಿತ್ವಕ್ಕೆ ಬುಧನೂ, ಧಾನ್ಯಕ್ಕೆ ಗುರುವೂ, ನೀರಸದ್ರವ್ಯಗಳಿಗೆ ಶುಕ್ರನೂ ಅಧಿಪತಿಗಳಾಗಿದ್ದಾರೆ. ಈ ವರ್ಷ ಕ್ರೂರಗ್ರಹಗಳಿಗೇ ಹೆಚ್ಚು ಆಧಿಪತ್ಯವು ದೊರೆದಿದೆ. ಅಲ್ಲದೆ ವೈಶಾಖಕೃಷ್ಣ ೬ ಯಿಂದ ಭಾದ್ರಪದ ಕೃಷ್ಣ ೫ ವರೆಗೆ ಲೋಕೋಪದ್ರವಕಾರಕವಾದ ಕಾಲಸರ್ಪಯೋಗವಿದೆಯೆಂದು ದೈವಜ್ಞರು ಹೇಳುತ್ತಾರೆ. ಪ್ರಪಂಚದ ಸದ್ಯದ ಸ್ಥಿತಿಗಳನ್ನೂ ಕಾಲಚಕ್ರದ ವಿದ್ಯಮಾನವನ್ನೂ ಅವಲೋಕಿಸಿದರೆ ಈ ನಡೆಯುವ ವರ್ಷದಲ್ಲಾದರೋ ಶಾಂತಿಸುಭಿಕ್ಷಗಳು ಸಮಾಧಾನಕರವಾಗಿರುವುವೇ ಎಂದು ಚಿಂತಿಸುವಂತಿರುವುದು. ಅಸೂಯೆ, ಅತೃಪ್ತಿ, ಅಸತ್ಯ, ಅನ್ಯಾಯ, ಅಪ್ರೀತಿ, ಅತ್ಯಾಶೆ, ಅನೈಕ್ಯಮತ್ಯ ಮೊದಲಾದ ಅಮಂಗಲ ರಾಜಸ ತಾಮಸ ಗುಣಗಳೆಲ್ಲಾ ಅಂತ್ಯಗೊಂಡು, ಸತ್ಯ, ಸತ್ಸಂಕಲ್ಪ, ಶಾಂತಿ, ತೃಪ್ತಿ, ಪರಸ್ಪರ ಪ್ರೀತಿ, ಸಹೋದರವಾತ್ಸಲ್ಯ, ಮೊದಲಾದ ಸದ್ಗುಣಗಳು ವೃದ್ಧಿಗೊಳ್ಳುವಂತಾದಲ್ಲದೆ ಕಲಿಮಲಗಳ ತಾಪವು ದೇಶಕ್ಕೆ ತಪ್ಪದುದಲ್ಲ. ಲೋಕಯಾತ್ರೆಯೇ ದುರ್ಭರ ದುಃಖಭೂಯಿಷ್ಠವಾದುದೆಂದು ಅದರ ಸ್ವಭಾವವನ್ನರಿತಿರುವ ಸಜ್ಜನರು ಕಮಲಪತ್ರದ ಮೇಲಣ ಜಲಕಣದಂತೆ ನಿರ್ಲಿಪ್ತರಾಗಿ ಶಾಂತಚಿತ್ತದಿಂದ ಆ ಯಾತ್ರೆಯನ್ನು ಸಾಗಿಸಿಕೊಳ್ಳಬಲ್ಲರು. ಜಗದೀಶನ ಕರುಣದಿಂದ ನೂತನ ವರ್ಷವು ಸರ್ವರಿಗೂ ಶುಭಸುಮತಿಸೌಖ್ಯಸಂಪತ್ಪ್ರದವಾಗಲಿ.

ವಿದ್ಯುದುತ್ಪಾದನೆ.

ಸರ್ ಶೇಷಾದ್ರಿ ಅಯ್ಯರ ಕಾಲದಲ್ಲಿ ಕಾವೇರೀ ವಿದ್ಯುಚ್ಛಕ್ತಿ ಸಮುತ್ಪಾದನ ಪ್ರತಿಷ್ಠಾಪನೆಯನ್ನು ಏರ್ಪಡಿಸಿಕೊಟ್ಟ ಇಂಜನಿಯರ್ ಗಿಬ್ಸ್‌ರವರ ಸಲಹೆಯ ಪ್ರಕಾರ ಬೊಂಬಾಯಿಯ ಸರ್ ದೊರಾಬ್ಜಿ ಟಾಟಾ, ಸರ್ ಸಾಸೂನ್ ಡೇವಿಡ್, ಸರ್ ಷಾಪೂರ್ಜಿ ಬ್ರೋಚಾರವರೇ ಮೊದಲಾದ ಶ್ರೀಮಂತರು ಕೆಲರು ಸೇರಿ ೯ ಕೋಟಿಯ ಮೂಲಧನದಿಂದ ಒಂದು ವಿದ್ಯುಚ್ಛಕ್ತಿ ನಿರ್ಮಾಣ ಪ್ರತಿಷ್ಠಾಪನೆಯನ್ನು ಬೊಂಬಾಯಿಗೆ ಸ್ವಲ್ಪ ದೂರದಲ್ಲಿ ಮಾಡಲು ಪ್ರಯತ್ನಿಸಿದ್ದಾರೆ. ಪೂನಾ ಜಿಲ್ಲೆಗೆ ಸೇರಿದ ಹವೇಲಿ ತಾಲ್ಲೂಕಿಗೆ ಸೇರಿದ ಮುಲ್ಷಾಯಿ ಎಂಬ ಗ್ರಾಮದ ಬಳಿಯಲ್ಲಿ ನೀಲಾ, ಮೂಲಾ, ಎಂಬ ನದಿಗಳ ಸಂಗಮವಾಗುತ್ತದೆ. ಅಲ್ಲಿ ಒಂದು ದೊಡ್ಡ ಅಣೆಕಟ್ಟೆಯನ್ನು ಕಟ್ಟಿ ಅದರಲ್ಲಿ ಶೇಖರಿಸಿದ ನೀರನ್ನು ಬೆಟ್ಟಗಳ ಮೇಲೆ ಸ್ವಲ್ಪದೂರ ಹರಿದು ೧೭೫೦ ಅಡಿಗಳ ಎತ್ತರದಿಂದ ಕೆಳಕ್ಕೆ ಧುಮಿಕುವಂತೆ ಮಾಡಿ, ಅದರ ಶಕ್ತಿಯಿಂದ ೧½ ಲಕ್ಷ ಕುದುರೆಯ ಶಕ್ತಿಯಷ್ಟು ವಿದ್ಯುಚ್ಛಕ್ತಿಯನ್ನು ಹುಟ್ಟಿಸುವರು. ಈ ವಿದ್ಯುಚ್ಛಕ್ತಿ ಸಮುತ್ಪಾದನ ಭವನವು ಭೀರಾ ಎಂಬಲ್ಲಿ ಕಟ್ಟಲ್ಪಡುವುದು. ಅಲ್ಲಿಂದ ೭೦ ಮೈಲಿಗಳ ದೂರದಲ್ಲಿರುವ ಬೊಂಬಾಯಿಯ ಯಂತ್ರಾಲಯ ಮೊದಲಾದುವುಗಳಿಗೆ ಈ ಶಕ್ತಿಯು ಒದಗಿಸಲ್ಪಡುತ್ತದು. ಈ ಪ್ರಯತ್ನದಿಂದ ಆ ಪ್ರಾಂತದ ೫೪ ಗ್ರಾಮಗಳು ಮುಳುಗಡೆಗೆ ಬರುತ್ತವಂತೆ. ಇದರಿಂದ ಅಷ್ಟು ಗ್ರಾಮದ ರೈತರೆಲ್ಲಾ ಶ್ರಮಕ್ಕೆ ಈಡಾಗುವರೆಂದೂ ಕೆಲ ಧನಿಕರ ಲಾಭಕ್ಕಾಗಿ ಸಾಮಾನ್ಯ ಪ್ರಜೆಗಳಿಗೆ ಹಿಂಸೆ ಕೊಡುವುದು ಯುಕ್ತವಲ್ಲವೆಂದೂ ರಾಷ್ಟ್ರೀಯ ಮಹಾಸಭೆಯವರೂ ಅವರನ್ನನುವರ್ತಿಸಿದ ಪೂನಾ ಪ್ರಾಂತಿಕ ಸಭೆಯವರೂ ವಾದಿಸುತ್ತಿರುವರು. ಗ್ರಾಮಗಳನ್ನು ಬಿಡಿಸಿದ ಮಾತ್ರಕ್ಕೇ ಅವರಿಗೆ ತಕ್ಕ ಪ್ರತಿಭೂಮಿಗಳೋ ಅಥವಾ ಪರಿಹಾರದ್ರವ್ಯವೋ ಕೊಡಲ್ಪಡದೆ ಇರುವುದುಂಟೆ? ವಿದ್ಯುಚ್ಛಕ್ತಿಯ ಸಹಾಯದಿಂದ ದೇಶದ ಪರಿಶ್ರಮಗಳು ಅಭಿವೃದ್ಧಿಗೊಳ್ಳುವುದಿಲ್ಲವೆ? ಯಂತ್ರಾಲಯಗಳ ಅಭಿವೃದ್ಧಿಯಿಂದ ಕೂಲಿಕಾರರಾದ ಪ್ರಜೆಗಳಿಗೆ ಜೀವನ ನಡೆಯುವುದಿಲ್ಲವೆ? ರಾಜಕೀಯ ಚಳವಳಿಗಾರರು ರೈತರಿಗೆ ಬೆಂಬಲವಾಗಿ ನಿಂತು ನಮ್ಮ ಭೂಮಿಯೇ ನಮಗೆ ಇರಬೇಕೇ ಹೊರತು ಬೇರೆ ಭೂಮಿಯು ನಮಗೆ ಅವಶ್ಯಕವಲ್ಲವೆಂದು ಇಂಥ ಸಂದರ್ಭದಲ್ಲಿ ಹೇಳಿಸುವುದು ಅವಿವೇಕವಲ್ಲವೆ? ಪರಿಶ್ರಮಾಭ್ಯುದಯದಿಂದ ಧನಿಕರಿಗೇ ಲಾಭವಾಗುವುದೆಂದು ತಿಳಿದು ಅವರ ಪ್ರೋತ್ಸಾಹಕ್ಕೆ ಭಂಗಪಡಿಸುವ ಕ್ಷುಲ್ಲಕಯೋಚನೆಯಿಂದ ಇಂಥ ಮಹಾ ಪ್ರಯತ್ನಗಳಿಗೆ ಭಂಗಪಡಿಸುವವರ ಕೈಗೆ ಸ್ವರಾಜ್ಯವು ಬಂದರೆ ಭರತಖಂಡಕ್ಕೆ ಸೋವಿಯಟ್ ಪ್ರಭುತ್ವವೇ ಬಂದಂತಾಗುವುದಿಲ್ಲವೆ?

ಲಾಂಕಷೈರ್ ಬಟ್ಟೆವ್ಯಾಪಾರಿಗಳು.

ಭರತಖಂಡದ ಸರ್ಕಾರದವರು ಹೊರಗಣಿಂದ ಇಲ್ಲಿಗೆ ಬರುವ ಬಟ್ಟೆಗಳ ಮೇಲೆ ಸುಂಕವನ್ನು ಹೆಚ್ಚಿಸಿದುದರಿಂದ ಈ ದೇಶಕ್ಕೆ ವಿಶೇಷವಾಗಿ ಬಟ್ಟೆಗಳನ್ನು ಕಳುಹಿಸುವ ಲಾಂಕಷೈರಿನ ಬಟ್ಟೆಯ ಯಂತ್ರಾಲಯಗಳ ಯಜಮಾನರುಗಳು ಉದ್ವಿಗ್ನರಾಗಿರುವರು. ಅವರು ಸೀಮೆಯಲ್ಲಿ ಇಂಡ್ಯಾ ಸೆಕ್ರೆಟರಿಯವರನ್ನು ಕಂಡು ತಮ್ಮ ನಷ್ಟಕಷ್ಟಗಳನ್ನು ಹೇಳಿಕೊಂಡರು. ಅದನ್ನೆಲ್ಲಾ ಇವರು ಸಾವಧಾನವಾಗಿ ಕೇಳಿ, "ಭರತಖಂಡದ ಪ್ರಭುತ್ವದವರಿಗೆ ಈಗ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿರುವುದರಿಂದ ಹೀಗೆ ಹೊಸಸುಂಕಗಳನ್ನೂ ಹೆಚ್ಚು ಸುಂಕಗಳನ್ನೂ ವಿಧಿಸಬೇಕಾಯಿತೇ ಹೊರತು ಲಾಂಕಷೈರ್ ವರ್ತಕರಿಗೆ ನಷ್ಟಪಡಿಸಿ ಭರತಖಂಡದ ಬಟ್ಟೆಗಳಿಗೆ ಪ್ರೋತ್ಸಾಹಿಸಬೇಕೆಂಬ ಉದ್ದೇಶದಿಂದ ವಿಧಿಸಿಲ್ಲ. ನೀವು ಹಾಗೆ ಭ್ರಾಂತಿಪಟ್ಟಿದ್ದರೆ ಅದನ್ನು ಬಿಟ್ಟುಬಿಡಬೇಕು. ಆ ದೇಶದಲ್ಲಿ ರೈಲ್ವೆಛಾರ್ಜು ಪೋಸ್ಟುದರ, ವರಮಾನದ ತೆರಿಗೆ ಇವುಗಳೆಲ್ಲಾ ಈಗಲೇ ಹೆಚ್ಚಿ ಹೋಗಿವೆ. ಇನ್ನು ಅವನ್ನು ಹೆಚ್ಚಿಸಲಾಗುವುದಿಲ್ಲ. ಅದುಕಾರಣ ಗತ್ಯಂತರವಿಲ್ಲದೆ ಸೀಮೆಯಿಂದ ಬರುವ ಬಟ್ಟೆ ಮೊದಲಾದ ವಸ್ತುಗಳ ಮೇಲೆ ಹೀಗೆ ಸುಂಕವನ್ನು ವಿಧಿಸಬೇಕಾಯಿತು. ಅಲ್ಲದೆ ಆರ್ಥಿಕ ವಿಷಯದಲ್ಲಿ ಇಂಡ್ಯಾಪ್ರಭುತ್ವದವರಿಗೇ ಅಧಿಕಾರ ಸ್ವಾತಂತ್ರ್ಯವಿರುವುದರಿಂದ ಅದರಲ್ಲಿ ನಾವು ಸಂಬಂಧಪಟ್ಟುಕೊಳ್ಳಲಾಗುವುದಿಲ್ಲ. ಬೇಕಿದ್ದರೆ ನಿಮ್ಮ ಪ್ರತಿನಿಧಿಗಳು ಭರತಖಂಡಕ್ಕೇ ಹೋಗಿ ಅಲ್ಲಿಯ ಪ್ರಭುತ್ವದವರೊಡನೆ ಮಾತನಾಡುವುದು ಲೇಸು" ಎಂದು ಹೇಳಿದರು. ಅದರ ಮೇಲೆ ಪ್ರತಿನಿಧಿಗಳು ಮೆತ್ತಗಾಗಿ "ನಾವು ನಿಮ್ಮನ್ನು ವಿಧಿಗೆ ವಿರುದ್ಧವಾಗಿ ನಡೆಯಿರೆಂದು ಕೋರುವುದಕ್ಕೆ ಬರಲಿಲ್ಲ. ನಮ್ಮ ವ್ಯಾಪಾರಕ್ಕೆ ಬಾಧೆ ತಟ್ಟಿದರೆ ಇಲ್ಲಿ ಎಷ್ಟೋ ಜನರು ಕೆಲಸವಿಲ್ಲದೆ ತೊಂದರೆ ಪಡಬೇಕಾಗಿಬರುವುದು. ಅದುಕಾರಣ ಸ್ನೇಹಸಂಬಂಧದಿಂದ ಏನಾದರೂ ಅನುಕೂಲಮಾಡಿಕೊಟ್ಟೀರೆಂದು ನಿಮ್ಮ ಬಳಿಗೆ ಬಂದೆವು" ಎಂದು ಶೃತಪಡಿಸಿದರು. ಅದಕ್ಕೆ ಮಿ|| ಮಾಂಟೆಗ್‌ರವರೂ ಸ್ವಲ್ಪ ಕಿವಿಜೋಲುಬಿಟ್ಟು ನಾನು ಇಂಡ್ಯಾ ಸರ್ಕಾರದವರಿಗೆ ಹೇಳಿ ನೋಡಿ ಏನಾದರೂ ಮಾಡುತ್ತೇನೆಂದು ಅಭಯ ಕೊಟ್ಟು ಕಳುಹಿಸಿದರು.

ಬಂಗಾಳಾಪ್ರಾಂತಿಕ ಸಭೆ.

ಬಾರೀ ಸಾಲಿನಲ್ಲಿ ಕಳೆದ ತಾ|| ೨೫ ರಲ್ಲಿ ವಂಗದೇಶದ ಪ್ರಾಂತಿಕ ರಾಜಕೀಯ ಸಭೆಯು ಮ|| ವಿಪಿನಚಂದ್ರಪಾಲರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಅಧ್ಯಕ್ಷರು ಮಾಡಿದ ಭಾಷಣದಲ್ಲಿ—"ಸ್ವರಾಜ್ಯವನ್ನು ಒಂದು ವರ್ಷದೊಳಗೆ ನಾವು ಪಡೆದುಕೊಳ್ಳಬೇಕಾಗಿದ್ದರೆ ಆಂಗ್ಲಪ್ರಭುತ್ವದೊಡನೆ ಕೆಲ ವಿಷಯಗಳಲ್ಲಿ ನಾವು ಸಹಾಯಕರಾಗಿ ನಡೆದು ಕೆಲವನ್ನು ಬಿಟ್ಟು ಹೀಗೆ ಸಾಮರಸ್ಯದಿಂದ ನಾವು ಪಡೆಯಬೇಕೇ ಹೊರತು ಸಾಮರಸ್ಯವೆಂದು ಹೇಳಿದ ಮಾತ್ರಕ್ಕೇ ಕೆಕ್ಕರಿಸಿಕೊಂಡು ದೂರ ಸರಿದು ನಿಂತಿರುವವರಿಗೆ ಸ್ವರಾಜ್ಯವು ಸಾಧ್ಯವಲ್ಲ. ಸಾಮರಸ್ಯವಿದ್ದರೆ ೧ ವರ್ಷದಲ್ಲೋ ಅಥವಾ ಕೆಲವರ್ಷಗಳೊಳಗೋ ಸಿದ್ಧಿಸುವುದು. ಅದಕ್ಕಾಗಿ ನಾವು ಈಗಣ ಸಂಸ್ಕರಣಶಾಸನವನ್ನು ಅನುವರ್ತಿಸಬೇಕು. ಅದು ೧೦ ವರ್ಷಗಳೊಳಗೇ ಎಲ್ಲಶಾಖೆಗಳನ್ನು ಪ್ರಜಾನಿಯುಕ್ತ ಸಭಿಕರಿಂದಲೇ ಕೂಡಿದ ಶಾಸನ ಸಭೆಗಳನ್ನೂ ನಾವು ವಶಪಡಿಸಿಕೊಳ್ಳುವೆವೆಂಬುದನ್ನು ನಮ್ಮ ಕಾರ್ಯನಿರ್ವಾಹಸಾಮರ್ಥ್ಯದಿಂದ ಸ್ಪಷ್ಟಪಡಿಸಬೇಕು. ಇದುವರೆಗೆ ನಾವು ಕಲಿತ ಆಂಗ್ಲಭಾಷೆಯೂ ಆಂಗ್ಲ ನ್ಯಾಯಶಾಸ್ತ್ರವೂ ಆಂಗ್ಲ ಪರಿಪಾಲನೆಯೂ ಪ್ರಜೆಗಳಲ್ಲಿದ್ದ ಅಂತರವನ್ನು ತೊಲಗಿಸಿ ಸಮತ್ವವನ್ನು ಹುಟ್ಟಿಸಿ, ಪ್ರಜಾಪರಿಪಾಲನಭಾವವನ್ನು ಪ್ರೋತ್ಸಾಹಿಸಿತೆಂಬುದು ನಿಜ. ಈ ಲಾಭವುಂಟಾಗಲಿಲ್ಲವೆಂದು ಹೇಳುವುದು ಅನುಚಿತ. ಅಸಹಾಯೋದ್ಯಮದಂಥ ಪ್ರಯತ್ನದಿಂದ ದ್ವೇಷವೂ ಪ್ರತೀಕಾರಚಿಂತೆಯೂ ಉಂಟಾಗುವುದು ನಿಜ. ಪಾಶ್ಚಾತ್ಯ ಸಂಪರ್ಕದಿಂದ ನಮಗುಂಟಾಗಿರುವ ಲಾಭಗಳನ್ನು ನಾವು ಯೋಚಿಸಿಕೊಂಡು ಅವರಲ್ಲಿ ದ್ವೇಷಾದಿ ನೀಚಭಾವಗಳನ್ನು ಪರಿತ್ಯಜಿಸಬೇಕು" ಎಂದು ಹೇಳಿದರು. ಈ ಭಾಷಣವು ಸಭಿಕರಲ್ಲಿ ಹಲವರಿಗೆ ರುಚಿಸಲಿಲ್ಲ. ನಾಗಪುರದ ಸಭೆಯ ತೀರ್ಮಾನಗಳನ್ನನುಸರಿಸಿಯೇ ಸಭಾ ನಿರ್ಧಾರಗಳಾದವು.

ಒಳದೇಶದ ವೃತ್ತಾಂತಗಳು.

ಕೊಡಗಿನ ಜನಸಂಖ್ಯೆಯು ಕಳೆದ ೧೦ ವರ್ಷದಲ್ಲಿ ೧೭೪೯೭೬ ಇದ್ದುದಕ್ಕೆ ಈಗ ೧೬೪೪೪೯ ಆಗಿದೆ. ಎಂದರೆ ೧೦½ ಸಾವಿರ ಪ್ರಜೆ ಕಡಿಮೆಯಾಯಿತು.

ಬೆಂಗಳೂರಿನಲ್ಲಿದ್ದ ವೈಮಾನಿಕ ಸೈನ್ಯದ ೧ ಭಾಗವು ಪಂಜಾಬಿಗೆ ಕಳುಹಿಸಲ್ಪಟ್ಟಿತು. ಮತ್ತೊಂದು ಮೆಸಪೊಟೋಮಿಯಾವಿಗೆ ಹೋಗುವ ಸಂಭವವಿದೆಯಂತೆ.

ಗಂಧದೆಣ್ಣೆಗೆ ತಕ್ಕ ಗಿರಾಕಿಯಿಲ್ಲದಿರುವುದರಿಂದ ಆ ಎಣ್ಣೆಯ ಯಂತ್ರಾಲಯಗಳು ಲಾಭಕಾರಿಗಳಾಗಿಲ್ಲವೆಂಬ ಕಾರಣದಿಂದ ಮುಚ್ಚಲ್ಪಡುವುದರಲ್ಲಿವೆಯೆಂದು ಕೇಳುತ್ತೇವೆ.

ಎಕ್ಸೈಜ್ ಕಮಿಷನರ ಉದ್ಯೋಗಸ್ಥಾನವು ತೆಗೆದುಹಾಕಲ್ಪಟ್ಟು ಆ ಶಾಖೆಯ ಮೇಲ್ವಿಚಾರಣೆಯು ರೆವಿನ್ಯೂ ಕಮಿಷನರಿಗೆ ವಹಿಸಲ್ಪಡುವುದರಲ್ಲಿದೆಯೆಂದು ಕೇಳುತ್ತೇವೆ.

ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ಕೀರ್ತನಸಂಮೇಳನದ ೨ ನೆ ಆವೃತ್ತಿಯು ಈ ವರ್ಷ ರಾಜಧಾನಿಯಲ್ಲಿ ಬರುವ ತಿಂಗಳು ತಾ|| ೮ ರಿಂದ ೧ ವಾರದವರೆಗೆ ನಡೆಯಲು ಏರ್ಪಾಟಾಗಿದೆ.

ತುಮಕೂರು ಡಿಸ್ಟ್ರಿಕ್ಟ್ ಒಕ್ಕಲಿಗರ ಮಹಾಸಭೆಯು ಕಡಬದ ಮ|| ಹುಚ್ಚವೀರೇಗೌಡರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು ತಾ|| ೨೪-೨೫ ರಲ್ಲಿ ಸಿದ್ಧಗಂಗಾಕ್ಷೇತ್ರದಲ್ಲಿ ನಡೆಯುವುದಾಗಿದೆ.

ನಿವೃತ್ತರಾದ ಮ|| ಪಿ. ರಂಗಸ್ವಾಮಯ್ಯಂಗಾರರ ಸ್ಥಾನದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯದ ಡೈರೆಕ್ಟರ್ ಪದವಿಗೆ ಆಕ್ಟಿಂಗಾಗಿ ಮ|| ಬಾಲಸುಂದರಂ ಅಯ್ಯರವರು ನಿಯಮಿಸಲ್ಪಟ್ಟಿದ್ದಾರೆ.

ಡಾ|| ಬಿ. ನಂಜಪ್ಪನವರು ಬೆಂಗಳೂರು ವಿಕ್ಟೋರಿಯಾ ವೈದ್ಯಶಾಲೆಯ ಮೆಡಿಕಲ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ. ಆ ಸ್ಥಲದಲ್ಲಿದ್ದ ಡಾ|| ಡಿ. ಎಸ್. ಪುಟ್ಟಣ್ಣನವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಮೊದಲನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿಯವರು ಮುಂದಣ ತಿಂಗಳಲ್ಲಿ ೩ ತಿಂಗಳ ರಜಾ ಪಡೆದು ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆಂದೂ, ಅವರ ಕೆಲಸವನ್ನು ದಿವಾನರೂ ಇನ್ನಿಬ್ಬರು ಕೌನ್ಸಿಲರುಗಳೂ ಹಂಚಿಕೊಂಡು ನಿರ್ವಹಿಸುವವರಾಗಿದ್ದಾರೆಂದೂ ತಿಳಿಯುತ್ತೇವೆ.

ಡಿಸ್ಟ್ರಿಕ್ಟು ಎಕನಾಮಿಕ್ ಸೂಪರಿಂಟೆಂಡೆಂಟ್ (ಡಿಸ್ಟ್ರಿಕ್ಟು ಬೋರ್ಡ್ ಸೆಕ್ರೆಟರಿ) ಗಳ ಸ್ಥಾನಗಳು ತಪ್ಪಿಸಲ್ಪಟ್ಟು ಅವುಗಳಲ್ಲಿದ್ದ ಉದ್ಯೋಗಿಗಳೆಲ್ಲಾ ತಾ|| ಅಮಲ್ದಾರ್‌ಗಿರಿ ಮೊದಲಾದ ಪೂರ್ವದ ಉದ್ಯೋಗಗಳಿಗೆ ಕಳುಹಿಸಲ್ಪಟ್ಟಿದ್ದಾರೆ.

ನಮ್ಮ ಸಂಸ್ಥಾನದ ಸರ್ಕಾರಕ್ಕೆ ಆದಾಯಕ್ಕಿಂತಲೂ ವ್ಯಯಭಾಗವು ಹೆಚ್ಚಾಗಿ ಕಾರ್ಯನಿರ್ವಾಹವು ಕಷ್ಟತರವಾಗಿರುವುದು. ಬೊಕ್ಕಸದಲ್ಲಿ ತುಂಬಾ ಹಣವಿದ್ದಾಗ ೧ ಕ್ಕೆ ನಾಲ್ಕರಷ್ಟು ಅಂದಾಜಿನ ದೊಡ್ಡದೊಡ್ಡ ಕಾರ್ಯಗಳಿಗೆ ಅನಾಲೋಚಿತವಾಗಿ ಆರಂಭಿಸಿಬಿಟ್ಟಿರುವುದರಿಂದ ಬೊಕ್ಕಸವು ಬರಿದಾಗಿರುವ ಈ ಸಮಯದಲ್ಲಿ ಅವುಗಳಿಗೆಲ್ಲಾ ಹಣವನ್ನು ಒದಗಿಸುವುದು ಅಸಾಧ್ಯವಾಗಿರುವುದು. ಕಳೆದ ವರ್ಷ ೧ ಕೋಟಿ ಸಾಲ ಮಾಡಿದರೂ ಯಾವ ಮೂಲೆಗೂ ಸಾಲಲಿಲ್ಲ. ಆರಂಭಿಸಿ ಸ್ವಲ್ಪ ದೂರ ನಡೆದಿರುವ ಕೆಲಸಗಳೆಲ್ಲಾ ನಿಲ್ಲಿಸಲ್ಪಡುತ್ತಿರುವುವು. ವೆಚ್ಚವನ್ನು ಕಡಿಮೆಮಾಡುವ ಕೆಲಸವೇ ಮುಖ್ಯಕಾರ್ಯವಾಗಿರುವುದು. ಅನೇಕ ಉದ್ಯೋಗಸ್ಥಾನಗಳು ತೆಗೆದುಹಾಕಲ್ಪಡುತ್ತಿರುವುವು. ಪ್ರತಿಯೊಂದು ಶಾಖೆಯಲ್ಲೂ ಸಾಧ್ಯವಾದಷ್ಟು ಸಂಕೋಚವು ಕಲ್ಪಿಸಲ್ಪಡುತ್ತಿರುವುದು.

ವರ್ಷಾರಂಭವು ಸುಮುಖವಾಗಿದೆ. ರಾಜಧಾನಿಯಲ್ಲೂ ಈ ಡಿಸ್ಟ್ರಿಕ್ಟಿನ ಅನೇಕಸ್ಥಲಗಳಲ್ಲೂ ರೇವತಿಯ ಮಳೆಯಿಂದೀಚೆಗೆ ಮಳೆಗಾರಂಭವಾಗಿದೆ. ಕಳೆದ ಗುರುವಾರ ಮಧ್ಯಾಹ್ನವೂ ರಾತ್ರಿಯೂ ರಾಜಧಾನಿಯಲ್ಲಿ ಮಹಾ ವೃಷ್ಟಿಯಾಯಿತು. ಊರಿನ ಎಲ್ಲ ಬೀದಿಗಳಲ್ಲೂ ಜಲಪ್ರವಾಹವು ಹರಿದಿತು. ಕೆರೆಕಟ್ಟೆಗಳೆಲ್ಲಾ ತುಂಬಿ ಹೋದುವು. ಕಳೆದ ವರ್ಷದಲ್ಲಾದ ಎಲ್ಲ ಮಳೆಗಳಿಂದಲೂ ಕೆರೆಗಳಿಗೆ ಬಾರದಿದ್ದಷ್ಟು ನೀರು ಇದೊಂದು ಮಳೆಯಿಂದ ರಾಜಧಾನಿಯ ದೊಡ್ಡಕೆರೆ ಕಾರಂಜಿಕೆರೆ ಮೊದಲಾದುವುಗಳಿಗೆ ಬಂದಿದೆ. ಇನ್ನೊಂದು ಮಳೆಗೆ ಕೋಡಿಬೀಳುವಂತಾಗಿವೆ. ಅದೊಂದು ದಿನದಲ್ಲಿ ೫.೨ ಇಂಚು ಮಳೆ ಬಿದ್ದಿದೆ. ವರ್ಷವು ನಾಮದಲ್ಲಿ ದುರ್ಮತಿಯಾಗಿದ್ದರೂ ವೃಷ್ಟಿಸಂಬಂಧದಲ್ಲಿ ಸುಮುಖವಾಗಿರುವುದು ಸಂತೋಷಪ್ರದವು. ಈ ವಿಪರೀತ ಮಳೆಯಿಂದ ರಾಜಧಾನಿಯ ಕೆಲಭಾಗಗಳಲ್ಲಿ ನೀರಿನ ಪ್ರವಾಹವು ಮನೆಗಳಿಗೆ ನುಗ್ಗಿದುದರಿಂದ ಗೋಡೆಗಳು ಬಿದ್ದುಹೋಗಿ ಬಹಳ ಪದಾರ್ಥಗಳ ನಷ್ಟವಾಯಿತು; ಕೆಲವರಿಗೆ ಕೊಂಚ ಪೆಟ್ಟು ಬಿದ್ದಿರುವುದು. ದೀವಟಿಗೆ ಬೀದಿಯಲ್ಲಿರುವ ದೊಡ್ಡಕಾಲುವೆಯಲ್ಲಿ ಒಂದು ದನ ಕೊಚ್ಚಿಹೋಯಿತು. ಅದೇ ದಿವಸ ಬೆಂಗಳೂರಿನಲ್ಲೂ ೩ ಅಂಗುಲದವರೆಗೂ ಮಳೆಯಾಗಿ ದಂಡಿನಲ್ಲಿ ಒಂದು ಮನೆ ಬಿದ್ದುಹೋಗಿ ಒಂದು ಹುಡುಗಿಯು ಸತ್ತುಹೋಯಿತಂತೆ.

ವರ್ತಮಾನಸಂಗ್ರಹ.

ಕೈಜರರ ಪತ್ನಿಯವರು ಮೃತರಾದರೆಂದು ಸುದ್ದಿ ಬಂದಿದೆ.

ಕಳೆದ ೬೩ ವರ್ಷಗಳಿಂದಲೂ ಆಗದಿದ್ದ ಸೂರ್ಯಗ್ರಹಣವು ಇಂಗ್ಲಂಡಿನಲ್ಲಿ ಕಳೆದ ತಾ|| ೮ರಲ್ಲಿ ಆಯಿತು.

ಅಮೇರಿಕನ್ನರು ಜರ್ಮನರೊಡನೆ ಪ್ರತ್ಯೇಕ ಸಂಧಿಯೊಂದನ್ನು ಮಾಡಿಕೊಳ್ಳಲಿಷ್ಟಪಟ್ಟವರಾಗಿದ್ದಾರೆ. ಯೂರೋಪಿನ ರಾಜ್ಯನೀತಿಯು ಪೂರ್ವೇತಿಪೂರ್ವಕ್ಕೇ ಬರುತ್ತಲಿದೆ.

ಮಿತ್ರಮಂಡಲಿಯವರು ಸೂಚಿಸಿರುವಷ್ಟು ನಷ್ಟಪರಿಹಾರವನ್ನು ಕೊಡಲು ಜರ್ಮನರು ಸಮ್ಮತಿಸಿರುವರಂತೆ. ಆದರೆ ಕೆಲ ನಿಬಂಧನೆಗಳ ವಿಷಯದಲ್ಲಿ ಮಾತ್ರ ಚರ್ಚೆ ನಡೆಯಬೇಕಾಗಿದೆಯಂತೆ.

ಐರ್ಲೆಂಡಿನಲ್ಲಿ ಪ್ರಾಟೆಸ್ಟೆಂಟ್ ಕೆಥೋಲಿಕ್ ಭೇದದ ಇಬ್ಬಗದ ಪ್ರಜೆಗಳಿರುವ ಬೇರೆಬೇರೆ ಜಾಗಕ್ಕೆ ಬೇರೆಬೇರೆ ಪಾರ್ಲಿಮೆಂಟನ್ನು ಕೊಡುವ ಏರ್ಪಾಡು ನಡೆದಿದೆ. ಆದರೂ ಪೂರ್ಣ ಸ್ವರಾಜ್ಯಪ್ರಾಪ್ತಿಯಾದಲ್ಲದೆ ಅಲ್ಲಿಯ ಸಿನ್‌ಫಿನಿಯರು ತೃಪ್ತರಾಗುವಂತೆ ತೋರುವುದಿಲ್ಲ.

ಪಾಟ್ನಾ ವಿಶ್ವವಿದ್ಯಾಲಯದ ಸೆನೇಟಿನವರು ಸಭೆಗೂಡಿ ಏರ್ಪಡಿಸಿದ್ದ ಸಂಘದವರು ಸ್ತ್ರೀವಿದ್ಯಾ ವಿಧಾನವನ್ನು ಕುರಿತು ಒಂದು ವರದಿಯನ್ನು ಮಾಡಿರುವರು. ಸ್ತ್ರೀಯರಿಗೆ ವಿದ್ಯಾ ವಿಧಾನವು ಪ್ರತ್ಯೇಕವಾಗಿರಬೇಕೆಂದೂ ಅದಕ್ಕಾಗಿ ಒಂದು ಸಂಘವಿರಬೇಕೆಂದೂ ತಿಳಿಯಿಸಿರುವರು.

ಭರತಖಂಡದ ಪತ್ರಿಕಾ ಶಾಸನವನ್ನೂ ರೌಲೆಟ್ ಶಾಸನವನ್ನೂ ಆಂಗ್ಲಮಂತ್ರಿಮಂಡಲದವರು ತೆಗೆದುಹಾಕಿಬಿಡಲು ತೀರ್ಮಾನಿಸಿರುವರೆಂದು ಕಲ್ಕತ್ತಾದ ವಸುಮತಿ ಪತ್ರಿಕೆಯು ಹೇಳುತ್ತದೆ. ನಡೆದರೆ ಸಂತೋಷವೇ ಸರಿ. ಆದರೆ ಹೀಗೆಮಾಡುವುದರಿಂದ ಭರತಖಂಡದ ಅಸಹಾಯದ ಚಳವಳಿಯು ನಿಲ್ಲುವುದೆಂದು ಅವರು ಭಾವಿಸಿದ್ದರೆ ಅದು ಬರೀಭ್ರಮೆ.

ಮದರಾಸು ಅಧಿಪತ್ಯದಲ್ಲಿ ಅಲ್ಲಿಯ ಸ್ವದೇಶ ಸಂಸ್ಥಾನಗಳ ಪ್ರಜಾಸಂಖ್ಯೆಯೂ ಸೇರಿ ಕಳೆದ ೧೯೧೧ ನೆ ವರ್ಷದ ಸೆನ್ಸಸ್ಸಿನ ಪ್ರಕಾರ ೪೬೨೧೬೨೪೫ ಜನಸಂಖ್ಯೆಯಿದ್ದಿತು. ಈ ೧೯೨೧ ನೆ ಸೆನ್ಸಸ್ಸಿನ ಪ್ರಕಾರ ಆ ಸಂಖ್ಯೆಯು ೪೭೮೬೮೩೨೮ ಆಗಿರುತ್ತದೆ. ಎಂದರೆ ೧೦ ವರ್ಷಕಾಲದಲ್ಲಿ ೧೬½ ಲಕ್ಷದಷ್ಟು ಮಾತ್ರ ಜನಸಂಖ್ಯೆ ಹೆಚ್ಚಿದಂತಾಯಿತು.

ಅಮೇರಿಕಾದವರು ಒಂದು ತರದ ವಿಷದ್ರಾವಕವನ್ನು ನಿರ್ಮಿಸಿದ್ದಾರೆ. ಇದನ್ನು ತುಂಬಿದ ಚರ್ಮದ ಚೀಲಗಳನ್ನು ವಿಮಾನಗಳಲ್ಲಿಟ್ಟುಕೊಂಡು ಆಕಾಶದಲ್ಲಿ ಹೋಗುತ್ತ ದ್ರಾವಕವನ್ನು ತೊಟ್ಟುತೊಟ್ಟಾಗಿ ಸುರಿಸಿಕೊಂಡು ಹೋದರೆ ಅವು ಯಾರಮೇಲೆ ಬೀಳುವುವೋ ಅವರೆಲ್ಲಾ ಕೂಡಲೇ ಸಾಯುವರಂತೆ! ಪಾಶ್ಚಾತ್ಯರು ಕಲಿತ ವಿದ್ಯೆಯನ್ನು ಹೀಗೆ ಸಾರ್ಥಕಪಡಿಸಿಕೊಳ್ಳುತ್ತಿರಬಹುದು!

ಶಾಸನಸಭೆ ಮೊದಲಾದುವುಗಳ ಸಭಿಕರನ್ನು ಆರಿಸುವಾಗ್ಗೆ ಓಟನ್ನು ಕೊಡುವ ಅಧಿಕಾರವು ಸ್ತ್ರೀಯರಿಗೂ ಇರುವಂತೆ ಮಾಡಬೇಕೆಂಬ ತೀರ್ಮಾನವು ಮದರಾಸು ನಿಯಮನಿರ್ಮಾಣ ಸಭೆಯಲ್ಲಿ ಚರ್ಚೆಗೆ ಬಂದಿತು. ಮಹಮ್ಮದೀಯ ಕ್ರೈಸ್ತಮತಗಳ ಪ್ರತಿನಿಧಿಗಳು ಇದಕ್ಕೆ ವಿರೋಧವನ್ನು ತೋರಿಸಿದರು. ಸಭಿಕರಲ್ಲಿ ಹೆಚ್ಚುಜನರು ತೀರ್ಮಾನಕ್ಕೆ ಅನುಮೋದಿಸಿದುದರಿಂದ ಅಂಗೀಕೃತವಾಯಿತು.

ಸ್ಮರ್ನಾ ಪ್ರಾಂತದಲ್ಲಿ ಗ್ರೀಕರಿಗೂ ತುರುಕರಿಗೂ ಮಹಾಯುದ್ಧವಾಗುತ್ತಿದೆ. ಮೊನ್ನೆ ವಾರದಲ್ಲಿ ತುರುಕರ ಜಯದ ವಾರ್ತೆಗಳು ಬಂದಿದ್ದುವು. ಕಳೆದ ವಾರದಲ್ಲಿ ಗ್ರೀಕರ ಜಯದ ವಾರ್ತೆಗಳು ಬಂದಿವೆ. ಗ್ರೀಕ್ ಪ್ರಭುವು ತನ್ನ ಇಬ್ಬರು ಸಹೋದರರ ಸಮೇತ ತಾನೇ ರಣರಂಗಕ್ಕೆ ಬಂದಿದ್ದನಂತೆ. ಸಹೋದರರಲ್ಲೊಬ್ಬನು ಗಾಯಗೊಂಡು ತುರುಕರ ವಶದಲ್ಲಿ ಮೃತನಾದನೆಂಬ ಸುದ್ದಿಯಿದೆ.

ಲಾಲಾ ಲಜಪತರಾಯರು ಬೊಂಬಾಯಿಯಲ್ಲಿ ಒಂದು ಉಪನ್ಯಾಸವನ್ನು ಮಾಡಿ, ಮಿತವಾದಿಗಳನ್ನು 'ದೇಶದ್ರೋಹಿಗಳೆಂದು' ನಿಂದಿಸಿದರು. ಆ ಮಿತವಾದಿ ಪ್ರಮುಖರಲ್ಲೊಬ್ಬರಾದ ಶ್ರೀನಿವಾಸಶಾಸ್ತ್ರಿಗಳು ಪ್ರಯಾಗದಲ್ಲಿ ಲೀಡರ್ ಪತ್ರಿಕಾಪ್ರತಿನಿಧಿಯೊಡನೆ ಸಂಭಾಷಿಸುವಾಗ್ಗೆ ಸಹಾಯನಿರಾಕರಣವನ್ನು ಜರಿದು ಅದರಿಂದ ದೇಶಕ್ಕೆ ಆಗುವ ಅನರ್ಥವನ್ನೂ ಆ ಯತ್ನವು ಈಗ್ಗೆ ಅಪಜಯಗೊಂಡಿರುವುದನ್ನೂ ಪ್ರತಿಪಾದಿಸಿದರು.

ಕಲಕತ್ತಾದಲ್ಲಿ ಯಾವದ್ಭಾರತ ಮಾರ್ವಾಡಿಜನರ ಮಹಾಸಭೆಯು ಕಳೆದ ತಾ|| ೧೦-೧೧ ರಲ್ಲಿ ಕೂಡಿ ತಮ್ಮ ಬಾಲಬಾಲಿಕೆಯರಿಗೆ ವ್ಯಾಪಾರ ಕೈಗಾರಿಕೆಗಳ ವಿದ್ಯೆಯನ್ನು ಚೆನ್ನಾಗಿ ಕಲಿಸಬೇಕೆಂದೂ ಹೆಣ್ಣುಹುಡುಗಿಯರಿಗೆ ೧೨ ವರ್ಷ ತುಂಬುವವರೆಗೂ, ಹುಡುಗರಿಗೆ ೧೬ ವರ್ಷ ತುಂಬುವವರೆಗೂ ಮದುವೆಮಾಡಕೂಡದೆಂದೂ, ೪೦ ವರ್ಷ ತುಂಬಿದಗಂಡುಸರು ದ್ವಿತೀಯವಿವಾಹ ಮಾಡಿಕೊಳ್ಳಕೂಡದೆಂದೂ ನಿರ್ಧರಿಸಿದರು.

ಯಾವದ್ಭಾರತ ರಾಷ್ಟ್ರೀಯ ಮಹಾಸಭಾಸ್ಥಾಯಿ ಸಂಘದ ಅಧಿವೇಶನವು ಬೆಜವಾಡದಲ್ಲಿ ನಡೆದಿತು. ಮ|| ಗಾಂಧಿಯವರು ಅಲಿಸೋದರರು ಲಜಪತರಾಯರು ಸಿ. ಆರ್. ದಾಸರೇ ಮೊದಲಾದ ಪ್ರಮುಖರೂ ಲಕ್ಷಾಂತರ ಆಂಧ್ರದೇಶ ಪ್ರಜೆಗಳೂ ಸೇರಿದ್ದರು. ಸ್ವರಾಜ್ಯಸಂಪಾದನೆಗಾಗಿ ಬರುವ ಜೂನ್ ತಿಂಗಳೊಳಗಾಗಿ ತಿಲಕ ಫಂಡಿಗೆ ೧ ಕೋಟಿ ರೂ. ಗಳನ್ನೂ, ೧ ಕೋಟಿ ಮಂದಿ ಕಾಂಗ್ರೆಸ್ ಮೆಂಬರುಗಳನ್ನೂ ಕೂಡಿಸಿ, ದೇಶದಲ್ಲೆಲ್ಲಾ ೨೦ ಲಕ್ಷ ನೂಲಿನ ರಾಟೆಗಳನ್ನು ಸ್ಥಾಪಿಸುವಂತೆ ಮಾಡಬೇಕೆಂಬ ಮುಖ್ಯವಾದ ನಿರ್ಧಾರವು ಮಾಡಲ್ಪಟ್ಟಿತು.

ಈಗ ನಡೆದ ಜನಪರಿಗಣಿತಿಯ ಪ್ರಕಾರ ಭರತಖಂಡದಲ್ಲೆಲ್ಲಾ ಪ್ರಜಾಸಂಖ್ಯೆಯು ೩೧೯೦೦೦೦೦೦ ಕ್ಕೆ ಸ್ವಲ್ಪ ಹೆಚ್ಚಾಗಿಯೇ ಇದೆ. ೧೯೧೧ ನೆ ವರ್ಷದಲ್ಲಿ ೩೧೫೦೦೦೦೦೦ ಪ್ರಜೆಯಿದ್ದಿತು. ಇದನ್ನು ನೋಡಲಾಗಿ ಕಳೆದ ೧೦ ವರ್ಷ ಕಾಲದಲ್ಲಿ ಭರತಖಂಡದೊಳಗೆ ೪೦ ಲಕ್ಷದಷ್ಟು ಜನರು ಮಾತ್ರವೇ ಹೆಚ್ಚಿದಂತಾಯಿತು. ಮೂರನೆ ವರ್ಷದಲ್ಲಿ ಇನ್‌ಫ್ಲುಯೆನ್‌ಜಾ ರೋಗವೊಂದೇ ೬೦ ಲಕ್ಷ ಜನಗಳನ್ನು ಆಹುತಿತೆಗೆದುಕೊಂಡಿತು. ಯುದ್ಧ, ಕ್ಷಾಮ, ರೋಗ, ಇವುಗಳಿಂದೆಲ್ಲಾ ಜನನಾಶವು ಹೆಚ್ಚಿದುದರಿಂದಲೂ ದಾರಿದ್ರ್ಯಪೀಡೆಯಿಂದಲೂ ಜನಸಮೃದ್ಧಿಯು ಕಡಿಮೆಯಾಗಿರುವುದು. ಮದ್ರಾಸು, ಬಂಗಾಳ, ಪಂಜಾಬು, ಬರ್ಮಾ, ಅಸ್ಸಾಂ, ಪ್ರಾಂತಗಳಲ್ಲಿ ಮೊದಲಿಗಿಂತ ಈಗ ಸ್ವಲ್ಪ ಜನಸಂಖ್ಯೆ ವೃದ್ಧಿಯಾಗಿದೆ. ಮಧ್ಯಪ್ರಾಂತದಲ್ಲಿ ಇದ್ದಷ್ಟೇ ಇದೆ. ಬೊಂಬಾಯಿ ಬೇಹಾರ್, ಒರಿಸ್ಸಾ, ಸಂಯುಕ್ತರಾಷ್ಟ್ರದ ಪ್ರಾಂತಗಳಲ್ಲೆಲ್ಲಾ ಜನಸಂಖ್ಯೆಯು ಪೂರ್ವಕ್ಕಿಂತ ತಗ್ಗಿಹೋಯಿತು. ಬರೋಡ, ಮೈಸೂರು, ಕಾಶ್ಮೀರದೇಶಗಳಲ್ಲೂ, ಮದರಾಸು, ಬಂಗಾಳ, ಪಂಜಾಬು ಈ ಪ್ರಾಂತಗಳಲ್ಲಿರುವ ಸ್ವದೇಶೀಯ ಸಂಸ್ಥಾನಗಳಲ್ಲೂ ಜನಸಂಖ್ಯೆಯು ಹೆಚ್ಚಿತು. ದೇಶೀಯ ಸಂಸ್ಥಾನಗಳೊಳಗೆಲ್ಲಾ ಹೈದರಾಬಾದು, ರಾಜಪುತ್ರಸ್ಥಾನ, ಮಧ್ಯಪ್ರಾಂತದ ಸಂಸ್ಥಾನಗಳು ಇವುಗಳಲ್ಲಿ ಮಾತ್ರ ಜನಸಂಖ್ಯೆಯು ಕಡಿಮೆಯಾಗಿಹೋಯಿತು.

ಸೀಮೆಯಲ್ಲಿ ಕಲ್ಲಿದ್ದಲ ಗಣಿಗಳ ಕೂಲಿಕಾರ ಜನರ ಮುಷ್ಕರದಿಂದ ಮಹಾನರ್ಥವಾಗುವ ಸೂಚನೆಗಳುಂಟಾಗಿವೆ. ಯುದ್ಧಕಾಲದಲ್ಲಿ ಅಲ್ಲಿಯ ಕಲ್ಲಿದ್ದಲ ಗಣಿಗಳನ್ನೆಲ್ಲಾ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಕೂಲಿಕಾರರಿಗೆಲ್ಲಾ ಸ್ವಲ್ಪ ಹೆಚ್ಚಾಗಿಯೇ ಕೂಲಿಗಳನ್ನು ಕೊಡುತ್ತಿದ್ದರು. ಈಗ ಅವನ್ನೆಲ್ಲಾ ಗಣಿಗಳ ಯಜಮಾನರಿಗೇ ಸರ್ಕಾರದವರು ವಹಿಸಿಕೊಟ್ಟರು. ಆ ಯಜಮಾನರುಗಳು ಕೂಲಿ ದರಗಳನ್ನು ಯುದ್ಧಕ್ಕೆ ಪೂರ್ವದಲ್ಲಿದ್ದ ಸ್ಥಿತಿಗೆ ಇಳಿಯಿಸಿದರು. ಇದರ ಮೇಲೆ ೧೦-೧೨ ಲಕ್ಷ ಗಣಿಗಳ ಕೂಲಿ ಜನರು ಮುಷ್ಕರ ಹಿಡಿದು ಕೆಲಸವನ್ನು ಬಿಟ್ಟರು. ಮುಂದೆ ನಿಮ್ಮ ಗತಿಯೂ ಹೀಗೆಯೇ ಆಗುವುದೆಂದು ಇವರುಗಳು ರೈಲ್ವೆ ಕೆಲಸಗಾರರನ್ನೂ, ಹಡಗುಗಳಿಗೆ ಸಾಮಾನು ಸಾಗಿಸುವ ಕೂಲಿಕಾರರನ್ನೂ ಬೋಧಿಸಿ ಅವರುಗಳನ್ನು ಕೆಲಸ ಬಿಡುವಂತೆ ಮಾಡುತ್ತಿದ್ದಾರೆ. ಸೀಮೆಯಲ್ಲಿ ಸಕಲ ವ್ಯಾಪಾರಕ್ಕೂ ಕಲ್ಲಿದ್ದಲೇ ಮುಖ್ಯಾಧಾರವಾಗಿರುವುದರಿಂದ ಅದರ ಸಂಬಂಧದಲ್ಲಿ ದೊಡ್ಡ ವಿಘ್ನವು ಬಂದಿರುವುದರಿಂದ ಇದಕ್ಕಾಗಿಯೇ ಪಾರ್ಲಿಮೆಂಟನ್ನು ಕರೆದು ಅದರಲ್ಲಿ ಸಭಿಕರು ಕೂಲಿಕಾರ ಪ್ರತಿನಿಧಿಗಳೊಡನೆ ಚರ್ಚಿಸಿ ಹೇಗಾದರೂ ಸಮಾಧಾನಪಡಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಪ್ರಭುತ್ವದವರು ಸೇನಾದರ್ಪದಿಂದಲಾದರೂ ಮುಷ್ಕರವನ್ನು ಶಾಂತಿಪಡಿಸಲು ಕೃತನಿಶ್ಚಯವಾಗಿರುವಂತೆ ಕಾಣುತ್ತಿದೆ. ಈ ನಿಶ್ಚಯವು ಮಹಾ ಸಂಕ್ಷೋಭಕ್ಕೆ ಹೇತುವಾಗುವುದೋ ಏನೋ ತಿಳಿಯಲಿಲ್ಲ.

1921 ನೆಯ ಏಪ್ರಿಲ್ ತಾ|| 18 ರಿಂದ ಹೊಸದಾಗಿ ನಿಗದಿಯಾಗಿರುವ ಅಂಚೆಯ ವೆಚ್ಚವು.

ಕಾಗದಗಳು.

½ ತೊಲ ತೂಕದೊಳಗಿರುವ ಕಾಗದಕ್ಕೆ	½ ಆಣೆ.
½ ತೊಲದಮೇಲೆ 1 ತೊಲದೊಳಗಿರುವ ಕಾಗದಕ್ಕೆ	¾ ಆಣೆ.
1 ತೊಲದಮೇಲೆ 2½ ತೊಲದೊಳಗಿರುವ ,,	1 ಆಣೆ.
ಅನಂತರ ಪ್ರತಿ 2½ ತೊಲ ಅಥವಾ ಅದರ ಭಿನ್ನಾಂಶಕ್ಕೆ	1 ಆಣೆ.

ಬುಕ್ಕು ಮತ್ತು ಮಾದ್ರಿಭಾಂಗಿ.

ಪ್ರತಿ 5 ತೊಲ ಅಥವಾ ಅದರ ಭಿನ್ನಾಂಶತೂಕವಿರುವುದಕ್ಕೆ	½ ಆಣೆ.

ರಿಜಿಸ್ಟರ್ಡ್ ವರ್ತಮಾನ ಪತ್ರಿಕೆಗಳು.

8 ತೊಲ ತೂಕದೊಳಗಿರುವ ವರ್ತಮಾನಪತ್ರಿಕೆಗೆ.	¼ ಆಣೆ.
8 ತೊಲದಮೇಲೆ 20 ತೊಲದೊಳಗಿರುವುದಕ್ಕೆ	½ ಆಣೆ.
ಅನಂತರ ಪ್ರತಿ 20 ತೊಲ ಅಥವಾ ಅದರ ಭಿನ್ನಾಂಶದ ತೂಕವಿರುವುದಕ್ಕೆ	½ ಆಣೆ.

ವ್ಯಾಲು ಪೇಯಿಬಲ್ ದರ.

ಮೊಬಲಗು 10 ರೂ. ನೊಳಗಿದ್ದರೆ	2 ಆಣೆ.
10 ರೂ ಮೇಲೆ 25 ರೂ. ನೊಳಗಿದ್ದರೆ	4 ಆಣೆ.
25 ರೂ. ಗೆ ಮಿಾರಿದ್ದರೆ ಪ್ರತಿ 25 ಕ್ಕೂ ಅದರ ಭಿನ್ನಾಂಶಕ್ಕೂ	4 ಆಣೆ.
ಭಿನ್ನಾಂಶಮಾತ್ರ 10 ರೂ. ಗೆ ಮಿಾರದಿದ್ದರೆ	2 ಆಣೆ.

ಮನಿಯಾರ್ಡರ್ ಕಮಿಷನ್ನೂ ಮೇಲಿನಂತೆಯೇ.

ಇದು ಹೊಸಬದಲಾವಣೆಯಾಗಿರುವ ಕಾರಣ, ಜನರೂ ಒಂದುವೇಳೆ ಕಾಣದೆ ಪೂರ್ವದ ದರದಂತೆಯೇ ಸ್ಟಾಂಪುಗಳನ್ನು ಅಂಟಿಸಿದ್ದರೂ, ಕಡಿಮೆಯಾಗಿದ್ದಷ್ಟನ್ನು ಮಾತ್ರ ವಸೂಲ್ಮಾಡಿಕೊಳ್ಳುವುದಲ್ಲದೆ ದ್ವಿಗುಣವಾಗಿ ವಸೂಲ್ಮಾಡಿಕೊಳ್ಳದಿರುವ ಸೌಲಭ್ಯವನ್ನು ಏಪ್ರಿಲ್ ತಾ|| 18 ರಿಂದ 1 ತಿಂಗಳವರೆಗೆ ಮಾತ್ರ ಕೊಟ್ಟಿರುವುದಾಗಿ ಇಂಡಿಯಾ ಸರ್ಕಾರದವರಿಂದ ಪ್ರಕಟಿತವಾಗಿರುವುದು.

ಉಪಯುಕ್ತ ವಿಷಯ.

ಕಜ್ಜಿಗೆ ಔಷಧ.

ವೀಳ್ಯದೆಲೆ 300, ಗಂಧಕ 3 ತೊಲ, ಪಾದರಸ ಕಾಲುತೊಲ (¼ ತೊಲ) 300 ವೀಳ್ಯದೆಲೆಗಳನ್ನು ಮೊದಲು ಅರೆದುಕೊಂಡು ಗಂಧಕವನ್ನು ನುಣುಪಾಗಿ ಅರೆದನಂತರ ಇವೆರಡನ್ನೂ ಕಲ್ವತ್ತಿನಲ್ಲಿ ಸೇರಿಸಿ ಚೆನ್ನಾಗಿ ಅರೆದು ಪಾದರಸವನ್ನು ಇದರಜೊತೆಯಲ್ಲಿ ಸೇರಿಸಿ ಇವೆಲ್ಲವನ್ನೂ ಪುನಃ ಅರೆದು ಸಿದ್ಧಪಡಿಸಿಕೊಂಡು ಒಂದು ಮಣ್ಣಿನಪಾತ್ರೆಯಲ್ಲಿ ಶೇಖರಿಸಿಟ್ಟು ಅದರ ಹದಕ್ಕೆ ಸರಿಯಾಗಿ ಕೊಬರಿ ಎಣ್ಣೆಯನ್ನು ಮಿಶ್ರಮಾಡಿ ಇಟ್ಟುಕೊಳ್ಳತಕ್ಕದ್ದು. ದದ್ದುಕಜ್ಜಿ, ತುರಿಕಜ್ಜಿ, ತಲೆಯಮೇಲಣ ಹುಣ್ಣು ಮತ್ತು ತಲೆಯಲ್ಲಿರುವ ಹೇನಿಗೂ ಸಹ ಈ ಔಷಧವನ್ನು ಉಪಯೋಗಿಸತಕ್ಕದ್ದು.

ಔಷಧವನ್ನು ಉಪಯೋಗಿಸುವ ಕ್ರಮ.

ಮೇಲಿನಂತೆ ಸಿದ್ಧಪಡಿಸಿಕೊಂಡಿರುವ ಈ ಮುಲಾಮನ್ನು ಪ್ರಾತಃಕಾಲ ಹಚ್ಚಿಕೊಂಡು ಮಧ್ಯಾಹ್ನ ಹತ್ತುಹನ್ನೆರಡು ಘಂಟೆಯವರೆಗೂ ಬಿಸಿಲಿನಲ್ಲಿದ್ದು ತರುವಾಯ ಸ್ನಾನಮಾಡತಕ್ಕದ್ದು. ರಾತ್ರಿವೇಳೆಯಲ್ಲಿ ಔಷಧದಮೇಲ್ಗಡೆ ನಿಂತಿರುವ ತಿಳಿಯಾದ ಎಣ್ಣೆಯನ್ನು ಸವರಬೇಕು. ಕಜ್ಜಿಯು ವಾಸಿಯಾದಮೇಲೂ ಮೂರುದಿವಸಗಳವರೆಗೆ ಈ ಔಷಧವನ್ನು ಹಚ್ಚುತ್ತಿರಬೇಕು. ತುರುಕಜ್ಜಿಯಾಗಿದ್ದಲ್ಲಿ ಅವುಗಳನ್ನ ಸೂಜಿಯಿಂದ ಚುಚ್ಚಿ, ಕೀವನ್ನ ಹೊರಗೆಹೊರಡಿಸಿದ ನಂತರ ಈ ಮುಲಾಮನ್ನ ಹಚ್ಚಬೇಕು. ಕೈಬೆರಳುಗಳ ಸಂದುಗಳಲ್ಲಿರುವ ಸಣ್ಣಸಣ್ಣ ಬೊಕ್ಕೆಗಳು ಒಂದೂಕಾಣದಂತೆ ನಿರ್ಮೂಲವಾಗುವ ಪರ್ಯಂತರವೂ ಈ ಔಷಧವನ್ನ ಹಚ್ಚುತ್ತಲೇ ಇರಬೇಕು.

V. MUTTUSAMY DAS,
District Health Officer, Mysore District.

ಸ್ವೀಕಾರ.

ಕೈ. ವೈ. ವೀರಸಂಗಪ್ಪನವರ ಅಗ್ರತಾಂಬೂಲದಬಗೆಗೆ ನರಸಿಂಹರಾಜಪುರದ ಸಾಹುಕಾರ್ ಎಂ. ಶಾಂತಪ್ಪಶೆಟ್ಟರವರು ತಮ್ಮ ತಮ್ಮನ ಪುತ್ರಿ ಚಿ|| ಸೌ|| ಅನ್ನಪೂರ್ಣಮ್ಮನನ್ನು ಹೊನ್ನಾಳಿ ಮ|| ನಂದಿ ರಾಚೋಟಪ್ಪನವರ ಪುತ್ರ ಗುರುಬಸಪ್ಪನಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ೧ ರೂ. (೨) ಹೊನ್ನುಡಿಕೆ ಮ|| ಹೊನ್ನಗಂಗಪ್ಪನವರ ಮಗಳು ಚಿ|| ಸೌ|| ದೊಡ್ಡಹೊನ್ನಮ್ಮನನ್ನು ಅದೇ ಊರು ಅರಳಲ್ಲೂಡು ಮಠದ ಸೋಮಯ್ಯನವರ ಮಗ ಚೆನ್ನವೀರಪ್ಪಶಾಸ್ತ್ರಿಗಳಿಗೆ ಕೊಟ್ಟು ನಡಿಸಿದ ವಿವಾಹದಲ್ಲಿ ಉಭಯರಿಂದ ಮ|| ಹೊನ್ನುಡಿಕೆಯ ಹೊನ್ನಶೆಟ್ಟಪ್ಪನವರ ಮೂಲಕ ೧ ರೂ. (೩) ಹುಮನಾಬಾದು ಪೋಸ್ಟ್ ಚಿಡಗುಪ್ಪ ಗ್ರಾಮದಲ್ಲಿ ಉಸ್ತಾನಿಯಾ ಸ್ಕೂಲು ಸ್ಥಾಪನಮಹೋತ್ಸವದಲ್ಲಿ ತೆಗೆದ ೨ ರೂ ಚಿಡಗುಪ್ಪಿ ಮ|| ವೀರಪ್ಪ ಬೀಡಪ್ಪನವರ ಮೂಲಕ ಸಂದಿರುತ್ತವೆ.

ಪತ್ರವ್ಯವಹಾರ.

ಫಾಲ್ಗುಣವದ್ಯಪ್ರತಿಪದೆಯ ಶುಭಮುಹೂರ್ತದಲ್ಲಿ ಶ್ರೀಮನ್ನಿರಂಜನ ಹಾಲಕೇರಿಯ ಅನ್ನದಾನ ಸ್ವಾಮಿಗಳವರ ಹಸ್ತದಿಂದ ಶ್ರೀ ವಿಜಯಮಹಾಂತೇಶ ಎ. ವಿ. ಸ್ಕೂಲು ತೆರೆಯುವ ಸಮಾರಂಭವು ಮಾಡಲ್ಪಟ್ಟಿತು.

ಚೇರ್ಮನ್ ಶ್ರೀ ಮಹಾಂತೇಶ ಸ್ಕೂಲ ಬೋರ್ಡ ಕಮಿಟಿ.

ಲಗ್ನ ಮುಹೂರ್ತಗಳು.

ಶಕೆ ೧೮೪೩ ನೇ ದುರ್ಮತಿನಾಮ ಸಂವತ್ಸರದ ವೈಶಾಖ ಜ್ಯೇಷ್ಠಮಾಸಗಳಲ್ಲಿ ವಿವಾಹ ಶುಭಮುಹೂರ್ತಗಳು ಇದ್ದು, ಗಂಗಾನದಿಯ ಪ್ರದೇಶದವರ ವಿನಾ ಸರ್ವಭಾಗದವರಿಗೂ ಶಾಸ್ತ್ರವತ್ ಬಲವಾದ ವಿವಾಹಮುಹೂರ್ತಗಳೂ ಸಿಗುತ್ತವೆ.

ವೇ|| ಸಿದ್ಧಾಂತಿಗಳು ಹಿರೇಮಠ,
ಹೀರೆಕೆರೂರ ಜಿಲ್ಲಾ ಧಾರವಾಡ.

ರಥೋತ್ಸವ.

ಚಿತ್ರದುರ್ಗದ ತಾಲ್ಲೂಕು ಹಿರೇಗುಂಟನೂರಲ್ಲಿ ಶ್ರೀದ್ಯಾಮಲಾಂಬಿಕಾ ರಥೋತ್ಸವವನ್ನು ದುರ್ಮತಿಸಂವತ್ಸರದ ಚೈತ್ರಶುದ್ಧ ೧೪ (೨೧-೪-೨೧) ನೇ ಗುರುವಾರ ಮಾಮೂಲು ಪದ್ಧತಿ ಮೇರೆ ನಡೆಸಲ್ಪಡುತ್ತದೆ. ಆ ಕಾಲಕ್ಕೆ ಭಕ್ತಾದಿಗಳು ಬಂದು ದೇವತಾದರ್ಶನಾನಂದವನ್ನು ಹೊಂದಬೇಕಾಗಿ ಈ ಮೂಲಕ ತಿಳಿಸಿದೆ. ಮಾಮೂಲ್ ಮೇರೆ ಇತರೆ ಉತ್ಸವಗಳೂ ಕುಸ್ತಿಗಳು ಸಹ ನಡೆಯುತ್ತವೆ. ಈ ಪ್ರಾಂತ ರೋಗಾದಿ ಉಪದ್ರವಗಳಿಲ್ಲ. ನಾಟಕದ ಕಂಪನಿಯವರು ಬಂದಲ್ಲಿ ಸಾಧ್ಯವಾದ ಪ್ರೋತ್ಸಾಹಗಳು ಕೊಡಲ್ಪಡುತ್ತವೆ.

ಬಸಪ್ಪ, ಧರ್ಮಕರ್ತರು.

ಹಾಂಸಭಾವಿ ವೀರಶೈವ ವಿದ್ಯಾವರ್ಧಕ ಸಂಘದ ೩ ನೇ ವಾರ್ಷಿಕ ಸಮ್ಮೇಲನವು.

ಸದರಿ ಸಮ್ಮೇಲನವು ಹಾಂಸಭಾವಿಯಲ್ಲಿ (ಜಿಲ್ಲಾ ಧಾರವಾಡ) ಇದೇ ತಿಂಗಳ ೨೨-೨೩ ನೇ ತಾರೀಖುಗಳ ದಿವಸ ಹುಬ್ಬಳ್ಳಿಯ ಪ್ರಸಿದ್ಧ ವಕೀಲರಾದ ಮ|| ಎಸ್. ವಿ. ಕಂಬಳಿ ಬಿ.ಎ., ಎಲ್.ಎಲ್.ಬಿ., ಎಂ.ಎಲ್.ಸಿ. ಇವರ ಅಧ್ಯಕ್ಷತೆಯ ಕೆಳಗೆ ಜರಗುವದು. ಆಗಿನ ಕಾಲಕ್ಕೆ ಪ್ರಸಿದ್ಧ ವ್ಯಾಖ್ಯಾತರೂ, ಕೀರ್ತನಕಾರರೂ, ಮಹಾ ಪೂಜ್ಯಪಾದರೂ ದಯಮಾಡಿಸುವವರಿದ್ದಾರೆ. ಸಮಾಜ ಬಾಂಧವರೆಲ್ಲರೂ ತಮ್ಮಾಗಮದಿಂದ ಪ್ರೋತ್ಸಾಹಿಸಬೇಕಾಗಿ ಕೋರುವೆವು. ೨೧ ನೇ ತಾರೀಖಿನ ದಿವಸ ಬ್ಯಾಡಗಿ ಸ್ಟೇಶನ್ನದಮೇಲೆ ಸಭೆಗೆ ಬರುವವರಿಗೆ ಗಾಡಿಗಳ ವ್ಯವಸ್ಥೆಯು ಮಾಡಲ್ಪಡುವದು.

ಸೆಕ್ರೆಟರಿಗಳು.

ಹೂಲಿಯಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ.

ಮೊದಲೇ ಪ್ರಕಟಮಾಡಿದಂತೆ ಇದೇ ಫಾ|| ಶು|| ೧೩ ಚಂದ್ರವಾರ ಊರಲ್ಲೆಲ್ಲಾ ಬೀದಿಗಳನ್ನು ಶೃಂಗರಿಸಿ ಯಾವತ್ತು ವೀರಶೈವರು ಗುರುಲಿಂಗಜಂಗಮಾರಾಧನೆಯ ಕಾರ್ಯವನ್ನು ಸಮಾಪ್ತಿಗೊಳಿಸಿ ಸಂಜೆ ೮ ಗಂಟೆ ಸಮಯಕ್ಕೆ ಶ್ರೀ ಜಗದ್ಗುರು - - ಜಯಂತಿಯುತ್ಸವವನ್ನು ಹೊರಡಿಸಿದರು. ಉತ್ಸವವು ಅತಿ ವಿಜೃಂಭಣೆಯಿಂದ ಜರುಗಿ ಊರಲ್ಲೆಲ್ಲಾ ಸಂಚರಿಸಿ ಮುಂದೆ ೧೧ ಘಂಟೆ ಸಮಯಕ್ಕೆ ಶ್ರೀ ವೀರಭದ್ರದೇವಸ್ಥಾನಕ್ಕೆ ತಲ್ಪಿತು ಮುಂದೆ ಅಲ್ಲಿ ಸಭೆ ಸೇರಿ ಜಗದ್ಗುರು ವಿಶ್ವಾರಾಧ್ಯಾಚಾರ್ಯನಾಲಯದ ಮೆ|| ಶಿವಮೂರ್ತಪ್ಪ ಗೊರೋಬಾಳಯವರ ಭಾಷಣವಾಗಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಮಹತ್ವ ಈ ವಿಷಯದ ಮೇಲೆ ಎಸ್. ಎಂ. ಸಿದ್ಧಾಂತಿಗಳು ಒಂದೆರಡು ಗಂಟೆವರೆಗೆ ಸುಶ್ರಾವ್ಯವಾಗಿ ಭಾಷಣಮಾಡಿದ ಮೇಲೆ ಮಂಗಲವಾಗಿ ಸಭೆ ವಿಸರ್ಜನೆಯಾಯಿತು. ಇಲ್ಲಿಗೆ ೧ ಗಂಟೆ ವೇಳೆಯಾಗಿ ಯಾವತರೂ ತಮ್ಮ ಗೃಹಕ್ಕೆ ತೆರಳಿದರು. ಮು. ಹೂಲಿ

ಶುಭಕರ್ಮ ಮುಹೂರ್ತಗಳು.

ಈ ದುರ್ಮತಿಸಂವತ್ಸರದ ಚೈತ್ರಾದಿಯಾಗಿ ಶ್ರಾವಣ ಶುದ್ಧ ೩ ಯವರೆಗೆ ಗುರುವು ಸಿಂಹರಾಶಿಗತವಾಗಿರುತ್ತಾನೆ.

ನೀಚಸ್ಥೇವಕ್ರಸಂಸ್ಥೇಪ್ಯತಿಚರಣಗತೇ ಬಾಲವೃದ್ಧಾಸ್ತಗೇವಾ ಸನ್ಯಾಸೋದೇವಯಾತ್ರಾ ವ್ರತನಿಯಮವಿಧಿಃ ಕರ್ಣವೇಧಸ್ತುದೀಕ್ಷಾ | ಮೌಂಜೀಬಂಧೋಂಗನಾನಾಂ ಪರಿಣಯನವಿಧಿರ್ವಾಸ್ತುದೇವಪ್ರತಿಷ್ಠಾ ವರ್ಜ್ಯಾಸ್ಸದ್ಭಿಃ ಪ್ರಯತ್ನಾತ್ತ್ರಿದಶಪತಿಗುರೌ ಸಿಂಹರಾಶಿಸ್ಥಿತೇಚ ||

ಉದ್ಯಾನಚೋದ್ಯಾವ್ರತಬಂಧದೀಕ್ಷಾ ವಿವಾಹಯಾತ್ರಾ ಚವಧೂಪ್ರವೇಶಃ । ತಟಾಕಕೂಪತ್ರಿದಶಪ್ರತಿಷ್ಠಾ ಬೃಹಸ್ಪತೌ ಸಿಂಹಗತೇ ನಕಾರ್ಯಾತ್ ॥

ಬಾಲೇಶುಕ್ರೇ ವೃದ್ಧೇಶುಕ್ರೇ ವೃದ್ಧೇಜೀವೇ ನಷ್ಟೇಜೀವೇ । ಬಾಲೇಜೀವೇ ಸಿಂಹೇಜೀವೇ ಸಿಂಹಾದಿತ್ಯೇ ಜೀವಾದಿತ್ಯೇ ॥ ತಥಾಮಲಿಮ್ಲುಚೇಮಾಸಿ ಸುರಾಚಾರ್ಯೇತಿಚಾರಗೇ । ವಾಪೀಕೂಪವಿವಾಹಾದಿಕ್ರಿಯಾಃ ಪ್ರಾಗುದಿತಾಸ್ತ್ಯಜೇತ್ ॥

ಇತ್ಯಾದಿ ಮದನಪಾರಿಜಾತ ಜ್ಯೋತಿಸ್ಸಾಗರ ದಿವ್ಯೋದಾಸೀಯಾದಿ ಗ್ರಂಥ ವಚನಗಳ ಪ್ರಕಾರ ಗುರುವು ಸಿಂಹರಾಶಿಗತನಾಗಿರುವುದರಿಂದ ವಿವಾಹಾದಿ ಶುಭಕರ್ಮಗಳನ್ನು ಮಾಡಕೂಡದೆಂದು ಸಿದ್ಧವಾಗುತ್ತದೆ. ಅದನ್ನನುಸರಿಸಿಯೇ ಅನೇಕ ಪಂಚಾಂಗಕಾರರು ಈ ವರ್ಷ ಚೈತ್ರ ವೈಶಾಖ ಜ್ಯೇಷ್ಠ ಮಾಸಗಳಲ್ಲಿ ವಿವಾಹಮುಹೂರ್ತಗಳನ್ನು ಬರೆಯದೆ ಬಿಟ್ಟಿರಬೇಕು. ಆದರೆ ಪಕ್ಷಾಂತರದಿಂದ ಈ ದೋಷವು ನಮಗೆ ಪರಿಗ್ರಾಹ್ಯವಾಗಿರುವುದಿಲ್ಲ. ಹೇಗೆಂದರೆ..

ಜ್ಯೋತಿರ್ನಿಬಂಧದಲ್ಲಿ—

ನರ್ಮದೋತ್ತರದೇಶೇತು ಸಿಂಹಸ್ಥೇದೇವಮಂತ್ರಿಣಿ । ಶುಭಕರ್ಮನಕುರ್ವೀತನಿಷೇಧೋನಾಸ್ತಿದಕ್ಷಿಣೇ ॥

ಎಂದರೆ ಸಿಂಹಸ್ಥ ಗುರುದೋಷವು ನರ್ಮದಾನದಿಯ ಉತ್ತರದಲ್ಲಿ ವಾಸಿಸುವವರಿಗೇ ಹೊರತು ತನ್ನದೀ ದಕ್ಷಿಣ ಪ್ರಾಂತವಾಸಿಗಳಿಗೆ ಶುಭಕರ್ಮ ಮಾಡಲು ನಿಷೇಧವಿಲ್ಲವೆಂದು ಸ್ಪಷ್ಟೋಕ್ತಿಯಿದೆ. ಮತ್ತು

ಬ್ರಾಹ್ಮೇ—

ಮುಂಡನಂಚೋಪನಾಯಶ್ಚ ಗೌತಮ್ಯಾಂ ಸಿಂಹಗೇಗುರೌ । ಕನ್ಯಾಗತೇ ತುಕರ್ತವ್ಯಂ ಯಾಂನತುತೀರವಾಸಿನಾಂ । ಎಂದು ಈ ವಚನವಾದರೂ ಅದೇ ಅರ್ಥವನ್ನೇ ದೃಢಪಡಿಸುತ್ತದೆ.

೧-೨ ತಿಂಗಳಿಂದ ಈ ಸಂಬಂಧವಾಗಿ ವೃತ್ತಪತ್ರಿಕೆಗಳಲ್ಲಿ ಚರ್ಚೆ ನಡೆಯುತ್ತಿರುವುದರಿಂದ ಜ್ಯೋತಿಸ್ಸಿದ್ಧಾಂತಗಳಲ್ಲಿ ಉಭಯಪಕ್ಷಕ್ಕೂ ಇರುವ ಆಧಾರವನ್ನು ತೋರಿಸಲಿಕ್ಕಾಗಿ ನನಗೆ ತಿಳಿದಿರುವ ವಿಷಯವನ್ನು ಹೀಗೆ ಬರೆದಿರುತ್ತೇನೆ.

ಕ.

೪ ನೆಯ ನೈಜಾಂ ದೇಶೀಯ ಪ್ರಾಂತಿಕಸಭಾ

ನೀರಡಗುಂಫ.

ಇಲ್ಲಿಯ ವಿರಕ್ತಮಠದಲ್ಲಿ ಪ್ರತಿಸಂವತ್ಸರ ಫಾಲ್ಗುಣ ಬ|| ೪ ತಿಥಿಯಲ್ಲಿ ನಡೆಯುವ ಶ್ರೀ ಸಿದ್ಧಲಿಂಗಮಹಾಸ್ವಾಮಿಯ ರಥೋತ್ಸವದ ಜತೆಗೆ ಮೇಲೆಕಾಣಿಸಿದ ಸಭೆಯು ಅತಿವಿಜೃಂಭಣೆಯಿಂದ ಜರಗಿತೆನ್ನುವುದು ಕೆಳಗಿನ ಪಂಕ್ತಿಗಳನ್ನೋದುವದರಿಂದ ತಾನೇ ಗೊತ್ತಾಗುತ್ತದೆ. ಸದರಿ ಸಭೆಗೆ ಪ್ರಾಂತಿಕ ಗೊಬ್ಬೂರು ಬೃಹನ್ಮಠಾಧ್ಯಕ್ಷ ಶಿವಯೋಗಿ ಬಸವಲಿಂಗ ಚರಮೂರ್ತಿಗಳ ಅಧ್ಯಕ್ಷತೆಯಲ್ಲಿ—ಮರ್ಬೇಡ್ ಚನ್ನಬಸವ ಶಾಸ್ತ್ರಿಗಳು ಚಾಲಕರಾಗಿದ್ದು, ಚಿಕ್ಕಸೂಗೂರು ಶ್ರೀಗಳ ಸಂಸ್ಕೃತಶಾಲಾ ವಿದ್ಯಾರ್ಥಿಗಳೂ, ರಾಮಗಡ್ಡ ಶ್ರೀಗಳಸಂಬಂಧಿ ನಾರಾಯಣಪೇಟೆಯ ವಿದ್ಯಾರ್ಥಿಗಳೂ, ಸದರೀ ಮಠದ ಶಾಸ್ತ್ರಾಮಂದಿರ ಸಾಧಕರೂ, ಇನ್ನುಳಿದವರ ಪರೀಕ್ಷೆಯು ಪಂಡಿತ ಮಹಾಶಯರಿಂದ ತೆಗೆದುಕೊಂಡ ಬಳಿಕ, ಶ್ರೀಯುತ ಜೇಗರಕಲ್ಲು ವೆಂಕಟರಾವ್ ಉರ್ಫ್-ಶಿವರಾವ್ ಪಾಟೀಲರು ಅಧ್ಯಕ್ಷರನತಿಯಿಂದ ಉತ್ತೀರ್ಣರಾದವರಿಗೆ ಬಹುಮಾನಹಂಚಿದರು. ಅನಂತರ ಮಧ್ಯಾಹ್ನ 3 ಘಂಟೆಯಿಂದ 6 ರ ವರೆಗೂ ಸದರೀ ಚಾಲಕರು ಯುಕ್ತ್ಯನುಭವಪೂರ್ವಕ ಮಂಜುಳವಾಣಿಯಿಂದ ಶಿವಕೀರ್ತನಮಾಡಿದ ತರುವಾಯ ಬೆಳಗೆ 6 ಘಂಟೆಯಿಂದ 10 ರ ವರೆಗೂ, ಚಿಕ್ಕಸೂಗೂರು ನಾರಾಯಣಪೇಟಿ ವೇ|| ಬಸವಲಿಂಗಶಾಸ್ತ್ರಿಗಳೂ, ಚಿಕ್ಕೋಡಿ ಗುರುಪಾದಶಾಸ್ತ್ರಿಗಳೂ, ಸರ್ವವಿದ್ಯಾರ್ಥಿಗಳೂ, ಧಾರ್ಮಿಕ, ಬ್ರಹ್ಮಚರ್ಯ, ಶ್ರೀಮದಷ್ಟಾವರಣಗಳ ಬಗ್ಗೆ ಶ್ರೋತೃಗಳ ಹೃದಯಾರವಿಂದ ಪ್ರಫುಲ್ಲಿತವಾಗುವಂತೆ ಭಾಷಣಮಾಡಿದನಂತರ ಮಧ್ಯಾಹ್ನ 3 ರಿಂದ ೬ ರ ವರೆಗೂ ಗವಾಯಿ ಅನಂಪಲ್ಲಿ ಶಾಂತವೀರಪ್ಪನವರು ಪನ್ನೀರು ಸುರಿಸುವಂತೆ ಅಮೃತಮಯವಾಣಿಯಿಂದಲೂ ಗಾನರಸದಿಂದಲೂ ತೃಪ್ತಿಗೊಳಿಸಿದಮೇಲೆ ಪ್ರಾತಃಕಾಲಕ್ಕೆ ಸದರೀ ಪ್ರಕಾರ ಮಠಪತಿಗಳಾಯ ಹಂಪಯ್ಯನವರು ಸುಧಾಮಯ ವಚನನಿಚಯಗಳಿಂದ ಮನೋರೂಪಹರಿಣವನ್ನು ವಶಮಾಡಿಕೊಂಡ ಬಳಿಕ ಸಭೆಯೆಂಬ ನರ್ತಕಿಗೆ ಉತ್ತೇಜಕರಾಗಿಯೂ ಸತಾಜಡೇಳಿಯನ್ನು ಇಟ್ಟಿಸುವ ಮೇಲೆಕಾಣಿಸಿದ ಪಾಟೀಲರೂ, ಚಿಕ್ಕಸೂಗೂರು ಬಸವರಾಜಪ್ಪ ದೇಶಿಕನೂರು ಶಿವಮಠದ ಶರಣಯ್ಯನವರೂ ವಟುಗಳ ಬಗ್ಗೆ ಸದರೀಮಠದ ಸಿದ್ಧಲಿಂಗಶಾಸ್ತ್ರಿಗಳೂ, ಇನ್ನುಳಿದವರು ಸತ್ಪ್ರಮಾಣ ಧಾರ್ಮಿಕ ಬಗ್ಗೆ ಉಪನ್ಯಾಸಮಾಡಿದ ಬಳಿಕ, ಕವಿತಾಳ ಶ್ರೀಗಳೂ, ಹೊಸಪೇಟೆಯ ಶ್ರೀಗಳೂ, ಮಾನ್ವಿ ಚರಮೂರ್ತಿಗಳೂ, ಮುತ್ತಲಿ ಚರಮೂರ್ತಿಗಳೂ, ಉಳಿದ ಮಹಾನುಭಾವಿಗಳೂ, ವೈದ್ಯಕಲಾವಿದರಾದ ಶಿವಮಠದ ಪರ್ವತಯ್ಯನವರೂ, ಧಾರ್ಮಿಕ, ನೈತಿಕ, ವೈದ್ಯ, ಇವುಗಳಬಗ್ಗೆ ಉಪನ್ಯಾಸಮಾಡಲು, ಮಧ್ಯಾಹ್ನ 3 ರಿಂದ ರಾತ್ರಿ 8 ರ ವರೆಗೂ, ಸದರೀಮಠದ ವಿದ್ವಾಂಸರಾದ ಶ್ರೀಗಳು ತಮ್ಮ ಧನ್ಯವಾದ ಸರಸ್ವತಿಯನ್ನು ಸರ್ವರಹೃದಯದೊಳು ಪೊಗುವಂತೆ ಲಿಂಗಾಂಗಸಾಮರಸ್ಯದ ಬಗ್ಗೆ ಮಾತಾಡಿದರು. ಇದರಲ್ಲಿ ಆಗಾಗ್ಗೆ ಚಾಲಕಶಾಸ್ತ್ರಿಗಳೂ ಅಮೃತಬಿಂದುಗಳನ್ನು ಮಧ್ಯೆಮಧ್ಯೆ ಬೀರಿದರು. ಆಕಾಲಕ್ಕೆ ಅನಂಪಲ್ಲಿ ರಾಚೋಟೆಪ್ಪ ಗವಾಯಿಗಳು ಮೇಲೆಕಾಣಿಸಿದ ಗವಾಯಿಗಳೂ ಪಲ್ಲವಿವರೆಗೂ ಗಾನಮಾಡಿ ಸರ್ವರಮನಃಕಮಲವನ್ನು ವಿಕಸಿತಮಾಡಿದರು. ಆಮೇಲೆ ಅಧ್ಯಕ್ಷರಭಾಷಣ ಲಿಂಗಧಾರಣಬಗ್ಗೆ ಮಾಡಿದ ಬಳಿಕ, ನೈಜಾಂ ಮಹಾರಾಜರಿಗೂ ವಿದ್ಯಾಭಿಮಾನಿಗಳಾದ ವೈ. ಶಿರಸಂಗಿ ಲಿಂಗಭೂಪರಿಗೂ, ಕೈ. ಅಪ್ಪಾಸಾಹೇಬರಿಗೂ, ಕೈ. ವೈ. ವೀರಸಂಗಪ್ಪನವರಿಗೂ, ಜಯವಾಗಲೆಂದು ಮಹಾಧ್ವನಿಪೂರ್ವಕ ಮತ್ತು ಪಂಡಿತಮಹಾಶಯರಿಗೆ ಬಹುಮಾನಕೊಟ್ಟ ಬಳಿಕ ಪುಷ್ಪಗುಚ್ಛಗಳು ಹಂಚಲ್ಪಟ್ಟವು. ಮುಕ್ತಾಯವಾಯಿತು.

ಓರ್ವಪ್ರೇಕ್ಷಕ.

ಮಂಡ್ಯದ ಹಿಂದೂಗಳೂ ಮುಸಲ್ಮಾನರೂ ಒಗ್ಗಟ್ಟಾದುದು.

ಮಂಡ್ಯದಲ್ಲಿ ಬಹಳ ದಿನಗಳಿಂದಲೂ ಹಿಂದೂಗಳೂ ಮುಸಲ್ಮಾನರೂ ಅವರವರ ಹಬ್ಬಗಳ ಕಾಲದಲ್ಲಿ ಒಬ್ಬರಿಗೊಬ್ಬರು ತಕರಾರುಗಳನ್ನು ಮಾಡಿಕೊಂಡು ಕೋರ್ಟು ಕಚೇರಿಗಳಲ್ಲಿ ವ್ಯಾಜ್ಯ ನಡೆಸುತ್ತಲಿದ್ದರು. ಇವರಿವರ ಜಗಳಗಳನ್ನು ಸಮಾಧಾನಪಡಿಸಿ ಐಕಮತ್ಯವನ್ನುಂಟುಮಾಡಲು 1921 ನೇ ಏಪ್ರಿಲ್ 3 ನೇ ತಾರೀಖು ಭಾನುವಾರ ಮಂಡ್ಯದಲ್ಲಿ ಮೈಸೂರಿನಿಂದ ಸಾಹುಕಾರರುಗಳಾದ ಹ|| ಮಹಮ್ಮದ್‌ಸೇಟರೂ, ಹ|| ಇಬ್ರಾಯಿಂಸೇಟರೂ, ಹ|| ಜಾಸಿಂಸೇಟರೂ, ಹ|| ಅಹಮ್ಮದ್‌ಸೇಟರೂ, ಹ|| ಅಜೀಜ್‌ಪಾಷಾರವರೂ, ಮ|| ಧರ್ಮಪ್ರಕಾಶಕ ಬನುಮಯ್ಯನವರೂ, ಮ|| ತಿಮ್ಮಯ್ಯನವರೂ, ಮ|| ತಮ್ಮಯ್ಯನವರೂ, ಮ|| ಬಂಡಯ್ಯನವರೂ ಮದ್ದೂರಿಂದ ಜಹಗೀರ್‌ದಾರ್ ಹ|| ಮಹಮ್ಮದ್ ಅಲಿಬೇಗ್‌ರವರೂ, ಮ|| ಎಂ. ಸಿ. ಲಿಂಗೇಗೌಡರೂ, ಮ|| ಗೆಜ್ಜಲಗೆರೆ ಸಿದ್ದಪ್ಪನವರೂ, ಮಂಡ್ಯದ ಸಾಹುಕಾರ್ ಮ|| ಧರಣಪ್ಪನವರೂ, ಮ|| ಪದ್ಮರಾಜಯ್ಯನವರೂ ಕೂಡಿದ ಒಂದು ಪಂಚಾಯತಿಯು ಏರ್ಪಡಿಸಲ್ಪಟ್ಟಿತು. ಸ್ಥಳದ ಹಿಂದೂ ಮತ್ತು ಮಹಮ್ಮದೀಯ ದೊಡ್ಡಮನುಷ್ಯರು ತಮ್ಮ ವ್ಯಾಜ್ಯವನ್ನು ಕೇಳಿ ಫೈಸಲ್‌ಮಾಡಬೇಕೆಂದು ಒಂದೊಂದು ಮುಚ್ಚಳಿಕೆಯನ್ನು ಬರೆದುಕೊಟ್ಟರು. ಅದರ ಮೇಲೆ ಎರಡು ಪಂಗಡದವರ ವ್ಯಾಜ್ಯಗಳನ್ನೂ ಸಾವಧಾನವಾಗಿ ಕೇಳಿ ಉಭಯರಿಗೂ ಅನುಕೂಲಿಸುವಂತೆ ಅವರಪಂಗೆ ಇದ್ದ ವ್ಯತ್ಯಾಸಗಳ ವಿಷಯದಲ್ಲಿ ಸರಿಯಾದ ತೀರ್ಮಾನಗಳನ್ನು ಪಂಚಾಯತದಾರರು ಮಾಡಿದರು. ಅವುಗಳಲ್ಲಿ ಮುಖ್ಯ ತೀರ್ಮಾನಗಳು ಯಾವುವೆಂದರೆ:—(1) ಅವರವರ ಹಬ್ಬಗಳಲ್ಲಿ ಅವರವರ ಸಂತೋಷಕ್ಕಾಗಿ ಯಾವ ವೇಷಗಳನ್ನಾದರೂ ಯಾರು ಬೇಕಾದರೂ ಹಾಕಿಕೊಳ್ಳಬಹುದು. ಅದಕ್ಕೆ ಯಾರೂ ಅಡ್ಡಿ ಮಾಡಕೂಡದು (2) ಊರಿನೊಳಗೆ ಇದ್ದ ಒಂದು ಪಾಳು ನಿವೇಶನವನ್ನು ಎರಡು ಪಂಗಡದವರೂ ತಮಗೆ ಸೇರಿದ್ದೆಂದು ಹೇಳುತ್ತಲಿದ್ದರು. ಸದರಿ ಸ್ಥಳದಲ್ಲಿ ಅರ್ಧವನ್ನು ಹಿಂದೂಗಳೂ ಇನ್ನರ್ಧವನ್ನು ಮಹಮ್ಮದೀಯರೂ ಸರಕಾರದವರ ಅನುಮತಿಯಿಂದ ವಹಿಸಿಕೊಳ್ಳತಕ್ಕದ್ದು. (3) ಉಭಯತ್ತರ ಮೇಲೂ ಸರಕಾರದವರು ಮಾಡಿರುವ ಮೊಕದ್ದಮಾ ವಿಚಾರದಲ್ಲಿ ಸರಕಾರದವರು ಕ್ಷಮಾಪಣೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳತಕ್ಕದ್ದು ಎಂಬುವೇ ಬಹು ಮುಖ್ಯವಾದ ತೀರ್ಮಾನಗಳು. ಇದು ಆದಮೇಲೆ ಎರಡು ಪಂಗಡದಲ್ಲಿಯೂ ಮುಖ್ಯರಾದವರನ್ನು ಸೇರಿಸಿ ಒಬ್ಬ ಹಿಂದೂ ದೊಡ್ಡ ಮನುಷ್ಯರನ್ನೂ ಒಬ್ಬ ಮುಸಲ್ಮಾನ ದೊಡ್ಡ ಮನುಷ್ಯರನ್ನೂ ಕೈಹಿಡಿಸಿ ಜತೆ ಸೇರಿಸಿ ಹೂವಿನ ಹಾರ ಹಾಕಿಸಿ ವಾದ್ಯಬಜಂತ್ರಿಯೊಡನೆ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿಸಿ ಉಭಯಪಕ್ಷದ ಜನರ ಮನಸ್ಸಿನಲ್ಲಿದ್ದ ದ್ವೇಷಾಸೂಯೆಗಳೆಲ್ಲಾ ಹೋಗುವಂತೆ ಮಾಡಿದರು.

ತಾಲ್ಲೂಕು ಅಮಲ್ದಾರ್ ಮ|| ಕೆ. ನಾರಣಯ್ಯರ್‌ರವರು ಮೊದಲಿನಿಂದಲೂ ಕೊನೆವರೆಗೂ ನಿಂತು ಸಮಯೋಚಿತವಾದ ಬುದ್ಧಿವಾದಗಳಿಂದಲೂ 2 ಪಂಗಡದ ಜನರೂ ಎಲ್ಲೆಲ್ಲಿ ಹೊಡೆದಾಡುತ್ತಲಿದ್ದಾರೋ ಅಲ್ಲಿನ ಕೆಡಕನ್ನು ವಿವರಿಸುತ್ತಲೂ, ಎರಡು ಪಂಗಡದವರೂ ಅನ್ಯೋನ್ಯವಾಗಿರುವ ಕಡೆ ಎಷ್ಟರಮಟ್ಟಿಗೆ ಏಳಿಗೆಯಲ್ಲಿರುತ್ತಾರೆಂಬುದನ್ನೂ ನಿದರ್ಶನಪೂರ್ವಕವಾಗಿ ಹೇಳುತ್ತ 2 ಪಂಗಡದವರೂ ಒಟ್ಟಾಗಲು ಎಷ್ಟು ಬೇಕೋ ಅಷ್ಟೆಲ್ಲಾ ಮಾಡಿದರು. ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟ್‌ರವರಾದ ಮ|| ಪ್ಲೀಡರ್ ನಂಜಪ್ಪಶೆಟ್ಟರವರು ಅಮಲ್ದಾರ್‌ರವರೊಡನೆ ಸೇರಿ ಮೇಲ್ಕಂಡ ಕಾರ್ಯದಲ್ಲಿ ತುಂಬಾ ಸಹಾಯಮಾಡಿದುದಲ್ಲದೆ, ಪರಸ್ಥಳದಿಂದ ಬಂದಿದ್ದ ಜನರಿಗೆ ತಿಂಡಿ ತೀರ್ಥಗಳನ್ನು ಒದಗಿಸಿದರು.

ಮಂಡ್ಯದಲ್ಲಿ ಈ ಎರಡು ಪಂಗಡದವರೂ ಒಂದಾದಂತೆ ಇತರಕಡೆಯಲ್ಲಿಯೂ ದ್ವೇಷಾಸೂಯೆ ಬಿಟ್ಟು ಒಂದಾಗಿ ದೇಶದ ಏಳಿಗೆಯಲ್ಲಿ ನಿರತರಾಗಲೆಂದು ಹಾರೈಸುತ್ತೇವೆ.

ಸ್ಥಳಿಕ.

ಚಿಡಗುಂಪಿಯಲ್ಲಿ ಪ್ರಾಥಮಿಕಶಾಲೆಯು ಸ್ಥಾಪಿಸಲ್ಪಟ್ಟಿತು.

ನೈಜಾಮು ಇಲಾಖಾಪೈಕಿ ಜಿಲ್ಲಾ ಗುಲ್ಬರ್ಗಾ ತಾಲ್ಲೂಕು ಚಿಡಗುಂಪಿಗೆ ಶ್ರೀಮಜ್ಜ ನಿರಂಜನ ಗುರುಮಠಕಲ್ಲ ಶಾಂತವೀರಸ್ವಾಮಿಗಳವರು ದಯಮಾಡಿಸಿ ಈ ಗ್ರಾಮದಲ್ಲಿರುವ ವಿದ್ಯೆಯ ಕೊರತೆಯನ್ನು ನೋಡಿ ಕನಿಕರಪಟ್ಟು ಪ್ರತಿನಿತ್ಯದಲ್ಲಿಯೂ ವಿದ್ಯಾವಿಷಯಕವಾಗಿ ಹಿತೋಪದೇಶಗಳನ್ನು ಮಾಡಿದರು. ತದ್ವಾರಾ ಸಕಲಮತಸ್ಥರಲ್ಲಿಯೂ ವಿದ್ಯಾಭಿಮಾನವು ಉದಯವಾದ ಮೇರೆಗೆ ಈ ಗ್ರಾಮದಲ್ಲಿ ಉಚ್ಚಶಿಕ್ಷಣದ ಪ್ರಾಥಮಿಕಶಾಲೆಯೊಂದನ್ನು ಸ್ಥಾಪಿಸಬೇಕೆಂದು ಶ್ರೀ ಸ್ವಾಮಿಗಳವರ ಅಪ್ಪಣೆಯಾದದ್ದಕ್ಕೆ ಸರ್ವರೂ ಶಿರಸಾವಹಿಸಿ ಒಪ್ಪಿಕೊಂಡರು. ಮಾರನೇದಿವಸ ಅಂದರೆ ಮಾಘ ಶುದ್ಧ ೧೩ ಭಾನುವಾರ ಸಾಯಂಕಾಲ ೫ ಗಂಟೆಗೆ ವಿರಕ್ತಮಠದಲ್ಲಿ ಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿತಲ್ಲದೆ ಸಭೆಗೆ ಸ್ಥಳ ಪರಸ್ಥಳದ ಅನೇಕ ಪ್ರಮುಖಜನರು ಬಂದಿದ್ದರು. ಅಧ್ಯಕ್ಷರೇ ಮೊದಲಾದವರ ಸಂಸವಾದ ಭಾಷಣಗಳಾದ ನಂತರ ಸದರಿಶಾಲೆಗೆ ನಮ್ಮನ್ನಾಳುವ ನೈಜಾಮರ ನಾಮವನ್ನೇ ಇಡಬೇಕೆಂದು ಸರ್ವಾನುಮತದಿಂದ ಪ್ರಾಸಾದವೇರೆಗೆ ಉಸ್ಮಾನಿಯಾ ಸ್ಕೂಲು ಎಂಬಭಿಧಾನದಿಂದ ಸ್ಥಾಪಿಸಲ್ಪಟ್ಟಿತು. ಈ ಸಂಸ್ಥೆಯು ನಿರಾತಂಕವಾಗಿ ನಡೆಯಲು ಒಂದು ಧನರಾಶಿಯನ್ನು ಕೂಡಿಸಿದರಲ್ಲದೆ ಇದರ ವ್ಯವಸ್ಥೆಯ ದೆಸೆಯಿಂದ ಕೆಳಗೆಕಂಡ ವಿದ್ಯಾಭಿಮಾನಿಗಳು ನೇಮಕವಾಗಿದ್ದಾರೆ. ಪ್ರೆಸಿಡೆಂಟರು—ಇಟ್ಗಿ ವಿರಕ್ತಮಠದ ವೀರತಸ್ವಾಮಿಗಳು, ಸೆಕ್ರೆಟರಿ ವೀರಭದ್ರಪ್ಪಾ ಬೀಡಪ್ಪನವರ, ಆನರರಿ ಸೆಕ್ರೆಟರಿ—ವೀರಭದ್ರಯ್ಯಾ ಮಂಗಲಗಿ, ಖಜಾನದಾರ—ರಾಯಸೆಟ್ಟಿಪ್ಪಾ ಪಾರಾ, ಮೆಂಬರರು—ವೀರಸಂಗಪ್ಪಾ ಅಡ್ಡಿ, ಹನುಮಂತ ಶಿವರಾಮ ಮಂಕಾಲ, ಗುರಪ್ಪಾ ಮಾಲಿ, ಗೋವಿಂದರಾವ ಗುತ್ತೇದಾರ, ರಾಮಣ್ಣಾ ಆಣದೂರು, ಶಿದ್ದಪ್ಪಾ ಅವರಾದಿ, ರೇವಪ್ಪಾ ನಾಸಿ, ವೀರಭದ್ರಪ್ಪಾ ಉಣ್ಣಿ, ಶಿವಲಿಂಗಪ್ಪಾ ಪಾರಾ, ಖಂಡಪ್ಪಾ ಪೋಲೀಸಪಾಟೀಲ, ಚನ್ನಬಸವಪ್ಪಾ ಮಹಾಜನ, ದಶರಥಗಂಟೋಜಿ, ರಾಚಪ್ಪಾ ಮಾಲಿ, ಶಾಂತಪ್ಪಾ ಪಾರಾ, ವೀರಸೆಟ್ಟಿಪ್ಪಾ ಗಂದಿಗಿ, ಈಶಪ್ಪಾ ಮಾಲಿ, ವೀರಭದ್ರಪ್ಪಾ ರುದ್ರಕ್ಕಿ, ರಾಮಲಿಂಗಪ್ಪಾ ದಯಾಳ, ಲಕ್ಷ್ಮಣ ಡುಮಾಳೆ, ಚನ್ನವೀರಪ್ಪಾ ಹೊಸದೊಡ್ಡಿ, ವ್ಯವಸ್ಥಾಪಕರು—ಗುಂಡಪ್ಪಾ ಮಲ್ಲಾಡ, ಗಂಗಪ್ಪಾ ಕೋರವಾರ. ಇವರು ತಮತಮ ಧನಗಳಿಂದ ಅವರವರು ಮಾಡತಕ್ಕ ಕರ್ತವ್ಯಕರ್ಮನನ್ನು ಸಭಾಧ್ಯಕ್ಷರು ಸೂಚಿಸಿ ಬ್ರಿಟಿಷ್ ಸಾರ್ವಭೌಮರವರ ಮತ್ತು ನಮ್ಮ ನೈಜಾಮರ ಶ್ರೇಯಃಪ್ರಾರ್ಥನೆಮಾಡಿ ಸಭಿಕರಿಗೆ ಮಿಠಾಯಿ ಗಂಧಪುಷ್ಪ ತಾಂಬೂಲಾದಿಗಳನ್ನು ಹಂಚಿ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೇದಿವಸ ಪುನಃ ಸದರಿಮಠದಲ್ಲಿ ಗುರುಮಠಕಲ್ಲ ಪೂಜ್ಯಪಾದರಾದ ಶ್ರೀ ಶಾಂತವೀರಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ ಅಧ್ಯಕ್ಷರು ನೈಜಾಮು ಇಲಾಖೆಯ ವೀರಶೈವರ ಹೀನಾವಸ್ಥೆಯನ್ನೂ, ಅನೈಕಮತದಿಂದುಂಟಾಗುವ ಮಹಾಹಾನಿಯನ್ನೂ, ವಿದ್ಯಾಪ್ರಸಾರದ ಲಾಭವನ್ನೂ ಕುರಿತು ಬಹುಸರಳವಾಗಿಯೂ ಹೃದಯಂಗಮವಾಗುವಂತೆಯೂ ಭಾಷಣಮಾಡಿದ ನಂತರ ಶಿವನಾಮಸ್ಮರಣೆಯೊಡನೆ ಸಭೆಯು ಬರಖಾಸ್ತಾಯಿತು. ಈ ಪೂಜ್ಯಪಾದರನ್ನು ನೈಜಾಮು ಇಲಾಖೆಯ ಉದ್ಧಾರಕ್ಕಾಗಿ ಕಳುಹಿಸಿಕೊಟ್ಟ ಶ್ರೀಮನ್ಮಹಾನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಉಪಕಾರವು ಚಿರಸ್ಮರಣೀಯವಾಗಿದೆ. ಪೂಜ್ಯಪಾದರಿಗೆ ಪೂಜಾ ಸೇವಾದಿಗಳು ಅತ್ಯಧಿಕವಾಗಿದ್ದರೂ ಇವರು ಪ್ರವೇಶಮಾಡಿದ ದೇಶದಲ್ಲೆಲ್ಲಾ ಅನೇಕ ಸಂಸ್ಕೃತಪಾಠಶಾಲೆಗಳೂ ಪ್ರಾಥಮಿಕಶಾಲೆಗಳೂ ಸ್ಥಾಪಿಸಲ್ಪಡುತ್ತಿರುವುದಲ್ಲದೆ ಧಾರ್ಮಿಕಜಾಗ್ರತಿಯು ನೆಲೆಗೊಳ್ಳುತ್ತಿರುವದೆಂದು ತಿಳಿಸಲು ಅತ್ಯಂತ ಆನಂದವಾಗುತ್ತದೆ.

ಪ್ರತ್ಯಕ್ಷದರ್ಶಿ.

ಸೇವಿಂಗ್ಸ್ ಬಾಕ್ಸ್ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ ಕೈಯಲ್ಲಿರುವಾಗ ಸೇವಿಂಗ್ಸ್‌ಬ್ಯಾಂಕ್‌ನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವವೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಳ್ಳುವದು. ಅದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ 2—0—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
29 102 ಜೈನಾಬಜಾರ್ ರೋಡ್ ಮದರಾಸು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪೇಟೆಯಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

29 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೪—೦ ; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ನಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
29 ಪಾರ್ಕ್‌ಟೌನ್ ಮದರಾಸು.

೧೯೨೧ ನೆಯ ಇಸವಿ ಏಪ್ರೆಲ್ ತಾ|| ೧೭ ರಿಂದ ೧೯೨೧ ನೆಯ ಏಪ್ರೆಲ್ ತಾ|| ೨೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿನಾಮ ಸಂವತ್ಸರದ ಚೈತ್ರ ಶುದ್ಧ ದಶಮಿಯಿಂದ ಚೈತ್ರಬಹುಳ ಪಾಡ್ಯಮಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
17	ಭಾನು	ದಶ	37-15	ಆಶ್ಲೇ	18-43	5
18	[1]ಸೋಮ	ಏಕಾ	31-35	ಮಘಾ	14-52	6
19	[2]ಮಂಗಳ	ದ್ವಾದ	26-29	ಹುಬ್ಬ	11-29	7
20	[3]ಬುಧ	ತ್ರಯೋ	22-10	ಉತ್ತರಾ	8-48	8
21	[4]ಗುರು	ಚತು	18-41	ಹಸ್ತ	6-57	9
22	ಶುಕ್ರ	ಪೌರ್ಣ	16-14	ಚಿತ್ತ	6-3	10
23	ಶನಿ	ಪಾಡ್ಯ	14-56	ಸ್ವಾತಿ	6-15	11

(1) ಸರ್ವತ್ರೈಕಾದಶಿ, (2) ಪ್ರದೋಷಃ, ಮಾಗಡಿ ರಂಗಸ್ವಾಮಿರಥಃ, (3) ಮಳೂರು ಅಪ್ರಮೇಯಸ್ವಾಮಿರಥಃ, ಕಂಚಿ ವರದರಾಜಸ್ವಾಮಿರಥಃ, (4) ಬಿಳಿಗಿರಿ ರಂಗಸ್ವಾಮಿರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತಮುಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತ್ರಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ಕ ೧೯೨೧ ನೆಯ ಇಸವಿ ಏಪ್ರೆಲ್ ತಾರೀಖು ೧೭ ನೆಯ ಭಾನುವಾರ (ಸಂಚಿಕೆ ೧೬

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಕಶ್ಯ, ಹೊಟ್ಟೆ ದಪ್ಪವಾಗುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHAVA
VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0, 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
15 ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೪—೦ ; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ನಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ
ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ 5-4-0
ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
30 ಪಾರ್ಕ್‌ಟೌನ್ ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖಿ	ರೂ. ಇಂದ.		ರೂ. ವರೆಗೆ.
4	0.12.0	,	50.0.0
5	0. 8.0	,	100.0.0
6	0.12.0	,,	100.0.0
7	6. 0.0	,,	100.0.0

ಬಿಡಿ ಮಣಿಗಳು 1ಕ್ಕೆ ಕ್ರಯ

3	0. 6.0	ಇಂದ	10.0.0
8	0. 8.0	,,	100.0.0
9	0.12.0	,,	100.0.0
10	0.14.0	,,	100.0.0
11	3. 8.0	,,	100.0.0
12	4. 0.0	,,	100.0.0
13	4. 8.0	,,	100.0.0
14	6. 0.0	,,	100.0.0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ರಿನ ,,	15.0.0 ,,	40.0.0
ಮಣಸು ,,	7-8-0 ,,	15.0.0
ಕಡಲೆ ,,	2-8-0 ,,	7.0.0
ನೆನೆದಕಡಲೆ,,	1-8.0 ,,	3.0.0
ಕಮಲಾಕ್ಷಿ,,	1.0.0 ,,	2.0.0
ದೊಡ್ಡ ,, ,,	0.8.0 ,,	1.0.0
ಅದಕ್ಕಿಂತ ,,	0.6.0 ,,	0.8.0
ಸ್ಫಟಿಕ108ಕ್ಕೆ	4-8-0 ,,	30.0.0
ಶ್ರೀಚಕ್ರ1ಕ್ಕೆ	8.0.0 ,,	100-0-0
ಲಿಂಗ 1ಕ್ಕೆ	1.0.0 ,,	100.0.0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
9 ಕಂಪನಿ, ಚೌಕಂಬಾ ಕಾಶೀ.

ರಕ್ತಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 28

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವಂಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 20

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ, ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0.

30 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತುರಾಯಿ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ರಾಗಮಾಲಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದಕನ್ನಡಿ 1, ಹೇರಾಯಿಲ್ ಸೀಸೆ 1, ಶರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಭಂಗಾರದ ಉಂಗುರ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
30 89, ನಾರಾಯಣಮೊದಲಬೀದಿ, ಮದ್ರಾಸು.

ಚಂದಾದಾರರು ಗಮನಿಸತಕ್ಕದ್ದು.

ಸ್ಟಾರ್ ಪತ್ರಿಕೆಯು ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು.

ಮೈಸೂರು ಸ್ಟಾರ್ ಪತ್ರಿಕೆಯ ಹೊಸ ಮತ್ತು ಹಳೆ ಚಂದಾಹಣವನ್ನು ಬರಮಾಡಿಕೊಳ್ಳುವುದಕ್ಕಾಗಿ ಪತ್ರಿಕೆಯ ಒಂದು ಸಂಚಿಕೆಯನ್ನು ವಿ.ಪಿ. ಪೋಸ್ಟ್ ದ್ವಾರಾ ಕಳುಹುವ ಪದ್ಧತಿಯು ಬಹುಕಾಲದಿಂದಲೂ ನಡೆದುಬರುತ್ತಿರುವುದಷ್ಟೆ. ಇದರಿಂದ ಮನಿಯಾರ್ಡರ್ ಕಮೀಷನ್ 1 ಆಣೆ ಪೋಸ್ಟೇಜು ¼ ಆಣೆ ಒಟ್ಟು 1¼ ಆಣೆ ಬೀಳುತ್ತಿದ್ದಿತು. ಈಗ ಸ್ವಲ್ಪದಿನಗಳಿಂದ ಪ್ರತಿಯೊಂದು ವಿ. ಪಿ. ಪ್ಯಾಕೆಟ್ಟೂ ರಿಜಿಸ್ಟರ್ ಮಾಡಿಸಲ್ಪಡಬೇಕೆಂಬ ನಿರ್ಬಂಧವು ಕಲ್ಪಿಸಲ್ಪಟ್ಟುದರಿಂದಲೂ, ಪೋಸ್ಟೇಜು ಅರ್ಧಾಣೆ ಮಾಡಲ್ಪಟ್ಟುದರಿಂದಲೂ 3¼ ಆಣೆ ವೆಚ್ಚ ಬೀಳುತ್ತಿದ್ದಿತು. ಈ ತಾ|| 18 ರಿಂದ ಮನಿಯಾರ್ಡರ್ ಕಮೀಷನನ್ನು 10 ರೂ. ವರೆಗೂ ೨ ಆಣೆ ಮಾಡಲ್ಪಟ್ಟಿರುವುದರಿಂದ ಒಟ್ಟು 4¼ ಆಣೆ ಛಾರ್ಜು ಬೀಳುವಂತಾಗಿದೆ. ಇದೂ ಅಲ್ಲದೆ ವಿ. ಪಿ. ಪ್ಯಾಕೆಟ್ಟುಗಳನ್ನು ರಿಜಿಸ್ಟರ್ ಮಾಡಿಸಲು ಒಬ್ಬ ಮನುಷ್ಯನು ಒಂದು ದಿವಸವೆಲ್ಲಾ ಪೋಸ್ಟಾಫೀಸ್ ಬಳಿ ಕಾದಿರಬೇಕಾಗಿರುವುದು. ಇಷ್ಟೆಲ್ಲಾ ತೊಂದರೆಗಳಿಗೊಳಗಾಗಿ ಕಳುಹಿಸಲ್ಪಟ್ಟ ವಿ. ಪಿ. ಗಳಲ್ಲಿ ಅನೇಕ ವಾಪಸ್ ಬರುವುದರಿಂದ ನಮಗೆ ಅತ್ಯಂತ ನಷ್ಟವಾಗುವುದಾದ ಪ್ರಯುಕ್ತ ಚಂದಾದಾರರುಗಳು ಇನ್ನುಮುಂದೆ ಹಣವನ್ನು ಮುಂಗಡವಾಗಿ ಮನಿಯಾರ್ಡರ್ ಮಾಡಿ ತಾವು ಹೆಚ್ಚಾಗಿ ಕೊಡಬೇಕಾದ ರಿಜಿಸ್ಟರ್ ಫೀ ೨ ಆಣೆಯನ್ನು ಉಳಿಸಿಕೊಳ್ಳುವುದಲ್ಲದೆ, ನಮಗಾಗುವ 2¼ ಆಣೆ ನಷ್ಟವನ್ನು ತಪ್ಪಿಸುವವರಾಗಬೇಕೆಂದು ಅಪೇಕ್ಷಿಸುತ್ತೇವೆ. ಹಾಗೆ ಮುಂಗಡ ಮನಿಯಾರ್ಡರ್ ಮಾಡದಿದ್ದವರಿಗೆ ಸ್ಟಾರ್ ಪತ್ರಿಕೆಯು ಖಂಡಿತವಾಗಿಯೂ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಹಳೆ ಚಂದಾದಾರರು ತಮ್ಮ ವಿಳಾಸದ ಎಡಪಕ್ಕದಲ್ಲಿರುವ ರಿಜಿಸ್ಟರ್ ನಂಬರನ್ನು ಮನಿಯಾರ್ಡರ್ ಕೂಪಿನಲ್ಲಿ ಮರೆಯದೆ ಬರೆದು ತಿಳಿಸಬೇಕು. ಮ್ಯಾನೇಜರ್.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಏಪ್ರಿಲ್ ತಾ|| ೨೪ನೆಯ ಭಾನುವಾರ.

ಸಹಾಯನಿರಾಕರಣಕಾರರು ಸಿನ್‌ಫಿನಿಯನರು.

ಲಾಲಾಲಜಪತರಾಯಿರವರು ಬೊಂಬಾಯಿಯಲ್ಲಿ ಮೊನ್ನೆ ತಾನೇ ಉಪನ್ಯಾಸ ಮಾಡುವಾಗ್ಗೆ ಮಿತವಾದಿಗಳನ್ನು ದೇಶದ್ರೋಹಿಗಳೆಂದೂ ಸರ್ಕಾರದ ಅಧಿಕಾರಿ ಕೂಟದಲ್ಲೇ ಸೇರಿಹೋದವರೆಂದೂ ದೂರಿದ್ದರು. ಅದರ ಮುಯ್ಯನ್ನು ತೀರಿಸಿಕೊಳ್ಳುವ ಉಪನ್ಯಾಸವನ್ನು ಕಳೆದವಾರದಲ್ಲಿ ಆ|| ಶ್ರೀನಿವಾಸ ಶಾಸ್ತ್ರಿಯವರು ಮಾಡಿದರು. ಈ ಶಾಸ್ತ್ರಿಯವರನ್ನು ಇಂಗ್ಲಂಡಿನಲ್ಲಿ ಜೂನ್ ತಿಂಗಳೊಳಗೆ ಕೂಡುವ ಸಾಮ್ರಾಜ್ಯಶಾಸನ ಸಭೆಗೆ ಭರತಖಂಡದ ಪ್ರತಿನಿಧಿಯಾಗಿ ಹಿಂದೂಸ್ಥಾನ ಸರ್ಕಾರದವರು ಕಳುಹಿಸಿಕೊಡುವವರಾಗಿದ್ದಾರೆ. ಈ ಸಂದರ್ಭವನ್ನನುಸರಿಸಿ ಪುಣೆಯ ದಕ್ಕನ್ ಸಭೆಯವರು ಶಾಸ್ತ್ರಿಯವರಿಗೆ ಒಂದು ದೊಡ್ಡ ಔತಣವನ್ನು ಮಾಡಿದರು. ಆ ಪಟ್ಟಣದ ಪ್ರಮುಖರೆಲ್ಲಾ ಬಂದಿದ್ದರು. ಅಗ್ಗೆ ಶಾಸ್ತ್ರಿಯವರು ಹೀಗೆ ಉಪನ್ಯಾಸ ಮಾಡಿದರು–"ಮಿತವಾದಿ ವರ್ಗದ ನಾಯಕರೆಲ್ಲರೂ ಅಧಿಕಾರಿಗಳೊಡನೆ ಸೇರಿಹೋಗಿರುವುದರಿಂದ ಈಗ ಭರತಖಂಡದಲ್ಲಿ ಮಿತವಾದ ಪಕ್ಷವೆಂಬುದು ಬೇರೆ ಇಲ್ಲವೆಂದು ಲಜಪತಿರಾಯಿಯವರು ಹೇಳಿದರು. ಸಿನ್‌ಫಿನ್ ಉದ್ಯಮ ಪ್ರಚಾರಕರೂ ಭರತಖಂಡಕ್ಕೆ ಸ್ವೇಚ್ಛೆಯನ್ನು ಸಂಪಾದಿಸಿಕೊಡತಕ್ಕವರೂ ಆಗಿರುವ ಇವರಿಗೆ ನಮ್ಮ ಮಿತವಾದಿಗಳನ್ನು ಕುರಿತು ಇಷ್ಟು ಭಯವೇಕೋ ತಿಳಿಯಲಿಲ್ಲ. ನಮ್ಮ ಮಿತವಾದಿ ಸಭೆಗಳಿಗೆ ಸ್ವಲ್ಪ ಜನರು ಕೂಡುತ್ತಿರಬಹುದು. ಗಾಂಧಿಯವರ ಸಭೆಗೆ ಸಾವಿರಗಟ್ಟಲೆ ಜನರು ಕೂಡುತ್ತಿರಬಹುದು. ಆದರೆ ಅವರಲ್ಲಿ ನಿಜವಾದ ಸಹಾಯನಿರಾಕರಣಾವಲಂಬಿಗಳ ಸಂಖ್ಯೆಯು ಬೆರಲುಗಳ ಮೇಲೆ ಎಣಿಸುವಷ್ಟಕ್ಕಿಂತ ಹೆಚ್ಚಾಗಿಲ್ಲ. ಅದುಕಾರಣ ಈ ಸಹಾಯನಿರಾಕರಣಾವಲಂಬಿಗಳ ಪಕ್ಷದ ಮೇಲೆ ಪ್ರಜೆಗಳಿಗೆ ನಂಬುಗೆಯೇನಾದರೂ ಉಂಟೇ? ಸಂಖ್ಯೆಯನ್ನು ನೋಡಿ ನಾವು ಮೋಸಹೋಗಬಾರದು. ಇಷ್ಟು ದಿನ ಪಾಡುಪಟ್ಟರೂ ಅವರ ಉದ್ಯಮದಿಂದ ಯಾವ ಫಲವೂ ಆಗಿಲ್ಲ. ನಮ್ಮ ಪಾಠಶಾಲೆಗಳೂ, ಕೋರ್ಟುಗಳೂ, ಶಾಸನ ಸಭೆಗಳೂ ತಡೆಯಿಲ್ಲದೆ ನಡೆಯುತ್ತಲೇ ಇವೆ; ಯಾವುವೂ ಶೂನ್ಯವಾಗಿಲ್ಲ. ಮಿತವಾದಿಗಳ ಸಂಖ್ಯೆಯು ಸ್ವಲ್ಪವಾಗಿದ್ದರೂ ಪ್ರಜೆಗಳಲ್ಲಿ ಮಿತವಾದಿಗಳ ಅಭಿಪ್ರಾಯಗಳು ಪ್ರಬಲಿಸುತ್ತಿವೆ. ಆ ಕಾರಣದಿಂದಲೇ ಲಾಲಾಜಿ ಮೊದಲಾದ ಅತಿವಾದಿಗಳಿಗೆ ಮಿತವಾದಿಗಳೆಂದರೆ ಬಹು ಕೋಪ. ಮಿತವಾದಿಗಳು ಪ್ರಭುತ್ವ ಪಕ್ಷಾವಲಂಬಕರೆಂದು ನಿಂದಿಸಲ್ಪಡುತ್ತಿದ್ದಾರೆ. ಹಾಗಾದರೆ ಪರಂಜಪೆ ಮೊದಲಾದವರಿಗೆಲ್ಲಾ ಕ್ಷುಲ್ಲಕಾಭಿಪ್ರಾಯವೇ ಇರುವುದೇ? ದೇಶವು ಅನ್ಯಾಯವಾಗಿ ಅರಾಜಕದಲ್ಲಿ ಮುಳುಗಿಹೋಗದಂತೆ ಮಾಡಲು ಮಿತವಾದಿಗಳು ಪ್ರಯತ್ನಿಸುತ್ತಿದ್ದಾರೆ. ಪ್ರಭುತ್ವಪರಿಪಾಲನವನ್ನು ತೊಲಗಿಸಿಬಿಡಬೇಕೆಂಬ ಪ್ರಯತ್ನವು ನಡೆಯುತ್ತಿರುವಾಗ ಪ್ರಭುತ್ವದವರಿಗೆ ಸಾಧ್ಯವಾದಷ್ಟು ಸಹಾಯವನ್ನು ಮಾಡಬೇಕು. ಗಾಂಧಿಯವರೂ ಪಂಡಿತ ಮೋತೀಲಾಲ್ ನೆಹ್ರೂರವರೂ ದೇಶವನ್ನು ಅನ್ಯಾಯದ ಪಾಲುಮಾಡಬೇಕೆಂದಿದ್ದಾರೆ. ಹೀಗಿರುವಾಗ ನಾವು ಸುಮ್ಮನಿರಬೇಕೇ? ದೇಶಸೇವೆಯನ್ನು ಮಾಡುವಲ್ಲಿ ನಮಗಿರುವ ಅಭಿಪ್ರಾಯವನ್ನು ಅನುಸರಿಸಿ ನಾವು ಹಾಗೆ ಇರಲಾರೆವು. ನಾವು ಕೂಡ ಸ್ವರಾಜ್ಯಸಂಪಾದನೆಗಾಗಿಯೇ ಪಾಟುಪಡತಕ್ಕವರು. ಆದರೆ ನಮ್ಮ ಪ್ರಯತ್ನಗಳ ರೀತಿಯೇ ಬೇರೆ. ನಮ್ಮ ದೇಶಕ್ಕೆ ಸಿನ್‌ಫಿನಿಯನ್ ಪದ್ಧತಿಯನ್ನವಲಂಬಿಸುವುದರಿಂದ ಪ್ರಯೋಜನವಿಲ್ಲ. ಐರ್ಲಂಡಿನ ಸಿನ್‌ಫಿನಿಯನರು ಸ್ವರಾಜ್ಯಸಂಪಾದನೆಗಾಗಿ ಅವಲಂಬಿಸಿದ ಪದ್ಧತಿಯಿಂದ ಅವರು ಎಷ್ಟು ಬಾಧೆಪಡುತ್ತಿರುವರೋ ಅಂಥಾ ಬಾಧೆಗೆ ನಾವೂ ಕೂಡ ಒಳಗಾಗುವುದು ಒಳ್ಳೆಯದಲ್ಲ. ಮಿತವಾದಿಗಳು ದೀರ್ಘಾಲೋಚನೆ ಮಾಡಿ ಸ್ವಲ್ಪಸ್ವಲ್ಪವಾಗಿ ಸ್ವರಾಜ್ಯಸಂಪಾದನೆಯನ್ನು ಮಾಡಲು ನಿಶ್ಚಯಿಸಿ, ಅದಕ್ಕಾಗಿ ಈಗ ದೊರೆದಿರುವಷ್ಟನ್ನು ಅಂಗೀಕರಿಸಿರುವರು. ಈಗ ಜರುಗಿರುವ ಸಂದರ್ಭಗಳನ್ನೆಲ್ಲಾ ಅವಲೋಕಿಸುವಲ್ಲಿ ಆಂಗ್ಲ ಜನರ ಮನಸ್ಸು ಮೊದಲಂತೆ ಅಲ್ಲದೆ ಎಷ್ಟೋ ಮಾರ್ಪನ್ನು ಪಡೆದಿರುವುದೆಂದು ನಾವು ಗ್ರಹಿಸಿ ಅವರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯವೆಂದು ತಿಳಿದೆವು.''

ಇದೇ ಶಾಸ್ತ್ರಿಯವರ ಉಪನ್ಯಾಸದ ಮುಖಾಭಿಪ್ರಾಯ. ಹೀಗೆ ಮಿತವಾದಿ ಅತಿವಾದಿ ಪಕ್ಷದ್ವಯವೂ ಆತ್ಮಶ್ಲಾಘನೆ ಪರದೂಷಣೆಯಲ್ಲಿ ತೊಡಗಿರುವುವು. ಈ ದ್ವೈವಿಧ್ಯವು ಪರಸ್ಪರ ಮತ್ಸರಕ್ಕೆಡೆಗುಡುತ್ತಿದೆ. ಅದು ಸರಿಯಲ್ಲ. ರಥವನ್ನು ಎಳೆಯುವವರಂತೆ ಮಿತವಾದಿಗಳಿದ್ದರೆ ಅದನ್ನು ತಪ್ಪುದಾರಿಗೆ ಹೋಗಗುಡದಿರುವ ಎದ್ದನಂತೆ ಅತಿವಾದಿಗಳಿರಲಿ. ಅವರವರು ಅವಲಂಬಿಸಿರುವ ಮಾರ್ಗಗಳಲ್ಲಿ ದೃಢನಿಷ್ಠೆಯಿಂದ ಕೆಲಸಮಾಡಲಿ. ಉಭಯರ ಪ್ರಯತ್ನದಿಂದಲೂ ದೇಶಕ್ಕೆ ಹಿತವಾಗಲಿ. ಬರಿಯ ಕಾವನ್ನು ಕೊಡುವುದೊಂದೇ ಕಮ್ಮಾರನ ಉದ್ಯೋಗಕ್ಕೆ ಸಾಧಕವಲ್ಲ. ಅದರ ಜತೆಗೆ ಹದವರಿತು ಕುಡಿಸುವ ನೀರೂ ಇರಬೇಕಲ್ಲವೆ? ಅದರಂತೆ ಅತಿವಾದಿ ಮಿತವಾದಿಗಳ ಉಜ್ಜುಗವೆರಡೂ ದೇಶಕ್ಕೆ ಸ್ವರಾಜ್ಯವನ್ನು ಸಮೀಪಿಸುವಂತೆ ಮಾಡಲಿ ಆದರೆ ಹೆಚ್ಚು ಕಾವಿನಿಂದ ಕುಲುಮೆ ಮನೆಯೇ ಹೊತ್ತಿಕೊಳ್ಳುವಂತೆ ಆಗದಿರಲಿ.

ಲಾರ್ಡ್ ರೀಡಿಂಗ್‌ರವರು ರೀಡಿಂಗನ್ನೇ ಮಾಡಿದರು.

ವೈಸ್ರಾಯಿ ಮತ್ತು ಗೌರ್ನರ್ ಜನರಲ್ ಪದವಿಗೆ ಲಂಡನ್ ಪ್ರಧಾನ ನ್ಯಾಯಮೂರ್ತಿ ಲಾರ್ಡ್ ರೀಡಿಂಗ್‌ರವರು ಬಂದಿರುವುದರಿಂದ ಇಲ್ಲಿಯ ಪ್ರಭುತ್ವಕ್ರಮಗಳಲ್ಲಿ ಅಪೂರ್ವವಾದ ಬದಲಾವಣೆಗಳಾಗಬಹುದೆಂದು ಅನೇಕರು ಭಾವಿಸುತ್ತಿರುವರು. ಪಾರ್ಲಿಮೆಂಟ್ ಮೆಂಬರಾದ ಕರ್ನಲ್ ವೆಡ್ಜಿವುಡ್‌ರವರು, ದಿಲ್ಲಿಯ ಸಯ್ಯದ್ ರಜಾ ಆಲಿಯವರು, ಬೊಂಬಾಯಿಯ ಬೊಮ್ಮಂಜಿಯವರು ಮೊದಲಾದ ಪ್ರಮುಖರು ಕೆಲರು ಈ ಹೊಸ ವೈಸ್ರಾಯರು ಬಂದಿರುವ ಈ ಸಮಯದಲ್ಲಿ ಭಾರತೀಯರು ಸಹಾಯನಿರಾಕರಣ ಚಳವಳಿಯನ್ನು ನಿಲ್ಲಿಸಿರುವುದು ಯುಕ್ತವೆಂದೂ, ಈ ರೀಡಿಂಗ್ ಪ್ರಭುಗಳಿಂದ ಭರತಖಂಡದ ಇಷ್ಟಾರ್ಥಸಿದ್ಧಿಯಾಗುವುದೆಂದೂ ಉಪದೇಶಿಸಿರುವರು. ಆದರೆ ಕಳೆದವಾರ ಲಾರ್ಡ್ ರೀಡಿಂಗ್‌ರವರು ಲಾಹೋರ್ ಪಟ್ಟಣಕ್ಕೆ ದಯಮಾಡಿಸಿದ ವೇಳೆಯಲ್ಲಿ ಅಲ್ಲಿಯ ಸಂಸ್ಥಾನಾಧಿಪತಿಗಳೆಲ್ಲಾ ಸೇರಿ ನಡೆಯಿಸಿದ ಔತಣದ ಸಂದರ್ಭದೊಳಗೆ ಇವರು ಮಾಡಿದ ಭಾಷಣವನ್ನು ನೋಡುವಲ್ಲಿ, ಗಾಳಿಗಿದಿರಾಗಿಯಾದರೂ ನೇರವಾಗಿ ಓಡುತ್ತಿರುವ ಸಶಕ್ತಮನುಷ್ಯನೂ ಕೂಡ ರಾಟವಾಳೆಯನ್ನು ಏರಿ ಕುಳಿತುಬಿಟ್ಟರೆ ಅದರ ಗತಿಗನುಸಾರವಾಗಿಯೇ ಆತನು ಸುತ್ತುವುದೇ ಧರ್ಮವಾಗಿರುವಂತೆ, ಅಧಿಕಾರಪದಾರೂಢರಾಗುವುದಕ್ಕೆ ಮುಂಚೆ ಯಾವ ತೆರದ ನ್ಯಾಯಸೂತ್ರಗಳನ್ನು ವಿಧವಿಧವಾಗಿ ಪ್ರತಿಪಾತಿಸುತ್ತಿದ್ದವರೂ ಸಹ ಆ ಪದವಿಗೆ ಏರಿದ ಕೂಡಲೇ ಅದರ ಅನುಸ್ಯೂತ ಶಕ್ತಿಗೆ ಅಧೀನರಾಗಿಯೇ ತೀರುವುದು ನಿಜವೆಂಬುದನ್ನು ಸಿದ್ಧಾಂತಪಡಿಸಿರುತ್ತದೆಂದು ದೇಶೀಯರು ಎಂದುಕೊಳ್ಳಲು ಆರಂಭಿಸಿರುತ್ತಾರೆ.

ಭರತಖಂಡದಲ್ಲಿ ಈಗ ಎದ್ದಿರುವ ಸಹಾಯನಿರಾಕರಣದ ಚಳವಳಿಗೆ ಹೆಚ್ಚು ಕಾವನ್ನು ಕೊಟ್ಟಿರುವ ವಿಷಯಗಳಲ್ಲಿ ಪಂಜಾಬಿನಲ್ಲಿ ನಡೆದುಹೋದ ನರವಧೆಯ ವಿಷಯವೊಂದು, ತುರ್ಕಿಯ ಸಮಸ್ಯೆಯೊಂದು ಇವೆರಡೇ ಮುಖ್ಯವು. ಇವೆರಡರ ಹಿಂದೆ ಸ್ವರಾಜ್ಯಕಾಂಕ್ಷೆಯಿರುವುದು. ಈ ಕಾರಣಗಳಲ್ಲಿ ಮೊದಲನೆಯದು ಪಂಜಾಬಿಗೆ ಸಂಬಂಧಿಸಿದುದರಿಂದಲೇ ವೈಸ್ರಾಯರು ಮೊಟ್ಟ ಮೊದಲು ಅದರ ಪರಿಸ್ಥಿತಿಯ ಪರಿಶೋಧನೆಗಾಗಿ ಅಲ್ಲಿಗೆದಯಮಾಡಿಸಿದರೆನ್ನಬಹುದು. ಈ ಸಂದರ್ಭದಲ್ಲಿ ಅವರು ಅಲ್ಲಿ ಮಾಡುವ ಭಾಷಣವೂ ಸಹ ದೇಶೀಯರಿಂದ ಆತುರವಾಗಿ ನಿರೀಕ್ಷಿಸಲ್ಪಡುತ್ತಿದ್ದಿತು. ಸಭೆಯಲ್ಲಿ ಅವರಿಗೆ ಒಪ್ಪಿಸಲ್ಪಟ್ಟ ವಿಜ್ಞಾಪನ ಪತ್ರಿಕೆಗೆ ವೈಸ್ರಾಯರು ಉತ್ತರವನ್ನು ಕೊಟ್ಟ ಸಂದರ್ಭದಲ್ಲಿ ಜಲಿಯನ್‌ವಾಲಾಬಾಗ್ ವಧೆಯನ್ನು ಕುರಿತೂ ಪ್ರಸ್ತಾಪಿಸದೆ ಇರುವ ಹಾಗೆಯೇ ಇಲ್ಲವಷ್ಟೆ. ಅದರ ಸಂಬಂಧದಲ್ಲಿ ಈ ರೀಡಿಂಗ್ ಪ್ರಭುಗಳು ಹೊಸದೇನನ್ನೂ ಅಪ್ಪಣೆ ಕೊಡಿಸಲಿಲ್ಲ. ಮತ್ತೇನೆಂದರೆ—ಹಿಂದೆ ಈ ಸಂಬಂಧವಾಗಿ ಕನ್ನಾಟ್‌ಪ್ರಭುಗಳು ಹೇಳಿದ್ದುದನ್ನೇ ಮತ್ತೆ ರೀಡಿಂಗ್ (ಪಠನೆ) ಮಾಡಿದರು. ಎಂದರೆ "ಅವಶ್ಯಕವಾದೆಡೆಯಲ್ಲಿ ಕ್ಷಮಿಸಿರಿ. ನಡೆದುಹೋದ ತಪ್ಪನ್ನು ಕ್ಷಮಿಸಿಬಿಡಿರಿ, ಮುಂದೆ ಸರ್ವರೂ ಕಲೆತು ದೇಶಾಭಿವೃದ್ಧಿಗಾಗಿ ಪಾಟುಪಡಿರಿ" ಎಂಬುದನ್ನೇ ಮತ್ತೆ ಜ್ಞಾಪಿಸಿಕೊಟ್ಟರು. ಅದರ ಮೇಲೆ ತಮಗೆ ಈ ನೂತನ ಪದವಿಯು ದೊರೆತಾರಭ್ಯ ಅಮೃತಸರಸ್ಸಿನಲ್ಲಿ ನಡೆದ ಕೃತ್ಯದ ಛಾಯೆಯೇ ಮನಸ್ಸಿನಲ್ಲಿ ಹುಚ್ಚುತ್ತಿರುವುದೆಂದೂ, ಸಾಮ್ರಾಜ್ಯ ಶಾಸನ ಸಭೆಯಲ್ಲಿ ಅಮೃತಸರಸ್ಸಿನ ಕೊಲೆಯ ವಿಷಯದ ಚರ್ಚೆ ಬಂದಾಗ ಪ್ರಭುತ್ವಪಕ್ಷದಲ್ಲಿ ಆ|| ವಿನ್‌ಸೆಂಟ್‌ರವರು ನುಡಿದ ಅಭಿಪ್ರಾಯಗಳನ್ನು ಸಾವಧಾನವಾಗಿ ಪರ್ಯಾಲೋಚಿಸಿಕೊಂಡರೆ ನಿಮಗೆ ಪ್ರಯೋಜನವಾಗುವುದೆಂದೂ ಹೇಳಿ ಕಣ್ಣೊರಸಿದರು. ಹೆಚ್ಚಿನ ವಿಷಯವೇನೆಂದರೆ–ಅಲ್ಲಿ ಬಾಧಿತರಾದ ಯೂರೋಪಿಯನ್ನರಿಗೆ ಪ್ರಭುತ್ವದವರು ಎಷ್ಟು ಸಹಾಯಮಾಡಿದರೋ ಅಷ್ಟೇ ಸಹಾಯವನ್ನು ಬಾಧಿತರಾದ ಭಾರತೀಯರಿಗೂ ಮಾಡುವಂತೆ ಪಂಜಾಬು ಗೌರ್ನರವರಿಗೆ ತಾವು ಸೂಚಿಸುವುದಾಗಿ ಅಪ್ಪಣೆ ಮಾಡಿದರು. ಮತ್ತು ಆ ಕೂಡಲೇ ಹಾಗೆ ಇಂಡ್ಯಾ ಪ್ರಭುತ್ವದ ಅಪ್ಪಣೆಯನ್ನೂ ಕೊಡಿಸಿದರು. ಬಾಧಿತರಾದ ಆಂಗ್ಲ ಜನರಿಗೆ ಸಮಾನವಾಗಿ ಬಾಧಿತರಾದ ಭಾರತೀಯರಿಗೂ ಧನಸಹಾಯಮಾಡುವ ವಿಷಯದಲ್ಲಿ ಒಂದು ಕಮಿಟಿಯನ್ನು ಏರ್ಪಡಿಸುವುದಾಗಿ ಪಂಜಾಬು ಗೌರ್ನರವರು ತಮ್ಮೊಡನೆ ಹೇಳಿರುವುದಾಗಿಯೂ ತಿಳಿಯಿಸಿದರು. ಆಂಗ್ಲ ಜನರು ಸ್ವಲ್ಪ ಸಂಖ್ಯಾಕರಾಗಿರುವರೆಂತಲೂ, ಭಾರತೀಯರು ವಿಶೇಷ ಸಂಖ್ಯಾಕರಾಗಿರುವರೆಂತಲೂ, ನೀವೆಲ್ಲರೂ ಪ್ರಭುತ್ವದವರ ವಿಷಯದಲ್ಲಿ ಸಂಶಯವನ್ನು ತ್ಯಜಿಸಿಬಿಟ್ಟು, ಅವರ ನ್ಯಾಯಮಾರ್ಗವನ್ನು ನಂಬಿ, ನೂತನ ಸಂಸ್ಕರಣಗಳ ದ್ವಾರಾ ಗಮ್ಯಸ್ಥಾನವನ್ನು ಸೇರುವುದಕ್ಕೆ ದೇಶದ ಮೇಲ್ಮೆಗಾಗಿ ಅವರು ಮಾಡುತ್ತಿರುವ ಪ್ರಯತ್ನಗಳಿಗೆ ದೇಶಿಯರೆಲ್ಲರೂ ಕಲೆತು ಸಹಾಯಮಾಡಬೇಕೆಂತಲೂ ಕೋರಿದರು.

ನಡೆದುಹೋದ ಜಲಿಯನ್‌ವಾಲಾಬಾಗಿನ ವಧೆಯ ವಿಷಯದಲ್ಲಿ ಯಾವ ವೈಸ್ರಾಯರೇ ಆಗಲೀ ಅವರ ಮೇಲಣ ಇನ್ನಾರೇ ಆಗಲೀ ಇನ್ನಾವ ಪರಿಹಾರವನ್ನು ಕಲ್ಪಿಸುವರೆಂದು ನೆನಸುವುದೂ ಬರಿಯ ಭ್ರಮೆಯೇ ಸರಿ. ಹಾಗೇನಾದರೂ ಆಗುವುದಿದ್ದರೆ ಕನ್ನಾಟ್ ಪ್ರಭುಗಳ ಮುಖವಚನದಿಂದಲೇ ಹೊರಡುತ್ತಿದ್ದಿತು. ಅವರ ಆಗಮನದ ಸಂದರ್ಭದಂಥ ವಿಶೇಷ ಸಮಯವೇ ಅಂಥ ಫಲವನ್ನುಂಟುಮಾಡಿಕೊಡದೆ ಹೋಗಿರುವಾಗ್ಗೆ ೫ ವರ್ಷಕ್ಕೊಂದುಸಲ ಸಾಮಾನ್ಯವಾಗಿ ನಡೆಯುತ್ತಿರುವ ವೈಸ್ರಾಯರುಗಳ ಬದಲಾವಣೆಯ ಸಂದರ್ಭವು ವಿಶೇಷ ಸಂದೇಶವಾವುದನ್ನು ತಾನೇ ತಂದೀತು? ಅಲ್ಲದೆ ಜಲಿಯನ್‌ವಾಲಾಬಾಗಿನ ವಧೆಯ ಸಂಬಂಧದಲ್ಲಿ ಪಾರ್ಲಿಮೆಂಟಿನಲ್ಲೇ ಅಷ್ಟೊಂದು ಕೋಲಾಹಲವು ನಡೆದುಹೋಗಿರುವಾಗ, ಮರಳಿ ಅದರ ಅಪ್ಪಣೆಯಿಲ್ಲದೆ ಮಂತ್ರಿಮಂಡಲದವರು ಏನನ್ನು ತಾನೇ ಮಾಡಲಾದೀತು? ಈ ಕಾರಣದಿಂದ ಈ ಸಂಬಂಧವಾಗಿ ಮೂರ್ಖ ಪಟ್ಟನ್ನು ಹಿಡಿಯುವುದು ಅಷ್ಟೇನೂ ಫಲಪ್ರದವಾಗಲಾರದು. ಅಲ್ಲದೆ ಸರ್ಕಾರದ ಪಕ್ಷದಿಂದ ವಿನ್‌ಸೆಂಟರ ಮುಖೇನ ಕ್ಷಮಾಪಣೆಯ ವಚನವು ಹೊರಬಿದ್ದೇ ಹೋಗಿದೆ. ಕನ್ನಾಟ್ ಪ್ರಭುಗಳು ಸಹ ಕ್ಷಮಿಸಿಬಿಡಿರಿ ಎಂದು ಕೋರಿದ್ದಾರೆ. ಇದರ ಮೇಲೂ ಹಠತೊಡುವುದೆಂದರೆ ಅಷ್ಟೇನೂ ಗೌರವಪ್ರದವೂ ಯಶಸ್ಕರವೂ ಆಗಲಾರದು. ಮತ್ತು ಈ ಸಂಬಂಧದಲ್ಲಿ ರೀಡಿಂಗ್ ಪ್ರಭುಗಳಿಗಾದರೂ ಬೇರೆತೆರದ ಉತ್ತರವನ್ನು ಕೊಡುವುದು ಸಾಧ್ಯವಲ್ಲದಿರುವಾಗ, ಇದರಿಂದಲೇ ಅವರ ಧೋರಣೆಯನ್ನೆಲ್ಲಾ ತೂಗಿ ನಿರಾಶೆಗೊಳ್ಳುವುದು ವಿಹಿತವಲ್ಲ.

ಮಾವಳರ ಸತ್ಯಾಗ್ರಹ.

ಪೂನಾಜಿಲ್ಲೆಗೆ ಸೇರಿದ ಮುಳಸಿಪೇಟೆಯ ಹತ್ತಿರ ಮೂಲಾ ನದಿಗೆ ಅಣೆಕಟ್ಟೆ ಹಾಕಿ ಪ್ರವಾಹಪಾತದಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಲು ತಾತಾ ಹೈಡ್ರೋ ಎಲೆಕ್ಟ್ರಿಕ್ ಕಂಪೆನಿಯವರು ಪ್ರಯತ್ನಿಸಿರುವರಷ್ಟೆ. ಈ ಕಾರ್ಯದಿಂದ ಆ ಸುತ್ತಿನಲ್ಲಿರುವ ಮಾವಳರೆಂಬ ಹೆಸರಿನ ರೈತರ ಗ್ರಾಮಾದಿಗಳು ಮುಳುಗಡೆಗೆ ಬರುವ ಕಾರಣ, ಅವರು ಇದಕ್ಕೆ ನಿರೋಧಿಸಿ ಸಭೆಗಳ ಮೂಲಕವೂ ವಿಜ್ಞಾಪನ ಪತ್ರಗಳ ಮೂಲಕವೂ ಸರ್ಕಾರಕ್ಕೆ ಬಿನ್ನಯಿಸಿಕೊಂಡು ಈ ಕೆಲಸವನ್ನು ನಿಲ್ಲಿಸಿಬಿಡಬೇಕೆಂದು ಕೇಳಿಕೊಂಡರು. ಫಲವಾಗದುದರಿಂದ ಈಗ ಸತ್ಯಾಗ್ರಹವ್ರತವನ್ನವಲಂಬಿಸಿ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಹೇಗೆಂದರೆ– ಕಳೆದ ತಾ|| ೧೬ ರಲ್ಲಿ ಈ ರೈತರುಗಳಲ್ಲಿ ಅನೇಕರು ಅಣೆಕಟ್ಟಿನ ಕೆಲಸ ನಡೆಯುವ ಸ್ಥಲಕ್ಕೆ ಹೋದರು. ಅಲ್ಲಿ ನಿರ್ಮಿಸಲ್ಪಡುವ ಅಡ್ಡಕಟ್ಟೆಯು ೪ ಫರ್ಲಾಂಗು ದೂರವಾಗಿಯೂ ೧೦೦ ಅಡಿಗಳೆತ್ತರವಾಗಿಯೂ ಇರುವುದು. ಕೆಲಸವು ಮುಖ್ಯವಾಗಿ ಮೂರು ಸ್ಥಲಗಳಲ್ಲಿ ನಡೆಯುವುದು. ಆ ಪ್ರತಿಯೊಂದು ಸ್ಥಲದಲ್ಲೂ ಈ ಮಾವಳ ರೈತರು ಅಡ್ಡಡ್ಡಲಾಗಿ ನೂರಾರುಜನರು ಮಲಗಿಕೊಂಡು ಕೈಜೋಡಿಸಿ ದೇವತಾಸ್ತೋತ್ರವನ್ನು ಮಾಡುತ್ತಿದ್ದರು. ತಾತಾ ಕಂಪೆನಿಯ ಇಂಜನಿಯರ್ ಕಾಮಿರಾನ್‌ರವರು, ಕಂಟ್ರಾಕ್ಟರುಗಳು, ಕೂಲಿಜನರು, ಪೋಲೀಸ್ ಇನ್‌ಸ್ಪೆಕ್ಟರು, ಸೂಪರಿಂಟೆಂಡೆಂಟರು ಮೊದಲಾದವರೆಲ್ಲಾ ಕೆಲಸವನ್ನು ನಡೆಯಿಸುವ ಸ್ಥಲಕ್ಕೆ ಹೋಗಿ ನೋಡುವಲ್ಲಿ ರೈತರು ಅಡ್ಡಲಾಗಿ ಮಲಗಿರುವುದು ಗೋಚರಿಸಿತು. ಹದಿಯನ್ನು ಮೆಟ್ಟಬೇಕಾದ ಹಳ್ಳದಲ್ಲಿ ಜನರೇ ಮಲಗಿದ್ದುದರಿಂದ ಅವರ ಮೇಲೆ ಜಲ್ಲಿಯನ್ನು ಸುರಿದು ಕೆಲಸ ನಡೆಯಿಸಲಿಕ್ಕೆ ಕೂಲಿಕಾರರಿಗೆ ಅವಕಾಶವಿಲ್ಲದೆ ಹೋಯಿತು. ಮಲಗಿರುವವರ ಮೇಲೆ ಪ್ರವಾಹದ ನೀರನ್ನು ಹರಿಯಿಸಿ ಅವರನ್ನೇಳುವಂತೆ ಮಾಡಿ ಕೆಲಸವನ್ನು ಸಾಗಿಸಿರೆಂದು ಕೂಲಿಕಾರರಿಗೆ ಇಂಜನಿಯರು ಆಜ್ಞಾಪಿಸಿದರು. ಅದರಂತೆ ಎಷ್ಟು ನೀರನ್ನು ಅವರ ಮೇಲೆ ಹರಿಯಿಸಿದರೂ ಒಬ್ಬರೂ ಕದಲಲಿಲ್ಲ. ಅಲ್ಲಿ ಕೆಲಸವನ್ನು ನಿಲ್ಲಿಸಿ ಮತ್ತೊಂದು ಕಡೆಯ ಕೆಲಸದ ಸ್ಥಲಕ್ಕೆ ಹೋದರು. ಅಲ್ಲೂ ರೈತರು ನಿಬಿಡವಾಗಿ ಮಲಗಿದ್ದರು. ಅಲ್ಲಿಂದ ಮುಂದಣ ಸ್ಥಲಕ್ಕೆ ಹೋಗಿ ನೋಡಲು ಅಲ್ಲೂ ಹಾಗೆಯೇ ಇದ್ದು ಕೂಲಿಕಾರರಿಂದ ಎಷ್ಟು ಪ್ರಯತ್ನಮಾಡಿಸಿದರೂ ಸತ್ಯಾಗ್ರಹಿಗಳು ಕದಲದೆ ಇದ್ದುದರಿಂದ ಕೆಲಸವನ್ನೇ ನಿಲ್ಲಿಸಿಬಿಡಬೇಕಾಯಿತು. ಈ ಸಂದರ್ಭದಲ್ಲಿ ದೌರ್ಜನ್ಯಕ್ಕೆ ಯಾರೂ ತೊಡಗಲಿಲ್ಲ. ನಡೆಯುತ್ತಿದ್ದ ವಿದ್ಯಮಾನವನ್ನೆಲ್ಲ ಕರಂದಿಕರ್, ಗೋಖಲೆ, ಬಾಪತ್, ಕನಿತ್ಕರ್, ರಾನಡೆ ಮೊದಲಾದ ಪೂನಾ ಪ್ರಮುಖಜನರು ನೋಡುತ್ತ ನಿಂತಿದ್ದರು. ಪೋಲೀಸರು ಯಾವುದಕ್ಕೂ ಪ್ರವೇಶಿಸಲಿಲ್ಲ. ಅದೇ ದಿನ ಮಧ್ಯಾಹ್ನ ೨ ಗಂಟೆಯ ಮೇಲೆ ತಾತಾ ಕಂಪೆನಿಯ ಅಧಿಕಾರಿಗಳಲ್ಲೊಬ್ಬರಾದ ಭಾಭಾರವರು ಅಣೆಕಟ್ಟಿನ ಸ್ಥಲಕ್ಕೆ ಹೋಗಿ, ಹೇಗಾದರೂ ಕೆಲಸವನ್ನು ಸಾಗಿಸಲೇಬೇಕೆಂದು ಕೂಲಿಕಾರರಿಗೆ ಆಜ್ಞಾಪಿಸಿದರು. ಆಗಲೂ ಮಲಗಿದ್ದ ಜನರ ಮೇಲೆ ತಣ್ಣೀರನ್ನು ತಪ್ಪಿಸಿ ಮರಳುವ ಬಿಸಿನೀರನ್ನು ಹರಿಯಿಸಬೇಕೆಂದು ಕೂಲಿಕಾರರಿಗೆ ಅಪ್ಪಣೆ ಮಾಡಿದರು. ಅದಕ್ಕೆ ಅವರು ಒಪ್ಪಲಿಲ್ಲ. ಇಂಜನಿಯರ್ ಕಾಮರಾನ್‌ರವರೂ ಭಾಭಾರವರೂ ಸಹ ತಾವೇ ಕೊಳಾಯಿಗಳ ಮೂಲಕ ಬಿಸಿನೀರನ್ನು ಅವರುಗಳ ಮೇಲೆ ಹರಿಯಿಸಿದರು. ಅದರಿಂದ ಎಷ್ಟು ಬಾಧೆಯಾದರೂ ಆಗಲೂ ರೈತರು ಕದಲಲಿಲ್ಲ. ಹೀಗೆ ತಾವು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಗಲು ಆ ದಿನದ ಕೆಲಸವನ್ನೇ ನಿಲ್ಲಿಸಿಬಿಡಬೇಕಾಯಿತು. ಮರುದಿನ ತಾ|| ೧೭ನೆ ಭಾನುವಾರ ಬೆಳಗ್ಗೆ ಸತ್ಯಾಗ್ರಹಿಗಳು ಕಟ್ಟೆಯ ಬಳಿಗೆ ಹೋಗಿ ಮೊದಲಂತೆಯೇ ಸಾಲುಸಾಲಾಗಿ ಮಲಗಿಕೊಂಡಿದ್ದರು. ಅವರಲ್ಲಿ ಕೆಲ ಸ್ತ್ರೀಯರೂ ಇದ್ದರು. ಕೇಳ್ಕರ್ ಮೊದಲಾದ ಪ್ರಮುಖರೂ ಹೋಗಿದ್ದರು. ಕೆಲಸ ನಡೆಯಿಸುವುದಕ್ಕೆ ಕಂಪೆನಿಯವರು ಪ್ರಯತ್ನಮಾಡಿದರು. ಸ್ಥಿತಿಯು ಪೂರ್ವದಂತೆಯೇ ಇದ್ದಿತು. ಕೇಳ್ಕರ್ ಮೊದಲಾದ ಪ್ರಮುಖರೇ ಈ ರೈತರ ಸತ್ಯಾಗ್ರಹ ವ್ರತಕ್ಕೆ ಬೆಂಬಲರಾಗಿರುವರೆಂಬುದನ್ನು ತಿಳಿದಿದ್ದವರಾದ ಕಂಪೆನಿಯ ಇಂಜನಿಯರೂ ಭಾಭಾರವರೂ ಸಹ ಕೇಳ್ಕರ್‌ರವರ ಬಳಿಗೆ ಹೋಗಿ ಈ ಸಂಬಂಧವಾಗಿ ಚರ್ಚಿಸಿ ತೀರ್ಮಾನಿಸುವುದಕ್ಕೆ ಅವಕಾಶವನ್ನು ಕೇಳಿದರು. ಅದಕ್ಕೆ ಅವರು ಒಪ್ಪಿದರು. ಆ ದಿನ ಸಾಯಂಕಾಲದವರೆಗೆ ಕೆಲಸವನ್ನು ನಡೆಯಿಸದೆ ನಿಲ್ಲಿಸುವುದಕ್ಕೆ ಕಂಪೆನಿಯವರು ಒಪ್ಪಿಕೊಂಡರು. ಬಳಿಕ ಕೇಳ್ಕರ್‌ರವರು ರೈತರೊಡನೆ ಮಾತನಾಡಿ ಸಮಾಧಾನಪಡಿಸಿ, ಪೂನಾಪಟ್ಟಣದಲ್ಲಿ ಇದಕ್ಕಾಗಿ ಒಂದು ಸಭೆ ನಡೆಯಿಸುವುದಕ್ಕೂ ಅಲ್ಲಿಗೆ ಉಭಯ ಪಕ್ಷದವರೂ ತಂತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಅವರವರ ಹೇಳಿಕೆಗಳನ್ನು ತಿಳಿಯಿಸುವುದಕ್ಕೂ ಅದರ ಮೇಲೆ ಸೂಕ್ತವಾದ ಪರ್ಯವಸಾನವನ್ನು ನಿರ್ಧರಿಸಲಿಕ್ಕೂ ಗೊತ್ತುಮಾಡಿರುವರು.

ರಾಜಕೀಯ ಚಳವಳಿಕಾರರಾದ ಅತಿವಾದಿಗಳ ಬೆಂಬಲದಿಂದ ಉದ್ವಿಗ್ನರಾದ ರೈತರು ದೇಶದ ಪರಿಶ್ರಮಾಭ್ಯುದಯಾದಿಗಳಿಗೂ ಕೂಡ ಹೇಗೆ ವಿಘ್ನಕಾರಿಗಳಾಗುವರೆಂಬುದನ್ನು ಇದರಿಂದ ತಿಳಿಯಬಹುದು. ಆದರೆ ಇಂಥ ಸಂದರ್ಭಗಳಲ್ಲಿ ಲ್ಯಾಂಡ್‌ಅಕ್ವಿಜಿಷನ್ ಆಕ್ಟಿನ ಪ್ರಕಾರ ಸ್ವತ್ತುಗಳ ಆಕ್ರಮಣವನ್ನು ಮಾಡುವ ಅಧಿಕಾರವು ಸರ್ಕಾರಕ್ಕಿದ್ದರೂ ಪ್ರಜೆಗಳಿಗೆ ಸಮಾಧಾನಕರವಾದ ಪರಿಹಾರವನ್ನು ಕೊಟ್ಟೇ ನಡೆಯಿಸಬೇಕಾದುದು ಮುಖ್ಯಕರ್ತವ್ಯವು.

ಒಳದೇಶದ ವೃತ್ತಾಂತಗಳು.

ಫಾರೆಸ್ಟ್ ಕನ್‌ಸರ್ವೇಟರಾದ ಮ|| ಎಂ. ಜಿ. ರಾಮರಾಯರು ಉದ್ಯೋಗದಿಂದ ನಿವೃತ್ತರಾಗುತ್ತಾರೆ.

ಧನದ ಅಭಾವದಿಂದ ಶಿವಮೊಗ್ಗಾ ಅರಸಾಳು ಲೋಹಮಾರ್ಗದ ಕೆಲಸವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿರುವುದಂತೆ.

ಚೀಫ್ ಇಂಜನಿಯರಾದ ಮ|| ಆರ್. ಎ. ಸುಂದರಂ ಅಯ್ಯರು ಬರುವ ತಿಂಗಳಲ್ಲಿ ಕೆಲಸದಿಂದ ನಿವೃತ್ತರಾಗುತ್ತಾರೆ.

ಹುಣಸೂರು ತಾಲ್ಲೂಕು ರಾಮಂದೂರಿನಲ್ಲಿ ಹೊಸದಾಗಿ ಸಂತೆ ಕೂಡಲು ವೈಶಾಖ ಶುದ್ಧ ೫ ಮಂಗಳವಾರ ಲಗ್ನ ನಿಶ್ಚಯಿಸಲ್ಪಟ್ಟಿರುವುದಾಗಿ ಒಬ್ಬ ಸ್ಥಳಿಕರು ತಿಳಿಸಿರುತ್ತಾರೆ.

ಬರುವ ಜೂನ್ ತಿಂಗಳ ಕಡೆಯಲ್ಲಿ ಉದ್ಯೋಗದಿಂದ ನಿವೃತ್ತರಾಗಬೇಕಾಗಿದ್ದ ಮ|| ಬಿ. ಬಸವಾರಾಧ್ಯರಿಗೂ, ಮ|| ಬಿ. ಎಸ್. ರಾಣೋಜಿರಾಯರಿಗೂ ಒಂದೊಂದು ವರ್ಷದವರೆಗೆ ಅಧಿಕಾರದವಧಿಯು ಹೆಚ್ಚಿಸಿಕೊಡಲ್ಪಟ್ಟಿತೆಂದು ಅರಿಯುತ್ತೇವೆ.

ಮೈಸೂರು ದೇಶದ ಎಲ್ಲೆಯಿಂದಾಚೆಗೆ ಈ ರೋಡಿನವರೆಗೆ ಲೋಹಮಾರ್ಗವನ್ನು ಹಾಕುವುದಕ್ಕೆ ಈಸ್ಟಿಂಡಿಯಾ ರೈಲ್ವೆ ಕಂಪೆನಿಯವರು ಒಪ್ಪಲಿಲ್ಲವೆಂದೂ ಅದುಕಾರಣ ನಂಜನಗೂಡಿನಿಂದ ಮುಂದಕ್ಕೆ ಲೋಹಮಾರ್ಗವನ್ನು ಬೆಳೆಯಿಸುವ ಪ್ರಯತ್ನವು ನಿಂತ ಹಾಗೆಯೇ ಸರಿಯೆಂದೂ ತಿಳಿಯುತ್ತೇವೆ.

ಬೆಂಗಳೂರಲ್ಲಿರುವ ಬಿನ್ನಿ ಮತ್ತು ಮಹಾರಾಜ ಬಟ್ಟೆಯ ಕಾರ್ಯಾಲಯಗಳು, ಅವುಗಳಲ್ಲಿ ಕೆಲಸಮಾಡುವ ಸಾವಿರಾರು ಜನರು ಮುಷ್ಕರ ಹಿಡಿದು ಕೆಲಸಕ್ಕೆ ಬಾರದೆ ನಿಂತಿರುವುದರಿಂದ, ಮುಚ್ಚಲ್ಪಟ್ಟಿರುವುದಾಗಿಯೂ ಹೊಗೆಬತ್ತಿಯ ಕಾರ್ಯಾಲಯದ ೧ ಸಾವಿರ ಕೆಲಸಗಾರರು ಕೆಲಸಕ್ಕೆ ಹೋಗದೆ ನಿಂತಿರುವುದಾಗಿಯೂ ತಿಳಿಯಬರುತ್ತದೆ.

ರಾಜಧಾನಿಯ ಮ|| ಎಚ್. ಸಂಪತ್ಕೃಷ್ಣಜೋಯಿಸರಿಂದ ಗುಣಿಸಲ್ಪಟ್ಟು ಪ್ರಕಟಿಸಲ್ಪಟ್ಟಿರುವ ದುರ್ಮತಿ ಸಂವತ್ಸರದ ಪಂಚಾಂಗವನ್ನೂ, ಬೆಂಗಳೂರು ಮ|| ಗಳಾದ ಎಂ. ಎಸ್. ರಾವ್ ಅಂಡ್ ಕೋ ಯವರೂ ತುಮಕೂರಿನ ರತ್ನಾಕರ ಪ್ರೆಸ್ಸಿನವರೂ ಪ್ರಕಟಿಸಿರುವ ನೂತನ ಸಂವತ್ಸರದ ಕ್ಯಾಲಂಡರುಗಳನ್ನೂ ಆದರದಿಂದ ಸ್ವೀಕರಿಸಿರುತ್ತೇವೆ.

ಕರ್ನಾಟಕ ಸಾಹಿತ್ಯಪರಿಷತ್ತಿನ ೬ ನೆ ಅಧಿವೇಶನವು ಬರುವ ಮೇ ತಾ|| ೧೯ ರಲ್ಲಿ ಚಿಕ್ಕಮಗಳೂರಿನೊಳಗೆ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ಪ್ರಕಟವಾಗಿದೆ. ಸಾಹಿತ್ಯಪರಿಷತ್ತಿಗೆ ಕೂಡುವ ಜನಸಂಖ್ಯೆಯೇ ಕಡಿಮೆ. ತತ್ರಾಪಿ ಲೋಹಮಾರ್ಗ ಸಂಬಂಧವಿಲ್ಲದ ಸ್ಥಲಗಳಲ್ಲಿ ಕೂಡಿದರೆ—ಇನ್ನು ಹೇಳುವುದೇನು?

ಮ|| ಎಂ. ವೆಂಕಟಕೃಷ್ಣಯ್ಯನವರು ಬ್ರಾಹ್ಮಣಾನಾಥಾಲಯದ ಧನಸಹಾಯವನ್ನೆತ್ತುವುದಕ್ಕಾಗಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಸಂಚರಿಸುತ್ತಿರುವರೆಂದು ಕೇಳುತ್ತೇವೆ. ಮುಪ್ಪಿನ ವಯಸ್ಸಿನಲ್ಲೂ ಅವರು ಸ್ವಜನಾಭ್ಯುದಯಕ್ಕಾಗಿ ಪಡುತ್ತಿರುವ ಶ್ರಮವನ್ನೂ ಸಾಹಸವನ್ನೂ ನೋಡಿ ಇತರ ವರ್ಗಗಳ ಪ್ರಮುಖರೆನಿಸಿಕೊಳ್ಳುವವರು ನಾಚುಗೆಪಡಬಾರದೆ?

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಮೋಡವಾಡುತ್ತ ೧–೨ ದಿನ ಸ್ವಲ್ಪ ಮಳೆಯು ಆಯಿತು. ಈ ಡಿಸ್ಟ್ರಿಕ್ಟಿನ ಎಲ್ಲ ತಾಲ್ಲೂಕುಗಳಲ್ಲೂ ಅಷ್ಟಿಷ್ಟು ಮಳೆಯಾಗಿರುತ್ತದೆ. ದೈವಕೃಪೆಯಿಂದ ಈಸಲ ಮುಂಗಾರು ಮಳೆಯು ಬೇಗನೆ ಬಿದ್ದುದರಿಂದ ಹಲವು ಕಡೆ ನೀರಿನ ಕ್ಷಾಮವು ತಪ್ಪುವುದಕ್ಕೂ ವಾಂತಭೇದಿ, ದನಗಳ ರೋಗ ಇತ್ಯಾದಿಗಳು ಹುಟ್ಟದಿರುವುದಕ್ಕೂ ಸಾಧಕವಾಯಿತೆಂದು ಹೇಳಬಹುದು. ಜೋಳದ ಬಿತ್ತನೆಯು ಈ ಸುತ್ತಿನಲ್ಲೆಲ್ಲಾ ನಡೆಯುತ್ತಿದೆ.

ವೈದ್ಯೋದ್ಯೋಗದಿಂದ ನಿವೃತ್ತೆಯರಾದ ಮಿಸ್. ಗೋವಿಂದರಾಜುಲು ಎಂ. ಡಿ, ಎಂ. ಬಿ. ಸಿ. ಯವರಿಗೆ ಬೆಂಗಳೂರಿನ ಮಹಿಳೆಯರು ಅಲ್ಲಿಯ ಲಾಲ್‌ಬಾಗಿನಲ್ಲಿ ಸೌಂದಾರಾಣಿಸಮೇಬ್ ಸೌ|| ಪಾರ್ವತೀಬಾಯಿಯವರ ಅಧ್ಯಕ್ಷತೆಯಲ್ಲಿ ಒಂದು ಅಭಿನಂದನ ಸಮಾರಂಭವನ್ನೇರ್ಪಡಿಸಿ ಅವರ ಗುಣಕಥನವನ್ನು ಮಾಡಿದುದಲ್ಲದೆ ಅವರ ಸನ್ಮಾನಾರ್ಥವಾಗಿ ಕೂಡಿಸಿರುವ ೧ ಸಾವಿರ ಫಂಡಿನ ಬಡ್ಡಿಯಿಂದ ಪ್ರತಿ ವರ್ಷವೂ ಬೆಂಗಳೂರು ವೈದ್ಯಶಾಲೆಯಲ್ಲಿ ಉತ್ತಮವಾಗಿ ಉತ್ತೀರ್ಣೆಯಾಗುವ ಒಬ್ಬ ವಿದ್ಯಾರ್ಥಿನಿಗೆ ಭಂಗಾರದ ಮೆಡಲನ್ನು ಕೊಡುವಂತೆ ಏರ್ಪಡಿಸಿದ್ದಾರೆ.

ಭರತಖಂಡದ ವೃತ್ತಾಂತಗಳು.

ದಕ್ಷಿಣ ಹಿಂದೂಸ್ಥಾನದ ಆಧುನಿಕ ಸಂಗೀತ ವಿದ್ವಾಂಸರಲ್ಲಿ ಸುಪ್ರಸಿದ್ಧರಾಗಿದ್ದ ಕೊನೇರಿ ರಾಜಪುರಂ ವೈದ್ಯನಾಥಯ್ಯರು ಪರಲೋಕವಾಸಿಗಳಾದರೆಂದು ಕೇಳಿ ದೇಶೀಯರೆಲ್ಲಾ ವ್ಯಸನಪಡದಿರಲಾರರು. ಇವರು ಸಂಗೀತ ಸ್ವರಕಲ್ಪನೆಯಲ್ಲೂ ಸ್ವತಃ ರಾಗಾಲಾಪನೆ ಮಾಡುವುದರಲ್ಲೂ ಅಪೂರ್ವತರ ನೂತನ ಪ್ರತಿಭೆಯನ್ನು ಪ್ರಕಟಿಸಿದ್ದರು.

ಎಡ್ವರ್ಡ್ ಚಕ್ರವರ್ತಿಯವರ ಸ್ಮಾರಕ ವಿಗ್ರಹವನ್ನು ಕಲ್ಕತ್ತಾ ಪಟ್ಟಣದ ಒಂದು ಚೌಕದಲ್ಲಿ ಸ್ಥಾಪಿಸುವವರಾಗಿದ್ದಾರೆ. ಇದಕ್ಕಾಗಿ ಎತ್ತಿದ ಫಂಡಿಗೆ ೫೦೭೩೫೫ ರೂ. ಗಳು ಕೂಡಿವೆ. ಬಡ್ಡಿ ೧೬೪೩೭೪ ರೂ. ಗಳು ಬಂದಿವೆ. ಇದರಲ್ಲಿ ವಿಗ್ರಹ ಪ್ರತಿಷ್ಠಾಪನೆಗೆ ೨೪೫೭೪೨ ರೂ. ಗಳು ಮಾತ್ರ ಹಿಡಿಯುತ್ತವೆ. ಉಳಿದ ಹಣವನ್ನೆಲ್ಲಾ ಪ್ರಜೆಗಳ ವೈದ್ಯಸಹಾಯಕ್ಕಾಗಿ ಉಪಯೋಗಿಸಲು ತೀರ್ಮಾನಿಸಿದ್ದಾರೆ.

ಅಲಹಾಬಾದ್ ಪಟ್ಟಣದ ಪೋಸ್ಟ್ ಖಜಾಂಚಿಯು ಅಲ್ಲಿಯ ಇಂಪೀರಿಯಲ್ ಬ್ಯಾಂಕಿನಿಂದ ೨೫ ಸಾವಿರ ರೂ. ಗಳ ಕರೆನ್ಸಿ ನೋಟುಗಳನ್ನು ತೆಗೆದುಕೊಂಡು ಸೈಕಲ್ಲಿನ ಮೇಲೆ ಬರುತ್ತಿರುವಾಗ ಹಗಲುಹೊತ್ತಿನಲ್ಲೇ ಮೂವರು ದೊಣ್ಣೆ ಹಿಡಿದುಕೊಂಡು ಇದಿರಿಗೆ ಬಂದು ಹೊಡೆದು ೨೨೦೦ ರೂ. ಗಳ ನೋಟುಗಳನ್ನೂ ೩೦೦ ರೂ. ಗಳ ಸ್ಟಾಂಪುಗಳನ್ನೂ ಅಪಹರಿಸಿಕೊಂಡು ಓಡಿದರು. ಖಜಾಂಚಿಗೆ ಏಟು ಬಿದ್ದಿದೆ. ಒಬ್ಬ ಬಂಡಿಯವನು ಆ ಸ್ಟಾಂಪುಗಳ ಚೀಲವು ತನಗೆ ಹಾದಿಯಲ್ಲಿ ಸಿಕ್ಕಿತೆಂದು ತಂದುಕೊಟ್ಟಿದ್ದಾನೆ. ಪೋಲೀಸರು ಪತ್ತೆಮಾಡುತ್ತಿದ್ದಾರೆ.

ಭರತಖಂಡದ ಅಸಹಾಯವಾದಿಗಳು ಒಂದು ಸ್ವರಾಜ್ಯಪತಾಕೆಯನ್ನೇರ್ಪಡಿಸಬೇಕೆಂದು ಯೋಚಿಸುತ್ತಿರುವರು. ಆ ಪತಾಕೆಯ ಮೇಲೆ ರಾಟೆಯ ಗುರ್ತಿರಬೇಕೆಂದು ಲಾಲಾ ಹಂಸರಾಜ್‌ರವರು ಸೂಚಿಸಿದುದನ್ನು ಮ|| ಗಾಂಧಿಯವರು ಒಪ್ಪಿದ್ದಾರೆ. ಆ ಧ್ವಜಪಟದಲ್ಲಿ ಹಿಂದೂಮತ ಚಿಹ್ನೆಯಾಗಿ ಹಳದಿ ರಂಗಿನ, ಮಹಮ್ಮದೀಯ ಮತಚಿಹ್ನವಾಗಿ ಹಸರು ರಂಗಿನ, ಇತರ ಮತಗಳೆಲ್ಲದರ ಚಿಹ್ನೆಯಾಗಿ ಬಿಳಿ ರಂಗಿನ ಗುರುತುಗಳಿರಬೇಕೆಂದೂ, ಪತಾಕೆಯು ಸ್ವದೇಶದ ಖಾದಿ ಬಟ್ಟೆಯಿಂದ ಮಾಡಲ್ಪಡಬೇಕೆಂದೂ, ಅದರ ಮೇಲೆ ರಾಟೆಯ ಚಿಹ್ನೆಯು ಸ್ಪಷ್ಟವಾಗಿರಬೇಕೆಂದೂ ಮ|| ಗಾಂಧಿಯವರು ಸೂಚಿಸಿರುವರು.

ಯಾವದ್ಭಾರತಾಯುರ್ವೇದ ಮಹಾಸಭೆಯ ೧೨ನೆ ಅಧಿವೇಶನವು ಕಳೆದ ತಾ|| ೬ ರಿಂದ ೪ ದಿವಸಗಳ ವರೆಗೆ ಬೊಂಬಾಯಿಯಲ್ಲಿ ಕವಿರಾಜಹರಣಚಂದ್ರಚಕ್ರವರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಯುರ್ವೇದ ವೈದ್ಯರು ಸರ್ಕಾರಿ ಬಿರುದುಗಳನ್ನು ಪರಿತ್ಯಜಿಸಬೇಕು, ಆಯುರ್ವೇದಕ್ಕೆ ಪ್ರತಿಕೂಲವಾಗಿ ನಿಂದಿಸುವವರಿಗೆ ಪ್ರತ್ಯುತ್ತರ ಕೊಡಲಿಕ್ಕೆ ಒಂದು ಸಂಘವನ್ನು ಸ್ಥಾಪಿಸಬೇಕು. ನಾನಾ ಪ್ರಾಂತಗಳಲ್ಲಿರುವ ಮೂಲಿಕೆಗಳನ್ನೂ ಅವುಗಳ ಹೆಸರನ್ನೂ ಕಂಡುಹಿಡಿದು ಒಂದು ನಿಘಂಟುವನ್ನು ರಚಿಸಲು ಒಂದು ಸಂಘವನ್ನೇರ್ಪಡಿಸಬೇಕು, ಎಂಬುದೇ ಮೊದಲಾದ ತೀರ್ಮಾನಗಳಾದುವು. ಬರುವ ವರ್ಷದ ಸಭೆಯು ಆಂಧ್ರದೇಶದಲ್ಲಿ ಕೂಡುವುದು.

ಹರಾಜು ನೋಟೀಸ್.

ಮೈಸೂರು ಸಿಟಿಯಲ್ಲಿದ್ದ ಲೇಟ್ ಬಳೆ ಶಿವನಯ್ಯನವರ ಕುಟುಂಬ ವೀರಮ್ಮನೆಂಬುವರು ಟ್ರಸ್ಟ್ ಡೀಡ್ ಮೂಲಕ ಧರ್ಮಾರ್ಥವಾಗಿ ಕೊಟ್ಟಿರುವ ಚರ, ಸ್ಥಿರ ಆಸ್ತಿಗಳ ಪೈಕಿ ಚಿನ್ನ, ಬೆಳ್ಳಿ ಮುಂತಾದ ನಗಗಳು; ತಾಮ್ರ, ಹಿತ್ತಾಳೆ, ಕಬ್ಬಿಣ, ಮರ ಮತ್ತು ಗಾಜಿನ ಸಾಮಾನುಗಳು; ರೇಷ್ಮೆ ಮತ್ತು ನೂಲು ಬಟ್ಟೆಗಳು ಇನ್ನೂ ಮುಂತಾದ ಪದಾರ್ಥಗಳು ಬರುವ ಮೇ ಮಾಹೆ ತಾ|| ೧ನೆ ಭಾನುವಾರ ಬೆಳಗ್ಗೆ ೮ ಗಂಟೆಗೆ ಸರಿಯಾಗಿ ಅರಮನೆ ಗಜಶಾಲಾ ಬಳಿ ಶ್ರೀ ಚಿಕ್ಕಬಸವೇಶ್ವರಸ್ವಾಮಿಯವರ ದೇವಸ್ಥಾನದ ಪಕ್ಕದಲ್ಲಿರುವ ಮನೆಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ಆಪೈಕಿ ಬೀಟ್‌ದಾರರು ಬೀಟ್ ಮೊಬಲಗನ್ನು ತಕ್ಷಣವೇ ಪಾವತಿ ಮಾಡಿ ಮಾಲನ್ನು ಹೊಂದಬೇಕು. ತಪ್ಪಿದರೆ ಪುನಃ ಹರಾಜು ಮಾಡಲ್ಪಡುವುದು. ಆಗ ಕಡಮೆ ಬಂದಲ್ಲಿ ಮೊದಲನೆ ಬೀಟ್‌ದಾರರು ನಷ್ಟ ಸೇರಿಸಿಕೊಡಬೇಕು. ಹೆಚ್ಚಿಗೆ ಬಂದಲ್ಲಿ ಅವರಿಗೆ ಕೊಡಲ್ಪಡುವುದಿಲ್ಲ.

T. S. SIDDAPPA,
President,
Veeramma's Charities, Mysore.

ಖಿಲಾಫತ್ ಸಂಘದವರು ೧-೫-೧೦-೧೦೦ ರೂ. ಗಳ ಗುರ್ತಿರುವ ನೋಟುಗಳನ್ನು ೧೯೨೦ರಲ್ಲಿ ಮುದ್ರಿಸಿ ದೇಶದಲ್ಲಿ ವ್ಯವಹಾರಕ್ಕೆ ತಂದಿದ್ದಾರೆ. ಅವುಗಳ ಮೇಲೆ ಅರಬ್ಬಿ ಅಕ್ಷರಗಳಿವೆ. ದೇವರ ಹೆಸರಿನ ಮೇಲೆ ದ್ರವ್ಯವನ್ನರ್ಪಿಸಿದರೆ ಒಂದಕ್ಕೆರಡರಷ್ಟನ್ನು ಅವನು ಆಶೀರ್ವದಿಸುವನು. ಈ ನೋಟುಗಳನ್ನು ತೆಗೆದುಕೊಂಡು ದುಡ್ಡನ್ನು ಕೊಟ್ಟರೆ ಅದನ್ನು ಸ್ವರಾಜ್ಯದಲ್ಲಿ ತೊಂದರೆಪಡುತ್ತಿರುವವರಿಗೂ, ಮುಹಾಜರಿಗಳಿಗೂ, ಜಾತೀಯ ವಿದ್ಯಾವ್ಯಾಪನೆಗೂ ಅದು ಸಲ್ಲುವುದು ಎಂದು ಅದರರ್ಥ. ಇದು ಸರ್ಕಾರಿ ನೋಟುಗಳಂತಲ್ಲ. ಇವನ್ನು ತೆಗೆದುಕೊಂಡು ಯಾವ ಖಜಾನೆಯಲ್ಲಾಗಲಿ ಮತ್ತೆಲ್ಲಾಗಲಿ ಕೊಟ್ಟರೆ ಅವಕ್ಕೆ ಹಣವನ್ನು ಪಡೆಯಲಾಗುವುದಿಲ್ಲ. ಇದನ್ನು ಎಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂದು ಮದ್ರಾಸು ಸರ್ಕಾರಿ ಪ್ರಚುರಣ ಸಂಘದವರು ಪ್ರಕಟಿಸಿದ್ದಾರೆ.

ಅಸಹಾಯದ ಚಳವಳಿಗಾರರು ತಮ್ಮ ಪ್ರಯತ್ನವನ್ನು ಬಾಲಕರಲ್ಲೂ ಗ್ರಾಮದ ರೈತರಲ್ಲೂ ಹರಡುವುದು ಸುಲಭವೆಂದು ತಿಳಿದು ಈಗ ಅದರಲ್ಲಿ ತೊಡಗಿದ್ದಾರಷ್ಟೆ. ಇಂಥ ಜನರಲ್ಲಿ ದೌರ್ಜನ್ಯರಹಿತವಾದ ಅಸಹಾಯನಿರಾಕರಣವ್ರತವು ಸಫಲವಾಗುವುದಕ್ಕೆ ಪ್ರತಿಯಾಗಿ ಅನರ್ಥಕ್ಕೇ ಅದು ಹೇತುವಾಗುವುದೆಂಬುದಕ್ಕೆ ಕಟಕ್ಕಿನ ರೆವನ್ಷಾ ಕಲಾಶಾಲಾ ವಿದ್ಯಾರ್ಥಿಯೊಬ್ಬನ ನಡೆಯು ದೃಷ್ಟಾಂತಮಾಡಿಕೊಟ್ಟಿರುವುದು. ಈ ಶಾಲೆಯ ಬಾಲಕರೆಲ್ಲರೂ ಮುಷ್ಕರ ಹಿಡಿದಿದ್ದ ಸಂಬಂಧವಾಗಿ ಕಲಾಶಾಲಾಧಿಕಾರಿಯು ಒಬ್ಬ ಬಾಲಕನಿಗೆ ಅರ್ಥದಂಡವನ್ನು ವಿಧಿಸಲಾಗಿ, ಅದಕ್ಕೆ ಆತನು ಮುಳಿದು ಕಲಾಶಾಲಾಭವನವನ್ನೇ ನಾನು ಸುಟ್ಟುಬಿಡುತ್ತೇನೆಂದು ಶಪಥ ತೊಟ್ಟು ಕಳೆದ ತಾ|| ೧೫ನೆ ಬೆಳಗಿನಜಾವದಲ್ಲಿ ಸೀಮೆಯೆಣ್ಣೆ ಸೀಸೆಯನ್ನೂ ಮೋಂಬತ್ತಿಯನ್ನೂ ದೀಪದಕಡ್ಡಿ ಪೆಟ್ಟಿಗೆಯನ್ನೂ ಹಿಡಿದು ಕಲಾಶಾಲಾಭವನಕ್ಕೆ ನುಗ್ಗಿದನು. ಅಷ್ಟರಲ್ಲಿ ಅದನ್ನು ಕಂಡವರು ಪೋಲೀಸಿಗೆ ಅವನನ್ನು ಒಪ್ಪಿಸಿದರು. ಈ ಬಾಲಕನು ಪಾಟ್ನಾದ ಒಬ್ಬ ದೊಡ್ಡ ಅಧಿಕಾರಿಯ ಮಗನು. ಮತ್ತು ಕಲ್ಕತ್ತಾ ಜಾತೀಯ ಕಲಾಶಾಲೆಯ ವಿದ್ಯಾರ್ಥಿ. ಇದಕ್ಕೆ ೨ ದಿನಗಳಿಗೆ ಮುಂಚೆಯೇ ಅದೇ ಕಟಕ್ಕಿನಲ್ಲಿ ಪಾಠಶಾಲೆಗಳ ಡೆ|| ಇನ್‌ಸ್ಪೆಕ್ಟರವರ ಆಫೀಸು ಸುಡಲ್ಪಟ್ಟಿರುವುದಂತೆ. ಇದೂ ಒಬ್ಬ ತಲೆತಿರುಕ ವಿದ್ಯಾರ್ಥಿಯ ಚೇಷ್ಟೆಯ ಫಲವಾಗಿಯೇ ಇರಬೇಕು.

ವಿದೇಶ ವೃತ್ತಾಂತಗಳು.

ತುರುಕರ ಮೇಲೆ ಯುದ್ಧಮಾಡುತ್ತಿರುವ ಗ್ರೀಕರಿಗೆ ಪ್ರತ್ಯಕ್ಷವಾಗಾಗಲಿ ಪರೋಕ್ಷವಾಗಾಗಲಿ ಯಾವ ಸಹಾಯವನ್ನೂ ಮಾಡಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಆಂಗ್ಲ ಸರ್ಕಾರದ ಪಕ್ಷದಿಂದ ಹೇಳಲ್ಪಟ್ಟಿದೆ.

ಯುದ್ಧ ಮುಗಿದಮೇಲೆ ಮಿತ್ರಮಂಡಲಿಯವರು ಗೆದ್ದ ರಾಜ್ಯಗಳನ್ನು ತಮಗೆ ತಿಳಿಯಿಸದೆಯೇ ತಾವು ತಾವೇ ಹಂಚಿಕೊಂಡಿರುವರೆಂದೂ, ವರ್ಸಲೇಸ್‌ನಲ್ಲಿ ನಡೆದ ಸಂಧಿನಿಬಂಧನೆಗಳಿಗೆ ತಾವು ಬದ್ಧರಲ್ಲವೆಂದೂ ನಾನಾಜಾತೀಯ ಸಮಿತಿಗೂ ತಾವು ಸಭ್ಯರಲ್ಲವೆಂದೂ ಅಮೇರಿಕಾದ ಈಗಣ ಪ್ರಭುತ್ವದವರು ತಿಳಿಯಪಡಿಸಿದ್ದಾರೆ.

ಯುದ್ಧಕಾಲದಲ್ಲಿ ಪ್ರತ್ಯಕ್ಷ ಯಮನಂತೆ ಆಚರಿಸಿದ ಎಮ್ಡನ್ ಹಡಗಿನ ಕೇಪ್ಟನ್ ವಾನ್ ಮುಲ್ಲರ್ ಎಂಬಾತನನ್ನು ಸೈಲೇಶಿಯಾದಲ್ಲಿ ಯಾರೋ ಗುಂಡಿನಿಂದ ಹೊಡೆದು ಕೊಂದರೆಂದು ಸುದ್ದಿ ಬಂದಿದ್ದಿತು. ಆದರೆ ಅವನು ಸತ್ತಿಲ್ಲವೆಂದೂ ಬರ್ಲಿನ್ ಪಟ್ಟಣದಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವನೆಂದೂ ಈಚೆಗೆ ಪ್ರಕಟವಾಗಿದೆ.

ಜಪಾನ್ ಯುವರಾಜರು ಯೂರೋಪು ಖಂಡದ ಸಂಚಾರವನ್ನೆಲ್ಲಾ ಮುಗಿಸಿಕೊಂಡ ಬಳಿಕ ಅವರನ್ನು ತಮ್ಮ ದೇಶಕ್ಕೂ ಕಳುಹಿಸಿಕೊಡಬೇಕೆಂದು ಅಮೇರಿಕಾದ ಸಂಯುಕ್ತರಾಷ್ಟ್ರಗಳ ಅಧ್ಯಕ್ಷರು ಜಪಾನ್ ಚಕ್ರವರ್ತಿಯವರಿಗೆ ಪತ್ರವನ್ನು ಬರೆದುಕೊಂಡಿರುವಲ್ಲಿ ಸದ್ಯಃ ಯುವರಾಜರಿಂದ ತಮಗೆ ಎಷ್ಟೋ ಅವಶ್ಯಕ ಕಾರ್ಯಗಳಿರುವ ಪ್ರಯುಕ್ತ ಕಳುಹಿಸಿಕೊಡಲು ಅವಕಾಶವಿಲ್ಲವೆಂದು ಜಪಾನ್ ಚಕ್ರವರ್ತಿಯು ವಿಷಾದಪೂರ್ವಕ ಪ್ರತ್ಯುತ್ತರವನ್ನು ಕೊಟ್ಟಿದ್ದಾರೆ.

ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಸಾಧನವನ್ನು ಕಂಡುಹಿಡಿದ ಮಾರ್ಕೋನಿಯವರನ್ನು ಕಂಡು ಕೆಲವರು ನಿನ್ನೆ ತಾನೇ ಪ್ರಸ್ತಾಪಿಸಿದಾಗ್ಗೆ ೫-೬ ಸಾವಿರ ಮೈಲಿಗಳ ದೂರದವರೆಗೂ ಪರಸ್ಪರ ಸಂಭಾಷಿಸುವ ಟೆಲಿಫೋನ್ ಸಾಧನವನ್ನೇರ್ಪಡಿಸಬಹುದೆಂದೂ, ಅಟ್ಲಾಂಟಿಕ್ ಸಮುದ್ರದ ಮೇಲೆ ಇದೇ ತೆರದ ಟೆಲಿಫೋನ್ ಏರ್ಪಾಟುಮಾಡಲು ಅನುಕೂಲವಿರುವುದೆಂದೂ ಇಷ್ಟರಲ್ಲೇ ಆ ಏರ್ಪಾಟು ಜರುಗುವುದರಲ್ಲಿದೆಯೆಂದೂ ಹೇಳಿದರು. ಇಂಗ್ಲಂಡು ಮತ್ತು ಮೆಡಿಟರೇನಿಯನ್ ಸಮುದ್ರಗಳ ಮಧ್ಯದಲ್ಲಿ ಟೆಲಿಫೋನ್ ಏರ್ಪಾಟನ್ನು ನಡೆಯಿಸುವ ಬಗೆಗಾಗಿ ಮಾರ್ಕೋನಿಯವರು ಇಟಲಿಗೆ ಪ್ರಯಾಣಮಾಡಿರುವರು. ಹಾಗಾದರೆ ಇನ್ನುಮುಂದೆ ಇಂಗ್ಲಂಡಿನಲ್ಲಿ ಕುಳಿತಿರುವವರು ಭರತಖಂಡದಲ್ಲಿ ಕುಳಿತಿರುವವರೊಡನೆ ಪರಸ್ಪರ ಸಂಭಾಷಣೆಯನ್ನು ನಡೆಯಿಸಬಹುದಾಯಿತು.

ಚೀನಾ ದೇಶವನ್ನು ಚಕ್ರವರ್ತಿ ನಿರಂಕುಶಪರಿಪಾಲನದಿಂದ ತಪ್ಪಿಸಿ ಪ್ರಜಾಪ್ರಭುತ್ವದ ಕೆಳಗೆ ಆಳಲ್ಪಡುವಂತೆ ಮಾಡುವಲ್ಲಿ ಡಾಕ್ಟರ್ ಸನ್‌ಯಟ್‌ಸೇನ್‌ರವರು ಅಸಮಸಾಹಸವನ್ನು ಸ್ವಾರ್ಥತ್ಯಾಗಪೂರ್ವಕವಾಗಿ ಮಾಡಿ, ಕಡೆಗೆ ಅಧ್ಯಕ್ಷಪದವಿಯನ್ನು ತಾವು ವಹಿಸದೆ ತನ್ನ ಪ್ರಬಲ ಶತ್ರುಪಕ್ಷ ಪ್ರಮುಖನಾದ ಯುವಾನ್‌ಷಿಕಾಯಿಗೆ ಒಪ್ಪಿಸಿ ತಾವು ಸಾಮಾನ್ಯ ಮನುಷ್ಯರಂತೆ ಕಾಲವನ್ನು ಕಳೆಯುತ್ತಿದ್ದರು. ಈಗ ಅಲ್ಲಿಯ ಪ್ರಜಾಬಹುಮತದ ಬಲೋದ್ಬಂಧದಿಂದ ಇವರೇ ಅಧ್ಯಕ್ಷಪದವಿಯನ್ನು ವಹಿಸಿಕೊಳ್ಳಬೇಕಾಯಿತು. ಸ್ವದೇಶದ ಸ್ವಾತಂತ್ರ್ಯಸ್ಥಾಪನೆಯೇ ಪರಮಪುರುಷಾರ್ಥವೆಂದು ಭಾವಿಸಿರುವ ಈ ಮಹಾಶಯರ ಕಾಲದಲ್ಲಿ ಚೀನಾ ದೇಶವು ಕಾಲೋಚಿತವಾದ ಸುಧಾರಣೆಗೊಂಡು ತನ್ನ ಪ್ರಾಚೀನವೈಭವವನ್ನು ಪಡೆದುಕೊಳ್ಳುವುದು ಪೂರ್ವದೇಶೀಯರಾದ ನಮಗೆಲ್ಲಾ ವಾಂಛಿತವೇ ಆಗಿದೆ.

ಹಿಂದಣ ಜರ್ಮನ್ ಕೈಜರರಿಗೆ ಕಳೆದ ತಾ|| ೧೧ ರಲ್ಲಿ ಪತ್ನೀವಿಯೋಗವಾಯಿತು. ಆಕೆಯ ಕುಮಾರರಲ್ಲಿ ಜೋಕಿಂ ಎಂಬಾತನು ಆತ್ಮಹತ್ಯೆ ಮಾಡಿಕೊಂಡ ಬಳಿಕ ಆ ಪ್ರೇಮ ಪುತ್ರನ ವಿಯೋಗವಾದಂದಿನಿಂದ ಆಕೆಯು ಬಹಳ ದುಃಖಪಡುತ್ತಿದ್ದು ಅದರಿಂದಲೇ ಅಸ್ವಸ್ಥಳಾಗಿ ಕಡೆಗೆ ಮೃತ್ಯುಮುಖದಲ್ಲಿ ಬಿದ್ದಳೆಂದು ತಿಳಿಯಬರುತ್ತದೆ. ಕಾಲಗತಿಯ ಮಹತ್ವವನ್ನು ಅವಲೋಕಿಸಬೇಕಾದರೆ ಜರ್ಮನ್ ಚಕ್ರವರ್ತಿಯು ಸದ್ಯದ ಸ್ಥಿತಿಯನ್ನು ನೋಡಿದರೆ ಸಾಕು. ಈ ಹತಭಾಗಿಯು ಪ್ರಪಂಚಾಧಿಪತ್ಯವನ್ನು ಮಾಡಬೇಕೆಂಬ ದುರಾಸೆಗೆ ಬಿದ್ದು ಆಪ್ತಬಾಂಧವಾದಿಗಳಲ್ಲೆಲ್ಲಾ ದ್ರೋಹಾಚರಣೆಮಾಡಿ, ಎಲ್ಲೆಲ್ಲೂ ಗೂಢಚಾರರನ್ನಿಟ್ಟು, ಭೇದೋಪಾಯಗಳನ್ನು ನಡೆಸಿ, ಅಪಾರವಾದ ಸೇನಾಬಲವನ್ನು ಸ್ಥಾಪಿಸಿ, ಜಗತ್ತಿಗೆ ಯುದ್ಧಾಗ್ನಿಯ ಬೇಗೆಯನ್ನಿಕ್ಕಿ ಉರಿಯಿಸಿದುದಕ್ಕೆ ತಕ್ಕ ಫಲವನ್ನು "ಅತ್ಯುತ್ಕಟೈಃ ಪುಣ್ಯಪಾಪೈರಿಹೈವಫಲಮಶ್ನುತೇ" ಎಂಬಂತೆ ಈ ಜನ್ಮದಲ್ಲೇ ಅನುಭವಿಸಿ ಮುಗಿಸುವಂತೆ ಆಗಿರುವುದು. ತನಗೆ ರಾಜ್ಯಭ್ರಷ್ಟತೆಯು ಪ್ರಾಪ್ತವಾದುದೇ ಅಲ್ಲದೆ ಆಪತ್ಕಾಲದಲ್ಲಿ ತನಗೆ ಒಬ್ಬಳೇಒಬ್ಬ ಸಹಚಾರಿಣಿಯಾಗಿದ್ದು ತನ್ನನ್ನೂ ತನ್ನ ಕುವರರನ್ನೂ ಭಕ್ತಿ ಪ್ರೇಮಗಳಿಂದ ಆದರಿಸಿ ತನ್ನ ಮನೋವ್ಯಥೆಯನ್ನು ಕಾಲೋಚಿತವಾಗಿ ಶಾಂತಿಪಡಿಸುತ್ತಿದ್ದ ಅರ್ಧಾಂಗಿನಿಯನ್ನು ಕೂಡ ಕಳೆದುಕೊಂಡನು. ಆತನ ದುರದೃಷ್ಟವು ದುರ್ಭರವೇ ಸರಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡು ಸಂಘ ಲಗ್ನದ ಫಂಡು.

೧. ಹುಲಿಯೂರುದುರ್ಗಕ್ಕೆ ಸೇರಿದ ಹಳೆಯೂರು ಗ್ರಾಮದ ಶೆಟ್ಟರು ಮ|| ರಾ|| ಸಿದ್ಧಬಸವಯ್ಯನವರಿಂದ ಮ|| ರಾ|| ಸಿದ್ಧಬಸವಯ್ಯನವರ ಮನೆಯ ಲಗ್ನಕಾಲದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು ೫ ರೂ. ೨. ನರಸಿಂಹರಾಜಪುರದ ಇಂಗಳಗೊಂದಿ ಮ|| ರಾ|| ಶಾಂತಪ್ಪಶೆಟ್ಟರವರಿಂದ ಅವರ ತಮ್ಮಂದಿರ ಪುತ್ರಿಯವರ ಲಗ್ನಕಾಲದಲ್ಲಿ ತೆಗೆದು ಕಳುಹಿಸಿದ್ದು ೫ ರೂ. ೩. ತುಮಕೂರು ತಾ|| ಹೊನ್ನುಡಿಕೆ ಶೆಟ್ಟರು ಮ|| ರಾ|| ಹೊನ್ನಶೆಟ್ಟರು ಮ|| ರಾ|| ಹೊನ್ನಗಂಗಪ್ಪನವರ ಪುತ್ರಿಯವರನ್ನು ಅರಕಲಗೂಡು ಮಠದ ವೇ|| ಚೆನ್ನವೀರಪ್ಪಶಾಸ್ತ್ರಿಗಳವರಿಗೆ ಕೊಟ್ಟು ನಡೆಯಿಸಿದ ಲಗ್ನದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು ೪ ರೂ. ಜುಮ್ಲಾ ರೂಪಾಯಿಗಳು ೧೪.

ಬೆಂಗಳೂರು ಸಿಟಿ, ತಾ|| 12-4-1921. } ಜಿ. ಪರಮಶಿವಯ್ಯ, ಬಿ. ಎ. ಎಲ್ ಎಲ್. ಬಿ.
ಆನರರಿ ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ.

ಪತ್ರವ್ಯವಹಾರ.

ವಾರ್ಷಿಕ ಸಭೆಯು.

ಪರಮ ಪುಣ್ಯಶಾಲಿಗಳಾದ ಶ್ರೀಮಂತ ಮಹಾಜನಗಳಿಗೂ ಶಿವಶಾರ್ಯ ಶಿವಕ್ಷೇತ್ರ ಲಂಪಟರಾದ ಪುನೀತ ಶಿವಭಕ್ತರಿಗೂ ಸದ್ಬೋಧೆಯಿಂದ ಸ್ವಸಮಾಜವನ್ನು ಎಚ್ಚರಗೊಳಿಸುವ ಪಂಡಿತ ಮಹಾಶಯರಿಗೂ ಆದರದಿಂದ ಅರಿಕೆ ಮಾಡಿಕೊಳ್ಳುವ ಉತ್ತಮ ಪ್ರಸಂಗವೇನಂದರೆ:—

ಭರತ ಭೂಮಿಯ ಪ್ರಸಿದ್ಧ ಶಿವಕ್ಷೇತ್ರಗಳಲ್ಲಿ ಗಣ್ಯವಾದ ಭೂಕೈಲಾಸವೆಂಬ ಉಪನಾಮದಿಂದ ಪ್ರಜ್ವಲಿಸುವ ಶ್ರೀ ಸಂಗಮೇಶ್ವರ ಕ್ಷೇತ್ರವು ಸ್ವಪ್ರಭಾವದಿಂದಲೂ ರಮ್ಯತನದಿಂದಲೂ ಪ್ರಸಿದ್ಧವಾದ ಸಂಗತಿಯು ವೀರಶೈವ ಬಾಂಧವರಿಗೆಲ್ಲ ವಿದಿತವಾದ ಸಂಗತಿಯಾಗಿದೆ. ವಾಡಿಕೆಯಂತೆ ಇದೇ ಚೈತ್ರ ವದಿ ೫ ಬುಧವಾರ ತಾ|| ೨೭-೪-೧೯೨೧ ಇಸ್ವಿ ದಿವಸ ಶ್ರೀ ಸಂಗಮೇಶ್ವರ ದೇವರ ರಥೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಡುವುದು. ತಾ|| ೨೮-೨೯-೩೦ ಈ ಮೂರು ದಿವಸಗಳಲ್ಲಿ ಇದೇ ಕ್ಷೇತ್ರದಲ್ಲಿ ವಾಡಿಕೆಯಂತೆ ವಾರ್ಷಿಕ ಸಭೆಯು ನೆರೆಯುವುದು. ಅದರಲ್ಲಿ ವೀರಶೈವಾಧ್ಯುನಿಕ ಪರಿಸ್ಥಿತಿ ಧಾರ್ಮಿಕ, ನೈತಿಕ ಸಾಮಾಜಿಕ ಮುಂತಾದ ವಿಷಯಗಳನ್ನು ಕುರಿತು ಭಾಷಣಗಳಾಗತಕ್ಕವೆ. ಸಭೆಗೆ ಶ್ರೀ ಶಿವಯೋಗಮಂದಿರದಿಂದ ಮಹಾಸ್ವಾಮಿಗಳವರೂ, ಶ್ರೀ ಶಿವಯೋಗೀಂದ್ರರೂ, ಆಗಮಿಸುತ್ತಾರೆ. ಮತ್ತು ಹಿರಿಯರಾದ ವೀರಪ್ಪಯ್ಯಶಾಸ್ತ್ರಿಗಳು ಮೊದಲಾದ ಪ್ರಸಿದ್ಧ ಕೀರ್ತನಕಾರರೂ, ರಾವಸಾಹೇಬ ನಾಮದಾರ ಪಿ. ಜಿ. ಹಳಕಟ್ಟಿ ವ ಶಿವಮೂರ್ತಿಸ್ವಾಮಿ ಕಣಬರ್ಗಿಮಠ ವಗೈರೆ ಪ್ರಸಿದ್ಧ ವ್ಯಾಖ್ಯಾನಕಾರರೂ ಬರತಕ್ಕವರಿದ್ದಾರೆ. ಕಾರಣ ತಾವು ಇಂಥ ಅಮೂಲ್ಯವಾದ ಸುಸಂಧಿಯನ್ನು ಕಳಕೊಳ್ಳದೆ ಅಗತ್ಯವಾಗಿ ದಯಮಾಡಿಸಿ ಕೃಷ್ಣಾಸ್ನಾನ ಶ್ರೀ ಸಂಗಮೇಶನ, ಮಹಾ ಸ್ವಾಮಿಗಳ ಮತ್ತು ಶಿವಯೋಗೀಂದ್ರರ ದರ್ಶನ ಲಾಭದಿಂದ ಪವಿತ್ರರಾಗುವಿರೆಂದು ಪ್ರೀತಿ ಪೂರ್ವಕ ಅರಿಕೆಮಾಡಿಕೊಂಡಿದ್ದೇವೆ.

ಮ್ಯಾನೇಜರು—ಸಂಗಪ್ಪಾ ರುದ್ರಪ್ಪಾ ಪಾಟೀಲ ಸದರಗಟ್ಟಿ, ಸಂಗಪ್ಪಗೌಡಾ ಗಂಗಪ್ಪಗೌಡಾ ಪಾಟೀಲ. ವ್ಯವಸ್ಥಾಪಕರು—1 ರುದ್ರಗೌಡಾ ಪಾಟೀಲ. 2 ಎಸ್. ಸಿ. ಹಿತ್ತಲಮನಿ. ಹೆ|| ಮಾ|| ಇ|| ತಾ|| 3 ಕಳಸಪ್ಪ ರೇವಡಿಹಾಳ. 4 ಬಾಬುರಾವ ಪಾಟೀಲ. 5 ಮಲ್ಲಿಕಾರ್ಜುನಪ್ಪ ಮಾಟೂರ. 6 ದೊಡ್ಡಪ್ಪ ಹಗೇದಾಳ.

ಧಾರವಾಡ.

ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಧಾರವಾಡ ಹಾವೇರಿ ಪೇಟೆ ಮುರುಘಾಮಠದಲ್ಲಿ ಈ ವರ್ಷ ಧಾರವಾಡಕ್ಕೆ ಮುಲ್ಕಿ ಪರೀಕ್ಷೆ ಮತ್ತು ಮೆಟ್ರಿಕ್ಯುಲೇಷನ್ ಪರೀಕ್ಷೆಗಳಿಗೆ ಬರತಕ್ಕ ವೀರಶೈವ ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥಭೋಜನದ ಅನುಕೂಲ ಮಾಡಬೇಕೆಂದು ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯಸ್ವಾಮಿಗಳವರ ಅಪ್ಪಣೆಯಾದ ಪ್ರಕಾರ ತಾ|| ೧ನೆ ಏಪ್ರೆಲ್‌ನಿಂದ ತಾ|| ೯ನೆ ಏಪ್ರೆಲ್ ವರೆಗೆ ವೇಳೆವೇಳೆಗೆ ಮತ್ತು ಸುವ್ಯವಸ್ಥೆಯಿಂದ ಸಮರ್ಪಕವಾದ ಏರ್ಪಾಟು ಶ್ರೀ|| ಬೋರ್ಡಿಂಗ್ ಕಮಿಟಿಯವರಿಂದ ನಡೆಯಿಸಲ್ಪಟ್ಟಿತು. ಈ ಮಧ್ಯೆ ತಾ|| ೮ ಮತ್ತು ೯ನೆ ದಿವಸಗಳು ಮುಖ್ಯ ಹಬ್ಬದ ದಿವಸಗಳಾದುದರಿಂದ ವಿದ್ಯಾರ್ಥಿಗಳಿಗೆ ತೀರ್ಥಪ್ರಸಾದಸೇವನೆ, ಮೃಷ್ಟಾನ್ನಭೋಜನ ದೊರೆಯುವ ವ್ಯವಸ್ಥಾ ಮಾಡಲ್ಪಟ್ಟಿತ್ತು. ಶ್ರೀ ಮಠದಲ್ಲಿ ಭೋಜನ ಮಾಡಿದ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳ ಸಂಖ್ಯೆ ೧೧೯. ಇವರಲ್ಲಿ ಮಹೇಶ್ವರರು ೪೯, ಭಕ್ತರು ೬೬, ಹಾಲುಮತದವರು (ಕುರುಬರು) ೨, ನೀಲಗಾರ ೧೬, ಗೋಕುಲ (ಗೊಲ್ಲರು) ೧. ಶ್ರೀ ಮಠದ ಬೋರ್ಡಿಂಗಿನ ಇಂಗ್ಲಿಷ್ ವಿದ್ಯಾರ್ಥಿಗಳೆಲ್ಲರೂ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳ ಆದರಾತಿಥ್ಯವನ್ನು ಚನ್ನಾಗಿ ನಡೆಯಿಸಿದರು. ಧಾರವಾಡ ಪ್ಯಾಟೆಶೆಟ್ಟರು ಮಡಿವಾಳಪ್ಪನವರು ಕೇವಲ ಭಕ್ತಿಯಿಂದ ವಿದ್ಯಾರ್ಥಿಗಳ ಆತಿಥ್ಯದ ನಿಗಾ ನೋಡಿಕೊಳ್ಳುತ್ತಲಿದ್ದರು. ಶ್ರೀ ಬೋರ್ಡಿಂಗ್ ಸೆಕ್ರಟರಿಯವರು ಸರ್ವಸಿದ್ಧತೆಯನ್ನೂ ಚೆನ್ನಾಗಿ ಇಡಿಸಿದ್ದರು. ಪ್ರತಿದಿವಸ ಅಧಣಿ ಶ್ರೀಗಳ ಭಜನೆಯು ನಡೆಯುತ್ತಲಿತ್ತು. ಸಮಸ್ತ ವಿದ್ಯಾರ್ಥಿಗಳೂ ಶ್ರೀ ತಪಸ್ವಿಗಳವರ ಕೃಪಾಕಟಾಕ್ಷಬಲದಿಂದ ಸಂತೋಷದಿಂದಲೂ ಆರೋಗ್ಯದಿಂದಲೂ ಇದ್ದು ತಮ್ಮ ಪರೀಕ್ಷೆಯ ಕೆಲಸ ಪೂರೈಸಿಕೊಂಡರು. ಶ್ರೀ ಮಠದಲ್ಲಿ ಸ್ಥಾಪಿತವಾಗಿರುವ ಲೈಬ್ರರಿಗೆ ಎಲ್ಲ ವಿದ್ಯಾರ್ಥಿಗಳೂ ಶಕ್ತ್ಯಾನುಸಾರ ವಾರ್ಷಿಕ ವರ್ಗಣಿ ಕಳಿಸುತ್ತೇವೆಂದು ಆನಂದದಿಂದ ಹೇಳಿದ್ದಲ್ಲದೆ ಕೆಲವರು ಆಗಲೇ ಆರು ರೂ. ಚಿಲ್ಲರೆ ರಕಮ್ಮನ್ನು ಜಮಾ ಕೊಟ್ಟರು. ಈ ಆನಂದದಾಯಕವಾದ ಅನ್ನದಾನದ ಕಾರ್ಯವನ್ನು ಪ್ರತಿ ವರ್ಷವೂ ಅಧಿಕಸೌಕರ್ಯಗಳಿಂದ ನಡೆಯಿಸಬೇಕೆಂಬ ಕಮಿಟಿಯವರ ಸದುದ್ದೇಶವು ಶ್ರೀ ಮೃತ್ಯುಂಜಯಸ್ವಾಮಿಗಳವರ ಸನ್ನಿಧಿಗೆ ಅರಿಕೆಯಾದೊಡನೆ ಅವಶ್ಯವಾಗಿ ಆಗಬಹುದೆಂಬ ಆನಂದದ ಅಪ್ಪಣೆಯಾಗಿರುವುದನ್ನು ತಿಳಿಸಲು ಸಂತೋಷವಾಗುತ್ತದೆ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಸಹಾಯ.

ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಸ್ವಾಮಿಗಳವರು ಚಿತ್ರದುರ್ಗದ ಸೆಂಟರಿಗೆ ಪರೀಕ್ಷೆಗಾಗಿ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಇವರ ಪೋಷಕರಿಗೂ ಮಾಸ್ತರುಗಳಿಗೂ ವೀರಶೈವರಲ್ಲಿ ಊಟಉಪಚಾರಮಾಡುವ ಇತರ ಮತಸ್ಥರಿಗೂ ಸಹ ಕಳೆದ ೮-೧೦ ವರ್ಷಗಳಿಂದಲೂ ತಮ್ಮ ಸ್ವಂತ ಮಠದ ಖರ್ಚಿನಿಂದ ಚಿತ್ರದುರ್ಗದ ಟೌನಿನಲ್ಲಿರುವ ತಮ್ಮ ಕಂಬಾಳಿ ಮಠದಲ್ಲಿ ಪ್ರತಿ ವರ್ಷವೂ ಭೋಜನದ ಏರ್ಪಾಡನ್ನಿಡಿಸುತ್ತಿದ್ದುದು ಸರ್ವರಿಗೂ ವಿದಿತವಾಗಿಯೇ ಇರುತ್ತದೆ. ಈ ಏರ್ಪಾಡು ಪದ್ಧತಿಪ್ರಕಾರ ನಡೆಯಲು ಈ ವರ್ಷ ಬಹಳ ಅಡಚಣೆಗಳುಂಟಾಗಿದ್ದುವು. ಅವುವೆಂದರೆ—ಮೇಲ್ಕಂಡ ಕಂಬಾಳಿ ಮಠವು ಜೀರ್ಣಾವಸ್ಥೆಯಲ್ಲಿರುವ ಕಾರಣ ಇದರ ರಿಪೇರಿಗಾಗಿ ಮಠವನ್ನೆಲ್ಲಾ ಕೀಳಿಸಿಬಿಟ್ಟಿರುತ್ತಾರೆ. ಇದೇ ಟೌನ್ ದೊಡ್ಡಪೇಟೆಯಲ್ಲಿರುವ ಮಂಡಿ ಮಠವು ಕೂಡ ಅದರಂತೆಯೇ ದುರಸ್ತಾಗುತ್ತಿರುವ ಕಾರಣ ಮೇಲ್ಕಂಡ ಭೋಜನದ ಏರ್ಪಾಡನ್ನು ನಡೆಸಲು ತುಂಬಾ ಕಷ್ಟವಾಗಿದ್ದರೂ ಸಮಾಜಬಾಂಧವರ ಹಾಗು ಇತರ ಮತಸ್ಥರ ವಿದ್ಯಾರ್ಥಿಗಳಿಗೆ ಶ್ರಮವಾಗುವುದೆಂದು ತಿಳಿದು ಶ್ರೀ|| ಜಗದ್ಗುರುಗಳವರು ಎಂಥ ಅನನುಕೂಲಗಳಿದ್ದರೂ ಬಿಡಬಾರದೆಂದು ತಮ್ಮ ಮಠದ ಏಜಂಟರವರಿಗೆ ಆಜ್ಞಾಪನ ಪತ್ರಿಕಾ ನಿರೂಪಿಸಿದ್ದರ ಮೇರೆಗೆ ಏಜಂಟರವರು ಮ|| ರಾ|| ಎಕ್‌ಸಾಮಿಕ್ ಸೂಪರಿಂಟೆಂಡೆಂಟ್ ಕೆ. ಸಿದ್ಧರಾಮಪ್ಪನವರ ಬಲವಾದ ಸಹಾಯದಿಂದ ಸದರಿ ಕಾರ್ಯವನ್ನು ಕಾಡಪ್ಪನವರ ಕಾಂಪೌಂಡಿನಲ್ಲಿ ಪದ್ಧತಿಗೆ ವ್ಯತಿರಿಕ್ತವಿಲ್ಲದಂತೆ ನಡೆಯಿಸಿದರು. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಇದರಂತೆ ನಡೆಸಲ್ಪಡುತ್ತೆಂಬದಾಗಿ ಅವರ ಮತಸ್ಥರೇ ವೃತ್ತಾಂತರತ್ನಾಕರ ಪತ್ರಿಕೆಯಲ್ಲಿ ಛಾಪಿಸಿಯೂ ಕೂಡ ಅದರಂತೆ ಅವರು ನಡೆಸದ ಕಾರಣ ಸದರಿ ವಿದ್ಯಾರ್ಥಿಗಳ ಕಷ್ಟವನ್ನು ನೋಡಿ ಮ|| ರಾ|| ಎಕ್‌ಸಾಮಿಕ್ ಸೂಪರಿಂಟೆಂಡೆಂಟ್ ಕೆ. ಸಿದ್ಧರಾಮಪ್ಪನವರು ಬಹಳ ಕನಿಕರಪಟ್ಟು ಜಗದ್ಗುರುಗಳ ಮಠದಿಂದಲೇ ಭೋಜನದ ಏರ್ಪಾಡನ್ನು ಪೂರ್ಣಯ್ಯನವರ ಸತ್ರದಲ್ಲಿ ನಡೆಸಿದ್ದು ಅವರ ಘನತೆಗೆ ಭೂಷಣವಾಗಿರುತ್ತದೆ. ಶ್ರೀ ಜಗದ್ಗುರುಗಳವರು ಈ ಸ್ಥಳದಲ್ಲಿಯೇ ಅಲ್ಲದೆ ದಾವಣಗೆರೆ ಸೆಂಟರಿಗೆ ಬರುವ ವಿದ್ಯಾರ್ಥಿಗಳಿಗೂ ಕೂಡ ಅಲ್ಲಿನ ವಿರಕ್ತಮಠದಲ್ಲಿ ಭೋಜನದ ಏರ್ಪಾಡನ್ನಿಡಿಸಿದ್ದರು. ಶ್ರೀ ಮಹಾಸ್ವಾಮಿಗಳವರ ಮನಸ್ಸು ಅಹರ್ನಿಶಿಯಲ್ಲಿಯೂ ಕೂಡ ಸಮಾಜಬಾಂಧವರ ಹಿತವನ್ನು ಮರೆಯದೆ ಚಿಂತಿಸುತ್ತಿರುವುದನ್ನು ನೋಡಿದರೆ ಈ ಮಹನೀಯರಲ್ಲಿರುವ ಅಪಾರಮಹಿಮೆಯೂ, ಮಠಬಾಂಧವರಲ್ಲಿರುವ ಅನುತಾಪವೂ ಪ್ರತಿಮಾನವಪ್ರಾಣಿಯ ಮನಸ್ಸಿನಲ್ಲಿಯೂ ಬಿಂಬಿಸದಿರಲಾರದು. ಇದರಂತೆಯೇ ಇತರ ಪೀಠದ ಜಗದ್ಗುರುಗಳವರೂ ನಡಸಿದಲ್ಲಿ ಸಮಾಜಕ್ಕೆ ಎಷ್ಟೊ ಹಿತವಾಗುವುದೆಂಬುದಾಗಿ ಸಮಾಜಬಾಂಧವರಾದಿಯಾಗಿ ಹಾರೈಸುತ್ತೇವೆ.

ಯಂ. ಗುರುಬಸವಯ್ಯ, ಹೆಡ್ಮಾಸ್ಟರ್,
ವಿ. ಇ ಸ್ಕೂಲ್, ಕೊನಬೇವು. ಚಿತ್ರದುರ್ಗ ತಾಲ್ಲೂಕು.

ವೀರಶೈವ ತರುಣರ "ಸ್ಪೆಶಲ್" ಸಮ್ಮೇಲನ, ಹುಬ್ಬಳ್ಳಿ.

ಸದ್ಯಕ್ಕೆ ನಮ್ಮ ಸಮಾಜವು ಎಲ್ಲ ರೀತಿಯಿಂದಲೂ ಹಿಂದುಳಿದಿರುವದೆಂಬುದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ. ಅದರಲ್ಲಿಯೂ ವಿಶೇಷವಾಗಿ ಸಾಮಾಜಿಕ, ಶೈಕ್ಷಣಿಕ, ವಿಷಯಗಳಲ್ಲಿ ಬಹಳೇ ಶೋಚನೀಯ ಸ್ಥಿತಿಯಲ್ಲಿರುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಸಂಬಂಧವಾಗಿ ನಮ್ಮಲ್ಲಿಯ ಸಕಲರೂ ಸಮಾಜಾಭಿವೃದ್ಧಿಯ ಕಡೆಗೆ ಮುಖಮಾಡಿಟ್ಟು ಕಂಕಣಬದ್ಧರಾಗಿ ನಿಂತಹೊರತು ನಿರ್ವಾಹವೇ ಇಲ್ಲ. ಇದಕ್ಕಾಗಿಯೇ ನಮ್ಮಲ್ಲಿಯ ತರುಣರು ಈ ವಿಷಯವಾಗಿ ಪ್ರಯತ್ನಿಸಿ ಇದ್ದ ಕೊರತೆಯನ್ನು ಕೆಲವು ಮಟ್ಟಿಗಾದರೂ ಹೋಗಲಾಡಿಸುವುದು ಸಾಧ್ಯವಿದೆಯೆಂದು ಈ ಸ್ತುತ್ಯವಾದ ಉದ್ದೇಶವನ್ನು ಕೊನೆಗಾಣಿಸಲಿಕ್ಕೆ ಕ್ರಿ. ಶ ೧೯೧೭ ರಲ್ಲಿ "ವೀರಶೈವ ತರುಣರ ಸಂಘ" ಎಂಬ ಒಂದು ಸಂಘವು ದಾವಣಗೆರೆಯಲ್ಲಿ ಸರ್ವಾನುಮತದಿಂದ ಏರ್ಪಡಿಸಲ್ಪಟ್ಟಿತು.

ಈ ಸಂಘದಾಶ್ರಯದಿಂದ ಎರಡು ಸಮ್ಮೇಲನಗಳು ಜರುಗಿದುವು. ಮುಂದಿನ ಸಭೆಯು ಹೊನ್ನಾಳಿಯಲ್ಲಿ ಕೂಡಿತು. ಪರಂತು ಅಲ್ಲಿನ ಸಮ್ಮೇಲನದ ವಿಷಯವಾಗಿ ಸಂಘದ ಸಭಾಸದರಲ್ಲಿ ಭಿನ್ನಾಭಿಪ್ರಾಯವುಂಟಾದುದರಿಂದ ಈಗ ಇಲ್ಲಿ ನೆರೆಯುವ ಸಭೆಗೆ "ಸ್ಪೆಶಲ್" ಸಮ್ಮೇಲನವೆಂದು ಹೇಳಬೇಕಾಯಿತು. ಹಾವೇರಿಯ ವೀರಶೈವ ತರುಣರು ಈ "ಸ್ಪೆಷಲ್" ಸಮ್ಮೇಲನವನ್ನು ಮಾಡಬೇಕೆಂದು ಕೆಲವು ದಿವಸಗಳ ಹಿಂದೆ ನಿರ್ಧರಿಸಿದ್ದರು. ಪರಂತು ಅನಿವಾರ್ಯ ಅಡಚಣೆಗಳ ಮೂಲಕ ಅಲ್ಲಿಯ ತರುಣರು ಮಾಡುವದಶಕ್ಯವಾದದ್ದರಿಂದ ಈ ಸಮ್ಮೇಲನವನ್ನು ಇಲ್ಲಿಯ ತರುಣರು ಇದೇ ಮೇ ತಿಂಗಳು ೧೫-೧೬ ನೆಯ ತಾರೀಖುಗಳಲ್ಲಿ ಕೂಡಿಸಬೇಕೆಂದು ನಿರ್ಣಯಿಸಿದ್ದಾರೆ. ಸಮಾಜದ ಹಿತಚಿಂತಕರು ಈ ಸಮ್ಮೇಲನಕ್ಕೆ ಆಗಮಿಸಿ ತರುಣರಿಂದ ಸಮಾಜಸೇವೆಯು ವಿಶೇಷವಾಗಿ ಆಗುವಂತೆ ಮಾಡುವರೆಂದು ನಂಬಿದ್ದೇವೆ.

ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ರಾವಸಾಹೇಬ ಫಕೀರಪ್ಪನವರು ಹಳಕಟ್ಟಿ ಬಿ.ಎ.ಎಲ್ಎಲ್.ಬಿ., ಎಮ್.ಎಲ್.ಸಿ. ವಿಜಾಪುರ ಇವರು ವಹಿಸಲು ಅನುಮೋದಿಸಿರುತ್ತಾರೆಂದು ತಿಳಿಸಲು ಅತ್ಯಾನಂದವಾಗುತ್ತದೆ.

ಸಮ್ಮೇಲನದಲ್ಲಿ ಚರ್ಚಿಸತಕ್ಕ ವಿಷಯಗಳು.

೧ "ವೀರಶೈವ ತರುಣರ ಸಂಘದ" ಘಟನೆಯು (ಮುಖ್ಯವಾಗಿ ಹೆಸರು ಉದ್ದೇಶ ನಿಯಮ ಇತ್ಯಾದಿ) ತಿದ್ದುಪಾಟು. ೨. ಈ ಸಮ್ಮೇಲನವು ಅವಿಚ್ಛಿನ್ನವಾಗಿ ನಡೆಯತಕ್ಕ ಏರ್ಪಾಟು. ೩. ಪ್ರಬೋಧ ಮಾಸಪತ್ರಿಕೆಯ ಅಭಿವೃದ್ಧಿ. ೪. ಸಮಾಜಸೇವೆ. ೫. ವಾಚನಾಲಯಗಳ ಪ್ರಸಾರ. ೬. ಮಾತೃಭಾಷೆಯ ಮಹತ್ವ. ೭. ಒಕ್ಕಲತನ, ಕೈಗಾರಿಕೆ, ವ್ಯಾಪಾರ.

ಸೂಚನೆ—(೧) ಪ್ರತಿನಿಧಿಗಳಿಗೆ ಫೀ ಒಂದು ರೂಪಾಯಿ. ಇವರು ತಮ್ಮ ಹೆಸರನ್ನು ಒಂದು ವಾರ ಮುಂಚಿತವಾಗಿ ತಿಳುಹಿಸಬೇಕು. ಇವರಿಗೆ ಊಟಕ್ಕೂ ವಾಸವಾಗಿರುವುದಕ್ಕೂ ಅನುಕೂಲ ಪಡಿಸುತ್ತದೆ. ಆದರೆ ತಮಗೆ ಅವಶ್ಯಕವಾಗಿ ಬೇಕಾಗುವ ಹಾಸಿಗೆ ತಂಬಿಗೆ ಮೊದಲಾದುವುಗಳನ್ನು ಸಂಗಡ ತೆಗೆದುಕೊಂಡು ಬರಬೇಕು. (೨) ಮೇಲಣ ವಿಷಯಗಳನ್ನು ಕುರಿತು ಉಪನ್ಯಾಸಮಾಡುವವರು ತಮ್ಮ ಉಪನ್ಯಾಸವನ್ನು ಬರೆದು ಒಂದುವಾರ ಮುಂಚಿತವಾಗಿ ಕಳುಹಿಸಬೇಕು. (೩) ಸಮ್ಮೇಲನದ ಸಂಬಂಧವಾದ ಎಲ್ಲಾ ಪತ್ರವ್ಯವಹಾರಗಳನ್ನು "ಜನರಲ್ ಸೆಕ್ರೆಟರಿ" ಗಳ ಸಂಗಡ ಮಾಡಬೇಕು.

ಇಲ್ಲಿಗೆ ಬರುವ ರೇಲ್ವೆಗಾಡಿಗಳ ಕಾಲ.

ಬೆಳಗಾಂವ ಮಾರ್ಗವಾಗಿ ಬರತಕ್ಕ ಮೇಲ್ ಮಧ್ಯಾಹ್ನ ೨|| ಗಂಟೆ. ಪ್ಯಾಸೆಂಜರ್ ರಾತ್ರಿ ೧೧|| ಗಂಟೆ. ಹರಿಹರ ಮಾರ್ಗವಾಗಿ ಬರತಕ್ಕ ಮೇಲ್ ಮಧ್ಯಾಹ್ನ ೧೧|| ಗಂಟೆ. ಪ್ಯಾಸೆಂಜರ್ ರಾತ್ರಿ ೧|| ಗಂಟೆ. ಗದಗ ಮಾರ್ಗವಾಗಿ ಬರತಕ್ಕ ಮೇಲ್ ಪ್ರಾತಃಕಾಲ ೮|| ಗಂಟೆ. ಪ್ಯಾಸೆಂಜರ್ ಮಧ್ಯಾಹ್ನ ೧೧ ಗಂಟೆ; ರಾತ್ರಿ ೮ ಗಂಟೆ.

ಜನರಲ್ ಸೆಕ್ರೆಟರಿ—ಬಿ. ಪಿ. ಕಂಬದ,
ಸೆಕ್ರೆಟರಿಗಳು—ಜಿ. ಎಂ. ಮಿರ್ಜಿ, ಬಿ. ಎನ್. ಬೆಂಡಿಗೇರಿ.

ಸೇವಿಂಗ್ಸ್ ಬಾಕ್ಸ್ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ. ಕೈಯಲ್ಲಿರುವಾಗ ಸೇವಿಂಗ್ಸ್‌ಬ್ಯಾಂಕ್‌ನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವದೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಳ್ಳುವದು. ಇದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ 2—0—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
30 102 ಜೈನಾಬಜಾರ್ ರೋಡ್ ಮದರಾಸು.

18 ನೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

30 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ).

ಪಂಡಿತಾರಾಧ್ಯಚರಿತಂ.—ಇದು ವೀರಶೈವ ಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀಶೈಲಮಹತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣ ಗ್ರಂಥ ೫ ರೂಪಾಯಿ.

ಬಸವರಾಜ ವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹೊಸಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೬-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಷಟ್‌ಸ್ಥಲಯೋಗಪ್ರದೀಪಿಕೆ—ಬೆಲೆ ೧೪ ಆಣೆ. ವಿಜಗುಣಾ ಗುರುಗಳಾದ ಶ್ರೀ ಚನ್ನ ಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟಿ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೦—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ-೧-೨-೦; ಸಟೀಕ ಕಠಸೂತ್ರವು ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೨ ಆಣೆ; ರತ್ನತ್ರಯ ೨ ಆಣೆ; ಶಂಕರಲಿಂಗಕಂದಂ ೧೪.

ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೫—೦
ಚಾರುಶೀಲಚರಿತ್ರೆ	೦—೬—೦
ಹಂಸಾ	೦—೮—೦

೧೯೨೧ ನೆಯ ಇಸವಿ ಏಪ್ರೆಲ್ ತಾ|| ೨೪ ರಿಂದ ೧೯೨೧ ನೆಯ ಏಪ್ರೆಲ್ ತಾ|| ೩೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿನಾಮ ಸಂವತ್ಸರದ ಚೈತ್ರ ಬಹುಳ ಬಿದಿಗೆಯಿಂದ ಚೈತ್ರಬಹುಳ ಅಷ್ಟಮಿವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
24	ಭಾನು	ಬಿದಿ	14.50	ವಿಶಾ	-7.42	12
25	ಸೋಮ	ತದಿ	16-1	ಅನೂ	10-25	13
26	ಮಂಗಳ	ಚವು	18.30	ಜ್ಯೇಷ್ಠ	14.7	14
27	ಬುಧ	ಪಂಚ	22-1	ಮೂಲ	19-16	15
23	ಗುರು	ಷಷ್ಠಿ	26-27	ಪೂಷಾ	25-11	16
29	ಶುಕ್ರ	ಸಪ್ತ	31-35	ಉಷಾ	31-36	17
30	ಶನಿ	ಅಷ್ಟ	36-45	ಶ್ರವ	38-10	18

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124. REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಶಶ್ವನ್ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧—೬—೦] [ಅಂಚೆವೆಚ್ಚ ಸೇರಿ ೨—೪—೦]

ಸಂಪುಟ ೩೪) ಮೈಸೂರ್ ಸ್ಟಾರ್ ಸ ೧೯೨೧ ನೆಯ ಇಸವಿ ಮೇ ತಾರೀಖು ೧ ನೆಯ ಭಾನುವಾರ (ಸಂಚಿಕೆ ೧೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಕಾಲ್ಸ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
16 ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹರದೀ ಗ್ಲೆಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹೇದಿರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಗಳಯ್ಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ಆಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ. 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
31 ಪಾರ್ಕ್‌ಟೌನ್ ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು. ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಸಾಮಾನುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣೆಗಳ ಕಂಠಿ 1ಕ್ಕೆ

ಮುಖ	ರೂ. ಇಂದ		ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0

ಬಿಡಿ ಮಣೆಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣೆಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ರಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
10 ಕಂಪನಿ, ಚೌಕಂಬಾ ಕಾಶೀ.

ಭಕ್ತಶೋಧಕ ! ಮನೋಲ್ಲಾಸಿತವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು

29

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವಂಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

21

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಿತಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0.

31 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತುರಾಯಿ 1, ಶಾವಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1. ರಾಗಮಾಲಿಕೆ 1, ಗಡಿಯಾರದ ಉತ್ತರಮುಖ 1, ಮುಖ ನೋಡಿಕೊಳ್ಳುವ ದಂತದಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಡರ್ಬಾರ್ ಕೈಸತ್ತ 1, ರೋಲ್‌ಗೋಲ್ಡ್ ಎಂಬ ಥಂಗಾರದ ಉಂಗುರ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
31 89, ನಾರಾಯಣಮೊದಲಬೀದಿ, ಮದ್ರಾಸು.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಮೇ ತಾ|| ೧ನೆಯ ಭಾನುವಾರ.

ಮೈಸೂರು ಪ್ರಭುತ್ವದ ಹಣದ ಕೊರತೆ.

ಯುದ್ಧ ಮುಗಿದ ಬಳಿಕ ಪ್ರಪಂಚದಲ್ಲೆಲ್ಲಾ ಆರ್ಥಿಕ ದುಸ್ಥಿತಿಯ ಚಿಹ್ನಗಳು ನಾನಾವಿಧವಾಗಿ ಗೋಚರಿಸುತ್ತವೆ. ಆದಾಯ ಕಡಿಮೆಯಾಗಿ ವೆಚ್ಚವು ಹೆಚ್ಚಿಹೋಗಿ ಪ್ರತಿಯೊಂದು ಸರ್ಕಾರವೂ ತಲ್ಲಣಿಸುತ್ತಿದೆ. ನಮ್ಮ ಭರತಖಂಡದ ಸರ್ಕಾರದ ಪಾಡೂ ಹೀಗೆಯೇ ಆಗಿರುವುದು ಗೊತ್ತೇ ಇದೆ. ಹೆಚ್ಚು ವೆಚ್ಚದ ಭಾರವನ್ನು ನೀಗಿಸಿಕೊಳ್ಳುವುದಕ್ಕಾಗಿ ಹೊಸ ಹೊಸ ತೆರಿಗೆ ಕಂದಾಯಗಳನ್ನು ವಿಧಿಸಿ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ನಮ್ಮ ಮೈಸೂರು ಪ್ರಭುತ್ವಕ್ಕೂ ಆರ್ಥಿಕ ದುಸ್ಥಿತಿಯು ತಪ್ಪಲಿಲ್ಲ. ಸರ್ ವಿಶ್ವೇಶ್ವರಯ್ಯನವರ ಮಂತ್ರಿತ್ವದಲ್ಲಿ ಸಂಸ್ಥಾನದಲ್ಲಿ ಲಾಭಕರವಾದ ಪ್ರತಿಷ್ಠಾಪನೆಗಳೆಂದು ಅನೇಕ ನೂತನ ಕಾರ್ಯಾರಂಭಗಳು ಮಾಡಲ್ಪಟ್ಟು ಕೆಲವು ಇನ್ನೂ ಅರ್ಧಾಂತವಾಗಿ ಕೆಲವು ಲಾಭವಿಲ್ಲದೆ ಮೂಲೆಗೆ ಬಿದ್ದು ನಿಂತಿರುವುವು. ಹಣವೇನೋ ಬೊಕ್ಕಸದಲ್ಲಿದ್ದುದೆಲ್ಲಾ ಮುಗಿದುಹೋಯಿತು. ಹಿಡಿದ ಕೆಲಸಗಳನ್ನು ಕೊನೆಮುಟ್ಟಿಸಲಿಕ್ಕೆ ಸಾಲವನ್ನು ಮಾಡಿಯೇ ತೀರಬೇಕಾಗುವುದೆಂದು ಅವರೇ ಅಭಿಪ್ರಾಯಪಟ್ಟಿದ್ದರು. ಅಲ್ಲದೆ ಸರ್ಕಾರದ ಕಾರ್ಯನಿರ್ವಾಹಕ್ರಮದಲ್ಲಿ ದುಂದು ಹೆಚ್ಚಾಗಿ ಹೋಯಿತು. ಅಧಿಕಾರಸ್ಥಾನಗಳು ಹೆಚ್ಚಿಸಲ್ಪಟ್ಟುವು. ಒಬ್ಬರ ಕೆಲಸವು ಇಬ್ಬರು ಮೂವರುಗಳಿಗೆ ಹಂಚಿಹಾಕಲ್ಪಟ್ಟಿತು. ಉದ್ಯೋಗಿಗಳ ಸಂಚಾರದಭತ್ಯವು ಬಹಳ ಹೆಚ್ಚಿಹೋಯಿತು. ಹೀಗೆ ನಾನಾ ಕಾರಣಗಳಿಂದ ವೃದ್ಧಿಹೊಂದಿಹೋಗಿರುವ ವೆಚ್ಚದ ಭಾರವನ್ನು ತಾಳಿಕೊಳ್ಳುವುದು ಈಗ ದುರ್ಭರವಾಗಿ ಕುಳಿತಿದೆ.

ಮುಂದಣ ವರ್ಷದಲ್ಲಿ ಆಗಬಹುದಾದ ಸಂಸ್ಥಾನದ ಆಯವ್ಯಯವನ್ನು ವಿಮರ್ಶಿಸಿದರೆ ೬೦ ಲಕ್ಷ ರೂ. ಗಳು ವೆಚ್ಚಕ್ಕೆ ಸಾಲದೆಹೋಗುವಂತೆ ಇದೆಯಂತೆ. ಇಂಥ ದುಸ್ಥಿತಿಯು ಸಂಸ್ಥಾನಕ್ಕೆ ಹಿಂದೆ ಯಾವಾಗಲೂ ಬಂದುದಿಲ್ಲ. ಇದರ ಬಾಧ್ಯತೆಯನ್ನು ಈಗಣ ಪ್ರಭುತ್ವದ ಮೇಲೆ ಹೊರಿಸಲಿಕ್ಕಿಲ್ಲ. ಕಳೆದ ವರ್ಷ ೧ ಕೋಟಿ ರೂ. ಗಳ ಸಾಲವನ್ನು ಮಾಡಿದುದಾಯಿತು. ಈಗ ಮತ್ತೆ ೧ ಕೋಟಿ ರೂ. ಗಳ ಸಾಲವನ್ನು ತೆಗೆಯದಿದ್ದರೆ ನಿರ್ವಾಹವಾಗುವ ಸ್ಥಿತಿಯಿಲ್ಲವೆಂದು ಪ್ರವಾದವಿದೆ. ಗತ್ಯಂತರವಿಲ್ಲದೆ ಸಾಲಮಾಡಬೇಕಾಗಿ ಬಂದಿರಬಹುದಾದರೂ ಇದು ಸಂಸ್ಥಾನಕ್ಕೊಂದು ಶುಭಚಿಹ್ನೆಯಲ್ಲವೆಂದೇ ಭಾವಿಸಬೇಕು. ಸಾಲಮಾಡುತ್ತಹೋಗುವುದು ದಿವಾಳಿಯ ದಾರಿಯಾಗಿರುತ್ತದೆ. ಧನಪುಷ್ಟವಾಗಿದ್ದ ಸಂಸ್ಥಾನದ ಬೊಕ್ಕಸವು ಬರಿದಾಗಿ ಸಂಸ್ಥಾನಕ್ಕೆ ಇಂಥ ಸ್ಥಿತಿ ಬಂದುದು ಪ್ರಜೆಗಳಿಗೆಲ್ಲಾ ವ್ಯಸನಕರ. ಲಾಭಕರ ಪ್ರತಿಷ್ಠಾಪನೆಗಳಿಗೆ ಸಾಲ ಮಾಡುವುದು ಅಯುಕ್ತವಲ್ಲವೆಂದೂ, ಅದು ನಾಗರಿಕ ಪ್ರಭುತ್ವದ ಧರ್ಮವೇ ಆಗಿರುವುದೆಂದೂ ವಾದಿಸುವವರು ಕೆಲವರು ಇರಬಹುದು. ಲಾಭಕರ ಪ್ರತಿಷ್ಠಾಪನೆಗಳೆಂದು ಊಹಾ ಪ್ರಪಂಚದ ಬರವಸೆಯ ಮೇಲೆ ಸಾಲಮಾಡುವುದು ಸರಿಯಲ್ಲ. ೧ ಕೋಟಿ ಇದ್ದ ಸಂಸ್ಥಾನದ ವರಮಾನವು ೩ ಕೋಟಿಗೆ ಏರಿದರೂ ಪ್ರಜೆಗಳ ಮೇಲೆ ನಾನಾ ತೆರದ ಕಂದಾಯದ ಭಾರಗಳು ಹೆಚ್ಚಾಗಿ ಹೇರಲ್ಪಟ್ಟಿದ್ದರೂ ಸಾಲಮಾಡಬೇಕಾದ ಅವಸ್ಥೆಯು ಸರ್ಕಾರಕ್ಕೆ ಪ್ರಾಪ್ತವಾಗಿರುವುದು ವಿಷಾದಸ್ಥಾನವಲ್ಲವೇ? ಆದುಕಾರಣ ಈ ವಿಷಮಪತನದ ಗತಿಯಿಂದ ರಾಜ್ಯರಥವನ್ನು ತಿಟ್ಟಿಗೆ ಮರಳಿಸುವುದು ಈಗ ಅತ್ಯವಶ್ಯಕವು. ಈ ದುರ್ಭರ ಕಾರ್ಯಕ್ಕೆ ತಮ್ಮ ಹೆಗಲನ್ನೊಡ್ಡಬೇಕಾದ ಯೋಗವು ನಮ್ಮ ಸರ್ದಾರ್ ಕಾಂತರಾಜ ಅರಸರವರಿಗೂ ಅವರ ಅನುಯಾಯಿಗಳಾದ ಉದ್ಯೋಗಿಗಳಿಗೂ ಪ್ರಾಪ್ತವಾದುದಕ್ಕಾಗಿ ಚಿಂತಿಸಬೇಕಾಗಿದೆ. ಆದರೆ ಇಂಥ ಅನಿಷ್ಟ ಸಮಯಕ್ಕೆ ಅವರಂಥವರ ಮಂತ್ರಿತ್ವವು ದೊರೆತುದೇ ಸಂಸ್ಥಾನದ ಪುಣ್ಯೋದಯವೆಂದು ಒಂದು ಪಕ್ಷದಲ್ಲಿ ಭಾವಿಸಬೇಕಾಗಿರುವುದು. ಇವರು ಶ್ರೀಮನ್ಮಹಾರಾಜರವರ ಕೇವಲ ಸಂಬಂಧಿಗಳಾದುದರಿಂದ ಶ್ರೀಮನ್ಮಹಾರಾಜ ಸಹೋದರರಿಗೆ ಸಂಸ್ಥಾನದ ಆಗುಹೋಗುಗಳ ವಿಷಯದಲ್ಲಿ ಎಷ್ಟು ವ್ಯಗ್ರವಾದ ಚಿಂತಾ ಕುತೂಹಲಗಳಿರುವುವೋ ಇವರಿಗಾದರೂ ಹಾಗೆಯೇ ಇರುವುವೆಂಬುದಕ್ಕೆ ಸಂಪೂರ್ಣವಾದ ಕಾರಣಗಳಿವೆ. ಸಂಬಳದ ಅಥವಾ ಬರಿಯ ದಂಭಪ್ರತಿಷ್ಠೆಗಳ ಆಸೆಗಾಗಿ ಇವರು ಕೆಲಸಮಾಡತಕ್ಕವರಾಗಿಲ್ಲ. ಅಂಥವರುಗಳ ದಿವಾನಗಿರಿಯು ಈಗಣ ಸಮಯದಲ್ಲಿದ್ದರೆ ಸಂಸ್ಥಾನವು ಅಡಮಾನಕ್ಕೂ ಗುರಿಯಾಗಿಹೋಗುತ್ತಿತ್ತೋ ಏನೋ! ಶ್ರೀಮನ್ಮಹಾರಾಜರ ಮತ್ತು ಅವರ ಪ್ರಜೆಗಳ ಭಾಗದ ದೈವವೇ ಅದನ್ನು ತಪ್ಪಿಸಿತೆಂದು ಭಾವಿಸಬೇಕು.

ಈಗಣ ಸ್ಥಿತಿಯಲ್ಲಿ ಆಯವ್ಯಯಗಳನ್ನು ಸರಿಪಡಿಸಿಕೊಳ್ಳುವುದೇ ಕೆಲ ವರ್ಷಗಳವರೆಗೂ ಪರಮ ಪ್ರಯಾಸವಾಗಬಹುದು. ಸಂಸ್ಥಾನದಲ್ಲಿ ಹೊಸ ತೆರಿಗೆ ಸುಂಕಗಳನ್ನು ವಿಧಿಸಿ ಹೆಚ್ಚು ಆದಾಯವನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಈಗಣ ಕಂದಾಯಗಳೇ ಪ್ರಜೆಗಳಿಗೆ ಹೊರಲಾರದಷ್ಟಾಗಿವೆ. ಆ ಮಾರ್ಗವು ತಪ್ಪಿದ ಬಳಿಕ ವೆಚ್ಚವನ್ನು ಕಡಿಮೆಮಾಡಿಕೊಳ್ಳುವ ಮಾರ್ಗವೊಂದೇ ಉಳಿದಿರುತ್ತದೆ. ಅದು ಸಾಧ್ಯವೂ ಆಗಿರುತ್ತದೆ. ಅಂಥ ಕಾರ್ಯವನ್ನು ಮಾಡುವುದಕ್ಕೆ ತಕ್ಕ ಮುಖ್ಯಾಧಿಕಾರಿಯೂ ತಕ್ಕ ಸಮಯವೂ ಒದಗಿರುತ್ತವೆ. ದೂರಾಲೋಚನೆಯಿಂದಲೂ, ದರ್ಪದಿಂದಲೂ, ಧೈರ್ಯದಿಂದಲೂ, ಕೇವಲ ದೇಶಹಿತೈಕದೃಷ್ಟಿಯಿಂದಲೂ, ಸ್ವಾಮಿಭಕ್ತಿಯಿಂದಲೂ ಸರಿಯಾದ ಏರ್ಪಾಟುಗಳನ್ನು ಈಗ ಮಾಡಿದರೆ ಸಂಸ್ಥಾನಕ್ಕೆ ಮಹಾಸೇವೆಯನ್ನು ಮಾಡಿದ ಶಾಶ್ವತ ಕೀರ್ತಿಯು ಮ|| ಅರಸಿನವರ ಪಾಲಿಗೆ ಬರುವುದು; ಮಹಾರಾಜರೂ ಮೆಚ್ಚುವರು; ಪ್ರಜೆಗಳೂ ಸಂತೋಷಿಸುವರು.

ಪ್ರತಿಯೊಂದು ಶಾಖೆಯಲ್ಲೂ ಎಷ್ಟುಮಟ್ಟಿಗೆ ವೆಚ್ಚವನ್ನು ಕಡಿಮೆಮಾಡಲು ಸಾಧ್ಯವೆಂಬುದು ಈಗ ವಿಮರ್ಶಿಸಲ್ಪಟ್ಟು ಸಂಕೋಚಗೊಳಿಸಲ್ಪಡುತ್ತಿದೆಯೆಂದು ಕೇಳುತ್ತೇವೆ. ಆ ವಿವರಣವೆಲ್ಲಾ ಮುಂದಣ ವರ್ಧಂತಿ ಕಾಲದ ಪ್ರಜಾಪ್ರತಿನಿಧಿ ಸಭಾಧಿವೇಶನದಲ್ಲಿ ಗೊತ್ತಾಗುವುದು. ಮತ್ತೂ ಆಯವ್ಯಯಗಳ ಸಂಸ್ಕರಣವೆಲ್ಲಾ ಇಷ್ಟರಲ್ಲೇ ಪ್ರಕಟವಾಗಲಿಕ್ಕಿರುವ ಬಡ್ಜೆಟ್ಟಿನಿಂದ ಹೊರಬೀಳುವುದು. ಸಂಕೋಚವನ್ನು ಕೆಳಗಣ ಉದ್ಯೋಗಸ್ಥರ ಕಡೆಯಿಂದ ಮಾಡದೆ ಮೇಲಣ ಅಧಿಕಾರಿಗಳ ಕಡೆಯಿಂದ ಮಾಡುತ್ತ ಬರಬೇಕೆಂದೂ, ದಿವಾನರು ಮೊದಲಾದ ಸಾವಿರಾರು ಸಂಬಳದ ಉನ್ನತಾಧಿಕಾರಿಗಳು ಇಂಥ ಸಮಯದಲ್ಲಿ ತಮ್ಮ ವೇತನವನ್ನು ಅರ್ಧಪ್ರಮಾಣಕ್ಕೆ ಇಳುಹಿಸಿಕೊಂಡರೆ ಎಷ್ಟೋ ಅನುಕೂಲವಾದ ರಿಟ್ರೆಂಚ್‌ಮೆಂಟ್ ಆಗುವುದೆಂದೂ ಕೆಲವರು ವಾದಿಸುವರು. ಇದು ವಾಸ್ತವವೇ ಸರಿ. ಪ್ರಭುತ್ವಹಿತಕ್ಕಾಗಿ ಹೀಗೆ ಮಾಡಲು ನಮ್ಮ ಸರ್ದಾರರೂ ಹಿಂದೆಗೆಯಲಾರರು. ಸ್ವತೋಭಾತಮತಿಗಳೇ ಆಗಿದ್ದಾರೆ. ಪರರ ಸೂಚನೆಯೂ ಕೂಡ ಅವರಿಗೆ ಬೇಕಾಗಿರದು. ಆದರೆ ಅವರ ಅನುಯಾಯಿಗಳಿಗೆಲ್ಲಾ ಹೀಗೆ ಮಾಡುವಲ್ಲಿ ಸಮ್ಮತಿಯಿರುವುದೆಂದು ಹೇಳಲಾಗುವುದಿಲ್ಲ. ಬಲಾತ್ಕರಿಸುವುದು ಉಚಿತವಲ್ಲ. ಒಂದು ವೇಳೆ ದಾಕ್ಷಿಣ್ಯಕ್ಕೆ ಒಪ್ಪಿದರೂ ಮನಸ್ಸಿನಲ್ಲಿ ಅಸಮಾಧಾನವೂ ಬೇಸರೂ ಹುಟ್ಟಬಹುದು. ಆದುಕಾರಣ ಆ ಭಾಗದಲ್ಲಿ ಪರರ ಸೂಚನೆಗಿಂತಲೂ ಅವರವರ ಮನಸ್ಸಿಗೆ ಅದರ ವಿಮರ್ಶಾಭಾರವನ್ನೂ ಔದಾರ್ಯಸ್ವಾತಂತ್ರ್ಯವನ್ನೂ ವಹಿಸಿಬಿಡುವುದೇ ಯುಕ್ತವಾಗಿರುತ್ತದೆ.

ಇದುವರೆಗೆ ನಡೆದಿರುವ ಯೋಚನೆಯಲ್ಲಿ ಕಡೂರು ಡಿಸ್ಟ್ರಿಕ್ಟನ್ನೇ ತಪ್ಪಿಸಿಬಿಟ್ಟು ಅದಕ್ಕೆ ಸೇರಿದ ೪ ತಾಲ್ಲೂಕುಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿಗೇ ಸೇರಿಸಿಬಿಡಬೇಕೆಂದೂ, ಎಕ್ಸೈಜ್ ಕಮಿಷನರ ಸ್ಥಾನ, ಸ್ಯಾನಿಟರಿ ಕಮಿಷನರ ಸ್ಥಾನ, ಕೃಷ್ಣರಾಜಸಾಗರದ ಚೀಫ್ ಇಂಜನಿಯರ ಸ್ಥಾನ, ಡೆಪ್ಯುಟಿ ಚೀಫ್ ಇಂಜನಿಯರ ಸ್ಥಾನ, ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರುಗಳ ಸ್ಥಾನ, ವಿದ್ಯಾಶಾಖಾ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್‌ರವರ ಸ್ಥಾನ, ಇವಿಷ್ಟನ್ನು ತೆಗೆದುಹಾಕಿಬಿಡಬೇಕೆಂದೂ ಗೊತ್ತಾಗಿರುವುದಂತೆ. ಇವೆಲ್ಲಾ ಸರಿಯಾದ ನಿರ್ಧಾರಗಳೇ ಆಗಿರುತ್ತವೆ. ಇವುಗಳ ಜತೆಗೆ ಸರ್ಕಾರದವರು ಯಂತ್ರಾಲಯ ಪ್ರತಿಷ್ಠೆಗಳಿಂದ ಏನೋ ಲಾಭಸಂಪಾದಿಸುತ್ತೇವೆಂದು ಭಾವಿಸಿರುವ ಭ್ರಮೆಯನ್ನೂ ಕೂಡ ತೊಲಗಿ, ಲೋಹದ ಯಂತ್ರಾಲಯವನ್ನು ಪ್ರಜೆಗಳಿಗೆ ವಹಿಸಿಕೊಡಲು ಸಿದ್ಧಬಾಗಿರುವಂತೆ ಸಾಬೂನು, ಗಂಧದೆಣ್ಣೆ, ಸಕ್ಕರೆ ಮೊದಲಾದುವುಗಳ ಯಂತ್ರಾಲಯ ಕಾರ್ಯಗಳ ಸಂಬಂಧದಿಂದಲೂ ಕೈ ತೊಳೆದುಕೊಳ್ಳುವುದು ಅವಶ್ಯಕವಾಗಿರುವುದು. ಮುಖ್ಯವಾಗಿ ಪಿ. ಡಬ್ಲ್ಯು ಶಾಖೆಯಲ್ಲಿ ಪ್ರಬಲವಾದ ಸಂಸ್ಕರಣವನ್ನು ಮಾಡಲು ಅವಕಾಶವಿರುವುದೆಂಬುದನ್ನು ಹೇಳಬೇಕಾಗಿಲ್ಲ. ಸರ್ಕಾರಿ ಮುದ್ರಣ ಶಾಖೆಯ ವಿಸ್ತಾರವನ್ನು ತೀರ ಕಡಿಮೆಮಾಡಿ ಮೈಸೂರಿನಲ್ಲಿರುವ ಶಾಖಾ ಮುದ್ರಾಲಯವನ್ನು ಸಂಪೂರ್ಣವಾಗಿ ತೆಗೆದುಬಿಡಬಹುದು.

ವಿಶ್ವವಿದ್ಯಾಲಯವನ್ನು ಪ್ರತಿಷ್ಠಾಪಿಸದೆ ಇದ್ದರೇನೆಯೇ ಚೆನ್ನಾಗಿದ್ದಿತೆಂದು ಈಗ ಎಣಿಸುತ್ತಿದ್ದರೂ ಈ ಅತ್ಯಲ್ಪ ಕಾಲದಲ್ಲಿ ಅದರ ಬದಲಾವಣೆಗೆ ಮನಸ್ಸುಕೊಡಲು ಸಾಧ್ಯವಿಲ್ಲ. ಸೇನಾಶಾಖಾವ್ಯಯವನ್ನು ಈಗ ಕಡಮೆ ಮಾಡಲೇಬಹುದು. ಅಮೃತಮಹಲ್, ಕುಣಿಗಲ್ ಸ್ಟಡ್‌ಫಾರಂ ಇವುಗಳ ವೆಚ್ಚವನ್ನು ಹ್ರಾಸಗೊಳಿಸಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ ಅಧಿಕಾರಿಗಳ ಸಂಚಾರದ ಬತ್ಯದ ಪ್ರವಾಹವನ್ನು ತಡೆಗಟ್ಟಲು ವಿಶೇಷ ಗಮನವನ್ನು ಕೊಡಬೇಕಾಗಿರುವುದು.

ಮುಖ್ಯವಾಗಿ ಸಂಸ್ಥಾನಕ್ಕೆ ಈಗಣ ಆರ್ಥಿಕ ದುಸ್ಥಿತಿಯ ತಾಪವೆಲ್ಲಾ ತಪ್ಪಿ ರಾಜ್ಯರಥ ಚಲನವು ಒಂದು ನಿರುಪಾಧಿಕ ನಿಶ್ಚಿಂತಸ್ಥಿತಿಗೆ ಬರುವವರೆಗೂ ನಮ್ಮ ಸರ್ದಾರ್ ಕಾಂತರಾಜ ಅರಸಿನವರೇ ಅಮಾತ್ಯ ಪದವಿಯಲ್ಲಿದ್ದು ಕಾರ್ಯನಿರ್ವಾಹ ಮಾಡುವಂತೆ ಅವಕಾಶವನ್ನೂ ಆಯುರಾರೋಗ್ಯಗಳನ್ನೂ ಜಗದಂಬೆಯು ಅನುಗ್ರಹಿಸಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು

ಬರುವ ವೈಶಾಖ ಶುದ್ಧ ೨ ಸೋಮವಾರ (ಮೇ ತಾ|| ೯ ರಲ್ಲಿ) ಬಸವೇಶ್ವರ ಜಯಂತ್ಯುತ್ಸವವು ಸರ್ವತ್ರ ಆಚರಿಸಲ್ಪಡತಕ್ಕುದಾಗಿದೆ.

ವಿದ್ಯಾಶಾಖೆಯಲ್ಲಿರುವ ಸರ್ಕಲ್ ಇನ್ಸ್ಪೆಕ್ಟರ್ ಮ|| ಸಿ. ಎಂ. ವಿಜಯ ರಾಘವಾಚಾರರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವವರಾಗಿದ್ದಾರೆ.

ಸರ್ಕಾರದಿಂದ ಪರಸ್ಪರ ಸಹಾಯಕ ಸಂಘಗಳಿಗೆ ಕೊಡುವ ಸಾಲದ ಹಣಕ್ಕೆ ಸೇಕಡಾ ೬|| ಯಂತೆ ಸಾಧಾರಣ ಬಡ್ಡಿಯನ್ನೂ ೮ ರಂತೆ ಸುಸ್ತಿಬಡ್ಡಿಯನ್ನೂ ಇನ್ನುಮೇಲೆ ವಿಧಿಸುವರು.

ಸಿವಿಲ್ ಸಪ್ಲೈ ಡೈರೆಕ್ಟರ ಕೆಲಸವೂ ರೆ|| ಕಮಿಷನರಿಗೇ ವಹಿಸಲ್ಪಟ್ಟು ಆ ಶಾಖ ಭಾಗಗಳಿಗಾಗಿ ಮ|| ಮುದ್ದುಕೃಷ್ಣಪ್ಪನವರು ರೆ|| ಕಮಿಷನರ ಅಸಿಸ್ಟೆಂಟರಾಗಿ ಮಾಡಲ್ಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಆಂಗ್ಲಭಾಷೆಯ ದಿನ ಪತ್ರಿಕೆಯೊಂದನ್ನೂ ದೇಶಭಾಷೆಯ ದಿನ ಪತ್ರಿಕೆಯೊಂದನ್ನೂ ಪ್ರಕಟಿಸಲು ಒಂದು ಸಿಂಡಿಕೇಟ್ ಬೋರ್ಡು ಸ್ಥಾಪಿಸಲ್ಪಟ್ಟಿದೆಯೆಂದು ಕೇಳುತ್ತೇವೆ.

ಮಹಾಮಹಿಮರೂ ಸಂಪೂಜ್ಯರೂ ಪ್ರತ್ಯಕ್ಷಪರಶಿವರೂ ಎನಿಸಿಕೊಂಡಿದ್ದ ಅತಣಿ ಮಹಾಶಿವಯೋಗಿವರ್ಯರು ಕಳೆದ ತಾ|| ೨೪ ನೆ ಭಾನುವಾರದ ದಿವಸ ಶಿವೈಕ್ಯರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಈಗಣ ಆರ್ಥಿಕ ದುಸ್ಥಿತಿಯಿಂದ ವಿದ್ಯಾಶಾಖೆಯ ವೆಚ್ಚದಲ್ಲಿ ೩ ಲಕ್ಷವು ಕಡಿಮೆಮಾಡಲ್ಪಡುವುದಂತೆ. ಸಂಪದಭ್ಯುದಯ ಸಮಾಜದ ಶೋಧನ ಕಾರ್ಯಗಳ ವೆಚ್ಚವು ೨ ಲಕ್ಷದಿಂದ ||| ಲಕ್ಷಕ್ಕೆ ಇಳುಹಿಸಲ್ಪಡುವುದು.

ನಂದೀದುರ್ಗದ ಪರಸ್ಪರ ಸಹಾಯಸಂಘದ ಲೆಕ್ಕವನ್ನು ಏರುಪೇರು ಮಾಡಿ ಧನವನ್ನು ಅಪಹರಿಸಿದ್ದ ಜಿ. ರಾಮಸ್ವಾಮಯ್ಯಂಗಾರ್ ಎಂಬಾತನಿಗೆ ೩ ವರ್ಷಗಳ ಕಠಿನ ಕಾರಾಗೃಹವಾಸ ಶಿಕ್ಷೆಯೂ ೫೦೦ ರೂ. ಅರ್ಥದಂಡವೂ ವಿಧಿಸಲ್ಪಟ್ಟುವು.

ಪುನಾದಿಂದ ಬಂದಿದ್ದ ಪ್ರೊ|| ಕರ್ವೆಯವರು ಬೆಂಗಳೂರಿನಲ್ಲಿ ೨ ಉಪನ್ಯಾಸಗಳನ್ನು ಸ್ತ್ರೀ ವಿದ್ಯಾಪ್ರೋತ್ಸಾಹ ವಿಷಯದಲ್ಲಿ ಮಾಡಿದರು. ಪುಣೆಯಲ್ಲಿರುವ ಮಹಿಳಾ ವಿಶ್ವವಿದ್ಯಾಲಯದ ಧನನಿಧಿಗೆ ಚಂದಾಕೂಡಿಸಲು ಒಂದು ಸಂಘವು ಏರ್ಪಾಡಾಗಿ ಅದಕ್ಕೆ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಅಧ್ಯಕ್ಷರಾಗಿ ಮಾಡಲ್ಪಟ್ಟರು.

ಚೀಫ್ ಕೋರ್ಟಿನ ೩ ನೆ ಜಡ್ಜರಾದ ಮಿ|| ಆರ್. ಬಿ. ಪ್ಲಮರ್‌ರವರು ೬ ತಿಂಗಳ ರಜಾ ಪಡೆದಿರುವುದರಿಂದ ಆ ಕಾಲದಲ್ಲಿ ಗೌ|| ಅಡ್ವೋಕೇಟರಾದ ಮ|| ಸಿ. ಎಸ್. ದೊರೆಸಾಮಯ್ಯರವರು ಆಕ್ಟಿಂಗ್ ಜಡ್ಜರಾಗಿರುವಂತೆ ನಿಯಮಿಸಲ್ಪಟ್ಟಿದ್ದಾರೆ. ಇವರು ಮೊದಲೊಂದುಸಲ ಹೀಗೆಯೇ ಆಕ್ಟಿಂಗ್ ಮಾಡಿದ್ದರು. ಇಲ್ಲದಿದ್ದರೆ ಈ ಸಮಯದಲ್ಲಿ ಸೀನಿಯರ್ ಡಿಸ್ಟ್ರಿಕ್ಟ್ ಜಡ್ಜರಾಗಿರುವ ಬ್ಯಾರಿಸ್ಟರ್ ಮ|| ಬಿ. ನಾಗಪ್ಪನವರಿಗೆ ಆ ಪದವಿಯು ದೊರೆಯಬೇಕಾಗಿದ್ದಿತು.

ಗಾನವಿಶಾರದ ಮ|| ಬಿ. ಕೃಷ್ಣಪ್ಪನವರು ಪ್ರತಿವರ್ಷವೂ ರಾಮೋತ್ಸವವನ್ನು ಬಹು ಭಕ್ತಿವೈಭವದಿಂದ ನಡೆಯಿಸಲುಪಕ್ರಮಿಸಿ ಇಂದಿಗೆ ೨೪ ವರ್ಷಗಳು ಮುಗಿದುವು. ಈಸಲ ಅನ್ನತದ ಉದಾಪನೆಯನ್ನು ಮಾಡಿ ತದಂಗವಾದ ಸಮಾರಾಧನೆ ದಾನಧರ್ಮ ಮೊದಲಾದುವುಗಳನ್ನು ಬಹು ಉದಾರವಾಗಿ ನೆರವೇರಿಸಿದರು. ಬೇರೆಬೇರೆ ಮತಸ್ಥರಿಗೆ ಬೇರೆಬೇರೆ ಕಡೆ ಸಮಾರಾಧನೆಗಳು ವಿತರಣೆಯಿಂದ ನಡೆಯಿಸಲ್ಪಟ್ಟುವು. ವೀರಶೈವರಿಗೆಲ್ಲಾ ಮಹಾಲಿಂಗಪ್ಪನವರ ಮಠದಲ್ಲಿ ನಡೆಯಿಸಲ್ಪಟ್ಟಿತು.

೫ ವರ್ಷಕ್ಕೆ ೧ ಸಲ ನಡೆಯುವ ಪಶು ಪರಿಗಣಿತಿಯ ಪ್ರಕಾರ ಈ ವರ್ಷ ಮಾಡಲ್ಪಟ್ಟ ಎಣಿಕೆಯಲ್ಲಿ ಸಂಸ್ಥಾನದಲ್ಲೆಲ್ಲಾ ಹೋರಿ ಮತ್ತು ಎತ್ತುಗಳು ೧೮೯೭೦೦೩ ಹಸು ಎಮ್ಮೆಗಳು ೧೭೧೭೧೫೬ ಇರುವುವು. ಎಂದರೆ ಕಳೆದ ೫ ವರ್ಷಕ್ಕಿಂತ ಈಗ ೧೦೦ ಕ್ಕೆ ೮ ರಷ್ಟು ಎತ್ತು ಹೋರಿಗಳೂ, ೧೦೦ ಕ್ಕೆ ೬.೬ ರಷ್ಟು ಹಸು ಎಮ್ಮೆಗಳೂ ಹೆಚ್ಚಿದಂತಾದುವು. ಕುರಿ ಮೇಕೆಗಳು ಒಟ್ಟು ೫೫೨೯೭೭ ಇರುವುವು. ಇವು ಹಿಂದಿಗಿಂತ ಈಗ ೧೦೦ ಕ್ಕೆ ೩೦ ರಷ್ಟು ಕಡಿಮೆಯಾದುವು. ಮಾಂಸಭಕ್ಷಣದ ಹೆಚ್ಚುಗೆಯನ್ನು ಇದು ವ್ಯಕ್ತಪಡಿಸುತ್ತದೆ.

ಸೀನಿಯರ್ ಅ|| ಕಮಿಷನರುಗಳಾದ ಮ|| ಆರ್. ನಾನಾಸಾಮಿರಾಯರು ಮದ್ದಗಿರಿ ಸಬ್ ಡಿವಿಜನ್ ಆಫೀಸರಾಗಿಯೂ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ಫ್ರೆಂಚರಾಕ್ಸ್ ಸಬ್ ಡಿವಿಜನ್ ಆಫೀಸರಾಗಿಯೂ ಮ|| ಎನ್. ಹಿರಿಯಣ್ಣಯ್ಯನವರು ಕೋಲಾರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಅ|| ಕಮಿಷನರುಗಳಾದ ಮ|| ಜಿ. ರುದ್ರಪ್ಪನವರು ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಮ|| ಪಿ. ಎಚ್. ಕೃಷ್ಣರಾಯರು ಫ್ರೆಂಚರಾಕ್ಸ್ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಬೌರಿಂಗ್‌ಪೇಟೆಯಲ್ಲಿ ಸಬ್ ರಿಜಿಸ್ಟ್ರಾರರಾಗಿರುವ ಕೃಷ್ಣಮೂರ್ತಿಶಾಸ್ತ್ರಿಗಳವರು ಲಂಚವನ್ನು ತೆಗೆದುಕೊಂಡರೆಂಬ ಆಪಾದನೆಯಿಂದ ಕೋಲಾರದ ಸ್ಪೆಷಲ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು. ಡಿ|| ಕಮಿಷನರು ಇವರನ್ನು ಸಸ್ಪೆಂಡ್‌ಮಾಡಿರುವರು. ರಾಜಧಾನಿಯಲ್ಲೂ ಸಬ್ ರಿಜಿಸ್ಟ್ರಾರರಾಗಿದ್ದ ಇವರನ್ನು ಅನೇಕರು ತಿಳಿದಿರುವರು. ಇಂಥ ಮೊಕದ್ದಮೆಗಳು ಬಂದಾಗ್ಗೆ ಪ್ರಜೆಗಳು ಸತ್ಯೋದ್ಧಾರಕ್ಕಾಗಿ ಧೈರ್ಯಸ್ಥೈರ್ಯಗಳಿಂದ ನಿಂತು, ನಿಜವಾದ ಸಾಕ್ಷ್ಯಗಳ ರುಜುವಾತನ್ನು ಕೊಡುತ್ತಾಬಂದರೆ ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಿ ಲಂಚದ ಹಾವಳಿಯು ಕಡಿಮೆಯಾದೀತು.

1921 ರಲ್ಲಿ ನಡೆದ ಜನಪರಿಗಣತಿಯ ಪ್ರಕಾರ ಮೈಸೂರು ಸಂಸ್ಥಾನದ ವಾಸದ ಮನೆ ಮತ್ತು ಪ್ರಜಾಸಂಖ್ಯೆಗಳು ಈ ಕೆಳಗೆ ಕೊಟ್ಟಿರುವ ಪ್ರಕಾರ ಇರುತ್ತವೆ. ವಾಸದ ಮನೆಗಳ ಸಂಖ್ಯೆಯು 47955 ಅಥವಾ ಶೇಕಡ 4·14 ರ ಪ್ರಕಾರ ಹೆಚ್ಚಿರುತ್ತದೆ. 1911 ನೆ ಗಣತಿಯಗಿನ್ನ ಶಿವಮೊಗ್ಗ ಡಿ|| ನಲ್ಲಿ 24,287 ಮತ್ತು ಕಡೂರು ಡಿ|| ನಲ್ಲಿ 1432 ಜನಸಂಖ್ಯೆ ಕಡಿಮೆಯಾಗಿರುತ್ತದೆ. ಈಸಲ ಮೈಸೂರು ಡಿ|| ವಿನಾ ಇತರ ಎಲ್ಲಾ ಕಡೆಯೂ ಹೆಂಗುಸರ ಸಂಖ್ಯೆಯು ಗಂಡುಸರ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ.

ಡಿಸ್ಟ್ರಿಕ್ಟು.	ವಾಸದ ಮನೆ	ಒಟ್ಟು ಪ್ರಜಾ ಸಂಖ್ಯೆ	ಗಂಡುಸರು	ಹೆಂಗುಸರು	1911 ಕ್ಕಿಂತ ಹೆಚ್ಚು	ಕಡಿಮೆ
ಬೆಂಗಳೂರು ಡಿಸ್ಟ್ರಿಕ್ಟು ಮಾತ್ರ	1,56,623	7,88,764	3,99,752	3,89,012	29,242	
ಬೆಂಗಳೂರು ಪಟ್ಟಣ	25,290	1,19,427	64,426	55,001	30,776	
ಬೆಂಗಳೂರು ದಂಡು	16,667	1,18,684	61,255	57,429	17,850	
ಮೈಸೂರು ಪಟ್ಟಣ	17,227	83,932	43,878	40,054	12,626	
ಮೈಸೂರು ಡಿ|| ಮಾತ್ರ	2,77,394	13,15,785	6,57,447	6,58,338	45,020	
ಕೋಲಾರ ಡಿ|| ಗಣಿ ವಿನಾ	1,38,157	7,04,792	3,57,419	3,47,373		26,726
ಕೋಲಾರ ಗಣಿ	20,604	87,723	47,506	40,217	39,088	
ತುಮಕೂರು ಡಿ||	1,54,908	7,73,808	3,95,450	3,78,358	38,462	
ಚಿತ್ರದುರ್ಗ ಡಿ||	1,10,891	5,73,646	2,44,685	2,78,961	9,403	
ಹಾಸನ ಡಿ||	1,20,675	5,83,645	2,92,237	2,91,408	3,445	
ಕಡೂರು ಡಿ||	68,476	3,34,025	1,74,847	1,59,178		4,432
ಶಿವಮೊಗ್ಗ ಡಿ||	99,047	4,92,429	2,57,097	2,35,332		24,287
ಮೈಸೂರು ಸಂಸ್ಥಾನ ದಂಡು ಸೇರಿ ಒಟ್ಟು	12,05,959	59,76,660	30,45,999	29,30,661	1,70,467	
ಮೈಸೂರು ಸಂಸ್ಥಾನ ದಂಡಿನ ವಿನಾ ..	11,89,292	58,57,976	29,84,744	28,73,232	1,52,617	

ಧಾರವಾಡದ ಶುಭೋದಯ ಪತ್ರವು ಕೆರೂರು ವಾಸುದೇವಾಚಾರರ ಮೃತಿಯಿಂದ ನಿಂತುಹೋಗಿದ್ದು ಈಗ ಕಳೆದ ಪೂರ್ಣಿಮೆಯಿಂದ ಮ|| ಬಾಳಕೃಷ್ಣಗೋವಿಂದ ಕುಲಕರ್ಣಿ ಬಿ.ಎ., ಎಲ್‌ಎಲ್.ಬಿ. ಯವರಿಂದ ಪ್ರಕಾಶಗೊಳ್ಳಲಾರಂಭವಾಗಿದೆ. ಒಂದುಕಡೆ ಶುಭೋದಯದ ಪುನರುದಯ ಸಂತೋಷ ವಾರ್ತೆಯನ್ನು ಕೇಳುತ್ತಿರುವಲ್ಲಿಯೇ ಮತ್ತೊಂದುಕಡೆ ಅದೇ ಊರಿನ ಚಂದ್ರೋದಯದ ಲಯವಾರ್ತೆಯನ್ನು ಕೇಳುವುದಕ್ಕೆ ವಿಷಾದವಾಗುತ್ತದೆ. ತತ್ರಾಪಿ ತಕ್ಕಷ್ಟು ವರ್ಗಣಿದಾರರ ಆಶ್ರಯವಿಲ್ಲದ ಕಾರಣದಿಂದಲೇ ಅದು ಅಸ್ತವಾಗಬೇಕಾಯಿತೆಂಬುದನ್ನು ಕೇಳಿದರಂತೂ ಕರ್ನಾಟಭಾಷಾಪತ್ರಿಕೆಗಳ ಹಣೆಬರಹವನ್ನು ಕುರಿತು ಮತ್ತಷ್ಟು ವಿಷಾದವಾಗುವುದು.

ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಪತ್ರಗಳ ರಿಜಿಸ್ಟರಿಗೆ ಹೋದವರು ಲಂಚಗಳನ್ನು ಕೊಡಬೇಕಾಗುತ್ತಿರುವ ಹಿಂಸೆಯನ್ನು ತಪ್ಪಿಸುವುದಕ್ಕಾಗಿ ರಿಜಿಸ್ಟರ್ ರುಸುಮನ್ನು ಕೂಡ ಸ್ಟಾಂಪ್ ಪೇಪರಿನ ರೂಪವಾಗಿಯೇ ತಗೆದುಕೊಳ್ಳುವಂತೆ ಮಾಡಬಹುದೆಂದು ಪ್ರಜಾಪ್ರತಿನಿಧಿ ಸಭಾಸಭಿಕರು ಕೋರಿಕೊಂಡಿದ್ದ ಪ್ರಕಾರ ಏರ್ಪಡಿಸಬಹುದಾದ ಶಾಸನದ ಮುಸೂದೆಯನ್ನು ಸರ್ಕಾರದವರು ಪ್ರಕಟಿಸಿದ್ದಾರೆ. ಇದು ಶಾಸನ ವಿಧಾಯಕ ಸಭೆಗೆ ಬಂದು ಚರ್ಚಿತವಾದ ಬಳಿಕ ಶಾಸನವಾಗುವುದು. ಆದರೆ ಈ ಏರ್ಪಾಟಿನಿಂದ ಲಂಚದ ಹಾವಳಿಯು ತಪ್ಪಿಹೋಗುವುದೆಂದು ಹೇಳಲು ಸಾಧ್ಯವಿಲ್ಲ. ಗೂಢಚಾರರನ್ನಿಟ್ಟು ಶೋಧಿಸಿ ಲಂಚಗುಳಿಗಳನ್ನು ನಿರ್ದಾಕ್ಷಿಣ್ಯವಾಗಿ ಸಸ್ಪೆಂಡು ಮಾಡುತ್ತಾ ಬಂದಲ್ಲದೆ ಈ ಆಫೀಸುಗಳ ಸುಲಿಗೆಯು ತಪ್ಪಲಾರದು.

ಭರತಖಂಡದ ವೃತ್ತಾಂತಗಳು.

ಪಂಜಾಬುಪ್ರಾಂತದ ಲಾಹೋರು, ಅಮೃತಸರ್, ಷೇಕ್‌ಪುರಾ, ಈ ಮೂರು ಜಿಲ್ಲೆಗಳೊಳಗೆ ಕಳೆದ ತಾ|| ೨೫ ರಿಂದ ೬ ತಿಂಗಳವರೆಗೆ ರಾಜದ್ರೋಹ ಶಾಸನವನ್ನು ವ್ಯವಹಾರಕ್ಕೆ ತರುವೆವೆಂದು ಅಲ್ಲಿಯ ಸರ್ಕಾರದವರು ಇಂಡ್ಯಾ ಸರ್ಕಾರದಪ್ಪಣೆಯನ್ನು ಪಡೆದು ಪ್ರಕಟಿಸಿದ್ದಾರೆ.

ಹೊಸ ವೈಸ್ರಾಯರು ಲಾಹೋರಿಗೆ ದಯಮಾಡಿಸಿದ್ದಾಗ ಪಂಜಾಬಿನ ಹಿಂದೂ ಮಹಮ್ಮದೀಯರ ಮುಖ್ಯರನೇಕರನ್ನು ಬರಮಾಡಿಕೊಂಡು ರಾಜಕೀಯ ವಿಷಯವಾಗಿ ಸಂಭಾಷಿಸಿದರು. ಆದರೆ ಅತಿವಾದಿ ಪಕ್ಷದ ಮುಖಂಡರಾದ ಲಾಲಾಲಜಪತಿರಾಯರನ್ನು ಕರೆಯಿಸಿಕೊಂಡಿರಲಿಲ್ಲ. ಇದು ಪಂಜಾಬು ಪ್ರಾಂತದ ಲಾಹೋರು, ಅಮೃತ ಸರ್ ಷೇಕ್‌ಪುರಾ, ಈ ಮೂರು ಜಿಲ್ಲೆಗಳೊಳಗೆ ಕಳೆದ ತಾ|| ೨೫ ರಿಂದ ೬ ತಿಂಗಳವರೆಗೆ ರಾಜದ್ರೋಹ ಶಾಸನವನ್ನು ವ್ಯವಹಾರಕ್ಕೆ ತರುವೆವೆಂದು ಅಲ್ಲಿಯ ಸರ್ಕಾರದವರು ಇಂಡ್ಯಾ ಸರ್ಕಾರದಪ್ಪಣೆಯನ್ನು ಪಡೆದು ಪ್ರಕಟಿಸಿದ್ದಾರೆ.

ಹಿಂದಣ ವೈಸ್ರಾಯ ಲಾರ್ಡ್ ಛೆಲಮ್ಸ್‌ಫರ್ಡ್‌ರವರು ಸೀಮೆಗೆ ಹೋಗಿ ಸೇರಿದರು. ಸ್ಟೇಟ್ ಸೆಕ್ರಟರಿಯವರು, ವಿದೇಶಾಂಗ ಮಂತ್ರಿಯವರು ಮೊದಲಾದ ಕೆಲ ಪ್ರಮುಖರು ಇದಿರ್ಗೊಂಡು ಸನ್ಮಾನಿಸಿದರು. ಇವರಿಗೆ ಸಾರ್ವಭೌಮರು ಸಂದರ್ಶನವನ್ನಿತ್ತು ವಿಷಮಸಮಯದಲ್ಲಿ ಭರತಖಂಡವನ್ನು ಪಾಲಿಸಿ ಬಂದುದಕ್ಕಾಗಿ ಅಭಿನಂದಿಸಿದರು. ಇವರಿಗೆ ವೈಕೌಂಟ್ ಎಂಬ ಘನತರವಾದ ಬಿರುದು ಕೊಡಲ್ಪಟ್ಟಿರುವುದು. ಭರತಖಂಡವನ್ನು ಬಿಟ್ಟು ತೆರಳುವಾಗ್ಗೆ ಇವರ ಮನಸ್ಸಿನಲುಂಟಾಗಿದ್ದ ಖೇದವು ಈ ಸಾರ್ವಭೌಮಾಭಿನಂದನದಿಂದಲೂ ನೂತನ ಬಿರುದು ಪ್ರಾಪ್ತಿಯಿಂದಲೂ ಸಮಾಧಾನಗೊಂಡಿರಬಹುದೆ?

ಮದರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರು ಬರುವ ಜೂನ್ ತಾ|| ೧ ರಿಂದ ಪ್ಯಾಸೆಂಜರು ಮತ್ತು ಮೇಲ್ ಬಂಡಿಗಳ ಬಾಡಿಗೆ ದರವನ್ನು ಹೆಚ್ಚಿಸುತ್ತಾರೆ. ಹೇಗೆಂದರೆ ಬ್ರಾಡ್‌ಗೇಜ್ ದಾರಿಗಳಲ್ಲಿ ಹೋಗುವ ಪ್ಯಾಸೆಂಜರು ಬಂಡಿ, ಮೀಟರ್‌ಗೇಜು ದಾರಿಗಳಲ್ಲಿ ಹೋಗುವ ಮೇಲ್ ಬಂಡಿಗಳು ಸಹ ೧ನೆ ತರಗತಿಗೆ ೩೦೦ ಮೈಲಿಗಳವರೆಗೆ ಮೈಲಿ ೧ಕ್ಕೆ ೨ ಆಣೆ ತದನಂತರ ಪ್ರತಿ ಮೈಲಿಗೂ ೧|| ಆಣೆ. ೨ನೆ ತರಗತಿಗೆ ೩೦೦ ಮೈಲುವರೆಗೆ ೧ ಆಣೆ. ಬಳಿಕ ೯ ಕಾಸು. ೩ನೆ ತರಗತಿಗೆ ಎಷ್ಟುದೂರಕ್ಕಾದರೂ ಇಂಟರ್‌ಮೀಡಿಯಟ್ ತರಗತಿಗೆ ಮೈಲಿಗೆ ೬ ಕಾಸು, ೩ನೆ ತರಗತಿಗೆ ಮೈಲಿಗೆ ೪ ಕಾಸು.

ನಮ್ಮ ಇಂಡ್ಯಾ ಸರ್ಕಾರದವರು ಸೀಮೆಯಲ್ಲಿ ಶೇಕಡಾ ೭ರ ಬಡ್ಡಿಯ ಮೇಲೆ ಸಾಲಮಾಡಿದರು. ಒಂದೇ ದಿನದೊಳಗೆ ಋಣಪತ್ರಗಳು ಮಾರಿಹೋದುವು. ಅಷ್ಟು ಹೆಚ್ಚು ಬಡ್ಡಿಯನ್ನು ಪರದೇಶದವರಿಗೆ ಕೊಟ್ಟು ಸಾಲಮಾಡುವುದು ಸರಿಯಲ್ಲವೆಂದು ಬೊಂಬಾಯಿಯ ದೇಶೀಯ ವರ್ತಕ ಸಂಘದವರು ಆಕ್ಷೇಪಿಸಿದರು. ಅದಕ್ಕೆ ಇಂಡ್ಯಾ ಸರ್ಕಾರದ ಆರ್ಥಿಕ ಮಂತ್ರಿಯವರು ಹೀಗೆ ಉತ್ತರಕೊಟ್ಟಿರುತ್ತಾರೆ. ಭರತಖಂಡದಲ್ಲಿ ಮಾಡಲ್ಪಟ್ಟ ಸಾಲದ ಹಣದ ಮೇಲೆ ವರಮಾನದ ತೆರಿಗೆಯಿಲ್ಲ. ವಿದೇಶದಲ್ಲಿ ತೆಗೆದುಕೊಳ್ಳುವ ಸಾಲದ ಹಣದಮೇಲೆ ವರಮಾನದ ತೆರಿಗೆ ವಿಧಿಸಲ್ಪಟ್ಟಿರುತ್ತದೆ. ಆ ತೆರಿಗೆಯನ್ನು ಕಳೆದರೆ ಅವರಿಗೆ ಗಿಟ್ಟುವ ಬಡ್ಡಿಯು ಸೇಕಡಾ ೫ ರೂ.ಗಳಿಗಿಂತ ಕಡಿಮೆಯಾಗಿಯೇ ದೊರೆಯುವುದು.

ಹೈದರಾಬಾದು ಸಂಸ್ಥಾನದಲ್ಲಿ ಕ್ಷಾಮವೂ ಪ್ಲೇಗೂ ವ್ಯಾಪಿಸಿಕೊಂಡಿವೆ. ಮಂತ್ರಿಯವರು ದೇಶಸಂಚಾರಕ್ಕೆ ಹೋಗಿ ಸ್ಥಿತಿಗತಿಯನ್ನು ಪರಾಮರಿಸಿಕೊಂಡು ಬಂದರು. ನೈಜಾಮರು ಈಗ ಗುಲ್ಬರ್ಗಾ ಜಿಲ್ಲೆಯ ಕಡೆ ಹೊರಡಬೇಕೆಂಬ ಉದ್ದೇಶವುಳ್ಳವರಾಗಿದ್ದಾರಂತೆ. ಹೀಗೆ ಅವರು ದೇಶಸಂಚಾರ ಮಾಡುವಕಾಲದಲ್ಲಿ ಜಿಲ್ಲಾಧಿಕಾರಿಗಳು ಆಯಾ ಸ್ಥಳಗಳಲ್ಲಿ ನೈಜಾಮರ ನಜರಿಗಾಗಿ ಲಕ್ಷಾಂತರ ರೂ.ಗಳನ್ನು ಪ್ರಜೆಗಳಿಂದ ಎತ್ತುತ್ತಿದ್ದುದು ಪದ್ಧತಿಯಂತೆ. ಈಗಣ ದೇಶದ ದುಸ್ಥಿತಿಯನ್ನು ನೈಜಾಮರು ತಿಳಿದು ತಮ್ಮ ನಜರಿಗಾಗಿ ಪ್ರಜೆಗಳಿಂದ ೧ ಕಾಸನ್ನೂ ಎತ್ತಕೂಡದೆಂದು ಕಟ್ಟಪ್ಪಣೆ ಮಾಡಿರುವರು. ಈ ಮುಂಚೆಯೇ ಗುಲ್ಬರ್ಗಾ ಜಿಲ್ಲಾಧಿಕಾರಿಗಳು ೧೦ ಲಕ್ಷ ರೂ.ಗಳನ್ನು ನಜರಿಗಾಗಿ ಎತ್ತಿಬಿಟ್ಟಿದ್ದರಂತೆ. ಅದನ್ನು ಹಿಂದಿರಿಗಿ ಆಯಾ ಪ್ರಜೆಗಳಿಗೇ ಕೊಟ್ಟುಬಿಡಬೇಕೆಂದು ಆಜ್ಞಾಪಿಸಿರುವರು. ಎಲ್ಲ ದೇಶದ ಪ್ರಭುಗಳೂ ಅಧಿಕಾರಿಗಳೂ ಸಹ ತಮ್ಮ ದೇಶಸಂಚಾರ ಕಾಲದಲ್ಲಿ ಪ್ರಜೆಗಳಿಗೆ ವರಿಗಳು ಬೀಳದಂತೆ ಏರ್ಪಾಟುಮಾಡಿದರೆ ಎಷ್ಟೋ ಕ್ಷೇಮವಾದೀತು. ಈಗ ನೈಜಾಮರು ತೋರಿಸಿದ ಔದಾರ್ಯವು ಎಷ್ಟೋ ಪ್ರಜಾರಂಜಕವಾದುದೆನ್ನುವುದಕ್ಕೆ ಸಂಶಯವಿಲ್ಲ.

ಸರ್ ಜಗದೀಶ ಚಂದ್ರಭೋಸ್‌ರವರು ಕಲ್ಕತ್ತಾ ಪಟ್ಟಣದಲ್ಲಿ ಕಳೆದ ತಾ|| ೧೨ ರಲ್ಲಿ ಜೀವಿತಧರ್ಮವನ್ನು ಕುರಿತು ಒಂದು ಉಪನ್ಯಾಸಮಾಡಿದರು. ಅದರೊಳಗೆ - ಆಂಗ್ಲ ಸ್ಯಾಕ್ಸನ್ ಜಾತಿಯವರಿಗೆ ಒಂದು ಮುಖ್ಯಸುಗುಣವುಂಟು. ಅವರು ಯಾವ ದೇಶಕ್ಕೆ ಹೋಗಿ ಕೆಲಸಮಾಡುವರೋ ಆ ದೇಶದವರೊಡನೆ ಕಲಸಿ ಹೋಗಿ ಆದೇಶವನ್ನು ತಮ್ಮ ಜನ್ಮ ಭೂಮಿಯನ್ನಾಗಿ ಮಾಡಿಕೊಳ್ಳುತ್ತಾರೆ. ಹೇಗೆಂದರೆ ಆಸ್ಟ್ರೇಲಿಯಾ ದೇಶಕ್ಕೆ ಹೋಗಿ ಸೇರಿದರೆ ಆತನು ಆಸ್ಟ್ರೇಲಿಯಾ ದೇಶಸ್ಥನೆನ್ನಲ್ಪಡುತ್ತಾನೆ. ಅಮೇರಿಕಾಕ್ಕೆ ಹೋಗಿ ಸೇರಿದರೆ ಅಮೇರಿಕಾ ದೇಶಸ್ಥನೆನ್ನಲ್ಪಡುತ್ತಾನೆ. ಆದುದರಿಂದ ನಮ್ಮ ದೇಶದಲ್ಲಿರುವ ಆಂಗ್ಲೋ ಇಂಡಿಯನ್ನರು ಕೂಡ ಸ್ವಲ್ಪ ಕಾಲದಲ್ಲೇ ಹಿಂದೂಗಳೆಂದು ಕರೆಯಲ್ಪಡುವರು. ನಮ್ಮ ದೇಶ ಚರಿತ್ರವನ್ನು ಓದಿದರೆ ಒಂದು ವಿಷಯವು ಗೊತ್ತಾಗುವುದು. ನಮ್ಮ ದೇಶಕ್ಕೆ ಆಗಾಗ್ಗೆ ಬಂದ ನಾನಾಜಾತಿಯ ನಾನಾಮತದ ಜನರು ಈ ದೇಶವನ್ನು ತಮ್ಮ ಮಾತೃಭೂಮಿಯೆಂದು ಹೇಳಿಕೊಳ್ಳಲುಪಕ್ರಮಿಸಿದರು. ಇಂಥವರೆಲ್ಲಾ ಕಲಸಿ ದೇಶಾಭಿವೃದ್ಧಿಗಾಗಿ ಪಾಡುಪಡುವುದರಿಂದ ಅಭ್ಯುದಯವುಂಟಾಗುತ್ತದೆ. ಮಾನವರ ಜೀವಿತವೆಲ್ಲಾ ಒಂದೇ ಆದುದರಿಂದ ಅವರ ಯತ್ನವೆಲ್ಲಾ ಒಂದೇ ಆಗಿರುವುದು. ನಾನು ಸನ್ನಿತಾನೆ ಪ್ರಪಂಚಯಾತ್ರೆಯನ್ನು ಮಾಡಿದಾಗ ಲೋಕದಲ್ಲೆಲ್ಲಾ ಅಶಾಂತಿಯು ಪ್ರಬಲಿಸುತ್ತಿರುವುದನ್ನು ಅರಿತೆನು. ಈ ಅಶಾಂತಿಗೆ ಆರ್ಥಿಕ ದುಸ್ಥಿತಿಯೇ ಮುಖ್ಯ ಕಾರಣವು. ಪ್ರಪಂಚದಲ್ಲಿ ಈಗ ಬೆಳೆಯುತ್ತಿರುವ ಧಾನ್ಯವು ಇರತಕ್ಕಷ್ಟು ಪ್ರಜೆಗಳಿಗೆಲ್ಲಾ ಆಹಾರಕ್ಕೆ ಸಾಲದು. ನಾರ್ವೆ ದೇಶದವರು ಶಾಸ್ತ್ರೋಕ್ತ ರೀತಿಯನ್ನನುಸರಿಸಿ ಸಕಲ ವಿಧದಲ್ಲೂ ಕೆಲಸಮಾಡುತ್ತ ಬಂದುದರಿಂದ ತಮ್ಮ ದೇಶವನ್ನು ಅಭಿವೃದ್ಧಿಪಡಿಸಿಕೊಂಡರು. ಅದರಂತೆ ನಮ್ಮ ಭರತಖಂಡದ ಜನರು ಪ್ರಯತ್ನಪಟ್ಟರೆ ಈ ದೇಶವು ಪ್ರಪಂಚದಲ್ಲಿರುವ ಇತರ ದೇಶಗಳಿಗಿಂತಲೂ ಧನವಂತರಾಗುವುದು - ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ದೇಶದಲ್ಲಿ ಸ್ವದೇಶೀಯರೂ ಪರದೇಶೀಯರೂ ಪರಸ್ಪರ ಸಹಾಯಕರಣ ಪದ್ಧತಿಯಿಂದ ನಡೆಯುವುದೇ ದೇಶಾಭ್ಯುದಯಕ್ಕೆ ಹೇತುವೆಂದು ಇವರ ಉಪನ್ಯಾಸದ ಮುಖ್ಯಾಶಯವಾಗಿರುತ್ತದೆ.

ಇಸಬು ಅಥವಾ ಕರಪಾಣಿ ವ್ಯಾಧಿಗೆ ಔಷಧ.

ಕೀಲ್ ಎಣ್ಣೆ ಮತ್ತು ಕೊಬರಿ ಎಣ್ಣೆ ಇವುಗಳೆರಡನ್ನೂ ಸಮಭಾಗವಾಗಿ ತೆಗೆದುಕೊಂಡು ಮಿಶ್ರಮಾಡಿ ವ್ಯಾಧಿ ವ್ಯಾಪಿಸಿರುವ ಭಾಗಕ್ಕೆ ಚೆನ್ನಾಗಿ ಹಚ್ಚತಕ್ಕದ್ದು. ತರುವಾಯ ಇದರ ಮೇಲ್ಗಡೆ ಅಕ್ಕಿಯ ತೌಡನ್ನು ಹೆಪ್ಪುಕಟ್ಟಿಕೊಳ್ಳುವಂತೆ ಮಂದವಾಗಿ ಉದಿರಿಸಬೇಕು. ಒಂದುವಾರದ ಪರಿಯಂತರ ಇದನ್ನು ಹೀಗೆಯೇ ಬಿಟ್ಟಲ್ಲಿ ಇದೆಲ್ಲವೂ ಬಿದ್ದುಹೋಗುವುದು.

೨ ನೆಯ ಔಷಧ.

ಅರ್ಧಪಾವು ಕೊಬರಿಯೆಣ್ಣೆ, ಒಂದು ಪಾವು (ತೂಕದ ಅಳತೆ) ಬಂಗಲಿ ಬಾದಾಮಿ, ಕಾಲುತೊಲ ಉಪ್ಪು ಇವುಗಳೆಲ್ಲವನ್ನೂ ಕಲ್ಪತ್ತಿನಲ್ಲಿ ಚೆನ್ನಾಗಿ ಅರೆದು ಹಚ್ಚತಕ್ಕದ್ದು. ಬಾದಾಮಿ ಪೊಪ್ಪನ್ನು ಮಾತ್ರ ಉಪಯೋಗಿಸತಕ್ಕದ್ದು.

ಒಂದು ಪಾವು ತೂಕ ಶೀಗೆಕಾಯಿಪುಡಿ, ಇದರಲ್ಲರ್ಧ ಹೆಸರಿನ ಹಿಟ್ಟು, ಎರಡುತೊಲ ಕಸ್ತೂರಿ ಅರಸಿನ, ಎರಡುತೊಲ ಗಸಗಸೆ ಇವುಗಳೆಲ್ಲವನ್ನು ಪುಡಿಮಾಡಿ ಬೆರಸಿಟ್ಟುಕೊಂಡು ಔಷಧಿ ಹಚ್ಚಿಕೊಂಡಿರುವ ಭಾಗವನ್ನು ತೊಳೆಯತಕ್ಕದ್ದು.

೩ನೆಯ ಔಷಧ.

ದತ್ತೂರಿಗಿಡದೆಲೆ, ಹುವ್ವು ಮತ್ತು ಕಾಯಿ ಇವುಗಳನ್ನ (ಸಮೂಲವಾಗಿ) ತೆಗೆದುಕೊಂಡು ಒಂದು ಕಿತ್ತಲೆಹಣ್ಣಿನ ಗಾತ್ರಕ್ಕೆ ಅರೆದು, ಅರ್ಧತೊಲ ಉಪ್ಪನ್ನ ಸಹಾ ಪುಡಿಮಾಡಿ ಬೆರಸಿ ಸಿದ್ಧಪಡಿಸಿಕೊಂಡು, ಕೊಬರಿಯೆಣ್ಣೆಯನ್ನ ಇದರಲ್ಲಿ ಸೇರಿಸಿಕೊಂಡು ಹಚ್ಚತಕ್ಕದ್ದು. ವ್ಯಾಧಿಯ ತುರಿಯ ನವೆಯು ಹೆಚ್ಚಾಗಿದ್ದಲ್ಲಿ ಈ ಔಷಧಿಯನ್ನ ಉಪಯೋಗಮಾಡತಕ್ಕದ್ದು.

ಮೇಲೆ ಹೇಳಿರುವ ಪುಡಿ ಇದರ ಔಷಧಿ ಹಚ್ಚಿರುವ ಭಾಗವನ್ನು ತೊಳೆಯತಕ್ಕದ್ದು.

V. MUTTUSAMY DAS,
District Health Officer, Mysore District.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ.

ಲಗ್ನದ ಫಂಡು.

ಹುಲಿಯೂರು ದುರ್ಗದ ಮಠದ ವೇ|| ಹುಚ್ಚಪ್ಪದೇವರ ಮೂಲಕ ಉಜ್ಜನಿ ಗ್ರಾಮದ ಮ|| ರಾ|| ಶಾಂತಪ್ಪನವರ ಮನೆ ಲಗ್ನದಲ್ಲಿ ತೆಗೆದು ಕಳುಹಿಸಿದ್ದು ೩ ರೂ. ಮತ್ತು ಶಾಂತಬಸಪ್ಪನವರ ಮನೆ ಲಗ್ನದಲ್ಲಿ ೩ ರೂ. ಜುಮ್ಲಾ ಜಮ ೬-೦-೦.

ಬೆಂಗಳೂರು ಸಿಟಿ,
ತಾ|| ೨೯-೪-೧೯೨೧.
ಜಿ. ಪರಮಶಿವಯ್ಯ, ಬಿ. ಎ. ಎಲ್. ಎಲ್. ಬಿ. ಆ|| ಸೆಕ್ರಟರಿ.
ಮೈಸೂರು ವೀ. ವಿ. ಫಂಡ್ ಸಂಘ.

ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸ್ಮಾರಕ ಫಂಡು.

ಸಕಲೇಶಪುರದ ಮೋಣಗಾಲ್ ಎಸ್ಟೇಟು ಅಧಿಪತಿಗಳೂ ರೆ|| ಅಸೆಂಬ್ಲಿ ಮೆಂಬರರೂ ಆದ ಮ|| ರಾ|| ಡಿ. ನಂಜೇಗೌಡರವರಿಂದ ೧೦-೦-೦
X ರವರಿಂದ ೫-೦-೦
ಹಿಂದೆ ವಸೂಲು ಬಂದಿರತಕ್ಕದ್ದು ೫೦-೦-೦
ಜುಮ್ಲಾ ರೂ. ೬೫-೦-೦.

ವೀರಶೈವ ಮಹನೀಯರು ಮುಂದುವರಿದು ಸ್ಮಾರಕ ಫಂಡಿಗಾಗಿ ಚಂದಾ ಮೊಬಲಗನ್ನು ಕಳುಹಿಸಲಿಲ್ಲವಾಗಿ, ಆ ಕಾರ್ಯವು ಈವರೆವಿಗೂ ನಿಲ್ಲಿಸಬೇಕಾಯಿತು. ಇನ್ನು ಮುಂದೆ ಸ್ಮಾರಕ ಕಾರ್ಯವನ್ನು ಜಾಗ್ರತೆಯಾಗಿಯೇ ನೆರವೇರಿಸದೆಬಿಡುವದು ಸರಿಯಲ್ಲವಾದುದರಿಂದ ಪ್ರತಿಯೊಬ್ಬ ವೀರಶೈವರೂ ನಿರ್ವಂಚನೆಯಿಂದ ಯಥಾಶಕ್ತಿ ಚಂದಾ ಹಣವನ್ನು ಕಳುಹಿಸಿಕೊಟ್ಟು ಅಭಿಮಾನಪ್ರದರ್ಶನ ಮಾಡುವವರಾಗಬೇಕೆಂದು ಕೋರುವ,

ತಮ್ಮ ವಿಧೇಯ.

ಬೆಂಗಳೂರು ಸಿಟಿ,
ತಾ|| ೨೯-೪-೧೯೨೧.
ಜಿ. ಪರಮಶಿವಯ್ಯ, ಬಿ. ಎ. ಎಲ್ ಎಲ್. ಬಿ., ಆ|| ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ.

ಪತ್ರವ್ಯವಹಾರ.

ಆಲೂರು.

ಹಾನಗಲ್ಲ ತಾಲ್ಲೂಕು ಆಲೂರ ವೀರಶೈವ ವಾಚನಮಂದಿರದ ೧೫ನೆ ಧಾರ್ಮಿಕ ಮಹೋತ್ಸವವು ಮಿ|| ಬಸವಾರ್ಯ ಬೂದಿಹಳ ಆಲೂರ ಕನ್ನಡ ಶಾಳಾ ಹೆಡ್ಮಾಸ್ತರ ಇವರ ಅಧ್ಯಕ್ಷತೆಯ ಕೆಳಗೆ ಶ್ರೀ ವೀರಭದ್ರ ದೇವಾಲಯದಲ್ಲಿ ತಾ|| ೭-೫-೧೯೨೧ನೆ ಇಸವಿ ದಿನ ನೆರವೇರುವುದು. ಈ ಮಹೋತ್ಸವದಲ್ಲಿ ಕೆಳಗೆ ತೋರಿಸಿದ ವಿಷಯಗಳನ್ನು ಉಪನ್ಯಾಸಕ್ಕಿಟ್ಟದೆ ಬರೆದುಕಳುಹಿಸತಕ್ಕವರು ಏಪ್ರೆಲ್ ತಿಂಗಳ ೩೦ನೆ ತಾ|| ದೊಳಗಾಗಿ ಸದರಿ ಮಂದಿರದ ಸೆಕ್ರಟರಿಯವರ ಕಡೆಗೆ ಸ್ಪಷ್ಟವಾಗಿ ಬರೆದುಕಳುಹಿಸತಕ್ಕದ್ದು.

ವೀರಶೈವ ವಾಚನಮಂದಿರ.

ಬ್ರಾಹ್ಮಣೇತರ ಪರಿಷತ್ತು.

ಈ ವರ್ಷದ ಬ್ರಾಹ್ಮಣೇತರ ಪರಿಷತ್ತು ಬೆಳಗಾವಿಯಲ್ಲಿ ಮೇ ತಾ|| ೧೪-೧೫ ದಿವಸ ಜರುಗತಕ್ಕದ್ದಿದೆ. ದೇವಾಸದ ಮಹಾರಾಜರ ಬಂಧುಗಳಾದ ಶ್ರೀಮಂತ ಜಗದೇವರಾವ ಉರ್ಫ್ ಭಾವುಸಾಹೇಬ ಪವಾರ ಎಂ. ಎಲ್. ಸಿ. ಯವರು ಅಧ್ಯಕ್ಷಸ್ಥಾನವನ್ನು ವಹಿಸುವರು. ಇವರು ಬ್ರಾಹ್ಮಣೇತರ ಬಂಧುಗಳ ಪುಢಾರಿಗಳಿದ್ದು ಅವರ ಕಲ್ಯಾಣಕ್ಕಾಗಿ ಯಾವಾಗೂ ಯತ್ನಿಸುವರು. ಇದೇ ತಿಂಗಳ ೨೧ನೆ ತಾ|| ದಿವಸ ಸ್ವಾಗತ ಕಮಿಟಿಯ ಸಭಾಸದರು ತಮ್ಮ ಚೇರ್ಮನ್ನರನ್ನು ಆರಿಸುವದಕ್ಕಾಗಿ ರಾಷ್ಟ್ರವೀರ ಆಫೀಸಿನಲ್ಲಿ ಕೂಡಿದ್ದರು. ಮಿ|| ದಳವಿ ಪಟೀಲ ಬೆಳಗಾಂವ ಇವರು ಶ್ರೀಮಂತ ಸರ್ ದೇಸಾಯಿ ತಲ್ಲೂರ ಇವರ ಹೆಸರನ್ನು ಸೂಚಿಸಿದರು. ಮಿ|| ಭೋಸಲೆ ವಕೀಲರು ತಮ್ಮ ಅನುಮೋದನವನ್ನು ಕೊಡಲು ಸರ್ ದೇಸಾಯಿಯವರು ಸರ್ವಾನುಮತದಿಂದ ಚೇರ್ಮನ್ನರಾಗಿ ಆರಿಸಲ್ಪಟ್ಟರು. ಇದೇ ಸಭೆಯಲ್ಲಿ ಬೇರೆ ಬೇರೆ ಕಮಿಟಿಗಳನ್ನು ಸ್ಥಾಪಿಸಿ ಅವರಿಗೆ ಕೆಲಸವು ಒಪ್ಪಿಸಿಕೊಡಲ್ಪಟ್ಟಿತು. ಈ ಕಮಿಟಿಗಳಲ್ಲಿದ್ದ ಜನರು ಒಳ್ಳೇ ಉತ್ಸಾಹದಿಂದ ಮತ್ತು ಚಪಲತನದಿಂದ ಕೆಲಸವನ್ನು ಈಗಲೇ ಆರಂಭ ಮಾಡಿರುವರು.

ಫಲದಾನ.

ದೀಕ್ಷಾ ವಿವಾಹಾದಿ ಶುಭಮಹೋತ್ಸವಗಳಲ್ಲಿ ಫಲಪೂಜಾ ಫಲದಾನಗಳನ್ನು ಮಾಡುವ ಪದ್ಧತಿಯುಂಟಷ್ಟೆ. ಇವನ್ನು ವಿನಿಯೋಗಿಸುವ ವಿಷಯದಲ್ಲಿ ಕೆಲವು ಕಡೆ ಸಂಶಯವೂ ವಾಗ್ವಾದವೂ ಕಡೆಗೆ ಮನಸ್ತಾಪವೂ ಕಲಹವೂ ಸಂಭವಿಸುತ್ತಿರುವುದುಂಟು. ಇದರ ವಿನಿಯೋಗವು ವಿರಾಸಿಗೆ ಸೇರಿದ್ದೆ? ಅಥವಾ ಹಕ್ಕುದಾರಿಕೆಯೆ? ಹೇಗೆ ವಿನಿಯೋಗವಾಗತಕ್ಕದ್ದು ಯುಕ್ತವು? ದೊಡ್ಡ ದೊಡ್ಡ ಸ್ಥಳಗಳವರೂ ವಿದ್ಯಾಬುದ್ಧಿವಂತರೂ ಧನವಂತರೂ ಇದರ ವಿನಿಯೋಗವನ್ನು ತಂತಮ್ಮ ಸ್ಥಳಗಳಲ್ಲಿ ಹೇಗೆ ಮಾಡುವರು? ಹೇಗೆ ಮಾಡಿದರೆ ಉಚಿತವಾಗಿರುವುದು? ಎಂಬುದನ್ನು ತಮ್ಮ ಪತ್ರಿಕಾ ವಾಚಕ ವರ್ಗದಲ್ಲಿ ಯಾರಾದರೂ ತಿಳಿಯಿಸಿದರೆ ಸರ್ವತ್ರ ಅದರಂತೆ ತಿಳಿದು ಆಚರಿಸಲು ಸಹಾಯವಾಗುತ್ತದೆ.

ತಮ್ಮ ಚಂದಾದಾರ ಶಂಭುಲಿಂಗಪ್ಪ.

[ಫಲದಾನವು ಸತ್ಪಾತ್ರವಿನಿಯೋಗಕ್ಕೇ ಹೊರತು ಬಹುಮಾನಕ್ಕಲ್ಲ. ಆಯಾ ಸ್ಥಳದ ಮಠಾಧಿಕಾರಿಗಳು ಮಾಹೇಶ್ವರ ವರ್ಗದವರು ಇವರುಗಳಲ್ಲಿ ಗಣ್ಯರಾಗಿ ತೋರಿದ ಅಯ್ಯರಿಗೆ ಪೂಜಿತಗಳಾದ ಫಲಗಳನ್ನು ಧಾರಾಪೂರ್ವಕವಾಗಿ ಕೊಡುವುದು ವಾಡಿಕೆ. ಇದೇ ಉಚಿತವಾದ ಪದ್ಧತಿಯೆಂದು ಹೇಳಬಹುದು. ಬಹುಮಾನಕ್ಕಾಗಿ ಕೊಡಲ್ಪಡತಕ್ಕ ಫಲತಾಂಬೂಲಾದಿ ಮರ್ಯಾದೆಗಳೂ ವಿರಾಸೆಗಳೂ ಪ್ರತ್ಯೇಕವಾಗಿ ನಡೆದೇತೀರುತ್ತವೆ. ಪ ಪ್ರ.]

ದಕ್ಷಿಣಕಾಶಿ-ಶಿವಗಂಗೆ.

ಇದೇ ನೂತನ ವರ್ಷವಾದ ದುರ್ಮತಿನಾಮ ಸಂವತ್ಸರದ ಚೈತ್ರ ಶುದ್ಧ ಬಿದಿಗೆ ಭಾನುವಾರದಲ್ಲಿ ಈ ಗ್ರಾಮದ ವೀರಶೈವ ಮಂಡಲಿಯವರು ಪದ್ಧತಿಯಂತೆ ಗ್ರಾಮ ಮಧ್ಯದಲ್ಲಿರುವ ಶ್ರೀ ಮಕ್ಕಳ ಬಸವೇಶ್ವರಸ್ವಾಮಿ ದೇವಾಲಯವನ್ನು ಚಪ್ಪರ ತಳಿರುತೋರಣಗಳಿಂದ ಅಲಂಕರಿಸಿ ಶ್ರೀ ಬಸವೇಶ್ವರಸ್ವಾಮಿಗೆ ರುದ್ರಾಭಿಷೇಕವೇ ಮೊದಲಾದ ಅರ್ಚನೆಗಳನ್ನು ವಿಧಿವತ್ತಾಗಿ ನಡೆಸಿ ಶ್ರೀ ಸ್ವಾಮಿಯನ್ನು ವಾದ್ಯಘೋಷ ಮೊದಲಾದ ಬಹಳ ವಿಜೃಂಭಣೆಯಿಂದ ಪೇಟೆಯಲ್ಲಿ ಉತ್ಸವಗೊಳಿಸಿದ ತರುವಾಯ ಮಾಮೂಲ್ ಪದ್ಧತಿಯಂತೆ ಈ ಗ್ರಾಮದ ಉತ್ತರ ಭಾಗದಲ್ಲಿ ಶ್ರೀ ಗಂಗಾಧರೇಶ್ವರಸ್ವಾಮಿಗೆ ಮಜ್ಜನದ ಕೊಳ, ೧೦೮ ಲಿಂಗಪ್ರತಿಷ್ಠೆಯ ಮಂಟಪ ಶಿಖರ ಮುಂತಾದವುಗಳನ್ನು ಬಹು ಪುರಾತನ ಕಾಲದಲ್ಲಿ ನಮ್ಮ ವೀರಶೈವ ಮತೀಯರಿಂದ ನಿರ್ಮಿಸಿ ಈಗಲೂ ಶಾಸನ ಲಿಖಿತವುಳ್ಳ ಅಗಸ್ತ್ಯ ತೀರ್ಥದಿಂದ ಗಂಗೆಯನ್ನು ವಿಧಿವತ್ತಾಗಿ ಪೂಜಿಸಿ ಬಾಜಾಭಜಂತ್ರಿ ಮೊದಲಾದ ವಾದ್ಯ ವೈಭವದಿಂದ ಅಗ್ರೋದಕವನ್ನು ತೆಗೆದುಕೊಂಡು, ವೀರಶೈವ ಬಾಲಕಿಯರು ಮಡಿಯಿಂದ ಭಕ್ತಿಪೂರ್ವಕವಾಗಿ ಮಾಡಿದ್ದ ಆರತಿಗಳ ಸಮೇತ ಶ್ರೀ ದೇವಸ್ಥಾನಕ್ಕೆ ತೆರಳಿದನಂತರ ಪೂಜಾದಿಗಳೇ ಮೊದಲಾದ ಮಂಗಳಾಚರಣೆಗಳು ನಡೆಯುತ್ತಿರುವಲ್ಲಿ, ವೀರಶೈವ ತರುಣರು ಅಗ್ನಿಕುಂಡವನ್ನು ಹಾಯ್ದ ಬಳಿಕ ಸರ್ವರೂ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೀಮನ್ ಯುವರಾಜರವರ ಮತ್ತು ಶ್ರೀಮನ್ ಜಯಚಾಮರಾಜ ಒಡೆಯರ ಮತ್ತು ನಮ್ಮ ಸಂಸ್ಥಾನದ ಶ್ರೀಮನ್ ದಿವಾನ್ ಸಾಹೇಬರವರ ಶ್ರೇಯಸ್ಪ್ರಾರ್ಥನೆ ಮಾಡಿದ ನಂತರ ಸರ್ವರಿಗೂ ಪ್ರಸಾದ ಹಂಚಲ್ಪಟ್ಟಿತು. ಈ ದಿವಸ ಮಳೆಯು ಮಧ್ಯಾಹ್ನ ೩ ಗಂಟೆಗೆ ಸುರುವಾಗಿ ಸ್ವಲ್ಪ ಮಟ್ಟಿಗೆ ಸುರಿದು ಭೂಮಿಯನ್ನು ತಂಪುಮಾಡಿತು. ರಾತ್ರಿಯೂ ಮೇಘಗರ್ಜನೆಯಿಂದ ಮಳೆ ಬರುವಹಾಗೆ ಇದ್ದದ್ದು, ಭಕ್ತರ ಸೇವೆಯು ಆಶಾಭಂಗವಾಗದಂತೆ ಮೇಘರಾಜನು ಮೇಘಮಂಡಲವನ್ನು ತಡೆದುದು ಭಕ್ತರ ಭಕ್ತಿಯೆಂಬ ಸತ್ಸಂಕಲ್ಪವೇ ಇದಕ್ಕೆ ನಿದರ್ಶನವಾಗಿದೆ. ಇಂಥಾ ಮಹತ್ಕಾರ್ಯಗಳಲ್ಲೆಲ್ಲಾ ಇಲ್ಲಿನ ವೀರಶೈವ ಮಹನೀಯರು ಇದೇ ರೀತಿ ಮುಂದೆಯೂ ಕೂಡ ಶ್ರೀ ಸ್ವಾಮಿಯ ಸೇವೆಗೂ ಸಮಾಜಸೇವೆಗೂ ಗಮನಕೊಡುತ್ತಾ ಬರಬೇಕಾಗಿ ಬೇಡುವ,

ಈಶ್ವರಭಕ್ತ.

ಬಬಲೇಶ್ವರ.

ತಾ|| ೨೩-೩-೨೧ ನೇ ಇಸ್ವಿಯ ದಿವಸ ನಮ್ಮ ಆಮಂತ್ರಣಕ್ಕೆ ಮಾನಕೊಟ್ಟು ಮೆಹರಬಾನ ಡಿ. ಬಿ. ದೇಶಪಾಂಡೆ ಮಾಮಲೇದಾರ ಸಾಹೇಬರವರು ಬಂದು ಯಾವತ್ತು ವ್ಯವಸ್ಥೆಯನ್ನು ನೋಡಿ ಕೆಳಗೆ ಬರೆದ ಪ್ರಕಾರ ಶರಾಬುಕ್ಕಿನಲ್ಲಿ ತಮ್ಮ ಅಭಿಪ್ರಾಯವನ್ನು ಬರೆದದ್ದು ---- ಬಬಲೇಶ್ವರದಂಥ ಊರಲ್ಲಿ ಸಾರ್ವಜನಿಕ ಉಪಯೋಗಮಾಡುವಂಥ ಸಂಘವನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಮತ್ತು ಅದಕ್ಕೆ ಶ್ರೀಗಳವರು ಕೃಪಾದೃಷ್ಟಿಯಿಂದ ನೋಡುತ್ತಾರೆ. ಇದು ಬಹಳ ಭೂಷಣವದೆ. ಸಂಘವು ಚಿರಾಯುವಾಗಲಿ ಮತ್ತು ಅದರ ಕಡೆಯಿಂದ ಅನೇಕ ತರದ ಉಪಯುಕ್ತ ಕೆಲಸಗಳಾಗಲಿ ಅಂತ ನಾನು ದೇವರಿಗೆ ಪ್ರಾರ್ಥಿಸುತ್ತೇನೆ. - ತಾ|| ೨೫-೩-೨೧ನೆ ಇಸ್ವಿಯ ದಿವಸ ರಾವಸಾಹೇಬ್ ಎನ್. ಎಸ್. ಮಮದಾಪೂರ ಸಾಹೇಬರವರಾದರೂ ಬಂದು ಇದೇ ಪ್ರಕಾರ ತಮ್ಮ ಅಭಿಪ್ರಾಯವನ್ನು ತೋರಿಸಿರುತ್ತಾರೆ. ಈ ಸಂಘದವರು ಮೆಹರಬಾನ ಮಾಮಲೇದಾರ ಸಾಹೇಬರವರಿಗೂ ಮತ್ತು ರಾವ ಸಾ|| ಮಮದಾಪೂರ ಸಾಹೇಬರವರಿಗೂ ಈಶ್ವರನು ಚಿರಾಯುರಾರೋಗ್ಯಸಂಪತ್ತನ್ನು ಕೊಟ್ಟು ರಕ್ಷಿಸಲೆಂದು ಬೇಡಿಕೊಂಡು ನೆರೆದ ಯಾವತ್ತು ಸಭ್ಯಗೃಹಸ್ಥರಿಗೂ ಸಾಹೇಬರವರಿಗೂ ತಾಂಬೂಲ ಗಂಧ ದ್ರವ್ಯಾದಿಗಳನ್ನು ಕೊಟ್ಟ ನಂತರ ಸಭಾ ವಿಸರ್ಜನೆಯಾಯಿತು.

ನಮ್ಮ ಊರಲ್ಲಿ (ಬಬಲೇಶ್ವರದಲ್ಲಿ) ಬಬಲೇಶ್ವರ ವೀರಶೈವ ತರುಣ ಸಂಘದವರಿಂದ ತಾರೀಖು ೯-೪-೧೯೨೧ ನೆ ಇಸ್ವಿಯ ಚೈತ್ರ ಶುದ್ಧ ಪ್ರತಿಪದೆಯ ಶನಿವಾರ ದಿವಸದಲ್ಲಿ ಇಲ್ಲಿಯ ಶ್ರೀ ಪಟ್ಟಾಧಿಕಾರಿಗಳ ಹಸ್ತದಿಂದ ರಾತ್ರ ಪ್ರಾಥಮಿಕ ಶಾಲೆಯು ಪ್ರಾರಂಭಿಸಲ್ಪಟ್ಟಿತು. ಶಾಲೆಗೆ (೧೦೪) ಜನರು ಬರಹತ್ತಿರುತ್ತಾರೆ. ಶಾಲೆಯು ಪ್ರತಿ ದಿವಸ ಸಂಜೆಯ ೭ ಗಂಟೆಯಿಂದ ೯ ಗಂಟೆಯವರೆಗೆ ಅಂದರೆ ಪ್ರತಿ ದಿವಸ ಎರಡು ತಾಸ

ಗಳವರೆಗೆ ಕ್ಲಾಸುಗಳು ನಡೆಯುವವು. ಸದರ ಶಾಲೆಯು ಇಲ್ಲಿಯ ಭವ್ಯವಾದ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ಇಡಲ್ಪಟ್ಟಿರುವದು. ೧೪ ವರ್ಷಗಳಿಗಿಂತ ಹೆಚ್ಚಿನ ಮೂವತ್ತು ವರ್ಷಗಳಕಿಂತ ಕಡಮೆಯ ವಯಸ್ಸಿನವರನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕೆಂದು ಗೊತ್ತುಪಡಿಸಿದ್ದೇವೆ. ಯಾವತ್ತು ಮಾಸ್ತರ ಜನರು ಸಂಘದವರೇ ಇರುತ್ತೇವೆ. ಮತ್ತು ವರ್ನ್ಯಾಕ್ಯುಲರ್ ಸ್ಕೂಲ ಫಾಯನಲ್ ಪರೀಕ್ಷೆ ಪಾಸ ಆದವರೇ ಇರುತ್ತೇವೆ. ಮತ್ತು ಪುಕ್ಕಟೆಯಾಗಿ ಹೇಳುತ್ತೇವೆ. ಅನಾಥರೆಂದು ಕಂಡು ಬಂದವರಿಗೆ ಸಂಘದವರು ಸ್ಲೇಟು ಪೆನಸಿಲು ಬುಕ್ಕು ಇವೇ ಮೊದಲಾದ ಅವಶ್ಯವಾದ ಶಾಲೆಯ ಸಾಮಾನುಗಳನ್ನು ಪುಕ್ಕಟೆಯಾಗಿ ಕೊಡುತ್ತೇವೆ. ದೀಪದ ಸಲುವಾಗಿ ಗ್ಯಾಸಿನ ವ್ಯವಸ್ಥೆಯಾದರೂ ಸಂಘದಿಂದಲೇ ನಡೆಸಿರುತ್ತೇವೆ.

ತಮ್ಮ ಬಬಲೇಶ್ವರ ವೀರಶೈವ ತರುಣ ಸಂಘ.

ಕೈ. ವಾ. ಬಸವಾರ್ಯ ಕವಿಗಳು.

'ಕಿತ್ತೂರಿನ ಬಸವಾರ್ಯಕವಿ' ಗಳೆಂದು ಕನ್ನಡನಾಡಿನಲ್ಲೆಲ್ಲ ಹೆಸರು ಹೊಂದಿದ ಬಸವಯ್ಯ ಚೆನ್ನಬಸವಯ್ಯ ತಂಬಿ ಯೆಂಬ ಸುಪ್ರಸಿದ್ಧ ಪ್ರಾಥಮಿಕ ಶಾಲಾ ಮಾಸ್ತರರು ಬೆಳಗಾವ ಜಿಲ್ಲಾ ಸಂಪಗಾವ ತಾಲೂಕು ನೇಗಿನ ಹಾಳದಲ್ಲಿ ತಾ॥ ೨೭-೩-೨೧ ನೇ ರವಿವಾರ ದಿವಸ ಸಾಯಂಕಾಲದ ೪ ಗಂಟೆಗೆ ಇನ್‌ಫ್ಲುಯಂಜಾ ಬೇನೆಯಿಂದ ಸ್ವರ್ಗಸ್ಥರಾದ ದುರ್ವಾರ್ತೆಯನ್ನು ತಿಳಿಸಲಿಕ್ಕೆ ಅವರ ಶಿಷ್ಯನಾದ ನನಗೆ ಅತ್ಯಂತ ದುಃಖವಾಗುತ್ತದೆ. ಕೈಲಾಸವಾಸಿ ಗುರುವರ್ಯ ಬಸವಾರ್ಯರ ಜನ್ಮಸ್ಥಳವು ಖಾನಾಪುರ ತಾಲೂಕಿನೊಳಗಿನ ಪಾರಿಶ್ವಾಡ ಗ್ರಾಮವು. ಇವರು ಧಾರವಾಡ ಟ್ರೇನಿಂಗ್ ಕಾಲೇಜದ ೨ ನೆಯ ವರ್ಷದ ಸರ್ಟಿಫಿಕೇಟು ಪಡೆದ ಕೂಡಲೆ ಸನ್ ೧೮೯೬ ನೆಯ ಇಸವಿಯ ಜನವರಿ ತಿಂಗಳಲ್ಲಿ ಕಿತ್ತೂರಿನ ೧ ನೆಯ ನಂಬರ ಶಾಲೆಯ ೧ ನೆಯ ಅಸಿಸ್ಟಂಟರಾಗಿ ಬಂದವರು ಕಳೆದ ವರ್ಷದ ಕೊನೆಯವರೆಗೆ ೨೫ ವರ್ಷ ಅದೇ ಸ್ಥಳದಲ್ಲಿದ್ದರು. ಪುನಃ ಹೋದ ಆಗಸ್ಟ ತಿಂಗಳಲ್ಲಿ ಇವರಿಗೆ ಸೆಲೆಕ್ಷನ್ ಬಡತಿ ಸಿಕ್ಕಿದ್ದರಿಂದಲೂ ಇನ್ನು ಮೇಲೆ ಇವರನ್ನು ಅದೇ ಸ್ಥಳದಲ್ಲಿಡುವದು ಸರಕಾರಕ್ಕೆ ಅಶಕ್ಯವಾದುದರಿಂದಲೂ ಇವರಿಗೆ ನೇಗಿನಹಾಳ ಕನ್ನಡ ಗಂಡು ಮಕ್ಕಳ ಶಾಲೆಗೆ ವರ್ಗವಾಯಿತು. ಅಲ್ಲಿ ನಿರ್ದಯನಾದ ಕಾಲನು ಇನ್‌ಫ್ಲುಯಂಜಾ ಎಂಬ ಕ್ರೂರ ದೂತನೊಬ್ಬನಿಂದ ಇವರನ್ನು ಇಹದಿಂದ ತನ್ನ ಲೋಕಕ್ಕೆ ಎಳೆದೊಯ್ದನು! ಇವರ ವಯಸ್ಸು ೪೫ ವರ್ಷ ಮಾತ್ರವಾಗಿತ್ತು. ಇವರ ಅಕಾಲಿಕ ಮರಣದಿಂದ ಪ್ರತಿಯೊಬ್ಬ ಸುಶಿಕ್ಷಿತ ಕನ್ನಡಿಗನು ಕಣ್ಣೀರುಸುರಿಸದೆ ಇರಲಾರನು! ಇವರ ಪತ್ನಿಯವರಿಗೂ, ಮಕ್ಕಳಿಗೂ, ಶಿಷ್ಯವರ್ಗಕ್ಕೂ, ಆಪ್ತೇಷ್ಟರಿಗೂ ಆದ ದುಃಖವಂತೂ ವರ್ಣಿಸಲಸಾಧ್ಯವು!! ಗುರುವರ್ಯ ಬಸವಾರ್ಯರು ಒಳ್ಳೇ ಕವಿಗಳಾಗಿದ್ದು ಹಲವು ವಿಷಯಗಳ ಮೇಲೆ ಅನೇಕ ಪದ-ಪದ್ಯಗಳನ್ನು ರಚಿಸಿರುವರಲ್ಲದೆ ವಿಷಮವಿವಾಹ, ಮುಂಟೋರಮುಂಟಿವ ಪೂಜಾವರ್ಣನ (ಲಾವಣಿ) ಚಂದ್ರಿಕಾನಾಟಕ, ವೀರಶೈವ ಸಮಾಜಾದರ್ಶ, ಲಿಂಗರಾಜನಾಮಾವಳಿ, ದೇವಿಸ್ತೋತ್ರ, ಮುರುಘೇಂದ್ರಾಷ್ಟಕ ಮುಂತಾದ ಗ್ರಂಥಗಳನ್ನೂ ಅಷ್ಟಕ ಆರತಿಗಳನ್ನೂ ರಚಿಸಿರುವರು. ಇವರ ಹಸ್ತಾಕ್ಷರಗಳಂತೂ ಮುತ್ತಿನಂಥವಿದ್ದು ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿಯ ವಿದ್ಯಾರ್ಥಿಗಳು ಇವರ ಕಿತ್ತೆಗಳನ್ನೇ ಪ್ರತಿ ದಿನ ತಿದ್ದುವರು. ಅಕ್ಷರ ಲೇಖನದ ಬಗ್ಗೆ ಸರಕಾರದಿಂದ ಇವರಿಗೆ ಉಚಿತವೂ ದೊರೆದಂತಿದೆ. ಇವರು ಅತ್ಯಂತ ಶಾಂತರೂ, ಸರಳಸ್ವಭಾವದವರೂ, ಸುಶೀಲರೂ, ದಯಾಳುಗಳೂ, ರಸಿಕರೂ, ಶಿಷ್ಯವತ್ಸಲರೂ ಆಗಿದ್ದುದರಿಂದ ಇವರ ಬಗ್ಗೆ ವಿದ್ಯಾರ್ಥಿಗಳ ಹಾಗು ಜನರ ಮನಸಿನಲ್ಲಿ ಪೂಜ್ಯಬುದ್ಧಿ-ಪ್ರೇಮಾದರಗಳು ಸ್ವಾಭಾವಿಕವಾಗಿಯೇ ಉತ್ಪನ್ನವಾಗುತ್ತವೆ. ಇವರು ನಿಜವಾಗಿ ಸ್ಮಾರಕಾರ್ಹರಾಗಿರುವದರಿಂದ, ಇವರ ಕೈಯಲ್ಲಿ ಮುಲ್ಕೀ ಪರೀಕ್ಷೆ ಪಾಸಾಗಿ ಟ್ರೇನಿಂಗ ಕಾಲೇಜದ ೨ನೆ ೩ನೆ ವರ್ಷದ ಸರ್ಟಿಫಿಕೇಟು ಪಡೆದಿರುವ ಈ ಜಿಲ್ಲೆಯೊಳಗಿನ ಅನೇಕ ಜನ ಶಿಕ್ಷಕರು ಮನಸಿನ ಮೇಲೆ ತೆಗೆದುಕೊಂಡು ಈ ಕಾರ್ಯವನ್ನು ಮಾಡುವರೆಂದು ಆಶಿಸುತ್ತೇನೆ. ಗುರುವರ್ಯರ ಹಿಂದೆ ಅವರ ಪತ್ನಿಯವರೂ ೧೬ ವರ್ಷದ ಒಬ್ಬ ಮಗನೂ, ೨ ವರ್ಷದ ಇನ್ನೊಬ್ಬ ಮಗನೂ ಇರುವರು. ದಯಾಘನನಾದ ಶ್ರೀ ಶಂಕರನು ಗುರುವರ್ಯರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದೂ ಅವರ ಪತ್ನೀ-ಪುತ್ರರಿಗೆ ಆಯುರಾರೋಗ್ಯೈಶ್ವರ್ಯಗಳನ್ನಿತ್ತು ಸೌಖ್ಯದಿಂದ ಸಂರಕ್ಷಿಸಲೆಂದೂ ಆತನನ್ನು ಅನನ್ಯಭಾವದಿಂದ ಬೇಡಿಕೊಳುತ್ತೇನೆ.

ಸಂಗೊಳ್ಳಿ, } ಗುರುವರ್ಯರ ಪ್ರಿಯಶಿಷ್ಯ, ವೀರಪ್ಪ ವೀರಭದ್ರಪ್ಪ,
ತಾ॥ ೨೯-೩-೨. } ನಾಗಸೆಟ್ಟಿ ಸ್ಕೂಲ ಮಾಸ್ತರು.

ದಾವಣಗೆರೆಯಲ್ಲಿ ಮ॥ ರಾ॥ ಕೆ. ಸಿದ್ಧರಾಮಪ್ಪ ಬಿ. ಎ., ಇವರಿಗೆ ಮಾಡಿದ ಸನ್ಮಾನ ಸಮಾರಂಭ.

ಸುಮಾರು ೨॥ ವರ್ಷಗಳಕಾಲ ನಮ್ಮ ಚಿತ್ರದುರ್ಗದ ಡಿಸ್ಟ್ರಿಕ್ಟ್ 'ಎಜುಕೇಷನಲ್ ಸೂಪರಿಂಟೆಂಡೆಂಟ್' ರ ಪದವಿಯನ್ನನುಭವಿಸಿ, ಮೊನ್ನೆ ತಾನೇ ಮಂಜರಾಬಾದ್ ತಾಲ್ಲೂಕ ಅಮಲ್ದಾರರ ಪದವಿಗೆ ವರ್ಗಾಯಿಸಲ್ಪಟ್ಟ ಮ॥ ರಾ॥ ಕೆ. ಸಿದ್ಧರಾಮಪ್ಪ ಬಿ. ಎ. ಇವರನ್ನು ಈ ಊರ ವೀರಶೈವ ಮಹಾಜನಗಳು ಕಳೆದ ತಾ॥ ೨೧ನೆಯ ಗುರುವಾರದಿವಸ ಇಲ್ಲಿಗೆ ಬರಮಾಡಿಕೊಂಡು, ಮಧ್ಯಾಹ್ನ ವೇ॥ ತಿ॥ ಷಡಕ್ಷರಪ್ಪಯ್ಯನವರ ಬಂಗಲೆಯಲ್ಲಿ ಅವರ ಅನೇಕ ಸ್ನೇಹಿತರೊಂದಿಗೆ ಅಲ್ಪಾಹಾರದಿಂದ ಸಂತೋಷಪಡಿಸಿ, ಸಾಯಂಕಾಲ ಆನಂದಮಯವಾಗಿ ಕಂಗೊಳಿಸುವ ಶ್ರೀ ವಿರಕ್ತಮಠದಲ್ಲಿ ಘನತರವಾದ ಸಭೆ ಸೇರಿಸಿ, ಪಾನಸುಪಾರಿ ಸಮಾರಂಭದೊಂದಿಗೆ ಹಾರ ತುರಾಯಿಗಳಿಂದ ಸನ್ಮಾನಿಸಿದರು. ಸಭೆಗೆ ವಿದ್ಯಾರ್ಥಿಗಳ ವೃಂದವೂ, ವೀರಶೈವಪ್ರಮುಖರನೇಕರೂ ಆಗಮಿಸಿದ್ದಲ್ಲದೆ, ಆಮಂತ್ರಣದ ಮೇರೆಗೆ ತಾಲ್ಲೂಕ ಅಮಲ್ದಾರರೂ, ಮುನ್ಸೀಫರೂ, ಡಾಕ್ಟರೂ, ಹಲವು ವಕೀಲರೂ, ಜೈನ, ವೈಶ, ಮಹಮ್ಮದೀಯ, ಮಾರ್ವಾಡಿ ಮೊದಲಾದ ಪಂಗಡಗಳ ದೊಡ್ಡ ದೊಡ್ಡ ಮನುಷ್ಯರುಗಳೂ ದಯಮಾಡಿಸಿ ಸಭೆಯಲ್ಲಿ ಮಂಡಿಸಿ ರಂಜಿಸುತ್ತಿದ್ದರು. ಮೊದಲು ಇಲ್ಲಿಯ ಸಂಗೀತ ವಿದ್ವಾಂಸರಾದ ಮ॥ ರಾ॥ ಮಡಿವಾಳಪ್ಪನವರ ಮಂಜುಳವಾದ ಗಾನವೂ, ಪ್ರಕೃತ ಇಲ್ಲಿ ಆಟವಾಡುತ್ತಿರುವ ಹೊಂಬಳ ನಾಟಕಮಂಡಳಿಯವರ ಇಂಪಾದ ಹಾಡುಗಾರಿಕೆಯೂ ಆದ ಮೇಲೆ ವೇ॥ ಚಂದ್ರಶೇಖರಶಾಸ್ತ್ರಿಗಳು ಮತ್ತು ಮ॥ ರಾ॥ ನಾರಾಯಣಶೆಟ್ಟರು ಕನ್ನಡದಲ್ಲಿಯೂ, ವಿದ್ಯಾರ್ಥಿಗಳ ಪರವಾಗಿ ಮ॥ ರಾ॥ ವೀರಪ್ಪ ಎಂಬ ತರುಣ ವಿದ್ಯಾರ್ಥಿಯು ಇಂಗ್ಲೀಷಿನಲ್ಲಿಯೂ, ಮ॥ ರಾ॥ ಸಿದ್ಧರಾಮಪ್ಪನವರ ಗುಣಕಥನರೂಪದ ವ್ಯಾಖ್ಯಾನಗಳನ್ನು ಬಹು ಸ್ವಾರಸ್ಯವಾಗಿ ಮಾಡಿದರು. ಅಲ್ಲದೆ, ಮ॥ ರಾ॥ ಕೆ. ಜಿ. ಮಹಾದೇವಪ್ಪನವರು ಇಂಗ್ಲೀಷಿನಲ್ಲಿ ಬರೆಯಲ್ಪಟ್ಟ ವಿಜ್ಞಾಪನ ಪತ್ರವನ್ನು ಓದಿ ಹೇಳಿದರು. ಯಾರು ಪ್ರಜಾಸೇವೆಯೇ ರಾಜಸೇವೆಯೆಂದು ತಿಳಿದು ತಮ್ಮ ಅಧಿಕಾರಬಲದಿಂದ ಹಲವು ಶಾಶ್ವತವಾದ ಹಿತಕಾರ್ಯಗಳನ್ನು ಈ ಡಿಸ್ಟ್ರಿಕ್ಟಿನಲ್ಲಿ ಮಾಡಿರುವರೋ ಅಂಥ ಸಿದ್ಧರಾಮಪ್ಪನವರನ್ನು ಬರೀ ಮಧುರವಾದ ಮಾತುಗಳ ಸರಣಿಯಿಂದ ಸನ್ಮಾನಿಸುವುದಕ್ಕಿಂತ, ಅವರ ಜ್ಞಾಪಕಾರ್ಥವಾಗಿ ಏನಾದರೊಂದು ಶಾಶ್ವತ ಕೃತಿಯನ್ನು ಮಾಡಬೇಕೆಂಬ ಉದ್ದೇಶದಿಂದ ಇಲ್ಲಿನ 'ತರುಣ ಸದುದ್ಯೋಗ ಸಂಘ' ದವರ ಪರವಾಗಿ ಮ॥ ರಾ॥ ಬಿ. ಸಿ. ಮುಪ್ಪಣ್ಣನವರು ಈ ಊರ ಹೈಸ್ಕೂಲಿನಿಂದ ಪ್ರತಿ ವರ್ಷವೂ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಹೆಚ್ಚು ಸಂಖ್ಯೆಗಳನ್ನು ಪಡೆದು ತೇರ್ಗಡೆಯಾಗುವ ವಿದ್ಯಾರ್ಥಿಗೆ ಮ॥ ರಾ॥ ಸಿದ್ಧರಾಮಪ್ಪನವರ ನಾಮದಿಂದ ಒಂದು ಬಹುಮಾನವನ್ನು ಕೊಡುವುದಕ್ಕೋಸ್ಕರ ಒಂದುನೂರು ರೂಪಾಯಿನ ಫಂಡನ್ನು ಆಗಲೇ ಕೂಡಿಸಿರುವೆವೆಂದು ಬಹು ಆವೇಶದಿಂದ ಹೇಳಿದರು. ಕೂಡಲೇ ಎಲ್ಲರೂ ಇದನ್ನು ಅನುಮೋದಿಸಿ ತುಂಬಾ ಸಂತೋಷಭರಿತರಾದರು. ಪ್ರಮುಖತರಾದ ತುಮಕೂರು ಪ್ಲೀಡರ್ ಮ॥ ಗುರುಸಂಗಾರ್ಯರು ಈ ಫಂಡಿಗೆ ೧೦ ರೂ. ಗಳನ್ನು ಕೊಟ್ಟಿರುವರು. ಇದಾದ ಮೇಲೆ ಮ॥ ರಾ॥ ಸಿದ್ಧರಾಮಪ್ಪನವರು ಸಮಯಕ್ಕೆ ತಕ್ಕಂತೆ ಬಹು ಗಂಭೀರವಾದ ಮತ್ತು ರಸಭರಿತವಾದ ಶಬ್ದಗಳಿಂದ ಸಭಿಕರ ಮನಸ್ಸಿನಲ್ಲಿ ನಾಟುವಂತೆ ಉಪನ್ಯಾಸಿಸಿದರು. ಅವರು ಹೇಳಿದ್ದರ ಮುಖ್ಯತಾತ್ಪರ್ಯವೇನಂದರೆ:— ಪ್ರಜಾಸೇವೆಗಾಗಿಯೇ ನಿಯಮಿಸಲ್ಪಟ್ಟ ನಾನು ನನ್ನ ಕರ್ತವ್ಯವನ್ನು ನಿಮ್ಮಗಳಿಗೆ ತೃಪ್ತಿಯಾಗುವಂತೆ ಮಾಡದಿದ್ದಾಗ್ಯೂ, ನನ್ನನ್ನು ತಾವುಗಳು ಈ ರೀತಿಯಾಗಿ ಗೌರವಿಸಿದ್ದಕ್ಕಾಗಿ ತುಂಬಾ ವಂದಿಸುತ್ತೇನೆ. ರೈತಾಪಿ ಜನರು ಸಲ್ಲಿಸುವ ಕಂದಾಯ ಕಾಣಿಕೆಗಳಿಂದಲೇ ಸರ್ಕಾರದವರು ಅಧಿಕಾರಿಗಳಿಗೆ ಸಂಬಳವನ್ನು ಕೊಟ್ಟು ಅವರನ್ನು ಪ್ರಜಾಹಿತಕಾರ್ಯಗಳಿಗೆ ಹಚ್ಚಿರುವರು. ತಮಗೇನು ಬೇಕೆಂಬುದೇ ಇನ್ನೂ ಯಾವ ಜನಗಳಿಗೆ ತಿಳಿವಿಲ್ಲವೋ ಅಥವಾ ತಿಳಿದಿದ್ದರೂ ಹೇಳಲು ಬಾಯಿಲ್ಲವೋ ಅಂಥ ಅನೇಕ ಜನಗಳ ವಿಚಾರದಲ್ಲಿ ಮುಂದೊರೆದುಹೋಗುವ ಸರ್ವಸಮಾಜದವರೂ ಸಹಾಯ ಸಾನುಭೂತಿಯುಳ್ಳವರಾಗಿರಬೇಕು. ಹಿಂದುಳಿದ ವರ್ಗದವರು ವಿದ್ಯಾಭಿವೃದ್ಧಿಯನ್ನು ಹೊಂದಿ, ರಾಜ್ಯಾಡಳಿತದಲ್ಲಿಯೂ ಮುಂದೊರೆದು ತಮ್ಮ ತಮ್ಮ ಅಭ್ಯುದಯ ಕಾರ್ಯವನ್ನು ಕೈಕೊಳ್ಳಬೇಕು. ಕುರಿ, ಕೋಣ ಮೊದಲಾದ ಬಡ ಮೂಕ ಪ್ರಾಣಿಗಳನ್ನು ಮಾರಿ, ದುರ್ಗಿ, ಚೌಡಿ ಮೊದಲಾದ ರಾಕ್ಷಸರೂಪದ ದೇವತೆಗಳಿಗೆ ಬಲಿಯಾಗಿ ಅರ್ಪಿಸುವಂಥ ಅಶಾಸ್ತ್ರೀಯ ಕೆಲಸವನ್ನೂ, ಮನುಷ್ಯನ ಕ್ಷುದ್ಬಾಧೆಯ ಶಾಂತಿಗಾಗಿ ಪ್ರತಿನಿತ್ಯವೂ ಆಗುತ್ತಿರುವ ಗೋವಧೆಯಂತಹ ಕ್ರೂರಕೃತ್ಯವನ್ನೂ, ಪ್ರಾಣಿ ದಯಾಪರರೆಲ್ಲರೂ ಸರ್ಕಾರದವರ ಸಹಾಯವಿಲ್ಲದೇನೇ ಶಾಂತರೀತಿಯಲ್ಲಿ ನಿಲ್ಲಿಸಲು ಕಂಕಣಬದ್ಧರಾಗಿ ಪ್ರಯತ್ನ ನಡೆಯಿಸಬೇಕು. ಪ್ರಾಣಹತ್ಯವು ಪರಮ ಸಂತೋಷವೆಂದೆನಿಸುವ ದೇವತೆಗೆ ದೇವರೆನ್ನಬೇಕೆ? ದೇವತೆಯ ಹೆಸರಿಂದಾಗಲಿ, ಬರೇ ಹೊಟ್ಟೆಯ ಪಾಡಿಗಾಗಲಿ, ಪ್ರಾಣಿವಧೆಯನ್ನು ಮಾಡುವವರಿಗೆ ಮನುಷ್ಯರೆಂದು ಕರೆಯಬೇಕೆ? ಹೀಗೆಂಬುದಾಗಿ ಹೇಳಿ ಮುಗಿಸಿದ ಮೇಲೆ ಅವರಿಗೆ ಹಾರ ತುರಾಯಿಗಳು ಸಮರ್ಪಿಸಲ್ಪಟ್ಟು, ಸಭೆಯು ಹರ್ಷಿತವಾಗಿ ಪರಿಸಮಾಪ್ತಿಯನ್ನು ಹೊಂದಿತು. ಪ್ರಿಯ ವಾಚಕರೇ, ಇಂಥ ಪ್ರಜಾ ಸನ್ಮಾನವು ಈ ಹಿಂದೆ ಯಾವ ಅಧಿಕಾರಿಗೂ ಇಲ್ಲಿ ನಡೆದಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಒಂದುವೇಳೆ ಹಾಗೇನಾದರೂ ನಡೆದಿದ್ದರೆ, ಅದು ಒಂದು ಕೋಮಿನವರಿಂದಲೋ ಅಥವಾ ಒಂದು ಜಾತಿಯವರಿಂದಲೋ ನಡೆದಿರಬಹುದು. ಆದರೆ ಇಷ್ಟು ಪ್ರಿಯಕರವಾಗಿಯೂ, ಉತ್ಸಾಹಪೂರ್ವಕವಾಗಿಯೂ ಆಗಿರಲಿಕ್ಕಿಲ್ಲವೆಂದು ನಿಸ್ಸಂದೇಹವಾಗಿ ಹೇಳುತ್ತೇನೆ. ಪ್ರಜೆಗಳೆಲ್ಲರ ವಿಚಾರದಲ್ಲಿ ಪ್ರೋತ್ಸಾಹಶೀಲರೂ, ಕಾರ್ಯದಕ್ಷರೂ ಆದ ಮ॥ ರಾ॥ ಸಿದ್ಧರಾಮಪ್ಪನವರು ವೀರಶೈವಮತದವರೆಂದಾಗಲಿ, ಅಥವಾ ಭಾರಿ ಅಧಿಕಾರಿಗಳೆಂದಾಗಲಿ ಇಲ್ಲಿ ಸನ್ಮಾನಿಸಲಿಲ್ಲ. ಆದರೆ ಅವರು ಈ ಡಿಸ್ಟ್ರಿಕ್ಟಿನಲ್ಲಿದ್ದ ಅಲ್ಪಕಾಲದಲ್ಲಿ ತಮ್ಮ ಅಧಿಕಾರಕರ್ತವ್ಯದ ದೃಷ್ಟಿಯನ್ನಿಟ್ಟುಕೊಂಡು, ಯಾವ ಭೇದಭಾವವೂ ಇಲ್ಲದೆ ಪ್ರಜಾಹಿತಕಾರ್ಯಗಳನ್ನು ಮಾಡುವುದರಲ್ಲಿಯೇ ತಮ್ಮ ತನುಮನಗಳನ್ನು ಅವಿಶ್ರಾಂತ ಶ್ರಮಪಡಿಸಿ, 'ಪ್ರಜಾಪ್ರೇಮಿ' ಎಂಬ ಬಿರುದನ್ನು ಪಡೆದಿದ್ದುದರಿಂದ ಇಷ್ಟು ಘನತರವಾಗಿ ಸನ್ಮಾನವಾಯಿತು. ವಿದ್ಯೆ, ವಾಣಿಜ್ಯ, ಕೈಗಾರಿಕೆಯಲ್ಲಿ ಹಿಂದುಳಿದವರನ್ನು ಮುಂದರಿಸಲೋಸುಗ ಸರ್ಕಾರದವರು ನೇಮಿಸಿದ್ದುದರಿಂದ ಸಾರ್ಥಕತೆಯನ್ನು ಇವರು ಮನಃಪೂರ್ವಕವಾಗಿ ಮಾಡಿ ಜನಾನುರಾಗವನ್ನು ಸಂಪಾದಿಸಿದರು. ಇವರ ದಯಾರ್ದ್ರ ಹೃದಯವೂ, ಶಾಂತಸ್ವಭಾವವೂ, ನಿಷ್ಕಾಮಕರ್ತವ್ಯದಕ್ಷತೆಯೂ ಜನಸಾಮಾನ್ಯರಿಗೆಲ್ಲಾ ತಿಳಿದಿದ್ದುದರಿಂದ, ಎಲ್ಲರೂ ಇವರನ್ನು ತುಂಬಾ ಗೌರವಿಸುತ್ತಿದ್ದರು. ಈ ಡಿಸ್ಟ್ರಿಕ್ಟಿನಲ್ಲಿ ಇವರು ತಮ್ಮ ಅಧಿಕಾರದಲ್ಲಿದ್ದಾಗ ಮಾಡಿಟ್ಟಿರುವ ಪ್ರಜಾಹಿತಕಾರ್ಯಗಳನ್ನು ಪ್ರಕೃತ ಇಲ್ಲಿ ವರ್ಣಿಸಲಸಾಧ್ಯ. ಮುಖ್ಯವಾಗಿ ಇವರು ಅಧಿಕಾರಮದದಿಂದ ಮೆರೆಯದೆ ಜನಸಾಮಾನ್ಯರಲ್ಲೆಲ್ಲಾ ಬೆರೆತು, ಅವರ ಕಷ್ಟನಷ್ಟಗಳನ್ನು ಪರಿಶೀಲಿಸಿ ಮತ್ತು ಬಹುಮಟ್ಟಿಗೆ ಪರಿಹರಿಸಿ, ಹೋದೆಡೆಯಲ್ಲೆಲ್ಲಾ ಪ್ರೀತಿಯನ್ನೂ, ಗೌರವವನ್ನೂ ಸಂಪಾದಿಸಿ, ಇವರಷ್ಟು ಜನೋಪಕಾರಿಯಾದವರಾರೂ ಈವರೆಗೆ ಇಲ್ಲಿಗೆ ಬಂದಿರಲಿಲ್ಲವೆಂಬ ಕೀರ್ತಿಯನ್ನು ಪಡೆದುಕೊಂಡರು. ಇಂಥ ಸಿದ್ಧರಾಮಪ್ಪನವರನ್ನು ಈ ನಮ್ಮ ಡಿಸ್ಟ್ರಿಕ್ಟು ಅಲ್ಪಕಾಲದಲ್ಲಿಯೇ ಕಳೆದುಕೊಂಡದ್ದಕ್ಕೆ ತುಂಬಾ ವ್ಯಸನವಾಗುತ್ತಿದೆ. ಇಂಥ ಸಿದ್ಧರಾಮಪ್ಪನವರನ್ನು ಇನ್ನೂ ಉಚ್ಚಪದವಿಗೇರಿಸದೆ, ಎಲ್ಲೋ ಒಂದು ಮೂಲೆಯಲ್ಲಿನ ತಾಲ್ಲೂಕು ಅಧಿಕಾರಸ್ಥಾನಕ್ಕೆ ಹಾಕಿದರಲ್ಲಾ ಎಂದು ಇಲ್ಲಿನ ಜನರೆಲ್ಲರೂ ದುಃಖಪಡುತ್ತಿರುವರು. ಯೋಗ್ಯತೆಯಿಲ್ಲದವರಿಗೆ ಬೇಡ. ತಕ್ಕ ಯೋಗ್ಯತೆಯೂ ಪ್ರಜಾಸೇವಾಧುರಂಧರತೆಯೂ ನಿಸ್ಪೃಹತೆಯೂ ಉಳ್ಳ ಇಂಥ ಹಿಂದುಳಿದ ಜನವರ್ಗದವರಿಗೆ ಸರ್ಕಾರದವರು ಹೀಗೆ ಉಪೇಕ್ಷೆ ಮಾಡುತ್ತ ಬಂದರೆ ಆ ಜನವರ್ಗಗಳಿಗೆ ಸರ್ಕಾರವು ಸಾನುಭೂತಿಯನ್ನು ಇನ್ನಾವಾಗ ತೋರಿಸುವುದು? ಅವರು ತಮ್ಮ ವಾಗ್ದಾನವನ್ನು ನೆರವೇರಿಸಿಕೊಳ್ಳುವುದು ಯಾವಾಗ? ಯಾವ ಜನರು ಬಹು ಕಷ್ಟಪಟ್ಟು ಸಂಪಾದಿಸಿ ಸಲ್ಲಿಸುತ್ತಿರುವ ಕಂದಾಯ ಕಾಣಿಕೆಗಳಿಂದ ರಾಜ್ಯವೈಭವವು ಸರಾಗವಾಗಿ ಸಾಗುತ್ತಿದೆಯೋ ಯಾವ ಜನರ ರಾಜಾಭಿಮಾನದೈಕಮತ್ಯವು ಸರ್ಕಾರದ ಅಸ್ತಿತ್ವಕ್ಕೂ, ದೇಶದ ಶಾಂತತೆಗೂ ಕಾರಣವಾಗಿರುವುದೋ, ಅಂಥ ಜನರ ಹಿತಾಭಿವೃದ್ಧಿಗೋಸ್ಕರ ಅಧಿಕಾರಿಗಳೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ನಿಷ್ಕಾಮ ಮತ್ತು ಸಮಾನಬುದ್ಧಿಯಿಂದ ಮಾಡಿಯೇತೀರಬೇಕೆಂದೂ, ಹಾಗೆ ಮಾಡದಿದ್ದರೆ ಅವರು ದೇಶಕ್ಕೆ ಅಹಿತಕಾರಿಗಳೆಂದೂ ರಾಜಕೀಯ ಶಾಸ್ತ್ರಜ್ಞರು ಹೇಳುತ್ತಾರೆ. ಈ ತತ್ವವನ್ನನುಸರಿಸಿ ನಡೆಯುವ ಅಧಿಕಾರಿಗಳ ಯೋಗ್ಯತೆಯ ಮೇರೆಗೆ ಅಧಿಕಾರಸ್ಥಾನಗಳನ್ನು ಕೊಡುವುದು ಸರ್ಕಾರದವರ ಕರ್ತವ್ಯವೂ ಆಗಿರುವುದು.

ಬಸವದಾಸ.

ಸೇವಿಂಗ್ಸ ಬಾಕ್ಸ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ ಕೈಯಲ್ಲಿರುವಾಗ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವದೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರದುಕೊಳ್ಳುವದು. ಇದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ 2—0—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
31 102 ಪೈನಾಬಜಾರ್ ರೋಡ್ ಮದರಾಸು.

---

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

31 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟಬಾಕ್ಸ ನಂ. 542 ಪಾರ್ಕ್‌ಟೌನ್ ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ).

ಪಂಡಿತಾರಾಧ್ಯಚರಿತಂ.—ಇದು ವೀರಶೈವ ಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರಗಳೂ, ಶ್ರೀಶೈಲಮಹತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣ ಗ್ರಂಥ ೫ ರೂಪಾಯಿ.

ಬಸವರಾಜ ವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೬-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೦—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ-೧-೨-೦; ಸಟೀಕ ಶತಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ. ಸ್ತುತಿಮುಕ್ತಾವಳಿ ೪ಆಣೆ; ರಕ್ಷಾಶತಕ ೩ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೫—೦
ಚಾರುಶೀಲೆಚರಿತ್ರೆ	೦—೯—೦
ಹರಿದಾಸಿ	೦—೮—೦

೧೯೨೧ ಇಸವಿ ಮೇ ತಾ॥ ೧ ರಿಂದ ೧೯೨೧ ನೆಯ ಮೇ ತಾ॥ ೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಚೈತ್ರ ಬಹುಳ ನವಮಿಯಿಂದ ಚೈತ್ರ ಬಹುಳ ಅಮಾವಾಸ್ಯೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
1	ಭಾನು	ನವಮಿ	41-37	ಧನಿ	44-40	19
2	ಸೋಮ	ದಶ	45-57	ಶತ	50-24	20
3	[1]ಮಂಗಳ	ಏಕಾ	49-20	ಪೂಭಾ	55-14	21
4	ಬುಧ	ದ್ವಾದ	51-27	ಉಭಾ	58-54	22
5	[2]ಗುರು	ತ್ರಯೋ	52-25	ರೇವ	60	23
6	ಶುಕ್ರ	ಚತು	51-54	ರೇವ	0-34	24
7	[3]ಶನಿ	ಅಮಾ	50-12	ಅಶ್ವಿ	1-44	25

(1) ಸರ್ವತ್ರೈಕಾದಶಿ. (2) ಪ್ರದೋಷ. (3) ಸರ್ವತ್ರಾಮಾವಾಸ್ಯೆ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷದ್ವನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರನಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ಭೃತ್ಯಮಾಲಾಕುಲಂ | ಶ್ರೀಮಂಚಿತ್ತೇಶಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೪ ಮೈಸೂರ್ ಸ್ಟಾರ್ ಸನ್ ೧೯೨೧ ನೇಯ ಇಸವಿ ಮೇ ತಾರೀಖು ೮ ನೆಯ ಭಾನುವಾರ ಸಂಚಿಕೆ ೧೮

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವೇ ಹೇಳುವೆವು. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHAVA VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
17 ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೩—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ನೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಆಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.



ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು. ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ 5-4.0

ಎಸ್. ಪಾಲ್ ಅಂಡ್ ಕೊ, ಪೋಸ್ಟಬಾಕ್ಸ ನಂ. 542,
32 ಪಾರ್ಕ್‌ಟೌನ್ ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12.0	,,	50-0.0
5	0-8.0	,,	100-0.0
6	0.12.0	,,	100.0.0
7	6.0.0	,,	100-0.0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0-6.0	ಇಂದ	10-0.0
8	0-8.0	,,	100.0.0
9	0-12-0	,,	100-0.0
10	0-14-0	,,	100-0-0
11	3-8.0	,,	100-0.0
12	4-0.0	,,	100-0-0
13	4-8.0	,,	100-0.0
14	6-0.0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅವಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0.0 ಬಿ. 50.0.0 ಸಿ. 40.0.0 ಡಿ. 25-0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
11 ಕಂಪನಿ, ಚೌಕಂಬಾ ಕಾಶೀ.

ಫಲ್ತಶೋಧಕ! ಮನೋಲ್ಲಾಸಿಕವೆಂಬ ಧಾತುಪುಷ್ಟಿಕ!!

ಮಹದ್ರಾಕ್ಷಾದಿ ಚೂರ್ಣವು. 30

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಕೆಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ದಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೪ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 22

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0.

32 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟಬಾಕ್ಸ ನಂ. 542 ಪಾರ್ಕ್‌ಟೌನ್ ಮದರಾಸು.

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತುರಾಯಿ 1, ತಾಮವಂತಿಗೆಹುವ್ವು, 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ರಾಗಮಾಲಿಕೆ 1, ಗಡಿಯಾರದ ಉತ್ತರಮುಖ 1, ಮುಖ ನೋಡಿಕೊಳ್ಳುವ ದಂತದಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಶೃಂಗಾರದ ಉಂಗುರ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
32 89, ನಾರಾಯಣಮೊದಲಿಬೀದಿ, ಮದ್ರಾಸು.

ಗಳವರೆಗೆ ಕ್ಲಾಸುಗಳು ನಡೆಯುವವು. ಸದರ ಶಾಲೆಯು ಇಲ್ಲಿಯ ಭವ್ಯವಾದ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ಇಡಲ್ಪಟ್ಟಿರುವದು. ೧೩ ವರ್ಷಗಳಿಗಿಂತ ಹೆಚ್ಚಿನ ಮೂವತ್ತು ವರ್ಷಗಳಕಿಂತ ಕಡಮೆಯ ವಯಸ್ಸಿನವರನ್ನು ಹಚ್ಚಿಗೆ ತಗೆದುಕೊಳ್ಳಬೇಕೆಂದು ಗೊತ್ತುಪಡಿಸಿದ್ದೇವೆ. ಯಾವತ್ತು ಮಾಸ್ತರ ಜನರು ಸಂಘದವರೇ ಇರುತ್ತೇವೆ. ಮತ್ತು ವರ್ನ್ಯಾಕ್ಯುಲರ್ ಸ್ಕೂಲ ಫಾಯನಲ್ ಪರೀಕ್ಷೆ ಪಾಸ ಆದವರೇ ಇರುತ್ತೇವೆ. ಮತ್ತು ಪುಕ್ಕಟೆಯಾಗಿ ಹೇಳುತ್ತೇವೆ. ಅನಾಥರೆಂದು ಕಂಡು ಬಂದವರಿಗೆ ಸಂಘದವರು ಸ್ಲೇಟು ಪೆನಸಿಲು ಬುಕ್ಕು ಇವೇ ಮೊದಲಾದ ಅವಶ್ಯವಾದ ಶಾಲೆಯ ಸಾಮಾನುಗಳನ್ನು ಪುಕ್ಕಟೆಯಾಗಿ ಕೊಡುತ್ತೇವೆ. ಬೀಸದ ಸಲುವಾಗಿ ಗ್ಯಾಸಿನ ವ್ಯವಸ್ಥೆಯಾದರೂ ಸಂಘದಿಂದಲೇ ನಡೆಸಿರುತ್ತೇವೆ.

ತಮ್ಮ ಬಬಲೇಶ್ವರ ವೀರಶೈವ ತರುಣ ಸಂಘ.

ಕೈ. ವಾ. ಬಸವಾರ್ಯ ಕವಿಗಳು.

“ಕಿತ್ತೂರಿನ ಬಸವಾರ್ಯಕವಿ” ಗಳೆಂದು ಕನ್ನಡನಾಡಿನಲ್ಲೆಲ್ಲ ಹೆಸರು ಹೊಂದಿದ ಬಸವಯ್ಯ ಚೆನ್ನಬಸವಯ್ಯ ತಂಬಿ ಯೆಂಬ ಸುಪ್ರಸಿದ್ಧ ಪ್ರಾಥಮಿಕ ಶಾಲಾ ಮಾಸ್ತರರು ಬೆಳಗಾವ ಜಿಲ್ಲಾ ಸಂಪಗಾವ ತಾಲ್ಲೂಕು ನೇಗಿನ ಹಾಳದಲ್ಲಿ ತಾ|| ೨೭-೩-೨೧ ನೇ ರವಿವಾರ ದಿವಸ ಸಾಯಂಕಾಲದ ೪|| ಗಂಟೆಗೆ ಇನ್‌ಫ್ಲುಯೆಂಜಾ ಬೇನೆಯಿಂದ ಸ್ವರ್ಗಸ್ಥರಾದ ದುರ್ವಾರ್ತೆಯನ್ನು ತಿಳಿಸಲಿಕ್ಕೆ ಅವರ ಶಿಷ್ಯನಾದ ನನಗೆ ಅತ್ಯಂತ ದುಃಖವಾಗುತ್ತದೆ. ಕೈಲಾಸವಾಸಿ ಗುರುವರ್ಯ ಬಸವಾರ್ಯರ ಜನ್ಮಸ್ಥಳವು ಖಾನಾಪುರ ತಾಲ್ಲೂಕಿನೊಳಗಿನ ಪಾರಿಶ್ವಾಡ ಗ್ರಾಮವು. ಇವರು ಧಾರವಾಡ ಟ್ರೇನಿಂಗ್ ಕಾಲೇಜಿನ ೨ ನೆಯ ವರ್ಷದ ಸರಟಿಫಿಕೇಟು ಪಡೆದ ಕೂಡಲೆ ಸನ್ ೧೮೯೬ ನೆಯ ಇಸವಿಯ ಜನವರಿ ತಿಂಗಳಲ್ಲಿ ಕಿತ್ತೂರಿನ ೧ ನೆಯ ನಂಬರ ಶಾಲೆಯ ೧ ನೆಯ ಅಸಿಸ್ಟೆಂಟರಾಗಿ ಬಂದವರು ಕಳೆದ ವರ್ಷದ ಕೊನೆಯವರೆಗೆ ೨೫ ವರ್ಷ ಅದೇ ಸ್ಥಳದಲ್ಲಿದ್ದರು. ಪುನಃ ಹೋದ ಆಗಸ್ಟು ತಿಂಗಳಲ್ಲಿ ಇವರಿಗೆ ಸೆಲೆಕ್ಷನ್ ಬಡತಿ ಸಿಕ್ಕದ್ದರಿಂದಲೂ ಇನ್ನು ಮೇಲೆ ಇವರನ್ನು ಅದೇ ಸ್ಥಳದಲ್ಲಿಡುವದು ಸರಕಾರಕ್ಕೆ ಅಶಕ್ಯವಾದುದರಿಂದಲೂ ಇವರಿಗೆ ನೇಗಿನಹಾಳ ಕನ್ನಡ ಗಂಡು ಮಕ್ಕಳ ಶಾಲೆಗೆ ವರ್ಗವಾಯಿತು. ಅಲ್ಲಿ ನಿರ್ದಯನಾದ ಕಾಲನು ಇನ್‌ಫ್ಲುಯೆಂಜಾ ಎಂಬ ಕ್ರೂರ ದೂತನೊಬ್ಬನಿಂದ ಇವರನ್ನು ಇಹದಿಂದ ತನ್ನ ಲೋಕಕ್ಕೆ ಎಳೆದೊಯ್ದನು! ಇವರ ವಯಸ್ಸು ೪೫ ವರ್ಷ ಮಾತ್ರವಾಗಿತ್ತು. ಇವರ ಅಕಾಲಿಕ ಮರಣದಿಂದ ಪ್ರತಿಯೊಬ್ಬ ಸುಶಿಕ್ಷಿತ ಕನ್ನಡಿಗನು ಕಣ್ಣೀರುಸುರಿಸದೆ ಇರಲಾರನು! ಇವರ ಪತ್ನಿಯವರಿಗೂ, ಮಕ್ಕಳಿಗೂ, ಶಿಷ್ಯವರ್ಗಕ್ಕೂ, ಆಪ್ತೇಷ್ಟರಿಗೂ ಆದ ದುಃಖವಂತೂ ವರ್ಣಿಸಲಸಾಧ್ಯವು!! ಗುರುವರ್ಯ ಬಸವಾರ್ಯರು ಒಳ್ಳೇ ಕವಿಗಳಾಗಿದ್ದು ಹಲವು ವಿಷಯಗಳ ಮೇಲೆ ಅನೇಕ ಪದ-ಪದ್ಯಗಳನ್ನು ರಚಿಸಿರುವರಲ್ಲದೆ ವಿಷಮವಿವಾಹ, ಮುಂಟೂರಮುಂಟಪ ಪೂಜಾವರ್ಣನ (ಲಾವಣಿ) ಚಂದ್ರಿಕಾನಾಟಕ, ವೀರಶೈವ ಸಮಾಜಾದರ್ಶ, ಲಿಂಗರಾಜನಾಮಾವಳಿ, ದೇವೀಸ್ತೋತ್ರ, ಮುರುಘೇಂದ್ರಾಷ್ಟಕ ಮುಂತಾದ ಗ್ರಂಥಗಳನ್ನೂ ಅಸ್ಸಂಕ ಆರತಿಗಳನ್ನೂ ರಚಿಸಿರುವರು. ಇವರ ಹಸ್ತಾಕ್ಷರಗಳಂತೂ ಮುತ್ತಿನಂಥವಿದ್ದು ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿಯ ವಿದ್ಯಾರ್ಥಿಗಳು ಇವರ ಕಿತ್ತಿಗಳನ್ನೇ ಪ್ರತಿ ದಿನ ತೀಡುವರು. ಅಕ್ಷರ ಲೇಖನದ ಬಗ್ಗೆ ಸರಕಾರದಿಂದ ಇವರಿಗೆ ಉಚಿತವೂ ದೊರೆದಂತಿದೆ. ಇವರು ಅತ್ಯಂತ ಶಾಂತರೂ, ಸರಳಸ್ವಭಾವದವರೂ, ಸುಶೀಲರೂ, ದಯಾಳುಗಳೂ, ರಸಿಕರೂ, ಶಿಷ್ಯವತ್ಸಲರೂ ಆಗಿದ್ದುದರಿಂದ ಇವರ ಬಗ್ಗೆ ವಿದ್ಯಾರ್ಥಿಗಳ ಹಾಗು ಜನರ ಮನಸಿನಲ್ಲಿ ಪೂಜ್ಯಬುದ್ಧಿ-ಪ್ರೇಮಾದರಗಳು ಸ್ವಾಭಾವಿಕವಾಗಿಯೇ ಉತ್ಪನ್ನವಾಗುತ್ತಿದ್ದವು. ಇವರು ನಿಜವಾಗಿ ಸ್ಮಾರಕಾರ್ಹರಾಗಿರುವದರಿಂದ, ಇವರ ಕೈಯಲ್ಲಿ ಮುಲ್ಕೀ ಪರೀಕ್ಷೆ ಪಾಸಾಗಿ ಟ್ರೇ-ಕಾ-ದ ೨ನೆ ೩ನೆ ವರ್ಷದ ಸರಟಿಫಿಕೇಟು ಪಡೆದಿರುವ ಈ ಜಿಲ್ಲೆಯೊಳಗಿನ ಅನೇಕ ಜನ ಶಿಕ್ಷಕರು ಮನಸಿನ ಮೇಲೆ ತೆಗೆದುಕೊಂಡು ಈ ಕಾರ್ಯವನ್ನು ಮಾಡುವರೆಂದು ಆಶಿಸುತ್ತೇನೆ. ಗುರುವರ್ಯರ ಹಿಂದೆ ಅವರ ಪತ್ನಿಯವರೂ ೧೬ ವರ್ಷದ ಒಬ್ಬ ಮಗನೂ, ೨ ವರ್ಷದ ಇನ್ನೊಬ್ಬ ಮಗನೂ ಇರುವರು. ದಯಾಘನನಾದ ಶ್ರೀ ಶಂಕರನು ಗುರುವರ್ಯರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದೂ ಅವರ ಪತ್ನೀ-ಪುತ್ರರಿಗೆ ಆಯುರಾರೋಗ್ಯೈಶ್ವರ್ಯಗಳನ್ನಿತ್ತು ಸೌಖ್ಯದಿಂದ ಸಂರಕ್ಷಿಸಲೆಂದೂ ಆತನನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ.

ಸಂಗೊಳ್ಳಿ, ತಾ|| ೨೯-೩-೨. } ಗುರುವರ್ಯರ ಪ್ರಿಯಶಿಷ್ಯ, ವೀರಪ್ಪ ವೀರಭದ್ರಪ್ಪ,
ನಾಗಸೆಟ್ಟಿ ಸ್ಕೂಲ ಮಾಸ್ತರರು.

ದಾವಣಗೆರೆಯಲ್ಲಿ ಮ|| ರಾ|| ಕೆ. ಸಿದ್ಧರಾಮಪ್ಪ ಬಿ. ಎ., ಇವರಿಗೆ ಮಾಡಿದ ಸನ್ಮಾನ ಸಮಾರಂಭ.

ಸುಮಾರು ೨|| ವರ್ಷಗಳಕಾಲ ನಮ್ಮ ಚಿತ್ರದುರ್ಗದ ಡಿಸ್ಟ್ರಿಕ್ಟ್ “ಎಕನಾಮಿಕ್ ಸೂಪರಿಂಟೆಂಡೆಂಟ್” ರ ಪದವಿಯನ್ನನುಭವಿಸಿ, ಮೊನ್ನೆ ತಾನೇ ಮಂಜರಾಬಾದ್ ತಾಲ್ಲೂಕ ಅಮಲ್ದಾರರ ಪದವಿಗೆ ವರ್ಗಾಯಿಸಲ್ಪಟ್ಟ ಮ|| ರಾ|| ಕೆ. ಸಿದ್ಧರಾಮಪ್ಪ ಬಿ. ಎ. ಇವರನ್ನು ಈ ಊರ ವೀರಶೈವ ಮಹಾಜನಗಳು ಕಳೆದ ತಾ|| ೨೧ನೆಯ ಗುರುವಾರದಿವಸ ಇಲ್ಲಿಗೆ ಬರಮಾಡಿಕೊಂಡು, ಮಧ್ಯಾಹ್ನ ವೇ|| ತಿ|| ಷಡಕ್ಷರಪ್ಪಯನವರ ಬಂಗಲೆಯಲ್ಲಿ ಅವರ ಅನೇಕ ಸ್ನೇಹಿತರೊಂದಿಗೆ ಅಲ್ಪಾಹಾರದಿಂದ ಸಂತೋಷಪಡಿಸಿ, ಸಾಯಂಕಾಲ ಆನಂದಮಯವಾಗಿ ಕಂಗೊಳಿಸುವ ಶ್ರೀ ವಿರಕ್ತಮಠದಲ್ಲಿ ಭಿನತರವಾದ ಸಭೆ ಸೇರಿಸಿ. ಪಾನಸುಪಾರಿ ಸಮಾರಂಭದೊಂದಿಗೆ ಹಾರ ತುರಾಯಿಗಳಿಂದ ಸನ್ಮಾನಿಸಿದರು. ಸಭೆಗೆ ವಿದ್ಯಾರ್ಥಿಗಳ ವೃಂದವೂ, ವೀರಶೈವಪ್ರಮುಖರನೇಕರೂ ಆಗಮಿಸಿದ್ದಲ್ಲದೆ, ಆಮಂತ್ರಣದ ಮೇರೆಗೆ ತಾಲ್ಲೂಕ ಅಮಲ್ದಾರರೂ, ಮುನ್ಸೀಫರೂ, ಡಾಕ್ಟರೂ, ಹಲವು ವಕೀಲರೂ, ಜೈನ, ವೈಶ, ಮಹಮ್ಮದೀಯ, ಮಾರ್ವಾಡಿ ಮೊದಲಾದ ಪಂಗಡಗಳ ದೊಡ್ಡ ದೊಡ್ಡ ಮನುಷ್ಯರುಗಳೂ ದಯಮಾಡಿಸಿ ಸಭೆಯಲ್ಲಿ ಮಂಡಿಸಿ ರಂಜಿಸುತ್ತಿದ್ದರು. ಮೊದಲು ಇಲ್ಲಿಯ ಸಂಗೀತ ವಿದ್ವಾಂಸರಾದ ಮ|| ರಾ|| ಮಡಿವಾಳಪ್ಪನವರ ಮಂಜುಳವಾದ ಗಾನವೂ, ಪ್ರಕೃತ ಇಲ್ಲಿ ಆಟವಾಡುತ್ತಿರುವ ಹೊಂಬಳ ನಾಟಕಮಂಡಳಿಯವರ ಇಂಪಾದ ಹಾಡುಗಾರಿಕೆಯೂ ಆದ ಮೇಲೆ ವೇ|| ಚಂದ್ರಶೇಖರಶಾಸ್ತ್ರಿಗಳು ಮತ್ತು ಮ|| ರಾ|| ನಾರಾಯಣಶೆಟ್ಟರು ಕನ್ನಡದಲ್ಲಿಯೂ, ವಿದ್ಯಾರ್ಥಿಗಳ ಪರವಾಗಿ ಮ|| ರಾ|| ವೀರಪ್ಪ ಎಂಬ ತರುಣ ವಿದ್ಯಾರ್ಥಿಯು ಇಂಗ್ಲೀಷಿನಲ್ಲಿಯೂ, ಮ|| ರಾ|| ಸಿದ್ಧರಾಮಪ್ಪನವರ ಗುಣಕಥನರೂಪದ ವ್ಯಾಖ್ಯಾನಗಳನ್ನು ಬಹು ಸ್ವಾರಸ್ಯವಾಗಿ ಮಾಡಿದರು. ಅಲ್ಲದೆ, ಮ|| ರಾ|| ಕೆ. ಜಿ. ಮಹಾದೇವಪ್ಪನವರು ಇಂಗ್ಲೀಷಿನಲ್ಲಿ ಬರೆಯಲ್ಪಟ್ಟ ವಿಜ್ಞಾಪನ ಪತ್ರವನ್ನು ಓದಿ ಹೇಳಿದರು. ಯಾರು ಪ್ರಜಾಸೇವೆಯೇ ರಾಜಸೇವೆಯೆಂದು ತಿಳಿದು ತಮ್ಮ ಅಧಿಕಾರಬಲದಿಂದ ಹಲವು ಶಾಶ್ವತವಾದ ಹಿತಕಾರ್ಯಗಳನ್ನು ಈ ಡಿಸ್ಟ್ರಿಕ್ಟಿನಲ್ಲಿ ಮಾಡಿರುವರೋ ಅಂಥ ಸಿದ್ಧರಾಮಪ್ಪನವರನ್ನು ಬರೀ ಮಧುರವಾದ ಮಾತುಗಳ ಸರಣಿಯಿಂದ ಸನ್ಮಾನಿಸುವುದಕ್ಕಿಂತ, ಅವರ ಜ್ಞಾಪಕಾರ್ಥವಾಗಿ ಏನಾದರೊಂದು ಶಾಶ್ವತ ಕೃತಿಯನ್ನು ಮಾಡಬೇಕೆಂಬ ಉದ್ದೇಶದಿಂದ ಇಲ್ಲಿನ “ತರುಣ ಸದುದ್ಯೋಗ ಸಂಘ” ದವರ ಪರವಾಗಿ ಮ|| ರಾ|| ಬಿ. ಸಿ. ಮುಪ್ಪಣ್ಣನವರು ಈ ಊರ ಹೈಸ್ಕೂಲಿನಿಂದ ಪ್ರತಿ ವರ್ಷವೂ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಹೆಚ್ಚು ಸಂಖ್ಯೆಗಳನ್ನು ಪಡೆದು ತೇರ್ಗಡೆಯಾಗುವ ವಿದ್ಯಾರ್ಥಿಗೆ ಮ|| ರಾ|| ಸಿದ್ಧರಾಮಪ್ಪನವರ ನಾಮದಿಂದ ಒಂದು ಬಹುಮಾನವನ್ನು ಕೊಡುವುದಕ್ಕೋಸ್ಕರ ಒಂದುನೂರು ರೂಪಾಯಿನ ಫಂಡನ್ನು ಆಗಲೇ ಕೂಡಿಸಿರುವೆವೆಂದು ಬಹು ಆವೇಶದಿಂದ ಹೇಳಿದರು. ಕೂಡಲೇ ಎಲ್ಲರೂ ಇದನ್ನು ಅನುಮೋದಿಸಿ ತುಂಬಾ ಸಂತೋಷಭರಿತರಾದರು. ಪ್ರಮುಖ ತರಾದ ತುಮಕೂರು ಪ್ಲೀಡರ್ ಮ|| ಗುರುಸಂಗಾರ್ಯರು ಈ ಫಂಡಿಗೆ ೧೦ ರೂ. ಗಳನ್ನು ಕೊಟ್ಟಿರುವರು. ಇದಾದ ಮೇಲೆ ಮ|| ರಾ|| ಸಿದ್ಧರಾಮಪ್ಪನವರು ಸಮಯಕ್ಕೆ ತಕ್ಕಂತೆ ಬಹು ಗಂಭೀರವಾದ ಮತ್ತು ರಸಭರಿತವಾದ ಶಬ್ದಗಳಿಂದ ಸಭಿಕರ ಮನಸ್ಸಿನಲ್ಲಿ ನಾಟುವಂತೆ ಉಪನ್ಯಾಸಿಸಿದರು. ಅವರು ಹೇಳಿದ್ದರ ಮುಖ್ಯತಾತ್ಪರ್ಯವೇನಂದರೆ:—ಪ್ರಜಾಸೇವೆಗಾಗಿಯೇ ನಿಯಮಿಸಲ್ಪಟ್ಟ ನಾನು ನನ್ನ ಕರ್ತವ್ಯವನ್ನು ನಿಮ್ಮಗಳಿಗೆ ತೃಪ್ತಿಯಾಗುವಂತೆ ಮಾಡದಿದ್ದಾಗ್ಗ್ಯೂ, ನನ್ನನ್ನು ತಾವುಗಳು ಈ ರೀತಿಯಾಗಿ ಗೌರವಿಸಿದ್ದಕ್ಕಾಗಿ ತುಂಬಾ ವಂದಿಸುತ್ತೇನೆ. ರೈತಾಪಿ ಜನರು ಸಲ್ಲಿಸುವ ಕಂದಾಯ ಕಾಣಿಕೆಗಳಿಂದಲೇ ಸರ್ಕಾರದವರು ಅಧಿಕಾರಿಗಳಿಗೆ ಸಂಬಳವನ್ನು ಕೊಟ್ಟು ಅವರನ್ನು ಪ್ರಜಾಹಿತಕಾರ್ಯಗಳಿಗೆ ಹಚ್ಚಿರುವರು. ತಮಗೇನು ಬೇಕೆಂಬುದೇ ಇನ್ನೂ ಯಾವ ಜನಗಳಿಗೆ ತಿಳಿಯಿಲ್ಲವೋ ಅಥವಾ ತಿಳಿದಿದ್ದರೂ ಹೇಳಲು ಬಾಯಿಲ್ಲವೋ ಅಂಥ ಅನೇಕ ಜನಗಳ ವಿಚಾರದಲ್ಲಿ ಮುಂದೊರಿದುಹೋಗುವ ಸರ್ವಸಮಾಜದವರೂ ಸಹಾಯ ಸಾನುಭೂತಿಯುಳ್ಳವರಾಗಿರಬೇಕು. ಹಿಂದುಳಿದ ವರ್ಗದವರು ವಿದ್ಯಾಭಿವೃದ್ಧಿಯನ್ನು ಹೊಂದಿ, ರಾಜ್ಯಾಡಳಿತದಲ್ಲಿಯೂ ಮುಂದೊರೆದು ತಮ್ಮ ತಮ್ಮ ಅಭ್ಯುದಯ ಕಾರ್ಯವನ್ನು ಕೈಕೊಳ್ಳಬೇಕು. ಕುರಿ, ಕೋಣ ಮೊದಲಾದ ಬಡ ಮೂಕ ಪ್ರಾಣಿಗಳನ್ನು ಮಾರಿ, ದುರ್ಗಿ, ಚೌಡಿ ಮೊದಲಾದ ರಾಕ್ಷಸರೂಪದ ದೇವತೆಗಳಿಗೆ ಬಲಿಯಾಗಿ ಅರ್ಪಿಸುವಂಥ ಅಶಾಸ್ತ್ರೀಯ ಕೆಲಸವನ್ನೂ, ಮನುಷ್ಯನ ಕ್ಷುದ್ಬಾಧೆಯ ಶಾಂತಿಗಾಗಿ ಪ್ರತಿನಿತ್ಯವೂ ಆಗುತ್ತಿರುವ ಗೋವಧೆಯಂತಹ ಕ್ರೂರಕೃತ್ಯವನ್ನೂ, ಪ್ರಾಣಿ ದಯಾಪರರೆಲ್ಲರೂ ಸರ್ಕಾರದವರ ಸಹಾಯವಿಲ್ಲದೇನೇ ಶಾಂತರೀತಿಯಲ್ಲಿ ನಿಲ್ಲಿಸಲು ಕಂಕಣಬದ್ಧರಾಗಿ ಪ್ರಯತ್ನ ನಡೆಯಿಸಬೇಕು. ಪ್ರಾಣಹತ್ಯವು ಪರಮ ಸಂತೋಷವೆಂದೆನಿಸುವ ದೇವತೆಗೆ ದೇವರೆನ್ನಬೇಕೆ? ದೇವತೆಯ ಹೆಸರಿಂದಾಗಲಿ, ಬರೀ ಹೊಟ್ಟೆಯ ಪಾಡಿಗಾಗಲಿ, ಪ್ರಾಣವಧೆಯನ್ನು ಮಾಡುವವರಿಗೆ ಮನುಷ್ಯರೆಂದು ಕರೆಯಬೇಕೆ? ಹೀಗೆಂಬುದಾಗಿ ಹೇಳಿ ಮುಗಿಸಿದ ಮೇಲೆ ಅವರಿಗೆ ಹಾರ ತುರಾಯಿಗಳು ಸಮರ್ಪಿಸಲ್ಪಟ್ಟು, ಸಭೆಯು ಹರ್ಷಿತವಾಗಿ ಪರಿಸಮಾಪ್ತಿಯನ್ನು ಹೊಂದಿತು. ಪ್ರಿಯ ವಾಚಕರೇ, ಇಂಥ ಪ್ರಜಾ ಸನ್ಮಾನವು ಈ ಹಿಂದೆ ಯಾವ ಅಧಿಕಾರಿಗೂ ಇಲ್ಲಿ ನಡೆದಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಒಂದುವೇಳೆ ಹಾಗೇನಾದರೂ ನಡೆದಿದ್ದರೆ, ಅದು ಒಂದು ಕೋಮಿನವರಿಂದಲೋ ಅಥವಾ ಒಂದು ಜಾತಿಯವರಿಂದಲೋ ನಡೆದಿರಬಹುದು. ಆದರೆ ಇಷ್ಟು ಪ್ರಿಯಕರವಾಗಿಯೂ, ಉತ್ಸಾಹಪೂರ್ವಕವಾಗಿಯೂ ಆಗಿರಲಿಕ್ಕಿಲ್ಲವೆಂದು ನಿಸ್ಸಂದೇಹವಾಗಿ ಹೇಳುತ್ತೇನೆ. ಪ್ರಜೆಗಳೇಳ್ಗೆಯ ವಿಚಾರದಲ್ಲಿ ಪ್ರೋತ್ಸಾಹಶೀಲರೂ, ಕಾರ್ಯದಕ್ಷರೂ ಆದ ಮ|| ರಾ|| ಸಿದ್ಧರಾಮಪ್ಪನವರು ವೀರಶೈವಮತದವರೆಂದಾಗಲಿ, ಅಥವಾ ಭಾರಿ ಅಧಿಕಾರಿಗಳೆಂದಾಗಲಿ ಇಲ್ಲಿ ಸನ್ಮಾನಿಸಲಿಲ್ಲ. ಆದರೆ ಅವರು ಈ ಡಿಸ್ಟ್ರಿಕ್ಟಿನಲ್ಲಿದ್ದ ಅಲ್ಪಕಾಲದಲ್ಲಿ ತಮ್ಮ ಅಧಿಕಾರಕರ್ತವ್ಯದ ದೃಷ್ಟಿಯನ್ನಿಟ್ಟುಕೊಂಡು, ಯಾವ ಭೇದಭಾವವೂ ಇಲ್ಲದೆ ಪ್ರಜಾಹಿತಕಾರ್ಯಗಳನ್ನು ಮಾಡುವುದರಲ್ಲಿಯೇ ತಮ್ಮ ತನುಮನಗಳನ್ನು ಅವಿಶ್ರಾಂತ ಶ್ರಮಪಡಿಸಿ, “ಪ್ರಜಾಪ್ರೇಮಿ” ಎಂಬ ಬಿರುದನ್ನು ಪಡೆದಿದ್ದುದರಿಂದ ಇಷ್ಟು ಘನತರವಾಗಿ ಸನ್ಮಾನವಾಯಿತು. ವಿದ್ಯೆ, ವಾಣಿಜ್ಯ, ಕೈಗಾರಿಕೆಯಲ್ಲಿ ಹಿಂದುಳಿದವರನ್ನು ಮುಂದರಿಸಲೋಸುಗ ಸರ್ಕಾರದವರು ನೇಮಿಸಿದ್ದುದರಿಂದ ಸಾರ್ಥಕತೆಯನ್ನು ಇವರು ಮನಃಪೂರ್ವಕವಾಗಿ ಮಾಡಿ ಜನಾನುರಾಗವನ್ನು ಸಂಪಾದಿಸಿದರು. ಇವರ ದಯಾರ್ದ್ರ ಹೃದಯವೂ, ಶಾಂತಸ್ವಭಾವವೂ, ನಿಷ್ಕಾಮಕರ್ತವ್ಯದಕ್ಷತೆಯೂ ಜನಸಾಮಾನ್ಯರಿಗೆಲ್ಲಾ ತಿಳಿದಿದ್ದುದರಿಂದ, ಎಲ್ಲರೂ ಇವರನ್ನು ತುಂಬಾ ಗೌರವಿಸುತ್ತಿದ್ದರು. ಈ ಡಿಸ್ಟ್ರಿಕ್ಟಿನಲ್ಲಿ ಇವರು ತಮ್ಮ ಅಧಿಕಾರದಲ್ಲಿದ್ದಾಗ ಮಾಡಿಟ್ಟಿರುವ ಪ್ರಜಾಹಿತಕಾರ್ಯಗಳನ್ನು ಪ್ರಕೃತ ಇಲ್ಲಿ ವರ್ಣಿಸಲಸಾಧ್ಯ. ಮುಖ್ಯವಾಗಿ ಇವರು ಅಧಿಕಾರಮದದಿಂದ ಮೆರೆಯದೆ ಜನಸಾಮಾನ್ಯರಲ್ಲೆಲ್ಲಾ ಬೆರೆತು, ಅವರ ಕಷ್ಟನಷ್ಟಗಳನ್ನು ಪರಿಶೀಲಿಸಿ ಮತ್ತು ಬಹುಮಟ್ಟಿಗೆ ಪರಿಹರಿಸಿ, ಹೋದೆಡೆಯಲ್ಲೆಲ್ಲಾ ಪ್ರೀತಿಯನ್ನೂ, ಗೌರವವನ್ನೂ ಸಂಪಾದಿಸಿ, ಇವರಷ್ಟು ಜನೋಪಕಾರಿಯಾದವರಾರೂ ಈವರೆಗೆ ಇಲ್ಲಿಗೆ ಬಂದಿರಲಿಲ್ಲವೆಂಬ ಕೀರ್ತಿಯನ್ನು ಪಡೆದುಕೊಂಡರು. ಇಂಥ ಸಿದ್ಧರಾಮಪ್ಪನವರನ್ನು ಈ ನಮ್ಮ ಡಿಸ್ಟ್ರಿಕ್ಟು ಅಲ್ಪಕಾಲದಲ್ಲಿಯೇ ಕಳೆದುಕೊಂಡದ್ದಕ್ಕೆ ತುಂಬಾ ವ್ಯಸನವಾಗುತ್ತದೆ. ಇಂಥ ಸಿದ್ಧರಾಮಪ್ಪನವರನ್ನು ಇನ್ನೂ ಉಚ್ಚಪದವಿಗೇರಿಸದೆ, ಎಲ್ಲೋ ಒಂದು ಮೂಲೆಯಲ್ಲಿನ ತಾಲ್ಲೂಕು ಅಧಿಕಾರಸ್ಥಾನಕ್ಕೆ ಹಾಕಿದರಲ್ಲಾ ಎಂದು ಇಲ್ಲಿನ ಜನರೆಲ್ಲರೂ ದುಃಖಪಡುತ್ತಿರುವರು. ಯೋಗ್ಯತೆಯಿಲ್ಲದವರಿಗೆ ಬೇಡ. ತಕ್ಕ ಯೋಗ್ಯತೆಯೂ ಪ್ರಜಾಸೇವಾಧುರಂಧರತೆಯೂ ನಿಸ್ಪೃಹತೆಯೂ ಉಳ್ಳ ಇಂಥ ಹಿಂದುಳಿದ ಜನವರ್ಗದವರಿಗೆ ಸರ್ಕಾರದವರು ಹೀಗೆ ಉಪೇಕ್ಷೆಮಾಡುತ್ತ ಬಂದರೆ ಆ ಜನವರ್ಗಗಳಿಗೆ ಸರ್ಕಾರವು ಸಾನುಭೂತಿಯನ್ನು ಇನ್ಯಾವಾಗ ತೋರಿಸುವುದು? ಅವರು ತಮ್ಮ ವಾಗ್ದಾನವನ್ನು ನೆರವೇರಿಸಿಕೊಳ್ಳುವುದು ಯಾವಾಗ? ಯಾವ ಜನರು ಬಹು ಕಷ್ಟಪಟ್ಟು ಸಂಪಾದಿಸಿ ಸಲ್ಲಿಸುತ್ತಿರುವ ಕಂದಾಯ ಕಾಣಿಕೆಗಳಿಂದ ರಾಜ್ಯವೈಭವವು ಸರಾಗವಾಗಿ ಸಾಗುತ್ತಿದೆಯೋ ಯಾವ ಜನರ ರಾಜಾಭಿಮಾನದೈಕಮತ್ಯವು ಸರ್ಕಾರದ ಅಸ್ತಿತ್ವಕ್ಕೂ, ದೇಶದ ಶಾಂತತೆಗೂ ಕಾರಣವಾಗಿರುವುದೋ, ಅಂಥ ಜನರ ಹಿತಾಭಿವೃದ್ಧಿಗೋಸ್ಕರ ಅಧಿಕಾರಿಗಳೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ನಿಷ್ಕಾಮ ಮತ್ತು ಸಮಾನಬುದ್ಧಿಯಿಂದ ಮಾಡಿಯೇತೀರಬೇಕೆಂದೂ, ಹಾಗೆ ಮಾಡದಿದ್ದರೆ ಅವರು ದೇಶಕ್ಕೆ ಅಹಿತಕಾರಿಗಳೆಂದೂ ರಾಜಕೀಯ ಶಾಸ್ತ್ರಜ್ಞರು ಹೇಳುತ್ತಾರೆ. ಈ ತತ್ವವನ್ನನುಸರಿಸಿ ನಡೆಯುವ ಅಧಿಕಾರಿಗಳ ಯೋಗ್ಯತೆಯ ಮೇರೆಗೆ ಅಧಿಕಾರಸ್ಥಾನಗಳನ್ನು ಕೊಡುವುದು ಸರ್ಕಾರದವರ ಕರ್ತವ್ಯವೂ ಆಗಿರುವುದು.

ಬಸವದಾಸ.

ಸೇವಿಂಗ್ಸ್ ಬಾಕ್ಸ್ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ ಕೈಯಲ್ಲಿರುವಾಗ ಸೇವಿಂಗ್ಸ್‌ಬ್ಯಾಂಕ್‌ನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವದೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರದುಕೊಳ್ಳುವದು. ಇದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ 2—0—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
31 102 ಛೈನಾಬಜಾರ್ ರೋಡ್ ಮದರಾಸು.

18 ತೊಲ ತೂಕ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

31 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ).

ಪಂಡಿತಾರಾಧ್ಯಚರಿತಂ.—ಇದು ವೀರಶೈವ ಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರಗಳೂ, ಶ್ರೀಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣ ಗ್ರಂಥ ೫ ರೂಪಾಯಿ.

ಬಸವರಾಜ ವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೬-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೦—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ-೧-೨-೦; ಸಟೀಕ ಶತಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ. ಸ್ತುತಿಮುಕ್ತಾವಳಿ ೪ಆಣೆ; ರತ್ನಾಷ್ಟಕ ೨ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಶಿವಪೂಜಾವಿಧಿ	೦—೧೫—೦
ಚಾರುಶೀಲಚರಿತ್ರೆ	೦—೯—೦
ಹರಿದಾಸಿ	೦—೮—೦

೧೯೨೧ ಇಸವಿ ಮೇ ತಾ|| ೧ ರಿಂದ ೧೯೨೧ ನೆಯ ಮೇ ತಾ|| ೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಚೈತ್ರ ಬಹುಳ ನವಮಿಯಿಂದ ಚೈತ್ರ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
1	ಭಾನು	ನವಮಿ	41-37	ಧನಿ	44-40	19
2	ಸೋಮ	ದಶ	45-57	ಶತ	50-24	20
3	[1]ಮಂಗಳ	ಏಕಾ	49-20	ಪೂಭಾ	55-14	21
4	ಬುಧ	ದ್ವಾದ	51-27	ಉಭಾ	58-54	22
5	[2]ಗುರು	ತ್ರಯೋ	52-25	ರೇವ	60	23
6	ಶುಕ್ರ	ಚತು	51-54	ರೇವ	0-34	24
7	[3]ಶನಿ	ಅಮಾ	50-12	ಅಶ್ವಿ	1-44	25

(1) ಸರ್ವತ್ರೈಕಾದಶಿ. (2) ಪ್ರದೋಷ. (3) ಸರ್ವತ್ರಾಮಾವಾಸ್ಯ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋತ್ರಮಾಭೀಷ್ಟಪದಶೀಲ ನಾಕಲಿತ ಸಾಧ್ವಲ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತ್ರಿಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೪ ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಮೇ ತಾರೀಖು ೮ ನೆಯ ಭಾನುವಾರ ಸಂಚಿಕೆ ೧೮

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷಾಂತರ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHAVA
VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕರೋಗಗಳು ಗುಣವಾಗುತ್ತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
17 ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೩—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೩—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಸೇರಿಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ

ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂಮೆಂಟ್ಸ್‌ಗಳಿಂದ ಮಾಡಿದೆ. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
32 ಪಾರ್ಕ್‌ಟೌನ್ ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಸ್ತ್ರಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.	ರೂ. ವರೆಗೆ.
4	0.12.0	50.0.0
5	0. 8.0	100.0.0
6	0-12-0	100-0-0
7	6. 0.0	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ		
3	0- 6.0 ಇಂದ	10-0-0
8	0- 8.0	100-0-0
9	0-12-0	100-0-0
10	0-14-0	100-0-0
11	3- 8.0	100-0-0
12	4- 0.0	100-0-0
13	4- 8.0	100-0-0
14	6- 0.0	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	15-0-0	40-0-0
ಮೆಣಸು	7-8-0	15-0-0
ಕಡಲೆ	2-8-0	7-0-0
ನೆನೆದಕಡಲೆ	1-8-0	3-0-0
ಕಮಲಾಕ್ಷಿ	1-0-0	2-0-0
ದೊಡ್ಡ	0-8-0	1-0-0
ಅದಕ್ಕಿಂತ	0-6-0	0-8-0
ಸ್ಫಟಿಕ108ಕ್ಕೆ	4-8-0	30-0-0
ಶ್ರೀಚಕ್ರ1ಕ್ಕೆ	8-0-0	100-0-0
ಲಿಂಗ 1ಕ್ಕೆ	1-0-0	100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
11 ಕಂಪನಿ, ಚೌಕಂಬಾ ಕಾಶೀ.

ಫಲಶೋಧಕ! ಮನೋಲ್ಲಾಸಕರವೆಂಬ ಧಾತುಪುಷ್ಟಿಕ!!

ಮಹದ್ರಾಕ್ಷಾದಿ ಚೂರ್ಣ.

30

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕಂಪ್ಪರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆ ಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತರದವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ತೀವ್ರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಸೆಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

22

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0.

32 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ರೈಲ್ವೆ ಲೀವರ್ ವಾಚ್.

೫ ವರುಷ ಬಾಧ್ಯಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತುರಾಯಿ 1, ಕಾಮವಂತಿಗೆಹುವ್ವ, 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ರಾಗಮಾಲಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಡಪಾರ್ಕ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಭಂಗಾರದ ಉಂಗುರ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
32 89, ನಾರಾಯಣಮೊದಲಿಬೀದಿ, ಮದ್ರಾಸು.

ಮೈಸೂರು ಸ್ಟಾರ್

೧೯೨೧ನೆ ಇಸವಿಯ ಮೇ ತಾ|| ೮ನೆಯ ಭಾನುವಾರ.

ಮಿಲ್ಲರ್‌ಕಮಿಟಿ ರಿಪೋರ್ಟು, ಮತ್ತೂ ಹಿಂದುಳಿದ ಜನವರ್ಗದವರು.

ಮೈಸೂರು ಸಂಸ್ಥಾನದ ಪ್ರಭುತ್ವೋದ್ಯೋಗಗಳ ವಿನಿಯೋಗದಲ್ಲಿ ಏನಾದರೂ ನ್ಯೂನಾತಿರೇಕಗಳಿರುವುವೋ, ಇದ್ದರೆ ಅವನ್ನು ಸರಿಪಡಿಸಲು ಮಾಡಬೇಕಾದ ಏರ್ಪಾಟುಗಳೇನು? ಎಂಬುದನ್ನು ಪರಿಶೀಲಿಸಿ ವರದಿಮಾಡುವುದಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರು ಈಗ್ಗೆ ೨ ವರ್ಷಗಳ ಕೆಳಗೆ ಒಂದು ಸಂಘವನ್ನೇರ್ಪಡಿಸಿ, ಅದಕ್ಕೆ ಚೀಫ್ ಜಡ್ಜಿ ಸರ್ ಲೇಸ್ಲಿ ಮಿಲ್ಲರ್‌ರವರನ್ನು ಅಧ್ಯಕ್ಷರನ್ನಾಗಿಯೂ ರಾ|| ಬ|| ಮುತ್ತಣ್ಣನವರು, ರಾ|| ಬ|| ಎಂ. ಸಿ. ರಂಗಯ್ಯಂಗಾರರು, ದಿ|| ಬ|| ಸಿ. ಶ್ರೀಕಂಠೇಶ್ವರಯ್ಯರ್ ಎಂ. ಬಸವಯ್ಯನವರು ಇವರುಗಳನ್ನು ಸಭಿಕರನ್ನಾಗಿಯೂ ನಿರ್ಪಡಿಸಿದ್ದರು. ಈ ಸಂಘದವರು ಸಂಸ್ಥಾನದ ಆಳಿಕೆಯು ಚೀಫ್ ಕಮಿಷನರ ಅಧೀನದಲ್ಲಿದ್ದಾರಭ್ಯ ಸರ್ಕಾರದುದ್ಯೋಗಗಳಲ್ಲಿ ಯಾವಯಾವ ವರ್ಗದ ಪ್ರಜೆಗಳು ಎಷ್ಟೆಷ್ಟು ಸಂಖ್ಯಾಮಾನದಿಂದಿದ್ದರು, ಬರುಬರುತ್ತ ಆದರ ಪ್ರಮಾಣವು ಹೇಗೆ ವ್ಯತ್ಯಾಸಗೊಳ್ಳುತ್ತ ಬಂದಿತು, ಆಗಿದ್ದ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವೇನು ಎಂಬುದೇ ಮೊದಲಾದ ವಿವರಣಗಳನ್ನು ಕೂಲಂಕಷವಾದ ಪರಿಶೋಧನೆಯಿಂದ ಕಂಡುಹಿಡಿದು, ಇರತಕ್ಕ ನ್ಯೂನಾತಿರೇಕಗಳನ್ನೆಲ್ಲಾ ವಿವರಿಸಿ, ಅದರ ಪರಿಹಾರಕ್ಕೆ ಮಾಡಬೇಕಾದ ಏರ್ಪಾಟುಗಳ ರೀತಿಯನ್ನೂ ಸೂಚಿಸಿ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿ ಒಂದು ವರ್ಷದ ಮೇಲಾಯಿತೆಂದು ವರ್ತಮಾನವಿದೆ. ಆ ವರದಿಯಲ್ಲಿ ಯಾವ ಯಾವ ವಿಶೇಷ ವಿಷಯಗಳಿರುವುವೋ ಗೊತ್ತಿಲ್ಲ. ಪ್ರಜಾಪ್ರತಿನಿಧಿ ಸಭೆಯಲ್ಲೂ ನಿಯಮ ನಿರ್ಮಾಣಸಭೆಯಲ್ಲೂ ಸಹ ಸಭಿಕರುಗಳು ಆ ವರದಿಯನ್ನು ಪ್ರಕಟಿಸಬೇಕೆಂದು ಪ್ರಾರ್ಥಿಸಿಕೊಂಡಿರುವರು. ಸರ್ಕಾರದವರೇನೊ ಇದುವರೆಗೂ ಅದನ್ನು ಪ್ರಕಟಿಸಿಲ್ಲ. ಆದರೆ ಆ ವರದಿಯಲ್ಲಿ ಕಂಡ ಸೂಚನೆಯ ಪ್ರಕಾರ ಕಾರ್ಯವನ್ನು ನಡೆಯಿಸಲು ಸರ್ಕಾರದವರು ಕೃತಸಂಕಲ್ಪರಾಗಿ ಆಗಲೇ ಆರಂಭಿಸಿರುವರೆಂದೂ, ೫೫ ವರ್ಷ ವಯಸ್ಸು ತುಂಬಿದ ಬ್ರಾಹ್ಮಣ ಅಧಿಕಾರಿಗಳನ್ನೆಲ್ಲಾ ಉದ್ಯೋಗದಿಂದ ನಿವೃತ್ತಿಗೊಳಿಸಿ, ಆ ಸ್ಥಲಗಳಿಗೆಲ್ಲಾ ಇತರ ಜನವರ್ಗಗಳವರನ್ನು ನಿಯಮಿಸುವವರಾಗಿದ್ದಾರೆಂದೂ ವೃತ್ತಾಂತಪತ್ರಿಕೆಯು ಹೇಳಿರುತ್ತದೆ. ಇದು ಎಷ್ಟುಮಟ್ಟಿಗೆ ನಿಜವೋ ನಾವು ಕಾಣೆವು. ಪರಿಸ್ಥಿತಿಯನ್ನವಲೋಕಿಸಿದರಂತೂ ಇದರಲ್ಲಿ ಎಳ್ಳಷ್ಟೂ ಯಾಥಾರ್ಥ್ಯವಿಲ್ಲವೆಂದು ತೋರುತ್ತಿರುವುದು.

ಮೇಲೆಕಂಡ ಸಂಘದಲ್ಲಿ ಪರಸ್ಪರ ಜಾತಿ ಮತ ಮತ್ಸರಾದಿಗಳ ಸಂಬಂಧಕ್ಕೇ ತಾವಿಲ್ಲದ ಮತ್ತು ಮುಖ್ಯ ನ್ಯಾಯಮೂರ್ತಿಯಾದ ಒಬ್ಬ ಯೂರೋಪ್ಯರು ಅಧ್ಯಕ್ಷರಾಗಿಯೂ, ಪೂರ್ಣ ವಿದ್ಯಾವಂತರೂ ಘನತೆಯುಳ್ಳವರೂ ಅನುಭವಿಗಳೂ ಆದ ದೊಡ್ಡ ಮನುಷ್ಯರುಗಳು ಸಭಿಕರಾಗಿಯೂ ಇದ್ದುದರಿಂದ, ಅವರುಗಳು ತಕ್ಕ ಪರಿಶೀಲನೆಯಿಂದ ಮಾಡಿರುವ ವರದಿಯು ವಿಶ್ವಸನೀಯವಾಗಿಯೂ ಗಮನೀಯವಾಗಿಯೂ ಇರಲೇಬೇಕೆಂಬುದರಲ್ಲಿ ಸಂಶಯವಿಲ್ಲ. ಸರ್ಕಾರದ ಉದ್ಯೋಗಗಳಲ್ಲಿ ಮುಕ್ಕಾಲುಮೂರುವೀಸಪಾಲೆಲ್ಲಾ ಒಂದೇ ಒಂದು ವಿಶಿಷ್ಟ ವರ್ಗದವರಿಗೆ ವಿನಿಯೋಗವಾಗಿರುವುದೆಂಬುದು ಎಲ್ಲರಿಗೂ ಗೊತ್ತೇ ಇದೆ. ಹಾಗೆ ಒಂದೇ ತೆರದವರು ಮೇಲೂ ಕೆಳಗೂ ವ್ಯಾಪಿಸಿಕೊಂಡಿರುವುದರಿಂದ ನಿರಂಕುಶ ಸ್ವೇಚ್ಛಾಪ್ರವರ್ತನೆಗಳಿಗೂ ಪರಸ್ಪರ ದೋಷಾಚ್ಛಾದನೆಗೂ ಅವಕಾಶವಿರುವುದೂ, ಇದನ್ನು ನೋಡಿ ಇತರ ಬಹುಭಾಗ ಪ್ರಜೆಗಳೆಲ್ಲಾ ಅಸಮಾಧಾನ ಪಟ್ಟಿರುವುದೂ, ನ್ಯಾಯವಾಗಿ ಸರ್ಕಾರದ ಉದ್ಯೋಗಗಳ ಪಾಲು ತಮಗೂ ಇರಬೇಕೆಂದು ಅವರುಗಳು ನೊರೆಯಿಡುತ್ತಿರುವುದೂ, ಈಗ ಎಲ್ಲತೆರದ ಉದ್ಯೋಗಗಳಿಗಿಂತಲೂ ಸರ್ಕಾರದ ಉದ್ಯೋಗವು ಅತ್ಯಂತ ಲಾಭಕಾರಿ ಮತ್ತು ಸುಖಕಾರಿಯೆಂದು ತೋರಿಹೋಗಿ ಅದರ ಪ್ರಾಪ್ತಿಗಾಗಿ ಸರ್ವರೂ ಹಾತೊರೆಯುತ್ತಿರುವುದೂ ಪ್ರಭುತ್ವದವರ ಗಮನಕ್ಕೆ ಬಂದೇ ಇದೆ. ಅದರ ಮೇಲೆಯೇ ಪ್ರಭುತ್ವದವರು ಮೇಲೆ ಕಂಡ ಸಂಘವನ್ನು ಏರ್ಪಡಿಸಿದ್ದರು. ನಿಜಸ್ಥಿತಿಯನ್ನು ಕಂಡುಹಿಡಿದು ಸರಿಯಾದ ನಿವಾರಣೋಪಾಯವನ್ನು ಸಂಘದವರು ನಿರೂಪಿಸಿದ್ದರೆ ಅದು ಪ್ರಭುತ್ವದವರಿಗೆ ತೃಪ್ತಿಕರವಾಗಿರುವುದು ಮಾತ್ರವೇ ಅಲ್ಲದೆ ಅನ್ಯಾಯದ ತುಳಿತದಿಂದ ನೆಲಕಚ್ಚಿ ಹೋಗಿ ರೋದಿಸುತ್ತಲೂ ಅತೃಪ್ತಿಯಿಂದ ನೊರೆಯಿಡುತ್ತಲೂ ಇರುವ ಪ್ರಜಾಕೋಟಿಗೆಲ್ಲಾ ಅಭಯದಾನವನ್ನೂ ಆಶಾಪ್ರಭೆಯನ್ನೂ ಉಂಟುಮಾಡಿ ಪರಿತೃಪ್ತಿಗೊಳಿಸತಕ್ಕುದಾಗಿಯೂ ಇದ್ದೀತು. ಆದುದರಿಂದಲೇ ಆ ವರದಿಯ ಪ್ರಕಟನೆಯನ್ನು ಈ ಪರಿತಪ್ತ ಜನರು ಚಂದ್ರಿಕೆಯನ್ನು ಚಕೋರವು ನಿರೀಕ್ಷಿಸಿಕೊಂಡಿರುವಂತೆ ಹಾರೈಸಿಕೊಂಡಿರುವರು. ಆ ವರದಿಯಲ್ಲಿ ಕಂಡ ಸೂಚನೆಯು ತಮಗೆ ಹಿತಕರವಾಗಿದ್ದರೆ ಸಂತೋಷಿಸೋಣವೆಂದು ಹಿಂದುಳಿದ ಜನವರ್ಗಗಳವರು ನಿರೀಕ್ಷಿಸಿಕೊಂಡಿದ್ದರೆ, ತಮ್ಮ ಸ್ವೇಚ್ಛಾಧಿಕಾರ ಭೋಗಕ್ಕೆ ಈ ವರದಿಯು ಆತಂಕವನ್ನು ಸೂಚಿಸುವುದಾಗಿದ್ದರೆ ಅದಕ್ಕೆ ಅಡ್ಡಿಯನ್ನೊಡ್ಡುವ ಕೋಲಾಹಲವನ್ನು ಮಾಡೋಣವೆಂದು ಮುಂಬರಿದ ಜನವರ್ಗದವರು ಅದರ ಪ್ರಕಟನೆಯನ್ನು ಕೋರುತ್ತಿರಬಹುದು. ಇವರುಭ್ಬರ ಕೋಲಾಹಲಕ್ಕೂ ಅವಕಾಶಕೊಡದಂತೆ ಉದ್ದಿಷ್ಟಕಾರ್ಯವನ್ನು ಸಾಗಿಸದರಾಯಿತೆಂದು ಸರ್ಕಾರದವರು ಭಾವಿಸಿರುವರೋ ಏನೋ ತಿಳಿಯಲಿಲ್ಲ.

ಆದರೆ ಸರ್ಕಾರದ ಉದ್ಯೋಗ ವಿನಿಯೋಗಧೋರಣೆಯಲ್ಲಿ ಮಾತ್ರ ಯಾವ ವ್ಯತ್ಯಾಸವೂ ನಮಗೆ ತೋರಿಬರುವುದಿಲ್ಲ. ತಕ್ಕ ವಿದ್ಯಾದಿಯೋಗ್ಯತೆಯುಳ್ಳ ಮತ್ತು ಕಾರ್ಯನಿರ್ವಾಹ ಸಾಮರ್ಥ್ಯವನ್ನು ವ್ಯಕ್ತಗೊಳಿಸಿರುವ ಹಿಂದುಳಿದ ಜನವರ್ಗಗಳವರಿಗೆ ಮೇಲೇರುವುದಕ್ಕೆ ತಕ್ಕ ಅವಕಾಶವು ದೊರೆಯುತ್ತಲೇ ಇಲ್ಲ. ಮೇಲಿರುವ ಒಬ್ಬ ಬ್ರಾಹ್ಮಣಾಧಿಕಾರಿಯು ನ್ಯಾಯ ಧರ್ಮಗಳೊಂದನ್ನೂ ಲಕ್ಷಿಸದೆ ತಮ್ಮ ಜನರಿಗೆ ದ್ವಿಗುಣ ತ್ರಿಗುಣವಾದ ಅಭಿವೃದ್ಧಿಗಳನ್ನು ಕೂಡ ಕೂಡಲೇ ಕೊಟ್ಟು ಮೇಲಕ್ಕೇರಿಸುತ್ತಿರುವಂಥ ಸ್ವಜನಾಭಿಮಾನವನ್ನು ಹಿಂದುಳಿದ ಜನವರ್ಗಾಧಿಕಾರಿಗಳು ತೋರಿಸುವುದೇ ಇಲ್ಲ. ತೋರಿಸುವುದಕ್ಕೆ ತಕ್ಕ ಉನ್ನತಾಧಿಕಾರ ಸ್ಥಾನಗಳಲ್ಲಿ ಇತರರಿರುವುದೂ ವಿರಳವೇ. ಮ|| ರಡ್ಡಿಯವರಂಥ ಯಾರಾದರೊಬ್ಬರು ಉನ್ನತಾಧಿಕಾರಕ್ಕೆ ಬಂದರೆ ಅವರಿಗೆ ಚಟುಗುಮುಳ್ಳಾಡಿಸಿ ಕಡೆಗೆ ತೊಲಗಿಸಬೇಕೆಂದು ಪ್ರತಿಪಕ್ಷದವರು ಅವಾಂತರಗಳನ್ನು ಮಾಡಿ ಬೊಬ್ಬೆಯಿಡುತ್ತಾರೆ. ಹೀಗಿರುವಾಗ ಶ್ರೀಮನ್ಮಹಾರಾಜರೂ ಅವರ ರಕ್ತಸಂಬಂಧಿಗಳಾಗಿ ದೇಶದ ಸರ್ವ ಪ್ರಜಾಸಮುದ್ಧಾರ ಚಿಂತೆಯನ್ನು ಹೊತ್ತಿರುವ ದಿವಾನ್ ಕಾಂತರಾಜಅರಸಿನವರು ಸಹ ಹಿಂದುಳಿದ ವರ್ಗಗಳ ವಿದ್ಯಾವಂತರಿಗೆ ತಕ್ಕ ಹಸ್ತಾವಲಂಬನವನ್ನಿತ್ತು ಮೇಲಕ್ಕೇರಿಸದೆ ಹೋದರೆ ಅವರುಗಳು ಇನ್ನಾವಾಗ ತಲೆಯೆತ್ತುವುದು?

ಚೀಫ್‌ಕಮಿಷನರ ಕಾಲದ ಮಾತು ಹಾಗಿರಲಿ. ಅದರೀಚೆಗೆ ಸರ್ ಕೆ. ಶೇಷಾದ್ರಿಅಯ್ಯರ ಕಾಲದಲ್ಲೂ ಕೂಡ ಡಿ|| ಕಮಿಷನರ ಸ್ಥಾನಗಳಲ್ಲಿ ಅರ್ಧಬಾಗಕ್ಕೆ ಕಡಿಮೆಯಿಲ್ಲದೆ ಇತರರಿಗೇ ಇರುತ್ತಿದ್ದುವು. ಈಗಲಾದರೊ ೮ ಡಿಸ್ಟ್ರಿಕ್ಟುಗಳೊಳಗೆ ೭ಕ್ಕೆ ಬ್ರಾಹ್ಮಣಾಧಿಕಾರಿಗಳೇ ಡಿ|| ಕಮಿಷನರಾಗಿದ್ದಾರೆ. ಬ್ರಾಹ್ಮಣ ವರ್ಗದವರ ಮುಖ್ಯ ಮಂತ್ರಿತ್ವವೇ ದೀರ್ಘಕಾಲ ನಡೆದು ಬಂದು ಇತರರಿಗೆ ಮೇಲೇರುವುದಕ್ಕೆ ಅವಕಾಶವಿಲ್ಲದೆ ಹೋದಕಾರಣದಿಂದಲೇ ಇಂಥ ಪರಿಣಾಮವುಂಟಾಯಿತು. ಈಗಲಾದರೂ ಈ ವಿಷಮಾವಸ್ಥೆಯು ತೊಲಗಬಾರದೊ? ಬ್ರಾಹ್ಮಣೇತರರ ಮಂತ್ರಿಪದವಿಯು ಕೂಡ ಅಸಹಾಯರಾದ ಹಿಂದುಳಿದವರ ದೀನಾವಸ್ಥೆಯನ್ನು ತೊಲಗಿಸಿ ಪ್ರೋತ್ಸಾಹಗೊಳಿಸದೆ ಹೋಗುವುದಾದರೆ ಅವರ ಆಶೋತ್ತರವು ಎಲವದ ಕಾಯಿಗೆ ಗಿಣಿಯು ಕಾದು ಕುಳಿತಂತೆಯೇ ಆದೀತಲ್ಲವೆ?

ಮೈಸೂರಿನಂತೆಯೇ ಮದ್ರಾಸಾಧಿಪತ್ಯದಲ್ಲೂ ಸರ್ಕಾರದ ಎಲ್ಲ ಶಾಖೆಗಳೊಳಗೂ ತ್ರಿಮತ ಬ್ರಾಹ್ಮಣಾಧಿಕಾರಿಗಳ ಸಂಖ್ಯೆಯೇ ಮಿಗಿಲಾಗಿರುವುದರ ದೋಷವನ್ನು ಪರಿಹಾರಮಾಡುವುದಕ್ಕೆ ಅಲ್ಲಿಯ ಸರ್ಕಾರದಲ್ಲಿ ಈಗೀಗ ಯತ್ನಗಳು ನಡೆದಿವೆ. ಅಲ್ಲಿಯ ನಿಯಮನಿರ್ಮಾಣ ಸಭೆಯ ಕಳೆದ ಅಧಿವೇಶನದಲ್ಲಿ ಈ ಸಂಬಂಧವಾಗಿ ಕೆಲ ಚರ್ಚೆಗಳು ನಡೆದುವು. ಮದರಾಸು ನ್ಯಾಯಶಾಖೆಯೊಳಗೆ ಒಟ್ಟು ಜಿಲ್ಲಾ ಮುನ್ಸೀಫ್ ಸ್ಥಾನಗಳು ೧೯೯ ಇರುತ್ತವೆ. ಇವುಗಳಲ್ಲಿ ೧೫೨ಕ್ಕೆ ಬ್ರಾಹ್ಮಣರೂ, ೩೮ಕ್ಕೆ ಇತರ ಹಿಂದುಗಳೂ, ೪ ಸ್ಥಾನಗಳಿಗೆ ಮಹಮ್ಮದೀಯರೂ, ೫ ಸ್ಥಾನಗಳಿಗೆ ಕ್ರೈಸ್ತರೂ ನಿಯಮಿಸಲ್ಪಟ್ಟಿದ್ದಾರೆ. ಹೀಗೆ ಅಧಿಕಾರ ಸ್ಥಾನಗಳಲ್ಲಿ ಬ್ರಾಹ್ಮಣರ ಸಂಖ್ಯೆಯೇ ಹೆಚ್ಚಿ ಇತರರ ಸಂಖ್ಯೆಯು ತೀರ ಕಡಿಮೆಯಾಗಿ ಹೋಗಿದೆ. ಬ್ರಾಹ್ಮಣರಂತೆಯೇ ಇತರರಲ್ಲೂ ವಿದ್ಯಾ ಬುದ್ಧಿವಂತರುಗಳಿದ್ದಾರೆ. ಆದುಕಾರಣ ಈಗಣ ಪಕ್ಷಪಾತ ಪದ್ಧತಿಯನ್ನು ತಪ್ಪಿಸಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಸೂಚನೆಯ ಪ್ರಕಾರ ಎಲ್ಲ ಜನವರ್ಗಗಳಿಗೂ ಸರಿಯಾದ ಪ್ರಾತಿನಿಧ್ಯವು ಬರುವಂತೆ ಅಧಿಕಾರವಿನಿಯೋಗಮಾಡಬೇಕೆಂಬ ತೀರ್ಮಾನವು ಸಭೆಯಲ್ಲಿ ಚರ್ಚಿತವಾಯಿತು. ಆದರಮೇಲೆ ಜಿಲ್ಲಾ ಮುನ್ಸೀಫ್ ಉದ್ಯೋಗಸ್ಥಾನಗಳಲ್ಲಿ ಸಾಂಘಿಕ ಪ್ರಾತಿನಿಧ್ಯವುಂಟಾಗುವಂತೆ ಮಾಡುವುದಕ್ಕಾಗಿ ಇನ್ನು ೫ ವರ್ಷಗಳವರೆಗೂ ಮುನ್ಸೀಫ್‌ಉದ್ಯೋಗಕ್ಕೆ ಬ್ರಾಹ್ಮಣೇತರರಾದ ಹಿಂದುಗಳಿಂದಲೂ, ಕ್ರೈಸ್ತರಿಂದಲೂ, ಮಹಮ್ಮದೀಯರಿಂದಲೂ ಅರ್ಹರಾದ ಜನರನ್ನು ಆರಿಸಿ ಸೇರಿಸಿಕೊಳ್ಳಬೇಕು ಎಂದು ಕಡೆಗೆ ತೀರ್ಮಾನವಾಯಿತು. ಹೀಗೆ ನೆರೆಯ ಸರ್ಕಾರದಲ್ಲಿ ಪ್ರಯತ್ನವು ನಡೆದಿರುವಾಗ, ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಜನವರ್ಗಗಳೊಳಗೆ ವಿದ್ಯಾದಿಯೋಗ್ಯತೆಯುಳ್ಳವರಿಗೆ ಸರ್ಕಾರದ ಉದ್ಯೋಗಸ್ಥಾನಗಳನ್ನು ಸಾಂಘಿಕ ಪ್ರಾತಿನಿಧ್ಯ ತತ್ವಕ್ಕನುಸಾರವಾಗಿ ಕೊಟ್ಟು, ಆ ವರ್ಗಗಳವರ ಉತ್ತರೋತ್ತರ ವಿದ್ಯಾಭಿವೃದ್ಧಿಗೂ ರಾಜಕೀಯಾಂಗ ಪ್ರವೇಶಕ್ಕೂ ಅವಕಾಶಮಾಡಿಕೊಡುವುದು ವಿಶೇಷವೇನೂ ಅಲ್ಲ; ಸಹಜವಾದ ಅವಶ್ಯ ಕರ್ತವ್ಯವೇ ಆಗಿರುತ್ತದೆ. ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸಹ ಹಲವುಸಲ ಹಿಂದುಳಿದವರ ವಿಜ್ಞಾಪನೆಗಳಿಗೆ ಉತ್ತರವನ್ನು ಕೊಡುವಾಗ್ಗೆ ಅರ್ಹರಾಗಿ ಬಂದವರಿಗೆ ನಾವು ಪ್ರೋತ್ಸಾಹಿಸದೆ ಮರೆಯುವುದಿಲ್ಲವೆಂದು ಅಪ್ಪಣೆ ಕೊಡುತ್ತಲೇ ಬಂದಿದ್ದಾರೆ. ಆದರೆ ಆ ನುಡಿಯಂತೆ ನಡೆಯು ಜರುಗಬೇಕೆಂದೇ ಹಿಂದುಳಿದವರೆಲ್ಲರೂ ಪ್ರಾರ್ಥಿಸುತ್ತಿದ್ದಾರೆ.

ಹಿಂದುಳಿದವರಿಗೆ ಉದ್ಯೋಗಸ್ಥಾನಗಳು ತಕ್ಕಷ್ಟು ದೊರೆಯುವಂತಾಗಬೇಕಾದರೆ ಸಮಯ ಸಿಕ್ಕಿದಾಗ ಅವರುಗಳಿಗೇ ಪ್ರತ್ಯೇಕವಾದ ಉತ್ತೇಜನವನ್ನುಂಟುಮಾಡಬೇಕು. ದೊರೆದ ಸಮಯವೆಲ್ಲಾ ಮುಂಬರಿದವರ ಫಲಕ್ಕೇ ಆದರೆ ಇವರಿಗೆ ಮಾಡಿದ ವಾಗ್ದಾನವು ಗಾಳಿಯಲ್ಲಿ ತೂರಿ ಹೋದಂತಾಗುವುದು. ಉನ್ನತಾಧಿಕಾರಗಳನ್ನೇರಲು ಮೊದಲ ಮೆಟ್ಟಿಲಾದ ಅ|| ಕಮಿಷನರ್ ಸ್ಥಾನಗಳಲ್ಲಿ ಹಿಂದುಳಿದ ಜನವರ್ಗಗಳವರಿರುವುದು ಈಗ ಬಹಳ ಕಡಿಮೆ. ಈ ಲೋಪವನ್ನು ಮೊದಲು ಸರಿಪಡಿಸಬೇಕಾಗಿದೆ. ಬ್ರಾಹ್ಮಣಾಧಿಕಾರಿಗಳಲ್ಲಿ ಅನೇಕರು ತಮ್ಮ ಅಭಿಮಾನಕ್ಕೆ ಪಾತ್ರರಾದ ಸ್ವಜನರನ್ನು ನಾಲ್ಕಾರು ವರ್ಷಗಳಲ್ಲಿ ಉಚ್ಚಾಧಿಕಾರಕ್ಕೇರಿಸಿ ೮-೧೦ ವರ್ಷಗಳ ಕೆಳಗೆ ೨೦ ರೂ. ಸಂಬಳದಲ್ಲಿದ್ದವರನ್ನು ಈಗ ೬೦೦-೭೦೦ ಸಂಬಳವನ್ನು ಪಡೆಯುವ ಸ್ಥಿತಿಗೆ ತಂದಿದ್ದಾರೆ. ಹೀಗೆ ಹಿಂದುಳಿದವರನ್ನು ಮೇಲಕ್ಕೇರಿಸಿಕೊಳ್ಳುವ ಉನ್ನತಾಧಿಕಾರಿಗಳಾರೂ ಹಿಂದುಳಿದವರಲ್ಲಿ ಇಲ್ಲವೇ ಇಲ್ಲ. ಆ ಕೆಲಸವನ್ನು ಪ್ರಭುತ್ವದವರೇ ಪ್ರಯತ್ನಪೂರ್ವಕವಾಗಿ ಮಾಡಬೇಕಾಗಿದೆ. ಈಗಣ ರಿಟ್ರೆಚ್‌ಮೆಂಟಿನಿಂದಂತೂ ಹಿಂದುಳಿದ ವರ್ಗದ ಕೆಲವರಿಗೆ ಮತ್ತಷ್ಟು ಅಧಃಪತನವೇ ಉಂಟಾದುದು ವಿಪರೀತವಾಗಿದೆ. ಈ ರಿಟ್ರೆಚ್‌ಮೆಂಟಿನ ಅಲೆಯೆಲ್ಲಾ ಮುಖ್ಯವಾಗಿ ವೀರಶೈವ ಮತದ ಉದ್ಯೋಗಿಗಳನ್ನೇ ಬಡಿದುಕೊಂಡು ಹೋಯಿತೆಂದು ಹೇಳಬಹುದಾಗಿದೆ. ಸದ್ಯಃ ಉನ್ನತೋದ್ಯೋಗಕ್ಕೆ ಏರಲನುವಾದ ಸ್ಥಾನಗಳಲ್ಲಿ ವೀರಶೈವೋದ್ಯೋಗಿಗಳಿರುವುದೇ ಬಹಳ ವಿರಳ. ಶ್ರೀಮತ್ ಮಹಾರಾಜರವರು ಹಿಂದೊಂದುಸಲ ವೀರಶೈವರ ಡೆಪ್ಯುಟೇಷನ್ನಿಗೆ ಉತ್ತರವನ್ನು ದಯಪಾಲಿಸಿದಾಗ್ಗೆ "ಯಾವ ಜನವರ್ಗದವರ ವಿಷಯದಲ್ಲಿ ವಿಶೇಷವಾದ ಅಭಿಮಾನವನ್ನು ತೋರಿಸುವುದಕ್ಕೆ ತಕ್ಕಷ್ಟು ಕಾರಣವಿದೆಯೋ ಅಂಥ ಈ ಜನವರ್ಗದವರಲ್ಲಿ ಅರ್ಹತೆಯನ್ನು ಪಡೆದುಬಂದವರಿಗೆ ತಕ್ಕಪದವಿಗಳನ್ನು ಅನುಗ್ರಹಿಸುವಲ್ಲಿ ನಾವು ಮರೆಯುವುದಿಲ್ಲ" ವೆಂದು ಅಪ್ಪಣೆಕೊಡಿಸಿದ್ದಾರೆ. ಆ ಅಭಯದಾನವು ಸಾರ್ಥಕವಾಗುವಂತೆ ಮಾಡುವ ಕಾರ್ಯವು ಅವರ ಸರ್ಕಾರದವರಿಂದ ಸರಿಯಾಗಿ ನಡೆಯಿಸಲ್ಪಡುತ್ತಲಿಲ್ಲವೆಂಬುದನ್ನು ಕಂಡು ಅತ್ಯಂತವಾಗಿ ವಿಷಾದಿಸಬೇಕಾಗಿದೆ. ಹಿಂದುಳಿದವರ ಪ್ರೋತ್ಸಾಹಭಾವನೆಯೂ ಶ್ರೀಮನ್ಮಹಾರಾಜರ ಅಭಯದಾನಸಾಫಲ್ಯವೂ ಸರ್ಕಾರದ ಮನಸ್ಸಿನಲ್ಲಿದ್ದರೆ ತಕ್ಕ ಅರ್ಹತೆಯನ್ನು ಪಡೆದಿರುವ ಮ|| ಗಳಾದ ಜಿ. ಶಾಂತವೀರಪ್ಪನವರೂ, ಕೆ. ಸಿದ್ಧರಾಮಪ್ಪನವರೂ ಅ|| ಕಮಿಷನರ್ ಪದವಿಗೇರಿಸಲ್ಪಡದೆ ಇರುತ್ತಿರಲಿಲ್ಲ. ಡಬ್ಬಲ್ ಗ್ರಾಜುಯೇಟರಾಗಿದ್ದರೂ ಎಷ್ಟು ಅನುವರ್ತನೆ ಮಾಡಿದರೂ ತಕ್ಕ ಉದ್ಯೋಗಸ್ಥಾನವು ದೊರೆಯದೆಹೋದ ಕಾರಣದಿಂದ ಮ|| ಎಂ. ಪಿ. ಭೋಗಯ್ಯನವರು ನಿರಾಶೆಯಿಂದ ಸರ್ಕಾರದ ಉದ್ಯೋಗದ ಸಂಬಂಧವನ್ನೇ ಹರಿದುಕೊಂಡು ಹೋದರು. ಮ|| ಪುಟ್ಟಮಾದಪ್ಪನವರನ್ನು ಆಕ್ಟಿಂಗ್ ಡಿ|| ಅಮಲ್ದಾರಿಯಿಂದ ಹಿಂದಕ್ಕೆ ಕಳುಹಿಸಿದ ನಮ್ಮ ಸರ್ಕಾರದವರು ಡಿಸ್ಟ್ರಿಕ್ಟ್ ಆಫೀಸಿನ ಒಬ್ಬಬ್ರಾಹ್ಮಣ ಕ್ಲರ್ಕಿಗೆ ಆಕ್ಟಿಂಗ್ ಅಮಲ್ದಾರಿಯನ್ನು ಹೊಸದಾಗಿ ಕೊಟ್ಟು ಈಗತಾನೇ ಕಳುಹಿಸಿರುವುದು ಹಿಂದುಳಿದವರಮೇಲೆ ತೋರಿಸುವ ಅಭಿಮಾನಕ್ಕೆ ನಿದರ್ಶನವೆ? ವೀರಶೈವ ಜನವರ್ಗದವರು ಕೇವಲ ರಾಜಭಕ್ತಸಂಪನ್ನರಾದ ಕಾರಣದಿಂದ ಗಲಾಟೆಮಾಡುವ ಬಾಯಿಲ್ಲದವರಾಗಿರುವುದೇ ಅವರ ಈ ಹೀನಸ್ಥಿತಿಗೆ ಕಾರಣವೆಂದು ಯೋಚಿಸಬೇಕೆ? ಹಾಗಿರುವುದೇ ಅವರ ತಪ್ಪಾಗಿದ್ದರೆ ಅದನ್ನು ಪರಿಹರಿಸಿಕೊಂಡು ಕಾಲೋಚಿತವಾಗಿ ನಡೆದುಕೊಳ್ಳಲು ಅವರು ವ್ಯಗ್ರರಾಗಬೇಕಾಯಿತು. ಪ್ರಭುತ್ವದವರಿಗೆ ಹಿಂದುಳಿದವರ ಪ್ರೋತ್ಸಾಹವು ಧರ್ಮವೆಂದು ತೋರಿದ್ದರೆ ಅವರುಗಳಮೇಲೆ ಪಕ್ಷಪಾತವನ್ನು ಸಂಪೂರ್ಣವಾಗಿ ವ್ಯಕ್ತಪಡಿಸಿ ದೊರೆದ ಸಮಯವನ್ನು ವ್ಯರ್ಥಗೊಳಿಸಿದಂತೆ ಅವರಿಗೆ ಉಪಯೋಗಿಸಿ, ಹೃದಯಪೂರ್ವಕವಾದ ಸಾನುಭೂತಿಯನ್ನು ನಿದರ್ಶನಪಡಿಸಬೇಕು. ಶ್ರೀಮನ್ಮಹಾರಾಜರ ಮತ್ತು ಅವರ ಸರ್ಕಾರದವರ ಧೋರಣೆಯಲ್ಲಿ ಉಂಟಾದ ನವೀನ ವೈಲಕ್ಷಣ್ಯವೇನೆಂಬುದನ್ನು ಹಿಂದುಳಿದ ಪ್ರಜಾವರ್ಗಗಳವರೆಲ್ಲರೂ ಆತುರದಿಂದ ನಿರೀಕ್ಷಿಸುತ್ತಿರುವರು.

ಒಳದೇಶದ ವೃತ್ತಾಂತಗಳು.

ತಿರುವಾಂಕೂರು ಮಹಾರಾಜರು ಮುಂದಣ ತಿಂಗಳ ಆದಿಭಾಗದಲ್ಲಿ ಬೆಂಗಳೂರಿಗೆ ನಮ್ಮ ಶ್ರೀಮತ್ ಮಹಾರಾಜರವರ ಅತಿಥಿಗಳಾಗಿ ದಯಮಾಡಿಸುವವರಾಗಿರುವರು.

ಕಳೆದ ತಾ|| ೫ರಲ್ಲಿ ಚಿಕ್ಕಜಾಜೂರು-ಚಿತ್ರದುರ್ಗದ ಲೋಹಮಾರ್ಗ ಪ್ರಯಾಣವು ದಿವಾನರಿಂದ ಆರಂಭಿಸಲ್ಪಟ್ಟು ಅಂದಿನಿಂದ ಪ್ರಯಾಣಿಕರ ಬಂಡಿಗಳು ಬಿಡಲ್ಪಡುತ್ತಿರುವುವು.

ಶ್ರೀಮತ್ ಮಹಾರಾಜರವರ ಸ್ವಾರಿಯು ಮೃಗಯಾ ವಿಹಾರಕ್ಕಾಗಿ ಬೂಜಗಕ್ಕೆ ಚಿತ್ತೈಸಿದ್ದು ಕಳೆದ ಶುಕ್ರವಾರ ರಾಜಧಾನಿಗೆ ದಯಮಾಡಿಸಿತು. ಇಷ್ಟರಲ್ಲೇ ಉದಕಮಂಡಲಕ್ಕೆ ತೆರಳುವುದಾಗಿ ತಿಳಿಯುತ್ತೇವೆ.

ಫ್ರೇಂಚ್‌ರಾಕ್ಸಿನಲ್ಲಿ ಆಕ್ಟಿಂಗ್ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದ ಮ|| ಜಿ. ಶಾಂತವೀರಪ್ಪ ಬಿ.ಎ., ಯವರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟು ಬೆಂಗಳೂರಲ್ಲಿರುವ ಪೋಲೀಸು ಸ್ಕೂಲಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಳೆದ ತಾ|| ೨ರ ರಾತ್ರಿ ಬರೀ ಸಿಡಿಲುಗುಡುಗುಗಳಿಂದ ಕೂಡಿದ ಮಳೆಯು ಆಯಿತು. ಆಗ ನಂಜನಗೂಡಿನಿಂದ ರೈಲುಬಂಡಿಯಲ್ಲಿ ಬಂದ ಪ್ರಯಾಣಿಕರು ಬಂಡಿಯಿಂದಿಳಿಯುವಾಗ್ಗೆ ಬಂಡಿಯ ಸಮೀಪದಲ್ಲಿ ಸಿಡಿಲು ಬಡಿದಿತು. ಪ್ರಯಾಣಿಕರಲ್ಲಿ ಒಬ್ಬನು ಸತ್ತುಹೋದನು, ಮತ್ತೊಬ್ಬರಿಗೆ ಕೊಂಚ ಗಾಯವಾಯಿತು.

ಚನ್ನಪಟ್ಟಣದ ತಾ|| ಆಕ್ಕೂರು ಗ್ರಾಮದ ಶಾನುಭೋಗ ಗುಂಡಪ್ಪನವರು ಕಳೆದ ತಾ|| ೨೯ರಲ್ಲಿ ಕ್ಲೋಸ್‌ಪೇಟೆಗೆ ಹೋಗಿದ್ದು ಹಿಂದಿರುಗಿ ಊರಿಗೆ ಬರುತ್ತಿರುವಾಗ್ಗೆ ಮಾಳಗಾಲವೆಂಬ ಗ್ರಾಮದ ಬಳಿ ಯಾರೋ ಇವರ ಶತ್ರುಗಳು ಇವರನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು. ಈ ಗುಂಡಪ್ಪನವರು ದೊಡ್ಡ ಭೂಸ್ವಾಮಿಯಾಗಿಯೂ ಡಿ|| ಬೋರ್ಡು ಮತ್ತು ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿದ್ದರೂ ಯಾವುದಾದರೊಂದು ಪಾರ್ಟಿಗೆ ಮುಖಂಡರಾಗಿದ್ದುದರಿಂದ ಯಾವಾಗಲೂ ಪ್ರಾಣಭೀತಿಯುಳ್ಳವರಾಗಿದ್ದರು. ಇವರ ಪ್ರತಿಕಕ್ಷಿಯ ಮುಖಂಡರು ಹಿಡಿಯಲ್ಪಟ್ಟು ಶಿಕ್ಷಿಸಲ್ಪಟ್ಟರೆ ಈ ತಾಲ್ಲೂಕಿನ ಹಾವಳಿಯು ಕಡಿಮೆಯಾಗುವದರಲ್ಲಿ ಸಂದೇಹವಿಲ್ಲವು.

ಆಕ್ಕಿ ಅಂಗಡಿ ಚಿಕ್ಕಣ್ಣನವರ ಜ್ಯೇಷ್ಠಪುತ್ರರಾದ ಮ|| ಸಾ|| ದೊಡ್ಡಯ್ಯನವರು ಕಳೆದ ಶುಕ್ರವಾರ ಮಧ್ಯಾಹ್ನದವರೆಗೆ ನಿತ್ಯಗಟ್ಟಲೆಯಂತೆ ಕೆಲಸಗಳನ್ನು ಮಾಡಿಕೊಂಡು ಮನೆಗೆ ಹೋಗಿ ಭೋಜನಾನಂತರ ವಿಶ್ರಮಿಸಿಕೊಳ್ಳಲಿಕ್ಕೆ ಮಲಗಿ ಸ್ವಲ್ಪ ಆಯಾಸವಾಗುತ್ತದೆಂದು ಹೇಳಿ ನೀರನ್ನು ಕುಡಿದು ಮಲಗಿ ಹಾಗೆಯೇ ಸ್ವಲ್ಪ ಹೊತ್ತಿನೊಳಗಾಗಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಸಾತ್ವಿಕರಾಗಿಯೂ, ದಯಾಪರರಾಗಿಯೂ ದೀನಾನಾಥರಿಗೆ ಆಶ್ರಯರಾಗಿಯೂ, ಮ್ಯುನಿಸಿಪಲ್ ಕೌನ್ಸಿಲರಾಗಿಯೂ ಇದ್ದರು. ಶ್ರೀಮಂತರಾಗಿದ್ದರೂ ನಿಗರ್ವಿಗಳಾಗಿದ್ದರು. ಇವರ ಅನಾಯಾಸಮರಣದ ಧನ್ಯತೆಯನ್ನು ಕೊಂಡಾಡಿದರೂ ಮಧ್ಯ ವಯಸ್ಸಿಲ್ಲೇ (೪೫) ತಮ್ಮ ದೊಡ್ಡ ಕುಟುಂಬವನ್ನೆಲ್ಲಾ ದುಃಖಕ್ಕೀಡುಮಾಡಿ ಗತಿಸಿದುದು ಖೇದಜನಕವಾಗಿದೆ. ಸಂತೇಪೇಟೆಯ ವರ್ತಕರೆಲ್ಲರೂ ಆ ದಿನ ಅಂಗಡಿಗಳನ್ನು ಮುಚ್ಚಿ ಸಾವಿರಾರು ಮಂದಿ ಶವದೊಡನೆ ಹೋಗಿ ತಮ್ಮ ಸಾನುಭೂತಿ ಗೌರವಗಳನ್ನು ವ್ಯಕ್ತಪಡಿಸಿದರು. ಮ|| ಜವರಯ್ಯನವರೇ ಮೊದಲಾದ ಅವರ ಕುಟುಂಬದವರಿಗೆಲ್ಲಾ ಆವರ ವಿಯೋಗದುಃಖವನ್ನು ಸೈರಿಸಿಕೊಳ್ಳುವ ಶಕ್ತಿಯನ್ನು ಜಗದೀಶನು ಉಂಟುಮಾಡಲಿ.

ಎಡತೊರೆಯಲ್ಲಿ ಶ್ರೀ ರಾಮೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಲು ಅಲ್ಲಿಯ ಮ್ಯು|| ವೈಸ್‌ಪ್ರೆಸಿಡೆಂಟರಾದ ಮ|| ಡಿ. ನಾರಾಯಣಸ್ವಾಮಿಶೆಟ್ಟರು ಮೊದಲಾದ ಪ್ರಮುಖಜನರಿಂದೇರ್ಪಡಿಸಲ್ಪಟ್ಟಿದ್ದು ಕಳೆದ ತಾ|| ೩೦ ರ ರಾತ್ರಿ ರಾಮದೇವರ ಪಟವು ವಾದ್ಯವೈಭವಗಳಿಂದ ಬೀದಿಗಳಲ್ಲಿ ಮುಂದೆ ನಡೆಯುವ ಆನೆಯ ಸಮೇತ ಮೆರೆಯಿಸಲ್ಪಟ್ಟು ಅರಕೇಶ್ವರಸ್ವಾಮಿಯ ದೇವಸ್ಥಾನದ ಮುಂಗಡೆಗೆ ಬರುತ್ತಲೇ ವಿಚಿತ್ರವಾದ ಮದ್ದು ಸುಡಲ್ಪಡುತ್ತಿದ್ದಿತು. ಒಂದು ಉಕ್ಕಿನ ಕೊಳವೆಯಲ್ಲಿ ಮಾಡಲ್ಪಟ್ಟದ್ದು ತಾರಾಮಂಡಲವು ಗ್ರಹಚಾರವಶಾತ್ ಒಡೆದು ನುಚ್ಚುನೂರಾಗಿ ಉತ್ಸವದಲ್ಲಿ ನೆರೆದಿದ್ದ ಮ|| ಡಿ|| ನಾರಾಯಣಸ್ವಾಮಿಶೆಟ್ಟರು ಮೊದಲಾದ ಕೆಲವರಿಗೆ ತಗುಲಿತು. ಇದರಿಂದ ನಾರಾಯಣಸ್ವಾಮಿಶೆಟ್ಟರು, ಒಬ್ಬ ಪೋರ್ಟರು, ಒಬ್ಬ ಗರ್ಭಿಣಿಹೆಂಗುಸು, ಒಂದು ಕೈಮಗು, ಆನೆಮಾವುತ, ಮತ್ತೆ ಮೂವರು ಆ ಸ್ಥಾನದಲ್ಲಿಯೇ ಸತ್ತುಹೋದರು. ಮತ್ತೊಬ್ಬನು ಮಾರನೆಯದಿನ ಆಸ್ಪತ್ರೆಯಲ್ಲಿ ಸತ್ತುಹೋದನು. ಗಾಯಹೊಂದಿದವರಲ್ಲಿ ಕೆಲರು ಆ ಊರಿನ ಆಸ್ಪತ್ರೆಯಲ್ಲೂ ೪-೫ ಜನ ಮೈಸೂರಿಗೆ ತರಲ್ಪಟ್ಟು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲೂ ಚಿಕಿತ್ಸೆಯನ್ನು ಹೊಂದುತ್ತಿರುವರು. ಮದ್ದನ್ನು ಮಾಡಿದ ಪುಟ್ಟಸಾಮಿ ಎಂಬವನು ಪೋಲೀಸರಿಂದ ಹಿಡಿಯಲ್ಪಟ್ಟು ಲೈಸನ್ಸಿಲ್ಲದೆ ಮಾಡಿದುದಕ್ಕಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು. ನಾರಾಯಣಸ್ವಾಮಿಶೆಟ್ಟರ ಪಕ್ಕದಲ್ಲೇ ಕುಳಿತಿದ್ದ ಅಮಲ್ದಾರರಿಗೆ ದೈವಾಧೀನದಿಂದ ಅಪಾಯವಾಗಲಿಲ್ಲವು.

ಪತ್ರವ್ಯವಹಾರ.

ಹಾಮ್ಸಭಾವಿ.

ಈ ಗ್ರಾಮದಲ್ಲಿ ತಾ|| ೨-೫-೧೯೨೧ ನೇ ಇಸವಿ ಸೋಮವಾರ ದಿವಸ ಶ್ರೀ ತೋರಟೊಪ್ಪಿಗಿ ಸಿದ್ಧಲಿಂಗಸ್ವಾಮಿ ಮಠದಲ್ಲಿ ಗಣಾರಾಧನೆಯೂ ಮತ್ತು ಯಾವತ್ತು ವರ್ಗದ ಜನರಿಗೆ ಅನ್ನಸಂತರ್ಪಣೆಯೂ ಜರಗಿ ಸಾಯಂಕಾಲ ೮ ಗಂಟೆಗೆ - ಶ್ರೀ ಶಿವಯೋಗೀಶ್ವರ ಅಥಣಿ - ಇವರ ಭಾವಚಿತ್ರವನ್ನು ಪಲ್ಲಕ್ಕಿ ಆರೋಹಣ ಮಾಡಿಸಿ ಸದರಿ ತೋರಟೊಪ್ಪಿಗಿ ಮಠದಿಂದ ಭಜನ ಮೇಳ ಸಹಿತ ಆಂದೋಲನೋತ್ಸವವು ಬಹು ವಿಜೃಂಭಣೆಯಿಂದ ಊರ ಯಾವತ್ತು ಭಾಗದಲ್ಲಿ ನಡೆದು ಪುನಃ ಉತ್ಸವವು ಮಠಕ್ಕೆ ಬಂದು ತಲುಪಿ ಅಲ್ಲಿ ನೆರೆದ ಭಕ್ತವೃಂದವು ಶ್ರೀ ಶಿವಯೋಗಿಗಳ ಸ್ಮಾರಕಕ್ಕಾಗಿ ಶ್ರೀ ಸಿದ್ಧಲಿಂಗಸ್ವಾಮಿ ಮಠದಲ್ಲಿ - ಶ್ರೀ ಶಿವಯೋಗಿ ವಾಚನಾಲಯ - ವೆಂಬ ಸಂಸ್ಥೆಯನ್ನು ಸ್ಥಾಪಿಸಲು ಆನಂದಪೂರ್ವಕ ಒಪ್ಪಿದೊಡನೆ ಇದಕ್ಕೆ ಅನೇಕ ಜನ ಸದ್ಗೃಹಸ್ಥರು ವಾರಪತ್ರಿಕೆಗಳನ್ನೂ ಮತ್ತು ಅನೇಕ ಉತ್ತಮ ಗ್ರಂಥಗಳನ್ನೂ, ಫರ್ನಿಚರ್ ವಗೈರೆ ಸಾಮಾನುಗಳನ್ನೂ ಕೊಡಲು ಒಪ್ಪಿಕೊಂಡಿರುತ್ತಾರೆಂದು ತಿಳಿಸಲು ಬಹಳ ಆನಂದವಾಗುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ದಾವಣಗೆರೆ.

ಮೈಸೂರು ಸೀಮೆಯ ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.—ದಾವಣಗೆರೆ ಹೈಸ್ಕೂಲಿನಲ್ಲಿ ಅಭ್ಯಾಸಮಾಡತಕ್ಕ (ಬಡ) ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಬೋರ್ಡಿಂಗ್ ಸೀಟು ಕೊಡಲ್ಪಡುವುದು. ಸಂಘದ ರೂಲಿಗೆ ಒಳಪಟ್ಟು ನಡೆಯತಕ್ಕವರು ನಮ್ಮ ಪ್ರಿಂಟೆಡ್ ಫಾರಂನಲ್ಲಿ ಬರುವ ಜೂನ್ ತಾರೀಖು ೫ ರೊಳಗಾಗಿ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. ಮತ್ತು ಜೂನ್ ತಾರೀಖು ೧೦ ನೇ ದಿವಸ ಮೀಟಿಂಗ್ ಇರುವ ಪ್ರಯುಕ್ತ ಅಪ್ಲಿಕೇಷನ್ ಬರೆದುಕೊಂಡವರು ಆ ದಿನ ತಪ್ಪದೆ ಇರತಕ್ಕದ್ದು. ಅನುಕೂಲಸ್ಥರಾದ ವಿದ್ಯಾರ್ಥಿಗಳು ಸಂಘದ ರೂಲಿಗೆ ಒಳಪಟ್ಟು ಬೋರ್ಡಿಂಗಿಗೆ ಸೇರಲು ಅಪೇಕ್ಷೆಯುಳ್ಳವರು ಮಾಹೆಯಾನ ಆಗುವ ಹಣದಲ್ಲಿ ಹೀಲಿಯಂತೆ ಖರ್ಚುಕೊಟ್ಟು ಸೇರಲು ಅವಕಾಶಕೊಟ್ಟಿರುತ್ತೇವೆ. ಇಷ್ಟವುಳ್ಳವರು ಬರುವ ಜೂನ್ ತಾರೀಖು ೫ ರೊಳಗಾಗಿ ೧೦ ರೂಪಾಯಿಗಳನ್ನು ಅಡ್ವಾನ್ಸಾಗಿ ಕಳಿಸಿ ಅರ್ಜಿ ಬರೆದುಕೊಳ್ಳಬಹುದು.

ಸೆಕ್ರೆಟರಿ ವೀರಶೈವ ವಿದ್ಯಾವರ್ಧಕ ಫಂಡ್ ಸಂಘ, ದಾವಣಗೆರೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ೭ನೆ ವಾರ್ಷಿಕ ಸಭೆ; ಮುಕ್ಕಾಮ ಹೂಲಿ ಜಿಲ್ಲಾ ಬೆಳಗಾಂವ, ತಾಲ್ಲೂಕು ಪರಸಗಡ.

ಮೊದಲು ಪ್ರಕಟಪಡಿಸಿದಂತೆ ತಾ|| ೨೫-೪-೧೯೨೧ ನೇ ಸೋಮವಾರ ದಿವಸ ಪ್ರಾತಃಕಾಲದ ೮ ಗಂಟೆಯ ಸಮಯಕ್ಕೆ ಪುರಪ್ರಮುಖರು ಪಾಟೀಲರೂ ಶಾಲಾಮಾಸ್ತರರೂ ಸ್ಯಾನಿಟರಿ ಸೊಸೈಟಿ ಮೆಂಬರರೂ ಸೆಕ್ರೆಟರಿಗಳೂ ಇವರೆಲ್ಲಾ ಸದರಿ ವಾಚನಾಲಯದಲ್ಲಿ ಕೂಡಲು, ಕೂಡಲೇ ಅಧ್ಯಕ್ಷಸ್ಥಾನವನ್ನು ಸಿರಸಂಗಿ ಟ್ರಸ್ಟಿಗಳೂ ಚಿಕ್ಕೋಡಿ ಶಿರಸ್ತೇದಾರರೂ ಆದ ರಾ|| ಸಾ|| ರೈನಾಪೂರರವರು ಸ್ವೀಕರಿಸಬೇಕೆಂದು ಸೂಚನೆಯನ್ನು ವಾಚನಾಲಯದ ಮೆ|| ಶಿವಮೂರ್ತೆಪ್ಪಾ ಗೋರೋಬಾಳೆಯವರು ತರಲು ಸರ್ವಾನುಮತದಿಂದ ಸೂಚನೆ ಕೊಡಲು ರಾ|| ಸಾ|| ರೈನಾಪೂರರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು, ಮೊದಲು - ಸಂಘಶಕ್ತಿಃ ಕಲೌಯುಗೇ - ಈ ವಿಷಯದ ಮೇಲೆ ಇಲ್ಲಿಯ ಎಸ್. ಎಮ್. ಸಿದ್ಧಾಂತಿಗಳು ಹಿರೇಮಠಯವರು ಭಾಷಣ ಮಾಡುವಾಗ್ಗೆ ಸಹಕಾರವೇ ಸಂಘಶಕ್ತಿಯ ಮೂಲಾಧಾರವೆಂದು ನಿರೂಪಿಸಿದ ಮೇಲೆ ವಾಚನಾಲಯದಿಂದಾಗುವ ಲಾಭ ಈ ವಿಷಯದ ಮೇಲೆ ಶಾಲಾಮಾಸ್ತರರು ಭಾಷಣಮಾಡಿದರು. ಮುಂದೆ ಅಧ್ಯಕ್ಷರು ಅತಿಸರಸವಾಗಿ ೨ ಗಂಟೆಯವರೆಗೆ ಸ್ಪಷ್ಟೀಕರಿಸಿ ಯಾವತ್ತರಿಗೂ ತಿಳಿಯುವಂತೆ ಹೇಳಿದ ಮೇಲೆ ವಾಚನಾಲಯದ ರಿಪೋರ್ಟು ಓದಲ್ಪಟ್ಟು ಹಾರ ತಾಂಬೂಲವಿನಿಯೋಗವಾದ ಬಳಿಕ ಸಭಾ ವಿಸರ್ಜನೆಯಾಯಿತು. ವಾಚನಾಲಯದ ಮೆಂಬರರು ೧ ಗುಂಡಪ್ಪನವರು ಬಾಳಿ, ೨ ಮಲ್ಲಪ್ಪ ಕವಜಲಗಿ, ೩ ಮಲ್ಲಪ್ಪ ಸಜ್ಜನ, ೪ ಸಿದ್ಧಪ್ಪ ಪಟ್ಟಣಶೆಟ್ಟಿ, ೫ ಅಡೆವಪ್ಪ ಹಿತ್ತಲಮನಿ, ೬ ಬಸವಲಿಂಗಯ್ಯ ದಂಡಿನ, ೭ ಶಿವಮೂರ್ತೆಪ್ಪ ಗೋರೋಬಾಳ, ೮ ಬಸವಣ್ಣ ಗೋರೋಬಾಳ, ಸೆಕ್ರೆಟರಿಗಳು ಶ್ರೀ|| ಸಂಗಯ್ಯನವರು ಮುರಗೋಡ.

ಸೆಕ್ರೆಟರಿ ಜಗದ್ಗುರು ವಿಶ್ವಾರಾಧ್ಯ ವಾಚನಾಲಯ,
ಮುಕ್ಕಾಮ ಹೂಲಿ ಡಿ|| ಬೆಳಗಾಂವ.

ಶ್ರೀಮದ್ಬಸವ ಜಯಂತ್ಯುತ್ಸವವು.

ಸಕಲ ವೀರಶೈವ ಬಾಂಧವರೇ ಮತ್ತು ವೀರಶೈವಾಭಿಮಾನಿಗಳೇ! ಹುಬ್ಬಳ್ಳಿ ಲಿಂಗಾಯತ ಸದ್ಗೃಹಸ್ಥರು ವಿನಯಪೂರ್ವಕವಾಗಿ ಪ್ರಾರ್ಥಿಸುವದೇನಂದರೆ:—ಶ್ರೀಮದ್ವೀರಶೈವ ಮತೋದ್ಧಾರಕನೂ ಲೋಕೈಕ ಭಕ್ತಶಿರೋಮಣಿಯೂ ಆದ ಶ್ರೀಮದ್ಬಸವೇಶ್ವರನು ಸುಮಾರು ೮೦೦ ವರ್ಷಗಳ ಹಿಂದೆ ಫಲಫಲಿತವಾದ ನಮ್ಮೀ ಕರ್ನಾಟಕ ಪ್ರಾಂತದೊಳಗೆ ಬಸವನಬಾಗೇವಾಡಿ ಎಂಬ ಊರಲ್ಲಿ ವೈಶಾಖ ಶುಕ್ಲ ಪಕ್ಷದಲ್ಲಿ ರೋಹಿಣೀ ನಕ್ಷತ್ರವಿರುವಾಗ ಜನಿಸಿದನು. ಈ ಸಾರೆ ವೈಶಾಖ ಶುದ್ಧದಲ್ಲಿ ರೋಹಿಣೀ ನಕ್ಷತ್ರವು ಬಿದಿಗೆ ಸೋಮವಾರವಿರುವದರಿಂದ ಆ ಸುಮಂಗಲಕರವಾದ ಪುಣ್ಯದಿವಸ ಈ ಊರ ಬೊಮ್ಮಾಪುರದಲ್ಲಿರುವ ಕಲಗುಂದಿ ಶ್ರೀಬಸವೇಶ್ವರ ದೇವಾಲಯದಲ್ಲಿ ಶ್ರೀ ಬಸವೇಶ್ವರನ ರಥೋತ್ಸವವನ್ನು ಮಾಡಬೇಕೆಂದು ನಿಶ್ಚಯಿಸಿದ್ದೇವೆ. ಕಾರಣ ಆ ಹೊತ್ತು ಸರ್ವರೂ ತಮ್ಮ ವ್ಯವಹಾರೋದ್ಯೋಗಗಳನ್ನು ತೊರೆದು, ದೊಡ್ಡ ಹಬ್ಬವನ್ನು ಮಾಡಿ, ಈ ಮಂಗಲಕಾರ್ಯಕ್ಕೆ ಬಂದು ನೆರವಾಗುವಿರೆಂದು ನೆರೆನಂಬಿದ್ದೇವೆ. ಈ ಊರ ಸುಪ್ರಸಿದ್ಧ ಶ್ರೀಮಂತ ವರ್ತಕರೂ ಧರ್ಮಪ್ರವರ್ತಕರೂ ಆದ ಮ|| ರಾ|| ರಾ|| ಪರಪ್ಪಣ್ಣಾ ಜಾಬಿನ ಎಂಬ ಉದಾರ ಸದ್ಗೃಹಸ್ಥರು ಬೊಮ್ಮಾಪುರದಲ್ಲಿರುವ ಕಲಗುಂದಿ ಶ್ರೀಬಸವೇಶ್ವರ ದೇವಾಲಯದ ಹಾಗು ಅಡಕಿ ಓಣಿಯಲ್ಲಿರುವ ಶ್ರೀ ಈಶ್ವರ ದೇವಾಲಯದ ಜೀರ್ಣವಾದ ಇಮಾರತುಗಳನ್ನು ಸಂಪೂರ್ಣವಾಗಿ ತೆಗೆದು ಸುಮಾರು ೨೫-೩೦ ಸಾವಿರ ರೂಪಾಯಿ ಸ್ವಧನವನ್ನು ವ್ಯಯಮಾಡಿ ಅಂದವಾದ ಕಲ್ಲಿನಿಂದ ಸುಂದರಾಕಾರದ ಶಾಶ್ವತ ಕಟ್ಟಡಗಳನ್ನು ಕಟ್ಟಿಸಿ ಘನತರವಾದ ಕೀರ್ತಿಯನ್ನು ಸಂಪಾದಿಸಿರುವದು ಸರ್ವರಿಗೂ ವಿದಿತವಾದ ಸಂಗತಿಯಾಗಿದೆ. ಇವರ ಈ ಕೃತಿಯು ಅತಿಸ್ತುತ್ಯವಾದದ್ದು, ಶ್ರೀ ಬಸವೇಶ್ವರನಲ್ಲಿರುವ ಅತುಲವಾದ ಭಕ್ತಿಯನ್ನು ವ್ಯಕ್ತಪಡಿಸುತ್ತದೆ. ನಮ್ಮ ಸಮಾಜದೊಳಗಿನ ಶ್ರೀಮಂತರು ಇವರ ಈ ಉದಾರ ಧಾರ್ಮಿಕಕೃತಿಯನ್ನು ಅನುಸರಿಸತಕ್ಕದ್ದಾಗಿರುವದು. ಆ ದ್ವಿತೀಯ ಶಂಭುವಾದ ಶ್ರೀ ಬಸವೇಶ್ವರನು ಇವರನ್ನು ಇದೇ ಮೇರೆಗೆ ಚಿರಕಾಲ ಧಾರ್ಮಿಕಕಾರ್ಯಗಳಲ್ಲಿ ತೊಡಗಿಸಿ ಇವರ ಕೀರ್ತಿಯನ್ನು ಉತ್ತರೋತ್ತರವಾಗಿ ಬೆಳೆಯಿಸಲೆಂದು ಶ್ರೀಬಸವೇಶ್ವರನನ್ನು ಪ್ರಾರ್ಥಿಸುತ್ತೇವೆ.

ಉತ್ಸವದ ಕಾರ್ಯಕ್ರಮ.

ತಾ|| ೨-೫-೧೯೨೧ನೇ ಸೋಮವಾರದಿಂದ ಪ್ರತಿದಿವಸ ಸಾಯಂಕಾಲದಲ್ಲಿ ಶ್ರೀ ಬಸವಪುರಾಣ ಶ್ರವಣ. ತಾ|| ೭-೫-೧೯೨೧ನೇ ಶನಿವಾರ ಮು ೮-೧೨ ಗಂಟೆಯವರೆಗೆ ಮಹಾ ರುದ್ರಾಭಿಷೇಕ. ತಾ|| ೮-೫-೧೯೨೧ ನೇ ರವಿವಾರ ಮ. ೪||-೬|| ವರೆಗೆ ಮಹಿಳಾಪರಿಷತ್ತು. ತಾ|| ೯-೫-೨೧ ನೇ ಸೋಮವಾರ ಮು. ೭-೧೦ ಗಂಟೆಯವರೆಗೆ ಶ್ರೀ ಬಸವೇಶ್ವರನನ್ನು ತೊಟ್ಟಿಲಲ್ಲಿ ತೂಗುವ ಸಮಾರಂಭವು, ಹಾಗು ಪಲ್ಲಕ್ಕಿ ಉತ್ಸವವು. ಅದೇ ತಾ|| ಮ. ೪|| ಗಂಟೆಗೆ ರಥೋತ್ಸವವು.

ಚನ್ನಬಸವಪ್ಪನವರು ತಂಬದ, ವ ವಸ್ಥಾಪಕರು, ಹುಬ್ಬಳ್ಳಿ.

ನ್ಯಾಮತಿ ಟೌನ್ ಗರ್ಲ್ಸ್ ಸ್ಕೂಲ್.

ವಾಚಕಮಹಾಶಯರೆ! ಈ ಟೌನ್ ವೈಸ್‌ಪ್ರೆಸಿಡೆಂಟರಾದ ಮ|| ರಾ|| ನಗರದ ಗುರುಲಿಂಗಪ್ಪನವರ ಗೃಹದಲ್ಲಿ ನಡೆದ ವಿವಾಹಮಹೋತ್ಸವಕ್ಕೆ ದಾವಣಗೆರೆಯಿಂದ ದಯಮಾಡಿಸಿದ್ದ ಮ|| ರಾ|| ಬಾಗಿಲಮನೆ ಷಡಕ್ಷರಪ್ಪನವರು ತಾ|| ೪-೪-೧೯೨೧ನೇ ಸೋಮವಾರ ಪ್ರಾತಃಕಾಲ ೭|| ಗಂಟೆಯ ಸಮಯದಲ್ಲಿ ಈ ಟೌನ್ ಗರ್ಲ್ಸ್ ಸ್ಕೂಲ್ ಮಾರ್ಗವಾಗಿ ಹೋಗುತ್ತಿರುವಾಗ ಬಾಲಕಿಯರು ಸುಶ್ರಾವ್ಯವಾಗಿ ಹಾಡುತ್ತಿದ್ದ ದೇವತಾಸ್ತೋತ್ರವನ್ನು ಕೇಳಿ ಸಂತೋಷದಿಂದ ಒಳಗೆ ದಯಮಾಡಿಸಿ ಮಕ್ಕಳಿದ್ದೆಡೆಗೆ ಬರಿಯ ಗೈಯಲ್ಲಿ ಹೋಗಬಾರದೆಂಬ ನಾಣ್ಣುಡಿಯನ್ನನುಸರಿಸಿ ಅದೇ ದಿನವೇ ಇನ್ಸ್‌ಪೆಕ್ಟ್ರೆಸ್‌ರವರಾದ ಚನ್ನಮ್ಮನವರಿಂದ ನಡೆಯಿಸಲ್ಪಡುವ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಬಾಲಿಕೆಯರಿಗೆ ಇನಾಮಾಗಿ ಕೊಡಲು ಆ ಕೂಡಲೇ ೩೨ ಪುಸ್ತಕಗಳನ್ನು ಬುಕ್ಕು ಡಿಪೋದಿಂದ ತರಿಸಿಕೊಟ್ಟು ಮುಂದಕ್ಕೆ ತೆರಳಿದರು. ತಾವು ತಾವು ಇನಾಮನ್ನು ಪಡೆಯಬೇಕೆಂಬ ಮೇಲಾಟದಿಂದ ಅನೇಕ ಬಾಲಿಕೆಯರು ಉತ್ತೀರ್ಣರಾದರು. ಮಾರನೇ ದಿನ ಈ ಟೌನ್ ಆಸ್ಪಿಟಲ್ ಅ|| ಸ|| ರವರ ಅಧ್ಯಕ್ಷತೆಯಲ್ಲಿ ಈ ಟೌನ್ ಮುಖಂಡರನ್ನು ಬರಮಾಡಿಕೊಂಡು ಪುಸ್ತಕಗಳನ್ನು ತಮ್ಮ ಸ್ವಹಸ್ತದಿಂದಲೇ ಸದರಿ ಮ|| ರಾ|| ಷಡಕ್ಷರಪ್ಪನವರು ಅತ್ಯುತ್ತಮವಾಗಿ ತೇರ್ಗಡೆಯಾದ ಬಾಲಿಕೆಯರಿಗೆ ಆಯಾ ಕ್ಲಾಸಿಗೆ ತಕ್ಕ ಬೆಲೆಯುಳ್ಳ ಪುಸ್ತಕಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಇದಲ್ಲವೆ ನಿಜವಾದ ಔದಾರ್ಯ ಮತ್ತು ವಿದ್ಯಾಭಿಮಾನ! ಇವರ ಔದಾರ್ಯಕ್ಕೆ ನೆರೆದಿದ್ದವರೆಲ್ಲರೂ ಬಲು ಸಂತೋಷಪಟ್ಟರು. ಆ ಸಭೆಯಲ್ಲೇ ಇದೇ ಟೌನ್ ವಾಸಿಗಳಾಗಿ ವಿದ್ಯಾಭ್ಯಾಸದ ಇಲಾಖಾ ಹ|| ಇನ್||ಜ||ಸಾ|| ರವರ ಆಫೀಸಿನಲ್ಲಿ ಪ್ರೂಫ್ ರೀಡರ್ ಕೆಲಸದಲ್ಲಿದ್ದು ತಾ|| ೩-೧೨-೧೯೨೦ ರಲ್ಲಿ ಕನ್ನಡಿಗರಿಗೆಲ್ಲಾ ಮಹಾ ದುಃಖವನ್ನಿತ್ತು, ಶಿವಸಾನ್ನಿಧ್ಯವನ್ನು ಸೇರಿದ ಸುಪ್ರಸಿದ್ಧ ಕರ್ನಾಟಕ ಪಂಡಿತರಾದ ಮ|| ರಾ|| ಜೀನಕೇರೆ ಪ್ರಭಪ್ಪನವರ ಗುಣಕಥನವನ್ನು ಮಾಡಿ, ಆವರು ೧೫ ವರ್ಷಗಳಿಂದ ಅವಿಶ್ರಾಂತವಾಗಿ ಕಷ್ಟಪಟ್ಟು, ರಚಿಸಿರುವ ಕರ್ನಾಟಕ ನಿಘಂಟನ್ನು ಬೇಗನೆ ತಯಾರಿಸಿ ಅಚ್ಚುಹಾಕಿಸಿ ಅವರ ಕೀರ್ತಿಯನ್ನು ಉಳಿಸಬೇಕೆಂತಲೂ, ಪ್ರಿಂಟಿಂಗ್ ಖರ್ಚಿಗಾಗಿ ತಾವೂ ದ್ರವ್ಯಸಹಾಯ ಮಾಡುವುದಾಗಿಯೂ ಸದರಿ ಪ್ರಭಪ್ಪನವರ ಅಣ್ಣಂದಿರಾದ ಇದೇ ಟೌನ್ ಎ.ವಿ. ಸ್ಕೂಲ್ ಅ||ಮಾ|| ಮ|| ರಾ|| ಶಾಂತವೀರಪ್ಪನವರಿಗೆ ಪ್ರೋತ್ಸಾಹಿಸಿದರು. ಇವರು ಇಂತಹ ಸತ್ಪಾತ್ರಗಳಿಗೆ ಎಷ್ಟೋ ದ್ರವ ಸಹಾಯಮಾಡಿರುವರು. ಶ್ರೀಮದಿಂಡಿಯಾ ಚಕ್ರವರ್ತಿಗಳ, ಶ್ರೀಮತ್ ಮಹಾರಾಜರವರ, ಶ್ರೀಮದ್ಯುವರಾಜರವರ, ಶ್ರೀ ಜಯಚಾಮರಾಜ ಒಡೆಯರವರ ಶ್ರೇಯಃ ಪ್ರಾರ್ಥನೆಯಾದ ನಂತರ ಎಲ್ಲರೂ ತೆರಳಿದರು. ದೇವರು ಸದರಿ ಷಡಕ್ಷರಪ್ಪನವರಿಗೆ ಇತೋಪ್ಯತಿಶಯವಾದ ಆಯುರಾರೋಗ್ಯವನ್ನಿತ್ತು ಸಲಹಲೆಂದು ಗ್ರಾಮದಪರವಾಗಿ ನನ್ನ ವಂದನೆಗಳನ್ನರ್ಪಿಸಿ ಲೇಖನವನ್ನು ಮುಗಿಸುವೆನು. ತಮ್ಮ ವಿಧೇಯ,

ಪ್ರತ್ಯಕ್ಷದರ್ಶಿ.

ಶಿವೈಕ್ಯರಾದ ಶ್ರೀ ಅಥಣಿ ಮಹಾಶಿವಯೋಗೀಶ್ವರರ ಸ್ಮಾರಕ ಸಭೆ ದಾವಣಗೆರೆ.

ಸುಮಾರು ೩೫ ಲಕ್ಷ ಜನ ಸಂಖ್ಯೆಯುಳ್ಳ ನಮ್ಮ ವೀರಶೈವ ಸಮಾಜದಲ್ಲಿ ಅತ್ಯಂತ ತೇಜಸ್ವಿಗಳೂ, ಮಹಾಶಿವಯೋಗಿಗಳೂ, ಘನಮಹಿಮರೂ ಆಗಿದ್ದ ಶ್ರೀ ಅಥಣಿ ಮುರುಗೇಂದ್ರ ಮಹಾಯೋಗಿಗಳು ನಶ್ವರವಾದ ಈ ಭವದೇಹಮಾಯೆಯಿಂದ ಮೊನ್ನೆ ತಾನೇ ಬಿಡುಗಡೆಯನ್ನು ಹೊಂದಿ, ಸಚ್ಚಿದಾನಂದವೆಂಬ ಅತ್ಯುತ್ಕೃಷ್ಟಸ್ಥಿತಿಯಲ್ಲಿ ಅಡಕರಾಗಿ ಹೋದರೆಂಬ ವಾರ್ತೆಯನ್ನು ಕೇಳಿದ ಮರುದಿನ ಅಂದರೆ ತಾ|| ೨ ನೆಯ ಸೋಮವಾರ ಇಲ್ಲಿಯ ವರ್ತಕಮಂಡಳಿಯ ಮಹಾಜನರು ತಮ್ಮ ಕಾಟನ್ ಮಾರ್ಕೆಟ್ಟನ್ನು ಬಂದುಮಾಡಿ ಯಾವ ಹತ್ತಿ ಅರಳೆ ವ್ಯಾಪಾರವನ್ನೂ ಮಾಡದೆ ಆ ದಿವಸವನ್ನು ಶ್ರೀ ಮಹಾಸ್ವಾಮಿಗಳ ಸಂಕೀರ್ತನದಲ್ಲಿಯೇ ಕಳೆದರು. ಆ ದಿವಸ ಈ ಊರಿಗೆ ಬಂದಿದ್ದ ಸುಮಾರು ೫೦೦ ಹತ್ತಿಗಾಡಿಗಳು ವ್ಯಾಪಾರವಾಗದೆ ಹಾಗೆಯೇ ನಿಲ್ಲಿಸಲ್ಪಟ್ಟುವು. ಕಾರ್ಯಕ್ರಮದ ಪ್ರಕಾರ ಸಾಯಂಕಾಲ ೬ ಗಂಟೆಗೆ ಸದರಿ ಮಾರ್ಕೆಟ್ಟಿನಲ್ಲಿ ಅನೇಕ ಭಕ್ತಾದಿ ಜನರ ಪ್ರಚಂಡ ಸಭೆಯೊಂದು ಕೂಡಿತ್ತು. ಶ್ರೀ ಮಹಾಶಿವಯೋಗಿಗಳ ಭಾವಚಿತ್ರ ಪಟವು ತಕ್ಕ ಅಲಂಕಾರದಿಂದಾಚ್ಛಾದಿತವಾಗಿ ಇಡಲ್ಪಟ್ಟಿತ್ತು. ಮೊದಲು ಇಲ್ಲಿಯ ವೀರಶೈವ ಭಜನಾಸಂಘದವರು ಭಕ್ತಿಪರವಾದ ಭಜನೆಯನ್ನು ಮಾಡಿದ ಮೇಲೆ ವೇ|| ಚಂದ್ರಶೇಖರಶಾಸ್ತ್ರಿಗಳು ಶ್ರೀ|| ಮಹಾಸ್ವಾಮಿಗಳ ಘನವಾದ ಜೀವಿತ ಚರಿತ್ರೆಯನ್ನು ಅವರ ಅನೇಕ ಮಹಿಮಾದಿ ಉದಾಹರಣೆಗಳಿಂದ ಸಭಿಕರ ಹೃದಯದಲ್ಲಿ ಬಹುಚೆನ್ನಾಗಿ ಬಿಂಬಿಸುವಂತೆ ಹೇಳಿದರು. ಎಲ್ಲರೂ ಆಶ್ಚರ್ಯದಿಂದ ಕೇಳಿ ಹರ್ಷಿತರಾಗಿ ಜಯಜಯಕಾರ ಮಾಡಿದರು. ಇವರ ಜತೆಗೆ ಮೇಘರಾಜನು ಕೂಡ ಗುಡುಗುಡ ಎಂದು ಜಯಭೇರಿ ಹೊಡೆಯುತ್ತಿದ್ದನು. ಮಂಗಳಾರತಿಯನ್ನು ಮಾಡಿ ಎಲ್ಲರಿಗೂ ಪ್ರಸಾದವು ಕೊಡಲ್ಪಟ್ಟನಂತರ ಶ್ರೀ ಮಹಾಯೋಗಿಗಳ ಭಾವಚಿತ್ರಪಟದ ಉತ್ಸವವು ಬಹು ಆಟ್ಟಹಾಸದಿಂದ ಊರಲ್ಲೆಲ್ಲಾ ನಡೆಯಿತು. ಶ್ರೀ ಮಹಾಸ್ವಾಮಿಗಳ ಜ್ಞಾಪಕಾರ್ಥವಾಗಿ ಏನಾದರೊಂದು ದೊಡ್ಡ ಸ್ಮಾರಕವನ್ನು ಈ ಊರಲ್ಲಿ ಸ್ಥಾಪಿಸಬೇಕೆಂದೂ, ಅದಕ್ಕೋಸ್ಕರ ೫೦೦೦ ರೂ. ಗಳಿಗೆ ಕಡಿಮೆಯಿಲ್ಲದಂತೆ ಒಂದು ಧನ ನಿಧಿಯನ್ನು ಕೂಡಿಸಬೇಕೆಂದೂ, ಇದೆಲ್ಲವನ್ನು ವ್ಯವಸ್ಥೆಗೊಳಿಸಿ ಕಾರ್ಯನಡೆಯಿಸಲು ಒಂದು ಕಮಿಟಿಯನ್ನು ನಿರ್ಮಿಸಬೇಕೆಂದೂ, ಇವೆಲ್ಲವೂ ಸಭೆಯಲ್ಲಿ ಸೂಚಿಸಲ್ಪಟ್ಟು ಸರ್ವಾನುಮತದಿಂದ ಒಪ್ಪಿತವಾಗಿ ನಿರ್ಧಾರವನ್ನು ಹೊಂದಿದವು. ಅಲ್ಲಿಯೇ ಒಂದು ಪ್ರಾವಿಜನಲ್ ಕಮಿಟಿಯು ಸ್ಥಾಪಿತವಾಯಿತು. ಇದಕ್ಕೆ ಇಲ್ಲಿ ಪ್ರಸಿದ್ಧವರ್ತಕರಾಗಿರುವ ಮ|| ರಾ|| ದೇವೇಂದ್ರಪ್ಪನವರು (ಜೈನಮತಸ್ಥರು) ಅಧ್ಯಕ್ಷರಾಗಿರುವರು. ಅಲ್ಲದೆ, ಆ ನಿಧಿಗೆ ೧೦೧ ರೂ. ಗಳನ್ನು ಸಹ ಕೊಟ್ಟಿರುವರು. ಇದು ಸ್ತುತ್ಯವಾಗಿರುವುದಲ್ಲದೆ, ಗುರುಭಾವನೆಯಲ್ಲಿ ಜಾತಿ ಮಾತ್ಸರ್ಯವನ್ನಿಡಬಾರದೆಂದು ವ್ಯಕ್ತವಾಗುತ್ತದೆ. ಸಭೆಯಲ್ಲಿಯೇ ಸುಮಾರು ೨೫೦೦ ರೂ. ಗಳವರೆಗೆ ವಾಗ್ದಾನವಾಯಿತು. ಪ್ರಕೃತ ಈ ಊರಲ್ಲಿ ದಾನಶೂರರಾಗಿರುವ ಮ|| ರಾ|| ಚಿಗಟೇರಿ ಶಿವರುದ್ರಪ್ಪ ಮುರಿಗೆಪ್ಪ ಇವರು ೧೦೦೧ ರೂ. ಗಳನ್ನು ಕೊಟ್ಟಿರುವರು. ಮತ್ತು ಮ|| ರಾ|| ಆದಿಶೆಟ್ಟರ ಚನ್ನಪ್ಪನವರು ಪ್ರತಿ ವರ್ಷವೂ ೧೨೦ ರೂ. ಗಳನ್ನು ಕೊಡುತ್ತಾ ಹೋಗುವೆವೆಂದು ವಾಗ್ದಾನ ಮಾಡಿದರು. ಹೀಗೆಯೇ ಹಲವರು ಅವರವರ ಶಕ್ತಿಯಿದ್ದಷ್ಟು ದಾನಮಾಡಿರುತ್ತಾರೆ. ಈ ನಿಧಿಗೆ ಸಹಾಯ ಮಾಡತಕ್ಕ ಮಹಾದಾನಿಗಳು ಈ ಊರಲ್ಲಿ ಅನೇಕರಿರುವುದರಿಂದ, ಈ ನಿಧಿಯು ಎಷ್ಟು ಘನತರವಾಗಿ ಬೆಳೆದೀತೆಂದು ಪ್ರಕೃತ ಹೇಳುವುದಕ್ಕಾಗುವುದಿಲ್ಲ. ಕಮಿಟಿಯ ಮೆಂಬರುಗಳು ಕಾರ್ಯಾಭಿಮಾನಿಗಳೇ ಆಗಿರುವುದರಿಂದ, ಸ್ಮಾರಕ ಕಾರ್ಯವನ್ನು ಮುಂದಿನ ವರ್ಧಂತ್ಯುತ್ಸವದ ಕಾಲದೊಳಗಾಗಿ ಕೈಕೊಂಡು ಮುಗಿಯಿಸುವರೆಂದು ನಂಬುತ್ತೇನೆ. ಇವೆಲ್ಲ ಆ ಮಹಾತ್ಮರಾದ ಶಿವಯೋಗೀಶ್ವರರ ಮಹಿಮೆಯಿಂದಲ್ಲವೆ?

ಬಸವದಾಸ.

ಶಿವೈಕ್ಯ ಶ್ರೀ ಶಿವಯೋಗೀಶ್ವರರು.

ಶ್ರೀಮನ್ನಿರಂಜನ ಪ್ರಣವಸ್ವರೂಪರಾದ ಅಥಣಿ ಗಚ್ಚಿನಮಠದ ಶ್ರೀ ಶಿವಯೋಗೀಶ್ವರರು ತಮ್ಮ ಪೂರ್ವ ವಯಸ್ಸಿನಲ್ಲಿಯೇ ನಿಜವೈರಾಗ್ಯ ವಳವಟ್ಟು, ಶಮದಮಾದಿಗಳಿಂದ ಕೂಡಿದವರಾಗಿ ಸರ್ವಸಂಗ ಪರಿತ್ಯಾಗರೂಪವಾದ ವಿರತಿ ಧರ್ಮಮಂ ಕೈಕೊಂಡು, ಪುಣ್ಯಕ್ಷೇತ್ರ ಮಹಿಮಾಸ್ಥಾನ ತಪಸ್ಸಿದ್ಧಿಸ್ಥಾನ ಮೊದಲಾದ ಭೂಭಾಗದ ಅನೇಕ ಪವಿತ್ರ ಸ್ಥಲಗಳಲ್ಲಿ ಸಂಚರಿಸಿ ಅಲ್ಲಲ್ಲಿ ಕೆಲವು ಕಾಲ ಯೋಗಸಾಧನೆಯೊಳಿದ್ದು ತರುವಾಯ ತಮ್ಮ ಗುರುಗಳು ಅಪ್ಪಣೆ ಕೊಡಿಸಿದ್ದ ಪ್ರಕಾರ ಈ ಮಠಾಂತರಾಳದಲ್ಲಿ ವಿರಾಜಿಸುತ್ತಿರುವ ತಪೋವನ ಮಂಟಪ ಮಧ್ಯದಲ್ಲಿ ಶಿವತೇಜೋಮೂರ್ತಿಗಳಾಗಿ ವಿರಾಜಿಸುತ್ತಿದ್ದು ಸದಾ ಶಿವಯೋಗತತ್ಪರರಾಗಿದ್ದಾಗ್ಗೂ -ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಾಃ- ಎಂಬಭಿಹಿತೋಕ್ತಿಯಂತೆ ವೀರಶೈವ ಷಟ್‌ಸ್ಥಲಸಿದ್ಧಾಂತ ಪ್ರತಿಪಾದಕಗಳಾದ ಅಷ್ಟಾವರಣ, ಪಂಚಾಚಾರ, ಭಕ್ತಿ ಜ್ಞಾನ, ವೈರಾಗ್ಯಗಳ ಸ್ವರೂಪವನ್ನು ಸರ್ವರೂ ಕರತಳಾಮಲಕದಂತೆ ತಿಳಿದು ಅದರಂತೆ ಆಚರಿಸಿ ಕೃತಾರ್ಥರಾಗಲೆಂಬ ಭಾವನೆಯಿಂದ ತ್ರಿಕಾಲಿಕ ಶಿವಾರ್ಚನೆಯಲ್ಲಿ ಅಂದರೆ ಇಷ್ಟ, ಪ್ರಾಣ, ಭಾವ, ಲಿಂಗಾನುಸಂಧಾನರೂಪ ಶಿವಯೋಗಾನುಷ್ಠಾನದಿಂದೊಡಗೂಡಿ ತತ್ತ್ವಮಸ್ಯಾದಿ ಮಹಾವಾಕ್ಯ ಪ್ರತಿಪಾದಿತ ಲಿಂಗಾಂಗ ಸಾಮರಸ್ಯರೂಪ ವಿಶೇಷಾರ್ಥಬೋಧಕಗಳಾದ ಶಿವಾನುಭವಶಾಸ್ತ್ರಾದಿಗಳ ಸುವಿಚಾರವೆಂಬನುಭವಾಮೃತದಿಂ ಪರಿತೃಪ್ತಮಾನಸರಾಗಿ ಪುರಾತನ ಶಿವಶರಣರ ಧರ್ಮಮಾರ್ಗವನ್ನೆಡೆವಿಡದೆ ಆಚರಿಸುತ್ತಾ ಮಠದಲ್ಲಿ ಪ್ರತಿದಿವಸ ನಡೆಯುತ್ತಿರುವ ಜಂಗಮ ದಾಸೋಹ ಪುರಾಣಶ್ರವಣ ಮೊದಲಾದ ಶಿವಪ್ರೀತಿ ಕಾರ್ಯಗಳನ್ನೀಕ್ಷಿಸಿ ಪರಮಾನಂದಗೊಳ್ಳುತ್ತ, ಭಕ್ತೋದ್ಧಾರಕತ್ವ, ಶಿವಶರಣಸಮಯಪರಿಪಾಲಕತ್ವ, ಸಮವೃತ್ತಿತ್ವಾದಿ ಸದ್ಗುಣಗಳಿಗಾಶ್ರಯಭೂತರಾಗಿಯೂ, ನಿಷ್ಕಲ ನಿರಂಜನ ಜಂಗಮಾದಿ ಪದಗಳಿಗೆ ಮುಖ್ಯಾರ್ಥಭೂತರಾಗಿಯೂ, ಜಗತ್ಕಲ್ಯಾಣಮೂರ್ತಿಗಳೆನಿಸಿ ಪ್ರಖ್ಯಾತರಾಗಿಯೂ ಇದ್ದುದರಿಂದ ಇವರ ಮಹಿಮಾತಿಶಯಮಂ ಕೇಳಿ ಅನೇಕ ದೇಶಗಳಿಂದ ಶ್ರೀ ವಿರಕ್ತಮೂರ್ತಿಗಳೂ ಶ್ರೀ ಪಟ್ಟಚರಾಧಿಕಾರಿಗಳೂ ವಿದ್ವಜ್ಜನರೂ ಶ್ರೀಮಂತರೂ ಮೊದಲಾದವರು ಬಂದು ತಪೋನಿಧಿಗಳ ಸಂದರ್ಶನಾಶೀರ್ವಾದಗಳಂ ಪಡೆಯುತ್ತಿದ್ದರು. ಇಂತಹ ಶಿವಾವತಾರಮೂರ್ತಿಗಳಾದ ಶ್ರೀ ಶಿವಯೋಗೀಶ್ವರರು ಲೋಕರಕ್ಷಾಶಿಕ್ಷಣಾರ್ಥವಾಗಿ ಸದಾಚಾರ ಸಂಪದದಿಂ ಕೂಡಿದ ಶಿವಜ್ಞಾನಾನಂದ ವೈಭವದಿಂದ ಜೀವನ್ಮುಕ್ತದಶೆಯೊಳಿದ್ದು ಇಹಲೋಕಯಾತ್ರೆಯಂ ಪೂರೈಸಿಕೊಂಡು ಶ್ರೀ ಪರಮೇಶ್ವರ ಪ್ರೇರಣೆಯಿಂ ತಾವು ಇಲ್ಲಿಗೆ ೬ ತಿಂಗಳ ಮುಂಚೆಯೇ ಅಪ್ಪಣೆ ಕೊಡಿಸಿದ್ದ ಪ್ರಕಾರ ಇದೇ ದುರ್ಮತಿನಾಮಸಂವತ್ಸರದ ಚೈತ್ರ ಬಹುಳ ೧ ಸ್ಥಿರವಾರ ಸಾಯಂಕಾಲದಲ್ಲಿ ತಮ್ಮ ೮೫ನೆ ವರ್ಷವಯಸ್ಸಿನಲ್ಲಿ ಪ್ರದೋಷಕಾಲದ ಶಿವಪೂಜೆಯಂ ನೆರವೇರಿಸಿಕೊಂಡು ತತ್ಸಮಯದಲ್ಲಿ ಶ್ರೀ ನಿರಂಜನ ಜಂಗಮ ಮೂರ್ತಿಗಳು ವಿದ್ವಜ್ಜನರು ಸಹ ಶ್ರೀರುದ್ರಪಾರಾಯಣ, ಶಿವಸಹಸ್ರನಾಮ ಸಂಕೀರ್ತನಾದಿಗಳನ್ನು ಮಾಡುತ್ತಿರಲು ತಂಡೋಪತಂಡವಾಗಿ ನೆರೆದಿದ್ದ ಭಕ್ತಮಾಹೇಶ್ವರರು ಜಯವಿಘೇ ಎಂಬದಾಗಿ ಉದ್ಘೋಷಿಸುತ್ತಿರಲು ತಮ್ಮ ಇಷ್ಟಲಿಂಗದೊಳಿಟ್ಟ ದೃಷ್ಟಿಗನುಸರಿಸಿ ಮನೋಭಾವಾತ್ಮಲಿಂಗಾನುಸಂಧಾನದಿಂದ ಭೌತಿಕದೇಹ ಸಂಬಂಧವಂ ಪರಿತ್ಯಜಿಸಿ ಶಿವಸಾಯುಜ್ಯ ಪದವಿಯಂ ಪಡೆದುದು ಇವರ ಮಹತ್ವಾತಿಶಯಕ್ಕೆ ನಿದರ್ಶನವಾಗಿರುತ್ತದೆ. ಆಬೆಳಗಿನ ದಿವಸ ಶ್ರೀ ಮಠದಲ್ಲಿ ಮೊದಲೇ ತಯಾರುಮಾಡಿಸಿದ್ದ ಕ್ರಿಯಾಸಮಾಧಿಯಲ್ಲಿ ಲಿಂಗದೇಹಸ್ಥಾಪನೆ ಮೊದಲಾದುದು ಯಥಾವಿಧಿಯಾಗಿ ಜರಗಿಸಲ್ಪಟ್ಟು ಭೂರಿದಕ್ಷಿಣೆ ಮೊದಲಾದವುಗಳು ಶ್ರೀ ಮಠದಿಂದಲೂ ಭಕ್ತಾದಿಗಳಿಂದಲೂ ಅವರವರ ಭಕ್ತಿಗೂ ಶಕ್ತಿಗೂ ಅನುಗುಣವಾಗಿ ವಿನಿಯೋಗಿಸಲ್ಪಟ್ಟಿತು. ಈ ಸಮಯದಲ್ಲಿ ದಯಮಾಡಿಸಿದ್ದ ಬೀಳೂರು ಶ್ರೀ ಮಹಾಸ್ವಾಮಿಗಳೂ, ಹಾನಗಲ್ಲು ಶ್ರೀ ಕುಮಾರಸ್ವಾಮಿಗಳೂ. ತೋಟಿಗೆ ಮಠದ ಶ್ರೀ ಚನ್ನಬಸವಸ್ವಾಮಿಗಳೂ, ಹಾವೇರಿ ಶ್ರೀ ಶಿವಬಸವಸ್ವಾಮಿಗಳೂ, ಶ್ರೀ ನಂದಗಡದಸ್ವಾಮಿಗಳೂ, ಶ್ರೀ ಮೃತ್ಯುಂಜಯಸ್ವಾಮಿಗಳೂ, ಕೋಟನೂರು ಸ್ವಾಮಿಗಳೂ, ಶ್ರೀ ಶಂಭು

ಲಿಂಗಸ್ವಾಮಿಗಳೂ ಮೊದಲಾದ ವಿರಕ್ತ ಮೂರ್ತಿಗಳೂ ಮತ್ತು ಸ್ಥಲ ಪರಸ್ಥಲದ ದೊಡ್ಡ ಮನುಷ್ಯರೂ ಸಹ ಸಭೆ ಸೇರಿ ಶ್ರೀ ಶಿವಯೋಗಿಗಳ ಅಸಾಧಾರಣ ಮಹಿಮಾದಿಗಳನ್ನೂ ಅವರಿಂದುಂಟಾದ ಪ್ರಯೋಜನವನ್ನೂ ಪ್ರಸಂಸೆಮಾಡಿ ಸ್ಮಾರಕ ಫಂಡನ್ನೇರ್ಪಡಿಸಿದರು. ಇದರ ವ್ಯವಸ್ಥೆ ಮುಂತಾದುದು ಮುಂದೆ ನಡೆಯಬೇಕಾಗಿದೆ. ಶಿವಧರ್ಮಪ್ರಕಾಶಕರಾದ ಈ ಪುಣ್ಯಮೂರ್ತಿಗಳು ನಮ್ಮಗಳ ಕೈತಪ್ಪಿ ಹೋದುದು ಯಾರೊಬ್ಬರಿಗೂ ವಿಷಾದಕರವಾಗಿರುವುದು. ಈಶ್ವರವಿಲಾಸಕ್ಕೆ ಪ್ರಯತ್ನಾಂತರವೇನಿದೆ? ಪ್ರತ್ಯಕ್ಷದರ್ಶಿ.

ಹಂಸಭಾವಿ ವಿದ್ಯಾವರ್ಧಕ ತೃತೀಯ ಸಮ್ಮೇಲನವು.

ಸದರಿ ಸಭೆಯು ನಿಶ್ಚಿತಪ್ರಕಾರ ಇದೇ ೨೨-೪ನೆ ತಾರೀಖಿನ ದಿವಸ ಮಿ॥ ಸಿದ್ದಪ್ಪಾ ಕಂಬಳಿ ಬಿ. ಎ. ಎಲ್ ಎಲ್. ಬಿ., ಎಂ. ಎಲ್. ಸಿ., ಇವರ ಅಧ್ಯಕ್ಷತೆಯ ಕೆಳಗೆ ನೆರೆದಿತ್ತು. ಸಭೆಗೆ ಶ್ರೀ ಹಾನಗಲ್ ಕುಮಾರಸ್ವಾಮಿಗಳು, ದಾವಣಗೆರೆ ಶ್ರೀ ಮೃತ್ಯುಂಜಯಸ್ವಾಮಿಗಳು ಜಂಬೂರ, ಕರ್ಜಗಿ ಮೊದಲಾದ ಸ್ಥಳಗಳ ಶ್ರೀಗಳವರು ದಯಮಾಡಿಸಿದ್ದರಲ್ಲದೆ ಮಳಗೀ ವಕೀಲರು, ಬ್ಯಾಡಗಿ ಮುರಿಗೆಪ್ಪ ಶೆಟ್ಟರು, ಕರೆಗೌಡರು, ಸಬ್‌ರೆಜಿಸ್ಟ್ರಾರ ಜಿಡೇದ ಗಂಗಾಧರಶಾಸ್ತ್ರಿಗಳು, ಮತ್ತು ಮಾಸೂರ ಚಿಕ್ಕೆರೂರ ಸಿಗೇನೂರ ಎಡಚಿ ಮುಂತಾದ ಗ್ರಾಮಗಳ ಪ್ರಮುಖರೂ ಆಗಮಿಸಿದ್ದರು. ಸಭೆಯು ಶುಕ್ರವಾರ ಮಧ್ಯಾಹ್ನ ೫ ಘಂಟೆಗೆ ಪ್ರಾರಂಭವಾಯಿತು. ಸ್ವಾಗತ ಸಂಘಾಧ್ಯಕ್ಷರಾದ ಶಿವಮೂರ್ತಿಸ್ವಾಮಿ ಹಿರೇಮಠ ಬಿ. ಎ. ಇವರು ಬಂದ ಅತಿಥಿಗಳಿಗೆ ಸ್ವಾಗತವನ್ನು ಮಾಡಿ, ಸದ್ಯದ ಪರಿಸ್ಥಿತಿಯನ್ನು ವಿವೇಚಿಸಿ ಸಾಂಪ್ರತದಲ್ಲಿ ಹೊತ್ತುತ್ತಿರುವ ಅಂತಃಕಲಹವು ಆತ್ಮವಿಘಾತಕ್ಕೆ ಕಾರಣವೆಂದೂ ನಮ್ಮ ಸಮಾಜದೇಳ್ಗೆಗೆ ವಿದ್ಯೆಯು ಅತ್ಯಗತ್ಯವಾಗಿದೆಂದೂ ಪ್ರತಿಪಾದಿಸಿದರು. ಅಧ್ಯಕ್ಷರಾದ ಮಿ॥ ಕಂಬಳಿ ಬಿ. ಎ. ಎಲ್ ಎಲ್. ಬಿ. ಇವರ ಚುನಾವಣೆಯಾದ ನಂತರ ಅಧ್ಯಕ್ಷರು ಎರಡು ಗಂಟೆಗಳ ತನಕ ಒಳ್ಳೇ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು. ನಮ್ಮ ಸಮಾಜಾಭಿವೃದ್ಧಿಗೆ ಸಭಾ ಸಮ್ಮೇಲನಗಳವಶ್ಯವಿದೆ. ಅವುಗಳ ಮೂಲಕ ನಮ್ಮ ಒಳಜಗಳಗಳನ್ನು ಬಗೆಹರಿಸಿಕೊಳ್ಳಬೇಕು. ನಮ್ಮಲ್ಲಿ ಒಕ್ಕಟ್ಟು ನೆಲೆಗೊಳ್ಳದಿದ್ದರೆ ನಮಗೆ ಜಯವಾಗಲಾರದು. ಪರಸ್ಪರರು ಸೋದರಭಾವದಿಂದ ನಡೆದುಕೊಳ್ಳಬೇಕು. ಇದು ಪ್ರಚಾರದಲ್ಲಿ ಬರಬೇಕಾದರೆ ನಮ್ಮ ಪೂಜ್ಯವರ್ಗದವರು ಈ ಬಗ್ಗೆ ಪ್ರಯತ್ನ ಮಾಡಲಿಕ್ಕೇಬೇಕು. ವಿದ್ಯೆಯು ವಿಶೇಷ ಪ್ರಸಾರಗೊಳ್ಳದ ಹೊರತು ನಮಗೆ ಸ್ವಾವಲಂಬನದ ಸಾಮರ್ಥ್ಯವು ಬರಲಾರದು. ಪುರಾಣ, ಪ್ರಸ್ತ, ತೇರು ಜಾತ್ರೆಗಳಲ್ಲಿ ವ್ಯರ್ಥವಾಗಿ ಖರ್ಚುಮಾಡುವ ಹಣವನ್ನು ಕಡಿಮೆ ಮಾಡಿ ಆ ಹಣವನ್ನೆಲ್ಲ ವಿದ್ಯೆಗೆ ಉಪಯೋಗಿಸಬೇಕು. ಅದಕ್ಕಾಗಿ ಬೆಳಗಾಂವಿಗಿ ಆ॥ ಹೈಸ್ಕೂಲಿಗೆ ಸಹಾಯ, ಧಾರವಾಡದಲ್ಲಿ ಹೈಸ್ಕೂಲಿಗೆ ಮಾಡಬೇಕಾದ ಪ್ರೋತ್ಸಾಹ ಮುಂತಾದವುಗಳ ಬಗ್ಗೆ ಹೇಳಿ ಶ್ರೋತೃವೃಂದದಲ್ಲಿ ವಿದ್ಯಾಭಿರುಚಿಯಾಗುವಂತೆ ಒಳ್ಳೇ ಜೋರಿನಿಂದ ಹೇಳಿದರು. ಇಷ್ಟಕ್ಕೆ ಅಂದಿನ ಕೆಲಸವು ಮುಗಿಯಿತು. ಮರುದಿನ ಸಭೆಯ ಕೆಲಸಕ್ಕೆ ಪ್ರಾರಂಭವಾಗಿ ಮಿ॥ ಕೇಶರಿಯವರು ವಿದ್ಯಾಪ್ರಸಾರ ಈ ವಿಷಯದ ಮೇಲೆ ಒಳ್ಳೇ ಪರಿಣಾಮಕಾರಕವಾಗಿ ಸದ್ಯದ ಪರಿಸ್ಥಿತಿಯನ್ನರಿತುಕೊಂಡು ನಾವು ಜಾಗರೂಕರಾಗಿರುವದರಿಂದ ಅದಕ್ಕೆ ವಿದ್ಯೆಯೇ ನಮ್ಮ ಸುಖಕ್ಕೆ ಸಾಧನವೆಂದೂ, ಧಾರ್ಮಿಕ ವಿಷಯವನ್ನು ಮರೆಯಕೂಡದೆಂದೂ ಪ್ರತಿಪಾದಿಸಿದರು. ಮಲ್ಲಸರ ಗುರುಪಾದಸ್ವಾಮಿಗಳು ಶಿಕ್ಷಣಪ್ರಸಾರದ ಮೇಲೆ ಮರ್ಮಚ್ಛೇದಕವಾಗಿ ಮಾತಾಡಿದರು. ಮಿ॥ ಚನ್ನವೀರಪ್ಪ ಹೊಟ್ಟಿ ಇವರು ಎಲ್ಲ ಅನ್ಯಸಮಾಜದವರೂ ವಿಶೇಷ ಪ್ರಗತಿಯನ್ನು ಮಾಡಿಕೊಂಡು ನಮ್ಮನ್ನು ಬಿಟ್ಟು ಮುಂದಕ್ಕೆ ಹೋಗಿರುವದರಿಂದ ಮುಂದಗತಿಯಿಂದ ಪ್ರಸಾರಮಾಡದೆ ನಾವು ಮೊಟಾರಿನಲ್ಲಿ ಕುಳಿತು ಮುಂದೆ ಹೋಗುವವರನ್ನು ಕೂಡಿಕೊಳ್ಳಬೇಕೆಂದು ಭಾಷಣ ಮಾಡಿದರು. ಆ ಮೇಲೆ ಇಂಗ್ಲೀಷ ಸ್ಕೂಲ ಅ॥ ಮಾಸ್ತರ ಕುಲಕರ್ಣಿಯವರು ನಮ್ಮ ಗುರುವರ್ಗ ಭಕ್ತವರ್ಗದವರು ತಮ್ಮ ತಮ್ಮ ಸಂಪತ್ತು ವೈಭವಗಳ ಪ್ರಮಾಣದಿಂದ ನಾವು ಹೆಚ್ಚು ನೀವು ಹೆಚ್ಚೆನ್ನುವ ತಾರತಮ್ಯಕ್ಕೆ ಬೀಳದೆ ವಿದ್ಯೆಗೆ ಸಹಾಯಮಾಡಿದ್ದರ ಮಾನದಿಂದ ತಮ್ಮ ಶ್ರೇಷ್ಠತೆಯನ್ನು ಗೊತ್ತುಮಾಡಿಕೊಳ್ಳುವ ಅಭಿಮಾನಕ್ಕೆ ಬೀಳಬೇಕೆಂದು ಮಾತಾಡಿದರು. ಕೊಳ್ಳೀ ಮಾಸ್ತರರು ಮೋಟೇಬೆನ್ನೂರ ಸಣ್ಣಬಸವಪ್ಪ ಇವರು ಒಕ್ಕಟ್ಟಿನ ಮೇಲೆ ವಾಚಾ ನವನ್ನು ಕೊಟ್ಟರು. ಇಲ್ಲಿಯ ಹೆಡ್‌ಮಾಸ್ತರರಾದ ಪಾಟೀಲರು ಸ್ತ್ರೀ ಶಿಕ್ಷಣದ ಮೇಲೆ ಒಳ್ಳೇ ಬಲವತ್ತರವಾಗಿ ಮಾತಾಡಿದರು. ಇದೇ ವಿಷಯದ ಮೇಲೆ ಧಾರವಾಡದಿಂದ ಬಂದಿದ್ದ ಮಲಪುರದಪ್ಪಾ, ಚಿಕ್ಕಮಠ, ಕಾಳಪ್ಪಾ, ಮೊದಲಾದವರ ಭಾಷಣಗಳಾದವು. ಅನಂತರ ದಾವಣಗೇರಿ ಶ್ರೀಗಳವರು ಇಂಗ್ಲೀಷು ವಿದ್ಯೆಯ ಮಹತ್ವದ ವಿಷಯಕ್ಕೆ ಜನರ ಮನಸ್ಸಿನ ಮೇಲೆ ಬಿಂಬಿಸುವಂತೆ ಮಾತಾಡಿ ಅದರಲ್ಲಿ ಇಂಗ್ಲೀಷ್ ಕಲಿಯುವದರಿಂದ ಧರ್ಮಕ್ಕೆ ಅಡ್ಡಿ ಬರಲಾರದೆಂದೂ ಪ್ರತಿಯೊಬ್ಬ ಶ್ರೀ ಸ್ವಾಮಿಗಳು ಸಹ ಕಲಿಯುವದು ಅವಶ್ಯವೆಂದೂ ಪ್ರತಿಪಾದಿಸಿ ಹೇಳಿದ ನಂತರ ತಾವು ಆಂಗ್ಲವಿದ್ಯಾ ಪ್ರೋತ್ಸಾಹಕ್ಕೆಂದು ಇಲ್ಲಿ ಫ್ರೀ ಬೋರ್ಡಿಂಗು ಕಟ್ಟುವ ಉದ್ದಿಶ್ಯ ೫೧ ರೂ. ರೋಖ ಕೊಟ್ಟರು. ಇದರಂತೆ ಆಗಮಿಸಿದ್ದ ಇತರ ಶ್ರೀಗಳವರೂ, ಸಭ್ಯ ಗೃಹಸ್ಥರೂ ಕೂಡಿ ೧೬ ಕೋಣೆಗಳನ್ನು ಕಟ್ಟಿಸಲಿಕ್ಕೆ ಒಪ್ಪಿಕೊಂಡರು. ಮತ್ತೊಂದು ಮಹತ್ವದ ಸಂಗತಿಯೇನಂದರೆ—ಸದ್ಯಃಸ್ಥಿತಿಯನ್ನನುಸರಿಸಿ ಆಂಗ್ಲವಿದ್ಯಾ ಪ್ರಸಾರವು ಬಹಳ ಅಗತ್ಯವಾದದ್ದೆಂದೂ, ಈ ಕಾರ್ಯವನ್ನು ಕೈಕೊಳ್ಳಬೇಕೆಂದೂ, ಅಧ್ಯಕ್ಷರೂ, ಸಭಿಕರೂ, ಹಾನಗಲ್ ಶ್ರೀಗಳವರನ್ನೂ, ದಾವಣಗೇರಿ ಶ್ರೀಗಳವರನ್ನೂ ಪ್ರಾರ್ಥಿಸಲು ಸದರೀ ಶ್ರೀಗಳವರು ಅದಕ್ಕೆ ಪ್ರೀತಿಯಿಂದ ಒಪ್ಪಿಕೊಂಡು ಧಾರವಾಡದಲ್ಲಿ ಒಂದು ಹೈಸ್ಕೂಲಿನ ಸ್ಥಾಪನೆಯ ಬಗ್ಗೆ (ತಾವು ಈಗ ಕೈಕೊಂಡಿರುವ ಕಾರ್ಯದ ವ್ಯವಸ್ಥೆಯನ್ನು ನೋಡಿಕೊಂಡು) ಪ್ರಯತ್ನ ನಡಿಸುತ್ತೇವೆಂದು ಒಪ್ಪಿಕೊಂಡದ್ದನ್ನು ಸಮಾಜಕ್ಕೆ ತಿಳುಹಿಸಲು ಸಂತೋಷವಾಗುತ್ತದೆ. ನಂತರ ಕೊಳ್ಳೀ ಮಾಸ್ತರರು ಒಕ್ಕಟ್ಟಿನ ಮೇಲೆ ರಸಯುಕ್ತವಾಗಿ ಭಾಷಣ ಮಾಡಿದ್ದರಿಂದ ಸಭಾಧ್ಯಕ್ಷರ ಮತ್ತು ಶ್ರೀಗಳವರ ಸೂಚನೆ ಪ್ರಕಾರ ಇಲ್ಲಿಯ ವಿದ್ಯಾವರ್ಧಕ ಸಂಘದವರು ಒಂದು ಬಂಗಾರದ ಪದಕವನ್ನು ಕೊಟ್ಟರು. ಬಳಿಕ ಸಂಗಳದ ಲಕ್ಷ್ಮಣಶಾಸ್ತ್ರಿಗಳ ಕೀರ್ತನವಾದ ನಂತರ ಅಂದಿನ ಕೆಲಸವು ಮುಗಿಯಿತು.

ಶ್ರೀಮನ್ನಿರಂಜನ ಗುರುಸಿದ್ಧಸ್ವಾಮಿ ಸಂ॥ ಕಾಶೀನಾಥ ಶಾಸ್ತ್ರಿಗಳ ಶಿವಲೋಕಯಾತ್ರೆಯು.

ಇವರು ತಾ॥ ೨೭-೪-೨೧ನೆ ಬುಧವಾರ ಪ್ರಾತಃಕಾಲ ೧೦ ಘಂಟೆಗೆ ನಶ್ವರವಾದ ಈ ಜಡ ಪ್ರಪಂಚವನ್ನು ತ್ಯಜಿಸಿ ಶಿವಸಾಯುಜ್ಯವನ್ನು ಹೊಂದಿದರು. ಇವರ ವಿಯೋಗದಿಂದ ಕರ್ನಾಟಕಕ್ಕೆ ವಿಶೇಷತಃ ನಮ್ಮ ಸಮಾಜಕ್ಕೆ ದೊಡ್ಡ ಹಾನಿಯೇ ತಟ್ಟಿತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈ ಶ್ರೀ ಗುರುಸಿದ್ಧದೇವರು ಮಹಾಭಾಷ್ಯಕಾರರಾದ ಶ್ರೀ ನೀಲಕಂಠ ಶಿವಾಚಾರ್ಯರ ಹಾಗು "ಸಪ್ತಪದಾರ್ಥಿ" "ಲಕ್ಷಣಮಾಲಾ" ಮೊದಲಾದ ವೈಶೇಷಿಕ ಗ್ರಂಥಗಳನ್ನು ಬರೆದು ವೈಶೇಷಿಕಾಚಾರ್ಯರೆಂದೆನಿಸಿಕೊಂಡ ಶ್ರೀ ಶಿವಾದಿತ್ಯ ಶಿವಾಚಾರ್ಯರ ವಂಶಪರಂಪರಾಗತರಾದ ಶ್ರೀ ಹೂಲಿ (ಪೂವಲಿ) ಸಿದ್ಧನಂಜಾಚಾರ್ಯರ ಸದ್ವಂಶಜರಾದ ಸುತಗಟ್ಟಿ ಪುರಾಣಿಕರ ಮನೆತನದಲ್ಲಿ ಜನಿಸಿದರು. ಇವರು ತಮ್ಮ ಹನ್ನೆರಡು ವರ್ಷ ವಯಸ್ಸಿನಲ್ಲಿ ಕನ್ನಡ ೬ನೆ ಇಯತ್ತೆಯನ್ನು ಮುಗಿಸಿದರು. ಮಹಿಮರಾದ ಕುಸಲಾಪುರ ಶ್ರೀ ಸಂಗಮನಾಥಸ್ವಾಮಿಗಳವರು ಇವರನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಅದರಿಂದ ಭಾವಿಕರಾದ ಜನರು ಇವರು ಘನತೆಯನ್ನು ಹೊಂದುವರೆಂದು ಭಾವಿಸಿದ್ದರು. ದೈವವಶಾತ್ ಯಕ್ಕುಂಡಿ ವಿರಕ್ತಮಠದ ಶ್ರೀ ನಿರಂಜನ ಸ್ವಾಮಿಗಳು ಸುತಗಟ್ಟಿಗೆ ದಯಮಾಡಿಸಿದಾಗ್ಗೆ ಸಲ್ಲಕ್ಷಣಸಂಪನ್ನರಾದ ಇವರನ್ನು ನೋಡಿ ಸಾನಂದಚಿತ್ತರಾಗಿ ಒಮ್ಮೆಲೇ ಇವರನ್ನು ನಮ್ಮ ಮಠಕ್ಕೆ ಕೊಟ್ಟುಬಿಡಿರೆಂದು ಅವರ ತಾಯಿತಂದೆಗಳನ್ನು ಕೇಳಿದರು. ಸ್ವಾಮಿನಿಷ್ಠರಾದ ಆ ವೃದ್ಧ ಮಾತಾಪಿತರು ಬಲವಾದ ಪುತ್ರವ್ಯಾಮೋಹದಿಂದ ಬದ್ಧರಾಗಿದ್ದರೂ ಶ್ರೀಗಳವರಿಗೆ ಇದಿರುತ್ತರವನ್ನೀಯದೆ ಸುಮ್ಮನೆ ಅವರ ಮಠಕ್ಕೆ ಕೊಟ್ಟುಬಿಟ್ಟರು. ಗೃಹಸ್ಥರ ಮಗನಾಗಿದ್ದ ನಮ್ಮ ಗುರುಸಿದ್ಧನು ಗೃಹಸ್ಥರ ಶ್ವೇತಾಂಬರವನ್ನು ತೆಗೆದು, ಪವಿತ್ರವಾದ ಕಾವೀಲಾಂಛನವನ್ನು ಧರಿಸಿ, ಯಕ್ಕುಂಡಿ ವಿರಕ್ತಮಠದಲ್ಲಿ ವಟುವಾಗಿ ನೋಟಕರ ಕಣ್ಮನಗಳನ್ನು ಆಕರ್ಷಿಸುತ್ತ ಸುಳಿದಾಡಲಾರಂಭಿಸಿದನು. ಸ್ವಲ್ಪ ದಿನಗಳಲ್ಲಿ ಶ್ರೀ ನಿರಂಜನಸ್ವಾಮಿಗಳು ಲಿಂಗೈಕ್ಯರಾದರು. ಮುಂದೆ ಅವರ ಸ್ಥಾನಾಪನ್ನರಾದ ಈಗಿದ್ದ ಶ್ರೀ ಮುರುಗೇಂದ್ರಸ್ವಾಮಿಗಳವರು ಆಶ್ರಮೋಚಿತವಾದ ಸಂಸ್ಕೃತ ವಿದ್ಯಾಭ್ಯಾಸ ಮಾಡಿಸಲಿಕ್ಕೆ ಇವರನ್ನು ಹಾವೇರಿಗೆ ಕಳಿಸಿದರು. ಅಲ್ಲಿ ಇವರು ವ್ಯಾಕರಣ, ಸಾಹಿತ್ಯಗಳಲ್ಲಿ ಪರಿಣತೆಯನ್ನು ಹೊಂದಿ, ಹುಬ್ಬಳ್ಳಿ, ಸೊಲ್ಲಾಪುರ ಪಾಠಶಾಲೆಗಳಲ್ಲಿ ಕೆಲ ದಿನಗಳಿದ್ದು ಮುಂದೆ ಶ್ರೀ ಕ್ಷೇತ್ರಕಾಶಿಗೆ ದಯಮಾಡಿಸಿದರು. ಅಲ್ಲಿ ಇವರು ೧೨ ವರ್ಷಗಳವರೆಗೆ ಅಧ್ಯಯನ ಮಾಡಿದರು. ಇವರು (ಪಂ॥ ಕಾಶೀನಾಥಶಾಸ್ತ್ರಿಯಕ್ಕುಂಡಿ) ನಾಲ್ಕು ವರ್ಷಗಳ ಹಿಂದೆ ಕಲ್ಕತ್ತಾ ಯೂನಿವರ್ಸಿಟಿ ಪರೀಕ್ಷೆಯಲ್ಲಿ ನವೀನ ನ್ಯಾಯಮಧ್ಯಮ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯೊಳಗೆ ಪ್ರಥಮ ನಂಬರ ಪಡೆದು ತೇರ್ಗಡೆ ಹೊಂದಿದರು. ಈ ವರ್ಷ ನ್ಯಾಯತೀರ್ಥ ಪರೀಕ್ಷೆಯಲ್ಲಿ ಕೂಡ್ರತಕ್ಕವರಿದ್ದರು. ಅಷ್ಟರಲ್ಲಿ ಅವರ ಪ್ರಕೃತಿಯು ಕೆಟ್ಟಿತು. ಡಾಕ್ತರರು - ನಿಮ್ಮ ದೇಶಕ್ಕೆ ಹೋಗಿರಿ ! ಹವೆಯನ್ನು ಬದಲಿಸಿರಿ; ಇಲ್ಲದಿದ್ದರೆ ನಿಮಗೆ ಕ್ಷಯರೋಗವಾಗುವದು - ಎಂದು ಹೇಳಿದ್ದರಿಂದ ನಿರ್ವಾಹವಿಲ್ಲದೆ ಕಳೆದ ಪುಷ್ಯಮಾಸದಲ್ಲಿ ನಮ್ಮ ದೇಶಕ್ಕೆ ದಯಮಾಡಿಸಿ ಅಥಣಿಗೆ ಬಂದು ಮುಟ್ಟಿದರು. ಅಲ್ಲಿ ಕೆಲದಿನ ಶ್ರೀ ಶಿವಯೋಗಿಗಳ ಸೇವೆಯನ್ನು ಮಾಡಿ ಆಶೀರ್ವಾದವನ್ನು ಹೊಂದಿ ಇಲ್ಲಿಗೆ ಬಂದರು. ಹವೆಯ ಬದಲಾವಣೆಯಿಂದ ಇವರ ಪ್ರಕೃತಿಯು ದಿನೇ ದಿನೇ ಗುಣವಾಗುತ್ತ ನಡೆಯಿತು. ತಮ್ಮ ಯಕ್ಕುಂಡಿ ವಿರಕ್ತಮಠದಲ್ಲಿ ಸ್ವತಃ ಪಂಡಿತಾರಾಧ್ಯಚರಿತವೆಂಬ ಸಂಸ್ಕೃತ ಪುರಾಣವನ್ನು ಪಂಡಿತ ಪಾಮರರಿಗೆ ಸರಿಯಾಗಿ ಬೋಧವಾಗುವಂತೆ ರಸಾಲವಾಣಿಯಿಂದ ಹೇಳಿ ಫಾಲ್ಗುಣವದ್ಯ ಚತುರ್ದಶಿ ದಿವಸ ಪುರಾಣಸಮಾಪ್ತಿ ಮಂಗಲವನ್ನು ಮಾಡಿದರು. ಇದೇ ಚೈತ್ರ ಶುದ್ಧ ಪ್ರತಿಪದೆಯ ದಿವಸ ಗತಿಸಿದ ಶ್ರೀ ನಿರಂಜನಸ್ವಾಮಿಗಳ ಪುಣ್ಯತಿಥಿಯ (ಕೈವಲ್ಯಮಹೋತ್ಸವದ) ನಿಮಿತ್ತದಿಂದ ಶ್ರೀಯುತ ಪಾವಟೆ ವಕೀಲರ ಅಧ್ಯಕ್ಷತೆಯ ಕೆಳಗೆ ಕೂಡಿದ ಮಹಾಸಭೆಯಲ್ಲಿ ಶ್ರೀ ಬಸವೇಶ್ವರನ ಆಧುನಿಕ ಸುಧಾರಕರಿಗೂ ಸಮ್ಮತವೆನಿಸುತ್ತಿರುವ ಉದಾರ ವಿಚಾರಗಳಿಂದ ಕೂಡಿರುವ ಸಮಾಜರಚನೆಯ ಬಗ್ಗೆ ಪ್ರಗಲ್ಭವಾದ ಭಾಷಣ ಮಾಡಿದರು. ಇವರು ಭೂತದಯೆಯಿಲ್ಲದವನು ಮನುಷ್ಯನೇ ಅಲ್ಲವೆಂದು ಮೇಲಿಂದ ಮೇಲೆ ಅನ್ನುತ್ತಿದ್ದರು. ಇಷ್ಟೇ ಅಲ್ಲ, ನುಡಿಯಂತೆ ತಮ್ಮ ನಡೆಯನ್ನಾದರೂ ಇಟ್ಟಿದ್ದರು. ಸಂಸ್ಕೃತ ಭಾಷಾಕೋವಿದರೂ, ಪರಿಸ್ಥಿತಿಯನ್ನರಿತವರೂ, ಐಕ್ಯತಾಪ್ರಿಯರೂ, ಪ್ರಾಣಿದಯಾಪರರೂ, ಕರ್ತೃತ್ವಶಾಲಿಗಳೂ ಇದ್ದದ್ದರಿಂದ ಸಮಾಜದ ಬಹುಜನ ಪ್ರೀತಿಗೆ ಪಾತ್ರರಾಗಿದ್ದರು. ಕಾಲಗತಿಯಿಂದ ನಮ್ಮ ಸಮಾಜದಲ್ಲಿ ಅನೈಕ್ಯಮೂಲಕ ಹರಡಿಕೊಂಡಿರುವ ಅನರ್ಥವನ್ನು ಹೋಗಲಾಡಿಸುವ ಕುರಿತು ವಿಶೇಷಪ್ರಯತ್ನ ಮಾಡುತ್ತಿದ್ದರು. ಇವರು ಕ್ಷೇತ್ರಕಾಶಿಯಲ್ಲಿ ಸಂಸ್ಕೃತ ಕಲಿಯುವ ವಿದ್ಯಾರ್ಥಿಗಳ ದೆಸೆಯಿಂದ ಒಂದು ವೀರಶೈವ ವಿದ್ಯಾರ್ಥಿಗಳ ಮಂದಿರವನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಒಳ್ಳೇ ಅನುಕೂಲತೆಯನ್ನು ಒದಗಿಸಿಕೊಟ್ಟಿರುವರು. ಚಿತ್ರದುರ್ಗ, ಗದಗ, ಹಾಳಕೇರಿ, ಶಿವಯೋಗಮಂದಿರ, ನಂದಗಡ, ದಾವಣಗೆರೆ ಶ್ರೀಗಳವರ ಕಡೆಗೆ ಹೋಗಿ ತಮ್ಮ ವಿದ್ಯಾರ್ಥಿಮಂದಿರದ ಚಿರಸ್ಥಾಯಿತ್ವದ ಬಗ್ಗೆ ಮಾಸಿಕವನ್ನು ಗೊತ್ತುಮಾಡಿ ಆಯಾಯ ಸ್ವಾಮಿಗಳ ಕಡೆಯಿಂದ ವಾಗ್ದಾನವನ್ನು ಪಡೆದಿದ್ದರು. ಕರ್ನಾಟಕದಲ್ಲಿ ವೀರಶೈವ ಸಂಸ್ಕೃತ ಕಾಲೇಜವನ್ನು ಸ್ಥಾಪಿಸುವದಕ್ಕಾಗಿ ಇನ್ನು ಪ್ರಯತ್ನಮಾಡತಕ್ಕವರಿದ್ದರು. ಹೋದ ವರ್ಷ ನವಲಗುಂದದಲ್ಲಿ ಕೂಡಿದ ವಿರಕ್ತರ ಪ್ರಥಮ ಸಭೆಯ ಅಧ್ಯಕ್ಷ ಬಹುಮಾನವು ಇವರಿಗೆ ಲಭ್ಯವಾಗಿತ್ತು. ಅಲ್ಲಿ ಇವರು ಉತ್ತಮವಾಗಿ ಕೆಲಸ ಮಾಡಿದರು. ಇವರು ಕೇವಲ ವಿರಕ್ತರ ಅಭಿಮಾನವನ್ನು ಹಿಡಿಯದೆ ಪಟ್ಟದ ಚರಮೂರ್ತಿಗಳಿಗೂ ವಿರಕ್ತರಿಗೂ ಇರುವ ಭೇದಭಾವನವನ್ನು ಮುರಿದುಹಾಕಬೇಕೆಂದು ಪ್ರಯತ್ನ ನಡಿಸಿದ್ದರು. ಈ ವರ್ಷ ಬೈಲಹೊಂಗಲ, ಸವದತ್ತಿ ಗ್ರಾಮಗಳಿಗೆ ಹೋಗಿ ಸಭೆ ಕೂಡಿಸಿ, ಸಮಾಜಸುಧಾರಣೆಯ ಬಗ್ಗೆ ವ್ಯಾಖ್ಯಾನ ಕೊಟ್ಟರು. ಇವರಿಗೆ ಅಂತ ಸಮಯಕ್ಕೆ ೩೨ ವರ್ಷಗಳಾಗಿದ್ದವು. ತಾ॥ ೨೪-೪-೨೧ನೆ ದಿವಸ ಇವರಿಗೆ ಮೊದಲು ಜ್ವರಾತಿಸಾರ ರೋಗವುಂಟಾಯಿತು. ತಾ॥ ೨೭ನೆಯ ದಿವಸ ಬೆಳಿಗ್ಗೆ ತಮ್ಮ ಪ್ರೀತಿಯ ಭಕ್ತರನ್ನು ಕರೆದು ಅವರ ಮುಂದೆ ನನ್ನ ಶರೀರದಲ್ಲಿ ತಾಪವಿರುತ್ತದೆ. ಇನ್ನು ಮೇಲೆ ನನ್ನ ಬರವಸವನ್ನು ಹಿಡಿಯಬೇಡಿರಿ. ಶ್ರೀಗಳವರು ನನ್ನ ವಿದ್ಯಾಭ್ಯಾಸಕ್ಕಾಗಿ ಬಹಳ ಶ್ರಮ ಮಾಡಿದರು. ನಾನು ಯಾವ ಗುರುಗಳಿಂದ ಉಪಕೃತನಾಗಿದ್ದೆನೋ ಆ ಗುರುಗಳ ಪಾದಸೇವೆಯನ್ನು ಮಾಡಿ ಕೃತಾರ್ಥನಾಗಲಿಲ್ಲ; ಯಾವ ಸಮಾಜದ ದುಡ್ಡಿನಿಂದ ವಿದ್ಯಾಭ್ಯಾಸ ಮಾಡಿದ್ದೆನೋ ಆ ಸಮಾಜಸೇವೆಯನ್ನು ಮಾಡಿ ಋಣಮುಕ್ತನಾಗಲಿಲ್ಲ; ಈಶ್ವರಾಜ್ಞೆಯಿಂದ ನಿಮ್ಮೆಲ್ಲರನ್ನೂ ಬಿಟ್ಟು ನಾನು ಶಿವಲೋಕಕ್ಕೆ ಹೊರಟೆನು. ಶಿವನೇ ಗತಿ ! ಶಿವಪಾದವನ್ನು ನಂಬಿರಿ. ಎಲ್ಲವೂ ನಿರರ್ಥಕವಿದೆ. ಹೆಚ್ಚು ಮಾತಾಡಲಿಕ್ಕೆ ನನಗೆ ಶಕ್ತಿಯಿಲ್ಲ. ಶಿವ ! ಶಿವ ! ಶಿವ ! ಎಂದು ಆಕಾಶದ ಕಡೆಗೆ ನೋಡಿ ಕೈಮುಗಿದರು; ವೈಖರೀವಾಣಿಯು ಶಾಂತವಾಯಿತು; ಕೂಡಲೇ ದೇಹಪಂಜರದಿಂದ ಪ್ರಾಣಪಕ್ಷಿಯು ಹೊರಟುಹೋಯಿತು. ಅಂತ್ಯೇಷ್ಟಿಯು ವಿಧ್ಯುಕ್ತವಾಗಿ ಜರುಗಿಸಲ್ಪಟ್ಟಿತು. ಈಶ್ವರಾಜ್ಞೆಯು ಅಲಂಘನೀಯವಾದದ್ದು. ದೇವರು ಇವರ ಆತ್ಮಕ್ಕೆ ಶಾಶ್ವತವಾದ ಶಾಂತಿಯನ್ನೀಯಲಿ.

ಪ್ರತ್ಯಕ್ಷದರ್ಶಿ.

ಸೇವಿಂಗ್ಸ ಬಾಕ್ಸ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ. ಕೈಯಲ್ಲಿರುವಾಗ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವದೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರದುಕೊಳ್ಳುವದು. ಇದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ 2—0—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
32 102 ಜೈನಾಬಜಾರ್ ರೋಡ್ ಮದರಾಸು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.
ಕ್ರಯ ನಂ. 1 6—8—0
ನಂ. 2 7—8—0

32 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಉತ್ತಮ ವೀರಶೈವ ಗ್ರಂಥಗಳು.
(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ).

ಪಂಡಿತಾರಾಧ್ಯಚರಿತಂ.—ಇದು ವೀರಶೈವ ಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತೆಗಳೂ, ಶ್ರೀಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣ ಗ್ರಂಥ ೫ ರೂಪಾಯಿ.

ಬಸವರಾಜ ವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೬-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಖ್ಯಾನರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧—೦—೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ-೧-೨-೦; ಸಟೀಕ ಶತಸೂತ್ರರತ್ನ ೮ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಕರಶತಕ ೩ಆಣೆ; ಶಂಕರಲಿಂಗಕಂದಂ ೧೪.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.
ವಿ. ಪಿ. ಪೋಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ।	೦—೧೨—೦
ಶಿವಪೂಜಾವಿಧಿ।	೦—೧೫—೦
ಚಾರುಶೀಲೆಚರಿತ್ರೆ	೦—೯—೦
ಹರಿದಾಸಿ	೦—೭—೦

೧೯೨೧ ನೆಯ ಇಸವಿ ಮೇ ತಾ॥ ೮ ರಿಂದ ೧೯೨೧ ನೆಯ ಮೇ ತಾ॥ ೧೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮ ಸಂವತ್ಸರದ ವೈಶಾಖ ಶುದ್ಧ ಪಾಡ್ಯಮಿಯಿಂದ ವೈಶಾಖ ಶುದ್ಧ ಸಪ್ತಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
8	ಭಾನು	ಪಾಡ	47-16	ಭರ	1-37	26
9	(1)ಸೋಮ	ಬಿದಿ	43-19	ಕೃತ್ತಿಕ	0-24	27
10	ಮಂಗಳ	ತದಿ	38-31	ಮೃಗ	55-45	28
11	ಬುಧ	ಚೌತಿ	33-9	ಆದ್ರಾ	51-57	29
12	ಗುರು	ಪಂಚ	27-20	ಪುನ	47-57	30
13	ಶುಕ್ರ	ಷಷ್ಠಿ	21-12	ಪುಷ	43-42	31
14	ಶನಿ	ಸಪ್ತ	15-4	ಆಶ್ಲೇ	39-27	1

(1) ಶ್ರೀ ಬಸವೇಶ್ವರ ಜಯಂತಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃಪಾ | ಘನಪಥಕೃತಾವತಾರಾ ಪಶ್ಯಜ್ಞ ನಹ್ಯ ತ್ವನೋಹರಾಜೀಯಾ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸದಶೀಲ ನಾಕಲಿತ ಸಾದ್ಗುಣ್ಯಾಲವಾಲಂವರ |
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124

ಸಂಪುಟ ೩೮) ಮೈಸೂರ್ ಸ್ಟಾರ್ ಸರ್ ೧೯—೨೧ ನೆಯ ಇಸವಿ ಮೇ ತಾರೀಖು ೧೫ ನೆಯ ಭಾನುವಾರ ಸಂಚಿಕೆ ೧೯

ಬಸವ ಸಮಿತಿ ಬೆಂಗಳೂರು

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಕಪ್ಪ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
18 ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೮—೦ ಸಹಾಯ್ಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ
ಹೊಸನಮೂನೆಯ ಲೀವರ್ ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೂವ್‌ಮೆಂಟ್ಸ್‌ಗಳಿಂದ ಮಾಡಿದೆ. ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು. ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ. 5-4-0

ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542,
33 ಪಾರ್ಕ್‌ಟೌನ್ ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.
ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ ಮುಖ	ರೂ. ಇಂದ.		ರೂ. ವರೆಗೆ.
4	0.12.0	,,	50.0.0
5	0. 8.0	,,	100.0.0
6	0.12.0	,,	100-0.0
7	6. 0.0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0. 6.0	ಇಂದ	10-0.0
8	0- 8.0	,,	100.0.0
9	0.12.0	,,	100-0.0
10	0.14.0	,,	100.0.0
11	3. 8.0	,,	100.0.0
12	4. 0.0	,,	100.0.0
13	4. 8.0	,,	100.0.0
14	6. 0.0	,,	100-0.0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15.0.0	,, 40.0.0
ಮೆಣಸು	,, 7-8.0	,, 15.0.0
ಕಡಲೆ	,, 2-8-0	,, 7.0.0
ನೆನೆದಕಡಲೆ	,, 1-8.0	,, 3.0.0
ಕಮಲಾಕ್ಷಿ	,, 1-0.0	,, 2-0.0
ದೊಡ್ಡ ,,	,, 0-8-0	,, 1.0.0
ಅದಕ್ಕಿಂತ	,, 0-6.0	,, 0-8.0
ಸ್ಫಟಿಕ108ಕ್ಕೆ	4-8-0	,, 30-0.0
ಶ್ರೀಚಕ್ರ1ಕ್ಕೆ	8-0.0	,,100-0.0
ಲಿಂಗ 1ಕ್ಕೆ	1-0.0	,, 100.0.0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0.0 ಬಿ. 50-0.0 ಸಿ. 40-0.0 ಡಿ. 25-0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
12 ಕಂಪನಿ, ಚೌಕಂಬಾ ಕಾಶೀ.

ಶಕ್ತಿಶೋಧಕ ! ಮನೋಲ್ಲಾಸಿಕವೆಂಬ ಧಾತುಪುಷ್ಟಿಕ !!
ಮಹದ್ರಾಕ್ಷಾದಿ ಚೂರ್ಣವು. 31

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾತರಕ್ತ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿತಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 23

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಜರ್ಮನ್ ಬೆಳ್ಳಿಯ ರೇಡಿಯಂ ರಿಸ್ಟ್‌ಲೆಟ್ ವಾಚ್.

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೆರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿಯಾರ 1ಕ್ಕೆ 6—8—0.

33 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ರೈಲ್ವೆ ಲೀವರ್ ವಾಚ್.

೫ ವರುಷ ಖಾತ್ರಿಯಾದ ಗ್ಯಾರಂಟಿ ಮತ್ತು ೧೫ ಬಹುಮಾನಗಳ ಸಹಿತ ಗಡಿಯಾರ ೧ ಕ್ಕೆ ೫-೦-೦.

12
1
2
3
4
5
6
7
8
9
11

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಮಜಬೂತಾದ ಸಾಮಾನುಗಳಿಂದ ಮಾಡಿದೆ ಮತ್ತು ಚಕ್ರಗಳಲ್ಲಿ ಕೆಂಪುಗಳು ಕತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ಇವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟೋಪಿಯಿ 1, ಶಾಮವಂತಿಗೆಹುವ್ವು, 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ರಾಗಮಾಲಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ಪಂಚದಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾರ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಛಂಗಾರದ ಉಂಗುರ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. ೫-೦-೦.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
33 89, ನಾರಾಯಣಮೊದಲಿಬೀದಿ, ಮದ್ರಾಸು.

ಮೈಸೂರು ಸ್ಟಾರ್

೧೯೨೧ ನೆಯ ಇಸವಿ ಮೇ ತಾ|| ೧೫ ನೆಯ ಭಾನುವಾರ.

ಒಕ್ಕಲಿಗರ ಸಭೆ

ತುಮಕೂರು ಡಿಸ್ಟ್ರಿಕ್ಟಿನ ಒಕ್ಕಲಿಗರ ಸಭೆಯು ಸಿದ್ಧಗಂಗಾಕ್ಷೇತ್ರದಲ್ಲಿ ಕಡಬದ ಮ|| ಹುಚ್ಚವೀರೇಗೌಡರ ಅಧ್ಯಕ್ಷತೆಯಿಂದ ಉಪಯೋಗಕರವಾಗಿ ನಡೆದಿತೆಂದು ಕೇಳಿ ಸಂತೋಷಿಸುತ್ತೇವೆ. ಈ ಸಭೆಗೆ ಒಕ್ಕಲಿಗರ ಪ್ರಮುಖರಾದ ರಾ|| ಸಾ|| ಚನ್ನಯ್ಯನವರು ಮ|| ಗಳಾದ ಕೆ. ಎಚ್. ರಾಮಯ್ಯನವರು, ಎ. ಸುಬ್ಬಯ್ಯನವರು, ಬಿ. ಪುಟ್ಟಯ್ಯನವರು, ಬಿ. ಎಚ್. ವಿಜಯದೇವರು, ಎಂ. ಎಲ್. ಶ್ಯಾಮಗೌಡರು, ಮೊದಲಾದ ವಿದ್ಯಾವಂತರುಗಳು ದಯಮಾಡಿಸಿದ್ದುದು ಮಾತ್ರವೇ ಅಲ್ಲದೆ ಸರ್ಕಾರದ ದೊಡ್ಡ ಉದ್ಯೋಗಿಗಳಾದ ಮಿ|| ರಾಮಲಿಂಗರೆಡ್ಡಿ, ಮಿ|| ಚಾಂಡಿ, ಮಿ|| ಕೆ. ಮೆಥ್ರಾ, ಮಿ|| ಬಾಳರಾಜ ಅರಸ್ ಮೊದಲಾದವರೂ ಹುಬ್ಬಳ್ಳಿಯಿಂದ ಮ|| ಮುದರೆಡ್ಡಿಯವರೂ, ಹೈದರಾಬಾದು ಚಿತ್ತೂರಿನ ರಡ್ಡಿ ಪ್ರಮುಖರೂ ದಯಮಾಡಿಸಿದ್ದುದರಿಂದ ಸಭಾಕಾರ್ಯಗಳು ಮತ್ತಷ್ಟು ವಿಜೃಂಭಣೆಯಿಂದಲೂ ಸಾರ್ಥಕವಾಗಿಯೂ ಜರುಗಲು ಅವಕಾಶವಾಯಿತು. ಸಭಾಧ್ಯಕ್ಷರೂ, ಮಿ|| ಕೆ. ಚಾಂಡಿಯವರೇ ಮೊದಲಾದ ಪ್ರಮುಖರೂ ಮಾಡಿದ ಭಾಷಣಗಳು ಬೋಧಪ್ರದವಾಗಿಯೂ ಉತ್ತೇಜಕವಾಗಿಯೂ ಕರ್ತವ್ಯವನ್ನು ಎಚ್ಚರಿಸಿ ಕೊಡತಕ್ಕವಾಗಿಯೂ ಇದ್ದುವು. ಒಕ್ಕಲಿಗರಸಂಘದ ನಿಧಿಗೆ ಸಭಾಧ್ಯಕ್ಷರು ೩೦೦೦ ರೂ. ಗಳನ್ನು ವಾಗ್ದಾನಮಾಡಿ ೫೦೦ ರೂ. ಗಳನ್ನು ಆಗಲೇ ಕೊಟ್ಟರು. ಒಟ್ಟು ಸಭಿಕರಿಂದೆಲ್ಲಾ ೫ ಸಾವಿರ ಚಿಲ್ಲರೆ ರೂ. ಗಳ ವಾಗ್ದಾನವಾಯಿತು.

ಶ್ರೀಮತಿ ರೇವಮ್ಮನವರ ಅಧ್ಯಕ್ಷತೆಯಿಂದ ಸ್ತ್ರೀಸಭೆಯೂ ನೆರವೇರಿತು. ಅವರು ಮಾಡಿದ ಭಾಷಣದ ಹಿತೋಪದೇಶವು ಸ್ತ್ರೀಮಂಡಲಿಯವರೆಲ್ಲಾ ಅನುಸರಿಸಬೇಕಾದ ಧರ್ಮಗಳ ನಿರೂಪಣೆಯಾಗಿದ್ದಿತು. ಒಕ್ಕಲಿಗ ವಿದ್ಯಾವಂತ ಪ್ರಮುಖರು ಕಾಲೋಚಿತವಾಗಿ ಮೈಮರೆಯದೆ ಮಾಡುತ್ತಿರುವ ಈ ಪ್ರಯತ್ನಗಳನ್ನೂ ಅವರ ಜನವರ್ಗದವರು ತಮ್ಮ ಪ್ರಮುಖರ ಬುದ್ಧಿವಾದಕ್ಕೆ ಬದ್ಧರಾಗಿ ತಮ್ಮ ಸಮಾಜೋನ್ನತಿಗೋಸ್ಕರ ಉದಾರಭಾವಗಳಿಂದ ಒತ್ತಾಸೆಯಾಗಿ ನಿಲ್ಲುತ್ತಿರುವುದನ್ನೂ, ತಮ್ಮ ಪುರುಷಮಂಡಲಿಯಂತೆಯೇ ಸ್ತ್ರೀವರ್ಗವನ್ನೂ ಸಂಸ್ಕರಿಸಲು ಅವರು ಗಮನ ಕೊಟ್ಟಿರುವುದನ್ನೂ ನೋಡಿ ನಾವು ವಿಶೇಷವಾಗಿ ಅಭಿನಂದಿಸದೆ ಇರಲಾರೆವು. ಇದೇ ಸಭೆಯ ಕಾಲದಲ್ಲಿ ಪಂಚಮರ ಸಭೆಯೊಂದನ್ನೂ ಕೂಡಿಸಿ ಅವರಿಗೆ ಹಿತಬೋಧೆಯನ್ನು ಮಾಡಿ ಅವರ ಉದ್ಧಾರಪ್ರಯತ್ನಕ್ಕೆ ತಾವೂ ಒತ್ತಾಸೆಯಾಗಿರುವುದನ್ನು ಕೃತ್ಯತಃ ವ್ಯಕ್ತಮಾಡಿದುದು ಒಂದು ವಿಶಿಷ್ಟಸ್ತುತ್ಯಪ್ರಯತ್ನವಾಗಿರುತ್ತದೆ. ಅವರುಗಳಲ್ಲಿರುವ ದುರಭ್ಯಾಸವನ್ನು ತಪ್ಪಿಸಲಿಕ್ಕೆ ಮಾಡಿದ ಉಪನ್ಯಾಸದ ಫಲವಾಗಿ ಸಭಿಕರಾಗಿದ್ದ ಒಬ್ಬೊಬ್ಬ ಪಂಚಮರು ಇತಃಪರಃ ತಾವು ಮದ್ಯಪಾನವನ್ನು ಖಂಡಿತವಾಗಿ ವಿಸರ್ಜಿಸಿಬಿಟ್ಟಿರುತ್ತೇವೆಂದು ಪ್ರತಿಜ್ಞೆಮಾಡಿದುದೂ ಅದಕ್ಕೆ ಮೆಚ್ಚಿ ಅಲ್ಲಿಯ ಫಾರೆಸ್ಟ್ ಉದ್ಯೋಗಿಗಳಾದ ಮ|| ವೇಣುಗೋಪಾಲಯ್ಯನವರು ತಾವು ತೊಟ್ಟಿದ್ದ ರೇಶಿಮೆಯ ಕೋಟನ್ನೇ ಕಳೆದು ಬಹುಮಾನವಾಗಿ ಕೊಟ್ಟು ಉತ್ತೇಜಿಸಿದುದೂ ಗಮನೀಯಗಳಾಗಿರುವುವು.

ದೇಶದ ಪ್ರತಿಯೊಂದು ಪ್ರಜಾವರ್ಗವನ್ನೂ ವಿದ್ಯಾದಿಸಂಪತ್ತುಗಳಲ್ಲಿ ಮುಂದುವರಿಯಿಸುವುದು ಸರ್ಕಾರದ ಮುಖ್ಯ ಕರ್ತವ್ಯವಾಗಿರುವುದು. ಅಂಥ ಕರ್ತವ್ಯವನ್ನರಿತೇ ಸಂಸ್ಥಾನದ ಮುಖ್ಯ ಜನಾಂಗವಾಗಿರುವ ಒಕ್ಕಲಿಗರ ಪುರೋಭಿವೃದ್ಧಿಗೆ ಸಾಧಕವಾದ ಸಭೆಗೆ ಮಿ|| ರಡ್ಡಿ ಮಿ|| ಚಾಂಡಿ ಮೊದಲಾದ ಅಧಿಕಾರಿ ವರ್ಗದವರು ಬಂದು ಪ್ರೋತ್ಸಾಹಿಸಿದುದು ಅವರ ಪ್ರಜಾರಂಜನೈಕಪರಾಯಣತೆಯನ್ನು ವ್ಯಕ್ತಪಡಿಸುತ್ತದೆ. ಎಲ್ಲಾ ಅಧಿಕಾರಿಗಳೂ ಪ್ರಜೆಗಳ ಉಪ್ಪನ್ನು ತಿನ್ನುತ್ತಿರುವುದಕ್ಕೆ ಇದೊಂದು ಕೃತಜ್ಞತಾಪ್ರದರ್ಶಕ ಕಾರ್ಯವೆಂದು ಭಾವಿಸಿ, ಸಮಯದೊರೆತಾಗಳೆಲ್ಲಾ ಹೀಗೆ ಪ್ರೋತ್ಸಾಹಿಸುತ್ತ ಬಂದರೆ ಎಷ್ಟೋ ಫಲವಾದೀತು.

ಮುಖ್ಯವಾಗಿ ಸಿದ್ಧಗಂಗಾ ಕ್ಷೇತ್ರದಂಥ ಪವಿತ್ರಸ್ಥಲದಲ್ಲಿ ಈ ಸಭೆಯು ಕೂಡಲಿಕ್ಕೆ ಅಣಿಮಾಡಿಕೊಟ್ಟು ಇತರ ವಿಧದ ಪ್ರೋತ್ಸಾಹ ಸಾಹಾಯ್ಯಗಳನ್ನೆಲ್ಲಾ ಒದಗಿಸಿಕೊಟ್ಟ ಅಲ್ಲಿಯ ಶ್ರೀ ಉದ್ದಾನಸ್ವಾಮಿಗಳ ಸರ್ವಸಮದೃಷ್ಟಿಯು ಶ್ಲಾಘ್ಯವಾದುದು. ಹಿಂದುಳಿದ ಜನವರ್ಗಗಳೆಲ್ಲಾ ಪರಸ್ಪರ ಹೀಗೆ ಸಹಾಯಮಾಡುತ್ತಿರುವುದು ಅವರುಗಳ ವಿಜಯಾಭ್ಯುದಯಗಳಿಗೆ ಅತ್ಯವಶ್ಯಕವಾಗಿರುತ್ತದೆಂಬುದನ್ನು ಮರೆಯಲಾಗದು. ಸಂಪದಭ್ಯುದಯ ಪತ್ರಿಕಾಕೂಟದವರ ಹೊರತು ಇತರ ಮುಂಬರಿದ ಜನವರ್ಗಗಳವರೂ ಸಹ ಹಿಂದುಳಿದ ಜನಗಳ ಅಭ್ಯುದಯದ ವಿಷಯದಲ್ಲಿ ಸಾನುಭೂತಿಯನ್ನು ತೋರಿಸದಿರಲಾರರು. ಯಾರೇ ಆಗಲೀ ವಾಚಾ ತೋರಿಸುವ ಅಭಿಮಾನಗಳನ್ನು ಕಾರ್ಯತಃ ತೋರಿಸಿದಾಗಲೇ ಅದು ಯಥಾರ್ಥಫಲಪ್ರದವೆನಿಸಿಕೊಂಡೀತು. ಸಂಪದಭ್ಯುದಯ ಕೂಟದವರ ಪರೋತ್ಕರ್ಷಾಸಹಿಷ್ಣುತೆಯೊಂದು ತಪ್ಪಿದರೆ ದೇಶದಲ್ಲಿ ಸರ್ವಜನವರ್ಗಗಳಲ್ಲೂ ಪರಸ್ಪರ ಸೌಹಾರ್ದವು ವೃದ್ಧಿಗೊಳ್ಳಲು ಅವಕಾಶವಾದೀತು. ಮುಖ್ಯವಾಗಿ ಒಕ್ಕಲಿಗಜನಮಂಡಲಿಯವರು ಈಗ ಸ್ವಜನಾಭ್ಯುದಯಕ್ಕಾಗಿ ಮಾಡುತ್ತಿರುವ ದೃಢಪ್ರಯತ್ನಗಳು ಇತರರಿಗೆಲ್ಲಾ ಮಾರ್ಗದರ್ಶಕವೂ ಉತ್ತೇಜಕವೂ ಆಗಿವೆಯೆಂದು ಹೇಳಲು ಸಂತೋಷಪಡುತ್ತೇವೆ.

ನೈಜಾಮರ ಪ್ರಜಾರಂಜಕತೆ.

ಹೈದರಾಬಾದು ಸಂಸ್ಥಾನವು ತನ್ನ ಹಿಂದಣ ರಾಜ್ಯತಂತ್ರಮಾಲಿನ್ಯವನ್ನೆಲ್ಲಾ ಕಳೆದುಕೊಂಡು ಈಗೀಗ ಸುಪ್ರಕಾಶಕ್ಕೆ ಬರುತ್ತಲಿದೆ. ಈಗಣ ನಿಜಾಂರವರು ತಮ್ಮ ತಂದೆಯವರ ಕಾಲಕ್ಕಿಂತಲೂ ಚೆನ್ನಾಗಿ ಪ್ರಜಾಪರಿಪಾಲನೆಯಲ್ಲಿ ಬದ್ಧಾದರರಾಗಿ ಕಾಲೋಚಿತಗಳಾದ ಅನೇಕ ಸುಧಾರಣೆಗಳನ್ನು ಮಾಡಿಸುತ್ತಿದ್ದಾರೆ. ಆ ದೇಶದಲ್ಲಿ ಕೆಲವು ಜಿಲ್ಲೆಗಳೊಳಗೆ ವಿಶೇಷವಾಗಿ ಕ್ಷಾಮಬಾಧೆಯು ತಟ್ಟಿರುವುದರಿಂದ ಅಂಥ ಸ್ಥಲಗಳಿಗೆಲ್ಲಾ ತಾವೇ ಪ್ರತ್ಯಕ್ಷವಾಗಿ ಹೋಗಿ ನೋಡಿಕೊಂಡು ಬಂದುದಲ್ಲದೆ, ಪದ್ಧತಿಯಾಗಿ ಇಂಥ ಸಮಯಗಳಲ್ಲಿ ಪ್ರಜೆಗಳಿಂದ ಎತ್ತಿಸುತ್ತಿದ್ದ ನಜರುಗಾಣಿಕೆಯ ಏರ್ಪಾಟನ್ನು ತಪ್ಪಿಸಿಬಿಟ್ಟುದಲ್ಲದೆ, ಎತ್ತಿದ್ದ ಹತ್ತಾರುಲಕ್ಷ ರೂ. ಗಳನ್ನು ಕೂಡ ಹಿಂದಿರುಗಿ ಕೊಡಿಸಿಬಿಟ್ಟುದನ್ನು ಹಿಂದೆಯೇ ನಮ್ಮ ಪತ್ರಿಕಾವಾಚಕರಿಗೆ ತಿಳಿಯಿಸಿರುತ್ತೇವೆ. ಈಗ ಮತ್ತೊಂದು ಅಪ್ಪಣೆಮಾಡಿರುವುದೇನೆಂದರೆ-ಯಾವಯಾವ ಕಡೆ ಮಳೆಬೆಳೆಗಳಿಲ್ಲದೆ ಪ್ರಜೆಗಳು ಕ್ಷಾಮಪೀಡನೆಗೆ ಗುರಿಯಾಗಿದ್ದಾರೋ ಅಲ್ಲೆಲ್ಲಾ ಕಂದಾಯವನ್ನು ಎತ್ತದಂತೆ ಮನ್ನಿಸಿಬಿಡಬೇಕೆಂದು ಅನುಗ್ರಹಿಸಿದ್ದಾರೆ. ಮತ್ತು ಅನೇಕ ಸ್ಥಲಗಳಲ್ಲಿ ಕುಡಿಯುವ ನೀರಿಗೂ ಬಹಳ ಅಭಾವವಾಗಿದ್ದುದರಿಂದ ಆ ಕಷ್ಟವನ್ನು ತಾವು ಕಣ್ಣಾರ ಕಂಡು ಸೈರಿಸಲಾರದೆ ಆ ಸ್ಥಲಗಳಿಗೆಲ್ಲಾ ಜಲಸೌಕರ್ಯವನ್ನುಂಟುಮಾಡಿಕೊಡಲು ೧೫ ಲಕ್ಷ ರೂ. ಗಳನ್ನು ಅಪ್ಪಣೆಮಾಡಿರುತ್ತಾರೆ. ಇದರಲ್ಲಿ ೧ ಲಕ್ಷ ರೂ. ಗಳನ್ನು ತಮ್ಮ ಸ್ವಂತದ ಹಣದಿಂದ ಕೊಟ್ಟಿರುತ್ತಾರೆ. ತಮ್ಮ ಸರ್ಕಾರದಿಂದ ೫ ಲಕ್ಷ ರೂ. ಗಳನ್ನು ಕೊಡಿಸಿರುತ್ತಾರೆ. ಉಳಿದ ೯ ಲಕ್ಷ ರೂ. ಗಳನ್ನು ಆಯಾ ಸ್ಥಲಿಕ ಸಂಘಗಳಿಂದ ಕೊಡುವಂತೆ ಅಪ್ಪಣೆಮಾಡಿದ್ದಾರೆ. ಮತ್ತು ತಮ್ಮ ಮುಖ್ಯಮಂತ್ರಿಯವರ ಸೂಚನೆಯನ್ನನುಮೋದಿಸಿ ತಮ್ಮ ಸಂಸ್ಥಾನದಲ್ಲಿ ನ್ಯಾಯಶಾಖೆ ಕಾರ್ಯನಿರ್ವಾಹಶಾಖೆಗಳೆರಡನ್ನೂ ಒಂದೇ ಅಧಿಕಾರಿಯಲ್ಲಿರದಂತೆ ಪ್ರತ್ಯೇಕಗೊಳಿಸುವ ಸಂಸ್ಕರಣವನ್ನು ಕೂಡ ಇಷ್ಟರಲ್ಲೇ ವ್ಯವಹರಣೆಗೆ ತರಿಸುವೆವೆಂದೂ ಅಪ್ಪಣೆ ಮಾಡಿದ್ದಾರೆ. ಭರತಖಂಡದ ಸರ್ಕಾರದವರು ಕೂಡ ಏರ್ಪಡಿಸಲಾರದೆ ಹಿಂದೆಗೆದಿರುವ ಈ ಸಂಸ್ಕರಣವನ್ನು ನಮ್ಮ ಮೈಸೂರು ಪ್ರಭುತ್ವದವರು ಈ ಮೊದಲೇ ವ್ಯವಹಾರಕ್ಕೆ ತಂದಿದ್ದಾರೆ. ಈಗ ಹೈದರಾಬಾದು ಮೊದಲಾದ ಇತರ ಸ್ವದೇಶೀಯ ಸಂಸ್ಥಾನಗಳು ಕೂಡ ತರುವುದಕ್ಕುಪಕ್ರಮಿಸಿರುತ್ತವೆ. ಇವನ್ನು ನೋಡಿದ ಮೇಲಾದರೂ ಆಂಗ್ಲ ಸರ್ಕಾರದವರು ವ್ಯವಹಾರಕ್ಕೆ ತರದೆ ಇರಲಾದೀತೆ? ನಿಜಾಂ ಪ್ರಭುಗಳ ಉದಾರಪ್ರವೃತ್ತಿಯು ವಿಶೇಷ ಪ್ರಜಾರಂಜಕವಾಗುತ್ತಿರುವುದು ಅಭಿನಂದನೀಯವಾಗಿದೆ.

ಶ್ರೀ ಶಿವಯೋಗಿಗಳು.

ಅಥಣಿಯ ಸುಪ್ರಸಿದ್ಧ ಮಹಾತ್ಮರಾದ ಶ್ರೀ ಶಿವಯೋಗಿಗಳ ಜೀವಿತ ಚರಿತ್ರವು ನಮ್ಮಲ್ಲಿಗೆ ಬರೆದು ಬಂದಿದ್ದು ಅದನ್ನು ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ವಿರಕ್ತಮಂಡಲದಲ್ಲಿ ಇಂಥ ಸರ್ವಾಂಗಪಾವನ ಚರಿತ್ರವನ್ನು ಕಾಣುವುದು ದುರ್ಲಭ. ನಿಜವಾದ ವೈರಾಗ್ಯ, ನಿಶಿತವಾದ ಆಚಾರ, ನಿರ್ಮಲವಾದ ಭಾವ, ನಿಷ್ಕಳಂಕವಾದ ಶಾಂತಿ, ನಿರುಪಮವಾದ ಶಿವಯೋಗನಿಷ್ಠೆ, ನಿತ್ಯವಾದ ಶಮದಮಾದಿ ಸಂಪತ್ತಿ, ನಿಶ್ಚಲವಾದ ಸಮಾಧಿ ಇವುಗಳಿಗೆಲ್ಲಾ ಶಿವಯೋಗಿಗಳು ತವರಾಗಿದ್ದರು. ನಿರಾಭಾರಿಗಳಲ್ಲಿ ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಬಲ್ಲಿದರಾಗಿರಬಹುದು. ಕೆಲಕೆಲರಲ್ಲಿ ಸ್ವೇಚ್ಛಾಚಾರಾನುವರ್ತನೆ, ಕೆಲವರಲ್ಲಿ ಧನಾಶೆ, ಕೆಲವರಲ್ಲಿ ಪ್ರತಿಷ್ಠಾಕಾಂಕ್ಷೆ, ಕೆಲವರಲ್ಲಿ ಭೋಗಭಾಗ್ಯಾಭಿಲಾಷೆ, ಕೆಲವರಲ್ಲಿ ಆಹಯಸ್ಯತೆ, ಕೆಲವರಲ್ಲಿ ಶಿವಜ್ಞಾನಾಭಾಸ ಇತ್ಯಾದಿಗಳೆಲ್ಲಾ ಗೋಚರಿಸುವುದುಂಟು. ಯಾವುದೊಂದು ಲೋಪದೋಷಗಳಿಗೂ ಈಡಾಗದೆ ಸಕಲರಿಗೂ ಆದರ್ಶವಾದ ಚರಿತ್ರವುಳ್ಳ ಚರಮೂರ್ತಿಯೆಂದರೆ ಈಗಣ ಕಾಲಕ್ಕೆ ಇವರೊಬ್ಬರೇ ಆಗಿದ್ದರೆಂದು ಹೇಳಿದರೆ ಯಾರೊಬ್ಬ ನಿರಾಭಾರಿ ಪೂಜ್ಯವಾದರೂ ನಮ್ಮ ಮೇಲೆ ಆಗ್ರಹಗೊಳ್ಳಲಿಕ್ಕಿಲ್ಲವೆಂದು ನಂಬುತ್ತೇವೆ.

ವೀರಶೈವರಲ್ಲಿ ಶಿವಜ್ಞಾನಪರಿಪಾಕದಿಂದ ಅಂತರ್ಲಿಂಗಾನುಸಂಧಾನಗೊಂಡ ಎಂಥ ಅನುಭವಿಯಾದರೂ ಬಹಿರ್ಲಿಂಗ ಪೂಜಾದಿ ನಿತ್ಯಕ್ರಿಯೆಯನ್ನು ದೂರೀಕರಿಸಲು ಸಿದ್ಧಾಂತದ ಅಪ್ಪಣೆಯಿರುವುದಿಲ್ಲ. ಶ್ರೀ ಶಿವಯೋಗಿಗಳು ಪರಮ ಶಿವಾನುಭವಿಗಳಾಗಿದ್ದರೂ ಸಿದ್ಧಾಂತಮಾರ್ಗಕ್ಕೆ ಲೇಶವೂ ತಪ್ಪದೆ ಕ್ರಿಯಾಜ್ಞಾನಗಳೆರಡನ್ನೂ ತಮ್ಮ ಅನುಷ್ಠಾನದಲ್ಲಿಟ್ಟುಕೊಂಡಿದ್ದುದು ಅವರ ಸರ್ವಸಂಮಾನ್ಯತೆಗೆ ಮೆರುಗನ್ನುಂಟುಮಾಡತಕ್ಕುದಾಗಿದ್ದಿತು. ಆದರ್ಶಭೂತವಾಗಿದ್ದ ಇಂಥ ಅಸಾಧಾರಣ ವಸ್ತುವು ನಮ್ಮಗಳಿಂದ ಅಗಲಿಹೋದುದಕ್ಕಾಗಿ ವಿಷಾದಿಸಬೇಕಾಗಿದೆ. ಅವರಲ್ಲಿ ನಮಗಿದ್ದ ಪೂಜ್ಯಬುದ್ಧಿಯನ್ನು ವ್ಯಕ್ತಪಡಿಸುವುದಕ್ಕಾಗಿ ಸಮಾಜದ ಕ್ರಿಯಾಜ್ಞಾನಗಳ ಅಭಿವೃದ್ಧಿಗೆ ಸಾಧಕವಾದ ಯಾವುದಾದರೊಂದು ಸ್ಮಾರಕಪ್ರತಿಷ್ಠಾಪನೆಯನ್ನೇರ್ಪಡಿಸುವುದು ಸರ್ವರಿಗೂ ಮುಖ್ಯವಾಗಿ ನಿರಾಭಾರಿ ಮಂಡಲಕ್ಕೆ ಕರ್ತವ್ಯವೆಂದು ಸೂಚಿಸಲಪೇಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರು ಕಳೆದ ಬುಧವಾರ ರಾಜಧಾನಿಯಿಂದ ನೀಲಗಿರಿಗೆ ದಯಮಾಡಿಸಿದರು.

ಬೆಂಗಳೂರಿಗೆ ದಯಮಾಡಿಸುವವರಾಗಿರುವ ತಿರುವಾಂಕೂರು ಮಹಾರಾಜರು ನಮ್ಮ ಶ್ರೀಮನ್ಮಹಾರಾಜರ ಅಪೇಕ್ಷೆಯಂತೆ ರಾಜಧಾನಿಗೂ ಜೂನ್ ತಿಂಗಳಲ್ಲಿ ದಯಮಾಡಿಸುವವರಾಗಿದ್ದಾರೆಂದು ತಿಳಿಯುತ್ತೇವೆ.

ಮೆ|| ಸಿ. ಎಸ್. ದೊರೆಸ್ವಾಮಯ್ಯರು ಬೆಂಗಳೂರು ಕಂಟೋನ್ಮೆಂಟ್ ಡಿಸ್ಟ್ರಿಕ್ಟು ಜಡ್ಜಿ ಪದವಿಗೆ ಹೋಗುವವರಾಗಿದ್ದಾರೆಂದೂ, ಅದುಕಾರಣ ಚೀಫ್ ಕೋರ್ಟಿನ ಆಕ್ಟಿಂಗ್ ೩ ನೆ ಜಡ್ಜಿಯ ಸ್ಥಾನಕ್ಕೆ ಮ|| ಬ್ಯಾರಿಸ್ಟರ್ ನಾಗಪ್ಪನವರೇ ನಿಯಮಿಸಲ್ಪಡುವರೆಂದೂ ಒಕ್ಕಲಿಗರ ಪತ್ರಿಕೆಯು ಹೇಳಿರುತ್ತದೆ.

ಕೋಲಾರದಲ್ಲಿ ಪ್ರೊಬೇಷನರು ಅ|| ಕಮಿಷನರಾಗಿದ್ದ ಮ|| ಸಿ. ಎಂ. ಚಿನ್ನಪ್ಪನವರು ತುಪಾಕಿಗುಂಡನ್ನು ಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ರಿಟೈರ್ಡ್ ಕೌನ್ಸಿಲರ್ ಸಿ. ಮಾದಯ್ಯನವರ ಕಿರಿಯ ಮಕ್ಕಳು. ತಮ್ಮ ಪ್ರೊಬೇಷನರಿ ಅವಧಿಯೊಳಗೆ ಲೋಕಲ್ ಟೆಸ್ಟ್ ಪರೀಕ್ಷೆಯಲ್ಲಿ ೧-೨ ಸಲವೂ ಉತ್ತೀರ್ಣವಾಗದೆ ಹೋದ ಮನೋವ್ಯಥೆಯಿಂದಲೇ ಹೀಗೆ ಮಾಡಿಕೊಂಡರೆಂದು ಪ್ರಕಟವಾಗಿರುತ್ತದೆ. ದುರ್ದೈವವೇ ಸರಿ.

ಬೆಂಗಳೂರು ಟ್ರೂತ್ ಪತ್ರಿಕೆಯ ಸಂಪಾದಕರಾದ ಮ|| ಕೆ. ನಾರಾಯಣಸ್ವಾಮಯ್ಯರ ಮೇಲೆ ಕಳವಿನ ಅಚ್ಚುಮೊಳೆಯನ್ನು ಕೊಂಡರೆಂಬ ತಪ್ಪಿತದಿಂದ ವಿಚಾರಣೆ ನಡೆದು ಮ್ಯಾಜಿಸ್ಟ್ರೇಟರು ೧೦೦ ರೂ. ಅರ್ಥದಂಡವನ್ನು ವಿಧಿಸಿದರು. ಇದರ ಮೇಲೆ ಇವರ ಪತ್ರಿಕೆಯೊಳಗೆ ತಮಗೆ ಮಾನಹಾನಿಕರವಾದ ಲೇಖನವನ್ನು ಪ್ರಕಟಿಸಿದರೆಂದು ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯದ ಶಾಖೆಯ ಡೈರೆಕ್ಟರಾಗಿದ್ದ ಮಿ|| ವಿ. ರಂಗಸ್ವಾಮಯ್ಯಂಗಾರರು ಕ್ರಿಮಿನಲ್ ಮಾನನಷ್ಟದ ವ್ಯಾಜ್ಯವನ್ನು ಹೂಡಿದ್ದಾರೆಂದು ಕೇಳುತ್ತೇವೆ. ಮ|| ಅಯ್ಯರವರು ಇಂಥ ತೊಂದರೆಗಳಿಗೆ ಸಿಕ್ಕಿದುದು ವಿಷಾದಕರವು.

ಆನಂದವನ ಅಗಡಿಯಲ್ಲಿ ಪ್ರಕಟವಾಗುವ ಸದ್ಬೋಧಚಂದ್ರಿಕೆಯ ಕಾಣಿಕೆಯ ಗ್ರಂಥವಾದ ಅಂಗದನ ಫಿರ್ಯಾದು (ಇದರ ಬೆಲೆ ೪ ಆಣೆ) ಪೂನಾಡೆಕನ್ ಕಾಲೇಜ್ ತ್ರೈಮಾಸಿಕ ಪತ್ರಿಕೆ (ಇದರ ಚಂದಾ ೧೦ ಆಣೆ) ಗುಂಡ್ಲುಪೇಟೆಯ ಶ್ರೀ ರಾಮಮಂದಿರದ ೧೩ ನೆ ವರ್ಷದ ರಿಪೋರ್ಟು, ಮ|| ಎಚ್. ಚಿದಂಬರಯ್ಯನವರಿಂದ ರಚಿಸಲ್ಪಟ್ಟ ಮಾರುತಿಯ ಚರಿತ್ರೆ (ಇದರ ಬೆಲೆ ೪ ಆಣೆ) ಚಿಕ್ಕಬಳ್ಳಾಪುರದ ಪ್ಲೀಡರ್ ಮ|| ಟಿ. ವೀರಪ್ಪನವರಿಂದ ರಚಿಸಲ್ಪಟ್ಟ ಉಪನ್ಯಾಸಮಂಜರಿ (ದ್ವಿತೀಯ ಮುದ್ರಣದ ಬೆಲೆ ೧ ರೂ.) ಬೆಂಗಳೂರು ಪುಸ್ತಕವ್ಯಾಪಾರಿಗಳು ಎಂ. ಎಸ್. ರಾವ್ ಕಂಪೆನಿಯವರು ಪ್ರಕಟಿಸಿರುವ ಕೆಲವು ಸಣ್ಣ ಕತೆಗಳು (ಇದರ ಬೆಲೆ ೧ ರೂ.) ಮತ್ತು ಮೈಸೂರು ಸೀಮೆಯ ಬಣ್ಣದ ಭೂಪಟ ಇವುಗಳನ್ನು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಭರತಖಂಡದ ವೃತ್ತಾಂತಗಳು.

ಕಾಂಗ್ರೆಸ್ ಖಿಲಾಫತ್ ಸಭೆಗಳ ಸಂಬಂಧದಲ್ಲಿ ಕೆಲಸಮಾಡುತ್ತ ದುರ್ಣಯವನ್ನು ಕೊಡಿಸಿದ ೬ ಮಂದಿಗಳಿಗೂ ಮೌಲಾನಾ ಆಯಾಗಬ್ ರವರಿಗೆ ಕಾರಾಗೃಹ ಶಿಕ್ಷೆಯು ವಿಧಿಸಲ್ಪಟ್ಟಿತು.

ಜರ್ಮನರು ಕೊಡಲಿಕ್ಕಿರುವ ನಷ್ಟಪರಿಹಾರ ದ್ರವ್ಯದಲ್ಲಿ ಜಾತೀಯ ಸಮಿತಿಗೆ ಸೇರಿರುವ ಭರತಖಂಡಕ್ಕೂ ಒಂದು ಭಾಗವು ಸೇರಬೇಕೆಂಬ ವಿಷಯಕ್ಕೆ ಸಾಮ್ರಾಜ್ಯ ಪ್ರಭುತ್ವದವರು ಒಪ್ಪಿಕೊಂಡಿರುವರು.

ಅಫ್ಘಾನಿಸ್ಥಾನದ ಮತ್ತು ಭರತಖಂಡದ ಮಧ್ಯದ ಎಲ್ಲೆಕಟ್ಟಿನಲ್ಲಿ ಆಫ್ಘನ್ನರು ಬೋಲ್ಷೆವಿಕ್ಕರ ಎತ್ತುಗಡೆಯಿಂದ ಯುದ್ಧಸನ್ನಾಹವನ್ನು ವಿಶೇಷವಾಗಿ ಮಾಡಿಕೊಂಡಿದಾರೆ. ಇಂಡಾ ಸರ್ಕಾರದವರು ತಕ್ಕಸನ್ನಾಹಗಳನ್ನು ಮಾಡಿಕೊಂಡಿದ್ದಾರೆ. ಈಗಾಗಲೇ ಒಂದು ಸಣ್ಣಯುದ್ಧವು ನಡೆದಂತೆ ವರ್ತಮಾನಬಂದಿವೆ.

ವೈಸರಾಯ ಲಾರ್ಡ್ ರೀಡಿಂಗ್ ರವರು ಪ್ರತ್ಯಕ್ಷ ಸಂಭಾಷಣೆಗಾಗಿ ಮ|| ಗಾಂಧಿಯವರನ್ನು ಸಿಮ್ಲಾ ಪಟ್ಟಣಕ್ಕೆ ಬರಮಾಡಿಕೊಂಡಿದ್ದಾರೆ. ಅಲಹಾಬಾದಿಗೆ ಪ್ರಾಂತಿಕಸಭೆಗಾಗಿ ದಯಮಾಡಿಸಿದ್ದ ಅವರು ತಾ|| ೧೧ ರಲ್ಲಿ ಅಲ್ಲಿಂದಲೇ ನೇರವಾಗಿ ಸಿಮ್ಲಾವಿಗೆ ಹೊರಟರು. ಇವರೀರ್ವರ ಸಂಭಾಷಣದ ಪರಿಣಾಮವು ಏನಾಗುವುದೋ ನೋಡಬೇಕು.

ಕಳೆದ ತಿಂಗಳು ಮದ್ರಾಸಿನಲ್ಲಿ ಮಹಮದಾಲಿಯವರು ಉಪನ್ಯಾಸ ಮಾಡುವಾಗ್ಗೆ ಆಫ್ಘಾನಿಸ್ಥಾನದವರು ಇಂಗ್ಲೀಷರಮೇಲೆ ಯುದ್ಧವನ್ನು ಸಾರಿದರೆ ನಾವು ಇಂಗ್ಲೀಷರಿಗೆ ವಿರುದ್ಧವಾಗಿ ಅವಿಗಾರಪಕ್ಷವಾಗಿಯೇ ಇರುವವೆಂದು ಭಾಷಣಮಾಡಿದ ವಿಷಯವು ರಾಜದ್ರೋಹಾತ್ಮಕವೆಂದು ಅವರ ವಿಷಯದಲ್ಲಿ ವಾದವಿವಾದಗಳು ದೇಶದಲ್ಲಿ ನಡೆಯುತ್ತಿರುವುವು.

ವೈಸ್ರಾಯರು ಪಂಡಿತ ಮದನಮೋಹನ ಮಾಳವ್ಯರನ್ನು ಸಿಮ್ಲಾವಿಗೆ ಬರಮಾಡಿಕೊಂಡು ಸಂಭಾಷಿಸಿದರು. ಪ್ರಾಂತಿಕ ಗೌರ್ನರುಗಳನ್ನೆಲ್ಲಾ ಇಷ್ಟರಲ್ಲೇ ಬರಮಾಡಿಕೊಳ್ಳುವವರಾಗಿದ್ದಾರೆ. ದೇಶದ ಪರಿಸ್ಥಿತಿಗಳನ್ನು ಎಲ್ಲ ಪಕ್ಷದ ಪ್ರಮುಖರಿಂದಲೂ ಅಧಿಕಾರಿ ವರ್ಗದವರಿಂದಲೂ ತಿಳಿದು ಕರ್ತವ್ಯವನ್ನು ನಿರ್ಧರಿಸುವುದಕ್ಕೆ ಇವರು ಮಾಡಿದ ಪ್ರಯತ್ನವು ಶ್ಲಾಘ್ಯವಾಗಿದೆ.

ಅಲಹಾಬಾದಿನಲ್ಲಿ ಪಂಡಿತ ಮೋತಿಲಾಲ್ ನೆಹ್ರೂರವರ ಕುಮಾರಿಯ ಮದುವೆಯು ತಾ|| ೯ ರಲ್ಲಿ ಆಯಿತು. ಅದರ ಮರುದಿನವೇ ಪ್ರಾಂತಿಕ ರಾಜಕೀಯಸಭೆಯು ಜರುಗಿತು. ಮ|| ಗಾಂಧಿ, ಸರೋಜನೀದೇವಿ, ಮೌಲಾನ, ಶೌಕತಾಲಿ, ಸರಳಾದೇವಿ, ಮೊದಲಾದ ಪ್ರಮುಖರನೇಕರು ನೆರೆದಿದರು. ಅದೇ ಸಮಯದಲ್ಲಿ ಯಾವದ್ಭಾರತರಜಕ (ಅಗಸ) ಮಹಾಸಭೆಯ್ಯೂ ಇತರ ರಾಜಕೀಯ ಪ್ರಮುಖರ ಒತ್ತಾಸೆಯಿಂದ ಜರುಗಿತು.

ಮುಲ್ಸಿಪೇಟೆಯ ಸರೋವರನಿರ್ಮಾಣ ಕಾರದಲ್ಲಿ ಮಾವಳರುಮಾಡಿದ ಸತ್ಯಾಗ್ರಹದಿಂದ ಟಾಟಾಕಂಪೆನಿಯ ಇಂಜನಿಯರುಗಳು ಕೆಲಸವನ್ನು ಮುಂದಣ ನವಂಬರ್ ತಿಂಗಳವರೆಗೂ ನಿಲ್ಲಿಸಿರಬೇಕಾಯಿತು. ಆದರೆ ಈ ಮಧೆ ಟಾಟಾಕಂಪೆನಿಯವರೂ ಪ್ರಭುತ್ವದವರೂ ಸಹ ಮಾವಳರೊಡನೆ ನಡೆಯಿಸಿದ ಮಾತುಕತೆಯಲ್ಲಿ ಎರಡುಪಕ್ಷದವರಿಗೂ ಸಮಾಧಾನವು ಕುದಿರಿತು. ಕಂಪೆನಿಯವರು ಆ ರೈತರಿಗೆ ಉದಾರವಾಗಿ ಪರಿಹಾರದ್ರವ್ಯವನ್ನು ಕೊಡಲು ಒಪ್ಪಿದರು. ಮತ್ತು ಅವರುಗಳಿಗೆ ಸೂರತ್ ಜಿಲ್ಲೆಯ ಪಶ್ಚಿಮಭಾಗದಲ್ಲಿ ತಕ್ಕಷ್ಟು ಭೂಮಿಗಳನ್ನು ಒಂದೇಕಡೆ ಕೊಡುವುದಕ್ಕೂ ಏರ್ಪಾಡಾಯಿತು.

ಬರುವ ಜೂನ್ ತಿಂಗಳು ತಾ|| ೨೬ ರಲ್ಲಿ ಒಂದು ಬಾಲಚುಕ್ಕಿಯು ಭೂಮಿಯನ್ನು ರಭಸದಿಂದ ಡಿಕ್ಕಿಹೊಡೆಯುವುದೆಂದೂ ಇದರಿಂದ ಪ್ರಳಯವಾಗುವುದೆಂದೂ ಪಾಶ್ಚಾತ್ಯ ಶಾಸ್ತ್ರಜ್ಞರೊಬ್ಬರು ಹೇಳಿರುತ್ತಾರೆ. ಮೊನ್ನೆ ವರ್ಷವೂ ಹೀಗೆಯೇ ಹೇಳಿದ ಒಂದು ಭವಿಷ್ಯತ್ತು ಗಾಳಿಗೆ ತೂರಿಹೋಯಿತು. ಇನ್ನು ಕೆಲ ಖಗೋಳ ಶಾಸ್ತ್ರಜ್ಞರು ಇದು ಹೊಸ ಬಾಲಚುಕ್ಕಿಯಲ್ಲವೆಂದೂ ೧೮೧೯ ನೆ ವರ್ಷದಲ್ಲೇ ಒಬ್ಬ ಫ್ರೆಂಚ್ ಶಾಸ್ತ್ರಜ್ಞನು ಕಂಡು ಹಿಡಿದನೆಂದೂ, ಇದು ಜೂನ್ ತಿಂಗಳಲ್ಲಿ ಭೂಮಿಗೆ ಸಂಘಟ್ಟಮಾಡುವುದು ನಿಜವಾದರೂ ಮಹಾ ಅಪಾಯವೇನೂ ಆಗುವುದಿಲ್ಲವೆಂದೂ ಬಹಳ ಬೆಳಕೂ ಉಲ್ಕಾಪಾತವೂ ಆಗುವುದೆಂದೂ ಇತರ ಗೋಳಗಳಿಂದ ಕೆಲಕೆಲ ಶಿಲೆಗಳು ಉದುರಬಹುದೆಂದೂ ಹೇಳಿರುತ್ತಾರೆ.

ಕುರುತುಕೋಟಿ ಭಾಗವತರು ಸನ್ಯಾಸವನ್ನು ಸ್ವೀಕರಿಸಿದರೂ ಅವರಿಗೆ ಲೌಕಿಕ ದುರ್ವಾಸನೆಯೂ ಈಷ್ಯಾರ್ಸೂಯಾದಿಗುಣ ಸಂಬಂಧವೂ ಬಿಡಲಿಲ್ಲ. ಇತ್ತೀಚೆಗೆ ಇವರು ರಾಜಕೀಯ ಸಭೆಗಳಲ್ಲಿ ವಿಶೇಷವಾಗಿ ಬೆರೆಯುತ್ತಾರೆ. ಮೊನ್ನೆ ಶನಿವಾರ ಮಹಾರಾಷ್ಟ್ರ ಪ್ರಥಮ ಸಭೆಯು ಕೂಡಿದ್ದಾಗೆ ಈ ಸ್ವಾಮಿಯು ಒಂದು ಉಪನ್ಯಾಸಮಾಡುವಾಗ್ಗೆ ಆಂಗ್ಲ ಪ್ರಭುತ್ವದ ಮೇಲೆ ತಮಗಿರುವ ದ್ವೇಷವನ್ನು ಹೀಗೆ ಕಕ್ಕಿದರು.—"ಇಷ್ಟು ಕಾಲವೂ ನಾವು ಮೋಸಹೋಗಿದ್ದು ಈಗ ಕಣ್ತೆರೆದೆವು. ಪಾಪಾತ್ಮರೊಡನೆ ಸೇರಿ ನಡೆದರೆ ನಮಗೂ ಪಾಪವು ಅಂಟಿಕೊಳ್ಳುವುದು. ನಾವು ಪಾಪಿಷ್ಠ ಪ್ರಭುತ್ವಕ್ಕೆ ಸಹಾಯಮಾಡಿದರೆ ನಾವೂ ಪಾಪಾತ್ಮರಾಗುವೆವು. ನಾವು ನಮ್ಮ ಮತಕ್ಕಾಗಿಯೂ ಆತ್ಮಗೌರವಕ್ಕಾಗಿಯೂ ಸಹಾಯ ನಿರಾಕರಣವನ್ನು ಮಾಡಬೇಕು."

ಮದ್ರಾಸು ಸರ್ಕಾರದವರು ಈಗತಾನೇ ಒಂದು ಪ್ರಕಟನೆಯನ್ನು ಮಾಡಿ ಅದರಲ್ಲಿ ಪ್ರಭುತ್ವವನ್ನು ಸ್ತಂಭನಗೊಳಿಸಬೇಕೆಂಬ ಉದ್ದೇಶದಿಂದಲೇ ಮಾಡಿರುವ ಸಹಾಯನಿರಾಕರಣೋದ್ಯಮವು ರಾಜದ್ರೋಹಪೂರಿತವೂ ನೀತಿವಿರುದ್ಧವೂ ಆದ ಪ್ರಚಾರವನ್ನು ಜನರಲ್ಲಿಮಾಡಿ ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳಬೇಕೆಂದಿರುವುದೆಂದೂ, ಅದುಕಾರಣ ಸರ್ಕಾರದ ಪ್ರತಿಯೊಬ್ಬ ಉದ್ಯೋಗಿಯೂ ರಾಜಕೀಯಸಂಬಂಧದಲ್ಲಿ ಪ್ರವೇಶಿಸಲಾಗದೆಂದು ಇರುವ ನಿರ್ಬಂಧವನ್ನು ಬಿಟ್ಟು ಸಹಾಯನಿರಾಕರಣೋದ್ಯಮವನ್ನು ಅಣಗಿಸುವುದಕ್ಕಾಗಿ ಸಕ್ರಮವಾದ ಪ್ರಯತ್ನಗಳನ್ನು ಬಹಿರಂಗವಾಗಿ ನಡೆಯಿಸಬಹುದೆಂದೂ, ನಿರಾಕರಣೋದ್ಯಮ ಪ್ರಚಾರದಿಂದ ಪ್ರಜೆಗಳಲ್ಲಿ ಉಂಟಾಗಿರುವ ದುರಭಿಪ್ರಾಯಗಳನ್ನು ತೊಲಗಿಸುವುದಕ್ಕೆ ತಮ್ಮ ಶಕ್ತಿಯಿದ್ದಷ್ಟೂ ಸಹ ಸಾಹಸಪಡಬೇಕೆಂದೂ, ಪ್ರಜಾಪ್ರಮುಖರೂ ಶಾಸನ ಸಭಾಸಭಿಕರೂ ಸಹ ಇದೇತೆರದ ಉದ್ಯಮವನ್ನು ಉಪನ್ಯಾಸಗಳ ಮೂಲಕವೂ ಸಭೆಗಳನ್ನು ನೆರವೇರಿಸುವುದರ ಮೂಲಕ ಇತರ ವಿಧದ ಪ್ರಚಾರಗಳ ಮೂಲಕವೂ ನಡೆಯಿಸಬೇಕೆಂದೂ, ಈ ಪ್ರಯತ್ನದಲ್ಲಿ ಪ್ರತಿಪಕ್ಷದವರಿಂದ ಇವರಿಗೇನಾದರೂ ಅಪಾಯ ಮಾನಹಾನಿ ಮೊದಲಾದುವುಗಳು ಉಂಟಾದರೆ ಸಂರಕ್ಷಿಸುವುದಕ್ಕೆ ಸರ್ಕಾರವು ಸಿದ್ಧವಾಗಿರುವುದೆಂದೂ, ತಿಳಿಯಿಸಿರುತ್ತಾರೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ

ಲಗ್ನದ ಫಂಡು.

ಚನ್ನಗಿರಿ ತಾಲ್ಲೂಕು ತಾವರೆಕೆರೆ ಮ|| ರಾ|| ಗೌಡಸಂಣವೀರಪ್ಪನವರ ಮೂಲಕ ಬುಕ್ಕಾಂಬುಧಿ ಗ್ರಾಮದಲ್ಲಿ ತಾ|| ೧೮-೪-೨೧ ರಲ್ಲು ನಡೆದ ಶ್ರೀ ಮದೇಕಾದಶ ಮಹಾರುದ್ರರ ಪೂಜಾ ಕಾಲದಲ್ಲಿ ಫಂಡಿಗಾಗಿ ಕಳುಹಿಸಿದ್ದು ಜಮಾ ರೂ. ೫೦.

ಬೆಂಗಳೂರು ಸಿಟಿ,
ತಾ|| ೧-೫-೧೯೨೧.

ಜಿ. ಪರಮಶಿವಯ್ಯ, ಬಿ. ಎ. ಎಲ್ ಎಲ್. ಬಿ. ಆ|| ಸೆಕ್ರೆಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಪತ್ರವ್ಯವಹಾರ.

ವೀರಶೈವ ತರುಣರ ಸ್ಪೆಷಲ್ ಸಮ್ಮೇಲನ.

ಮೇಲಿನ ಸಮ್ಮೇಲನವು ಇದೇ ಮೇ ತಿಂಗಳ ೧೫-೧೬ನ ತಾರೀಖುಗಳಿಗೆ ನೆರೆಯಬೇಕೆಂದು ಗೊತ್ತುಮಾಡಲ್ಪಟ್ಟಿತ್ತಷ್ಟೆ, ಆದರೆ ಕೆಲವು ಅಡಚಣೆಗಳ ಮೂಲಕ ಒಂದು ವಾರದ ವರೆಗೆ ಅಂದರೆ ಇದೇ ಮೇ ತಿಂಗಳ ತಾ|| ೨೨-೨೩ಕ್ಕೆ ನೆರವೇರಿಸಬೇಕೆಂದು ಗೊತ್ತುಮಾಡಲ್ಪಟ್ಟಿರುತ್ತದೆ.

ಸೆಕ್ರೆಟರಿ.

ಬೋರ್ಡಿಂಗಿನ ವ್ಯವಸ್ಥೆಯು.

ಪರಸ್ಥಳದಿಂದ ಇಂಗ್ಲೀಷ್ ಕಲಿಯಲಿಕ್ಕೆ ಬರುವ ಲಿಂಗಾಯತ ಬಡವಿದ್ಯಾರ್ಥಿಗಳಿಗೋಸ್ಕರ ಆಲೂರ (ಹಾನಗಲ್ಲ) ಪ್ರೈವೇಟ್ ವೀರಶೈವ ಎ.ವಿ. ಸ್ಕೂಲಿನ ಸಂಸ್ಥೆಯವರು ಬೋರ್ಡಿಂಗಿನ ವ್ಯವಸ್ಥೆಯನ್ನು ಇದೇ ಜೂನ್ ತಿಂಗಳಿಂದ ಮಾಡತಕ್ಕವರಿದ್ದಾರೆ. ಇವರ ಬೋರ್ಡಿಂಗಿನಲ್ಲಿ ಸ್ಥಳ ದೊರಕಿಸಿ ಸದರೀಸ್ಕೂಲಿನಲ್ಲಿ ಕಲಿಯಲಪೇಕ್ಷಿಸುವ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಕೆಳಗೆ ಸೈನ್ ಮಾಡಿದವರ ಕಡೆಗೆ ಜೂನ್ ತಿಂಗಳ 1 ನೇ ತಾರೀಖಿನೊಳಗಾಗಿ ತಿಳಿಸಬೇಕು ಅಥವಾ ಸಮಕ್ಷಮ ಬಂದು ಭೆಟ್ಟಿಯಾಗಬೇಕು.

C. S. Chulkimath,
ಹೆಡ್‌ಮಾಸ್ತರ್, ಪ್ರೈ. ವೀ. ಎ.ವಿ. ಸ್ಕೂಲ್, ಆಲೂರ್.

ಅರಶೀಕೆರೆ.

ಈ ಟವನ್ನಿನಲ್ಲಿ ಗುಬ್ಬಿ ನಾಟಕದ ಕಂಪೆನಿಯವರು ಒಂದು ತಿಂಗಳಿಂದ ನಾಟಕವನ್ನು ಆಡುತ್ತಾಯಿದಾರೆ. ನಿನ್ನೆ ಅಂದರೆ,—ತಾ|| ೧೧-೫-೨೧ ನೇ ಬುಧವಾರ ಪ್ರಭಾಮಣಿವಿಜಯವೆಂಬ ನಾಟಕವನ್ನು ಆಡಿದರು. ಈ ಟವನ್ನಿನ ಮಹಾಜನಂಗಳು ಇವರ ಮೇಲಿನ ಅಭಿಮಾನದಿಂದ ನಾಟಕಾವಲೋಕನಮಾಡಿ ಈ ಕಂಪನಿ ಪ್ರೊಪ್ರೈಟರವರಿಗೆ ಒಂದು ಭಂಗಾರದ ತೋಡಾ ದಯಪಾಲಿಸಿದ್ದಲ್ಲದೆ, ಹಾಸನದ ಅಮಚೂರು ಡ್ರಮಾಟಿಕ್ ಕಂಪನಿ ಅಸೋಸಿಯೇಷನ್ ಪರವಾಗಿ ಡಿಟೋ ಅಸೋಸಿಯೇಷನ್ ಸೆಕ್ರೆಟರಿಗಳಾದ ಮ|| ರಾ|| ಅಡ್ವೊಕೇಟ್ ಬಿ. ರಾಮಸ್ವಾಮಯ್ಯನವರು ಒಂದು ಭಂಗಾರದ ಮೆಡಲನ್ನು ಮೇಲ್ ಕಂಡ ಕಂಪಿನಿಗೆ ಬಹುಮಾನಾರ್ಥವಾಗಿ ದಯಪಾಲಿಸಿದರು.

ವಿಧೇಯ, ಎಸ್. ನಾಗೇಶರಾವ್.

ಶ್ರೀ ಸಂಗಮೇಶ್ವರ ಪ್ರಸೀದ.

ವೀರಶೈವ ಮತೋದ್ಧಾರಕ ಕಲ್ಯಾಣಬಸವೇಶ್ವರೈಕ್ಯಸ್ಥಾನ ಶ್ರೀ ಕಪ್ಪಡಿ ಸಂಗಮಕ್ಷೇತ್ರದಲ್ಲಿ ೧೯೨೧ ನೆ ಎಪ್ರೇಲ್ ತಾ|| ೨೭, ೨೮, ೨೯ ಈ ಮೂರು ದಿವಸಗಳಲ್ಲಿ ಕಣಬುರಗಿ ಶಿವಮೂರ್ತಿಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ ಶಿಕ್ಷಣ, ವಿದ್ಯಾಪ್ರಸಾರ, ಬಸವೇಶ್ವರತತ್ವ ಮೊದಲಾದ ವಿಷಯಗಳ ಮೇಲೆ ಶಿವಯೋಗಮಂದಿರದ ಸಾಧಕರೂ ಹುಬ್ಬಳ್ಳಿ ಪಾವಟೆ ವಕೀಲರೂ ಧಾರವಾಡದ ಪಶುಪತಿ ಮಾಸ್ತರರು ಮೊದಲಾದ ಅನೇಕ ವ್ಯಾಖ್ಯಾತೃಗಳ ವ್ಯಾಖ್ಯಾನಗಳಾಗಿ ಸರ್ವತ್ರ ಬಸವೇಶ್ವರ ಜಯಂತಿ ಮಾಡುವ ಬಗ್ಗೆ ಸರ್ವಾನುಮತದಿಂದ ಠರಾವ ಪಾಸಾಯಿತು. ಇದರ ವಿಸ್ತಾರವೃತ್ತಾಂತವನ್ನು ಮುಂದೆ ಕೊಡುತ್ತೇವೆ.

ಶ್ರೀ ಸಂಗಮೇಶ್ವರ ವೀರಶೈವ ವಿದ್ಯಾವರ್ಧಕ ಸಂಘ.

ಗುಂಡ್ಲುಪೇಟೆ ತಾ|| ಮಳವಳ್ಳಿ.

ಈ ಗ್ರಾಮದಲ್ಲಿ ಮ|| ರಾ|| ಪಟೇಲ್ ಲಿಂಗಪ್ಪನವರು ಗೌಡರು ಮಾದಪ್ಪನವರು ಇವರೇ ಮೊದಲಾದ ಸಕಲ ವೀರಶೈವ ಮಹಾಶಯರೂ ಏಪ್ರೀಲ್ ಮಾಹೆ ೨೮ ನೇ ಗುರುವಾರ ಸಾಯಂಕಾಲ ಸಭೆ ಸೇರಿ ಮತ ವಿಷಯಬೋಧಕರಾಗಿ ಬಂದಿದ್ದ ಕುದೇರು ಹೊಸಮಠದ ವೇ|| ಶ್ರೀ|| ಜಯದೇವ ಸ್ವಾಮಿಗಳು ಮತ್ತು ನಿತ್ಯಾನಂದಸ್ವಾಮಿಗಳು ಇವರುಗಳಿಂದ ಹಿತಕರವಾದ ಮತಸಂಬಂಧವಾದ ಉಪನ್ಯಾಸಗಳನ್ನು ಮಾಡಿಸಿ ಜನಗಳಿಗೆ ಸಂತೋಷಪಡಿಸಿದ್ದಲ್ಲದೆ ಸದರಿ ಗ್ರಾಮದ ಶ್ರೀ ಚನ್ನಬಸವೇಶ್ವರವಿಲಾಸ ವಾಚಕಮಂದಿರಕ್ಕೆ ೧೦ ರೂ. ಗಳನ್ನು ಸಹಾಯಮಾಡಿದ್ದಾರೆ. ಈ ಮಹನೀಯರಂತೆ ಸಕಲ ವೀರಶೈವ ಮಹಾಶಯರೂ ಮೇಲ್ಕಂಡ ಸ್ವಾಮಿಗಳವರಿಗೆ ಪ್ರೋತ್ಸಾಹ ಕೊಡುತ್ತಾರೆಂಬದಾಗಿ ನಂಬಿದ್ದೇನೆ.

ಮತಾಭಿಮಾನಿ, ಎಂ. ಬಸಪ್ಪ.

ಮುರಳೆಗವಿ ಮಠ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ವರ್ಷಂಗಳು ೧೮೪೩ಕ್ಕೆ ಸರಿಯಾದ ದುರ್ಮತಿನಾಮಸಂವತ್ಸರ ವೈಶಾಖ ಬಹುಳ ೫ ಶುಕ್ರವಾರ (ತಾ|| ೨೭-೫-೨೧) ಈ ಶುಭದಿನ ಸೂರ್ಯೋದಯಾನಂತರ ೯ ಘಂಟೆ ಮೇಲೆ ೧೦|| ಘಂಟೆಯೊಳಗಾಗಿ ಸಲುವ ಶುಭ ಕರ್ಕಾಟಕ ಲಗ್ನದಲ್ಲಿ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವೂ, ಮಹಾ ಪ್ರಮಥ ಗಣಾರಾಧನೆಯೂ (ಮತ್ತು ಶಿವಕಥಾ ಪಂಡಿತ ಬಿರುದಾಂಕಿತರಾದ ಮೈಸೂರು ಶಿವಯ್ಯಶಾಸ್ತ್ರಿಗಳವರಿಂದ ಶಿವಕಥಾಶ್ರವಣವೂ) ಸಹ ಕಾಡ್ಶಾನಹಳ್ಳಿ ತಾಲ್ಲೂಕಿಗೆ ಸೇರಿದ ಶ್ರೀಮನ್ ಮಹಾಸುಕ್ಷೇತ್ರ ಮುರಳೇ ಗವೀಮಠದಲ್ಲಿ ನಡೆಯುವಂತೆ ಗೊತ್ತುಮಾಡಿರುವುದರಿಂದ ಮತಾಭಿಮಾನಿಗಳು ತಮ್ಮ ಬಂಧುಮಿತ್ರವರ್ಗದೊಡನೆ ಒಂದು ದಿನ ಮುಂಚಿತವಾಗಿ ಬಂದು ಈ ಗುರು ಕಾರ್ಯವನ್ನು ನೆರವೇರಿಸಿ ದರ್ಶನಾಶೀರ್ವಾದಗಳನ್ನು ಪಡೆದುಕೊಂಡುಹೋಗಬೇಕೆಂದು ವಾತ್ಸಲ್ಯಪೂರ್ವಕವಾಗಿ ಸೂಚಿಸಿದ್ದೇವೆ.

ಹುಚ್ಚಪ್ಪ ದೇಶಿಕೇಂದ್ರರವರು.

ಏಕಾದಶರುದ್ರರ ಮಹಾಪೂಜೆ.

ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರತಾಲ್ಲೂಕು ಶ್ರೀಗುರುಸಂಸ್ಥಾನ ಕೆರೆಮಠದ ಪಟ್ಟದ ಶ್ರೀ ಮಹಂತಸ್ವಾಮಿಗಳ ಉದಾರಾಶ್ರಯದಿಂದ ತಾ|| ೧೮-೫-೨೧ ನೇ ಮತ್ತು ೧೯-೫-೨೧ ನೇ ಈ ದಿವಸಗಳಲ್ಲಿ ಈ ಮಠದ ಮರಿಗಳ ಮತ್ತು ವಟುಗಳ ದೀಕ್ಷೆಯೂ ಏಕಾದಶರುದ್ರಮಹಾಪೂಜೆಯೂ ಚವುಡಯ್ಯ ದುರ್ಗಪುರಸಂಸ್ಥಾನದ ಪಟ್ಟದ ಪಂಡಿತ, ವಿದ್ಯಾನಿಧಿ, ಧರ್ಮಭೂಷಣ, ವೇದತೀರ್ಥ ಮೊದಲಾದ ಪದವೀಧರರಾದ ಇಂದೂರಸಂಸ್ಥಾನದ ಸಂಸ್ಕೃತಕಾಲೇಜ್ ಪ್ರೊಫೆಸರರಾದ ಸ್ವಾಮಿ ಶ್ರೀ ವಿರೂಪಾಕ್ಷ ವಡಿಯರವರ ಅಧ್ಯಕ್ಷತೆಯಲ್ಲಿ ಗುರುವರ್ಗದ 3 ನೆ ಸಭೆಯು ಜರಗುವುವು. ಈ ಯಾವತ್ತು ಕಾರ್ಯಕ್ರಮಗಳ ಸ್ವಾಗತಸಂಘದ ಅಧ್ಯಕ್ಷಸ್ಥಾನವನ್ನು ಶ್ರೀಮನ್ಮಹಾಪಂಚಮಠ ಕ್ಯಾಸನೂರಸಂಸ್ಥಾನದ ಪಟ್ಟದಪಂಡಿತ ಶ್ರೀಗುರುಬಸವ ಶಿವಾಚಾರ್ಯರವರು ವಹಿಸಿದ್ದಾರೆ. ಅನೇಕ ಪಟ್ಟಚರಾಧಿಪತಿಗಳೂ, ಪಂಡಿತೋತ್ತಮರೂ ಬರುವವರಾಗಿದ್ದಾರೆ. ಈ ಸಮಾರಂಭಗಳಿಗೆ ಸರ್ವಮತಾಭಿಮಾನಿಗಳೂ ದಯವಿಟ್ಟು ಬರಬೇಕಾಗಿ ಅಪೇಕ್ಷೆ. ಈ ಕೆರೆಮಠಕ್ಕೆ ಶಿವಮೊಗ್ಗಾ ರೇಲ್ವೆಸ್ಟೇಷನ್ ೬೫ ಮೈಲುದೂರ ಇದೆ. ಸಾಗರದಲ್ಲಿ ಮೋಟಾರುಗಾಡಿಗಳ ವ ಕಾಫಿ ತಿಂಡಿಯ ಏರ್ಪಾಡು ಮಾಡಿದೆ.

ಎಸ್, ಗುರುಸಿದ್ಧಯ್ಯ, ಸಂಸ್ಥಾನದ ಏಜಂಟ್.

ರಾಣೀಬೆನ್ನೂರು.

ಇದೇ ಚೈತ್ರ ಬಹುಳ ೫ ಬುಧವಾರ ಈ ಗ್ರಾಮದ ಶ್ರೀ ಸಿದ್ಧೇಶ್ವರ ರಥೋತ್ಸವವೂ ಹಾಗೂ ಬಸವೇಶ್ವರ ರಥೋತ್ಸವವೂ ಒಳ್ಳೇ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ರಥೋತ್ಸವಗಳ ಕಾಲಕ್ಕೆ ಭಕ್ತ ಜನರು ವಿಶೇಷವಾಗಿ ಸೇರಿದ್ದರು. ೪-೫ ದಿವಸ ಕುಸ್ತಿ ವಗೈರೆ ಕಾರ್ಯಗಳು ಜರುಗಿಸಲ್ಪಟ್ಟವು. ಶ್ರೀ ಅಥಣಿ ಮಹಾ ಶಿವಯೋಗಿಗಳು ಶಿವಾಧೀನರಾದ ಬಗ್ಗೆ ತಾ|| ೧ ಮೇ ೨೧ನೆ ಭಾನುವಾರ ಪ್ರಾತಃಕಾಲ ಮಹಾಸ್ವಾಮಿಗಳವರ ಭಾವಚಿತ್ರದ ಪಲ್ಲಕ್ಕಿಯ ಉತ್ಸವವು ಸಂಭ್ರಮಪೂರ್ವಕವಾಗಿ ಸಾಂಗವಾಗಿ ಅದೇ ದಿನ ಸಾಯಂಕಾಲ ೩ ಘಂಟೆಗೆ ಶ್ರೀ ಬಸವೇಶ್ವರ ದೇವಾಲಯದಲ್ಲಿ ಪ್ರಚಂಡಸಭೆ ಸೇರಿ ಆ ಮಹನೀಯರ ಗುಣಕಥನ ಹಾಗು ಉಪನ್ಯಾಸಗಳು ಜರುಗಿ ಆ ಮಹನೀಯರ ದರ್ಶನಾಶೀರ್ವಾದ ಲಾಭವು ಇನ್ನುಮುಂದೆ ಸಮಸ್ತ ವೀರಶೈವರಿಗೆ ಅಲಭ್ಯವಾದುದಕ್ಕೆ ತಮಗಾದ ದುಃಖವನ್ನೂ ಅವರು ಶಿವನೊಡನೆ ಏಕರಾದ ಬಗ್ಗೆ ಆನಂದವೂ ಆಯಿತೆಂದು ಠರಾವು ಸರ್ವಾನುಮತದಿಂದ ಪಾಸಾಗಿ ಅಥಣಿ ಗಚ್ಚಿನಮಠಕ್ಕೆ ಕಳಿಸಲ್ಪಟ್ಟಿತು. ಇದಕ್ಕೆ ಮುನ್ನಾ ದಿವಸ ನಡೆದ ಸಭೆಯಲ್ಲಿ ಹುಬ್ಬಳ್ಳಿಯ ಸುಪ್ರಸಿದ್ಧ ವಕೀಲರಾದ ಮ|| ರಾ|| ವೀರಪ್ಪ-ಬಸಪ್ಪ ಬೆಳೇ ಅಂಗಡಿ ಬಿ. ಎ. ಎಲ್. ಎಲ್. ಬಿ., ಇವರು ಬಸವೇಶ್ವರನ ಮಹತ್ಮಾತಿಶಯಗಳನ್ನು ಶ್ರೋತೃವೃಂದಕ್ಕೆ ಬಹುಸರಸಾಗಿ ತಿಳಿಸಿ ಹೇಳಿದರು. ಮತ್ತು ಇದೇ ವೈಶಾಖ ಶುದ್ಧ ೨ ಸೋಮವಾರ ಬಸವಜಯಂತ್ಯುತ್ಸವವನ್ನು ಸಮಸ್ತ ವೀರಶೈವರೂ ಮಾಡಬೇಕೆಂಬದಾಗಿ ಸೂಚಿಸಿದರು. ಈ ಎರಡು ದಿವಸಗಳ ಸಭೆಗೆ ಮ|| ರಾ|| ಶಿವಲಿಂಗಪ್ಪ ಬಸವನಾಳ ಎಂ. ಎ. ಇವರು ಅಧ್ಯಕ್ಷರಾಗಿದ್ದರು. ಇದೇ ಪ್ರಕಾರ ಎಲ್ಲ ಗ್ರಾಮಗಳ ಸಮಸ್ತ ವೀರಶೈವರೂ ತಮ್ಮಲ್ಲಿ ಆಗತಕ್ಕ ಉತ್ಸವಾದಿ ಕಾರ್ಯಗಳಲ್ಲಿ ಶಿವಸಂಬಂಧವಾದ ಉಪನ್ಯಾಸ ವಗೈರೆ ನಡಿಸಿ ಜನರಲ್ಲಿ ಜಾಗ್ರತೆಯನ್ನುಂಟುಮಾಡುವರೆಂದು ಆಶಿಸುವ,

ತಮ್ಮ ಓರ್ವ ನಗರವಾಸಿ.

ಅಥಣಿ ಶ್ರೀ ಶಿವಯೋಗಿವರ್ಯರ ಸಂಕ್ಷಿಪ್ತ ಚರಿತ್ರವು.

(ಬರೆದುಬಂದುದು.)

ಮಹಾತ್ಮರ ಅವತಾರಕ್ಕೆ ಜಗದುದ್ಧಾರವೇ ಹೇತುವಾಗಿರುತ್ತದೆ. ಯಾವ ಮಹನೀಯರ ಜೀವಿತಕಾಲವು ಭೂಲೋಕದ ಮಾನವಪ್ರಾಣಿಗಳ ಶಿಕ್ಷಣರಕ್ಷಣಾರ್ಥವಾಗಿ ವಿನಿಯೋಗವಾಗುತ್ತಿರುವುದೋ ಆ ಮಹಾ ವಿಭೂತಿಗಳ ಜೀವಿತಚರಿತ್ರವು ಸರ್ವಕಾಲದಲ್ಲೂ ಲೋಕಪಾವನವಾಗಿ ಆದರ್ಶಭೂತವಾಗಿರುತ್ತದೆ. ಭವಸಾಗರದಲ್ಲಿ ಸಾಗುತ್ತಿರುವ ಪ್ರಾಣಿಜಾಲವೆಂಬ ನಾವೆಗಳಿಗೆ ಮಹನೀಯರ ಜೀವಿತವು ಉತ್ತರಮುಖಿಯಂತೆ ಸದಾ ಉದ್ದಿಷ್ಟದಿಗ್ದರ್ಶನ ಸಾಧನಭೂತವಾಗಿ ಪರಮ ಚರಿತಾರ್ಥವನ್ನುಂಟುಮಾಡಿಕೊಡಲು ಅನುಕೂಲವಾಗಿರುತ್ತದೆ. ಲೋಕದಲ್ಲಿ ಪ್ರತಿಯೊಂದು ಮತದಲ್ಲೂ ಆಗಾಗ್ಗೆ ಧರ್ಮಜಾಗರೂಕತೆಯನ್ನುಂಟುಮಾಡುವ ಉದ್ದೇಶದಿಂದಲೇ ಭಗವತ್ಪ್ರೇರಣೆಯಿಂದ ಮಹಾತ್ಮರ ಅವತಾರವು ಆಗುತ್ತ ಬಂದಿರುವಂತೆ ಪುರಾಣೇತಿಹಾಸಗಳಿಂದ ಗೊತ್ತಾಗುತ್ತದೆ. ಬಹು ಪುರಾತನ ಕಾಲದಿಂದಲೂ ವೀರಶೈವ ಮತವು ವಿದ್ಯಾಬಲಕ್ಕಿಂತಲೂ ಮಿಗಿಲಾಗಿ ಮಹನೀಯರ ಮಹತ್ತ್ವಬಲದಿಂದ ತೇಜೋಭೂಯಿಷ್ಠವಾಗಿ ಮಾನ್ಯತೆಯನ್ನು ಪಡೆದು ಬಂದಿರುತ್ತದೆ. ಅಗಣಿತರಾದ ಶಿವಶರಣರು ಈ ಮತದಲ್ಲಿ ಅವತರಿಸಿ ಅಮಾನುಷಗಳಾದ ಮಹತ್ತ್ವಗಳನ್ನು ಲೋಕಾಶ್ಚರ್ಯಕರವಾಗಿ ವ್ಯಕ್ತಪಡಿಸಿ, ಶಿವಭಕ್ತಿ ಜ್ಞಾನಾಚಾರಗಳ ಪ್ರಾಶಸ್ತ್ಯವನ್ನು ಜಗತ್ತಿನಲ್ಲಿ ನೆಲೆಗೊಳಿಸಿದ್ದಾರೆ. ಕಲಿಮಲಾಧಿಕ್ಯದಿಂದ ಈಗಣ ಕಾಲದಲ್ಲಿ ಅಂಥ ಮಹಾವಿಭೂತಿಗಳ ಅವತರಣವು ವಿಶೇಷವಾಗಿ ಆಗದಿದ್ದರೂ ವಿರಳತಮವಾಗಿಯಾದರೂ ಆಗುತ್ತಿರುವುದರಿಂದಲೇ ಭಕ್ತಿ ಜ್ಞಾನ ಸದಾಚಾರಗಳು ಸಂಪೂರ್ಣ ಖಿಲವಾಗದಂತೆ ಕಾಪಾಡಲ್ಪಡಲು ಅವಕಾಶವಾಗುತ್ತಿದೆ.

ಆಧುನಿಕ ಕಾಲದಲ್ಲಿ ವೀರಶೈವ ಮತದಲ್ಲಿ ಅವತರಿಸಿದ ಮಹಾಮಹಿಮರಲ್ಲಿ ಅಥಣಿಯ ಶ್ರೀ ಶಿವಯೋಗೀಶ್ವರರು ಒಬ್ಬರಾಗಿದ್ದರು. ಇವರ ಪವಿತ್ರ ಚರಿತ್ರವು ಮಾನವಕೋಟಿಯ ಶ್ರವಣಮನನನಿಧಿಧ್ಯಾಸಗಳಿಗೆ ಅರ್ಹವೆನಿಸಿಕೊಂಡಿರುವುದು. ಆಧುನಿಕ ಕವಿಗಳಾರಾದರೂ ಪ್ರಯತ್ನಿಸಿ ಅದನ್ನು ಕವಿತಾಬದ್ಧವನ್ನಾಗಿ ಮಾಡಿ ಶಾಶ್ವತಗೊಳಿಸಲು ಪ್ರಯತ್ನಿಸಿದರೆ ಅವರು ಕಲಿತ ವಿದ್ಯೆಯು ಸಾರ್ಥಕವಾಗುವುದಲ್ಲದೆ ಜಗತ್ತಿಗೆ ಹಿತವನ್ನು ಮಾಡಿದಂತೆಯೂ ಆಗುವುದು. ಅಘಟನಘಟನಾವಳಿಯಿಂದ ಪರಿಶುದ್ಧವಾಗಿದ್ದ ಅವರ ಪವಿತ್ರಚರಿತ್ರದಲ್ಲಿ ನನಗೆ ತಿಳಿದಿದ್ದ ಕೆಲವಂಶಗಳನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ.

ಬೆಳಗಾಂಜಿಲ್ಲಾ ಸಮೀಪದಲ್ಲಿ ಕುರಂದವಾಡ ಸಂಸ್ಥಾನಕ್ಕೆ ಸೇರಿದ ಇಂಗಳಗಾವಿಯೆಂಬ ಕೃಷ್ಣಾತೀರದ ಗ್ರಾಮದಲ್ಲಿ ಗುರುಸ್ಥಲದಮಠದ ರಾಚಯ್ಯನವರೆಂಬ ಮಾಹೇಶ್ವರರು ಸಾಧ್ವೀಮಣಿಯಾದ ನೀಲಾಂಬೆಯೆಂಬ ಪತ್ನಿಯಿಂದೊಡಗೂಡಿ ಇರುತ್ತಿದ್ದರು. ತ್ರಿಕಾಲ ಶಿವಲಿಂಗಪೂಜಾರೂಪಸತ್ಕ್ರಿಯಾಚಾರನಿರತರಾದ ಆ ದಂಪತಿಗಳಿಗೆ ಸದ್ಗುಣಿಗಳಾದ ಐದುಜನ ಗಂಡುಮಕ್ಕಳೂ ಸುಶೀಲೆಯಾದ ಒಬ್ಬ ಹೆಣ್ಣುಮಗಳೂ ಇರುತ್ತಿದ್ದರು. ಈ ಐವರಲ್ಲಿ ಎಲ್ಲಕ್ಕೂ ಚಿಕ್ಕವರಾದ ಈ ನಮ್ಮ ಚರಿತ್ರನಾಯಕರ ಹೆಸರು ಗುರುಲಿಂಗಾರ್ಯರೆಂದು. ಇವರ ಜನ್ಮವು ಕ್ರಿಸ್ತಶಕದ ೧೮೩೬ ನೆ ವರ್ಷದಲ್ಲಾಯಿತು. ಇವರನ್ನು ಇವರ ೫ ನೇ ವರ್ಷದಲ್ಲಿ ಇವರ ತಾಯಿತಂದೆಗಳು ಅಥಣಿ ಗಚ್ಚಿನಮಠದಲ್ಲಿ ವಿರಾಜಿಸುತ್ತಿದ್ದ ಶ್ರೀಮನ್ನಿರಂಜನ ಮುರುಳಶಂಕರ ಸ್ವಾಮಿಗಳ ಪಾದಕ್ಕೆ ಭಕ್ತಿಯಿಂದ ಸಮರ್ಪಿಸಿದರು. ಮೊಳೆಯಲ್ಲೇ ಪೈರಿನ ಗುಣವು ಕಂಡುಬರುವಂತೆ ಇವರ ಬಾಲ್ಯದಲ್ಲಿಯೇ ಗೋಚರವಾದ ಅಲೌಕಿಕವೃತ್ತಿಯನ್ನು ನೋಡಿ ಸಂತೋಷಪಟ್ಟು ಸದರಿ ಮುರುಳಶಂಕರಸ್ವಾಮಿಗಳು ಇವರನ್ನು ಅತ್ಯಂತಪ್ರೇಮದಿಂದ ಪಾಲಿಸುತ್ತಿದ್ದು ವಿದ್ಯಾಭ್ಯಾಸಕ್ಕೆ ತೊಡಗಿಸಿದರು. ಇವರಿಗೆ ೮ ನೆ ವಯಸ್ಸಿನಲ್ಲಿ ತಮ್ಮ ಮಠದಲ್ಲೇ ವೀರಮಾಹೇಶ್ವರದೀಕ್ಷೆಯನ್ನು ಮಾಡಿಸಿದರು. ೫ ನೆ ಇಯತ್ತೆಯವರೆಗೆ ಕನ್ನಡದ ಶಿಕ್ಷಣವನ್ನು ಪಡೆದಬಳಿಕ ಇವರು ಗುರುಗಳ ಅಪ್ಪಣೆಪ್ರಕಾರ ಶ್ರೀಮನ್ನಿರಂಜನಪ್ರಣವಸ್ವರೂಪಿಗಳೂ ಸಂಸ್ಕೃತಪ್ರಾಕೃತೋಭಯವಿದ್ಯಾವಿಶಾರದರೂ ಮಹಾಶಿವಾನುಭಾವಿಗಳೂ ಆದ ಮಮದಾಪುರದ ಮುರಿಗಿಸ್ವಾಮಿಗಳ ಸನ್ನಿಧಿಯಲ್ಲಿ ಶಿವಾನುಭವಶಾಸ್ತ್ರಗಳನ್ನು ಚೆನ್ನಾಗಿ ಓದಿ ಮನನಮಾಡಿಕೊಂಡರು. ಅಷ್ಟರಲ್ಲಿ ಇವರ ಗುರುಗಳ ನಿರೂಪವು ಬಂದುದರಿಂದ ಮಮದಾಪುರದ ವಿದ್ಯಾಗುರುಗಳ ಅನುಜ್ಞೆಯನ್ನು ಪಡೆದು ಅಥಣಿಗೆ ಬಂದರು. ಇವರ ನೈಸರ್ಗಿಕವಿರಕ್ತಿಯನ್ನೂ ಶಿವಾನುಭವ ಶಾಸ್ತ್ರಪರಿಣತಜ್ಞಾನವನ್ನೂ ಸತ್ಯಸದಾಚಾರನಿರತತೆಯನ್ನೂ ಶಮದಮಾದಿಸದ್ಗುಣಗಳನ್ನೂ ಪರಿಶೀಲಿಸಿ ಇವರ ಅನೇ ಗುರುಗಳಾದ ಗುರುಶಾಂತಸ್ವಾಮಿಗಳು ಇವರಿಗೆ ೧೬ ನೇ ವಯಸ್ಸಿನಲ್ಲಿ ಅನುಗ್ರಹಕೊಟ್ಟು, ಇವರ (೨೦) ನೇ ವರ್ಷದಲ್ಲಿ ವಿರಕ್ತಾಶ್ರಮವನ್ನು ಕರುಣಿಸಿದರು. ಈ ಪ್ರಕಾರದೇಶಿಕಾನುಗ್ರಹವನ್ನೂ ವಿರಕ್ತಾಶ್ರಮವನ್ನೂ ಸ್ವೀಕರಿಸಿದಬಳಿಕ ಇವರ ನೈಸರ್ಗಿಕವಾದ ವೈರಾಗ್ಯವೃತ್ತಿಗೆ ಮತ್ತಷ್ಟು ತೇಜಸ್ಸುಂಟಾಯಿತು. ಇವರು ತಮ್ಮ ಆಶ್ರಮಧರ್ಮಪದ್ಧತಿಯಂತೆ ಪಂಚಮುದ್ರೆಗಳನ್ನು ಧರಿಸಿ ಪಾದಚಾರಿಗಳಾಗಿ ಒಬ್ಬರೇ ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯಂತೆ ನಮ್ಮ ಕರ್ನಾಟಕ ಪ್ರಾಂತದಲ್ಲೆಲ್ಲಾ ಸಂಚಾರಮಾಡಿದುದಲ್ಲದೆ ಶ್ರೀಶೈಲ, ಹಂಪೆ, ಗೋಕರ್ಣ, ಉಳುವೆ, ಶಂಭುಲಿಂಗನಬೆಟ್ಟ ಮೊದಲಾದ ಅನೇಕ ಪುಣ್ಯಸ್ಥಲಗಳಲ್ಲಿ ಸಂಚಾರಮಾಡಿ ತಮ್ಮ ದರ್ಶನಸಂಭಾಷಣಾದಿಗಳಿಂದ ಅಲ್ಲಲ್ಲಿ ಭಕ್ತಾದಿಗಳನ್ನುದ್ಧಾರಮಾಡುತ್ತಲೂ, ಮಹಾತ್ಮರ ದರ್ಶನಲಾಭಗಳನ್ನು ತಾವು ಹೊಂದುತ್ತಲೂ, ತಮ್ಮ ೪೦ ನೇ ವರ್ಷ ವಯಸ್ಸಿನವರೆಗೆ ವೈರಾಗ್ಯದಿಂದ ದೇಶಸಂಚಾರಮಾಡಿ, ಅಲ್ಲಲ್ಲಿ ಮನವೊಪ್ಪಿದೆಡೆಯಲ್ಲಿ ಕೆಲಕೆಲಕಾಲ ತಪಸ್ಸನ್ನಾಚರಿಸಿದರು. ಸಂಚಾರಕಾಲದಲ್ಲಿ ಇವರಲ್ಲಿ ಮೂರ್ತೀಭವಿಸಿದ್ದ ಮನೋನಿಗ್ರಹವೂ ಸಾತ್ವಿಕ ಸಂಪತ್ತಿಯೂ ಪರಮೋಜ್ವಲವಾಗಿದ್ದುವು. ವೈರಾಗ್ಯವು ಸ್ವರಭೂತವಾಗುತ್ತ ಬಂದಿತು. ತಿವಿಷ್ಟೋಪಾಧಿಯು ಕಡೆಸರಿಯಲಾರಂಭಿಸಿತು. ಬಾಹ್ಯಕರ್ಮಗಳೂ ಅವುಗಳ ವಾಸನೆಯೂ ದಗ್ಧಪಟನ್ಯಾಯದಂತೆ ತೋರಿಕೆಯಲ್ಲಿ ಮಾತ್ರ ಇರುವಂತಾದುವು. ಪಕ್ವವಾಗುತ್ತ ಬಂದ ಫಲದಿಂದ ಸುವಾಸನೆಯು ದಶದಿಕ್ಕುಗಳಿಗೂ ಬೀರಲುಪಕ್ರಮಿಸುವಂತೆ ಆಗಲೇ ಇವರ ತಪಃಪ್ರಭಾವವು ದೇಶದೇಶಗಳಿಗೆ ಗೋಚರಿಸಲಾರಂಭವಾಯಿತು. ಸಂಚಾರಸಮಯದಲ್ಲಿ ಜಮಖಂಡಿಸಂಸ್ಥಾನದಸ್ಮೈಕಿ ಕೃಷ್ಣಾನದಿಯ ತೀರದಲ್ಲಿರುವ ಗುಹೇಶ್ವರಗಡ್ಡೆಯಲ್ಲಿ ನಿರ್ಜನ ಪ್ರದೇಶದಲ್ಲಿ ಗಿಡಗಳ ಗುಂಪಿನಲ್ಲಿರುವ ಗುಹೇಶ್ವರ ದೇವಾಲಯದಲ್ಲಿ ಶ್ರೀಗಳು ಕೆಲವುದಿವಸ ಏಕಾಂತಸ್ಥಾನವೆಂದು ಅಲ್ಲಿ ಅನುಷ್ಠಾನಮಾಡಿಕೊಳ್ಳುತ್ತಿದ್ದರು. ಪ್ರತಿನಿತ್ಯವೂ ಶಿವಾರ್ಚನಕಾಲಕ್ಕೆ ಸರಿಯಾಗಿ ಒಂದಾನೊಂದು ಘಟಸರ್ಪವು ಬಂದು ಇದಿರಿಗೆ ಆಡುತ್ತಿತ್ತು. ಹೀಗಿರುತ್ತಿರಲು ಒಂದಾನೊಂದು ದಿವಸ ಆ ಗಡ್ಡೆಯಸಮೀಪದಲ್ಲಿರುವ ಕೆಲವುಜನಭಕ್ತರು ಶ್ರೀಗಳ ದರ್ಶನಾರ್ಥವಾಗಿ ಬಂದಾಗ್ಗೆ ಶ್ರೀಗಳವಮುಂದೆ ಹೆಡೆಯನ್ನು ಬಿಚ್ಚಿ ಉಲ್ಲಾಸದಿಂದ ಆಡುತ್ತಿದ್ದ ಆ ಮಹತ್ತರಸರ್ಪವನ್ನು ನೋಡಿ ಭಯಗ್ರಸ್ತರಾಗಿ ಹಿಂದಕ್ಕೆ ಸರಿಯುತ್ತಿರಲಾಗಿ, ಶ್ರೀಗಳವರ ಕಣ್ಣುಸನ್ನೆ ಮಾತ್ರದಿಂದಲೇ ಅದು ಹೊರಟುಹೋಯಿತೋ ಎಂಬಂತೆ ಎಲ್ಲಿಯೋ ಮಾಯವಾಯಿತು. ಆಗ ಭಕ್ತಾದಿಗಳು ಶ್ರೀಗಳವರ ಸಮೀಪಕ್ಕೆ ಬಂದು ಸಾಷ್ಟಾಂಗವೆರಗಿ ಕೈಜೋಡಿಸಿಕೊಂಡು, ನಿರ್ಜನಪ್ರದೇಶವಾದ ಇಂಥ ಭಯಂಕರ ಸ್ಥಾನದಲ್ಲಿ ತಾವು ಒಬ್ಬರೇ ವಾಸಿಸುವುದಕ್ಕಿಂತ ನಮ್ಮ ಭಕ್ತಿ ಕೈಂಕರ್ಯವನ್ನು ಸ್ವೀಕರಿಸಿ ನಮ್ಮನ್ನು ಧನ್ಯರಂ ಮಾಡುವುದಕ್ಕಾಗಿ ಊರಿಗೆ ದಯಮಾಡಿಸಬೇಕು ಎಂದು ಎಷ್ಟು ವಿಧವಾಗಿ ಪ್ರಾರ್ಥಿಸಿಕೊಂಡರೂ ಒಪ್ಪದೆ ಶ್ರೀಗಳವರು ತಮ್ಮ ಉದ್ದಿಷ್ಟ ಕಾಲದವರೆಗೆ ೨-೩ ತಿಂಗಳು ಅಲ್ಲೇ ಶಿವಯೋಗಾನುಸಂಧಾನತತ್ಪರರಾಗಿದ್ದರು. ನಿಶಿತನಿಷ್ಠೆಯಿಂದ ಆ ನಿರ್ಜನ ಪ್ರದೇಶದಲ್ಲಿ ತಪಸ್ಸಿನಲ್ಲಿರುವಾಗ್ಗೆ ಶಿವಾಜ್ಞೆಯಿಂದ ಅನಾಯಾಸವಾಗಿ ಭಕ್ತಮಾಹೇಶ್ವ

ರರ ಗೃಹಗಳ ಎಡೆಯೇನಾದರೂ ಬಂದರೆ ಅದನ್ನು ಪ್ರಸಾದಗೊಳಿಸಿ ಸೇವಿಸುವುದರ ಹೊರತು ಉಳಿದ ದಿನಗಳಲ್ಲೆಲ್ಲಾ ಎದುರಿಗೆ ಪ್ರಸಾದ ಪತ್ರೆಯನ್ನು ಆನಂದದಿಂದ ಸ್ವೀಕರಿಸಿ ಎಷ್ಟುದಿವಸಗಳವರೆಗಾದರೂ ಸಂತೋಷದಿಂದಿರಲಿಕ್ಕೆ ಸಮರ್ಥರಿದ್ದರು.

ಒಂದು ದಿವಸ ಒಂದಾನೊಂದು ಅರಣ್ಯದಲ್ಲಿ ಗುಡ್ಡಗಳ ಬದಿಯಲ್ಲಿ ಒಂದು ವ್ಯಾಘ್ರವು ಬಂದು ದಾರಿಕಟ್ಟಿ ನಿಂತಿತ್ತು. ಅದನ್ನು ಪ್ರೇಮಪೂರ್ವಕವಾಗಿ ಕಂಡು ತಮ್ಮ ಹತ್ತಿರದ್ದ ಕಾರಿಕವನ್ನು ಅದರ ಮುಂದೆ ಚೆಲ್ಲಿ ಆದಾರಿಯನ್ನು ಬಿಟ್ಟು ಎರಡನೇ ದಾರಿಯಿಂದ ಹೋಗುತ್ತಿರುವಾಗ, ಅಕಸ್ಮಾತ್ತಾಗಿ ದನಕಾಯುವ ಹುಡುಗರನ್ನು ಕಂಡು, ಈ ದಾರಿಯೆಲ್ಲಿಗೆ ಹೋಗುತ್ತದೆಂದು ಕೇಳಲು, ಅವರು ಅಂಕಲಗಿ ಅಡವಿಸ್ವಾಮಿಗಳ ಮಠಕ್ಕೆ ಹೋಗುತ್ತದೆಂದು ಹೇಳಲಾಗಿ, ಆಗ ಶ್ರೀಗಳವರು ಮನಸ್ಸಿನಲ್ಲಿ ಹಿಂದೆ ಹುಲಿಯು ದಾರಿಯನ್ನು ಕಟ್ಟಿದುದರಿಂದಲೇ ಆ ಹಾದಿಯನ್ನು ಬಿಟ್ಟು ಈ ಹಾದಿಗೆ ಬಂದದ್ದು ಶ್ರೇಯಸ್ಕರವಾಯಿತು; ಮಹಾತ್ಮರ ದರ್ಶನಲಾಭವಾಗುವಂತಾಯಿತು ಎಂದು ಸಂತೋಷಪಟ್ಟು ಅಡವಿಸ್ವಾಮಿಗಳ ಮಠಕ್ಕೆ ಹೋದರು. ಅಲ್ಲಿ ಶ್ರೀಗಳವರ ದರ್ಶನಗೊಂಡು ಉಭಯ ಮಹಾತ್ಮರಿಗೂ ಪರಸ್ಪರ ನಮಸ್ಕಾರ ಕುಶಲಪ್ರಶ್ನೆಗಳು ಜರುಗಿದ ತರುವಾಯ, ಅಡವಿಸ್ವಾಮಿಗಳು ಶ್ರೀಗಳನ್ನು ಕುರಿತು ಮುಗುಳುನಗೆಯಿಂದ - ಶಿವಯೋಗಿಗಳೇ ಈ ಮುಕ್ಕನಿಗೆ ದರ್ಶನವನ್ನು ಕೊಡದೆ ಹೋಗುತ್ತಿದ್ದಿರಾ? ತಮ್ಮನ್ನು ಇತ್ತಕಡೆಗೆ ಬರುವಂತೆ ದಾರಿಯಲ್ಲಿ ಸಿದ್ಧೇಶ್ವರನು ಪ್ರೇರಿಸಿದಂತೆ ಕಾಣುತ್ತದೆ. ಆದರಿಂದಲೇ ತಾವು ಇಲ್ಲಿಗೆ ಅಕಸ್ಮಾತ್ತಾಗಿ ದಯಮಾಡಿಸಿ ದರ್ಶನವನ್ನು ಕೊಟ್ಟಿರಿ. ತಮ್ಮಂಥ ಶಿವಯೋಗಿಗಳ ದರ್ಶನವು ಇಂದು ಸಂಘಟಿಸಿದುದರಿಂದ ಧನ್ಯನಾದೆನು" ಎಂದು ತಮ್ಮ ಕೈಂಕರ್ಯವನ್ನು ತೋರಿಸಲು ಕೂಡಲೇ ಶಿವಯೋಗಿಗಳು -ನಾನು ಎರಡನೆಕಡೆಗೆ ಹೋಗುತ್ತಿರುವುದನ್ನು ಅಡ್ಡಗಟ್ಟಿ ಸಿದ್ಧೇಶ್ವರನೇ ಈ ನಿಮ್ಮ ದರ್ಶನದ ಲಾಭವನ್ನುಂಟುಮಾಡಿ ಕೊಟ್ಟನು" ಎಂದು ಹೇಳಿಕೊಂಡು ಉಭಯರೂ ಸಂತೋಷಪಟ್ಟು ಆ ದಿವಸ ಅಲ್ಲೇ ವಾಸಮಾಡಿ, ಪರಸ್ಪರ ಶಿವಾನುಭವಗೋಷ್ಠಿಗಳು ನಡೆದು, ಮರುದಿವಸ ಶ್ರೀ ಶಿವಯೋಗಿಗಳು ಸಂಚಾರಾರ್ಥವಾಗಿ ತೆರಳಿದರು. ಇಂತನೇಕ ಮಹಿಮೆಗಳನ್ನು ಅಲ್ಲಲ್ಲಿ ವ್ಯಕ್ತಪಡಿಸುತ್ತ ನಾನಾವಿಧವಾದ ಪುಣ್ಯಸ್ಥಾನಗಳಲ್ಲೆಲ್ಲಾ ಸಂಚಾರಮಾಡುತ್ತಿರಲು, ಇವರ ೪೫ ನೆ ವರ್ಷದ ವಯಸ್ಸಿನ ಸುಮಾರಿಗೆ ಇವರ ೩ ನೆ ಗುರುಗಳಾದ ಚೆನ್ನಬಸವಸ್ವಾಮಿಗಳು ತಮ್ಮ ಅವತಾರ ಸಮಾಪ್ತಿಯು ಸನ್ನಿಹಿತವಾಯಿತೆಂದು ಊಹಿಸಿ, ಈ ಶಿವಯೋಗಿಗಳನ್ನು ಪ್ರತ್ಯಕ್ಷವಾಗಿ ಬರಮಾಡಿಕೊಂಡು, ಇನ್ನು ನೀವು ಈ ಮಠದಲ್ಲಿ ಅಧಿಕಾರವನ್ನು ವಹಿಸಿರಿ; ನಿಮ್ಮ ಸಂಚಾರವನ್ನು ನಿಲ್ಲಿಸಿರಿ; ಇದೇ ಮಠದ ತಪೋವನದಲ್ಲಿ ನಿಮ್ಮ ಶಿವಾರ್ಚನಾನುಷ್ಠಾನವನ್ನು ಜರಿಗಿಸುತ್ತಾ ಶಿವಾನುಭವಾನಂದದಿಂದ ಭಕ್ತೋದ್ಧಾರಮೂರ್ತಿಗಳಾಗಿ ನೆಲಸಿರಿ" ಎಂದು ಅಪ್ಪಣೆ ಮಾಡಲಾಗಿ, ಆಗ ಶಿವಯೋಗಿಗಳು -ಈ ಅಧಿಕಾರಶೃಂಖಲೆಯಿಂದ ನನ್ನನ್ನೇಕೆ ಬಂಧಿಸುವಿರಿ? ಸಿದ್ಧಲಿಂಗಸ್ವಾಮಿಗಳು ಅದನ್ನು ವಹಿಸಲು ಯೋಗ್ಯರಿದ್ದಾರೆ. ಆದುದರಿಂದ ಅವರಿಗೆ ಅಧಿಕಾರವನ್ನು ಕೊಡಬೇಕೆಂದು ವಿಜ್ಞಾಪಿಸಿಕೊಂಡು ಗುರ್ವಾಜ್ಞೆಯನ್ನು ಮೀರಲಾರದೆ ಮಹಾಪ್ರಸಾದವೆಂದು ತಮ್ಮ ಸಂಚಾರವನ್ನು ಮಾತ್ರ ನಿಲ್ಲಿಸಿ ಸ್ಥಿರಗೊಂಡು ಮಠದಲ್ಲೇ ನೆಲಸಿದರು. ಆಗ ಗುರುಗಳು ಶ್ರೀ ಸಿದ್ಧಲಿಂಗಸ್ವಾಮಿಗಳಿಗೆ ಮಠದ ಸರ್ವಾಧಿಕಾರವನ್ನು ಕೊಟ್ಟು ಆಶೀರ್ವದಿಸಿ, ತಮ್ಮ ಅವತಾರವನ್ನು ಪೂರ್ತಿಗೊಳಿಸಿದರು. ಬಳಿಕ ಗುರ್ವಾಜ್ಞಾಪ್ರಕಾರ ಶ್ರೀ ಶಿವಯೋಗಿಗಳವರು ಮಠದಲ್ಲಿ ನಿಂತರೂ ಕಮಲಪತ್ರೋದಕದಂತೆ ಲೌಕಿಕವಿಷಯಗಳಿಂದ ನಿರ್ಲಿಪ್ತರಾಗಿ ತಮ್ಮ ಶಿವಯೋಗಾನಂದ ಸಾಮ್ರಾಜ್ಯವೈಭವದಲ್ಲಿ ಇರುತ್ತಿದ್ದರು. ಹೀಗಿರುತ್ತಿರಲು ಕೆಲವು ದಿವಸ ಕಳೆದನಂತರ ಅಂದರೆ ಶಕ ೧೮೨೬ನೆ ಸಂವತ್ಸರದಲ್ಲಿ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ಬಿದರೆ ಕುಮಾರಸ್ವಾಮಿಗಳು ಈ ಶಿವಯೋಗಿಗಳಲ್ಲಿ ಅಸಾಧಾರಣ ಭಕ್ತಿಯುಳ್ಳವರಾಗಿದ್ದುದರಿಂದ ನವದತ್ತಿಯಲ್ಲಿ ತಾವು ನಡೆಯಿಸಿದ ಬಸವಪುರಾಣ ಪ್ರವಚನಸಮಾಪ್ತಿಯ ಮಹೋತ್ಸವ ಕಾಲಕ್ಕೆ ಈ ಶಿವಯೋಗಿಗಳಿಗೆ ಬಿನ್ನಹ ಮಾಡಲು, ಶಿವಯೋಗಿಗಳು ನಿರ್ಲಿಪ್ತರಾದಾಗ್ಯೂ ಅವರ ಮೇಲಿನ ಮೊದಲಿನ ಪ್ರೇಮಾತಿಶಯದ ಮೂಲಕವಾಗಿ ಅವರಿಷ್ಟಪ್ರಕಾರ ಬಿನ್ನಹವನ್ನು ಕೈಕೊಂಡು ನವದತ್ತಿಗೆ ದಯಮಾಡಿಸಿದರು. ಆ ಕಾಲಕ್ಕೆ ಅಲ್ಲಿ ಧಾರ್ಮಿಕ ಸಭೆಯು ಕೂಡಿದಾಗ್ಯೂ ಈಗ ಚಿತ್ರದುರ್ಗದ ಜಗದ್ಗುರು ಪೀಠಕ್ಕೆ ಅಧಿಕಾರಿಗಳಾಗಿರುವ ಶ್ರೀಜಯದೇವ ಮಹಾಸ್ವಾಮಿಗಳು ಆದೇ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ತತ್ಸಭೆಗೆ ಬಂದಿದ್ದು, ಶ್ರೀ ಶಿವಯೋಗಿಗಳ ದರ್ಶನ ಮಾಡಿಕೊಂಡು, ಸಾಷ್ಟಾಂಗವೆರಗಿದಾಗ್ಗೆ ಶ್ರೀ ಶಿವಯೋಗಿಗಳು ಅವರನ್ನು ತಮ್ಮ ಕೃಪಾದೃಷ್ಟಿಯಿಂದ ನೋಡಿ, ತಮ್ಮ ಅಂತರ್ಜ್ಞಾನದಿಂದ ವಿಚಾರಿಸಿ - ಓಹೋ ಏಳಿರಿ ಏಳಿರಿ, ನೀವು ಮುಂದೆ ಮಹಾ ಜಗದ್ಗುರುಗಳಾಗಿ ಲೋಕಪೂಜ್ಯರಾಗುತ್ತೀರಿ, ನಮ್ಮ ಚರಸಮೂಹಕ್ಕೆಲ್ಲಾ ಚಕ್ರವರ್ತಿಗಳಾಗುತ್ತೀರಿ" ಎಂದು ಆನಂದದಿಂದ ಆಶೀರ್ವಚನಗಳನ್ನು ದಯಪಾಲಿಸಿದರು. ಕೆಲವು ದಿವಸಗಳ ಹಿಂದೆ ಈ ಚಿತ್ರದುರ್ಗದ ಪೀಠಾಧಿಕಾರಿಗಳಾಗಿದ್ದ ಜಗದ್ಗುರು ಶ್ರೀ ಮುಪ್ಪಿನಸ್ವಾಮಿಗಳು ಲಿಂಗೈಕ್ಯರಾಗಿದ್ದರು. ಆ ಪೀಠಕ್ಕೆ ಮತ್ತೊಬ್ಬ ಅಧಿಕಾರಿಗಳನ್ನು ಮಾಡುವ ಅವಶ್ಯಕತೆಯಿತ್ತು. ಈ ಮಹಾತ್ಮರಿಗಳವರು ಆಶೀರ್ವದಿಸಿದಂತೆ ಸ್ವಲ್ಪದಿವಸಗಳಲ್ಲಿಯೇ ಜಯದೇವ ಮಹಾಸ್ವಾಮಿಗಳೇ ಅಧಿಕಾರಿಗಳಾದುದನ್ನು ನೋಡಿ ಎಷ್ಟೋಜನ ಶಿಷ್ಯಪುರುಷರು ಶ್ರೀಗಳ ಆಶೀರ್ವಾದ ಪ್ರಕಾರ ಸಿದ್ಧಿಸಿದುದನ್ನು ಸ್ಮರಿಸಿ ಅವರ ಮಹಿಮೆಯ ಬಗ್ಗೆ ಈಗ್ಗೂ ಕೊಂಡಾಡುತ್ತಿರುವರು. ನವದತ್ತಿಯಲ್ಲಿ ಪುರಾಣಸಮಾಪ್ತಿಯ ಸಮಾರಾಧನೆ ನಡೆದು ೫-೬ ಸಹಸ್ರ ಜನರು ಬಯಲಲ್ಲಿ ಊಟಕ್ಕೆ ಕುಳಿತ ಕಾಲಕ್ಕೆ ಅಕಸ್ಮಾತ್ತಾಗಿ ಭಯಂಕರವಾದ ಮೇಘವು ಆವರಿಸಿ ಮಳೆ ಬರುವುದಕ್ಕಾರಂಭಿಸಲು ಕಾರ್ಯಕರ್ತರಾದ ಬಿದರೆ ಕುಮಾರಸ್ವಾಮಿಗಳು ಮುಂದೇನು ಗತಿಯೆಂದು ಉದ್ವೇಗಿಸಲು, ಆಗ ಶಿವಯೋಗಿಗಳ ಮಹಿಮಾತಿಶಯದಿಂದ ಆ ಸಮಾರಂಭಸ್ಥಾನದ ಹೊರತು ಉಳಿದ ಎಲ್ಲಾ ಕಡೆಯಲ್ಲಿಯೂ ವಿಪುಲವಾಗಿ ಮಳೆಯಾದಾಗ್ಯೂ ಆ ಸ್ಥಾನದಲ್ಲಿ ಮಾತ್ರ ಒಂದುಹನಿಸಹ ಉದುರದೆ ಯಥಾಸಾಂಗವಾಗಿ ಸಮಾರಂಭವು ನಡೆದುದನ್ನು ನೋಡಿ ಸಮೂಹವೆಲ್ಲಾ ಆಶ್ಚರ್ಯಪಟ್ಟಿತು. ಈ ರೀತಿಯಾಗಿ ನವದತ್ತಿಯಲ್ಲಿ ಅಲೌಕಿಕವಾದ ಮಹಿಮೆಯನ್ನು ತೋರಿಸಿ ಕಾರ್ಯವನ್ನು ಸಾಂಗಗೊಳಿಸಿ ಸರ್ವಭಕ್ತಮಾಹೇಶ್ವರರಿಗೆ ಆಶೀರ್ವದಿಸಿ ಅಲ್ಲಿಂದ ಹೊರಟು, ಅಲ್ಲಲ್ಲಿ ಭಕ್ತರ ಇಷ್ಟಾರ್ಥವನ್ನು ಪೂರ್ತಿಗೊಳಿಸುತ್ತ ಅಥಣಿಗೆ ದಯಮಾಡಿಸಿ ಮೊದಲಿನಂತೆ ತಮ್ಮ ಶಿವಯೋಗಾನಂದ ತತ್ಪರರಾಗಿದ್ದರು. ಹೀಗಿರುವಲ್ಲಿ ಕೆಲವು ದಿವಸಗಳನಂತರ ಸಂಗಮದ ಒಬ್ಬ ವಯೋವೃದ್ಧ ಚರಮೂರ್ತಿಗಳು ಶ್ರೀ ಶಿವಯೋಗಿಗಳ ದರ್ಶನಾರ್ಥವಾಗಿ ಬಂದು ಪರಸ್ಪರ ದರ್ಶನನಮಸ್ಕಾರಗಳಾದ ಬಳಿಕ ಶ್ರೀ ಶಿವಯೋಗಿಗಳು ಆ ಚರಮೂರ್ತಿಗಳನ್ನು ಕುರಿತು -ಮಧ್ಯಾಹ್ನಕಾಲದ ಶಿವಾರ್ಚನೆಗೆ ಹೊತ್ತಾಗಿದೆ, ಸ್ನಾನಕ್ಕೆ ದಯಮಾಡಿಸಿ"ರೆಂದು ನುಡಿಯಲು, ಅದಕ್ಕೆ ಆ ವೃದ್ಧಚರಮೂರ್ತಿಗಳು-- -ನಮಗೆ ಈಗ ಹೋಳಿಗೆಸೀಕರಣೆ ಊಟಮಾಡಿಸುವಂತಿದ್ದರೆ ನಾನು ಸ್ನಾನಮಾಡುತ್ತೇನೆ; ಇಲ್ಲವಾದರೆ ನನಗೆ ಭೋಜನದ ಇಷ್ಟವಿಲ್ಲ" ಎಂದು ಆಗ್ರಹದಿಂದ ಹೇಳಲು, ಮಾವಿನಹಣ್ಣು ಸಿಗುವ ಕಾಲವಲ್ಲದಿದ್ದಾಗ್ಯೂ ಶ್ರೀ ಶಿವಯೋಗಿಗಳು-ನಿಮ್ಮ ಇಷ್ಟವನ್ನು ಶಿವನು ಪೂರ್ತಿಮಾಡುವನು, ಸ್ನಾನಮಾಡಿರೆಂದು ಹೇಳಿ, ಅವರಿಗೆ ಸ್ನಾನವನ್ನು ಮಾಡಿಸಿ ತಾವೂ ಸ್ನಾನಮಾಡಿ ಶಿವಾರ್ಚನೆಗೆ ಕುಳಿತರು. ಶಿವಾರ್ಚನೆ ಮುಗಿಯುವುದರೊಳಗಾಗಿ ಆ ಮಹಿಮರ ವಾಕೃಪಾಭಾವದಿಂದ ಆದೇ ಕಾಲಕ್ಕೆ ಅಕಸ್ಮಾತ್ತಾಗಿ ಪಾರ್ಸಲ್ ಮೂಲಕ ಒಂದು ಮಾವಿನಹಣ್ಣಿನ ಬುಟ್ಟಿಯನ್ನು ಯಾರೋ ಕಳುಹಿಸಿಕೊಟ್ಟುದು ಬಂದಿತು. ಆಗ ಸೇವಕರು ಶ್ರೀ ಶಿವಯೋಗಿಗಳವರಿಗೆ ಈ ವಾರ್ತೆಯನ್ನು ತಿಳುಹಿಸಲು, ಚರಮೂರ್ತಿಗಳ ಇಷ್ಟವನ್ನು ಶಿವನು ಪೂರ್ತಿಮಾಡಿದನೆಂದು ಹೇಳಿದುದನ್ನು ಕಂಡು ಎಲ್ಲರೂ ಆನಂದಪಟ್ಟರು. ಅಷ್ಟರಲ್ಲಿ ಪದ್ಧತಿಯ ಪ್ರಕಾರ ಊರೊಳಗಿನ ಎಡೆಯೊಂದು ಬಂದಿತು. ಅದರಲ್ಲಿ ಹೋಳಿಗೆಗಳೇ ಇದ್ದುದನ್ನುನೋಡಿ ಮತ್ತಷ್ಟು ಆನಂದಪಟ್ಟರು. ಶಿವಯೋಗಿಗಳು ಆ ಚರಮೂರ್ತಿಗಳಿಗೆ ಹೋಳಿಗೆಯನ್ನು ಯಥೇಷ್ಟವಾಗಿ ನೀಡಿಸಿ ತೃಪ್ತಿಪಡಿಸಿದರು. ಸಂತುಷ್ಟನಾದ ಆ ಜಂಗಮನು ಕ್ಷಣಮಾತ್ರದಲ್ಲಿಯೇ ಮಾಯವಾದನು. ಇದರಂತೆ ಅನೇಕ ಮಹಿಮೆಗಳನ್ನು ಪ್ರಕಟಿಸುತ್ತಲಿದ್ದರು. ಅಷ್ಟಾಂಗಯೋಗನಿಷ್ಠಾಗರಿಷ್ಠರಿಗೆ ವಾಕ್ಸಿದ್ಧಿ, ದುಷ್ಟಪ್ರಾಣಿಬಾಧಾರಾಹಿತ್ಯ, ನೀರೋಗಿತ್ವ, ದೂರಶ್ರವಣ, ತ್ರಿಕಾಲಜ್ಞಾನ ಆಜ್ಞಾಸಿದ್ಧಿ ಮೊದಲಾದ ಸಿದ್ಧಿಗಳೆಲ್ಲಾ ತನ್ನಷ್ಟಕ್ಕೆ ತಾನೇ ಎಂದರೆ ವೇಗದಿಂದ ಓಡುವ ಹೊಗೆಬಂಡಿಯನ್ನನುಸರಿಸಿ ತಸಕಡ್ಡಿಗಳು ತಾವಾಗಿ ಓಡಿಬರುವಂತೆ ಲಭಿಸಿರುವುವು. ಆದರೆ ಮುಮುಕ್ಷುಗಳೂ ಜೀವನ್ಮುಕ್ತರೂ ಆದ ಮಹಿಮರು ಕಾಮಿತಾರ್ಥಕ್ಕಾಗಿ ಮಾತ್ರ ಯೋಗಾಭ್ಯಾಸವಂ ಮಾಡುವ ಭೌತಿಕರಂತಿರುವರಲ್ಲವಾದಕಾರಣ, ಈ ಸಿದ್ಧಿಗಳನ್ನೆಲ್ಲಾ ಅವರು ತೃಣಗಣದಂತೆ ಅಲಕ್ಷೀಕರಿಸಿಕೊಂಡಿರುವರು. ಆದರೆ ಅವರನ್ನು ಆಶ್ರಯಿಸಿಕೊಂಡಿರುವ ಸಿದ್ಧಿಗಳು ಮಾತ್ರ ಅವರ ಕರುಣಾಪಾತ್ರರಾದ ಭಾವಿಕಜನರಿಗೆ ಭಾವಾನುರೂಪವಾದ ಇಷ್ಟಾರ್ಥಲಾಭವನ್ನು ಮಾಡಿಕೊಡಲು ಸದಾ ಜಾಗರೂಕವಾಗಿರುವುವು. ಈ ಕಾರಣದಿಂದಲೇ ಶ್ರೀ ಶಿವಯೋಗಿಗಳ ಬಳಿಗೆ ರೋಗಾರ್ತರು, ಸಂತಾನಕಾಂಕ್ಷಿಗಳು ಮೊದಲಾದ ನಾನಾತರದ ಕಾಮಿತಾರ್ಥಿಗಳು ಸರ್ವದಾ ಬಂದು ಸೇವಿಸಿ ಅವರ ಕರುಣಾಕಟಾಕ್ಷಲೇಶಕ್ಕೆ ಭಾಗಿಗಳಾಗಿಹೋಗಿ ಮನೋರಥ ಫಲಗಳನ್ನು ಕೂಡಲೇ ಪಡೆದು, ಆನಂದನಿರ್ಭರರಾಗಿ ತಂತಮ್ಮ ಹರಕೆಗಳನ್ನು ತೀರಿಸಲಿಕ್ಕೆ ಮರಳಿ ಬಂದು ಮಠದ ದಾಸೋಹಕ್ಕೆ ನಾನಾವಿಧ ಸಾಹಾಯ್ಯಗಳನ್ನು ಮಾಡಿ ಕಾಣಿಕೆಗಳನ್ನು ಅರ್ಪಿಸಿ ತೆರಳುತ್ತಿದ್ದರು. ಒಂದು ಮತ ಜಾತಿಯವರೆನ್ನದೆ ಸಕಲ ವರ್ಣಾಶ್ರಮದವರೂ ಅಸಾಧಾರಣಭಕ್ತಿಯನ್ನು ಇವರಲ್ಲಿಟ್ಟಿದ್ದರು. ಈ ಭಕ್ತಜನರ ಸಂದಣಿಯು ಸದಾ ಮಠದಲ್ಲಿರುತ್ತಿದ್ದುದರಿಂದ ಈ ಪೂರು ಒಂದು ದಿವ್ಯಕ್ಷೇತ್ರದಂತೆ ಗಣ್ಯವಾಗಿದ್ದಿತು. ಭಕ್ತರ ಸೇವೆ ಅವರಿಂದ ಅರ್ಪಿಸಲ್ಪಟ್ಟ ದ್ರವ್ಯಗಳು ಅದರಿಂದ ನಡೆಯುವ ದಾಸೋಹಗಳು ಇವುಗಳಲ್ಲಾವುದರಲ್ಲೂ ಶಿವಯೋಗಿಗಳ ಪ್ರತ್ಯಕ್ಷ ಸಂಬಂಧವು ಲೇಶವಾದರೂ ಇರದೆ, ಅವರು ನಿಸ್ಸಂಗಿಗಳಾಗಿದ್ದರೂ, ಅವರ ಪಾದಸಾನ್ನಿಧ್ಯಪ್ರಭಾವದಿಂದ ಸಕಲವೂ ಅನ್ಯೂನವಾಗಿ ಮಹಾವೈಭವದಿಂದ ನಡೆದುಹೋಗುತ್ತಿದ್ದುವು. ಶ್ರೀಮಠದಲ್ಲಿ ಪ್ರತಿವರ್ಷವೂ ಬಸವಪುರಾಣ ಚೆನ್ನಬಸವಪುರಾಣ ಪ್ರಭುದೇವರಪುರಾಣ ಪ್ರವಚನವೂ ಏಕಾದಶರುದ್ರಪೂಜಾ ಅರುವತ್ತುಮೂರು ಪುರಾತನರ ಮಂಟಪೋತ್ಸವ ಇತ್ಯಾದಿ ಮಹತ್ಕಾರ್ಯಗಳೂ ಅವರ ಸಂಕಲ್ಪವಿಲ್ಲದೇನೆಯೇ ಭಕ್ತರ ಹೃದಯದಲ್ಲಿ ಉದ್ಭವಿಸಿದ ಭಕ್ತಿಯಿಂದಲೇ ಅನಾಯಾಸವಾಗಿ ನಡೆದುದು ಸರ್ವವಿಶ್ರುತವಾದ ಸಂಗತಿಯಾಗಿದೆ. ಹೀಗೆ ಈ ಮಹಾತ್ಮರ ತಪಃಪ್ರಭಾವದಿಂದ ಅನೇಕ ಅಪೌರುಷ ಕಾರ್ಯಗಳು ತಾವಾಗಿ ಜರುಗುತ್ತಿರುವ ಪ್ರಸಂಗದಲ್ಲಿ ಭಕ್ತಕೋಟಿಯಿಂದ ಎಷ್ಟೋ ದ್ರವ್ಯವು ಪ್ರವಾಹರೂಪವಾಗಿ ತಾನಾಗಿಯೇ ಬಂದು ಬೀಳುತ್ತಿತ್ತು. ಅದನ್ನು ಶಿವಯೋಗಿಗಳು ಕಣ್ಣೆತ್ತಿ ಸಹ ನೋಡಿದವರಲ್ಲ.

ಆ ಮಠಾಧಿಕಾರಿಗಳಾದ ಸಿದ್ಧಲಿಂಗಸ್ವಾಮಿಗಳು ಸಹ ಮಹಾ ವೈರಾಗ್ಯಶಾಲಿಗಳಾದುದರಿಂದ ಮಠಕ್ಕೆ ತಾನಾಗಿ ಬಂದು ಬೀಳುತ್ತಿದ್ದ ಧನರಾಶಿಯನ್ನೆಲ್ಲಾ ಪ್ರತಿದಿನವೂ ಜರುಗುತ್ತಿದ್ದ ದಾಸೋಹಕ್ಕೂ ಬಂದ ಅತಿಥಿಗಳ ಸತ್ಕಾರಕ್ಕೂ ಮಠದಲ್ಲಿರುವ ಸಂಸ್ಕೃತ ಪಾಠಶಾಲೆಯ ವಿದ್ಯಾಭ್ಯಾಸಕ್ಕೂ ವಿದ್ಯಾರ್ಥಿಗಳ ಭೋಜನಾದಿಗಳಿಗೂ ಆಗಿಂದಾಗ್ಗೆ ವೆಚ್ಚ ಮಾಡುತ್ತಿದ್ದರಲ್ಲದೆ ಅದರಲ್ಲಿ ಒಂದು ಪೈಯನ್ನಾದರೂ ಶೇಖರಿಸುವ ಅಥವಾ ಮಠಕ್ಕೆ ಆಸ್ತಿಯನ್ನು ಮಾಡುವ ಯಾವತೆರದ ಆಶಾಬಂಧಕ್ಕೂ ಸಿಲ್ಕಿದವರಲ್ಲವಾದುದರಿಂದ ಶ್ರೀಶಿವಯೋಗಿಗಳ ಆನಂದಾಭಿಮಾನಗಳಿಗೆ ಪಾತ್ರರಾಗಿ ಆ ಶಿವಯೋಗಿಗಳ ಇಷ್ಟಾನುವರ್ತಿಗಳಾಗಿ ಅನನ್ಯಗುರುಶಿಷ್ಯಭಾವದಿಂದ ಭಕ್ತೋದ್ಧಾರ ಮಾಡುತ್ತಿದ್ದರು. ಶ್ರೀಶಿವಯೋಗಿಗಳು ತಮ್ಮ ೮೫ ನೇ ವಯಸ್ಸಿನ ಸುಮಾರಿಗೆ ತಮ್ಮ ಅವತಾರಸಮಾಪ್ತಿಯ ವಿಷಯವನ್ನು ೬ ತಿಂಗಳ ಮುಂಚೆಯೇ ಗುರ್ತಿಸಿ, ಮಠಾಧಿಕಾರಿಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳನ್ನು ಏಕಾಂತದಲ್ಲಿ ಬರಮಾಡಿಕೊಂಡು ಅವರೊಡನೆ— "ನಾವು ಇನ್ನು ಇಹಲೋಕಯಾತ್ರೆಯನ್ನು ಮುಗಿಸುವುದು ಸಮೀಪಿಸಿದೆ. ಆದುದರಿಂದ ನಮ್ಮ ದೇಹತ್ಯಾಗವಾದ ಕೂಡಲೇ ಇತರರ ಹಾಗೆ ನಮ್ಮ ದೇಹದ ಮೆರೆವಣಿಗೆ ಮುಂತಾದುದನ್ನು ಮಾಡದೆ ಕೂಡಲೆ ಅಂತ್ಯಕ್ರಿಯೆಯನ್ನು ಸಾಂಗಗೊಳಿಸಿ ಸಮಾಧಿ ಮಾಡಬೇಕು" ಎಂದು ಅಪ್ಪಣೆ ಕೊಡಿಸಿದರು. ಇಷ್ಟಾದ ಕೆಲವು ದಿವಸಗಳಲ್ಲಿ ಶ್ರೀ ಶಿವಯೋಗಿಗಳ ವೃತ್ತಿಯು ಅಂತರ್ಮುಖವಾಗಿ ಶಿವಾಕಾರವೇ ಶೋಭಿಸಿದ್ದಿತು. ಬಹಿರಂಗದಲ್ಲಿ ಬಾಲ್ಯಾವಸ್ಥೆಯೂ ಅಂತರಂಗದಲ್ಲಿ ಸ್ಥಿರಪ್ರಜ್ಞೆಯೂ ವಿರಾಜಮಾನವಾಗಿದ್ದುವು. ಆದರೂ ಲೋಕಶಿಕ್ಷಾರಕ್ಷಣಹೇತುವಿನಿಂದ ಸಿದ್ಧಾಂತೋಕ್ತ ಸದಾಚಾರಮಾರ್ಗವನ್ನು ಬಿಡದೆ ತಮ್ಮ ನಿಯತವಾದ ಶಿವಪೂಜಾದಿ ಕ್ರಿಯೆಗಳನ್ನು ಕಿಂಚಿತ್ತಾದರೂ ನೂನತೆಯಿಲ್ಲದಂತೆ ಅಂತ್ಯದವರೆಗೂ ನಡೆಯಿಸಿ, ಕಡೆಗೆ ಇದೇ ದುರ್ಮತಿನಾಮಸಂವತ್ಸರದ ಚೈತ್ರ ಬ|| ೧ ಶನಿವಾರ ಪದ್ಧತಿ ಪ್ರಕಾರ ಪ್ರದೋಷಕಾಲದ ಸ್ನಾನಮಾಡಿ ಪೂಜೆಗೆ ಕುಳಿತು ಹಸ್ತದಲ್ಲಿ ತಮ್ಮ ಇಷ್ಟಲಿಂಗವನ್ನು ಧರಿಸಿ ಅರ್ಚಿಸಿ ನಮಸ್ಕಾರಮಾಡುತ್ತಾ ಲಿಂಗದಲ್ಲಿ ದೃಷ್ಟಿಯನ್ನು ಇಟ್ಟು, ಆ ತಮ್ಮ ಕರದಿಷ್ಟಲಿಂಗದಲ್ಲಿ ಇಂದ್ರಿಯ ಮನಃಪ್ರಾಣಾದಿಗಳನ್ನೆಲ್ಲಾ ಲಯಗೊಳಿಸಿ ಐಕ್ಯಗೊಂಡರು. ನೆರೆದಿದ್ದ ಭಕ್ತಮಾಹೇಶ್ವರ ಗುರುಚರಮೂರ್ತಿಗಳ ಜಯಜಯಘೋಷವು ದಿಙ್ಮಂಡಲವನ್ನು ಭೇದಿಸಿತು. ಹೀಗೆ ಜಗದುದ್ಧಾರಾರ್ಥವಾಗಿ ಅವತರಿಸಿದ್ದ ಈ ಮಹಾಜ್ಯೋತಿಯು ತನ್ನ ಪ್ರಭೆಯಿಂದ ಈ ವೀರಶೈವಸಮಯವನ್ನೇ ಬೆಳಗುತ್ತಿದ್ದು ಪರಾತ್ಪರಪರಂಜ್ಯೋತಿಯಲ್ಲಿ ಅಡಗಿತು. ಶಿವಾನುಗ್ರಹದಿಂದ ಇಂಥ ಮಹಾವಿಭೂತಿಗಳ ಅವತಾರವು ಭೂತಲದಲ್ಲಿ ಮೇಲಿಂದ ಮೇಲೆ ಉಂಟಾಗಲೆಂಬುದೇ ಆಸ್ತಿಕರೆಲ್ಲರ ಕೋರಿಕೆ.

ಶಿವಯೋಗಿಕಿಂಕರ.

ಸೇವಿಂಗ್ಸ್ ಬಾಕ್ಸ್ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ. ಕೈಯಲ್ಲಿರುವಾಗ ಸೇವಿಂಗ್ಸ್‌ಬ್ಯಾಂಕ್‌ನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವದೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಳ್ಳುವದು. ಇದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ. ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ 2—0—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
33 102 ಚೈನಾಬಜಾರ್ ರೋಡ್ ಮದರಾಸು.

18 ಮೊಳ ಪೂರಾಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

33 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ|	೦—೧೩—೦
ಶಿವಪೂಜಾವಿಧಿ|	೧—೦—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

೧೯೨೧ ನೆಯ ಇಸವಿ ಮೇ ತಾ|| ೧೫ ರಿಂದ ೧೯೨೧ ನೆಯ ಮೇ ತಾ|| ೨೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ವೈಶಾಖ ಶುದ್ಧ ಅಷ್ಟಮಿಯಿಂದ ವೈಶಾಖ ಶುದ್ಧ ಪೌರ್ಣಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
15	ಭಾನು	ಅಷ್ಟ	9-1	ಮಘಾ	35-32	2
16	ಸೋಮ	ನ-ದ	3-26 54-28	ಪುಬ್ಬ	32-0	3
17	ಮಂಗಳ	ಏಕಾ	53-21	ಉತ್ತ	20-8	4
18	ಬುಧ	ದ್ವಾ	49-41	ಹಸ್ತ	27-0	5
19	ಗುರು	ತ್ರಯೋ	47-11	ಚಿತ್ತ	25-54	6
20	ಶುಕ್ರ	ಚತು	45-46	ಸ್ವಾತಿ	25-53	7
21	ಶನಿ	ಪೌರ್ಣ	45-31	ವಿಶಾ	27-2	8

(1) ಪ್ರದೋಷ. (2) ವ್ಯಾಸಪೂರ್ಣಿಮಾ, ಅರ್ಧನಾರೀಶ್ವರವ್ರತ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃಶಾವತಾರಾ ಪಕ್ಷಜ್ಞ ನಕ್ಷತ್ರವೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರನಾಥೇಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಿಶೀಯಂಸದಾಪುರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಮೇ ತಾರೀಖು ೨೨ ನೆಯ ಭಾನುವಾರ (ಸಂಚಿಕೆ ೨೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸರಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHAVA
VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕರೋಗಗಳುಗುಣವಾಗುತ್ತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ,
19 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12.0	,	50-0-0
5	0. 8.0	..	100-0-0
6	0.12-0	,,	100-0-0
7	6. 0.0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0. 6.0	ಇಂದ	10-0-0
8	0. 8.0	,,	100-0-0
9	0.12-0	,,	100-0-0
10	0-14-0	,,	100-0-0
11	3- 8.0	,,	100-0-0
12	4- 0.0	,,	100-0-0
13	4- 8.0	,,	100-0-0
14	6. 0.0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಪಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅರಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
13 ಕಂಪನಿ, ಚೌಕಂಬಾ ಕಾಶೀ.

ಫಲ್ತಶೋಧಕ ! ಮನೋಲ್ಲಾಸಿಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 32

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾತರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿರುವು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆ ಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಧೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರ ಇದನ್ನು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ತೀವ್ರತರವಾದ ಜ್ವರವಾದರೂ ತತ್ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತತ್ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತವಹಿಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಸಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಕೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3. ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಡಬ್ಬಿ 1 ಕ್ಕೆ 1—4—0

34 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 547 ಪಾರ್ಕ್‌ಟೌನ್, ಮದರಾಸು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0



ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
34 102 ಚೈನಾಬಜಾರ್ ರೋಡ್ ಮದರಾಸು.

ಮೈಸೂರು ಸ್ಟಾರ್

೧೯೨೧ ನೆಯ ಇಸವಿ ಮೇ ತಾ|| ೨೨ ನೆಯ ಭಾನುವಾರ.

ಮ|| ಗಾಂಧಿಯವರು, ಸಿಮ್ಲಾ.

ವೈಸ್ರಾಯರ ಸಂದರ್ಶನಕ್ಕಾಗಿ ಮ|| ಗಾಂಧಿಯವರು ಸಿಮ್ಲಾಪಟ್ಟಣಕ್ಕೆ ಪತ್ನೀಸಮೇತರಾಗಿ ತಾ|| ೧೨ರಲ್ಲಿ ಹೋದರು. ಆ ಪಟ್ಟಣಕ್ಕೆ ೩ ಮೈಲಿಗಳ ದೂರದಲ್ಲಿರುವ ಸಮ್ಮರ್‌ಹಿಲ್ ಎಂಬ ನಿಲ್ದಾಣದಲ್ಲಿಳಿದಾಗ ಸಾವಿರಾರು ಪ್ರಜೆಗಳೂ ಪಂಡಿತ ಮಾಳವ್ಯರವರೂ ಸ್ವಾಗತಿಸಿದರು. ರಾಟೆಯ ಗುರ್ತುಳ್ಳ ಸ್ವರಾಜ್ಯಪತಾಕೆಯನ್ನು ಹಿಡಿದುಕೊಂಡು ಸ್ವಚ್ಛಂದ ಸೈನಿಕರು ಹಿಲ್ಯೈಸಿದ್ದರು. ಗಾಂಧಿ ದಂಪತಿಗಳು ಮಾಳವ್ಯರವರ ಬಿಡಾರದಲ್ಲಿ ಇಳಿದರು. ತಾ|| ೧೩ನೆ ಮಧ್ಯಾಹ್ನವೂ ತಾ|| ೧೪ನೆ ಬೆಳಗ್ಗೂ ಬಹಳ ಹೊತ್ತು ವೈಸ್ರಾಯರೊಡನೆ ಗಾಂಧಿಯವರ ಸಂಭಾಷಣವು ಜರುಗಿತೆಂದು ಪ್ರಕಟವಾಗಿದೆ. ವಿವರವು ಹೊರಬಿದ್ದಿಲ್ಲ. ತಾ|| ೧೫ರಲ್ಲಿ ಗಾಂಧಿಯವರು ಸಿಮ್ಲಾಪಟ್ಟಣದಲ್ಲಿ ಕೂಡಿದ್ದ ಒಂದು ಘೋಸಾಸ್ತ್ರೀಯರ ಸಭೆಯಲ್ಲಿ ಉಪನ್ಯಾಸಮಾಡಿದರು. ಕಾಂಗ್ರೆಸು ನಿರ್ಧರಿಸಿರುವ ಮೂರು ಧರ್ಮಗಳು ಎಂದರೆ (೧ ಕೋಟಿ ರೂ.ಗಳನ್ನು ತಿಲಕ್ ನಿಧಿಗೆ ಕೂಡಿಸುವುದು, ೧ ಕೋಟಿ ಮಂದಿ ಸಭಿಕರನ್ನು ಕಾಂಗ್ರೆಸ್ಸಿಗೆ ಸೇರಿಸುವುದು, ೨೦ ಲಕ್ಷ ನೂಲು ರಾಟೆಗಳನ್ನು ಸ್ಥಾಪಿಸುವುದು) ಇವನ್ನು ಈಡೇರಿಸಬೇಕೆಂದು ಬೋಧಿಸಿದರು. ೨೦೦೦ ರೂ.ಗಳು ಕೂಡಿದುವು. ತಾ|| ೧೫ರಲ್ಲಿ ಮತ್ತೊಂದುಪನ್ಯಾಸವನ್ನು ಈದ್ಗಾ ಬಯಲಿನಲ್ಲಿ ಮಾಡಿದರು. ಆ ಉಪನ್ಯಾಸದಲ್ಲಿ ವೈಸ್ರಾಯರೊಡನೆ ನಡೆದ ಸಂಭಾಷಣದ ಫಲಿತಾಂಶವನ್ನೇನಾದರೂ ಹೇಳಬಹುದೆಂದು ಬಹು ಜನರು ಕುತೂಹಲದಿಂದ ನೆರೆದಿದ್ದರು. ಸಹಾಯ ನಿರಾಕರಣಾವಲಂಬಿಗಳ ಉದ್ದೇಶವೇನೆಂಬುದನ್ನು ಕುರಿತು ವೈಸ್ರಾಯರೊಡನೆ ಮಾತನಾಡಲಪೇಕ್ಷಿಸಿದ್ದರೆ ಬರಬಹುದೆಂದು ಪಂಡಿತ ಮಾಳವ್ಯರವರು ಗಾಂಧಿಯವರಿಗೆ ತಂತಿಯನ್ನು ಕೊಟ್ಟು ಪತ್ರವನ್ನು ಬರೆದಿದ್ದುದರ ಮೇಲೆ ಗಾಂಧಿಯವರು ಅದಕ್ಕೆ ಒಪ್ಪಲು, ವೈಸ್ರಾಯರು ಗಾಂಧಿಯವರನ್ನು ಕರೆಯಿಸಿಕೊಂಡಂತೆ ಅವರ ಉಪನ್ಯಾಸದಿಂದ ವ್ಯಕ್ತವಾಯಿತು. ಇವರು ಹೇಳಿದುದನ್ನೆಲ್ಲಾ ವೈಸ್ರಾಯರು ದಯೆಯಿಂದಲೂ ಸಹನೆಯಿಂದಲೂ ಕೇಳಿದರಂತೆ. ತಮ್ಮಗಳ ಉದ್ದೇಶವನ್ನೆಲ್ಲಾ ಸ್ಪಷ್ಟವಾಗಿ ವಿವರಿಸಿದರಂತೆ. ಅದಕ್ಕೆ ಉತ್ತರಕೊಡುವಾಗ್ಗೆ ವೈಸ್ರಾಯರು ಪ್ರಭುತ್ವದವರಿಗೆ ಇರತಕ್ಕ ತೊಂದರೆಗಳನ್ನೆಲ್ಲಾ ವಿವರಿಸಿ ಹೇಳಿದರಂತೆ. ಈ ಸಂದರ್ಶನದಿಂದ ಜಯವೂ ಅಪಜಯವೂ ಕೂಡ ಫಲಿತಾಂಶವಾಗಬಹುದೆಂದು ಮ|| ಗಾಂಧಿಯವರು ಅಪ್ಪಣೆಕೊಡಿಸಿದರೇ ಹೊರತು ವಿವರಣವನ್ನೇನೂ ಹೇಳಲಿಲ್ಲ. ತಮ್ಮ ಅಭಿಪ್ರಾಯಗಳನ್ನೆಲ್ಲಾ ವೈಸ್ರಾಯರು ಸಾವಧಾನವಾಗಿ ಕೇಳಿಕೊಂಡುದರಿಂದ ಮುಂದೆ ಹೇಗಾದರೂ ಸಾನುಭೂತಿಯನ್ನು ತೋರಿಸಿದರೂ ತೋರಿಸಬಹುದೆಂದೂ, ಅಥವಾ ಪ್ರಭುತ್ವ ಚಕ್ರನೇಮಿಬದ್ಧರಾಗಿ ಪೂರ್ವಪದ್ಧತಿಯಂತೆಯೇ ನಡೆದರೂ ನಡೆಯಬಹುದೆಂದೂ ಗಾಂಧಿಯವರು ಭಾವಿಸಿದಂತೆ ಅವರ ವಚನದಿಂದಲೂ ಊಹಿಸಬೇಕಾಗುತ್ತದೆ. ಕೊನೆಗೆ ಗಾಂಧಿಯವರ ಉಪನ್ಯಾಸದೊಳಗೆ ನಾವು ಅಹಿಂಸೆಯನ್ನೇ ಪ್ರಧಾನವಾಗಿಟ್ಟುಕೊಂಡು ತ್ಯಾಗಶೀಲರಾಗಿ ಪ್ರಯತ್ನಿಸಿದರೆ ಈ ವರ್ಷ ಕೊನೆ ಮುಟ್ಟುವುದರೊಳಗಾಗಿ ಸ್ವರಾಜ್ಯ ಸಂಪಾದನೆಮಾಡಬಹುದೆಂದೂ, ಅದನ್ನು ಭೂಲೋಕದಲ್ಲಿ ಯಾವನೂ ತಡೆಮಾಡಲಾರನೆಂದೂ ಹೇಳಿ, ತಮ್ಮ ಪದ್ಧತಿಯಂತೆ ನೂಲಿನ ರಾಟೆಗಳ ಪ್ರಸಾರ ಹಿಂದೂ ಮಹಮ್ಮದೀಯೈಕಮತ್ಯ ಮೊದಲಾದುವುಗಳ ಸಂಬಂಧವಾಗಿ ಉತ್ತೇಜಕವಾಗುವಂತೆ ಭಾಷಣಮಾಡಿ ಮುಗಿಸಿದರು.

ತಾ|| ೧೬ರಲ್ಲಿ ಅವರು ಸಿಮ್ಲಾಪಟ್ಟಣವನ್ನು ಬಿಟ್ಟರು. ಗಾಂಧಿಯವರು ಸಿಮ್ಲಾದಲ್ಲಿದ್ದಾಗ ಶೌಕತಾಲಿಯವರೂ ಲಜಪತಿರಾಯರವರೂ ಸಹ ಅಲ್ಲಿಗೆ ಹೋಗಿದ್ದರು. ಇವರುಗಳೊಡನೆ ವೈಸ್ರಾಯರ ಸಂಭಾಷಣವು ಜರುಗಿದಂತೆ ತೋರುವುದಿಲ್ಲ. ಈಚೆಗೆ ಇಂಡ್ಯಾ ಸರ್ಕಾರದವರು ಮದ್ರಾಸಿನ ಹಿಂದೂ ಪತ್ರಿಕಾ ಸಂಪಾದಕರಾದ ಮಿ|| ಎಸ್. ಕಸ್ತೂರಿ ರಂಗಯ್ಯಂಗಾರರನ್ನು ಬರಮಾಡಿಕೊಂಡಿದ್ದಾರೆ. ಅವರು ತಾ|| ೧೬ರಲ್ಲಿ ಮದ್ರಾಸಿನಿಂದ ಸಿಮ್ಲಾಕ್ಕೆ ಪ್ರಯಾಣಮಾಡಿ ಹೋಗಿದ್ದಾರೆ. ಈ ಪ್ರಮುಖರೊಡನೆಲ್ಲಾ ವೈಸ್ರಾಯರು ನಡೆಯಿಸಿದ ಚರ್ಚೆಯು ವಿಫಲವಾಗದೆ ದೇಶಶಾಂತಿಗೆ ಸಾಧಕವಾಗುವಂಥ ಪರಿಣಾಮವನ್ನೀಯಲೆಂದು ಕೋರುತ್ತೇವೆ.

ರಾಯಿ ಅಲಿ ದ್ವಯರು.

ಸಹಾಯ ನಿರಾಕರಣಾವಲಂಬಕ ಪ್ರಮುಖರಲ್ಲಿ ಮ|| ಗಾಂಧಿಯವರಿಗಿರುವಂಥ ಸಾತ್ವಿಕೋದ್ದೇಶವು ಅವರ ಅನುಯಾಯಿಗಳಿಗೆಲ್ಲಾ ಇರುವುದಿಲ್ಲವೆಂದೂ, ಅವರು ಆಂಗ್ಲಜನದ್ವೇಷವನ್ನು ಪ್ರಸಾರಪಡಿಸುತ್ತಿರುವರೆಂದೂ ಹಲವರು ಅಭಿಪ್ರಾಯಪಟ್ಟಿದ್ದಾರೆ. ಈಗಣ ವೈಸ್ರಾಯರೂ ಕೂಡ ಅದನ್ನು ಆಡಿ ತೋರಿಸಿದ್ದಾರೆ. ರಾಜದ್ರೋಹಾಪರಾಧದಿಂದ ದೇಶಪರಿತ್ಯಾಗಶಿಕ್ಷೆಗೂ ಬಂಧನಪ್ರಾಪ್ತಿಗೂ ಒಳಗಾಗಿದ್ದವರನ್ನೆಲ್ಲಾ ಅವಿಚಾರದಿಂದ ಬಿಟ್ಟುದೇ ಭರತಖಂಡದಲ್ಲಿ ಈಗ ಉಂಟಾಗಿರುವಂಥ ಅಭೂತಪೂರ್ವ ಚಲನವಲನಕ್ಕೆ ಕಾರಣವಾಯಿತೆಂದು ಆಂಗ್ಲೋ ಇಂಡಿಯನ್ನರೇ ಮೊದಲಾದನೇಕರು ಪದೇಪದೇ ಹೇಳುತ್ತಿದ್ದಾರೆ. ಲಾಲಾಲಜಪತಿರಾಯಿಯವರೂ ಮಹಮ್ಮದಾಲಿಯವರೂ ಇತ್ತೀಚೆಗೆ ತಮ್ಮ ಉಪನ್ಯಾಸಗಳಲ್ಲಿ ಹೊರಬೀಳಿಸುತ್ತಿರುವ ಅಭಿಪ್ರಾಯಗಳು ಅವರ ಅಂತರುದ್ದೇಶವನ್ನು ವ್ಯಕ್ತಪಡಿಸುತ್ತ ಅವರ ವಿರುದ್ಧಪಕ್ಷದವರ ಹೇಳಿಕೆಗೆ ಬಲವನ್ನುಂಟುಮಾಡುತ್ತಿವೆಯೆಂದು ಹೇಳಬಹುದು.

ಪ್ರಕೃತದಲ್ಲಿ ಅಫ್ಗನ್ನರು ಬೋಲ್ಷೆವಿಕ್ಕರ ತಂತ್ರಗಳಿಗೆ ಒಳಗಾಗಿರುವುದರಿಂದ ಅವರ ಪ್ರವರ್ತನವು ಬಿಸಾಗಿದೆ. ಅವರು ಭರತಖಂಡದ ಮೇಲೆ ಸಾಗಿಬರುವ ಚಿಹ್ನೆಗಳೂ ಇವೆ. ಇಂಥ ಸಂದರ್ಭದಲ್ಲಿ ಮಹಮ್ಮದಾಲಿಯವರೂ ಲಜಪತಿರಾಯಿಯವರೂ ಎಂಥ ಅಭಿಪ್ರಾಯಗಳನ್ನು ಹೊರಗೆಡಹುತ್ತಿರುವರೆಂಬುದನ್ನು ಈ ಕೆಳಗೆ ಕಾಣಿಸಿರುತ್ತೇವೆ. ಮಹಮ್ಮದಾಲಿಯವರು ಇಂಡಿಪೆಂಡೆಂಟ್ ಪತ್ರಿಕಾ ಪ್ರತಿನಿಧಿಯೊಡನೆ ಸಂಭಾಷಣೆ ಮಾಡುವಾಗ್ಗೆ ''ಅಫ್ಘಾನಿಸ್ಥಾನದ ಅಮೀರರು ಇಸ್ಲಾಂ ಮತ ವಿರೋಧಿಗಳೊಡನೆ ಯುದ್ಧಮಾಡಬೇಕಾಗಿ ಬಂದರೆ ನಾನು ಅಮೀರರಿಗೆ ಸಂಪೂರ್ಣ ಸಹಾಯವನ್ನು ಮಾಡುವೆನು. ಕಣ್ಣಿನಲ್ಲಿ ಒತ್ತುವ ಸೆತ್ತೆಯಂತೆ ಇರುವರೆಂದು ಭರತಖಂಡ ಪ್ರಭುತ್ವದವರೊಡನೆ ಅಮೀರರು ಯುದ್ಧಮಾಡಿದರೆ ಅವರು ನನ್ನ ಸಂಪೂರ್ಣ ಸಾನುಭೂತಿಯನ್ನು ಪಡೆಯುವರು. ಅವರು ಭರತಖಂಡದಲ್ಲಿರುವ ಹೋರಾಟವನ್ನೆಲ್ಲಾ ತಪ್ಪಿಸಿ ತಮ್ಮ ಅಫ್ಘಾನಿಸ್ಥಾನವನ್ನು ಕೂಡ ನಿರುಪದ್ರವವನ್ನಾಗಿಮಾಡಿಕೊಳ್ಳಬಹುದು ಭರತಖಂಡದ ಸ್ವಾತಂತ್ರ್ಯೇಚ್ಛೆಯನ್ನು ನನ್ನ ಪ್ರಾಣವಿರುವವರೆಗೂ ಬಿಡೆನು. ೨೦ ಕೋಟಿ ಹಿಂದುಗಳು ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಲಾರದೆ ಹೋದರೆ ೭ ಕೋಟಿ ಮಂದಿ ಮುಸಲ್ಮಾನರು ಅದನ್ನು ಸಂಪಾದಿಸಬಲ್ಲರೆಂದು ನನಗೆ ದೃಢವಾದ ನಂಬುಗೆಯುಂಟು.'' ಇದರಿಂದ ಅಲಿಯವರ ಹೃದಯವು ಹೇಗಿರುವುದೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಲಾಲಾ ಲಜಪತಿರಾಯಿಯವರು ಪ್ರಯಾಗದಲ್ಲಿ ಕಳೆದ ತಾ|| ೧೦ರಲ್ಲಿ ಕೂಡಿದ್ದ ಪ್ರಾಂತಿಕಸಭೆಯೊಳಗೆ ಉಪನ್ಯಾಸ ಮಾಡಿದಾಗ್ಗೆ ಹೀಗೆ ಹೇಳಿದ್ದಾರೆ—''ಆಂಗ್ಲರು ಈ ದೇಶದಲ್ಲಿಲ್ಲದೆಹೋದರೆ ಮಹಮ್ಮದೀಯರೇ ಈ ದೇಶವನ್ನು ಆಕ್ರಮಿಸಿಕೊಂಡು ಆಳುವರೆಂದು ಕೆಲವರು ಆಕ್ಷೇಪಿಸುತ್ತಾರೆ. ಇಂಗ್ಲೀಷರಿಗಿಂತ ಮಹಮ್ಮದೀಯರಾಳ್ವಿಕೆಯೇ ಉತ್ತಮವೆಂದು ನಾನು ಹೇಳುತ್ತೇನೆ. ಆದರೂ ಮಹಮ್ಮದೀಯರ ಹೊಟ್ಟೆಯು ಹಿಂದೂಗಳನ್ನೆಲ್ಲಾ ನುಂಗಿಬಿಡುವಷ್ಟು ದೊಡ್ಡದಲ್ಲ. ಹಿಂದುಗಳು ಇದುವರೆಗೂ ಅವರಿಗೆ ಆಹುತಿಯಾಗದಂತೆ ಉಳಿದುಕೊಂಡು ಬಂದಿರುವರು. ಈಗ ೭ ಕೋಟಿ ಮಹಮ್ಮದೀಯರು ನಮ್ಮನ್ನು ನುಂಗಿಬಿಡಲಾರರು. ಆಂಗ್ಲೇಯರ ಸಹಾಯಸಂಪತ್ತಿಗಳಿಂದಲೇ ಹಿಂದುಗಳು ಬದುಕಿರಬೇಕಾದರೆ ಈಗಣ ಅವರ ಅವಸ್ಥೆಗಿಂತಲೂ ಮಹಮ್ಮದೀಯರಿಗೆ ಅಧೀನರಾಗಿ ಅವರ ವಾಸತ್ವದಲ್ಲಿರುವುದೇ ಸಮೀಚೀನವಾಗಿದ್ದೀತು. ಅನ್ಯರಿಗೆ ಕೈಯೊಡ್ಡಿಕೊಂಡಿರುವುದಕ್ಕಿಂತಲೂ ಹಿಂದುಗಳೂ ಮಹಮ್ಮದೀಯರೂ ಒಬ್ಬರನ್ನೊಬ್ಬರು ಧ್ವಂಸಮಾಡಿಕೊಳ್ಳುತ್ತ ಇರುವುದೇ ಉತ್ತಮವಾಗಿರುವುದು'' ಎಂದು ಹೇಳಿರುತ್ತಾರೆ. ಈ ಉಪನ್ಯಾಸದಿಂದ ಅತಿವಾದಿ ಪ್ರಮುಖರಲ್ಲಿ ಕೆಲವರ ಉದ್ದೇಶಗಳು ಭರತಖಂಡಕ್ಕೆ ಮರಳಿ ಗಜ್ನಿಮಹಮ್ಮದ್, ತೈಮೂರ್‌ಲಂಗ್ ಮೊದಲಾದಂಥವರ ಪ್ರಾಜಾಪತ್ಯವನ್ನು ಉಂಟುಮಾಡಿಕೊಳ್ಳಲು ಹೇಗೆ ಆತುರಗೊಂಡಿರುವುವೆಂಬುದನ್ನು ವ್ಯಕ್ತಪಡಿಸುತ್ತಿರುವುವಲ್ಲವೆ? ಇಂಥ ಆಂಗ್ಲಜನ ದ್ವೇಷಭಾಷಣಗಳು ಸಾಮಾನ್ಯ ಜನರನ್ನು ರೇಗಿಸಿ ವಿಪ್ಲವಕ್ಕೆ ದಾರಿಮಾಡದಿರುವುದುಂಟೆ? ಇವನ್ನು ನೋಡಿ ಕೇಳಿಕೊಂಡು ಪ್ರಭುತ್ವದವರು ಎಲ್ಲಿಯವರೆಗೆ ಸುಮ್ಮನಿರುವುದು ಸಾಧ್ಯವು?

ಜರ್ಮನರು ಹಣ್ಣಾದರು.

ಉನ್ನತ ಸಭೆಯವರು ಮೊನ್ನೆ ವಾರದಲ್ಲಿ ಜರ್ಮನ್ ಪ್ರಭುತ್ವದವರಿಗೆ ಕಳುಹಿಸಿದ ಪತ್ರವು ಅಂತ್ಯಸಂದೇಶರೂಪವಾಗಿದ್ದಿತು. ಪ್ರತಿವಚನವಿಲ್ಲದೆ ಅವರು ತಾ|| ೧೧ರ ರಾತ್ರಿಯೊಳಗೆ ಅದರಲ್ಲಿ ಕಂಡ ನಿಬಂಧನೆಗಳಿಗೆ ಒಪ್ಪಬೇಕು; ತಪ್ಪಿದರೆ ಕ್ಷಣವೂ ಸಾವಕಾಶವಿಲ್ಲದೆ ಜರ್ಮನಿ ದೇಶದ ರೂಹರ್ ಜಿಲ್ಲೆಯನ್ನು ಮಿತ್ರಮಂಡಲೀ ಸೈನ್ಯಗಳು ಆಕ್ರಮಿಸಿಕೊಳ್ಳುವುದು ಖಂಡಿತವೆಂದು ತಿಳಿಯಿಸಲ್ಪಟ್ಟಿದ್ದಿತು. ಅದಕ್ಕೆ ತಕ್ಕ ಸೇನಾಸನ್ನಾಹವೂ ನಡೆದಿದ್ದಿತು. ಇದಕ್ಕೆ ಜರ್ಮನರು ಏನುಮಾಡುವರೋ ಎಂದು ಯೋಚಿಸುತ್ತಿರುವಲ್ಲಿ, ಸಂಪೂರ್ಣವಾಗಿ ಅವರು ಮಿತ್ರಮಂಡಲೀ ಸಂದೇಶಕ್ಕೆ ಒಪ್ಪಿಕೊಂಡು ನಷ್ಟಪರಿಹಾರವನ್ನೆಲ್ಲಾ ತೆರುವುದಕ್ಕೆ ಅಂಗೀಕರಿಸಿಕೊಂಡರೆಂಬ ಶುಭವರ್ತಮಾನವು ಬಂದು ಸಂತೋಷಪಡಿಸಿರುತ್ತದೆ. ಈಗಲೂ ಜರ್ಮನರು ಕುಯುಕ್ತಿ ತೆಗೆದು ಹಿಂದಣಂತೆ ಕಾಲಯಾಪನೆಗೆ ಎಳೆದಾಡಲುಪಕ್ರಮಿಸಿದ್ದರೆ ಅವರು ಬಹಳ ಅನರ್ಥಮಾಡಿಕೊಳ್ಳುತ್ತಿದ್ದರು. ಈಗ ಮಿತ್ರಮಂಡಲಿಯವರು ಆಕ್ರಮಿಸಿಕೊಳ್ಳುತ್ತೇವೆಂದು ತಿಳಿಯಿಸಿದ್ದ ಭಾಗವು ಜರ್ಮನೀ ದೇಶದಲ್ಲಿ ಬಹು ಪ್ರಧಾನವಾದ ಸ್ಥಳ; ಕೈಗಾರಿಕೆ ವ್ಯಾಪಾರಗಳಿಗೆಲ್ಲಾ ನೆಲೆಮನೆಯಾದುದು. ಅದನ್ನು ಕಳೆದುಕೊಂಡಿದ್ದರೆ ಅವರು ತಲೆಯೆತ್ತುವುದೇ ಕಷ್ಟವಾಗುತ್ತಿದ್ದಿತು. ಅಲ್ಲದೆ ಆರೂಹರ್ ಮಂಡಲವನ್ನು ಆಕ್ರಮಿಸಿಕೊಳ್ಳಲಿಕ್ಕೆ ಮಿತ್ರಮಂಡಲಿಗೆ ಅವಕಾಶ ಕೊಡದಂತೆ ತಡೆಮಾಡಲುಪಕ್ರಮಿಸಿದ್ದರೆ ಸರ್ವನಾಶವನ್ನು ಮಾಡಿಕೊಳ್ಳುತ್ತಿದ್ದರು. ಇದನ್ನೆಲ್ಲಾ ಪರ್ಯಾಲೋಚನೆ ಮಾಡಿ ಮರುಮಾತಾಡದೆ ಅವರು ನಿಬಂಧನೆಗಳಿಗೆಲ್ಲಾ ಒಪ್ಪಿದುದೇ ಜಾಣತನವಾಯಿತು. ಮಿತ್ರಮಂಡಲಿಯವರ ಸಂದೇಶವನ್ನು ಒಪ್ಪಿಕೊಳ್ಳುವುದೇ ವಿಹಿತವೆಂದು ಅಮೇರಿಕಾ ಸಂಯುಕ್ತರಾಷ್ಟ್ರ ಪ್ರಭುತ್ವದವರು ಜರ್ಮನರಿಗೆ ಸೂಚನೆ ಕೊಟ್ಟರಂತೆ. ಅದರ ಮೇಲೆ ಜರ್ಮನರ ಒಗರು ಇಳಿದುಹೋಯಿತೆಂದು ತೋರುತ್ತದೆ. ಅವರ ರೀಚ್‌ಸ್ಟಾಗ್ ಸಭೆಯಲ್ಲಿ ಈ ಅಂತ್ಯಸಂದೇಶದ ವಿಷಯವಾಗಿ ಚರ್ಚೆ ಬಂದಾಗ್ಗೆ ಮಿತ್ರಮಂಡಲಿಯವರು ಕೇಳುವಂತೆ ನಷ್ಟಪರಿಹಾರವನ್ನು ಕೊಟ್ಟು ನಡೆದುಕೊಳ್ಳುವುದೇ ಯುಕ್ತವೆಂಬ ವಿಷಯಕ್ಕೆ ಸಾಂಘಿಕವಾದಿಗಳಲ್ಲಿ ಬಹುಜನರು ಅನುಮೋದಿಸಿದರು. ಎಂದರೆ ೨೨೧ಮಂದಿಗಳು ಅನುಕೂಲವಾಗಿಯೂ ೧೭೫ಮಂದಿಗಳು ಪ್ರತಿಕೂಲವಾಗಿಯೂ ಅಭಿಪ್ರಾಯಕೊಟ್ಟರು. ಅದರ ಮೇಲೆ ಒಪ್ಪಿಕೊಳ್ಳುವುದೇ ಸಿದ್ಧಾಂತವಾಯಿತು. ಜರ್ಮನ್ ಪ್ರಭುತ್ವದಲ್ಲಿ ಹಿಂದಣ ಮಂತ್ರಿಮಂಡಲವು ಅಳಿದುಹೋಯಿತು. ಮುಖ್ಯಮಂತ್ರಿ ಮೊದಲಾದವರು ರಾಜೀನಾಮೆ ಕೊಟ್ಟರು. ಹೊಸ ಮಂತ್ರಿಮಂಡಲವು ಏರ್ಪಟ್ಟಿತು. ಅಧ್ಯಕ್ಷತೆಗೆ ಮಾತ್ರ ಪೂರ್ವದ ಎಬರ್ಟ್‌ರವರೇ ಇರುವರು. ಪ್ರಜಾದರಕ್ಕೆ ಪಾತ್ರನೂ ಪೂರ್ವ ಮಂತ್ರಿಮಂಡಲದಲ್ಲಿ ಆರ್ಥಿಕಸಭಿಕನೂ ಆಗಿದ್ದ ಡಾಕ್ಟರ್ ವರ್ತ್ ಸ್ಟೆಸ್‌ಮೇನ್ ಎಂಬಾತನು ಈಗ ಮುಖ್ಯಮಂತ್ರಿಯೂ ವಿದೇಶಾಂಗ ಮಂತ್ರಿಯೂ ಆಗಿ ತನಗೆ ಅನುಕೂಲವಾದ ಮಂತ್ರಿಮಂಡಲವನ್ನೇರ್ಪಡಿಸಿರುವನು. ಈ ನೂತನ ಪ್ರಭುತ್ವದವರೇ ಮಿತ್ರಮಂಡಲಿಯವರ ಅಂತ್ಯಸಂದೇಶದಂತೆ ನಡೆಯಲು ಅಂಗೀಕಾರವನ್ನು ತಿಳಿಯಿಸಿರತಕ್ಕವರು. ನಷ್ಟಪರಿಹಾರವಾಗಿ ಜರ್ಮನರು ಮಿತ್ರಮಂಡಲಿಗೆ ೬೦೦೦೦೦೦೦೦೦ ಸೌರನ್ನುಗಳನ್ನು ಕೊಡಬೇಕಾಯಿತು. ವರ್ಷಕ್ಕೆ ೧೦ ಕೋಟಿ ಸವರನ್ನುಗಳಂತೆ ತೀರಿಸುವುದಲ್ಲದೆ ೧೦೦ಕ್ಕೆ ೫ರಂತೆ ಬಡ್ಡಿಯನ್ನೂ ಸೇರಿಸಿಕೊಡಬೇಕು. ಅದರಮೇಲೆ ಜರ್ಮನಿಯಿಂದ ಪರದೇಶಗಳಿಗೆ ಸಾಗಿಸುವ ಪದಾರ್ಥಗಳ ಮೇಲೆ ಬರುವ ಸುಂಕದಲ್ಲಿ ೧೦೦ಕ್ಕೆ ೨೫ರಂತೆ ಸಲ್ಲಿಸಬೇಕು.

ಹೊಗೆಬಂಡಿಗಳ ಭೀಕರವಾದ ಅನಾಹುತ.

ಇತ್ತೀಚೆಗೆ ಲೋಹಮಾರ್ಗಗಳಲ್ಲಿ ಭಯಂಕರಾನಾಹುತಗಳು ಏನು ಕಾರಣದಿಂದಲೋ ಹೆಚ್ಚುತ್ತಿವೆ. ಎಂ. ಎಸ್. ಎಂ. ಮತ್ತು ಎಸ್. ಐ. ಆರ್. ಲೋಹಮಾರ್ಗಗಳಲ್ಲಿ ಮೊನ್ನೆತಾನೇ ನಡೆದ ಭಯಂಕರಾನಾಹುತವು ಇನ್ನೂ ಮರೆತಿಲ್ಲ. ಈ ಮಧ್ಯೆ ಕಳೆದ ೨ ವಾರಗಳೊಳಗೆ ಜಿ.ಐ.ಪಿ., ಬಿ.ಬಿ.ಸಿ.ಐ. ಲೋಹಮಾರ್ಗಗಳೊಳಗೆ ೨ ಅನಾಹುತಗಳು ನಡೆದಿರುವುವು. ಮೊದಲನೆಯದು ಜಾನ್ಸಿ-ಮಣಿಕ್ಪುರ ಮಾರ್ಗದ ಮಾಟೆಂಪ್ ನಿಲ್ದಾಣದ ಬಳಿಯಲ್ಲಿ ಸಂಭವಿಸಿತು. ತಾ|| ೧೧ನೆ ಬುಧವಾರ ನಡುರಾತ್ರಿಯಲ್ಲಿ ಇದಿರುಬದರಾಗಿ ಬಂದ ಒಂದು ಪ್ರಯಾಣಿಕರ ಬಂಡಿಯೂ ಒಂದು ಸಾಮಾನುಗಳ ಬಂಡಿಯೂ ಡಿಕ್ಕಿಹೊಡೆದು ಒಂದರಮೇಲೊಂದು ಏರಿಕೊಂಡುವು. ಒಂದುಕಡೆಯ ಬಂಡಿಗಳಲ್ಲಿ ೩ನೆ ತರಗತಿಯ ಪ್ರಯಾಣಿಕರ ಬಂಡಿಗಳು ನಾಲ್ಕಕ್ಕೂ ಒಂದು ಲಗ್ಗೇಜು ಬಂಡಿಗೂ ಬೆಂಕಿ ಹೊತ್ತಿಕೊಂಡಿತು. ಇನ್ನು ಮೂರು ಬಂಡಿಗಳು ನುಗ್ಗಾದುವು. ಮತ್ತೊಂದುಕಡೆಯ ಬಂಡಿಗಳಲ್ಲಿ ೬ ಬಂಡಿಗಳು ಹಾಳಾದುವು. ಆ ಬಂಡಿಗಳಲ್ಲಿ ಪ್ರಯಾಣಮಾಡುತ್ತಿದ್ದು ಪ್ರಾಣದಿಂದುಳಿದು ಬಂದ ಪ್ರಯಾಣಿಕರು ಹೇಳುವ ಪ್ರಕಾರ ಒಟ್ಟು ೨೦೦ ಮಂದಿ ಪ್ರಯಾಣಿಕರು ಮೃತರಾದಂತೆಯೂ ೫೦ ಮಂದಿಗೆ ಬಲವಾದ ಗಾಯಗಳು ತಗುಲಿದಂತೆಯೂ, ತಿಳಿದುಬರುತ್ತದೆ. ಸುಟ್ಟು ಉರಿದುಹೋದ ಬಂಡಿಗಳಲ್ಲಿ ಎಷ್ಟುಮಂದಿ ದಗ್ಧರಾಗಿ ಹೋದರೋ ಗೊತ್ತಿಲ್ಲ. ರೈಲ್ವೆ ಕಂಪೆನಿಯವರೇನೋ ಮೂವರು ಸತ್ತಂತೆಯೂ ೧೨ ಮಂದಿಗಳು ಏನಾದರೋ ಗೊತ್ತಿಲ್ಲವೆಂತಲೂ ೪ ಮಂದಿಗೆ ಬಲವಾದ ಪೆಟ್ಟು ಬಿದ್ದಿರುವಂತೆಯೂ, ೧೮ ಮಂದಿಗೆ ಸಾಮಾನ್ಯವಾದ ಪೆಟ್ಟುಗಳು ಬಿದ್ದಿರುವಂತೆಯೂ ತಿಳಿಯಿಸಿರುತ್ತಾರೆ. ಪ್ರಯಾಣಿಕರಹೊರತು ಅಂಚೆಯ ಮತ್ತು ರೈಲ್ವೆಯ ಉದ್ಯೋಗಿಗಳು ಎಷ್ಟುಮಂದಿ ಮೃತರಾದರೋ ತಿಳಿಯಲಿಲ್ಲ. ಅದೇ ಬಂಡಿಯಲ್ಲೇ ಡಿಸ್ಟ್ರಿಕ್ಟು ಟ್ರಾಫಿಕ್ ಸೂಪರಿಂಟೆಂಡೆಂಟರು ಪ್ರಯಾಣಮಾಡುತ್ತಿದ್ದರು. ೨ನೆ ಅನಾಹುತವು ಬಿ.ಬಿ.ಸಿ.ಐ. ಲೋಹಮಾರ್ಗದಲ್ಲಿ ರಟ್ಲಂ ನಿಲ್ದಾಣದಲ್ಲಿ ರಾತ್ರಿ ೧೧ ಗಂಟೆಯಲ್ಲಿ ಒಂದುಕಡೆಯ ಬಂಡಿಗಳು ಬಂದು ನಿಂತಿರುವಾಗ್ಗೆ ಮತ್ತೊಂದು ಕಡೆಯಿಂದ ಇನ್ನೊಂದು ಬಂಡಿಸಾಲು ಬಂದು ಡಿಕ್ಕಿಹೊಡೆದು ಮೇಲೇರಿತು. ಎಷ್ಟು ಅನಾಹುತವಾಯಿತೋ ತಿಳಿಯದು. ರೈಲ್ವೆ ಕಂಪೆನಿಯವರು ಪ್ರಕಟಿಸಿರುವುದರಲ್ಲಿ ಒಬ್ಬ ಪ್ರಯಾಣಿಕನು ಮೃತನಾದಂತೆಯೂ ೧೩ ಮಂದಿಗೆ ಏಟುಗಳು ಬಿದ್ದಿರುವಂತೆಯೂ ಗೊತ್ತಾಗುತ್ತದೆ.

ಒಳದೇಶದ ವೃತ್ತಾಂತಗಳು.

ತಿರುವಾಂಕೂರು ಮಹಾರಾಜರವರು ಬರುವ ಜೂನ್ ತಾ|| ೨ ರಲ್ಲಿ ಬೆಂಗಳೂರಿಗೆ ದಯಮಾಡಿಸುವವರಾಗಿದ್ದಾರೆ.

ಬರೋಡಾದ ದಿವಾನರು ಬೆಂಗಳೂರಿಗೆ ಬಂದು ನಮ್ಮ ದಿವಾನರ ಅತಿಥಿಗಳಾಗಿದ್ದು ತಾ|| ೧೬ ರಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಿದರು.

ದಿವಾನರು ಉದಕಮಂಡಲಕ್ಕೆ ದಯಮಾಡಿಸಿರುವರು; ಅಲ್ಲಿ ಒಂದು ವಾರದವರೆಗಿದ್ದು ಬರುವವರಾಗಿರುವರೆಂದು ತಿಳಿಯಬರುತ್ತದೆ.

ಈ ಕಡೆ ಬಿಸಿಲ ದಗೆಯಿಂದ ಒಣಗುತ್ತಿದ್ದ ಜೋಳದ ಪೈರಿಗೆಲ್ಲಾ ಕಳೆದ ಗುರುವಾರ ಹಗಲೂ ರಾತ್ರಿಯೂ ಬಿದ್ದ ಮಳೆಯು ಬಹಳ ಅನುಕೂಲಿಸಿತು.

ಎಂಪೈರ್‌ಡೆಯು ಈವರೆಗೆ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ರಾಂತಿ ದಿನವಾಗಿದ್ದುದು ಇತಃಪರ ಸರ್ಕಾರಿಯ ಆಫೀಸುಗಳಿಗೂ, ಕೋರ್ಟುಗಳಿಗೂ ವಿಶ್ರಾಂತಿದಿನವಾಗಿರಬೇಕೆಂದು ಗೊತ್ತುಮಾಡಲ್ಪಟ್ಟಿರುವುದರಿಂದ ಈ ತಾ|| ೨೪ರಲ್ಲಿ ಎಲ್ಲಾ ಕೋರ್ಟು ಕಚೇರಿಗಳೂ, ಸ್ಕೂಲುಗಳೂ ಮುಚ್ಚಲ್ಪಡುವುವು.

ಬಿ. ಎ. ಪರೀಕ್ಷೆಯಲ್ಲುತ್ತೀರ್ಣರಾಗಿ ಎಲ್. ಎಲ್. ಬಿ. ಪರೀಕ್ಷೆಗೆ ಹೋಗಿದ್ದ ಮೈಸೂರು ವೀರಶೈವ ವಿದ್ಯಾರ್ಥಿಗಳು ಮೂವರಲ್ಲಿ ದಾವಣಗೆರೆಯ ಮ|| ಎಚ್. ಎಂ. ಚಂದ್ರಶೇಖರಯ್ಯನವರೂ ಚಿಕ್ಕಬಳ್ಳಾಪುರದ ಮ|| ರುದ್ರಪ್ಪನವರೂ ೧ ನೆ ವರ್ಷದ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಬರುವ ಜೂನ್ ತಾ|| ೧೫ ರಲ್ಲಿ ರಾಜಧಾನಿಯೊಳಗೆ ಪೌರಸಾಮಾಜಿಕ ಸಭೆಯ ವಾರ್ಷಿಕಾಧಿವೇಶನವು ಸೋಷಿಯಲ್ ರಿಫಾರ್ಮರ್ ಪತ್ರಿಕಾಕರ್ತರಾದ ಮ|| ನಟರಾಜನ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಆಗ್ಗೆ ಮ|| ಸೀಲ್, ಮ|| ರಡ್ಡಿ, ಮ|| ಎಸ್. ಪಿ. ರಾಮಸ್ವಾಮಯ್ಯರ್ ಮೊದಲಾದ ಪಂಡಿತಜನರ ಭಾಷಣಗಳು ಜರುಗುವುವು.

ಕಳೆದ ತಾ|| ೧೨ರಲ್ಲಿ ಕೊಡಲ್ಪಟ್ಟಿರುವ ಸರ್ಕಾರಿಯಪ್ಪಣೆಯನ್ನನುಸರಿಸಿ ನಡಿಯಲು ಇಷ್ಟವಿಲ್ಲವಾದುದರಿಂದ ಅರ್ಥಸಾಧಕ ಪತ್ರಿಕೆಯ ಪ್ರಕಟನೆಯು ಈ ತಾ|| ೧೪ರಿಂದ ನಿಲ್ಲಿಸಲ್ಪಟ್ಟಿರುವುದಾಗಿಯೂ, ಇದನ್ನು ಪುನಃ ಪ್ರಕಟಿಸಲು ತಕ್ಕೇರ್ಪಾಟನ್ನು ಕೂಡಲೆ ಮಾಡಬೇಕಾಗಿ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದಾಗಿಯೂ ಈ ಪತ್ರಿಕಾ ಸಂಪಾದಕರಾದ ಮ|| ಎಂ. ಗೋಪಾಲಯ್ಯಂಗಾರರು ತಿಳಿಸಿರುತ್ತಾರೆ.

ಶ್ರೀಮತೀ ಸರೋಜಿನೀ ದೇವಿಯವರು ಕಳೆದ ತಾ|| ೧೫ ರಲ್ಲಿ ಬೆಂಗಳೂರಿಗೆ ಬಂದರು. ಆ ರಾತ್ರಿ ಅಲ್ಲಿಯ ಚಿತ್ರಕಳಾಪ್ರದರ್ಶನಾರಂಭಮಹೋತ್ಸವವನ್ನು ಜರುಗಿಸಿ, ಆಗ್ಗೆ ಕೂಡಿದ್ದ ದೊಡ್ಡ ಸಭೆಯಲ್ಲಿ ಚಿತ್ರಕಲಾಪ್ರಾಶಸ್ತ್ಯ, ನಾಟ್ಯ ಕಲಾಭಿವೃದ್ಧಿಯ ಅವಶ್ಯಕತೆ ಇತ್ಯಾದಿ ವಿಷಯಗಳನ್ನು ಕುರಿತು ಬಹು ಹೃದಯಂಗಮವಾದ ಭಾಷಣವನ್ನು ಮಾಡಿ ಈ ಸಂಬಂಧದಲ್ಲಿ ಕವೀಂದ್ರ ರವೀಂದ್ರನಾಥಠಾಗೂರ್‌ರವರ ಮಾರ್ಗವನ್ನನುಸರಿಸಿ ನಡೆಯಬೇಕೆಂದು ಬೋಧಿಸಿದರು.

ಸರ್ಕಾರದ ಉದ್ಯೋಗಗಳ ವಿನಿಯೋಗದ ವಿಷಯದಲ್ಲಿರುವ ನ್ಯೂನಾತಿರೇಕಪರಿಹಾರ, ಹಿಂದುಳಿದವರಿಗೆ ಆ ಉದ್ಯೋಗಗಳನ್ನು ಹೆಚ್ಚು ಹೆಚ್ಚಾಗಿ ಕೊಡುವುದು, ಹಿಂದುಳಿದವರ ವಿದ್ಯಾಪ್ರೋತ್ಸಾಹ ಈ ವಿಷಯಗಳ ವಿಮರ್ಶೆಮಾಡಲಿಕ್ಕೆ ನಿಯಮಿಸಿದ್ದ ಮಿಲ್ಲರ್ ಕಮಿಟಿಯವರ ವರದಿಯಮೇಲೆ ಸರ್ಕಾರದವರು ತಮ್ಮ ತೀರ್ಮಾನವನ್ನು ನಿರ್ಧರಿಸಿ ಕಳೆದವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಅದರ ಮುಖ್ಯಭಾಗಗಳನ್ನು ಮುಂದಣವಾರ ನಾವು ಪ್ರಕಟಿಸಿ ವಿಮರ್ಶೆಮಾಡುತ್ತೇವೆ. ವಿದ್ಯಾಪ್ರಸಾರವನ್ನು ಹೆಚ್ಚುಮಾಡುವ ವಿಷಯದಲ್ಲಿ ಏರ್ಪಟ್ಟಿದ್ದ ಎಜುಕೇಷನ್ ಮೆಮೊರಾಂಡಮನ್ನು ಕೂಡ ಸರ್ಕಾರದವರು ಅಂಗೀಕರಿಸಿ ಅದರಂತೆ ವ್ಯವಹಾರಣೆಗೆ ತರಲು ಅಪ್ಪಣೆಮಾಡಿರುವರೆಂಬುದನ್ನು ಕೂಡ ತಿಳಿಯಿಸಲು ಸಂತೋಷಪಡುತ್ತೇವೆ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿ ಗೌರ್ನರ ಪತ್ನೀಪುತ್ರರು ತಾ|| ೧೪ ರಲ್ಲಿ ಸೀಮೆಗೆ ತೆರಳಿದರು.

ಪುಣೆಯ ಕೇಸರೀ ಮರಾಠಾ ಪತ್ರಿಕೆಗಳ ಕಾರ್ಯಾಲಯದ ಕಾಗದಗಳನ್ನು ತುಂಬಿದ್ದ ಮನೆಗೆ ಬೆಂಕಿಬಿದ್ದು ೬೦ ಸಾವಿರ ರೂ.ಗಳ ನಷ್ಟವಾಯಿತು.

ಲಾಹೋರು ಮ್ಯುನಿಸಿಪಾಲಿಟಿಯವರು ತಮ್ಮ ಎಲ್ಲೆಕಟ್ಟಿನೊಳಗೆ ಯಾರೂ ಮದ್ಯವನ್ನು ಮಾರಕೂಡದೆಂದೂ ಅವುಗಳ ಅಂಗಡಿಗಳನ್ನೆಲ್ಲಾ ಮುಚ್ಚಿಸಿಬಿಡತಕ್ಕುದೆಂದೂ ನಿರ್ಣಯಿಸಿದ್ದಾರೆ. ಸ್ತುತ್ಯಸಾಹಸ.

ಗ್ವಾಲಿಯರ್ ಸಿಂಧ್ಯಾ ಮಹಾರಾಜರವರು ಮೊನ್ನೆತಾನೇ ಕಲ್ಕತ್ತಾಕ್ಕೆ ಹೋಗಿ ಬರಕ್‌ಪೂರ್ ಭವನದಲ್ಲಿಳಿದುಕೊಂಡಿರಲು, ಅವರ ೧೬೬೩೩ ರೂ.ಗಳ ಬೆಲೆಬಾಳುವ ನಗಗಳನ್ನು ಕಳ್ಳರಾರೋ ಅಪಹರಿಸಿದರು.

ಇಂಗ್ಲೆಂಡಿನಲ್ಲಿ ಭರತಖಂಡದ ಸಾಲವು ಕಳೆದ ಮಾರ್ಚಿ ತಾ|| ೩೧ ರ ವರೆಗೆ ೧೬೦೬೦೪೯೬೮ ಪೌನುಗಳಷ್ಟಿದ್ದಿತು. ೧೯೨೦ ನೆ ವರ್ಷದ ಅಕ್ಟೋಬರ್ ತಾ|| ೧ ರ ವರೆಗೆ ಈ ಸಾಲವು ೧೬೦೪೯೯೦೧೩ ಪೌನುಗಳಾಗಿದ್ದುವು.

ಬಂಗಾಳದ ಸುಪ್ರಸಿದ್ಧ ಅತಿವಾದಿಗಳಾದ ಬಾಬು ಬಿಪಿನಚಂದ್ರಪಾಲರು ಯಾವದ್ಭಾರತ ದೇಶೀಯ ಸಭಾಸ್ಥಾಯಿಸಂಘದಲ್ಲಿದ್ದ ತಮ್ಮ ಸಭಿಕತೆಗೆ ರಾಜೀನಾಮೆ ಕೊಟ್ಟರು. ಜಾತೀಯವಾದಿಗಳ ಇತ್ತೀಚಿನ ಪ್ರವರ್ತನೆಯು ಅವರಲ್ಲೇ ಕೆಲವರಿಗೆ ಬೇಸರನ್ನುಂಟುಮಾಡುತ್ತಿದೆ.

ಮದರಾಸು ಗೌರ್ನರು ಕಳೆದ ಬುಧವಾರ ಪತ್ನೀಪುತ್ರಸಮೇತರಾಗಿ ಬೊಂಬಾಯಿಗೆ ತೆರಳಿದರು. ಅಲ್ಲಿ ತಮ್ಮ ಪತ್ನೀಪುತ್ರರನ್ನು ಸೀಮೆಗೆ ಕಳುಹಿಸುವುದಕ್ಕೆ ಹಡಗನ್ನು ಹತ್ತಿಸಿ, ತಾವು ಅಲ್ಲಿಂದ ಸಿಮ್ಲಾಪಟ್ಟಣಕ್ಕೆ ತೆರಳುವರು. ಈ ತಿಂಗಳಕೊನೆಯವರೆಗೂ ಅಲ್ಲಿರುವರೆಂದು ಪ್ರಕಟವಾಗಿದೆ.

ಬೊಂಬಾಯಿ ಆಧಿಪತ್ಯದಲ್ಲಿ ಈಗತಾನೇ ತೆಗೆದ ಸೆನ್ಸಸ್ಸಿನಪ್ರಕಾರ ಕಳೆದ ೧೦ ವರ್ಷಕ್ಕಿಂತ ಈಗ ಒಟ್ಟು ೩೩೩೩೩೩೩ ಮಂದಿ ಪ್ರಜೆಗಳು ಕಡಿಮೆಯಾದಂತೆ ಗೊತ್ತಾಗಿದೆ. ಮೊನ್ನೆವರ್ಷ ಆ ಆಧಿಪತ್ಯದಲ್ಲಿ ಇನ್‌ಫ್ಲುಯೆನ್ಜಾ ರೋಗದಿಂದ ೧೦ ಲಕ್ಷ ಮಂದಿಗಳು ಮೃತರಾದುದೇ ಇದಕ್ಕೆ ಮುಖ್ಯಕಾರಣವೆಂದು ಹೇಳಲ್ಪಟ್ಟಿದೆ.

ಮದರಾಸಾಧಿಪತ್ಯದಲ್ಲಿ ಕೆಲ ಜಾತೀಯವಾದಿಗಳು ಅಲ್ಲಲ್ಲಿ ನಡೆಯುವ ಜಾತ್ರೆಗಳಲ್ಲಿ ದೇವತಾರಥೋತ್ಸವಸಮಯದೊಳಗೆ ತೇರಿನಮೇಲೆ ಗಾಂಧಿ ಮೊದಲಾದ ಜಾತೀಯವಾದಿಗಳ ಪಟಗಳನ್ನಿರಿಸಿ ಮೆರೆಯಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಪ್ರಜಾಕಲ್ಲೋಲವುಂಟಾಗುವುದೆಂದು ಸರ್ಕಾರದುದ್ಯೋಗಿಗಳು ತಡೆಯುತ್ತಿದ್ದಾರೆ. ಇದರಿಂದ ಅಲ್ಲಲ್ಲಿ ಗಲಭೆಗಳಾಗುತ್ತಿವೆ.

ಬೊಂಬಾಯಿಪಟ್ಟಣದಲ್ಲಿ ಇನ್‌ಫ್ಲುಯೆಂಜಾ ನ್ಯುಮೋನಿಯಾ ರೋಗಗಳ ಹಾವಳಿಯು ಹೆಚ್ಚುತ್ತಿವೆ. ಕಳೆದ ಡಿಸೆಂಬರ್ ತಿಂಗಳಿಂದ ಅಲ್ಲಿಯ ಮರಣ ಸಂಖ್ಯೆಯು ಹೆಚ್ಚುತ್ತಿದೆ. ಡಿಸೆಂಬರ್ ತಿಂಗಳಲ್ಲಿ ಆ ಪಟ್ಟಣದೊಳಗೆ ೪೧೫೫ ಮಂದಿಗಳು ಮೃತರಾದರು. ಜನವರಿಯಲ್ಲಿ ೫ ಸಾವಿರಕ್ಕೆ ಮೀರಿತು. ಹೀಗೆಯೇ ಹೆಚ್ಚುತ್ತಾ ಬಂದು ಕಳೆದ ಮಾರ್ಚಿ ತಿಂಗಳೊಂದರಲ್ಲಿ ೬೪೩೬ ಮಂದಿಗಳು ಮೃತರಾಗಿದ್ದಾರೆ.

ಇತ್ತೀಚೆಗೆ ಮದ್ರಾಸುಪ್ರಾಂತದ ಆಂಧ್ರಜಿಲ್ಲೆಗಳಲ್ಲಿ ಅಸಹಾಯವಾದಿಗಳ ಆಡಂಬರವು ವಿಶೇಷವಾಗುತ್ತಿದೆ. ಪ್ರಭುತ್ವದವರು ಕೂಡ ಮುಳಿಸೆದ್ದು ಪ್ರಮುಖರನ್ನು ಹಿಡಿದು ಹೊಣೆಕೇಳುವುದು, ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸುವುದು ವಾಗ್ಬಂಧಗಳನ್ನು ಮಾಡುವುದು ಇತ್ಯಾದಿ ದಂಡನ ಪ್ರಯೋಗಗಳನ್ನು ಹೆಚ್ಚುಪಡಿಸುತ್ತಿದ್ದಾರೆ.

ಕಲ್ಲಿದ್ದಲು ಸೌದೆ ಮೊದಲಾದುವುಗಳಿಗೆ ಪ್ರತಿಯಾಗಿ ಮೋಟಾರುಸ್ಪಿರಿಟ್ ಫ್ಯೂಯಲ್ ಆಯಿಲ್, ಲೂಬ್ರಿಕೇಟಿಂಗ್ ಇತ್ಯಾದಿಗಳು ಉಪಯೋಗಿಸಲ್ಪಡುತ್ತಿವೆ. ಇವುಗಳೆಲ್ಲಾ ಸೀಮೆಯಿಂದ ಬರಬೇಕು. ಮತ್ತು ಅವುಗಳ ಬೆಲೆಯು ಕೂಡ ಏರಿಹೋಗಿದೆ. ಈಗ ಆ ಪದಾರ್ಥಗಳನ್ನು ದೇಶದಲ್ಲೇ ಅಗ್ಗವಾಗಿ ನಿರ್ಮಿಸಿ ಮಾರಲು ಅನುಕೂಲಪಡಿಸುವ ಉದ್ದೇಶದಿಂದ ಒಂದು ಯಂತ್ರಾಗಾರವು ಬೊಂಬಾಯಿಯಲ್ಲಿ ಸ್ಥಾಪಿಸಲ್ಪಡುತ್ತಿದೆ.

ತಮ್ಮ ಸಂಸ್ಥಾನಕ್ಕೆ ಕೇಸರಿ, ಅಮೃತಬಜಾರ್, ಮರಾಠಾ, ಕ್ರಾನಿಕಲ್, ಇಂಡಿಪೆಂಡೆಂಟ್, ಪ್ರತಾಪ್, ರಾಜಸ್ಥಾನ್, ಕೇಸರೀಸಾಹಸ ಈ ಪತ್ರಿಕೆಗಳು ಬರಲಾಗದೆಂದೂ, ರಾಜದ್ರೋಹಾಪರಾಧದಿಂದ ಶಿಕ್ಷಿತರಾದವರ ಭಾವಚಿತ್ರಗಳನ್ನು ಯಾರೂ ಇಟ್ಟುಕೊಳ್ಳಕೂಡದೆಂದೂ ಮಾರಲೂ ಕೂಡದೆಂದೂ ಗ್ವಾಲಿಯರ್ ಸಂಸ್ಥಾನದವರು ಅಪ್ಪಣೆಮಾಡಿರುವರು.

ಐರ್ಲೆಂಡಿಗೂ ಭರತಖಂಡಕ್ಕೂ ಸ್ವಾತಂತ್ರ್ಯವನ್ನು ಕೊಡಬೇಕಾದುದು ನ್ಯಾಯವೆಂದು ಧರ್ಮಬೋಧೆಮಾಡುತ್ತಿರುವ ಅಮೇರಿಕಾದ ಪ್ರಭುತ್ವದವರೇ ತಮ್ಮ ದಾಸ್ಯದಲ್ಲಿರುವ ಫಿಲಿಪೈನ್ ದ್ವೀಪಕ್ಕೆ ಸ್ವಾತಂತ್ರ್ಯವನ್ನು ಕೊಡಲು ಮನಸ್ಸುಮಾಡದೆ ಬಲ್ಲಜಕಾರಣಗಳನ್ನು ಹೇಳಿಕೊಂಡು ಕಾಲಯಾಪನೆ ಮಾಡುತ್ತಿದ್ದಾರೆ. ಪರೋಪದೇಶಪಾಂಡಿತ್ಯವು ಸರ್ವರಿಗೂ ಸುಕರವಲ್ಲವೆ?

ಮಲಗಾಂವ್ ಪಟ್ಟಣದಲ್ಲಿ ಸಹಾಯನಿರಾಕರಣ ವಾದಿಗಳು ಭಾಸ್ಕರ ನಾಯಿಡು ಎಂಬ ಸಬ್ ಇನ್‌ಸ್ಪೆಕ್ಟರನ್ನು ಕೊಂದುಹಾಕಿದುದಲ್ಲದೆ ಇನ್ನುಕೆಲ ಪೋಲೀಸರಿಗೂ ಹೊಡೆದು ಗಾಯಮಾಡಿದರು. ಆ ಇನ್‌ಸ್ಪೆಕ್ಟರು ಅವಿತಿರುವನೆಂದು ತಿಳಿದು ಅವನು ಅಡಗಿಕೊಂಡಿದ್ದ ದೇವಾಲಯಕ್ಕೆ ಬೆಂಕಿಯಿಕ್ಕಿ ಭಸ್ಮಮಾಡಿದರು. ಇನ್‌ಸ್ಪೆಕ್ಟರು ಪ್ರಾಣಭೀತಿಯಿಂದ ಸೀರೆಯನ್ನುಟ್ಟು ಹೆಂಗುಸಿನಂತೆ ಹೋಗುತ್ತಿದ್ದರೂ ಈ ಜನರು ಗುರುತುಹಿಡಿದು ಕೊಂದುಹಾಕಿದರು. ಪೋಲೀಸರಿಗೂ ನಿರಾಕರಣವಾದಿಗಳಿಗೂ ಆದ ಬಡಿದಾಟದಲ್ಲಿ ೬ ಮಂದಿ ಪ್ರಜೆಗಳು ಸತ್ತರು.

ಬೆಳಗಾವಿಯಲ್ಲಿ ಕಳೆದ ತಾ|| ೧೪ ರಲ್ಲಿ ಅಹಮ್ಮದ್‌ನಗರದ ಮ|| ಜಗದೇವರಾವ್ ಭಾವುಸಾಹೇಬ್ ಪವಾರ್‌ಯವರ ಅಧ್ಯಕ್ಷತೆಯ ಕೆಳಗೆ ಬ್ರಾಹ್ಮಣೇತರ ರಾಜಕೀಯಮಹಾಸಭೆಯು ಪ್ರಾರಂಭವಾಗಿ ನೆರವೇರಿತು. ಸರ್ದಾರ್ ಚಂದ್ರಪ್ಪ ದೇಸಾಯಿಯವರು ಸ್ವಾಗತಸಂಘಾಧ್ಯಕ್ಷರಾಗಿದ್ದರು. ಜಾತೀಯವಾದಿಗಳ ಸಾಹಸದಿಂದ ಬ್ರಾಹ್ಮಣೇತರರು ಕೂಡ ಮುಗ್ಧರಾಗಿ ಅವರಂತೆ ಕುಣಿಯುತ್ತಿರುವರೆಂದು ಸಭಾಧ್ಯಕ್ಷರು ತಮ್ಮ ಭಾಷಣದೊಳಗೆ ಹೇಳಿದರು. ಅಜ್ಞಸ್ಸುಖಮಾರಾಧ್ಯಃ ಎಂಬಂತೆ ವಿದ್ಯಾವಿವೇಕಗಳು ಊನರಾಗಿರುವ ಆ ಜನರಿಗೆ ಆತ್ಮಲಾಭಾಲಾಭಗಳನ್ನೇ ವಿಚಾರಿಸಿ ತಿಳಿದುಕೊಳ್ಳುವ ಶಕ್ತಿಯಿಲ್ಲದಿರುವಾಗ ಅವರು ಮೋಸಹೋಗುವುದು ಸುಲಭವಲ್ಲವೆ?

ಹಿಮವತ್ಪರ್ವತದ ಮೇಲಿರುವ ಎವರೆಸ್ಟ್ ಎಂಬ ಅತ್ಯುನ್ನತಶಿಖರವನ್ನು ಪರಿಶೋಧಿಸುವುದಕ್ಕಾಗಿ ಸೀಮೆಯಿಂದ ಬಂದಿರುವ ಪಾಶ್ಚಾತ್ಯ ಯಾತ್ರಿಕರು ಕರ್ನಲ್ ಹೋವರ್ಡ್ ಬ್ಯೂರಿಯವರ ಅಧಿನಾಯಕತ್ವದಿಂದ ಈಗ ಬೆಟ್ಟಕ್ಕೆ ಏರುತ್ತಿರುವರು. ಇವರಿಗೆ ಅವಶ್ಯಕವಾದ ಸಹಾಯವನ್ನೆಲ್ಲಾ ಭಾರತಪ್ರಭುತ್ವದವರು ಒದಗಿಸಿಕೊಟ್ಟರು. ೧೦೦ ಹೇಸರಕತ್ತೆಗಳನ್ನೂ, ಎವರೆಸ್ಟ್ ಶಿಖರ ದಕ್ಷಿಣಪ್ರಾಂತದಲ್ಲಿ ವಾಸಿಸುವ ಪ್ರಜೆಗಳಲ್ಲಿ ಅನುಭವಶಾಲಿಗಳಾದ ೪೦ ಮಂದಿಗಳನ್ನೂ, ಪರ್ವತಪ್ರಾಂತದ ಸ್ಥಿತಿಗತಿಗಳನ್ನೆಲ್ಲಾ ಅರಿತ ಕೂಲಿಯಾಳುಗಳು ಕೆಲರನ್ನೂ ಕಳುಹಿಸಿಕೊಟ್ಟಿದ್ದಾರೆ. ಅಲ್ಲದೆ ಇದಕ್ಕೆಮುಂಚೆ ಆ ಪರ್ವತದ ಅನೇಕಶಿಖರಗಳಿಗೆ ಏರಿಹೋಗಿದ್ದು ಅನುಭವಪಡೆದಿದ್ದ ರೇಬರನ್ ಡಾಕ್ಟರ್ ಕೆಲ್ಲಾಸ್, ಬುಲ್ಲಕ್ ಮೊದಲಾದವರೂ ಹೋಗಿದ್ದಾರೆ. ಈ ಯಾತ್ರಿಕರು ಯಾವಯಾವ ವಿಶೇಷಗಳನ್ನು ಕಂಡುಹಿಡಿದು ಪ್ರಕಟಿಸುವರೋ ನೋಡಬೇಕು.

ಸ್ವಾಮಿ ಗೋವಿಂದಾನಂದಸ್ವಾಮಿ ಎಂಬಾತನು ಆಂಗ್ಲಪ್ರಭುತ್ವವನ್ನು ದೂಷಿಸಿ ರಾಜದ್ರೋಹಕರವಾದ ಭಾಷಣವನ್ನು ಮಾಡಿ ಪ್ರಜೆಗಳನ್ನು ಉದ್ರೇಕಿಸಿದನೆಂಬ ತಪ್ಪಿತಕ್ಕಾಗಿ ಸಿಂಧು ಜುಡಿಷಿಯಲ್ ಕಮೀಷನರು ವಿಚಾರಣೆಮಾಡಿ ೫ ವರ್ಷಗಳ ದ್ವೀಪಾಂತರ ಶಿಕ್ಷೆಯನ್ನು ವಿಧಿಸಿದರು. ಆಗ ಸ್ವಾಮಿಯು - ನಾನು ಪ್ರಹ್ಲಾದನಂತೆಯೂ ಕ್ರಿಸ್ತನಂತೆಯೂ ಮಹಮ್ಮದನಂತೆಯೂ ಈ ಶಿಕ್ಷೆಯನ್ನು ಅನುಭವಿಸುತ್ತೇನೆ. ಇನ್ನುಮುಂದೆ ಭರತಖಂಡದ ಸ್ವರಾಜ್ಯಸಂಪಾದನೆಗಾಗಿ ಉಪನ್ಯಾಸವನ್ನು ಬಿಟ್ಟು ದೈವಪ್ರಾರ್ಥನೆ ಮಾಡುತ್ತೇನೆ. ಇನ್ನು ೧ ವರುಷದೊಳಗಾಗಿ ನಮಗೆ ತಪ್ಪದೆ ಸ್ವರಾಜ್ಯವು ಲಭಿಸುವುದು. ದೈವಾನುಗ್ರಹದಿಂದ ಬೇಗನೆ ನಾನು ನಿಮ್ಮನ್ನು ಕೂಡಿಕೊಳ್ಳುತ್ತೇನೆ. ನೀವೆಲ್ಲಾ ಸ್ವರಾಜ್ಯಸಂಪಾದನೆಗಾಗಿ ಅಹಿಂಸಾವ್ರತದಿಂದ ಸಾಧುಪಡಿರಿ. ನಿಮಗೆ ದೈವಸಹಾಯವುಂಟು" ಎಂದು ತನ್ನ ದೇಶೀಯರನ್ನು ಕುರಿತು ಹೇಳಿ ಸೆರೆಮನೆಗೆ ಹೋದನು. ಈತನು ಹಿಂದೆ ಕೊಮಾಗಾಟುಮಾರು ಹಡಗಿನಲ್ಲಿ ಬಂದು ರಾಜದ್ರೋಹಾಪರಾಧದಿಂದ ಹಿಡಿಯಲ್ಪಟ್ಟು ಸೆರೆಮನೆಯಲ್ಲಿದ್ದು ೧ ವರ್ಷದವರೆಗೆ ಸತ್ಯವರ್ತನೆಯಲ್ಲಿರುವುದಕ್ಕೆ ಹೊಣೆಕೊಟ್ಟಿದ್ದು ಗಡುಬವು ಮುಗಿದಕೂಡಲೇ ಮತ್ತೆ ಉಪನ್ಯಾಸಗಳಿಗೆ ತೊಡಗಿದ್ದನು.

ಅಫ್ಘಾನಿಸ್ಥಾನದ ಅಮೀರರು ಭರತಖಂಡದ ಪ್ರಭುತ್ವದವರೊಡನೆ ಸಂಧಿಮಾಡಿಕೊಳ್ಳಬೇಕಾಗಿದ್ದರೆ ಈ ಕೆಳಗೆ ಕಾಣಿಸುವಂತೆ ನಿಬಂಧನೆಗಳಿರಬೇಕೆಂದು ತಿಳಿಯಿಸಿದ್ದಾರೆಂದು ಇಂಡಿಪೆಂಡೆಂಟ್ ಪತ್ರಿಕೆಯು ಹೇಳಿರುತ್ತದೆ.—(೧) ಗತಿಸಿದ ಅಮೀರ್ ಹಬೀಬುಲ್ಲಾಖಾನರ ಕಾಲದಿಂದ ಹಿಡಿದು ಇಲ್ಲಿಯವರೆಗೆ ಭರತಖಂಡದ ಪ್ರಭುತ್ವದವರು ಆಫ್ಘಾನಿಸ್ಥಾನಕ್ಕೆ ಸಲ್ಲಿಸಬೇಕಾಗಿರುವ ವರ್ಷಾಶನದ ಹಣವನ್ನೆಲ್ಲಾ ಕೊಡಬೇಕು. (೨) ಆಫ್ಘನ್ ದೇಶದೊಳಕ್ಕೆ ಸಾಗಿಹೋಗುವ ಆಯುಧಗಳ ಮೇಲೂ ಮದ್ದುಗುಂಡು ಮೊದಲಾದ ಯುದ್ಧೋಪಕರಣಗಳ ಮೇಲೂ ತೆರಿಗೆಯನ್ನು ವಿಧಿಸದೆಯೂ ಅವುಗಳಿಗೆ ಯಾವ ಆಟಂಕವನ್ನು ಪಡಿಸದೆಯೂ ಇರಬೇಕು. (೩) ವಜೀರಿಸ್ಥಾನವನ್ನು ಆಫ್ಘಾನಿಸ್ಥಾನಕ್ಕೆ ಸೇರಿಸಿಕೊಡಬೇಕು. (೪) ತಮ್ಮ ದೇಶದ ರಾಯಭಾರಿಗಳನ್ನು ಗಜ್ನಿ, ಕಾಂದಹಾರ್, ಜಲಾಲಾಬಾದು ಪಟ್ಟಣಗಳಲ್ಲಿ ಇರಿಸಿಕೊಳ್ಳಲು ಆಫ್ಘನ್ ಪ್ರಭುತ್ವದವರಿಗೆ ಇರುವ ಸ್ವಾತಂತ್ರ್ಯಕ್ಕೆ ಭಾರತಪ್ರಭುತ್ವದವರು ಒಪ್ಪಬೇಕು. ಇಷ್ಟೇ ಅಲ್ಲದೆ ಶಾಂತಿಯೂ ಅಂತರ್ಜಾತೀಯ ಸಂಬಂಧಬಾಂಧವ್ಯಗಳೂ ದೃಢಪಡಬೇಕಾಗಿದ್ದರೆ ತುರ್ಕಿ ಸಂಧಿ ನಿಯಮಗಳನ್ನು ಮಾರ್ಪಡಿಸಲಿಕ್ಕೆ ಆಂಗ್ಲಪ್ರಭುತ್ವದವರು ಯಾವ ಅಭ್ಯಂತರವನ್ನೂ ಮಾಡಕೂಡದು.

ಇಂಡ್ಯಾ ಸರ್ಕಾರದ ಶಾಸ್ತ್ರಜ್ಞರಾದ ರೆಯಿಟ್‌ರವರು ಇಂಗ್ಲೆಂಡಿನ ರಾಯಲ್ ಸೊಸೈಟಿ ಆಫ್ ಆರ್ಟ್ಸ್‌ರವರನ್ನು ಕುರಿತು ಒಂದು ಉಪನ್ಯಾಸವನ್ನು ಕಾಗದದ ನಿರ್ಮಾಣವಿಷಯದಲ್ಲಿ ಕೊಡುವಾಗ್ಗೆ ಹೀಗೆ ಹೇಳಿದರು—ಈಗ ಕಾಗದಗಳು ಬಹಳ ತಗ್ಗಿರುವುದರಿಂದ ವರ್ತಮಾನ ಪತ್ರಿಕೆಗಳ ಚಂದಾ ಹೆಚ್ಚಿಹೋಗಿದೆ. ಪ್ರಪಂಚಕ್ಕೆಲ್ಲಾ ವರ್ಷಕ್ಕೆ ೧೨೦ ಲಕ್ಷ ಟನ್ನುಗಳ ಕಾಗದವು ಬೇಕಾಗುತ್ತದೆ. ಭರತಖಂಡದಲ್ಲಿ ಶಾಸ್ತ್ರಜ್ಞರು ನಡೆಯಿಸಿದ ಪರಿಶೋಧನೆಯಿಂದ ಆ ದೇಶದ ಬರ್ಮಾ ಬಂಗಾಳಾ ಸೈಕುತ್ಪ್ರಾಂತ ಇವುಗಳಲ್ಲಿರುವ ಬಿದಿರಿನಿಂದ ಪ್ರತಿವರ್ಷವೂ ೧೦೦ ಲಕ್ಷ ಟನ್ನುಗಳ ಕಾಗದವನ್ನು ನಿರ್ಮಿಸಬಹುದೆಂದೂ, ಅಸ್ಸಾಮು ಪ್ರಾಂತದಲ್ಲಿರುವ ಒಂದು ಜಾತಿ ಹುಲ್ಲಿನಿಂದ ೩೮ ಲಕ್ಷ ಟನ್ ಕಾಗದವನ್ನು ನಿರ್ಮಿಸಬಹುದೆಂದೂ ಹೀಗೆ ಭರತಖಂಡವೊಂದೇ ವರ್ಷಕ್ಕೆ ೧೩೮ ಲಕ್ಷ ಟನ್ನುಗಳ ಕಾಗದವನ್ನು ನಿರ್ಮಿಸಿ ಕೊಡಬಹುದೆಂದೂ, ಪರಿಶುಭ್ರ ಮಾಡದಿರುವ ಕಾಗದದ ಸರಿಗೆ ಆಂಗ್ಲದೇಶದಲ್ಲಿ ಟನ್ನು ೧ಕ್ಕೆ ೧೫ರಿಂದ ೧೮ ಸೌರನ್ನಿನವರೆಗೆ ಬೆಲೆಯಿರುವುದೆಂದೂ ಹೇಳಿದರು. ಈ ಅವಕಾಶವನ್ನು ಭಾರತೀಯರೇ ಉಪಯೋಗಿಸಿಕೊಂಡು ಇವೊಂದು ಭಾಗದ ವರ್ತಕತನವನ್ನಾದರೂ ತನ್ನ ಕೈಯಲ್ಲಿಟ್ಟುಕೊಳ್ಳಲು ತಕ್ಕ ಪರಿಶ್ರಮಮಾಡದಿದ್ದರೆ ಇದೂ ವಿದೇಶೀಯರ ಕೈಸೇರಿ ಹೋಗುವುದರಲ್ಲಿ ಸಂದೇಹವಿಲ್ಲ.

ವಿದೇಶ ವೃತ್ತಾಂತಗಳು.

ಲಂಡನ್ ಪಟ್ಟಣಕ್ಕೆ ಹೋಗಿರುವ ಜಪಾನ್ ಯುವರಾಜರನ್ನು ನಮ್ಮ ಯುವಸಾರ್ವಭೌಮರು ಸ್ವಾಗತಿಸಿ ಮರ್ಯಾದಿಸಿದರು. ಚಕ್ರವರ್ತಿಯವರು ಅರಮನೆಗೆ ಬರಮಾಡಿಕೊಂಡು ಜಿ.ಸಿ.ಬಿ., ಜಿ.ವಿ.ಓ., ಎಂಬ ಬಿರುದುಗಳನ್ನು ಕೊಟ್ಟು ಮರ್ಯಾದಿಸಿದರು.

ಉನ್ನತಸಭೆಗೂ, ರಾಯಭಾರಿಗಳ ಸಭೆಗೂ, ನಷ್ಟಪರಿಹಾರ ಪರ್ಯಾಲೋಚನೆಯ ಸಭೆಗೂ ನಿಮ್ಮ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆಂದು ಉನ್ನತಸಭೆಯವರು ಮರ್ಯಾದಾಪುರಸ್ಸರವಾಗಿ ಅಮೇರಿಕಾ ಸಂಯುಕ್ತರಾಷ್ಟ್ರ ಪ್ರಭುತ್ವದವರಿಗೆ ತಂತೀವಾರ್ತೆಯನ್ನು ಕಳುಹಿಸಿದ್ದಾರೆ.

ಇದಕ್ಕೆ ಮುಂಚೆ ಮಿತ್ರಮಂಡಲಿಯವರು ಜರ್ಮನೀ ರೈನ್‌ನದೀ ತೀರದ ಪಟ್ಟಣಗಳನ್ನು ಆಕ್ರಮಿಸಿಕೊಂಡಿರುವರಷ್ಟೆ. ಅಲ್ಲಿಯ ತೀರದ ಹಡಗುಗಳ ಮೇಲೆ ಅವರು ಸುಂಕವನ್ನು ಎತ್ತಿದುದರಲ್ಲಿ ೧ ತಿಂಗಳಿಗೆ ೧೫ ಕೋಟಿ ಮಾರ್ಕುಗಳ ಆದಾಯವಾಯಿತಂತೆ. ಇದರ ಪ್ರಕಾರ ಲೆಕ್ಕಹಾಕಿದರೆ ವರ್ಷಕ್ಕೆ ೫೦ ಕೋಟಿ ಭಂಗಾರದ ಮಾರ್ಕು (ಜರ್ಮನ್ ನಾಣ್ಯ) ಗಳಾಗುವುವೆಂದು ನಿರ್ಧರಿಸಿದ್ದಾರೆ.

ಈಗ ನಡೆಯುತ್ತಿರುವ ತುರ್ಕಿ ಗ್ರೀಕ್ ಯುದ್ಧದಲ್ಲಿ ಕಾನ್‌ಸ್ಟಾಂಟಿನೋಪಲ್ ಪಟ್ಟಣವು ತಟಸ್ಥವಾಗಿರಬೇಕೆಂದೂ, ಬಾಸ್ಫರಸ್ ಡಾರ್ಡನೆಲ್ಸುಗಳೂ ಕೂಡ ತಟಸ್ಥವಾಗಿರಬೇಕೆಂದೂ ತೀರ್ಮಾನಿಸಲ್ಪಟ್ಟಿದೆ. ಅದುಕಾರಣ ಗ್ರೀಕರು ಕಾನ್‌ಸ್ಟಾಂಟಿನೋಪಲ್ ಮೊದಲಾದುವುಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿಲ್ಲ. ಅದಕ್ಕೆ ೩ ಮೈಲಿಗಳ ಅಂತರದೊಳಗೆ ತಮ್ಮ ಯುದ್ಧದ ಹಡಗುಗಳನ್ನು ತರಕೂಡದು.

ಕಲ್ಚರ್ಡ್ ಪೆರಲ್ ಎಂಬ ಹೆಸರಿನಿಂದ ಜಪಾನರು ಒಂದು ಹೊಸತರದ ಮುತ್ತನ್ನು ನಿರ್ಮಿಸಿದ್ದಾರೆ. ಇವು ಲಂಡನ್ ಮಾರಕಟ್ಟೆಗೆ ವ್ಯಾಪಾರಕ್ಕೆ ಹೋಗಿವೆ. ನಿಜವಾದ ಮುತ್ತುಗಳಿಗೂ ಇವಕ್ಕೂ ಭೇದವನ್ನು ಕಂಡುಹಿಡಿಯುವುದು ಎಂಥ ರತ್ನಪರೀಕ್ಷಕನಿಗೂ ಪ್ರಯಾಸವಾಗುವುದಂತೆ. ಇದನ್ನು ಕೃತ್ರಿಮವಾದ ಮುತ್ತೆಂದು ಹೇಳಿಯೇ ಮಾರದಿದ್ದರೆ ಬಹು ಪ್ರಜೆಗಳು ಮೋಸಹೋಗುವರೆಂದೂ, ಅದುಕಾರಣ ಮೋಸದಿಂದ ಮಾರುವ ವರ್ತಕರಿಗೆ ಬಹಳ ಕ್ರೂರವಾದ ಶಿಕ್ಷೆಯನ್ನು ಮಾಡುವ ಭಯವಿರಬೇಕೆಂದೂ ಫ್ರಾನ್ಸು ಪತ್ರಿಕೆಗಳು ಹೇಳುತ್ತಿವೆ. ಪರೀಕ್ಷಕರಿಗೆ ಭೇದ ಗೊತ್ತಾಗುವುದೆಂದು ಆಂಗ್ಲರತ್ನವ್ಯಾಪಾರಿಗಳು ಪ್ರಕಟಿಸಿದ್ದಾರೆ.

ಪತ್ರವ್ಯವಹಾರ.

ಶ್ರೀ ಬಸವೇಶ್ವರಜಯಂತ್ಯುತ್ಸವವು.

ಹಿರೇಕೆರೂರ.

ಹೀನಾವಸ್ಥೆಯನ್ನು ಹೊಂದುತ್ತಲಿದ್ದ ವೀರಶೈವ ಧರ್ಮವನ್ನು ಉದ್ಧಾರಮಾಡುವದಕ್ಕಾಗಿ ಅವತರಿಸಿದ ಶ್ರೀ ಬಸವೇಶ್ವರನಜಯಂತ್ಯುತ್ಸವವು ಕೇವಲ ಆದರದಿಂದ ನಡೆಸಲ್ಪಟ್ಟಿತು. ಶ್ರೀ ಬಸವೇಶ್ವರಜಯಂತಿ ವಿಷಯವಾಗಿ ಪತ್ರಿಕೆಗಳನ್ನು ಮುದ್ರಣಮಾಡಿಸಿ ಸರ್ವರ ಅವಗಾಹನೆಗಾಗಿ ೪-೬ ದಿವಸ ಮುಂಚಿತವಾಗಿಯೇ ಹಂಚಲ್ಪಟ್ಟವು ತದನಂತರ ವೈಶಾಖ ಶುದ್ಧ ೨ ಸೋಮವಾರದಿವಸ ಶಿವಭಕ್ತಶ್ರೇಣಿಯಿಂದ ಶಿವಭಜನೆಯನ್ನು ಮಾಡುತ್ತ ಪಲ್ಲಕ್ಕಿಯುತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಮಂಗಳವಾರದ ದಿನ ಶ್ರೀ ಬಸವೇಶ್ವರ ದೇವರ ರಥೋತ್ಸವವನ್ನು ಹೊರಡಿಸಿ ದೊಡ್ಡ ಹಬ್ಬದಂತೆ ಆಚರಿಸಲ್ಪಟ್ಟಿತು. ಪುನಃ ಸಭೆಸೇರಿ ಶ್ರೀ ಬಸವೇಶ್ವರ ದೇವರು ಶ್ರೀಮದ್ವೀರಶೈವ ಮತದ ಉದ್ಧಾರಕನೆಂದು ಆ ಪುಣ್ಯಾತ್ಮರ ಮಹಿಮಾತಿಶಯಗಳನ್ನು ಕೊಂಡಾಡಿ ಸಭೆಯು ವಿಸರ್ಜಿಸಲ್ಪಟ್ಟಿತು.

ಸೆಕ್ರೆಟರಿ,
ವೀರಶೈವ ವಿದ್ಯಾವರ್ಧಕ ಸಂಘ.

ಸೋಲಾಪುರ.

ತಾ|| ೯-೫-೨೧ ಸೋಮವಾರ ಸಾಯಂಕಾಲ ನಾಲ್ಕು ಗಂಟೆಗೆ ವೇ|| ರಾ|| ರಾ|| ಬೋರಾಮಣಿಯವರ ವಿಶಾಲವಾದ ಮನೆಯಲ್ಲಿ ಶ್ರೀ ಬಸವಜಯಂತ್ಯುತ್ಸವದ ನಿಮಿತ್ತ ಇಲ್ಲಿಯ ಮಹಿಲಾವರ್ಗದ ವತಿಯಿಂದ ಶ್ರೀಮತಿ ಗೌರವ್ವಾಬಾಯಿ ವಾರದವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತ್ತು. ಸಭೆಯ ಮಧ್ಯದಲ್ಲಿ ಉನ್ನತ ಪೀಠದ ಮೇಲೆ ಸೌ|| ನೀಲವ್ವಾಬಾಯಿಯವರ ಹಸ್ತಕೌಶಲ್ಯದಿಂದ ತಯಾರಿಸಿದ ಶ್ರೀ ಬಸವೇಶ್ವರರ ಭಾವಚಿತ್ರವು ಬಹು ಸುಂದರವಾಗಿ ಶೋಭಿಸುತ್ತಿತ್ತು. ಆದಿಯಲ್ಲಿ ಸೌ|| ಪಂಚವ್ವಾಬಾಯಿ ಸೌ|| ತ್ರಿವೇಣಿಬಾಯಿ ಬಸಾಪುರೇ ಉಭಯರ ಸುಸ್ವರಗಾನವಾದನಂತರ ಕುಮಾರೀ ಗುರವ್ವಾಬಾಯಿಯವರ ಮಂಜುಳವಾದ ಭಾಷಣದಿಂದ ಸರ್ವಸಭೆಯೂ ಆನಂದಮಯವಾಯಿತು. ನಂತರ ಸೌ|| ನೀಲವ್ವಾಬಾಯಿ ವಸ್ತ್ರದ ತ್ರಿವೇಣಿಬಾಯಿ ಬಸಾಪುರೆ ಸೌ|| ಪಂಚವ್ವಾಬಾಯಿ ಸರದಾರ ಭಾಗೀರಥೀಬಾಯಿ ಕಟಾಪ ಸೌ|| ಸಂಗವ್ವಾಬಾಯಿ ಮಡಕಿ ಇವರೇ ಮೊದಲಾದ ಜನರ ಭಾಷಣವಾದನಂತರ ಶ್ರೀ ಬಸವೇಶ್ವರರ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಧಾರವಾಡ ಜಿಲ್ಲೆಯ ಸೂಡಿಗ್ರಾಮ.

ಇಲ್ಲಿಯ ವೀರಶೈವ ಸದ್ಗೃಹಸ್ಥರು ಇದೇ ವೈಶಾಖಶುದ್ಧ ೨ ಸೋಮವಾರ ತಾ|| ೯-೫-೧೯೨೧ ದಿವಸ ಶ್ರೀಮದ್ಬಸವಜಯಂತ್ಯುತ್ಸವವನ್ನು ನೆರವೇರಿಸಿದರು. (೧) ಮನೆಮನೆಯಲ್ಲಿ ಶ್ರೀ ಬಸವೇಶ್ವರಪೂಜೆ, ಗಣಾರಾಧನೆ ನಡಿಸಿ ದೊಡ್ಡ ಹಬ್ಬದಂತೆ ಆಚರಿಸಿದರು. (೨) ಸಾರ್ವಜನಿಕ ಸಭೆ ಸೇರಿಸಿ ವೀರಶೈವ ಮತ ಸನಾತನತ್ವ, ವೀರಶೈವ ಮತತತ್ವಗಳು, ಶ್ರೀ ಬಸವೇಶ್ವರರಿಂದಾದ ವೀರಶೈವ ಮತ ಜೀರ್ಣೋದ್ಧಾರ, ಇವುಗಳ ವಿಷಯಕ್ಕೆ ವೇ|| ಉಮಾಪತಿಶಾಸ್ತ್ರಿಗಳು, ಶಿ|| ಪುರಾಣಿಕ ಸಂಗಯ್ಯನವರು, ಮಿ|| ಹಿರೇಮಾ

ಸ್ವರ ಶಿವನಗೌಡರು ಉಪನ್ಯಾಸಮಾಡಿದರು. ಒಳಭೇದದ ದುರಭಿಮಾನವನ್ನು ಬಿಟ್ಟು ಏಕಮತದಿಂದ ನಡೆಯಬೇಕೆಂಬುದನ್ನು ಮಿ|| ಶಿವನಗೌಡರು ವ್ಯಾಖ್ಯಾನದಲ್ಲಿ ತಿಳಿಸಿದಂತೆ ಆಚರಣೆಯಲ್ಲಿ ತರಬೇಕೆಂದು ಎಲ್ಲರಿಗೂ ವಿನಂತಿಮಾಡಿಕೊಳ್ಳುತ್ತೇನೆ. (೪) ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರ ಭಾವಚಿತ್ರವನ್ನಿಟ್ಟು ಮೆರವಣಿಗೆ ಮಾಡಿದರು. ಊರೊಳಗೆ ಅಲ್ಲಲ್ಲಿ ಕಟ್ಟಿದ ತಳಿರು ತೋರಣಗಳಿಂದಲೂ, ಶುಭವಾದ್ಯಗಳಿಂದಲೂ, ಭಜನೆ ಜಯಘೋಷ ಮುಂತಾದವುಗಳಿಂದಲೂ, ದೇವಾಲಯಗಳೊಳಗಿನ ದೀಪೋತ್ಸವಗಳಿಂದಲೂ ಮೆರವಣಿಗೆಗೆ ವಿಶೇಷ ಶೋಭೆಬಂದಿತ್ತು. ಓರ್ವ ಪ್ರತ್ಯಕ್ಷದರ್ಶಿ.

ಇಂಗಳಹಳ್ಳಿ.

ಶ್ರೀಮದ್ಬಸವ ಜಯಂತ್ಯುತ್ಸವವು ಈ ವರ್ಷ ನಮ್ಮ ಊರಲ್ಲಿ ಅತ್ಯಂತ ಸಂಭ್ರಮದಿಂದ ನೆರವೇರಿತು. ವೈ-ಶು ೨ ದಿವಸ ಊರೆಲ್ಲಾ ತಳಿರ್ತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಊರೊಳಗಿನ ಯಾವತ್ತೂ ಜನರು ಸಂತೋಷದಿಂದ ಹಬ್ಬವನ್ನು ಮಾಡಿದರು. ಸಂಜೆಯ ೫ ಗಂಟೆಗೆ ಶ್ರೀ ಬಸವೇಶ್ವರ ಮೂರ್ತಿಯ ಮೆರವಣಿಗೆಯು ಶ್ರೀ ಸರಸ್ವತೀ ವಾಚನ ಮಂದಿರದಿಂದ ಹೊರಟು ಬಹು ವೈಭವದಿಂದ ಊರಲ್ಲೆಲ್ಲ ತಿರುಗಿ ಸಂಜೆಯ ೭ ಗಂಟೆಗೆ ಶ್ರೀ ಸರಸ್ವತೀ ವಾಚನಮಂದಿರಕ್ಕೆ ಬಂದಿತು. ಜನಸ್ತೋಮವು ಅತಿಶಯವಾಗಿತ್ತು. ಶ್ರೀ ಸರಸ್ವತೀ ವಾಚನಮಂದಿರದ ಮುಂದೆ ಹಾಕಿಸಿದ ದೊಡ್ಡ ಹಂದರದಲ್ಲಿ ಸಂಜೆಯ ೭ ಗಂಟೆಯಿಂದ ೧೦ ಗಂಟೆಯವರೆಗೆ ಸಭೆಯು ನಡೆಯಿತು. ಸಭೆಯಲ್ಲಿ ಶ್ರೀ ಬಸವೇಶ್ವರಜಯಂತಿಯ ಅವಶ್ಯಕತೆ, ಮತ್ತು ಅದರ ಮಹತ್ವ, ಶ್ರೀ ಬಸವೇಶ್ವರರ ಚರಿತ್ರ, ಅವರ ಲೀಲಾ, ಪ್ರಾಥಮಿಕ ಶಿಕ್ಷಣ, ಲೈಬ್ರರಿಗಳ ಅವಶ್ಯಕತೆ ಈ ವಿಷಯಗಳ ಮೇಲೆ ಶಿವಮೂರ್ತಿಗಳಾದ ಗುರಯ್ಯನವರು ಹಿರೇಮಠ, ಗುರಯ್ಯನವರು ಹೊಸಮಠ, ಬಸಯ್ಯನವರು ಮಠದ ಮಿ|| ಕೆ. ಬಿ. ದುಂದೂರ, ಸಿ-ಫ ಹೊಂಬಳ, ಮ|| ವಿ. ಕುಸೂಗಲ್ಲ ಇವರ ಮಹತ್ವದ ಭಾಷಣಗಳಾದ ಮೇಲೆ ಶ್ರೀ ಬಸವೇಶ್ವರ ಮೂರ್ತಿಗೆ ಮಂಗಳವನ್ನುಹಾಡಿ ಸಭೆಯು ವಿಸರ್ಜನೆಯಾಯಿತು.

ವೀರಪ್ಪ ಶಿವಪ್ಪ ಹಳೇಮನಿ ಹುಚ್ಚನಗೌಡ ಪಾಟೀಲ.

ತುರುವೇಕೆರೆ.

ಈ ವರ್ಷ ಪದ್ಧತಿ ಮೇರೆ ತಾ|| ೯-೫-೨೧ ನೇ ಸೋಮವಾರ ಶ್ರೀ ಕೋಡಿ ಬಸವೇಶ್ವರ ದೇವಸ್ಥಾನವನ್ನು ಸುಣ್ಣ ಬಣ್ಣಗಳಿಂದ ತೊಡೆದು ರಂಗವಲ್ಲಿಗಳಿಂದಲೂ ತಳಿರುತೋರಣ ಕದಳೀಸ್ತಂಭಗಳಿಂದಲೂ ಶೃಂಗರಿಸಿ ಬೆಳಗಿನ ೭ ಗಂಟೆಲಾಗಾಯಿತು ೧೨ ಗಂಟೆವರೆಗೂ ಅಭಿಷೇಕ ನಡೆದು ಶ್ರೀ ಬಸವೇಶ್ವರಸ್ವಾಮಿಯ ಭಾವಚಿತ್ರವನ್ನು ಬೀದಿಗಳಲ್ಲಿ ಕ್ರೈ|| ವಕೀಲ್ ಸಿದ್ಧಣ್ಣಯ್ಯನವರ ಮಕ್ಕಳು ಮಹಾರುದ್ರಯ್ಯನವರು ಅಂಗಡಿ ಚೆನ್ನಣ್ಣನವರ ಮಗ ವೀರಶೆಟ್ಟಿ ಮುಂತಾದ ವೀರಶೈವ ಮಹನೀಯರಿಂದ ಭಜನೆಯೂ ಬಹು ವಿಜೃಂಭಣೆಯಿಂದ ನಡಸಲ್ಪಟ್ಟಿತು. ತಾ|| ೧೦-೫-೨೧ ನೆ ಮಂಗಳವಾರ ಮಧ್ಯಾಹ್ನ ಗಣಸಂತರ್ಪಣೆಯೂ ರಾತ್ರಿ ಪೇಟೆ ಕೋಟೆಗಳಲ್ಲಿ ಶ್ರೀ ಕೋಡಿಬಸವೇಶ್ವರನ ಉತ್ಸವವೂ ನಡೆದುವು. ವೀರಶೈವರೊಬ್ಬರಿಂದ ತೊಂದರೆಸಂಭವಿಸಿತು. ಆದಾಗ್ಯೂ ಶ್ರೀಬಸವೇಶ್ವರ ಕೃಪೆಯಿಂದ ಉತ್ಸವವುನಡೆದು ಪೇಟೆ ದೇವಸ್ಥಾನಕ್ಕೆ ಬಿಜಮಾಡಿಸಿ ಮಂಗಳಾರತಿ ವಗೈರೆ ನಡೆಸಿ ಶ್ರೀಮನ್ಮಹಾರಾಜರಿಗೂ ಶ್ರೀಮನ್ ಯುವರಾಜರಿಗೂ ಶ್ರೇಯಃಪ್ರಾರ್ಥನೆಯನ್ನು ಕೋರಿ ಈ ಕೆಲಸದಲ್ಲಿ ಯಾವಾಗ್ಯೂ ಮುತುವರ್ಜಿವಹಿಸುವ ಪೇಟೆ ಶೆಟ್ಟರು ಗುಬ್ಬಿ ಶೆಟ್ಟರು ಹೊ. ವ್ರ. ರುದ್ರಪ್ಪನವರು ಷಾಪ್ ನಂಜಪ್ಪಸೆಟ್ಟರು ಗುಬ್ಬಿ ವಾಣಿ ರುದ್ರಪ್ಪಶೆಟ್ಟರು ಈ ಮಹನಿಯರುಗಳಿಗೆ ದೇವರು ಯಾವಾಗ್ಯೂ ಆಯುರಾರೋಗ್ಯವನ್ನು ಕೊಡಲಿ ಎಂದು ಸಭೆಯವರೆಲ್ಲಾ ಕೋರಿ ಸಭೆಯು ಭರಕಾಸ್ತಾಯಿತು. ಪ್ರತ್ಯಕ್ಷದರ್ಶಿ.

ಬಾಗೇವಾಡಿ ತಾ|| ನಿಡಗುಂದಿ.

ಉತ್ಸವದ ಮುನ್ನಾದಿವಸ ಡಂಗುರದ ಪ್ರಕಾರ ಯಾವತ್ತರ ಮನೆಯಲ್ಲಿ ದೊಡ್ಡ ಹಬ್ಬದಂತೆ ಪೂಜಾ, ಗಣಾರಾಧನೆ ವಗೈರೆ ನಡಿಸಿದರು. ಪ್ರತಿಯೊಂದು ಓಣಿಯೂ ತಳಿರ್ತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಶ್ರೀ ಬಸವರಾಜೇಂದ್ರರ ಭಾವಚಿತ್ರದ ಪಟವು ಇಲ್ಲಿಯ ಕನ್ನಡ ಶಾಲಾ ಮಾಸ್ತರರಾದ ವೇ|| ವೀರಬಸವಯ್ಯನವರು ಪುರಾಣಿಕ ಇವರ ಮನೆಯಲ್ಲಿ ದರವರ್ಷದ ಪದ್ಧತಿಯಂತೆ ಪೂಜಿಸಲ್ಪಟ್ಟಿತು. ಸಾಯಂಕಾಲ ೪ ಘಂಟೆಯ ಸುಮಾರಿಗೆ ಊರೊಳಗಿನ ಶೆಟ್ಟಿ ಸಾಹುಕಾರ ಮೊದಲಾದ ಸದ್ಗೃಹಸ್ಥರೊಂದಿಗೆ ಪಾಲಕಿ ಉತ್ಸವವು ವಿಜೃಂಭಣೆಯಿಂದ ಹೊರಟು ಇಲ್ಲಿಯ ಶ್ರೀ ಮದ್ಘನಲಿಂಗಚರಚಕ್ರವರ್ತಿಗಳ ಶ್ರೀ. ಮಠಕ್ಕೆ ಸಾಗಿತು. ಸದರಿಯವರ ಮಠದಲ್ಲಿ ಅವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆಯಿತು. ಧಾರ್ಮಿಕ ವಿಷಯಗಳಮೇಲೆ ಬಾಗಲಕೋಟೆ ಪಾಠಶಾಲೆಯ ವಿದ್ಯಾರ್ಥಿಗಳು ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಹೇಳಿದತರುವಾಯ ಇಲ್ಲಿಯ ಮಠದ ರುದ್ರಯ್ಯನವರೂ ಮತ್ತು ಕೊಡಗಿಮಠದ ಸ್ವಾಮಿ ಗದಿಗೆಯ್ಯನವರೂ ಶ್ರೀ ಬಸವೇಶ್ವರದೇವರ ಚರಿತ್ರವನ್ನು ಸಂಕ್ಷಿಪ್ತದಲ್ಲಿ ಹೇಳಿದರು. ತರುವಾಯ ಸದರೀ ವೇ|| ಪುರಾಣಿಕ ಮಾಸ್ತರರು ಊರೊಳಗಿನ ಯಾವತ್ತು ವರ್ಣದ ಜನರಿಗೆ ಶ್ರೀ ಬಸವೇಶ್ವರದೇವರೇ ಅಧಿಕರೆಂದು ನಂಬಿಗೆ ಹುಟ್ಟುವಂತೆ ಬಹು ಸರಸಾಗಿಯೂ ವಿಸ್ತಾರವಾಗಿಯೂ ತಿಳಿಸಿದರು.

ವೀರಶೈವವಿದ್ಯಾರ್ಥಿ.

ಮುದ್ದಿನಹಾಳ.

ಜಿಲ್ಲಾ ರಾಯಚೂರು ತಾ|| ಲಿಂಗಸೂಗೂರಿಗೆ ಸೇರಿದ ಮುದ್ದಿನಹಾಳಿಗೆ ಇದೇ ದುರ್ಮತಿ ಸಂ|| ರದ ವೈಶಾಖ ಶು|| ಆದಿತ ವಾರ ದಿವಸ ಹಾಲಕೆರೆ ಶ್ರೀ ಅನ್ನದಾನ ಮಹಾಸ್ವಾಮಿಗಳೂ ಮತ್ತು ಕನಕಗಿರಿ ಶ್ರೀ ಚನ್ನಮಲ್ಲಸ್ವಾಮಿಗಳೂ ದಯಮಾಡಿಸಿದ್ದರು. ಇವರನ್ನು ಮುದ್ದಿನಹಾಳ ರಾಜಾ ಅಮರೇಶ್ವರರಾವ ನಾಡಗೌಡ ಇವರು ತಮ್ಮ ಸಿಬ್ಬಂದಿ ಮತ್ತು ಊರ ಪ್ರಮುಖರನ್ನೆಲ್ಲ ಒಡಗೊಂಡು ಹೋಗಿ ಇದಿರ್ಗೊಂಡು ಪಲ್ಲಕ್ಕಿಯುತ್ಸವದೊಂದಿಗೆ ಬಹು ವಿಜೃಂಭಣೆಯಿಂದ ಗದ್ದುಗೆಯ ಮಠದವರೆಗೆ ಮೆರವಣಿಗೆಯ ಸಂಗಡ ಕರತಂದು ಅಲ್ಲಿ ಬಿಡಾರಗೈಸಿದರು. ವೈ-ಶುದ್ಧ ೨ ಸೋಮವಾರ ಪ್ರತಿಯೊಬ್ಬ ವೀರಶೈವರೂ ತಮ್ಮ ತಮ್ಮ ಗೃಹಗಳಲ್ಲಿ ಶ್ರೀ ಬಸವೇಶ್ವರ ಜಯಂತಿಯ ಹಬ್ಬವನ್ನು ಕೇವಲ ಆದರದಿಂದ ನಡೆಸಿದರು. ಸಾಯಂಕಾಲವಾಗುತ್ತಲೇ ಶ್ರೀ ಬಸವೇಶ್ವರನ ಪಟವನ್ನು ಪುಷ್ಪ ಮಾಲೆಯಿಂದಲಂಕರಿಸಿ ಶ್ರೀ ಪೇಟೆಯ ಬಸವೇಶ್ವರ ದೇವಸ್ಥಾನಕ್ಕೆ ಉತ್ಸವದೊಡನೆ ತರಳಿ ಅಲ್ಲಿ ಶಿವಭಜನೆ, ಮಂಗಳಾರತಿಯನ್ನು ಮಾಡಿ, ಮರಳಿ ಬಂದ ತರುವಾಯ ರಾಜವಾಡೆಯಲ್ಲಿ ಮಕ್ಕಿ ಸಿದ್ಧರಾಮಪ್ಪನು ಮತಸುಧಾರಣೆಯ ವಿಷಯವಾಗಿಯೂ ಏಕಮತ್ಯದ ವಿಷಯವಾಗಿಯೂ ಭಾಷಣಮಾಡಿದರು. ತರುವಾಯ ಕನಕಗಿರಿ ಶ್ರೀಗಳವರು ತಮ್ಮ ದೇವವಾಣಿಯಿಂದ ಅದೇ ವಿಷಯಗಳನ್ನೇ ಪುಷ್ಟೀಕರಿಸಿದ್ದಲ್ಲದೆ, ವೀರಶೈವ ಮತದ ಪ್ರಾಚೀನತ್ವ, ಆಚಾರ ಭಕ್ತಿ ವಿದ್ಯಾ ವಿಷಯಕವಾಗಿ ಸರಸವಾಗಿ ಭಾಷಣಮಾಡಿದರು. ಬಳಿಕ ಬಂದವರೆಲ್ಲರಿಗೂ ಪ್ರಸಾದವನ್ನು ಕೊಟ್ಟು ಜಯಘೋಷದೊಡನೆ ಸಭೆಯು ಮುಕ್ತಾಯಗೊಂಡಿತು. ಓರ್ವ ಪ್ರತ್ಯಕ್ಷದರ್ಶಿ.

ಲೈಬ್ರರಿಸ್ಥಾಪನೆ.

ಕರ್ಜಗಿ ತಾಲ್ಲೂಕು ಕೇಸರಹಳ್ಳಿ ಗ್ರಾಮದಲ್ಲಿ ಶ್ರೀ ಕಲ್ಲೇಶ್ವರ ಲೈಬ್ರೆರಿಯು ತಾ|| ೧೨-೫-೨೧ ನೇ ಇಸವಿ ದಿವಸ ಈಗ ಮೆಟ್ರಿಕ್ ಕ್ಲಾಸಿನಲ್ಲಿ ಓದುತ್ತಿರುವ ಬಸವಯ್ಯ ಕುಲಕರ್ಣಿಯವರ ಸತತಪ್ರಯತ್ನದಿಂದಲೂ ಸದುಪದೇಶದಿಂದಲೂ, ಅವರ ಮಿತ್ರರ ಸಹಾಯದಿಂದಲೂ ಸ್ಥಾಪಿಸಲ್ಪಟ್ಟಿತು. ಸಣ್ಣ ಗ್ರಾಮದಲ್ಲಿಯೂ ಸಹ ಇತ್ತೀಚೆಗೆ ವಾಚನಾಲಯಗಳು ಸ್ಥಾಪಿಸಲ್ಪಡುವವು ಅಂದಬಳಿಕ ಇದು ೨೦ ನೆ ಶತಮಾನದ ಮಹತ್ವವೆಂದು ತಿಳಿಯಬೇಕು. ಹಿಂದೆಬಿದ್ದ ನಮ್ಮ ಸಮಾಜವು ಮುಂದಕ್ಕೆ ಬರಲಿಕ್ಕೆ ಹತ್ತಿರುವುದು. ಊರ ಪ್ರಮುಖಜನರೂ, ತರುಣ ಜನರೂ ಉದಾರಭಾವದಿಂದ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಇದಕ್ಕೆ ಸಹಾಯಮಾಡಿದರು. ಇದಲ್ಲದೆ ಈ ಲೈಬ್ರರಿಗೆ ಆವಾದರೂ ಕುಂದುಕೊರತೆಗಳು ಬಂದರೆ ತಮ್ಮ ತನು ಮನ ಧನಗಳಿಂದ ಅವುಗಳನ್ನು ನೀಗಿಸಲಿಕ್ಕೂ ಮತ್ತು ಸ್ವಹಸ್ತ ಪರಹಸ್ತಗಳಿಂದ ಸಹಾಯಮಾಡಲಿಕ್ಕೂ ಒಪ್ಪಿಕೊಂಡಿರುವರೆಂದು ತಿಳಿಸಲಿಕ್ಕೆ ಅಭಿಮಾನವೆನಿಸುತ್ತದೆ. ಈಗಾಗಲೇ ಈ ಲೈಬ್ರರಿಗೆ ೧೨ ವರ್ತಮಾನ ಪತ್ರಗಳು ನಾಲ್ಕು ಮಾಸಿಕ ಪತ್ರಿಕೆಗಳು ಬರುವ ವ್ಯವಸ್ಥೆ ಮಾಡಿದೆ. ಇಲ್ಲಿಯ ತರುಣಜನರು ಸಮಾಜಸೇವೆಯನ್ನು ಮಾಡಲಿಕ್ಕೆ ಹತ್ತಿರುವರೆಂದು ತಿಳಿಸಲಿಕ್ಕೆ ಪರಮಾನಂದವಾಗುತ್ತದೆ. ಸೆಕ್ರೆಟರಿ, ಶ್ರೀ ಕಲ್ಲೇಶ್ವರ ಲೈಬ್ರರಿ.

ಧರ್ಮಾರ್ಥ ದೀಕ್ಷಾ ಸಂಸ್ಕಾರ.

ಬೇಲೂರು ತಾಲ್ಲೂಕು ಬಿಕ್ಕೋಡುಮಠದ ನಿರಂಜನಮೂರ್ತಿ ಶಿವಬಸವಸ್ವಾಮಿಗಳವರು ತಾರೀಖು ೨೪-೩-೯೨೧ ನೆ ಫಾಲ್ಗುಣ ಬಹುಳ ೧ ಗುರುವಾರ ಬಿಕ್ಕೋಡುಮಠದಲ್ಲಿ ಪಂಚಬ್ರಹ್ಮ ಕಲಶಸ್ಥಾಪನಮಾಡಿಸಿ ೩೦ ಬಡವಟುಗಳಿಗೆ ಧರ್ಮಾರ್ಥ ದೀಕ್ಷಾಮಾಡಿಸಿದ್ದಲ್ಲದೆ ತಾ|| ೨೫ ನೆ ಶುಕ್ರವಾರ ಶ್ರೀ ಪುಷ್ಪಗಿರಿ ಮಲ್ಲಾಪುರಮಠದ ಪಟ್ಟದ ಸ್ವಾಮಿಗಳೂ, ಆಣೂರಮಠದ ಶ್ರೀ ಚರಮೂರ್ತಿಗಳು, ಶಂಕರಪುರದ ಶ್ರೀ ಪಟ್ಟದಸ್ವಾಮಿಗಳು ಇನ್ನೂಮುಂತಾದ ಬೇಲೂರು, ಮಂಜ್ರಾಬಾದು, ಆಲೂರು, ಮೂಡಿಗೆರೆ ಈ ೪ ತಾಲ್ಲೂಕುಗಳ ಮಠಸ್ಥರೂ ಭಕ್ತಮಾಹೇಶ್ವರರೂ ಸೇರಿದ ಮಹಾಸಭೆಯಲ್ಲಿ ಮಠಸುಪೂರು ಮಠದ ವೇ|| ಮರುಳುಸಿದ್ಧಯ್ಯನವರು ಮುಂತಾದವರಿಂದ ಸಾಮಾಜಿಕ, ನೈತಿಕ, ಧಾರ್ಮಿಕ ಭಾಷಣಗಳು ನಡೆದು ಇದೇಕಾಲದಲ್ಲಿ ಹಾಡ್ಲಗೆರೆ ಸಂಗಮೇಶ್ವರಮಠಕ್ಕೆ ಅದೇಗ್ರಾಮದ ಸತ್ಕುಲಪ್ರಸೂತರಾಗಿಯೂ ಸಾಧನಚತುಷ್ಟಯ ಸಂಪನ್ನರಾಗಿಯೂ ಇದ್ದ ಶಿವಪ್ಪನೆಂಬುವರಿಗೆ ಬಿಕ್ಕೋಡುಮಠದ ಶ್ರೀಗಳವರಿಂದಲೇ ಆಶ್ರಮವು ಕೊಡಲ್ಪಟ್ಟು ಶಿವಸಂಗಮಸ್ವಾಮಿ ಎಂಬ ನಾಮಕರಣವನ್ನಿಟ್ಟರು. ಮತ್ತು ೨-೩ ಸಹಸ್ರಮಂದಿ ಸೇರಿ ೩ ದಿವಸ ಗಣಪರ್ವಸಾಗಿತು. ಶ್ರೀಗಳು ಕೈಕೊಂಡ ಮಹಾಕಾರ್ಯದಲ್ಲಿ ಸರ್ವರೂ ಭಕ್ತಿನಿಷ್ಠೆಗಳಿಂದ ಸ್ವಲ್ಪವೂ ನ್ಯೂನತೆಬಾರದಂತೆ ಪೂರ್ಣಗೊಳಿಸಿದ್ದು ಸ್ತುತ್ಯವೇಸರಿ. ಈ ಶುಭಸಮಯದಲ್ಲಿ ವೀರಶೈವ ವಿದ್ಯಾವರ್ಧಕಫಂಡಿಗೆ ೧೦ ರೂಪಾಯಿಗಳನ್ನೂ ಸ್ಮಾರಕಪತ್ರಿಕಾಭಿವೃದ್ಧಿಗಾಗಿ ೨ ರೂಪಾಯಿಗಳನ್ನೂ ಕಳುಹಿಸಿರುತ್ತಾರೆ. ಪ್ರತ್ಯಕ್ಷದರ್ಶಿ.

ಶ್ರೀ ಶಿವಯೋಗಿಗಳ ಸ್ಮಾರಕವೂ, ವೀರಶೈವರ ಕರ್ತವ್ಯವೂ.

ಅಥಣಿ ಸುಪ್ರಸಿದ್ಧ ಮಹಾತ್ಮರಾದ ಶ್ರೀ ಶಿವಯೋಗಿಗಳು ಶಿವೈಕ್ಯರಾದುದರಿಂದ ಕರ್ಣಾಟಕದ ಅನೇಕ ಪುರಗ್ರಾಮಗಳಲ್ಲಿ ಇವರ ದುಃಖಪ್ರದರ್ಶನ ಸಭೆಗಳೂ, ಸ್ಮಾರಕಫಂಡುಗಳೂ ನಡೆದಿರುತ್ತವೆಯಷ್ಟೆ. ವೀರಶೈವ ಸಮಾಜದಲ್ಲಿ ಇಂಥ ಯತಿಗಳು ದುರ್ಲಭವಾದುದರಿಂದಲೇ ಅನೇಕಕಡೆಗಳಲ್ಲಿ ಇವರ ಸ್ಮಾರಕಕಾರ್ಯವು ನಡೆದಿದೆ. ಈ ಶಿವಯೋಗಿಗಳ ಸ್ಮಾರಕಕ್ಕಾಗಿ ಕೆಲವುಕಡೆ ದೇವಸ್ಥಾನಗಳನ್ನೂ ಕೆಲವುಕಡೆ ವಾಚನಾಲಯಗಳ ಮೊದಲಾದ ಯೋಗ್ಯಸ್ಮಾರಕಗಳನ್ನೂ ತಮ್ಮತಮ್ಮ ಗ್ರಾಮಕ್ಕುಪಯೋಗವಾಗುವಂತೆ ಮಾಡುವುದು ತಕ್ಕುದಾದರೂ, ವೀರಶೈವ ಸಮಾಜದವರೆಲ್ಲರಿಗೂ, ಪ್ರಯೋಜನಕಾರಿಯಾದಂಥ ಒಂದು ದೊಡ್ಡ ಸಂಸ್ಥೆಯನ್ನು ಏರ್ಪಡಿಸುವುದು ಅತ್ಯವಶ್ಯವಾದದ್ದಾಗಿದೆ. ವೀರಶೈವರಿಗೆ ಒಂದಾದರೂ ಸಂಸ್ಕೃತ ವಿದ್ಯಾಪೀಠವು ಇರದೆ ಇದ್ದು ಸರ್ಕಾರಿವಿದ್ಯಾಲಯಗಳು ತ್ರಿಮತಸ್ಥರವೇ ಆಗಿವೆ. ಈ ಕೊರತೆಯು ನಮ್ಮ ಸಮಾಜಕ್ಕೆ ಬಹುಕಾಲದಿಂದಲೂ ಇರುವುದಾಗಿದೆ. ಕಾರಣ ನಮ್ಮ ಸಮಾಜಕ್ಕೆ ಅತ್ಯವಶ್ಯಕವಾಗಿರುವ ಆಧುನಿಕಪದ್ಧತಿಯಿಂದ ಶಿಕ್ಷಣ ಕೊಡತಕ್ಕಂಥ ಸಂಸ್ಕೃತ ಮಹಾವಿದ್ಯಾಲಯವನ್ನು ಕರ್ಣಾಟಕದ ಮಧ್ಯಪ್ರದೇಶದಲ್ಲಿ ಏರ್ಪಡಿಸುವುದು ತುಂಬಾ ಫಲಕಾರಿಯಾದದ್ದಾಗಿದೆ. ಈ ವಿದ್ಯಾಲಯದಲ್ಲಿ ಆರ್ಯಸಮಾಜದವರ ಗುರುಕುಲದಲ್ಲಿ ದೊರೆಯುವ ಶಿಕ್ಷಣ ಪದ್ಧತಿಯಂತೆ ಆಂಗ್ಲಸಂಸ್ಕೃತ ಶಿಕ್ಷಣವು ದೊರೆಯಬೇಕಲ್ಲದೆ, ಇದಕ್ಕೆ ಹೊಂದಿ ಒಂದು ಶಿವಯೋಗಾಶ್ರಮವೂ ಏರ್ಪಟ್ಟು ಬ್ರಹ್ಮಚಾರಿಗಳಾದ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸವೂ ನಡೆಯುವಂತೆ ಮಾಡಬೇಕು. ಇದರಿಂದ ಅಲ್ಲಲ್ಲಿಯ ಮಠಗಳಿಗೆ ಯೋಗ್ಯಮೂರ್ತಿಗಳು ದೊರೆತು ಅವರಿಂದ ಮತತತ್ವಸಾರವು ಸಕಲರಿಗೂ ತಿಳಿಯಲವಕಾಶವಾಗುತ್ತದೆ. ಅಲ್ಲದೆ ಈ ವಿದ್ಯಾಲಯದಲ್ಲಿ ತೇರ್ಗಡೆಯಾದ ಪಂಡಿತರುಗಳಿಂದ ಮತತತ್ವಗಳನ್ನು ಆಂಗ್ಲಭಾಷೆಯಲ್ಲಿ ಪ್ರಸಿದ್ಧಿಪಡಿಸುವುದರಿಂದ ನಮ್ಮಮತದ ಉದಾತ್ತ ತತ್ವಗಳು ಅನ ಮತದವರಿಗೂ ತಿಳಿಯಲವಕಾಶವಾಗುತ್ತದೆ, ಕಾರಣ ಈಗ ದೊರೆತಿರುವ ಶಿವಯೋಗಿಗಳ ಸ್ಮಾರಕದಂಥ ಸುಸಮಯವನ್ನು ಕಳೆದುಕೊಳ್ಳದೆ ನಮ್ಮ ಸಮಾಜದ ಮುಂದಾಳುಗಳೆಲ್ಲಾ ಸೇರಿ, ಶ್ರೀ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳಲ್ಲಿ ಬಿನ್ನೈಸಿ ಅವರಾಶೀರ್ವಾದಾನುಕೂಲದಿಂದಲೂ, ತಮ್ಮ ಉದಾರಹಸ್ತದಿಂದಲೂ ಹಣವನ್ನು ಶೇಖರಿಸಿ, ಕರ್ಣಾಟಕದ ಮಧ್ಯಪ್ರದೇಶವಾದ ದಾವಣಗೆರೆ ಇಲ್ಲವೆ ಹರಿಹರದ ನದೀತೀರದಲ್ಲಿ ಇಂಥ ಆಶ್ರಮ ವಿದ್ಯಾಪೀಠಗಳನ್ನು ಏರ್ಪಡಿಸುವುದು ತುಂಬಾ ಭೂಷಣವಾದದ್ದಾಗಿದೆಯಲ್ಲದೆ, ಶ್ರೀ ಶಿವಯೋಗಿಗಳ ಯೋಗ್ಯಚಿರಸ್ಮಾರಕವೆನಿಸುತ್ತದೆ.

ನಮ್ಮ ಸಮಾಜದವರಿಗೆ ಈ ಕಾರ್ಯವು ದೊಡ್ಡದಲ್ಲ. ಮನಸ್ಸುಮಾಡಿದರೆ ಮೂರೇತಿಂಗಳಲ್ಲಿ ಇದಕ್ಕೆ ಬೇಕಾಗುವ ದ್ರವ್ಯಾದಿಸಹಾಯವು ದೊರೆಯುವುದರಲ್ಲಿ ಸಂದೇಹವಿಲ್ಲ. ಮಹಾಮಹಿಮರಾದ ಶಿವಯೋಗಿಗಳ ಹೆಸರಿನ ಈ ಕಾರ್ಯಕ್ಕೆ ಹಣದೊರೆಯುವುದು ತಡವೆ? ಶ್ರೀ ಮೃತ್ಯುಂಜಯಸ್ವಾಮಿಗಳಂಥ ಸಮಾಜೋದ್ಧಾರಕರು ನಿಂತಲ್ಲಿ ಹಣಕ್ಕೆ ಕೊರತೆಯೆ? ಶ್ರೀ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರ ಚಿರಸ್ಮರಣೆಗಾಗಿ ಶ್ರೀ ರಾಮಕೃಷ್ಣ ಮಿಷನ್, ಎಂಬ ಸಂಸ್ಥೆಯನ್ನು ಏರ್ಪಡಿಸಿ ಧರ್ಮೋದ್ಧಾರಮಾಡಿದಂತೆ, ವೀರಶೈವ ವಿವೇಕಾನಂದರಾದ ಶ್ರೀ ಮೃತ್ಯುಂಜಯಸ್ವಾಮಿಗಳು ತಮ್ಮ ಪ್ರಿಯಗುರುವಾದ ಶ್ರೀ ಶಿವಯೋಗಿ ಪರಮಹಂಸರ ಚಿರಸ್ಮಾರಕಕ್ಕಾಗಿ ಈ ಮಹಾಕಾರ್ಯವನ್ನು ಕೈಕೊಂಡು ನಮ್ಮ ಸಮಾಜದೊಳಗಿನ ಅಂಧಕಾರವನ್ನು ಹೋಗಲಾಡಿಸಿ ಸಮಾಜೋದ್ಧಾರಮಾಡಬೇಕಾಗಿ ಪ್ರಾರ್ಥಿಸಿ ಶೀಘ್ರದಲ್ಲೇ ಈ ಕಾರ್ಯವನ್ನು ಕೈಕೊಳ್ಳಬೇಕಾಗಿ ಬೇಡುತ್ತೇನೆ. ಮುಪ್ಪೀನ, ದಾವಣಗೆರೆ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಶಿವಪೂಜಾವಿಧಿಃ	೧—೦—೦
ಚಾರುಶೀಲೆಚರಿತ್ರ	೦—೧೦—೦
ಹಂದಾಸಿ	೦—೮—೦

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೪—೦ ; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೬—೦ ಕೆಳಯ್ಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರ್.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 24

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವವರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ: —ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

34 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

೧೯೨೧ ನೆಯ ಇಸವಿ ಮೇ ತಾ|| ೨೨ ರಿಂದ ೧೯೨೧ ನೆಯ ಮೇ ತಾ|| ೨೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ವೈಶಾಖ ಬಹುಳ ಪಾಡ್ಯಮಿಯಿಂದ ವೈಶಾಖ ಬಹುಳ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
22	ಭಾನು	ಪಾಡ್ಯ	46-35	ಅನೂ	29-27	9
23	ಸೋಮ	ಬಿದಿ	48-59	ಜ್ಯೇಷ್ಠ	33-0	10
24	ಮಂಗಳ	ತದಿ	52-25	ಮೂಲ	37-48	11
25	ಬುಧ	ಚೌತಿ	56-46	ಪೂಷಾ	43-32	12
26	ಗುರು	ಪಂಚ	60	ಉಷಾ	49-53	13
27	ಶುಕ್ರ	ಪಂಚ	2-5	ಶ್ರವ	56-32	14
28	ಶನಿ	ಷಷ್ಠಿ	7-11	ಧನಿ	60	15

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚಿತ್ಮೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಮೇ ತಾರೀಖು ೨೯ ನೆಯ ಭಾನುವಾರ (ಸಂಚಿಕೆ ೨೧

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1ರೂ. 5ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು, ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

SREE SITHARAGHAVA VAIDYASALA

ನಮ್ಮ ವಿಳಾಸ—ಸೀತಾರಾಘವ ವೈದ್ಯಶಾಲಾ,
20 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☛ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ. ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕ್ಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

35 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ವಜ್ರದ ಬೆಂಡೋಲೆ.



ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂರ್ನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂರ್ನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
35 89 ನಾರಾಯಣಮೊದಲಿ ಬೀದಿ, ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
14 ಕಂಪನಿ, ಚೌಕಂಬಾ ಕಾಶೀ.

ಫಲಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 33

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, [illegible]

ನಮ್ಮ ವಿಳಾಸ—ಎಸ್. ಎಂ. [illegible], ಬಳ್ಳಾರಿ.

ಮೈಸೂರು ಸ್ಟಾರ್

೧೯೨೧ ನೆಯ ಇಸವಿ ಮೇ ತಾ|| ೨೯ ನೆಯ ಭಾನುವಾರ.

ಮಿಲ್ಲರ್ ಸಂಘದ ವರದಿ.

ಮೈಸೂರುಸಂಸ್ಥಾನದಸರ್ಕಾರದಉದ್ಯೋಗಗಳಿಗೆ ಪ್ರಜೆಗಳನ್ನು ಆರಿಸಿ ಸೇರಿಸಿಕೊಳ್ಳುವುದರಲ್ಲಿ ಈಗ ಅನುಸರಿಸಲ್ಪಡುತ್ತಿರುವ ಪದ್ಧತಿಯಲ್ಲಿ ವ್ಯತ್ಯಾಸವನ್ನೇನಾದರೂ ಮಾಡುವುದು ಅವಶ್ಯಕವೆ? ಹಿಂದುಳಿದ ಜನವರ್ಗಗಳಲ್ಲಿ ಪ್ರೌಢವಿದ್ಯಾಭ್ಯಾಸ ಮತ್ತು ಪಾರಿಶ್ರಾಮಿಕ ವಿದ್ಯಾಭ್ಯಾಸಗಳ ಪ್ರಸಾರವನ್ನು ಮಾಡಿಸಲು ಹೆಚ್ಚು ಪ್ರೋತ್ಸಾಹವನ್ನು ಕಲ್ಪಿಸುವುದು ಅವಶ್ಯಕವೆ? ಸರ್ಕಾರದ ಉದ್ಯೋಗಗಳಲ್ಲಿ ಹಿಂದುಳಿದ ಜನವರ್ಗಗಳ ಪ್ರಾತಿನಿಧ್ಯವು ತಕ್ಕಷ್ಟು ಇರುವಂತೆ ಆ ಜನವರ್ಗಗಳಲ್ಲಿ ಅರ್ಹತೆಯುಳ್ಳವರಿಗೆ ಹೆಚ್ಚುಹೆಚ್ಚಾಗಿ ಸರ್ಕಾರದ ಉದ್ಯೋಗಗಳನ್ನು ಕೊಟ್ಟು ಪ್ರೋತ್ಸಾಹಿಸುವುದು ಅವಶ್ಯಕವೆ? ಎಂಬ ಈ ಮೂರು ವಿಷಯಗಳಲ್ಲಿ ವಿಚಾರ ನಡೆಯಿಸಿ ೬ ತಿಂಗಳೊಳಗಾಗಿ ವರದಿ ಮಾಡುವುದಕ್ಕಾಗಿ ಶ್ರೀಮನ್ಮಹಾರಾಜರ ಸರ್ಕಾರದವರು ಕಳೆದ ೧೯೧೮ ನೆ ವರ್ಷದ ಆಗಸ್ಟ್ ತಾ|| ೨೩ ರಲ್ಲಿ ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳನ್ನು ಸೇರಿಸಿ ಒಂದು ಸಂಘವನ್ನು ಏರ್ಪಡಿಸಿದರು.—ಚೀಫ್ ಜಡ್ಜರಾದ ಸರ್ ಲೇಸ್ಲಿ ಸಿ. ಮಿಲ್ಲರ್‌ರವರು ಅಧ್ಯಕ್ಷರಾಗಿಯೂ, ರಾಜಸಭಾಭೂಷಣ ದಿ|| ಬ|| ಸಿ. ಶ್ರೀಕಂಠೇಶ್ವರಯ್ಯರು, ರಾಜಕಾರ್ಯಪ್ರಸಕ್ತ ರಾ|| ಬ|| ಎಂ. ಮುತ್ತಣ್ಣನವರು, ರಾ|| ಬ|| ಎಂ.ಸಿ. ರಂಗಯ್ಯಂಗಾರರು, ರಾ|| ಸಾ|| ಎಚ್. ಚೆನ್ನಯ್ಯನವರು, ಮಿ|| ನವಾಬ್ ಗುಲಾಂಅಹಮದ್‌ಕಲಾಮಿಯವರು, ಮ|| ಎಂ. ಬಸವಯ್ಯನವರು ಇವರುಗಳೆಲ್ಲಾ ಸಭಿಕರಾಗಿಯೂ ಮಾಡಲ್ಪಟ್ಟರು. ಈ ಸಂಘದವರು ತಮ್ಮ ವರದಿಯನ್ನು ೧೯೧೯ನೇ ಜುಲೈ ತಿಂಗಳಲ್ಲಿ ಸರ್ಕಾರಕ್ಕೆ ಕಳುಹಿಸಿದರು. ಬಳಿಕ ಈ ವರದಿಯ ಮೇಲೆ ಸರ್ಕಾರದವರು ಆಯಾ ಶಾಖಾ ಮುಖ್ಯಾಧಿಕಾರಿಗಳ ಅಭಿಪ್ರಾಯವನ್ನು ತರಿಸಿಕೊಂಡು, ತಾವೂ ಪೂರ್ಣವಾಗಿ ವಿಚಾರಮಾಡಿ ಕಳೆದ ಮೇ ತಾ|| ೧೬ ರಲ್ಲಿ ೧೮೨೭-೬೦-ಇ. ಎ. ಜಿ. ೩೦೮ ನಂಬರಾಗಿ ತಮ್ಮ ತೀರ್ಮಾನವನ್ನು ಕೊಟ್ಟಿರುತ್ತಾರೆ.

ಸಂಸ್ಥಾನದ ಪ್ರಜೆಗಳೊಳಗೆ ೧೯೧೧ನೆ ವರ್ಷದ ಜನಪರಿಗಣತಿಯ ಪ್ರಕಾರ ೧೦೦ಕ್ಕೆ ೫ ಕ್ಕಿಂತಲೂ ಕಡಿಮೆಯಾದ ಅಕ್ಷರಸ್ಥರುಳ್ಳ ಜನವರ್ಗಗಳೆಲ್ಲಾ ಹಿಂದುಳಿದವರಾಗಿ ಪರಿಗಣಿಸಲ್ಪಟ್ಟಿರುತ್ತಾರೆ. ಮತ್ತು ಕ್ರೈಸ್ತರು ಮೊದಲ್ಯಾರರು ಪಿಳ್ಳೆಗಳು ಇವರಲ್ಲಿ ಅಕ್ಷರಸ್ಥರ ಸಂಖ್ಯೆಯು ಹೆಚ್ಚಾಗಿದ್ದರೂ ಸರ್ಕಾರದವರು ಆ ವರ್ಗಗಳನ್ನು ಸಹ ಯಾವುದೋ ಉದ್ದೇಶದಿಂದ ಹಿಂದುಳಿದ ವರ್ಗಗಳಲ್ಲೇ ಸೇರಿಸಿರುವುದರಿಂದ ಈ ಸಂಘದವರೂ ಹಾಗೆಯೇ ಪರಿಗಣಿಸಲ್ಪಟ್ಟಿರುತ್ತಾರೆ. ಏತೇನ ಸಂಘದವರು ತ್ರಿಮತಸ್ಥಬ್ರಾಹ್ಮಣ ವರ್ಗದವರನ್ನು ಮುಂಬರಿದವರನ್ನಾಗಿಯೂ ಇತರರನ್ನೆಲ್ಲಾ ಹಿಂದುಳಿದವರನ್ನಾಗಿಯೂ ನಿಷ್ಕರ್ಷಿಸಿ ವರದಿಯನ್ನು ಸಿದ್ಧಮಾಡಿದ್ದಾರೆ. ಯೂರೋಪ್ಯರ ಮತ್ತು ಆಂಗ್ಲೋ ಇಂಡಿಯನ್ನರ ಪ್ರಸಕ್ತಿಗೆ ಮಾತ್ರ ಹೋಗಿಲ್ಲ.

ಸರ್ಕಾರದಿಂದ ಸೂಚಿಸಲ್ಪಟ್ಟಿದ್ದ ಮೂರು ವಿಷಯಗಳಲ್ಲಿ ೧ನೆಯದರ ಸಂಬಂಧವಾಗಿ ಸಂಘದವರು ಹೇಳಿರುವುದೇನೆಂದರೆ:—"ಹಿಂದುಳಿದ ಜನವರ್ಗಗಳಲ್ಲಿ ಸರ್ಕಾರದ ಉದ್ಯೋಗನಿರ್ವಾಹಕ್ಕೆ ತಕ್ಕ ಅರ್ಹತೆಯುಳ್ಳವರು ಸಿಕ್ಕುವ ಸಂದರ್ಭದಲ್ಲಿ ಆ ಜನರನ್ನು ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಒಂದು ಗೊತ್ತಾದ ಪರಿಮಿತಿಯವರೆಗೆ ಇರುವಂತೆ ಮಾಡುವುದು ಅವಶ್ಯಕವಾಗಿರುತ್ತದೆ. ದಿನಕ್ರಮದಿಂದ ಹಿಂದುಳಿದವರನ್ನು ಸರ್ಕಾರದ ಉದ್ಯೋಗಗಳಿಗೆ ಹೆಚ್ಚುಹೆಚ್ಚಾಗಿ ಸೇರಿಸಬೇಕಾಗುವುದಾದ ಕಾರಣ ಎಲ್ಲಾ ಶಾಖೆಗಳ ಹೆಡ್‌ಕ್ವಾರ್ಟರ್ ಮತ್ತು ಡಿಸ್ಟ್ರಿಕ್ಟ್ ಕಛೇರಿಗಳಲ್ಲೂ ಸರ್ಕಾರದ ಉದ್ಯೋಗಸ್ಥಾನಗಳಲ್ಲಿ (ಕೀಳು ಉದ್ಯೋಗಗಳನ್ನು ಬಿಟ್ಟು) ೧೦೦ ಕ್ಕೆ ೫೦ರಂತೆ ಹಿಂದುಳಿದ ಜನವರ್ಗಗಳು ಇರುವಂತೆ ಇನ್ನು ೭ ವರ್ಷ ಕಾಲದೊಳಗೆ ಆಗಬೇಕು." ಈ ಅಭಿಪ್ರಾಯವನ್ನು ಸರ್ಕಾರದವರೂ ಅನುಮೋದಿಸಿ ಹಾಗೆಯೇ ತೀರ್ಮಾನಿಸಿದ್ದಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹಿಂದುಳಿದ ಜನವರ್ಗಗಳವರೆಲ್ಲರೂ ತಂತಮ್ಮಲ್ಲಿ ಸರ್ಕಾರದ ಕಾರ್ಯನಿರ್ವಾಹಕ್ಕೆ ತಕ್ಕ ಅರ್ಹತೆಯುಳ್ಳ ಜನರನ್ನು ಅಣಿಮಾಡುವುದಕ್ಕೆ ಪ್ರಯತ್ನಿಸಬೇಕೆಂದು ಸರ್ಕಾರದವರು ಎಚ್ಚರಿಸಿರುತ್ತಾರೆ. ಅರ್ಹತೆಯುಳ್ಳವರು ಸಿಕ್ಕದರೆ ಸರ್ಕಾರದವರು ತಮ್ಮ ಉದ್ದೇಶವನ್ನು ನೆರವೇರಿಸಬಲ್ಲರೇ ಹೊರತು ಯೋಗ್ಯತೆಯಿಲ್ಲದಿದ್ದರೂ ಅಂಥವರನ್ನು ಉದ್ಯೋಗಗಳಿಗೆ ಸೇರಿಸಿ ೫೦ ಕ್ಕೆ ಭರ್ತಿಮಾಡುವರೆಂದು ಎಣಿಸಕೂಡದು. ಅದುಕಾರಣ ತಕ್ಕಷ್ಟು ಜನರನ್ನು ಸರ್ಕಾರದುದ್ಯೋಗಗಳಿಗೆ ಅಣಿಮಾಡುವ ಭಾರವು ಹಿಂದುಳಿದ ಪ್ರಜಾವರ್ಗಗಳ ಮೇಲೆಯೇ ಬಿದ್ದಿರುವುದು.

೭ ವರ್ಷಗಳಲ್ಲಿ ೧೦೦ಕ್ಕೆ ೫೦ ರಷ್ಟು ಹಿಂದುಳಿದ ಜನವರ್ಗಗಳ ಪ್ರತಿನಿಧಿಗಳು ಸಿಕ್ಕಿ ಸೇರದಿರುವ ಸಂದರ್ಭದಲ್ಲಿ ಮೈಸೂರಿನ ಹೊರಗಣ ಹಿಂದುಳಿದ ಜನವರ್ಗಗಳಿಂದಲಾದರೂ ಆರಿಸಿ ತಂದು ೫೦ಕ್ಕೆ ಭರ್ತಿಮಾಡಬೇಕೆಂದು ಸಂಘದ ವರದಿಯಲ್ಲಿ ಕಾಣಿಸಲ್ಪಟ್ಟಿದ್ದ ಅಂಶವನ್ನು ಸರ್ಕಾರದವರು ಅನುಮೋದಿಸಿಲ್ಲ. ಹಾಗೆ ಇತರರಿಗೆ ಅವಕಾಶ ಕೊಡುವುದಕ್ಕಿಂತಲೂ ಸ್ವದೇಶೀಯರಲ್ಲೇ ದೊರೆಯುವ ಮುಂಬರಿದ ಜನವರ್ಗಗಳವರಿಗಾದರೂ ತೆರವಾಗಿರುವ ಉದ್ಯೋಗಸ್ಥಾನಗಳನ್ನು ಕೊಡುವುದೇ ಉಚಿತವೆಂದು ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ. ಮತ್ತು ಹೊರಗಣಿಂದ ಸಂಸ್ಥಾನದ ಸರ್ವೀಸ್ಸಿಗೆ ಇತರರಾರನ್ನಾದರೂ ತರಬೇಕಾಗಿದ್ದರೆ ಅಂಥ ವಿಶೇಷ ಸಂದರ್ಭಗಳಲ್ಲಿ ಈಗಣ ಪದ್ಧತಿಯಂತೆಯೇ ಪ್ರಭುತ್ವದ ಅಪ್ಪಣೆ ಪಡೆದೇ ಮಾಡಲಾಗುವುದು.

ಈ ಸಂಕಲ್ಪವನ್ನು ನೆರವೇರಿಸುವುದಕ್ಕಾಗಿ ಸರ್ಕಾರದವರು ಮುಂದೆ ಈ ಕ್ರಮವನ್ನು ಅನುಸರಿಸಬೇಕೆಂದು ತಿಳಿಯಿಸಿದ್ದಾರೆ. ಹೇಗೆಂದರೆ—ಒಂದು ಕೆಲಸಕ್ಕೆ ಮುಂಬರಿದ ಜನವರ್ಗದವರಲ್ಲಿ ಎಷ್ಟು ವಿದ್ಯಾದಿಯೋಗ್ಯತೆಯಿರುವುದೋ ಅದಕ್ಕಿಂತ ಸ್ವಲ್ಪ ಕಡಿಮೆಯ ಯೋಗ್ಯತೆಯುಳ್ಳ ಒಬ್ಬ ಹಿಂದುಳಿದವನು ಆ ಉದ್ಯೋಗಕ್ಕೆ ಉಮೇದುವಾರನಾಗಿ ಬಂದಿದ್ದರೆ ಈತನಿಗೇ ಆ ಸ್ಥಲವನ್ನು ಕೊಡಬೇಕು. ಕೆಲಸಕ್ಕೆ ಸೇರಿದ ಬಳಿಕ, ಹಿಂದುಳಿದ ಮುಂಬರಿದ ಜನವರ್ಗಗಳಿಗೆಲ್ಲಾ ಬಡತಿ ಮೊದಲಾದುವುಗಳು ಒಂದೇ ವಿಧವಾಗಿರುವುವೇ ಹೊರತು ಅದರಲ್ಲಿ ವ್ಯತ್ಯಾಸವೇನೂ ಇರುವುದಿಲ್ಲ. ಹಿಂದುಳಿದವರ ಸಂಖ್ಯೆಯು ೧೦೦ ರಲ್ಲಿ ೫೦ ರಷ್ಟಕ್ಕೆ ಬರುವಂತೆ ಮಾಡುವುದಕ್ಕೆ ಸರ್ಕಾರದವರು ಈ ಮೇಲೆ ಕಂಡಂತೆ ಸೌಕರ್ಯವನ್ನು ಮಾಡಿಕೊಟ್ಟಿರುವುದು ಮಾತ್ರವೇ ಅಲ್ಲದೆ, ೨-೩ ನೆ ವಿಷಯಗಳಲ್ಲಿ ಸಂಘದವರು ಮಾಡಿದ್ದ ಸೂಚನೆಗಳನ್ನು ಗಮನಿಸಿ, ಹಿಂದುಳಿದವರಲ್ಲಿ ಹೆಚ್ಚು ಜನರು ವಿದ್ಯಾದಿ ಅರ್ಹತಾ ಸಂಪನ್ನರಾಗಿ ಬರುವಂತೆ ಮಾಡುವುದಕ್ಕೆ ಈಗ ಸಿದ್ಧವಾಗಿರುವ ವಿದ್ಯಾಭ್ಯಾಸದ ಮೆಮೊರಾಂಡಂ ೪ ನೆ ಭಾಗದಲ್ಲಿ ಕಾಣಿಸಿರುವ ಸೌಲಭ್ಯಗಳನ್ನೂ ಒದಗಿಸಿಕೊಡಲು ತೀರ್ಮಾನಿಸಿದ್ದಾರೆ. ಮತ್ತು ಸರ್ಕಾರದ ಉದ್ಯೋಗಕ್ಕೆ ಸೇರುವ ವಿಷಯದಲ್ಲಿ ಈಗ ಇರುವ ನಿಯಮಗಳಲ್ಲೂ ಸ್ವಲ್ಪ ಸೌಕರ್ಯವನ್ನು ತೋರಿಸಲು ಸಂಘದವರು ಕೊಟ್ಟಿರುವ ಕೆಲ ಸೂಚನೆಗಳನ್ನು ಸರ್ಕಾರದವರು ಒಪ್ಪಿದ್ದಾರೆ. ಆ ಸೌಕರ್ಯವೇನೆಂದರೆ—ಸರ್ಕಾರದ ಉದ್ಯೋಗಕ್ಕೆ ಸೇರಬೇಕಾದವರು ೨೫ ವರ್ಷ ವಯಸ್ಸಿನೊಳಗೇ ಇರಬೇಕೆಂಬ ನಿರ್ಬಂಧವನ್ನು ಹಿಂದುಳಿದವರ ವಿಷಯದಲ್ಲಿ ೨೮ ವಯಸ್ಸಿನೊಳಗಿರಬಹುದೆಂದು ಸಡಿಲಮಾಡಿದ್ದಾರೆ. ವಿದ್ಯಾಘನತೆಯ ವಿಷಯದಲ್ಲಿ ವಿದ್ಯಾಶಾಖೆ ನ್ಯಾಯಶಾಖೆಗಳಿಗೆ ಹೆಚ್ಚಿನವಿದ್ಯೆಯು ಅವಶ್ಯಕವೇ ಹೊರತು ಪೊಲೀಸು ರೆವಿನ್ಯೂ ಶಾಖೆಗಳಿಗೆ ವಿದ್ಯಾ ಯೋಗ್ಯತೆಗಿಂತಲೂ ದೇಹದಾರ್ಢ್ಯ, ಚಟುವಟಿಕೆ, ವಿವೇಕ, ನಿಸ್ಪೃಹತೆ ಇತ್ಯಾದಿ ಸದ್ಗುಣಗಳ ಅವಶ್ಯಕತೆಯೇ ಪ್ರಧಾನವಾಗಿರುತ್ತದೆಂತಲೂ, ಕಾಡು, ವ್ಯವಸಾಯ, ಗಣಿ, ವಿದ್ಯುಚ್ಛಕ್ತಿ, ವ್ಯಾಪಾರ ಕೈಗಾರಿಕೆ ಮೊದಲಾದ ಶಾಖೆಗಳಿಗೆ ಅನುಭವ ಕುತೂಹಲಗಳೇ ವಿದ್ಯೆಗಿಂತಲೂ ಪ್ರಧಾನವಾದ ಅರ್ಹತೆಗಳಾಗಿರುತ್ತವೆಂತಲೂ, ಈ ವಿಷಯವನ್ನು ಗಮನಿಸಿ ಆಯಾ ಶಾಖಾಕಾರ್ಯ ನಿರ್ವಾಹಕ್ಕೆ ತಕ್ಕ ಅರ್ಹತೆಯಿದ್ದರೆ ಸಾಕೆಂದು ತಿಳಿದು ಹಿಂದುಳಿದ ಉಮೇದುವಾರರನ್ನು ಸೇರಿಸಿಕೊಳ್ಳಬೇಕೆಂತಲೂ, ಕ್ಲರ್ಕುಗಳು ಸೇಕದಾರರು ಮೊದಲಾದ ಚಿಕ್ಕಪುಟ್ಟ ಉದ್ಯೋಗಸ್ಥಾನಗಳಿಗೆ ಹೆಚ್ಚಿನ ವಿದ್ಯಾಭ್ಯಾಸದ ಅವಶ್ಯಕತೆಯೇ ಇರುವುದಿಲ್ಲವೆಂತಲೂ ಸಂಘದವರು ವರದಿಯಲ್ಲಿ ತಿಳಿಯಿಸಿದ್ದರು. ಸರ್ಕಾರದವರಾದರೊ ಈ ವಿಷಯದಲ್ಲಿ ನಿರ್ಣಯಮಾಡುವುದು ಸುಲಭಸಾಧ್ಯವಲ್ಲವಾದುದರಿಂದ ಆಯಾ ಶಾಖೆಯ ಮುಖ್ಯೋದ್ಯೋಗಿಗಳು ಸರ್ಕಾರದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಉದ್ಯೋಗದ ಯೋಗ್ಯತೆ, ಅದಕ್ಕೆ ಉಮೇದುವಾರರಾಗಿ ಬಂದಿರುವವರ ಅರ್ಹತೆ ಇವುಗಳನ್ನು ಪರಿಶೀಲನೆಮಾಡಿ ಕಾರ್ಯನಿರ್ವಾಹ ಸಾಮರ್ಥ್ಯವುಳ್ಳವರನ್ನು ನಿಯಮಿಸಿಕೊಳ್ಳಬೇಕೆಂದೂ, ಹಿಂದುಳಿದವರಿಗೆ ತೋರಿಸಬೇಕಾದ ಸೌಲಭ್ಯವನ್ನು ಮರೆಯಕೂಡದೆಂದೂ ಅಪ್ಪಣೆಮಾಡಿದ್ದಾರೆ.

ಕ್ಲರ್ಕು ಮೊದಲಾದ ಸಣ್ಣ ಉದ್ಯೋಗಗಳ ವಿನಿಯೋಗದ ವಿಷಯದಲ್ಲಿ ಸಂಘದವರು ಸೂಚಿಸಿರುವಂತೆ ವಿಧಿಯಲ್ಲಿ ಬದಲಾವಣೆಮಾಡಲು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ೧೦೦ ಕ್ಕೆ ೩ನೆ ೨ ಭಾಗದಷ್ಟು ಹಿಂದುಳಿದವರ ಸಂಖ್ಯೆಯಿರುವಂತೆ ಮಾಡುವುದಕ್ಕೂ ಸಮ್ಮತಿಸಿದ್ದಾರೆ.

ದೊಡ್ಡ ಉದ್ಯೋಗಗಳನ್ನು ಕೊಡುವ ವಿಷಯದಲ್ಲಿ ಸಿವಿಲ್ ಸರ್ವೀಸ್ ಪರೀಕ್ಷೆ ಶಾಖಾ ಪ್ರತ್ಯೇಕ ಪರೀಕ್ಷೆಗಳನ್ನೆಲ್ಲಾ ತೆಗೆದುಬಿಡಬೇಕೆಂದು ಸಂಘದವರು ಮಾಡಿದ್ದ ಸೂಚನೆಯನ್ನು ಸರ್ಕಾರದವರು ಒಪ್ಪಿಲ್ಲ. ಅದರಿಂದ ಹಿಂದುಳಿದವರಿಗೆ ಬಾಧಕವೇನೂ ಇಲ್ಲವೆಂದೂ, ನಾಮಿನೇಷನ್ನಿನ ಮೂಲಕ ಇವರಿಗೆ ಸೌಕರ್ಯಗಳು ತೋರಿಸಲ್ಪಡುತ್ತಿವೆಯೆಂದೂ ಅಭಿಪ್ರಾಯಪಟ್ಟಿದ್ದಾರೆ.

ತಮ್ಮ ಸೂಚನೆಗಳು ವಿಶೇಷತಃ ಕಾರ್ಯಕಾರಿಯಾಗಬೇಕಾದರೆ ಹೆಡ್‌ಕ್ವಾರ್ಟರ್ ಅಧಿಕಾರ ಸ್ಥಾನಗಳಿಗೆ ವಿಶೇಷವಾಗಿ ಹಿಂದುಳಿದ ಜನವರ್ಗಗಳವರನ್ನೇ ಸೇರಿಸುವಂತೆ ಮಾಡಬೇಕಾದುದು ಅವಶ್ಯಕವೆಂದು ಸಂಘದವರು ಸೂಚಿಸಿರಲು, ಆ ಸೂಚನೆಯ ತತ್ತ್ವವನ್ನು ಸರ್ಕಾರದವರು ಅರಿತು, ಹೆಡ್ಕ್ವಾರ್ಟರ್ ಉದ್ಯೋಗಸ್ಥಾನ ವಿನಿಯೋಗ ಸಂದರ್ಭದಲ್ಲಿ ಈ ಸೂಚನೆಗೆ ಗಮನಕೊಡುತ್ತೇವೆಂದು ಅಪ್ಪಣೆಮಾಡಿದ್ದಾರೆ.

ಮತ್ತು ಮೇಲೆ ತಿಳಿಯಿಸಿದಂತೆ ೭ ವರ್ಷ ಕಾಲದೊಳಗಾಗಿ ೧೦೦ ಕ್ಕೆ ೫೦ ರಷ್ಟು ಹಿಂದುಳಿದ ಜನವರ್ಗದವರು ಸೇರುವಂತೆ ಮಾಡಬೇಕೆಂಬ ಉದ್ದೇಶವು ಈಡೇರಬೇಕಾದರೆ ಒಂದು ಪ್ರತ್ಯೇಕವಾದ ಏರ್ಪಾಡನ್ನಿಡಬೇಕೆಂಬುದನ್ನು ಸರ್ಕಾರದವರು ಪರ್ಯಾಲೋಚಿಸಿ, ಇತಃಪರಃ ಸರ್ಕಾರದ ಉದ್ಯೋಗಕ್ಕೆ ಸೇರಬೇಕೆಂದು ಅಪೇಕ್ಷಿಸಿ ತಕ್ಕ ಅರ್ಹತೆಯನ್ನು ಪಡೆದು ಬಂದ ಯಾವೊಬ್ಬ ಹಿಂದುಳಿದ ಜನವರ್ಗದವರಿಗೂ ಸಾವಕಾಶಮಾಡದೆ ಉದ್ಯೋಗಸ್ಥಾನವನ್ನು ಕೊಡುತ್ತ ಬರಬೇಕೆಂದೂ ಅದಕ್ಕಾಗಿ ಸೆಂಟರಲ್ ರಿಕ್ರೂಟ್‌ಮೆಂಟ್ ಬೋರ್ಡು ಎಂಬ ಸ್ಥಾನವೊಂದನ್ನೇರ್ಪಡಿಸಿ ಅದನ್ನು ಚೀಫ್ ಸೆಕ್ರೆಟರಿಯೇಟಿನ ಎಫಿಷಿಯೆನ್ಸಿ ಆಡಿಟ್ ಶಾಖೆಗೆ ಸಂಬಂಧಪಡಿಸಿಟ್ಟು, ಅದರಲ್ಲಿ ಒಂದು ರಿಜಿಸ್ಟರನ್ನು ಮಡಗಿ, ಆಗಾಗ್ಗೆ ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬಿಡುವಾಗಿರುವುವುಗಳನ್ನು ಪ್ರಕಟಿಸುತ್ತಲೂ, ಆಯಾ ಉದ್ಯೋಗಗಳನ್ನು ಅಪೇಕ್ಷಿಸಿ ಬರೆದುಬಂದ ಉಮೇದುವಾರರುಗಳ ವಿಜ್ಞಾಪನಪತ್ರಗಳ ಪಟ್ಟಿಯನ್ನು ಬರೆದಿಡುತ್ತಲೂ ಬರಬೇಕೆಂದೂ ಉದ್ದೇಶಿಸಿದ್ದಾರೆ. ಈ ಬೋರ್ಡು ಏರ್ಪಾಟಾದನಂತರ ಸರ್ಕಾರದವರು ಅದನ್ನು ಪ್ರಕಟಿಸುವುದಲ್ಲದೆ ಉಮೇದುವಾರರನ್ನು ಆಯಾ ಶಾಖೆಗೆ ಸೇರಿಸುವುದೇ ಮೊದಲಾದ ಯಾವಯಾವ ಕಾರ್ಯಗಳನ್ನು ಹೇಗೆ ಹೇಗೆ ನೆರವೇರಿಸಬೇಕೆಂಬ ವಿವರವನ್ನು ಕೂಡ ಪ್ರಕಟಿಸುವವರಾಗಿದ್ದಾರೆ.

ಸರ್ವಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣುತ್ತೇವೆಂಬ ಅಭಯದಾನವು ನಮ್ಮ ಶ್ರೀಮನ್ಮಹಾರಾಜರಲ್ಲೂ ಅವರ ಸರ್ಕಾರದವರಲ್ಲೂ ಈಗೀಗ ಕಾರ್ಯಮುಖವಾಗುತ್ತ ಬಂದಿದೆಯೆಂಬುದಕ್ಕೆ ಈ ಮೇಲೆಕಂಡ ಪ್ರಯತ್ನವೂ ಅದರ ಫಲಿತಾಂಶವೂ ನಿದರ್ಶನವಾಗಿರುತ್ತವೆ. ಹಿಂದುಳಿದವರ ವಿದ್ಯಾವಿವೇಕಾದಿಗಳ ಪುರೋಭಿವೃದ್ಧಿಗೂ ರಾಜಕೀಯಾಂಗ ಪರಿಜ್ಞಾನಕ್ಕೂ ಪ್ರೋತ್ಸಾಹವಾಗುವಂತೆ ಈ ನವೀನ ಮಾರ್ಗವನ್ನು ಸ್ಥಾಪಿಸಿ ಕೊಟ್ಟುದಕ್ಕಾಗಿ ಶ್ರೀಮಾನ್ ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ಸಂಸ್ಥಾನದ ಹಿಂದುಳಿದ ಪ್ರಜೆಗಳೇ ಅಲ್ಲದೆ ಭರತಖಂಡದ ಸರ್ವಭಾಗದ ಹಿಂದುಳಿದ ಜನವರ್ಗಗಳೆಲ್ಲಾ ಸಂತೋಷಿಸಿ ವಂದಿಸುತ್ತಾರೆಂಬುದಕ್ಕೆ ಸಂಶಯವಿಲ್ಲ. ಸರ್ಕಾರವು ಪ್ರಜೆಗಳಿಗೋಸ್ಕರವಾಗಿರುವಾಗ ಅಂಥ ಸರ್ಕಾರದಲ್ಲಿ ಎಲ್ಲ ಪ್ರಜೆಗಳ ಪ್ರಾತಿನಿಧ್ಯವೂ ಇರಬೇಕೆಂಬ ತತ್ವವು ನಿಷ್ಕೋಟಿಕವಾಗಿರುತ್ತದೆ. ಬಹು ಕಾಲದಿಂದ ಹಿಂದುಳಿದ ಜನವರ್ಗಗಳವರು ಸರ್ಕಾರದುದ್ಯೋಗಗಳಲ್ಲಿ ಪ್ರವೇಶಿಸದೆ ಹೋಗಿದ್ದುದರಿಂದ ಆ ಭಾಗದ ಸಂಸ್ಕಾರವು ಇವರಲ್ಲಿ ಕಡಿಮೆಯಾಗಿ ಹೋಗಿದೆ. ಈಗ ಸರ್ಕಾರದ ಉದ್ಯೋಗಗಳ ವ್ಯಾಮೋಹವು ಎಲ್ಲ ಪ್ರಜೆಗಳಲ್ಲೂ ಪ್ರಬಲಿಸುತ್ತಿದೆ. ಇದನ್ನು ತಿಳಿದು ಪ್ರಭುತ್ವದವರಾದರೂ ಅದನ್ನು ಸಾರ್ಥಕಪಡಿಸಲು ಕೃಪೆಮಾಡಿರುತ್ತಾರೆ. ಪ್ರಜಾವರ್ಗದಲ್ಲುಂಟಾಗಿರುವ ಕುತೂಹಲಕ್ಕೆ ಭಂಗ ಬರದಂತೆ ತಕ್ಕ ಅವಕಾಶವನ್ನು ಪ್ರಭುತ್ವದವರು ಒದಗಿಸಿಕೊಟ್ಟುದರಿಂದ, ಇನ್ನು ಮುಂದೆ ಈ ವಿಷಯದಲ್ಲೂ ಪ್ರಜಾಸಾಮಾನ್ಯದೊಳಗೆ ತಕ್ಕ ಸಂಸ್ಕಾರವು ದಿನೇದಿನೇ ಅಭಿವೃದ್ಧಿಯಾಗಿ, ಕಾಲಕ್ರಮೇಣ ಹಿಂದುಳಿದವರು–ಮುಂದಾದವರು ಎಂಬ ಭೇದಗಳಿಗೂ ಪಕ್ಷಪಾತಗಳಿಗೂ ಸಹ ತಾವೇ ಇಲ್ಲದೆಹೋಗಬಹುದು. ಪ್ರಜಾವರ್ಗಗಳೊಳಗೆ ಹಿಂದುಳಿದ ಜನವರ್ಗಗಳಲ್ಲಿ ಇನ್ನೂ ಹಲವು ಪಂಗಡಗಳು ಬಹಳ ಹೀನಸ್ಥಿತಿಯಲ್ಲಿವೆ. ಕೆಲಕೆಲ ವರ್ಗಗಳು ವಿದ್ಯಾನಾಗರಿಕತೆಗಳಲ್ಲಿ ಸ್ವಲ್ಪಸ್ವಲ್ಪ ಮುಂದಾಗಿವೆ. ಮುಂದಾಗುತ್ತ ಬಂದವರು ಸರ್ಕಾರದ ಉದ್ಯೋಗಗಳನ್ನು ಮುಂದುಮುಂದಾಗಿಯೂ ಅವರಿಗಿಂತ ಹಿಂದಾದವರು ಇನ್ನು ಸ್ವಲ್ಪ ಹಿಂದಾಗಿಯೂ ಉದ್ಯೋಗಸ್ಥಾನಗಳನ್ನು ಪಡೆದುಕೊಳ್ಳುತ್ತಾರೆ. ಹಿಂದುಳಿದ ಜನವರ್ಗಗಳಲ್ಲಿ ತಕ್ಕಷ್ಟು ಅರ್ಹತೆಯನ್ನು ಪಡೆದು ಬಂದವರಿಗೆಲ್ಲಾ ತಮ್ಮ ಉದ್ದಿಷ್ಟಪರಿಮಿತಿಯವರೆಗೆ ಕೆಲಸಗಳನ್ನು ಕೊಡಲು ಸರ್ಕಾರದವರು ಸಿದ್ಧರಾಗಿದ್ದಾರೆ. ಅದರಲ್ಲಿ ಭೇದವೇನನ್ನೂ ಮಾಡುವುದಿಲ್ಲ. ಹೀಗಿರುವಾಗ ಈ ಸಮಯವನ್ನು ವ್ಯರ್ಥಗೊಳಿಸದೆ ತಮಗೆಲ್ಲರಿಗೂ ಲಾಭಕರವಾಗುವಂತೆ ಮಾಡಿಕೊಳ್ಳಬೇಕಾದರೆ ಹಿಂದುಳಿದ ಎಲ್ಲ ಜನವರ್ಗಗಳವರೂ ತಂತಮ್ಮ ಬಾಲಕರ ವಿದ್ಯಾಭಿವೃದ್ಧಿಯ ಕಡೆಗೆ ವಿಶೇಷವಾಗಿ ಗಮನಕೊಡುತ್ತಾ ಬರಬೇಕು. "ಸರ್ಕಾರದವರು ಎಲ್ಲ ಉದ್ಯೋಗಗಳನ್ನೂ ತ್ರಿಮತಸ್ಥ ಬ್ರಾಹ್ಮಣರಿಗೇ ಕೊಡುತ್ತಾರೆ, ಇತರರಿಗೆ ಕೊಡದೆ ಪಕ್ಷಪಾತಮಾಡುತ್ತಾರೆ" ಎಂಬ ದೂರನ್ನು ಇನ್ನು ಮುಂದೆ ಹೊರಿಸುವುದಕ್ಕೆ ಅವಕಾಶವಿಲ್ಲ. ತಮ್ಮ ಮೇಲಿದ್ದ ಭಾರವನ್ನು ಸರ್ಕಾರದವರು ಇಳುಹಿಕೊಂಡರು. ಮುಂದಣ ಕರ್ತವ್ಯಭಾರವು ಹಿಂದುಳಿದ ಪ್ರಜಾವರ್ಗಗಳ ಮೇಲೆಯೇ ಬಿದ್ದಿರುವುದು. ಹಿಂದುಳಿದವರಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚುತ್ತಾ ಬಂದು ೭ ವರ್ಷಗಳೊಳಗಾಗಿ ೧೦೦ ಕ್ಕೆ ೫೦ ರಷ್ಟು ಇತರ ಜನವರ್ಗಗಳವರೇ ತುಂಬಿಕೊಂಡರೆ ಆ ಬಳಿಕ ಸರ್ಕಾರದವರು ಈ ಪರಿಮಿತಿಯನ್ನು ಇನ್ನೂ ಹೆಚ್ಚಿಸಿಕೊಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಏಕೆಂದರೆ ಪ್ರಜಾಕೋಟಿಯಲ್ಲಿ ತ್ರಿಮತಸ್ಥ ಬ್ರಾಹ್ಮಣರ ಸಂಖ್ಯೆಯು ೨ ಲಕ್ಷವಿದೆ. ಉಳಿದವರ ಸಂಖ್ಯೆಯು ೫೫ ಲಕ್ಷವಿದೆ. ೨ ಲಕ್ಷಕ್ಕೆ ಅರ್ಧಭಾಗವನ್ನೂ ಉಳಿದ ೫೫ ಲಕ್ಷಕ್ಕೆ ಅರ್ಧಭಾಗವನ್ನೂ ಹಂಚಿಡುವುದು ಯುಕ್ತವಾಗಿರಲಾರದು. ಈಗ ಇತರರಲ್ಲಿ ತಕ್ಕಷ್ಟು ಅರ್ಹರಾದ ಜನರ ಸಂಖ್ಯೆಯು ದೊರೆಯುವುದಿಲ್ಲವೆಂಬ ಕಾರಣದಿಂದಲೇ ಈ ಪರಿಮಿತಿಯನ್ನೇರ್ಪಡಿಸಿದ್ದಾರೆಂದು ಭಾವಿಸಬೇಕು. ಇಂಥ ಯುಕ್ತವಾದ ಏರ್ಪಾಟನ್ನು ಅಪ್ಪಣೆಮಾಡಿ ಹಿಂದುಳಿದ ಜನವರ್ಗದ ಉದ್ಧಾರಕ್ಕೆ ಬದ್ಧಕಂಕಣರಾದುದಕ್ಕಾಗಿ ಹಿಂದುಳಿದವರೆಲ್ಲರ ಪಕ್ಷವಾಗಿ ನಮ್ಮ ವಂದನೆಯನ್ನು ಶ್ರೀಮನ್ಮಹಾರಾಜರ ಸರ್ಕಾರಕ್ಕೆ ಸಲ್ಲಿಸುತ್ತೇವೆ.

ಸೈಲೇಷಿಯಾ, ಮತ್ತು ಮಿತ್ರಮಂಡಲಿಯಲ್ಲಿ ಭಿನ್ನಾಭಿಪ್ರಾಯ.

ಸೈಲೇಷಿಯಾ ಎಂಬ ದೇಶಭಾಗವು ಯುದ್ಧಕ್ಕೆ ಮುಂಚೆ ಜರ್ಮನರಿಗೆ ಸೇರಿದ್ದಿತು. ಇದರಲ್ಲಿ ಕೆಲ ಭಾಗಗಳೊಳಗೆ ಪೋಲರು ವಿಶೇಷವಾಗಿಯೂ ಕೆಲ ಭಾಗದಲ್ಲಿ ಜರ್ಮನರು ವಿಶೇಷವಾಗಿಯೂ ವಾಸಿಸುತ್ತಾರೆ. ಯುದ್ಧ ಮುಗಿದು ವರ್ಸೇಲೀಸ್ ಸಂಧಿ ಜರುಗಿದಾಗ ಪೋಲರು ಹೆಚ್ಚಾಗಿರುವ ಭಾಗವನ್ನು ಪೋಲಂಡಿನವರಿಗೂ ಜರ್ಮನರು ಹೆಚ್ಚಾಗಿರುವ ಭಾಗವನ್ನು ಜರ್ಮನರಿಗೂ ವಹಿಸಿಬಿಡುವಂತೆ ಮಿತ್ರಮಂಡಲೀ ವಿಚಾರಣ ಸಂಘದ ಆಂಗ್ಲ ಸಭಿಕರೂ ಇಟಲಿ ಸಭಿಕರೂ ನಿರ್ಣಯಿಸಿದರು. ಕಡೆಗೆ ಸಂಧಿಸಭೆಯವರು ಈ ಸೈಲೇಷಿಯಾವಿಗೆ ಸ್ವಯಂನಿರ್ಣಯ ಸೂತ್ರವನ್ನು ಎಂದರೆ ಹೆಚ್ಚಿನ

ಪ್ರಜೆಗಳು ಅಭಿಪ್ರಾಯಪಟ್ಟ ಪ್ರಭುತ್ವಕ್ಕೆ ಅಧೀನವಾಗಿರುವಂಥ ಸೂತ್ರವನ್ನು ಕೊಡಲು ತೀರ್ಮಾನಿಸಿದರು. ಆಗಣಿಂದಲೂ ಪೋಲಂಡಿನವರು ಅದೆಲ್ಲಾ ತಮಗೇ ಸೇರಬೇಕೆಂದು ಆಸೆಪಟ್ಟಿರುವರು. ಅವರಲ್ಲಿ ಕಾರ್ಫಂಟಿ ಎಂಬುವನೊಬ್ಬನು ನಾಯಕನಾಗಿ ನಿಂತು ಪೋಲು ಪ್ರಜೆಗಳನ್ನೆಲ್ಲಾ ಬೋಧಿಸಿ ಉದ್ರೇಕಗೊಳಿಸುತ್ತಿರುವನು. ಅವರಭಿಪ್ರಾಯಕ್ಕೆ ಫ್ರೆಂಚರೂ ಬೆಲ್ಜಿಯಮ್ಮಿನವರೂ ಅಂತಃ ಸಹಾಯಕರಾಗಿರುವರೆಂದು ಪ್ರವಾದವಿದೆ. ಆದರೆ ಆಂಗ್ಲ ಮುಖ್ಯ ಮಂತ್ರಿಯವರು ಮಾತ್ರ ತಮ್ಮ ಕಾಮನ್ಸ್ ಸಭೆಯಲ್ಲಿ ಈ ವಿಷಯವಾಗಿ ಬಹು ನಿಷ್ಪಕ್ಷಪಾತವೂ ಗಂಭೀರವೂ ಧೀರವೂ ಆದ ಉಪನ್ಯಾಸವನ್ನು ಮಾಡಿದರು. ವರ್ಸೇಲೀಸ್ ಸಂಧಿನಿಬಂಧನೆಗಳಿಗೆ ಯಾವ ಪಕ್ಷದವರೂ ವಿರುದ್ಧವಾಗಿ ನಡೆಯುವುದು ಆಂಗ್ಲದೇಶಕ್ಕೆ ಸಂಮತವಲ್ಲವೆಂತಲೂ, ಜರ್ಮನರಿಗೆ ನಷ್ಟವಾಗುವಂತೆ ಸಂಧಿನಿಬಂಧನೆಗಳನ್ನು ಒತ್ತರಿಸಿಬಿಡುವುದು ಅನ್ಯಾಯವೆಂತಲೂ, ಇದರಿಂದ ಪ್ರಪಂಚವು ಮತ್ತೆ ಸಂಕ್ಷೋಭಕ್ಕಾಕರವಾಗುವುದೆಂತಲೂ, ನಾವೆಲ್ಲರೂ ಹಸ್ತಾಕ್ಷರ ಹಾಕಿರುವ ಸಂಧಿಪತ್ರವನ್ನು ಗೌರವಿಸುವುದು ನಮ್ಮ ಧರ್ಮವೆಂತಲೂ, ಪೋಲಂಡು ಯುದ್ಧದಲ್ಲಿ ಜಯಿಸಲಿಲ್ಲವೆಂತಲೂ ಮಿತ್ರಮಂಡಲಿಯವರ ದಯೆಯಿಂದ ಅದಕ್ಕೆ ಇಷ್ಟುಮಾತ್ರ ಲಾಭವಾಗಿರುವುದೆಂತಲೂ, ಸೈಲೇಷಿಯಾದಲ್ಲಿ ಗದ್ದಲವೆದ್ದರೆ ಅದನ್ನಡಗಿಸುವುದಕ್ಕೆ ಮಿತ್ರಮಂಡಲಿಯವರು ಪ್ರವೇಶಿಸುವುದಿಲ್ಲವೆಂತಲೂ ಆದರ ಶಾಂತಿಸ್ಥಾಪನೆಗಾಗಿ ಜರ್ಮನರಿಗೇ ಅವಕಾಶಕೊಡಬೇಕೆಂತಲೂ ಹೇಳಿದರು. ಮತ್ತು ಈ ಸಂದರ್ಭದಲ್ಲಿ ಜರ್ಮನರ ಧೈರ್ಯ ಸ್ಥೈರ್ಯ ಸಾಹಸ ಸಾಧನ ಸಂಪತ್ತಿಗಳನ್ನೆಲ್ಲಾ ಕೊಂಡಾಡಿದರು. ಈ ಉಪನ್ಯಾಸವನ್ನು ಕೇಳಿ ಜರ್ಮನರು ಹಿಗ್ಗಿ ಹೋಗಿರಬೇಕು. ಅಮೇರಿಕಾ, ಇಟಲಿ ಮೊದಲಾದ ಅನೇಕ ರಾಷ್ಟ್ರಗಳು ಮಿ|| ಲಾಯಿಡ್ ಜಾರ್ಜರು ಈ ಉಪನ್ಯಾಸದಲ್ಲಿ ವ್ಯಕ್ತಪಡಿಸಿದ ನಿಷ್ಪಕ್ಷಪಾತತ್ವ ನ್ಯಾಯಪ್ರಿಯತ್ವಗಳಿಗಾಗಿ ಕೊಂಡಾಡುತ್ತಿವೆ. ಆದರೆ ಫ್ರಾನ್ಸ್, ಬೆಲ್ಜಿಯಂ, ಪೋಲಂಡುಗಳು ಮಾತ್ರ ಅಸಮಾಧಾನಗೊಂಡಿವೆ. ಯುದ್ಧಕ್ಕೆ ಮುಂಚೆ ಜರ್ಮನರಲ್ಲಿ ಇದ್ದ ಗುಣಗಳು ಈಗ ಫ್ರಾನ್ಸಿನವರಲ್ಲಿ ಪ್ರತಿಷ್ಠಾಪನೆಗೊಂಡಂತೆ ತೋರುತ್ತಿವೆ. ದೇಶಾಕ್ರಮಣ ಕಾಂಕ್ಷೆ ಇವರಲ್ಲಿ ಬೆಳೆಯುತ್ತಿದೆ. ಜರ್ಮನರು ನಷ್ಟಪರಿಹಾರವನ್ನು ಕೊಡದೆ ತಿರಸ್ಕರಿಸುವ ಸಂದರ್ಭದಲ್ಲಿ ಅವರ ರೂಹರ್‌ಪ್ರಾಂತವನ್ನು ಆಕ್ರಮಿಸಿಕೊಳ್ಳಬೇಕೆಂಬ ಆಸೆ ಇವರಿಗೆ ಪ್ರಬಲವಾಗಿದ್ದಿತು. ಆ ಪ್ರಾಂತದಲ್ಲಿ ಕಬ್ಬಿಣ ಕಲ್ಲಿದ್ದಲು ಮೊದಲಾದುವುಗಳು ಸಮೃದ್ಧವಾಗಿ ದೊರೆಯುವುವು. ಅದುಕಾರಣ ಹೇಗಾದರೂ ಮಾಡಿ ಅಂಥ ಭಾಗವನ್ನು ಆಕ್ರಮಿಸಿಕೊಂಡುಬಿಟ್ಟರೆ ತನ್ನ ಪರಿಶ್ರಮಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಲ್ಲದೆ ಸೇನಾಯುದ್ಧಸಾಮಗ್ರಿಗಳನ್ನೆಲ್ಲಾ ಬಲಪಡಿಸಿಕೊಂಡು ಜರ್ಮನರಿಗೆ ಎಂದೆಂದೂ ತಲೆಯೆತ್ತಲವಕಾಶವಿರದಂತೆಯೇ ಮಾಡಬೇಕೆಂಬ ಸಂಕಲ್ಪವು ಫ್ರಾನ್ಸಿಗೆ ಇರುವುದು. ಜರ್ಮನರು ನಷ್ಟಪರಿಹಾರವನ್ನೆಲ್ಲಾ ತೆರುವುದಕ್ಕೆ ಒಪ್ಪಿಕೊಂಡುದರಿಂದ ಫ್ರೆಂಚರ ಉದ್ದೇಶವು ನೆರವೇರುವುದಕ್ಕೆ ಅವಕಾಶವಿಲ್ಲದೆ ಹೋಯಿತು. ಈ ಮಧ್ಯೆ ಸೈಲೇಷಿಯಾದಲ್ಲಿ ಯಾರ ಪ್ರಭುತ್ವವಿರಬೇಕೆಂಬುದಕ್ಕೆ ಪ್ರಜಾಮತವನ್ನು ತಿಳಿಯುವುದಕ್ಕಾಗಿ ಮಿತ್ರಮಂಡಲಿಯವರಿಂದ ಏರ್ಪಡಿಸಲ್ಪಟ್ಟಿದ್ದ ಸಂಘದವರು ತಮ್ಮ ಕೆಲಸವನ್ನು ಮುಗಿಸಿದರು. ಫಲಿತಾಂಶವು ಇನ್ನೂ ಗೊತ್ತಾಗಿಲ್ಲ. ಈಚೆಗೆ ಪೋಲಂಡಿನ ಕೋರ್ಫಾಂಟಿ ನಾಯಕನು ಸೈಲೇಷಿಯಾದಲ್ಲಿ ಲೇಶಭಾಗವನ್ನೂ ಜರ್ಮನರಿಗೆ ಕೊಡಲು ಒಪ್ಪುವುದಿಲ್ಲವೆಂದು ಹೇಳುತ್ತಾ ಸೈನ್ಯವನ್ನು ಕೂಡಿಸುತ್ತಿದ್ದಾನೆ. ಸೈಲೇಷಿಯಾದಲ್ಲಿ ಶಾಂತಿಸ್ಥಾಪನೆ ಮಾಡಲಿಕ್ಕೆ ಜರ್ಮನ್ ಸೈನ್ಯವೇ ಹೋಗತಕ್ಕುದೆಂದು ಲಾಯಿಡ್ ಜಾರ್ಜರು ಹೇಳಿದ ಅಭಿಪ್ರಾಯವು ಪೋಲಂಡಿನವರಿಗೂ ಫ್ರೆಂಚರಿಗೂ ಆಗ್ರಹಹುಟ್ಟಿಸಿವೆ. ಜರ್ಮನರು ಅಲ್ಲಿಗೆ ಬರಲಿಕ್ಕೆ ಲಾಯಿಡ್ ಜಾರ್ಜರು ಹೇಳಿದ ಅಭಿಪ್ರಾಯವು ಅವರ ಸ್ವಂತಾಭಿಪ್ರಾಯವೇ ಹೊರತು ಉನ್ನತಸಭೆಯವರ ಅಭಿಪ್ರಾಯವಲ್ಲವೆಂದು ಫ್ರಾನ್ಸ್ ಮಂತ್ರಿಯವರು ಧಿಕ್ಕರಿಸಿ ಮಾತನಾಡಿದರು. ಇದರ ಮೇಲೆ ಈ ವಿಷಯದ ನಿರ್ಣಯಕ್ಕೆ ಕೂಡಲೇ ಒಂದು ಸಭೆಯನ್ನು ಬೋಲೋನ್ ಪಟ್ಟಣದಲ್ಲಿ ಕೂಡಿಸಬೇಕೆಂದು ಲಾಯಿಡ್ ಜಾರ್ಜರು ತಿಳಿಯಿಸಲಾಗಿ, ಅದಕ್ಕೆ ಮುಂಚೆ ತಾವು ಈ ವಿಷಯವಾಗಿ ತಮ್ಮ ಪಾರ್ಲಿಮೆಂಟಿನಲ್ಲಿ ಪರ್ಯಾಲೋಚಿಸಬೇಕಾಗಿರುವುದರಿಂದ ಅದಾದ ಬಳಿಕ ಬೋಲೋನ್ ಸಭೆಯು ಸೇರಬಹುದೆಂದು ಫ್ರೆಂಚ್‌ಮಂತ್ರಿ ಬ್ರಿಯಾಂಡ್‌ರವರು ಉತ್ತರಕೊಟ್ಟಿರುವರು. ಈ ಸಂದರ್ಭದಲ್ಲಿ ಆಂಗ್ಲದೇಶ ಪತ್ರಿಕೆಗಳು ಫ್ರೆಂಚರ ವರ್ತನವನ್ನೂ, ಫ್ರಾನ್ಸ್ ಪತ್ರಿಕೆಗಳು ಆಂಗ್ಲರ ವರ್ತನವನ್ನೂ ಕುರಿತು ಪರಸ್ಪರ ದೋಷಾಪಾದನೆ ಮಾಡಿ ಕೂಗಾಡುತ್ತಿರುವುವು. ಫ್ರೆಂಚರು ಪೋಲಂಡ್ ನಾಯಕನಾದ ಕೋರ್ಫಾಂಟಿಯೊಡನೆ ಗುಟ್ಟಿನ ಸಂಧಿಯೊಂದನ್ನು ಮಾಡಿಕೊಳ್ಳುವವರಾಗಿದ್ದಾರೆಂದು ಆಂಗ್ಲಪತ್ರಿಕೆಗಳು ಹೇಳುತ್ತಿರುವುವು. ತಮ್ಮ ಮೇಲೆ ಹೊರಿಸಲ್ಪಟ್ಟಿರುವ ಭಾರವನ್ನು ನಿರ್ವಹಿಸಿಕೊಳ್ಳಲಿಕ್ಕಾಗಿ ಎದ್ದುನಿಂತುಕೊಳ್ಳಲಿಕ್ಕೆ ಜರ್ಮನರಿಗೆ ಅವಕಾಶವನ್ನುಂಟುಮಾಡಿಕೊಡಲು ಆಂಗ್ಲದೇಶವು ಯತ್ನಿಸುತ್ತಿರುವಾಗ, ಜರ್ಮನರು ಇನ್ನೆಂದೆಂದಿಗೂ ಎದ್ದುನಿಲ್ಲದಂತೆ ಅಡಗಿಸಿಬಿಡಬೇಕೆಂದು ಫ್ರಾನ್ಸ್ ದೇಶವು ಪ್ರಯತ್ನಿಸುತ್ತಿರುವುದೆಂದು ಲಾರ್ಡ್ ಡರ್ಬಿಯವರು ಆಕ್ಸ್‌ಫರ್ಡಿನಲ್ಲಿ ಉಪನ್ಯಾಸ ಮಾಡಿರುವರು. ಆಂಗ್ಲರು ಜರ್ಮನರ ದುರಾಶೆಯನ್ನು ಪರಿಪೋಷಿಸಲು ಪ್ರಯತ್ನಿಸುತ್ತಿರುವರೆಂದು ಫ್ರೆಂಚ್ ಪತ್ರಿಕೆಗಳು ದೂಷಿಸುತ್ತಿರುವುವು. ಮತ್ತು ಇದುವರೆಗೆ ಜರ್ಮನಿಯಲ್ಲಿ ಮಿತ್ರಮಂಡಲಿಯವರು ಆಕ್ರಮಿಸಿಕೊಂಡಿರುವ ಭಾಗಗಳನ್ನು ಬಿಟ್ಟುಬಿಡುವುದಕ್ಕೆ ಆಂಗ್ಲರು ಜರ್ಮನರಿಗೆ ವಾಗ್ದಾನ ಮಾಡಿರುವರೆಂದು ಫ್ರೆಂಚ್ ಪತ್ರಿಕೆಗಳು ದೂರುತ್ತಿರುವುವು.

ಜರ್ಮನ್ ಸೈನ್ಯಗಳು ಸೈಲೇಷಿಯಾವಿಗೆ ಏನಾದರೂ ನುಗ್ಗಿದರೆ ನಮ್ಮ ಸೈನ್ಯಗಳು ರೂರ್ ಪ್ರಾಂತವನ್ನು ಆಕ್ರಮಿಸಿಕೊಂಡೇ ಮುಗಿಸುವುವೆಂದು ಫ್ರೆಂಚ್ ಮಂತ್ರಿಯವರು ಸ್ಪಷ್ಟವಾಗಿ ಸಾರಿದ್ದಾರೆ. ಆ ಸಂಗತಿಯನ್ನು ಫ್ರೆಂಚ್ ಪ್ರಭುತ್ವದವರು ಜರ್ಮನಿಗೂ ತಿಳಿಯಿಸಿದ್ದಾರಂತೆ. ಫ್ರೆಂಚರ ಈ ಭಾವವನ್ನು ಅಮೇರಿಕಾವು ನಿರಾಕರಿಸುತ್ತಿದೆ. ಹೀಗೆ ಯೂರೋಪುಖಂಡದಲ್ಲಿ ಮತ್ತೊಂದುಸಲ ರಾಜ್ಯದುರಾಶೆಯಿಂದ ಭಿನ್ನಭಾವಗಳು ಪ್ರಕಟವಾಗುತ್ತಿವೆ. ಯಾವಕಾಲಕ್ಕೆ ಯಾರು ಮಿತ್ರರಾಗುವರೋ ಯಾರು ಶತ್ರುಗಳಾಗುವರೋ ಯಾವ ಪರಿಣಾಮವುಂಟಾಗುವುದೋ ಊಹಿಸುವುದು ಕಷ್ಟ. ಶಾಂತಿಯೆಂಬುದು ಅವರಿಗೆ ಸ್ವಪ್ನದಲ್ಲೂ ದುರ್ಲಭವೆಂದೇ ಹೇಳಬಹುದು. ಅತುಲರಾಜನೀತಿಕೋವಿದರಾದ ಮಿ|| ಲಾಯಿಡ್ ಜಾರ್ಜರು ಯುದ್ಧದಿಂದೀಚೆಗೆ ಇಂಥ ಎಷ್ಟೋ ವಿಷಮದಾವಾನಲಗಳನ್ನು ದಾಟಿ ಬಂದಿದ್ದಾರೆ. ಪ್ರಕೃತಸಮಸ್ಯೆಯನ್ನೂ ಹೇಗಾದರೂ ಉಪಶಮನಕ್ಕೆ ತಾರದೆ ಇರಲಾರರೆಂದೇ ಹೇಳಬಹುದು. ಇದರ ಮೇಲೆ ದೈವಸಂಕಲ್ಪವು ಹೇಗಿದೆಯೋ ತಿಳಿಯಲಿಲ್ಲ.

ಈಚೆಗೆ ಕೂಡಿದ್ದ ಫ್ರೆಂಚರ ಪಾರ್ಲಿಮೆಂಟಿನಲ್ಲಿ ಈ ವಿಷಯವಾಗಿ ಚರ್ಚೆಗಳು ನಡೆದುವೆಂದು ವರ್ತಮಾನ ಬಂದಿದೆ. ಫ್ರೆಂಚರ ಆಗ್ರಹವು ಇನ್ನೂ ನಿಂತಿಲ್ಲ. ಮಿತ್ರಮಂಡಲಿಯವರ ಸುಪ್ರೀಂಕೌನ್ಸಿಲು ಇಷ್ಟರಲ್ಲೇ ಕೂಡುವುದಾಗಿದೆ. ಆ ಸಭೆಗೆ ಇಂಗ್ಲಂಡು, ಜಪಾನ್, ಅಮೇರಿಕಾ, ಇಟಲಿ ಪ್ರತಿನಿಧಿಗಳು ಬರುವರು. ಫ್ರೆಂಚರೂ ತಮ್ಮ ಪ್ರತಿನಿಧಿಯನ್ನು ಕಳುಹಿಸಿಕೊಡಲು ಒಪ್ಪಿದ್ದಾರೆ. ಆ ಸಭೆಯಲ್ಲಿ ಇದರ ಪರ್ಯವಸಾನವು ಗೊತ್ತಾಗುವುದು.

* * *

ಜರ್ಮನರು ಮೇ ತಾ|| ೩೧ ರೊಳಗಿನ ಕಂತಿಗೆ ನಷ್ಟಪರಿಹಾರಕ್ಕಾಗಿ ೧೦೦ ಕೋಟಿ ಮಾರ್ಕುಗಳನ್ನು ಕೊಡಬೇಕಾಗಿದ್ದಿತು. ಮೇ ತಾ|| ೫ ರೊಳಗೇ ೧೫ ಕೋಟಿ ಮಾರ್ಕುಗಳನ್ನು ಸಲ್ಲಿಸಿದ್ದರು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರ ಸ್ವಾರಿಯು ಕಳೆದ ಭಾನುವಾರ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸಿತು.

ರಾಜಧಾನಿಯಲ್ಲಿ ತಾ|| ೨೭ ರ ರಾತ್ರಿ ಕೊಂಚ ಮಳೆಯಾಯಿತು. ಇದರಿಂದ ನಿಂತಿರುವ ಜೋಳದ ಪೈರಿಗೆ ಬಹಳ ಅನುಕೂಲವಾಗಿರುವುದು. ಇನ್ನೂ ಮಳೆಬರುವ ಚಿನ್ಹೆಯಿದೆ.

ಕೋಲಾರ ಡಿಸ್ಟ್ರಿಕ್ಟ್ ಕಾನ್ಫರೆನ್ಸು ಬರುವ ಜೂನ್ ತಾ|| ೫-೬ ಮತ್ತು ೭ ರಲ್ಲಿ ಕೋಲಾರದಲ್ಲಿ ಜರುಗುವುದು. ಇದೇ ಸಂದರ್ಭದಲ್ಲಿ ವಸ್ತುಪ್ರದರ್ಶನವೂ, ಸ್ತ್ರೀಯರ ಮತ್ತೂ ಪಂಚಮರ ಸಮ್ಮೇಳನಗಳೂ ನಡಿಯುವುವು.

ಕಳೆದ ಬಿ. ಎ. ಪರೀಕ್ಷೆಯಲ್ಲಿ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರ ಭಾವಮೈದುನರಾದ ಮ|| ಎಂ. ಸಿ. ಲಕ್ಷ್ಮೀಪತಯ್ಯನವರು ಮತ್ತು ಡಾಕ್ಟರ್ ಟಿ. ಎಸ್. ಸಿದ್ದಪ್ಪನವರ ಅಳಿಯಂದರಾದ ಮ|| ಪುಟ್ಟಸ್ವಾಮಿಯವರು ಉತ್ತೀರ್ಣರಾಗಿರುವುದು ಅಭಿನಂದನೀಯವಾಗಿದೆ.

ಅಕ್ಕೂರು ಗುಂಡಪ್ಪನವರ ಕೊಲೆಯ ಸಂಬಂಧದಲ್ಲಿ ಇದುವರೆಗೆ ಪೊಲೀಸರು ಸಂಶಯದ ಮೇಲೆ ೧೫ ಮಂದಿಗಳನ್ನು ಹಿಡಿದಿದ್ದಾರೆ. ಇದರ ವಿಚಾರಣೆಗೆ ಅ|| ಕಮಿಷನರ್ ಮ|| ಕೆ. ವಿ. ಅನಂತರಾಮರ್ರವರು ಫಸ್ಟ್‌ಕ್ಲಾಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ಮಾಡಲ್ಪಟ್ಟು ಚೆನ್ನಪಟ್ಟಣಕ್ಕೆ ಕಳುಹಿಸಲ್ಪಟ್ಟಿದ್ದಾರೆ.

ಬಹಳ ಸಾತ್ವಿಕರೂ, ಪರೋಪಕಾರಿಗಳೂ, ನಿಗರ್ವಿಗಳೂ ಎಂದು ಹೆಸರ್ಪಡೆದಿದ್ದು ವಿಧಿವಶರಾದ ಮ|| ಸಿ. ದೊಡ್ಡಯ್ಯನವರ ಉತ್ತರಕ್ರಿಯಾದಿಗಳನ್ನು ಮ|| ಸಿ. ಜವರಪ್ಪನವರು ಮೊದಲಾದ ಸಹೋದರರು ಅತ್ಯಂತ ಉದಾರವಾಗಿ ನೆರವೇರಿಸಿ ಸಾವಿರಾರು ಬಡಜನರಿಗೆ ಮೃಷ್ಟಾನ್ನಭೋಜನ ಮಾಡಿಸಿದುದು ಸ್ತುತ್ಯವಾಗಿದೆ.

ಬರುವ ಜೂನ್ ತಾ|| ೧ರಿಂದ ಬೆಂಗಳೂರು ಮದ್ರಾಸುಗಳ ಮಧ್ಯದ ಹೊಗೆಬಂಡಿಗಳ ಕಾಲವು ಸ್ವಲ್ಪ ವ್ಯತ್ಯಾಸಮಾಡಲ್ಪಡುವುದು. ಬೆಂಗಳೂರಿನಿಂದ ರಾತ್ರಿ ೮-೪೦ ಕ್ಕೆ ಹೊರಡುವ ಮೇಲು ಬೆಳಗಿನ ೬-೩೦ ಕ್ಕೆ ಮದ್ರಾಸಿಗೆ ಸೇರುವುದು. ಪ್ಯಾಸೆಂಜರು ಬಂಡಿಯು ಸಾಯಂಕಾಲ ೫-೧೫ ಕ್ಕೆ ಬೆಂಗಳೂರಿಂದ ಹೊರಟು ಬೆಳಗಿನ ೬ ಗಂಟೆಗೆ ಮದ್ರಾಸನ್ನು ಸೇರುವುದು. ಮದರಾಸಿನಿಂದ ರಾತ್ರಿ ೯-೪೫ ಕ್ಕೆ ಹೊರಟ ಪ್ಯಾಸೆಂಜರ್ ಬಂಡಿಯು ಬೆಳಗಿನ ೧೦-೫೦ ಕ್ಕೆ ಬೆಂಗಳೂರನ್ನು ಸೇರುವುದು.

ಶ್ರೀಮತಿ ಸರೋಜಿನೀದೇವಿಯವರು ಬೆಂಗಳೂರಿಗೆ ಬಂದಿದ್ದಾಗ್ಗೆ ಅವರ ಅಧ್ಯಕ್ಷತೆಯಿಂದ ಮಹಿಳಾಸಂಘ ಸಭೆಯು ಕೂಡಿದ್ದಿತು. ಲೋಕಲ್ ಬೋರ್ಡುಗಳು ಪ್ರಜಾಪ್ರತಿನಿಧಿಸಭೆ ಶಾಸನಸಭೆ ಇವುಗಳಿಗೆಲ್ಲಾ ಸ್ತ್ರೀಯರು ಸಭಿಕರಾಗುವಂತೆ ಮಾಡಿಕೊಡಬೇಕೆಂಬ ತೀರ್ಮಾನವು ಮಾಡಲ್ಪಟ್ಟಿತು. ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವಾಗಿರುವುದರಿಂದ ರಾಜಕೀಯ ವಿಷಯದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನುಂಟುಮಾಡಿಕೊಡುವುದರಲ್ಲೂ ಅದು ಮಾರ್ಗದರ್ಶಕವಾಗಬೇಕಾದುದು ಯುಕ್ತವೆಂದು ಅಧ್ಯಕ್ಷೆಯರು ಭಾಷಣಮಾಡಿದರು.

ಕಳೆದ ತಾ|| ೧೯ ರಲ್ಲಿ ಶ್ರೀಮತಿ ಸರೋಜನೀದೇವಿಯವರು ವಿದ್ಯಾರ್ಥಿಗಳ ಸಭೆಯಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಈಗ ದೇಶದಲ್ಲಿ ಪ್ರಾಚೀನಾಚಾರವೆಂಬ ಸಂಕಲೆಗಳು ಸ್ವಲ್ಪವೂ ಸಡಿಲವಾಗಿಲ್ಲ. ಸಂಘಸಂಸ್ಕರಣವು ಅತ್ಯಾವಶ್ಯಕವಾಗಿದೆ. ನಿಮ್ನಜಾತಿಯವರನ್ನು ಮುಟ್ಟಕೂಡದೆಂಬ ಮೌಢ್ಯವು ಇನ್ನೂ ತೊಲಗಲಿಲ್ಲ. ಸರ್ವಸಮಾನತ್ವವೆಂಬುದಕ್ಕೆ ಎಡೆಯೇ ಇಲ್ಲ. ಹೀಗಿರುವಾಗ ನಿಮಗೆ ರಾಜಕೀಯ ಸ್ವಾತಂತ್ರ್ಯವು ಹೇಗೆ ಲಭಿಸುವುದು? ಭರತಖಂಡದಲ್ಲಿರುವ ಪ್ರತಿಯೊಬ್ಬ ಸ್ತ್ರೀಪುರುಷರೂ ಎಲ್ಲರಲ್ಲೂ ಇರುವ ಆತ್ಮನು ಒಬ್ಬನೇ ಎಂಬ ಭಾವನೆಯುಳ್ಳವರಾಗಿ ಮಾತೃದೇಶ ಸೇವೆಮಾಡಿದರೆ ಇಷ್ಟಸಿದ್ಧಿಯಾಗುವುದು ಎಂದು ಉಪದೇಶಿಸಿದರು.

ಅರ್ಥಸಾಧಕ ಪತ್ರಿಕೆಯ ಸಂಪಾದಕರಿಗೂ ಸರ್ಕಾರದವರಿಗೂ ಯಾವುದೋ ವಿಷಯದಲ್ಲಿ ಭಿನ್ನಾಭಿಪ್ರಾಯವಾಗಿ ಕಳೆದ ತಾ|| ೧೮ ರಿಂದ ಆ ಪತ್ರಿಕೆಯ ಪ್ರಕಟನವು ನಿಂತುಹೋಗಿರುವುದಷ್ಟೆ. ಪ್ರಕೃತಕ್ಕೆ ಆ ಪತ್ರಿಕೆಗೆ ಮ|| ಗೋಪಾಲಯ್ಯಂಗಾರರಂಥ ಸಂಪಾದಕರು ದೊರೆಯುವುದು ಕಷ್ಟ. ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಮರಳಿ ಆ ಪತ್ರಿಕೆಯು ಎಂದಿನಂತೆ ಪ್ರಕಟವಾಗಲು ಏರ್ಪಡಿಸುವುದೇ ವಿಹಿತವೆಂದು ಸೂಚಿಸಲಪೇಕ್ಷಿಸುತ್ತೇವೆ. "ಮ|| ಗೋಪಾಲಯ್ಯಂಗಾರರು ಅದರ ಸಂಬಂಧವನ್ನೇ ಬಿಟ್ಟರೆಂದು ಸಂಪದಭ್ಯುದಯ ಪತ್ರಿಕೆಯು ಹೇಳಿಕೊಂಡು ಆನಂದಪಟ್ಟಿದೆ. ಸಾರ್ಥಕನಾಮವುಳ್ಳ ಅರ್ಥಸಾಧಕ ಪತ್ರಿಕೆಯಿಲ್ಲದಂತಾದರೆ ನಾಮಮಾತ್ರದ ತಾನೇ ಮೆರೆಯಬಹುದೆಂದು ಇದರ ಕಾಂಕ್ಷೆಯಿರಬಹುದು" ಎಂದು ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

* * *

ಫಿರಂಗಿ ಮೊದಲಾದುವುಗಳನ್ನು ಜಗತ್ತಿಗೆಲ್ಲಾ ಒದಗಿಸಿಕೊಡುತ್ತಿದ್ದ ಜರ್ಮನರ ಕ್ರುಪ್ ಕರ್ಮಾಗಾರವು ಈಗ ಕೆಲಸವಿಲ್ಲದೆ ಹಳಸಿಕೊಂಡಿದೆ. ೧೯೧೯ನೆ ವರ್ಷದಲ್ಲಿ ಅದಕ್ಕೆ ೩೬೦೦೦೦೦೦ ಮಾರ್ಕುಗಳ ನಷ್ಟವು ಹುಟ್ಟಿತು. ಈಗ ಆ ಕಾರ್ಯಾಲಯದಲ್ಲಿ ಮೋಟಾರುಗಳು ಯಂತ್ರಸಾಮಗ್ರಿಗಳು ಕಬ್ಬಿಣದ ಉಕ್ಕಿನ ಗೃಹೋಪಕರಣ ಸಾಮಗ್ರಿಗಳು ಇತ್ಯಾದಿಗಳನ್ನು ನಿರ್ಮಿಸಿ ಹೊಟ್ಟೆಹೊರಕೊಳ್ಳಲು ಏರ್ಪಾಟುಮಾಡಿದ್ದಾರೆ.

ಭರತಖಂಡದ ವೃತ್ತಾಂತಗಳು.

ಅಲಹಾಬಾದಿನಲ್ಲಿ ೨೦ ಲಕ್ಷ ರೂ. ಗಳ ಮೂಲಧನದಿಂದ ಕಾಗದವನ್ನು ನಿರ್ಮಿಸುವ ಯಂತ್ರಾಲಯವು ಪ್ರತಿಷ್ಠಾಪಿಸಲ್ಪಟ್ಟಿತು. ಇಷ್ಟರಲ್ಲೇ ಕಾರ್ಯಾರಂಭವಾಗುವುದು.

ಈಗ ಇರುವ ಅಂಚೆಯ ೧ ಆಣೆಯ ಸ್ಟಾಂಪು ಅರ್ಧಾಣೆಯ ಸ್ಟಾಂಪುಗಳಲ್ಲೇ ಕೆಲವನ್ನು ೯ ಪೈಗಳ ಸ್ಟಾಂಪನ್ನಾಗಿ ಬದಲಾಯಿಸಲು ಸರ್ಕಾರದವರು ಯೋಚಿಸಿರುವರಂತೆ.

ಭರತಖಂಡಕ್ಕೆ ಹೊರಗಣಿಂದ ಬರುತ್ತಿದ್ದ ಎಜ್ಜ ಕೊರೆದಿರುವ ಮುತ್ತುಗಳ ಮೇಲೆ ವಿಧಿಸಲ್ಪಡುತ್ತಿದ್ದ ಸುಂಕವು ಮಾರ್ಚಿ ತಾ|| ೧ ರಿಂದ ತೆಗೆದುಹಾಕಲ್ಪಟ್ಟಿದೆಯೆಂದು ವಾಣಿಜ್ಯಶಾಖೆಯವರು ಪ್ರಕಟಿಸಿದ್ದಾರೆ.

ತಿಲಕ್ ಜಾತೀಯ ವಿದ್ಯಾಲಯ ಪ್ರತಿಷ್ಠಾಪಕರೂ, ನಾಗಪುರದ ಅಷ್ಟಾಂಗಯೋಗಾಶ್ರಮಸ್ಥಾಪಕರೂ ಭವಿಷ್ಯ ಎಂಬ ಪತ್ರಿಕೆಯ ಸಂಪಾದಕರೂ ಆದ ಪಂಡಿತ ಸುಂದರಲಾಲ್‌ರವರು ಪಿನಲ್‌ಕೋಡು ೧೨೪ನೆ ಸೆಕ್ಷನ್ ಪ್ರಕಾರ ಹಿಡಿಯಲ್ಪಟ್ಟು ೧ ವರ್ಷ ಕಠಿನ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟರು.

ಭರತಖಂಡದಲ್ಲಿ ಸೇನೆಯ ವೆಚ್ಚವು ಬಹಳ ಹೆಚ್ಚೆಂದು ಆಕ್ಷೇಪಿಸಲ್ಪಡುತ್ತಿದೆಯಷ್ಟೆ. ಅದನ್ನು ಪರಿಶೋಧಿಸಲಿಕ್ಕಾಗಿ ಇಂಡ್ಯಾ ಸರ್ಕಾರದವರು ಒಂದು ಸಂಘವನ್ನೇರ್ಪಡಿಸಿ, ಅದರಲ್ಲಿ ಆ|| ಷಫೀ, ಸಪ್ರು, ಸರ್ ಶಿವಸ್ವಾಮಯ್ಯರು, ವಾಸಾಮುದ್ದಿನ್-ಇವರುಗಳನ್ನೂ ಕೆಲ ಯೂರೋಪ್ಯರನ್ನೂ ಸಹ ಸಭಿಕರನ್ನಾಗಿ ಮಾಡಿದ್ದಾರೆ.

ಅಮೇರಿಕಾದಿಂದ ಪುಸ್ಸಿಫುಟ್ ಮತ್ತು ಜಾನ್ಸನ್ ಎಂಬುವರಿಬ್ಬರು ಭರತಖಂಡಕ್ಕೆ ಮುಂದಣ ಆಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಬರುವವರಾಗಿದ್ದಾರೆ. ಇವರು ಈಗ ಇಂಗ್ಲಂಡಿಗೆ ಹೊರಟಿದ್ದಾರೆ. ಭರತಖಂಡದಲ್ಲಿ ನೂರಾರು ಉಪನ್ಯಾಸಗಳನ್ನು ಮಾಡಿ ಇಲ್ಲಿ ಮದ್ಯಪಾನವನ್ನು ಸುತರಾಂ ನಿರ್ಮೂಲಮಾಡುತ್ತೇವೆಂದು ಸಂಕಲ್ಪಿಸಿ ಬರುವವರಾಗಿದ್ದಾರೆ.

ರೂಪಾಯಿ ಮಾರ್ಪಿನ ಬೆಲೆಯು ಬರುಬರುತ್ತ ತಗ್ಗುತ್ತಿದೆ. ಈಗ ಷಿಲಿಂಗ್ ಬೆಲೆಯು ೩ ಪೆನ್ನಿಗಿಂತಲೂ ಕಡಿಮೆಯಾಗಿದೆ. ಕೂಡಲೆ ಬೆಲೆಯನ್ನು ಹೆಚ್ಚಿಸದಿದ್ದರೆ ಸೀಮೆಯಿಂದ ಸರಕುಗಳನ್ನು ತರಿಸಿದ ಭಾರತೀಯ ವರ್ತಕರಿಗೆ ಬಹಳ ನಷ್ಟವುಂಟಾಗುವುದೆಂದೂ, ಇಲ್ಲಿಯ ವ್ಯಾಪಾರವು ಧ್ವಂಸವಾಗುವುದೆಂದೂ ಅಮೃತಸರದ ವರ್ತಕಸಂಘದವರು ಭಾರತ ಸರ್ಕಾರಕ್ಕೆ ಬಿನ್ನೈಸಿಕೊಂಡಿದ್ದಾರೆ.

ಭರತಖಂಡದಲ್ಲಿ ಈಗ ಏರ್ಪಟ್ಟಿರುವ ನೂತನ ರಾಜಕೀಯ ಸಂಸ್ಕರಣದಿಂದ ಸರ್ಕಾರಕ್ಕೆ ಈ ಕೆಳಗೆ ಕಂಡಂತೆ ವೆಚ್ಚಗಳು ಹೆಚ್ಚಿರುವುವು. ದಿಲ್ಲಿ ಶಾಸನಸಭೆಗೆ ಡೆಪ್ಯುಟಿ ಪ್ರೆಸಿಡೆಂಟರ ಸಂಬಳವೇ ಅಲ್ಲದೆ ೮೨೫೦೦೪ ರೂ. ಗಳು. ಎಲ್ಲ ಪ್ರಾಂತಗಳಿಗೂ ೨೧ ಲಕ್ಷ. ಮದ್ರಾಸು ಅಧಿಪತ್ಯಕ್ಕೇ ೨೯೬೦೦೦ ರೂ. ಬೊಂಬಾಯಿಗೆ ೨೯೩೦೦೦. ಬಂಗಾಳಕ್ಕೆ ೨೯೬೦೦೦. ಸಂಯುಕ್ತರಾಷ್ಟ್ರಕ್ಕೆ ೪೬೬೦೦೦. ಪಂಜಾಬಿಗೆ ೨೧೮೦೦೦. ಬೇಹಾರು ಒರಿಸ್ಸಾವಿಗೆ ೧೨೪೦೦೦. ಮಧ್ಯಪ್ರಾಂತಗಳಿಗೆ ೨೧೬೦೦೦. ಅಸ್ಸಾಮಿಗೆ ೧೮೪೦೦೦.

ವೈಸ್ರಾಯರು ಈಚೆಗೆ ಮತ್ತೊಂದುಸಲ ಗಾಂಧಿಯವರನ್ನೂ ಮಾಳವ್ಯರನ್ನೂ ಬರಮಾಡಿಕೊಂಡು ಸಂಭಾಷಿಸಿದರು. ಎಸ್. ಕಸ್ತೂರಿ ರಂಗಯ್ಯಂಗಾರರೊಡನೆಯೂ ಲಾಲಾಲಜಪತಿರಾಯರೊಡನೆಯೂ ಸಹ ಸಂಭಾಷಿಸಿದರು. ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನೆಲ್ಲಾ ಆಂಗ್ಲ ಮಂತ್ರಿಮಂಡಲಕ್ಕೆ ತಂತಿವಾರ್ತೆಯ ಮೂಲಕ ವೈಸ್ರಾಯರು ತಿಳಿಯಿಸಿರುವಂತೆಯೂ, ಅಲ್ಲಿಂದ ಅನುಕೂಲಾಭಿಪ್ರಾಯವು ಬಂದರೆ ರೌಲತ್ ಆಕ್ಟನ್ನೂ ಪ್ರೆಸ್ ಆಕ್ಟನ್ನೂ ಸುಧಾರಿಸುವುದಲ್ಲದೆ ಸೈನಿಕ ಶಾಸನದಪ್ರಕಾರ ಶಿಕ್ಷಿತರಾಗಿರುವ ಪಂಜಾಬಿನ ಭಾರತೀಯರನ್ನೆಲ್ಲಾ ಬಿಡುಗಡೆಮಾಡಿಸುವರೆಂತಲೂ, ಓಡ್ವಯರ್ ಜನರಲ್ ಡಯರ್‌ರವರಿಗೆ ಭರತಖಂಡದಿಂದ ಸಲ್ಲುತ್ತಿರುವ ಪೆನ್ಷನ್ನುಗಳನ್ನು ನಿಲ್ಲಿಸಿಬಿಡುವಂತೆ ಮಾಡುವರೆಂತಲೂ ಸುದ್ದಿಯು ಪ್ರಕಟವಾಗಿದೆ. ಯಾವುದೂ ಸ್ವಲ್ಪ ಕಾಲದಲ್ಲೇ ಗೊತ್ತಾಗುವುದು. ಅಂತೂ ಇಷ್ಟಾದರೆ ದೇಶದಲ್ಲಿ ಶಾಂತಿಯುಂಟಾದೀತೆ?

ಖಿಲಾಫತ್ ಸಭಿಕನಾದ ಹಮೀರ್ ಅಹಮ್ಮದ್ ಎಂಬಾತನು ಅಲಹಾಬಾದಿನಲ್ಲಿ ಒಂದು ಉಪನ್ಯಾಸಮಾಡುವಾಗ್ಗೆ—ಇನ್ನು ೬ ತಿಂಗಳೊಳಗೆ ಸ್ವರಾಜವು ನಮಗೆ ಲಭಿಸದಿದ್ದರೆ ಒಂದು ಕೈಯಲ್ಲಿ ಖುರಾನನ್ನೂ ಮತ್ತೊಂದು ಕೈಯಲ್ಲಿ ಕತ್ತಿಯನ್ನೂ ಹಿಡಿದುಕೊಂಡು, ದೇಶೀಯರು ವಿಲೋಭಿಯನ್ನು ಹತ್ಯಮಾಡಿದಂತೆ ಆಂಗ್ಲರನ್ನು ಮಾಡಿಬಿಡುವೆನೆಂದು ಭಾಷಣಮಾಡಿದ್ದನು. ಈ ಅಪರಾಧಕ್ಕಾಗಿ ಅವನು ವಿಚಾರಣೆಗೆ ಗುರಿಮಾಡಲ್ಪಟ್ಟನು. ಅಪರಾಧಿಯು ತಾನು ಹಾಗೆ ಉಪನ್ಯಾಸಮಾಡಿದುದುಂಟೆಂದು ಒಪ್ಪಿಕೊಂಡನು. ಅಲಹಾಬಾದ್ ಸೆಷನ್ ಜಡ್ಜರು ಪೀನಲ್‌ಕೋಡ್ ೧೨೧-೧೨೪ ಎ ಸೆಕ್ಷನ್ನುಗಳ ಪ್ರಕಾರ ವಿಚಾರ ನಡೆಯಿಸಿ ೩ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆ, ಯಾವಜ್ಜೀವ ದ್ವೀಪಾಂತರವಾಸ ಶಿಕ್ಷೆ ಇವೆರಡನ್ನೂ ಒಂದೇ ಸಲ ಅನುಭವಿಸುವಂತೆಯೂ ಆತನ ಆಸ್ತಿಯನ್ನೆಲ್ಲಾ ಮುಟ್ಟುಗೋಲು ಹಾಕಿ ಸರ್ಕಾರಕ್ಕೆ ಸೇರಿಸಿಕೊಳ್ಳುವಂತೆಯೂ ತೀರ್ಮಾನ ಹೇಳಿದರು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

1920-21 ನೇ ಸಾಲಿನಲ್ಲಿ ಯೂನಿವರ್ಸಿಟಿ ಹೈಸ್ಕೂಲು ಲೋವರ್ ಸೆಕೆಂಡರಿ ಮತ್ತು ಇತರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವೀರಶೈವ ವಿದ್ಯಾರ್ಥಿಗಳ ಹೆಸರುಗಳನ್ನು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ವಾರ್ಷಿಕರಿಪೋರ್ಟಿನಲ್ಲಿ ನಮೂದಿಸಬೇಕಾಗಿರುವುದರಿಂದ ಸದರಿ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ ಮತ್ತು ಉತ್ತೀರ್ಣರಾಗಿರುವ ಪರೀಕ್ಷೆ ಮುಂತಾದವುಗಳನ್ನು ಸ್ಪಷ್ಟವಾಗಿ ಬರೆದು ಜಾಗ್ರತೆಯಾಗಿ ಕಳುಹಿಸಿಕೊಡಬೇಕಾಗಿ ಕೋರಿದೆ.

ಬೆಂಗಳೂರು ಸಿಟಿ,
ತಾ|| ೨೪-೫-೧೯೨೧.

ಜಿ. ಪರಮಶಿವಯ್ಯ, ಬಿ. ಎ. ಎಲ್
ಎಲ್. ಬಿ. ಆ|| ಸೆಕ್ರಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ
ಲಗ್ನದ ಫಂಡು.

1. ಬೇಲೂರು ತಾ|| ಬಿಕ್ಕೋಡುಮಠದ ವೇ|| ಶ್ರೀ ಶಿವಬಸವಸ್ವಾಮಿಗಳವರಿಂದ ಮಠದಲ್ಲಿ ನಡಿಸಿದ ಶಿವದೀಕ್ಷಾ ಗಣಪರ್ವ ಕಾಲದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು 10 ರೂ.
2. ಕಡೂರು ಡಿ|| ಶಿವನೆಗ್ರಾಮದ ಮ|| ರಾ|| ವೈ. ಭದ್ರಪ್ಪನವರ ಮೂಲಕ, ಮ|| ರಾ|| ಪುರದಪ್ಪಗೌಡರವರು ನಡೆಸಿದ ನೂತನಗೃಹಪ್ರವೇಶ ಮತ್ತು ಶಿವದೀಕ್ಷಾಸಂಸ್ಕಾರದ ಜ್ಞಾಪಕಾರ್ಥವಾಗಿ ಕಳುಹಿಸಿದ್ದು 5 ರೂ.

ಜುಮ್ಲಾ 15 ರೂ.

ಬೆಂಗಳೂರು ಸಿಟಿ,
ತಾ|| ೨೪-೫-೧೯೨೧

ಜಿ. ಪರಮಶಿವಯ್ಯ, ಬಿ. ಎ., ಎಲ್.
ಎಲ್. ಬಿ. ಆನರರಿ ಸೆಕ್ರೆಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿತೋಟದಪ್ಪನವರ ಸ್ಮಾರಕ ಫಂಡು.

ಹಿಂದೆ ವಸೂಲು ಬಂದಿರತಕ್ಕದ್ದು 65 ರೂ. ಮಂಡ್ಯದ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಚನ್ನಪಟ್ಟಣದ ಗುರುಕಾರ್ ಮ|| ರಾ|| ಜಿ. ಮಲ್ಲಿಕಾರ್ಜುನಯ್ಯ, ಬಿ.ಎ. ಯವರಿಂದ 10 ರೂ. ಜುಮ್ಲಾ 75 ರೂ.

ಬೆಂಗಳೂರು ಸಿಟಿ,
ತಾ|| ೨೫-೫-೧೯೨೧

ಜಿ. ಪರಮಶಿವಯ್ಯ, ಬಿ. ಎ. ಎಲ್.
ಎಲ್. ಬಿ. ಆನರರಿ ಸೆಕ್ರೆಟರಿ,
ಮೈಸೂರು ವೀ. ಐ. ಫಂಡ್ ಸಂಘ.

ಪತ್ರವ್ಯವಹಾರ.

ಚಿಕ್ಕಯಡಚಿ.

ಹಿರೇಕೆರೂರ ತಾಲ್ಲೂಕು ಚಿಕ್ಕಯಡಚಿ ಗ್ರಾಮದಲ್ಲಿ ಇದೇ ವೈಶಾಖ ಶುದ್ಧ ದ್ವಾದಶಿ ದಿವಸ ಜರುಗಿದ ತಮ್ಮ ಲಗ್ನದ ಕಾಲಕ್ಕೆ ಬಸವಲಿಂಗಪ್ಪಾಗೌಡ ಸಾವುಕಾರ ಇವರು ಹಾಂವ್ಸಬಾವಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀಮೃತ್ಯುಂಜಯ ಎ. ವಿ. ಸ್ಕೂಲಿನ ಬಡವಿದ್ಯಾರ್ಥಿಗಳಿಗೆ ವಸತಿಗೃಹಗಳನ್ನು ಕಟ್ಟಿಸಲು ತಮ್ಮ ತಂದೆಯವರಾದ ಕರೆಸಿದ್ದಪ್ಪಗೌಡ ಇವರ ಸ್ಮಾರಕಕ್ಕಾಗಿ ೫೧ ರೂ. ಗಳನ್ನು ಕೊಡಲು ಒಪ್ಪಿಕೊಂಡಿದ್ದಾರೆಂದು ತಿಳಿಸಲು ಅತಿಶಯ ಆನಂದವಾಗುತ್ತದೆ. ಇವರ ಅನುಕರಣವನ್ನು ಪ್ರತಿಯೊಬ್ಬ ವೀರಶೈವನೂ ಮಾಡಬೇಕಾಗಿ ಸವಿನಯ ಪ್ರಾರ್ಥನೆ.

ಓರ್ವ ಮತಾಭಿಮಾನಿ.

ಆಲೂರು.

ಹಾನಗಲ್ಲ ತಾ|| ಆಲೂರಗ್ರಾಮದಲ್ಲಿ ಶ್ರೀ ವೀರಭದ್ರ ದೇವಾಲಯದೊಳಗೆ ಪ್ರತಿವರ್ಷದಂತೆ ೧೫ನೇ ಧಾರ್ಮಿಕಸಭಾ ಮಹೋತ್ಸವವು ೭-೫-೨೧ನೇ ದಿನ ಶ್ರೀ ಚಂದ್ರಶೇಖರಸ್ವಾಮಿ ಶಿವಯೋಗಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಭಾಮಂಟಪವು ತಳಿರುತೋರಣಗಳಿಂದ ಹಾಗೂ ವಿದ್ವಜ್ಜನರ ಸಮೂಹದಿಂದ ಶೃಂಗಾರವಾಗಿತ್ತು. ಸಭಾಕಾರ್ಯಕ್ರಮಪ್ರಕಾರ ಸಹಕಾರ ಗೋರಕ್ಷಣೆ, ವೀರಶೈವಮತ ಪ್ರಾಚೀನತ್ವವೂ ಪ್ರಾಶಸ್ತ್ಯವೂ ಈ ವಿಷಯಗಳ ಮೇಲೆ ವಿದ್ಯಾರ್ಥಿಗಳು ಮತ್ತು ಸಭ್ಯಗೃಹಸ್ಥರ ಅತ್ಯುತ್ತಮವಾದ ಭಾಷಣಗಳಾದುವು. ಈ ವಿಷಯಗಳ ಮೇಲೆ ಉಪನ್ಯಾಸ ಮಾಡಿದವರಿಗೆ ೧೫ ರೂ. ಗಳು ಇನಾಮಾಗಿ ಹಂಚಲ್ಪಟ್ಟುವು.—ಹಾನಗಲ್ಲ ತಾ|| ಆಲೂರ ಗ್ರಾಮದಲ್ಲಿ ವೈಶಾಖ ಶುದ್ಧ ೯ ದಿವಸ ಬಸವೇಶ್ವರ ಜಯಂತಿ ವೈಶಾಖ ಶುದ್ಧ ೩ ಏಕೋರಾಮಾರಾಧ್ಯರ ಜಯಂತಿ ವೈಶಾಖ ಶುದ್ಧ ೫ ದಾರುಕಾಚಾರ್ಯರ ಜಯಂತಿ ಈ ಜಯಂತ್ಯುತ್ಸವಗಳನ್ನು ಅತಿ ಆನಂದದೊಡನೆ ಪವಿತ್ರವಾದ ಹಬ್ಬಗಳೆಂದು ಮಾಡಲ್ಪಟ್ಟವು. ಸದರಿ ಪುಣ್ಯತಿಥಿಗಳಲ್ಲಿ ಮತಸ್ಥಾಪಕರ ಮತ್ತು ಸುಧಾರಕರ ಬಗ್ಗೆ ಸಂಕ್ಷೇಪಚರಿತ್ರವು ಉಪದೇಶ ಮಾಡಲ್ಪಟ್ಟಿತು.

ಓರ್ವ ಸಮಾಜಸೇವಕ.

ದಿ ಇಂಡಿಯನ್ ಸ್ಪಿನ್ನಿಂಗ ಮೆಷಿನ್.

ನೂಲುವ ಕೈರಾಟಿಗಳು ಇತ್ತಿತ್ತಲಾಗಿ ಪ್ರಚಾರದಲ್ಲಿ ಬರಹತ್ತಿದ್ದರಿಂದ ಈಗಿನ ಸುಧಾರಿಸಿದ ಕಾಲದಲ್ಲಿ ಹಿಂದೀಜನರು ಪೂರ್ವದ ಕಾಡು ಸ್ಥಿತಿಗೆ ಹೋಗಬಾರದೆಂದು ಸುಧಾರಿಸಿದ ಪದ್ಧತಿಯ ಪ್ರಕಾರ ನಾವು ನೂಲುವ ಯಂತ್ರವನ್ನು ಮಾಡಿರುತ್ತೇವೆ. ನೂರು ರಾಟಿಗಳಿಂದ ಹೊರಡುವ ನೂಲಿನಷ್ಟು ನೂಲನ್ನು ನಮ್ಮದೊಂದೇ ರಾಟಿಯಿಂದ ನಾವು ತೆಗೆದುಕೊಡುತ್ತೇವೆ. ಈ ಪ್ರಮಾಣದ ಮೇಲಿಂದ ನೋಡಿದರೆ ಮ. ಗಾಂಧಿಯವರು ೨೦,೦೦,೦೦೦ ರಾಟಿಗಳು ನಡೆಯಬೇಕೆಂದು ಹೇಳುವಲ್ಲಿ ೨೦,೦೦೦ ರಾಟಿಗಳು ನಡೆದರೆ ಹಿಂದುಸ್ಥಾನಕ್ಕೆ ಸಾಕಾಗುವಷ್ಟು ನೂಲು ಹೊರಡುತ್ತದೆ. ಈ ಯಂತ್ರವನ್ನು ನಾವು ಗೋಕಾಕದಲ್ಲಿ ಜೂನ್ ೧೧-೧೨ ತಾರೀಖಿಗೆ ಆಗುವ ಬ್ರಾಹ್ಮಣೇತರ ಜಿಲ್ಲಾ ಪರಿಷತ್ತು ಮತ್ತು ಜಿಲ್ಲಾ ಕಾಂಗ್ರೆಸ್ ಪರಿಷತ್ತು ಆಗುವ ಕಾಲಕ್ಕೆ ಪ್ರದರ್ಶನಕ್ಕೆ ಇಡುತ್ತೇವೆ. ಆಗ್ಗೆ ಎಲ್ಲರೂ ಈ ಯಂತ್ರವನ್ನು ಪರೀಕ್ಷಿಸಿ ಅದನ್ನು ಎಲ್ಲರಿಗೂ ಉಪಯೋಗುವಹಾಗೆ ದೊಡ್ಡ ಪ್ರಮಾಣದಿಂದ ತೆಗೆಯಲಿಕ್ಕೆ ಸಹಾಯ ಮಾಡಬೇಕೆಂದು ವಿನಂತಿ.

ಮಲ್ಲಪ್ಪಾ ಕುಬ್ಬಣ್ಣಾ ಮುರಗೋಡ
Inventor, Indian Spinning Machine,
ಮಹಾಲಿಂಗಪ್ಪಾ ದೇವೇಂದ್ರಪ್ಪಾ ಮುರಗೋಡ
Manager, Spinning Machine Works,
GOKAK.

ಶ್ರೀ ಶಿವಲಿಂಗಪ್ರತಿಷ್ಠಾಪನಾ ಮಹೋತ್ಸವ, ಹಿರೇಕೆರೂರ.

ಈ ಊರ ಶ್ರೀಯುತ ಕುಬಸದ ದೊಡ್ಡ ಅಡಿವೆಪ್ಪನವರು ಇಲ್ಲಿಯ ಹೊಸಹೊಂಡದ ಹತ್ತಿರ ಶ್ರೀ ಶಿವಲಿಂಗವನ್ನು ಪ್ರತಿಷ್ಠೆಗೊಳಿಸುವ ಕಾರ್ಯವನ್ನು ಇದೇ ವೈಶಾಖ ಶುದ್ಧ ೧೨ ಬುಧವಾರ ನೆರವೇರಿಸುವುದಾಗಿ ಈ ಮುಂಚೆ ಗೊತ್ತುಪಡಿಸಿದಪ್ರಕಾರ ಈ ಪುಣ್ಯಪ್ರದವಾದ ಸತ್ಕಾರ್ಯವು ಬಹು ವಿಜೃಂಭಣೆಯಿಂದ ಜರುಗಿತು. ಈ ಮಹೋತ್ಸವಕ್ಕೆ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಬ್ಯಾಡಗಿ ವಿರಕ್ತಮಠದ ಶ್ರೀ ಚನ್ನಬಸವಸ್ವಾಮಿಗಳವರು, ಅಬಲೂರ್ ಮತ್ತು ಕಲಾದಗಿಗಳ ಶ್ರೀ ಶ್ರೀ ಚರಮೂರ್ತಿಗಳವರೇ ಮೊದಲಾದ ಪೂಜ್ಯಪಾದರು, ಶಿವಯೋಗಮಂದಿರದ ವಿದ್ವಾನ್ ವೇ|| ಸೋಮನಾಥ ಶಾಸ್ತ್ರಿಗಳವರು, ಶಿಕಾರಿಪುರದ ವೇ|| ಕೊಟ್ಟೂರಪ್ಪಯ್ಯ ಶಾಸ್ತ್ರಿಗಳವರೇ ಮೊದಲಾದ ವಿದ್ವಾಂಸರು, ಶಿವಮೊಗ್ಗಾ ಸಾಹುಕಾರ್ ಮ|| ರಾ|| ಜಿ. ಎಂ. ಕಾಡಪ್ಪನವರು, ಹರ್ಡೇಕರ ಮಂಜಪ್ಪನವರೇ ಮೊದಲಾದ ದೊಡ್ಡ ಮನುಷ್ಯರು ಮತ್ತು ಪೂನಾ, ಧಾರವಾಡ, ಹುಬ್ಬಳ್ಳಿ, ರಾಣೀಬೆನ್ನೂರ, ಶಿರಾಳಕೊಪ್ಪ ಮೊದಲಾದ ಕಡೆಯ ಕಾಲೇಜ್ ಹೈಸ್ಕೂಲ ವಿದ್ಯಾರ್ಥಿಗಳು ಆಗಮಿಸಿದ್ದರು. ಶ್ರೀ ಶಿವಲಿಂಗಪ್ರತಿಷ್ಠೆಗೊಳಿಸುವ ಮಂದಿರದಲ್ಲಿ ಶಿಡೇನೂರ ವೇ|| ವೀರಪ್ಪಯ್ಯನವರಿಂದ ಶ್ರೀ ಬಸವಪುರಾಣ ಶ್ರವಣವು ವೈಶಾಖ ಶು|| ೮ ಭಾನುವಾರದಿಂದ ನಡೆಯಿಸಲ್ಪಡುತ್ತಿದ್ದಿತು. ಅದೇ ಮಂದಿರದಲ್ಲಿ ಶು|| ೧೧ ನೆಯ ದಿವಸ ವೀರಶೈವ ಮಾಹೇಶ್ವರವಟುಗಳ ದೀಕ್ಷಾಸಂಸ್ಕಾರ ಮಹೋತ್ಸವವು ಜರುಗಿತು. ಅನಂತರ ಶು|| ೧೨ ಬುಧವಾರ ಶ್ರೀ ಶಿವಲಿಂಗಸ್ಥಾಪನೆಯು ಮಹತ್ಕಾರ್ಯವು ಜರುಗಿ ಮಹಾಗಣಾರಾಧನೆಯು ನಡೆಯಿತು. ಮರುದಿನ ಮಧ್ಯಾಹ್ನ 3 ಗಂಟೆಗೆ ಶ್ರೀ ಶಿವಾಲಯದ ಮುಂಭಾಗದ ಮಂಟಪದಲ್ಲಿ ಸಭೆ ಸೇರಿತು. ಶಿವಮೊಗ್ಗಾ ಸಾಹುಕಾರ್ ಮ|| ರಾ|| ಜಿ. ಎಂ. ಕಾಡಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶಿಕಾರಿಪುರದ ವೇ|| ಕೊಟ್ಟೂರಪ್ಪಶಾಸ್ತ್ರಿಗಳವರು ವೀರಶೈವ ಮತಸಂಬಂಧವಾಗಿಯೂ ಈಗ ಗುರುವರ್ಗದವರಲ್ಲಿ ಕೆಲವರು ಪ್ರಾರಂಭಿಸಿರುವ ದ್ವೇಷಮೂಲಕವಾದ ಕಲಹದ ಸಂಬಂಧವಾಗಿಯೂ ಉಪನ್ಯಾಸಮಾಡಿ ಅವರ ದುರ್ಬೋಧನೆಯು ಎಷ್ಟು ಅಶಾಸ್ತ್ರೀಯವಾದುದೆಂಬುದನ್ನು ವಿವರಿಸಿದರು. ವೀರಶೈವ ವಿದ್ವಾಂಸರ ಯಾವುದಾದರೊಂದು ಸಂಘದ ಮೂಲಕವಾಗಿ ಪ್ರಕಟವಾಗುವ ಧರ್ಮಗ್ರಂಥಗಳನ್ನು ಮಾತ್ರ ಜನಗಳು ಗಮನಿಸಬೇಕೇ ವಿನಾ ದ್ವೇಷಾಸೂಯೆಗಳಿಂದ ಈಗ ಸ್ವೇಚ್ಛೆಯಿಂದ ಪ್ರಕಟಮಾಡುತ್ತಿರುವ ಒಂದೇ ವ್ಯಕ್ತಿಯ ಅಭಿಪ್ರಾಯವನ್ನು ಗಮನಿಸಬಾರದಾಗಿ ಈ ಸಭೆಯಲ್ಲಿ ತೀರ್ಮಾನಮಾಡಬೇಕೆಂದು ಒಂದು ಸೂಚನೆಯನ್ನು ಮಾಡಿದರು. ಇದು ಸರ್ವಾನುಮತದಿಂದ ತೀರ್ಮಾನವಾಯಿತು. ಅನಂತರ ಶ್ರೀಯುತ ಅಡಿವೆಪ್ಪನವರ ಸತ್ಕಾರ್ಯಗಳನ್ನು ಕುರಿತು ತಾವೇ ರಚಿಸಿದ ಅವರ ಗುಣಕಥನರೂಪವಾದ ಪದ್ಯಗಳನ್ನು ನ್ಯಾಮತಿ ಕನ್ನಡಸ್ಕೂಲ್ ಹೆಡ್ಮಾಸ್ತರರಾದ ಮ|| ರಾ|| ಶಾಂತವೀರಪ್ಪನವರು ಸಭೆಯಲ್ಲಿ ಓದಿಹೇಳಿದರು. ತರುವಾಯ ಮ|| ರಾ|| ಹರ್ಡೇಕರ ಮಂಜಪ್ಪನವರು ಸಮಾಜಸೇವೆಯಮೇಲೂ ಮತ್ತು ಗುರುವರ್ಗದವರು ಸಮಾಜದೇಳಿಗೆಗಾಗಿ ಮಾಡಬೇಕಾದ ಕರ್ತವ್ಯಗಳವಿಷಯವಾಗಿಯೂ ಸರ್ವರ ಮನಸ್ಸಿಗೆ ಪೂರ್ಣಬಿಂಬಿಸುವಂತೆ ಉತ್ಕೃಷ್ಟವಾದ ಭಾಷಣಮಾಡಿದರು. ನಂತರ ದಾವಣಗೆರೆ ಮ|| ರಾ|| ಜಿಗಟೇರಿ ಬಸಪ್ಪನವರು ವಚನಶಾಸ್ತ್ರಗಳಲ್ಲಿ ವಿವರಿಸಲ್ಪಟ್ಟ ವೀರಶೈವ ಮತತತ್ವಗಳನ್ನು ಜನಗಳಿಗೆ ಸುಲಭವಾಗಿ ತಿಳಿಯುವಂತೆ ಹಿಂದಣ ಮಹಾಶರಣರ ವಚನಗಳನ್ನು ಹೇಳಿದರು. ಆಮೇಲೆ ಶ್ರೀಯುತ ಅಡಿವೆಪ್ಪನವರ ಸಹೋದರರಾದ ಕೊಟ್ಟೂರಪ್ಪನವರಿಂದ ಸರ್ವರ ಆಭಾರ ಮನ್ನಿಸಲ್ಪಟ್ಟಿತು. ಅನಂತರ ಸಂಗೀತ ಕೋಳಲ ವಾದ್ಯಗಳಿಂದ ಸಭಿಕರಿಗೆ ಅತ್ಯಾನಂದವಾದ ತರುವಾಯ ಪುಷ್ಪತಾಂಬೂಲಗಳು ಸಭಿಕರಿಗೆ ಹಂಚಲ್ಪಟ್ಟು ಸ್ವಸ್ಥಳ ಪರಸ್ಥಳಗಳ ದೊಡ್ಡಮನುಷ್ಯರ ಭಾವಚಿತ್ರವು ತೆಗೆಯಲ್ಪಟ್ಟಿತು. ಈ ಪ್ರಕಾರ ಈ ಪುಣ್ಯದಾಯಕವಾದ ಮಹತ್ಕಾರ್ಯವನ್ನು ನೆರವೇರಿಸಿದ ಶ್ರೀಯುತ ಅಡಿವೆಪ್ಪನವರಿಗೆ ಜಗದೀಶನು ಇತೋಪ್ಯತಿಶಯವಾದ ಪುಣ್ಯಕಾರ್ಯಗಳನ್ನು ನಡೆಯಿಸುವಂಥ ಶಕ್ತಿಸಾಹಸಗಳನ್ನೀಯಲೆಂದು ಹಾರೈಸುತ್ತೇನೆ.

ಪ್ರೇಕ್ಷಕ.

ಕರ್ನಾಟಕ ಸಾಹಿತ್ಯ ಸಮ್ಮೇಳನ.

(ಏಳನೆಯಸಾರಿಯದು: ಚಿಕ್ಕಮಗಳೂರಿನಲ್ಲಿ).

(ಬರೆದು ಬಂದುದು.)

ಶ್ರೀಮನ್ಮಹಿಸೂರ ಸಂಸ್ಥಾನದ ಕಡೂರುಜಿಲ್ಲೆಯ ಮುಖ್ಯನಗರವಾದ ಚಿಕ್ಕಮಗಳೂರಿನಲ್ಲಿ ಕರ್ನಾಟಕ ಸಾಹಿತ್ಯಾಭಿಮಾನಿಗಳ ಏಳನೆಯ ಸಮ್ಮೇಳನವು ಈ ತಿಂಗಳು ೧೯ ನೆಯ ತಾರೀಖು ಗುರುವಾರ ಸಾಯಂಕಾಲ ೪ ಗಂಟೆಗೆ ಉಪಕ್ರಮಿಸಿತು. ಸಮ್ಮೇಳನ ಸ್ಥಾನವಾದ ಶ್ರೀ ನರಸಿಂಹರಾಜ ಒಡೆಯರ್ ಪೌರಸಭಾ ಮಂದಿರವು ತಳಿರುತೋರಣಗಳಿಂದಲಂಕೃತವಾಗಿ ಕರ್ನಾಟಕದ ನಾನಾಪ್ರಾಂತಗಳಿಂದ ಬಂದಿದ್ದ ಸದಸ್ಯರುಗಳಿಂದಲೂ ಸ್ಥಳೀಯ ಸಭ್ಯಜನರಿಂದಲೂ ತುಂಬಿ ಕಂಗೊಳಿಸುತ್ತಿತ್ತು. ಸಭೆಯಲ್ಲಿ ನಾನಾ ಮತಗಳವರೂ ನಾನಾವೃತ್ತಿಗಳವರೂ ಇದ್ದರಲ್ಲದೆ ಕೆಲವುಮಂದಿ ಮಹಿಳೆಯರೂ ಇದ್ದರು. ಅಗ್ರಾಸನವನ್ನು ಮೈಸೂರು ದರ್ಬಾರಿನ ಸೀನಿಯರ್ ಕೌನ್ಸಿಲರಾಗಿದ್ದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ.ಐ.ಇ. ಅವರು ಅಲಂಕರಿಸಿದ್ದರು. ಅವರ ಒಂದುಪಕ್ಕದಲ್ಲಿ ಸ್ವಾಗತಮಂಡಲಿಯ ಅಧ್ಯಕ್ಷರಾದ ಕಡೂರು ಡಿ|| ಡೆಪ್ಯುಟೀ ಕಮಿಷನರ್ ಮ|| ರಾ|| ಕೆ. ಮೈಲಾರಿರಾಯರು, ಬಿ.ಎ., ಬಿ.ಎಲ್. ಅವರೂ ಮತ್ತೊಂದುಪಕ್ಕದಲ್ಲಿ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರಾದ ರಿಟೈರ್ಡ್ ಚೀಫ್ ಎಂಜನಿಯರ್ ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು, ಬಿ.ಎಸ್.ಸಿ., ಎಲ್.ಸಿ.ಇ. ಅವರೂ ಉನ್ನತಾಸನಗಳನ್ನಲಂಕರಿಸಿದ್ದರು. ಅಲ್ಲಿ ನೆರೆದಿದ್ದ ಇತರ ದೊಡ್ಡಮನುಷ್ಯರಲ್ಲಿ ಹಾಸನದ ಡೆ|| ಕ|| ಮ|| ರಾ|| ಬಿ. ವೆಂಕೋಬರಾಯರವರೂ, ಡಿ|| ಮತ್ತು ಸೆಷನ್ಸ್ ಜಡ್ಜಿ ಮ|| ರಾ|| ಬಿ. ಸುಬ್ಬಣ್ಣನವರೂ, ಹಂಪೆಯ ರಾ|| ಬ|| ಸಿ. ಹನುಮಂತಗೌಡರವರೂ, ಧಾರವಾಡದ ಮ|| ರಾ|| ಕೆ. ಎಸ್. ಹುನಗುಂದರವರೂ, ಮ|| ರಾ|| ಜಿ. ಎಚ್. ಚಿಟ್ಟಗೆರಿಯವರೂ, ಮ|| ರಾ|| ದೇಶಪಾಂಡೆಯವರೂ, ಮ|| ರಾ|| ರಾವ್‌ಸಾಹೇಬ ಹಳಕಟ್ಟಿಯವರೂ, ಜಮಖಂಡಿಯ ಮ|| ರಾ|| ಟಿ. ಎಸ್. ಚಿಕ್ಕೋಡಿಮಠದವರೂ, ಚಿಕ್ಕಮಗಳೂರಿನ ಸಿಟ್ಟೂರು ನಂಜುಂಡಯ್ಯನವರೂ, ಪತ್ರಿವೀರಪ್ಪನವರೂ, ಕಾಫಿಪ್ಲಾಂಟರ್ ಶ್ರೀನಿವಾಸರಾಯರವರೂ, ವಾಸುದೇವರಾಯರವರೂ, ಅನೇಕಮಂದಿ ಅಧಿಕಾರಿಗಳೂ ಲಾಯರುಗಳೂ ಇತರ ಪ್ರಮುಖಜನರೂ ಇದ್ದರು. ಸಭಾಕಾರ್ಯವು ಹೆಣ್ಣುಮಕ್ಕಳು ಹಾಡಿದ ಮಂಗಳಗೀತದೊಡನೆ ಪ್ರಾರಂಭಿಸಿತು. ವಿದ್ಯಾರ್ಥಿ ಮ|| ವಾಸುದೇವಮೂರ್ತಿಯವರು ತಾವು ರಚಿಸಿದ್ದ ಸ್ವಾಗತಪದ್ಯಗಳನ್ನು ಓದಿದರು. ಅನಂತರ ಸ್ವಾಗತಮಂಡಲಿಯ ಅಧ್ಯಕ್ಷರಾದ ಮ|| ರಾ|| ಮೈಲಾರಿರಾಯರವರು ಒಂದು ಚಿಕ್ಕ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಸಕಲ ಸದಸ್ಯರುಗಳಿಗೂ ಸುಸ್ವಾಗತವನ್ನು ಬಯಸಿ ಕಡೂರು ಡಿ|| ನ ಮಹಾಜನರ ಆದರಣೆಯನ್ನು ವ್ಯಕ್ತಪಡಿಸಿದರು. ಕರ್ನಾಟಕದ ಪೂರ್ವಮಹತ್ವವನ್ನೂ ಈಚಿನ ಹೀನದಶೆಯನ್ನೂ ಕುರಿತು ಅವರು ಪ್ರಸ್ತಾಪಿಸಿ ಕರ್ನಾಟಕದ ಪುನರುಜ್ಜೀವನಕ್ಕಾಗಿ ಇಂತಹ ಸಮ್ಮೇಳನಗಳನ್ನು ಆಗಾಗ ದೊಡ್ಡದೊಡ್ಡ ಊರುಗಳಲ್ಲೆಲ್ಲಾ ನಡೆಯಿಸಬೇಕೆಂದೂ, ಅದರಿಂದ ಸಾಮಾನ್ಯಜನರಿಗೂ ಭಾಷಾವಿಷಯದಲ್ಲಿ ಉತ್ಸಾಹಹುಟ್ಟಿ ಗ್ರಂಥಾಭಿವೃದ್ಧಿಯೂ ವಿದ್ಯಾಪ್ರಚಾರವೂ ನಡೆಯಲು ಮಾರ್ಗವಾಗುವುದೆಂದೂ ಸೂಚಿಸಿದರು. ಚಿಕ್ಕಮಗಳೂರು ಪ್ರಾಂತವು ಹೊಯ್ಸಳಬಲ್ಲಾಳ ಮುಂತಾದ ಕನ್ನಡದೊರೆಗಳ ಆಳಿಕೆಗೆ ಒಳಪಟ್ಟು, ಪಂಪ, ಜನ್ನ, ರುದ್ರಭಟ್ಟ, ಲಕ್ಷ್ಮೀಶ, ಮೊದಲಾದ ಕನ್ನಡಕವಿಗಳಿಗೆ ಆವಾಸಸ್ಥಾನವಾಗಿತ್ತೆಂದೂ, ಇದು ಅನೇಕ ಐತಿಹಾಸಿಕ ಕ್ಷೇತ್ರಗಳನ್ನೊಳಕೊಂಡು ಸ್ಪಷ್ಟ ಸೌಂದರ್ಯಾತಿಶಯದಿಂದ ಶೋಭಿಸುತ್ತಿರುವುದೆಂದೂ ಸಹ ಅವರು ಸೂಚಿಸಿ, ಸಮ್ಮೇಳನಕ್ಕೆ ಮಂಗಳವಾಗಲಿ ಎಂದು ಹರಸಿದರು. ಬಳಿಕ ಪುರಪ್ರಮುಖರಾದ ಮ|| ರಾ|| ಸಿ. ಶ್ರೀನಿವಾಸರಾಯರವರು, ಅಗ್ರಸ್ಥಾನವನ್ನು ಮ|| ರಾ|| ಕೆ. ಪಿ. ಪುಟ್ಟಣ್ಣಸೆಟ್ಟರವರು, ಸಿ.ಐ.ಇ. ಅವರು ವಹಿಸಬೇಕೆಂಬ ಕೋರಿಕೆಯನ್ನು ಗಂಭೀರವಾದ ಭಾಷಣದಲ್ಲಿ ಸೂಚಿಸಿದರು. ಅದನ್ನು ರಾವ್‌ಸಾಹೇಬ ಹಳಕಟ್ಟಿಯವರು ಅನುಮೋದಿಸಿ, ರಾವ್ ಬಹದ್ದೂರ್ ಹನುಮಂತಗೌಡರು ಸಮರ್ಥಿಸಿ, ಮ|| ರಾ|| ಕರ್ಪೂರ ಶ್ರೀನಿವಾಸರಾಯರವರು ಪುಷ್ಟೀಕರಿಸಿದಮೇಲೆ ಸಭಿಕರು ಅದನ್ನು ಅಂಗೀಕರಿಸಿ ಕರಸ್ಫಾಲನಮಾಡಲು ಮ|| ರಾ|| ಪುಟ್ಟಣ್ಣಸೆಟ್ಟರವರು ಆ ಗೌರವವನ್ನು ಅಂಗೀಕರಿಸಿ ಸಭೆಗೆ ತಮ್ಮ ವಂದನೆಗಳನ್ನು ಹೇಳಿದರು.

ತರುವಾಯ ಪರಿಷತ್ತಿನ ಕಾರ್ಯದರ್ಶಿಯವರಾದ ಮ|| ರಾ|| ಬೆಳ್ಳಾವೆ ವೆಂಕಟನಾರಾಯಣಪ್ಪ, ಎಂ.ಎ. ಅವರು ರೌದ್ರಿಸಂವತ್ಸರಕ್ಕೆ ಸೇರಿದ ಪರಿಷತ್ತಿನ ವರದಿಯನ್ನು ಓದಿದರು. ದ್ರವ್ಯಾಭಾವವೂ ಇತರ ಕಷ್ಟಗಳೂ ಇದ್ದರೂ ಪರಿಷತ್ತು ತಕ್ಕಮಟ್ಟಿಗೆ ಕೆಲಸಮಾಡಿ ಸಾರ್ಥಕಗೊಂಡಿದೆಯೆಂದು ವರದಿಯಿಂದ ಸ್ಪಷ್ಟವಾಗುತ್ತದೆ. ತದನಂತರ ಸಭಾಧ್ಯಕ್ಷರಾದ ಮ|| ರಾ|| ಪುಟ್ಟಣ್ಣಸೆಟ್ಟರವರು ವಿಸ್ತಾರವಾಗಿಯೂ ಗಂಭೀರವಾಗಿಯೂ ಇದ್ದ ತಮ್ಮ ಉಪನ್ಯಾಸವನ್ನೋದಿದರು. ಅದರಲ್ಲಿ ಕರ್ಣಾಟಕಭಾಷೆಯ ಪ್ರಾಚೀನ ವಾಙ್ಮಯದ ವೈಶಾಲ್ಯವನ್ನೂ ಸೌಂದರ್ಯವನ್ನೂ ವರ್ಣಿಸಿ, ಈಚೆಗೆ ಅದಕ್ಕೆ ಒದಗಿರುವ ಕೊರತೆಗಳನ್ನು ವಿವರಿಸಿ, ಭಾಷಾಭಿವೃದ್ಧಿಗಾಗಿ ಈಗ ನಡೆಯಬೇಕಾಗಿರುವ ಕಾರ್ಯಗಳನ್ನು ಸಂಗ್ರಹವಾಗಿ ಸೂಚಿಸಿರುವರು. ಇನ್ನು ಮುಂದಿನ ಕರ್ನಾಟಕ ಲೇಖಕರು ಇಂಗ್ಲೀಷು ವಾಙ್ಮಯದಲ್ಲಿರುವಂತಹ ವಸ್ತುವೈಚಿತ್ರ್ಯವನ್ನೂ ಕ್ರಮವೈವಿಧ್ಯವನ್ನೂ ನಮ್ಮಲ್ಲಿಯೂ ಕಲ್ಪಿಸಲು ಯತ್ನಿಸಿ ಸಾಮಾನ್ಯಜನರಿಗೆ ರಂಜನೆಯಾಗುವ ರೀತಿಯಲ್ಲಿ ಬರೆಯಬೇಕೆಂದೂ, ಜನರು ಈಗಿಗಿಂತ ಹೆಚ್ಚಾಗಿ ಗ್ರಂಥಪಠನೆಯನ್ನೂ ಗ್ರಂಥಶ್ರವಣವನ್ನೂ ಮಾಡಿ ಲೇಖಕರನ್ನು ಪ್ರೋತ್ಸಾಹಿಸಬೇಕೆಂದೂ ಅವರು ಸೂಚಿಸಿರುವರು. ಹಿಂದಣ ಮೈಸೂರು ಪ್ರಭುಗಳು ಕವಿಪಂಡಿತರಿಗೆ ಕೊಟ್ಟ ಉದಾರಾಶ್ರಯವನ್ನು ಕೃತಜ್ಞತೆಯಿಂದ ಸ್ಮರಿಸಿ, ನಮ್ಮ ಶ್ರೀಮನ್ಮಹಾರಾಜರವರು ಇತೋಪ್ಯತಿಶಯವಾಗಿ ಈ ಭಾಷಾಸಂಸ್ಥೆಯನ್ನು ಪೋಷಿಸುವರೆಂಬ ಭರವಸೆಯನ್ನೂ ಅವರು ಸೂಚಿಸಿರುವರು. ಮತ್ತು, ಪರಿಷತ್ತಿನ ಉದ್ದೇಶಗಳು ಸಾಂಗವಾಗಿ ನೆರವೇರಲಾಗುವಂತೆ ಕರ್ನಾಟಕ ಭಾಷಾಭಿಮಾನಿಗಳು ಎಲ್ಲ ದೊಡ್ಡ ಊರುಗಳಲ್ಲಿಯೂ ಅದರ ಶಾಖೆಗಳನ್ನೇರ್ಪಡಿಸಿ, ಸದಸ್ಯರುಗಳ ಸಂಖ್ಯೆಯನ್ನೂ ಪರಿಷತ್ಪತ್ರಿಕೆಯ ಚಂದಾದಾರರ ಸಂಖ್ಯೆಯನ್ನೂ ಹೆಚ್ಚಿಸಲು ಶ್ರಮತೆಗೆದುಕೊಳ್ಳಬೇಕೆಂದು ಸಲಹೆಕೊಟ್ಟರು. ಉಪನ್ಯಾಸವು ಎಲ್ಲರ ಶ್ಲಾಘನೆಗೂ ಪಾತ್ರವಾಗಿತ್ತು. ಹೆಣ್ಣುಮಕ್ಕಳು ಮಂಗಳವನ್ನೂ ಮೈಸೂರಿನ ರಾಷ್ಟ್ರಗೀತವನ್ನೂ ಹಾಡಿದಬಳಿಕ ಸಭೆಯು ಅಂದಿಗೆ ಮುಗಿಯಿತು. ಸ್ವಾಗತಮಂಡಲಿಯವರು ಸದಸ್ಯರುಗಳನ್ನು ಬಹುಬಗೆಯಾಗಿ ಸತ್ಕರಿಸುತ್ತಿದ್ದಾರೆ. ಈಸಾರೆಯ ಸಮ್ಮೇಳನದ ಸಂಭ್ರಮವು ಸಂತೋಷವನ್ನುಂಟುಮಾಡತಕ್ಕುದಾಗಿದೆ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೮—೦ ; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಬೆಲೆಯಂತೆಯೂ ಕಳುಹಬೇಕು. ಕ್ಲಿಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

35 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೪—೦
ಶಿವಪೂಜಾವಿಧಿಃ	೧—೦—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

೧೯೨೧ ನೆಯ ಇಸವಿ ಮೇ ತಾ|| ೨೯ ರಿಂದ ೧೯೨೧ ನೆಯ ಜೂನ್ ತಾ|| ೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ವೈಶಾಖ ಬಹುಳ ಸಪ್ತಮಿಯಿಂದ ವೈಶಾಖ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
29	ಭಾನು	ಸಪ್ತ	12-0	ಧನಿ	3-0	16
30	ಸೋಮ	ಅಷ್ಟ	16-15	ಶತ	8-46	17
31	ಮಂಗಳ	ನವ	19-42	ಪೂಭಾ	13-44	18
1	ಬುಧ	ದಶ	21-31	ಉಭಾ	17-33	19
2	[1]ಗುರು	ಏಕಾ	22-17	ರೇವ	20-9	20
3	ಶುಕ್ರ	ದ್ವಾದ	21-50	ಅಶ್ವಿ	21-32	21
4	ಶನಿ	ತ್ರಯೋ	20-7	ಭರ	21-31	22

([1]ಶ್ರೀಮನ್ಮಹಾರಾಜರವರ ವರ್ಧಂತಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಮಹಿಮಾ | ಘನಪಥಕೃತಾವತಾರಾ ಪಶ್ಯಜ್ಞನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಪುಸ್ತಕ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಜೂನ್ ತಾರೀಖು ೫ ನೆಯ ಭಾನುವಾರ (ಸಂಚಿಕೆ ೨೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1ರೂ. 5ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು, ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHA
VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಬಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ—ಸೀತಾರಾಘವ ವೈದ್ಯಶಾಲಾ,
21 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನೆ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈ ಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣೀ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

36 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ವಜ್ರದ ಬೆಂಡೋಲೆ.



ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೆಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
36 89 ನಾರಾಯಣಮೊದಲಿ ಬೀದಿ, ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
15 ಕಂಪನಿ, ಚೌಕಂಬಾ ಕಾಶೀ.

ಶಕ್ತಿಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 34

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು. ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರಕೃಚ್ಛರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಕೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫರೋಗಸಂಜೀವಿನಿ ೧ ಡಜನ್ ಮಾತ್ರೆಗಳು ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊರಳೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜೂನ್ ತಾ|| ೫ ನೆಯ ಭಾನುವಾರ.

ಮಿಲ್ಲರ್‌ಸಂಘದ ವರದಿ.

(ಭಾಗ ೨.)

ವಾಕ್ಕು, ಮನಸ್ಸು, ಕ್ರಿಯೆ ಎಂಬಿವುಗಳೇ ತ್ರಿಕರಣಗಳೆಂದು ವ್ಯವಹರಿಸಲ್ಪಡುವುವು. ಸತ್ಪುರುಷರ ನಡೆಯು ಇವು ಮೂರರಲ್ಲೂ ಒಂದೇತೆರನಾಗಿರುವುದು. ದುರ್ಜನರ ನಡೆಯು ಮೂರರಲ್ಲೂ ಮೂರು ತೆರನಾಗಿರುವುದು. ಮನುಷ್ಯನ ಕೃತಾರ್ಥತೆಯು ಅವನ ತ್ರಿಕರಣಶುದ್ಧಿಯನ್ನವಲಂಬಿಸಿಕೊಂಡಿರುವಂತೆಯೇ ಪ್ರಭುತ್ವದ ಕೃತಾರ್ಥತೆಯೂ ತ್ರಿಕರಣಶುದ್ಧಿಯನ್ನೇ ಅವಲಂಬಿಸಿಕೊಂಡಿರುವುದು. ವ್ಯಕ್ತಿಮಾತ್ರದ ತ್ರಿಕರಣಶುದ್ಧಿಯೇ ಎಷ್ಟೋ ಪ್ರಯೋಜನಕರವಾಗುವಾಗ ಅನೇಕ ವ್ಯಕ್ತಿಸಮುದಾಯಾತ್ಮಕವಾದ ಪ್ರಭುತ್ವದ ತ್ರಿಕರಣಶುದ್ಧಿಯ ಮಹತ್ವವನ್ನು ವಿವರಿಸಬೇಕಾಗಿಲ್ಲ. ಮೈಸೂರು ಸಂಸ್ಥಾನದೊಳಗೆ ವಿದ್ಯೆಯಲ್ಲಿ ಹಿಂದುಳಿದಿರುವ ಪ್ರಜೆಗಳು ತಮ್ಮನ್ನುದ್ಧರಿಸುವುದಕ್ಕಾಗಿ ಹಲವು ಸಲ ಪ್ರಭುತ್ವದವರನ್ನು ಪ್ರಾರ್ಥಿಸುತ್ತ ಬಂದರು. ಅವಕ್ಕೆಲ್ಲಾ ಸಾನುಭೂತಿಪರವಾದ ಉತ್ತರಗಳನ್ನು ಪ್ರಭುತ್ವದವರು ಕೊಡುತ್ತಲೇ ಬಂದರು. ಅದರ ಮೇಲೆ "ನಾವು ನಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದೇನೋ ಆಗುತ್ತದೆ, ಪ್ರಭುತ್ವದವರು ನಾಲ್ಕು ಸಾನುಭೂತಿ ವಚನಗಳನ್ನಾಡಿ ತಲೆಸವರಿ ಕಳುಹಿಸಿಬಿಡುತ್ತಾರೆ, ಕಾರ್ಯದಲ್ಲಿ ಏನೂ ನಡೆಯುತ್ತಲಿಲ್ಲ" ಎಂದು ಹಿಂದುಳಿದ ಜನವರ್ಗಗಳವರು ಗೊಣಗುಟ್ಟುತ್ತಿದ್ದರು. ೮-೯ ವರ್ಷಗಳಿಂದ ಸರ್ಕಾರದವರ ಕಾರ್ಯದಲ್ಲಿ ಸ್ವಲ್ಪ ಸಾನುಭೂತಿಯು ವ್ಯಕ್ತವಾಗುತ್ತಿದ್ದಿತು. ಕಳೆದ ೧೯೧೮ನೆ ವರ್ಷದ ಜೂನ್ ತಾ|| ೨೪ರಲ್ಲಿ ಹಿಂದುಳಿದ ಜನವರ್ಗ ಪ್ರಮುಖಪ್ರತಿನಿಧಿಗಳು ಕೆಲರು ರಾಯಭಾರವಾಗಿ ಹೋಗಿ ಶ್ರೀಮನ್ಮಹಾರಾಜರ ಪ್ರತ್ಯಕ್ಷಸಂದರ್ಶನವನ್ನೇ ಪಡೆದುಕೊಂಡು ವಿಜ್ಞಾಪನಪತ್ರ ಸಮರ್ಪಣಮುಖೇನ ತಮಗಿರುವ ಕಷ್ಟಸುಖಗಳನ್ನೂ, ವಿದ್ಯೆಯಲ್ಲಿ ತಾವು ಹಿಂದೆಬಿದ್ದಿರುವುದನ್ನೂ, ಸರ್ಕಾರದ ಉದ್ಯೋಗಗಳಲ್ಲಿ ತಮ್ಮ ಜನರ ಪ್ರತಿನಿಧಿಗಳು ಬಲು ಕಡಿಮೆಯಾಗಿರುವುದನ್ನೂ, ಸರ್ಕಾರದವರು ಮಾಡಿಸುತ್ತಿರುವ ವಿದ್ಯಾಭ್ಯಾಸಕ್ರಮದ ಪಕ್ಷಪಾತತೆಯನ್ನೂ, ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಸಕಲ ಜನವರ್ಗಕ್ಕೂ ಇರಬೇಕಾದ ಪ್ರಾತಿನಿಧ್ಯದ ಅವಶ್ಯಕತೆಯನ್ನೂ ಬಿನ್ನಯಿಸಿಕೊಂಡರು. ಆಗ ಶ್ರೀಮನ್ಮಹಾರಾಜರು ಪ್ರತ್ಯುತ್ತರವನ್ನು ದಯಪಾಲಿಸಿದಾಗ್ಗೆ—ನಿಮ್ಮ ಕಷ್ಟವನ್ನು ನಾನು ಬಲ್ಲೆನೆಂದರು. ನಿಮ್ಮ ಅಭಿಪ್ರಾಯಗಳು ನಮಗೆ ಚೆನ್ನಾಗಿ ಗೊತ್ತಾಗಿವೆಯೆಂದುಸುರಿದರು. ಅವುಗಳ ಸಂಬಂಧವಾಗಿ ಚೆನ್ನಾಗಿ ವಿಚಾರಮಾಡಿ ಆದರಪೂರ್ವಕವಾದ ಏರ್ಪಾಡುಗಳನ್ನು ಮಾಡಲು ಪ್ರಯತ್ನಿಸುವೆವು ಎಂದು ಅಪ್ಪಣೆ ಕೊಟ್ಟರು. ಮತ್ತು ಹಿಂದೆ ಬಿದ್ದುಹೋಗಿರುವ ತರಗತಿಗಳ ಜನರನ್ನು ವೃದ್ಧಿಗೆ ತರಲು ನನ್ನ ಪ್ರಭುತ್ವದವರು ಇನ್ನು ಮುಂದೆ ಈಗಿಗಿಂತಲೂ ಹೆಚ್ಚಾಗಿ ಪ್ರಯತ್ನಮಾಡುವರು ಎಂದು ಅಭಯದಾನವನ್ನೂ ಮಾಡಿದರು. ಮಹಾಪುರುಷ ಕೋಟಿಯಲ್ಲಿ ಸೇರಲರ್ಹವಾದ ನಡತೆಯುಳ್ಳ ಶ್ರೀಮನ್ಮಹಾರಾಜರ ವಾಗ್ದಾನವು ಹುಸಿಯುವುದುಂಟೆ? ಆ ಅಪ್ಪಣೆ ಮಾಡಿದ ೨ ತಿಂಗಳೊಳಗಾಗಿ ಎಂದರೆ ಅದೇ ವರ್ಷದ ಆಗಸ್ಟ್ ತಾ|| ೨೩ ರಲ್ಲಿಯೇ ಮಿಲ್ಲರ್ ಸಂಘವನ್ನೇರ್ಪಡಿಸಿ, ಅದಕ್ಕೆ ನಮ್ಮ ಹಿಂದಣ ಸಂಚಿಕೆಯಲ್ಲಿ ತಿಳಿಯಿಸಿರುವಂತೆ ಕಾರ್ಯಭಾರವನ್ನು ವಹಿಸಿದರು. ಅದರ ಮೇಲೆ ನಡೆದಿರುವ ಪರಿಣಾಮವನ್ನೆಲ್ಲಾ ಕಳೆದ ಸಂಚಿಕೆಯಲ್ಲಿ ನಾವು ವಿವರಿಸಿಯೇ ಇರುತ್ತೇವೆ. ಹಿಂದುಳಿದ ಜನವರ್ಗಗಳ ಮುಂದಾಳುಗಳು ಮಾಡುತ್ತ ಬಂದ ಪ್ರಯತ್ನಕ್ಕೆ ಪ್ರಯೋಜನವು ಈಗ ಆಗುತ್ತಲಿದೆಯೆಂದು ಹೇಳಬಹುದು. ಇದನ್ನು ಅನುಭವಿಸುವ ಯೋಗವು ಅವರ ಮುಂದಣ ಪ್ರಯತ್ನ ವಿಶೇಷಕ್ಕೆ ಅನುಗುಣವಾಗಿರುವುದು. ಈ ಸಂಬಂಧದಲ್ಲಿ ವಿಶೇಷ ಶ್ರದ್ಧೆಯನ್ನೂ ಅಭಿಮಾನವನ್ನೂ ಸಾಹಸವನ್ನೂ ವಹಿಸಿ ಕೆಲಸಮಾಡುತ್ತಲಿದ್ದ ಮಹನೀಯರಾದ ಎಂ. ಬಸವಯ್ಯನವರು ಇಂತಹ ಕಾಲದಲ್ಲಿದ್ದು ಕಣ್ಣಾರ ನೋಡಿ, ಅದರ ಫಲವನ್ನನುಭವಿಸಲು ತಮ್ಮ ಹಿಂಬಾಲಕರನ್ನು ಯಾವ ತೆರದಿಂದಣಿಮಾಡಬೇಕೋ ಅದನ್ನು ಮಾಡಿಸಲು ಇಲ್ಲದಂತಾಗಿ ಹೋದುದೊಂದು ಮಾತ್ರ ವಿಷಾದಸ್ಥಾನವಾಗಿರುವುದು. ಅದಂತಿರಲಿ.

ಮಿಲ್ಲರ್ ಸಂಘದವರು ಮಾಡಿರುವ ವರದಿಯಲ್ಲಿ ಕಾಣಿಸಲ್ಪಟ್ಟಿರುವ ಸೂಚನೆಗಳಿಗೆ ಬಲವತ್ತರವಾದ ಕಾರಣಗಳನೇಕವು ವಿವರಿಸಲ್ಪಟ್ಟಿವೆ. ಅವೆಲ್ಲಾ ನ್ಯಾಯವೆಂದು ಪ್ರಭುತ್ವದವರು ಹಿಂದೆಯೇ ತಿಳಿದುಕೊಂಡಿದ್ದರು. ಈ ವರದಿಯು ಆ ಅಭಿಪ್ರಾಯಗಳನ್ನು ಮತ್ತಷ್ಟು ದೃಢಪಡಿಸಿತು. ಈ ವರದಿಯಲ್ಲಿ ಸಂಸ್ಥಾನದ ಜನವರ್ಗಗಳ ಪ್ರಜಾಸಂಖ್ಯೆಗಳು, ಅವುಗಳಲ್ಲಿ ವಿದ್ಯಾವಂತರ ಸಂಖ್ಯೆ, ಪ್ರಭುತ್ವದ ನಾನಾಶಾಖೆಗಳ ಉದ್ಯೋಗಸ್ಥಾನಗಳಲ್ಲಿ ಯಾವ ಯಾವ ಜನವರ್ಗಗಳವರು ಎಷ್ಟೆಷ್ಟು ಮಂದಿ ಇದ್ದರೆಂಬುದು ಇವನ್ನೆಲ್ಲಾ ಪ್ರಕಟಿಸಿರುತ್ತಾರೆ.

ವರ್ಗಗಳು	ಇಸವಿ	೨೫ ರೂ. ಸಂಬಳದಲ್ಲಿ	೨೫ ರಿಂದ ೫೦	೫೦-೧೦೦	೧೦೦-೨೫೦	೨೫೦-೪೫೦	೪೫೦-೮೦೦	೮೦೦ಕ್ಕೆ ಮೇಲೆ	೧೯೧೧ ನೆ ವರ್ಷದ ಸೆನ್ಸಸ್ ಪ್ರಕಾರ ಆಯಾ ಜನವರ್ಗದ ಒಟ್ಟು ಸಂಖ್ಯೆ.
ಬ್ರಾಹ್ಮಣ	೧೯೧೬	೪೯೦೩	೨೨೮೨	೬೩೪	೨೯೯	೧೦೬	೪೦	೩೨	
	೧೯೧೭	೫೧೭೧	೨೪೮೪	೭೩೯	೩೨೧	೧೨೨	೩೯	೩೫	೧೯೩೧೩೭
	೧೯೧೮	೫೪೦೭	೨೮೨೧	೮೮೨	೩೬೨	೧೫೦	೪೯	೪೧	
ಕ್ಷತ್ರಿಯ	೧೯೧೬	೧೧೭	೪೩	೧೪	೩	೨	೪	೧	
	೧೯೧೭	೧೨೩	೪೨	೧೪	೨	೨	೩	೨	
	೧೯೧೮	೧೪೮	೪೨	೧೬	೫	೪	೧	೪	೩೬೮೯೪
ವೈಶ್ಯ	೧೯೧೬	೩೯	೩೦	೮	೨	೧	....	....	
	೧೯೧೭	೩೫	೨೭	೧೦	೩	....	....	....	
	೧೯೧೮	೪೧	೨೨	೧೦	೨	....	೧	....	೩೫೭೮೪
ಲಿಂಗಾಯತ	೧೯೧೬	೩೪೦	೪೧	೧೧	೧೧	೪	೨	....	
	೧೯೧೭	೩೯೩	೫೩	೧೭	೧೧	೨	೨	....	
	೧೯೧೮	೪೧೩	೫೦	೩೫	೧೦	೫	೨	....	೭೨೮೫೨೧
ಒಕ್ಕಲಿಗ	೧೯೧೬	೨೨೨	೪೦	೧೭	೬	೨	....	೧	
	೧೯೧೭	೨೪೧	೪೬	೧೮	೩	೨	....	೧	
	೧೯೧೮	೨೫೮	೫೪	೧೮	೪	೩	....	೧	೧೩೨೮೨೩೭
ಮೊದಲ್ಯಾರಿ	೧೯೧೬	೭೯	೧೯೬	೮೩	೧೬	೬	....	೧	
	೧೯೧೭	೮೯	೨೦೩	೬೮	೧೬	೪	೧	೨	
	೧೯೧೮	೭೪	೧೯೫	೮೩	೧೯	೫	೧	೧	೧೧೮೭೧
ನಾಯಿಡು	೧೯೧೬	೮೦	೯೪	೪೧	೬	೩	....	....	
	೧೯೧೭	೮೭	೧೦೦	೩೮	೫	೨	....	....	
	೧೯೧೮	೮೬	೧೦೭	೩೮	೫	೪	೨	....	
ಕುರುಬ	೧೯೧೬	೩೭	೩	೧	....	....	....	....	
	೧೯೧೭	೬೨	೨	೨	....	....	....	....	೪೦೮೬೨೩
	೧೯೧೮	೪೪	೨	೨	....	....	....	....	
ಮಹಮ್ಮದೀಯ	೧೯೧೬	೭೪೪	೧೫೦	೪೩	೭	೯	೧	೧	
	೧೯೧೭	೭೭೯	೧೭೧	೪೯	೧೭	೫	....	೨	
	೧೯೧೮	೮೦೩	೧೭೭	೬೫	೧೭	೧೩	....	೩	೩೯೧೭೦೮
ಪಂಚಮ	೧೯೧೬	೩೧	೬	....	....	....	....	....	
	೧೯೧೭	೩೨	೭	....	....	....	....	....	
	೧೯೧೮	೫೯	೮	....	....	....	....	....	೫೯೪೬೩೭
ಜೈನ	೧೯೧೬	೨೪	೧೦	೨	....	೧	....	....	
	೧೯೧೭	೩೨	೧೦	೩	....	....	೧	....	
	೧೯೧೮	೩೪	೮	೧	....	....	೧	....	೭೮೩೯
ಪಾರ್ಸಿ	೧೯೧೬	....	....	೨	೧	೧	....	೧	
	೧೯೧೭	೧	....	೨	....	೧	೩	೧	
	೧೯೧೮	೧	....	೨	....	೧	೩	೧	
ಯೂರೋಪಿಯನ್ ಮತ್ತು ಆಂ. ಇಂಡಿಯನ್	೧೯೧೬	೧೦	೨೧	೨೯	೩೧	೬	೭	೧೭	
	೧೯೧೭	೮	೧೯	೪೧	೪೭	೮	೫	೧೫	
	೧೯೧೮	೧೧	೧೯	೪೧	೪೪	೧೭	೭	೧೭	೫೨೧೩
ಇಂ. ಕ್ರೈಸ್ತ	೧೯೧೬	೨೫೫	೭೧	೪೫	೬	೯	೫	೩	
	೧೯೧೭	೨೩೨	೭೨	೩೬	೧೧	೭	೪	೨	
	೧೯೧೮	೨೫೭	೭೧	೪೫	೭	೫	೫	೫	೩೪೨೦೧
ಪಿಳ್ಳೆ	೧೯೧೬	೮	೧೮	೭	೧	೬	....	....	
	೧೯೧೭	೮	೧೮	೪	೨	೧	....	....	
	೧೯೧೮	೧೧	೨೧	೫	೧	೧	....	....	

ಆ ಲೆಕ್ಕಗಳು ೧೯೧೬ ನೆ ವರ್ಷದಿಂದೀಚೆಗೆ ೩ ವರ್ಷಗಳ ಕಾಲಕ್ಕೆ ಸಂಬಂಧಪಟ್ಟುವಾಗಿವೆ. ಇನ್ನೂ ಹಿಂದಣ ೫೦-೬೦ ವರ್ಷಗಳ ಲೆಕ್ಕವನ್ನು ಎತ್ತಿ ಉದಹರಿಸಿದ್ದರೆ ಇನ್ನೂ ಅತಿಶಯವಾದ ವ್ಯತ್ಯಾಸಗಳು ಗೋಚರಿಸುತ್ತಿದ್ದುವೋ ಏನೋ. ಅಷ್ಟಕ್ಕೆ ಸಂಘದವರು ಪ್ರಯತ್ನಪಟ್ಟಂತೆ ತೋರುವುದಿಲ್ಲ. ಸಂಘದವರು ವಿವರಿಸಿರುವ ೩ ವರ್ಷಗಳ ಲೆಕ್ಕದ ಪ್ರಕಾರ ಸಂಸ್ಥಾನದಲ್ಲಿ ೨೫ ರೂ. ಗಳಿಗೆ ಮೇಲ್ಪಟ್ಟು ಎಷ್ಟೆಷ್ಟು ಸಂಬಳದಲ್ಲಿ ಯಾವ ಯಾವ ಜನವರ್ಗದವರು ಎಷ್ಟೆಷ್ಟು ಜನರಿದ್ದರೆಂಬುದನ್ನು ತಿಳಿಯಬಹುದಾಗಿದೆ. ಅದರಲ್ಲಿ ಒಟ್ಟು ೩೦ ಜನ ವರ್ಗಗಳ ವಿವರವು ಕೊಡಲ್ಪಟ್ಟಿದೆ. ನಾವು ಕೆಲಮುಖ್ಯ ಜನವರ್ಗಗಳ ವಿವರಣೆಯನ್ನು ಮಾತ್ರ ಮಗ್ಗುಲಲ್ಲಿರುವ ಪಟ್ಟಿಯಲ್ಲಿ ಎತ್ತಿ ಬರೆದಿರುತ್ತೇವೆ.

ಪಟ್ಟಿಯಲ್ಲಿ ಕಂಡ ವಿವರಣವನ್ನು ನೋಡಿದರೆ ತ್ರಿಮತಸ್ಥ ಬ್ರಾಹ್ಮಣರು ಜನಸಂಖ್ಯೆಯಲ್ಲಿ ಅಲ್ಪವಾಗಿದ್ದರೂ ಸರ್ಕಾರದ ಚಿಕ್ಕ ದೊಡ್ಡ ಉದ್ಯೋಗಗಳಲ್ಲೆಲ್ಲಾ ೯೭೧೨ ಮಂದಿಗಳು ೧೯೧೮ ನೆ ವರ್ಷದಲ್ಲಿದ್ದರೆಂದೂ, ಆ ಕಾಲದಲ್ಲಿ ಇತರ ವರ್ಗಗಳ ಜನರೆಲ್ಲಾ ಬಲು ಕಡಿಮೆಯಾಗಿಯೂ, ಶತ್ರಾಪಿ ನೂರರ ಮೇಲ್ಪಟ್ಟ ಸಂಬಳದ ಉದ್ಯೋಗಗಳಲ್ಲಿ ಇತರರು ಇದ್ದುದು ತೀರ ಕಡಿಮೆಯೆಂದೂ, ೫೦೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗದಲ್ಲಿ ಇತರರಿರುವುದೇ ಬಹು ಅಪೂರ್ವವೆಂದೂ ವ್ಯಕ್ತವಾಗುವುದು. ಅಲ್ಲದೆ ಅಕ್ಕಸಾಲಿಗರು, ಜಟ್ಟಿಗಳು, ದರ್ಜಿಯವರು, ಸಾತಾನಿಗಳು, ಚಟ್ಟಿಗಳು, ಮರಾಟಿಗರು, ನಾಯಿಕರು ಮೊದಲಾದ ಜನವರ್ಗಗಳಲ್ಲಿ ಸಣ್ಣ ಪುಟ್ಟ ಉದ್ಯೋಗಗಳಲ್ಲಿರುವವರು ಬಹಳ ಕಡಿಮೆ. ದೊಡ್ಡ ಉದ್ಯೋಗಗಳಲ್ಲಂತು ಒಬ್ಬರೂ ಇಲ್ಲವೇ ಇಲ್ಲವೆಂದು ಕಾಣುವುದು. ಇಂಥ ಸ್ಥಿತಿಯು ಸಂಸ್ಥಾನದ ಬಹು ಸಂಖ್ಯಾಕರಾದ ಇತರ ಜನವರ್ಗಗಳಿಗೆಲ್ಲಾ ಇರುವುದು ವಿಚಾರಕರವಾದುದಲ್ಲವೆ? ತಕ್ಕ ವಿದ್ಯಾಸಂಸ್ಕರಣಗಳಿಗೆ ಪ್ರವೇಶಗೊಳಿಸದೆ ಹೋದಂಥ ಪ್ರಾಚೀನ ಕಾರಣಗಳಿಂದಲೂ, ಈಗಣ ವಿದ್ಯಾಭ್ಯಾಸದಲ್ಲಿ ನಗರನಿವಾಸಿಗಳಿಗೆ ಮಾತ್ರ ವಿದ್ಯಾಭ್ಯಾಸಕ್ಕೆ ಅತಿಶಯವಾದ ಸಾಹಾಯ್ಯಪ್ರೋತ್ಸಾಹಗಳನ್ನಿತ್ತು ಗ್ರಾಮಾಂತರದ ಜನರಿಗೆ ತಕ್ಕ ಸಾಹಾಯ್ಯಾನುಕೂಲ್ಯಗಳನ್ನು ಕಲ್ಪಿಸದೆ ಹೋಗಿರುವ ತಾತ್ಕಾಲಿಕ ಕಾರಣಗಳಿಂದಲೂ ಕೂಡ ಇಂಥ ವಿಷಮಸ್ಥಿತಿಯು ಪ್ರಾಪ್ತವಾಗಿರುವುದು. ಇದನ್ನು ಪರಿಹರಿಸಿ ಅವಶ್ಯಕವಾದ ವಿದ್ಯಾವಿಕಾಸಗಳನ್ನು ಅವರುಗಳಿಗೆ ಉಂಟುಮಾಡಿ, ಯಾವ ಉದ್ಯೋಗಕ್ಕೆ ಪ್ರವೇಶಗೊಳಿಸಿದರೂ ಥಟ್ಟನೆ ಅಲ್ಲದೆ ಹೋದರೂ ಕಾಲಕ್ರಮದಲ್ಲಾದರೂ ಇತರರೆಲ್ಲಾ ಅಧಿಕಾರ ನಿರ್ವಾಹಸಾಮರ್ಥ್ಯಸಂಸ್ಕಾರವನ್ನು ಪಡೆದುಕೊಳ್ಳುವುದರಲ್ಲಿ ಅಭ್ಯಂತರವಿರುವುದಿಲ್ಲ. ಅವರುಗಳೂ ಮಾನವಕೋಟಿಗೆ ಸೇರಿದವರೇ ಹೊರತು ಪಶುಪಕ್ಷಿ ಜಾತಿಗೇನೂ ಸೇರಿದವರಲ್ಲ. ವಿದ್ಯಾಭ್ಯಾಸವೂ ಸರ್ಕಾರದ ಉದ್ಯೋಗನಿರ್ವಾಹವೂ ಒಂದೇ ಒಂದು ಜನವರ್ಗದ ಮುಡುಪಲ್ಲ. ಎಲ್ಲರನ್ನೂ ಸರ್ಕಾರದುದ್ಯೋಗಕ್ಕೆ ಸೇರಿಸಿದರೆ ಸರ್ಕಾರದ ಬಿಗಿ ತಪ್ಪಿಹೋಗುವುದೆಂದು ಹೇಳುವ ಮಾತು ಹೇತ್ವಾಭಾಸವೇ ಹೊರತು ನಿರ್ವ್ಯಂಜನೆಯಾದ ಸತ್ಕಾರಣವಲ್ಲ. ಎಂದೆಂದಿಗೂ ಈಜುಬಾರದವನನ್ನು ನೀರಿನ ಬಳಿಗೆ ಸೇರಿಸದೆ ಹೋದರೆ ಜನ್ಮದಲ್ಲಿ ಅವನು ಯಾವಾಗಲೂ ಈಸುವುದನ್ನೇ ಕಲಿಯಲಾರನು. ನೀರಿಗೆ ಬಿದ್ದು ಒದೆದಾಡಿ ಪ್ರಯತ್ನಪಟ್ಟಾಗಲೇ ಅದು ಸಾಧ್ಯವಾದೀತು. ಈಗ ಮುಂಬರಿದು ಸರ್ಕಾರದ ಉದ್ಯೋಗಗಳನ್ನು ವಿಶೇಷವಾಗಿ ಪಡೆದಿರುವವರಿಗೂ ಅದೇನೂ ಕುಲಕಸುಬಲ್ಲ. ಅವರು ದೂರದೃಷ್ಟಿಯುಳ್ಳವರಾಗಿ ಜಾಣ್ಮೆಯಿಂದ ಆ ಉದ್ಯೋಗಕ್ಕೆ ಹತ್ತಿಕೊಂಡು ತಮ್ಮವರನ್ನೆಲ್ಲಾ ತಮ್ಮ ಬಳಿಗೆ ಸೆಳೆದುಕೊಳ್ಳುತ್ತ ಬಂದುದರಿಂದಲೇ ಅವರಿಗೆ ಆ ಉದ್ಯೋಗವು ಸುಕರವಾಗಿರುವುದು. ಇತರರ ಮಾತೂ ಹಾಗೆಯೇ. ಶ್ರೀಮನ್ಮಹಾರಾಜರೂ ಅವರ ಪ್ರಭುತ್ವದವರೂ ಆಗಾಗ್ಗೆ ಹಿಂದುಳಿದವರಿಗೆ ಆಶ್ವಾಸನೆ ಕೊಡುತ್ತ ಸ್ವಲ್ಪಸ್ವಲ್ಪವಾಗಿ ಈಡೇರಿಸುತ್ತ ಬಂದಿದ್ದುದನ್ನು ಈಗ ಕಾರ್ಯತಃ ದೊಡ್ಡದಾಗಿ ಈಡೇರಿಸಲು ದೃಢವಾದ ಹದಿಯನ್ನು ಹಾಕಿ ಕೃತಕೃತ್ಯರಾಗಿದ್ದಾರೆ. ಅವರು ಮಾಡಿಟ್ಟಿರುವ ಏರ್ಪಾಟನ್ನು ಸಾರ್ಥಕಪಡಿಸಿ ದೇಶೋದ್ಧರಣೆಯನ್ನು ಮಾಡಿ ಪ್ರಜಾರಂಜಕರಾಗುವ ಭಾರವು ಈಗ ಉನ್ನತಾಧಿಕಾರಗಳನ್ನಲಂಕರಿಸಿರುವ ದೊಡ್ಡ ಮನುಷ್ಯರುಗಳ ಹಸ್ತಗತವಾಗಿರುವುದು. ಅವರು ಶ್ರೀಮನ್ಮಹಾರಾಜರ ಅಪ್ಪಣೆಗೆ ಲೋಪಬರದಂತೆ ನೆರವೇರಿಸುವ ಸ್ವಾಮಿಭಕ್ತಿಯನ್ನೂ ಉದಾರಚಿತ್ತವನ್ನೂ ತೋರಿಸದಿದ್ದರೆ ದೇವರು ವರಕೊಟ್ಟರೂ ಪೂಜಾರಿ ವರಕೊಡನೆಂಬ ಗಾಥೆಯಂತಾಗಿ ಈ ಅಪ್ಪಣೆಯು ಬಹುಭಾಗದಲ್ಲಿ ವ್ಯರ್ಥವೇ ಆದೀತು. ಇದಕ್ಕಾಗಿ ಏರ್ಪಡಿಸಲಿಕ್ಕಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು ಮುಖ್ಯವಾಗಿ ಹಿಂದುಳಿದವರ ಭಾಗದ ದೇವತೆಯಾಗಿ ಕೆಲಸ ಮಾಡುವಂತಹದಾಗಿರಬೇಕು. ಅಲ್ಲದೆ "ಹಿಂದುಳಿದವರು ಸರ್ಕಾರದುದ್ಯೋಗಗಳಿಗೆ ಸೇರಿದ ಬಳಿಕ ಮುಂದಣ "ಪ್ರಮೋಷನ್" ಮೊದಲಾದುವುಗಳೆಲ್ಲಾ ಯಾವವ್ಯತ್ಯಾಸವೂ ಇಲ್ಲದಂತೆ ಒಂದೇಸಮನಾಗಿ ನಡೆದುಕೊಂಡುಹೋಗುವುವು, ಎಂದು ಈಗಮಾಡಿರುವ ಅಪ್ಪಣೆಯನ್ನು ಕೂಡ ಸರ್ಕಾರದವರು ಪುನರ್ವಿಮರ್ಶೆಯಿಂದ ವ್ಯತ್ಯಾಸಮಾಡುವುದು ಅವಶ್ಯಕವೆಂದು ಹೇಳಬೇಕಾಗಿದೆ. ಏಕೆಂದರೆ—ಪ್ರಭುತ್ವದವರ ಉದ್ದೇಶವು ಈಡೇರಬೇಕಾದರೆ, ಈಗ ಹಿಂದುಳಿದವರ ವಿಷಯದಲ್ಲಿ ಕೆಲ ವಿಶೇಷಾನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿರುವಂತೆಯೇ ಅವರ "ಬಡತಿ" ಯ ವಿಷಯದಲ್ಲೂ ಮುಂಬರಿದವರಿಗಿಂತ ಸ್ವಲ್ಪ ವಿಶೇಷಾನುಕೂಲ್ಯಗಳನ್ನು ಇವರಿಗೆ ಕೆಲಕಾಲದವರೆಗಾದರು ಕೊಡಬೇಕು. ಇಲ್ಲದಿದ್ದರೆ ದೊಡ್ಡದೊಡ್ಡ ಉದ್ಯೋಗಗಳಿಗೆ ೭ ವರ್ಷಕಾಲದವಧಿಯೊಳಗಾಗಿ ಈ ಹಿಂದುಳಿದವರು ಏರುವುದು ಅಸಂಭವ. ಉದಾಹರಣೆ-ವರದಿಯಲ್ಲಿ ಕಂಡಿರುವ ಪಟ್ಟಿಯನ್ನು ನೋಡಿದರೆ ೧೯೧೨ ನೆ ವರ್ಷದಿಂದ ೧೯೧೮ ನೆ ವರ್ಷದವರೆಗೆ ಮುಂಬರಿದ ಬ್ರಾಹ್ಮಣವರ್ಗದವರಿಗೆ ಅಮಲ್ದಾರಿ ಡೆಪ್ಯುಟಿಅಮಲ್ದಾರಿ ಸ್ಥಾನಗಳು ೭೯ ಕೊಡಲ್ಪಟ್ಟಿವೆ. ಅಷ್ಟೇಕಾಲದಲ್ಲಿ ಲಿಂಗಾಯತರಿಗೆ ೫, ಕ್ಷತ್ರಿಯರಿಗೆ ೨, ಒಕ್ಕಲಿಗರಿಗೆ ೦, ಸಾದರಿಗೆ ೨, ಮಹಮ್ಮದೀಯರಿಗೆ ೧೧, ವೈಶ್ಯರಿಗೆ ೦, ಹೀಗೆ ಕೊಡಲ್ಪಟ್ಟಿರುತ್ತವೆ. ಅ|| ಕಮಿಷನರ್‌ಗಿರಿಯ ಅವಸ್ಥೆಯು ಇದಕ್ಕಿಂತಲೂ ಹೀನವಾಗಿದೆ. ಮುನ್‌ಸೀಫ್‌ಗಿರಿಗಳಲ್ಲಿ ಅದೇ ೭ ವರ್ಷಗಳ ಕಾಲದಲ್ಲಿ ತ್ರಿಮತಸ್ಥರಿಗೆ ೭ ಸ್ಥಾನಗಳು ಕೊಡಲ್ಪಟ್ಟಿರುವಾಗ ಲಿಂಗಾಯತರಿಗೆ ೧, ಮಹಮ್ಮದೀಯರಿಗೆ ೧, ಮೊದಲ್ಯಾರರಿಗೆ ಒಂದು ಸಿಕ್ಕಿದೆ. ಇತರರಿಗೆಲ್ಲಾ ೦. ಈಸ್ಥಿತಿಯಿರುವಾಗ ಎಲ್ಲೋ ಒಬ್ಬೊಬ್ಬ ಹಿಂದುಳಿದವರು ಸರ್ಕಾರದ ಉದ್ಯೋಗದ ಮೆಟ್ಟಲನ್ನು ಹತ್ತಿದಬಳಿಕ ತಮಗಿಂತ ಎಷ್ಟೋ ನೂರುಪಾಲು ಹೆಚ್ಚಾಗಿರುವಜನರೊಡನೆ ಇವರೂ ಒಂದೊಂದು ಮೆಟ್ಟಲನ್ನು ಹತ್ತಿ ಉನ್ನತಸ್ಥಾನಗಳಿಗೆ ಬರಬೇಕಾದರೆ ಇವರಿಗೆ ಸರ್ವೀಸ್ ಕಾಲವೇನಾದರೂ ದ್ವಿಗುಣವಾಗಿದ್ದೀತೆ? ಅಥವಾ ಆಯುರ್ನಿರ್ಯಾಣವಾದರೂ ವಿಲಕ್ಷಣವಾಗಿದ್ದೀತೆ? ಸರ್ಕಾರದ ಉದ್ಯೋಗಸ್ಥಾನಗಳಿಗೆ ಸೇರಿಸುವ ವಿಷಯದಲ್ಲಿ ಇವರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡಲು ಪ್ರಭುತ್ವದವರಿಗೆ ಯಾವಕಾರಣಗಳಿದ್ದವೋ ಆ ಕಾರಣಗಳಮೇಲೆಯೇ ಇವರುಗಳನ್ನು ಉದ್ಯೋಗಗಳಿಗೆ ಸೇರಿಸಿದಮೇಲೆ ಇತರರ ಅಪೇಕ್ಷೆಯಾ ದ್ವಿಗುಣವಾದ "ಬಡತಿ" ಗಳನ್ನು ಇವರಿಗೆ ಕೊಡುವುದೂ ಅವಶ್ಯಕವಾಗಿರುತ್ತದೆ. ಹೀಗೆ ಮಾಡದೆಹೋದರೆ ಈಗಣ ಅಪ್ಪಣೆಯ ಬಹುಭಾಗವು ಆಕಾರಮಾತ್ರ ಪ್ರಯೋಜನವಾಗಿ ಪರಿಣಮಿಸೀತು. ಹಿಂದುಳಿದವರ ಮುಖಂಡರು ಈ ವಿಷಯವನ್ನು ಪ್ರಭುತ್ವದವರ ಗಮನಕ್ಕೆತರುವುದು ಅತ್ಯಾವಶ್ಯಕವೆಂದೂ ಪ್ರಭುತ್ವದವರಾದರೂ ಪುನರ್ವಿಮರ್ಶೆಯಿಂದ ಈ ರೀತಿಯ ಅನುಕೂಲ್ಯವನ್ನು ಕಲ್ಪಿಸಲು ಉದಾರಚಿತ್ತವನ್ನು ತೋರಿಸದಿರಲಾರರೆಂದೂ ನಂಬಿರುವೆವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರು ಕಳೆದ ಭಾನುವಾರ ನೀಲಗಿರಿಗೆ ದಯಮಾಡಿಸಿದರು.

ನಿಯಮನಿರ್ಮಾಣಸಭೆಯು ಇದೇ ತಿಂಗಳು ತಾ|| ೨೭ ರ ಮಧ್ಯಾಹ್ನ ಬೆಂಗಳೂರಲ್ಲಿ ಕೂಡುವುದು.

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವು ಇದೇ ತಿಂಗಳು ತಾ|| ೧೬ ನೆ ಗುರುವಾರ ನಡೆಯುವುದು.

ಈ ಸಲದ ಬಿ. ಎ. ಪರೀಕ್ಷೆಗೆ ಕುಳಿತಿದ್ದವರಲ್ಲಿ ೭ ಮಂದಿ ವೀರಶೈವ ವಿದ್ಯಾರ್ಥಿಗಳು ಉತ್ತೀರ್ಣರಾದರೆಂದು ತಿಳಿದೆವು.

ಗೌ|| ಅಡ್ವೋಕೇಟರಾದ ಮ|| ಸಿ. ಎಸ್. ದೊರೆಸಾಮಯ್ಯರು ಉದ್ಯೋಗಕ್ಕೆ ರಾಜೀನಾಮೆ ಕೊಟ್ಟರೆಂದೂ ಕಲ್ಕತ್ತಾದ ಒಂದು ದೊಡ್ಡ ಫರಮ್ಮಿನಲ್ಲಿ ಸೇರುವವರಾಗಿದ್ದಾರೆಂದೂ ಕೇಳುತ್ತೇವೆ.

ಶ್ರೀಯುವರಾಜರವರ ವರ್ಧಂತ್ಯುತ್ಸವ ನಿಮಿತ್ತವಾಗಿ ಕಳೆದ ತಾ|| ೨ ರಲ್ಲೂ ಸಾರ್ವಭೌಮರ ವರ್ಧಂತ್ಯುತ್ಸವ ನಿಮಿತ್ತವಾಗಿ ಕಳೆದ ತಾ|| ೪ ರಲ್ಲೂ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ವಿಶ್ರಾಂತಿಯು ಕೊಡಲ್ಪಟ್ಟಿದ್ದಿತು.

ಮೈಸೂರು ಡಿಸ್ಟ್ರಿಕ್ಟು ಜಡ್ಜರಾಗಿರುವ ಬ್ಯಾರಿಸ್ಟರ್, ಮ|| ಬಿ. ನಾಗಪ್ಪನವರು, ಮಿ|| ಬಿ. ಆರ್. ಫ್ಲಮರ್‌ರವರ ೫ ತಿಂಗಳ ರಜಾದ ಕಾಲದಲ್ಲಿ ಚೀಫ್ ಕೋರ್ಟು ಆಕ್ಟಿಂಗ್ ೩ ನೆ ಜಡ್ಜರಾಗಿ ನಿಯಮಿಸಲ್ಪಟ್ಟರೆಂದು ತಿಳಿಯಿಸಲು ಸಂತೋಷಿಸುತ್ತೇವೆ.

ಇದುವರೆಗೆ ನಡೆಯಿಸಿದ ಮಳೆಯಿಂದ ಮೈಸೂರು, ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ತಿ|| ನರಸಿಹ್ಮಪುರದ ತಾಲ್ಲೂಕುಗಳಲ್ಲಿ ಮುಂಗಾರು ಬೆಳಸು ಉತ್ಕೃಷ್ಟವಾಗಿರುವುದೆಂದು ತಿಳಿಯಿಸಲು ಸಂತೋಷಿಸುತ್ತೇವೆ. ರಾಗಿ, ಜೋಳಗಳ ಬೆಲೆಯು ಇಳಿದುಹೋಗಿದೆ.

ವಿದ್ಯುಚ್ಛಕ್ತಿ ಶಾಖೆಯಲ್ಲಿ ಯೂನಿಟ್ಟಿಗೆ ೨|| ಆಣೆಯ ಛಾರ್ಜಿದ್ದುದನ್ನು ಈಗ ಮುಂದಣ ತಿಂಗಳಿಂದ ಯೂನಿಟ್ಟಿಗೆ ೪ ಆಣೆಯಂತೆ ಹೆಚ್ಚಿಸಿರುತ್ತಾರೆ. ಛಾರ್ಜನ್ನು ಇನ್ನೂ ಕಡಿಮೆಮಾಡಿ ಕೊಡಬೇಕೆಂದು ಪ್ರಜೆಗಳು ಕೇಳುತ್ತಿದ್ದುದಕ್ಕೆ ಮತ್ತೆ ಮೊದಲಿಗಿಂತ ||| ಭಾಗದಷ್ಟು ಹೆಚ್ಚಿಸಿದುದೇ ಫಲವಾಯಿತು.

ವಿದ್ಯಾಭ್ಯಾಸದ ಮೆಮೋರಾಂಡಮ್ಮಿನ ಮೇಲೆ ಸರ್ಕಾರದವರು ಮಾಡಿರುವ ಅಪ್ಪಣೆಯು ಈಗತಾನೇ ಪ್ರಕಟಿತವಾಗಿದೆ. ವಿದ್ಯಾಪ್ರಸಾರದ ವಿಷಯದಲ್ಲಿ ವಿಶೇಷೋಪಕಾರಿಯಾಗಿರುವ ಈ ಕ್ರಮವನ್ನು ವ್ಯವಹರಣೆಗೆ ತರಲು ಸರ್ಕಾರದವರು ಮನಸ್ಕರಿಸಿದುದಕ್ಕಾಗಿ ಪ್ರಜೆಗಳ ವಂದನೆಗೆ ಪ್ರಭುತ್ವದವರು ಪಾತ್ರರಾಗಿದ್ದಾರೆ.

ರಾಜಧಾನಿಗೆ ಕುಡಿಯುವ ನೀರನ್ನೊದಗಿಸುವುದಕ್ಕಾಗಿ ಇದುವರೆಗೆ ೨೦ ಲಕ್ಷ ರೂ. ಗಳ ಮೇಲೆಯೇ ವೆಚ್ಚವಾಗಿದೆ. ಆದರೂ ಸಮೃದ್ಧವಾಗಿ ನೀರು ಎಲ್ಲಾ ಕಡೆಗೂ ಒದಗುತ್ತಲಿಲ್ಲ. ದೂರಿಲ್ಲದೆ ಸಮೃದ್ಧವಾಗಿ ಒದಗುವಂತೆ ಮಾಡಬೇಕಾದರೆ ಇನ್ನೂ ೨೧ ಲಕ್ಷ ರೂ. ಗಳನ್ನು ವ್ಯಯಮಾಡಬೇಕಾಗುವುದಂತೆ. ಆದರೂ ಸದ್ಯಕ್ಕೆ ನೀರನ್ನೆತ್ತಿ ಒದಗಿಸುವ ನವೀನ ಯಂತ್ರಗಳನ್ನು ತರಿಸುವುದು ಅತ್ಯವಶ್ಯಕವಾಗಿರುವುದರಿಂದ ೧ ಲಕ್ಷ ರೂ. ಗಳನ್ನು ವೆಚ್ಚಮಾಡಲು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ರಾಜಧಾನಿಯ ಕುಕ್ಕರಹಳ್ಳಿಯ ಕೆರೆಗೆ ಜಲಾನಯನದ ಮಾರ್ಗವಾದ ನಾಲೆಯು ೨೦ ವರ್ಷಗಳಿಂದೀಚೆಗೆ ಜೀರ್ಣೋದ್ಧಾರಗೊಳ್ಳದೆ ಇದ್ದುದರಿಂದ ಕೆರೆಯು ತುಂಬುತ್ತಲೇ ಇರಲಿಲ್ಲ. ಇದರ ನೀರನ್ನು ಕುಡಿಯುವುದಕ್ಕೆ ಮೈಸೂರಿಗೆ ಉಪಯೋಗಿಸುವ ಅವಶ್ಯಕತೆಯಿಲ್ಲದುದರಿಂದ ಹೀಗಾಯಿತು. ಆದರೆ ಈಗ ಈ ನಾಲೆಯ ಜೀರ್ಣೋದ್ಧಾರಕ್ಕಾಗಿ ಸರ್ಕಾರದವರು ೨೫ ಸಾವಿರ ರೂ. ಗಳನ್ನು ಅಪ್ಪಣೆಮಾಡಿದ್ದಾರೆಂದು ಕೇಳುತ್ತೇವೆ. ಇಷ್ಟು ಹೆಚ್ಚು ಹಣವನ್ನು ಅದಕ್ಕೆ ಈಗ ವಿನಿಯೋಗಿಸಬೇಕಾದ ಆವಶ್ಯಕತೆಯೇನಿದ್ದಿತೋ ತಿಳಿಯಲಿಲ್ಲ.

ಬರುವ ಜುಲೈ ತಿಂಗಳಿಂದ ತರೀಕೆರೆ, ಕಡೂರು, ಕೊಪ್ಪ, ನರಸಿಹ್ಮರಾಜಪುರ, ಇವನ್ನೆಲ್ಲಾ ಕೂಡಿಸಿ ಒಂದು ಸಬ್‌ಡಿವಿಜನ್ನಾಗಿ ಮಾಡಿ ಅದರ ಹೆಡ್‌ಕ್ವಾರ್ಟರು ತರೀಕೆರೆಯಲ್ಲಿಡಲ್ಪಡುವುದು. ಚಿಕ್ಕಮಗಳೂರು ತಾಲ್ಲೂಕು ಛಾರ್ಜು ಅಲ್ಲಿಯ ಟ್ರೆಜರಿ ಇನ್ ಛಾರ್ಜಿನ ಅ|| ಕಮಿಷನರಿಗೂ, ಮೂಡಗೆರೆ ತಾಲ್ಲೂಕು ಛಾರ್ಜು ಕಡೂರು ಡಿಸ್ಟ್ರಿಕ್ಟು ಕಮಿಷನರಿಗೂ ವಹಿಸಲ್ಪಡುವುದು. ಆ ಡಿಸ್ಟ್ರಿಕ್ಟುಟ್ರೆಜರಿ ಆಫೀಸರಿಗೆ ಮಲೆನಾಡು ಅಭಿವೃದ್ಧಿಕಾರ್ಯದ ಚಿಕ್ಕಮಗಳೂರು ಮೂಡಗೆರೆ ತಾಲ್ಲೂಕುಗಳ ವರಮಾನದ ತೆರಿಗೆಯ ಮೇಲ್ವಿಚಾರಣೆಯ ಅಧಿಕಾರವು ವಹಿಸಲ್ಪಡುವುದು.

ಮಂಜರಾಬಾದ್ ತಾಲ್ಲೂಕಿನ ವೀರಶೈವರ ಮತ್ತು ಒಕ್ಕಲಿಗರ ವಿದ್ಯಾಭ್ಯುದಯ ಪರ್ಯಾಲೋಚನೆಗಾಗಿ ಸಕಲೇಶಪುರದ ಮ|| ಬಿ. ಸಂಣೇಗೌಡರ ಭವನದಲ್ಲಿ ಪ್ರಮುಖ ಪ್ರಜೆಗಳು ಸಬ್‌ಡಿವಿಜನ್ ಆಫೀಸರಾದ ಮ|| ಜಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ತಾ|| ಅಮಲ್ದಾರರಾದ ಮ|| ಕೆ. ಸಿದ್ಧರಾಮಪ್ಪನವರೇ ಮೊದಲಾದ ದೊಡ್ಡಮನುಷ್ಯರು ವಿದ್ಯಾಭಿವೃದ್ಧಿಯ ಅವಶ್ಯಕತೆಯನ್ನು ಕುರಿತು ಮಾಡಿದ ಉಪನ್ಯಾಸಗಳು ಸಭಿಕರನ್ನು ವಿಶೇಷವಾಗಿ ಉತ್ತೇಜನಗೊಳಿಸಿದುವು. ಸಕಲೇಶಪುರದಲ್ಲಿ ವೀರಶೈವರಿಗೊಂದು, ಒಕ್ಕಲಿಗರಿಗೊಂದು ವಿದ್ಯಾರ್ಥಿಭವನಗಳನ್ನು ಕಟ್ಟಿಸಬೇಕೆಂಬ ನಿರ್ಧಾರವಾಯಿತು. ವೀರಶೈವ ವಿದ್ಯಾರ್ಥಿನಿಲಯದ ರಚನೆಗಾಗಿ ಸಭೆಯಲ್ಲಿದ್ದ ವೀರಶೈವರಿಂದಲೇ ೧೦ ಸಾವಿರ ರೂ. ಗಳ ಚಂದಾ ಪಟ್ಟಿಯಾಯಿತು. ಇದರಂತೆ ಒಕ್ಕಲಿಗ ಜನರೂ ಏರ್ಪಡಿಸುವವರಾಗಿದ್ದಾರೆ. ಸ್ಥಳಾಧಿಕಾರಿಗಳು ಮ|| ಸಿದ್ಧರಾಮಪ್ಪನವರಂತೆಯೇ ಹಿಂದುಳಿದವರ ವಿದ್ಯಾಭಿವೃದ್ಧಿಗೆ ವಾಚಾ ಪ್ರೋತ್ಸಾಹವನ್ನಾದರೂ ಮಾಡುತ್ತಿದ್ದರೆ ಸರ್ಕಾರದವರ ಉದ್ದೇಶವು ಎಷ್ಟೋ ಮಟ್ಟಿಗೆ ಫಲಿಸೀತು. ಮಂಜರಾಬಾದು ತಾಲ್ಲೂಕಿನ ಹಿಂದುಳಿದ ಜನವರ್ಗಗಳವರು ತೋರಿಸಿದ ಅಭಿಮಾನವನ್ನು ಎಲ್ಲಾ ತಾಲ್ಲೂಕಿನವರೂ ಅನುಸರಿಸುತ್ತ ಹೋದಲ್ಲದೆ ಹಿಂದುಳಿದವರಲ್ಲಿ ವಿದ್ಯಾಪ್ರಸಾರವು ವೇಗವಾಗಿ ನಡೆಯಲಾರದು.

ಭರತಖಂಡದ ವೃತ್ತಾಂತಗಳು.

ಈಗ ಯೂರೋಪು ಖಂಡದಲ್ಲಿ ಸಂಚರಿಸುತ್ತಿರುವ ರವೀಂದ್ರನಾಥ ಠಾಕೂರ್‌ರವರು ತಮ್ಮ ಬೋಲ್ಪೂರು ಪಾಠಶಾಲೆಯ ಅಧ್ಯಕ್ಷರಿಗೆ ಒಂದು ಲೇಖನವನ್ನು ಬರೆದು ಅದರಲ್ಲಿ ಮ|| ಗಾಂಧಿಯವರನ್ನೂ ಸಹಾಯನಿರಾಕರಣ ಪ್ರಯತ್ನವನ್ನೂ ಕೂಡ ಖಂಡಿಸಿ ಬರೆದಿರುತ್ತಾರೆ. ಆ ಯತ್ನವು ವಿಘಾತಕವೆಂದು ಅವರಭಿಪ್ರಾಯ.

ಅಮೃತಸರದಲ್ಲಿರುವ ಸಹಾಯನಿರಾಕರಣ ಪಕ್ಷದವರು ಶಾಸನಸಭೆಗೆ ಅಲ್ಲಿಯ ಬೀದಿ ಕಸಗುಡಿಸುವ ಜಲಗಾರನೊಬ್ಬನನ್ನು ಸಭಿಕನನ್ನಾಗಿ ಆರಿಸಿ ಕಳುಹಿಸಿಕೊಡಬೇಕೆಂದು ಕುಚೇಷ್ಟೆಯ ಪ್ರಯತ್ನವನ್ನು ಮಾಡಿದರು. ಯಾವುದೋ ಕಾರಣವನ್ನು ತೋರಿಸಿ ಅವನ ಉಮೇದುವಾರಿಯನ್ನು ಸರ್ಕಾರದವರು ತಿರಸ್ಕರಿಸಿಬಿಟ್ಟರು.

ಇಷ್ಟರಲ್ಲೇ ಅಫ್ಘಾನಿಸ್ಥಾನಕ್ಕೂ ಭರತಖಂಡ ಸರ್ಕಾರಕ್ಕೂ ಸಂಧಿಯ ಒಪ್ಪಂದವು ನಡೆದುಹೋಗುವುದೆಂದು ಸುದ್ದಿ ಬಂದಿದೆ. ಆ ವಿಷಯದಲ್ಲಿ ಸೂಕ್ತವೆಂದು ತೋರಿದಂತೆ ಮಾಡಲು ಭಾರತ ಪ್ರಭುತ್ವದವರಿಗೇ ಆಂಗ್ಲ ಸರ್ಕಾರದವರು ಸ್ವಾತಂತ್ರ್ಯವನ್ನು ವಹಿಸಿಕೊಟ್ಟಿದ್ದಾರೆ. ಈಗ ವಾಯವ್ಯದ ಎಲ್ಲೆಯ ಪ್ರಾಂತದಲ್ಲಿ ಇಂಗ್ಲೀಷರ ಮೇಲೆ ಪ್ರತಿಕೂಲಪಕ್ಷದವರ ಆಟವೇನೂ ಸಾಗುವಸ್ಥಿತಿಯಿಲ್ಲ.

ಯೂರೋಪು ಖಂಡದಲ್ಲಿ ಕೂಲಿಗಳ ದರಗಳು ಹೆಚ್ಚಿಹೋಗಿವೆ. ಕೂಲಿಕಾರರ ಮುಷ್ಕರಗಳು ಅವಿಚ್ಛಿನ್ನವಾಗಿ ಸಾಗುತ್ತಿವೆ. ಭರತಖಂಡದಲ್ಲಿ ಕೂಲಿ ಕಡಿಮೆ. ಮತ್ತು ಅಪಕ್ವವಸ್ತುಗಳು ಸುಲಭವಾಗಿ ಸಿಕ್ಕುವುವು. ಆದುಕಾರಣ ಇನ್ನು ಮುಂದೆ ತಮ್ಮ ಯಂತ್ರಾದಿ ಸಾಧನಗಳನ್ನು ಭರತಖಂಡಕ್ಕೇ ಸಾಗಿಸಿ ಪದಾರ್ಥಗಳನ್ನು ಅಲ್ಲೇ ನಿರ್ಮಿಸಿ ಮಾರಿ ಲಾಭ ಸಂಪಾದನೆ ಮಾಡಬೇಕೆಂದು ಇಲ್ಲಿಯ ಶಿಲ್ಪಿಮುಖ್ಯಾಧಿಕಾರಿಗಳು ಯೋಚಿಸಿಕೊಂಡಿರುತ್ತಾರೆ ನೀವು ಎಚ್ಚರಾಗಿರಿ ಎಂದು ಸೆಂಟ್‌ನಿಹಾಲ್‌ಸಿಂಗ್‌ರವರು ಭಾರತೀಯರನ್ನು ಕುರಿತು ಒಂದು ಲೇಖನವನ್ನು ವೆಲ್ತ್ ಆಫ್ ಇಂಡಿಯಾ ಎಂಬ ವೃತ್ತಪತ್ರಿಕೆಗೆ ಬರೆದು ಪ್ರಕಟಿಸಿದ್ದಾರೆ.

ಮದರಾಸಿನ ಕೆಲ ಪಂಚಮರು ಅಲ್ಲಿಯ ಶಾಸನ ಸಭೆಗೆ ಒಂದು ಬಹಿರಂಗ ಲೇಖನವನ್ನು ಬರೆದಿದ್ದಾರೆ—ನಮ್ಮವರಿಗೆ ಸರ್ಕಾರದವರೂ ಲೋಕಲ್ ಬೋರ್ಡುಗಳೇ ಮೊದಲಾದವರೂ ಏರ್ಪಡಿಸಿಕೊಟ್ಟಿರುವ ಸೌಕರ್ಯಗಳಿಂದ ವಿದ್ಯಾಪ್ರಸಾರವು ಹೆಚ್ಚುತ್ತಲಿದೆ. ನಮ್ಮಲ್ಲಿ ವಿದ್ಯಾವಂತರಾಗಿ ಬರುತ್ತಲಿರುವವರಿಗೆ ಆಳುಕಾಳುಗಳ ವೃತ್ತಿಗಳ ಹೊರತು ಹೆಚ್ಚಿನ ಉದ್ಯೋಗಗಳನ್ನು ಕೊಡುತ್ತಲಿಲ್ಲ. ಆ ಸಣ್ಣ ಸಂಬಳದಿಂದ ಹೊಟ್ಟೆ ಹೊರಕೊಳ್ಳಲಾಗುವುದಿಲ್ಲ. ಓದಿದವರು ಸುಕುಮಾರಾಂಗರಾಗಿ ಹೊಲಗೆಲಸಗಳನ್ನು ಮಾಡಲಾರರು. ಆದುಕಾರಣ ಸರ್ಕಾರದ ಅಂಚೆ, ಪೋಲೀಸು, ಉಪ್ಪಿನ ನಿರ್ಮಾಣ, ಮುನ್ಸೀಫ್ ಕೋರ್ಟು ಮೊದಲಾದ ಶಾಖೆಗಳಲ್ಲಿರುವ ೧೦ ವರ್ಷಗಳೊಳಗೆ ೩೦ ರೂ. ನವರೆಗೆ ಬಡತಿಗೆ ಬರುವ ಸಂಬಳದ ಸ್ಥಾನಗಳನ್ನೆಲ್ಲಾ ನಮ್ಮ ಆದಿಮಾಂಧ್ರರಿಗಾಗಿಯೇ ಮೀಸಲಾಗಿಡುವಂತೆ ಮಾಡಿಸಬೇಕೆಂದು ಕೋರಿಕೊಂಡಿದ್ದಾರೆ.

ಮದರಾಸು ಅಧಿಪತ್ಯದಲ್ಲಿ ಪಂಚಾನನ ಕುಲಸ್ಥರ ಹೆಸರಿನ ಕೊನೆಯಲ್ಲಿ ಆಸಾರಿ ಎಂದು ಸೇರಿಸಿ ಕರೆಯುವಂತೆ ಸರ್ಕಾರದವರು ವಿಧಿಸಿದ್ದಾರೆ. ಅದು ತಪ್ಪು, ಆಚಾರಿಯೆಂದು ತಮ್ಮನ್ನು ಸಂಬೋಧಿಸಬೇಕೆಂದು ಆ ಕುಲಸ್ಥರು ವಾದಿಸುತ್ತಿದ್ದಾರೆ. ಕಳೆದ ಭಾನುವಾರ ಅಲ್ಲಿಯ ವಿಶ್ವಕರ್ಮಜನರು ಟಿ. ಎ. ವೈದಿಕಶಿಖಾಮಣಿ ಆಚಾರಿಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಆಚಾರಿಯೆಂಬ ಶಬ್ದವು ಆಸಾರಿಯೆಂದು ಅಬದ್ಧವಾಗಿ ಪ್ರಯೋಗಿಸಲ್ಪಡುತ್ತಿದೆಯೆಂದೂ, ಆಚಾರಿಯೆಂಬುದು ಶುದ್ಧ ಶಬ್ದವೆಂದೂ, ಅಬದ್ಧಶಬ್ದದ ವಾಡಿಕೆಯನ್ನು ತಪ್ಪಿಸಿ, ಆಚಾರಿಯೆಂದೇ ತಮ್ಮನ್ನು ಸಂಬೋಧಿಸುವಂತೆ ಮಾಡಬೇಕೆಂದೂ ಈ ಸಂಬಂಧವಾಗಿ ಅಲ್ಲಿಯ ಶಾಸನ ಸಭೆಯಲ್ಲಿ ಒಂದು ತೀರ್ಮಾನವನ್ನು ಪ್ರವೇಶಗೊಳಿಸುವುದಕ್ಕೆ ತಮ್ಮ ಕುಲದವರ ಪಕ್ಷದಿಂದ ಆರಿಸಲ್ಪಟ್ಟಿರುವ ಶಾಸನ ಸಭಾಸಭಿಕರಾದ ಮುತ್ತುಮಾಣಿಕ್ಯಾಚಾರರು ಪ್ರಯತ್ನಿಸಬೇಕೆಂದೂ ತೀರ್ಮಾನಿಸಿದರು.

ಅಲಿ ಸೋದರರು ಈಚೆಗೆ ಕೆಲಕಡೆ ಮಾಡಿದ ಉಪನ್ಯಾಸಗಳು ದೌರ್ಜನ್ಯ ಪ್ರೇರಕಗಳಾಗಿರುವುವೆಂದು ಎಣಿಸಲ್ಪಟ್ಟಿರುವುವು. ಸರ್ಕಾರದವರು ಕೂಡ ಅದನ್ನು ಗಮನಿಸಿದರೆಂದು ಕಾಣುತ್ತದೆ. ಅಷ್ಟರಲ್ಲಿ ತಮ್ಮ ಮಿತ್ರಬೃಂದದ ಎಚ್ಚರಿಕೆಯ ಮೇಲೋ ಏನೋ ಅಲಿ ಸೋದರರುಗಳು ಒಂದು ಕ್ಷಮಾಪಣಪತ್ರಿಕೆಯನ್ನು ಪ್ರಕಟಿಸಿಕೊಂಡು ನಾವು ಆವೇಶದ ಭರದಲ್ಲಿ ಉಪನ್ಯಾಸಮಾಡುವಾಗ ಒಂದೆರಡು ವಚನಗಳು ಕ್ರೂರವಾಗಿದ್ದರೆ ಅದಕ್ಕಾಗಿ ನಾವು ಕ್ಷಮಾಪಣೆಯನ್ನು ಕೋರುತ್ತೇವೆ. ನಾವು ಅಸಹಾಯೋದ್ಯಮದಲ್ಲಿರುವವರೆಗೂ ದೌರ್ಜನ್ಯವನ್ನುದ್ರೇಕಗೊಳಿಸುವ ವಚನಗಳನ್ನು ಪ್ರತ್ಯಕ್ಷವಾಗಾಗಲಿ ಪರೋಕ್ಷವಾಗಾಗಲಿ ಈಗಾಗಲಿ ಇನ್ನು ಮುಂದಾಗಲಿ ಆಡುವುದಿಲ್ಲವೆಂದು ವಾಗ್ದಾನಮಾಡುತ್ತೇವೆ" ಎಂದು ತಿಳಿಯಿಸಿದ್ದಾರೆ. ಈ ಸೋದರರ ವಿಷಯದಲ್ಲಿ ಭಾರತ ಸರ್ಕಾರದವರು ಕೂಡ ಒಂದು ಪ್ರಕಟನೆಯನ್ನು ಮಾಡಿ ಅದರೊಳಗೆ ಹೀಗೆ ತಿಳಿಯಿಸಿದ್ದಾರೆ—ಮಹಮ್ಮದಾಲಿಯವರು ಕಳೆದ ತಿಂಗಳು ಸಂಯುಕ್ತ ರಾಷ್ಟ್ರಗಳಲ್ಲಿ ಮಾಡಿದ ಉಪನ್ಯಾಸಗಳು ದೌರ್ಜನ್ಯ ಪ್ರೋತ್ಸಾಹಕಗಳೆಂದು ಭಾರತ ಸರ್ಕಾರದವರು ತಿಳಿಯುತ್ತಾರೆ. ಅದರ ಮೇಲೆ ಅಲಿ ಸೋದರರನ್ನು ಕುರಿತು ಚರ್ಯೆ ಜರುಗಿಸಲು ಈ ತಿಂಗಳು ತಾ|| ೬ ನ್ನು ಸರ್ಕಾರದವರು ಗೊತ್ತುಮಾಡಿದ್ದರು. ಆದರೆ ಈಮಧ್ಯದಲ್ಲೇ ಅಲಿ ಸೋದರರು ಕ್ಷಮಾಪಣ ಪತ್ರವನ್ನು ಪ್ರಕಟಿಸಿದುದರಿಂದ ಅವರ ಮೇಲೆ ಕೇಸನ್ನು ಹೂಡುವ ಪ್ರಯತ್ನವನ್ನು ವಿರಮಿಸಲಾಗಿದೆ. ಅವರು ಆ ತಮ್ಮ ನಿಯಮವನ್ನುಲ್ಲಂಘಿಸಿ ನಡೆದರೆ ಸರ್ಕಾರದವರು ತಮ್ಮ ಪ್ರಯತ್ನವನ್ನು ಜರುಗಿಸುವರು. ಪ್ರಭುತ್ವ ಪ್ರತಿಕೂಲ ಚರ್ಯೆಯನ್ನು ಯಾರು ಜರುಗಿಸಿದರೂ ಅವು ಅಪರಾಧಗಳೇ ಆಗುವುವು. ಅವಶ್ಯಕವೆಂದು ಯಾವಾಗ ತೋರಿದರೂ ಅಂಥ ಅಪರಾಧಿಗಳ ಮೇಲೆ ಪ್ರಭುತ್ವದವರು ಚರ್ಯೆಯನ್ನು ಜರುಗಿಸುವರು."

ವಿದೇಶ ವೃತ್ತಾಂತಗಳು.

ಇಂಗ್ಲೆಂಡ್ ಕಲ್ಲಿದ್ದಲುಗಣಿಯ ಕೂಲಿಕಾರರ ಮನಸ್ಸು ಸಮಾಧಾನಪಡುವಂತಹ ಒಡಂಬಡಿಕೆಗಳು ಇಷ್ಟರಲ್ಲೇ ಆಗುವಂಥ ಸ್ಥಿತಿಯು ಆಂಗ್ಲಮುಖ್ಯಮಂತ್ರಿಯವರ ಮಂತ್ರಾಲೋಚನೆಯಿಂದ ಜರುಗಿತೆಂದು ವಾರ್ತೆಗಳು ಬಂದಿವೆ.

ಸೈಲೀಸಿಯಾ ವಿಷಯದಲ್ಲಿ ಫ್ರಾನ್ಸ್ ಇಂಗ್ಲಂಡುಗಳ ಮಧ್ಯದಲ್ಲಿದ್ದ ಭಿನ್ನಾಭಿಪ್ರಾಯವು ಹಾಗೆಯೇ ಕರಗಿಹೋಯಿತೆಂದೂ, ಫ್ರೆಂಚರು ಇಂಗ್ಲೀಷರಿಗೆ ಬರೆದಿದ್ದ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯಗಳ ಸಾಧುತ್ವವನ್ನೆಲ್ಲಾ ತಿಳಿಯಪಡಿಸಿದ್ದರೆಂತಲೂ, ಅದಕ್ಕೆ ಇಂಗ್ಲೀಷರು ಒಪ್ಪಿ, ಸೈಲೀಸಿಯಾವಿಗೆ ತಮ್ಮ ದಂಡನ್ನು ಕಳುಹಿಸುವುದಕ್ಕೆ ಒಪ್ಪಿ ೬ ಪಟಾಲಮ್ಮುಗಳನ್ನು ಹೊರಡಿಸಿದರೆಂತಲೂ ಪ್ರಕಟವಾಗಿದೆ. ಇಷ್ಟರೊಳಗೆ ಜರ್ಮನ್ ಸೈನ್ಯವು ಅಪ್ಪರ್ ಸೈಲೀಸಿಯಾವಿಗೆ ನುಗ್ಗಿ ಒಂದೆರಡುಕಡೆ ಕಾಳಗಗಳನ್ನು ಬಲವಾಗಿ ನಡೆಯಿಸಿ, ಗ್ರೋಸ್ಸ್ಟೀನ್ ಎಂಬ ಪಟ್ಟಣವನ್ನು ಹಿಡಿದುಕೊಂಡಿತು. ಕ್ರೂಜ್‌ಬರ್ಗ್ ಲೋಹಮಾರ್ಗದಲ್ಲಿ ಕೆಲಸ ಮಾಡುತ್ತಿದ್ದ ೨೦೦೦೦ ಜರ್ಮನರು ಆಯುಧವನ್ನು ಧರಿಸಿ ಪೋಲರ ಎಲ್ಲೆಕಟ್ಟಿನಲ್ಲಿರುವ ಪಾರಿಶ್ರಾಮಿಕ ಸ್ಥಳಗಳ ಮೇಲೆ ನುಗ್ಗಿ ಹಿಡಿದುಕೊಳ್ಳಲು ಪ್ರಯತ್ನಿಸುತ್ತಿವೆಯಂತೆ. ಪೋಲಂಡಿನ ವಿಪ್ಲವಕಾರರ ಹಾವಳಿಯು ಹೆಚ್ಚಾಗಿದೆ. ಪೋಲರ ಸೈನ್ಯಕ್ಕೂ ಜರ್ಮನ್ ಸೈನ್ಯಕ್ಕೂ ಯುದ್ಧವು ನಡೆಯುತ್ತಿದೆ. ಪ್ಯಾರಿಸ್ಸಿನಲ್ಲೂ ಲಂಡನ್ನಿನಲ್ಲೂ ಇರುವ ಜರ್ಮನ್ ರಾಯಭಾರಿಗಳು ತಮ್ಮ ಪ್ರಭುತ್ವದವರಿಗೆ ತಂತ್ರೀವಾರ್ತೆಯನ್ನು ಕೊಟ್ಟು ಸೈಲೀಸಿಯಾ ದಂಡಯಾತ್ರೆಯನ್ನು ಕೂಡಲೇ ನಿಲ್ಲಿಸಿಬಿಡಿರೆಂದು ಕೋರಿಕೊಂಡಿದ್ದಾರೆ. ಇಂಗ್ಲೀಷರ ಸೇನೆಯು ಹೊರಡುವ ವಾರ್ತೆಯು ಜರ್ಮನರಿಗೆ ತಿಳಿಯಿತು. ಈಚೆಗೆ ಬಂದಿರುವ ವರ್ತಮಾನದಲ್ಲಿ ಸೇನೆಯನ್ನು ಕೂಡಿಸಕೂಡದೆಂದು ಜರ್ಮನ್ ಪ್ರಭುತ್ವದವರು ತಮ್ಮ ಸೇನಾಪತಿಗಳಿಗೆ ಆಜ್ಞೆ ಮಾಡಿದ್ದಾರಂತೆ. ಇದರ ಮೇಲೆ ಸೈಲೀಸಿಯಾದ ಯುದ್ಧವಾರ್ತೆಯು ಮುಗಿಯಿತೆಂತಲೇ ಕಾಣುತ್ತದೆ.

ಪಂಚಮರ ಸಮುದ್ಧಾರ.

(ಬರೆದುಬಂದುದು)

ಪಂಚಮ ಸಮುದ್ಧಾರ ವಿಷಯದಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲೂ ಚಳವಳಿ ನಡೆಯುತ್ತಿದೆಯಷ್ಟೆ. ಸಂಸ್ಥಾನದ ಹೊರಗೆ ಈ ಸಂಬಂಧವಾಗಿ ಎಷ್ಟು ದೂರದವರೆಗೆ ಪ್ರಯತ್ನಗಳು ನಡೆಯುತ್ತಿವೆಯೆಂಬುದನ್ನು ತಿಳಿದುಕೊಳ್ಳುವುದರಲ್ಲಿ ಫಲವುಂಟೆಂದು ತಿಳಿದು ಈ ಲೇಖನವನ್ನು ಬರೆದಿರುತ್ತೇನೆ. ಇದರಲ್ಲಿ ಪಂಚಮರೂ ತದಿತರರೂ ತಿಳಿದಾಚರಿಸಬೇಕಾದ ಬೋಧಾಂಶಗಳು ವಿಶೇಷವಾಗಿವೆ. ಮದರಾಸಿಗೆ ಸೇರಿದ ಏಲೂರು ಪಟ್ಟಣದಲ್ಲಿ ಮಾರ್ಚಿ ತಾ|| ೧೯-೨೦ ರಲ್ಲಿ ಆದಿಮಾಂಧ್ರ (ಪಂಚಮರ) ಮಹಾಸಭೆಯು ಸೇರಿತ್ತು. ಈ ಸಭೆಗೆ ತೆಲುಗುದೇಶದ ಅನೇಕ ಸ್ಥಳಗಳಿಂದ ಪಂಚಮರು ಮಾತ್ರವೇ ಅಲ್ಲದೆ ಪಂಚಮರ ಸಮುದ್ಧಾರದಲ್ಲಿ ನಿಜವಾದ ಅಭಿಮಾನವುಳ್ಳ ಉತ್ತಮವರ್ಣೀಯರೂ ಬಹುಜನರು ಬಂದಿದ್ದರು. ಮ|| ಗೂಡೂರು ರಾಮಚಂದ್ರರಾವ್‌ರವರು ಸಭಾಧ್ಯಕ್ಷರಾಗಿದ್ದರು. ಅಧ್ಯಕ್ಷರೇ ಮೊದಲಾದ ಕೆಲ ಮುಖಂಡರ ಉಪನ್ಯಾಸಗಳು ನಡೆದುವು. ಎಲ್ಲವೂ ಸ್ಫೂರ್ತಿದಾಯಕವಾಗಿದ್ದುವು. ಅವುಗಳಲ್ಲಿ ಒಬ್ಬರಿಬ್ಬರ ಭಾಷಣದ ಮುಖ್ಯಾಭಿಪ್ರಾಯವನ್ನು ಬರೆಯುತ್ತೇನೆ.

ಸಭಾಧ್ಯಕ್ಷರ ಭಾಷಣವು—ಪೂರ್ವಾಚಾರಪರಾಯಣರಾಗಿ ಜಪತಪೋನುಷ್ಠಾನತತ್ಪರರಾಗಿರುವವರನ್ನು ಹೊಲೆಮಾದಿಗರ ಜತೆಯಲ್ಲಿ ಕುಳಿತುಕೊಳ್ಳಿರೆಂದು ನಾವು ಬಲಾತ್ಕರಿಸುವುದು ಪಾತಕವು. ನಮ್ಮಲ್ಲಿ ಆಂಗ್ಲವಿದ್ಯಾವಿಶಾರದರಾದವರನೇಕರು ಪಂಚಮೋದ್ಧರಣವನ್ನು ಮಾಡಬೇಕೆಂದು ಸಭಾಂಗಣದಲ್ಲೂ ವೃತ್ತಪತ್ರಿಕೆಗಳಲ್ಲೂ ಪ್ರಸಂಗಗಳನ್ನು ಬೆಳೆಯಿಸಿ ಗದ್ದಲಮಾಡುತ್ತಾರೆ. ಅವರೆಲ್ಲರೂ ಅಷ್ಟರಲ್ಲೇ ತಮ್ಮ ಕರ್ತವ್ಯವು ತೀರಿತೆಂದು ತಿಳಿದುಕೊಂಡಿದಾರೆ. ಆದಿದಂತೆ ಪಂಚಮರಲ್ಲಿ ಅಸ್ಪೃಶ್ಯತೆಯನ್ನು ಭಾವಿಸದೆ ಅವರುಗಳು ನಡೆಯದಿರುವುದು ಸಮಂಜಸವಲ್ಲ. ಈಗ ರಾಜಕೀಯ ಸಂಬಂಧವಾಗಿ ಎಲ್ಲ ಪಕ್ಷದವರೂ ಆದಿಮಾಂಧ್ರರನ್ನೂ ತಮ್ಮ ಜತೆಗೆ ಸೆಳೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಕ್ರೈಸ್ತಪಾದರಿಗಳು ಇವರಿಗೆ ದೊಡ್ಡ ಆಸೆಯನ್ನು ತೋರಿಸಿ ತಮ್ಮ ಕಡೆಗೆ ಸೆಳೆದುಕೊಳ್ಳುತ್ತಿದ್ದಾರೆ. ಇವರುಗಳು ಕ್ರೈಸ್ತಮತವನ್ನವಲಂಬಿಸಿ ನಮ್ಮ ಬಳಿಗೆ ಬಂದರೆ ಅವರಿಗೆ ಷೇಕ್ ಹ್ಯಾಂಡ್ ಕೊಟ್ಟು ನಮಗೆ ಸಮಾನರನ್ನಾಗಿ ತಿಳಿಯುತ್ತೇವೆ. ನಮ್ಮ ಹಿಂದೂಮತದಲ್ಲೇ ಇದ್ದು ನಮ್ಮ ದೇವತೆಗಳನ್ನೇ ಪೂಜಿಸುತ್ತಾ ನಮ್ಮವರೊಳಗಿನವರೇ ಆಗಿದ್ದಾಗ ಅವರುಗಳನ್ನು ನಾವು [illegible] ಕಾಣು

ತ್ತೇವೆ. ಅನ್ಯಮತವನ್ನವಲಂಬಿಸಿದ ತಕ್ಷಣವೇ ತಮಗೆ ಗೌರವವುಂಟಾಗುವುದೆಂಬುದನ್ನು ಅವರು ತಿಳಿದುಕೊಂಡು, ಹಿಂದೂ ಮತದಲ್ಲಿದ್ದು ತುಚ್ಛಭಾವದಿಂದ ಕಾಣಿಸಿಕೊಳ್ಳುವುದಕ್ಕಿಂತಲೂ ಇಂಥ ಮತವನ್ನೇ ಬಿಟ್ಟು ಬೇರೆ ಮತಕ್ಕೆ ಸೇರಿಕೊಳ್ಳುವುದು ಉತ್ತಮವೆಂದು ಅವರಲ್ಲಿ ಬಹುಮಂದಿಗಳು ಕ್ರೈಸ್ತಮತಕ್ಕೆ ಸೇರಿಹೋಗುತ್ತಿದ್ದಾರೆ. ಇದರಿಂದ ಹಿಂದೂಮತದ ಬಲವು ಕಡಿಮೆಯಾಗಿ ಹೋಗುತ್ತಿದೆ. ಆದಕಾರಣ ನಾವುಗಳೆಲ್ಲರೂ ನಮ್ಮ ಸಂಘಕ್ಕೆ ಉಂಟಾಗುತ್ತಿರುವ ಈ ಕ್ಷಯಜಾಡ್ಯವನ್ನು ತೊಲಗಿಸಬೇಕು. ಇದಕ್ಕೆ ಮುಖ್ಯೋಪಾಯವಾವುದೆಂದರೆ—ಅವರುಗಳ ಅಸ್ಪೃಶ್ಯತ್ವ ದೋಷವನ್ನು ನಿವರ್ತಿಸುವುದೇ ಆಗಿರುತ್ತದೆ. ಈ ಅಸ್ಪೃಶ್ಯತ್ವವು ಹೇಗೆ ಉಂಟಾಯಿತೆಂದು ಅದರ ಮೂಲವನ್ನು ಕುರಿತು ವಿಮರ್ಶೆಮಾಡುತ್ತ ಕುಳಿತುಕೊಳ್ಳುವುದರಲ್ಲಿ ಫಲವಿಲ್ಲ. ಅದನ್ನು ನಿವೃತ್ತಿಗೊಳಿಸಲು ನಮ್ಮ ಶಾಸ್ತ್ರಗಳೇನಾದರೂ ಆತಂಕಪಡಿಸುವುವೋ ಎಂಬುದನ್ನು ಮಾತ್ರ ನಾವು ವಿಚಾರಿಸಬೇಕು. ವಾಲ್ಮೀಕಿ, ನಾರದ ಮೊದಲಾದವರು ನಿಮ್ಮ ಜಾತಿಯವರಾಗಿದ್ದರೂ ಅಗ್ರವರ್ಣದವರಾದರು. ಅರುಂಧತಿಯು ಪಂಚಮಜಾತಿಯವಳಾಗಿದ್ದರೂ ವಸಿಷ್ಠರ ಪತ್ನಿಯಾದಳು. ೧೨ ಮಂದಿ ಆಳ್ವಾರುಗಳಲ್ಲಿ ಒಬ್ಬಾತನು ಪಂಚಮನು. ವಿಚಾರಮಾಡಿದರೆ ಇಂಥ ದೃಷ್ಟಾಂತಗಳು ಅನೇಕವಾಗಿ ಸಿಕ್ಕುವುವು. ಇಂಥ ವಿಪರೀತ ವಿಷಯಗಳಿಗೆ ಅವಕಾಶವಿದ್ದರುವಾಗ ಪಂಚಮರ ಅಸ್ಪೃಶ್ಯತ್ವವನ್ನು ನಿವಾರಿಸಲು ಅವಕಾಶವಿಲ್ಲದೆ ಹೋಗಬಹುದೆ? ನಾವು ಹಾಗೆಮಾಡದೆ ಅವರನ್ನು ದೂರದೂರದಲ್ಲೇ ಇರಿಸಿದರೆ ಆ ಪಾಪವು ನಮ್ಮದೇ ಆಗುವುದು. ನಾವೆಲ್ಲರೂ ಸ್ವರಾಜ್ಯವಾಗಬೇಕೆಂದು ಕೋರುತ್ತಿರುವೆವು. ನಮ್ಮ ಶತ್ರುಗಳನೇಕರು ಇವರನ್ನು ತಮ್ಮ ಕಡೆಗೆ ಒಡೆದುಕೊಂಡು ಸ್ವರಾಜ್ಯವು ಬಂದರೆ ನಿಮ್ಮನ್ನು ಇನ್ನೂ ಪಾತಾಳಕ್ಕೆ ಹಾಕಿ ತುಳಿಯುವರೆಂದೂ, ಆಂಗ್ಲ ಪ್ರಭುಗಳು ಕತ್ತಿಯನ್ನು ತೋರಿಸಿ ಜೋಕೆಯೆಂದು ಅಗ್ರವರ್ಣದವರಿಗೆ ಬೆದರಿಸುತ್ತಿರುವುದರಿಂದಲೇ ಅವರು ನಿಮ್ಮನ್ನು ಈ ಮಾತ್ರವಾಗಿಯಾದರೂ ಬಿಟ್ಟಿರುವರೆಂದೂ, ಇಲ್ಲದಿದ್ದರೆ ನಿಮಗೆ ಇಷ್ಟು ಹೊತ್ತಿಗೆ ನಿಲ್ಲಲು ಗುಡಿಸಲೂ ಇಲ್ಲದಂತೆಮಾಡಿ ಓಡಿಸಿಬಿಡುತ್ತಿದ್ದರೆಂತಲೂ ಬೋಧಿಸುತ್ತಿದ್ದಾರೆ. ೬ ಕೋಟಿಗೆಮಿಗಿಲಾದ ಜನಸಂಖ್ಯೆಯುಳ್ಳ ಈ ಜನರನ್ನು ನಾವು ಕೈಬಿಟ್ಟು ನಮ್ಮ ಶತ್ರುಗಳನ್ನಾಗಿ ಮಾಡಿಕೊಳ್ಳಬಹುದೆ? ಗಾಂಧಿ ಮಹಾತ್ಮರು ಕೂಡ ಈ ವಿಷಯವಾಗಿ ಅನೇಕ ಸಾರಿ ಸ್ಪಷ್ಟವಾಗಿ ನುಡಿದು ಇವರ ಅಸ್ಪೃಶ್ಯತ್ವವನ್ನು ತೊಲಗಿಸಿ ಸ್ವರಾಜ್ಯ ಸಂಪಾದನೆಯಲ್ಲಿ ಇವರ ಸಹಾಯವನ್ನು ಪಡೆದುಕೊಳ್ಳಬೇಕೆಂದು ಬೋಧಿಸಿರುವರು. ಸ್ವರಾಜ್ಯವನ್ನು ಇನ್ನು ೭ ತಿಂಗಳಲ್ಲಿ ಸಂಪಾದಿಸಬೇಕೆನ್ನುತ್ತಿರುವಾಗ ಇವರುಗಳ ಅಸ್ಪೃಶ್ಯತ್ವವನ್ನು ತೊಲಗಿಸಲಿಕ್ಕೆ ನಾವು ತಡಮಾಡಬಹುದೆ? ನಾವು ಅನೇಕ ಸ್ಥಳಗಳಲ್ಲಿ ಈ ಸಂಬಂಧವಾಗಿ ರೆಜಲ್ಯೂಷನ್ನುಗಳನ್ನು ಮಾಡಿದ್ದೇವೆ. ಆದರೇನು? ಆ ಸ್ಥಲವನ್ನು ಬಿಟ್ಟು ಹೊರಟುಹೋದ ಕೂಡಲೇ ಅದನ್ನು ಮರತೇಬಿಡುತ್ತಿದ್ದೇವೆ. ಆದಕಾರಣ ನಾವು ದೃಢವಾಗಿ ಅದನ್ನು ಆಚರಣೆಯಲ್ಲಿ ತರುವುದಕ್ಕಾಗಿ ನಾವೆಲ್ಲರೂ ಆದಿಮಾಂಧ್ರರನ್ನು ನಮ್ಮಗಳ ಮನೆಯಲ್ಲಿ ಚಾಕರಿಗೆ ನಾಳೆಯಿಂದಲೇ ನಿಯಮಿಸಿಕೊಳ್ಳಬೇಕು. ಊಟದಮನೆಗೆ ಅಡುಗೆಮನೆಗೆ ಇವರುಗಳನ್ನು ಸೇರಿಸದಿದ್ದರೂ ಮನೆಗಳಲ್ಲಿ ಕಸಗುಡಿಸುವುದು ಬಟ್ಟೆ ಒಗೆಯುವುದು ನೀರನ್ನು ಸೇದಿಹಾಕುವುದು ಇತ್ಯಾದಿ ಕಾರ್ಯಗಳಿಗಾದರೂ ಅವರನ್ನುಪಯೋಗಿಸಿಕೊಳ್ಳಬಹುದು. ಅವರು ಇತರ ಮಾಮೂಲು ನೌಕರರುಗಳಿಗಿಂತಲೂ ಪರಿಶುಭ್ರವಾಗಿಯೂ ನಂಬುಗೆಯಿಂದಲೂ ಕೆಲಸಮಾಡುವರೆಂಬುದರಲ್ಲಿ ಸಂಶಯವಿಲ್ಲ. ಅವರು ಸ್ವಾಮಿದ್ರೋಹ ಮಾಡದೆ ಸತ್ಪವರ್ತನವುಳ್ಳವರಾಗಿರುವರೆಂಬುದಕ್ಕೆ ನಾನು ಜಾಮೀನ್ದಾರನಾಗಿರುತ್ತೇನೆ. ನನ್ನ ಸ್ನೇಹಿತರಾದ ಡಾಕ್ಟರ್ ಪಟ್ಟಾಭಿಸೀತಾರಾಮಯ್ಯನವರು ೧೫ ವರ್ಷಗಳಿಂದಲೂ ಒಬ್ಬ ಪಂಚಮನನ್ನು ತಮ್ಮ ಮನೆಯಲ್ಲಿ ಆಳಾಗಿ ಇಟ್ಟುಕೊಂಡಿದ್ದಾರೆ. ಊಟದ ಮನೆಯೊಂದರ ಹೊರತು ಉಳಿದಮನೆಯ ಎಲ್ಲ ಭಾಗಗಳಲ್ಲೂ ಆತನು ತಿರುಗಾಡುವನು. ಬಹಳ ನಂಬುಗೆಯಿಂದಿರುವನು. ೧ ಸಾವಿರ ರೂ. ನ ಥೈಲಿಯನ್ನು ಅವನಕೈಗೆ ಕೊಟ್ಟರೂ ನಂಬಿಕೆಯಿಂದ ತಂದೊಪ್ಪಿಸುವನೆಂದು ಆ ಪಟ್ಟಾಭಿಸೀತಾರಾಮಯ್ಯನವರೇ ನನ್ನೊಡನೆ ಹೇಳಿದ್ದಾರೆ. ಆದುದರಿಂದ ಸಭಿಕರೆಲ್ಲರೂ ತಮ್ಮ ಮನೆಗೆಲಸಗಳಿಗೆ ಈ ಪಂಚಮರನ್ನು ಆಳುಗಳಾಗಿಟ್ಟುಕೊಂಡು ಅವರ ಅಸ್ಪೃಶ್ಯತ್ವವನ್ನು ನಿವಾರಿಸಿ ದೇಶೋದ್ಧಾರಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸಭಿಕರಲ್ಲಿದ್ದ ಉಮ್ರಾಅಲೀಷಾ ಕವಿಗಳು ಮಾಡಿದ ಉಪನ್ಯಾಸದ ಸಾರಾಂಶವೇನೆಂದರೆ— ಅಗ್ರವರ್ಣದವರು ಪಂಚಮರಿಗೆ ಅನ್ಯಾಯಮಾಡಿದರೆಂದು ವಾದಿಸುವುದರಲ್ಲಿ ಫಲವಿಲ್ಲ. ಅವರವರ ಕಾಲಿನಮೇಲೆ ಅವರೇ ನಿಂತುಕೊಳ್ಳಬೇಕು. ಅವರವರ ಅಭಿವೃದ್ಧಿಯನ್ನು ಅವರವರು ನೋಡಿಕೊಳ್ಳಬೇಕಾಗಿರುವ ಈಗಿನ ಕಾಲದಲ್ಲಿ ಮತ್ತೊಬ್ಬರು ತಮಗೆ ಸಹಾಯ ಮಾಡಲಿಲ್ಲವೆಂದು ನಿಂದಿಸುವುದಕ್ಕಿಂತ ದಡ್ಡತನವು ಬೇರೊಂದಿಲ್ಲ. ಒಬ್ಬರ ಸಹಾಯವನ್ನು ಅಪೇಕ್ಷಿಸಿದರೆ ಒಂದುದಿನ ಅವರು ಕುರ್ಚಿಯ ಮೇಲೆ ಕುಳ್ಳಿರಿಸಬಹುದು. ನಿತ್ಯವೂ ಕುಳ್ಳಿರಿಸುವರೆ? ಆದುದರಿಂದ ಘನತೆಯು ತಮಗೆ ಉಂಟಾಗಬೇಕೆಂದರೆ ಅದಕ್ಕೆ ತಕ್ಕ ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕು. ವಿಶ್ವಾಮಿತ್ರನನ್ನು ಬ್ರಹ್ಮರ್ಷಿಯನ್ನಾಗಿ ಯಾರು ಮಾಡಿದರು? ಚಂಡಾಲನಾದ ವಾಲ್ಮೀಕಿಗೆ ಯಾರು ಜ್ಞಾನವನ್ನುಂಟುಮಾಡಿಕೊಟ್ಟರು? ಪಂಚಮಜಾತಿಯವಳಾದ ಅರುಂಧತಿಯನ್ನು ವಸಿಷ್ಠಪತ್ನಿಯನ್ನಾಗಿ ಯಾರು ಮಾಡಿದರು? ಅವರೆಲ್ಲರೂ ನಿಮ್ಮಜಾತಿಯವರಾಗಿದ್ದರೂ ಸ್ವಪ್ರಯತ್ನದಿಂದಲೇ ಇತರ ಉತ್ತಮವರ್ಣೀಯರಿಂದೆಲ್ಲಾ ಹೇಗೆ ಪೂಜ್ಯರಾದರೋ ಅದರಂತೆಯೇ ನಮ್ಮ ಪಂಚಮಸೋದರರೂ ತಮ್ಮ ಸ್ವಪ್ರಯತ್ನದಿಂದ ತಮ್ಮ ಜ್ಞಾನವಿಕಾಸದಿಂದ ಮೇಲಕ್ಕೆ ಬರಬೇಕು. ಜ್ಞಾನವೇ ಮುಖ್ಯಸಾಧನವು. ಪ್ರತಿಯೊಬ್ಬರಿಗೂ ಅಭ್ಯುದಯ ಮಾರ್ಗವನ್ನು ಈಶ್ವರನೇ ತನ್ನ ಸೃಷ್ಟಿಯಲ್ಲಿ ಏರ್ಪಡಿಸಿಕೊಟ್ಟಿದ್ದಾನೆ. ಪೂರ್ವದಲ್ಲಿ ಒಬ್ಬ ಮಹರ್ಷಿಯು ತನಗೆ ಯಾರೂ ಜ್ಞಾನಬೋಧೆ ಮಾಡುವವರಿಲ್ಲದಿರಲು, ಹಾವು ತನ್ನ ಆಹಾರವಸ್ತುಗಳನ್ನು ಕೂಡಿಟ್ಟುಕೊಳ್ಳುವುದನ್ನು ಅರಿಯದೆ ದೊರೆವಾಗ ತಿಂದು ದೊರೆಯದಿದ್ದಾಗ ವಾಯ್ವಾಹಾರ ಮಾಡಿಕೊಂಡರೂ ಬದುಕಿರುವುದನ್ನೂ, ಜೇನು ಆರ್ಜಿಸಿದ ವಸ್ತುವನ್ನೆಲ್ಲಾ ಕೂಡಿಹಾಕಿದ್ದು ಕಡೆಗೆ ತಾನೂ ತಿನ್ನದೆ ಪರರ ಪಾಲು ಮಾಡುತ್ತಿದ್ದರೂ ಬದುಕಿರುವುದನ್ನೂ ಕೂಡ ನೋಡಿ, ಈ ಪ್ರಪಂಚದಲ್ಲಿ ಪಡುವ ಶ್ರಮವೆಲ್ಲಾ ಶೂನ್ಯಫಲವೆಂದು ಅರಿತು ಕೂಡಲೇ ಬ್ರಹ್ಮಜ್ಞಾನಿಯಾದನಂತೆ. ಹಾಗೆ ಜ್ಞಾನೋದಯವು ಆಗಬೇಕಾದವರಿಗೆ ಹೇಗಾದರೂ ಆಗಿಯೇ ಆಗುವುದು. ಅದನ್ನು ಪಡೆದವರಿಗೆ ಆದರಣೆಯೂ ಸಿಕ್ಕೇಸಿಕ್ಕುವುದು. ಶಂಕರಾಚಾರ್ಯರು ಕೂಡ ಒಬ್ಬ ಚಂಡಾಲನನ್ನು ಎಷ್ಟೋ ಸನ್ಮಾನಿಸಿದಂತೆ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಕಾಳಿದಾಸನು ಬ್ರಾಹ್ಮಣೇತರನಾದರೂ ಈಗ್ಯೂ ಎಲ್ಲರಿಂದಲೂ ಸನ್ಮಾನಿಸಲ್ಪಡುವುದಿಲ್ಲವೆ? ಆದಕಾರಣ ಶಾಸ್ತ್ರಕಾರರು ಚಂಡಾಲರನ್ನು ಏತಕ್ಕೆ ನಿಷೇಧಿಸಿದರೆಂಬುದಾಗಿ ವೃಥಾ ವಿಮರ್ಶೆಮಾಡುತ್ತ ಕುಳಿತುಕೊಂಡು ಪರಸ್ಪರ ಜಗಳವಾಡುವುದು ಅವಿವೇಕವು. ಅಂಥ ವಿಮರ್ಶೆಗೆ ಕುಳಿತುಕೊಂಡರೆ ಅದು ಮುಗಿಯುವುದಿಲ್ಲ. ಚಂಡಾಲರನ್ನು ಮುಟ್ಟಲಾಗದೆಂಬ ನಿಯಮವು ಬಹುಕಾಲದಿಂದ ಬಂದಿದೆ. ಅದನ್ನು ನಿವಾರಿಸುವುದು ಹೇಗೆಂಬುದನ್ನು ಮಾತ್ರ ನಾವು ವಿಚಾರಮಾಡಬೇಕೇ ಹೊರತು ಮೂಲವಿಚಾರಕ್ಕಾಗಿ ಕುಳಿತು ಅದಕ್ಕೆ ಕುತರ್ಕಬುದ್ಧಿಯನ್ನುಪಯೋಗಿಸಿದರೆ ಕೆಂಪುಕನ್ನಡಿಯನ್ನು ಅಡ್ಡಲಾಗಿ ಹಿಡಿದು ಪ್ರಪಂಚವನ್ನು ನೋಡುವವನ ಕಣ್ಣಿಗೆ ಸರ್ವವೂ ಕೆಂಪಾಗಿಯೇ ತೋರವಂತೆ ಎಲ್ಲವೂ ಕುಯುಕ್ತಿಯಿಂದಲೇ ತುಂಬಿರುವಂತೆ ಕಾಣುವುದು. ಅನ್ಯಮತೀಯರಾದ ಮಹಮ್ಮದೀಯರೊಡನೆಯೇ ಸ್ನೇಹಮಾಡಿಕೊಂಡು ಏಕಮತ್ಯ ಪಡೆದಿರುವ ಹಿಂದೂಗಳಿಗೆ ಅವರ ಒಂದು ಶಾಖಾಭೇದದವರಾದ ಪಂಚಮರ ವಿವಾದವನ್ನು ಬಗೆ ಹರಿಸಿಕೊಳ್ಳುವ ವಿಷಯವು ಒಂದು ದೊಡ್ಡದಲ್ಲ. ಅದಕ್ಕೆ ತಕ್ಕ ಅರ್ಹತೆಯನ್ನು ಪಂಚಮರು ಸಂಪಾದಿಸಿಕೊಳ್ಳುವುದು ಕೂಡ ಅವಶ್ಯಕವೆಂದು ನಾನು ಅವರಿಗೆ ತಿಳಿಯಿಸುತ್ತೇನೆ. ಸತ್ತ ಪಶುಗಳ ಮಾಂಸವನ್ನು ತಿನ್ನುವುದು, ಮದ್ಯಪಾನ ಮಾಡುವುದು, ಕೊಳಕಾಗಿರುವುದು, ಮೂಢರಾಗಿರುವುದು ಇವೆಲ್ಲಾ ಅವರಲ್ಲಿ ನೆಲೆಯಾಗಿವೆ. ಇವನ್ನೆಲ್ಲಾ ಅವರು ತೊಲಗಿಸಿಕೊಂಡರೆ ಅವರಲ್ಲಿನ ಅಸ್ಪೃಶ್ಯದೋಷವು ಮಾಯವಾಗದೆ ಎಲ್ಲಿದ್ದೀತು? ಆ ದುರಾಚರಣೆಗಳನ್ನೆಲ್ಲಾ ಪರಿತ್ಯಜಿಸದೆ ಹೆಗಲಮೇಲೆ ಕೈಹಾಕಿ ನೀವೂ ನಾವೂ ಅಣ್ಣತಮ್ಮಂದಿರೆಂದು ಹೇಳಬೇಕೆಂದರೆ ಹೇಗಾಗುವುದು? ಆದಕಾರಣ ಈ ಕೊಳಕುತನವನ್ನೆಲ್ಲಾ ಅವರು ಮೊದಲು ಬಿಡಬೇಕು. ಮತ್ತು ತಮ್ಮ ಜ್ಞಾನಾಭಿವೃದ್ಧಿಗಾಗಿ ಪಾಡುಪಡಬೇಕು. ಆದರೆ ಒಂದು ವಿಶೇಷವುಂಟು. ಏನೆಂದರೆ: ಅದು ಬರಲಿ ಬರದಿರಲಿ, ಇದು ನೂತನಯುಗವು. ಇದರ ಪ್ರಭಾವದಿಂದ ಅವರ ಅಸ್ಪೃಶ್ಯದೋಷವು ತಾನಾಗಿ ನಶಿಸಿಹೋಗುವುದು. ಇದುವರೆಗೆ ಭಾರತಭೂಮಿಯು ಕೇವಲ ಜ್ಞಾನಭೂಮಿಯೆಂಬ ಬಿರುದನ್ನು ಹೊಂದಿರುವುದು. ಆದರೆ ಪಾಶ್ಚಾತ್ಯ ಸಂಸರ್ಗದಿಂದ ಈಗ ಅದು ಕೇವಲ ಆರ್ಥಿಕ ಸಾಂಘಿಕ ಮರ್ಯಾದೆಗಳಿಗೆ ಈಡಾಗಿದೆ. ಈ ಬದಲಾವಣೆಯುಂಟಾಗಿರುವುದರಿಂದ ಭಾರತಭೂಮಿಗೆ ಸಾಂಘಿಕ ಬಲದ ಆವಶ್ಯಕತೆಯು ಹೆಚ್ಚಾಗಿದೆ. ಇದಕ್ಕಾಗಿಯೇ ಮಹಾತ್ಮಗಾಂಧಿಯವರೂ ಕೂಡ ಈ ಅಸ್ಪೃಶ್ಯದೋಷವನ್ನು ಕೂಡಲೇ ನಿವಾರಿಸಬೇಕೆಂತಲೂ ೭ ತಿಂಗಳಲ್ಲಿ ಸ್ವರಾಜ್ಯವನ್ನು ಸಂಪಾದಿಸಬೇಕಾದರೆ ಇವರ ಸಹಾಯವು ಅವಶ್ಯಕವೆಂತಲೂ ಹೇಳುತ್ತಿದ್ದಾರೆ. ಹಂದಿ, ನಾಯಿ, ಬೆಕ್ಕು ಮೊದಲಾದ ನೀಚಜಂತುಗಳನ್ನೆಲ್ಲಾ ಮುಟ್ಟಿಕೊಳ್ಳುತ್ತಲಿರುವವರಿಗೆ ಮನುಷ್ಯಪ್ರಾಣಿಯನ್ನು ಮುಟ್ಟಿಕೊಳ್ಳುವುದು ದೋಷವೆಂದಿಗೂ ಅಲ್ಲ. ಆದುದರಿಂದ ಈ ಅಲ್ಪಭೇದವನ್ನು ಲೆಕ್ಕಿಸದೆ ಕೂಡಲೇ ಅದನ್ನು ತಿದ್ದಿಕೊಳ್ಳುವುದಕ್ಕೆ ಸರ್ವರೂ ಸಹಾಯಮಾಡಬೇಕು.

ಹೀಗೆಯೇ ಇನ್ನು ಕೆಲವುಪನ್ಯಾಸಗಳು ನಡೆದ ಬಳಿಕ ಪಂಚಮರ ಅಸ್ಪೃಶ್ಯತ್ವ ನಿರ್ಬಂಧವನ್ನು ತೊಲಗಿಸಿ ಸ್ಕೂಲುಗಳು ಪಾಠಶಾಲೆಗಳು ಮೊದಲಾದ ಬಹಿರಂಗಸ್ಥಲಗಳಿಗೆಲ್ಲಾ ನಿರಾತಂಕವಾಗಿ ಪಂಚಮರನ್ನು ಸೇರಿಸಿಕೊಳ್ಳಬೇಕು. ಹಾಗೆ ಮಾಡದಿರುವ ಯಾವ ಪಕ್ಷದವರಿಗೂ ನಾವು ಸಹಾಯ ಮಾಡಕೂಡದು ಎಂದು ತೀರ್ಮಾನವೂ ಅನುಮೋದನವೂ ಪುಷ್ಟೀಕರಣವೂ ಆಗಿ ಸರ್ವರಿಂದಲೂ ಅಂಗೀಕೃತವಾಯಿತು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ

ಲಗ್ನದ ಫಂಡು.

1. ಬೀರೂರು ಎ. ಪಿ. ಸಿ. ಏಜಂಟರು ಮ॥ ರಾ॥ ಎಂ. ವಿ. ಮರುಳು ಸಿದ್ಧಯ್ಯನವರ ಮನೆಯಲ್ಲಿ ನಡೆಸಿದ ಶಿವದೀಕ್ಷಾಸಂಸ್ಕಾರದಲ್ಲಿ ರೂ. ೫-೦-೦. 2. ತುಮಕೂರು ಡಿ॥ ಕೊರಟಗೆರೆ ಸಬ್ ತಾಲ್ಲೂಕು ತೀತದ ಯಜಮಾನ್ ಮ॥ ರಾ॥ ಭದ್ರಪ್ಪನವರ ಮೂಲಕ ಮ॥ ರಾ॥ ವರಣೆ ಸೋಮಣ್ಣನವರ ತಮ್ಮ ಪುಟ್ಟಣ್ಣನವರ ಪ್ರಸ್ತದಲ್ಲಿ ರೂ. ೩-೦-೦. ಮ॥ ರಾ॥ ತೀತದ ಯಜಮಾನ್ ಭದ್ರಪ್ಪ ಪಾಲ್ದಾರ್ ಮ॥ ರಾ॥ ಭದ್ರಯ್ಯನವರುಗಳು ಜವಳಿ ಅಂಗಡಿ ಲೆಕ್ಕ ನೋಡಿದ ಕಾಲದಲ್ಲಿ ಫಂಡಿಗಾಗಿ ತೆಗೆದದ್ದು ರೂ. ೧೨-೦-೦. ತೀತದಲ್ಲಿರುವ ಶ್ರೀಮತಿ ಬೆಳ್ಳಾವಿ ಗಂಗಮ್ಮನವರ ಮೊಮ್ಮಗಳು ಚಿ॥ ಸೌ॥ ನಂಜಮ್ಮನ ಪ್ರಸ್ತದಲ್ಲಿ ರೂ. ೧-೦-೦. ಮ॥ ರಾ॥ ವೀರೇಗೌಡರವರ ಮಕ್ಕಳು ವೀರಪ್ಪ ಮತ್ತು ಪಾಪಣ್ಣನವರುಗಳ ಲಗ್ನದಲ್ಲಿ ರೂ. ೨-೦-೦. ಮ॥ ರಾ॥ ಜಡೆಯಪ್ಪನವರಿಂದ ಅವರ ಲಗ್ನಕಾಲದಲ್ಲಿ ರೂ. ೨-೦-೦. ಜುಮ್ಲಾ ೨೦-೦-೦.

3. ಬೆಂಗಳೂರು ಸಿಟಿ ಮ॥ ರಾ॥ ಎಸ್. ವೀರಭದ್ರಪ್ಪನವರ ಮೂಲಕ—ಮುನಿಸಿಪಲ್ ಆಫೀಸಿನಲ್ಲಿರುವ ಮ॥ ರಾ॥ ಡಿ. ಎಸ್. ಮುದ್ದನಂಜಪ್ಪನವರ ತಮ್ಮಂದಿರು ಮ॥ ರಾ॥ ಚಂದ್ರಯ್ಯನವರ ಲಗ್ನದಲ್ಲಿ ರೂ. ೨-೦-೦. ಗಂದಿಗೆ ಅಂಗಡಿ ಮ॥ ರಾ॥ ರೇವಣ್ಣಶಿದ್ದಪ್ಪನವರ ಗುರುಶಿದ್ದಪ್ಪನವರ ಮಕ್ಕಳು ಶಿದ್ದಪ್ಪನವರ ಲಗ್ನದಲ್ಲಿ ರೂ. ೩-೦-೦. ಜುಮ್ಲಾ ೫.

4. ನಾಗಮಂಗಲದ ಅ॥ ರುದ್ರಪ್ಪನವರ ಮೂಲಕ ಮ॥ ರಾ॥ ಆರ್. ರುದ್ರಯ್ಯನಿಗೂ ಚಿ॥ ಸೌ॥ ಮರುಳುಸಿದ್ದಮ್ಮನಿಗೂ ನಡೆದ ಲಗ್ನದಲ್ಲಿ ರೂ. ೫-೦-೦. ಮಂಡ್ಯದ ತಾ॥ ಮದ್ದೂರ್ ಕೆ. ಚನ್ನಬಸಪ್ಪನವರ ಮೂಲಕ ಮ॥ ರಾ॥ ಬಿ. ಬಸವಪ್ಪನವರ ಸೋದರಳಿಯ ಕೆ. ಪುಟ್ಟಯ್ಯನವರ ಲಗ್ನದಲ್ಲಿ ರೂ. ೪-೦-೦ ಜುಮ್ಲಾ ೩೯.

ಬೆಂಗಳೂರು ಸಿಟಿ,
ತಾ॥ ೩೦-೫-೧೯೨೧

ಜಿ. ಪರಮಶಿವಯ್ಯ, ಬಿ. ಎ., ಎಲ್.
ಎಲ್. ಬಿ. ಆನರರಿ ಸೆಕ್ರೆಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಪತ್ರವ್ಯವಹಾರ.

ಶಿವದೀಕ್ಷಾಸಂಸ್ಕಾರವು.

ಶ್ರೀಮಚ್ಛಿವಗಂಗಾ ಮಹಾಪರ್ವತ ಪೂರ್ವದಿಗ್ಭಾಗದಲ್ಲಿ ವಿರಾಜಿಸಲ್ಪಟ್ಟ ಪೊಡವಿಡಿ ಮೇಲಣಗವಿ ವೀರಸಿಂಹಾಸನದ ಮಹಾ ಸಂಸ್ಥಾನದಲ್ಲಿ ಈ ಸಂವತ್ಸರದ ಜ್ಯೇಷ್ಠ ಬಹುಳ ೨ ಬುಧವಾರ (ತಾ॥ ೨೨-೬-೨೧) ನೆ ಸಂಸ್ಥಾನದ ಪೋಷಣೆಯಲ್ಲಿರುವ ಶಿವರುದ್ರಮುರಿ ಎಂಬ ವಟುವಿಗೆ ಬ್ರಹ್ಮೋಪದೇಶಪೂರ್ವಕವಾದ ಶಿವದೀಕ್ಷಾಸಂಸ್ಕಾರವೂ ಮಹಾಪ್ರಮಥಗಣಾರಾಧನೆಯು ಸಹ ನಡೆಯುತ್ತದೆಯಾದುದರಿಂದ ಮತಾಭಿಮಾನಿಗಳು ತಮ್ಮ ವಟುಗಳು ಬಂಧುಮಿತ್ರವರ್ಗದೊಡನೆ ಒಂದುದಿವಸ ಮುಂಚಿತವಾಗಿ ಆಗಮಿಸಿ ಈ ಗುರುಕಾರ್ಯವನ್ನು ಸಾಂಗಗೊಳಿಸಿ ಗುರುದರ್ಶನಾಶೀರ್ವಾದ ಪಡೆದುಕೊಂಡು ಹೋಗಬೇಕೆಂದು ವಾತ್ಸಲ್ಯಪೂರ್ವಕವಾಗಿ ಸೂಚಿಸುವ

ಮೇಲ್ಗಂಡ ವೀರಸಿಂಹಾಸನದ ಏಜಂಟ್ ಬಸವಲಿಂಗದೇವರು.

“ ವಿದ್ಯೆಯಲ್ಲಿ ಹಿಂದುಳಿದವರ ಆನಂದದ ಕಾಲ. ”

ಧರ್ಮದ ಜ್ಞಾನ, ವ್ಯವಹಾರದಗುಟ್ಟು, ದುಡ್ಡಿನಕಿಮ್ಮತ್ತು, ವಿದ್ಯೆಯ ಮಹತ್ವ, ಇವುಗಳನ್ನು ಎಂದೆಂದೂ ಕನಸು ಮನಸ್ಸಿನಲ್ಲಿ ಅರಿಯದವರಾದ ಹಳ್ಳಿಗಳನ್ನು ಈ ದಯಾಳು ಇಂಗ್ಲೀಷ್ ಸರಕಾರದ ಕಾಲದಲ್ಲಿಯೂ ಕೂಡ ಎಷ್ಟೋ ನೋಡಬಹುದು. ಇಂಥ ಹಳ್ಳಿಗಳಲ್ಲಿ ಒಂದಾದ ಕೋಡ ತಾಲ್ಲೂಕು ಪೈಕಿ (ಮತ್ತಿಹಳ್ಳಿ) ಗ್ರಾಮವು ಅಗದೀ ಸಣ್ಣದಿದ್ದರೂ ಒಬ್ಬರ ಮಾತಿನೊಳಗೆ ಒಬ್ಬರು ಇದ್ದಿಲ್ಲ. ಇದರಿಂದ ಮತ್ತಿಷ್ಟು ಹೀನಸ್ಥಿತಿಗೆ ಬರುವದನ್ನು ನೋಡಿ ಹಾಂಸಭಾವಿಯ ಸದ್ಗೃಹಸ್ಥರು ಈ ಗ್ರಾಮಕ್ಕೆ ಬಂದು ಇಲ್ಲಿಯ ಯಾವತ್ತೂ ಜನರನ್ನು ಕೂಡಿಸಿ ಒಂದು ಸಭೆಯನ್ನು ನೆರವೇರಿಸಿ ಅವರಿಗೆ ಈ ದಯಾಳು ಇಂಗ್ಲೀಷು ಸರಕಾರದ ಕಾಲದಲ್ಲಿ ನಮಗಾಗುವ ಹಿತವನ್ನೂ ನಾವು ಮಾಡಬೇಕಾದ ಕರ್ತವ್ಯವನ್ನೂ ಕುರಿತು ಚನ್ನಬಸಪ್ಪ ಅಣ್ಣಾ ಕೊಳ್ಳಿ ಸಾ॥ ಹಾಂಸಭಾವಿ ಇವರು ಒಳ್ಳೇ ಭಾಷಣಮಾಡಿದ್ದರಿಂದ ಯಾವತ್ತು ಜನರ ಮನಸ್ಸಿನ ಮೇಲೆ ಒಳ್ಳೆ ಪರಿಣಾಮವಾಗಿ ಆ ಕೂಡಲೇ ಆನಂದದಿಂದ ಒಂದುನೂರು ರೂಪಾಯಿ ವರ್ಗಣಿ ಆದಷ್ಟಲ್ಲದೆ, ಮುಷ್ಟಿ ಫಂಡು ಎತ್ತಬೇಕೆಂದು ಗೊತ್ತಾಗಿ (ಸೋಮೇಶ್ವರ ಸಂಘ) ಎಂಬ ಸಂಸ್ಥೆಯು ಉಂಟಾಗಿ, ಅದೇ ಹೆಸರಿನ (ಒಂದು ಸ್ಕೂಲು) ಸ್ಥಾಪನವಾಗಿ ಅದಕ್ಕೆ ಕಚವಿ ಬಸವಯ್ಯನವರನ್ನು ಮಾಸ್ತರಾಗಿ ನೇಮಿಸಲ್ಪಟ್ಟರು. ಹೀಗೆ ಪ್ರತಿಯೊಂದು ಹಳ್ಳಿಯೂ ಕೂಡ ಈ ಪ್ರಕಾರ ಸಂಘಗಳನ್ನು ಮಾಡಿಕೊಂಡು ಒಳ್ಳೇ ಕಲಿತಂಥ ಮಾಸ್ತರರಿಗೆ ಯೋಗ್ಯಪಗಾರ ಕೊಟ್ಟು ನಿಜವಾದ ವಿದ್ಯೆಯ ದಾರಿಯನ್ನು ಹಿಡಿಯಲೆಂತಲೂ, (ಹೋದ ದನ ಹುಡುಕಲಿಲ್ಲಾ ಕಾದ ಕೂಲಿ ಬೇಡಲಿಲ್ಲಾ) ಅನ್ನುವ ಇನ್ನೂ ಅನೇಕ ಹಳ್ಳಿಗಳಲ್ಲಿರುವ ಮಂಗಳಾರತಿ ಶಾಲೆಗಳು ಕಡಿಮೆಯಾಗಲೆಂತಲೂ ಹಾರೈಸಿ ಇಂಥ ಸಂಘಗಳಿಂದಲೇ ಬಹಳವಾಗಿ ಹಣ ಕೂಡಿಸಿ; ಇದರಿಂದಲೂ ಹಾಗೂ ಸರಕಾರದ ಸಹಾಯದಿಂದಲೂ ಒಳ್ಳೇ ಕಲಿತಂಥ ಮಾಸ್ತರರೂ ಪ್ರತಿಯೊಂದು ಹಳ್ಳಿಯಲ್ಲಿ ದುಡಿದ ಮೇಲೆ ಯೋಗ್ಯಶಿಕ್ಷಣ ಸಿಕ್ಕಿ ನಮ್ಮ ಸಮಾಜ ಹಾಗೂ ನಮ್ಮ ದೇಶ ಸುಧಾರಿಸಲೆಂದು ಪೂರ್ಣ ನಂಬಿರುವ,

ಓರ್ವ ಮತಾಭಿಮಾನಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

---

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

36 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಶಿವಪೂಜಾವಿಧಿಃ	೧— ೦—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦

೧೯೨೧ ನೆಯ ಇಸವಿ ಜೂನ್ ತಾ॥ ೫ ರಿಂದ ೧೯೨೧ ನೆಯ ಜೂನ್ ತಾ॥ ೧೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ವೈಶಾಖ ಬಹುಳ ಚತುರ್ದಶಿಯಿಂದ ಜ್ಯೇಷ್ಠ ಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
5	ಭಾನು	ಚತು	17-20	ಕೃತ್ತಿ	20-38	23
6	¹ಸೋಮ	ಅಮಾ	13-25	ರೋಹಿ	18-30	24
7	ಮಂಗಳ	ಪಾಡ್ಯ	8-42	ಮೃಗ	15-50	25
8	ಬುಧ	ಬಿ-ಉ	3-25 54-26	ಆರ್ದ್ರಾ	12-26	26
9	ಗುರು	ಚೌತಿ	51-36	ಪುನ	8-32	27
10	ಶುಕ್ರ	ಪಂಚ	45-17	ಪುಷ	4-24	28
11	ಶನಿ	ಷಷ್ಠಿ	39-15	ಆಶ್ಲೇ	0-13	29

(1) ಅಮಾಸೋಮವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಮಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೪ ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಜೂನ್ ತಾರೀಖು ೧೨ ನೆಯ ಭಾನುವಾರ. ಸಂಚಿಕೆ ೨೩

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1ರೂ. 5ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು, ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

SREE SITHARAGHAVA VAIDYASALA

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಡಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ—ಸೀತಾರಾಘವ ವೈದ್ಯಶಾಲಾ,
22 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಸಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

37 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
37 89 ನಾರಾಯಣಮೊದಲಿ ಬೀದಿ, ಮದರಾಸು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರತ್ನ ವಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖಿ	ರೂ. ಇಂದ		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0

೨೭ ಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖಿ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಪಳಕಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
16 ಕಂಪನಿ, ಚೌಕಂಬಾ ಕಾಶೀ.

ಫಲ್ಲಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 35

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಉಷ್ಣರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಕ್ಕಳುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ಕ್ಷಣಾರ್ಧದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಲಘು ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ಕ್ಷಣಾರ್ಧದಲ್ಲಿಯೇ ಅಂದರೆ ೪ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ಶೀಘ್ರ ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಖೋಪಚಾರ ನೆಂಬ ಶಿವಲಿಖಿತದಲ್ಲಿ ಅನ್ಯಮತಮೂಂದ್ರಿಯಮಾತ್ರೆಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಮನೆ ಕ್ರಯಕ್ಕೆ ದೊರೆಯುವುದು.

ಮೈಸೂರು ಇಲವಾಲ ರೋಡಿನಲ್ಲಿರುವ ಡೋರ್ ನಂ: 137ನೆ ಮನೆ 18 by 97 ಅಡಿ ಉಳ್ಳ ಇಪ್ಪಾರುಮನೆ, ಇದರ ಮುಂಭಾಗದಲ್ಲಿ ಕಾಂಪೌಂಡು ಹಿಂಭಾಗದ ಹಿತ್ತಲಿನಲ್ಲಿ ಭಾವಿ ಸಹ ಇರುತ್ತೆ. ನೆಲಕ್ಕೆ ಕಡಪಾಕಲ್ಲು ಹಾಕಿ ಗಾರೆಗಚ್ಚಿನಿಂದ ವಾಸಕ್ಕೆ ಬಹಳ ಅನುಕೂಲವಾಗಿರುವ ಮನೆ ಕ್ರಯಕ್ಕೆ ಸಿದ್ಧವಾಗಿರುತ್ತೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆದು ಖರೀದಿ ಮೊಬಲಗನ್ನು ತಿಳಿದುಕೊಳ್ಳಬಹುದು.

ಟಿ. ಎಲ್. ರಾವ್,
3/37 ಗುಂಡೋಪಂತ್‌ಬೀದಿ, ಬೆಂಗಳೂರು ಸಿಟಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜುಲೈ ತಾ|| ೧೦ ನೆಯ ಭಾನುವಾರ.

ನಮ್ಮ ಮಂತ್ರಿವರ್ಯರಿಗೆ ಹೊಸ ಬಿರುದು.

ಸಾರ್ವಭೌಮರು ತಮ್ಮ ವರ್ಧಂತ್ಯುತ್ಸವದ ದಿನ ಪದ್ಧತಿಯಾಗಿ ಕೊಡುತ್ತ ಬರುವ ಬಿರುದಾವಳಿಗಳೊಳಗೆ ಈ ಸಲ ನಮ್ಮ ಸಂಸ್ಥಾನದ ಮಂತ್ರಿವರ್ಯರಾದ ಸರ್ದಾರ್ ಎಂ. ಕಾಂತರಾಜಅರಸ್ ಬಿ.ಎ.,ಸಿ.ಎಸ್.ಐ.,ಯವರಿಗೆ ಕೆ.ಸಿ.ಐ.ಇ. ಎಂಬ ಘನತರವಾದ ಬಿರುದು ಅನುಗ್ರಹಿಸಲ್ಪಟ್ಟಿರುವುದೆಂಬುದನ್ನು ತಿಳಿಯಿಸಲು ವಿಶೇಷವಾಗಿ ಸಂತೋಷಿಸುತ್ತೇವೆ. ಪ್ರಜಾರಂಜನೈಕ ಪರಾಯಣರಾದ ಮ|| ಅರಸಿನವರಿಗೆ ಈ ಗೌರವವು ಪ್ರಾಪ್ತವಾದುದಕ್ಕಾಗಿ ದೇಶೀಯರೆಲ್ಲಾ ಸಂತೋಷಿಸುವರೆಂಬುದಕ್ಕೆ ಸಂಶಯವಿಲ್ಲ. ರಾಜಬಂಧುವರ್ಗದಲ್ಲಿ ಇತ್ತೀಚೆಗೆ ಮಂತ್ರಿಪದವಿಗೆ ಬಂದವರೂ, ಅದರಲ್ಲೂ ಇಂಥ ಘನತರವಾದ ಬಿರುದನ್ನು ಪಡೆದವರೂ ಸರ್ದಾರ್ ಕಾಂತರಾಜ ಅರಸಿನವರ ಹೊರತು ಮತ್ತೊಬ್ಬರಿಲ್ಲ. ಇಂಥ ಸತ್ಪುತ್ರರತ್ನವನ್ನು ಪಡೆದುದರಿಂದ ಕತ್ತಿಗೋಪಾಲರಾಜ ಅರಸರ ವಂಶವು ತೇಜೋಭೂಯಿಷ್ಠವಾಯಿತು. ರಾಮಲಕ್ಷ್ಮಣರಂತೆ ಪರಸ್ಪರ ನೆರವಾಗಿ ರಾಜ್ಯವನ್ನು ಸದ್ಧರ್ಮದಿಂದ ಪರಿಪಾಲಿಸುತ್ತ ಯಶೋಭೂಯಿಷ್ಠರಾಗಿರುವ ಪುತ್ರರತ್ನಗಳನ್ನು ಒಂದುಕಡೆಯೂ, ಭೂಭಾರವನ್ನು ಹೊತ್ತಿರುವ ಆದಿಶೇಷನಂತೆ ಸಂಸ್ಥಾನದ ಅಮಾತ್ಯಕಾರ್ಯನಿರ್ವಾಹವನ್ನು ಮಾಡುತ್ತ ಪ್ರಜಾರಂಜಕರಾಗಿ ಸರ್ವಸಂಮಾನ್ಯರಾಗಿರುವ ಸಹೋದರರನ್ನು ಒಂದುಕಡೆಯೂ ನೋಡಿ ಆನಂದಿಸುತ್ತಿರುವ ಮಹಾಮಾತೃಶ್ರೀಯವರ ಭಾಗ್ಯವಿಶೇಷವು ಸಾಮಾನ್ಯವಾದುದಲ್ಲ.

ನಮ್ಮ ಸಂಸ್ಥಾನವು ಆಂಗ್ಲ ಪರಿಪಾಲನೆಯಿಂದ ತಪ್ಪಿ ರಾಜವಂಶೀಯರ ಆಳಿಕೆಗೆ ಒಳಪಟ್ಟನಂತರ ಮಂತ್ರಿಪದವಿಗೆ ಬಂದ ೬-೭ ಮಂದಿಗಳಲ್ಲಿ ಕೆ. ಶೇಷಾದ್ರಿ ಅಯ್ಯರು, ಪಿ. ಎನ್. ಕೃಷ್ಣಮೂರ್ತಿಯವರು, ಎಂ. ವಿಶ್ವೇಶ್ವರಯ್ಯನವರು-ಈಮೂವರಿಗೆ ಮಾತ್ರವೇ ಸರ್ ಬಿರುದು ಪ್ರಾಪ್ತವಾಗಿದ್ದಿತು. ನಮ್ಮ ಸರ್ದಾರರು ಕೂಡ ಈಗ ಆ ಬಿರುದನ್ನು ಹೊಂದಿ ಅದೇ ಪಂಕ್ತಿಯಲ್ಲಿ ಗಣ್ಯರಾದರು. ಸಂಸ್ಥಾನವು ಸುಖಮುಖವಾಗಿದ್ದಾಗ ಅದರ ಕಾರ್ಯಭಾರವನ್ನು ನಿರ್ವಹಿಸುವುದು ಅಷ್ಟು ಕಷ್ಟವಲ್ಲ. ಈಗ ಸಂಸ್ಥಾನಕ್ಕೆ ಸಂಘಟಿತವಾಗಿರುವ ಆರ್ಥಿಕವೈಷಮ್ಯವು ಹಿಂದೆ ಯಾವಾಗ್ಗೂ ಬಂದಿರಲಿಲ್ಲ. ಇಂಥ ವಿಷಮಸಮಯದಲ್ಲಿ ರಾಜ್ಯರಥಕ್ಕೆ ಹೆಗಲನ್ನು ಕೊಟ್ಟು ಸಾಗಿಸುವ ಭಾರವು ಮ|| ಅರಸಿನವರ ಮೇಲೆ ಬಿದ್ದಿರುವುದು. ಈ ಸಮಯದಲ್ಲಿ ಅವರು ಸಂಸ್ಥಾನಕ್ಕೆ ಮಾಡುವ ಸೇವೆಯು ಎಂದೆಂದಿಗೂ ಮರೆಯತಕ್ಕುದಾಗಿರುವುದಿಲ್ಲ. ಇವರ ಕಾಲದಲ್ಲಿ ಕೂಲಂಕಷವಾದ ಪರಿಶೋಧನೆಯಿಂದ ಮಾಡಲ್ಪಟ್ಟ ರಕ್ಷಣೆಯು ಸಂಸ್ಥಾನದ ಕಾರ್ಯಭಾರಕ್ರಮಕ್ಕೆ ದೃಢತರವಾದ ಶಾಶ್ವತವಾದ ಹದಿಯಾಗಿ ಪರಿಣಮಿಸುವುದೆಂಬುದಕ್ಕೆ ಸಂಶಯವಿಲ್ಲ; ಇತರ ಮಂತ್ರಿವರ್ಯರುಗಳೆಲ್ಲರಿಗಿಂತಲೂ ಸಂಸ್ಥಾನದ ಯೋಗಕ್ಷೇಮ ಚಿಂತನೆಯ ಭಾರವು ಇವರಿಗೆ ವಿಶೇಷವಾಗಿರುವುದೆಂಬುದಕ್ಕೆ ಬಲವತ್ತರವಾದ ಕಾರಣವುಂಟೆಂಬುದು ಗೊತ್ತೇ ಇದೆ. ಸಂಸ್ಥಾನದ ಸೇವೆಯವಿಷಯದಲ್ಲಿ ಇವರಿಗೆ ನಿಸರ್ಗವಾಗಿರುವ ಉತ್ಸಾಹವು ಈಗಣ ನೂತನಬಿರುದುಪ್ರಾಪ್ತಿಯಿಂದ ಮತ್ತಷ್ಟು ಉತ್ತೇಜನಗೊಂಡೀತೆಂಬುದರಲ್ಲಿ ಸಂಶಯವಿಲ್ಲ. ದೀನ ಜನೋದ್ಧರಣ ವಿಷಯದಲ್ಲಿ ಇವರ ಕಾಲದೊಳಗೆ ನಡೆದಂಥ ಶಾಶ್ವತವಾದ ಏರ್ಪಾಟುಗಳು ಇದುವರೆಗಣ ಯಾವ ಮಂತ್ರೀಶ್ವರರ ಕಾಲದಲ್ಲೂ ನಡೆದುದಿಲ್ಲ. ಅದುಕಾರಣ ಇವರ ಮಂತ್ರಿತ್ವವು ಸಂಸ್ಥಾನದ ಮಹಾಪ್ರಜೆಗಳಿಗೆಲ್ಲಾ ಆಚಂದ್ರಾರ್ಕಸ್ಮರಣೀಯವಾಗಿರುವುದು. ಜಗದೀಶ್ವರನು ನಮ್ಮ ಸರ್ದಾರರಿಗೆ ಚಿರಾಯುರಾರೋಗ್ಯಾದಿ ಭಾಗ್ಯಗಳನ್ನೂ ರಾಜ್ಯಕಾರ್ಯನಿರ್ವಾಹದಲ್ಲಿ ಇತೋಪ್ಯತಿಶಯವಾದ ಧೈರ್ಯಸ್ಥೈರ್ಯ ಸಾಹಸಗಳನ್ನೂ ಅನುಗ್ರಹಿಸಲೆಂತಲೂ, ಇವರ ಮಂತ್ರಿತ್ವವು ಮೈಸೂರಿಗೆ ದೀರ್ಘಕಾಲ ದೊರೆದು ಅದುಂದ ದೇಶೀಯರಿಗೆ ವಿಶೇಷ ಸನ್ಮಂಗಳಗಳುಂಟಾಗಲೆಂತಲೂ ಕೋರುವೆವು.

ಕಂ|| ಕೇ. ಸೀ. ಎ. ಈ. ಬಿರುದಿಂ |
ಭಾಸುರನಾದೆಮ್ಮ ಕಾಂತರಾಜಾಮಾತ್ಯಂ ||
ಲೇಸಂ ದೇಶಕ್ಕೆಸಗು |
ತ್ತೋಸಸುಸದ ಭೋಗಭಾಗ್ಯದಿಂ ಮೆರೆಗೆ ಚಿರಂ ||

ಮಿಲ್ಲರ್ ಸಂಘದ ವರದಿ.

(ಭಾಗ ೩)

ಸರ್ಕಾರದ ದೊಡ್ಡ ಉದ್ಯೋಗಗಳಿಗೆ ಇನ್ನು ೭ ವರ್ಷಗಳೊಳಗಾಗಿ ೧೦೦ಕ್ಕೆ ೫೦ರಂತೆ ಹಿಂದುಳಿದ ಜನವರ್ಗಗಳವರು ಬರುವಂತೆ ಆಗಬೇಕೆಂದು ಪ್ರಭುತ್ವದವರು ಮಿಲ್ಲರ್ ಸಂಘದ ವರದಿಯ ಮೇಲೆ ಅಪ್ಪಣೆ ಮಾಡಿದ್ದಾರಷ್ಟೆ. ಪ್ರಭುತ್ವದವರು ಹೀಗೆ ಅಪ್ಪಣೆ ಮಾಡಿದ ಮಾತ್ರದಿಂದಲೇ ಚರಿತಾರ್ಥವಾದೀತೆಂದು ಊಹಿಸಲಾಗುವುದಿಲ್ಲ. ಒಳ್ಳೆಯ ತೃಣಜಲಸಮೃದ್ಧವಾಗಿರುವ ಕಾವಲಿಗೆ ಊರಪಶುಗಳೆಲ್ಲಾ ಬಂದು ಮೇಯ್ಯಬಹುದೆಂದು ಯಜಮಾನರು ಅಪ್ಪಣೆಮಾಡಿಟ್ಟರೂ ಸುತ್ತಲೂ ಮುಳ್ಳುಬೇಲಿ ಹಾಕಿ ಬಾಗಿಲಲ್ಲಿ ಕಾವಲುಗಾರರು ದೊಣ್ಣೆಹಿಡಿದು ಕುಳಿತಿದ್ದರೆ ಅಪ್ಪಣೆಯು ಎಷ್ಟುಮಟ್ಟಿಗೆ ಸಾರ್ಥಕವಾದೀತು? ಅಂಥ ಪ್ರತಿಬಂಧಕಗಳು ತೊಲಗಿದರೇನೆಯೋ ಅಲ್ಲವೆ ಯಜಮಾನನ ಅಪ್ಪಣೆಯು ಸಾರ್ಥಕವಾಗುವುದು? ಈಗಣ ಸಮಯಸನ್ನಿವೇಶಗಳ ಅನುಕೂಲ್ಯವನ್ನೆಲ್ಲಾ ಅರಿತುಕೊಂಡು ಹಿಂದುಳಿದ ಜನವರ್ಗಗಳಲ್ಲಿ ಕುಶಲಮತಿಗಳಾದವರು ವಿದ್ಯಾಭ್ಯಾಸದ ಕಡೆಗೆ ವಿಶೇಷ ಗಮನವಿತ್ತು ತಕ್ಕ ಅರ್ಹತೆಯನ್ನು ಸಂಪಾದಿಸಿಕೊಂಡು ಹೆಚ್ಚು ಹೆಚ್ಚಾಗಿ ಸರ್ಕಾರದಅಧಿಕಾರಕ್ಕೆ ಬರಲು ಸಿದ್ಧರಾಗಬೇಕು. ಮತ್ತು ಈಗ ಸರ್ಕಾರದ ದೊಡ್ಡ ದೊಡ್ಡ ಉದ್ಯೋಗಗಳನ್ನು ಅಲಂಕರಿಸಿರುವ ಮುಂಬರಿದ ಜನವರ್ಗಗಳವರು ನಿರ್ಮತ್ಸರತೆಯಿಂದಲೂ ಸಹೋದರ ವಾತ್ಸಲ್ಯದಿಂದಲೂ ಹಿಂದುಳಿದ ಜನವರ್ಗದ ವಿದ್ಯಾವಂತರಿಗೆ ಹಸ್ತಾವಲಂಬನವನ್ನಿತ್ತು ಅಧಿಕಾರಸ್ಥಾನಗಳಿಗೆ ಸೇರಿಸಲು ಅವಕಾಶ ಕೊಡಬೇಕಲ್ಲವೆ, ಇವರುಗಳು ಹೊಸದಾಗಿ ಕೈಕೊಳ್ಳುವ ಕೆಲಸವಾದುದರಿಂದ ಅದರಲ್ಲಿ ಸ್ವಲ್ಪ ನ್ಯೂನಾತಿರೇಕಗಳು ತೋರಿಬಂದರೂ ಬುದ್ಧಿಹೇಳಿ ಸಂವರಿಸಿಕೊಂಡುಹೋಗುವಷ್ಟು ಅಭಿಮಾನವನ್ನೂ ಸಹನೆಯನ್ನೂ ತೋರಿಸಬೇಕು. ಹಾಗಲ್ಲದಿದ್ದರೆ ಶ್ರೀಮನ್ಮಹಾರಾಜರ ಸರ್ಕಾರದ ಆಜ್ಞೆಯು ಈಡೇರಲಾರದು.

ಮಿಲ್ಲರ್ ಸಂಘದ ವರದಿಯು ಪ್ರಕಟವಾದ ಕೂಡಲೇ ಯಾರೋ ಒಬ್ಬ ಕಲಾಶಾಲಾಧ್ಯಕ್ಷರು - ಸರ್ಕಾರದವರು ಮಾಡುವುದನ್ನು ಮಾಡಲಿ, ನಮ್ಮ ಕೈಯನ್ನು ನಾವು ತೋರಿಸುತ್ತೇವೆ" ಎಂದು ತಲೆಕುಣಿಸಿದರಂತೆ! ಇಂಥಾ ಮಹಾನುಭಾವರೇ ಮುಂಬರಿದ ಜನವರ್ಗದಲ್ಲಿ ಹೆಚ್ಚಿದರೆ "ಸರ್ವೆ ಜನಾಸ್ಸುಖಿನೋಭವಂತು" ಎಂದು ಆಹರ್ನಿಶಿಯೂ ಕೋರುವ ಬ್ರಾಹ್ಮಣ್ಯಕ್ಕೆ ಭೂತಲದಲ್ಲಿ ಉಳಿಗಾಲವುಂಟೆ? ದೇಶದಲ್ಲಿ ಸಹೋದರ ಪ್ರೀತಿಯು ವೃದ್ಧಿಯಾದೀತೇ?

ಶ್ರೀಮನ್ಮಹಾರಾಜರವರು ೧೯೧೮ನೆ ವರ್ಷದಲ್ಲಿ ಹಿಂದುಳಿದವರ ಡೆಪ್ಯುಟೇಷನ್ನಿಗೆ ಉತ್ತರಕೊಡುವಾಗ್ಗೆ ತಾವು ಹಿಂದುಳಿದವರಿಗೆ ಮಾಡುವ ಸಹಾಯವನ್ನು ವಿವರಿಸಿ, ಕಡೆಗೆ - ಸ್ವಾಮಿಭಕ್ತಿಯಿಂದ ಇದನ್ನು ನೀವು ಅಂಗೀಕರಿಸಬೇಕು - ಎಂದು ಅಪ್ಪಣೆ ಮಾಡಿದರು. ಅದರ ಮೇಲೆ ಹಿಂದುಳಿದ ಜನವರ್ಗಗಳವರು ತಾವು ಯಾವಾಗಲೂ ಕಪಟಸ್ವಾಮಿಭಕ್ತರಲ್ಲವಾದುದರಿಂದ ಸಾದೆತ್ತಿಗೆ ೨ ಹೊರೆಯೆಂಬುದನ್ನು ನೆನಸಿಕೊಂಡು, ಪ್ರಭುಗಳ ಅಪ್ಪಣೆಗೆ ಮರುಮಾತಾಡದೆ - ಪ್ರಭುಚಿತ್ತ-ನಮ್ಮ ಭಾಗ್ಯ" ಎಂದುಕೊಂಡು, ಅವರ ಅಭಯದಾನವೇ ತಮ್ಮ ಭಾಗದ ಕಾಮಧೇನು ಕಲ್ಪವೃಕ್ಷಗಳೆಂದು ದೃಢವಾಗಿ ನಂಬಿ, ತಮ್ಮ ಕಷ್ಟಗಳಿಗೂ ಅಳಿಗಾಲವು ಬರದೆ ತಪ್ಪುವುದಿಲ್ಲವೆಂದು ಯೋಚಿಸಿಕೊಂಡು, ಪ್ರಭುಗಳ ಅಪ್ಪಣೆಯು ಫಲಿತವಾಗುವ ಸಮಯವನ್ನೇ ನಿರೀಕ್ಷಿಸಿಕೊಂಡು ಕಾಲಯಾಪನೆ ಮಾಡುತ್ತಿರುವರು. ಆಳುವ ಮಹಾಸ್ವಾಮಿಯವರ ಅಭಯದಾನವು ಮಿಲ್ಲರ್ ಸಂಘದ ವರದಿಯ ಮೇಲಣ ಅಪ್ಪಣೆಯಿಂದ ಫಲೋನ್ಮುಖವಾಗುವಂತಾಯಿತು. ಇದಕ್ಕಾಗಿ ಅವರುಗಳು ಎಷ್ಟೋ ಸಂತೋಷದಿಂದ ಭಕ್ತಿವಿನಮ್ರರಾಗಿ ಪ್ರಭುಗಳಿಗೂ ಅವರ ಸರ್ಕಾರಕ್ಕೂ ವಂದಿಸುತ್ತಿರುವರು. ಆದರೆ ಅದೇ ಸಮಯದಲ್ಲೇ ಶ್ರೀಮನ್ಮಹಾರಾಜರು ಮುಂಬರಿದಿರುವ ಶ್ರೀಮತಸ್ಥ ಬ್ರಾಹ್ಮಣ ವರ್ಗದವರಿಗೂ ಉಪದೇಶಪರವಾದ ಕೆಲವಚನಗಳನ್ನು ಅಪ್ಪಣೆ ಕೊಡಿಸಿದ್ದರು. ಏನೆಂದರೆ-- ನಿಂನಿಮ್ಮ ಇಷ್ಟಾರ್ಥಸಾಧನೆಯಲ್ಲಿ ಪ್ರಜೆಗಳ ಐಕಮತ್ಯಕ್ಕೆ ಭಂಗಕರವಾದ ಪ್ರಯತ್ನಗಳನ್ನು ಯಾರೂ ಮಾಡಲಾಗದು. ಬ್ರಾಹ್ಮಣರೂ ಕೂಡ ಉಳಿದ ಪ್ರಜೆಗಳೊಡನೆ ಭ್ರಾತೃಭಾವವನ್ನು ಅಭಿವೃದ್ಧಿಪಡಿಸಿಕೊಂಡು ಸಹನೆಯನ್ನು ತಾಳಿ, ನನ್ನ ಮನೋಭೀಷ್ಟವನ್ನು ನೆರವೇರಿಸುವುದಕ್ಕೆ ಸಾಹಾಯ್ಯಮಾಡಿ, ಉಳಿದ ಜನವರ್ಗಗಳ ನಿಸರ್ಗವಾದ ಆಕೋತ್ತರಗಳಿಗೆ ಯಾವ ಆತಂಕವನ್ನೂ ಉಂಟುಮಾಡದೆ ಇರುವವರಾಗಲಿ" ಎಂಬುದಾಗಿ ಅಪ್ಪಣೆ ಕೊಡಿಸಿದ್ದರು. ಆ ಅಪ್ಪಣೆಯನ್ನು ಸಫಲಗೊಳಿಸತಕ್ಕ ಬ್ರಾಹ್ಮಣೋತ್ತಮರು ದೇಶದಲ್ಲಿಲ್ಲವೆಂದು ನಾವು ಹೇಳುವುದಿಲ್ಲ. ಪರಹಿತವೇ ಜೀವಿತಚರಿತಾರ್ಥವೆಂದು ತಿಳಿದು ತ್ರಿಕರಣದಲ್ಲೂ ಆಚರಿಸತಕ್ಕ ಮಹಾನುಭಾವರು ಪ್ರಪಂಚದಲ್ಲಿಲ್ಲದೆ ಇಲ್ಲ. ಶ್ರೀಮನ್ಮಹಾರಾಜರ ಉಪದೇಶದ ಅವಶ್ಯಕತೆಯೇ ಇಲ್ಲದೆ ಸಹೋದರ ಪ್ರಜೆಗಳಲ್ಲಿ ಸಾನುಭೂತಿಯನ್ನು ತೋರಿಸತಕ್ಕ ಉತ್ತಮಪುರುಷರು ಕೂಡ ಬ್ರಾಹ್ಮಣಮಂಡಲಿಯಲ್ಲಿ ಕೆಲವರಾದರೂ ಇರಬಹುದು. ಪ್ರಭುಗಳು ಅಪ್ಪಣೆಕೊಡಿಸಿದ ಮೇಲಾದರೂ ಅದನ್ನು ವ್ಯರ್ಥಗೊಳಿಸಬಾರದೆಂದು ತಿಳಿದಾಚರಿಸತಕ್ಕ ಮಧ್ಯಮತರಗತಿಯವರಾದರೂ ಬ್ರಾಹ್ಮಣ ವರ್ಗದಲ್ಲಿ ಎಷ್ಟೋಮಂದಿ ಇದ್ದೀಅರಬಹುದು. ಆದರೆ ಸ್ವಬುದ್ಧಿಯಿಂದಾಗಲೀ ಪರೋಪದೇಶದಿಂದಾಗಲೀ ಪರಹಿತದಲ್ಲಿ ಆದರವನ್ನೂ ಪರೋತ್ಕರ್ಷದಲ್ಲಿ ಸಹನೆಯನ್ನೂ ತೋರಿಸದೆ ಇರತಕ್ಕ ಹುಟ್ಟುಸ್ವಭಾವವು ಬೋಳಿಸಿದರೆ ಹೋದೀತೇ? ಎಂಬ ಗಾದೆಯನ್ನು ಸಾರ್ಥಕಪಡಿಸತಕ್ಕ ಜನರೂ ಕೂಡ ಆಜನಮಧ್ಯದಲ್ಲಿರುತ್ತಿರುವುದನ್ನು ನೋಡಿದರೆ ನಾಮಮಾತ್ರದ ಬ್ರಾಹ್ಮಣ್ಯಕ್ಕೂ ಕೂಡ ಇವರುಗಳು ಅರ್ಹರೆ? ಎಂದು ಯೋಚಿಸಬೇಕಾಗುವುದು.

ಮಿಲ್ಲರ್‌ಸಂಘದ ವರದಿಯಮೇಲೆ ಪ್ರಭುತ್ವದವರು ಮಾಡಿದಪ್ಪಣೆಯಲ್ಲಿ ಬ್ರಾಹ್ಮಣವರ್ಗದವರಿಗೆ ಯಾವ ಉಪಹತಿಯನ್ನೂ ಮಾಡಿಲ್ಲವೆಂಬುದು ಸ್ಪಷ್ಟವಾಗಿದೆ. ಸಂಸ್ಥಾನದ ಒಟ್ಟು ಪ್ರಜೆಗಳಲ್ಲಿ ಆ ವರ್ಗದವರು ೨ ಲಕ್ಷದಷ್ಟು ಮಾತ್ರವೇ ಇದ್ದರೂ ಆ ಜನವರ್ಗದವರಿಗೇ ಸಂಸ್ಥಾನದ ಉದ್ಯೋಗಗಳಲ್ಲಿ ಅರ್ಧಭಾಗವನ್ನು ಮೀಸಲಾಗಿಟ್ಟು ಉಳಿದ ೫೬ ಲಕ್ಷ ಪ್ರಜೆಗಳಿಗೆಲ್ಲಾ ಅರ್ಧಭಾಗವನ್ನು ವಿಂಗಡಿಸಿದ್ದಾರೆ. ಹೀಗೆ ಇತರ ಪ್ರಜೆಗಳಿಗೆಲ್ಲಾ ಯತ್ಕಿಂಚಿತ್ ದಾನಮಾಡಿದ್ದರೂ ಅದನ್ನೂ ಸೈರಿಸದೆ ಸರ್ವವೂ ತಮಗೇ ಇಲ್ಲದೆ ತಪ್ಪಿಹೋಯಿತಲ್ಲಾ! ಎಂದು ಎದೆಬಡಿದುಕೊಳ್ಳುವವರು ಮನುಷ್ಯವರ್ಗದಲ್ಲಿ ಸೇರಿದವರೆಂದು ಹೇಳಬಹುದೇ? ಅವರು ವನ್ಯಮೃಗಪಕ್ಷಿಗಳಪಜ್ತ್ಕಿಗೂ ಸೇರತಕ್ಕವರಾಗಿಲ್ಲ. ಏಕೆಂದರೆ ಆ ಅರಣ್ಯಮೃಗಗಳು ಕೂಡ ಒಂದುಕಾಡಿನಲ್ಲಿ ಬೆಳೆದು ವಿಹರಿಸುವ ಇತರ ಮೃಗಗಳೊಡನೆಲ್ಲಾ ಎಷ್ಟೋ ಸೌಹಾರ್ದದಿಂದ ನಡೆದುಕೊಳ್ಳುತ್ತವೆ.

ನಮ್ಮ ಮೈಸೂರುದೇಶದೊಳಗೆ ಹಿಂದುಳಿದ ಪ್ರಜಾವರ್ಗಗಳ ಅಭ್ಯುದಯವನ್ನು ಈರ್ಷ್ಯಾಸೂಯೆಯಿಂದ ನೋಡುವಲ್ಲಿ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳೂ ಅವುಗಳ ಕೂಟದವರೂ ಸಹ ಅಗ್ರಗಣ್ಯರಾಗಿರುತ್ತಾರೆಂಬುದು ಇದುವರೆಗಣ ಅವರುಗಳ ಚಾರಿತ್ರದಿಂದ ಸರ್ವರಿಗೂ ಗೊತ್ತೇ ಆಗಿದೆ. ಮಿಲ್ಲರ್‌ಸಂಘದ ವರದಿಯು ಪ್ರಕಟವಾದಮೇಲಂತೂ ಅವುಗಳ ಕ್ರೋಧಾಗ್ನಿಯು ನೆತ್ತಿಯನ್ನು ಭೇದಿಸಿಕೊಂಡು ಹೋಗುವಷ್ಟು ಉಜ್ವಲವಾಗಿದೆ. ಈ ವರದಿಯ ವಿಷಯವನ್ನು ಎತ್ತಿ ಪ್ರಕಟಿಸುವಷ್ಟು ಸಹನೆಯು ಕೂಡ ಆ ಪತ್ರಿಕೆಗಳಿಗೆ ಇಲ್ಲದೆಹೋಯಿತು. ವೃತ್ತಾಂತಪತ್ರಿಕೆಯು ಪ್ರಕಟಿಸಿದ್ದ ವರದಿಯ ಮುಖ್ಯಾಂಶವನ್ನು ಸಂಪದಭ್ಯುದಯವು ಹೇಳಿಕೊಂಡು ಅದರ ಮೇಲೆ ತನ್ನ ವ್ಯಾಖ್ಯಾನವನ್ನು ಮಾಡುವಾಗ್ಗೆ ತನ್ನ ಹೃದಯದಿಷವನ್ನೆಲ್ಲಾ ಒಳಗೆ ತಾಳಿಕೊಳ್ಳಲಾರದೆ ಒಂದೇಸಲಕ್ಕೆ ವಮನಮಾಡಿಬಿಟ್ಟಿದೆ. ಈ ಅಪ್ಪಣೆಯಿಂದ ಮೈಸೂರು ಸರ್ಕಾರಕ್ಕೆ ಪ್ರಳಯರೂಪರೋಗವು ಬರುವುದಂತೆ! ಸಂಸ್ಥಾನಕ್ಕೆ ಶನಿದಶೆಯು ಬಂದಿರುವುದೆಂದು ಇವರ ಜೋಯಿಸರು ಹೇಳಿರುವರಂತೆ! ಜಾತಿ ಮತ ಭೇದರೂಪ ಮಹಾಮಾರಿಯು ಸಂಸ್ಥಾನಕ್ಕೆ ಪ್ರವೇಶಿಸಿರುವಳಂತೆ! ಸರ್ಕಾರಕ್ಕೆ ತಲೆತಗುಲಿದಮೇಲೆ ಬುದ್ಧಿ ಬರುವುದಂತೆ! ಇತರ ವರ್ಗಗಳವರಿಗೆಲ್ಲ ಸರ್ಕಾರಿಕೆಲಸಗಳನ್ನು ಕೊಟ್ಟರೆ ಸರ್ಕಾರದ ಬಿಗಿಯು ತಪ್ಪಿಹೋಗುವುದಂತೆ! ಇವೇ ಸಂಪದಭ್ಯುದಯದ ಪ್ರಲಾಪಗಳಾಗಿರುತ್ತವೆ. ಹಿಂದುಳಿದವರ ಡೆಪ್ಯುಟೇಷನ್ನಿಗೆ ಶ್ರೀಮನ್ಮಹಾರಾಜರು ಉತ್ತರ ಕೊಡುವಾಗ್ಗೆ ಬ್ರಾಹ್ಮಣವರ್ಗದವರನ್ನು ಕುರಿತು ಮಾಡಿದ ಹಿತೋಪದೇಶವನ್ನು ನೆನೆದಾದರೂ ಈ ಸಮಯದಲ್ಲಿ ಗಂಟಲಿಗೆ ಒತ್ತರಿಸಿಕೊಂಡುಬಂದ ಅಸೂಯಾಗ್ರಹಾಗ್ನಿಯನ್ನು ಈ ಪತ್ರಿಕೆಗಳು ಒಳಗೇ ನುಂಗಿಕೊಂಡು ಇರಲಾರದೆ ಹೋದುವು! ಪ್ರಭುಗಳ ಅಪ್ಪಣೆಯನ್ನು ಮಣ್ಣುಗೂಡಿಸುವುದಕ್ಕೆ ಈ ಪತ್ರಿಕೆಗಳೇ ಮುಂದಾಗಿ ಬಾಯ್ದೆರೆದು ನಿಂತುದು ಅತ್ಯಂತ ಹೇಯವು.

ದೇಶದ ಹೊರಗಣ ಕೆಲವು ವೃತ್ತಪತ್ರಿಕೆಗಳು ಸಂಸ್ಥಾನದೊಳಗಿನ ಸ್ಥಿತಿಗತಿಯನ್ನೂ ಮಿಲ್ಲರ್‌ಸಂಘದ ವರದಿಯನ್ನೂ ಸಾಂಗವಾಗಿ ಅರಿಯದ ಕಾರಣದಿಂದ ಈಗಣಪ್ಪಣೆಯಮೇಲೆ ಒರಟೊರಟಾಗಿ ವ್ಯಾಖ್ಯಾನಗಳನ್ನು ಮಾಡಿಕೊಂಡಿರುತ್ತವೆ. ಅವು ನಮಗೆ ಗಮನೀಯವಲ್ಲ. ಹಾಗಿರಲಿ, ದೇಶದಲ್ಲೇ ಹುಟ್ಟಿ ದೇಶದಪ್ರಜೆಗಳಲ್ಲಿ ಸೌಹಾರ್ದವನ್ನು ವೃದ್ಧಿಪಡಿಸಿಕೊಂಡು ಹೋಗಬೇಕಾದ ವೃತ್ತಪತ್ರಿಕೆಗಳಲ್ಲಿ ಹೀಗೆ ಪರೋತ್ಕರ್ಷಾಸಹನೆಯು ಪದೇಪದೇ ವ್ಯಕ್ತಪಡುತ್ತಾ ಬರುವುದು ಉಚಿತವೇ? ಅದರಿಂದ ದೇಶಕ್ಕೆ ಕ್ಷೇಮವೆ? ಮ|| ಎಂ. ವೆಂಕಟಕೃಷ್ಣಯ್ಯನವರು ಸರ್ವಸಮದೃಷ್ಟಿಯನ್ನೂ ದೇಶಾಭಿಮಾನವನ್ನೂ ನಿಸ್ಪೃಹತ್ವ ವೇದಾಂತವನ್ನೂ ಬಾಯಲ್ಲಿ ಹೇಳಿಕೊಳ್ಳುತ್ತಿರುವಂತೆ ಅವರ ಪತ್ರಿಕೆಯ ನಡತೆಯಲ್ಲಿ ತೋರಿಸದಿರುವುದನ್ನು ಕಂಡು ನಮ್ಮಂತೆ ಅನೇಕರು ಆಶ್ಚರ್ಯಪಡದೆ ಇರಲಾರರು. ಅವರ ವಯೋವಿಜ್ಞಾನ ಪರಿಪಾಕಕ್ಕೆ ತಕ್ಕಂತೆ ಅವರ ಪತ್ರಿಕಾ ಕಾರ್ಯದಲ್ಲಿ ವಿಚಾರಶುದ್ಧಿಯೂ ಉದಾತ್ತಚರಿತೆಯೂ ವ್ಯಕ್ತವಾಗದಿರುವುದನ್ನು ಕಂಡು ಈ ಸಮಯದಲ್ಲಿ ಅನೇಕರು ಅತ್ಯಾಶ್ಚರ್ಯದೊಡನೆ ವಿಷಾದವನ್ನು ಹೊಂದಿರುವರು. ಹೊನ್ನು ಹೆಣ್ಣು ಮಣ್ಣುಗಳ ಆಸೆಗಾಗಿ ಯೂರೋಪುಖಂಡವೇ ಯುದ್ಧಾಗ್ನಿಯಲ್ಲಿಬೆಂದು ದಗ್ಧವಾಯಿತೆಂದು ಉದಾಹರಿಸಿ, ನಿಸ್ಪೃಹತೆಯ ಪುರಾಣವನ್ನು ವಾರಕ್ಕೆ ನಾಲ್ಕುಸಲ ಬೋಧಿಸುವ ಈ ಪತ್ರಿಕೆಗಳು ಮೈಸೂರು ಸರ್ಕಾರದ ಉದ್ಯೋಗದಲ್ಲಿ ತಮ್ಮವರಿಗಿದ್ದ ನಾಲ್ಕುಕಾಸಿನ ಸಂಬಳದ ಪಾಲಿಗೆ ಇತರರು ಬರುವುದಕ್ಕೆ ಮಿಲ್ಲರ್‌ಸಂಘದ ವರದಿಯಿಂದ ಅವಕಾಶವಾದುದನ್ನು ಕಂಡು ಅಷ್ಟು ಮಾತ್ರವನ್ನೂ ಸೈಸಿಸಲಾರದೆ ಹೋಗಿವೆಯಲ್ಲಾ! ನೋಡಿದಿರಾ ಈ ಒಣ ವೇದಾಂತವನ್ನು? ಸರ್ವಭೂಷಣ ಶಿವಯೋಗಿಗಳು ಒಂದೆಡೆಯಲ್ಲಿ ಆತ್ಮಪ್ರತಿಷ್ಠೆ ಪರದೂಷಣೆಗಳನ್ನು ಮಾಡದೆ ನಿಸ್ಪೃಹನಾಗಿರುವ ನನಗೆ ಈ ಪಾಮರರ ಜತೆಯಲ್ಲಿ ಮೂರು ಕಾಸಿನ ಭೂರಿದಕ್ಷಿಣೆಯನ್ನು ಕೊಡಬಹುದೆ? ಎಂದು ಹೇಳಿರುವ ಕಪಟ ವಿರಾಗಿಗಳ ಸಾಮ್ಯವು ಅಕ್ಷರಶಃ ಒಪ್ಪುತ್ತದೆಯಲ್ಲವೆ? ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯನ್ನು ತಾವು ನಿಷೇಧಿಸಿದರೆ ತಮ್ಮ ಒಳಗಿನ ಪರೋತ್ಕರ್ಷಾಸಹನಗುಣವು ಎಲ್ಲಿ ಹೊರಬಿದ್ದು ಹೋಗುವುದೋ ಎಂಬ ಚಿಂತೆಯಿಂದ ಈ ಪತ್ರಿಕೆಗಳು ಬೆಕ್ಕು ಕಣ್ಣನ್ನು ಮುಚ್ಚಿ ಹಾಲು ಕುಡಿದರೆ ಯಾರೂ ಕಾಣುವುದಿಲ್ಲವೆಂದು ಅರಿತಂತೆ, ಇತರರನ್ನೆಲ್ಲಾ ಸರ್ಕಾರದುದ್ಯೋಗಗಳಿಗೆ ಸೇರಿಸಿದರೆ ಸರ್ಕಾರದ ಬಿಗಿಯು ತಪ್ಪಿಹೋಗುವುದೆಂಬ ಕಾರಣವನ್ನು ತೋರಿಸಿಕೊಂಡು, ಈ ನೆಪದಿಂದ ವರದಿಯನ್ನೂ ಅದನ್ನು ಅನುಮೋದಿಸಿದ ಮೈಸೂರು ಸರ್ಕಾರವನ್ನೂ ನಿಂದಿಸಿರುವುವು. ಸಂಸ್ಥಾನದ ಶ್ರೇಯಸ್ಸನ್ನು ಕೋರುವುದೇ ಇವುಗಳ ಅಂತರಾಶಯವಾಗಿದ್ದರೆ ಅದಕ್ಕೆ ಶನಿದಶೆಯನ್ನೂ ಪ್ರಳಯರೋಗವನ್ನೂ ಮಹಾಮಾರಿಯ ಪ್ರವೇಶವನ್ನೂ ಆಹ್ವಾನಮಾಡುತ್ತಿದ್ದುವೆ? ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಮೈಸೂರು ಪ್ರಜೆಗಳೂ ಸಹಾ ಈ ಪತ್ರಿಕೆಗಳಿಗೆ ಕೊಡುತ್ತಾ ಬಂದ ಸಾಹಾಯ್ಯದಿಂದ ಅವರುಗಳಿಗೆ ಇಷ್ಟು ಮಾತ್ರದ ಆಶೀರ್ವಾದವಾದರೂ ಲಭಿಸುವಂತಾಯಿತು! ಟಗರನ್ನು ಸಾಕಿದವನು ತಾನೂ ಒಂದು ದಿವಸ ಗುಮ್ಮಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಲಾದೀತೆ? ಎಮ್ಮೆಯು ಗರ್ಭಧಾರಣೆಮಾಡುವುದು, ಯಜಮಾನನ ಮನೆಯ ಮಕ್ಕಳಿಗೆ ಹಾಲಿನ ಕೊರತೆಯನ್ನು ನೀಗಿಸುವುದಕ್ಕಾಗಿಯೇ ಎಂಬುದು ಯಥಾರ್ಥವಾದರೆ ಸಾಧ್ವೀ ಸಂಪದಭ್ಯುದಯಗಳು ಮೈಸೂರು ಸರ್ಕಾರದ ಬಿಗಿಯನ್ನು ಪರಿಪಾಲಿಸುವುದಕ್ಕಾಗಿ ಪೇಚಾಡುವುವೆಂಬ ಮಾತೂ ಯಥಾರ್ಥವಾದೀತು. ಎಷ್ಟೋ ದೇವಾಲಯಗಳಲ್ಲಿ ಸುವರ್ಣರತ್ನಾಭರಣಗಳ ಸ್ಥಾನವನ್ನು ಗಿಲೀಟಿನ ನಗಗಳು ಆಕ್ರಮಿಸಿಕೊಂಡಿರುವುದೂ, ಒಂದು ಮೂಲೆಯಿಂದ ಮತ್ತೊಂದು ಮೂಲೆಯವರೆಗಣ ಸರ್ಕಾರಿ ಕೋರ್ಟು ಕಚೇರಿಗಳಲ್ಲೆಲ್ಲಾ ಲಂಚದ ಹಾವಳಿಯು ತುಂಬಿ ತುಳುಕಾಡುತ್ತಿರುವುದೂ, ಸರ್ಕಾರದ ದ್ರವ್ಯವನ್ನು ದುರುಪಯೋಗಪಡಿಸಿಕೊಂಡ ತಮ್ಮವರನ್ನು ಒಬ್ಬರಿಗೊಬ್ಬರು ಸವರಿಸಿಕೊಂಡು ಸರಿಪಡಿಸಿಕೊಳ್ಳುತ್ತಿರುವುದೂ ತಮ್ಮ ಕೈನಡೆಯುವಾಗ ಗಾಳಿಬಂದಾಗ ತೂರಿಕೊ ಎಂಬಂತೆ ತಮ್ಮ ಅನುಬಂಧಿಗಳ ಹೆಸರಿಗೆ ಒಂದೊಂದು ತಾಕಿನಲ್ಲಿ ನೂರಾರು ಎಕರೆ ಭೂಮಿಗಳನ್ನು ಹಿಡುವಳಿಗೆ ಮಾಡಿಕೊಳ್ಳುವುದೂ-ಇತ್ಯಾದ್ಯನಂತ ವಿಷಯಗಳೆಲ್ಲಾ ಮೈಸೂರುಸಂಸ್ಥಾನದ ಬಿಗಿಗಾಗಿಯೇ ಏರ್ಪಟ್ಟಿರಬಹುದು! ಪರರೆಲ್ಲಾ ಸರ್ಕಾರದ ಉದ್ಯೋಗಗಳಲ್ಲಿ ತಮಗೆಸಮಾನವಾಗಿ ಬಂದು ಕುಳಿತರೆ ಈ ಕಟ್ಟಿನ ಬಿಗಿಯು ತಪ್ಪಿಹೋಗುವುದೆಂಬ ಚಿಂತಾ ಭಯಗಳು ಸಾಧ್ವೀ ಸಂಪದಭ್ಯುದಯಗಳ ಹೃದಯವನ್ನು ಬಿರಿಯಿಸಿರಬಹುದು. ನಿಜವಾಗಿ ವಿಚಾರಮಾಡಿದರೆ ಶನಿಯ ಏಳರಾಟವು ಸಾಧ್ವೀ ಸಂಪದಭ್ಯುದಯಗಳಿಗೇ ಹೊರತು ದೇಶಕ್ಕಲ್ಲ. ಎಲ್ಲ ವಿಧದಲ್ಲೂ ಕ್ಷೀಣಾವಸ್ಥೆಯು ಇವಕ್ಕೆ ಕಾಲುಹಾಕಿಕೊಂಡಿದೆ. ಇವು ತಮ್ಮ ನಡೆನುಡಿಗಳಿಂದೆಲ್ಲಾ ದೇಶದಲ್ಲಿ ಪರಸ್ಪರ ಸಹೋದರರಂತಿರುವ ಪ್ರಜಾಸಮುದಾಯದಲ್ಲಿ ಇಲ್ಲದ ಮನಃಕಷಾಯಗಳನ್ನು ಹೆಚ್ಚಿಸಿ ಆಪ್ತಸ್ವಜನರಲ್ಲೂ ಪರಜನರಲ್ಲೂ ಜುಗುಪ್ಸೆಯನ್ನು ಹೊಂದಿ ಕಡೆಗೆ ಶ್ರೀಮನ್ಮಹಾರಾಜರ ಸರ್ಕಾರಕ್ಕೂ ಕೃತಘ್ನತೆಯನ್ನು ವ್ಯಕ್ತಪಡಿಸುತ್ತಿರುವುದು ಅವುಗಳ ಗ್ರಹಚಾರದೋಷವಲ್ಲದೆ ಮತ್ತೇನೂ ಅಲ್ಲ. ಇನ್ನಾದರೂ ಇಂಥ ವಕ್ರಮನೋಭಾವಗಳನ್ನು ಬಿಟ್ಟು ಸರಳತನದಿಂದ ನಡೆದರೆ ಕಡೆಗಾಲದಲ್ಲಾದರೂ ಇವುಗಳಿಗೂ ಇವುಗಳ ಸೂತ್ರಧಾರಕರಿಗೂ ಮನಶ್ಶಾಂತಿಯೂ ಗೌರವವೂ ಉಂಟಾಗದಿರಲಾರವೆಂದು ನಾವು ಸಹೋದ್ಯೋಗಧರ್ಮದೃಷ್ಟಿಯಿಂದ ಹಿತವಾದವನ್ನು ಮಾಡುವೆವು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕುದುರೆಯ ಜೂಜುಗಳು ಬರುವ ತಾ|| ೧೮ ರಿಂದ ಆರಂಭವಾಗುವುವು.

ಸಂಪದಭ್ಯುದಯ ಸಮಾಜದ ವಾರ್ಷಿಕಾಧಿವೇಶನವು ಬರುವ ತಾ|| ೧೩-೧೪-೧೫ ರಲ್ಲಿ ನಡೆಯುವುದು.

ಶ್ರೀಮನ್ಮಹಾರಾಜರವರು ಮತ್ತು ರಾಣೀವಾಸದವರು ಮೊನ್ನೆಯದಿನ ಉದಕಮಂಡಲದಿಂದ ರಾಜಧಾನಿಗೆ ಚಿತ್ತೈಸಿದರು.

ತಾ|| ೭ ರಲ್ಲಿ ದಿವಾನ್ ಸರ್ ಕಾಂತರಾಜ ಅರಸಿನವರು ನೀಲಗಿರಿಯಿಂದ ಬೆಂಗಳೂರಿಗೆ ದಯಮಾಡಿಸಿ ನಿನ್ನೆದಿನ ರಾಜಧಾನಿಗೆ ದಯಮಾಡಿಸಿದರು.

ಸಂಸ್ಥಾನದ ಒಂದನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿಯವರಿಗೆ ಸಿ. ಎಸ್. ಐ. ಎಂಬ ಬಿರುದು ಜಾರ್ಜ್ ಸಾರ್ವಭೌಮರಿಂದ ಕೊಡಲ್ಪಟ್ಟಿದೆಯೆಂಬುದನ್ನು ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ.

ಹುಣಸೂರು ತಾಲ್ಲೂಕಿನ ಅಮಲ್ದಾರರಾಗಿದ್ದ ಮ|| ಕೆ. ಎಸ್. ವೆಂಕಟಕೃಷ್ಣಯ್ಯನವರು ಅವರ ಹಿಂದಣ ಕೆಲಸಕ್ಕೆ ಕಳುಹಿಸಲ್ಪಟ್ಟು, ಆ ತಾ|| ಅಮಲ್ದಾರಿಗೆ ಮ|| ಸಿ. ಎಸ್. ಪೂರ್ಣಯ್ಯನವರು ನಿಯಮಿಸಲ್ಪಟ್ಟಿದ್ದಾರೆ.

ಸೆಂಟ್ರಲ್ ಪಂಚಮಸ್ಕೂಲಿನಿಂದ ಈಸಲ ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ೧೦ ವಿದ್ಯಾರ್ಥಿಗಳಲ್ಲಿ ೮ ಜನರೂ ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ೨೨ ಜನರೂ ತೇರ್ಗಡೆಯಾಗಿರುವುದು ಬಹಳ ಪ್ರಶಂಸನೀಯವಾಗಿದೆ.

ಶ್ರೀಮತ್ ತಿರುವಾಂಕೂರು ಮಹಾರಾಜರು ಕಳೆದ ಗುರುವಾರ ಬೆಳಗ್ಗೆ ಬೆಂಗಳೂರಿಗೆ ದಯಮಾಡಿಸಿ, ಅಲ್ಲಿಯ ಕುಮಾರಪಾರ್ಕು ಭವನದಲ್ಲಿ ಇಳಿಯಿಸಲ್ಪಟ್ಟಿರುವರು. ಅವರನ್ನು ಸ್ವಾಗತಿಸಿ ಮರ್ಯಾದಿಸುವುದಕ್ಕಾಗಿ ಸಂಸ್ಥಾನದ ಮುಖ್ಯಾಧಿಕಾರಿಗಳೆಲ್ಲಾ ನಿಲ್ದಾಣಕ್ಕೆ ಹೋಗಿದ್ದರು. ಮರ್ಯಾದಾರ್ಥವಾದ ೨೧ ಗುಂಡುಗಳು ಹಾರಿಸಲ್ಪಟ್ಟುವು.

ಶಿವಮೊಗ್ಗ ಡಿ|| ಬೆಳಗುತ್ತಿಯ ಮ|| ಎಚ್. ಲಿಂಗಪ್ಪನವರು ಮದ್ರಾಸ್ ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಗೆ ಹೋಗಿದ್ದು ಉತ್ತೀರ್ಣರಾಗಿರುವರೆಂದು ತಿಳುಹಲು ಸಂತೋಷವಾಗುತ್ತದೆ. ಯಾವ್ಯಾವ ಪರೀಕ್ಷೆಯಲ್ಲಿ ವೀರಶೈವ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆಂಬುದನ್ನು ಬರೆದು ತಿಳುಹಿದಲ್ಲಿ ನಾವು ಸಂತೋಷದಿಂದ ಈ ಪತ್ರಿಕೆಯಲ್ಲಿ ಪ್ರಕಟಿಸುವೆವು.

ಇದುವರೆಗೆ ರಾಷ್ಟ್ರೀಯ ಮಹಾಸಭೆಯ ಶಾಖಾಸಂಘವು ನಮ್ಮ ದೇಶದಲ್ಲಿರಲಿಲ್ಲ. ಈಗ ತಾನೇ ಬೆಂಗಳೂರಿನಲ್ಲಿ ಅಂಥ ಶಾಖೆಯೊಂದು ಸ್ಥಾಪಿಸಲ್ಪಟ್ಟಿತೆಂದೂ, ಮ|| ಅಡ್ವೋಕೇಟ್ ಸೆಟ್ಲೂರ್‌ರವರ ಅಧ್ಯಕ್ಷತೆಯಿಂದ ಏರ್ಪಟ್ಟ ಈ ಸಂಘದವರು ರಾಷ್ಟ್ರೀಯ ಸಭಾ ನಿರ್ಧಾರಗಳನ್ನು ಒಂದೊಂದಾಗಿ ಈ ದೇಶದಲ್ಲೂ ವ್ಯವಹರಣೆಗೆ ತರಲು ಉದ್ದೇಶಪಟ್ಟಿರುವರೆಂದೂ ಕೇಳುತ್ತೇವೆ.

ಮೈಸೂರು ಅರಮನೆ ಗೋಶಾಲೆಗೆ ಸಂಬಂಧಪಟ್ಟ ಅನೇಕ ಗೂಳಿಗಳೂ, ಹಸುಗಳೂ, ಕರುಗಳೂ ಈ ಜುಲೈ ತಾ|| ೧೭ ನೆಯ ಶುಕ್ರವಾರ ಮಧ್ಯಾನ್ಹ ೨ ಗಂಟೆಗೆ ರಾಜಧಾನಿಯ ಗಜಶಾಲೆಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವುವು. ಹರಾಜಿಗೆ ೩ ದಿವಸಗಳಿಗೆ ಮೊದಲು ಹೊಸೂರಮ್ಮನ ಸತ್ರದಲ್ಲಿ ಹರಾಜಾಗತಕ್ಕ ರಾಸುಗಳನ್ನು ಯಾರುಬೇಕಿದ್ದರೂ ನೋಡಬಹುದು.

ಕೊಡುಗು ಎಂಬ ಹೆಸರಿನಿಂದ ಒಂದು ವಾರ ಪತ್ರಿಕೆಯು ಪ್ರತಿ ಶುಕ್ರವಾರ ಹೊರಡಲಾರಂಭವಾಗಿದೆ. ಕೊಡಗುನಾಡಿನ ಕ್ಷೇಮಸಾಧನವೇ ಇದರ ಮುಖ್ಯೋದ್ದೇಶ. ಅದಕ್ಕೆ ಅವಶ್ಯಕವಾದ ಲೇಖನಗಳೇ ಇದರಲ್ಲಿ ವಿಶೇಷವಾಗಿವೆ. ಷೇರುಗಳ ಮೂಲಕ ಕೂಡಿಸಿದ ಮೂಲಧನವುಳ್ಳ ಒಂದು ಸಂಘದಿಂದ ಈ ಪತ್ರಿಕೆಯು ನಡೆಯಿಸಲ್ಪಡುವಂತೆ ಏರ್ಪಾಟಾಗಿದೆ. ಪತ್ರವು ಚಿರಾಯುವಾಗಲಿ. ಇದರ ಚಂದಾ ೩-೮-೦.

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಡಾಕ್ಟರ್ ಕುಪ್ಪಸ್ವಾಮಿಮೊದಲ್ಯಾರರು ಕೆಲ ದಿನಗಳಿಂದ ಅಸ್ವಸ್ಥರಾಗಿದ್ದು ಕಳೆದ ಬುಧವಾರ ದಿವಂಗತರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಕೇವಲ ಸಾತ್ವಿಕರಾಗಿಯೂ ದಯಾಳುಗಳಾಗಿಯೂ ಇದ್ದರು. ಡಾ|| ಆರೋಗ್ಯಂ ಮೊದಲ್ಯಾರರಿಗೆ ಸ್ವಲ್ಪ ಕಾಲದೊಳಗಾಗಿ ಇಬ್ಬರು ಸಹೋದರರ ವಿಯೋಗವುಂಟಾದುದಕ್ಕೆ ನಾವು ಅತಿಶಯವಾಗಿ ವಿಷಾದಿಸಿ, ಸಾನುತಾಪವನ್ನು ಈ ಮೂಲಕ ನಿವೇದಿಸುತ್ತೇವೆ.

ರಾಜಧಾನಿಯ ಜೀವಣ್ಣರಾಯನ ಕಟ್ಟೆಯಲ್ಲಿ ಮೊನ್ನೆಯದಿನ ಒಬ್ಬ ಹುಡುಗನು ನೀರಿನ ಮೇಲೆ ತೇಲುತ್ತಿದ್ದ ಒಂದು ಪೀಪಾಯಿಯ ಮೇಲೆ ಕುಳಿತು ಆಡುತ್ತಿರುವಾಗ್ಗೆ ಪೀಪಾಯಿ ಮಗುಚಿಕೊಂಡು ಅದರಡಿಯಲ್ಲಿ ಆ ಯುವಕನು ಸಿಕ್ಕಿಕೊಂಡು ನೀರನ್ನು ಕುಡಿದು ಸತ್ತುಹೋದನು. ಮತ್ತೊಬ್ಬ ಮನುಷ್ಯನು ೮-೧೦ ದಿನಗಳ ಹಿಂದೆ ರಾಜಧಾನಿಯ ಕಾರಂಜೀಕೆರೆ ಕೆಳಗಡೆಯ ತೋಟದಲ್ಲಿ ತೆಂಗಿನಮರದ ಮೇಲಿಂದ ಇಳಿಸುತ್ತಿದ್ದ ಎಳನೀರನ್ನು ಆತುಕೊಳ್ಳುತ್ತಿರುವಾಗ್ಗೆ ಆಯತಪ್ಪಿ ಅವನ ಮುಖದಮೇಲೆ ಬಿದ್ದು ಕಣ್ಣುಗಳು ಹೊರಗೆ ಕಳಚಿಕೊಂಡು ಬಂದು ಸ್ಮೃತಿ ತಪ್ಪಿಹೋಗಲು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಮಾಡಲ್ಪಟ್ಟಾಗ್ಗೂ ಗುಣಹೊಂದದೆ ಮೃತನಾದನು.

ತಾ|| ೧೨-೫-೨೧ ರಲ್ಲಿ ಶ್ರೀ ಕೃಷ್ಣರಾಜೇಂದ್ರಮಿಲ್ಲಿನ ಮ|| ಬಿ. ಸೀತಾರಾಮಾಚಾರ್ಯರ ಕುಮಾರಿ ಚಿ|| ಸೌ|| ರಾಜಮ್ಮನ, ತಾ|| ೨೬-೫-೨೧ರಲ್ಲಿ ಸಿಟಿಮ್ಯಾಜಿಸ್ಟ್ರೇಟ್ ಮ|| ಬಿ. ಬಸವಾರಾಧ್ಯರ ಕುಮಾರಿ ಚಿ|| ಸೌ|| ಅಂಬಿಕಾಬಾಯಿಯ, ತಾ|| ೯-೬-೨೧ರಲ್ಲಿ ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರ ಕುಮಾರಿ ಚಿ|| ಸೌ|| ಲಕ್ಷ್ಮೀನರಸಮ್ಮನ ಮತ್ತು ರಾವ್‌ಸಾಹೇಬ್ ಚನ್ನಯ್ಯನವರ ಕುಮಾರ ಮ|| ತಿಮ್ಮಯ್ಯನವರ, ತಾ|| ೧೨-೬-೨೧ರಲ್ಲಿ ಅರಮನೆ ಮುಸಾಹೇಬ್ ಮ|| ಆರ್. ಪುಟ್ಟಣ್ಣನವರ ಕುಮಾರರು ಅಸಿಸ್ಟೆಂಟ್‌ಕಮೀಷನರ್ ಮ|| ಆರ್. ಪಿ. ಮಲ್ಲಪ್ಪನವರ ವಿವಾಹಮಹೋತ್ಸವಗಳು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟುವು. ಈ ಮಹೋತ್ಸವಗಳಿಗೆ ಸ್ಥಳದ ಅಧಿಕಾರಿಗಳೂ ಲಾಯರುಗಳೂ ವರ್ತಕರುಗಳೂ ಆಹ್ವಾನಿಸಲ್ಪಟ್ಟಿದ್ದು ಮರ್ಯಾದಿಸಲ್ಪಟ್ಟರು.

ಚೀಫ್ ಕೋರ್ಟಿನ ಮೂರನೆಯ ಜಡ್ಜರಾದ ಮಿ|| ಪ್ಲಮರ್‌ರವರು ಈ ತಾ|| ೧೩ ರಿಂದ ೫ ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಮೈಸೂರು ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜರಾದ ಬ್ಯಾರಿಸ್ಟರ್ ನಾಗಪ್ಪನವರು ಅಫಿಸಿಯೇಟಿಂಗ್ ಮೂರನೆಯ ಜಡ್ಜರಾಗಿ ನಿಯಮಿಸಲ್ಪಟ್ಟಿರುವರಾದುದರಿಂದ ಇವರು ತಾ|| ೧೨ ರಲ್ಲಿ ಇಲ್ಲಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು. ಹಿಂದೊಂದು ಸಲ ೩ ನೆಯ ಜಡ್ಜರುದ್ಯೋಗವನ್ನು ಬದಲು ನೋಡಲು ಮ|| ನಾಗಪ್ಪನವರು ನೇಮಿಸಲ್ಪಡಬೇಕಾಗಿದ್ದರೂ ಬೇರೊಬ್ಬರು ನಿಯಮಿಸಲ್ಪಟ್ಟಿದ್ದುದು ಖೇದಕರವಾಗಿದ್ದಿತು. ಆದರೆ ಸರ್ಕಾರದವರು ಈ ವೇಳೆಯಾದರೂ ಮ|| ನಾಗಪ್ಪನವರಿಗೆ ಚೀಫ್ ಕೋರ್ಟಿನ ಜಡ್ಜರ ಸ್ಥಾನವನ್ನು ತಪ್ಪಿಸದೆ ಕೊಟ್ಟುದಕ್ಕಾಗಿ ಸಂತೋಷಪಡಬೇಕಾಗಿದೆ. ಇವರ ಬದಲು ಕೋಲಾರದಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿರುವ ಮ|| ಎಸ್. ಪಿರಿಯಣ್ಣಯ್ಯನವರು ಮೈಸೂರು ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜರಾಗಿ ನಿಯಮಿಸಲ್ಪಡುವರೆಂಬ ವದಂತಿಯು ಪ್ರಬಲವಾಗಿದೆ.

ಭರತಖಂಡದ ವೃತ್ತಾಂತಗಳು.

ರವೀಂದ್ರನಾಥ ಠಾಕೂರ್‌ರವರು ಈಗ ಜರ್ಮನಿಯ ರಾಜಧಾನಿಯಲ್ಲಿದ್ದಾರೆ. ಉಪನ್ಯಾಸಗಳು ನಡೆಯುತ್ತಿವೆ.

ಈಸ್ಟ್ ಇಂಡ್ಯಾ ರೈಲ್ವೆ ಡ್ರೈವರಾದ ಪಿಯರ್ಸ್ ಎಂಬಾತನಿಗೆ ಡರ್ಬಿಲಾಟರಿಯಲ್ಲಿ ೧೨ ಲಕ್ಷ ರೂ. ಗಳು ಬಂದಿರುತ್ತವೆ.

ಗುಜರಾತಿಗೆ ಸೇರಿದ ಬ್ರೋಚು ಪಟ್ಟಣದಲ್ಲಿ ೫ ನೆ ರಾಷ್ಟ್ರೀಯ ಸಭೆಯು ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಿಂದ ಕೂಡಿದ್ದಿತು. ಈ ಸಭೆಯವರು ಮಾಡಿದ ತೀರ್ಮಾನಗಳೊಳಗೆ ಮುಂದಣ ವರ್ಷದಿಂದ ಸರ್ಕಾರಕ್ಕೆ ಭೂಕಂದಾಯವನ್ನು ಕೊಡಬಾರದೆಂಬ ತೀರ್ಮಾನವು ಮುಖ್ಯವಾಗಿದೆ.

ಭರತಖಂಡಕ್ಕೆ ಬರತಕ್ಕ ವಜ್ರಗಳಲ್ಲಿ ಬಹು ಭಾಗವು ದಕ್ಷಿಣಾಫ್ರಿಕಾ ಗಣಿಗಳಿಂದಲೇ ಬರುವುವು. ಅಲ್ಲಿರುವ ಭಾರತೀಯರನ್ನು ಅಲ್ಲಿಯ ಸರ್ಕಾರದವರು ಬಹು ನೀಚವಾಗಿ ಕಂಡು ಹಿಂಸೆಪಡಿಸುತ್ತಿರುವುದರಿಂದ ಅಲ್ಲಿಯ ವಜ್ರಗಳಿಗೆ ಬಹಿಷ್ಕಾರ ಹಾಕಬೇಕೆಂದು ಬೊಂಬಾಯಿಯ ಮಹಿಳೆಯರು ತೀರ್ಮಾನಿಸಿದ್ದಾರೆ.

ಕಳೆದ ತಿಂಗಳಲ್ಲಿ ಭರತಖಂಡದ ಹಲವುಕಡೆ ವಿದ್ಯುಚ್ಛಕ್ತಿ ಮಿಶ್ರವಾದ ಬಿರುಗಾಳಿಮಳೆಗಳ ಪಾತದಿಂದ ವಿದ್ಯುಚ್ಛಕ್ತಿಯ ಕೆಲಸಗಳೆಲ್ಲಾ ಸ್ವಲ್ಪ ಕಾಲ ನಿಂತುಹೋಯಿತು. ತಂತ್ರೀವಾರ್ತೆಗಳನ್ನೆಲ್ಲಾ ನಿಲ್ಲಿಸಬೇಕಾಯಿತು. ಒಂದೇಸಮಯದಲ್ಲಿ ಈ ವೈಲಕ್ಷಣ್ಯವು ಪ್ರಪಂಚದಮೇಲೆಲ್ಲಾ ಕಾಣಿಸಿಕೊಂಡಿತು. ಹೀಗಾಗುವುದಕ್ಕೆ ಸೂರ್ಯಮಂಡಲದಲ್ಲಿ ಕಾಣಿಸಿಕೊಂಡ ಒಂದು ಕಪ್ಪುಮಚ್ಚೆಯೇ ಕಾರಣವೆಂದು ಖಗೋಳಶಾಸ್ತ್ರಜ್ಞರು ಹೇಳುತ್ತಾರೆ.

ನಿರಾಕರಣವಾದಿಗಳು ೧ ವರ್ಷದೊಳಗಾಗಿ ತಾವು ಸ್ವರಾಜವನ್ನು ಪಡೆಯುತ್ತೇವೆಂದು ಉದ್ಘೋಷಿಸುತ್ತಿದ್ದುದರಲ್ಲಿ ಅವರಿಗೇ ಈಗ ನಂಬುಗೆ ತಪ್ಪಿದಂತೆ ಕಾಣುತ್ತದೆ. ಕಾಂಗ್ರೆಸ್ಸು ನಿರ್ಣಯಿಸಿದಂತೆ ಜುಲೈ ತಿಂಗಳ ಕೊನೆಯಲ್ಲಿ ೧ ಕೋಟಿ ಸಭಿಕರನ್ನೂ ೧ ಕೋಟಿ ರೂ. ಗಳನ್ನೂ ಕೂಡಿಸಿ ೨೦ ಲಕ್ಷ ರಾಟೆಗಳನ್ನು ಸ್ಥಾಪಿಸುವ ಕೆಲಸವು ದೇಶೀಯರಿಂದ ಸಾಗಲಿಲ್ಲವೆಂದೂ, ಹೀಗಿರುವಾಗ ಸ್ವರಾಜ್ಯಪ್ರಾಪ್ತಿಯಾಗುವುದು ಅಸಂಭವವೆಂದೂ ಮ|| ಗಾಂಧಿಯವರು ಉಪನ್ಯಾಸಗಳನ್ನು ಮಾಡುತ್ತ ತಮ್ಮ ಮನೋದುಃಖವನ್ನು ಹೊರಗೆಡಹುತ್ತಿದ್ದಾರೆ. ಅವರ ಅನುಚರರಾದ ವೃತ್ತಪತ್ರಿಕೆಯವರಾದರೋ ಸರ್ಕಾರಕ್ಕೆ ಸಹಾಯಮಾಡುವುದನ್ನು ಬಿಟ್ಟು ಮನೆಯಲ್ಲಿ ಕುಳಿತುಕೊಳ್ಳುವ ಮಾತ್ರದಿಂದ ಈಗಲೇ ನಮಗೆ ಸ್ವರಾಜ್ಯಸಿದ್ಧಿಯಾಯಿತೆಂದು ಆಡಲಿಕ್ಕೆ ಉಪಕ್ರಮಿಸಿರುತ್ತವೆ.

ಸರ್ ದೊರಾಬ್ಜಿ ಟಾಟಾರವರ ಕೈಗಾರಿಕೆ ಬ್ಯಾಂಕಿನ ಭಾಗಸ್ಥರ ವಾರ್ಷಿಕಸಭಾ ಸಮ್ಮೇಳನವು ಕಳೆದ ತಾ|| ೨೫ ರಲ್ಲಿ ಬೊಂಬಾಯಿಯಲ್ಲಿ ಕೂಡಿದ್ದಿತು. ಬ್ಯಾಂಕಿನ ಉದ್ಯೋಗಗಳಿಗೆ ತಕ್ಕಜನರು ಭಾರತೀಯರಲ್ಲಿದ್ದರೂ ಹೆಚ್ಚು ಸಂಬಳಗಳನ್ನು ಕೊಟ್ಟು ಆಂಗ್ಲ ಜನರನ್ನೇ ವಿಶೇಷವಾಗಿ ಸೇರಿಸಿಕೊಂಡಿರುವುದು ತಪ್ಪೆಂದು ಭಾಗಸ್ಥರಲ್ಲಿ ಅನೇಕರು ಆಕ್ಷೇಪಿಸಿದರು. ತಕ್ಕ ಅನುಭವಿಗಳು ಭಾರತೀಯರಲ್ಲಿ ಸಿಕ್ಕುತ್ತಲಿಲ್ಲವೆಂತಲೂ, ಅದು ಕಾರಣವೇ ಅನ್ಯದೇಶೀಯರನ್ನು ತಂದಿಟ್ಟುಕೊಳ್ಳಬೇಕಾಗಿದೆಯೆಂತಲೂ ದಿನಕ್ರಮೇಣ ಇಲ್ಲಿಯವರನ್ನು ಅಣಿಮಾಡುತ್ತಿರುವೆವೆಂತಲೂ ಮೊದಲಾಗಿ ಅಧ್ಯಕ್ಷರಾದ ಟಾಟಾರವರು ಎಷ್ಟು ಸಮಾಧಾನ ಹೇಳಿದರೂ ಹಲವರು ಒಪ್ಪಲಿಲ್ಲ. ಕಳೆದವರ್ಷದ ಲೆಕ್ಕಗಳನ್ನು ಒಪ್ಪುವ ತೀರ್ಮಾನವನ್ನೂ ಮುಗಿಸಲಿಲ್ಲ. ಮರಳಿ ಈ ತಿಂಗಳು ತಾ|| ೬ ಕ್ಕೆ ಸಭೆಕೂಡಲು ನಿರ್ಧಾರವಾಯಿತು. ಆ ದಿನವೂ ಹೀಗೆಯೇ ವಾಗ್ವಾದಕೋಲಾಹಲವಾಗಿ ಕಡೆಗೆ ಕಳೆದ ಮಂಗಳವಾರ ಕೂಡಿದ ಸಭೆಯಲ್ಲಿ ಸಭಾಸದರಾರೂ ಮೊದಲಿನಂತೆ ಗಲಭೆಯನ್ನು ಮಾಡಲಿಲ್ಲ. ರೆಮಿಂಗ್ಟನ್ ಎಂಬ ಯೂರೋಪರೇ ಡೈರೆಕ್ಟರಾಗಿ ಆರಿಸಲ್ಪಟ್ಟರು.

ಸಿಮ್ಲಾ ಪಟ್ಟಣದಲ್ಲಿ ಕಳೆದ ತಾ|| ೩೦ ರಲ್ಲಿ ಅಲ್ಲಿಯ ಚೆಲಮ್ಸ್‌ಫರ್ಡ್ ಕ್ಲಬ್ (ಇದು ಆಂಗ್ಲರಲ್ಲೂ ಭಾರತೀಯರಲ್ಲೂ ಪರಸ್ಪರ ಪ್ರೀತಿವಿಶ್ವಾಸಗಳನ್ನು ಹೆಚ್ಚಿಸುವುದಕ್ಕಾಗಿಯೇ ಚೆಲಮ್ಸ್‌ಫರ್ಡ್ ಪ್ರಭುಗಳ ಕಾಲದಲ್ಲಿ ಸ್ಥಾಪಿತವಾದುದು) ಇದರಲ್ಲಿ ಈಗಣ ವೈಸ್ರಾಯರಾದ ರೀಡಿಂಗ್ ಪ್ರಭುಗಳಿಗೆ ಒಂದು ಔತಣವನ್ನು ಕ್ಲಬ್ಬಿನ ಸಭಿಕರು ಬಹು ಮನೋಹರವಾಗಿ ಏರ್ಪಡಿಸಿದ್ದರು. ಬಹುಜನ ಪ್ರಮುಖರು ನೆರೆದಿದ್ದರು. ಕ್ಲಬ್ಬಿನ ಪಕ್ಷದಲ್ಲಿ ಆ|| ಷಫಿಯವರು ಭಾಷಣಮಾಡಿ ರೀಡಿಂಗ್ ಪ್ರಭುಗಳನ್ನು ಅಭಿನಂದಿಸಿದರು. ಅದಕ್ಕೆಲಾರ್ಡ್ ರೀಡಿಂಗ್‌ರವರು ಉತ್ತರವನ್ನು ಕೊಡುವಾಗ-ಬರೆದಿಟ್ಟುಕೊಂಡಿರದೆ ೪೦ ನಿಮಿಷಗಳವರೆಗೆ ಬಾಯಲ್ಲೇ ಉಪನ್ಯಾಸಮಾಡಿದರು. ಅದರಲ್ಲಿ ತಮ್ಮ ಉದಾರಮನೋಭಾವಗಳನ್ನು ಸುಸ್ಪಷ್ಟಗೊಳಿಸಿದರು. ಪ್ರಕೃತದ ರಾಜಕೀಯ ವಿಷಯಗಳನ್ನು ಕುರಿತು ಸೂಕ್ಷ್ಮವಾಗಿ ವರ್ಣಿಸಿದರು. ಆ ದೊಡ್ಡ ಉಪನ್ಯಾಸದ ಕಡೆಯಲ್ಲಿ—"ನಾವು ಭಾರತೀಯರನ್ನು ಸಂತೃಪ್ತಿಗೊಳಿಸುತ್ತೇವೆ. ನಮ್ಮಲ್ಲಿ ಅವರಿಗೆ ಸಾನುಭೂತಿ ಸದಭಿಪ್ರಾಯಗಳು ಹುಟ್ಟುವಂತೆ ಮಾಡುತ್ತೇವೆ. ಭರತಖಂಡವನ್ನು ಅದರ ಗಮ್ಯಸ್ಥಾನಕ್ಕೆ ಸೇರಿಸಿ ಸಂಪೂರ್ಣಾಭಿವೃದ್ಧಿಗೊಳ್ಳುವಂತೆ ಮಾಡುತ್ತೇವೆ. ಸಾಮ್ರಾಜ್ಯ ಸಭೆಯಲ್ಲಿ ಅದು ಅಂಗವಾಗಿನಿಂತ ಬಳಿಕ ಪ್ರಪಂಚದ ಸಭೆಯಲ್ಲೇ ಅದು ಅಂಗವಾಗಿ ನಿಲ್ಲುವಂತೆ ಮಾಡುತ್ತೇವೆ" ಎಂದು ಅಪ್ಪಣೆಕೊಡಿಸಿದರು.

ವಿದೇಶ ವೃತ್ತಾಂತಗಳು.

ತಮ್ಮ ದೇಶವು ಮರಳಿ ತಲೆಯೆತ್ತಿಕೊಳ್ಳಬೇಕಾದರೆ ಮಿತ್ರಮಂಡಲಿಯವರು ವಿಧಿಸಿರುವ ನಿಬಂಧನೆಗಳನ್ನೆಲ್ಲಾ ತಪ್ಪದೆ ಈಡೇರಿಸುವುದೇ ತಮಗೆ ಯುಕ್ತವೆಂದು ಜರ್ಮನ್ ಮುಖ್ಯಮಂತ್ರಿಯವರು ತಮ್ಮ ರಾಜಕೀಯ ಸಭೆಯಲ್ಲಿ ಉಪನ್ಯಾಸಮಾಡಿದ್ದಾರೆ.

ಅಮೇರಿಕಾಕ್ಕೆ ಸೇರಿದ ಕನಡಾ ಪ್ರಜಾಪ್ರಭುತ್ವದ ಮಂತ್ರಿಮಂಡಲಕ್ಕೆ ಮೇರಿ ಎಲ್ಲೆನ್‌ಸ್ಮಿತ್ ಎಂಬ ನಾರೀಮಣಿಯನ್ನು ಒಬ್ಬ ಮಂತ್ರಿಣಿಯಾಗಿ ಅಲ್ಲಿಯ ಪಾರ್ಲಿಮೆಂಟ್ ಮೆಂಬರುಗಳು ಆರಿಸಿ ನಿಯಮಿಸಿದ್ದಾರೆ. ಆಂಗ್ಲ ಸಾಮ್ರಾಜ್ಯಕ್ಕೆ ಅಧೀನವಾದ ಒಂದಾನೊಂದು ರಾಜ್ಯದಲ್ಲಿ ಸ್ತ್ರೀಯು ಮಂತ್ರಿಯಾಗಿ ಏರ್ಪಟ್ಟುದಕ್ಕೆ ಇದೇ ಮೊದಲು.

ಗ್ರೀಕ್ ತುರ್ಕಿ ಯುದ್ಧದಲ್ಲಿ ಕಾನ್‌ಸ್ಟಾಂಟಿನೋಪಲು ತಟಸ್ಥವಾಗಿರಬೇಕೆಂದು ಮಿತ್ರಮಂಡಲಿಯವರು ವಿಧಿಸಿದುದಕ್ಕೆ ತುರ್ಕಿ ಸುಲ್ತಾನರು ಒಪ್ಪಿಕೊಂಡು ಅದರ ಸಮುದ್ರತೀರದಲ್ಲಿರುವ ಗ್ರೀಕ್ ಯುದ್ಧನೌಕೆಗಳನ್ನೆಲ್ಲಾ ಹೊರಡಿಸಿಬಿಡಬೇಕೆಂತಲೂ, ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿರುವ ಗ್ರೀಕ್ ಸೈನ್ಯವೂ ಹೊರಟುಹೋಗಬೇಕೆಂತಲೂ, ಡಾರ್ಡಿನಲ್ಲಿನ ದ್ವಾರಾ ಗ್ರೀಕರಿಗೆ ಆಹಾರ್ಯಪದಾರ್ಥಗಳು ಸಾಗುತ್ತಿರುವುದನ್ನು ತಪ್ಪಿಸಿಬಿಡಬೇಕೆಂತಲೂ ಮಿತ್ರಮಂಡಲಿಗೆ ತಿಳಿಯಿಸಿದ್ದಾರೆ.

ಅಮೇರಿಕಾಕ್ಕೆ ಸೇರಿದ ಒಕ್ಲಹಾಮಾದಲ್ಲಿ ಒಬ್ಬ ನೀಗ್ರೋವು ಒಬ್ಬ ಪಾಶ್ಚಾತ್ಯ ಸ್ತ್ರೀಯನ್ನು ಹಿಡಿದು ಹೊಡೆದುದಕ್ಕಾಗಿ ಅವೆರಡು ಜನವರ್ಗಗಳವರಿಗೂ ಬಡಿದಾಟವಾಗಿ ಒಬ್ಬ ನೀಗ್ರೋ ಹತನು; ಇಬ್ಬರು ಬಿಳೀಮನುಷ್ಯರೂ ಮೂವರು ನೀಗ್ರೋಗಳೂ ಗಾಯವಡೆದರು. ಅದರಮೇಲೆ ಶ್ವೇತಮುಖಿಗಳು ೭೦ ಮೋಟಾರುಗಳಲ್ಲಿ ಆಯುಧಪಾಣಿಗಳಾಗಿ ಬಂದು ನೀಗ್ರೋಗಳು ಇದ್ದ ಪ್ರದೇಶಕ್ಕೆ ಮುತ್ತಿಗೆಹಾಕಿದರು. ೬ ವಿಮಾನಗಳು ಮೇಲ್ಗಡೆ ಬಂದು ಈ ಆಯುಧಪಾಣಿಗಳಿಗೆ ಸಹಾಯಮಾಡುತ್ತಿದ್ದುವು. ಭಯಂಕರವಾದ ಯುದ್ಧವು ನಡೆಯಿತು. ೭೦ ಮಂದಿ ನೀಗ್ರೋಗಳೂ, ೨೫ ಮಂದಿ ಬಿಳಿಜನರೂ ಮೃತರಾದರೆಂದು ಊಹಿಸಲ್ಪಟ್ಟಿದೆ. ಗದ್ದಲವನ್ನಡಗಿಸುವುದಕ್ಕೆ ಪೋಲೀಸರಿಗೆ ಸೈನಿಕರ ಸಹಾಯವು ಕೊಡಲ್ಪಟ್ಟಿದೆ.

ತುರ್ಕಿಯ ಎನ್ವರ್ ಪಾಷಾರವರು ಇದುವರೆಗೆ ರಷ್ಯಾದ ಮಾಸ್ಕೋ ಪಟ್ಟಣದಲ್ಲಿದ್ದು ಈಗ ಬೋಲ್ಷೆವಿಕರ ಜತೆಯಲ್ಲಿ ಬರ್ಲಿನ್ ಪಟ್ಟಣಕ್ಕೆ ಹೋಗಿದ್ದಾರಂತೆ. ಅವರು ಅಲ್ಲಿಂದ ಕಾಬೂಲಿಗೆ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನು ನಿರ್ಮಿಸಬಲ್ಲ ಇಂಜನೀಯರುಗಳನ್ನು ಕರೆದುಕೊಂಡುಬರುವ ಯತ್ನಮಾಡುತ್ತಿದ್ದಾರಂತೆ. ಜರ್ಮನಿಯಲ್ಲಿ ಉದ್ಯೋಗವಿಲ್ಲದೆ ಇರುವ ಸೈನಿಕರನ್ನೂ ಇಂಜನೀಯರುಗಳನ್ನೂ ಆಫ್ಗನಿಸ್ಥಾನಕ್ಕೆ ತಂದು ಅಲ್ಲಿಯ ಸೈನ್ಯಕ್ಕೆ ಕ್ರಮಶಿಕ್ಷೆ ಕೊಡಿಸಿ ಆಫ್ಗನಿಸ್ಥಾನವನ್ನು ರಣಸನ್ನದ್ಧಗೊಳಿಸುವುದರಲ್ಲಿದ್ದಾರೆ. ತುರ್ಕಿಗೆ ಇದೇ ತೆರದ ಪ್ರೋತ್ಸಾಹಮಾಡಿ ಅದನ್ನು ಇವರು ಉದ್ಧಾರಮಾಡಿದುದಾಯಿತು. ಅದೇ ಉದ್ಧಾರವನ್ನು ಆಫ್ಗನಿಸ್ಥಾನಕ್ಕೂ ಇವರು ಮಾಡಿಸಬಹುದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

ಲಗ್ನದ ಫಂಡು.

1. ಕುಣಿಗಲ್ ತಾ|| ಹುಲಿಯೂರುದುರ್ಗದ, ಮಠದ ವೇ|| ಹುಚ್ಚಪ್ಪನವರ ಮೂಲಕ ಉಜ್ಜನಿಗ್ರಾಮದ ಯಜಮಾನ್ ಮ|| ರಾ|| ಹೊನ್ನಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ 3-0-0.

2. ಮಂಡ್ಯದ ತಾಲ್ಲೂಕು ಮದ್ದೂರು ಮ|| ರಾ|| ಚನ್ನಮಲ್ಲಪ್ಪನವರ ಮೂಲಕ, ಮದ್ದೂರು ಕೆಟ್ಟರು ಮ|| ರಾ|| ಸುಬ್ಬಣ್ಣನವರ ಲಗ್ನದಲ್ಲಿ 2-0-0.

3. ನೆಲಮಂಗಲದ ತಾ|| ತ್ಯಾಗೊಂಡ್ಲು ಮ|| ರಾ|| ಜವಳಿ ಹುಚ್ಚಪ್ಪನವರ ಮೂಲಕ—ಮ|| ರಾ|| ಕೆಟ್ಟರ ಸಿದ್ದನಂಜಪ್ಪನವರ ಪುತ್ರಿಯನ್ನು ಪಟೇಲ್, ಮ|| ರಾ|| ಅಪ್ಪಾಜಿಯಪ್ಪನವರ ಪುತ್ರ ನಂಜುಂಡಯ್ಯನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ವರನ ಕಡೆಯಿಂದ 3 ರೂ. ವಧುವಿನ ಕಡೆಯಿಂದ 2 ರೂ. ಜುಮ್ಲಾ 5-0-0. ಸದರಿ ಪಟೇಲ್, ಮ|| ರಾ|| ಅಪ್ಪಾಜಿಯಪ್ಪನವರ ಕುಮಾರ ವೀರಕೆಟ್ಟರ ಮಗಳು ಶಿವಮ್ಮನನ್ನು ಬಿಡದಿ ಮ|| ರಾ|| ಚಿಕ್ಕವೀರಕೆಟ್ಟರ ಮಕ್ಕಳು ರುದ್ರಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ, ಮ|| ರಾ|| ಅಪ್ಪಾಜಿಯಪ್ಪನವರಿಂದ 5-0-0. ಸದರಿಯವರಿಂದ ಮನಿಯಾರ್ಡರ್ ಕಮೀಷನ್ನಿಗಾಗಿ 0-4-0. ಜುಮ್ಲಾ 10-4-0.

ಜುಮ್ಲಾ ಜಮಾ 15-4-0.

ಬೆಂಗಳೂರು ಸಿಟಿ,
ತಾ|| ೮-೬-೧೯೨೧.

ಜಿ. ಪರಮಶಿವಯ್ಯ, ಬಿ. ಎ. ಎಲ್
ಎಲ್. ಬಿ. ಆ|| ಸೆಕ್ರಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

ವಿಜ್ಞಾಪನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಜನರಲ್ ಕಮಿಟಿ ಮೀಟಿಂಗು 1921 ನೆಯ ಇಸವಿ ಜುಲೈ ತಾ|| 3 ನೆಯ ಭಾನುವಾರ ಸಾಯಂಕಾಲ 3 ಘಂಟೆಗೆ ಸರಿಯಾಗಿ ಬೆಂಗಳೂರಿನಲ್ಲಿರುವ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ನಡೆಯಬೇಕೆಂದು ನಿರ್ಧಾರವಾಗಿರುವುದರಿಂದ ಮೆಂಬರುಗಳು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ವಿಷಯಗಳು.

1. ಕಳೆದ ಜನರಲ್ ಕಮಿಟಿ ಮೀಟಿಂಗಿನ ತಾ|| 27-6-20 ರಿಂದ ತಾ|| 3-7-21 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಶಿವಮೊಗ್ಗಾ ಡಿ|| ವೀರಶೈವ ಕಾನ್‌ಫರೆನ್ಸಿನವರು ಬೆಂಗಳೂರಿನಲ್ಲಿ ಒಂದು ಮುದ್ರಣಾಲಯವನ್ನೂ, ಮತಗ್ರಂಥಗಳ ಒಂದು ಪುಸ್ತಕ ಭಂಡಾರವನ್ನೂ ಸ್ಥಾಪಿಸಬೇಕೆಂದು ಮಾಡಿರುವ ನಿರ್ಧಾರಗಳನ್ನು ಪರ್ಯಾಲೋಚಿಸುವುದು.
4. ವೀರಶೈವ ಮತವಿಚಾರವಾಗಿ ಇಂಗ್ಲೀಷಿನಲ್ಲಿ ಒಂದು ಗ್ರಂಥವನ್ನು ಬರೆಸತಕ್ಕ ವಿಷಯ.
5. ಬೆಂಗಳೂರು ಮತ್ತು ಮೈಸೂರು ವೀರಶೈವ ವಿದ್ಯಾರ್ಥಿನಿಲಯಗಳ ವಿಚಾರ.
6. ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರೂ ತಿಳುಹಿಸಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ.)

ಬೆಂಗಳೂರು ಸಿಟಿ,
ತಾ|| ೩-೬-೧೯೨೧.

ಜಿ. ಪರಮಶಿವಯ್ಯ, ಬಿ. ಎ., ಎಲ್
ಎಲ್. ಬಿ., ಆನರರಿ ಸೆಕ್ರೆಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಪತ್ರವ್ಯವಹಾರ.

ಹುಬ್ಬಳ್ಳಿಯಲ್ಲಿ ನೆರೆದ ವೀರಶೈವ ತರುಣರ ಸ್ಪೆಷಲ್ (ವಿಶಿಷ್ಟ) ಸಮ್ಮೇಲನವು.

ಮೊದಲು ಗೊತ್ತಾಗಿದ್ದ ಮೇರೆಗೆ ತಾ|| ೨೨ ನೆ ರವಿವಾರ ವೀರಶೈವ ತರುಣರ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು. ಸ್ವಯಂಸೇವಕರು ಬಹು ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಪರಸ್ಥಳದಿಂದ ಬಂದ ಪ್ರತಿನಿಧಿಗಳಿಗೆ ಶ್ರೀ ಓಲೀಮಠದಲ್ಲಿ ಭೋಜನದ ವ ಇಳಕೊಳ್ಳುವ ವ್ಯವಸ್ಥೆಯು ಮಾಡಲ್ಪಟ್ಟಿತ್ತು. ಸಭೆಯು ಸಲುವಾಗಿ ಗಣೇಶಪೇಟಿ ಥಿಯೇಟರನ್ನು ಅಲಂಕರಿಸಿದ್ದರು. ಮಧ್ಯಾಹ್ನದ ೧೦|| ಗಂಟೆಗೆ ಮೇಲ್‌ಗಾಡಿಯಿಂದ ಚಿಕ್ಕಮಗಳೂರಲ್ಲಿ ನೆರೆದ ಸಾಹಿತ್ಯಪರಿಷತ್ತಿನ ಕೆಲಸ ತೀರಿಸಿಕೊಂಡು, ಸಮ್ಮೇಲನದ ಅಧ್ಯಕ್ಷರಾದ ರಾವಸಾಹೇಬ ಫಕೀರಪ್ಪನವರು ಹಳಕಟ್ಟಿ ಬಿ.ಎ.ಎಲ್‌ಎಲ್.ಬಿ., ಎಂ.ಎಲ್.ಸಿ., ಯವರು ಆಗಮಿಸಿದರು. ಇವರ ಸಂಗಡ ಮೆಸರ್ಸ್ ಎಲ್.ಎಸ್. ಬಸವನಾಳ ಎಂ.ಎ. ತಮ್ಮಣ್ಣಪ್ಪನವರು ಚಿಕ್ಕೋಡಿ, ಗುರುಬಸಪ್ಪನವರು ಹಳಕಟ್ಟಿ, ಗಂಗಾಧರಪ್ಪನವರು ಸಾಬೋಜಿ ಮೊದಲಾದ ಸದ್ಗೃಹಸ್ಥರು ಆಗಮಿಸಿದರು. ಸ್ವಾಗತಸಂಘಾಧ್ಯಕ್ಷರಾದ ಮಿ|| ಎಚ್. ಎಫ್. ಕಟ್ಟಿಮನಿ ಬಿ. ಎ. ಯವರೂ ಉಳಿದ ಸ್ವಾಗತಸಭಾಸದರರೂ, ಬೇರೆ ಪ್ರಮುಖಗೃಹಸ್ಥರೂ ಮತ್ತು ಮೊದಲೇ ಬಂದ ಪ್ರತಿನಿಧಿಗಳೂ ಸ್ಟೇಷನ್ನಿನಲ್ಲಿ ಅಧ್ಯಕ್ಷರನ್ನು ಇದಿರ್ಗೊಂಡು ವಾದ್ಯವೈಭವದೊಡನೆ ಪ್ರಚಂಡತರವಾದ ಮೆರವಣಿಗೆ ಹೊರಡಿಸಿ ಊರೊಳಗಿನ ಮುಖ್ಯಮುಖ್ಯ ಬೀದಿಗಳಲ್ಲಿ ಹಾಯ್ದು ಬಿಡಾರಕ್ಕೆ ತಲ್ಪಿದರು. ಮಾರ್ಗದಲ್ಲಿ ಅನೇಕ ವ್ಯಾಪಾರಸ್ಥರು ಅಧ್ಯಕ್ಷರನ್ನು ಹೂವಿನ ಮಾಲೆಗಳಿಂದ ಅಲಂಕರಿಸಿದರು.

ಸಭೆಯ ಕಾರ್ಯವು ಸಾಯಂಕಾಲದ ನಾಲ್ಕು ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಆರಂಭದಲ್ಲಿ ಸ್ವಾಗತಪರವಾದ ಗೀತಗಳನ್ನು ಕೆಲವು ಬಾಲಕರು ಮಧುರ ಸ್ವರದಿಂದ ಹಾಡಿ ಸಭಿಕರ ಮನಸ್ಸನ್ನು ಆಹ್ಲಾದಗೊಳಿಸಿದರು. ಇದಾದ ಬಳಿಕ ಸ್ವಾಗತಸಂಘಾಧ್ಯಕ್ಷರು ಆನರೆಬಲ್ ಮಿ|| ಆರ್. ಪಿ. ಪರಾಂಜಪೆ ಎಜ್ಯುಕೇಶನ್ ಮಿನಿಸ್ಟರ, ಮಿ|| ಮಾನೂರಕರ ಪುಣೆ, ಮಿ|| ಸಾಖರೆ. ಎಂ. ಎ. ಮಿ|| ಚಿಕ್ಕೋಡಿ. ಬಿ. ಎ. ಎಂ. ಎಲ್. ಸಿ. ಬೆಳಗಾವ, ಮಿ|| ಕೋಟಿ ಬಿ. ಎ., ಎಲ್ ಎಲ್. ಬಿ. ವಕೀಲ ಗದಗ ಮುಂತಾದ ಸದ್ಗೃಹಸ್ಥರ ಸಹಾನುಭೂತಿಪರ ಪತ್ರಗಳನ್ನೋದಿದ ಬಳಿಕ ತಮ್ಮ ಗಂಭೀರವಾದ ವಾಣಿಯಿಂದ ಸ್ವಾಗತಪರಭಾಷಣವನ್ನು ಮಾಡಿದರು. ತರುವಾಯ ಮಿ|| ಎಸ್. ಬಿ. ಹಿರೇಮಠ, ಬಿ. ಎ. ಇವರು ಅಧ್ಯಕ್ಷರನ್ನು ಆರಿಸುವ ಸೂಚನೆಯನ್ನು ತಂದರು. ಈ ಸೂಚನೆಯನ್ನು ಮಿ|| ಮುಂಡಿ ಬಿ. ಎ. ಯವರು ಮತ್ತು ಇನ್ನೂ ಕೆಲವರು ಪುಷ್ಟೀಕರಣಮಾಡಿದರು. ಬಳಿಕ ಅಧ್ಯಕ್ಷರು ಸಭಿಕರ ಕರತಾಡನ ಧ್ವನಿಯೊಡನೆ ತಮ್ಮ ಸ್ಥಾನವನ್ನು ಅಲಂಕರಿಸಿದರು. ಇವರ ಸುತ್ತಲೂ ಸ್ಟೇಜಿನ ಮೇಲೆ ಮಿ|| ಕಂಬಳಿ ಬಿ. ಎ. ಎಲ್ ಎಲ್. ಬಿ., ಎಂ. ಎಲ್. ಸಿ. ಮಿ|| ಪಾವಟೆ, ಬಿ. ಎ. ಎಲ್‌ಎಲ್. ಬಿ., ಮಿ|| ಬೆಳೀ ಅಂಗಡಿ ಬಿ. ಎ. ಎಲ್‌ಎಲ್. ಬಿ., ಮಿ|| ಬಸವನಾಳ ಎಂ. ಎ., ಮಿ|| ಮೆಣಸಿನಕಾಯಿ ರಿಟಾಯರ್ಡ ಡಿ. ಡಿ. ಕ|| ಡಾ|| ಪಾಟೀಲ ಎಲ್. ಎಮ್. ಅಂಡ ಎಸ್., ಡಾ|| ಹೀರೇಮಠ ಮಿ|| ಹಿರೇಮಠ ಬಿ. ಎ., ಮಿ|| ಮುಂಡಿ ಬಿ. ಎ., ಮಿ|| ಗೋಥಿ ಬಿ. ಎ ಮಿ|| ಮಳೀಮಠ ಮೊದಲಾದ ದೊಡ್ಡ ಮನುಷ್ಯರುಗಳು ಅಲಂಕರಿಸಿದ್ದರು. ಇಂಥ ವೇಳೆಯಲ್ಲಿ ಅಧ್ಯಕ್ಷರು ತಮ್ಮ ಸುಶ್ರಾವ್ಯವಾದ ವಾಣಿಯಿಂದ ಸುಮಾರು ೧ ಘಂಟೆಯವರೆಗೆ ತಮ್ಮ ಭಾಷಣವನ್ನು ಓದಿದರು. ಬಳಿಕ ವಿಷಯನಿಯಾಮಕ ಕಮಿಟಿಯು ನಿರ್ಮಿಸಲ್ಪಟ್ಟಿತು. ಮರುದಿವಸ ತಾ|| ೨೩ನೆ ಮೇ ಸೋಮವಾರ ೮ ಘಂಟೆಗೆ ಸರಿಯಾಗಿ ಪುನಃ ಸಭೆಯು ಕೆಲಸವು ಪ್ರಾರಂಭವಾಗಿ ಕೆಳಗೆಬರೆದ ನಿರ್ಧಾರಗಳು ಸರ್ವಾನುಮತದಿಂದ ಪಾಸಾದವು.

ನಿರ್ಧಾರಗಳು.

೧. ೧೯೧೯ನೆ ಇಸವಿ ಮೇ ತಿಂಗಳ ೭-೮ ತಾರೀಖುಗಳ ದಿವಸ ಹೊನ್ನತ್ತಿಯಲ್ಲಿ ಕೂಡಿದ ಸಮ್ಮೇಲನವನ್ನು ಅದನ್ನು ಕರೆದವರು ಸದುದ್ದೇಶದಿಂದ ಪ್ರೇರಿತರಾದುದರಿಂದ ಅದಕ್ಕೆ ೩ ನೇ ಸಮ್ಮೇಲನವೆಂದೂ, ಹುಬ್ಬಳ್ಳಿಯಲ್ಲಿ ಕೂಡಿದ ಈ "ಸ್ಪೆಶಲ್" ವಿಶಿಷ್ಟ ಸಮ್ಮೇಲನವು ನಾಲ್ಕನೆಯದೆಂದೂ ಈ ಸಮ್ಮೇಲನವು ನಿರ್ಧರಿಸುತ್ತದೆ.

೨. ವೀರಶೈವ ತರುಣ ಸಂಘದ ಘಟನೆ (ಹೆಸರು, ಉದ್ದೇಶ, ರಚನೆ.)

೩. (೧) ಸಂಘವು ವಾಙ್ಮಯಾತ್ಮಕವಾಗಿರುವ ತನ್ನ ಉದ್ದೇಶವನ್ನು ಕೊನೆಗಾಣಿಸುವುದರ ಸಲುವಾಗಿ ಬೆಳಗಾವಿಯಲ್ಲಿ ಕೂಡಿದ ೨ನೆ ತರುಣ ಸಮ್ಮೇಲನದಲ್ಲಿ ನಿಶ್ಚಯವಾದ ಪ್ರಕಾರ ಹೊರಟಿರುವ "ಪ್ರಬೋಧ" ಮಾಸಪತ್ರಿಕೆಯನ್ನು ಈ ಸಂಘವು ಶಾಶ್ವತವಾಗಿ ನಡೆಯಿಸಬೇಕು. (೨) ಈ ಕೆಲಸಕ್ಕೆ ಒಬ್ಬ ಸಂಪಾದಕರು ಪ್ರಕಾಶಕರು ಪ್ರತಿಫಲಾಪೇಕ್ಷೆಯಿಲ್ಲದೆ ಗೌರವಾರ್ಥವಾಗಿ ಕೆಲಸಮಾಡುವವರು ಇರತಕ್ಕದ್ದು. (೩) ಪ್ರಬೋಧ ಮಾಸಪತ್ರಿಕೆಯ ವ್ಯವಸ್ಥೆಗಾಗಿ ಒಂದು ಕಮಿಟಿಯು ಇರತಕ್ಕದ್ದು. ಅದು ಸಂಪಾದಕರು ಪ್ರಕಾಶಕರು ಸಂಘದಿಂದ ಆರಿಸಿದ ಇಬ್ಬರು ಮೆಂಬರರು ಈ ನಾಲ್ವರು ಕೂಡಿದ್ದಾಗಿರಬೇಕು. ಆ ಕಮಿಟಿಯು ಮಾಸಪತ್ರಿಕೆಯ ಹಿತದ ಬಗ್ಗೆ ಅವಶ್ಯವಾದ ಎಲ್ಲ ಕಾರ್ಯಗಳನ್ನೂ ನೆರವೇರಿಸತಕ್ಕದ್ದು. (೪) ಈ ಕಮಿಟಿಯವರು ಪ್ರಬೋಧ ಪತ್ರಿಕೆಯ ವಾರ್ಷಿಕ ವೃತ್ತಾಂತವನ್ನು ಪ್ರತಿ ವರ್ಷ ಸಮ್ಮೇಲನದ ಕಾಲಕ್ಕೆ ಒಪ್ಪಿಸಬೇಕು. (೫) ಈ ಮಾಸಪತ್ರಿಕೆಗೆ ಪ್ರತಿ ವರ್ಷ ಹತ್ತು ರೂಪಾಯಿ ಅದರ ಮೇಲ್ಪಟ್ಟು ಅಥವಾ ಒಮ್ಮೆಲೆ ಒಂದುನೂರು ರೂಪಾಯಿ ಅದರ ಮೇಲ್ಪಟ್ಟು ರಕಮನ್ನು ಕೊಟ್ಟವರು ಈ ಪತ್ರಿಕೆಯ ಪೋಷಕರಾಗುತ್ತಾರೆ. ಮತ್ತು ಅವರಿಗೆ ಈ ಪತ್ರಿಕೆಯು ಉಚಿತವಾಗಿ ಕಳಿಸಲ್ಪಡುವುದು. (೬) ಈ ಮಾಸಪತ್ರಿಕೆಗೆ ಕನಿಷ್ಠ ಐದು ಸಾವಿರದ ಒಂದು ಸ್ವತಂತ್ರ ಫಂಡನ್ನು ಕೂಡಿಸತಕ್ಕದ್ದು. ಪೋಷಕರಿಂದ ಅಥವಾ ಇತರ ರೂಪದಿಂದ ಬಂದ ಹಣವನ್ನು ಈ ಫಂಡಿಗೆ ಸೇರಿಸತಕ್ಕದ್ದು. ಚಂದಾಹಣದಿಂದ ಪತ್ರಿಕೆಗೆ ಕಡಿಮೆ ಬಿದ್ದ ಹಣವನ್ನು ಈ ಫಂಡಿನಿಂದ ಭರತಿ ಮಾಡಿಕೊಳ್ಳತಕ್ಕದ್ದು. ಈ ಫಂಡಿನ ವ್ಯವಸ್ಥೆಗೆ ಒಬ್ಬ ಕೋಶಾಧ್ಯಕ್ಷನು ಇರತಕ್ಕದ್ದು. ಅವನು ಮಾಸಪತ್ರಿಕೆಯ ಕಮಿಟಿಯ ಅನುಕೂಲತೆಯಂತೆ ಹಣದ ವ್ಯವಸ್ಥೆಯನ್ನು ಮಾಡಬೇಕು. (೭) ಮಾಸಪತ್ರಿಕೆಯ ವಾರ್ಷಿಕ ಅಂದಾಜ ಪತ್ರಿಕೆಯನ್ನು ಈ ಕಮಿಟಿಯವರು ಮಾಡತಕ್ಕದ್ದು. (೮) ಈ ಪತ್ರಿಕೆಯ ಸರ್ವಾಧಿಕಾರವು ಈ ಸಂಘಕ್ಕೆ ಇರತಕ್ಕದ್ದು. (೯) ಸಂಘದ ಪರವಾಗಿ ೧೯೧೯ನೆ ಇಸವಿ ಅಕ್ಟೋಬರ ತಿಂಗಳಿನಿಂದ ಎರಡು ವರ್ಷಗಳವರೆಗೆ ಹೊರಟ ಪ್ರಬೋಧ ಮಾಸಪತ್ರಿಕೆಯನ್ನು ಅದರ ಸಂಪಾದಕ ವರ್ಗದವರು ಮತ್ತು ಪ್ರಕಾಶಕರು ಸಂಘದಿಂದ ಏನೂ ಪ್ರತಿಫಲವಿಲ್ಲದೆ ಒಳ್ಳೇ ವ್ಯವಸ್ಥೆಯಿಂದ ನಡೆಯಿಸಿದ್ದರಿಂದ ಅವರ ಅಭಿನಂದನವನ್ನು ಈ ಸಮ್ಮೇಲನದವರು ಮಾಡುತ್ತಾರೆ. (೧೦) ಪ್ರಬೋಧಮಾಸಪತ್ರಿಕೆಯನ್ನು ನಡೆಯಿಸಲಿಕ್ಕೆ ಇನ್ನು ಮೇಲೆ ಕೆಳಗೆ ಕಾಣಿಸಿದವರ ಕಮಿಟಿಯನ್ನು ಈ ಸಮ್ಮೇಲನವು ನಿಯಮಿಸುತ್ತದೆ. (೧) ಎಸ್. ಎಸ್. ಬಸವನಾಳ ಎಮ್. ಎ. ಸಂಪಾದಕರು, (೨) ಎಚ್. ಎಫ್. ಕಟ್ಟಿಮನಿ ಬಿ. ಎ. ಪ್ರಕಾಶಕರು, (೩) ಎಮ್. ಎಸ್. ಪಾಟೀಲ ಕೋಶಾಧ್ಯಕ್ಷ (೪) ಡಾ|| ಹಿರೇಮಠ ಎಲ್. ಸಿ. ಪಿ. ಎಸ್. ಮತ್ತು ಎಲ್. ಎಮ್. ಎಸ್.

೪. ವೀರಶೈವ ತರುಣರ ಸಮ್ಮೇಲನವು ಅವಿಚ್ಛಿನ್ನವಾಗಿ ನಡೆಯುವ ಉದ್ದಿಶ್ಯವಾಗಿ ಯಾವತ್ತು ತರುಣರು ಈ ಸಮ್ಮೇಲನದ ಮೆಂಬರರಾಗಬೇಕೆಂತಲೂ, ಅದನ್ನು ಸ್ಥಿರವಾಗಿ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಗ್ರಾಮಸಂಘ ತಾಲ್ಲೂಕ್ ಸಂಘ ಜಿಲ್ಲಾ ಸಂಘಗಳನ್ನು ಈ ಸಮ್ಮೇಲನದ ನಿಯಮಗಳಿಗನುಸಾರವಾಗಿ ಸ್ಥಾಪಿಸಬೇಕೆಂತಲೂ ಇದಕ್ಕೆ ಒಂದು ಧನಸಂಚಯವನ್ನು ಮಾಡಲಿಕ್ಕೆ ತಕ್ಕ ಏರ್ಪಾಡು ಮಾಡಬೇಕೆಂತಲೂ ಈ ಸಭೆಯು ನಿರ್ಣಯಿಸುತ್ತದೆ. ಸೂಚಕರು ಮಿ|| ಬಿ. ಪುರಾಣಿಕ (ದಾವಣಗೆರೆ) ಅನುಮೋದಿಸಿದವರು ಮಿ|| ಸಿ. ಯಗಟಿ (ಫ. ಕಾಲೇಜು ಪುಣೆ.)

೫. ಧಾರ್ಮಿಕ ಶಿಕ್ಷಣದ ಬಗ್ಗೆ ಸರ್ವಾನುಮತದಿಂದ ಪಾಸಾದ ನಿರ್ಧಾರಗಳು.—(೧) ಧರ್ಮಗ್ರಂಥಗಳನ್ನು ಸುಲಭ ಕನ್ನಡಭಾಷೆಯಲ್ಲಿ ಬರೆಯಿಸಿ ಧರ್ಮದ ವಿಷಯಕ್ಕೆ ಬೇರೆ ಬೇರೆ ಅಭಿಪ್ರಾಯವುಳ್ಳ ವಿದ್ವಾಂಸರ ಕಮಿಟಿಯನ್ನು ನಿಯಮಿಸಿ ಆ ಕಮಿಟಿಯಲ್ಲಿ ಧರ್ಮಗ್ರಂಥಗಳನ್ನು ಪರೀಕ್ಷಿಸಿ ಅವುಗಳನ್ನು ಪ್ರಸಾರಮಾಡುವುದು. (೨) ಸಂಸ್ಕೃತ ವೀರಶೈವ ಧರ್ಮಗ್ರಂಥಗಳನ್ನು ಇಂಗ್ಲೀಷ್ ಮೊದಲಾದ ಪರಕೀಯ ಭಾಷೆಯಲ್ಲಿ ಭಾಷಾಂತರಿಸುವುದು. (೩) ತರುಣರಿಂದ ಸ್ಥಾಪಿಸಲ್ಪಟ್ಟ ಮತ್ತು ಸ್ಥಾಪಿಸಲ್ಪಡುವ ಕನ್ನಡ ಮತ್ತು ಇಂಗ್ಲೀಷ್ ಶಾಲೆಗಳಲ್ಲಿ ಸಾಧ್ಯವಿದ್ದ ಮಟ್ಟಿಗೆ ಧರ್ಮ ಗ್ರಂಥಗಳ ಅಭ್ಯಾಸವನ್ನೇರ್ಪಡಿಸುವುದು. (೪) ಸ್ಕಾಲರ್ಶಿಪ್ ಮತ್ತು ಇನಾಮು ಇವುಗಳ ರೂಪದಿಂದ ವಿದ್ಯಾರ್ಥಿಗಳಲ್ಲಿ ಧರ್ಮ ವಿದ್ಯಾಪ್ರಸಾರಮಾಡುವುದು. (೫) ಅಲ್ಲಲ್ಲಿ ಧರ್ಮ ಸಂಸ್ಥೆಗಳನ್ನು ಸ್ಥಾಪಿಸಿ, ವ್ಯಾಖ್ಯಾತರನ್ನು ತಯಾರಿಸಿ ಅಲ್ಲಲ್ಲಿ ಭಾಷಣಮಾಡಿಸುವುದು. (೬) ಧರ್ಮಾಚರಣೆಗಿಂತಲೂ ಧರ್ಮದ ಮೂಲತತ್ವಗಳ ಕಡೆಗೆ ಹೆಚ್ಚು ಮಹತ್ವವನ್ನು ಕೊಡತಕ್ಕದ್ದು. ಮತ್ತು ಸದ್ಯಕ್ಕೆ ರೂಢಿಯಲ್ಲಿರುವ ಧರ್ಮಾಚರಣೆಗಳಿಗೆ ಅವುಗಳ ಮೂಲತತ್ವವನ್ನು ಪರಿಶೋಧಿಸಿ ಅವುಗಳಿಗೆ ಅನುರೂಪವಾಗಿ ಆಚರಣೆಗಳನ್ನು ಇಡತಕ್ಕದ್ದು. (೭) ಈ ಉದ್ದೇಶವನ್ನು ಕೊನೆಗಾಣಿಸಲಿಕ್ಕೆ ಕೆಳಗೆ ಕಾಣಿಸಿದ ಗೃಹಸ್ಥರದೊಂದು ಮಂಡಲವು ಸ್ಥಾಪಿಸಲ್ಪಟ್ಟಿದೆ. (೧) ರಾವ್ ಸಾಹೇಬ ಹಳಕಟ್ಟಿ (೨) ಮಿ|| ಬೆಳೀ ಅಂಗಡಿ (೩) ಮಿ|| ಪಾವಟೆ ವಕೀಲ (೪) ಮಿ|| ಬಸವನಾಳ್ ಎಮ್. ಎ. (ಸೆಕ್ರೆಟರಿ) ಹೆಚ್ಚಿಗೆ ಜನರನ್ನು ತಕ್ಕೊಳ್ಳಲಿಕ್ಕೆ ಈ ಜನರಿಗೆ ಅಧಿಕಾರವಿದೆ. ಸೂಚಿಸಿದವರು—ಸಿ. ಜಿ. ಹುಂಡೇಕಾರ (ಕರ್ನಾಟಕ ಕಾಲೇಜ ಧಾರವಾಡ) ಅನುಮೋದಿಸಿದವರು ಎಸ್. ಡಿ. ಪಾವಟೆ ಬಿ. ಎ. ಎಲ್ ಎಲ್. ಬಿ.

೬. ಯಾವತ್ತು ತರುಣ ವೀರಶೈವರು ತಮ್ಮ ಸಮಾಜದಲ್ಲಿ ಶೀಘ್ರದಲ್ಲಿ ಶಿಕ್ಷಣವು ಪ್ರಸಾರವಾಗಲಿಕ್ಕೆ ಎಲ್ಲ ತರದ ಶಿಕ್ಷಣದ ಸಂಸ್ಥೆಗಳನ್ನು ಅಲ್ಲಲ್ಲಿ ಸ್ಥಾಪಿಸಲಿಕ್ಕೆ ಯತ್ನಿಸಬೇಕೆಂತಲೂ ಮತ್ತು ಪ್ರೌಢವಿದ್ಯಾಭ್ಯಾಸದಲ್ಲಿರುವವರು ಈಗಿನ ಕಾಲಕ್ಕೆ ಔದ್ಯೋಗಿಕ ಸುಧಾರಣೆಗೆ ಅತ್ಯವಶ್ಯವಾಗಿರುವ ರಸಾಯನಶಾಸ್ತ್ರ, ವಿಜ್ಞಾನಶಾಸ್ತ್ರ ಮೊದಲಾದ ಶಾಸ್ತ್ರೀಯ ವಿಷಯಗಳನ್ನು ತಮ್ಮ ಐಚ್ಛಿಕವಿಷಯವಾಗಿ ತೆಗೆದುಕೊಳ್ಳಬೇಕೆಂತಲೂ ವಾಙ್ಮಯಾಭ್ಯಾಸಕ್ಕೆ ಲಕ್ಷ್ಯವುಳ್ಳವರು ವೀರಶೈವ ಧರ್ಮಶೋಧನಕ್ಕೆ ಅವಶ್ಯವಾಗಿರುವ ಸಂಸ್ಕೃತ, ಕನ್ನಡ ಮತ್ತು ಇತರ ದೇಶಭಾಷೆಗಳನ್ನು ಅಭ್ಯಾಸಿಸಬೇಕೆಂತಲೂ ಈ ಸಭೆಯು ಅಭಿಪ್ರಾಯಪಡುತ್ತದೆ. ಸೂ—ಮಿ|| ಉಚ್ಚಂಗಿ ಬಿ.ಎ. ಅ-ಮಿ|| ಗೋಥಿ ಬಿ.ಎ. ಅ. ಮಿ|| ಎಸ್. ಎಸ್. ಮಳಿಮಠ.

೭. ಈಗ ವೀರಶೈವರ ಇತಿಹಾಸವನ್ನು ಬರೆದಿರುವುದಿಲ್ಲ. ಆದುದರಿಂದ ವೀರಶೈವರು ತಮ್ಮ ಜನಾಂಗದ ಗೌರವದ ವಿಷಯವಾಗಿ ಏನೂ ಗೊತ್ತಾಗದೆ, ಅವರಲ್ಲಿ ಸ್ವಾಭಿಮಾನವು ಹುಟ್ಟುವುದಿಲ್ಲ. ಆದುದರಿಂದ ವೀರಶೈವರ ಇತಿಹಾಸವನ್ನು ಬರೆಯುವುದು ಅತ್ಯಾವಶ್ಯವದೆ. ಇದಕ್ಕಾಗಿ ದಂತಕಥೆಗಳನ್ನೂ ಶಿಲಾಲೇಖನಗಳನ್ನೂ ಪ್ರಸಿದ್ಧಿಪಡಿಸುವುದೂ, ಇತರ ಭಾಷೆಯಲ್ಲಿರುವ ಗ್ರಂಥದೊಳಗಿಂದ ವೀರಶೈವರ ಇತಿಹಾಸವನ್ನು ಶೋಧಿಸುವದೂ, ಪುರಾಣಗ್ರಂಥಗಳನ್ನು ಓದಿ ಅದರೊಳಗಿಂದ ಐತಿಹಾಸಿಕ ಭಾಗವನ್ನು ಪ್ರಸಿದ್ಧಿಪಡಿಸುವುದೂ, ಮತ್ತು ಇತಿಹಾಸಕ್ಕೆ ಉಪಯೋಗವಾಗುವ ಹಾಗೆ ಯಾವದೇ ತರದಿಂದ ಯತ್ನಿಸುವುದೂ ಅವಶ್ಯಕವಾಗಿರುವದೆಂದು ಈ ಸಭೆಯು ನಿರ್ಧರಿಸುತ್ತದೆ. ಈ ಸಂಬಂಧವಾಗಿ ಕೆಳಗಿನ ನಾಲ್ಕುಮಂದಿ ಸಭಾಸದರ ಕಮಿಟಿಯು ಕೊಡಲ್ಪಡುತ್ತದೆ. (೧) ರಾವಸಾಹೇಬ ಹಳಕಟ್ಟಿ, (೨) ಮಿ|| ಪಾವಟೆ, (೩) ಬಳೀಅಂಗಡಿ, (೪) ಮಿ|| ಬಸವನಾಳ ಎಂ.ಎ. ಸೂ-ತಮ್ಮಣ್ಣಪ್ಪ ಚಿಕ್ಕೋಡಿ, ಅ-ಮಿ|| ಬೆಳಿಅಂಗಡಿ ವಕೀಲ ಬಿ.ಎ.ಎಲ್‌ಎಲ್.ಬಿ., ಅ-ಮಿ|| ಕಂಬಳಿ.

೮. ಧಾರವಾಡದಲ್ಲಿ ಓದುತ್ತಿರುವ ಎಲ್ಲಾ ಹೈಸ್ಕೂಲು ಮತ್ತು ಕಾಲೇಜುಗಳ ವೀರಶೈವ ವಿದ್ಯಾರ್ಥಿಗಳ ವಾಚನಕ್ಕೋಸ್ಕರ ಈ ವೀರಶೈವ ತರುಣಸಂಘದಿಂದ ಧಾರವಾಡದಲ್ಲಿ ಒಂದು ವೀರಶೈವ ಗ್ರಂಥಭಂಡಾರವನ್ನು ಏರ್ಪಡಿಸತಕ್ಕದ್ದು. ಸೂ-ಎಂ. ಎಸ್. ಕೇಸರಿ, ಅ-ಎಸ್. ಬ. ಹಿರೇಮಠ ಬಿ. ಎ.

೯. ವೀರಶೈವ ಸಮಾಜವು ಒಕ್ಕಲತನ ಕೈಗಾರಿಕೆ ಮತ್ತು ವ್ಯಾಪಾರಗಳಲ್ಲಿ ಹೀನಾವಸ್ಥೆಯನ್ನು ಹೊಂದಿರುವುದರಿಂದ ಇವುಗಳ ಅಭಿವೃದ್ಧಿಗೋಸ್ಕರ ಈ ಕಸಬುಗಳ ಶಿಕ್ಷಣವನ್ನು ನಮ್ಮ ಸಮಾಜದ ತರುಣರು ಹೊಂದಬೇಕಾಗಿ ಈ ಸಮ್ಮೇಲನವು ಸೂಚಿಸುತ್ತದ. ಸೂ-ಡಿ. ಕೆ. ರಮಣಿ ಅ-ಮಿ|| ಶಾಬಾದಿ ಮರಡೂರ ಮಾಸ್ತರರು.

೧೦. ಈ ಸಂಘದ ಉದ್ದೇಶಗಳು ಮತ್ತು ಅವುಗಳ ವಿವರಣೆಯಲ್ಲಿ ವಿವರಿಸಲ್ಪಟ್ಟ ಸಂಗತಿಗಳು ಸಮಾಜದವರ ಆಚರಣೆಯಲ್ಲಿ ಬರಲು ವ್ಯಾಖ್ಯಾನಗಳ ಮೂಲಕವಾಗಿಯೂ ನಮ್ಮ ಸಮಾಜದ ತರುಣರು ಪ್ರಯತ್ನಿಸಬೇಕಾಗಿ ಈ ಸಮ್ಮೇಲನವು ಸೂಚಿಸುತ್ತದೆ.

೧೧. ೧೯೧೮ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ದಾವಣಗೇರಿಯಲ್ಲಿ ಕೂಡಿದ ಅಖಿಲ ವೀರಶೈವ ಮಹಾಸಭೆಯ ಕಾಲಕ್ಕೆ ಆ ಮಹಾಸಭೆಯ ಅಭಿವೃದ್ಧಿಗೋಸ್ಕರ ಸುಮಾರು ಅರವತ್ತುಸಾವಿರ ರೂಪಾಯಿಗಳ ಧನರಾಶಿಯು ಕೂಡಿದ್ದು ಅದರ ವ್ಯವಸ್ಥೆಯು ಆ ಹಣವನ್ನು ಕೂಡಿಸಿದ ಉದ್ದೇಶದಂತೆ ಕಾರ್ಯವು ಪ್ರಾರಂಭವಾಗದ್ದರಿಂದ ಈ ಹಣದ ಜವಾಬದಾರಿಯನ್ನು ವಹಿಸಿಕೊಂಡ ಕಮಿಟಿಯವರು ಆ ಕೆಲಸವನ್ನು ತೀವ್ರವೇ ಪ್ರಾರಂಭಿಸಬೇಕೆಂದು ಈ ಸಮ್ಮೇಲನವು ಅಭಿಪ್ರಾಯಪಡುತ್ತದೆ. ಅದು ತೀವ್ರ ಆಗದೆ ಇದ್ದಪಕ್ಷದಲ್ಲಿ ಇಲ್ಲಿಯವರೆಗೆ ಕೂಡಿದ ಆ ಹಣದ ಬಡ್ಡಿಯನ್ನು ಈ ಸಮ್ಮೇಲನದ ವ್ಯವಸ್ಥೆಗೆ ದಯಪಾಲಿಸಬೇಕಾಗಿ ಕೋರುತ್ತಾರೆ. ಈ ಸಂಬಂಧವಾಗಿ ಪತ್ರವ್ಯವಹಾರಮಾಡಲು ಅಧ್ಯಕ್ಷರಿಗೆ ಅಧಿಕಾರವಿದೆ. ಠರಾವು ತಂದವರು ಎಮ್. ಎಸ್. ಕೇಸರಿ, ಅನುಮೋದಿಸಿದವರು ಮಿ|| ಮುಂಡಿ, ಬಿ.ಎ.

೧೨. ನವಲಗುಂದ ಶಿರಸಂಗಿ ಸಂಸ್ಥಾನದ ಟ್ರಸ್ಟ್ ಕಮಿಟಿಯವರು ಮುಂಬೈಯಲ್ಲಿ ವೀರಶೈವವಿದ್ಯಾರ್ಥಿಗಳ ಅನುಕೂಲತೆಗಾಗಿ ಒಂದು ವಿದ್ಯಾರ್ಥಿನಿಲಯದ ವ್ಯವಸ್ಥೆಯನ್ನು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಅವರಿಗೆ ಈ ಸಮ್ಮೇಲನವು ಪ್ರಾರ್ಥಿಸುತ್ತದೆ. ಠರಾವು ಅಧ್ಯಕ್ಷರು.

೧೩. ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಹಾನಗಲ್ಲ ಶ್ರೀಕುಮಾರಸ್ವಾಮಿಗಳವರು ಇದೇ ತಿಂಗಳಲ್ಲಿ ಬೆಳಗಾವಿಗೆ ದಯಮಾಡಿಸಿದಾಗ, ನಮ್ಮ ಸಮಾಜದ ಕೆಲವು ಪದವೀಧರರು ಸ್ವಾರ್ಥತ್ಯಾಗಮಾಡಿ ನಡೆಸುತ್ತಲಿರುವ "ಗಿಲಗಂಜಿ ಅರ್ಟಾಳ" ಹೈಸ್ಕೂಲಿಗೆ ಒಂದುಲಕ್ಷ ರೂಪಾಯಿಗಳನ್ನು ಕೂಡಿಸಿಕೊಡುತ್ತೇವೆಂದು ಅಪ್ಪಣೆ ಕೊಡಿಸಿದ್ದರಿಂದ ಈ ತರುಣಸಮ್ಮೇಲನವು ಆ ಮಹಾಸ್ವಾಮಿಗಳವರನ್ನು ಅತ್ಯಂತ ಭಕ್ತಿಪುರಸ್ಸರವಾಗಿ ಅಭಿನಂದಿಸುತ್ತದೆ. ಸೂ-ಎಮ್. ಎಸ್. ಕೇಸರಿ, ಅ-ಸಿ. ಎಸ್. ಕೆಂಪಣ್ಣನವರು.

೧೪. ಹುಬ್ಬಳ್ಳಿ ಶ್ರೀಮನ್ನಿರಂಜನ ಜಗದ್ಗುರು ಗಂಗಾಧರಸ್ವಾಮಿಗಳವರು ಲಿಂಗದೊಳಗಾದದ್ದಕ್ಕೆ ಈ ಸಮ್ಮೇಲನವು ಅತ್ಯಂತ ದುಃಖಪ್ರದರ್ಶನ ಮಾಡುತ್ತದೆ. ಶ್ರೀ ಅಥಣಿ ಶಿವಯೋಗಿವರ್ಯರಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಲಿಂಗೈಕ್ಯರಾದದ್ದಕ್ಕೆ ಈ ಸಮ್ಮೇಲನವು ಅತ್ಯಂತ ದುಃಖಪ್ರದರ್ಶನ ಮಾಡುತ್ತದೆ. ಬೆಂಗಳೂರಿನ ಮ|| ರಾ|| ರಾ|| ಎಂ. ಬಸವಯ್ಯನವರು ಶಿವಾಧೀನರಾದದ್ದಕ್ಕೆ ಈ ಸಮ್ಮೇಲನವು ದುಃಖಪ್ರದರ್ಶನಮಾಡುತ್ತದೆ. ವೀರಶೈವ ಕವಿವರ್ಯರಾದ ಶ್ರೀ ಬಸವಾರ್ಯ ಕಿತ್ತೂರ ಇವರು ಶಿವಾಧೀನರಾದದ್ದಕ್ಕೆ ಈ ಸಮ್ಮೇಲನವು ದುಃಖಪ್ರದರ್ಶನ ಮಾಡುತ್ತದೆ.

೧೫. ಐದನೆಯ ವೀರಶೈವತರುಣರ ಸಮ್ಮೇಲನವನ್ನು ಮುಂದಣ ವರ್ಷದ ಬೇಸಗೆಯ ರಜೆಯಕಾಲದಲ್ಲಿ ಬಾಗಲಕೋಟೆಯಲ್ಲಿ ಕೂಡಿಸಲು ಅಲ್ಲಿಯ ತರುಣಸಂಘದವರು ಒಪ್ಪಿರುವುದನ್ನು ಈ ಸಮ್ಮೇಲನದವರು ಅನುಮೋದಿಸುತ್ತಾರೆ. ಸೂ|| ತಂದವರು-ಶ್ರೀ ನಾಗಪ್ಪಾ, ರಾಚಪ್ಪಾ, ಬಾಗಲಕೋಟೆ, ಅ-ಕೊಟ್ಟವರು-ಸೋಮಪ್ಪಾ, ಸಿದ್ದಪ್ಪಾ. ಶಾಬಾದಿ, ಬಾಗಲಕೋಟೆ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಧಾರಣೆಯಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಳು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

37 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಶಿವಪೂಜಾವಿಧಿಃ	೧—೦—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

೧೯೨೧ ನೆಯ ಇಸವಿ ಜೂನ್ ತಾ|| ೧೨ ರಿಂದ ೧೯೨೧ ನೆಯ ಜೂನ್ ತಾ|| ೧೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಜ್ಯೇಷ್ಠ ಶುದ್ಧ ಸಪ್ತಮಿಯಿಂದ ಜ್ಯೇಷ್ಠ ಶುದ್ಧ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಿ ಮಾಸ
12	ಭಾನು	ಸಪ್ತ	33-20	ಪುಬ್ಬ	52-22	30
13	ಸೋಮ	ಅಷ್ಟ	28-3	ಉತ್ತರ	49-17	31
14	ಮಂಗಳ	ನವ	23-32	ಹಸ್ತ	46-55	1
15	ಬುಧ	ದಶ	19-54	ಚಿತ್ತ	45-33	2
16	[1]ಗುರು	ಏಕಾ	17-14	ಸ್ವಾತಿ	45-18	3
17	ಶುಕ್ರ	ದ್ವಾದ	15-42	ವಿಶಾ	46-10	4
18	ಶನಿ	ತ್ರಯೋ	15-22	ಅನೂ	48-21	5

(1) ಸರ್ವತ್ರನಿರ್ಜಲೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪ ಮೈಸೂರ್ ಸ್ಟಾರ್ ೧೯೨೧ ನೆಯ ಇಸವಿ ಜೂನ್ ತಾರೀಖು ೧೯ ನೆಯ ಭಾನುವಾರ. (ಸಂಚಿಕೆ ೨೪

ಬಸವ ಸಮಿತಿ
ಬೆಂಗಳೂರು

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
23 ಮೈಸೂರು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

[illegible] ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ ರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫು||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ :—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ :—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲುಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ :—ಶ್ರೀ ವಿಷ್ಣುದೇವರು ನೇತ್ರವ ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡದ ಈ ಫೋಟೋ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ :—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ :—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫು|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ :—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ :—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫು|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೋಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣ ಕುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಿಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪೂರು ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ, ಅಥಣಿ ಶಿವಯೋಗಿಗಳು, ಹಾನಗಲ್ಲ ಸ್ವಾಮಿಗಳು, ಸೊಲ್ಲಾಪೂರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಳೂರ ಸ್ವಾಮಿಗಳು, ಕಮತಗಿ ಹುಚ್ಚೀಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೋಗಳು ಶಿಗುತ್ತವೆ. ಕ್ರಯ ಫು|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0.12.0	,	50-0-0
5	0- 8.0	,,	100-0-0
6	0-12-0	,,	100-0-0
7	6. 0-0	,,	100-0-0
೨೭ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
17 ಕಂಪನಿ, ಚೌಕಂಬಾ ಕಾಶೀ.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

38 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಶಿವಪೂಜಾವಿಧಿಃ	೧—೦—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

ಮನೆ ಕ್ರಯಕ್ಕೆ ದೊರೆಯುವುದು.

ಮೈಸೂರು ಇಲವಾಲ ರೋಡಿನಲ್ಲಿರುವ ಡೋರ್ ನಂ. 437ನೆ ಮನೆ 18 by 97 ಅಡಿ ಉಳ್ಳ ಇಸ್ಪಾರುಮನೆ, ಇದರ ಮುಂಭಾಗದಲ್ಲಿ ಕಾಂಪೌಂಡು ಹಿಂಭಾಗದ ಹಿತ್ತಲಿನಲ್ಲಿ ಭಾವಿ ಸಹ ಇರುತ್ತೆ. ನೆಲಕ್ಕೆ ಕಡಪಾಕಲ್ಲು ಹಾಕಿ ಗಾರೆಗಚ್ಚಿನಿಂದ ವಾಸಕ್ಕೆ ಬಹಳ ಅನುಕೂಲವಾಗಿರುವ ಮನೆ ಕ್ರಯಕ್ಕೆ ಸಿದ್ಧವಾಗಿರುತ್ತೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆದು ಖರೀದಿ ಮೊಬಲಗನ್ನು ತಿಳಿದುಕೊಳ್ಳಬಹುದು.

ಟಿ. ಎಚ್. ರಾವ್,
3/37 ಗುಂಡೋಪಂತ್‌ಬೀದಿ, ಬೆಂಗಳೂರು ಸಿಟಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜೂನ್ ತಾ|| ೧೯ ನೆಯ ಭಾನುವಾರ.

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ.

ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರ ೩೮ನೆ ವರ್ಷವರ್ಧಂತೀ ಮಹೋತ್ಸವವು ಕಳೆದ ಗುರುವಾರ ಯಥಾಸಾಂಗವಾಗಿ ವಿಜೃಂಭಣೆಯಿಂದ ನಡೆದಿತು. ಆ ದಿನ ಪ್ರಾತಃಕಾಲ ೩೮ ಗುಂಡುಗಳು ಹಾರಿಸಲ್ಪಟ್ಟುವು. ೯ ಗಂಟೆಗೆ ಅರಮನೆಯ ಅಂಬಾವಿಲಾಸದಲ್ಲಿ ಶ್ರೀಮನ್ಮಹಾರಾಜರು ಯುವರಾಜರು ಸಹ ಭದ್ರಾಸನಗಳನ್ನಲಂಕರಿಸಿ ವಿವಾಹಮಂಟಪಸ್ಥಲದಲ್ಲಿ ದರಬಾರನ್ನು ನಡೆಯಿಸಿದರು. ದಿವಾನರು ರಾಜಬಂಧುವರ್ಗದವರು ಕೌನ್ಸಿಲರುಗಳು ಡಿ|| ಕಮಿಷನರುಗಳು ಮೊದಲಾದ ಅಧಿಕಾರಿಗಳೂ ವೈದಿಕಮಂಡಲಿಯವರೂ ಪುರಪ್ರಮುಖರೂ ಸಭೆಯನ್ನಲಂಕರಿಸಿದ್ದರು. ಪದ್ಧತಿಯಂತೆ ಸಭೆಯಲ್ಲಿ ಗಾನ ನರ್ತನಾದಿ ವೈಭವಗಳು ಜರುಗುತ್ತಿದ್ದುವು. ದೇವಾಲಯಗಳಿಂದಲೂ ಮಠಗಳ ಕಡೆಯಿಂದಲೂ ಬಂದಿದ್ದ ಫಲಮಂತ್ರಾಕ್ಷತೆಗಳೂ ಕಿಲ್ಲತ್ತುಗಳೂ ಸಮರ್ಪಿಸಲ್ಪಟ್ಟುವು. ಮುತ್ತೈದೆಯರ ಸೇಸೆಯೂ ವೈದಿಕರ ಆಶೀರ್ವಾದಗಳೂ ನಡೆದುವು. ಇತರ ಸಭಿಕರೆಲ್ಲಾ ಮುಜುರೆಮಾಡಿದರು. ಪುಷ್ಪಹಾರ ತಾಂಬೂಲಾದಿ ಮರ್ಯಾದೆಗಳು ಸಭಿಕರಿಗೆಲ್ಲಾ ನಡೆದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು. ಸಾಯಂಕಾಲ ೫ ಗಂಟೆಗೆ ಶ್ರೀಮನ್ಮಹಾರಾಜ ಸಹೋದರರು ದಿವ್ಯವಸ್ತ್ರಾಭರಣವಿಭೂಷಿತರಾಗಿ ಉತ್ತಮಾಶ್ವಗಳನ್ನೇರಿ ಚತುರಂಗಸೈನ್ಯಪರಿವೃತರಾಗಿ ಅಲಂಕೃತವಾಗಿದ್ದ ದೊಡ್ಡಪೇಟೆಯ ಮಾರ್ಗದಿಂದ ಉತ್ಸವಹೊರಟರು. ಮುಂಗಡೆಯಲ್ಲಿ ಅರಸುಮಂಡಲಿಯವರು, ಅಧಿಕಾರಿಗಳು, ಪ್ರಜಾಪ್ರತಿನಿಧಿ ಸಭಿಕರು ಪುರಪ್ರಮುಖರು ಮೊದಲಾದವರೆಲ್ಲಾ ನಡೆಯುತ್ತಿದ್ದರು. ದಾರಿಯುದ್ದಕ್ಕೂ ಪುರಪ್ರಮುಖರು ಅಲ್ಲಿಗಲ್ಲಿಗೆ ಮಹಾರಾಜಸಹೋದರರಿಗೆ ಫಲಪುಷ್ಪಗಳನ್ನೊಪ್ಪಿಸಿದರು. ಮ್ಯು|| ಕೌನ್ಸಿಲರುಗಳು ಸೆಂಟರಲ್ ಪೊಲೀಸ್ ಠಾಣದ ಮುಂದೆ ಹಾಕಿಸಿದ್ದ ಚಪ್ಪರದಲ್ಲಿ ಫಲಪುಷ್ಪಗಳನ್ನರ್ಪಿಸಿದರು. ಸ್ವಾರಿಯು ದೊಡ್ಡಬಂಗಲೆಯನ್ನು ಸೇರಿ ಸ್ವಲ್ಪ ವಿಶ್ರಮಿಸಿಕೊಂಡ ನಂತರ ವಿದ್ಯುಚ್ಛಕ್ತಿಯ ಬೆಳಕಿನಿಂದ ಹಗಲಿನಂತೆ ಕಾಣುತ್ತಿದ್ದ ಬಯಲಿನಲ್ಲಿ ನಿಂತಿದ್ದ ಸೈನಿಕರ ಮರ್ಯಾದೆಯನ್ನು ಸ್ವೀಕರಿಸಿ ಅವರುಗಳ ಕವಾಯತನ್ನು ಪರಾಮರಿಸಿ, ಬಂಗಲೆಯನ್ನು ಸೇರಿ, ಮಹಾ ದೀಪೋತ್ಸವದ ವೈಭವದಲ್ಲಿ ಹಿಂದಿರಿಗಿ ಕೋಟೆಯನ್ನು ಪ್ರವೇಶಿಸಿ ದೇವಾಲಯಗಳಿಗೆ ಹೋಗಿ ದೇವತಾದರ್ಶನ ಪ್ರಸಾದ ಸ್ವೀಕಾರಗಳನ್ನು ಮಾಡಿ ರಾತ್ರಿ ೯|| ಗಂಟೆಗೆ ಸ್ವಾರಿಯು ಅರಮನೆಯನ್ನು ಸೇರಿತು. ದಾರಿಯುದ್ದಕ್ಕೂ ಪುರಜನರೇ ಅಲ್ಲದೆ ಹೊರಗಣಿಂದ ಬಂದಿದ್ದ ಹತ್ತಾರುಸಾವಿರ ಜನರು ಉತ್ಸವವೈಭವವನ್ನು ನೋಡಿ ಅತ್ಯಂತವಾಗಿ ಆನಂದಿಸಿದರು.

ಕೇವಲ ಪ್ರಜಾರಂಜನೈಕಪರಾಯಣರಾದ ಪ್ರಭುಗಳ ಶ್ರೇಯೋಭಿವೃದ್ಧಿಯನ್ನೂ ಆಯುರಾರೋಗ್ಯಾಭಿವೃದ್ಧಿಯನ್ನೂ ಕೋರುವಲ್ಲಿ ರಾಜಭಕ್ತಿವಿಖ್ಯಾತರಾದ ಮೈಸೂರು ಪ್ರಜೆಗಳಿಗೆ ಇರತಕ್ಕ ಆನಂದವು ಸಾಧಾರಣವಾದುದಲ್ಲ. ಪ್ರತಿಯೊಬ್ಬರೂ ತಂತಮ್ಮ ಮನೆಗಳಲ್ಲಿ ಆ ದಿನವನ್ನು ಹಬ್ಬದಂತೆ ಆಚರಿಸಿದರು. ದೇವಾಲಯಗಳಲ್ಲೆಲ್ಲಾ ವಿಶೇಷ ಪೂಜಾಪ್ರಾರ್ಥನೆಗಳು ಜರುಗಿದುವು. ಎಲ್ಲ ಪಾಠಶಾಲೆಗಳಲ್ಲೂ ಬಾಲಬಾಲೆಯರಿಂದ ಆಟಪಾಟಗಳು ಆಡಿಸಲ್ಪಟ್ಟು ತಿಂಡಿಗಳು ಹಂಚಲ್ಪಟ್ಟುವು. ಸಭೆಗಳೂ ಅವುಗಳಲ್ಲಿ ಮೈಸೂರು ದೇಶದ ಚರಿತ್ರೆ ಮತ್ತು ರಾಜಭಕ್ತಿ ಸಂಬಂಧವಾದ ಉಪನ್ಯಾಸಗಳೂ ನಡೆದು ಮೈಸೂರು ರಾಜಪತಾಕೆಗೆ ವಂದನೆಗಳು ನಡೆದು ಬಾಲಬಾಲೆಯರಿಗೆಲ್ಲಾ ತಿಂಡಿಯ ಪದಾರ್ಥಗಳು ಹಂಚಲ್ಪಟ್ಟವು. ಇವಕ್ಕೆಲ್ಲಾ ಅರಮನೆಯಿಂದಲೂ ಮಕ್ಕಳ ಪೋಷಕರಿಂದಲೂ ಸಹಾಯದ್ರವ್ಯವು ಒದಗಿಸಲ್ಪಟ್ಟಿದ್ದಿತು. ಸರ್ವತ್ರ ಮಹಾಪ್ರಭುವಿಗೆ ಮಂಗಳವು ಕೋರಲ್ಪಟ್ಟಿತು.

ಶ್ರೀಮನ್ಮಹಾರಾಜ ಸಹೋದರರಿಗೆ ವಯೋವೃದ್ಧಿಯಾಗುತ್ತ ಬಂದಂತೆ ಅವರ ಪ್ರಜಾವಾತ್ಸಲ್ಯ ಪರಿಪಾಲನಸದ್ಧರ್ಮ ಕೌಶಲಗಳು ಕೂಡ ಪರಿಪಾಕಗೊಳ್ಳುತ್ತ ಬರುತ್ತಿವೆ. ಸಂಸ್ಥಾನಕ್ಕೆ ಧನದ ಕೊರತೆಯು ಹೆಚ್ಚಾಗಿದ್ದರೂ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವುದೇ ಮೊದಲಾದ ಮುಖ್ಯ ಕಾರ್ಯಗಳಿಗೆ ಮಾಡಿಸಬೇಕಾದ ವೆಚ್ಚಕ್ಕೇನೂ ಕೊರತೆಮಾಡಿಲ್ಲ. ಈ ಮುಂದಣವರ್ಷದಲ್ಲಿ ವಿದ್ಯಾಶಾಖೆಗಾಗಿಯೇ ೬೮|| ಲಕ್ಷ ರೂ.ಗಳನ್ನು ವ್ಯಯಮಾಡಿಸುವವರಾಗಿದ್ದಾರೆ. ಸರ್ವಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣುವ ವಿಷಯದಲ್ಲೂ ಪತಿತಜನೋದ್ಧರಣೆಯ ವಿಷಯದಲ್ಲಿಯೂ ಅವರು ಈ ಕಳೆದವರ್ಷ ಮಾಡಿದ ಅಪ್ಪಣೆಗಳು ಸರ್ವಜನ ಸಮಾದರಣೀಯಗಳಾಗಿರುತ್ತವೆ. ಇದುವರೆಗೆ ಉಂಟಾದ ಅನುಭವದಿಂದ ರಾಜಕಾರ್ಯನಿರ್ವಾಹಕ್ರಮದಲ್ಲಿ ತೋರಿಬಂದ ನ್ಯೂನಾತಿರೇಕಗಳನ್ನೆಲ್ಲಾ ನಿವೃತ್ತಿಗೊಳಿಸಲಿಕ್ಕೆ ಸರಿಯಾದ ಏರ್ಪಾಟುಗಳು ಜರುಗುತ್ತಿವೆ. ಆಂಗ್ಲ ಪರಿಪಾಲನೆಯ ದೇಶದಲ್ಲಿ ಇನ್ನೂ ರೂಢಿಸಲ್ಪಡದಿರುವ ಪರಿಪಾಲನ ಸಂಸ್ಕಾರಗಳೆಲ್ಲಾ ನಮ್ಮ ಸಂಸ್ಥಾನದಲ್ಲಿ ಒಂದೊಂದಾಗಿ ವ್ಯವಹಾರಕ್ಕೆ ಬರುತ್ತಿವೆ. ಮಾದರಿ ಸಂಸ್ಥಾನವೆಂದು ತಾನು ಪಡೆದುಕೊಂಡಿರುವ ಪ್ರತಿಷ್ಠೆಯನ್ನು ಈಗಲೂ ಅಭಿವೃದ್ಧಿಗೊಳಿಸಿಕೊಳ್ಳುತ್ತ ಇತರ ದೇಶೀಯ ಪ್ರಭುತ್ವದವರಿಗೆಲ್ಲಾ ನಮ್ಮ ದೇಶವು ಮೇಲುಪಂತಿಯಾಗಿದೆ. ಕಾಲಧರ್ಮವು ಕೂಡ ಶ್ರೀಮಹಾಪ್ರಭುಗಳ ಸದ್ಧರ್ಮಪ್ರಭಾವವೋ ಎಂಬಂತೆ ಕೂಡಿದ ಮಟ್ಟಿಗೂ ಮಳೆಬೆಳೆಗಳ ಅನುಕೂಲ್ಯವುಳ್ಳದಾಗಿ ಪ್ರಜೆಗಳಿಗೆ ಹಾಹಾಕಾರವಿಲ್ಲದಂತೆ ಮಾಡಿದೆ. ಈ ವರ್ಷ ಮುಂಗಾರು ಪೈರು ನಳನಳಿಸಿ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿರುವುದರ ಮಧ್ಯದಲ್ಲಿ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವು ನಡೆದುದರಿಂದ ಅದನ್ನಾಚರಿಸುವಲ್ಲಿ ರಾಜಧಾನಿಯ ಸುತ್ತುಮುತ್ತಣ ತಾಲ್ಲೂಕಿನ ಪ್ರಜೆಗಳೆಲ್ಲಾ ಅತ್ಯಾನಂದವನ್ನು ವ್ಯಕ್ತಪಡಿಸಿರುವರು. ಇದೇ ರೀತಿಯಲ್ಲಿ ಶ್ರೀಮನ್ಮಹಾರಾಜ ಸಹೋದರರ ವರ್ಧಂತ್ಯುತ್ಸವಗಳು ಚಿರಕಾಲ ನಡೆದು ಅವುಗಳನ್ನವಲೋಕಿಸುವ ಪುಣ್ಯವೂ ಅವರುಗಳ ಪರಿಪಾಲನ ಪ್ರಭಾವದಿಂದ ಇನ್ನೂ ವಿಶೇಷವಾದ ಸುಖಶಾಂತಿಗಳನ್ನು ಪಡೆಯುವ ಭಾಗ್ಯವೂ ಮೈಸೂರು ಪ್ರಜೆಗಳ ಭಾಗಕ್ಕೆ ಉಂಟಾಗಲೆಂದು ಸಕಲ ಪ್ರಜೆಗಳೊಡನೆ ನಾವು ಕೋರುತ್ತಿರುವೆವು.

ಪೌರಸಾಮಾಜಿಕ ಸಭೆ.

ಈ ಸಂಘದ ವಾರ್ಷಿಕಾಧಿವೇಶನವು ರಾಜಧಾನಿಯ ರಂಗಾಚಾರ್ಲು ಸ್ಮಾರಕಭವನದಲ್ಲಿ ಕಳೆದ ತಾ|| ೧೫ ನೆ ಪ್ರಾತಃಕಾಲ ೮ ಗಂಟೆಗೆ ನೆರವೇರಿತು. ಶ್ರೀಮದ್ಯುವರಾಜರವರು ದಿವಾನರು ಕೌನ್ಸಿಲರು ಶಾಖಾಮುಖ್ಯಾಧಿಕಾರಿಗಳೂ ಡಿ|| ಕಮಿಷನರೇ ಮೊದಲಾದ ಅನೇಕ ಸ್ಥಲ ಪರಸ್ಥಲಗಳ ಅಧಿಕಾರಿಗಳೂ ಪುರಪ್ರಮುಖರೂ ಕೆಲ ನಾರೀಮಣಿಗಳೂ ವಿದ್ಯಾರ್ಥಿಗಳು ಸಹ ಸಭೆಯನ್ನಲಂಕರಿಸಿದ್ದರು. ಮೊಟ್ಟಮೊದಲು ಶ್ರೀಮದ್ಯುವರಾಜರವರು ಪೌರಸಾಮಾಜಿಕ ಕಾರ್ಯಗಳ ಅಭ್ಯುದಯದಿಂದ ದೇಶೀಯರಿಗೆ ಆಗತಕ್ಕ ಪ್ರಯೋಜನಗಳನ್ನೂ ಅವುಗಳನ್ನು ಉಪೇಕ್ಷಿಸುವುದರಿಂದ ಉಂಟಾಗತಕ್ಕ ಅನರ್ಥವನ್ನೂ ತಿಳಿಯಿಸಿದುದಲ್ಲದೆ, ಆ ದಿನದ ಸಭೆಯಲ್ಲಿ ಉಪನ್ಯಾಸಮಾಡಲು ಅಂಗೀಕರಿಸಿರುವ ದೊಡ್ಡಮನುಷ್ಯರುಗಳ ಬೋಧೆಯು ವಿಶೇಷ ಫಲದಾಯಕವಾಗತಕ್ಕುದೆಂಬುದನ್ನು ಕುರಿತು ಶ್ರಾವ್ಯವಾದ ಭಾಷಣವನ್ನು ಮಾಡಿದರು. ಬಳಿಕ ಸಭಾಧ್ಯಕ್ಷತೆಗೆ ಇಂಡಿಯನ್ ಸೋಷಲ್ ರಿಫಾರಂಪತ್ರಿಕೆಯ ಸಂಪಾದಕರಾದ ಮ|| ಕೆ. ನಟರಾಜನ್‌ರವರು ಪ್ರಾರ್ಥಿಸಲ್ಪಟ್ಟು ಅಧ್ಯಕ್ಷಪೀಠವನ್ನಲಂಕರಿಸಿದರು. ಈ ಸಂಘದ ಸಂಮಾನ್ಯಕಾರ್ಯದರ್ಶಿಗಳಾದ ಮ|| ಬಿ. ಪುಟ್ಟಯ್ಯ ಬಿ. ಎ. ಯವರು ಸಂಘದ ಮೂಲಕ ಕಳೆದ ವರ್ಷ ನಡೆದ ಕಾರ್ಯಗಳ ವರದಿಯನ್ನೋದಿದರು. ಬಳಿಕ ಸಭಾಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದರು. ಅದರಲ್ಲಿ ಕಾಲೋಚಿತವಾಗಿ ಸಾಮಾಜಿಕದ ತಿದ್ದುಪಾಟುಗಳು ಅವಶ್ಯಕವಾಗಿ ಆಗಬೇಕಾಗಿರುವುದನ್ನೂ ಅದರ ಪ್ರಯೋಜನವನ್ನೂ ಸರ್ವಾಭಿವೃದ್ಧಿಗೂ ಪೌರಸಾಮಾಜಿಕ ಪ್ರಯತ್ನಗಳೇ ವಿಕಾಸವೇ ಅತಿ ಮುಖ್ಯವೆಂಬುದನ್ನೂ, ಅದಕ್ಕಾಗಿ ಉಂಟಾಗುವ ಅಡಚಣೆಗಳನ್ನು ನಿವೃತ್ತಿಮಾಡಿಕೊಳ್ಳಬೇಕಾದ ಉಪಾಯಗಳನ್ನೂ ನಿರೂಪಿಸಿದರು. ಅನಂತರ ಮ|| ಜಿನರಾಜದಾಸ್ ಎಂ. ಎ. ಯವರ ಮತ್ತು ಅವರ ಪತ್ನಿಯವರ ಡಾಕ್ಟರ್ ಕ್ಲಾರ್ಕ್ ದಂಪತಿಗಳ ಮಿಸಸ್ [illegible]ರಾವ್‌ರವರ ಉಪನ್ಯಾಸಗಳು ನಡೆದುವು. ಇವುಗಳಲ್ಲೆಲ್ಲಾ ಸ್ತ್ರೀ ಪುರುಷರು ನಡೆಯಿಸಬೇಕಾದ ಉತ್ತಮಧರ್ಮಗಳೂ ಶೀಲಗಳೂ ಶಿಶುಪರಿಪಾಲನೆಯ ಕ್ರಮಗಳೂ, ಪರಸ್ಪರ ಪ್ರೀತಿಫಲಗಳೂ ಅವುಗಳ ಲಾಭಗಳೂ ಅತ್ಯಂತ ಹೃದಯಂಗಮವಾಗಿ ವರ್ಣಿತವಾಗಿದ್ದುವು. ಕಡೆಯಲ್ಲಿ ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರು ಶ್ರೀಮನ್ಮಹಾರಾಜರಿಗೂ ಶ್ರೀಮದ್ಯುವರಾಜರಿಗೂ ಸಭಾಧ್ಯಕ್ಷರಿಗೂ ಮಂಗಳವನ್ನು ಕೋರಿ ಭಾಷಣಮಾಡಿ ವಂದಿಸಿದರು. ಸರ್ವರಿಗೂ ಪುಷ್ಪ ಹಾರಗುಚ್ಛಗಳು ಅರ್ಪಿಸಲ್ಪಟ್ಟನಂತರ ಪರಿಸಮಾಪ್ತವಾಯಿತು.

ಸಂಪದಭ್ಯುದಯ ಸಮಾಜ.

ಇದರ ೧೨ನೆ ಅಧಿವೇಶನವು ಕಳೆದ ತಾ|| ೧೩ರಿಂದ ಆರಂಭವಾಗಿ ೩ ದಿನಗಳವರೆಗೆ ನಡೆದಿತು. ದಿವಾನರವರು ಅಧ್ಯಕ್ಷರಾಗಿದ್ದರು. ಈ ಸಮಾಜಕ್ಕೆ ಅಂಗಗಳಾದ ವಿದ್ಯಾಭ್ಯಾಸ ಕೈಗಾರಿಕೆ ವಾಣಿಜ್ಯ ವ್ಯವಸಾಯ ಶಾಖೆಗಳಿಗೆ ಸಂಬಂಧಪಟ್ಟ ಬೋರ್ಡುಗಳ ಸಭಿಕರೂ ಇತರ ಸರ್ಕಾರದ ಅಧಿಕಾರಿಗಳೂ ನೆರೆದಿದ್ದರು. ಸಭಾಧ್ಯಕ್ಷರು ತಮ್ಮ ಆರಂಭಭಾಷಣದಲ್ಲಿ ಸಭಿಕರನ್ನೆಲ್ಲಾ ಸ್ವಾಗತಿಸಿ ಕಳೆದ ವರ್ಷ ಈ ಸಮಾಜದ ಕಾರ್ಯನಿರ್ವಾಹಕ್ರಮದಲ್ಲಿ ಮಾಡಲ್ಪಟ್ಟಿರುವ ಬದಲಾವಣೆಗಳನ್ನೆಲ್ಲಾ ವಿವರಿಸಿ ಆಯಾ ಶಾಖೆಗಳವರು ನಡೆಯಿಸಿರುವ ಪರಿಶೋಧನೆ ಪುರೋಭಿವೃದ್ಧಿ ಕಾರ್ಯಗಳು ಮುಂದೆ ಇದರಿಂದಾಗಬಹುದಾದ ಫಲೋದಯಗಳು ಇವನ್ನೆಲ್ಲಾ ಕುರಿತು ನಿರೂಪಿಸಿದರು. ಆಯಾ ಶಾಖೆಗಳಿಗೆ ಸಂಬಂಧಪಟ್ಟು ಕಳೆದ ವರ್ಷದಲ್ಲಿ ನಡೆದಿರುವ ಕಾರ್ಯಗಳ ವರದಿಯು ಇದಕ್ಕೆ ಮುಂಚೆಯೇ ಸರ್ಕಾರದವರಿಂದ ಸಭಿಕರಿಗೆಲ್ಲಾ ಕಳುಹಿಸಲ್ಪಟ್ಟಿದ್ದಿತು. ಅದುಕಾರಣ ಅವುಗಳು ಓದಲ್ಪಡಲಿಲ್ಲ.

ಆ ವರದಿಗಳನ್ನು ಸಭಾಧ್ಯಕ್ಷರ ಭಾಷಣವನ್ನೂ ಓದಿ ನೋಡುವಲ್ಲಿ ಅಷ್ಟೇನೂ ಉತ್ಸಾಹಕರವಾಗಿ ತೋರಲಿಲ್ಲ. ಸರ್ ವಿಶ್ವೇಶ್ವರಯ್ಯನವರ ಕಾಲದಲ್ಲಿ “ಈಗ ಯುದ್ಧ ಸಮಯವಾಗಿರುವುದರಿಂದ ಯಂತ್ರೋಪಕರಣಗಳು ದೊರೆಯುವುದು ಕಷ್ಟವಾಗಿರುವ ಕಾರಣ ಕೈಗಾರಿಕೆ ಮತ್ತು ಕಸಬುಗಳ ಅಭಿವೃದ್ಧಿಗೆ ಅಡ್ಡಿಯಾಗಿದೆ. ಮುಂದೆ ಅವೆಲ್ಲಾ ಅನುಕೂಲವಾಗುತ್ತವೆ” ಎಂದು ಸಭೆಯಲ್ಲಿ ಹೇಳುತ್ತಬಂದರು. ಈಗ ಯುದ್ಧವು ನಿಂತಿತು. ಯಂತ್ರೋಪಕರಣಗಳ ಬೆಲೆಯೇನೂ ಇಳಿಯಲಿಲ್ಲ. ಹೆಚ್ಚು ದುಡ್ಡು ಹಾಕಿ ತರಿಸಿದ ಅನೇಕ ಯಂತ್ರಗಳ ಮೂಲಕ ನಡೆದಿರುವ ಕಾರ್ಯಗಳು ಲಾಭಕ್ಕೆ ಪ್ರತಿಯಾಗಿ ನಷ್ಟವನ್ನೀಯುತ್ತಿವೆ. ಈ ಸಮಾಜದ ಮೂಲಕ ದೇಶದ ಸಂಪದಭ್ಯುದಯವನ್ನು ಪ್ರಭುತ್ವದವರು ಮಾಡಬೇಕಾಗಿದ್ದರೆ ಪ್ರಜಾಜನಸಮುದಾಯದಲ್ಲೆಲ್ಲಾ ಅದಕ್ಕೆ ಅವಶ್ಯಕವಾದ ಕರ್ತವ್ಯಗಳಲ್ಲಿ ಅಭಿರುಚಿ ಹೆಚ್ಚಬೇಕು. ಈಗ ವರ್ಷ ಒಂದಕ್ಕೆ ||| ಲಕ್ಷ ರೂ.ಗಳನ್ನು ಮಾತ್ರ ಈ ಶಾಖೆಗೆ ವೆಚ್ಚಮಾಡಲು ಏರ್ಪಡಿಸಿರುತ್ತಾರೆ. ಹೆಸರಿಗೆ ಇದರ ಸಮಾಜವು ಬೋರ್ಡುಗಳೂ ಸಭಿಕರೂ ಇದ್ದಾರೆ. ಡಿಸ್ಟ್ರಿಕ್ಟ್ ತಾಲ್ಲೂಕುಗಳಲ್ಲೆಲ್ಲಾ ಇದರ ಕಾರ್ಯಭಾರವು ಅಲ್ಲಲ್ಲಿಯ ಬೋರ್ಡುಗಳಿಗೇ ವಹಿಸಲ್ಪಟ್ಟಿದೆ. ಡಿಸ್ಟ್ರಿಕ್ಟುಗಳಲ್ಲಿದ್ದ ಸಂಪದಭ್ಯುದಯ ಸಮಾಜದ ಸೂಪರಿಂಟೆಂಡೆಂಟರು ತೆಗೆದುಹಾಕಲ್ಪಟ್ಟರು. ಡಿಸ್ಟ್ರಿಕ್ಟು ಬೋರ್ಡುಗಳಿಗೆ ಹಣವನ್ನು ಕೊಟ್ಟು ಅಂಥ ಸೆಕ್ರಟರಿಗಳನ್ನು ಶಾಶ್ವತವಾಗಿ ಸಹಾಯಕ್ಕೆ ಇರಿಸಿಕೊಳ್ಳಲೂ ಈ ಭಾಗದ ವ್ಯಯಕ್ಕೆ ದುಡ್ಡನ್ನು ಒದಗಿಸಲೂ ಸಾಮರ್ಥ್ಯವಿಲ್ಲ. ಹೀಗಾಗಿ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಈ ಸೂಪರಿಂಟೆಂಡೆಂಟರುಗಳ ಮುಖೇನ ಅಷ್ಟೂ ಇಷ್ಟು ನಡೆಯುತ್ತಿದ್ದ ಕೆಲಸವೆಲ್ಲಾ ನಿಂತೇಹೋಯಿತೆಂದು ಹೇಳಬಹುದಾಗಿದೆ. ಡಿಸ್ಟ್ರಿಕ್ಟುಗಳಲ್ಲೆಲ್ಲಾ ಚಳವಳನಡೆಯಿಸಿ ವಿದ್ಯಾ ವ್ಯವಸಾಯ ಕರಕೌಶಲಾದಿ ಕಲೆಗಳಿಗೆ ಜನಮನಃಪ್ರವೃತ್ತಿಯು ಹೆಚ್ಚಾಗಿ ಹರಿಯುವಂತೆ ಮಾಡುವ ಉದ್ಯೋಗಿಗಳಿಲ್ಲದ ಬಳಿಕ ದೇಶಸಾಮಾನ್ಯದಲ್ಲೂ ಈ ಸಮಾಜದ ಉದ್ದೇಶವು ಸಾರ್ಥಕವಾಗುವುದು ದುರ್ಲಭ. ಬರಿಯ ವರದಿಗಳನ್ನು ಅಂದವಾಗಿ ಆಂಗ್ಲ ಭಾಷೆಯಲ್ಲಿ ಮುದ್ರಿಸುವುದಕ್ಕೂ ವರ್ಷಕ್ಕೊಂದುಸಲ ಸಭೆಮಾಡುವುದಕ್ಕೂ ಒಂದಿಷ್ಟು ಧನವ್ಯಯವನ್ನು ಮಾಡಿಬಿಟ್ಟರೆ ಚರಿತಾರ್ಥವಾಗುವಂತಿರುವುದಿಲ್ಲ. ಈಗ ಸಮಾಜದ ಹೆಸರಿನಿಂದ ನಡೆಯುತ್ತಿರುವಷ್ಟು ಕಾರ್ಯಗಳನ್ನು ಸರ್ಕಾರದ ವಿದ್ಯಾಭ್ಯಾಸಾದಿ ಸ್ವತಂತ್ರ ಶಾಖೆಗಳೇ ನಡಯಿಸಬಹುದಾಗಿರುವುದು.

ಈಗ ಕೂಡಿದ್ದ ಸಭೆಯಲ್ಲಿ ಮೆಂಬರುಗಳು ಆಯಾ ಶಾಖೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಅನೇಕ ಸೂಚನೆಗಳನ್ನು ಮಾಡಿದರು. ಇವುಗಳಲ್ಲಿ ಬಹು ಭಾಗವು ಪ್ರಜಾಪ್ರತಿನಿಧಿಸಭೆಯಲ್ಲೇ ಚರ್ಚಿತವಾಗಬಹುದಾಗಿದ್ದುವು. ರಾ|| ಬ|| ಮ|| ಎಂ. ಶ್ಯಾಮರಾಯರು ಮೊಟ್ಟಮೊದಲು ಭಾಷಣಮಾಡಿ ದಿವಾನರಿಗೆ ಸರ್ ಬಿರುದು ಪ್ರಾಪ್ತವಾದುದಕ್ಕಾಗಿ ಸಭಿಕರ ಸಂತೋಷವನ್ನು ನಿವೇದಿಸಿದರು. ಸಂಪದಭ್ಯುದಯ ಸಮಾಜವನ್ನು ಸ್ಥಿರಪಡಿಸಿದುದೂ ವಿದ್ಯಾಭ್ಯಾಸದ ಮೆಮೋರಾಂಡಮ್ಮನ್ನು ವ್ಯವಹರಣೆಗೆ ತರಲು ಸರ್ಕಾರದವರು ಮಾಡಿದ ಅಪ್ಪಣೆಯೂ ಸರ್ವಜನಾಮೋದಕವಾಗಿದೆಯೆಂಬುದನ್ನೂ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಉದಾರವಾಗಿ ಧನವ್ಯಯಮಾಡುತ್ತಿರುವುದನ್ನೂ ಕುರಿತು ಪ್ರಸಂಗಿಸಿದರು.

ಪ್ರಜಾಪ್ರತಿನಿಧಿ ಮಹಾಸಭೆ.

ಈ ಸಭೆಯ ಅಧಿವೇಶನವು ಕಳೆದ ತಾ|| ೧೭ನೆ ಶುಕ್ರವಾರ ಮಧ್ಯಾಹ್ನ ೧೨ ಗಂಟೆಗೆ ಮಂತ್ರಿವರ್ಯರಾದ ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್ ಬಿ.ಎ., ಕೆ.ಸಿ.ಐ.ಇ., ಸಿ.ಎಸ್.ಐ., ಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡಿತು. ಪದ್ಧತಿಯಂತೆ ಕೌನ್ಸಿಲರು, ಶಾಖಾಮುಖ್ಯಾಧಿಕಾರಿಗಳು, ಚೀಫ್‌ಕೋರ್ಟ್ ನ್ಯಾಯಮೂರ್ತಿಗಳು, ಶ್ರೀಮನ್ಮಹಾರಾಜರ ಪ್ರೈವೆಟ್ ಸೆಕ್ರೆಟರಿಯವರು, ಡಿಸ್ಟ್ರಿಕ್ಟು ಡಿ|| ಕಮಿಷನರುಗಳೇ ಮೊದಲಾದ ದೊಡ್ಡಮನುಷ್ಯರುಗಳು ದಿವಾನರ ಪಕ್ಕಗಳಲ್ಲೂ ಹಿಂಗಡೆಯೂ ಉಚ್ಚಾಸನಗಳನ್ನಲಂಕರಿಸಿದ್ದರು. ಸೆಕ್ರೆಟೆರಿಯಟ್ಟಿನ ಉದ್ಯೋಗಿಗಳು ಮುಂಗಡೆ ಬಲಪಕ್ಕದಲ್ಲೂ ಪತ್ರಿಕಾಪ್ರತಿನಿಧಿಗಳು ಎಡಪಕ್ಕದಲ್ಲೂ, ಮುಂಗಡೆ ಪ್ರತಿನಿಧಿಪೀಠಗಳ ಮೇಲೆ ಬಹುಶಃ ೨೦೦ ಮಂದಿಗೆ ಮೇಲ್ಪಟ್ಟು ಪ್ರತಿನಿಧಿಗಳೂ ನೆರೆದಿದ್ದರು. ಸಭಾಧ್ಯಕ್ಷರು ತಮ್ಮ ಭಾಷಣವನ್ನು ಓದಿ ಮುಗಿಸಿದರು. ಬಳಿಕ ಪ್ರತಿನಿಧಿಗಳಲ್ಲೊಬ್ಬರಾದ ಮಿ|| ಅಬ್ಬಾಸ್‌ಖಾನರು ದಿವಾನರಿಗೆ ಸಾರ್ವಭೌಮರಿಂದ ಕೆ.ಸಿ.ಐ.ಇ. ಎಂಬ ಬಿರುದು ಪ್ರಾಪ್ತವಾದುದಕ್ಕಾಗಿಯೂ, ತತ್ರಾಪಿ ಅದು ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವದ ವಿಶೇಷ ಸಂತೋಷ ಸಮಯದಲ್ಲೇ ಪ್ರಾಪ್ತವಾದುದಕ್ಕಾಗಿಯೂ ತಮಗೆ ಇಮ್ಮಡಿಯಾಗಿ ಉಂಟಾಗಿರುವ ಸಂತೋಷವನ್ನು ಪ್ರಜಾಪಕ್ಷದಿಂದ ತಿಳಿಯಿಸುವ ಭಾಷಣವನ್ನು ಮಾಡಿದುದರಲ್ಲಿ— ಸಂಸ್ಥಾನದ ಬೊಕ್ಕಸದೊಳಗೆ ಹಣವಿಲ್ಲದ ಸಮಯದಲ್ಲಿ ಸರ್ದಾರರು ಮಂತ್ರಿಪದವಿಗೆ ಬಂದರೂ ತಮ್ಮ ವಿವೇಕಸಾಮರ್ಥ್ಯಾದಿವಿಶೇಷದಿಂದ ರಾಜ್ಯದ ಆಡಳತದಲ್ಲಿ ಯಾವ ಕೊರತೆಗೂ ಅವಕಾಶವಿಲ್ಲದಂತೆ ಸಾಗಿಸಿಕೊಂಡು ಹೋಗಲು ತೋರಿಸಿದ ಕೌಶಲವನ್ನೂ, ಸಂಸ್ಥಾನದ ಪ್ರಜೆಗಳಲ್ಲಿ ಪರಸ್ಪರ ವೈಷಮ್ಯವಿದ್ದುದನ್ನು ತೊಲಗಿಸಲಿಕ್ಕಾಗಿ ಮಿಲ್ಲರ್ ಸಂಘದವರದಿಯಮೇಲೆ ಸೂಕ್ತವಾದ ಅಪ್ಪಣೆಮಾಡಿ ಎಲ್ಲಪ್ರಜೆಗಳ ಮನಸ್ತೃಪ್ತಿಪಡಿಸಿದುದನ್ನೂ, ಸಕಲಪ್ರಜೆಗಳ ವಿದ್ಯಾಭ್ಯಾಸಕ್ಕೂ ಪ್ರೋತ್ಸಾಹಕವಾಗಿರುವ ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನು ವ್ಯವಹಾರಕ್ಕೆ ತರಲು ಅಪ್ಪಣೆಮಾಡಿದುದನ್ನೂ ಕುರಿತು ವರ್ಣಿಸಿ, ಇವೆಲ್ಲ ರೂಪಗಳಿಂದ ದೇಶಸೇವೆ ಮಾಡುವಲ್ಲಿ ಅವರು ತೋರಿಸುತ್ತಿರುವ ಶ್ರದ್ಧಾಸಾಮರ್ಥ್ಯಗಳಿಗೆ ಮೆಚ್ಚಿ ಸಾರ್ವಭೌಮ ಪ್ರಭುತ್ವದವರು ಸರ್ ಪ್ರಶಸ್ತಿಯನ್ನು ದಯಪಾಲಿಸಿದುದಕ್ಕಾಗಿ ತಮ್ಮೆಲ್ಲರಿಗೂ ಉಂಟಾಗಿರುವ ಸಂತೋಷವನ್ನು ನಿವೇದಿಸಿದರು. ಬಳಿಕ ಎಂ. ಸುಬ್ಬಯ್ಯನವರು ಅದೇ ಅಭಿನಂದನವನ್ನು ಮಾಡುವಲ್ಲಿ, ಹಿಂದಣ ಮಂತ್ರೀಶ್ವರರುಗಳ ಪ್ರಭುತ್ವದಲ್ಲಿ ಒಂದೊಂದು ಅಭ್ಯುದಯ ಕಾರ್ಯಗಳು ನಡೆದಿದ್ದರೂ ಅದೇ ಎಷ್ಟೋ ದೊಡ್ಡದಾಗಿ ಭಾವಿಸಲ್ಪಡುತ್ತಿದ್ದಿತು. ನಿಮ್ಮ ಕಾಲದಲ್ಲಿ ಅಭ್ಯುದಯಸಾಧಕವಾಗಿ ನಡೆದಿರುವ ಏರ್ಪಾಟು ಅವೆಲ್ಲಕ್ಕಿಂತಲೂ ಹೆಚ್ಚಾದುದು. ವಿದ್ಯಾಪ್ರಸಾರದ ವಿಷಯದಲ್ಲೂ ಅಂತ್ಯಜೋದ್ಧಾರ ವಿಷಯದಲ್ಲೂ ಪ್ರಭುತ್ವೋದ್ಯೋಗಗಳನ್ನು ಸರ್ವಜನವರ್ಗದವರಿಗೂ ವಿನಿಯೋಗಿಸುವ ವಿಷಯದಲ್ಲೂ ಮಾಡಿರುವ ಏರ್ಪಾಡುಗಳೆಲ್ಲಾ ಬಹುಕಾಲದಿಂದ ಅನುಸರಿಸಿ ಬಂದಿದ್ದ ನ್ಯೂನತೆಗಳನ್ನೆಲ್ಲಾ ಪರಿಹರಿಸುವ ಶಾಶ್ವತವಾದ ಶಾಸನಗಳಾಗಿರುತ್ತವೆ ಎಂದು ಮೊದಲಾಗಿ ಭಾಷಣ ಮಾಡಿದರು. ಬಳಿಕ ಇದೇ ತೆರದ ಅಭಿನಂದನಗಳನ್ನು ಒಕ್ಕಲಿಗರ ಸಂಘದ ಪರವಾಗಿ ಬ್ಯಾರಿಸ್ಟರ್ ವಿಜಯದೇವರವರೂ, ವೀರಶೈವ ಸಮಾಜದ ಪಕ್ಷದಿಂದ ಮ|| ಜಿ. ಪರಮಶಿವಯ್ಯ, ಬಿ.ಎ. ಎಲ್‌ಎಲ್. ಬಿ. ಯವರೂ, ಇಂಡಿಯನ್ ಕ್ರೈಸ್ತಸಂಘದ ಪರವಾಗಿ ಮಿ|| ಇಸಾಕ್‌ರವರೂ ಭಾಷಣಗಳನ್ನು ಮಾಡಿ ವಂದಿಸಿದರು. ಪ್ರಜಾಪ್ರತಿನಿಧಿಸಭಾ ಸಭಿಕರ ಪರವಾಗಿ ಮ|| ವಾಸುದೇವರಾಯರೂ, ಮೈಸೂರು ಪುರಜನರ ಮತ್ತು ಮೈಸೂರು ಡಿಸ್ಟ್ರಿಕ್ಟಿನ ಪ್ರಜೆಗಳ ಪರವಾಗಿ ಅಭಿನಂದನವಂದನೆಗಳನ್ನು ಮ|| ಪುರುಷೋತ್ತಮಾನಂದಗಿರಿ ಬಾವಾಜಿಯವರೂ ವ್ಯಕ್ತಪಡಿಸಿದರು. ಇವೆಲ್ಲಕ್ಕೂ ದಿವಾನರು ಪ್ರತ್ಯುತ್ತರವನ್ನು ಕೊಟ್ಟುದರಲ್ಲಿ ಅವರ ಸಹಜ ಸೌಜನ್ಯ ಸೌಶೀಲ್ಯ ವಿನಯಗಳು ಮೂರ್ತಿಭವಿಸಿದ್ದುವು. ಹೇಗೆಂದರೆ— “ನನಗೆ ಶ್ರೀಮಜ್ಜಾರ್ಜ್ ಸಾರ್ವಭೌಮರವರು ಬಿರುದನ್ನು ದಯಪಾಲಿಸಿದುದಕ್ಕಾಗಿ ತಾವೆಲ್ಲರೂ ಸಂತೋಷವನ್ನು ವ್ಯಕ್ತಪಡಿಸಿದುದಕ್ಕಾಗಿ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇದು ನನಗೆಮಾತ್ರ ಬಂದ ಗೌರವವೆಂದು ನಾನು ತಿಳಿಯುವುದಿಲ್ಲ. ಈ ಸಭೆಯ ಅಧ್ಯಕ್ಷನಾದುದರಿಂದ ತನ್ಮೂಲಕ ನನಗೆ ಉಂಟಾದ ಮರ್ಯಾದೆಯು ತಮಗೆಲ್ಲರಿಗೂ ಸಂಬಂಧಪಟ್ಟುದೆಂದು ಭಾವಿಸಿರುತ್ತೇನೆ. ಈಚೆಗೆ ಗೌರ್ನಮೆಂಟಿನಿಂದ ಕೊಡೋಣಾದ ಕೆಲ ಅಪ್ಪಣೆಗಳನ್ನು ಕುರಿತು ನನ್ನನ್ನು ನೀವುಗಳು ಅಭಿನಂದಿಸಿರುತ್ತೀರಿ. ಈ ಅಪ್ಪಣೆಗಳಿಗೆ ನಾನೇ ಕಾರಣನಲ್ಲ. ತತ್ಸಂಬಂಧವಾಗಿ ಹಿಂದಣಿಂದ ವ್ಯವಸಾಯ ನಡೆದು ಅವುಗಳ ಮೊಳಕೆಯಾಗಿದ್ದಿತು. ನನ್ನ ಕಾಲಕ್ಕೆ ಅವುಗಳಿಗೆ ಸ್ವಲ್ಪ ಜಲಸೇಚನೆ ಮೊದಲಾದ ಕಾರ್ಯಗಳು ನಡೆದುದರಿಂದ ಅವು ಕಾರ್ಯರೂಪಕ್ಕೆ ಬಂದುವು. ಅದುಕಾರಣ ಅವುಗಳ ಶ್ರೇಯಸ್ಸಿಗೆ ಅಲ್ಪನಾದ ನಾನೇ ಕಾರಣನಲ್ಲ. ನೀವೆಲ್ಲರೂ ನನ್ನ ವಿಷಯದಲ್ಲಿ ತೋರಿಸಿದ ಪ್ರೀತಿಗಾಗಿ ವಂದನೆಯನ್ನರ್ಪಿಸುತ್ತೇನೆ” ಎಂದು ಅಪ್ಪಣೆ ಕೊಡಿಸಿದರು. ಈ ವಿಶೇಷ ವಚನಗಳನ್ನು ಕೇಳಿ ಸಭಿಕರು ಆನಂದದಿಂದ ಕರತಾಡನವನ್ನು ವಿಶೇಷವಾಗಿ ಮಾಡಿದರು. ವಾಗ್ಮಿಗಳೆನಿಸಿಕೊಂಡು ಸಭೆಯಲ್ಲಿದ್ದ ಬ್ರಾಹ್ಮಣಪ್ರತಿನಿಧಿಗಳಲ್ಲಿ ಯಾರೊಬ್ಬರೂ ಈ ತೆರದ ಭಾಷಣವನ್ನು ಲೇಶಮಾತ್ರವಾದರೂ ಮಾಡಿ ಅಭಿನಂದಿಸದಿದ್ದುದು ಅವರುಗಳ ಹೃದಯಲಕ್ಷಣವನ್ನು ವ್ಯಕ್ತಪಡಿಸುವ ಕನ್ನಡಿಯಾಗಿದ್ದಿತು.

ಬಳಿಕ ಸಾಮಾನ್ಯ ವಿಷಯಗಳ ಚರ್ಚೆಗೆ ಆರಂಭವಾಗಿ ಎಲ್ಲವೂ ೫ ಗಂಟೆಯೊಳಗೆ ಮುಗಿದುವು. ಆ ವಿಷಯಗಳಲ್ಲಿ ಹಲವು ಸಂಪದಭ್ಯುದಯ ಸಮಾಜ ಮೊದಲಾದುವುಗಳಲ್ಲಿ ಹಿಂದೆಯೇ ಚರ್ಚಿತವಾಗಿರುವುದೆಂಬುದೇ ಮೊದಲಾದ ಕಾರಣಗಳಿಂದ ಪ್ರತಿಪಾದಿಸಲಿಕ್ಕಿಟ್ಟಿದ್ದವರಲ್ಲಿ ಹಲವರು ತಾವೇ ಅದನ್ನು ಹಿಂದಕ್ಕೆ ತೆಗೆದುಕೊಂಡರು.

ಮರುದಿನ ಬೆಳಗ್ಗೆ ಪ್ರತಿನಿಧಿಗಳು ಫೈನಾನ್ಷಿಯಲ್ ಸೆಕ್ರೆಟರಿಯವರ ಇದಿರಿನಲ್ಲಿ ಬಡ್ಜೆಟ್ಟಿನ ವಿಷಯಕವಾಗಿ ಚರ್ಚಿಸಿ ತಿಳಿದುಕೊಳ್ಳಬೇಕಾದುದನ್ನು ಅರಿತುಕೊಂಡರು. ಮಧ್ಯಾಹ್ನಾತ್ಪರ ೧೨ ಗಂಟೆಗೆ ಸಭೆಯು ಮತ್ತೆ ಸೇರಿತು. ಬಡ್ಜೆಟ್ಟಿನ ಮೇಲಣ ಚರ್ಚೆಯೆಲ್ಲಾ ನಿನ್ನೆಗೆ ಪೂರೈಸಿದ್ದರೆ ಸಭಾಕಾರ್ಯಗಳು ಸೋಮವಾರಕ್ಕೆ ಮುಗಿಯುವುವು.

ದಿವಾನರು ಈ ಸಭೆಯಲ್ಲಿ ಮಾಡಿದ ಭಾಷಣವು ಸಂಸ್ಥಾನದ ಈಗಣ ಆರ್ಥಿಕ ದುಸ್ಸ್ಥಿತಿಯ ಸುದ್ದಿಯನ್ನು ಕೇಳಿ ವಿಶೇಷವಾಗಿ ಕಳವಳಗೊಳ್ಳುತ್ತಿದ್ದ ಪ್ರಜೆಗಳಿಗೆಲ್ಲಾ ವಿಷಯಗಳನ್ನು ಕೂಲಂಕಷವಾಗಿ ಬಿಚ್ಚಿ ಹೇಳಿ ಧೈರ್ಯಪಡಿಸುವುದಕ್ಕೆ ಸಾಧಕವಾಗಿರುತ್ತದೆ. ಹಿಂದೆ ಸರ್ಕಾರದವರು ಮಾಡಿದ ಸಾಲವನ್ನು ಪ್ರಭುತ್ವದವರು ಯಾತಕ್ಕೆ ವಿನಿಯೋಗಿಸಿದರೆಂಬುದನ್ನೂ ಈಗ ಮತ್ತೆ ೧ ಕೋಟಿ ರೂ. ಗಳ ಸಾಲವನ್ನು ಅದೇ ತೆರದ ಅವಶ್ಯಕತೆಗಾಗಿ ಮಾಡಬೇಕಾಗಿರುವುದನ್ನೂ ಮುಂದೆ ಆಯಕ್ಕೆ ಮೀರದಂತೆ ವ್ಯಯದ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಮಾಡಿರುವ ನಿಶ್ಚಯವನ್ನೂ, ಅಧೈರ್ಯಪಡಬೇಕಾದ ಸ್ಥಿತಿಗಳುಂಟಾಗದಂತೆ ಮುಂದಾಗಿಯೇ ಎಚ್ಚರಿಕೆ ತೆಗೆದುಕೊಂಡು ಆಯವ್ಯಯಗಳನ್ನು ಸರಿಪಡಿಸಿಕೊಂಡುದನ್ನೂ, ಕೃಷ್ಣರಾಜಸಾಗರದ ಕಟ್ಟೆಯನ್ನು ೧೨೪ ಅಡಿಯೆತ್ತರಕ್ಕೆ ಮುಂದಣ ವರ್ಷದಲ್ಲೇ ಕಟ್ಟಿಸಿ ಮುಗಿಯಿಸಬೇಕಾಗಿರುವುದನ್ನೂ ಅದರ ನಾಲೆಗಳ ಕೆಲಸವನ್ನು ಮಾತ್ರ ಹಣವೊದಗಿದಂತೆ ಮಾಡಬೇಕಾಗಿರುವ ಸಂಗತಿಯನ್ನೂ ಭದ್ರಾವತಿಯ ಕಬ್ಬಿಣದ ಯಂತ್ರಾಲಯಪ್ರತಿಷ್ಠಾಪನೆಗೆ ೧೯೦ ಲಕ್ಷದವರೆಗೆ ವೆಚ್ಚವು ಹಿಡಿಯುವಂತಿರುವುದನ್ನೂ ಕೃಷ್ಣರಾಜಸಾಗರ, ವಿದ್ಯುಚ್ಛಕ್ತಿಯ ೬ ನೆ ನಿರ್ಮಾಣ, ಭದ್ರಾವತಿಯ ಲೋಹಯಂತ್ರಪ್ರತಿಷ್ಠಾಪನೆ ಈ ಮೂರು ಕಾರ್ಯಗಳಿಗೇ ಮುಂದಣ ವರ್ಷದಲ್ಲಿ ೧ ಕೋಟಿಯೂ ೧ ಲಕ್ಷ ರೂ. ಗಳನ್ನು ವ್ಯಯಮಾಡಬೇಕಾಗಿರುವುದನ್ನೂ ಸಾಲಮಾಡದೆ ಈಗಣ ಹುಟ್ಟುವಳಿಯಿಂದಲೇ ಇಷ್ಟು ದೊಡ್ಡ ಮೊತ್ತವನ್ನು ಒದಗಿಸುವುದು ಸಾಧ್ಯವಲ್ಲದಿರುವುದೇ ಮೊದಲಾದುವುಗಳ ವಿವರಣವನ್ನೂ ಮುಂದಣ ವರ್ಷದಲ್ಲಿ ಶಾಶ್ವತವ್ಯಯಗಳ ಜತೆಗೆ ಹಿಂದಣ ಸಾಲದ ಮುಂದಣ ಸಾಲದ ಬಡ್ಡಿಗಳನ್ನೆಲ್ಲಾ ಕಳೆದೂ || ಲಕ್ಷ ರೂ. ಗಳವರೆಗೆ ಮಿಗಿಸುವಂತೆ ಬಡ್ಜೆಟ್ ನಿರ್ಮಿತವಾಗಿರುವುದನ್ನೂ ವಿವರಿಸಿರುವರು. ಎಲ್ಲ ಪ್ರಜೆಗಳೂ ಕೂಲಂಕಷವಾಗಿ ಓದಿ ತಿಳಿಯಬೇಕಾದ ಸಂಗತಿಗಳು ಅದರಲ್ಲಿ ಪೂರ್ಣವಾಗಿರುವುದರಿಂದ ಅದರ ಭಾಗಗಳನ್ನು ಈ ಸಂಚಿಕೆಯಲ್ಲೂ ಮುಂದಣ ಸಂಚಿಕೆಯಲ್ಲೂ ಪ್ರಕಟಿಸುವವರಾಗಿದ್ದೇವೆ.

ಒಳದೇಶದ ವೃತ್ತಾಂತಗಳು.

ಕುದುರೆಯ ಜೂಜುಗಳು ನಿನ್ನೆಯದಿನ ಆರಂಭವಾದುವು. ತಾ|| ೨೧ ರಲ್ಲೂ ೨೩ ರಲ್ಲೂ ಸಹ ನಡೆಯುವುವು.

ಈ ಪತ್ರಿಕೆಯಲ್ಲಿ ಮದ್ರಾಸಿನ ಎಸ್. ಆರ್. ಕೃಷ್ಣ ಅಂಡ್ ಕೋ ಯವರ ಪ್ರಕಟನ ಪತ್ರಿಕೆಯನ್ನು ಗರ್ಭೀಕರಿಸಿದ್ದೇವೆ.

ವರ್ಧಂತ್ಯುತ್ಸವಕ್ಕಾಗಿ ರಾಜಧಾನಿಗೆ ಎಲ್ಲಾಕಡೆಯಿಂದಲೂ ಸ್ಪೆಷಲ್ ಟ್ರೇನುಗಳನ್ನು ಬಿಡುವುದಕ್ಕೆ ರೈಲ್ವೆ ಶಾಖೆಯವರು ಏರ್ಪಡಿಸಿಕೊಟ್ಟಿದ್ದರು.

ಬ್ರಿಟಿಷ್ ರೆಸಿಡೆಂಟರು ಕಳೆದ ತಾ|| ೧೫ ರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿದರು. ಮರ್ಯಾದಾರ್ಥವಾಗಿ ೧೩ ಗುಂಡುಗಳು ಹಾರಿಸಲ್ಪಟ್ಟುವು. ಈ ವಾರವೆಲ್ಲಾ ಇವರು ರಾಜಧಾನಿಯಲ್ಲೇ ಇರುವರು.

ಕಳೆದ ಶನಿವಾರ ಬೆಳಿಗ್ಗೆ ಧರ್ಮಪ್ರಕಾಶ ಡಿ. ಬನುಮಯ್ಯನವರ ಶಾಲಾಭವನದಲ್ಲಿ ಪ್ರಜಾಮಿತ್ರಮಂಡಲಿಯ ಸಮ್ಮೇಳನವು ರಾ|| ಸಾ|| ಎಚ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ್ದು ಕೆಲವು ವಿಶೇಷ ನಿರ್ಧಾರಗಳು ಮಾಡಲ್ಪಟ್ಟುವು.

ಮೈಸೂರು ಲಿಟರರಿ ಅಂಡ್ ಡ್ರಮಾಟಿಕ್ ಅಸೋಸಿಯೇಷನ್ನಿನವರು ರತ್ನಾವಳಿ ಥಿಯೇಟರಿನಲ್ಲಿ ಈದಿನ ಒಂದು ಪ್ರಯೋಗವನ್ನು ಮಾಡಿ ಅದರಿಂದ ಬಂದ ಉತ್ಪತ್ತಿಯನ್ನು ಮರಿಮಲ್ಲಪ್ಪನವರ ಹೈಸ್ಕೂಲಿಗೆ ಕೊಡುವವರಾಗಿದ್ದಾರೆ. ಶ್ರೀಮದ್ಯುವರಾಜರೂ, ದಿವಾನ್ ಸರ್ ಕಾಂತರಾಜ ಅರಸಿನವರೂ ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ವಿದ್ಯಾಭ್ಯಾಸ ಶಾಖೆಯ ಇನ್|| ಜನರಲ್‌ರವರಾಗಿದ್ದ ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟರೆಂದೂ ಅದನ್ನು ಶ್ರೀಮನ್ಮಹಾರಾಜರು ಕೂಡ ಯತ್ನವಿಲ್ಲದೆ ಅಂಗೀಕರಿಸಿದರೆಂದೂ ಕೇಳಿದೆವು. ಇವರ ಸರ್ವೀಸು ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಸ್ವಲ್ಪಕಾಲ ಲಭ್ಯವಾಗಿದ್ದರೂ ಅದರಿಂದುಂಟಾದ ಫಲವು ಎಂದೆಂದಿಗೂ ಮರೆಯದ ಶಾಶ್ವತ ಫಲಪ್ರದವಾಗಿರುವುದು. ದೊಡ್ಡ ಜಮೀನ್‌ದಾರರೂ ಲಕ್ಷಾಧಿಕಾರಿಗಳೂ ಪೂರ್ಣ ವಿದ್ಯಾವಂತರೂ ಲೋಕಾನುಭವಿಗಳೂ ಆದ ಇವರು ವಿಶೇಷಕಾರ್ಯಾಂತರದ ಅವಸರದಿಂದ ನಮ್ಮ ಸಂಸ್ಥಾನದ ಉದ್ಯೋಗವನ್ನು ಬಿಟ್ಟು ತಮ್ಮ ಜನ್ಮಪ್ರಾಂತಕ್ಕೆ ಹೋಗಬೇಕಾಯಿತೆಂದು ತಿಳಿಯುತ್ತೇವೆ. ಇನ್ನು ೧–೨ ವರ್ಷಗಳವರೆಗಾದರೂ ಇವರು ಇದೇ ಉದ್ಯೋಗದಲ್ಲಿರದೆ ಬಿಟ್ಟುದು ವ್ಯಸನಕರ. ಸರ್ವೇಶ್ವರನು ಇವರಿಗೆ ಸರ್ವತ್ರ ಸನ್ಮಂಗಳವನ್ನುಂಟುಮಾಡಲಿ.

-ಕೊಡಗು ಸೋಮವಾರಪೇಟೆಯಲ್ಲಿ ಪೂರ್ಣ ಶ್ರೀಮಂತರೂ ದೊಡ್ಡ ಕಾಫಿತೋಟಗಾರರೂ ಆದ ಹಿರೇಕುರುಹಿನ ಜನಾಂಗಕ್ಕೆ ಸೇರಿದ ಮ|| ಡಿ. ಚನ್ನಬಸವಶೆಟ್ಟರು ಅಸ್ವಸ್ಥರಾಗಿದ್ದು ಕಳೆದ ತಾ|| ೬ ರಲ್ಲಿ ವಿಧಿವಶರಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ಇವರಿಗೆ ಮರಣಕಾಲದಲ್ಲಿ ೩೫ ವರ್ಷ ವಯಸ್ಸು ಮಾತ್ರವಾಗಿದ್ದಿತು. ಮತ್ತು ೩ ಜನ ಪತ್ನಿಯರಿರುವರು. ಈ ಶ್ರೀಮಂತರು ತಮ್ಮ ಹಿರೇಕುರುಹಿನ ಜನಾಂಗದವರ ವಿದ್ಯಾಭಿವೃದ್ಧಿಗಾಗಿ ಬೆಂಗಳೂರಿನಲ್ಲಿ ವಿದ್ಯಾರ್ಥಿನಿಲಯವನ್ನು ಕಟ್ಟಲು ೨೦ ಸಾವಿರ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನಮಾಡಿದ್ದರು. ಇವರು ಸೋಮವಾರಪೇಟೆಯಲ್ಲಿ ೧ ಲಕ್ಷ ರೂಪಾಯಿಗಳನ್ನು ಮುಟ್ಟಿಸಿ ದೊಡ್ಡಮನೆಯನ್ನು ಕಟ್ಟಿಸಿ ಕಳೆದ ಮೇ ತಾ|| ೨೮ ರಲ್ಲಿ ಅದರ ಪ್ರವೇಶಮಹೋತ್ಸವವನ್ನು ೨೦ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಇವರ ಅಕಾಲಮರಣದಿಂದ ಹಿರೇಕುರುಹಿನ ಜನಾಂಗಕ್ಕೆ ವಿಶೇಷ ನಷ್ಟವಾಯಿತೆಂದು ಮ|| ಎಚ್. ಆರ್. ತಿರುಮಲಶೆಟ್ಟರು ತಿಳಿಸಿರುತ್ತಾರೆ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ

1921ನೆಯ ಜೂನ್ 17.

ಪೀಠಿಕೆ

ಮಹಾಶಯರೇ,

ಘನವನ್ನೈದಿದ ನಮ್ಮ ಶ್ರೀಮನ್ಮಹಾರಾಜಾಸಾಹೇಬ್ಬಹದುರವರ ಪರಮಾನುಗ್ರಹರೂಪವಾದ ಆಜ್ಞಾನುಸಾರ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಈ ದ್ವಿತೀಯ ಅಧಿವೇಶನಕ್ಕೆ ತಮ್ಮಗಳನ್ನು ಆದರಪೂರ್ವಕವಾಗಿ ಬರಮಾಡಿಕೊಳ್ಳಲು ತುಂಬಾ ಸಂತೋಷಿಸುತ್ತೇವೆ. ಸಂಸ್ಥಾನದ ಆಯವ್ಯಯಗಳ ಅಂದಾಜನ್ನು ಪರಿಶೀಲನೆ ಮಾಡುವುದಕ್ಕಾಗಿಯೇ ಈ ಅಧಿವೇಶನವು ಏರ್ಪಟ್ಟಿರುವ ಪ್ರಯುಕ್ತ ಮಳೆಬೆಳೆಗಳ ವಿಚಾರವಾಗಿಯೂ, ಆಹಾರಧಾನ್ಯಗಳ ವಿಚಾರವಾಗಿಯೂ ಧಾರಣೆವಾಸಿಗಳ ವಿಚಾರವಾಗಿಯೂ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಿ ಅನಂತರ ಸದರೀ ಅಂದಾಜಿನ ಮುಖ್ಯಾಂಶಗಳನ್ನು ವಿವರಿಸಲುಪಕ್ರಮಿಸುತ್ತೇವೆ.

ಮಳೆಬೆಳೆಗಳು.

ಕಳೆದ ವರ್ಷ ಸಾಕಾದಷ್ಟು ಮಳೆ ಬೀಳಲಿಲ್ಲ. ಸರಾಸರಿಗಿಂತಲೂ ಹತ್ತುಹದ ಮಳೆ ಕಡಿಮೆಯಾಗಿ ಬಿತ್ತು. ಇದರಿಂದ ಬೇಸಾಯಕ್ಕೆ ಅನುಕೂಲ ಸಾಲದೆಹೋಯಿತು. ತುಮಕೂರು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ತರೀಫಸಲು ತುಂಬಾ ಕಡಿಮೆಯಾದುದರಿಂದ ತರೀಕಂದಾಯದ ಒಂದು ಭಾಗದ ವಸೂಲಾತಿಯನ್ನು ಕೆಲವುಕಾಲದಮಟ್ಟಿಗೆ ನಿಲ್ಲಿಸಬೇಕಾಯಿತು. ಈ ರೀತಿ ನಾವು ನಿರೀಕ್ಷಿಸಿದಷ್ಟು ಚೆನ್ನಾಗಿ ಬೆಳೆ ಆಗಿಲ್ಲವಾದರೂ ನಾವು ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಪೈಕಿ ಬೆಳೆ ಸರಿಯಾಗಿ ಆಗದೆ ಇದ್ದ ಪ್ರದೇಶಗಳಲ್ಲಿ ಈ ವರ್ಷದ ಪ್ರಾರಂಭದಲ್ಲಿ ಸಂಚಾರ ಮಾಡಿದಾಗ ದುರ್ಭಿಕ್ಷದ ಚಿಹ್ನೆಗಳು ಎಲ್ಲಿಯೂ ತೋರಿಬರಲಿಲ್ಲವೆಂದು ತಿಳಿಸಲು ಸಂತೋಷಿಸುತ್ತೇವೆ.

ಆಹಾರಧಾನ್ಯಗಳ ವಿಷಯವಾದ ನಿರ್ಬಂಧ.

ಆದರೆ ನಮ್ಮ ಸೀಮೆಯಲ್ಲಿ ಮಳೆಬೆಳೆಗಳು ಚೆನ್ನಾಗಿ ಆಗದೆ ಇದ್ದುದರಿಂದಲೂ, ನಮ್ಮ ಸೀಮೆಯ ಒತ್ತಿನಲ್ಲಿರುವ ಕುಂಪಣಿ ಸೀಮೆಯ ಕೆಲವು ಪ್ರಾಂತ್ಯಗಳಲ್ಲಿ ದುರ್ಭಿಕ್ಷದ ಸೂಚನೆಗಳು ತಲೆದೋರಿದ್ದುದರಿಂದಲೂ ಸಹ ಆಹಾರಧಾನ್ಯಗಳನ್ನು ನಮ್ಮ ಸೀಮೆಯಿಂದ ಹೊರಕ್ಕೆ ಸಾಗಿಸಕೂಡದೆಂಬ ವಿಷಯದಲ್ಲಿ ಏರ್ಪಡಿಸಿದ್ದ ನಿರ್ಬಂಧವನ್ನು ತೆಗೆದುಹಾಕದೇ ಇಟ್ಟಿರಬೇಕಾಗಿ ಬಂತು. ಆದಾಗ್ಯೂ, ಸರಿಯಾಗಿ ಬೆಳೆ ಆಗದೆ ಇದ್ದ ಬ್ರಿಟಿಷ್ ಡಿಸ್ಟ್ರಿಕ್ಟುಗಳಿಗೆ ಆಹಾರಧಾನ್ಯಗಳನ್ನು ಒದಗಿಸುವ ವಿಷಯದಲ್ಲಿ ಎಂದಿನಂತೆ ಈಗಲೂ ಸಹಾಯಮಾಡುತ್ತಿರುವುದಾಗಿದೆ. ಕಳೆದ ಅಕ್ಟೋಬರ್ ತಿಂಗಳಿಂದೀಚೆಗೆ ನಿರ್ಬಂಧಕ್ಕೆ ಒಳಪಟ್ಟ 3,650 ಟನ್ ಆಹಾರ ಧಾನ್ಯಗಳನ್ನು ಸದರೀ ಪ್ರಾಂತಕ್ಕೆ ಒದಗಿಸಿರುತ್ತೇವೆ. ಅಲ್ಲದೆ ಇದೇ ಕಾಲದಲ್ಲಿ ನಮ್ಮ ಸೀಮೆಯ ಉಪಯೋಗಕ್ಕಾಗಿ 4,150 ಟನ್ ಅಕ್ಕಿಯು ಹೊರಗಿನಿಂದ ಬಂದಿರುತ್ತದೆ. ಈಗ ಮಂಡಿಗಳಲ್ಲಿ ಬೇಕಾದಷ್ಟು ಆಹಾರಧಾನ್ಯವು ಮಾರಾಟಕ್ಕೆ ಬರುತ್ತಿರುವುದರಿಂದ ಸರ್ಕಾರಿ ಡಿಪೋಗಳನ್ನೆಲ್ಲಾ ಮುಚ್ಚಿರುತ್ತೇವೆ. ಫುಡ್ ಕಂಟ್ರೋಲರವರ ಹುದ್ದೆಯನ್ನು ಮೇ 1ನೆಯ ತಾರೀಖು ಲಾಗಾಯಿತು ವಜಾಮಾಡಿರುತ್ತೇವೆ. ಆಹಾರಧಾನ್ಯಗಳನ್ನು ಹೊರಗೆ ಸಾಗಿಸುವ ವಿಷಯದಲ್ಲಿ ಇರುವ ನಿರ್ಬಂಧಗಳನ್ನೆಲ್ಲಾ ಈ ತಿಂಗಳ ಆಖೈರಿನಿಂದ ತೆಗೆದುಹಾಕಿಬಿಡುತ್ತೇವೆ.

ಧಾರಣೆವಾಸಿಗಳು.

ಆಹಾರಧಾನ್ಯಗಳ ಮತ್ತು ಸಾಮಾನ್ಯವಾಗಿ ಎಲ್ಲಾ ಪದಾರ್ಥಗಳ ಧಾರಣೆಗಳು ಯುದ್ಧಕ್ಕೆ ಮೊದಲಿನಲ್ಲಿದ್ದ ಧಾರಣೆಗಿಂತಲೂ ಇನ್ನೂ ಹೆಚ್ಚಿನಲ್ಲೇ ಇವೆ. ಆದರೂ ಈಚೆಗೆ ಧಾರಣೆಗಳು ವಿಶೇಷಮಟ್ಟಿಗೆ ತಗ್ಗಿ 1918ನೆ ಜುಲೈ ತಿಂಗಳಲ್ಲಿದ್ದಷ್ಟಕ್ಕೆ ಇಳಿದಿರುವುದನ್ನು ಕೇಳಿ ಸಂತೋಷಿಸಬೇಕು.

ಕೆಲವು ಕಾಲದಿಂದೀಚೆಗೆ ವೃತ್ತಾಂತಪತ್ರಿಕೆಗಳವರೂ, ಪ್ರಜೆಗಳೂ ಸಂಸ್ಥಾನದ ಆಯವ್ಯಯಗಳ ವಿಷಯದಲ್ಲಿ ಹೆಚ್ಚುಹೆಚ್ಚಾಗಿ ಆಸಕ್ತಿಯನ್ನು ತೋರ್ಪಡಿಸುತ್ತ ಬಂದಿರುತ್ತಾರೆ. ರಾಜ್ಯಾಡಳಿತದಲ್ಲಿ ಮುಖ್ಯಭಾಗವಾದ ಈ ವಿಷಯಕ್ಕೆ ಈ ರೀತಿ ಗಮನ ಕೊಡುತ್ತಿರುವುದು ನಮಗೆ ಸಂತೋಷಕರವಾಗಿದೆ. ವೃತ್ತಾಂತಪತ್ರಿಕೆಗಳಲ್ಲಿ ವಿಚಾರಮಾಡಿ ಚರ್ಚಿಸುತ್ತಿರುವುದನ್ನೂ ನ್ಯಾಯವಿಧಾಯಕ ಸಭೆಯಲ್ಲಿಯೂ, ಈ ಸಭೆಯಲ್ಲಿಯೂ ಪ್ರಶ್ನೆಗಳು ಕೇಳುತ್ತಿರುವುದನ್ನೂ ನೋಡಿದರೆ ಸಂಸ್ಥಾನದ ಸರಿಯಾದ ಆಯವ್ಯಯದ ಸ್ಥಿತಿಯನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ಪ್ರಜೆಗಳಲ್ಲಿ ನೆಲೆಗೊಂಡಿರುವಂತೆ ವ್ಯಕ್ತವಾಗುತ್ತದೆ. ಆದುದರಿಂದ ನಾವು ಈ ಸಂದರ್ಭದಲ್ಲಿ ಸಂಸ್ಥಾನದ ಆದಾಯ ವೆಚ್ಚದ ನಿಜಸ್ಥಿತಿಯನ್ನು ಸಂಪೂರ್ಣವಾಗಿ ವಿವರಿಸಬೇಕೆಂದು ಉದ್ದೇಶ ಮಾಡಿರುತ್ತೇವೆ. ಈ ವಿವರಗಳನ್ನೆಲ್ಲಾ ಸಾವಧಾನವಾಗಿ ಕೇಳಿದುದೇ ಆದರೆ ಈಗ ಹಣಕ್ಕೆ ಮುಗ್ಗಟ್ಟಾಗಿರುವ ದೆಸೆಯಿಂದ ಎಲ್ಲಾ ಖರ್ಚುಬಾಬುಗಳಿಗೂ ಹಣ ಒದಗಿಸುವುದು ಅಸಾಧ್ಯವಾಗಿ ಪರಿಣಮಿಸಿದ್ದರೂ ಕೂಡ ನಮ್ಮ ಸಂಸ್ಥಾನದ ದ್ರವ್ಯೋಪಪತ್ತಿಸ್ಥಿತಿಗೆ ಮಾತ್ರ ಲೇಶಮಾತ್ರವೂ ಚ್ಯುತಿಯುಂಟಾಗಿಲ್ಲವೆಂಬುದು ತಮ್ಮೆಲ್ಲರಿಗೂ ದೃಢಪಡುವುದೆಂತ ನಂಬಿದ್ದೇವೆ.

1920-21ನೆಯ ವರ್ಷದ ತಿದ್ದುಪಾಟಾದ ಅಂದಾಜು.

ಮೊದಲು ಚಾಲ್ತಿ ವರ್ಷದ ಸ್ಥಿತಿಯನ್ನು ವಿವರಿಸುತ್ತೇವೆ. ಕಳೆದ ವರ್ಷ ಸಂಸ್ಥಾನದ ಬಡ್ಜೆಟ್ಟನ್ನು ನಿರ್ಧರಿಸಿದಾಗ, ಈ ವರ್ಷದ ಹುಟ್ಟುವಳಿಯು 3,15,15,000 ರೂಪಾಯಿ ಆದೀತೆಂತಲೂ, ಖರ್ಚು 3,24,66,000 ರೂಪಾಯಿ ಆದೀತೆಂತಲೂ, ಇದರಿಂದ ಖರ್ಚಿಗೆ 9½ ಲಕ್ಷ ರೂಪಾಯಿ ಸಾಲದೆ ಬರಬಹುದೆಂತಲೂ ನಿರೀಕ್ಷಿಸಿತ್ತು. ಆದರೆ ತಿದ್ದುಪಾಟಾದ ಅಂದಾಜಿನ ಮೇರೆಗೆ ಈ ವರ್ಷ ಸುಮಾರು 20 ಲಕ್ಷ ರೂಪಾಯಿಯಷ್ಟು ಖರ್ಚಿಗೆ ಸಾಲದೆ ಬೀಳುತ್ತಿತ್ತೆಂದು ತೋರುತ್ತದೆ. ಮುಂದೆ ಸೂಚಿಸಿರುವಂತೆ ಸಾಧ್ಯವಾದಷ್ಟು ಖರ್ಚು ಖೋತಾ ಮಾಡುವ ಪ್ರಯತ್ನಗಳನ್ನು ಮೊದಲೇ ನಡಿಸದೆ ಹೋಗಿದ್ದಲ್ಲಿ ಇನ್ನೂ ಹೆಚ್ಚು ಮೊಬಲಗು ಸಾಲದೆ ಬೀಳುತ್ತಿತ್ತು. ಮೊದಲನೆಯ ಅಂದಾಜಿಗಿಂತ ತಿದ್ದುಪಾಟಾದ ಅಂದಾಜಿನಲ್ಲಿ ಈ ರೀತಿ 10½ ಲಕ್ಷ ರೂಪಾಯಿ ಕಮ್ಮಿ ಬಿದ್ದಿರುವುದಕ್ಕೆ ವರಮಾನದ ಕೆಲವು ಮುಖ್ಯ ಬಾಬುಗಳಲ್ಲಿ ಹುಟ್ಟುವಳಿಯು ಕಮ್ಮಿಯಾಗಿರುವುದೇ ಕಾರಣವಾಗಿದೆ. ಕೆಲವು ಬಾಬುಗಳಿಂದ ಹೆಚ್ಚು ವರಮಾನ ಬರುವುದನ್ನು ಲೆಕ್ಕಕ್ಕೆ ತೆಗೆದುಕೊಂಡ ಮೇಲೆಯೂ ಸಹ ಒಟ್ಟು ಹುಟ್ಟುವಳಿಯು 2,97,61,000 ರೂಪಾಯಿ ಮಾತ್ರ ಆಗುತ್ತದೆ ; ಎಂದರೆ ಬಡ್ಜೆಟ್ಟಿನ ಅಂದಾಜಿಗಿಂತಲೂ 17,54,000 ರೂಪಾಯಿ ಕಮ್ಮಿಯಾದಂತಾಯಿತು. (ಸಶೇಷ.)

ಸುಟ್ಟ ಮತ್ತು ಬೆಂದಗಾಯಗಳ ಚಿಕಿತ್ಸೆ.

ಈ ಎರಡು ಬಗೆಯ ಅನಾಹುತಗಳಿಂದ ಯಾತನೆಪಡುವ ಮನುಷ್ಯರು ಇದರಿಂದುಂಟಾಗುವ ಭೀತಿ ಮತ್ತು ಘಾಬರಿಗಳೊಳಗಾಗದೆ ಎಚ್ಚತ್ತುಕೊಳ್ಳುವುದೂ, ಮತ್ತು ಈ ಘಾಯಗಳಿಂದ ಹುಟ್ಟುವ ಸಹಿಸಲಸಾಧ್ಯವಾದ ಉರಿ ಮತ್ತು ನೋವನ್ನು ನಿವಾರಣೆಮಾಡಿಕೊಳ್ಳುವುದು. ಇವು ಚಿಕಿತ್ಸೆಯ ಕ್ರಮದಲ್ಲಿ ಪ್ರಾಮುಖ್ಯವಾದವುಗಳಾಗಿರುವುವು. ಈ ಎರಡು ವಿಧದ ಸುಟ್ಟಘಾಯಗಳಲ್ಲಿ ಏಳತಕ್ಕ ಹೊಪ್ಪಳೆಗಳಿಗೆ ಕೈ ಹಾಕದೆ ಹಾಗೆಯೇ ಬಿಡತಕ್ಕದ್ದು. ಘಾಯಕ್ಕೆ ಘಾಳಿ ಸೋಕಿದರೆ ಸಹಿಸಲಸಾಧ್ಯವಾದ ಸಂಕಟವಾಗುವುದು.

ಸರಿಯಾದ ವೈದ್ಯರಿಲ್ಲದೆಡೆಗಳಲ್ಲಿ ಈ ಕೆಳಗೆ ವಿವರಿಸಲ್ಪಟ್ಟಿರುವ ಚಿಕಿತ್ಸೆಯನ್ನು ಆ ಒಡನೆಯೇ ಮಾಡತಕ್ಕದ್ದು.

1. ತೆಂಗಿನಕಾಯಿಯ ತುರಿಯನ್ನು ಘಾಯದ ಮೇಲೆ ಮಂದವಾಗಿ ಹಾಕಿ ಇದರ ಮೇಲ್ಗಡೆ ಬಟ್ಟೆಯನ್ನು ಭದ್ರವಾಗಿ ಸುತ್ತಿ ಕಟ್ಟತಕ್ಕದ್ದು.
2. ಗಾತ್ರವಾದ ಒಂದು ಆಲುಗಡ್ಡೆಯನ್ನು ಎರಡು ಭಾಗಗಳಾಗಿ ಕುಯಿದು, ಹೋಳುಗಳ ಒಳಭಾಗವನ್ನು ಚಾಕುವಿನಿಂದ ಒರೆದು ತುರಿದ ಚೂರುಗಳಿಂದ ಹೊರಡುವ ಹಾಲನ್ನು ಈ ಘಾಯಗಳಿಗೆ ಹಾಕಿ ಇದರ ಮೇಲ್ಗಡೆ ಹತ್ತಿಯನ್ನು ಜೋಡಿಸಿಟ್ಟು ಬಟ್ಟೆಯಿಂದ ಭದ್ರವಾಗಿ ಸುತ್ತಿ ಕಟ್ಟಬೇಕು.
3. ಕೊಬರಿ ಎಣ್ಣೆಯನ್ನು ಮತ್ತು ಸುಣ್ಣದ ಮೇಲಣ ತಿಳಿಯನೀರನ್ನು ಸಮಭಾಗಗಳಾಗಿ ತೆಗೆದುಕೊಂಡು ಒಂದು ಶೀಶೆಯೊಳಗಡೆ ಹಾಕಿ ಬೆರಸಿ ಚೆನ್ನಾಗಿ ಅಲ್ಲಾಡಿಸಲ್ಪಟ್ಟರೆ; ಇವೆರಡೂ ಸೇರಿ ಬೆಣ್ಣೆಯ ರೂಪಿನ ತಿಳಿಯಾಗಿ ತಿರುಗುವುದು. ಈ ತಿಳಿಯನ್ನು ಘಾಯಗಳಿಗೆ ಹಾಕಿ, ಇದರ ಮೇಲ್ಗಡೆ ಹತ್ತಿಯ ತುಪಟವನ್ನು ಜೋಡಿಸಿಟ್ಟು ಸುತ್ತಲೂ ಭದ್ರವಾಗಿ ಬಟ್ಟೆಯಿಂದ ಕಟ್ಟತಕ್ಕದ್ದು.
4. ಅರ್ಧಶೀಶೆ ನೀರಿನಲ್ಲಿ ಒಂದು ಚಂಚ ಪ್ರಮಾಣದಷ್ಟು ಉಪ್ಪನ್ನು ಹಾಕಿ ಕರಗಿಸಲ್ಪಟ್ಟ ನೀರಿನಲ್ಲಿ ಶುಚಿಯಾಗಿರುವ ಬಟ್ಟೆಯನ್ನು ನೆನೆಯಿಸಿ ಸುಟ್ಟ ಸ್ಥಳಗಳ ಮೇಲೆ ಹಾಕುವುದರಿಂದಲೂ ಅನುಕೂಲವಾಗುವುದು.

ಈ ಘಾಯಗಳು ಆದೊಡನೆಯೇ 1, 2, ನೇ ಔಷಧಗಳನ್ನು ಪ್ರಯೋಗಮಾಡತಕ್ಕದ್ದು. ಕಾಲಮೀರಿ ಹುಣ್ಣುಗಳೆದ್ದ ತರುಣದಲ್ಲಿ 3, 4, ನೇ ಚಿಕಿತ್ಸೆಯನ್ನು ಮಾಡತಕ್ಕದ್ದು.

V. Muttuswamy Das,
District Health Officer,
Mysore District.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ ಲಗ್ನದ ಫಂಡು.

1. ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಸೂಲಕುಂಟೆ ಮ|| ರಾ|| ಶೆಟ್ಟರಬಸಪ್ಪನವರ ಮಕ್ಕಳು ಮ|| ರಾ|| ರುದ್ರಪ್ಪನವರ ಮನೆಯಲ್ಲಿ ನಡೆದ ಪ್ರಸ್ತದಲ್ಲಿ 3 ರೂ.
2. ತುಮಕೂರು ತಾ|| ಊರಡಗೆರೆ ಯಜಮಾನ್ ಮ|| ರಾ|| ಪುಟ್ಟನಂಜಪ್ಪನವರ ಮೂಲಕ, ಸದರಿಗ್ರಾಮದ ಮ|| ರಾ|| ಸೋಮೇದೇವರ ಸೋಮಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವಧುವಿನಕಡೆಯಿಂದ 2 ರೂ. ವರನಕಡೆಯಿಂದ 2 ರೂ. ಒಟ್ಟು 4 ರೂ.
3. ಕಡೂರು ಡಿ|| ಅಜ್ಜಂಪುರದ ಮುನಸಿಪಲ್ ವೈಸ್ ಪ್ರೆಸಿಡೆಂಟ್ ಮ|| ರಾ|| ಸೆಟ್ಟರಸಿದ್ದಪ್ಪನವರಿಂದ 5 ರೂ.
4. ಚಾಮರಾಜನಗರದ ತಾ|| ಆಲೂರುಗ್ರಾಮದ ಮ|| ರಾ|| ಪುಟ್ಟಬಸಪ್ಪನವರ ಮೂಲಕ ಮ|| ರಾ|| ಪುಟ್ಟಮಾದಪ್ಪನವರಮಗಳ ಲಗ್ನದಲ್ಲಿ 2 ರೂ. ಮ|| ರಾ|| ಕಾಂತಯ್ಯನವರ ಮಕ್ಕಳು ಮ|| ರಾ|| ಮಲ್ಲಣ್ಣನವರ ಲಗ್ನದಲ್ಲಿ 2 ರೂ. ಮ|| ರಾ|| ಛತ್ರದನಾಗಪ್ಪನವರ ಮಕ್ಕಳು ಮ|| ರಾ|| ವೀರತ್ತಪ್ಪನವರ ಲಗ್ನದಲ್ಲಿ 2 ರೂ. ಜುಮ್ಲಾ ಜಮಾ 6 ರೂ.
5. ಚಿತ್ರದುರ್ಗದ ತಾ|| ಗುಡ್ಡದರಂಗಪ್ಪನಹಳ್ಳಿಗ್ರಾಮದ ಮ||ರಾ|| ಹುರಿಕಡ್ಲಿ ಹಂಪಣ್ಣನವರಿಂದ, ಅವರಪುತ್ರಿ ಚಿ|| ಸೌ|| ಶಿವಮ್ಮನಿಗೂ, ಮ|| ರಾ|| ಮುಪ್ಪಣ್ಣನವರಿಗೂ, ಮತ್ತು ಮ|| ರಾ|| ಹಂಪಣ್ಣನವರ ಅಣ್ಣಂದಿರು ಮ|| ರಾ|| ಮರಿಬಸಪ್ಪನವರ ಪುತ್ರಿ ಚಿ|| ಸೌ|| ಪೂರಮ್ಮನಿಗೂ, ಚಳ್ಳಕೆರೆ ಸಾಹುಕಾರ್ ಮ|| ರಾ|| ಚಂದ್ರಪ್ಪನವರಿಗೂ ನಡೆದಲಗ್ನದಲ್ಲಿ 10 ರೂ.
6. ದೊಡ್ಡಬಳ್ಳಾಪುರದ ಮ|| ರಾ|| ಯಜಮಾನ್ ವೀರಶೆಟ್ಟಪ್ಪನವರ ಮೂಲಕ, ಹಣಬೆಗ್ರಾಮದಲ್ಲಿ ನಡೆದ ಮ|| ರಾ|| ತುಮಕೂರಿನ ಅನ್ನದಾನಪ್ಪನವರ ಲಗ್ನದಲ್ಲಿ 3 ರೂ. ಜುಮ್ಲಾ ಜಮಾ 31 ರೂ.

ಬೆಂಗಳೂರು ಸಿಟಿ,
ತಾ|| ೧೫-೬-೧೯೨೧ }

ಜಿ. ಪರಮಶಿವಯ್ಯ, ಬಿ. ಎ., ಎಲ್ ಎಲ್. ಬಿ., ಆನರರಿ ಸೆಕ್ರೆಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಪತ್ರವ್ಯವಹಾರ.

ಅದ್ಭುತವಾರ್ತೆ.

ಜಿಲ್ಲಾ ವಿಜಾಪುರ ತಾ||ಶಿಂದಗಿ ಪೈಕಿ ಬಾಣಾಪುರವೆಂಬ ಗ್ರಾಮದಲ್ಲಿ ಲಿಂಗವಂತರ ಒಬ್ಬ ಹೆಣ್ಣುಮಗಳು ಈಗ ಆರುವರ್ಷದಿಂದ ಅನ್ನ ನೀರು ಸೇರಿಸದೆ ಮಲಮೂತ್ರಾದಿಗಳನ್ನು ಮಾಡದೆ ಸದಾ ಉದ್ಯೋಗವನ್ನು ಮಾಡುತ್ತಾ ಮಂದಿಮಕ್ಕಳೊಡನೆ ಹಿತದಿಂದ ಕಾಲಕಳೆಯುತ್ತಿದ್ದಾಳೆ. ಸಂಸಾರ ಸುಖವನ್ನು ವರ್ಜಮಾಡಿದ್ದಾಳೆ. ಇವರನ್ನು ನೋಡುವದರ ದೆಸೆಯಿಂದ ಎಷ್ಟೋಜನರು ಬಂದು ದರ್ಶನತೆಗೆದುಕೊಂಡು ಹೋಗುತ್ತಾರೆ. ಇವರಿಗೆ ಸುಮಾರು ೨೦ ವರ್ಷವಾಗಿರಬಹುದು. ಇದು ದೇವಾಂಶವೇ ಆಗಿರಬಹುದೆಂದು ವಾಚಕರೇ ಊಹಿಸಬಹುದು. ಈಶ್ವರಲೀಲೆಯು ಅಗಾಧವಾದದ್ದು.

ಪ್ರತ್ಯಕ್ಷದರ್ಶಿ.

ಶ್ರೀ ಗುಹೇಶ್ವರ ವಾಚನಾಲಯ ಹೊಸರಿತ್ತಿ.

ಶ್ರೀ ಸ್ವಾಮಿಗಳವರ ಉತ್ತೇಜನದಿಂದ ಶ್ರೀ ಅನ್ನದಾನ ದೇವರ ಅಧ್ಯಕ್ಷತೆಯಲ್ಲಿ ತಾ|| ೮ ನೇ ಬುಧವಾರ ಸಭೆ ಸೇರಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಅಧ್ಯಕ್ಷರು ವಾಚನಾಲಯದ ಮಹತ್ವವನ್ನು ಕುರಿತು ಹೃದಯಂಗಮವಾಗಿ ಭಾಷಣಮಾಡಿದನಂತರ ಅದೇ ವಿಷಯವನ್ನು ಕುರಿತು ಮ|| ಬಾಬಣ್ಣನವರು ಮತ್ತು ವಿ. ಕಿ. ಯಂಗಟೆ ಅವರು ಉಪನ್ಯಾಸಮಾಡಿ